ಮನೆ ಕ್ರಯಕ್ಕೆ ದೊರೆಯುವುದು.

ಮೈಸೂರು ಇಲವಾಲ ರೋಡಿನಲ್ಲಿರುವ ಸ್ಟೋರ್ ನಂ. 437ನೆ ಮನೆ 18 by 97 ಅಡಿ ಉಳ್ಳ ಇಪ್ಪಾರುಮನೆ, ಇದರ ಮುಂಭಾಗದಲ್ಲಿ ಕಾಂಪೌಂಡು ಹಿಂಭಾಗದ ಹಿತ್ತಲಿನಲ್ಲಿ ಭಾವಿಸಹ ಇರುತ್ತೆ. ನೆಲಕ್ಕೆ ಕಡಪಾಕಲ್ಲು ಹಾಕಿ ಗಾರೆಗಚ್ಚಿನಿಂದ ವಾಸಕ್ಕೆ ಬಹಳ ಅನುಕೂಲವಾಗಿರುವ ಮನೆ ಕ್ರಯಕ್ಕೆ ಸಿದ್ಧವಾಗಿರುತ್ತೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಬರೆದು ಖರೀದಿ ಮೊಬಲಗನ್ನು ತಿಳಿದುಕೊಳ್ಳಬಹುದು.

ಟಿ. ಎಚ್. ರಾವ್,
3/37 ಗುಂಡೋಪಂತ್ ಬೀದಿ, ಬೆಂಗಳೂರು ಸಿಟಿ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜೂನ್ ತಾ|| ೧೯ ನೆಯ ಭಾನುವಾರ.

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ.

ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರ ೩೮ನೆ ವರ್ಷವರ್ಧಂತೀ ಮಹೋತ್ಸವವು ಕಳೆದ ಗುರುವಾರ ಯಥಾಸಾಂಗವಾಗಿ ವಿಜೃಂಭಣೆಯಿಂದ ನಡೆದಿತು. ಆ ದಿನ ಪ್ರಾತಃಕಾಲ ೩೮ ಗುಂಡುಗಳು ಹಾರಿಸಲ್ಪಟ್ಟುವು. ೯ ಗಂಟೆಗೆ ಅರಮನೆಯ ಅಂಬಾವಿಲಾಸದಲ್ಲಿ ಶ್ರೀಮನ್ಮಹಾರಾಜರು ಯುವರಾಜರು ಸಹ ಭದ್ರಾಸನಗಳನ್ನಲಂಕರಿಸಿ ವಿವಾಹಮಂಟಪಸ್ಥಳದಲ್ಲಿ ದರಬಾರನ್ನು ನಡೆಯಿಸಿದರು. ದಿವಾನರು ರಾಜಬಂಧುವರ್ಗದವರು ಕೌನ್ಸಿಲರುಗಳು ಡಿ|| ಕಮಿಷನರುಗಳು ಮೊದಲಾದ ಅಧಿಕಾರಿಗಳೂ ವೈದಿಕಮಂಡಲಿಯವರೂ ಪುರಪ್ರಮುಖರೂ ಸಭೆಯನ್ನಲಂಕರಿಸಿದ್ದರು. ಪದ್ಧತಿಯಂತೆ ಸಭೆಯಲ್ಲಿ ಗಾನನರ್ತನಾದಿ ವೈಭವಗಳು ಜರುಗುತ್ತಿದ್ದುವು. ದೇವಾಲಯಗಳಿಂದಲೂ ಮಠಗಳ ಕಡೆಯಿಂದಲೂ ಬಂದಿದ್ದ ಫಲಮಂತ್ರಾಕ್ಷತೆಗಳೂ ಕಿಲ್ಲತ್ತುಗಳೂ ಸಮರ್ಪಿಸಲ್ಪಟ್ಟುವು. ಮುತ್ತೈದೆಯರ ಸೇಸೆಯೂ ವೈದಿಕರ ಆಶೀರ್ವಾದಗಳೂ ನಡೆದುವು. ಇತರ ಸಭಿಕರೆಲ್ಲಾ ಮುಜುರೆಮಾಡಿದರು. ಪುಷ್ಪಹಾರ ತಾಂಬೂಲಾದಿ ಮರ್ಯಾದೆಗಳು ಸಭಿಕರಿಗೆಲ್ಲಾ ನಡೆದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು. ಸಾಯಂಕಾಲ ೫ ಗಂಟೆಗೆ ಶ್ರೀಮನ್ಮಹಾರಾಜಸಹೋದರರು ದಿವ್ಯವಸ್ತ್ರಾಭರಣವಿಭೂಷಿತರಾಗಿ ಉತ್ತಮಾಶ್ವಗಳನ್ನೇರಿ ಚತುರಂಗಸೈನ್ಯಪರಿವೃತರಾಗಿ ಅಲಂಕೃತವಾಗಿದ್ದ ದೊಡ್ಡಪೇಟೆಯ ಮಾರ್ಗದಿಂದ ಉತ್ಸವಹೊರಟರು. ಮುಂಗಡೆಯಲ್ಲಿ ಅರಸುಮಂಡಲಿಯವರು, ಅಧಿಕಾರಿಗಳು, ಪ್ರಜಾಪ್ರತಿನಿಧಿ ಸಭಿಕರು ಪುರಪ್ರಮುಖರು ಮೊದಲಾದವರೆಲ್ಲಾ ನಡೆಯುತ್ತಿದ್ದರು. ದಾರಿಯುದ್ದಕ್ಕೂ ಪುರಪ್ರಮುಖರು ಅಲ್ಲಿಗಲ್ಲಿಗೆ ಮಹಾರಾಜಸಹೋದರರಿಗೆ ಫಲಪುಷ್ಪಗಳನ್ನೊಪ್ಪಿಸಿದರು. ಮ್ಯು|| ಕೌನ್ಸಿಲರುಗಳು ಸೆಂಟರಲ್ ಪೊಲೀಸ್ ತಾಣದ ಮುಂದೆ ಹಾಕಿಸಿದ್ದ ಚಪ್ಪರದಲ್ಲಿ ಫಲಪುಷ್ಪಗಳನ್ನರ್ಪಿಸಿದರು. ಸ್ವಾರಿಯು ದೊಡ್ಡಬಂಗಲೆಯನ್ನು ಸೇರಿ ಸ್ವಲ್ಪ ವಿಶ್ರಮಿಸಿಕೊಂಡ ನಂತರ ವಿದ್ಯುಚ್ಛಕ್ತಿಯ ಬೆಳಕಿನಿಂದ ಹಗಲಿನಂತೆ ಕಾಣುತ್ತಿದ್ದ ಬಯಲಿನಲ್ಲಿ ನಿಂತಿದ್ದ ಸೈನಿಕರ ಮರ್ಯಾದೆಯನ್ನು ಸ್ವೀಕರಿಸಿ ಅವರುಗಳ ಕವಾಯತನ್ನು ಪರಾಮರಿಸಿ, ಬಂಗಲೆಯನ್ನು ಸೇರಿ, ಮಹಾ ದೀಪೋತ್ಸವದ ವೈಭವದಲ್ಲಿ ಹಿಂದಿರುಗಿ ಕೋಟೆಯನ್ನು ಪ್ರವೇಶಿಸಿ ದೇವಾಲಯಗಳಿಗೆ ಹೋಗಿ ದೇವತಾದರ್ಶನ ಪ್ರಸಾದ ಸ್ವೀಕಾರಗಳನ್ನು ಮಾಡಿ ರಾತ್ರಿ ೯|| ಗಂಟೆಗೆ ಸ್ವಾರಿಯು ಅರಮನೆಯನ್ನು ಸೇರಿತು. ದಾರಿಯುದ್ದಕ್ಕೂ ಪುರಜನರೇ ಅಲ್ಲದೆ ಹೊರಗಣಿಂದ ಬಂದಿದ್ದ ಹತ್ತಾರುಸಾವಿರ ಜನರು ಉತ್ಸವವೈಭವವನ್ನು ನೋಡಿ ಅತ್ಯಂತವಾಗಿ ಆನಂದಿಸಿದರು.

ಕೇವಲ ಪ್ರಜಾರಂಜನೈಕಪರಾಯಣರಾದ ಪ್ರಭುಗಳ ಶ್ರೇಯೋಭಿವೃದ್ಧಿಯನ್ನೂ ಆಯುರಾರೋಗ್ಯಾಭಿವೃದ್ಧಿಯನ್ನೂ ಕೋರುವಲ್ಲಿ ರಾಜಭಕ್ತಿವಿಖ್ಯಾತರಾದ ಮೈಸೂರು ಪ್ರಜೆಗಳಿಗೆ ಇರತಕ್ಕ ಆನಂದವು ಸಾಧಾರಣವಾದುದಲ್ಲ. ಪ್ರತಿಯೊಬ್ಬರೂ ತಂತಮ್ಮ ಮನೆಗಳಲ್ಲಿ ಆ ದಿನವನ್ನು ಹಬ್ಬದಂತೆ ಆಚರಿಸಿದರು. ದೇವಾಲಯಗಳಲ್ಲೆಲ್ಲಾ ವಿಶೇಷ ಪೂಜಾಪ್ರಾರ್ಥನೆಗಳು ಜರುಗಿದುವು. ಎಲ್ಲ ಪಾಠಶಾಲೆಗಳಲ್ಲೂ ಬಾಲಬಾಲೆಯರಿಂದ ಆಟಪಾಟಗಳು ಆಡಿಸಲ್ಪಟ್ಟು ತಿಂಡಿಗಳು ಹಂಚಲ್ಪಟ್ಟುವು. ಸಭೆಗಳೂ ಅವುಗಳಲ್ಲಿ ಮೈಸೂರು ದೇಶದ ಚರಿತ್ರೆ ಮತ್ತು ರಾಜಭಕ್ತಿ ಸಂಬಂಧವಾದ ಉಪನ್ಯಾಸಗಳೂ ನಡೆದು ಮೈಸೂರು ರಾಜಪತಾಕೆಗೆ ವಂದನೆಗಳು ನಡೆದು ಬಾಲಬಾಲೆಯರಿಗೆಲ್ಲಾ ತಿಂಡಿಯ ಪದಾರ್ಥಗಳು ಹಂಚಲ್ಪಟ್ಟವು. ಇವಕ್ಕೆಲ್ಲಾ ಅರಮನೆಯಿಂದಲೂ ಮಕ್ಕಳ ಪೋಷಕರಿಂದಲೂ ಸಹಾಯದ್ರವ್ಯವು ಒದಗಿಸಲ್ಪಟ್ಟಿದ್ದಿತು. ಸರ್ವತ್ರ ಮಹಾಪ್ರಭುವಿಗೆ ಮಂಗಳವು ಕೋರಲ್ಪಟ್ಟಿತು.

ಶ್ರೀಮನ್ಮಹಾರಾಜ ಸಹೋದರರಿಗೆ ವಯೋವೃದ್ಧಿಯಾಗುತ್ತ ಬಂದಂತೆ ಅವರ ಪ್ರಜಾವಾತ್ಸಲ್ಯ ಪರಿಪಾಲನಸದ್ಧರ್ಮಕೌಶಲಗಳು ಕೂಡ ಪರಿಪಾಕಗೊಳ್ಳುತ್ತ ಬರುತ್ತಿವೆ. ಸಂಸ್ಥಾನಕ್ಕೆ ಧನದ ಕೊರತೆಯು ಹೆಚ್ಚಾಗಿದ್ದರೂ ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡುವುದೇ ಮೊದಲಾದ ಮುಖ್ಯ ಕಾರ್ಯಗಳಿಗೆ ಮಾಡಿಸಬೇಕಾದ ವೆಚ್ಚಕ್ಕೇನೂ ಕೊರತೆಮಾಡಿಲ್ಲ. ಈ ಮುಂದಣವರ್ಷದಲ್ಲಿ ವಿದ್ಯಾಶಾಖೆಗಾಗಿಯೇ ೬೮|| ಲಕ್ಷ ರೂ.ಗಳನ್ನು ವ್ಯಯಮಾಡಿಸುವವರಾಗಿದ್ದಾರೆ. ಸರ್ವಪ್ರಜೆಗಳನ್ನೂ ಸಮದೃಷ್ಟಿಯಿಂದ ಕಾಣುವ ವಿಷಯದಲ್ಲೂ ಪತಿತಜನೋದ್ಧರಣೆಯ ವಿಷಯದಲ್ಲಿಯೂ ಅವರು ಈ ಕಳೆದವರ್ಷ ಮಾಡಿದ ಅಪ್ಪಣೆಗಳು ಸರ್ವಜನ ಸಮಾದರಣೀಯಗಳಾಗಿರುತ್ತವೆ. ಇದುವರೆಗೆ ಉಂಟಾದ ಅನುಭವದಿಂದ ರಾಜಕಾರ್ಯನಿರ್ವಾಹಕ್ರಮದಲ್ಲಿ ತೋರಿಬಂದ ನ್ಯೂನಾತಿರೇಕಗಳನ್ನೆಲ್ಲಾ ನಿವೃತ್ತಿಗೊಳಿಸಲಿಕ್ಕೆ ಸರಿಯಾದ ಏರ್ಪಾಟುಗಳು ಜರುಗುತ್ತಿವೆ. ಆಂಗ್ಲಪರಿಪಾಲನೆಯ ದೇಶದಲ್ಲಿ ಇನ್ನೂ ರೂಢಿಸಲ್ಪಡದಿರುವ ಪರಿಪಾಲನ ಸಂಸ್ಕಾರಗಳೆಲ್ಲಾ ನಮ್ಮ ಸಂಸ್ಥಾನದಲ್ಲಿ ಒಂದೊಂದಾಗಿ ವ್ಯವಹಾರಕ್ಕೆ ಬರುತ್ತಿವೆ. ಮಾದರಿ ಸಂಸ್ಥಾನವೆಂದು ತಾನು ಪಡೆದುಕೊಂಡಿರುವ ಪ್ರತಿಷ್ಠೆಯನ್ನು ಈಗಲೂ ಅಭಿವೃದ್ಧಿಗೊಳಿಸಿಕೊಳ್ಳುತ್ತ ಇತರ ದೇಶೀಯ ಪ್ರಭುತ್ವದವರಿಗೆಲ್ಲಾ ನಮ್ಮ ದೇಶವು ಮೇಲುಪಂಕ್ತಿಯಾಗಿದೆ. ಕಾಲಧರ್ಮವು ಕೂಡ ಶ್ರೀಮಹಾಪ್ರಭುಗಳ ಸದ್ಧರ್ಮಪ್ರಭಾವವೋ ಎಂಬಂತೆ ಕೂಡಿದ ಮಟ್ಟಿಗೂ ಮಳೆಬೆಳೆಗಳ ಅನುಕೂಲ್ಯವುಳ್ಳದಾಗಿ ಪ್ರಜೆಗಳಿಗೆ ಹಾಹಾಕಾರವಿಲ್ಲದಂತೆ ಮಾಡಿದೆ. ಈ ವರ್ಷ ಮುಂಗಾರು ಪೈರು ನಳನಳಿಸಿ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿರುವುದರ ಮಧ್ಯದಲ್ಲಿ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವು ನಡೆದುದರಿಂದ ಅದನ್ನಾಚರಿಸುವಲ್ಲಿ ರಾಜಧಾನಿಯ ಸುತ್ತುಮುತ್ತಣ ತಾಲ್ಲೂಕಿನ ಪ್ರಜೆಗಳೆಲ್ಲಾ ಅತ್ಯಾನಂದವನ್ನು ವ್ಯಕ್ತಪಡಿಸಿರುವರು. ಇದೇ ರೀತಿಯಲ್ಲಿ ಶ್ರೀಮನ್ಮಹಾರಾಜ ಸಹೋದರರ ವರ್ಧಂತ್ಯುತ್ಸವಗಳು ಚಿರಕಾಲ ನಡೆದು ಅವುಗಳನ್ನವಲೋಕಿಸುವ ಪುಣ್ಯವೂ ಅವರುಗಳ ಪರಿಪಾಲನ ಪ್ರಭಾವದಿಂದ ಇನ್ನೂ ವಿಶೇಷವಾದ ಸುಖಶಾಂತಿಗಳನ್ನು ಪಡೆಯುವ ಭಾಗ್ಯವೂ ಮೈಸೂರು ಪ್ರಜೆಗಳ ಭಾಗಕ್ಕೆ ಉಂಟಾಗಲೆಂದು ಸಕಲ ಪ್ರಜೆಗಳೊಡನೆ ನಾವು ಕೋರುತ್ತಿರುವೆವು.

ಪೌರಸಾಮಾಜಿಕ ಸಭೆ.

ಈ ಸಂಘದ ವಾರ್ಷಿಕಾಧಿವೇಶನವು ರಾಜಧಾನಿಯ ರಂಗಾಚಾರ್ಲು ಸ್ಮಾರಕಭವನದಲ್ಲಿ ಕಳೆದ ತಾ|| ೧೫ ನೆ ಪ್ರಾತಃಕಾಲ ೮ ಗಂಟೆಗೆ ನೆರವೇರಿತು. ಶ್ರೀಮದ್ಯುವರಾಜರವರು ದಿವಾನರು ಕೌನ್ಸಿಲರು ಶಾಖಾಮುಖ್ಯಾಧಿಕಾರಿಗಳೂ ಡಿ|| ಕಮಿಷನರೇ ಮೊದಲಾದ ಅನೇಕ ಸ್ಥಲ ಪರಸ್ಥಲಗಳ ಅಧಿಕಾರಿಗಳೂ ಪುರಪ್ರಮುಖರೂ ಕೆಲ ನಾರೀಮಣಿಗಳೂ ವಿದ್ಯಾರ್ಥಿಗಳು ಸಹ ಸಭೆಯನ್ನಲಂಕರಿಸಿದ್ದರು. ಮೊಟ್ಟಮೊದಲು ಶ್ರೀಮದ್ಯುವರಾಜರವರು ಪೌರಸಾಮಾಜಿಕ ಕಾರ್ಯಗಳ ಅಭ್ಯುದಯದಿಂದ ದೇಶೀಯರಿಗೆ ಆಗತಕ್ಕ ಪ್ರಯೋಜನಗಳನ್ನೂ ಅವುಗಳನ್ನು ಉಪೇಕ್ಷಿಸುವುದರಿಂದ ಉಂಟಾಗತಕ್ಕ ಅನರ್ಥವನ್ನೂ ತಿಳಿಯಿಸಿದುದಲ್ಲದೆ, ಆ ದಿನದ ಸಭೆಯಲ್ಲಿ ಉಪನ್ಯಾಸಮಾಡಲು ಅಂಗೀಕರಿಸಿರುವ ದೊಡ್ಡಮನುಷ್ಯರುಗಳ ಬೋಧೆಯು ವಿಶೇಷ ಫಲದಾಯಕವಾಗತಕ್ಕುವೆಂಬುದನ್ನು ಕುರಿತು ಶ್ರಾವ್ಯವಾದ ಭಾಷಣವನ್ನು ಮಾಡಿದರು. ಬಳಿಕ ಸಭಾಧ್ಯಕ್ಷತೆಗೆ ಇಂಡಿಯನ್ ಸೋಷಲ್ ರಿಫಾರಂಪತ್ರಿಕೆಯ ಸಂಪಾದಕರಾದ ಮ|| ಕೆ. ನಟರಾಜನ್ ರವರು ಪ್ರಾರ್ಥಿಸಲ್ಪಟ್ಟು ಅಧ್ಯಕ್ಷಪೀಠವನ್ನಲಂಕರಿಸಿದರು. ಈ ಸಂಘದ ಸಂಮಾನ್ಯಕಾರ್ಯದರ್ಶಿಗಳಾದ ಮ|| ಬಿ. ಪುಟ್ಟಯ್ಯ ಬಿ. ಎ. ಯವರು ಸಂಘದ ಮೂಲಕ ಕಳೆದ ವರ್ಷ ನಡೆದ ಕಾರ್ಯಗಳ ವರದಿಯನ್ನೋದಿದರು. ಬಳಿಕ ಸಭಾಧ್ಯಕ್ಷರು ತಮ್ಮ ಭಾಷಣವನ್ನು ಮಾಡಿದರು. ಅದರಲ್ಲಿ ಕಾಲೋಚಿತವಾಗಿ ಸಾಮಾಜಿಕದ ತಿದ್ದುಪಾಟುಗಳು ಅವಶ್ಯಕವಾಗಿ ಆಗಬೇಕಾಗಿರುವುದನ್ನೂ ಅದರ ಪ್ರಯೋಜನವನ್ನೂ ಸರ್ವಾಭಿವೃದ್ಧಿಗೂ ಪೌರಸಾಮಾಜಿಕ ಪ್ರಯತ್ನಗಳೇ ವಿಕಾಸವೇ ಅತಿ ಮುಖ್ಯವೆಂಬುದನ್ನೂ, ಅದಕ್ಕಾಗಿ ಉಂಟಾಗುವ ಅಡಚಣೆಗಳನ್ನು ನಿವೃತ್ತಿಮಾಡಿಕೊಳ್ಳಬೇಕಾದ ಉಪಾಯಗಳನ್ನೂ ನಿರೂಪಿಸಿದರು. ಅನಂತರ ಮ|| ಜಿನರಾಜದಾಸ್ ಎಂ. ಎ. ಯವರ ಮತ್ತು ಅವರ ಪತ್ನಿಯವರ ಡಾಕ್ಟರ್ ಕ್ಲಾರ್ಕ್ ದಂಪತಿಗಳ ಮಿಸಸ್ [illegible]ಜಿರಾವ್‌ರವರ ಉಪನ್ಯಾಸಗಳು ನಡೆದುವು. ಇವುಗಳಲ್ಲೆಲ್ಲಾ ಸ್ತ್ರೀ ಪುರುಷರು ನಡೆಯಿಸಬೇಕಾದ ಉತ್ತಮಧರ್ಮಗಳೂ ಶೀಲಗಳೂ ಶಿಶುಪರಿಪಾಲನೆಯ ಕ್ರಮಗಳೂ, ಪರಸ್ಪರ ಪ್ರೀತಿಫಲಗಳೂ ಅವುಗಳ ಲಾಭಗಳೂ ಅತ್ಯಂತ ಹೃದಯಂಗಮವಾಗಿ ವರ್ಣಿತವಾಗಿದ್ದುವು. ಕಡೆಯಲ್ಲಿ ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರು ಶ್ರೀಮನ್ಮಹಾರಾಜರಿಗೂ ಶ್ರೀಮದ್ಯುವರಾಜರಿಗೂ ಸಭಾಧ್ಯಕ್ಷರಿಗೂ ಮಂಗಳವನ್ನು ಕೋರಿ ಭಾಷಣಮಾಡಿ ವಂದಿಸಿದರು. ಸರ್ವರಿಗೂ ಪುಷ್ಪ ಹಾರಗುಚ್ಛಗಳು ಅರ್ಪಿಸಲ್ಪಟ್ಟ ನಂತರ ಪರಿಸಮಾಪ್ತವಾಯಿತು.

ಸಂಪದಭ್ಯುದಯ ಸಮಾಜ.

ಇದರ ೧೨ನೆ ಅಧಿವೇಶನವು ಕಳೆದ ತಾ|| ೧೪ ರಿಂದ ಆರಂಭವಾಗಿ ೩ ದಿನಗಳವರೆಗೆ ನಡೆದಿತು. ದಿವಾನರವರು ಅಧ್ಯಕ್ಷರಾಗಿದ್ದರು. ಈ ಸಮಾಜಕ್ಕೆ ಅಂಗಗಳಾದ ವಿದ್ಯಾಭ್ಯಾಸ ಕೈಗಾರಿಕೆ ವಾಣಿಜ್ಯ ವ್ಯವಸಾಯ ಶಾಖೆಗಳಿಗೆ ಸಂಬಂಧಪಟ್ಟ ಬೋರ್ಡುಗಳ ಸಭಿಕರೂ ಇತರ ಸರ್ಕಾರದ ಅಧಿಕಾರಿಗಳೂ ನೆರೆದಿದ್ದರು. ಸಭಾಧ್ಯಕ್ಷರು ತಮ್ಮ ಆರಂಭಭಾಷಣದಲ್ಲಿ ಸಭಿಕರನ್ನೆಲ್ಲಾ ಸ್ವಾಗತಿಸಿ ಕಳೆದ ವರ್ಷ ಈ ಸಮಾಜದ ಕಾರ್ಯನಿರ್ವಾಹಕ್ರಮದಲ್ಲಿ ಮಾಡಲ್ಪಟ್ಟಿರುವ ಬದಲಾವಣೆಗಳನ್ನೆಲ್ಲಾ ವಿವರಿಸಿ ಆಯಾ ಶಾಖೆಗಳವರು ನಡೆಯಿಸಿರುವ ಪರಿಶೋಧನೆ ಪುರೋಭಿವೃದ್ಧಿ ಕಾರ್ಯಗಳು ಮುಂದೆ ಇದರಿಂದಾಗಬಹುದಾದ ಫಲೋದಯಗಳು ಇವನ್ನೆಲ್ಲಾ ಕುರಿತು ನಿರೂಪಿಸಿದರು. ಆಯಾ ಶಾಖೆಗಳಿಗೆ ಸಂಬಂಧಪಟ್ಟು ಕಳೆದ ವರ್ಷದಲ್ಲಿ ನಡೆದಿರುವ ಕಾರ್ಯಗಳ ವರದಿಯು ಇದಕ್ಕೆ ಮುಂಚೆಯೇ ಸರ್ಕಾರದವರಿಂದ ಸಭಿಕರಿಗೆಲ್ಲಾ ಕಳುಹಿಸಲ್ಪಟ್ಟಿದ್ದಿತು. ಅದುಕಾರಣ ಅವುಗಳು ಓದಲ್ಪಡಲಿಲ್ಲ.

ಆ ವರದಿಗಳನ್ನೂ ಸಭಾಧ್ಯಕ್ಷರ ಭಾಷಣವನ್ನೂ ಓದಿ ನೋಡುವಲ್ಲಿ ಅಷ್ಟೇನೂ ಉತ್ಸಾಹಕರವಾಗಿ ತೋರಲಿಲ್ಲ. ಸರ್ ವಿಶ್ವೇಶ್ವರಯ್ಯನವರ ಕಾಲದಲ್ಲಿ "ಈಗ ಯುದ್ಧಸಮಯವಾಗಿರುವುದರಿಂದ ಯಂತ್ರೋಪಕರಣಗಳು ದೊರೆಯುವುದು ಕಷ್ಟವಾಗಿರುವ ಕಾರಣ ಕೈಗಾರಿಕೆ ಮತ್ತು ಕಸಬುಗಳ ಅಭಿವೃದ್ಧಿಗೆ ಅಡ್ಡಿಯಾಗಿದೆ. ಮುಂದೆ ಅವೆಲ್ಲಾ ಅನುಕೂಲವಾಗುತ್ತವೆ" ಎಂದು ಸಭೆಯಲ್ಲಿ ಹೇಳುತ್ತಬಂದರು. ಈಗ ಯುದ್ಧವು ನಿಂತಿತು. ಯಂತ್ರೋಪಕರಣಗಳ ಬೆಲೆಯೇನೂ ಇಳಿಯಲಿಲ್ಲ. ಹೆಚ್ಚು ದುಡ್ಡು ಹಾಕಿ ತರಿಸಿದ ಅನೇಕ ಯಂತ್ರಗಳ ಮೂಲಕ ನಡೆದಿರುವ ಕಾರ್ಯಗಳು ಲಾಭಕ್ಕೆ ಪ್ರತಿಯಾಗಿ ನಷ್ಟವನ್ನೇ ತೆತ್ತಿವೆ. ಈ ಸಮಾಜದ ಮೂಲಕ ದೇಶದ ಸಂಪದಭ್ಯುದಯವನ್ನು ಪ್ರಭುತ್ವದವರು ಮಾಡಬೇಕಾಗಿದ್ದರೆ ಪ್ರಜಾಸಮುದಾಯದಲ್ಲೆಲ್ಲಾ ಅದಕ್ಕೆ ಅವಶ್ಯಕವಾದ ಕರ್ತವ್ಯಗಳಲ್ಲಿ ಅಭಿರುಚಿ ಹೆಚ್ಚಬೇಕು. ಈಗ ವರ್ಷ ಒಂದಕ್ಕೆ ||| ಲಕ್ಷ ರೂ.ಗಳನ್ನು ಮಾತ್ರ ಈ ಶಾಖೆಗೆ ವೆಚ್ಚಮಾಡಲು ಏರ್ಪಡಿಸಿರುತ್ತಾರೆ. ಹೆಸರಿಗೆ ಇದರ ಸಮಾಜವೂ ಬೋರ್ಡುಗಳೂ ಸಭಿಕರೂ ಇದ್ದಾರೆ. ಡಿಸ್ಟ್ರಿಕ್ಟ್ ತಾಲ್ಲೂಕುಗಳಲ್ಲೆಲ್ಲಾ ಇದರ ಕಾರ್ಯಭಾರವು ಅಲ್ಲಲ್ಲಿಯ ಬೋರ್ಡುಗಳಿಗೇ ವಹಿಸಲ್ಪಟ್ಟಿದೆ. ಡಿಸ್ಟ್ರಿಕ್ಟುಗಳಲ್ಲಿದ್ದ ಸಂಪದಭ್ಯುದಯ ಸಮಾಜದ ಸೂಪರಿಂಟೆಂಡೆಂಟರು ತೆಗೆದುಹಾಕಲ್ಪಟ್ಟರು. ಡಿಸ್ಟ್ರಿಕ್ಟು ಬೋರ್ಡುಗಳಿಗೆ ಹಣವನ್ನು ಕೊಟ್ಟು ಅಂಥ ಸೆಕ್ರಟರಿಗಳನ್ನು ಶಾಶ್ವತವಾಗಿ ಸಹಾಯಕ್ಕೆ ಇರಿಸಿಕೊಳ್ಳಲೂ ಈ ಭಾಗದ ವ್ಯಯಕ್ಕೆ ದುಡ್ಡನ್ನು ಒದಗಿಸಲೂ ಸಾಮರ್ಥ್ಯವಿಲ್ಲ. ಹೀಗಾಗಿ ಪ್ರತಿ ಡಿಸ್ಟ್ರಿಕ್ಟಿನಲ್ಲೂ ಈ ಸೂಪರಿಂಟೆಂಡೆಂಟರುಗಳ ಮುಖೇನ ಅಷ್ಟೂ ಇಷ್ಟು ನಡೆಯುತ್ತಿದ್ದ ಕೆಲಸವೆಲ್ಲಾ ನಿಂತೇಹೋಯಿತೆಂದು ಹೇಳಬಹುದಾಗಿದೆ. ಡಿಸ್ಟ್ರಿಕ್ಟುಗಳಲ್ಲೆಲ್ಲಾ ಚಳವಳನಡೆಯಿಸಿ ವಿದ್ಯಾ ವ್ಯವಸಾಯ ಕರಕೌಶಲಾದಿ ಕಲೆಗಳಿಗೆ ಜನಮನಃಪ್ರವೃತ್ತಿಯು ಹೆಚ್ಚಾಗಿ ಹರಿಯುವಂತೆ ಮಾಡುವ ಉದ್ಬೋಧಕರಿಲ್ಲದ ಬಳಿಕ ದೇಶಸಾಮಾನ್ಯದಲ್ಲೂ ಈ ಸಮಾಜದ ಉದ್ದೇಶವು ಸಾರ್ಥಕವಾಗುವುದು ದುರ್ಲಭ. ಬರಿಯ ವರದಿಗಳನ್ನು ಅಂದವಾಗಿ ಆಂಗ್ಲ ಭಾಷೆಯಲ್ಲಿ ಮುದ್ರಿಸುವುದಕ್ಕೂ ವರ್ಷಕ್ಕೊಂದುಸಲ ಸಭೆಮಾಡುವುದಕ್ಕೂ ಒಂದಿಷ್ಟು ಧನವ್ಯಯವನ್ನು ಮಾಡಿಬಿಟ್ಟರೆ ಚರಿತಾರ್ಥವಾಗುವಂತಿರುವುದಿಲ್ಲ. ಈಗ ಸಮಾಜದ ಹೆಸರಿನಿಂದ ನಡೆಯುತ್ತಿರುವಷ್ಟು ಕಾರ್ಯಗಳನ್ನು ಸರ್ಕಾರದ ವಿದ್ಯಾಭ್ಯಾಸಾದಿ ಸ್ವತಂತ್ರ ಶಾಖೆಗಳೇ ನಡಯಿಸಬಹುದಾಗಿರುವುದು.

ಈಗ ಕೂಡಿದ್ದ ಸಭೆಯಲ್ಲಿ ಮೆಂಬರುಗಳು ಆಯಾ ಶಾಖೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಅನೇಕ ಸೂಚನೆಗಳನ್ನು ಮಾಡಿದರು. ಇವುಗಳಲ್ಲಿ ಬಹು ಭಾಗವು ಪ್ರಜಾಪ್ರತಿನಿಧಿಸಭೆಯಲ್ಲೇ ಚರ್ಚಿತವಾಗಬಹುದಾಗಿದ್ದುವು. ರಾ|| ಬ|| ಮ|| ಎಂ. ಶ್ಯಾಮರಾಯರು ಮೊಟ್ಟಮೊದಲು ಭಾಷಣಮಾಡಿ ದಿವಾನರಿಗೆ ಸರ್ ಬಿರುದು ಪ್ರಾಪ್ತವಾದುದಕ್ಕಾಗಿ ಸಭಿಕರ ಸಂತೋಷವನ್ನು ನಿವೇದಿಸಿದರು. ಸಂಪದಭ್ಯುದಯ ಸಮಾಜವನ್ನು ಸ್ಥಿರಪಡಿಸಿದುದೂ ವಿದ್ಯಾಭ್ಯಾಸದ ಮೆಮೋರಾಂಡಮ್ಮನ್ನು ವ್ಯವಹರಣೆಗೆ ತರಲು ಸರ್ಕಾರದವರು ಮಾಡಿದ ಅಪ್ಪಣೆಯೂ ಸರ್ವಜನಾಮೋದಕವಾಗಿದೆಯೆಂಬುದನ್ನೂ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಉದಾರವಾಗಿ ಧನವ್ಯಯಮಾಡುತ್ತಿರುವುದನ್ನೂ ಕುರಿತು ಪ್ರಸಂಗಿಸಿದರು.

ಪ್ರಜಾಪ್ರತಿನಿಧಿ ಮಹಾಸಭೆ.

ಈ ಸಭೆಯ ಅಧಿವೇಶನವು ಕಳೆದ ತಾ|| ೧೭ನೆ ಶುಕ್ರವಾರ ಮಧ್ಯಾಹ್ನ ೧೨ ಗಂಟೆಗೆ ಮಂತ್ರಿವರ್ಯರಾದ ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್ ಬಿ.ಎ., ಕೆ.ಸಿ.ಐ.ಇ., ಸಿ.ಎಸ್.ಐ., ಯವರ ಅಧ್ಯಕ್ಷತೆಯಲ್ಲಿ ಆರಂಭಗೊಂಡಿತು. ಪದ್ಧತಿಯಂತೆ ಕೌನ್ಸಿಲರು, ಶಾಖಾಮುಖ್ಯಾಧಿಕಾರಿಗಳು, ಚೀಫ್ ಕೋರ್ಟ್ ನ್ಯಾಯಮೂರ್ತಿಗಳು, ಶ್ರೀಮನ್ಮಹಾರಾಜರ ಪ್ರೈವೆಟ್ ಸೆಕ್ರೆಟರಿಯವರು, ಡಿಸ್ಟ್ರಿಕ್ಟು ಡಿ|| ಕಮಿಷನರುಗಳೇ ಮೊದಲಾದ ದೊಡ್ಡಮನುಷ್ಯರುಗಳು ದಿವಾನರ ಪಕ್ಕಗಳಲ್ಲೂ ಹಿಂಗಡೆಯೂ ಉಚ್ಚಾಸನಗಳನ್ನಲಂಕರಿಸಿದ್ದರು. ಸೆಕ್ರೆಟೇರಿಯಟ್ಟಿನ ಉದ್ಯೋಗಿಗಳು ಮುಂಗಡೆ ಬಲಪಕ್ಕದಲ್ಲೂ ಪತ್ರಿಕಾಪ್ರತಿನಿಧಿಗಳು ಎಡಪಕ್ಕದಲ್ಲೂ, ಮುಂಗಡೆ ಪ್ರತಿನಿಧಿಪೀಠಗಳ ಮೇಲೆ ಬಹುಶಃ ೨೦೦ ಮಂದಿಗೆ ಮೇಲ್ಪಟ್ಟು ಪ್ರತಿನಿಧಿಗಳೂ ನೆರೆದಿದ್ದರು. ಸಭಾಧ್ಯಕ್ಷರು ತಮ್ಮ ಭಾಷಣವನ್ನು ಓದಿ ಮುಗಿಸಿದರು. ಬಳಿಕ ಪ್ರತಿನಿಧಿಗಳಲ್ಲೊಬ್ಬರಾದ ಮಿ|| ಅಬ್ಬಾಸ್‌ಖಾನರು ದಿವಾನರಿಗೆ ಸಾರ್ವಭೌಮರಿಂದ ಕೆ.ಸಿ.ಐ.ಇ. ಎಂಬ ಬಿರುದು ಪ್ರಾಪ್ತವಾದುದಕ್ಕಾಗಿಯೂ, ತತ್ರಾಪಿ ಅದು ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವದ ವಿಶೇಷ ಸಂತೋಷಸಮಯದಲ್ಲೇ ಪ್ರಾಪ್ತವಾದುದಕ್ಕಾಗಿಯೂ ತಮಗೆ ಇಮ್ಮಡಿಯಾಗಿ ಉಂಟಾಗಿರುವ ಸಂತೋಷವನ್ನು ಪ್ರಜಾಪಕ್ಷದಿಂದ ತಿಳಿಯಿಸುವ ಭಾಷಣವನ್ನು ಮಾಡಿದುದರಲ್ಲಿ—ಸಂಸ್ಥಾನದ ಬೊಕ್ಕಸದೊಳಗೆ ಹಣವಿಲ್ಲದ ಸಮಯದಲ್ಲಿ ಸರ್ದಾರರು ಮಂತ್ರಿಪದವಿಗೆ ಬಂದರೂ ತಮ್ಮ ವಿವೇಕಸಾಮರ್ಥ್ಯಾದಿವಿಶೇಷದಿಂದ ರಾಜ್ಯದ ಆಡಳತದಲ್ಲಿ ಯಾವ ಕೊರತೆಗೂ ಅವಕಾಶವಿಲ್ಲದಂತೆ ಸಾಗಿಸಿಕೊಂಡು ಹೋಗಲು ತೋರಿಸಿದ ಕೌಶಲವನ್ನೂ, ಸಂಸ್ಥಾನದ ಪ್ರಜೆಗಳಲ್ಲಿ ಪರಸ್ಪರ ವೈಷಮ್ಯವಿದ್ದುದನ್ನು ತೊಲಗಿಸಲಿಕ್ಕಾಗಿ ಮಿಲ್ಲರ್ ಸಂಘದವರದಿಯಮೇಲೆ ಸೂಕ್ತವಾದ ಅಪ್ಪಣೆಮಾಡಿ ಎಲ್ಲಪ್ರಜೆಗಳ ಮನಸ್ಸು ಪ್ರೀತಿಪಡಿಸಿದುದನ್ನೂ, ಸಕಲಪ್ರಜೆಗಳ ವಿದ್ಯಾಭ್ಯಾಸಕ್ಕೂ ಪ್ರೋತ್ಸಾಹಕವಾಗಿರುವ ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನು ವ್ಯವಹಾರಕ್ಕೆ ತರಲು ಅಪ್ಪಣೆಮಾಡಿದುದನ್ನೂ ಕುರಿತು ವರ್ಣಿಸಿ, ಇವೆಲ್ಲ ರೂಪಗಳಿಂದ ದೇಶಸೇವೆ ಮಾಡುವಲ್ಲಿ ಅವರು ತೋರಿಸುತ್ತಿರುವ ಶ್ರದ್ಧಾಸಾಮರ್ಥ್ಯಗಳಿಗೆ ಮೆಚ್ಚಿ ಸಾರ್ವಭೌಮ ಪ್ರಭುತ್ವದವರು ಸರ್ ಪ್ರಶಸ್ತಿಯನ್ನು ದಯಪಾಲಿಸಿದುದಕ್ಕಾಗಿ ತಮ್ಮೆಲ್ಲರಿಗೂ ಉಂಟಾಗಿರುವ ಸಂತೋಷವನ್ನು ನಿವೇದಿಸಿದರು. ಬಳಿಕ ಎಂ. ಸುಬ್ಬಯ್ಯನವರು ಅದೇ ಅಭಿನಂದನವನ್ನು ಮಾಡುವಲ್ಲಿ, ಹಿಂದಣ ಮಂತ್ರೀಶ್ವರರುಗಳ ಪ್ರಭುತ್ವದಲ್ಲಿ ಒಂದೊಂದು ಅಭ್ಯುದಯ ಕಾರ್ಯಗಳು ನಡೆದಿದ್ದರೂ ಅದೇ ಎಷ್ಟೋ ದೊಡ್ಡದಾಗಿ ಭಾವಿಸಲ್ಪಡುತ್ತಿದ್ದಿತು. ನಿಮ್ಮ ಕಾಲದಲ್ಲಿ ಅಭ್ಯುದಯಸಾಧಕವಾಗಿ ನಡೆದಿರುವ ಏರ್ಪಾಟು ಅವೆಲ್ಲಕ್ಕಿಂತಲೂ ಹೆಚ್ಚಾದುದು. ವಿದ್ಯಾಪ್ರಸಾರದ ವಿಷಯದಲ್ಲೂ ಅಂತಜೋದ್ಧಾರ ವಿಷಯದಲ್ಲೂ ಪ್ರಭುತ್ವೋದ್ಯೋಗಗಳನ್ನು ಸರ್ವಜನವರ್ಗದವರಿಗೂ ವಿನಿಯೋಗಿಸುವ ವಿಷಯದಲ್ಲೂ ಮಾಡಿರುವ ಏರ್ಪಾಡುಗಳೆಲ್ಲಾ ಬಹುಕಾಲದಿಂದ ಅನುಸರಿಸಿ ಬಂದಿದ್ದ ನ್ಯೂನತೆಗಳನ್ನೆಲ್ಲಾ ಪರಿಹರಿಸುವ ಶಾಶ್ವತವಾದ ಶಾಸನಗಳಾಗಿರುತ್ತವೆ ಎಂದು ಮೊದಲಾಗಿ ಭಾಷಣ ಮಾಡಿದರು. ಬಳಿಕ ಇವೇ ತೆರದ ಅಭಿನಂದನಗಳನ್ನು ಒಕ್ಕಲಿಗರ ಸಂಘದ ಪರವಾಗಿ ಬ್ಯಾರಿಸ್ಟರ್ ವಿಜಯದೇವರವರೂ, ವೀರಶೈವ ಸಮಾಜದ ಪಕ್ಷದಿಂದ ಮ|| ಜಿ. ಪರಮಶಿವಯ್ಯ, ಬಿ.ಎ. ಎಲ್ ಎಲ್. ಬಿ. ಯವರೂ, ಇಂಡಿಯನ್ ಕ್ರೈಸ್ತಸಂಘದ ಪರವಾಗಿ ಮಿ|| ಇಸಾಕ್‌ರವರೂ ಭಾಷಣಗಳನ್ನು ಮಾಡಿ ವಂದಿಸಿದರು. ಪ್ರಜಾಪ್ರತಿನಿಧಿಸಭಾ ಸಭಿಕರ ಪರವಾಗಿ ಮ|| ವಾಸುದೇವರಾಯರೂ, ಮೈಸೂರು ಪುರಜನರ ಮತ್ತು ಮೈಸೂರು ಡಿಸ್ಟ್ರಿಕ್ಟಿನ ಪ್ರಜೆಗಳ ಪರವಾಗಿ ಅಭಿನಂದನವಂದನೆಗಳನ್ನು ಮ|| ಪುರುಷೋತ್ತಮಾನಂದಗಿರಿ ಬಾವಾಜಿಯವರೂ ಶ್ರುತಪಡಿಸಿದರು. ಇವೆಲ್ಲಕ್ಕೂ ದಿವಾನರು ಪ್ರತ್ಯುತ್ತರವನ್ನು ಕೊಟ್ಟುದರಲ್ಲಿ ಅವರ ಸಹಜ ಸೌಜನ್ಯ ಸೌಶೀಲ್ಯ ವಿನಯಗಳು ಮೂರ್ತೀಭವಿಸಿದ್ದುವು. ಹೇಗೆಂದರೆ—"ನನಗೆ ಶ್ರೀಮಜ್ಜಾರ್ಜ್ ಸಾರ್ವಭೌಮರವರು ಬಿರುದನ್ನು ದಯಪಾಲಿಸಿದುದಕ್ಕಾಗಿ ತಾವೆಲ್ಲರೂ ಸಂತೋಷವನ್ನು ವ್ಯಕ್ತಪಡಿಸಿದುದಕ್ಕಾಗಿ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಇದು ನನಗೆಮಾತ್ರ ಬಂದ ಗೌರವವೆಂದು ನಾನು ತಿಳಿಯುವುದಿಲ್ಲ. ಈ ಸಭೆಯ ಅಧ್ಯಕ್ಷನಾದುದರಿಂದ ತನ್ಮೂಲಕ ನನಗೆ ಉಂಟಾದ ಮರ್ಯಾದೆಯು ತಮಗೆಲ್ಲರಿಗೂ ಸಂಬಂಧಪಟ್ಟುದೆಂದು ಭಾವಿಸಿರುತ್ತೇನೆ. ಈಚೆಗೆ ಗೌರ್ನಮೆಂಟಿನಿಂದ ಕೊಡೋಣಾದ ಕೆಲ ಅಪ್ಪಣೆಗಳನ್ನು ಕುರಿತು ನನ್ನನ್ನು ನೀವುಗಳು ಅಭಿನಂದಿಸಿರುತ್ತೀರಿ. ಈ ಅಪ್ಪಣೆಗಳಿಗೆ ನಾನೇ ಕಾರಣನಲ್ಲ. ತತ್ಸಂಬಂಧವಾಗಿ ಹಿಂದಣಿಂದ ವ್ಯವಸಾಯ ನಡೆದು ಅವುಗಳ ಮೊಳಕೆಯಾಗಿದ್ದಿತು. ನನ್ನ ಕಾಲಕ್ಕೆ ಅವುಗಳಿಗೆ ಸ್ವಲ್ಪ ಜಲಸೇಚನೆ ಮೊದಲಾದ ಕಾರ್ಯಗಳು ನಡೆದುದರಿಂದ ಅವು ಕಾರ್ಯರೂಪಕ್ಕೆ ಬಂದುವು. ಅದುಕಾರಣ ಅವುಗಳ ಶ್ರೇಯಸ್ಸಿಗೆ ಅಲ್ಪನಾದ ನಾನೇ ಕಾರಣನಲ್ಲ. ನೀವೆಲ್ಲರೂ ನನ್ನ ವಿಷಯದಲ್ಲಿ ತೋರಿಸಿದ ಪ್ರೀತಿಗಾಗಿ ವಂದನೆಯನ್ನರ್ಪಿಸುತ್ತೇನೆ" ಎಂದು ಅಪ್ಪಣೆ ಕೊಡಿಸಿದರು. ಈ ವಿಶೇಷ ವಚನಗಳನ್ನು ಕೇಳಿ ಸಭಿಕರು ಆನಂದದಿಂದ ಕರತಾಡನವನ್ನು ವಿಶೇಷವಾಗಿ ಮಾಡಿದರು. ವಾಗ್ಮಿಗಳೆನಿಸಿಕೊಂಡು ಸಭೆಯಲ್ಲಿದ್ದ ಬ್ರಾಹ್ಮಣಪ್ರತಿನಿಧಿಗಳಲ್ಲಿ ಯಾರೊಬ್ಬರೂ ಈ ತೆರದ ಭಾಷಣವನ್ನು ಲೇಶಮಾತ್ರವಾದರೂ ಮಾಡಿ ಅಭಿನಂದಿಸದುದು ಅವರುಗಳ ಹೃದಯಲಕ್ಷಣವನ್ನು ವ್ಯಕ್ತಪಡಿಸುವ ಕನ್ನಡಿಯಾಗಿದ್ದಿತು.

ಬಳಿಕ ಸಾಮಾನ್ಯ ವಿಷಯಗಳ ಚರ್ಚೆಗೆ ಆರಂಭವಾಗಿ ಎಲ್ಲವೂ ೫ ಗಂಟೆಯೊಳಗೆ ಮುಗಿದುವು. ಆ ವಿಷಯಗಳಲ್ಲಿ ಹಲವು ಸಂಪದಭ್ಯುದಯ ಸಮಾಜ ಮೊದಲಾದುವುಗಳಲ್ಲಿ ಹಿಂದೆಯೇ ಚರ್ಚಿತವಾಗಿರುವುದೆಂಬುದೇ ಮೊದಲಾದ ಕಾರಣಗಳಿಂದ ಪ್ರತಿಪಾದಿಸಲಿಕ್ಕಿಟ್ಟಿದ್ದವರಲ್ಲಿ ಹಲವರು ತಾವೇ ಅದನ್ನು ಹಿಂದಕ್ಕೆ ತೆಗೆದುಕೊಂಡರು.

ಮರುದಿನ ಬೆಳಗ್ಗೆ ಪ್ರತಿನಿಧಿಗಳು ಫೈನಾನ್ಸಿಯಲ್ ಸೆಕ್ರೆಟರಿಯವರ ಇದಿರಿನಲ್ಲಿ ಬಡ್ಜೆಟ್ಟಿನ ವಿಷಯಕವಾಗಿ ಚರ್ಚಿಸಿ ತಿಳಿದುಕೊಳ್ಳಬೇಕಾದುದನ್ನು ಅರಿತುಕೊಂಡರು. ಮಧ್ಯಾಹ್ನೋತ್ತರ ೧೨ ಗಂಟೆಗೆ ಸಭೆಯು ಮತ್ತೆ ಸೇರಿತು. ಬಡ್ಜೆಟ್ಟಿನ ಮೇಲಣ ಚರ್ಚೆಯೆಲ್ಲಾ ನಿನ್ನೆಗೆ ಪೂರೈಸಿದ್ದರೆ ಸಭಾಕಾರ್ಯಗಳು ಸೋಮವಾರಕ್ಕೆ ಮುಗಿಯುವುವು.

ದಿವಾನರು ಈ ಸಭೆಯಲ್ಲಿ ಮಾಡಿದ ಭಾಷಣವು ಸಂಸ್ಥಾನದ ಈಗಣ ಆರ್ಥಿಕ ದುಸ್ಸ್ಥಿತಿಯ ಸುದ್ದಿಯನ್ನು ಕೇಳಿ ವಿಶೇಷವಾಗಿ ಕಳವಳಗೊಳ್ಳುತ್ತಿದ್ದ ಪ್ರಜೆಗಳಿಗೆಲ್ಲಾ ವಿಷಯಗಳನ್ನು ಕೂಲಂಕಷವಾಗಿ ಬಿಚ್ಚಿ ಹೇಳಿ ಧೈರ್ಯಪಡಿಸುವುದಕ್ಕೆ ಸಾಧಕವಾಗಿರುತ್ತದೆ. ಹಿಂದೆ ಸರ್ಕಾರದವರು ಮಾಡಿದ ಸಾಲವನ್ನು ಪ್ರಭುತ್ವದವರು ಯಾತಕ್ಕೆ ವಿನಿಯೋಗಿಸಿದರೆಂಬುದನ್ನೂ ಈಗ ಮತ್ತೆ ೧ ಕೋಟಿ ರೂ. ಗಳ ಸಾಲವನ್ನು ಅದೇ ತೆರದ ಅವಶ್ಯಕತೆಗಾಗಿ ಮಾಡಬೇಕಾಗಿರುವುದನ್ನೂ ಮುಂದೆ ಆಯಕ್ಕೆ ಮೀರದಂತೆ ವ್ಯಯದ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಮಾಡಿರುವ ನಿಶ್ಚಯವನ್ನೂ, ಅಧೈರ್ಯಪಡಬೇಕಾದ ಸ್ಥಿತಿಗಳುಂಟಾಗದಂತೆ ಮುಂದಾಗಿಯೇ ಎಚ್ಚರಿಕೆ ತೆಗೆದುಕೊಂಡು ಆಯವ್ಯಯಗಳನ್ನು ಸರಿಪಡಿಸಿಕೊಂಡುದನ್ನೂ, ಕೃಷ್ಣರಾಜಸಾಗರದ ಕಟ್ಟೆಯನ್ನು ೧೨೪ ಅಡಿಯೆತ್ತರಕ್ಕೆ ಮುಂದಣ ವರ್ಷದಲ್ಲೇ ಕಟ್ಟಿಸಿ ಮುಗಿಯಿಸಬೇಕಾಗಿರುವುದನ್ನೂ ಅದರ ನಾಲೆಗಳ ಕೆಲಸವನ್ನು ಮಾತ್ರ ಹಣವೊದಗಿದಂತೆ ಮಾಡಬೇಕಾಗಿರುವ ಸಂಗತಿಯನ್ನೂ ಭದ್ರಾವತಿಯ ಕಬ್ಬಿಣದ ಯಂತ್ರಾಲಯಪ್ರತಿಷ್ಠಾಪನೆಗೆ ೧೯೦ ಲಕ್ಷದವರೆಗೆ ವೆಚ್ಚವು ಹಿಡಿಯುವಂತಿರುವುದನ್ನೂ ಕೃಷ್ಣರಾಜಸಾಗರ, ವಿದ್ಯುಚ್ಛಕ್ತಿಯ ೬ ನೆ ನಿರ್ಮಾಣ, ಭದ್ರಾವತಿಯ ಲೋಹಯಂತ್ರಪ್ರತಿಷ್ಠಾಪನೆ ಈ ಮೂರು ಕಾರ್ಯಗಳಿಗೇ ಮುಂದಣ ವರ್ಷದಲ್ಲಿ ೧ ಕೋಟಿಯೂ ೧ ಲಕ್ಷ ರೂ. ಗಳನ್ನು ವ್ಯಯಮಾಡಬೇಕಾಗಿರುವುದನ್ನೂ ಸಾಲಮಾಡದೆ ಈಗಣ ಹುಟ್ಟುವಳಿಯಿಂದಲೇ ಇಷ್ಟು ದೊಡ್ಡ ಮೊತ್ತವನ್ನು ಒದಗಿಸುವುದು ಸಾಧ್ಯವಲ್ಲದಿರುವುದೇ ಮೊದಲಾದುವುಗಳ ವಿವರಣವನ್ನೂ ಮುಂದಣ ವರ್ಷದಲ್ಲಿ ಶಾಶ್ವತವ್ಯಯಗಳ ಜತೆಗೆ ಹಿಂದಣ ಸಾಲದ ಮುಂದಣ ಸಾಲದ ಬಡ್ಡಿಗಳನ್ನೆಲ್ಲಾ ಕಳೆದೂ || ಲಕ್ಷ ರೂ. ಗಳವರೆಗೆ ಮಿಗಿಸುವಂತೆ ಬಡ್ಜೆಟ್ ನಿರ್ಮಿತವಾಗಿರುವುದನ್ನೂ ವಿವರಿಸಿರುವರು. ಎಲ್ಲ ಪ್ರಜೆಗಳೂ ಕೂಲಂಕಷವಾಗಿ ಓದಿ ತಿಳಿಯಬೇಕಾದ ಸಂಗತಿಗಳು ಅದರಲ್ಲಿ ಪೂರ್ಣವಾಗಿರುವುದರಿಂದ ಅದರ ಭಾಗಗಳನ್ನು ಈ ಸಂಚಿಕೆಯಲ್ಲೂ ಮುಂದಣ ಸಂಚಿಕೆಯಲ್ಲೂ ಪ್ರಕಟಿಸುವವರಾಗಿದ್ದೇವೆ.

ಒಳದೇಶದ ವೃತ್ತಾಂತಗಳು.

ಕುದುರೆಯ ಜೂಜುಗಳು ನಿನ್ನೆಯದಿನ ಆರಂಭವಾದುವು. ತಾ|| ೨೧ ರಲ್ಲೂ ೨೩ ರಲ್ಲೂ ಸಹ ನಡೆಯುವುವು.

ಈ ಪತ್ರಿಕೆಯಲ್ಲಿ ಮದ್ರಾಸಿನ ಎಸ್. ಆರ್. ಕೃಷ್ಣ ಅಂಡ್ ಕೋ ಯವರ ಪ್ರಕಟನ ಪತ್ರಿಕೆಯನ್ನು ಗರ್ಭೀಕರಿಸಿದ್ದೇವೆ.

ವರ್ಧಂತ್ಯುತ್ಸವಕ್ಕಾಗಿ ರಾಜಧಾನಿಗೆ ಎಲ್ಲಾ ಕಡೆಯಿಂದಲೂ ಸ್ಪೆಷಲ್ ಟ್ರೇನುಗಳನ್ನು ಬಿಡುವುದಕ್ಕೆ ರೈಲ್ವೆ ಶಾಖೆಯವರು ಏರ್ಪಡಿಸಿಕೊಟ್ಟಿದ್ದರು.

ಬ್ರಿಟಿಷ್ ರೆಸಿಡೆಂಟರು ಕಳೆದ ತಾ|| ೧೫ ರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿದರು. ಮರ್ಯಾದಾರ್ಥವಾಗಿ ೧೩ ಗುಂಡುಗಳು ಹಾರಿಸಲ್ಪಟ್ಟುವು. ಈ ವಾರವೆಲ್ಲಾ ಇವರು ರಾಜಧಾನಿಯಲ್ಲೇ ಇರುವರು.

ಕಳೆದ ಶನಿವಾರ ಬೆಳಗ್ಗೆ ಧರ್ಮಪ್ರಕಾಶ ಡಿ. ಬನುಮಯ್ಯನವರ ಶಾಲಾಭವನದಲ್ಲಿ ಪ್ರಜಾಮಿತ್ರಮಂಡಲಿಯ ಸಮ್ಮೇಳನವು ರಾ|| ಸಾ|| ಎಚ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ್ದು ಕೆಲವು ವಿಶೇಷ ನಿರ್ಧಾರಗಳು ಮಾಡಲ್ಪಟ್ಟುವು.

ಮೈಸೂರು ಲಿಟರರಿ ಅಂಡ್ ಡ್ರಮಾಟಿಕ್ ಅಸೋಸಿಯೇಷನ್ನಿನವರು ರತ್ನಾವಳಿ ಥಿಯೇಟರಿನಲ್ಲಿ ಈದಿನ ಒಂದು ಪ್ರಯೋಗವನ್ನು ಮಾಡಿ ಅದರಿಂದ ಬಂದ ಉತ್ಪತ್ತಿಯನ್ನು ಮರಿಮಲ್ಲಪ್ಪನವರ ಹೈಸ್ಕೂಲಿಗೆ ಕೊಡುವವರಾಗಿದ್ದಾರೆ. ಶ್ರೀಮದ್ಯುವರಾಜರೂ, ದಿವಾನ್ ಸರ್ ಕಾಂತರಾಜ ಅರಸಿನವರೂ ದಯಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ.

ವಿದ್ಯಾಭ್ಯಾಸ ಶಾಖೆಯ ಇನ್|| ಜನರಲ್‌ರವರಾಗಿದ್ದ ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟರೆಂದೂ ಅದನ್ನು ಶ್ರೀಮನ್ಮಹಾರಾಜರು ಕೂಡ ಯತ್ನವಿಲ್ಲದೆ ಅಂಗೀಕರಿಸಿದರೆಂದೂ ಕೇಳಿದೆವು. ಇವರ ಸರ್ವೀಸು ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಸ್ವಲ್ಪಕಾಲ ಲಭ್ಯವಾಗಿದ್ದರೂ ಅದರಿಂದುಂಟಾದ ಫಲವು ಎಂದೆಂದಿಗೂ ಮರೆಯದ ಶಾಶ್ವತ ಫಲಪ್ರದವಾಗಿರುವುದು. ದೊಡ್ಡ ಜಮೀನ್ದಾರರೂ ಲಕ್ಷಾಧಿಕಾರಿಗಳೂ ಪೂರ್ಣ ವಿದ್ಯಾವಂತರೂ ಲೋಕಾನುಭವಿಗಳೂ ಆದ ಇವರು ವಿಶೇಷಕಾರ್ಯಾಂತರದ ಅವಸರದಿಂದ ನಮ್ಮ ಸಂಸ್ಥಾನದ ಉದ್ಯೋಗವನ್ನು ಬಿಟ್ಟು ತಮ್ಮ ಜನ್ಮಪ್ರಾಂತಕ್ಕೆ ಹೋಗಬೇಕಾಯಿತೆಂದು ತಿಳಿಯುತ್ತೇವೆ. ಇನ್ನು ೧-೨ ವರ್ಷಗಳವರೆಗಾದರೂ ಇವರು ಇದೇ ಉದ್ಯೋಗದಲ್ಲಿರದೆ ಬಿಟ್ಟುದು ವ್ಯಸನಕರ. ಸರ್ವೇಶ್ವರನು ಇವರಿಗೆ ಸರ್ವತ್ರ ಸನ್ಮಂಗಳವನ್ನುಂಟುಮಾಡಲಿ.

ಕೊಡಗು ಸೋಮವಾರಪೇಟೆಯಲ್ಲಿ ಪೂರ್ಣ ಶ್ರೀಮಂತರೂ ದೊಡ್ಡ ಕಾಫಿತೋಟಗಾರರೂ ಆದ ಹಿಕುರುಹಿನ ಜನಾಂಗಕ್ಕೆ ಸೇರಿದ ಮ|| ಡಿ. ಚನ್ನಬಸವಶೆಟ್ಟರು ಅಸ್ವಸ್ಥರಾಗಿದ್ದು ಕಳೆದ ತಾ|| ೬ ರಲ್ಲಿ ವಿಧಿವಶರಾದರೆಂದು ತಿಳಿಸಲು ಬಹಳ ಖೇದವಾಗುತ್ತದೆ. ಇವರಿಗೆ ಮರಣಕಾಲದಲ್ಲಿ ೩೫ ವರ್ಷ ವಯಸ್ಸು ಮಾತ್ರವಾಗಿದ್ದಿತು. ಮತ್ತು ೩ ಜನ ಪತ್ನಿಯರಿರುವರು. ಈ ಶ್ರೀಮಂತರು ತಮ್ಮ ಹಿರೇಕುರುಹಿನ ಜನಾಂಗದವರ ವಿದ್ಯಾಭಿವೃದ್ಧಿಗಾಗಿ ಬೆಂಗಳೂರಿನಲ್ಲಿ ವಿದ್ಯಾರ್ಥಿನಿಲಯವನ್ನು ಕಟ್ಟಲು ೨೦ ಸಾವಿರ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನಮಾಡಿದ್ದರು. ಇವರು ಸೋಮವಾರಪೇಟೆಯಲ್ಲಿ ೧ ಲಕ್ಷ ರೂಪಾಯಿಗಳನ್ನು ಮುಟ್ಟಿಸಿ ದೊಡ್ಡಮನೆಯನ್ನು ಕಟ್ಟಿಸಿ ಕಳೆದ ಮೇ ತಾ|| ೨೮ ರಲ್ಲಿ ಅದರ ಪ್ರವೇಶಮಹೋತ್ಸವವನ್ನು ೨೦ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಇವರ ಅಕಾಲಮರಣದಿಂದ ಹಿರೇಕುರುಹಿನ ಜನಾಂಗಕ್ಕೆ ವಿಶೇಷ ನಷ್ಟವಾಯಿತೆಂದು ಮ|| ಎಚ್. ಆರ್. ತಿರುಮಲಶೆಟ್ಟರು ತಿಳಿಸಿರುತ್ತಾರೆ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ

1921ನೆಯ ಜೂನ್ 17.

ಪೀಠಿಕೆ

ಮಹಾಶಯರೇ,

ಘನವನ್ನೈದಿದ ನಮ್ಮ ಶ್ರೀಮನ್ಮಹಾರಾಜಾಸಾಹೇಬ್ಬಹದುರವರ ಪರಮಾನುಗ್ರಹರೂಪವಾದ ಆಜ್ಞಾನುಸಾರ ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಈ ದ್ವಿತೀಯ ಅಧಿವೇಶನಕ್ಕೆ ತಮ್ಮಗಳನ್ನು ಆದರಪೂರ್ವಕವಾಗಿ ಬರಮಾಡಿಕೊಳ್ಳಲು ತುಂಬಾ ಸಂತೋಷಿಸುತ್ತೇವೆ. ಸಂಸ್ಥಾನದ ಆಯವ್ಯಯಗಳ ಅಂದಾಜನ್ನು ಪರಿಶೀಲನೆ ಮಾಡುವುದಕ್ಕಾಗಿಯೇ ಈ ಅಧಿವೇಶನವು ಏರ್ಪಟ್ಟಿರುವ ಪ್ರಯುಕ್ತ ಮಳೆಬೆಳೆಗಳ ವಿಚಾರವಾಗಿಯೂ, ಆಹಾರಧಾನ್ಯಗಳ ವಿಚಾರವಾಗಿಯೂ ಧಾರಣೆವಾಸಿಗಳ ವಿಚಾರವಾಗಿಯೂ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಿ ಅನಂತರ ಸದರೀ ಅಂದಾಜಿನ ಮುಖ್ಯಾಂಶಗಳನ್ನು ವಿವರಿಸಲುಪಕ್ರಮಿಸುತ್ತೇವೆ.

ಮಳೆಬೆಳೆಗಳು.

ಕಳೆದ ವರ್ಷ ಸಾಕಾದಷ್ಟು ಮಳೆ ಬೀಳಲಿಲ್ಲ. ಸರಾಸರಿಗಿಂತಲೂ ಹತ್ತು ಹದ ಮಳೆ ಕಡಿಮೆಯಾಗಿ ಬಿತ್ತು. ಇದರಿಂದ ಬೇಸಾಯಕ್ಕೆ ಅನುಕೂಲ ಸಾಲದೆಹೋಯಿತು. ತುಮಕೂರು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ತರೀಫಸಲು ತುಂಬಾ ಕಡಿಮೆಯಾದುದರಿಂದ ತರೀ ಕಂದಾಯದ ಒಂದು ಭಾಗದ ವಸೂಲಾತಿಯನ್ನು ಕೆಲವುಕಾಲದಮಟ್ಟಿಗೆ ನಿಲ್ಲಿಸಬೇಕಾಯಿತು. ಈ ರೀತಿ ನಾವು ನಿರೀಕ್ಷಿಸಿದಷ್ಟು ಚೆನ್ನಾಗಿ ಬೆಳೆ ಆಗಿಲ್ಲವಾದರೂ ನಾವು ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಪೈಕಿ ಬೆಳೆ ಸರಿಯಾಗಿ ಆಗದೆ ಇದ್ದ ಪ್ರದೇಶಗಳಲ್ಲಿ ಈ ವರ್ಷದ ಪ್ರಾರಂಭದಲ್ಲಿ ಸಂಚಾರ ಮಾಡಿದಾಗ ದುರ್ಭಿಕ್ಷದ ಚಿಹ್ನೆಗಳು ಎಲ್ಲಿಯೂ ತೋರಿಬರಲಿಲ್ಲವೆಂದು ತಿಳಿಸಲು ಸಂತೋಷಿಸುತ್ತೇವೆ.

ಆಹಾರಧಾನ್ಯಗಳ ವಿಷಯವಾದ ನಿರ್ಬಂಧ.

ಆದರೆ ನಮ್ಮ ಸೀಮೆಯಲ್ಲಿ ಮಳೆಬೆಳೆಗಳು ಚೆನ್ನಾಗಿ ಆಗದೆ ಇದ್ದುದರಿಂದಲೂ, ನಮ್ಮ ಸೀಮೆಯ ಒತ್ತಿನಲ್ಲಿರುವ ಕುಂಪಣಿ ಸೀಮೆಯ ಕೆಲವು ಪ್ರಾಂತ್ಯಗಳಲ್ಲಿ ದುರ್ಭಿಕ್ಷದ ಸೂಚನೆಗಳು ತಲೆದೋರಿದ್ದುದರಿಂದಲೂ ಸಹ ಆಹಾರಧಾನ್ಯಗಳನ್ನು ನಮ್ಮ ಸೀಮೆಯಿಂದ ಹೊರಕ್ಕೆ ಸಾಗಿಸಕೂಡದೆಂಬ ವಿಷಯದಲ್ಲಿ ಏರ್ಪಡಿಸಿದ್ದ ನಿರ್ಬಂಧವನ್ನು ತೆಗೆದುಹಾಕದೇ ಇಟ್ಟಿರಬೇಕಾಗಿ ಬಂತು. ಆದಾಗ್ಯೂ ಸರಿಯಾಗಿ ಬೆಳೆ ಆಗದೆ ಇದ್ದ ಬ್ರಿಟಿಷ್ ಡಿಸ್ಟ್ರಿಕ್ಟುಗಳಿಗೆ ಆಹಾರಧಾನ್ಯಗಳನ್ನು ಒದಗಿಸುವ ವಿಷಯದಲ್ಲಿ ಎಂದಿನಂತೆ ಈಗಲೂ ಸಹಾಯಮಾಡುತ್ತಿರುವುದಾಗಿದೆ. ಕಳೆದ ಅಕ್ಟೋಬರ್ ತಿಂಗಳಿಂದೀಚೆಗೆ ನಿರ್ಬಂಧಕ್ಕೆ ಒಳಪಟ್ಟ 3,650 ಟನ್ ಆಹಾರ ಧಾನ್ಯಗಳನ್ನು ಸದರೀ ಪ್ರಾಂತಕ್ಕೆ ಒದಗಿಸಿರುತ್ತೇವೆ. ಅಲ್ಲದೆ ಇದೇ ಕಾಲದಲ್ಲಿ ನಮ್ಮ ಸೀಮೆಯ ಉಪಯೋಗಕ್ಕಾಗಿ 4,150 ಟನ್ ಅಕ್ಕಿಯು ಹೊರಗಿನಿಂದ ಬಂದಿರುತ್ತದೆ. ಈಗ ಮಂಡಿಗಳಲ್ಲಿ ಬೇಕಾದಷ್ಟು ಆಹಾರಧಾನ್ಯವು ಮಾರಾಟಕ್ಕೆ ಬರುತ್ತಿರುವುದರಿಂದ ಸರ್ಕಾರಿ ಡಿಪೋಗಳನ್ನೆಲ್ಲಾ ಮುಚ್ಚಿರುತ್ತೇವೆ. ಫುಡ್ ಕಂಟ್ರೋಲರವರ ಹುದ್ದೆಯನ್ನು ಮೇ 1ನೆಯ ತಾರೀಖು ಲಾಗಾಯಿತು ವಜಾಮಾಡಿರುತ್ತೇವೆ. ಆಹಾರಧಾನ್ಯಗಳನ್ನು ಹೊರಗೆ ಸಾಗಿಸುವ ವಿಷಯದಲ್ಲಿ ಇರುವ ನಿರ್ಬಂಧಗಳನ್ನೆಲ್ಲಾ ಈ ತಿಂಗಳ ಆಖೈರಿನಿಂದ ತೆಗೆದುಹಾಕಿಬಿಡುತ್ತೇವೆ.

ಧಾರಣೆವಾಸಿಗಳು.

ಆಹಾರಧಾನ್ಯಗಳ ಮತ್ತು ಸಾಮಾನ್ಯವಾಗಿ ಎಲ್ಲಾ ಪದಾರ್ಥಗಳ ಧಾರಣೆಗಳು ಯುದ್ಧಕ್ಕೆ ಮೊದಲಿನಲ್ಲಿದ್ದ ಧಾರಣೆಗಿಂತಲೂ ಇನ್ನೂ ಹೆಚ್ಚಿನಲ್ಲೇ ಇವೆ. ಆದರೂ ಈಚೆಗೆ ಧಾರಣೆಗಳು ವಿಶೇಷಮಟ್ಟಿಗೆ ತಗ್ಗಿ 1918ನೆ ಜುಲೈ ತಿಂಗಳಲ್ಲಿದ್ದಷ್ಟಕ್ಕೆ ಇಳಿದಿರುವುದನ್ನು ಕೇಳಿ ಸಂತೋಷಿಸಬೇಕು.

ಕೆಲವು ಕಾಲದಿಂದೀಚೆಗೆ ವೃತ್ತಾಂತಪತ್ರಿಕೆಗಳವರೂ, ಪ್ರಜೆಗಳೂ ಸಂಸ್ಥಾನದ ಆಯವ್ಯಯಗಳ ವಿಷಯದಲ್ಲಿ ಹೆಚ್ಚು ಹೆಚ್ಚಾಗಿ ಆಸಕ್ತಿಯನ್ನು ತೋರ್ಪಡಿಸುತ್ತ ಬಂದಿರುತ್ತಾರೆ. ರಾಜ್ಯಾಡಳಿತದಲ್ಲಿ ಮುಖ್ಯಭಾಗವಾದ ಈ ವಿಷಯಕ್ಕೆ ಈ ರೀತಿ ಗಮನ ಕೊಡುತ್ತಿರುವುದು ನಮಗೆ ಸಂತೋಷಕರವಾಗಿದೆ. ವೃತ್ತಾಂತಪತ್ರಿಕೆಗಳಲ್ಲಿ ವಿಚಾರಮಾಡಿ ಚರ್ಚಿಸುತ್ತಿರುವುದನ್ನೂ ನ್ಯಾಯವಿಧಾಯಕ ಸಭೆಯಲ್ಲಿಯೂ, ಈ ಸಭೆಯಲ್ಲಿಯೂ ಪ್ರಶ್ನೆಗಳು ಕೇಳುತ್ತಿರುವುದನ್ನೂ ನೋಡಿದರೆ ಸಂಸ್ಥಾನದ ಸರಿಯಾದ ಆಯವ್ಯಯದ ಸ್ಥಿತಿಯನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ಪ್ರಜೆಗಳಲ್ಲಿ ನೆಲೆಗೊಂಡಿರುವಂತೆ ವ್ಯಕ್ತವಾಗುತ್ತದೆ. ಆದುದರಿಂದ ನಾವು ಈ ಸಂದರ್ಭದಲ್ಲಿ ಸಂಸ್ಥಾನದ ಆದಾಯ ವೆಚ್ಚದ ನಿಜಸ್ಥಿತಿಯನ್ನು ಸಂಪೂರ್ಣವಾಗಿ ವಿವರಿಸಬೇಕೆಂದು ಉದ್ದೇಶ ಮಾಡಿರುತ್ತೇವೆ. ಈ ವಿವರಗಳನ್ನೆಲ್ಲಾ ಸಾವಧಾನವಾಗಿ ಕೇಳಿದುದೇ ಆದರೆ ಈಗ ಹಣಕ್ಕೆ ಮುಗ್ಗಟ್ಟಾಗಿರುವ ದೆಸೆಯಿಂದ ಎಲ್ಲಾ ಖರ್ಚುಬಾಬುಗಳಿಗೂ ಹಣ ಒದಗಿಸುವುದು ಅಸಾಧ್ಯವಾಗಿ ಪರಿಣಮಿಸಿದ್ದರೂ ಕೂಡ ನಮ್ಮ ಸಂಸ್ಥಾನದ ದ್ರವ್ಯೋಪಪತ್ತಿಸ್ಥಿತಿಗೆ ಮಾತ್ರ ಲೇಶಮಾತ್ರವೂ ಚ್ಯುತಿಯುಂಟಾಗಿಲ್ಲವೆಂಬುದು ತಮ್ಮೆಲ್ಲರಿಗೂ ದೃಢಪಡುವುದೆಂತ ನಂಬಿದ್ದೇವೆ.

1920-21ನೆಯ ವರ್ಷದ ತಿದ್ದುಪಾಟಾದ ಅಂದಾಜು.

ಮೊದಲು ಚಾಲ್ತಿ ವರ್ಷದ ಸ್ಥಿತಿಯನ್ನು ವಿವರಿಸುತ್ತೇವೆ. ಕಳೆದ ವರ್ಷ ಸಂಸ್ಥಾನದ ಬಡ್ಜೆಟ್ಟನ್ನು ನಿರ್ಧರಿಸಿದಾಗ, ಈ ವರ್ಷದ ಹುಟ್ಟುವಳಿಯು 3,15,15,000 ರೂಪಾಯಿ ಆದೀತೆಂತಲೂ, ಖರ್ಚು 3,24,66,000 ರೂಪಾಯಿ ಆದೀತೆಂತಲೂ, ಇದರಿಂದ ಖರ್ಚಿಗೆ 9½ ಲಕ್ಷ ರೂಪಾಯಿ ಸಾಲದೆ ಬರಬಹುದೆಂತಲೂ ನಿರೀಕ್ಷಿಸಿತ್ತು. ಆದರೆ ತಿದ್ದುಪಾಟಾದ ಅಂದಾಜಿನ ಮೇರೆಗೆ ಈ ವರ್ಷ ಸುಮಾರು 20 ಲಕ್ಷ ರೂಪಾಯಿಯಷ್ಟು ಖರ್ಚಿಗೆ ಸಾಲದೆ ಬೀಳುತ್ತಿತ್ತೆಂದು ತೋರುತ್ತದೆ. ಮುಂದೆ ಸೂಚಿಸಿರುವಂತೆ ಸಾಧ್ಯವಾದಷ್ಟು ಖರ್ಚು ಖೋತಾ ಮಾಡುವ ಪ್ರಯತ್ನಗಳನ್ನು ಮೊದಲೇ ನಡಿಸದೆ ಹೋಗಿದ್ದಲ್ಲಿ ಇನ್ನೂ ಹೆಚ್ಚು ಮೊಬಲಗು ಸಾಲದೆ ಬೀಳುತ್ತಿತ್ತು. ಮೊದಲನೆಯ ಅಂದಾಜಿಗಿಂತ ತಿದ್ದುಪಾಟಾದ ಅಂದಾಜಿನಲ್ಲಿ ಈ ರೀತಿ 10½ ಲಕ್ಷ ರೂಪಾಯಿ ಕಮ್ಮಿ ಬಿದ್ದಿರುವುದಕ್ಕೆ ವರಮಾನದ ಕೆಲವು ಮುಖ್ಯ ಬಾಬುಗಳಲ್ಲಿ ಹುಟ್ಟುವಳಿಯು ಕಮ್ಮಿಯಾಗಿರುವುದೇ ಕಾರಣವಾಗಿದೆ. ಕೆಲವು ಬಾಬುಗಳಿಂದ ಹೆಚ್ಚು ವರಮಾನ ಬರುವುದನ್ನು ಲೆಕ್ಕಕ್ಕೆ ತೆಗೆದುಕೊಂಡ ಮೇಲೆಯೂ ಸಹ ಒಟ್ಟು ಹುಟ್ಟುವಳಿಯು 2,97,61,000 ರೂಪಾಯಿ ಮಾತ್ರ ಆಗುತ್ತದೆ; ಎಂದರೆ ಬಡ್ಜೆಟ್ಟಿನ ಅಂದಾಜಿಗಿಂತಲೂ 17,54,000 ರೂಪಾಯಿ ಕಮ್ಮಿಯಾದಂತಾಯಿತು. (ಸಶೇಷ.)

ಸುಟ್ಟ ಮತ್ತು ಬೆಂದಗಾಯಗಳ ಚಿಕಿತ್ಸೆ.

ಈ ಎರಡು ಬಗೆಯ ಅನಾಹುತಗಳಿಂದ ಯಾತನೆಪಡುವ ಮನುಷ್ಯರು ಇದರಿಂದುಂಟಾಗುವ ಭೀತಿ ಮತ್ತು ಗಾಬರಿಗಳೊಳಗಾಗದೆ ಎಚ್ಚತ್ತುಕೊಳ್ಳುವುದೂ, ಮತ್ತು ಈ ಘಾಯಗಳಿಂದ ಹುಟ್ಟುವ ಸಹಿಸಲಸಾಧ್ಯವಾದ ಉರಿ ಮತ್ತು ನೋವನ್ನು ನಿವಾರಣೆಮಾಡಿಕೊಳ್ಳುವುದು. ಇವು ಚಿಕಿತ್ಸೆಯ ಕ್ರಮದಲ್ಲಿ ಪ್ರಾಮುಖ್ಯವಾದವುಗಳಾಗಿರುವುವು. ಈ ಎರಡು ವಿಧದ ಸುಟ್ಟ ಘಾಯಗಳಲ್ಲಿ ಏಳತಕ್ಕ ಹೊಪ್ಪಳೆಗಳಿಗೆ ಕೈ ಹಾಕದೆ ಹಾಗೆಯೇ ಬಿಡತಕ್ಕದ್ದು. ಘಾಯಕ್ಕೆ ಗಾಳಿ ಸೋಕಿದರೆ ಸಹಿಸಲಸಾಧ್ಯವಾದ ಸಂಕಟವಾಗುವುದು.

ಸರಿಯಾದ ವೈದ್ಯರಿಲ್ಲದೆಡೆಗಳಲ್ಲಿ ಈ ಕೆಳಗೆ ವಿವರಿಸಲ್ಪಟ್ಟಿರುವ ಚಿಕಿತ್ಸೆಯನ್ನು ಆ ಒಡನೆಯೇ ಮಾಡತಕ್ಕದ್ದು.

1. ತೆಂಗಿನಕಾಯಿಯ ತುರಿಯನ್ನು ಘಾಯದ ಮೇಲೆ ಮಂದವಾಗಿ ಹಾಕಿ ಇದರ ಮೇಲ್ಗಡೆ ಬಟ್ಟೆಯನ್ನು ಭದ್ರವಾಗಿ ಸುತ್ತಿ ಕಟ್ಟತಕ್ಕದ್ದು.
2. ಗಾತ್ರವಾದ ಒಂದು ಆಲುಗಡ್ಡೆಯನ್ನು ಎರಡು ಭಾಗಗಳಾಗಿ ಕುಯಿದು, ಹೋಳುಗಳ ಒಳಭಾಗವನ್ನು ಚಾಕುವಿನಿಂದ ಒರೆದು ತುರಿದ ಚೂರುಗಳಿಂದ ಹೊರಡುವ ಹಾಲನ್ನು ಈ ಘಾಯಗಳಿಗೆ ಹಾಕಿ ಇದರ ಮೇಲ್ಗಡೆ ಹತ್ತಿಯನ್ನು ಜೋಡಿಸಿಟ್ಟು ಬಟ್ಟೆಯಿಂದ ಭದ್ರವಾಗಿ ಸುತ್ತಿ ಕಟ್ಟಬೇಕು.
3. ಕೊಬರಿ ಎಣ್ಣೆಯನ್ನು ಮತ್ತು ಸುಣ್ಣದ ಮೇಲಣ ತಿಳಿಯನೀರನ್ನು ಸಮಭಾಗಗಳಾಗಿ ತೆಗೆದುಕೊಂಡು ಒಂದು ಶೀಶೆಯೊಳಗಡೆ ಹಾಕಿ ಬೆರಸಿ ಚೆನ್ನಾಗಿ ಅಲ್ಲಾಡಿಸಲ್ಪಟ್ಟರೆ; ಇವೆರಡೂ ಸೇರಿ ಬೆಣ್ಣೆಯ ರೂಪಿನ ತಿಳಿಯಾಗಿ ತಿರುಗುವುದು. ಈ ತಿಳಿಯನ್ನು ಘಾಯಗಳಿಗೆ ಹಾಕಿ, ಇದರ ಮೇಲ್ಗಡೆ ಹತ್ತಿಯ ತುಪಟವನ್ನು ಜೋಡಿಸಿಟ್ಟು ಸುತ್ತಲೂ ಭದ್ರವಾಗಿ ಬಟ್ಟೆಯಿಂದ ಕಟ್ಟತಕ್ಕದ್ದು.
4. ಅರ್ಧಶೇರೆ ನೀರಿನಲ್ಲಿ ಒಂದು ಚಂಚ ಪ್ರಮಾಣದಷ್ಟು ಉಪ್ಪನ್ನು ಹಾಕಿ ಕರಗಿಸಲ್ಪಟ್ಟ ನೀರಿನಲ್ಲಿ ಶುಚಿಯಾಗಿರುವ ಬಟ್ಟೆಯನ್ನು ನೆನೆಯಿಸಿ ಸುಟ್ಟ ಸ್ಥಳಗಳ ಮೇಲೆ ಹಾಕುವುದರಿಂದಲೂ ಅನುಕೂಲವಾಗುವುದು.

ಈ ಘಾಯಗಳು ಆದೊಡನೆಯೇ 1, 2, ನೇ ಔಷಧಗಳನ್ನು ಪ್ರಯೋಗಮಾಡತಕ್ಕದ್ದು. ಕಾಲಮೀರಿ ಹುಣ್ಣುಗಳೆದ್ದ ತರುಣದಲ್ಲಿ 3, 4, ನೇ ಚಿಕಿತ್ಸೆಯನ್ನು ಮಾಡತಕ್ಕದ್ದು.

V. Muttuswamy Das,
District Health Officer,
Mysore District.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ

ಲಗ್ನದ ಫಂಡು.

1. ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಸೂಲಕುಂಟೆ ಮ|| ರಾ|| ಶೆಟ್ಟರಬಸಪ್ಪನವರ ಮಕ್ಕಳು ಮ|| ರಾ|| ರುದ್ರಪ್ಪನವರ ಮನೆಯಲ್ಲಿ ನಡೆದ ಪ್ರಸ್ತದಲ್ಲಿ 3 ರೂ.
2. ತುಮಕೂರು ತಾ|| ಊರಡಗೆರೆ ಯಜಮಾನ್ ಮ|| ರಾ|| ಪುಟ್ಟನಂಜಪ್ಪನವರ ಮೂಲಕ, ಸದರಿಗ್ರಾಮದ ಮ|| ರಾ|| ಸೋಮೇದೇವರ ಸೋಮಯ್ಯನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವಧುವಿನಕಡೆಯಿಂದ 2 ರೂ. ವರನಕಡೆಯಿಂದ 2 ರೂ. ಒಟ್ಟು 4 ರೂ.
3. ಕಡೂರು ಡಿ|| ಅಜ್ಜಂಪುರದ ಮುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ರಾ|| ಸೆಟ್ಟರಸಿದ್ದಪ್ಪನವರಿಂದ 5 ರೂ.
4. ಚಾಮರಾಜನಗರದ ತಾ|| ಆಲೂರುಗ್ರಾಮದ ಮ|| ರಾ|| ಪುಟ್ಟಬಸಪ್ಪನವರ ಮೂಲಕ ಮ|| ರಾ|| ಪುಟ್ಟಮಾದಪ್ಪನವರಮಗಳ ಲಗ್ನದಲ್ಲಿ 2 ರೂ. ಮ|| ರಾ|| ಕಾಂತಯ್ಯನವರ ಮಕ್ಕಳು ಮ|| ರಾ|| ಮಲ್ಲಣ್ಣನವರ ಲಗ್ನದಲ್ಲಿ 2 ರೂ. ಮ|| ರಾ|| ಛತ್ರದನಾಗಪ್ಪನವರ ಮಕ್ಕಳು ಮ|| ರಾ|| ವೀರತ್ತಪ್ಪನವರ ಲಗ್ನದಲ್ಲಿ 2 ರೂ. ಜುಮ್ಲಾ ಜಮಾ 6 ರೂ.
5. ಚಿತ್ರದುರ್ಗದ ತಾ|| ಗುಡ್ಡದರಂಗಪ್ಪನಹಳ್ಳಿಗ್ರಾಮದ ಮ||ರಾ|| ಹುರಿಕಡ್ಡಿ ಹಂಪಣ್ಣನವರಿಂದ, ಅವರಪುತ್ರಿ ಚಿ|| ಸೌ|| ಶಿವಮ್ಮನಿಗೂ, ಮ|| ರಾ|| ಮುಪ್ಪಣ್ಣನವರಿಗೂ, ಮತ್ತು ಮ|| ರಾ|| ಹಂಪಣ್ಣನವರ ಅಣ್ಣಂದಿರು ಮ|| ರಾ|| ಮರಿಬಸಪ್ಪನವರ ಪುತ್ರಿ ಚಿ|| ಸೌ|| ಪೂರಮ್ಮನಿಗೂ, ಚಳ್ಳಕೆರೆ ಸಾಹುಕಾರ್ ಮ|| ರಾ|| ಚಂದ್ರಪ್ಪನವರಿಗೂ ನಡೆದಲಗ್ನದಲ್ಲಿ 10 ರೂ.
6. ದೊಡ್ಡಬಳ್ಳಾಪುರದ ಮ|| ರಾ|| ಯಜಮಾನ್ ವೀರಶೆಟ್ಟಪ್ಪನವರ ಮೂಲಕ, ಹಣಬೆಗ್ರಾಮದಲ್ಲಿ ನಡೆದ ಮ|| ರಾ|| ತುಮಕೂರಿನ ಅನ್ನದಾನಪ್ಪನವರ ಲಗ್ನದಲ್ಲಿ 3 ರೂ. ಜುಮ್ಲಾ ಜಮಾ 31 ರೂ.

ಬೆಂಗಳೂರು ಸಿಟಿ,
ತಾ|| ೧೫-೬-೧೯೨೧

ಜಿ. ಪರಮಶಿವಯ್ಯ, ಬಿ. ಎ., ಎಲ್ ಎಲ್. ಬಿ., ಆನರರಿ ಸೆಕ್ರೆಟರಿ,
ಮೈಸೂರು ವೀ. ವಿ. ಫಂಡ್ ಸಂಘ.

ಪತ್ರವ್ಯವಹಾರ.

ಅದ್ಭುತವಾರ್ತೆ.

ಜಿಲ್ಲಾ ವಿಜಾಪುರ ತಾ|| ಸಿಂದಗಿ ಪೈಕಿ ಬಾಣಾಪುರವೆಂಬ ಗ್ರಾಮದಲ್ಲಿ ಲಿಂಗವಂತರ ಒಬ್ಬ ಹೆಣ್ಣುಮಗಳು ಈಗ ಆರುವರ್ಷದಿಂದ ಅನ್ನ ನೀರು ಸೇರಿಸದೆ ಮಲಮೂತ್ರಾದಿಗಳನ್ನು ಮಾಡದೆ ಸದಾ ಉದ್ಯೋಗವನ್ನು ಮಾಡುತ್ತಾ ಮಂದಿಮಕ್ಕಳೊಡನೆ ಹಿತದಿಂದ ಕಾಲಕಳೆಯುತ್ತಿದ್ದಾಳೆ. ಸಂಸಾರ ಸುಖವನ್ನು ವರ್ಜಮಾಡಿದ್ದಾಳೆ. ಇವರನ್ನು ನೋಡುವವರ ದೆಸೆಯಿಂದ ಎಷ್ಟೋಜನರು ಬಂದು ದರ್ಶನತೆಗೆದುಕೊಂಡು ಹೋಗುತ್ತಾರೆ. ಇವರಿಗೆ ಸುಮಾರು ೨೦ ವರ್ಷವಾಗಿರಬಹುದು. ಇದು ದೇವಾಂಶವೇ ಆಗಿರಬಹುದೆಂದು ವಾಚಕರೇ ಊಹಿಸಬಹುದು. ಈಶ್ವರಲೀಲೆಯು ಅಗಾಧವಾದದ್ದು.

ಪ್ರತ್ಯಕ್ಷದರ್ಶೀ.

ಶ್ರೀ ಗುಹೇಶ್ವರ ವಾಚನಾಲಯ ಹೊಸರಿತ್ತಿ.

ಶ್ರೀ ಸ್ವಾಮಿಗಳವರ ಉತ್ತೇಜನದಿಂದ ಶ್ರೀ ಅನ್ನದಾನ ದೇವರ ಅಧ್ಯಕ್ಷತೆಯಲ್ಲಿ ತಾ|| ೮ ನೇ ಬುಧವಾರ ಸಭೆ ಸೇರಿ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಅಧ್ಯಕ್ಷರು ವಾಚನಾಲಯದ ಮಹತ್ವವನ್ನು ಕುರಿತು ಹೃದಯಂಗಮವಾಗಿ ಭಾಷಣಮಾಡಿದನಂತರ ಅದೇ ವಿಷಯವನ್ನು ಕುರಿತು ಮ|| ಬಾಬಣ್ಣನವರು ಮತ್ತು ವಿ. ಸಿ. ಯುಗಟಿ ಅವರು ಉಪನ್ಯಾಸಮಾಡಿ

ದರು. ತತ್ಕಾಲದಲ್ಲಿಯೇ ೫೦ ರೂಪಾಯಿ ವಸೂಲಾದದ್ದಲ್ಲದೆ ಅನೇಕರು ವರ್ಗಣಿಯನ್ನು ಕೊಡಲು ವಾಗ್ದಾನಮಾಡಿದರು. ಇದಲ್ಲದೆ ತರುಣರು ಉತ್ಸಾಹದಿಂದ ವಾಚನಾಲಯದ ಅಭಿವೃದ್ಧಿಯ ದೆಸೆಯಿಂದ ಸರ್ವ ಪ್ರಯತ್ನಮಾಡುವೆವೆಂದು ಒಪ್ಪಿದರು. ಈಶಪ್ರಾರ್ಥನೆಯಾದನಂತರ ಸಭೆಯು ವಿಸರ್ಜನೆಯಾಯಿತು. ಓರ್ವ ಪ್ರೇಕ್ಷಕ.

ವಿಜ್ಞಾಪನೆ.

ವೀರಶೈವಮಹಾಶಯರೇ,

ಶಿವಮೊಗ್ಗ ಡಿಸ್ಟ್ರಿಕ್ಟ ಶಿಕಾರಿಪುರ ಟವನ್ನಿನಲ್ಲಿ ಒಂದು ವೀರಶೈವಾಶ್ರಮವು ಸ್ಥಾಪಿಸಲ್ಪಟ್ಟಿದೆ. ಇದರಿಂದ ಇಂಗ್ಲೀಷ್ ಮತ್ತು ಕನ್ನಡ ವಿದ್ಯಾಭ್ಯಾಸಕ್ಕೆ ಇದ್ದ ತೊಂದರೆಯು ಬಹುಮಟ್ಟಿಗೆ ಕಡಿಮೆಯಾಗಿದೆ. ಈಗ ಸುಮಾರು ಎಂಟು ಹತ್ತು ವಿದ್ಯಾರ್ಥಿಗಳು ಎರಡು ವರ್ಷಗಳಿಂದಲೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ವರ್ಷ ಬೇಸಗೆ ರಜಾಕ್ಕೋಸ್ಕರ ಮುಚ್ಚಿದ್ದ ಆಶ್ರಮವು ಕಳೆದ ತಿಂಗಳು ೨೬ನೇ ಗುರುವಾರ ಪುನಃ ತೆರೆಯಲ್ಪಟ್ಟಿದೆ. ಆಶ್ರಮಕ್ಕೆ ಬರತಕ್ಕ ವಿದ್ಯಾರ್ಥಿಗಳು ಮುಂಚಿತವಾಗಿಯೇ ಬರೆದುಕೊಂಡರೆ ತಕ್ಕ ಏರ್ಪಾಟು ಮಾಡಲ್ಪಡುತ್ತದೆ. ಎಲ್ಲಾ ಸಂಗತಿಗಳಿಗೂ ಶಿಕಾರಿಪುರದ ವಿದ್ಯಾವರ್ಧಕ ಸಂಘದ ಸೆಕ್ರೆಟರಿಗಳವರಿಗೆ ಬರೆದು ತಿಳಿದುಕೊಳ್ಳಬಹುದು. ಶಿವಪ್ಪ ಹುಲಿಯಪ್ಪ ಶಿಕಾರಿಪುರ (ಸೆಕ್ರೆಟರಿ.)

ಹುಬ್ಬಳ್ಳಿ ತರುಣರಸಮ್ಮೇಲನದ ಸಿಂಹಾವಲೋಕನ.

ಲೇಖಕ ಒಬ್ಬ ಪ್ರತಿನಿಧಿ

ಈ ಸಾರೆಯ ತರುಣರ ಸಮ್ಮೇಲನವು ಅಲ್ಲಿಯಾಗುವದು ಇಲ್ಲಿಯಾಗುವದೆಂದು ಕಡೆಗೆ ಹುಬ್ಬಳ್ಳಿಯಲ್ಲಿ ಸಾಂಗೋಪಾಂಗವಾಗಿ ನೆರೆಯಿತು. ಈ ಸಾರೆಯೂ ಸಮ್ಮೇಲನವು ಕೂಡದೇ ಇದ್ದ ಪಕ್ಷದಲ್ಲಿ ಸಂಘವೇ ನಿರ್ನಾಮವಾಗುವ ಪ್ರಸಂಗವಿತ್ತು. ಏನೇ ಆಗಲಿ ಮಾಡೇಬಿಡಬೇಕೆಂದು ನಿರ್ಧರಿಸಿ ಪ್ರಯತ್ನಮಾಡಿದ ಕೆಲಸಂಘದ ಮೆಂಬರರೂ ಅವರಿಗೆ ಆಶ್ರಯವಿತ್ತು ಸಹಾಯಮಾಡಿದ ಹುಬ್ಬಳ್ಳಿಯ ಮಹಾಜನರೂ ಇಡೀ ವೀರಶೈವ ತರುಣವರ್ಗವನ್ನೇ ಋಣಿಯಾಗಿ ಮಾಡಿದ್ದು ಸಂತೋಷದ ಮಾತು. ತರುಣರ ಸಂಘದ ವಿಷಯಕ್ಕೆ ತುಸು ಅಭಿಮಾನವಿದ್ದು ಇದೇ ಮೊದಲನೇ ಸಾರೆಗೆ ಸಮ್ಮೇಲನಕ್ಕೆ ಹಾಜರಿದ್ದ ನನ್ನಮನಸ್ಸಿನಮೇಲಾದ ಪರಿಣಾಮವನ್ನು ಲೇಖನದಮೂಲಕ ವ್ಯಕ್ತಪಡಿಸಲು ಕೋರುತ್ತೇನೆ.

ಸಂಘದ ಹೆಸರು, ಧ್ಯೇಯ, ನಿಯಮ ಮೊದಲಾದವುಗಳ ತಿದ್ದುಪಡೆಯಬಗ್ಗೆಯೂ, ಪ್ರಬೋಧದ ಪುನರುಜ್ಜೀವನ, ವಾಚನಾಲಯಗಳ ಸ್ಥಾಪನೆ ಮೊದಲಾದವುಗಳಬಗ್ಗೆಯೂ ಠರಾವುಗಳು ಆಗುವುವಿದ್ದುದರಿಂದ ಈಸಾರೆಯ ಸಮ್ಮೇಲನವು ಒಳ್ಳೇ ಮಹತ್ವದ್ದಿತ್ತು. ವಿಷಯನಿಯಾಮಕ ಕಮಿಟಿಯಲ್ಲಾದ ಚರ್ಚೆಯಮೇಲಿಂದಲೂ ಸಮ್ಮೇಲನಕ್ಕೆ ದೊಡ್ಡದೊಡ್ಡ ಜನರ ಆಗಮನದಮೇಲಿಂದಲೂ ತರುಣರ ಉತ್ಸಾಹವೂ ಸಮಾಜಸೇವಾಭಾವನೆಯೂ ಎಷ್ಟರಮಟ್ಟಿಗೆ ಬೆಳೆದದೆಯೆಂಬುವದು ವ್ಯಕ್ತವಾಗುವಂತಿತ್ತು. ಕೆಲಕೆಲವು ಠರಾವುಗಳ ವಿಷಯದಬಗ್ಗೆ ಚರ್ಚೆಯಾದದ್ದರಮೇಲಿಂದ ಕೆಲಕೆಲವು ಜನರಲ್ಲಿ ವೃತ್ಯಮರುಚಿಯು ಹಬ್ಬುತ್ತಿರುವದೆಂದೂ ಅದು ಯಾವಕಾರಣದಿಂದ ಸಂಘದ ಹಿತಸಾಧನೆಯಾಗದೇ ಪುನಃ ಅದರ ಪ್ರಗತಿಪ್ರತಿರೋಧವಾಗಿತ್ತೆಂದೂ ಕಂಡುಬರುವಂತೆಯಿತ್ತು. ತರುಣರಸಂಘವೆಂಬ ಹೆಸರನ್ನು ತೆಗೆದು ಬೇರೆ ವಿದ್ಯಾವರ್ಧಕ ಸಂಘವೆಂಬದಾಗಿ ಇಡಬೇಕೆಂದೂ ರಾ|| ಚಂದ್ರಶೇಖರಪ್ಪ ಕೆಂಪಣ್ಣನವರ ಎಂಬುವವರು ಠರಾವುತಂದರು. ಅದಕ್ಕೆ ವೇ|| ಶಿವಮೂರ್ತಿಸ್ವಾಮಿ ಹಿರೇಮಠ ಎಂಬುವವರು ವಿರೋಧಿಸಿದರು. ಪರಂತು ಠರಾವುತಂದವರಿಗೆ ಅನುಮೋದಿಸುವವರು ಯಾರೂ ಇದ್ದಿಲ್ಲವಾದದ್ದರಿಂದ ಅಧ್ಯಕ್ಷರು ತಮ್ಮ ಅಧಿಕಾರಯುಕ್ತವಾಣಿಯಿಂದ ಆ ಠರಾವನ್ನು ಚೆಲ್ಲಿಕೊಟ್ಟರು (over-rule). ಈ ಹೆಸರನ್ನು ಬದಲಿಸುವದರಿಂದ ಯಾವ ಅರ್ಥವು ಸಾಧಿಸುತ್ತಿತ್ತೋ ಏನೋ? ಸಂಘದ ಉಪಯುಕ್ತತೆಯು ಹೆಸರಿನಮೇಲಿರದೆ ಅದರ ಕೆಲಸದಮೇಲಿದೆ. ತರುಣರೆಂದರೆ ಹುಡುಗರೆಂದು ಜನರು ಅಪಹಾಸ್ಯಮಾಡುವರೆಂದು ಭಯವಂತೆ! ಒಳ್ಳೇಮಾತಿದು! ಮುಂದೆ ಮೊದಲಿನ ಧ್ಯೇಯವು ಅಪೂರ್ಣ, ಮತ್ತು ಸಂಕ್ಷಿಪ್ತವಾಗಿದ್ದುದರಿಂದ (ಮೊದಲಿನ ಧ್ಯೇಯವನ್ನೇ) ಸ್ಪಷ್ಟೀಕರಿಸಿ ವೇ|| ಶಿವಮೂರ್ತಿಸ್ವಾಮಿಯವರು ಠರಾವುತಂದರು. ಅದಕ್ಕೆ ಮಿ|| ಪಾವಟೆ ವಕೀಲರು ವಿರೋಧಿಸಿದರು. ಮೊದಲಿದ್ದ ಧ್ಯೇಯವೇ ಸ್ಪಷ್ಟೀಕೃತವಿದ್ದಲ್ಲಿ ಪಾವಟೆಯವರು ವಿರೋಧಿಸಿ ಮೊದಲು ಇದ್ದ ಪ್ರಕಾರ ವಾಕ್ಯಗಳನ್ನು ಇಡಬೇಕೆನ್ನುವದು ಯಾತಕ್ಕೆ? ಬಹುಶಃ ಹಳೆಯನಿಯಮದಲ್ಲಿ "ಸಮಾಜಸುಧಾರಣೆ" ಯೆಂಬುವ ಶಬ್ದವಿದ್ದುದರಿಂದ ಅದನ್ನು ಬೇಕಾದತ್ತ ಹಿಗ್ಗಿಸಲಿಕ್ಕೆ ಬರುತ್ತದೆಂತಲೋ ಏನೋ! ಕಡೆಗೆ ಎರಡೂ ಇರಬೇಕೆಂದು ನಿರ್ಣಯವಾಯಿತು. ಮುಂದೆ ನಮ್ಮ ಸಮಾಜದಲ್ಲಿರುವ (ಅಷ್ಟಾವರಣ ನಿಷ್ಠರಾಗಿರುವ) ಒಳಪಂಗಡಗಳಲ್ಲಿ ಅನ್ನವ್ಯವಹಾರಾದಿಗಳು ನಡೆಯಬೇಕೆಂದು ಮಿ|| ಪಶುಪತಿಯೆಂಬುವವರು ಠರಾವುತಂದರು. ಅದಕ್ಕೆ ಮಿ|| ಪಾವಟೆಯವರು ಅನುಮೋದಿಸಿದರು. ಈ ಠರಾವಿಗೆ ವೇ|| ಶಿವಮೂರ್ತಿಸ್ವಾಮಿಯವರು ಇದು ವಾದವಿವಾದಾತ್ಮಕ ವಿಷಯವಾದದ್ದು ಇದನ್ನು ಪಾಸುಮಾಡುವದರಿಂದ ತರುಣರಸಂಘಕ್ಕೆ ಧಕ್ಕತಟ್ಟುವ ಸಂಭವವದೆಯೆಂಬ ಕಾರಣದಿಂದ ವಿರೋಧಿಸಿದರು. ಈ ಠರಾವಿನಮೇಲೆ ಬಹುಮಟ್ಟಿಗೆ ಚರ್ಚೆಯಾಗಿ ಸಭಾಗೃಹದ ತುಂಬಾ ಗಲಭೆಯುಂಟಾಯಿತು. ಅತ್ತಿಗೇರಿ ಮಾಸ್ತರ ಮಿ|| ಮರಡೂರರವರು ವೇ|| ಶಿವಮೂರ್ತಿಸ್ವಾಮಿಯವರ ಸಮರ್ಥನಮಾಡಿ ತಮ್ಮ ಅನುಭವದ ಸಂಗತಿಗಳಿಂದ ಪ್ರತಿಪಾದಿಸಿದರು. ಮಿ|| ಪಾವಟೆ, ಬೇಲೀಅಂಗಡಿ ವಕೀಲರು, ಗಂಗಾಧರಪ್ಪಾ ಸಾಬೋಜಿ, ತಮ್ಮಣ್ಣಪ್ಪ ಚಿಕ್ಕೋಡಿ, ಹಾಲಯ್ಯ ಇಂಜನಿಯರ, ವ್ಹಿ. ವ್ಹಿ. ಪಾಟೀಲ ಮೊದಲಾದವರು ಮಿ|| ಪಶುಪತಿಯವರನ್ನು ಸಮರ್ಥಿಸಿದರು. ಇದಕ್ಕೆ ಉತ್ತರರೂಪವಾಗಿ ಮಿ|| ಶಿವಮೂರ್ತಿಸ್ವಾಮಿಯವರು ತಾವು ಪುರಾಣವಾದಿಗಳಲ್ಲವೆಂದೂ ತಮ್ಮ ವ್ಯಕ್ತಿಮಾತ್ರವಾದ ಅನುಮತಿಯುದ್ದು ಪರಸ್ಪರ ಅನ್ನವ್ಯವಹಾರದ ಠರಾವಿನಿಂದ ಸಂಘಕ್ಕೆ ಪ್ರತಿಕೂಲವಾದಸಂಗತಿಗಳು ಒದಗಬಹುದೆಂದೂ ಹೇಳಿದರು. ಅಷ್ಟಕ್ಕೆ ಸಮಾಧಾನಹೊಂದದೆ ಆಮಾತು ಅತಿವಿಕೋಪಕ್ಕೇ ಹೋಯಿತು. ಅದನ್ನು ಸಮರ್ಥಿಸಿದ ಜನರೆಲ್ಲರೂ ದೊಡ್ಡವರೂ, ತಿಳಿದವರೂ ಅನುಭವಿಕರೂ ಇದ್ದು, ಅದು ಒಮ್ಮೆ ಪಾಸಾಗಿಹೋಗಿದೆಯೆಂಬುದು ಗೊತ್ತಿದ್ದೂ, ಎಲ್ಲರೂ ಆ ಠರಾವು ಪಾಸುಮಾಡುವದು ಅವಶ್ಯಕವಿಲ್ಲದೇ ಈಗಾಗಲೇ ವಿದ್ಯಾಪ್ರಸಾರದಿಂದ ಪರಸ್ಪರರಲ್ಲಿ ಆತರಹದ ವ್ಯವಹಾರವು ನಡೆದುಹೋಗಿರುವದೆಂದು ಹೇಳುತ್ತಿದ್ದು, ಆ ಠರಾವಿನಮೇಲೆ ಅಷ್ಟುಯಾಕೆ ಜೋರುಕೊಟ್ಟರೋ ತಿಳಿಯದು. ಆ ಠರಾವಿನಿಂದ ತರುಣರ ಕಾರ್ಯಕ್ಕೆ ಬರುವ ಪಡೆಗಳಕಡೆಗೆ ಲಕ್ಷ್ಯಬಾರದಾಗಿತ್ತೇನು? ಹಟಹಿಡಿದವರ ಅವರೆಲ್ಲರ ಸಂಬಂಧದಮೇಲಿಂದ ಇದು ಏನೋ ಪೂರ್ವತಯಾರಿಯಕೆಲಸವಿರುವದೋ ಏನೋ ಎಂದು ಕೆಲವರು ಊಹಿಸಿದರು. ಕಡೆಗೆ ಅಧ್ಯಕ್ಷರು ಮರುದಿನಕ್ಕೆ ಹಾಕಿದ್ದೂ ಮರುದಿನ ಠರಾವುತಂದವರೇ ಗೈರ್‌ಹಾಜರು ಇದ್ದದ್ದೂ ಜಾಣತನದಕೆಲಸವಾಯಿತು.

ಪ್ರಬೋಧ ಮಾಸಪತ್ರಿಕೆಯು ಪುನಃ ಜೂನದಿಂದ ಹೊರಡುವದು ನಿಶ್ಚಯವಾಯಿತು. ಆನಂದದ ಮಾತು. ವ್ಯವಸ್ಥಾಪಕ ಕಮಿಟಿಯೂ ದೃಢೀಕರಿಸಲ್ಪಟ್ಟಿತು. ಇನ್ನುಮೇಲೆ ವಿಘ್ನಗಳು ಬರಲಿಕ್ಕಿಲ್ಲ. ಕೆಲವರು ವರ್ಷ ೧೦ ರೂಪಾಯಿಗಳನ್ನು ಮಾಸಪತ್ರಿಕೆಯ ಧನರಾಶಿಗೆಕೊಟ್ಟು ಪೋಷಕರಾದರು. ಮಿ|| ಮರಡೂರ ಮಾಸ್ತರರು ೧೦೦ ಚಂದಾದಾರರನ್ನು ಪ್ರಾಥಮಿಕ ಶಾಲಾಮಾಸ್ತರರ ಸಹಾಯದಿಂದ ಕೂಡಿಸಿಕೊಡುತ್ತೇನೆಂದು ಒಪ್ಪಿಕೊಂಡರು. ಮತ್ತೊಂದು ಕೆಲಸವಾದದ್ದೆಂದರೆ ಮಿ|| ಕೇಸರಿಯವರು ಸೂಚನೆತಂದಪ್ರಕಾರ ಧಾರವಾಡದಲ್ಲಿ ಒಂದು ವೀರಶೈವಗ್ರಂಥ ಭಂಡಾರವು ಸ್ಥಾಪಿತವಾಯಿತು. ಈಗಾಗಲೇ ೫೦೦-೬೦೦ ರೂಪಾಯಿಗಳ ಪುಸ್ತಕಗಳು ಕೂಡಿದವು. ಮತ್ತೊಂದು ಹೊಸಸಂಗತಿಯೆಂದರೆ ಮಿ|| ಕೇಸರಿಯವರು ಈ ಸಂಘದಲ್ಲಿ ಸ್ತ್ರೀಯರ ಸಮಾವೇಶವಾಗಬೇಕೆಂದು ಸೂಚಿಸಿದರು. ಸರ್ವಾನುಮತಿಯಿಂದ ಪಾಸಾಯಿತು! ನೆಟ್ಟಗಾಯಿತು!!

ಸಂಘದ ಕಾರ್ಯನಿರ್ವಾಹಮಂಡಲವೂ ರಚನೆಯಾಯಿತು. ಆದರಲ್ಲಿ ಇನ್ನೊಂದಿಷ್ಟು ಅನುಭವಿಕ ತರುಣರ ಸಮಾವೇಶವಾಗಿದ್ದರೆ ತುಸು ನೆಟ್ಟಗಾಗುತ್ತಿತ್ತು. ಆದರೂ ಹೊಸಹುರುಪಿನ ಜನರಿರುವದರಿಂದ ಮುಂದಿನವರ್ಷದ ಕೆಲಸವು ಜೋರಿನಿಂದ ಸಾಗಬಹುದು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳೀಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
38 89 ನಾರಾಯಣಮೊದಲಿ ಬೀದಿ, ಮದರಾಸು.

ಶಕ್ತಿಶೋಧಕ ! ಮನೋಲ್ಲಾಸಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 36

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ ರೋಗ, ದೀರ್ಘಜ್ವರ ಉಬ್ಬಸ ವಾತರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ಪಲ್ಲಶಕೆ, ಚುರುಕು, ಉಷ್ಣ, ಬಿಳುವು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರಿರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಹಳೆಮ್ಮು ಇವುಗಳನ್ನು ತತ್ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪಸತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 6

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕ್ಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಕೇಖಿರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

38 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

೧೯೨೧ ನೆಯ ಇಸವಿ ಜೂನ್ ತಾ|| ೧೯ ರಿಂದ ೧೯೨೧ ನೆಯ ಜೂನ್ ತಾ|| ೨೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ಜ್ಯೇಷ್ಠ ಶುದ್ಧ ಚತುರ್ದಶಿಯಿಂದ ಜ್ಯೇಷ್ಠ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
19	ಭಾನು	ಚತು	16-23	ಜ್ಯೇಷ್ಠ	50-34	6
20	ಸೋಮ	ಪೌರ್ಣ	18-31	ಮೂಲ	55-6	7
21	ಮಂಗಳ	ಪಾಡ್ಯ	21-37	ಪೂಷಾ	60	8
22	ಬುಧ	ಬಿದಿ	26-5	ಪೂಷಾ	2-8	9
23	ಗುರು	ತದಿ	30-58	ಉಷಾ	8-20	10
24	ಶುಕ್ರ	ಚೌತಿ	36-4	ಶ್ರವ	14-55	11
25	ಶನಿ	ಪಂಚ	40-58	ಧನಿ	21-10	12

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಶ್ಯಜ್ಞ ನಹ್ಯತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಪಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪, ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಜೂನ್ ತಾರೀಖು ೨೬ ನೆಯ ಭಾನುವಾರ. ಸಂಚಿಕೆ ೨೪

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ?

ಲೋಕಾನುಗ್ರಹ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲಿ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
24 ಮೈಸೂರು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳೀಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
39 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೪—೦
ಶಿವಪೂಜಾವಿಧಿ	೧— ೦—೦
ಚಾರುಶೀಲೆಚರಿತ್ರೆ	೦—೧೦—೧
[illegible]	೦— ೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀ ರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫೂ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕಾ|| ಸಾ|| ಆಣೆ ೧೨.

ಶ್ರೀ ಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫೂ|| ಸಾ|| ಪ್ರ ೧ಕ್ಕೆ ೧-೪-೦. ಕ್ಯಾ|| ಸಾ|| ೧೨ಆಣೆ.

ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮ × ೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ಪಹಿಸಿ ಸುದರ್ಶನಚಕ್ರ ಪಡದ ಈ ಫೋಟೋ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫೂ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫೂ|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ|| ಸಾ|| ೧೨ ಆಣೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಎದ್ದಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫೂ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ:—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫೂ|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೋಗಳು ಕೈ|| ವಾ|| ರಾಜಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣ ಕುಂಬಾರ ಕೋಟ್ಯಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪುರ ಸಿದ್ಧರಾಮೇಶ್ವರ, ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ|| ಗು|| ಚಿತ್ರದುರ್ಗದ ಮಹಾಸ್ವಾಮಿ, ಅಥಣಿ ಶಿವಯೋಗಿಗಳು, ಹಾನಗಲ್ಲ ಸ್ವಾಮಿಗಳು, ಸೊಲ್ಲಾಪುರದ ಪ್ರಸಿದ್ಧ ನಾಲತ್ವಾಡದ ಶರಣರು, ಬೆಳೂರ ಸ್ವಾಮಿಗಳು, ಕಮತಗಿ ಹುಚ್ಚೇಂದ್ರಸ್ವಾಮಿಗಳು, ಸದ್ಯಕ್ಕೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರ ಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ|| ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ|| ಬ|| ವಾರದ ಮಲ್ಲಪ್ಪನವರು, ಮುಂತಾದ ಫೋಟೋಗಳು ಸಿಗುತ್ತವೆ. ಕ್ರಯ ಫೂ|| ಸಾ|| ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

2 ವಿಳಾಸ—ಗಂಗಪ್ಪಾ ಜೇರಿಗೆ ಫೋಟೋ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಪಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ,		ರೂ. ವರೆಗೆ.
4	0.12.0	,	50-0-0
5	0. 8.0	,	100-0-0
6	0.12.0	,,	100-0-0
7	6. 0.0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6.0	ಇಂದ	10-0-0
8	0- 8.0	,,	100-0-0
9	0-12-0	,,	100-0-0
10	0-14-0	,,	100-0-0
11	3- 8.0	,,	100-0-0
12	4- 0.0	,,	100-0-0
13	4- 8.0	,,	100-0-0
14	6- 0.0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ·
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ,,	1-8-0	,, 3-0-0
ಕಮಲಾಕ್ಷಿ,,	1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಪಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
18 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪಸತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 7

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಮನೆ ಕ್ರಯಕ್ಕೆ ದೊರೆಯುವುದು.

3

ಮೈಸೂರು ಜಲವಾಲ ರೋಡಿನಲ್ಲಿರುವ ಡೋರ್ ನಂ. 437ನೆ ಮನೆ 18 by 97 ಅಡಿ ಉಳ್ಳ ಇಪ್ಪಾರುಮನೆ, ಇದರ ಮುಂಭಾಗದಲ್ಲಿ ಕಾಂಪೌಂಡು ಹಿಂಭಾಗದ ಹಿತ್ತಲಿನಲ್ಲಿ ಭಾವಿ ಸಹ ಇರುತ್ತೆ. ನೆಲಕ್ಕೆ ಕಡಸಾಕಲ್ಲು ಹಾಕಿ ಗಾರೆಗಚ್ಚಿನಿಂದ ವಾಸಕ್ಕೆ ಬಹಳ ಅನುಕೂಲವಾಗಿರುವ ಮನೆ ಕ್ರಯಕ್ಕೆ ಸಿದ್ಧವಾಗಿರುತ್ತೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಬರೆದು ಖರೀದಿ ಮೊಬಲಗನ್ನು ತಿಳಿದುಕೊಳ್ಳಬಹುದು.

ಟಿ. ಎಚ್. ರಾವ್,
3/37 ಗುಂಡೋಪಂತ್‌ಬೀದಿ, ಬೆಂಗಳೂರು ಸಿಟಿ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜೂನ್ ತಾ|| ೨೬ ನೆಯ ಭಾನುವಾರ.

ಇದು ಸಹಾಯನಿರಾಕರಣವೆ ?

ಈಸಲದ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಭೂತಪೂರ್ವವಾದ ಒಂದು ಸಂಗತಿಯು ಜರುಗಿತು. ಪ್ರತಿನಿಧಿಗಳಾಗಿ ಬಂದಿದ್ದ ಬ್ರಾಹ್ಮಣರುಗಳಲ್ಲಿ ಒಬ್ಬಿಬ್ಬರು ಹೊರತು ಎಲ್ಲರೂ ತಾವು ಕೊಟ್ಟಿದ್ದ ಯಾವುದೊಂದು ವಿಷಯವನ್ನು ಚರ್ಚಿಸುವುದಕ್ಕೇ ಆಗಲೀ ಬಡ್ಜೆಟ್ಟಿನ ಮೇಲೆ ಚರ್ಚಿಸುವುದಕ್ಕೇ ಆಗಲೀ ಪ್ರಯತ್ನಿಸದೆ, ತಮ್ಮ ವಿಷಯಗಳನ್ನೆಲ್ಲಾ ಚರ್ಚೆಗಿಡದೆ ಹಿಂದಕ್ಕೆ ತೆಗೆದುಕೊಂಡಿದ್ದೇವೆಂದು ಹೇಳಿಬಿಟ್ಟು ಸುಮ್ಮನೆ ಕುಳಿತಿದ್ದರು. ಉಳಿದ ಪ್ರತಿನಿಧಿಗಳೇ ೮ ದಿನಗಳವರೆಗೂ ನಡೆದ ಸಭಾಕಾರ್ಯದಲ್ಲಿ ಅಂಗವಾಗಿದ್ದುಕೊಂಡು ಚರ್ಚೆಗಳನ್ನು ನಡೆಯಿಸಿದರು. ಮೇಲೆಕಂಡಂತೆ ಬ್ರಾಹ್ಮಣವರ್ಗದ ಸಭಿಕರುಗಳು ಮೌನವನ್ನು ವಹಿಸಿದುದಕ್ಕೆ ಏನುಕಾರಣವೋ ಎಂದು ಉಳಿದವರೆಲ್ಲಾ ಆಶ್ಚರ್ಯಪಟ್ಟರು. ೨ನೆ ದಿನದ ಕಾರ್ಯಾರಂಭವಾಗುವುದಕ್ಕೆ ಮೊದಲೇ ಸಭಿಕರಲ್ಲಿ ಬೆಂಗಳೂರಿನ ಮ|| ರಾಮಚಂದ್ರರಾವ್ ಸಿಂಧ್ಯಯವರು ಒಂದು ವಿಷಯವನ್ನು ಶ್ರುತಪಡಿಸಲಿಕ್ಕಾಗಿ ಸಭಾಧ್ಯಕ್ಷರ ಅಪ್ಪಣೆಯನ್ನು ಕೇಳಿ, ಹೀಗೆ ಹೇಳಿದರು— ಈ ಸಭೆಯಲ್ಲಿ ಸಭಿಕರು ಆಚರಿಸಬೇಕಾದ ನಡವಳಿಕೆಗಳನ್ನು ಕುರಿತು ಸರ್ಕಾರದವರು ಹೊಸದಾಗಿ ಹೊರಡಿಸಿರುವ ಅಪ್ಪಣೆಯಲ್ಲಿ ಕಂಡಿರುವ ನಿಬಂಧನೆಗಳು ಹೊಸವೇನೂ ಅಲ್ಲದಿದ್ದರೂ ಅದರಲ್ಲಿ ಕಂಡಿರುವ ಕೆಲವಂಶಗಳು ನನ್ನ ಮಿತ್ರರಲ್ಲಿ ಅನೇಕರಿಗೆ ಅಸಮಾಧಾನಕರವಾಗಿ ತೋರುರುವಂತಿದೆ. ಆ ಕಾರಣದಿಂದಲೇ ನಿನ್ನೆ ದಿವಸ ಅವರುಗಳು ಯಾವ ಸಬ್ಜೆಕ್ಟನ್ನೂ ಚರ್ಚಿಸಲಿಲ್ಲ; ದಯವಿಟ್ಟು ಆ ಆರ್ಡರನ್ನು ಮನ್ನಾ ಮಾಡಿಸುವಂತೆ ಮಾಡಿದರೆ ಸಭಾಕಾರ್ಯಗಳು ಎಂದಿನಂತೆ ನಿರಾತಂಕವಾಗಿ ನಡೆಯಲು ಅನುಕೂಲವಾಗುತ್ತದೆ ಎಂದು ಶ್ರುತಪಡಿಸಿದರು. ಅದರ ಮೇಲೆ ಮ|| ಕೆ. ಟಿ. ಶೇಷಯ್ಯನವರೆಂಬ ಒಬ್ಬ ಬ್ರಾಹ್ಮಣ ಪ್ರತಿನಿಧಿಯು "ಸ್ವಾಮಿ! ಅದೊಂದೇ ಕಾರಣವಲ್ಲ. ಇನ್ನೂ ಕೆಲವು ಕಾರಣಗಳಿವೆ. ಅಪ್ಪಣೆಯಾದರೆ ಶ್ರುತಪಡಿಸುತ್ತೇನೆ" ಎಂದು ಸಭಾಧ್ಯಕ್ಷರಿಗೆ ಬಿನ್ನಯಿಸಿದರು. ಅದರ ಮೇಲೆ ಅಧ್ಯಕ್ಷರು ಕಳೆದ ಮೇ ತಿಂಗಳಲ್ಲಿ ಹುಟ್ಟಿದ ಆ ಸರ್ಕಾರಿ ಅಪ್ಪಣೆಯನ್ನು ತೆಗೆದು ಓದಿ, ಇದರಲ್ಲಿ ಕಂಡ ಅಭಿಪ್ರಾಯಗಳು ಹೊಸವೇನೂ ಅಲ್ಲವೆಂದೂ, ಗಲಭೆಯಿಲ್ಲದೆ ಸಭಾಕಾರ್ಯಗಳು ಸುಲಲಿತವಾಗಿ ಜರುಗುವುದಕ್ಕೆ ಸಾಧನವಾಗಿ ಹಿಂದೆ ಹುಟ್ಟಿದ ನಿಬಂಧನೆಗಳ ಪುನರಾವೃತ್ತಿಯೇ ಆಗಿರುವುವೆಂದೂ, ಅಲ್ಲದೆ ಭರತಖಂಡ ಸರ್ಕಾರದವರು ಅಲ್ಲಿಯ ಕೌನ್ಸಿಲುಗಳ ಕಾರ್ಯಕ್ರಮವಿಷಯವಾಗಿ ಏರ್ಪಡಿಸಿರುವ ನಿಬಂಧನೆಗಳಲ್ಲಿ ಕಾಣಿಸಿರುವುದಕ್ಕಿಂತಲೂ ಸೌಮ್ಯವಾಗಿಯೇ ಇಲ್ಲಿಯ ನಿಬಂಧನೆಗಳೂ ಶಬ್ದಗಳೂ ಉಪಯೋಗಿಸಲ್ಪಟ್ಟಿವೆಯೆಂದೂ ಹೇಳಿ, ಆ ಸರ್ಕಾರದ ವಿಧಿಗಳನ್ನು ಓದಿ ತೋರಿಸಿದರು. ಮತ್ತು ಇನ್ನಾವ ಆಕ್ಷೇಪವನ್ನು ಯಾರು ಮಾಡುವುದಿದ್ದರೂ ಹೇಳಬಹುದೆಂದು ೨-೩ ಸಲ ಕೇಳಿದರು. ಮೊದಲು ಬೇರೆ ಕಾರಣಗಳೂ ಉಂಟೆಂದು ಸೂಚಿಸಿದ್ದ ಶೇಷಯ್ಯನವರೇ ಆಗಲೀ ಮತ್ತಾವ ಸಭಿಕರೇ ಆಗಲೀ ಇನ್ನು ಯಾವ ಆಕ್ಷೇಪಣೆಯನ್ನೇ ಆಗಲೀ ಯಾವ ಕಾರಣವನ್ನೇ ಆಗಲೀ ಹೇಳಲೇ ಇಲ್ಲ. ಬಳಿಕ ಸಭಾಕಾರ್ಯಗಳು ಯಥಾಪ್ರಕಾರ ಜರುಗಿಹೋದುವು.

ಬ್ರಾಹ್ಮಣ ಪ್ರತಿನಿಧಿಗಳು ಹೀಗೆ ಆಚರಿಸಿದ ಕೃತ್ಯವು ಯಾವ ತೆರದಿಂದ ಯೋಚಿಸಿದರೂ ಸಹಜವೂ ನ್ಯಾಯವೂ ಆದುದೆಂದು ನಮಗೆ ತೋರುವುದಿಲ್ಲ. ಇದರ ಮೂಲದಲ್ಲಿ ನೈತಿಕಧೈರ್ಯವು ಸ್ವಲ್ಪವೂ ಇದ್ದಂತೆ ತೋರುವುದಿಲ್ಲ. ನ್ಯಾಯವಾದ ಕಾರಣದಿಂದ ಅವರು ತೂಷ್ಣೀಂಭಾವವನ್ನು ವಹಿಸಿದ್ದರೆ, ಅದನ್ನು ತಿಳಿಯಿಸಲಿಕ್ಕೆ ಅವಕಾಶವಿತ್ತು. ಅಧ್ಯಕ್ಷರು ೨-೩ ವೇಳೆ ಕೇಳಿದರೂ ಶ್ರುತಪಡಿಸದೆ ಹೋದುದರಿಂದಲೇ ಯುಕ್ತವಾದ ಕಾರಣವು ಅವರಲ್ಲಿರಲಿಲ್ಲವೆಂಬುದು ವ್ಯಕ್ತಪಟ್ಟಿರುತ್ತದೆ. ಇದೊಂದು ಸಹಾಯನಿರಾಕರಣವೆಂದೂ, ಇದರ ಅವಲಂಬನೆಯಿಂದ ಪ್ರಭುತ್ವವನ್ನು ತಾವು ಬೆದರಿಸಿಬಿಡುವೆವೆಂದೂ ತಾವುಗಳು ತಟಸ್ಥರಾಗಿ ನಿಂತರೆ ಸಭಾಕಾರ್ಯಗಳೇ ಕಟ್ಟಾಗಿಹೋಗುವುವೆಂದೂ ಅವರುಗಳು ತಿಳಿದುಕೊಂಡು ಹೀಗೆ ಮಾಡಿದ್ದರೆ ಅದು ಕೇವಲ ಭ್ರಮೆಯೇ ಹೊರತು ಮತ್ತೇನೂ ಅಲ್ಲ. ಆಂಗ್ಲಪ್ರಭುತ್ವದ ಮೇಲೆ ಈಗ ಆಚರಿಸಲ್ಪಡುತ್ತಿರುವ ಸಹಾಯನಿರಾಕರಣಕ್ಕೂ ಇದಕ್ಕೂ ಹೋಲಿಕೆಮಾಡುವುದು ವನ್ಯಸಿಂಹಕ್ಕೂ ಗ್ರಾಮಸಿಂಹಕ್ಕೂ ಹೋಲಿಸಿದಂತೆಯೇ ಸರಿ. ಆ ಸಹಾಯನಿರಾಕರಣದಲ್ಲಿ ಧೈರ್ಯ ಸ್ಥೈರ್ಯ ಸಹಜವರ್ತನಗಳು ಸ್ಫುಟವಾಗಿವೆ. ತಮ್ಮ ಸಹಾಯನಿರಾಕರಣಾವಲಂಬನೆಗೆ ಕಾರಣವೇನೆಂಬುದನ್ನು ಅವರು ಘಂಟಾಘೋಷವಾಗಿ ಸಾರಿ, ಅದನ್ನಾಚರಿಸುತ್ತಿದ್ದಾರೆ. ಇಲ್ಲಿ ಇವರುಗಳು ಆಚರಿಸುವುದರಲ್ಲಿ ಆ ಧೈರ್ಯ ಸ್ಥೈರ್ಯಗಳೇ ಆಗಲೀ ಕಾರಣನಿರೂಪಣವೇ ಆಗಲೀ ಇಲ್ಲವೇ ಇಲ್ಲ. ಬರೀ ಹೇಡಿತನ. ಆದುಕಾರಣ ಇದು ಕೃತಕ (imitation) ಸಹಾಯನಿರಾಕರಣವೇ ಹೊರತು ಸಹಜವಾದುದಲ್ಲ. ಇದರ ಅವಲಂಬನೆಯಿಂದ ಲಾಭಕ್ಕೆ ಪ್ರತಿಯಾಗಿ ಹಾನಿಯೇ ಹೆಚ್ಚೆಂಬುದು ಅವರುಗಳಲ್ಲಿ ಯಾರೊಬ್ಬರಿಗೂ ಹೊಳೆಯದೆ ಹೋದುದು ದುರ್ದೈವವೇ ಸರಿ.

ಮ|| ಸಿಂಧ್ಯರವರು ಹೇಳಿದ ಕಾರಣವೇ ಈ ಮೌನಕ್ಕೆ ಹೇತುಭೂತವೋ ಬೇರೆ ಇನ್ನಾವುದಾದರೂ ಉಂಟೋ ಗೊತ್ತಾಗಲಿಲ್ಲ. ಮ|| ಸಿಂಧ್ಯರವರು ಬ್ರಾಹ್ಮಣ ಪ್ರತಿನಿಧಿಗಳಲ್ಲ. ಬ್ರಾಹ್ಮಣರೊಬ್ಬರ ಬಾಯಿಂದಲೂ ಅವರ ಮೌನಧಾರಣದ ಕಾರಣವು ಹೊರಬೀಳಲಿಲ್ಲ. ಸಿಂಧ್ಯರವರು ಹೇಳಿದ ಕಾರಣವನ್ನೇ ಹಿಡಿದು ವಿಚಾರಮಾಡಿ ನೋಡಿದರೆ ಸರ್ಕಾರದವರು ಕಳೆದ ಮೇ ತಾ|| ೨೮ರಲ್ಲಿ ಹುಟ್ಟಿಸಿ ಜೂನ್ ತಿಂಗಳು ತಾ|| ೨ನೆ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿರುವ ಅಪ್ಪಣೆಯು ಪ್ರಜಾಪ್ರತಿನಿಧಿ ಸಭೆಯ ಗೌರವರಕ್ಷಣೆಗೆ ಸಾಧಕವಾದುದೆಂದೇ ಹೇಳಬೇಕು. ನಮ್ಮ ಈ ಸಭೆಯು ಹುಟ್ಟಿ ೪೦ ವರ್ಷಗಳಾಗಿದ್ದರೂ ಇದರ ನಡವಳಿಕೆಯ ಸಮಯದಲ್ಲಿ ಜರುಗುತ್ತಿದ್ದ ಗದ್ದಲವನ್ನೂ ಕ್ರಮಚ್ಯುತಿಯನ್ನೂ ನೋಡಿದರೆ ಅದು ಸಂತೆಯಕೂಟದಷ್ಟು ಕೋಲಾಹಲಮಯವಾಗಿರುತ್ತಿದ್ದಿತು; ನಿರಂಕುಶತ್ವವು ನಿರರ್ಗಳವಾಗಿದ್ದಿತು ; ಅಧ್ಯಕ್ಷರು ಬಾರಿಸುವ ಬೆಲ್ಲುಗಳೂ ಹೇಳುವ ಎಚ್ಚರಿಕೆಗಳೂ ನಿಷ್ಫಲವಾಗುತ್ತಿದ್ದುವು. ಹೊರಗಣವರು ಯಾರಾದರೂ ಬಂದು ನೋಡಿದ್ದರೆ ಇದರ ಸ್ವರೂಪವನ್ನು ಕುರಿತು ಎಷ್ಟೋ ಅಡಿ ಪರಿಹಾಸಮಾಡುವ ಸ್ಥಿತಿಯಲ್ಲಿದ್ದಿತು. ಹಿಂದಣ ದಿವಾನರುಗಳೆಲ್ಲಾ ಇದೇ ಅವಸ್ಥೆಯನ್ನೇ ಅನುಭವಿಸಿ ಹಲವುಸಲ ಎಷ್ಟೋ ಆಗ್ರಹವನ್ನೂ ಬೇಸರನ್ನೂ ವ್ಯಕ್ತಪಡಿಸಿರುವರು. ಕಾಲಕಾಲಕ್ಕೆ ಅವರೂ ಕಟ್ಟಲೆಗಳನ್ನು ವಿಧಿಸಿರುವರು. ಆ ನ್ಯೂನಾತಿರೇಕಗಳನ್ನೆಲ್ಲಾ ತಪ್ಪಿಸಬೇಕೆಂಬ ಸದುದ್ದೇಶದಿಂದಲೇ ಈ ಅಪ್ಪಣೆಯನ್ನು ಸರ್ಕಾರದವರು ಈಗ ಪ್ರಕಟಿಸಿದರೇ ಹೊರತು ಮತ್ತಾವ ದುರುದ್ದೇಶದಿಂದಲೂ ಅಲ್ಲ. ಹಿಂದಣ ದಿವಾನರುಗಳು ತೋರಿಸುತ್ತಿದ್ದಂಥ ಆಗ್ರಹದಲ್ಲಿಯೂ ಕಟೂಕ್ತಿಯಲ್ಲಿಯೂ ಲೇಶಮಾತ್ರವನ್ನೂ ಈಗಣ ದಿವಾನರು ಉಪಯೋಗಿಸುವುದನ್ನು ತ್ರಿಕರಣದಲ್ಲೂ ಅರಿಯರೆಂಬುದನ್ನು ಸರ್ವರೂ ಬಲ್ಲರು. ಈಗಣ ಅಪ್ಪಣೆಯು ಕಾಗದದ ಮೂಲಕ ಪ್ರಕಟವಾದ ಮಾತ್ರದಿಂದಲೇ ಯಾವುದೊಂದು ಗಲಭೆಯೂ ಇಲ್ಲದೆ ಈ ಸಲದ ಸಭೆಯ ಕಾರ್ಯಗಳು ಎಷ್ಟು ಗಂಭೀರವಾಗಿಯೂ ಶಾಂತವಾಗಿಯೂ ನಡೆದುವೆಂಬುದನ್ನು ಪರ್ಯಾಲೋಚಿಸಿದರೆ, ಅಂಥ ಅಪ್ಪಣೆ ಹುಟ್ಟುವುದು ಎಷ್ಟು ಅತ್ಯವಶ್ಯಕವಾಗಿದ್ದಿತೆಂಬುದನ್ನು ಸರ್ವರೂ ಒಪ್ಪಿಯೇ ತೀರಬೇಕಾಗುವುದು. ಅಲ್ಲದೆ ಅಂಥ ನಿಯಮಗಳಿಗೆ ಅವಿದ್ಯಾವಂತ ಜನರಿಗಿಂತ ವಿದ್ಯಾವಿವೇಕಾದಿಗಳಲ್ಲಿ ಮುಂಬರಿದು ಹಳಬರಾಗಿರುವ ಜನರೇ ಮುಂದಾಗಿ ಅನುಮೋದನೆಯನ್ನು ತೋರಿಸಿ ಅನುಸರಿಸಿ ನಡೆದು ವಿಧಿಬದ್ಧತೆಯ ಪ್ರಯೋಜನವನ್ನು ಇತರರಿಗೆಲ್ಲಾ ತಿಳಿಯಪಡಿಸಿಕೊಡುವುದು ಕರ್ತವ್ಯವಾಗಿದ್ದಿತು. ಅದನ್ನು ಕೂಡ ಅವರುಗಳು ಪರ್ಯಾಲೋಚಿಸದೆಹೋದರು.

ಮತ್ತು ವಿದ್ಯಾ ವಿವೇಕಗಳಲ್ಲಿ ಹಿಂದಾಳುಗಳಾಗಿರುವ ಇತರ ಜನವರ್ಗಗಳ ಸಭಿಕರೆಲ್ಲಾ ಈ ಅಪ್ಪಣೆಯ ವಿಷಯದಲ್ಲಿ ಯಾವುದೊಂದು ಅಸಮಾಧಾನವನ್ನೂ ಲೇಶವೂ ತೋರ್ಪಡಿಸದೆ ಅದಕ್ಕೆ ತಲೆವಾಗಿ ನಡೆದುಕೊಂಡು ಹೋಗುತ್ತಿರುವಾಗ ಮುಂಬರಿದ ಜನವರ್ಗಗಳವರೆನಿಸಿಕೊಳ್ಳುವ ಇವರುಗಳೇ ಆ ಅಪ್ಪಣೆಯಿಂದ ತಮಗೇನೋ ಮುಕ್ಕಾಯಿತೆಂದು ಹೇಳಿಕೊಳ್ಳುವುದು ಅಲೌಕಿಕವಲ್ಲವೆ? ಹೀಗೆ ಮೌನಾಚರಣೆಮಾಡಿದ ಸಭಿಕರು ಈ ಸಂದರ್ಭದಲ್ಲಿ ಸ್ವಬುದ್ಧಿಯನ್ನು ಸ್ವೇಚ್ಛಾಗಿ ಉಪಯೋಗಿಸಿದಂತೆ ಕಾಣುವುದಿಲ್ಲ. ಪರಪ್ರೇರಣೆಯೇ ಇವರನ್ನು ಈ ಅವಸ್ಥೆಗೆ ಗುರಿಮಾಡಿರಬೇಕೆಂದು ಕಾಣುತ್ತದೆ. ಹೀಗೆ ಸಭಾಕಾರ್ಯದಲ್ಲಿ ಅಸಹಾಯವನ್ನು ಅವಲಂಬಿಸಬೇಕೆಂಬ ಉದ್ದೇಶವು ಇವರುಗಳ ಸ್ಥಳದಲ್ಲೇ ಹುಟ್ಟಿದ್ದರೆ ಮೈಸೂರಿನ ತನಕ ಇವರು ಬರುತ್ತಲೇ ಇರಲಿಲ್ಲ. ಯಾವುದೊಂದು ಮನೋವಿಷವೂ ಅವರಲ್ಲಿಲ್ಲದೆ ಇದ್ದುದರಿಂದಲೇ ಯಥಾಪ್ರಕಾರ ಇಲ್ಲಿಗೆ ಬಂದು, ಇಲ್ಲಿಯ ಯಾವ ಮಹಾನುಭವರ ವಿಷದ ಇಂಜಕ್ಷನ್ನಿನಿಂದಲೋ ಮತಿಗೆಟ್ಟು ಇಂಥ ಕಾರ್ಯಕ್ಕೆ ಪ್ರವೃತ್ತರಾಗಿರಬೇಕು. ಆದರೆ ಹಾಗೆ ಪ್ರವೃತ್ತರಾಗುವಾಗ ತಾವು ಯಾವ ಪ್ರಜೆಗಳ ಕಾರ್ಯಕ್ಕೋಸ್ಕರ ಯಾರ ಓಟುಗಳ ಆಧಾರದಮೇಲೆ ಈ ಸಭೆಯ ಪ್ರತಿನಿಧಿತ್ವ ಗೌರವವನ್ನು ಪಡೆದುಕೊಂಡು ಬಂದಿರುವರೋ ಅಂಥವರುಗಳ ಕೆಲಸವನ್ನು ಮಾಡದೆ, ಸರ್ಕಾರದ ತಿಂಡಿತೀರ್ಥ ಆತಿಥ್ಯ ಮರ್ಯಾದೆ ಮೊದಲಾದುವುಗಳಿಗೆ ಮಾತ್ರ ಲೋಪಮಾಡಿಕೊಳ್ಳದೆ, ಅವುಗಳೊಂದಕ್ಕೂ ಅಸಹಾಯವನ್ನವಲಂಬಿಸದೆ ಸಭಾಕಾರ್ಯವನ್ನು ಮಾತ್ರ ಪರಿತ್ಯಜಿಸಿದರು. ಇದರಿಂದ ಪ್ರಜಾದ್ರೋಹವನ್ನು ಮಾಡಿದ ದೋಷಕ್ಕೆ ತಾವು ಪಾತ್ರರಾಗಬೇಕಾಗುತ್ತದೆಂಬುದನ್ನೂ ಅವರುಗಳಿಗೆಲ್ಲಾ ನಾಳೆ ಏನು ಉತ್ತರಕೊಡಬೇಕೆಂಬುದನ್ನೂ ಕೂಡ ಯೋಚಿಸಿಕೊಳ್ಳದೆ ಹೋದುದು ಧೂರ್ತತನವೇ ಸರಿ. ಇಂಥವರುಗಳಿಗೆ ತಮ್ಮ ಓಟುಗಳನ್ನು ಕೊಟ್ಟು ತಮ್ಮ ಪ್ರತಿನಿಧಿಗಳನ್ನು ಮಾಡಿ ಕಳುಹಿಸತಕ್ಕ ಪ್ರಜೆಗಳು ಇನ್ನುಮೇಲಾದರೂ ಬುದ್ಧಿ ಕಲಿತುಕೊಂಡಾರು.

ಒಂದೇಒಂದು ಜನವರ್ಗಕ್ಕೆ ಪ್ರಾಬಲ್ಯವಿರುವುದು ಪ್ರಭುತ್ವಕ್ಕೇ ಆಗಲೀ ದೇಶಕ್ಕೇ ಆಗಲೀ ಹಿತಪ್ರದವಲ್ಲವೆಂದು ನಾವು ಇದೇ ಪತ್ರಿಕೆಯ ಮೂಲಕ ಹಲವುಸಲ ಆಡುತ್ತಬಂದಿರುವ ವಾದಗಳಿಗೆ ಈಗಣ ಸಂದರ್ಭವು ಉತ್ತಮವಾದ ನಿದರ್ಶನವಾಗಿ ಪ್ರಭುತ್ವದವರ ಗಮನಕ್ಕೆ ತಟ್ಟಿರುವುದಾದರೆ ಇಂಥ ಪ್ರತಿರೋಧಕ್ರಿಯೆಯಿಂದ ನಷ್ಟಕ್ಕೆ ಪ್ರತಿಯಾಗಿ ಲಾಭವೇ ಆಯಿತೆಂದು ತಿಳಿಯುವೆವು. ಮುಖ್ಯವಾಗಿ ನಮ್ಮ ಬ್ರಾಹ್ಮಣ ಸಹೋದರರಿಗೆ ನಾವು ಸೌಹಾರ್ದದಿಂದ ಈ ಸಮಯದಲ್ಲಿ ಮಾಡುವ ಮುಖ್ಯ ಹಿತವಾದವೇನೆಂದರೆ—ಸಲ್ಲದ ಕಾರಣಗಳಿಂದ ಮನಸ್ಸಿನಲ್ಲಿ ಕುದಿಯುವ ಕೆಲರ ದುರ್ಬೋಧನೆಗೆ ಒಳಪಟ್ಟು ಬ್ರಾಹ್ಮಣರೆಲ್ಲರೂ ಪರೋತ್ಕರ್ಷಾಸಹನರೆಂಬ ಅಪಪ್ರಥೆಗೆ ಗುರಿಯಾಗುವುದೂ, ಪ್ರಭುತ್ವದಲ್ಲಿ ವಿರೋಧಬೆಳಸುವುದೂ ನೆರೆಹೊರೆಯ ಮಹಾ ಪ್ರಜಾಸಮುದಾಯದ ವಿಶ್ವಾಸವನ್ನು ಧಿಕ್ಕರಿಸುವುದೂ ವಿಹಿತವಲ್ಲ. "ಅಸಂತುಷ್ಟೋ ದ್ವಿಜೋ ನಷ್ಟಃ" ಎಂಬ ಉತ್ತಮ ನೀತಿಸಾರವನ್ನು ಪರ್ಯಾಲೋಚಿಸಿ, ನಾವು ಮುಂಬರಿದಿರುವಂತೆಯೇ ಪರರೂ ಮುಂಬರಿದು ಬರಲಿ ಎಂಬ ಉದಾರಭಾವವನ್ನು ಹೊಂದಿ, ಪರಸ್ಪರ ಸೌಹಾರ್ದದಿಂದ ಬಾಳಿ ತಮ್ಮ ದೇಶವನ್ನು ಏಳ್ಗೆಗೆತರುವಲ್ಲಿ ದೃಷ್ಟಿ ಕೊಟ್ಟರೆ ಇದುವರೆಗೆ ಗಳಿಸಿಕೊಂಡುಬಂದ ತಮ್ಮ ಗೌರವಪ್ರತಿಷ್ಠೆಗಳು ಮುಂದಕ್ಕೂ ವೃದ್ಧಿಗೊಳ್ಳುವುವೇಹೊರತು ವಕ್ರಮಾರ್ಗಾಚರಣದಿಂದ ಎಂದಿಗೂ ಅವು ವೃದ್ಧಿಹೊಂದಲಾರವು. ಆದುಕಾರಣ ತಪ್ಪಾಗಿ ಒಂದಾವೃತ್ತಿ ನಡೆದ ಈಗಣ ಸಂದರ್ಭವನ್ನು ಮುಂದಕ್ಕೆ ಎಂದಿಗೂ ತಂದುಕೊಳ್ಳಬಾರದು.

ಪ್ರಜಾಪ್ರತಿನಿಧಿಸಭೆಯನ್ನು ಮುಗಿಸುವಾಗ್ಗೆ ದಿವಾನರವರು ಮಾಡಿದ ಭಾಷಣ.

ಈ ಅಧಿವೇಶನದ ಕಾರ್ಯಗಳೆಲ್ಲಾ ಮುಗಿದುವು. ಸಭೆಯನ್ನು ಮುಗಿಸುವುದಕ್ಕೆ ಮುಂಚೆ ಕೆಲ ಮಾತುಗಳನ್ನು ಆಡಲಪೇಕ್ಷಿಸುತ್ತೇನೆ. ಬ್ರಾಹ್ಮಣವರ್ಗಕ್ಕೆ ಸೇರಿದ ಸಭಿಕರುಗಳು ತಾವು ಸೂಚಿಸಿದ್ದ ಬಹಳ ವಿಷಯಗಳನ್ನು ಅವರಲ್ಲಿ ಕೆಲವರು ವಿನಾ ಉಳಿದಸಭಿಕರುಗಳು ಚರ್ಚಿಸದೆ ಹಿಂದಕ್ಕೆ ತೆಗೆದುಕೊಂಡುದರಿಂದ ನಿರೀಕ್ಷಣೆಮಾಡಿದ್ದ ಕಾಲಕ್ಕಿಂತ ಮುಂಚೆಯೇ ವಿಷಯ ಚರ್ಚಾಭಾಗವು ಮುಗಿದಿತು. ಇದೇವರ್ಗದ ಸಭಿಕರುಗಳು ಆಯವ್ಯಯದ (ಬಡ್ಜೆಟ್) ಚರ್ಚೆಯಲ್ಲೂ ಭಾಗಿಗಳಾಗಲಿಲ್ಲ. ಒಂದೆರಡು ವಿಷಯಗಳು ಈಚೆಗೆ ಆದ ಸರ್ಕಾರದ ಅಪ್ಪಣೆಗಳಿಂದಲೂ ಮತ್ತು ಸಂಪದಭ್ಯುದಯ ಸಮಾಜದಲ್ಲಿ ಚರ್ಚಿಸಲ್ಪಟ್ಟುದರಿಂದಲೂ ಅವುಗಳ ಚರ್ಚೆಯು ಮಾತ್ರ ಅನವಶ್ಯಕವಾಗಿ ಬಿಡಲ್ಪಡತಕ್ಕುವಾಗಿದ್ದರೂ ಉಳಿದವಿಷಯಗಳೆಲ್ಲಾ ಚರ್ಚೆಗೆ ಅನಾವಶ್ಯಕಗಳೆಂದು ಹಿಂದೆಗೆದುಕೊಳ್ಳಲ್ಪಟ್ಟವುಗಳಲ್ಲ. ಮತ್ತೇನೆಂದರೆ, ಸರ್ಕಾರದವರಿಗೆ ತಿಳಿಯದಿದ್ದ ಯಾವುದೋ ಒಂದು ಅಸಮಾಧಾನದ ಮೂಲಕ ಹಿಂದೆಗೆದುಕೊಳ್ಳಲ್ಪಟ್ಟುವಾಗಿವೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆಯುವ ಕಾರ್ಯಕ್ರಮದ ವಿಷಯವಾಗಿ ಸರ್ಕಾರದಿಂದ ಹುಟ್ಟಿದ ಸರ್ಕ್ಯುಲರಿನ ಮೇಲೆ ಉಂಟಾದ ಅಸಮಾಧಾನವೇ ಈ ಹಿಂದೆಗೆದುಕೊಳ್ಳುವಿಕೆಗೆ ಕಾರಣವಾಗಿರಬಹುದೆಂದು ಒಬ್ಬ ಪ್ರತಿನಿಧಿಯಿಂದ ಸೂಚಿಸಲ್ಪಟ್ಟಿತು. ಇನ್ನೊಬ್ಬ ಮೆಂಬರು ಅದಕ್ಕೆ ಇದೊಂದೇ ಕಾರಣವಲ್ಲ, ಇನ್ನು ಬೇರೆ ಕಾರಣಗಳಿವೆಯೆಂದು ಹೇಳಿದರು. ಆದರೆ ಅವನ್ನು ಬಿಚ್ಚಿ ಹೇಳಲಿಲ್ಲ. ಅದು ಏನೇಆಗಿದ್ದರೂ ಇರಲಿ, ಅಸಮಾಧಾನಪಟ್ಟ ಜನರು ತಾವು ಯಾರ ಪ್ರತಿನಿಧಿಗಳಾಗಿ ಸಭೆಗೆ ಬಂದಿದ್ದರೋ ಅಂಥ ಪ್ರಜೆಗಳ ಕುಂದುಕೊರತೆಗಳನ್ನೆಲ್ಲಾ ಸರ್ಕಾರದ ಗಮನಕ್ಕೆ ತರಬೇಕಾದ ಸಂದರ್ಭವನ್ನೆಲ್ಲಾ ವ್ಯರ್ಥಮಾಡಿಬಿಟ್ಟು ಚರ್ಚೆಮಾಡತಕ್ಕ ಸನ್ನಿಹಿತಸಮಯದಲ್ಲಿ ಮುಳಿಸಿಕೊಂಡು ಕುಳಿತುಕೊಳ್ಳುವುದಕ್ಕೆ ಬದಲು, ತಮ್ಮ ಅಸಮಾಧಾನಕ್ಕೆ ಕಾರಣವನ್ನು ಬಹಿರಂಗವಾಗಿ ಸರ್ಕಾರದ ಗಮನಕ್ಕೆ ತಂದಿದ್ದ ಪಕ್ಷದಲ್ಲಿ ಅದು ಯುಕ್ತವೆನಿಸಿಕೊಳ್ಳುತ್ತಿದ್ದಿತು.

ತಮ್ಮನ್ನು ಚುನಾವಣೆಮಾಡಿ ಕಳುಹಿಸಿದ ಪ್ರಜೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಇವರು ಚರ್ಚೆಗೆ ತರದೆ ಇರುವರಾಗಿದ್ದ ಪಕ್ಷದಲ್ಲಿ ಇವರ ಪ್ರತಿನಿಧಿತ್ವವು ಸಕ್ರಮವೆನಿಸಿಕೊಳ್ಳುವುದಿಲ್ಲ. ತಮ್ಮ ಪ್ರತಿನಿಧಿಸ್ಥಾನವನ್ನು ತ್ಯಜಿಸಿಬಿಡಬಹುದಾಗಿದ್ದಿತು. ಆದರೆ ಇವರು ಆಸ್ಥಾನದಲ್ಲೇ ಇದ್ದುಕೊಂಡು, ಸಭೆಗೂ ಬಂದು, ವಿಷಯ ಚರ್ಚೆಯನ್ನು ಮಾತ್ರ ಮಾಡದೆ ತಿರಸ್ಕರಿಸಿದುದರಿಂದ ಇವರನ್ನು ಆರಿಸಿ ಕಳುಹಿಸಿದ ಪ್ರಜೆಗಳ ನಂಬುಗೆಗೆ ಇವರು ದ್ರೋಹಮಾಡಿದವರಾಗಿದ್ದಾರೆಂದು ನಾನು ಎಣಿಸುತ್ತೇನೆ. ಸಭೆಯ ಒಟ್ಟು ಮೆಂಬರುಗಳ ಸಂಖ್ಯೆಯಲ್ಲಿ ಸೇಕಡಾ ೩೫ರಷ್ಟು ಮಾತ್ರ ಇರತಕ್ಕ ಈ ಜನರಲ್ಲಿ ಕಂಡುಬಂದ ಈ ಚರ್ಯೆಯು ಅವಿವೇಕವೂ, ಬಹುಕಾಲದಿಂದ ನಡೆದು ಬಂದ ಸಭೆಯ ಗೌರವಪ್ರತಿಷ್ಠೆಗಳಿಗೆ ಭಂಗಕಾರಿಯೂ ಆಗಿರುತ್ತದೆಂಬುದನ್ನು ನಾನು ಹೇಳದೆ ಇರಲಾರೆನು. ಈತರದ ಚರ್ಯೆಯನ್ನು ಹೆಚ್ಚು ಜನರು ಅವಲಂಬಿಸಿದ್ದ ಪಕ್ಷದಲ್ಲಿ ಪ್ರತಿನಿಧಿಸಂಸ್ಥೆಗಳ ಉದ್ದೇಶಕ್ಕೆ ಭಂಗಬರದಂತೆ ಮಾಡುವುದಕ್ಕಾಗಿಯೂ ಪ್ರಜೆಗಳ ವಿಶ್ವಾಸವನ್ನು ಕಾಪಾಡುವುದಕ್ಕಾಗಿಯೂ ತಕ್ಕ ಕಾರ್ಯಭಾಗವನ್ನು ಕೈಕೊಳ್ಳಬೇಕಾಗುತ್ತಿದ್ದಿತು. ಇದೇನೋ ಆಕಸ್ಮಿಕವಾಗಿ ಸಂಭವಿಸಿದುದೆಂದೂ ಬರುವ ಅಕ್ಟೋಬರ್ ತಿಂಗಳ ಅಧಿವೇಶನ ಕಾಲದೊಳಗಾಗಿ ಇದು ಅಳಿಸಿಹೋಗುವುವೆಂದೂ ನಾನು ನಿರೀಕ್ಷಿಸುತ್ತೇನೆ.

ಸಭಾಕಾರ್ಯಕ್ರಮದ ವಿಷಯವಾಗಿ ಹೊಸದಾಗಿ ಹುಟ್ಟಿದ ಸರ್ಕಾರಿ ಅಪ್ಪಣೆಯ ರೂಲ್ಸಿನಲ್ಲಿ ಕಂಡಿರುವ ಅಧಿಕಾರಗಳು ಸಭಾಧ್ಯಕ್ಷರಿಗೆ ಮೊದಲಿಂದಲೂ ಇದ್ದೇ ಇದ್ದುವೆಂದೂ, ಅವನ್ನೇ ಈ ರೂಲ್ಸುಗಳು ಒಳಗೊಂಡಿವೆಯೆಂದೂ ಈ ಸರ್ಕಾರಿ ಅಪ್ಪಣೆಯ ವಿಷಯದಲ್ಲಿ ಅಸಮಾಧಾನವನ್ನು ಸೂಚಿಸಿದ ಮೆಂಬರುಗಳೇ ಒಪ್ಪಿಕೊಂಡಿದ್ದಾರೆ. ಈ ವಿಧಿಯಲ್ಲಿ ಪ್ರಯೋಗಿಸಲ್ಪಟ್ಟಿರುವ ಪದಗಳು ಭರತಖಂಡದ ಶಾಸನಸಭೆಗಳ ಕಾರ್ಯಕ್ರಮಕ್ಕಾಗಿ ವಿಧಿಸಲ್ಪಟ್ಟಿರುವ ನಿಯಮಗಳಲ್ಲಿ ಉಪಯೋಗಿಸಲ್ಪಟ್ಟುವುಗಳಾಗಿಯೇ ಇರುತ್ತವೆ. ಮತ್ತು ಈ ನಿಯಮಗಳು ಅನುಭವಕ್ಕೆ ಬಂದಂತೆಲ್ಲಾ ವ್ಯತ್ಯಾಸಗೊಳಿಸಲ್ಪಡಲರ್ಹವಾಗಿರುತ್ತವೆಯೇ ಹೊರತು ಎಂದೆಂದಿಗೂ ಬದಲಾಯಿಸಲ್ಪಡದೆ ಇರತಕ್ಕವುಗಳಾಗಿಯೂ ಇಲ್ಲ.

ಇದುವರೆಗೆ ಚರ್ಚಿಸಲ್ಪಟ್ಟ ವಿಷಯಗಳೊಳಗೆಲ್ಲಾ ನಮ್ಮಜಾತಿ ಜನರ ಉದ್ಧಾರದ ವಿಷಯಕ್ಕೆ ಸಂಬಂಧಪಟ್ಟುವೇ ಹೆಚ್ಚಾಗಿದ್ದುದು ಸಂತೋಷಪ್ರದವು. ಆ ಜನರ ವಾಸಕ್ಕೂ ವ್ಯವಸಾಯಕ್ಕೂ ಭೂಮಿಯನ್ನು ಉಚಿತವಾಗಿ ಕೊಟ್ಟು ಶಾಲೆಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂಬುವೇ ಮೊದಲಾದ ಸೂಚನೆಗಳು ಕೊಡಲ್ಪಟ್ಟಿವೆ. ಇವೆಲ್ಲಾ ಸರ್ಕಾರದ ಪರ್ಯಾಲೋಚನೆಯಲ್ಲಿವೆ. ಈ ವಿಷಯದ ವಿಚಾರಕ್ಕೆ ನಿಯುಕ್ತರಾಗತಕ್ಕ ಸಂಘದವರಿಗೆ ಇವುಗಳನ್ನು ವಿಮರ್ಶಿಸಲಿಕ್ಕಾಗಿ ಕೊಡುವೆವು.

ನಡೆದ ಚರ್ಚೆಗಳಲ್ಲಿ ಅಟವೀಶಾಖೆಗೆ ಸಂಬಂಧಪಟ್ಟ ತೊಂದರೆಗಳನ್ನು ಅನೇಕರು ಸೂಚಿಸಿದರು. ಆ ಸಂಬಂಧವಾಗಿ ತಕ್ಕ ವಿಚಾರಣೆಗಳನ್ನು ಸರ್ಕಾರದವರು ನಡೆಯಿಸುವರು. ಎಲ್ಲಿಯವರೆಗೆ ಪ್ರಜೆಗಳು ಡಿಸ್ಟ್ರಿಕ್ಟು ಮತ್ತು ಸ್ಟೇಟ್‌ಫಾರೆಸ್ಟುಗಳನ್ನೇ ನಂಬಿಕೊಂಡು ತಮ್ಮ ಸ್ವಂತ ಸಾಧನಗಳನ್ನು ಏರ್ಪಡಿಸಿಕೊಳ್ಳದೆ ಇರುತ್ತಾರೆಯೋ ಅಲ್ಲಿಯವರೆಗೂ ಅಟವೀಶಾಖೆಯ ಆಡಳಿತದ ಕೆಲವು ತೊಂದರೆಗಳನ್ನು ಅನುಭವಿಸಲು ಅವರು ಸಿದ್ಧರಾಗಿಯೇ ಇರಬೇಕು. ಅವರುಗಳು ವಿಲೇಜ್ ಫಾರೆಸ್ಟುಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಸಂದರ್ಭದಲ್ಲಿ ಅದಕ್ಕೆ ತಕ್ಕಸಹಾಯವನ್ನು ಕಲ್ಪಿಸಿಕೊಡಲು ಸರ್ಕಾರದವರು ಸಿದ್ಧರಾಗಿರುವರು.

ತುರುವೆಕೆರೆ ಸಬ್‌ತಾಲ್ಲೂಕಿನಿಂದ ಬಂದಿದ್ದ ನಾಗಪ್ಪನವರು ಗ್ರಾಮಾಂತರದವರು ಸರ್ಕಾರಕ್ಕೆ ಕೊಟ್ಟಿರುವ ಸಾಲದಮೇಲಣ ಬಡ್ಡಿಯನ್ನು ಅವರುಗಳಿಗೆ ಆಯಾ ಗ್ರಾಮಗಳಲ್ಲೇ ಸಲ್ಲಿಸುವಂತೆಯಾಗಲಿ ಅಥವಾ ಅವರವರು ಕೊಡಬೇಕಾದ ಸರ್ಕಾರಿ ಕಂದಾಯಕ್ಕಾಗಿ ಜಮೆಕಟ್ಟಿಕೊಳ್ಳುವಂತೆಯಾಗಲಿ ಮಾಡಿಸಬೇಕೆಂಬ ಒಂದು ಉತ್ತಮವಾದ ಸಲಹೆಯನ್ನು ಮಾಡಿರುತ್ತಾರೆ. ಇದು ಉಭಯತ್ರ ಅನುಕೂಲವಾದ ಸೂಚನೆಯಾಗಿದೆ. ಇದನ್ನು ಚೆನ್ನಾಗಿ ಪರ್ಯಾಲೋಚಿಸಿ ತಕ್ಕ ಏರ್ಪಾಟು ಮಾಡಲ್ಪಡುವುದು.

ಬಡ್ಜೆಟ್ಟಿನ ಮೇಲಣ ಚರ್ಚೆಯನ್ನು ಕೆಲವು ಮೆಂಬರುಗಳು ಬಹಳ ಚೆನ್ನಾಗಿ ಓದಿಕೊಂಡು ಸಮಗ್ರವಾಗಿ ನಡೆಸಿದುದಕ್ಕಾಗಿ ಅವರುಗಳನ್ನು ನಾನು ಅಭಿನಂದಿಸುತ್ತೇನೆ. ಈ ಚರ್ಚೆಯಲ್ಲಿ ಬಹುಮಂದಿ ಸಭಿಕರು ಭಾಗಿಗಳಾದುದರಿಂದ ಎಂದಿನಂತೆ ಇದನ್ನು ೨ ದಿನ ನಡೆಯಿಸುವುದಕ್ಕೆ ಪ್ರತಿಯಾಗಿ ೩ ದಿವಸ ನಡೆಯಿಸಬೇಕಾಯಿತು. ಅವರುಗಳು ಕೊಟ್ಟ ಸೂಚನೆಗಳನ್ನೆಲ್ಲಾ ಜಾಗರೂಕತೆಯಿಂದ ಪರ್ಯಾಲೋಚಿಸುವೆವು. ಅವರು ಮಾಡಿದ ಸೂಚನೆಗಳಲ್ಲಿ ಕೆಲವು ಈಗಣ ರಿಟ್ರೆಂಚ್‌ಮೆಂಟಿನ ಸಂಬಂಧದಲ್ಲಿ ಆಗಲೇ ಅಪ್ಪಣೆಮಾಡಲ್ಪಟ್ಟುಹೋಗಿವೆ ; ಕೆಲವು ಪರ್ಯಾಲೋಚನೆಯಲ್ಲಿವೆ. ಫಾರೆಸ್ಟ್ ಎಕನಾಮಿಸ್ಟ್ ಸ್ಥಾನ, ಅನೇಕ ಸೆಕ್ರೆಟರಿಯೇಟ್ ಸ್ಥಾನಗಳು ಆಗಲೇ ತೆಗೆದುಹಾಕಲ್ಪಟ್ಟಿವೆ. ಎಷ್ಟೋಮಂದಿ ನೌಕರರನ್ನು ತೆಗೆದುಹಾಕಲಾಗಿದೆ. ಯೂನಿವರ್ಸಿಟಿ ಪ್ರೊಫೆಸರುಗಳು ಮಾಡತಕ್ಕ ಕೆಲಸದ ಕಾಲದ ಪರಿಮಿತಿಯನ್ನು ಹೆಚ್ಚಿಸೋಣವಾಗಿದೆ. ಮನೆ ಕೈಗಾರಿಕೆಯ ತರಗತಿಗಳನ್ನು ತೆಗೆದುಹಾಕಲಾಯಿತು. ವಿದೇಶ ವಿದ್ಯಾರ್ಥಿವೇತನಗಳನ್ನೆಲ್ಲಾ ಸಾಲದ ರೂಪವಾಗಿ ಕೊಡುವಂತೆ ಮಾಡಬೇಕೆಂಬ ಸೂಚನೆಯನ್ನು ಪರ್ಯಾಲೋಚಿಸುತ್ತೇವೆ. ಕೈಗಾರಿಕೆ ವ್ಯವಸಾಯಗಳ ಪುರೋವೃದ್ಧಿಗಾಗಿ ಕೊಟ್ಟಿರುವ ಸಾಲಗಳ ಶೇಷವನ್ನು ಬೇಗನೆ ವಸೂಲ್ಮಾಡಲು ತಕ್ಕ ಏರ್ಪಾಟು ಮಾಡುತ್ತೇವೆ. ವರವಾನದ ತೆರಿಗೆಯ ಶಾಖೆಗೆ ಸಂಬಂಧಪಟ್ಟ ದೂರುಗಳ ವಿಷಯವಾಗಿ ಸರ್ಕಾರದವರು ತಕ್ಕ ಗಮನಕೊಟ್ಟು ವಿಚಾರಣಮಾಡುತ್ತಾರೆ. ಅದರ ಸಂಬಂಧದಲ್ಲಿ ಹೆಚ್ಚು ತೆರಿಗೆ ಬಿದ್ದಿದ್ದರೆ ಅದು ಹೋದವರ್ಷದ ಲೆಕ್ಕದ ಮೇಲೆ ವಿಧಿಸಲ್ಪಟ್ಟಿದೆ. ಈ ವರ್ಷದ ಆದಾಯವನ್ನು ನೋಡಿ ಆದಮೇಲೆ ಅದರಲ್ಲಿ ಹೆಚ್ಚುಕಡಿಮೆ ಮಾಡಬೇಕಾದುದು ತೋರಿಬಂದರೆ ಅವಶ್ಯಕವಾಗಿ ಮಾಡಲ್ಪಡುವುದು. ವಿದ್ಯಾಶಾಖಾ ಸಂಬಂಧವಾಗಿ ಅನೇಕ ಚರ್ಚೆಗಳು ಮಾಡಲ್ಪಟ್ಟುವು. ಅದಕ್ಕೆ ಹೆಚ್ಚು ಹಣವನ್ನು ವಿನಿಯೋಗಿಸಬೇಕೆಂದು ಕೇಳಲ್ಪಟ್ಟಿತು. ವಿದ್ಯಾಭಿವೃದ್ಧಿಗಾಗಿ ತತ್ರಾಪಿ ಗ್ರಾಮಾಂತರಗಳ ವಿದ್ಯಾಪ್ರಸಾರಕ್ಕಾಗಿ ಹೆಚ್ಚು ಹಣವನ್ನು ವಿನಿಯೋಗಿಸಲು ಸರ್ಕಾರದವರು ಹೆಚ್ಚು ಕುತೂಹಲವುಳ್ಳವರಾಗಿದ್ದಾರೆ. ಆದರೆ ನಾನು ಇತರ ಸಂದರ್ಭದಲ್ಲಿ ಹೇಳಿದಂತೆ ಹಣದ ಅನುಕೂಲತೆಯುಂಟಾದರೆ ಮಾತ್ರ ಇದು ಸಾಧ್ಯವಾಗುವುದು. ವಿದ್ಯೆಯ ಸೆಸ್ಸನ್ನು ವ್ಯವಹಾರಕ್ಕೆ ತರಕೂಡದೆಂದು ಕೆಲರು ಹೇಳಿದರು. ವಿದ್ಯಾಪ್ರಸಾರ ಮಾಡಬೇಕಾದರೆ ಹೆಚ್ಚು ಹಣವು ಬೇಕಾಗುವುದೆಂಬುದನ್ನು ಗಮನಿಸಿದರೆ ಅವರುಗಳು ಈ ಸೆಸ್ಸನ್ನು ತೆರುವುದಕ್ಕೆ ಹಿಂದೆಗೆಯಲಾರರೆಂದು ನಾನು ನಂಬುತ್ತೇನೆ.

ಕೊನೆಯಲ್ಲಿ ಮುಖ್ಯವಾದೊಂದು ವಿಷಯವನ್ನು ನಾನು ಈಗ ತಿಳಿಯಿಸಬೇಕಾಗಿದೆ. ಏನೆಂದರೆ— ನಮ್ಮ ವಿದ್ಯಾಶಾಖಾ ಇನ್ಸ್‌ಪೆಕ್ಟರ್ ಜನರಲ್ಲರಾದ ಮಿ|| ಸಿ. ಆರ್. ರೆಡ್ಡಿಯವರು ಬ್ರಿಟಿಷ್ ಇಂಡಿಯಾದಲ್ಲಿ ದೇಶಸೇವಾಕಾರ್ಯವನ್ನು ಕೈಕೊಳ್ಳುವ ಉದ್ದೇಶದಿಂದ ಇನ್ನು ಕೆಲವು ವಾರಗಳೊಳಗೆ ನಮ್ಮ ದೇಶದ ಸರ್ವೀಸಿನಿಂದ ತಾವೇ ರಿಟೈರಾಗತಕ್ಕವರಾಗಿದ್ದಾರೆ. ಇವರು ಕಳೆದ ೧೩ ವರ್ಷಗಳಿಂದಲೂ ಸಂಸ್ಥಾನದ ನಾನಾ ಉದ್ಯೋಗಗಳಲ್ಲಿ ಎಂದರೆ ವಿದ್ಯಾಶಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾಗಿಯೂ, ಮಹಾರಾಜಾ ಕಾಲೇಜಿನಲ್ಲಿ ಪ್ರೊಫೆಸರಾಗಿಯೂ, ಬಳಿಕ ಪ್ರಿನ್ಸಿಪಾಲರಾಗಿಯೂ ಕಡೆಯಲ್ಲಿ ವಿದ್ಯಾಶಾಖಾ ಇನ್ಸ್‌ಪೆಕ್ಟರ್ ಜನರಲ್ಲರಾಗಿಯೂ ಇದ್ದರು. ಈ ಕಾರ್ಯಗಳನ್ನೆಲ್ಲಾ ಅವರು ಎಷ್ಟು ಸಮರ್ಥತೆಯಿಂದ ನಿರ್ವಹಿಸಿದರೆಂಬುದನ್ನು ಇಲ್ಲಿ ವಿವರಿಸಬೇಕಾದುದಿಲ್ಲ. ಕಳೆದ ೩ ವರ್ಷಗಳಿಂದ ಅವರು ವಿದ್ಯಾಶಾಖೆಯಲ್ಲಿ ನಡೆಯಿಸಿದ ಆಡಳಿತವು ಅತ್ಯಂತ ಪ್ರಕಾಶಮಾನವಾದ ಉತ್ತಮದಿಗ್ದರ್ಶನಸಾಧನವಾಗಿರುವುದು. ಈಚೆಗೆ ಸರ್ಕಾರದವರು ಅಪ್ಪಣೆ ಮಾಡಿರುವ ಮತ್ತು ನೀವೆಲ್ಲರೂ ಮೆಚ್ಚಿ ಅನುಮೋದಿಸಿರುವ ವಿದ್ಯಾಪ್ರಸಾರ ಸಂಬಂಧವಾದ ಏರ್ಪಾಟುಗಳಿಗೆ ಇವರೇ ಕಾರಣಭೂತರು. ಆದುದರಿಂದ ಇಂಥವರು ಸಂಸ್ಥಾನದ ಉದ್ಯೋಗದಿಂದ ನಿವೃತ್ತಿಗೊಳ್ಳುವುದನ್ನು ಪ್ರಭುತ್ವದವರು ಬಹಳ ವಿಷಾದದಿಂದ ಒಪ್ಪಿಕೊಂಡಿದ್ದಾರೆ. ಇಲ್ಲಿ ನೆರೆದಿರತಕ್ಕವರಲ್ಲಿ ಅನೇಕರು ಈ ದುಃಖದಲ್ಲಿ ಭಾಗಿಗಳಾಗುತ್ತೀರೆಂದು ನಾನು ನಂಬುತ್ತೇನೆ. ಮುಂದೆ ಅವರು ಕೈಕೊಳ್ಳಲಿರತಕ್ಕ ಕಾರ್ಯದಲ್ಲಿ ಅವರಿಗೆ ನಿಸರ್ಗವಾಗಿರುವ ಸಂಪೂರ್ಣ ಸಾಮರ್ಥ್ಯವು ಅವರಿಗೆ ಸಂಪೂರ್ಣ ಫಲವನ್ನುಂಟುಮಾಡಲೆಂದು ನಾವೆಲ್ಲರೂ ಕೋರೋಣ.

ಒಳದೇಶದ ವೃತ್ತಾಂತಗಳು.

ಮೈಸೂರು ಡಿಸ್ಟ್ರಿಕ್ಟು ಮತ್ತು ಸೆಷನ್ ಜಡ್ಜರ ಸ್ಥಾನಕ್ಕೆ ಚೀಫ್ ಕೋರ್ಟು ರಿಜಿಸ್ಟ್ರಾರರಾಗಿದ್ದ ಮ|| ಜಿ. ಶ್ರೀನಿವಾಸಯ್ಯಂಗಾರ್‌ರವರು ಆಕ್ಟಿಂಗಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಳೆದ ಬೊಂಬಾಯಿ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಗೆ ಕುಳಿತಿದ್ದ ವೀರಶೈವವಿದ್ಯಾರ್ಥಿಗಳಲ್ಲಿ ೧೭ ಮಂದಿಗಳು ಉತ್ತೀರ್ಣರಾಗಿರುವರೆಂಬುದನ್ನು ತಿಳಿಯಿಸಲು ಸಂತೋಷಿಸುತ್ತೇವೆ.

ಉದ್ಯೋಗದಿಂದ ನಿವೃತ್ತರಾದ ಮ|| ರಾಮಲಿಂಗರೆಡ್ಡಿಯವರಿಗೆ ಜೀವಿತಾವಧಿ ೨೫೦ ರೂ. ಗಳ ಉಪಕಾರವೇತನವನ್ನು ಕೊಡಲು ಶ್ರೀಮನ್ಮಹಾರಾಜರು ಅನುಗ್ರಹಿಸಿದರೆಂಬುದನ್ನು ತಿಳಿಯಿಸಲು ಸಂತೋಷಿಸುತ್ತೇವೆ.

ಕಳೆದ ಬುಧವಾರ ಹಗಲು ೪|| ಗಂಟೆಗೆ ದಿವಾನರವರು ಲೇಕ್‌ವ್ಯೂ ಬಂಗಲೆಗೆ ಪ್ರಜಾಪ್ರತಿನಿಧಿಗಳು ರಾಜಬಂಧುಗಳು ಅಧಿಕಾರಿಗಳು ಪುರಪ್ರಮುಖರು ಮೊದಲಾದವರನ್ನು ಬರಮಾಡಿಕೊಂಡು ಅಲ್ಪಾಹಾರ ವಿನೋದಾದಿಗಳಿಂದ ಸತ್ಕರಿಸಿ ಸಂತೋಷಪಡಿಸಿದರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಬಡ್ಜೆಟ್ ಚರ್ಚೆಯು ೩ ದಿನಗಳ ಕಾಲ ನಡೆದು ಮಂಗಳವಾರದ ದಿನಕ್ಕೆ ಸಭೆಯು ಮುಗಿದಿತು. ದಿವಾನರವರು ಕೊನೆಯ ಭಾಷಣವನ್ನು ಮಾಡಿದ ಬಳಿಕ ಮಿ|| ಗುಲಾಂ ಅಹಮ್ಮದ್ ಕಲಾಮಿಯವರು ಸಭಿಕರ ಪರವಾಗಿ ವಂದನೆಯನ್ನರ್ಪಿಸುವ ಸುಶ್ರಾವ್ಯವಾದ ಭಾಷಣವನ್ನು ಮಾಡಿದರು.

ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟರಾದ ಮ|| ಬಿ. ಬಸವಾರಾಧ್ಯರು ಈ ತಾ|| ೩೦ ರಲ್ಲಿ ಉದ್ಯೋಗದಿಂದ ನಿವೃತ್ತರಾಗುವರು. ಇವರ ಬದಲು ಮ|| ... ಮಹಾದೇವಯ್ಯನವರು ನಿಯಮಿಸಲ್ಪಡುವರೆಂದು ಮೊದಲು ವದಂತಿಯಿದ್ದಿತು. ಈಚೆಗೆ ಮ|| ಹೆಬ್ಬಳ್ಕರ್‌ರವರು ಈ ಸ್ಥಾನಕ್ಕೆ ಬರಲು ಪ್ರಯತ್ನಿಸುತ್ತಿರುವುದಾಗಿ ತಿಳಿಯುತ್ತೇವೆ.

ತಿರುವಾಂಕೂರು ಶ್ರೀಮನ್ಮಹಾರಾಜರವರು ಬರುವ ತಾ|| ೨೮ ರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿ ೧-೨ ದಿನಗಳು ನಮ್ಮ ಮಹಾರಾಜರ ಆತಿಥ್ಯದಲ್ಲಿರುವರೆಂದು ಕೇಳುತ್ತೇವೆ. ಇವರ ಸತ್ಕಾರಕ್ಕಾಗಿ ಟೌನ್‌ಹಾಲಿಗೆ ದಕ್ಷಿಣಭಾಗದ ವಿಕ್ಟರ್ ರೋಡಿನಲ್ಲಿ ಚಪ್ಪರವು ಹಾಕಲ್ಪಡುತ್ತಿದೆ. ಮತ್ತು ಅವರ ಬಿಡಾರಕ್ಕಾಗಿ ವಾಸಬಂಗಲೆಯು ಸುಣ್ಣಬಣ್ಣಗಳಿಂದ ಶೃಂಗರಿಸಲ್ಪಡುತ್ತಿದೆ.

ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾದ ಡಾ|| ಮುತ್ತುಸ್ವಾಮಿದಾಸ್‌ರವರು ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸರಾಗಿ ವರ್ಗವಾಗಿ ಹೋಗುವರೆಂದು ಕೇಳುತ್ತೇವೆ. ಇವರು ಈ ಡಿಸ್ಟ್ರಿಕ್ಟಿಗೆ ಬಂದು ಸ್ವಲ್ಪಕಾಲವಾಗಿದ್ದರೂ ಬಹಳ ಶ್ರದ್ಧೆಯಿಂದಲೂ ಚಟುವಟಿಕೆಯಿಂದಲೂ ಕೆಲಸಮಾಡಿ ಜನಾನುರಾಗಿಗಳಾಗಿರುವರು. ಇಂತಹ ಗುಣಾಢ್ಯರು ಇಷ್ಟು ಶೀಘ್ರವಾಗಿ ವರ್ಗವಾಗಿ ಹೋಗಲು ಕಾರಣವು ಗೊತ್ತಾಗಲಿಲ್ಲವು ಮತ್ತು ಇದರಿಂದ ಅನೇಕರಿಗೆ ವ್ಯಾಕುಲವುಂಟಾಗಿದೆ.

ರಾಜಧಾನಿಯಲ್ಲಿ ನಡೆಯುತ್ತಿದ್ದ ಕುದುರೆಯ ಪಂದ್ಯವು ತಾ|| ೨೩ ರಲ್ಲಿ ಮುಗಿದಿತು. ಬಂದಿದ್ದ ರೆಸಿಡೆಂಟರು ಮೊದಲಾದ ಅತಿಥಿಗಳು ತಂತಮ್ಮ ಸ್ಥಳಗಳಿಗೆ ತೆರಳಿದರು. ಮೋಡ ಮಾತ್ರವಾಡುತ್ತಿರುವುದಾದರೂ ಮಳೆಯಿಲ್ಲ. ಇಲಿಗಳು ಅಲ್ಲಲ್ಲಿ ಸಾಯಲುಪಕ್ರಮಿಸಿವೆ. ಮತ್ತು ಒಂದೇ ಮನೆಯಲ್ಲಿ ಮೂರು ಜನರು ಪ್ಲೇಗುರೋಗಗ್ರಸ್ತರಾಗಿ ಸತ್ತರು, ಅಲ್ಲದೆ ಅಲ್ಲಲ್ಲಿ ಒಂದೊಂದು ಮರಣವಾಗುತ್ತಿದೆ. ಆರೋಗ್ಯಶಾಖೆಯವರು ಪ್ರಾರಂಭದಲ್ಲೇ ಗಮನಕೊಟ್ಟು ಶಮನಕ್ಕೆ ತಕ್ಕೇರ್ಪಾಟನ್ನು ಮಾಡದಿದ್ದಲ್ಲಿ ಮುಂದೆ ಪ್ರಬಲಿಸುವ ಚಿಹ್ನೆ ತೋರುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ಕಮಿಷನರುಗಳಾದ ಧರ್ಮಪ್ರಕಾಶ ಡಿ. ಬನುಮಯ್ಯನವರು ತಮ್ಮ ಕುಮಾರ ವಿಶ್ವಂಭರಯ್ಯನವಿವಾಹವನ್ನು ಬೆಂಗಳೂರಿನಲ್ಲೂ, ಮ|| ತಿರುವೆಂಗಡಂ ಮೊದಲಿಯಾರರು ತಮ್ಮ ಕುಮಾರ ಯತಿರಾಜನ್ನನ ವಿವಾಹವನ್ನು ಬೌರಿಂಗ್‌ಪೇಟೆಯಲ್ಲೂ ನೆರವೇರಿಸಿಕೊಂಡುಬಂದು ನೂತನ ವಧೂವರರುಗಳ ಆರತ್ಯಕ್ಷತೆಯ ಮಹೋತ್ಸವವನ್ನು ಕಳೆದ ತಾ|| ೨೩ ಮತ್ತು ೨೪ ರಲ್ಲೂ ಮ್ಯು|| ಕೌನ್ಸಿಲ್ ಮ|| ಮಾದಪ್ಪನವರು ತಮ್ಮ ಸಹೋದರರುಗಳ ಮಕ್ಕಳ ವಿವಾಹವನ್ನು ಕಳೆದ ತಾ|| ೧೮ ರಲ್ಲೂ ರಾಜಧಾನಿಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿಸಿದರು. ಸರ್ಕಾರಿಯುದ್ಯೋಗಸ್ಥರುಗಳೂ ಅರಸುಮಕ್ಕಳೂ, ಮ್ಯು|| ಕೌನ್ಸಿಲರುಗಳೂ ಲಾಯರುಗಳೂ ವರ್ತಕರುಗಳೂ ಬರಮಾಡಲ್ಪಟ್ಟಿದ್ದು ಸಂಗೀತಶ್ರವಣಾದಿಗಳಿಂದ ಉಚಿತವಾಗಿ ಸತ್ಕರಿಸಲ್ಪಟ್ಟರು.

ಮ|| ರಾಮಲಿಂಗರೆಡ್ಡಿಯವರು ಮೈಸೂರು ಸಂಸ್ಥಾನದ ಉದ್ಯೋಗದಿಂದ ನಿವೃತ್ತರಾಗಿ ಇನ್ನು ಸ್ವಲ್ಪ ದಿನಗಳಲ್ಲೇ ತೆರಳುವವರಾಗಿದ್ದಾರೆ. ಇವರು ಈ ದೇಶದಲ್ಲಿ ವಿದ್ಯಾಪ್ರಸಾರಕ್ಕಾಗಿ ಮಾಡಿದ ಅಸಾಧಾರಣ ಪ್ರಯತ್ನಗಳು ಪ್ರಜಾವರ್ಗಕ್ಕೆ ವಿಶೇಷ ಲಾಭಕರವಾಗಿರುವುದರಿಂದ ಆ ಉಪಕಾರಸ್ಮರಣೆಗಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಪ್ರಜೆಗಳಿಗೆ ಧರ್ಮವಾಗಿದೆ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಅವರಿಗೆ ಉಚಿತಾನುಸಾರವಾದ ಸನ್ಮಾನ ಸಮಾರಂಭಗಳನ್ನೇರ್ಪಡಿಸಿ ಸತ್ಕರಿಸಬೇಕೆಂದು ಪ್ರಜಾಮಿತ್ರಮಂಡಲಿಯವರು ನಿರ್ಧಾರಮಾಡಿರುವುದು ಸ್ತುತ್ಯವಾಗಿದೆ. ದೇಶದ ಎಲ್ಲ ಭಾಗದ ಪ್ರಜೆಗಳೂ ತಮ್ಮ ಸಾನುಭೂತಿಯನ್ನು ದ್ರವ್ಯಸಹಾಯಮೂಲಕವೂ ಇತರ ವಿಧವಾಗಿಯೂ ನಿವೇದಿಸಲು ಸುಸಮಯವಾಗಿದೆ. ಹಣವನ್ನು ಕಳುಹಿಸತಕ್ಕವರು ಬೆಂಗಳೂರಲ್ಲಿರುವ ಪ್ರಜಾಮಿತ್ರಮಂಡಲಿಯ ಅಧ್ಯಕ್ಷರಾದ ರಾ|| ಸಾ|| ಎಚ್. ಚೆನ್ನಯ್ಯನವರ ವಶಕ್ಕೆ ಕಳುಹಿಸಿಕೊಡಬಹುದು.

ಎಡತೊರೆ ತಾ|| ಚಾಮರಾಜ ನಾಲೆಯ ಕೆಳಗಣ ಹೊಸ ತಱೀಜವಿರ್ನ ಸಾಗುವಳಿದಾರರಿಗೆ ಕಂಟ್ರಿಬ್ಯೂಷನ್ ಹಣಕ್ಕಾಗಿ ರೆವಿನ್ಯು ಅಧಿಕಾರಿಗಳು ಈಗ ವಿಪರೀತ ತಗಾದೆ ಕೊಡುತ್ತಿದ್ದಾರೆಂತಲೂ, ಕೈಯಲ್ಲಿ ಕಾಸಿಲ್ಲದ ಈ ಅಕಾಲದಲ್ಲಿ ಮಾಡುತ್ತಿರುವ ತಗಾದೆಯಿಂದ ರೈತರು ಬಹಳ ತಾಪತ್ರಯಪಡುತ್ತಿರುವರೆಂದೂ ರೈತರ ಮನೆಯ ದನಕರುಗಳನ್ನು ಹಿಡಿಯಿಸಿ ರೆವಿನ್ಯೂ ಉದ್ಯೋಗಿಗಳು ಬಹಳ ಹಿಂಸೆಕೊಡುತ್ತಿರುವರೆಂತಲೂ ವರ್ತಮಾನ ಕೇಳುತ್ತೇವೆ. ಇದೇ ವಿಷಯವು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲೂ ಶ್ರುತಪಡಿಸಲ್ಪಟ್ಟಿತು. ಸದ್ಯಃ ತಗಾದೆ ಮಾಡುವುದನ್ನು ನಿಲ್ಲಿಸುವುದಕ್ಕೆ ಅಪ್ಪಣೆ ಮಾಡುವುದಾಗಿ ರೆವಿನ್ಯೂ ಕಮಿಷನರವರು ಉತ್ತರಕೊಟ್ಟಿರುವರು. ಕಂದಾಯದ ವಸೂಲಾತಿ ಜತೆಗೆ ಮೊದಲಕಂತಿನ ಕಾಲದಿಂದಲೂ ತಗಾದೆ ಕೊಟ್ಟಿದ್ದರೆ ಕಂಟ್ರಿಬ್ಯೂಷನ್ ಮೊಬಲಗು ಎಷ್ಟೋ ವಸೂಲಾಗಬಹುದಾಗಿತ್ತು. ತಾಲ್ಲೂಕು ಅಧಿಕಾರಿಗಳು ಅಕಾಲದಲ್ಲಿ ತಗಾದೆ ಕೊಟ್ಟು ಹಿಂಸೆಪಡಿಸುವುದನ್ನು ನಿಲ್ಲಿಸುವುದೇ ಉತ್ತಮ.

ಬ್ರಾಹ್ಮಣ ವರ್ಗದ ಪ್ರತಿನಿಧಿಗಳು ಪ್ರಜಾಪ್ರತಿನಿಧಿಸಭೆಯ ಕಾರ್ಯವೆಲ್ಲಾ ಮುಗಿದ ಮೇಲೆ ಒಂದು ಕಡೆ ಸೇರಿ ಮೀಟಿಂಗ್ ಮಾಡಿ, ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲೆ ತಮ್ಮಗಳ ಅಭಿಪ್ರಾಯ ತೆಗೆದುಕೊಳ್ಳದೆ ಸರ್ಕಾರದವರು ಕೊನೆ ಅಪ್ಪಣೆಯನ್ನು ಮಾಡಿಬಿಟ್ಟುದೇ ಮೊದಲಾದುವನ್ನು ಕುರಿತ ತಮ್ಮ ವಿಷಾದವನ್ನು ಶ್ರೀಮನ್ಮಹಾರಾಜರಿಗೂ ಸರ್ಕಾರಕ್ಕೂ ನಿವೇದಿಸುವ ನಿರ್ಧಾರಗಳನ್ನು ಮಾಡಿಕೊಂಡರಂತೆ. ಈ ಸಂಬಂಧದ ಕಾರ್ಯಭಾಗಗಳಿಗಾಗಿ ಡಿಸ್ಟ್ರಿಕ್ಟುವಾರು ಬ್ರಾಹ್ಮಣ ಸಭೆಗಳನ್ನು ಮಾಡಿ ಧನಶೇಖರವನ್ನು ಮಾಡುವುದಕ್ಕೂ ನಿರ್ಧರಿಸಿದರಂತೆ. ಆ ದಿನದ ಸಭೆಗೆ ಮ|| ಎಂ. ವೆಂಕಟಕೃಷ್ಣಯ್ಯನವರೇ ಅಧ್ವರ್ಯುಗಳಾಗಿದ್ದರು. ತಾವು ಸಹಾಯನಿರಾಕರಣ ಮಾಡಿದುದಕ್ಕೆ ಕಾರಣವನ್ನೇನೂ ಈ ಸಭೆಯಲ್ಲಿ ತಿಳಿಯಿಸಿಲ್ಲ. ಆ ಸಂಬಂಧವಾದ ನಿರ್ಧಾರವೂ ಇಲ್ಲ. ಇವರ ವಿಷಾದಗಳನ್ನೆಲ್ಲಾ ಪ್ರತಿನಿಧಿ ಸಭೆಯಲ್ಲಿ ಬಹಿರಂಗವಾಗಿ ತಿಳಿಯಿಸುವುದಕ್ಕೆ ಅವಕಾಶವಿದ್ದರೂ ಹಾಗೆ ಮಾಡದೆ ಕೋಣೆಯಲ್ಲಿ ಕೋಲಾಹಲಮಾಡಿಕೊಂಡುದೇಕೆ ? ತಮ್ಮ ಸಹಾಯನಿರಾಕರಣಾವಲಂಬನದೋಷವನ್ನು ಮರೆಯಿಸಿಕೊಳ್ಳುವುದಕ್ಕಾಗಿ ಈ ವಿಷಾದರೂಪಕವನ್ನು ಅಭಿನಯಿಸಿದರೆಂದು ಜನರು ಆಡಿಕೊಳ್ಳುತ್ತಿದ್ದಾರೆ. ನಿರಾಕರಣದ ನಿಷ್ಕೃತಿಯಾದ ಮೇಲೆ ತಾನೇ ವಿಷಾದದ ವಿಮರ್ಶನೆ ?

ಪತ್ರವ್ಯವಹಾರ.

ನನ್ನ ಕೋಳಿ ಕೂಗದಿದ್ದರೂ ಬೆಳಗಾಯಿತು !

ಸ್ವಾಮಿ!

ಒಂದು ಕೋಳಿಯನ್ನೂ ಒಂದು ಕುಮ್ಮಟಿಯನ್ನೂ ಇಟ್ಟುಕೊಂಡಿದ್ದ ಒಬ್ಬ ಅಡುಗೂಲಜ್ಜಿಯು ತನ್ನ ಕೋಳಿಯು ಬೆಳಗಿನಜಾವದಲ್ಲಿ ಕೂಗುವುದರಿಂದಲೂ, ತನ್ನ ಕುಮ್ಮಟಿಯಿಂದ ಎಲ್ಲರೂ ಬೆಂಕಿಹಚ್ಚಿಕೊಳ್ಳುವುದರಿಂದಲೂ ಬೆಳಗಾಗಿ ಒಲೆಹತ್ತಿಸುವರೆಂದು ಭಾವಿಸಿದ್ದು, ಒಂದುದಿವಸ ಕೋಳಿಯನ್ನು ಬೇರೊಂದೂರಿಗೆ ಸಾಗಿಸಿ, ಕುಮ್ಮಟಿಯನ್ನು ಹೊತ್ತಿಕ್ಕದೆ, ಊರನ್ನು ಇವತ್ತು ಹಾಳುಗೆಡವುತ್ತೇನೆಂದು ಸಂಕಲ್ಪಮಾಡಿ, ಕಿಟಕಿಸಂದಿನಲ್ಲಿ ನೋಡುತ್ತಾ ಕೂತಿದ್ದಳು. ಬೆಳಕು ಹರಿಯಿತು. ನೆರೆಹೊರೆಯವರು ಮುದುಕಿಯ ಮನೆಬಾಗಿಲು ಹಾಕಿರುವದನ್ನು ನೋಡಿ ಇವ್ಯಾಕೋ ಅಡುಗೂಲಜ್ಜಿ ಏನಾದಳೋ ಎಂದುಕೊಂಡು ಬೆಂಕಿಕಡ್ಡಿಗಳಿಂದ ಒಲೆಹತ್ತಿಸಿಕೊಂಡರು. ಯಥಾಪ್ರಕಾರ ಊರಕೆಲಸಗಳು ನಡೆದೇನಡೆದವು. ಆಗ ಮುದಿಕಿಯು ಅಯ್ಯೋ ನನ್ನ ಕೋಳಿಕೂಗದಿದ್ದರೂ ಬೆಳಗಾಯಿತು. ನಾನು ಮಾಡಿದ ಮುಟ್ಠಾಳತನದಿಂದ ಈ ದಿನದ ದೋಸೆಮಾರಾಟದಲ್ಲಿ ಹಣಹಾಗದ ಲಾಭ ತಪ್ಪಿದ್ದೇ ಫಲವಾಯಿತು ಎಂದುಕೊಂಡಳಂತೆ.

ನಮ್ಮ ಮೈಸೂರಿನ ಅಸೆಂಬ್ಲಿಯಲ್ಲಿ ಕೆಲವು ಹಳೆಹುಲಿಗಳು ನಾವು ಬಾಯಿ ಆಡಿಸದಿದ್ದರೆ ಅಸೆಂಬ್ಲಿಯೆಂದರೇನು ? ಉಳಿದವರಿಗೆ ಮಾತನಾಡುವುದಕ್ಕೆಲ್ಲಿ ಬರುತ್ತೆ ? ಅವರಿಗೇನು ತಿಳಿಯುತ್ತೆ ? ನಾವು ಬಿಗುಮಾನದಿಂದ ನಿಂತುಬಿಟ್ಟರೆ ಬ್ಯಾಕ್ವರ್ಡ್‌ಕ್ಲಾಸ್ ಜನಗಳೂ ಯತ್ನವಿಲ್ಲದೆ ನಮ್ಮ ಹಿಂದೆ ನಿಂತುಬಿಡುತ್ತಾರೆ. ಆಗ ಅಸೆಂಬ್ಲಿಯೇ ಬರಿದಾಗಿಹೋಗುತ್ತೆ. ಗೌರ್ಮೆಂಟು ನಾವು ಹೇಳಿದಂತೆ ಕೇಳಿ ಅವಾಲಜಿ ಕೇಳಿಕೊಳ್ಳುತ್ತೆ. ನಾವು ಹೊಸ ಆರ್ಡರನ್ನು ರದ್ದುಮಾಡಿಸಿ ಜಯಧ್ವಜ ಸ್ಥಾಪಿಸಬಹುದು ಎಂದು ನಮ್ಮ ಜತೆಗಾರ ಮಿತ್ರರಾದ ಕೆಲ ಬ್ರಾಹ್ಮಣಮೆಂಬರುಗಳು ಯೋಚಿಸಿಕೊಂಡೋ ಏನೋ ಸಬ್ಜೆಕ್ಟ್ ವಿತಡ್ರಾರೋಗಗ್ರಸ್ತರಾಗಿ ಕೂತುಬಿಟ್ಟರು. ಆದರೇನು? ತಾನೊಂದು ಯೋಚಿಸಿದರೆ ದೈವವೊಂದು ಯೋಚಿಸುವುದು. ಅಸೆಂಬ್ಲಿ ನಿಲ್ಲಲೇಇಲ್ಲ. ಇತಃಪರಃ ಹೀಗೆ ಮಾಡಿದವರಿಗೆ ತಕ್ಕ ಬಂದೋಬಸ್ತು ಮಾಡಬೇಕೆಂದು ಸರ್ಕಾರದ ಮನಸ್ಸಿಗೆ ಬಂದದ್ದೇ ಫಲವಾಯಿತು. ತಾವು ತೊರೆದುಹೋದರೂ ಅಸೆಂಬ್ಲಿಯೇನೂ ತೊರೆದುಹೋಗುವುದಿಲ್ಲವೆಂಬುದನ್ನು ಕಂಡುಕೊಂಡರು.

ಒಬ್ಬ ಪ್ರತಿನಿಧಿ.

ಮೈಸೂರಿನಲ್ಲಿ ನಾನ್‌ಕೋಆಪರೇಷನ್.

ಸ್ವಾಮಿ !

ನಮ್ಮ ದೇಶದಲ್ಲಿ ನಾನ್‌ಕೋಆಪರೇಷನ್ ಎಂಬುವದು ಹುಟ್ಟಲಿಕ್ಕೂ ಹುಟ್ಟಿದರೂ ಜೀವಿಸಲಿಕ್ಕೂ ಅವಕಾಶವಿಲ್ಲ. ಆದರೂ ಕೆಲವರಿಗೆ ಬ್ರಿಟಿಷ್ ಇಂಡ್ಯಾದಲ್ಲಿರುವಂಥ ನಾನ್‌ಕೋಆಪರೇಷನ್ ಚಳವಳಿಯನ್ನು ಹೇಗಾದರೂ ನಮ್ಮ ದೇಶದಲ್ಲೂ ಹುಟ್ಟಿಸಿ ಗಲಾಟೆ ಮಾಡಬೇಕೆಂಬ ಇಷ್ಟವು ಕೆಲವು ಕಾಲದಿಂದ ಇದೆ. ಈಗಿನ ಬ್ರಾಹ್ಮಣೇತರ ದಿವಾನ್‌ಗಿರಿಯೂ, ಹಿಂದುಳಿದವರಿಗೆ ಮೈಸೂರು ಸಂಸ್ಥಾನದಲ್ಲಿ ಈಗ ಒಂದರ ಹಿಂದೊಂದು ಪ್ರೋತ್ಸಾಹಕೊಟ್ಟು ಅಭಿವೃದ್ಧಿಗೆ ತರಬೇಕೆನ್ನುತ್ತಿರುವದೂ, ಮಿಲ್ಲರ್ ಕಮಿಟಿ ಸಜೆಷನ್ ಜಾರಿಗೆ ತರಲಿಕ್ಕೆ ಆರ್ಡರ್‌ಮಾಡಿದ್ದೂ ಸಹ ಹೊಟ್ಟೆ ಉರಿ ಎಬ್ಬಿಸಿದೆ. ಹೆರವರು ಚೆನ್ನಾಗಿ ಬಾಳಿ ಬದುಕುವದನ್ನು ಈ ಜನರು ಸೈರಿಸರು. ತಾವುಂಟೋ ಮೂರು ಲೋಕವುಂಟೋ, ತಾವೊಬ್ಬರು ಚೆನ್ನಾಗಿದ್ದರೆ ಲೋಕವೆಲ್ಲಾ ಚೆನ್ನಾಗಿರುವುದೆಂದು ಹಿಗ್ಗುವದೂ, ತಮಗೆಮುಗ್ಗಟ್ಟಾದರೆ ಲೋಕವೆಲ್ಲಾ ಕೆಟ್ಟಿತೆಂದು ಬಗಳುವದೂ ಇವರ ಸ್ವಭಾವ. ಈಗಿನ ಬ್ರಾಹ್ಮಣೇತರ ದಿವಾನ್‌ಗಿರಿಯಲ್ಲಿ ಏನಾದರೂ ಗಟಾಟಿ ಹುಟ್ಟಿಸಿ, ಕೆಟ್ಟ ಹೆಸರು ಬರುವಂತೆ ಮಾಡಿದರೆ ಬ್ರಾಹ್ಮಣೇತರರು ಸರ್ಕಾರಿ ಕಾರ್ಯನಿರ್ವಾಹ ಮಾಡಲು ಸಮರ್ಥರಲ್ಲ ಎಂಬ ಸಿದ್ಧಾಂತವನ್ನು ಬಲಪಡಿಸಲಿಕ್ಕೆ ಸಾಧಕವಾಗುವದೆಂದು ಈ ಜನರು ಹೊಂಚುಹಾಕಿಕೊಂಡು ಇಲ್ಲದ ಸಲ್ಲದ ಕಾರಣಗಳ ನೆಪವನ್ನು ಹುಟ್ಟಿಸಿಕೊಂಡು ಗಲಾಟೆಮಾಡುವದರಲ್ಲಿದ್ದಾರೆ. ಇಂಥ ದುರಭಿಪ್ರಾಯದಿಂದ ಇರುವ ಕೆಲವು ಜನರ ಮಾತಿಗೆ ಇನ್ನು ಕೆಲವರು ಮೋಸಹೋಗಿ ಪರಿಣಾಮವನ್ನು ಯೋಚಿಸಿಕೊಳ್ಳದೆ ಅವರಜೊತೆಯಲ್ಲಿ ಸೇರಿ ಕೈತೋರಿಸಿ ಅವಲಕ್ಷಣಮಾಡಿಕೊಳ್ಳುತ್ತಲಿದ್ದಾರೆ. ಇದಕ್ಕೆ ಪ್ರಜಾಪ್ರತಿನಿಧಿಸಭೆಯ ಈ ಬರ್ತ್‌ಡೆ ಸೆಷನ್ನಿನಲ್ಲಿ ನಡೆದಸಂಗತಿಯೇ ಉದಾಹರಣೆ. ಮೈಸೂರು ಸಂಪದಭ್ಯುದಯ ಪತ್ರಿಕೆಯ ಕೂಟದವರು ಕೆಲವುದಿವಸಗಳಿಂದ ಮೈಸೂರು ಸಂಸ್ಥಾನಕ್ಕೆ ಸಹಾಯನಿರಾಕರಣವನ್ನೂ ಬೋಲ್ಷೆವಿಜಮ್ಮನ್ನೂ ಪ್ರಳಯವನ್ನೂ ದಿವಾನರಿಗೆ ಅಪಕೀರ್ತಿಯನ್ನೂ ಕೋರುತ್ತಿದ್ದಾರೆ. ಆ ಪಲ್ಲವಿಗೆ ತಾಳವನ್ನೂ ಪದವನ್ನೂ ಕೂಡಿಸುವಂಥ ಕೆಲಸವು ಮೈಸೂರು ದೇಶದ ಮುಖ್ಯ ರಾಜಧಾನಿಯಲ್ಲಿ ಅದರೊಳಗೂ ಪ್ರಜಾಪ್ರತಿನಿಧಿ ಸಭೆಯಂಥ ಪ್ರಧಾನವಾದ ರಾಜಕೀಯ ಸಭೆಯಲ್ಲಿ ಆರಂಭಿಸಲ್ಪಟ್ಟಿತು. ಇದರ ವಾಸನೆಯನ್ನು ಸರ್ಕಾರದವರೂ ಉಳಿದ ಪ್ರಜಾಪ್ರತಿನಿಧಿಗಳೂ ತಿಳಿದುಕೊಳ್ಳದೆ ಹೋಗಲಿಲ್ಲ. ತಾವು ಪ್ರಯೋಗಿಸುವ ಮೋಡಿಯು ಸಂಮೋಹನಾಸ್ತ್ರವೆಂದೂ ಇದರಿಂದ ಉಳಿದ ಪ್ರತಿನಿಧಿಗಳೆಲ್ಲಾ ಮೆಸ್ಮರಿಜಂ ಮಾಡಲ್ಪಟ್ಟವರಂತೆ ಸ್ತಬ್ಧರಾಗಿ ತಮ್ಮನ್ನು ಹಿಂಬಾಲಿಸುವರೆಂದೂ, ಆಗ ಸಭೆಯೇ ಸ್ತಂಭಿತವಾಗುವದೆಂದೂ, ದಿವಾನರಿಗೆ ನಾಲಾಯಖ್ ಪಟ್ಟವು ಬರುವುದೆಂದೂ, ಈ ಸಹಾಯನಿರಾಕರಣವಾದಿಗಳಲ್ಲಿ ಕೆಲವರು ಮನಸ್ಸಿನ ಮಂಡಿಗೆಯನ್ನು ತಿನ್ನುತ್ತಿದ್ದರಬಹುದು. ಆದರೇನು ? ಅವರು ಪ್ರಯೋಗಿಸಿದ ಮೋಡಿಯು ಅವರಿಗೇ ತಿರುಗಿ ಅವರ ಮುಖಗಳಿಗೇ ಕಪ್ಪು ಸುತ್ತಿಹೋಯಿತು ! ದಿವಾನರು ತಮ್ಮ ನಿಜಕ್ಷತ್ರಿಯತ್ವವನ್ನು ವ್ಯಕ್ತಪಡಿಸಿದರು. ಉಳಿದ ಪ್ರತಿನಿಧಿಗಳೆಲ್ಲಾ ಸಭೆಯ ಮತ್ತು

ಸಂಸ್ಥಾನದ ಕೀರ್ತಿಪ್ರತಿಷ್ಠೆಗಳನ್ನು ಕಾಪಾಡಲು ಕಟಾಯಮಾನರಾಯುವೆಂದು ಸಿದ್ಧರಾದರು. ಕೊನೆಯಲ್ಲಿ ಮಿ|| ಗುಲಾಂಅಹಮ್ಮದ್ ಕಲಾಮಿಯವರು ಅಪ್ಪಣೆಕೊಡಿಸಿದಂತೆ ಮೈಸೂರು ಸಂಸ್ಥಾನದ ಗೌರವಕ್ಕೆ ಭಂಗಬರುವಂಥ ಸಮಯವೇ ಸನ್ನಿಹಿತವಾದರೆ ಸಂಸ್ಥಾನದ ೫೮ ಲಕ್ಷ ಪ್ರಜೆಗಳು ತಮ್ಮ ತಲೆಗಳನ್ನಾದರೂ ಒಪ್ಪಿಸಿ ಸಂಸ್ಥಾನದ ಗೌರವವನ್ನು ರಕ್ಷಣೆಮಾಡುವುದಕ್ಕೆ ಸಿದ್ಧರಾಗಿರುವಂಶವನ್ನೂ, ನಿಷ್ಕಪಟವಾದ ಅಮೋಘವಾದ ರಾಜಭಕ್ತಿಯು ಎಲ್ಲಿದೆಯೆಂಬುದನ್ನೂ ಈ ಸಮಯದಲ್ಲಿ ಮಾದರಿಯಾಗಿ ತೋರಿಸಿಕೊಟ್ಟರು.

ಈ ತಮ್ಮ ಸಹಾಯನಿರಾಕರಣಕ್ಕೆ ಕಾರಣವೇನೆನ್ನುವುದನ್ನು ಸಂಪದಭ್ಯುದಯಕರ್ತರಾದ ಎಂ. ವೆಂಕಟಕೃಷ್ಣಯ್ಯನವರೂ ಅವರ ಹಿಂಬಾಲಕರಲ್ಲಿ ಕೆಲವರೂ ಸಭೆಯಲ್ಲಿದ್ದರೂ ಹೇಳಲಾರದೆ ಹೋದರು. ಉಚಿತವಾದ ಕಾರಣವಿದ್ದರೆ ಅವರುಗಳು ಹೇಳುವುದಕ್ಕೆ ಹಿಂಜರಿಯಬೇಕಾಗಿರಲಿಲ್ಲ; ಹಿಂಜರಿಯುತ್ತಲೂ ಇರಲಿಲ್ಲ. ನಿಜವಾದ ಸಹಾಯನಿರಾಕರಣವನ್ನವಲಂಬಿಸಿ, ತಮ್ಮ ಕಾರಣವನ್ನೂ ಉದ್ದೇಶವನ್ನೂ ಸಮರ್ಥನಮಾಡಿಕೊಳ್ಳುವ ಸಾಮರ್ಥ್ಯವು ಇವರಿಗಿಲ್ಲ. ತಾವು ಅವಲಂಬಿಸಿದ್ದು ಸಹಾಯನಿರಾಕರಣವೆಂದು ಗಟ್ಟಿಯಾಗಿ ಹೇಳಿಕೊಳ್ಳಲಿಕ್ಕೂ ಇವರಿಗೆ ಪುಂಸ್ತ್ವವಿಲ್ಲ. ಹೇಳಿಕೊಳ್ಳದೆ ಇರಲೂ ಆರರು. ಇದರಿಂದ ಸಂಪೂರ್ಣ ಪುಂಸ್ತ್ವವೇ ಆಗಲೀ ಸಂಪೂರ್ಣ ಸ್ತ್ರೀತ್ವವೇ ಆಗಲೀ ವ್ಯಕ್ತವಾಗುವುದಿಲ್ಲ. ಷಂಡತನವೇ ವ್ಯಕ್ತಪಡುತ್ತದೆ. ನ್ಯಾಯವಾದ ಕಾರಣದಿಂದ ಯೋಗ್ಯವಾದ ಉದ್ದೇಶವನ್ನು ಸಾಧಿಸಿಕೊಳ್ಳತಕ್ಕವರ ನಡೆಯು ಹೀಗೆಂದಿಗೂ ಇರುವುದಿಲ್ಲ.

ಜೂನ್ ತಾ|| ೨೦ ನೆಯ ಸಂಪದಭ್ಯುದಯ ಪತ್ರಿಕೆಯಲ್ಲಿ -"ಈಗ ಈ ಸಂಸ್ಥಾನದಲ್ಲಿ ಹುಟ್ಟಿರತಕ್ಕ ಅಸಹಕಾರಕ್ಕೆ ರೆಡ್ಡಿಯವರೇ ಕಾರಣಭೂತರು............ಸಹಕಾರ ನಿರಾಕರಣವನ್ನು ಅನೇಕರು ಅವಲಂಬಿಸುವಂತಾಯಿತು. ಪ್ರಜಾಪ್ರತಿನಿಧಿ ಸಭೆಯಲ್ಲಿ ತಮ್ಮ ಕಷ್ಟಸುಖಗಳನ್ನು ನಿರೂಪಿಸುವುದರಿಂದ ಲೇಶವೂ ಪ್ರಯೋಜನವಿಲ್ಲವೆಂಬ ಭಾವನೆಯು ಅನೇಕರಿಗೆ ಹುಟ್ಟಿತು. ಸಬ್ಜೆಕ್ಟುಗಳನ್ನು ಅನೇಕರು ವಾಪಸ್ ತೆಗೆದುಕೊಂಡರು" ಎಂಬಲ್ಲಿ ಹೇಳಿರುವ ಸಹಾಯನಿರಾಕರಣವು ಪ್ರಜಾಪ್ರತಿನಿಧಿಸಭೆಯಲ್ಲಿ ತೋರಿಸಲ್ಪಟ್ಟ ಸಹಾಯನಿರಾಕರಣವಲ್ಲದೆ ಮತ್ತೆ ಬೇರೆಯಿಲ್ಲವೆಂಬುವುದು ಸರ್ವತ್ರ ವಿಶದವಾಗೇ ಆಗುತ್ತದಷ್ಟೆ. ಇದರ ಮೇಲೆ ಅದೇ ಸಂಪದಭ್ಯುದಯದ ೨೧ನೆ ತಾರೀಖು ಸಂಚಿಕೆಯಲ್ಲಿ—"ಬ್ರಾಹ್ಮಣರು ಅಸಹಕಾರಿಗಳೆ?" ಎಂಬ ಹೆಡ್ಡಿಂಗಿನಿಂದ ಬರೆಯಲ್ಪಟ್ಟಿರುವ ಲೇಖನದಲ್ಲಿ ೭ ವರ್ಷಗಳವರೆಗೂ ಒಬ್ಬ ಬ್ರಾಹ್ಮಣನಿಗೂ ಸರ್ಕಾರಿಕೆಲಸವು ಸಿಕ್ಕುವುದಿಲ್ಲವಲ್ಲಾ ಎಂಬ ಚಿಂತೆಯಿಂದ ಬ್ರಾಹ್ಮಣ ಪ್ರತಿನಿಧಿಗಳು ಮೌನವನ್ನು ವಹಿಸಿ ತಮ್ಮ ಸಬ್ಜೆಕ್ಟುಗಳನ್ನು ವಾಪಸ್ ತೆಗೆದುಕೊಂಡರು ಎಂದು ಹೇಳಲ್ಪಟ್ಟಿದೆ. ಈ ಹೊರಆಟವನ್ನು ನೋಡಿದವರಿಗೆ ಮೇಲೆ ನಾನು ಹೇಳಿದ ಮಾತಿನ ನಿಜಸ್ಥಿತಿಯು ಸ್ಪಷ್ಟವಾಗದೆ ಹೋಗುವದಿಲ್ಲ. ಈ ಪ್ರತಿನಿಧಿಗಳಿಗೆ ಅತ್ಯಂತ ವ್ಯಸನವೂ ವಿಚಾರವೂ ಬಂದಿತಂತೆ! ಆದಕ್ಕಾಗಿ ಸಬ್ಜೆಕ್ಟನ್ನು ಚರ್ಚಿಸದೆ ಬಿಟ್ಟರಂತೆ! ಇದು ಎಷ್ಟರಮಟ್ಟಿಗೆ ನಿಜ? ವಿಚಾರಮಾಡಿನೋಡಿರಿ. ಹಾಗಿದ್ದರೆ ಇವರುಗಳು ತಮ್ಮ ಪದವಿಗೆ ಯಾಕೆ ರಿಜೈನ್ ಮಾಡಲಿಲ್ಲ? ಈ ಚಿಂತಾಪರರಿಗೆ ಸರ್ಕಾರದಿಂದ ಅಲೋಯನ್ಸನ್ನು ತೆಗೆದುಕೊಳ್ಳುವಲ್ಲಿ ಚಿಂತೆಯು ಅಡ್ಡಿಮಾಡಲಿಲ್ಲ! ೩|| ಗಂಟೆಗೆ ಸರಿಯಾಗಿ ಡೇರಾಕ್ಕೆ ಹೋಗಿ ಸರ್ಕಾರದ ಉಪ್ಪಿಟ್ಟು, ಪಕೋಡಾ, ಟಿ, ಕಾಫಿ, ಹಣ್ಣು, ಲಾಡು, ಜಿಲೇಬಿ, ಎಳನೀರುಗಳನ್ನು ಮೆಲ್ಲುವಲ್ಲಿ ಚಿಂತೆಯು ಅಡ್ಡಿಮಾಡಲಿಲ್ಲ! ಸಭೆಯ ಕುರ್ಚಿಗಳನ್ನು ಅಲಂಕರಿಸುವಲ್ಲಿ ಚಿಂತೆಯು ಅಡ್ಡಿಮಾಡಲಿಲ್ಲ! ಸಬ್ಜೆಕ್ಟನ್ನು ಚರ್ಚಿಸುವುದಕ್ಕೆ ಮಾತ್ರ ಚಿಂತೆ ಅಡ್ಡಬಂದು ಬಾಯನ್ನು ಬಂದುಮಾಡಿತಂತೆ! ಇದು ಎಂಥ ನಾಚಿಕೆಯ ಮಾತು! ಇವರೇನು ತಮ್ಮ ಮನೆಯ ಸ್ವಂತಕೆಲಸಕ್ಕೆ ಬಂದವರೋ? ಇವರಿಗೆ ಬೇಕಾದರೆ ಬೇಕು, ಇವರಿಗೆ ಬೇಡವಾದರೆ ಬೇಡವೋ? ಹೀಗೆಮಾಡುವುದಕ್ಕಾಗಿಯೇ ಇವರನ್ನು ಮೈಸೂರುದೇಶದ ಪ್ರಜೆಗಳು ತಮ್ಮಪ್ರತಿನಿಧಿಗಳನ್ನಾಗಿಮಾಡಿ ಕಳಿಸಿದ್ದು? ಪ್ರತಿನಿಧಿಪಟ್ಟವನ್ನು ಕಟ್ಟಿಕೊಂಡು ಅದರಕರ್ತವ್ಯವನ್ನು ನಡಿಸದೆ ಹೋದದ್ದಕ್ಕೆ ಇವರು ಜವಾಬ್ದಾರರಲ್ಲವೆ? ಅಷ್ಟೊಂದು ವಿಷಯಗಳನ್ನು ಚರ್ಚೆಮಾಡದೆ ಬಿಟ್ಟು ನಷ್ಟಪಡಿಸಿದ್ದಕ್ಕೂ ಸರ್ಕಾರದ ಬತ್ತವನ್ನು ಲುಕ್ಸಾನುಪಡಿಸಿದ್ದಕ್ಕೂ ಸಹ ಇವರುಗಳು ಪ್ರಜೆಗಳಿಗೂ ಸರ್ಕಾರಕ್ಕೂ ಸಹ ಕ್ಷಮಾಪಣೆ ಬೇಡಿಯೋ ಅಥವಾ ಅಪರಾಧವನ್ನು ತೆತ್ತೋ ತಮ್ಮ ತಪ್ಪಿತದಿಂದ ವಿಮೋಚನೆ ಹೊಂದಬೇಕಾಗಿರುತ್ತಾರೆ.

ಗೋಪಾಲಸ್ವಾಮಯ್ಯರೆಂಬುವರು ಮೈಸೂರಿನಲ್ಲಿ ಬೋಲ್ಷೆವಿಜಂ ಬರುವುದೆಂದು ಎಕನಾಮಿಕ್ ಕಾನ್ಫರೆನ್ಸಿನಲ್ಲಿ ಹೇಳಿದರಂತೆ. ಅದನ್ನು ಸಂಪದಭ್ಯುದಯದ ಲೇಖಕರು ಒಂದಲ್ಲ ಎರಡುಸಲ ಎತ್ತಿ ಎತ್ತಿ ಆಡಿ ಬೆದರಿಸುತ್ತಿದ್ದಾರೆ. ಬ್ರಾಹ್ಮಣರು ಆ ಸ್ಥಿತಿಯನ್ನು ತರುವರಂತೆ! ಹಾಗಾದರೆ ಹಣಬೆಗಳನ್ನು ಕಾಲಿನಲ್ಲಿ ಹೊಸಗಿಹಾಕಿಬಿಡುವಂತೆ ಶ್ರೀಮನ್ಮಹಾರಾಜಪೀಠರಕ್ಷಣೆಗಾಗಿ ಆ ಬೋಲ್ಷೆವಿಜಮ್ಮನ್ನು ಹುಟ್ಟಡಗಿಸಲು ೫೮ ಲಕ್ಷ ಪ್ರಜೆಗಳು ನಡುಕಟ್ಟಿ ಸಿದ್ಧರಾಗಿರುವರೆಂಬುದನ್ನು ಇವರ ಸೆರಗಿನಲ್ಲಿ ಗಂಟು ಹಾಕಿಕೊಂಡು ನೆನಪಿಗಿಟ್ಟಿರಲಿ.

"ಬ್ರಾಹ್ಮಣಪ್ರತಿನಿಧಿಗಳು ವ್ಯಸನದಿಂದ ಸಬ್ಜೆಕ್ಟುಗಳನ್ನು ವಾಪಸ್ ತೆಗೆದುಕೊಂಡರೇ ಹೊರತು ಪ್ರತೀಕಾರದಿಂದಲ್ಲ" ಎಂದು ಸಂಪದಭ್ಯುದಯ ಪತ್ರಿಕೆಯಲ್ಲಿ ಬರೆದಿರುವುದು ಕಪಟವಚನವಲ್ಲದೆ ಸಹಜವಾಗಿದ್ದರೆ, ನಡೆದುಹೋದುದು ಪ್ರಮಾದವೆಂದು ಸರ್ಕಾರದ ಕ್ಷಮಾಪಣೆಯನ್ನು ಕೋರಿ ಪ್ರಕಟಿಸಲಿ. ಹಾಗೆ ಮಾಡಿದಲ್ಲದೆ ಎಂದಿನಂತೆ ಇತರರೊಡನೆ ಕೈಕೈಕಲಿಸಿ ದೇಶಸೇವೆ ಮಾಡಲು ಇತರ ಪ್ರತಿನಿಧಿಗಳೊಡನೆ ಸೇರಲೂ ಇವರು ಅರ್ಹರಾಗಲಾರರು.

ಕಾಪಟ್ಯಛೇದಿ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ

(ಕಳೆದವಾರದ ಶೇಷ.)

ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ವ್ಯವಸಾಯದ ಸ್ಥಿತಿಯು ಪ್ರತಿಕೂಲವಾಗಿದ್ದ ಪ್ರಯುಕ್ತ, ಜಮೀನ್ ಕಂದಾಯದ ವಸೂಲಾತಿಯು ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತ ಸುಮಾರು 5 ಲಕ್ಷ ರೂಪಾಯಿಯಷ್ಟು ಕಡಮೆಯಾಗುವ ಸಂಭವವಿರುತ್ತದೆ. ಗಂಧದ ಎಣ್ಣೆಯ ತಯಾರಿಯನ್ನು ಕಡಿಮೆ ಮಾಡಿ ಜಾಸ್ತಿ ಎಣ್ಣೆ ದಾಸ್ತಾನ್ ನಿಲ್ಲುವುದನ್ನು ತಪ್ಪಿಸುವ ಉದ್ದೇಶದಿಂದ ಸದರೀ ಎಣ್ಣೆಯ ಕಾರ್ಖಾನೆಗಳಲ್ಲಿ ಕಿರಿದು ತರಹೆಯ ಮರವನ್ನೇ ಕೊಂಡುಕೊಳ್ಳುತ್ತಾ ಬಂದ ಪ್ರಯುಕ್ತ ಫಾರೆಸ್ಟ್ ಇಲಾಖೆಯ ಹುಟ್ಟುವಳಿಯು ಕಡಮೆಯಾಗಲು ಕಾರಣವಾಯಿತು. ಅಲ್ಲದೆ ಕಬ್ಬಿಣದ ಕಾರ್ಖಾನೆಯವರು ೨|| ಲಕ್ಷ ರೂಪಾಯಿ ಬೆಲೆಬಾಳುವ ಸೌದೆಯನ್ನು ಕೊಂಡುಕೊಳ್ಳುವರೆಂದು ನಿರೀಕ್ಷಿಸಿತ್ತು. ಆದರೆ ನಮ್ಮ ನಿರೀಕ್ಷಣೆಯು ಸಫಲವಾಗಲಿಲ್ಲ. ಇದೂ ಅಲ್ಲದೆ ತಂಗಡಿಚಕ್ಕೆಯ ಗುತ್ತಿಗೆಗಳಿಂದ ನಿರೀಕ್ಷಿಸಿದ್ದಷ್ಟು ಹುಟ್ಟುವಳಿಯು ಬರಲಿಲ್ಲ. ಈ ಕಾರಣಗಳಿಂದ ಫಾರೆಸ್ಟ್ ಬಾಬಿನ ಹುಟ್ಟುವಳಿಯು 7 ಲಕ್ಷ ರೂಪಾಯಿಯಷ್ಟು ಕಡಿಮೆಯಾಯಿತು. 1919-20ನೆಯ ವರ್ಷದಲ್ಲಿ ಬೆಂಗಳೂರು ದಂಡಿನಲ್ಲಿ ಖರ್ಚು ಜಾತಾ ಉಳಿಕೆಯಾದ 8 ಲಕ್ಷ ರೂಪಾಯಿ ಹುಟ್ಟುವಳಿಯು ಚಾಲ್ತಿ ವರ್ಷದಲ್ಲಿ ನಮಗೆ ಬರಬಹುದೆಂದು ಗಣನೆಮಾಡಿ ಬಡ್ಜೆಟ್ ಅಂದಾಜಿನಲ್ಲಿ ಸೇರಿಸಿತ್ತು. ಈ ರೀತಿಯಾದ ಉಳಿಕೆಯ ಮೊಬಲಗು ಸುಮಾರು 9½ ಲಕ್ಷ ರೂಪಾಯಿಯಷ್ಟು ಆಗಿರುವುದೆಂದು ಸದರಿ ಪ್ರದೇಶದ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಸೂಚಿಸಲ್ಪಟ್ಟಿದೆ. ಆದರೆ ಈ ಹುಟ್ಟುವಳಿಯನ್ನು ಇಂಡಿಯಾ ಸರ್ಕಾರದವರು 1918-19 ರ ಲಾಗಾಯತು ಮೂರು ವರ್ಷಗಳವರೆಗೆ ನಿಲ್ಲಿಸಿಕೊಂಡಿರುವುದರಿಂದ ಈ ಹಣವು ನಮಗೆ ಪಾವತಿಯಾಗಲಿಲ್ಲ. ರೈಲ್ವೆ ಬಾಬಿನ ನಿವ್ವಳ ಹುಟ್ಟುವಳಿಯು ನಮ್ಮ ನಿರೀಕ್ಷಣೆಗಿಂತಲೂ ಬಹಳಮಟ್ಟಿಗೆ ಎಂದರೆ 7¾ ಲಕ್ಷ ರೂಪಾಯಿಯಷ್ಟು ಕಡಿಮೆಯಾಗಿರುತ್ತದೆ. ಈ ಬಾಬಿನ ಒಟ್ಟು ಹುಟ್ಟುವಳಿಯೇನೋ ಕಡಮೆಯಾಗಲಿಲ್ಲ; ಬಡ್ಜೆಟ್ ಅಂದಾಜಿನಲ್ಲಿ ನಮೂದಿಸಿರುವುದಕ್ಕಿಂತಲೂ 7¼ ಲಕ್ಷ ರೂಪಾಯಿ ಹೆಚ್ಚಾಗಿ ಉತ್ಪತ್ತಿಯಾಗಬಹುದೆಂದು ನಿರೀಕ್ಷಿಸಿದೆ. ಆದರೂ ಸಾಮಾನುಗಳ ಖರೀದಿ ಹೆಚ್ಚಿದುದರಿಂದಲೂ, ಕೂಲಿಯ ದರವನ್ನೂ ನೌಕರರ ಸಂಬಳವನ್ನೂ ಹೆಚ್ಚಿಸಿದುದರಿಂದಲೂ, ಯುದ್ಧಕಾಲದಲ್ಲಿ ನಿಲ್ಲಿಸಿದ್ದ ದುರಸ್ತಿ ಮತ್ತು ಹೊಸ ಕೆಲಸಗಳನ್ನು ಪ್ರಾರಂಭಿಸಿದ್ದರಿಂದಲೂ ಕೆಲಸನಡಿಸುವ ಖರ್ಚು ವಿಪರೀತ ಹೆಚ್ಚಾಯಿತು. ಎಕ್ಸ್‌ಛೇಂಜಿನ ದರ ಕಮ್ಮಿಯಾದ ಪ್ರಯುಕ್ತ ವಿಲಾಯತಿಯಲ್ಲಿ ತೆಗೆದಿರತಕ್ಕ ರೈಲ್ವೆಸಾಲದ ಮೇಲೆ ಪಾವತಿಯಾಗತಕ್ಕ ಬಡ್ಡಿಯೂ ಸಹ ಸುಮಾರು 1½ ಲಕ್ಷದಷ್ಟು ಹೆಚ್ಚಿರುತ್ತದೆ. ಗಂಧದ ಎಣ್ಣೆಗೆ ಈ ವರ್ಷ ಗಿರಾಕಿಯು ವಿಶೇಷ ಕಡಿಮೆಯಾದ ಪ್ರಯುಕ್ತ ಸದರೀ ಎಣ್ಣೆಯ ವಿಕ್ರಯದಿಂದ ಬರತಕ್ಕ ಲಾಭವು ಅಂದಾಜಿನಲ್ಲಿ ನಮೂದಿಸಿರುವುದಕ್ಕಿಂತಲೂ ಸುಮಾರು ಒಂದು ಲಕ್ಷ ಕಡಮೆ ಬೀಳಬಹುದು.

ಕೋಲಾರದ ಚಿನ್ನದಗಣಿಗಳ ಭಂಗಾರಕ್ಕೆ ಒಳ್ಳೆಯ ಬೆಲೆ ಬಂದದ್ದರಿಂದಲೂ, ಈ ವರ್ಷದಲ್ಲಿ ಎಕ್ಸ್‌ಛೇಂಜಿನ ದರವು ಕಡಿಮೆಯಾಗಿದ್ದುದರಿಂದಲೂ ಜಮಾ ಬಾಬಿನಲ್ಲಿ ಗಣಿಗಳಿಂದ 4½ ಲಕ್ಷ ರೂಪಾಯಿ ಹೆಚ್ಚು ವರಮಾನವು ಬಂದಿರುತ್ತದೆ. ಅಬ್ಕಾರಿ ಹುಟ್ಟುವಳಿಯು ಬಡ್ಜೆಟ್ಟಿನ ಅಂದಾಜಿಗಿಂತಲೂ 3½ ಲಕ್ಷ ರೂಪಾಯಿನಷ್ಟು ಹೆಚ್ಚಿದೆ. ಅಲ್ಲದೆ ಸ್ಟಾಂಪು ಬಾಬಿನಲ್ಲಿ 1½ ಲಕ್ಷ, ಆದಾಯದ ಮೇಲಿನ ತೆರಿಗೆಯ ಬಾಬಿನಲ್ಲಿ ½ ಲಕ್ಷ, ರಿಜಿಸ್ಟ್ರೇಷನ್ ಬಾಬಿನಲ್ಲಿ ½ ಲಕ್ಷ ಈ ರೀತಿ ಬಡ್ಜೆಟ್ಟಿಗಿಂತ ಹೆಚ್ಚು ವರಮಾನವು ಬರಬಹುದೆಂದು ನಿರೀಕ್ಷಣೆ ಇದೆ.

ಕಳೆದ ವರ್ಷದ ನಮ್ಮ ಭಾಷಣದಲ್ಲಿ ಸೂಚಿಸಿರುವಂತೆ, ಇಂಡಿಯಾ ಸರ್ಕಾರದವರು ಅನುಸರಿಸಿರುವ ಸರ್ಕಾರಿ ದರದಂತೆ ಒಂದು ರೂಪಾಯಿಗೆ ಎರಡು ಷಿಲಿಂಗ್ ಪ್ರಕಾರ ಬ್ರಿಟಿಷ್ ನಾಣ್ಯದಲ್ಲಿ ಬರತಕ್ಕ ಹುಟ್ಟುವಳಿಯನ್ನು ನಮ್ಮ ಲೆಕ್ಕದಲ್ಲಿ ದಾಖಲ್ಮಾಡಿದೆ. ಈ ವರ್ಷದಲ್ಲಿ ಎಕ್ಸ್‌ಛೇಂಜಿನ ದರವು ವಿಶೇಷ ವ್ಯತ್ಯಾಸವಾಗುತ್ತಿದ್ದ ಪ್ರಯುಕ್ತ, ನಮಗೆ ಬ್ರಿಟಿಷ್ ನಾಣ್ಯದಲ್ಲಿ ಬರಬೇಕಾದ ಬಾಕಿಗಳು ವಸ್ತುತಃ ವಿಶೇಷವಾದ ಅನುಕೂಲವಾದ ದರಗಳಲ್ಲಿ ಪಾವತಿಮಾಡಲ್ಪಟ್ಟವು. ಇದರಿಂದ 4,95,000 ರೂಪಾಯಿ ಹೆಚ್ಚು ವರಮಾನ ಬಂದಿರುತ್ತದೆ. ಬ್ರಿಟಿಷ್ ನಾಣ್ಯದಲ್ಲಿ ಬರತಕ್ಕ ನಮ್ಮ ಹುಟ್ಟುವಳಿಯನ್ನು ಆಯಾಕಾಲದಲ್ಲಿ ಜಾರಿಯಲ್ಲಿರುವ ದರವನ್ನು ಪರಿಗಣಿಸದೆ ಮನಸ್ಸಿಗೆ ತೋರಿದ ಒಂದು ದರದಂತೆ ಠರಾಯಿಸುವುದನ್ನು ತಪ್ಪಿಸುವುದಕ್ಕಾಗಿ, ಇಂಡಿಯಾ ಸರ್ಕಾರದವರು ಅವರ 1921-22 ನೆಯ ವರ್ಷದ ಬಡ್ಜೆಟ್ಟನಲ್ಲಿ ದಾಖಲ್ಮಾಡಿರುವಂತೆ ರೂಪಾಯಿಗೆ ಒಂದು ಷಿಲಿಂಗ್ ಎಂಟು ಪೆನ್ನಿಗಳ ದರವನ್ನು ನಾವು ಮುಂದಿನವರ್ಷ ಅನುಸರಿಸಬೇಕೆಂದು ನಿರ್ಧರಿಸಿರುತ್ತೇವೆ.

ಚಾಲ್ತಿವರ್ಷದ ಬಡ್ಜೆಟ್ಟಿನ ಖರ್ಚುಬಾಬನ್ನು ಕುರಿತು ಪ್ರಸ್ತಾಪಿಸುವಲ್ಲಿ, ಹುಟ್ಟುವಳಿಗೆ ಖರ್ಚು ಬೀಳತಕ್ಕ ಮೊಬಲಗು 3,24,66,000 ರೂಪಾಯಿ ಆಗಬಹುದೆಂದು ನಿರೀಕ್ಷಿಸಿತ್ತು. ಆದರೆ ಚಾಲ್ತಿವರ್ಷಕ್ಕೆ ಸರ್ವಿಸ್ ಬಾಬುಗಳಿಗಾಗಿ 3,39,49,000 ರೂಪಾಯಿ ವಾಸ್ತವವಾಗಿ ಖರ್ಚಾಗುವುದೆಂದು ಅಂದಾಜಾಗಿ 14,83,000 ರೂಪಾಯಿಯ ಈ ಹೆಚ್ಚು ಖರ್ಚನ್ನು ಇಲಾಖಾ ಸಿಲ್ಕು ಮತ್ತು ರಿಜರ್ವ್‌ಗಳಿಂದ ಒದಗಿಸಲಾಗಿತ್ತು. ಆದರೆ ತಿದ್ದುಪಾಟಾದ ಅಂದಾಜಿನ ಮೇರೆ ವಾಸ್ತವವಾಗಿ 3,33,33,000 ರೂಪಾಯಿ ಖರ್ಚು ಬೀಳುವುದಾಗಿದೆ. ಇದು ಬಡ್ಜೆಟ್ಟಿನಲ್ಲಿ ನಮೂದಾಗಿರುವ ಅಂಕಿಗಿಂತಲೂ, 6,16,000 ರೂಪಾಯಿ ಕಡಿಮೆಯಾಗಿರುತ್ತದೆ. ವೈದ್ಯ ಮತ್ತು ಸೈನ್ಯದ ಇಲಾಖೆಗಳಂತಹ ಕೆಲವು ಬಾಬುಗಳಲ್ಲಿ ಬಡ್ಜೆಟ್ಟಿನ ಗ್ರ್ಯಾಂಟುಗಳಿಗಿಂತಲೂ ವಿಶೇಷ ಹೆಚ್ಚಾಗಿ ಹಣವನ್ನು ನಿರ್ವಾಹವಿಲ್ಲದೆ ಒದಗಿಸಬೇಕಾಗಿ ಬರದಿದ್ದ ಪಕ್ಷದಲ್ಲಿ, ಈ ವರ್ಷದಲ್ಲಿ ಖರ್ಚುಬಾಬಿನಲ್ಲಿ ಖೋತಾಮಾಡಿದ ಅಂಶವು ಲೆಕ್ಕದಲ್ಲಿ ಬಹಳ ಚೆನ್ನಾಗಿ ಗೋಚರಕ್ಕೆ ಬರುತ್ತಿತ್ತು. ಹೆಚ್ಚು ಧಾರಣೆವಾಸಿಗಳ ಪ್ರಯುಕ್ತವಾದ ಅಲೋಯನ್ಸುಗಳಿಗಾಗಿ ಕೊಡತಕ್ಕ ಹಣವೂ ಸಹ ಬಡ್ಜೆಟ್ಟಿನಲ್ಲಿ ಒದಗಿಸಿದ್ದ 20 ಲಕ್ಷ ರೂಪಾಯಿಗಿಂತಲೂ 6 ಲಕ್ಷ ರೂಪಾಯಿ ಜಾಸ್ತಿಯಾಯಿತು. ಸೇಕಡ 6¼ರಂತೆ ಬಡ್ಡಿಯುಳ್ಳ ಹೊಸ ಸಾಲದ ಬಡ್ಡಿಗಾಗಿ ನಾಲ್ಕು ಲಕ್ಷ ರೂಪಾಯಿಯಷ್ಟು ಭಾರಿ ಮೊಬಲಗನ್ನು ಒದಗಿಸಬೇಕಾಯಿತು. ಪೆನ್‌ಷನ್ ಪರಿವರ್ತನೆಗಾಗಿ ಬಡ್ಜೆಟ್ಟಿನಲ್ಲಿ ಒದಗಿಸಿದ್ದುದಕ್ಕಿಂತಲೂ ಸುಮಾರು 2 ಲಕ್ಷ ರೂಪಾಯಿ ಹೆಚ್ಚಾಗಿ ಖರ್ಚಾಗಿರುತ್ತದೆ. ಸೈನ್ಯದ ಬಾಬಿನಲ್ಲಿ ಬಾಕಿಯಿದ್ದ ಬಿಲ್ಲುಗಳು ಖರ್ಚು ಬಿದ್ದ ಪ್ರಯುಕ್ತ ಸುಮಾರು ಒಂದು ಲಕ್ಷ ರೂಪಾಯಿ ಹೆಚ್ಚಾಗಿ ಖರ್ಚಾಗಿದೆ. ಇನಾಮುಭೋಗರುಗಳಿಗೆ ಪೋಟಿಗಾಗಿ 90,000 ರೂಪಾಯಿ ಹೆಚ್ಚಾಗಿ ಮಂಜೂರಾಯಿತು. ಖಾನೇಷ್ಮಾರಿ ಕೆಲಸಗಳಿಗಾಗಿ ಸುಮಾರು ½ ಲಕ್ಷ ರೂಪಾಯಿಯಷ್ಟು ಹೆಚ್ಚು ಖರ್ಚುಮಾಡಬೇಕಾಯಿತು. ಖರ್ಚು ಖೋತಾಮಾಡಲು ಸರ್ಕಾರದವರು ತಕ್ಕ ಪ್ರಯತ್ನಗಳನ್ನು ನಡೆಸಿದುದರಿಂದ ಬಡ್ಜೆಟ್ಟಿನಲ್ಲಿ ದಾಖಲ್ಮಾಡಿದ್ದ ಈ ವಿಶಿಷ್ಟ ಹೆಚ್ಚು ಖರ್ಚುಗಳನ್ನೂ ವಹಿಸಿ 6 ಲಕ್ಷ ರೂಪಾಯಿಯನ್ನು ಮಿಗಿಸಲು ಸಾಧ್ಯವಾಯಿತು. ಕೆಲವು ಬಾಬುಗಳ ಹುಟ್ಟುವಳಿಯು ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ ಕಡಮೆಯಾಗಬಹುದೆಂದು ಗೊತ್ತಾದಕೂಡಲೇ, ನಾನಾ ಇಲಾಖೆಗಳ ಖರ್ಚುಬಾಬುಗಳನ್ನು ಸಾಧ್ಯವಾದಮಟ್ಟಿಗೆ ಕಡಮೆಮಾಡಲು ಪ್ರಯತ್ನಮಾಡಲಾಯಿತು. ಈ ಪ್ರಯತ್ನದ ಫಲಿತಾಂಶವು "ಪಬ್ಲಿಕ್ ಕಾಂಗಾರಿಗಳು," "ಜನೋಪಯುಕ್ತವಾದ ಅಭಿವೃದ್ಧಿ ಕಾರ್ಯಗಳ ಗ್ರ್ಯಾಂಟುಗಳು," ಇವೇ ಮೊದಲಾದ ಬಾಬುಗಳಲ್ಲಿ ಚೆನ್ನಾಗಿ ಕಂಡುಬರುತ್ತದೆ. ಇತರ ಬಾಬುಗಳಲ್ಲಿ ಖರ್ಚು ಕಡಮೆಮಾಡಿ ಮಿಗಿಸಿದ ಹಣವು ಹೆಚ್ಚು ಧಾರಣೆವಾಸಿ ಅಲೋಯನ್ಸ್ ಮತ್ತು ಕಡ್ಡಾಯವಾದ ಇತರ ಹೆಚ್ಚು ಖರ್ಚುಗಳು ಆಯಾ ಬಾಬುಗಳಲ್ಲಿ ಸೇರಿಹೋದ ಪ್ರಯುಕ್ತ ಗೋಚರಕ್ಕೆ ಬಂದಿರುವುದಿಲ್ಲ.

ತಿದ್ದುಪಾಟಾದ ಅಂದಾಜುಗಳಲ್ಲಿ ಹೆಚ್ಚು ಧಾರಣೆವಾಸಿ ಅಲೋಯನ್ಸನ್ನು ದಾಮಾಷಾಯ ಮೇರೆಗೆ ಆಯಾ ಬಾಬುಗಳಲ್ಲಿ ದಾಖಲ್ಮಾಡಿರುತ್ತದೆ. ಈ ಅಲೋಯನ್ಸನ್ನು ಮೊದಲಿನ ಬಡ್ಜೆಟ್ಟಿನಲ್ಲಿ ಒಟ್ಟಾಗಿ ಮಿಸಲೇನಿಯಸ್ ಎಂಬ ಬಾಬಿನಲ್ಲಿ ತೋರಿಸಿತ್ತು. ಈ ಅಂಶವನ್ನು ಜ್ಞಾಪಕದಲ್ಲಿಟ್ಟುಕೊಂಡ ಪಕ್ಷದಲ್ಲಿ ಒರಿಜನಲ್ ಬಡ್ಜೆಟ್ಟಿನ ಮತ್ತು ತಿದ್ದುಪಾಟಾದ ಬಡ್ಜೆಟ್ಟಿನ ಅಂಕಿಗಳನ್ನು ಹೋಲಿಸಿ ನೋಡಲು ಸುಲಭವಾಗುತ್ತದೆ. ಸರ್ವಿಸ್ ಬಾಬುಗಳ ಒಟ್ಟು ಖರ್ಚು 3,33,33,000 ರೂಪಾಯಿಯ ಪೈಕಿ 15,67,000 ರೂಪಾಯಿಯನ್ನು ರಿಜರ್ವ್ ಫಂಡುಗಳಿಂದಲೂ, ಇಲಾಖಾ ಸಿಲ್ಕುಗಳಿಂದಲೂ ವಹಿಸಿ 3,17,66,000 ರೂಪಾಯಿಯನ್ನು ಚಾಲ್ತಿ ಹುಟ್ಟುವಳಿಗೆ ಖರ್ಚು ತೋರಿಸಿದೆ.

1921-22ನೆಯ ವರ್ಷದ ಬಡ್ಜೆಟ್ಟು.

ನಾವು ಈಗ ಮುಂದಿನ ವರ್ಷದ ಆಯವ್ಯಯದ ಅಂದಾಜುಗಳನ್ನು ಕುರಿತು ಪ್ರಸ್ತಾಪಿಸುತ್ತೇವೆ. ಮುಂದಿನ ವರ್ಷದಲ್ಲಿ ಒಟ್ಟು 306¾ ಲಕ್ಷ ರೂಪಾಯಿಯ ಹುಟ್ಟುವಳಿಯೂ, 305¾ ಲಕ್ಷ ರೂಪಾಯಿಯ ಒಟ್ಟು ಖರ್ಚೂ ಆಗುವುದೆಂದು ಅಂದಾಜು ಮಾಡಿದೆ, ಎಂದರೆ ಹುಟ್ಟಿದ ವರಮಾನದಿಂದ ಖರ್ಚು ಬಾಬುಗಳನ್ನೆಲ್ಲಾ ನಿರ್ವಹಿಸಿದ ಮೇಲೆಯೂ ಸುಮಾರು ಅರ್ಧ ಲಕ್ಷ ರೂಪಾಯಿ ಮಿಗುವಂತೆ ಬಡ್ಜೆಟ್ಟನ್ನು ತಯಾರ್ಮಾಡಿದೆ. ಮುಂದಿನ ವರ್ಷದ ಹುಟ್ಟುವಳಿಯ ಬಾಬುಗಳನ್ನು ಚಾಲ್ತಿ ವರ್ಷದ ತಿದ್ದುಪಾಟಾದ ಅಂದಾಜಿನೊಂದಿಗೆ ಹೋಲಿಸಿ ನೋಡಿದರೆ, ಜಮೀನ್ ಕಂದಾಯ, ವರಮಾನದ ತೆರಿಗೆ, ವಿದ್ಯುಚ್ಛಕ್ತಿಯ ಕಾಮಗಾರಿಗಳು, ಗಂಧದ ಎಣ್ಣೆಯ ಕಾರ್ಖಾನೆಗಳ ಲಾಭ ಈ ಬಾಬುಗಳಲ್ಲಿ ಹೆಚ್ಚು ವರಮಾನ ಕಂಡುಬರುತ್ತದೆ. ಮಳೆ ಬೆಳೆಗಳು ಸಾಮಾನ್ಯವಾಗಿ ಎಂದಿನಂತೆ ಆಗಬಹುದೆಂಬ ಊಹೆಯ ಮೇಲೆಯೂ, ಮುಂದಿನ ವರ್ಷ ಕೆಲವು ತಾಲ್ಲೂಕುಗಳಲ್ಲಿ ಸರ್ವೇ ರೀಸೆಟಲ್‌ಮೆಂಟು ಜಾರಿಗೆ ಬರುವುದಾಗಿರುವ ಪ್ರಯುಕ್ತ ಚಾಲ್ತಿ ವರ್ಷದಲ್ಲಿ ವಸೂಲಾಗದೆ ನಿಂತಿರುವ ಬಾಕಿಯ ಪೈಕಿ ಹೆಚ್ಚು ಭಾಗದ ಮೊಬಲಗು ಮುಂದಿನ ವರ್ಷ ವಸೂಲಾಗಬಹುದೆಂಬ ನಿರೀಕ್ಷಣೆಯ ಮೇಲೆಯೂ ಜಮೀನ್ ಕಂದಾಯದ ಬಾಬಿನ ಅಂದಾಜನ್ನು ತಯಾರ್ಮಾಡಿದೆ. ಆದುದರಿಂದ ಚಾಲ್ತಿ ವರ್ಷದ ತಿದ್ದುಪಾಟಾದ ಅಂದಾಜಿನಲ್ಲಿ ಕೊಟ್ಟಿರುವ 107¼ ಲಕ್ಷ ರೂಪಾಯಿಗೆ ಪ್ರತಿಯಾಗಿ ಮುಂದಿನ ವರ್ಷದ ಅಂದಾಜಿನಲ್ಲಿ 113¼ ಲಕ್ಷ ರೂಪಾಯಿ ಲೆಕ್ಕದಲ್ಲಿ ಸೇರಿಸಿದೆ. ವರಮಾನದ ಮತ್ತು ಚಿಲ್ಲರೆ ತೆರಿಗೆಗಳ ಬಾಬುಗಳಲ್ಲಿ ಒಂದು ಲಕ್ಷ ರೂಪಾಯಿ ಹೆಚ್ಚಾಗಿ ಹುಟ್ಟುವಳಿಯಾಗಬಹುದೆಂದು ನಿರೀಕ್ಷಿಸಿದೆ. ಆರನೆಯ ವಿದ್ಯುಚ್ಛಕ್ತಿಯ ಸ್ಥಾಪನೆಯಿಂದ ಕೋಲಾರದ ಚಿನ್ನದಗಣಿಯ ಕಂಪೆನಿಗಳಿಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದರಿಂದಲೂ, ದೀಪಕ್ಕಾಗಿಯೂ, ಕಾರ್ಖಾನೆಗಳಿಗಾಗಿಯೂ ಒದಗಿಸುವ ವಿದ್ಯುಚ್ಛಕ್ತಿಯ ದರಗಳನ್ನು ಹೆಚ್ಚಿಸಿರುವುದರಿಂದಲೂ ವಿದ್ಯುಚ್ಛಕ್ತಿಯ ಕಾಮಗಾರಿ ಬಾಬಿನಲ್ಲಿ ಹೆಚ್ಚು ಹುಟ್ಟುವಳಿಯಾಗುವುದೆಂದು ಅಂದಾಜು ಮಾಡಿದೆ. ಪ್ರಕೃತದಲ್ಲಿ ಗಂಧದ ಎಣ್ಣೆಗೆ ಗಿರಾಕಿ ಬಹು ಕಮ್ಮಿಯಾಗಿದೆ. ಈ ಸ್ಥಿತಿಯು ಕ್ಷಿಪ್ರದಲ್ಲಿಯೇ ಬದಲಾಗಿ ಎಂದಿನಂತೆಯೇ ಗಿರಾಕಿಯುಂಟಾಗಿ ಲಾಭ ಬರುವುದೆಂಬ ನಿರೀಕ್ಷಣೆಯ ಮೇಲೆ ಅಂದಾಜು ಮಾಡಲಾಗಿದೆ.

ಈ ಕಾರ್ಖಾನೆಗಳಲ್ಲಿ ಭಾರಿ ದಾಸ್ತಾನ್ ನಿಂತಿರುವ ಕಾರಣ ಗಂಧದ ಎಣ್ಣೆಯ ತಯಾರಿಯನ್ನು ಸ್ವಲ್ಪ ಕಮ್ಮಿ ಮಾಡಬೇಕಾಗಿದೆ; ಆದಕಾರಣ ಅವುಗಳಿಗೆ ಫಾರೆಸ್ಟ್ ಇಲಾಖೆಯಿಂದ ಸಾಮಾನ್ಯವಾಗಿ ಸರ್ಬರಾಯಿಸುತ್ತಿದ್ದ ಗಂಧದ ಮರದ ಪ್ರಮಾಣದಲ್ಲಿ ಅರ್ಧಭಾಗವನ್ನು ಮಾತ್ರ ಸರಬರಾಯಿ ಮಾಡುವುದಕ್ಕೆ ಅವಕಾಶ ಕೊಟ್ಟಿದೆ. ಇದರಿಂದ ಫಾರೆಸ್ಟ್ ಇಲಾಖೆಯ ವರಮಾನವು ಸುಮಾರು ಅರ್ಧಭಾಗದಷ್ಟು ಕಮ್ಮಿಯಾಗಿರುತ್ತದೆ. ಬೆಂಗಳೂರು ದಂಡಿನ ಹುಟ್ಟುವಳಿಯಲ್ಲಿ ಖರ್ಚು ಜಾತಾ ಉಳಿಕೆಯಾಗುವ ಹಣವನ್ನು ಹಿಂದಿನಂತೆ ಈಗಲೂ ನಮಗೆ ಕೊಡಿಸಬೇಕೆಂಬ ಅರಿಕೆಯ ವಿಚಾರದಲ್ಲಿ ಇಂಡಿಯಾ ಸರ್ಕಾರದವರಿಂದ ಇನ್ನೂ ಹುಕುಂ ಬಂದಿಲ್ಲವಾದಕಾರಣ ಸದರೀ ಪ್ರದೇಶದ ಹುಟ್ಟುವಳಿಯ ಬಾಬಿನಲ್ಲಿ ಅಂದಾಜು ಮೊಬಲಗನ್ನು ತೋರಿಸಿಲ್ಲ. ಇದುವರೆಗಿನಂತೆಯೇ ಇನ್ನು ಮುಂದೆಯೂ ರೈಲ್ವೆ ಬಾಬಿನ ಒಟ್ಟು ಹುಟ್ಟುವಳಿಯು ಒಂದೇರೀತಿಯಾಗಿ ಹೆಚ್ಚಬಹುದಾದರೂ, ಯುದ್ಧಕಾಲದಲ್ಲಿ ಒದಗಿಸಲಾಗದೆ ಇದ್ದ ಸೌಕರ್ಯಗಳನ್ನು ಈಗ ಒದಗಿಸಿ ರೈಲ್ವೆಗಳನ್ನು ಸಮರ್ಪಕವಾದ ಸ್ಥಿತಿಗೆ ತರಲು ವಿಶೇಷವಾಗಿ ಹಣ ಖರ್ಚು ಮಾಡಬೇಕಾಗಿರುವುದರಿಂದ ಈ ಬಾಬಿನ ನಿವ್ವಳ ಲಾಭವು ವಿಶೇಷವಾಗಿ ಹೆಚ್ಚುವುದೆಂದು ನಿರೀಕ್ಷಿಸುವುದು ಸರಿಯಲ್ಲ. ಈ ವಿಷಯದಲ್ಲಿ ಈಚೆಗೆ ಸಾದರಾಗಿರುವ ಇಂಡಿಯಾ ಸರ್ಕಾರದ ರೈಲ್ವೆ ಇಲಾಖೆಯ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಸೂಚಿತವಾಗಿರುವ ಇದರಡಿ ಕಂಡ ಅಭಿಪ್ರಾಯವನ್ನು ಓದಿ ನೋಡಿದಲ್ಲಿ ಇಂಥ ಸ್ಥಿತಿಯು ನಮ್ಮ ಸಂಸ್ಥಾನದ ರೈಲ್ವೆಗಳಿಗೆ ಮಾತ್ರವೇ ಉಂಟಾದುದಲ್ಲವೆಂಬ ಅಂಶವು ವ್ಯಕ್ತವಾಗುವುದು. ಅದರಲ್ಲಿ ಹೇಳಿರುವುದೇನೆಂದರೆ, "ಈ ರೀತಿ ಸೌಕರ್ಯಗಳನ್ನು ಹೆಚ್ಚಿಸುತ್ತ ಹೋದಹಾಗೆಲ್ಲಾ ಕೆಲಸ ನಡಿಸುವ ಖರ್ಚೂ ಸಹ ಹೆಚ್ಚುತ್ತಾ ಹೋಗುವುದು ಸ್ವಾಭಾವಿಕವೇ. ಹಿಂದೆ ಒದಗಿಸದೆ ಬಿಟ್ಟುಬಿಟ್ಟ ಸೌಕರ್ಯಗಳನ್ನು ಈಗ ಒದಗಿಸಿಕೊಳ್ಳುತ್ತಾ ಬರಬೇಕಾಗಿರುವುದರಿಂದಲೂ, ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ರೈಲ್ವೆ ಸಾಮಾನುಗಳು ಪ್ರಕೃತದಲ್ಲಿ ಬೇಕಾದಷ್ಟು ಸಿಕ್ಕುತ್ತಾ ಇಲ್ಲದಿರುವುದರಿಂದಲೂ, ಕೆಲಸ ನಡಿಸುವ ಖರ್ಚನ್ನು ಯಥಾಸ್ಥಿತಿಗೆ ತರುವುದಕ್ಕೆ ಸ್ವಲ್ಪಕಾಲ ಬೇಕಾಗುವುದರಲ್ಲಿ ಸಂಶಯವಿಲ್ಲ" ಎಂತ ಹೇಳಿರುತ್ತದೆ.

ಖರ್ಚು ಬಾಬನ್ನು ಕುರಿತು ಪ್ರಸ್ತಾಪಿಸುವಲ್ಲಿ ಅನೇಕ ಬಾಬುಗಳಲ್ಲಿ ಖರ್ಚು ತಗ್ಗಿಸಿರುವ ಅಂಶವನ್ನು ತಾವು ಮುಖ್ಯವಾಗಿ ಗಮನಿಸಬೇಕೆಂದು ಕೋರುವೆವು. ಸರ್ವಪ್ರಯತ್ನಗಳಿಂದಲೂ ಮುಂದಿನ ವರ್ಷದಲ್ಲಿ ವರಮಾನಕ್ಕಿಂತ ಖರ್ಚು ಹೆಚ್ಚಾಗದಂತೆ ಬಡ್ಜೆಟ್ಟನ್ನು ತಯಾರ್ಮಾಡತಕ್ಕದ್ದು ಅಗತ್ಯವೆಂದು ಸರ್ಕಾರದವರು ಭಾವಿಸಿರುತ್ತಾರೆ. ನಮ್ಮ ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕೆ ಅವಕಾಶ ಕಮ್ಮಿಯಾಗಿರುವುದರಿಂದ ವಿಶೇಷಮಟ್ಟಿಗೆ ಖರ್ಚು ಖೋತಾ ಮಾಡುವುದರ ಮೂಲಕವೇ ಆಯವ್ಯಯಗಳನ್ನು ಸರಿಪಡಿಸಬೇಕಾಗಿದೆ. ಇಲಾಖೆಗಳ ಬಡ್ಜೆಟ್ಟುಗಳನ್ನು ಕೂಲಂಕಷವಾಗಿ ಪರಿಶೋಧಿಸಿ ಸಾಧ್ಯವಾದಮಟ್ಟಿಗೂ ಎಲ್ಲಾ ಬಾಬುಗಳಲ್ಲಿಯೂ ಖರ್ಚುಗಳನ್ನು ತಗ್ಗಿಸಿ ಒಟ್ಟು ಖರ್ಚು ವರಮಾನಕ್ಕೆ ಮೀರದಂತೆ ಮಾಡಿರುತ್ತದೆ. ಆಯವ್ಯಯಗಳನ್ನು ಸಮಪಡಿಸುವುದನ್ನೇ ಮುಖ್ಯವಾಗಿ ದೃಷ್ಟಿಯಲ್ಲಿಟ್ಟು ಇತರ ಅಂಶಗಳೆಲ್ಲಾ ಅದಕ್ಕೆ ಅಧೀನವಾಗಿರುವಂತೆ ಮಾಡಿದೆ. ಈ ಫಲಿತಾಂಶವನ್ನು ಹೊಂದುವುದಕ್ಕಾಗಿ ಅನೇಕ ಉಪಯುಕ್ತವಾದ ಕಾಮಗಾರಿಗಳ ಬಡಾವಣೆಗಳನ್ನು ಸದ್ಯಕ್ಕೆ ಮುನ್ನಾಮಾಡಿ ಸಿಬ್ಬಂದಿಗಳ ಖರ್ಚನ್ನೂ ಇತರ ಖರ್ಚನ್ನೂ ಬಹಳವಾಗಿ ಕಮ್ಮಿ ಮಾಡಲಾಯಿತು. ಈ ಖರ್ಚನ್ನು ತಗ್ಗಿಸುವ ಏರ್ಪಾಡುಗಳಿಂದ ಸರ್ವಿಸ್ ಇಲಾಖೆಗಳ ಕೆಲಸ ಕಾರ್ಯಗಳಿಗೆ ಸ್ವಾಭಾವಿಕವಾಗಿ ಬಹುಮಟ್ಟಿಗೆ ಬಾಧಕ ಉಂಟಾಗುತ್ತದೆ. ಆದರೆ ಸಂಸ್ಥಾನದ ದ್ರವ್ಯೋಪಪತ್ತಿಯ ಗೌರವವನ್ನು ಕಾಪಾಡುವ ಉದ್ದೇಶದಿಂದ ವರಮಾನಕ್ಕಿಂತ ಖರ್ಚು ಜಾಸ್ತಿಯಾಗದಂತೆ ಪ್ರಯತ್ನ ಮಾಡುವುದು ಯುಕ್ತವೆಂದು ನಿರ್ಧರಿಸಲಾಯಿತು. 1920-21ನೆಯ ವರ್ಷದ ತಿದ್ದುಪಾಟಾದ ಅಂದಾಜಿನ ಪ್ರಕಾರ ಒಟ್ಟು ಖರ್ಚು 333⅓ ಲಕ್ಷ ರೂಪಾಯಿಯಾಗಿದೆ. ಇದಕ್ಕೆ ಪ್ರತಿಯಾಗಿ ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ 316⅔ ಲಕ್ಷ ರೂಪಾಯಿಯನ್ನು ಒದಗಿಸಿದೆ. ತಿದ್ದುಪಾಟಾದ ಅಂದಾಜಿನಲ್ಲಿ 1920ನೆಯ ವರ್ಷದ ಸಾಲಕ್ಕಾಗಿ ದಾಖಲ್ಮಾಡಿರುವ ಬಡ್ಡಿಯು ವರ್ಷದ ಒಂದು ಭಾಗದ ಬಡ್ಡಿಯಾಗಿ ಮಾತ್ರ ಇದೆ. ಆದರೆ 1921-22ನೆಯ ವರ್ಷದ ಬಡ್ಜೆಟ್ಟಿನಲ್ಲಿ 1920ನೆಯ ವರ್ಷದ ಸಾಲದ ಪೂರಾ ವರ್ಷದ ಬಡ್ಡಿಯ ಪಾವತಿಗಾಗಿಯೂ, ನಾವು ಕ್ಷಿಪ್ರದಲ್ಲಿಯೇ ಸೂಚಿಸುವ 1921ನೆಯ ವರ್ಷದ ಹೊಸಸಾಲದ ಬಡ್ಡಿಗಾಗಿಯೂ ಸಹ ಹಣವನ್ನು ಒದಗಿಸಿದೆ. ಈ ಕಾರಣದಿಂದ ಬಡ್ಡಿಯ ಪಾವತಿಗಾಗಿ 10½ ಲಕ್ಷ ರೂಪಾಯಿಯನ್ನು ಬಡ್ಡಿಯ ಬಾಬಿನಲ್ಲಿ ಒದಗಿಸಿದೆ. ಈ ಹೆಚ್ಚು ಮೊಬಲಗನ್ನು ಗಣನೆಗೆ ತಂದುಕೊಂಡಲ್ಲಿ, ಮುಂದಿನ ವರ್ಷದ ಖರ್ಚು ಚಾಲ್ತಿ ವರ್ಷದ ಖರ್ಚಿಗಿಂತ ಸುಮಾರು 27 ಲಕ್ಷ ರೂಪಾಯಿಯಷ್ಟು ಕಮ್ಮಿಯಾಗಿದೆ. ಇಷ್ಟರಮಟ್ಟಿಗೆ ಖರ್ಚು ಖೋತಾಮಾಡಿದ್ದು ಸುಲಭವಾಗಿ ಆಗಿರುವುದಿಲ್ಲ. ಬೇರೆ ಉಪಾಯವೇ ಇರಲಿಲ್ಲವಾದಪ್ರಯುಕ್ತ ಖರ್ಚು ಖೋತಾ ಮಾಡಬೇಕಾಗಿಬಂತು. ಆಯವ್ಯಯಗಳನ್ನು ಸಮಪಡಿಸಿರುವ ಬಡ್ಜೆಟ್ಟು ತಮ್ಮಗಳಿಗೆ ಆದರಣೀಯವಾಗಿ ಕಂಡುಬರುವುದೆಂದು ನಂಬುತ್ತೇವೆ.

ಯಾವ ಬಾಬುಗಳಲ್ಲಿ ಖರ್ಚು ಕಮ್ಮಿಮಾಡದೆ ಹಾಗೆಯೇ ಉಳಿಸಿಕೊಳ್ಳಬೇಕಾಗಿತ್ತು? ಯಾವ ಬಾಬುಗಳಲ್ಲಿ ಖರ್ಚು ಕಮ್ಮಿ ಮಾಡಬೇಕಾಗಿತ್ತು? ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿರಬಹುದು. ಫೈನಾನ್ಸ್ ಕಮಿಟಿಯವರು ಖರ್ಚು ಖೋತಾಮಾಡುವ ಈ ಏರ್ಪಾಡುಗಳನ್ನು ನಿರ್ದಾಕ್ಷಿಣ್ಯವಾಗಿಯೂ, ಸಮಗ್ರವಾಗಿಯೂ ಪರ್ಯಾಲೋಚಿಸಿರುತ್ತಾರೆ. ಕೆಲವು ಸಲಹೆಗಳು ಮೊದಲಿನಲ್ಲಿ ಸಾಧ್ಯವಾಗಿ ತೋರಬಹುದಾದರೂ ಸಂಬಂಧಪಟ್ಟ ಇಲಾಖಾ ಮೊಖ್ತೇಸರರುಗಳು ಕೊಡಬಹುದಾದ ಸಮಜಾಯಿಷಿಯನ್ನು ಪರ್ಯಾಲೋಚಿಸಿದುದೇ ಆದರೆ ಅದೇ ಸಲಹೆಗಳು ವಿಶೇಷ ಬದಲಾವಣೆಗೊಳಪಡಬೇಕಾಗುವುವೆಂದು ನಮಗೆ ಕಂಡುಬಂದಿರುತ್ತದೆ. ಇದರ ನಿಜಾಂಶವು ಫೈನಾನ್ಸ್ ಕಮಿಟಿಯ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳಿಂದ ದೃಢಪಡುವುದರಲ್ಲಿ ಸಂದೇಹವಿಲ್ಲ. ಯಾವ ಬಾಬಿನ ಖರ್ಚನ್ನೇ ಆಗಲಿ ವಜಾಮಾಡುವುದನ್ನು ನಿರ್ಧರಿಸುವುದರಲ್ಲಿ ಸಾಧ್ಯವಾದಮಟ್ಟಿಗೂ ಖರ್ಚನ್ನು ಖೋತಾಮಾಡಬೇಕೆಂಬ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಶ್ರೀಮನ್ಮಹಾರಾಜಾ ಸರ್ಕಾರದವರು ಈ ವಿಷಯವನ್ನು ವಿಶೇಷ ಜಾಗರೂಕತೆಯಿಂದ ಪರ್ಯಾಲೋಚಿಸಿರುತ್ತಾರೆ.

ಈ ರೀತಿ ಖರ್ಚು ಖೋತಾ ಮಾಡುವ ಪ್ರಯತ್ನಗಳನ್ನು ನಡಿಸಬೇಕಾಗಿ ಬಂದುದಕ್ಕೆ ಕಾರಣಗಳು ಯಾವುವೆಂಬುದನ್ನು ಈ ಸಮಯದಲ್ಲಿ ನಾವು ಸಂಕ್ಷೇಪವಾಗಿ ಪ್ರಸ್ತಾಪಿಸಬಹುದಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ವರಮಾನಗಳೂ ಖರ್ಚುಗಳೂ ಯಾವ ರೀತಿ ವ್ಯತ್ಯಾಸವಾಗುತ್ತಿದ್ದವೆಂಬುದನ್ನು ತಾವು ಪರಿಶೀಲಿಸುವುದು ಯುಕ್ತವಾಗಿದೆ; ಆದಕಾರಣ 1919-20ನೆಯ ವರ್ಷಕ್ಕೆ ಆಖೈರಾದ ಐದು ವರ್ಷಗಳ ಕರಾರ್ವಾಕ್ಕಾ ಅಂಕಿಗಳನ್ನು ತೋರಿಸುವ ತಃಖ್ತೆಯೊಂದನ್ನು ಈ ಭಾಷಣದ ಕೊನೆಯಲ್ಲಿ ಕೊಟ್ಟಿದೆ. ಇಲಾಖೆಗಳ ಶಿಲ್ಕುಗಳಿಗೂ ರಿಜರ್ವ್‌ಗಳಿಗೂ ಹೆಚ್ಚಾಗಿ ಕೊಟ್ಟ ಮೊಬಲಗುಗಳೂ, ಅವುಗಳಿಂದ ಆದ ಖರ್ಚುಗಳೂ ವರ್ಷದ ಫಲಿತಾಂಶಗಳನ್ನು ಸ್ಪಷ್ಟವಾಗಿ ತೋರಿಸುವದಿಲ್ಲವಾಗಿ, ತಃಖ್ತೆಯಲ್ಲಿ ಈ ವಜಾವಟ್ಟಗಳನ್ನು ಕೊಟ್ಟಿಲ್ಲ. ಆಯಾ ವರ್ಷದ ಖರ್ಚು ಆಯಾ ವರ್ಷದ ವರಮಾನದಿಂದಲೇ ವಹಿಸಲ್ಪಡಬೇಕೆಂಬುದು ಸಾಮಾನ್ಯ ನಿಯಮವಾಗಿದೆ, ಈ ನಿಯಮದಮೇಲೆ ತಖ್ತೆಯನ್ನು ತಯಾರ್ಮಾಡಿದೆ. ಹುಟ್ಟುವಳಿಯಿಂದ ಸಾಲದ ಸಿಂಕಿಂಗ್ ಫಂಡಿಗೂ, ಕ್ಷಾಮ ನಿವಾರಣೆಯ ಫಂಡಿಗೂ ಇತರ ಬಾಬಿಗಿಂತ ಮುಂಚೆ ತಕ್ಕಷ್ಟು ಹಣವನ್ನೊದಗಿಸುವುದು ಆವಶ್ಯಕ. ಆದಕಾರಣ ಮುಖ್ಯವಾದ ಈ ರಿಜರ್ವುಗಳಿಗೆ ಹಣ ಒದಗಿಸಿದನಂತರವೇ ಆದಾಯವೆಚ್ಚದ ಕರಾರ್ವಾಕ್ಕಾ ಸ್ಥಿತಿಯನ್ನು ತಿಳಿಯಲಾಗುವುದು. ತಖ್ತೆಯಲ್ಲಿ ಕೊಟ್ಟಿರುವ ಐದು ವರ್ಷಗಳಲ್ಲಿ ಒಟ್ಟು ವರಮಾನವು 274ರಿಂದ 315¼ ಲಕ್ಷ ರೂಪಾಯಿವರೆಗೆ ಇರುವಲ್ಲಿ ಒಟ್ಟು ಖರ್ಚು ಏಕರೀತಿಯಾಗಿ 228¼ ಲಕ್ಷದಿಂದ 321⅓ ಲಕ್ಷ ರೂಪಾಯಿಗೆ ಏರಿರುತ್ತದೆ. 1917-18ನೆಯ ವರ್ಷದವರೆಗೂ ನಮ್ಮ ವರಮಾನವು ಖರ್ಚಿಗಿಂತಲೂ ವಿಶೇಷ ಅಧಿಕವಾಗಿತ್ತು. ಆ ವರ್ಷದಲ್ಲಿ 52½ ಲಕ್ಷ ರೂಪಾಯಿಯಷ್ಟು ಹೆಚ್ಚು ಹಣ ಇತ್ತು. ಅದರ ಮುಂದಿನ ವರ್ಷದಲ್ಲಿಯೇ, ಎಂದರೆ 1918-19ರಲ್ಲಿ, ನಮ್ಮ ಖರ್ಚು ವರಮಾನಕ್ಕಿಂತಲೂ 1⅓ ಲಕ್ಷ ರೂಪಾಯಿಯಷ್ಟು ಹೆಚ್ಚಾಯಿತು; 21ಲಕ್ಷ ರೂಪಾಯಿವರೆಗೂ ವರಮಾನವು ಕಮ್ಮಿ ಬಿದ್ದು ಖರ್ಚು 33 ಲಕ್ಷದಷ್ಟು ಹೆಚ್ಚಿದುದೇ ಇದಕ್ಕೆ ಕಾರಣ. ಒಂದು ಸಲ ಖರ್ಚು ಹೆಚ್ಚಿಸಿದುದೇ ಆದರೆ, ಪುನಃ ಅದನ್ನು ತಗ್ಗಿಸುವುದು ಸುಲಭವಲ್ಲ; ಆದಕಾರಣ ಪ್ರತಿವರ್ಷವೂ ಹುಟ್ಟುವ ವರಮಾನಕ್ಕೆ ತಕ್ಕಂತೆ ಖರ್ಚನ್ನು ಮಿತಪಡಿಸುವುದೇ ಸರ್ವೋತ್ತಮವಾದ ಮಾರ್ಗವಾಗಿರುತ್ತದೆ. ನಾವು ಮೊದಲೇ ತಿಳಿಸಿರುವಂತೆ ಅರ್ಧ ಲಕ್ಷದಷ್ಟು ಹಣ ಮಿಗುವ ಹಾಗೆ ನಮ್ಮ ಮುಂದಿನ ವರ್ಷದ ಬಡ್ಜೆಟ್ ಅಂದಾಜುಗಳನ್ನು ತಯಾರ್ಮಾಡಿದೆ. ಹಿಂದಿನ ವರ್ಷದಲ್ಲಿ ತೆಗೆದ ಸಾಲದ ಮತ್ತು ಮುಂದಿನವರ್ಷದಲ್ಲಿ ತೆಗೆಯಬೇಕೆಂದಿರುವ ಸಾಲದ ಬಡ್ಡಿಗಾಗಿ ಮೊಬಲಗನ್ನು ಒದಗಿಸಿದನಂತರವೇ ಮೇಲಿನ ಫಲಿತಾಂಶವುಂಟಾಗಿದೆ. ಸಾಲ ತೀರಿಸುವ ಸಿಂಕಿಂಗ್ ಫಂಡಿಗೆ ಬೇಕಾಗುವ ಹಣವನ್ನು ಈ ಉದ್ದೇಶಕ್ಕಾಗಿ ಸಂಗ್ರಹಿಸಿರುವ ಶಿಲ್ಕಿನಿಂದ ಕೊಟ್ಟಿರುತ್ತದೆ. ಕಡ್ಡಾಯವಾಗಿ ಒದಗಿಸಬೇಕಾಗಿದ್ದ ಕ್ಷಾಮನಿವಾರಣೆಯ ಫಂಡಿಗೆ ಮಾತ್ರ ಹಣವನ್ನೊದಗಿಸಿಲ್ಲ; ಆದರೆ ಮುಂದಿನ ವರ್ಷ ಈ ಬಾಬಿಗೆ ಬೇಕಾಗುವ ಹಣಕ್ಕೆ ಮೇಲ್ಪಟ್ಟು ವಸೂಲಾಗಬಹುದಾದ ವರಮಾನದ ಬಾಬುಗಳ ಬಾಕಿಗಳು ಇರುತ್ತವೆ. ಕಳೆದ ಮೂರು ವರ್ಷಗಳಲ್ಲಿ ಗಂಧದ ಎಣ್ಣೆಯ ಸರಾಸರಿ ಹುಟ್ಟುವಳಿಯು 20 ಲಕ್ಷ ರೂಪಾಯಿಗೆ ಮೇಲ್ಪಟ್ಟಿದ್ದಾಗ್ಯೂ ಗಿರಾಕಿಯು ಒಂದೇ ಸಮನಾಗಿಲ್ಲದ ದೆಸೆಯಿಂದ ಮುಂದಿನ ವರ್ಷದ ಅಂದಾಜಿನಲ್ಲಿ ಗಂಧದ ಮರದ ವರಮಾನವು 11¼ ಲಕ್ಷ ರೂಪಾಯಿ ಮಾತ್ರ ಆಗಬಹುದೆಂದು ತೋರಿಸಿದೆ. ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿಯ ವಿಷಯದಲ್ಲಿ, ಅದನ್ನು ಪಾವತಿಮಾಡಿಸಬೇಕೆಂದು ಇಂಡಿಯಾ ಸರ್ಕಾರದವರಿಗೆ ಬರೆದುಕೊಂಡಿರುತ್ತೇವೆ. ಈ ಎರಡು ಬಾಬುಗಳ ಹುಟ್ಟುವಳಿಯೂ ಬಂದಲ್ಲಿ, ಕ್ಷಾಮನಿವಾರಣೆಯ ಫಂಡಿಗಾಗಿ ಮಾಮೂಲು ಪ್ರಕಾರ ಸಾಲೀಯಾನಾ ಕಂಟ್ರಿಬ್ಯೂಷನ್ ಮಾತ್ರವಲ್ಲದೆ 1920-21 ಮತ್ತು 1921-22, ಈ ವರ್ಷಗಳ ಬಾಕಿಗಳನ್ನೂ ಸಹ ಕೊಡುವುದಕ್ಕೆ ಸಾಧ್ಯವಾಗುವುದು.

ನಮ್ಮ ಹುಟ್ಟುವಳಿಯೂ ಖರ್ಚೂ ಸಮವಾಗುವಂತೆ ಮಾಡಲು ಆವಶ್ಯಕವಾದ ಪರಿಹಾರಗಳನ್ನೆಲ್ಲಾ ಅನುಸರಿಸಲಾಗುವುವೆಂದೂ, ಸದರೀ ಪರಿಹಾರಗಳೆಲ್ಲವೂ ಸರ್ವಾನುಮೋದಿತವಾದವುಗಳೆಂಬ ವಿಚಾರದಲ್ಲಿ ಅನುಮಾನಪಡಬೇಕಾಗಿಲ್ಲವೆಂದೂ ಮೇಲೆ ನಾವು ಹೇಳಿರುವ ಅಂಶಗಳಿಂದ ವ್ಯಕ್ತವಾಗುವುದು.

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ಕಟ್ಟುನಿಟ್ಟಾಗಿ ಖರ್ಚುಗಳನ್ನು ತಗ್ಗಿಸುವುದರಮೂಲಕ ವರಮಾನವೂ ಖರ್ಚೂ ಅಲ್ಲಲ್ಲಿಗೆ ಸರಿಹೋಗುವಂತೆ ಮಾಡಿರುವುದು ಸರಿಯಷ್ಟೆ. ಮುಂದಿನವರ್ಷ ಎಲ್ಲಾ ಇಲಾಖೆಗಳನ್ನೂ ಇನ್ನೂ ಚೆನ್ನಾಗಿ ಪರಿಶೋಧಿಸಿ ವಜಾಮಾಡಬಹುದಾದ ಖರ್ಚು ಬಾಬುಗಳನ್ನು ಇನ್ನೂ ತಗ್ಗಿಸಲು ಸಾಧ್ಯವಾಗಬಹುದು. ಆದರೆ ನಾವು ಈರೀತಿ ಎಷ್ಟೇ ಮಿಗಿತಾಯಮಾಡಿದರೂ, ವಿದ್ಯಾಭ್ಯಾಸ, ವ್ಯವಸಾಯ, ಜನಾರೋಗ್ಯ, ವೈದ್ಯಸಹಾಯ, ಕೈಗಾರಿಕೆಯ ಉದ್ಯೋಗಗಳು, ಈ ಬಾಬುಗಳಲ್ಲಿ ಆವಶ್ಯಕವಾಗಿ ಮಾಡಬೇಕಾಗಿರುವ ಖರ್ಚುಗಳಿಗೆ ಸಾಕಾಗುವಷ್ಟು ಹಣವನ್ನೊದಗಿಸುವುದಕ್ಕೆ ಸಾಧ್ಯವಾಗಲಾರದು; ಅಲ್ಲದೆ ಈ ಬಾಬುಗಳ ಏರ್ಪಾಡನ್ನು ಬಹುಕಾಲ ಜಾರಿಗೆತರದೆ ಇರುವುದೂ ಹಿತವಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಈಚೆಗೆ ಮಂಜೂರ್ಮಾಡಿರುವ ದರ್ಜೆಗಳಿಗೆ ಸರಿಸುಮಾರಾಗಿ ಹೋಲಿಕೆಯಾಗುವಂತಾದರೂ ಎಲ್ಲಾ ದರ್ಜೆಯ ನಮ್ಮ ಸರ್ಕಾರಿ ನೌಕರರ ವೇತನಗಳನ್ನು ಪುನರ್ವ್ಯವಸ್ಥೆ ಮಾಡದೆ ಇದ್ದಲ್ಲಿ ಅವರಲ್ಲಿ ಅತೃಪ್ತಿಯುಂಟಾಗಿ ಸಮರ್ಪಕವಾಗಿ ಕೆಲಸನಡೆಯದೆ ಹೋಗಬಹುದಾದ ಪ್ರಯುಕ್ತ ಈ ಬಾಬನ್ನು ಸಹ ಸರ್ಕಾರದವರು ಬಹುಕಾಲ ಪರ್ಯಾಲೋಚಿಸದೆ ಬಿಡುವುದು ಸಾಧ್ಯವಲ್ಲ. ಆದಕಾರಣ ಸರ್ಕಾರದವರು ಯಾವ ಮಾರ್ಗಗಳಲ್ಲಿ ತಮ್ಮ ವರಮಾನಗಳನ್ನು ಹೆಚ್ಚಿಸಿಕೊಳ್ಳಬಹುದೆಂಬುದನ್ನು ಪರಿಶೀಲಿಸಲೇ ಬೇಕಾಗಿದೆ.

ಕಳೆದ ಐದು ವರ್ಷಗಳಲ್ಲಿ ನಮ್ಮ ಹುಟ್ಟುವಳಿಯು ಹೆಚ್ಚದೆ ಇದ್ದಷ್ಟೇ ಇದ್ದುಕೊಂಡು ಖರ್ಚುಬಾಬು ಮಾತ್ರ ಬಹುಮಟ್ಟಿಗೆ ಹೆಚ್ಚುತ್ತಾ ಬಂದುದರಿಂದ ಖರ್ಚು ಖೋತಾಮಾಡುವ ಪ್ರಯತ್ನಗಳನ್ನು ಮಾಡಬೇಕಾಗಿ ಬಂತೆಂಬಂಶವನ್ನು ಈ ಮೊದಲೇ ಸೂಚಿಸಿರುತ್ತೇವೆ. ಹುಟ್ಟುವಳಿಯ ಮುಖ್ಯ ಬಾಬುಗಳಲ್ಲಿ ಎಕ್ಸೈಜು ಬಿಟ್ಟರೆ ಮತ್ತಾವ ಬಾಬಿನಲ್ಲಿಯೂ ಅಭಿವೃದ್ಧಿಯು ಕಂಡುಬಂದಿಲ್ಲ. ಐದು ವರ್ಷಗಳ ಕಾಲದಲ್ಲಿ ಈ ಬಾಬಿನಲ್ಲಿ 16¾ ಲಕ್ಷ ರೂಪಾಯಿ ಹೆಚ್ಚಿದೆ; ಇದೇ ಅವಧಿಯಲ್ಲಿ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಬಾಬುಗಳೆರಡರಲ್ಲಿಯೂ ಸೇರಿ 6⅓ ಲಕ್ಷದಷ್ಟು ವರಮಾನವು ಹೆಚ್ಚಿದೆ. ನಮ್ಮ ವರಮಾನದಲ್ಲಿ ಮುಖ್ಯ ಬಾಬದ ಜಮೀನ್ ಕಂದಾಯವು ಹೆಚ್ಚದೆ ಕಳೆದ ಐದು ವರ್ಷಗಳಿಂದಲೂ, ಸುಮಾರು 107 ಲಕ್ಷ ರೂಪಾಯಿಗೆ ನಿಂತುಹೋಗಿದೆ. ನಾನಾಕಾರಣಗಳಿಂದಲೂ, ಮುಖ್ಯವಾಗಿ ರೀಸರ್ವೇಕಾಲದಲ್ಲಿ ಬಾಂದುಗಳನ್ನು ದೀರ್ಘವಾಗಿ ತನಿಖೆಮಾಡುವ ಈಗಣ ಪದ್ಧತಿಯಿಂದಲೂ ಸುಮಾರು 29 ತಾಲ್ಲೂಕುಗಳ ರೀಸೆಟ್ಲ್‌ಮೆಂಟು ಕಾರ್ಯವು ಈಗ ಬಾಕಿಯಲ್ಲಿ ನಿಂತುಹೋಗಿದೆ. ವರ್ಷಕ್ಕೆ ಆರು ತಾಲ್ಲೂಕುಗಳ ರೀಸೆಟ್ಲ್‌ಮೆಂಟನ್ನು ಮುಗಿಸಬೇಕೆಂದು ಸರ್ಕಾರದವರು ಈಚೆಗೆ ಹುಕುಂ ಸಾದರ್ಮಾಡಿದ್ದಾರೆ. ರೀಸೆಟ್ಲ್‌ಮೆಂಟು ಜಾರಿಗೆ ಬರುವುದರಿಂದ ಉಂಟಾಗತಕ್ಕ ಹೆಚ್ಚು ಹುಟ್ಟುವಳಿಯು ಒರಿಜಿನಲ್ ಸರ್ವೆಯ ಕಾಲದಿಂದ ಧಾರಣೆಗಳು ಹೆಚ್ಚುತ್ತಿರುವುದಕ್ಕೆ ಅನುರೂಪವಾಗಿಲ್ಲವೆಂಬುದನ್ನು ಸಹಾ ಇಲ್ಲಿ ಗಮನಿಸಬಹುದಾಗಿದೆ. ಇದುವರೆಗೆ ಮುಗಿದಿರುವ 37 ತಾಲ್ಲೂಕುಗಳ ರೀಸೆಟ್ಲ್‌ಮೆಂಟುಗಳಮೂಲಕ ಜಮೀನ್ ಕಂದಾಯದಲ್ಲಿ ಆಗಿರುವ ಒಟ್ಟು ಹೆಚ್ಚಿಗೆಯು 4¼ ಲಕ್ಷ ಮಾತ್ರವಾಗಿದೆ, ಎಂದರೆ ಶೇಕಡ 11ರಷ್ಟು ಹೆಚ್ಚಿದೆ. ನಮ್ಮ ಜಮೀನ್ ಕಂದಾಯದ ಠರಾವಣೆಯಕ್ರಮವು ಬೊಂಬಾಯಿ ಧಿವತ್ತದಲ್ಲಿ ಜಾರಿಯಲ್ಲಿರುವ ಕ್ರಮವನ್ನನುಸರಿಸುತ್ತದೆ. ಅಲ್ಲಿನ ರೀಸೆಟ್ಲ್‌ಮೆಂಟಿನಲ್ಲಿ ಕಂದಾಯವು ಸೇಕಡ 30ರಷ್ಟು ಹೆಚ್ಚಿರುತ್ತದೆ.

ಗಂಧದೆಣ್ಣೆಗೆ ಸರಿಯಾದ ಗಿರಾಕಿ ಇಲ್ಲದಿರುವುದರಿಂದಲೂ, ಚರ್ಮ ಹದಮಾಡುವ ಚಕ್ಕೆಗಳಿಗೆ ಗಿರಾಕಿ ದೊರೆಯುವುದರಲ್ಲಿ ಅವ್ಯವಸ್ಥೆಯುಂಟಾದುದರಿಂದಲೂ ಫಾರೆಸ್ಟು ಇಲಾಖೆಯ ಹುಟ್ಟುವಳಿಯು ಬಹುಮಟ್ಟಿಗೆ ಕಮ್ಮಿಯಾಗಿರುತ್ತದೆ. ಯುದ್ಧದೆಸೆಯಿಂದುಂಟಾದ ವ್ಯಾಪಾರದ ವಿಷಮಾವಸ್ಥೆಯು ನಮ್ಮ ಫಾರೆಸ್ಟು ಹುಟ್ಟುವಳಿಯು ಕಡಮೆಯಾದುದಕ್ಕೆ ಕಾರಣವಾಗಿರುವುದು ಮಾತ್ರವಲ್ಲದೆ, ಅವ್ಯವಸ್ಥಿತವಾದ ಎಕ್ಸ್‌ಛೇಂಜ್ ದರದ ದೆಸೆಯಿಂದ ಹುಟ್ಟುವಳಿಯನ್ನುಂಟುಮಾಡುವ ಕಾಮಗಾರಿಗಳ ಪೈಕಿ ಕೆಲವು ಬಾಬುಗಳ ಉತ್ಪತ್ತಿಗೆ ನ್ಯೂನತೆಯನ್ನು ಸಹ ಉಂಟುಮಾಡಿದೆ. ಪ್ರಪಂಚಕ್ಕೆಲ್ಲಾ ಸಾಮಾನ್ಯವಾಗಿರತಕ್ಕ ಇಂತಹ ವಿಷಯಗಳನ್ನು ಅನುಸರಿಸಿಕೊಂಡಿರುವ ನಮ್ಮ ಹುಟ್ಟುವಳಿಯನ್ನು ಕಾಪಾಡಿಕೊಂಡು ಬರಲು ಸಾಧನವನ್ನು ಕಂಡುಹಿಡಿಯುವುದು ಕಷ್ಟಸಾಧ್ಯ. ಆದಕಾರಣ ಕಾಲಸ್ಥಿತಿಯು ಸುಮುಖವಾಗುವವರೆಗೆ ರಾಜ್ಯಾಡಳಿತದಲ್ಲಿ ಅಭಿವೃದ್ಧಿಯ ಕಾರ್ಯವನ್ನು ಪರಿಮಿತಗೊಳಿಸಬೇಕಾಗಿದೆ.

ಮೂಲಧನದ ಖರ್ಚು.

ಇದುವರೆಗೂ ರೆವಿನ್ಯೂ ಫೈನಾನ್ಸ್ ವಿಚಾರವಾಗಿ ಪ್ರಸ್ತಾಪಿಸಿದುದಾಯಿತು. ಇನ್ನು ಕ್ಯಾಪಿಟಲ್ ಫೈನಾನ್ಸ್ ವಿಷಯವಾಗಿ ಪ್ರಸ್ತಾಪಿಸುತ್ತೇವೆ. ಚಾಲ್ತಿ ವರ್ಷದಲ್ಲಿ ಎತ್ತಿದ ಸರ್ಕಾರಿ ಸಾಲದ ವಿಷಯದಲ್ಲಿಯೂ, ಮುಂದಿನ ವರ್ಷದಲ್ಲಿ ಎತ್ತಬೇಕೆಂದಿರುವ ಸಾಲದ ವಿಷಯದಲ್ಲಿಯೂ ವಿಶೇಷ ತಪ್ಪು ತಿಳವಳಿಕೆ ಇರುವಹಾಗೆ ಕಾಣುತ್ತದೆ. ಬಡ್ಜೆಟ್ ಅಂದಾಜಿನಲ್ಲಿ ಲಾಭಕರವಾದ ಕಾಮಗಾರಿಗಳಿಗೆ 96½ ಲಕ್ಷ ರೂಪಾಯಿಯನ್ನು ಒದಗಿಸಿತ್ತಷ್ಟೆ. ಹೋದಸಾರಿ ತೆಗೆದ ಸಾಲವನ್ನು ಈ ಬಾಬಿಗಾಗಿ ಉಪಯೋಗಿಸಲಾಯಿತೆಂದು ಚಾಲ್ತಿ ವರ್ಷದ ಬಡ್ಜೆಟ್ಟುಮೆಮೊರ್‍ಯಾಂಡಂನಲ್ಲಿ ಸ್ಪಷ್ಟವಾಗಿ ನಮೂದಿಸಿತ್ತು. ಆದರೂ ಮೇಲ್ಕಂಡ ಸಾಲದ ಮೊಬಲಗು ಯಾವ ರೀತಿಯಲ್ಲಿ ವಿನಿಯೋಗಿಸಲ್ಪಟ್ಟಿತೆಂಬ ವಿಷಯದಲ್ಲಿಯೂ, ಆ ಮೊಬಲಗೆಲ್ಲವೂ ಬಂಡವಾಳದ ಕಾಮಗಾರಿಗಳಿಗಾಗಿಯೇ ನಿಜವಾಗಿಯೂ ಖರ್ಚು ಮಾಡಲ್ಪಟ್ಟಿತೇ ಎಂಬ ವಿಷಯದಲ್ಲಿಯೂ ಅನೇಕರು ಪ್ರಶ್ನೆಮಾಡಿದ್ದಾರೆ. ವರ್ಷದ ಮೊದಲನೆಯ ಒಂಭತ್ತು ತಿಂಗಳಲ್ಲಿ ಈ ಕಾಮಗಾರಿಗಳಿಗೆ ವಸ್ತುತಃ ತಗುಲಿದ ಖರ್ಚು 72 ಲಕ್ಷ ರೂಪಾಯಿಯಾಗುವುದಲ್ಲದೆ ಉಳಿದ ಮೂರು ತಿಂಗಳಲ್ಲಿ ಸುಮಾರು 68½ ಲಕ್ಷ ರೂಪಾಯಿಯು ಅವುಗಳಿಗಾಗಿಯೇ ಖರ್ಚು ತಗುಲಬಹುದೆಂದು ನಿರೀಕ್ಷಿಸಲಾಗಿದೆ. ಆದಕಾರಣ ಚಾಲ್ತಿ ವರ್ಷದಲ್ಲಿ ಬಂಡವಾಳದ ಕಾಮಗಾರಿಗಳಿಗಾಗಿ ಮಾಡುವ ಒಟ್ಟು ಖರ್ಚು 140½ ಲಕ್ಷ ರೂಪಾಯಿಯಾಗುತ್ತದೆ. ಸಾಲದ ಮೂಲಕ ಸಂಗ್ರಹಿಸಿದ ಮೊಬಲಗು 134¼ ಲಕ್ಷ ರೂಪಾಯಿ; ಇದೆಲ್ಲವೂ ಈ ರೀತಿಯಲ್ಲಿ ಲಾಭಕರವಾದ ಕಾಮಗಾರಿಗಳಿಗಾಗಿ ವಿನಿಯೋಗಿಸಲ್ಪಟ್ಟಿರುವುದೆಂಬ ವಿಷಯವು ಮೇಲ್ಕಂಡ ವಿವರಗಳಿಂದ ವ್ಯಕ್ತವಾಗುತ್ತದೆ.

ಮುಂದಣ ವರ್ಷ ಎತ್ತಬೇಕೆಂದಿರುವ ಸಾಲದ ವಿಷಯದಲ್ಲಿ ಪುನಃ ಸಾಲ ತೆಗೆಯಬೇಕಾದ ಪ್ರಕೃತವಿಲ್ಲವೆಂತ ಕೆಲವರು ಸೂಚಿಸಿರುತ್ತಾರೆ. ತಮಗೆಲ್ಲಾ ಗೊತ್ತಿರುವಂತೆ, ರೈಲ್ವೆಗಳಿಗೂ, ವಿದ್ಯುಚ್ಛಕ್ತಿಯ ಕೆಲಸಗಳಿಗೂ, ಕೃಷ್ಣರಾಜಸಾಗರಕ್ಕೂ, ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆಯ ಕೆಲಸಗಳಿಗೂ ಹಣವನ್ನು ಸಾಲಮಾಡಿ ಒದಗಿಸಬೇಕಾಗಿದೆ.

ರೈಲ್ವೆಗಳು.

ರೈಲ್ವೆ ಬಾಬುಗಳಿಗೆ ಮುಂದಣ ವರ್ಷ 30 ಲಕ್ಷ ರೂಪಾಯಿ ಬೇಕಾಗುತ್ತದೆ. ಇದು ಬಹುಮಟ್ಟಿಗೆ ಓಪನ್ ಲೈನುಗಳ ಮೂಲಧನದ ಖರ್ಚಿಗಾಗಿ ಬೇಕಾಗಿದೆ. ಇಂಡಿಯಾ ಸರ್ಕಾರದವರಿಂದ ಮಂಜೂರಾದ ಹೊಸ ಲೈನುಗಳ ಸಂಬಂಧವಾದ ಕಾಮಗಾರಿಗಳಿಗೆ ಮಾಡಬೇಕಾದ ಖರ್ಚನ್ನೆಲ್ಲಾ ಹಣದ ಅಭಾವದಿಂದ ನಿಲ್ಲಿಸಲಾಗಿದೆ. ಈಗ ಕೈಗೊಳ್ಳಬೇಕಾದ ಬಂಡವಾಳದ ಖರ್ಚು ಮೂಲಧನಕ್ಕೆ ಖರ್ಚುಹಾಕತಕ್ಕ ಕೇವಲ ಆವಶ್ಯಕವಾದ ನವೀಕರಣಗಳಿಗೋಸ್ಕರವೂ, ಅಭಿವೃದ್ಧಿಯ ಕಾರ್ಯಗಳಿಗೋಸ್ಕರವೂ ಆಗಿದೆ. ಈ ಕಾರ್ಯಗಳನ್ನು ಯುದ್ಧ ನಡೆಯುತ್ತಿದ್ದ ಕಾಲದಲ್ಲಿ ನಿಲ್ಲಿಸಬೇಕಾಗಿ ಬಂತು. ಜನರ ಅನುಕೂಲ ಮತ್ತು ರಕ್ಷಣೆಗಳಿಗೆ ಕುಂದಕವಿಲ್ಲದಂತೆಯೂ, ಲೈನುಗಳು ಹೀನಸ್ಥಿತಿಗೆ ಬಂದು ಹುಟ್ಟುವಳಿಯಲ್ಲಿ ನಷ್ಟವಾಗದಂತೆಯೂ ಈ ಕಾರ್ಯಗಳನ್ನು ಕ್ಷಿಪ್ರದಲ್ಲಿಯೇ ಕೈಗೊಳ್ಳದೆ ತಾಮಸಮಾಡಲು ಆಗಲಾರದು. ರೈಲ್ವೆಗಳ ಸೀನಿಯರ್ ಗೌರ್ನ್ಮೆಂಟ್ ಇನ್ಸ್‌ಪೆಕ್ಟರವರು ಈ ಅಭಿವೃದ್ಧಿಯ ಕಾರ್ಯಗಳ ಆವಶ್ಯಕತೆಯನ್ನು ಕುರಿತು ಅನೇಕ ವೇಳೆ ಒತ್ತಿ ಹೇಳಿದ್ದಾರೆ. ಈ ಅಭಿವೃದ್ಧಿಯ ಕಾರ್ಯಗಳು ಪೂರೈಸಿದಮೇಲೆ ವರಮಾನವು ಬಹುಮಟ್ಟಿಗೆ ಹೆಚ್ಚುವುದೆಂದು ನಿರೀಕ್ಷಿಸಬಹುದು.

ವಿದ್ಯುಚ್ಛಕ್ತಿಯ ಕಾಮಗಾರಿಗಳು.

ಹಿಂದೆ ಸೂಚಿಸಲ್ಪಟ್ಟ ವಿದ್ಯುಚ್ಛಕ್ತಿಯ ಕೆಲಸಗಳು ಶಿವಸಮುದ್ರದ ಕಾವೇರೀ ವಿದ್ಯುಚ್ಛಕ್ತಿಯ ಕೆಲಸಗಳ ಸಂಬಂಧದಲ್ಲಿ 6ನೆಯ ಸ್ಥಾಪನೆಯ ಕಾರ್ಯಗಳಿಗೆ ಸಂಬಂಧಪಟ್ಟವುಗಳಾಗಿವೆ. ಕೋಲಾರದ ಚಿನ್ನದಗಣಿಯ ಕಂಪನಿಗಳಿಗೂ, ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಅಭಿವೃದ್ಧಿಗೆ ಬರುತ್ತಿರುವ ಕೈಗಾರಿಕೆಗಳಿಗೂ ಹೆಚ್ಚು ಶಕ್ತಿಯು ಆವಶ್ಯಕವಾಗಿರುವುದರಿಂದ ಇದನ್ನು ಪ್ರಯತ್ನಿಸಿದೆ. ಹಾಲಿ ಇರುವ ಒಡಂಬಡಿಕೆಯ ಪ್ರಕಾರ 12,000 ಅಶ್ವಶಕ್ತಿಯಷ್ಟು ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಇವುಗಳಿಗೆ ಸರ್ಕಾರದವರು ಒದಗಿಸಬೇಕಾಗಿದೆ. ಇದರ ಅಂದಾಜಿನ ಒಟ್ಟು ಮೊಬಲಗು 43 ಲಕ್ಷ ರೂಪಾಯಿ. ಈ ಪೈಕಿ ಚಾಲ್ತಿ ಸರ್ಕಾರಿ ವರ್ಷದ ಕೊನೆಯವರೆಗೆ 12 ಲಕ್ಷದವರೆಗೆ ಖರ್ಚು ಆಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. 1921-22ನೆಯ ವರ್ಷದಲ್ಲಿ 23 ಲಕ್ಷ ಬೇಕಾಗಬಹುದು.

ಸಾಲತೆಗೆದು ಬಂಡವಾಳವನ್ನೊದಗಿಸಿ ಪೂರೈಸಬೇಕಾಗಿರುವ ಇತರ ಮುಖ್ಯವಾದ ಕಾರ್ಯಗಳು ಯಾವುವೆಂದರೆ, ಕೃಷ್ಣರಾಜಸಾಗರ ಜಲಾಶಯ ಮತ್ತು ಅದಕ್ಕೆ ಸಂಬಂಧಪಟ್ಟ ಕಾಮಗಾರಿಗಳು ಮತ್ತು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಏರ್ಪಾಟು. ಇವುಗಳಿಗೆ ಈಗಾಗಲೇ ಭಾರಿ ಮೊಬಲಗನ್ನು ಖರ್ಚುಮಾಡಿ ಇನ್ನುಮುಂದೆಯೂ ಮಾಡುವುದಾಗಿ ಒಪ್ಪಿಕೊಂಡಿರುವ ಪ್ರಯುಕ್ತ ಇವುಗಳಿಗೆ ಸಂಬಂಧಪಟ್ಟ ವಿವರಗಳನ್ನು ಈ ಸಂದರ್ಭದಲ್ಲಿ ಸಮಸ್ತಜನರ ತಿಳುವಳಿಕೆಯಬಗ್ಗೆ ಸೂಚಿಸಲು ಅವಕಾಶವು ಒದಗಿದುದಕ್ಕಾಗಿ ಹರ್ಷಿಸುತ್ತೇವೆ.

ಕೃಷ್ಣರಾಜಸಾಗರದ ಕಾಮಗಾರಿಗಳು.

ಕೃಷ್ಣರಾಜಸಾಗರದ ಕೆಲಸವು ಎಷ್ಟರ ಮಟ್ಟಿಗೆ ನಡೆದಿರುತ್ತದೆಂದರೆ, ಅಣೆಕಟ್ಟೆಯ ಮೊದಲನೆಯ ಅಂತಸ್ತು ಬಹುಮಟ್ಟಿಗೆ ಪೂರೈಸುತ್ತಾ ಬಂದಿದೆ. ಅಲ್ಲದೆ ಅಣೆಕಟ್ಟಿನ ಭದ್ರತೆಗೋಸ್ಕರವೂ, ಕ್ಷಿಪ್ರದಲ್ಲಿಯೇ ಆಖೈರಾಗಿವ ವಸ್ಥೆಯಾಗುವುದರಲ್ಲಿರುವ ಮದರಾಸ್ ಸರ್ಕಾರದವರೊಂದಿಗೆ ಮಾಡಿಕೊಂಡಿರುವ ಕರಾರಿನಂತೆ ನಡಿಸುವುದಕ್ಕೋಸ್ಕರವೂ ಇದನ್ನು 124 ಅಡಿ ಎತ್ತರದವರೆಗೆ ಕ್ಷಿಪ್ರದಲ್ಲಿಯೇ ಕಟ್ಟಿ ಪೂರೈಸಬೇಕಾಗಿದೆ. ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಹೆಚ್ಚಿಸುವುದು, ನೀರಾವರಿಯಕೆಲಸವನ್ನು ಬಡಾಯಿಸುವುದು, ಈ ಎರಡು ಉದ್ದೇಶಗಳಿಂದ ಈ ಅಣೆಕಟ್ಟನ್ನು ಏರ್ಪಡಿಸಬೇಕೆಂದು ನಿರ್ಧರಿಸಲಾಯಿತು. ಅಣೆಕಟ್ಟೆಯ ಕಾಮಗಾರಿಯನ್ನು ಆರಂಭಿಸಿದಾಗ ಇದ್ದ ಮೊದಲನೆಯ ಮೂರು ಸ್ಥಾಪನೆಗಳಿಂದ ಶಿವಸಮುದ್ರದಲ್ಲಿ ಉತ್ಪನ್ನಮಾಡಿದ ವಿದ್ಯುಚ್ಛಕ್ತಿಯು 13,000 ಅಶ್ವಶಕ್ತಿಯಷ್ಟಾಗಿದ್ದಿತು. ಅಣೆಕಟ್ಟೆಯ ಮೊದಲನೆಯ ಅಂತಸ್ತು ಮುಗಿದೊಡನೆ ಉತ್ಪನ್ನವಾಗುವ ವಿದ್ಯುಚ್ಛಕ್ತಿಯು 13,000 ಅಶ್ವಶಕ್ತಿಯಿಂದ 32,000 ಅಶ್ವಶಕ್ತಿಯವರೆಗೆ (6 ನೆಯ ಸ್ಥಾಪನೆಯು ಪೂರೈಸಿದಾಗ್ಗೆ) ಹೆಚ್ಚಿಸಲ್ಪಡುವುದು. ಅಣೆಕಟ್ಟೆಯ ಮೊದಲನೆಯ ಅಂತಸ್ತಿನ ಒಟ್ಟು ಖರ್ಚನ್ನು ಕಾವೇರಿ ಪವರ್ ವರ್ಕ್ಸಿಗೆ ಖರ್ಚು ಹಾಕತಕ್ಕದೆಂದು ಉದ್ದೇಶಿಸಿದೆ. ಕಾವೇರಿ ಪವರ್ ವರ್ಕ್ಸಿನ ಒಟ್ಟು ಖರ್ಚು 6 ನೆಯ ಸ್ಥಾಪನೆಯವರೆಗೆ ಮತ್ತು ಅದೂ ಸೇರಿಕೊಂಡು ಈ ಕೆಳಗೆ ತೋರಿಸಿರುವಂತೆ 309 ಲಕ್ಷವಾಗುವುದು:—

ವಿದ್ಯುಚ್ಛಕ್ತಿಯ ಕಾಮಗಾರಿಗಳು	....	205 ಲಕ್ಷ
ಅಣೆಕಟ್ಟೆಯ ಮೊದಲನೆಯ ಅಂತಸ್ತು	....	104 ,,
ಜುಮ್ಲಾ	....	309 ಲಕ್ಷ

ಉತ್ಪನ್ನವಾದ 32,000 ಅಶ್ವಶಕ್ತಿಯಿಂದ 32 ಲಕ್ಷ ರೂಪಾಯಿ ನಿವ್ವಳ ಹುಟ್ಟುವಳಿಯು ಬರುವುದೆಂದು ಅಂದಾಜಾಗಿದೆ. ಅಣೆಕಟ್ಟೆಯನ್ನು ಸಾವಕಾಶಮಾಡದೆ ಆಖೈರು ಅಂತಸ್ತಿನವರೆಗೆ ತರಬೇಕಾಗಿದೆ ಎಂದು ಈ ಮೊದಲೇ ಸೂಚಿಸಿರುತ್ತೇವೆ. ಅಣೆಕಟ್ಟೆಯ ಕಾಮಗಾರಿಗಳಿಗೆ ಆಗಿರುವ ಒಟ್ಟು ಅಂದಾಜುಮೇಲೆ ಸೂಚಿಸಿದ 104 ಲಕ್ಷವೂ ಸೇರಿ 191 ಲಕ್ಷ ರೂಪಾಯಿಯಾಗುವುದು. ಈ ಸರ್ಕಾರಿವರ್ಷದ ಆಖೈರುವರೆಗೆ 158 ಲಕ್ಷ ರೂಪಾಯಿ ಖರ್ಚಾಗುವುದೆಂದು ನಿರೀಕ್ಷಿಸಿದೆ. ಆದಕಾರಣ ಇನ್ನುಮುಂದೆ ಆಗಬೇಕಾದ ಖರ್ಚು 33 ಲಕ್ಷ ಮಾತ್ರ ಇರುತ್ತದೆ. ಈ ಖರ್ಚನ್ನು ತಪ್ಪಿಸಿಕೊಳ್ಳುವುದಾಗಲಿ, ಸದ್ಯಕ್ಕೆ ಮಾನಸಿಕಮಾಡಿ ಮುಂದಕ್ಕೆ ವಹಿಸುವುದಾಗಲಿ ಸಾಧ್ಯವಲ್ಲವೆಂದು ಸರ್ಕಾರಕ್ಕೆ ಸಲಹೆಕೊಟ್ಟಿರುವವರ ಅಭಿಪ್ರಾಯವಾಗಿದೆ. ಅಣೆಕಟ್ಟೆಯನ್ನು ಮುಗಿಸಿದ ಮೇಲೆ ಸುಮಾರು 17 ಲಕ್ಷ ರೂಪಾಯಿಯ ಖರ್ಚಿನಲ್ಲಿ ಅಣೆಕಟ್ಟೆಯ ನಿವೇಶನದಲ್ಲಿಯೇ 4,000 ಅಶ್ವಶಕ್ತಿಯನ್ನು ಉತ್ಪನ್ನಮಾಡಬಹುದೆಂದು ಉದ್ದೇಶಿಸಲಾಗಿದೆ. ಇದರಿಂದ ಸಾಲೀಯಾನಾ 3 ಲಕ್ಷ ರೂಪಾಯಿ ಹುಟ್ಟುವಳಿಯಾಗುವುದೆಂದು ನಿರೀಕ್ಷಿಸಿದೆ. ಇದಲ್ಲದೆ, ಜಲಾಶಯದಲ್ಲಿ ಶೇಖರವಾಗುವ ನೀರಿನಿಂದ ಸುಮಾರು 70,000 ಎಕರೆಗಳವರೆಗೆ ತರೀ ಸಾಗುವಳಿಗೆ ಸಾಧ್ಯವಾಗುತ್ತದೆ. ಇದಕ್ಕೆ ಬೇಕಾದ ನಾಲೆಗಳಿಗೆ 150 ಲಕ್ಷ ರೂಪಾಯಿ ಖರ್ಚಾಗುವುದೆಂದು ಅಂದಾಜಾಗಿದೆ. ಆದರೆ ಇದರ ಮೇಲೆ ಬರಬಹುದಾದ ವರಮಾನವು 5 ಲಕ್ಷ ರೂಪಾಯಿ ಮಾತ್ರವಾಗಿರುವುದರಿಂದ, ನೀರಾವರಿಯ ಕೆಲಸದ ಬಡಾವಣೆಯನ್ನು ಹಣ ಒದಗಿದಹಾಗೆಲ್ಲಾ ಮುಂದೆ ಕೈಗೊಳ್ಳಬಹುದೆಂದು ಯೋಚಿಸಲಾಗಿದೆ.

ಕಬ್ಬಿಣದ ಕಾರ್ಖಾನೆ.

ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆಯ ಕೆಲಸವನ್ನು ಟಾಟಾ ಐರನ್ ಮತ್ತು ಸ್ಟೀಲ್ ಕಂಪೆನಿಗೆ ಕನ್‌ಸಲ್ಟಿಂಗ್ ಇಂಜನಿಯರುಗಳಾದ ನ್ಯೂಯಾರ್ಕ್ ಪಟ್ಟಣದ ಮೆ|| ಪೆರಿನ್ ಮತ್ತು ಮಾರ್ಷಲ್‌ರವರ ಪ್ರಸಿದ್ಧವಾದ ಕಂಪೆನಿಗೆ ಸೇರಿದ ಮಿ|| ಸಿ. ಪಿ. ಪೆರಿನ್‌ರವರ ಸಲಹೆಯಮೇಲೆ ಕೈಗೊಳ್ಳಲಾಗಿದೆ. ತಮಗೆ ತಿಳಿದಿರುವಂತೆ, ಈ ಟಾಟಾ ಕಂಪೆನಿಯವರನ್ನು ಏಜಂಟರನ್ನಾಗಿ ನೇಮಿಸಿದೆ; ಸರ್ಕಾರದವರ ಪೈಕಿ ಮೂವರು, ಏಜಂಟರ ಪೈಕಿ ಇಬ್ಬರು ಪ್ರತಿನಿಧಿಗಳನ್ನುಳ್ಳ ಮ್ಯಾನೇಜ್‌ಮೆಂಟ್ ಬೋರ್ಡಿಗೆ ಇದರ ಕಾರ್ಯಭಾಗಗಳನ್ನೆಲ್ಲಾ ವಹಿಸಲಾಗಿದೆ.

ಈ ಏರ್ಪಾಟಿನಲ್ಲಿ ಕಬ್ಬಿಣದ ಅದುರು ಮತ್ತು ಸುಣ್ಣದಕಲ್ಲೆ (ಟಂಕ), ಇವುಗಳ ಗಣಿಯ ಕೆಲಸ, ಇಂಧನ ಸಾಮಗ್ರಿಯನ್ನು ತೆಗೆಯುವುದು, ಅದರನ್ನೂ, ಇಂಧನ ಸಾಮಗ್ರಿಯನ್ನೂ ಸಾಗಿಸುವುದಕ್ಕೆ ಟ್ರಾಂವೆ ಲೈನುಗಳನ್ನು ಹಾಕುವುದು, ಮರವನ್ನು ತುಂಡುಮಾಡುವ ಯಂತ್ರ, ವಿಶೇಷ ಕಾವಿನಿಂದ ಭಟ್ಟಿ ಇಳಿಸುವ ಕ್ರಮದ ಮೂಲಕ ಮರದಿಂದ ಇದ್ದಲನ್ನು ತಯಾರ್ಮಾಡಲು ಮರದ ಭಟ್ಟಿಯಿಳಿಸುವ ಯಂತ್ರಸಾಹಿತ್ಯ ಮತ್ತು ಉಪಉತ್ಪತ್ತಿಗಳನ್ನು ಪಡೆಯುವುದು, ಬಿರುಗಾಳಿಯ ಕುಲುಮೆ ಮತ್ತು ಸಿಬ್ಬಂದಿಯ ವಸತಿಗಾಗಿ ಹೊಸ ಟೌನು ರಚನೆ—ಇವುಗಳು ಅಡಗಿರುತ್ತವೆ.

1916 ನೆಯ ಇಸವಿಯಲ್ಲಿ ಮಿ|| ಪೆರಿನ್‌ರವರಿಂದ ತಯಾರು ಮಾಡಲ್ಪಟ್ಟ ಸ್ಕೀಮಿಗೆ 63,60,300 ರೂಪಾಯಿ ತಗಲಬಹುದೆಂದು ಮೊದಲು ಅಂದಾಜು ಮಾಡಲ್ಪಟ್ಟಿತ್ತು. ಈ ಅಂದಾಜನ್ನು ಅನೇಕ ಸಲ ತಿದ್ದುಪಡಿ ಮಾಡಬೇಕಾಯಿತು. ಏಜಂಟರು ಕಳುಹಿಸಿದ 1919 ನೆಯ ಇಸವಿಯ ಕೊನೆಯ ತಿದ್ದುಪಡಿಯಾದ ಅಂದಾಜು 99,30,000 ರೂಪಾಯಿ ಆಗಿರುತ್ತದೆ. ಯುದ್ಧದೆಸೆಯಿಂದ ಯಂತ್ರಸಾಮಗ್ರಿಗಳ ಬೆಲೆ ಏರಿದ್ದರಿಂದ ಈ ರೀತಿ ಮೊದಲನೆಯ ಅಂದಾಜು ಹೆಚ್ಚಿದ್ದು ಅನಿರ್ವಾಹವಾಗಿದೆ. ಈಚೆಗೆ ನಡೆದಿರುವ ವಿದ್ಯಮಾನಗಳನ್ನು ಪರಿಶೀಲಿಸಿ ನೋಡಲಾಗಿ ಮೇಲ್ಕಂಡ ತಿದ್ದುಪಾಟಾದ ಅಂದಾಜಾ ಮೊಬಲಗು ಈ ಸ್ಕೀಮಿನ ಬೇರೆ ಬೇರೆ ಭಾಗಗಳಿಗೆಲ್ಲಾ ತಗಲುವ ಬಂಡವಾಳದಖರ್ಚಿಗೆಲ್ಲಾ ಸಾಕಾಗಲಾರದೆಂದು ಕಂಡುಬಂದಿದೆ.

ಈ ಸ್ಕೀಮಿನ ಎಲ್ಲಾ ಭಾಗವೂ ಸಮಗ್ರವಾಗಿ ಕೆಲಸನಡಿಸುವ ಸ್ಥಿತಿಗೆ ಬರುವುದರೊಳಗಾಗಿ ಮರದಿಂದ ಭಟ್ಟಿಯಿಳಿಸುವ ಯಂತ್ರಗಳಿಗೂ, ಬಿರುಗಾಳಿಯ ಕುಲುಮೆ ಯಂತ್ರಗಳಿಗೂ ಸುಮಾರು 100 ಲಕ್ಷ ರೂಪಾಯಿ; ಇದುವರೆಗೆ 117 ಮೈಲಿ ದೂರ ಹಾಕಿರುವ ಟ್ರಾಂವೆಗಳಿಗೆ ಸುಮಾರು 72 ಲಕ್ಷ ರೂಪಾಯಿ, ಪಟ್ಟಣರಚನೆ, ಅದರು ಮತ್ತು ಟಂಕ ಈ ಕೆಲಸಗಳಿಗಾಗಿ 20 ಲಕ್ಷ ರೂಪಾಯಿ ಖರ್ಚಾಗಬಹುದೆಂಬ ನಿರೀಕ್ಷಣೆ ಇದೆ. ಈ ರೀತಿ ಆಖೈರ್‌ವರೆಗೆ ಒಟ್ಟು ಖರ್ಚು ಸುಮಾರು 190 ಲಕ್ಷಕ್ಕೆ ಕಮ್ಮಿಯಿಲ್ಲದಂತೆ ಆಗುವುದು. ತಪ್ಸೀಲುವಾರಾದ ಮತ್ತು ಚಾಲತು ವರೆಗಿನ ಪಕ್ಕಾ ಅಂದಾಜುಗಳು ಈಗ ತಯಾರಾಗುತ್ತಲಿವೆ. ಜಾಗರೂಕತೆಯಿಂದ ತನಿಖೆಮಾಡಿದಮೇಲೆ ಸರ್ಕಾರದವರು ಅವುಗಳನ್ನು ಮಂಜೂರ್ಮಾಡುವರು.

ಈ ಮೇಲ್ಕಂಡ ಮೊಬಲಗಿನ ಪೈಕಿ ಈ ವರ್ಷದ ಆಖೈರೊಳಗಾಗಿ ಸುಮಾರು 120 ಲಕ್ಷ ರೂಪಾಯಿ ಖರ್ಚಾಗಿರುತ್ತದೆ; ಮುಂದಿನ ವರ್ಷ 45 ಲಕ್ಷ ರೂಪಾಯಿ ಖರ್ಚು ಅತ್ಯವಶ್ಯಕವಾಗಿ ಬೇಕಾಗಿದೆ.

ಮರದಿಂದ ಭಟ್ಟಿ ಇಳಿಸುವ ಯಂತ್ರ, ಬಿರುಗಾಳಿಯ ಕುಲುಮೆ, ಇವುಗಳು ಸ್ವಲ್ಪ ಹೆಚ್ಚುಕಡಿಮೆ ಸಂಪೂರ್ಣವಾಗಿ ಸ್ಥಾಪಿಸಲ್ಪಟ್ಟವೆಯಾದ ಪ್ರಯುಕ್ತ ಅವುಗಳಬಗ್ಗೆ ಮತ್ತೇನೂ ಹೆಚ್ಚು ಖರ್ಚು ಬೇಕಾಗಿರುವುದಿಲ್ಲ. ಟ್ರಾಂವೇಗಳಿಗಾಗಿ ಬೇಕಾಗುವ ಖರ್ಚನ್ನು ಎರಡುಮೂರು ವರುಷಗಳಿಗೆ ಹಂಚಿಕೊಳ್ಳಲಾಗುತ್ತದೆ. ಮೇಲ್ಕಂಡ ಯಂತ್ರಗಳಲ್ಲಿ ಸರಿಯಾಗಿ ಕೆಲಸ ನಡೆಯಬೇಕಾದರೆ ಬೇಕಾದ ಪದಾರ್ಥಗಳು ಎಂದರೆ ಮರದಿಂದ ಭಟ್ಟಿ ಇಳಿ

ಸುವ ಯಂತ್ರಗಳಿಗಾಗಿ ಸೌದೆಯೂ, ಬಿರುಗಾಳಿಯ ತುಲುವೆಗಾಗಿ ಅದರು ಮತ್ತು ಟಂಕವೂ ತಪ್ಪದೆ ಸ್ಥಿರವಾಗಿ ಸರಬರಾಯಿ ಆಗುತ್ತಾ ಬರಬೇಕಾದುದು ಆವಶ್ಯಕ. ಜಾಗರೂಕತೆಯಿಂದ ತಯಾರುಮಾಡಿರುವ ಕಾರ್ಯಕ್ರಮವನ್ನು ಅನುಸರಿಸಿ ಸೌದೆಯನ್ನು ಶೇಖರ ಮಾಡುತ್ತಿರುವುದೇ ಅಲ್ಲದೆ ಜಂಗಲಿ ಪ್ರದೇಶಗಳಿಂದ ಪಕ್ಕಾ ಶಾಸ್ತ್ರೀಯ ಮಾರ್ಗದಲ್ಲಿ ಸೌದೆಗಾಗಿ ಮರ ಹೊಡೆಯುತ್ತಿರುವುದಾಗಿದೆ. ಕಬ್ಬಿಣದ ಕಾರಖಾನೆಗೆ ಸೌದೆ ಸರಬರಾಯಿ ಮಾಡುವುದರ ಜೊತೆಗೆ ನಮ್ಮ ಜಂಗಲಿಗಳಲ್ಲಿರುವ ಚೌಬೀನೆ ಮತ್ತು ಬೊಂಬು, ಇವುಗಳನ್ನು ಕ್ರಮವಾಗಿ ಪರೀಕ್ಷೆ ಮಾಡುತ್ತಾ ಈ ಸಾಮಾನುಗಳನ್ನು ಸುಲಭವಾದ ದರಕ್ಕೆ ಮಾರಾಟಕ್ಕೆ ಕಳುಹಿಸುವುದಕ್ಕೆ ಟ್ರಾಂಲೈನುಗಳನ್ನು ಉಪಯೋಗಿಸುವುದಕ್ಕೂ ಸಹ ಏರ್ಪಾಟು ನಡೆಯುತ್ತಾ ಇದೆ. ಗಣಿ ಮತ್ತು ಭೂಗರ್ಭಶೋಧನ ಇಲಾಖಾ ಡೈರೆಕ್ಟರಾದ ಡಾ|| ಡಬ್ಲ್ಯು. ಎಫ್. ಸ್ಮಿತ್‌ರವರು ಅದರು ಮತ್ತು ಟಂಕ, ಇವುಗಳ ಕೆಲಸವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದಾರೆ. ಮುಖ್ಯವಾಗಿ ಬಾಬಾಬುಡರ್ನ ಗುಡ್ಡದ ಮೇಲಿರುವ ಕೆಮ್ಮಣ್ಣುಗುಂಡಿಯಿಂದ ಅದರನ್ನು ತರಬೇಕಾಗಿದೆ. ಫಾರೆಸ್ಟು ಟ್ರಾಂಲೈನನ್ನು ಬೇಗಬೇಗನೆ ಪೂರೈಸುತ್ತಿರುವುದಾಗಿದೆ. 1921ನೆಯ ಡಿಸಂಬರ್ ಮಾಹೆಯೊಳಗೆ ಸಾಮಾನುಸಾಗಿಸುವುದಕ್ಕೆ ಸುಮಾರು 50 ಮೈಲಿಯಷ್ಟು ಲೈನ್ ಸಿದ್ಧವಾಗುತ್ತದೆ ಎಂದು ನಿರೀಕ್ಷಣೆ ಇದೆ.

ಏಜಂಟರೊಂದಿಗೆ ಮಾಡಿಕೊಂಡಿರುವ ಕರಾರಿನಲ್ಲಿ ನಮೂದಾಗಿರುವ ದರಗಳ ಮೇರೆಗೆ ಸರ್ಕಾರದವರು ಕಬ್ಬಿಣದ ಕಾರ್ಖಾನೆಗೆ ಕಚ್ಚಾ ಸಾಮಾನುಗಳನ್ನು ಸರಬರಾಯಿ ಮಾಡಬೇಕಾಗಿದೆ. ಐದು ವರುಷಗಳ ಹಿಂದೆ ಇದ್ದ ಸ್ಥಿತಿಗತಿಗಳ ಮೇಲೆ ಈ ದರಗಳನ್ನು ಗೊತ್ತುಮಾಡಿತ್ತು. ಆಲಾಗಾಯ್ತು ಸ್ಥಿತಿಗತಿಗಳು ವಿಪರೀತ ಬದಲಾವಣೆಯಾಗಿ ಹಿಂದೆ ಮಾಡಲ್ಪಟ್ಟ ಲೆಕ್ಕಾಚಾರಗಳು ಬಹಳ ಮಟ್ಟಿಗೆ ವ್ಯತ್ಯಸ್ತವಾಗಿವೆ. ಕಾರ್ಖಾನೆಗೆ ಸರಬರಾಯಿ ಮಾಡಲ್ಪಡಬೇಕಾದ ದರಕ್ಕಿಂತಲೂ ಕಚ್ಚಾ ಪದಾರ್ಥಗಳ ಬೆಲೆಯು ಹೆಚ್ಚಿರುವುದಾಗಿ ಈಗ ಕಾಣಬರುತ್ತದೆ. ಈ ಕಾರ್ಖಾನೆಯಿಂದ ಬಂಡವಾಳದಮೇಲೆ ಸೇಕಡ 25ರಂತೆ ನಫೆ ಬರುವುದಾಗಿ ಮೊದಲು ಮಿ|| ಪೆರಿನ್‌ರವರಿಂದ ಅಂದಾಜು ಹಾಕಲ್ಪಟ್ಟಿತು. ಆದರೆ ಬಂಡವಾಳ ಹೆಚ್ಚಾಗಿ ಹಿಡಿಯುವುದರಿಂದಲೂ, ಕಚ್ಚಾ ಪದಾರ್ಥಗಳ ಕಿಮ್ಮತ್ತು ಏರಿರುವುದರಿಂದಲೂ, ಈ ನಫೆಯು ಬಹಳ ಮಟ್ಟಿಗೆ ಕಮ್ಮಿ ಬೀಳುವುದು. ಆದರೂ ಈ ಅಂಶಗಳನ್ನೂ ಇತರ ಎಲ್ಲಾ ಪ್ರತಿಕೂಲ ಸಂದರ್ಭಗಳನ್ನೂ ಗಣನೆಗೆ ತೆಗೆದುಕೊಂಡಾಗ್ಯೂ ನಮ್ಮ ಬಂಡವಾಳದಮೇಲೆ ಈಗಿನ ಅಂದಾಜಾ ಪ್ರಕಾರ ಸೇಕಡ 10ಕ್ಕೆ ಕಮ್ಮಿ ಇಲ್ಲದಂತೆ ನಫೆ ಬರಬಹುದೆಂದು ನಿರೀಕ್ಷಿಸಬಹುದು.

ಕೃಷ್ಣರಾಜಸಾಗರ ಮತ್ತು ಕಬ್ಬಿಣದ ಕಾರ್ಖಾನೆಗಳು ಹಿಂದೆ ಉಪಕ್ರಮಿಸಲ್ಪಟ್ಟ ಪ್ರಾಜೆಕ್ಟುಗಳಾಗಿವೆ. ಸಾಧ್ಯವಾದಷ್ಟು ಕ್ಷಿಪ್ರವಾಗಿ ಅವುಗಳನ್ನು ಮುಗಿಸತಕ್ಕದ್ದು ಯುಕ್ತವಾಗಿದೆ. ಅವುಗಳಿಂದ ವರಮಾನವು ಬರಬೇಕಾದರೆ ಹಾಗೆ ಮಾಡಿದಲ್ಲದೆ ವಿಧಿಯಿಲ್ಲ. ಬಹಳವಾಗಿ ಹಣಮುಟ್ಟಿಸಿ ಪ್ರಾರಂಭಿಸಿರುವ ಇಂತಹ ಕೆಲಸಗಳನ್ನು ಅರ್ಧಾಂಗವಾಗಿ ಬಿಟ್ಟು ಕಷ್ಟನಷ್ಟಗಳಿಗೆ ಗುರಿಯಾಗುವಹಾಗೆ ಮಾಡುವುದನ್ನಾಗಲಿ, ಅವುಗಳನ್ನು ಪೂರೈಸುವ ಕಾರ್ಯವನ್ನು ಸಾವಕಾಶಮಾಡಿ ಆಮೂಲಕ ಹುಟ್ಟುವಳಿಯಲ್ಲಿ ನಷ್ಟವಾಗುವಂತೆ ಮಾಡುವುದನ್ನಾಗಲಿ ಯಾರೂ ಒಪ್ಪಲಾರರೆಂದು ನಾವು ಭಾವಿಸುತ್ತೇವೆ.

ಹೊಸ ಸಾಲ.

ಈ ಪ್ರಾಜೆಕ್ಟುಗಳು ಬೇಗನೆ ಮುಗಿಯಬೇಕಾದರೆ ಹಣ ಬೇಕು. ಆ ಹಣ ಎಲ್ಲಿಂದಬರಬೇಕೆಂಬುವುದೇ ಈಗಿನ ವಿಚಾರವಾಗಿದೆ. ವರ್ಷೇವರ್ಷೇ ಹುಟ್ಟುವ ವರಮಾನದ ಶಿಲ್ಕಿನಲ್ಲಿ ಇಷ್ಟೊಂದು ಭಾರಿ ಮೊಬಲಗನ್ನು ಬಂಡವಾಳದ ಕೆಲಸಕ್ಕೆ ಒದಗಿಸುವುದು ಸಾಧ್ಯವೇ ಅಲ್ಲ. ಹಿಂದೆ ಇದ್ದಂತೆ ನಮ್ಮಲ್ಲಿ ಅಂತಹ ಶಿಲ್ಕು ಹಣವೂಸಹ ಇಲ್ಲ. ಈರೀತಿ ಸರ್‌ಪ್ಲಸ್ ಹುಟ್ಟುವಳಿಯಿಂದ ಲಾಭಕರವಾದ ಕೆಲಸಗಳನ್ನು ಮಾಡಿಸುವುದಕ್ಕೆ ಆಗದೇ ಇದ್ದ ಪಕ್ಷದಲ್ಲಿ ಜನರಿಂದ ಸಾಲ ತೆಗೆದು ಮಾಡಿಸುವುದೊಂದೇ ಉಪಾಯವಾಗಿದೆ.

1919-20ನೆಯ ವರ್ಷದ ಅಖೈರುವರೆಗೂ ಬಂಡವಾಳದ ಕಾಮಗಾರಿಗಳನ್ನು ಚಾಲ್ತಿ ಹುಟ್ಟುವಳಿಯ ಶಿಲ್ಕಿನಿಂದಲಾಗಲಿ ಅಥವಾ ಹೆಚ್ಚಾದ ನಗದು ಶಿಲ್ಕುಗಳಿಂದ ಪಡೆದ ಬಾಂಡುಗಳ ವಿಕ್ರಯದಿಂದಲಾಗಲಿ ಅಥವಾ ಈ ಎರಡರಿಂದಲೂ ಆಗಲಿ ನಡೆಯಿಸಿಕೊಂಡು ಬಂದದ್ದಾಯಿತು. ಈ ರೀತಿ ಕೆಲಸಗಳಿಗೆ ಹಣ ಒದಗಿಸುವುದು ಸುಲಭವಾಗಿಯೂ ಸರಾಗವಾಗಿಯೂ ಇದ್ದಿತು. ಚಾಲ್ತಿ ವರುಷ ಈ ಎರಡು ಮಾರ್ಗಗಳೂ ನಮಗೆ ಅನುಕೂಲವಾಗಲಿಲ್ಲ, ಆದರೆ ಹಿಂದೆಯೇ ಉಪಕ್ರಮಿಸಿದ ಪ್ರಾಜೆಕ್ಟುಗಳನ್ನು ಮುಗಿಸುವುದಕ್ಕೆ ವಿಶೇಷವಾಗಿ ಮೊಬಲಗು ಕೊಡಬೇಕಾಗಿ ಬಂದುದರಿಂದ ಸಾಲ ತೆಗೆಯುವುದು ಅತ್ಯವಶ್ಯಕವಾಯಿತು. ಬರುವ ವರ್ಷದಲ್ಲೂ ಇದೇರೀತಿ ಇರೋಣದರಿಂದ ಈಗ ಮುಂದುವರಿಯುತ್ತಿರುವ ಕೆಲಸಗಳನ್ನು ಮುಗಿಸುವುದಕ್ಕಾಗಿ ಮತ್ತೊಂದು ಸಾಲವು ಅತ್ಯವಶ್ಯಕವಾಗಿದೆ.

ನಾವು ಮೊದಲೇ ತಿಳಿಸಿರುವಂತೆ, ಹಾಲಿ ನಡೆಯುತ್ತಿರುವ ಕೆಲಸಗಳನ್ನು ಸಾಧ್ಯವಾದಷ್ಟು ಬೇಗನೆ ಮುಗಿಸಬೇಕೆಂಬುವುದರಲ್ಲಿ ಎಲ್ಲಿಯೂ ಭಿನ್ನಾಭಿಪ್ರಾಯವಿರಲಾರದು. ಈ ಉದ್ದೇಶವು ನೆರವೇರಬೇಕಾದರೆ ಈಗ ಸೂಚನೆ ಮಾಡುವ ಸಾಲಕ್ಕೆ ಜನರು ಸಂಪೂರ್ಣವಾದ ಪ್ರೋತ್ಸಾಹ ಕೊಡಬೇಕಾಗಿದೆ. ಸಮರ್ಪಕವಾಗಿ ನೆರವೇರುವುದಕ್ಕೆ ಅವಶ್ಯಕವಾದ ಕನಿಷ್ಠಾಂಶದ ಮೊಬಲಗಿಗೆ ಮಾತ್ರವೇ ಬಂಡವಾಳದ ಕಾಮಗಾರಿಗಳ ವಿವರವನ್ನು ತಯಾರ್ ಮಾಡಿರುವುದಾಗಿದೆ. ಇದಕ್ಕಾಗಿ 108 ಲಕ್ಷ ರೂಪಾಯಿಬೇಕು. ಆದ್ದರಿಂದ ಸುಮಾರು ಒಂದುಕೋಟಿ ರೂಪಾಯಿ ಸಾಲ ತೆಗೆಯಬೇಕೆಂದು ಯೋಚಿಸಿದೆ. ಹಿಂದಿನ ಸಾಲದ ವಿಷಯದಲ್ಲಿ ತೋರ್ಪಡಿಸಿದಂತೆಯೇ ಮುಂದಿನ ಸಾಲದ ವಿಷಯದಲ್ಲಿಯೂ ಸಹ ತಾವುಗಳು ಶ್ರದ್ಧೆಯನ್ನು ತೋರ್ಪಡಿಸಿ ಸಹಾಯಮಾಡುವಿರೆಂದು ಈ ಸಂದರ್ಭದಲ್ಲಿ ನಾವು ಕೋರುತ್ತೇವೆ. ಈ ಸಾಲಕ್ಕೆ ಕೊಡುವಹಣಕ್ಕೆ ಸಂಸ್ಥಾನದ ವರಮಾನವು ಸಂಪೂರ್ಣವಾಗಿ ಗುರಿಯಾಗಿರುವುದೇ ಹೊರತು ಇದರಪಾವತಿಯು ಈ ಹಣದಿಂದ ನಡೆಯುವ ಕಾಮಗಾರಿಗಳ ಲಾಭನಷ್ಟಗಳಿಗೆ ಅಧೀನವಾಗಿರುವುದಿಲ್ಲ. ಆದಕಾರಣ ಈ ಸಾಲಕ್ಕೆ ಚಂದಾ ಕೊಡುವವರ ಹಣಕ್ಕೆ ಯಾವ ವಿಧವಾದ ಅಪೋಹವೂ ಇಲ್ಲ. ಈ ಸಾಲದ ಷರತ್ತುಗಳು ಕ್ಷಿಪ್ರದಲ್ಲಿಯೇ ಪ್ರಕಟಿಸಲ್ಪಡುತ್ತವೆ. ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಈ ಸಾಲಕ್ಕೆ ಪೂರ್ತಿಯಾಗಿ ಹಣ ಸೇರುವಂತೆ ಸಹಾಯಮಾಡುವುದೇ ಅಲ್ಲದೆ ಸಂಸ್ಥಾನದ ಸಾಧನಸಂಪತ್ತುಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಸರ್ಕಾರದವರಿಗೆ ಸಹಾಯಕರಾಗಿ ನಿಂತು ದೇಶಾಭಿಮಾನವನ್ನು ವ್ಯಕ್ತಗೊಳಿಸತಕ್ಕದ್ದು ತಮ್ಮ ಕರ್ತವ್ಯವೆಂತ ಭಾವಿಸುವರೆಂದು ನಾವು ಕುತೂಹಲದಿಂದ ನಿರೀಕ್ಷಿಸುತ್ತೇವೆ.

ಎಂ. ಕಾಂತರಾಜ ಅರಸ್,
ಮೈಸೂರು ಸಂಸ್ಥಾನದ ದಿವಾನರವರು.

1919-20ಕ್ಕೆ ಆಖೈರಾದ ಐದುವರ್ಷಗಳ ಸಂಸ್ಥಾನದ ಆಯವ್ಯಯದ ತಃಖ್ತೆ.

	1915-16	1916-17	1917-18	1918-19	1919-20
	ರೂ.	ರೂ.	ರೂ.	ರೂ.	ರೂ.
ಹುಟ್ಟುವಳಿ	273,97	290,04	325,21	294,24	313,12
ಖರ್ಚು	221,93	244,35	256,53	280,27	315,37
ಸಿಂಕಿಂಗ್‌ಫಂಡ್	1,33	1,33	1,33	1,33	1,33
ಕ್ಷಾಮನಿವಾರಣೆ ಫಂಡು	5,00	5,00	5,00	5,00	5,00
ಒಟ್ಟು ಖರ್ಚು	228,26	250,68	262,86	295,60	321,70
ಸರ್‌ಪ್ಲಸ್	45,71	48,36	52,39	....	....
ಡಿಫಿಸಿಟ್	....	....	....	1,36	8,58

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈ ಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಡಬ್ಬಿ 1 ಕ್ಕೆ 1—4—0

39 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ. ಸಟೀಕ ದೀಕ್ಷಾವಿಧಿ. ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

39 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512 ಪಾರ್ಕ್‌ಟೌನ್ ಮದರಾಸು.

ರಕ್ತಶೋಧಕ ! ಮನೋಲ್ಲಾಸಿತವೆಂಟ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 37

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ಥರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಳಿಗೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಳೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆತ್ತೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ, ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಸ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ ನೆಯ ಇಸವಿ ಜೂನ್ ತಾ|| ೨೬ ರಿಂದ ೧೯೨೧ ನೆಯ ಜುಲೈ ತಾ|| ೨ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಜ್ಯೇಷ್ಠ ಬಹುಳ ಷಷ್ಠಿಯಿಂದ ಜ್ಯೇಷ್ಠ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾಸ
26	ಭಾನು	ಷಷ್ಠಿ	45-12	ಶತ	27-21	13
27	ಸೋಮ	ಸಪ್ತ	48-37	ಪೂಭಾ	32-35	14
28	ಮಂಗಳ	ಅಷ್ಟ	50-54	ಉಭಾ	36-43	15
29	ಬುಧ	ನವ	51-40	ರೇವ	39-33	16
30	ಗುರು	ದಶ	51-19	ಅಶ್ವಿ	41-10	17
1	ಶುಕ್ರ	ಏಕಾ	49-34	ಭರ	41-37	18
2	ಶನಿ	ದ್ವಾದ	46-24	ಕೃತ್ತಿ	40-51	19

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞಸಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೮, ಮೈಸೂರ್ ಸ್ಟಾರ್ ಸರ್ ೧೯೨೧ ನೇಯ ಇಸವಿ ಜುಲೈ ತಾರೀಖು ೩ ನೇಯ ಭಾನುವಾರ (ಸಂಚಿಕೆ ೨೬

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾನುಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
25 ಮೈಸೂರು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಳೆಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ „ 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
10 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೩—೦
ಶಿವಪೂಜಾವಿಧಿ।	೧— ೦—೦
ಚಾರುಶೀಲೆಚರಿತ್ರೆ	೦—೧೦—೦
ಹರಿಹಾಸಿ	೦— ೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕಾ|| ಸಾ|| ಆಣೆ ೧೨.

ಶ್ರೀಹನುಮಂತನಿಗೆ-ವೀರಭದ್ರನಿಂದ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫು||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

ಶ್ರೀ ಶಿವಯೋಗಿಸಂಘ :—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ :—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮ × ೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ :—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡದ ಈ ಫೋಟೊ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ :—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ :—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫು|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಆಣೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ :—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಆದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ :—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫು|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೊಗಳು ಕೈ|| ವಾ|| ರಾಜಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣಾ ಕುಂಬಾರ ಕೋಟ್ಯಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಿಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪೂರು ಸಿದ್ಧರಾಮೇಶ್ವರ, ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ|| ಗು|| ಚಿತ್ರದುರ್ಗದ ಮಹಾಸ್ವಾಮಿ, ಅಥಣಿ ಶಿವಯೋಗಿಗಳು, ಹಾನಗಲ್ಲ ಸ್ವಾಮಿಗಳು, ಸೊಲ್ಲಾಪೂರದ ಪ್ರಸಿದ್ಧ ನಾಲತ್ತವಾಡದ ಶರಣರು, ಬಿಳೂರ ಸ್ವಾಮಿಗಳು, ಕಮತಗಿ ಹುಚ್ಚೇಂದ್ರಸ್ವಾಮಿಗಳು, ಸದ್ಯಕ್ಕೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರ ಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ|| ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ|| ಬ|| ವಾರದ ಮಲ್ಲಪ್ಪನವರು, ಮುಂತಾದ ಫೋಟೊಗಳು ಶಿಗುತ್ತವೆ. ಕ್ರಯ ಫು|| ಸಾ|| ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

3 ವಿಳಾಸ—ಗಂಗಪ್ಪಾ ಜೇರಿಗೆ ಫೋಟೊ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0

ಬಿಡಿ ಮಣಿಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
19 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪವತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 8

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಪಿ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಶಿರ್ಸಿ, ಉತ್ತರಕನ್ನಡಾ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜುಲೈ ತಾ|| ೩ ನೆಯ ಭಾನುವಾರ.

ಇನ್ನೂ ಸರ್ಕಾರದ ಉಪೇಕ್ಷೆಯೆ?

೧೯೧೮ ನೆ ವರ್ಷದಲ್ಲಿ ಶ್ರೀಮನ್ಮಹಾರಾಜರವರಿಗೆ ಹಿಂದುಳಿದ ಜನವರ್ಗಗಳ ಪ್ರತಿನಿಧಿಗಳು ವಿಜ್ಞಾಪನ ಪತ್ರವನ್ನು ಪ್ರತ್ಯಕ್ಷವಾಗಿ ಸಮರ್ಪಿಸಿಕೊಂಡಾಗ್ಗೆ ಪ್ರಭುಗಳು ಕೊಟ್ಟ ಪ್ರತ್ಯುತ್ತರದಲ್ಲಿ ''ಉಳಿದ ಜನವರ್ಗಗಳವರು ಎಷ್ಟು ರಾಜಭಕ್ತಿಯನ್ನು ಹೊಂದಿರುವರೋ ಬ್ರಾಹ್ಮಣರೂ ಅಷ್ಟು ಭಕ್ತಿಯನ್ನೇ ಹೊಂದಿದ್ದಾರೆ. ನನ್ನ ಸಂಸ್ಥಾನದ ಅಭಿವೃದ್ಧಿಯ ನಿಮಿತ್ತವಾಗಿಯೂ ನನ್ನ ಮನೆತನದ ಅಭಿವೃದ್ಧಿ ನಿಮಿತ್ತವಾಗಿಯೂ ಅವರು ಇದುವರೆಗೂ ಮಾಡಿದ ಮತ್ತು ಮುಂದೆ ಮಾಡುವ ಕೆಲಸವನ್ನು ನಾನು ಮರೆಯಲಾರೆ. ಹಿಂದೆ ಬಿದ್ದುಹೋಗಿರುವ ತರಗತಿಗಳನ್ನು ವೃದ್ಧಿಗೆ ತರುವುದಕ್ಕಾಗಿ ನನ್ನ ಪ್ರಭುತ್ವದವರು ಸಾಧ್ಯವಾದಮಟ್ಟಿಗೂ ಪ್ರಯತ್ನಿಸುತ್ತಿದ್ದಾರೆ. ಇನ್ನು ಮುಂದೆ ಅದಕ್ಕಾಗಿ ಹಿಂದೆ ಮಾಡಿರುವ ಪ್ರಯತ್ನಗಳಿಗಿಂತಲೂ ಹೆಚ್ಚಾದ ಪ್ರಯತ್ನಗಳು ಮಾಡಲ್ಪಡುವುವು......ನಿಮ್ಮಿಮ್ಮ ಇಷ್ಟಾರ್ಥಸಾಧನೆಯಲ್ಲಿ ಪ್ರಜೆಗಳ ಐಕಮತ್ಯಕ್ಕೆ ಭಂಗಕರವಾದ ಪ್ರಯತ್ನಗಳನ್ನು ಯಾರೂ ಮಾಡಲಾಗದು. ಬ್ರಾಹ್ಮಣರೂ ಕೂಡ ಉಳಿದವರೊಡನೆ ಭ್ರಾತೃಭಾವವನ್ನು ಅಭಿವೃದ್ಧಿಪಡಿಸಿಕೊಂಡು ಸಹನೆಯನ್ನು ತಾಳಿ ನನ್ನ ಮನೋಭೀಷ್ಟವನ್ನು ನೆರವೇರಿಸುವುದಕ್ಕೆ ಸಹಾಯವಾಗಿ ಉಳಿದಜನವರ್ಗದ ಆಶೋತ್ತರಗಳಿಗೆ ಯಾವ ಆತಂಕವನ್ನೂ ಉಂಟುಮಾಡದೆ ಇರುವವರಾಗಲೆಂದು ಕೋರುತ್ತೇನೆ.'' ಎಂದು ಅಪ್ಪಣೆಕೊಡಿಸಿದ್ದರು. ಬ್ರಾಹ್ಮಣವರ್ಗದಲ್ಲಿ ತಲೆಯೆತ್ತಿಕೊಂಡಿರುವ ಕೆಲವರು ಈಗ ತಮ್ಮ ವರ್ಗದವರ ಮೇಲೆ ಪ್ರಭುಗಳು ಇಟ್ಟಿದ್ದ ಭರವಸೆಯನ್ನೂ ವಿಶ್ವಾಸವನ್ನೂ ಕೆಡಿಸಿ, ಅವರ ನಿರೀಕ್ಷಣೆಯನ್ನೆಲ್ಲಾ ಮಣ್ಣುಗೂಡಿಸುವಂಥ ಕೆಲಸವನ್ನು ಮಾಡಿ, ಆ ವರ್ಗಕ್ಕೆಲ್ಲಾ ಕೆಟ್ಟ ಹೆಸರನ್ನು ತಂದು, ಅವರಲ್ಲಿ ದೇಶದ ಜನರ ಸೌಹಾರ್ದವೆಲ್ಲಾ ತಪ್ಪಿಹೋಗಿ, ಪರಸ್ಪರ ವೈಮನಸ್ಯಗಳು ಬೆಳೆಯುವಂಥ ರೀತಿಯನ್ನು ಮಾಡುತ್ತಲಿರುವುದು ಬಹಳ ಅನ್ಯಾಯವಾಗಿದೆ.

ದೇಶದಲ್ಲಿ ಬೇಗೆಯನ್ನು ಹೊತ್ತಿಸಲಿಕ್ಕೆ ಸಾಹಸಪಡುತ್ತಿರುವ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳ ಬೊಬ್ಬೆಯನ್ನು ಪ್ರಭುತ್ವದವರು ಎಳಸಿನಲ್ಲೇ ಚಿಗುಟದೆ ಉಪೇಕ್ಷಿಸುತ್ತಾ ಬಂದುದರಿಂದ, ತಮ್ಮ ಕೈಬಾಯಿಗೆ ತಡೆಯಿಲ್ಲವೆಂದು ತಿಳಿದು ಅತ್ಯುಚ್ಛೃಂಖಲವಾಗಿ ಪ್ರವರ್ತಿಸುವುದಕ್ಕೆ ಮತ್ತಷ್ಟು ಅವಕ್ಕೆ ದಾರಿಮಾಡಿಕೊಟ್ಟಂತಾಗಿರುವುದು. ಪ್ರಭುತ್ವದವರ ಮುದ್ರಣಶಾಸನವು ಮೂಲೆಮುಟ್ಟಾಗಿ ಬಿದ್ದಿದೆ. ಶಾಂತಿಭಂಗಕರವಾದ ಪ್ರಯತ್ನಗಳೂ ಲೇಖನಗಳೂ ನಿರರ್ಗಳವಾಗಿ ಸಾಗುತ್ತಿವೆ. ಹಿಂದಣ ತಟಸ್ಥಭಾವವನ್ನು ಗೌರ್ನಮೆಂಟಿನವರು ಈಗಲೂ ಪರಿತ್ಯಜಿಸದಿದ್ದರೆ ತೃಣದಿಂದ ಪರಿಹಾರವಾಗುತ್ತಿದ್ದುದಕ್ಕೆ ಮುಂದೆ ಕೊಡಲಿಯನ್ನೇ ಉಪಯೋಗಿಸಬೇಕಾಗಿ ಬರುವುದು ಖಂಡಿತ.

ದೇಶದಲ್ಲಿ ೧೦೦ ಕ್ಕೆ ೯೮ ರಷ್ಟು ಭಾಗದ ಪ್ರಜೆಗಳೆಲ್ಲಾ ವಿದ್ಯೆ ವಿವೇಕ ಅಧಿಕಾರ ರಾಜಕೀಯ ಸಂಬಂಧ ಮೊದಲಾದುವುಗಳಲ್ಲಿ ಹಿಂದೆ ಬಿದ್ದಿರುವುದರಿಂದ ಅವುಗಳಲ್ಲಿ ಅವರನ್ನು ಮುಂಬರಿಸುವುದು ಅವಶ್ಯಕವೆಂದು ಶ್ರೀಮನ್ಮಹಾರಾಜರು ನಿರ್ಧಾರಮಾಡಿ, ಅದನ್ನು ನೆರವೇರಿಸಲಿಕ್ಕಾಗಿ ಮಾಡಿದ ಅಪ್ಪಣೆಯಪ್ರಕಾರ ಅವರಸರ್ಕಾರದವರು ನಡೆಸುತ್ತಿರುವ ಏರ್ಪಾಟುಗಳಲ್ಲಿ ಕೆಲ ಬ್ರಾಹ್ಮಣನಾಮಧಾರಿಗಳಿಗೆ ಸೈರಣೆಯಿಲ್ಲ. ಇವೆಲ್ಲಾ ಅವರ ಕಣ್ಣಿಗೂ ಕರುಳುಗಳಿಗೂ ಮುಳ್ಳು ಚುಚ್ಚಿದಂತೆ ಆಗಿವೆ. ಪರರ ಉತ್ಕರ್ಷವನ್ನು ನೋಡಿ ಸೈರಿಸದಿರುವ ದುರ್ಗುಣವನ್ನು ಬ್ರಾಹ್ಮಣವರ್ಗಕ್ಕೆ ಆವೇಶಗೊಳಿಸುವಲ್ಲಿ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳು ಪಟ್ಟಕಟ್ಟಿಕೊಂಡಿವೆ. ಹಿಂದುಳಿದವರಿಗೆ ಪ್ರತ್ಯೇಕ ವಿದ್ಯಾರ್ಥಿವೇತನಗಳನ್ನು ಕೊಡಲು ಏರ್ಪಾಟಾದಾಗ ಇವುಗಳು ಶಂಖನಾದ್ಯಕ್ಕೆ ಮೊದಲು ಮಾಡಿದುವು. ವಿದ್ಯಾಭ್ಯಾಸದ ಮೆಮೊರಾಂಡಮು ಸರ್ವಜನ ವಿದ್ಯಾಪ್ರಸಾರಕ್ಕೆ ಮುಖ್ಯಸಾಧಕವಾಗಿ ತಲೆದೋರಿದ ಕೂಡಲೇ ಇವುಗಳ ಎದೆಯೊಡೆದುಹೋಗಿ ದಿಕ್ತಟವೆಲ್ಲಾ ಮೊಳಗುವಂತೆ ಬೊಬ್ಬೆಯಿಕ್ಕಿದುವು. ಅದರ ಮೇಲೆ ಮಿಲ್ಲರ್ ಸಂಘದ ವರದಿಯು ಹೊರಬಿದ್ದಮೇಲಂತೂ ತಮ್ಮ ಸರ್ವಸ್ವವೂ ಮುಳುಗಿಹೋದವರಂತೆ ಭೂಮ್ಯಾಕಾಶಗಳನ್ನು ಒಂದುಮಾಡಿಸುವಹಾಗೆ ಈಗ ವಿಪ್ರಲಾಪ ಮಾಡುತ್ತಿವೆ.

ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಬ್ರಾಹ್ಮಣ ಸಭಿಕರುಗಳು ಸಭಾಕಾರ್ಯವನ್ನು ತೃಣೀಕರಿಸಿ ಕುಳಿತುಕೊಂಡುದಕ್ಕೆ ಮಿಲ್ಲರ್ ಸಂಘದ ವರದಿಯಮೇಲೆ ಅವರಿಗೆ ಹುಟ್ಟಿದ ಅಸಹನೆಯೇ ಕಾರಣವೆಂದೂ, ಸರ್ಕಾರದ ಸರ್ಕ್ಯುಲರು ಪ್ರಧಾನಕಾರಣವಲ್ಲವೆಂದೂ ಈಗ ವ್ಯಕ್ತಪಟ್ಟಿದೆ. ಪ್ರಜಾವರ್ಗದಲ್ಲಿ ಕೇವಲ ೨ ಲಕ್ಷ ಸಂಖ್ಯಾಕರಾಗಿರುವ ಜನರ ಭಾಗಕ್ಕೆ ಸರ್ಕಾರದ ಅಧಿಕಾರಸ್ಥಾನಗಳಲ್ಲಿ ಅರ್ಧಭಾಗವನ್ನುಳಿಯಿಸಿ, ಉಳಿದ ೫೮ ಲಕ್ಷ ಪ್ರಜೆಗಳಲ್ಲಿ ವಿದ್ಯಾದಿಸಾಮರ್ಥ್ಯಸಂಪನ್ನರಾಗಿ ಬಂದವರ ಭಾಗಕ್ಕೆಲ್ಲಾ ಅರ್ಧಭಾಗವನ್ನು ಕೊಡಲು ಸರ್ಕಾರದವರು ಮಾಡಿದ ತೀರ್ಮಾನವನ್ನು ಕೂಡ ಈ ಜನರು ಸೈರಿಸದೆ ಹೋದಮೇಲೆ, ದೇಶದಪ್ರಜೆಗಳಲ್ಲಿ ಇವರಿಗೆ ಎಷ್ಟುಮಟ್ಟಿನ ಅಭಿಮಾನವೂ ಸೌಹಾರ್ದವೂ ಸಹೋದರಭಾವವೂ ಅಭ್ಯುದಯ ಚಿಂತೆಯೂ ಇವೆಯೆಂಬುದನ್ನು ಬಿಚ್ಚಿ ಹೇಳಬೇಕಾಗಿಲ್ಲ. ಇಷ್ಟು ಕಾಲವೂ ದೇಶದ ಸರ್ವಾಧಿಕಾರಗಳೂ ಇವರುಗಳ ಹಸ್ತಗತವಾಗಿಯೇ ಇದ್ದರೂ, ಮೂಗುದನಗಳಂತೆ ಸೈರಿಸಿಕೊಂಡುಹೋಗುತ್ತಿದ್ದ ಆ ಇತರ ಜನವರ್ಗಗಳೇ ನಿಜವಾಗಿಯೂ ಶಾಂತರೂ ಸೌಜನ್ಯಯುಕ್ತರೂ, ಸದ್ಗುಣಭರಿತರೂ, ಉತ್ತಮವರ್ಣೀಯರೂ ಎಂದು ಹೇಳಿಸಿಕೊಳ್ಳಲಿಕ್ಕೆ ಅರ್ಹರು. ಆ ಇತರ ಜನವರ್ಗಗಳವರಲ್ಲಿ ಕಂಡುಬಂದ ಸೈರಣೆ ಮೊದಲಾದ ಸದ್ಗುಣಗಳಲ್ಲಿ ಒಂದು ಶತಾಂಶವೂ ಈ ಜನರಲ್ಲಿ ಕಂಡುಬರಲಿಲ್ಲ. ನಮ್ಮ ಶ್ರೇಯಕಾಂಕ್ಷಿಗಳೂ ನಮ್ಮ ಹಿತಚಿಂತಕರೂ ನಮ್ಮ ಅಭ್ಯುದಯದಲ್ಲಿ ಪ್ರೇಮವುಳ್ಳವರೂ ಎಂದು ಆ ಇತರ ಜನವರ್ಗಗಳವರು ಇವರಲ್ಲಿ ಇದುವರೆಗೂ ಇಟ್ಟಿದ್ದ ವಿಶ್ವಾಸವು ತಪ್ಪಾದುದೂ ವ್ಯರ್ಥವಾದುದೂ ಕೇವಲ ಭ್ರಮಾತ್ಮಕವಾದುದೂ ಎಂದು ಅವರುಗಳು ಈಗ ತಿಳಿದುಕೊಳ್ಳುವಂತಾಯಿತು.

ಹಿಂದುಳಿದ ಜನವರ್ಗಗಳವರ ಉದ್ಧಾರಕ್ಕೆ ತ್ರಿಕರಣಪೂರ್ವಕವಾಗಿ ಈಗಣ ಪ್ರಭುತ್ವದವರು ಪ್ರೋತ್ಸಾಹಮಾಡುತ್ತಿರುವ ಕಾರಣದಿಂದಲೇ ಇದನ್ನು ಮೂಲೋತ್ಪಾಟನಮಾಡಿ ಮುಗಿಸಬೇಕೆನ್ನುವಷ್ಟು ಆಗ್ರಹವನ್ನು ಈ ಕ್ರೋಧಾವಿಷ್ಟ ಜನರು ತೋರಿಸುತ್ತಿದ್ದಾರೆ. ದಿವಾನ್ ಸರ್ ಕಾಂತರಾಜ ಅರಸಿನವರನ್ನು ಬ್ರಹ್ಮದ್ವೇಷಿಗಳೆಂದು ಘಂಟಾಘೋಷವಾಗಿ ನಿಂದಿಸುತ್ತಿದ್ದಾರೆ. ಸರ್ಕಾರದ ಚೀಫ್ ಸೆಕ್ರೆಟರಿಯವರನ್ನು, ತೈಮೂರ್ಲ್ಲಂಗ್, ನಾದರ್ಷಾ, ಹಂಫ್ರೀಸ್ ಮೊದಲಾದವರಿಗೆ ಸಮಾನರೆಂದು ದೂಷಿಸುತ್ತಿದ್ದಾರೆ. ಇಂಥ ಬೈಗುಳಗಳಿಗೆ ಸಂಪದಭ್ಯುದಯ ಪತ್ರಿಕಾಕರ್ತರು ಪ್ರೋತ್ಸಾಹ ಕೊಟ್ಟು ಕುಣಿಸುತ್ತಿದ್ದಾರೆ. ಈಗಣ ದಿವಾನರು ಪ್ರಭುತ್ವದಲ್ಲಿ ಶ್ರೀಮನ್ಮಹಾರಾಜರ ಪ್ರತಿನಿಧಿಗಳಾಗಿರುವುದು ಮಾತ್ರವೇ ಅಲ್ಲದೆ ಶ್ರೀಮನ್ಮಹಾರಾಜರ ಸೋದರಮಾವಂದಿರು, ಮತ್ತು ಭಾವನವರು. ಹೀಗಿದ್ದರೂ ಅಂಥವರನ್ನು ಕೂಡ ಬಾಳಲೀಸಗೊಡಬಾರದೆಂದು ಈ ಜನರು ಇಷ್ಟೊಂದು ಕಾರ್ಯಭಾರ ಮಾಡುತ್ತಿರುವಾಗ ಇನ್ನು ಇತರ ಜನವರ್ಗಗಳವರು ದಿವಾನ್ ಪದವಿಯಂಥ ಮುಖ್ಯೋದ್ಯೋಗಕ್ಕೆ ಬಂದರೆ ಎಷ್ಟು ಚಿಟಿಕುಮುಳ್ಳಾಡಿಸಬಹುದು! ಇವರ ಮನೋಭಾವಗಳು ಎಷ್ಟು ಹೀನ ಕ್ರೂರ ವಿಷಮಯವಾಗಿವೆಯೆಂಬುದು ಈಗ ಸರ್ವರಿಗೂ ಸುವ್ಯಕ್ತವಾಗುತ್ತಿರುವುದು.

ವಿಚಾರಮಾಡಿ ನೋಡಿದರೆ ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರಿ ಅಪ್ಪಣೆಯಿಂದ ಹಿಂದುಳಿದ ಜನವರ್ಗಗಳವರಿಗೆ ಉಂಟಾಗುವ ಸೌಭಾಗ್ಯವು ಅಷ್ಟರಲ್ಲೇ ಇದೆ. ಈಗಲೇ ಸರ್ಕಾರದ ಉದ್ಯೋಗಗಳಲ್ಲಿ ೧೦೦ ಕ್ಕೆ ೩೦ ರಷ್ಟು ಅವರುಗಳಿದ್ದಾರೆ. ಈ ಅಪ್ಪಣೆಯು ಹೊಸದಾಗಿ ಹುಟ್ಟದಿದ್ದರೂ ದಿನಕ್ರಮೇಣ ಅವರ ಸಂಖ್ಯೆಯು ಹೆಚ್ಚೇ ಹೆಚ್ಚುತ್ತಿದ್ದಿತು. ಈಗಣ ಅಪ್ಪಣೆಯಿಂದ ಪ್ರಭುತ್ವದವರು ಹಿಂದುಳಿದ ಜನವರ್ಗಗಳವರಿಗೆ ಅವರ ಸಂಖ್ಯಾನುಗುಣವಾದಷ್ಟು ಸ್ಥಾನಗಳನ್ನೇನೂ ಕೊಡುವುದಿಲ್ಲ. ಅಲ್ಲದೆ ವಿದ್ಯಾದಿಯೋಗ್ಯತಾಸಂಪನ್ನರಲ್ಲದವರಿಗೂ ಕೂಡ ಕೇವಲ ಅಭಿಮಾನವೊಂದರಿಂದಲೇ ಅಧಿಕಾರವನ್ನೇನೂ ಕೊಡುವುದಿಲ್ಲ. ಸರ್ಕಾರದ ಅಧಿಕಾರಗಳನ್ನು ಮುಂಬರಿದ ಜನರು ಪಡೆದುಕೊಳ್ಳಲಿಕ್ಕೆ ಎಷ್ಟು ಬಾಧ್ಯತೆಯನ್ನು ಪಡೆದಿರುವರೋ ಅಷ್ಟು ಬಾಧ್ಯತೆಯು ಇತರ ಜನರಿಗೂ ಇದ್ದೇ ಇರುವುದು. ಮುಂಬರಿದವರಿಗೆ ಮಾತ್ರ ಹಕ್ಕಿನ ಹಪ್ಪೋಡು ಇತರರಿಗೆ ದಯಾಧರ್ಮಭಿಕ್ಷವೆಂಬುದೇನೂ ಇಲ್ಲ. ಇತರರು ಇದುವರೆಗೂ ವಿದ್ಯೆಯ ಕಡೆಗೆ ಹೆಚ್ಚು ಗಮನಕೊಡದೆ ಇದ್ದರು. ಇನ್ನು ಮೇಲೆ ತಕ್ಕಷ್ಟು ಗಮನಕೊಡುತ್ತಾರೆ. ಯೋಗ್ಯತೆಯನ್ನು ಸಂಪಾದಿಸಿಕೊಂಡು ತಮ್ಮ ಹಕ್ಕನ್ನು ತಾವು ನ್ಯಾಯದಿಂದಲೂ ಸಾಮರ್ಥ್ಯದಿಂದಲೂ ಅವರುಗಳು ಅನುಭವಿಸುತ್ತಾರೆ. ಮಿಲ್ಲರ್ ಸಂಘದ ವರದಿಯ ಮೂಲಕ ಮಾಡಿಕೊಟ್ಟಿರುವ ಸೌಲಭ್ಯಗಳೂ ಕೂಡ ಅಪೂರ್ಣವೂ ಪಕ್ಷಪಾತಮಯವೂ ಆಗಿರುವುದೆಂದು ತೋರಿಸಿಕೊಡುತ್ತಾರೆ. ಅಲ್ಲದೆ ತಾವು ಇದುವರೆಗೆ ಅನುಭವಿಸುತ್ತ ಬಂದ ಕೃಷಿ ವಾಣಿಜ್ಯ ಶಿಲ್ಪಾದಿ ವೃತ್ತಿಗಳಿಗೆ ಮುಂಬರಿದ ಜನರುಗಳು ಬರದಂತೆ ಅವರು ತಡೆಯನ್ನೇನೂ ಕಲ್ಪಿಸಿಲ್ಲ; ಈಗಲೂ ಕಲ್ಪಿಸುವವರಲ್ಲ; ಅದು ತಮ್ಮಗಳಿಗೆ ಮಾತ್ರ ಹಪ್ಪೋಡಾಗಿ ಬಂದ ವೃತ್ತಿಯೆಂದು ತಿಳಿದು, ಇತರರುಗಳನ್ನು ಅವುಗಳಿಗೆ ಬರಬಾರದೆಂದು ಹೇಳುವವರೂ ಅಲ್ಲ; ಬರಲು ಉದ್ಯುಕ್ತರಾದವರನ್ನು ಕಂಡು ಬಾಯ್ಬಿಡುಕೊಳ್ಳುವವರೂ ಅಲ್ಲ. ಹೀಗಿರುವಾಗ ಸರ್ಕಾರದುದ್ಯೋಗಗಳಿಗೆ ಇತರರು ಬಂದರೆ ಅದಕ್ಕಾಗಿ ಈ ಮುಂಬರಿದವರು ಎದೆಬಿಡುಕೊಳ್ಳಬೇಕಾದುದೇನು? ಅವು ಇವರುಗಳಿಗೆ ಮಾತ್ರವೇ ಶಾಸನದ ಮೂಲಕ ಬಂದ ಹಕ್ಕುದಾರಿಯ ಕಸಬೆ?

ಮುಖ್ಯವಾಗಿ ಪರೋತ್ಕರ್ಷಸಹನೆ ವಿಶ್ವಾಸ ಪರಸ್ಪರ ಪ್ರೀತಿ ಸೌಹಾರ್ದ ಮೊದಲಾದ ಗುಣಗಳು ವಿಶೇಷವಾಗಿರಬೇಕಾದ ಈ ಮುಂಬರಿದ ವಿದ್ಯಾಧಿಕ ಜನರೇ ತಮ್ಮ ಸಹೋದರ ಪ್ರಜೆಗಳ ಏಳ್ಗೆಯನ್ನು ಸೈರಿಸಲಾರದೆ ಅಸೂಯೆಪಟ್ಟು ಅವರನ್ನೂ ಅವರ ಮೇಲೆ ಅಭಿಮಾನವನ್ನು ತೋರಿಸುವ ಸರ್ಕಾರವನ್ನೂ ಮಚ್ಚರಿಸಿ ಅವರುಗಳಿಗೆ ಯಾವುದಾದರೂ ತೆರದ ಹಾನಿಯನ್ನುಂಟುಮಾಡಬೇಕೆಂದು ಬದ್ಧಸಂಕಲ್ಪರಾಗಿರುವವರಾದರೆ ಇಂಥ ದುಷ್ಟಸಂಕಲ್ಪವು ಅವರಿಗೂ ದೇಶಕ್ಕೂ ಎಂದಿಗೂ ಶಾಂತಿಸೌಖ್ಯಗಳನ್ನುಂಟುಮಾಡಲಾರವು. ಜತೆಯವನು ಅಸೂಯೆಯಿಂದ ಮಚ್ಚರಿಸುವುದನ್ನು ಕಂಡು ಉಳಿದವರು ಸುಮ್ಮನಿರುವುದು ಎಂದಿಗೂ ಸಾಧ್ಯವಲ್ಲ. ಇದನ್ನು ಗೌರ್ನಮೆಂಟಿನವರು ದೂರವಾಗಿ ಪರ್ಯಾಲೋಚಿಸಿ, ದೇಶದ ಕ್ಷೇಮಕ್ಕೋಸ್ಕರವಾಗಿ ತಕ್ಕ ಉಪಾಯವನ್ನು ಕೈಕೊಳ್ಳದಿದ್ದರೆ ಮುಂದಣ ಅನರ್ಥಕ್ಕೆ ಅವರೂ ಬಾಧ್ಯರಾಗುವರು.

ಮೈಸೂರಿನ ಸದ್ಯಸ್ಸ್ಥಿತಿ ಮತ್ತು ಹಿಂದೂಪತ್ರಿಕೆ.

ಮದರಾಸಿನ ಹಿಂದೂಪತ್ರಿಕೆಗೆ ಮ|| ಸೆಟ್ಲೂರ್‌ರವರು ಮೈಸೂರು ರಾಜ್ಯಭಾರದ ವಿಷಯವಾಗಿ ೨-೩ ಲೇಖನಗಳನ್ನು ಬರೆದಿರುವರು. ಈಸಲದ ಪ್ರಜಾಪ್ರತಿನಿಧಿಸಭೆಯಲ್ಲಿ ಬ್ರಾಹ್ಮಣಪ್ರತಿನಿಧಿಗಳು ಆಚರಿಸಿದ ನಡೆಯನ್ನು ಕುರಿತೂ, ಅವರುಗಳು ಸಭೆ ಮುಗಿದನಂತರ ಪ್ರತ್ಯೇಕ ಸಭೆಗೂಡಿ ಮಾಡಿದ ನಿರ್ಧಾರಗಳಗಳನ್ನು ಕುರಿತೂ ಅದೇ ಪತ್ರಿಕೆಯು ಕಳೆದವಾರದಲ್ಲಿ ಪ್ರಕಟಿಸಿ, ತನ್ನ ಅಗ್ರಲೇಖನವನ್ನು ಬರೆದಿರುವುದು. ಆ ಅಗ್ರಲೇಖನವನ್ನು ಆದ್ಯಂತವಾಗಿ ನೋಡುವಲ್ಲಿ ಅದರ ಕೊನೆಯಭಾಗ ೧ ರ ಹೊರತು ಉಳಿದ ಭಾಗನೆಲ್ಲಾ ಮೈಸೂರಿನ ಯಾರೋ ಒಬ್ಬ ಬ್ರಾಹ್ಮಣಪ್ರತಿನಿಧಿಯೇ ಬರೆದುಕಳುಹಿಸಿಕೊಟ್ಟಂತಿರುವುದು. ಅದರಲ್ಲಿ ಕಂಡ ವಿವರಣವು ಪರಸ್ಪರವಿರುದ್ಧವಾಗಿರುವ ಕಾರಣ ಈ ಲೇಖನದಿಂದ ಆ ಪತ್ರಿಕೆಯ ಕಿರೀಟದ ಮೇಲೆ ಒಂದು ಗೂಬೆ ಕೂತಂತೆಯೇ ಆಗಿರುವುದು. ಏಕೆಂದರೆ ಇಲ್ಲಿಯ ಲೇಖಕರು ಕಳುಹಿಸಿದ ಲೇಖನದಲ್ಲಿ ಸಂಪೂರ್ಣವಾಗಿ ವಿಷಯ ವಿಪರ್ಯಾಸವನ್ನು ಮಾಡಿರುವರು. ಅದನ್ನು ತಿಳಿಯದೆ ಹಿಂದೂಪತ್ರಿಕಾಕರ್ತರು ಹಾಗೆಯೇ ಪ್ರಕಟಿಸಿ ಮೋಸಹೋಗಿರುವರು. ದಿವಾನ್ ಸಾಹೇಬರವರು ಸಭಾಪರಿಸಮಾಪ್ತಿಕಾಲದ ಭಾಷಣವನ್ನು ಕೊಟ್ಟ ನಂತರ ಅದನ್ನು ಕೇಳಿ ಸಂತಪ್ತರಾದ ೪೦-೫೦ ಮಂದಿಮೆಂಬರುಗಳು ವಿಷಯ ಚರ್ಚೆಮಾಡದೆ ಸುಮ್ಮನೆ ನೋಡುತ್ತಾ ಕುಳಿತಿದ್ದರೆಂದು ಆ ಲೇಖನದಲ್ಲಿ ಹೇಳಲ್ಪಟ್ಟಿದೆ. ಇದು ಶುದ್ಧ ಅಸಂಗತ. ಸಭೆಯಾರಂಭದಿಂದಲೂ ಆ ಪ್ರತಿನಿಧಿಗಳು ಸುಮ್ಮನೆ ಕುಳಿತಿದ್ದುದರಿಂದಲೇ ದಿವಾನರು ತಮ್ಮ ಭಾಷಣದಲ್ಲಿ ಅವರುಗಳನ್ನು ಕುರಿತು ಖಂಡಿಸಿಮಾತನಾಡಬೇಕಾಯಿತೆಂಬುದು ಗೊತ್ತೇ ಇದೆ. ತಮ್ಮ ಅಸಮಾಧಾನಕ್ಕೆ ಕಾರಣವಾದ ಕೊರತೆಯನ್ನು ಹೇಳಿಕೊಳ್ಳಲಿಕ್ಕೆ ಅವಕಾಶಕೊಡಲಿಲ್ಲವೆಂದು ಈ ತಟಸ್ಥ ಸಭಿಕರು ಹೇಳುವುದನ್ನು ನಿಜವೆಂದು ಹಿಂದೂಪತ್ರಿಕೆಯು ನಂಬಿ ಮೋಸಹೋಗಿದೆ. ಆಕ್ಷೇಪಣೆ ಏನಿದ್ದರೂ ಹೇಳಬಹುದೆಂದು ಮೊಟ್ಟಮೊದಲೇ ದಿವಾನರು ೨-೩ ವೇಳೆ ಕೇಳಿದರೂ ಈ ತಟಸ್ಥರು ಬಾಯ್ಬಿಚ್ಚಲಿಲ್ಲ. ಸಭಾರಂಭದಲ್ಲೇ ತಮ್ಮ ಅಸಮಾಧಾನದ ಮುಖ್ಯವಿಷಯವನ್ನು ಅವರುಗಳೇ ಹೇಳಿದ್ದರೆ ಅದನ್ನು ಯಾರೂ ಬೇಡವೆನ್ನುತ್ತಿರಲಿಲ್ಲ. ಇವರು ಹೇಳಬೇಕಾದುದನ್ನು ಹೇಳಿದ್ದು, ಅದನ್ನು ದಿವಾನರವರು ಕೇಳುವುದಿಲ್ಲವೆಂದು ತಿರಸ್ಕರಿಸಿದ್ದರೆ, ಆಗ ದಿವಾನರ ಮೇಲೆ ಪಕ್ಷಪಾತಿಗಳು ಬ್ರಾಹ್ಮಣ ದ್ವೇಷಿಗಳು ಎಂದು ಮೊದಲಾಗಿ ಇವರು ದೂರುಹೊರಿಸಿ ತಮ್ಮ ಹೊಟ್ಟೆಯುರಿಯನ್ನು ಶಾಂತಿಪಡಿಸಿಕೊಳ್ಳಬಹುದಾಗಿದ್ದಿತು. ಆ ನ್ಯಾಯಮಾರ್ಗಾನುಸರಣವು ಇವರಲ್ಲಿ ಲೇಶವೂ ಇಲ್ಲದೆ ತಮ್ಮ ವರ್ಣೀಯರ ಪತ್ರಿಕೆಗಳಲ್ಲಿ ತಾವುತಾವುಗಳೇ ತಮ್ಮ ಮೂಗಿನ ನೇರಕ್ಕೆ ಸರಿಯಾಗಿ ಬರೆದುಕೊಳ್ಳುವುದು ಜಘನ್ಯವ್ಯಾಪಾರವೇ ಹೊರತು ದೊಡ್ಡಮನುಷ್ಯರ ಲಕ್ಷಣವೆಂದಿಗೂ ಅಲ್ಲ. ಪ್ರಜೆಗಳ ಪಕ್ಷವನ್ನು ವಹಿಸಿ ದಿವಾನರು ಮಾತನಾಡುವುದು ವಿಹಿತವಾಗಿಲ್ಲವೆಂದು ಹಿಂದೂಪತ್ರಿಕಾ ಲೇಖನದಲ್ಲಿ ಹೇಳಿರುವುದು ಅವಿವೇಕದ ಮಾತಾಗಿರುತ್ತದೆ. ಪ್ರಜಾಕ್ಷೇಮಚಿಂತನೆಗಾಗಿಯೇ ಸಭೆಯು ಕೂಡುತ್ತಿರುವಾಗ, ಅದಕ್ಕಾಗಿಯೇ ಸಭೆಯ ಸಂಬಂಧದಲ್ಲಿ ಸರ್ಕಾರದ ಧನವ್ಯಯವೆಷ್ಟೋ ಆಗುತ್ತಿರುವಾಗ, ಆ ವ್ಯಯವನ್ನೂ ಸಭಾಕಾಲವನ್ನೂ ವ್ಯರ್ಥಗೊಳಿಸಿದವರ ವಿಷಯದಲ್ಲಿ ತಕ್ಕಗಮನವನ್ನು ಸಭಾಧ್ಯಕ್ಷರು ತೆಗೆದುಕೊಳ್ಳದೆ ಹೋಗಿದ್ದರೆ ಅವರು ತಮ್ಮ ಕರ್ತವ್ಯದಿಂದ ತಪ್ಪಿಹೋದವರಾಗುತ್ತಿದ್ದರು. ಇದೇ ಸಂದರ್ಭದಲ್ಲಿ ಸರ್ ಶೇಷಾದ್ರಿ ಅಯ್ಯರು, ವಿ. ಪಿ. ಮಾಧವರಾಯರಂಥ ದಿವಾನರುಗಳು ಅಧ್ಯಕ್ಷಪೀಠದಲ್ಲಿದ್ದರೆ ಈಗ ಅಕ್ರಮವಾಗಿ ಸಹಾಯ ನಿರಾಕರಣಮಾಡಿದಂಥ ತಪ್ಪಿತಸ್ಥರಿಗೆ ಎಂದೆಂದಿಗೂ ಸಭಾ ಪ್ರವೇಶಾಧಿಕಾರವಿಲ್ಲದಂತೆಯೇ ಮಾಡಿ ಆ ಕೂಡಲೇ ಹೊರಹೊರಡಿಸಿ ಬಿಡದೆ ಇರುತ್ತಿರಲಿಲ್ಲ. ಸರ್ ಕಾಂತರಾಜ ಅರಸಿನವರಲ್ಲಿ ಆ ತೆರದ ಧೂರ್ತಸ್ವಭಾವವು ಲೇಶಮಾತ್ರವೂ ಇಲ್ಲದಕಾರಣದಿಂದಲೂ, ದೇಶೀಯರಮೇಲೆ ಅವರಿಗೆ ನಿಸರ್ಗವಾಗಿರುವ ಪ್ರೀತಿವಿಶ್ವಾಸಗಳು ಸರ್ವತ್ರ ಗೋಚರವಾಗಿರುವುದರಿಂದಲೂ, ಇದೇ ಸಭೆಗೆ ಅವರು ಪ್ರಥಮಾಧ್ಯಕ್ಷತೆಯನ್ನು ವಹಿಸಿದಾಗ್ಗೆ ಮಾಡಿದ ಭಾಷಣದಲ್ಲಿ ವ್ಯಕ್ತವಾದ ಗದ್ಗದಕಂಠಸ್ವರದಿಂದ ಸರ್ವರಿಗೂ ರೋಮಾಂಚವಾಗಿ ಅವರ ಪ್ರೇಮಾರ್ದ್ರ ಹೃದಯವೆಂತಹದೆಂಬುದು ವ್ಯಕ್ತಪಟ್ಟಿರುವುದರಿಂದಲೂ ಅದಕ್ಕನುಗುಣವಾಗಿ ಅವರು ಬಹಳ ಸೈರಣೆಗೊಂಡು ಸಭೆಯಲ್ಲಿ ಇಂಥ ಉಚ್ಛೃಂಖಲವರ್ತನವು ನಡೆಯಬಾರದೆಂಬುದಕ್ಕಾಗಿ ಕೆಲವು ಎಚ್ಚರಿಕೆಯಮಾತುಗಳನ್ನು ಮಾತ್ರ ಆಡಿಮುಗಿಸಿಬಿಟ್ಟಿರುತ್ತಾರೆ. ಹೀಗಿರುವಲ್ಲಿ ತಟಸ್ಥಪ್ರತಿನಿಧಿಗಳು ತಾವುಮಾಡಿದ ತಪ್ಪಿಗೂ ಮ|| ಅರಸಿನವರು ಆಗ್ಗೂ ತೋರಿಸಿದ ಶಾಂತಿಗೂ ಪಶ್ಚಾತ್ತಾಪವನ್ನೂ ಕೃತಜ್ಞತೆಯನ್ನೂ ತೋರಿಸುವುದಕ್ಕೆ ಪ್ರತಿಯಾಗಿ ದಿಕ್ಕುದಿಕ್ಕುಗಳಲ್ಲಿ ಬೊಬ್ಬೆಯಿಟ್ಟುಕೊಳ್ಳುತ್ತಿರುವುದು ಅವರ ಸೌಜನ್ಯಹೀನತೆಗೆ ಕುರುಹಾಗಿರುವುದು.

ಇಂಥ ಸಂದರ್ಭಗಳಲ್ಲಿ ಬ್ರಿಟಿಷ್ ಇಂಡ್ಯಾದ ಸಭೆಗಳೊಳಗೆ ಸಭಿಕರುಗಳು ಇದೇ ಉಪಾಯವನ್ನು ಎಂದರೆ ಸಬ್ಜೆಕ್ಟುಗಳನ್ನೇ ಹಿಂದೆಗೆದುಕೊಳ್ಳುವ ಇಲ್ಲವೆ ಎದ್ದು ಹೋಗುವುದನ್ನು ಮಾಡುವ ಸಂಪ್ರದಾಯವುಂಟೆಂದೂ, ೨೦ ವರ್ಷಗಳ ಕೆಳಗೆ ಬೊಂಬಾಯಿ ನಿಯಮನಿರ್ಮಾಣ ಸಭೆಯಲ್ಲಿ ಲ್ಯಾಂಡ್ ರೆವಿನ್ಯೂ ಬಿಲ್ ಮಸೂದೆಯನ್ನು ಪ್ರತಿಭಟಿಸಿ ಅದು ಸಫಲವಾಗದಿರಲು ಸರ್ ಫೆರೋಜ್‌ಷಾಮೇಥಾ, ಗೋಖಲೆ, ಸರ್ ಬಾಲಚಂದ್ರ ಕೃಷ್ಣ ಮೊದಲಾದವರು ಸಭೆಯನ್ನು ಬಿಟ್ಟು ಹೊರಟೇ ಹೋದರೆಂದೂ ಹಿಂದೂ ಪತ್ರಿಕಾ ಲೇಖನದಲ್ಲಿ ಹೇಳಲ್ಪಟ್ಟಿದೆ. ಸರ್ ಮೇಥಾ ಮೊದಲಾದವರ ಕೃತ್ಯಗಳಿಗೂ ಇಲ್ಲಿಯ ಮಾನಧಾರಿಗಳ ಕೃತ್ಯಕ್ಕೂ ಈ ಸಂದರ್ಭದಲ್ಲಿ ಹೋಲಿಕೆಯನ್ನು ಕಲ್ಪಿಸಿರುವ ಹಿಂದೂ ಪತ್ರಿಕೆಗೆ ಸ್ವಜಾತಿಪಕ್ಷಪಾತಾಂಧತೆಯಿಂದ ಮತಿಗೆ ಮಂಕುಸುತ್ತಿಹೋಗಿದೆಯೆಂದು ತೋರುವುದು. ಏಕೆಂದರೆ–ಆ ಸಭೆಯಲ್ಲಿ ಸರ್ ಫೆರೋಜ್‌ಷಾ ಮೇಥಾ ಮೊದಲಾದವರು ಇಲ್ಲಿಯ ಪ್ರತಿನಿಧಿಗಳಂತೆ ತಮ್ಮ ಹೊಟ್ಟೆಯಲ್ಲಿದ್ದ ಕಾರಣವನ್ನು ಹೇಳಲೂ ಆರದೆ ಹೇಳದೆಯೂ ಇರಲಾರದೆ ಹೇಡಿತನದಿಂದ ಬಾಯಿಗೆ ಬೀಗಮುದ್ರೆ ಹಾಕಿಕೊಂಡು ಕುಳಿತವರಲ್ಲ. ತಾವು ಆಡಬೇಕಾದುದನ್ನೆಲ್ಲಾ ಆಡಿ ಮುಗಿಸಿದರು. ಸರ್ಕಾರದವರು ಕೇಳದೆ ಹೋಗಲು ಎದ್ದು ಹೋದರು. ಆ ಪುರುಷ ಸಿಂಹಗಳ ವರ್ತನವೆಲ್ಲಿ? ಇಲ್ಲಿನವರ ಹೇಡಿತನವೆಲ್ಲಿ? ಅವರ ವರ್ತನವನ್ನು ದೇಶವೆಲ್ಲಾ ಶ್ಲಾಘಿಸುತ್ತಿದ್ದರೆ ಇವರ ವರ್ತನವನ್ನು ದೇಶವೆಲ್ಲಾ ಛೀಗುಟ್ಟುತ್ತಿರುವುದು.

ಹಿಂದೂ ಪತ್ರಿಕೆಯ ಆ ಲೇಖನದ ಕೊನೆಯಲ್ಲಿ ಆಡಿರುವ ಕೆಲಮಾತುಗಳುಮಾತ್ರ ಪತ್ರಿಕಾಸಂಪಾದಕರ ನಿಜಲೇಖನಿಯಿಂದ ಹೊರಪಟ್ಟಂತೆ ತೋರಿ ಅದರ ಘನತೆಗೆ ತಕ್ಕುವಾಗಿರುವುವು. ''ಸರ್ಕಾರದವರು ನಾನಾಜಾತಿಯವರಿಗೆಲ್ಲಾ ಅಧಿಕಾರಕೊಟ್ಟು ಸರ್ಕಾರದಲ್ಲಿ ಜಾತಿಮತಗಳ ಕಲಹಗಳೂ ಅತೃಪ್ತಿಯೂ ಇಲ್ಲದಂತೆ ಮಾಡುವುದು ನ್ಯಾಯವೂ ಆವಶ್ಯಕವೂ ಆದ ಕಾರ್ಯವಾಗಿರುತ್ತದೆ......ಇಂಥ ಕಾಲದಲ್ಲಿ ಬ್ರಾಹ್ಮಣರ ಜವಾಬ್ದಾರಿಯು ಬಹಳ ಹೆಚ್ಚಾದುದು. ಅವರು ಕೋಪಮಾಡಿಕೊಂಡು ಮಾತನಾಡದೆ ಕುಳಿತುಕೊಳ್ಳುವುದು ಹೇಡಿತನವು. ಹೀಗೆ ಮಾಡುವುದರಿಂದ ಅವರಿಗೇನೂ ಅನುಕೂಲವಾಗಲಾರದು'' ಎಂದು ಹಿಂದೂ ಪತ್ರಿಕಾಕರ್ತರೇ ಕೊನೆಯಲ್ಲಿ ಅಭಿಪ್ರಾಯಪಟ್ಟಿರುವುದು ಇಲ್ಲಿಯ ನಿರಾಕರಣಾವಲಂಬಿ ಪ್ರತಿನಿಧಿಗಳಿಗೆ ಸರಿಯಾದ ಸರಟಿಫಿಕೇಟೇ ಆದಂತಾಯಿತು. ಇವರ ಪಕ್ಷದವರೇ ಇವರಿಗೆ ಹೇಳಿದ ಈ ಬುದ್ಧಿವಾದವನ್ನಾದರೂ ಗಮನಿಸಿ ಮುಂದೆ ಇವರುಗಳು ಎಚ್ಚತ್ತು ನಡೆದುಕೊಳ್ಳಲಿ.

ಶ್ರೀಮತ್ ಅನಂತಶಯನದ ಮಹಾರಾಜರು.

ತಿರುವಾಂಕೂರು (ಅನಂತಶಯನದ) ಮಹಾರಾಜರಾದ ಶ್ರೀ ಪದ್ಮನಾಭದಾಸ ವಂಚಿಪಾಲ ಸರ್ ರಾಮವರ್ಮ ಕುಲಶೇಖರ ಕಿರೀಟಪತಿ ಮನ್ನೆಸುಲ್ತಾನ್ ಮಹಾರಾಜ ರಾಜಾರಾಮ ರಾಜಬಹದ್ದೂರ್ ಸಂಷೇರ್‌ಜಂಗ್ ಜಿ.ಸಿ.ಎಸ್.ಐ., ಜಿ.ಸಿ.ಐ.ಇ. ಯವರು ತಮ್ಮ ಪುತ್ರಿಯವರೊಡನೆಯೂ ಇತರ ಪರಿವಾರದೊಡನೆಯೂ ಕಳೆದ ಮಂಗಳವಾರ ಮಧ್ಯಾಹ್ನ ೧೨ ಗಂಟೆಗೆ ಬೆಂಗಳೂರಿನಿಂದ ಸ್ಪೆಷಲ್ ಟ್ರೇನಿನಲ್ಲಿ ಹೊರಟು ೪|| ಗಂಟೆಗೆ ರಾಜಧಾನಿಗೆ ದಯಮಾಡಿಸಿದರು. ನಿಲ್ದಾಣವು ಹೊರಗೂ ಒಳಗೂ ಗುಡಿತೋರಣ ಮೇಲ್ಕಟ್ಟು ಮೊದಲಾದುವುಗಳಿಂದ ಶೃಂಗರಿಸಲ್ಪಟ್ಟಿದ್ದಿತು. ರಾಜಮಾರ್ಗವು ಧ್ವಜಪತಾಕತೋರಣಗಳಿಂದ ವಿಚಿತ್ರವಾಗಿ ಅಲಂಕರಿಸಲ್ಪಟ್ಟಿದ್ದಿತು. ಎರಡುಪಕ್ಕಗಳಲ್ಲೂ ಕಾಲ್ಬಲದವರು, ಪೋಲೀಸಾಳುಗಳು, ಕುದುರೆ ಸ್ವಾರರು ಅಲ್ಲಿಗಲ್ಲಿಗೆ ಸಾಲಾಗಿ ನಿಲ್ಲಿಸಲ್ಪಟ್ಟಿದ್ದರು. ಟರ್ನ್ ಹಾಲಿನ ದಕ್ಷಿಣಭಾಗದಲ್ಲಿ ಹಸರುವಾಣಿ ಚಪ್ಪರವು ಹಾಕಲ್ಪಟ್ಟು ಅಲ್ಲಿ ಮ್ಯುನಿಸಿಪಲ್ ಕೌನ್ಸಿಲರೇ ಮೊದಲಾದ ಪುರಪ್ರಮುಖರೂ ಮ್ಯು|| ಪ್ರೆಸಿಡೆಂಟರೂ ಕಾದಿದ್ದರು. ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರು ಶ್ರೀಮದ್ಯುವರಾಜರು ದಿವಾನರು, ಕೌನ್ಸಿಲರು, ಸರ್ದಾರರುಗಳು, ರಾಜಬಂಧುಗಳು, ಸ್ಥಳಾಧಿಕಾರಿಗಳು, ಪುರಪ್ರಮುಖರು ಮೊದಲಾದವರೆಲ್ಲಾ ನೆರೆದಿದ್ದರು. ಒಳಗೆ ೨ ಸಾಲು ಕಾಲ್ಬಲವು ನಿಂತಿದ್ದಿತು. ಹೊರಗೆ ಅಂಬಾರಿಯ ನಿಶಾನೆಯ ಆನೆಗಳ ಸಾಲುಗಳೂ ಒಂಟೆಗಳೂ ರಥಗಳೂ ವಾದ್ಯಗಾರರೂ ಸಾಲುಸಾಲಾಗಿ ನಿಂತಿದ್ದುವು. ಸ್ಪೆಷಲ್ ಟ್ರೇನು ನಿಲ್ದಾಣಕ್ಕೆ ಬಂದುನಿಂತು ಮಹಾರಾಜರು ಬಂಡಿಯಿಂದಿಳಿಯುವ ಹೊತ್ತಿಗೆ ನಮ್ಮ ಮಹಾರಾಜಸಹೋದರರು ಹೋಗಿ ಕರಾವಲಂಬನವನ್ನಿತ್ತು ಕುಶಲಪ್ರಶ್ನೆಗಳನ್ನು ಮಾಡಿದರು. ಬಳಿಕ ದಿವಾನರೇ ಮೊದಲಾದವರ ಪರಿಚಯವು ಮಾಡಿಸಲ್ಪಟ್ಟಿತು. ಬಳಿಕ ಉಭಯ ಮಹಾರಾಜರೂ ಕಾಲ್ಬಲದ ಮಧ್ಯದಲ್ಲಿ ಹೊರಟು ಅವರುಗಳ ಮರ್ಯಾದೆಯನ್ನು ಸ್ವೀಕರಿಸಿ, ಹೊರಕ್ಕೆ ಹೊರಟು ಅಲ್ಲಿ ವಾದ್ಯಗಳು ಭೋರ್ಗರೆದು ಚತುರಂಗಸೈನ್ಯವೂ ಮಾಡಿದ ಮರ್ಯಾದೆಯನ್ನು ಸ್ವೀಕರಿಸಿದನಂತರ ಸಿದ್ಧವಾಗಿದ್ದ ನಾಲ್ಕುಕುದುರೆ ಹೂಡಿದ ರಥದಲ್ಲಿ ಒಂದುಕಡೆ ಉಭಯ ಮಹಾರಾಜರೂ ಇದಿರಿನಲ್ಲಿ ನಮ್ಮ ಯುವರಾಜರೂ ಕುಳಿತು ಶ್ವೇತಚ್ಛತ್ರಚಾಮರ ಮರ್ಯಾದಿತರಾಗಿ ಹಿಂದೆ ಮುಂದೆ ಬಾಡಿಗಾರ್ಡ್‌ಸ್ವಾರರೂ ಸಿಲ್ಲೇದಾರ್ ಸೈನ್ಯವೂ ನಡೆಯುತ್ತಿರಲು, ಪಕ್ಕಗಳಲ್ಲಿ ಖಾಸಾಜಿಲ್ಲೋಗಳು ಓಡುತ್ತಿರಲು, ದಾರಿಯುದ್ದಕ್ಕೂ ಪುರಜನರು ದರ್ಶನಮಾಡಿ ಆನಂದದಿಂದ ಕರತಾಡನ ಮಾಡುತ್ತಿರಲು, ಉತ್ಸವವು ಸಯ್ಯಾಜಿರಾವ್ ರೋಡಿಗೆ ತಿರುಗಿ, ಮ್ಯುನ್ಸಿಪಲ್ ಚಪ್ಪರದ ಬಳಿಯಲ್ಲಿ ಪ್ರೆಸಿಡೆಂಟರು ಒಪ್ಪಿಸಿದ ಪುಷ್ಪಹಾರಗುಚ್ಛಗಳನ್ನು ಸ್ವೀಕರಿಸಿ, ಹಾರ್ಡಿಂಜ್ ಸರ್ಕಲ್ ಮಿರ್ಜಾರೋಡುಗಳ ಮೂಲಕ ಖಾಸಬಂಗಲೆಗೆ ತಲುಪಿತು. ಆಗ ಅಲ್ಲಿ ಕಾದಿದ್ದ ಸೈನ್ಯವು ಮುಜರೆಮಾಡಿತು. ಬ್ಯಾಂಡುಗಳು ಭೋರ್ಗರೆದುವು. ಮರ್ಯಾದಾರ್ಥವಾದ ೨೧ ಗುಂಡುಗಳು ಹಾರಿಸಲ್ಪಟ್ಟುವು. ಶ್ರೀಮನ್ಮಹಾರಾಜರು ಈ ತಮ್ಮ ಅತಿಥಿಗಳನ್ನು ಪ್ರಸಿದ್ಧವಾದ ಮೈಸೂರು ದರ್ಬಾರಿನ ಆತಿಥ್ಯದಿಂದ ಸತ್ಕರಿಸಿದರು. ಆ ದಿನ ಸಾಯಂಕಾಲದಲ್ಲಿ ಬಂಗಲೆಯೊಳಗೆ ಸಂಗೀತಗಳೂ ವಾದ್ಯವೈಭವಗಳೂ ಏರ್ಪಡಿಸಲ್ಪಟ್ಟಿದ್ದುವು. ಒಂದೇ ದಿನ ನಿಲ್ಲುವುದಕ್ಕೆ ಗೊತ್ತುಮಾಡಿಕೊಂಡಿದ್ದ ನೂತನಾತಿಥಿಗಳು ೩ ದಿನಗಳವರೆಗೆ ನಿಂತರು. ಆ ಮರುದಿನದಿಂದಲೂ ನಮ್ಮ ಮಹಾರಾಜರೊಡನೆ ಪುರದ ನಾನಾಭಾಗಗಳನ್ನು ಅವಲೋಕಿಸಿದರು. ಕನ್ನಂಬಾಡಿಯ ಕೃಷ್ಣರಾಜಸಾಗರ, ಶ್ರೀರಂಗಪಟ್ಟಣ, ಚಾಮುಂಡೇಶ್ವರಿಯ ಬೆಟ್ಟ ಮೊದಲಾದ ಅವಲೋಕನೀಯ ಸ್ಥಳಗಳನ್ನೆಲ್ಲಾ ಪರಾಮರಿಸಿ, ಮೈಸೂರಿನ ಅಂದಚಂದಗಳಿಗೂ ನಾಗರಿಕತೆಗೂ ಮಹಾರಾಜರು ಬಹಳ ಸಂತೋಷಪಟ್ಟರೆಂದು ಅರಿತವು. ಕಳೆದ ತಾ|| ೧ ರ ಮಧ್ಯಾಹ್ನ ೧೨ ಗಂಟೆಗೆ ಇವರು ಸಪರಿವಾರರಾಗಿ ಸ್ಪೆಷಲ್ ಟ್ರೇನಿನಲ್ಲಿ ಬೆಂಗಳೂರಿಗೆ ದಯಮಾಡಿಸಿ ಅಲ್ಲಿಂದ ನೆನ್ನೆಯ ದಿನ ಬೆಳಿಗ್ಗೆ ೮ ಗಂಟೆಯಲ್ಲಿ ತಮ್ಮೂರಿಗೆ ಪ್ರಯಾಣಮಾಡಿದರು.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರು ನಿನ್ನೆದಿವಸ ಮೈಸೂರಿನಿಂದ ಬೆಂಗಳೂರಿಗೆ ದಯಮಾಡಿಸಿದರು.

ಶ್ರೀಮನ್ಮಹಾರಾಜರ ೨೦ ಸಾವಿರ ರೂ. ಬೆಲೆಬಾಳುವ ಒಂದು ಜೂಜಿನಕುದುರೆಯನ್ನು ಮೈಸೂರಿನಿಂದ ಬೆಂಗಳೂರಿಗೆ ಕಳುಹಿಸಲಿಕ್ಕಾಗಿ ವಾಗಿನ್ನಿಗೆ ಹತ್ತಿಸುವಾಗ್ಗೆ ಅದು ಬಹಳಶಂಟಿಮಾಡಿ ಹಿಂದಕ್ಕೆಹಾರಿಬಿದ್ದುದರಿಂದ ಮೃತವಾಯಿತು.

ತರೀಕೆರೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ನವನೀತಂನಾಯುಡುಯವರಿಗೆ ೨ ತಿಂಗಳ ರಜಾ ಕೊಡಲ್ಪಟ್ಟಿರುವುದರಿಂದ ೨ನೇ ಕೌನ್ಸಿಲರ ಪರ್ಸನಲ್ ಅಸಿಸ್ಟೆಂಟರಾದ ಮ|| ಎನ್. ಸೀತಾರಾಮಯ್ಯನವರು ಆ ಸ್ಥಳಕ್ಕೆ ನಿಯಮಿಸಲ್ಪಟ್ಟಿರುವರು.

ಅನೇಕಸ್ಥಳಗಳಲ್ಲಿ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವನ್ನು ವಿಶೇಷ ವಿಜೃಂಭಣೆಯಿಂದ ನಡೆಯಿಸಿದ ಸುದ್ದಿಯ ಲೇಖನಗಳು ನಮಗೆ ಸೇರಿವೆ. ಸ್ಥಳವು ದೊರೆಯಲಿಲ್ಲವಾದಕಾರಣ ಪ್ರಕಟಿಸಲನುಕೂಲವಾಗಲಿಲ್ಲವೆಂಬುದನ್ನು ವಿಷಾದದಿಂದ ನಮ್ಮ ಪತ್ರವ್ಯವಹಾರಕರಿಗೆ ಸೂಚಿಸಿ ವಂದಿಸುತ್ತೇವೆ.

ಅತ್ತೂರು ಕೊಲೆಕೇಸಿನ ವಿಚಾರಣೆಗಾಗಿ ಸ್ಪೆಷಲ್ ಮೇಜಿಸ್ಟ್ರೇಟಾಗಿ ನಿಯಮಿಸಲ್ಪಟ್ಟಿದ್ದ ಆ ಕೆಲಸವನ್ನು ಮುಗಿಸಿಬಂದ ಮ|| ಕೆ. ಅನಂತರಾಮನ್‌ರವರು ಕಳೆದ ತಾ|| ೩೦ ರಲ್ಲಿ ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟ್ ಪದವಿಯನ್ನು ತಾತ್ಕಾಲಿಕವಾಗಿ ವಹಿಸಿಕೊಂಡಿರುತ್ತಾರೆ. ಮ|| ಬಸವಾರಾಧ್ಯರು ಆದಿನದಿಂದ ಉದ್ಯೋಗನಿವೃತ್ತರಾದರು.

ದಿವಾನ್ ಸರ್ ಕಾಂತರಾಜ ಅರಸಿನವರು ತಿರುವಾಂಕೂರು ಮಹಾರಾಜರನ್ನು ಇದಿರುಗೊಳ್ಳುವ ನಿಮಿತ್ತ ಬೆಂಗಳೂರಿನಿಂದ ಸೋಮವಾರ ರಾತ್ರಿ ಹೊರಟು ಮಂಗಳವಾರ ಬೆಳಗ್ಗೆ ರಾಜಧಾನಿಯನ್ನು ಸೇರಿದರು. ಅವರೊಡನೆಯೇ ತಿರುವಾಂಕೂರು ದಿವಾನರೂ ದಯಮಾಡಿಸಿದರು. ಆ ದಿನದ ರಾತ್ರಿಯೇ ನಮ್ಮ ದಿವಾನರು ಮರಳಿ ಬೆಂಗಳೂರಿಗೆ ಪ್ರಯಾಣಮಾಡಿದರು.

ಕಳೆದ ಮೈಸೂರು ನಿಯಮನಿರ್ಮಾಣಸಭೆಯಲ್ಲಿ ಮಿಲ್ಲರ್‌ಸಂಘದ ವರದಿಯಮೇಲೆ ಸರ್ಕಾರದವರು ಮಾಡಿರುವ ಅಪ್ಪಣೆಯನ್ನು ಕುರಿತು ಮ|| ಹೊಸಕೊಪ್ಪದ ಕೃಷ್ಣರಾಯರು ಬಹಳ ಆಕ್ಷೇಪಮಾಡಿ ಚರ್ಚೆನಡಿಯಿಸಿದರು. ಸಭೆಯಲ್ಲಿದ್ದ ಹಿಂದುಳಿದ ವರ್ಗಗಳ ಸಭಿಕರು ಅದಕ್ಕೆ ತಕ್ಕ ಪ್ರತಿವಾದಗಳನ್ನು ಸಮರ್ಥತೆಯಿಂದ ಮಾಡಿ ಸರ್ಕಾರಿ ಅಪ್ಪಣೆಯನ್ನು ಅನುಮೋದಿಸಿದರು.

ಇದರಡಿ ಕಂಡಿರುವಂತೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳ ವರ್ಗಾವರ್ಗಿಯಾಗಿರುತ್ತದೆ—ಮ|| ಗಳಾದ ಎಂ. ಮಾಚಯ್ಯನವರು ಶಿವಮೊಗ್ಗದಿಂದ ಮೈಸೂರು ಪಶ್ಚಿಮ ಡಿವಿಜನ್ನಿಗೆ. ಅಲ್ಲಿದ್ದ ಎ. ನಾರಾಯಣರಾಯರು ಶಿವಮೊಗ್ಗ ಡಿವಿಜನ್ನಿಗೆ. ಎಂ. ಎ. ವರದಾಚಾರರು ಸಾಗರದ ಡಿವಿಜನ್ನಿನಿಂದ ಚಿತ್ರದುರ್ಗದ ಡಿವಿಜನ್ನಿಗೆ. ಅಬ್ದುಲ್ ಜಭಾರ್‌ರವರು ಫಾರೆಸ್ಟ್ ಟ್ರೇನಿಂಗ್ ಸ್ಕೂಲಿನಿಂದ ಸಾಗರದ ಡಿವಿಜನ್ನಿಗೆ.

ಇದೇ ಜುಲೈ ತಾ|| ೧ ರಿಂದ ನಮ್ಮ ಸಂಸ್ಥಾನದ ಧಾನ್ಯದ ಕಂಟ್ರೋಲನ್ನು ತಪ್ಪಿಸಿಬಿಟ್ಟರು. ಎಂದರೆ ದೇಶದಿಂದ ಹೊರಕ್ಕೆ ಧಾನ್ಯಗಳನ್ನು ತಡೆಯಿಲ್ಲದೆ ಕಳುಹಿಸಿ ಕೊಡಬಹುದಾಯಿತು. ಆಗಲೇ ಬೆಲೆಗಳು ಏರುತ್ತಲಿವೆ. ೧೦-೨೦ ದಿನಗಳಿಂದಲೂ ಮಳೆಯಿಲ್ಲದೆ ಮುಂಗಾರು ಬೆಳಸು ಒಣಗುತ್ತಿದೆ. ಈ ಕಾರಣದಿಂದಲೂ ಮುಖ್ಯಧಾನ್ಯಗಳ ಬೆಲೆಯು ಹೆಚ್ಚುತ್ತಿದೆ. ಕೊಂಡು ತಿನ್ನತಕ್ಕವರು ಆಗಲೇ ಚಿಂತಾಗ್ರಸ್ತರಾಗಿದ್ದಾರೆ.

ಕೆಲಕಾಲದಿಂದ ನಿಂತುಹೋಗಿದ್ದ ಬೆಳಗಾಂವಿನ ವಿಭಾಕರ ಪತ್ರವು ಈಗ ಮರಳಿ ಆಂಗ್ಲಭಾಷೆ ದೇಶಭಾಷೆಗಳೆರಡು ಲೇಖನಗಳಿಂದ ಕೂಡಿ ಪ್ರಕಟಗೊಳ್ಳಲಾರಂಭಗೊಂಡಿದೆ. ಹಿಂದುಳಿದವರ ಉದ್ಧಾರವೇ ಇದರ ಮುಖ್ಯೋದ್ದೇಶವೆಂಬುದು ಗೊತ್ತೇ ಇದೆ. ಸ್ವಕೀಯ ಮುದ್ರಾಲಯದಲ್ಲಿ ಆಗುತ್ತಿರುವ ಈಗಣ ಅದರ ಮುದ್ರಣವು ಮುದ್ದಾಗಿದೆ. ಉದ್ದೇಶಕ್ಕೆ ತಕ್ಕ ಲೇಖನಗಳು ಉಜ್ವಲವಾದ ಶೈಲಿಯಲ್ಲಿ ಬರೆಯಲ್ಪಡುತ್ತಿವೆ. ಜನಾಶ್ರಯಕ್ಕೆ ಪಾತ್ರವಾಗಿದೆ. ವರ್ಗಣಿ ಪರಸ್ಥಳದವರಿಗೆ ೩-೧೨-೦.

ಕೆಲದಿನಗಳಿಂದ ಮೈಸೂರು-ಬೆಂಗಳೂರುಗಳ ಮಧ್ಯದ ಹೊಗೆಬಂಡಿಗಳು ಕಾಲಕಾಲಕ್ಕೆ ಬಂದು ಸೇರದೆ ೧-೨ ಗಂಟೆಗಳು ಸಾವಕಾಶವಾಗಿ ಬಂದು ಸೇರುತ್ತಿವೆ. ಕಳೆದ ಬುಧವಾರವಂತು ಮಂಗಳವಾರ ರಾತ್ರಿ ಬೆಂಗಳೂರಿನಿಂದ ಹೊರಟ ಬಂಡಿಯು ಮರುದಿನ ಮಧ್ಯಾಹ್ನ ೩ ಗಂಟೆಗೆ ರಾಜಧಾನಿಗೆ ಸೇರಿತು. ಆ ದಿನ ಬೆಳಿಗ್ಗೆ ಇಲ್ಲಿಂದ ನಂಜನಗೂಡಿಗೆ ಹೊರಡಬೇಕಾಗಿದ್ದ ಬಂಡಿಯು ಹೋಗಲೇ ಇಲ್ಲ. ೩|| ಗಂಟೆಗೆ ಹೊರಟಿತು. ತ್ವರ್ಯವಾಗಿ ಹೋಗಬೇಕಾಗಿದ್ದ ಪ್ರಯಾಣಿಕರು ೨-೩ ಮೋಟಾರು ಬಸ್ಸುಗಳ ಮೇಲೆ ಹೋದರು. ಮೈಸೂರು ರೈಲ್ವೆಯೆಂದರೆ ಪ್ರಜೆಗಳು ಜುಗುಪ್ಸೆಪಟ್ಟು ಪರಿಹಾಸ ಮಾಡುವಂಥ ಸ್ಥಿತಿಯೊದಗಿರುವುದು. ರೈಲ್ವೆ ಅಧಿಕಾರಿಗಳು ಕೂಡಲೇ ನಿವಾರಣೆ ಮಾಡಬೇಕು.

ಸರ್ಕಾರಿಯುದ್ಯೋಗದ ವಿನಿಯೋಗವಿಚಾರಕ್ಕಾಗಿ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡ್ ಸರ್ಕಾರದವರಿಂದ ಏರ್ಪಡಿಸಲ್ಪಟ್ಟಿದೆ. ಅದಕ್ಕೆ ಒಬ್ಬ ಕೌನ್ಸಿಲರರು (ಮಿ|| ಮಿರ್ ಹಂಜಾಹುಸೇನ್‌ರವರು) ಚೇರ್ಮನ್ನರಾಗಿಯೂ, ರೆವಿನ್ಯೂ ಕಮಿಷನರು, ಚೀಫ್ ಇಂಜನಿಯರು, ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರು, ಸರ್ಕಾರದ ಚೀಫ್ ಸೆಕ್ರೆಟರಿಯವರು, ಮ|| ಎಂ. ಸುಬ್ಬಯ್ಯನವರು, ಮ|| ಜಿ. ಪರಮಶಿವಯ್ಯನವರು, ಮ|| ಮಹಮುದ್ ಅಬ್ಬಾಸ್‌ಖಾನ್‌ರವರು ಮೆಂಬರುಗಳಾಗಿಯೂ, ಎಫಿಸಿಯೆನ್ಸಿ ಆಡಿಟ್ ಬ್ರಾಂಚಿನಲ್ಲಿ ಅಂಡರ್ ಸೆಕ್ರೆಟರಿಯಾಗಿರುವವರು ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಈ ಬೋರ್ಡಿನವರಿಗೆ ಸ್ವತಂತ್ರಿಸಿ ಉದ್ಯೋಗವನ್ನು ಕೊಡಲಧಿಕಾರವಿಲ್ಲ; ಎಚ್ಚರಿಕೆಯನ್ನು ಕೊಡುವ ಅಧಿಕಾರವಿರುವುದು.

ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿಯಲ್ಲಿ ಒಂದು ಹಿಂದುಗಳ ಮದುವೆ ಮೆರವಣಿಗೆಯು ನಡೆಯುತ್ತಿರುವಾಗ್ಗೆ ಮಸ್ಜಿದಿಯಲ್ಲಿದ್ದ ಮಹಮ್ಮದೀಯರು ನೂರಾರು ಮಂದಿಗಳು ಬಂದು ಮೆರವಣಿಗೆಯವರ ಮೇಲೆ ಬಿದ್ದು ಹೊಡೆದು ತಡೆದುದರಲ್ಲಿ ೨ ಪಕ್ಷದವರಿಗೂ ದೊಡ್ಡ ಕಲಹವೂ ಬಡಿದಾಟವೂ ನಡೆದು ನಿಲ್ಲಿಸುವುದಕ್ಕೆ ಪ್ರಯತ್ನಿಸಿದ ಹೀರಾಸಿಂಗ್ ಎಂಬ ಪೋಲೀಸ್ ಉದ್ಯೋಗಿಗೆ ಪೆಟ್ಟುಬಿದ್ದು ಮೃತನಾದಂತೆಯೂ ಇನ್ನು ಕೆಲವರಿಗೆ ಗಾಯಗಳಾಗಿರುವಂತೆಯೂ ಅಮಲ್ದಾರರಿಗೂ ಕೂಡ ಕಲ್ಲಿನೇಟುಗಳು ಬಿದ್ದಿರುವಂತೆಯೂ, ಪೋಲೀಸ್ ಸೂಪರಿಂಟೆಂಡೆಂಟರು ಹೋಗಿ ಗುಂಡುಗಳನ್ನು ಹಾರಿಸಿ ಗದ್ದಲವನ್ನು ಶಾಂತಿಪಡಿಸಿದಂತೆಯೂ, ಈಚೆಗೆ ಪೋಲೀಸರು ಅನೇಕರನ್ನು ಹಿಡಿದು ವಿಚಾರಣೆಗೆ ಗುರಿಮಾಡಿದ್ದಾರೆಂದೂ ಕೇಳುತ್ತೇವೆ.

ಮೈಸೂರು ನಿಯಮನಿರ್ಮಾಣಸಭೆಯು ಬೆಂಗಳೂರಿನಲ್ಲಿ ಕಳೆದ ತಾ|| ೨೭ ನೆ ಸೋಮವಾರ ಕೂಡಿದ್ದಿತು. ಆರಂಭದಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ನಮ್ಮ ದಿವಾನರಿಗೂ, ೧ನೆ ಕೌನ್ಸಿಲರ್ ಮ|| ಎ. ಆರ್. ಬಾನರ್ಜಿಯವರಿಗೂ ನೂತನವಾಗಿ ಪ್ರಾಪ್ತವಾದ ಬಿರುದಾವಳಿಗಳಿಗಾಗಿ ಸಭಿಕರ ಪಕ್ಷದ ಸಂತೋಷಾಭಿನಂದನಗಳನ್ನು ಕೃತಪಡಿಸುವ ಗಂಭೀರವಾದ ಭಾಷಣವನ್ನು ಮಾಡಿದರು. ಅದರ ಜತೆಗೆ ಮ|| ಸಿ. ರಾಮಲಿಂಗರೆಡ್ಡಿಯವರು ಸಂಸ್ಥಾನದ ಉದ್ಯೋಗವನ್ನು ಇಷ್ಟರಲ್ಲೇ ಬಿಟ್ಟುಹೋಗುವುದಕ್ಕಿರುವುದರಿಂದ ಸಂಸ್ಥಾನಕ್ಕೆ ಉಂಟಾದ ನಷ್ಟವನ್ನೂ, ಅವರು ವಿದ್ಯಾಶಾಖೆಯಲ್ಲಿ ಮಾಡಿದ ಸಂಸ್ಕರಣವು ದೇಶಕ್ಕೆ ಚಿರಸ್ಮರಣೀಯವಾದ ಮಹೋಪಕಾರವಾಗಿರುವುದನ್ನೂ ಕುರಿತು ವರ್ಣಿಸಿದರು. ಈ ಭಾಷಣಕ್ಕೆ ಪ್ರತ್ಯುತ್ತರವನ್ನು ಯಥೋಚಿತವಾಗಿ ದಿವಾನರೂ, ಮ|| ಸಿ.ಆರ್. ರೆಡ್ಡಿಯವರೂ ಕೊಟ್ಟು ಪ್ರತಿವಂದನೆಯನ್ನರ್ಪಿಸಿದರು. ಬಳಿಕ ಸಭಿಕರು ಮಾಡಿದ ಪ್ರಶ್ನೆಗಳಿಗೆ ಉತ್ತರಗಳು ನಡೆದು ಕೆಲ ವಿಧಿಗಳು ಉಪಪಾದಿತವಾಗಿ ಅನುಮೋದನಗೊಂಡುವು.

ಶ್ರೀಮತ್ ಆಂಗ್ಲ ಯುವರಾಜರು (ಪ್ರಿನ್ಸ್ ಆಫ್ ವೇಲ್ಸ್) ಬರುವ ನವಂಬರ್ ತಿಂಗಳಲ್ಲಿ ಭರತಖಂಡಕ್ಕೆ ದಯಮಾಡಿಸಲು ಏರ್ಪಾಟು ಜರಗುತ್ತಿದೆ. ವೈಸ್ರಾಯಿ ರೀಡಿಂಗ್ ಪ್ರಭುಗಳೇ ಅವರ ಆಗಮನವನ್ನು ಅವಶ್ಯವೆಂದು ಕೋರಿರುವರೆಂದು ಪ್ರಕಟವಾಗಿರುವುದನ್ನು ನೋಡಿದರೆ ಬಹುಶಃ ಯುವರಾಜರು ರಿಕ್ತಹಸ್ತದಿಂದ ಭರತಖಂಡಕ್ಕೆ ಸಂದರ್ಶನವನ್ನೀಯಲಾರರೆಂದೂ, ವರದ ಹಸ್ತದಿಂದಲೇ ದಯಮಾಡಿಸುವರೆಂದೂ ನಿರೀಕ್ಷಿಸಬಹುದಾಗಿದೆ.

ಅಮಲ್ದಾರರುಗಳಾದ ಮೆ|| ಗಳಾದ ರಜದ ಮೇಲಿರುವ ಮೊಹದೀನ್ ಷರೀಫ್‌ರವರು ನಾಗಮಂಗಲಕ್ಕೆ, ಆರ್. ರಾಮಯ್ಯಂಗಾರರು ನೆಲಮಂಗಲದಿಂದ ಶಿಕಾರಿಪುರಕ್ಕೆ, ಹಾಸನದ ಡಿಸ್ಟ್ರಿಕ್ಟ್ ಆಫೀಸ್ ಹೆಡ್‌ಕ್ಲಾರ್ಕ್ ಬಿ. ಸಿದ್ದರಾಜಅರಸಿನವರು ಹೊಸದುರ್ಗಕ್ಕೆ, ಕೆ. ಸುಬ್ಬರಾಯರು ಶಿವಮೊಗ್ಗೆಯಿಂದ ಚಾಮರಾಜನಗರಕ್ಕೆ, ಅಬ್ದುಲ್‌ಕಾಲಕ್‌ರವರು ಚಾಮರಾಜನಗರದಿಂದ ಶಿವಮೊಗ್ಗೆಗೆ, ಕೋಲಾರ ಡಿ|| ಆಕ್ಟಿಂಗ್ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾದ ಎ. ಎಸ್. ರಾಜಗೋಪಾಲಾಚಾರರು ಕೋಲಾರದ ಅಮಲ್ದಾರಿಗೆ, ಟಿ. ಆರ್. ರಾಮಚಂದ್ರರಾಯರು ಕೋಲಾರದಿಂದ ಬಾಗೇಪಲ್ಲಿಗೆ, ಜಿ. ಆರ್. ಪದ್ಮನಾಭರಾಯರು ಬಾಗೇಪಲ್ಲಿಯಿಂದ ಚಿಕ್ಕಬಳ್ಳಾಪುರಕ್ಕೆ, ಟಿ. ಕೆ. ಲಕ್ಷ್ಮಣಯ್ಯರ್‌ರವರು ಚಿಕ್ಕಬಳ್ಳಾಪುರದಿಂದ ಸಿದ್ಧಘಟ್ಟಕ್ಕೆ, ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಹೆಡ್‌ಕ್ಲಾರ್ಕ್ ಸಿ. ರಾಮಚಂದ್ರರಾಯರು ಶ್ರೀರಂಗಪಟ್ಟಣಕ್ಕೆ, ಎಸ್. ಸುಬ್ಬರಾಯರು ಶ್ರೀರಂಗಪಟ್ಟಣದಿಂದ ಹಿರೋಡೆಗೆ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಆಕ್ಟಿಂಗ್ ಡಿ|| ಎಕ್ಸೈಸ್ ಆಫೀಸರಾದ ಎಚ್. ಬಸವರಾಜ ಅರಸಿನವರು ಆನೆಕಲ್ಲಿಗೆ (ಅಮಲ್ದಾರರಾಗಿ) ವರ್ಗಾಯಿಸಲ್ಪಟ್ಟಿರುತ್ತಾರೆ.

ಪತ್ರವ್ಯವಹಾರ.

ಈ ಮಹಾಸೂಯೆಗೆ ಅಳಿಗಾಲವೆಂದಿಗೆ?

ಸ್ವಾಮಿ,

ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಈ ನನ್ನ ಲೇಖನವನ್ನು ಪ್ರಕಟಿಸಲು ಬೇಡುತ್ತೇನೆ. ನಾನು ವರ್ತಮಾನಪತ್ರಿಕೆಗಳಿಗೆ ಲೇಖನವನ್ನು ಬರೆಯುವ ಅಭ್ಯಾಸವನ್ನು ಆಚರಣೆಯಲ್ಲಿಟ್ಟಿಲ್ಲ. ಆದರೆ ಈಗ ಒಂದೆರಡು ವಾರದಿಂದ ಬ್ರಾಹ್ಮಣರಾದ ನಮ್ಮ ಸಹೋದರರ ಅಧೀನದಲ್ಲಿರುವ ಇಂಗ್ಲೀಷು ಮತ್ತು ಕನ್ನಡಪತ್ರಿಕೆಗಳು, ಮಿಲ್ಲರ್ ಕಮಿಟಿಯ ರಿಪೋರ್ಟಿನಮೇಲೆ ನಮ್ಮ ದಯಾಳುಸರ್ಕಾರದವರು ಮಾಡಿರುವ ಆರ್ಡರಿನ ವಿಷಯವಾಗಿ ಪ್ರಕಟಿಸುತ್ತಿರುವ ಕಠಿಣವಾಕ್ಯಗಳು ಈ ಪತ್ರವನ್ನು ತಮಗೆ ಬರೆಯುವಂತೆ ಬಲಾತ್ಕಾರಪಡಿಸಿದುದರಮೇಲೆ ವಿಶೇಷ ಅಸಮಾಧಾನದಿಂದ ಈ ಮುಖಾಂತರ ನಿದ್ರೆಮಾಡುತ್ತಿರುವ ನನ್ನ ಬಂಧುಬಾಂಧವರಿಗೆ ಅರಿಕೆಮಾಡಿಕೊಳ್ಳುವುದೇನೆಂದರೆ:—

ಮಿಲ್ಲರ್‌ಕಮಿಟಿಯ ರಿಪೋರ್ಟಿನವಿಷಯದಲ್ಲಿ ಚರ್ಚಿಸಬೇಕಾದ ಅವಶ್ಯಕವಿಲ್ಲ. ಮುಂದೆ ಒಂದೇಪಂಗಡದವರ ಪ್ರಾಬಲ್ಯದಿಂದ ದೇಶದ ಸಂಪದಭಿವೃದ್ಧಿಗೆ ಸರ್ಕಾರದ ನೌಕರರಮುಖೇನ ಕುಂದರೆಯುಂಟಾದೀತೆಂಬ ಶಂಕೆಯಿಂದ ಈಗಿನ ಸರ್ಕಾರವು ದೀರ್ಘಾಲೋಚನೆಯಿಂದ ಮಾಡಿದ ಆರ್ಡರು ಬ್ರಾಹ್ಮಣಸಹೋದರರಿಗೆ ಖೇದವನ್ನುಂಟುಮಾಡಿರುತ್ತದೆ. ಈ ಶಂಕೆ ಯಾತರಿಂದ ಉಂಟಾಯಿತು? ಇದಕ್ಕೆ ಈಗ ಸರ್ಕಾರದ ನೌಕರಿಯಲ್ಲಿರುವ ಅನೇಕರಾದ ಬ್ರಾಹ್ಮಣಸಹೋದರರ ನಡತೆಯು ಮುಖ್ಯಕಾರಣವಾಗಿರುತ್ತದೆ. ಈ ನಡತೆಯನ್ನು ತಿಳಿಯಲು ಇಬ್ಬರಿಗೆಮಾತ್ರ ಅವಕಾಶವಿರುತ್ತದೆ. ಅವರು ಯಾರೆಂದರೆ—ಸರ್ಕಾರದ ಮುಖ್ಯಮಂತ್ರಿವರ್ಯರು, ಉಪಮಂತ್ರಿಗಳು ಮುಂತಾದವರಿಂದ ಕೂಡಿರುವ ಅಂಗ ಒಂದು. ಈ ಬ್ರಾಹ್ಮಣಸಹೋದರರ ಕೈಯಿಂದ ನೋವುತಿನ್ನುತ್ತಿರುವ ಕೃಷಿ, ಕೈಗಾರಿಕೆ, ವ್ಯಾಪಾರ ಮುಂತಾದ ಸ್ವತಂತ್ರಕೆಲಸಗಳನ್ನು ಮಾಡುತ್ತಿರುವ ಪ್ರಜೆಗಳು ಎರಡನೆಯವರು. ವರ್ತಮಾನ ಪತ್ರಿಕೆಯನ್ನು ತಮ್ಮ ವಶಮಾಡಿಕೊಂಡು ಮನಸ್ಸಿಗೆಬಂದ ಬರವಣಿಗೆಯನ್ನು ಬರೆಯುತ್ತಿರುವವರಿಗೆ ಬ್ರಾಹ್ಮಣಸಹೋದರರ ಏಕಪ್ರಾಬಲ್ಯದಿಂದ ಇತರರಿಗೆ ಆಗುತ್ತಿರುವ ಸಂಕಟವು ಹ್ಯಾಗೆ ತಿಳಿಯಬೇಕು? ಅಪಾರವಾದ ಸರ್ಕಾರದ ನೌಕರಿಯ ಮುಖಾಂತರ ನಮ್ಮ ಬ್ರಾಹ್ಮಣಸಹೋದರರು ಯಾವಯಾವ ಫಲವನ್ನು ಹೊಂದಿರುತ್ತಾ ಬಂದಿರುವರೆಂಬುದನ್ನು ವಿವರಿಸಲು ಅನೇಕ ಪತ್ರಗಳನ್ನು ಬರೆಯಬೇಕಾಗುತ್ತದೆ. ಈ ನೌಕರರು ಶ್ರೀಮನ್ಮಹಾರಾಜರವರ ಪ್ರಜೆಗಳನ್ನು ಕಠಿಣರೀತಿಯಾಗಿ ಅನೇಕ ವರ್ಷಗಳಿಂದ ಕಾಣುತ್ತಾ ಬಂದುದೇ ಮಿಲ್ಲರ್ ಕಮಿಟಿಯ ಆರ್ಡರಿಗೆ ಕಾರಣವಾಗಿದೆ.

ಈ ಹಿಂದೆ ಮೀಟಿಂಗುಗಳಲ್ಲಿ ಇವರಮಾತಿಗೆ ಪ್ರತಿಹೇಳುವವರು ಇಲ್ಲದ ಕಾಲದಲ್ಲಿ ಇವರು ಆಡುತ್ತಿದ್ದ ಮಾತುಗಳನ್ನು ಜ್ಞಾಪಿಸಿಕೊಂಡರೆ ಭಯವಾಗುತ್ತದೆ. ಒಂದಾನೊಂದು ಎಕನಾಮಿಕ್ ಕಾನ್ಫರೆನ್ಸು ಸಭೆಯಲ್ಲಿ ಒಬ್ಬ ಮಂತ್ರಿವರ್ಯರನ್ನು ಬ್ರಾಹ್ಮಣ ಸಹೋದರರು ಎಬ್ಬಿಸಿ ಅವರನ್ನು ವಾಕ್ಪ್ರಘೋಷವನ್ನು ಮಾಡುವಂತೆ ಬೆಂಬಲವಾಗಿ ನಿಂತು, ನ್ಯಾಯನೀತಿಯಲ್ಲಿ ಮಾತನಾಡುತ್ತಿದ್ದ ಪರೋಪಕಾರಿಯಾದ ಒಬ್ಬ ಮೆಂಬರನ್ನು ಸಭೆಯಿಂದ ಆಚೆಗೆ ಅಟ್ಟಿಯೆಂಬುವವರೆಗೆ ಬಂತು. ಸಾಧುಗಳಾದ ಆ ಮೆಂಬರೂ ಅವರ ಹಿಂಬಾಲಕರೂ ಒಂದು ಮಾತನ್ನೂ ಆಡದೆ ನೊಪ್ಪತಿಂದಾಗ್ಯೂ ಕೂಡ ನೂರಾರು ಮೆಂಬರುಗಳಿಗೆ ಸಮಾಧಾನವನ್ನು ಹೇಳಿ ಅವಮಾನವನ್ನು ಸಹಿಸಿಕೊಂಡು ರಾಜಭಕ್ತಿಯನ್ನೂ ದೇಶಾಭಿಮಾನವನ್ನೂ ತೋರಿಸಿದರು. ಇದೊಂದು ಸೌಮ್ಯಾಕಾರ, ಮತ್ತೊಂದು ವ್ಯಾಘ್ರಾಕಾರವನ್ನು ನೋಡಿ. ಧರ್ಮದೃಷ್ಟಿಯಿಂದಲೂ, ನಿರ್ವಂಚನೆಯಿಂದಲೂ, ದೇಶಾಭಿಮಾನದಿಂದಲೂ, ಹಿಂದುಳಿದ ಪ್ರಜೆಗಳು ಮುಂದೆ ಬಂದು ಪ್ರಬಲರಾದ ಸಹೋದರರ ಕೂಡ ಸೇರಿ ಸರ್ಕಾರದ ಕೆಲಸವನ್ನು ಏಕಮತ್ಯದಿಂದ ಮಾಡಿರಿ ಯೆಂದು ಹೇಳಿದ ಸೌಜನ್ಯವಾದ ಮಿಲ್ಲರು ಕಮಿಟಿಯ ಆರ್ಡರನ್ನು ನೋಡಿ, ಆಗ್ರಹ ದೂಷಣೆ ಭಯೋತ್ಪಾತವನ್ನುಂಟುಮಾಡುವ ಲೇಖನಗಳು ಮುಂತಾದ ನಡತೆಯನ್ನು ತೋರಿಸುವ ಮಾತೊಂದು ಗುಂಪನ್ನು ನೋಡಿರಿ. ಎಲ್ಲಾ ಸುಖವೂ ತಮ್ಮೊಬ್ಬರಿಗೇನೇ ಇರಬೇಕೆಂದು ಹೋರಾಡುವ ಈ ಸಹೋದರರು ಯಾವ ಹೊತ್ತಾದರೂ ದುಃಖವನ್ನು ಹೆಚ್ಚಿಸುವರೇ ಹೊರ್ತು ದೇಶವನ್ನು ಉನ್ನತಸ್ಥಿತಿಗೆ ತರುವ ಯೋಚನೆಯನ್ನು ಮಾಡುವವರಲ್ಲ. ಅವರ ಕೋಪಕ್ಕೆ ಕೊನೆಯಿಲ್ಲ. ದಾರಿಯಲ್ಲಿ ಹೋಗುವ ಬ್ರಾಹ್ಮಣ ಸಹೋದರನಾದ ಒಬ್ಬೊಬ್ಬನ ಬಾಯಿಯಲ್ಲೂ ಕೋಪದ ಮಾತಲ್ಲದೆ ಬೇರೆಯಿಲ್ಲ. ಸರ್ಕಾರದ ನೌಕರಿಯಲ್ಲಿರುವ ಯಾವೊಬ್ಬನೂ ಅಸಮಾಧಾನಚಿತ್ತನಾಗಿರುತ್ತಾನೆ. ಇದು ರಾಜಭಕ್ತಿಯೇ? ಇದು ದೇಶೋನ್ನತಿಯ ಆಶೆಯನ್ನು ತೋರಿಸುವ ಲಕ್ಷಣವೇ? ಸಾವಧಾನ ಚಿತ್ತದಿಂದ ನೋಡುತ್ತ ಬಂದರೆ, ಈ ಜನಾಂಗದ ಅಸೂಯೆಯು ಎಷ್ಟರಮಟ್ಟಿಗಿರುತ್ತೆಂಬುವದು ವ್ಯಕ್ತವಾಗುತ್ತದೆ. ಸರ್ಕಾರದವರ ಉದಾರೋದ್ದೇಶವು ನೆರವೇರಬೇಕಾದರೆ ಒಕ್ಕಲಿಗ ಮಹಾಶಯರು ಮುಂತಾದವರು ವಿದ್ಯಾವಂತರಾಗಬೇಕು. ಇದೊಂದೇ ವಿಷಯವನ್ನು ಎಲ್ಲರೂ ಗಮನದಲ್ಲಿಡಬೇಕು. ಎರಡನೆವಿಷಯ ಒಂದಿದೆ. ಇದಕ್ಕೆ ಬ್ರಾಹ್ಮಣೇತರರು ತುಂಬಾ ಗಮನವನ್ನು ಕೊಡಬೇಕು. ಈ ಲೇಖನವನ್ನು ಓದುವ ಪ್ರತಿಯೊಬ್ಬರೂ ಈ ವಿಷಯವನ್ನು ಹರಡಬೇಕು; ಪ್ರತಿನಿತ್ಯವೂ ಮತ್ತೊಬ್ಬರಿಗೆ ಜ್ಞಾಪಿಸಬೇಕು. ಅದೇನೆಂದರೆ—ಸಾಹುಕಾರನ ಹತ್ತಿರ ಸೇರಬೇಡ, ಬ್ರಾಹ್ಮಣವಕೀಲನಿಗೆ ಹಣಕೊಡಬೇಡ. ಈ ಇಬ್ಬರು ಶತೃಗಳನ್ನು ದೂರಮಾಡುವ ರೈತನೂ, ವ್ಯಾಪಾರಿಯೂ ಸುಖವಾಗಿರುತ್ತಾನೆ. ಪ್ರತಿಯೊಬ್ಬನೂ ಪಂಥಮಾಡಿ ನಿರ್ಧರಮಾಡಿ ಸಂಘಗಳನ್ನು ಏರ್ಪಡಿಸಿ, ಲಾಯರುಗಳ ಮನೆಗೆ ಹೋಗುವದಿಲ್ಲವೆಂದು ಪ್ರತಿಜ್ಞೆಮಾಡಿರಿ, ಇದರಿಂದ ಲೋಕಕ್ಕೆ ಸುಖವಾಗುತ್ತದೆ. ಪ್ರತಿನಿಧಿಸಭೆ, ಲೆಜಿಸ್ಲೇಟಿವ್ ಕೌನ್ಸಿಲ್ಲು

ಮುಂತಾದ ಸಂಘಗಳಿಗೆ ಈ ಶತ್ರುಗಳನ್ನು ಯಾಕೆ ಚುನಾಯಿಸುತ್ತೀರಿ? ಪ್ರತಿ ಒಬ್ಬ ಬ್ರಾಹ್ಮಣನಲ್ಲದ ಮೈಸೂರು ಪ್ರಜೆಯು ಈ ಪ್ರತಿಜ್ಞೆಯನ್ನು ಮಾಡಿದರೆ ಒಂದು ವರ್ಷದಲ್ಲಿ ಸುಖಫಲವನ್ನು ಅನುಭವಿಸುವಿರಿ.

ಒಕ್ಕಲಿಗರ ಪತ್ರಿಕೆಯನ್ನೂ ಮತ್ತು ಸ್ಟಾರ್ ಪತ್ರಿಕೆಯನ್ನೂ ಪ್ರತಿಯೊಬ್ಬ ಬ್ರಾಹ್ಮಣೇತರನೂ ಈ ಮುಂದೆ ತರಿಸಿಕೊಂಡು ಓದಬೇಕು. ಮತ್ತು ಈ ವಿಷಯವಾಗಿ ಈ ಪತ್ರಿಕೆಗಳಿಗೆ ಬರೆಯಬೇಕು.

- ಸತ್ಯವಾದಿ."

ಪ್ರಜಾಪ್ರತಿನಿಧಿ ಸಭೆಯಲ್ಲಿ ಆಯವ್ಯಯದ ಪಟ್ಟಿಯ ಮೇಲಣ ಚರ್ಚೆ.

ತಾ|| ೧೮-೬-೨೧ ರ ಮಧ್ಯಾಹ್ನ ದಿವಾನ್ ಸಾಹೇಬರ ಅಧ್ಯಕ್ಷತೆಯಿಂದ ಯಥಾಪ್ರಕಾರ ಸಭೆ ಕೂಡಿತು. ಬೆಂಗಳೂರಿನ ಮ|| ರಾಮಚಂದ್ರರಾವ್ ಸಿಂಧ್ಯರವರು, ನಿನ್ನೆ ದಿವಸ ನಮ್ಮ ಮಿತ್ರರಾದ ಬ್ರಾಹ್ಮಣ ಮೆಂಬರುಗಳು ಸಬ್ಜೆಕ್ಟುಗಳನ್ನು ವಿತ್‌ಡ್ರಾ ಮಾಡಿದುದಕ್ಕೆ ಚೀಫ್ ಸೆಕ್ರಟರಿಯವರ ಹೆಸರಿನಿಂದ ಹುಟ್ಟಿರುವ ಈ ಸಭಾ ಸಂಬಂಧವಾದ ಸರ್ಕ್ಯುಲರೇ ಆಧಾರವೆಂದು ತೋರುತ್ತದೆ. ಅದರಲ್ಲಿರುವ ಆರ್ಡರ್ಸ್ ಎಂಬುದೇ ಮೊದಲಾದ ಒಂದೆರಡು ಶಬ್ದಗಳನ್ನು ಮನ್ನಾ ಮಾಡಿಸಿಬಿಟ್ಟರೆ ಉತ್ತಮ.

ದಿವಾನರು—ಆ ಸರ್ಕ್ಯುಲರಿನಲ್ಲಿ ಯಾವುದೂ ಹೊಸ ಮಾತಿಲ್ಲ.

ಸಿಂಧ್ಯಾ—ನಿಜ; ಆದರೂ ಒಂದೆರಡು ಮಾತುಗಳನ್ನು ಮನ್ನಾ ಮಾಡಿದರೆ ಚೆನ್ನಾಗಿದೆ.

ದಿವಾನ್—ಎಲ್ಲಾ ಹಿಂದೆ ಇದ್ದುದೇ. ಇಲ್ಲದಿದ್ದ ಅಧಿಕಾರವನ್ನು ಹೊಸದಾಗಿ ಉಂಟುಮಾಡಿಕೊಂಡು ಚಲಾಯಿಸಬೇಕೆಂಬ ಉದ್ದೇಶವೇನೂ ಇಲ್ಲ.

ಮ|| ಜಿ. ಪರಮಶಿವಯ್ಯನವರು—ನಿರಂಕುಶವಾಗಿ ಚರ್ಚೆ ನಡೆಯಿಸಬೇಕೆನ್ನುವರಿಗೆ ಈ ಸರ್ಕ್ಯುಲರು ವಿರೋಧವಾಗಿ ತೋರಬಹುದೇ ಹೊರತು ಸಾಂಕುಶವಾಗಿ ನ್ಯಾಯವಾಗಿ ಚರ್ಚೆ ಮಾಡಬೇಕೆನ್ನುವವರಿಗೆ ಇದರಿಂದ ಏನೂ ತೊಂದರೆ ತೋರಲಿಲ್ಲ. ಸರಿಯಾದ ದೇಶಾಭಿಮಾನದಿಂದ ಎಷ್ಟೋ ಮಂದಿ ಸಭಿಕರು ನಿನ್ನೆ ದಿನ ಚರ್ಚೆ ಮಾಡಿಯೇ ಇದ್ದಾರೆ.

ಮ|| ಪುರುಷೋತ್ತಮನಂದಗಿರಿಬಾವಾಜಿಯವರು—ಎಕನಾಮಿಕ್ ಸಭೆಯ ಚರ್ಚೆಯಲ್ಲಿ ಹೀಗೆ ಯಾರೂ ಸಬ್ಜೆಕ್ಟ್ ವಿತಡ್ರಾ ಮಾಡಲಿಲ್ಲ. ಹಾಗಿದ್ದರೆ ಅಲ್ಲೂ ಮಾಡಬಹುದಾಗಿತ್ತು.

ಮಿ|| ವೇಮನಾರಡ್ಡಿಯವರು ಮತ್ತು ಮ|| ಇ. ರಾಂಕಪ್ಪಶೆಟ್ಟರು—ಕಾಲಕ್ಲಾಸ್ಟಿಯನ್ನು ಮಾತ್ರ ಮನ್ನಾ ಮಾಡಿಸಿಕೊಡಬೇಕು.

ದಿವಾನ್—ಅವಶ್ಯವಾಗಿ ತೋರಿದ ಸಂದರ್ಭದಲ್ಲಿ ಅದಕ್ಕೆ ಅಡ್ಡಿಯಿಲ್ಲ. ಇನ್ನಾರಾದರೂ ಮತ್ತೆ ಯಾವ ಆಕ್ಷೇಪವನ್ನಾದರೂ ಹೇಳುತ್ತೀರಾ? (ಸದ್ದಿಲ್ಲ.)

ಮಿ|| ಅಬ್ಬಾಸ್‌ಖಾನ್ ರವರು—ಪಾರ್ಲಿಮೆಂಟಿನಲ್ಲೂ ಕೂಡ ಅಧ್ಯಕ್ಷರಿಗೆ ಡಿಸಾರ್ಡರ್ ಅಧಿಕಾರವಿದೆ. ಇಷ್ಟು ದೊಡ್ಡ ಸಭೆಯ ಅಧ್ಯಕ್ಷರಿಗೆ ಅಂಥ ನಿರೋಧಾಜ್ಞೆಯ ಅಧಿಕಾರವಿರುವುದು ಹೆಚ್ಚೇನೂ ಅಲ್ಲ.

ಮಿ|| ರಸೂಲ್‌ಖಾನ್—ಚೆನ್ನಾಗಿ ಆರ್ಗ್ಯುಮೆಂಟ್ ಮಾಡತಕ್ಕವರಿಗೆ ತಕ್ಕಷ್ಟು ಅವಕಾಶ ಸಿಕ್ಕೇಸಿಕ್ಕಬಹುದು.

ದಿವಾನರು—ಸಭೆಯ ಪ್ರಾರಂಭದಲ್ಲೇ ಈ ವಿಷಯವನ್ನು ತಿಳಿಸಬಹುದಾಗಿತ್ತು?

ಮ|| ಕೆ. ಸುಬ್ರಾಯಶೆಟ್ಟರು—ಈ ಸರ್ಕ್ಯುಲರು ಅಷ್ಟೇನೂ ಅಪೂರ್ವವೂ ವಿರುದ್ಧವೂ ಆಗಿ ತೋರುವುದಿಲ್ಲ. ರೂಲ್ಸಿನಲ್ಲಿರುವ ಕೆಲವು ಶಬ್ದಗಳ ಅರ್ಥವನ್ನು ತಪ್ಪಾಗಿ ತಿಳಿದುಕೊಂಡಿರುವಂತೆ ಕಾಣುತ್ತದೆ.

ದಿವಾನರು—೧೯೨೦ನೆ ಇಸವಿ ಸೆಪ್ಟೆಂಬರ್ ತಿಂಗಳ ಇಂಡ್ಯಾ ಸರ್ಕಾರದ ಗೆಜೆಟ್ಟಿನಲ್ಲಿ ಲೆಜಿಸ್ಲೇಟೀವ್ ಕೌನ್ಸಿಲ್ ನಿಯಮಗಳನ್ನು ಕುರಿತು ಪ್ರಕಟಿಸಿರುವ ರೂಲ್ಸುಗಳು ಹೀಗಿದೆ (ಓದಿ ಹೇಳಿದರು). ನಾವು ಅಲ್ಲಿ ಉಪಯೋಗಿಸಿರುವ ಶಬ್ದಗಳಿಗಿಂತಲೂ ಸೌಮ್ಯವಾಗಿಯೇ ಇಲ್ಲಿ ಉಪಯೋಗಿಸಿದ್ದೇವೆ. ಫ್ರೀಡಂ ಆಫ್ ಸ್ಪೀಚನ್ನು ವಿರೋಧಿಸಬೇಕೆಂಬುದೇನೂ ಇಲ್ಲ. ಕಾಲವನ್ನು ಬೇಕಿದ್ದರೆ ಕೆಲ ಸಮಯದಲ್ಲಿ ಹೆಚ್ಚಿಸುವುದಕ್ಕೆ ಅಡ್ಡಿಯಿಲ್ಲ. ಇದರಲ್ಲಿರುವ ಒಂದೆರಡು ಶಬ್ದಗಳಿಗೆ ತಪ್ಪಾಗಿ ಅರ್ಥವನ್ನು ಕೆಲರು ಮಾಡಿಕೊಂಡಿದ್ದರೆ ಅದು ಸರಿಯಲ್ಲ; ನಾವು ಹೊಸದೇನೂ ಮಾಡಿಲ್ಲ. (ಇಲ್ಲಿಗೆ ಆ ಚರ್ಚೆ ಮುಗಿದು ಆಯವ್ಯಯದ ಮೇಲಣ ಚರ್ಚೆಗೆ ಆರಂಭವಾಯಿತು.)

ಮಿ|| ಅಬ್ಬಾಸ್‌ಖಾನ್ ರವರು—ಈ ವರ್ಷದ ಬಜೆಟ್ಟಿನಲ್ಲಿ ಎಲ್ಲ ಖರ್ಚುಗಳನ್ನೂ ಕಳೆದು ೬೦ ಸಾವಿರ ರೂ. ಉಳಿಯಿಸಿರುವುದು ಸಮರ್ಪಕವಾಗಿದೆ. ನಾವು ಅವಕಾಶವಿದ್ದಷ್ಟು ರಿಟ್ರೆಂಚ್‌ಮೆಂಟನ್ನೆಲ್ಲಾ ಮಾಡಿದುದಾಗಿಯೂ ಇನ್ನಾವುದೂ ಮಾಡತಕ್ಕದಿಲ್ಲವೆಂಬುದಾಗಿಯೂ ತಮ್ಮ ಭಾಷಣದಲ್ಲಿ ಕಂಡ ಅಭಿಪ್ರಾಯದಿಂದ ಗೊತ್ತಾಗುತ್ತದೆ. ಹಿಂದೆ ಸರ್ಕಾರದ ಖಜಾನೆಯಲ್ಲಿ ಹಣವು ಹೆಚ್ಚಾಗಿದ್ದಾಗ ಖರ್ಚುಗಳನ್ನು ಮನಸ್ಸಿಗೆ ಹೆಚ್ಚಿಸಿಕೊಂಡದ್ದೇ ಈಗಿನ ದುಸ್ಥಿತಿಗೆ ಕಾರಣವಾಯಿತು. ಅದನ್ನೆಲ್ಲಾ ಈಗ ಮಿಂಡಿಸಿಯೇ ತೀರಬೇಕು. ದಿವಾನರು ಕೌನ್ಸಿಲರುಗಳು ಇವರುಗಳ ವೇತನದ ವಿಷಯದಲ್ಲಿ ನಾವು ಏನನ್ನೂ ಹೇಳುವುದಕ್ಕಾಗುವುದಿಲ್ಲ. ನಮ್ಮ ಸೀಮೆಯ ವಿಸ್ತೀರ್ಣ, ವರಮಾನ, ನಡೆಯುವ ಮುಖ್ಯಾಂಶ ಇವುಗಳನ್ನೆಲ್ಲಾ ಗಮನಿಸಿ, ದಿವಾನರ ಕೌನ್ಸಿಲರುಗಳ ಸಂಬಳಗಳು ಯಾವಾಗಲೂ ಇಷ್ಟೇ ಇರಬೇಕೆಂದು ವಿಧಾಯಕವಮಾಡಬೇಕು. ಹಾಗೆ ಮಾಡದಿದ್ದರೆ ಸಮಯಾನುಸಾರ ಆಗಾಗಿನ ಗೌರ್ನಮೆಂಟಿನವರು ಸಂಬಳಗಳನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುವ ಸಂಭವವುಂಟಾಗುತ್ತದೆ.

ದಿವಾನ್—ಎಷ್ಟಿಷ್ಟಿರಬೇಕೆಂದು ನಿಮ್ಮಭಿಪ್ರಾಯ?

ಅಬ್ಬಾಸ್‌ಖಾನ್—ದಿವಾನರಿಗೆ ೪೦೦೦ ರೂ. ಕೌನ್ಸಿಲರುಗಳಿಗೆ ೧೮೦೦ ಇದ್ದರೆ ಯುಕ್ತವಾಗಿ ಕಾಣುತ್ತದೆ. ಶಾಖಾಮುಖ್ಯಾಧಿಕಾರಿಗಳು ನಮ್ಮ ದೇಶೀಯರೇ ಆಗಿರುವುದರಿಂದ ಅವರಿಗೆ ಸಂಬಳವೇ ಅಲ್ಲದೆ ಭೂಮಿಕಾಣಿಗಳ ವರಮಾನವು ಬೇರೆ ಬರುತ್ತಿರುವುದರಿಂದ ಅವರಿಗೆ ಹೆಚ್ಚು ಸಂಬಳವನ್ನು ಕೊಡಬೇಕಾದುದು ಅಷ್ಟೇನೂ ಆವಶ್ಯಕವಾಗಿ ತೋರುವುದಿಲ್ಲ. ಯೂರೋಪಿಯನ್ನರಿಗೆ ಮಾತ್ರ ಸ್ವಲ್ಪ ಹೆಚ್ಚು ಕೊಡಬೇಕಾದುದು ಅವಶ್ಯಕ. ೫೦೦ ರೂ. ಗೆ ಮೇಲ್ಪಟ್ಟ ಸಂಬಳಗಳನ್ನೆಲ್ಲಾ ಪ್ರಪೋರ್ಷನೇಟಾಗಿ ಕಡಿಮೆಮಾಡುವುದು ಯುಕ್ತವಾಗಿದೆ. ಶಾಖಾಮುಖ್ಯಾಧಿಕಾರಿಗಳಿಗೆ ೧೫೦೦ ಡಿ|| ಕಮಿಷನರುಗಳಿಗೆ ೮೦೦ ರಿಂದ ೧೦೦೦ ಒಳಗೆ ಸಂಬಳ ಗೊತ್ತುಮಾಡಬಹುದು.

ದಿವಾನ್—ಅಧಿಕಾರಸ್ಥರು ತಮಗೆ ಸಂಬಳವನ್ನು ಹೆಚ್ಚಿಸಬೇಕೆಂದೂ, ಈಗಿರುವುದೇ ಸಾಲದೆಂದೂ ಹೇಳುತ್ತಿದ್ದಾರೆ. ನೀವುಗಳು ಈಗಿರುವುದನ್ನೇ ಕಡಿಮೆಮಾಡಬೇಕೆಂದು ಹೇಳುತ್ತೀರಿ. ಇಬ್ಬರ ಮಧ್ಯದಲ್ಲಿ ಸಿಕ್ಕಿಕೊಂಡು ನಾವು ಪೇಚಾಡಬೇಕಾಗಿದೆ.

ಅಬ್ಬಾಸ್‌ಖಾನ್—ಚೀಫ್ ಕೋರ್ಟಿನಲ್ಲಿ ಚೀಫ್ ಜಡ್ಜರ ಸಂಬಳ ೨೦೦೦, ಉಳಿದ ಜಡ್ಜರಿಗೆ ೧೫೦೦ ಗೊತ್ತುಮಾಡಬಹುದು. ಅಧಿಕಾರಿಗಳಿಗೆ ಡ್ಯೂಟಿ ಅಲೋಯನ್ಸು, ಪರ್ಸನಲ್ ಅಲೋಯನ್ಸ್, ಲೋಕಲ್ ಅಲೋಯನ್ಸ್, ಎಂಬಿತ್ಯಾದಿಯಾದ ಹೆಸರುಗಳಿಂದ ಬಹಳ ಹಣವು ಸಂದು ಹೋಗುತ್ತದೆ. ಈ ಅಲೋಯನ್ಸುಗಳಿಗೆ ಬಹುಶಃ ೨-೩ ಲಕ್ಷ ರೂ. ಗಳು ಖರ್ಚಾಗಬಹುದು. ಇದನ್ನು ರಿಟ್ರೆಂಚ್‌ಮೆಂಟ್ ಮಾಡಿಯೇ ತೀರಬೇಕು. ಸಾವಿರಾರು ರೂ. ಸಂಬಳ ಪಡೆಯುವವರಿಗೆ ಮತ್ತೆ ಅಲೋಯನ್ಸ್ ಕೊಡುವುದು ಯಾಕೆ? ಅವರೇ ಕೌನ್ಸಿಲರುಗಳನ್ನಿಟ್ಟು ಅವರಿಗೆ ಸ್ವಲ್ಪ ಅಲೋಯನ್ಸನ್ನೋ ಅಥವಾ ಆನರರಿಯಮ್ಮೋ ಕೊಟ್ಟರೆ ಬಹಳ ಖರ್ಚು ಕಡಿಮೆಯಾದೀತು. ಸೆಕ್ರಟರಿಯಟ್ಟಿನಲ್ಲಿ ಇಬ್ಬರು ಅ|| ಸೆಕ್ರಟರಿಗಳನ್ನು ಕಡಿಮೆಮಾಡಬಹುದು. ಅಲ್ಲಿ ಸೇವಕರು ೪೦೦ ಮಂದಿಗಳಿರಬಹುದು. ಕಂಟ್ರೋಲರ್ ಆಫೀಸಿನ ಸೇವಕರೂ ಸೇರಿದರೆ ೬೦೦ ಮಂದಿಗಳಾಗಬಹುದು. ಇವರಲ್ಲಿ ಆಫೀಸ್ ಕೆಲಸ ಮಾಡುವವರೆಷ್ಟು ಜನ? ಅಧಿಕಾರಸ್ಥರ ಮನೆ ಚಾಕರಿ ಮಾಡುವವರೆಷ್ಟು ಜನ? ಪರಿಶೀಲಿಸಿ ನೋಡಬೇಕು. ಪೇಟೆ ಮಾರ್ಕೆಟ್ಟುಗಳಲ್ಲೆಲ್ಲಾ ಈ ಸೇವಕರು ಎರಡು ಹೊತ್ತೂ ತರಕಾರಿ ಮೊದಲಾದುವುಗಳನ್ನು ಖರೀದಿ ಮಾಡಿ ತೆಗೆದುಕೊಂಡು ಹೋಗುವುದರಲ್ಲೇ ಇರುತ್ತಾರೆ. ರೆವಿನ್ಯೂ ಕಮಿಷನರ್ ಪದವಿಯು ಅನವಶ್ಯಕ. ರೆ|| ಸೆಕ್ರಟರಿಯವರು ಇದ್ದಾರೆ. ಕೌನ್ಸಿಲರುಗಳು ಇದ್ದಾರೆ. ರೆ|| ಕಮಿಷನರು ಇಲ್ಲದೆ ಇದ್ದರೂ ಅವರ ಕೆಲಸಗಳೆಲ್ಲಾ ಮ್ಯಾನೇಜ್ ಆಗಬಹುದು. ನಾನು ಫೈನಾನ್ಸ್ ಕಮಿಟಿಯಲ್ಲಿ ಈ ವಿಷಯವನ್ನು ಸೂಚಿಸಿದಾಗ, ರೆವಿನ್ಯೂ ಅಪ್ಪೀಲುಗಳ ವಿಚಾರಣೆಗೆ ರೆವಿನ್ಯೂ ಕಮಿಷನರು ಇದ್ದೇ ತೀರಬೇಕೆಂದು ಉತ್ತರ ಹೇಳೋಣವಾಯಿತು. ಕೌನ್ಸಿಲರೇ ಅಂಥ ರೆವಿನ್ಯೂ ಅಪ್ಪೀಲುಗಳ ವಿಚಾರಣೆ ಮಾಡಬಹುದು. ಮತ್ತು ಡಿಸ್ಟ್ರಿಕ್ಟ್ ಡಿ|| ಕಮಿಷನರುಗಳ ಅಧಿಕಾರವನ್ನು ಹೆಚ್ಚಿಸಬಹುದು. ಅಲ್ಲದೆ ಅಸಿಸ್ಟೆಂಟ್ ಕಮಿಷನರುಗಳ ಸಂಖ್ಯೆಯನ್ನು ಕಡಿಮೆಮಾಡಬಹುದು. ಫಾರೆಸ್ಟ್ ಇಲಾಖೆಯಲ್ಲಿ ಗೇಂಪ್ರಿಜರ್ವರ್ ಎಂಬ ಹೆಸರಿನಿಂದ ೬೦೦-೭೦೦ ರೂ. ಸಂಬಳದ ಹುದ್ದೆ ಇದೆ. ಆ ಸ್ಥಾನವನ್ನು ತೆಗೆದುಹಾಕಬೇಕು.

ದಿವಾನ್—ಅವರೇ ರಿಟೈರ್ ಆಗುವುದರಲ್ಲಿದ್ದಾರೆ. ಆ ಕೂಡಲೇ ಆ ಸ್ಥಾನವೇ ತೆಗೆದುಹಾಕಲ್ಪಡುವುದು. ಬಜೆಟ್ಟಿನಲ್ಲೂ ಕೂಡ ಆ ಸ್ಥಾನಕ್ಕೆ ಹೊಸಬರನ್ನು ಸೇರಿಸಿಲ್ಲ.

ಅಬ್ಬಾಸ್‌ಖಾನ್—೧೨ ಮಂದಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳಿದ್ದಾರೆ. ಭದ್ರಾವತೀ ಐರನ್ ವರ್ಕ್ಸಿಗೋಸ್ಕರ ಆ ಡಿವಿಜನನ್ನೂ ಉಳಿದ ೮ ಡಿಸ್ಟ್ರಿಕ್ಟುಗಳಿಗೆ ೮ ಡಿವಿಜನನ್ನೂ ಇಟ್ಟುಕೊಂಡು ೩ ಡಿವಿಜನ್ನುಗಳನ್ನು ವಜಾಮಾಡಬೇಕು. ಸಾಗರದಲ್ಲೂ ಮೈಸೂರಿನಲ್ಲೂ ಎರಡೆರಡು ಡಿವಿಜನ್ನುಗಳಿವೆ. ಒಂದೊಂದನ್ನು ಕಡಿಮೆಹಾಕಬೇಕು. ಇಬ್ಬಿಬ್ಬರು ಆಫೀಸರುಗಳನ್ನು ಮಾಡಿದ್ದರಿಂದ ಮೊದಲಿಗಿಂತ ನಾಟಾಜಮಾವಣೆ ಮೊದಲಾದುದು ಹೆಚ್ಚೇನೂ ಆಗಲಿಲ್ಲ. ಮೊದಲಿಗಿಂತ ಈಗ ಕಡಿಮೆಯಾಗಿಯೇ ಇದೆ. ಸಬ್ ಅಸಿಸ್ಟೆಂಟ್ ಕನ್ಸರ್‌ವೇಟರು ೨೮ ಮಂದಿಗಳಿದ್ದಾರೆ. ೮ ಮಂದಿಗಳನ್ನು ವಜಾಮಾಡಬೇಕು. ಗಣಿಗಳ ಇಲಾಖೆಯಲ್ಲಿ ೪ ಮಂದಿ ಆಫೀಸರುಗಳಿದ್ದಾರೆ. ಇಬ್ಬರನ್ನು ವಜಾಮಾಡಬೇಕು. ಜಿಯೋಲಾಜಿಕಲ್ ಇಲಾಖೆಯಲ್ಲಿ ೪ ಜನ ಆಫೀಸರಿದ್ದಾರೆ. ಇಬ್ಬರನ್ನು ವಜಾಮಾಡಬಹುದು. ಚೀಫ್‌ಕೋರ್ಟಿನಲ್ಲಿ ಡೆಪ್ಯುಟಿರಿಜಿಸ್ಟ್ರಾರರವರ ಹುದ್ದೆಯನ್ನು ವಜಾಮಾಡಬಹುದು. ಗೌರ್ನಮೆಂಟ್ ಅಡ್ವೋಕೇಟರ ಸಂಬಳವನ್ನು ೫೦೦ ರಿಂದ ೭೦೦ ರ ವರೆಗೆ ಗೊತ್ತುಮಾಡಿದೆ. ಹಿಂದೆ ಆ ಪದವಿಯಲ್ಲಿದ್ದವರು ಈಗ ಬಿಟ್ಟುಹೋಗಿರುವುದರಿಂದ ಮುಂದೆ ಆ ಪದವಿಗೆ ೫೦೦ ಸಂಬಳವನ್ನೇ ನಿರ್ಧರ ಮಾಡಬೇಕು. ಸ್ಯಾನಿಟರಿ ಕಮಿಷನರ ಸ್ಥಾನವನ್ನು ತೆಗೆದುಬಿಡಬೇಕು. ಈಗಿನ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರುಗಳಿಗೆ ಯಾವ ಪವರೂ ಇಲ್ಲ. ಎಸ್ಟಾಬ್ಲಿಷ್ಮೆಂಟಿಲ್ಲ. ಕೆಲಸಮಾಡಲು ಫಂಡಿಲ್ಲ. ಕೋಲಾರ, ಬೆಂಗಳೂರು, ಮೈಸೂರುಗಳಿಗೆ ಮಾತ್ರ ಸ್ಯಾನಿಟರಿ ಆಫೀಸರನ್ನು ಇಟ್ಟುಕೊಂಡು, ಉಳಿದ ಕಡೆಯಲ್ಲಿರುವ ಸ್ಯಾನಿಟರಿ ಆಫೀಸರುಗಳನ್ನು ತೆಗೆದುಬಿಟ್ಟು ಅವರುಗಳ ಕೆಲಸವನ್ನು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರುಗಳೇ ನೋಡಿಕೊಳ್ಳುವಂತೆ ಮಾಡಬೇಕು. ಪಬ್ಲಿಕ್ ಹೆಲ್ತ್ ಇನ್ಸ್ಟಿಟ್ಯೂಷನ್ನಿನಲ್ಲಿರುವ ೨ ಸ್ಥಾನಗಳಲ್ಲಿ ೧ನ್ನು ತೆಗೆದುಬಿಡಬೇಕು. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಇಬ್ಬರು ಸೂಪರಿಂಟೆಂಡಿಂಗ್ ಇಂಜನಿಯರಿದ್ದಾರೆ. ಅವೆರಡು ಸ್ಥಾನಗಳನ್ನೂ ವಜಾಮಾಡಬೇಕೆಂದು ಸೂಚನೆ ಕೊಟ್ಟಿತ್ತು. ಸರ್ಕಾರಿ ಅಪ್ಪಣೆ ಇನ್ನೂ ಆಗಿಲ್ಲ. ಇದುವರೆಗೆ ಆ ಸೂಪರಿಂಟೆಂಡಿಂಗ್ ಇಂಜನಿಯರುಗಳು ಯಾವ ಲಾಭಕರವಾದ ಕೆಲಸವನ್ನು ಮಾಡಿದಂತೆಯೂ ಕಂಡುಬಂದಿಲ್ಲ. ಎಕನಾಮಿಕ್ ಇಲಾಖೆಯಲ್ಲಿ ವಿದ್ಯೆ ಮತ್ತು ಕೈಗಾರಿಕೆಯ ಶಾಖೆಯ ಸೆಕ್ರೆಟರಿ ಅನವಶ್ಯಕ. ಅವರು ಈಗ ಸೀಮೆಗೆ ಹೋಗಿದ್ದಾರೆ. ಅವರಿಲ್ಲದಿದ್ದರೂ ಕೆಲಸ ಸಾಗುತ್ತಿದೆ. ಆ ಸ್ಥಾನವನ್ನು ತಪ್ಪಿಸಿದರೆ ಕಷ್ಟವೇನೂ ಆಗುವ ಹಾಗಿಲ್ಲ.

ವಿದ್ಯಾಭ್ಯಾಸದ ಇಲಾಖೆಯಲ್ಲಿ ಲೋಕಲ್ ಫಂಡಿನಲ್ಲಿ ಜಮೆ ಆಗುವ ೮ ಲಕ್ಷ ಚಿಲ್ಲರೆ ರೂ. ಗಳನ್ನು ಎ. ವಿ. ಸ್ಕೂಲುಗಳ ಸ್ಥಾಪನೆಗೆ ಉಪಯೋಗಿಸಬೇಕೆಂದು ಬಜೆಟ್ಟಿನಲ್ಲಿ ಕಾಣಿಸೋಣವಾಗಿದೆ. ಈಗ ನೂರಾರು ಸ್ಥಳಗಳಲ್ಲಿ ಹೊಸ ಎ. ವಿ. ಸ್ಕೂಲುಗಳು ಆಗಬೇಕಾಗಿದೆ. ಅವುಗಳಿಗಾಗಿ ೫ ಲಕ್ಷ ರೂ. ಗಳನ್ನಾದರೂ ಸರ್ಕಾರದವರು ಪ್ರತ್ಯೇಕವಾಗಿ ವೆಚ್ಚಮಾಡಿ ಬೇಗನೆ ಹೊಸಸ್ಕೂಲುಗಳನ್ನು ಸ್ಥಾಪಿಸಿಕೊಡಬೇಕು. ಮತ್ತು ಕೈಗಾರಿಕೆಯ ಸ್ಕೂಲುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಫಾರಿನ್ ಸ್ಕಾಲರ್‌ಷಿಪ್ಪುಗಳಿಗೆ ಪ್ರತಿವರ್ಷವೂ ೧ ಲಕ್ಷ ರೂ. ಖರ್ಚಾಗುತ್ತದೆ. ಈ ಹಣವನ್ನು ಸಾಲದ ರೂಪವಾಗಿ ಕೊಡಬೇಕೇ ಹೊರತು ಧರ್ಮಾರ್ಥವಾಗಿ ಕೊಡಕೂಡದು. ಯಾಕಂದರೆ ಸೀಮೆಗೆ ಹೋಗಿ ವಿದ್ಯಾಭ್ಯಾಸಮಾಡಿ ಬಂದವರು ದೊಡ್ಡದೊಡ್ಡ ಸಂಬಳದ ಮೇಲೆ ಹೋಗುತ್ತಾರಾದುದರಿಂದ ಅವರುಗಳು ನಿರಾಯಾಸವಾಗಿ ಸಾಲವನ್ನು ತೀರಿಸಬಲ್ಲರು. ಅದುಕಾರಣ ಫಾರಿನ್ ಸ್ಕಾಲರ್‌ಷಿಪ್ಪುಗಳು ಸಾಲದ ರೂಪವಾಗಿಯೇ ಇರಬೇಕು. ಎಜುಕೇಷನಲ್ ಸೆಸ್ಸನ್ನು ಜಾರಿಮಾಡಬೇಕೆಂದು ಗೌರ್ನಮೆಂಟಿನವರು ಅಪ್ಪಣೆಕೊಟ್ಟಿದ್ದೀರಿ. ಈ ಸೆಸ್ಸನ್ನು ಪ್ರಜೆಗಳು ಅವಶ್ಯಕವಾಗಿ ಕೊಟ್ಟೇಕೊಡುತ್ತಾರೆ. ಏಕೆಂದರೆ ಪ್ರಜೆಗಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ೫೦ ಲಕ್ಷ ರೂ. ವರೆಗೆ ಖರ್ಚುಮಾಡುತ್ತಾರೆ. ಪಟ್ಟಣವಾಸಿಗಳು ರೂ. ಗೆ ೨ ಆಣೆಯಂತೆಯೂ, ಗ್ರಾಮಾಂತರದವರು ರೂ. ಗೆ ೧ ಆಣೆಯಂತೆಯೂ ಎಜ್ಯುಕೇಷನಲ್ ಸೆಸ್ಸನ್ನು ಕೊಡಬೇಕೆಂದು ವಿಧಿಸೋಣವಾಗಿದೆ. ಪಟ್ಟಣವಾಸಿಗಳಿಗೆ ಈಗಲೇ ನಾನಾತರದ ಸೆಸ್ಸುಗಳು ವಿಶೇಷವಾಗಿ ಬಿದ್ದಿವೆ. ಆದುದರಿಂದ ವ್ಯತ್ಯಾಸವಿಲ್ಲದೆ ಗ್ರಾಮಾಂತರದವರಂತೆಯೇ ಪಟ್ಟಣವಾಸಿಗಳಿಗೂ ಈ ಸೆಸ್ಸನ್ನು ೧ ಆಣೆಯಂತೆಯೇ ವಿಧಿಸಬೇಕು.

ಹೋಂ ಇಂಡಸ್ಟ್ರಿ ಕ್ಲಾಸುಗಳನ್ನು ಇದುವರೆಗೆ ಏರ್ಪಡಿಸಿದುದರಲ್ಲಿ ಅವು ಬಡಜನರಲ್ಲಿ ಜಾರಿಗೆ ಬರಲಿಲ್ಲ. ಶ್ರೀಮಂತರಲ್ಲಿ ಮಾತ್ರ ಜಾರಿಗೆ ಬಂದುವು. ನಾನೂ ಇನ್ನೊಬ್ಬ ದೊಡ್ಡಮನುಷ್ಯರೂ ಹೋಗಿ ಅವುಗಳ ಸ್ಥಿತಿಗತಿಯನ್ನು ಇನ್ಸ್‌ಪೆಕ್ಷನ್ ಮಾಡಿ ರಿಪೋರ್ಟು ಮಾಡಿದೆವು. ಅವು ಪ್ರಯೋಜನಕಾರಿಯಾಗಿಲ್ಲ. ಅವುಗಳನ್ನು ತೆಗೆದುಬಿಡತಕ್ಕದ್ದು ಅವಶ್ಯವಾಗಿದೆ. ಕಮರ್ಷಿಯಲ್ ಸ್ಕೂಲಿನಲ್ಲಿ ೬-೭ ಮಂದಿ ಮ್ಯಾಸ್ಟರುಗಳಿದ್ದಾರೆ. ಖರ್ಚು ಬಹಳ ಇದೆ. ಅಲ್ಲಿರುವ ವಿದ್ಯಾರ್ಥಿಗಳಾದರೊ ೪-೬ ಮಂದಿ ಮಾತ್ರ. ಅದುಕಾರಣ ಅದೂ ವಜಾ ಆಗಬೇಕು.

ದಿವಾನ್—ಅದನ್ನು ತೆಗೆದುಬಿಡಲು ಅಪ್ಪಣೆಯಾಗಿದೆ.

ಮೆಂಬರು—ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯಲ್ಲಿ ೩ ವರ್ಷದೊಳಗೆ ೭|| ಸಾವಿರ ರೂ. ನಷ್ಟವಾಗಿದೆ. ಹೀಗೆಯೇ ಬಿಟ್ಟರೆ ಸ್ವಲ್ಪಕಾಲದೊಳಗೆ ಇನ್ನೂ ಲಕ್ಷಾಂತರ ನಷ್ಟವಾಗಬಹುದು. ತಿಳಿದವರ ಮೂಲಕ ಅದರ ಲಾಭನಷ್ಟಗಳನ್ನು ಚೆನ್ನಾಗಿ ವಿಚಾರಮಾಡಿಸಬೇಕು. ಕೈಗಾರಿಕೆಯ ಅಭಿವೃದ್ಧಿಗೋಸ್ಕರವೆಂದು ಅನೇಕರಿಗೆ ೭-೮ ಲಕ್ಷ ರೂ. ಗಳ ಸಾಲವನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದರಲ್ಲಿ ಬಹಳಮಟ್ಟಿಗೆ ವಾಪಸ್ ಬರದೇ ನಿಂತುಹೋಗಿದೆ. ಮೀಟಿಂಗಿನಲ್ಲಿ ಇತರರು ತಡೆದರೂ ಸರ್ಕಾರಿ ಆಫೀಸರು
ಗಳೇ ಓಟುಗಳನ್ನು ಹೆಚ್ಚಾಗಿ ಕೊಟ್ಟು ೧-೨-೩ ಆವೃತ್ತಿಯಾದರೂ ಒಬ್ಬೊಬ್ಬರಿಗೆ ಸಾಲಗಳನ್ನು ಕೊಡಿಸಿಬಿಡುತ್ತಾರೆ. ಸಾಲಪಡೆದಿರುವವರ ಸೆಕ್ಯೂರಿಟಿಗಳನ್ನು ಪರೀಕ್ಷೆ ಮಾಡಬೇಕು. ನಷ್ಟವಾಗುವಂತಿದ್ದರೆ ಈಗ ಆಗಿರುವ ಲುಕ್ಸಾನು ಕೈಬಿಟ್ಟುಹೋದರೂ ಹೋಗಲೆಂದು ಮುಂದೆ ಕೊಡುವುದನ್ನು ಮನ್ನಾಮಾಡಬೇಕು. ಆ ಇಲಾಖೆಯಲ್ಲಿ ೨೨ ಮಂದಿ ಆಫೀಸರುಗಳಿದ್ದಾರೆ. ಅಷ್ಟು ಜನವೂ ಬೇಕೆ ಹೇಗೆ? ಎಂಬುದನ್ನು ವಿಚಾರಮಾಡಿಸಬೇಕು. ಕೋ|| ಆ|| ಸೊಸೈಟಿ ಶಾಖೆಯಲ್ಲಿ ರಿಜಿಸ್ಟ್ರಾರರ ಪರ್ಸನಲ್ ಅಸಿಸ್ಟೆಂಟ್ ಗಿರಿಯನ್ನು ವಜಾಮಾಡಬೇಕು. ಎಲಕ್ಟ್ರಿಕ್ ಶಾಖೆಯಲ್ಲಿ ೧೦ ತಿಂಗಳ ಕಾಲದೊಳಗೆ ೯೬ ಸಾವಿರ ರೂ. ಗಳ ದಸ್ತಾಗಿದೆ. ಯಾವ ಯಾವ ಉದ್ಯೋಗಿಗಳ ಔದಾಸೀನ್ಯದಿಂದ ಹೀಗಾಯಿತೋ ಅದನ್ನು ವಿಚಾರಮಾಡಿಸಿ ಅವರುಗಳಿಂದ ಈ ಹಣವನ್ನು ಭರ್ತಿಮಾಡಿಸಬೇಕು. ಪ್ರಜೆಗಳು ಮನೆಗಳಿಗೆ ಎಲಕ್ಟ್ರಿಕ್ ದೀಪಗಳನ್ನು ಇಡಿಸಿಕೊಳ್ಳುವಾಗ್ಗೆ ಆಗ ವಿಧಿಸೋಣವಾಗಿರುವ ಛಾರ್ಜೇ ಶಾಶ್ವತವೆಂದು ತಿಳಿದೂ, ಅದರ ಮೇಲೆ ಆಫೀಸರುಗಳು ಕೊಟ್ಟ ಪ್ರೋತ್ಸಾಹಕ್ಕೆ ಒಪ್ಪಿಯೂ ದೀಪಗಳನ್ನು ಇಡಿಸಿಕೊಂಡದ್ದಾಯಿತು. ಈಗ ಸರ್ಕಾರದವರು ಪ್ರಜೆಗಳಿಗೆ ತಿಳಿಸದೇನೆಯೇ ಸೇಕಡಾ ೪೦ ರಷ್ಟು ಛಾರ್ಜನ್ನು ಹೆಚ್ಚಿಸಿಬಿಟ್ಟಿದ್ದಾರೆ. ವ್ಯಾಪಾರಕ್ಕಾಗಿ ಎಲೆಕ್ಟ್ರಿಕ್ ಪವರನ್ನು ಉಪಯೋಗಿಸಿಕೊಳ್ಳುತ್ತಿದ್ದರೆ ಅದಕ್ಕೆ ಹೆಚ್ಚಿಸಬಹುದು. ದೀಪಗಳಿಗೆ ಉಪಯೋಗಿಸುವ ಶಕ್ತಿಯ ಮೇಲಣ ಛಾರ್ಜನ್ನು ಹೆಚ್ಚಿಸಬಾರದು. ಅದನ್ನು ವಜಾಮಾಡಬೇಕು. ಇನ್ಕಂಟ್ಯಾಕ್ಸ್ ಶಾಖೆಯಲ್ಲಿ ಬಹಳ ಅಕ್ರಮಗಳೂ ಜುಲುಮುಗಳೂ ನಡೆಯುತ್ತಿವೆ. ಅಪ್ಪೀಲುಗಳ ವಿಚಾರಣೆಯನ್ನು ಸಕ್ರಮವಾಗಿ ನಡೆಯಿಸುವುದೇ ಇಲ್ಲ. ಇದನ್ನೆಲ್ಲಾ ಕೂಡಲೇ ಸರಿಪಡಿಸಬೇಕು.

ಬ್ಯಾ|| ವಿಜಯದೇವ ಎಂ.ಎ. ಯವರು—ಈ ಸಲದ ಬಜೆಟ್ಟಿನಲ್ಲಿ ಅನೇಕ ಶಾಖೆಗಳಲ್ಲಿ ಕೋತಾಹಾಕಿ ಖರ್ಚನ್ನು ಕಡಿಮೆಮಾಡಿ ಆಯವ್ಯಯಗಳನ್ನು ಸಮರ್ಪಕವಾದ ಸ್ಥಿತಿಗೆ ತಂದಿರುವುದಕ್ಕಾಗಿ ಗೌರ್ನಮೆಂಟಿನವರಿಗೆ ವಂದಿಸಿ ಹೀಗೆ ಹೇಳಿದರು.-ರೈಲ್ವೆ ಇಲಾಖೆಯಲ್ಲಿ ಆದಾಯವಾದುದರಲ್ಲಿ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚಾಗಿಯೇ ಖರ್ಚಾಗಿ ಹೋಗುವಂತೆ ಕಾಣುತ್ತದೆ. ಇದರಲ್ಲಿ ವಿಪರೀತವಾಗಿ ಆಗಿಹೋಗುತ್ತಿರುವ ಖರ್ಚುಬಾಬನ್ನು ಕಡಿಮೆಮಾಡಬೇಕು.

೧ನೆ ಕೌನ್ಸಿಲರು—ಬ್ರಿಟಿಷ್ ಇಂಡ್ಯಾದೊಳಗೆ ರೈಲ್ವೆ ಆದಾಯದಲ್ಲಿ ಸೇಕಡಾ ೭೫ ರಿಂದ ೮೦ ರ ವರೆಗೆ ಖರ್ಚಾಗುತ್ತಿದೆ. ನಮ್ಮಲ್ಲಿ ಸೇಕಡಾ ೭೫ ರಿಂದ ೭೬ ರ ವರೆಗೆ ಆಗುತ್ತಿದೆ.

ಮಿ|| ವಿಜಯದೇವ—ಯೂನಿವರ್ಸಿಟಿಯಲ್ಲಿ ಕೆಲಪ್ರೊಫೆಸರುಗಳಿಗೆ ವಾರಕ್ಕೆ ೬-೭ ಗಂಟೆಯ ಮೇಲೆ ಕೆಲಸವಿಲ್ಲವೆಂದು ಕೇಳುತ್ತೇವೆ. ಅದನ್ನು ವಿಚಾರಮಾಡಬೇಕು. ಹೆಚ್ಚು ಕಾಲ ಕೆಲಸ ತೆಗೆದುಕೊಂಡು ಹೆಚ್ಚು ಇಸಮುಗಳನ್ನು ಕೋತಾ ಮಾಡಬಹುದು. ಅಗ್ರಿಕಲ್ಚರಲು, ಕೋಆಪರೇಟಿವ್ ಸೊಸೈಟಿ, ಇಂಡಸ್ಟ್ರಿಯಲ್ ಮತ್ತು ಕಾಮರ್ಸ್ ಈ ಮೂರು ಶಾಖೆಗಳನ್ನೂ ಸೇರಿಸಿ ಒಬ್ಬ ಅಧಿಕಾರಿಗೆ ವಶಪಡಿಸಿದರೆ ಲಕ್ಷಾಂತರ ರೂ. ಗಳ ವ್ಯಯವು ಮಿಗಬಹುದು. ಕಮ್ಯುಟೇಷನ್ ಪೆನ್ಷನನ್ನು ವಜಾಮಾಡಿಬಿಡಬೇಕು. ಉದ್ಯೋಗಿಗಳಿಗೆ ೫-೬ ತೆರದ ಅಲೋಯನ್ಸುಗಳು ಸಲ್ಲುತ್ತಿವೆ. ತಪ್ಪಿಸಬೇಕು.

ಮಿ|| ವೇಮಾರಡ್ಡಿಯವರು—ಗ್ರಾಮಸ್ಥರಿಗೆ ಸಾಗುವಳಿಗೆ ದೊರೆಯತಕ್ಕ ಖರಾಬು ಜಮೀನುಗಳ ವಿವರವೇ ತಿಳಿಯುವುದಿಲ್ಲ. ಪ್ರತಿ ಗ್ರಾಮಗಳಲ್ಲೂ ಸಾಗುವಳಿಗೆ ಲಾಯಖಾದ ಜಮೀನು, ಖರಾಬು ಜಮೀನು, ವ್ಯವಸಾಯಕ್ಕೆ ಬಂದ ಜಮೀನು ಇವುಗಳ ತಃಖ್ತೆಗಳನ್ನು ಬರೆಯಿಸಿ ಗ್ರಾಮಗಳ ಚಾವಡಿಗಳಲ್ಲಿ ಯಾವಾಗಲೂ ತಗಲುಹಾಕಿದ್ದು ಅದನ್ನು ಎಲ್ಲರೈತರಿಗೂ ನೋಡಿ ತಿಳಿಯುವಂತೆ ಮಾಡುವುದಲ್ಲದೆ ಗ್ರಾಮಗಳಿಗೆ ಬರುವ ಪ್ರತಿಯೊಬ್ಬ ಇನ್ಸ್‌ಪೆಕ್ಷನ್ ಆಫೀಸರೂ ಅದನ್ನು ನೋಡಿ ಷರಾ ಬರೆಯುವಂತೆ ಏರ್ಪಡಿಸಬೇಕು. ಹೀಗಾದರೆ ಪಾಳುಬಿದ್ದಿರುವ ಹಲವು ಜಮೀನುಗಳು ಕಾಲಕಾಲಕ್ಕೆ ವ್ಯವಸಾಯಕ್ಕೆ ಬರಲೂ, ಅದರಿಂದ ಸಂಪದಭಿವೃದ್ಧಿಗೂ ಸರ್ಕಾರದ ಆದಾಯಾಭಿವೃದ್ಧಿಗೂ ದಾರಿಯಾಗುತ್ತದೆ. ಅಗ್ರಿಕಲ್ಚರಲ್ ಇಲಾಖೆಯ ಸಿಬ್ಬಂದಿಯಲ್ಲಿ ಬಹುಭಾಗವು ದುಂದಾಗಿ ವ್ಯರ್ಥವಾಗುತ್ತದೆಯೆಂದು ಕಾಣುತ್ತದೆ. ಅದನ್ನು ತಪ್ಪಿಸಿ, ಆ ಖರ್ಚಿನ ಬಹುಭಾಗವನ್ನು ನಿಜವಾಗಿ ವ್ಯವಸಾಯಗಾರರ ಕಾರ್ಯಗಳಿಗೆ ಸಹಾಯವಾಗುವಂತೆ ಒದಗಿಸಬೇಕು. ಗ್ರಾಮಾಂತರ ರೈತರುಗಳ ಮೇಲೆ ವಿದ್ಯಾಭ್ಯಾಸದ ಸೆಸ್ಸನ್ನು ಹಾಕಬಾರದು. ಈಗಲೇ ಅವರುಗಳ ಮೇಲೆ ಕಂದಾಯದ ಭಾರವು ಹೆಚ್ಚಾಗಿದೆ. ಮತ್ತು ರೈತರುಗಳ ಸ್ಥಿತಿಯು ಬಹಳ ಹೀನವಾಗಿದೆ.

ಮಿ|| ಅಬ್ದುಲ್‌ರಹೀಂರವರು—ಈಗಿರುವ ತಾಲ್ಲೂಕುಗಳ ವಿಸ್ತಾರವನ್ನು ಹೆಚ್ಚಿಸಿ ತಾಲ್ಲೂಕುಗಳ ಸಂಖ್ಯೆಯನ್ನು ಕಡಿಮೆಮಾಡಿದರೆ ಖರ್ಚು ಕಡಿಮೆಯಾಗುತ್ತದೆ. ರೈಲ್ವೆ ಇಲಾಖೆಯಲ್ಲಿ ಸೇಕಡಾ ೩೦ ರಷ್ಟು ಸರ್ಕಾರದ ಕೈಸೇರದೆ ಅನ್ಯಾಯವಾಗಿ ಹೋಗುತ್ತಿದೆ. ಅದನ್ನು ಕ್ರಮಪಡಿಸಬೇಕು. ಎಜುಕೇಷನ್ ಸೆಸ್ಸನ್ನು ಬೆಂಗಳೂರು ಮೈಸೂರು ನಿವಾಸಿಗಳಿಗೆ ಹೆಚ್ಚಾಗಿ ಎಂದರೆ ರೂ. ಗೆ ೨ ಆಣೆಯಂತೆ ಹಾಕುವುದೇ ನ್ಯಾಯ. ಅವರಿಗೆ ವಿದ್ಯಾಭ್ಯಾಸದ ಅನುಕೂಲ್ಯಗಳು ವಿಶೇಷವಾಗಿ ಕಲ್ಪಿಸಲ್ಪಟ್ಟಿವೆ. ಚನ್ನಪಟ್ಟಣಕ್ಕೆ ಜನಾನಾ ಆಸ್ಪತ್ರೆಯನ್ನೇರ್ಪಡಿಸಿಕೊಡಬೇಕು.

ಮ|| ಕಾಳಪ್ಪನವರು—ಚಿಕ್ಕಜಾಜೂರು-ಚಿತ್ರದುರ್ಗ ರೈಲ್ವೆಯು ಪ್ರಜೆಗಳಿಗೆ ಬಹಳ ಉಪಯೋಗಕರವಾಗಿದೆ. ಆದರೆ ಥ್ರೂಬುಕಿಂಗ್ ಏರ್ಪಾಡು ಆಗಿಲ್ಲ. ಬಂಡಿಗಳು ಸಾಲವು. ಈ ಸಲದ ಬಜೆಟ್ಟಿನಲ್ಲಿ ಅದಕ್ಕೆ ಏರ್ಪಾಡಿಡಬೇಕು.

೧ನೆ ಕೌನ್ಸಿಲರು—ಏರ್ಪಾಡು ಮಾಡುತ್ತಿದ್ದಾರೆ.

ಮ|| ಕಡಬದ ಉಚ್ಚವೀರೇಗೌಡರು—ಯಾವ ಹೊರೆಯೂ ಮೊದಲು ರೈತರ ಮೇಲೆ ಬೀಳುತ್ತದೆ. ಆದರೆ ಪ್ರಯೋಜನವನ್ನು ಹೊಂದುವವರು ಯಾರೋ ಆಗುತ್ತಾರೆ. ವಿದ್ಯಾಪ್ರಯೋಜನವು ರೈತರಿಗೆ ಕಡಿಮೆ. ಆದರೆ ಈಗ ವಿದ್ಯಾಭ್ಯಾಸದ ಸೆಸ್ಸನ್ನು ಬೇರೆ ಅವರ ಮೇಲೆ ಹೊರಿಸಬೇಕೆಂದು ಅಪ್ಪಣೆ ಕೊಡಿಸಿದ್ದೀರಿ. ಈಗಲೇ ಕಂದಾಯವನ್ನು ರೈತರು ತೆರಲಾರರು. ಅವರಿಗೆ ಬಹಳ ಬಡತನ. ಅನೇಕರು ಹಿಟ್ಟುಬಟ್ಟೆಗೇ ತಾಪತ್ರಯಪಡುತ್ತಿದ್ದಾರೆ. ಅವರಿಂದ ಭೂಕಂದಾಯವನ್ನು ವಸೂಲ್ಮಾಡುವುದರಲ್ಲಿ ಪಟೇಲರ ಕಷ್ಟವನ್ನು ಹೇಳತೀರದು. ಆದಕಾರಣ ರೈತರ ಮೇಲೆ ಈ ಹೊಸ ಸೆಸ್ಸನ್ನು ಹೇರಕೂಡದು.

ತಾ|| ೨೦-೬-೨೧ ರ ನಡವಳಿಕೆ.

ಮ|| ಕೆ. ಸುಬ್ರಾಯಶೆಟ್ಟಿ ಬಿ. ಎ., ಬಿ. ಎಲ್. ರವರು—ಅಲೋಯನ್ಸು ಬಾಬುಗಳನ್ನು ರಿವೈಜ್ ಮಾಡುವುದು ಅತವಶ್ಯಕ. ಆ ಬಾಬಿನ ಖರ್ಚು ಬಹಳ ಹೆಚ್ಚಿಹೋಗುತ್ತಿದೆ. ಮತ್ತು ಸಿಬ್ಬಂದಿ ಖರ್ಚನ್ನೂ ಸೇಕಡ ೨೫ ರಂತೆ ಕಡಿಮೆಮಾಡಬಹುದು. ಚೀಫ್ ಕೋರ್ಟಿನಲ್ಲಿ ಮೂವರು ಜಡ್ಜರಿಗೂ ತಕ್ಕಷ್ಟು ಕೆಲಸವಿದೆಯೆ? ಒಬ್ಬರನ್ನಾದರೂ ವಜಾಮಾಡಬಹುದು. ಹಾಗಲ್ಲದಿದ್ದರೆ ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರ ಸ್ಥಾನವನ್ನಾದರೂ ತೆಗೆದುಬಿಡಬಹುದು. ಸಣ್ಣಸಣ್ಣ ಸೆಷನ್ ಕೇಸನ್ನು ಸಬ್ ಜಡ್ಜ್ ಕೋರ್ಟಿಗೆ ವರ್ಗಾಯಿಸಬಹುದು. ಚೀಫ್ ಕೋರ್ಟಿನಲ್ಲಿ ಇಬ್ಬರು ಜಡ್ಜರಿಂದ ಅವರವರಿಗೆ ತೀರ್ಪಿನಲ್ಲಿ ಭಿನ್ನಾಭಿಪ್ರಾಯ ಬಂದಾಗ್ಗೆ ಡಿಸ್ಟ್ರಿಕ್ಟ್ ಜಡ್ಜರನ್ನು ೩ ನೆಯವರಾಗಿ ಅಂಥ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಬಹುದು. ಹೀಗೆ ಮಾಡುವುದರಿಂದ ೬-೭ ಸಾವಿರ ರೂ. ಗಳು ಉಳಿಯಬಹುದು.

೨ನೆ ಕೌನ್ಸಿಲರು—ಈಗಲೇ ಚೀಫ್ ಕೋರ್ಟಿನಲ್ಲಿ ೬೦೦ ಕೇಸುಗಳು ಬಾಕಿ ಬಿದ್ದಿವೆ.

ಮೆಂಬರು—ಎಲಕ್ಟ್ರಿಕ್ ಇಲಾಖೆಯಲ್ಲಿ ಆದಾಯವು ಹೆಚ್ಚಾಗಿದೆ ಎಂದು ಸಿಬ್ಬಂದಿಯನ್ನು ಹೆಚ್ಚಿಸಿಕೊಂಡಿದ್ದಾರೆ. ಉದಾಹರಣೆಯಾಗಿ ಯಾರ ಮನೆಯಲ್ಲಾದರೂ ಕರೆಂಟ್ ಕೆಟ್ಟುದರಿಂದ ಎಲಕ್ಟ್ರಿಕ್ ಆಫೀಸಿಗೆ ಸುದ್ದಿಕೊಟ್ಟರೆ ಒಬ್ಬರು ಬಂದು ನೋಡುವಕೆಲಸಕ್ಕೆ ಒಟ್ಟಿಗೆ ೫-೬ ಜನ ಬರುತ್ತಾರೆ. ಸಿಬ್ಬಂದಿ ಹೆಚ್ಚುಮಾಡಿಲ್ಲದಿದ್ದರೆ ಇಷ್ಟು ಜನ ಹೀಗೆ ಬರುತ್ತಿರಲಿಲ್ಲ. ಅದನ್ನು ವಿಮರ್ಶಿಸಿ ಸಿಬ್ಬಂದಿ ಕಡಿಮೆ ಹಾಕಬೇಕು. ಎಜ್ಯುಕೇಷನಲ್ ಮೆಮೋರಾಡಂ ಪ್ರಕಾರ ಅದರ ಏರ್ಪಾಟಿಗೆ ಮೊದಲ ವರ್ಷಕ್ಕೆ ೧೪ ಲಕ್ಷ ರೂ. ಗಳನ್ನು ಖರ್ಚಿಗೆ ಏರ್ಪಡಿಸಬೇಕಾಗಿತ್ತು. ಬಜೆಟ್ಟಿನಲ್ಲಿ ೪-೫ ಲಕ್ಷ ರೂ. ನ್ನು ಕೊಟ್ಟಿದ್ದಾರೆ. ಅದೂ ಲೋ|| ಬೋರ್ಡುಗಳಿಗೆ ವಹಿಸಿದ್ದಾರೆ. ಅವರಲ್ಲಿ ಹಣದಕೊರತೆ, ಆ ಹಣವನ್ನು ಬೋರ್ಡುಗಳು ಕೊಡುತ್ತವೋ ಇಲ್ಲವೋ. ಅವು ಒದಗಿಸಲಾರದೆ ಹೋದರೆ ಮೆಮೊರಾಡಂ ಏರ್ಪಾಟು ಜಾರಿಗೆ ಬರುವುದಕ್ಕೇ ಇಲ್ಲವಾಗುವುದು. ಇನ್ಕಂ ಟ್ಯಾಕ್ಸನ್ನು ವಿಧಿಸುವಾಗ್ಗೆ ಆ ಬಾಬಿನ ಆದಾಯವನ್ನು ವಿದ್ಯಾಪ್ರಸಾರಕ್ಕೇ ಉಪಯೋಗಿಸುತ್ತೇವೆಂದು ಅಪ್ಪಣೆ ಕೊಡಿಸಿದ್ದಿರಿ. ಈಗ ಹಾಗೆ ಮಾಡಬೇಕು. ಮತ್ತು ಗಂಧದೆಣ್ಣೆ ಬಾಬಿನಲ್ಲಿ ಹೆಚ್ಚು ಆದಾಯ ಬರುತ್ತಿದೆ. ಈಗ ಕಾರಣಾಂತರದಿಂದ ಕಡಿಮೆಯಾಗಿದ್ದರೂ ಮುಂದೆ ಗಿರಾಕಿ ಹೆಚ್ಚಿ ವಿಶೇಷಾದಾಯವಾಗಬಹುದು. ಅದನ್ನಾದರೂ ಮೆಮೊರಾಂಡಂ ಜಾರಿ ಖರ್ಚಿಗೆ ಉಪಯೋಗಿಸಬೇಕು. ಅಲ್ಲದೆ ಕಂಟೋನ್ಮೆಂಟ್ ಉಳಿದ ಬಾಬಿನ ಹಣವು ಮುಂದೆ ಬಂದರೆ ಅದನ್ನು ಈ ಬಾಬಿಗೇ ಉಪಯೋಗಿಸಬೇಕು. ಯಾವುದೂ ಒದಗದಿದ್ದರೆ ಸಾಲವನ್ನಾದರೂ ಮಾಡಿ ಈ ಬಾಬಿಗೆ ಉಪಯೋಗಿಸಬೇಕು. ಉತ್ತರತ್ರ ಕೆಲವು ಬಾಬುಗಳಲ್ಲಿ ಆದಾಯವು ಹೆಚ್ಚಾಗುತ್ತ ಬಂದಂತೆ ಆ ಸಾಲವನ್ನು ತೀರಿಸಿಕೊಳ್ಳಬಹುದು. ವಿದ್ಯಾಭ್ಯಾಸ ಸಂಬಂಧದ ಹಾಸ್ಟಲ್ ಸ್ಥಾಪನೆ ಮೊದಲಾದುವುಗಳಿಗೆ ಪ್ರಜೆಗಳು ಧರ್ಮಮಾಡಿದರೆ ಅದರ ಸಮಾರ್ಧದ್ರವ್ಯವನ್ನು ಸರ್ಕಾರದವರು ಕೊಡುವುದುಂಟಷ್ಟೆ. ಅದಕ್ಕಾಗಿ ಬೇರೆ ಮೊಬಲಗನ್ನು ಪ್ರತ್ಯೇಕವಾಗಿ ಬಜೆಟ್ಟಿನಲ್ಲಿ ವಿಂಗಡಿಸಿಟ್ಟಿದ್ದರೆ ಇನ್ನಷ್ಟು ಪ್ರೋತ್ಸಾಹವುಂಟಾಗಿ ಬಹು ಜನರು ಆ ಬಾಬಿಗೆ ಧರ್ಮಮಾಡಲು ಅವಕಾಶವಾಗುತ್ತದೆ. ಈಗಿರುವ ಅಸಿಸ್ಟೆಂಟ್ ಕಮಿಷನರುಗಳ ಸಂಖ್ಯೆಯು ಹೆಚ್ಚು. ಅವರಲ್ಲಿ ೩೯ ಮಂದಿಯನ್ನು ತೆಗೆದುಬಿಡಬಹುದೆಂದು ಫೈನಾನ್ಸ್ ಕಮಿಟಿಯವರು ಸರ್ಕಾರಕ್ಕೆ ಶಿಫಾರಸ್ ಮಾಡಿದ್ದಾರೆ. ಅದರಂತೆ ನೆರವೇರಿಸಬೇಕು. ಗೌರ್ನಮೆಂಟಿನವರು ಬೆಂಗಳೂರು ಮೈಸೂರು ಮ್ಯುನಿಸಿಪಾಲಿಟಿಗಳಿಗೆ ಗ್ರ್ಯಾಂಟ್ ಕೊಡುವುದನ್ನು ನಿಲ್ಲಿಸಿಬಿಡಬೇಕು. ಕಂಟೋನ್ಮೆಂಟಿನವರು ಖರ್ಚು ಕಳೆದು ೯ ಲಕ್ಷ ಚಿಲ್ಲರೆಯನ್ನು ಉಳಿಯಿಸಿದ್ದಾರೆ. ಈ ನಮ್ಮ ಬೆಂಗಳೂರು ಮೈಸೂರು ಮ್ಯುನಿಸಿಪಾಲಿಟಿಗಳವರೂ ಅಷ್ಟು ಇಷ್ಟನ್ನು ಉಳಿಯಿಸಬಹುದು. ಹೆಚ್ಚು ಧಾರಣೆಯ ಕಷ್ಟಕ್ಕಾಗಿ ಉದ್ಯೋಗಿಗಳಿಗೆ ಅಲೋಯನ್ಸ್ ಕೊಡುವುದಕ್ಕಾಗಿ ಹಿಂದಣ ವರ್ಷ ೨೬ ಲಕ್ಷ ರೂ. ಗಳನ್ನು ವಿನಿಯೋಗಿಸಿದಿರಿ. ಈ ವರ್ಷಕ್ಕೆ ಅದರಲ್ಲಿ ೧೦ ಲಕ್ಷವನ್ನು ಕೋತಾಹಾಕಿದ್ದೀರಿ. ೫೦ ರೂ. ನೊಳಗಣ ಸಂಬಳದವರಿಗೆ ಪೂರ್ವದಲ್ಲಿ ಕೊಡುತ್ತಿದ್ದಷ್ಟು ಅಲೋಯನ್ಸನ್ನೇ ಕೊಡಬೇಕು.

ಆದಿದ್ರಾವಿಡ ಸಂಘ ಪ್ರತಿನಿಧಿ ಮಿ|| ಮುರಿಗೇಶಂಪಿಳ್ಳೆಯವರು—ಪ್ರೈಮರಿ ತರಗತಿಯಲ್ಲಿ ಓದುವ ಪಂಚಮರಿಗೆ ೨ ರೂ. ಸ್ಕಾಲರ್‌ಷಿಪ್ ಮಾಡಿದೆ. ಅದು ಸಾಲದು; ಇನ್ನಷ್ಟು ಹೆಚ್ಚಿಸಿಕೊಡಬೇಕು.

ಎಜ್ಯುಕೇಷನ್ ಇನ್|| ಜ|| ರವರು—ಸಣ್ಣ ತರಗತಿಗಳಿಗೆ ಅದಕ್ಕಿಂತಲೂ ಹೆಚ್ಚಿನ ಸ್ಕಾಲರ್‌ಷಿಪ್ಪನ್ನು ಕೊಡುವುದು ಸಾಧ್ಯವಲ್ಲ.

ಮೆಂಬರು—ಮೈಸೂರಿನಲ್ಲಿರುವಂತೆ ಬೆಂಗಳೂರಿನಲ್ಲೂ ಪಂಚಮರ ಬೋರ್ಡಿಂಗನ್ನು ಏರ್ಪಡಿಸಿಕೊಡಬೇಕು.

ಎ|| ಇನ್|| ಜ|| ರವರು—ತುಮಕೂರು ಚಿಕ್ಕಮಗಳೂರುಗಳಲ್ಲಿ ಪಂಚಮರ ಬೋರ್ಡಿಂಗನ್ನೇರ್ಪಡಿಸಬೇಕೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ. ಅಪ್ಪಣೆ ನೆರವೇರಿದ ಮೇಲೆ ಉಳಿದ ಸ್ಥಳಗಳ ವಿಷಯವನ್ನು ಆಲೋಚಿಸುತ್ತಾರೆ.

ಮೆಂಬರು—ಮೈಸೂರಿನಲ್ಲಿ ಎಲ್ಲೆಲ್ಲೂ ವಿದ್ಯುದ್ದೀಪಗಳು ಮಿರುಗುತ್ತವೆ. ಪಂಚಮರ ಬೋರ್ಡಿಂಗಿಗೆ ಅವು ಇಲ್ಲ. ಅಲ್ಲಿಗೂ ಹಾಕಿಸಿಕೊಟ್ಟರೆ ವಿದ್ಯಾರ್ಥಿಗಳು ರಾತ್ರಿಕಾಲದಲ್ಲಿ ಚನ್ನಾಗಿ ಅಭ್ಯಾಸಮಾಡಲು ಅನುಕೂಲವಾಗುತ್ತದೆ. ಅವರುಗಳಿಗೆ ಮಲಗಲು ಬರೀ ಚಾಪೆಕೊಡುತ್ತಾರೆ; ಸ್ವಲ್ಪ ಮೆತ್ತಗಿರುವ ಜಮಖಾನ ವಗೈರೆ ಕೊಟ್ಟರೆ ಅನುಕೂಲ. ಸಂಸ್ಥಾನಾದ್ಯಂತ ಪಂಚಮರಿಗೆ ಕುಡಿಯುವ ನೀರಿನ ಅನುಕೂಲ ಕಲ್ಪನೆಗಾಗಿ ಅಲಾಟ್ ಮಾಡಿದ್ದನ್ನೇ ಕೆಲವು ಕಡೆ ಖರ್ಚು ಮಾಡದೆ ಉಳಿಯಿಸಿಬಿಟ್ಟಿದ್ದಾರೆ; ಕೆಲಕಡೆ ಮಾತ್ರ ಏರ್ಪಡಿಸಿಕೊಟ್ಟಿದ್ದಾರೆ. ಮಿಲ್ಲರ್ ಕಮಿಟಿ ರಿಪೋರ್ಟಿನಲ್ಲಿ ಸರ್ಕಾರಿ ಉದ್ಯೋಗಸ್ಥಾನಗಳೊಳಗೆ ಸೇಕಡಾ ೫೦ ನ್ನು ಹಿಂದುಳಿದವರಿಗೆ ಕೊಡಬೇಕೆಂದು ನಮೂದಿದೆ. ಅದರಲ್ಲಿ ನಮ್ಮ ವರ್ಗದವರಿಗೇ ಪ್ರತ್ಯೇಕವಾಗಿ ಇಷ್ಟು ಸ್ಥಾನಗಳೆಂದು ನಿಯಮಮಾಡಬೇಕು. ನಮ್ಮವರೊಬ್ಬರು ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟವರು ಸೊರಬದಲ್ಲಿ ಎಕ್ಸೈಜ್ ಇಲಾಖೆಯಲ್ಲಿದ್ದಾರೆ. ಪ್ರೊಬೇಷನರಿ ಕೆಲಸ ಕೊಡುವಾಗ್ಗೆ ಅವರ ಕಡೆಗೆ ಗಮನ ಕೊಡಬೇಕು. ಬೋರ್ಡಿಂಗ್ ಸ್ಕೂಲುಗಳ ಅಭ್ಯಾಸ ಮುಗಿಸಿಕೊಂಡು ಮೇಲಣ ತರಗತಿಗೆ ಹೋದವರಿಗೆ ಸ್ಕೂಲು ಬುಕ್ಕುಗಳನ್ನು ಉಚಿತವಾಗಿ ಕೊಡಿಸಬೇಕು. ಪಂಚಮ ಬಾಲಿಕೆಯರಿಗೆ ಪ್ರತ್ಯೇಕ ಬೋರ್ಡಿಂಗ್ ಸ್ಕೂಲಾಗಬೇಕು.

೨ನೆ ಕೌನ್ಸಿಲರು—ಫಂಡಿಲ್ಲ.

ಮೆಂಬರು—ಸರ್ಕಾರದವರು ಪಂಚಮರಿಗೆ ಒದಗಿಸಿಕೊಟ್ಟಿರುವ ಸೌಕರ್ಯಗಳು ಇಂಥಿಂಥಾವೆಂದು ದೂರ ಪ್ರಾಂತದ ಗ್ರಾಮಾಂತರಗಳಲ್ಲಿರುವವರಿಗೆ ಗೊತ್ತೇ ಇಲ್ಲ. ರೆವಿನ್ಯೂ ಅಧಿಕಾರಿಗಳ ಮೂಲಕ ಅದನ್ನು ಚೆನ್ನಾಗಿ ಪ್ರಕಟಪಡಿಸಬೇಕು.

ಮಿ|| ಮುಹಮ್ಮದ್ ಇಸೂ—ಅವಶ್ಯವಾದ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡಿಸುವಂತೆ ಉರ್ದು ಭಾಷೆಗೂ ಪರಿವರ್ತನೆ ಮಾಡಿಸಲು ಬಜೆಟ್ಟಿನಲ್ಲಿ ಅಲಾಟ್‌ಮೆಂಟಾಗಬೇಕು.

೨ನೆ ಕೌನ್ಸಿಲರು—ಆ ತಜ್ವೀಜು ಇದೆ.

ಮ|| ದಾವಣಗೆರೆ ನಾರಾಯಣಶೆಟ್ಟರು—ಆರ್ಕಿಲಾಜಿಕಲ್, ಜಿಯಾಲಾಜಿಕಲ್, ಮುಜರಾಯಿ ಈ ಶಾಖೆಗಳನ್ನು ೩-೪ ವರ್ಷಗಳವರೆಗೆ ನಿಲ್ಲಿಸಿಬಿಟ್ಟರೆ ಹೆಚ್ಚು ಬಾಧಕವೇನೂ ಆಗುವುದಿಲ್ಲ. ಇವುಗಳನ್ನು ತೆಗೆಯುವುದರಿಂದ ಮಿಗುವ ಹಣವನ್ನು ಅವಶ್ಯಕವಾದ ಇಲಾಖೆಗಳ ಖರ್ಚಿಗೆ ಒದಗಿಸಿಕೊಳ್ಳಬಹುದು. ಭೂರಚನಶಾಖೆಯ ಪ್ರೋಗ್ರೆಸ್ಸೇನೂ ತೋರಿಲ್ಲ. ಅದನ್ನು ತೆಗೆದುಬಿಡಬಹುದು. ಹೊಸ ಸ್ಕೂಲುಕಟ್ಟಡಗಳ ಗ್ರ್ಯಾಂಟಿಗಾಗಿ ಬಜೆಟ್ ಅಲಾಟ್‌ಮೆಂಟು ಸಾಲದು. ದಾವಣಗೆರೆ ಹೈಸ್ಕೂಲಿನ ಕಳೆದ ವರ್ಷದ ರಿಜಲ್ಟು ಬಹಳ ಸಮರ್ಪಕವಾಗಿದೆ; ಹುಡುಗರ ಸಂಖ್ಯೆಯೂ ಸಮರ್ಪಕವಾಗಿದೆ. ಆ ಸ್ಕೂಲನ್ನು ಈಗ ನಾನು ಕಟ್ಟಿಸಿರುವ ಒಂದು ಥಿಯೇಟರಿನಲ್ಲಿ ಮಾಡುತ್ತಿದ್ದಾರೆ. ಅದರಲ್ಲಿ ಬೇಸಗೆಯಲ್ಲಿ ವಿಪರೀತ ದಗೆ; ಮಳೆಗಾಲದಲ್ಲಿ ಶೀತ. ಅದರಲ್ಲಿ ಸ್ಕೂಲು ಮಾಡುವುದು ಅನುಕೂಲವಲ್ಲ. ಸ್ಕೂಲಿಗೆ ಬೇರೆ ಕಟ್ಟಡವಾಗಿಲ್ಲ. ಈ ಥಿಯೇಟರಿಗೇ ಬಾಡಿಗೆ ಕೊಡುತ್ತಿದ್ದಾರೆ. ಈ ಸ್ಕೂಲು ಬಿಲ್ಡಿಂಗಿಗಾಗಿ ೧೦ ಸಾವಿರ ರೂ. ಗ್ರ್ಯಾಂಟು ಕೊಟ್ಟ
ದೆ. ಹಾಸ್ಟಲಿಗಾಗಿ ೧೫ ಸಾವಿರ ರೂ. ಗಳನ್ನು ಪ್ರಜೆಗಳು ಕೊಟ್ಟಿದ್ದಾರೆ. ಇವೆರಡಕ್ಕೂ ಗೌರ್ನಮೆಂಟ್ ಗ್ರ್ಯಾಂಟು ಕೊಟ್ಟಿಲ್ಲ. ದಾವಣಗೆರೆ ತಾ|| ದೇವರಬೆಳಕೆರೆ ರಿಪೇರಿ ಮಾಡಿಸಬೇಕು. ಇದರಿಂದ ಸರ್ಕಾರಕ್ಕೂ ಬಹಳ ರಾಜಾದಾಯವು ಬರುತ್ತದೆ. ೪-೫ ವರ್ಷದಿಂದ ಆ ಪ್ರಾಂತ ಕ್ಷಾಮವು ಇದ್ದೇ ಇದೆ.

ಸರ್ಕಾರದ ಉತ್ತರ—ಇದನ್ನು ಮಾಡಿಸಿದರೆ ರಾಜಾದಾಯವೇನೂ ಆಗುವುದಿಲ್ಲವೆಂದು ಗೊತ್ತಾಗಿದೆ.

ಮೆಂಬರು—ಕಣ್ಣಂಬಾಡಿಕಟ್ಟೆ, ಮಾರಿಕಣಿವೆಕೆರೆಗಳಂಥ ದೊಡ್ಡ ಪ್ರಾಜೆಕ್ಟುಗಳನ್ನು ಇನ್ನುಮುಂದೆ ಸ್ಯಾಂಕ್ಷನ್ ಮಾಡುವಾಗ್ಗೆ ಅಂಥ ಸಂಗತಿಯನ್ನು ಅಸೆಂಬ್ಲಿ ಮುಂದೆ ಚರ್ಚಿಸದೆ ಸ್ಯಾಂಕ್ಷನ್ ಮಾಡಬಾರದು. ಸಂಸ್ಥಾನದ ರೆವಿನ್ಯೂವನ್ನೆಲ್ಲಾ ಒಂದು ಕಡೆಗೇ ತಂದುಹಾಕಿಕೊಳ್ಳಬಾರದು. ಪೂರ್ವದವರು ಎಲ್ಲಪ್ರಾಂತದಲ್ಲೂ ನೀರಾವರಿಯು ಅನುಕೂಲವಾಗಿರಬೇಕೆಂದು ಕೆರೆಗಳನ್ನು ಸರ್ವತ್ರ ಕಟ್ಟಿಸಿದ್ದರು. ಈಗ ಆ ತೆರದ ಅಭಿಪ್ರಾಯವೇ ತಪ್ಪಿಹೋಗಿದೆ. ಎಲ್ಲೆಲ್ಲಿ ಹೊಸ ಕೆರೆಗಳನ್ನು ನಿರ್ಮಿಸಲು ಅನುಕೂಲವಿದೆಯೆಂಬುದನ್ನು ವಿಚಾರಮಾಡಿಸಿ ಕಟ್ಟಿಸಿಕೊಡಬೇಕು.

೧ನೆ ಕೌನ್ಸಿಲರು—ದೇಶದಲ್ಲಿ ೨೦ ಸಾವಿರ ಕೆರೆಗಳಿವೆ. ಇನ್ನು ಹೊಸಕೆರೆಗಳನ್ನು ಕಟ್ಟಲು ಆಗುವುದೇ ಇಲ್ಲ. ಎಲ್ಲೆಲ್ಲಿ ಕಟ್ಟಲು ಅನುಕೂಲಸ್ಥಳಗಳಿದ್ದುವೋ ಅಲ್ಲೆಲ್ಲಾ ಕಟ್ಟಆಗಿಹೋಗಿದೆ. ಇನ್ನು ಬೇರೆ ಹೊಸಕೆರೆಗಳನ್ನು ಕಟ್ಟಿದರೆ ಹಿಂದಣ ಕೆರೆಗಳಿಗೆ ನೀರು ಬರುವುದು ತಪ್ಪಿಹೋಗುತ್ತದೆ. ಅಥವಾ ಹೊಸವುಗಳಿಗೆ ನೀರು ಜಮಾಯಿಸುವುದೇ ಕಡಿಮೆ.

ಮೆಂಬರು—ಚಿತ್ರದುರ್ಗ ಡಿಸ್ಟ್ರಿಕ್ಟ್ ೧ರಲ್ಲಿ ವಿದ್ಯಾಪ್ರಸಾರ ಕಾರ್ಯಕ್ಕಾಗಿ ಪ್ರಜೆಗಳಿಂದಲೇ ೭೫ ಸಾವಿರ ರೂ. ಗಳಷ್ಟು ಸರ್ಕಾರದ ಖಜಾನೆಗೆ ಧರ್ಮಾರ್ಥವಾಗಿ ಕಟ್ಟಲಾಗಿದೆ. ಸರ್ಕಾರದವರು ತಮ್ಮ ಕಡೆಯ ಬಾಕಿ ಗ್ರ್ಯಾಂಟನ್ನು ಕೊಟ್ಟು ಕೆಲಸ ಮಾಡಿಸಿಲ್ಲ. ದಾವಣಗೆರೆಯವರು ಹೆಂಗುಸರ ಆಸ್ಪತ್ರೆಗಾಗಿ ಮ್ಯುನಿಸಿಪಾಲಿಟಿಯಿಂದ ೧೪ ಸಾವಿರ ರೂ. ಗ್ರ್ಯಾಂಟನ್ನು ಕೊಡಲು ರೆಜಲ್ಯೂಷನ್ ಮಾಡಿ ೪ ವರ್ಷಗಳಾದುವು. ಹಣವೂ ಸಿದ್ಧವಾಗಿದೆ. ಸರ್ಕಾರದವರು ಕೆಲಸ ಮಾಡಿಲ್ಲ. ಸಿಟಿ ಇಂಪ್ರೂವ್ಮೆಂಟಿಗೆಂದು ಬೆಂಗಳೂರು ಮೈಸೂರುಗಳಿಗೆ ಮಾತ್ರ ಸರ್ಕಾರದವರು ಪ್ರತಿವರ್ಷವೂ ೪-೫ ಲಕ್ಷವನ್ನು ಕೊಡುತ್ತಾರೆ. ಇನ್ನು ೪-೫ ವರ್ಷಗಳವರೆಗಾದರೂ ಅವುಗಳ ಗ್ರ್ಯಾಂಟನ್ನು ನಿಲ್ಲಿಸಿ, ದೇಶದ ಇತರ ಸ್ಥಳಗಳ ಇಂಪ್ರೂವ್ಮೆಂಟಿಗೆ ಒಂದಿಷ್ಟು ಗ್ರ್ಯಾಂಟನ್ನು ಕೊಡುತ್ತ ಬಂದರೆ ಎಷ್ಟೋ ಅನುಕೂಲವಾದೀತು. ಹರಿಹರವು ಬೊಂಬಾಯಿ ಅಧಿಪತ ಮತ್ತು ಮೈಸೂರು ದೇಶದ ಎಲ್ಲೆಯೊಳಗಿರುವ ದಕ್ಷಿಣಕಾಶಿಯೆಂದು ಪ್ರಸಿದ್ಧವಾದ ಕ್ಷೇತ್ರ. ಅಲ್ಲಿಗೆ ಬಹುಜನ ದೂರದೇಶದವರು ಬರುತ್ತಾರೆ. ಅದನ್ನು ಇಂಪ್ರೂವ್ ಮಾಡಿಸುವುದು ಅತ್ಯವಶ್ಯಕವಾಗಿದೆ. ಅದಕ್ಕೆ ಸ್ವಲ್ಪ ಗ್ರ್ಯಾಂಟನ್ನು ಏರ್ಪಡಿಸಬೇಕು. ರಾಣಿಬನ್ನೂರು ತಾಲ್ಲೂಕಿಗೆ ಬೊಂಬಾಯಿ ಗೌರ್ನಮೆಂಟಿನವರು ಮೋಟಾರು ನೇಗಿಲನ್ನು ತರಿಸಿಕೊಟ್ಟು ರೈತರಿಗೆ ಉಪಯೋಗಮಾಡಿದ್ದಾರೆ. ಅದರಿಂದ ಬಹಳ ಪ್ರಯೋಜನವಾಗುತ್ತಿದೆ. ರೈತರಿಂದ ಅದರ ಕ್ರಯದಮೊಬಲಗನ್ನು ಕಿಸ್ತುವಾರು ವಸೂಲ್ಮಾಡಿಕೊಳ್ಳುತ್ತಿದ್ದಾರೆ. ನಮ್ಮ ತಾಲ್ಲೂಕಿಗೂ ಹರಿಹರದ ತಾಲ್ಲೂಕಿಗೂ ಅಂಥ ನೇಗಿಲನ್ನು ತರಿಸಿ ಇಡಿಸಿಕೊಟ್ಟರೆ ೧೦ ಸಾವಿರ ಎಕರೆ ಭೂಮಿಗೆ ಉಪಯೋಗಿಸಿಕೊಳ್ಳಲು ನಾವು ಸಿದ್ಧರಾಗಿದ್ದೇವೆ. ಅದಕ್ಕೆ ನಾನೇ ಗ್ಯಾರಂಟಿ. ಈ ವಿಷಯದಲ್ಲಿ ಅಪ್ಲಿಕೇಷನ್ ಕೊಟ್ಟು ಎಷ್ಟೋ ಕಾಲವಾಗಿದೆ. ದಾವಣಗೆರೆಯಲ್ಲಿ ಈಗಿರುವ ಆಸ್ಪತ್ರೆ ಕಟ್ಟಡವು ಬಹಳ ಚಿಕ್ಕದು. ಹೊಸ ಕಟ್ಟಡವನ್ನು ಕಟ್ಟಿ ಅಲ್ಲಿಗೆ ಇದನ್ನು ಸಾಗಿಸಿ, ಈಗಿರುವುದನ್ನು ಹೆಂಗುಸರ ಆಸ್ಪತ್ರೆಗಾಗಿ ಉಪಯೋಗಿಸಿಕೊಳ್ಳುವಂತೆ ಮಾಡಿಕೊಡಬೇಕು.

ಸರ್ಕಾರ—ಸೀನಿಯರ್ ಸರ್ಜನರು ಬಂದು ನೋಡುತ್ತೇವೆಂದು ಹೇಳುತ್ತಾರೆ.

ಮ|| ಮೈಸೂರು ಮಠದ ಚನ್ನವೀರಪ್ಪನವರು—ದಾವಣಗೆರೆಯ ಹೈಸ್ಕೂಲುಕಟ್ಟಡವು ಬೇಗನೆ ಆಗಬೇಕು. ಅದರತೊಂದರೆ ಬಹಳವಾಗಿದೆ.

ದಿವಾನರು—ಆ ಕಟ್ಟಡಕ್ಕೆ ೪೦ ಸಾವಿರ ರೂ. ಗಳಾಗಬೇಕಂತೆ. ಈ ಸಲದ ಬಜೆಟ್ಟಿನಲ್ಲಿ ಒದಗಿಸಲು ಸಾಧ್ಯವಿಲ್ಲ.

ಮೆಂಬರು—ನಮ್ಮ ಊರಿನಲ್ಲಿ ೧೭ ಸಾವಿರ ಜನಸಂಖ್ಯೆಯಿದೆ. ಅದನ್ನನುಸರಿಸಿ ಪೋಲೀಸ್ ಇಸಮನ್ನು ಹೆಚ್ಚಿಸಿಕೊಡಬೇಕು. ಸಂಬಳವನ್ನು ಹೆಚ್ಚುಕೊಟ್ಟು ಉತ್ತಮವಾದ ಇಸಮುಗಳನ್ನು ಪೋಲೀಸ್ ಇಲಾಖೆಯಲ್ಲಿಡಬೇಕು.

ಮ|| ಕನ್ನಶೆಟ್ಟಪ್ಪನವರು—ಮೈಸೂರು ಬೆಂಗಳೂರು ಪಟ್ಟಣಗಳ ಇಂಪ್ರೂವ್ಮೆಂಟಿಗೆ ಕೊಡುವ ಗ್ರ್ಯಾಂಟನ್ನು ಇನ್ನುಮುಂದಾದರೂ ಕಡಿಮೆಹಾಕಿ, ಉಳಿಯುವುದನ್ನು ತಾಲ್ಲೂಕಾವಾರಿ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚಾಗಿ ಕೊಡಿಸುತ್ತ ಬರಬೇಕು. ಈ ಲಾಗಾಯ್ತು ೧೦ ವರ್ಷಗಳವರೆಗೆ ಈ ಕಾರ್ಯಕ್ಕಾಗಿ ವರ್ಷಕ್ಕೆ ೧ ಲಕ್ಷದಂತೆಯಾದರೂ ವಿನಿಯೋಗಿಸುತ್ತ ಹೋಗುವುದು ಅತ್ಯವಶ್ಯಕ. ರೈತರುಗಳ ಮೇಲೆ ವಿದ್ಯಾಭ್ಯಾಸದ ಸೆಸ್ಸನ್ನು ಹಾಕಬಾರದು. ಅವರುಗಳ ವಿದ್ಯಾಭ್ಯಾಸಕ್ಕೆ ಮಾಡಿಕೊಟ್ಟಿರುವ ಅನುಕೂಲವು ತೀರಸ್ವಲ್ಪ. ವಿದ್ಯಾಶಾಖೆಯಲ್ಲಿ ಡೆಪ್ಯುಟಿ ಇನ್|| ಜನರಲ್ಲರ ಸ್ಥಾನವನ್ನು ತೆಗೆದುಹಾಕಿಬಿಡಬೇಕು. ಜಾಯಿಂಟ್‌ಸ್ಟಾಕ್ ಕಂಪನಿಗಳು ಮತ್ತು ಕೋ-ಆಪರೇಟೀವ್ ಸೊಸೈಟಿಗಳು ಇವೆರಡು ಶಾಖೆಗಳನ್ನೂ ಒಟ್ಟುಗೂಡಿಸಿದರೆ ಖರ್ಚು ಕಡಿಮೆಯಾಗುತ್ತದೆ.

ದಿವಾನರು—ಇವೆರಡೂ ಪರಸ್ಪರ ವಿರುದ್ಧವಾದ ಇಲಾಖೆಗಳು. ಹೀಗೆ ಒಟ್ಟುಗೂಡಿಸಲಾಗದು?

ಮೆಂಬರು—ಸ್ಯಾನಿಟರಿ ಕಮಿಷನರ ಸ್ಥಾನವನ್ನು ತೆಗೆದುಬಿಟ್ಟು ಮೆಡಿಕಲ್ ಇಲಾಖೆಗೇ ಸೇರಿಸಿಬಿಡಬೇಕು.

೨ನೆ ಕೌನ್ಸಿಲರು—ಸ್ಯಾನಿಟರಿ ಕಮಿಷನರನ್ನು ತೆಗೆದುಬಿಟ್ಟರೆ ಸೀನಿಯರ್ ಸರ್ಜನರಿಗೆ ೮೦೦ ರೂ. ಸಂಬಳದ ಒಬ್ಬ ಅಸಿಸ್ಟೆಂಟರನ್ನು ಕೊಡಬೇಕಾಗುತ್ತದೆ. ೩೦೦-೪೦೦ ರೂ. ಸಂಬಳದವರು ಆ ಕೆಲಸಕ್ಕೆ ಸಿಕ್ಕುವಹಾಗಿಲ್ಲ. ಈ ಬಾಬಿನ ಅಲಾಟಿನಲ್ಲಿ ೩೫ ಸಾವಿರ ರೂ. ಕಡಿಮೆ ಹಾಕಿದ್ದೇವೆ.

ಮೆಂಬರು—ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟು ಅಷ್ಟು ಆದಾಯಕರವಾಗಿ ತೋರುವುದಿಲ್ಲ. ಅದನ್ನು ವಜಾಮಾಡಿಬಿಡಬಹುದು. ಆ ಇಲಾಖೆಯಿಂದ ರೈತರಿಗೆ ಆಗುವ ಪ್ರಯೋಜನ ಅಷ್ಟರಲ್ಲೇ ಇದೆ. ಅ|| ಕಮಿಷನರು ಮೊದಲಾದವರಿಗೆ ಮೈಲೇಜು ಕೊಡಿಸಬಹುದು. ಅಲೋಯನ್ಸನ್ನು ತಪ್ಪಿಸಬಿಡಬೇಕು. ೩೦೦ ರೂ. ಗೆ ಮೇಲ್ಪಟ್ಟ ಸಂಬಳದವರಿಗೆಲ್ಲಾ ಅಲೋಯನ್ಸನ್ನು ತೆಗೆದುಬಿಡಬೇಕು.

ಮ|| ಕಾಳಪ್ಪನವರು—ರೈತರಿಗೆ ವಿದ್ಯಾಭ್ಯಾಸದ ಸೆಸ್ಸನ್ನು ವಜಾಮಾಡಿಸಬೇಕು. ಸಂಸ್ಥಾನದಲ್ಲಿ ಜೈನರ ಜನಸಂಖ್ಯೆಯು ಬಹಳ ಕಡಿಮೆ. ಇವರಿಗೆ ಕೊಟ್ಟಿರುವ ಸ್ಕಾಲರ್‌ಷಿಪ್ ಸಂಖ್ಯೆಯೂ ಬಹಳ ಕಡಿಮೆ. ಅದನ್ನು ಹೆಚ್ಚಿಸಬೇಕು. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರುಗಳನ್ನು ವಜಾಮಾಡಬೇಕೆಂದು ಸರ್ಕಾರಕ್ಕೆ ಸೂಚನೆಕೊಡಲ್ಪಟ್ಟಿತು. ಅದು ಸರಿಯಲ್ಲ. ಆರೋಗ್ಯವೇ ಮುಖ್ಯಾಧಾರವು. ಅದು ದೇಶದಲ್ಲಿ ಬಹುಮಟ್ಟಿಗೆ ವೃದ್ಧಿಯಾಗಬೇಕಾಗಿದೆ. ಹೆಲ್ತ್ ಆಫೀಸರುಗಳನ್ನು ಇಡಲೇ ಬೇಕು. ಆದರೆ ಅವರುಗಳಿಂದ ಪ್ರಜೆಗಳಿಗೆ ಹೆಚ್ಚು ಪ್ರಯೋಜನವಾಗುವಂತೆ ಮಾಡಬೇಕು. ರೈಲ್ವೆ ಉತ್ಪತ್ತಿಯು ಆದಾಯಕ್ಕೂ ಖರ್ಚಿಗೂ ಸರಿಹೋಗುತ್ತಿದೆ. ಮಧ್ಯೆ ಬಹಳ
ಪೋಲಾಗುತ್ತದೆ. ಅದನ್ನೆಲ್ಲಾ ತಪ್ಪಿಸಿದರೆ ನಿಜವಾಗಿಯೂ ಈ ಇಲಾಖೆಯ ಉತ್ಪತ್ತಿ ಹೆಚ್ಚಾಗುತ್ತದೆ. ವಿದ್ಯಾಶಾಖೆಯ ಖರ್ಚನ್ನು ಕಡಿಮೆ ಮಾಡಲೇಕೂಡದು.

ಮಿ|| ಸಯ್ಯದ್‌ರಹೀಂರವರು—ಬಿದಿರು ಸೀಬನ್ನು ರೈತರು ಫ್ರೀಯಾಗಿ ಸಾಗಿಸಿಕೊಳ್ಳಲು ಅಪ್ಪಣೆ ಮಾಡಬೇಕು.

ಕನ್ಸರ್ವೇಟರು—ಅಪ್ಪಣೆ ಮಾಡಿದ್ದೇವೆ.

ಮೆಂಬರು—ಜಾರಿಯಲ್ಲಿಲ್ಲ. ರುಸುಂ ತೆಗೆದುಕೊಳ್ಳುತ್ತಲೇ ಇದ್ದಾರೆ.

೨ನೆ ಕೌನ್ಸಿಲರು—ರುಸುಂ ಕೊಟ್ಟ ರಸೀದಿಯನ್ನು ಇಟ್ಟುಕೊಂಡಿದ್ದು ಮೇಲ್ಪಟ್ಟ ಆಫೀಸರಿಗೆ ತಿಳಿಸಿರಿ; ಸರಿಪಡಿಸಿಕೊಡುತ್ತಾರೆ.

ಮೆಂಬರು—ಸುಪಾರಿ ಸೆಸ್ಸನ್ನು ವಜಾಮಾಡಿಸಿ ಕೊಡಬೇಕು. ಹಣಬೆರೋಗದ ನಿವೃತ್ತಿಗಾಗಿ ಮಿ|| ಕೋಲ್ಮನ್ ಸಾಹೇಬರು ನಡೆಸಿದ ಪರೀಕ್ಷೆಯಿಂದ ಏನೂ ಫಲವಾಗಲಿಲ್ಲ.

ಸರ್ಕಾರದ ಉತ್ತರ—ಇನ್ನೂ ಪರೀಕ್ಷೆಮಾಡುತ್ತಿದ್ದಾರೆ.

ಮೆಂಬರು—ಆರೋಗದ ನಿವಾರಣೆಯನ್ನು ನಾವೇ ಮಾಡಿಕೊಳ್ಳುತ್ತೇವೆ. ಸುಪಾರಿ ಸೆಸ್ಸನ್ನು ವಜಾಮಾಡಿಬಿಟ್ಟರೆ ಸಾಕು. ಬೀರೂರು ಶಿವಮೊಗ್ಗ ಸೆಕ್ಷನ್ನಿನ ಟ್ರೇನಿನಲ್ಲಿ ಘೋಷಾ ಗಾಡಿಯಿಲ್ಲ ಹಾಕಿಸಬೇಕು. ಆ ಗಾಡಿಯಿಲ್ಲದಿದ್ದುದರಿಂದ ಘೋಷಾ ಸ್ತ್ರೀಯರು ಬಂಡಿ ಹತ್ತದೆ ನಿಂತುಬಿಟ್ಟರೆ ಅವರ ಟಿಕೇಟನ್ನು ವಾಪಸ್ ತೆಗೆದುಕೊಂಡು ಹಣವನ್ನು ಕೊಡುವುದಿಲ್ಲ. ಅದನ್ನು ಕೊಡುವಂತೆ ಮಾಡಿಸಬೇಕು. ತಾಲ್ಲೂಕು ರೆವಿನ್ಯೂ ದಿವಾನರ ಇಸಂ ಕಡಿಮೆಮಾಡಬೇಕು.

ಉತ್ತರ—ಯೋಚನೆಯಲ್ಲಿದೆ.

ಮೆಂಬರು—ತರೀಕೆರೆಯಿಂದ ಬಾಬಾಬುಡನ್‌ಗಿರಿಗೆ ನೇರವಾಗಿ ರೋಡುಮಾಡಿಸಬೇಕು.

ಉ—ಏರ್ಪಾಟು ಆಗುತ್ತದೆ.

ಮೆಂಬರು—ಮಲೆನಾಡು ರೋಡುಗಳ ದುರವಸ್ಥೆಯನ್ನು ಹೇಳತೀರದು. ಒಂದೊಂದುಕಡೆ ೧ಅಡಿ ೨ಅಡಿ ಹಳ್ಳಗಳು ಬಿದ್ದಿರುತ್ತವೆ. ಮೇಲ್ಪಟ್ಟ ಅಧಿಕಾರಿಗಳು ಬಂದು ನೋಡುತ್ತಾರೆಂದು ತಿಳಿದು ಆ ರೋಡುಗಳ ಆರಂಭದಲ್ಲೇ -ನಾಟ್‌ಫಿಟ್ ಫಾರ್ ಮೋಟಾರ್ ಟ್ರಾಫಿಕ್- ಎಂದು ಬೋರ್ಡು ಹಾಕಿಬಿಡುತ್ತಾರೆ. ಸರಿ; ಇದರಿಂದ ಮೋಟಾರಿನ ಮೇಲೆ ಬರುವ ಅಧಿಕಾರಿಗಳು ಮುಂದಕ್ಕೆ ಹೋಗುವುದೇ ಇಲ್ಲ. ರೋಡುಗಳ ದುರವಸ್ಥೆ ಅವರ ಗೋಚರಕ್ಕೆ ಬರುವುದೇ ಇಲ್ಲ. ಆ ರಸ್ತೆಗಳಲ್ಲಿ ಸಂಚರಿಸುವ ಜನರು ಧೂಳನ್ನು ಕುಡಿದು ಎದೆಯಾರಿ ಬಂದು ಹಳ್ಳಗಳ ನೀರನ್ನು ಕುಡಿದುಬಿಡುತ್ತಾರೆ. ಕೂಡಲೇ ಶ್ಲೇಷ್ಮಜಾಡ್ಯಕ್ಕೆ ತುತ್ತಾಗಿ ಸಾಯುತ್ತಾರೆ. ತರೀಕೆರೆ ನರಸಿಂಹರಾಜಪುರದ ರೋಡನ್ನು ರಿಪೇರಿಮಾಡಿಸುತ್ತೇವೆಂದು ಸರ್ಕಾರದವರು ೪-೫ ವರ್ಷಗಳಿಂದಲೂ ಹೇಳುತ್ತಲೇ ಇದ್ದೀರಿ. ಬೇಗನೆ ಮಾಡಿಸಬೇಕು. ರಂಗಾಪುರದಹಳ್ಳಕ್ಕೆ ಸೇತು ಕಟ್ಟಿಸಬೇಕು. ೧೦-೨೦ ಹಳ್ಳಿಯವರು ಅದರ ಮೇಲೆ ತಿರುಗಾಡುತ್ತಾರೆ. ಭದ್ರಾವತೀ ಕಬ್ಬಿಣದ ಕಾರ್ಖಾನೆಗೆ ಸೌದೆಯನ್ನು ಕಂಟ್ರಾಕ್ಟರ ಮೂಲಕ ಒದಗಿಸಿಕೊಂಡರೆ ಲಾಭವೇ ಹೊರತು ಸರ್ಕಾರದವರು ಸ್ವಂತವಾಗಿ ಒದಗಿಸಿಕೊಳ್ಳುವ ಏರ್ಪಾಟನ್ನಿಟ್ಟಿರುವುದರಿಂದ ಬಹಳ ಲುಕ್ಸಾನ್ ಆಗುತ್ತಿದೆ. ಕೋ|| ಆ|| ಸೊಸೈಟಿ ಶಾಖೆಯಲ್ಲಿ ಅ|| ರಿಜಿಸ್ಟ್ರಾರರ ಸ್ಥಾನವನ್ನು ವಜಾಮಾಡಿಸಬೇಕು.

ಉತ್ತರ—ಅದು ಸಾಧ್ಯವಲ್ಲ.

ಮೆಂಬರು—ತರೀಕೆರೆ ಹಿಂದೂಸ್ಥಾನಿ ಟ್ರೇನಿಂಗ್ ಕ್ಲಾಸಿಗೆ ಬೇರೆ ಕಟ್ಟಡವಾಗಬೇಕು. ಈಗಿರುವುದು ಬಹಳ ಶೀತ. ಸರ್ಕಲ್ ಇನ್ಸ್‌ಪೆಕ್ಟರು, ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರು, ಡೆಪ್ಯುಟಿ ಇನ್ಸ್‌ಪೆಕ್ಟರು, ಅ|| ಡೆ|| ಇನ್ಸ್‌ಪೆಕ್ಟರು, ಇವರುಗಳೆಲ್ಲಾ ಒಂದೇ ಸಲ ಸರ್ಕೀಟಿಗೆ ಒಟ್ಟಿಗೆ ಬರುತ್ತಾರೆ. ಇವರೆಲ್ಲಾ ಹೀಗೆ ಬರುವುದು ಟಿ. ಎ. ಗಾಗಿ.

ದಿವಾನರು—ಇದನ್ನೆಲ್ಲಾ ತಪ್ಪಿಸಿ, ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರು ಮಾತ್ರ ಇನ್ಸ್‌ಪೆಕ್ಷನ್ ಕಾಲದಲ್ಲಿ ಬರುವಂತೆ ಮಾಡಿದೆ.

ಮೆಂಬರು—ಸರ್ಕಲ್ ಇನ್ಸ್‌ಪೆಕ್ಟರ ಉದ್ಯೋಗವೇ ಅವಶ್ಯಕವಿಲ್ಲ. ತರೀಕೆರೆಯಲ್ಲಿ ೧೦ ಸಾವಿರ ರೂ. ಖರ್ಚಿನಿಂದ ಹಾಸ್ಟಲ್ ಏರ್ಪಡಿಸಿದ್ದೇವೆ. ಇನ್ನೂ ಎ.ವಿ. ಸ್ಕೂಲು ಆಗಲಿಲ್ಲ. ಹೆಡ್‌ಕ್ವಾರ್ಟರುಗಳಲ್ಲಿ ಡಬ್ಬಲ್ ಗ್ರ್ಯಾಜುಯೇಟರುಗಳೇ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರಾಗಿರುವಂತೆ ಮಾಡಬೇಕು. ಫಾರೆಸ್ಟ್ ಇಲಾಖೆಯಲ್ಲಿ ೭೦೦ ರೂ. ಸಂಬಳದಿಂದ ಏಕ್ದಂ ೧೪೦೦ ರೂ. ಸಂಬಳಕ್ಕೆ ಯಾಕೆ ಬಡ್ತಿಮಾಡುತ್ತಾರೆ? ಡಿ|| ಕಮಿಷನರಂತೆ ೨೦೦-೨೦೦ ರೂ. ಗಳ ರೀತಿಯಿಂದ ಯಾತಕ್ಕೆ ಬಡ್ತಿ ಕೊಡಬಾರದು? ರೈತರಮೇಲೆ ವಿದ್ಯಾಭ್ಯಾಸದ ಸೆಸ್ಸನ್ನು ವಿಧಿಸಕೂಡದು. ವಿದ್ಯಾಪ್ರಸಾರಕ್ಕಾಗಿ ಹೆಚ್ಚು ಹಣಬೇಕೆಂದು ಸರ್ಕಾರದವರು ಹೇಳಿದ್ದರಿಂದ ನಾವು ಇನ್ಕಂಟ್ಯಾಕ್ಸಿಗೆ ಒಪ್ಪಿಕೊಂಡೆವು. ಈಗ ವಿದ್ಯಾಭ್ಯಾಸದ ಸೆಸ್ಸಿಗೆಬೇರೆ ಉಪಕ್ರಮಿಸಿದ್ದೀರಿ. ಇದನ್ನು ತಪ್ಪಿಸಬೇಕು.

ಮಿ|| ರಸೂಲ್‌ಖಾನ್ ರವರು—ಸಬ್ ಅಸಿಸ್ಟೆಂಟ್ ಸರ್ಜನರುಗಳ ಸಂಬಳವನ್ನು ಹೆಚ್ಚಿಸಬೇಕು. ಫಾರೆಸ್ಟ್ ಇಲಾಖೆಯವರು ಶ್ರೀಗಂಧವನ್ನು ಕಾಡಿನಲ್ಲೇ ಬಹಳ ನಿಲ್ಲಿಸಿಬಿಟ್ಟಿದ್ದಾರೆ. ತಂದು ಜಮಾಯಿಸಿ ಜೋಪಾನಮಾಡಬೇಕು. ಇಲ್ಲದಿದ್ದರೆ ಬೆಂಕಿಬಿದ್ದು ಬಹಳ ನಷ್ಟವಾಗುತ್ತದೆ. ಎಜುಕೇಷನ್ ಸೆಸ್ ಹಾಕಬಾರದೆಂಬುದು ನ್ಯಾಯವಲ್ಲ. ಅದನ್ನುಹಾಕಿ ಆದಾಯವನ್ನು ಹೆಚ್ಚಿಸಿಕೊಂಡರೇನೆಯೇ ವಿದ್ಯಾಭ್ಯಾಸಕ್ಕೆ ಅನುಕೂಲವಾದೀತು. ಎಕ್ಸೈಜ್ ಬಾಬಿನ ಅಧಿಕಾರವನ್ನು ರೆವಿನ್ಯೂ ಆಫೀಸರಿಗೇ ಸೇರಿಸಿಕೊಟ್ಟರೆ ಖರ್ಚು ಕಡಿಮೆಯಾದೀತು.

ಉತ್ತರ—೪ ಡಿಸ್ಟ್ರಿಕ್ಟುಗಳಲ್ಲಿ ಹಾಗೆಮಾಡಲು ಅಪ್ಪಣೆಮಾಡಿದೆ.

ಮೆಂಬರು—ಸೋಪಿನಕಾರ್ಖಾನೆ ಮೆಟಲ್‌ಫ್ಯಾಕ್ಟರಿ ಇವುಗಳ ಆದಾಯವನ್ನು ಬಜೆಟ್ಟಿನಲ್ಲಿ ತೋರಿಸಿಲ್ಲ. ಕಾರಣವೇನು?

ಉತ್ತರ—ಎಕ್ಸ್‌ಪ್ಲನೇಷನ್ ಕೇಳಿದ್ದೇವೆ. ಇನ್ನೂ ಬಂದಿಲ್ಲ. ಆದಕಾರಣ ಸೇರಿಸಿಲ್ಲ.

ಮೆಂಬರು—ಅಲೋಯನ್ಸುಗಳು ಹೆಚ್ಚಾಗಿವೆ. ಲೋವರ್‌ಸೆಕೆಂಡರಿ ಪರೀಕ್ಷೆಕೊಟ್ಟ ಪಂಚಮರ ಹುಡುಗರನ್ನು ಸೇಕ್ಡರಿ ಅಭ್ಯಾಸಕ್ಕೆ ಕಳುಹಿಸಬೇಕು. ಚಿಕ್ಕಜಾಜೂರು ಚಿತ್ರದುರ್ಗದ ರೈಲ್ವೆಯನ್ನು ಮಾರಿಕಣಿವೆಗೆ ಸೇರಿಸಬೇಕು.

ಮ|| ಫ್ರೆಂಚ್‌ರಾಕ್ಸ್ ರಂಗಯ್ಯನವರು—ಗ್ರಾಮಾಂತರಗಳಲ್ಲಿ ಗ್ರ್ಯಾಂಟಿನ್ನೇಡ್ ಸ್ಕೂಲುಗಳನ್ನು ತಪ್ಪಿಸಿಬಿಡಬೇಕು. ಎಲ್ಲ ಸರ್ಕಾರಿ ಸ್ಕೂಲುಗಳನ್ನಾಗಿ ಮಾಡಬೇಕು. ಗ್ರ್ಯಾಂಟಿನ್ನೇಡಾಗಿದ್ದರೆ ಅವುಗಳು ಕ್ರಮವಾಗಿ ನಡೆಯುವುದೇ ಇಲ್ಲ. ಬರೀ ಧನವ್ಯಯ. ಅವುಗಳ ಮ್ಯಾಸ್ಟರುಗಳು ವ್ಯರ್ಥವಾಗಿ ಸಂಬಳ ತೆಗೆದುಕೊಳ್ಳುತ್ತಾರೆ. ಅರ್ಥಸಾಧಕ ಪತ್ರಿಕೆ ನಿಂತುಹೋಗಿದೆ. ತಕ್ಕ ಪ್ರೋತ್ಸಾಹಕೊಟ್ಟು ಎಂದಿನಂತೆ ಪ್ರಕಟವಾಗುವಹಾಗೆ ಮಾಡಬೇಕು. ಅದರಿಂದ ಗ್ರಾಮಾಂತರದ ಜನರಿಗೆ ಬಹಳ ಪ್ರಯೋಜನವುಂಟು. ಸರ್ಕಾರಿ ಗೆಜೆಟ್ಟಿನಲ್ಲಿ ಇಂಗ್ಲೀಷಿನಲ್ಲಿ ಬರುವುದೆಲ್ಲಾ ಕನ್ನಡದಲ್ಲಿ ಬರುವುದಿಲ್ಲ. ಕೆಲವು ಬಂದರೂ ಕಾಲಾಂತರದಮೇಲೆ ಬರುತ್ತವೆ. ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಏಕಕಾಲದಲ್ಲೇ ಬರುವಂತೆ ಮಾಡಬೇಕು. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ನೀರಾವರಿಕೆಲಸಗಳಿಗೆ ಹಣವನ್ನು ಹೆಚ್ಚಾಗಿ ವಿನಿಯೋಗಿಸುತ್ತಲಿಲ್ಲ. ಕಟ್ಟಡಗಳಿಗೇ ಹೆಚ್ಚು ವಿನಿಯೋಗಿಸುತ್ತಾರೆ. ನೀರಾವರಿಕೆಲಸಗಳು ಹೆಚ್ಚಿದರೆ ಪ್ರಜೆಗಳಿಗೂ ಅನುಕೂಲವಾಗುತ್ತದೆ; ಸರ್ಕಾರಿ ಆದಾಯವೂ ವೃದ್ಧಿಯಾಗುತ್ತದೆ. ಆದಕಾರಣ ಕಟ್ಟಡಗಳಿಗೆ ಕಾಲುಭಾಗ

ವನ್ನೂ ನೀರಾವರಿಗೆ ಮುಕ್ಕಾಲುಭಾಗವನ್ನೂ ಖರ್ಚುಮಾಡುವಂತೆ ಏರ್ಪಡಿಸಬೇಕು. ಅ|| ಕಮಿಷನರುಗಳು ಸಬ್‌ರಿಜಿಸ್ಟ್ರಾರ್ ಆಫೀಸುಗಳ ಇನ್ಸ್‌ಪೆಕ್ಷನ್ ಮಾಡುವಂತೆ ಏರ್ಪಡಿಸಬೇಕು. ಹಲವುಕಡೆ ಸಬ್‌ರಿಜಿಸ್ಟ್ರಾರುಗಳು ಆಫೀಸಿಗೆ ೩ ಗಂಟೆಗೆ ಬರುತ್ತಾರೆ. ಪ್ರಜೆಗಳಿಗೆ ಬಹಳಹಿಂಸೆಯಾಗಿದೆ.

ಸರ್ಕಾರಿ ಉತ್ತರ—ಅಂಥ ತೊಂದರೆಗಳನ್ನು ಅರ್ಜಿಗಳ ಮೂಲಕ ಮೇಲಕ್ಕೆ ಬರೆದುಕೊಳ್ಳಿ.

ಮೆಂಬರು—ಕಾಗದಗಳ ಮೂಲಕ ಬರೆದುಬರೆದು ಸಾಕಾಗಿ ಏನೂ ಫಲವಾಗದಿದ್ದುದರಿಂದಲೇ ಇಲ್ಲಿ ಬಿನ್ನೈಸಿಕೊಳ್ಳುವುದು. ಕರಡುಸಾಲ (ಹೋಕುಬಾಕಿ) ಗಳ ಮೇಲೆ ಇನ್‌ಕಂಟ್ಯಾಕ್ಸು ವಿಧಿಸುವುದನ್ನು ತಪ್ಪಿಸಬೇಕು.

ಮ|| ಅನಂತಯ್ಯಶೆಟ್ಟರು—ಪಂಚಮರ ಸ್ಕಾಲರ್ಷಿಪ್ಪುಗಳನ್ನು ಹೆಚ್ಚಿಸಬೇಕು. ಎಲ್ಲೆಲ್ಲಿ ಆ ಜನಸಂಖ್ಯೆ ಹೆಚ್ಚಾಗಿದೆಯೋ ಅಲ್ಲಲ್ಲಿ ಸ್ಕಾಲರ್ಷಿಪ್ ಸಂಖ್ಯೆಯನ್ನು ಹೆಚ್ಚಿಸಬೇಕು. ಗ್ರಾಮ ವಿದ್ಯಾಭಿವೃದ್ಧಿಗೆ ಹೆಚ್ಚು ಹಣವನ್ನು ಅಲಾಟ್‌ಮಾಡಬೇಕು. ಹತ್ತಿಗೆ ಬೀಳುವ ಕೆಂಪುಹುಳ ಮಾವಿನ ಹೂವಿಗೆ ಬೀಳುವ ಜೋನಿರೋಗ ಇವುಗಳಿಗೆ ಅಗ್ರಿಕಲ್ಚರಲ್ ಶಾಖೆಯವರು ಯಾವ ಪರಿಹಾರವನ್ನೂ ಕಲ್ಪಿಸಿಕೊಡಲಿಲ್ಲ. ಕೋ|| ಆ|| ಸೊಸೈಟಿಗಳ ಶಾಖೆಯಲ್ಲಿ ವೆಚ್ಚವು ಹೆಚ್ಚಾಗಿದೆ. ಸಾಧ್ಯವಾದಷ್ಟು ತಗ್ಗಿಸಬೇಕು.

ಮಿ|| ಉಸ್ಮಾನ್‌ಖಾನರು—ಎಲೆಕ್ಟ್ರಿಕ್ ಇಲಾಖೆಯಲ್ಲಿ ಯೂನಿಟ್ ಛಾರ್ಜನ್ನು ಹೆಚ್ಚಿಸಿದ್ದು ಸರಿ, ಪಾಯಿಂಟ್ ಛಾರ್ಜನ್ನು ೬ ಆಣೆಯಿಂದ ೮ ಆಣೆ ಮಾಡಿರುವುದು ಸರಿಯಲ್ಲ. ಏವರಿಗೆ ಛಾರ್ಜುಹೆಚ್ಚಾದರೆ ಆಗಲಿ. ಲೈಟಿಂಗ್ ಛಾರ್ಜನ್ನು ಹೆಚ್ಚಿಸಬಾರದು. ವಿದ್ಯಾಭ್ಯಾಸದ ಪ್ರಯೋಜನವನ್ನು ಸರ್ಕಾರಿ ಅಧಿಕಾರಿಗಳು ವಿಶೇಷವಾಗಿ ಪಡೆಯುತ್ತಿದ್ದಾರೆ. ಅವರುಗಳ ಮಕ್ಕಳೇ ವಿಶೇಷವಾಗಿ ಓದುತ್ತಾರೆ. ಅಂಥವರುಗಳ ಸಂಬಳದಮೇಲೆ ರೂ. ಗೆ ೨ ಆಣೆಯಂತೆ ವಿದ್ಯಾಭ್ಯಾಸದ ಸೆಸ್ಸನ್ನು ವಿಧಿಸಬೇಕು. ಇಂಡಸ್ಟ್ರಿಯಲ್ ಅಗ್ರಿಕಲ್ಚರಲ್ ಮೊದಲಾದವುಗಳ ಅಭಿವೃದ್ಧಿಗಾಗಿಯೆಂದು ಸರ್ಕಾರದವರು ಎಷ್ಟು ಜನಕ್ಕೆ ಎಷ್ಟು ಸಾಲ ಕೊಟ್ಟಿದ್ದೀರಿ? ಅದರಲ್ಲಿ ಎಷ್ಟು ವಸೂಲಾಯಿತು? ಅದರಿಂದ ಎಷ್ಟು ಅಭಿವೃದ್ಧಿಕಾರ್ಯಗಳಾಗಿವೆ? ಸಾಲಕೊಟ್ಟು ಎಷ್ಟು ದಿವಸವಾಯಿತು? ಯಾವಾಗ ಅದು ವಾಪಸ್ ಬರುತ್ತದೆ? ಅಗ್ರಿಕಲ್ಚರಲ್ ಕೋ ಆಪರೇಟಿವ್ ಸೊಸೈಟಿಗಳ ಅವಸ್ಥೆಯೇನು? ಸೆಂಟರಲ್ ವರ್ಕ್‌ಷಾಪಿಗೆ ಬಹಳಹಣ ಖರ್ಚಾಗುತ್ತಿದೆ. ಅದರಿಂದ ಪಬ್ಲಿಕ್ಕಿಗೆ ಏನು ಪ್ರಯೋಜನವಾಗುತ್ತಿದೆ? ರೈಲ್ವೆ ವರ್ಕ್‌ಷಾಪು ಇರಬೇಕಾದದ್ದೇನೋ ಸರಿ. ಆದರೆ ಸೆಂಟರಲ್ ವರ್ಕ್‌ಷಾಪು ಏತಕ್ಕೆ? ೨ ಲವಾಜಮೆಯು ಬೇಕಿಲ್ಲ. ತಜ್ಞ ಎಕ್ಸ್‌ಪರ್ಟರನ್ನು ಕರೆಯಿಸಿ ಅದರ ಸ್ಥಿತಿಗತಿಯನ್ನು ವಿಚಾರಮಾಡಿಸುತ್ತೇವೆನ್ನುವುದು ಅಪ್ರಕೃತ. ಅದಕ್ಕೆ ಬರೀಖರ್ಚು. ಆ ಸೆಂಟರಲ್ ವರ್ಕ್‌ಷಾಪು ವ್ಯರ್ಥವೆಂಬುದನ್ನು ತಿಳಿಯುವುದಕ್ಕೆ ಎಕ್ಸ್‌ಪರ್ಟರೇ ಆಗಬೇಕಾಗಿಲ್ಲ. ಸೋಪುಕಾರ್ಖಾನೆ ವೀವಿಂಗ್ ಫ್ಯಾಕ್ಟರಿ ಇವುಗಳ ಸ್ಥಿತಿಯು ಅಸಮರ್ಪಕವಾಗಿದೆ; ಲಾಭಕರವಾಗಿಲ್ಲ. ಅವುಗಳಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಸಹ ಲಾಭವಿಲ್ಲ. ವೀವಿಂಗ್ ಫ್ಯಾಕ್ಟರಿಯಲ್ಲಿ ಕುಂಭಕೋಣಂ, ಕುತ್ತಾಲು, ಕೊಯಮುತ್ತೂರು ರವಿಂ ೬ ರಿಂದ ೩೦ ರೂ. ನೊಳಗಣ ಬೆಲೆಯ ಸೀರೆಗಳನ್ನು ತಯಾರ್ಮಾಡಿಸಿದರೆ ಬಹಳ ಲಾಭವುಂಟು. ಅದನ್ನು ಬಿಟ್ಟು ದೊಡ್ಡದೊಡ್ಡ ಶ್ರೀಮಂತರಿಗೆಮಾತ್ರ ಉಪಯೋಗಕ್ಕೆ ಬರುವ ಸೀರೆಗಳನ್ನು ಮಾತ್ರ ಮಾಡಿಸುತ್ತಾರೆ. ಸರ್ಕಾರಿ ಆಫೀಸರುಗಳಿಗೆ ಸಂಬಳದ ಮೇಲೆ ಅಲೋಯನ್ಸುಗಳು ಏತಕ್ಕೆ? ೨೫೦ ರೂ. ಸಂಬಳವುಳ್ಳವರಿಗೆ ಅದರಮೇಲೆ ೫೦ + ೫೦ + ೫೦ ಅಲೋಯನ್ಸುಗಳೇ? ಅಧಿಕಾರಿಗಳು ಹೊರಕ್ಕೆಹೋದರೆ ಡಬ್ಬಲ್ ಫಸ್ಟ್‌ಕ್ಲಾಸ್, ಡಬ್ಬಲ್ ಸೆಕೆಂಡ್‌ಕ್ಲಾಸ್ ರೈಲ್ವೆಟಿಕೆಟ್ ಛಾರ್ಜನ್ನು ಕೊಡುವುದೇಕೆ? ಸಿಂಗಲ್‌ಛಾರ್ಜನ್ನು ಕೊಡಿ. ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಬಳಿಯಲ್ಲಿ ಮೈನರ್ ಮ್ಯುನಿಸಿಪಾಲಿಟಿಗಳಿಗೆಸಂಬಂಧಪಟ್ಟ ಗುಮಾಸ್ತರು ಇಬ್ಬರು ಇರಬೇಕಾದುದಿಲ್ಲ. ಒಬ್ಬರು ಸಾಕು. ಇದರಿಂದ ಸಾವಿರಾರು ರೂಪಾಯಿ ಖರ್ಚು ಮಿಗುತ್ತದೆ.

ಮ|| ವೆಂಕಟಮುನಿಶೆಟ್ಟರು—ವರಮಾನದ ತೆರಿಗೆಯನ್ನು ಅವರವರು ಕೊಟ್ಟ ಲೆಕ್ಕದ ಮೇಲೆ ತೆಗೆದುಕೊಳ್ಳದೆ ಹೆರವರ ಮಾತು ಕೇಳಿಕೊಂಡು ೧ಕ್ಕೆ ಹತ್ತಾಗಿ ವಸೂಲ್ಮಾಡಿಕೊಳ್ಳುತ್ತಾರೆ. ಲೆಕ್ಕದ ಸಮಜಾಯಿಸಿ ಕೇಳುವುದೇ ಇಲ್ಲ. ಇದನ್ನು ತಪ್ಪಿಸಿ ಮೊದಲು ಅವರವರು ಕೊಟ್ಟಷ್ಟನ್ನು ತೆಗೆದುಕೊಂಡು ಅದು ತಪ್ಪಾಗಿದ್ದರೆ ಹಿಂದಣಿಂದ ಲೆಕ್ಕಗಳನ್ನು ಪರಿಶೋಧಿಸಿ ಹೆಚ್ಚಿಗೆ ಬರಬೇಕಾಗಿದ್ದರೆ ತೆಗೆದುಕೊಳ್ಳಲಿ. ಆ ರೀತಿ ಏರ್ಪಡಿಸಿಕೊಡಬೇಕು.

ಮಿ|| ಅಬ್ಬಾಸ್‌ಖಾನ್—ಶ್ರೀರಂಗಪಟ್ಟಣದ ಗುಮ್ಮಜಿಗೆ ಸರ್ಕಾರದಿಂದ ಗ್ರಾಂಟು ಸಲ್ಲುತ್ತದೆ. ಅದರ ಮೇಲ್ವಿಚಾರಣೆಗೆ ಸ್ಥಳದ ಪರಸ್ಥಳದ ಕೆಲ ದೊಡ್ಡಮನುಷ್ಯರುಗಳನ್ನು ಧರ್ಮದರ್ಶಿಗಳಂತೆ ಏರ್ಪಡಿಸಿಕೊಡಬೇಕು.

ಉತ್ತರ—ಯೋಚಿಸಿ ಮಾಡಿಕೊಡುತ್ತೇವೆ.

ಮ|| ನಾಗಲಿಂಗಯ್ಯನವರು—ಮಳೆಬೆಳೆ ಆಗದಿರುವ ತಾಲ್ಲೂಕು ಗ್ರಾಮಾಂತರಗಳಿಂದ ಅರ್ಜಿಗಳು ಬಂದರೆ ವಿಚಾರಣೆಯಿಂದ ಕಂದಾಯದ ರಿಮಿಷನ್ ಮಾಡಿಸಿಕೊಡಬೇಕು. ಬೆಂಕಿಬಿದ್ದು ಮನೆ ಸುಟ್ಟುಹೋದ ರೈತರಿಗೆ ೫೦ ರೂ. ಬೆಲೆಯ ಮರಮುಟ್ಟುಗಳನ್ನು ಫಾರೆಸ್ಟಿನಿಂದ ಕೊಡಿಸಲು ತಾ|| ಅಮಲ್ದಾರರುಗಳಿಗೆ ಅಧಿಕಾರ ಕೊಡಬೇಕು. ವಿದ್ಯಾಶಾಖೆಯಲ್ಲಿ ಸ್ಕೂಲುಗಳ ಇನ್ಸ್‌ಪೆಕ್ಷನ್ನಿಗಾಗಿ ಇನ್ಸ್‌ಪೆಕ್ಟರುಗಳು ಬಂದರೆ ಸ್ಥಳದ ಪ್ರಜೆಗಳಿಗೆ ತಿಳುವಳಿಕೆ ಕೊಡದೇನೆಯೋ ಯಾವಾಗಲೋ ಬಂದು ಹೋಗಿಬಿಡುತ್ತಾರೆ. ಸ್ಕೂಲು ಅಕ್ರಮಾದಿಗಳ ವಿಷಯವನ್ನು ಅವರೊಡನೆ ದೂರು ಹೇಳಿಕೊಳ್ಳುವುದಕ್ಕೆ ರೈತರಿಗೆ ಅವಕಾಶವೇ ಆಗುವುದಿಲ್ಲ. ಹಲವು ಕಡೆ ಸ್ಕೂಲ್ಮಾಸ್ಟರುಗಳು ತಮಗೆ ಬೇಕಾದಾಗ ರಜಾ ಎಂದು ಬಿಟ್ಟು ೮-೧೦ ದಿನಗಳು ಸ್ಕೂಲನ್ನು ಮುಚ್ಚಿಬಿಟ್ಟು ಹೋಗುತ್ತಾರೆ.

ಮ|| ತರೀಕೆರೆ ಎಲ್ಲಪ್ಪಶೆಟ್ಟರು—ಶಿವಮೊಗ್ಗಾ ತರೀಕೆರೆ ಸ್ಟೇಷನ್ನುಗಳ ಗೂಡ್ಸುಷೆಡ್ಡಿನಲ್ಲಿ ಸ್ಥಳಸಾಲದೆ ಸಾಮಾನುಗಳನ್ನು ಈಚೆ ಹಾಕಿರಬೇಕಾಗಿದೆ. ವಾಗಿನ್ನುಗಳು ಸಾಲವು. ಬಂಡಿಗಳನ್ನು ಹೆಚ್ಚಿಸಿಕೊಟ್ಟು ಗೂಡ್ಸುಷೆಡ್ಡನ್ನು ವಿಸ್ತಾರವಾಗಿ ನಿರ್ಮಿಸಲು ಬಡ್ಜೆಟ್ಟಿನಲ್ಲಿ ಅಲಾಟ್‌ಮೆಂಟ್ ಆಗಬೇಕು. ಮತ್ತು ನಮ್ಮಕಡೆ ಸಂತೆಗಳಲ್ಲಿ ತಿರುಕರ ಹಾವಳಿ ಜುಲುಂ ಬಹಳ ಹೆಚ್ಚಾಗಿದೆ. ಸಂತೆಗಳಿಗೆ ವರ್ತಕರು ಹೋಗಿ ವ್ಯಾಪಾರ ಮಾಡುವುದಕ್ಕೇ ಹಿಂದೆಗೆಯುತ್ತಿದ್ದಾರೆ. ಬೆಗ್ಗರ್ಸ್ ಆಕ್ಟನ್ನು ಮಾಡಿ ಸಂತೆಯಲ್ಲಿ ಅವರುಗಳ ಹಾವಳಿಯನ್ನು ತಪ್ಪಿಸಬೇಕು.

ಮ|| ಸಂಗನಬಸವಪ್ಪನವರು—ಧಾನ್ಯದ ಕಂಟ್ರೋಲನ್ನು ತೆಗೆಯಬಾರದು. ತೆಗೆದರೆ ಕೂಡಲೇ ಧಾರಣೆಯು ೧ಕ್ಕೆ ೧|| ಆಗಿಹೋಗುವುದು ಖಂಡಿತ.

ಉತ್ತರ—ಈಗತಾನೇ ಅಪ್ಪಣೆ ಮಾಡಿದೆ, ಜುಲೈ ತಿಂಗಳಿಂದ ತೆಗೆಯಲಾಗುತ್ತದೆ. ಆಗ ನೋಡೋಣ. ಮತ್ತೆ ಧಾರಣೆಗಳು ಹೆಚ್ಚಿದರೆ ಪುನಃ ನಿರ್ಬಂಧಪಡಿಸೋಣ.

ಮೆಂಬರು—ಮಳೆಬೆಳೆಗಳು ಆಗಿಲ್ಲ. ಕಂದಾಯದ ರಿಮಿಷನ್ ಮಾಡಿಸಬೇಕು.

ಉತ್ತರ—ಅಂಥ ಕಡೆ ಅರ್ಧ ಕಂದಾಯವನ್ನು ರಿಮಿಷನ್ ಮಾಡುವಂತೆ ಅಪ್ಪಣೆಮಾಡಿದೆ.

ಮೆಂಬರು—ನಮ್ಮ ಊರಿನ ಹತ್ತಿರ ದೊಡ್ಡದೊಂದು ಕೆರೆಯನ್ನು ನಿರ್ಮಿಸಿ ಜಲವಸತಿಯನ್ನು ಕಲ್ಪಿಸಿ ಆ ಪ್ರಾಂತದ ಕ್ಷಾಮಭೀತಿಯನ್ನು ತಪ್ಪಿಸಬಹುದಾದ ಏರ್ಪಾಟನ್ನು ಕುರಿತು ಹೋದಸಲದ ಸಭೆಯಲ್ಲಿ ನಾನು ಶ್ರುತಪಡಿಸಿಕೊಂಡಾಗ್ಗೆ ಚೀಫ್ ಇಂಜನಿಯರು ೬-೭ ದಿನಗಳಲ್ಲಿ ನಾನು ಬಂದುನೋಡುತ್ತೇನೆಂದು ನೋಟುಮಾಡಿಕೊಂಡರು; ೬ ತಿಂಗಳಾದರೂ ಬರಲಿಲ್ಲ. ನಾವಿರುವುದು ಸಂಸ್ಥಾನದ ಗಡಿಯ ಕೊನೆಯಲ್ಲಿ. ಹೋದಸಲ ಇದೇ ಚೀಫ್ ಇಂಜನಿಯರು ತಮ್ಮಗಳ ಇದಿರಿಗೇ ನನ್ನ ಹೆಸರನ್ನು ನೋಟುಬುಕ್ಕಿಗೆ ಬರೆದುಕೊಂಡು ತಾವು ಬರುವಾಗ್ಗೆ ನನಗೆ ತಿಳುವಳಿಕೆ ಕೊಡುವುದಾಗಿ ಅಪ್ಪಣೆ ಕೊಡಿಸಿದರು. ಇನ್ನೂ ಬರಲಿಲ್ಲ. ಸಶೇಷ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

40 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

18 ಮೊಳ ಪೂರ ಇರುವದು. ದೊಡ್ಡ ಪ

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಯಂತೆಯೇ ಇರುವವು. ಉಡುವದ ಲಕ್ಷಣವಾಗಿಯೂ, ನಯವಾಗಿ ಇರುವದು. ಸುಂದರವಾದ ರೇಷ್ಮೆ ಸೆರಗು ಮತ್ತು ದೊಡ್ಡ ಅಂಚು ಹೋಗದು ಶ್ರೀಮಂತರಿಗೂ, ಗರೀ ರಿಗೂ ಲಾಯಖಾದದ್ದು. ಈಗಿನ ಕಾ ದಲ್ಲಿ ಈ ಕ್ರಯಕ್ಕೆ ಯಾವ ಪಟ್ಟ ಲ್ಲಿಯೂ ಸಿಕ್ಕಲಾರವು. ಮಾದರಿಗಾ ಕೆಲವನ್ನು ಮಾತ್ರ ತಯಾರಿಸಿರುವೆ ಒಂದೆರಡನನ್ನು ತರಿಸಿ ಪರೀಕ್ಷಿ

ಕ್ರಯ ನಂ. 1 6—8—0
ನಂ. 2 7—8—0

40 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು

ಶಕ್ತಿಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ

ಮಹದ್ರಾಕ್ಷಾದಿ ಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇ ವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾ ದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸ ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷ ರೋಗ, ಪಿತ್ಥರೋಗ, ನೇತ್ರರೋಗಗಳು, ಪಾಂಡುರೋಗ, ಪೀನಸ, ಕುಷ್ಠ ರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾ ರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿ ಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗು ದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗ ನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸಿ ಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊ ಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆ ಥೆಪಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೆ ವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾ ಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊ ಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಅ ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕ ಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ ನೆಯ ಇಸವಿ ಜುಲೈ ತಾ|| ೩ ರಿಂದ ೧೯೨೧ ನೆಯ ಜುಲೈ ತಾ|| ೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ಜ್ಯೇಷ್ಠ ಬಹುಳ ತ್ರಯೋದಶಿಯಿಂದ ಆಷಾಢ ಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ಮಾಸ
3	ಭಾನು	ತ್ರಯೋ	42-51	ರೋಹಿ	38-58	20
4	ಸೋಮ	ಚತು	38-9	ಮೃಗ	36-20	21
5	¹ಮಂಗಳ	ಅಮಾ	32-47	ಆದ್ರಾ	32-57	22
6	ಬುಧ	ಪಾಡ್ಯ	26-54	ಪುನ	29-5	23
7	ಗುರು	ಬಿದಿ	20-45	ಪುಷ್ಯ	24-58	24
8	²ಶುಕ್ರ	ತದಿ	14-32	ಆಶ್ಲೇ	20-45	25
9	ಶನಿ	ಚೌತಿ	8-24	ಮಖಾ	16-41	26

(1) ಸರ್ವತ್ರಾಮಾವಾಸ್ಯ. (2) ಅಡಿಶುಕ್ರವಾರಂ.

ಮೈಸೂರು : ಮೈ. ವಿರೂಪಾಕ್ಷಯ್ಯನವರಿಂದ ಕ್ರಾನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಜುಲೈ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೨೭

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
26 ಮೈಸೂರು.

ವಜ್ರದ ಬೆಂಡೋಲೆ.



ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬವಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂನ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
41 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕಾ|| ಸಾ|| ಆಣೆ ೧೨.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫು||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮ × ೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡೆದ ಈ ಫೋಟೊ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫು|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಆಣೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ:—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫು|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೊಗಳು ಕೈ|| ವಾ|| ರಾಜಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣಾ ಕುಂಬಾರ ಕೋಟ್ಯಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಿಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪೂರು ಸಿದ್ಧರಾಮೇಶ್ವರ, ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ|| ಗು|| ಚಿತ್ರದುರ್ಗದ ಮಹಾಸ್ವಾಮಿ. ಅಥಣಿ ಶಿವಯೋಗಿಗಳು. ಹಾನಗಲ್ಲ ಸ್ವಾಮಿಗಳು, ಸೊಲ್ಲಾಪೂರದ ಪ್ರಸಿದ್ಧ ನಾಲತ್ತವಾಡದ ಶರಣರು, ಬಳೂರ ಸ್ವಾಮಿಗಳು, ಕಮತಗಿ ಹುಚ್ಚೀಂದ್ರಸ್ವಾಮಿಗಳು, ಸದ್ಯಕ್ಕೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ|| ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ|| ಬ|| ವಾರದ ಮಲ್ಲಪ್ಪನವರು, ಮುಂತಾದ ಫೋಟೊಗಳು ಸಿಗುತ್ತವೆ. ಕ್ರಯ ಫು|| ಸಾ|| ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

4 ವಿಳಾಸ—ಗಂಗಪ್ಪಾ ಜೇರಿಗೆ ಫೋಟೊ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0.12.0	,	50.0.0
5	0. 8.0	,,	100.0.0
6	0.12.0	,,	100.0.0
7	6. 0.0	,,	100.0.0

ಬಿಡಿ ಮಣಿಗಳು 1ಕ್ಕೆ ಕ್ರಯ

3	0. 6.0	ಇಂದ	10.0.0
8	0. 8.0	,,	100.0.0
9	0.12.0	,,	100.0.0
10	0.14.0	,,	100.0.0
11	3. 8.0	,,	100.0.0
12	4. 0.0	,,	100.0.0
13	4. 8.0	,,	100.0.0
14	6. 0.0	,,	100.0.0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15.0.0	,, 40.0.0
ಮೆಣಸು	,, 7.8.0	,, 15.0.0
ಕಡಲೆ	,, 2.8.0	,, 7.0.0
ನೆನೆದಕಡಲೆ	,, 1.8.0	,, 3.0.0
ಕಮಲಾಕ್ಷಿ	,, 1.0.0	,, 2.0.0
ದೊಡ್ಡ ,,	,, 0.8.0	,, 1.0.0
ಅದಕ್ಕಿಂತ	,, 0.6.0	,, 0.8.0
ಸ್ಫಟಿಕ108ಕ್ಕೆ	4.8.0	,, 30.0.0
ಶ್ರೀಚಕ್ರ1ಕ್ಕೆ	8.0.0	,,100.0.0
ಲಿಂಗ 1ಕ್ಕೆ	1.0.0	,, 100.0.0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ.40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
20 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ. ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 9

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ ಶಿರ್ಸಿ, ಉತ್ತರಕನಡಾ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜುಲೈ ತಾ|| ೧೦ ನೆಯ ಭಾನುವಾರ.

ಕಪಟಿಗಳಿಂದ ಮೋಸಹೋಗದಿರಿ

ಧರ್ಮವನ್ನು ಅಧರ್ಮವೆಂಬುದಾಗಿಯೂ, ನ್ಯಾಯವನ್ನು ಅನ್ಯಾಯವೆಂಬುದಾಗಿಯೂ, ಸಮದೃಷ್ಟಿಯನ್ನು ವಿಷಮದೃಷ್ಟಿಯೆಂಬುದಾಗಿಯೂ, ಪ್ರಜಾರಂಜನೆಯನ್ನು ಪ್ರಜಾಹಿಂಸೆಯೆಂಬುದಾಗಿಯೂ ಬೊಗಳತಕ್ಕ ರಾಕ್ಷಸರ ಕೂಗು ಈಗ ನಮ್ಮ ದೇಶದಲ್ಲಿ ಹೆಚ್ಚಿಕೊಂಡಿದೆ. ಹಿಂದುಳಿದವರಲ್ಲಿ ಯೋಗ್ಯತಾಸಿದ್ಧಿಯುಳ್ಳವರಿಗೆ ಸರ್ಕಾರದಧಿಕಾರಗಳನ್ನು ಇನ್ನಷ್ಟು ಹೆಚ್ಚಾಗಿ ಕೊಡಬೇಕೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರಯತ್ನಿಸಿದುದು, ಪರರ ಏಳ್ಗೆಯನ್ನು ಸೈರಿಸಲಾರದ ಪಿಶಾಚಗಳನ್ನು ಉದ್ರೇಕಗೊಳಿಸಿ ಬಾಯಿಗೆ ಬಂದಂತೆ ಅಸತ್ಯಪ್ರಲಾಪವನ್ನು ಮಾಡಿಸುತ್ತಿರುವುದು. ಯಾರು ತಾವು ದೇಶಬಂಧುಗಳೆಂತಲೂ, ಪರಹಿತಕಾಂಕ್ಷಿಗಳೆಂತಲೂ, ವೃದ್ಧಪಿತಾಮಹರಾಗಿದ್ದ ದಾದಾಭಾಯಿ ನವರೋಜಿಯವರಂತೆ ದೇಶಾಭಿಮಾನಿಗಳೆಂತಲೂ ಪ್ರಗಲ್ಭವನ್ನು ಕೊಚ್ಚಿಕೊಳ್ಳುತ್ತಿದ್ದರೋ ಅವರುಗಳ ನಿಜವಾದ ಬಣ್ಣವು ಈಗ ಹೊರಬೀಳುತ್ತಿರುವುದು. ನಿಶಾಸೇವನೆ ಮಾಡಿದ ಅಪರಾಧಿಗಳು ಪೋಲೀಸರ ಮುಂದೆ ತಮ್ಮ ದುಷ್ಕೃತ್ಯಗಳನ್ನೆಲ್ಲಾ ಹೇಳಿಬಿಡುವರೆಂತಲೂ, ಪಿಶಾಚಾವೇಶಗೊಂಡವರು ಒಳಗೆ ಗೂಢವಾಗಿದ್ದ ವಿಷಯಗಳನ್ನೆಲ್ಲಾ ಹೊರಗೆಡಹಿಬಿಡುವರೆಂತಲೂ ಜನವಾರ್ತೆಯನ್ನು ನಾವು ಕೇಳುತ್ತಿದ್ದೆವಷ್ಟೆ. ಇದುವರೆಗೆ ದೇಶಾಭಿಮಾನಾಭಿನಯವನ್ನು ಮಾಡುತ್ತಿದ್ದ ಗೋಮುಖವ್ಯಾಘ್ರಗಳ ಹೃದಯದೊಳಗಿದ್ದ ಸ್ವಾರ್ಥೈಕಸಾಧನ ಪರೋತ್ಕರ್ಷಾಸಹನರೂಪ ನಿಜಸ್ಥಿತಿಯನ್ನೆಲ್ಲಾ ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರಿ ಆಜ್ಞೆಯು ಈಗ ಹೊರಗೆಡಹಿಸುತ್ತಿರುವುದು. ಶೂದ್ರಾದಿಗಳು ವಿದ್ಯೆಯನ್ನೋದಿದರೆ ಪಾಪವೆಂದು ಹಿಂದಣ ಕಾಲದಲ್ಲಿ ವಿಧಿಸಿ ಅದಕ್ಕೆ ಧಾರ್ಮಿಕಸ್ವರೂಪವನ್ನು ಕೊಟ್ಟು ಇತರರ ವಿದ್ಯಾವಿವೇಕಾಭಿವೃದ್ಧಿಗೆ ತಡೆಗಟ್ಟಿದ್ದ ಸ್ವಾರ್ಥೈಕಸಾಧಕರು ಈಗ ಅದಕ್ಕೆ ರಾಜಕೀಯ ಸ್ವರೂಪವನ್ನು ಕೊಟ್ಟು ಪೂರ್ವದ ತಮ್ಮ ಉದ್ದೇಶವನ್ನು ಈಗಲೂ ನೆರವೇರಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದಾರೆ. ಸರ್ವರೂ ವಿದ್ಯಾಭ್ಯಾಸಕ್ಕೆ ತೊಡಗಿದರೆ ದೇಶದಲ್ಲಿ ಸಂಪದಭಿವೃದ್ಧಿಯ ಪ್ರಯತ್ನಗಳೇ ನಿರ್ಮೂಲವಾಗಿ ದೇಶವು ಅಧೋಗತಿಗಿಳಿಯುವುದೆಂದೂ, ವಿದ್ಯೆ ಕಲಿತವರು ತಂತಮ್ಮ ಕಸಬುಗಳನ್ನು ಪರಿತ್ಯಜಿಸುವರೆಂದೂ ವಾದಿಸುತ್ತಿದ್ದಾರೆ. ದರ್ಜಿ ಕೆಲಸ, ಅಗಸನ ಕೆಲಸ, ಮೋಚಿಕೆಲಸ ಮೊದಲಾದುವುಗಳನ್ನೆಲ್ಲಾ ಹೊಸದಾಗಿ ಮಾಡುವುದಕ್ಕುಪಕ್ರಮಿಸಿ ತನ್ನ ಉತ್ತಮ ಧರ್ಮದಿಂದ ಭ್ರಷ್ಟನಾಗಿದ್ದರೂ ಆರೂಢಪತಿತನಾಗಿದ್ದರೂ ತನ್ನ ಬ್ರಾಹ್ಮಣ್ಯವು ಹೋಗಲಿಲ್ಲನೆಂದು ವಾದಿಸುವವನು, ವಿದ್ಯೆಯನ್ನು ಕಲಿತು ಉತ್ತಮವೃತ್ತಿಗೆ ಹೋಗುವ ಇತರರನ್ನು ನಾನಾವಿಧವಾಗಿ ಅನುತ್ಸಾಹಗೊಳಿಸುವುದೂ, ಜರೆಯುವುದೂ, ವಿದ್ಯೆ ಕಲಿತರೆ ಜೀವನಾಧಾರವಾದ ಕಸಬುಗಳು ಹಾಳಾಗುವುವೆಂದು ವಾದಿಸುವುದೂ ಎಷ್ಟು ಮೋಸದ ಮಾತೆಂಬುದನ್ನು ಹೇಳಬೇಕಾಗಿಲ್ಲ. "ಕಿಂಕಿಂನಸಾಧಯತಿಕಲ್ಪಲತೇವವಿದ್ಯಾ" ಎಂಬ ನೀತಿವಚನದ ಪ್ರಕಾರ ವಿದ್ಯೆಯು ಸಕಲೇಪ್ಸಾರ್ಥವನ್ನೂ ಕೊಡತಕ್ಕ ಕಲ್ಪಲತೆಯಲ್ಲವೆ? ಅಂಥ ವಿದ್ಯೆಯು ಬ್ರಾಹ್ಮಣನಿಗೆ ಬಂದರೆ ದೇಶಕ್ಕೆ ಲಾಭಕಾರಿಯೆಂದೂ ಇತರರಿಗೆ ಬಂದರೆ ಅನರ್ಥಕಾರಿಯೆಂದೂ ವಾದಿಸುವುದು ತಕ್ಕರಿಗೆ ಜನ್ಮಜನ್ಮಾಂತರದಿಂದ ಅಂಟಿಬಂದಿರುವ ಚಾತುರ್ಯದ ಪ್ರಭಾವವಲ್ಲವೆ?

ಕಳೆದ ಪ್ರಜಾಪ್ರತಿನಿಧಿ ಸಭೆಗೆ ಮಳವಳ್ಳಿ ತಾಲ್ಲೂಕಿನಿಂದ ಬಂದಿದ್ದ ಮ|| ಪುಟ್ಟಸ್ವಾಮಿಗೌಡರೆಂಬುವವರು ಸಣ್ಣ ತರಗತಿಯಿಂದ ಹಿಡಿದು ಬಿ. ಎ. ತರಗತಿಯವರೆಗೂ ಓದತಕ್ಕ ಹುಡುಗರಿಗೆಲ್ಲಾ ವ್ಯವಸಾಯ ವಿದ್ಯೆಯನ್ನು ತಪ್ಪದೆ ಅಭ್ಯಾಸ ಮಾಡಿಸುವುದಕ್ಕೆ ಅನುಕೂಲವಾಗಿ ಪ್ರತಿಶಾಲೆಗೂ ಸೇರಿದಂತೆ ಎರಡೆರಡು ಎಕರೆ ಭೂಮಿಯನ್ನು ಬಿಟ್ಟುಕೊಟ್ಟು ಆ ಕಸಬನ್ನು ಕಲಿಸಿಕೊಡಬೇಕೆಂಬ ವಿಷಯವೊಂದನ್ನು ಅರಿಕೆಗಿಟ್ಟು, ಅದನ್ನು ಕುರಿತು ಸಭೆಯಲ್ಲಿ ಮಾತನಾಡುವಾಗ್ಗೆ—ನಮ್ಮ ಹುಡುಗರು ಪಟ್ಟಣಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುವುದರಿಂದ ಹೋಟಲುಗಳ ತಿಂಡಿಯ ಅಭ್ಯಾಸವನ್ನು ಕಲಿತು ಸುಖಜೀವಿಗಳಾಗಿಬಿಟ್ಟು, ಮೈಬಗ್ಗಿಸಿ ಕೆಲಸಮಾಡುವ ಅಭ್ಯಾಸವನ್ನು ಮರೆತುಬಿಡುತ್ತಿದ್ದಾರೆಂಬ ಕಾರಣವನ್ನು ತೋರಿಸಿ ಹೇಳಿದರು. ಅದರ ಮೇಲೆ ಸರ್ಕಾರದವರು ಈಗಣ ವಿದ್ಯಾಭ್ಯಾಸದ ಮೆಮೊರಾಂಡಮ್ಮಿನಲ್ಲಿ ಈ ವಿಷಯವೂ ಸೇರಿರುವುದೆಂತಲೂ ಮಿಡಲ್ ಸ್ಕೂಲುಗಳಾದ ಮೇಲೆ ಇದನ್ನು ಸೇರಿಸುವಂತೆ ಮಾಡಿದೆಯೆಂದೂ, ಸಣ್ಣಸಣ್ಣ ತರಗತಿಗಳಿಗೆ ಇದನ್ನಿಟ್ಟರೆ ಲಾಭವಿಲ್ಲವೆಂದೂ, ಸದ್ಯಃ ಹಣದ ಕೊರತೆಯಿಂದ ಈ ಏರ್ಪಾಟನ್ನು ವ್ಯವಹಾರಕ್ಕೆ ತರಲು ಸಾಧ್ಯವಾಗಿಲ್ಲವೆಂದೂ ಉತ್ತರ ಕೊಟ್ಟರು. ಆ ಮಾತ್ರಕ್ಕೇ ಮೈಸೂರಿನ ಒಂದು ಬ್ರಾಹ್ಮಣ ಪತ್ರಿಕೆಯು—"ಒಬ್ಬ ಗೌಡರು ಈಗ ಸರ್ಕಾರದವರು ಮಾಡಿಸುತ್ತಿರುವ ವಿದ್ಯಾಭ್ಯಾಸದಿಂದ ದೇಶಕ್ಕೆ ಆಗುತ್ತಿರುವ ಹಾನಿಯನ್ನು ನಿರೂಪಿಸಿದರೆಂದೂ, ಕೃಷಿ ಕೈಗಾರಿಕೆ ಮೊದಲಾದುವುಗಳಲ್ಲಿ ಆಸಕ್ತರಾಗಿದ್ದ ಜನರಿಗೆ ವೇತನಗಳನ್ನು ಕೊಡುವುದಾಗಿ ಹೇಳಿದುದರ ಮೇಲೆ ಪಟ್ಟಣಗಳಿಗೆ ಅವರುಗಳು ಬಂದು ದುಂದನ್ನು ಕಲಿತು ಕೆಟ್ಟುಹೋಗುವಂತಾಯಿತೆಂದೂ, ಇದಕ್ಕೆ ಸರ್ಕಾರದವರೇ ಕಾರಣರೆಂದು ನಿರೂಪಿಸಿದರೆಂದೂ, ಅಸತ್ಯವಾದವನ್ನೂ ಕುಹಕವ್ಯಾಖ್ಯಾನವನ್ನೂ ಮಾಡಿ, ದೇಶೀಯರನ್ನು ವಂಚಿಸಲು ಪ್ರಯತ್ನಿಸಿರುವುದು, "ಹರಿಹರಿ ಎಂದರೆ ಪಾಪವು ಹುದುಹೋಗುವುದು" ಎಂಬ ದಾಸರ ಪದದಲ್ಲಿ "ಹುದುಹೋಗುವುದು" ಎಂಬ ಕೊನೆಯ ಕ್ರಿಯಾಪದವನ್ನು ಬಿಟ್ಟು "ಹರಿಹರಿಯೆಂದರೆ ಪಾಪವು" ಎಂಬುದಿಷ್ಟನ್ನೇ ಹೇಳಿ, ಹರಿನಾಮಸ್ಮರಣೆಯಲ್ಲಿ ದೋಷಾಪಾದನೆ ಮಾಡುವುದಕ್ಕೆ ಹೊರಟ ನಾಸ್ತಿಕನ ಕಪಟಜಾಲಕ್ಕೆ ಸರಿಹೋಗಿರುವುದು. ತಮ್ಮ ಉದ್ದೇಶಸಾಧನೆಗಾಗಿ ಯಾವ ಸುಳ್ಳನ್ನಾಡುವುದಕ್ಕೂ, ಯಾವ ಮೋಸವನ್ನಾಚರಿಸುವುದಕ್ಕೂ ಹಿಂದೆಗೆಯದ ಮಟ್ಟಿಗೆ ಸಿದ್ಧರಾಗಿರುವ ಈ ಜನರ ಮಾತನ್ನು ಈಗ ದೇಶೀಯರು ಗಮನಿಸಲೇಕೂಡದು. ಗಲ್ಲಿಗೇರಿಸಿಕೊಳ್ಳಲು ಸಿದ್ಧನಾಗಿರುವ ಅಪರಾಧಿಯು ಏನನ್ನಾಡಿಕೊಂಡರೂ ಅದನ್ನು ಈ ಕಿವಿಯಿಂದ ಕೇಳಿ ಆ ಕಿವಿಯಿಂದ ಬಿಟ್ಟುಬಿಡುವಂತೆ ಮಾಡುವುದೇ ಶ್ರೇಯಸ್ಕರವು.

ಹಿಂದೆ ಮಾಡಿದ್ದ ಅನ್ಯಾಯಾಧರ್ಮಗಳಿಗೆಲ್ಲಾ ಪ್ರಾಯಶ್ಚಿತ್ತವೋ ಎಂಬಂತೆ ಈಗಣ ಪ್ರಭುತ್ವದವರು ಸಕಲ ಪ್ರಜೆಗಳನ್ನೂ ಉದ್ಧರಿಸುವುದಕ್ಕೆ ಪ್ರಯತ್ನಮಾಡಿರುವರಷ್ಟೆ? ಆದುದರಿಂದ ತಮ್ಮೊಬ್ಬರಿಗೇ ಆಗುತ್ತಿದ್ದ ಫಲವೆಲ್ಲಾ ಇತರರಿಗೂ ಹಂಚಿಹೋಗುವಂತಾಯಿತಲ್ಲಾ ಎಂಬ ದುಗುಡದಿಂದ ಮತಿಗೆಟ್ಟು ಬೊಗಳುವ ಈ ಜನರು ತಮ್ಮಲ್ಲಿರಬೇಕಾದ ಮಾನುಷಧರ್ಮಕ್ಕೇ ತಿಲಾಂಜಲಿಯನ್ನಿತ್ತು ಮಹಾಕೃತಘ್ನರೂ ದುರ್ಜನರೂ ಪಾಪಿಷ್ಠರೂ ಆಚರಿಸುವಂಥ ಕೃತ್ಯಗಳಿಗೆ ಈಗ ತೊಡಗಿರುವರು. ಇದುವರೆಗೂ ಕೇವಲ ಸಾತ್ವಿಕರೂ ಶಾಂತಿಪರರೂ ದಯಾವಂತರೂ ದೊಡ್ಡವಂಶದವರೂ ದೈವಬ್ರಾಹ್ಮಣಭಕ್ತರೂ ಎಂದು ಯಾರನ್ನು ಹೊಗಳುತ್ತಿದ್ದರೋ ಅಂಥ ಸರ್ದಾರ್ ಕಾಂತರಾಜ ಅರಸಿನವರನ್ನೇ ಈಗ ಬ್ರಹ್ಮದ್ವೇಷಿಗಳೆಂದೂ, ಅರಸ (ರಸಹೀನ) ರೆಂದೂ ದೇಶವನ್ನು ಹೀನಸ್ಥಿತಿಗೆ ತರುತ್ತಿರುವರೆಂದೂ, ಮೊದಲಾಗಿ ಇನ್ನೂ ಎಷ್ಟೋ ಅವಾಚ್ಯಗಳಾದ ಶಬ್ದಗಳಿಂದ ದೂಷಿಸುತ್ತಿರುವರು. ಅವೆಲ್ಲಾ ಸಜ್ಜನರಿಗೆ ಸಂತಾಪಕರಗಳಾಗಿರುವುವು. ಯಾವ ಪ್ರಜೆಯೂ ಅವನ್ನು ಕೇಳಿ ಸೈರಿಸಲಾರನು. ಅಷ್ಟೊ ಇಷ್ಟು ಪಿಂಡವನ್ನು ಬಾಯಿಗೆ ಹಾಕುತ್ತಿರುವುದರಿಂದ ಶ್ರೀಮನ್ಮಹಾರಾಜರನ್ನು ಮಾತ್ರ ಈ ಮಹಾನುಭಾವರು ಆಶೀರ್ವದಿಸದೆ ಬಿಟ್ಟುಕೊಂಡಿರುವರು. ಆ ಪಿಂಡವನ್ನು ಅವರು ತಪ್ಪಿಸಿದರೆ ಅವರಿಗೂ ಇದೇ ಸಹಸ್ರನಾಮವಾಗುವುದರಲ್ಲಿ ಅಭ್ಯಂತರವು ತೋರುವುದಿಲ್ಲ. ಮದ್ದಲೆಯ ಮತ್ತು ದುರ್ಜನರ ನಡತೆ ಯೆರಡೂ ಒಂದೇ ವಿಧವಾಗಿರುವುದೆಂದೂ, ಬಾಯಿಗೆ ಅನ್ನವನ್ನು ಮೆತ್ತಿರುವವರೆಗೇ ಅವೆರಡು ವಸ್ತುಗಳಲ್ಲೂ ಮೃದುವಾದ ಶಬ್ದವು ಹೊರಡುತ್ತಿರುವುದೆಂದೂ ಅದು ತಪ್ಪಿದೊಡನೆಯೇ ಒಡಕು ಸದ್ದು ಹೊರಡುವುದೆಂದೂ ಹೇಳಿರುವನು. ಅದು ಸುಳ್ಳಲ್ಲ. ಎಷ್ಟೋ ಕಾಲದಿಂದ ವಿಪರೀತವಾಗಿ ಉಪಕೃತರಾಗಿದ್ದರೂ ಲೇಶಮಾತ್ರ ತಮ್ಮ ಫಲಾನುಭವಕ್ಕೆ ಲೋಪ ಬಂದಕೂಡಲೇ ಅದನ್ನೆಲ್ಲಾ ಮರೆತು ತಿರುಗಿಬಿದ್ದು ದೌರ್ಜನ್ಯಕ್ಕೆ ತೊಡಗುವ ಈ ಜನರನ್ನು ದೇಶೀಯರು ತಮ್ಮ ಆಪ್ತರೆಂದೂ ತಮ್ಮ ಹಿತಚಿಂತಕರೆಂದೂ ತಮ್ಮ ಉದ್ಧಾರಕರೆಂದೂ ತಮ್ಮ ಪ್ರತಿನಿಧಿಗಳೆಂದೂ ತಮ್ಮ ಮುಂದಾಳುಗಳೆಂದೂ ತಿಳಿದು ಅಯ್ಯೋ! ಎಷ್ಟು ಮೋಸಹೋದರು!! ಇವರ ಈಗಣ ನಡತೆಯು ಚರಿತ್ರಗತವಾಗಿರುವ ಇವರ ಹಿಂದಣ ನಡತೆಯೊಂದನ್ನು ಈಗ ಸ್ಮೃತಿಪಥಕ್ಕೆ ತರುತ್ತಿರುವುದು. ಅದೇನೆಂದರೆ—ಪೂರ್ವದಲ್ಲಿ ಒಂದಾವೃತ್ತಿ ೧೨ ವರ್ಷಗಳ ಕಾಲ ಅಖಂಡವಾಗಿ ಮಳೆಬೆಳೆಗಳಿಲ್ಲದೆ ಭಯಂಕರವಾದ ಕ್ಷಾಮವುಂಟಾಯಿತು. ಗೌತಮಮಹರ್ಷಿಯು ಶಿವನ ವರದಿಂದ ಮಹಾಧಾನ್ಯಸಮೃದ್ಧಿ ಪಡೆದಿರುವುದನ್ನು ನಾನಾ ಆಶ್ರಮಗಳಲ್ಲಿದ್ದ ವಿಪ್ರರುಗಳೆಲ್ಲರೂ ತಿಳಿದಿದ್ದ ಕಾರಣ, ಅವನ ಆಶ್ರಮಕ್ಕೆ ಹೋಗಿ ಮರೆಬಿದ್ದರು. ಆತನು ಆ ೧೨ ವರ್ಷವೂ ಇವರುಗಳಿಗೆಲ್ಲಾ ಅನ್ನಾಹಾರವನ್ನಿತ್ತು ಕಾಪಾಡಿದನು. ೧೨ ವರ್ಷಗಳು ಕಳೆದ ಕೂಡಲೇ ಅನಾವೃಷ್ಟಿಯು ಹೋಗಿ ಮಳೆಗಳು ಸುರಿದು ಸುಭಿಕ್ಷವಾಯಿತು. ಬಳಿಕ ಈ ವಿಪ್ರರೆಲ್ಲರೂ ತಂತಮ್ಮ ಸ್ಥಲಗಳಿಗೆ ಹೋಗಬೇಕೆಂದು ಯೋಚಿಸಿಕೊಂಡು ಗೌತಮನ ಬಳಿಗೆ ಹೋಗಿ ತಮಗೆ ಅಪ್ಪಣೆ ಕೊಡಬೇಕೆಂದು ಕೇಳಿದರು. ಇನ್ನು ಕೆಲಕಾಲ ಇಲ್ಲೇ ಸುಖವಾಗಿದ್ದು ಹೋಗಬಹುದೆಂದು ಆತನು ಹೇಳಿ ತಡೆಯಲು, ಇವರುಗಳೆಲ್ಲರೂ ಗುಂಪುಕೂಡಿ, ಹೀಗಾದರೆ ಈತನು ತಮ್ಮನ್ನು ಬಿಟ್ಟುಕೊಡುವುದಿಲ್ಲವೆಂದು ಯೋಚಿಸಿ, ಅದಕ್ಕೆ ಒಂದು ಕಪಟೋಪಾಯವನ್ನು ನಿರ್ಧರಿಸಿದರು. ಒಂದು ಮಾಯಾ ಗೋವನ್ನು ನಿರ್ಮಿಸಿದರು. ಅದು ಅಸ್ಥಿಚರ್ಮ ಮಾತ್ರಾವಶಿಷ್ಟವಾದ ಬಡಕಲ ಹಸುವಾಗಿದ್ದಿತು; ಹುಲ್ಲನ್ನು ಅಗಿದು ತಿನ್ನುವುದಕ್ಕೂ ಅಶಕ್ತವಾಗಿದ್ದಿತು. ಅದನ್ನು ಗೌತಮನ ಮುಂದಕ್ಕೆ ಹೋಗುವಂತೆ ಮಾಡಿದರು. ಅದನ್ನು ಆ ಋಷಿಯು ನೋಡಿದ ಕೂಡಲೇ ಕನಿಕರಪಟ್ಟು ಕೊಟ್ಟಗೆಗೆ ಕಟ್ಟಿಸಿ ಚೆನ್ನಾಗಿ ಪೋಷಣೆ ಮಾಡಬೇಕೆಂಬ ಬುದ್ಧಿಯಿಂದ ಅದರ ಬಳಿಗೆ ಹೋಗಿ ತನ್ನ ಕೈಯನ್ನು ಅದರ ಮೈಮೇಲಿಟ್ಟು ಸವರಿದ ಕೂಡಲೇ ಆ ಮಾಯಾಧೇನುವು ಧೊಪ್ಪನೆ ಭೂಮಿಯ ಮೇಲೆ ಬಿದ್ದು ಸತ್ತುಹೋಯಿತು. ಅದನ್ನು ನೋಡಿ ಆತನು ಚಿಂತಾಕ್ರಾಂತನಾದನು. ಆಗ ದೂರದೂರದಲ್ಲಿದ್ದ ಕಪಟವಿಪ್ರರೆಲ್ಲಾ ಓಡಿಬಂದು—"ಓಹೋ ಗೌತಮನು ಗೋಹತ್ಯವನ್ನು ಮಾಡಿದನು! ಅವನು ಪಾಪಿಷ್ಠ!! ಅವನ ಬಳಿಯಲ್ಲಿರುವುದು ಸರಿಯಲ್ಲ. ನಾವೆಲ್ಲರೂ ಹೊರಟು ಹೋಗುತ್ತೇವೆ" ಎಂದು ಕೂಗಿಕೊಂಡು ಹೊರಟುಹೋದರು. ೧೨ ವರ್ಷ ಕಾಲ ಅನ್ನಬಟ್ಟೆ ಕೊಟ್ಟು ಸಾಕಿದ ಗೌತಮನ ಉಪಕಾರಕ್ಕೆ ಅವರು ಮಾಡಿದ ಪ್ರತ್ಯುಪಕಾರವು ಗೋಹತ್ಯಾದೋಷವನ್ನು ಅವನ ತಲೆಯ ಮೇಲೆ ಹೊರಿಸಿದುದೇ ಆಯಿತು. ಬಳಿಕ ಮಹಾತಪಸ್ವಿಯಾದ ಗೌತಮನು ತನ್ನ ಕೈಯಿಂದ ಹೀಗೆ ಗೋಹತ್ಯೆಯಾಗುವುದಕ್ಕೆ ಕಾರಣವೇನು? ನಿಜವಾಗಿ ತಾನು ಗೋಹತ್ಯ ಮಾಡಿದವನೆ? ಎಂಬುದನ್ನೆಲ್ಲಾ ತನ್ನ ಜ್ಞಾನದೃಷ್ಟಿಯಿಂದ ವಿಚಾರಮಾಡಿ, ಕಡೆಗೆ ಇದೆಲ್ಲಾ ತನ್ನಿಂದ ಉಪಕೃತರಾಗಿದ್ದ ಬ್ರಾಹ್ಮಣರು ಸ್ವಾರ್ಥಕ್ಕಾಗಿ ಕೃತಘ್ನತೆಯಿಂದ ಆಚರಿಸಿದ ಕೃತಕವೆಂಬುದನ್ನು ತಿಳಿದುಕೊಂಡು, ಅತ್ಯಂತ ಕೋಪದಿಂದ ನೀವು ಕಲಿಯುಗದಲ್ಲಿ ಪರಹಿಂಸಕರಾಗಿ ದುರಾಲೋಚನಪರರಾಗಿ ಪಾಪಿಷ್ಠರಾಗಿ ಅವತರಿಸಿರಿ ಎಂದು ಶಾಪವನ್ನು ಕೊಟ್ಟನು. ಶ್ರೀ ವೇದವ್ಯಾಸರೇ ಇದನ್ನೆಲ್ಲಾ ವರ್ಣಿಸಿರುತ್ತಾರೆ. ಆ ಶಾಪವಚನವನ್ನು ಸಾರ್ಥಕಪಡಿಸುವುದಕ್ಕಾಗಿ ಕೆಲ ಬ್ರಾಹ್ಮಣ ಬ್ರುವರು ಈಗ ಮೈಸೂರು ದೇಶದಲ್ಲಿ ಅವತರಿಸಿರುವಂತೆ ತೋರುತ್ತದೆ. ಆದುಕಾರಣ ಇಂಥವರ ವಿಷಯದಲ್ಲಿ ಶ್ರೀಮನ್ಮಹಾಪ್ರಭುಗಳೂ ಅವರಪ್ರಜೆಗಳೂ ಎಚ್ಚತ್ತು ನಡೆಯುವುದು ಅವಶ್ಯಕವಾಗಿರುವುದಲ್ಲದೆ, ಇಂಥ ದುರ್ಜನರಿಂದ ತಮ್ಮ ಕುಲಕ್ಕೇ ಕಳಂಕವುಂಟಾಗುತ್ತಿರುವುದನ್ನು ತಪ್ಪಿಸಲಿಕ್ಕಾಗಿ ನಿಜವಾದ ಸದ್ಬ್ರಾಹ್ಮಣರುಗಳು ತಕ್ಕ ಪ್ರಯತ್ನವನ್ನು ಮಾಡಬೇಕೆಂದೂ ಸೂಚಿಸದೆ ಇರಲಾರೆವು.

ಮ|| ಸಿ. ರಾಮಲಿಂಗರೆಡ್ಡಿ ಎಂ. ಎ., ಯವರು.

ಈ ಮಹನೀಯರು ಕಳೆದ ತಾ|| ೯ ರಲ್ಲಿ ತಮ್ಮ ವಿದ್ಯಾಶಾಖಾಧ್ಯಕ್ಷ ಪದವಿಯನ್ನು ಡಿ|| ಇ|| ಜನರಲ್ ಮ|| ಬಿ. ದಾಸಪ್ಪನವರಿಗೆ ಕಳೆದ ತಾ|| ೯ ರಲ್ಲಿ ಒಪ್ಪಿಸಿದರು; ಇಷ್ಟರಲ್ಲೇ ಮದರಾಸಿಗೆ ದಯಮಾಡಿಸುವವರಾಗಿದ್ದಾರೆ. ಇವರು ಮೈಸೂರು ದೇಶದ ಪ್ರಜೆಗಳಿಗೆ ವಿದ್ಯಾಪ್ರಸಾರ ವಿಷಯದಲ್ಲಿ ಮಾಡಿದ ಘನತರವಾದ ಸೇವೆಗೆ ಅನುಗುಣವಾಗಿ ಕೃತಜ್ಞತಾಪ್ರದರ್ಶನರೂಪವಾದ ಸನ್ಮಾನಸಮಾರಂಭಗಳು ಇಷ್ಟರಲ್ಲೇ ನಡೆಯುವುವಾಗಿವೆ. ಇವರು ಈ ದೇಶದ ಉದ್ಯೋಗವನ್ನು ಬಿಟ್ಟು ಹೋದುದಕ್ಕೆ ಕೆಲವರು ಸುಳ್ಳುಸುಳ್ಳಾದ ಸುದ್ದಿಗಳನ್ನು ಹುಟ್ಟಿಸಿ ಹರಡುತ್ತಿದ್ದಾರೆ. ಅವೆಲ್ಲಾ ಹಿಂದೆ ಆಡಿಕೊಳ್ಳುವ ನೀಚರ ಸ್ವಭಾವಕ್ಕೆ ಅನುಗುಣವಾದುದರಿಂದ ಅವುಗಳನ್ನು ಯಾರೂ ನಂಬಬಾರದು. ಅವುಗಳಲ್ಲಿ ಲೇಶಮಾತ್ರವೂ ಸತ್ಯಾಂಶವಿರುವುದಿಲ್ಲ. ಮ|| ರೆಡ್ಡಿಯವರ ವಿದ್ವತ್ತೂ ಮೇಧಾಶಕ್ತಿಯೂ, ಲೋಕಾನುಭವವೂ ಎಲ್ಲಕ್ಕಿಂತಲೂ ಮೀರಿದ ವಾಗ್ಮಿತ್ವವೂ ದೇಶಸೇವಾಭಿರತಿಯೂ ಅನ್ಯಾದೃಶಗಳಾಗಿರುವುವು. ಚಿಕ್ಕವಯಸ್ಸಿನವರೇ ಆಗಿದ್ದರೂ ಇಷ್ಟೆಲ್ಲಾ ಮಹಾಗುಣಗಳು ಅವರಲ್ಲಿ ಮೂರ್ತೀಭವಿಸಿರುವುದರಿಂದ ಗುಣಗ್ರಹಣಧುರೀಣರಾದ ಸತ್ಪುರುಷರು ಅವರನ್ನು ಮಹಾಪುರುಷರಲ್ಲೊಬ್ಬರೆಂದು ಗಣಿಸಿರುವರು. ಸೂರ್ಯಪ್ರಕಾಶವು ಗೂಬೆಗಳಿಗೆ ದುಸ್ಸಹವಾಗಿರುವಂತೆ ಮ|| ರೆಡ್ಡಿಯವರ ತೇಜೋವೈಭವವು ದುರ್ಜನರಿಗೆ ದುಸ್ಸಹವಾಗಿದ್ದ ಮಾತ್ರಕ್ಕೇ ಬಾಧಕವೇನೂ ಇಲ್ಲ. ಗೂಬೆಗಳ ಘೂತ್ಕಾರಕ್ಕಂಜಿಯೇ ಸೂರ್ಯನು ಅಸ್ತಂಗತನಾಗುವುದು ನಿಜವಾಗಿದ್ದರೆ ದುಷ್ಟರ ಕೋಲಾಹಲಗಳಿಗೆ ಅಂಜಿ ಮ|| ರೆಡ್ಡಿಯವರು ಈ ಪದವಿಯನ್ನು ಬಿಟ್ಟರೆಂಬುದೂ ನಿಜವಾಗಲಿ.

ಪಾಶ್ಚಾತ್ಯ ದೇಶಪ್ರಜೆಗಳಲ್ಲಿ ೧೦೦ ಕ್ಕೆ ೯೫ ಮಂದಿಗಳಷ್ಟು ವಿದ್ಯಾವಂತರಾಗಿರುವಂತೆ ಮೈಸೂರುದೇಶದ ಪ್ರಜಾಸಾಮಾನ್ಯವನ್ನೂ ಮಾಡಬೇಕೆಂಬ ಘನತರವಾದ ಉದ್ದೇಶವು ಅವರಿಗಿದ್ದಿತು. ಅದಕ್ಕೆ ಸಾಧಕವಾಗಿಯೇ ಮೆಮೋರಾಂಡಂ ರಚಿಸಲ್ಪಟ್ಟಿತು. ಆದರಿಂದ ಸಕಲಪ್ರಜೆಗಳೂ ವಿದ್ಯಾವಂತರಾದರೆ ಆತ್ಮಲಾಭ ಹಾನಿಯಾಗುವುದೆಂದು ಯೋಚಿಸಿಕೊಂಡಿರುವ ಕೆಲ ಸ್ವಾರ್ಥೈಕನಿರತರು ಮಾತ್ರ ಅದಕ್ಕೆ ವಿರೋಧಿಸಿದರು. ಆದರೆ ದೇಶಹಿತೈಕದೃಷ್ಟಿಯುಳ್ಳ ಶ್ರೀಮನ್ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ದೇಶದ ವಿಶಿಷ್ಟಪ್ರಜೆಗಳಿಗೂ ರೆಡ್ಡಿಯವರು ಮಾಡುವ ಕೆಲಸಗಳು ತೃಪ್ತಿಕರವಾಗಿದ್ದುವು. ಸರ್ಕಾರದಲ್ಲಿ ದುಡ್ಡಿನ ಕೊರತೆಯು ನೀಗುತ್ತ ಬಂದಂತೆಲ್ಲಾ ವಿದ್ಯಾಭ್ಯಾಸಶಾಖೆಗೆ ಹೆಚ್ಚುಹೆಚ್ಚಾಗಿ ಹಣವನ್ನೊದಗಿಸಲು ಸಾಧ್ಯವಾಗುವುದು. ಹಣವೊದಗಿದಷ್ಟೂ ಮೆಮೋರಾಂಡಮ್ಮಿನಲ್ಲಿ ಸೂಚಿತವಾಗಿರುವ ಏರ್ಪಾಟುಗಳೆಲ್ಲಾ ವ್ಯವಹಾರಕ್ಕೆ ಬಂದು ದೇಶದಲ್ಲಿ ವಿದ್ಯಾಸಂಪತ್ತಿಯ ವಿಕಾಸವು ಸರ್ವತೋಮುಖವಾಗಿ ಜರಗುವುದು. ಆಗ ಮ|| ರೆಡ್ಡಿಯವರ ದೇಶಸೇವಾಮಹೋನ್ನತಿಯು ಸರ್ವರಿಗೂ ಗೊತ್ತಾಗುವುದು. ಇದುವರೆಗೆ ಡಿ|| ಇ|| ಜ|| ಪದವಿಗೆ ಬಂದಿದ್ದ ಯಾವೊಬ್ಬ ಅಧಿಕಾರಿಯೂ ಇವರಷ್ಟು ಮೇಧಾಶಕ್ತಿಯನ್ನು ತೋರಿಸಿ ದೇಶಸೇವೆಯನ್ನು ಮಾಡಿದುದಿಲ್ಲ. ಮ|| ರೆಡ್ಡಿಯವರ ಶತ್ರುಗಳೂ ಕೂಡ ಒಳಗೊಳಗೇ ಅವರ ಸಾಮರ್ಥ್ಯವನ್ನು ಕುರಿತು ಆಲೋಚಿಸಿ ತಲೆದೂಗದೆ ಹೋಗಿಲ್ಲ. ಕ್ಷಣಮಾತ್ರದಲ್ಲಿ ಮನುಷ್ಯನ ಯೋಗ್ಯತಾ ವಿಶೇಷವನ್ನು ಅರಿಯಬಲ್ಲವರಾದ ನಮ್ಮ ಮಹಾಪ್ರಭುಗಳು ಯಾರೇನು ಬೊಗಳಿಕೊಳ್ಳುತ್ತಿದ್ದರೂ ಮ|| ರೆಡ್ಡಿಯವರ ಯೋಗ್ಯತಾಮಹತ್ವವನ್ನರಿತೇ ಅವರನ್ನು ಆ ಪದವಿಯಿಂದ ನಿವೃತ್ತಿಗೊಳಿಸಲಿಲ್ಲ. ಮ|| ರೆಡ್ಡಿಯವರು ಸ್ವದೇಶಕ್ಕೆ ಹೋಗಿ ದೇಶಸೇವೆಯನ್ನು ಇನ್ನೂ ವಿಸ್ತಾರವಾಗಿ ಮಾಡಬೇಕೆಂದು ಸಂಕಲ್ಪಿಸದಿದ್ದರೆ ಈ ದೇಶದಲ್ಲೇ ಅವರಿಗೆ ಇನ್ನೂ ಮಹೋನ್ನತವಾದ ಪದವಿಗಳು ದೊರೆಯಲು ಅಡ್ಡಿಯಿರಲಿಲ್ಲ. ಶ್ರೀಮನ್ಮಹಾರಾಜರ ವಿಷಯದಲ್ಲೂ ಅವರ ಪ್ರಜೆಗಳ ವಿಷಯದಲ್ಲೂ ರೆಡ್ಡಿಯವರ ಭಕ್ತಿವಿಶ್ವಾಸಗಳು ಅಕೃತ್ರಿಮಗಳೂ ಸಂಪೂರ್ಣಗಳೂ ಅಸ್ಖಲಿತಗಳೂ ಆಗಿದ್ದುವು. ಅವರುಗಳ ಪ್ರೀತಿವಿಶ್ವಾಸಗಳೂ ಇವರಮೇಲೆ ಸಂಪೂರ್ಣವಾಗಿದ್ದುವು. ಶ್ರೀಮದ್ಯುವರಾಜರ ಪ್ರೀತಿಯು ಇವರಮೇಲೆ ಅಸಾಧಾರಣವಾಗಿದ್ದಿತು. ಮೆಮೋರಾಂಡಮ್ಮನ್ನು ಸರ್ಕಾರದವರು ಒಪ್ಪಿ ವ್ಯವಹರಣೆಗೆ ತರಿಸಲು ಅಪ್ಪಣೆ ಮಾಡಿದುದರಿಂದ ಮ|| ರೆಡ್ಡಿಯವರು ಕೈಕೊಂಡಿದ್ದ ಕಾರ್ಯದಲ್ಲಿ ಒಂದು ಪ್ರಕರಣವನ್ನು ಮುಗಿಸಿದಂತಾಯಿತು. ಒಂದೊಂದನ್ನಾಗಿ ವ್ಯವಹರಣೆಗೆ ತರಿಸುವ ಪ್ರಕರಣವು ಇನ್ನುಮುಂದೆ ನಿಂತಿರುವುದು. ದ್ರವ್ಯಾನುಕೂಲವಾದಂತೆ ಅದನ್ನು ಸರ್ಕಾರದವರು ಮಾಡಿಯೇ ಮಾಡುವರು. ಮ|| ರೆಡ್ಡಿಯವರು ಈ ದೇಶವನ್ನು ಬಿಟ್ಟುಹೋದರೂ ವಿದ್ಯಾಪ್ರಸಾರದ ವಿಷಯದಲ್ಲಿ ಅವರು ಬಿತ್ತಿರುವ ಬೀಜವು ಗಿಡಮರಗಳಾಗಿ ಫಲವನ್ನು ಬಿಟ್ಟೇ ಮುಗಿಯುವುದು. ಅವರ ವಿಶ್ವಾಸಾಭಿಮಾನಗಳು ದೇಶದಮೇಲೆ ನಿರಂತರವಾಗಿ ಇದ್ದೇ ಇರುವುವು. ಅವರು ನಮ್ಮದೇಶದ ಪ್ರಜೆಗಳ ಅಭ್ಯುದಯಕ್ಕಾಗಿ ಸ್ಥಾಪಿಸಿಕೊಟ್ಟ ಏರ್ಪಾಟು ಎಷ್ಟು ಶಾಶ್ವತವಾದುದೋ ಅಷ್ಟೇ ಶಾಶ್ವತವಾದ ಸ್ಮಾರಕವನ್ನು ಅವರಿಗಾಗಿ ಪ್ರತಿಷ್ಠಾಪಿಸುವುದು ನಮ್ಮ ದೇಶೀಯರಿಗೆ ಕರ್ತವ್ಯವಾಗಿರುವುದು. ಅವರು ವಿದ್ಯಾಶಾಖೆಯಲ್ಲಿದ್ದು ಕೆಲಸ ಮಾಡಿದವರಾದುದರಿಂದ ಅದಕ್ಕೆ ಸಂಬಂಧಪಟ್ಟ ಕಾರ್ಯಗಳಲ್ಲಿ ಅವರ ಚಿರಸ್ಮರಣೆಯಿರುವಂತೆ ಮಾಡುವುದು ಉಚಿತವಾಗಿರುವುದು. ಎಂದರೆ ಇತಃಪರಃ ನಮ್ಮ ಪ್ರಜೆಗಳು ದೇಶಮಧ್ಯದಲ್ಲಿ ಸ್ಥಾಪಿಸುವ ವಾಚನಾಲಯಗಳು ಪಾಠಶಾಲಾಭವನಗಳು ಇತ್ಯಾದಿಗಳಿಗೆ "ಶ್ರೀ ರಾಮಲಿಂಗವಾಚನಾಲಯ" "ಶ್ರೀ ರಾಮಲಿಂಗಶಾಲಾಭವನ" ಎಂದು ಮೊದಲಾಗಿ ನಾಮಕರಣವನ್ನು ಮಾಡಿ ಅವರ ನಾಮಸ್ಮರಣೆಯು ಸದಾ ದೇಶಮಧ್ಯದಲ್ಲಿರುವಂತೆ ಮಾಡುವುದು ನಮ್ಮಗಳ ಕೃತಜ್ಞಸ್ವಭಾವವನ್ನು ವ್ಯಕ್ತಪಡಿಸುವುದಕ್ಕೆ ತಕ್ಕುದಾಗಿರುವುದು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಕಳೆದ ಬುಧವಾರ ಬೆಂಗಳೂರಿಗೆ ದಯಮಾಡಿಸಿದರು.

ಚಿಂತಾಮಣಿಯಲ್ಲಿ ನಡೆದ ಗದ್ದಲದಲ್ಲಿ ಒಬ್ಬ ಪೋಲೀಸುದ್ಯೋಗಿಯ ಪ್ರಾಣಹಾನಿಯಾಯಿತೆಂದು ತಿಳಿದುಬಂದಿದ್ದ ಸುದ್ದಿಯು ಸುಳ್ಳಾಗಿದೆ. ಕೆಲವರಿಗೆ ಏಟುಬಿದ್ದು ಗಾಯವಾಗಿರುವುದು ಮಾತ್ರ ನಿಜ.

ರಜದಮೇಲಿದ್ದ ವಿದ್ಯಾಭ್ಯಾಸದ ಡಿ|| ಇ|| ಜನರಲ್ ಮ|| ಬಿ. ದಾಸಪ್ಪನವರು ಕೆಲಸದಮೇಲೆ ಬರಮಾಡಲ್ಪಟ್ಟಿರುವರು. ಮ|| ರಾಮಲಿಂಗರೆಡ್ಡಿಯವರು ತಮ್ಮ ಇ|| ಜನರಲ್ ಉದ್ಯೋಗದ ಛಾರ್ಜನ್ನು ಮ|| ದಾಸಪ್ಪನವರಿಗೆ ನೆನ್ನೆಯದಿನ ವಹಿಸಿಕೊಡುವವರಾಗಿದ್ದರೆಂದು ತಿಳಿಯಬರುತ್ತದೆ.

ಮಂಡ್ಯದಲ್ಲಿ ನಡೆದಿದ್ದ ಹಿಂದೂ ಮಹಮ್ಮದೀಯರ ಕಲಹಗಳು ಮೈಸೂರಿನ ಕೆಲವು ವರ್ತಕರ ಮಧ್ಯಸ್ತಿಕೆಯಿಂದ ಶಾಂತವಾದುದಷ್ಟೆ. ಸರ್ಕಾರದವರು ಅಲ್ಲಿಯ ಕೆಲವರಮೇಲೆ ನಡೆಯಿಸಿದ್ದ ಪ್ರಾಸಿಕ್ಯೂಷನ್ ವ್ಯಾಜ್ಯಗಳೂ ಕೂಡ ಅದೇ ದೊಡ್ಡಮನುಷ್ಯರ ಪ್ರಾರ್ಥನೆಯ ಮೇರೆಗೆ ಸರ್ಕಾರದವರಿಂದ ಹಿಂದೆಗೆದುಕೊಳ್ಳಲ್ಪಟ್ಟಿರುತ್ತವೆ.

ಧಾನ್ಯದ ಕಂಟ್ರೋಲನ್ನು ತೆಗೆದು ಬಿಟ್ಟುದರಿಂದ ಜೋಳದಬೆಲೆಯು ೬ ರೂ. ನಿಂದ ೧೪ ರೂ. ಗೂ, ರಾಗಿಯಬೆಲೆಯು ೮ ರೂ. ನಿಂದ ೧೨ ರೂ. ಗೂ ಹಾಗೆಯೇ ಅಕ್ಕಿ ಮೊದಲಾದುವುಗಳ ಬೆಲೆಯು ಏರಿಹೋಗಿದೆ. ಪರಸ್ಥಲದ ಗಿರಾಕಿಗಳು ಎಲ್ಲೆಲ್ಲೂ ತುಂಬಿದ್ದಾರೆ. ಎಂದಿನಂತೆ ಕಂಟ್ರೋಲನ್ನು ಮರಳಿ ಏರ್ಪಡಿಸದಿದ್ದರೆ ದೇಶದಲ್ಲಿ ವಿಪರೀತ ಹಾಹಾಕಾರವು ಹುಟ್ಟುತ್ತದೆ.

ರಾ|| ಬ|| ಅಡ್ವೋಕೇಟ್ ಎಂ. ಸಿ. ರಂಗಯ್ಯಂಗಾರರ ಕುಮಾರರಾದ ಬ್ಯಾರಿಸ್ಟರ್ ಮ|| ಆರ್. ಎಸ್. ಅಯ್ಯಂಗಾರ್ ರವರನ್ನು ಮೈಸೂರು ಸರ್ಕಾರದವರು ಗೌರ್ನಮೆಂಟ್ ಅಡ್ವೋಕೇಟ್ ಪದವಿಗೆ ನಿಯಮಿಸಿರುತ್ತಾರೆ. ಮಿಲ್ಲರ್ ಕಮಿಟಿ ರಿಪೋರ್ಟಿನಿಂದ ಇನ್ನುಮುಂದೆ ಬ್ರಾಹ್ಮಣರಿಗೆ ಸರ್ಕಾರಿಯುದ್ಯೋಗವೇ ದೊರೆಯುವುದಿಲ್ಲವೆಂದು ರೋದಿಸುವವರು ಇದಕ್ಕೇನನ್ನುವರು?

ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲಿಗೆ ಸರ್ಕಾರದುದ್ಯೋಗಸ್ಥರಲ್ಲದೆ ಪ್ರಜಾಪ್ರತಿನಿಧಿಗಳಿಂದಾರಿಸಲ್ಪಡುವ ಒಬ್ಬ ಮೆಂಬರನ್ನು ತೆಗೆದುಕೊಳ್ಳಲೇ ಸಾರ್ಟಾಗಬೇಕೆಂದು ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರುಗಳು ಪ್ರಾರ್ಥಿಸಿಕೊಂಡುದರ ಮೇಲೆ ಆ ರೀತಿ ಸೌಲಭ್ಯವನ್ನು ಕಲ್ಪಿಸಿಕೊಡಲು ಶ್ರೀಮನ್ ಮಹಾರಾಜರ ಅನುಜ್ಞೆಗಾಗಿ ಅರಿಕೆಮಾಡುತ್ತೇವೆಂದು ದಿವಾನರು ಅಪ್ಪಣೆ ಕೊಡಿಸಿರುವರು.

ಕಳೆದ ಬುಧವಾರ ಜೈನರ ಗುರುಗಳಾದ ಶ್ರೀ ನೇಮಿಸಾಗರಸ್ವಾಮಿಗಳವರು ಮಂಡ್ಯಕ್ಕೆ ದಯಮಾಡಿಸಿ, ಆ ದಿವಸ ಸಾಯಂಕಾಲ ಗೌರ್ನಮೆಂಟ್ ಎ.ವಿ. ಸ್ಕೂಲಿನಲ್ಲಿ "ದಯೆ" ಎಂಬ ವಿಚಾರವನ್ನು ಕುರಿತು ಅನೇಕ ಉದಾಹರಣೆಗಳಿಂದ ಪ್ರಜೆಗಳ ಮನಸ್ಸು ಅದರಲ್ಲೇ ಲೀನವಾಗುವ ಹಾಗೆ ಉಪನ್ಯಾಸಮಾಡಿದರು. ಈ ಉಪನ್ಯಾಸವನ್ನು ಕೇಳಲು ಸರ್ಕಾರಿ ನೌಕರರೂ, ವರ್ತಕಮಂಡಲಿಯವರೂ ಇತರರೂ ದಯಮಾಡಿಸಿದ್ದರು ಎಂದು ಒಬ್ಬ ಚಂದಾದಾರರು ತಿಳಿಸುತ್ತಾರೆ.

ಮಹಾರಾಜಾಕಾಲೇಜಿನಲ್ಲಿ ಕಳೆದ ೨೪-೨೫ ವರ್ಷಗಳಿಂದಲೂ ಚರಿತ್ರೆಯ ಬೋಧಕರಾಗಿಯೂ, ವಿದ್ಯಾದಾಯಿನಿ ಮತ್ತು ಗ್ರಂಥಮಾಲೆ ಎಂಬ ಮಾಸಪತ್ರಿಕೆಗಳ ಸಂಪಾದಕರಾಗಿಯೂ ಇದ್ದ ಮ|| ಬಾಪುಸುಬ್ಬರಾವ್, ಬಿ. ಎ., ಯವರು ಕೆಲದಿನಗಳಿಂದ ಅಸ್ವಸ್ಥರಾಗಿದ್ದು ಕಳೆದವಾರ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಬಹಳ ಸರಸಿಗಳಾಗಿಯೂ ನಿಗರ್ವಿಗಳಾಗಿಯೂ ಇದ್ದು ವಿದ್ಯಾರ್ಥಿಗಳ ಮತ್ತು ಮಿತ್ರಮಂಡಲಿಯ ವಿಶೇಷಾನುರಾಗಕ್ಕೆ ಪಾತ್ರರಾಗಿದ್ದರು. ಇವರ ಮಕ್ಕಳುಗಳಲ್ಲಿ ಒಬ್ಬರು ವೆಟರಿನರಿ ಸರ್ಜನರಾಗಿಯೂ ಇನ್ನೊಬ್ಬರು ಅಸಿಸ್ಟೆಂಟ್ ಕಮಿಷನರಾಗಿಯೂ ಇರುವರು.

ಮೈಸೂರು ಗೌರ್ನಮೆಂಟ್ ಆರ್ಡರ್ No.R. 12,000—L.R. 482-17-20 Dated 2nd May 1921 ನಲ್ಲಿ ಕಂಡ ಮೇರೆ ಈ ತಿಂಗಳಲ್ಲೇ ಗೌರ್ನಮೆಂಟಿಗೆ ಇನಾಂ ಕಮಿಷನ್ ವಿಚಾರದಲ್ಲಿ ಇರಾದೆಗಳನ್ನು ಕಳುಹಿಸಬೇಕೆಂದಿರುವುದರಿಂದ, ಈ ಜುಲೈ ೯ ನೇ ಶನಿವಾರ ೮ ರಿಂದ ೬|| ಗಂಟೆ ವರೆಗೂ ೧೦ನೇ ಭಾನುವಾರ ೩ ರಿಂದ ೮ ಗಂಟೆಯವರೆಗೂ ಮೈಸೂರು ಟೌನ್ ಹಾಲಿನಲ್ಲಿ ಪ್ರಜೆಗಳನ್ನೂ, ಇನಾಂದಾರ್ ಮತ್ತು ಜೋಡಿದಾರರುಗಳನ್ನೂ ಸೇರಿಸಿ ಮೀಟಿಂಗ್ ಮಾಡಬೇಕೆಂದು ಉದ್ದೇಶಿಸಿರುವುದರಿಂದ ಸರ್ವರೂ ಆ ಕಾಲಕ್ಕೆ ದಯಮಾಡಿಸಬೇಕಾಗಿ ಇನಾಂ ಏಜನ್ಸಿ ಮ್ಯಾನೇಜರವರು ಕೋರುತ್ತಾರೆ.

ರಾಜಧಾನಿಯ ಕೋಟೆಗೆ ದಕ್ಷಿಣಭಾಗದಲ್ಲಿ ದೊಡ್ಡಕೆರೆ ಕೆಳಗಿರುವ ಹಸುಕರೆಯುವಹಟ್ಟಿಯಲ್ಲಿದ್ದ ಹಸುಗಳು ಬೇರೆಕಡೆಗೆ ಸಾಗಿಸಲ್ಪಟ್ಟು ಕಟ್ಟಡದ ಉತ್ತರಭಾಗವೆಲ್ಲಾ ಯೋಗ್ಯರಾದ ಪರಸ್ಥಳೀಕರು ಇಳಿದುಕೊಳ್ಳಲು ಬಿಟ್ಟುಕೊಡಲ್ಪಟ್ಟು "ಶ್ರೀ ಕೃಷ್ಣರಾಜೇಂದ್ರ ಧರ್ಮಶಾಲಾ" ಎಂದು ನಾಮಕರಣಮಾಡಲ್ಪಟ್ಟಿದೆ. ನವರಾತ್ರಿ ಮತ್ತು ವರ್ಧಂತಿ ಮಹೋತ್ಸವಗಳ ಕಾಲದಲ್ಲಿ ರಾಜಧಾನಿಗೆ ಬರತಕ್ಕ ಮಧ್ಯಮ ತರಗತಿಯ ಪ್ರಯಾಣಿಕರು ಇಳಿದುಕೊಳ್ಳಲು ತಕ್ಕ ಸ್ಥಳವಿಲ್ಲದೆ ಬಹಳ ತೊಂದರೆಯಾಗಿದ್ದಿತು. ಶ್ರೀಮನ್ ಮಹಾರಾಜರವರು ಅಂಥ ಜನರ ಸೌಕರ್ಯಕ್ಕಾಗಿ ಈ ವಸತಿಯನ್ನು ಕಲ್ಪಿಸಿಕೊಟ್ಟಿರುವುದು ಮಹೋಪಕರವಾಗಿರುವುದು. ಶ್ರೀಮನ್ ಮಹಾರಾಜರವರ ಪ್ರಜೋಪಕಾರವು ಬಹುಮುಖವಾಗಿ ಅಭಿವೃದ್ಧಿಯಾಗುತ್ತಿರುವುದರಲ್ಲಿ ಸಂದೇಹವಿಲ್ಲವು.

ಆರ್ಯಸಮಾಜದ ಮೈಸೂರು ಶಾಖೆಯ ನಿರ್ವಾಹಕರಾದ ಪಂಡಿತ ಗೋಪಾಲದತ್ತಶಾಸ್ತ್ರಿ ಮತ್ತು ಪಂಡಿತ ಕೇದಾರನಾಥ ಇವರುಗಳಿಂದ ಈ ಕೆಳಗೆ ಸೂಚಿಸಿರುವ ಮೇರೆಗೆ ಆಯಾ ದಿನಗಳಲ್ಲಿ ಆಯಾ ಉಪನ್ಯಾಸಗಳು ಪ್ರತಿದಿನ ಸಾಯಂಕಾಲ ೬ ಗಂಟೆಗೆ ಮೈಸೂರು ಟೌನ್ ಹಾಲಿನಲ್ಲಿ ಮ|| ಗೋವಿಂದಾಚಾರ್ಲು ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಸಲ್ಪಡುತ್ತವೆ. ೧೧-೭-೨೧ ರಲ್ಲಿ ಧರ್ಮ ಅಂದರೇನು? ೧೨-೭-೨೧ ರಲ್ಲಿ ವೇದ ಮತ್ತು ಅದರ ಅಪೌರುಷೇಯತ್ವ. ೧೩-೭-೨೧ ರಲ್ಲಿ ಸಮಾಜಶಾಸ್ತ್ರ ಮತ್ತು ವರ್ತಮಾನ ಪರಿಸ್ಥಿತಿ. ೧೪-೭-೨೧ ರಲ್ಲಿ ಜ್ಯೋತಿಷ ಮತ್ತು ಕರ್ಮವಾದ. ೧೭-೭-೨೧ ರಲ್ಲಿ ವೇದ ಮತ್ತು ಪರಿಣಾಮವಾದ. ೧೮-೭-೨೧ ರಲ್ಲಿ ವೇದ ಮತ್ತು ಈಶ್ವರವಾದ. ೧೯-೭-೨೧ ರಲ್ಲಿ ಪ್ರಾಚೀನಾರ್ಯಧರ್ಮ ಮತ್ತು ಆಧುನಿಕಸಂಪ್ರದಾಯ. ಮಹಾಜನರೆಲ್ಲರೂ ದಯಮಾಡಿಸಬೇಕೆಂದು ಶಾಖಾಸಮಾಜದ ಕಾರ್ಯನಿರ್ವಾಹಕರು ಪ್ರಾರ್ಥಿಸುತ್ತಾರೆ.

ಮುಂದಣ ನವರಾತ್ರಿಯಕಾಲದ ಪ್ರಜಾಪ್ರತಿನಿಧಿಸಭೆಯ ಕಾರ್ಯಕ್ರಮವನ್ನು ಸರ್ಕಾರದವರು ಪ್ರಕಟಿಸಿದ್ದಾರೆ. ಲೋಕಲ್‌ಬೋರ್ಡುಗಳು ಮ್ಯುನ್ಸಿಪಾಲಿಟಿಗಳು ಅಂಗೀಕೃತ ಸಂಘಗಳು ತಾವು ಆರಿಸಿದ ಪ್ರತಿನಿಧಿಗಳ ಹೆಸರನ್ನು ಜುಲೈ ತಾ|| ೭ ರೊಳಗೂ ತಾಲ್ಲೂಕು ಬೋರ್ಡು ಪ್ರತಿನಿಧಿಗಳ ಹೆಸರನ್ನು ಜುಲೈ ತಾ|| ೧೨ ರೊಳಗೂ, ಡಿ|| ಕಮಿಷನರುಗಳಿಗೆ ಕಳುಹಿಸಿಕೊಡಬೇಕು. ಡಿ|| ಕಮಿಷನರು ಸಭೆಗೂಡಿ ಚರ್ಚಿಸಿ ಸಬ್ಜೆಕ್ಟುಗಳನ್ನು ಜುಲೈ ತಾ|| ೨೮ ರೊಳಗೆ ಸೆಕ್ರಟರಿಯಟ್ಟಿಗೆ ಕಳುಹಿಸಬೇಕು. ಅಕ್ಟೋಬರ್ ತಾ|| ೧೩ ರಲ್ಲಿ ಸಭೆಯಾರಂಭವಾಗುವುದು. ಈ ಸಭೆಯಲ್ಲಿ ಮಿಲ್ಲರ್ ಕಮಿಟಿ ರಿಪೋರ್ಟು, ಪ್ರಸ್ತಾಪು, ಮೆರಿಟ್ ಸ್ಕಾಲರ್ಷಿಪು, ಪ್ರಜಾಪ್ರತಿನಿಧಿಸಭಾ ನಿಯಮಗಳ ಸರ್ಕ್ಯುಲರು-ಇವುಗಳ ಮೇಲಣ ಚರ್ಚೆಯೂ ಇಡಲ್ಪಡುವುದೆಂದು ಡೇಲಿಪೋಸ್ಟ್ ಪತ್ರಿಕೆಯ ಬಾತ್ಮೀದಾರರು ಬರೆದಿದ್ದಾರೆ, ಇದು ನಿಜವಿರಲಾರದು. ಸರ್ಕಾರದ ಕ್ಯಾಲಂಡರಲ್ಲಿ ಈ ವಿಷಯವನ್ನೇನೂ ತಿಳಿಸಿಲ್ಲ.

ಮ|| ರಾಮಲಿಂಗರೆಡ್ಡಿ ಎಂ. ಎ. ಯವರು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರ ಪದವಿಯನ್ನು ಬಿಟ್ಟು ತೆರಳುವರಾದುದರಿಂದ ಈ ಮಹಾಶಯರ ಸತ್ಕಾರಸಮಾರಂಭಮಹೋತ್ಸವವನ್ನು ಬೆಂಗಳೂರಿನಲ್ಲಿ ಈ ತಾ|| ೧೭ ನೆಯ ಭಾನುವಾರ ನಡೆಯಿಸಬೇಕೆಂದೂ ಒಂದು ಸ್ಮಾರಕನಿಧಿಯನ್ನೇರ್ಪಡಿಸಬೇಕೆಂದೂ ಪ್ರಜಾಮಿತ್ರಮಂಡಲಿಯವರು ನಿರ್ಧರಿಸಿ ಇದಕ್ಕಾಗಿ ಪ್ರತಿಯೊಬ್ಬ ಜನಾಂಗದವರೂ ನಿರ್ವಂಚನೆಯಿಂದ ಶಕ್ತಿಮೀರಿ ದ್ರವ್ಯಸಹಾಯಮಾಡಬೇಕೆಂದೂ ಈ ಮಹೋತ್ಸವ ಭಾಗಿಗಳಾಗಬೇಕೆಂದೂ ಕೋರಿ ಪ್ರಕಟಿಸಿರುವ ವಿಜ್ಞಾಪನಪತ್ರಿಕೆಯು ಬೇರೊಂದುಕಡೆ ಮುದ್ರಿಸಲ್ಪಟ್ಟಿದೆ. ಇದರಂತೆ ರಾಜಧಾನಿಯಲ್ಲೂ ಸತ್ಕಾರಸಮಾರಂಭ ಮಹೋತ್ಸವವನ್ನು ಬರುವ ತಾ|| ೧೯ ರಲ್ಲಿ ಜರುಗಿಸಬೇಕೆಂಬ ಏರ್ಪಾಟು ನಡೆಯುತ್ತಿದೆ. ಈ ವೇಳೆಯಲ್ಲಿ ನಮ್ಮ ದೇಶದ ಹಿಂದುಳಿದ ಜನಾಂಗದವರೆಲ್ಲರೂ ದ್ರವ್ಯಸಹಾಯಮಾಡಿ ಮಹೋತ್ಸವಗಳನ್ನು ಅಭೂತಪೂರ್ವವಾಗಿ ಜಯಜಯವೆನಿಸಿ ಆ ಮಹನೀಯರಲ್ಲಿ ತಮಗಿರುವ ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸುವರೆಂದು ನಿರೀಕ್ಷಿಸುತ್ತೇವೆ.

ವಿಜ್ಞಾಪನೆ.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರಾಗಿದ್ದು ಈಗ ಅಧಿಕಾರದಿಂದ ನಿವೃತ್ತರಾಗಲೆಳಸಿರುವ ಶ್ರೀಯುತ ರಾಮಲಿಂಗರೆಡ್ಡಿ, ಎಂ. ಎ., ಯವರು ಈ ಸಂಸ್ಥಾನಕ್ಕೂ ಈ ಸಂಸ್ಥಾನದ ಪ್ರಜೆಗಳಿಗೂ ಮಾಡಿರುವ ಮಹೋಪಕಾರದ ಕೃತಜ್ಞತಾಪ್ರದರ್ಶನದ ಸಲುವಾಗಿ ಈ ತಿಂಗಳ ೧೭ನೇ ತಾರೀಖಿನ ಸುಮಾರಿನಲ್ಲಿ ಮಹಾಜನರು ಸಭೆಗೂಡಿ ಮ|| ರೆಡ್ಡಿಯವರನ್ನು ಸತ್ಕರಿಸಬೇಕೆಂದೂ, ಅವರ ಜ್ಞಾಪಕಾರ್ಥವಾಗಿ ಸ್ಮಾರಕನಿಧಿಯೊಂದನ್ನು ಶೇಖರಿಸಬೇಕೆಂದೂ, ಮೈಸೂರು ಪ್ರಜಾಮಿತ್ರಮಂಡಲಿಯವರ ಪರವಾಗಿ ರಾಜಧಾನಿಯಲ್ಲಿ ಕಳೆದ 13 ನೇ ತಾರೀಖಿನಲ್ಲಿ ನೆರೆದ ಸಾರ್ವಜನಿಕ ಮಹಾಸಭೆಯವರು ನಿರ್ಧರಿಸಿದ್ದಾರೆ.

ಈ ಮಹತ್ಕಾರ್ಯಗಳಿಗೆ ಸಂಸ್ಥಾನದ ಮಹಾಜನರು ಧಾರಾಳವಾಗಿ ಧನಸಹಾಯ ಮಾಡಬೇಕೆಂದೂ ಈ ಸತ್ಕಾರ ಸಮಾರಂಭ ಕಾರ್ಯಕ್ಕೆ ತಾವುಗಳೆಲ್ಲರೂ ಅಗತ್ಯವಾಗಿ ದಯಮಾಡಿಸಿ ಇದು ವಿಜೃಂಭಣೆಯಿಂದ ನೆರವೇರುವಂತೆ ಮಾಡಬೇಕೆಂದೂ ಕೋರುತ್ತೇವೆ.

ಮೇಲ್ಕಂಡ ಮಹತ್ಕಾರ್ಯಗಳಿಗಾಗಿ ತಾವು ಕೊಡಲಿರುವ ಉದಾರವಾದ ಧನಸಹಾಯವನ್ನು ಪ್ರಜಾಮಿತ್ರಮಂಡಲಿಯ ಅಧ್ಯಕ್ಷರಾದ ರಾವ್ ಸಾಹೇಬ್ ಎಚ್. ಚೆನ್ನಯ್ಯನವರಿಗಾಗಲೀ ಅಥವಾ ಅದೇ ಮಂಡಲಿಯ ಟ್ರೆಷರರ್ ಮ|| ಟಿ. ನಂಜಪ್ಪನವರಿಗಾಗಲೀ ಕೂಡಲೇ ರವಾನಿಸಬೇಕಾಗಿ ಈ ಮೂಲಕ ಪ್ರಾರ್ಥಿಸುತ್ತೇವೆ.

ತಮ್ಮ ವಿಧೇಯರು,

ಮ|| ರಾ|| ಎಚ್. ಚೆನ್ನಯ್ಯ. — ಮ|| ರಾ|| ಅಬ್ಬಾಸ್‌ಖಾನ್
" ಗುಲಾಂ ಅಮದ್ ಕಲಾಮಿ. — " ತೂಬಿಗೆರೆ ನಂಜಪ್ಪ.
" ಎಂ. ಸುಬ್ಬಯ್ಯ. — " ಮುನಿಬಸಪ್ಪ.
" ಬಿ. ವಿ. ರಾಮಸ್ವಾಮಿ ಸೆಟ್ಟಿ. — " ಎಸ್. ಎ. ಜವರಯ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಆಯವ್ಯಯದ ಪಟ್ಟಿಯ ಮೇಲಣ ಚರ್ಚೆ.

(ಕಳೆದವಾರದ ಶೇಷ.)

ಮ|| ಲಿಂಗೇಗೌಡರು—ಕೃಷ್ಣರಾಜಸಾಗರದ ಉತ್ತರದಕ್ಷಿಣ ನಾಲೆಗಳ ಕೆಲಸವನ್ನು ಕೂಡಲೇ ಆರಂಭಿಸಲು ಬಡ್ಜೆಟ್ಟಿನಲ್ಲಿ ಅಲಾಟ್ ಮಾಡಬೇಕು.

ದಿವಾನರು—ಹಣದ ತೊಂದರೆಯಿರುವುದರಿಂದ ಈಗ ಸಾಧ್ಯವಲ್ಲ.

ಮ|| ಗುರುವಾರೆಡ್ಡಿಯವರು—ಬೆಂಗಳೂರು ತಾ|| ಕೆಲವು ಗ್ರಾಮಗಳಿಗೆ ಮಳೆಬೆಳೆಯಿಲ್ಲದೆ ಹೋದವರ್ಷ ಕಂದಾಯದ ರಿಮಿಷನ್ ಆಯಿತು. ಈ ವರ್ಷದ ಸ್ಥಿತಿಯೂ ಹಾಗೆಯೇ ಇದೆ, ಸುತರಾಂ ಬೆಳೆಯಿಲ್ಲ. ಕೆರೆಗಳು ಮೂರು ವರ್ಷಗಳಿಂದಲೂ ತುಂಬಿಲ್ಲ. ಈ ಸಲವೂ ರಿಮಿಷನ್ ಮಾಡಿಸಬೇಕು. ಮತ್ತು ರೈತರಮೇಲೆ ವಿದ್ಯೆಯಸೆಸ್ಸನ್ನು ಹಾಕಬಾರದು.

ತಾ|| ೨೧—೬—೨೧ ರ ನಡವಳಿಕೆ.

ಮ|| ಪುರುಷೋತ್ತಮಾನಂದಗಿರಿಯವರು—ಬಡ್ಜೆಟ್ಟಿನಲ್ಲಿ ಕಂಟೋನ್ಮೆಂಟಿನಿಂದ ನಮಗೆ ೩ ವರ್ಷಗಳಿಂದಲೂ ಬರದೆ ನಿಂತಿರತಕ್ಕ ೯|| ಲಕ್ಷ ರೂ. ಗಳನ್ನು ಜಮಾಬಾಬಿಗೆ ಸೇರಿಸಿಲ್ಲ. ಅದನ್ನು ಸೇರಿಸಿದರೆ ಆದಾಯವು ಮಿಗಿಲಾಗಿ ತೋರುತ್ತದೆ. ಮತ್ತು ಜನರಲ್ ಸ್ಟಾಂಪು, ಕೋರ್ಟುಫೀಜು ಸ್ಟಾಂಪುಗಳಮೇಲೆ ರೂಪಾಯಿಗೆ ಒಂದೊಂದಾಣೆಯಂತೆ ಸೆಸ್ಸನ್ನು ವಿಧಿಸಿದರೆ ೧ ಲಕ್ಷ ರೂ. ನ ಮೇಲೆಯೇ ಆದಾಯವಾಗುತ್ತದೆ. ಇದರಿಂದಲೂ ಆದಾಯವನ್ನು ಬಲಪಡಿಸಬಹುದು. ರೈಲ್ವೆಯಿಂದ ಖರ್ಚುಜಾತಾ ೧೦ ಲಕ್ಷ ಆದಾಯವೆಂದು ತೋರಿಸಲ್ಪಟ್ಟಿದೆ. ಒಟ್ಟು ೬೭,೯೦೦೦೦ ರೂ. ವರಮಾನವಿದೆ. ಮಾರಲ್ಪಡುವ ಟಿಕೇಟುಗಳಮೇಲೆ ಟಿಕೇಟು ೧ ಕ್ಕೆ ೩ ಪೈಯಂತೆ ಹೆಚ್ಚಾಗಿ ವಿಧಿಸಿದರೂ ಎಷ್ಟೋ ವರಮಾನವಾಗುತ್ತದೆ. ಸರ್ಕಾರಕ್ಕೆ ಸ್ಟಾಂಪಿನಿಂದ ೧೫ ಲಕ್ಷ ಬರುತ್ತಿರುವುದನ್ನು ನೋಡಿದರೆ ಅದಕ್ಕೆ ದ್ವಿಗುಣವಾಗಿಯಾದರೂ ಲಾಯರುಗಳಿಗೆ ಫೀಜಿನಮೂಲಕ ವರಮಾನವಿರುವುದೆಂದು ಕನಿಷ್ಠಪಕ್ಷವಾಗಿ ಭಾವಿಸಬಹುದು. ಆ ಉತ್ಪತ್ತಿಯಮೇಲೆ ರೂ. ಗೆ ೧ ಆಣೆಯಂತೆ ವಿಧಿಸಿದರೆ ೨ ಲಕ್ಷ ರೂ. ವರಮಾನವಾಗಬಹುದು. ಪೆನ್ಷನ್ ಅಲೋಯನ್ಸು ಬಹುಶಃ ೧೦ ಲಕ್ಷ ರೂ. ಗಳ ವರೆಗೆ ಆಗುತ್ತದೆ. ಅದರಮೇಲೆ ರೂ. ಗೆ ೧ ಆಣೆಯಂತೆ ವಿದ್ಯೆಯಸೆಸ್ಸನ್ನು ಹಾಕಿ ವಸೂಲ್ಮಾಡಬಹುದು. ಕ್ರಿಮಿನಲ್ ಕೇಸುಗಳ ಲಾಯರ್‌ಫೀಜಿಗೆ ಒಂದು ಲಿಮಿಟನ್ನು ಏರ್ಪಡಿಸಬೇಕು. ಸಿವಿಲ್‌ಕೇಸುಗಳ ಫೀಜಿಗೂ ಹಾಗೆಯೇ ಹದ್ದನ್ನು ಏರ್ಪಡಿಸಿ, ಲಾಯರುಗಳು ತೆಗೆದುಕೊಂಡ ಫೀಜಿಗೆ ರಸೀದಿಯನ್ನು ಪಡೆದುಕೊಳ್ಳುವಂತೆ ಮಾಡಿದರೆ ಅಂಥಾ ರಸೀದಿಗಳಮೇಲೆ ಲೆಕ್ಕಾಚಾರಮಾಡಿ ಸೆಸ್ ವಿಧಿಸಬಹುದು. ದೊಡ್ಡಪಟ್ಟಣಗಳ ಇಂಪ್ರೂವ್ಮೆಂಟಿಗೆ ಭಾರಿ ಗ್ರಾಂಟುಕೊಡುತ್ತಿದ್ದಾರೆ. ಅದರಲ್ಲಿ ಅರ್ಧಭಾಗ ಸಿಬ್ಬಂದಿಗೇ ಖರ್ಚಾಗಿ ಹೋಗುತ್ತದೆ. ಮೈಸೂರು ಸಿಟಿಗೆ ೭೭೦೯೯ ಗ್ರಾಂಟು ಕೊಟ್ಟದ್ದೀರಿ. ಇವರ ಮ್ಯುನ್ಸಿಪಾಲಿಟಿಗೆ ಆನರರಿ ಪ್ರೆಸಿಡೆಂಟರು, ಆನರರಿ ವೈಸ್‌ಪ್ರೆಸಿಡೆಂಟರು, ಚೀಫ್‌ಆಫೀಸರು ಹೀಗೆ ಮೂವರು ಅಧಿಕಾರಿಗಳಾಗಿದ್ದಾರೆ. ಮೊದಲಿನವರಿಬ್ಬರಿಗೂ ೨೫೦ + ೧೦೦ ರೂ. ಗಳು ಆನರೇರಿಯಮ್ಮಾಗಿ ಕೊಡಲ್ಪಡುತ್ತದೆ. ಇವರಿಬ್ಬರೂ ಮಾಡುವ ಕೆಲಸವು ಬಹಳಕಡಿಮೆ. ಬೆಂಗಳೂರಿಗೆ ಕೊಟ್ಟಿರುವಂತೆ ಎಲಕ್ಟೆಡ್ ಪ್ರೆಸಿಡೆಂಟರನ್ನು ಮೈಸೂರಿಗೂ ಕೊಡಬೇಕು. ಪುನಾವಗೈರೆ ಮ್ಯುನ್ಸಿಪಾಲಿಟಿಯಲ್ಲಿ ಆನರೆರಿಯಮ್ಮಿಲ್ಲ. ಗುಮಾಸ್ತೆ ವಗೈರೆ ಸಿಬ್ಬಂದಿಮಾತ್ರ ಸ್ವಲ್ಪವಿದೆ. ಅವರು ಮೀಟಿಂಗಿನಲ್ಲಿ ರೆಜಲ್ಯೂಷನ್ ಮಾಡಿ ಚೀಫ್ ಆಫೀಸರಿಗೆ ಕಳುಹಿಸಿಬಿಡುತ್ತಾರೆ. ಅವರು ಎಲ್ಲವನ್ನೂ ಜಾರಿಮಾಡುತ್ತಾರೆ. ಇಲ್ಲಿಯಕ್ರಮ ಹಾಗಿಲ್ಲ. ಅವರೇ ರೆಜಲ್ಯೂಷನ್ನನ್ನೂ ಅವರೇ ಚಲಾವಣೆಯನ್ನೂ ಮಾಡುತ್ತಾರೆ. ಮ್ಯುನ್ಸಿಪಲ್ ಎಸ್ಟಾಬ್ಲಿಷ್‌ಮೆಂಟನ್ನು ನೋಡಿದರೆ ಅಲ್ಲಿರುವವರೆಲ್ಲಾ ಬಹಳ ಪುರಾತನರು. ಮೈಸೂರು ಸಿಟಿಯ ಇಂಪ್ರೂವ್ಮೆಂಟು ಅವ್ಯವಸ್ಥೆಯನ್ನು ಹೇಳತೀರದು. ಕೆಲವು ಎಕ್ಸ್‌ಟೆನ್ಷನ್ನುಗಳ ಭಾಗದಹೊರತು ಉಳಿದ ಲಷ್ಕರ್ ಮುಂದಿಮೊಹಲ್ಲಾಗಳಂಥ ಹಳೆಯಭಾಗಗಳಲ್ಲಿ ಸರಿಯಾದ ಇಂಪ್ರೂವ್ಮೆಂಟೇ ಆಗಿಲ್ಲ. ನಮಗೆ ಎಲೆಕ್ಟೆಡ್ ಪ್ರೆಸಿಡೆಂಟರನ್ನು ಕೊಟ್ಟು ಅವರ ಆನರೆರಿಯಮ್ಮನ್ನು ನಿಲ್ಲಿಸಿಬಿಡಬೇಕು. ಮೈಸೂರು ಸಿಟಿಯಲ್ಲಿ ಮ್ಯುನ್ಸಿಪಾಲಿಟಿಯನ್ನೂ ಟ್ರಸ್ಟ್ ಬೋರ್ಡನ್ನೂ ಒಟ್ಟಿಗೆ ಸೇರಿಸಬೇಕು. ಇಲ್ಲಿ ಗೌರ್ನಮೆಂಟ್ ಇಂಜನಿಯರ ಮೂಲಕ ನಡೆಯುವ ಕೆಲಸಗಳನ್ನೆಲ್ಲಾ ಮ್ಯು|| ಇಂಜನಿಯರಮೂಲಕವೇ ನಡೆಯಿಸಿದರೆ ಖರ್ಚು ಕಡಿಮೆ ಆಗುತ್ತದೆ. ಸಂಸ್ಥಾನದಲ್ಲಿ ಆದಾಯಕರವಾದ ಈಚಲು ಪ್ಲಾಂಟೇಷನ್ನು ಕಡಿಮೆಯಾಗುತ್ತಿದೆ. ರೈತರಿಗೆ ಪ್ರೋತ್ಸಾಹಕೊಟ್ಟು ಕೆಲವು ಜಮೀನುಗಳಲ್ಲಿ ಅವರುಗಳ ಮೂಲಕ ಈಚಲು ಪ್ಲಾಂಟೇಷನ್ನುಗಳನ್ನು ವೃದ್ಧಿಪಡಿಸಬೇಕು. ಮುಜರಾಯಿ ಶಾಖೆಯಲ್ಲಿ ಸೂಪರಿಂಟೆಂಡೆಂಟರಿಗೆ ೯ ಸಾವಿರವೂ ಅವರ ಎಸ್ಟಾಬ್ಲಿಷ್ಮೆಂಟಿಗೆ ೮ ಸಾವಿರವೂ ಖರ್ಚು ಬಿದ್ದಿದೆ. ಇಷ್ಟು ದುಬಾರಿಖರ್ಚು ಆ ಶಾಖೆಗೆ ಅವಶ್ಯಕವಿಲ್ಲ. ಕಲೆಕ್ಟಿಂಗ್ ಸೇವಿಂಗ್ಸ್ ಬ್ಯಾಂಕ್ ಬಾಬಿಗೆ ೬೭೦೦ ರೂ. ಖರ್ಚುಬಿದ್ದಿದೆ. ಆ ಇಲಾಖೆಯವರು ಎಷ್ಟು ಹಣ ಜಮಾವಣೆಮಾಡುತ್ತಾರೆ? ಎಷ್ಟು ಕೆಲಸ ನಡೆಯುತ್ತಿದೆ? ಅದಕ್ಕೆ ಅವರಖರ್ಚು ಅನುಗುಣವಾಗಿದೆಯೆ? ವಿಚಾರಮಾಡಬೇಕು.

ಚೀಫ್‌ಕೋರ್ಟಿಗೆ ಇರುವ ಇಬ್ಬರು ರಿಜಿಸ್ಟ್ರಾರರುಗಳಲ್ಲಿ ಒಬ್ಬರನ್ನು ವಜಾಮಾಡಬೇಕು. ಗೌ|| ಅಡ್ವೋಕೇಟರಿಗೆ ೬೦೦-೭೦೦ ರೂ. ಗ್ರೇಡು ಇವೆ. ಸರ್ಕಾರದ ಸಿವಿಲ್‌ಕೇಸುಗಳಿಗಾಗಿ ಅವರಿಗೆ ಬೇರೆ ಫೀಜು ಕೊಡುತ್ತೀರಿ. ಇದರಮೇಲೆ ಅವರು ಪ್ರೈವೇಟ್‌ಕೇಸುಗಳನ್ನೂ ಹಿಡಿಯುತ್ತಾರೆ. ಆದುದರಿಂದ ಅವರ ಸಂಬಳವನ್ನು ೩೦೦-೪೦೦ ಒಳಗೆ ಏರ್ಪಡಿಸಿದರೆ ಸಾಕು.

೨ ನೆ ಕೌನ್ಸಿಲರು—ಕಡಿಮೆಸಂಬಳಕ್ಕೆ ಒಳ್ಳೆಯಲಾಯರು ಸಿಕ್ಕುವುದಿಲ್ಲ.

ಮೆಂಬರು—ನಂಜನಗೂಡು ಈರೋಡು ರೈಲ್ವೆ ಪೋಲೀಸಿಗೆ ಖರ್ಚನ್ನು ಬಡ್ಜೆಟ್ಟಿನಲ್ಲಿ ಹಾಕಿರುವುದೇಕೆ? ಆ ಲೈನೇ ಇಲ್ಲದಿರುವಾಗ ಖರ್ಚೆಲ್ಲಿಗೆ? ಅದನ್ನು ವಜಾಮಾಡಬೇಕು. ಈರೋಡು ರೈಲ್ವೆಗಾಗಿ ಇದುವರೆಗೆ ೯೦೨೭ ರೂ. ಖರ್ಚಾಗಿರುವುದಾಗಿ ಇಂಟರ್ಪಲೇಷನ್ನಿಗೆ ಕೊಟ್ಟಿರುವ ಉತ್ತರದಲ್ಲಿ ಕಾಣಿಸಲ್ಪಟ್ಟಿದೆ. ಈ ಖರ್ಚಿನಿಂದ ಆಗಿರುವ ಕೆಲಸದಲ್ಲಿ ನಿಲ್ಲತಕ್ಕ ಕೆಲಸವೆಷ್ಟು? ಸುತರಾಂ ಹೋಗುವುದೆಷ್ಟು?

೧ ನೆ ಕೌನ್ಸಿಲರು—೭ ಮೈಲಿಗಳವರೆಗೆ ಮಟ್ಟಕೆಲಸವಾಗಿದೆ. ಮಳೆ ಹುಯ್ದರೆ ಕೊಚ್ಚಿಕೊಂಡುಹೋದರೂ ಹೋಗಬಹುದು.

ಮ|| ನೆಟ್ಟಾಜಿರಾಯರು—ಎಲೆಕ್ಟ್ರಿಸಿಟಿಯ ಛಾರ್ಜನ್ನು ೨ ಬಾಬಿನಲ್ಲಿ ಹೆಚ್ಚಿಸಿದೆ. ಒಂದು ಬಾಬಿನಲ್ಲಿ ಕಡಿಮೆ ಮಾಡಬೇಕು. ಛಾರ್ಜು ಹೆಚ್ಚಾಯಿತೆಂದು ಅನೇಕರು ಬಲ್ಬುಗಳನ್ನು ಕಡಿಮೆಹಾಕಿ ಛಾರ್ಜುಗಳನ್ನು ಕಡಿಮೆಬೀಳುವಂತೆ ಮಾಡಿಕೊಳ್ಳುತ್ತಿದ್ದಾರೆ. ಮುಂದೆ ದೀಪತೆಗೆದುಕೊಳ್ಳತಕ್ಕವರೂ ಹಿಂದೆಗೆಯುತ್ತಾರೆ. ಇದರಿಂದ ಸರ್ಕಾರಕ್ಕೆ ಲುಕ್ಸಾನಾಗುತ್ತದೆ. ಮೈಸೂರಿನ ಟ್ರಸ್ಟ್‌ಬೋರ್ಡ್ ಮ್ಯುನ್ಸಿಪಾಲಿಟಿ ಇವೆರಡನ್ನೂ ಒಟ್ಟುಗೂಡಿಸಿದರೆ ಒಳ್ಳೇದು.

ಮಿ|| ಉಸ್ಮಾನ್‌ಖಾನರು—ಸರ್ಕಾರದವರು ಮೈನರ್‌ಕೆರೆಗಳ ರಿಪೇರಿಗಾಗಿ ೧೦ ವರ್ಷಗಳಿಂದ ಎಷ್ಟು ಖರ್ಚುಮಾಡಿದ್ದಾರೆ? ಎಷ್ಟು ವರಮಾನವಾಗುತ್ತಿದೆ?

ಸರ್ಕಾರಿ ಉತ್ತರ—ಲೆಕ್ಕಮಾಡಿಸಿ ತಿಳಿಸುತ್ತಾರೆ.

ಮೆಂಬರು—ಮೈನರ್ ಟ್ಯಾಂಕುಗಳ ರಿಪೇರಿಗೆ ಸರ್ಕಾರದವರು ಹೆಚ್ಚು ಗಮನಕೊಡಬೇಕು. ಮೈನರ್ ಟ್ಯಾಂಕುಗಳ ಜೀರ್ಣೋದ್ಧಾರದ ಖರ್ಚಿನಲ್ಲಿ ಪ್ರಜೆಗಳಿಂದ ೧/೩ ಭಾಗವೂ ಸರ್ಕಾರದಿಂದ ೨/೩ ಭಾಗವೂ ಕೊಡುವಂತೆ ಆರ್ಡರಿದೆ. ಪ್ರಜೆಗಳು ತಮ್ಮಭಾಗದ ಹಣವನ್ನು ಕೊಟ್ಟರೂ ಸರ್ಕಾರವು ಬಾಕಿಯನ್ನು ಕೊಟ್ಟು ಬೇಗನೆ ಕೆಲಸಮಾಡಿಸುವುದಿಲ್ಲ. ರೈತರು ಕೊಡದಿದ್ದರೆ ಸರ್ಕಾರವು ರೈತರಭಾಗವನ್ನೂ ಕೊಟ್ಟು ಕೆಲಸಮಾಡಿಸಿ ಅನಂತರ ಅವರಿಂದ ಬಲಾತ್ಕಾರವಾಗಿ ವಸೂಲ್ಮಾಡಿಸಿಕೊಳ್ಳಬಹುದು. ಹಾಗಾದರೆ ಕೆಲಸವು ಬೇಗನೆ ಆಗುತ್ತದೆ. ಸರ್ಕಾರಕ್ಕೆ ಒಂದು ಅರ್ಜಿ ಕೊಟ್ಟರೆ ೧೦ ವರ್ಷವಾದರೂ ಫೈಸಲೇ ಆಗುವುದಿಲ್ಲ. ನನ್ನದೇ ಒಂದು ಜಮೀನಿನ ವಿಷಯದಲ್ಲಿ ಅರ್ಜಿಕೊಟ್ಟು ೬ ವರ್ಷವಾಯಿತು. ಇನ್ನೂ ಏನೂ ಆಗಿಲ್ಲ. ಅರ್ಜಿಗಳನ್ನು ಜಾಗ್ರತೆ ವಿಲೆಮಾಡಿಸಬೇಕು. ಅರ್ಜಿಗಳ ವಿಲೆವಾರಿಗೆ ಕಾಲದ ಲಿಮಿಟ್ಟನ್ನು ಏರ್ಪಡಿಸಬೇಕು. ವಿಲೇಜ್ ಇಂಪ್ರೂವ್ಮೆಂಟೆಂದೂ ಸಂಚಾರದ ಲೈಬ್ರೆರಿಯೆಂದೂ ಏರ್ಪಾಡು ಮಾಡೋಣವಾಯಿತು. ಎಷ್ಟು ಪ್ರಯೋಜನವಾಗಿದೆಯೋ ಸರ್ಕಾರಕ್ಕೇ ಗೊತ್ತು. ಅವುಗಳಿಗೆ ಹಾಳ್ಮಾಡುವ ಹಣವನ್ನೆಲ್ಲಾ ಮೈನರ್‌ಟ್ಯಾಂಕುಗಳ ರಿಪೇರಿಗೆ ಉಪಯೋಗಿಸಿ ಬೇಗಬೇಗನೆ ಮಾಡಿಸಬೇಕು. ಕೆರೆಗಳ ರಿಪೇರಿಗಾಗಿ ರೈತರಿಂದ ೧/೩ ಭಾಗವನ್ನು ತೆಗೆದುಕೊಂಡು ಉಳಿದದ್ದನ್ನು ಸರ್ಕಾರದಿಂದ ಹಾಕಿ ರಿಪೇರಿಮಾಡಿಸುವುದಾಗಿ ಮೊನ್ನೆ ವರ್ಷದಲ್ಲಿ ಆರ್ಡರಾಗಿದೆ. ಅದರಂತೆಯೂ ಕೆಲಸವು ನಡೆದಿಲ್ಲ. ಕೆರೆರಿಪೇರಿಗಳ ಕೆಲಸವನ್ನು ಹಿಡಿದ ಇಷ್ಟು ದಿನಗಳೊಳಗಾಗಿ ಮುಗಿಸಬೇಕೆಂದು ಖಂಡಿತವಾದ ಆರ್ಡರ್ ಕೊಡಬೇಕು. ಅದಿಲ್ಲದೆ ೪-೫ ವರ್ಷಗಳ ವರೆಗೆ ಒಂದೊಂದು ಕೆರೆಯನ್ನು ರಿಪೇರಿಮಾಡಿಸುತ್ತಿರುವ ಈಗಿನ ಪದ್ಧತಿಯಿಂದ ಒಂದುಕಡೆಯಿಂದ ಕೆಲಸ ಮಾಡಿಕೊಂಡು ಹೋಗುತ್ತಿದ್ದರೆ ಒಂದು ಕಡೆಯಿಂದ ಕೊಚ್ಚಿಹೋಗುವುದೂ ರಿವೈಜ್ ಎಸ್ಟಿಮೇಟು ಮತ್ತೆ ಆಗುವುದೂ ಹೀಗೆ ಬಹಳನಷ್ಟವಾಗಿ ಹೋಗಲು ಅವಕಾಶವಾಗಿದೆ. ಕುಡಿಯುವನೀರಿನ ಜಲಾಶಯಗಳನ್ನು ಕಲ್ಪಿಸುವಬಗೆಗೆ ಬಡ್ಜೆಟ್ಟಿನಲ್ಲಿ ಅಲಾಟ್ಮೆಂಟ್ ಮಾಡಿಲ್ಲ. ಕಾರಣವೇನೋ ತಿಳಿಯದು.

ಸರ್ಕಾರದ ಉತ್ತರ—ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿಕೊಡುವ ಬಗೆಗಾಗಿ ಸ್ಯಾಂಕ್ಷನ್ ಆಗಿರುವ ಹಣವು ಲೋ|| ಬೋರ್ಡುಗಳಲ್ಲಿ ಬಹಳವಾಗಿ ನಿಂತಿದೆ. ಆದುದರಿಂದ ಬಡ್ಜೆಟ್ಟಿನಲ್ಲಿ ಬೇರೆ ಸೇರಿಸಿಲ್ಲ.

ಮೆಂಬರು—ಬೆಂಗಳೂರು ಡಿಸ್ಟ್ರಿಕ್ಟಿಗಾಗಿ ೧೦ ಸಾವಿರ ರೂ. ಗಳನ್ನು ಕೊಟ್ಟರೆ ನಾವು ಬಾವಿಗಳನ್ನು ತೋಡಿಸಿಕೊಡುತ್ತೇವೆ. ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹಣವಿಲ್ಲ. ವಿಲೇಜ್ ಇಂಪ್ರೂವ್ಮೆಂಟ್ ಹೆಡ್ಡಿಗೆ ಬಡ್ಜೆಟ್ಟಿನಲ್ಲಿ ಹಣವನ್ನು ಸ್ಯಾಂಕ್ಷನ್ ಮಾಡಿಲ್ಲ. ಬೆಂಗಳೂರು ಸಿಟಿ ಇಂಪ್ರೂವ್ಮೆಂಟಿಗಾಗಿ ಕೊಟ್ಟಿರುವ ಗ್ರಾಂಟು ಕಡಿಮೆಯಾಗಿದೆ, ಸಾಲದು.

ಸರ್ಕಾರದ ಉತ್ತರ—ಮ್ಯುನ್ಸಿಪಾಲಿಟಿಗೆ ಗ್ರಾಂಟನ್ನು ಕೊಟ್ಟಿದೆ, ಅವರು ಮಾಡಲಿ.

ಮೆಂಬರು—ಡಿ. ಪಿ. ಡಬ್ಲ್ಯು. ಇಲಾಖೆಯಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರ ಫೀಸನ್ನು ಅಬಾಲಿಷ್‌ಮಾಡಬೇಕು. ಪೋಲೀಸ್ ಇಲಾಖೆಗೆ ೧೫ ಲಕ್ಷ ಚಿಲ್ಲರೆ ರೂ. ನ್ನು ಏರ್ಪಡಿಸಿದೆ. ಪೋಲೀಸ್ ಇಲಾಖೆಯಲ್ಲಿ ಅನೇಕರ ಸಂಬಳವನ್ನು ಜಾಸ್ತಿಮಾಡಲಾಗಿದೆ. ಲಾಕಪ್ಪುಗಳ ಕ್ಷೇಮಸಮಾಚಾರ ವಿಚಾರಿಸಿಕೊಂಡು ಬರಲು ಸ್ಥಳಿಕ ದೊಡ್ಡಮನುಷ್ಯರ ಕಮಿಟಿಯನ್ನು ನಿಯಮಿಸಬೇಕು.

ಸರ್ಕಾರಿ ಉತ್ತರ—ಮೇಜಿಸ್ಟ್ರೇಟ್ ಲಾಕಪ್ಪಿಗೆ ಬೇಕಿದ್ದರೆ ಕಮಿಟಿಯನ್ನೇರ್ಪಡಿಸಬಹುದು.

ಮೆಂಬರು—ಮದ್ರಾಸಿನಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲೇ ಲಾಕಪ್ಪಿದೆ. ಇಲ್ಲಿ ಹಾಗಿಲ್ಲ. ಅಪರಾಧಿಗಳನ್ನು ಹಿಡಿದ ಕೂಡಲೇ ಡಿಸ್ಟ್ರಿಕ್ಟ್ ಲಾಕಪ್ಪಿಗೆ ಕಳುಹಿಸುವಂತೆ ಮಾಡಲಿ. ಅಪರಾಧಿಗಳನ್ನು ಪೋಲೀಸ್ ಲಾಕಪ್ಪುಗಳಲ್ಲಿ ೨೦ ದಿನ ತಿಂಗಳುಗಟ್ಟಲೆ ಮಡಗಿಕೊಂಡು ಸರಿರಾತ್ರಿಯಲ್ಲಿ ಅವರುಗಳನ್ನು ಗಾಳಿ ತವಾಕ್ಕೆ ಕರೆದುಕೊಂಡು ಹೋಗುತ್ತಾರಂತೆ.

ಸರ್ಕಾರಿ ಉತ್ತರ—ಬ್ರಿಟಿಷ್ ಇಂಡ್ಯಾದಲ್ಲಿ ಹೇಗೆ ಮಾಡಿದ್ದಾರೋ ನೋಡುತ್ತೇವೆ.

ಮ|| ಇಂ. ಶಾಂತಪ್ಪಶೆಟ್ಟರು—ಫಾರೆಸ್ಟುಗಳಲ್ಲಿ ನಾಟಾಗಳನ್ನು ಕಡಿದು ರೈಲಿಗೆ ದೂರವಾಗಿ ಕಾಡುಗಳಲ್ಲೇ ೨-೩ ವರ್ಷಗಳು ಬಿಟ್ಟುಬಿಡುತ್ತಾರೆ. ಅಲ್ಲಿಗೆ ಬೀಟ್‌ದಾರರು ಹೋಗುವುದಕ್ಕೆ ಅನನುಕೂಲ. ಇದರಿಂದ ನಾಟಾಗಳಿಗೆ ತಕ್ಕದಾರಣೆಬರದೆ ಹೀನ ಖರೀದಿಗೆ ಹೋಗಿಬಿಡುತ್ತವೆ. ಅದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಇಷ್ಟು ನಾಟಾಗಳು ಪ್ರತಿ ಡಿಪೋವಿಗೂ ಸಾಲೀಯಾನಾ ಜಮಾವಣೆ ಆಗಬೇಕೆಂದು ಕ್ಲುಪ್ತ ಮಾಡಬೇಕು. ಹೀಗೆ ಮಾಡಿದರೆ ಕಾಡುಗಳು ಬೇಗನೆ ಹಾಳಾಗುವುದೂ ಇಲ್ಲ, ಸರ್ಕಾರಕ್ಕೆ ಒಂದೇಸಮನಾದ ಉತ್ಪತ್ತಿಯೂ ಬರುತ್ತದೆ. ಕಾಡನ್ನೆಲ್ಲಾ ಏಕಕಾಲದಲ್ಲಿ ಕಡಿದುಬಿಟ್ಟರು ಅದರಿಂದಲೇ ಮಳೆ ಹೋಯಿತೆಂಬ ಪುಕಾರೂ ತಪ್ಪುತ್ತದೆ. ಮತ್ತು ನಾಟಾಗಳನ್ನು ಹೆಚ್ಚಿಗೆ ಜಮಾಯಿಸಿ ನಿಲ್ಲಿಸಿಬಿಟ್ಟರೆ ಅವು ಮಳೆಗೆ ಸಿಕ್ಕಿ ಹಾಳಾಗಿ ಅದು ಬೇರೆ ನಷ್ಟವಾಗುತ್ತದೆ. ಬೆಂಕಿಪುರದ ಕಾರ್ಖಾನೆ ಸೌದೆಗಾಗಿ ರಸ್ತೆಗೆ ಸಮಿಪದ ಕಾಡನ್ನೆಲ್ಲಾ ಕಡಿದುಬಿಟ್ಟು ಬಯಲುಮಾಡಿದ್ದಾರೆ. ಅದರ ಹಿಂದೆ ದೂರದೂರದ ಕಾಡೆಲ್ಲಾ ಹಾಗೆಯೇ ಉಳಿದಿದೆ. ಜಂಬೆಮರದ ಮೇಲಣ ತೀರ್ವೆಯನ್ನು ರೈತರ ಉಪಯೋಗಕ್ಕಾಗಿ ೧ ರೂ. ಗಾದರೂ ಇಳಿಯಿಸಿಕೊಡಬೇಕು.

ಮ|| ಬಿ. ಬಸಮಯ್ಯನವರು—ಮೈಸೂರು ಸಿಟಿಯ ಟ್ರಸ್ಟ್‌ಬೋರ್ಡನ್ನೂ ಮುನ್ಸಿಪಾಲಿಟಿಯನ್ನೂ ಒಟ್ಟಿಗೆ ಸೇರಿಸಿಕೊಡಬೇಕು. ಮುನ್ಸಿಪಾಲಿಟಿಯಲ್ಲಿ ಮೂರು ಮಂದಿ ಆಫೀಸರುಗಳಿದ್ದರೂ ಟವರ್ ಇನ್ಸ್‌ಪೆಕ್ಷನ್ನಿಗೆ ಬರುವುದಿಲ್ಲ. ಒಬ್ಬರೇ ಅಧಿಕಾರಿಗಳಿದ್ದರೆ ಎಲ್ಲಾ ಕಷ್ಟಸುಖವೂ ಅವರೊಬ್ಬರ ಮೇಲೆಯೇ ಇರುತ್ತದೆ. ಆದಕಾರಣ ಜವಾಬ್ದಾರಿ ಆಫೀಸರೊಬ್ಬರನ್ನು ಇಟ್ಟುಕೊಡಬೇಕು. ವೈಸ್ ಪ್ರೆಸಿಡೆಂಟರೆಂಬುವರು ಟವರ್ ಇನ್ಸ್‌ಪೆಕ್ಷನ್ನು ಮೊದಲಾದುವುಗಳಿಗೆ ಬರುವುದೂ ಇಲ್ಲ, ನೋಡುವುದೂ ಇಲ್ಲ. ಪೂರ್ವದಲ್ಲಿ ಲಕ್ಷ್ಮಣರಾಯರು ೩ ಕೆಲಸವನ್ನೂ ಒಬ್ಬರೇ ನೋಡಿಕೊಳ್ಳುತ್ತಿದ್ದರೂ ಪ್ರತಿದಿನಕ್ಕೂ ಒಂದೊಂದು ಮೊಹಲ್ಲೆ ಇನ್ಸ್‌ಪೆಕ್ಷನನ್ನು ಇಟ್ಟುಕೊಂಡಿದ್ದರು. ಈಗಣ ಪ್ರೆಸಿಡೆಂಟರ ದರಬಾರಿನಲ್ಲಿ ಶಿಫಾರಸ್ಸಿನ ಕೆಲಸಕ್ಕೆ ೧೦ ಸಾವಿರ ರೂ. ಗಳನ್ನಾದರೂ ವಿನಿಯೋಗಿಸಿಬಿಡುತಾರೆ. ಪ್ರಜೆಗಳಿಗೆ ಅತ್ಯಾವಶ್ಯಕವಾದ ೧೦೦-೨೦೦ ರೂ. ಗಳ ಕೆಲಸವನ್ನಾದರೂ ಮಾಡುವುದೇ ಇಲ್ಲ, ನಾವುಗಳು ಸುಮ್ಮನೆ ಮರ್ಯಾದೆಗೆ ಮೆಂಬರುಗಳಾಗಿ ಮೀಟಿಂಗುಗಳಿಗೆ ಹೋಗಿದ್ದು ಬರುವುದಷ್ಟೇ ಆಗಿದೆ. ನಮ್ಮಿಂದೇನೂ ನಡೆಯುವುದಿಲ್ಲ. ಮುನ್ಸಿಪಾಲಿಟಿಗೆ ಸರ್ಕಾರದವರು ಕೊಡುವ ಗ್ರಾಂಟಿನಲ್ಲಿ ಬಹು ಭಾಗವು ವಿತರಣೆಯಿಲ್ಲದೆ ವ್ಯರ್ಥವಾಗಿ ಹಾಳಾಗಿ ಹೋಗುತ್ತಿದೆ. ಮತ್ತು ಮೈಸೂರು ಪ್ರಜೆಗಳ ದುಡ್ಡೂ ಬಹಳ ಅನಾಯತವಾಗುತ್ತಿದೆ. ಟ್ರಸ್ಟ್ ಬೋರ್ಡಿಗೂ ಮುನ್ಸಿಪಾಲಿಟಿಗೂ ಇವೆರಡಕ್ಕೂ ಬೇರೆಬೇರೆ ಸಿಬ್ಬಂದಿಯಿಟ್ಟಿರುವುದರಿಂದ ಹೆಚ್ಚು ದುಬಾರಿ ಖರ್ಚಾಗುತ್ತದೆ.

ಮ|| ಮಂಜಯ್ಯನವರು—ಗ್ರಾಮಾಂತರದವರ ಮೇಲೆ ವಿದ್ಯೆಯ ಸೆಸ್ಸನ್ನು ಹಾಕಬಾರದು. ಗ್ರಾಮಾಂತರದವರಿಗೆ ವೈದ್ಯಸಹಾಯವು ಸುತರಾಂ ಇಲ್ಲ. ನಮ್ಮ ಚೆನ್ನರಾಯಪಟ್ಟಣದ ತಾ|| ಹಿರೀಸಾವೆಗೆ ಮಿ|| ಬಾನರ್ಜಿಸಾಹೇಬರು ಬಂದು ನೋಡಿಕೊಂಡು ಹೋದರು. ಅಲ್ಲಿ ಆಸ್ಪತ್ರೆಯಿಲ್ಲ, ಚೆನ್ನರಾಯಪಟ್ಟಣವು ಅಲ್ಲಿಗೆ ೧೮ ಮೈಲಿ ದೂರದಲ್ಲಿದೆ. ಇತರಾಸ್ಪತ್ರೆಗಳು ಅಲ್ಲಿಗೆ ೨೦-೨೨ ಮೈಲಿಗಳ ದೂರದಲ್ಲಿವೆ. ಸಮಿಪದಲ್ಲೆಲ್ಲೂ ಆಸ್ಪತ್ರೆಗಳೇ ಇಲ್ಲ. ಗ್ರಾಮಸ್ಥರು ಆಸ್ಪತ್ರೆಗಾಗಿ ಅರ್ಜಿಬರೆದುಕೊಂಡದ್ದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹಣವಿಲ್ಲವೆಂದು ಉತ್ತರವಾಯಿತು. ನಮಗೆ ನೀರಿನ ವಸತಿ ಇಲ್ಲವೇ ಇಲ್ಲ. ಕೆರೆ ಹೂಳು ಬಿದ್ದು ಎಷ್ಟೋ ಕಾಲವಾಗಿ ಅದರಲ್ಲಿ ನೀರು ನಿಲ್ಲುವುದೇ ಇಲ್ಲ. ಇಂಜನಿಯರ್ ಇಲಾಖೆಗೆ ಎಷ್ಟು ಸಲ ಬರೆದುಕೊಂಡರೂ ಏನೂ ಫಲವಾಗಲಿಲ್ಲ. ಇಷ್ಟೆಲ್ಲಾ ರೈತರಿಗೆ ಸೌಕರಗಳಿರುವಾಗ ಅವರು ವಿದ್ಯೆಯ ಸೆಸ್ಸನ್ನು ಬೇರೆ ಕೊಡಬೇಕೆ? ಗ್ರಾಮದವರು ಒಂದು ಬಾವಿಯನ್ನು ತೋಡಿಕೊಂಡಿರಲು ಇಂಜನಿಯರ್ ಇಲಾಖೆಯವರು ಬಂದು ನೋಡಿ ಅದನ್ನು ಮುಚ್ಚಿಸಿಬಿಟ್ಟರು. ಖಂಡಿತವಾಗಿ ನಾವು ಮಾತನಾಡಿದರೆ ಉಳಿಯುವುದಿಲ್ಲ. ನಮ್ಮ ಕಷ್ಟಗಳನ್ನು ಕೇಳುವವರೇ ಇಲ್ಲ. ೮-೧೦ ವರ್ಷದಿಂದೀಚೆಗೆ ಈ ಗ್ರಾಮದಲ್ಲಿ ೧-೧|| ಸಾವಿರ ಜನರು ಸಾಂಕ್ರಾಮಿಕ ರೋಗಗಳಿಂದ ನಷ್ಟವಾಗಿದ್ದಾರೆ.

ಮ|| ಹೊನ್ನಯ್ಯಹೆಗ್ಗಡೆಯವರು—ಮಲೆನಾಡಿನಲ್ಲಿ ಕೆರೆಗಳೊಳಗೆ ೯-೧೦ ಅಡಿ ಹೂಳು ತುಂಬಿದೆ. ಇಂಜನಿಯರ್ ಇಲಾಖೆಯವರು ರಿಪೇರಿಗೆಂದು ಬಂದು ಮೇಲೆಮೇಲೆ ಸಿಸ್ತುಮಾಡಿಸಿ ಹೋಗುತ್ತಾರೆ. ಕೆಲಸವನ್ನು ಸರಿಯಾಗಿ ಮಾಡುವುದಿಲ್ಲ. ನಮಗೆ ನೀರಿನ ಅಭಾವವು ತಪ್ಪುವುದಿಲ್ಲ.

ಸರ್ಕಾರಿ ಉತ್ತರ—ಹೂಳುತೆಗೆಸಿದರೂ ಪ್ರಯೋಜನವಾಗುವುದಿಲ್ಲ. ೧-೨ ಕಡೆ ಮಾಡಿಸಿನೋಡಿದ್ದಾಯಿತು ಎಂದು ಇಲಾಖೆಯವರು ಹೇಳುತ್ತಾರೆ. ಯಾವುವಾದರೂ ೨-೩ ಕೆರೆಗಳನ್ನು ನೀವು ಸೂಚಿಸಿದರೆ ಇಂಜನಿಯರ್ ಇಲಾಖೆಯವರು ಬಂದು ಮಾಡಿಕೊಡುತಾರೆ.

ಮೆಂಬರು—ಕೊಪ್ಪದ ತಾಲ್ಲೂಕು ಚಿತಕಮಲೆ ಕೆರೆ ವಿಷಯವಾಗಿ ಕಂಪೆನ್‌ಸೇಷನ್ ಕೊಟ್ಟು ೩ ವರ್ಷವಾಯಿತು. ರಿಪೇರಿಯಾಗಿಯೇ ಇಲ್ಲ. ಇರಿಗೇಷನ್ ಸೆಸ್ಸನ್ನು ವಜಾಮಾಡಿಸಿಕೊಡಬೇಕು.

ಮ|| ವೇಮಾರೆಡ್ಡಿಯವರು—ಎಕ್ಸೈಜ್ ಇಲಾಖೆಯಿರುವುದರಿಂದ ಜನರಲ್ಲಿ ಖರ್ಚು ಹೆಚ್ಚಾಗಿ ಸಂಪತ್ತಿನ ಉಳಿತಾಯವು ಕಡಿಮೆಯಾಗುತ್ತಿದೆ. ಸರ್ಕಾರದವರು ಪ್ರಜೆಗಳಲ್ಲಿ ಸಂಪದಭ್ಯುದಯವನ್ನು ಮಾಡಬೇಕೆಂದು ಒಂದುಕಡೆ ಪ್ರಯತ್ನಪಡುತಾರೆ. ಈ ಇಲಾಖೆಯಿಂದ ಸಂಪತ್ತಿನ ಹಾನಿಯು ಅಪರಿಮಿತವಾಗಿ ಆಗುತ್ತಿದೆ. ಅಲ್ಲದೆ ಕುಡಿತದಿಂದ ಪ್ರಜೆಗಳ ಬುದ್ಧಿವಿವೇಕಗಳೆಲ್ಲಾ ಕ್ಷೀಣವಾಗಿ ಹೋಗುತ್ತಿವೆ. ಇದನ್ನು ತಡೆಮಾಡದೆ ಬಿಟ್ಟರೆ ದೇಶವೇ ಕ್ಷೀಣವಾಗಿ ಹೋಗುತ್ತದೆ. ಸರ್ಕಾರದವರು ಮದದ್ರವ್ಯಗಳಲ್ಲಿ ನಿಷಾಗುಣವನ್ನು (ಸಿಕ್ಕರ್ ಸ್ಟ್ರೆಂಗ್ತ್) ಕಡಿಮೆಮಾಡುತ್ತ ಬಂದದ್ದರಿಂದ ಕುಡಿಕರು ೧ ಡ್ರಾಮಿಗೆ ಬದಲಾಗಿ ೪ ಡ್ರಾಂ ಕುಡಿಯಲು ಪ್ರಯತ್ನಿಸಿ ೪ ಆಣೆ ಖರ್ಚುಮಾಡುತ್ತಿದ್ದವರು ೧ ರೂ. ಖರ್ಚು ಮಾಡುವಂತಾಯಿತು. ಆ ಕುಡಿಕರ ದುಷ್ಟಪದ್ಧತಿಯನ್ನು ಬಿಡಿಸಲಿಕ್ಕಾಗಿ ಸರ್ಕಾರದವರು ೩ ಕಾಸನ್ನೂ ಖರ್ಚುಮಾಡುವುದಿಲ್ಲ. ಕುಡಿತದಿಂದ ೭೫ ಲಕ್ಷ ರೂ. ಗಳನ್ನು ಸಂಪಾದಿಸಿಕೊಂಡು ಅವರಿಗೆ ಯಾವ ಪ್ರತಿಫಲವನ್ನೂ ಸರ್ಕಾರದವರು ಮಾಡಿ ಅವರನ್ನು ಮೇಲ್ಮೆಗೆ ತರುತ್ತಲಿಲ್ಲ. ಅವರಿಂದ ಬರುವ ಹಣವನ್ನು ಅವರ ವಿವೇಕವರ್ಧನಕ್ಕೆ ಸಾಧಕವಾದ ವಿದ್ಯಾಪ್ರಸಾರಕ್ಕಾಗಿಯೇ ವೆಚ್ಚಮಾಡಬೇಕು.

ಸರ್ಕಾರದ ಉತ್ತರ—ವಿದ್ಯಾಭ್ಯಾಸದ ಇಲಾಖೆಯಿಂದ ೧-೧|| ಲಕ್ಷ ಆದಾಯವಾಗುತ್ತದೆ. ಆ ಶಾಖೆಗಾಗಿ ೪೦-೫೦ ಲಕ್ಷ ಖರ್ಚಾಗುತ್ತದೆ. ಅಷ್ಟು ಹಣವನ್ನೆಲ್ಲಾ ಎಕ್ಸೈಜ್ ಬಾಬು ಮೊದಲಾದುವುಗಳಿಂದ ಬರುವ ಉತ್ಪತ್ತಿಯಿಂದಲೇ ಒದಗಿಸಲಾಗುತ್ತದೆ.

ಮೆಂಬರು—ಎಕ್ಸೈಜಿನಿಂದ ಬರುವ ಉತ್ಪತ್ತಿಯಲ್ಲಿ ಆ ಶಾಖೆಯ ಖರ್ಚು ಕಳೆದು ಉಳಿದುದನ್ನೆಲ್ಲಾ ವಿದ್ಯಾಶಾಖೆಗೇ ಕೊಟ್ಟುಬಿಡಿ. ಪ್ರಜೆಗಳು ಬುದ್ಧಿಹೀನರಾಗಿ ಕಳೆದುಕೊಳ್ಳುತ್ತಿರುವುದು ಅವರ ಜುಲ್ಮಾನೆಯ ಹಣವಾಗಿರುತ್ತದೆ. ಅದನ್ನು ಅವರಿಗೆ ಬುದ್ಧಿಕಲಿಸುವುದಕ್ಕಾಗಿಯೇ ಉಪಯೋಗಿಸಿರಿ. ತಾಲ್ಲೂಕುಗಳಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಅವಶ್ಯಕತೆಯೇ ಇಲ್ಲ. ಹಿಂದಣ ಕಾಲದಲ್ಲಿ ಇವರುಗಳು ಇರಲಿಲ್ಲ. ಈಗ ಇವರುಗಳು ಹೆಚ್ಚಾಗಿ ಮಾಡತಕ್ಕದ್ದೇನೂ ಇರುವುದಿಲ್ಲ. ಇವರ ಕೆಲಸವನ್ನು ತಾ|| ಮೆಡಿಕಲ್ ಆಫೀಸರೇ ಮಾಡಬಹುದು. ಮತ್ತು ತಾ|| ಗಳಿಗೆ ಟ್ಯಾಂಕ್ ಇನ್ಸ್‌ಪೆಕ್ಟರೂ ಅವಶ್ಯಕವಿಲ್ಲ.

ಸರ್ಕಾರಿ ಉತ್ತರ—ಇದು ಪರ್ಯಾಲೋಚನೆಯಲ್ಲಿದೆ.

ಮೆಂಬರು—ಅಪೇಕ್ಷಿಸಿದ ಕಡೆಗೆ ಮೊಟಾರು ನೇಗಿಲುಗಳನ್ನು ತರಿಸಿಕೊಡಬೇಕು.

ಸರ್ಕಾರಿ ಉತ್ತರ—ಈಗ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಒಂದು ಇದೆ.

ಸಶೇಷ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕ್ಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

41 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ. ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಸಂಸ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

41 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ರಕ್ತಶೋಧಕ ! ಮನೋಲ್ಲಾಸಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 39

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿವಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ ನೆಯ ಇಸವಿ ಜುಲೈ ತಾ|| ೧೦ ರಿಂದ ೧೯೨೧ ನೆಯ ಜುಲೈ ತಾ|| ೧೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ಆಷಾಢ ಶುದ್ಧ ಪಂಚಮಿಯಿಂದ ಆಷಾಢ ಶುದ್ಧ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
10	ಭಾನು	ಪಂ-ಷ	2-29 54-19	ಪುಬ್ಬಾ	13-2	27
11	ಸೋಮ	ಸಪ್ತ	52-14	ಉತ್ತರಾ	9-47	28
12	ಮಂಗಳ	ಅಷ್ಟ	48-25	ಹಸ್ತ	7-20	29
13	ಬುಧ	ನವ	45-50	ಚಿತ್ತ	5-42	30
14	ಗುರು	ದಶ	44-3	ಸ್ವಾತಿ	5-11	31
15	[1]ಶುಕ್ರ	ಏಕಾ	43-42	ವಿಶಾ	5-48	32
16	[2]ಶನಿ	ದ್ವಾದ	44-28	ಅನೂ	7-28	1

(1) ಸರ್ವತ್ರ ಪ್ರಥಮೈಕಾದಶಿ. (2) ಶಯನ ದ್ವಾದಶಿ, ದಕ್ಷಿಣಾಯನಪುಣ್ಯಕಾಲ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಜುಲೈ ತಾರೀಖು ೧೭ ನೆಯ ಭಾನುವಾರ. (ಸಂಚಿಕೆ ೨೯

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ,

ಲೋಕಾನುಗ್ರಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ವಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
27 ಮೈಸೂರು.

SREE SITHARAGHAVA
VAIDYASALA



ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0



[illegible]ಲಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮರ್ಜ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮರ್ಜ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
42 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ:	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫು|| ಪ್ರ ೧ಕ್ಕೆ ಸಾ|| ರೂ. ೧—೪—೦. ಕಾ|| ಸಾ|| ಆಣೆ ೧೨.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫು||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮ × ೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲುಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡದ ಈ ಫೋಟೋ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೆಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫು|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಆಣೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ:—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೋಗಳು ಕೈ|| ವಾ|| ರಾಜಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣ ಕುಂಬಾರ ಕೋಟ್ಯಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪುರು ಸಿದ್ಧರಾಮೇಶ್ವರ, ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ|| ಗು|| ಚಿತ್ರದುರ್ಗದ ಮಹಾಸ್ವಾಮಿ. ಅಥಣಿ ಶಿವಯೋಗಿಗಳು. ಹಾನಗಲ್ಲ ಸ್ವಾಮಿಗಳು, ಸೊಲ್ಲಾಪುರದ ಪ್ರಸಿದ್ಧ ನಾಲತ್ತವಾಡದ ಶರಣರು, ಬಳೂರ ಸ್ವಾಮಿಗಳು, ಕಮತಗಿ ಹುಚ್ಚೇಂದ್ರಸ್ವಾಮಿಗಳು, ಸದ್ಯಕ್ಕೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರ ಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ|| ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ|| ಬ|| ವಾರದ ಮಲ್ಲಪ್ಪನವರು, ಮುಂತಾದ ಫೋಟೋಗಳು ಸಿಗುತ್ತವೆ. ಕ್ರಯ ಫು|| ಸಾ|| ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

5 ವಿಳಾಸ—ಗಂಗಪ್ಪಾ ಜೇರಿಗೆ ಫೋಟೋ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಪಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆಸಿದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಪಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
21 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 10

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜುಲೈ ತಾ|| ೧೭ ನೆಯ ಭಾನುವಾರ.

ಇದೊಂದು ಕುತಂತ್ರ

ಎಸ್. ಎನ್. ಎಂಬ ಸಂಕೇತಾಕ್ಷರದಿಂದ ಮದ್ರಾಸ್ ಹಿಂದೂ ಪತ್ರಿಕೆಗೆ ಮೈಸೂರಿನ ಬ್ರಾಹ್ಮಣರೊಬ್ಬರು ಒಂದು ಲೇಖನವನ್ನು ಬರೆದು, ತಮ್ಮ ಗ್ರಾಮದಲ್ಲಿ ಈಗ ಬ್ರಾಹ್ಮಣೇತರರಾದ ಕರ್ಷಕರು ತಮ್ಮ ಭೂಮಿಗಳನ್ನು ಮಾಡಲು ತಿರಸ್ಕರಿಸುವರೆಂದೂ, ಇತಃಪರಃ ಬ್ರಾಹ್ಮಣರೇ ತಂತಮ್ಮ ಭೂಮಿಗಳನ್ನು ವ್ಯವಸಾಯಮಾಡಿಕೊಳ್ಳುವುದು ಉತ್ತಮವೆಂದೂ, ಉತ್ತರೋತ್ತರ ಹೀಗೆಯೇ, ಅಗಸರು ಬ್ರಾಹ್ಮಣರ ಬಟ್ಟೆಗಳನ್ನು ಒಗೆಯುವುದಕ್ಕೂ ಕ್ಷೌರಿಕರು ಬ್ರಾಹ್ಮಣರ ಕ್ಷೌರಮಾಡುವುದಕ್ಕೂ ತಿರಸ್ಕರಿಸಬಹುದೆಂದೂ, ಹೀಗಾದರೆ ಆ ಕರ್ಮಗಳನ್ನೆಲ್ಲಾ ಬ್ರಾಹ್ಮಣರು ತಾವು ತಾವುಗಳೇ ಮಾಡಿಕೊಳ್ಳಲು ಸಿದ್ಧರಾಗಿರಬೇಕೆಂದೂ ಹೇಳಿಕೊಂಡಿರುತ್ತಾರೆ. ಇದು ಎಷ್ಟುಮಟ್ಟಿಗೆ ನಿಜವೋ ನಾವು ಹೇಳಲಾರೆವು. ವೃತ್ತ್ಯಂತರದಲ್ಲಿ ಜೀವಿಸುವುದಕ್ಕೆ ತಮಗೆ ದಾರಿಯಿಲ್ಲದೆ ಹೋದುದರಿಂದ ಸರ್ಕಾರಿ ಉದ್ಯೋಗಕ್ಕೆ ಸೇರಿ ಬ್ರಾಹ್ಮಣರು ಜೀವಿಸುವುದಕ್ಕೆ ಪ್ರಯತ್ನಿಸಬೇಕಾಯಿತೆಂದು ಇದುವರೆಗೆ ಅವರು ಕಲ್ಪಿಸಿಕೊಂಡಿರುವ ಕಥೆಯಂತೆಯೇ ಈಗಲೂ ತಾವು ಸ್ವಚ್ಛಂದವಾಗಿ ನಾನಾ ವೃತ್ತಿಗಳಲ್ಲಿ ಸೇರಿ ಸಂಪದಾರ್ಜನೆ ಮಾಡಿಕೊಳ್ಳಬೇಕಾದುದಕ್ಕೆ ಇತರರ ಮೇಲೆ ಒಂದು ತಪ್ಪನ್ನು ಹೊರಿಸಿ ಅದನ್ನೇ ಕಾರಣವನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಕೈಕೊಂಡ ಎತ್ತುಗಡಿಯೇ ಇದೆಂದು ಹೇಳಬೇಕಾಗಿರುತ್ತದೆ. ಏಕೆಂದರೆ ಸಕಲ ವಿಧದಲ್ಲೂ ಬ್ರಾಹ್ಮಣರ ಸಂಸರ್ಗವನ್ನು ಪರಿತ್ಯಜಿಸಿ ನಾವು ಬಾಳಬೇಕೆಂಬ ಭಾವವು ದೇಶದ ಇತರ ಪ್ರಜೆಗಳ ಮನಸ್ಸಿನಲ್ಲಿ ಇದುವರೆಗೂ ನಾಟಿಲ್ಲ. ದೇಶೀಯರನ್ನೆಲ್ಲಾ ತುಚ್ಛವನ್ನಾಗಿ ಕಂಡು ದೂರೀಕರಿಸಿ ತಾವು ಮಾತ್ರ ಸರ್ವತ್ರ ಸ್ವತಂತ್ರರಾಗಿ ಬಾಳಿ ಮುಂದಕ್ಕೆ ಬರಬೇಕೆಂದೂ ಇತರರೆಲ್ಲಾ ಹಾಳುಬಾವಿಯಲ್ಲೇ ಬಿದ್ದು ನರಳುತ್ತಿರಬೇಕೆಂದೂ ಭಾವಿಸುವವರು ಕೆಲವು ಬ್ರಾಹ್ಮಣನಾಮಧಾರಿಗಳೇ ಆಗಿರುತ್ತಾರೆ. ಮಿಲ್ಲರ್ ಸಂಘದ ವರದಿ ಮೊದಲಾದ ಏರ್ಪಾಟುಗಳಿಂದ ಇತರರು ಅಭ್ಯುದಯಗೊಳ್ಳುವರೆಂದು ತಿಳಿದು ಆಗ್ರಹಗೊಂಡು ಮಚ್ಚರಿಸಿ ದ್ವೇಷಿಸುವವರು ಬ್ರಾಹ್ಮಣರೇ ಆಗಿದ್ದಾರೆ. ಯಾವುದೊಂದು ಸೌಕರ್ಯದಲ್ಲೇ ಆಗಲೀ ಮುಖ್ಯಭಾಗವನ್ನು ತಮಗೆ ಮೀಸಲಾಗಿ ಮಾಡಿಕೊಂಡು ಶೇಷವಿದ್ದರೆ ಇತರಪ್ರಜೆಗಳೆಲ್ಲಾ ಒಟ್ಟಿಗೆ ಉಣ್ಣಲೆಂದು ಬಿಡುವ ಪದ್ಧತಿಯನ್ನು ಇವರೇ ಹಾಕಿರುತ್ತಾರೆ. ಹೀಗೆ ಇವರುಗಳು ಇತರರ ಅಭ್ಯುದಯವನ್ನೆಲ್ಲಾ ಹಗೆತನದಿಂದ ಕಾಣುತ್ತ, ಅವರನ್ನೆಲ್ಲಾ ಪಾದಾಕ್ರಾಂತರನ್ನಾಗಿ ಮಾಡಿಕೊಂಡಿರಬೇಕೆಂದು ಎಣಿಸುತ್ತಲಿರುವ ಕಾರಣ, ಕಾಲಪ್ರಗತಿಗನುಸಾರವಾಗಿ ಉದ್ಬೋಧಗೊಂಡ ಆ ಜನರು ಇವರುಗಳಲ್ಲಿಟ್ಟಿದ್ದ ವಿಶ್ವಾಸವನ್ನು ಹಿಂದೆಗೆದುಕೊಳ್ಳಬೇಕಾಗುತ್ತದೆ. ಸಹೋದರರ ಸೌಹಾರ್ದವು ಇವರುಗಳಿಗೆ ಬೇಕಾಗಿಲ್ಲ. ಇತರರಲ್ಲೆಲ್ಲಾ ಪಶುತ್ವವೂ ಇವರಿಗೆ ಮಾತ್ರ ಪತಿತ್ವವೂ ಇವರಿಗೆ ಬೇಕಾದುದು. ಇಂಥ ಭಾವವನ್ನು ಇವರು ಬಲಪಡಿಸುತ್ತ ಬರುತ್ತಿರುವುದರಿಂದ ಇವರೇ ಇತರರನ್ನು ತಮಗೆ ದೂರಂಗತರಾಗುವಂತೆ ಮಾಡುತ್ತಿದ್ದಾರೆ. ಇತರರಿಗೆ ಎಂದರೆ ಕರ್ಷಕ ಕ್ಷೌರಿಕ ರಜಕಾದಿ ವೃತ್ತಿಗಳವರಿಗೆ ಅಷ್ಟೂ ಇಷ್ಟು ವೆಚ್ಚಮಾಡುತ್ತಿದ್ದುದನ್ನೆಲ್ಲಾ ತಾವೇ ಉಳಿಯಿಸಿಕೊಳ್ಳಬೇಕೆಂಬ ದುರಾಲೋಚನೆಯನ್ನೊಳಗೆ ಇಟ್ಟುಕೊಂಡು ಹೊರಗಣ ತೋರಿಕೆಗಾಗಿ ಇತರರ ಮೇಲೆ ಒಂದು ಅಪರಾಧವನ್ನು ಹೊರಿಸಿ ನುಣುಚಿಕೊಳ್ಳುವುದಕ್ಕೆ ಈ ತಂತ್ರವಲ್ಲದೆ ಮತ್ತೇನೂ ಅಲ್ಲ.

ವಿಚಾರಮಾಡಿ ನೋಡಿದರೆ ನಮ್ಮ ದೇಶದಲ್ಲಿ ತ್ರಿಮತಬ್ರಾಹ್ಮಣವರ್ಗದವರು ಕರ್ಷಕ ವೃತ್ತಿಯನ್ನು ಈಗತಾನೇ ಅವಲಂಬಿಸುವರೆಂದು ಹೇಳುವ ಹಾಗಿಲ್ಲ. ಮೈಸೂರು ತುಮಕೂರು ಚಿತ್ರದುರ್ಗ ಮೊದಲಾದ ಕೆಲ ಡಿಸ್ಟ್ರಿಕ್ಟುಗಳಲ್ಲಿ ಪೂರ್ವಕಾಲದಿಂದಲೂ ಸ್ವತಃ ವ್ಯವಸಾಯ ಮಾಡುತ್ತಿದ್ದ ಪದ್ಧತಿಯುಂಟು. ಈಗಲಾದರೋ ಧರ್ಮಶಾಸ್ತ್ರದಲ್ಲಿ ಪ್ರತ್ಯಕ್ಷವಚನನಿಷಿದ್ಧಗಳಾಗಿರುವ ವೃತ್ತಿಗಳನ್ನೆಲ್ಲಾ ಇವರುಗಳು ಮಾಡುತ್ತಿದ್ದಾರೆ. ಇವರುಗಳು ತಾವೇ ಅಂಗಡಿಗಳನ್ನಿಟ್ಟು ಕತ್ತಿಯನ್ನು ಹಿಡಿದು ಕ್ಷೌರಗಳನ್ನು ಮಾಡುವುದಕ್ಕೆ ಕುಳಿತರೂ ತಾವೇ ಮೂಟೆಗಳನ್ನು ಹೊತ್ತು ಬಟ್ಟೆಗಳನ್ನೊಗೆಯುವುದಕ್ಕೆ ತೊಡಗಿದರೂ ಯಾವ ಕ್ಷೌರಿಕನೂ ಯಾವ ಅಗಸನೂ ತಮ್ಮ ಕುಲಕಸಬಿಗೆ ಇವರು ಹೊಸದಾಗಿ ನುಗ್ಗಿದರೆಂದು ಇವರ ಮೇಲೆ ದಾಳಿಯಿಡುವುದಿಲ್ಲ. ತಮ್ಮ ಕುಲಕಸಬಲ್ಲದಿದ್ದರೂ ಸರ್ಕಾರದುದ್ಯೋಗಗಳನ್ನಾಕ್ರಮಿಸಿಕೊಂಡು ಅದಕ್ಕೆ ಇತರರು ನುಗ್ಗಿದರೆ ಅವರ ಮೇಲೆ ದಾಳಿಯಿಡುವ ಅಕ್ರಮವೂ ಘಾತಕತನವೂ ಇವರಲ್ಲಿರುವುದೇ ಹೊರತು ಇತರರಲ್ಲಿಅಂಥ ದೌರ್ಜನ್ಯವು ಲೇಶವೂ ಇರುವುದಿಲ್ಲ. ಅವರುಗಳ ಸಹನೆಯಲ್ಲಿ ನೂರನೆ ಒಂದು ಭಾಗದಷ್ಟು ಇವರಲ್ಲಿದ್ದರೂ ಇವರ ಬ್ರಾಹ್ಮಣನಾಮವು ಅನ್ವರ್ಥವಾಗಬಹುದಾಗಿದ್ದಿತು.

ಬಿದ್ದುಹೋದ ಕಾಸು ಸತ್ತುಹೋದ ದಾಸಯ್ಯನಿಗೆ.

ಹೀಗೆಂಬ ಒಂದು ಗಾಥೆಯುಂಟು. ಇದನ್ನು ಸಂಪದಭ್ಯುದಯ ಪತ್ರಿಕೆಯು ನಮ್ಮ ಜ್ಞಾಪ್ತಿಗೆ ಬರುವಂತೆ ಮಾಡಿದೆ. ಅದೇನೆಂದರೆ—ಕಳೆದ ನಿಯಮನಿರ್ಮಾಣ ಸಭೆಯಲ್ಲಿ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಬಡ್ಜೆಟ್ಟಿನ ಸಂಬಂಧವಾಗಿ ಮಾಡಿದ ಉಪನ್ಯಾಸವನ್ನು ಕುರಿತು ಈ ಪತ್ರಿಕೆಯು ಶ್ಲಾಘಿಸಿ, ಅವರ ರಾಜತಂತ್ರನಿಪುಣತೆಯನ್ನು ಕೊಂಡಾಡಿ "ಇವರಿಗೆ ದಿವಾನ್‌ಗಿರಿ ಪದವಿಯು ಒಪ್ಪಿಸಿದ್ದರೆ ಕೋಟ್ಯಂತರ ರೂಪಾಯಿಗಳು ದರೋಬಸ್ತು ಖರ್ಚು ಕಳೆದು ಉಳಿಯುವಂತೆ ಇವರು ಮಾಡುತ್ತಿದ್ದರು. ಈ ಸಂಸ್ಥಾನದ ಜನಗಳ ದುರದೃಷ್ಟದಿಂದ ಇವರಿಗೆ ಈ ಪದವಿಯು ಲಭ್ಯವಾಗಲಿಲ್ಲ. ಇವರು ಇನ್ನೂ ಶಕ್ತರಾಗಿರುತ್ತಾರೆ. ಒಂದೆರಡು ವರ್ಷಗಳು ಇವರಿಗೆ ದಿವಾನ್‌ಗಿರಿಯನ್ನು ವಹಿಸಿದರೆ ನಮ್ಮ ದೇಶಕ್ಕೆ ಅನೇಕಮುಖವಾಗಿ ಉಂಟಾಗಿರತಕ್ಕ ವಿಪತ್ತುಗಳೆಲ್ಲಾ ನಿವಾರಣೆಯಾಗುವುವೆಂದು ಅನೇಕರು ಹೇಳುತ್ತಾರೆ" ಎಂದು ಕಳೆದ ತಾ|| ೫ ರ ಸಂಚಿಕೆಯಲ್ಲಿ ಹೇಳಿಕೊಂಡಿದೆ. ದಿವಾನ್ ಬಹದ್ದೂರರಲ್ಲಿ ಪ್ರಾಣಪ್ರಾಣ ಸ್ನೇಹಿತತ್ವವನ್ನು ನಟಿಸುವ ಈ ಪತ್ರಿಕಾಕರ್ತರಿಗೆ ದಿವಾನ್ ಬಹದ್ದೂರರ ರಾಜತಂತ್ರಪ್ರಾವೀಣ್ಯವು ಈಗ ತಾನೇ ಗೊತ್ತಾಯಿತೆ? ಅವರು ೧ನೆ ಕೌನ್ಸಿಲರಾಗಿದ್ದಾಗ್ಗೆ ದಿವಾನ್ ಪದವಿಯಲ್ಲಿದ್ದ ನೆರಳುಗಣ್ಣಿನ ಬ್ರಾಹ್ಮಣದಿವಾನರು ಒಂದುದಿನ ತಾವು ರಜಾ ಪಡೆದುಕೊಂಡರೂ ಮ|| ಶೆಟ್ಟರಿಗೆ ಆಕ್ಟಿಂಗಾಗಿಯಾದರೂ ದಿವಾನ್‌ಗಿರಿಯನ್ನು ಕೊಡಬೇಕಾಗುತ್ತದೆಂದು ಯೋಚಿಸಿಕೊಂಡು ತಪಸ್ಸುಮಾಡಿ ಮುಗಿಸಿದರಲ್ಲಾ! ಸಂಪದಭ್ಯುದಯದ ಅಭಿಮಾನದೇವತೆಗಳಾಗಿದ್ದ ಅವರಲ್ಲಿ ಅವರ ಪೂಜಾಧುರಂಧರರಾಗಿದ್ದ ಈ ಸಂಪದಭ್ಯುದಯ ಕರ್ತರು ದಿವಾನ್ ಬಹದ್ದೂರರ ವಿಷಯವಾಗಿ ಒಂದಕ್ಷರದ ಶಿಫಾರಸ್ಸನ್ನಾದರೂ ಆಗ ಮಾಡಿದರೆ? ಇವರುಗಳು ಪರರಲ್ಲಿ ತೋರಿಸುವ ಸಾನುಭೂತಿಯ ಕಾಪಟ್ಯವು ಇದುವರೆಗೆ ಮುಚ್ಚಿಕೊಂಡು ಸಾಗಿಬಂದಂತೆ ಇನ್ನೂ ಸಾಗಿಬಂದೀತೆ ? ಆಗ ತೋರಿಸದಿದ್ದ ಸಾನುಭೂತಿಯನ್ನು ಈಗ ತೋರಿಸಿರುವುದು "ಬಿದ್ದುಹೋದ ಕಾಸು ಸತ್ತುಹೋದ ದಾಸಯ್ಯನಿಗೆ" ಎಂದು ಹೇಳುವ ಗಾಥೆಗೆ ಸಮನಾಗಿಲ್ಲವೆ ?

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ವಾರ್ಷಿಕಾಧಿವೇಶನ.

ಈ ಸಂಘದ ಸಾಮಾನ್ಯ ಸಭಿಕರ ವಾರ್ಷಿಕಾಧಿವೇಶನವು ಕಳೆದ ತಾ|| ೩ ರಲ್ಲಿ ಬೆಂಗಳೂರು ಧರ್ಮಪ್ರವರ್ತಕ ಕೈ|| ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ಸಂಘದ ಅಧ್ಯಕ್ಷರಾದ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ.ಐ.ಇ. ಯವರ ಅಧ್ಯಕ್ಷತೆಯಲ್ಲಿ ನೆರೆದಿದ್ದಿತು. ಸ್ಥಳದ ಮತ್ತು ಪರಸ್ಥಳಗಳ ಅನೇಕ ಸಭಿಕರು ನೆರೆದಿದ್ದರು. ಕಳೆದ ವರ್ಷದ ಲೆಕ್ಕಗಳ ಪರಿಶೋಧಕರ ವರದಿಯು ಓದಲ್ಪಟ್ಟು ಸಭಿಕರಿಂದ ಒಪ್ಪಲಾಯಿತು. ಬಳಿಕ ಸಂಘದ ಗೌರವ ಕಾರ್ಯದರ್ಶಿ ಮ|| ಜಿ. ಪರಮಶಿವಯ್ಯ ಬಿ.ಎ., ಎಲ್‌ಎಲ್.ಬಿ. ಯವರು ಕಳೆದ ವರ್ಷದ ಸಂಘದ ಚರಿತ್ರೆಯನ್ನು ಓದಿದರು. ಅದರಲ್ಲಿ ಕಂಡ ಮುಖ್ಯ ವಿಷಯಗಳೇನೆಂದರೆ—

ಕಳೆದ ವರ್ಷದಲ್ಲಿ ಸಂಘಕ್ಕೆ ಬಡ್ಡಿ ಲಗ್ನದ ಕಾಣಿಕೆ ಮೊದಲಾದುವುಗಳಿಂದೆಲ್ಲಾ ೫೨೬೨-೭-೧೧ ರೂ. ಆದಾಯವೂ ೩೩೬೨-೧೦-೯ ರೂ. ವೆಚ್ಚವೂ ಆಗಿದೆ. ವಿದ್ಯಾರ್ಥಿ ವೇತನಗಳಿಗಾಗಿಯೇ ೧೩೭೮ ರೂ.ಗಳು ವಿನಿಯೋಗಿಸಲ್ಪಟ್ಟಿವೆ. ಸಂಘದ ಫಂಡಿನಿಂದ ೨೭ ಮಂದಿ ವಿದ್ಯಾರ್ಥಿಗಳಿಗೂ ೩ ಮಂದಿ ವಿದ್ಯಾರ್ಥಿನಿಯರಿಗೂ, ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಅನುಗ್ರಹಿಸಿದ ೬೨೫ ರೂ.ಗಳು ಮತ್ತೆ ೧೧ ಮಂದಿ ವಿದ್ಯಾರ್ಥಿಗಳಿಗೂ ವೇತನಗಳಾಗಿ ಕೊಡಲ್ಪಟ್ಟುವು. ಕೈ|| ಸೂಲುಬೆಲೆ ಶ್ಯಾಮಣ್ಣನವರು ದಾನಮಾಡಿದ ಆಸ್ತಿಯಿಂದ ಇದುವರೆಗೆ ಸಂಘದ ಕೈ ಸೇರಿರುವ ೨೭೧೭೭ ರೂ.ಗಳೂ ಸೇರಿ ಸಂಘದ ಮೂಲಧನವು ೫೫ ಸಾವಿರ ರೂ.ಗಳವರೆಗೆ ಆಗಿರುವುದು. ಈ ಶ್ಯಾಮಣ್ಣನವರಿಂದ ಬಂದ ಆಸ್ತಿಯ ಹಣವನ್ನೆಲ್ಲಾ ಸರ್ಕಾರಿ ಸಾಲಕ್ಕೆ ಕೊಟ್ಟಿರುವುದರಿಂದ ಸೇಕಡಾ ೬|. ರೂ. ಬಡ್ಡಿ ಬರುವ ಕಾರಣ ಅದರ ವೃದ್ಧ್ಯಂಶವೇ ವರ್ಷಕ್ಕೆ ೧೭೦೦ ರೂ.ಗಳಿಗೆ ಮೇಲ್ಪಟ್ಟು ಬರುವುದು. ಬೆಂಗಳೂರಿನ ಮ|| ಮುನಿಬಸವಪ್ಪನವರು ತಮ್ಮ ಯಜಮಾನರ ಹೆಸರಿನ ಮೇಲೆ ವಿದ್ಯಾರ್ಥಿ ವೇತನಗಳನ್ನು ಕೊಡಲು ಕೊಟ್ಟಿರುವ ೫೦೦೦ ರೂ.ಗಳ ಮೂಲಧನಕ್ಕೆ ಸರ್ಕಾರದವರು ಸೇಕಡಾ ೫ ರೂ.ನಂತೆ ಬಡ್ಡಿ ಕೊಡಲು ಒಪ್ಪಿರುವುದರಿಂದ ಆ ಬಾಬಿನಲ್ಲಿ ೨೫೦ ರೂ.ಗಳೂ ಸಂಘದ ಮೂಲಧನದ ಬಾಬತು ಪೂರ್ವದಲ್ಲೇ ಸರ್ಕಾರದ ವಶದಲ್ಲಿಡಲ್ಪಟ್ಟಿರುವ ೨೦ ಸಹಸ್ರ ರೂ.ಗಳಿಗೆ ಸೇಕಡಾ ೪ ರೂ.ನಂತೆ ಬರುತ್ತಿರುವ ಬಡ್ಡಿಯ ಬಾಬತು ವರ್ಷಕ್ಕೆ ೮೦೦ ರೂ.ಗಳೂ ಇದರ ಮೇಲೆ ಕಿರುಕುಳ ಆದಾಯಗಳೂ ಸೇರಿದರೆ ವರ್ಷ ೧ ಕ್ಕೆ ಇನ್ನುಮೇಲೆ ೩೦೦೦ ರೂ.ಗಳ ವರೆಗೆ ವಿದ್ಯಾರ್ಥಿ ವೇತನಗಳಿಗೆ ಉಪಯೋಗಿಸಬಹುದಾಗಿ ತೋರುತ್ತದೆ. ಹಿಂದೆ ಸರ್ಕಾರದಲ್ಲಿಟ್ಟಿರುವ ೨೦ ಸಾವಿರದ ಹಣಕ್ಕೆ ೪ ರೂ.ನಂತೆ ಕೊಡುತ್ತಿರುವ ಬಡ್ಡಿಯನ್ನು ೫ ರೂ.ಗೆ ಹೆಚ್ಚಿಸಿಕೊಡಬೇಕೆಂದು ಸಂಘದವರು ಪ್ರಾರ್ಥಿಸಿಕೊಂಡಿರಲಾಗಿ ಸರ್ಕಾರದವರು ನೆರವೇರಿಸಿಕೊಡಲಿಲ್ಲ. ಧರ್ಮಕಾರ್ಯಕ್ಕಾಗಿ ವಿನಿಯೋಗವಾಗತಕ್ಕ ಇಂಥ ಬಾಬುಗಳಿಗೆ ಸರ್ಕಾರದವರು ಈಗಣ ಕಾಲದ ಹೆಚ್ಚು ಬಡ್ಡಿಯನ್ನು ಕೊಡದಿದ್ದರೂ ಮಧ್ಯಸ್ಥವಾದ ೫ ರೂ.ನಂತಹ ಬಡ್ಡಿಯನ್ನಾದರೂ ಕೊಡುವುದು ಅವಶ್ಯಕವಾಗಿದ್ದಿತು. ಅಷ್ಟು ಉದಾರಮತಿಯು ಅವರಿಗೆ ಹುಟ್ಟದೆ ಹೋಯಿತು. ಸಂಘಕ್ಕೆ ವಾಗ್ದಾನವಾಗಿರುವ ಮೂಲಧನದೊಳಗೆ ಒಂದು ನೂರು ರೂ.ಗಳು ಮಾತ್ರ ಕಳೆದವರ್ಷ ಬೆಂಗಳೂರಿನ ಮ|| ಎಂ. ಜಿ. ನಾಗಪ್ಪನವರು ಸಲ್ಲಿಸಿರುತ್ತಾರೆ. ಇತರರಾರೂ ಸಲ್ಲಿಸಲಿಲ್ಲ. ಫಂಡು ಎಷ್ಟು ವೃದ್ಧಿಯಾದರೆ ಅದರ ಬಡ್ಡಿಯು ಅಷ್ಟು ಹೆಚ್ಚುವುದು. ಅದು ಹೆಚ್ಚಿದಂತೆ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ಸಹಾಯಮಾಡಲು ಅನುಕೂಲವಾಗುವುದು. ಬರುಬರುತ್ತ ನಮ್ಮಲ್ಲಿ ವಿದ್ಯಾಭ್ಯಾಸಮಾಡಲು ತೊಡಗುವ ಬಾಲಬಾಲೆಯರ ಸಂಖ್ಯೆಯು ಹೆಚ್ಚುತ್ತಿರುವುದು ಶುಭ ಚಿಹ್ನೆಯಾಗಿದೆ. ಬಹುಮಂದಿ ಬಡವರ ಮಕ್ಕಳು ತಕ್ಕ ಸಾಹಾಯ್ಯವಿಲ್ಲದೆ ಓದುವುದನ್ನೇ ಬಿಡುತ್ತಲಿದ್ದಾರೆ. ಸರ್ಕಾರದವರು ಹಿಂದುಳಿದವರ ವಿದ್ಯಾರ್ಥಿ ವೇತನಗಳನ್ನು ಕೊಡುತ್ತಿದ್ದರೂ ಅವು ದೊರೆಯುವುದು ಬಹಳ ಸ್ವಲ್ಪ ಜನಕ್ಕೇನೆಯೇ. ಹಲವರು ಈಗಲೂ ವಾರಾನ್ನಗಳನ್ನು ಮಾಡಿಕೊಂಡು ಓದುತ್ತಿದ್ದಾರೆ. ಅನೇಕರಿಗೆ ಪುಸ್ತಕಗಳಿಗೂ ಫೀ ಕೊಡುವುದಕ್ಕೂ ಯತ್ನವಿಲ್ಲದೆ ಮನೆಮನೆಗೆ ಸಹಾಯವನ್ನು ಕೋರಿ ಅಲೆಯುತ್ತಿದ್ದಾರೆ. ಫಂಡು ವೃದ್ಧಿಯಾದರೆ ಇಂಥವರಿಗೆಲ್ಲಾ ಸಹಾಯಮಾಡಬಹುದು. ಫಂಡಿಗೆ ದಾನಮಾಡಿದ ೧ ಕಾಸೂಕೂಡ ಸದ್ವಿನಿಯೋಗವಾಗಿ ಮಹಾ ಫಲಪ್ರದವಾಗುವುದರಲ್ಲಿ ಅಭ್ಯಂತರವಿಲ್ಲ. ಇದನ್ನು ಪರಿಭಾವಿಸಿ ವೀರಶೈವ ಸಮಾಜ ಬಾಂಧವರೆಲ್ಲರೂ ನಾನಾ ವಿಧದಲ್ಲಿ ಈ ಫಂಡನ್ನು ವೃದ್ಧಿಪಡಿಸುವುದಕ್ಕೆ ವ್ಯಗ್ರರಾಗಬೇಕು.

ಕಳೆದ ವರ್ಷ ಲಗ್ನದ ಕಾಣಿಕೆಯ ಮೂಲಕ ಬಂದ ಹಣವು ಮೊನ್ನೆ ವರ್ಷದಲ್ಲಿ ಬಂದಿದ್ದ ಹಣಕ್ಕಿಂತಲೂ ಕಡಿಮೆಯಾಗಿರುವುದು ವಿಷಾದಕರವು. ಬೆಂಗಳೂರು ಡಿಸ್ಟ್ರಿಕ್ಟಿನಿಂದ ೯೧-೪-೦, ತುಮಕೂರು ಡಿಸ್ಟ್ರಿಕ್ಟಿನಿಂದ ೬೩-೦-೦, ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ೬೦-೦-೦, ಮೈಸೂರು ಡಿಸ್ಟ್ರಿಕ್ಟಿನಿಂದ ೨೬-೦-೦, ಕಡೂರು ಡಿಸ್ಟ್ರಿಕ್ಟಿನಿಂದ ೨೩-೦-೦, ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ೨೦-೦-೦, ಕೋಲಾರ ಡಿಸ್ಟ್ರಿಕ್ಟಿನಿಂದ ೧೩-೦-೦, ಹಾಸನ ಡಿಸ್ಟ್ರಿಕ್ಟಿನಿಂದ ೧೨-೦-೦, ತಿರುಚನಾಪಳ್ಳಿಯಿಂದ ೨-೦-೦. ಹೀಗೆ ೩೧೦-೪-೦ ರೂ.ಗಳು ಮಾತ್ರ ಬಂದಿರುತ್ತವೆ. ಲೆಕ್ಕವು ಆಡಿಟ್ಟಾದ ಬಳಿಕ ಈಚೆಗೆ ೧೦೦ ರೂ.ಗಳ ವರೆಗೆ ಈ ಕಾಣಿಕೆಯು ಬಂದಿರುವಂತೆ ಗೊತ್ತಾಗುತ್ತದೆ. ಈ ಬಾಬಿನಲ್ಲಿ ಸೇರತಕ್ಕ ಹಣವು ಬಹಳ ಸ್ವಲ್ಪವಾಗಿರುತ್ತದೆ. ಎಲ್ಲ ಡಿಸ್ಟ್ರಿಕ್ಟುಗಳವರೂ ತಂತಮ್ಮ ಮನೆಗಳ ಶುಭೋತ್ಸವ ಸಮಯಗಳಲ್ಲಿ ತಪ್ಪದೆ ಲಗ್ನದ ಕಾಣಿಕೆಗಳನ್ನು ತೆಗೆದು ಸಲ್ಲಿಸುತ್ತ ಬಂದರೆ ಸಾವಿರಾರು ರೂ.ಗಳನ್ನು ಈ ಬಾಬಿನಿಂದಲೇ ಫಂಡಿಗೆ ನಿರಾಯಾಸವಾಗಿ ಕೂಡಿಸಬಹುದು. ಹಲವು ಕಡೆಯಲ್ಲಿ ಲಗ್ನದ ಮನೆಗಳೊಳಗೆ ಎತ್ತಿದ ಕಾಣಿಕೆಗಳನ್ನು ಬೆಂಗಳೂರಿಗೆ ಫಂಡಿನ ಸಂಘಕ್ಕೆ ಸಲ್ಲಿಸದೆ ಅಲ್ಲಲ್ಲೇ ಇಟ್ಟುಕೊಂಡಿರುವುದಾಗಿ ದೂರುಗಳು ಬಂದಿರುತ್ತವೆ. ಹೀಗೆ ಮಾಡುವುದಕ್ಕೆ ಅವರುಗಳಿಗೆ ದುರುದ್ದೇಶಗಳಿಲ್ಲದಿದ್ದರೂ ಹಾಗೆ ಇಟ್ಟುಕೊಳ್ಳುವುದು ತಪ್ಪು, ಮತ್ತು ಅನ್ಯಾಯ. ಹೀಗೆ ಮಾಡುತ್ತಾ ಬಂದ ಮುಖಂಡರಲ್ಲಿ ಜನರ ನಂಬುಗೆಯು ಕೆಡುವುದು ; ಸಮಾಜದ ಆಗ್ರಹಕ್ಕೂ ಅವರು ಪಾತ್ರರಾಗಬೇಕಾಗುವುದು. ಯಾವ ಯಾವ ಸ್ಥಳಗಳಲ್ಲಿ ಅಂಥ ಹಣವು ಯಾರಲ್ಲಿ ನಿಂತುಹೋಗಿರುವುದೋ ಅದರ ವಿವರವನ್ನು ಕಾಣಿಸಿ ನಮ್ಮಲ್ಲಿಗೆ ಬರೆದರೆ ನಾವು ಪತ್ರಿಕೆಯಲ್ಲಿ ಪ್ರಕಟಿಸಿಯಾದರೂ ಅಂಥವರುಗಳನ್ನು ಎಚ್ಚರಿಸುವೆವು.

ಕಳೆದವರ್ಷ ನಮ್ಮ ಮತವಿದ್ಯಾರ್ಥಿಗಳಲ್ಲಿ ೯ ಮಂದಿ ಬಿ. ಎ. ಪರೀಕ್ಷೆಯಲ್ಲೂ, ೧೩ ಮಂದಿ ಎಂಟರನ್ಸ್ ಪರೀಕ್ಷೆಯಲ್ಲೂ ೫ ಮಂದಿಗಳು ಬಿ. ಎ. ಒಂದು ಭಾಗದ ಪರೀಕ್ಷೆಯಲ್ಲೂ, ಇಬ್ಬರು ಇಂಜನಿಯರಿಂಗ್ ಪರೀಕ್ಷೆಯಲ್ಲೂ ಉತ್ತೀರ್ಣರಾಗಿದ್ದಾರೆ. ಉಳಿದ ಪರೀಕ್ಷೆಗಳಲ್ಲಿ ಎಷ್ಟೆಷ್ಟು ಮಂದಿ ಉತ್ತೀರ್ಣರಾಗಿರುವರೆಂಬುದು ಇನ್ನೂ ಗೊತ್ತಾಗಿಲ್ಲ. ಅಂತು ಮೊನ್ನೆವರ್ಷದ ಫಲಿತಾಂಶಕ್ಕಿಂತಲೂ ಇದು ಸ್ವಲ್ಪ ಉತ್ತಮವಾಗಿದ್ದರೂ ಇದೂ ತೃಪ್ತಿಕರವಾಗಿಲ್ಲ. ಸದ್ಯಃ ವರ್ಷಕ್ಕೆ ೨೦ ಮಂದಿಗಳಂತೆಯಾದರೂ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತ ಬರಬೇಕು. ಬೆಂಗಳೂರಿನ ಕೈ|| ತೋಟದಪ್ಪನವರ ಸತ್ರದಲ್ಲಿ ೬೦ ಮಂದಿಗಳವರೆಗೆ ಅನ್ನೋದಕಗಳನ್ನು ಉಚಿತವಾಗಿ ಪಡೆದು ಅಭ್ಯಾಸ ಮಾಡುತ್ತಿದ್ದಾರೆ. ಅಷ್ಟು ಮಂದಿಗಳಲ್ಲಿ ೫-೬ ಮಂದಿಗಳು ಮಾತ್ರ ಉತ್ತೀರ್ಣರಾದರೆಂಬುದನ್ನು ಕೇಳಿದರೆ ವಿಷಾದವಾಗುತ್ತದೆ. ತಕ್ಕ ಮೇಲ್ವಿಚಾರಣೆಯಿಲ್ಲದ ಕಾರಣವೇ ಅಲ್ಲಿಯ ವಿದ್ಯಾರ್ಥಿಗಳು ಶ್ರಮಪಟ್ಟು ಅಭ್ಯಾಸಮಾಡುತ್ತಲಿಲ್ಲವೆಂದು ಹೇಳಬೇಕಾಗುತ್ತದೆ. ಈ ಲೋಪವನ್ನು ಆ ಧರ್ಮಕಾರ್ಯದ ವಿಚಾರಣಕರ್ತರು ಅವಶ್ಯಕವಾಗಿ ಗಮನಿಸಬೇಕು.

ಸಂಘದವರು ಕೈಕೊಂಡಿರುವ ಕಾರ್ಯಗಳಲ್ಲಿ ಬೆಂಗಳೂರು ಶ್ರೀ ಜಯದೇವ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟುವ ಕೆಲಸಕ್ಕೆ ಈಗ ಆರಂಭವಾಗಿರುವುದು ಸಂತೋಷವಿಷಯವು. ಹವಿಯೆಲ್ಲಾ ತೆಗೆದು ಹದ್ದಲ್ಪಡುತ್ತಿದೆ. ಸಾಮಗ್ರಿಗಳೆಲ್ಲಾ ಕೂಡಿಸಲ್ಪಡುತ್ತಿವೆ. ೧೮ ತಿಂಗಳೊಳಗಾಗಿ ಕಟ್ಟಡದ ಕೆಲಸವನ್ನು ಪೂರಯಿಸಿ ಕೊಡುವ ಒಪ್ಪಂದದ ಮೇಲೆ ಒಬ್ಬ ಯೋಗ್ಯರಾದ ಕಂಟ್ರಾಕ್ಟರಿಗೆ ಆ ಕೆಲಸವನ್ನು ಒಪ್ಪಿಸಿರುತ್ತಾರೆ.

ಸಂಘದ ಫಂಡಿಗೆ ದ್ರವ್ಯಸಹಾಯ ಮಾಡಲು ವಾಗ್ದಾನಮಾಡಿರುವವರಿಂದಲೂ ಇತರಾಭಿಮಾನಿಗಳಿಂದಲೂ ದ್ರವ್ಯವನ್ನು ಕೂಡಿಸಲಿಕ್ಕೆ ಸಂತತವಾದ ಬಲವಾದ ಯಾವುದಾದರೂ ಏರ್ಪಾಟನ್ನು ಮಾಡುವುದು ಅತ್ಯವಶ್ಯಕವಾಗಿದೆ. ನಂಬುಗೆಯಿಂದ ವಸೂಲು ಮಾಡತಕ್ಕ ೩-೪ ಮಂದಿಗಳನ್ನಾದರೂ ಕಮಿಷನ್ ಕೊಡುವ ನಿಬಂಧನೆಯ ಮೇಲೆ ಏರ್ಪಡಿಸಿದರೂ ಎಷ್ಟೋ ಪ್ರಯೋಜನವಾದೀತು. ಸದ್ಯಃ ಡಿಸ್ಟ್ರಿಕ್ಟು ತಾಲ್ಲೂಕು ಕಾನ್ಫರೆನ್ಸುಗಳನ್ನು ನಡೆಯಿಸಿ ಅವುಗಳ ಮೂಲಕ ಧನಶೇಖರದ ಕಾರ್ಯವನ್ನು ಮಾಡಬೇಕೆಂದು ನಿರ್ಧರಿಸಲಾಗಿದೆ. ಪ್ರಥಮತಃ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆಯಿಸಬೇಕೆಂದು ತೀರ್ಮಾನಿಸಲಾಗಿದೆ. ಯಾವ ತೆರದಿಂದಲಾದರೂ ಫಂಡಿನ ಮೂಲಧನವನ್ನು ೧ ಲಕ್ಷದ ಮೆಟ್ಟಿಲನ್ನಾದರೂ ಹತ್ತಿಸಲು ಸಮಾಜಬಾಂಧವರು ಬದ್ಧಸಂಕಲ್ಪರಾದರೆ ಅದೊಂದು ಅಸಾಧ್ಯವಾದ ಕೆಲಸವಲ್ಲ.

ಅಧಿವೇಶನದಲ್ಲಿ ನಡೆದ ಇತರ ಕಾರ್ಯಗಳೊಳಗೆ ಸಮಾಜದ ಪಕ್ಷದಿಂದ ಒಂದು ಮುದ್ರಣಾಲಯವನ್ನು ಸ್ಥಾಪಿಸಬೇಕೆಂಬ ವಿಷಯವೂ ಒಂದಾಗಿದ್ದಿತು. ಅದಕ್ಕಾಗಿ ಸಭೆಯಲ್ಲಿದ್ದವರೇ ಸಾವಿರಾರು ಷೇರುಗಳನ್ನು ಕೊಳ್ಳಲು ಅನುಮತಿಯನ್ನಿತ್ತರು.

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ತಾ|| ೧೧ ರಲ್ಲಿ ಅನುಕೂಲವಾಗಿ ೧|| ಅಂಗುಲ ಮಳೆ ಬಿದ್ದಿತು.

ವಾರಕ್ಕೆರಡಾವೃತ್ತಿ ಹೊರಡುತ್ತಿದ್ದ ಬೆಂಗಳೂರಿನ ಕರ್ನಾಟಕವೆಂಬ ಹೆಸರಿನ ಆಂಗ್ಲ ಪತ್ರಿಕೆಯು ಕಳೆದ ವಾರದಿಂದ ತಕ್ಕ ಪ್ರೋತ್ಸಾಹವಿಲ್ಲದೆ ನಿಂತುಹೋಯಿತು.

ರಾಜಧಾನಿಯಲ್ಲಿ ಮೋಡಮುಚ್ಚಿ ಆಗಾಗ್ಗೆ ಸಣ್ಣ ಮಳೆ ಉದುರುತ್ತಿದೆ. ಗ್ರಾಮಾಂತರಗಳಲ್ಲಿ ಜೋಳದ ಪೈರಿಗೆ ಮಳೆ ಸಾಲದು. ಧಾನ್ಯಗಳ ಬೆಲೆಯು ಏರುತ್ತಲೇ ಇದೆ.

ಈ ದಿವಸ ಮೈಸೂರು ಮಹಾಪ್ರಜೆಗಳ ಪಕ್ಷದಿಂದ ಪ್ರಜಾಮಿತ್ರಮಂಡಲಿಯವರು ರಿಟೈರ್ಡ್ ಎಜುಕೇಷನಲ್ ಇನ್ಸ್ಪೆಕ್ಟರ್ ಜನರಲ್‌ರವರಾದ ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರಿಗೆ ಬೆಂಗಳೂರು ಲಾಲಬಾಗಿನ ಆಲ್ಬರ್ಟ್ ವಿಕ್ಟರ್ ಹಾಲಿನಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಎಂಟರ್ಟೈನ್‌ಮೆಂಟನ್ನು ಕೊಡಲು ಏರ್ಪಡಿಸಿದ್ದಾರೆ.

ರಾಜಧಾನಿಯ ಪುರನಿವಾಸಿಗಳು ಉದ್ಯೋಗದಿಂದ ನಿವೃತ್ತರಾದ ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರಿಗೆ ಬರುವ ಬುಧವಾರ ಸಾಯಂಕಾಲ ನಿಷದ್‌ಬಾಗಿನಲ್ಲಿ ಒಂದು ಸನ್ಮಾನ ಸಮಾರಂಭವನ್ನು ಮಾಡಿ ವಿಜ್ಞಾಪನಪತ್ರವನ್ನು ಸಮರ್ಪಿಸಬೇಕೆಂದು ನಿರ್ಧರಿಸಿದ್ದಾರೆ. ಪುರಜನರೆಲ್ಲರೂ ಅದರಲ್ಲಿ ಸೇರಿ ತಮ್ಮ ಕೃತಜ್ಞತಾವಿಶ್ವಾಸಗಳನ್ನು ವ್ಯಕ್ತಪಡಿಸುವುದಕ್ಕೆ ಉಚಿತ ಸಮಯವಾಗಿದೆ.

ಮೈಸೂರು ಸರ್ಕಾರದವರು ಹೊಸದಾಗಿ ತೆಗೆಯಬೇಕೆಂದಿರುವ ೧ ಕೋಟಿ ರೂ. ಗಳ ಸಾಲಕ್ಕೆ ಸೇಕಡಾ ವರ್ಷ ೧ಕ್ಕೆ ೭ ರೂ. ನಂತೆ ಬಡ್ಡಿ ಕೊಡಲೂ, ಅಸಲನ್ನು ೧೦ ವರ್ಷಗಳಲ್ಲಿ ತೀರಿಸುವಂತೆಯೂ, ಆ ಹಣದ ಮೇಲೆ ವರಮಾನದ ತೆರುಗೆಯಿಲ್ಲದಿರುವಂತೆಯೂ ನಿಷ್ಕರ್ಷಿಸಿದ್ದಾರೆ. ೧೯೩೧ನೆ ವರ್ಷದಲ್ಲಿ ಹಿಂದಿರಿಗಿ ಕೊಡುವ ಸಾಲಕ್ಕೆ ಸೇಕಡಾ ೬|| ರೂ. ಬಡ್ಡಿ ಕೊಡುತ್ತಾರೆ.

ಬೆಂಗಳೂರಿನ ಮ|| ಎಂ. ಸುಬ್ಬಯ್ಯ ಬಿ. ಎ. ಯವರು ಮ|| ಎಂ. ವೆಂಕಟಕೃಷ್ಣಯ್ಯನವರಿಗೆ ಒಂದು ಮಾರುದ್ದದ ಬಹಿರಂಗ ಲೇಖನವನ್ನು ಬರೆದು ದೇಶದಲ್ಲಿ ಭೇದಭಾವಗಳನ್ನು ತೊಲಗಿಸಿ ಸೋದರಭಾವವನ್ನು ಮಾಡಿಸಿ ಶಾಂತಿಸ್ಥಾಪನೆ ಮಾಡಲು ನೀವು ಶಕ್ತರಾಗಿರುವುದರಿಂದ ಹಾಗೆ ಮಾಡಬೇಕೆಂದು ಕೇಳಿಕೊಂಡು ವೃಥಾ ಶ್ರಮಪಟ್ಟುದಕ್ಕಾಗಿ ವ್ಯಸನಪಡುತ್ತೇವೆ. ಬಣ್ಣವನ್ನು ತಿಳಿಯುವುದಕ್ಕೆ ಎಷ್ಟಾವೃತ್ತಿ ಒರೆಯಿಕ್ಕುವುದು ? ಗಿಲೀಟಿನ ನಗವನ್ನು ಒರೆಯಿಕ್ಕುವವನಿಗೆ ಮೇಣಕ್ಕೆ ಮೆತ್ತಿಸಿಕೊಳ್ಳುವಷ್ಟು ಭಂಗಾರದಪುಡಿಯು ಕೂಡ ಸಿಕ್ಕಲಾರದಲ್ಲವೆ ?

ವರ್ತಮಾನಸಂಗ್ರಹ.

ಕೊಲ್ಹಾಪುರದಲ್ಲಿ ವಿದ್ಯಾವಿಲಾಸವೆಂಬ ಪತ್ರಿಕೆಗೆ ಸಂಪಾದಕರಾಗಿದ್ದ ಗೋಖಲೆಯೆಂಬುವವರಿಗೆ ೧೮ ತಿಂಗಳ ಕಠಿನ ಕಾರಾಗೃಹವಾಸಶಿಕ್ಷೆಯಾಯಿತು.

ಐರ್ಲಂಡಿನಲ್ಲಿ ಸದ್ಯಃ ಸಂಹಾರಕ್ರಿಯೆಗಳು ನಿಂತಿವೆ. ಲಂಡನ್ನಿನಲ್ಲಿ ತಾ|| ೧೪ ರಲ್ಲಿ ಒಂದು ಸಭೆಗೂಡಿ ವಿಷಯ ಪರಿಷ್ಕಾರವನ್ನು ಮಾಡುವುದಕ್ಕೆ ಉಭಯಪಕ್ಷಗಳವರೂ ಒಪ್ಪಿದ್ದಾರೆ.

ಮ|| ಗಾಂಧಿಯವರು ತಿಲಕ್ ಸ್ವರಾಜ್ಯ ಫಂಡಿಗಾಗಿ ಕೂಡಿಸಿದ ಹಣವು ೧ ಕೋಟಿಗೆ ಏರಿದೆ. ಈಗ ಅದನ್ನು ಸ್ವದೇಶೀಯ ವಸ್ತ್ರೋತ್ಪಾದನ ಕಾರ್ಯಕ್ಕೆ ಬಂಡವಾಳವಾಗಿ ಉಪಯೋಗಿಸಬೇಕೆಂದು ಯೋಚಿಸುತ್ತಿದ್ದಾರೆ.

ಮ|| ಗಾಂಧಿಯವರ ಸೂಚನೆಯ ಪ್ರಕಾರ ಬೊಂಬಾಯಿಯ ದೊಡ್ಡ ಬಟ್ಟೆ ವ್ಯಾಪಾರಿಗಳಲ್ಲಿ ೬ ಮಂದಿ ಮಾತ್ರ ವಿದೇಶದ ಬಟ್ಟೆಗಳನ್ನು ತರಿಸಿಕೊಂಡು ವ್ಯಾಪಾರ ಮಾಡುವುದಿಲ್ಲವೆಂದು ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದ್ದಾರೆ.

ಭರತಖಂಡದ ರೈಲ್ವೆ ಗೂಡ್ಸು ದರಗಳು ಬಹಳ ಹೆಚ್ಚಿಹೋಗಿರುವುದರಿಂದ ಅದನ್ನು ತಗ್ಗಿಸುವುದು ಆವಶ್ಯಕವೆಂದು ಪಾರ್ಲಿಮೆಂಟಿನಲ್ಲಿ ಸರ್ ಥಾಮಸ್ ಬೆನ್ನೆಟ್‌ರವರು ಹೇಳಲಾಗಿ ಈ ವಿಷಯವನ್ನು ಕುರಿತು ಇಂಡ್ಯಾಸರ್ಕಾರದವರೊಡನೆ ಮಾತುಕತೆಗಳನ್ನು ನಡೆಯುಸುತ್ತಿರುವುದಾಗಿ ಸ್ಟೇಟ್ ಸೆಕ್ರೆಟರಿಯವರು ಉತ್ತರ ಕೊಟ್ಟರು.

ಗ್ರೀಕರಿಗೂ ಅಂಗೋರಾದ ತುರುಕರಿಗೂ ನಡೆಯುತ್ತಿರುವ ಯುದ್ಧದಲ್ಲಿ ಗ್ರೀಕರು ಸೋತು ಹಿಮ್ಮೆಟ್ಟಿಹೋಗಿದ್ದಾರೆ. ಈಗ ಗ್ರೀಕರಿಗೆ ಆಂಗ್ಲರು ಸಹಾಯ ಮಾಡುವುದರಲ್ಲಿದ್ದಾರೆಂದು ಸುದ್ದಿ ಹುಟ್ಟಿದೆ. ಆದರೆ ನಾವು ತಟಸ್ಥರಾಗಿರುವುವೆಂದು ಮಂತ್ರಿಮಂಡಲದವರು ಘಂಟಾಘೋಷವಾಗಿ ಹೇಳಿರುವಾಗ ಅದಕ್ಕೆ ತಪ್ಪಿ ಹೀಗೆ ಪ್ರವರ್ತಿಸುವರೆಂದು ಹೇಳುವುದಕ್ಕಾಗುವುದಿಲ್ಲ.

ರಷ್ಯಾದೇಶದಲ್ಲಿ ಮಹಾಕ್ಷಾಮವು ಕಾಲಿಕ್ಕಿಕೊಂಡಿದೆ. ಸೈಬೇರಿಯಾದಲ್ಲಿ ೨|| ಕೋಟಿ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಸಮಾರಾಪ್ರಾಂತದ ಪ್ರಜೆಗಳೂ ಪ್ರಭುತ್ವದವರೂ ಪೂರ್ವಭಾಗದ ದೇಶಗಳಿಗೆ ಹೊರಟುಹೋಗುತ್ತಿದ್ದಾರೆ. ಇದರ ಮೇಲೆ ವಾಂತಿಭೇದಿ ರೋಗವು ಬೇರೆ ವ್ಯಾಪಿಸಿಕೊಂಡು ಜನವಿನಾಶ ಮಾಡುತ್ತಿದೆ. ಇದುವರೆಗೆ ಆ ರೋಗದಿಂದ ೬ ಸಾವಿರ ಜನರು ಸತ್ತರಂತೆ.

ಭರತಖಂಡದ ವಾಯುವ್ಯದ ಸರಹದ್ದಿನಕಡೆ ಭರತಖಂಡದ ಸೇನೆಗಳ ಮೇಲೆ ಅಲ್ಲಿಯ ಶತ್ರುಗಳು ಹೆಚ್ಚಾಗಿ ಮೇಲೇರಿ ಬಂದು ಕದನ ಮಾಡಿದರು. ನಮ್ಮವರ ಕಡೆ ಸೇನಾಬಲವು ಕಡಿಮೆಯಾಗಿದ್ದಿತು. ಒಬ್ಬ ಲೆಫ್ಟಿನೆಂಟ್ ಕರ್ನಲು, ಒಬ್ಬ ಕ್ಯಾಪ್ಟನು, ೧೫ ಮಂದಿ ಸಿಪಾಯಿಗಳು ನಮ್ಮವರ ಕಡೆ ಸತ್ತರು. ಉಳಿದವರೆಲ್ಲಾ ಹಿಮ್ಮೆಟ್ಟಿಬಂದರು. ಶತ್ರುಗಳು ಬಳಿಕ ಸ್ವಸ್ಥಾನಗಳಿಗೆ ಹೊರಟುಹೋದರು.

ಬೆಲ್ಜಿಯಂ ಪ್ರಭುಗಳು ಈಗ ಲಂಡನ್ ಪಟ್ಟಣದಲ್ಲಿ ನಮ್ಮ ಸಾರ್ವಭೌಮರ ಆತಿಥ್ಯದಲ್ಲಿದ್ದಾರೆ. ಬಕಿಂಗ್‌ಹ್ಯಾಂ ಅರಮನೆಯಲ್ಲಿ ಅವರಿಗೆ ಬಹುವಿಶೇಷವಾದ ಒಂದು ಔತಣವು ನಡೆದಿತು. ಭವನವು ಅತಿ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತು. ಔತಣಕ್ಕೆ ಕರೆಯಿಸಲ್ಪಟ್ಟಿದ್ದ ಅತಿಥಿಗಳಲ್ಲಿ ದಕ್ಷಿಣಾಫ್ರಿಕಾ, ಆಸ್ಟ್ರೇಲಿಯಾ ಮೊದಲಾದ ಅಧಿನಿವೇಶಗಳ ಮಂತ್ರಿಗಳೂ ಸಾಮ್ರಾಜ್ಯಸಭೆಗಾಗಿ ಭರತಖಂಡದ ಪ್ರತಿನಿಧಿಗಳಾಗಿ ಹೋಗಿರುವ ಕಚ್ ಮಹಾರಾಜರೂ, ಆ|| ಶ್ರೀನಿವಾಸಶಾಸ್ತ್ರಿಯವರೂ, ಬರೋಡಾ ಮಹಾರಾಜ ದಂಪತಿಗಳೂ, ಇಂದೂರ್, ಪಾಟಿಯಾಲಾ, ಕಪುರ್ಥಲಾ ಮಹಾರಾಜರುಗಳೂ ಸೇರಿದ್ದರು.

ಆಂಗ್ಲ ಯುವರಾಜರವರು ಭರತಖಂಡಕ್ಕೆ ದಯಮಾಡಿಸುವವರಾಗಿರುವುದರಿಂದ, ಅವರು ಬರುವುದಕ್ಕೆ ಪೂರ್ವವೇ ಈ ದೇಶದಲ್ಲಿ ನಡೆಯಬೇಕಾದ ಸನ್ನಾಹಗಳನ್ನು ಭರತಖಂಡದ ಸರ್ಕಾರದವರು ನಡೆಯಿಸಬೇಕಾಗಿದೆ. ಅದಕ್ಕಾಗಿ ತಕ್ಕ ಸಲಹೆ ಕೊಡುವ ಸಂಘವನ್ನು ವೈಸ್ರಾಯರು ಏರ್ಪಡಿಸಿದ್ದಾರೆ. ಅದಕ್ಕೆ ಜಾನ್‌ವುಡ್‌ರವರು ಅಧ್ಯಕ್ಷರು. ಲಾಲಾಹರಿಕಿಷನ್‌ಲಾಲ್‌ರವರೂ, ಪಂಡಿತ ಮದನಮೋಹನ ಮಾಳವ್ಯರವರೂ ಇನ್ನು ಕೆಲ ಯೂರೋಪ್ಯರೂ ಸಭಿಕರಾಗಿ ಮಾಡಲ್ಪಟ್ಟಿದ್ದಾರೆ. ಇದಕ್ಕೆ ಗ್ವಾಲಿಯರ್, ಬಿಕಾನೀರ್ ಮಹಾರಾಜರೂ, ಗೌ|| ಷಫೀಯವರೂ, ಸಪ್ರುರವರೂ ಸಹಾಯ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ.

ಧಾರವಾಡದಲ್ಲಿ ಕಳೆದ ತಾ|| ೧ನೆಯ ದಿವಸ ಅಲ್ಲಿಯ ಪೋಲೀಸರು ಪ್ರಜೆಗಳ ಮೇಲೆ ಗುಂಡುಗಳನ್ನು ಹಾರಿಸಿದರು : ಮೂವರು ಸತ್ತರು ; ೩೦-೪೦ ಮಂದಿಗಳಿಗೆ ಗಾಯವಾಯಿತು. ಮದ್ಯಪಾನ ನಿರೋಧಕ್ರಿಯೆಯಲ್ಲಿ ತೊಡಗಿದ ಖಿಲಾಫತ್ ಸಂಘದ ವಾಲಂಟಿಯರೂ ಅಸಹಾಯವಾದಿಗಳೂ ಸಹ ಅಲ್ಲಿಯ ಮದ್ಯದಂಗಡಿಗೆ ಹೋಗುತ್ತಿದ್ದ ಜನರನ್ನು ತಡೆದು ಬಂಧಿಸಿದರೆಂದೂ, ಮತ್ತು ಆ ಅಂಗಡಿಗಳಿಗೆ ಬೆಂಕಿಯಿಕ್ಕಲು ಪ್ರಯತ್ನಿಸಿದರೆಂದೂ, ಅದನ್ನು ತಡೆಯಲಿಕ್ಕೆ ಪ್ರಯತ್ನಿಸಿದ ಪೋಲೀಸರ ಮೇಲೆ ಗುಂಪಿನ ಜನರು ಕಲ್ಲುಗಳನ್ನು ಬೀರಿ ಪೋಲೀಸ್ ಇನ್ಸ್ಪೆಕ್ಟರಿಗೆ ಗಾಯ ಕಾಣಿಸಿದರೆಂದೂ, ಎಷ್ಟು ಎಚ್ಚರಿಕೆ ಕೊಟ್ಟರೂ ಜನರ ಹಾವಳಿ ತಪ್ಪದೆ ಮೇಲೇರಿ ಬಂದುದರಿಂದ ತುಪಾಕಿಗಳನ್ನು ಹಾರಿಸಬೇಕಾಯಿತೆಂದೂ ಸರ್ಕಾರದವರು ತಿಳಿಯಿಸಿರುತ್ತಾರೆ. ಸ್ಥಳದ ಪತ್ರಿಕೆಗಳು ತಕ್ಕ ಕಾರಣವನ್ನು ತಿಳಿಯಿಸಿಲ್ಲ. ವಿಜಯ, ಕರ್ಮವೀರ, ಕರ್ನಾಟಕವೃತ್ತ ಈ ಪತ್ರಿಕೆಗಳ ಸಂಪಾದಕರನ್ನೂ ಇನ್ನೂ ಕೆಲಜನರನ್ನೂ ಪೋಲೀಸರು ಹಿಡಿದು ಬಂಧನದಲ್ಲಿಟ್ಟಿದ್ದಾರೆ.

ಗೃಹಕೃತ್ಯದ ನೋಟೀಸ್.

ಹಾಸನದ ಡಿಸ್ಟ್ರಿಕ್ಟು ಚನ್ನರಾಯಪಟ್ಟಣದ ತಾಲ್ಲೂಕು ತಾವರೆಕೆರೆ ಗ್ರಾಮವಾಸಿ ಬೊಮ್ಮೆಗೌಡನ 2ನೆ ಮಗ ಶಿವನಂಜೇಗೌಡನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—

ನಮ್ಮ ತಂದೆ ಬೊಮ್ಮೆಗೌಡನಿಗೆ ನಾನು 2ನೆ ಮಗನಾಗಿಯೂ 1ನೆ ಶಿದ್ದಪ್ಪನಾಗಿಯೂ ಸಹ ಖಾಸ ಮಕ್ಕಳಾಗಿರುತ್ತೇವೆ. ನಮ್ಮ ತಂದೆ ಬೊಮ್ಮೆಗೌಡನಿಗೂ ನನ್ನ ಅಣ್ಣ ಶಿದ್ದಪ್ಪನಿಗೂ ನನಗೂ ಭಾಗಾಂಶದ ವಿಷಯದಲ್ಲಿ ಅನಂತ ಕಲಹ ಹುಟ್ಟಿ ನಂತರ ಪಂಚಾಯಿತರು ತೀರ್ಮಾನ ಮಾಡಿ ನಮ್ಮನಮ್ಮಗಳಿಗೆ ವಿಭಾಗದ ಕಾಗದವು 1920ನೆ ಇಸ್ವಿ ಜನವರಿ ತಾರೀಖು 2ನೆ ಮುರ್ರ್ಯಂನಲ್ಲಿ ಹುಟ್ಟಿ ಸದರಿ ತಾರೀಖು 5 ರಲ್ಲಿ ಚನ್ನರಾಯಪಟ್ಟಣದ ತಾಲ್ಲೂಕು ಸಬ್‌ರಿಜಿಸ್ಟ್ರಾರವರ ಆಫೀಸಿನಲ್ಲಿ ರಿಜಿಸ್ಟರ್ ಆಗಿದೆ. ಈ ವಿಭಾಗದ ಕರಾರಿನಲ್ಲಿ ನಮೂದಾಗಿರುವ ನಮ್ಮನಮ್ಮ ಹಿಸ್ಸೆ ಜಾತಾ ನಮ್ಮ ತಂದೆ ಬೊಮ್ಮೆಗೌಡನಿಗೆ ಜೀವನಾಂಶಕ್ಕಾಗಿ ಬಿಟ್ಟಿರುವ ಸ್ವತ್ತುಗಳನ್ನು ನಮ್ಮ ತಂದೆ ಬೊಮ್ಮೆಗೌಡನು ನನ್ನ ಅಣ್ಣ ಶಿದ್ದಪ್ಪನು ಸಹ ದುರ್ಬೋಧನೆಗೆ ಒಳಪಟ್ಟು ನನಗೆ ಮೋಸಮಾಡಬೇಕೆಂಬ ಉದ್ದೇಶದಿಂದ ತಮ್ಮಗಳ ಸಾಲವನ್ನು ತೀರುವಳಿ ಬಗ್ಗೆ ಜೀವನಾಂಶದ ಸೊತ್ತುಗಳನ್ನು ಯಾರಿಗಾದರೂ ಪರಬಾರೆ ಮಾಡಬೇಕೆಂದು ಉದ್ದೇಶಪಟ್ಟಿರುವ ವರ್ತಮಾನ ಕೇಳುತ್ತೇನೆ. ಈ ಸ್ವತ್ತನ್ನು ಯಾರಾದರೂ ಆಧಾರ ಕ್ರಯ ಭೋಗ್ಯ ವಗೈರೆಗಳನ್ನು ಮಾಡಿಕೊಂಡರೆ ಊರ್ಜಿತವಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಿರುತ್ತೆ. ಶಿವನಂಜೇಗೌಡನ ರುಜು.

ಪತ್ರವ್ಯವಹಾರ.

ಮಹದಾಶ್ಚರ್ಯ.

ಸ್ವಾಮಿ.—

ವೇದಶಾಸ್ತ್ರ ಪುರಾಣೇತಿಹಾಸಗಳಲ್ಲಿ ಉಕ್ತವಾಗಿರುವ ಭೂಸುರರೆಂಬುವವರು ಇವರೇನೇ ? ಸಾವಿರಾರು ವರ್ಷಗಳಿಂದಲೂ ಗೀತೆ ಮುಂತಾದ ಪಾರಮಾರ್ಥಿಕ ಗ್ರಂಥಗಳನ್ನು ಓದಿ ಗ್ರಹಿಸಿ ಬೋಧಿಸಿ ಆಚಾರ್ಯವರ್ಯರೆನ್ನಿಸಿಕೊಂಡಿರುವ ಬ್ರಾಹ್ಮಣೋತ್ತಮರು ಇವರೇನೇ ? ಒಂದೇ ಒಂದು ನಿಮಿಷದಲ್ಲಿ ಚಿತ್ತವನ್ನು ಬದಲಾಯಿಸಿ ದೂಷಣವಾಕ್ಯವನ್ನು ಪಠಿಸಲಾರಂಭಿಸಿರುವ ದೇವೋತ್ತಮರಾದ ನಂಜುಂಡ, ವೆಂಕಟರಮಣ, ಗೋಪಾಲ, ಕೃಷ್ಣ, ರಾಮ ಮುಂತಾದ ನಾಮಾಂಕಿತರಾಗಿ ಆ ಅಂಶಕ್ಕೆ ಕೊರತೆಯನ್ನು ತರತಕ್ಕ ಕಠಿಣೋಕ್ತಿಯನ್ನು ಕೂಗುವ ಇವರು ಯಾರು ? ಅಗ್ರಹಕ್ಕೂ ಅಸಮಾಧಾನಕ್ಕೂ ಕೂಗಿಗೂ ಕಾರಣವೆಲ್ಲಿದೆ ? ತಂದೆಯು ತನ್ನ ಹನ್ನೆರಡು ಮಕ್ಕಳಲ್ಲಿ ಹಿರಿಯವನಿಗೆ ವಿದ್ಯಾಬುದ್ಧಿ ಕಲಿಸಿ ಇದಕ್ಕಾಗಿ ಎಷ್ಟೋ ಆಸ್ತಿಯನ್ನು ವೆಚ್ಚಮಾಡಿ ಆ ಜ್ಯೇಷ್ಠ ಪುತ್ರನಿಗೆ —"ಎಲೈ ಸುಕುಮಾರನೇ ನಿನ್ನ ಹನ್ನೊಂದು ಜನ ತಮ್ಮಂದಿರು ಬಹಳ ಹಿಂದುಳಿದಿರುತ್ತಾರೆ ನಿನಗಾಗಿ ಬಹಳ ಕಷ್ಟಪಟ್ಟು ನಿನ್ನನ್ನು ಮುಂದೆ ತಂದಿರುತ್ತೇನೆ. ನಿಂತಿರುವ ಎಲ್ಲಾ ಆಸ್ತಿಯನ್ನು ನೀನೇ ಪೂರ್ತಿಯಾಗಿ ಅನುಭವಿಸುವುದಕ್ಕೆ ಬದಲಾಗಿ ಅರ್ಧಭಾಗವನ್ನು ನೀನು ತೆಗೆದುಕೋ ಬಾಕಿ ಅರ್ಧಭಾಗವನ್ನು 7 ವರ್ಷದಲ್ಲಿ ನಿನ್ನ ತಮ್ಮಂದಿರ ಸ್ವಾಧೀನಪಡಿಸು" ಎಂದು ಧರ್ಮಿಷ್ಠನಾದ ನಿರ್ವಂಚಕನಾದ ತಂದೆಯು ಆಡಿದ ಮಾತು ದ್ವೇಷವನ್ನು ಕಲ್ಪಿಸುತ್ತದೆಯೇ ? ತಂದೆಗೆ ಸಂಶಯ ತೋರದಿದ್ದರೆ ಆ ರೀತಿ ಜ್ಯೇಷ್ಠಪುತ್ರನನ್ನು ಕೇಳುತ್ತಿದ್ದನೇ ?

ಮಿಲ್ಲರು ಕಮಿಟಿಯ ರಿಪೋರ್ಟಿನ ಮೇಲೆ ಬ್ರಾಹ್ಮಣರು ಆಗ್ರಹವನ್ನು ತೋರ್ಪಡಿಸುತ್ತಿರುವುದು ಅತ್ಯಾಶ್ಚರ್ಯವನ್ನುಂಟುಮಾಡಿರುತ್ತದೆ. ಧರ್ಮಪರಿಪಾಲನೆಯನ್ನು ಮಾಡಬೇಕೆಂದು ನಮ್ಮ ಸತ್ಯ ಸರ್ಕಾರವು ಮಾಡಿದ ಆರ್ಡರನ್ನು ನೋಡಿ ಸಹಿಸಲಾರದೆ ಮನಸ್ಸಿಗೆಬಂದಂತೆ ಕೆಟ್ಟ ಭಾಷೆಯಿಂದ ನಮ್ಮ ಮಂತ್ರಿವರ್ಯರನ್ನು ದೂಷಿಸುವುದು ನ್ಯಾಯವೇ ? "ಅಧಿಕಾರ ಮಹತ್ವ", "ಕಂಠೀರವ" ಮುಂತಾದ ಹೆಸರಿನಿಂದ ಪತ್ರಿಕೆಗಳಲ್ಲಿ ಕೂಗುವ ಶಬ್ದಗಳನ್ನು ಪುನಃ ಉಚ್ಚರಿಸಲು ನನಗೆ ಅಗೌರವವೆಂದು ನಾನು ತಿಳಿದಿರುತ್ತೇನೆ. "ಮಂತ್ರಿಪದವಿಗೆ ಬಂದ ಆಗಸರವನ ದೆಸೆಯಿಂದ ಪ್ರಭುವಿಗೆ ಯಾವಗತಿ ಬಂದಿತೋ ಆ ಗತಿ ಬರುವುದು ಸಂದೇಹವಿಲ್ಲ." "ಅಧಿಕಾರ ಮದದಿಂದ ಪರವಶರಾಗಿ ತಮಗೆ ಎದುರಿಲ್ಲವೆಂದು ನಡೆಯತಕ್ಕ ಅಧಿಕಾರ ದರ್ಪವನ್ನು ನೋಡಿದರೆ ತುಂಬಾ ವಿಷಾದವಾಗುತ್ತದೆ." "ಯಮದೂತರು ವಾರಂಟು ತಂದು ಎದುರಿಗೆ ನಿಂತಿರುವಂತೆ ತಿಳಿದುಕೊಂಡು ಧರ್ಮದಿಂದ ನಡೆಯಬೇಕು. ಹಾಗಿಲ್ಲದಿದ್ದರೆ ಇಹಪರ ಸೌಖ್ಯಗಳಿಗೆ ಬಾಧಕವುಂಟಾಗುವದು." ಈ ಮುಂತಾದ ದುಷ್ಟ ವಾಕ್ಯಗಳನ್ನು ನಾವು ಕೇಳಬಹುದೇ ? ಈ ಹಿಂದೆ ಮಂತ್ರಿಪದವಿಗೆ ಬಂದಿದ್ದ ಮದ್ರಾಸಿನವರೂ ಮೈಸೂರಿನವರೂ ಈ ಮೇಲೆ ಹೇಳಿದ ಕಠಿಣೋಕ್ತಿಗೆ ನೂರಾರುಪಾಲು ಅವಕಾಶಗಳನ್ನು ಕೊಟ್ಟಿದ್ದರು. ಪ್ರತಿನಿಧಿ ಸಭೆಯವರನ್ನು ಕುರಿ ಮಂದಿಗಳಂತೆ ಕಾಣುತ್ತಿದ್ದರು. ಆಕಾಲ ಚನ್ನಾಗಿತ್ತು. ಯಾಕೆಂದರೆ ಆ ರೀತಿ ಅನ್ನಿಸಿಕೊಳ್ಳುತ್ತಿದ್ದವರು ಬ್ರಾಹ್ಮಣೇತರರು. ಆ ಹಿಂದಿನ ಗರ್ಜನೆಗಳು ಸಿಡಿಲಿಗಿಂತಲೂ ಹೆಚ್ಚು ಶಬ್ದ ಮಾಡುತ್ತಿದ್ದವು. ಈಗ ಹೇಳುವ ನೀತಿವಚನಗಳು "ದಯವಿಟ್ಟು ಲಾಲಿಸಿ, "ತಾವುಹತ್ತಿರ ಬನ್ನಿ" ಎಂಬ ಶಬ್ದಗಳು; ಇವು ಲಾಲ್ಯವಾಗಿಲ್ಲ. ಇದೇನು ಆಶ್ಚರ್ಯ ? ಗದರಿಸುವದು ಈಗ ಎಲ್ಲಿ ಬಂತು? ಅದು ಕಳೆದು ಎರಡು ವರ್ಷದ ಮೇಲಾಯಿತು. ಸಿಂಹಾಕಾರವಾಗಿದ್ದ ಆ ೩ನೇ ಮಂತ್ರಿಯು ಯಾವ ರೀತಿ ಕಾಣುತ್ತಿದ್ದರು? ತಾನೇ ತಾನು, ತನ್ನ ಜನರೇ ಜನರು ಎಂದು ತಿಳಿದಿದ್ದ ೩ನೆಯವರು ಹ್ಯಾಗಿದ್ದರು ? ಹಿಡಿದ ಹಠ ಬಿಡದೆ ಆಗದವರನ್ನು ಸುಡುತ್ತಿದ್ದ ಆ ೪ ನೆಯವರು ಏನು ಮಾಡಿದರು ? ಆರು ವರ್ಷಗಳ ಪರ್ಯಂತವೂ ಮತ್ತೊಬ್ಬರಿಗೆ ತಿಳಿಯದಂತೆ ಏಕ ಜಾತಿಯವರನ್ನು ಮುಂದಕ್ಕೆ ತಂದ ೫ನೆಯವರ ಕಥೆಯೇನು ? ೬ ನೆಯವರ ವಿಷಯವನ್ನು ಎಷ್ಟು ಕಡಿಮೆ ಹೇಳಿದರೆ ಅಷ್ಟು ಉತ್ತಮ. ದೂಷಣೆಮಾಡುವುದಕ್ಕಾಗಿ ಇದನ್ನೆಲ್ಲಾ ಹೇಳುತ್ತಿಲ್ಲ. ಇವರೆಲ್ಲರೂ ಒಂದೇ ಒಂದು ಪಂಗಡದವರನ್ನು ವಂಚನೆಯಿಂದ ಕೊಬ್ಬಿಸಿದರು. ಮದ್ರಾಸಿನವರು ಮುತ್ತಿಗೆಹಾಕಿ ಉತ್ತಮವಾದ ಅಧಿಕಾರಗಳನ್ನು ಕೊಳ್ಳೇಹೊಡೆದಾಗ ಮಾತನಾಡುವವರಿರಲಿಲ್ಲ. ಅನೇಕಾನೇಕ ಇಲಾಖೆಗಳನ್ನು ಸೃಷ್ಟಿಸಿ ಬೇಕಿಲ್ಲದ ಪರೀಕ್ಷೆಗಳನ್ನು ಹೆಚ್ಚಿಸಿ ಒಂದೇ ಪಂಗಡದವರನ್ನು ಸಂಖ್ಯೆಯಿಲ್ಲದೆ ಹೆಚ್ಚಿಸಿ ಖಜಾನೆಯು ಖಾಲಿಯಾದಾಗ ಈ ಶ್ರೇಷ್ಠ ಪುರುಷರ ಧ್ವನಿಯಿಲ್ಲ.

ಕಂಠೀರವನು—ಪ್ರಜೆಗಳು ಎಂದು ಕೂಗುವ ಜನರು ಯಾರು? ೭ ಜನ ಲಾಯರು ೧೧ ಜನ ಶ್ಯಾನುಭೋಗರೊ ? ಮ|| ರಾ|| ರಾ|| ಹೊಸಕೊಪ್ಪ ಕೃಷ್ಣರಾಯರ ಬಾಯಿಯಲ್ಲಿ ಮಿಲ್ಲರು ಕಮಿಟಿಯ ರಿಪೋರ್ಟಿನ ವಿಷಯವಾಗಿ ಬಂದ ಮಾತುಗಳು ಮರ್ಯಾದೆಯ ಶಬ್ದಗಳೇ ? ಸರ್ಕಾರದ ನೌಕರರಲ್ಲಿ ಬ್ರಾಹ್ಮಣರಾದವರು ಈ ರಿಪೋರ್ಟಿನ ವಿಷಯವಾಗಿ ಒಂದು ಮಾತೂ ಆಡದೇ ಹೋದದ್ದು ಅವರು ನೌಕರರೆಂಬ ಯೋಗ್ಯತೆಗೆ ತಕ್ಕುದೇ ?

ನನ್ನ ಬಾಂಧವರಾದ ಬ್ರಾಹ್ಮಣೇತರರು ದ್ವೇಷ-ಕೋಪತಾಪಕ್ಕೆ ಪಾತ್ರರಲ್ಲವೆಂದು ನಂಬಿರುತ್ತೇನೆ. ಇದಕ್ಕೆ ಅವರ ಸೌಜನ್ಯದಶೆಯೇ ಸಾಕ್ಷಿಯಾಗಿದೆ. ಮಿಲ್ಲರು ಕಮಿಟಿಯ ರಿಪೋರ್ಟನ್ನು ಆಕ್ಷೇಪಿಸುವವರು ಬ್ರಾಹ್ಮಣೇತರರಿಗೆ ಕೆಲಸಕೊಟ್ಟರೆ ಕೆಲಸದ ಗುಣ (efficiency) ಕಡಮೆಯಾಗುತ್ತದೆಂದು ಹೇಳುತ್ತಾರೆ. ನೂರಾರು ಪರೀಕ್ಷೆಗಳನ್ನು ಮಾಡಿದ ಮೊದಲಿನ ಶಕ್ತಿಯಿಂದ ಪ್ರಜಾಹಿಂಸೆಯೇ ಕೆಲಸದ ಗುಣವೆಂದು ತಿಳಿದಿರಬಹುದು. ಅದಲ್ಲ. ಪ್ರಜೆಗಳ ಹಿತಚಿಂತನೆಯಿಂದ ಕೂಡಿದ ಹೃದಯವಿಲ್ಲದ ಬುದ್ಧಿಯಿಂದ ದೇಶೋದ್ಧಾರವಾಗುವದುಂಟೆ ?

ಮಿಲ್ಲರು ಕಮಿಟಿಯ ರಿಪೋರ್ಟು ಬಂದ ಕೂಡಲೇ ನಮ್ಮ ಹಿರಿಅಣ್ಣನ ನಿಜಸ್ಥಿತಿಯು ಒಂದು ಕ್ಷಣದಲ್ಲಿ ಹೊರಗೇಬಿತ್ತು. ಇವರೇನೋ ಭಯಂಕರವಾದ ಹುಲಿಗಳಂತೆ ಹೆದರಿಸುವವರು! ಗರ್ಜನೆಯೇನೋ ಜುಳ್ಳು. "ಅಗಸನೂ ಅವನದೊಂದು ಕತ್ತೆಯೂ" ಯೆಂಬದೊಂದು ಸಣ್ಣ ಕಥೆಯಿದೆ. ಅದರಂತೆ ಈ ವಕೀಲರೂ ಈ ಶ್ಯಾನುಭಾಗರೂ ನಟಿಸುತ್ತಿದ್ದಾರೆ. ಈಗ ಮಾಡುತ್ತಿರುವ ಕೂಗಿನಿಂದ ನಿಜಾಕಾರ ಹೊರಪಡುತ್ತಿದೆ, ಎಚ್ಚರ.

"ಸತ್ಯವಾದಿ"

ದ್ವೇಷಾಗ್ನಿಯನ್ನು ಪುಟಮಾಡುತ್ತಿದ್ದಾರೆ.

ಸ್ವಾಮಿ !

ಸ್ವಾರ್ಥೈಕಪರತ್ವವೇ ತುಂಬಿತುಳುಕುತ್ತಿರುವ ಕೆಲ ಬ್ರಾಹ್ಮಣ ಬ್ರುವರು ಈಗ ತಮ್ಮಲಾಭಕ್ಕೆ ಸ್ವಲ್ಪ ನ್ಯೂನತೆಯುಂಟಾಗುವಂತೆ ಇದೆಯೆನ್ನುವದನ್ನು ಅರಿತುಕೊಂಡು ಆವೇಶಪರವಶರಾಗಿದ್ದಾರೆ. ಮನಸ್ಸಿನಲ್ಲಿ ಆವೇಶವುಂಟಾದ ಕೂಡಲೇ ಅದನ್ನು ನಿಗ್ರಹಿಸಿಕೊಳ್ಳುವ ಸಾಮರ್ಥ್ಯವಿಲ್ಲದೇ ಹೋದರೆ ಅನ್ಯಾಯಕಾರ್ಯಪ್ರವರ್ತನೆ ಅದು ಪ್ರೋತ್ಸಾಹಮಾಡುವುದು ಸಹಜವೇ ಆಗಿರುತ್ತದೆ. ಈ ಕ್ರೋಧಾವೇಶಪರವಶರಲ್ಲಿ ಈಚೀಚೆಗೆ ನೀತಿಹೀನಪ್ರವರ್ತನೆಯೂ, ಜ್ಞಾನಹೀನಾವಸ್ಥೆಯೂ, ಲಜ್ಜೆಯಿಲ್ಲದ ಮಾತುಗಳೂ ತಾನೇತಾನಾಗಿ ಹೊರಪಡುತ್ತವೆ.

ಮೈಸೂರಿನ ಸತ್ಯವಾದಿ ಎಂಬ ಪತ್ರಿಕೆಯ ಕಳೆದ ಜೂನ್ ತಿಂಗಳ ೪ ನೆ ತಾರೀಖಿನ ಸಂಚಿಕೆಯಲ್ಲಿ ಕೆಲವು ಸಂಕರ ಜಾತಿಯ ಪದಗಳು ಪ್ರಕಟಿಸಲ್ಪಟ್ಟಿವೆ. ಅವು ಒಂದು ಭಾಷೆಗೆ ಒಂದು ನಿಬಂಧನೆಗೆ ಸೇರಿದವಲ್ಲ. ಬರೆದವನ ಹೆಸರಿಲ್ಲ. ನಿಜವಾದ ಧೈರ್ಯಸ್ಥನು ಆಡುವ ಮಾತಾಗಿಲ್ಲ. ಆ ಪದಗಳ ಸ್ವರೂಪದಂತೆಯೇ ಅವನ್ನು ಬರೆದವನು ಬಿರಕೆಯ ಲಫಂಗನಾಗಿರಬೇಕೆಂದು ಪ್ರತಿಯೊಬ್ಬರೂ ಊಹಿಸಬಹುದಾಗಿದೆ. ಆ ಪದ್ಯಗಳನ್ನು ಬರೆದಿದ್ದ ಕಾಗದವು ಸದರಿ ಪತ್ರಿಕೆಯ ಆಫೀಸಿನ ಕರಸ್ಪಾಂಡೆನ್ಸಿನ ಪೆಟ್ಟಿಗೆಯಲ್ಲಿ ಬಿದ್ದಿದ್ದಿತಂತೆ. ಅದನ್ನು ಓದಿ ನೋಡಿದಕೂಡಲೇ ಪತ್ರಿಕಾಕರ್ತರಿಗೆ ಆಹ್ಲಾದವುಂಟಾಯಿತಂತೆ ! ಅದರಲ್ಲಿ ದೂಷಣ ಭೂಷಣಗಳೊಂದೂ ಇಲ್ಲದೆ ಯಥಾವಸ್ಥಿತವಾಗಿದ್ದಿತಂತೆ. ಅದಕ್ಕಾಗಿ ಪತ್ರದಲ್ಲಿ ಪ್ರಕಟಿಸಿದರಂತೆ. ಹೀಗೆಂದಿರುವುದರಿಂದ ಅರ್ಥಾತ್ ಸದರಿ ಪತ್ರಿಕಾಕರ್ತರಿಗೂ ಆ ಪದಗಳಲ್ಲಿ ಕಂಡಿರುವ ಅಭಿಪ್ರಾಯಗಳು ಇಷ್ಟವೇ ಎಂದು ವ್ಯಕ್ತವಾಗುವುದು. ಒಂದುವೇಳೆ ಧೈರ್ಯದಿಂದ ಅವೇ ಮಾತುಗಳನ್ನು ಗದ್ಯರೂಪವಾಗಿಯೋ, ಅಥವಾ ಸಲಕ್ಷಣ ಪದ್ಯರೂಪವಾಗಿಯೋ ಹೇಳುವುದಕ್ಕೆ ಧೈರ್ಯಸಾಮರ್ಥ್ಯಗಳಿಲ್ಲದೆ ಹೀಗೆ ಮಾಡಿರಬೇಕೆಂದು ಇತರರು ಊಹಿಸುವಂತೆಯೂ ಇರುವುದು.

ಅದರಲ್ಲಿರುವ ಮುಖ್ಯತಾತ್ಪರ್ಯವೆಲ್ಲಾ ಏನೆಂದರೆ—"ದಿವಾನ್ ಕಾಂತರಾಜಅರಸಿನವರು ಬ್ರಹ್ಮದ್ವೇಷವನ್ನು ಮಾಡುತ್ತಿದ್ದಾರೆ. ಮಂತ್ರಿತ್ವ ನಿರ್ವಾಹವು ಬಹುಕಷ್ಟ. ಮತ್ತು ರಾಜಸೇವೆ ಗೌರವವಾದದ್ದಲ್ಲ, ಪರಶುರಾಮನು ಭೂಮಿಯನ್ನೆಲ್ಲಾ ಗೆದ್ದು ಬ್ರಾಹ್ಮಣರಿಗೆ ಧಾರೆಯೆರೆದು ಕೊಟ್ಟಿದ್ದಾನೆ. ರಾಜರಿಗೆ ದೊರೆತನದ ಹಕ್ಕಿಲ್ಲ. ಬ್ರಾಹ್ಮಣರನ್ನು ಮಂತ್ರಿಗಳನ್ನಾಗಿಟ್ಟುಕೊಂಡಿರುವುದರಿಂದಲೇ ದೊರೆತನದ ಹಕ್ಕು ಅವರಿಗೆ ನಡೆಯುತ್ತಿದೆ. ದ್ವಿಜೇತರರು ಕೃಷಿ ಗೋರಕ್ಷಣಾದಿಗಳನ್ನು ಬಿಟ್ಟು ರಾಜಕಾರ್ಯದಲ್ಲಿ ಪ್ರವರ್ತಿಸಿದರೆ ಮುದಿತನು ನಿಷೇಕಭೋಗವನ್ನು ಮಾಡಿಕೊಂಡಂತೆ ಪರಿಹಾಸಾಸ್ಪದನಾಗುತ್ತಾನೆ. ದೊರೆಗಳು ವಿಪ್ರರಲ್ಲದವರನ್ನು ಮಂತ್ರಿತ್ವಕ್ಕೆ ನಿಯಮಿಸಿಕೊಂಡರೆ ಅಗಸನಿಗೂ ಕ್ಷೌರಿಕನಿಗೂ ಮಂತ್ರಿತ್ವ ಕೊಟ್ಟ ದೊರೆಯ ಪಾಡಿಗೆ ಸಮನಾಗುತ್ತದೆ. ಕಾಂತರಾಜರು ಒಕ್ಕಲಿಗರು ಮ್ಲೇಂಛರು ಮೊದಲಾದವರಿಗೆ ಅಧಿಕಾರಗಳನ್ನು ಕೊಟ್ಟರೆ ಹಾಗೇ ಆಗುತ್ತದೆ. ಅರಸುಗಳಿಗೆ ಅರಮನೆ ಭಕ್ಷಿಗಿರಿ ಗುರುಕಾರತನ ಇವುಗಳನ್ನು ಕೊಡಬೇಕೇ ಹೊರತು ಬೇರೆ ಅಧಿಕಾರಗಳನ್ನು ಕೊಟ್ಟರೆ ಮೇಲೆ ಹೇಳಿದಂತೆ ವಿಪರೀತವೇ ಆಗುತ್ತದೆ. ಆದಕಾರಣ ಎಲೈ ಕಾಂತರಾಜನೇ ನೀನು ಕಷ್ಟತರವಾದ ರಾಜಭಾರವನ್ನು ಬಿಟ್ಟು ಸುಖಭೋಜನವನ್ನು ಮಾಡಿಕೊಂಡು ನಿದ್ರೆಯೆಂಬ ಹೆಂಡತಿಯೊಡನೆ ಕೂಡಿ ಸುಖವಾಗಿರು" ಎಂಬುವೇ ಅದರಭಿಪ್ರಾಯ.

ಸರ್ ಕಾಂತರಾಜ ಅರಸಿನವರು ದಿವಾನಗಿರಿಯಲ್ಲಿರುವುದು ಕೆಲ ಬ್ರಾಹ್ಮಣ ನಾಮಧಾರಿಗಳ ಹೊಟ್ಟೆಗೆ ಎಷ್ಟುಮಟ್ಟಿಗೆ ಬೆಂಕಿಯಿಕ್ಕಿದಂತಾಗಿದೆಯೆಂಬುದಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತಬೇಕೆ ? ಮೈಸೂರ ಅರಸರೂ ಅವರ ಬಂಧುವರ್ಗದವರೂ ಇಂಥ ಜನರನ್ನು ತಮ್ಮ ಶ್ರೇಯಃಕಾಂಕ್ಷಿಗಳೂ ತಮ್ಮನ್ನು ಸ್ವರ್ಗಕ್ಕೆ ಸಾಗಿಸುವ ಏಜಂಟರೂ ಎಂದು ತಿಳಿದುಕೊಂಡು ಗೊತ್ತುಗುರಿಯಿಲ್ಲದಷ್ಟು ಮಾನ್ಯಗಳನ್ನೂ ವೃತ್ತಿಗಳನ್ನೂ ಅಗ್ರಹಾರ ದಾನಗಳನ್ನೂ ಮಾಡಿ ಎಷ್ಟೋ ಕಳೆದುಕೊಂಡರು. ಸರ್ ಕಾಂತರಾಜ ಅರಸರವರೂ ಕೂಡ ಹಿಂದೆಯೂ ಈಗಲೂ ಎಷ್ಟೋ ದಾನಧರ್ಮಾದಿಗಳ ರೂಪದಲ್ಲಿ ಈ ಜನರಿಗೆ ತೆತ್ತೂ ತೆರುತ್ತಲೂ ಇರುವರು. ಆದರೇನು? ಒಂದು ಕೈಯಲ್ಲಿ ತುತ್ತು ಒಂದು ಕೈಯಲ್ಲಿ ಮಣ್ಣು ! ಹಾವಿಗೆ ಹಾಲೆರೆದಂತಾಯಿತು. ಹಿಂದೊಂದುಸಲ ಮತ್ತೊಂದು ಬ್ರಾಹ್ಮಣ ಪತ್ರಿಕೆಯು ಶ್ರೀಮನ್ಮಹಾರಾಜರು ಅರಸು ಮಂಡಲಿಯ ಬಾಲಕರಿಗೂ ಬಾಲೆಯರಿಗೂ ಪ್ರತ್ಯೇಕವಾದ ಬೋರ್ಡಿಂಗ್ ಶಾಲೆಗಳನ್ನೇರ್ಪಡಿಸಿರುವುದನ್ನು ನೋಡಿ, ಹೀಗೆ ಸ್ವಜನಾಭಿಮಾನವನ್ನು ತೋರಿಸಿ ಔರಂಗ್‌ಜೇಬನು ಹಾಳಾದನೆಂಬ ದೃಷ್ಟಾಂತವನ್ನು ನಮ್ಮ ಪ್ರಭುಗಳಿಗೆ ಕೊಟ್ಟು, ಅರಸುಗಳ ಪುರೋವೃದ್ಧಿಯಲ್ಲಿ ತಮಗಿರುವ ಹೊಟ್ಟೆಯುರಿಯನ್ನು ತೋರ್ಪಡಿಸಿಕೊಂಡಿತ್ತು. ಈಗ ಸತ್ಯವಾದಿಯು ಪುನರಾವೃತ್ತಿ ಮಾಡಿದೆ. ನಮ್ಮನ್ನಾಳುವ ಪ್ರಭುಗಳೂ ಅವರ ಕುಟುಂಬದವರೂ ಬಾಂಧವರೂ ರಾಜ್ಯಕಾರ್ಯನಿರ್ವಾಹದಲ್ಲಿ ಮುಂದಕ್ಕೆ ಬಂದು ಚೆನ್ನಾಗಿ ಬಾಳಿ ಬದುಕುವುದೇ ನಮ್ಮ ಭಾಗ ವೆಂದು ತಿಳಿಯುವುದು ಸತ್ಪ್ರಜೆಗಳ ಲಕ್ಷಣವಾಗಿರುವಲ್ಲಿ, ಅಂಥ ಅರಸುಗಳ ಮಂಡಲಿಯನ್ನೇ ಮೂಲೆಗೆ ತಳ್ಳಿರಿಸಬೇಕೆಂದು ಯೋಚಿಸಿಕೊಂಡಿರುವವರ ಕೃತಘ್ನತೆಯ ಪರಿಮಾಣವು ಎಷ್ಟುಮಟ್ಟಿಗಿರಬಹುದು ! ಇದನ್ನು ಅರಸುಗಳ ಮಂಡಲಿಯೆಲ್ಲಾ ಚೆನ್ನಾಗಿ ಗಮನಿಸಿ ಎಚ್ಚತ್ತುಕೊಳ್ಳುವುದೆ ?

ಪರಶುರಾಮನು ಭೂತಲವನ್ನೆಲ್ಲಾ ಇವರಿಗೆ ಧಾರೆಯೆರೆದು ಕೊಟ್ಟನಂತೆ ! ಹಾಗಾದರೆ ಅಂಥ ಭೂಮಿಯನ್ನು ಇತರರೆಲ್ಲಾ ಈಗ ಅನ್ಯಾಯಾಕ್ರಮಣಮಾಡಿ ಆಳುತ್ತಿರಬಹುದಾಯಿತು ! ಅದಕ್ಕಾಗಿಯೇ ಈಗ ಇವರುಗಳು ರಾಜ್ಯಗಳನ್ನು ಕ್ಷತ್ರಿಯ ಪರಿಪಾಲನೆಯಿಂದ ಬಿಡಿಸಿ ಬ್ರಾಹ್ಮಣ ಪರಿಪಾಲನೆಯನ್ನು ಸ್ಥಾಪಿಸುವುದಕ್ಕಾಗಿ ಸನ್ನಾಹಮಾಡುತ್ತಿರಬಹುದಾಗಿದ್ದೀತು! ಇಂಡ್ಯಾದೇಶವನ್ನು ಪಾಲಿಸುತ್ತಿರುವ ಬ್ರಿಟಿಷ್ ಪ್ರಭುಗಳ ಮೇಲೆ ಸಹಾಯನಿರಾಕರಣ ರೂಪದ ದಾಳಿಯಿಟ್ಟಿರುವುದರ ಉದ್ದೇಶವಾದರೂ ಇದೇ ಆಗಿರಬಹುದು ! ಬ್ರಾಹ್ಮಣ ಮಂತ್ರಿಯಿಂದಲೇ ಇತರರಿಗೆ ರಾಜ್ಯಪಾಲನಾಧಿಕಾರವಿರುವುದೆಂಬುದು ನಿಜವಾಗಿದ್ದರೆ ಪ್ರಪಂಚದ ಮೇಲಿರುವ ತುರುಷ್ಕ ಕ್ರೈಸ್ತ ಬೌದ್ಧಾದಿ ಮತಗಳ ನಾನಾ ರಾಜ್ಯಗಳಲ್ಲಿ ಮಂತ್ರಿತ್ವ ಮಾಡಿಕೊಂಡು ಲೋಕೋತ್ತರಸಂಪತ್ಕೀರ್ತಿಗಳನ್ನು ಹೊಂದಿರುವವರೆಲ್ಲಾ ಈ ಲೇಖಕರ ಅಪ್ಪಂದಿರೋ ತಾತಮುತ್ತಾತಂದಿರೋ ಆಗಿರಬೇಕು.

ಮೈಸೂರು ಕೋಟೆಯಲ್ಲಿದ್ದ ಒಬ್ಬ ಅರಸರಿಗೆ ೧೦-೨೦ ಗ್ರಾಮಗಳು ಇನಾಮತಿಯಾಗಿ ಬಂದಿರುವುವು. ಆ ಮನೆಯರಸಿನವರು ಕೇವಲ

ಹುಡುಕ್ರಿಯರು. ಮನೆ ಹೊಸಲನ್ನು ಬಿಟ್ಟು ಹೊರಕ್ಕೆ ವರ್ಷಕ್ಕೊಂದೆರಡು ಸಲ ಹೋಗುತ್ತಿದ್ದುದೂ ಅಪೂರ್ವವೇ ಎಂದು ಹೇಳಬಹುದು. ಊರನ್ನು ಬಿಟ್ಟು ಹೊರಕ್ಕೆ ಹೋದದ್ದನ್ನಂತೂ ಕಂಡವರೇ ಇಲ್ಲ. ಇಂಥ ಅರಸಿನವರಿಗೆ ಸತ್ಯವಾದಿಯ ಬಿರಕೆಯ ಲೇಖಕರಂಥ ಮಾಯಾವಿ ಭಟ್ಟನೊಬ್ಬನು ದೊರೆತು ಅರಸಿನವರ ಗ್ರಾಮಾಂತರಗಳ ಏಜಂಟಾಗಿದ್ದನು. ಅವನೂ ಅವನ ಕಡೆಯ ವಕೀಲರೂ ಅರಸಿನವರ ಬಳಿಗೆ ಹೋದಾಗಲೆಲ್ಲಾ ಅವರನ್ನು ಇಂದ್ರಚಂದ್ರನೆಂದು ಹೊಗಳಬಿಟ್ಟು - ನಿಮ್ಮ ಗ್ರಾಮಗಳಿಗೆ ನಿಮ್ಮ ಹಿರಿಯರಾರೋ ಒಂದುಸಲ ಹೋಗಿರಲು ಮಹಾಲತ್ತೆ ಬಡಿದುಬಿಟ್ಟಿತು. ಆಗಿನಿಂದ ಯಾರೂ ಅವುಗಳ ಕಡೆಗೆ ಮುಖವನ್ನೇ ತೋರಿಸಿಲ್ಲ. ಸಾದಸೇವಕರು ನಾವಿರುವಾಗ ತಮಗೆ ಅದರ ಕಷ್ಟವೇಕೆ? ಎಂದು ಹೇಳಿ ಬೆದರಿಸಿಬಿಟ್ಟು, ಗ್ರಾಮಗಳ ಕಡೆ ಅರಸರು ಕಣ್ಣೆತ್ತಿಯೂ ನೋಡದಂತೆ ಮಾಡಿ ಕುಳ್ಳಿರಿಸಿ ಬಿಟ್ಟಿದ್ದರು. ಹೀಗೆಯೇ ಬಹುಕಾಲ ಕಳೆದುಹೋಯಿತು. ಏಜಂಟನೂ ಅವನ ಕಡೆಯವರೂ ಸಂಪತ್ಸಮೃದ್ಧರಾದರು. ಈಚೆಗೆ ಅರಸಿನವರ ಮಕ್ಕಳುಗಳು ತಲೆಯೆತ್ತಿಕೊಂಡರು. ಇವರು ಹಿಂದಣಕಾಲದ ಅರಸರುಗಳಲ್ಲ. ಪುಗಸಟ್ಟೆ ಪುರಾಣಗಳ ಬೇಳೆಯು ಇವರುಗಳ ಮುಂದೆ ಬೆಯ್ಯದು. ಸ್ವತಃ ಗ್ರಾಮಗಳಿಗೆ ಹೋಗಿ ನೋಡಿದರು. ರೈತರಿಂದ ವಿದ್ಯಮಾನವನ್ನೆಲ್ಲಾ ತಿಳಿದರು. ಏಜಂಟನು ಮಾಡಿದ ದ್ರೋಹಗಳೆಲ್ಲಾ ಬಟ್ಟಬಯಲಾದುವು. ಅಷ್ಟರಲ್ಲಿ ಅವನೂ ಪಾಪಭಾರವನ್ನು ಹೊರಲಾರದೆ ಭೂಗತವಾಗಿ ಹೋಗಿದ್ದನು. ಅವನ ಕಾಲದಲ್ಲಿ ಅರಸಿನವರಿಗೆ ಅಷ್ಟು ಗ್ರಾಮಗಳಿಂದಲೂ ಬರುತ್ತಿದ್ದ ೮-೯ ಸಾವಿರ ರೂ.ಗಳು ಈಗ ಮಕ್ಕಳ ಕಾಲಕ್ಕೆ ೨೨ ಸಾವಿರ ರೂ.ಗಳಾಗಿರುತ್ತವೆ.

ಸತ್ಯವಾದಿಯ ಸಂಕರ ಲೇಖಕರೂ ಅದೇ ತೆರದ ಕೈಯನ್ನು ಸರ್ ಕಾಂತರಾಜೇ ಅರಸಿನವರಿಗೆ ತೋರಿಸಿದ್ದಾರೆ. ಇವರು ದಿವಾನಗಿರಿಯನ್ನು ಬೇಗನೆ ಬಿಟ್ಟರೆ ತಮ್ಮವರಾರಾದರೂ ಆಕ್ರಮಿಸಬಹುದೆಂಬ ದುರಾಲೋಚನೆಯೇ ಇದಕ್ಕೆ ಕಾರಣ. ಸರ್ ಅರಸಿನವರ ವಿಷಯದಲ್ಲಿರುವ ಇವರ ಮನೋಭಾವವು ಮಹಾರಾಜರ ರಾಜ್ಯಪರಿಪಾಲನೆಯ ವಿಷಯದಲ್ಲೂ ಇಲ್ಲವೆಂದು ಹೇಳುವುದು ಹೇಗೆ? ಆದರೆ ಮನಸ್ಸಿನಲ್ಲಿರುವುದನ್ನು ಬಾಯಲ್ಲಿ ಆಡಲಾರರು. ಅಷ್ಟೇ. ಸರರು ಹಾಳಾದರೆ ಅಥವಾ ಮೂಲೆಮುಟ್ಟಾದರೆ ನಾವು ಬದುಕಬಹುದೆಂಬ ತತ್ವವೇ ಇವರದು. ಅವರ ಕೈಯನ್ನು ಅವರು ತೋರಿಸಲಿ. ಹಾಗೆ ಪದೇಪದೇ ಕೈ ತೋರಿಸಿದರೆ ತಾನೇ ವೈದ್ಯನಿಗೆ ನಾಡೀಗುಣವು ಗೊತ್ತಾಗುವುದು. ಆ ನಾಡೀ ಪರಿಶೋಧನೆಯಿಂದಲೇ ತಾನೇ ಪ್ರಕೃತಿಯೂ ರೋಗಮೂಲವೂ ವ್ಯಕ್ತವಾಗುವುದು. ಇದೆಲ್ಲಾ ಆದಮೇಲೆಯೇ ತಕ್ಕ ಚಿಕಿತ್ಸೆ.

ರಾಜಭಕ್ತ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಆಯವ್ಯಯದ ಪಟ್ಟಿಯ ಮೇಲಣ ಚರ್ಚೆ.

ಕಳೆದವಾರದ ಶೇಷ.

ಮೆಂಬರು—ಧಾನ್ಯದ ಕಂಟ್ರೋಲನ್ನು ತೆಗೆದುಬಿಡಬೇಕು. ಸಿರಿಕಲ್ಚರಿನಿಂದ ಪ್ರಯೋಜನವುಂಟು. ರೋಗವಿಲ್ಲದ ಬೀಜಗಳನ್ನು ಆ ಜಾಪಿಯವರಿಂದ ತಂದು ಇಟ್ಟರೆ ಬೆಳೆ ಕೆಡುವುದೇ ಇಲ್ಲ. ಇದು ಲಾಭಕರವಾದ ಕೈಗಾರಿಕೆ. ಎಕರೆ ೧ಕ್ಕೆ ಖರ್ಚು ಕಳೆದು ೫೦೦ ರೂ. ಗಳ ಉತ್ಪತ್ತಿ ಆಗುತ್ತದೆ. ಮನೆ ಜನರಿಗೆಲ್ಲಾ ಕೆಲಸ ಸಿಕ್ಕುತ್ತದೆ. ಕ್ಯಾಸರೀನ್ ಬೆಳಸಿನಿಂದ ಸುತ್ತಣ ಭೂಮಿಯ ಜಲವನ್ನೆಲ್ಲಾ ಅದು ಆಕರ್ಷಿಸಿಬಿಡುವುದಲ್ಲದೆ ಸುತ್ತುಮುತ್ತಣ ಮೋಡವನ್ನು ಆಕರ್ಷಿಸುವ ಶಕ್ತಿಯು ಕೂಡ ಅದಕ್ಕಿರುವುದಿಲ್ಲ. ಆದುಕಾರಣ ಈ ಗಿಡದ ಬೆಳಸು ನೀರಿಗೆ ದುರ್ಭಿಕ್ಷವನ್ನು ಮಾಡುತ್ತದೆ. ಇದು ಕಡಿಮೆ ಆಗಬೇಕು. ಮಾಲೂರಿಗೆ ಹೊಸ ಸ್ಕೂಲು ಕಟ್ಟಡವಾಗಬೇಕು. ಪೊಲೀಸ್ ಕುಮ್ಮಕ್ಕನ್ನು ಹೆಚ್ಚಿಸಬೇಕು. ೧೧ ಮಂದಿ ಪೊಲೀಸರು ಮಾತ್ರ ಇದ್ದಾರೆ. ನಮ್ಮ ತಾ|| ಅಮಲ್ದಾರರ ಮನೆಯಲ್ಲೇ ೨ ಸಾವಿರ ರೂ. ಕಳವಾಯಿತು.

ಮ|| ಪಟೇಲ್ ಚೆನ್ನಪ್ಪನವರು—ಎಡತೊರೆ ಹೊಸಪುರವನ್ನು ಕಟ್ಟಲು ಬಡ್ಜೆಟ್ಟಿನಲ್ಲಿ ಅಲಾಟ್‍ಮೆಂಟಾಗಿಲ್ಲ. ಸಾಗರಕಟ್ಟೆಯ ತೂಬನ್ನು ೮೦ ಅಡಿಗೆ ಹೆಚ್ಚಿಸಿದರೆ ಎಡತೊರೆ ಊರು ಮುಳುಗಡೆಗೆ ಬರುತ್ತದೆ. ಹೊಸನಿವೇಶನಕ್ಕೆ ರಸ್ತೆ ಬಾವಿ ಮುಂತಾದುವನ್ನು ಅನುಕೂಲಪಡಿಸಿಲ್ಲ.

ಸರ್ಕಾರಿ ಉತ್ತರ—ವಿಚಾರ ಮಾಡುತ್ತೇವೆ.

ಮೆಂಬರು—ಚಾಮರಾಜ ನಾಲೆಯ ಕೆಳಗೆ ೪ ವರ್ಷಗಳಿಂದ ಕುಷ್ಕಿಪಸಲನ್ನು ಮಾಡಿಕೊಂಡಿದ್ದರೂ ಅನಕ್ಕೆ ಕಂಟ್ರಿಬ್ಯೂಷನ್ನನ್ನು ಕೊಡಬೇಕೆಂದು ಈ ಜೂನ್ ತಿಂಗಳಿಂದ ಸಖತ್ ತಗಾದೆ ಮಾಡುತ್ತಿದ್ದಾರೆ. ಸಣ್ಣ ಸಣ್ಣ ನಾಲೆಗಳ ಕೆಲಸವನ್ನು ಇನ್ನೂ ಮುಗಿಸಿಯೇ ಇಲ್ಲ. ಈ ಮಧ್ಯಕಾಲದಲ್ಲಿ ಕಂಟ್ರಿಬ್ಯೂಷನ್ ತಗಾದೆ ಮಾಡುತ್ತಿರುವುದರಿಂದ ರೈತರಿಗೆ ಬಹಳ ಹಿಂಸೆಯಾಗಿದೆ. ಸುಗ್ಗಿ ಕಾಲವೂ ಅಲ್ಲ. ಆದಕಾರಣ ಸದ್ಯ ತಗಾದೆಯನ್ನು ತಪ್ಪಿಸಿಕೊಡಬೇಕು.

ಸರ್ಕಾರಿ ಉತ್ತರ—ನೀರು ಬರದೆ ಇದ್ದ ಭೂಮಿಗೆ ಕಂಟ್ರಿಬ್ಯೂಷನ್ ಕೊಡಬೇಕಾದುದೇ ಇಲ್ಲ. ಸದ್ಯಃ ಸಖತ್ ತಗಾದೆ ಮಾಡದಂತೆ ಆರ್ಡರು ಕೊಡುತ್ತೇವೆ.

ಮೆಂಬರು—ಗ್ರಾಮಾಂತರದವರಿಗೆ ವಿದ್ಯೆಯ ಸೆಸ್ಸನ್ನು ಹಾಕಬೇಕೆಂದಿರುತ್ತೀರಿ. ಅವರುಗಳಿಗೆ ತಕ್ಕಷ್ಟು ಸ್ಕೂಲುಗಳನ್ನೇರ್ಪಡಿಸಿಕೊಟ್ಟು ಅದನ್ನು ವಿಧಿಸಬಹುದು. ಕನ್ನಂಬಾಡಿ ಕಟ್ಟೆಯಿಂದ ಮುಳುಗಡೆಗೆ ಬಂದ ಗ್ರಾಮಗಳ ಪಟೇಲರಿಗೆ ಪೋಟಿ ಹೋದ ಸಬಬು ಬೇರೆ ಪರಿಹಾರವನ್ನು ಕೊಡಿಸಬೇಕು.

ಸರ್ಕಾರಿ ಉತ್ತರ.—ವಿಚಾರ ಮಾಡುತ್ತೇವೆ.

ಮ|| ಹುಚ್ಚವೀರೇಗೌಡರು—ಅಗ್ರಿಕಲ್ಚರಲ್ ಇಲಾಖೆಯ ಖರ್ಚು ಕಳೆದ ವರ್ಷಕ್ಕಿಂತ ಈ ವರ್ಷದ ಬಡ್ಜೆಟ್ಟಿನಲ್ಲಿ ಹೆಚ್ಚಾಗಿದೆ. ಕಾರಣವೇನೋ ತಿಳಿಯಲಿಲ್ಲ. ಇರಿಗೇಷನ್ ಬಾಬಿಗೆ ಬಹಳ ಖರ್ಚಾಗುತ್ತಿದೆ. ಅದರಿಂದ ೩ ಕಾಸೂ ಪ್ರಯೋಜನವಿಲ್ಲ.

ಮ|| ಅಂಜನೇಯಶೆಟ್ಟರು—ಮುಳಬಾಗಲು ಟೌನ್ನಿನಲ್ಲಿ ಹೊಸ ಸ್ಕೂಲು ಕಟ್ಟಡವಾಗಬೇಕು. ಬಾಡಿಗೆಮನೆಯಲ್ಲಿ ಮಾಡುತ್ತಿದ್ದಾರೆ. ಕಟ್ಟಡವಾಗುವವರೆಗೂ ಛತ್ರವನ್ನು ಬಾಡಿಗೆಗೆ ತೆಗೆದುಕೊಂಡರೆ ಅನುಕೂಲ. ಅಲ್ಲಿಗೆ ಟವುನ್ ಪೊಲೀಸ್ ಏರ್ಪಾಡಾಗಬೇಕು.

ಮ|| ಗುಬ್ಬಯ್ಯನವರು—ಪಟ್ಟಣಗಳ ನೀರಿನ ಅಭಿವೃದ್ಧಿಗಾಗಿಯೆಂದು ಬಡ್ಜೆಟ್ಟಿನಲ್ಲಿ ೫೦ ಸಾವಿರ ರೂ. ಗಳನ್ನು ಕೊಟ್ಟಿರುತ್ತೀರಿ. ಅದರಲ್ಲಿ ಸಣ್ಣ ಮ್ಯುನಿಸಿಪಾಲಿಟಿಗಳಿಗೂ ಕೆಲಭಾಗವನ್ನು ವಿನಿಯೋಗಿಸುವಿರಾ?

ಸರ್ಕಾರದ ಉತ್ತರ—ಈಗ ಕೆಲಸ ನಡೆಯುತ್ತಿರುವ ನೀರಿನ ಅಭಿವೃದ್ಧಿ ಕೆಲಸಗಳಿಗೆ ಮಾತ್ರ ಇದನ್ನು ವಿನಿಯೋಗಿಸುತ್ತಾರೆ. ನೀವು ಕೇಳುವ ಸಣ್ಣ ಮ್ಯುನಿಸಿಪಾಲಿಟಿಗಳ ನೀರಿನ ಕೆಲಸಕ್ಕೆ ಏನೂ ಏರ್ಪಡಿಸಿಲ್ಲ.

ಮೆಂಬರು—ವೀರಶೈವರ ಸಂಸ್ಕೃತ ವಿದ್ಯಾಭ್ಯಾಸ ಸಂಬಂಧವಾಗಿ ಕಮಿಟಿಯನ್ನೇರ್ಪಡಿಸಿ ವಿಚಾರ ಮಾಡುವುದಾಗಿ ಅಪ್ಪಣೆಯಾಗಿತ್ತು. ಅದೇನಾಯಿತು?

ಸರ್ಕಾರದ ಉತ್ತರ—ಅದು ಏರ್ಪಾಟಾಗಿದೆ. ವಿಚಾರ ನಡೆಯುತಿ ತಿಳಿಯಿಸುತಾರೆ.

ಮ|| ಕೆ. ನಾರಾಯಣಶೆಟ್ಟರು—ಹರಿಹರದ ದೇವಸ್ಥಾನಕ್ಕೆ ೧೯ ಸಾವಿರ ರೂ. ಸಾಲಿಯಾನಾ ಖರ್ಚಾಗುತ್ತಿದೆ. ಅದು ಸದ್ವಿನಿಯೋಗವಾಗುತ್ತದೆಯೆ ಇಲ್ಲವೆ ಎಂಬುದನ್ನು ವಿಚಾರ ಮಾಡಿಸಬೇಕು.

ಮ|| ತರುವುಲೆಗೌಡರು—ಹಿರೀಸಾವೆಯಿಂದ ನೊಣವಿನಕೆರೆ ಮೇಲೆ ತಿಪಟೂರಿಗೆ ಗಾಡಿರಸ್ತೆಯನ್ನು ಹಾಕಿಸಲು ಏರ್ಪಾಟಾಗಬೇಕು.

ಸರ್ಕಾರಿ ಉತ್ತರ—ಡಿ|| ಬೋರ್ಡಿನಲ್ಲಿ ಹಣವಿಲ್ಲ.

ಮ|| ಮರುಳಸಿದ್ದಪ್ಪನವರು—ಕೆಂಗಟ್ಟೆ ಮೈನರ್‍ಕೆರೆ ಕಾಮಗಾರಿಗೆ ೫೦೦ ರೂ. ಕಂಟ್ರಿಬ್ಯೂಷನ್ ಕೊಟ್ಟು ೩ ವರ್ಷಗಳಾದುವು. ಇನ್ನೂ ಕೆಲಸಕ್ಕೆ ಆರಂಭಮಾಡಿಸಿಲ್ಲ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

42 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಆದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಫ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

42 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512 ಪಾರ್ಕ್‌ಟೌನ್ ಮದರಾಸು.

ರಕ್ತಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 40

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೈಧೆಪಡತಕ್ಕ ಸ್ತ್ರೀಪುರುಷರಿರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ದಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ ನೆಯ ಇಸವಿ ಜುಲೈ ತಾ|| ೧೭ ರಿಂದ ೧೯೨೧ ನೆಯ ಜುಲೈ ತಾ|| ೨೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಆಷಾಢ ಶುದ್ಧ ತ್ರಯೋದಶಿಯಿಂದ ಆಷಾಢ ಬಹುಳ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
17	ಭಾನು	ತ್ರಯೋ	46-38	ಜ್ಯೇಷ್ಠ	10-42	2
18	ಸೋಮ	ಚತು	49-54	ಮೂಲ	14-58	3
19	ಮಂಗಳ	ಪೌರ್ಣ	54-7	ಪೂಷಾ	20-13	4
20	ಬುಧ	ಪಾಡ್ಯ	59-5	ಉಷಾ	26-9	5
21	ಗುರು	ಬಿದಿ	60	ಶ್ರವ	32-49	6
22	ಶುಕ್ರ	ಬಿದಿ	4-23	ಧನಿ	39-23	7
23	ಶನಿ	ತದಿ	9-15	ಶತ	45-35	8

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಮಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸ ೧೯೨೧ ನೇಯ ಇಸವಿ ಜುಲೈ ತಾರೀಖು ೨೪ ನೇಯ ಭಾನುವಾರ (ಸಂಚಿಕೆ ೨೯

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ,

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
28 ಮೈಸೂರು.

ವಜ್ರದ ಬೆಂಡೋಲೆ.



ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮರ್ಲ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮರ್ಲ್ ಲೈಟ್ ಸೋಪ್, ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
43 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ:	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫೂ|| ಪ್ರ ೧ಕ್ಕೆ ಸಾ|| ರೂ. ೧—೪—೦. ಕಾ|| ಸಾ|| ಆಣೆ ೧೨.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫೂ||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

ಶ್ರೀ ಶಿವಯೋಗಿಸಂಘ :—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ :—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮ × ೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲುಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ :—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ಅರ್ಪಿಸಿ ಸುದರ್ಶನಚಕ್ರ ಪಡದ ಈ ಫೋಟೊ ಫುಲ್‍ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ :—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫೂ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ :—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫೂ|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಆಣೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ :—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫೂ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ :—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫೂ|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೋಗಳು ಕೈ|| ವಾ|| ರಾಜಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣ ತುಂಬಾರ ಕೋಟ್ಯಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಿಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪೂರು ಸಿದ್ಧರಾಮೇಶ್ವರ, ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ|| ಗು|| ಚಿತ್ರದುರ್ಗದ ಮಹಾಸ್ವಾಮಿ, ಅಥಣಿ ಶಿವಯೋಗಿಗಳು, ಹಾನಗಲ್ಲ ಸ್ವಾಮಿಗಳು, ಸೊಲ್ಲಾಪೂರದ ಪ್ರಸಿದ್ಧ ನಾಲತ್ತವಾಡದ ಶರಣರು, ಬಿಳೂರ ಸ್ವಾಮಿಗಳು, ಕಮತಗಿ ಹುಚ್ಚೀಂದ್ರಸ್ವಾಮಿಗಳು, ಸದ್ಭಕ್ತೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರ ಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ|| ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ|| ಬ|| ವಾರದ ಮಲ್ಲಪ್ಪನವರು, ಮುಂತಾದ ಫೋಟೋಗಳು ಸಿಗುತ್ತವೆ. ಕ್ರಯ ಫೂ|| ಸಾ|| ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

6 ವಿಳಾಸ—ಗಂಗಪ್ಪಾ ಜೇರಿಗೆ ಫೋಟೋ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ.	ರೂ. ವರೆಗೆ.
4	0.12-0	,	50-0-0
5	0- 8.0	..	100-0-0
6	0-12-0	,,	100-0-0
7	6. 0-0	,,	100-0-0
	ಬಿಡಿ ಮಣಿಗಳು 1ಕ್ಕೆ ಕ್ರಯ		
3	0- 6.0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8.0	,,	100-0-0
12	4- 0-0	,,	100-0-0
13	4- 8.0	,,	100-0-0
14	6- 0.0	,,	100-0-0

180. ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5-6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆಸಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
22 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ನರ್ಮ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 11

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಸಿ, ಉತ್ತರಕನಡಾ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜುಲೈ ತಾ|| ೨೪ ನೆಯ ಭಾನುವಾರ.

ಶ್ರೀಮಾನ್ ಸಿ. ರಾಮಲಿಂಗರಡ್ಡಿಯವರ ಸನ್ಮಾನ.

ಮ|| ರಡ್ಡಿಯವರು ತಮ್ಮ ಸರ್ಕಾರದುದ್ಯೋಗವನ್ನು ಕಳೆದ ತಾ|| ೯ರಲ್ಲಿ ಬಿಟ್ಟುಕೊಟ್ಟರು. ಅಂದಿನಿಂದಲೇ ಅವರಿಗೆ ಮೈಸೂರು ದೇಶದಲ್ಲಿ ಸನ್ಮಾನ ಸಮಾರಂಭಗಳು ನಡೆಯುವುದಕ್ಕೆ ಮೊದಲಾಯಿತು. ಅವರ ಕೈಕೆಳಗೆ ಕೆಲಸಮಾಡುತ್ತಿದ್ದ ಸಣ್ಣ ದೊಡ್ಡ ಉದ್ಯೋಗಿಗಳೆಲ್ಲಾ ಒಂದು ಸತ್ಕಾರ ಸಮಾರಂಭವನ್ನು ಆ ದಿವಸವೇ ನೆರವೇರಿಸಿದರು. ಬಳಿಕ ಅವರ ಮಿತ್ರರು ಕಲಾಶಾಲಾ ವಿದ್ಯಾರ್ಥಿಗಳು ಮೊದಲಾದವರೆಲ್ಲಾ ಸಂಚುರಿ ಕ್ಲಬ್ಬಿನಲ್ಲಿ ಔತಣವನ್ನು ಮಾಡಿಸಿದರು. ತಾ|| ೧೧ ರಲ್ಲಿ ಆದಿದ್ರಾವಿಡ ಸಂಘದವರು ಬೆಂಗಳೂರು ಗೌರ್ನಮೆಂಟ್ ಹೈಸ್ಕೂಲು ಭವನದಲ್ಲಿ ಒಂದು ವಿಜ್ಞಾಪನಪತ್ರ ಸಮರ್ಪಣಮೂಲಕ ಸನ್ಮಾನಿಸಿದರು. ತದನಂತರ ತಾ|| ೧೨ ರಲ್ಲಿ ಬೆಂಗಳೂರಿನ ಬಾಲಭಟ ಸಂಘದವರು ಸನ್ಮಾನಿಸಿ ವಿಜ್ಞಾಪನಪತ್ರವನ್ನರ್ಪಿಸಿದರು. ತಾ|| ೧೭ ರಲ್ಲಿ ಪ್ರಜಾಮಿತ್ರಮಂಡಲಿಯವರು ಮೈಸೂರು ದೇಶದ ಸಕಲ ಪ್ರಜೆಗಳಪಕ್ಷದಿಂದಲೂ ಬೆಂಗಳೂರು ಲಾಲಬಾಗಿನಲ್ಲಿ ಒಂದು ವಿಜ್ಞಾಪನ ಪತ್ರವನ್ನು ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಅರ್ಪಿಸಿ ಮಾಡಿದ ಸನ್ಮಾನಸಮಾರಂಭವು ಅಭೂತಪೂರ್ವವಾಗಿದ್ದಿತು. ತಾ|| ೨೦ ರಲ್ಲಿ ರಾಜಧಾನಿಯ ಪ್ರಜೆಗಳು ನಿಷದ್‌ಬಾಗಿನಲ್ಲಿ ನಡೆಯಿಸಿದ ಸತ್ಕಾರಸಮಾರಂಭವು ಶ್ಲಾಘನೀಯವಾಗಿದ್ದಿತು. ಅವರು ಬೆಂಗಳೂರಿಂದ ಮೈಸೂರಿಗೆ ಬರುವಾಗ್ಗೆ ಚೆನ್ನಪಟ್ಟಣದ ನಿಲ್ದಾಣದಲ್ಲಿ ಸಾವಿರಾರುಜನರು ಫಲಪುಷ್ಪಾದಿಗಳ ಸಮೇತ ಕಾದಿದ್ದು ಆದರದಿಂದ ಸನ್ಮಾನಿಸಿದರು. ತಾ|| ೨೧ ರಲ್ಲಿ ಶ್ರೀರಂಗಪಟ್ಟಣದ ತಾಲ್ಲೂಕು ಪ್ರಜೆಗಳೆಲ್ಲಾ ಅಲ್ಲಿಯ ದರಿಯಾದವಲತ್ ತೋಟದಲ್ಲಿ ನಡೆಯಿಸಿದ ಸನ್ಮಾನ ಸಮಾರಂಭವು ಆಹ್ಲಾದಕರವಾಗಿದ್ದಿತು. ಈ ಭಾನುವಾರ ತುಮಕೂರಿನ ಪ್ರಜೆಗಳು ಇದೇ ತೆರದ ಸನ್ಮಾನಮಹೋತ್ಸವವನ್ನು ನಡೆಯಿಸುವವರಾಗಿದ್ದಾರೆಂದು ಕೇಳಿದೆವು. ಮ|| ರಡ್ಡಿಯವರಿಗೆ ಅವಶ್ಯಕವಾಗಿ ಕೂಡಲೇ ಹೊರಡಬೇಕಾದ ಸಂದರ್ಭವಿಲ್ಲದೆ ಅವರು ಇನ್ನು ಕೆಲದಿನಗಳು ಈ ದೇಶದಲ್ಲಿ ನಿಲ್ಲುವವರಾಗಿದ್ದರೆ ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಇದೇರೀತಿಯ ಸತ್ಕಾರ ಸಮಾರಂಭಗಳ ಪರಂಪರೆಯು ಲೆಕ್ಕವಿಲ್ಲದಷ್ಟು ನಡೆಯುತ್ತಿದ್ದುವೆಂದು ಹೇಳುವುದು ಉತ್ಪ್ರೇಕ್ಷೆಯೇನೂ ಅಲ್ಲ.

ಇವೆಲ್ಲಾ ಏನನ್ನು ತೋರಿಸುತ್ತಿವೆ?—ಮ|| ರಡ್ಡಿಯವರ ವಿಷಯದಲ್ಲಿ ಮೈಸೂರು ಪ್ರಜೆಗಳ ನಿಜಮನೋಭಾವವು ಹೇಗಿರುವುದೆಂಬುದನ್ನು ವ್ಯಕ್ತಪಡಿಸಿರುತ್ತವೆ. ಪ್ರಜಾಮಿತ್ರಮಂಡಲಿಯವರು ದೇಶೀಯರೆಲ್ಲರಪಕ್ಷದಿಂದ ನಡೆಯಿಸಿದ ಸತ್ಕಾರಸಮಾರಂಭಕ್ಕೆ ೧೦ ಸಹಸ್ರ ಜನರು ಕೂಡಿದ್ದುದೂ, ಅದಕ್ಕೆ ದೇಶದ ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಸಹಾಯದ್ರವ್ಯವನ್ನು ಯಥೇಚ್ಛವಾಗಿ ಕಳುಹಿಸಿಕೊಟ್ಟಿದ್ದುದಲ್ಲದೆ ಮಲೆನಾಡಿನ ಮತ್ತು ಬಯಲುಸೀಮೆಯ ದೂರದೂರ ಪ್ರದೇಶಗಳಿಂದಲೂ ಸಹ ಪ್ರಜೆಗಳು ಸ್ವತಃ ಬಂದೂ ಬರಲನುಕೂಲವಾಗದಿದ್ದವರು ನೂರಾರು ಸಾನುಭೂತಿಯ ತಂತ್ರೀವಾರ್ತೆಗಳನ್ನೂ ಲೇಖನಗಳನ್ನೂ ಕಳುಹಿಸಿಕೊಟ್ಟು ತಮ್ಮ ವಿಶ್ವಾಸಾಭಿಮಾನಗಳನ್ನು ತೋರಿಸಿದುದೂ ಇವೆಲ್ಲಾ ಸಾಧಾರಣವೆ? ಮೈಸೂರು ದೇಶದ ಚರಿತ್ರೆಯಲ್ಲೇ ಇಂಥ ಕಾರ್ಯವು ಅಪೂರ್ವವೆಂದು ಹೇಳುವುದರಲ್ಲಿ ಸಂಶಯವಿಲ್ಲ. ಏಕೆಂದರೆ—ಅಧಿಕಾರಿಗಳು ದೊಡ್ಡ ಪದವಿಗೆ ಬಂದಾಗ್ಗೆ ಮುಂದೆ ಅವರಿಂದ ಪ್ರಜೆಗಳಿಗೆ ವಿಶಿಷ್ಟತರವಾದ ಹಿತಾಚಾರಣೆಯು ನಡೆದೀತೆಂಬ ನಿರೀಕ್ಷಣೆಯಿಂದ, ಅಥವಾ ತಮ್ಮ ಸನ್ಮಾನಸತ್ಕಾರದ ಆದರೋಪಚಾರಗಳಿಂದ ಅವರುಗಳು ಪ್ರಸನ್ನರಾಗಿ ಹಿತವನ್ನಾಚರಿಸಲೆಂಬ ಉದ್ದೇಶದಿಂದ, ಪ್ರಥಮದಲ್ಲಿ ಪ್ರಜಾ ಸನ್ಮಾನಸಮಾರಂಭಗಳು ನಡೆಯುವ ಪದ್ಧತಿಯು ಸರ್ವತ್ರ ಉಂಟು. ಅಧಿಕಾರದ ವಿಶ್ರಾಂತಿಯ ಕಾಲದಲ್ಲಿ ಅಂಥ ಸನ್ಮಾನಗಳಿಗೆ ಪಾತ್ರರಾಗುವ ಅಧಿಕಾರಿಗಳು ಮಾತ್ರ ಅತ್ಯಂತ ವಿರಳ. ಲಾರ್ಡ್ ಕರ್ಜನರಂಥ ದೊಡ್ಡದೊಡ್ಡ ವೈಸ್ರಾಯರುಗಳ ಪಾಡೇ ಹಾಗಾಗುತ್ತಿರುವಾಗ ಸಾಮಾನ್ಯರ ಪಾಡನ್ನು ಹೇಳುವುದೇನು? ಅಧಿಕಾರವೂ ಗರ್ಭಧಾರಣವೂ ಸಾಲಮಾಡುವಿಕೆಯೂ ಆರಂಭದಲ್ಲಿ ಸುಖವಾಗಿರುವುವೆಂದೂ, ಕಳೆದುಕೊಳ್ಳುವಾಗ ಪ್ರಾಣಸಂಕಟವನ್ನುಂಟುಮಾಡುವುವೆಂದೂ ಒಬ್ಬ ಕವಿಯು ಹೇಳಿರುತ್ತಾನೆ. ಅದು ಸುಳ್ಳಲ್ಲ. ಮನಸ್ಸಾಕ್ಷಿಗೆ ವಿರೋಧವಿಲ್ಲದಂತೆ ನಡೆಯುವ ಪ್ರಾಮಾಣಿಕನು ಕೂಡ ತನ್ನ ಅಧಿಕಾರ ನಿರ್ವಾಹಕಾಲದಲ್ಲಿ ಪ್ರಭುವಿನ ಮತ್ತು ಪ್ರಜೆಗಳ ಮೆಚ್ಚುಗೆಗೆರಡಕ್ಕೂ ಪಾತ್ರನಾಗುವಂತೆ ಕೆಲಸಮಾಡುವುದು ಬಹಳಕಷ್ಟ. ಪ್ರಭುಪ್ರಿಯನಾದವನು ಪ್ರಜಾವಕ್ರದೃಷ್ಟಿಗೂ, ಪ್ರಜಾಪ್ರಿಯನಾದವನು ಪ್ರಭುವಿನ ವಕ್ರದೃಷ್ಟಿಗೂ ಪಾತ್ರನಾಗಬೇಕಾಗಿ ಬರುವ ಸಂಭವವಿರುವುದೇ ಹೆಚ್ಚು. ಲೋಕದಲ್ಲಿ ಸ್ವಾರ್ಥಪ್ರಿಯತೆಯಿರುವುದೇ ವಿಶೇಷ. ಅದರ ಪರಾಕ್ರಮಕ್ಕೆ ಬಲಿಬಿದ್ದುಹೋದವರು ಪ್ರಭುಕೃಪಾದೃಷ್ಟಿಯನ್ನೇ ತಮ್ಮ ಪುರುಷಾರ್ಥವನ್ನಾಗಿ ತಿಳಿದಿರುವರು. ಅಂಥವರು ಪ್ರಜಾಕ್ಷೇಮವನ್ನು ವಿಶೇಷವಾಗಿ ಗಮನಿಸುವುದಿಲ್ಲ. ಅದುಕಾರಣ ಅವರುಗಳಿಗೆ ಅಧಿಕಾರಾಂತ್ಯದಲ್ಲಿ ಪ್ರಜಾಸನ್ಮಾನ ಪಾತ್ರತೆಯು ಶೂನ್ಯವಾಗುವುದೇ ಸಿದ್ಧವು. ಯಾವಾತನ ಲಕ್ಷ್ಯದಲ್ಲಿ ಈಶ್ವರನ ಮೆಚ್ಚುಗೆಯೇ ಮುಖ್ಯವಾಗಿದ್ದು, ಸ್ವಾರ್ಥಪರತೆಯು ತೃಣಕ್ಕಿಂತಲೂ ಹೀನವಾಗಿರುವುದೋ ಆತನಿಗೆ ಜಗದೀಶ್ವರನ ಪ್ರಸಾದವೇ ಸಿದ್ಧವಾಗುತ್ತಿರುವಾಗ ಮಾನುಷಮಾತ್ರನಾದ ಪ್ರಭುವಿನ ಮತ್ತು ಪ್ರಜಾಕೋಟಿಯ ಸನ್ಮಾನಗಳೆಲ್ಲಾ ತಮಗೆ ತಾವೇ ಸಿದ್ಧವಾಗಿ ಬರುವುದರಲ್ಲಾಶ್ಚರ್ಯವೇನು?

ಮೈಸೂರು ಸಂಸ್ಥಾನದಲ್ಲಿ ಹಿಂದೆ ಮಂತ್ರಿಪದವಿಯನ್ನು ಪಡೆದು ಹೋದವರುಗಳಿಗೂ ಕೂಡ ಈಗ ಮ|| ರಡ್ಡಿಯವರಿಗೆ ಅಧಿಕಾರ ವಿಶ್ರಾಂತಿಯ ಕಾಲದಲ್ಲಿ ನಡೆದಂಥ ಪ್ರಜಾಸನ್ಮಾನವು ನಡೆದುದಿಲ್ಲ. ನಾವು ಮೇಲೆ ಹೇಳಿದಂತೆ ಅಧಿಕಾರಾರಂಭಕಾಲದಲ್ಲಿ ಪ್ರಜಾಸನ್ಮಾನ ಸಮಾರಂಭಗಳಿಂದ ಸತ್ಕೃತರಾದವರಿಗೇನೂ ಕಡಿಮೆಯಿಲ್ಲ. ಮ|| ರಡ್ಡಿಯವರು ವಿದ್ಯಾಭ್ಯಾಸಶಾಖೆಯ ಅಧ್ಯಕ್ಷಪದವಿಯನ್ನೇರುವುದಕ್ಕೆ ಪೂರ್ವದಲ್ಲಿ ರಾಜಧಾನಿಯೊಳಗೆ ಮಹಾವಿಜೃಂಭಣೆಯಿಂದ ಪ್ರಜೆಗಳ ಸನ್ಮಾನ ಸಮಾರಂಭವೊಂದು ಅವರಿಗಾಗಿ ನಡೆದಿದ್ದಿತು. ಅದು ಸರ್ವಸಾಮಾನ್ಯವಾದುದು. ಇತರ ಅನೇಕಾಧಿಕಾರಿಗಳಂತೆ ಇವರೂ ತಮ್ಮ ದುಡ್ಡಿನ ಚೀಲವೊಂದನ್ನು ಭರ್ತಿಮಾಡುವುದನ್ನೇ ಮುಖ್ಯಲಕ್ಷ್ಯವನ್ನಾಗಿಟ್ಟುಕೊಂಡು ಪ್ರಜೆಗಳ ಹಿತವನ್ನು ದುರ್ಲಕ್ಷಿಸಿದ್ದರೆ ಅನಿತರ ದುರ್ಲಭವಾಗಿ ಚಿರಸ್ಮರಣೀಯವಾಗಿರುವಂತೆ ಈಗ ನಡೆದ ಅಮೌಲ್ಯವಾದ ಪ್ರಜಾಸನ್ಮಾನರೂಪ ಮಹಾಭಾಗ್ಯವು ಇವರಿಗೆ ಸ್ವಪ್ನದಲ್ಲೂ ದೊರೆಯುತ್ತಿರಲಿಲ್ಲ. ಇವರು ನಿಷ್ಕಪಟವಾಗಿ ಪ್ರಜಾಸೇವೆಯನ್ನು ಮಾಡಿದರು. ಅದಕ್ಕೆ ತಕ್ಕ ಫಲವು ಇವರಿಗೆ ಸಿದ್ಧಿಸಿತು. ಬೇವಿನ ಬೀಜವನ್ನು ಬಿತ್ತಿ ಮಾವಿನ ಹಣ್ಣನ್ನು ತಿನ್ನಬೇಕೆಂದು ಬಯಸಿದರೆ ಸಿದ್ಧಿಸುವುದೆ? ೫೦ ವರ್ಷದಿಂದ ದೇಶಸೇವೆ ಮಾಡಿದುದಕ್ಕೆ ತಿನ್ನುವುದಕ್ಕೆ ಗತಿಯಿಲ್ಲದವಸ್ಥೆ ಬಂದಿತೆಂದು ಗೋಳಾಡುತ್ತಿರುವವರನ್ನು ನಾವೇ ನೋಡುತ್ತಿದ್ದೇವೆ. ಅವರು ಮಾಡಿದ ದೇಶಸೇವೆಯು ನಿಷ್ಕಪಟವಾಗಿದ್ದರೆ ಅವರಿಗೆ ಅಂಥ ದುರ್ಗತಿಯು ಸಂಭವಿಸುತ್ತಲೇ ಇರಲಿಲ್ಲ. ಮಾಡಿದುದಕ್ಕೆ ಮನವೇ ಸಾಕ್ಷಿ; ತೋಡಿದುದಕ್ಕೆ ಜಲವೇ ಸಾಕ್ಷಿ. ಸರ್ಕಾರದಧಿಕಾರದಲ್ಲೇ ಇರಲಿ ಇಲ್ಲದೆಯೇ ಇರಲಿ; ಲೋಕಸೇವೆಯೇ ಜಗದೀಶ್ವರನ ಸೇವೆಯೆಂದು ನಿಷ್ಕಪಟ ನಿಷ್ಪಕ್ಷಪಾತಭಾವದಿಂದ ಆಚರಿಸತಕ್ಕವರಿಗೆ ಯಾವುದು ತಾನೇ ದುರ್ಲಭವಾಗಿದ್ದೀತು? ಅದಕ್ಕೆ ಮ|| ರಡ್ಡಿಯವರನ್ನೇ ಪ್ರಕೃತದಲ್ಲಿ ಉದಾಹರಣೆಯನ್ನಾಗಿ ಹೇಳಬಹುದು. ಹೇಗೆ ಆಚರಿಸುವುದರಿಂದ ತಮಗೂ ತಮ್ಮ ಅಧಿಕಾರಕ್ಕೂ ಧನ್ಯತೆಯನ್ನು ಉಂಟುಮಾಡಿಕೊಳ್ಳಬಹುದೆಂಬುದನ್ನು ಮ|| ರಡ್ಡಿಯವರ ದೇಶಸೇವಾರೂಪಾದರ್ಶವನ್ನು ನೋಡಿ ನಮ್ಮ ದೇಶದ ಅಧಿಕಾರಿಗಳನೇಕರು ತಿಳಿದುಕೊಂಡರೆ ಕೃತಕೃತ್ಯರಾಗಬಹುದು.

ದೇಶಕ್ಕೆ ದೇಶವೇ ಮ|| ರಡ್ಡಿಯವರ ಪ್ರಶಂಸೆಯನ್ನು ಮಾಡಿ ತಮ್ಮ ಕೃತಜ್ಞತಾ ಬದ್ಧತೆಯನ್ನು ವ್ಯಕ್ತಪಡಿಸುತ್ತಿರುವಾಗ ನಾವು ಇಲ್ಲಿ ಅವರ ಯೋಗ್ಯತಾವಿಶೇಷಗಳನ್ನು ವಿವರಿಸಬೇಕಾದುದೇನೂ ಇಲ್ಲ. ಇದುವರೆಗೆ ಮೈಸೂರು ವಿದ್ಯಾಶಾಖಾಧ್ಯಕ್ಷತೆಯನ್ನು ಎಷ್ಟೋ ಮಂದಿ ಅಲಂಕರಿಸಿದ್ದರು; ಮುಂದೆಯೂ ಎಷ್ಟೋ ಜನರು ಅಲಂಕರಿಸುವರು. ಈ ಆವಾಹನೆ ವಿಸರ್ಜನೆಗಳಿಗೇನೂ ಕಡಿಮೆಯಿಲ್ಲ. ಆದರೆ ಅಭೂತಪೂರ್ವವೂ ಶಾಶ್ವತಫಲಪ್ರದವೂ ಆದ ವಿದ್ಯಾಪ್ರಸಾರಕ್ರಮವನ್ನು ಈ ದೇಶದಲ್ಲಿ ಸ್ಥಾಪಿಸಿಕೊಟ್ಟುದರ ಮೂಲಕ ರಡ್ಡಿಯವರು ನಮ್ಮಲ್ಲಿ ಶಾಶ್ವತವಾಗಿರುವರು. ಅದಕ್ಕಾಗಿ ನಾವು ಅವರಿಗೆ ಧನ್ಯವಾದವನ್ನು ಮಾಡುವೆವು. ಮತ್ತು ಗುಣಕ್ಕೆ ತನುವನ್ನಾದರೂ ಸೂರೆಕೊಡುವುದರಲ್ಲಿ ನಿಸ್ಸೀಮರೆಂಬುದನ್ನು ಮ|| ರಡ್ಡಿಯವರ ಸನ್ಮಾನಸಮಾರಂಭಗಳ ಮೂಲಕ ನಿದರ್ಶನಪಡಿಸಿದ ಮೈಸೂರು ದೇಶದ ಪ್ರಜೆಗಳನ್ನಾದರೂ ಈ ಸಂದರ್ಭದಲ್ಲಿ ಅಭಿನಂದಿಸಿ ನಮ್ಮ ಲೇಖನಿಗೆ ವಿರಾಮವನ್ನೀಯುವೆವು.

ಮ|| ಸಿ. ರಾಮಲಿಂಗರಡ್ಡಿ ಎಂ. ಎ. ಯವರಿಗೆ ಮೈಸೂರು ಪುರಜನರ ಸತ್ಕಾರ.

ರಾಜಧಾನಿಯ ನಿವಾಸಿಗಳು ಕಳೆದ ತಾ|| ೨೦ನೆ ಸಾಯಂಕಾಲ ಆಹ್ಲಾದಕರವಾಗಿ ಈ ಸತ್ಕಾರ ಸಮಾರಂಭವನ್ನು ನೆರವೇರಿಸಿದರು. ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಸ್ಥಳವು ಸಾಲದೆಂಬ ಕಾರಣದಿಂದ ನಿಷದ್‌ಬಾಗಿನಲ್ಲಿ ಇದನ್ನೇರ್ಪಡಿಸಿದರು. ಇದು ಮಳೆಗಾಲವಾಗಿದ್ದು ತಾ|| ೧೮-೧೯ ರಲ್ಲೂ ಮತ್ತು ತಾ|| ೨೧ ರಲ್ಲೂ ಮಧ್ಯಾಹ್ನಾತ್ಪರವೇ ವಿಶೇಷವಾಗಿ ಮಳೆ ಸುರಿದು ೨೦ನೆ ತಾರೀಖಿನ ದಿವಸ ನಿರ್ಮಲಾಕಾಶವಾಗಿದ್ದುದರಿಂದ ಈ ಸತ್ಕಾರ್ಯಕ್ಕೆ ದೈವಸಹಾಯವೂ ಉಂಟಾಯಿತೆಂದು ಭಾವಿಸಿ ಪ್ರಜೆಗಳು ಬಹಳ ಹರ್ಷದಿಂದ ಈ ಕಾರ್ಯವನ್ನು ನೆರವೇರಿಸಿದರು. ಸ್ವಭಾವರಮಣೀಯತೆಯಿಂದ ಕೂಡಿರುವ ನಿಷದ್‌ಬಾಗು ಧ್ವಜಪತಾಕವಾದ್ಯ ವೈಭವಗಳಿಂದ ಮತ್ತಷ್ಟು ಶೋಭಾಯಮಾನವಾಗಿದ್ದಿತು. ಲೋಕಹಿತೈಷಿ ಮ|| ನಂಜುಂಡರಾಜೇ ಅರಸಿನವರು, ದರ್ಬಾರ್ ಭಕ್ಷಿ ಮ|| ಲಿಂಗರಾಜ ಅರಸಿನವರು ಜಿಲ್ಲೋಕಚೇರಿ ಭಕ್ಷಿ ಮ|| ಎ. ವಿ. ಸುಬ್ರಹ್ಮಣ್ಯರಾಜೇ ಅರಸಿನವರು, ಬಿಡದಿಭಕ್ಷಿ ಮ|| ಮುದ್ದುರಾಜೇಅರಸಿನವರು, ಅಮಲ್ದಾರ್ ಮಲ್ಲರಾಜೇಅರಸಿನವರು, ಸಿದ್ಧರಾಜೇಅರಸಿನವರು, ಎ. ಸಿ. ಲಿಂಗರಾಜೇ ಅರಸಿನವರು ಮೊದಲಾದ ಅನೇಕ ಅರಸು ಮಂಡಲಿಯವರೂ ಕಾಲೇಜ್ ಪ್ರಿನ್ಸ್‌ಪಾಲ್ ಮ|| ಎನ್. ಎಸ್. ಸುಬ್ಬಾರಾವ್, ಪ್ರೊಫೆಸರುಗಳಾದ ಮಿ|| ಮೆಕೆಂಟಾಷ್ ಮಿ|| ವಾಡಿಯಾ, ಮಿ|| ರೋಲೊ ಮೊದಲಾದವರೂ ಮಿ|| ಟಿ. ತಂಬೂಚೆಟ್ಟಿಯವರು, ಮ್ಯು|| ಚೀಫ್‌ಆಫೀಸರ್ ಮಿ|| ಮಹಮ್ಮದ್‌ಪೀರ್ ರವರು, ಡಾ|| ಮಹಮ್ಮದ್ ಉಸ್ಮಾನ್‌ರವರು, ಬಿ. ಸೀತಾರಾಮಾಚಾರ್ಯರು, ಮಿ|| ಗೋಪಾಲರಾವ್ ರವರು, ೨ ನೆ ಮುನ್ಸೀಫ್ ಮ|| ಸಿಂಗಾರವೇಲು ಮೊದಲಿಯಾರರು, ಲೋಕಸೇವಾನಿರತ ಮ|| ಅಣ್ಣಯ್ಯಪಂಡಿತರು, ಧರ್ಮಪ್ರಕಾಶ ಡಿ. ಬನುಮಯ್ಯನವರು, ಸಾ|| ಅನಂತರಾಜಯ್ಯನವರು, ಮಿ|| ಮಹಮ್ಮದ್‌ಸೇಟರು, ಮಿ|| ಮಾದಪ್ಪನವರು, ಮ|| ಧನಕೋಟಿಶೆಟ್ಟರು ಮೊದಲಾದ ಮ್ಯುನ್ಸಿಪಲ್ ಕೌನ್ಸಿಲರುಗಳೂ, ರಾಜಕಾರ್ಯಪ್ರಸಕ್ತ ಮ|| ಬಿ. ರಾಮಕೃಷ್ಣರಾಯರು, ಮ|| ಬಿ. ಬಸವಾರಾಧ್ಯರು ಮಿ|| ಖಾನ್‌ತನಾಲುದೀನ್ ಅಲ್ಲೀಖಾನ್, ಮಿ|| ಮಹಮದ್‌ಜಾಫರ್‌ಸಾಬ್ ಮೊದಲಾದ ಪೆನ್‌ಷನ್ಡ್ ಆಫೀಸರುಗಳೂ, ಅನೇಕ ಮಂದಿ ಯೂರೋಪ್ಯ ದಂಪತಿಗಳೂ, ಸಾಹುಕಾರ್ ವರ್ಧಮಾನಯ್ಯನವರು, ಸಾ|| ತಿಮ್ಮಯ್ಯನವರು, ಸಾ|| ಜವರಪ್ಪನವರೇ ಮೊದಲಾದ ಶ್ರೀಮಂತರುಗಳೂ ದೊಡ್ಡಪೇಟೆ ಸಂತೇಪೇಟೆ ಮೊದಲಾದ ಕಡೆಯ ಸಾವಿರಾರು ಮಂದಿ ವರ್ತಕರುಗಳೂ ಅಂಗಡಿಗಳನ್ನೆಲ್ಲಾ ಮುಚ್ಚಿ ಬಂದಿದ್ದರು. ಸಾವಿರಾರು ಮಂದಿ ವಿದ್ಯಾರ್ಥಿಗಳು ನೆರೆದಿದ್ದರು. ಒಟ್ಟು ಎಲ್ಲ ಕೋಮಿನವರುಗಳೂ ೪-೫ ಸಾವಿರ ಮಂದಿಗಳಿಗೆ ಕಡಿಮೆಯಿಲ್ಲದೆ ಇದ್ದುದರಿಂದ ಆ ಉಪವನವೆಲ್ಲಾ ಜನಮಯವಾಗಿ ತೋರುತ್ತಿದ್ದಿತು. ಮ|| ರಡ್ಡಿಯವರು ರಾ|| ಸಾ|| ಹೆಚ್. ಚೆನ್ನಯನವರೊಡನೆ ಉಪವನದ ಬಾಗಿಲಿಗೆ ಮೋಟಾರಿನಲ್ಲಿ ಬಂದ ಕೂಡಲೇ ಮಿ|| ಮಹಮ್ಮದ್‌ಸೇಟರೇ ಮೊದಲಾದವರು ಪುಷ್ಪಹಾರವನ್ನೊಪ್ಪಿಸಿ ಸ್ವಾಗತಿಸಿದರು. ನೆರೆದಿದ್ದ ಮಹಾಜನರೆಲ್ಲರೂ ಮಹಾಕರಾಸ್ಫಾಲನ ಧ್ವನಿಯಿಂದ ಜಯಘೋಷವನ್ನು ಮಾಡಿದರು. ಮ|| ರಡ್ಡಿಯವರು ಉನ್ನತಾಸನವನ್ನಲಂಕರಿಸಿದ ಬಳಿಕ ಸಂಗೀತ ವಿದ್ವಾನ್ ರಾಚಪ್ಪನವರು ಈ ಪತ್ರದ ಬೇರೆ ಕಡೆಯಲ್ಲಿ ಮುದ್ರಿಸಿರುವ ಮಂಗಳಾಶಾಸನ ಪದ್ಯಗಳನ್ನು ಅನೇಕ ರಾಗಗಳಿಂದ ಸುಸ್ಪಷ್ಟವಾಗಿ ಹೇಳಿ ಆನಂದಗೊಳಿಸಿದರು. ಬಳಿಕ ಉರ್ದುಭಾಷೆಯಲ್ಲಿ ರಚಿತವಾಗಿದ್ದ ಪದ್ಯಗಳನ್ನು ಮಿ|| ಇಸಾಸೇಟರು ಬಹಳ ಇಂಪಾದ ಆಲಾಪನೆಯಿಂದ ಹೇಳಿ ಸಂತೋಷಪಡಿಸಿದರು. ಮ|| ಎ. ಸಿ. ಲಿಂಗರಾಜಅರಸಿನವರು, ಮಿ|| ಎ. ಮಹಮ್ಮದ್‌ಸೇಟರು, ವೇ|| ಎನ್. ಆರ್. ಕರಿಬಸವಶಾಸ್ತ್ರಿಗಳು ಕ್ರಮವಾಗಿ ಇಂಗ್ಲೀಷಿನ ಹಿಂದೂಸ್ಥಾನಿಯ ಕನ್ನಡದ ವಿಜ್ಞಾಪನಪತ್ರಗಳನ್ನು ಓದಿ ಅರ್ಪಿಸಿದರು. ಅವಕ್ಕೆಲ್ಲಾ ಮಿ|| ರಡ್ಡಿಯವರು ಪ್ರತ್ಯುತ್ತರವಾಗಿ ರಸವತ್ತಾದ ಉಪನ್ಯಾಸವೊಂದನ್ನು ಮಾಡಿ ಸಭಿಕರನ್ನೆಲ್ಲಾ ಆನಂದಪಡಿಸಿ, ಇಂಥ ಸಮಾರಂಭದಿಂದ ತಮ್ಮನ್ನು ಸತ್ಕರಿಸಿದುದಕ್ಕಾಗಿ ಸರ್ವರನ್ನೂ ವಂದಿಸಿದರು. ಪ್ರತಿಯೊಂದು ಜನವರ್ಗದವರೂ ಬೇರೆ ಬೇರೆ ಹಾರ ತುರಾಯಿಗಳನ್ನು ಮಿ|| ರಡ್ಡಿಯವರಿಗೆ ಸಮರ್ಪಿಸಿ ತಮ್ಮ ಸಕಲರ ವಿಶ್ವಾಸಕೃತಜ್ಞತೆಗಳನ್ನು ಚೆನ್ನಾಗಿ ಪ್ರದರ್ಶಿಸಿದರು. ಶ್ರೀಮನ್ಮಹಾರಾಜರಿಗೂ ಶ್ರೀಮದ್ಯುವರಾಜರಿಗೂ ಮ|| ರಡ್ಡಿಯವರಿಗೂ ಮೂರುಮೂರು ವೇಳೆ ಜಯಘೋಷವನ್ನು ಮಾಡಿದ ಬಳಿಕ ಸಭೆಯು ಮುಗಿದಿತು.

ಕಳಿತು ಕೊಳೆತುಹೋಯಿತು.

ಮ|| ರಾಮಲಿಂಗರಡ್ಡಿಯವರು ಮೈಸೂರು ಸಂಸ್ಥಾನದ ಅಧಿಕಾರವನ್ನು ತಾವಾಗಿ ತ್ಯಜಿಸಿಬಿಟ್ಟು ಹೋಗಬೇಕೆಂದು ಸಂಕಲ್ಪಿಸದಿದ್ದರೆ ಶ್ರೀಮನ್ಮಹಾರಾಜರೇ ಆಗಲಿ ಅವರ ವಿಶಿಷ್ಟ ಪ್ರಜೆಗಳೇ ಆಗಲಿ ಅವರನ್ನು ಕಳೆದುಕೊಳ್ಳುವುದಕ್ಕೆ ಎಂದಿಗೂ ಅಪೇಕ್ಷಿಸುತ್ತಿರಲಿಲ್ಲ. ಅವರಾಗಿ ಕೊಟ್ಟ ರಾಜೀನಾಮೆಯನ್ನು ಶ್ರೀಮನ್ಮಹಾರಾಜರು ಎಷ್ಟೋ ಚಿಂತೆಯಿಂದ ಅಂಗೀಕರಿಸಿ, ಇದುವರೆಗೆ ಸ್ವಲ್ಪಕಾಲ ಅವರು ಮಾಡಿದ ದೇಶಸೇವೆಗೆ ಮೆಚ್ಚಿ ಯಾವಜ್ಜೀವವೂ ಅವರಿಗೆ ೨೫೦ ರೂ. ಉಪಕಾರವೇತನವು ದೊರೆಯುವಂತೆ ಏರ್ಪಾಟುಮಾಡಿದ್ದಾರೆ. ಹೀಗಿರುವಲ್ಲಿ ಕೆಲ ನೀಚರು ಮ|| ರಡ್ಡಿಯವರು ಬಲಾತ್ಕಾರದಿಂದ ರಿಟೈರ್ಮಾಡಿಸಲ್ಪಟ್ಟರೆಂದೂ, ನಾವುಗಳು ನಡೆಸಿದ ಗದ್ದಲದಿಂದ ಅವರಿಗೆ ಅಧಿಕಾರ ನಿವೃತ್ತಿಯಾಯಿತೆಂದೂ ತಲೆಬಾಲಗಳಿಲ್ಲದ ಸುದ್ದಿಗಳನ್ನು ಹರಡಿ, ಪ್ರಗಲ್ಭವನ್ನು ಕೊಚ್ಚಿಕೊಳ್ಳುತ್ತಿದ್ದರು. ಅವೆಲ್ಲಾ ಸುಳ್ಳಾದುವೆಂಬುದಾಗಿ ದೇಶೀಯರಿಗೆ ತಿಳಿಯಿಸುವುದಕ್ಕಾಗಿ ನಾವು ಕಳೆದ ೧೦ ನೆ ತಾರೀಖಿನ ಸ್ಟಾರ್ ಪತ್ರದಲ್ಲಿ ಬರೆದಿದ್ದ ಒಂದು ಲೇಖನದಲ್ಲಿ "ಸೂರ್ಯಪ್ರಕಾಶವು ಗೂಬೆಗಳಿಗೆ ದುಸ್ಸಹವಾಗಿರುವಂತೆ ಮ|| ರಡ್ಡಿಯವರ ತೇಜೋವೈಭವವು ದುರ್ಜನರಿಗೆ ದುಸ್ಸಹವಾಗಿದ್ದ ಮಾತ್ರಕ್ಕೇ ಬಾಧಕವೇನೂ ಇಲ್ಲ. ಗೂಬೆಗಳ ಘೂತ್ಕಾರಕ್ಕಂಜಿಯೇ ಸೂರ್ಯನು ಅಸ್ತಂಗತನಾಗುವುದು ನಿಜವಾಗಿದ್ದರೆ ದುಷ್ಟರ ಕೋಲಾಹಲಗಳಿಗೆ ಅಂಜಿ ಮ|| ರಡ್ಡಿಯವರು ಈ ಪದವಿಯನ್ನು ಬಿಟ್ಟರೆಂಬುದೂ ನಿಜವಾಗಲಿ" ಎಂದು ಬರೆದಿದ್ದೆವು. ಈ ಲೇಖನವನ್ನು ಸಂಪದಭ್ಯುದಯ ಕರ್ತರು ನೋಡಿ ಸೈರಿಸಲಾರದೆ, ಅದರಲ್ಲಿ ತಪ್ಪುಸುಳ್ಳುಗಳೇನಾದರೂ ಇದ್ದರೆ ಸರಿಯಾದ ಸಮಾಧಾನಗಳಿಂದ ಖಂಡಿಸುವುದನ್ನು ಬಿಟ್ಟು, ಯಾವುದೋ ಒಂದು ಪುಟ್ಟ ಪತ್ರವ್ಯವಹಾರವು ಬಂದಂತೆ ಮಾಡಿಕೊಂಡು, ಅದಕ್ಕೆ ತಾವು ಉತ್ತರಕೊಡುವಂತೆ ತಾ|| ೧೯ನೆ ಸಂಚಿಕೆಯಲ್ಲಿ ಬರೆದಿರುವ ಲೇಖನದಲ್ಲಿ–ಮ|| ರಡ್ಡಿಯವರನ್ನು ಬಿಡುಗಡೆ ಮಾಡಿಸಲಿಕ್ಕೆ ಶ್ರೀಮನ್ಮಹಾರಾಜರೇ ಕರ್ತರೆಂದೂ, ಅವರನ್ನೇ ಸ್ಟಾರ್‌ಕರ್ತರು ಗೂಬೆಗಳೆಂದು ನಿಂದಿಸಿರುವರೆಂದೂ ವ್ಯಾಖ್ಯಾನಮಾಡಿ, ಅದಕ್ಕಾಗಿ ಅವರು ಶ್ರೀಮನ್ಮಹಾರಾಜರ ಕ್ಷಮಾಪಣೆ ಕೇಳಿಕೊಳ್ಳಬೇಕೆಂದೂ ಬರೆದು ತಮ್ಮ ಅಸಮಾನ ಪಾಂಡಿತ್ಯವನ್ನು ತೋರ್ಪಡಿಸಿ ಶಾಲೆಯ ಬಾಲಕರೆಲ್ಲಾ ನೋಡಿ ನಗುವಂತೆ ಮಾಡಿಕೊಂಡಿರುತ್ತಾರೆ. ನೀರಿನಲ್ಲಿ ಎರಡು ಮುಳುಗು ಮುಳುಗಿ ೩ ನೆ ಮುಳುಗಿಗೆ ನಿಂತಿರುವ ಮನುಷ್ಯನು ಕೈಗೆಸಿಕ್ಕಿದ ಅವಲಂಬನೆಯನ್ನೆಲ್ಲಾ ತಬ್ಬಿಕೊಳ್ಳಲು ತಡವರಿಸುತ್ತಿರುವಂತೆ ಆಗಿರುವ ಇವರ ಸ್ಥಿತಿಯನ್ನು ನೋಡಿದರೆ ಕನಿಕರವುಂಟಾಗುತ್ತದೆ. ಸಾಮಾನ್ಯವಾದ ಒಂದು ವಾಕ್ಯಕ್ಕೆ ಸರಿಯಾದ ಅರ್ಥವನ್ನು ಮಾಡಿಕೊಳ್ಳಲು ಬಾರದಂಥ ಸ್ಥಿತಿಯು ಇವರಿಗೆ ಉಂಟಾಗಿರುವುದನ್ನು ನೋಡಿದರೆ ಅದು ಕ್ರೋಧಾವೇಶದ ಮಹಿಮೆಯಾಗಿರಬೇಕು, ಇಲ್ಲವೆ ಜ್ಞಾನವು ಕಳಿತು ಕೊಳೆತುಹೋಗಿರಬೇಕು.

ಒಳದೇಶದ ವೃತ್ತಾಂತಗಳು.

ಸೀಮೆಗೆ ಹೋಗಿರುವ ಮ|| ಎ. ಆರ್. ಬಾನರ್ಜಿ ಸಿ. ಎಸ್. ಐ. ಯವರು ತಮ್ಮ ರಜವನ್ನು ಮತ್ತೊಂದು ತಿಂಗಳು ಹೆಚ್ಚಿಸಿಕೊಂಡಿದ್ದಾರೆಂದು ಕೇಳಿದೆವು.

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಸೂರ್ಯರಶ್ಮಿಯೇ ಕಾಣದಂತೆ ಮೋಡಮುಚ್ಚಿ ಆಗಾಗ್ಗೆ ಮಳೆ ಸುರಿಯುತ್ತಲೇ ಇದ್ದಿತು. ಅಲ್ಲಲ್ಲಿ ಒಂದೊಂದು ಪ್ಲೇಗಿನ ಮರಣವಾಗುತ್ತಲಿದೆ.

ನಮ್ಮ ದೇಶದ ಸೇನೆಯ ಚೀಫ್ ಕಮ್ಯಾಂಡೆಂಟರಾದ ಲೆ|| ಕರ್ನಲ್ ಸರ್ದಾರ್‌ಬಹದ್ದೂರ್ ಬಿ. ಚಾಮರಾಜೆ ಅರಸಿನವರು ವೈಸ್ರಾಯರ ಮಾನನೀಯ ಏಡಿಕಾಂಗರಾಗಿ ಅಂಗೀಕರಿಸಿಕೊಳ್ಳಲ್ಪಟ್ಟಿದ್ದಾರೆ.

ಅಕ್ಕೂರು ಗುಂಡಪ್ಪನವರ ಕೊಲೆಯ ಸಂಬಂಧದ ವ್ಯಾಜ್ಯದ ವಿಚಾರಣೆಯು ಬೆಂಗಳೂರು ಸೆಷನ್ ಕೋರ್ಟಿನಲ್ಲಿ ನಡೆಯುತ್ತಿದೆ. ಪ್ರಾಸಿಕ್ಯೂಷನ್ನಿನ ಕಡೆ ಮತ್ತು ಅಪರಾಧಿಗಳ ಕಡೆ ೨೦೦ ರ ಮೇಲ್ಪಟ್ಟು ಸಾಕ್ಷಿಗಳ ವಿಚಾರಣೆಯು ನಡೆಯಬೇಕಾಗಿದೆ.

ಸಂಪದಭ್ಯುದಯವು ೧ ದಿನದಲ್ಲಿ ೨ ಆಕಾರವನ್ನು ತಾಳಿ ಹೊರಟಿರುತ್ತದೆ. ಪತ್ರಿಕೆಗಳ ಸ್ವಭಾವವು ಹೀಗೂ ಉಂಟೆ? ಎಂದು ನಮ್ಮ ಒಬ್ಬ ಚಂದಾದಾರರು ಕೇಳಿರುತ್ತಾರೆ. ಸಂದರ್ಭವೇನೆಂಬುದನ್ನು ತಿಳಿಯದಿರುವುದರಿಂದ ನಾವು ಯಾವ ಉತ್ತರವನ್ನೂ ಹೇಳಲಾರೆವು. ಸ್ಪಷ್ಟವಾಗಿ ವಿವರಿಸಿ ತಿಳಿಸಿದರೆ ಉತ್ತರ ಕೊಡಬಹುದು.

ಕಟಕ ಸಂಕ್ರಮಣವು ಹುಟ್ಟಿದಂದಿನಿಂದ ಮಳೆಗೆ ಆರಂಭವಾಗಿ ಎಲ್ಲ ಕಡೆಯೂ ಅಷ್ಟಷ್ಟು ನಡೆಯಿಸಿದೆ. ಇದರಿಂದ ರಾಗಿಯ ವ್ಯವಸಾಯಕ್ಕೆ ಅನುಕೂಲವಾಯಿತು. ನಿಂತಿರುವ ಜೋಳದ ಬೆಳಸಿಗೂ ಬಹಳ ಪ್ರಯೋಜನವಾಯಿತು. ಧಾನ್ಯದ ಕಂಟ್ರೋಲನ್ನು ತೆಗೆದುಬಿಟ್ಟುದರಿಂದ ಸಂಸ್ಥಾನದಲ್ಲಿದ್ದ ಬಹು ಧಾನ್ಯವು ಹೊರಕ್ಕೆ ಸಾಗಿಹೋಗಿಯೂ ಹೋಗುತ್ತಲೂ ಇದೆ; ಧಾರಣೆಗಳು ಏರಿಕೊಂಡೇ ಇರುತ್ತವೆ.

ರಾಜಧಾನಿಗೆ ದಯಮಾಡಿಸಿದ್ದ ಮ|| ಸಿ. ಆರ್. ರಡ್ಡಿ ಎಂ. ಎ. ಯವರು ತಾ|| ೨೧ ರಲ್ಲಿ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿ ಅಲ್ಲಿಯ ಪ್ರತಿಯೊಂದು ಅಂಗಡಿಯ ವರ್ತಕರೂ ಸಮರ್ಪಿಸಿದ ಪುಷ್ಪಹಾರಾದಿಗಳನ್ನು ಸ್ವೀಕರಿಸಿ, ದರಿಯಾದವಲತ್ ತೋಟದಲ್ಲಿ ಏರ್ಪಡಿಸಿದ್ದ ಅತ್ಯಂತ ವಿಜೃಂಭಣೆಯಿಂದ ಕೂಡಿದ ಸತ್ಕಾರವನ್ನೂ ವಿಜ್ಞಾಪನಪತ್ರವನ್ನೂ ಸ್ವೀಕರಿಸಿ ಅದೇದಿನ ಮೇಲ್‌ಟ್ರೇನಿನಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

ಬೆಂಗಳೂರಿನ ಕೆಲ ನಾರೀಮಣಿಯರು ಕಳೆದ ತಾ|| ೧೮ ರಲ್ಲಿ ದಿವಾನ್ ಸಾಹೇಬರ ಬಳಿಗೆ ಹೋಗಿ ಪ್ರಜಾಪ್ರತಿನಿಧಿಸಭೆ ಮೊದಲಾದುವುಗಳಿಗೆ ಮೆಂಬರಾಗಿ ನಿಲ್ಲುವ ಮತ್ತು ಓಟನ್ನು ಕೊಡುವ ಅಧಿಕಾರವು ಪುರುಷರಿಗಿರುವಂತೆ ಸ್ತ್ರೀಯರಿಗೂ ಉಂಟುಮಾಡಿ ಕೊಡಬೇಕೆಂಬ ವಿಷಯಕವಾದ ವಿಜ್ಞಾಪನಪತ್ರವನ್ನು ಸಮರ್ಪಿಸಿದರು. ಈ ಅಂಶವನ್ನು ಪ್ರಜಾಪ್ರತಿನಿಧಿಸಭೆಯ ವಿಚಾರಕ್ಕಿಡುವುದಲ್ಲದೆ ಶ್ರೀಮನ್ಮಹಾರಾಜರಿಗೂ ಅರಿಕೆಮಾಡುವುದಾಗಿ ದಿವಾನರವರು ಪ್ರತ್ಯುತ್ತರವನ್ನು ಕೊಟ್ಟರು.

“ಮಿಲ್ಲರ್ ಕಮಿಟಿ ರಿಪೋರ್ಟು ಜಾರಿಗೆಬಂದದ್ದರ ಮೇಲಣ ಹೊಟ್ಟೆಕಿಚ್ಚಿನಿಂದ ಮೈಸೂರು ಸಂಪದಭ್ಯುದಯ ಕೂಟದವರು ತಮ್ಮ ಜಾತಿವರ್ಗದವರಿಗೆಲ್ಲಾ ಸರ್ಕಾರಿ ನೌಕರಿಯನ್ನು ಬಿಟ್ಟುಬಿಡಬೇಕೆಂದೂ ಪ್ರಜಾಪ್ರತಿನಿಧಿಸಭೆಯ ಮೆಂಬರ್‌ಷಿಪ್ಪಿಗೆ ರಾಜೀನಾಮೆ ಕೊಡಬೇಕೆಂದೂ ಒತ್ತೊತ್ತಿ ಹೇಳಿ ಕೂಗಿಕೊಂಡು ತಣ್ಣಗಾದರು. ಯಾವೊಂದು ಪಿಳ್ಳೆಯೂ ಇದುವರೆಗೂ ಸರ್ಕಾರಿ ಕೆಲಸವನ್ನಾಗಲೀ ಮೆಂಬರ್‌ಷಿಪ್ಪನ್ನಾಗಲೀ ಬಿಡಲಿಲ್ಲ. ಹೇಳುವುದು ಸುಲಭ, ಮಾಡುವುದು ಕಷ್ಟ. ಇದ್ದ ಕೆಲಸವನ್ನು ಬಿಡುವುದೆಂದರೆ ಎಷ್ಟು ಪ್ರಾಣಸಂಕಟವೆಂಬುದನ್ನು ಮ|| ವೆಂಕಟಕೃಷ್ಣಯ್ಯನವರು ಬಲ್ಲರು” ಎಂದು ಒಬ್ಬ ಬಾತ್ಮೀದಾರರು ಬರೆದಿದ್ದಾರೆ.

ರಾಜಧಾನಿಯ ಮ್ಯು|| ಕೌನ್ಸಿಲರ ಚುನಾವಣೆಯು ಬರುವ ಆಗಸ್ಟ್ ತಾ|| ೯ ರಿಂದ ಆರಂಭವಾಗುತ್ತದೆ. ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ತಾ|| ೯ರ ಬೆಳಿಗ್ಗೆ ಲಷ್ಕರ್ ಮೊಹಲ್ಲಾದ, ಅದೇ ಮಧ್ಯಾಹ್ನ ಮಂಡಿಮೊಹಲ್ಲೆಯ ಕೌನ್ಸಿಲರುಗಳ ಚುನಾವಣೆಯೂ, ಅದೇ ಸ್ಥಲದಲ್ಲಿ ತಾ|| ೧೦ ನೆ ಬೆಳಿಗ್ಗೆ ನಜರ್ಬಾದ್ ಮೊಹಲ್ಲೆಯ ಮಧ್ಯಾಹ್ನದ ಮೇಲೆ ಕೋಟೆ ಮೊಹಲ್ಲೆಯ ಕೌನ್ಸಿಲರ್ ಚುನಾವಣೆಯೂ, ಬೊಮ್ಮಯ್ಯನ ಛತ್ರದಲ್ಲಿ ತಾ|| ೧೧ ರ ಬೆಳಿಗ್ಗೆ ದೇವರಾಜ ಮೊಹಲ್ಲೆಯ ಮಧ್ಯಾಹ್ನ ಕೃಷ್ಣರಾಜಮೊಹಲ್ಲೆಯ ಮೆಂಬರ್ ಚುನಾವಣೆಯೂ, ಮರಿಮಲ್ಲಪ್ಪನವರ ಹೈಸ್ಕೂಲ್ ಭವನದಲ್ಲಿ ತಾ|| ೧೨ ರ ಬೆಳಿಗ್ಗೆ ಚಾಮರಾಜ ಮೊಹಲ್ಲೆಯ ಕೌನ್ಸಿಲರ ಚುನಾವಣೆಯೂ ನಡೆಯುತ್ತವೆ.

ಮೈಸೂರು ಚಾಮರಾಜೇಂದ್ರ ಕೈಗಾರಿಕೆಯ ಪಾಠಶಾಲೆಯಲ್ಲಿ ಮರಗೆಲಸ, ಚಿತ್ರದಕೆಲಸ, ಕಮ್ಮಾರಕೆಲಸ, ಲೋಹದ ಕೆಲಸ, ಯಂತ್ರ ಜೋಡಿಸುವುದು, ದಂತದ ಕೆಲಸ ಮೊದಲಾದ ಕಸಬುಗಳನ್ನು ಕಲಿಸುವ ತರಗತಿಗಳು ಪುನಃ ಈ ಜುಲೈ ತಿಂಗಳಿಂದಾರಂಭಿಸಲ್ಪಟ್ಟು ಸಮರ್ಥರಾದ ಬೋಧಕರು ನಿಯಮಿಸಲ್ಪಟ್ಟಿರುವರು. ಮೇಲ್ಕಂಡ ಕೈಗಾರಿಕೆಯನ್ನು ಕಲಿಯಲಿಷ್ಟಪಡುವ ೧೫ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಹುಡುಗರು ತಮ್ಮ ತಂದೆ ಅಥವಾ ಪೋಷಕರುಗಳ ಮೂಲಕ ಅಪ್ಲೀಕೇಷನ್ ಬರೆದುಕೊಳ್ಳಬೇಕೆಂದೂ, ೩ ತಿಂಗಳವರೆಗೆ ಕೆಲಸ ಕಲಿತನಂತರ ಅರ್ಹರಾದ ವಿದ್ಯಾರ್ಥಿಗಳಿಗೆ ವೇತನ (ಸ್ಕಾಲರ್‌ಷಿಪ್) ಗಳು ಕೊಡಲ್ಪಡುವುವೆಂದೂ ಈ ಶಾಲೆಯ ಸೂಪರಿಂಟೆಂಡೆಂಟರು ತಿಳಿಸಿರುತ್ತಾರೆ.

ಪತ್ರವ್ಯವಹಾರ.

ಅಸೂಯಾರೋಗ.

ಸ್ವಾಮಿ!

ನಮ್ಮ ದೇಶದ ಕೆಲ ಬ್ರಾಹ್ಮಣರಲ್ಲಿ ಸ್ವಾರ್ಥಾಭಿಮಾನವು ಮಿತಿಮೀರಿಹೋಗಿ ಈಗ ಅದು ಅಸೂಯಾರೋಗವಾಗಿ ಪರಿಣಮಿಸಿದೆ. ಪಂಚಮರೇ ಮೊದಲಾದ ಪಶುಸಮಾನಸ್ಥಿತಿಯಲ್ಲಿದ್ದ ಜನರನ್ನು ವಿದ್ಯಾವಿವೇಕಗಳ ಪ್ರಸಾರದಿಂದ ನಿಜವಾದ ಮನುಷ್ಯರನ್ನಾಗಿ ಮಾಡಲಿಕ್ಕೆ ಈಗ ಭರತಖಂಡವೇ ಒಟ್ಟಿಗೆ ಪ್ರಯತ್ನಿಸುತ್ತಲಿದೆ. ಮ|| ಗಾಂಧಿಯವರು ಸ್ವರಾಜ್ಯಸಾಧನೆಗೆ ಅವಶ್ಯಕವಾದ ಉಪಕರಣಗಳೊಳಗೆ ಪಂಚಮರ ಅಸ್ಪೃಶ್ಯತ್ವ ನಿವಾರಣೆಗೆ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಜಾತೀಯ ಪ್ರಗತಿಯು ಧೋರಣೆಯೇ ಹೀಗಿರುತ್ತಿರುವಲ್ಲಿ ಅದರ ಭರದಲ್ಲಿ ಸಿಕ್ಕಿರುವ ನಮ್ಮ ಪ್ರಭುತ್ವದವರೂ ಕೂಡ ಪಂಚಮೋದ್ಧರಣಕ್ಕಾಗಿ ಸಾಧ್ಯವಾದಷ್ಟು ದಯಾಪೂರ್ಣವಾದ ಏರ್ಪಾಡುಗಳನ್ನು ಮಾಡಿದುದಕ್ಕಾಗಿ ಸಂಪದಭ್ಯುದಯ ಕೂಟದ ಅಸೂಯಾಳುಗಳ ಬೈಗುಳಗಳಿಗೆ ಗುರಿಯಾಗಬೇಕಾಯಿತು. ಸರ್ ದಿವಾನ್ ಸಾಹೇಬರನ್ನು ಈ ಧೂರ್ತರು ನಿಂದಿಸುತ್ತಿರುವುದಕ್ಕೆ ಪಾರವೇ ಇಲ್ಲ. ಬ್ರಾಹ್ಮಣಪ್ರತಿನಿಧಿಯೆಂಬ ಹೆಸರಿಟ್ಟುಕೊಂಡು ಒಬ್ಬ ನರಾಧಮನು ಸರ್ ಕಾಂತರಾಜ ಅರಸಿನವರನ್ನು ಕುರಿತು—"ನಿಮ್ಮ ಮನೆಯಲ್ಲಿರತಕ್ಕ ಬ್ರಾಹ್ಮಣರನ್ನು ತೆಗೆದುಹಾಕಿ ಪಂಚಮರನ್ನು ಇಟ್ಟುಕೊಳ್ಳಿ, ನಿಮ್ಮ ದೇವಸ್ಥಾನದ ಪೂಜೆಗೆ ಪಂಚಮರನ್ನು ನೇಮಿಸಿಕೊಳ್ಳಿ, ಅವರು ಕೊಡತಕ್ಕ ತೀರ್ಥ ಪ್ರಸಾದಗಳನ್ನು ಪರಿಗ್ರಹಿಸಿ" ಎಂದು ಬರೆದಿದ್ದಾನೆ. ಮತ್ತು ಅವರು ಬ್ರಹ್ಮದ್ವೇಷಿಗಳೆಂತಲೂ ಅವರು ದಿವಾನಗಿರಿಯಲ್ಲಿರುವವರೆಗೂ ತಾನು ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿ ಬರುವುದಿಲ್ಲವೆಂತಲೂ ಹೇಳಿ ಸ್ವಾಭಿಮಾನವಿರುವ ಬ್ರಾಹ್ಮಣರೆಲ್ಲರೂ ಹೀಗೆಯೇ ಮಾಡಬೇಕೆಂದು ಬೋಧಿಸಿಕೊಂಡಿರುತ್ತಾನೆ. ರಾಮರಾಮಾ! ಇಂಥ ಲೇಖನಕ್ಕೆ ಸಂಪದಭ್ಯುದಯಕರ್ತರು ಸ್ಥಲವನ್ನು ಕೊಟ್ಟಿದ್ದಾರೆ. ಇಂಥ ಶಪಥವನ್ನು ಮಾಡಿ ಸರ್ ಕಾಂತರಾಜ ಅರಸಿನವರನ್ನು ದೂಷಿಸಿರುವ ಧೀರಶಿಖಾಮಣಿಯು ತನ್ನ ಹೆಸರನ್ನು ತಿಳಿಯಿಸಿಕೊಂಡಿದ್ದರೆ ಇವನನ್ನು ಪುರುಷಕೋಟಿಗೆ ಸೇರಿಸಬಹುದಾಗಿತ್ತು. ಗೋಡೆಮರೆಯಲ್ಲಿ ನಿಂತು ಕಲ್ಲೆಸೆಯುವಂಥ ಸಮರ್ಥನಿಗೂ ಈ ಲೇಖಕನಿಗೂ ವ್ಯತ್ಯಾಸವೇನಾದರೂ ಉಂಟೆ? ಇವನಂಥವರು ಪ್ರಜಾಪ್ರತಿನಿಧಿ ಸಭೆಯನ್ನೇ ಅಲ್ಲ, ದೇಶವನ್ನೇ ಬಿಟ್ಟು ಹೋದರೂ ಪೀಡೆಯೇ ಕಳೆದಂತಾಗುವುದು. ಇಂಥ ಕ್ಷುಲ್ಲಕರ ಲೇಖನಗಳನ್ನೆಲ್ಲಾ ಒಡಲಲ್ಲಿ ತುಂಬಿಕೊಂಡಿರುವ ಸಂಪದಭ್ಯುದಯದ ಮತ್ತು ಅದರ ಕರ್ತರ ಯೋಗ್ಯತೆಯೂ ರಾಜಭಕ್ತಿಯೂ ನ್ಯಾಯಪ್ರವರ್ತನವೂ ಎಷ್ಟು ನಿರ್ದುಷ್ಟವಾಗಿರುವುದೆಂಬುದನ್ನು ಹೇಳಬೇಕಾಗಿಲ್ಲ. ಸರ್ಕಾರದ ಅಪ್ಪಣೆಯಲ್ಲಿ ಪಂಚಮರೊಡನೆ ಇತರ ಪ್ರಜೆಗಳೆಲ್ಲಾ ಬಂಧುತ್ವವನ್ನು ಮಾಡಬೇಕೆಂದೇನೂ ಹೇಳಿರುವುದಿಲ್ಲ. ಅವರೊಡನೆ ಊಟ ಉಪಚಾರಗಳನ್ನು ಮಾಡಬೇಕೆಂದೇನೂ ವಿಧಿಸಿರುವುದಿಲ್ಲ. ಹಿಂದೆ ಯಾರು ಪಂಚಮರನ್ನು ಗುರುಕೋಟಿಯಲ್ಲಿ ಸೇರಿಸಿಕೊಂಡಿದ್ದರೋ ಅವರಸಂಬಂಧವು ಯಾರ ಕೂಟಸ್ಥರಲ್ಲೆಲ್ಲಾ ಇದ್ದಿತೋ ಅಂಥವರ ಪರಂಪರಾಗತರೇ ಈಗ ಪಂಚಮರನ್ನೂ ಅವರ ಉದ್ಧರಣಕ್ಕಾಗಿ ದಯೆತೋರಿಸಿದ ಶ್ರೀಮನ್ಮಹಾರಾಜ ಸರ್ಕಾರದವರನ್ನೂ ವಾಚಾಮಗೋಚರವಾಗಿ ನಿಂದಿಸುವುದಕ್ಕೆ ಹೊರಟಿರುವುದು ಕಲಿಕಾಲದ ಪ್ರಭಾವ; ಮತ್ತು ಈಗಣ ಸರ್ಕಾರದ ಚಂದ್ರಕಾಂತ ಶಿಲೆಗಿಂತಲೂ ಶೀತಲವಾದ ಸ್ವಭಾವ—ಇವೇ ಕಾರಣವೆಂದು ಭಾವಿಸಬೇಕಾಗಿದೆ.

ಇನ್ನು ಮಿಲ್ಲರ್‌ಸಂಘದ ವರದಿಗೆ ಏರ್ಪಾಟುಮಾಡಿ ಅದನ್ನನುಮೋದಿಸಿದ ಸರ್ಕಾರದವರನ್ನೂ ಆ ವರದಿಯಲ್ಲಿ ಕಂಡ ಸೌಕರ್ಯಕ್ಕೆ ಪಾತ್ರರಾದ ಜನರನ್ನೂ ಈ ಸಂಪದಭ್ಯುದಯ ಕೂಟದ ಜನರು ಹಗೆತನಮಾಡಿ ಬ್ರಹ್ಮದ್ವೇಷಿಗಳೆಂದು ಮೊದಲಾಗಿ ದೂಷಿಸುತ್ತಿರುವರಷ್ಟೆ. ಅಂಥ ಲೇಖನಗಳಿಗೆ ಸಂಪದಭ್ಯುದಯ ಪತ್ರಿಕೆಯಲ್ಲಿ ಬೇಕಾದಷ್ಟು ಅವಕಾಶಗಳು ಕೊಡಲ್ಪಟ್ಟಿರುವುವು. ಇದರ ವಿಷಯದಲ್ಲಿ ವಿಚಾರ ಮಾಡೋಣ. ಮಿಲ್ಲರ್‌ಸಂಘದ ವರದಿಯಮೇಲಣ ಅಪ್ಪಣೆಯು ಬ್ರಹ್ಮದ್ವೇಷದಿಂದ ಹುಟ್ಟಿದುದೆಂದೂ, ಇನ್ನು ೭ ವರ್ಷಗಳವರೆಗೂ ತಮಗೊಬ್ಬರಿಗೂ ಸರ್ಕಾರದಧಿಕಾರಗಳು ಸಿಕ್ಕುವುದಿಲ್ಲವೆಂದೂ ಆ ವರದಿಯಮೇಲೆ ಪ್ರಜಾಭಿಪ್ರಾಯ ತೆಗೆದುಕೊಳ್ಳದೆ ಸರ್ಕಾರದವರು ವ್ಯವಹರಣೆಗೆ ತರುವಂತೆ ಮಾಡಿದುದು ಅನ್ಯಾಯವೆಂದೂ ಇವರು ವಾದಿಸುತ್ತಿದ್ದಾರಷ್ಟೆ. ಈವಾದದಲ್ಲಿ ಲೇಶಮಾತ್ರವೂ ಧರ್ಮದೃಷ್ಟಿಯೂ ಸತ್ಯವಿಧಾನವೂ ಇರುವುದಿಲ್ಲ. ಸರ್ಕಾರದವರು ತಾವೇ ಬೇಕಾಗಿ ಮಿಲ್ಲರ್ ಸಂಘವನ್ನೇರ್ಪಡಿಸಲಿಲ್ಲ. ಎಷ್ಟೋ ಕಾಲದಿಂದ ಆತ್ಮಪರಿಜ್ಞಾನವಿಲ್ಲದೆ ಬಿದ್ದಿದ್ದ ಮಹಾಪ್ರಜೆಗಳು ದೈವಾನುಗ್ರಹದಿಂದ ಸ್ವಲ್ಪ ಎಚ್ಚರುಗೊಂಡು, ತಮ್ಮ ಉದ್ಧಾರದಕಡೆಗೆ ದೃಷ್ಟಿಕೊಟ್ಟು ತಮ್ಮಿಂದ ಆಗತಕ್ಕ ಅಭ್ಯುದಯದ ಕೆಲಸಗಳನ್ನು ತಾವು ಮಾಡಿಕೊಳ್ಳುತ್ತ, ಸರ್ಕಾರದಿಂದ ಆಗಬೇಕಾದ ಸಾಹಾಯ್ಯವನ್ನು ಅವರಿಂದ ಪಡೆದುಕೊಳ್ಳಲಿಕ್ಕಾಗಿ ಒತ್ತರಪಡಿಸುತ್ತ ಬಂದರು. ಪಾಲಕರಾದ ಕ್ಷತ್ರಿಯರಿಗೆ ಇತರ ಧರ್ಮಗಳೆಲ್ಲಕ್ಕಿಂತಲೂ ಪ್ರಜಾರಂಜನೆಯೇ ಪ್ರಥಮ ಧರ್ಮವಾಗಿರುವುದರಿಂದ ಬಹು ಸಂಖ್ಯಾಕ ಪ್ರಜೆಗಳ ನ್ಯಾಯವಾದ ಕೋರಿಕೆಯನ್ನು ಸಲ್ಲಿಸಿ ಅವರ ಅತೃಪ್ತಿಯನ್ನು ನಿವಾರಿಸುವುದೂ, ಅವರನ್ನು ಮೇಲಕ್ಕೆತ್ತುವುದೂ ನ್ಯಾಯವಾದ ಕರ್ತವ್ಯವೆಂದು ಅವರಿಗೆ ತೋರಿತು. ಅದರಮೇಲೆ ಮಿಲ್ಲರ್‌ಸಂಘದ ಏರ್ಪಾಟಾಗಿ, ಅವರುಗಳು ತಕ್ಕ ವಿಮರ್ಶೆಯಿಂದ ಒಂದು ವರದಿಯನ್ನು ಮಾಡಿದರು. ಅದರಲ್ಲಿ ಕೆಲವನ್ನು ಬಿಟ್ಟು ಇನ್ನು ಕೆಲವನ್ನು ಮಾತ್ರ ಸರ್ಕಾರದವರು ಅನುಮೋದಿಸಿ ಅವನ್ನು ವ್ಯವಹರಣೆಗೆ ತರಲು ಅಪ್ಪಣೆಮಾಡಿದರು. ಅದರ ಪ್ರಕಾರವೇ ಇನ್ನು ೭ ವರ್ಷಗಳವರೆಗೆ ಸರ್ಕಾರದ ಅಧಿಕಾರಗಳಲ್ಲಿ ೧೦೦ ಕ್ಕೆ ೫೦ ಸ್ಥಾನಗಳು ಹಿಂದುಳಿದ ಜನವರ್ಗದವರಿಗೆ ಸಂದಿರಬೇಕೆಂದು ನಿರ್ಣಯವಾಗಿರುವುದು. ವಿಚಾರಮಾಡಿ ನೋಡಿದರೆ ಈ ವರದಿಯೂ ಅದರ ಮೇಲಣ ಅಪ್ಪಣೆಯೂಕೂಡ ಹಿಂದುಳಿದವರ ವಿಷಯದಲ್ಲಿ ಅನ್ಯಾಯವನ್ನೇ ಮಾಡಿವೆ. ಈಗ ಅಗ್ರಹವನ್ನು ತೊಟ್ಟಿರುವ ಜನವರ್ಗದವರ ಕಡೆಯೇ ಪಕ್ಷಪಾತಮಾಡಿವೆಯೆಂದು ಖಂಡಿತವಾಗಿ ಹೇಳಬಹುದು. ಏಕೆಂದರೆ ೫೮ ಲಕ್ಷ ಜನರಿಗೆ ಅರ್ಧಭಾಗವನ್ನು ಕೊಟ್ಟು ಇನ್ನರ್ಧವನ್ನೆಲ್ಲಾ ೨ ಲಕ್ಷ ಸಂಖ್ಯಾಕರಾದ ತ್ರಿಮತಸ್ಥರಿಗೆ ಇರುವಂತೆ ನಿರ್ಣಯವಾಗಿರುತ್ತದೆ. ಇದು ಪಕ್ಷಪಾತವಲ್ಲವೆ? ಹಾಗಿದ್ದರೂ ತಮ್ಮ ಗಂಟು ಮುಳುಗಿಹೋದವರಂತೆ ಬೊಬ್ಬೆಯಿಕ್ಕುವುದು ಕ್ರೂರತನವಲ್ಲವೆ? ಇದೂ ಅಲ್ಲದೆ ಇನ್ನು ೭ ವರ್ಷಗಳವರೆಗೂ ಯಾವೊಬ್ಬ ಬ್ರಾಹ್ಮಣನಿಗೂ ಸರ್ಕಾರದ ೧ ಅಧಿಕಾರವೂ ದೊರೆಯುವುದಿಲ್ಲವೆಂದು ಇವರು ಕೂಗಿಕೊಳ್ಳುತ್ತಿದ್ದಾರಷ್ಟೆ, ಇದು ನಿಜವೆ? ಖಾಲಿಯಾದ ಪ್ರತಿಯೊಂದು ಸ್ಥಲಕ್ಕೂ ವಿದ್ಯಾವಂತರಾದ ಹಿಂದುಳಿದ ಜನವರ್ಗದವರೇ ಸಿಕ್ಕುವರೆ? ಅವರು ಅಷ್ಟುಮಂದಿ ಸಿಕ್ಕದಿದ್ದ ಸಂದರ್ಭದಲ್ಲಿ ಆ ಸ್ಥಾನಗಳೆಲ್ಲಾ ಇವರ ಪಾಲೇ ಆಗುವುವಲ್ಲವೆ? ಸರ್ಕಾರದವರು ಈ ಮಿಲ್ಲರ್ ಸಂಘದ ವರದಿಯ ಮೇಲಣ ಅಪ್ಪಣೆಯನ್ನು ಕೊಟ್ಟು ಹಿಂದುಳಿದವರಿಗೆ ಮುಂಬರಿಯಲು ಹೆಚ್ಚು ಅವಕಾಶವನ್ನು ಕಲ್ಪಿಸದಿದ್ದರೆ ಈಗ ಉಂಟಾಗಿರುವ ವೈಷಮ್ಯ ಪರಿಹಾರಕ್ಕೆ ಅವಕಾಶವೇ ಆಗುತ್ತಿರಲಿಲ್ಲ. ಹಿಂದುಳಿದವರಿಗಿಂತ ಈ ತ್ರಿಮತಸ್ಥರಲ್ಲಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಬಹಳ ಹೆಚ್ಚೆಂಬುದು ಕಂಡೇ ಇದೆ. ಇತರರು ಆ ಸ್ಥಿತಿಗೆ ಬರಬೇಕಾದರೆ ಎಷ್ಟೋ ಕಾಲಬೇಕು. ಹೀಗಿರುವಾಗ ಒಂದು ಕಡೆಗೆ ಸ್ವಲ್ಪ ತಡೆಯನ್ನೇರ್ಪಡಿಸದಿದ್ದರೆ ಮತ್ತೊಂದು ಕಡೆಯವರು ಜತೆಗೆ ಬರುವುದು ಎಂದಿಗೆ ಸಾಧ್ಯ? ತಕ್ಕಡಿಯನ್ನು ಹಿಡಿದು ತೂಗುವವನು ಹೆಚ್ಚು ಭಾರ ಬಿದ್ದು ಕೆಳಕ್ಕೆ ತಗ್ಗಿರುವ ತಟ್ಟೆಗೇ ಮತ್ತಷ್ಟು ಎರುಹಾಕುತ್ತಿದ್ದರೆ ದಂಡಿಯು ಸಮನಾಗುವುದುಂಟೆ? ಕೆಳಕ್ಕೆ ಕುಳಿತ ತಟ್ಟೆಗೆ ಮತ್ತೆ ಎರುಹಾಕುವುದನ್ನು ಬಿಟ್ಟು ಅಥವಾ ಅದರಲ್ಲಿ ಹೆಚ್ಚಾಗಿ ಬಿದ್ದಿರುವ ವಸ್ತುವನ್ನು ತೆಗೆದುಹಾಕಿ, ಹಗುರವಾಗಿ ಎದ್ದು ನಿಂತಿರುವ ಭಾಗಕ್ಕೆ ಎರುಹಾಕಬೇಕಾದುದು ಧರ್ಮವಲ್ಲವೆ? ಅಂಥ ಕಾರ್ಯವನ್ನು ಮಾಡುವುದಕ್ಕೇ ಈಗ ಸರ್ಕಾರದವರು ಪ್ರವೃತ್ತರಾಗಿದ್ದಾರೆ. ಇತರ ಪ್ರಜೆಗಳನ್ನೆಲ್ಲಾ ಸರ್ಕಾರದ ಅಂಗದಲ್ಲಿ ಹೆಚ್ಚಾಗಿ ಪ್ರವೇಶಗೊಳಿಸಲಿಕ್ಕೆ ಸರ್ಕಾರದವರು ಯತ್ನಿಸಿರುವುದನ್ನು ಕಂಡು ದ್ವೇಷಿಸತಕ್ಕವರಿಗೆ ಇತರರ ಅಭ್ಯುದಯದಲ್ಲಿ ಸ್ವಲ್ಪವೂ ಸೈರಣೆಯಿಲ್ಲವೆಂಬುವುದು ಸಿದ್ಧಾಂತವಾಯಿತು. ಆ ಅಭಿಪ್ರಾಯವು ಅವರಲ್ಲಿಲ್ಲದಿದ್ದರೆ ಈಗ ಗದ್ದಲವನ್ನೆಬ್ಬಿಸಲಿಕ್ಕೆ ಕಾರಣವೇನು? ಬಾಯಲ್ಲಿ ನಮಗೆ ಅಸಹನವಿಲ್ಲವೆಂದು ಹೇಳುತ್ತ ಕಾರ್ಯದಲ್ಲಿ ಚೂರಿಯನ್ನು ಒಡಲಿಗೆ ಹೊಗಿಸುತ್ತಿದ್ದರೆ ಇತರರು ಸುಮ್ಮನಿರುವುದಕ್ಕಾದೀತೆ? ನಿಜವಾದ ಸೈರಣೆಯು ಇವರುಗಳ ಹೃದಯದಲ್ಲಿದ್ದರೆ ಮಿಲ್ಲರ್ ಸಂಘದ ವರದಿಯ ಮಾತನ್ನೇ ಇನ್ನು ಮುಂದೆ ಎತ್ತದೆ ಇರಲಿ. ಹಾಗೆ ಮಾಡಿ ಸಹಜಸ್ಥಿತಿಯನ್ನು ವ್ಯಕ್ತಪಡಿಸಲಿ, ನೋಡೋಣ.

ಪ್ರಭುತ್ವದವರು ಮಿಲ್ಲರ್ ಸಂಘದ ವರದಿಯನ್ನು ಮಹಾಜನಾಭಿಪ್ರಾಯಕ್ಕೆ ಇಡಲಿಲ್ಲವೆಂಬ ಕಾರಣದಿಂದ ತಮ್ಮಗಳಿಗೆ ಅಗ್ರಹಬಂದಿತೇ ಹೊರತು ಇದನ್ನು ಹಿಂದುಳಿದವರ ಹಿತಕ್ಕಾಗಿ ಏರ್ಪಡಿಸಿದುದಕ್ಕಾಗಿ ಅಗ್ರಹಬರಲಿಲ್ಲವೆಂದು ಕೆಲವರು ಹೇಳಿಕೊಳ್ಳುತ್ತಾರೆ. ಇದೆಷ್ಟು ಸಹಜವಾದ ಮಾತೋ ನೋಡಿರಿ. ಆ ವರದಿಯು ಇಷ್ಟವಾಗಿದ್ದ ಬಳಿಕ ಅದು ಯಾವ ಮಾರ್ಗದಿಂದ ಸಿದ್ಧವಾದರೆ ತಾನೇ ದೋಷವೇನು? ಹೋಗಲಿ; ಈಗಲೂ ಪ್ರಭುತ್ವದವರು ಪ್ರಜಾಭಿಪ್ರಾಯಕ್ಕಾಗಿ ಅದನ್ನೇತಕ್ಕೆ ಇಡಬಾರದು? ಪ್ರತಿಯೊಂದು ತಾಲ್ಲೂಕು ಡಿಸ್ಟ್ರಿಕ್ಟು ಸಭೆಗಳಲ್ಲೂ ಕಡೆಗೆ ಗ್ರಾಮಾಂತರಗಳಲ್ಲೂ ಪ್ರಜಾಪ್ರತಿನಿಧಿ ಸಭೆಯಲ್ಲೂ ಈ ವರದಿಯ ಮೇಲೆ ಪ್ರಜಾಭಿಪ್ರಾಯವನ್ನು ಓಟುಗಳ ಮೂಲಕ ತೆಗೆದುಕೊಳ್ಳಲು ಪ್ರಯತ್ನಿಸಲಿ. ಇದು ಅವಶ್ಯಕವೆಂಬ ವಿಷಯಕ್ಕೆ ಹೆಚ್ಚು ಓಟುಗಳು ಬಂದರೆ ಆಗ್ಗೆ ಈ ಪ್ರತಿಪಕ್ಷದವರು ಯಾವಶಪಥಕ್ಕೆ ನಿಲ್ಲುವರು? ೭ ವರ್ಷಕ್ಕೆ ಪ್ರತಿಯಾಗಿ ೭೦ ವರ್ಷಗಳವರೆಗೂ ೧೦೦ ಕ್ಕೆ ೫೦ ಸ್ಥಾನಕ್ಕೆ ಪ್ರತಿಯಾಗಿ ೧೦೦ ಕ್ಕೆ ೫ ಸ್ಥಾನವನ್ನು ಮಾತ್ರ ತಮ್ಮ ಜನವರ್ಗಗಳವರು ಹೊಂದಿರುವುದಕ್ಕೆ ಒಪ್ಪಿ ಇವರು ಕರಾರು ಬರೆದು ಕೊಡುವರೆ? ಅದನ್ನಾದರೂ ಗೊತ್ತುಪಡಿಸಲಿ. ಮಹಾಜನರೆಂದರೆ ಬಾಯಿಬಲ್ಲ ತಾವು ಮೂರೂಮತ್ತೊಂದು ಜನರೇ ಎಂದು ವಿಜೃಂಭಿಸುವವರ ಪಟಾಟೋಪವೆಲ್ಲಾ ಆಗ ಗೊತ್ತಾಗುವುದು.

ವೃತ್ತಪತ್ರಿಕಾನಿರ್ವಾಹದಂಥ ಘನತರ ಕಾರ್ಯಭಾರವನ್ನು ಹೊತ್ತವರೂ ವಿದ್ಯಾ ಬುದ್ಧಿ ವಿವೇಕಗಳಲ್ಲಿ ಮುಂದಾದವರೆಂದು ಹೆಸರು ಹೊತ್ತವರೂ ಆದ ಜನರುಗಳಿಗೆ ದೇಶಕ್ಷೇಮಚಿಂತೆಯು ಮುಖ್ಯ ಲಕ್ಷ್ಯವಾಗಿಯೂ ಸಹೋದರ ಪ್ರೀತಿಯು ವಿಸ್ತಾರವಾಗಿಯೂ ಇದ್ದೇ ತೀರಬೇಕು. ತಮ್ಮ ಕರ್ತವ್ಯಜ್ಞಾನವೇ ತಮಗಿಲ್ಲದೆ, ದೇಶದ ಮಹಾಜನರ ಅಭ್ಯುದಯದಲ್ಲಿ ಅಸೂಯೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಬಾಯ್ಮಾತಿನಲ್ಲಿ ದೇಶಾಭಿಮಾನದ ಪ್ರವಾಹವನ್ನು ಹರಿಸುವವರ ಬೇಳೆಯು ಇನ್ನು ಮುಂದೆ ಬೆಯ್ಯಲಾರದು, ಏಕೆಂದರೆ ದೇಶವು ಹಿಂದಿದ್ದಂತೆ ಮುಂದೆ ಇರದು. ಎಚ್ಚತ್ತು ಕಣ್ದೆರೆದಿದೆ.

ಎಸ್. ಎಂ.

ಆ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳಿಂದ ರಚಿತವಾಗಿ ಆರಮನೆ ಸಂಗೀತ ವಿದ್ವಾನ್ ರಾಚಪ್ಪನವರಿಂದ ಸಭೆಯಲ್ಲಿ ಓದಲ್ಪಟ್ಟ

ಶ್ರೀರಾಮಲಿಂಗಪುಷ್ಪಾಂಜಲಿ.

|| ಕಂದಪದ್ಯಂ ||

ಶ್ರೀರಾಮಲಿಂಗ ಬುಧಕಂ | ಧೀರವ ಗುಣಸಾಂದ್ರ ರಡ್ಡಿ
ಜನಕುಲಪಾರಾ || ವಾರಪರಿಪೂರ್ಣಚಂದ್ರಮ | ಧೀರಾಗ್ರಣಿ
ನಿನಗೆ ಸಂತತಂ ಶುಭವಿಭವಂ || ||೧||
ಕೋಲಾರದ ಪೆಗ್ಗಲ್ಪುವಿ | ಮೇಲಾದಗ್ಗಳಿಕೆಯಾಂತ
ವೋ ಲ್ಪೊನ್ನಗಣಿಯಿಂ || ಧೀಲಲಿತ ನಿನ್ನ ಜನಿಯಿಂ | ಲಾಲಿತ
ವಿಖ್ಯಾತಿವೆತ್ತು ಪಾರಡ್ಡಿಕುಲಂ || ||೨||
ಗೆರುಸೊಪ್ಪೆಯ ಜಲಪಾತಂ | ಭರದಿಂ ದುಮ್ಮಿಕ್ಕುವೊಂ
ದುಗುಣಮಾಂತಿರ್ಕುಂ || ಪರಿಕಿಸೆ ನಿನ್ನಯ ವಾಗ್ಝರಿ | ಸರಸ
ಸುಧಾಸಾರಮಧುರಿಮಂ ಸುಶ್ರಾವ್ಯಂ || ||೩||
ನಿನ್ನಂ ವಿದ್ಯಾಶಾಖಾ | ಧ್ಯಾನ್ನತಪದಕಿಟ್ಟು ನಾಡ ನುದ್ಧ
ರಿಸಿದ ಸಂ || ಪನ್ನಶ್ರೀಕೃಷ್ಣೇಂದ್ರಂ | ಸನ್ನುತಿತತಿಪಾತ್ರನಾಗಿ
ಮೆರೆವಂ ನಿಸದಂ || ||೪||
ವಿದ್ಯಾಶಾಖಾಧ್ಯಕ್ಷತೆ | ಯುದ್ಯೋಗದೆ ನಿಂತು ನೀಂ
ಸಮೆದ ಸಂಸ್ಕರಣಂ || ಹೃದ್ಯಂ ನಿರವದ್ಯಂ ಭೂ | ಪಾದ್ಯಮ
ಹಾಸಜ್ಜನಾಳಿ ಗಾಮೋದಕರಂ || ||೫||
ಸಮಧಿಗತವಿದ್ಯೆಯಂ ಪ | ಶ್ಚಿಮದೇಶಾಟನದೆ ಪಡೆದ ನಿ
ನ್ನನುಭವಮಂ ಸಮವಿದ್ಯಾವಿಸ್ತರಣ | ಕ್ರಮಮಂ ನೆಲೆಗೊಳಿ
ಸ ಲೆಮ್ಮ ದೇಶಕೆ ತೆತ್ತೈ || ||೬||
ಅರಿಯ ಲ್ಕಿನೆಸಗಿದ ಸಂ | ಸ್ಕರಣದಿ ನೀನಾಡ ನರಪಶು
ಗಳುಂ ನರಕೇ || ಸರಿಗೆಳೆನಿಸಿ ಪಣಮಿಪ | ಪೇರತಿದರಿಂ
ಪೆರ್ಚಿ ನುಪಕೃತಿ ಯದೇನುಂಟೈ || ||೭||
ಮೈಸೂರುದೇಶವಿದ್ಯಾ | ಭ್ಯಾಸಚರಿತ್ರದೊಳೆ ನಿನ್ನ ಪೆರ್ಮೆ
ಯ ನಾಮಂ || ಮಾಸದೆ ಕುಂದದೆ ನಂದದೆ | ಭಾಸಿಪ ಸು
ಜ್ಯೋತಿಯಾಗಿ ಬೆಳಗುಗು ಮೆಂದುಂ || ||೮||
ತನುವೊ ಲ್ಪಟ್ಟಿದೊಡಂ ರುಜೆ | ತನ ಗಹಿತಂ ಕಾಡಬೇ
ರು ಹಿತಮಂ ಮಾಳ್ಕುಂ || ಜನಿಯಿಸಿದೊಡಮೇಂ ನೀಂ ಪೊರ|
ಗಣನಾಪೊ ಳ್ಗೆಯ್ದೆ ಯೆಮಗೆ ಪರತರಹಿತಮಂ || ||೯||
ಅರುಣಂ ಮೂಡ ಲ್ತಾವರೆ | ಬಿರಿದೆಸವುದು ಮುತ್ತಲಂ
ಮುಗಿವುದುಂ ಸಾಜಂ || ನಿರುಕಿಸ ಲದರಿಂದಮೆ ಭಾ | ಸ್ಕರ
ನಂ ವಿಷಮಾಕ್ಷನೆಂದು ತೆಗಳಲ್ಪಹುದೆ? || ||೧೦||
ವೃ|| ಶ್ರೀರಾಮಸುಪ್ರತಿಷ್ಠಿತರಾಮಲಿಂಗ ನಾ ಘೋರ
ದುಷ್ಕೃತಹರಣ ನೆನಿಸಿ ರಾರಾಜಿಕುಂ || ಈರಾಮಲಿಂಗ ನೆ
ಮ್ಮಯ ನಾಡಿನಜ್ಞತಾಭಾರಮಂ ಕಳೆದ ನೆನು ತಿಳಿಯೆ ಕೊಂ
ಡಾಡುಗುಂ || ||೧೧||
ಕಂ|| ಕುರು (ಕಿರು) ಕೋಣೆ ಸಾಲ್ಗುಮೆ ಪಟಾ | ವರಸೆ
ಯ ಹಮ್ಮಾರಜಟ್ಟೆ ಗಂತಿರೆ ನಿನ್ನ || ತ್ಯುರುತರವಿಶಾಲಮತಿ
ವಿ | ಸ್ತರಣ ಕ್ಕೀನಾಡು ಸಾಲದಿದ್ದೊಡೆ ಸಾಜಂ ||೧೨||
ಅದರಿಂದಮೆ ನೀಂ ಪರಜನ | ಪದಕೈದುವೆಯಾದೊ ಡ
ಲ್ಲಿ ನಿನ್ನುದ್ದೇಶಂ || ಪದುಳಂ ಮಿಗೆ ಫಲಮಾಳ್ಗಿಮ | ಸದಯಂ
ಸರ್ವೇಶ ನೀಗೆ ಸನ್ಮಂಗಳಮಂ || ||೧೩||
ಮರೆಯದಿರದೆಂದು ಮೆಮ್ಮಂ | ಸರಸಗುಣಾಭರಣಮಿತ್ರ
ಸುಚರಿತ್ರಸದಾ || ಮರೆದಿರ್ಕೆ ಮೈತ್ರಿ ಯೆಮ್ಮೊಳ್ | ಸರಸಿಜ
ಭಾಸ್ಕರರ ಮೈತ್ರಿಯಂತಿ ರನೂನಂ || ||೧೪||
ಜಯಮಕ್ಕೆ ನಿನ್ನಯ ಮಹಾ | ಶಯಗ ಳ್ಗಪ್ರತಿಮಮೆ
ನಿಪ ಮೇಧಾವಿತೆಗಂ || ಜಯಮಕ್ಕೆ ಸರ್ವಕಾರ್ಯೋ | ಜ್ಜ
ಯದೊ ಳ್ನಿನಗತುಲವಿಮಲಮಂಜುಲಹಾಸಾ || ||೧೫||

ಶ್ರೀಮಾನ್

ಕಟ್ಟಮಂಚಿ ರಾಮಲಿಂಗರಡ್ಡಿ ಎಂ. ಎ.

ಯವರ ಸನ್ನಿಧಿಯಲ್ಲಿ

ಮೈಸೂರು ಪುರನಿವಾಸಿಗಳಾದ ನಾವುಗಳು ವಿಜ್ಞಾಪಿಸುವುದೇನೆಂದರೆ—

೧. ಮಹಾಶಯರೆ! ತಾವು ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಪದವಿಯಂಥ ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದು ಈಗ ಅದನ್ನು ನೀನಾಗಿ ಪರಿತ್ಯಜಿಸಿ ನಮ್ಮಗಳನ್ನಗಲಿ ಹೋಗಲಿಕ್ಕಿರುವುದು ನಮ್ಮಗಳಿಗೆ ವಿಶೇಷ ಖೇದವನ್ನುಂಟುಮಾಡಿರುತ್ತದೆ.

೨. "ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬ ನೀತಿಯಂತೆ ತಾವು ಘನತರ ವಿದ್ಯಾವಂತರೂ ಮೇಧಾವಿಗಳೂ

ಆಗಿದ್ದುದನ್ನು ಕಂಡು, ತಾವು ಹೊರಗಣ ದೇಶೀಯರಾದರೂ ಗುಣಗ್ರಹಣಧುರೀಣರಾದ ಶ್ರೀಮನ್ಮಹಾರಾಜರವರು ತಮ್ಮ ಸಂಸ್ಥಾನದ ಉದ್ಯೋಗಕ್ಕೆ ನಿಮ್ಮನ್ನು ಕರೆಯಿಸಿಕೊಂಡರು. ತಾವು ಈ ಸೀಮೆಯ ಉದ್ಯೋಗದಲ್ಲಿ ೧೩ ವರ್ಷ ಕಾಲ ಮಾತ್ರ ಇದ್ದರೂ ವಿದ್ಯಾಶಾಖೆಯಲ್ಲಿ ನೀವು ನೆರವೇರಿಸಿದ ಕೆಲಸವು ಮಹತ್ತರವಾಗಿರುವುದು. ಮೊದಲಿನ ೧೦ ವರ್ಷಗಳೊಳಗೆ ನೀವು ಎಜ್ಯುಕೇಷನಲ್ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾಗಿಯೂ, ಮೈಸೂರು ಮಹಾರಾಜಾ ಕಾಲೇಜಿನ ಪ್ರೊಫೆಸರಾಗಿಯೂ ಬಳಿಕ ಅದರ ಪ್ರಿನ್ಸಿಪಾಲರಾಗಿಯೂ ಇದ್ದು, ಆ ಪ್ರತಿಯೊಂದು ಕಾರ್ಯದಲ್ಲೂ ನಿಮ್ಮ ಮೇಧಾವಿತೆ ಪಾಂಡಿತ್ಯ ಕಾರ್ಯನಿರ್ವಾಹದಕ್ಷತೆ ಇವುಗಳನ್ನು ವ್ಯಕ್ತಪಡಿಸಿದಿರಿ. ಕಾಲೇಜು ವಿದ್ಯಾರ್ಥಿಗಳು ನಿಮ್ಮ ಅಚುಂಬಿತವಾದ ಬೋಧನಾಶಕ್ತಿ ಅಸಮಾನಪ್ರತಿಭೆ ಉಜ್ವಲಪಾಂಡಿತ್ಯ ಕರುಣಾರ್ದ್ರಹೃದಯ ಅಕುಟಿಲ ಸರಸತೆ ಇವುಗಳಿಂದೆಲ್ಲಾ ನಿಮಗೆ ವಶಂವದರಾಗಿದ್ದುದಲ್ಲದೆ, ನೀವು ಅವರುಗಳ ಒಡನಾಡಿಗಳಂತೆ ಇದ್ದುಕೊಂಡು ಅವರುಗಳಿಗೆ ಸಮಯೋಚಿತ ಬುದ್ಧಿವಾದಗಳನ್ನು ಮಾಡುತ್ತಾ ಅವರುಗಳಿಗೆ ಪ್ರಾಣಮಿತ್ರರಂತೆ ಇದ್ದಿರಿ. ಆಗ ನಿಮ್ಮಲ್ಲಿ ವ್ಯಕ್ತವಾದ ಸರ್ವತೋಮುಖ ಸಾಮರ್ಥ್ಯವು ಶ್ರೀಮನ್ಮಹಾಪ್ರಭುಗಳಿಗೆ ಸಂತೃಪ್ತಿಯನ್ನುಂಟುಮಾಡಿ, ವಿದ್ಯಾಶಾಖೆಯ ಇನ್ಸ್‌ಪೆಕ್ಟರ್ ಜನರಲ್ ಪದವಿಯನ್ನು ನೀವು ಅಲಂಕರಿಸುವಂತೆ ಮಾಡಿತು. ಆ ಪದವಿಯಲ್ಲಿದ್ದ ೩ ವರ್ಷ ಕಾಲದೊಳಗೆ ನೀವು ಮಾಡಿದ ಕಾರ್ಯವು ಇತರರಿಂದ ಮೂವತ್ತು ವರ್ಷದಲ್ಲಿ ಮಾಡಲ್ಪಡಲಸಾಧ್ಯವೂ ಅಭೂತಪೂರ್ವವೂ ಆಗಿರುವುವೆಂದು ಕೊಂಡಾಡಲ್ಪಡುತ್ತಿರುವುವು. ದೇಶದ ಸಕಲ ಪ್ರಜೆಗಳಲ್ಲೂ ವಿದ್ಯಾಪ್ರಸಾರವನ್ನು ಮಾಡುವುದಕ್ಕಾಗಿ ನೀವು ಏರ್ಪಡಿಸಿದ ಸಂಸ್ಕರಣವು ಮೈಸೂರು ದೇಶದ ವಿದ್ಯಾಭ್ಯಾಸ ಚರಿತ್ರದಲ್ಲಿ ಎಂದೆಂದಿಗೂ ಮಾಜದಿರುವ ದಿಗ್ದರ್ಶನಸ್ತಂಭದಂತೆ ಮೆರೆಯುತ್ತಿರುವುದು. ಅದರಿಂದ ದೇಶಕ್ಕುಂಟಾದ ಉಪಕಾರವು ಅಗಾಧವು. ಅದನ್ನು ಯಾರೂ ಮರೆಯುವಂತಿರುವುದಿಲ್ಲ. ಹಿಂದುಳಿದ ಸಕಲ ಪ್ರಜೆಗಳ ವಿದ್ಯಾವಿವೇಕ ವಿಕಾಸಕ್ಕೂ ತತ್ರಾಪಿ ನಿಮ್ಮ ಜಾತಿ ಜನರ ಸಮುದ್ಧಾರಕ್ಕೂ ನೀವು ಮಾಡಿದ ಪ್ರಯತ್ನಗಳು ಅವರೆಲ್ಲರ ಸ್ವಾತಂತ್ರ್ಯಾಭಿವೃದ್ಧಿಗೆ ವಿಶೇಷ ಸಾಧಕವಾಗಿರುತ್ತವೆ. ಈ ಸಂದರ್ಭದಲ್ಲಿ ನೀವು ಕೈಕೊಂಡ ಕಾರ್ಯಗಳು ಸುಲಭವಾಗಿರಲಿಲ್ಲ. ಸಂಕುಚಿತ ಹೃದಯರಾದ ಕೆಲವು ಜನರಿಂದ ನಿಮ್ಮ ಯತ್ನಗಳಿಗೆ ಎಷ್ಟೋ ವಿಘ್ನಗಳು ಒಡ್ಡಲ್ಪಟ್ಟುವು. ಆದರೇನು ? ನಿಮ್ಮ ಉದ್ದೇಶವು ನಿರ್ದುಷ್ಟವೂ ನ್ಯಾಯಸಮ್ಮತವೂ ಆಗಿದ್ದುದರಿಂದಲೇ ದೀನ ಸಮುದ್ಧರಣ ರೂಪವಾದ ಆ ಪ್ರಯತ್ನಕ್ಕೆ ದೈವಬಲವು ಪರಿಪೂರ್ಣವಾಗಿದ್ದಿತು. ಪ್ರತ್ಯಕ್ಷದೈವವಾದ ಶ್ರೀಮನ್ಮಹಾರಾಜರೂ ದೇಶದ ಮಹಾಪ್ರಜಾಮಂಡಲಿಯೂ ಅದಕ್ಕೆ ಅನುಮೋದನವನ್ನು ಕೊಟ್ಟರು. ನೀವೂ ಕೂಡ ನಿಸರ್ಗಸಿದ್ಧವಾದ ಧೈರ್ಯ ಸ್ಥೈರ್ಯ ಸಾಮರ್ಥ್ಯಗಳಿಂದ ಸಕಾರಣವಾದ ನ್ಯಾಯ ಧರ್ಮ ಸಂಮತಿಯನ್ನು ತೋರಿಸಿಕೊಟ್ಟು ವಿಘ್ನಜಾಲವನ್ನೆಲ್ಲಾ ದಾಂಟಿ ಜಯಶಾಲಿಗಳಾದಿರಿ. ಈ ಸಂದರ್ಭಗಳಲ್ಲೆಲ್ಲಾ ನೀವು ತೋರಿಸಿದ ಪ್ರಜಾಭಿಮಾನವೂ ಕರುಣಾಳುತ್ವವೂ ಸೌಹಾರ್ದವೂ ನ್ಯಾಯಪ್ರಿಯತೆಯೂ ನಿಶ್ಚಲತೆಯೂ ನಮ್ಮಗಳ ಮನಸ್ಸನ್ನೆಲ್ಲಾ ಸೂರೆಗೊಂಡು, ನಿಮ್ಮ ಉಪಕೃತಿಯು ನಮ್ಮಗಳ ಹೃದಯ ಫಲಕದಲ್ಲಿ ಅಚ್ಚೊತ್ತಿದಂತೆ ನೆಲಸಿ ನಮ್ಮನ್ನು ಸಂಪೂರ್ಣ ಕೃತಜ್ಞತಾಬದ್ಧರನ್ನಾಗಿ ಮಾಡಿರುತ್ತದೆ.

೩. ಶ್ರೀಮನ್ಮಹಾರಾಜರವರ ಪ್ರತಿನಿಧಿಗಳಾಗಿರುವ ದಿವಾನ್ ಸರ್ ಕಾಂತರಾಜ ಅರಸಿನವರು ಪ್ರಜಾಪ್ರತಿನಿಧಿ ಸಭೆಯಲ್ಲೂ, ಪ್ರಜಾಪ್ರಮುಖಶೇಖರರಾಗಿರುವ ದಿವಾನ್ ಬಹದ್ದೂರ್ ಕೆ.ಪಿ. ಪುಟ್ಟಣ್ಣಶೆಟ್ಟರವರು ನ್ಯಾಯವಿಧಾಯಕ ಸಭೆಯಲ್ಲೂ ನಿಮ್ಮ ವಿಷಯಕವಾಗಿ ನುಡಿದಿರುವ ಶ್ರೇಷ್ಠ ವಚನಗಳು ಪ್ರಭುತ್ವದವರ ಮತ್ತು ಪ್ರಜೆಗಳ ಹೃದಯದ ಪ್ರತಿಧ್ವನಿಯೇ ಆಗಿರುತ್ತವೆ. ಅದಕ್ಕಿಂತಲೂ ಹೆಚ್ಚಾಗಿ ನಾವು ಹೇಳಬೇಕಾದುದೇನೂ ಇರುವುದಿಲ್ಲ.

೪. ಇದುವರೆಗೂ ನೀವು ನಮ್ಮ ಮಧ್ಯದಲ್ಲಿದ್ದುಕೊಂಡು ನಮಗೆ ಸಹಾಯಭೂತರಾಗಿ ಸಮಯೋಚಿತವಾದ ಬುದ್ಧಿವಾದವನ್ನೂ ಎಚ್ಚರಿಕೆಯನ್ನೂ ಕೊಡುತ್ತಲಿದ್ದುದನ್ನೂ, ದೇಶಹಿತಚಿಂತಕರಗಳಾದ ಪ್ರತಿಯೊಂದು ಬಹಿರಂಗ ಸಭೆಗಳಲ್ಲೂ ನೀವು ಕಣ್ಣಿನಂತೆ ಇದ್ದುಕೊಂಡು ಅಸಾಧಾರಣ ವಾಗ್ಮಿತ್ವ ಪಾಂಡಿತ್ಯ ಸ್ವಾನುಭವಗಳಿಂದ ಪೂರ್ಣವಾದ ಉಪನ್ಯಾಸಗಳನ್ನು ಕೊಡುತ್ತಿದ್ದುದನ್ನೂ ನೆನೆದುಕೊಂಡಷ್ಟೂ ಈಗ ನಿಮ್ಮ ಅಗಲುವಿಕೆಯು ನಮ್ಮ ಮನೋವೇದನೆಯನ್ನು ಬಹಳವಾಗಿ ಹೆಚ್ಚಿಸುತ್ತಿರುವುವು. ಆದರೆ ನಿಮ್ಮಲ್ಲಿರುವ ಅಸಾಧಾರಣಪ್ರತಿಭೆ ಮತ್ತು ಅವಿಶ್ರಾಂತಕಾರ್ಯತತ್ಪರತೆ ಇವುಗಳ ಪರಿಮಿತಿಗೆ ತಕ್ಕಂತೆ ಇಲ್ಲಿಗಿಂತಲೂ ಅಧಿಕತರವಾಗಿ ದೇಶಸೇವೆಯನ್ನು ಮಾಡಬೇಕೆಂಬ ಉದ್ದೇಶದಿಂದ ಈ ದೇಶವನ್ನು ಬಿಟ್ಟು ನೀವು ತೆರಳುವವರಾಗಿದ್ದೀರೆಂಬುದನ್ನು ತಿಳಿದು ನಾವು ಮನಸ್ಸಮಾಧಾನಪಟ್ಟುಕೊಳ್ಳಬೇಕಾಗಿದೆ.

೫. ಮಿತ್ರವರ್ಯರೆ! ನೀವು ನಮ್ಮ ದೇಶಕ್ಕಾಗಿ ಮಾಡಿದ ಮಹೋಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲು ನಾವು ಅಸಮರ್ಥರು. ಈಗ ನಾವು ಈ ರೂಪವಾಗಿ ತೋರಿಸುವ ಕೃತಜ್ಞತೆಯು ಕೇವಲ ಔಪಚಾರಿಕಮಾತ್ರವೇ. ಅಮೌಲ್ಯವಾದ ನಿಮ್ಮ ಮಹೋಪಕಾರಕ್ಕೆ ತಕ್ಕ ಪ್ರತಿಫಲವೆಂದರೆ ಸತ್ಯಸ್ವರೂಪನೂ ದಯಾನಿಧಿಯೂ ದೀನಬಂಧುವೂ ಆದ ಜಗದೀಶ್ವರನ ಅಮೋಘವಾದ ಆಶೀರ್ವಾದವೇ ಆಗಿರುತ್ತದೆ. ಅದು ನಿಮ್ಮ ಮೇಲೆ ಸಂಪೂರ್ಣವಾಗಿರಲೆಂದೂ, ಅದರ ಬಲದಿಂದ ನಿಮ್ಮ ಉತ್ತರೋತ್ತರ ಕಾರ್ಯಗಳೆಲ್ಲಾ ಜಯಶೀಲಗಳಾಗಲೆಂದೂ ಕೋರುವುದೇ ನಮ್ಮಿಂದ ಆಗತಕ್ಕ ಕಾರ್ಯವಾಗಿರುತ್ತದೆ. ಜಗದೀಶ್ವರನು ತಮಗೆ ದೀರ್ಘಾಯುರಾರೋಗ್ಯಗಳನ್ನೂ ಸರ್ವತ್ರ ಸನ್ಮಂಗಳವನ್ನೂ ಉಂಟುಮಾಡಲಿ.

ತಾ|| ೨೦-೭-೨೧. **ಮೈಸೂರು ಪುರನಿವಾಸಿಗಳು.**

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

43 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸೂಕ್ತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಫ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

43 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಫಲಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು. 41

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ದಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅನ್ಯತಮಹಿಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ ನೆಯ ಇಸವಿ ಜುಲೈ ತಾ|| ೨೪ ರಿಂದ ೧೯೨೧ ನೆಯ ಜುಲೈ ತಾ|| ೩೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಆಷಾಢಬಹುಳ ಚವುತಿಯಿಂದ ಆಷಾಢಬಹುಳ ದಶಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿಧುಮಾಸ
24	ಭಾನು	ಚೌತಿ	13-29	ಪೂಭಾ	51-9	9
25	1ಸೋಮ	ಪಂಚ	16-51	ಉಭಾ	55-35	10
26	2ಮಂಗಳ	ಷಷ್ಠಿ	19-3	ರೇವ	58-51	11
27	ಬುಧ	ಸಪ್ತ	20-3	ಅಶ್ವಿ	60	12
28	ಗುರು	ಅಷ್ಟ	19-47	ಅಶ್ವಿ	0-6	13
29	3ಶುಕ್ರ	ನವ	18-11	ಭರ	0-44	14
30	ಶನಿ	ದಶ	15-30	ಕೃತ್ತಿ	0-15	15

(1) ಟೀಕಾಚಾರ್ಯರ ಪುಣ್ಯದಿನ. (2) ಶ್ರೀ ಚಾಮುಂಡೇಶ್ವರೀ ಸ್ತೋತ್ರತ್ಸವ, ಜಯಚಾಮರಾಜರವರ ವರ್ಧಂತಿ. (3) ಆಡಿಶುಕ್ರವಾರ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ಸಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ||
ನೀಪಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೭-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೮) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಜುಲೈ ತಾರೀಖು ೩೧ ನೆಯ ಭಾನುವಾರ (ಸಂಚಿಕೆ ೩೦

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ,

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
29 ಮೈಸೂರು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮಾರ್ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮಾರ್ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ „ 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
44 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಟೀಕ ವೀರಶೈವ ವಿವಾಹವಿಧಿ ೦—೧೩—೦
ಾರುಶೀಲಚರಿತ್ರೆ ೦—೧೦—೦
ಂಡಾಸಿ ೦— ೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫೂ|| ಪ್ರ ೧ಕ್ಕೆ ಸಾ|| ರೂ. ೧—೪—೦. ಕಾ || ಸಾ|| ಆಣೆ ೧೨.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫೂ||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮ × ೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲುಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡದ ಈ ಫೋಟೋ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫೂ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫೂ|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಕಳ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫೂ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ:—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫೂ|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೋಗಳು ಕೈ|| ವಾ|| ರಾಜಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣಾ ಕುಂಬಾರ ಕೊಟ್ಟಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಿಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪೂರು ಸಿದ್ಧರಾಮೇಶ್ವರ, ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ|| ಗು|| ಚಿತ್ರದುರ್ಗದ ಮಹಾಸ್ವಾಮಿ, ಅಥಣಿ ಶಿವಯೋಗಿಗಳು, ಹಾನಗಲ್ಲ ಸ್ವಾಮಿಗಳು, ಸೊಲ್ಲಾಪೂರದ ಪ್ರಸಿದ್ಧ ನಾಲತ್ತವಾಡದ ಶರಣರು, ಬಿಳೂರ ಸ್ವಾಮಿಗಳು, ಕಮತಗಿ ಹುಚ್ಚೇಂದ್ರಸ್ವಾಮಿಗಳು, ಸದ್ಯಕ್ಕೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರ ಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ|| ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ|| ಬ|| ವಾರದ ಮಲ್ಲಪ್ಪನವರು, ಮುಂತಾದ ಫೋಟೋಗಳು ಸಿಗುತ್ತವೆ. ಕ್ರಯ ಫೂ|| ಸಾ|| ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

7 ವಿಳಾಸ—ಗಂಗಪ್ಪಾ ಜೇರಿಗೆ ಫೋಟೋ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ		ರೂ. ವರೆಗೆ
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0

ಬಿಡಿ ಮಣಿಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಮುಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ.40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
23 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 12

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪನಿ,
ನಂ. 7 ಪೋಸ್ಟ್ ಶಿರ್ಸಿ, ಉತ್ತರಕನಡಾ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಜುಲೈ ತಾ|| ೩೧ ನೆಯ ಭಾನುವಾರ.

ಪತ್ರಿಕಾ ಸ್ವವಿಷಯ

ಹಿಂದುಳಿದವರ ಅಭ್ಯುದಯವನ್ನು ಸೈರಿಸದಿರುವ ಸ್ವಾರ್ಥೈಕಪರರ ಬೊಬ್ಬೆಯು ಮಿತಿಮೀರಿಹೋಗಿದೆ. ಅವರು ಅಂತರಂಗದಲ್ಲಿಟ್ಟುಕೊಂಡಿದ್ದ ಈರ್ಷ್ಯಾಸೂಯೆಗಳನ್ನು ಈಗ ಬಹಿರಂಗವಾಗಿ ತೋರಿಸಲುಪಕ್ರಮಿಸಿದ್ದಾರೆ. ಮುಂಬರಿಯಬೇಕೆಂದು ಪ್ರಯತ್ನಿಸುತ್ತಿರುವ ಸಹೋದರ ಪ್ರಜೆಗಳನ್ನೆಲ್ಲಾ ಅವರು ಮನಃಪೂರ್ವಕವಾಗಿ ದ್ವೇಷಿಸುತ್ತಿದ್ದಾರೆ. ತಮ್ಮಂತೆಯೇ ಅವರೂ ಅಭ್ಯುದಯಗೊಳ್ಳಲಿ, ಅವರೂ ನಾವೂ ಜತೆಗೂಡಿ ದೇಶಸೇವೆಯನ್ನು ಮಾಡಿ ವೃದ್ಧಿಗೊಳ್ಳೋಣವೆಂಬ ಸೌಹಾರ್ದವೂ ಸಾತ್ವಿಕತನವೂ ಅವರಿಂದ ಎಷ್ಟೋ ದೂರ ತೊಲಗಿಹೋಗಿವೆ. ಇಷ್ಟೇ ಅಲ್ಲದೆ ಹಿಂದುಳಿದವರ ದೀನಸ್ಥಿತಿಯನ್ನು ತೊಲಗಿಸಿ ಸಕಲ ಪ್ರಜೆಗಳನ್ನೂ ಸಮದೃಷ್ಟಿಯಿಂದ ಕಾಣಬೇಕೆಂದು ಧರ್ಮಮಾರ್ಗಪರತೆಯಿಂದ ಪ್ರವರ್ತಿಸುವ ಶ್ರೀಮನ್ಮಹಾರಾಜರ ಸರ್ಕಾರವನ್ನು ಕೂಡ ಅವರು ದ್ವೇಷಿಸುತ್ತಿದ್ದಾರೆ. ಮತ್ತು ವಾಚಾಮಗೋಚರವಾಗಿ ಸ್ವದೇಶ ಪರದೇಶ ಪತ್ರಿಕೆಗಳಲ್ಲೆಲ್ಲಾ ನಿಂದಿಸುತ್ತಿದ್ದಾರೆ. ತಾವು ಹಗೆತನ ಮಾಡುತ್ತಿರುವ ಪ್ರಜೆಗಳಿಗೆ ಸಹಾಯೀಕರಿಸುವ ಸರ್ಕಾರವು ಇರುವುದಕ್ಕಿಂತಲೂ ನಿರ್ನಾಮವಾಗುವುದೇ ತಮಗೆ ಇಷ್ಟವೆಂಬುದನ್ನು ತಮ್ಮ ಪ್ರವರ್ತನೆಗಳಿಂದ ವ್ಯಕ್ತಪಡಿಸುತ್ತಿದ್ದಾರೆ. ಸತ್ಯನ್ಯಾಯ ಧರ್ಮಗಳನ್ನೆಲ್ಲಾ ಮೂಲೆಗೊತ್ತರಿಸಿ ಅನೃತ ಅನ್ಯಾಯ ಅಧರ್ಮಗಳನ್ನು ಅಪ್ಪಿಕೊಂಡಿದ್ದಾರೆ. ಈ ಕಾರಣದಿಂದ ಮಲಿನ ಮನಸ್ಕರಾಗಿರುವ ಈ ಜನರ ಕೋಲಾಹಲವು ಉಚ್ಛೃಂಖಲವಾಗಿರುತ್ತದೆ. ತಮಗೇ ಇದು ಕಳಂಕಾಪಾದಕವಾಗಿಯೂ ಹಾನಿಕರವಾಗಿಯೂ ಇದೆಯೆಂಬ ಅರಿವಿನ ಲೇಶವೂ ಕೂಡ ಇವರಲ್ಲಿ ಇಲ್ಲದೆಹೋಗಿರುವುದರಿಂದ ಇವರ ಭಾಷಣಗಳೂ ಲೇಖನಗಳೂ ಜೇಳಿನ ಕೊಡೆತದಂತೆ ಬಹಳ ದುಸ್ಸಹವಾಗಿಯೂ ದುಷ್ಟವಾಗಿಯೂ ಇರುತ್ತವೆ. ಸ್ಥಿತಿಯು ಹೀಗಿರುವಾಗ್ಗೆ ಇದರ ನಿರೋಧೋಪಾಯವನ್ನು ಇತರರು ಅವಲಂಬಿಸದಿದ್ದರೆ ಅವರಿಗೆ ಉದ್ಧಾರಮಾರ್ಗವೇ ಇಲ್ಲದಂತಾಗುವುದು. ನಾವು ಇವರನ್ನು ದ್ವೇಷಿಸದಿದ್ದರೂ, ಪರರನ್ನು ದ್ವೇಷಿಸಬೇಕಾದ ಅವಶ್ಯಕತೆಯು ನಮಗೆ ಇಲ್ಲದಿದ್ದರೂ, ನಮ್ಮನ್ನು ಅಹರ್ನಿಶಿಯೂ ದ್ವೇಷಿಸಿ ನಮ್ಮ ಮೂಲೋತ್ಪಾಟನೆಗಾಗಿ ಹೊಂಚು ಹಾಕಿಕೊಂಡಿರುವವರನ್ನು ಕಂಡೂ ಕಂಡೂ ನಾವು ತಟಸ್ಥರಾಗಿರುವುದೆಂದರೆ ನಮ್ಮ ಗೋರಿಯನ್ನು ನಾವೇ ತೋಡಿಕೊಂಡಂತಾಗುವುದು. ಅಸೂಯಾಂಧನಾದ ವೈರಿಯು ನಿಷ್ಕರುಣೆಯಿಂದ ಕತ್ತಿಯನ್ನು ಹಿರಿದು ಕಡಿಯುವುದಕ್ಕೆ ನಿಂತಿರುವಾಗ ನಾವು ಕೈಜೋಡಿಸಿ ತಲೆ ಬಗ್ಗಿಸಿರುವುದು ಮನುಷ್ಯ ಧರ್ಮಕ್ಕೆ ದೂರವಾದ ಕೆಲಸ. ಅವರು ತಾಮಸ ವೈರವನ್ನು ತಾಳಿರುವಾಗ ನಾವು ಸಾತ್ವಿಕ ವೈರವನ್ನಾದರೂ ತಾಳಿಯೇ ತೀರಬೇಕಾಗುವುದು. ಇಲ್ಲದಿದ್ದರೆ ಆತ್ಮರಕ್ಷಣೆಗೆ ಉಪಾಯವೇ ಇಲ್ಲ. ಅದುಕಾರಣ ಈ ವಿಷಮ ಕಂಟಕದಿಂದ ಹಿಂದುಳಿದ ಜನವರ್ಗದವರೆಲ್ಲರೂ ಪಾರಾಗಬೇಕಾಗಿದ್ದರೆ ತಕ್ಕ ಧೈರ್ಯ ಸ್ಥೈರ್ಯಗಳಿಂದಲೂ ಎಚ್ಚರಿಕೆಯಿಂದಲೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಸಿದ್ಧರಾಗಿಯೇ ತೀರಬೇಕು.

ಈಗಣ ಕಾಲದಲ್ಲಿ ರಾಜಸ ತಾಮಸಗಳಿಗೇ ಪ್ರಾಬಲ್ಯವು ಹೆಚ್ಚು. ಸಾತ್ವಿಕರ ಸಣ್ಣ ದನಿಗೆ ಜಯವೇ ಇಲ್ಲ. "ಬಾಯುಳ್ಳವನು ಬರದಲ್ಲಿ ಗೆದ್ದ" ನೆಂಬ ಗಾಥೆಯಂತೆ ಗಟ್ಟಿಯಾಗಿ ಕೂಗಿಕೊಳ್ಳುವವನ ದೂರೇ ದೂರು. ಅದು ಅಸತ್ಯವಾಗಿದ್ದರೂ ಅಧರ್ಮವಾಗಿದ್ದರೂ ಎಲ್ಲರ ಕಿವಿಗೂ ಅದೇ ಬಿದ್ದು ಲೋಕವನ್ನು ಮರುಳುಗೊಳಿಸುವುದು. ಸಾಮರ್ಥ್ಯವಿಲ್ಲದ ಪ್ರತಿಧ್ವನಿಯಲ್ಲಿ ಎಷ್ಟೇ ಸತ್ಯಧರ್ಮಗಳು ಪರಿಪೂರ್ಣವಾಗಿದ್ದರೂ ತಾಮಸ ಕೋಲಾಹಲದ ಮಧ್ಯದಲ್ಲಿ ಇದು ಯಾರ ಕಿವಿಗೂ ಬೀಳುವುದೇ ಇಲ್ಲ. ಅದುಕಾರಣ ಸತ್ಯನ್ಯಾಯ ಬಲವುಳ್ಳ ನಮ್ಮ ಪಕ್ಷದ ಕೂಗು ಅನ್ಯಾಯಪಕ್ಷದ ಅಧರ್ಮ ಕೋಲಾಹಲವನ್ನು ಮೀರಿಸುವಂತೆ ಮಾಡಿಕೊಳ್ಳಬೇಕಾದುದು ಅವಶ್ಯಕವಾಗಿರುತ್ತದೆ. ಪರಿಣಾಮದಲ್ಲಿ ನ್ಯಾಯಧರ್ಮಗಳಿಗೇ ಜಯವಾಗುವುದೆಂಬುದಕ್ಕೆ ಸಂಶಯವೇ ಇಲ್ಲ.

ಹಿಂದುಳಿದವರ ಧರ್ಮಪಕ್ಷವನ್ನು ಲೋಕದ ಕಣ್ಣೆದುರಿಗೆ ಇಟ್ಟು ಬಲವಾಗಿ ಕೂಗತಕ್ಕ ವೃತ್ತಪತ್ರಿಕೆಗಳ ಸಂಖ್ಯೆಯು ನಮ್ಮ ದೇಶದಲ್ಲಿ ಬಹಳ ಕಡಿಮೆ. ಅವು ವೃದ್ಧಿಯಾಗಬೇಕು. ಮತ್ತು ವಾರಕ್ಕೆರಡಾವೃತ್ತಿಯೋ ಅಥವಾ ಪ್ರತಿದಿನವೋ ಹೊರಡುವ ಅಂಥ ಪತ್ರಿಕೆಯನ್ನು ಸ್ಥಾಪಿಸಿ ಪ್ರಕಟಿಸುವುದು ಈಗ ಅತ್ಯವಶ್ಯಕವಾಗಿರುವುದು. ನಮ್ಮ ಪರಿಸ್ಥಿತಿಯಲ್ಲಿ ಅದನ್ನು ನಾವೇ ಸಾಗಿಸುವುದಕ್ಕೆ ಸಾಧ್ಯವಲ್ಲ. ದೇಶಾಭ್ಯುದಯೈಕ ದೃಷ್ಟಿಯುಳ್ಳ ಹಿಂದುಳಿದ ವಿದ್ವಜ್ಜನರು ಇದಕ್ಕೆ ಪ್ರಬಲವಾದ ಪ್ರಯತ್ನವನ್ನು ಮಾಡಿಯೇ ತೀರಬೇಕು. ನಾವಾದರೂ ಈಗ ಸಾಧ್ಯವಾದಷ್ಟು ಹೆಚ್ಚಿನ ಸಾಹಸವನ್ನು ಮಾಡುವುದರಲ್ಲಿ ಉದಾಸೀನರಾಗಿರುವುದಿಲ್ಲ. ದೇಶದ್ರೋಹಿಗಳೂ ರಾಜದ್ರೋಹಿಗಳೂ ಆದ ಕೆಲವರು ಹೊರಗಣ ನಾಡಿನ ಪತ್ರಿಕೆಗಳಿಗೆ ಆಂಗ್ಲಭಾಷೆಯ ಅಸತ್ಯ ಲೇಖನಗಳನ್ನು ಕಳುಹಿಸಿ ನಮ್ಮ ದೇಶಕ್ಕೂ ಪ್ರಭುಗಳಿಗೂ ಅಪಕೀರ್ತಿಯನ್ನು ಉಂಟುಮಾಡುತ್ತಲಿದ್ದಾರೆ; ಜನರ ಮನಸ್ಸನ್ನೆಲ್ಲಾ ಕಲುಷಗೊಳಿಸಲು ಬದ್ಧಕಂಕಣರಾಗಿದ್ದಾರೆ. ಅಂಥವುಗಳ ದುಷ್ಟತನವನ್ನೆಲ್ಲಾ ಹೊರಗೆ ಹಾಕಿ ನಿಜಸ್ಥಿತಿಯನ್ನು ಹೊರಪಡಿಸಿ ದೇಶದ ಗೌರವವನ್ನೂ ರಾಜಭಕ್ತಿಯನ್ನೂ ಸ್ಥಿರಪಡಿಸುವ ಕೆಲಸವನ್ನು ಹಿಂದುಳಿದ ಜನವರ್ಗಗಳವರೇ ಈಗ ಮಾಡಬೇಕಾಗಿ ಬಂದಿದೆ. ಅದನ್ನು ದೇಶಭಾಷೆಯ ಲೇಖನಗಳಿಂದಲೇ ಮಾಡಿ ಮುಗಿಸುವುದು ಸಾಧ್ಯವಲ್ಲ; ಆಂಗ್ಲಭಾಷೆಯಿಂದಲೇ ಮಾಡಬೇಕು. ಕಪಟಿಗಳಿಂದ ಮೋಸಹೋಗುತ್ತಿರುವ ಹೊರಗಣಜನರಿಗೆ ನಾವು ನಿಜಸ್ಥಿತಿಯನ್ನು ಆಂಗ್ಲಭಾಷೆಯಿಂದಲೇ ವ್ಯಕ್ತಪಡಿಸಬೇಕಾಗಿದೆ. ಅದುಕಾರಣ ಇನ್ನುಮುಂದೆ ಸ್ಟಾರ್ ಪತ್ರದಲ್ಲಿ ಆಂಗ್ಲಭಾಷೆಯ ಲೇಖನಗಳಿಗೂ ಅವಕಾಶವನ್ನು ಕೊಡಲು ನಿರ್ಧರಿಸಿ, ಈ ಸಂಚಿಕೆಯಿಂದಲೇ ಅದಕ್ಕೆ ಆರಂಭಿಸಿರುತ್ತೇವೆ. ಹಿಂದುಳಿದವರ ಮೇಲಣ ಹಿತಚಿಂತನೆಯಿಂದಲೂ, ಅವರ ಅಭ್ಯುದಯಗಳಿಗೆ ಒಡ್ಡಲ್ಪಡುವ ಕಂಟಕಗಳಿಗೆ ಪ್ರತಿಕ್ರಿಯೆಗಳಾಗಿಯೂ ದೇಶಭಕ್ತಿ ರಾಜಭಕ್ತಿಗಳಿಂದ ಪರಿಪೂರ್ಣಗಳಾಗಿಯೂ ಇರುವಂಥ ಆಂಗ್ಲಭಾಷೆಯ ಲೇಖನಗಳನ್ನು ಯಾರು ಬರೆದು ಕಳುಹಿಸಿದರೂ ಅವಕ್ಕೆ ಇನ್ನು ಮುಂದೆ ಸ್ಥಲವನ್ನು ಕೊಡುವುದಲ್ಲದೆ ಆ ವಿಧದ ಆಂಗ್ಲಲೇಖನಗಳನ್ನು ನಾವೂ ಸ್ವತಃ ಪ್ರಕಟಿಸಲೂ ಕುತೂಹಲಪಟ್ಟಿರುವೆವು. ಈ ಸಂಚಿಕೆಯಿಂದಲೇ ಆಂಗ್ಲಲೇಖನಕ್ಕೆ ಸ್ಥಲವನ್ನು ಕೊಟ್ಟಿರುವೆವು. ಇದಕ್ಕಾಗಿಯೇ ಪತ್ರಿಕೆಯ ಆಕೃತಿಯನ್ನು ಇನ್ನು ಮುಂದೆ ೬ ಪುಟಗಳುಳ್ಳುದನ್ನಾಗಿ ಮಾಡುವೆವು ವರ್ಗಣಿದಾರರ ಪ್ರೋತ್ಸಾಹವು ಹೆಚ್ಚಿದಂತೆ ಶಾಶ್ವತವಾಗಿ ೮ ಪುಟಗಳುಳ್ಳುದನ್ನಾಗಿ ಮಾಡಲೂ ಸಿದ್ಧರಾಗಿರುವೆವು.

ಆದರೆ ಕಾಗದ ಮೊದಲಾದ ಮುದ್ರಣಸಾಧನಗಳ ಬೆಲೆಯು ಇಳಿದೇ ಇಲ್ಲ. ದೇಶಸೇವೆಯ ಅಭಿಮಾನದಿಂದ ನಾವು ಈ ಕಾರ್ಯದಲ್ಲಿ ಬದ್ಧದೀಕ್ಷೆಯುಳ್ಳವರಾಗಿದ್ದೇವೆಯೇ ಹೊರತು ಇದರಲ್ಲಿ ಅರ್ಥಾರ್ಜನೆಯ ಆಸೆಯನ್ನಿಟ್ಟುಕೊಳ್ಳಲು ಅವಕಾಶವೇ ಇಲ್ಲ, ಮತ್ತು ಸಾಧ್ಯವೂ ಅಲ್ಲ. ಆಗುವ ವೆಚ್ಚಗಳಿಗೆ ತಕ್ಕಷ್ಟು ಆದಾಯವು ಬಂದರೆ ಸಾಕಾಗಿದೆ. ಅದುಕಾರಣ ಕರ್ತವ್ಯಭಾರದ ಕಡೆಗೆ ದೃಷ್ಟಿಯಿಟ್ಟು, ಇದು ಪ್ರತಿಯೊಬ್ಬ ಹಿಂದುಳಿದವನ ಆತ್ಮೋದ್ಧಾರ ಪ್ರಯತ್ನವೆಂಬುದನ್ನು ಚೆನ್ನಾಗಿ ಗಮನಿಸಿ, ಪ್ರತಿಯೊಬ್ಬ ನಮ್ಮ ವರ್ಗಣಿದಾರರೂ ತಮ್ಮ ಆಪ್ತಜನ ಸಮುದಾಯದಲ್ಲೆಲ್ಲಾ ಈ ವಿಷಯವನ್ನು ಪ್ರಕಟಿಸಿ, ವರ್ಗಣಿದಾರರ ಸಂಖ್ಯೆಯನ್ನು ಹೆಚ್ಚಿಸಿಕೊಟ್ಟು ಸಹಾಯೀಕರಿಸುವವರಾಗಬೇಕೆಂದು ಕೋರುತ್ತೇವೆ.

ಈ ನೂತನ ಪ್ರಯತ್ನದಲ್ಲಿ ನಮಗೆ ವೆಚ್ಚದಭಾರವು ಇನ್ನಷ್ಟು ಅಧಿಕವಾಗುವುದರಿಂದ ನಿರ್ವಾಹವಿಲ್ಲದೆ ವರ್ಗಣಿಯ ದರವನ್ನು ಸ್ವಲ್ಪ ಹೆಚ್ಚಿಸಬೇಕಾಗಿದೆ. ಇತಃಪರಃ ಪರಸ್ಥಳದ ಚಂದಾದಾರರು ಅಂಚೆವೆಚ್ಚವೂ ಸೇರಿ ವರ್ಷಕ್ಕೆ ೨|| ರೂ. ಗಳನ್ನೂ, ಸ್ಥಳದವರು ೧-೧೦-೦ ನ್ನೂ ಕೊಡಬೇಕಾಗುತ್ತದೆ. ಮನಮುಟ್ಟಿ ಸಾಹಸಪಡುತ್ತಿರುವ ಈ ತಮ್ಮ ಪುರಾತನ ಬಂಧುವಿನ ಪೋಷಣೆಯಲ್ಲಿ ಅಭಿಮಾನವುಳ್ಳ ಮಹಾಜನರು ಇದಕ್ಕೆ ಹಿಂಜರಿಯಲಾರರೆಂದೂ, ಇದುವರೆಗೆ ನಮ್ಮ ವರ್ಗಣಿದಾರರು ಸಾಹಾಯ್ಯಪ್ರೋತ್ಸಾಹಗಳನ್ನು ಮಾಡಿಕೊಂಡು ಬಂದಂತೆಯೇ ಮುಂದೆಯೂ ನಡೆಯಿಸಿಕೊಡುವರೆಂದೂ ನಂಬಿ ನಮ್ಮ ಕರ್ತವ್ಯದಲ್ಲಿ ತತ್ಪರರಾಗಿರುವೆವು.

ಒಳದೇಶದ ವೃತ್ತಾಂತಗಳು.

ಮ|| ಸಿ. ರಾಮಲಿಂಗರಡ್ಡಿ ಎಂ. ಎ., ಯವರು ಕಳೆದ ಮಂಗಳವಾರ ಬೆಳಗ್ಗೆ ಬೆಂಗಳೂರಿನಿಂದ ತಮ್ಮ ಸ್ಥಳವಾದ ಚಿತ್ತೂರಿಗೆ ಪ್ರಯಾಣಮಾಡಿದರು. ಸಿಲ್ದಾಣಕ್ಕೆ ನೂರಾರು ಮಂದಿ ಆಪ್ತಜನರು ಹೋಗಿದ್ದು ಸಾಗಗಳುಹಿಸಿ ಬಂದರು.

ವಿಶೇಷ ಧರ್ಮಕಾರ್ಯಗಳನ್ನು ಮಾಡಿ ಪರಮಸಾತ್ವಿಕವೃತ್ತಿಯಲ್ಲಿರುವ ಬೆಂಗಳೂರಿನ ಮ|| ದೊಡ್ಡಣ್ಣಶೆಟ್ಟರು ಕೆಲಕಾಲದಿಂದ ಅಸ್ವಸ್ಥರಾಗಿ ಈಗ ಅಂತ್ಯಾವಸ್ಥೆಯಲ್ಲಿರುವರೆಂದು ತಿಳಿಯಿಸಲು ವಿಷಾದಿಸುತ್ತೇವೆ

ಶ್ರೀ ಜಯಚಾಮರಾಜ ಒಡೆಯರವರ ದ್ವಿತೀಯ ವರ್ಷವರ್ಧಂತ್ಯುತ್ಸವವು ಅರಮನೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಸರ್ ಕಾಂತರಾಜ ಅರಸಿನವರೂ ಇದಕ್ಕಾಗಿ ರಾಜಧಾನಿಗೆ ದಯಮಾಡಿಸಿರುವರು. ಆದಿನ ಮುಜರಾಯಿ ದೇವಾಲಯಗಳಲ್ಲೆಲ್ಲಾ ವಿಶೇಷ ಪೂಜಾಪ್ರಾರ್ಥನೆಗಳು ನಡೆದುವು.

ರಾಜಧಾನಿಯ ದೊಡ್ಡಪೇಟೆಯ ವರ್ತಕರು ಜಗ್ಗೂಲಾಲಾ ಧರ್ಮಸತ್ರದಲ್ಲಿ ಆಗಾಗ್ಗೆ ಧರ್ಮನೀತಿಸಂಬಂಧವಾದ ಉಪನ್ಯಾಸಗಳು ನಡೆಯುವಂತೆ ಮಾಡಬೇಕೆಂದು ಪ್ರಯತ್ನಿಸಿದ್ದಾರೆ. ಬರುವ ಆಷಾಢ ಬಹುಳ ೩೦ ಬುಧವಾರ ಸಾಯಂಕಾಲ ೫ ಗಂಟೆಗೆ "ಸಾತ್ವಿಕಾಹಾರವೂ ವಿಜ್ಞಾನಶಕ್ತಿಯೂ" ಎಂಬ ವಿಷಯವಾಗಿ ಮ|| ಗೋಧಿ ಶ್ರೀನಿವಾಸಯ್ಯಂಗಾರರು ಕನ್ನಡದಲ್ಲಿ ಉಪನ್ಯಾಸ ಮಾಡುವವರಾಗಿದ್ದಾರೆ. ಮಹಾಜನರೆಲ್ಲರೂ ದಯಮಾಡಿಸಬೇಕೆಂದು ಪ್ರಾರ್ಥಿಸಲ್ಪಟ್ಟಿದ್ದಾರೆ.

ಮ|| ಹಲ್ಕೂರು ಮರುಳಸಿದ್ದಪ್ಪನವರು ಅರಸೀಕೆರೆಯಲ್ಲಿ ೧೦ ಸಹಸ್ರ ರೂ. ಗಳ ವರೆಗೆ ಮುಟ್ಟಿಸಿ ಹೊಸದಾಗಿ ಕಟ್ಟಿಸಿರುವ ಬಾಲಿಕಾ ಪಾಠಶಾಲೆಯ ಪ್ರವೇಶಮಹೋತ್ಸವವನ್ನು ಬರುವ ಆಗಸ್ಟ್ ತಾ|| ೧೦ ರಲ್ಲಿ ನೆರವೇರಿಸಲು ದಿವಾನ್ ಸಾಹೇಬರವರು ಅಂಗೀಕರಿಸಿ ಆದಿನ ಮಧ್ಯಾಹ್ನಕ್ಕೆ ಅಲ್ಲಿಗೆ ದಯಮಾಡಿಸುವವರಾಗಿದ್ದಾರೆ. ಆ ಕಾಲದಲ್ಲಿ ಸತ್ಕಾರದ ಏರ್ಪಾಟುಗಳನ್ನೆಲ್ಲಾ ವಿಜೃಂಭಣೆಯಿಂದ ನೆರವೇರಿಸಲೂ ಒಂದು ಕ್ಯಾಸ್ಕೆಟ್ಟಿನಲ್ಲಿ ವಿಜ್ಞಾಪನ ಪತ್ರವನ್ನಿಟ್ಟು ಅರ್ಪಿಸಲೂ ಮ|| ಮರುಳಸಿದ್ದಪ್ಪನವರು ಏರ್ಪಡಿಸಿದ್ದಾರೆ.

ಜೈನ ಎಜುಕೇಷನ್ ಫಂಡು ಅಸೋಸಿಯೇಷನ್ನಿನಿಂದ ಈ ವರ್ಷದ ಪ್ರಜಾಪ್ರತಿನಿಧಿಸಭೆಗೆ ಪ್ರತಿನಿಧಿಯನ್ನು ಚುನಾಯಿಸಲು ಇದೇ ಮಾಹೆ ತಾ|| 21 ನೆ ಗುರುವಾರ ಪ್ರಾತಃಕಾಲ ಫಂಡಿನ ಪ್ರೆಸಿಡೆಂಟರಾದ ಶ್ರೀಯುತ ಎಂ. ಎಲ್. ವರ್ಧಮಾನಯ್ಯನವರ ಅಧ್ಯಕ್ಷತೆಯಲ್ಲಿ ಸ್ಪೆಷಲ್ ಜನರಲ್ ಮೀಟಿಂಗು ಶ್ರೀಮಾನ್ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿ ನಿಲಯದಲ್ಲಿ ನಡೆಯಿತು. ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಅಸೋಸಿಯೇಷನ್ನಿನ ಮೆಂಬರುಗಳು ದಯಮಾಡಿಸಿದ್ದರು. ಈ ನಮ್ಮ ಅಸೋಸಿಯೇಷನ್ನಿನಿಂದ ಒಬ್ಬ ಮೆಂಬರನ್ನು ಪ್ರಜಾಪ್ರತಿನಿಧಿ ಸಭೆಗೆ ಕಳುಹಿಸಿಕೊಡುವ ಹಕ್ಕನ್ನು ಅಸೋಸಿಯೇಷನ್ನಿನ ಕೋರಿಕೆಯಂತೆ ದಯಪಾಲಿಸಿದುದಕ್ಕೋಸ್ಕರ ಘನವನ್ನು ಹೊಂದಿದ ನಮ್ಮ ಶ್ರೀಮನ್ ಮಹಾರಾಜರ ಸರ್ಕಾರದವರಿಗೆ ವಂದನೆಗಳನ್ನು ಅರ್ಪಿಸಿದನಂತರ ಮ|| ರಾ|| ಸಾಲಿಗ್ರಾಮದ ಸಾಹುಕಾರ್ ಉಪಾಧ್ಯಾಯ ನಾಗರಾಜಯ್ಯನವರು ಅಸೋಸಿಯೇಷನ್ನಿನ ಪರವಾಗಿ ಚುನಾಯಿಸಲ್ಪಟ್ಟರು. ಮೀಟಿಂಗಿನ ಕಾರ್ಯಗಳು ನೆರವೇರಿದನಂತರ ಶ್ರೀಮನ್ ಮಹಾರಾಜರವರಿಗೂ, ರಾಜಮನೆತನಕ್ಕೂ, ಶ್ರೇಯೋಭಿವೃದ್ಧಿಗಳುಂಟಾಗಲೆಂದು ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

To

THE EDITOR OF THE MYSORE STAR.

Dear Editor,

The Miller Committee Report and the Order of Government thereon have been the subject matter of severe criticism at the hands of those persons who have been for many years past dominating public opinion from the vantage-ground of official position which has more or less been exclusively in their possession. The Country has been in the grip of one class so far as public opinion as ventilated in the columns of news papers is concerned. This is due to the fact of the method of administration in vogue in the Public Service of Mysore which is almost a copy of what it is in British India. The class of people who were attracted into that Service were those whose interests in other walks of life in this Country as the same existed at the time when the new system was introduced, were limited. The Service wanted such class of men as were ready and prepared to work for wages. This accounts for the importation of men from the neighbouring Presidencies of Madras and Bombay during the Commission days and the two administrations immediately following. The fact that the successive Heads of the Administrations belonged to one community or caste accounts for the predominance of one class of people in the Public Service. The system of education was also such as was intended to produce men whom the machinery of Public Service as thus brought into existence, required. It was a problem of demand and supply. The people who were earliest in the field had naturally the advantage of monopolising the Public Service and subsequently the advantage of shaping the public opinion to guard its interests in Public Service. The Government servant, the Lawyer and the Shanbhogue forming the clique of that community attained the culminating point of domination in all public life in Mysore during the period of the last administration and in the interests of the Country a brake had to be applied to check the head-long conduct of the men in the Public Service which having been in the hands of one class of people was speeding fast to the detriment of the remaining classes having abiding interests in the Country. The honor of applying that brake and the honor of doing service to the Country at large fell to the lot of the present administration which deserves to be congratulated on the courage shown in the issue of that memorable document contained in the Order on the Miller Committee Report.

It certainly grieves any fair minded person to read that volume of undeserved matter appearing in print on the subject of the Miller Committee Report. The absence of opinion and the feeling of the other side on the subject is likely to prejudice the outside disinterested mind by giving a wrong impression as a result of repeated reading of selfish ideas circulated by the one class whose members fear that their unchecked powers are about to be examined and revised. The communications of Mr. S. S. Setlur and of A. B. on the subject are refreshing occasionally but their effects vanish as the wrong waves of criticism rush in volumes in rapid succession. It behoves you, dear Editor to counteract the malevolent influence of these publications which have penetrated so far as Calcutta as indicated by A. B.

A patient and impartial examination of this document which is unfairly criticised will indicate that no class is penalised for Public Service. It on the other hand safe-guards the prospects of those already in service and advises the members of other classes to receive education and to compete for Public Service. To encourage them to come forward, the document says that the members of the Backward Communities will, all things being equal, receive a sympathetic consideration. In the higher education field there may be at present 2 to 5 students of the big body of Backward Communities to 100 of the small class of persons who have now monopolised Public Service. And in the seven years to come it may be that against 100 vacancies of all grades and classes there may be 5 to 10 candidates from the non-monopolists and 500 to 1000 from the monopolists. What does the document say? It says give 5 out of 100 places to the Backwards and 95 to the Forwards. Is there any penalty attached to the Forwards? In the field of horse racing and other sports there is a process of handicap which is considered honorable and equitable. There is no handicap process in this Order on the Miller Committee Report.

In the heaps of examinations which the Backwards are required to pass to compete with the Forwards on equal terms, it is to speak frankly an uphill task for the Backwards. The deceptive word "Efficiency" under which all heartlessness and unbrotherliness are introduced into Public Service and which has created injustice, will go to triumph if the Backwards do not take proper care.

The Forwards have an organisation for propagandist work in the bodies of the Lawyers and Shanbhogues and they have their own papers to cry down the policy of Government if it does not foster their ends. These are their advantages. They are merciless in their wars and do anything to win their ends. In this vantage ground they stand well-informed, will-armed and well situated. The Backwards are exposed to their bits. And this is the actual situation.

Read that sentence in the latest telegram's which is uttered in connection with the Irish situation. Irish people "who, we claim, have been systematically, wilfully, and fundamentally mislead by a foreign power." How completely and really it applies to the situation in which we are placed where "we have been systematically, wilfully and fundamentally ill treated, ill used by an unsympathetic and selfish class which claims superiority in all things of life over its fellow brothren" who is not a foreigner. As this letter is being concluded the issue of the wealth of Mysore? for 22-7-21 is put into the writer's hand. It aches the heart to read the contents which at times threatens and at others flatters the end and aim being to deceive and all other shades of conduct between these two extremes, in dealing with the Miller Committee Report with a view to attain one end viz monopoly in Public Service.

It is time that we come to agreement and settle matters amongst ourselves. It is the Aggressor that should call fot the halt, but he does not. What will the Backwards do? Do they go to be crushed and removed from existence to a condition of absolute slavery to the monopolists. No! Wake up and organise to meet the situation and God will help us. Let us concentrate our attention on educating our children and to befit them to fight their battles for honorable life. Let word go from village to village to say that it is time to wake up and look around how things are developing. It is idle talk to say that all is well around us. Educate and organise all our Mantrams for the future and in them lies our salvation in society.

This is an earnest appeal coming from one who feels strongly for the Backwards whoever they are.

JUSTICE.

ಪತ್ರವ್ಯವಹಾರ.

ನೋಟೀಸ್.

ವೀರಶೈವ ಬಡವಿದ್ಯಾರ್ಥಿಗಳಿಗೆ ಸೂಚನೆ.—ಈ ಫಂಡಿನಿಂದ ಸ್ಕಾಲರ್‌ಷಿಪ್ ಪಡೆಯಲು ಅಪೇಕ್ಷಿಸುವ ಹೈಸ್ಕೂಲ್ ಕಾಲೇಜ್ ವಿದ್ಯಾರ್ಥಿಗಳು ಕೆಳಗೆ ಬರೆದಿರುವ ತಾರೀಖಿನೊಳಗಾಗಿ ಫಂಡಿನ ಪ್ರಿಂಟೆಡ್ ಫಾರಮ್ಮಿನಲ್ಲಿ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು.

೧. ಚಿತ್ರದುರ್ಗ ಮತ್ತು ದಾವಣಗೆರೆ ಹೈಸ್ಕೂಲ್ ವಿದ್ಯಾರ್ಥಿಗಳು ತಾರೀಖು ೩೦-೭-೨೧.

೨. ಕೊಲೀಜಿಯೆಟ್ ಹೈಸ್ಕೂಲ್ ವಿದ್ಯಾರ್ಥಿಗಳು ತಾ|| ೨೫-೮-೨೧.

೩. ಕಾಲೇಜು ವಿದ್ಯಾರ್ಥಿಗಳು ತಾರೀಖು ೨೦-೧೦-೨೧.

N. B.—ಲೇಟಾಗಿ ಬಂದ ಅಪ್ಲಿಕೇಷನ್‌ಗಳೂ ಮತ್ತು ಫಾರಂ ಸರಿಯಾಗಿ ಬರೆಯದ ಅಪ್ಲಿಕೇಷನ್‌ಗಳೂ ತಿರಸ್ಕರಿಸಲ್ಪಡುವುವು.

ಸೆಕ್ರಿಟರಿ
ವೀರಶೈವ ವಿದ್ಯಾವರ್ಧಕ ಫಂಡ್ ಸಂಘ, ದಾವಣಗೆರೆ.

ಕಾಂತರಾಜಪುರದಲ್ಲಿ ನಡೆದ ಸಂತೋಷಕೂಟ.

ಚನ್ನರಾಯಪಟ್ಟಣದ ತಾಲ್ಲೂಕು ಕಾಂತರಾಜಪುರದ ಪ್ರಜಾಪ್ರಮುಖರು ನಮ್ಮ ದಿವಾನ್ ಬಹದ್ದೂರ್ ಸರ್ ಎಂ. ಕಾಂತರಾಜ ಅರಸ್ ಬಿ. ಎ. ಯವರಿಗೆ ಕೆ. ಸಿ. ಐ. ಇ. ಎಂಬ ಅಮೋಘವಾದ ಬಿರುದು ಬಂದುದಕ್ಕಾಗಿ ತಮಗೆ ಉಂಟಾಗಿರುವ ಸಂತೋಷವನ್ನು ವಿಶದಪಡಿಸಲು ತಳಿರು ತೋರಣಗಳಿಂದಲಂಕೃತವಾದ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಕಳೆದ ತಿಂಗಳು ೧೫ ನೆಯ ತಾರೀಖು ಬುಧವಾರ ಪ್ರಾತಃಕಾಲ ೧೦ ಘಂ. ಗೆ. ಒಂದು ಸಂತೋಷಕೂಟವನ್ನು ಮ|| ಎಂ. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿಸಿದರು. ಈ ಸಭೆಗೆ ಗ್ರಾಮದ ಎಲ್ಲಾ ಪ್ರಜೆಗಳೂ ಎ. ವಿ. ಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲ್ ಉಪಾಧ್ಯಾಯರುಗಳೂ, ಬಾಲಕ-ಬಾಲಿಕೆಯರೂ ಸಹ ಸೇರಿದ್ದರು. ಸಭಾಧ್ಯಕ್ಷರು ನಮ್ಮ ದಿವಾನ್ ಬಹದ್ದೂರ್ ಸರ್ ಎಂ. ಕಾಂತರಾಜ ಅರಸಿನವರ ಅಮೋಘವಾದ ಗುಣಕಥನವನ್ನು ಮಾಡಿದ್ದಲ್ಲದೆ, ದಿವಾನರವರು ಕೆ. ಸಿ. ಐ. ಇ. ಎಂಬ ಬಿರುದನ್ನು ಪಡೆಯಲು ಎಷ್ಟು ಮಟ್ಟಿನ ಅರ್ಹತೆಯುಳ್ಳವರೆಂಬುದನ್ನೂ ಅವರು ಪ್ರಜೆಗಳ ಮತ್ತು ದೇಶದ ಉನ್ನತಿಗಾಗಿ ಸ್ವಾರ್ಥಪರತೆಯಿಲ್ಲದೆ ಮಾಡಿದ ಮತ್ತು ಇನ್ನೂ ಮಾಡುತ್ತಿರುವ ಅನೇಕ ಕಾರ್ಯಗಳನ್ನೂ ಸಭೆಯವರಿಗೆ ಹೃದಯಂಗಮವಾಗುವಂತೆ ವಿಶದಪಡಿಸುವುದರ ಮೂಲಕ ಆನಂದಗೊಳಿಸಿದರು. ಎ. ವಿ. ಸ್ಕೂಲ್ ಹೆ|| ಮಾಸ್ಟರ್ ಮ|| ಎನ್. ನಾರಣಪ್ಪನವರು ನಮ್ಮ ದಿವಾನ್ ಬಹದ್ದೂರ್‌ರವರು ಹಿಂದುಳಿದ ಪ್ರಜೆಗಳ ಅಭಿವೃದ್ಧಿಗಾಗಿ ಮಾಡುತ್ತಲಿರುವ ಸಾಹಸಕಾರ್ಯಗಳ ವಿಷಯವಾಗಿ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಮತ್ತು ಇಂಗ್ಲೀಷ್ ಮಾಸ್ಟರ್ ಮ|| ಎಂ. ಪುಟ್ಟಯ್ಯನವರು ಪ್ರಕೃತಕಾಲದಂಥ ಧನಾಭಾವದ ದುಸ್ಥಿತಿಯಲ್ಲಿಯೂ, ಆಹಾರಧಾನ್ಯಾದಿಗಳ ಅಭಾವಕಾಲದಲ್ಲಿಯೂ, ಯುದ್ಧಾನಂತರ ಸಂಭವಿಸಬಹುದಾದ ಶೋಚನೀಯಾವಸ್ಥೆಗಳುಂಟಾಗಿರುವ ಕಾಲದಲ್ಲಿಯೂ ನಮ್ಮ ದಿವಾನರವರು ರಾಜ್ಯಭಾರ ಸೂತ್ರವನ್ನು ಎಷ್ಟು ಸರಾಗವಾಗಿ ನಡೆಯಿಸುತ್ತಿದ್ದಾರೆಂಬ ವಿಷಯದಲ್ಲಿ ಸಭೆಯವರಿಗೆಲ್ಲ ಸಂತೋಷವಾಗುವಂತೆ ಉಪನ್ಯಾಸಮಾಡಿದರು. ಅನೇಕ ಕಾರ್ಯ ಗೌರವಗಳಿದ್ದಾಗ್ಯೂ ಅವುಗಳನ್ನೆಲ್ಲಾ ಬಿಟ್ಟು ಈ ಗ್ರಾಮಕ್ಕೆ ದಯಮಾಡಿಸಿ, ಕಾಂತರಾಜಪುರವೆಂದು ತಮ್ಮ ಹೆಸರಿಟ್ಟ ನಮ್ಮ ದಿವಾನ್ ಬಹದ್ದೂರ್‌ರವರಿಗೆ ಕೆ. ಸಿ. ಐ. ಇ. ಎಂಬ ಬಿರುದು ಬಂದುದಕ್ಕಾಗಿ ಸಂತೋಷಸೂಚಕವಾದ ಮೆಸೇಜನ್ನು ದಿವಾನ್ ಸಾಹೇಬರವರಿಗೆ ಕಳುಹಿಸಿದ ಮೇಲೆ ಸಭೆಯವರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಾದಿಗಳು ಹಂಚಲ್ಪಟ್ಟವು. ನಮ್ಮ ಚಕ್ರವರ್ತಿ ಸಾರ್ವಭೌಮರವರ ಶ್ರೀಮನ್ ಮಹಾರಾಜರವರ ದಿವಾನ್ ಸಾಹೇಬರವರ ಶ್ರೇಯಃಪ್ರಾರ್ಥನೆಯಾದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಶಿಡೇನೂರು.

ಲೆಜಿಸ್ಲೇಟಿವ್ ಅಸೆಂಬ್ಲಿಯೊಳಗಣ ಠರಾವುಗಳನ್ನು ಅನುಮೋದಿಸುವದಕ್ಕಾಗಿ ಕೂಡಿದ ಪರಿಷತ್ತು.

ಮೊದಲೇ ಗೊತ್ತಾಗಿದ್ದ ವೇಳೆಗೆ ಈ ಪರಿಷತ್ತಿಗೆ ಹಿರೇಕೆರೂರ ತಾಲ್ಲೂಕಿನೊಳಗಿನ ರಟ್ಟೀಹಳ್ಳಿ, ಮಾಸೂರ, ಅಣೂರ, ಹಾಂಸಭಾವಿ ಮತ್ತು ರಾಣೆಬೆನ್ನೂರ ಇತ್ಯಾದಿ ಗ್ರಾಮಗಳಿಂದ ಸ್ವಾಮಿಗಳೂ, ಸಾವಕಾರರೂ, ವಿದ್ಯಾರ್ಥಿಗಳೂ, ಸದ್ಗೃಹಸ್ಥರೂ ಸಭೆಗೆ ಆಗಮಿಸಿದ್ದರು. ಸಭಾಸ್ಥಾನವು ಇದೇ ಊರ ಕೈ|| ವಾ|| ಶಿವನಗೌಡರ ಸುಪುತ್ರರಾದ ಚನ್ನಬಸವನಗೌಡರು ಪಾಟೀಲ ಕೋ. ಕ್ರೆ. ಸೊಸೈಟಿ ವ್ಯಾ. ಕ. ಮೆಂಬರ ಇವರ ವಿಶಾಲವಾದ ಮತ್ತು ಶೃಂಗರಿಸಿದ ಹಾಲಿನಲ್ಲಿ ಶ್ರೀ ವೇ. ಮೂ. ಬಸಪ್ಪಯ್ಯನವರು ಕಬ್ಬಿನಕಂತಿಮಠ ರಟ್ಟೀಹಳ್ಳಿ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಅಧ್ಯಕ್ಷರು ತಮ್ಮ ಮಧುರವಾಣಿಯಿಂದ ಧರ್ಮಜಾಗ್ರತೆ ಹುಟ್ಟುವಂತೆ ಬೋಧಪರ ಭಾಷಣ ಮಾಡಿದ ಬಳಿಕ ಮಿ|| ಮಣಬಸನಗೌಡ ಸಿದ್ಧನಗೌಡ ಪಾಟೀಲ ತಾ. ಲೋ. ಮೆಂಬರ ಮತ್ತು ಕೋ. ಕ್ರೆ. ಸೊ. ಚೇರಮನ್ ಶಿಡೇನೂರ ಇವರು ಸಭೆಯಲ್ಲಿ ಯಾವತ್ತು ಜನರ ಮನಸ್ಸಿಗೆ ಬಿಂಬಿಸುವಂತೆ "ಸಕ್ತಿಯ ಪ್ರಾಥಮಿಕ ಶಿಕ್ಷಣ" "ಜೋಶಿಬಾಬು" ಇವರ ಮೇಲೆ ಭಾಷಣಮಾಡಿ ಇವೆರಡು ಠರಾವುಗಳನ್ನು ಸಭೆಯ ಮುಂದೆ ಇಟ್ಟರು.

೧ನೇ ಠರಾವ.—ಜೋಶಿಬಾಬು ತೆಗೆದುಹಾಕಲಿಕ್ಕೆ ಬೇಕೆಂತ ಕಾಯದೆ ಆಗತಕ್ಕದ್ದೆಂದು ಸರ್ವಾನುಮತದಿಂದ ಅಧ್ಯಕ್ಷರು ಪಾಸುಮಾಡಿದರು.

೨ನೇ ಸೂಚನೆ.—ಮಿ|| ಆರ್. ಯು. ಹಿತ್ತಲಮನಿ ಇವರು ಸಕ್ತಿಯ ಶಿಕ್ಷಣವನ್ನು ಅಮಲಿನಲ್ಲಿ ಯಾಕೆ ತರಬೇಕು? ಇದರ ಅವಶ್ಯಕತೆಯೇನು? ಎಂಬ ಬಗ್ಗೆ ಭಾಷಣಮಾಡಿದರು. ಇದರ ವಿಷಯಕ್ಕೆ ಮಿ|| ಲಿಂಗಪ್ಪ ಭರಮಪ್ಪ ಮಲ್ಲಾಡ, ಸಾವಕಾರ ಮಿ|| ರಾಮಪ್ಪ ಬದರಕಟ್ಟಿ ಈ ಉಭಯತರೂ ಪುಷ್ಟೀಕರಿಸಿದರು. ಇದೇ ವಿಷಯವನ್ನು ಮಿ|| ಮಣಬಸವನಗೌಡರು ಹಾವನೂರ ಇವರು ಭಾಷಣಮಾಡಿದರು.

೩ನೇ ಠರಾವ.—ಸಾರ್ವತ್ರಿಕ ಸಕ್ತಿಯ ಶಿಕ್ಷಣವು ಸಿಗಬೇಕೆಂತ ಲೆಜಿಸ್ಲೇಟಿವ್ ಅಸೆಂಬ್ಲಿ ಸೆಕ್ರಿಟರಿ ಇವರ ಕಡೆಗೆ ಠರಾವಿನ ನಕಲುಗಳನ್ನು ಕಳಿಸತಕ್ಕದ್ದೆಂತ ಠರಾಯಿಸಿದರು.

ದಯಾಳು ಇಂಗ್ಲೀಷ ಸರಕಾರದವರು ದೇವೀಹೊಸೂರಶೆಟ್ಟರಿಂಗೆ ರಾವಬಹದ್ದೂರ ಎಂಬಕಿತಾಬು ಕೊಟ್ಟ ಬಗ್ಗೆ ನಮಗಾಗಿರುವ ಆನಂದದರ್ಶನದ ಠರಾವ ಮಿ|| ಮಣಬಸವನಗೌಡರು ಪಾಟೀಲ ಇವರು ತಂದರು. ನಂತರ ವೇ. ಮೂ. ಶಿವರುದ್ರಪ್ಪಯ್ಯಾ ಕೆಂಡದಮಠ ಶಾಲಾಮಾಸ್ತರ ಹಾಂಸಭಾವಿ ಇವರು ರಾ. ಬ. ಚನಬಸಪ್ಪ ಅಣ್ಣಶೆಟ್ಟರ ಇವರ ಗುಣಕಥನವನ್ನು ಸಾರ್ವಜನಿಕ ಕೆಲಸದಲ್ಲಿ ಮನಮುಟ್ಟಿ ದುಡಿಯುವ ಪದ್ಧತಿಯನ್ನೂ ಸ್ಪಷ್ಟೀಕರಿಸಿದರು. ನಂತರ ಸರ್ವಾನುಮತದಿಂದ ಇವರಿಗೆ ರಾ|| ಬ|| ಕಿತಾಬು ಕೊಟ್ಟ ಬಗ್ಗೆ ಸರಕಾರದವರ ಆಭಾರವನ್ನು ಮನ್ನಿಸಿದರು. ಆ ವೇಳೆ ಮಿ|| ಚನಬಸನಗೌಡರು ಪಾಟೀಲ ಇವರು ಅಧ್ಯಕ್ಷರ ಆಭಾರವನ್ನು ಮನ್ನಿಸಿ ತಾಂಬೂಲವನ್ನು ಕೊಡಲು ಸಭೆಯು ವಿಸರ್ಜನೆಯಾಯಿತು.

ಓರ್ವ ಪ್ರೇಕ್ಷಕ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್.

ಸ್ವಾಮಿ,

ತಮ್ಮ ಪತ್ರಿಕೆಯಲ್ಲಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಸಂಘದ ವಾರ್ಷಿಕಾಧಿವೇಶನದ ವಿಚಾರವನ್ನು ಪ್ರಕಟಿಸಿರುತ್ತೀರಿ. ಈ ಸಂಘದ ಆಯವ್ಯಯದ ಪಟ್ಟಿಯನ್ನು ನೋಡಿದರೆ ಸಂಘದಕಾರ್ಯಗಳು ಬಹು ತಾಮಸದಿಂದ ನಡೆಯುತ್ತಿವೆಯೆಂಬುದು ಸ್ಪಷ್ಟವಾಗುವುದು. ಪ್ರಖ್ಯಾತರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಶ್ರೀಯುತ ಕೆ. ಪಿ. ಪುಟ್ಟಣ್ಣಸೆಟ್ಟರವರು ಕಳೆದ 15 ವರುಷಗಳಿಂದಲೂ ಸಂಘದ ಅಧ್ಯಕ್ಷರಾಗಿದ್ದಾರೆ. ಈ ಮಹನೀಯರ ಕಾರ್ಯದಕ್ಷತೆಯು ಲೋಕವಿಖ್ಯಾತವಾದುದು. ಶ್ರೀಮನ್ ಮಹಾರಾಜಾ ಸರ್ಕಾರದುಪಮಂತ್ರಿಪದವಿಯಿಂದ ನಿವೃತ್ತಿಯಾದರೂ ಇತರ ರಿಟೈರ್ಡ್ ಆಫೀಸರುಗಳಂತೆ ದೇಹದಾರ್ಢ್ಯ ಮತ್ತು ಚಟುವಟಿಕೆಗಳಿಲ್ಲದೆ ಮೂಲೆಮುಟ್ಟಾಗಿ ಕುಳಿತವರಲ್ಲ. ಉದ್ಯೋಗದಿಂದ ನಿವೃತ್ತರಾದಮೇಲೆ ಅನೇಕ ಮಹತ್ಕಾರ್ಯಗಳನ್ನು ಕೈಕೊಂಡು ದಕ್ಷತೆಯಿಂದ ನಿರ್ವಹಿಸುತ್ತಲಿರುವರು. ವೀರಶೈವರ ಸುದೈವದಿಂದ ಈ ಮಹನೀಯರು ನಮ್ಮ ವಿದ್ಯಾಭಿವೃದ್ಧಿಸಂಘಕ್ಕೆ ಅಧ್ಯಕ್ಷಪದವಿಯನ್ನಲಂಕರಿಸಿದ್ದಾರೆ. ಆದಾಗ್ಯೂ ಸಂಘದ ಧನರಾಶಿಯು ದಿನೇದಿನೇ ವೃದ್ಧಿಯಾಗಲು ತಕ್ಕಪ್ರಯತ್ನಗಳಾವುವೂ ನಡೆಯದಿರುವುದು ಪರಮಾಶ್ಚರ್ಯವನ್ನುಂಟುಮಾಡುತ್ತಿದೆ. ಅಧ್ಯಕ್ಷಮಹಾಶಯರು ತಾವು ಹಿಡಿದಕಾರ್ಯಗಳನ್ನೆಲ್ಲಾ ಕೊನೆಗಾಣಿಸಿ ಜಯಶೀಲರಾಗಿದ್ದಾರೆ. ಆದರೆ ನಮ್ಮ ಸಂಘದ ವಿಚಾರದಲ್ಲಿ ಮಾತ್ರ ಅವರ ಪ್ರಯತ್ನವು ನಿರೀಕ್ಷಣೀಯವಾಗಿದ್ದಷ್ಟು ಫಲಪ್ರದವಾಗದಿರಲು ಕಾರಣವೇನು? ದಾನಶೂರರಾದ ಕೈ|| ಸೂಲಿಬೆಲೆ ಶಾಮಣ್ಣನವರು ದೈವಾಜ್ಞೆಯಿಂದ ಈ ಸಂಘಕ್ಕೆ ಅಮೋಘವಾದ ಸಹಾಯವನ್ನು ಮಾಡದಿದ್ದರೆ ನಮ್ಮ ಸಂಘದವರು ಪರಮತೀಯರ ನಗೆಗೀಡಾಗುತಿದ್ದರು. ಕಾರ್ಯತತ್ಪರರೂ, ಕಾರ್ಯನಿರ್ವಾಹದಕ್ಷತೆಯುಳ್ಳವರೂ ಮತ್ತು ಸರ್ವತೋಮುಖ ಸಾಮರ್ಥ್ಯವುಳ್ಳವರೂ ಎಂದೆನಿಸಿಕೊಂಡಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮಿ|| ಕೆ. ಪಿ. ಪುಟ್ಟಣ್ಣಸೆಟ್ಟರವರು ಸಂಘದಧ್ಯಕ್ಷತೆಯನ್ನಲಂಕರಿಸಿದ್ದರೂ ಅದು ವೃದ್ಧಿಗೊಳ್ಳದಿರಲು ಕಾರಣವೇನು? ಯಾವತೆರದ ಪ್ರಯತ್ನದಿಂದ ಅದನ್ನು ಬೇಗನೆ ಅಭಿವೃದ್ಧಿಗೊಳಿಸಬಹುದೆಂಬುದಕ್ಕೆ ತಕ್ಕ ಸಲಹೆಯನ್ನು ತಿಳಿಯಲು ಮತಾಭಿಮಾನಿಗಳನೇಕರು ಕುತೂಹಲಪಡುತ್ತಿರುವುದರಿಂದ ತಮ್ಮ ಪತ್ರಿಕಾವಾಚಕರಾದರವರೂ ಈ ಕುತೂಹಲವನ್ನು ಈಡೇರಿಸಬೇಕೆಂದು ಕೋರುತ್ತೇನೆ.

ಓರ್ವ ಮತಾಭಿಮಾನಿ.

ಮೈಸೂರು ಶಿವಕಥಾಪಂಡಿತ ವೇ|| ಶಿವಯ್ಯಶಾಸ್ತ್ರಿಗಳಿಂದ ರಚಿಸಲ್ಪಟ್ಟು ಬೆಂಗಳೂರಿನ ಮ|| ರಡ್ಡಿಯವರ ಸತ್ಕಾರಕ ಸಭೆಯಲ್ಲಿ ಓದಲ್ಪಟ್ಟ ಪದ್ಯಗಳು.

ಶ್ರೀಮನ್ ಮಹಾರಾಜ ಪೂಜಿತ ರಾಜಮಾನ್ಯರಾಜೇಶ್ರೀ ವಿದ್ಯಾನಿಧಿಗಳಾದಂಥ ಮೈಸೂರು ಸರಕಾರದ ವಿದ್ಯಾ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬ್ ಬಹದ್ದೂರ್ ಸಿ. ರಾಮಲಿಂಗರಡ್ಡಿ, ಎಂ.ಎ., ಈ ಮಹನೀಯರವರ ಚಿರಸ್ಮರಣೀಯವಾದ ಸ್ತೋತ್ರ ನವರತ್ನ ಪದ್ಯಗಳು.

ವೃತ್ತ|| ಶ್ರೀಮನ್ಮಂಜುಳಮಾನಸಾಬ್ಜ ನಿಲಯಂ | ಲೋಕೋಪಕಾರಾಶ್ರಯಂ | ಅವಾರಾತಿಮನೇಕಶಾಸ್ತ್ರನಿಪುಣಂ | ವಿದ್ಯಾವಿನೋದಪ್ರಿಯಂ || ಸಾಮೋಪಾಯಮನೂನಭಕ್ತಿ ವಿಜಯಂ | ಸೌಭಾಗ್ಯವೃದ್ಧಿಕ್ರಿಯಂ || ವೇಮೋರ್ವೀಶಸುವಂಶಜಾತಮಮಲಂ | ಶ್ರೀರಾಮಲಿಂಗಂಭಜೆ ||೧||

ಕಂ|| ಕಾವರಕಾಣದಪ್ರಜೆಗ | ಳ್ಗಾವಿಲದುರ್ಬೋಧ್ಯರಾಗಿಕೆಡುತಿರೆಚವದಿಂ || ಕೋವಿದಸುಮಾರ್ಗಕೆಳಸುವ | ಪಾವನತರರಾಮಲಿಂಗವಿಭುನೀನಿಳೆಯೊಳ್ ||೨||

ಕಂ|| ಅನುಪಮರಾಮನುನೀನ್ಯೆ | ದನಗಳುಜನರಾಗಿಜನಪರಮ್ಮುದಗೊಳಿಸಲ್ || ಮನವಿಟ್ಟುಕೆಲಸಮಾಡುವ | ಘನಗುಣಗಂಭೀರರಾಮಲಿಂಗೇಶ್ವರನೆ ||೩||

ಕಂ|| ಗಾಂಪರಬೋಧೆಯಕೇಳುವ | ಕಿಂಶುಕಜನರಿರ್ಪದೇಶವೃದ್ಧಿಸದೆನುತಂ || ಸಂಪದದೇಳ್ಗೆಯನೆಸಗುವ | ತ್ವಂಪದವರತತ್ವದಾಸಿಪದಲಕ್ಷ್ಯಾರ್ಥಾ ||೪||

ಭಾಮಿನಿ|| ದೇಶಹಿತಕಾರಿಗಳೊಳಗ್ರಜ | ಕ್ಲೇಶವಿಲ್ಲದೆಅಮರವರಕುಜ | ಪಾಶವಿಚ್ಛೇದಕಬುಧವ್ರಜಪೂಜ ನಿರ್ವಾಜಾ || ಆಶೆಯಿಂದ್ದೆ ದೆವಿದದೆಭೂಭುಜ | ದಾಸಕಾರೋಕ್ತೆ ತೇಜನೀನಿಜ | ಈಶನಾಮವಿರಾಜಸುಕೃತಪ್ರಜಾ ||

ಭಾಮಿನಿ|| ಶ್ರೀಮಹಿಶೂರಪುರದೊಡೆಯನ | ಶೀಮೆಯೊಳುಸಕಲಪ್ರಜೆಗಳಿಗೆ | ಕಾಮಿತಾರ್ಥವನೀವಸದ್ವಿದ್ಯಾಇಲಾಖೆಯೊಳು || ತಾಮಸದಕಾರ್ಯಗಳತೊಲಗಿಸೆ | ತಾಮರಸಸಖನಂತೆರಾಜಿಸಿ | ಪ್ರೇಮದಿಂವಿದ್ಯಾಭಿವೃದ್ಧಿಯಗೈದೆರಾಮೇಶ ||೬||

ಕಂ|| ಎನ್ನವರವರಿವರೆನ್ನದೆ | ಸನ್ನುತಗುಣರಾದಜನರನಾದರಿಸುತ್ತಂ || ನಿನ್ನಂಗವಬಲುಸವೆಸಿದೆ | ಕನ್ನಡದೇಶಾಭಿವೃದ್ಧಿಗೋಸುಗಸತತಂ ||

ಕಂ|| ಎಂಬಸವಯ್ಯಸುಮಿತ್ರನೆ | ನಂಬಿದಬಡಜನರಬಿಡದೆಕಾಪಾಡುವನೆ || ದಂಬವಿದೂರನೆಸಾಕ್ಷಾ | ತ್ರ್ಯಂಬಕನವತಾರರಾಮಲಿಂಗೇಶ್ವರನೆ ||

ಕಂ|| ರಾಮತಿರಸ್ಕಾರವುಯಮು | ಭಾಮವಚಿರಗೋಳಿಸಿದುಃಖವಿಲ್ಲದರಿಂದಂ || ತಾಮಸಮುತಿನಾನಾಗದೆ | ಪ್ರೇಮದಿನುತಿಸಿದೆನುರಾಮಲಿಂಗೇಶ್ವರನೆ ||೯||

ಹೊಟ್ಟೆಯುರಿ, ಮತ್ತು ಸುಳ್ಳು.

ನಾನು ಇದಕ್ಕೆ ಮೊದಲು ಬರೆದಿರುವ ಪತ್ರದಲ್ಲಿ ಮಿಲ್ಲರ್ ಕಮಿಟಿಯ ರಿಪೋರ್ಟು ವಿಷಯದಲ್ಲಿ ನಮ್ಮ ಬ್ರಾಹ್ಮಣ ಸಹೋದರರ ನಡತೆಯು ಆಶ್ಚರ್ಯವನ್ನುಂಟುಮಾಡಿರುತ್ತದೆಯೆಂದು ತಿಳಿಸಿರುತ್ತೇನೆ. ಆದರೆ ಈಚೆಗೆ ನಿತ್ಯವೂ ಅವರ ವರ್ತಮಾನ ಪತ್ರಿಕೆಗಳಿಂದ ತಿಳಿಯಬರುವದೇನಂದರೆ— ಇವರು ಹೊಟ್ಟೆಯುರಿಯಿಂದ ಸುಳ್ಳು ವಿಷಯಗಳನ್ನು ಪ್ರಕಟಿಸಲು ಪ್ರಯತ್ನಿಸುತ್ತಿರುವಂತೆ ವ್ಯಕ್ತಪಡುತ್ತದೆ. ಈ ಸುಳ್ಳು ಬರವಣಿಗೆಯನ್ನು ನಿತ್ಯವೂ ಓದುತ್ತ ಬಂದರೆ ಯಾರಿಗಾದರೂ ಮನಸ್ಸು ಕೆಡುವುದು ಸ್ವಭಾವವಾಗಿರುತ್ತದೆ. ಒಂದೇ ಒಂದು ದಿವಸದಲ್ಲಿ ಪ್ರಬಲಸ್ಥಿತಿಯಲ್ಲಿದ್ದ ನಮ್ಮ ಸಹೋದರರು ಸರ್ವಸ್ವವನ್ನೂ ಕಳೆದುಕೊಂಡು ಭಿಕ್ಷಾಪಾತ್ರೆಯನ್ನು ಹಿಂದಿನಂತೆ ಕೈಯ್ಯಲ್ಲಿ ಹಿಡಿದುಕೊಂಡು ಬೀದಿಗಳಲ್ಲಿ ಬ್ರಾಹ್ಮಣೇತರರ ಮನೆಮನೆಗೆ ತಿರುಗುತ್ತಿರುವಂತೆ ರೋದನಮಾಡುತ್ತಿರುವದು ಸುಳ್ಳಲ್ಲವೆ? ಒಬ್ಬ ಬ್ರಾಹ್ಮಣನೂ ಕೆಲಸ ಬಿಟ್ಟಿಲ್ಲ. ಕೆಲಸವನ್ನು ಪಡೆಯುವವರೂ ಅವರೇ. ಪ್ರತಿಯೊಂದು ದಿನವೂ ಸೂರ್ಯನು ಪಶ್ಚಿಮದಿಕ್ಕಿನ ಕೊನೆಯನ್ನು ಸೇರುವುದರೊಳಗೆ ಅನೇಕಾನೇಕ ಬ್ರಾಹ್ಮಣರು ಹೊಸ ಕೆಲಸವನ್ನು ಹೊಂದುತ್ತಲೇ ಇದ್ದಾರೆ. ಮತ್ತು ಬಡತಿಗೆ ಬರುತ್ತಲೇ ಇದ್ದಾರೆ. ಪತ್ರಿಕೆಗಳಲ್ಲಿ ಸುಳ್ಳು ರೋದನವನ್ನು ಮಾಡುವುದರ ಮೂಲಕ ತಿಳುವಳಿಕೆ ಸಾಲದ ಬ್ರಾಹ್ಮಣೇತರರ ಮನಸ್ಸನ್ನು ಕೆಡಿಸಲು ಪ್ರಯತ್ನಿಸುತ್ತಿರುತ್ತಾರೆ. ಇದನ್ನು ಎಲ್ಲರೂ ತಿಳಿಯಬೇಕು. ಮತ್ತು ಜಾತಿದ್ವೇಷ ಮತದ್ವೇಷವನ್ನು ಮಿಲ್ಲರ್ ಕಮಿಟಿಯ ರಿಪೋರ್ಟು ಹುಟ್ಟಿಸಿರುತ್ತದೆ. ಮತ್ತು ಹೆಚ್ಚಿಸುತ್ತಿದೆಯೆಂಬುವುದು ಒಂದು ಭಾಗದಲ್ಲಿ ನಿಜ. ಮತ್ತೊಂದು ಭಾಗದಲ್ಲಿ ಸುಳ್ಳು. ಬ್ರಾಹ್ಮಣರು ಮೊದಲಿಂದಲೂ ಕ್ರೂರವಾಗಿ ಇತರರನ್ನು ಕಂಡು ದ್ವೇಷಿಸುತ್ತಿದ್ದರು. ಈಗ ಅದು ಹೆಚ್ಚಾಗಿರುತ್ತದೆ. ದೊಡ್ಡದೊಡ್ಡ ಅಧಿಕಾರಿಗಳ ನಡತೆಯನ್ನು ಈಗ ಪರೀಕ್ಷಿಸಿ ನೋಡಿದರೆ ಗೊತ್ತಾಗುತ್ತದೆ. ಇದಕ್ಕೊಂದು ಉದಾಹರಣೆ ನೋಡಿ--ಬ್ರಾಹ್ಮಣೇತರರು ಯಾವ ಉನ್ನತಪದವಿಯಲ್ಲೇ ಇರಲಿ ಬ್ರಾಹ್ಮಣನಾದ ಯಾವ ಅಲ್ಪನೂ ಕೂಡ ಮೊದಲನೆಯವನನ್ನು ಏಕವಚನದಲ್ಲಿ "ಅವನು" "ಇವನು" ಎನ್ನುತ್ತಾನೆ. ಆದರೆ ಬ್ರಾಹ್ಮಣೇತರರಾದ ಶ್ರೇಷ್ಠ ಪದವಿಯವರೂ ಅಲ್ಪ ಬ್ರಾಹ್ಮಣನನ್ನೂ ಕೂಡ ಬಹುವಚನದಿಂದ ಮಾತನಾಡುವುದರಲ್ಲಿ ಗೌರವವನ್ನು ತೋರಿಸುತ್ತಾರೆ. ಇದರಲ್ಲಿ ದ್ವೇಷಿಸುವವರು ಯಾರು ಪ್ರೀತಿಸುವವರು ಯಾರು ನೀವೇ ಯೋಚಿಸಿರಿ. ಬ್ರಾಹ್ಮಣೇತರರ ಹೃದಯದಲ್ಲಿ ದ್ವೇಷದ ನಡತೆಗೆ ಸ್ಥಳವೇ ಇಲ್ಲ. ಇದಕ್ಕೆ ಮತ್ತೊಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ.

ಮದ್ರಾಸಿನಲ್ಲಿರುವ ಹಿಂದು ಎಂಬ ಹೆಸರಿನ ಪತ್ರಿಕೆಯ ಕರ್ತರು ಬಹಳ ಪ್ರಾಜ್ಞರು ಮತ್ತು ಯೋಚನೆಯಲ್ಲಿ ಶಕ್ತರು ಎಂದು ಕೇಳಿಕೆಯುಂಟು. ಆದರೆ ಅವರು ಈ ತಿಂಗಳು ೩ ನೇ ತಾರೀಖು ಭಾನುವಾರ ಸಾಯಂಕಾಲ "ಮೈಸೂರು ಯೌವನಸ್ಥರ ಕೂಟ" ವೆಂಬ ಸುಳ್ಳು ಹೆಸರಿನಿಂದ ಮೆರೆಯುತ್ತಿರುವ ಒಂದು ಸಭೆಯಲ್ಲಿ ಅವರು ಆಡಿರುವ ಶಬ್ದಗಳನ್ನು ಯೋಚಿಸಿ ನೋಡಿದರೆ ಬ್ರಾಹ್ಮಣರ ಹೃದಯಾಂಶವು ಗೊತ್ತಾಗುವುದು. ಅದನ್ನು ವರ್ಣಿಸುವುದೇ ಅಗೌರವವೆಂದು ತಿಳಿಯುತ್ತೇನೆ. ಇದು ಒಂದು ಬ್ರಾಹ್ಮಣ ಯುವಕರ ಕೂಟವಾಗಿರುವಂತೆ ತಿಳಿಯಬರುತ್ತದೆ. ನಮ್ಮಲ್ಲಿ ರಾಷ್ಟ್ರೀಯ ವಿಷಯಗಳಿಗೆ ಅವಶ್ಯಕತೆಯಿಲ್ಲದಿದ್ದರೂ ಈ ಕಸ್ತೂರಿರಂಗ ಅಯ್ಯಂಗಾರರ ಬಾಯಿಯಿಂದ ಬಂದಿರುವ ಮಾತುಗಳೆಲ್ಲವೂ ಮೈಸೂರು ಸೀಮೆಯ ದೊಡ್ಡದೊಡ್ಡ ಅಧಿಕಾರದಲ್ಲಿರುವ ಮದ್ರಾಸುದೇಶದ ಬ್ರಾಹ್ಮಣರ ಪ್ರೇರಣೆಯಿಂದ ಹೊರಟಿರುತ್ತವೆಯೆಂದು ಖಂಡಿತವಾಗಿ ಹೇಳಬಹುದು. ನಮ್ಮ ದೇಶದ ಬ್ರಾಹ್ಮಣಸಹೋದರರು ದೂರದೃಷ್ಟಿಯಿಲ್ಲದೆ ದೇಶಾಭಿಮಾನವಿಲ್ಲದೆ ಗುಂಪನ್ನು ಸೇರಿ ರಾಜದೂಷಣೆಯ ಪಾಪಕ್ಕೆ ಪಾತ್ರರಾಗುತ್ತಿದ್ದಾರೆ. ಈ ಪತ್ರಿಕಾಕರ್ತರ ತಿಳುವಳಿಕೆಯನ್ನು ಪರೀಕ್ಷಿಸಿ ನೋಡೋಣ—ಆ ದಿನದ ಉಪನ್ಯಾಸವೇನೆಂದರೆ "Poetic Justice in Shakespeare Tragedy" ಅಂದರೆ ಷೇಕ್ಸ್‌ಪಿಯರ್‌ಯೆಂಬ ಇಂಗ್ಲೀಷು ಮಹಾಕವಿಯ ದುಃಖಾಂತದಿಂದ ಮಾಡಿರುವ ಕವಿತ್ವಧರ್ಮ." ಈ ಸಂದರ್ಭದಲ್ಲಿ ರಾಜಕೀಯ ವಿಷಯವನ್ನು ಮಾತನಾಡಲು ಲೇಶವೂ ಅವಕಾಶವಿಲ್ಲ. ಮತ್ತು ಈ ಕೂಟದ ವಿಧಿಗಳಲ್ಲಿ ರಾಜಕೀಯ ವಿಷಯಗಳ ತರ್ಕವು ನಿಷೇಧಿಸಲ್ಪಟ್ಟಿರುತ್ತದೆ. ಆದರೂ ಈ ಅಯ್ಯಂಗಾರರವರು ರಾಜಕೀಯ ಮತ್ತು ರಾಜದ್ವೇಷ ವಿಷಯವ

ಲ್ಲದ ಮತ್ತೊಂದು ಶಬ್ದವನ್ನು ಉಚ್ಚರಿಸದೆ ಬ್ರಾಹ್ಮಣ ಯುವಕರ ಹೃದಯ ಮಧ್ಯದಲ್ಲಿ ದ್ವೇಷದ ಬೀಜವನ್ನು ಸ್ಥಾಯಿಯಾಗಿ ಅಂಕುರಿಸಲು ಮಾಡಿದ ಭಾಷಣದಿಂದ ಮತದ್ವೇಷ ಜಾತಿದ್ವೇಷ ರಾಜದ್ವೇಷ ಪಾಪಕೃತ್ಯಕ್ಕೆ ಕಾರಣರು ಯಾರೆಂಬುದನ್ನು ವಾಚಕರೇ ಯೋಚಿಸಬಹುದು. ಇವರ ಭಾಷಣದಲ್ಲಿ ಬಹಳ ದಿವಸಗಳಿಂದಲೂ ಮೈಸೂರು ದೇಶದಷ್ಟು ಅದೃಷ್ಟದಿಂದ ಕೂಡಿದ ದೇಶವು ಮತ್ತೊಂದಿಲ್ಲವೆಂದು ತಿಳಿದಿದ್ದವರೂ ಕೂಡ ಸತ ಮೂರ್ತಿಯವರೊಡನೆ ಒಂದು ವಾರ ಮೈಸೂರುದೇಶದ ಪ್ರಮುಖರೊಡನೆ (Leading men) ಸೇರಿದ್ದರ ದೆಸೆಯಿಂದ ಆ ಅಭಿಪ್ರಾಯವು ಹೋಗಿ ದುಃಖವನ್ನೂ ನೋವನ್ನೂ ಹುಟ್ಟಿಸುವ ಅಭಿಪ್ರಾಯವು ಹುಟ್ಟಿತೆಂದು ಈ ಅಯ್ಯಂಗಾರ್ಯರವರು ಹೇಳಿರುತ್ತಾರೆ. ಇವರು ಪ್ರಖ್ಯಾತವಾದ ಹಿಂದುಪತ್ರಿಕೆಯನ್ನು ಬಹಳ ದಿವಸದಿಂದ ನಡೆಸುತ್ತಿರುವರು. ಒಂದು ನಿಮಿಷದಲ್ಲಿ ಅನೇಕ ವರ್ಷಗಳಿಂದ ಸಂಪಾದಿಸಿದ್ದ ಅಭಿಪ್ರಾಯವನ್ನು ಕಳೆದುಕೊಂಡರು. ಈ ಬದಲು ಅಭಿಪ್ರಾಯ ಬರುವಂತೆ ಮಾಡಿದ ಮೈಸೂರು ಮುಖ್ಯ ಜನರು ಯಾರು? ೧೦-೨೦ ವರ್ಷಗಳಾಗಿದ್ದಾಗ್ಯೂ ಕನ್ನಡ ಮಾತನ್ನಾಡುವುದನ್ನು ಒಂದು ಪಾಪಕೃತ್ಯವನ್ನಾಗಿ ತಿಳಿದಿರುವ ಸರ್ಕಾರದ ನೌಕರಿಯಲ್ಲಿರುವ ಮದ್ರಾಸು ಬ್ರಾಹ್ಮಣ ವರ್ಯರೋ? ಇಲ್ಲವೆ ೬೦ ವರ್ಷವಾದನಂತರ ಅರಳು ಮರಳುಯೆಂದು ಹೇಳುವಂತಿರುವ ಕಪಟದೇಶಾಭಿಮಾನವನ್ನು ನಟಿಸುತ್ತಿರುವ ಮೈಸೂರು ದೇಶದ ಬ್ರಾಹ್ಮಣೋತ್ತಮರೋ? ಅಥವಾ ಆ ಸಭೆಯ ಬ್ರಾಹ್ಮಣ ಹುಡುಗರೋ?

ಸ್ವರಾಜ್ಯ ವಿಷಯವನ್ನು ಕುರಿತು ಈ ಅಯ್ಯಂಗಾರರು ಮಾತನಾಡಿದುದರಲ್ಲಿ ಸ್ವರಾಜ್ಯವಾವುದೆಂದರೆ—ದೇಶದ ಜನರ ಅಭಿಪ್ರಾಯ ಪ್ರಾಬಲ್ಯವೇ ಎಂದು ಹೇಳಿ, ಇದು ಸ್ವಲ್ಪ ವರ್ಷಗಳ ಹಿಂದೆ ಇದ್ದು ಈಗ ಹೋಯಿತೆಂದು ಹೇಳಿರುತ್ತಾರೆ. ದೇಶದ ಜನರು "People of the Country" ಎಂದರೆ ಯಾರು? ಈ ಉಪನ್ಯಾಸ ಕರ್ತರ ಸುತ್ತುಮುತ್ತಲೂ ಕೂತಿದ್ದು ಅವರ ಕಿವಿಯಲ್ಲಿ - ಸುಳ್ಳು ಮಂತ್ರವನ್ನು - ಬೋಧಿಸಿದ ಬ್ರಾಹ್ಮಣನೋ? ರೈತರ ರಕ್ತವನ್ನು ಹೀರುತ್ತಿರುವ ಬ್ರಾಹ್ಮಣ ವಕೀಲರೋ? ಎರಡು ವರ್ಷಗಳ ಹಿಂದೆ ಆರು ವರ್ಷಗಳ ಪರ್ಯಂತ ಸಭೆಗಳಲ್ಲಿ ಅರ್ಭಟಿಸುತ್ತಿದ್ದು ಹಿತವಿಲ್ಲದ ಅನೇಕ ಮಂ[illegible]ಯವನ್ನು ಮಾಡುವುದಕ್ಕೆ ಸಲಹೆಗಳನ್ನು ಕೊಡುತ್ತಿದ್ದ ಕಾಲವು ಸ್ವರಾಜ್ಯಕಾಲ! ನಮ್ಮ ದೇಶದ ಜನರು ಮುಂದಕ್ಕೆ ಬರಲೆಂದು ಅಹೋರಾತ್ರಿಯೂ [illegible]ಷ್ಟಪಡುತ್ತಿರುವ ಈ ಕಾಲವು ಸ್ವರಾಜ್ಯಕಾಲವಲ್ಲ!! ಈ ಅಯ್ಯಂ[illegible]ರ್ಯರು ಮಾಡಿದ ವಿಮರ್ಶೆ "enquiry" ಎಷ್ಟು [illegible]ವಾದದ್ದೋ ಯೋಚಿಸಿರಿ. ನಮ್ಮಲ್ಲಿರುವ ಪ್ರಜಾಪ್ರತಿನಿಧಿ ಸಭೆಗಳು [illegible] ಮುಂತಾದವು ಈ ಅಯ್ಯಂಗಾರ್ಯರ ಅಭಿಪ್ರಾಯದಲ್ಲಿ - [illegible] ಪ್ರಾಣವಿಲ್ಲದ ಕೋತಿಗಳ ಸಭೆಗಳು "Lifeless imitations," ಮತ್ತು ಅರ್ಥವಿಲ್ಲದ ಸಂಘಗಳು "Sham institutions" ಎಂದು ಆಗಿರುತ್ತವೆ. ಶೇಷಾದ್ರಿಅಯ್ಯರೇ ಮುಂತಾದ ಮಂತ್ರಿವರ್ಯರು ಈ ಸಭೆಗಳ ಮೆಂಬರುಗಳನ್ನು ಗದರಿಸಿ ಬಯ್ಯುತ್ತಿದ್ದ ಕಾಲಗಳು ಶ್ಲಾಘನೀಯವಾಗಿದ್ದವು! ಈಗ ಅಯ್ಯಂಗಾರ್ಯರು ಭಾಷಣಮಾಡಲು ತೊಡಗಿದ ಒಂದು ವಾರದೊಳಗೆ ಆ ೨೦ ವರ್ಷಗಳ ಸ್ವರಾಜ್ಯವು ಮಂಗಳ ಮಾಯವಾಗಿ ಹೋಗಿ "It is not necessary for me to argue the point that in the State of Mysore you have got nothing like Swaraj ಮೈಸೂರು ದೇಶದಲ್ಲಿ ಸ್ವರಾಜ್ಯವೆಂಬ ಅಂಶವು ಲೇಶಮಾತ್ರವೂ (nothing) ಇಲ್ಲವೆಂದು ಹೇಳುವ ನೂತನ ರಾಜ್ಯವು ಅರೇಬಿಯನ್ ನೈಟ್ಸ್ ಎಂಬ ಕಥೆಗಳಲ್ಲಿ ಓದುವಂತೆ ಒಂದು ರಾತ್ರಿ ಸಲ್ಲಿ ಮಿಲ್ಲರ್ ಕಮಿಟಿಯ ರಿಪೋರ್ಟು ಪ್ರಕಟಣೆಯಾದ ಮಾರನೆದಿವಸವೇ ಕಣ್ಣಿಗೆ ಕಂಡುಬಂದಿತಲ್ಲ! ಅದ್ಭುತ!! ಇದು ಅಯ್ಯಂಗಾರ್ಯರ ಅಪಾರವಾದ ದೃಷ್ಟಿಯಿಂದ ಕಂಡುಹಿಡಿಯಲ್ಪಟ್ಟಿತೋ! ಇಲ್ಲವೆ ಅವರ ಕಿವಿಯ ದ್ವಾರಗಳಲ್ಲಿ ಪ್ರವೇಶಿಸಿ ಬಾಯಿ ಮುಖಾಂತರ ಗಾಳಿಗೆ ಸೇರಿದ ಮಾತುಗಳೋ? ಇವರು ಬ್ರಿಟಿಷ್ ಸರ್ಕಾರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಇಲ್ಲಿನ ಸ್ಥಿತಿಗಳಿಗೆ ಹೋಲಿಸಿ ಬ್ರಿಟಿಷ್ ಸರ್ಕಾರದ ಸ್ಥಿತಿಗಳನ್ನು ಸ್ತೋತ್ರಮಾಡುತ್ತಿರುವಂತೆ ಕಾಣುತ್ತದೆ. ಇದು ಕಾಲಕ್ಕೆ ತಕ್ಕ ಅಭಿಪ್ರಾಯವಾಗಿರುತ್ತದೆಯೇ ಹೊರತು ಸ್ವೈಜವಲ್ಲ. ಇಂಥವರ ಅಭಿಪ್ರಾಯಕ್ಕೆ ಬೆಲೆಯೇನಿದೆ? ಯೋಚಿಸಿರಿ. ಇವೆಲ್ಲಾ ಸುಳ್ಳುಮಾತುಗಳು, ಅಸತ ಹೃದಯ, ಮತ್ತು ಬ್ರಾಹ್ಮಣ ವರ್ಗದ ಸ್ವಾರ್ಥಪರತ್ವ. ಇವರ ತಿಳುವಳಿಕೆಯೆಲ್ಲಾ ಹೊಟ್ಟೆಕಿಚ್ಚಿನಿಂದ ಧ್ವಂಸವಾದ ಹೃದಯದಿಂದ ತಿಳಿದುಕೊಂಡ ಅಂಶಗಳಾಗಿರುತ್ತವೆ. ಈ ಅಯ್ಯಂಗಾರರು ವಿದ್ಯಾಭಿವೃದ್ಧಿಗೆ ಕೊರತೆಬಂದಿರುತ್ತದೆಯೆಂದು ಕೇಳುತ್ತೇನೆ. "I am told" ಯೆಂದು ಹೇಳುತ್ತಾರೆ. ಇದೇನೆಯೊ ಅವರುಮಾಡಿದ ಒಂದುವಾರದವಿಚಾರಣೆ? (enquiry) ಇದಕ್ಕಾಗಿ ಅವರು ತೆಗೆದುಕೊಂಡಿರುವ ಉದಾಹರಣೆಯು--ಈ ಸತ ಮೂರ್ತಿಗಳೂ ಈ ಅಯ್ಯಂಗಾರ್ಯರೂ ವಾಣೀವಿಲಾಸ ಗರ್ಲ್ಸ್ ಸ್ಕೂಲಿನ ಸುತ್ತುಮುತ್ತ ತಿರುಗಾಡಿ ನೇತ್ರಾನಂದಹೊಂದಿ ಇನ್ನೂ ಅನೇಕ ಆನಂದವನ್ನು ಹೊಂದಬೇಕಾದ ಆಶೆಯನ್ನು ತೋರಿಸುತ್ತದೆ. ಮೈಸೂರು ಜನರಿಗೆ ದೇಶದ ವೆಚ್ಚದ ವಿಷಯದಲ್ಲಿ ಅಧಿಕಾರವಿಲ್ಲದಿರುವುದು ಅಯ್ಯಂಗಾರ್ಯರ ದೃಷ್ಟಿಗೆ ಬಿದ್ದ ದುಸ್ಥಿತಿಯಂತೆ. "It is because the people of the State have no control over the natural expenditure" ಎಂದು ಇವರು ಹೇಳಿರುತ್ತಾರೆ. ಇದೆಲ್ಲಾ ಶಬ್ದಾಡಂಬರವಾದಾಗ್ಯೂ ಒಂದು ಅರ್ಥವಿರುತ್ತದೆ. ಈಗ್ಗೆ ಎರಡುವರ್ಷಗಳ ಹಿಂದೆ ಆರು ವರ್ಷಗಳಪರ್ಯಂತ ಮೈಸೂರುದೇಶದ ಜನರೆಂಬ ಹೆಸರಿನಿಂದ ಜನರ ಹಣವನ್ನು ಸೂರೆಮಾಡಿದ ಅಧಿಕಾರದ ಫಲವೇ ಈಗಿನ ಕೈಕಾಲು ಮುರಿದ ಖಜಾನೆಯ ಸ್ಥಿತಿಯಾಗಿದೆ. ಈ ಮುರಿದ ಕೈಕಾಲುಗಳನ್ನು ಸರಿಮಾಡುವುದೇ ಈಗಿನ ಸರ್ಕಾರದ ಕೆಲಸವಾಗಿದೆ. ಈ ಕೆಲಸವನ್ನು ಈ ಅಯ್ಯಂಗಾರ್ಯರು ಆಶ್ಚರ್ಯಕರವಾದ ಮಾರ್ಗವೆನ್ನುತ್ತಾರೆ. ಇವರ ಭಾಷಣದ ಅಂತ್ಯಭಾಗವನ್ನು ಎಚ್ಚರಿಕೆಯಿಂದ ಓದಿದರೆ ಅದನ್ನು ಬ್ರಾಹ್ಮಣ ಯುವಕರಿಗೆ ಯೋಗ್ಯವಾದದ್ದೆನ್ನಬೇಕೇ ಹೊರತು ಮೈಸೂರು ಪ್ರಜೆಗಳಿಗೆಲ್ಲಾ ಈ ಭಾಷಣವನ್ನು ದುರ್ಭಾಷಣವೆಂದು ಹೇಳಬೇಕಾಗುತ್ತದೆ. ಕೀರ್‌ಹಾರ್ಡಿಯವರು "Kier Hardy" ಪಶ್ಚಿಮ ದೇಶಗಳಿಗೆ ಅನ್ವಯಿಸುವ ಕೆಲವು ಮಾತುಗಳನ್ನು ನಮ್ಮ ಮೈಸೂರು ಯುವಕರಿಗೆ ಹೇಳಿದ ಭಾಷಣದಲ್ಲಿ ಇವರು ಉಪಯೋಗಿಸಿದ್ದು ಬ್ರಾಹ್ಮಣ ಯುವಕರ ಹೃದಯದಲ್ಲಿ ವಿಷಬೀಜವನ್ನು ನಾಟಿದಂತಾಗಿರುತ್ತದೆ. "The melting pot" ಕುದಿಯುವ ಗಡಿಗೆಯಲ್ಲಿ ಈ ಅಯ್ಯಂಗಾರ್ಯರು ರಾಜರುಗಳನ್ನು ಹಾಕಿ ಬೆಯ್ಯಿಸಿ ತಿನ್ನುವವರಂತಿರುತ್ತಾರೆ. ಇದು ಸ್ವರಾಜ್ಯಲಕ್ಷಣವೇ? ಈ ಮಾತುಗಳನ್ನು ಕೇಳಿ ಹಲ್ಲುಗಳನ್ನೆಲ್ಲಾ ಬಿಟ್ಟು ನಗುತ್ತಿದ್ದ ಆ ಯುವಕರಲ್ಲಿ ರಾಜಭಕ್ತಿ ಹುಟ್ಟುವುದೇ? ಆ ಸಭೆಯನ್ನು ಅಲಂಕರಿಸಿದ್ದವರೆಲ್ಲರೂ ಆರು ವರ್ಷಗಳ ಹಿಂದೆ ಗರ್ಜಿಸುತ್ತಿದ್ದ ಮಂತ್ರಿವರ್ಯರ ಹಿಂಬಾಲಕರು; ಸರ್ಕಾರದ ನೌಕರರಾಗಿದ್ದವರು. ಈ ಮಾತುಗಳು ಹೊಟ್ಟೆಕಿಚ್ಚಿನಿಂದ ಉದ್ಭವವಾದ ಸುಳ್ಳಿನ ರಾಶಿಯಲ್ಲವೆ? ಈ ವರ್ತಮಾನ ಪತ್ರಿಕೆಗಳನ್ನು ಓದಿ ಹೇಸಿಗೆ ಮಾಡಿಕೊಂಡ ಮನಸ್ಸುಗಳನ್ನು ಶುದ್ಧಿಮಾಡುವ ಕರ್ತವ್ಯವನ್ನು ಒಕ್ಕಲಿಗರಪತ್ರಿಕೆ ಮತ್ತು ಸ್ಟಾರ್‌ಪತ್ರಿಕೆಯವರು ಮಾಡದಿದ್ದರೆ ಬ್ರಾಹ್ಮಣರ ಅಧೀನದಲ್ಲಿರುವ ಪತ್ರಿಕೆಗಳಲ್ಲಿ ಪ್ರಕಟವಾಗುವ ಹೊಟ್ಟೆಕಿಚ್ಚಿನ ಸುಳ್ಳುಮಾತುಗಳನ್ನು ಓದಿಓದಿ ಮನಸ್ಸು ಕೆಟ್ಟು ದೇಶಕ್ಕೆ ಅಸುಖವು ಈ ಅಸೂಯಾಭರಿತರಾದ ಸ್ವಲ್ಪ ಜನರಿಂದ ಉಂಟಾದೀತೆಂಬ ಭೀತಿಯು ತಲೆದೋರುತ್ತದೆ. ರಾಜಭಕ್ತರಾದ ಹಿಂದುಳಿದ ಜನವರ್ಗಗಳವರು ಎಚ್ಚರಹೊಂದಿ ನಮ್ಮ ಮಂತ್ರಿಶ್ರೇಷ್ಠರಿಗೆ ಬೆಂಬಲವಾಗಿ ನಿಂತು, ಈ ಕಿಚ್ಚಿನ ಸ್ವಲ್ಪ ಜನರ ಸುಳ್ಳುಮಾತುಗಳು ಹರಡದಂತೆ ಮಾಡಿ, ಸತ್ಯಮೂರ್ತಿಯವರು ಮತ್ತು ಕಸ್ತೂರಿಅಯ್ಯಂಗಾರರು ಬಿತ್ತಿರುವ, ದುರ್ಬೀಜ ಮಂತ್ರವು ಹಿಂದುಳಿದವರ ಗುಂಪಿನಲ್ಲಿ ಕೆಂದದಂತೆ ಎಚ್ಚರವಾಗಿರಲು ಆತ್ಯಾದರದಿಂದ ಪ್ರಾರ್ಥಿಸುವ

ಸತ್ಯವಾದಿ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾದಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಡಬ್ಬಿ 1 ಕ್ಕೆ 1—4—0

44 ವಿಳಾಸ.—ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 512 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ. ತತ್ತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ ಮೈಸೂರು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವುವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0

ನಂ. 2 7—8—0

44 ವಿಳಾಸ —ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 512 ಪಾರ್ಕ್‌ಟೌನ್ ಮದರಾಸು.

ಫಕ್ತ ಶೋಧಿಸಿ ! ಮನೋಲ್ಲಾಸಿಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 42

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದನರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಿಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯುವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ ನೆಯ ಇಸವಿ ಜುಲೈ ತಾ॥ ೩೧ ರಿಂದ ೧೯೨೧ ನೆಯ ಅಗಸ್ಟ್ ತಾ॥ ೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಆಷಾಢಬಹುಳ ಏಕಾದಶಿಯಿಂದ ಶ್ರಾವಣ ಶುದ್ಧ ತದಿಗೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುಮಾಸ
31	ಭಾನು	ಏಕಾ	11-44	ಮೃಗಶಿ	57-28	16
1	[1]ಸೋಮ	ದ್ವಾದ	7-11	ಆದ್ರಾ	53-26	17
2	ಮಂಗಳ	ತ್ರ.ಉ	1-56-54-31	ಪುನ	49-35	18
3	[2]ಬುಧ	ಅಮಾ	50-10	ಪುಷ್ಯ	45-27	19
4	ಗುರು	ಪಾಡ	43-54	ಆಶ್ಲೆ	41-7	20
5	[3]ಶುಕ್ರ	ಬಿದಿ	37-46	ಮಖ	37-0	21
6	[4]ಶನಿ	ತದಿ	31-56	ಪುಬ್ಬ	33-7	22

(1) ಪ್ರದೋಷಃ. (2) ಸರ್ವತ್ರಭೀಮಾಮಾವಾಸ್ಯ, ಜ್ಯೋತಿಸ್ತಂಭವ್ರತಂ. (3) ಅಡಿಶುಕ್ರವಾರಂ. (4) ಸಂಪದ್ಗೌರೀವ್ರತಂ, ಶ್ರಾವಣಶನಿವಾರ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಯಜ್ಞ ನಹೃತ ಮೋಹರಾಜೀಯಾತ್ ॥

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಮಲಂ ॥

ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪, ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಅಗಸ್ಟ ತಾರೀಖು ೭ ನೆಯ ಭಾನುವಾರ (ಸಂಚಿಕೆ ೩೧

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ,

30 ಮೈಸೂರು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0

ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂರ್ ಲೈಯಿಟ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂರ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0

ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,

45 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ೀತ ವೀರಶೈವ ವಿವಾಹವಿಧಿ ೦—೧೩—೦

ರುಶೀಲಚರಿತ್ರೆ ೦—೧೦—೦

ದಾಸಿ ೦—೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ‍್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೋ ಇರುತ್ತದೆ. ಫೂ॥ ಪ್ರ ೧ಕ್ಕೆ ಸಾ॥ ರೂ. ೧—೪—೦. ಕಾ॥ ಸಾ॥ ಆಣೆ ೧೨.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ಫೂ॥ಸಾ॥ಪ್ರ ೧ಕ್ಕೆ ೧-೪-೦. ಕ್ಯಾ॥ಸಾ॥ ೧೨ಆಣೆ.

ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮×೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಕಲ್ಯಾಣಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣನ ಖಾಸ ಫೋಟೋ ಇರುತ್ತದೆ. ೧೮×೧೨ ಸೈಜು ಕ್ರಯ ಪ್ರ ೧ಕ್ಕೆ ೮ ಆಣೆ. ಕೈಬಣ್ಣದ್ದು ರೂ. ೧ ಟಪಾಲಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ಮಹಿಸಿ ಸುದರ್ಶನಚಕ್ರ ಪಡದ ಈ ಫೋಟೋ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೆಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವರಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ಫೂ॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ೧೨ ಆಣೆ.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫೂ॥ ಸಾ॥ ಪ್ರ ೧ಕ್ಕೆ ೧-೪-೦ ಕ್ಯಾ॥ಸಾ॥ ೧೨ ಆಣೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫೂ॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

ಶ್ರೀ ಅಲ್ಲಮ-ಮಾಯಾ:—ಇದರಲ್ಲಿ ಶ್ರೀ ಅಲ್ಲಮ ಪ್ರಭುವಿಗೆ ಮಾಯೆಯು ಮೋಹಿಸಲಿಕ್ಕೆ ಬಂದು ಇರುವಳು. ಇದು ಬಹು ಸುಂದರಪಟ ಇರುತ್ತದೆ. ಫೂ॥ ಸಾ॥ ಪ್ರ॥ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

ಈ ಅಪೂರ್ವ ಫೋಟೋಗಳು ಕೈ॥ ವಾ॥ ರಾಚಾರವಿವರ್ಮನಂತೆ ವೀರಶೈವರಲ್ಲಿ ಪ್ರಸಿದ್ಧ ಆರ್ಟಿಸ್ಟರಾದ ಭರಮಣ್ಣ ತುಂಬಾರ ಕೋಟ್ಯಾಳಕರ ಇವರ ಕಡಿಂದೇ ತಯಾರ ಮಾಡಿಸಿದ ಕಾರಣ ಇವು ಅತಿ ಸುಂದರ ಇದ್ದು ಪ್ರತಿ ವೀರಶೈವರು ಸಂಗ್ರಹಿಸಲಿಕ್ಕೆ ಯೋಗ್ಯ ಇರುವವು.

ಇವುಗಳ ಹೊರತು ಶ್ರೀ ಪಂಚಮುಖಿಪರಮೇಶ್ವರ, ೨. ಶ್ರೀವೀರಭದ್ರದೇವರು, ೩. ಶ್ರೀ ಶರಭಾವತಾರ, ೪. ಶ್ರೀ ಗೌರಿಗಜಾನನ ವಿನೋದ, ೫. ಶ್ರೀ ಸೊಲ್ಲಾಪೂರು ಸಿದ್ಧರಾಮೇಶ್ವರ. ೬. ಶ್ರೀ ಹಂಪೆವಿರೂಪಾಕ್ಷೇಶ್ವರ ಮುಂತಾದ ದೇವರು ಮತ್ತು ಶ್ರೀ ಜ॥ ಗು॥ ಚಿತ್ರದುರ್ಗದ ಮಹಾಸ್ವಾಮಿ, ಅಥಣಿ ಶಿವಯೋಗಿಗಳು, ಹಾನಗಲ್ಲ ಸ್ವಾಮಿಗಳು, ಸೊಲ್ಲಾಪೂರದ ಪ್ರಸಿದ್ಧ ನಾಲತ್ತವಾಡದ ಶರಣರು, ಬಿಳೂರ ಸ್ವಾಮಿಗಳು, ಕಮತಗಿ ಹುಚ್ಚೇಂದ್ರಸ್ವಾಮಿಗಳು, ಸದ್ಯಕ್ಕೆ ವೀರಶೈವ ಸಮಾಜಸುಧಾರಣೆಗೆ ಕಂಕಣಬದ್ಧರಾದ ಮೃತ್ಯುಂಜಯ ಸ್ವಾಮಿಗಳು, ಗುರುಮಠಕಲ್ಲ ಶಾಂತವೀರ ಸ್ವಾಮಿಗಳು ಮುಂತಾದ ಸತ್ಪುರುಷರು, ಮತ್ತು ಶ್ರೀ ವೀರಶೈವರಾಜಸಮೂಹ, ಕೈ॥ ಮಹಾತ್ಮಾ ಸಿರಸಂಗಿ ಸರದೇಸಾಯಿಗಳು, ರಾ॥ ಬ॥ ವಾರದ ಮಲ್ಲಪ್ಪನವರು, ಮುಂತಾದ ಫೋಟೋಗಳು ಸಿಗುತ್ತವೆ. ಕ್ರಯ ಫೂ॥ ಸಾ॥ ಪ್ರತಿ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ೧೨ ಆಣೆ. ಎಲ್ಲಕ್ಕೂ ಟಪಾಲುಖರ್ಚು ಬೇರೆ. ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕೆಟ್ ಕಳಿಸಿ ನಿಯಮ ತರಿಸಿಕೊಳ್ಳಿ.

8 ವಿಳಾಸ—ಗಂಗಪ್ಪಾ ಜೇರಿಗೆ ಫೋಟೋ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.	ರೂ. ವರೆಗೆ.
4	0-12-0 ,,	50-0-0
5	0- 8-0 ,,	100-0-0
6	0-12-0 ,,	100-0-0
7	6- 0-0 ,,	100-0-0

ಬಿಡಿ ಮಣಿಗಳು 1ಕ್ಕೆ ಕ್ರಯ

ಮುಖ	ರೂ. ಇಂದ.	ರೂ. ವರೆಗೆ.
3	0- 6-0 ಇಂದ	10-0-0
8	0- 8-0 ,,	100-0-0
9	0-12-0 ,,	100-0-0
10	0-14-0 ,,	100-0-0
11	3- 8-0 ,,	100-0-0
12	4- 0-0 ,,	100-0-0
13	4- 8-0 ,,	100-0-0
14	6- 0-0 ,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆಗಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅಪಕ್ವಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರ ರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ

34 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 13

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,

ನಂ. 7 ಪೋಸ್ಟ್ ಶಿರ್, ಉತ್ತರಕನಡಾ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಆಗಸ್ಟ್ ತಾ|| ೭ ನೆಯ ಭಾನುವಾರ.

ಸ್ನೇಹಕ್ಕೆ ಸ್ನೇಹ, ವೈರಕ್ಕೆ ವೈರ.

ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರಿ ಅಪ್ಪಣೆಯನ್ನು ಹಿಂದುಳಿದವರ ಉದ್ಧಾರಕ್ಕಾಗಿ ಶ್ರೀಮನ್ಮಹಾರಾಜರು ದಯಪಾಲಿಸಿರುತ್ತಾರೆಂಬುದು ಸರ್ವತ್ರ ಗೊತ್ತೇಇದೆ. ಅದನ್ನು ಕಂಡು ಸೈರಿಸಲಾರದ ಬ್ರಾಹ್ಮಣ ಪ್ರತಿನಿಧಿಗಳು ಸರ್ಕಾರವನ್ನು ಹೆದರಿಸುವ ಉದ್ದೇಶದಿಂದ ಪ್ರಜಾಪ್ರತಿನಿಧಿಸಭೆಯಲ್ಲಿ ತಮ್ಮ ಸಬ್ಜೆಕ್ಟುಗಳನ್ನೇ ಚರ್ಚಿಸದೆ ತಮ್ಮನ್ನು ಆರಿಸಿ ಕಳುಹಿಸಿದ ಪ್ರಜೆಗಳನಂಬುಗೆಗೆ ದ್ರೋಹಮಾಡಿದಂತಾಗುವುದೆಂಬುದನ್ನು ಕೂಡ ಗಣಿಸದೆ ಹೋದರಷ್ಟೆ. ಆದರಮೇಲೆ ಸರ್ಕಾರದವರು ಇಂಥ ಪ್ರವರ್ತನವು ಸರಿಯಲ್ಲವೆಂದು ಎಚ್ಚರಿಸಬೇಕಾಯಿತು. ಈಗ ಆ ಪ್ರತಿನಿಧಿಗಳಿಗೆ ತಮ್ಮ ಹಠದ ಪರಿಣಾಮವು ಗೋಚರಿಸಿದಂತೆ ತೋರುತ್ತದೆ. ಅವರ ಪ್ರೇರೇಪಕರು—ಎಲ್ಲ ಬ್ರಾಹ್ಮಣರೂ ಸರ್ಕಾರದುದ್ಯೋಗಗಳನ್ನು ಬಿಟ್ಟುಬಿಡಬೇಕೆಂದೂ, ಆನರರಿ ಕೆಲಸಗಳನ್ನೆಲ್ಲಾ ಬಿಟ್ಟುಬಿಡಬೇಕೆಂದೂ, ಬ್ರಹ್ಮದ್ವೇಷವುಳ್ಳ ಸರ್ಕಾರಕ್ಕೆ ಸಹಾಯಮಾಡಬಾರದೆಂದೂ, ಪ್ರತಿನಿಧಿ ಸಭೆಯ ಸಭಿಕತ್ವವನ್ನು ದೂರೀಕರಿಸಬೇಕೆಂದೂ ಮೊದಲಾಗಿ ಹೇಳಿಕೊಟ್ಟರು. ಆದರೆ ಆ ಚಿತಾವಣೆ ಮಾತುಗಳೊಂದೂ ಈಡೇರುವಂತೆ ತೋರುವುದಿಲ್ಲ. ಜಾಣರಾದ ಆ ಪ್ರತಿನಿಧಿಗಳು ಆ ಹಠವನ್ನೂ ಅದರ ಫಲವನ್ನೂ ಅನುಭವಿಸುವ ಹಕ್ಕನ್ನೆಲ್ಲಾ ತಮ್ಮ ಪ್ರೇರೇಪಕರಿಗೇ ಬಿಟ್ಟುಕೊಟ್ಟಿರಬೇಕೆಂದು ತೋರುತ್ತದೆ. ಅದರಿಂದಲೇ ಯಥಾಪ್ರಕಾರ ತ್ರಿಮತ ಬ್ರಾಹ್ಮಣ ಪ್ರತಿನಿಧಿಗಳು ಸರ್ಕಾರಕ್ಕೆ ಮುಂದಣ ಸಭೆಯ ಸಬ್ಜೆಕ್ಟುಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ಚರ್ಚೆಗೆ ತರುತ್ತಾರೆಂಬುದಕ್ಕೆ ಸಂಶಯವಿಲ್ಲ.

ಆದರೆ ಈ ಪ್ರತಿನಿಧಿಗಳಲ್ಲಿ ಕೆಲರಿಗೆ ಮಿಲ್ಲರ್ ಸಂಘದ ವರದಿಯ ಮೇಲಣ ಆಗ್ರಹವು ಇನ್ನೂ ಬಿಟ್ಟಿಲ್ಲ. ಅದರ ಮೇಲೆ ಸರ್ಕಾರದಪ್ಪಣೆ ಆಗಿಹೋಗಿದ್ದರೂ ಆ ವಿಷಯದ ಮೇಲೆ ಸಬ್ಜೆಕ್ಟನ್ನು ಮುಂದಣ ಸಭೆಯ ಚರ್ಚೆಗೆ ಇಡಿಸಿದ್ದಾರೆ. ಈ ಅಪ್ಪಣೆಯ ಮೇಲೆ ಅಸಮಾಧಾನ ತೋರಿಸುವುದೆಂದರೆ ಹಿಂದುಳಿದ ಜನಗಳ ಅಭಿವೃದ್ಧಿಗೆ ಅಸೂಯೆಪಡುವುದೇ ಆಗಿರುತ್ತದೆ. ೫೮ ಲಕ್ಷ ಪ್ರಜೆಗಳ ಅಭಿವೃದ್ಧಿಗೆ ಅಡ್ಡಿಮಾಡಿ ೨ ಲಕ್ಷ ಪ್ರಜೆಗಳಾದ ತಾವು ಮಾತ್ರ ಉದ್ಧಾರವಾಗಬೇಕೆಂಬ ಸಂಕಲ್ಪವು ಇವರಲ್ಲಿರುವಾಗ ಇದಕ್ಕೆ ದೈವವು ಮೆಚ್ಚುವುದುಂಟೊ? ತಮ್ಮ ವಿಷಯದಲ್ಲಿ ಇಷ್ಟು ಅಂತಃಕರಣವನ್ನು ಅವರು ಇಟ್ಟುಕೊಂಡಿರುವಾಗ ಅಂಥ ಪ್ರತಿನಿಧಿಗಳ ವಿಷಯದಲ್ಲಿಯೂ ಅವರು ಮಾಡುವ ಚರ್ಚೆಯ ವಿಷಯದಲ್ಲಿಯೂ ಇತರ ಪ್ರತಿನಿಧಿಗಳೆಲ್ಲಾ ತಕ್ಕ ಎಚ್ಚರಿಕೆಯನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿರುತ್ತದೆ.

ತಾವು ಹಿಂದಣ ಸಭೆಯಲ್ಲಿ ವಿಷಯಗಳನ್ನು ಚರ್ಚಿಸದೆ ತಟಸ್ಥರಾದುದರಿಂದ ತಮ್ಮನ್ನು ಆರಿಸಿ ಕಳುಹಿಸಿದ ಓಟರುಗಳಿಗೆ ದ್ರೋಹಮಾಡಿದಂತಾಗಿರುವ ಕಾರಣ ಮುಂದೆ ತಮ್ಮಲ್ಲಿ ನಂಬುಗೆಯಿಟ್ಟು ಅವರುಗಳು ಓಟನ್ನು ಕೊಡಲಾರರೆಂಬ ಭೀತಿಯು ಇವರುಗಳಿಗೆ ಈಗ ಉಂಟಾಗಿದೆ. ಇವರು ತಟಸ್ಥರಾಗಿ ಕುಳಿತುದರಿಂದ ತಮಗೆ ಅಸಮಾಧಾನವಿಲ್ಲವೆಂಬರ್ಥದ ಹೆಸರಿಲ್ಲದ ಲೇಖನಗಳನ್ನು ಗ್ರಾಮಾಂತರದ ಜನರು ಕಳುಹಿಸಿಕೊಟ್ಟಂತೆ ತಮ್ಮ ಪತ್ರಿಕೆಗಳಲ್ಲಿ ಪ್ರಕಟಪಡಿಸಿಕೊಳ್ಳುತ್ತಿದ್ದಾರೆ. ಹಿಂದುಳಿದ ತಮ್ಮನ್ನು ವಿದ್ಯಾವಂತರನ್ನಾಗಿ ಮಾಡಿ ಸರ್ಕಾರದ ಉದ್ಯೋಗ ಮೊದಲಾದುವುಗಳಿಗೆ ಹತ್ತಿಸಿ ಉದ್ಧಾರಮಾಡಬೇಕೆಂಬ ಸರ್ಕಾರದವರ ಉದ್ದೇಶವು ತಮಗೆ ಹಿತಕರವೋ ಅಂಥ ಉದ್ದೇಶಕ್ಕೆ ಅಡ್ಡಿಮಾಡುವ ಜನರ ತಂತ್ರವು ತಮಗೆ ಹಿತಕರವೋ ಎಂಬುದನ್ನು ಸಕಲ ಪ್ರಜೆಗಳೂ ಈಗ ವಿಚಾರಮಾಡಬೇಕು. ಅರಿಯದ ಗ್ರಾಮಾಂತರಗಳ ಜನರು ಇಂಥ ಸಮಯದಲ್ಲಿ ಪರರ ವಂಚನೆಯ ಮಾತುಗಳಿಗೆ ಮರುಳಾಗಿ ಅವರು ಹೇಳಿದ ಕಾಗದಗಳಿಗೆಲ್ಲಾ ರುಜು ಮಾಡುವುದನ್ನೇ ಆಗಲೀ ಇತರರು ಆಡಿದ ಮಾತಿಗೆಲ್ಲಾ ತಲೆದೂಗುವುದನ್ನೇ ಆಗಲೀ ಮಾಡಬಾರದು. ತಮ್ಮ ಕ್ಷೇಮಕ್ಕೆ ಸಾಧಕವಾವುದು ಭಂಗಕಾರಿಯಾವುದು ಎಂಬುದನ್ನು ತಮ್ಮ ಹಿತಚಿಂತಕರಿಂದ ಕೇಳಿ ಚೆನ್ನಾಗಿ ತಿಳಿದುಕೊಂಡ ನಂತರವೇ ಪ್ರವರ್ತಿಸಬೇಕು. ನಮ್ಮ ಅಭ್ಯುದಯವನ್ನು ಕೋರುವವರೊಡನೆ ನಾವು ನಂಬುಗೆಯಿಟ್ಟು ಸ್ನೇಹಮಾಡೋಣ. ನಮ್ಮ ಕ್ಷೇಮಕ್ಕೆ ಭಂಗಕಾರಿಗಳಾದವರಿಂದ ದೂರವಾಗಿರೋಣ. ಸ್ನೇಹಕ್ಕೆ ಸ್ನೇಹ, ವೈರಕ್ಕೆ ವೈರ ಹುಟ್ಟುವುದು ಸ್ವಭಾವವು. ಪರಸ್ಪರ ಸ್ನೇಹ ಪ್ರೀತಿ ವಿಶ್ವಾಸಗಳೂ ಅದರಿಂದ ದೇಶಾಭ್ಯುದಯವೂ ಉಂಟಾಗಬೇಕೆಂಬುದು ಮುಂಬರಿದ ಜನವರ್ಗ ಪ್ರತಿನಿಧಿಗಳ ಮನಸ್ಸಿನಲ್ಲಿದ್ದರೆ ಮಿಲ್ಲರ್ ಸಂಘದ ವರದಿಯ ಪ್ರಸ್ತಾಪವನ್ನು ಇನ್ನುಮುಂದೆ ಎತ್ತದೆ ಇರುವವರಾಗಲಿ.

M. M. G.

The unceasing ebullition is going on unrestrained. The campaign of rage is taking various shapes and forms. The Chelas of the last administration, brought up in that vanity which was well hidden under the cover of peoples men, are now appearing in their true colours. That daily which issues under the name of Wealth viz. the wealth of wrath and selfishness, is devoted to one cause and that cause is the cause of one minor class of people in Mysore. It is sufficient to understand its nature if its leader in Kanarese of 29-7-21 is read. It betrays the blood of which those veins are in abundance. That story of the passage at arms between Dewan Rangacharlu and a Krishna Rao and the advice that similar conclusions should now be repeated out of the episode that was enacted at the last Birth-day Session of the Representative Assembly read very ridiculous. Is there any loftiness of mind or of thought disclosed in this example which is brought to bear upon the present conditions?

We might take another incident to show that the Monopolists are altogether out of their way in their conduct in public business. The Representative Assembly Members of Bangalore District met under the Presidency of the Deputy Commissioner of Bangalore on the afternoon of 28-7-21 to discuss the subjects for the Dasara Session. It was an occasion for a scene. The members of the Monopolist Community were detained notwithstanding that some had desire to take leave to attend to some professional work for the purpose of taking part in the discussion on the Miller Committee Report. That was the conspiracy of the meeting. One of the favourites of the Conference discussions moved that some monopolists must be on the Vigilance Committee which is appointed to watch the working of the order on the Miller Committee Report and in doing so passed certain remarks with reference to the members now on the Committee. This attitude necessarily prompted one of the members to defend his position in the Committee. Then "The cat was out of the bag." The President of the meeting was in rage and the rest of the incident was not dignifying for a Representatives Meeting of the kind where they were to discuss matters not concerned with the prospects of this community or of that community, but to discuss matters of general interest which affected the people who elected them to the Representative Assembly. The Monopolists' rage is making thus its appearance in all shapes and forms. Our land has become the land of the Almighty Monopolists. We feel strongly that such a state of things must be ended if it is not possible to mend it. How strong is the love of power! It lends no room for reason. It would sell its Country—as the Monopolists' organ sometime ago suggested in this connection for the sake of Self-seaking Power. The signs of this abnormal desire for power are visible in all directions. We say that it must go. We say that the Monopolists Must Go (M.M.G.) and that is the appeal which the loyal and patriatic subjects of His Highness the Maharaja put in at his feet. We say that the influence and power which these Monopolists are exercising over the minds of the people of Mysore should be brought under control before it is too late. Even now it is a difficult task. The people of Mysore confided in them and that confidence has been abused in so far that they have neglected to represent the interests of their constituents. They care only for their personal interests. That will not do. Hence M. M. G.

MONOPOLISTS The attitude of the Monopolists of Public Service in this State is betraying a spirit of bad blood and it is noticeable in their advocasy of their cause which they have imagined as having been affected by the order on the Miller Committee Report in their papers in the State itself and in those outside which are brought under their influence. What kind of spirit it is, can at once be seen if the loyal Mysorean is told that those papers which have taken up this cause outside the State are the Hindu of Madras and the Chronical of Bombay, which are unmistakably Extremists Oracles. Read the utterances of men who have spoken at a public meeting held at Madras on 21-7-21 in Soundarya Mahal. Two of the principal speakers at this meeting were in Mysore very recently and have now been converted as Champions of Swaraj in Native States. They seem to hold the brief in their hands on behalf of the Monopolists in Mysore Public service and they are Lawyers by profession. The Bombay Chronical belongs to the same brotherhood. These are the loyal subjects of Mysore who employ extremists in politics to fight their cause which they imagine is in danger. This is a strategic move in Politics and the move points to the fact of the rebellious spirit for which these Monopolists are known all over India. They are a very resourceful class of people. They have enjoyed unrestrained power in Mysore. They desire to be autocrats in Mysore by keeping all official influence from what the Shanbhogue can hold to what the Dewan if a Monopolist, can in their hands. Read the Chronicl's "Back Sliding Mysore" in the issue for 22-7-21 which is nothing more than defending one of the most autocratic administrations there ever existed in Mysore and an administration which made the position of the Monopolists in the State Service the strongest. They have not lost today an iota of their influence in Public service; they have not been deprived of one appointment which they held; they have not forfieted one chance of promotion and they are being appointed to new posts in the Education and other departments and still look at that havoc of their cry at the Miller Committee Report. In the past history of appointments to the Chief Court Bench there were instances pointing to any degree of insufficient qualification and unfittedness in the men appointed to the high post. They happened to belong to the class of Monopolists. Not a word of complaint or criticism. Because it was "My Man." What about the instance of the Chronicle? He has been the senior most, the best qualified and his work has not been wanting in quality and quantity. But he is not one of the Monopolists' class. What a sin! What a disqualification!! How much wrath at the poor Judge!!! Such is the result of unrestrained influence of one class. What thousands of unjust acts are there which are committed every day by these Monopolists and which do not see the light of day. Why? There is at every stage of the offices from the Taluk office to the Secretariat at least one to watch every other's interests. "He is safe." The culprit, the in competent and what not—"He is safe."

The Daily Post of Bangalore is threatened with boycott. Why? Once and once only it failed to worship this earthly God. Is all on earth created by God to serve the interests of one class of people in the State of Mysore? Love of power and influence!! The Monopolists will fight vehemently by the means employed any-to keep official power in their hands. May we tell the Hindu and the Chronicle that they know so little of Mysore—why put in their hands into things of which they are ignorant? May we tell those champions of the Monopolists' cause that their sojourn in Bangalore for a week in the company of Tamilians mostly and in the company of that atmosphere which was surfeited with discontent notwithstanding they hold the best offices in the State service but the Dewanship (just now) was not sufficient to know Mysore and that to seek and find out where loyalty, honesty and patriatism reside, they must go to the interior of the country where thousands are who are oppressed by the handful of those at whose feet they learnt those one week's unsatisfactory lessons which form the subject matter of their great orations at Madras on 21-7-21.

We are one and will be one after there transitary clouds pass and we will settle our differences if the influences of these "Have-no-work-to-do-of their-own"—men who come here for a week on the invitation of the boistrous boys and for change of climate leave us alone. If however the Mysore Monopolists to fight and that to kill the "Just and Equitable Miller Report," they will have plenty of it to spare to the Monopolists who in the long enjoyment of power and influence have forgotten that it is but their brothern who are askin for association with them in the work of the administration of their Country.

ಕಾಗದದ ಉಡುಪುಗಳು.

ನಮ್ಮ ಪೂರ್ವಿಕರು ಉಡುಪುಗಳಿಗಾಗಿ ವಿಶೇಷ ದ್ರವ್ಯವನ್ನು ಹಾಳುಮಾಡಿದವರಲ್ಲ. ಈಗಣ ನಮ್ಮ ನಾಗರಕತೆಯು ಉಡುಪಿನ ಡೌಲಿನಲ್ಲೇ ಮುಳುಗಿ ತೇಲುತ್ತಲಿದೆ. ಪಾಶ್ಚಾತ್ಯರ ಸಂಸರ್ಗದಿಂದ ನಮಗೆ ಉಡುಪಿನ ಮೋಹವು ಬಹಳ ಪ್ರಬಲಿಸಿತು. ಅದು ಇತ್ತಲಾಗಿ ಮಿತಿಮೀರಿಹೋಗಿ ಹಳ್ಳಿಗಾಡಿನ ಕಂಬಳಿಹೊದೆಯುತ್ತಿದ್ದವರು ಕೂಡ ಈಗ ಪರದೇಶಗಳ ರಂಗುದಾರಿ ಬಟ್ಟೆಗಳಶೋಕಿಗೆ ಬಲಿಬಿದ್ದಿರುವರು. ಈ ಕಾರಣದಿಂದ ಪ್ರತಿವರ್ಷವೂ ಭರತಖಂಡವು ಪರದೇಶದ ಬಟ್ಟೆಗಳಿಗಾಗಿಯೇ ನೂರೈವತ್ತು ಕೋಟಿ ರೂ. ಗಳನ್ನು ತೋಡಿಕೊಡುತ್ತಲಿದೆ. ನಾವುಗಳು ಒಂದೊಂದು ಜತೆ ಉಡುಪಿಗಾಗಿ ನೂರಾರು ರೂ. ಗಳನ್ನು ವೆಚ್ಚಮಾಡಲಿಕ್ಕೂ ಹಿಂದೆಗೆಯದಂಥ ಅವಿವೇಕಸ್ಥಿತಿಗೆ ಬಂದಿರುವಾಗ, ನಮಗೆ ಈ ಸ್ಥಿತಿಯನ್ನು ತಂದಿಕ್ಕಿದ ಪಾಶ್ಚಾತ್ಯದೇಶೀಯರುಗಳು ೧-೨ ರೂ. ನ ವೆಚ್ಚದೊಳಗೆ ಉಡುಪಿನ ಸೌಕರ್ಯವೆಲ್ಲಾ ಮುಗಿಯುವಂತೆ ಮಾಡಿಕೊಂಡಿರುವ ಸಿಸ್ತನ್ನು ಕೇಳಿದರೆ ನಮ್ಮವರು ಆಶ್ಚರ್ಯಪಡದೆ ಇರಲಾರರು. ಯೂರೋಪುಖಂಡದ ಗ್ರೇಟ್‌ಬ್ರಿಟನು, ಜರ್ಮನಿ, ಆಸ್ಟ್ರಿಯಾ, ತುರ್ಕಿ, ಇಟಲಿ, ಅರ್ಜಂಟೇನಿಯಾ ಮೊದಲಾದ ಯಾವದೇಶಗಳಲ್ಲಿ ನೋಡಿದರೂ ಈಗ ಕಾಗದಗಳಿಂದ ಮಾಡಿದ ಉಡುಪುಗಳನ್ನು ಧರಿಸಿದವರೇ ಕಣ್ಣಿಗೆ ಬೀಳುತ್ತಾರೆ. ಅವರು ಮೆಡುವ ಪಾದರಕ್ಷೆಗಳೂ ಕೂಡ ಕಾಗದದಿಂದಲೇ ಮಾಡಿದುವುಗಳು. ಈ ನೂತನ ಪದ್ಧತಿಯು ಮೊಟ್ಟಮೊದಲು ಜರ್ಮನಿ ಆಸ್ಟ್ರಿಯಾ ದೇಶಗಳಲ್ಲಿ ಪ್ರಾರಂಭವಾಯಿತು. ಅಲ್ಲಿಯ ಜನರು ತಮ್ಮ ಕೋಟು ಷರಾಯಿ ವೇಸ್ಟುಕೋಟು ಇವುಗಳಿಗೆಲ್ಲಾ ಒಟ್ಟಿಗೆ ೨ ರೂ. ಗಳನ್ನು ಮಾತ್ರ ಕೊಟ್ಟರೆ ಸಾಕು. ಓವರ್‌ಕೋಟಿಗೆ ೧ ರೂ. ಕಾಲು ಜೋಡಿಗೆ ೧ ರೂ. ತಲೆಯ ಟೋಪಿಗೆ ೬|| ಆಣೆ ಮಾತ್ರ ಆಗುವುದಂತೆ.

ಯುದ್ಧಕಾಲದಲ್ಲಿ ಜರ್ಮನಿಯವರು ಮೊದಲು ಈ ನೂತನ ನಿರ್ಮಾಣಕ್ಕೆ ತೊಡಗಿದರು. ಹತ್ತಿ ಉಣ್ಣೆ ಮೊದಲಾದ ವಸ್ತ್ರಗಳು ಪರದೇಶಗಳಿಂದ ಅವರಿಗೆ ದೊರೆಯದೆ ಹೋದಕಾರಣ ಅವರು ಕಾಗದಗಳಿಗೆ ಉಪಯೋಗಿಸುತ್ತಿದ್ದ ಸಸ್ಯ ವಸ್ತುಗಳಿಂದಲೂ ನಾರುಗಳಿಂದಲೂ ಬಟ್ಟೆಗಳನ್ನು ನಿರ್ಮಿಸುವುದಕ್ಕಾಗಿ ರಚಿಸುತ್ತಿದ್ದ ಗುಜ್ಜಿನ ಜತೆಗೆ ನಾರನ್ನೂ ಕೆಲಸಕ್ಕೆ ಭಾರದ

ಚಿಂದಿ ಕಾಗದಗಳನ್ನೂ ಕೂಡಿಸಿ ಅವುಗಳ ಜತೆಗೆ ಕೆಲವು ರಾಸಾಯನಿಕ ದ್ರವ್ಯಗಳನ್ನು ಕೂಡಿಸಿ ಅವುಗಳಿಂದೆಲ್ಲಾ ಹತ್ತಿಗೆ ಸಮಾನವಾದ ಪದಾರ್ಥವೊಂದನ್ನು ರಚಿಸಿದರು. ಅದನ್ನು ಯಂತ್ರಕ್ಕೆ ಕೊಟ್ಟು ನೂಲನ್ನು ಮಾಡಿ ಬೇಕಾದ ಬಟ್ಟೆಗಳನ್ನು ನಿರ್ಮಿಸುತ್ತಿರುವರು. ಜರ್ಮನಿ ದೇಶದಲ್ಲಿ ಪ್ರತಿಯೊಂದು ಮನೆಯಲ್ಲಿ ಉಪಯೋಗಿಸುವ ಬಟ್ಟೆಗಳೂ ಹೀಗೆ ಕಾಗದದಿಂದ ಮಾಡಿದುವುಗಳೇ ಆಗಿರುತ್ತವೆ. ಟುವಾಲುಗಳು, ದುಪ್ಪಟಿಗಳು, ಕಾಲರುಗಳು, ಚಾಪೆಗಳು, ಸೊಳ್ಳೆತೆರೆಗಳು, ಎಣ್ಣೆ ತುಂಬುವ ತಿತ್ತಿಗಳು ಮೊದಲಾದ ಸಾಮಗ್ರಿಗಳೆಲ್ಲಾ ಹೀಗೆ ನಿರ್ಮಿತವಾದುವುಗಳೇ. ಶ್ರೀಮಂತರು ಮೊದಲುಗೊಂಡು ಕೂಲಿನಾಲಿ ಮಾಡುವವರೆಲ್ಲಾ ಈ ಕಾಗದದ ಉಡುಪುಗಳನ್ನೇ ಧರಿಸಿಕೊಳ್ಳುತ್ತಾರೆ. ರಣರಂಗದಲ್ಲಿ ಕಾದಾಡುವ ಸೈನಿಕರ ಉಡುಪುಗಳೂ ಇಂಥವುಗಳೇ ಆಗಿರುತ್ತವೆ.

ಈ ಕಾಗದದ ಬಟ್ಟೆಗಳನ್ನು ನೀರಿನಿಂದ ತೊಳೆಯಬಹುದು. ಯಂತ್ರಸಾಹಾಯ್ಯದಿಂದ ಒಗೆದರೆ ಕೆಟ್ಟುಹೋಗುವುದು. ನೀರಿನಲ್ಲಿ ಅದ್ದಿ ಕೈಯಿಂದ ತಿಕ್ಕಿ ಉಜ್ಜಿ ಚೊಕ್ಕಟಮಾಡಬಹುದು. ಹುಳಿಯು ಸೋಕಕೂಡದು. ಜೇಳುಮಣ್ಣನ್ನು ಉಪಯೋಗಿಸಿ ಶುದ್ಧಿಪಡಿಸಿ ಒಣಗಿಸಬಹುದು. ಆದರೆ ಇಸ್ತ್ರಿಮಾಡಕೂಡದು. ಮಾಡಿದರೆ ಹೆಚ್ಚುಕಾಲ ಬಾಳಿಕೆ ಬರುವುದಿಲ್ಲ. ಈ ಕಾಗದದ ಉಡುಪನ್ನು ೨೦ ಸಲಕ್ಕೆ ಮೀರಿ ನೀರಿಗೆ ಹಾಕಿ ತೊಳೆದರೂ ಕೆಟ್ಟುಹೋಗುವುದಿಲ್ಲವಂತೆ.

ಜರ್ಮನಿಯು ಈಗ ಪ್ರತಿವರ್ಷವೂ ೧೦ ಕೋಟಿ ರೂ. ಬೆಲೆಬಾಳುವ ಇಂಥ ಕಾಗದದ ಬಟ್ಟೆಗಳನ್ನು ನಿರ್ಮಿಸುತ್ತಿರುವುದು. ಇದನ್ನು ನೋಡಿ ಇಂಗ್ಲಂಡ್ ದೇಶವು ಕೂಡ ಈ ಕೈಗಾರಿಕೆಯನ್ನಾರಂಭಿಸಿ ವ್ಯಾಪಾರ ಮಾಡುತ್ತಿದೆ. ಫ್ರಾನ್ಸ್ ದೇಶವು ಕೂಡ ಈ ನಿರ್ಮಾಣಕ್ಕೆ ಪ್ರಯತ್ನಪಟ್ಟಿದೆ. ಆದರೆ ಅಲ್ಲಿ ಕಾಗದದ ನಿರ್ಮಾಣಕ್ಕೆ ತಕ್ಕ ಮೂಲವಸ್ತುಗಳು ಹೇರಳವಾಗಿ ಸಿಕ್ಕದಿರುವುದರಿಂದ ಈ ಪರಿಶ್ರಮದಿಂದ ಅವರಿಗೆ ವಿಶೇಷ ಲಾಭವಾಗುವುದಿಲ್ಲ. ಜಪಾನ್ ದೇಶವು ಟೋಪಿಗಳನ್ನು ರಚಿಸುವುದಕ್ಕೂ ನೂಲನ್ನು ಎತ್ತುವುದಕ್ಕೂ ರೇಶಿಮೆಯನ್ನು ಮಾಡುವುದಕ್ಕೂ ಕಾಗದವನ್ನು ಉಪಯೋಗಿಸುತ್ತಿದೆ. ಸ್ವೀಡನ್ ಡೆನ್ಮಾರ್ಕು ದೇಶಗಳವರು ಕೂಡ ಇದರ ವ್ಯಾಪಾರಕ್ಕೆ ಈಗೀಗ ತೊಡಗಿದ್ದಾರೆ.

ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ಈ ಕಾಗದದ ಉಡುಪುಗಳಿಗಾಗಿ ಪ್ರಜೆಗಳು ಈ ಕೆಳಗೆ ಕಂಡಂತೆ ವೆಚ್ಚಮಾಡುತ್ತಿದ್ದಾರೆ—ಕಾಲರಿಗೆ ೯ ಕಾಸು. ಸಾಧಾರಣವಾದ ಒಂದು ಕೋಟು ಶರಟು ವೇಸ್ಟುಕೋಟು ಶರಾಯಿ ಇವಿಷ್ಟಕ್ಕೂ ೨ ರೂ. ಹುಡುಗರ ಉಡುಪಿಗೆ ೧೪ ಆಣೆ. ಮಂಚದಮೇಲೆ ಹರಡುವ ಸೊಳ್ಳೆತೆರೆಗೆ ೧||| ರೂ. ಮಳೆಗಾಲದಲ್ಲಿ ಉಪಯೋಗಿಸುವ ರೇಯಿನ್‌ಪ್ರೂಫ್ ಓವರ್‌ಕೋಟಿಗೆ ೧೪ ಆಣೆ. ಹಾಸುಗೆಗೆ ೧|| ರೂ. ಗೌರವಸ್ಥರಾದ ದೊಡ್ಡಮನುಷ್ಯರ ಉಡುಪಿಗೆ ೫||| ರೂ. ಹೆಂಗುಸರ ಉಡುಪಿಗೆ ೧ ರೂ. ಕಿಟಕಿಗಳಿಗೆ ಕಟ್ಟುವ ತೆರೆಗಳಿಗೆ ೨ ರೂ. ಓವರ್‌ಕೋಟಿಗೆ ೨ ರೂ. ಆಗುವುದಂತೆ.

ಕೆಲ ಶಾಸ್ತ್ರಜ್ಞರು ಈ ಕಾಗದದ ಬಟ್ಟೆಗಳು ಶೀತದೇಶದ ಉಪಯೋಗಕ್ಕೆ ಸರಿಯೇ ಹೊರತು ಉಷ್ಣದೇಶಕ್ಕೆ ತಕ್ಕುವಲ್ಲವೆಂದು ಹೇಳುತ್ತಾರೆ. ಏಕೆಂದರೆ ಇಲ್ಲಿಯ ವಾತಾವರಣದಿಂದ ಇವು ಬೇಗನೆ ಮಾಸಿಹೋಗುತ್ತವೆಯಂತೆ. ಆದರೆ ಜರ್ಮನಿಯ ಶಾಸ್ತ್ರಜ್ಞರು ಇನ್ನಾವ ರಾಸಾಯನಿಕದ್ರವ್ಯಗಳನ್ನಾದರೂ ಅವಕ್ಕೆ ಸೇರಿಸಿ ಹೊಸತರವಾಗಿ ನಿರ್ಮಿಸಿ ಉಷ್ಣದೇಶದಲ್ಲೂ ಬಾಳಿಕೆಗೆ ಬರುವಂತೆ ಮಾಡಿದರೆ ಉತ್ತರತ್ರ ನಮ್ಮ ಭರತಖಂಡಕ್ಕೂ ಈ ಪದಾರ್ಥಗಳು ತಲೆಯಿಕ್ಕಬಹುದು. ಬಡತನದಲ್ಲಿರುವ ಭರತಖಂಡವು ಅಗ್ಗದ ವಸ್ತುಗಳಿಗೇ ಬಾಯ್ಬಿಟ್ಟುಕೊಂಡಿರುವುದಷ್ಟೆ.

ಒಳದೇಶದ ವೃತ್ತಾಂತಗಳು.

ಕಳೆದ ೪ ನೇ ತಾರೀಖಿನ ದಿನ ಬೆಂಗಳೂರಿನಲ್ಲಿ ೧ ಇಂಚು ಮೇಲೆಯೇ ಮಳೆ ಬಿದ್ದಿತು.

ರಾಜಧಾನಿಯ ಫಲಪುಷ್ಪ ಪ್ರದರ್ಶನೋತ್ಸವವು ಮುಂದಣ ತಾ|| ೧೩-೧೪ ನೆ ಶನಿವಾರ ಭಾನುವಾರಗಳಲ್ಲಿ ನಡೆಯುವುದು.

ಮ|| ತೂಬಗೆರೆ ನಂಜಪ್ಪನವರು ಮೈಸೂರು ವರ್ತಕಸಂಘ ಪಕ್ಷದಿಂದ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿ ಆರಿಸಲ್ಪಟ್ಟಿದ್ದಾರೆ.

ನಮ್ಮ ಬ್ರಿಟಿಷ್ ರೆಸಿಡೆಂಟರು ಬರೋಡಾ ಸಂಸ್ಥಾನದ ರೆಸಿಡೆಂಟರಾಗಿ ಬರುವ ಆಕ್ಟೋಬರ್ ತಿಂಗಳಲ್ಲಿ ತೆರಳುವರೆಂದು ಕೇಳುತ್ತೇವೆ.

ಹಿಂದೂಸ್ಥಾನಿ ಸ್ಕೂಲುಗಳ ಇನ್‌ಸ್ಪೆಕ್ಟರಾದ ಮಿ|| ಮಹಮ್ಮದ್‌ಬೇಗ್‌ರವರು ೩೫೦ ರೂ. ಸಂಬಳದ ಗ್ರೇಡಿನಲ್ಲಿ ಸ್ಥಿರಗೊಳಿಸಲ್ಪಟ್ಟಿದ್ದಾರೆ.

ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮ|| ಆರ್. ಪುಟ್ಟರಾಜೆ ಅರಸಿನವರು ತತ್ಕಾಲಕ್ಕೆ ಕೋಲಾರ ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ರಾಜಧಾನಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರೂ ದಿವಾನರೂ ಸಹ ಕಳೆದ ಭಾನುವಾರಬೆಂಗಳೂರಿಗೆ ದಯಮಾಡಿಸಿದರು.

ಚೀಫ್‌ಕೋರ್ಟ್ ರಿಜಸ್ಟ್ರಾರ್ ಕೆಲಸಕ್ಕೆ ಆಕ್ಟಿಂಗಾಗಿ ಶಿವಮೊಗ್ಗೆಯ ಮುನ್‌ಸೀಫ್‌ರಾದ ಮ|| ಎ. ಶ್ರೀನಿವಾಸರಾಘವಾಚಾರರು ನಿಯಮಿಸಲ್ಪಟ್ಟಿದ್ದಾರೆ.

ಕಳೆದ ಗುರುವಾರ ನಡೆದ ರಾಜಧಾನಿಯ ಮ್ಯುನ್ಸಿಪಲ್ ಮೀಟಿಂಗಿನಲ್ಲಿ ಇಲ್ಲಿಗೆ ೨೦೦ ರೂ. ಸಂಬಳದ ಹೆಲ್ತ್ ಆಫೀಸರಿದ್ದರೆ ಸಾಕೆಂದು ಕೌನ್‌ಸಿಲರುಗಳು ತೀರ್ಮಾನಿಸಿದ್ದಾರೆ.

ಜನರಲ್ ಮತ್ತು ರೆವಿನ್ಯೂ ಗೌ|| ಅಸಿಸ್ಟೆಂಟ್ ಸೆಕ್ರೆಟರಿಗಳಾಗಿರುವ ಮ||ಪಿ. ಮಹದೇವಯ್ಯ ಬಿ.ಎ.,ಬಿ.ಎಲ್. ರವರು ಶಿವಮೊಗ್ಗೆಯ ಸಬ್‌ಜಡ್ಜರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಶಿವಮೊಗ್ಗಾದಲ್ಲಿ ಸಬ್‌ಜಡ್ಜರಾಗಿದ್ದ ಮ|| ಜಿ. ಸತ್ಯಾಜಿರಾವ್ ಬಿ.ಎ.ಬಿ,.ಎಲ್. ರವರು ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರಾಗಿ ಮೈಸೂರುಸಿಟಿ ಮೇಜಿಸ್ಟ್ರೇಟ್ ಕೆಲಸಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ.

ಮೈಸೂರು ಟ್ರಾನ್‌ಸ್‌ಪೋರ್ಟ್ ಸೈನ್ಯದಲ್ಲಿರುವ ಕ್ಯಾಪ್ಟನ್ ಎ. ಟಿ. ತ್ಯಾಗರಾಜ್‌ಯವರಿಗೆ ೨ ನೆ ತರಗತಿಯ ಬ್ರಿಟಿಷ್ ಇಂಡ್ಯಾ ಆರ್ಡರ್ ಬಿರುದೂ ಬಹದೂರ್ ಎಂಬ ಟೈಟಲು ಸಹ ಕೊಡಲ್ಪಟ್ಟಿರುತ್ತಾರೆ.

ಸರ್ಕಾರದ ಸಾಬೂನ್ ಕಾರ್ಖಾನೆಯನ್ನು ಮಾರಿಬಿಡಲು ಸರ್ಕಾರದವರು ಸಿದ್ಧರಾಗಿರುವರಷ್ಟೆ. ಅದನ್ನು ನೋಡಬೇಕಾಗಿದ್ದವರು ಬೆಳಗಿನ ೮ ರಿಂದ ೧೨ ಗಂಟೆಯೊಳಗೂ ಮಧ್ಯಾಹ್ನ ೧ ರಿಂದ ೫ ಗಂಟೆಯವರೆಗೂ ಬಂದು ನೋಡಬಹುದೆಂದು ಪ್ರಕಟವಾಗಿದೆ.

ಮೈಸೂರುಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾದ ಮಿ|| ಮುತ್ತುಸ್ವಾಮಿದಾಸರು ೧ ತಿಂಗಳ ರಜಾ ಪಡೆದಿರುವುದರಿಂದ ಕೃಷ್ಣರಾಜ ವೈದ್ಯಶಾಲೆಯ ಅ|| ಸರ್ಜನ್ ಮ|| ಎಂ. ಹಿರಣ್ಣಯ್ಯನವರು ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸ್ ಛಾರ್ಜನ್ನು ವಹಿಸಿಕೊಳ್ಳುವಂತೆ ಅಪ್ಪಣೆಯಾಗಿದೆ.

ಮೈಸೂರು ಅರಸೀಕೆರೆ ಲೋಹಮಾರ್ಗದ ಇಕ್ಕೆಲದಲ್ಲೂ ಸಾಲುಮರಗಳನ್ನೇಳಿಸಲು ಕೊನೆಗಳನ್ನು ರೈಲ್ವೆಯ ಇಲಾಖೆಯವರು ಈಗತಾನೇ ನೆಡಿಸುತ್ತಿದ್ದಾರೆ. ಈ ಪ್ರಯತ್ನಕ್ಕಿಂತಲೂ ಉಭಯಪಾರ್ಶ್ವಗಳಲ್ಲೂ ಭೂತಾಳೆಯ ಸಸಿಗಳನ್ನು ಎಳಿಸುವುದಕ್ಕೆ ಗ್ಯಾಂಗಿನವರಿಗೆ ಅಪ್ಪಣೆಮಾಡಿದ್ದರೆ ಆಗಾಗ್ಗೆ ಈ ಮಾರ್ಗದಲ್ಲಿ ಹೊಗೆಬಂಡಿಗೆ ಸಿಕ್ಕಿ ನಡೆಯುತ್ತಿರುವ ಪಶುಬಲಿಯು ತಪ್ಪಿಹೋದೀತು.

ಈ ಕೆಳಗೆ ಕಂಡಂತೆ ಅ|| ಕಮಿಷನರುಗಳ ಗ್ರೇಡ್ ಬಡತಿಯು ಆಗಿರುತ್ತದೆ. ಮ|| ಗಳಾದ ಸಿ. ರಂಗನಾಥರಾವ್ ಸಾಹೇಬರು, ಟಿ. ಗೋವಿಂದರಾಯರು ಸಹ ೨ನೆ ತರಗತಿಯಿಂದ ೧ನೆ ತರಗತಿಗೆ, ಎಸ್. ಎನ್. ಅಪ್ಪಣ್ಣಯ್ಯಂಗಾರರು, ವೈ. ನರಸಿಂಗರಾಯರು, ಎಚ್. ವ್ಯಾಸರಾವ್‌ರವರು, ಮಹಮ್ಮದ್ ಪೀರ್‌ರವರು, ಸಿ. ಗೋಪಾಲಾಚಾರರು ಇವರೆಲ್ಲಾ ೫ ನೆ ತರಗತಿಯಿಂದ ೪ ನೆ ತರಗತಿಗೆ.

ಕಪಿನೀ ಕಾವೇರೀ ನದಿಗಳ ಪ್ರವಾಹಗಳು ನಿನ್ನೆ ಮೊನ್ನೆ ವಾರದಲ್ಲಿ ಅಧಿಕವಾಗಿ ಬಂದಿದ್ದುವು. ಕೃಷ್ಣರಾಜಸಾಗರದ ಕಟ್ಟೆಯಮೇಲೆ ೧೧ ಅಡಿಗಳ ನೀರು ಹರಿದು ದುಮ್ಮಿಕ್ಕುತ್ತಿದ್ದಿತು. ಕಳೆದವಾರವೆಲ್ಲಾ ರಾಜಧಾನಿಯಿಂದ ಪ್ರತಿದಿನವೂ ಸಾವಿರಾರು ಜನರು ಹೋಗಿ ನೋಡಿಕೊಂಡು ಬರುತ್ತಿದ್ದರು. ಪಶ್ಚಿಮಘಟ್ಟಗಳಲ್ಲಿ ಹೆಚ್ಚು ಮಳೆ ಸುರಿದಿದೆ. ಮಡಕೇರಿಯಲ್ಲಿ ಒಂದೇ ದಿನದೊಳಗೆ ೭.೭೭ ಇಂಚು ಮಳೆಯಾಯಿತೆಂದೂ ಕಳೆದ ೩೫ ವರ್ಷಗಳಿಂದ ಇಂಥ ಮಳೆ ಸುರಿದುದಿಲ್ಲವೆಂದೂ, ಮಡಕೇರಿ ಮೂರ್ನಾಡು, ಮತ್ತು ಮಡಕೇರಿ ಸಂಪಾಜೆ, ಮಡಕೇರಿ ಸಿದ್ದಾಪುರ ಈ ಮಾರ್ಗಗಳಲ್ಲಿ ಗುಡ್ಡವೂ ಮಾರ್ಗಗಳೂ ಕುಸಿದು ಬಿದ್ದು ಪ್ರಯಾಣವೇ ಕಟ್ಟಾಗಿದೆಯೆಂದೂ ಕೊಡಗುಪತ್ರವು ಹೇಳುತ್ತದೆ.

ಕೃಷ್ಣರಾಜ ಸಾಗರದಿಂದ ಮುಳುಗಡೆಗೆ ಬಂದು ಸರ್ಕಾರಕ್ಕೆ ಆಕ್ವೈರಾಗಿರುವ ಭೂಮಿಗಳಿಗೆ ಪ್ರತಿಯಾಗಿ ಭೂಮಿಯನ್ನು ಪಡೆದುಕೊಳ್ಳುವರಾಗಿರುವವರೂ, ಅಥವಾ ಪ್ರತಿ ಭೂಮಿಯನ್ನು ಪಡೆದುಕೊಂಡಿದ್ದರೂ ನೀರು ಸಪ್ಲೈ ಆಗದೆ ಇರುವುದೇ ಮೊದಲಾದ ಕಾರಣದಿಂದ ಫಸಲು ನಷ್ಟವನ್ನು ಅನುಭವಿಸುತ್ತಿರುವವರೂ ಸಹ ಬೇರೆ ಭೂಮಿಗಳನ್ನೂ ಅಥವಾ ದ್ರವ್ಯರೂಪ ಪರಿಹಾರವನ್ನೂ ಪಡೆದುಕೊಳ್ಳಲಿಕ್ಕೆ ಈಗಿನಿಂದ ಇನ್ನು ೧ ವರ್ಷ ಕಾಲದೊಳಗಾಗಿ ಕೃಷ್ಣರಾಜಸಾಗರದ ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸರಲ್ಲಿ ಹೋಗಿ ತಿಳಿಯಿಸಿ ಪಡೆದುಕೊಳ್ಳಬೇಕು. ತದನಂತರ ಬರುವ ಕೇಸುಗಳನ್ನು ಅಂಗೀಕರಿಸುವುದಿಲ್ಲ. ಮತ್ತು ಒಂದು ವರ್ಷದ ಮೇಲ್ಪಟ್ಟು ಕ್ರಾಪ್‌ಕಂಪನ್‌ಸೇಷನ್ ದೊರೆಯಲಾರದು ಎಂದು ಸರ್ಕಾರದ ಪ್ರಕಟನೆಯಾಗಿದೆ.

ಕಳೆದ ಸೋಮವಾರದ ದಿವಸ ರಾಜಧಾನಿಯಲ್ಲಿ ಶಾರದಾವಿಲಾಸ ಪಾಠಶಾಲೆಯ ವಿದ್ಯಾರ್ಥಿಗಳು ತಿಲಕರ ಪುಣ್ಯಾದಿನಾಚರಣೆಯನ್ನು ಮಾಡುವ ಉದ್ದೇಶದಿಂದ ತಿಲಕರ ಭಾವಚಿತ್ರವನ್ನೂ ಅದರ ಜತೆಗೆ ಶ್ರೀಮನ್ಮಹಾರಾಜರ ಮತ್ತು ಗಾಂಧಿಯವರ ಭಾವಚಿತ್ರಗಳನ್ನೂ ಹಿಡಿದುಕೊಂಡು ಚಾಮರಾಜಪೇಟೆಯಿಂದ ಉತ್ಸವ ಮಾಡಿಕೊಂಡು ಬರುತ್ತಿರುವಲ್ಲಿ ಅಲ್ಲಿಯ ಪೊಲೀಸ್ ಟಾಣದ ಬಳಿಯಲ್ಲಿ ಪೊಲೀಸರು ಲೈಸೆನ್ಸೆಲ್ಲಿ ಎಂದು ಕೇಳಿದಹಾಗೂ, ಅವರಲ್ಲಿಲ್ಲದಿದ್ದುದರಿಂದ ತಡೆಮಾಡಿದ ಹಾಗೂ ಅದರ ಮೇಲೆ ಪೊಲೀಸರು ಭಾವಚಿತ್ರಗಳನ್ನು ಕಿತ್ತುಕೊಳ್ಳಲು ಪ್ರವರ್ತಿಸಲು ಬಹುಮಂದಿ ವಿದ್ಯಾರ್ಥಿಗಳು ಕೂಡಿ ಪರಸ್ಪರ ಬಡಿದಾಟಗಳು ನಡೆದು ಭಾವಚಿತ್ರಗಳು ಚೂರಾಗಿ ಕಡೆಗೆ ಪೊಲೀಸ್ ಸೂಪರಿಂಟೆಂಡೆಂಟರು ಬಂದ ಮೇಲೆ ಗದ್ದಲವು ಸಮಾಧಾನವಾಯಿತೆಂದೂ ಕೇಳಿದೆವು.

ಮದ್ರಾಸು ಭೂಸ್ವಾಮಿಗಳ ಸಭೆಯು ಮ|| ಸಿ. ರಾಮಲಿಂಗರೆಡ್ಡಿಯವರ ಅಧ್ಯಕ್ಷತೆಯಿಂದ ನಡೆಯುವುದು.

ದಕ್ಷಿಣ ಇಂಡ್ಯಾ ವೈಶ್ಯಸಂಘದ ವಾರ್ಷಿಕ ವರ್ಧಂತ್ಯುತ್ಸವ ಸಭೆಯು ಮದ್ರಾಸಿನಲ್ಲಿ ಈ ದಿವಸ ಕೂಡುವುದು. ಅದರಲ್ಲಿ ಮ|| ಸಿ. ರಾಮಲಿಂಗರೆಡ್ಡಿಯವರು "ಶ್ರೀಮಂತರು ಸಂಘಕ್ಕೆ ಮಾಡಬೇಕಾದ ಉಪಕಾರ" ಎಂಬ ವಿಷಯವಾಗಿ ಉಪನ್ಯಾಸಮಾಡುವರು.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಸಂಸ್ಥಾನದ ಏಜಂಟರ ಕಡೆಯಿಂದ ಪ್ರಕಟನಾರ್ಥವಾಗಿ ಬಂದಿರುವ ಸಂಗತಿಯೇನಂದರೆ—ಶ್ರೀ ಜಗದ್ಗುರುಗಳ ಸ್ವಾರಿಯು ಬೃಹನ್ಮಠದಿಂದ ಈ ದಿವಸ ಅಬ್ಬಿನಾಯಕನಹಳ್ಳಿಗೆ ತೆರಳಿ ಅಲ್ಲಿಂದ ತಾ|| ೧೦ನೆ ಬುಧವಾರ ಬೆಳಗಿನ ೮ ಗಂಟೆಗೆ ಹೊಳಲಕೆರೆಗೆ ಸಕಲ ಮರ್ಯಾದೆಗಳೊಡನೆ ದಯಮಾಡಿಸುವುದು. ಸಂಸ್ಥಾನಕ್ಕೆ ಪತ್ರಗಳನ್ನು ಬಿನ್ನೈಸಿಕೊಳ್ಳತಕ್ಕವರು ಹೊಳಲಕೆರೆಗೆ ಬರೆದುಕೊಳ್ಳಬೇಕು. ಮತ್ತು ವಿದ್ಯಾರ್ಥಿವೇತನಗಳಿಗಾಗಿ ಸಂಸ್ಥಾನಕ್ಕೆ ಬರೆದುಕೊಂಡಿರುವ ಅಪ್ಲಿಕೇಷನ್ನುಗಳ ವ್ಯವಸ್ಥೆಯು ಇನ್ನೂ ಆಗಿಲ್ಲ. ಹಿಂದುಳಿದ ವರ್ಗದ ವಿದ್ಯಾರ್ಥಿವೇತನದ ವ್ಯವಸ್ಥೆಯು ಸರ್ಕಾರದಿಂದ ಮಾಡಲ್ಪಟ್ಟನಂತರ ಆ ವೇತನವು ದೊರೆಯದಿದ್ದವರಿಗೆ ಸಂಸ್ಥಾನದ ವೇತನವನ್ನು ಕೊಡಬೇಕೆಂಬ ನಿರೀಕ್ಷಣೆಯಿಂದ ಸಾವಕಾಶ ಮಾಡಲ್ಪಟ್ಟಿದೆ.

ರಾಜಧಾನಿಯ ಮ್ಯುನ್ಸಿಪಲ್ ಕೌನ್‌ಸಿಲರ ಆರಿಸುವಿಕೆಯ ದಿನಗಳು ಈಚೆಗೆ ಬದಲಾಯಿಸಲ್ಪಟ್ಟಿವೆ. ಉಮೇದುವಾರರ ಅಪ್ಲಿಕೇಷನ್ನುಗಳನ್ನು ಈ ತಿಂಗಳು ತಾ|| ೧೦ ರೊಳಗೆ ಕೊಡಬಹುದು. ತಾ|| ೨೨ರಿಂದ ಕೌನ್‌ಸಿಲರ ಆರಿಸುವಿಕೆಯು ಆರಂಭವಾಗುವುದು. ಲಷ್ಕರ್ ಮೊಹಲ್ಲಾ ಕೌನ್‌ಸಿಲರುಗಳ ಚುನಾವಣೆಯು ತಾ|| ೨೨ನೆ ಸೋಮವಾರ ಬೆಳಗ್ಗೆ ಜಗ್ಗುಲಾಲಾ ಧರ್ಮಶಾಲೆಯಲ್ಲೂ ಅದೇ ಮಧ್ಯಾಹ್ನ ಮಂಡಿಮೊಹಲ್ಲಾ ಚುನಾವಣೆಯು ಕಾಡಯ್ಯನ ಸತ್ರದಲ್ಲೂ, ೨೩ ನೆ ತಾ|| ಬೆಳಗ್ಗೆ ನಜರ್‌ಬಾದ್ ಮೊಹಲ್ಲಾ ಚುನಾವಣೆಯು ಲೇಸಿ ಕೋರ್ಟ್ ಭವನದಲ್ಲೂ, ಕೋಟೆ ಮೊಹಲ್ಲಾ ಚುನಾವಣೆಯು ಅದೇ ಮಧ್ಯಾಹ್ನ ಟವನ್‌ಹಾಲಿನಲ್ಲೂ, ದೇವರಾಜ ಮೊಹಲ್ಲೆಯ ಚುನಾವಣೆಯು ತಾ|| ೨೪ ನೆ ಬುಧವಾರ ಬೆಳಗ್ಗೆ ಬೊಮ್ಮಯ್ಯನ ಸತ್ರದಲ್ಲೂ, ಕೃಷ್ಣರಾಜ ಮೊಹಲ್ಲಾ ಚುನಾವಣೆಯು ಅದೇ ದಿನ ಮಧ್ಯಾಹ್ನ ಅದೇ ಸತ್ರದಲ್ಲಿಯೂ, ಚಾಮರಾಜ ಮೊಹಲ್ಲೆಯ ಚುನಾವಣೆಯು ತಾ|| ೨೫ ನೆ ಗುರುವಾರ ಬೆಳಗ್ಗೆ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲೂ ನಡೆಯುವುವು.

ಮಂಜ್ರಾಬಾದ್ ತಾಲ್ಲೂಕಿನಲ್ಲಿ ಪ್ರಸಿದ್ಧ ಕಾಫಿಪ್ಲಾಂಟರು, ಡಿ|| ಬೋರ್ಡು ಮತ್ತು ಪ್ರಜಾಪ್ರತಿನಿಧಿಸಭೆ ಕೈಗಾರಿಕೆ ಮತ್ತು ವ್ಯಾಪಾರ ಕಮಿಟಿಯ ಸೆಂಟ್ರಲ್ ಬೋರ್ಡು ಇವುಗಳ ಮೆಂಬರೂ, ತಾಲ್ಲೂಕು ಬೋರ್ಡಿನ ಮೊದಲನೆ ವೈಸ್ ಪ್ರೆಸಿಡೆಂಟರೂ ಆಗಿದ್ದ ದೋಣಿಗಾಲ ನಂಜೇಗೌಡರು ನ್ಯುಮೋನಿಯಾ ಜ್ವರಪೀಡಿತರಾಗಿ ಡಾಕ್ಟರ ಚಿಕಿತ್ಸೆಯಿಂದ ಗುಣವನ್ನು ಹೊಂದದೆ ಕಳೆದ ತಾ|| ೨ ನೆಯ ಮಂಗಳವಾರ ಬೆಳಗ್ಗೆ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳವಾಗಿ ವಿಷಾದಿಸುತ್ತೇವೆ. ಇವರಿಗೆ ಅವಸಾನಕಾಲದಲ್ಲಿ ೪೮ ವರ್ಷ ವಯಸ್ಸು ಮಾತ್ರವಾಗಿದ್ದಿತು, ಮತ್ತು ಒಬ್ಬ ಚಿಕ್ಕ ವಯಸ್ಸಿನ ಪತ್ನಿಯೂ ನಾಲ್ವರು ಮಕ್ಕಳೂ ಇರುವರು. ಬಹಳ ಸ್ನೇಹಪರರೂ, ಉದಾರಿಗಳೂ, ನಿಗರ್ವಿಗಳೂ, ಖ್ಯಾತಿವಂತರೂ ಆಗಿದ್ದ ನಂಜೇಗೌಡರ ಅಕಾಲಮರಣದಿಂದ ಅವರ ಬಂಧುಗಳಿಗೂ ಮಿತ್ರಮಂಡಲಿಗೂ ಅಪಾರವಾದ ವ್ಯಸನವುಂಟಾಗಿದೆ. ಮೃತರ ಆತ್ಮಕ್ಕೆ ಶಾಂತಿಯೂ ವಿಯೋಗದುಃಖಕ್ಕೆ ಗುರಿಯಾದ ಅವರ ಕುಟುಂಬಕ್ಕೆ ಮನಸ್ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ಬರುವ ಸೆಪ್ಟಂಬರ್ ತಾ|| ೧ ರ ಆರಭ್ಯ ಮೈಸೂರಿನಿಂದ ಎಕ್ಸ್‌ಪ್ರೆಸ್ ರೈಲುಬಂಡಿಯು (ಈಗ ೭-೨೦ ಕ್ಕೆ ಹೊರಡುವುದು) ಬೆಳಗ್ಗೆ ೮-೩೫ ಕ್ಕೆ ಹೊರಟು, ಮಧ್ಯಾಹ್ನ ೧||ಗೆ ಮತ್ತು ಈಗ ೨ ಕ್ಕೆ ಹೊರಡುವ ಮೇಲ್ ಬಂಡಿಯು ಮಧ್ಯಾಹ್ನ ೨-೩೫ ಕ್ಕೆ ಹೊರಟು ಸಾಯಂಕಾಲ ೭-೫ ಕ್ಕೆ ಬೆಂಗಳೂರನ್ನು ತಲುಪುವುವು. ಬೆಂಗಳೂರಿಂದ ಈಗ ೭-೩೦ ಕ್ಕೆ ಹೊರಡುವ ಮೇಲ್‌ಬಂಡಿಯು ಬೆಳಗ್ಗೆ ೭-೩೫ ಕ್ಕೆ ಹೊರಟು ಮಧ್ಯಾಹ್ನ ೧೨-೧೫ ಕ್ಕೆ ಮತ್ತು ಮಧ್ಯಾಹ್ನ ೨-೨೦ ಕ್ಕೆ ಹೊರಡುವ ಎಕ್ಸ್‌ಪ್ರೆಸ್ಸು ಮಧ್ಯಾಹ್ನ ೨ ಕ್ಕೆ ಹೊರಟು ಸಾಯಂಕಾಲ ೭ ಕ್ಕೆ ಮೈಸೂರನ್ನು ತಲುಪುವುವು. ಈ ಬಂಡಿಗಳ ೩ ನೆಯ ತರಗತಿಯ ಛಾರ್ಜು ಮೇಲ್ಬಂಡಿಯಷ್ಟು ಮಾಡಲ್ಪಡುವುದು. ಮೈಸೂರು ಅರಶೀಕೆರೆ ಮಾರ್ಗ—ಮೈಸೂರಿನಿಂದ ಮಿಕ್ಸೆಡ್ಡುಬಂಡಿಯು ಮಧ್ಯಾಹ್ನ ೧ ಗಂಟೆಗೆ ಹೊರಟು ರಾತ್ರಿ ೯-೧೫ ಕ್ಕೆ ಮತ್ತು ಸಾಯಂಕಾಲ ಮೇಲ್ಬಂಡಿಯು ೭|| ಗೆ ಹೊರಟು ರಾತ್ರಿ ೧೨-೪೦ ಕ್ಕೆ ಅರಶೀಕೆರೆಯನ್ನು ತಲುಪುವುವು. ಅರಶೀಕೆರೆಯಿಂದ ಮಿಕ್ಸೆಡ್‌ಬಂಡಿಯು ಬೆಳಗ್ಗೆ ೭-೧೫ ಕ್ಕೆ ಹೊರಟು ಮೈಸೂರನ್ನು ಮಧ್ಯಾಹ್ನ ೪-೫೦ ಕ್ಕೆ ಮತ್ತು ಮೇಲ್ಬಂಡಿಯು ರಾತ್ರಿ ೩|| ಗೆ ಹೊರಟು ಬೆಳಗ್ಗೆ ೭-೫೦ ಕ್ಕೆ ಮೈಸೂರನ್ನು ತಲುಪುವುವು.

ರಾಜಧಾನಿಯ ಜನರಲ್ ಪೋಸ್ಟಾಫೀಸಿನ ಹಿಂದೆ ಇರುವ ಮತ್ತಿಸಿದ್ದಿಯ ಮುಂಭಾಗದ ಜಾಗವನ್ನು ಒಂದು ನಾಟ್ಯ

ಶಾಲೆಯನ್ನು ಕಟ್ಟುವುದಕ್ಕಾಗಿ ನಮ್ಮ ಸರ್ಕಾರದವರು ಕೊಟ್ಟಿರುವುದನ್ನು ನೋಡಿ ಆಶ್ಚರ್ಯಪಡಬೇಕಾಗಿದೆ. ಮಸ್ಜಿದ್ದಿಯ ಮುಂದೆ ವಾದ್ಯಗಳನ್ನು ಬಾರಿಸಿದರೆಂಬ ಕಾರಣದಿಂದಲೇ ಅಲ್ಲಲ್ಲಿ ವಿಶೇಷ ಕಲಹಗಳು ಹುಟ್ಟುತ್ತಿರುವುದನ್ನು ನಾವು ಕೇಳುತ್ತಿರುವಲ್ಲಿ ಯಾವಾಗಲೂ ಬ್ಯಾಂಡ್ ಮೊದಲಾದುವುಗಳನ್ನು ಬಾರಿಸುವ ಆವಶ್ಯಕತೆಯುಳ್ಳ ನಾಟ್ಯಮಂದಿರಗಳನ್ನು ಮಸ್ಜಿದ್ದಿಯ ಮುಂದೆಯೇ ಕಟ್ಟುವಂತೆ ಮಾಡುವುದು ಉಚಿತವಾಗಲಾರದು. ಮುಂದೆ ಇದು ಶಾಂತಿಭಂಗಕ್ಕೆ ಆಸ್ಪದವನ್ನು ತರದೆ ಇರಲಾರದು. ಈಗಲೇ ಮಹಮದೀಯ ಪ್ರಜೆಗಳು ಅಸಮಾಧಾನಪಟ್ಟು ಶ್ರೀಮನ್ಮಹಾರಾಜರಿಗೆ ಬಿನ್ನಯಿಸಿಕೊಂಡಿರುವರೆಂದು ಕೇಳುತ್ತೇವೆ. ದೀರ್ಘಾಲೋಚನೆಯಿಂದ ಈ ಪ್ರಯತ್ನವನ್ನು ನಿಲ್ಲಿಸುವಂತೆ ಅಪ್ಪಣೆಯನ್ನು ಪ್ರಭುಗಳು ಕೊಡದೆ ಇರಲಾರರೆಂದು ನಂಬಿರುತ್ತೇವೆ. ಸುಂದರವಾದ ಕಟ್ಟಡವು ಅಲ್ಲಿ ಕಟ್ಟಲ್ಪಡಬೇಕೆಂಬ ಉದ್ದೇಶದಿಂದಲೇ ಈ ಏರ್ಪಾಟನ್ನು ಮಾಡಿದ್ದರೆ, ಅದೇ ಜಾಗದಲ್ಲಿ ಅತ್ಯುತ್ತಮವಾದ ೧ ಲಕ್ಷ ರೂ. ಅಂದಾಜಿನ ಸುಂದರವಾದ ಕಟ್ಟಡವನ್ನು ಇತರರು ಕಟ್ಟುವುದಕ್ಕೆ ಸಿದ್ಧರಾಗಿರುವರೆಂದು ಕೇಳುತ್ತೇವೆ. ಹಾಗಾದರೂ ಮಾಡಿ ನಾಟ್ಯಶಾಲೆಯ ಏರ್ಪಾಟನ್ನು ನಿಲ್ಲಿಸುವುದು ಸೂಕ್ತವಾಗಿರುತ್ತದೆ.

ಭರತಖಂಡದ ವೃತ್ತಾಂತಗಳು.

ನೆಲ್ಲೂರು ಮ್ಯುನಿಸಿಪಾಲಿಟಿಯಲ್ಲಿ ಮಿಸೆಸ್ ಮರೆಮ್ಮ ಎಂಬ ಸ್ತ್ರೀಯು ಕೌನ್ಸಿಲರಾಗಿದ್ದಾರೆ.

ಪಾಶ್ಚಾತ್ಯ ದೇಶಗಳಿಗೆ ಹೋಗಿದ್ದ ರವೀಂದ್ರನಾಥ ಠಾಕೂರ್‌ರವರು ಮೊನ್ನೆವಾರ ಭರತಖಂಡಕ್ಕೆ ಬಂದು ಬೊಂಬಾಯಿಯಲ್ಲಿಳಿದರು.

ಇದುವರೆಗೆ ತೆಲುಗು ದೇಶದಲ್ಲಿ ಸಹಾಯನಿರಾಕರಣ ಸಂಕಲ್ಪದಿಂದ ೯೨ ಮಂದಿ ವಕೀಲರು ತಮ್ಮ ವೃತ್ತಿಯನ್ನು ಬಿಟ್ಟುಬಿಟ್ಟಿದ್ದಾರಂತೆ.

ಪ್ರಸಿದ್ಧವಾದ ಬೊಂಬಾಯಿ ಪಾರ್ಸಿ ಕಂಪೆನಿಯ ಯಜಮಾನರಾದ ಮಿ|| ತಂತ್ರಿರವರು ವಾಂತಿಭೇದಿ ರೋಗದಿಂದ ಹೈದರಾಬಾದಿನಲ್ಲಿ ಮೃತರಾದರು.

ಸಾಮ್ರಾಜ್ಯಸಭೆಗಾಗಿ ಹೋಗಿರುವ ಆ|| ಶ್ರೀನಿವಾಸಶಾಸ್ತ್ರಿಯವರು ಬರುವಾಗ್ಗೆ ಕನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ದೇಶಗಳಿಗೆ ಹೋಗಿ ಬರುವರು.

ಜಪಾನಿನ ವರ್ತಕರು ತಮ್ಮ ಪ್ರತಿನಿಧಿಗಳನ್ನು ಭರತಖಂಡಕ್ಕೆ ಕಳುಹಿಸಿ ಇಲ್ಲಿ ಯಾವ ತೆರದ ವಸ್ತುಗಳಿಗೆ ಗಿರಾಕಿ ಹೆಚ್ಚಾಗಿದೆಯೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರೆ.

ನಿಯಮನಿರ್ಮಾಣಸಭೆಗೆ ಓಟುಕೊಡುವ ಅಧಿಕಾರವು ಮದರಾಸು ನಿಯಮನಿರ್ಮಾಣ ಸಭೆಯಲ್ಲಿ ಒಪ್ಪಲ್ಪಟ್ಟಿರುವಂತೆಯೇ ಬೊಂಬಾಯಿ ಸಭೆಯಲ್ಲಿಯೂ ಕಳೆದವಾರ ಅನುಮತಿಸಲ್ಪಟ್ಟಿತು.

ಈ ವರ್ಷದ ಕೊನೆಯಲ್ಲಿ ಅಹಮ್ಮದಾಬಾದಿನಲ್ಲಿ ಕೂಡಲಿಕ್ಕಿರುವ ದೇಶೀಯ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಲು ಚಿತ್ತರಂಜನ ದಾಸರಿಗೇ ಹೆಚ್ಚು ಓಟುಗಳು ಇದುವರೆಗೆ ಬಂದಿರುತ್ತವೆ.

ಅನುಕೂಲವಾದಮಟ್ಟಿಗೆ ಪ್ರತಿಗ್ರಾಮದ ಸುತ್ತಲೂ ೧ ಮೈಲಿ ದೂರದೊಳಗೆ ಇರುವ ರಿಜರ್ವ್ಡ್ ಫಾರೆಸ್ಟ್‌ಗಳನ್ನು ತೆಗೆದುಬಿಡಬೇಕೆಂದೂ ಅವು ಗ್ರಾಮಸ್ಥರ ಉಪಯೋಗಕ್ಕೆ ಮುಕ್ತದ್ವಾರವಾಗಿರಬೇಕೆಂದೂ ಮದರಾಸು ನಿಯಮನಿರ್ಮಾಣ ಸಭೆಯಲ್ಲಿ ತೀರ್ಮಾನವಾಯಿತು.

ವರ್ಣಾಂತರ ವಿವಾಹದ ಶಾಸನವನ್ನೇರ್ಪಡಿಸಬೇಕೆಂಬ ತೀರ್ಮಾನವು ಮದರಾಸು ನಿಯಮನಿರ್ಮಾಣ ಸಭೆಯಲ್ಲಿ ಕಳೆದವಾರ ಅನುಮೋದಿತವಾಯಿತು. ಅದನ್ನಾಗಬೇಕೆಂಬ ಪಕ್ಷಕ್ಕೆ ೫೪ ಮಂದಿಯೂ ಕೂಡದೆಂಬ ಪಕ್ಷಕ್ಕೆ ೨೩ ಮಂದಿಗಳೂ ಅನುಮತಿ ಕೊಟ್ಟರು.

ಸೀಮೆಯಲ್ಲಿ ನೆರೆದ ಸಾಮ್ರಾಜ್ಯ ಸಭೆಗೆ ಭರತಖಂಡದ ಪ್ರತಿನಿಧಿಗಳಾಗಿ ಹೋಗಿರುವ ಕಚ್‌ಮಹಾರಾಜರಿಗೂ ಶ್ರೀನಿವಾಸಶಾಸ್ತ್ರಿಗಳಿಗೂ ಸಹ ಲಂಡನ್ ಮ್ಯುನಿಸಿಪಾಲಿಟಿಯವರು ತಮ್ಮ ಪುರಸ್ವಾತಂತ್ರ್ಯಗೌರವವನ್ನು ಕೊಟ್ಟು ಮರ್ಯಾದಿಸಿರುವರು.

ಮದ್ರಾಸು ಅಧಿಸತ್ಯದ ಮಚಲೀಬಂದರು ರಾಜಮಹೇಂದ್ರಿ ಗುಂಟೂರು ಮ್ಯುನಿಸಿಪಾಲಿಟಿಗಳಲ್ಲಿ ಎಲ್ಲಾ ಕಾಗದ ಪತ್ರಗಳೂ ಸ್ವದೇಶಭಾಷೆಯಲ್ಲೇ ಜರುಗಬೇಕೆಂದು ತೀರ್ಮಾನಿಸಲ್ಪಟ್ಟಿದೆ. ಸರ್ವತ್ರ ಮ್ಯುನಿಸಿಪಾಲಿಟಿಗಳಲ್ಲೆಲ್ಲಾ ಹೀಗೆ ನಡೆಯುವುದೇ ದೇಶಕ್ಕೆ ಹಿತಕರವು.

ಶ್ರೀಮದಾಂಗ್ಲ ಯುವರಾಜರು ಮದರಾಸಿಗೆ ದಯಮಾಡಿಸಿದಾಗ್ಗೆ ಅವರಿಗೆ ವಿಜ್ಞಾಪನ ಪತ್ರವನ್ನು ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಸಮರ್ಪಿಸಿ ಸತ್ಕರಿಸುವ ಏರ್ಪಾಟಿಗಾಗಿ ಅಲ್ಲಿಯ ಮ್ಯುನಿಸಿಪಾಲಿಟಿಯವರು ೩೦೦೦ ರೂ. ಗಳನ್ನು ವ್ಯಯಮಾಡಲು ನಿರ್ಧರಿಸಿದ್ದಾರೆ.

ಸ್ವ|| ಬಾಲಗಂಗಾಧರ ತಿಲಕರು ಮೃತರಾಗಿ ಕಳೆದ ಆಷಾಢ ಬ|| ೧೧ ಗೆ ಒಂದು ವರ್ಷವು ತುಂಬಿತು. ಆ ದಿನ ಸ್ಮರಣೆಯು ಭರತಖಂಡದ ಎಲ್ಲ ಪಟ್ಟಣಗಳಲ್ಲೂ ಆಗಸ್ಟ್ ತಾ|| ೧ ನೆಯ ದಿವಸ ನಾನಾವಿಧಾಡಂಬರಗಳಿಂದ ಆಚರಿಸಲ್ಪಟ್ಟಿತು. ಹಲವುಕಡೆ ವಿದೇಶವಸ್ತ್ರದಹನ ಸ್ವದೇಶೀಯ ವಸ್ತ್ರಧಾರಣ ಸಂಕಲ್ಪರೂಪವಾಗಿ ಆಚರಿಸಲ್ಪಟ್ಟಿತು.

ಧಾರವಾಡದಲ್ಲಿ ಜನರನ್ನು ತುಪಾಕಿಯಿಂದ ಸುಟ್ಟ ಸಂಬಂಧದ ವ್ಯಾಜ್ಯದ ವಿಚಾರಣೆಯು ಅಲ್ಲಿಯ ಕಾರಾಗೃಹದಲ್ಲಿ ಒಬ್ಬ ಪ್ರತ್ಯೇಕಯೂರೋಪ್ಯ ದಂಡಾಧಿಕಾರಿಯಿಂದ ನಡೆಯಿಸಲ್ಪಡುತ್ತಿದೆ. ಅಪರಾಧಿಗಳಲ್ಲಿ ಒಬ್ಬರೆಂದು ಸೇರಿಸಿ ಹಿಡಿಯಲ್ಪಟ್ಟಿದ್ದ ಮ|| ಕೃಷ್ಣರಾವ್ ಮುದುವೇಡಕರ (ಕರ್ನಾಟಕವೃತ್ತಪತ್ರದ ಸಂಪಾದಕರು) ನಿರ್ದೋಷಿಗಳೆಂದು ಆಗಲೇ ಬಿಡಲ್ಪಟ್ಟರು.

ಬೊಂಬಾಯಿ ಪಟ್ಟಣದ ಹೊರತು ಉಳಿದ ಆ ಅಧಿಪತ್ಯಕ್ಕೆ ಸೇರಿದ ಪಟ್ಟಣಗಳಲ್ಲೂ ಇತರ ಕಡೆಗಳಲ್ಲೂ ನಿರ್ಬಂಧವಾಗಿಯೂ ಉಚಿತವಾಗಿಯೂ ವಿದ್ಯಾಭ್ಯಾಸ ಮಾಡಿಸುವುದು ಸಾಧ್ಯವೆ? ಅವಶ್ಯಕವೆ? ಎಂಬುದನ್ನು ವಿಚಾರಪೂರ್ವಕ ತಿಳಿಯಪಡಿಸುವುದಕ್ಕಾಗಿ ಸರ್ ನಾರಾಯಣಚಂದ್ರವಾರ್ಕರ್‌ರವರ ಅಧ್ಯಕ್ಷತೆಯಿಂದ ಕೂಡಿದ ಒಂದು ಸಂಘವನ್ನು ಬೊಂಬಾಯಿ ಸರ್ಕಾರದವರು ಏರ್ಪಡಿಸಿದ್ದಾರೆ.

ಪುದುಕೋಟೆ ಸಂಸ್ಥಾನದ ಅಧಿಕಾರವನ್ನು ಅಲ್ಲಿಯ ಪ್ರಭುಗಳು ಪರಿತ್ಯಜಿಸಿದರೆಂದೂ ಅದನ್ನು ಆಂಗ್ಲ ಪ್ರಭುತ್ವದವರು ವಶಪಡಿಸಿಕೊಳ್ಳುವರೆಂದೂ, ಮದ್ರಾಸು ಸರ್ಕಾರದವರು ಅದರ ಪರಿಪಾಲನದಲ್ಲಿ ಮಾರ್ಪಾಟುಗಳನ್ನು ಮಾಡುವರೆಂದೂ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದ್ದಿತು. ಆದರೆ ಮದರಾಸು ಸರ್ಕಾರದವರು ಪುದುಕೋಟೆಯ ಪರಿಪಾಲನ ಕ್ರಮದಲ್ಲಿ ಮಾರ್ಪಾಟು ಮಾಡುವುದು ನಿಜವೆಂತಲೂ ಉಳಿದ ಸುದ್ದಿಗಳೆಲ್ಲಾ ಸುಳ್ಳೆಂತಲೂ ಗೊತ್ತಾಗಿದೆ.

ಲಂಡನ್ ಪಟ್ಟಣದಿಂದ ಬಂದಿರುವ ಪತ್ರವನ್ನಾಧಾರಪಡಿಸಿಕೊಂಡು ಡೇಲಿಎಕ್ಸ್‌ಪ್ರೆಸ್ ಪತ್ರಿಕೆಯು ಹೀಗೆ ಹೇಳಿರುತ್ತದೆ. ಯುವರಾಜರವರು ಭರತಖಂಡಕ್ಕೆ ದಯಮಾಡಿಸಿದಾಗ್ಗೆ ಅಧಿನಿವೇಶಗಳಲ್ಲಿರುವ ಪ್ರಭುತ್ವದಂಥ ಪರಿಪಾಲನಾಧಿಕಾರವನ್ನು ಈ ದೇಶಕ್ಕೆ ಅನುಗ್ರಹಿಸುವ ಸಂದೇಶವನ್ನು ತೆಗೆದುಕೊಂಡು ಬರುವರು. ಎಂದರೆ ದಕ್ಷಿಣಾಫ್ರಿಕಾದಲ್ಲಿರುವಂಥ ಪ್ರಭುತ್ವವನ್ನೋ ಅಥವಾ ಈಗ ಐರ್ಲಂಡಿನಲ್ಲಿ ಶಾಂತಿಸ್ಥಾಪನೆಗಾಗಿ ಏರ್ಪಡಿಸುತ್ತಿರುವಂಥ ಪ್ರಭುತ್ವರೀತಿಯನ್ನೋ ಅನುಗ್ರಹಿಸುವರು.

ಬಿ. ಎ. ಬಿ. ಎಲ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಸುಧನ್ ಲಾಲಾ ಹಜ್ರಮ್ಮ ಎಂಬ ನಾರೀಮಣಿಯನ್ನು ಬಾಂಕಿಪುರದಲ್ಲಿ ಅಡ್ವೋಕೇಟಾಗಿ ಕೆಲಸ ಮಾಡಲು ಅಂಗೀಕರಿಸಬೇಕೆಂದು ದೇವಪ್ರಸಾದಸಿಹ್ನರವರೇ ಮೊದಲಾದ ಕೆಲ ವಕೀಲರುಗಳು ಪಾಟ್ನಾ ಹೈಕೋರ್ಟಿನ ಜಸ್ಟಿಸ್‌ರವರಿಗೆ ಬರೆದುಕೊಂಡಿರುವರು. ಈ ವಿಷಯವನ್ನು ವಿಚಾರ ಮಾಡುತ್ತೇವೆಂದು ಅವರು ಉತ್ತರ ಕೊಟ್ಟಿರುವರು. ಇದು ನೆರವೇರಿದರೆ ಇನ್ನು ಮುಂದೆ ಭರತಖಂಡದಲ್ಲಿ ಅನೇಕ ಮಹಿಳೆಯರು ನ್ಯಾಯಮೂರ್ತಿವೃತ್ತಿಗೂ ತೊಡಗಬಹುದು.

ಮದರಾಸಿನಲ್ಲಿರುವ ಕರ್ನಾಟಕ ಎಂಬ ಹೆಸರಿನ ಸೈನ್ಯದಲ್ಲಿದ್ದು ಪೆನ್ಷನ್ ಪಡೆಯುತ್ತಿದ್ದ ಮಹಮ್ಮದ್ ಅಬ್ದುಲ್ ಸಲಾಂ ಸಾಹೇಬ್, ಮಹಮ್ಮದ್ ಅಬ್ದುಲ್ ಲತೀಫ್ ಸಾಹೇಬ್ ಎಂಬವರಿಬ್ಬರು ಅಸಹಾಯೋದ್ಯಮದಲ್ಲಿ ಸೇರಿ ಅದಕ್ಕೆ ಪ್ರೋತ್ಸಾಹಕರವಾದ ಉಪನ್ಯಾಸಗಳನ್ನು ಸಭೆಗಳಲ್ಲಿ ಮಾಡುತ್ತಿದ್ದುದರಿಂದ ಮದ್ರಾಸ್ ಸರ್ಕಾರದವರು ಹೀಗೆ ನೀವು ಸರ್ಕಾರಕ್ಕೆ ವಿರುದ್ಧವಾದ ಪ್ರಯತ್ನದಲ್ಲಿದ್ದರೆ ನಿಮ್ಮ ಪೆನ್ಷನನ್ನು ನಿಲ್ಲಿಸಲ್ಪಡುವುದೆಂದು ಎಚ್ಚರಿಕೆ ಕೊಟ್ಟು ನಿಲ್ಲಿಸಿಬಿಟ್ಟರು. ಅದರ ಮೇಲೆ ಮಹಮ್ಮದ್ ಅಬ್ದುಲ್ ಸಲಾಂ ಸಾಹೇಬ್ ಎಂಬುವರು ಕ್ಷಮಾಪಣಪತ್ರವನ್ನು ಬರೆದುಕೊಟ್ಟುದರಿಂದ ಅವರಿಗೆ ಪೆನ್ಷನ್ ಸಲ್ಲುವಂತೆ ಆಜ್ಞೆಯಾಯಿತು. ಮತ್ತೊಬ್ಬರು ಬರೆದುಕೊಡಲಿಲ್ಲವಾದುದರಿಂದ ಆತನ ೩೦ ರೂ. ಪೆನ್ಷನ್ ತಪ್ಪಿಸಲ್ಪಟ್ಟಿತು.

ದಿಲ್ಲಿಯಲ್ಲಿದ್ದ ಸುಪ್ರಸಿದ್ಧ ಮಯೂರಾಸನವನ್ನು ನಾದರ್‌ಷಹಾನು ದೋಚಿಕೊಂಡು ಪಾರಸೀಕದೇಶಕ್ಕೆ ಸಾಗಿಸಿದನೆಂಬ ವಿಷಯವನ್ನು ಚರಿತ್ರ ವಾಚಕರೆಲ್ಲರೂ ತಿಳಿದಿರುವರಷ್ಟೆ. ಆ ಸಿಂಹಾಸನವು ಈಗಲೂ ಪರ್ಷಿಯಾ ದೇಶದ ರಾಜಧಾನಿಯಲ್ಲಿದೆ. ಅದರ ಬೆಲೆಯು ೧೨ ಕೋಟಿ ರೂ. ಗಳಾಗುವುದೆಂದು ಈ ಮಧ್ಯೆ ಒಬ್ಬ ವರ್ತಕನು ಬೆಲೆ ಕಟ್ಟಿದ್ದನಂತೆ. ಆದರೆ ಅದು ಅಮೌಲ್ಯವೆಂದೇ ಹಲವರ ಅಭಿಪ್ರಾಯವಾಗಿರುತ್ತದೆ. ಈ ಸಿಂಹಾಸನಕ್ಕೆ ಉಪಯೋಗಿಸಿರುವ ಮರವು ಬಹು ದುರ್ಲಭವಾದುದಂತೆ. ಅದರ ಮೇಲೆ ಹದ್ದಿರುವ ಭಂಗಾರದ ತಗಡಿನಲ್ಲಿ ಅತಿ ಸುಂದರವಾದ ಚಿತ್ರಕೆಲಸ ಮಾಡಲ್ಪಟ್ಟು ಅದಕ್ಕನುಗುಣವಾಗಿ ಬಹು ಶ್ರೇಷ್ಠಗಳಾದ ನವರತ್ನಗಳು ಕೆತ್ತಲ್ಪಟ್ಟಿರುವುವು. ನೋಡುವುದಕ್ಕೆ ಅತ್ಯಂತ ಮನೋಹರವಾಗಿ ರತ್ನಪ್ರಭೆಯಿಂದ ಝುಝುಗಿಸುತ್ತಿರುವುದು. ಇಂಥ ಅದ್ಭುತವಸ್ತುವು ಪ್ರಪಂಚದ ಇನ್ನಾವ ಕಡೆಯಲ್ಲೂ ಮತ್ತಾವುದೂ ಇಲ್ಲವಂತೆ. ಪರ್ಷಿಯಾದೇಶದ ಪ್ರಭುವು ಮುಖ್ಯವಾದ ರಾಜಕೀಯ ವಿಷಯಗಳ ಚರ್ಚೆಗಳ ಕಾಲದಲ್ಲೂ ಪರದೇಶ ಪ್ರಭುಗಳನ್ನು ಸತ್ಕರಿಸುವ ಸಮಯಗಳಲ್ಲೂ ಈ ಸಿಂಹಾಸನದ ಮೇಲೆ ಕುಳಿತು ದರ್ಬಾರನ್ನು ಮಾಡುತ್ತಿರುವನು.

ದೇಶೀಯ ಸಭಾಸ್ಥಾಯಿ ಸಂಘವು ಬೊಂಬಾಯಿ ಪಟ್ಟಣದಲ್ಲಿ ಕಳೆದ ತಿಂಗಳು ತಾ|| ೨೮-೨೯-೩೦ ರಲ್ಲಿ ಕೂಡಿದ್ದಿತು. ೩೦೦ ಮಂದಿ ಪ್ರತಿನಿಧಿಗಳು ದೇಶದ ಎಲ್ಲಾ ಪ್ರಾಂತಗಳಿಂದಲೂ ಬಂದು ಕೂಡಿದ್ದರು. ಮ|| ಗಾಂಧಿ ಮಾಳವ್ಯ, ದಾಸ್, ಲಜಪತರಾಯಿ ಮೊದಲಾದ ನಾಯಕರುಗಳೆಲ್ಲಾ ಸೇರಿದ್ದರು. ನಡೆದ ತೀರ್ಮಾನಗಳೊಳಗೆ ಆಗಸ್ಟ್ ತಾ|| ೧ ರಲ್ಲಿ ವಿದೇಶದ ಬಟ್ಟೆಗಳನ್ನೆಲ್ಲಾ ತೆಗೆದು ಸುಟ್ಟುಬಿಡಬೇಕು. ಬೊಂಬಾಯಿ ಅಹಮ್ಮದಾಬಾದ್ ಮೊದಲಾದ ಕಡೆಗಳಲ್ಲಿರುವ ಯಂತ್ರಾಲಯಗಳವರು ಲಾಭದ ದೃಷ್ಟಿಯನ್ನಿಡದೆ ತಮ್ಮ ಖರ್ಚಿಗೆ ಸರಿಹೋಗುವಷ್ಟು ಬೆಲೆಗೆ ಬಟ್ಟೆಗಳನ್ನು ಅಗ್ಗವಾಗಿ ಮಾರಬೇಕು. ವಿದೇಶದ ಬಟ್ಟೆಗಳನ್ನು ವರ್ತಕರು ಇನ್ನು ಮುಂದೆ ತರಿಸಕೂಡದು. ಈಗ ಉಳಿದಿರುವ ವಿದೇಶದ ಬಟ್ಟೆಗಳನ್ನು ಸಾಧ್ಯವಾದಮಟ್ಟಿಗೆ ವಿದೇಶಗಳಿಗೇ ಕಳುಹಿಸಿಕೊಡಬೇಕು. ಎಲ್ಲಪ್ರಜೆಗಳೂ ಸ್ವದೇಶದ ಬಟ್ಟೆಗಳನ್ನೇ ಧರಿಸಿಕೊಳ್ಳಬೇಕು. ಸರ್ಕಾರದ ಆಜ್ಞೆಯನ್ನು ತಿರಸ್ಕರಿಸುವ ಸಂಕಲ್ಪವನ್ನು ಮಾಡಬೇಕಾದರೆ ಆಯಾ ಪ್ರಾಂತಗಳ ಕಾಂಗ್ರೆಸ್ ಸಂಘಗಳು ದೇಶೀಯ ಮಹಾಸ್ಥಾಯಿ ಸಂಘದ ಅನುಮತಿಯನ್ನು ಪಡೆದು ಮಾಡಬೇಕು. ಆಂಗ್ಲಯುವರಾಜರು ಈ ದೇಶಕ್ಕೆ ಬಂದರೆ ಅವರ ಸ್ವಾಗತ ಸಮಾರಂಭಗಳಿಗೆ ದೇಶೀಯರು ಹೋಗದೆ ಬಹಿಷ್ಕರಿಸಬೇಕು ಎಂಬಿವುಗಳು ಮುಖ್ಯಗಳಾಗಿರುತ್ತವೆ.

ವಿದೇಶ ವೃತ್ತಾಂತಗಳು.

ಫ್ರಾನ್ಸ್ ದೇಶದಲ್ಲಿ ಕಳೆದ ೧೦ ವರ್ಷದೊಳಗೆ ೨೫ ಲಕ್ಷ ಜನ ಸಂಖ್ಯೆಯು ಕಡಿಮೆಯಾಗಿಹೋಗಿದೆ.

ಪ್ರತಿದಿನವೂ ನೂತನಾದ್ಭುತ ವಸ್ತುಗಳನ್ನು ಕಂಡುಹಿಡಿಯುವುದರಲ್ಲಿ ಅಮೇರಿಕಾವು ಲೋಕವಿಖ್ಯಾತವಾಗಿದೆ. ಈಗ ಅಲ್ಲಿಯ ಒಬ್ಬ ಶಾಸ್ತ್ರಜ್ಞನು ಒಂದು ಯಂತ್ರವನ್ನು ನಿರ್ಮಿಸಿದ್ದಾನೆ. ಅದರ ಸಹಾಯದಿಂದ ೧ ಅಡಿ ಅಗಲವೂ, ೫|| ಅಡಿ ಆಳವೂ ಉಳ್ಳ ಬಾವಿಯನ್ನು ಒಂದು ನಿಮಿಷಕಾಲದಲ್ಲಿ ಆಗೆಯಬಹುದಂತೆ.

ಮಂಜು ಸುರಿದಿರುವ ಸ್ಥಲದಲ್ಲೂ ಜಾರುತ್ತಿರುವ ಪ್ರದೇಶದಲ್ಲೂ ಓಡಾಡುವ ಕುದುರೆಗಳು ಜಾರಿ ಅಪಾಯಗೊಳ್ಳದಿರುವಂತೆ ಮಾಡುವುದಕ್ಕೆ ತಕ್ಕ ಲಾಳಗಳನ್ನು ಕಂಡುಹಿಡಿದವನಿಗೆ ನಾಲ್ಕು ಸಾವಿರ ರೂ. ಗಳನ್ನು ಬಹುಮಾನವಾಗಿ ಕೊಡುತ್ತೇವೆಂದು ಅಮೇರಿಕೆಯ ಹ್ಯೂಮನ್ ಅಸೋಸಿಯೇಷನ್ನವರು ಪ್ರಕಟಿಸಿದ್ದಾರೆ.

ಆಂಗ್ಲೇಯರು ಹೇಳಿದಪ್ರಕಾರ ಪಾರಿಸ್ ಪಟ್ಟಣದಲ್ಲಿ ನಾಳೆ ತಾ|| ೮ನೆ ಸೋಮವಾರದ ದಿವಸ ಸುಪ್ರೀಂ ಕೌನ್ಸಿಲನ್ನು ನೆರವೇರಿಸಲು ಫ್ರೆಂಚ್ ಮಂತ್ರಿ ಬ್ರಿಯಾಂಡ್‌ರವರು ಒಪ್ಪಿಕೊಂಡಿದ್ದಾರೆ. ಆಂಗ್ಲ ಮಂತ್ರಿಗಳಾದ ಲಾಯಿಡ್ ಜಾರ್ಜರು ಲಾರ್ಡ್ ಕರ್ಜನ್‌ರವರೇ ಮೊದಲಾದ ಮಂತ್ರಿ ಮಂಡಲದವರೂ, ಇಟಲಿ ಮುಖ್ಯಮಂತ್ರಿಯೂ ವಿದೇಶಾಂಗ ಮಂತ್ರಿಯೂ ಕೂಡ ಸಭೆಗೆ ಹೋಗುವರು.

ಸೈಲೀಷಯಾ ವಿಷಯದಲ್ಲಿ ಆಂಗ್ಲದೇಶಕ್ಕೂ ಫ್ರಾನ್ಸಿಗೂ ಮರಳಿ ಅಭಿಪ್ರಾಯಭೇದವು ಪ್ರಬಲಿಸುತ್ತ ಇದು ಮರಳಿ ಎಲ್ಲಿ ಯುದ್ಧಕ್ಕೆ ದಾರಿ ಮಾಡುವುದೋ ಎಂಬ ಭೀತಿಯನ್ನು ಹುಟ್ಟಿಸುತ್ತಿದೆ. ಈ ಭೇದೋಪಾಯಕ್ಕೆ ಜರ್ಮನರು ಹೆಚ್ಚು ಪುಟ ಹಾಕುತ್ತಿರುವರಂತೆ. ಅಮೇರಿಕಾದ ಅಧ್ಯಕ್ಷರೇ ಮೊದಲಾದ ಪ್ರಬಲ ರಾಷ್ಟ್ರದವರು ಈ ಸಂದರ್ಭದಲ್ಲಿ ಸುಪ್ರೀಂಕೌನ್ಸಿಲಿಗೆ ಸೇರಿ ಈ ಭಿನ್ನಭಾವವನ್ನು ವಿಕೋಪಗೊಳ್ಳದಂತೆ ಶಾಂತಪಡಿಸಬೇಕೆಂದು ದೂರದರ್ಶಿಗಳು ಅಭಿಪ್ರಾಯಪಡುತ್ತಿದ್ದಾರೆ.

ಆಂಗೋರಾ ತುರುಕರಿಗೂ ಗ್ರೀಕರಿಗೂ ನಡೆಯುತ್ತಿದ್ದ ಯುದ್ಧದಲ್ಲಿ ತುರುಕರ ಸೈನ್ಯದಲ್ಲಿ ೬೦ ಸಾವಿರ ಜನರು ಸತ್ತು ಅಥವಾ ಗಾಯಪಟ್ಟು ಇಲ್ಲವೆ ಸೆರೆಸಿಕ್ಕಿಹೋದರೆಂದೂ ಉಳಿದ ಸೈನ್ಯವು ವಿಚ್ಛಿನ್ನವಾಗಿ ಅವರಿಗೆ ದೊಡ್ಡ ಪರಾಜಯವಾಯಿತೆಂದೂ, ಗ್ರೀಕರು ಗೋರ್ಡಿಯನ್ ಪಟ್ಟಣವನ್ನು ಸೇರಿ ಆಂಗೋರಾಕ್ಕೂ ಎಸ್ಕಿಷರ್ಹಿಗೂ ಮಧ್ಯದಲ್ಲಿರುವರೆಂದೂ ಅವರ ಉತ್ತರ ದಕ್ಷಿಣ ಸೈನ್ಯಗಳೆರಡೂ ಏಕವಾದುವೆಂದೂ ಆಂಗೋರಾದ ಹತ್ತಿರ ತುರುಕರ ಸೈನ್ಯವು ವಿಚ್ಛಿನ್ನವಾಯಿತೆಂದೂ ಮುಸ್ತಫಾಕೇಮಲ್ ಪಾಷಾರವರು ಗ್ರೀಕರೊಡನೆ ಸಂಧಿಮಾಡಿಕೊಳ್ಳಲು ಆತುರಪಟ್ಟು ಅದಕ್ಕಾಗಿ ಮಿತ್ರಮಂಡಲಿಯವರಿಗೆ ವಿಜ್ಞಾಪನಪತ್ರವನ್ನು ಬರೆದುಕೊಡಿರುವರೆಂದೂ ತಂತಿವಾರ್ತೆಗಳು ಹೇಳುತ್ತಿವೆ.

ಯುವಸಾರ್ವಭೌಮ (ಪ್ರಿನ್ಸ್‌ಆಫ್‌ವೇಲ್ಸ್) ರವರ ಭರತಖಂಡದ ಸಂಚಾರ.

ಈಗ ಗೊತ್ತಾಗಿರುವ ಪ್ರಕಾರ ಪ್ರಿನ್ಸ್‌ಆಫ್‌ವೇಲ್ಸ್‌ರವರು ಬರುವ ನವಂಬರ್ ತಾ|| ೧೭ ರಲ್ಲಿ ಭರತಖಂಡಕ್ಕೆ ದಯಮಾಡಿಸಿ ೧೯೨೨ ನೆ ವರ್ಷದ ಮಾರ್ಚಿ ತಾ|| ೧೭ ರಲ್ಲಿ ಇಲ್ಲಿಂದ ಸ್ವದೇಶಕ್ಕೆ ತೆರಳುವರೆಂದು ಗೊತ್ತಾಗಿದೆ. ಯಾವ ಯಾವ ತಾರೀಖುಗಳಲ್ಲಿ ಎಲ್ಲೆಲ್ಲಿಗೆ ಹೋಗುವರೆಂಬ ವಿವರವನ್ನು ಇಂಡ್ಯಾ ಸರ್ಕಾರದವರು ಈ ಕೆಳಗೆ ಕಂಡಂತೆ ಪ್ರಕಟಿಸಿರುತ್ತಾರೆ.

ಬೊಂಬಾಯಿ—	ನವಂಬರ್ ತಾ||	೧೭ ರಿಂದ ೨೨.
ಬರೋಡಾ—	,,	೨೨—೨೪
ಉದಯಪುರ—	,,	೨೫—೨೭.
ಜೋಧಪುರ—	,,	೨೯—ಡಿಶಂಬರ್ ೧.
ಬಿಕನೀರ್—	ಡಿಶಂಬರ್	೨—೬.
ಭರತಪುರ—	,,	೭—೮.
ಲಕ್ನೋ—	,,	೯—೧೨.
ಪ್ರಯಾಗ—ಕಾಶಿ—	,,	೧೩.
ನೇಪಾಳ—	,,	೧೪—೨೧.
ಪಾಟ್ನಾ—	,,	೨೨—೨೩.
ರಂಗೂನ್—	ಜನವರಿ	೨—೧೦.
ಮದರಾಸ್—	,,	೧೩—೧೮.
ಮೈಸೂರು—	,,	೧೯—೨೨.
ಹೈದರಾಬಾದು—	,,	೨೫—೨೮.
ನಾಗಪುರ—	,,	೩೦—೩೧.
ಇಂದೋರು—	ಫೆಬ್ರವರಿ	೧—೩.
ಭೂಪಾಲ್—	,,	೪—೭.
ಗ್ವಾಲಿಯರ್—	,,	೮—೧೨.
ಆಗ್ರಾ—	,,	೧೩.
ಆಲ್ವರ್—	,,	೧೪.
ದಿಲ್ಲಿ—	,,	೧೪—೨೧.
ಪಾಟಿಯಾಲಾ—	,,	೨೨—೨೪.
ಜಲಂಧರ್—	,,	೨೫.
ಲಾಹೋರ್—	,,	೨೫—ಮಾರ್ಚಿ ೧.
ಅಮೃತಸರ—	ಮಾರ್ಚಿ	೨.
ಕಾಶ್ಮೀರ—	,,	೨—೩.
ಜೀಲಂ—	,,	೩.
ಪೆಷಾವರ್—	,,	೪—೭.
ರಾವಲ್ಪಿಂಡಿ—	,,	೮—೧೧.
ಕಪರ್ಥಲಾ—	,,	೧೨.
ದೇರಾಡೂನ್—	,,	೧೩.
ಗುಜರಾನ್ವಾಲಾ—	,,	೧೩—೧೫.
ಕರಾಚಿ—	,,	೧೬.

ತಾ|| ೧೭ನೆ ಮಧ್ಯಾಹ್ನ ಕರಾಚಿ ತೀರದಲ್ಲಿ ಹಡಗನ್ನೇರಿ ಸ್ವದೇಶಕ್ಕೆ ಪ್ರಯಾಣಮಾಡುವರು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

To
THE EDITOR "MYSORE STAR" MYSORE.
Sir,

It is not with little reluctance that one has to note the fomentation of unpleasantness created by a section of the people who after the publication of the Government order on Miller Committee Report and Reddy's Educational Memorandom have lost all balance of mind and become quite blind to equity, reason, logic and justice; they have begun to insinuate the Dewan and draw the Royal family into the arena of public politics. These people are backed up by a set of people out-side among whom notably one is an editor, another a platform quancher both of whom are the declared antogonists of the South Indian Liberal Federation of Madras.

The ingratitude of these people is unfathomable in as much as they have begun to oppose and obstruct the progress of a people who from time im-memorial by shedding their blood and sacrificing their food and comfort have afforded pomp and pleasure to this priestly class. Here in Mysore both the platform and the press are strong for the Brahmin and this has fecilitated him to try to misinform the public and if possible the Government by publishing most abominable lies that any decent man cannot but rate them as anything higher than foolish platitudes emanating from a biased mind and wanton will.

Could anything be more wonderful, mischivous and rediculous than that the very people whose bread is the out come of our blood and whose sole living is due to the shedding of our sweat should have become so monstrous, cruel and inhuman as not to tolerate the progress of the dumb millions who have served these people so fajthfully without a grumble for centuries together!

Surely for the degeneration of India from its high pedastal of ancient glory and renown no one

is better responsible than these Brahmins. These people to further their own interests and to maintain their preveleges, in addition to keeping all others ignorent and inarticulate, implanted in the minds of the now backward classes superstious ideas and ideals, devided the whole people into innumerable castes and classes and to achieve their selfish objects set one against the other by classifying some as superior and others inferior.

Is it not curious that a Brahmin cook because of his birth should have to be considered as superior to a cultured and well educated non-Brahmin. Still more curious is that invariably in all the coffee-clubs managed by Brahmins a board "Brahmins only" is put up in a particular place meaning that none but this preveleged class should go there never mind even if they wear the boots and sandals made by a Panchama brother. By this are we to understand that the non-Brahmins that are probibited to occupy that particular place are inferior to any kind of Brahmin or the boots and sandals made by our Panchama brothern have been so sanctified by the wearing of a Brahmin that they are made so holly as to destroy the scruples of a religious Purohit and assume a superiority over others? By making such invidious distinctions, are not these people wantonly widening the gulf between man and man. What will be the fate of these brahmins if all the non-Brahmin merchants were to deny them all sales, the peasants obstain from cultivating their lands and the coolies refuse to work for them and infact practice non-cooperation with them?

Some how something tells me that if these Brahmins were to persist in their nefarious warfare of opposition and re-action and try to wound the already wounded feelings of the non-Brahmins there will come a time in the near future when the non-Brahmins will be impelled to give up all connection with these ungrateful people and see that their foolish actions are properly paid.

Let anybody say whether it is the Miller Committee that penalises a particular community or was it the laws of 'Manu' that penalised all communities but one? Who are the people that are denying admission of all classes of pupils into the Sanskrit College which is purely maintained by public money? Again who are the people that covet the progress of humanity at large and how is that though the backward classes were under the influence and guidance of these Brahmins for centuries together did not get so much of education and progress as they have obtained by being under the benevolent British rule for one hundred years? These are some of the questions which when impartially answered will expose the hollowness, the conceitedness and the villainous behaviour of this class of monopoly.

M. L. S.

ಎಲೆಕ್ಟರುಗಳ ಸಭೆ.

ಸನ್ ೧೯೨೧ನೆ ಇಸವಿ ಜುಲೈ ತಾ|| ೨೩ ರಲ್ಲು ಹೊಳಲಕೆರೆ ತಾ|| ದೊಗ್ಗನಹಾಳು ಗ್ರಾಮದಲ್ಲಿ, ದಾವಣಗೆರೆ, ಚಿತ್ರದುರ್ಗ, ಹೊಳಲಕೆರೆ, ಚನ್ನಗಿರಿ, ಶಿವಮೊಗ್ಗಾ ಕಡೂರು ಈ ತಾಲ್ಲೋಕುಗಳ ಎಲೆಕ್ಟರುಗಳು ಸಭೆಸೇರಿ ನಡೆಸಿದ ಮೀಟಿಂಗು ಪ್ರೊಸೀಡಿಂಗ್ಸ್.—

೧. ಈ ಸಭೆಗೆ ಸುಮಾರು ೩೦೦ ಜನಗಳವರೆಗೂ ಮೆಂಬರುಗಳು ಹಾಜರಾಗಿದ್ದರು.

೨. ಈ ಮೆಂಬರುಗಳ ಪೈಕಿ ದಾವಣಗೆರೆ ತಾಲ್ಲೋಕು ಮಾಯಕೊಂಡ ಸಾಹುಕಾರ್ ಮ|| ರಾ|| ವೀರಪ್ಪನವರು ಪ್ರೆಸಿಡೆಂಟರಾಗಬೇಕೆಂತ ಮ|| ರಾ|| ಭರ್ಮನಾಯ್ಕನ ದುರ್ಗದ ನಾಡಿಗ ಮಲ್ಲಪ್ಪನವರು ಪ್ರಪೋಸು ಮಾಡಿದ್ದನ್ನು ಎಲ್ಲಾ ಮೆಂಬರುಗಳೂ ಅನುಮೋದಿಸಿದರು.

೩. ಶ್ರೀಮನ್ಮಹಾರಾಜರವರ ವರ್ಧಂತಿಕಾಲದ ಕಳೆದ ದಸರಾ ೨ನೇ ಸೆಷನ್‌ನಲ್ಲಿ ಹಾಲಿ ಗೌರ್ನಮೆಂಟಿನವರು ಪ್ರಜಾ ಸಮುದಾಯದ ಏಳಿಗೆಗೆ ಮಾಡಿರತಕ್ಕ ಆವಶ್ಯಕವಾದ ಏರ್ಪಾಟುಗಳಿಗೆ ಅಸೂಯೆಯಿಂದ ವಿರೋಧವಾಗಿ ಪ್ರಜಾಪ್ರತಿನಿಧಿಗಳು ಕೆಲವರು ಪ್ರಜೆಗಳ ಪರವಾಗಿ ತಾವು ಕೊಟ್ಟ ಸಬ್‌ಜಕ್ಟುಗಳನ್ನು ಸರ್ಕಾರದವರ ಅವಗಾಹನೆಗೆ ತಾರದೆ ಒಗ್ಗಟ್ಟಾಗಿ ಸಬ್‌ಜಕ್ಟುಗಳನ್ನು ವಾಪಸು ತೆಗೆದುಕೊಂಡಿರುವದು ನಮ್ಮ ಅನುಮತಿಗೆ ವಿರೋಧವಾಗಿರುತ್ತದೆ. ನಮ್ಮ ಜವಾಬ್ದಾರಿ ಮೇಲೆ ಚುನಾಯಿಸಿದ ಮೆಂಬರುಗಳು ಸ್ವತಂತ್ರಿಸಿ ಈ ರೀತಿ ಈಗಿನ ಗೌರ್ನಮೆಂಟಿಗೆ ವಿರೋಧವಾಗಿ ಪ್ರವರ್ತಿಸಿರುವ ನಡತೆಯನ್ನು ನಾವುಗಳು ಖಂಡಿಸುತ್ತೇವೆ. ಅಲ್ಲದೆ ಸಭಾಅಂತ್ಯದಲ್ಲಿ ಮ|| ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಅಭಿಪ್ರಾಯಗಳು ಈ ತಾಲ್ಲೋಕುಗಳ ಸರ್ವಜನಕ್ಕೂ ಸಮ್ಮತವಾಗಿರುತ್ತದೆ.

೪. ಪ್ರಜಾಸಮುದಾಯದ ಏಳಿಗೆಯನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಪ್ರವರ್ತಿಸುತ್ತಿರುವ ಈಗಿನ ಸರ್ಕಾರದವರಲ್ಲಿ ನಮ್ಮಗಳಿಗೆ ಪೂರ್ಣನಂಬಿಕೆಯಿರುತ್ತದೆ.

೫. ಪ್ರಜೆಗಳ ಪುರೋಭಿವೃದ್ಧಿಗಾಗಿ ಸರ್ಕಾರದವರು ಮಾಡುವ ಎಲ್ಲಾ ಏರ್ಪಾಟುಗಳಲ್ಲೂ ನಮ್ಮ ಸಂಪೂರ್ಣವಾದ ಸಹಾಯವಿರುತ್ತದೆ.

೬. ಮೇಲ್ಕಂಡ ಅಂಶಗಳನ್ನೆಲ್ಲಾ ಸರ್ಕಾರದವರ ಅವಗಾಹನೆಗೆ ತರಬೇಕಾಗಿ ತೀರ್ಮಾನಿಸಲಾಯ್ತು.

ಈಬಳಿ ಪ್ರೆಸಿಡೆಂಟರ ಮತ್ತು ಹಾಜರಿದ್ದ ಮೆಂಬರುಗಳ ರುಜುಗಳು ಆಗಿರುತ್ತದೆ.

ಎಸ್. ಸಿದ್ಧರಾಮಪ್ಪ.

ಸರ್ಕಾರದ ಶತ್ರುಗಳು.

ಮೈಸೂರು ಸಂಸ್ಥಾನಕ್ಕೆ ಈಗ ಬ್ರಾಹ್ಮಣೇತರರೊಬ್ಬರು ದಿವಾನರಾಗಿರುವುದನ್ನು ಸಹಿಸಲಾರದ ಕ್ಷುದ್ರಾತ್ಮರು ಸಂಸ್ಥಾನಕ್ಕೆ ಅಪಖ್ಯಾತಿಯನ್ನು ಯಾವರೀತಿಯಿಂದಲಾದರೂ ತರಬೇಕೆಂಬ ದುಸ್ಸಂಕಲ್ಪದಿಂದ ನಾನಾ ಅಪವಾದಗಳನ್ನು ಕಲ್ಪಿಸಿ ಆರೋಪಿಸುವುದಕ್ಕೆ ಮಾಡುತ್ತಿರುವ ಇಂದ್ರಜಾಲ ಮಹೇಂದ್ರಜಾಲಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಹಿಂದೆ ದಿವಾನ್ ಅಧಿಕಾರ ಮಾಡಿದವರು ಅರಮನೆ ಪಬ್ಲಿಕ್ ಆಫೀಸುಗಳು ಕಾಲೇಜುಗಳು ಮೊದಲಾದ ಕಟ್ಟಡಗಳನ್ನೂ, ವಿದ್ಯುಚ್ಛಕ್ತಿ ಸಮುತ್ಪಾದನವೇ ಮೊದಲಾದ ಸ್ಥಾಪನೆಗಳನ್ನೂ ಎಷ್ಟೋ ಮಾಡಿದ್ದರೂ ಅವೊಂದಕ್ಕೂ ಸಾಲಮಾಡಲಿಲ್ಲವಂತೆ. ಖರ್ಚಿಗೆ ತಾಪತ್ರಯಪಡಲಿಲ್ಲವಂತೆ. ಈಗಣ ದಿವಾನರು ಸಾಲಸೋಲಮಾಡಬೇಕೆಂದು ತಾಪತ್ರಯ ಪಡುತ್ತಿರುವುದನ್ನು ನೋಡಿದರೆ ಈ ಕತುಕಾಳು ದೇಶಾಭಿಮಾನಿ (?) ಗಳಿಗೆ ವಿಷಾದವಾಗುವುದಂತೆ!

ಸಂಪತ್ತಿನ ಬಾಲವನ್ನು ಪೃಷ್ಠಭಾಗಕ್ಕೆ ಅಂಟಿಸಿಕೊಂಡು ಬಂದಿದ್ದವರಾಗಿರಬಹುದಾದ ಆ ಹಿಂದಣ ದಿವಾನರು ಕೆಲಸಕ್ಕೆ ಬರುವಾಗ ಸರ್ಕಾರದ ಬೊಕ್ಕಸವು ಯಾವ ಸ್ಥಿತಿಯಲ್ಲಿತ್ತು, ಅವರು ನಿವೃತ್ತಿಮಾಡಲ್ಪಡುವಾಗ ಯಾವಸ್ಥಿತಿಗೆ ತಂದಿಟ್ಟು ಹೋದರು ಎಂಬುದನ್ನು ಈ ದೇಶಬಾಂಧವರುಗಳು ಮುಚ್ಚಿಕೊಳ್ಳದೆ ಆಡಿದ್ದರೆ ತಮ್ಮ ಪುಚ್ಛದಿಂದ ಬೊಕ್ಕಸವನ್ನೆಲ್ಲಾ ಗುಡಿಸಿ ಗುಂಡಾಂತರಮಾಡಿ ದೇಶವನ್ನು ಸಾಲದಬಾಯಿಗೆ ತುತ್ತಾಗುವಂತೆ ಮಾಡುವುದಕ್ಕೆ ಯಾರು ಕಾರಣರೆಂಬುದೂ ಇನ್ನು ಕೆಲದಿನಗಳು ಅದೇ ಅಧಿಕಾರಿಗಳೇ ಇದ್ದಿದ್ದರೆ ಕೃಷ್ಣರಾಜಸಾಗರದಂಥ ಪ್ರತಿಷ್ಠಾಪನೆಗಳೆಲ್ಲಾ ವಿದೇಶೀಯ ವರ್ತಕಸಂಘಗಳಿಗಾವುದಕ್ಕಾದರೂ ಈಡುಮಾಡಲ್ಪಡದೇ ಹೋಗುತ್ತಿರಲಿಲ್ಲವೆಂಬುದೂ ಗೊತ್ತಾಗುತ್ತಿದ್ದಿತು.

ಆದಾಯಕರವಾದ ಪ್ರತಿಷ್ಠಾಪನೆಗಳೆಂಬ ಊಹೆಯಮೇಲೆ ಕೋಟ್ಯಂತರ ರೂ. ಗಳ ವೆಚ್ಚದಮಹಾಕಾರ್ಯಗಳನ್ನು ಹಿಂದಣ ಅಧಿಕಾರಿಗಳು ಆರಂಭಿಸಿಬಿಟ್ಟು ಬೊಕ್ಕಸದಲ್ಲಿ ಕೂಡಿದ್ದ ಹಣವನ್ನೆಲ್ಲಾ ನೀರಿಗಿಂತಕಡೆಯಾಗಿ ಚೆಲ್ಲಿಬಿಟ್ಟು ಮುಂದೆ ಸಾಲಮಾಡಿದಲ್ಲದೆ ನಿರ್ವಾಹವಿಲ್ಲವೆಂಬ ಸ್ಥಿತಿಯನ್ನು ಸಂಸ್ಥಾನಕ್ಕೆ ಆ ಹಿಂದಣವರೇ ತಂದಿಟ್ಟಿದ್ದರು. ಮುಂದೆ ನಾವುಸಾಲಮಾಡಿಯೇ ತೀರಬೇಕೆಂದು ಹಿಂದಣ ಸರ್. ವಿಶ್ವೇಶ್ವರಯ್ಯನವರೇ ಬಾಯ್ಬಿಟ್ಟು ಹೇಳಿದ್ದರು. ಆ ಸ್ಥಿತಿಯು ಅನಿವಾರ್ಯವಾಗಿ ಈಗ ಬಂದೇಬಂದಿತು. ಈಗಣ ದಿವಾನರು ಸಂಬಳಕ್ಕಾಗಿಯೇ ಸಂಸ್ಥಾನದ ಸಂಬಂಧವನ್ನು ಕಟ್ಟಿಕೊಂಡವರಲ್ಲವಾದುದರಿಂದ ಸಂಸ್ಥಾನರಕ್ಷಣೆಗಾಗಿ ವೆಚ್ಚಗಳನ್ನೆಲ್ಲಾ ಸಾಧ್ಯವಾದಷ್ಟು ಮಿತಗೊಳಿಸಿ, ಅರ್ಧಾಂತವಾಗಿರುವ ಕೆಲಸಗಳನ್ನು ಮುಗಿಯಿಸದಿದ್ದರೆ ಇದುವರೆಗೆ ಅವುಗಳಿಗಾಗಿ ಮಾಡಿರುವ ದೊಡ್ಡಮೊತ್ತವೆಲ್ಲಾ ಹಾಳಾದಂತಾಗುವುದೆಂಬ ಕಾರಣದಿಂದ ನಿರ್ವಾಹವಿಲ್ಲದೆ ಸಾಲಮಾಡಿ ಅವುಗಳನ್ನು ಮುಗಿಸಬೇಕಾಗಿ ಬಂದಿರುವುದು. ಈ ಸಂಗತಿಗಳನ್ನೆಲ್ಲಾ ಸುಸ್ಪಷ್ಟವಾಗಿ ದಿವಾನರವರು ಕಳೆದ ಪ್ರಜಾಪ್ರತಿನಿಧಿ ಸಭೆಯ ತಮ್ಮ ಉಪನ್ಯಾಸದಲ್ಲಿ ವಿವರಿಸಿದ್ದರೂ, ಅದನ್ನು ಮುಚ್ಚಿಬಿಟ್ಟು ಸಾಲಮಾಡುವುದಕ್ಕೆ ಸರ್. ಕಾಂತರಾಜ ಅರಸಿನವರೇ ಕಾರಣರೆಂಬ ದುರಭಿಪ್ರಾಯಗಳನ್ನು ಜನರಲ್ಲಿ ಹುಟ್ಟಿಸಲು ಪ್ರಯತ್ನಿಸುವ ಜನರನ್ನು ದೇಶದ ಶತ್ರುಗಳಲ್ಲದೆ ದೇಶಬಾಂಧವರೆಂದು ಹೇಳಲಾದೀತೆ?

ಪ್ರಭುತ್ವ ಮಾಡತಕ್ಕವರು ಬ್ರಾಹ್ಮಣೇತರರಾಗಿಯೂ ನೌಕರಿ ಮಾಡತಕ್ಕವರು ಬ್ರಾಹ್ಮಣರೂ ಬ್ರಾಹ್ಮಣೇತರರೂ ಆಗಿಯೂ ಇರುವುದರಿಂದ ಈಗ ಮೈಸೂರು ದೇಶದಲ್ಲಿ ಸಮುದ್ರಮಥನಕ್ಕೆ ಆರಂಭವಾಗಿರುವುದಂತೆ! ವಿಷವು ಹುಟ್ಟಿದೆಯಂತೆ! ಲೋಕರಕ್ಷಣೆಗೆ ಇನ್ನೂ ವಿಷಕಂಠನು ಬಂದಿರುವುದಿಲ್ಲವಂತೆ! ಈಗಲೇ ಬರುವನೋ ಅಥವಾ ಇನ್ನು ೭ ವರ್ಷಗಳು ಕಾಯುವನೋ ತಿಳಿಯದಂತೆ! ಪರಿಣಾಮದಲ್ಲಿ ಬಂದೇಬರುವನಂತೆ! ಇವು ಸಂಪದಭ್ಯುದಯ ಪತ್ರದ ಅಲಂಕಾರೋಕ್ತಿ ಮೌಕ್ತಿಕಗಳು!!

ಪ್ರಭುತ್ವ ಮಾಡುತ್ತಿರುವವರು ಬ್ರಾಹ್ಮಣೇತರರಾಗಿರುವುದೇ ಮಹಾಪಾಪಕಾರ್ಯವೆಂದು ಈ ಪತ್ರಿಕೆಯ ಅಭಿಪ್ರಾಯ. ಶ್ರೀಮನ್ಮಹಾರಾಜರೂ ಅವರ ಬಂಧುವರ್ಗದವರೂ ರಾಜ್ಯವನ್ನೆಲ್ಲಾ ಸಂಪದಭ್ಯುದಯದ ಸಂಘದವರಿಗೆ ಒಪ್ಪಿಸಿಬಿಟ್ಟು ಅವರು ಅರಣ್ಯಯಾತ್ರೆಗೆ ತೆರಳಿದರೆ ಆಗ ಇವರ ಹೊಟ್ಟೆಯು ತಣ್ಣಗಾದೀತು! ಪರಶುರಾಮದತ್ತವಾದ ತಮ್ಮ ಭೂಭಾಗವನ್ನು ನಿಷ್ಕಂಟಕವಾಗಿ ಅನುಭವಿಸಿಕೊಳ್ಳಲು ಮನಸ್ಸಾದೀತು. ಪರಶುರಾಮನ ಕಾಲದ ಬ್ರಾಹ್ಮಣ್ಯವು ಈಗ ಕಣ್ಣಿಗೆ ಬೀಳದಿರುವುದರಿಂದಲೇ ಅವರಹಕ್ಕಿನ ರಾಜ್ಯವನ್ನು ಅವರಿಗೆ ಕೊಡಲಿಕ್ಕಿಲ್ಲದೆ ಈಗಣ ಭೂಪಾಲಕರುಗಳು ತಟಸ್ಥರಾಗಿರುವರಾದೀತು!

ಸಮುದ್ರಮಥನಕ್ಕೆ ಈಗ ಆರಂಭವಾಗಿ ವಿಷವು ಹುಟ್ಟಿದೆಯೆಂದು ಹೇಳಿದ್ದಾರಷ್ಟೆ. ಆ ವಿಷವು ಸಮುದ್ರದಲ್ಲಿರಲಿಲ್ಲ. ಕಡೆಗೋಲಿಗೆ ಸುತ್ತಿದ್ದ ಶೇಷನು ತನ್ನ ವಿಷವನ್ನು ಸಮುದ್ರದಲ್ಲಿ ಕಾರಿದನು. ಈಗಣ ಮೈಸೂರು ಸಂಸ್ಥಾನದಲ್ಲಿಲ್ಲದಿದ್ದ ವಿಷವನ್ನು ತಮ್ಮ ಸ್ವಾರ್ಥಕ್ಕೆ ಲೇಶಮಾತ್ರ ಹಾನಿ ಬಂದುದನ್ನು ಸೈರಿಸಲಾರದ ಅಸೂಯಾಳುಗಳು ಹುಟ್ಟಿಸಿರುವರು. ತಾವು ಪರೋತ್ಕರ್ಷದ್ವೇಷ ವಿಷವನ್ನು ಕಾರಿ ಇದು ದೇಶದಲ್ಲಿಹುಟ್ಟಿದ ವಿಷವೆಂದು ಹೇಳುತ್ತಿರುವರು, ಆದರೇನು? ವಿಷಕಂಠನು ಇನ್ನೂ ಹುಟ್ಟಿಲ್ಲವೆಂಬುದು ಅವಿವೇಕ. ಜಗದಾದಿಯಿಂದಲೂ ಅವನು ಸ್ವಯಂಭುವಾಗಿದ್ದೇ ಇದ್ದಾನೆ. ಅನ್ಯಾಯ ಅಧರ್ಮ ಪಕ್ಷಪಾತಾಚರಣೆಗಳನ್ನೆಲ್ಲಾ ನೋಡುತ್ತಲೇ ಇದ್ದಾನೆ. ಅವು ಪರಿಪಕ್ವಸ್ಥಿತಿಗೆ ಬರುವುದನ್ನು ನೋಡಿ ಅವರವರ ಕರ್ಮಕ್ಕೆ ತಕ್ಕಫಲವನ್ನವರಿಗೆ ಉಣ್ಣಿಸಿ ಪರಪೀಡನೆ ವಂಚನೆ ಪಕ್ಷಪಾತ ಸ್ವಾರ್ಥೈಕಪರತೆ ಎಂಬ ಆತ್ಮವಿನಾಶಕವಾದ ವಿಷವನ್ನು ನಿಕ್ಷೇಪಗೊಳಿಸಿ ದೀನಪಾಲನೆಮಾಡಿ ತನ್ನ ಲೋಕರಕ್ಷಕ ಬಿರುದನ್ನು ಸಾರ್ಥಕಪಡಿಸಿಕೊಳ್ಳಲು ಸಿದ್ಧನಾಗಿಯೇ ಇದ್ದಾನೆ. ಸೌಮ್ಯಸ್ವಭಾವದವರೂ ಪರೋತ್ಕರ್ಷಸಹಿಷ್ಣುಗಳೂ ಸಾತ್ವಿಕರೂ ಆಗಿದ್ದ ಸ್ವದೇಶೀಯರೆಂಬ ದೇವತೆಗಳಿಗೆ ಹೊರನಾಡಿನವರೆಂಬ ಅಸುರರ ಪ್ರಾಬಲ್ಯದಿಂದ ಪ್ರಾಪ್ತವಾಗಿದ್ದ ಕ್ಷೋಭೆಯನ್ನು ನಿವಾರಿಸಿ ಇವರುಗಳ ನಿಜವಾದ ಸ್ವತ್ವವನ್ನು ಇವರಿಗೆ ಕೊಡಿಸುವುದಕ್ಕೆ ಈಗ ತನ್ನಪ್ರಸಾದರೂಪವಾದ ವಿವೇಕತೇಜಸ್ಸನ್ನು ಇವರುಗಳಮೇಲೆ ಪ್ರಸರಿಸಿದ್ದಾನೆ. ಅವನ ಕೃಪೆಯಿಂದ ದೇಶವೆಲ್ಲಾ ಆನಂದಾಮೃತವನ್ನು ಸವಿದು ಸುಖಿಸುವ ಕಾಲವು ನಮ್ಮ ಶ್ರೀಮನ್ಮಹಾರಾಜರವರ ಸತ ಧರ್ಮ ಪರಿಪಾಲನಶಕ್ತಿಯಿಂದ ಸಮೀಪಗತವಾಗುತ್ತಿದೆ.

ದೇಶಭಕ್ತ.

ಇದು ಸಾಂಕರ್ಯವಲ್ಲವೊ?

ಸ್ವಾಮಿ,

ನಮ್ಮ ತಿರುಮಕೂಡಲು ನರಸೀಪುರದ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಬಹುಕಾಲದಿಂದಲೂ ತಿರುಕುಲದ ಹೊಲೆಯರೆಂಬ ಒಂದು ಪಂಗಡದ ಅನೇಕ ಒಕ್ಕಲುಗಳಿವೆ. ಅನಾದಿಯಾಗಿ ಇವರ ಮನೆಗೆ ಸಮಯ ಬಿದ್ದಾಗ್ಗೆ ಕಂಡುಕಾಣದಂತೆ ಸಾತಾನಿಗಳೆಂಬ ವೈಷ್ಣವರು ಹೋಗಿ ಅವರ ಮದುವೆ ಮುಂತಾದ ಕೆಲಸಗಳನ್ನು ಮಾಡಿಸಿ ತಮ್ಮ ಸೌಮ್ಯವನ್ನು ತೆಗೆದುಕೊಂಡು ಬರುತ್ತಲಿದ್ದ ಪದ್ಧತಿಯಿತ್ತು. ಇದನ್ನು ಈ ಸುತ್ತಿನ ರಾಮಾನುಜ ಮತದ ಶ್ರೀ ವೈಷ್ಣವರು ಕಂಡು ಆ ಸಾತಾನಿಗಳನ್ನು ಗದರಿಸಿ ಅಥವಾ ಹೀಸೈಸಿ ಜರಿಯುತ್ತಿದ್ದರು. ಈಚೆಗೆ ೬-೮ ತಿಂಗಳಗಳ ಕೆಳಗೆ ಕಣಿವೆಕೆಳಗಿನಿಂದ ಒಬ್ಬ ಶ್ರೀವೈಷ್ಣವ ಆಚಾರ್ಯನು ಬಂದು ಈ ತಿರುಕುಲದ ಹೊಲೆಯರ ಮನೆಗೆಲ್ಲಾ ಹೋಗಿ ಅವರಿಗೆ ಶಂಖಚಕ್ರಧಾರಣಾದಿ ಪಂಚಸಂಸ್ಕಾರಗಳನ್ನು ಮಾಡಿ ನಾಮಗಳನ್ನಿಕ್ಕಿಸಿ ತಲೆಗೆ ೪-೫ ರೂಪಾಯಿಗಳಂತೆ ವಸೂಲು ಮಾಡಿಕೊಂಡು ಹೀಗೆ ಈ ಸುತ್ತಿನಿಂದೆಲ್ಲಾ ೫-೬ ಸಾವಿರ ರೂ. ಗಳನ್ನು ಗಳಿಸಿಕೊಂಡು ಹೋದನೆನ್ನುವದನ್ನು ಈ ಪ್ರಾಂತದವರೆಲ್ಲರೂ ಬಲ್ಲರು. ತದನಂತರ ಇದನ್ನು ಕೇಳಿದ ಈ ಸುತ್ತಿನ ಶ್ರೀವೈಷ್ಣವರು ಆ ಕಣಿವೆಕೆಳಗಿನವನನ್ನು ವಿಪರೀತವಾಗಿ ಆಕ್ಷೇಪಿಸುತ್ತ ಕೆಲವು ಕಾಲವನ್ನು ಕಳೆದರು. ಈಗ ಅವರೂ ತಣ್ಣಗಾಗಿರುವದಲ್ಲದೆ ಕಂಡುಕಾಣದಂತೆ ಈ ತಿರುಕುಲದವರ ಮನೆಯ ಶುಭಕಾರ್ಯಗಳಿಗೆ ತಾವೇ ಹೋಗಿ ದಕ್ಷಿಣೆಪಡಿ ಮೊದಲಾದುವುಗಳನ್ನು ತಾವೂ ಪಡೆದು ಬರುತ್ತಿದ್ದಾರೆಂದು ಪ್ರವಾದವಿದೆ, ಇದು ಆಗತಕ್ಕದ್ದೇ ಸರಿ. ಹಿಂದೂ ಮತಕ್ಕೇ ಸೇರಿರುವ ಆ ಪತಿತ ಜನರಿಗೆ ಈ ರೀತಿಯಾದ ಕಾರ್ಯಗಳಿಂದ ಉದ್ಧಾರವಾಗಬೇಕಾದದ್ದೇ ಧರ್ಮ. ಹಿಂದಿನ ಕಾಲದಲ್ಲಿ ರಾಮಾನುಜರೇ ಒಬ್ಬ ಅಂತ್ಯಜನನ್ನು ಗುರುಸಮಾನನನ್ನಾಗಿ ತಿಳಿದು ಪೂಜಿಸಿದ್ದಾರೆ. ಅವರ ಆಳ್ವಾರುಗಳಲ್ಲಿಯೂ ಈ ಪಂಚಮರಿದ್ದರೆಂದು ಕೇಳಿಯೇ ಇರುತ್ತೇವೆ. ಮೇಲುಕೋಟೆ ಚಲುವರಾಯಸ್ವಾಮಿಯನ್ನು ಡಿಲ್ಲಿಯಿಂದ ಸಾಗಿಸಿತಂದ ಮೆಹನತ್ತಾಗಿ ಪಂಚಮರಿಗೆ ಈಗಲೂ ವರ್ಷಕ್ಕೆ ೩ ದಿನ ಆ ದೇವಾಲಯದ ಪ್ರವೇಶಾಧಿಕಾರವು ನಡೆದು ಬರುತ್ತಿದೆಯೆಂಬುದನ್ನು ಎಲ್ಲರೂ ಬಲ್ಲರಷ್ಟೆ. ಆದರೆ ಈಗ ಈ ಸುತ್ತಿನ ತಿರುಕುಲದವರನ್ನು ಪಂಚಸಂಸ್ಕಾರದಿಂದ ಪಾವನ ಮಾಡುವದಕ್ಕೆ ಬಂದ ಆಚಾರರು ತಮ್ಮ ಕ್ರಿಯೆಯಿಂದ ಸ್ವಾರ್ಥವನ್ನು ಸಾಧಿಸಿಕೊಂಡರೇ ಹೊರತು ಅವರ ದುರಾಚಾರಗಳನ್ನು ಬಿಡಿಸಿ ಪುನೀತರನ್ನು ಮಾಡಲಿಲ್ಲ. ಅವರ ದುರಾಹಾರ ದುಷ್ಪಾನಗಳು ಇನ್ನೂ ತಪ್ಪಲಿಲ್ಲ. ಅದನ್ನು ಬಿಡಿಸಿದ್ದರೆ ಇವರು ನಿಜವಾಗಿಯೂ ಅವರನ್ನು ಉದ್ಧರಿಸಿದವರಾಗುತ್ತಿದ್ದರು. ಎಲ್ಲರೂ ಇವರನ್ನು ಕೊಂಡಾಡುತ್ತಿದ್ದರು. ಅವರ ವಿತ್ತಾಪಹಾರವೇ ಇವರ ಮುಖ್ಯ ಗುರಿಯಾಗಿತ್ತೆಂದು ಕಾಣುತ್ತದೆ.

ಶ್ರೀಮನ್ಮಹಾರಾಜರೂ ಅವರ ಘನ ಸರ್ಕಾರದವರೂ ಪತಿತರಾಗಿರುವ ಪಂಚಮರನ್ನು ಉದ್ಧರಿಸಲಿಕ್ಕಾಗಿ ಶಾಸ್ತ್ರಗಳಲ್ಲಿ ಅಸಿದ್ಧವಾಗಿದ್ದರೂ ಕಾರಣಾಂತರ ಕಲ್ಪಿತವಾಗಿರುವ ಅವರ ಅಸ್ಪೃಶ್ಯತ್ವವನ್ನು ವಿಚ್ಛೇದಗೊಳಿಸಿದ ಹೊರತು ಅವರ ನಿಜವಾದ ಉದ್ಧಾರವು ಆಗುವುದಿಲ್ಲವೆಂದು ತಿಳಿದು ಸರ್ವಜನ ಸಾಮಾನ್ಯವಾಗಿರುವ ಸರ್ಕಾರಿ ಸ್ಕೂಲುಗಳಿಗೆ ಆ ಜನರ ಹುಡುಗರನ್ನು ಸೇರಿಸಬೇಕೆಂದು ಮಾಡಿದ ಹುಕುಮನ್ನು ಕಂಡು ಅದು ವರ್ಣಸಾಂಕರ್ಯಪ್ರಯತ್ನವೆಂದೂ ಬ್ರಹ್ಮದ್ವೇಷಮೂಲಕವೆಂದೂ ಕೂಗಾಡಿದರಷ್ಟೆ. ಆ ಜನರು ಈಗ ಈ ತಿರುಕುಲದ ಪಂಚಮರ ಮನೆಗೆ ತಮ್ಮವರೇ ನುಗ್ಗಿ ಅವರ ಹಿತಚಿಂತಕರಂತೆ ನಟಿಸಿ ಧನಾರ್ಜನೆ ಮಾಡಿಕೊಂಡು ಬಂದಿರುವ ಕೆಲಸವನ್ನು ವರ್ಣಸಾಂಕರ್ಯ ಪ್ರಯತ್ನವೆಂದು ಯಾಕೆ ನಿಷೇಧಿಸಲಿಲ್ಲ? ಪ್ರಜಾಪ್ರತಿನಿಧಿಸಭೆಗೇ ಒಬ್ಬ ಪಂಚಮ ಪ್ರತಿನಿಧಿಯು ಬಂದು ಕುಳಿತಿರುವಾಗ ಅವರ ಸಮಾನ ಪಙ್ಕ್ತಿಯಲ್ಲಿ ಕುಳಿತುಕೊಳ್ಳುವುದಿಲ್ಲವೆಂದು ಯಾವ ಬ್ರಾಹ್ಮಣ ಪ್ರತಿನಿಧಿಯೂ ಸಿಡಿದು ದೂರಹೋಗಲಿಲ್ಲವಲ್ಲಾ? ಅವರ್ಯಾರಿಗೂ ಯಾವ ಮಠಾಚಾರ್ಯರೂ ಬಹಿಷ್ಕಾರ ಹಾಕಿದ್ದಿಲ್ಲವಷ್ಟೆ? ಹೀಗೆಲ್ಲಾ ಉದಾಹರಣೆಯಿರುವಾಗ ಅವೆಲ್ಲಾ ವರ್ಣಸಾಂಕರ್ಯವೆನಿಸಿಕೊಳ್ಳದೆ ಸ್ಕೂಲುಗಳಿಗೆ ಪಂಚಮರ ಹುಡುಗರು ಬಂದರೆ ಮಾತ್ರ ವರ್ಣಸಾಂಕರ್ಯವೆಂದು ಕೂಗುವವರ ಮಾಯಾಜಾಲವು ವರ್ಣಾಶ್ರಮಧರ್ಮಗಳ ಉದ್ಧಾರಾರ್ಥವಾದದ್ದೋ? ಅಥವಾ ಸರ್ಕಾರದವರ ಮೇಲೆ ದೂರನ್ನು ಹೊರಿಸಿ ಗದ್ದಲಮಾಡಬೇಕೆಂಬ ದುರುದ್ದೇಶದ್ದೋ? ಎನ್ನುವದನ್ನು ವಾಚಕರೇ ಪರ್ಯಾಲೋಚಿಸಬೇಕು.

ಸತ್ಯಪ್ರಿಯ.

ಕುಲಪ್ರಮಾಣ ನಾಲಗೆ.

ಸ್ವಾಮಿ!

ಕಳೆದ ೧ನೆ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಮ|| ರಾಮಲಿಂಗರೆಡ್ಡಿಯವರು ಎಂಬ ಹೆಡ್ಡಿಂಗಿನಿಂದ ಮ|| ರಾಮಲಿಂಗರೆಡ್ಡಿಯವರಿಗೆ ನಡೆದ ಎಂಟರ್‌ಟೇನ್‌ಮೆಂಟನ್ನು ಕುರಿತು ಪ್ರಸ್ತಾಪಿಸಿ "ಬ್ರಾಹ್ಮಣೇತರರಾದ ಸಮಸ್ತ ಕೋಮಿನವರೂ ಡೆಪ್ಯುಟೇಷನ್ ಬಂದು ತಮಗೆ ಪುರಸ್ಕಾರಮಾಡಿದರೆಂದು ಇವರು ಹೇಳಿಕೊಂಡಿರುತ್ತಾರೆ. ಎಲ್ಲಾ ಪಂಗಡದವರೂ ಇವರಿಗೆ ಪುರಸ್ಕಾರಮಾಡಿರುವುದಿಲ್ಲ. ಇವರ ವರ್ಣಸಂಕರ ಪ್ರಯತ್ನವನ್ನು ನೋಡಿ ಶೇಕಡ ೯೯ ಜನ ಬ್ರಾಹ್ಮಣೇತರರೂ ಕೂಡ ಇವರ ವರ್ಣಸಂಕರ ಪ್ರಯತ್ನಕ್ಕೆ ಅಸಮಾಧಾನಪಟ್ಟಿರುವರು. ಹೀಗೆ ಅಸಮಾಧಾನಪಟ್ಟವರ್ಯಾರೂ ಇವರ ಸತ್ಕಾರಕ್ಕೆ ಹೋಗಿರಲಿಲ್ಲ. ಜಾತಿ ಕುಲ ಗೋತ್ರ ಮೊದಲಾದುವುಗಳನ್ನು ಬಿಟ್ಟವರು ಮಾತ್ರ ಇವರಿಗೆ ಪುರಸ್ಕಾರ ಮಾಡುವುದಕ್ಕೆ ಹೋಗಿರಬಹುದೆಂದು ತೋರುತ್ತದೆ" ಎಂದು ಬರೆಯಲ್ಪಟ್ಟಿರುತ್ತದೆ.

ಮ|| ರೆಡ್ಡಿಯವರು ಅಧಿಕಾರವನ್ನು ಪರಿತ್ಯಜಿಸಿದ ಮೇಲೂ ಕೂಡ ಅವರಿಗೆ ಸಂಸ್ಥಾನದಲ್ಲಿ ನಡೆದ ಅಸಾಧಾರಣ ಮರ್ಯಾದೆಗಳು ಅವರ ಪ್ರಜಾರಂಜಕತೆಯನ್ನು ವ್ಯಕ್ತಪಡಿಸಿರುವಾಗ, ಅದನ್ನು ನೋಡಿ ಕೇಳಿ ಸೈರಿಸಲಾರದವರು ಎಂಥ ತುಚ್ಛವಚನಗಳನ್ನಾಡುವುದಕ್ಕೂ ಹೇಸದೆ ಎಷ್ಟು ಜಘನ್ಯಸ್ಥಿತಿಗೆ ಬಂದು ತಮ್ಮ ಲಾಘವವನ್ನು ತಾವೇ ಹೇಗೆ ಹೊರಹಾಕಿಕೊಳ್ಳುತ್ತಿದ್ದಾರೆಂಬುದಕ್ಕೆ ಈ ಮಾತಿಗಿಂತಲೂ ಬೇರೆ ದೃಷ್ಟಾಂತಬೇಕೆ? ಮ|| ರೆಡ್ಡಿಯವರ ಎಂಟರ್‌ಟೇನ್‌ಮೆಂಟಿಗೆ ಸಂಸ್ಥಾನದ ದಿವಾನರು ಕೌನ್ಸಿಲರೇ ಮೊದಲಾದ ದೊಡ್ಡದೊಡ್ಡ ಅಧಿಕಾರಿಗಳೂ ದಿ|| ಬ|| ಪುಟ್ಟಣ್ಣಶೆಟ್ಟರು ಲೋಕಸೇವಾನಿರತ ಅಣ್ಣಯ್ಯಪಂಡಿತರು ರಾಜಕಾರ್ಯಪ್ರಸಕ್ತ ಬಿ. ರಾಮಕೃಷ್ಣರಾಯರು ಲೋಕಹಿತೈಷಿ ಎಚ್. ನಂಜುಂಡರಾಜೆಅರಸಿನವರೇ ಮೊದಲಾದಂಥ ಎಷ್ಟೋ ಗಣ್ಯಪ್ರಜೆಗಳು ಸೇರಿದ್ದರು. ಅವರನ್ನೆಲ್ಲಾ ಜಾತಿಕುಲ ಗೋತ್ರಗಳೊಂದೂ ಇಲ್ಲದವರೆಂದು ಬರೆದಿರುವವರ ಹಸ್ತಕ್ಕೆ ಯಾವ ಪ್ರಾಯಶ್ಚಿತ್ತವನ್ನು ಮಾಡಿದರೂ ತೀರಲಾರದು. ಮಹಾಜನರನ್ನು ಕುರಿತು ಇಂಥ ಹಲ್ಕಾ ಮಾತುಗಳನ್ನು ವೃತ್ತಪತ್ರಿಕೆಗಳಲ್ಲಿ ನಿರ್ಭಯವಾಗಿ ಆಡುತ್ತಿರುವುದಕ್ಕೆ ಅವಕಾಶವಿರುವುದು ದೇಶದ ಗೌರವಕ್ಕೇ ಕಳಂಕದಾಯಕವು. ಒಂದುಜಾತಿಗೆ ಹುಟ್ಟಿದ ಗೌರವಸ್ಥರ ಬಾಯಿಂದ ಇಂಥ ಮಾತು ಬರುವುದುಂಟೆ? ಕುಲಪ್ರಮಾಣ ನಾಲಗೆ.

ಯಥಾರ್ಥವಾದಿ.

ರೈಲ್ವೆ ಇಲಾಖೆಯಲ್ಲೂ ಬ್ರಾಹ್ಮಣೇತರರ ಪ್ರವೇಶಕ್ಕೆ ಅಡ್ಡಿ.

ಅಯ್ಯಾ,—ನಮ್ಮ ದಯಾಳುವಾದ ಸರಕಾರದವರು ಹಿಂದುಳಿದವರನ್ನು ಅಭಿವೃದ್ಧಿ ಮಾಡಬೇಕೆಂದಿರುತ್ತಾರೆ. ಮತ್ತು ಅದೇ ಮೇರೆಗೆ ಸರಕಾರಿ ಆರ್ಡರು ಸಹ ಮಾಡಿರುತ್ತಾರೆ. ಆದರೆ ಈ ರೂಲ್ಸು ಮೈಸೂರು ರೈಲ್ವೆಯ ಇಲಾಖೆಗೆ ಅನುವರ್ತಿಸಿಲ್ಲವೆಂದು ಕಾಣುತ್ತದೆ. ಯಾಕಂದರೆ ಮೈಸೂರು ಡಿಸ್ಟ್ರಿಕ್ಟ್ ಟ್ರಾಫಿಕ್ ಮ್ಯಾನೇಜರವರಾದ ಮ|| ರಾ|| ರಂಗಾಚಾರರು ಈ ರೂಲ್ಸು ಜಾರಿಗೆ ಬಂದನಂತರ ಮೈಸೂರು ಸ್ಟೇಷನ್ ಮಾಸ್ಟರು ಕೆಲಸಕ್ಕೆ ಬ್ರಾಹ್ಮಣರನ್ನೇ ಚುನಾಯಿಸಿದರು. ಮತ್ತು ಅವರ ಆಫೀಸು ಅಂದರೆ ಸ್ಟೇಷನ್ ಮಾಸ್ಟರ ಆಫೀಸು ರೈಟರು ಕೆಲಸಕ್ಕೆ ಸಹ ಬ್ರಾಹ್ಮಣರನ್ನೇ ಹೊಸದಾಗಿ ಇಟ್ಟಿರುತ್ತಾರೆ. ಅನೇಕ ಜನ ಬ್ರಾಹ್ಮಣೇತರರು ಅಪ್ಲಿಕೇಷನ್ ಕೊಟ್ಟರೂ ಅವರಿಗೆ ಕೆಲಸ ಖಾಲಿಯಿಲ್ಲವೆಂದು ಬರೆದು ತಮ್ಮ ಜಾತಿಯವರಿಗೇ ಕೆಲಸಕೊಟ್ಟಿರುತ್ತಾರೆ. ಆದುದರಿಂದ ಈ ರೂಲ್ಸು ರೈಲ್ವೆಯ ಇಲಾಖೆಗೆ ಅನುವರ್ತಿಸಿರುವುದಿಲ್ಲವೆಂದು ಕಾಣುತ್ತದೆ. ಆದರೆ ದಯಾಳುವಾದ ನಮ್ಮ ಸರಕಾರದವರು ಈ ರೂಲ್ಸನ್ನು ಅಲ್ಲಿಯೂ ಜಾರಿಗೆ ತರುತ್ತಾರೆಂದು ನಂಬಿರುತ್ತೇನೆ.

ಒಬ್ಬ ಬ್ರಾಹ್ಮಣೇತರ.

ನರಗುಂದ.

ನರಗುಂದ ಪಂಚಗೃಹಗುಡ್ಡದ ಹಿರೇಮಠದಲ್ಲಿ ತಾ|| ೫-೭-೨೧ ದಿವಸ ಶ್ರೀ ಚಿಕ್ಕಪಟ್ಟದದೇವರ ಅಧ್ಯಕ್ಷತೆಯಲ್ಲಿ ಸಭಾ ಕೂಡಿದ್ದು ರಾ|| ಸಿದ್ದಪ್ಪಯ್ಯನವರು ವಸ್ತ್ರದ ಸಾ|| ಸದರಯವರು ಧರ್ಮದ ವಿಷಯದಲ್ಲಿ ರಾ|| ಬಸಪ್ಪನವರು ಕಲವಡಿ ಶಾಲಾ ಹೆಡ್ಮಾಸ್ತರು ಇವರು ಷಟ್‌ಸ್ಥಲದ ಸಂಬಂಧವಾಗಿ ವ್ಯಾಖ್ಯಾನಗಳನ್ನು ಕೊಟ್ಟರು. ಈ ಸಭೆಗೆ ಸಾವಕಾರರೂ ರೈತರೂ ಕೂಡಿ ಒಟ್ಟು ೫೦೦ ಮಂದಿ ಕೂಡಿದ್ದು ವಿಜೃಂಭಣೆಯಿಂದ ಜರುಗಿತು.

ಕೈ|| ಚಂದಪ್ಪಗೌಡರು.

ಹೊಳಲಕೆರೆ ತಾಲ್ಲೂಕು ದೊಗ್ಗನಹಾಳು ಗ್ರಾಮದ ಪಟೇಲರಾದ ಮ|| ರಾ|| ಚಂದಪ್ಪಗೌಡರವರು ತಾ|| ೨-೭-೨೧ ನೆ ಶನಿವಾರ ರಾತ್ರಿ ಸುಮಾರು ೧೦ ಗಂಟೆಗೆ ಶಿವಸಾನ್ನಿಧ್ಯವನ್ನು ಹೊಂದಿದರೆಂಬ ಸಮಾಚಾರವನ್ನು ತಿಳಿಸಲು ತುಂಬಾ ವಿಷಾದವಾಗುತ್ತದೆ. ಈ ಮಹನೀಯರು ಭಾರಿ ಕುಟುಂಬಸ್ಥರೂ ವಿದ್ಯಾವಂತರೂ ವಿವೇಕಶಾಲಿಗಳೂ ಆಗಿದ್ದರು. ಹೊಳಲಕೆರೆ ತಾಲ್ಲೂಕಿನ ವೀರಶೈವ ಜನಾಂಗದವರಲ್ಲಿ ವಿದ್ಯಾಪ್ರಸರಣೆಯನ್ನು ಮುಂದಕ್ಕೆ ತಂದವರಲ್ಲಿ ಇವರೇ ಮೊದಲನೆಯವರು. ಹಾಲಿ ಇವರ ಮನೆತನದಲ್ಲಿ ಒಬ್ಬರು ಬಿ. ಎ. ಕ್ಲಾಸಿನಲ್ಲಿಯೂ ಇನ್ನೊಬ್ಬರು ಎಫ್., ಎ. ಕ್ಲಾಸಿನಲ್ಲಿಯೂ ವಿದ್ಯಾಭ್ಯಾಸಂಗಮಾಡುತ್ತಾ ಇದ್ದಾರೆ. ಇವರ ಮೃತಿಯಿಂದ ಈ ಕುಟುಂಬಕ್ಕೆ ಅಪಾರವಾದ ದುಃಖವೊದಗಿರುವದಲ್ಲದೆ, ಈ ತಾಲ್ಲೂಕಿನ ವೀರಶೈವ ಜನಾಂಗಕ್ಕೆ ತುಂಬಾ ವ್ಯಸನವುಂಟಾಗಿದೆ. ಭಗವಂತನು ಇವರ ಕುಟುಂಬಕ್ಕೆ ಉಂಟಾಗಿರತಕ್ಕ ವ್ಯಸನವನ್ನು ಹೋಗಲಾಡಿಸಿ ಇವರ ಆತ್ಮಕ್ಕೆ ಶಾಂತಿಯನ್ನು ಉಂಟುಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಹಿತಚಿಂತಕ.

ಶುಭಾಗಮನವು.

ತಾರೀಖು ೧-೭-೨೧ ನೆ ದಿವಸ ಕಾಶಿಯ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಸಂಸ್ಥಾನ ಜಂಗಮವಾಡೀ ಮಠಕ್ಕೆ ಶ್ರೀಮನ್ಮಹಾರಾಜಪ್ರಭು ನಾರಾಯಣಸಿಂಹ ಜಿ. ಸಿ. ಎಸ್. ಐ. ಕಾಶೀ ಮಹಾರಾಜರವರು ದಯಮಾಡಿಸಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದರ್ಶನವನ್ನೂ ಮತ್ತು ಸಿಂಹಾಸನಾರೂಢ ಜಗದ್ಗುರು ಶ್ರೀ ೧೦೮ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ದರ್ಶನಾಶೀರ್ವಾದವನ್ನೂ ಸಹ ಪಡೆದು ಅನಂತರ ರಾಜಾಧಿರಾಜರಿಂದ ಸಮರ್ಪಿಸಿರುವ ತಾಮ್ರಪತ್ರ ಶಿಲಾಪತ್ರ ಮೊದಲಾದ ಬಹು ಪ್ರಾಚೀನವಾದ ದಾನಶಾಸನಗಳನ್ನು ಸಮವಲೋಕಿಸಿ, ಜಗದ್ಗುರುಗಳ ಅಪ್ಪಣೆಯನ್ನು ಪಡೆದು ಶ್ರೀ ಜಗದ್ಗುರುಗಳಿಂದ ಈವಾಗ ನೂತನವಾಗಿ ಕಟ್ಟಿಸಲ್ಪಟ್ಟ ಶ್ರೀ ವಿಶ್ವಾರಾಧ್ಯ ನಾಟ್ಯಭವನಕ್ಕೆ ದಯಮಾಡಿಸಿ ಪೂನಾಪಟ್ಟಣದಿಂದ ಬಂದಿರುವ ಸುಪ್ರಸಿದ್ಧ ಕಿರ್ಲೋಸ್ಕರ ಸಂಗೀತ ನಾಟಕಮಂಡಲಿಯಿಂದ ಅಭಿನಯಿಸಲ್ಪಟ್ಟ ಪ್ರಹ್ಲಾದಚರಿತ್ರವನ್ನು ಪರಾಮರ್ಶಿಸಿ, ರಾಜಧಾನಿ ರಾಮನಗರಕ್ಕೆ ಚಿತ್ತೈಸಿದರು. ಅನಂತರ ದಿವಾನಬಹದ್ದೂರ್ ವಿಜಯಪ್ರಸಾದರು ಮತ್ತು ಪ್ರೈವೇಟ್ ಸೆಕ್ರೆಟರಿಗಳು ಮೊದಲಾದ ರಾಜಾಶ್ರಿತರು ಬಂದು ಶ್ರೀ ಜಗದ್ಗುರುಗಳ ದರ್ಶನಾಶೀರ್ವಾದವನ್ನು ಪಡೆದು ರಾಜಧಾನಿಗೆ ತೆರಳಿದರು.

ಪಂಡಿತ ಭಾಲಾಕ್ಷಶಾಸ್ತ್ರಿ, ಕಾಶೀಕ್ಷೇತ್ರ.

ಕೈ. ವಾ. ಶ್ರೀಮಂತ ಲಿಂಗಪ್ಪ ಜಾಯಪ್ಪ ಸರ್ ದೇಸಾಯರು ಸಿರಸಂಗಿ, ಸಂಸ್ಥಾನ ನವಲಗುಂದ ಇವರ ಸ್ಮಾರಕವು.

ಮೇಲ್ಕಂಡ ಮಹನೀಯರ ಸ್ಮಾರಕವನ್ನು ಮಾಡುವದರ ಸಲುವಾಗಿ ನಮ್ಮ ಬಂಧುಗಳು ಒಳಗಡೆ ಪ್ರಯತ್ನಪಟ್ಟಿರು. ಆದರೆ ಹಾಗೇ ಸ್ತಬ್ಧವಾಯಿತು. ಇಷ್ಟು ದಿವಸ ಮುಹೂರ್ತದ ಸಲುವಾಗಿ ಬಿಟ್ಟಿರಬಹುದು. ಇನ್ನಾದರೂ ನಮ್ಮ ಬಂಧುಗಳು ಇದರ ವಿಷಯವಾಗಿ ತೀವ್ರ ಎಚ್ಚರಪಟ್ಟು ಆ ಮಹಾನುಭಾವರ ಋಣದಿಂದ ಎಳ್ಳಷ್ಟಾದರೂ ಮುಕ್ತರಾಗಲಿಕ್ಕೆ ಪ್ರಯತ್ನಮಾಡುವದು ಅತ್ಯವಶ್ಯವದೆ. ೩೫ ಲಕ್ಷ ಜನರಿಗೆ ಇದೊಂದು ದೊಡ್ಡ ವಿಷಯವಲ್ಲ. ತಲೆಗೆ ೪ ಆಣೆಯಂತೆ ಕೊಟ್ಟರೆ ೮|| ಲಕ್ಷ ರೂಪಾಯಿಗಳು ಏಕ ಕಾಲದಲ್ಲಿ ಕೂಡಿಬರುತ್ತವೆ. ಆದರೆ ಪ್ರಯತ್ನಮಾಡತಕ್ಕವರೇ ಇಲ್ಲ. ಸಿದಾನ ೧೦-೧೫ ಸಾವಿರ ರೂಪಾಯಿಗಳು ಖರ್ಚುಮಾಡಿ ದೇಸಾಯರ ಮೂರ್ತಿಯನ್ನು ಧಾರವಾಡಬಾಂಧವರು ತರಿಸಿ ಧಾರವಾಡ ಟೌನ್ ಹಾಲಿನಲ್ಲಿ ಇಡಿ! ಕರ್ನಾಟಕದ ವತಿಯಿಂದಾಗಲೀ ಧಾರವಾಡ ಜಿಲ್ಲೆಯ ವತಿಯಿಂದಾಗಲಿ ಇಡತಕ್ಕದ್ದು. ಇದಕ್ಕಾಗಿ ರಾ|| ಬ|| ಮೆಣಸಿನಕಾಯಿ ಸಾಹೇಬರು ನೋಟೀಸು ತೆಗೆದರೆ ಅದಕ್ಕಾಗಿ ಹಣ ಕಳಿಸತಕ್ಕವರಾದರೂ ಕಳಿಸಬಹುದು, ಅದ್ದರಿಂದ ರಾ|| ಬ|| ರವರು ತೀವ್ರ ನೋಟಿಸ್ ತೆಗೆಯಬೇಕು. ಅಲ್ಲದೆ, ತರುಣ ಸಮ್ಮೇಲನದವರು ಕೆಲವು ಸ್ವಯಂಸೇವಕರನ್ನು ನೇಮಿಸಿ ಇದರ ಬಗ್ಗೆ ಹಣವನ್ನು ಕೂಡಿಸುವ ಮುದ್ದತ ಮಾಡಿಕೊಡಬೇಕು. ದೇಸಾಯರು ದೇಶಪಾಂಡೇರು ಹೇಳಿಸಿಕೊಳ್ಳದಲೇ ತಮ್ಮ ದೊಡ್ಡ ವರ್ಗಣಿಯನ್ನು ರಾ|| ಬ|| ಶಾಂತವೀರಪ್ಪನವರ ಕಡೆಗೆ ಕಳಿಸಬೇಕು.

ಓರ್ವ ವೀರಶೈವ ತರುಣ.

ತೆಂಗಿನಮರ.

ರಾಜವೃಕ್ಷರು ಅಥವಾ ಧ್ರುವವೃಕ್ಷರು ಅಂದರೆ ತೆಂಗಿನಮರವಲ್ಲದೆ ಬೇರೆ ಇಲ್ಲ, ಸಸಿಕಟ್ಟಿದ ಮೂರು ವರ್ಷಗಳ ಕಾಲ ಕಾಪಾಡಿದರೆ ಆ ಮೇಲೆ ಮೂರು ವರ್ಷಕ್ಕೆ ಫಸಲುಬಿಟ್ಟು ಎಂಥಾ ಗೊಟ್ಟಿನ ದುರ್ಭಿಕ್ಷವನ್ನಾದರೂ ಸಹಿಸಿಕೊಂಡು ಸದಾಕಾಲದಲ್ಲೂ ಫಲವನ್ನು ಕೊಡುತ್ತಾ ದಣಿಯನ್ನು ಕಾಪಾಡುತ್ತದೆ. ಈಗಿನ ಕಾಲದಲ್ಲಂತೂ ಸಮೃದ್ಧಿ ಮಳೆ ಬಂದು ಕೆರೆಗಳು ತುಂಬಿ ತರಿ ಬಾಗಾಯ್ತುಗಳ ಫಸಲು ಆಗದೆ ಬಾವಿಗಳಲ್ಲೂ ನೀರಿಲ್ಲದೆ ಅಡಿಕೆ ತೋಟಗಳು ಧಣಿಯ ಆಸ್ತಿಗಳನ್ನೆಲ್ಲಾ ಅಪಹರಿಸಿ ಸಾಲಗಾರರನ್ನು ಮಾಡಿ ಅಡಿಕೆ ಅಗ್ರಗಳೆಲ್ಲವೂ ನಾಶವಾದವು. ಆದುದರಿಂದ ಪುನಃ ಅಡಿಕೆ ಮರ ಮಾಡಿ ಲಾಗೋಡು ಇಟ್ಟು ನಷ್ಟಕ್ಕೆ ಈಡಾಗದೆ ಜಮೀನ್ದಾರರು ಸಾಧ್ಯವಾದಮಟ್ಟಿಗೂ ತೆಂಗಿನ ತೋಟದ ಆಸ್ತಿಯನ್ನು ಮಾಡುವದು ಶ್ರೇಷ್ಠವೆಂದು ಯೋಚಿಸಿ, ಒಳ್ಳೇ ಬೀಜದ ಗೋಟನ್ನು ತರಿಸಿ ನಾಟಿಸಿ ಸಸಿಗಳನ್ನು ಮಾಡಿರುತ್ತೇವೆ. ೪-೫ ಅಡಿಯ ಬಾರುದೆಸಸಿಗಳು ೬ ಮತ್ತು ೮ ಅಡಿಯ ತೆಂಡೆಸಸಿಗಳು ಸಹ ಇರುತ್ತವೆ. ಈಗ ಸಸಿಗಳನ್ನು ಕಟ್ಟುವುದಕ್ಕೆ ಒಳ್ಳೇ ಹದನಾದ ಕಾಲವಾಗಿರುವದರಿಂದ ಇಷ್ಟವುಳ್ಳವರು ಮೊದಲು ಬಂದು ನೋಡಿ ತೆಗೆದುಕೊಂಡು ಹೋಗಬಹುದು. ಅಥವಾ ಹೆಚ್ಚು ಸಂಗತಿಯನ್ನು ತಿಳಿಯಬೇಕಾದರೆ ಈ ಕೆಳಗಿನ ವಿಳಾಸದಾರರಿಗೆ ಬರೆದು ಜವಾಬು ತರಿಸಿಕೊಳ್ಳಬಹುದು.

ಯಜಮಾನರ ಮುದ್ದೀರಪ್ಪ, ಹೊನ್ನುಡಿಕೆ,
ತಾಲ್ಲೂಕು ತುಮಕೂರು.

ಹೊಸ ಪುಸ್ತಕ ! ಕ್ರಯ ೬ ಆಣೆ.

ವೀರಶೈವ ಸಮಾಜಸುಧಾರಣೆ.

ಲೇಖಕ ಎಂ. ಮಂಜಪ್ಪ ಹರ್ಡೇಕರ್.

ಈ ಪುಸ್ತಕದಲ್ಲಿ ವೀರಶೈವ ಸಮಾಜದ ಪೂರ್ವಸ್ಥಿತಿಯನ್ನೂ, ಧಾರ್ಮಿಕ, ಸಾಮಾಜಿಕ, ಮತ್ತು ವಿದ್ಯಾವಿಷಯಗಳಲ್ಲಿ ಈವರೆಗಾದ ಜಾಗ್ರತೆಯನ್ನೂ, ಗುರುವರ್ಗದಲ್ಲಿಯೂ ಮತ್ತು ಭಕ್ತವರ್ಗದಲ್ಲಿಯೂ ಈಗ ಉಂಟಾಗಿರುವ ಕಲಹಕ್ಕೆ ಕಾರಣಗಳಾದ ಸಂಗತಿಗಳ ಯುಕ್ತಾಯುಕ್ತತೆಗಳನ್ನೂ, ನಮ್ಮ ಸಮಾಜದ ಮುಂದಾಳುಗಳ ಕರ್ತವ್ಯವನ್ನೂ ಮತ್ತು ಬ್ರಾಹ್ಮಣೇತರರ ಸಂಗಡದಲ್ಲಿ ನಮ್ಮ ಸಮಾಜವು ಸೇರುವುದರಿಂದ ಇದಕ್ಕಾಗತಕ್ಕ ಅನರ್ಥವನ್ನೂ ಧಾರ್ಮಿಕ, ಸಾಂಪತ್ತಿಕಾದಿ ಸಕಲ ವಿಷಯಗಳಲ್ಲಿಯೂ ವೀರಶೈವ ಸಮಾಜಬಾಂಧವರು ಅತ್ಯಂತ ಮಹತ್ತರವಾದ ಈ ಕಾಲದಲ್ಲಿ ಮಾಡಬೇಕಾಗಿರುವ ಕರ್ತವ್ಯಗಳನ್ನೂ ಕುರಿತು ಸ್ಪಷ್ಟವಾಗಿಯೂ, ವಿಸ್ತಾರವಾಗಿಯೂ ವಿವರಿಸಿದೆ.

ಇದರಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳು ನಮ್ಮ ಸಮಾಜದ ಅನೇಕ ಸುಪ್ರಸಿದ್ಧ ಮುಂದಾಳುಗಳ ಅಭಿಪ್ರಾಯಗಳಿಂದ ದೃಢೀಕರಿಸಲ್ಪಟ್ಟಿವೆ.

ವಿಳಾಸ—ಎಸ್. ಕೆ. ಸೋಮನಾಥಯ್ಯ,
ಬುಕ್‌ಸೆಲರ್ ದಾವಣಗೆರೆ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾದಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

45 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮಹಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಂ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

18 ತೊಲ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

45 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಭಕ್ತತೋಷಕ ! ಮನೋಲ್ಲಾಸಿತನೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 43

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ಆವಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಉಷ್ಣರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯನಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಸೊಲೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಉರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರಿಬ್ಬರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರೆಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫರೋಗಸಂಜೀವಿನಿ ೧ ಡಜನ್ ಮಾತ್ರೆಗಳು: ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೋಕೆಮ್ಮು ಇವುಗಳನ್ನು ತತ್ಕ್ಷಣದಲ್ಲಿಯೇ ಅಂದರೆ ೪ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಕರಿಬಸವಾರ್ಯ, ಬಳ್ಳಾರಿ.

೧೯೨೧ ನೆಯ ಇಸವಿ ಆಗಸ್ಟ್ ತಾ|| ೭ ರಿಂದ ೧೯೨೧ ನೆಯ ಆಗಸ್ಟ್ ತಾ|| ೧೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮಸಂವತ್ಸರದ ಶ್ರಾವಣ ಶುದ್ಧ ಚೌತಿಯಿಂದ ಶ್ರಾವಣ ಶುದ್ಧ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿಧುಮಾಸ
7	[1] ಭಾನು	ಚೌತಿ	26-38	ಉತ್ತ	29-46	23
8	[2] ಸೋಮ	ಪಂಚ	1-58	ಹಸ್ತ	27-5	24
9	[3] ಮಂಗಳ	ಷಷ್ಠಿ	18-12	ಚಿತ್ತ	25-13	25
10	ಬುಧ	ಸಪ್ತ	15-22	ಸ್ವಾತಿ	24-27	26
11	ಗುರು	ಅಷ್ಟ	13-38	ವಿಶಾ	24-44	27
12	[4] ಶುಕ್ರ	ನವ	13-14	ಅನೂ	26-15	28
13	[5] ಶನಿ	ದಶ	14-0	ಜ್ಯೇಷ್ಠ	28-20	29

(1) ನಾಗರಚೌತಿ. (2) ನಾಗರಪಂಚಮಿ. (3) ಮಂಗಳಗೌರೀವ್ರತಂ. (4) ವರಮಹಾಲಕ್ಷ್ಮೀವ್ರತಂ, ಅಡಿಶುಕ್ರವಾರಂ. (5) ಶ್ರಾವಣಶನಿವಾರಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಯಾಪ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ವಜ್ರದ ಬೆಂಡೋಲೆ.

ಈ ಬೆಂಡೋಲೆಗಳನ್ನು ರೋಲ್ಡ್ ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನು ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣವು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3-0-0 ಕೆಂಪುಕಲ್ಲಿನವು ಜೊತೆ 4-0-0

ಸೇವಿಂಗ್ಸ್ ಬಾಕ್ಸ್ ಎನ್ನುವ ಹುಂಡಿ ಪೆಟ್ಟಿಗೆ.

ಈ ಪೆಟ್ಟಿಗೆಯ ಆಶ್ಚರ್ಯವೇನಂದರೆ ಇದನ್ನು 40 ಪಾವಲಿಗಳು ಹಿಡಿಯುವಂತೆ ತಯಾರಿಸಿದೆ ಕೈಯಲ್ಲಿರುವಾಗ ಸೇವಿಂಗ್ಸು ಬ್ಯಾಂಕಿನಲ್ಲಿ ಹಣ ಸೇರಿಸುವಂತೆ, ಇದರಲ್ಲಿ ಒಂದೊಂದಾಗಿ ಹಾಕಿ ಹಣವನ್ನು ಸೇರಿಸಬಹುದು. ಯಾವಾಗ 40 ಪಾವಲಿಗಳು ಸೇರುವದೋ ಆಗ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರದುಕೊಳ್ಳುವದು. ಇದಕ್ಕೆ ಮುಂಚಿತವಾಗಿ ತೆರೆಯುವದಿಲ್ಲ. ಹಾಗೆ ಬೇಕಾದರೆ ಪೆಟ್ಟಿಗೆಯನ್ನು ಹೊಡೆದುಬಿಡಬೇಕು. ಹಣ ಸೇರಿಸಲು ಇದು ಬಹು ಉತ್ತಮವಾದ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ಮಾಡಿದೆ. ಕ್ರಯ 1 ಕ್ಕೆ ರೂ. 2-0-0

MAGIC
SAVINGBANK

ಕೂದಲು ಕತ್ತರಿಸುವ ಕತ್ತರಿ.

ಈ ಕತ್ತರಿಯು ವಿಲಾಯತಿಯಲ್ಲಿ ತಯಾರಾದದ್ದು. ಇದರಿಂದ ಕೂದಲನ್ನು ಕತ್ತರಿಸುವದರಿಂದ, ಕತ್ತರಿಯಲ್ಲಿ ಕತ್ತರಿಸಿದಂತೆ ಅಸಹ್ಯವಾಗಿ ಕಾಣದೆ ಬಹು ಲಕ್ಷಣವಾಗಿ ಕಾಣುವುದು. ಬೇರೆಯವರು ವಿಲಾಯತಿಯದೆಂದು ಹೇಳಿ, ಕೆಲಸಕ್ಕೆಬಾರದ ಜಪಾನು ಕತ್ತರಿಯನ್ನು ಕಳುಹಿಸುವರು ನಾವು ಹಾಗೆ ಮಾಡಲಾರೆವು. ವಿಲಾಯತಿಯಲ್ಲಿ ತಯಾರಾದದ್ದನ್ನೇ ಕಳುಹಿಸುವೆವು.

ಕ್ರಯ 1 ಕ್ಕೆ ರೂ, 4-8-0

ಕ್ಷೌರಕತ್ತಿ.

ಈ ಕತ್ತಿಗಳು ವಿಲಾಯಿತಿಯಲ್ಲಿ ತಯಾರಾದದ್ದು ಇದು ಇಟ್ಟುಕೊಂಡು ಕ್ಷವರೀಕನ ಕೈಯಲ್ಲಿಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಶರೀರ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವದು.

ಕ್ರಯ 1 ಕ್ಕೆ 2-8-0

ರಾಜಸ್ ಚಾಕುಗಳು.

ಈ ಕತ್ತಿಗಳು ಬಹುಮೇಲಾದದ್ದು ಎಂಥಾಕೆಲಸಗಳಿಗೂ ಉಪಯೋಗಿಸಬಹುದು.

ರಡು ಅಲಗಿನ ಚಾಕು. 1-8-0 ಒಂದುಅಲಗಿನ ಚಾಕು. 1-4-0

ಬುಗಡಿ ಅಂಚಿನ ಸೇರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದರೇಶ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು. ಶ್ರೀಮಂತರಿಗು, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ ಯ ನಂ. 1 6-8-0 ಕ್ರಯ ನಂ. 2 7-8-0

ಇಂಗ್ಲೀಷು ಕೂದಲರಂಗು.

ನೆರೆಕೂದಲುಗಳಿಗೆ ಚಂದುಸಲ ಹಚ್ಚಿದರೆ 20 ವರುಷದಪ್ರಾಯ ಸಮರ್ಥರಂತೆ ಕಾಣುವಿರಿ. ಈ ರಂಗನ್ನು ಹಚ್ಚಿಕೊಂಡರೆ ಕೂದಲು ಅಚ್ಚಕಪ್ಪಾಗಿ ರೇಷ್ಮೆಯಹಾಗೆ ಕಂಗೊಳಿಸುವವು. ಈಗಮಾರಾಟಕ್ಕೆ ಬಂದಿರುವ ಕೂದಲು ರಂಗುಗಳು ತುಂಬಾ ಕೀಳು ಜಾತಿಯವು ಹಚ್ಚಿದಕೂಡಲೆ ಕೂದಲು ಕೆಂಚಾಗಿ ಹಸಿಯವಾಗಿ ಕಾಣುತ್ತೆ. ನಮ್ಮ ಕೂದಲು ರಂಗು ಅಂಥಾದ್ದಲ್ಲ ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷಿಸಿದರೆ ನೀವೇ ಸಂತೋಷಪಡುವಿರಿ.

ಕ್ರಯ ಬಾಟ್ಲ 1ಕ್ಕೆ ಬುರುಸು ಸಮೇತ 1.4.0

ಜ್ವರದ ಮಾತ್ರೆ.

ಪ್ರತಿದಿನವೂ ಬರುವಜ್ವರ, ದಿನಬಿಟ್ಟು ಬರುವಜ್ವರ, ನಾಲ್ಕರಜ್ವರ, ಚಳಿಜ್ವರ, ಮಲೇರಿಯಾಜ್ವರ, ಸನ್ನಿಪಾತಜ್ವರ, ಹೊಟ್ಟೆಯಲ್ಲಿ ಜ್ವರ ಮತ್ತು ಜಿರ್ಣಜ್ವರಗಳಿಗೆ ಇರುವದು. ಮುಂತಾದ ಎಲ್ಲಾತರಹ ವಿಷಮಜ್ವರಗಳನ್ನು ಗುಣಮಾಡುತದೆ. ಕ್ರ 1-4-0

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘ ಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದ ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು.

15 ತೊಲೆಯ ಡಬ್ಬಿ 1ಕ್ಕೆ 2-0-0

ಸಾವಂತಿ ಹುವ್ವಿನ ಜಡೆಬಿಲ್ಲೆ.

ಈ ಜಡೆಬಿಲ್ಲೆಗಳು ಬಹು ಹಸನಾದದ್ದು. ಎಂದಿಗೂ ಕಪ್ಪಾಗದು. ಇದರ ಮೇಲ್ಭಾಗವು ಅಚ್ಚ ಸವರನ್ನಿಂದಲೂ, ಕೆಳಭಾಗವು ಚೊಕ್ಕ ಬೆಳ್ಳಿಯಿಂದಲೂ ತಯಾರಿಸಿದೆ. ಕೂದಲಿಗೆ ತಗಲಿಸಲಿಕ್ಕೆ ತಿರುಪು ಇರುವದು.

ಕ್ರಯ 1-ಕ್ಕೆ ರೂ. 1—4—0

ವಜ್ರದ ಉಂಗರಗಳು.

ಈ ಉಂಗರಗಳನ್ನು ಸೀಮೆ ಭಂಗಾರದಿಂದ ಮಾಡಿದೆ.

ಇದರ ಮೇಲುಗಡೆ ಕೆಂಪು, ಹಸರು, ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳನ್ನಿಟ್ಟು ಕಟ್ಟಡ ಕಟ್ಟಿರುವದು. ನೋಡಿದವರು ನಿಜವಾದ ವಜ್ರದ ಉಂಗರವೆಂದೇ ಹೇಳುವರು ಬಣ್ಣಕ್ಕೆ ಗ್ಯಾರಂಟಿ 2 ವರುಷಕೊಡುವೆವು. ರೂ. 1—8—0

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವು.

ಇದು ಪುಷ್ಪಗಳ ಸಾರದಿಂದ ತಯಾರಿಸಿದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಒಂದುವಾರದ ವರಿವಿಗೂ ಒಂದೇ ರೀತಿಯಾಗಿ ಘಮಘಮಿಸುತ್ತಿರುವದು. ದೊಡ್ಡ ದೊಡ್ಡ ಕಂಪನಿಯವರ ಸುಗಂಧ ದ್ರವ್ಯಗಳೊಡನೆ ಇದನ್ನು ಪರೀಕ್ಷಿಸಿರಿ. ಕ್ರಯ ಬಾಟಲ್ 1-ಕ್ಕೆ ರೂ. 1-4-0

ಬೊಂಬಾಯಿ ಮುತ್ತುಗಳು.

ಬುಗುಡಿ, ಮುರಾವು ಮುಂತಾದ ಭಂಗಾರದ ಒಡವೆಗಳಿಗೆ ಬೇಕಾಗುವ ಸಣ್ಣ ಮುತ್ತುಗಳೂ, ಹಾರ ಮುಂತಾದವುಗಳಿಗೆ ಬೇಕಾಗುವ ದೊಡ್ಡ ಮುತ್ತುಗಳೂ ತಯಾರಾಗಿರುವವು. ಇವು ಸಾಚಾ ಥಳ್ಳಿ ಮುತ್ತುಗಳು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಅಕ್ಕಸಾಲಿಗರಿಗೂ, ವ್ಯಾಪಾರಸ್ಥರಿಗೂ ಬಹುಬಳಕೆಯವು. 100 ಮುತ್ತುಗಳಿಗಿಂತಲೂ ಕಡಿಮೆಯಾಗಿ ಕೊಡುವದಿಲ್ಲ.

ಒಡವೆಗಳಿಗೆ ಬೇಕಾಗುವ ಸಣ್ಣ ಮುತ್ತುಗಳು
100 ಕ್ಕೆ ರೂ. 1—8—0
ಹಾರಗಳಿಗೆ ಬೇಕಾಗುವ ದೊಡ್ಡ ಮುತ್ತುಗಳು
100 ಕ್ಕೆ ರೂ. 2—4—0

ಗಂಡಸರದು 1-4-0 ಹೆಂಗಸರದು 3-4-0

ಕೆಮ್ಮು ಔಷಧ.

ಒಬ್ಬ ಋಷಿಯಿಂದ ಕೊಡಲ್ಪಟ್ಟ ಈ ಸಿದ್ಧೌಷಧವನ್ನು ಉಪಯೋಗಿಸಿದರೆ ಕೆಮ್ಮು, ಉಷ್ಣಕೆಮ್ಮು, ಶೀತಕೆಮ್ಮು, ನಾಯಿಕೆಮ್ಮು, ಕಫಕಟ್ಟುವದು, ಉಬ್ಬಸ ಬರುವದು. ಮುತಾದವುಗಳು ಕೂಡಲೆ ವಾಸಿಯಾಗುವವು.

ಕ್ರಯ 1-4-0

ಜಗನ್ನಾಥ ಅಂಜನ.

ತಲೆಯ ನೋವಿಗೆ, ಅರ ತಲೆನೋವಿಗೆ, ಕೈ, ಕಾಲು, ಹಿಡಿತ ಮೊದಲಾದವುಗಳಿಗೆ ಅತ್ಯುತ್ತಮವಾದದ್ದು. ಕೆಮ್ಮು ನೆಗಡಿ ಉಬ್ಬಸ, ಉಳುಕು, ಮುಂತಾದವುಗಳಿಗೆ ದಿವ್ಯೌಷಧ. ಈ ಅಂಜನವನ್ನು ತಲೆಗೆ ಸವರಿದಕೂಡಲೆ ನೋವೆಲ್ಲವನ್ನು ತೆಗದು ಬಿಡುವದು. ಈ ಒಂದು ಔಷಧವು ಮನೆಯಲ್ಲಿದ್ದರೆ ಒಬ್ಬ ವೈದ್ಯನು ಇದ್ದಂತೆಯೇ ಇರುವದು. ಕ್ರಯ 0-6-0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾದಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1-4-0

ಮೂರ್ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರ ಮಾಡಿಸಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು.

ನಮ್ಮ ಮೂರ್ಲೈಟ್ ಸೋಪ್. ಗಂಧೆ, ಮೊಡೆಮೆ, ಖಜ್ಜಿ, ತುರಿ. ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳನ್ನು ಪೆಟ್ಟಿಗೆ 1 ಕ್ಕೆ ರೂ. 1-4-0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2-4-0

ಇಂದ್ರಿಯ ಸ್ತಂಭನ ಗುಳಿಗೆ.

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದುಗಂಟೆ ಮುಂಚಿತವಾಗಿ ಹಾಲು ಅಥವ ನೀರಿನಲ್ಲಿ ತೆಗದುಕೊಳ್ಳಬೇಕು. ನಂತರ ಧಾತುವೃದ್ಧಿಯಾಗಿ ಗಟ್ಟಿಯಾಗುವದು. ಔಷಧವನ್ನು ತಿಂದು ಒಂದುಗಂಟೆ ಕಾಲತಡೆದು ಹೆಂಗಸಿನಲ್ಲಿ ಮಲಗಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಕೊಡುವದು. ತರಿಸಿ ಪರೀಕ್ಷಿಸಿರಿ.

ಕ್ರಯ 16 ಮಾತ್ರೆಯಡಬ್ಬಿ 1 ಕ್ಕೆ 1-4-0

ಲೈಸ್ ಕಿಲ್ಲರ್.

ಈ ಔಷಧವನ್ನು ಒಂದೇ ಒಂದುಸಾರಿ ತಲೆಯ ಕೂದಲುದಳಿಗೆ ಹಾಕುವುದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿ ಹೋಗಿ ಮುಂದೆ ಎಂದಿಗೂ ಹೇನುಗಳ ಸುಳಿಯೇ ಇಲ್ಲದಂತಾಗುವುದು. ಮತ್ತು ತಲೆಯಲ್ಲಿ ಹುಟ್ಟುವ ಕೆಟ್ಟಹುಣ್ಣುಗಳಿಗೆ 3 ದಿನಗಳು ಹಾಕುವುದರಿಂದ ಖಂಡಿತವಾಗಿಯೂ ಗುಣವಾಗುವವು. ಈ ಔಷಧದಿಂದ ಆಗುವ ಗುಣವು ಇಷ್ಟೇ ಅಲ್ಲ ಮುಖ, ಮೈ, ಕೈ, ಕಾಲುವುಗಳಲ್ಲಿ ಹುಟ್ಟುವ ನವೆ, ಖಜ್ಜಿ, ತುರಿ, ಗಂಧೆ, ಮುಂತಾದವುಗಳಿಗೆ ಸೋಪು, ಸೀಗೆಕಾಯಿ ಮುಂತಾದವುಗಳ ಬದಲಾಗಿ ಇದನ್ನು ಉಪಯೋಗಿಸಿದರೆ ರಾಂಬಾಣದಂತೆ ಗುಣಮಾಡುವದು.

ಕ್ರಯ ಡಬ್ಬಿ 1ಕ್ಕೆ 1-0-0
1 ಡಬ್ಬಿಯಿಂದ 6 ಡಬ್ಬಿಗಳಿಗೆ ಟ. ಖ. ಖರ್ಚು 0-6-0

ಸಾಚಾ ಮುತ್ತಗಳಿಂದ ತಯಾರಿಸಿದ ಸುರ್ಮ.

ಈ ಸುರ್ಮವನ್ನು ಕಣ್ಣುಗಳಿಗೆ ಹಾಕುವದರಿಂದ, ಕೆಂಗಣ್ಣು ಉರಿಗಣ್ಣು, ದೃಷ್ಟಿಮಂದ್ಯ, ಕಣ್ಣುನೋವುಮುಂತಾದಕಣ್ಣಿನ ಎಲ್ಲಾವ್ಯಾಧಿಗಳನ್ನು ತಪ್ಪದೆಗುಣಮಾಡುವದು. ಈ ಸುರ್ಮವನ್ನು ಸಾಚಾಮುತ್ತುಗಳಿಂದ ತಯಾರಿಸಿದ್ದು. ಇದರಲ್ಲಿ ಯಾವದೋಷವು ಇರುವದಿಲ್ಲ. ಕ್ರಯ

ಶೀಸೆ 1 ಕ್ಕೆ 1-8-0

ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂಜಳುಕೂ ಮಾಯವಾಗುವವು.

ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ರೂ. 5.

ಕಂಬಳಿ ಟೋಪಿ.

ಈ ಟೋಪಿಗಳನ್ನು ಹಸನು ಉಲನ್ನು ದಾರದಿಂದ ಹೆಣದಿದೆ. ಇವು ಹಿಮ, ಮಳೆಗಳಲ್ಲಿ ಉಪಯೋಗಿಸುವುದರಿಂದ ಶರೀರಕ್ಕೆ ಶಾಖವನ್ನು ಉಂಟುಮಾಡಿ ಸೀತ, ಜನ್ನಿ ಮುಂತಾದ ವ್ಯಾಧಿಗಳು ಬರುವುದಿಲ್ಲ. ಈ ಟೋಪಿಗಳನ್ನು ಸಾಧಾರಣ ಟೋಪಿಗಳ ಹಾಗೆಯೂ, ಕಿವಿಯವರೆವಿಗೂ, ಕತ್ತಿನವರೆವಿಗೂ ಯಾವ ರೀತಿಯಲ್ಲಾದರೂ ಉಪಯೋಗಿಸಬಹುದು. ಇದಕ್ಕೆ ತಲೆಯ ಅಳತೆ ಬೇಕಿಲ್ಲ. ಪ್ರತಿಯೊಬ್ಬರ ತಲೆಗೂ ಸರಿಯಾಗಿರುತ್ತೆ, ಇದು ಪ್ರತಿ ಕುಟುಂಬದಲ್ಲಿ ಒಂದು ಇದ್ದರೆ ಎಲ್ಲರಿಗೂ ಆಗುವುದು.

ಕ್ರಯ 1 ಕ್ಕೆ 1-8-0

ANANDA PRESS MADRAS.

ssue.

20-0-0

S. R. KRISHNA & Co.,

102, China Bazaar Road, Madras.

ಎಸ್. ಆರ್. ಕೃಷ್ಣ ಅಂಡ್ ಕೋ

೩

102, ಚೈನಾಬಜಾರ್ ರೋಡ್, ಮದರಾಸು.

25-0-0

ಈ ಕೇಟಲಾಗಿನಲ್ಲಿರುವ, ಗಡಿಯಾಗಳೂ, ಸ್ಟೇಷನರಿಗಳು, ಭಂಗಾರದಗಿಲೀಟಿನ ಒಡವೆಗಳು ಬೇಕಾದರೆ, ತಾವಾಗಿಯೇ ಖುದ್ದಾಗಿ ಕೊಳ್ಳುವದಕ್ಕಿಂತಲು ಹೆಚ್ಚು ನಂಬಿಕೆಯಿಂದ ಕಳುಹಿಸುವೆವು. ಬೇಕಾದವರು ಹಣವನ್ನು ಮುಂಗಡವಾಗಿ ಕಳುಹಿಸಿ ಅಥವ ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಮತ್ತುತಮ್ಮ ವಿಳಾಸವನ್ನು ಚೆನ್ನಾಗಿ ತಿಳಿಯುವಂತೆ ವಿವರವಾಗಿ ಬರೆಯಿರಿ.

8 ದಿನಕ್ಕೆ ಒಂದುಸಲ ಬೀಗಕೊಡುವ ಪಾಕೆಟುವಾಚು.



ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಒಂದಾವರ್ತಿ ಬೀಗಕೊಟ್ಟರೆ 8 ದಿನಗಳು ನಡೆಯುವವು. ಮುಂದಲ ಕನ್ನಡಿ ದಪ್ಪನಾಗಿರುವದು. ಮೇಲುಗಡೆ ಬೀಗವಿರುವದು. ನೋಡಲು ಚೆನ್ನಾಗಿರುವಂತೆ ನಕಾಸಿ ಕೆಲಸಮಾಡಿರುವದು. ಬಹಳ ಕಾಲಬಾಳಿಕೆ ಬರುವದು.

ಕ್ರಯ ಕ್ಕೆ 10-0-0
ಬೆಳ್ಳಿಯ ವಾಚ್ ,, 13-0-0

ಬೆಳ್ಳಿಯ ಹಂಟಿಂಗು ಗಡಿಯಾರ.



ಈ ಗಡಿಯಾರವು ಬೆಳ್ಳಿಯಿಂದ ತಯಾರಿಸಿದೆ. ಇದು ನೋಡಲಿಕ್ಕೆ ರಮಣೀಯವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ ಅಮೇರಿಕಾ ದೇಶದಲ್ಲಿ ಒಳ್ಳೆ ಲೀವರ್ ಕೆಲಸದಲ್ಲಿ ಮಾಡಿದೆ. ಇದರ ಹಿಂಭಾಗದಲ್ಲಿ ಚಿತ್ರ ಕೆಲಸಮಾಡಿದೆ ಬೆಳ್ಳಿಯ ಮುಚ್ಚಳವಿರುವುದು. ಒಳಗಡೆ ದೂಳುಗಾಳಿ ಇವುಗಳು ಸೇರದಂತೆ ಗ್ಲಾಸ್‌ಡೂಮ್ ಎಂಬ ಮುಚ್ಚಳವಿರುವುದು ಇವುಗಳಲ್ಲಿ ಕೆಲವಕ್ಕೆ ಬೀಗವು ಒಳಭಾಗದಲ್ಲಿಯೂ ಕೆಲವಕ್ಕೆ ತಲೆಯಲ್ಲಿಯೂ ಇರುವವು. ಕ್ರಯ 1ಕ್ಕೆ ರೂ. 8-0-0
ಬೆಳ್ಳಿಯದು ,, ,, ,, 12-0-0

ಹೊಸನಮೂನೆಯ ಲೀವರು ವಾಚ್.



ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು, ಲೀವರ್‌ಮೂವ್ಮೆಂಟ್ಸುಗಳಿಂದ ಮಾಡಿದೆ, ಘೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆಸಾಕು. ಜೇಬಿಗೂ ಕೈಗೆ ಕಟ್ಟಿಕೊಳ್ಳಲೂ ಅನುಕೂಲವಾದದ್ದು. ಕ್ರಯ ಗಡಿಯಾರ 1ಕ್ಕೆ ರೂ 5-8-0

ಜನ್‌ಟಲ್‌ಮೆನ್ ಪಾಕೆಟು ವಾಚ್.



ಈ ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಒಳ್ಳೆ ಗಟ್ಟಿಸಾಮಾನುಗಳಿಂದ ತಯಾರಿಸಿದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟಿವೆ, ಗಾಳಿ, ದೂಳುಸೇರದಂತೆ ಒಳಗಡೆ ಗ್ಲಾಸ್‌ಡೂಮು ಇರುವದು. ಇದರಲ್ಲಿ ಯಾರೇ ಆಗಲಿ ಗಂಟೆಯನ್ನು ಬೇಗನೆ ಗುರುತುಹಿಡಿಯಬಹುದು. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸರಪಣಿ, ಒಂದು ಪೆಟ್ಟಿಗೆ, ಒಂದು ಗಡಿಯಾರದ ಗ್ಲಾಸು ಇನಾಮಾಗಿ ಕೊಡುವೆವು.

ಕ್ರಯ ಗಡಿಯಾರ. 1ಕ್ಕೆ ರೂ. 4-8-0

ಕೈಲ್ವಿ ಲೀವರ್ ವಾಚ್.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲಟ್ಟು ರಿಜಿಸ್ಟರು ಆಗಿದೆ. ಇದು ನೋಡಲಿಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ. ಗ್ಲಾಸು ಡೋಮು ಇರುವುದು ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದು ತರಿಸಿ ನೋಡಿರಿ! ಕ್ರಯ 1ಕ್ಕೆ 4-8-0

ಜರ್ಮನ್ ಬೆಳ್ಳಿಯ ರಿಸ್ ವಾಚ್.



ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದತಯಾರಿಸಿ ಈಗಲೇ ಬಂದಿರುವುವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯ ಬಹುದು, ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಬಿರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ.

ಗಡಿಯಾರ 1 ಕ್ಕೆ ರೂ. 5-0-0

ಬೆಳ್ಳಿಯ ರೇಡಿಯಂ ರಿಸ್‌ಲೆಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆ ಗಂಟೆನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕುಬೇಕಾಗಿಲ್ಲ. ಎಷ್ಟುಕತ್ತಲಾಗಿರುತ್ತೊ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೇರಿಕಾ ದೇಶದ ಗಡಿಯಾರಗಳು. ಜರ್ಮನ್ ಬೆಳ್ಳಿಯ ಕೇಸಿನಿಂದಲೂ, ದೃಢವಾದಸಾಮಾನುಗಳಿಂದಲೂ ತಯಾರಿಸಿದೆ. ಬಹು ದಿನ ಬಾಳಿಕೆಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆಗಂಟೆಯನ್ನು ಗುರುತು ಹಿಡಿಯಬಹುದು.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿ. 1ಕ್ಕೆ 6-8-0

ಲೇಡೀಸು ಹ್ಯಾಂಡು ವಾಚು.



ಇದು ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಉಪಯೋಗವಾದದ್ದು. ಸ್ತ್ರೀ ಪುರುಷರುಗಳೂ, ಬಾಲಕರೂ ಮತ್ತು ಕುದುರೆ, ಬೈಸಿಕಲ್, ಮೋಟಾರ್,ಮುಂತಾದ ವೇಗವಾದ ಸವಾರಿಮಾಡು ಕಾವಲದಲ್ಲಿ ಜೇಬಿನಿಂದ ಗಡಿಯಾರ ತೆಗದು ನೋಡುವದಕ್ಕೆ ಸಾವಕಾಶವಾಗುತ್ತೆ. ಇದನ್ನು ಕೈಯಲ್ಲಿ ಕಟ್ಟಿಕೊಂಡರೆ ಸುಖವಾಗಿ ನೋಡಿ ಕೊಳ್ಳಬಹುದು. ಈ ಗಡಿಯಾರದಮೇಲೆ ಸ್ಪಟಿಕದಬಿಲ್ಲೆ ಕನ್ನಡಿಯಿಂದ ಮುಚ್ಚಲ್ಪಟ್ಟು ಬೀಗಕೊಡಲು ಸುಲಭವಾಗಿಯಿದೆ. ಇಷ್ಟವಿದ್ದಾಗ ಕೈಯಲ್ಲಿಕಟ್ಟಿಕೊಳ್ಳ ಬಹುದು. ಮತ್ತು ಜೇಬಿನಲ್ಲೂ ಹಾಕಿಕೊಳ್ಳ ಬಹುದು. ಇದು ನಾಜೂಕಾಗಿ ಮಜಬೂತಾದ ಸಾಮಾನುಗಳಿಂದ ತಯಾರಿಸಿದೆ.

ಕ್ರಯ 1 ಕ್ಕೆ 7-0-0

ಹೊಸನಮೂನೆ ಟೇಬಿಲ್ ಟೈಂಪೀಸು.



ಈ ಗಡಿಯಾರಗಳು ಅಮೇರಿಕಾದೇಶದಲ್ಲಿ ತಯಾರಾದವು. ಮೇಲುಗಡೆ ಬೆಳ್ಳಿಯಂತಿರುವ ಮುಚ್ಚಳವಿರುವದು. ಎಂದಿಗೂ ಕಪ್ಪಾಗದು ಕರಾರು ಗಂಟೆಯನ್ನು ಕೊಡುವದು. ಮತ್ತು ಗಂಟೆ ಘಣ್ಣನೆ ಸಹ ಬಾರಿಸುವದು. ಬಹು ಬೇಗನೆ ಗಂಟೆಯನ್ನು ಕಂಡುಹಿಡಿಯಬಹುದು. ಅಂಗಡಿ, ಸ್ಕೂಲು, ಮನೆ, ಗುಡಿಗಳಲ್ಲಿಡಲು ಬಹು ಚೆನ್ನಾಗಿರುವದು. ಇದಕ್ಕೆಮುಂಚಿತವಾಗಿ ಈ ಮಾದರಿ ಗಡಿಯಾರಗಳು ಮಾರಾಟಕ್ಕೆಬಂದದಿಲ್ಲ. ಕ್ರ 6-8-0

ಇಮಿಟೇಷನ್ ಡೈಮಂಡು ಬ್ರೋಚ್



ಇವುಗಳನ್ನು ಸೀಮೆ ಭಂಗಾರದಿಂದಮಾಡಿ ಮೇಲೆ ಇಮಿಟೇಷನ್ ವಜ್ರದಕಲ್ಲುಗಳಿಟ್ಟಿವೆ. ಈ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಸಮನಾಗಿರುವದು. ಇದನ್ನು ದೊಡ್ಡವರೂ, ಚಿಕ್ಕವರೂ ಧರಿಸಿಕೊಳ್ಳಬಹುದು. ಹೆಂಗಸರು ದಾವಣಿಗಳ ಮೇಲೆ ಚುಚ್ಚಿಕೊಳ್ಳಲು ಲಾಯಖಾಗಿವೆ. ನಾಟಕದವರಿಗೂ ಬಹು ಉಪಯೋಗವಾದದ್ದು. ಇದುನೋಡುವದಕ್ಕೆ ಒಂದು ಆಭರಣವಾಗಿದೆ. ಇದಕ್ಕೆ ಭಂಗಾರದ ಗಿಲೀಟು ಮಾಡಿರುವದರಿಂದ ನೋಡುವವರು 500, ರೂಪಾಯಿಗಳ ಬೆಲೆಕಟ್ಟುವರು. ಕ್ರಯ 1 ಕ್ಕೆ ರೂ. 1-10-0

ಎಲೆಕ್ಟ್ರಿಕ್ ಫೋಟೊ ಉಂಗರ.



ಈ ಉಂಗರಗಳು ಭಂಗಾರಥಂತ ಒಂದು ವಿಧವಾದ ಲೋಹದಲ್ಲಿ ತಯಾರಾಗಿದೆ. ನೋಡಲು ಭಂಗಾರದ ಉಂಗರದಂತೆ ಇರುವವು. ಇದರಲ್ಲಿಟ್ಟಿರುವಕಲ್ಲುಗಳು ವಜ್ರಕ್ಕೆ ಸರಿಸಮಾನವಾಗಿರುವವು. ಇದರ ಮಧ್ಯದಲ್ಲಿ ಒಂದು ರಂಧ್ರವಿರುವದು [illegible]ಲ್ಲಿ ನೋಡಿದರೆ ರಾಮ, ಕೃಷ್ಣ, ಲಕ್ಷ್ಮಿ ಕಾಣುವರು. ಕ್ರಯ 1 ಕ್ಕೆ ರೂ. 1-0-0

ಬೇತಿಂಗು ಬ್ರಷ್.

ಅನೇಕರು ಸ್ನಾನಮಾಡುವಾಗ್ಗೆ ಬೆವರು ಕೊಳೆ ತೆಗೆಯಲಿಕ್ಕೆ ಕಲ್ಲುನಾರುಮುಂತಾದುವುಗಳಿಂದ ಉಜ್ಜಿಕೊಳ್ಳುವರು. ಇದರಿಂದ ಅನೇಕವೇಳೆಗಾಯಗಳಾಗುವವು. ಮತ್ತು ಚೆನ್ನಾಗಿ ಉಜ್ಜಿಕೊಳ್ಳಲು ಸಹ ಆಗದು. ಆದರೆ ಈ ಬ್ರಷ್‌ಗಳು ವಿಲಾಯತಿಯಲ್ಲಿ ಕೆಂಪು ರಬ್ಬರಿನಿಂದತಯಾರಾಗಿ ಬಂದಿವೆ ಇವುಗಳಲ್ಲಿ ಮೈಯನ್ನು ಯಾವ ತೊಂದರೆಯೂ ಇಲ್ಲದೆ ಉಜ್ಜಿಕೊಳ್ಳಬಹುದು. ಬೆವರು ಕೊಳೆಮುಂತಾದದ್ದನ್ನು ಬಹಳ ಚೆನ್ನಾಗಿ ತೆಗೆಯುತ್ತದೆ. ಒಂದು ತಿಂಗಳಮಕ್ಕಳಿಗೂ ಸಹ ಇದರಿಂದ ಉಜ್ಜಬಹುದು.

ಕ್ರಯ 1 ಕ್ಕೆ ರೂ. 1-8-0

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದುಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕೊಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ.

ಡಾಬು 1 ಕ್ಕೆ ರೂ. 3-0-0

ತುರಾಯಿಗಳು.



ಈ ತುರಾಯಿಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿದೆ. ಇವಕ್ಕೆ ನಾನಾಬಣ್ಣದ ಇಮಿಟೇಷನು ಇಟ್ಟು ತಯಾರಿಸಿದೆ. ಇದರಮೇಲುಭಾಗದಲ್ಲಿ ಪಕ್ಷಿಗಳ ರೆಕ್ಕೆಗಳನ್ನೂ ರೇಷ್ಮೆಯ ದಾರಗಳನ್ನೂ ಇಟ್ಟಿರುವದು. ನೋಡಲು ಬಹು ಚೆನ್ನಾಗಿರುವದು. ಇವನ್ನು ಹೆಂಗಸರು, ಮಕ್ಕಳು ವೇಷಧಾರಿಗಳು ಮುಂತಾದವರು ಉಪಯೋಗಿಸಲು ಬಹು ಚೆನ್ನಾಗಿದೆ. ಇವುಗಳ ಪ್ರಕಾಶವು ಎಷ್ಟೆಂಬದನ್ನು ಹೇಳ ತೀರದು. ಒಂದನ್ನು ತರಿಸಿನೋಡಿರಿ. ಕ್ರಯ 1 ಕ್ಕೆ ರೂ. 1-10-0

REGISTERED No. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪, ಮೈಸೂರ್ ಸ್ಟಾರ್ ಸರ್ ೧೯೨೦ ನೇ ಇಸವಿ ಆಗಸ್ಟ ತಾರೀಖು ೧೪ ನೇ ಭಾನುವಾರ. (ಸಂಚಿಕೆ ೩೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

ಬಸವ ಸಮಿತಿ
ಬೆಂಗಳೂರು

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯನನ್ನು ಎಂದಿಗೂ 'ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೇ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೇಡತೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕ್ಕೆಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.



ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಶಾಲ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
31 ಮೈಸೂರು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್ ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂರ್ಣ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂರ್ಣ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
46 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
[illegible]	೦—೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

೧. ಶ್ರೀ ಬಸವೇಶ್ವರ ಸಂಗಮೈಕ್ಯ.—ಇದರಲ್ಲಿ ಶ್ರೀ ಕಲ್ಯಾಣಬಸವೇಶ್ವರನು ಶ್ರೀ ಕೂಡಲಸಂಗಮೇಶ್ವರಲಿಂಗದಲ್ಲಿ ಐಕ್ಯ ಆಗುತ್ತ ಇದ್ದು ಶ್ರೀ ಸಂಗಮನಾಥಸ್ವರೂಪಿಯಾದ ಪರಶಿವನು ಶ್ರೀ ಬಸವಣ್ಣಗೇ ಪ್ರತ್ಯಕ್ಷ ಅಪ್ಪಿಕೊಂಡು ಇದ್ದಾನೆ. ಇದು ಅತ್ಯಂತ ಸುಂದರವಾಗಿ ಆದೆ. ಪ್ರತ್ಯೇಕ ವೀರಶೈವನು ಇದನ್ನು ಅವಶ್ಯ ಸಂಗ್ರಹಿಸಬೇಕು. ಫು॥ ಸಾ॥ ಪ್ರ॥ ೧ಕ್ಕೆ ರೂ. ೧-೪-೦. ಕ್ಯಾ॥ ಸಾ॥ ೧೨ ಆಣೆ.

೨. ಶ್ರೀ ಮಹಾದೇವ ಕಾಲಕೂಟ ವಿಷಪಾನ.—ಇದರಲ್ಲಿ ಶ್ರೀ ಬ್ರಹ್ಮ, ವಿಷ್ಣು, ಇಂದ್ರಾದಿ ದೇವತರು ಮತ್ತು ಅಸುರರು ಶ್ರೀ ಶಿವನಿಗೆ ಕಾಲಕೂಟವಿಷ ನಿವಾರಣಾರ್ಥಕ್ಕಾಗಿ ಪ್ರಾರ್ಥಿಸುತ್ತ ಇದ್ದಾರೆ. ಶ್ರೀ ಮಹಾದೇವನು ಕಾಲಕೂಟ ವಿಷವನ್ನು ಆನಂದದೊಡನೆ ಪಾನ ಮಾಡುತ್ತಾ ಇದ್ದಾನೆ. ಈ ಫೋಟೊ ಇದುವರಿವಿಗೂ ಪ್ರಸಿದ್ಧವಾಗಿಲ್ಲ. ಹಾಂಗು ಇದು ಪ್ರತ್ಯಕ್ಷ ನೋಡದೆ ಇದರ ಅಪೂರ್ವ ಸುಂದರತ್ವ ಕಂಡು ಬರುವದಿಲ್ಲ. ಕ್ರಯ ಫು॥ ಸಾ॥ ಪ್ರ॥ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

೩. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ಫು॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ೧೨ ಆಣೆ.

೪ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫು॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

೫. ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫು॥ ಸಾ॥ ಪ್ರ ೧ಕ್ಕೆ ೧-೪-೦ ಕ್ಯಾ॥ಸಾ॥ ೧೨ ಆಣೆ.

೬. ಶ್ರೀವಿಷ್ಣು ಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡದ ಈ ಫೋಟೊ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೊ ಇರುತ್ತದೆ. ಫು॥ಸಾ॥ಪ್ರ ೧ಕ್ಕೆ ೧-೪-೦. ಕ್ಯಾ॥ಸಾ॥ ೧೨ಆಣೆ.

೮. ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ ರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೊ ಇರುತ್ತದೆ. ಫು॥ ಪ್ರ ೧ಕ್ಕೆ ಸಾ॥ ರೂ. ೧—೪—೦. ಕಾ॥ ಸಾ॥ ಆಣೆ ೧೨.

ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

9 ವಿಳಾಸ—ಗಂಗಪ್ಪ ಪೇಂಟರ್ ಫೋಟೊ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 14

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಸಿ, ಉತ್ತರಕನಡಾ. 25

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ
4	0.12.0	,	50-0-0
5	0. 8.0	..	100-0-0
6	0.12.0	,,	100-0-0
7	6. 0.0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6.0	ಇಂದ	10-0-0
8	0. 8.0	,,	100-0-0
9	0-12-0	,,	100-0-0
10	0-14-0	,,	100-0-0
11	3. 8.0	,,	100-0-0
12	4. 0.0	,,	100-0-0
13	4. 8.0	,,	100-0-0
14	6. 0.0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರೆಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆಲಗಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ತ್ರಿಶೂಲ 1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
ಕಂಪನಿ, ಚೌಕಂಬಾ ಕಾಶೀ.

issue.



20-0-0

S. R. KRISHNA & Co.,

102, China Bazaar Road, Madras.

ಎಸ್. ಆರ್. ಕೃಷ್ಣ ಅಂಡ್ ಕೋ

102, ಜೈನಾಬಜಾರ್ ರೋಡ್, ಮದರಾಸು.



25-0-0

ಈ ಕೇಟಲಾಗಿನಲ್ಲಿರುವ, ಗಡಿಯಾಗಳೂ, ಸ್ಟೇಷನರಿಗಳು, ಭಂಗಾರದಗಿಲೀಟಿನ ಒಡವೆಗಳು ಬೇಕಾದರೆ, ತಾವಾಗಿಯೇ ಖುದ್ದಾಗಿ ಕೊಳ್ಳುವದಕ್ಕಿಂತಲು ಹೆಚ್ಚು ನಂಬಿಕೆಯಿಂದ ಕಳುಹಿಸುವೆವು. ಬೇಕಾದವರು ಹಣವನ್ನು ಮುಂಗಡವಾಗಿ ಕಳುಹಿಸಿ ಅಥವ ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಮತ್ತು ತಮ್ಮ ವಿಳಾಸವನ್ನು ಚೆನ್ನಾಗಿ ತಿಳಿಯುವಂತೆ ವಿವರವಾಗಿ ಬರೆಯಿರಿ.

8 ದಿನಕ್ಕೆ ಒಂದುಸಲ ಬೀಗಕೊಡುವ ಪಾಕೆಟುವಾಚು.



ಈ ಗಡಿಯಾರಗಳು ಬಹು ಒಳ್ಳೆಯವು. ಇವಕ್ಕೆ ಒಂದಾವರ್ತಿ ಬೀಗಕೊಟ್ಟರೆ 8 ದಿನಗಳು ನಡೆಯುವವು. ಮುಂದಲ ಕನ್ನಡಿ ದಪ್ಪನಾಗಿರುವದು. ಮೇಲುಗಡೆ ಬೀಗವಿರುವದು ನೋಡಲು ಚೆನ್ನಾಗಿರುವಂತೆ ನಕಾಸಿ ಕೆಲಸಮಾಡಿರುವದು. ಬಹಳ ಕಾಲಬಾಳಿಕೆ ಬರುವದು.

ಕ್ರಯ ಕ್ಕೆ 10-0-0
ಬೆಳ್ಳಿಯ ವಾಚ್ ,, 13-0-0

ಬೆಳ್ಳಿಯ ಹಂಟಿಂಗು ಗಡಿಯಾರ.



ಈ ಗಡಿಯಾರವು ಬೆಳ್ಳಿಯಿಂದ ತಯಾರಿಸಿದೆ. ಇದು ನೋಡಲಿಕ್ಕೆ ರಮಣೀಯವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ ಅಮೇರಿಕಾ ದೇಶದಲ್ಲಿ ಒಳ್ಳೆ ಲೀವರ್ ಕೆಲಸದಲ್ಲಿಮಾಡಿದೆ. ಇದರ ಹಿಂಭಾಗದಲ್ಲಿ ಚಿತ್ರ ಕೆಲಸಮಾಡಿದೆ ಬೆಳ್ಳಿಯ ಮುಚ್ಚಳವಿರುವುದು. ಒಳಗಡೆ ದೂಳುಗಾಳಿ ಇವುಗಳು ಸೇರದಂತೆ ಗ್ಲಾಸ್‌ಡೂಮ್ ಎಂಬ ಮುಚ್ಚಳವಿರುವುದು ಇವುಗಳಲ್ಲಿ ಕೆಲವಕ್ಕೆ ಬೀಗವು ಒಳಭಾಗದಲ್ಲಿಯೂ ಕೆಲವಕ್ಕೆ ತಲೆಯಲ್ಲಿಯೂ ಇರುವುದು. ಕ್ರಯ 1ಕ್ಕೆ ರೂ. 8-0-0
ಬೆಳ್ಳಿಯದು ,, ,, ,, 12-0-0

ಹೊಸನಮೂನೆಯ ಲೀವರು ವಾಚ್.



ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು, ಲೀವರ್‌ಮೂವ್‌ಮೆಂಟ್ಸ ಗಳಿಂದ ಮಾಡಿದೆ, ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ, ಮುಂದೆ ದಪ್ಪನಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು ಈ ಗಡಿಯಾರಗಳಲ್ಲಿ ಒಂದು ಇದ್ದರೆಸಾಕು. ಜೇಬಿಗೂ ಕೈಗೆ ಕಟ್ಟಿಕೊಳ್ಳಲೂ ಅನುಕೂಲವಾದದ್ದು, ಕ್ರಯ ಗಡಿಯಾರ 1ಕ್ಕೆ ರೂ 5-8-0

ಜನ್‌ಟಲ್‌ಮೆನ್ ಪಾಕೆಟು ವಾಚ್.



ಈ ಗಡಿಯಾರವು ಅಮೆರಿಕಾ ದೇಶದಲ್ಲಿ ತಯಾರಾದದ್ದು. ಒಳ್ಳೆ ಗಟ್ಟಿಸಾಮಾನುಗಳಿಂದ ತಯಾರಿಸಿದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟಿವೆ, ಗಾಳಿ, ದೂಳುಸೇರದಂತೆ ಒಳಗಡೆ ಗ್ಲಾಸ್‌ಡೂಮು ಇರುವದು. ಇದರಲ್ಲಿ ಯಾರೇ ಆಗಲಿ ಗಂಟೆಯನ್ನು ಬೇಗನೆ ಗುರುತುಹಿಡಿಯಬಹುದು. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸರಪಣಿ, ಒಂದು ಪೆಟ್ಟಿಗೆ, ಒಂದು ಗಡಿಯಾರದ ಗ್ಲಾಸು ಇನಾಮಾಗಿ ಕೊಡುವೆವು.

ಕ್ರಯ ಗಡಿಯಾರ. 1ಕ್ಕೆ ರೂ. 4-8-0

ರೈಲ್ವೆ ಲೀವರ್ ವಾಚ್.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲಟ್ಟು ರಿಜಿಸ್ಟರು ಆಗಿದೆ. ಇದು ನೋಡಲಿಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ. ಗ್ಲಾಸು ಡೋಮು ಇರುವುದು ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದು ತರಿಸಿ ನೋಡಿರಿ! ಕ್ರಯ 1ಕ್ಕೆ 4 8-0

ಜರ್ಮನೀ ಬೆಳ್ಳಿಯ ರಿಸ್ ವಾಚ್.



ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದತಯಾರಿಸಿ ಈಗಲೇ ಬಂದಿರುವುವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು ಇದರಲ್ಲಿಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯ ಬಹುದು, ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಬಿರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ.

ಗಡಿಯಾರ 1 ಕ್ಕೆ ರೂ. 5-0-0

ಬೆಳ್ಳಿಯ ರೇಡಿಯಂ. ರಿಸ್‌ಲೆಟ್ ವಾಚ್.



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕುಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟೂ ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೇರಿಕಾ ದೇಶದ ಗಡಿಯಾರಗಳು. ಜರ್ಮನ್ ಬೆಳ್ಳಿಯ ಕೇಸಿನಿಂದಲೂ, ದೃಢವಾದಸಾಮಾನುಗಳಿಂದಲೂ ತಯಾರಿಸಿದೆ. ಬಹು ದಿನ ಬಾಳಿಕೆಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆಗಂಟೆಯನ್ನು ಗುರುತು ಹಿಡಿಯಬಹುದು.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ ಗಡಿ. 1ಕ್ಕೆ 6-8-0

ಲೇಡೀಸು ಹ್ಯಾಂಡು ವಾಚು.



ಇದು ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಉಪಯೋಗವಾದದ್ದು ಸ್ತ್ರೀ ಪುರುಷರುಗಳೂ, ಬಾಲಕರೂ ಮತ್ತು ಕುದುರೆ, ಬೈಸಿಕಲ್, ಮೋಟಾರ್,ಮುಂತಾದ ವೇಗವಾದ ಸವಾರಿಮಾಡು ಕಾಲದಲ್ಲಿ ಜೇಬಿನಿಂದ ಗಡಿಯಾರ ತೆಗದು ನೋಡುವದಕ್ಕೆ ಸಾವಕಾಸವಾಗುತ್ತೆ. ಇದನ್ನು ಕೈಯಲ್ಲಿ ಕಟ್ಟಿಕೊಂಡರೆ ಸುಖವಾಗಿ ನೋಡಿಕೊಳ್ಳಬಹುದು. ಈ ಗಡಿಯಾರದಮೇಲೆ ಸ್ಪಟಿಕದಬಿಲ್ಲೆ ಕನ್ನಡಿಯಿಂದ ಮುಚ್ಚಲ್ಪಟ್ಟು ಬೀಗಕೊಡಲು ಸುಲಭವಾಗಿಯಿದೆ. ಇಷ್ಟಬಿದ್ದಾಗ ಕೈಯಲ್ಲಿಕಟ್ಟಿಕೊಳ್ಳ ಬಹುದು. ಮತ್ತು ಜೇಬಿನಲ್ಲೂ ಹಾಕಿಕೊಳ್ಳ ಬಹುದು. ಇದು ನಾಜೂಕಾಗಿ ಮಜಭೂತಾದ ಸಾಮಾನುಗಳಿಂದ ತಯಾರಿಸಿದೆ.

ಕ್ರಯ 1 ಕ್ಕೆ 7-0-0

ಹೊಸನಮೂನೆ ಟೇಬಿಲ್ ಟೈಂಪೀಸು.



ಈ ಗಡಿಯಾರಗಳು ಅಮೆರಿಕಾದೇಶದಲ್ಲಿ ತಯಾರಾದವು. ಮೇಲುಗಡೆ ಬೆಳ್ಳಿಯಂತಿರುವ ಮುಚ್ಚಳವಿರುವದು. ಎಂದಿಗೂ ಕಟ್ಟಾಗದು ಕರಾರು ಗಂಟೆಯನ್ನು ಕೊಡುವದು. ಮತ್ತು ಗಂಟೆ ಘಂಟೆ ಸಹ ಭಾರಿಸುವದು. ಬಹು ಬೇಗನೆ ಗಂಟೆಯನ್ನು ಕಂಡುಹಿಡಿಯಬಹುದು. ಅಂಗಡಿ, ಸ್ಕೂಲು, ಮನೆ, ಗುಡಿಗಳಲ್ಲಿ ಇಡಲು ಬಹು ಚೆನ್ನಾಗಿರುವದು. ಇದಕ್ಕೆಮುಂಚಿತವಾಗಿ ಈ ಮಾದರಿ ಗಡಿಯಾರಗಳು ಮಾರಾಟಕ್ಕೆಬಂದಿದ್ದಿಲ್ಲ. ಕ್ರ 6-8-0

ಇಮಿಟೇಷನ್ ಡೈಮಂಡು ಬ್ರೋಚ್



ಇವುಗಳನ್ನು ಸೀಮೆ ಭಂಗಾರದಿಂದಮಾಡಿ ಮೇಲೆ ಇಮಿಟೇಷನ್ ವಜ್ರದಕಲ್ಲುಗಳಿಟ್ಟಿವೆ. ಈ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಸಮನಾಗಿರುವದು. ಇದನ್ನು ದೊಡ್ಡವರೂ, ಚಿಕ್ಕವರೂ ಧರಿಸಿಕೊಳ್ಳಬಹುದು. ಹೆಂಗಸರು ದಾವಣಿಗಳ ಮೇಲೆ ಚುಚ್ಚಿಕೊಳ್ಳಲು ಲಾಯಖಾಗಿವೆ. ನಾಟಕದವರಿಗೂ ಬಹು ಉಪಯೋಗವಾದದ್ದು. ಇದುನೋಡುವದಕ್ಕೆ ಒಂದು ಅಭರಣವಾಗಿದೆ. ಇದಕ್ಕೆ ಭಂಗಾರದ ಗಿಲೀಟು ಮಾಡಿರುವದರಿಂದ ನೋಡುವವರು 500, ರೂಪಾಯಿಗಳ ಬೆಲೆಕಟ್ಟುವರು. ಕ್ರಯ 1 ಕ್ಕೆ ರೂ. 1-10-0

ಎಲಕ್ಟ್ರಿಕ್ ಫೋಟೊ ಉಂಗರ.



ಈ ಉಂಗರಳು ಭಂಗಾರಥಂತ ಒಂದು ವಿಧವಾದ ಲೋಹದಲ್ಲಿ ತಯಾರಾಗಿದೆ. ನೋಡಲು ಭಂಗಾರದ ಉಂಗರದಂತೆ ಇರುವವು. ಇದರಲ್ಲಿಟ್ಟಿರುವಕಲ್ಲುಗಳು ವಜ್ರಕ್ಕೆ ಸರಿಸಮಾನವಾಗಿರುವವು. ಇದರ ಮಧ್ಯದಲ್ಲಿ ಒಂದು ರಂಧ್ರವಿರುವದು. [illegible]ಲ್ಲಿ ನೋಡಿದರೆ ರಾಮ, ಕೃಷ್ಣ, ಲಕ್ಷ್ಮಿ. ಕಾಣುವರು. ಕ್ರಯ 1 ಕ್ಕೆ ರೂ. 1-0-0

ಬೇತಿಂಗು ಬ್ರಷ್.

ಅನೇಕರು ಸ್ನಾನಮಾಡುವಾಗ್ಗೆ ಬೆವರು ಕೊಳೆ ತೆಗೆಯಲಿಕ್ಕೆ ಕಲ್ಲುನಾರುಮುಂತಾದುವುಗಳಿಂದ ಉಜ್ಜಿಕೊಳ್ಳುವರು. ಇದರಿಂದ ಅನೇಕವೇಳೆಗಾಯಗಳಾಗುವವು. ಮತ್ತು ಚೆನ್ನಾಗಿ ಉಜ್ಜಿಕೊಳ್ಳಲು ಸಹ ಆಗದು. ಆದರ ಈ ಬ್ರಷ್‌ಗಳು ವಿಲಾಯತಿಯಲ್ಲಿ ಕಂಪು ರಬ್ಬರಿನಿಂದ ತಯಾರಾಗಿ ಬಂದಿವೆ ಇವುಗಳಲ್ಲಿ ಮೈಯನ್ನು ಯಾವ ತೊಂದರೆಯೂ ಇಲ್ಲದೆ ಉಜ್ಜಿಕೊಳ್ಳಬಹುದು. ಬೆವರು ಕೊಳೆಮುಂತಾದದ್ದನ್ನು ಬಹಳ ಚೆನ್ನಾಗಿ ತೆಗೆಯುತ್ತದೆ. ಒಂದು ತಿಂಗಳಮಕ್ಕಳಿಗೂ ಸಹ ಇದರಿಂದ ಉಜ್ಜಬಹುದು.

ಕ್ರಯ 1 ಕ್ಕೆ ರೂ. 1-8-0

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದುಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕೊಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ.

ಡಾಬು 1 ಕ್ಕೆ ರೂ. 3-0-0

ತುರಾಯಿಗಳು.



ಈ ತುರಾಯಿಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿದೆ. ಇವಕ್ಕೆ ನಾನಾಬಣ್ಣದ ಇಮಿಟೇಷನು ಇಟ್ಟು ತಯಾರಿಸಿದೆ. ಇದರಮೇಲುಭಾಗದಲ್ಲಿ ಪಕ್ಷಿಗಳ ರೆಕ್ಕೆಗಳನ್ನೂ ರೇಷ್ಮೆಯ ದಾರಗಳನ್ನೂ ಇಟ್ಟಿರುವದು. ನೋಡಲು ಬಹು ಚೆನ್ನಾಗಿರುವದು. ಇವನ್ನು ಹೆಂಗಸರು, ಮಕ್ಕಳು ವೇಷದಾರಿಗಳು ಮುಂತಾದವರು ಉಪಯೋಗಿಸಲು ಬಹು ಚೆನ್ನಾಗಿದೆ. ಇವುಗಳ ಪ್ರಕಾಶವು ಎಷ್ಟೆಂಬದನ್ನು ಹೇಳ ತೀರದು. ಒಂದನ್ನು ತರಿಸಿನೋಡಿರಿ. ಕ್ರಯ 1 ಕ್ಕೆ ರೂ. 1-10-0

REGISTERED No. M. 1

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೀಯಿಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪, ಮೈಸೂರ್ ಸ್ಟಾರ್ ಸನ್ ೧೯೨೦ ನೇ ಇಸವಿ ಅಗಸ್ಟ್ ತಾರೀಖು ೧೮ ನೇ ಭಾನುವಾರ. (ಸಂಚಿಕೆ ೩೦

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ,

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.



ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಸಾಳ್ವದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
31 ಮೈಸೂರು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್ ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟದ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬವುನ್ನು ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂರ್‌ಲೈಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂರ್‌ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
46 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲಚರಿತ್ರೆ	೦—೧೦—೦
[illegible]	೦—೪—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

೧. ಶ್ರೀ ಬಸವೇಶ್ವರ ಸಂಗನೈಕ್ಯ.—ಇದರಲ್ಲಿ ಶ್ರೀ ಕಲ್ಯಾಣಬಸವೇಶ್ವರನು ಶ್ರೀ ಕೂಡಲಸಂಗಮೇಶ್ವರಲಿಂಗದಲ್ಲಿ ಐಕ್ಯ ಆಗುತ್ತ ಇದ್ದು ಶ್ರೀ ಸಂಗಮನಾಥಸ್ವರೂಪಿಯಾದ ಪರಶಿವನು ಶ್ರೀ ಬಸವಣ್ಣಗೇ ಪ್ರತ್ಯಕ್ಷ ಅಪ್ಪಿಕೊಂಡು ಇದ್ದಾನೆ. ಇದು ಅತ್ಯಂತ ಸುಂದರವಾಗಿ ಅದೆ. ಪ್ರತ್ಯೇಕ ವೀರಶೈವನು ಇದನ್ನು ಅವಶ್ಯ ಸಂಗ್ರಹಿಸಬೇಕು. ಫು|| ಸಾ|| ಪ್ರ|| ೧ಕ್ಕೆ ರೂ. ೧-೪-೦. ಕ್ಯಾ|| ಸಾ|| ೧೨ ಆಣೆ.

೨. ಶ್ರೀ ಮಹಾದೇವರ ಕಾಲಕೂಟ ವಿಷಪಾನ.—ಇದರಲ್ಲಿ ಶ್ರೀ ಬ್ರಹ್ಮ, ವಿಷ್ಣು, ಇಂದ್ರಾದಿ ದೇವತರು ಮತ್ತು ಅಸುರರು ಶ್ರೀ ಶಿವನಿಗೆ ಕಾಲಕೂಟವಿಷ ನಿವಾರಣಾರ್ಥಕ್ಕಾಗಿ ಪ್ರಾರ್ಥಿಸುತ್ತ ಇದ್ದಾರೆ. ಶ್ರೀ ಮಹಾದೇವನು ಕಾಲಕೂಟ ವಿಷವನ್ನು ಆನಂದದೊಡನೆ ಪಾನಮಾಡುತ್ತಾ ಇದ್ದಾನೆ. ಈ ಫೋಟೊ ಇದುವರೆವಿಗೂ ಪ್ರಸಿದ್ಧವಾಗಿಲ್ಲ. ಹಾಂಗು ಇದು ಪ್ರತ್ಯಕ್ಷ ನೋಡದೆ ಇದರ ಅಪೂರ್ವ ಸುಂದರತ್ವ ಕಂಡುಬರುವದಿಲ್ಲ. ಕ್ರಯ ಫು|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

೩. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವಪಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

೪. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫು|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

೫. ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫು|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಆಣೆ.

೬. ಶ್ರೀವಿಷ್ಣು ಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡೆದ ಈ ಫೋಟೊ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೆಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೊ ಇರುತ್ತದೆ. ಫು||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

೮. ಶ್ರೀ ಶಿವಯೋಗಿಸಮೂಹ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೊ ಇರುತ್ತದೆ. ಫು|| ಪ್ರ ೧ಕ್ಕೆ ಸಾ|| ರೂ. ೧—೪—೦, ಕಾ|| ಸಾ|| ಆಣೆ ೧೨.

ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

9 ವಿಳಾಸ—ಗಂಗಪ್ಪಾ ಪೇಂಟಿಗೆ ಫೋಟೊ ಆರ್ಟಿಸ್ಟ, ಸೊಲ್ಲಾಪೂರ ಸಿಟಿ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 14

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ ಶಿರ್ಶಿ, ಉತ್ತರಕನಡಾ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಪಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0-12-0	,,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉಬ್ಬಿನ	,, 15-0-0	,, 40-0-0
ಮಣಕು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆಲಕಡಲೆ	,, 1-8-0	,, 3-0-0
ಕಮರಾಕ್ಷಿ	,, 1-0-0	,, 2-0-0
ಬೆಂದ್ಯ	,, 0-8-0	,, 1-0-0
ಅವಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರಮುಖ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
35 ಕಂಪನಿ, ಚೌಕಂಬಾ ಕಾಶೀ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಆಗಸ್ಟ್ ತಾ|| ೧೪ ನೆಯ ಭಾನುವಾರ.

ನಮ್ಮ ಸಂಸ್ಥಾನದಲ್ಲಿ ರಾಷ್ಟ್ರೀಯಸಭಾ ಶಾಖಾ ಸಂಘವೇಕೆ?

ಪ್ರಜೆಗಳ ಅಭಿಪ್ರಾಯಗಳು ಸರ್ಕಾರಕ್ಕೂ, ಸರ್ಕಾರದ ಉದ್ದೇಶಗಳು ಪ್ರಜೆಗಳಿಗೂ ತಿಳಿದು ಪರಸ್ಪರ ಹಿತಚಿಂತನೆಯಿಂದ ರಾಜ್ಯಕಾರ್ಯಗಳು ಸುಲಲಿತವಾಗಿ ಸಾಗುವುದಕ್ಕೆ ಸಾಧಕವಾಗುವಂತೆ ಪ್ರಜಾಪ್ರತಿನಿಧಿ ಸಭೆಯು ಮೊಟ್ಟಮೊದಲು ಏರ್ಪಾಟಾದುದು ನಮ್ಮ ಸಂಸ್ಥಾನದಲ್ಲೇ. ಅದರಿಂದೀಚೆಗೆ ಸ್ತ್ರೀವಿದ್ಯಾಭಿವೃದ್ಧಿಯ ವಿಶೇಷ ಪ್ರಯತ್ನ, ಜಲಪಾತದಿಂದ ವಿದ್ಯುಚ್ಛಕ್ತಿ ಸಮುತ್ಪಾದನೆ, ನಿಯಮನಿರ್ಮಾಣಸಭಾ ಸ್ಥಾಪನೆ, ನ್ಯಾಯಶಾಖಾ ಕಾರ್ಯಕಾರಿ ಶಾಖೆಗಳ ವಿಭಜನೆ, ಸಂಪದಭ್ಯುದಯ ಸಮಾಜಸ್ಥಾಪನೆ, ಸ್ವತಂತ್ರವಿದ್ಯಾಪೀಠ ಪ್ರತಿಷ್ಠಾಪನೆ ಇತ್ಯಾದಿ ದೇಶಾಭ್ಯುದಯಸಾಧಕ ಕಾರ್ಯಗಳೆಲ್ಲಾ ಒಂದೊಂದಾಗಿ ಹುಟ್ಟಿ ನಮ್ಮ ಸಂಸ್ಥಾನಕ್ಕೆ ಮಾದರಿ ಸಂಸ್ಥಾನವೆಂಬ ಪ್ರಸಿದ್ಧಿಯನ್ನುಂಟುಮಾಡಲಿಕ್ಕೆ ಸಾಧಕಗಳಾಗಿರುವುವು. ಮತ್ತು ಈ ದೇಶದ ಪಾಲ್ಯಪಾಲಕರ ಪ್ರೀತಿವಿಶ್ವಾಸಗಳೂ ರಾಜಭಕ್ತಿ ಪ್ರಜಾರಂಜನೆಗಳೂ ನಿಷ್ಕಳಂಕವಾಗಿ ನಡೆದುಬಂದಿರುವುವು. ಭರತಖಂಡ ಪ್ರಭುತ್ವದವರ ಪ್ರತ್ಯಕ್ಷಪರಿಪಾಲನೆಗೆ ಒಳಪಟ್ಟಿರುವ ದೇಶಭಾಗದ ಪ್ರಜೆಗಳಿಗಿಂತಲೂ ಇಲ್ಲಿಯ ಪ್ರಜೆಗಳ ಕ್ಷೇಮಲಾಭವು ನಮ್ಮ ಶ್ರೀಮನ್ಮಹಾರಾಜರ ಸರ್ಕಾರದವರಿಂದ ಅತಿಶಯವಾಗಿ ಗಮನಿಸಲ್ಪಡುತ್ತಿರುವುವು. ಅಲ್ಲಿಯ ಪ್ರಜೆಗಳಿಗಿಂತಲೂ ವಿಶೇಷವಾದ ಸೌಕರ್ಯಗಳೂ ಸುವಿಶ್ರಾಂತಿಗಳೂ ನಮ್ಮಗಳಿಗೆ ಎಷ್ಟೋ ಭಾಗದಲ್ಲಿ ಅಧಿಕವಾಗಿರುವುವು. ಹೆಚ್ಚು ಮಾತಿನಿಂದೇನು? ನಾವು ಪರ್ಯಾಯವಾದ ಸ್ವರಾಜ್ಯವನ್ನೇ ಅನುಭವಿಸುತ್ತಿರುವೆವೆಂದು ಘಂಟಾಘೋಷವಾಗಿ ಹೇಳಬಹುದು.

ಹೀಗಿರುವಾಗ ನಮ್ಮ ದೇಶದಲ್ಲಿ ಕಾಂಗ್ರೆಸ್ ಶಾಖಾ ಕಮಿಟಿಯನ್ನು ಸ್ಥಾಪಿಸುವ ಪ್ರಯತ್ನಕ್ಕೆ ಕೆಲವರು ಬದ್ಧಕಂಕಣರಾಗಿರುವುದಕ್ಕೇನು ಗುರಿಯೋ ತಿಳಿಯಲಿಲ್ಲ. ಸದ್ಯದಲ್ಲಿ ನಮ್ಮ ಕಷ್ಟಗಳನ್ನು ನೀಗಿಸಿಕೊಂಡು ಹಿತವನ್ನು ಪಡೆದುಕೊಳ್ಳಲಿಕ್ಕೆ ಬೇಕಾದಷ್ಟು ಸಭಾಸೌಕರ್ಯಗಳು ನಮಗೆ ಇದ್ದೇ ಇರುತ್ತವೆ. ಅಲ್ಲದೆ ಈಗಣ ಕಾಂಗ್ರೆಸ್ ಸಭೆಯ ಸ್ಥಿತಿಯು ಪೂರ್ವದಂತೆ ಇಲ್ಲ. ಜನ್ಮಾರಭ್ಯ ಆ ಸಭೆಗೆ ಹಾಲೆರೆದು ಸಾಕಿ ದೊಡ್ಡದುಮಾಡಿ ದೇಶಹಿತೈಕಸಾಧನದಲ್ಲೇ ತಮ್ಮ ಜೀವಿತವನ್ನೆಲ್ಲಾ ಧಾರೆಯೆರೆದು ಅದರ ಕಷ್ಟಸುಖಗಳ ಮತ್ತು ಸದಸನ್ಮಾರ್ಗಗಳ ಅನುಭವವನ್ನೆಲ್ಲಾ ಪಡೆದಿರುವ ಸಾತ್ವಿಕರಾದ ಮಿತವಾದಿಗಳೆಲ್ಲಾ ಈಗ ಅದರಿಂದ ದೂರಸ್ಥರಾಗಿದ್ದಾರೆ. ಕಾರಣವೇನೆಂದರೆ ಈಗಣ ರಾಷ್ಟ್ರೀಯ ಸಭೆಯ ಮುಖ್ಯತತ್ವವು ಪ್ರಭುತ್ವಕ್ಕೆ ಯಾವುದೊಂದು ಸಹಾಯವನ್ನೂ ಮಾಡದೆ ಅದನ್ನು ಆದಷ್ಟು ಬೇಗನೆ ಸ್ತಂಭನಗೊಳಿಸಬೇಕೆಂಬುದೇ ಆಗಿರುತ್ತದೆ. ಅಂಥ ತತ್ವವನ್ನು ಹರಡುತ್ತ ಬರುವುದರಿಂದ ಈಗ ಭರತಖಂಡದಲ್ಲಿ ಪ್ರಜಾಪ್ರಭುಗಳ ಮಧ್ಯದಲ್ಲಿ ಎಷ್ಟು ಚಕಮಕಿಯೂ, ವೈಮನಸ್ಯವೃದ್ಧಿಯೂ, ಅತ್ಯಾಚಾರಗಳೂ, ಪ್ರಾಣಹಾನಿಗಳೂ, ಕಠಿನದಂಡನೆಗಳೂ ಆಗುತ್ತಿವೆಯೆಂಬುದನ್ನು ಪ್ರತಿದಿನವೂ ನಾವು ಕೇಳುತ್ತಲಿದ್ದೇವೆ. ಹೀಗಿರುವಾಗ ಅಂಥ ತತ್ವದ ಅವಶ್ಯಕತೆಯೇ ಇಲ್ಲದ ದೇಶೀಯ ಸಂಸ್ಥಾನಗಳಲ್ಲಿ ಆ ತೆರದ ಉದ್ದೇಶದ ಸಭಾಶಾಖೆಯನ್ನು ಸ್ಥಾಪಿಸುವುದರಲ್ಲಿ ಪ್ರಯೋಜನವೇನು? ಅಷ್ಟು [illegible] ಹೈದರಾಬಾದು ಮೊದಲಾದ ಸಂಸ್ಥಾನಗಳವರು ತಮ್ಮ ಸಂಸ್ಥಾನಗಳಲ್ಲಿ ಇಂಥ ಹಳವಳಿಗೆ ಅವಕಾಶವನ್ನು ಕೊಡದೆ ನಿಷೇಧಾಜ್ಞೆಯನ್ನು ಪ್ರಕಟಿಸಿದರೆ? ಇಂಥ ಹಳವಳಿಗೆ ಅವಕಾಶ ಕೊಡುವುದರಿಂದ ಶಾಂತವಾಗಿದ್ದ ದೇಶದಲ್ಲಿ ಗುಲ್ಲೆಬ್ಬಿಸಿ ಅಶಾಂತಿಯನ್ನುಂಟುಮಾಡುವುದೇ ಫಲವಾದೀತಲ್ಲದೆ ಮತ್ತೇನೂ ಇಲ್ಲ.

ರಾಷ್ಟ್ರೀಯ ಸಭೆಯವರು ಶಾಲೆಯ ವಿದ್ಯಾರ್ಥಿಗಳಿಗೆ ಸಹಾಯನಿರಾಕರಣದ ಹುಚ್ಚನ್ನು ಹತ್ತಿಸಿ ಕೆಲವುದಿನ ಕುಣಿದಾಡಿಸಿ ಅದರಿಂದೇನೂ ಫಲಸಿದ್ಧಿ ಕಾಣದೆ ಆ ಭಾಗದಲ್ಲಿ ಉದಾಸೀನರಾದರು. ವಕೀಲತನ ಮೊದಲಾದ ವೃತ್ತಿಗಳನ್ನು ಬಿಡುವುದಕ್ಕೆ ಪ್ರಜೆಗಳಿಗೆ ಬೋಧಿಸಿ ಅಲ್ಪಸ್ವಲ್ಪ ಲಾಭವನ್ನು ಪಡೆದಿರಬಹುದು. ಮೊದಮೊದಲು ಹರತಾಳವನ್ನು ಬಲವಾಗಿ ಎಲ್ಲೆಲ್ಲೂ ಆಚರಿಸುತ್ತಿದ್ದರು. ಈಗ ಅದು ಉತ್ತಮವಲ್ಲವೆಂದು ಮ|| ಗಾಂಧಿಯವರು ಉಪದೇಶಿಸುತ್ತಿದ್ದಾರೆ. ಆ ಪೂರ್ವದ ಪ್ರಯತ್ನವೆಲ್ಲಾ ನಿಷ್ಫಲವೆಂದು ತಿಳಿದುಕೊಂಡ ಬಳಿಕ ಈಗ ಅವರು ಸ್ವದೇಶ ವಸ್ತ್ರೋತ್ಪಾದನೆಯ ಪ್ರಯತ್ನಕ್ಕೆ ತೊಡಗಿ ವಿದೇಶ ವಸ್ತ್ರದಹನ ಕಾರ್ಯವನ್ನು ಆಚರಿಸುತ್ತಿದ್ದಾರೆ. ಹೀಗೆ ನಿರ್ಧಾರವಾದ ಫಲವನ್ನು ಕಾಣದೆ ಒಂದರ ಹಿಂದೊಂದು ಪ್ರಯತ್ನಗಳು ಅವರಿಂದ ಆಚರಿಸಲ್ಪಡುತ್ತಿವೆ. ಅವುಗಳ ಗುಣಾವಗುಣ ಫಲಾಫಲಗಳ ಭವಿಷ್ಯತ್ ಸ್ಥಿತಿಯು ಹೇಗಾದರೂ ಇರಲಿ. ಸರ್ಕಾರದ ಕಾರ್ಯಸ್ತಂಭನವೇ ಮುಖ್ಯೋದ್ದೇಶವಾಗುಳ್ಳ ಆ ಸಭೆಯ ಅಂತಸ್ತತ್ವಬೀಜವು ನಮ್ಮ ದೇಶದಲ್ಲಿ ನಡಲ್ಪಡುವುದು ಹಿತಪ್ರದವಲ್ಲ.

ಅಲ್ಲದೆ ಈ ಸಂಸ್ಥಾನದಲ್ಲಿ ಈ ಬೀಜದ ಆರೋಪಣೆಗೆ ಬದ್ಧಕಂಕಣರಾಗಿರುವವರಲ್ಲಿ ರಾಷ್ಟ್ರೀಯ ಸಭಾಶಾಸನವಿಧೇಯತೆಯೂ ನಿಷ್ಕಪಟಭಕ್ತಿಯೂ ಇದೆಯೆಂಬುದಕ್ಕೆ ನಿದರ್ಶನವೇ ಇಲ್ಲ. ಮ|| ಗಾಂಧಿಯವರ ಸ್ವರಾಜ್ಯಸಾಧನದ ಉಪಕರಣಗಳಲ್ಲಿ ಪ್ರಥಮಸ್ಥಾನವನ್ನು ಹೊಂದಿರುವ ಅಸ್ಪೃಶ್ಯತ್ವನಿವಾರಣೆಯ ಉದ್ದೇಶಕ್ಕೆ ಇವರು ಬದ್ಧವೈರಿಗಳು. ಮತ್ತು ವಿದೇಶದ ಬಟ್ಟೆಗಳನ್ನು ತೆಗೆದು ಖದ್ದರ ಬಟ್ಟೆಗಳನ್ನು ಧರಿಸಿದವರು ಇವರಲ್ಲಿ ಒಬ್ಬರೂ ಇಲ್ಲ. ಇಷ್ಟೇ ಅಲ್ಲದೆ ದೇಶದ ಸಕಲ ಪ್ರಜೆಗಳೂ ಅಭ್ಯುದಯಕ್ಕೆ ಬರಲಿ ಎಂಬ ಉದಾರದೇಶಾಭಿಮಾನವು ಇವರಿಗೆ ಸ್ವಪ್ನದಲ್ಲೂ ಇಲ್ಲ. ವಿದ್ಯಾಭ್ಯಾಸದ ಮೆಮೊರಾಂಡಂ ಮತ್ತು ಮಿಲ್ಲರ್ ಸಂಘದ ವರದಿ ಇವುಗಳ ಮೂಲಕ ಪ್ರಜಾಸಾಮಾನ್ಯವೂ ಅಭಿವೃದ್ಧಿಗೊಳ್ಳುವುದೆಂಬ ಅಸೂಯೆಯಿಂದ ಕುದಿಯುತ್ತಿರುವ ಜನರಿಗೂ ರಾಷ್ಟ್ರೀಯ ಸಭೆಯ ಆದರ್ಶಕ್ಕೂ ಭೂಮ್ಯಾಕಾಶದಷ್ಟು ತಾರತಮ್ಯಗಳಿರುತ್ತವೆ. ಅಲ್ಲದೆ ಮೈಸೂರಿನಲ್ಲಿ ಇವರು ಸ್ಥಾಪಿಸಿರುತ್ತೇವೆಂದು ಹೇಳುವ ಶಾಖಾಸಂಘಕ್ಕೆ ಅತಿರಥಮಹಾರಥರೆಂದು ಹೇಳಿಕೊಳ್ಳತಕ್ಕ ತಾವುಗಳು ವೈಸ್‌ಪ್ರೆಸಿಡೆಂಟರಾಗಿ ನಿಂತುಕೊಳ್ಳದೆ ರಾಜಕೀಯರಂಗದಲ್ಲಿ ಹಜ್ಜೆಯಿಡುವುದನ್ನೇ ಇದುವರೆಗೂ ಅರಿಯದಿರುವ ಸಾಧುಪ್ರಾಣಿಗಳನ್ನು ಮುಂಚೂಣಿಗೆ ನಿಲ್ಲಿಸಿಬಿಟ್ಟಿರುವುದು ಕಡುಚೋದ್ಯವಾಗಿರುವುದು ಮಾತ್ರವಲ್ಲದೆ ಕಂಡವರ ಮಕ್ಕಳನ್ನು ಏನೋ ಮಾಡಿ ಆಳ ನೋಡಿದರೆಂಬ ಗಾಥೆಗೆ ಸಮನಾಗಿರುತ್ತದೆ. ಇದನ್ನೆಲ್ಲಾ ನೋಡಿದರೆ ಈ ಪ್ರಯತ್ನದಲ್ಲಿ ಶುದ್ಧವಾದ ಮತ್ತು ದೇಶಹಿತಸಾಹಾಯ್ಯಕವಾದ ಅಭಿಪ್ರಾಯಗಳಿರುವಂತೆ ಕಂಡುಬರುವುದಿಲ್ಲ. ಇದರ ಆರಂಭಕಾಲದಲ್ಲೇ ರಾಜಧಾನಿಯಲ್ಲಿ ವಿದ್ಯಾರ್ಥಿಗಳಿಗೂ ಪೊಲೀಸುದ್ಯೋಗಿಗಳಿಗೂ ಬಡಿದಾಟವಾದ ಶಕುನವು ಶುಭಲಕ್ಷಣವಾಗಿಯೂ ಇಲ್ಲ. ಅಧಿಕಾರದ್ವೇಷವ್ಯಾಪನೆಗೆ ಇದು ಒಂದು ಸಾಧನವಾಗುವುದು ಎಂದು ಅನೇಕರು ಶಂಕಿಸುತ್ತಿದ್ದಾರೆ. ರಾಜಭಕ್ತಿ ದೇಶಹಿತಚಿಂತನೆಗಳುಳ್ಳ ಪ್ರಜೆಗಳು ಇದರಿಂದ ಎಷ್ಟು ದೂರವಾಗಿದ್ದರೆ ಅಷ್ಟು ಕ್ಷೇಮ. ಇದು ಮೂಡಿದಲ್ಲಿಯೇ ಕರಿತುಹೋಗುವಂತೆ ಮಾಡುವಲ್ಲಿ ಪಾಲ್ಯಪಾಲಕರೆಲ್ಲರೂ ಎಚ್ಚರಪಡುವುದು ವಿಹಿತವೆಂದ ಹೇಳದಿರಲಾರೆವು.

ಹಿಂದುಳಿದವರ ಪ್ರಾತಿನಿಧ್ಯ.

ಕಳೆದ ತಾ|| ೫ ರಲ್ಲಿ ಕೂಡಿದ್ದ ಮದರಾಸು ಶಾಸನಸಭೆಯಲ್ಲಿ ನಡೆದ ಚರ್ಚೆಗಳೊಳಗೆ ಹಿಂದುಳಿದ ಜನವರ್ಗಗಳವರಿಗೆ ಸರ್ಕಾರದ ಉದ್ಯೋಗಸ್ಥಾನಗಳನ್ನು ಹೆಚ್ಚುಹೆಚ್ಚಾಗಿ ಕೊಡುವಂತೆ ಮಾಡಬೇಕು, ಎಂಬ ತೀರ್ಮಾನದ ಚರ್ಚೆಯು ಪ್ರಬಲವಾಗಿದ್ದಿತು. ಮ|| ಒ. ತನಿಕಾಚಲಂ ಶೆಟ್ಟಿಯವರು ಈ ತೀರ್ಮಾನವನ್ನು ಉಪಪಾದಿಸಿದರು:—ಸರ್ಕಾರದುದ್ಯೋಗಗಳನ್ನಪೇಕ್ಷಿಸಿ ಬಂದ ಉಮೇದುವಾರರಲ್ಲಿ ಬ್ರಾಹ್ಮಣರಿಗಿಂತ ಇತರರು ಸ್ವಲ್ಪ ಕಡಿಮೆಯ ವಿದ್ಯಾವಂತರಾಗಿದ್ದರೂ ಅವರಲ್ಲಿ ಸರ್ಕಾರಿ ಕಾರ್ಯನಿರ್ವಾಹಕ್ಕೆ ಅವಶ್ಯಕವಾದ ಕನಿಷ್ಠ ಯೋಗ್ಯತೆಯಿದ್ದರೂ ಅವರಿಗೇ ಎಂದರೆ ಬ್ರಾಹ್ಮಣೇತರ ಹಿಂದುಗಳು ಕ್ರೈಸ್ತರು ಮಹಮ್ಮದೀಯರು ನಿಮ್ನಜಾತಿಯವರು ಇವರುಗಳಿಗೆ ೭ ವರ್ಷಕಾಲದವರೆಗೂ ಸರ್ಕಾರದ ಎಲ್ಲ ಉದ್ಯೋಗಗಳನ್ನೂ ಕೊಡುವಂತೆ ಪ್ರಭುತ್ವದವರು ಒಂದು ಅಪ್ಪಣೆಯನ್ನು ಕೊಡಬೇಕೆಂದೂ ೧೦೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರರಿಗೆ ೧೦೦ ಕ್ಕೆ ೬೬ ಸ್ಥಲಗಳೂ, ೧೦೦ ರೂ. ಗೆ ಕೀಳ್ಪಟ್ಟ ಸಂಬಳದ ಸ್ಥಾನಗಳಲ್ಲಿ ೧೦೦ ಕ್ಕೆ ೭೫ ರಂತೆಯೂ ಬರುವವರೆಗೆ ಮಾತ್ರ ಹೀಗೆ ಮಾಡಬೇಕೆಂದೂ ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ, ಎಂಬುದೇ ತೀರ್ಮಾನದ ಅಭಿಪ್ರಾಯವಾಗಿದ್ದಿತು. ಇದನ್ನು ರಾ|| ಬ|| ಟಿ. ಬಾಲಾಜಿರಾವು ನಾಯಡುಯವರು ಬಲಪಡಿಸಿದರು. ಇದರಮೇಲೆ ಸರ್ಕಾರದ ಪಕ್ಷದಿಂದ ಅ|| ಎ. ಆರ್ ನಾಪುರವರು ಮಾತನಾಡುವಾಗ್ಗೆ ಜಾತಿವರ್ಣ ಪಕ್ಷಪಾತವನ್ನು ಬೆಳೆಯಿಸುವ ವಿಷಯಗಳು ಸರ್ಕಾರಕ್ಕೆ ಸಂಮತವಲ್ಲವೆಂದು ಹೇಳಿಕೊಂಡರೂ ಸರ್ಕಾರದವರು ಸಕಲ ವರ್ಗಗಳವರಿಗೂ ಉದ್ಯೋಗಸ್ಥಾನಗಳನ್ನು ಕೊಟ್ಟೇತೀರಬೇಕೆಂಬುದನ್ನು ಒಪ್ಪಿಕೊಂಡುದಲ್ಲದೆ, ಬ್ರಾಹ್ಮಣೇತರ ವರ್ಗಗಳವರು ತಮಗೆ ಸರ್ಕಾರಿ ಉದ್ಯೋಗಸ್ಥಾನಗಳು ಹೆಚ್ಚಾಗಿ ದೊರೆಯಬೇಕೆಂದು ಕೇಳುತ್ತಿರುವುದನ್ನು ನ್ಯಾಯವೆಂದು ಒಪ್ಪಿಕೊಂಡರು. ಮತ್ತು ಮೇಲೆ ಕಂಡ ತೀರ್ಮಾನಕ್ಕೆ ತಮ್ಮದೊಂದು ಸವರಣವನ್ನು ಸೂಚಿಸಿದರು. ಏನೆಂದರೆ ಸರ್ಕಾರದುದ್ಯೋಗಗಳಲ್ಲಿ ಬ್ರಾಹ್ಮಣೇತರ ಸಂಘಗಳ ಪ್ರಾತಿನಿಧ್ಯವನ್ನು ಹೆಚ್ಚುಗೊಳಿಸುವುದಕ್ಕಾಗಿ ಈಗ ರೆವಿನ್ಯೂ ಶಾಖೆಯಲ್ಲಿರುವ ನಿಬಂಧನೆಗಳನ್ನು ಎಲ್ಲಶಾಖೆಗಳಿಗೂ ಎಲ್ಲತೆರದ ಉದ್ಯೋಗಗಳಿಗೂ ಅನುವರ್ತಿಸುವಹಾಗೆ ಮಾಡಿ, ಅದಕ್ಕೆ ತಕ್ಕ ಅಪ್ಪಣೆಯನ್ನು ಸರ್ಕಾರದವರು ಕೊಟ್ಟು, ಆ ಅಪ್ಪಣೆಯಪ್ರಕಾರ ಉದ್ಯೋಗಗಳನ್ನು ಕೊಡಲು ಅರ್ಹರಾದ ಅಧಿಕಾರಿಗಳೆಲ್ಲರೂ ಬದ್ಧರಾಗಿಯೇ ತೀರಬೇಕೆಂದು ನಿರ್ಬಂಧಮಾಡಿ, ಪ್ರತಿಯೊಂದು ಕಚೇರಿಯ ಅಧಿಕಾರಿಯೂ ಈ ವಿಷಯವಾಗಿ ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವು ಸರ್ಕಾರದುದ್ಯೋಗಗಳಲ್ಲಿ ಹೇಗೆ ಅಭಿವೃದ್ಧಿಗೊಳ್ಳುತ್ತಿರುವುದೋ ಅದನ್ನು ಆರಾರು ತಿಂಗಳಿಗೊಂದಾವೃತ್ತಿ ವರದಿಮಾಡಿ ಸರ್ಕಾರಕ್ಕೆ ತಪ್ಪದೆ ಕಳುಹಿಸುತ್ತಾ ಬರಬೇಕೆಂದೂ, ಅಂಥ ವರದಿಗಳನ್ನು ಈ ಶಾಸನವಿಧಾಯಕ ಸಭೆಯ ಸಭಿಕರಿಗೆ ಕಳುಹಿಸಿಕೊಡಬೇಕೆಂದೂ ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ. ಹೀಗೆಂಬ ಸವರಣೆಗೆ ಮ|| ತನಿಕಾಚಲಂ ಶೆಟ್ಟಿಯವರು ಒಪ್ಪಿಕೊಂಡರು.

ದಿ|| ಬ|| ಎ. ಕೃಷ್ಣನ್ ನಾಯರ್‌ರವರು—ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವನ್ನು ಕುರಿತು ಈಗಲೇ ಕೆಲನಿಬಂಧನೆಗಳು ಇರುವುವೆಂದೂ, ಪಕ್ಷಪಾತವಿಲ್ಲದೆ ಎಲ್ಲ ವರ್ಗಗಳವರಿಗೂ ನ್ಯಾಯವಾಗಿ ಸರ್ಕಾರದುದ್ಯೋಗಗಳನ್ನು ಕೊಡುತ್ತಾ ಬರುವುದು ಅವಶ್ಯಕವೆಂದೂ ಸ್ಪಷ್ಟೀಕರಿಸಿ ಮಾತನಾಡಿದರು. ಬಳಿಕ ದಿ||ಬ|| ಆರ್. ವೆಂಕಟರತ್ನಂನಾಯಡುರವರು—ಅ|| ನಾಪುರವರ ಸವಣೆಯು ನನಗೆ ಸಂತೋಷಕರವಾಗಿರುವುದು; ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವು ಇದ್ದೇತೀರಬೇಕೆಂಬ ಧರ್ಮಸೂತ್ರವನ್ನು ಸರ್ಕಾರದವರು ಈಗ ಗುರ್ತಿಸಿದರು. ಅದಕ್ಕಾಗಿ ಅವರಿಗೆ ನಾವು ಕೃತಜ್ಞರು, ಎಂದು ಹೇಳಿದರು. ಪ್ರತಿಕೂಲವಾಗಿ ಯಾರೂ ಅಭಿಪ್ರಾಯ ಕೊಡದೆ ಸರ್ವರೂ ತೀರ್ಮಾನವನ್ನಂಗೀಕರಿಸಿದರು.

ಬಳಿಕ ಅದೇ ತನಿಕಾಚಲಂ ಶೆಟ್ಟಿಯವರು ಇನ್ನೊಂದು ತೀರ್ಮಾನವನ್ನು ಪ್ರತಿಪಾದಿಸಿದರು, ಏನೆಂದರೆ—ಮದ್ರಾಸು ಸರ್ಕಾರದ ಸೆಕ್ರೆಟರಿಯೆಟ್ಟಿನಲ್ಲಿ ಸಿವಿಲ್‌ಸರ್ವೆಂಟರಹೊರತು ಉಳಿದ ಉದ್ಯೋಗಿಗಳಲ್ಲಿ ಬ್ರಾಹ್ಮಣರಂತೆಯೇ ಇತರ ಸಂಘಗಳವರೂ ಸಮಾನಸಂಖ್ಯೆಗೆ ಬರುವವರೆಗೆ ಮೂರುವರ್ಷ ಕಾಲದೊಳಗೆ ಎಲ್ಲ ಸ್ಥಾನಗಳಲ್ಲೂ ಬ್ರಾಹ್ಮಣೇತರರನ್ನೇ ಸೇರಿಸಬೇಕು. ಹೀಗೆ ಇತರರನ್ನೂ ಸೇರಿಸಿ ಸಮಾನಪಡಿಸುವುದಕ್ಕಾಗಿ ಈಗ ಸೆಕ್ರೆಟರಿಯಟ್ಟಿನಲ್ಲಿರುವ ಕೆಲ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಿಯೊ ಅಥವಾ ಬೇರೆ ಹೊಸ ಉದ್ಯೋಗಗಳನ್ನು ಕೊಟ್ಟೋ ಸ್ಥಲ ಬಿಡಿಸಬೇಕೆಂದು ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ.

ಇದರಮೇಲೆ ದಿ|| ಬ|| ಎಲ್. ಎ. ಗೋವಿಂದರಾಘವಯ್ಯರು ಆಕ್ಷೇಪಿಸಿ, ಮೊದಲು ಮಾಡಿದ ತೀರ್ಮಾನದಲ್ಲೇ ಈ ವಿಷಯವೂ ಸೇರಿಹೋಗುವುದಿಲ್ಲವೆ? ಎಂದರು.

ಅದಕ್ಕೆ ತನಿಕಾಚಲಂ ಶೆಟ್ಟಿಯವರು—ಹಾಗಲ್ಲ, ಸೆಕ್ರೆಟರಿಯಟ್ಟು ಒಂದು ಒಳಕೋಟೆಯಂತಿರುವುದು; ನಾವು ಒಂದು ಕೋಟೆಯಲ್ಲಿದ್ದೇವೆ. ಸೆಕ್ರೆಟರಿಯಟ್ಟು ಇದರ ಒಳಕೋಟೆ. ಬ್ರಾಹ್ಮಣರು ಈ ಕೋಟೆಗೆ ದ್ವಾರಪಾಲಕರು. ೧೯೧೮ ನೆ ವರ್ಷದಲ್ಲಿ ಈ ಸೆಕ್ರೆಟರಿಯಟ್ಟಿನಲ್ಲಿದ್ದ ೩೭ ಮಂದಿ ಸೂಪರಿಂಟೆಂಡೆಂಟರೊಳಗೆ ಬ್ರಾಹ್ಮಣರು ೨೯ ಮಂದಿಯೂ, ಕ್ರೈಸ್ತರು ೭ ಮಂದಿಯೂ, ಒಬ್ಬ ಯೂರೋಪಿಯನ್ನೂ ಇದ್ದರು. ಈಗಲಾದರೊ ಬ್ರಾಹ್ಮಣರು ೩೨ ಮಂದಿಯೂ, ಕ್ರೈಸ್ತರು ೩ ಮಂದಿಯೂ, ಬ್ರಾಹ್ಮಣೇತರ ಹಿಂದುವು ಒಬ್ಬನೂ ಇದ್ದಾರೆ. ವಿದ್ಯಾಶಕ್ತಿ ಸಾಮರ್ಥ್ಯದಲ್ಲಿ ಬ್ರಾಹ್ಮಣೇತರರೇನೂ ಕಡಿಮೆಯಾದವರಲ್ಲ. ಇದೇ ಸೆಕ್ರೆಟರಿಯಟ್ಟಿನ ಗುಮಾಸ್ತೆಯರೊಳಗೆ ೧೯೧೮ ನೆ ವರ್ಷದಲ್ಲಿ ೧೨೧ ಮಂದಿ ಬ್ರಾಹ್ಮಣರೂ, ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೨ ಮಂದಿ ಕ್ರೈಸ್ತರೂ, ಇಬ್ಬರು ಮಹಮ್ಮದೀಯರೂ ಇದ್ದರು. ಈಗ ೧೧೧ ಮಂದಿ ಬ್ರಾಹ್ಮಣರೂ ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೮ ಮಂದಿ ಕ್ರೈಸ್ತರೂ ಇಬ್ಬರು ಮಹಮ್ಮದೀಯರೂ ಇದ್ದಾರೆ ಎಂದರು.

ಡಾಕ್ಟರ್ ಸಿ. ನಟೇಶನ್‌ರವರು ತೀರ್ಮಾನವನ್ನು ಅನುಮೋದಿಸಿದರು.

ಬಳಿಕ ಸರ್ಕಾರದ ಪಕ್ಷದಿಂದ ಅ|| ನಾಪುರವರು ಮಾತನಾಡಿದುದರಲ್ಲಿ-ಸೆಕ್ರೆಟರಿಯಟ್ಟಿನೊಳಗೆ ಬ್ರಾಹ್ಮಣರ ಸಂಖ್ಯೆ ಹೆಚ್ಚಾಗಿರುವುದು ನಿಜವೇ; ಆದರೂ ಅಲ್ಲಿ ಬಹಳ ಮೇಧಾವಿಗಳಾದವರೇ ಇರಬೇಕಾದುದು ಅವಶ್ಯಕವೆಂದೂ, ಇತರರು ಈಗೀಗ ವೃದ್ಧಿಯಾಗುತ್ತಿರುವರೆಂದೂ, ಅಲ್ಲಿರುವ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಬೇಕಾದರೆ ಅಲ್ಲಿಯ ಸಂಬಳಗಳಿಗೂ ಇಲ್ಲಿಯ ಸಂಬಳಗಳಿಗೂ ಬಹಳ ವ್ಯತ್ಯಾಸವಿರುವುದೆಂತಲೂ, ಇವರನ್ನು ವರ್ಗಾಯಿಸಲೂ ಬ್ರಾಹ್ಮಣೇತರರ ಕಷ್ಟವನ್ನು ತೊಲಗಿಸಲೂ ತಕ್ಕ ಮಾರ್ಗವನ್ನು ತೋರಿಸಿಕೊಟ್ಟರೆ ನಾನು ಯಥಾಶಕ್ತಿ ಸಹಾಯಮಾಡುವುದಕ್ಕೆ ಅಭ್ಯಂತರವಿಲ್ಲವೆಂತಲೂ, ತತ್‌ಕ್ಷಣವೇ ಬ್ರಾಹ್ಮಣೇತರರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಕೋರಿದರೆ ಪ್ರಯೋಜನವಿಲ್ಲವೆಂತಲೂ, ಈಗ್ಗೆ ೨ ವರ್ಷಗಳಿಂದಲೂ ಎಲ್ಲ ಕಚೇರಿಗಳಲ್ಲೂ ಬ್ರಾಹ್ಮಣೇತರರನ್ನು ಹೆಚ್ಚುಹೆಚ್ಚಾಗಿ ಸೇರಿಸಿಕೊಳ್ಳುತ್ತಲೇ ಇದ್ದಾರೆಂತಲೂ ಈಗಣ ಪ್ರಭುತ್ವಯಂತ್ರವನ್ನು ಒಂದು ದಿನದಲ್ಲೇ ಮಾರ್ಪಡಿಸುವುದು ಅಸಾಧ್ಯವೆಂತಲೂ ಹೇಳಿದರು.

ಮ|| ಪಿ. ಶಿವರಾವು ಎಂಬ ಸಭಿಕರು ತೀರ್ಮಾನಕ್ಕೆ ವಿರುದ್ಧವಾಗಿ ಮಾತನಾಡುವಾಗ್ಗೆ—ಇಂಥ ಜಾತಿಮತ ಸಂಬಂಧವಾದ ವಿಚಾರಗಳನ್ನು ಈ ಸಭೆಯಲ್ಲಿ ನಾವು ಚರ್ಚಿಸುವುದಕ್ಕೆ ಹಿಡಿದರೆ ಈಗಣ ನೂತನ ಸಭೆಗಳ ಕಾರ್ಯವಿಧಾನವು ಹೇಗಿರುವುದೋ ಎಂದು ನಿರೀಕ್ಷಿಸುತ್ತಲಿರುವ ಪ್ರಪಂಚವೆಲ್ಲಾ ನಮ್ಮನ್ನು ನೋಡಿ ನಗುವುದೆಂದು ಹೇಳಿದರು.

ಅದಕ್ಕೆ ದಿ|| ಬ|| ಪಿ. ಕೇಶವಪಿಳ್ಳೆಯವರು ತಕ್ಕ ಉತ್ತರವನ್ನು ಕೊಟ್ಟುದರಲ್ಲಿ—ಪ್ರಪಂಚವು ನಮ್ಮನ್ನು ನೋಡಿ ಏತಕ್ಕೆ ನಗಬೇಕು? ಯೂರೋಪ್ಯರಿಗೆ ಅಧಿಕಾರವಾಗಬೇಕು, ಬ್ರಾಹ್ಮಣರಿಗೆ ಅಧಿಕಾರವಾಗಬೇಕು, ಎಂದು ತಂತಮ್ಮವರಿಗೆ ಅಧಿಕಾರಾಧಿಕ್ಯವನ್ನು ಕೋರಿಕೊಳ್ಳದೆ ಇರುವವರು ಯಾರಿದ್ದಾರೆ? ಎಂದರು.

ಅದರಮೇಲೆ ಮತ್ತೆ ಗೋವಿಂದರಾಘವಯ್ಯರು—ಇದಕ್ಕೆ ಮುಂಚೆ ಮಾಡಿದ ತೀರ್ಮಾನಕ್ಕೆ ನಾನು ಅನುಮೋದಿಸಿದ್ದೇನೆ. ಈಗಣ ಪರಿಸ್ಥಿತಿಗೆ ಬ್ರಾಹ್ಮಣನು ಎಷ್ಟುಮಾತ್ರವೂ ಉತ್ತರವಾದಿಯಲ್ಲ; ಬ್ರಾಹ್ಮಣನನ್ನು ಅಧಮಸ್ಥಿತಿಗೆ ತರಬೇಡಿ. ಅತನ ಸ್ಥಿತಿಗೆ ನೀವೆಲ್ಲರೂ ಬರಬಹುದು ಎಂದರು.

ದಿ|| ಬ|| ಡಿ. ಶೇಷಗಿರಿರಾವ್‌ರವರು—ಸರ್ಕಾರದುದ್ಯೋಗದಲ್ಲಿ ಸೇರಿರುವ ಬ್ರಾಹ್ಮಣರ ಗತಿಯೇನೆಂದು ನನಗೆ ಈಗಲೇ ಅತ್ಯಂತ ಚಿಂತೆಯಾಗಿದೆ. ಅವರಿಗೆ ಯಾವ [illegible] ಆಗುವುದಿಲ್ಲವೆಂದು ಅ|| ನಾಪುರವರು [illegible]

ಬಳಿಕ ಆಂಗ್ಲಜನರು ಎಷ್ಟು ನ್ಯಾಯಪ್ರಿಯರೆಂದು ನನಗೆ ಆನಂದವುಂಟಾಗಿದೆ. ಇನ್ನು ಮೇಲೆ ಬ್ರಾಹ್ಮಣ ತರುಣರಿಗೆ ಸರ್ಕಾರಿ ಉದ್ಯೋಗಗಳು ದೊರೆಯದೆಹೋದರೆ ಅವರು ಇತರ ವೃತ್ತಿಗಳಲ್ಲಿ ಪ್ರವೇಶಿಸಬಹುದು. ಸರ್ಕಾರದುದ್ಯೋಗಗಳು ತಪ್ಪಿದರೆ ಬೇರೆ ಕೆಲಸವಿಲ್ಲವೆ? ಯಾವ ಮಾರ್ಗವೂ ಇಲ್ಲದೆ ಹೋದರೆ ಮರಣಮಾರ್ಗವೇ ಗತಿತಾನೇ? ಬಲವಂತರು ಜೀವಿಸುವ ಕಾಲದಲ್ಲಿ ದುರ್ಬಲರು ಪಾತಾಳಕ್ಕೆ ಹೋಗಲೇಬೇಕಷ್ಟೆ? ಎಂದರು.

ಮ|| ಟಿ. ಶಿವಶಂಕರಂ ಪಿಳ್ಳೆಯವರು ತೀರ್ಮಾನಕ್ಕೆ ಅನುಮೋದನವನ್ನು ಕೊಟ್ಟರು. ಕಡೆಗೆ ತೀರ್ಮಾನದ ಮೇಲೆ ಸಭಿಕರ ಓಟುಗಳನ್ನು ಕೇಳಲಾಗಿ, ಸಾಧಾರಣವಾಗಿ ಬ್ರಾಹ್ಮಣ ಸಭಿಕರೆಲ್ಲಾ ವಿರುದ್ಧವಾಗಿಯೇ ಇದ್ದು ತಮ್ಮ ಅಸಂಮತಿಯನ್ನು ತೋರಿಸಿದರು. ಅದರಿಂದ ೨೨ ಮಂದಿ ಪ್ರತಿಕೂಲರೂ, ೪೯ ಮಂದಿ ಅನುಕೂಲರೂ ಆಗಿ ಓಟುಕೊಟ್ಟುದರಿಂದ ಮ|| ತನಿಕಾಚಲಂಶೆಟ್ಟರ ತೀರ್ಮಾನವೇ ಅಂಗೀಕೃತವಾಯಿತು.

ಸರ್ಕಾರದ ಉದ್ಯೋಗಗಳನ್ನೆಲ್ಲಾ ಒಂದೇ ಜನ ವರ್ಗದವರೇ ವಿಶೇಷವಾಗಿ ಆಕ್ರಮಿಸಿ, ಪರರಿಗೆ ನಾನಾ ವಿಧದ ತೊಂದರೆಗಳನ್ನು ಕೊಟ್ಟು ಹಿಂಸೆಪಡಿಸುತ್ತ ಬಂದುದರಿಂದ ಅಧಿಕಾರಶಕ್ತಿಯನ್ನು ಇತರರು ಪ್ರತಿಭಟಿಸುವುದು ಕಷ್ಟತರವಾಗಿರುವುದರಿಂದಲೂ, ಸಕಲ ಜನವರ್ಗದ ಪ್ರಾಬಲ್ಯವೂ ಒಂದೇ ಸಮನಾಗಿದ್ದರೆ ದೇಶಕ್ಕೂ ಪ್ರಜಾಕೋಟಿಗೂ ಹಿತವಾಗುವುದೆಂಬ ಯೋಚನೆಯಿಂದಲೂ ಹಿಂದೆಬಿದ್ದಿದ್ದ ಜನವರ್ಗದವರು ಈಗ ಎಚ್ಚತ್ತು ತಮ್ಮ ಚಳವಳವನ್ನು ವೃದ್ಧಿಪಡಿಸುತ್ತಿದ್ದಾರೆ. ಅದು ಅವರಿಗೆ ಧರ್ಮವೇ ಆಗಿರುತ್ತದೆ. ಆದರೆ ಇದುವರೆಗೆ ಅಖಂಡವಾಗಿ ಅಧಿಕಾರ ದರ್ಪದ ಸವಿಯನ್ನನುಭವಿಸಿದವರು ಈಗ ಅದರಲ್ಲಿ ಸ್ವಲ್ಪ ಭಾಗವನ್ನು ಕಳೆದುಕೊಳ್ಳಬೇಕಾದರೂ ಸಂಕಟಪಡುತ್ತಾರೆ. ಅದೂ ಅವರಿಗೆ ಸ್ವಭಾವವೇ. "ಭವಿತವ್ಯಂ ಭವತ್ಯೇವ ನಾರಿಕೇಳ ಫಲಾಂಬುವತ್ | ಗಂತವ್ಯಂ ಗಚ್ಛತಿ ಸದಾ ಗಜಭುಕ್ತಕಪಿತ್ಥವತ್ ||"

ಮ್ಯು|| ಕೌನ್ಸಿಲರುಗಳ ಆರಿಸುವಿಕೆ.

ಈ ತಿಂಗಳ ಕಡೆಯ ವಾರದಲ್ಲಿ ರಾಜಧಾನಿಯೊಳಗೂ, ಮುಂದಣ ತಿಂಗಳಲ್ಲಿ ಬೆಂಗಳೂರಿನೊಳಗೂ ಮ್ಯುನ್ಸಿಪಲ್ ಕೌನ್ಸಿಲರುಗಳ ಆರಿಸುವಿಕೆಯು ನಡೆಯಲು ಏರ್ಪಾಟಾಗಿದೆ. ಪ್ರಜಾಸಮುದಾಯದಲ್ಲಿ ವಿದ್ಯಾಬುದ್ಧಿವಿಕಾಸಗಳೂ ತಮ್ಮ ಊರು ತಮ್ಮ ಪಟ್ಟಣ ತಮ್ಮ ದೇಶದ ಹಿತಚಿಂತನೆಯ ಭಾವಗಳೂ ಪ್ರಬಲಿಸದಿರುವ ಕಾಲದಲ್ಲಿ ದೇಶೀಯ ಸರ್ಕಾರದ ಕಾರ್ಯಗಳೇ ಆಗಲೀ ಸ್ಥಳಿಕ ಸರ್ಕಾರದ ಕಾರ್ಯಗಳೇ ಆಗಲೀ ಪ್ರಜೆಗಳ ಅಭಿಪ್ರಾಯಗಳಿಗೆ ಅನುಸಾರವಾಗಿ ನಡೆಯುತ್ತವೆಂದು ಹೇಳಲಾಗುವುದಿಲ್ಲ. ಪ್ರಜೆಗಳಲ್ಲಿ ವಿದ್ಯಾವಿವೇಕ ನಾಗರಕತಾದಿ ಲಕ್ಷಣಗಳು ವೃದ್ಧಿಗೊಳ್ಳುತ್ತ ಬಂದ ಬಳಿಕ ಸರ್ಕಾರದ ಕಾರ್ಯಗಳು ಪ್ರಜಾಮತಕ್ಕೆ ವಿರುದ್ಧವಾಗಿ ನಿರಂಕುಶತನದಿಂದ ನಡೆಯುವುದು ಸಾಧ್ಯವಲ್ಲ. ಮತ್ತು ಪ್ರಜಾಸಮುದಾಯವೆಲ್ಲಾ ವಿದ್ಯಾವಿಕಾಸಗೊಳ್ಳದಿದ್ದರೆ ನಿಷ್ಪಕ್ಷಪಾತವಾದ ಆಡಳಿತವು ದೇಶದಲ್ಲಿ ನಡೆಯುವುದೂ ಸಾಧ್ಯವಲ್ಲ. ಈಗೀಗ ದೇಶದಲ್ಲಿ ಪ್ರ



APT. Y. V. AYYA.

VASANTHA COTTAGE.
BASAVESWARA TEMPLE ROAD,
BANGALORE 25-9-27.

V. R. Chikkachennaiya appa. Setty Esqr

ear Sir,

May I request you to give me the leasure of your company at the inner to be given in honour of r. G. Paramasiviah B. A., LL. B., ub-judge, at my residence at 12 oon precisely on Monday the 27th nstant.

I am
Yours Sincerely,
YVAyya

[illegible]

ಸುಮ್ಮನೆ ಕುಳಿತಿದ್ದವರು ಕುಳಿತೇ ಕೆಡುತ್ತಾರೆ. ನಿಂತು ಕೆಲಸ ಮಾಡಿದವರು ಫಲವನ್ನನುಭವಿಸಿಕೊಳ್ಳುತ್ತಾರೆ. ಊರಿನ ಪ್ರಜೆಗಳೆಲ್ಲಾ ಮ್ಯುನ್ಸಿಪಾಲಿಟಿಯಲ್ಲಿ ಕೆಲಸಮಾಡುವುದಿಲ್ಲ. ಊರಿನ ಪ್ರಜೆಗಳ ಪ್ರತಿನಿಧಿಗಳೇ ಕೌನ್ಸಿಲರುಗಳಾಗಿ ಎಲ್ಲ ಪ್ರಜೆಗಳಿಗೋಸ್ಕರ ಅಲ್ಲಿ ಕೆಲಸಮಾಡುತ್ತಾರೆ. ಎಂದ ಬಳಿಕ ಊರನ್ನೇ ಒಂದು ತೆಪ್ಪವನ್ನಾಗಿಯೂ ಉಳಿದ ಜನರನ್ನೆಲ್ಲಾ ಅದರಲ್ಲಿ ಕುಳಿತಿರುವ ಪ್ರಯಾಣಿಕರನ್ನಾಗಿಯೂ ಕಲ್ಪಿಸಿಕೊಂಡರೆ, ತಾವು ಆರಿಸಿ ಕಳುಹಿಸುವ ಕೌನ್ಸಿಲರನ್ನು ದೋಣಿಯನ್ನು ನಡೆಯಿಸುವ ನಾವಿಕನನ್ನಾಗಿ ಎಣಿಸಬಹುದು. ಮಹಾ ಪ್ರವಾಹದಲ್ಲಿ ದೋಣಿಯನ್ನು ನಡೆಯಿಸುವ ನಾವಿಕನು ಅಸಮರ್ಥನೂ ವಿಶ್ವಾಸಘಾತಕನೂ ಆಗಿದ್ದರೆ ದೋಣಿಯಲ್ಲಿ ಕುಳಿತಿರುವವರ ಅವಸ್ಥೆಯನ್ನು ಹೇಳಬೇಕಾದುದೇ ಇಲ್ಲ. ಅದರಂತೆಯೇ ಈ ಸಮಯದಲ್ಲಿ ನಮ್ಮ ಓಟುಗಳನ್ನು ಕೊಟ್ಟು ನಾವು ಆರಿಸುವ ಪ್ರತಿನಿಧಿಗಳು ನಿಜವಾಗಿ ನಮ್ಮ ಯೋಗಕ್ಷೇಮ ಚಿಂತೆಯನ್ನು ಮಾಡುವಲ್ಲಿ ದಕ್ಷರೆ? ಅವರು ನಂಬುಗೆಗೆ ಅರ್ಹರೆ? ಅವರು ಸ್ವಾರ್ಥಕ್ಕಲ್ಲದೆ ಪ್ರಜಾಹಿತಾರ್ಥವಾಗಿ ನಿರ್ವಂಚನೆಯಿಂದ ಕೆಲಸ ಮಾಡಬಲ್ಲವರೆ? ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ, ತಕ್ಕವರೆಂದು ತೋರಿದವರಿಗೇ ಓಟುಗಳನ್ನು ಕೊಡಬೇಕೇಹೊರತು ಪರರ ಬಲಾತ್ಕಾರಕ್ಕೋ ದಾಕ್ಷಿಣ್ಯಕ್ಕೋ ಅಥವಾ ಉಪಸರ್ಗಕ್ಕೋ ವಶರಾಗಿ ಸಿಕ್ಕಸಿಕ್ಕದವರಿಗೆ ಓಟುಗಳನ್ನು ಕೊಟ್ಟುಬಿಟ್ಟರೆ ಉತ್ತರತ್ರ ತಮ್ಮ ಹಗ್ಗವನ್ನು ಕೊಟ್ಟು ತಾವೇ ಕೈಕಾಲು ಕಟ್ಟಿಸಿಕೊಳ್ಳುವಂಥ ಸ್ಥಿತಿಯು ಬರುವುದೇನೂ ಸುಳ್ಳಲ್ಲ. ಊರ ಕ್ಷೇಮಾಭಿವೃದ್ಧಿಯು ಓಟರುಗಳ ಕೈಯಲ್ಲಿರುವುದು. ಅವರ ಓಟುಗಳಿಗೆ ಘನವಾದ ಬೆಲೆಯಿರುವುದು. ಅದನ್ನು ಅವರು ಈಗಣ ಸಮಯದಲ್ಲಿ ದುರ್ವಿನಿಯೋಗಪಡಿಸಬಾರದು. ನಮ್ಮ ಪುರಸಂಘಾಧ್ಯಕ್ಷರೂ ಅವರ ಸಹಾಯಕರಾದ ಉದ್ಯೋಗಿಗಳೂ ಹಿಂದೆ ನಮ್ಮಿಂದ ಓಟುಗಳನ್ನು ಪಡೆದು ಕೌನ್ಸಿಲ್ ಪೀಠಾಧಿರೋಹಣ ಮಾಡಿದ ಕೆಲವರೂ ಸಹ ವರ್ಷಕ್ಕೆ ಒಂದುದಿನವಾದರೂ ಪಟ್ಟಣದ ಕೆಲ ಭಾಗಗಳಿಗೆ ದರ್ಶನವನ್ನೇ ಕೊಟ್ಟುದಿಲ್ಲ. ಇಂಥವರನ್ನು ನಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸಿದರೆ ನಮಗೆ ಕ್ಷೇಮವಾಗುವುದೆಂದರೇನು? ಅದುಕಾರಣ ಈಗ ಕೌನ್ಸಿಲರಾಗುತ್ತೇವೆಂದು ಉಮೇದುವಾರರಾಗಿ ನಿಂತಿರುವವರಲ್ಲಿ ನಮ್ಮ ನೆರೆಹೊರೆಯವರಾಗಿ ನಮ್ಮ ಅನುಕೂಲಗಳನ್ನೂ ಆರೋಗ್ಯವನ್ನೂ ಹಿತವನ್ನೂ ತ್ರಿಕರಣದಿಂದಲೂ ಕೋರುವ ಉದಾರಭಾವವೂ ಸಚ್ಚರಿತವೂ ವಿಶ್ವಾಸವೂ ಯಾರಲ್ಲುಂಟೋ ಅಂಥವರುಗಳಿಗೇ ನಮ್ಮ ಓಟುಗಳನ್ನು ಕೊಡಲು ನಿಶ್ಚಯಮಾಡಿಕೊಂಡು, ಆಯಾ ಮೊಹಲ್ಲಾ ಕೌನ್ಸಿಲರುಗಳ ಆರಿಸುವಿಕೆಯ ದಿವಸ ಆಯಾ ಸ್ಥಲಕ್ಕೆ ಗೊತ್ತಾಗಿರುವ ಕಾಲಕ್ಕೆ ಪ್ರತಿಯೊಬ್ಬ ಓಟರುಗಳೂ ಹೋಗಿ ತಮ್ಮ ಓಟನ್ನು ಕೊಟ್ಟು ಬರುವಲ್ಲಿ ಉದಾಸೀನಮಾಡಲಾಗದೆಂದು ಸೂಚಿಸುತ್ತೇವೆ.

ತಮ್ಮ ಅಭ್ಯುದಯಕ್ಕೆ ವೀರಶೈವರು ಮಾಡಬೇಕಾದ ಕರ್ತವ್ಯ.

ಬಾಂಧವರೇ ಕಾಲಸ್ಥಿತಿಯು ಬದಲಾಯಿಸುತ್ತಿದೆ. ನಮ್ಮ ಬ್ರಾಹ್ಮಣ ಸಹೋದರರು ಶ್ಲಾಘನೀಯವಾದ ಸಂಘಗಳನ್ನು ಸ್ಥಾಪಿಸುತ್ತಿದ್ದಾರೆ. ಅಭಿವೃದ್ಧಿಗೆ ಅತ್ಯವಶಕವಾದ ಏರ್ಪಾಡು
ಜಾಗರೂಕತೆಯಿಂದ ಮಾಡುತ್ತಿದ್ದಾರೆ. ಅವರನ್ನು
ನಾವುಗಳೂ ಹೋಗಬೇಕು. ಇಲ್ಲವಾದರೆ ನಾಶ
ಶ್ರದ್ಧೆಯಿಂದಿರುವವರ ಪಾಲಾಗುತ್ತದೆ. ನಾವು
ಂದಿರುವ ಏರ್ಪಾಟುಗಳು ಮೈಸೂರುದೇಶದ ಎಲ್ಲಾ
ಯೂ ತಿಳಿಯಬಂದು ಪ್ರತಿಯೊಬ್ಬರ ಸಹಾಯವೂ
ಅವಶ್ಯಕವಾಗಿರುತ್ತದೆ. ಅದುದರಿಂದ ಪ್ರತಿ ತಾ
ಲೂ ನಮಗೆ ವೀರಶೈವ ಮಂಡಳಿಯಲ್ಲಿ ೫ ಜನ
ಸ್ಯರ ಹೆಸರುಗಳು ತಿಳಿಯಬೇಕಾಗಿರುತ್ತವೆ. ಅವರ
ರ ವಿದ್ಯಾಭಿವೃದ್ಧಿ ಮುಂತಾದ ಕಾರ್ಯಗಳಿಗೆ
ಡಬೇಕಾದ ಏರ್ಪಾಟುಗಳು ತಿಳಿಯಿಸಲ್ಪಡುತ್ತವೆ.
ಗತಿಗಳು ಪ್ರತಿ ಗ್ರಾಮಕ್ಕೂ ತಿಳಿಯಬೇಕಾಗು
ಪತ್ರಿಕೆಯನ್ನು ಓದುವಂಥ ಯಾವ ವೀರಶೈವ ಮ
ದರೂ ೫ಕ್ಕೆ ಕಮ್ಮಿಯಿಲ್ಲದೆ ಒಂದೊಂದು ತಾಲ್ಲೂ
ವೀರಶೈವಮುಖಂಡರ ಹೆಸರನ್ನು ಈ ಪತ್ರಿಕಾಕ
ಬೇಕೆಂದು ಕೋರಿಕೆ. ಯಾವುದಾದರೂ ತಾಲ್ಲೂ
ಪತ್ರಿಕೆಯನ್ನು ತರಿಸಿ ಓದುವವರಿಲ್ಲದಿದ್ದರೆ ನೆರೆಯ
ರು ಈ ಸಹಾಯವನ್ನು ನಮಗೆ ಮಾಡಬೇಕೆಂದು
ೇವೆ. ಈ ತಿಂಗಳ ಅಂತ್ಯದೊಳಗೆ ಎಲ್ಲಾ ತಾಲ್ಲೂ
ನಮಗೆ ಹೆಸರುಗಳು ತಿಳಿಯಬರುವುವೆಂದು ನಂಬಿ
ಈ ಹೆಸರುಗಳನ್ನು ನಾವು ಪ್ರಕಟಿಸುವುದಿಲ್ಲ. ಒಂ
ಕಿನಿಂದ ಒಬ್ಬರಿಗಿಂತ ಹೆಚ್ಚು ಜನರು ಐದುಐದ
ಗಳನ್ನು ಕೊಟ್ಟರೆ ಅವೆಲ್ಲವನ್ನೂ ನಾವು ತೆಗೆದು
ಕನಿಷ್ಠಪಕ್ಷ ೫ ಜನರ ಹೆಸರು ತಿಳಿಯಬೇಕಾ
ಹೆಚ್ಚು ಎಷ್ಟಿದ್ದರೆ ಅಷ್ಟೂ ಉತ್ತಮ. ತಾಲ್ಲೂ
ನೂರಾರು ಜನರು ನಮಗೆ ದೊರೆತರೆ ಮತ್ತೂ
ಎಲ್ಲಾ ತಾಲ್ಲೂಕಿನಿಂದಲೂ ಹೆಸರುಗಳು ತಿಳಿದ
ಒಟ್ಟುಪಟ್ಟಿಯನ್ನು ಮಾಡಿ, ಎಲ್ಲಾ ಹೆಸರುಗಳೂ
ಗೂ ತಿಳಿಯುವಂತೆ ಒಬ್ಬೊಬ್ಬರಿಗೆ ಒಂದೊಂದು
ಕಳುಹಿಸುತ್ತೇವೆ. ಅದರಿಂದ ಎಲ್ಲರಿಗೂ ಅಂತರಂ
ಯಾರುಮತಾಭಿಮಾನದಿಂದ ಮತಾಭಿವೃದ್ಧಿಗೆ
ಗಿದ್ದಾರೆಂಬುದು ತಿಳಿಯಬಹುದು. ಅತಿ ಜಾಗ್ರ
ಗಳನ್ನು ತಿಳಿಸುವಿರೆಂದು ನಂಬಿರುತ್ತೇವೆ.

THE INDIAN SOCIAL REFORMER ON MYSORE PROBLEMS.

The Indian Social Reformer furnishes the evidence that what is contained in the Bombay Chronicle about Mysore affairs is completely misleading and one sided. While the mis-leading statements of the Chronicle are based on the misinterpretation of the order of Government on the Miller Report, conveyed to them by the partisan class in Mysore which is for monopolisation of official authority to one sect of people, the contradiction by the Indian Social Reformer has for its statements the authority of the experience of an Indian publicist, the authority of direct observation by a leading gentleman like the Hon. Mr. Lalubhai Samaldas who had occasion to intimately study the conditions in Mysore by undertaking an extensive tour into the interior of the country, the authority of the impressions of the prevailing conditions in Mysore received by Mr. Devdhar and the authority of the Editor himself who had recently occasions to meet the men of leading in Mysore and to exchange views with them.

The causes for the Miller Committee Report are appreciated and hopes are entertained by the Indian Social Reformer that the loyal people of Mysore who are undoubtedly other than those who rush to the columns of the non-co-operationist journals for clamerous cry, have the good sense to take measures to preserve the abiding interests of the country. What contrast is there between an outburst caused by a hollow bubble and a sane statement based on solid facts.

We have no desire for controversy. Nor do we like the idea of a rupture arising in the country as a consequence of Miller Committee Report. A series of misleading statements having appeared in certain journals in this country, which serve the interests of one minor class of people who not having been satisfied with such mis-representations here, have also gone outside the country to spread the mischief consequent on mis-statements, we consider it our sacred duty to our Beloved Maharaja and to our country to take the earliest opportunity to contradict the mis-statements and to do our best to expose the falsity and the mischief involved in the mis-leading articles appearing in the Bombay Chronicle and the Madras Hindu.

Our Noble Dewan is certainly not an amateur statesman as was the case with his immediate predecessor who emerged to be the Dewan from the heaps of plans and estimates, and schemes and projects. Our Patriatic Sirdar has nothing of strangeness in his veins as was in the case of 4 out of 5 non-Engineer Dewans of Mysore. He knows the people of the country. He realises their wants. He does his best to remove the disabilities under which they have been systematically labouring for the last 40 years under the yoke of one class administration. He loves and is thoroughly loyal to. His Highness and if such a Patriatic Nobleman is not the statesman whom the country wants, whom else would the people want. Certainly not those upstarts who were something yesterday and are to-day the "Efficients" in the heaps of the examinations which they have passed. We want more justice and less examinations. We want more heart and less brains. We want statesmen whose heart beats with those of the people of the country. We are sorry to read the statements of malcontents with no reason for that bad spirit. The real people of Mysore have been silent till now and will speak hereafter to show the falsity of those who had the monopoly of Public service and who had the audacity to distort public opinion.

We have great hopes in the policy of the present Government and we have the trust that it has the courage of its conviction.

THE FUTILE GAME.

We do not know what has come about our Brahmin friends now a days. Their attitude and action are fully illustrative of the old bit correct saying 'ವಿನಾಶಕಾಲೇ ವಿಪರೀತಬುದ್ಧಿಃ'. The Miller Committee which is after all a belated grant of partial justice has altogether upset their mentality. While the non-Brahmins, who number 96% of the population of the State are finding the orders on the Miller Committee too inadequate to meet their present needs or to satisfy their just claims, the Brahmins who though are entitled to only 4% of the appointments have yet 50% reserved for them at the end of seven years a concession for which, in our earnest and candid opinion, there is not the slightest justification are madly raising a storm of opposition. Even the realisation of this partial justice by the non-Brahmins at the end of 7 long years is problematical, because of the suttle and insiduous ways of those who have now girded up their loins against this popular measure. When nothing as yet has been done by way of giving appointments to the non-Brahmins to the detriment of the Brahmins, already they have raised a hue and cry and with all their characteristic and traditional craft and cunning

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಆಗಸ್ಟ್ ತಾ|| ೧೪ ನೆಯ ಭಾನುವಾರ.

ನಮ್ಮ ಸಂಸ್ಥಾನದಲ್ಲಿ ರಾಷ್ಟ್ರೀಯಸಭಾ ಶಾಖಾ ಸಂಘವೇಕೆ?

ಪ್ರಜೆಗಳ ಅಭಿಪ್ರಾಯಗಳು ಸರ್ಕಾರಕ್ಕೂ ಸರ್ಕಾರದ ಉದ್ದೇಶಗಳು ಪ್ರಜೆಗಳಿಗೂ ತಿಳಿದು ಪರಸ್ಪರ ಹಿತಚಿಂತನೆಯಿಂದ ರಾಜ್ಯಕಾರ್ಯಗಳು ಸುಲಲಿತವಾಗಿ ಸಾಗುವುದಕ್ಕೆ ಸಾಧಕವಾಗುವಂತೆ ಪ್ರಜಾಪ್ರತಿನಿಧಿ ಸಭೆಯು ಮೊಟ್ಟಮೊದಲು ಏರ್ಪಾಟಾದುದು ನಮ್ಮ ಸಂಸ್ಥಾನದಲ್ಲೇ. ಅದರಿಂದೀಚೆಗೆ ಸ್ತ್ರೀವಿದ್ಯಾಭಿವೃದ್ಧಿಯ ವಿಶೇಷ ಪ್ರಯತ್ನ, ಜಲಪಾತದಿಂದ ವಿದ್ಯುಚ್ಛಕ್ತಿ ಸಮುತ್ಪಾದನೆ, ನಿಯಮನಿರ್ಮಾಣಸಭಾ ಸ್ಥಾಪನೆ, ನ್ಯಾಯಶಾಖಾ ಕಾರ್ಯಕಾರಿ ಶಾಖೆಗಳ ವಿಭಜನೆ, ಸಂಪದಭ್ಯುದಯ ಸಮಾಜಸ್ಥಾಪನೆ, ಸ್ವತಂತ್ರವಿದ್ಯಾಪೀಠ ಪ್ರತಿಷ್ಠಾಪನೆ ಇತ್ಯಾದಿ ದೇಶಾಭ್ಯುದಯಸಾಧಕ ಕಾರ್ಯಗಳೆಲ್ಲಾ ಒಂದೊಂದಾಗಿ ಹುಟ್ಟಿ ನಮ್ಮ ಸಂಸ್ಥಾನಕ್ಕೆ ಮಾದರಿ ಸಂಸ್ಥಾನವೆಂಬ ಪ್ರಸಿದ್ಧಿಯನ್ನುಂಟುಮಾಡಲಿಕ್ಕೆ ಸಾಧಕಗಳಾಗಿರುವುವು. ಮತ್ತು ಈ ದೇಶದ ಪಾಲ್ಯಪಾಲಕರ ಪ್ರೀತಿವಿಶ್ವಾಸಗಳೂ ರಾಜಭಕ್ತಿ ಪ್ರಜಾರಂಜನೆಗಳೂ ನಿಷ್ಕಳಂಕವಾಗಿ ನಡೆದುಬಂದಿರುವುವು. ಭರತಖಂಡ ಪ್ರಭುತ್ವದವರ ಪ್ರತ್ಯಕ್ಷ ಪರಿಪಾಲನೆಗೆ ಒಳಪಟ್ಟಿರುವ ದೇಶಭಾಗದ ಪ್ರಜೆಗಳಿಗಿಂತಲೂ ಇಲ್ಲಿಯ ಪ್ರಜೆಗಳ ಕ್ಷೇಮಲಾಭವು ನಮ್ಮ ಶ್ರೀಮನ್ಮಹಾರಾಜರ ಸರ್ಕಾರದವರಿಂದ ಅತಿಶಯವಾಗಿ ಗಮನಿಸಲ್ಪಡುತ್ತಿರುವುವು. ಅಲ್ಲಿಯ ಪ್ರಜೆಗಳಿಗಿಂತಲೂ ವಿಶೇಷವಾದ ಸೌಕರ್ಯಗಳೂ ಸುಖಶಾಂತಿಗಳೂ ನಮ್ಮಗಳಿಗೆ ಎಷ್ಟೋ ಭಾಗದಲ್ಲಿ ಅಧಿಕವಾಗಿರುವುವು. ಹೆಚ್ಚು ಮಾತಿನಿಂದೇನು? ನಾವು ಪರ್ಯಾಯವಾದ ಸ್ವರಾಜ್ಯವನ್ನೇ ಅನುಭವಿಸುತ್ತಿರುವೆವೆಂದು ಘಂಟಾಘೋಷವಾಗಿ ಹೇಳಬಹುದು.

ಹೀಗಿರುವಾಗ ನಮ್ಮ ದೇಶದಲ್ಲಿ ಕಾಂಗ್ರೆಸ್ ಶಾಖಾ ಕಮಿಟಿಯನ್ನು ಸ್ಥಾಪಿಸುವ ಪ್ರಯತ್ನಕ್ಕೆ ಕೆಲವರು ಬದ್ಧಕಂಕಣರಾಗಿರುವುದಕ್ಕೇನು ಗುರಿಯೋ ತಿಳಿಯಲಿಲ್ಲ. ಸದ್ಯದಲ್ಲಿ ನಮ್ಮ ಕಷ್ಟಗಳನ್ನು ನೀಗಿಸಿಕೊಂಡು ಹಿತವನ್ನು ಪಡೆದುಕೊಳ್ಳಲಿಕ್ಕೆ ಬೇಕಾದಷ್ಟು ಸಭಾಸೌಕರ್ಯಗಳು ನಮಗೆ ಇದ್ದೇ ಇರುತ್ತವೆ. ಅಲ್ಲದೆ ಈಗಣ ಕಾಂಗ್ರೆಸ್ ಸಭೆಯ ಸ್ಥಿತಿಯು ಪೂರ್ವದಂತೆ ಇಲ್ಲ. ಜನ್ಮಾರಭ್ಯ ಆ ಸಭೆಗೆ ಹಾಲೆರೆದು ಸಾಕಿ ದೊಡ್ಡದುಮಾಡಿ ದೇಶಹಿತೈಕಸಾಧನದಲ್ಲೇ ತಮ್ಮ ಜೀವಿತವನ್ನೆಲ್ಲಾ ಧಾರೆಯೆರೆದು ಅದರ ಕಷ್ಟಸುಖಗಳ ಮತ್ತು ಸದಸನ್ಮಾರ್ಗಗಳ ಅನುಭವವನ್ನೆಲ್ಲಾ ಪಡೆದಿರುವ ಸಾತ್ವಿಕರಾದ ಮಿತವಾದಿಗಳೆಲ್ಲಾ ಈಗ ಅದರಿಂದ ದೂರಸ್ಥರಾಗಿದ್ದಾರೆ. ಕಾರಣವೇನೆಂದರೆ ಈಗಣ ರಾಷ್ಟ್ರೀಯ ಸಭೆಯ ಮುಖ್ಯತತ್ವವು ಪ್ರಭುತ್ವಕ್ಕೆ ಯಾವುದೊಂದು ಸಹಾಯವನ್ನೂ ಮಾಡದೆ ಅದನ್ನು ಆದಷ್ಟು ಬೇಗನೆ ಸ್ತಂಭನಗೊಳಿಸಬೇಕೆಂಬುದೇ ಆಗಿರುತ್ತದೆ. ಅಂಥ ತತ್ವವನ್ನು ಹರಡುತ್ತ ಬರುವುದರಿಂದ ಈಗ ಭರತಖಂಡದಲ್ಲಿ ಪ್ರಜಾಪ್ರಭುಗಳ ಮಧ್ಯದಲ್ಲಿ ಎಷ್ಟು ಚಕಮಕಿಯೂ, ವೈಮನಸ್ಯವೃದ್ಧಿಯೂ, ಅತ್ಯಾಚಾರಗಳೂ, ಪ್ರಾಣಹಾನಿಗಳೂ, ಕಠಿನದಂಡನೆಗಳೂ ಆಗುತ್ತಿವೆಯೆಂಬುದನ್ನು ಪ್ರತಿದಿನವೂ ನಾವು ಕೇಳುತ್ತಲಿದ್ದೇವೆ. ಹೀಗಿರುವಾಗ ಅಂಥ ತತ್ವದ ಅವಶ್ಯಕತೆಯೇ ಇಲ್ಲದ ದೇಶೀಯ ಸಂಸ್ಥಾನಗಳಲ್ಲಿ ಆ ತೆರದ ಉದ್ದೇಶದ ಸಭಾಶಾಖೆಯನ್ನು ಸ್ಥಾಪಿಸುವುದರಿಂದ ಪ್ರಯೋಜನವೇನು? ಅಷ್ಟು ಕಾಣದೆ ಹೈದರಾಬಾದು ಮೊದಲಾದ ಸಂಸ್ಥಾನಗಳವರು ತಮ್ಮ ಸಂಸ್ಥಾನಗಳಲ್ಲಿ ಇಂಥ ಚಳವಳಿಗೆ ಅವಕಾಶವನ್ನು ಕೊಡದೆ ನಿಷೇಧಾಜ್ಞೆಯನ್ನು ಪ್ರಕಟಿಸಿದರೆ? ಇಂಥ ಚಳವಳಿಗೆ ಅವಕಾಶ ಕೊಡುವುದರಿಂದ ಶಾಂತವಾಗಿದ್ದ ದೇಶದಲ್ಲಿ ಗುಲ್ಲೆಬ್ಬಿಸಿ ಅಶಾಂತಿಯನ್ನುಂಟುಮಾಡುವುದೇ ಫಲವಾದೀತಲ್ಲದೆ ಮತ್ತೇನೂ ಇಲ್ಲ.

ರಾಷ್ಟ್ರೀಯ ಸಭೆಯವರು ಶಾಲೆಯ ವಿದ್ಯಾರ್ಥಿಗಳಿಗೆ ಸಹಾಯನಿರಾಕರಣದ ಹುಚ್ಚನ್ನು ಹತ್ತಿಸಿ ಕೆಲವುದಿನ ಕುಣಿದಾಡಿಸಿ ಅದರಿಂದೇನೂ ಫಲಸಿದ್ಧಿ ಕಾಣದೆ ಆ ಭಾಗದಲ್ಲಿ ಉದಾಸೀನರಾದರು. ವಕೀಲತನ ಮೊದಲಾದ ವೃತ್ತಿಗಳನ್ನು ಬಿಡುವುದಕ್ಕೆ ಪ್ರಜೆಗಳಿಗೆ ಬೋಧಿಸಿ ಅಲ್ಪಸ್ವಲ್ಪ ಲಾಭವನ್ನು ಪಡೆದಿರಬಹುದು. ಮೊದಮೊದಲು ಹರತಾಳವನ್ನು ಬಲವಾಗಿ ಎಲ್ಲೆಲ್ಲೂ ಆಚರಿಸುತ್ತಿದ್ದರು. ಈಗ ಅದು ಉತ್ತಮವಲ್ಲವೆಂದು ಮ|| ಗಾಂಧಿಯವರು ಉಪದೇಶಿಸುತ್ತಿದ್ದಾರೆ. ಆ ಪೂರ್ವದ ಪ್ರಯತ್ನವೆಲ್ಲಾ ನಿಷ್ಫಲವೆಂದು ತಿಳಿದುಕೊಂಡ ಬಳಿಕ ಈಗ ಅವರು ಸ್ವದೇಶ ವಸ್ತ್ರೋತ್ಪಾದನೆಯ ಪ್ರಯತ್ನಕ್ಕೆ ತೊಡಗಿ ವಿದೇಶ ವಸ್ತ್ರದಹನ ಕಾರ್ಯವನ್ನು ಆಚರಿಸುತ್ತಿದ್ದಾರೆ. ಹೀಗೆ ನಿರ್ಧಾರವಾದ ಫಲವನ್ನು ಕಾಣದೆ ಒಂದರ ಹಿಂದೊಂದು ಪ್ರಯತ್ನಗಳು ಅವರಿಂದ ಆಚರಿಸಲ್ಪಡುತ್ತಿವೆ. ಅವುಗಳ ಗುಣಾವಗುಣ ಫಲಾಫಲಗಳ ಭವಿಷ್ಯತ್ ಸ್ಥಿತಿಯು ಹೇಗಾದರೂ ಇರಲಿ. ಸರ್ಕಾರದ ಕಾರ್ಯಸ್ತಂಭನವೇ ಮುಖ್ಯೋದ್ದೇಶವಾಗುಳ್ಳ ಆ ಸಭೆಯ ಅಂತಸ್ತತ್ವಬೀಜವು ನಮ್ಮ ದೇಶದಲ್ಲಿ ನಡಲ್ಪಡುವುದು ಹಿತಪ್ರದವಲ್ಲ.

ಅಲ್ಲದೆ ಈ ಸಂಸ್ಥಾನದಲ್ಲಿ ಈ ಬೀಜದ ಆರೋಪಣೆಗೆ ಬದ್ಧಕಂಕಣರಾಗಿರುವವರಲ್ಲಿ ರಾಷ್ಟ್ರೀಯ ಸಭಾಶಾಸನವಿಧೇಯತೆಯೂ ನಿಷ್ಕಪಟಭಕ್ತಿಯೂ ಇದೆಯೆಂಬುದಕ್ಕೆ ನಿದರ್ಶನವೇ ಇಲ್ಲ. ಮ|| ಗಾಂಧಿಯವರ ಸ್ವರಾಜ್ಯಸಾಧನದ ಉಪಕರಣಗಳಲ್ಲಿ ಪ್ರಥಮಸ್ಥಾನವನ್ನು ಹೊಂದಿರುವ ಅಸ್ಪೃಶ್ಯತ್ವನಿವಾರಣೆಯ ಉದ್ದೇಶಕ್ಕೆ ಇವರು ಬದ್ಧವೈರಿಗಳು. ಮತ್ತು ವಿದೇಶದ ಬಟ್ಟೆಗಳನ್ನು ತೆಗೆದು ಖದ್ದರ ಬಟ್ಟೆಗಳನ್ನು ಧರಿಸಿದವರು ಇವರಲ್ಲಿ ಒಬ್ಬರೂ ಇಲ್ಲ. ಇಷ್ಟೇ ಅಲ್ಲದೆ ದೇಶದ ಸಕಲ ಪ್ರಜೆಗಳೂ ಅಭ್ಯುದಯಕ್ಕೆ ಬರಲಿ ಎಂಬ ಉದಾರದೇಶಾಭಿಮಾನವು ಇವರಿಗೆ ಸ್ವಪ್ನದಲ್ಲೂ ಇಲ್ಲ. ವಿದ್ಯಾಭ್ಯಾಸದ ಮೆಮೊರಾಂಡಂ ಮತ್ತು ಮಿಲ್ಲರ್ ಸಂಘದ ವರದಿ ಇವುಗಳ ಮೂಲಕ ಪ್ರಜಾಸಾಮಾನ್ಯವೂ ಅಭಿವೃದ್ಧಿಗೊಳ್ಳುವುದೆಂಬ ಅಸೂಯೆಯಿಂದ ಕುದಿಯುತ್ತಿರುವ ಜನರಿಗೂ ರಾಷ್ಟ್ರೀಯ ಸಭೆಯ ಆದರ್ಶಕ್ಕೂ ಭೂಮ್ಯಾಕಾಶದಷ್ಟು ತಾರತಮ್ಯಗಳಿರುತ್ತವೆ. ಅಲ್ಲದೆ ಮೈಸೂರಿನಲ್ಲಿ ಇವರು ಸ್ಥಾಪಿಸುತ್ತೇವೆಂದು ಹೇಳುವ ಶಾಖಾಸಂಘಕ್ಕೆ ಅತಿರಥಮಹಾರಥರೆಂದು ಹೇಳಿಕೊಳ್ಳತಕ್ಕ ತಾವುಗಳು ವೈಸ್‌ಪ್ರೆಸಿಡೆಂಟರಾಗಿ ನಿಂತುಕೊಳ್ಳದೆ ರಾಜಕೀಯ ರಂಗದಲ್ಲಿ ಹಜ್ಜೆಯಿಡುವುದನ್ನೇ ಇದುವರೆಗೂ ಅರಿಯದಿರುವ ಸಾಧುಪ್ರಾಣಿಗಳನ್ನು ಮುಂಚೂಣಿಗೆ ನಿಲ್ಲಿಸಿಬಿಟ್ಟಿರುವುದು ಕಡು ಚೋದ್ಯವಾಗಿರುವುದು ಮಾತ್ರವಲ್ಲದೆ ಕಂಡವರ ಮಕ್ಕಳನ್ನು ಏನೋ ಮಾಡಿ ಆಳ ನೋಡಿದರೆಂಬ ಗಾಥೆಗೆ ಸಮನಾಗಿರುತ್ತದೆ. ಇದನ್ನೆಲ್ಲಾ ನೋಡಿದರೆ ಈ ಪ್ರಯತ್ನದಲ್ಲಿ ಶುದ್ಧವಾದ ಮತ್ತು ದೇಶಹಿತಸಾಹಾಯ್ಯಕವಾದ ಅಭಿಪ್ರಾಯಗಳಿರುವಂತೆ ಕಂಡುಬರುವುದಿಲ್ಲ. ಇದರ ಆರಂಭಕಾಲದಲ್ಲೇ ರಾಜಧಾನಿಯಲ್ಲಿ ವಿದ್ಯಾರ್ಥಿಗಳಿಗೂ ಪೊಲೀಸುದ್ಯೋಗಿಗಳಿಗೂ ಬಡಿದಾಟವಾದ ಶಕುನವು ಶುಭಲಕ್ಷಣವಾಗಿಯೂ ಇಲ್ಲ. ಅಧಿಕಾರದ್ವೇಷವ್ಯಾಪನೆಗೆ ಇದು ಒಂದು ಸಾಧನವಾಗುವುದು ಎಂದು ಅನೇಕರು ಶಂಕಿಸುತ್ತಿದ್ದಾರೆ. ರಾಜಭಕ್ತಿ ದೇಶಹಿತಚಿಂತನೆಗಳುಳ್ಳ ಪ್ರಜೆಗಳು ಇದರಿಂದ ಎಷ್ಟು ದೂರವಾಗಿದ್ದರೆ ಅಷ್ಟು ಕ್ಷೇಮ. ಇದು ಮೂಡಿದಲ್ಲಿಯೇ ಕರಿತುಹೋಗುವಂತೆ ಮಾಡುವಲ್ಲಿ ಪಾಲ್ಯಪಾಲಕರೀರ್ವರೂ ಎಚ್ಚರಪಡುವುದು ವಿಹಿತವೆಂದು ಹೇಳದಿರಲಾರೆವು.

ಹಿಂದುಳಿದವರ ಪ್ರಾತಿನಿಧ್ಯ.

ಕಳೆದ ತಾ|| ೫ರಲ್ಲಿ ಕೂಡಿದ್ದ ಮದರಾಸು ಶಾಸನಸಭೆಯಲ್ಲಿ ನಡೆದ ಚರ್ಚೆಗಳೊಳಗೆ ಹಿಂದುಳಿದ ಜನವರ್ಗಗಳವರಿಗೆ ಸರ್ಕಾರದ ಉದ್ಯೋಗಸ್ಥಾನಗಳನ್ನು ಹೆಚ್ಚುಹೆಚ್ಚಾಗಿ ಕೊಡುವಂತೆ ಮಾಡಬೇಕು, ಎಂಬ ತೀರ್ಮಾನದ ಚರ್ಚೆಯು ಪ್ರಬಲವಾಗಿದ್ದಿತು. ಮ|| ಒ. ತನಿಕಾಚಲಂ ಶೆಟ್ಟಿಯವರು ಈ ತೀರ್ಮಾನವನ್ನು ಉಪಪಾದಿಸಿದರು:—ಸರ್ಕಾರದುದ್ಯೋಗಗಳನ್ನಪೇಕ್ಷಿಸಿ ಬಂದ ಉಮೇದುವಾರರಲ್ಲಿ ಬ್ರಾಹ್ಮಣರಿಗಿಂತ ಇತರರು ಸ್ವಲ್ಪ ಕಡಿಮೆಯ ವಿದ್ಯಾವಂತರಾಗಿದ್ದರೂ ಅವರಲ್ಲಿ ಸರ್ಕಾರಿ ಕಾರ್ಯನಿರ್ವಾಹಕ್ಕೆ ಅವಶ್ಯಕವಾದ ಕನಿಷ್ಠ ಯೋಗ್ಯತೆಯಿದ್ದರೂ ಅವರಿಗೇ ಎಂದರೆ ಬ್ರಾಹ್ಮಣೇತರ ಹಿಂದುಗಳು ಕ್ರೈಸ್ತರು ಮಹಮ್ಮದೀಯರು ನಿಮ್ನಜಾತಿಯವರು ಇವರುಗಳಿಗೆ ೭ ವರ್ಷಕಾಲದವರೆಗೂ ಸರ್ಕಾರದ ಎಲ್ಲ ಉದ್ಯೋಗಗಳನ್ನೂ ಕೊಡುವಂತೆ ಪ್ರಭುತ್ವದವರು ಒಂದು ಅಪ್ಪಣೆಯನ್ನು ಕೊಡಬೇಕೆಂದೂ ೧೦೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರರಿಗೆ ೧೦೦ ಕ್ಕೆ ೬೬ ಸ್ಥಳಗಳೂ, ೧೦೦ ರೂ. ಗೆ ಕೀಳ್ಪಟ್ಟ ಸಂಬಳದ ಸ್ಥಾನಗಳಲ್ಲಿ ೧೦೦ ಕ್ಕೆ ೬೫ ರಂತೆಯೂ ಬರುವವರೆಗೆ ಮಾತ್ರ ಹೀಗೆ ಮಾಡಬೇಕೆಂದೂ ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ, ಎಂಬುದೇ ತೀರ್ಮಾನದ ಅಭಿಪ್ರಾಯವಾಗಿದ್ದಿತು. ಇದನ್ನು ರಾ|| ಬ|| ಟಿ. ಬಾಲಾಜಿರಾವು ನಾಯಡುಯವರು ಬಲಪಡಿಸಿದರು. ಇದರಮೇಲೆ ಸರ್ಕಾರದ ಪಕ್ಷದಿಂದ ಅ|| ಎ. ಆರ್ ನಾಪುರವರು ಮಾತನಾಡುವಾಗ್ಗೆ ಜಾತಿವರ್ಣ ಪಕ್ಷಪಾತವನ್ನು ಬೆಳೆಯಿಸುವ ವಿಷಯಗಳು ಸರ್ಕಾರಕ್ಕೆ ಸಂಮತವಲ್ಲವೆಂದು ಹೇಳಿಕೊಂಡರೂ ಸರ್ಕಾರದವರು ಸಕಲ ವರ್ಗಗಳವರಿಗೂ ಉದ್ಯೋಗಸ್ಥಾನಗಳನ್ನು ಕೊಟ್ಟೇತೀರಬೇಕೆಂಬುದನ್ನು ಒಪ್ಪಿಕೊಂಡುದಲ್ಲದೆ, ಬ್ರಾಹ್ಮಣೇತರ ವರ್ಗಗಳವರು ತಮಗೆ ಸರ್ಕಾರಿ ಉದ್ಯೋಗಸ್ಥಾನಗಳು ಹೆಚ್ಚಾಗಿ ದೊರೆಯಬೇಕೆಂದು ಕೇಳುತ್ತಿರುವುದನ್ನು ನ್ಯಾಯವೆಂದು ಒಪ್ಪಿಕೊಂಡರು. ಮತ್ತು ಮೇಲೆ ಹೇಳಿದ ತೀರ್ಮಾನಕ್ಕೆ ತಮ್ಮದೊಂದು ಸವರಣವನ್ನು ಸೂಚಿಸಿದರು. ಏನೆಂದರೆ ಸರ್ಕಾರದುದ್ಯೋಗಗಳಲ್ಲಿ ಬ್ರಾಹ್ಮಣೇತರ ಸಂಘಗಳ ಪ್ರಾತಿನಿಧ್ಯವನ್ನು ಹೆಚ್ಚುಗೊಳಿಸುವುದಕ್ಕಾಗಿ ಈಗ ರೆವಿನ್ಯೂಶಾಖೆಯಲ್ಲಿರುವ ನಿಬಂಧನೆಗಳನ್ನು ಎಲ್ಲಶಾಖೆಗಳಿಗೂ ಎಲ್ಲತೆರದ ಉದ್ಯೋಗಗಳಿಗೂ ಅನುವರ್ತಿಸುವಹಾಗೆ ಮಾಡಿ, ಅದಕ್ಕೆ ತಕ್ಕ ಅಪ್ಪಣೆಯನ್ನು ಸರ್ಕಾರದವರು ಕೊಟ್ಟು, ಆ ಅಪ್ಪಣೆಯಪ್ರಕಾರ ಉದ್ಯೋಗಗಳನ್ನು ಕೊಡಲು ಅರ್ಹರಾದ ಅಧಿಕಾರಿಗಳೆಲ್ಲರೂ ಬದ್ಧರಾಗಿಯೇ ತೀರಬೇಕೆಂದು ನಿರ್ಬಂಧಮಾಡಿ, ಪ್ರತಿಯೊಂದು ಕಚೇರಿಯ ಅಧಿಕಾರಿಯೂ ಈ ವಿಷಯವಾಗಿ ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವು ಸರ್ಕಾರದುದ್ಯೋಗಗಳಲ್ಲಿ ಹೇಗೆ ಅಭಿವೃದ್ಧಿಗೊಳ್ಳುತ್ತಿರುವುದೋ ಅದನ್ನು ಆರಾರು ತಿಂಗಳಿಗೊಂದಾವೃತ್ತಿ ವರದಿಮಾಡಿ ಸರ್ಕಾರಕ್ಕೆ ತಪ್ಪದೆ ಕಳುಹಿಸುತ್ತಾ ಬರಬೇಕೆಂದೂ, ಅಂಥ ವರದಿಗಳನ್ನು ಈ ಶಾಸನವಿಧಾಯಕ ಸಭೆಯ ಸಭಿಕರಿಗೆ ಕಳುಹಿಸಿಕೊಡಬೇಕೆಂದೂ ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ. ಹೀಗೆಂಬ ಸವರಣೆಗೆ ಮ|| ತನಿಕಾಚಲಂ ಶೆಟ್ಟಿಯವರು ಒಪ್ಪಿಕೊಂಡರು.

ದಿ|| ಬ|| ಎ. ಕೃಷ್ಣನ್ ನಾಯರ್‌ರವರು—ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವನ್ನು ಕುರಿತು ಈಗಲೇ ಕೆಲನಿಬಂಧನೆಗಳು ಇರುವುವೆಂದೂ, ಪಕ್ಷಪಾತವಿಲ್ಲದೆ ಎಲ್ಲ ವರ್ಗಗಳವರಿಗೂ ನ್ಯಾಯವಾಗಿ ಸರ್ಕಾರದುದ್ಯೋಗಗಳನ್ನು ಕೊಡುತ್ತಾ ಬರುವುದು ಅವಶ್ಯಕವೆಂದೂ ಪುಷ್ಟೀಕರಿಸಿ ಮಾತನಾಡಿದರು. ಬಳಿಕ ದಿ||ಬ|| ಆರ್. ವೆಂಕಟರತ್ನಂನಾಯಡುರವರು—ಅ|| ನಾಪುರವರ ಸವರಣೆಯು ನನಗೆ ಸಂತೋಷಕರವಾಗಿರುವುದು; ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವು ಇದ್ದೇತೀರಬೇಕೆಂಬ ಧರ್ಮಸೂತ್ರವನ್ನು ಸರ್ಕಾರದವರು ಈಗ ಗುರ್ತಿಸಿದರು. ಅದಕ್ಕಾಗಿ ಅವರಿಗೆ ನಾವು ಕೃತಜ್ಞರು, ಎಂದು ಹೇಳಿದರು. ಪ್ರತಿಕೂಲವಾಗಿ ಯಾರೂ ಅಭಿಪ್ರಾಯ ಕೊಡದೆ ಸರ್ವರೂ ತೀರ್ಮಾನವನ್ನಂಗೀಕರಿಸಿದರು.

ಬಳಿಕ ಅದೇ ತನಿಕಾಚಲಂ ಶೆಟ್ಟಿಯವರು ಇನ್ನೊಂದು ತೀರ್ಮಾನವನ್ನು ಪ್ರತಿಪಾದಿಸಿದರು, ಏನೆಂದರೆ—ಮದ್ರಾಸು ಸರ್ಕಾರದ ಸೆಕ್ರೆಟೆರಿಯಟ್ಟಿನಲ್ಲಿ ಸಿವಿಲ್‌ಸರ್ವೆಂಟರಹೊರತು ಉಳಿದ ಉದ್ಯೋಗಿಗಳಲ್ಲಿ ಬ್ರಾಹ್ಮಣರಂತೆಯೇ ಇತರ ಸಂಘಗಳವರೂ ಸಮಾನಸಂಖ್ಯೆಗೆ ಬರುವವರೆಗೆ ಮೂರುವರ್ಷ ಕಾಲದೊಳಗೆ ಎಲ್ಲ ಸ್ಥಾನಗಳಲ್ಲೂ ಬ್ರಾಹ್ಮಣೇತರರನ್ನೇ ಸೇರಿಸಬೇಕು. ಹೀಗೆ ಇತರರನ್ನೂ ಸೇರಿಸಿ ಸಮಾನಪಡಿಸುವುದಕ್ಕಾಗಿ ಈಗ ಸೆಕ್ರೆಟೆರಿಯಟ್ಟಿನಲ್ಲಿರುವ ಕೆಲ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಿಯೊ ಅಥವಾ ಬೇರೆ ಹೊಸ ಉದ್ಯೋಗಗಳನ್ನು ಕೊಟ್ಟೋ ಸ್ಥಲ ಬಿಡಿಸಬೇಕೆಂದು ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ.

ಇದರಮೇಲೆ ದಿ|| ಬ|| ಎಲ್. ಎ. ಗೋವಿಂದರಾಘವಯ್ಯರು ಆಕ್ಷೇಪಿಸಿ, ಮೊದಲು ಮಾಡಿದ ತೀರ್ಮಾನದಲ್ಲೇ ಈ ವಿಷಯವೂ ಸೇರಿಹೋಗುವುದಿಲ್ಲವೆ? ಎಂದರು.

ಅದಕ್ಕೆ ತನಿಕಾಚಲಂ ಶೆಟ್ಟಿಯವರು—ಹಾಗಲ್ಲ, ಸೆಕ್ರೆಟೆರಿಯಟ್ಟು ಒಂದು ಒಳಕೋಟೆಯಂತಿರುವುದು; ನಾವು ಒಂದು ಕೋಟೆಯಲ್ಲಿದ್ದೇವೆ. ಸೆಕ್ರೆಟೆರಿಯಟ್ಟು ಇದರ ಒಳಕೋಟೆ. ಬ್ರಾಹ್ಮಣರು ಈ ಕೋಟೆಗೆ ದ್ವಾರಪಾಲಕರು. ೧೯೧೮ ನೆ ವರ್ಷದಲ್ಲಿ ಈ ಸೆಕ್ರೆಟೆರಿಯಟ್ಟಿನಲ್ಲಿದ್ದ ೩೬ ಮಂದಿ ಸೂಪರಿಂಟೆಂಡೆಂಟರೊಳಗೆ ಬ್ರಾಹ್ಮಣರು ೨೯ ಮಂದಿಯೂ, ಕ್ರೈಸ್ತರು ೬ ಮಂದಿಯೂ, ಒಬ್ಬ ಯೂರೋಪಿಯನ್ನೂ ಇದ್ದರು. ಈಗಲಾದರೊ ಬ್ರಾಹ್ಮಣರು ೩೨ ಮಂದಿಯೂ, ಕ್ರೈಸ್ತರು ೩ ಮಂದಿಯೂ, ಬ್ರಾಹ್ಮಣೇತರ ಹಿಂದುವು ಒಬ್ಬನೂ ಇದ್ದಾರೆ. ವಿದ್ಯಾಶಕ್ತಿ ಸಾಮರ್ಥ್ಯದಲ್ಲಿ ಬ್ರಾಹ್ಮಣೇತರರೇನೂ ಕಡಿಮೆಯಾದವರಲ್ಲ. ಇದೇ ಸೆಕ್ರೆಟೆರಿಯಟ್ಟಿನ ಗುಮಾಸ್ತೆಯರೊಳಗೆ ೧೯೧೮ ನೆ ವರ್ಷದಲ್ಲಿ ೧೩೧ ಮಂದಿ ಬ್ರಾಹ್ಮಣರೂ, ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೨ ಮಂದಿ ಕ್ರೈಸ್ತರೂ, ಇಬ್ಬರು ಮಹಮ್ಮದೀಯರೂ ಇದ್ದರು. ಈಗ ೧೧೧ ಮಂದಿ ಬ್ರಾಹ್ಮಣರೂ ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೮ ಮಂದಿ ಕ್ರೈಸ್ತರೂ ಇಬ್ಬರು ಮಹಮ್ಮದೀಯರೂ ಇದ್ದಾರೆ ಎಂದರು.

ಡಾಕ್ಟರ್ ಸಿ. ನಟೇಶನ್‌ರವರು ತೀರ್ಮಾನವನ್ನು ಅನುಮೋದಿಸಿದರು.

ಬಳಿಕ ಸರ್ಕಾರದ ಪಕ್ಷದಿಂದ ಅ|| ನಾಪುರವರು ಮಾತನಾಡಿದುದರಲ್ಲಿ-ಸೆಕ್ರೆಟೆರಿಯಟ್ಟಿನೊಳಗೆ ಬ್ರಾಹ್ಮಣರ ಸಂಖ್ಯೆ ಹೆಚ್ಚಾಗಿರುವುದು ನಿಜವೇ; ಆದರೂ ಅಲ್ಲಿ ಬಹಳ ಮೇಧಾವಿಗಳಾದವರೇ ಇರಬೇಕಾದುದು ಅವಶ್ಯಕವೆಂದೂ, ಇತರರು ಈಗೀಗ ವೃದ್ಧಿಯಾಗುತ್ತಿರುವರೆಂದೂ, ಅಲ್ಲಿರುವ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಬೇಕಾದರೆ ಅಲ್ಲಿಯ ಸಂಬಳಗಳಿಗೂ ಇಲ್ಲಿಯ ಸಂಬಳಗಳಿಗೂ ಬಹಳ ವ್ಯತ್ಯಾಸವಿರುವುದೆಂತಲೂ, ಇವರನ್ನು ವರ್ಗಾಯಿಸಲೂ ಬ್ರಾಹ್ಮಣೇತರರ ಕಷ್ಟವನ್ನು ತೊಲಗಿಸಲೂ ತಕ್ಕ ಮಾರ್ಗವನ್ನು ತೋರಿಸಿಕೊಟ್ಟರೆ ನಾನು ಯಥಾಶಕ್ತಿ ಸಹಾಯಮಾಡುವುದಕ್ಕೆ ಅಭ್ಯಂತರವಿಲ್ಲವೆಂತಲೂ, ತತ್‌ಕ್ಷಣವೇ ಬ್ರಾಹ್ಮಣೇತರರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಕೋರಿದರೆ ಪ್ರಯೋಜನವಿಲ್ಲವೆಂತಲೂ, ಈಗ್ಗೆ ೨ ವರ್ಷಗಳಿಂದಲೂ ಎಲ್ಲ ಕಚೇರಿಗಳಲ್ಲೂ ಬ್ರಾಹ್ಮಣೇತರರನ್ನು ಹೆಚ್ಚುಹೆಚ್ಚಾಗಿ ಸೇರಿಸಿಕೊಳ್ಳುತ್ತಲೇ ಇದ್ದಾರೆಂತಲೂ ಈಗಣ ಪ್ರಭುತ್ವಯಂತ್ರವನ್ನು ಒಂದು ದಿನದಲ್ಲೇ ಮಾರ್ಪಡಿಸುವುದು ಅಸಾಧ್ಯವೆಂತಲೂ ಹೇಳಿದರು.

ಮ|| ಪಿ. ಶಿವರಾವು ಎಂಬ ಸಭಿಕರು ತೀರ್ಮಾನಕ್ಕೆ ವಿರುದ್ಧವಾಗಿ ಮಾತನಾಡುವಾಗ್ಗೆ—ಇಂಥ ಜಾತಿಮತ ಸಂಬಂಧವಾದ ವಿಚಾರಗಳನ್ನು ಈ ಸಭೆಯಲ್ಲಿ ನಾವು ಚರ್ಚಿಸುವುದಕ್ಕೆ ಹಿಡಿದರೆ ಈಗಣ ನೂತನ ಸಭೆಗಳ ಕಾರ್ಯವಿಧಾನವು ಹೇಗಿರುವುದೋ ಎಂದು ನಿರೀಕ್ಷಿಸುತ್ತಲಿರುವ ಪ್ರಪಂಚವೆಲ್ಲಾ ನಮ್ಮನ್ನು ನೋಡಿ ನಗುವುದೆಂದು ಹೇಳಿದರು.

ಅದಕ್ಕೆ ದಿ|| ಬ|| ಪಿ. ಕೇಶವಪಿಳ್ಳೆಯವರು ತಕ್ಕ ಉತ್ತರವನ್ನು ಕೊಟ್ಟುದರಲ್ಲಿ—ಪ್ರಪಂಚವು ನಮ್ಮನ್ನು ನೋಡಿ ಏತಕ್ಕೆ ನಗಬೇಕು? ಯೂರೋಪ್ಯರಿಗೆ ಅಧಿಕಾರವಾಗಬೇಕು, ಬ್ರಾಹ್ಮಣರಿಗೆ ಅಧಿಕಾರವಾಗಬೇಕು, ಎಂದು ತಂತಮ್ಮವರಿಗೆ ಅಧಿಕಾರಾಧಿಕ್ಯವನ್ನು ಕೋರಿಕೊಳ್ಳದೆ ಇರುವವರು ಯಾರಿದ್ದಾರೆ? ಎಂದರು.

ಅದರಮೇಲೆ ಮತ್ತೆ ಗೋವಿಂದರಾಘವಯ್ಯರು—ಇದಕ್ಕೆ ಮುಂಚೆ ಮಾಡಿದ ತೀರ್ಮಾನಕ್ಕೆ ನಾನು ಅನುಮೋದಿಸಿದ್ದೇನೆ. ಈಗಣ ಪರಿಸ್ಥಿತಿಗೆ ಬ್ರಾಹ್ಮಣನು ಎಷ್ಟುಮಾತ್ರಕ್ಕೂ ಉತ್ತರವಾದಿಯಲ್ಲ; ಬ್ರಾಹ್ಮಣನನ್ನು ಅಧಮಸ್ಥಿತಿಗೆ ತಳ್ಳಬೇಡಿ. ಆತನ ಸ್ಥಿತಿಗೆ ನೀವೆಲ್ಲರೂ ಬರಬಹುದು ಎಂದರು.

ದಿ|| ಬ|| ಡಿ. ಶೇಷಗಿರಿರಾವ್‌ರವರು—ಸರ್ಕಾರದುದ್ಯೋಗದಲ್ಲಿ ಸೇರಿರುವ ಬ್ರಾಹ್ಮಣರ ಗತಿಯೇನೆಂದು ನನಗೆ ಈಗಲೇ ಅತ್ಯಂತ ಚಿಂತೆಯಾಗಿದೆ. ಅವರಿಗೆ ಯಾವ ಅನ್ಯಾಯವೂ ಆಗುವುದಿಲ್ಲವೆಂದು ಅ|| ನಾಪುರವರು ಅಭಯವನ್ನು ಕೊಟ್ಟ ಬಳಿಕ ಆಂಗ್ಲಜನರು ಎಷ್ಟು ನ್ಯಾಯಪ್ರಿಯರೆಂದು ನನಗೆ ಆನಂದವುಂಟಾಗಿದೆ. ಇನ್ನು ಮೇಲೆ ಬ್ರಾಹ್ಮಣ ತರುಣರಿಗೆ ಸರ್ಕಾರಿ ಉದ್ಯೋಗಗಳು ದೊರೆಯದೆಹೋದರೆ ಅವರು ಇತರ ವೃತ್ತಿಗಳಲ್ಲಿ ಪ್ರವೇಶಿಸಬಹುದು. ಸರ್ಕಾರದುದ್ಯೋಗಗಳು ತಪ್ಪಿದರೆ ಬೇರೆ ಕೆಲಸವಿಲ್ಲವೆ? ಯಾವ ಮಾರ್ಗವೂ ಇಲ್ಲದೆ ಹೋದರೆ ಮರಣಮಾರ್ಗವೇ ಗತಿತಾನೇ? ಬಲವಂತರು ಜೀವಿಸುವ ಕಾಲದಲ್ಲಿ ದುರ್ಬಲರು ಪಾತಾಳಕ್ಕೆ ಹೋಗಲೇಬೇಕಷ್ಟೆ? ಎಂದರು.

ಮ|| ಟಿ. ಶಿವಶಂಕರಂ ಪಿಳ್ಳೆಯವರು ತೀರ್ಮಾನಕ್ಕೆ ಅನುಮೋದನವನ್ನು ಕೊಟ್ಟರು. ಕಡೆಗೆ ತೀರ್ಮಾನದ ಮೇಲೆ ಸಭಿಕರ ಓಟುಗಳನ್ನು ಕೇಳಲಾಗಿ, ಸಾಧಾರಣವಾಗಿ ಬ್ರಾಹ್ಮಣ ಸಭಿಕರೆಲ್ಲಾ ವಿರುದ್ಧವಾಗಿಯೇ ಇದ್ದು ತಮ್ಮ ಅಸಂಮತಿಯನ್ನು ತೋರಿಸಿದರು. ಅದರಿಂದ ೨೨ ಮಂದಿ ಪ್ರತಿಕೂಲರೂ, ೪೯ ಮಂದಿ ಅನುಕೂಲರೂ ಆಗಿ ಓಟುಕೊಟ್ಟುದರಿಂದ ಮ|| ತನಿಕಾಚಲಂಶೆಟ್ಟರ ತೀರ್ಮಾನವೇ ಅಂಗೀಕೃತವಾಯಿತು.

ಸರ್ಕಾರದ ಉದ್ಯೋಗಗಳನ್ನೆಲ್ಲಾ ಒಂದೇ ಜನ ವರ್ಗದವರೇ ವಿಶೇಷವಾಗಿ ಆಕ್ರಮಿಸಿ, ಪರರಿಗೆ ನಾನಾ ವಿಧದ ತೊಂದರೆಗಳನ್ನು ಕೊಟ್ಟು ಹಿಂಸೆಪಡಿಸುತ್ತ ಬಂದುದರಿಂದ ಅಧಿಕಾರಶಕ್ತಿಯನ್ನು ಇತರರು ಪ್ರತಿಭಟಿಸುವುದು ಕಷ್ಟತರವಾಗಿರುವುದರಿಂದಲೂ, ಸಕಲ ಜನವರ್ಗದ ಪ್ರಾಬಲ್ಯವೂ ಒಂದೇ ಸಮನಾಗಿದ್ದರೆ ದೇಶಕ್ಕೂ ಪ್ರಜಾಕೋಟಿಗೂ ಹಿತವಾಗುವುದೆಂಬ ಯೋಚನೆಯಿಂದಲೂ ಹಿಂದೆಬಿದ್ದಿದ್ದ ಜನವರ್ಗದವರು ಈಗ ಎಚ್ಚತ್ತು ತಮ್ಮ ಚಳವಳವನ್ನು ವೃದ್ಧಿಪಡಿಸುತ್ತಿದ್ದಾರೆ. ಅದು ಅವರಿಗೆ ಧರ್ಮವೇ ಆಗಿರುತ್ತದೆ. ಆದರೆ ಇದುವರೆಗೆ ಅಖಂಡವಾಗಿ ಅಧಿಕಾರ ದರ್ಪದ ಸವಿಯನ್ನನುಭವಿಸಿದವರು ಈಗ ಅದರಲ್ಲಿ ಸ್ವಲ್ಪ ಭಾಗವನ್ನು ಕಳೆದುಕೊಳ್ಳಬೇಕಾದರೂ ಸಂಕಟಪಡುತ್ತಾರೆ. ಅದೂ ಅವರಿಗೆ ಸ್ವಭಾವವೇ. "ಭವಿತವ್ಯಂ ಭವತ್ಯೇವ ನಾರಿಕೇಳ ಫಲಾಂಬುವತ್ | ಗಂತವ್ಯಂ ಗಚ್ಛತಿ ಸದಾ ಗಜಭುಕ್ತಕಪಿತ್ಥವತ್ ||

ಮ್ಯು|| ಕೌನ್ಸಿಲರುಗಳ ಆರಿಸುವಿಕೆ.

ಈ ತಿಂಗಳ ಕಡೆಯ ವಾರದಲ್ಲಿ ರಾಜಧಾನಿಯೊಳಗೂ, ಮುಂದಣ ತಿಂಗಳಲ್ಲಿ ಬೆಂಗಳೂರಿನೊಳಗೂ ಮ್ಯುನ್ಸಿಪಲ್ ಕೌನ್ಸಿಲರುಗಳ ಆರಿಸುವಿಕೆಯು ನಡೆಯಲು ಏರ್ಪಾಟಾಗಿದೆ. ಪ್ರಜಾಸಮುದಾಯದಲ್ಲಿ ವಿದ್ಯಾಬುದ್ಧಿ ವಿಕಾಸಗಳೂ ತಮ್ಮ ಊರು ತಮ್ಮ ಪಟ್ಟಣ ತಮ್ಮ ದೇಶದ ಹಿತಚಿಂತನೆಯ ಭಾವಗಳೂ ಪ್ರಬಲಿಸದಿರುವ ಕಾಲದಲ್ಲಿ ದೇಶೀಯ ಸರ್ಕಾರದ ಕಾರ್ಯಗಳೇ ಆಗಲೀ ಸ್ಥಳಿಕ ಸರ್ಕಾರದ ಕಾರ್ಯಗಳೇ ಆಗಲೀ ಪ್ರಜೆಗಳ ಅಭಿಪ್ರಾಯಗಳಿಗೆ ಅನುಸಾರವಾಗಿ ನಡೆಯುತ್ತವೆಂದು ಹೇಳಲಾಗುವುದಿಲ್ಲ. ಪ್ರಜೆಗಳಲ್ಲಿ ವಿದ್ಯಾವಿವೇಕ ನಾಗರಕತಾದಿ ಲಕ್ಷಣಗಳು ವೃದ್ಧಿಗೊಳ್ಳುತ್ತ ಬಂದ ಬಳಿಕ ಸರ್ಕಾರದ ಕಾರ್ಯಗಳು ಪ್ರಜಾಮತಕ್ಕೆ ವಿರುದ್ಧವಾಗಿ ನಿರಂಕುಶತನದಿಂದ ನಡೆಯುವುದು ಸಾಧ್ಯವಲ್ಲ. ಮತ್ತು ಪ್ರಜಾಸಮುದಾಯವೆಲ್ಲಾ ವಿದ್ಯಾವಿಕಾಸಗೊಳ್ಳದಿದ್ದರೆ ನಿಷ್ಪಕ್ಷಪಾತವಾದ ಆಡಳಿತವು ದೇಶದಲ್ಲಿ ನಡೆಯುವುದೂ ಸಾಧ್ಯವಲ್ಲ. ಈಗೀಗ ದೇಶದಲ್ಲಿ ಪ್ರ



APT. Y. V. AYYA.

VASANTHA COTTAGE.
BASAVESWARA TEMPLE ROAD,
BANGALORE 25-9-27.

o

V. R. Chikkachennaiyappa Setty Esqr

ear Sir,

May I request you to give me the leasure of your company at the inner to be given in honour of r. G. Paramasiviah B. A., LL. B., ub-judge, at my residence at 12 oon precisely on Monday the 27th nstant.

I am
Yours Sincerely,

ಸುಮ್ಮನೆ ಕುಳಿತಿದ್ದವರು ಕುಳಿತೇ ಕೆಡುತ್ತಾರೆ. ನಿಂತು ಕೆಲಸಮಾಡಿದವರು ಫಲವನ್ನನುಭವಿಸಿಕೊಳ್ಳುತ್ತಾರೆ. ಊರಿನ ಪ್ರಜೆಗಳೆಲ್ಲಾ ಮ್ಯುನ್ಸಿಪಾಲಿಟಿಯಲ್ಲಿ ಕೆಲಸಮಾಡುವುದಿಲ್ಲ. ಊರಿನ ಪ್ರಜೆಗಳ ಪ್ರತಿನಿಧಿಗಳೇ ಕೌನ್ಸಿಲರುಗಳಾಗಿ ಎಲ್ಲ ಪ್ರಜೆಗಳಿಗೋಸ್ಕರ ಅಲ್ಲಿ ಕೆಲಸಮಾಡುತ್ತಾರೆ. ಎಂದ ಬಳಿಕ ಊರನ್ನೇ ಒಂದು ತೆಪ್ಪವನ್ನಾಗಿಯೂ ಉಳಿದ ಜನರನ್ನೆಲ್ಲಾ ಅದರಲ್ಲಿ ಕುಳಿತಿರುವ ಪ್ರಯಾಣಿಕರನ್ನಾಗಿಯೂ ಕಲ್ಪಿಸಿಕೊಂಡರೆ, ತಾವು ಆರಿಸಿ ಕಳುಹಿಸುವ ಕೌನ್ಸಿಲರನ್ನು ದೋಣಿಯನ್ನು ನಡೆಯಿಸುವ ನಾವಿಕನನ್ನಾಗಿ ಎಣಿಸಬಹುದು. ಮಹಾ ಪ್ರವಾಹದಲ್ಲಿ ದೋಣಿಯನ್ನು ನಡೆಯಿಸುವ ನಾವಿಕನು ಅಸಮರ್ಥನೂ ವಿಶ್ವಾಸಘಾತಕನೂ ಆಗಿದ್ದರೆ ದೋಣಿಯಲ್ಲಿ ಕುಳಿತಿರುವವರ ಅವಸ್ಥೆಯನ್ನು ಹೇಳಬೇಕಾದುದೇ ಇಲ್ಲ. ಆದರಂತೆಯೇ ಈ ಸಮಯದಲ್ಲಿ ನಮ್ಮ ಓಟುಗಳನ್ನು ಕೊಟ್ಟು ನಾವು ಆರಿಸುವ ಪ್ರತಿನಿಧಿಗಳು ನಿಜವಾಗಿ ನಮ್ಮ ಯೋಗಕ್ಷೇಮ ಚಿಂತೆಯನ್ನು ಮಾಡುವಲ್ಲಿ ದಕ್ಷರೆ? ಅವರು ನಂಬುಗೆಗೆ ಅರ್ಹರೆ? ಅವರು ಸ್ವಾರ್ಥಕ್ಕಲ್ಲದೆ ಪ್ರಜಾಹಿತಾರ್ಥವಾಗಿ ನಿರ್ವಂಚನೆಯಿಂದ ಕೆಲಸಮಾಡಬಲ್ಲವರೆ? ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ, ತಕ್ಕವರೆಂದು ತೋರಿದವರಿಗೇ ಓಟುಗಳನ್ನು ಕೊಡಬೇಕೇಹೊರತು ಪರರ ಬಲಾತ್ಕಾರಕ್ಕೋ ದಾಕ್ಷಿಣ್ಯಕ್ಕೋ ಅಥವಾ ಉಪಸರ್ಪಣೆಗೋ ವಶರಾಗಿ ಸಿಕ್ಕಿಸಿಕ್ಕಿದವರಿಗೆ ಓಟುಗಳನ್ನು ಕೊಟ್ಟುಬಿಟ್ಟರೆ ಉತ್ತರತ್ರ ತಮ್ಮ ಹಗ್ಗವನ್ನು ಕೊಟ್ಟು ತಾವೇ ಕೈಕಾಲು ಕಟ್ಟಿಸಿಕೊಳ್ಳುವಂಥ ಸ್ಥಿತಿಯು ಬರುವುದೇನೂ ಸುಳ್ಳಲ್ಲ. ಊರ ಕ್ಷೇಮಾಭಿವೃದ್ಧಿಯು ಓಟರುಗಳ ಕೈಯಲ್ಲಿರುವುದು. ಅವರ ಓಟುಗಳಿಗೆ ಘನವಾದ ಬೆಲೆಯಿರುವುದು. ಅದನ್ನು ಅವರು ಈಗಣ ಸಮಯದಲ್ಲಿ ದುರ್ವಿನಿಯೋಗಪಡಿಸಬಾರದು. ನಮ್ಮ ಪುರಸಂಘಾಧ್ಯಕ್ಷರೂ ಅವರ ಸಹಾಯಕರಾದ ಉದ್ಯೋಗಿಗಳೂ ಹಿಂದೆ ನಮ್ಮಿಂದ ಓಟುಗಳನ್ನು ಪಡೆದು ಕೌನ್ಸಿಲ್ ಪೀಠಾಧಿರೋಹಣ ಮಾಡಿದ ಕೆಲವರೂ ಸಹ ವರ್ಷಕ್ಕೆ ಒಂದುದಿನವಾದರೂ ಪಟ್ಟಣದ ಕೆಲ ಭಾಗಗಳಿಗೆ ದರ್ಶನವನ್ನೇ ಕೊಟ್ಟುದಿಲ್ಲ. ಇಂಥವರನ್ನು ನಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕುಳ್ಳಿರಿಸಿದರೆ ನಮಗೆ ಕ್ಷೇಮವಾಗುವುದೆಂದರೇನು? ಅದುಕಾರಣ ಈಗ ಕೌನ್ಸಿಲರಾಗುತ್ತೇವೆಂದು ಉಮೇದುವಾರರಾಗಿ ನಿಂತಿರುವವರಲ್ಲಿ ನಮ್ಮ ನೆರೆಹೊರೆಯವರಾಗಿ ನಮ್ಮ ಅನುಕೂಲಗಳನ್ನೂ ಆರೋಗ್ಯವನ್ನೂ ಹಿತವನ್ನೂ ತ್ರಿಕರಣದಿಂದಲೂ ಕೋರುವ ಉದಾರಭಾವವೂ ಸಚ್ಚರಿತವೂ ವಿಶ್ವಾಸವೂ ಯಾರಲ್ಲುಂಟೋ ಅಂಥವರುಗಳಿಗೇ ನಮ್ಮ ಓಟುಗಳನ್ನು ಕೊಡಲು ನಿಶ್ಚಯಮಾಡಿಕೊಂಡು, ಆಯಾ ಮೊಹಲ್ಲಾ ಕೌನ್ಸಿಲರುಗಳ ಆರಿಸುವಿಕೆಯ ದಿವಸ ಆಯಾ ಸ್ಥಲಕ್ಕೆ ಗೊತ್ತಾಗಿರುವ ಕಾಲಕ್ಕೆ ಪ್ರತಿಯೊಬ್ಬ ಓಟರುಗಳೂ ಹೋಗಿ ತಮ್ಮ ಓಟನ್ನು ಕೊಟ್ಟು ಬರುವಲ್ಲಿ ಉದಾಸೀನಮಾಡಲಾಗದೆಂದು ಸೂಚಿಸುತ್ತೇವೆ.

ತಮ್ಮ ಅಭ್ಯುದಯಕ್ಕೆ ವೀರಶೈವರು ಮಾಡಬೇಕಾದ ಕರ್ತವ್ಯ.

ಬಾಂಧವರೇ ಕಾಲಸ್ಥಿತಿಯು ಬದಲಾಯಿಸುತ್ತಿದೆ. ನಮ್ಮ ಬ್ರಾಹ್ಮಣ ಸಹೋದರರು ಶ್ಲಾಘನೀಯವಾದ ಸಂಘಗಳನ್ನು ಸ್ಥಾಪಿಸುತ್ತಿದ್ದಾರೆ. ಅಭಿವೃದ್ಧಿಗೆ ಅತ್ಯವಶಕವಾದ ಏರ್ಪಾಡು
ಜಾಗರೂಕತೆಯಿಂದ ಮಾಡುತ್ತಿದ್ದಾರೆ. ಅವರನ್ನು
ನಾವುಗಳೂ ಹೋಗಬೇಕು. ಇಲ್ಲವಾದರೆ ನಾಶ
ಶ್ರದ್ಧೆಯಿಂದಿರುವವರ ಪಾಲಾಗುತ್ತದೆ. ನಾವು
ದಿರುವ ಏರ್ಪಾಟುಗಳು ಮೈಸೂರುದೇಶದ ಎಲ್ಲಾ
ಯೂ ತಿಳಿಯಬಂದು ಪ್ರತಿಯೊಬ್ಬರ ಸಹಾಯವೂ
ಅವಶ್ಯಕವಾಗಿರುತ್ತದೆ. ಆದುದರಿಂದ ಪ್ರತಿ ತಾ
ಲೂ ನಮಗೆ ವೀರಶೈವ ಮಂಡಳಿಯಲ್ಲಿ ೫ ಜನ
ಸ್ಯರ ಹೆಸರುಗಳು ತಿಳಿಯಬೇಕಾಗಿರುತ್ತವೆ. ಅವರ
ರ ವಿದ್ಯಾಭಿವೃದ್ಧಿ ಮುಂತಾದ ಕಾರ್ಯಗಳಿಗೆ
ಡಬೇಕಾದ ಏರ್ಪಾಟುಗಳು ತಿಳಿಯಿಸಲ್ಪಡುತ್ತವೆ.
ಗತಿಗಳು ಪ್ರತಿ ಗ್ರಾಮಕ್ಕೂ ತಿಳಿಯಬೇಕಾಗು
ಪತ್ರಿಕೆಯನ್ನು ಓದುವಂಥ ಯಾವ ವೀರಶೈವ ಮ
ದರೂ ೫ಕ್ಕೆ ಕಮ್ಮಿಯಿಲ್ಲದೆ ಒಂದೊಂದು ತಾಲ್ಲೂ
ವೀರಶೈವಮುಖಂಡರ ಹೆಸರನ್ನು ಈ ಪತ್ರಿಕಾಕ
ಬೇಕೆಂದು ಕೋರಿಕೆ. ಯಾವುದಾದರೂ ತಾಲ್ಲೂ
ಪತ್ರಿಕೆಯನ್ನು ತರಿಸಿ ಓದುವವರಿಲ್ಲದಿದ್ದರೆ ನೆರೆಯ
ರು ಈ ಸಹಾಯವನ್ನು ನಮಗೆ ಮಾಡಬೇಕೆಂದು
ವೆ. ಈ ತಿಂಗಳ ಅಂತ್ಯದೊಳಗೆ ಎಲ್ಲಾ ತಾಲ್ಲೂ
ನಮಗೆ ಹೆಸರುಗಳು ತಿಳಿಯಬರುವುವೆಂದು ನಂಬಿ
ಈ ಹೆಸರುಗಳನ್ನು ನಾವು ಪ್ರಕಟಿಸುವುದಿಲ್ಲ. ಒಂ
ಕಿನಿಂದ ಒಬ್ಬರಿಗಿಂತ ಹೆಚ್ಚು ಜನರು ಐದುಐದ
ಗಳನ್ನು ಕೊಟ್ಟರೆ ಅವೆಲ್ಲವನ್ನೂ ನಾವು ತೆಗೆದು
ಕನಿಷ್ಠಪಕ್ಷ ೫ ಜನರ ಹೆಸರು ತಿಳಿಯಬೇಕಾ
ಹೆಚ್ಚು ಎಷ್ಟಿದ್ದರೆ ಅಷ್ಟೂ ಉತ್ತಮ. ತಾಲ್ಲೂ
ನೂರಾರು ಜನರು ನಮಗೆ ದೊರೆತರೆ ಮತ್ತೂ
ಎಲ್ಲಾ ತಾಲ್ಲೂಕಿನಿಂದಲೂ ಹೆಸರುಗಳು ತಿಳಿದ
ಒಟ್ಟುಪಟ್ಟಿಯನ್ನು ಮಾಡಿ, ಎಲ್ಲಾ ಹೆಸರುಗಳೂ
ಗೂ ತಿಳಿಯುವಂತೆ ಒಬ್ಬೊಬ್ಬರಿಗೆ ಒಂದೊಂದು
ಕಳುಹಿಸುತ್ತೇವೆ. ಅದರಿಂದ ಎಲ್ಲರಿಗೂ ಅಂತರಂ
ಯಾರುಮತಾಭಿಮಾನದಿಂದ ಮತಾಭಿವೃದ್ಧಿಗೆ
ಗಿದ್ದಾರೆಂಬುದು ತಿಳಿಯಬಹುದು. ಅತಿ ಜಾಗ್ರ
ಗಳನ್ನು ತಿಳಿಸುವಿರೆಂದು ನಂಬಿರುತ್ತೇವೆ.

THE INDIAN SOCIAL REFORMER ON MYSORE PROBLEMS.

The Indian Social Reformer furnishes the evidence that what is contained in the Bombay Chronicle about Mysore affairs is completely misleading and one sided. While the mis-leading statements of the Chronicle are based on the misinterpretation of the order of Government on the Miller Report, conveyed to them by the partisan class in Mysore which is for monopolisation of official authority to one sect of people, the contradiction by the Indian Social Reformer has for its statements the authority of the experience of an Indian publicist, the authority of direct observation by a leading gentleman like the Hon. Mr. Lalubhai Samaldas who had occasion to intimately study the conditions in Mysore by undertaking an extensive tour into the interior of the country, the authority of the impressions of the prevailing conditions in Mysore received by Mr. Devdhar and the authority of the Editor himself who had recently occasions to meet the men of leading in Mysore and to exchange views with them.

The causes for the Miller Committee Report are appreciated and hopes are entertained by the Indian Social Reformer that the loyal people of Mysore who are undoubtedly other than those who rush to the columns of the non-co-operationist journals for clamerous cry, have the good sense to take measures to preserve the abiding interests of the country. What contrast is there between an outburst caused by a hollow bubble and a sane statement based on solid facts.

We have no desire for controversy. Nor do we like the idea of a rupture arising in the country as a consequence of Miller Committee Report. A series of misleading statements having appeared in certain journals in this country, which serve the interests of one minor class of people who not having been satisfied with such mis-representations here, have also gone outside the country to spread the mischief consequent on mis-statements, we consider it our sacred duty to our Beloved Maharaja and to our country to take the earliest opportunity to contradict the mis-statements and to do our best to expose the falsity and the mischief involved in the mis-leading articles appearing in the Bombay Chronicle and the Madras Hindu.

Our Noble Dewan is certainly not an amateur statesman as was the case with his immediate predecessor who emerged to be the Dewan from the heaps of plans and estimates, and schemes and projects. Our Patriatic Sirdar has nothing of strangeness in his veins as was in the case of 4 out of 5 non-Engineer Dewans of Mysore. He knows the people of the country. He realises their wants. He does his best to remove the disabilities under which they have been systematically labouring for the last 40 years under the yoke of one class administration. He loves and is thoroughly loyal to His Highness and if such a Patriatic Nobleman is not the statesman whom the country wants, whom else would the people want. Certainly not those upstarts who were something yesterday and are to-day the "Efficients" in the heaps of the examinations which they have passed. We want more justice and less examinations. We want more heart and less brains. We want statesmen whose heart beats with those of the people of the country. We are sorry to read the statements of malcontents with no reason for that bad spirit. The real people of Mysore have been silent till now and will speak hereafter to show the falsity of those who had the monopoly of Public service and who had the audocity to distort public opinion.

We have great hopes in the policy of the present Government and we have the trust that it has the courage of its conviction.

THE FUTILE GAME.

We do not know what has come about our Brahmin friends now a days. Their attitude and action are fully illustrative of the old bit correct saying 'ವಿನಾಶಕಾಲೇ ವಿಪರೀತಬುದ್ಧಿಃ'. The Miller Committee which is after all a belated grant of partial justice has altogether upset their mentality. While the non-Brahmins, who number 96% of the population of the State are finding the orders on the Miller Committee too inadequate to meet their present needs or to satisfy their just claims, the Brahmins who though are entitled to only 4% of the appointments have yet 50% reserved for them at the end of seven years a concession for which, in our earnest and candid opinion, there is not the slightest justification are madly raising a storm of opposition. Even the realisation of this partial justice by the non-Brahmins at the end of 7 long years is problematical, because of the suttle and insiduous ways of those who have now girded up their loins against this popular measure. When nothing as yet has been done by way of giving appointments to the non-Brahmins to the detriment of the Brahmins, already they have raised a hue and cry and with all their characteristic and traditional craft and cunning

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಆಗಸ್ಟ್ ತಾ|| ೧೪ ನೆಯ ಭಾನುವಾರ.

ನಮ್ಮ ಸಂಸ್ಥಾನದಲ್ಲಿ ರಾಷ್ಟ್ರೀಯಸಭಾ ಶಾಖಾ ಸಂಘವೇಕೆ?

ಪ್ರಜೆಗಳ ಅಭಿಪ್ರಾಯಗಳು ಸರ್ಕಾರಕ್ಕೂ ಸರ್ಕಾರದ ಉದ್ದೇಶಗಳು ಪ್ರಜೆಗಳಿಗೂ ತಿಳಿದು ಪರಸ್ಪರ ಹಿತಚಿಂತನೆಯಿಂದ ರಾಜ್ಯಕಾರ್ಯಗಳು ಸುಲಲಿತವಾಗಿ ಸಾಗುವುದಕ್ಕೆ ಸಾಧಕವಾಗುವಂತೆ ಪ್ರಜಾಪ್ರತಿನಿಧಿ ಸಭೆಯು ಮೊಟ್ಟಮೊದಲು ಏರ್ಪಾಟಾದುದು ನಮ್ಮ ಸಂಸ್ಥಾನದಲ್ಲೇ. ಅದರಿಂದೀಚೆಗೆ ಸ್ತ್ರೀವಿದ್ಯಾಭಿವೃದ್ಧಿಯ ವಿಶೇಷ ಪ್ರಯತ್ನ, ಜಲಪಾತದಿಂದ ವಿದ್ಯುಚ್ಛಕ್ತಿ ಸಮುತ್ಪಾದನೆ, ನಿಯಮನಿರ್ಮಾಣಸಭಾ ಸ್ಥಾಪನೆ, ನ್ಯಾಯಶಾಖಾ ಕಾರ್ಯಕಾರಿ ಶಾಖೆಗಳ ವಿಭಜನೆ, ಸಂಪದಭ್ಯುದಯ ಸಮಾಜಸ್ಥಾಪನೆ, ಸ್ವತಂತ್ರವಿದ್ಯಾಪೀಠ ಪ್ರತಿಷ್ಠಾಪನೆ ಇತ್ಯಾದಿ ದೇಶಾಭ್ಯುದಯಸಾಧಕ ಕಾರ್ಯಗಳೆಲ್ಲಾ ಒಂದೊಂದಾಗಿ ಹುಟ್ಟಿ ನಮ್ಮ ಸಂಸ್ಥಾನಕ್ಕೆ ಮಾದರಿ ಸಂಸ್ಥಾನವೆಂಬ ಪ್ರಸಿದ್ಧಿಯನ್ನುಂಟುಮಾಡಲಿಕ್ಕೆ ಸಾಧಕಗಳಾಗಿರುವುವು. ಮತ್ತು ಈ ದೇಶದ ಪಾಲ್ಯಪಾಲಕರ ಪ್ರೀತಿವಿಶ್ವಾಸಗಳೂ ರಾಜಭಕ್ತಿ ಪ್ರಜಾರಂಜನೆಗಳೂ ನಿಷ್ಕಳಂಕವಾಗಿ ನಡೆದುಬಂದಿರುವುವು. ಭರತಖಂಡ ಪ್ರಭುತ್ವದವರ ಪ್ರತ್ಯಕ್ಷಪರಿಪಾಲನೆಗೆ ಒಳಪಟ್ಟಿರುವ ದೇಶಭಾಗದ ಪ್ರಜೆಗಳಿಗಿಂತಲೂ ಇಲ್ಲಿಯ ಪ್ರಜೆಗಳ ಕ್ಷೇಮಲಾಭವು ನಮ್ಮ ಶ್ರೀಮನ್ಮಹಾರಾಜರ ಸರ್ಕಾರದವರಿಂದ ಅತಿಶಯವಾಗಿ ಗಮನಿಸಲ್ಪಡುತ್ತಿರುವುವು. ಅಲ್ಲಿಯ ಪ್ರಜೆಗಳಿಗಿಂತಲೂ ವಿಶೇಷವಾದ ಸೌಕರ್ಯಗಳೂ ಸುಖಶಾಂತಿಗಳೂ ನಮ್ಮಗಳಿಗೆ ಎಷ್ಟೋ ಭಾಗದಲ್ಲಿ ಅಧಿಕವಾಗಿರುವುವು. ಹೆಚ್ಚು ಮಾತಿನಿಂದೇನು? ನಾವು ಪರ್ಯಾಯವಾದ ಸ್ವರಾಜ್ಯವನ್ನೇ ಅನುಭವಿಸುತ್ತಿರುವೆವೆಂದು ಘಂಟಾಘೋಷವಾಗಿ ಹೇಳಬಹುದು.

ಹೀಗಿರುವಾಗ ನಮ್ಮ ದೇಶದಲ್ಲಿ ಕಾಂಗ್ರೆಸ್ ಶಾಖಾ ಕಮಿಟಿಯನ್ನು ಸ್ಥಾಪಿಸುವ ಪ್ರಯತ್ನಕ್ಕೆ ಕೆಲವರು ಬದ್ಧಕಂಕಣರಾಗಿರುವುದಕ್ಕೇನು ಗುರಿಯೋ ತಿಳಿಯಲಿಲ್ಲ. ಸದ್ಯದಲ್ಲಿ ನಮ್ಮ ಕಷ್ಟಗಳನ್ನು ನೀಗಿಸಿಕೊಂಡು ಹಿತವನ್ನು ಪಡೆದುಕೊಳ್ಳಲಿಕ್ಕೆ ಬೇಕಾದಷ್ಟು ಸಭಾಸೌಕರ್ಯಗಳು ನಮಗೆ ಇದ್ದೇ ಇರುತ್ತವೆ. ಅಲ್ಲದೆ ಈಗಣ ಕಾಂಗ್ರೆಸ್ ಸಭೆಯ ಸ್ಥಿತಿಯು ಪೂರ್ವದಂತೆ ಇಲ್ಲ. ಜನ್ಮಾರಭ್ಯ ಆ ಸಭೆಗೆ ಹಾಲೆರೆದು ಸಾಕಿ ದೊಡ್ಡದುಮಾಡಿ ದೇಶಹಿತೈಕಸಾಧನದಲ್ಲೇ ತಮ್ಮ ಜೀವಿತವನ್ನೆಲ್ಲಾ ಧಾರೆಯೆರೆದು ಅದರ ಕಷ್ಟಸುಖಗಳ ಮತ್ತು ಸದಸನ್ಮಾರ್ಗಗಳ ಅನುಭವವನ್ನೆಲ್ಲಾ ಪಡೆದಿರುವ ಸಾತ್ವಿಕರಾದ ಮಿತವಾದಿಗಳೆಲ್ಲಾ ಈಗ ಅದರಿಂದ ದೂರಸ್ಥರಾಗಿದ್ದಾರೆ. ಕಾರಣವೇನೆಂದರೆ ಈಗಣ ರಾಷ್ಟ್ರೀಯ ಸಭೆಯ ಮುಖ್ಯತತ್ವವು ಪ್ರಭುತ್ವಕ್ಕೆ ಯಾವುದೊಂದು ಸಹಾಯವನ್ನೂ ಮಾಡದೆ ಅದನ್ನು ಆದಷ್ಟು ಬೇಗನೆ ಸ್ತಂಭನಗೊಳಿಸಬೇಕೆಂಬುದೇ ಆಗಿರುತ್ತದೆ. ಅಂಥ ತತ್ವವನ್ನು ಹರಡುತ್ತ ಬರುವುದರಿಂದ ಈಗ ಭರತಖಂಡದಲ್ಲಿ ಪ್ರಜಾಪ್ರಭುಗಳ ಮಧ್ಯದಲ್ಲಿ ಎಷ್ಟು ಚಕಮಕಿಯೂ, ವೈಮನಸ್ಯವೃದ್ಧಿಯೂ, ಅತ್ಯಾಚಾರಗಳೂ, ಪ್ರಾಣಹಾನಿಗಳೂ, ಕಠಿನದಂಡನೆಗಳೂ ಆಗುತ್ತಿವೆಯೆಂಬುದನ್ನು ಪ್ರತಿದಿನವೂ ನಾವು ಕೇಳುತ್ತಲಿದ್ದೇವೆ. ಹೀಗಿರುವಾಗ ಅಂಥ ತತ್ವದ ಅವಶ್ಯಕತೆಯೇ ಇಲ್ಲದ ದೇಶೀಯ ಸಂಸ್ಥಾನಗಳಲ್ಲಿ ಆ ತೆರದ ಉದ್ದೇಶದ ಸಭಾಶಾಖೆಯನ್ನು ಸ್ಥಾಪಿಸುವುದರಲ್ಲಿ ಪ್ರಯೋಜನವೇನು? ಅಷ್ಟು ಕಾಣದೆ ಹೈದರಾಬಾದು ಮೊದಲಾದ ಸಂಸ್ಥಾನಗಳವರು ತಮ್ಮ ಸಂಸ್ಥಾನಗಳಲ್ಲಿ ಇಂಥ ಚಳವಳಿಗೆ ಅವಕಾಶವನ್ನು ಕೊಡದೆ ನಿಷೇಧಾಜ್ಞೆಯನ್ನು ಪ್ರಕಟಿಸಿದರೆ? ಇಂಥ ಚಳವಳಿಗೆ ಅವಕಾಶ ಕೊಡುವುದರಿಂದ ಶಾಂತವಾಗಿದ್ದ ದೇಶದಲ್ಲಿ ಗುಲ್ಲೆಬ್ಬಿಸಿ ಅಶಾಂತಿಯನ್ನುಂಟುಮಾಡುವುದೇ ಫಲವಾದೀತಲ್ಲದೆ ಮತ್ತೇನೂ ಇಲ್ಲ.

ರಾಷ್ಟ್ರೀಯ ಸಭೆಯವರು ಶಾಲೆಯ ವಿದ್ಯಾರ್ಥಿಗಳಿಗೆ ಸಹಾಯನಿರಾಕರಣದ ಹುಚ್ಚನ್ನು ಹತ್ತಿಸಿ ಕೆಲವುದಿನ ಕುಣಿದಾಡಿಸಿ ಅದರಿಂದೇನೂ ಫಲಸಿದ್ಧಿ ಕಾಣದೆ ಆ ಭಾಗದಲ್ಲಿ ಉದಾಸೀನರಾದರು. ವಕೀಲತನ ಮೊದಲಾದ ವೃತ್ತಿಗಳನ್ನು ಬಿಡುವುದಕ್ಕೆ ಪ್ರಜೆಗಳಿಗೆ ಬೋಧಿಸಿ ಅಲ್ಪಸ್ವಲ್ಪ ಲಾಭವನ್ನು ಪಡೆದಿರಬಹುದು. ಮೊದಮೊದಲು ಹರತಾಳವನ್ನು ಬಲವಾಗಿ ಎಲ್ಲೆಲ್ಲೂ ಆಚರಿಸುತ್ತಿದ್ದರು. ಈಗ ಅದು ಉತ್ತಮವಲ್ಲವೆಂದು ಮ|| ಗಾಂಧಿಯವರು ಉಪದೇಶಿಸುತ್ತಿದ್ದಾರೆ. ಆ ಪೂರ್ವದ ಪ್ರಯತ್ನವೆಲ್ಲಾ ನಿಷ್ಫಲವೆಂದು ತಿಳಿದುಕೊಂಡ ಬಳಿಕ ಈಗ ಅವರು ಸ್ವದೇಶ ವಸ್ತ್ರೋತ್ಪಾದನೆಯ ಪ್ರಯತ್ನಕ್ಕೆ ತೊಡಗಿ ವಿದೇಶ ವಸ್ತ್ರದಹನ ಕಾರ್ಯವನ್ನು ಆಚರಿಸುತ್ತಿದ್ದಾರೆ. ಹೀಗೆ ನಿರ್ಧಾರವಾದ ಫಲವನ್ನು ಕಾಣದೆ ಒಂದರ ಹಿಂದೊಂದು ಪ್ರಯತ್ನಗಳು ಅವರಿಂದ ಆಚರಿಸಲ್ಪಡುತ್ತಿವೆ. ಅವುಗಳ ಗುಣಾವಗುಣ ಫಲಾಫಲಗಳ ಭವಿಷ್ಯತ್ ಸ್ಥಿತಿಯು ಹೇಗಾದರೂ ಇರಲಿ. ಸರ್ಕಾರದ ಕಾರ್ಯಸ್ತಂಭನವೇ ಮುಖ್ಯೋದ್ದೇಶವಾಗುಳ್ಳ ಆ ಸಭೆಯ ಅಂತಸ್ತತ್ವಬೀಜವು ನಮ್ಮ ದೇಶದಲ್ಲಿ ನಡಲ್ಪಡುವುದು ಹಿತಪ್ರದವಲ್ಲ.

ಅಲ್ಲದೆ ಈ ಸಂಸ್ಥಾನದಲ್ಲಿ ಈ ಬೀಜದ ಆರೋಪಣೆಗೆ ಬದ್ಧಕಂಕಣರಾಗಿರುವವರಲ್ಲಿ ರಾಷ್ಟ್ರೀಯ ಸಭಾಶಾಸನವಿಧೇಯತೆಯೂ ನಿಷ್ಕಪಟಭಕ್ತಿಯೂ ಇದೆಯೆಂಬುದಕ್ಕೆ ನಿದರ್ಶನವೇ ಇಲ್ಲ. ಮ|| ಗಾಂಧಿಯವರ ಸ್ವರಾಜ್ಯಸಾಧನದ ಉಪಕರಣಗಳಲ್ಲಿ ಪ್ರಥಮಸ್ಥಾನವನ್ನು ಹೊಂದಿರುವ ಅಸ್ಪೃಶ್ಯತ್ವನಿವಾರಣೆಯ ಉದ್ದೇಶಕ್ಕೆ ಇವರು ಬದ್ಧವೈರಿಗಳು. ಮತ್ತು ವಿದೇಶದ ಬಟ್ಟೆಗಳನ್ನು ತೆಗೆದು ಖದ್ದರ ಬಟ್ಟೆಗಳನ್ನು ಧರಿಸಿದವರು ಇವರಲ್ಲಿ ಒಬ್ಬರೂ ಇಲ್ಲ. ಇಷ್ಟೇ ಅಲ್ಲದೆ ದೇಶದ ಸಕಲ ಪ್ರಜೆಗಳೂ ಅಭ್ಯುದಯಕ್ಕೆ ಬರಲಿ ಎಂಬ ಉದಾರದೇಶಾಭಿಮಾನವು ಇವರಿಗೆ ಸ್ವಪ್ನದಲ್ಲೂ ಇಲ್ಲ. ವಿದ್ಯಾಭ್ಯಾಸದ ಮೆಮೊರಾಂಡಂ ಮತ್ತು ಮಿಲ್ಲರ್ ಸಂಘದ ವರದಿ ಇವುಗಳ ಮೂಲಕ ಪ್ರಜಾಸಾಮಾನ್ಯವೂ ಅಭಿವೃದ್ಧಿಗೊಳ್ಳುವುದೆಂಬ ಅಸೂಯೆಯಿಂದ ಕುದಿಯುತ್ತಿರುವ ಜನರಿಗೂ ರಾಷ್ಟ್ರೀಯ ಸಭೆಯ ಆದರ್ಶಕ್ಕೂ ಭೂಮ್ಯಾಕಾಶದಷ್ಟು ತಾರತಮ್ಯಗಳಿರುತ್ತವೆ. ಅಲ್ಲದೆ ಮೈಸೂರಿನಲ್ಲಿ ಇವರು ಸ್ಥಾಪಿಸಿರುತ್ತೇವೆಂದು ಹೇಳುವ ಶಾಖಾಸಂಘಕ್ಕೆ ಅತಿರಥಮಹಾರಥರೆಂದು ಹೇಳಿಕೊಳ್ಳತಕ್ಕ ತಾವುಗಳು ವೈಸ್‌ಪ್ರೆಸಿಡೆಂಟರಾಗಿ ನಿಂತುಕೊಳ್ಳದೆ ರಾಜಕೀಯ ರಂಗದಲ್ಲಿ ಹಜ್ಜೆಯಿಡುವುದನ್ನೇ ಇದುವರೆಗೂ ಅರಿಯದಿರುವ ಸಾಧುಪ್ರಾಣಿಗಳನ್ನು ಮುಂಜೂರಿಗೆ ನಿಲ್ಲಿಸಿಬಿಟ್ಟಿರುವುದು ಕಡು ಚೋದ್ಯವಾಗಿರುವುದು ಮಾತ್ರವಲ್ಲದೆ ಕಂಡವರ ಮಕ್ಕಳನ್ನು ಏನೋ ಮಾಡಿ ಆಳ ನೋಡಿದರೆಂಬ ಗಾಥೆಗೆ ಸಮನಾಗಿರುತ್ತದೆ. ಇದನ್ನೆಲ್ಲಾ ನೋಡಿದರೆ ಈ ಪ್ರಯತ್ನದಲ್ಲಿ ಶುದ್ಧವಾದ ಮತ್ತು ದೇಶಹಿತಸಾಹಾಯ್ಯಕವಾದ ಅಭಿಪ್ರಾಯಗಳಿರುವಂತೆ ಕಂಡುಬರುವುದಿಲ್ಲ. ಇದರ ಆರಂಭಕಾಲದಲ್ಲೇ ರಾಜಧಾನಿಯಲ್ಲಿ ವಿದ್ಯಾರ್ಥಿಗಳಿಗೂ ಪೊಲೀಸುದ್ಯೋಗಿಗಳಿಗೂ ಬಡಿದಾಟವಾದ ಶಕುನವು ಶುಭಲಕ್ಷಣವಾಗಿಯೂ ಇಲ್ಲ. ಅಧಿಕಾರದ್ವೇಷವ್ಯಾಪನೆಗೆ ಇದು ಒಂದು ಸಾಧನವಾಗುವುದು ಎಂದು ಅನೇಕರು ಶಂಕಿಸುತ್ತಿದ್ದಾರೆ. ರಾಜಭಕ್ತಿ ದೇಶಹಿತಚಿಂತನೆಗಳುಳ್ಳ ಪ್ರಜೆಗಳು ಇದರಿಂದ ಎಷ್ಟು ದೂರವಾಗಿದ್ದರೆ ಅಷ್ಟು ಕ್ಷೇಮ. ಇದು ಮೂಡಿದಲ್ಲಿಯೇ ಕರಿತುಹೋಗುವಂತೆ ಮಾಡುವಲ್ಲಿ ಪಾಲ್ಯಪಾಲಕರೀರ್ವರೂ ಎಚ್ಚರಪಡುವುದು ವಿಹಿತವೆಂದ ಹೇಳದಿರಲಾರೆವು.

ಹಿಂದುಳಿದವರ ಪ್ರಾತಿನಿಧ್ಯ.

ಕಳೆದ ತಾ|| ೫ ರಲ್ಲಿ ಕೂಡಿದ್ದ ಮದರಾಸು ಶಾಸನಸಭೆಯಲ್ಲಿ ನಡೆದ ಚರ್ಚೆಗಳೊಳಗೆ ಹಿಂದುಳಿದ ಜನವರ್ಗಗಳವರಿಗೆ ಸರ್ಕಾರದ ಉದ್ಯೋಗಸ್ಥಾನಗಳನ್ನು ಹೆಚ್ಚುಹೆಚ್ಚಾಗಿ ಕೊಡುವಂತೆ ಮಾಡಬೇಕು, ಎಂಬ ತೀರ್ಮಾನದ ಚರ್ಚೆಯು ಪ್ರಬಲವಾಗಿದ್ದಿತು. ಮ|| ಓ. ತನಿಕಾಚಲಂ ಶೆಟ್ಟಿಯವರು ಈ ತೀರ್ಮಾನವನ್ನು ಉಪಪಾದಿಸಿದರು:—ಸರ್ಕಾರದುದ್ಯೋಗಗಳನ್ನಪೇಕ್ಷಿಸಿ ಬಂದ ಉಮೇದುವಾರರಲ್ಲಿ ಬ್ರಾಹ್ಮಣರಿಗಿಂತ ಇತರರು ಸ್ವಲ್ಪ ಕಡಿಮೆಯ ವಿದ್ಯಾವಂತರಾಗಿದ್ದರೂ ಅವರಲ್ಲಿ ಸರ್ಕಾರಿ ಕಾರ್ಯನಿರ್ವಾಹಕ್ಕೆ ಅವಶ್ಯಕವಾದ ಕನಿಷ್ಠ ಯೋಗ್ಯತೆಯಿದ್ದರೂ ಅವರಿಗೇ ಎಂದರೆ ಬ್ರಾಹ್ಮಣೇತರ ಹಿಂದುಗಳು ಕ್ರೈಸ್ತರು ಮಹಮ್ಮದೀಯರು ನಿಮ್ನಜಾತಿಯವರು ಇವರುಗಳಿಗೆ ೭ ವರ್ಷಕಾಲದವರೆಗೂ ಸರ್ಕಾರದ ಎಲ್ಲ ಉದ್ಯೋಗಗಳನ್ನೂ ಕೊಡುವಂತೆ ಪ್ರಭುತ್ವದವರು ಒಂದು ಅಪ್ಪಣೆಯನ್ನು ಕೊಡಬೇಕೆಂದೂ ೧೦೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರರಿಗೆ ೧೦೦ ಕ್ಕೆ ೬೬ ಸ್ಥಲಗಳೂ, ೧೦೦ ರೂ. ಗೆ ಕೀಳ್ಪಟ್ಟ ಸಂಬಳದ ಸ್ಥಾನಗಳಲ್ಲಿ ೧೦೦ ಕ್ಕೆ ೭೫ ರಂತೆಯೂ ಬರುವವರೆಗೆ ಮಾತ್ರ ಹೀಗೆ ಮಾಡಬೇಕೆಂದೂ ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ,
ದೇ ತೀರ್ಮಾನದ ಅಭಿಪ್ರಾಯವಾಗಿದ್ದಿತು. ಇದನ್ನು ರಾ
ಟಿ. ಬಾಲಾಜಿರಾವು ನಾಯಡುಯವರು ಬಲಪಡಿಸಿದರು
ರಮೇಲೆ ಸರ್ಕಾರದ ಪಕ್ಷದಿಂದ ಆ|| ಎ. ಆರ್ ನಾ
ಮಾತನಾಡುವಾಗ್ಗೆ ಜಾತಿವರ್ಣ ಪಕ್ಷಪಾತವನ್ನು ಬೆಳೆಂ
ವಿಷಯಗಳು ಸರ್ಕಾರಕ್ಕೆ ಸಂಮತವಲ್ಲವೆಂದು ಹೇಳಿಕೊ
ಸರ್ಕಾರದವರು ಸಕಲ ವರ್ಗಗಳವರಿಗೂ ಉದ್ಯೋಗಗ
ಳನ್ನು ಕೊಟ್ಟೇತೀರಬೇಕೆಂಬುದನ್ನು ಒಪ್ಪಿಕೊಂಡುದಲ್ಲದೆ
ಹ್ಮಣೇತರ ವರ್ಗಗಳವರು ತಮಗೆ ಸರ್ಕಾರಿ ಉದ್ಯೋ
ಗಳು ಹೆಚ್ಚಾಗಿ ದೊರೆಯಬೇಕೆಂದು ಕೇಳುತ್ತಿರು
ನ್ಯಾಯವೆಂದು ಒಪ್ಪಿಕೊಂಡರು. ಮತ್ತು ಮೇಲೆ ಂಡ
ನಕ್ಕೆ ತಮ್ಮದೊಂದು ಸವರಣವನ್ನು ಸೂಚಿಸಿದರು.
ಸರ್ಕಾರದುದ್ಯೋಗಗಳಲ್ಲಿ ಬ್ರಾಹ್ಮಣೇತರ ಸಂಘಗಳ
ಧ್ಯವನ್ನು ಹೆಚ್ಚುಗೊಳಿಸುವುದಕ್ಕಾಗಿ ಈಗ ರೆವಿನ್ಯೂಶಾ
ರುವ ನಿಬಂಧನೆಗಳನ್ನು ಎಲ್ಲಶಾಖೆಗಳಿಗೂ ಎಲ್ಲತೆರದ ಉ
ಗಗಳಿಗೂ ಅನುವರ್ತಿಸುವಹಾಗೆ ಮಾಡಿ, ಅದಕ್ಕೆ ತಕ್ಕ
ಣೆಯನ್ನು ಸರ್ಕಾರದವರು ಕೊಟ್ಟು, ಆ ಅಪ್ಪಣೆಯ
ಉದ್ಯೋಗಗಳನ್ನು ಕೊಡಲು ಅರ್ಹರಾದ ಅಧಿಕಾರಿಗ
ಬದ್ಧರಾಗಿಯೇ ತೀರಬೇಕೆಂದು ನಿರ್ಬಂಧಮಾಡಿ, ಪ್ರತಿ
ಕಚೇರಿಯ ಅಧಿಕಾರಿಯೂ ಈ ವಿಷಯವಾಗಿ ಬ್ರಾಹ್ಮ
ಸಂಘ ಪ್ರಾತಿನಿಧ್ಯವು ಸರ್ಕಾರದುದ್ಯೋಗಗಳಲ್ಲಿ ಹೇಗೆ
ದ್ಧಿಗೊಳ್ಳುತ್ತಿರುವುದೋ ಅದನ್ನು ಆರಾರು ತಿಂಗಳಿಗೆ
ವೃತ್ತಿ ವರದಿಮಾಡಿ ಸರ್ಕಾರಕ್ಕೆ ತಪ್ಪದೆ ಕಳುಹಿಸುತ್ತಾ
ಕೆಂದೂ, ಅಂಥ ವರದಿಗಳನ್ನು ಈ ಶಾಸನವಿಧಾಯಕ
ಸಭಿಕರಿಗೆ ಕಳುಹಿಸಿಕೊಡಬೇಕೆಂದೂ ಈ ಸಭೆಯವರು
ರಕ್ಕೆ "ಶಿಫಾರಸು" ಮಾಡುತ್ತಾರೆ. ಹೀಗೆಂಬ ಸ
ಮ|| ತನಿಕಾಚಲಂ ಶೆಟ್ಟಿಯವರು ಒಪ್ಪಿಕೊಂಡರು.
ದಿ|| ಬ|| ಎ. ಕೃಷ್ಣನ್ ನಾಯರ್‌ರವರು—ಬ್ರಾಹ್ಮ
ಸಂಘ ಪ್ರಾತಿನಿಧ್ಯವನ್ನು ಕುರಿತು ಈಗಲೇ ಕೆಲಸಬಂದ
ಇರುವುವೆಂದೂ, ಪಕ್ಷಪಾತವಿಲ್ಲದೆ ಎಲ್ಲ ವರ್ಗಗಳವರಿಗ
ಯವಾಗಿ ಸರ್ಕಾರದುದ್ಯೋಗಗಳನ್ನು ಕೊಡತ್ತಾ ಬ
ಅವಶ್ಯಕವೆಂದೂ ಪುಷ್ಟೀಕರಿಸಿ ಮಾತನಾಡಿದರು. ಬಳಿಕ ಆರ್. ವೆಂಕಟರತ್ನಂನಾಯಡುರವರು—ಆ|| ನಾಪುರವರ ಸವಣೆಯು ನನಗೆ ಸಂತೋಷಕರವಾಗಿರುವುದು; ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವು ಇದ್ದೇತೀರಬೇಕೆಂಬ ಧರ್ಮಸೂತ್ರವನ್ನು ಸರ್ಕಾರದವರು ಈಗ ಗುರ್ತಿಸಿದರು. ಅದಕ್ಕಾಗಿ ಅವರಿಗೆ ನಾವು ಕೃತಜ್ಞರು, ಎಂದು ಹೇಳಿದರು. ಪ್ರತಿಕೂಲವಾಗಿ ಯಾರೂ ಅಭಿಪ್ರಾಯ ಕೊಡದೆ ಸರ್ವರೂ ತೀರ್ಮಾನವನ್ನಂಗೀಕರಿಸಿದರು.

ಬಳಿಕ ಅದೇ ತನಿಕಾಚಲಂ ಶೆಟ್ಟಿಯವರು ಇನ್ನೊಂದು ತೀರ್ಮಾನವನ್ನು ಪ್ರತಿಪಾದಿಸಿದರು, ಏನೆಂದರೆ—ಮದ್ರಾಸು ಸರ್ಕಾರದ ಸೆಕ್ರೆಟೆರಿಯೆಟ್ಟಿನಲ್ಲಿ ಸಿವಿಲ್ ಸರ್ವೆಂಟರಹೊರತು ಉಳಿದ ಉದ್ಯೋಗಿಗಳಲ್ಲಿ ಬ್ರಾಹ್ಮಣರಂತೆಯೇ ಇತರ ಸಂಘಗಳವರೂ ಸಮಾನಸಂಖ್ಯೆಗೆ ಬರುವವರೆಗೆ ಮೂರುವರ್ಷ ಕಾಲದೊಳಗೆ ಎಲ್ಲ ಸ್ಥಾನಗಳಲ್ಲೂ ಬ್ರಾಹ್ಮಣೇತರರನ್ನೇ ಸೇರಿಸಬೇಕು. ಹೀಗೆ ಇತರರನ್ನೂ ಸೇರಿಸಿ ಸಮಾನಪಡಿಸುವುದಕ್ಕಾಗಿ ಈಗ ಸೆಕ್ರೆಟೆರಿಯಟ್ಟಿನಲ್ಲಿರುವ ಕೆಲ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಿಯೊ ಅಥವಾ ಬೇರೆ ಹೊಸ ಉದ್ಯೋಗಗಳನ್ನು ಕೊಟ್ಟೋ ಸ್ಥಲ ಬಿಡಿಸಬೇಕೆಂದು ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ.

ಇದರಮೇಲೆ ದಿ|| ಬ|| ಎಲ್. ಎ. ಗೋವಿಂದರಾಘವಯ್ಯರು ಆಕ್ಷೇಪಿಸಿ, ಮೊದಲು ಮಾಡಿದ ತೀರ್ಮಾನದಲ್ಲೇ ಈ ವಿಷಯವೂ ಸೇರಿಹೋಗುವುದಿಲ್ಲವೆ? ಎಂದರು.

ಅದಕ್ಕೆ ತನಿಕಾಚಲಂ ಶೆಟ್ಟಿಯವರು—ಹಾಗಲ್ಲ, ಸೆಕ್ರೆಟೆರಿಯಟ್ಟು ಒಂದು ಒಳಕೋಟೆಯಂತಿರುವುದು; ನಾವು ಒಂದು ಕೋಟೆಯಲ್ಲಿದ್ದೇವೆ. ಸೆಕ್ರೆಟೆರಿಯಟ್ಟು ಇದರ ಒಳಕೋಟೆ. ಬ್ರಾಹ್ಮಣರು ಈ ಕೋಟೆಗೆ ದ್ವಾರಪಾಲಕರು. ೧೯೧೮ ನೆ ವರ್ಷದಲ್ಲಿ ಈ ಸೆಕ್ರೆಟೆರಿಯಟ್ಟಿನಲ್ಲಿದ್ದ ೩೬ ಮಂದಿ ಸೂಪರಿಂಟೆಂಡೆಂಟರೊಳಗೆ ಬ್ರಾಹ್ಮಣರು ೨೯ ಮಂದಿಯೂ, ಕ್ರೈಸ್ತರು ೬ ಮಂದಿಯೂ, ಒಬ್ಬ ಯೂರೋಪಿಯನ್ನೂ ಇದ್ದರು. ಈಗಲಾದರೊ ಬ್ರಾಹ್ಮಣರು ೩೨ ಮಂದಿಯೂ, ಕ್ರೈಸ್ತರು ೩ ಮಂದಿಯೂ, ಬ್ರಾಹ್ಮಣೇತರ ಹಿಂದುವು ಒಬ್ಬನೂ ಇದ್ದಾರೆ. ವಿದ್ಯಾಶಕ್ತಿ ಸಾಮರ್ಥ್ಯದಲ್ಲಿ ಬ್ರಾಹ್ಮಣೇತರರೇನೂ ಕಡಿಮೆಯಾದವರಲ್ಲ. ಇದೇ ಸೆಕ್ರೆಟೆರಿಯಟ್ಟಿನ ಗುಮಾಸ್ತೆಯರೊಳಗೆ ೧೯೧೮ ನೆ ವರ್ಷದಲ್ಲಿ ೧೨೧ ಮಂದಿ ಬ್ರಾಹ್ಮಣರೂ, ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೨ ಮಂದಿ ಕ್ರೈಸ್ತರೂ, ಇಬ್ಬರು ಮಹಮ್ಮದೀಯರೂ ಇದ್ದರು. ಈಗ ೧೧೧ ಮಂದಿ ಬ್ರಾಹ್ಮಣರೂ ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೮ ಮಂದಿ ಕ್ರೈಸ್ತರೂ ಇಬ್ಬರು ಮಹಮ್ಮದೀಯರೂ ಇದ್ದಾರೆ ಎಂದರು.

ಡಾಕ್ಟರ್ ಸಿ. ನಟೇಶನ್‌ರವರು ತೀರ್ಮಾನವನ್ನು ಅನುಮೋದಿಸಿದರು.

ಬಳಿಕ ಸರ್ಕಾರದ ಪಕ್ಷದಿಂದ ಆ|| ನಾಪುರವರು ಮಾತನಾಡಿದುದರಲ್ಲಿ-ಸೆಕ್ರೆಟೆರಿಯಟ್ಟಿನೊಳಗೆ ಬ್ರಾಹ್ಮಣರ ಸಂಖ್ಯೆ ಹೆಚ್ಚಾಗಿರುವುದು ನಿಜವೇ; ಆದರೂ ಅಲ್ಲಿ ಬಹಳ ಮೇಧಾವಿಗಳಾದವರೇ ಇರಬೇಕಾದುದು ಅವಶ್ಯಕವೆಂದೂ, ಇತರರು ಈಗೀಗ ವೃದ್ಧಿಯಾಗುತ್ತಿರುವರೆಂದೂ, ಅಲ್ಲಿರುವ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಬೇಕಾದರೆ ಅಲ್ಲಿಯ

ಬಳಿಕ ಆಂಗ್ಲಜನರು ಎಷ್ಟು ನ್ಯಾಯಪ್ರಿಯರೆಂದು ನನಗೆ ಆನಂದವುಂಟಾಗಿದೆ. ಇನ್ನು ಮೇಲೆ ಬ್ರಾಹ್ಮಣ ತರುಣರಿಗೆ ಸರ್ಕಾರಿ ಉದ್ಯೋಗಗಳು ದೊರೆಯದೆಹೋದರೆ ಅವರು ಇತರ ವೃತ್ತಿಗಳಲ್ಲಿ ಪ್ರವೇಶಿಸಬಹುದು. ಸರ್ಕಾರದುದ್ಯೋಗಗಳು ತಪ್ಪಿದರೆ ಬೇರೆ ಕೆಲಸವಿಲ್ಲವೆ? ಯಾವ ಮಾರ್ಗವೂ ಇಲ್ಲದೆ ಹೋದರೆ ಮರಣಮಾರ್ಗವೇ ಗತಿತಾನೇ? ಬಲವಂತರು ಜೀವಿಸುವ ಕಾಲದಲ್ಲಿ ದುರ್ಬಲರು ಪಾತಾಳಕ್ಕೆ ಹೋಗಲೇಬೇಕಷ್ಟೆ? ಎಂದರು.

ಮ|| ಟಿ. ಶಿವಶಂಕರಂ ಪಿಳ್ಳೆಯವರು ತೀರ್ಮಾನಕ್ಕೆ ಅನುಮೋದನವನ್ನು ಕೊಟ್ಟರು. ಕಡೆಗೆ ತೀರ್ಮಾನದ ಮೇಲೆ ಸಭಿಕರ ಓಟುಗಳನ್ನು ಕೇಳಲಾಗಿ, ಸಾಧಾರಣವಾಗಿ ಬ್ರಾಹ್ಮಣ ಸಭಿಕರೆಲ್ಲಾ ವಿರುದ್ಧವಾಗಿಯೇ ಇದ್ದು ತಮ್ಮ ಅಸಂಮತಿಯನ್ನು ತೋರಿಸಿದರು. ಅದರಿಂದ ೨೨ ಮಂದಿ ಪ್ರತಿಕೂಲರೂ, ೪೯ ಮಂದಿ ಅನುಕೂಲರೂ ಆಗಿ ಓಟುಕೊಟ್ಟುದರಿಂದ ಮ|| ತನಿಕಾಚಲಂಶೆಟ್ಟರ ತೀರ್ಮಾನವೇ ಅಂಗೀಕೃತವಾಯಿತು.

ಸರ್ಕಾರದ ಉದ್ಯೋಗಗಳನ್ನೆಲ್ಲಾ ಒಂದೇ ಜನ ವರ್ಗದವರೇ ವಿಶೇಷವಾಗಿ ಆಕ್ರಮಿಸಿ, ಪರರಿಗೆ ನಾನಾ ವಿಧದ ತೊಂದರೆಗಳನ್ನು ಕೊಟ್ಟು ಹಿಂಸೆಪಡಿಸುತ್ತ ಬಂದುದರಿಂದ ಅಧಿಕಾರ ಶಕ್ತಿಯನ್ನು ಇತರರು ಪ್ರತಿಭಟಿಸುವುದು ಕಷ್ಟತರವಾಗಿರುವುದರಿಂದಲೂ, ಸಕಲ ಜನವರ್ಗದ ಪ್ರಾಬಲ್ಯವೂ ಒಂದೇ ಸಮನಾಗಿದ್ದರೆ ದೇಶಕ್ಕೂ ಪ್ರಜಾಕೋಟಿಗೂ ಹಿತವಾಗುವುದೆಂಬ ಯೋಚನೆಯಿಂದಲೂ ಹಿಂದೆಬಿದ್ದಿದ್ದ ಜನವರ್ಗದವರು ಈಗ ಎಚ್ಚತ್ತು ತಮ್ಮ ಚಳವಳವನ್ನು ವೃದ್ಧಿಪಡಿಸುತ್ತಿದ್ದಾರೆ. ಅದು ಅವರಿಗೆ ಧರ್ಮವೇ ಆಗಿರುತ್ತದೆ. ಆದರೆ ಇದುವರೆಗೆ ಅಖಂಡವಾಗಿ ಅಧಿಕಾರ ದರ್ಪದ ಸವಿಯನ್ನನುಭವಿಸಿದವರು ಈಗ ಅದರಲ್ಲಿ ಸ್ವಲ್ಪ ಭಾಗವನ್ನು ಕಳೆದುಕೊಳ್ಳಬೇಕಾದರೂ ಸಂಕಟಪಡುತ್ತಾರೆ. ಅದೂ ಅವರಿಗೆ ಸ್ವಭಾವವೇ. "ಭವಿತವ್ಯಂ ಭವತ್ಯೇವ ನಾರಿಕೇಳ ಫಲಾಂಬುವತ್ | ಗಂತವ್ಯಂ ಗಚ್ಛತಿ ಸದಾ ಗಜಭುಕ್ತಕಪಿತ್ಥವತ್ ||

ಮ್ಯು|| ಕೌನ್ಸಿಲರುಗಳ ಆರಿಸುವಿಕೆ.

ಈ ತಿಂಗಳ ಕಡೆಯ ವಾರದಲ್ಲಿ ರಾಜಧಾನಿಯೊಳಗೂ, ಮುಂದಣ ತಿಂಗಳಲ್ಲಿ ಬೆಂಗಳೂರಿನೊಳಗೂ ಮ್ಯುನ್ಸಿಪಲ್ ಕೌನ್ಸಿಲರುಗಳ ಆರಿಸುವಿಕೆಯು ನಡೆಯಲು ಏರ್ಪಾಟಾಗಿದೆ. ಪ್ರಜಾಸಮುದಾಯದಲ್ಲಿ ವಿದ್ಯಾಬುದ್ಧಿವಿಕಾಸಗಳೂ ತಮ್ಮ ಊರು ತಮ್ಮ ಪಟ್ಟಣ ತಮ್ಮ ದೇಶದ ಹಿತಚಿಂತನೆಯ ಭಾವಗಳೂ ಪ್ರಬಲಿಸದಿರುವ ಕಾಲದಲ್ಲಿ ದೇಶೀಯ ಸರ್ಕಾರದ ಕಾರ್ಯಗಳೇ ಆಗಲೀ ಸ್ಥಲಿಕ ಸರ್ಕಾರದ ಕಾರ್ಯಗಳೇ ಆಗಲೀ ಪ್ರಜೆಗಳ ಅಭಿಪ್ರಾಯಗಳಿಗೆ ಅನುಸಾರವಾಗಿ ನಡೆಯುತ್ತವೆಂದು ಹೇಳಲಾಗುವುದಿಲ್ಲ. ಪ್ರಜೆಗಳಲ್ಲಿ ವಿದ್ಯಾವಿವೇಕ ನಾಗರಕತಾದಿ ಲಕ್ಷಣಗಳು ವೃದ್ಧಿಗೊಳ್ಳುತ್ತ ಬಂದ ಬಳಿಕ ಸರ್ಕಾರದ ಕಾರ್ಯಗಳು ಪ್ರಜಾಮತಕ್ಕೆ ವಿರುದ್ಧವಾಗಿ ನಿರಂಕುಶತನದಿಂದ ನಡೆಯುವುದು ಸಾಧ್ಯವಲ್ಲ. ಮತ್ತು ಪ್ರಜಾಸಮುದಾಯವೆಲ್ಲಾ ವಿದ್ಯಾವಿಕಾಸಗೊಳ್ಳದಿದ್ದರೆ ನಿಷ್ಪಕ್ಷಪಾತವಾದ ಆಡಳಿತವು ದೇಶದಲ್ಲಿ ನಡೆಯುವುದೂ ಸಾಧ್ಯವಲ್ಲ. ಈಗೀಗ ದೇಶದಲ್ಲಿ ಪ್ರಜಾವರ್ಗಗಳೊಳಗೆ ವಿದ್ಯಾಭಿರುಚಿಯೂ, ವಿವೇಕದ ಬೆಳಕೂ, ಅಭ್ಯುದಯದ ಚಿಂತೆಯೂ ತಲೆಯೆತ್ತಿಕೊಳ್ಳುತ್ತಿವೆ. ಇದನ್ನು ಕಂಡು ಪ್ರಭುತ್ವದವರು ಕೂಡ ರಾಜ್ಯಾಂಗಗಳಲ್ಲಿ ತಕ್ಕಷ್ಟು ಭಾರವಹನ ಕಾರ್ಯವನ್ನು ಪ್ರಜಾವರ್ಗಕ್ಕೆ ವಹಿಸಿಕೊಡುತ್ತ ಬರುತ್ತಿದ್ದಾರೆ. ಪೂರ್ವದಲ್ಲಿ ಸ್ಥಲಿಕ ಸರ್ಕಾರ (ಮ್ಯುನಿಸಿಪಾಲಿಟಿ) ಗಳೂ ಕೂಡ ಹೆಸರಿಗೆ ಪ್ರಜಾಸರ್ಕಾರವಾಗಿದ್ದರೂ, ಪ್ರಭುತ್ವದವರ ಅಧಿಕಾರವೇ ಅದರಲ್ಲಿ ನಡೆಯುತ್ತಿದ್ದಿತೇ ಹೊರತು ಪ್ರಜಾಭಿಪ್ರಾಯಕ್ಕೆ ಮಹತ್ತ್ವವಿರಲಿಲ್ಲ. ಈಗೀಗ ಆ ಲಕ್ಷಣಗಳೆಲ್ಲಾ ಮಾರ್ಪಡುತ್ತಲಿವೆ. ಪ್ರತಿ ಮ್ಯುನಿಸಿಪಾಲಿಟಿಗಳಲ್ಲೂ ಪ್ರಜಾಮತಕ್ಕೆ ಆಧಿಕ್ಯವಿರುವಂತೆಯೂ, ಅಷ್ಟೇ ಅಲ್ಲದೆ ನಾನಾ ಜನವರ್ಗ ಪ್ರಾತಿನಿಧ್ಯವಿರುವಂತೆಯೂ, ನಿರ್ವಾಹವಿಲ್ಲದ ಸಣ್ಣಸಣ್ಣ ಸ್ಥಲಗಳಲ್ಲಿ ಮಾತ್ರ ಸರ್ಕಾರದ ಅಧಿಕಾರವು ವಿಶೇಷವಾಗಿರುವಂತೆಯೂ, ಸಿಟಿ ಮ್ಯುನ್ಸಿಪಾಲಿಟಿ ಟರ್ವ ಮ್ಯುನ್ಸಿಪಾಲಿಟಿಗಳಲ್ಲಿ ಪ್ರಜೆಗಳಿಂದ ಆರಿಸಲ್ಪಟ್ಟವರೇ ಅಧ್ಯಕ್ಷರಾಗಿರುವಂತೆಯೂ ಮಾಡುತ್ತಿದ್ದಾರೆ. ಬೆಂಗಳೂರು ಮೈಸೂರಿನಂಥ ದೊಡ್ಡ ಮ್ಯುನ್ಸಿಪಾಲಟಿಗಳಿಗೂ ಕೂಡ ಉದ್ಯೋಗನಿವೃತ್ತರಾದ ಹಳಬರೊಬ್ಬೊಬ್ಬರು ಅಧ್ಯಕ್ಷಪದವಿಗೆ ಸರ್ಕಾರದಿಂದಲೇ ನಿಯಮಿಸಲ್ಪಡುತ್ತಿದ್ದು ಕಳೆದವರ್ಷ ಬೆಂಗಳೂರಿಗೆ ಕೌನ್ಸಿಲರುಗಳೇ ತಮ್ಮಲ್ಲೊಬ್ಬರನ್ನು ಆರಿಸಿಕೊಳ್ಳಲವಕಾಶ ಕೊಟ್ಟರು. ಮುಂದೆ ನಮ್ಮ ರಾಜಧಾನಿಗೂ ಅದೇತೆರದ ಅವಕಾಶ ಸಿಕ್ಕೇ ಸಿಕ್ಕುವುದು. ಹೀಗಾಗುವುದರಿಂದ ಎಲ್ಲೋ ಕೆಲವು ಮಹತ್ತರವಾದ ವಿಷಯಗಳ ಹೊರತು ಇತರ ವಿಷಯಗಳನ್ನೆಲ್ಲಾ ಅಲ್ಲಲ್ಲಿಯ ಪ್ರಜೆಗಳ ಹಿತಕ್ಕೆ ಅನುಸಾರವಾಗಿ ನೆರವೇರಿಸಿಕೊಳ್ಳಲಿಕ್ಕೆ ಅವಕಾಶವಾಗುವುದು. ಮನೆಯ ಯಜಮಾನನಿಗೆ ತನ್ನ ಮನೆಯ ಹಾನಿ ವೃದ್ಧಿಗಳ ನಿಕಟಸಂಬಂಧವು ಎಷ್ಟುಮಟ್ಟಿಗಿರುವುದೋ ಹಾಗೆ ಸ್ಥಲಿಕ ಪ್ರತಿನಿಧಿಗಳ ಮಧ್ಯದಲ್ಲೊಬ್ಬರಿಗೆ ಅಧ್ಯಕ್ಷತೆಯು ದೊರೆತರೆ ಸ್ಥಲಿಕ ಕಾರ್ಯಗಳು ನಿರಾಕ್ಷೇಪವಾಗಿ ನಡೆಯಲು ಸಾಧಕವಾಗುವುದು.

ಹೀಗೆ ಸ್ಥಲಿಕ ಸರ್ಕಾರಗಳ ಸ್ಥಿತಿಯು ಮುಂಬರಿಯುತ್ತಿರುವಾಗ ಅದರ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುವಲ್ಲಿ ಪ್ರಜಾಕೋಟಿಯು ತೂಗಡಿಸುತ್ತ ಕುಳಿತಿರಲಾರದು. ಸ್ವಾರ್ಥವೇ ಸಾಮ್ರಾಜ್ಯಮಾಡುತ್ತಿರುವ ಈಗಣ ಕಾಲದಲ್ಲಿ ಸುಮ್ಮನೆ ಕುಳಿತಿದ್ದವರು ಕುಳಿತೇ ಕೆಡುತ್ತಾರೆ. ನಿಂತು ಕೆಲಸ ಮಾಡಿದವರು ಫಲವನ್ನನುಭವಿಸಿಕೊಳ್ಳುತ್ತಾರೆ. ಊರಿನ ಪ್ರಜೆಗಳೆಲ್ಲಾ ಮ್ಯುನ್ಸಿಪಾಲಿಟಿಯಲ್ಲಿ ಕೆಲಸಮಾಡುವುದಿಲ್ಲ. ಊರಿನ ಪ್ರಜೆಗಳ ಪ್ರತಿನಿಧಿಗಳೇ ಕೌನ್ಸಿಲರುಗಳಾಗಿ ಎಲ್ಲ ಪ್ರಜೆಗಳಿಗೋಸ್ಕರ ಅಲ್ಲಿ ಕೆಲಸಮಾಡುತ್ತಾರೆ. ಎಂದ ಬಳಿಕ ಊರನ್ನೇ ಒಂದು ತೆಪ್ಪವನ್ನಾಗಿಯೂ ಉಳಿದ ಜನರನ್ನೆಲ್ಲಾ ಅದರಲ್ಲಿ ಕುಳಿತಿರುವ ಪ್ರಯಾಣಿಕರನ್ನಾಗಿಯೂ ಕಲ್ಪಿಸಿಕೊಂಡರೆ, ತಾವು ಆರಿಸಿ ಕಳುಹಿಸುವ ಕೌನ್ಸಿಲರನ್ನು ದೋಣಿಯನ್ನು ನಡೆಯಿಸುವ ನಾವಿಕನನ್ನಾಗಿ ಎಣಿಸಬಹುದು. ಮಹಾ ಪ್ರವಾಹದಲ್ಲಿ ದೋಣಿಯನ್ನು ನಡೆಯಿಸುವ ನಾವಿಕನು ಅಸಮರ್ಥನೂ ವಿಶ್ವಾಸಘಾತಕನೂ ಆಗಿದ್ದರೆ ದೋಣಿಯಲ್ಲಿ ಕುಳಿತಿರುವವರ ಅವಸ್ಥೆಯನ್ನು ಹೇಳಬೇಕಾದುದೇ ಇಲ್ಲ. ಅದರಂತೆಯೇ ಈ ಸಮಯದಲ್ಲಿ ನಮ್ಮ ಓಟುಗಳನ್ನು ಕೊಟ್ಟು ನಾವು ಆರಿಸುವ ಪ್ರತಿನಿಧಿಗಳು ನಿಜವಾಗಿ ನಮ್ಮ ಯೋಗಕ್ಷೇಮ ಚಿಂತೆಯನ್ನು ಮಾಡುವಲ್ಲಿ ದಕ್ಷರೆ? ಅವರು ನಂಬುಗೆಗೆ ಅರ್ಹರೆ? ಅವರು ಸ್ವಾರ್ಥಕ್ಕಲ್ಲದೆ ಪ್ರಜಾಹಿತಾರ್ಥವಾಗಿ ನಿರ್ವಂಚನೆಯಿಂದ ಕೆಲಸ ಮಾಡಬಲ್ಲವರೆ? ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ, ತಕ್ಕವರೆಂದು ತೋರಿದವರಿಗೇ ಓಟುಗಳನ್ನು ಕೊಡಬೇಕೇ ಹೊರತು ಪರರ ಬಲಾತ್ಕಾರಕ್ಕೋ ದಾಕ್ಷಿಣ್ಯಕ್ಕೋ ಅಥವಾ ಉಪಸರ್ಪಣೆಗೋ ವಶರಾಗಿ ಸಿಕ್ಕಸಿಕ್ಕಿದವರಿಗೆ ಓಟುಗಳನ್ನು ಕೊಟ್ಟುಬಿಟ್ಟರೆ ಉತ್ತರತ್ರ ತಮ್ಮ ಹಗ್ಗವನ್ನು ಕೊಟ್ಟು ತಾವೇ ಕೈಕಾಲು ಕಟ್ಟಿಸಿಕೊಳ್ಳುವಂಥ ಸ್ಥಿತಿಯು ಬರುವುದೇನೂ ಸುಳ್ಳಲ್ಲ. ಊರ ಕ್ಷೇಮಾಭಿವೃದ್ಧಿಯು ಓಟರುಗಳ ಕೈಯಲ್ಲಿರುವುದು. ಅವರ ಓಟುಗಳಿಗೆ ಘನವಾದ ಬೆಲೆಯಿರುವುದು. ಅದನ್ನು ಅವರು ಈಗಣ ಸಮಯದಲ್ಲಿ ದುರ್ವಿನಿಯೋಗಪಡಿಸಬಾರದು. ನಮ್ಮ ಪುರಸಂಘಾಧ್ಯಕ್ಷರೂ ಅವರ ಸಹಾಯಕರಾದ ಉದ್ಯೋಗಿಗಳೂ ಹಿಂದೆ ನಮ್ಮಿಂದ ಓಟುಗಳನ್ನು ಪಡೆದು ಕೌನ್ಸಿಲ್ ಪೀಠಾಧಿರೋಹಣ ಮಾಡಿದ ಕೆಲವರೂ ಸಹ ವರ್ಷಕ್ಕೆ ಒಂದುದಿನವಾದರೂ ಪಟ್ಟಣದ ಕೆಲ ಭಾಗಗಳಿಗೆ ದರ್ಶನವನ್ನೇ ಕೊಟ್ಟುದಿಲ್ಲ. ಇಂಥವರನ್ನು ನಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕುಳ್ಳಿರಿಸಿದರೆ ನಮಗೆ ಕ್ಷೇಮವಾಗುವುದೆಂದರೇನು? ಆದುಕಾರಣ ಈಗ ಕೌನ್ಸಿಲರಾಗುತ್ತೇವೆಂದು ಉಮೇದುವಾರರಾಗಿ ನಿಂತಿರುವವರಲ್ಲಿ ನಮ್ಮ ನೆರೆಹೊರೆಯವರಾಗಿ ನಮ್ಮ ಅನುಕೂಲಗಳನ್ನೂ ಆರೋಗ್ಯವನ್ನೂ ಹಿತವನ್ನೂ ತ್ರಿಕರಣದಿಂದಲೂ ಕೋರುವ ಉದಾರಭಾವವೂ ಸಚ್ಚರಿತವೂ ವಿಶ್ವಾಸವೂ ಯಾರಲ್ಲುಂಟೋ ಅಂಥವರುಗಳಿಗೇ ನಮ್ಮ ಓಟುಗಳನ್ನು ಕೊಡಲು ನಿಶ್ಚಯಮಾಡಿಕೊಂಡು, ಆಯಾ ಮೊಹಲ್ಲಾ ಕೌನ್ಸಿಲರುಗಳ ಆರಿಸುವಿಕೆಯ ದಿವಸ ಆಯಾ ಸ್ಥಲಕ್ಕೆ ಗೊತ್ತಾಗಿರುವ ಕಾಲಕ್ಕೆ ಪ್ರತಿಯೊಬ್ಬ ಓಟರುಗಳೂ ಹೋಗಿ ತಮ್ಮ ಓಟನ್ನು ಕೊಟ್ಟು ಬರುವಲ್ಲಿ ಉದಾಸೀನಮಾಡಲಾಗದೆಂದು ಸೂಚಿಸುತ್ತೇವೆ.

ತಮ್ಮ ಅಭ್ಯುದಯಕ್ಕೆ ವೀರಶೈವರು ಮಾಡಬೇಕಾದ ಕರ್ತವ್ಯ.

ಬಾಂಧವರೇ ಕಾಲಸ್ಥಿತಿಯು ಬದಲಾಯಿಸುತ್ತಿದೆ. ನಮ್ಮ ಬ್ರಾಹ್ಮಣ ಸಹೋದರರು ಶ್ಲಾಘನೀಯವಾದ ಸಂಘಗಳನ್ನು ಸ್ಥಾಪಿಸುತ್ತಿದ್ದಾರೆ. ಅಭಿವೃದ್ಧಿಗೆ ಅತ್ಯವಶಕವಾದ ಏರ್ಪಾಡುಗಳನ್ನು ಅತಿಜಾಗರೂಕತೆಯಿಂದ ಮಾಡುತ್ತಿದ್ದಾರೆ. ಅವರನ್ನು ಹಿಂಬಾಲಿಸಿ ನಾವುಗಳೂ ಹೋಗಬೇಕು. ಇಲ್ಲವಾದರೆ ನಾಶಸ್ಥಿತಿಯು ಅಶ್ರದ್ಧೆಯಿಂದಿರುವವರ ಪಾಲಾಗುತ್ತದೆ. ನಾವು ಮಾಡಬೇಕೆಂದಿರುವ ಏರ್ಪಾಟುಗಳು ಮೈಸೂರುದೇಶದ ಎಲ್ಲಾ ಭಾಗಗಳಲ್ಲಿಯೂ ತಿಳಿಯಬಂದು ಪ್ರತಿಯೊಬ್ಬರ ಸಹಾಯವೂ ಅಭಿವೃದ್ಧಿಗೆ ಅವಶ್ಯಕವಾಗಿರುತ್ತದೆ. ಆದುದರಿಂದ ಪ್ರತಿ ತಾಲ್ಲೂಕಿನಿಂದಲೂ ನಮಗೆ ವೀರಶೈವ ಮಂಡಲಿಯಲ್ಲಿ ೫ ಜನ ದೊಡ್ಡಮನುಷ್ಯರ ಹೆಸರುಗಳು ತಿಳಿಯಬೇಕಾಗಿರುತ್ತವೆ. ಅವರ ಮುಖಾಂತರ ವಿದ್ಯಾಭಿವೃದ್ಧಿ ಮುಂತಾದ ಕಾರ್ಯಗಳಿಗೆ ಮುಂದೆ ಮಾಡಬೇಕಾದ ಏರ್ಪಾಟುಗಳು ತಿಳಿಯಿಸಲ್ಪಡುತ್ತವೆ. ಅಂಥಾ ಸಂಗತಿಗಳು ಪ್ರತಿ ಗ್ರಾಮಕ್ಕೂ ತಿಳಿಯಬೇಕಾಗುತ್ತವೆ. ಈ ಪತ್ರಿಕೆಯನ್ನು ಓದುವಂಥ ಯಾವ ವೀರಶೈವ ಮಹನೀಯರಾದರೂ ೫ಕ್ಕೆ ಕಮ್ಮಿಯಿಲ್ಲದೆ ಒಂದೊಂದು ತಾಲ್ಲೂಕಿನಿಂದಲೂ ವೀರಶೈವಮುಖಂಡರ ಹೆಸರನ್ನು ಈ ಪತ್ರಿಕಾಕರ್ತರಿಗೆ ತಿಳಿಸಬೇಕೆಂದು ಕೋರಿಕೆ. ಯಾವುದಾದರೂ ತಾಲ್ಲೂಕುಗಳಲ್ಲಿ ಈ ಪತ್ರಿಕೆಯನ್ನು ತರಿಸಿ ಓದುವವರಿಲ್ಲದಿದ್ದರೆ ನೆರೆಯ ತಾಲ್ಲೂಕಿನವರು ಈ ಸಹಾಯವನ್ನು ನಮಗೆ ಮಾಡಬೇಕೆಂದು ಅಪೇಕ್ಷಿಸುತ್ತೇವೆ. ಈ ತಿಂಗಳ ಅಂತ್ಯದೊಳಗೆ ಎಲ್ಲಾ ತಾಲ್ಲೂಕಿನಿಂದಲೂ ನಮಗೆ ಹೆಸರುಗಳು ತಿಳಿಯಬರುವುವೆಂದು ನಂಬಿರುತ್ತೇವೆ. ಈ ಹೆಸರುಗಳನ್ನು ನಾವು ಪ್ರಕಟಿಸುವುದಿಲ್ಲ. ಒಂದು ತಾಲ್ಲೂಕಿನಿಂದ ಒಬ್ಬರಿಗಿಂತ ಹೆಚ್ಚು ಜನರು ಐದುಐದರಂತೆ ಹೆಸರುಗಳನ್ನು ಕೊಟ್ಟರೆ ಅವೆಲ್ಲವನ್ನೂ ನಾವು ತೆಗೆದುಕೊಳ್ಳುತ್ತೇವೆ. ಕನಿಷ್ಠಪಕ್ಷ ೫ ಜನರ ಹೆಸರು ತಿಳಿಯಬೇಕಾಗಿರುತ್ತದೆ. ಹೆಚ್ಚು ಎಷ್ಟಿದ್ದರೆ ಅಷ್ಟೂ ಉತ್ತಮ. ತಾಲ್ಲೂಕು ಒಂದಕ್ಕೆ ನೂರಾರು ಜನರು ನಮಗೆ ದೊರೆತರೆ ಮತ್ತೂ ಅನುಕೂಲವು. ಎಲ್ಲಾ ತಾಲ್ಲೂಕಿನಿಂದಲೂ ಹೆಸರುಗಳು ತಿಳಿದನಂತರ ಒಂದು ಒಟ್ಟುಪಟ್ಟಿಯನ್ನುಮಾಡಿ, ಎಲ್ಲಾ ಹೆಸರುಗಳೂ ಪ್ರತಿಯೊಬ್ಬರಿಗೂ ತಿಳಿಯುವಂತೆ ಒಬ್ಬೊಬ್ಬರಿಗೆ ಒಂದೊಂದು ಪಟ್ಟಿಯನ್ನು ಕಳುಹಿಸುತ್ತೇವೆ. ಅದರಿಂದ ಎಲ್ಲರಿಗೂ ಅಂತರಂಗವಾಗಿ ಯಾರುಯಾರುಮತಾಭಿಮಾನದಿಂದ ಮತಾಭಿವೃದ್ಧಿಗೆ ಸಹಾಯಕರಾಗಿದ್ದಾರೆಂಬುದು ತಿಳಿಯಬಹುದು. ಅತಿ ಜಾಗ್ರತೆಯಿಂದ ಹೆಸರುಗಳನ್ನು ತಿಳಿಸುವಿರೆಂದು ನಂಬಿರುತ್ತೇವೆ.

THE INDIAN SOCIAL REFORMER ON MYSORE PROBLEMS.

The Indian Social Reformer furnishes the evidence that what is contained in the Bombay Chronicle about Mysore affairs is completely misleading and one sided. While the mis-leading statements of the Chronicle are based on the misinterpretation of the order of Government on the Miller Report, conveyed to them by the partisan class in Mysore which is for monopolisation of official authority to one sect of people, the contradiction by the Indian Social Reformer has for its statements the authority of the experience of an Indian publicist, the authority of direct observation by a leading gentleman like the Hon. Mr. Lalubhai Samaldas who had occasion to intimately study the conditions in Mysore by undertaking an extensive tour into the interior of the country, the authority of the impressions of the prevailing conditions in Mysore received by Mr. Devdhar and the authority of the Editor himself who had recently occasions to meet the men of leading in Mysore and to exchange views with them.

The causes for the Miller Committee Report are appreciated and hopes are entertained by the Indian Social Reformer that the loyal people of Mysore who are undoubtedly other than those who rush to the columns of the non-co-operationist journals for clamerous cry, have the good sense to take measures to preserve the abiding interests of the country. What contrast is there between an outburst caused by a hollow bubble and a sane statement based on solid facts.

We have no desire for controversy. Nor do we like the idea of a rupture arising in the country as a consequence of Miller Committee Report. A series of misleading statements having appeared in certain journals in this country, which serve the interests of one minor class of people who not having been satisfied with such mis-representations here, have also gone outside the country to spread the mischief consequent on mis-statements, we consider it our sacred duty to our Beloved Maharaja and to our country to take the earliest opportunity to contradict the mis-statements and to do our best to expose the falsity and the mischief involved in the mis-leading articles appearing in the Bombay Chronicle and the Madras Hindu.

Our Noble Dewan is certainly not an amateur statesman as was the case with his immediate predecessor who emerged to be the Dewan from the heaps of plans and estimates, and schemes and projects. Our Patriatic Sirdar has nothing of strangeness in his veins as was in the case of 4 out of 5 non-Engineer Dewans of Mysore. He knows the people of the country. He realises their wants. He does his best to remove the disabilities under which they have been systematically labouring for the last 40 years under the yoke of one class administration. He loves and is thoroughly loyal to His Highness and if such a Patriatic Nobleman is not the statesman whom the country wants, whom else would the people want. Certainly not those upstarts who were something yesterday and are to-day the "Efficients" in the heaps of the examinations which they have passed. We want more justice and less examinations. We want more heart and less brains. We want statesmen whose heart beats with those of the people of the country. We are sorry to read the statements of malcontents with no reason for that bad spirit. The real people of Mysore have been silent till now and will speak hereafter to show the falsity of those who had the monopoly of Public service and who had the audacity to distort public opinion.

We have great hopes in the policy of the present Government and we have the trust that it has the courage of its conviction.

THE FUTILE GAME.

We do not know what has come about our Brahmin friends now a days. Their attitude and action are fully illustrative of the old bit correct saying 'ವಿನಾಶಕಾಲೇ ವಿಪರೀತಬುದ್ಧಿಃ'. The Miller Committee which is after all a belated grant of partial justice has altogether upset their mentality. While the non-Brahmins, who number 96% of the population of the State are finding the orders on the Miller Committee too inadequate to meet their present needs or to satisfy their just claims, the Brahmins who though are entitled to only 4% of the appointments have yet 50% reserved for them at the end of seven years a concession for which, in our earnest and candid opinion, there is not the slightest justification are madly raising a storm of opposition. Even the realisation of this partial justice by the non-Brahmins at the end of 7 long years is problematical, because of the suttle and insiduous ways of those who have now girded up their loins against this popular measure. When nothing as yet has been done by way of giving appointments to the non-Brahmins to the detriment of the Brahmins, already they have raised a hue and cry and with all their characteristic and traditional craft and cunning

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಆಗಸ್ಟ್ ತಾ|| ೧೪ ನೆಯ ಭಾನುವಾರ.

ನಮ್ಮ ಸಂಸ್ಥಾನದಲ್ಲಿ ರಾಷ್ಟ್ರೀಯಸಭಾ ಶಾಖಾ ಸಂಘವೇಕೆ?

ಪ್ರಜೆಗಳ ಅಭಿಪ್ರಾಯಗಳು ಸರ್ಕಾರಕ್ಕೂ ಸರ್ಕಾರದ ಉದ್ದೇಶಗಳು ಪ್ರಜೆಗಳಿಗೂ ತಿಳಿದು ಪರಸ್ಪರ ಹಿತಚಿಂತನೆಯಿಂದ ರಾಜ್ಯಕಾರ್ಯಗಳು ಸುಲಲಿತವಾಗಿ ಸಾಗುವುದಕ್ಕೆ ಸಾಧಕವಾಗುವಂತೆ ಪ್ರಜಾಪ್ರತಿನಿಧಿ ಸಭೆಯು ಮೊಟ್ಟಮೊದಲು ಏರ್ಪಾಟಾದುದು ನಮ್ಮ ಸಂಸ್ಥಾನದಲ್ಲೇ. ಅದರಿಂದೀಚೆಗೆ ಸ್ತ್ರೀವಿದ್ಯಾಭಿವೃದ್ಧಿಯ ವಿಶೇಷ ಪ್ರಯತ್ನ, ಜಲಪಾತದಿಂದ ವಿದ್ಯುಚ್ಛಕ್ತಿ ಸಮುತ್ಪಾದನೆ, ನಿಯಮನಿರ್ಮಾಣಸಭಾ ಸ್ಥಾಪನೆ, ನ್ಯಾಯಶಾಖಾ ಕಾರ್ಯಕಾರಿ ಶಾಖೆಗಳ ವಿಭಜನೆ, ಸಂಪದಭ್ಯುದಯ ಸಮಾಜಸ್ಥಾಪನೆ, ಸ್ವತಂತ್ರವಿದ್ಯಾಪೀಠ ಪ್ರತಿಷ್ಠಾಪನೆ ಇತ್ಯಾದಿ ದೇಶಾಭ್ಯುದಯಸಾಧಕ ಕಾರ್ಯಗಳೆಲ್ಲಾ ಒಂದೊಂದಾಗಿ ಹುಟ್ಟಿ ನಮ್ಮ ಸಂಸ್ಥಾನಕ್ಕೆ ಮಾದರಿ ಸಂಸ್ಥಾನವೆಂಬ ಪ್ರಸಿದ್ಧಿಯನ್ನುಂಟುಮಾಡಲಿಕ್ಕೆ ಸಾಧಕಗಳಾಗಿರುವುವು. ಮತ್ತು ಈ ದೇಶದ ಪಾಲ್ಯಪಾಲಕರ ಪ್ರೀತಿವಿಶ್ವಾಸಗಳೂ ರಾಜಭಕ್ತಿ ಪ್ರಜಾರಂಜನೆಗಳೂ ನಿಷ್ಕಳಂಕವಾಗಿ ನಡೆದುಬಂದಿರುವುವು. ಭರತಖಂಡ ಪ್ರಭುತ್ವದವರ ಪ್ರತ್ಯಕ್ಷ ಪರಿಪಾಲನೆಗೆ ಒಳಪಟ್ಟಿರುವ ದೇಶಭಾಗದ ಪ್ರಜೆಗಳಿಗಿಂತಲೂ ಇಲ್ಲಿಯ ಪ್ರಜೆಗಳ ಕ್ಷೇಮಲಾಭವು ನಮ್ಮ ಶ್ರೀಮನ್ಮಹಾರಾಜರ ಸರ್ಕಾರದವರಿಂದ ಅತಿಶಯವಾಗಿ ಗಮನಿಸಲ್ಪಡುತ್ತಿರುವುವು. ಅಲ್ಲಿಯ ಪ್ರಜೆಗಳಿಗಿಂತಲೂ ವಿಶೇಷವಾದ ಸೌಕರ್ಯಗಳೂ ಸುಖಶಾಂತಿಗಳೂ ನಮ್ಮಗಳಿಗೆ ಎಷ್ಟೋ ಭಾಗದಲ್ಲಿ ಅಧಿಕವಾಗಿರುವುವು. ಹೆಚ್ಚು ಮಾತಿನಿಂದೇನು? ನಾವು ಪರ್ಯಾಯವಾದ ಸ್ವರಾಜ್ಯವನ್ನೇ ಅನುಭವಿಸುತ್ತಿರುವೆನೆಂದು ಘಂಟಾಘೋಷವಾಗಿ ಹೇಳಬಹುದು.

ಹೀಗಿರುವಾಗ ನಮ್ಮ ದೇಶದಲ್ಲಿ ಕಾಂಗ್ರೆಸ್ ಶಾಖಾ ಕಮಿಟಿಯನ್ನು ಸ್ಥಾಪಿಸುವ ಪ್ರಯತ್ನಕ್ಕೆ ಕೆಲವರು ಬದ್ಧಕಂಕಣರಾಗಿರುವುದಕ್ಕೇನು ಗುರಿಯೋ ತಿಳಿಯಲಿಲ್ಲ. ಸದ್ಯದಲ್ಲಿ ನಮ್ಮ ಕಷ್ಟಗಳನ್ನು ನೀಗಿಸಿಕೊಂಡು ಹಿತವನ್ನು ಪಡೆದುಕೊಳ್ಳಲಿಕ್ಕೆ ಬೇಕಾದಷ್ಟು ಸಭಾಸೌಕರ್ಯಗಳು ನಮಗೆ ಇದ್ದೇ ಇರುತ್ತವೆ. ಅಲ್ಲದೆ ಈಗಣ ಕಾಂಗ್ರೆಸ್ ಸಭೆಯ ಸ್ಥಿತಿಯು ಪೂರ್ವದಂತೆ ಇಲ್ಲ. ಜನ್ಮಾರಭ್ಯ ಆ ಸಭೆಗೆ ಹಾಲೆರೆದು ಸಾಕಿ ದೊಡ್ಡದುಮಾಡಿ ದೇಶಹಿತೈಕಸಾಧನದಲ್ಲೇ ತಮ್ಮ ಜೀವಿತವನ್ನೆಲ್ಲಾ ಧಾರೆಯೆರೆದು ಅದರ ಕಷ್ಟಸುಖಗಳ ಮತ್ತು ಸದಸನ್ಮಾರ್ಗಗಳ ಅನುಭವವನ್ನೆಲ್ಲಾ ಪಡೆದಿರುವ ಸಾತ್ವಿಕರಾದ ಮಿತವಾದಿಗಳೆಲ್ಲಾ ಈಗ ಅದರಿಂದ ದೂರಸ್ಥರಾಗಿದ್ದಾರೆ. ಕಾರಣವೇನೆಂದರೆ ಈಗಣ ರಾಷ್ಟ್ರೀಯ ಸಭೆಯ ಮುಖ್ಯತತ್ವವು ಪ್ರಭುತ್ವಕ್ಕೆ ಯಾವುದೊಂದು ಸಹಾಯವನ್ನೂ ಮಾಡದೆ ಅದನ್ನು ಆದಷ್ಟು ಬೇಗನೆ ಸ್ತಂಭನಗೊಳಿಸಬೇಕೆಂಬುದೇ ಆಗಿರುತ್ತದೆ. ಅಂಥ ತತ್ತ್ವವನ್ನು ಹರಡುತ್ತ ಬರುವುದರಿಂದ ಈಗ ಭರತಖಂಡದಲ್ಲಿ ಪ್ರಜಾಪ್ರಭುಗಳ ಮಧ್ಯದಲ್ಲಿ ಎಷ್ಟು ಚಕಮಕಿಯೂ, ವೈಮನಸ್ಯವೃದ್ಧಿಯೂ, ಅತ್ಯಾಚಾರಗಳೂ, ಪ್ರಾಣಹಾನಿಗಳೂ, ಕಠಿನದಂಡನೆಗಳೂ ಆಗುತ್ತಿವೆಯೆಂಬುದನ್ನು ಪ್ರತಿದಿನವೂ ನಾವು ಕೇಳುತ್ತಲಿದ್ದೇವೆ. ಹೀಗಿರುವಾಗ ಅಂಥ ತತ್ತ್ವದ ಅವಶ್ಯಕತೆಯೇ ಇಲ್ಲದ ದೇಶೀಯ ಸಂಸ್ಥಾನಗಳಲ್ಲಿ ಆ ತೆರದ ಉದ್ದೇಶದ ಸಭಾಶಾಖೆಯನ್ನು ಸ್ಥಾಪಿಸುವುದರಲ್ಲಿ ಪ್ರಯೋಜನವೇನು? ಅಷ್ಟು ಕಾಣದೆ ಹೈದರಾಬಾದು ಮೊದಲಾದ ಸಂಸ್ಥಾನಗಳವರು ತಮ್ಮ ಸಂಸ್ಥಾನಗಳಲ್ಲಿ ಇಂಥ ಚಳವಳಿಗೆ ಅವಕಾಶವನ್ನು ಕೊಡದೆ ನಿಷೇಧಾಜ್ಞೆಯನ್ನು ಪ್ರಕಟಿಸಿದರೆ? ಇಂಥ ಚಳವಳಿಗೆ ಅವಕಾಶ ಕೊಡುವುದರಿಂದ ಶಾಂತವಾಗಿದ್ದ ದೇಶದಲ್ಲಿ ಗುಲ್ಲೆಬ್ಬಿಸಿ ಅಶಾಂತಿಯನ್ನುಂಟುಮಾಡುವುದೇ ಫಲವಾದೀತಲ್ಲದೆ ಮತ್ತೇನೂ ಇಲ್ಲ.

ರಾಷ್ಟ್ರೀಯ ಸಭೆಯವರು ಶಾಲೆಯ ವಿದ್ಯಾರ್ಥಿಗಳಿಗೆ ಸಹಾಯನಿರಾಕರಣದ ಹುಚ್ಚನ್ನು ಹತ್ತಿಸಿ ಕೆಲವುದಿನ ಕುಣಿದಾಡಿಸಿ ಅದರಿಂದೇನೂ ಫಲಸಿದ್ಧಿ ಕಾಣದೆ ಆ ಭಾಗದಲ್ಲಿ ಉದಾಸೀನರಾದರು. ವಕೀಲತನ ಮೊದಲಾದ ವೃತ್ತಿಗಳನ್ನು ಬಿಡುವುದಕ್ಕೆ ಪ್ರಜೆಗಳಿಗೆ ಬೋಧಿಸಿ ಅಲ್ಪಸ್ವಲ್ಪ ಲಾಭವನ್ನು ಪಡೆದಿರಬಹುದು. ಮೊದಮೊದಲು ಹರತಾಳವನ್ನು ಬಲವಾಗಿ ಎಲ್ಲೆಲ್ಲೂ ಆಚರಿಸುತ್ತಿದ್ದರು. ಈಗ ಅದು ಉತ್ತಮವಲ್ಲವೆಂದು ಮ|| ಗಾಂಧಿಯವರು ಉಪದೇಶಿಸುತ್ತಿದ್ದಾರೆ. ಆ ಪೂರ್ವದ ಪ್ರಯತ್ನವೆಲ್ಲಾ ನಿಷ್ಫಲವೆಂದು ತಿಳಿದುಕೊಂಡ ಬಳಿಕ ಈಗ ಅವರು ಸ್ವದೇಶ ವಸ್ತ್ರೋತ್ಪಾದನೆಯ ಪ್ರಯತ್ನಕ್ಕೆ ತೊಡಗಿ ವಿದೇಶ ವಸ್ತ್ರದಹನ ಕಾರ್ಯವನ್ನು ಆಚರಿಸುತ್ತಿದ್ದಾರೆ. ಹೀಗೆ ನಿರ್ಧಾರವಾದ ಫಲವನ್ನು ಕಾಣದೆ ಒಂದರ ಹಿಂದೊಂದು ಪ್ರಯತ್ನಗಳು ಅವರಿಂದ ಆಚರಿಸಲ್ಪಡುತ್ತಿವೆ. ಅವುಗಳ ಗುಣಾವಗುಣ ಫಲಾಫಲಗಳ ಭವಿಷ್ಯತ್ ಸ್ಥಿತಿಯು ಹೇಗಾದರೂ ಇರಲಿ. ಸರ್ಕಾರದ ಕಾರ್ಯಸ್ತಂಭನವೇ ಮುಖ್ಯೋದ್ದೇಶವಾಗುಳ್ಳ ಆ ಸಭೆಯ ಅಂತಸ್ತತ್ತ್ವಬೀಜವು ನಮ್ಮ ದೇಶದಲ್ಲಿ ನಡಲ್ಪಡುವುದು ಹಿತಪ್ರದವಲ್ಲ.

ಅಲ್ಲದೆ ಈ ಸಂಸ್ಥಾನದಲ್ಲಿ ಈ ಬೀಜದ ಆರೋಪಣೆಗೆ ಬದ್ಧಕಂಕಣರಾಗಿರುವವರಲ್ಲಿ ರಾಷ್ಟ್ರೀಯ ಸಭಾಶಾಸನವಿಧೇಯತೆಯೂ ನಿಷ್ಕಪಟಭಕ್ತಿಯೂ ಇದೆಯೆಂಬುದಕ್ಕೆ ನಿದರ್ಶನವೇ ಇಲ್ಲ. ಮ|| ಗಾಂಧಿಯವರ ಸ್ವರಾಜ್ಯಸಾಧನದ ಉಪಕರಣಗಳಲ್ಲಿ ಪ್ರಥಮಸ್ಥಾನವನ್ನು ಹೊಂದಿರುವ ಅಸ್ಪೃಶ್ಯತ್ವನಿವಾರಣೆಯ ಉದ್ದೇಶಕ್ಕೆ ಇವರು ಬದ್ಧವೈರಿಗಳು. ಮತ್ತು ವಿದೇಶದ ಬಟ್ಟೆಗಳನ್ನು ತೆಗೆದು ಖದ್ದರ ಬಟ್ಟೆಗಳನ್ನು ಧರಿಸಿದವರು ಇವರಲ್ಲಿ ಒಬ್ಬರೂ ಇಲ್ಲ. ಇಷ್ಟೇ ಅಲ್ಲದೆ ದೇಶದ ಸಕಲ ಪ್ರಜೆಗಳೂ ಅಭ್ಯುದಯಕ್ಕೆ ಬರಲಿ ಎಂಬ ಉದಾರದೇಶಾಭಿಮಾನವು ಇವರಿಗೆ ಸ್ವಪ್ನದಲ್ಲೂ ಇಲ್ಲ. ವಿದ್ಯಾಭ್ಯಾಸದ ಮೆಮೊರಾಂಡಂ ಮತ್ತು ಮಿಲ್ಲರ್ ಸಂಘದ ವರದಿ ಇವುಗಳ ಮೂಲಕ ಪ್ರಜಾಸಾಮಾನ್ಯವೂ ಅಭಿವೃದ್ಧಿಗೊಳ್ಳುವುದೆಂಬ ಅಸೂಯೆಯಿಂದ ಕುದಿಯುತ್ತಿರುವ ಜನರಿಗೂ ರಾಷ್ಟ್ರೀಯ ಸಭೆಯ ಆದರ್ಶಕ್ಕೂ ಭೂಮ್ಯಾಕಾಶದಷ್ಟು ತಾರತಮ್ಯಗಳಿರುತ್ತವೆ. ಅಲ್ಲದೆ ಮೈಸೂರಿನಲ್ಲಿ ಇವರು ಸ್ಥಾಪಿಸಿರುತ್ತೇವೆಂದು ಹೇಳುವ ಶಾಖಾಸಂಘಕ್ಕೆ ಅತಿರಥಮಹಾರಥರೆಂದು ಹೇಳಿಕೊಳ್ಳತಕ್ಕ ತಾವುಗಳು ವೈಸ್‌ಪ್ರೆಸಿಡೆಂಟರಾಗಿ ನಿಂತುಕೊಳ್ಳದೆ ರಾಜಕೀಯ ರಂಗದಲ್ಲಿ ಹಜ್ಜೆಯಿಡುವುದನ್ನೇ ಇದುವರೆಗೂ ಅರಿಯದಿರುವ ಸಾಧುಪ್ರಾಣಿಗಳನ್ನು ಮುಂಚೂಣಿಗೆ ನಿಲ್ಲಿಸಿಬಿಟ್ಟಿರುವುದು ಕಡುಚೋದ್ಯವಾಗಿರುವುದು ಮಾತ್ರವಲ್ಲದೆ ಕಂಡವರ ಮಕ್ಕಳನ್ನು ಏನೋ ಮಾಡಿ ಆಳ ನೋಡಿದರೆಂಬ ಗಾಥೆಗೆ ಸಮನಾಗಿರುತ್ತದೆ. ಇದನ್ನೆಲ್ಲಾ ನೋಡಿದರೆ ಈ ಪ್ರಯತ್ನದಲ್ಲಿ ಶುದ್ಧವಾದ ಮತ್ತು ದೇಶಹಿತಸಾಹಾಯ್ಯಕವಾದ ಅಭಿಪ್ರಾಯಗಳಿರುವಂತೆ ಕಂಡುಬರುವುದಿಲ್ಲ. ಇದರ ಆರಂಭಕಾಲದಲ್ಲೇ ರಾಜಧಾನಿಯಲ್ಲಿ ವಿದ್ಯಾರ್ಥಿಗಳಿಗೂ ಪೋಲೀಸುದ್ಯೋಗಿಗಳಿಗೂ ಬಡಿದಾಟವಾದ ಶಕುನವು ಶುಭಲಕ್ಷಣವಾಗಿಯೂ ಇಲ್ಲ. ಅಧಿಕಾರದ್ವೇಷವ್ಯಾಪನೆಗೆ ಇದು ಒಂದು ಸಾಧನವಾಗುವುದು ಎಂದು ಅನೇಕರು ಶಂಕಿಸುತ್ತಿದ್ದಾರೆ. ರಾಜಭಕ್ತಿ ದೇಶಹಿತಚಿಂತನೆಗಳುಳ್ಳ ಪ್ರಜೆಗಳು ಇದರಿಂದ ಎಷ್ಟು ದೂರವಾಗಿದ್ದರೆ ಅಷ್ಟು ಕ್ಷೇಮ. ಇದು ಮೂಡಿದಲ್ಲಿಯೇ ಕರಿತುಹೋಗುವಂತೆ ಮಾಡುವಲ್ಲಿ ಪಾಲ್ಯಪಾಲಕರೆಲ್ಲರೂ ಎಚ್ಚರಪಡುವುದು ವಿಹಿತವೆಂದ ಹೇಳದಿರಲಾರೆವು.

ಹಿಂದುಳಿದವರ ಪ್ರಾತಿನಿಧ್ಯ.

ಕಳೆದ ತಾ|| ೫ ರಲ್ಲಿ ಕೂಡಿದ್ದ ಮದರಾಸು ಶಾಸನಸಭೆಯಲ್ಲಿ ನಡೆದ ಚರ್ಚೆಗಳೊಳಗೆ ಹಿಂದುಳಿದ ಜನವರ್ಗಗಳವರಿಗೆ ಸರ್ಕಾರದ ಉದ್ಯೋಗಸ್ಥಾನಗಳನ್ನು ಹೆಚ್ಚುಹೆಚ್ಚಾಗಿ ಕೊಡುವಂತೆ ಮಾಡಬೇಕು, ಎಂಬ ತೀರ್ಮಾನದ ಚರ್ಚೆಯು ಪ್ರಬಲವಾಗಿದ್ದಿತು. ಮ|| ಒ. ತನಿಕಾಚಲಂ ಶೆಟ್ಟಿಯವರು ಈ ತೀರ್ಮಾನವನ್ನು ಉಪಪಾದಿಸಿದರು:—ಸರ್ಕಾರದುದ್ಯೋಗಗಳನ್ನಪೇಕ್ಷಿಸಿ ಬಂದ ಉಮೇದುವಾರರಲ್ಲಿ ಬ್ರಾಹ್ಮಣರಿಗಿಂತ ಇತರರು ಸ್ವಲ್ಪ ಕಡಿಮೆಯ ವಿದ್ಯಾವಂತರಾಗಿದ್ದರೂ ಅವರಲ್ಲಿ ಸರ್ಕಾರಿ ಕಾರ್ಯನಿರ್ವಾಹಕ್ಕೆ ಅವಶ್ಯಕವಾದ ಕನಿಷ್ಠ ಯೋಗ್ಯತೆಯಿದ್ದರೂ ಅವರಿಗೇ ಎಂದರೆ ಬ್ರಾಹ್ಮಣೇತರ ಹಿಂದುಗಳು ಕ್ರೈಸ್ತರು ಮಹಮ್ಮದೀಯರು ನಿಮ್ನಜಾತಿಯವರು ಇವರುಗಳಿಗೆ ೭ ವರ್ಷಕಾಲದವರೆಗೂ ಸರ್ಕಾರದ ಎಲ್ಲ ಉದ್ಯೋಗಗಳನ್ನೂ ಕೊಡುವಂತೆ ಪ್ರಭುತ್ವದವರು ಒಂದು ಅಪ್ಪಣೆಯನ್ನು ಕೊಡಬೇಕೆಂದೂ ೧೦೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರರಿಗೆ ೧೦೦ ಕ್ಕೆ ೭೭ ಸ್ಥಲಗಳೂ, ೧೦೦ ರೂ. ಗೆ ಕೀಳ್ಪಟ್ಟ ಸಂಬಳದ ಸ್ಥಾನಗಳಲ್ಲಿ ೧೦೦ ಕ್ಕೆ ೭೫ ರಂತೆಯೂ ಬರುವವರೆಗೆ ಮಾತ್ರ ಹೀಗೆ ಮಾಡಬೇಕೆಂದೂ ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ, ದೇ ತೀರ್ಮಾನದ ಅಭಿಪ್ರಾಯವಾಗಿದ್ದಿತು. ಇದನ್ನು ರಾ ಬಾಲಾಜಿರಾವು ನಾಯಡುಯವರು ಬಲಪಡಿಸಿದರು. ಮೇಲೆ ಸರ್ಕಾರದ ಪಕ್ಷದಿಂದ ಆ|| ಎ. ಆರ್ ನಾ ಮಾತನಾಡುವಾಗ್ಗೆ ಜಾತಿವರ್ಣ ಪಕ್ಷಪಾತವನ್ನು ಬೆಳೆ ವಿಷಯಗಳು ಸರ್ಕಾರಕ್ಕೆ ಸಂಮತವಲ್ಲವೆಂದು ಹೇಳಿಕೊ ಸರ್ಕಾರದವರು ಸಕಲ ವರ್ಗಗಳವರಿಗೂ ಉದ್ಯೋಗಗ ಳನ್ನು ಕೊಟ್ಟೇತೀರಬೇಕೆಂಬುದನ್ನು ಒಪ್ಪಿಕೊಂಡುದಲ್ಲದೆ ಹ್ಮಣೇತರ ವರ್ಗಗಳವರು ತಮಗೆ ಸರ್ಕಾರಿ ಉದ್ಯೋಗಗಳು ಹೆಚ್ಚಾಗಿ ದೊರೆಯಬೇಕೆಂದು ಕೇಳುತ್ತಿರುವ ನ್ಯಾಯವೆಂದು ಒಪ್ಪಿಕೊಂಡರು. ಮತ್ತು ಮೇಲೆ ಂಡ ನಕ್ಕೆ ತಮ್ಮದೊಂದು ಸವರಣವನ್ನು ಸೂಚಿಸಿದರು. ಸರ್ಕಾರದುದ್ಯೋಗಗಳಲ್ಲಿ ಬ್ರಾಹ್ಮಣೇತರ ಸಂಘಗಳ ಧ್ಯವನ್ನು ಹೆಚ್ಚುಗೊಳಿಸುವುದಕ್ಕಾಗಿ ಈಗ ರೆವಿನ್ಯೂಶಾ ರುವ ನಿಬಂಧನೆಗಳನ್ನು ಎಲ್ಲಶಾಖೆಗಳಿಗೂ ಎಲ್ಲತೆರದ ಉ ಗಗಳಿಗೂ ಅನುವರ್ತಿಸುವಹಾಗೆ ಮಾಡಿ, ಅದಕ್ಕೆ ತಕ್ಕ ಣೆಯನ್ನು ಸರ್ಕಾರದವರು ಕೊಟ್ಟು, ಆ ಅಪ್ಪಣೆಯ ಉದ್ಯೋಗಗಳನ್ನು ಕೊಡಲು ಅರ್ಹರಾದ ಅಧಿಕಾರಿಗ ಬದ್ಧರಾಗಿಯೇ ತೀರಬೇಕೆಂದು ನಿರ್ಬಂಧಮಾಡಿ, ಪ್ರತಿ ಕಚೇರಿಯ ಅಧಿಕಾರಿಯೂ ಈ ವಿಷಯವಾಗಿ ಬ್ರಾಹ್ಮ ಸಂಘ ಪ್ರಾತಿನಿಧ್ಯವು ಸರ್ಕಾರದುದ್ಯೋಗಗಳಲ್ಲಿ ಹೇಗೆ ದ್ಧಿಗೊಳ್ಳುತ್ತಿರುವುದೋ ಅದನ್ನು ಆರಾರು ತಿಂಗಳಿಗೆ ವೃತ್ತಿ ವರದಿಮಾಡಿ ಸರ್ಕಾರಕ್ಕೆ ತಪ್ಪದೆ ಕಳುಹಿಸುತ್ತಾ ಕೆಂದೂ, ಅಂಥ ವರದಿಗಳನ್ನು ಈ ಶಾಸನವಿಧಾಯಕ ಸಭಿಕರಿಗೆ ಕಳುಹಿಸಿಕೊಡಬೇಕೆಂದೂ ಈ ಸಭೆಯವರು ರಕ್ಕೆ "ಶಿಫಾರಸು" ಮಾಡುತ್ತಾರೆ. ಹೀಗೆಂಬ ಸ ಮ|| ತನಿಕಾಚಲಂ ಶೆಟ್ಟಿಯವರು ಒಪ್ಪಿಕೊಂಡರು.

ದಿ|| ಬ|| ಎ. ಕೃಷ್ಣನ್ ನಾಯರ್‌ರವರು—ಬ್ರಾಹ್ಮ ಸಂಘ ಪ್ರಾತಿನಿಧ್ಯವನ್ನು ಕುರಿತು ಈಗಲೇ ಕೆಲಸಬಿಂ ಇರುವುದೆಂದೂ, ಪಕ್ಷಪಾತವಿಲ್ಲದೆ ಎಲ್ಲ ವರ್ಗಗಳವರಿಗ ಯವಾಗಿ ಸರ್ಕಾರದುದ್ಯೋಗಗಳನ್ನು ಕೊಡತ್ತಾ ಬ ಅವಶ್ಯಕವೆಂದೂ ಪೃಷ್ಟೀಕರಿಸಿ ಮಾತನಾಡಿದರು. ಬಳಿಕ ಆರ್. ವೆಂಕಟರತ್ನಂನಾಯಡುರವರು—ಆ|| ನಾಪುರವರ ಸವರಣೆಯು ನನಗೆ ಸಂತೋಷಕರವಾಗಿರುವುದು; ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರ ಸಂಘ ಪ್ರಾತಿನಿಧ್ಯವು ಇದ್ದೇತೀರಬೇಕೆಂಬ ಧರ್ಮಸೂತ್ರವನ್ನು ಸರ್ಕಾರದವರು ಈಗ ಗುರ್ತಿಸಿದರು. ಅದಕ್ಕಾಗಿ ಅವರಿಗೆ ನಾವು ಕೃತಜ್ಞರು, ಎಂದು ಹೇಳಿದರು. ಪ್ರತಿಕೂಲವಾಗಿ ಯಾರೂ ಅಭಿಪ್ರಾಯ ಕೊಡದೆ ಸರ್ವರೂ ತೀರ್ಮಾನವನ್ನಂಗೀಕರಿಸಿದರು.

ಬಳಿಕ ಅದೇ ತನಿಕಾಚಲಂ ಶೆಟ್ಟಿಯವರು ಇನ್ನೊಂದು ತೀರ್ಮಾನವನ್ನು ಪ್ರತಿಪಾದಿಸಿದರು, ಏನೆಂದರೆ—ಮದ್ರಾಸು ಸರ್ಕಾರದ ಸೆಕ್ರಟೆರಿಯಟ್ಟಿನಲ್ಲಿ ಸಿವಿಲ್ ಸರ್ವೆಂಟರಹೊರತು ಉಳಿದ ಉದ್ಯೋಗಿಗಳಲ್ಲಿ ಬ್ರಾಹ್ಮಣರಂತೆಯೇ ಇತರ ಸಂಘಗಳವರೂ ಸಮಾನಸಂಖ್ಯೆಗೆ ಬರುವವರೆಗೆ ಮೂರುವರ್ಷ ಕಾಲದೊಳಗೆ ಎಲ್ಲ ಸ್ಥಾನಗಳಲ್ಲೂ ಬ್ರಾಹ್ಮಣೇತರರನ್ನೇ ಸೇರಿಸಬೇಕು. ಹೀಗೆ ಇತರರನ್ನೂ ಸೇರಿಸಿ ಸಮಾನಪಡಿಸುವುದಕ್ಕಾಗಿ ಈಗ ಸೆಕ್ರಟೆರಿಯಟ್ಟಿನಲ್ಲಿರುವ ಕೆಲ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಿಯೊ ಅಥವಾ ಬೇರೆ ಹೊಸ ಉದ್ಯೋಗಗಳನ್ನು ಕೊಟ್ಟೋ ಸ್ಥಲ ಬಿಡಿಸಬೇಕೆಂದು ಈ ಸಭೆಯವರು ಸರ್ಕಾರಕ್ಕೆ "ಶಿಫಾರಸು" ಮಾಡುತ್ತಾರೆ.

ಇದರಮೇಲೆ ದಿ|| ಬ|| ಎಲ್. ಎ. ಗೋವಿಂದರಾಘವಯ್ಯರು ಆಕ್ಷೇಪಿಸಿ, ಮೊದಲು ಮಾಡಿದ ತೀರ್ಮಾನದಲ್ಲೇ ಈ ವಿಷಯವೂ ಸೇರಿಹೋಗುವುದಿಲ್ಲವೆ? ಎಂದರು.

ಅದಕ್ಕೆ ತನಿಕಾಚಲಂ ಶೆಟ್ಟಿಯವರು—ಹಾಗಲ್ಲ, ಸೆಕ್ರಟೆರಿಯಟ್ಟು ಒಂದು ಒಳಕೋಟೆಯಂತಿರುವುದು; ನಾವು ಒಂದು ಕೋಟೆಯಲ್ಲಿದ್ದೇವೆ. ಸೆಕ್ರಟೆರಿಯಟ್ಟು ಇದರ ಒಳಕೋಟೆ. ಬ್ರಾಹ್ಮಣರು ಈ ಕೋಟೆಗೆ ದ್ವಾರಪಾಲಕರು. ೧೯೧೮ ನೆ ವರ್ಷದಲ್ಲಿ ಈ ಸೆಕ್ರಟೆರಿಯಟ್ಟಿನಲ್ಲಿದ್ದ ೩೭ ಮಂದಿ ಸೂಪರಿಂಟೆಂಡೆಂಟರೊಳಗೆ ಬ್ರಾಹ್ಮಣರು ೨೯ ಮಂದಿಯೂ, ಕ್ರೈಸ್ತರು ೭ ಮಂದಿಯೂ, ಒಬ್ಬ ಯೂರೋಪಿಯನ್ನೂ ಇದ್ದರು. ಈಗ ಕಾದರೊ ಬ್ರಾಹ್ಮಣರು ೩೨ ಮಂದಿಯೂ, ಕ್ರೈಸ್ತರು ೩ ಮಂದಿಯೂ, ಬ್ರಾಹ್ಮಣೇತರ ಹಿಂದುವು ಒಬ್ಬನೂ ಇದ್ದಾರೆ. ವಿದ್ಯಾಶಕ್ತಿ ಸಾಮರ್ಥ್ಯದಲ್ಲಿ ಬ್ರಾಹ್ಮಣೇತರರೇನೂ ಕಡಿಮೆಯಾದವರಲ್ಲ. ಇದೇ ಸೆಕ್ರಟೆರಿಯಟ್ಟಿನ ಗುಮಾಸ್ತೆಯರೊಳಗೆ ೧೯೧೮ ನೆ ವರ್ಷದಲ್ಲಿ ೧೨೧ ಮಂದಿ ಬ್ರಾಹ್ಮಣರೂ, ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೨ ಮಂದಿ ಕ್ರೈಸ್ತರೂ, ಇಬ್ಬರು ಮಹಮ್ಮದೀಯರೂ ಇದ್ದರು. ಈಗ ೧೧೧ ಮಂದಿ ಬ್ರಾಹ್ಮಣರೂ ೩೨ ಮಂದಿ ಬ್ರಾಹ್ಮಣೇತರ ಹಿಂದುಗಳೂ, ೧೮ ಮಂದಿ ಕ್ರೈಸ್ತರೂ ಇಬ್ಬರು ಮಹಮ್ಮದೀಯರೂ ಇದ್ದಾರೆ ಎಂದರು.

ಡಾಕ್ಟರ್ ಸಿ. ನಟೇಶನ್‌ರವರು ತೀರ್ಮಾನವನ್ನು ಅನುಮೋದಿಸಿದರು.

ಬಳಿಕ ಸರ್ಕಾರದ ಪಕ್ಷದಿಂದ ಆ|| ನಾಪುರವರು ಮಾತನಾಡಿದುದರಲ್ಲಿ-ಸೆಕ್ರಟೆರಿಯೆಟ್ಟಿನೊಳಗೆ ಬ್ರಾಹ್ಮಣರ ಸಂಖ್ಯೆ ಹೆಚ್ಚಾಗಿರುವುದು ನಿಜವೇ; ಆದರೂ ಅಲ್ಲಿ ಬಹಳ ಮೇಧಾವಿಗಳಾದವರೇ ಇರಬೇಕಾದುದು ಅವಶ್ಯಕವೆಂದೂ, ಇತರರು ಈಗೀಗ ವೃದ್ಧಿಯಾಗುತ್ತಿರುವರೆಂದೂ, ಅಲ್ಲಿರುವ ಬ್ರಾಹ್ಮಣೋದ್ಯೋಗಿಗಳನ್ನು ಇತರ ಜಿಲ್ಲೆಗಳಿಗೆ ಕಳುಹಿಸಬೇಕಾದರೆ ಅಲ್ಲಿಯ

ಬಳಿಕ ಆಂಗ್ಲಜನರು ಎಷ್ಟು ನ್ಯಾಯಪ್ರಿಯರೆಂದು ನನಗೆ ಆನಂದವುಂಟಾಗಿದೆ. ಇನ್ನು ಮೇಲೆ ಬ್ರಾಹ್ಮಣ ತರುಣರಿಗೆ ಸರ್ಕಾರಿ ಉದ್ಯೋಗಗಳು ದೊರೆಯದೆಹೋದರೆ ಅವರು ಇತರ ವೃತ್ತಿಗಳಲ್ಲಿ ಪ್ರವೇಶಿಸಬಹುದು. ಸರ್ಕಾರದುದ್ಯೋಗಗಳು ತಪ್ಪಿದರೆ ಬೇರೆ ಕೆಲಸವಿಲ್ಲವೆ? ಯಾವ ಮಾರ್ಗವೂ ಇಲ್ಲದೆ ಹೋದರೆ ಮರಣಮಾರ್ಗವೇ ಗತಿತಾನೇ? ಬಲವಂತರು ಜೀವಿಸುವ ಕಾಲದಲ್ಲಿ ದುರ್ಬಲರು ಪಾತಾಳಕ್ಕೆ ಹೋಗಲೇಬೇಕಷ್ಟೆ? ಎಂದರು.

ಮ|| ಟಿ. ಶಿವಶಂಕರಂ ಪಿಳ್ಳೆಯವರು ತೀರ್ಮಾನಕ್ಕೆ ಅನುಮೋದನವನ್ನು ಕೊಟ್ಟರು. ಕಡೆಗೆ ತೀರ್ಮಾನದ ಮೇಲೆ ಸಭಿಕರ ಓಟುಗಳನ್ನು ಕೇಳಲಾಗಿ, ಸಾಧಾರಣವಾಗಿ ಬ್ರಾಹ್ಮಣ ಸಭಿಕರೆಲ್ಲಾ ವಿರುದ್ಧವಾಗಿಯೇ ಇದ್ದು ತಮ್ಮ ಅಸಂಮತಿಯನ್ನು ತೋರಿಸಿದರು. ಆದರಿಂದ ೨೨ ಮಂದಿ ಪ್ರತಿಕೂಲರೂ, ೪೯ ಮಂದಿ ಅನುಕೂಲರೂ ಆಗಿ ಓಟುಕೊಟ್ಟುದರಿಂದ ಮ|| ತನಿಕಾಚಲಂಶೆಟ್ಟರ ತೀರ್ಮಾನವೇ ಅಂಗೀಕೃತವಾಯಿತು.

ಸರ್ಕಾರದ ಉದ್ಯೋಗಗಳನ್ನೆಲ್ಲಾ ಒಂದೇ ಜನ ವರ್ಗದವರೇ ವಿಶೇಷವಾಗಿ ಆಕ್ರಮಿಸಿ, ಪರರಿಗೆ ನಾನಾ ವಿಧದ ತೊಂದರೆಗಳನ್ನು ಕೊಟ್ಟು ಹಿಂಸೆಪಡಿಸುತ್ತ ಬಂದುದರಿಂದ ಅಧಿಕಾರಶಕ್ತಿಯನ್ನು ಇತರರು ಪ್ರತಿಭಟಿಸುವುದು ಕಷ್ಟತರವಾಗಿರುವುದರಿಂದಲೂ, ಸಕಲ ಜನವರ್ಗದ ಪ್ರಾಬಲ್ಯವೂ ಒಂದೇ ಸಮನಾಗಿದ್ದರೆ ದೇಶಕ್ಕೂ ಪ್ರಜಾಕೋಟಿಗೂ ಹಿತವಾಗುವುದೆಂಬ ಯೋಚನೆಯಿಂದಲೂ ಹಿಂದೆಬಿದ್ದಿದ್ದ ಜನವರ್ಗದವರು ಈಗ ಎಚ್ಚತ್ತು ತಮ್ಮ ಚಳವಳವನ್ನು ವೃದ್ಧಿಪಡಿಸುತ್ತಿದ್ದಾರೆ. ಅದು ಅವರಿಗೆ ಧರ್ಮವೇ ಆಗಿರುತ್ತದೆ. ಆದರೆ ಇದುವರೆಗೆ ಅಖಂಡವಾಗಿ ಅಧಿಕಾರ ದರ್ಪದ ಸವಿಯನ್ನನುಭವಿಸಿದವರು ಈಗ ಅದರಲ್ಲಿ ಸ್ವಲ್ಪ ಭಾಗವನ್ನು ಕಳೆದುಕೊಳ್ಳಬೇಕಾದರೂ ಸಂಕಟಪಡುತ್ತಾರೆ. ಅದೂ ಅವರಿಗೆ ಸ್ವಭಾವವೇ. "ಭವಿತವ್ಯಂ ಭವತ್ಯೇವ ನಾರಿಕೇಳ ಫಲಾಂಬುವತ್ | ಗಂತವ್ಯಂ ಗಚ್ಛತಿ ಸದಾ ಗಜಭುಕ್ತಕಪಿತ್ಥವತ್ ||

ಮ್ಯು|| ಕೌನ್ಸಿಲರುಗಳ ಆರಿಸುವಿಕೆ.

ಈ ತಿಂಗಳ ಕಡೆಯ ವಾರದಲ್ಲಿ ರಾಜಧಾನಿಯೊಳಗೂ, ಮುಂದಣ ತಿಂಗಳಲ್ಲಿ ಬೆಂಗಳೂರಿನೊಳಗೂ ಮ್ಯುನ್ಸಿಪಲ್ ಕೌನ್ಸಿಲರುಗಳ ಆರಿಸುವಿಕೆಯು ನಡೆಯಲು ಏರ್ಪಾಟಾಗಿದೆ. ಪ್ರಜಾಸಮುದಾಯದಲ್ಲಿ ವಿದ್ಯಾಬುದ್ಧಿ ವಿಕಾಸಗಳೂ ತಮ್ಮ ಊರು ತಮ್ಮ ಪಟ್ಟಣ ತಮ್ಮ ದೇಶದ ಹಿತಚಿಂತನೆಯ ಭಾವಗಳೂ ಪ್ರಬಲಿಸದಿರುವ ಕಾಲದಲ್ಲಿ ದೇಶೀಯ ಸರ್ಕಾರದ ಕಾರ್ಯಗಳೇ ಆಗಲೀ ಸ್ಥಳಿಕ ಸರ್ಕಾರದ ಕಾರ್ಯಗಳೇ ಆಗಲೀ ಪ್ರಜೆಗಳ ಅಭಿಪ್ರಾಯಗಳಿಗೆ ಅನುಸಾರವಾಗಿ ನಡೆಯುತ್ತವೆಂದು ಹೇಳಲಾಗುವುದಿಲ್ಲ. ಪ್ರಜೆಗಳಲ್ಲಿ ವಿದ್ಯಾವಿವೇಕ ನಾಗರಕತಾದಿ ಲಕ್ಷಣಗಳು ವೃದ್ಧಿಗೊಳ್ಳುತ್ತ ಬಂದ ಬಳಿಕ ಸರ್ಕಾರದ ಕಾರ್ಯಗಳು ಪ್ರಜಾಮತಕ್ಕೆ ವಿರುದ್ಧವಾಗಿ ನಿರಂಕುಶತನದಿಂದ ನಡೆಯುವುದು ಸಾಧ್ಯವಲ್ಲ. ಮತ್ತು ಪ್ರಜಾಸಮುದಾಯವೆಲ್ಲಾ ವಿದ್ಯಾವಿಕಾಸಗೊಳ್ಳದಿದ್ದರೆ ನಿಷ್ಪಕ್ಷಪಾತವಾದ ಆಡಳಿತವು ದೇಶದಲ್ಲಿ ನಡೆಯುವುದೂ ಸಾಧ್ಯವಲ್ಲ. ಈಗೀಗ ದೇಶದಲ್ಲಿ ಪ್ರಜಾವರ್ಗಗಳೊಳಗೆ ವಿದ್ಯಾಭಿರುಚಿಯೂ, ವಿವೇಕದ ಬೆಳಕೂ, ಅಭ್ಯುದಯದ ಚಿಂತೆಯೂ ತಲೆಯೆತ್ತಿಕೊಳ್ಳುತ್ತಿವೆ. ಇದನ್ನು ಕಂಡು ಪ್ರಭುತ್ವದವರು ಕೂಡ ರಾಜ್ಯಾಂಗಗಳಲ್ಲಿ ತಕ್ಕಷ್ಟು ಭಾರವಹನ ಕಾರ್ಯವನ್ನು ಪ್ರಜಾವರ್ಗಕ್ಕೆ ವಹಿಸಿಕೊಡುತ್ತ ಬರುತ್ತಿದ್ದಾರೆ. ಪೂರ್ವದಲ್ಲಿ ಸ್ಥಳಿಕ ಸರ್ಕಾರ (ಮ್ಯುನಿಸಿಪಾಲಿಟಿ) ಗಳೂ ಕೂಡ ಹೆಸರಿಗೆ ಪ್ರಜಾಸರ್ಕಾರವಾಗಿದ್ದರೂ, ಪ್ರಭುತ್ವದವರ ಅಧಿಕಾರವೇ ಅದರಲ್ಲಿ ನಡೆಯುತ್ತಿದ್ದಿತೇ ಹೊರತು ಪ್ರಜಾಭಿಪ್ರಾಯಕ್ಕೆ ಮಹತ್ತ್ವವಿರಲಿಲ್ಲ. ಈಗೀಗ ಆ ಲಕ್ಷಣಗಳೆಲ್ಲಾ ಮಾರ್ಪಡುತ್ತಲಿವೆ. ಪ್ರತಿ ಮ್ಯುನಿಸಿಪಾಲಿಟಿಗಳಲ್ಲೂ ಪ್ರಜಾಮತಕ್ಕೆ ಆಧಿಕ್ಯವಿರುವಂತೆಯೂ, ಅಷ್ಟೇ ಅಲ್ಲದೆ ನಾನಾ ಜನವರ್ಗ ಪ್ರಾತಿನಿಧ್ಯವಿರುವಂತೆಯೂ, ನಿರ್ವಾಹವಿಲ್ಲದ ಸಣ್ಣಸಣ್ಣ ಸ್ಥಲಗಳಲ್ಲಿ ಮಾತ್ರ ಸರ್ಕಾರದ ಅಧಿಕಾರವು ವಿಶೇಷವಾಗಿರುವಂತೆಯೂ, ಸಿಟಿ ಮ್ಯುನ್ಸಿಪಾಲಿಟಿ ಟವರ್ ಮ್ಯುನ್ಸಿಪಾಲಿಟಿಗಳಲ್ಲಿ ಪ್ರಜೆಗಳಿಂದ ಆರಿಸಲ್ಪಟ್ಟವರೇ ಅಧ್ಯಕ್ಷರಾಗಿರುವಂತೆಯೂ ಮಾಡುತ್ತಿದ್ದಾರೆ. ಬೆಂಗಳೂರು ಮೈಸೂರಿನಂಥ ದೊಡ್ಡ ಮ್ಯುನ್ಸಿಪಾಲಿಟಿಗಳಿಗೂ ಕೂಡ ಉದ್ಯೋಗನಿವೃತ್ತರಾದ ಹಳಬರೊಬ್ಬೊಬ್ಬರು ಅಧ್ಯಕ್ಷಪದವಿಗೆ ಸರ್ಕಾರದಿಂದಲೇ ನಿಯಮಿಸಲ್ಪಡುತ್ತಿದ್ದು ಕಳೆದವರ್ಷ ಬೆಂಗಳೂರಿಗೆ ಕೌನ್ಸಿಲರುಗಳೇ ತಮ್ಮಲ್ಲೊಬ್ಬರನ್ನು ಆರಿಸಿಕೊಳ್ಳಲವಕಾಶ ಕೊಟ್ಟರು. ಮುಂದೆ ನಮ್ಮ ರಾಜಧಾನಿಗೂ ಅದೇತೆರದ ಅವಕಾಶ ಸಿಕ್ಕೇ ಸಿಕ್ಕುವುದು. ಹೀಗಾಗುವುದರಿಂದ ಎಲ್ಲೋ ಕೆಲವು ಮಹತ್ತರವಾದ ವಿಷಯಗಳ ಹೊರತು ಇತರ ವಿಷಯಗಳನ್ನೆಲ್ಲಾ ಅಲ್ಲಲ್ಲಿಯ ಪ್ರಜೆಗಳ ಹಿತಕ್ಕೆ ಅನುಸಾರವಾಗಿ ನೆರವೇರಿಸಿಕೊಳ್ಳಲಿಕ್ಕೆ ಅವಕಾಶವಾಗುವುದು. ಮನೆಯ ಯಜಮಾನನಿಗೆ ತನ್ನ ಮನೆಯ ಹಾನಿ ವೃದ್ಧಿಗಳ ನಿಕಟಸಂಬಂಧವು ಎಷ್ಟುಮಟ್ಟಿಗಿರುವುದೋ ಹಾಗೆ ಸ್ಥಳಿಕ ಪ್ರತಿನಿಧಿಗಳ ಮಧ್ಯದಲ್ಲೊಬ್ಬರಿಗೆ ಅಧ್ಯಕ್ಷತೆಯು ದೊರೆತರೆ ಸ್ಥಳಿಕ ಕಾರ್ಯಗಳು ನಿರಾಕ್ಷೇಪವಾಗಿ ನಡೆಯಲು ಸಾಧಕವಾಗುವುದು.

ಹೀಗೆ ಸ್ಥಳಿಕ ಸರ್ಕಾರಗಳ ಸ್ಥಿತಿಯು ಮುಂಬರಿಯುತ್ತಿರುವಾಗ ಅದರ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುವಲ್ಲಿ ಪ್ರಜಾಕೋಟಿಯು ತೂಗಡಿಸುತ್ತ ಕುಳಿತಿರಲಾರದು. ಸ್ವಾರ್ಥವೇ ಸಾಮ್ರಾಜ್ಯಮಾಡುತ್ತಿರುವ ಈಗಣ ಕಾಲದಲ್ಲಿ ಸುಮ್ಮನೆ ಕುಳಿತಿದ್ದವರು ಕುಳಿತೇ ಕೆಡುತ್ತಾರೆ. ನಿಂತು ಕೆಲಸ ಮಾಡಿದವರು ಫಲವನ್ನನುಭವಿಸಿಕೊಳ್ಳುತ್ತಾರೆ. ಊರಿನ ಪ್ರಜೆಗಳೆಲ್ಲಾ ಮ್ಯುನ್ಸಿಪಾಲಿಟಿಯಲ್ಲಿ ಕೆಲಸಮಾಡುವುದಿಲ್ಲ. ಊರಿನ ಪ್ರಜೆಗಳ ಪ್ರತಿನಿಧಿಗಳೇ ಕೌನ್ಸಿಲರುಗಳಾಗಿ ಎಲ್ಲ ಪ್ರಜೆಗಳಿಗೋಸ್ಕರ ಅಲ್ಲಿ ಕೆಲಸಮಾಡುತ್ತಾರೆ. ಎಂದ ಬಳಿಕ ಊರನ್ನೇ ಒಂದು ತೆಪ್ಪವನ್ನಾಗಿಯೂ ಉಳಿದ ಜನರನ್ನೆಲ್ಲಾ ಅದರಲ್ಲಿ ಕುಳಿತಿರುವ ಪ್ರಯಾಣಿಕರನ್ನಾಗಿಯೂ ಕಲ್ಪಿಸಿಕೊಂಡರೆ, ತಾವು ಆರಿಸಿ ಕಳುಹಿಸುವ ಕೌನ್ಸಿಲರನ್ನು ದೋಣಿಯನ್ನು ನಡೆಯಿಸುವ ನಾವಿಕನನ್ನಾಗಿ ಎಣಿಸಬಹುದು. ಮಹಾ ಪ್ರವಾಹದಲ್ಲಿ ದೋಣಿಯನ್ನು ನಡೆಯಿಸುವ ನಾವಿಕನು ಅಸಮರ್ಥನೂ ವಿಶ್ವಾಸಘಾತಕನೂ ಆಗಿದ್ದರೆ ದೋಣಿಯಲ್ಲಿ ಕುಳಿತಿರುವವರ ಅವಸ್ಥೆಯನ್ನು ಹೇಳಬೇಕಾದುದೇ ಇಲ್ಲ. ಆದರಂತೆಯೇ ಈ ಸಮಯದಲ್ಲಿ ನಮ್ಮ ಓಟುಗಳನ್ನು ಕೊಟ್ಟು ನಾವು ಆರಿಸುವ ಪ್ರತಿನಿಧಿಗಳು ನಿಜವಾಗಿ ನಮ್ಮ ಯೋಗಕ್ಷೇಮ ಚಿಂತೆಯನ್ನು ಮಾಡುವಲ್ಲಿ ದಕ್ಷರೆ? ಅವರು ನಂಬುಗೆಗೆ ಅರ್ಹರೆ? ಅವರು ಸ್ವಾರ್ಥಕ್ಕಲ್ಲದೆ ಪ್ರಜಾಹಿತಾರ್ಥವಾಗಿ ನಿರ್ವಂಚನೆಯಿಂದ ಕೆಲಸ ಮಾಡಬಲ್ಲವರೆ? ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ, ತಕ್ಕವರೆಂದು ತೋರಿದವರಿಗೇ ಓಟುಗಳನ್ನು ಕೊಡಬೇಕೇ ಹೊರತು ಪರರ ಬಲಾತ್ಕಾರಕ್ಕೋ ದಾಕ್ಷಿಣ್ಯಕ್ಕೋ ಅಥವಾ ಉಪಸರ್ಪಣೆಗೋ ವಶರಾಗಿ ಸಿಕ್ಕಸಿಕ್ಕದವರಿಗೆ ಓಟುಗಳನ್ನು ಕೊಟ್ಟುಬಿಟ್ಟರೆ ಉತ್ತರೋತ್ತರ ತಮ್ಮ ಹಗ್ಗವನ್ನು ಕೊಟ್ಟು ತಾವೇ ಕೈಕಾಲು ಕಟ್ಟಿಸಿಕೊಳ್ಳುವಂಥ ಸ್ಥಿತಿಯು ಬರುವುದೇನೂ ಸುಳ್ಳಲ್ಲ. ಊರ ಕ್ಷೇಮಾಭಿವೃದ್ಧಿಯು ಓಟರುಗಳ ಕೈಯಲ್ಲಿರುವುದು. ಅವರ ಓಟುಗಳಿಗೆ ಘನವಾದ ಬೆಲೆಯಿರುವುದು. ಅದನ್ನು ಅವರು ಈಗಣ ಸಮಯದಲ್ಲಿ ದುರ್ವಿನಿಯೋಗಪಡಿಸಬಾರದು. ನಮ್ಮ ಪುರಸಂಘಾಧ್ಯಕ್ಷರೂ ಅವರ ಸಹಾಯಕರಾದ ಉದ್ಯೋಗಿಗಳೂ ಹಿಂದೆ ನಮ್ಮಿಂದ ಓಟುಗಳನ್ನು ಪಡೆದು ಕೌನ್ಸಿಲ್ ಪೀಠಾಧಿರೋಹಣ ಮಾಡಿದ ಕೆಲವರೂ ಸಹ ವರ್ಷಕ್ಕೆ ಒಂದುದಿನವಾದರೂ ಪಟ್ಟಣದ ಕೆಲ ಭಾಗಗಳಿಗೆ ದರ್ಶನವನ್ನೇ ಕೊಟ್ಟುದಿಲ್ಲ. ಇಂಥವರನ್ನು ನಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕುಳ್ಳಿರಿಸಿದರೆ ನಮಗೆ ಕ್ಷೇಮವಾಗುವುದೆಂದರೇನು? ಆದುಕಾರಣ ಈಗ ಕೌನ್ಸಿಲರಾಗುತ್ತೇವೆಂದು ಉಮೇದುವಾರರಾಗಿ ನಿಂತಿರುವವರಲ್ಲಿ ನಮ್ಮ ನೆರೆಹೊರೆಯವರಾಗಿ ನಮ್ಮ ಅನುಕೂಲಗಳನ್ನೂ ಆರೋಗ್ಯವನ್ನೂ ಹಿತವನ್ನೂ ತ್ರಿಕರಣದಿಂದಲೂ ಕೋರುವ ಉದಾರಭಾವವೂ ಸಚ್ಚರಿತವೂ ವಿಶ್ವಾಸವೂ ಯಾರಲ್ಲುಂಟೋ ಅಂಥವರುಗಳಿಗೇ ನಮ್ಮ ಓಟುಗಳನ್ನು ಕೊಡಲು ನಿಶ್ಚಯಮಾಡಿಕೊಂಡು, ಆಯಾ ಮೊಹಲ್ಲಾ ಕೌನ್ಸಿಲರುಗಳ ಆರಿಸುವಿಕೆಯ ದಿವಸ ಆಯಾ ಸ್ಥಲಕ್ಕೆ ಗೊತ್ತಾಗಿರುವ ಕಾಲಕ್ಕೆ ಪ್ರತಿಯೊಬ್ಬ ಓಟರುಗಳೂ ಹೋಗಿ ತಮ್ಮ ಓಟನ್ನು ಕೊಟ್ಟು ಬರುವಲ್ಲಿ ಉದಾಸೀನಮಾಡಲಾಗದೆಂದು ಸೂಚಿಸುತ್ತೇವೆ.

ತಮ್ಮ ಅಭ್ಯುದಯಕ್ಕೆ ವೀರಶೈವರು ಮಾಡಬೇಕಾದ ಕರ್ತವ್ಯ.

ಬಾಂಧವರೇ ಕಾಲಸ್ಥಿತಿಯು ಬದಲಾಯಿಸುತ್ತಿದೆ. ನಮ್ಮ ಬ್ರಾಹ್ಮಣ ಸಹೋದರರು ಶ್ಲಾಘನೀಯವಾದ ಸಂಘಗಳನ್ನು ಸ್ಥಾಪಿಸುತ್ತಿದ್ದಾರೆ. ಅಭಿವೃದ್ಧಿಗೆ ಅತ್ಯವಶ್ಯಕವಾದ ಏರ್ಪಾಡುಗಳನ್ನು ಅತಿಜಾಗರೂಕತೆಯಿಂದ ಮಾಡುತ್ತಿದ್ದಾರೆ. ಅವರನ್ನು ಹಿಂಬಾಲಿಸಿ ನಾವುಗಳೂ ಹೋಗಬೇಕು. ಇಲ್ಲವಾದರೆ ನಾಶಸ್ಥಿತಿಯು ಅಶ್ರದ್ಧೆಯಿಂದಿರುವವರ ಪಾಲಾಗುತ್ತದೆ. ನಾವು ಮಾಡಬೇಕೆಂದಿರುವ ಏರ್ಪಾಟುಗಳು ಮೈಸೂರುದೇಶದ ಎಲ್ಲಾ ಭಾಗಗಳಲ್ಲಿಯೂ ತಿಳಿಯಬಂದು ಪ್ರತಿಯೊಬ್ಬರ ಸಹಾಯವೂ ಅಭಿವೃದ್ಧಿಗೆ ಅವಶ್ಯಕವಾಗಿರುತ್ತದೆ. ಆದುದರಿಂದ ಪ್ರತಿ ತಾಲ್ಲೂಕಿನಿಂದಲೂ ನಮಗೆ ವೀರಶೈವ ಮಂಡಳಿಯಲ್ಲಿ ೫ ಜನ ದೊಡ್ಡಮನುಷ್ಯರ ಹೆಸರುಗಳು ತಿಳಿಯಬೇಕಾಗಿರುತ್ತವೆ. ಅವರ ಮುಖಾಂತರ ವಿದ್ಯಾಭಿವೃದ್ಧಿ ಮುಂತಾದ ಕಾರ್ಯಗಳಿಗೆ ಮುಂದೆ ಮಾಡಬೇಕಾದ ಏರ್ಪಾಟುಗಳು ತಿಳಿಯಿಸಲ್ಪಡುತ್ತವೆ. ಅಂಥಾ ಸಂಗತಿಗಳು ಪ್ರತಿ ಗ್ರಾಮಕ್ಕೂ ತಿಳಿಯಬೇಕಾಗುತ್ತವೆ. ಈ ಪತ್ರಿಕೆಯನ್ನು ಓದುವಂಥ ಯಾವ ವೀರಶೈವ ಮಹನೀಯರಾದರೂ ೫ಕ್ಕೆ ಕಮ್ಮಿಯಿಲ್ಲದೆ ಒಂದೊಂದು ತಾಲ್ಲೂಕಿನಿಂದಲೂ ವೀರಶೈವಮುಖಂಡರ ಹೆಸರನ್ನು ಈ ಪತ್ರಿಕಾಕರ್ತರಿಗೆ ತಿಳಿಸಬೇಕೆಂದು ಕೋರಿಕೆ. ಯಾವುದಾದರೂ ತಾಲ್ಲೂಕುಗಳಲ್ಲಿ ಈ ಪತ್ರಿಕೆಯನ್ನು ತರಿಸಿ ಓದುವವರಿಲ್ಲದಿದ್ದರೆ ನೆರೆಯ ತಾಲ್ಲೂಕಿನವರು ಈ ಸಹಾಯವನ್ನು ನಮಗೆ ಮಾಡಬೇಕೆಂದು ಅಪೇಕ್ಷಿಸುತ್ತೇವೆ. ಈ ತಿಂಗಳ ಅಂತ್ಯದೊಳಗೆ ಎಲ್ಲಾ ತಾಲ್ಲೂಕಿನಿಂದಲೂ ನಮಗೆ ಹೆಸರುಗಳು ತಿಳಿಯಬರುವುವೆಂದು ನಂಬಿರುತ್ತೇವೆ. ಈ ಹೆಸರುಗಳನ್ನು ನಾವು ಪ್ರಕಟಿಸುವುದಿಲ್ಲ. ಒಂದು ತಾಲ್ಲೂಕಿನಿಂದ ಒಬ್ಬರಿಗಿಂತ ಹೆಚ್ಚು ಜನರು ಐದುಐದರಂತೆ ಹೆಸರುಗಳನ್ನು ಕೊಟ್ಟರೆ ಅವೆಲ್ಲವನ್ನೂ ನಾವು ತೆಗೆದುಕೊಳ್ಳುತ್ತೇವೆ. ಕನಿಷ್ಠಪಕ್ಷ ೫ ಜನರ ಹೆಸರು ತಿಳಿಯಬೇಕಾಗಿರುತ್ತದೆ. ಹೆಚ್ಚು ಎಷ್ಟಿದ್ದರೆ ಅಷ್ಟೂ ಉತ್ತಮ. ತಾಲ್ಲೂಕು ಒಂದಕ್ಕೆ ನೂರಾರು ಜನರು ನಮಗೆ ದೊರೆತರೆ ಮತ್ತೂ ಅನುಕೂಲವು. ಎಲ್ಲಾ ತಾಲ್ಲೂಕಿನಿಂದಲೂ ಹೆಸರುಗಳು ತಿಳಿದನಂತರ ಒಂದು ಒಟ್ಟುಪಟ್ಟಿಯನ್ನುಮಾಡಿ, ಎಲ್ಲಾ ಹೆಸರುಗಳೂ ಪ್ರತಿಯೊಬ್ಬರಿಗೂ ತಿಳಿಯುವಂತೆ ಒಬ್ಬೊಬ್ಬರಿಗೆ ಒಂದೊಂದು ಪಟ್ಟಿಯನ್ನು ಕಳುಹಿಸುತ್ತೇವೆ. ಅದರಿಂದ ಎಲ್ಲರಿಗೂ ಅಂತರಂಗವಾಗಿ ಯಾರುಯಾರು ಮತಾಭಿಮಾನದಿಂದ ಮತಾಭಿವೃದ್ಧಿಗೆ ಸಹಾಯಕರಾಗಿದ್ದಾರೆಂಬುದು ತಿಳಿಯಬಹುದು. ಅತಿ ಜಾಗ್ರತೆಯಿಂದ ಹೆಸರುಗಳನ್ನು ತಿಳಿಸುವಿರೆಂದು ನಂಬಿರುತ್ತೇವೆ.

THE INDIAN SOCIAL REFORMER ON MYSORE PROBLEMS.

The Indian Social Reformer furnishes the evidence that what is contained in the Bombay Chronicle about Mysore affairs is completely misleading and one sided. While the mis-leading statements of the Chronicle are based on the misinterpretation of the order of Government on the Miller Report, conveyed to them by the partisan class in Mysore which is for monopolisation of official authority to one sect of people, the contradiction by the Indian Social Reformer has for its statements the authority of the experience of an Indian publicist, the authority of direct observation by a leading gentleman like the Hon. Mr. Lalubhai Samaldas who had occasion to intimately study the conditions in Mysore by undertaking an extensive tour into the interior of the country, the authority of the impressions of the prevailing conditions in Mysore received by Mr. Devdhar and the authority of the Editor himself who had recently occasions to meet the men of leading in Mysore and to exchange views with them.

The causes for the Miller Committee Report are appreciated and hopes are entertained by the Indian Social Reformer that the loyal people of Mysore who are undoubtedly other than those who rush to the columns of the non-co-operationist journals for clamerous cry, have the good sense to take measures to preserve the abiding interests of the country. What contrast is there between an outburst caused by a hollow bubble and a sane statement based on solid facts.

We have no desire for controversy. Nor do we like the idea of a rupture arising in the country as a consequence of Miller Committee Report. A series of misleading statements having appeared in certain journals in this country, which serve the interests of one minor class of people who not having been satisfied with such mis-representations here, have also gone outside the country to spread the mischief consequent on mis-statements, we consider it our sacred duty to our Beloved Maharaja and to our country to take the earliest opportunity to contradict the mis-statements and to do our best to expose the falsity and the mischief involved in the mis-leading articles appearing in the Bombay Chronicle and the Madras Hindu.

Our Noble Dewan is certainly not an amateur statesman as was the case with his immediate predecessor who emerged to be the Dewan from the heaps of plans and estimates, and schemes and projects. Our Patriatic Sirdar has nothing of strangeness in his veins as was in the case of 4 out of 5 non-Engineer Dewans of Mysore. He knows the people of the country. He realises their wants. He does his best to remove the disabilities under which they have been systematically labouring for the last 40 years under the yoke of one class administration. He loves and is thoroughly loyal to His Highness and if such a Patriatic Nobleman is not the statesman whom the country wants, whom else would the people want. Certainly not those upstarts who were something yesterday and are to-day the "Efficients" in the heaps of the examinations which they have passed. We want more justice and less examinations. We want more heart and less brains. We want statesmen whose heart beats with those of the people of the country. We are sorry to read the statements of malcontents with no reason for that bad spirit. The real people of Mysore have been silent till now and will speak hereafter to show the falsity of those who had the monopoly of Public service and who had the audocity to distort public opinion.

We have great hopes in the policy of the present Government and we have the trust that it has the courage of its conviction.

THE FUTILE GAME.

We do not know what has come about our Brahmin friends now a days. Their attitude and action are fully illustrative of the old bit correct saying - ವಿನಾಶಕಾಲೇ ವಿಪರೀತಬುದ್ಧಿಃ ।". The Miller Committee which is after all a belated grant of partial justice has altogether upset their mentality. While the non-Brahmins, who number 96% of the population of the State are finding the orders on the Miller Committee too inadequate to meet their present needs or to satisfy their just claims, the Brahmins who though are entitled to only 4% of the appointments have yet 50% reserved for them at the end of seven years a concession for which, in our earnest and candid opinion, there is not the slightest justification are madly raising a storm of opposition. Even the realisation of this partial justice by the non-Brahmins at the end of 7 long years is problematical, because of the suttle and insiduous ways of those who have now girded up their loins against this popular measure. When nothing as yet has been done by way of giving appointments to the non-Brahmins to the detriment of the Brahmins, already they have raised a hue and cry and with all their characteristic and traditional craft and cunning are adopting all sorts of questionable ways to discredit the Government and what is more, are not sparing the Royalty too—a game which the loyal non-Brahmin subjects of His Highness the Maharaja detest and deplore. Under the cloak of Brahmana Vidya Sahaya Sangha in which official and non-official Brahmins join their hands in many places Brahmin officers taking leading part and even becoming Presidents and Office Bearers, a thing absolutely wrong in principle—the seeds of disaffection are being thrown broadcast and their unrighteous propoganda is being carried on most unrestrictedly. The entire Brahmin press of India is being approached by the wirepullers who are never ashamed of throwing all truth and fairplay into winds, and presenting altogether distorted facts. They go to journals who perhaps know as much of Mysore as a man in Jericho or Timbaktoo would who become like "clay in designing hands" for their nefarious propoganda. They are staunch *Varnashramadharmites*—men who have no *varna*, no *ashrama*, and no *dharma*. They join the Indian National Congress, the relevency or the propriety of which is impossible to see in Mysore, with no other object than scheming with the outside Brahmin politicians. What is more than all, they become Gandhites and the first and foremost virtue they display is unadulterated and concentrated selfishness a thing which if M. Gandhi sees committed by his so called desciples would be horror stricken. Yes, the Brahmins have unmasked themselves at last. Hitherto because of the ignorance of the masses on which they traded and plundered, they of course found it paying to put on the garb of very religious people and of being their well-wishers. Now that their interests have been affected or are likely to be affected their inherited true element of selfishness is exhibited in all its naked horror, and ugliness and the persons who once prided on their spirituality and their humility-be it noted they will never stop praying every morning for the good of all-are now revealed to the world as a set of people with whom self is everything and others nothing beyond instruments to serve their purpose and with whom principles, justice (it is idle to think of generosity when there is no justice) fairplay, and loyalty count for nothing. How could otherwise have India been reduced to this State!

They have forfeited the confidence of the people and it would be a folly and, much more, fatal to put any trust in them. It is inconceivable how a community so grossly selfish, and utterly unreliable could be entrusted with the responsible duties of officials where they are to serve the interests of the people at large, to the good of whom they are so openly and stoutly opposed. How they came as representatives of the people to the public institutions, Representative Assembly and the Legislative Council and how against the interests of the very people who elected them they became the champions of their own selfish interests has become too notorious a fact to need mention here. Needless to say that in every centre and in every constituency only non-Brahmins who are really interested in the welfare and progress of the masses should be elected. This should be the first item on the programme of the work of the people at the elections.

However it is well known that, all the din and the dust raised by them is bound to subside as they realise the futility of their propoganda in course of time if not from any ultruistic motives at least from the view of their own future welfare and good, and as they realise that the time are changed when the great democracy is to be the determining factor in our life in all spheres and not any priestly heirarchy or sacerdotalism nor selfseeking opportunists however clever and cunning they may be. In Mysore as Mr. Reddy stated, the two factors on which the State depended are the Prince and the people. Under the paternal and benevolent guidance of His Highness the Maharaja the people will look after their own affairs. They do not need any intermediaries.

N. B.

ಒಳದೇಶದ ವೃತ್ತಾಂತಗಳು.

ದಿವಾನ್ ಸರ್ ಕಾಂತರಾಜ ಅರಸಿನವರು ದೀರ್ಘಕಾಲ ರಜಾಪಡೆದುಕೊಳ್ಳುವರೆಂದೂ ಮ|| ಎ. ಬಾನರ್ಜಿಯವರು ದಿವಾನರಾಗಿ ಬರುವರೆಂದೂ [illegible] ಸಂಪೂರ್ಣವಾಗಿ [illegible] ಪರರಿಕೆ [illegible] ಹುಟ್ಟಿ ಹರಡುತ್ತಿರುವ [illegible]

ಈಗ ಹೊಳಲಕೆರೆಯಲ್ಲಿರುವ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಸಕಲ ಬಿರುದಾವಳಿಗಳೊಡನೆ ಬರುವ ತಾ|| ೧೭ನೆ ಬುಧವಾರ ಬೆಳಿಗ್ಗೆ ೮ ಗಂಟೆಗೆ ದಾವಣಗೆರೆಯ ಪುರಪ್ರವೇಶ ಮಾಡುವುವೆಂದೂ, ಇದಕ್ಕಾಗಿ ದಾವಣಗೆರೆಯಲ್ಲಿ ಅತಿಶಯವಾಗಿ ಪುರಾಲಂಕಾರಾದಿ ಸಂರಂಭಗಳು ನಡೆಯುತ್ತಿರುವುವೆಂದೂ ಕೇಳುತ್ತೇವೆ.

ಶ್ರೀ ಕೇದಾರದಲ್ಲಿರುವ ಏಕೋರಾಮಶಿವಾಚಾರ್ಯ ಪೀಠಕ್ಕೆ ಹೊಸಬಾಗಿ ಅಧಿಕಾರಿಗಳಾಗಿರುವ ಶ್ರೀ ನೀಲಕಂಠಶಿವಾಚಾರ್ಯರವರ ಪಟ್ಟಾಭಿಷೇಕ ಮಹೋತ್ಸವವು ಇದೇ ಶ್ರಾವಣ ಶುದ್ಧ ೧೩ ಸೋಮವಾರದ ದಿವಸ ನಡೆಯುವುದರಿಂದ ಯಾವದ್ಭರತಖಂಡದ ಸ್ವಮತೀಯರೂ ಆ ಉತ್ಸವಕ್ಕೆ ಆಗಮಿಸಬೇಕೆಂದು ಕಾಶೀ ಶ್ರೀ ವಿಶ್ವಾರಾಧ್ಯ ಪೀಠದ ಜಗದ್ಗುರುಗಳು ಅಪ್ಪಣೆ ಮಾಡಿರುತ್ತಾರೆ.

ರಾಜಧಾನಿಯಲ್ಲಿ ನಡೆದ ತಿಲಕರ ಪುಣ್ಯ ದಿನದ ಸಂಬಂಧದ ಉತ್ಸವದಲ್ಲಿ ಇಲ್ಲಿಯ ಶಾರದಾವಿಲಾಸ ಪಾಠಶಾಲೆಯ ವಿದ್ಯಾರ್ಥಿಗಳು ಬಾವ ಚಿತ್ರಗಳನ್ನು ಹಿಡಿದುಕೊಂಡು ಹೋಗುತ್ತಿದ್ದರೆಂದು ಕಳೆದ ಸಂಚಿಕೆಯಲ್ಲಿ ಬರೆದಿದ್ದೆವಷ್ಟೆ, ಅದು ನಿಜವಲ್ಲವೆಂದೂ ರಾಜಧಾನಿಯ ವಿದ್ಯಾರ್ಥಿ ವರ್ಗದಿಂದ ಅದು ಆಚರಿಸಲ್ಪಟ್ಟಿತೆಂದೂ ಆ ಶಾಲೆಯ ಹೆಡ್ಮಾಸ್ಟರು ನಮಗೆ ಬರೆದು ತಿಳಿಯಿಸಿರುತ್ತಾರೆ. ಸತ್ಕಾರ್ಯವೆಂದು ತಿಳಿದು ಆಚರಿಸಿದ ಕೃತ್ಯದಲ್ಲಿ ತಮ್ಮ ಸಂಬಂಧವಿರಲಿಲ್ಲವೆಂದು ಸಾಧಿಸಿಕೊಳ್ಳುವುದರಲ್ಲಿ ಏನಾಧಿಕ ?

ದಾವಣಗೆರೆ, ಕೊಯಮುತ್ತೂರು, ನಿಜಾಮಾಬಾದ್ ಮತ್ತು ಒರಂಗಲ್ಲು ಈ ಸ್ಥಳಗಳಲ್ಲಿ ಭಾರಿ ವರ್ತಕತನವನ್ನು ನಡಿಸುತ್ತಿರುವ ದಾವಣಗೆರೆ ಪ್ರಸಿದ್ಧ ವೀರಶೈವ ದೊಡ್ಡ ಮನುಷ್ಯರಾದ ಮ|| ರಾ|| ಶಿವರುದ್ರಪ್ಪ ಮುರಿಗೆಪ್ಪ ಚಿಗಟೇರಿಯವರು ದಾವಣಗೆರೆಯಲ್ಲಿ ಕಟ್ಟಿಸಿರುವ ಬಂಗಲೆಯ ಪ್ರವೇಶೋತ್ಸವವನ್ನು ಈ ದಿವಸ ಅತ್ಯಂತ ವಿಜೃಂಭಣೆಯಿಂದಲೂ ದೊಡ್ಡ ಸಂತರ್ಪಣೆಯಿಂದಲೂ ನಡೆಯಿಸುವವರಾಗಿರುವರು ಮತ್ತೂ ಇದಕ್ಕಾಗಿ ಸಾವಿರಾರು ಮಿತ್ರಮಂಡಲಿಯವರಿಗೆ ಆಹ್ವಾನಪತ್ರಗಳನ್ನು ಕಳುಹಿಸಿರುವರು. ಈ ಮಹೋತ್ಸವಕ್ಕೆ ಚಿತ್ರದುರ್ಗದ ಜಗದ್ಗುರುಗಳೂ ಬೀಳೂರು ಸ್ವಾಮಿಗಳು ಮೊದಲಾದ ಗುರುವರ್ಗರೂ ದಯಮಾಡಿಸುವರು. ಅತಿಥಿ ಅಭ್ಯಾಗತರ ಸತ್ಕಾರಕ್ಕಾಗಿ ಸಂಗೀತ ಮತ್ತು ಶಿವಕಥಾಶ್ರವಣಕ್ಕೇರ್ಪಾಟು ಇಡಲ್ಪಟ್ಟಿರುವುದು.

ಬೆಂಗಳೂರಿನ ಜನೋಪಕಾರಿ ದೊಡ್ಡಣ್ಣಶೆಟ್ಟರು ಅಸ್ವಸ್ಥರಾಗಿದ್ದರೆಂದು ತಿಳಿಯಿಸಿದ್ದೆವಷ್ಟೆ, ಕಡೆಗೂ ಅವರು ತಮ್ಮ ೭೮ ನೆ ವಯಸ್ಸಿನಲ್ಲಿ ಕಳೆದ ೫ನೆ ತಾರೀಖಿನಲ್ಲಿ ತಮ್ಮ ಗೃಹದಲ್ಲಿ ದೈವಾಧೀನರಾದರು. ಅವರ ಸಂಕಲ್ಪದಂತೆ ಅಲ್ಲಿಯ ಪುರಪ್ರಮುಖರು ಮುಂದಾಗಿನಿಂತು ಅವರ ಧರ್ಮಾರ್ಥ ಪಾಠಶಾಲೆಗೆ ಸೇರಿದಂತೆ ಇರುವ ತೋಟದಲ್ಲೇ ಅವರ ಸಮಾಧಿಯನ್ನು ಮಾಡಿಸುವುದಕ್ಕೆ ಪ್ರಯತ್ನಿಸಿ, ಕೆಲ ಬ್ರಾಹ್ಮಣರು ಅಡ್ಡಿ ಮಾಡಿದರೂ ಸರ್ಕಾರಕ್ಕೆ ಬಿನ್ನಯಿಸಿಕೊಂಡು, ಮ್ಯುನಿಸಿಪಾಲಿಟಿಯಲ್ಲಿ ಹೆಚ್ಚು ಮಂದಿ ಕೌನ್ಸಿಲರುಗಳ ಅನುಮತಿಯನ್ನು ಪಡೆದೂ ಸಮಾಧಿಯನ್ನು ತೋಟದಲ್ಲೇ ಮಾಡಿಸಿದರು. ಸಮಾಧಿಮಾಡಿದ ತಾ|| ೬ನೆ ದಿವಸ ಊರಿಗೆ ಊರೇ ಬಹು ಆಡಂಬರದಿಂದ ನಡೆದ ಶವೋತ್ಸವದ ಜತೆಗೆ ಹೋಗಿದ್ದು ಗತಿಸಿದವರ ವಿಷಯದಲ್ಲಿ ತಮಗಿದ್ದ ಗೌರವಬುದ್ಧಿಯನ್ನು ವ್ಯಕ್ತಪಡಿಸಿದರು. ಲಕ್ಷಾಂತರ ದ್ರವ್ಯವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಿ ಶ್ರೀಮನ್ಮಹಾರಾಜರಿಂದ ಜನೋಪಕಾರಿ ಎಂಬ ಬಿರುದನ್ನು ಪಡೆದು ಕೇವಲಸಾತ್ವಿಕಸ್ಥಿತಿಯಲ್ಲಿ ಪರೋಪಕಾರಕರಾಗಿದ್ದ ಮ|| ಶೆಟ್ಟರು ಅಳಿದರೂ ಅವರ ಯಶಃಕಾಯವು ಅವರ ಧರ್ಮಪ್ರತಿಷ್ಠಾಪನೆಗಳ ಮೂಲಕ ಶಾಶ್ವತವಾಗಿರುವುದು. ಇಂಥವರ ಜನ್ಮವೇ ಧನ್ಯವು. ಅವರ ಶುದ್ಧವರ್ತನಕ್ಕೆ ತಕ್ಕ ಸತ್ಪದವಿಯನ್ನು ಜಗದೀಶ್ವರನು ಅನುಗ್ರಹಿಸಿರುವನೆಂಬುದಕ್ಕೆ ಸಂಶಯವೇ ಇಲ್ಲ.

ಅಮಲ್ದಾರ್ ಮ|| ಬಿ. ಲಿಂಗಯ್ಯ ಬಿ.ಎ., ಯವರ ಕುಮಾರರಾದ ಬಿ. ಮಂಜುನಾಥರವರು ಮದರಾಸು ವಿದ್ಯಾಪೀಠದ ಕಳೆದವರ್ಷದ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಯಸ್ಸು ಇನ್ನೂ ೧೯ ಆಗಿರುವುದರಿಂದ ಮುಂದೆ ಇವರು ತುಂಬಾ ವೃದ್ಧಿಗೆ ಬರುವವರಾಗಿದ್ದಾರೆ. ಮ|| ಎಂ. ಬಸವಯ್ಯನವರು ಇವರನ್ನು ಬಿ.ಎ. ಪರೀಕ್ಷೆಗೆ ಓದಿಸಲಿಕ್ಕೆ ಸೀಮೆಗೆ ಕಳುಹಿಸಬೇಕೆಂದು ಅವರಿದ್ದಾಗಲೇ ಆಲೋಚಿಸಿದ್ದರು. ಆದರೆ ಅಲ್ಲಿ ಸೀಟು ದೊರಕದೆ ಆ ಸಂಕಲ್ಪವು ನಿಂತಿತು. ಈಗ ಇವರ ತಂದೆಯವರೂ ತಾತಂದಿರಾದ ಪ್ರೊಫೆಸರ್ ಮ|| ಬಸವಲಿಂಗಪ್ಪನವರೂ ಮುಂದಣ ವಿದ್ಯಾಭ್ಯಾಸಕ್ಕಾಗಿ ಮಂಜುನಾಥರವರನ್ನು ಸೀಮೆಗೆ ಕಳುಹಿಸಿಕೊಡಲಿಕ್ಕೆ ನಿರ್ಣಯಿಸಿರುವುದು ಸಂತೋಷಕರವಾಗಿದೆ. ನಾಳೆ ಸೋಮವಾರ ಬೆಂಗಳೂರಿಂದ ಅವರನ್ನು ಪ್ರಯಾಣ ಮಾಡಿಸುವವರಾಗಿದ್ದಾರೆ. ಕೈ|| ಬಸವಯ್ಯನವರ ವಿದ್ಯಾರ್ಥಿದಶೆಯಲ್ಲಿ ಅವರ ಮೇಧಾಶಕ್ತಿಯನ್ನುನೋಡಿ ಕೈ|| ಚಾಮರಾಜಪ್ರಭುಗಳು ಅವರನ್ನು ಮುಂದಣ ವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಕಳುಹಿಸಿಕೊಡಬೇಕೆಂದು ಉದ್ದೇಶಪಟ್ಟರೂ ಪೂರ್ವಾಚಾರಪ್ರಿಯರೂ ಪುತ್ರರಲ್ಲಿ ವಿಶೇಷ ಮಮತೆಯುಳ್ಳವರೂ ಆಗಿದ್ದ ಮ|| ಬಸವಲಿಂಗಪ್ಪನವರು ಆಗ್ಗೆ ಅದಕ್ಕೆ ಒಡಂಬಟ್ಟಿರಲಿಲ್ಲ. ಈಗಲಾದರೂ ಗತಿಸಿದ ಬಸವಯ್ಯನವರ ಸಂಕಲ್ಪಕ್ಕೆ ಚ್ಯುತಿಯನ್ನು ಮಾಡಬಾರದೆಂಬ ಉದ್ದೇಶದಿಂದಲೇ ಈ ತಮ್ಮ ಮೊಮ್ಮಗನನ್ನು ಸೀಮೆಗೆ ಕಳುಹಿಸಿಕೊಡಲು ಅವರು ಒಪ್ಪಿದ್ದಾರೆ. ಮಂಜುನಾಥರು ಹೋದ ಕಾರ್ಯದಲ್ಲಿ ವಿಶೇಷಜಯವನ್ನು ಪಡೆದು ಕೈ|| ಬಸವಯ್ಯನವರನ್ನು ಮರೆಯಿಸುವಂಥ ಪುರುಷಕೇಸರಿಯಾಗಿ ಬರಲೆಂದೂ, ಪೌತ್ರನ ಅಭ್ಯುದಯವನ್ನು ಕಣ್ಣಾರನೋಡಿ ಆನಂದಿಸುವಂಥ ಯೋಗವು ಮ|| ಬಸವಲಿಂಗಪ್ಪನವರಿಗೆ ಜಗದೀಶ್ವರನು ಅನುಗ್ರಹಿಸಲೆಂದೂ ಕೋರುವೆವು.

ನಿದ್ರೆಯ ಪ್ರಯೋಜನ.

ಜೀವಿಯ ಆರೋಗ್ಯಕ್ಕೆ ಅವಶ್ಯಕವಾದ ಸಾಧನಗಳಲ್ಲಿ ನಿದ್ರೆಯು ಒಂದು ಮುಖ್ಯಸಾಧನವಾಗಿರುತ್ತದೆ. ಆಹಾರಕ್ಕಿಂತಲೂ ನಿದ್ರೆಯು ಅತ್ಯಂತ ಮುಖ್ಯವಾದುದೆಂದು ಹೇಳಬಹುದು. ಕೆಲಕಾಲ ಆಹಾರವನ್ನು ಬಿಟ್ಟಿದ್ದೂ ಕೂಡ ಬದುಕಿರಬಹುದು. ಅಂಥ ಕಾಲದಲ್ಲಿ ದೇಹದ ಚರ್ಮದೊಳಗೂ ಉಳಿದ ಕಡೆಯೂ ಇರುವ ಕೊಬ್ಬನ್ನು ಅಂತಶ್ಶಕ್ತಿಗಳು ಸೇವಿಸುತ್ತಿರುವುವು. ಆದರಿಂದ ಆಹಾರವಿಲ್ಲದೆಯೂ ಕೆಲಕಾಲ ಜೀವಿಸಿರಬಹುದು. ಆದರಂತೆ ನಿದ್ರೆಯನ್ನು ಬಿಟ್ಟು ಬದುಕಿರುವುದಕ್ಕಾಗುವುದಿಲ್ಲ. ಆಹಾರಕ್ಕೆ ಪ್ರತಿಯಾಗಿ ದೇಹದ ಕೊಬ್ಬು ಉಪಯೋಗಕ್ಕೆ ಬರುವಂತೆ ನಿದ್ರೆಯನ್ನು ಬಿಟ್ಟರೆ ಅದಕ್ಕೆ ಪ್ರತಿಯಾಗಿ ಮತ್ತೊಂದು ವಸ್ತುವು ಅದರ ಅಭಾವವನ್ನು ಪೂರ್ತಿಗೊಳಿಸತಕ್ಕದು ನಮ್ಮಲ್ಲಾವುದೂ ಇಲ್ಲ. ನಿದ್ರೆಯಿಲ್ಲದೆ ಹೋಗುವುದರಿಂದ ಉಂಟಾಗುವ ಮಾರ್ಪು ಕೂಡಲೇ ದೇಹದಲ್ಲಿ ವ್ಯಕ್ತವಾಗುವುದು. ಮುಖವು ಬಿಳಿಚಿಕೊಳ್ಳುವುದು. ಕೆಲಕಾಲ ಹಾಗೆಯೇ ನಿದ್ರೆ ಕೆಡುತ್ತಾಬಂದರೆ ರಕ್ತದಲ್ಲಿ ಮಾರ್ಪುಂಟಾಗುವುದು. ಅದರಿಂದ ಒಂದುತೆರದ ರೋಗವು ಹುಟ್ಟುವುದು, ಅದೇ ರಕ್ತಕ್ಷೀಣತೆ. ನಿದ್ರೆಯಿಂದ ಶರೀರದಲ್ಲಿ ನೂತನಾಣುಗಳು ನಿರ್ಮಿತವಾಗಿ, ನಷ್ಟವಾಗಿಹೋಗುತ್ತಿರುವ ದೇಹಶಕ್ತಿಯು ಮತ್ತೆ ಕೂಡಿಕೊಳ್ಳಲವಕಾಶವಾಗುವುದು. ಯುಕ್ತವಯಸ್ಸು ಬಂದವರು ಹಗಲುಹೊತ್ತು ಕೆಲಸಮಾಡುವುದರಿಂದ ಶಾರೀರಕ ಮಾನಸಿಕ ಪರಿಶ್ರಮಗಳಿಂದ ದೇಹಶಕ್ತಿಯು ಪ್ರತಿಕ್ಷಣದಲ್ಲೂ ಹೆಚ್ಚು ವೆಚ್ಚವಾಗಿ ಹೋಗುತ್ತಿರುವುದು. ಶಕ್ತಿಯ ಪುನರ್ನಿರ್ಮಾಣವು ಮಂದವಾಗಿರುವುದು. ರಾತ್ರಿಯಹೊತ್ತು ನಿದ್ರೆಮಾಡುವುದರಿಂದ ಶಕ್ತಿನಿರ್ಮಾಣವು ಹೆಚ್ಚಾಗಿಯೂ ಶಕ್ತಿವ್ಯಯವು ಬಹಳ ಕಡಿಮೆಯಾಗಿಯೂ ಆಗುತ್ತಿರುವುದು. ನಿದ್ರೆಯಲ್ಲಿ ಗುಂಡಿಗೆಯು ಬಹಳಮೆಲ್ಲಗೆ ಹೊಡೆದುಕೊಳ್ಳುತ್ತಿರುವುದು. ಆದರಿಂದ ಶ್ವಾಸವುಕೂಡ ಮೆಲ್ಲಗೆ ನಡೆಯುತ್ತಿರುವುದು. ಅನ್ನಕೋಶ ಮೊದಲಾದ ಎಲ್ಲ ಅವಯವಗಳೂ ಬಹಳ ಸ್ವಲ್ಪ ಕೆಲಸ ಮಾಡುವುವು. ಆದುಕಾರಣ ಹೊಟ್ಟೆತುಂಬಾ ಊಟಮಾಡಿದ ಕೂಡಲೇ ನಿದ್ರೆಮಾಡಕೂಡದು. ಅನ್ನಕೋಶ ಮಲಕೋಶಗಳು ಸರಿಯಾದ ಸ್ಥಿತಿಯಲ್ಲಿಲ್ಲದಿದ್ದರೆ ನಿದ್ರೆಯು ಸರಿಯಾಗಿ ಬರುವುದಿಲ್ಲ. ಸ್ವಪ್ನಗಳು ಹೆಚ್ಚಾಗಿ ಬೀಳುವುವು ಅನ್ನವನ್ನು ಜೀರ್ಣಗೊಳಿಸುವ ಭಾಗಗಳಿಗೂ ಮೆದುಳಿಗೂ ಸಂಬಂಧವಿರುವುದು. ಅಜೀರ್ಣವಾಗಿದ್ದರೆ ಮೆದುಳಿಗೆ ಉಷ್ಣವು ಹೆಚ್ಚುವುದು. ನಿದ್ರೆಯು ಗಾಢವಾಗಿ ಬರುವುದಿಲ್ಲ.

ನಿದ್ರೆಯಿಂದ ಬಾಹ್ಯೇಂದ್ರಿಯಗಳಿಗೂ ಸ್ನಾಯುಗಳಿಗೂ ಮಾತ್ರವೇ ಅಲ್ಲದೆ ಅಂತರಿಂದ್ರಿಯಗಳಿಗೂ ಶಕ್ತಿಗಳಿಗೂ ಕೂಡ ವಿಶ್ರಾಂತಿಯುಂಟಾಗುವುದು. ಮನಸ್ಸಿಗೂ ವಿಶ್ರಾಂತಿಯುಂಟಾಗುವುದು. ಮನಸ್ಸು ಸಬಲವಾಗುವುದು. ನಿದ್ರೆಹೋಗುವುದಕ್ಕೆ ಮುಂಚೆ ನಮ್ಮ ಮನಸ್ಸನ್ನು ಕೊರೆಯುತ್ತಿದ್ದ ಸಂಶಯಗಳೆಲ್ಲಾ ನಿದ್ರೆಮಾಡಿಕೊಂಡು ಎದ್ದಬಳಿಕ ಪೂರ್ತಿಯಾಗಿ ತೊಲಗಿಹೋಗಿರುವುವು. ಗಾಢನಿದ್ರೆಯಲ್ಲಿರುವವರು ಆಕಸ್ಮಿಕಧ್ವನಿಗಳನ್ನು (ಅಲಾರಂಧ್ವನಿ) ಇತ್ಯಾದಿಗಳನ್ನು ಕೇಳಿ ಥಟ್ಟನೆ ಏಳುವುದು ಅಯುಕ್ತವು. ಮತ್ತು ಅಕ್ರಮವು. ಎಚ್ಚರು ಒಳಗಿನಿಂದ ಉಂಟಾಗಬೇಕೇ ಹೊರತು ಹೊರಗಣಿಂದ ಉಂಟಾಗಬಾರದು. ದೇಹಶಕ್ತಿಗೆ ವಿಶ್ರಾಂತಿ (ನಿದ್ರೆಯು) ಎಷ್ಟು ಅವಶ್ಯಕನೆಂಬುದು ಉದ್ಬೋಧನಶಕ್ತಿ (ಎಚ್ಚರಿಸುವಿಕೆ) ಗೆ ಗೊತ್ತುಂಟು. ಅವಶ್ಯಕವಾದಷ್ಟು ಹೊತ್ತು ನಿದ್ರೆಯಾದಬಳಿಕ ಆ ಶಕ್ತಿಯೇ ಎಚ್ಚರನ್ನು ಮಾಡುವುದು. ಸಾಧಾರಣವಾಗಿ ಸ್ತ್ರೀಯರಿಗೂ ಪುರುಷರಿಗೂ ೭–೮ ಗಂಟೆಗಳಕಾಲ ಗಾಢನಿದ್ರೆಯನ್ನು ಮಾಡುವುದು ಅವಶ್ಯಕವು. ನಾವು ಮಲಗಿರುವಷ್ಟೂ ಉತ್ತಮವಾದ ನಿದ್ರೆಯೆನಿಸಿಕೊಳ್ಳುವುದಿಲ್ಲ. ಕೆಲರು ರಾತ್ರಿಯೆಲ್ಲಾ ಮಲಗಿದ್ದರೂ ಅವರಿಗೆ ಉತ್ತಮವಾದ ನಿದ್ರೆಯು ಲೇಶವೂ ಹತ್ತಿರುವುದಿಲ್ಲ. ಕೆಲರು ೩–೪ ಗಂಟೆ ಹೊತ್ತು ಮಲಗಿದ್ದರೂ ಗಾಢನಿದ್ರೆಗೊಳ್ಳುವರು. ಆದುಕಾರಣ ನಿದ್ರೆಯ ಪರಿಮಿತಿಯನ್ನು ಗಂಟೆಗಳನ್ನನುಸರಿಸಿ ನಿರ್ಣಯಿಸಲಾಗುವುದಿಲ್ಲ. ಕೆಲರು ರಾತ್ರಿಯೆಲ್ಲಾ ಎಚ್ಚರುಗೊಂಡಿದ್ದು ಹಗಲಹೊತ್ತು ನಿದ್ರೆಮಾಡುವರು. ಅವರಿಗೆ ಆ ನಿದ್ರೆಯು ಪ್ರಯೋಜನವಾದುದಲ್ಲ, ಅದು ಎಚ್ಚರವಾಗಿದ್ದಂತೆಯೇ ಸರಿ. ಅಂಥವರಿಗೆ ರಾತ್ರಿಯೂ ಹಗಲೂ ಎರಡೂ ಒಂದೇ. ಅವರು ಸುಮ್ಮನೆ ನಿದ್ರೆಮಾಡಿದೆವೆಂದು ತಿಳಿದುಕೊಂಡರೂ ಅವರು ಮಲಗಿದ್ದಾಗ ಅತ್ತಿಂದಿತ್ತ ಹೊರಳಾಡುತ್ತಿರುವುದೇ ಸರಿ. ಕೆಲತಿಂಗಳು ಹೀಗೆಯೇಮಾಡಿದರೆ ಅವರ ಆರೋಗ್ಯಕ್ಕೆಭಂಗವುಂಟಾಗುವುದು.

ನಿದ್ರೆಯಿಂದ ಮಾನಸಿಕ ನೈತಿಕಶಕ್ತಿಗಳು ವಿಕಾಸಗೊಳ್ಳುವುವು. ಸಂಕಲ್ಪಶಕ್ತಿಯು ವೃದ್ಧಿಹೊಂದುವುದು. ಹಗಲೆಲ್ಲಾ ಕೆಲಸಮಾಡಿ ಬಳಲಿಹೋದ ಬಳಿಕ ಸಾಯಂಕಾಲವಾಗುತ್ತಲೂ ಎಂಥ ಅಕೃತ್ಯವನ್ನು ಮಾಡುವುದಕ್ಕೂ ಹಿಂದೆಗೆಯದಿರುವ ಸ್ತ್ರೀ ಪುರುಷರುಸುದಾ ರಾತ್ರಿಯಲ್ಲಿ ಹಾಯವಾಗಿ ನಿದ್ರೆಮಾಡಿ ಬೆಳಗ್ಗೆ ಎದ್ದ ಬಳಿಕ ಕಳೆದ ಸಾಯಂಕಾಲದಲ್ಲಿ ತಾವು ತಡೆಯಿಲ್ಲದೆ ಮಾಡಿದ ಅಕೃತ್ಯವನ್ನು ಮತ್ತೆ ಮಾಡಬೇಕೆಂದರೆ ಅದು ಅವರಿಗೇ ಅಸಹ್ಯಕರವಾಗಿ ಕಾಣುವುದು.

ಕೆಲ ಮಕ್ಕಳು ರಾತ್ರಿಹೊತ್ತು ಹಾಸುಗೆಮೇಲೆ ಅಚಲವಾಗಿ ಮಲಗಿಕೊಳ್ಳದೆ ಒದೆದಾಡಿ ಹೊರಳುತ್ತಿರುವರು. ಅವರು ಭಯಗ್ರಸ್ತರೋ ಅಥವಾ ಇನ್ನಾವ ತೆರದ ಮಾನಸಿಕೋದ್ವೇಗವುಳ್ಳವರೋ ಆಗಿರುವರು. ಮಲಬದ್ಧ ಅಜೀರ್ಣ ಈ ದೋಷಗಳುಳ್ಳವರು ಭೋಜನಮಾಡಿದ ಕೂಡಲೇ ಮಲಗಿಕೊಳ್ಳಬಾರದು. ಅಚಲವಾಗಿ ಮನಸ್ಸನ್ನೊಂದುಕಡೆಯೇ ನಿಲ್ಲಿಸಿ ಚದುರಂಗ ಮೊದಲಾದ ಆಟಗಳನ್ನಾಡಿದವರು ಆಡಿ ಮುಗಿದೊಡನೆಯೇ ಮಲಗಿಕೊಳ್ಳಬಾರದು. ಮಲಗುವ ಮನೆಯ ಕಿಟಕಿಗಳನ್ನೆಲ್ಲಾ ಮುಚ್ಚಿಕೊಂಡಾಗಲಿ ಮುಖದ ಮೇಲೆ ದುಪ್ಪಟಿಯನ್ನು ಹೊದೆದಾಗಲೀ ನಿದ್ರಿಸಬಾರದು. ಈ ಪದ್ಧತಿಯು ಮಕ್ಕಳಿಗೂ ಮುಖ್ಯವಾಗಿ ಮಾನಸಿಕೋದ್ವೇಗವುಳ್ಳವರಿಗೂ ಕೂಡಲೇ ಕೂಡದು. ಅರ್ಧ ರಾತ್ರಿಗೆ ಮುಂಚೆ ಮಾಡುವ ನಿದ್ರೆಯ ಪ್ರಯೋಜನವು ಅರ್ಧ ರಾತ್ರಿಯಾದನಂತರ ಮಾಡುವ ನಿದ್ರೆಯಿಂದ ಲಭಿಸದು.

ನಿರ್ಮಲವಾಗಿರುವ ಕೊಟ್ಟಡಿಯ ಕಿಟಕಿಗಳ ಬಾಗಿಲನ್ನೆಲ್ಲಾ ತೆರೆದುಬಿಟ್ಟು ಮಲಗಿಕೊಳ್ಳುವ ಪದ್ಧತಿಯನ್ನಿಡಬೇಕು. ಆದರೆ ಕಿಟಕಿಯಿಂದ ಬೀಸುವ ಗಾಳಿಯು ದೇಹದ ಮೇಲೆ ನೇರವಾಗಿ ಬೀಳುವಂತಿರಬಾರದು. ಊರಿನ ಸದ್ದಿನಿಂದ ನಿದ್ರಾಭಂಗವಾಗುವುದೆಂಬ ಕಾರಣದಿಂದ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿ ಮಲಗಬಾರದು. ಅಂಥ ಸಂದರ್ಭದಲ್ಲಿ ಕಿವಿಗಳಿಗೆ ಅರಳೆಯನ್ನು ತುರುಕಿ ಮಲಗಿಕೊಳ್ಳಬೇಕು. ಕೆಲರಿಗೆ ರಾತ್ರಿಯೆಲ್ಲಾ ನಿದ್ರೆಹತ್ತದೆ ಹೊರಳಾಡುತ್ತ ಏನೇನೋ ಉಪಚಾರಗಳನ್ನು ಮಾಡಿಕೊಳ್ಳುತ್ತ ಗುಣಗುಟ್ಟಿಕೊಳ್ಳುತ್ತ ಎಂದಿಗೆ ಬೆಳಗಾಗುವುದೋ ಎಂದು ಯೋಚಿಸುತ್ತ ರಾತ್ರಿಯನ್ನು ನೂಕುತ್ತಿರುತ್ತಾರೆ. ಅಂಥವರು ಹಾಸುಗೆಯಿಂದ ಏಳುವಾಗ್ಗೆ ಬಹಳ ನೀರಸವಾಗಿರುವರು. ಅವರುಗಳು ರಾತ್ರಿಯ ಹೊತ್ತು ಬೇಗನೆ ಊಟ ಮಾಡಬೇಕು. ಟೀ ಕಾಫಿ ಮೊದಲಾದುವುಗಳನ್ನು ಕುಡಿಯಕೂಡದು. ಮನಸ್ಸಿಗೆ ಚಿಂತೆ ಕೋಪ ಮೊದಲಾದುವುಗಳ ಭಾರವನ್ನು ಹಚ್ಚಿಕೊಳ್ಳಲಾಗದು. ಯಾವ ವಿಷಯದ ಆಲೋಚನೆಯನ್ನೂ ಇಟ್ಟುಕೊಳ್ಳಬಾರದು. ನಿದ್ರೆ ಮಾಡಬೇಕೆಂಬುದರ ಹೊರತು ಮತ್ತಾವ ಯೋಚನೆಯೂ ಇರಬಾರದು. ೪ ಗಂಟೆಗೋ ೫ ಗಂಟೆಗೋ ಏಳಬೇಕೆಂಬ ಸಂಕಲ್ಪವಿಟ್ಟುಕೊಂಡು ನಿಶ್ಚಿಂತೆಯಿಂದ ಮಲಗಿದರೆ ಅಷ್ಟು ಹೊತ್ತಿಗೆ ಸರಿಯಾಗಿ ಎಚ್ಚರಾಗುವುದು; ಗಾಢನಿದ್ರೆಯೂ ಹತ್ತುವುದು. ಮಲಗುವುದಕ್ಕೆ ಮುಂಚೆ ಸ್ವಲ್ಪ ಹೊತ್ತು ನಿರ್ಮಲವಾದ ಗಾಳಿಯಲ್ಲಿ ತಿರುಗಾಡಿ ಮಲಗಿದರೆ ಸ್ವಪ್ನವಿಲ್ಲದ ನಿದ್ರೆ ಹತ್ತುವುದು. ಮಧ್ಯೆ ಎಚ್ಚರಾಗಿ ಮರಳಿ ನಿದ್ರೆ ಹತ್ತದಿದ್ದರೆ ಆಗಲೂ ಸ್ವಲ್ಪ ಹೊತ್ತು ಶತಪಥ ಮಾಡಿ ಸ್ವಲ್ಪ ಸಿಹಿನೀರನ್ನು ಕುಡಿದು ಮಲಗಿದರೆ ನಿದ್ರೆ ಹತ್ತುವುದು.

ನಿದ್ರೆ ಸರಿಯಾಗಿ ಹತ್ತದಿರುವುದು, ನಿದ್ರೆಯಲ್ಲಿ ಕನವರಿಸುವುದು, ಸ್ವಪ್ನ ಬೀಳುವುದು, ನಿದ್ರೆಯಲ್ಲೇ ಎದ್ದು ತಿರುಗಾಡುವುದು–ಇತ್ಯಾದಿ ದೋಷಗಳು ಚೆನ್ನಾಗಿ ಕಾಯಕಷ್ಟಪಟ್ಟು ಜೀವಿಸುವ ಕೂಲಿ ಜನರಿಗೆ ಸಾಮಾನ್ಯವಾಗಿ ಇರುವುದೇ ಇಲ್ಲ. ಹೆಚ್ಚಾಗಿ ಮೆದುಳಿನ ಕೆಲಸ ಮಾಡುವವರಿಗೂ ಒಂದು ಕಡೆಯೇ ಕುಳಿತಿರುವವರಿಗೂ ಒಂದು ಗೊತ್ತಾದ ಕೆಲಸವೇ ಇಲ್ಲದವರಿಗೂ ನಿದ್ರೆಯು ಸರಿಯಾಗಿ ಹತ್ತುವುದಿಲ್ಲ. ಅಂಥವರು ಸ್ವಲ್ಪ ದೇಹಶ್ರಮದ ಕೆಲಸಗಳನ್ನು ಮಾಡುತ್ತ ಬಂದರೆ ನಿದ್ರೆ ಹತ್ತುವುದು. ಬಹಳ ಹೊತ್ತು ಮನಸ್ಸಿನ ಯೋಚನೆಯ ಕೆಲಸವನ್ನು ಮಾಡಿ ನರಗಳು ಬಳಲಿರುವವರು ಸ್ವಲ್ಪ ಹೊತ್ತು ಊರಹೊರಗಣ ನಿರ್ಮಲವಾಯುವಿನಲ್ಲಿ ಪಾದಚಾರಿಗಳಾಗಿಯೋ ರಥಾರೂಢರಾಗಿಯೋ ಸಂಚರಿಸಿ ಬಂದರೆ ರಾತ್ರಿ ಸುಖನಿದ್ರೆ ಬರುವುದು.

ಭರತಖಂಡದ ವೃತ್ತಾಂತಗಳು.

ಬೊಂಬಾಯಿ ಬ್ಯಾಂಕಿನಲ್ಲಿ ೧೬ ಲಕ್ಷ ರೂ.ಗಳು ಅಪಹರಿಸಲ್ಪಟ್ಟಿವೆ.

ಬೊಂಬಾಯಿ ಆಧಿಪತ್ಯದಲ್ಲಿ ಕಳೆದ ವರ್ಷ ಸರ್ಪ ಕಚ್ಚಿದುದರಿಂದ ೧೩೯೦ ಮಂದಿಗಳೂ ಕ್ರೂರಜಂತುಗಳಿಂದ ೫೪ ಮಂದಿಯೂ ಮೃತರಾದರು.

ಧಾರವಾಡದ ಪ್ರಾಂತದಲ್ಲಿ ಮಳೆಯು ಹೆಚ್ಚಾಗಿ ಸುರಿದು ೪ ದಿನ ತೆರವು ಕೊಟ್ಟರೆ ಸಾಕೆನ್ನಿಸಿಬಿಟ್ಟಿದೆ. ವ್ಯವಸಾಯ ಕಾರ್ಯಗಳಿಗೆ ಅನುಕೂಲವಾಗಿದೆ.

ಬರ್ಮಾದ ರಂಗೂನ್ ಪಟ್ಟಣದಲ್ಲಿ ನದಿಯ ಮಗ್ಗುಲ ಕಟ್ಟೆಯಲ್ಲಿ ಇಲಿಗಳು ಕನ್ನವನ್ನು ತೋಡಿದ್ದುದರಿಂದ ಕಟ್ಟೆಯು ಒಡೆದು ೮೦೦೦ ಎಕರೆ ಭೂಮಿಗಳ ಪೈರು ಹಾಳಾಗಿರುವುದು. ವಿಪರೀತ ನಷ್ಟವಾದಂತೆ ವರ್ತಮಾನ ಬಂದಿದೆ.

ಬೊಂಬಾಯಿಯ ಸ್ವರಾಜ್ಯ ಸಂಘದವರು ಈ ತಿಂಗಳು ತಾ|| ೨೯ ರಲ್ಲಿ ಬೊಂಬಾಯಿ ಪಟ್ಟಣದೊಳಗೆ ಆನಿಬೆಸೆಂಟಮ್ಮನವರ ಅಧ್ಯಕ್ಷತೆಯಿಂದ ಒಂದು ಸಭೆಯನ್ನು ನಡೆಯಿಸುವರು. ಜಮ್ನಾದಾಸ್ ದ್ವಾರಕದಾಸ್‌ರವರು ಆಹ್ವಾನ ಸಂಘಾಧ್ಯಕ್ಷರಾಗಿರುವರು.

ಗೋರಕ್ಷಣಾರ್ಥವಾಗಿ ಪ್ರಬಲವಾದ ಯಾವ ಏರ್ಪಾಟನ್ನು ಮಾಡಬೇಕೆಂಬುದನ್ನು ಪರ್ಯಾಲೋಚಿಸುವುದಕ್ಕಾಗಿ ಪಂಡಿತ ಮದನಮೋಹನ ಮಾಳವ್ಯರವರ ಅಧ್ಯಕ್ಷತೆಯಿಂದ ಇದೇ ತಿಂಗಳು ತಾ|| ೨೬ ರಲ್ಲಿ ಮಥುರಾ ಬೃಂದಾವನದೊಳಗೆ ಯಾವದ್ಭಾರತ ಹಿಂದೂ ಮಹಾಸಭೆಯು ಕೂಡುತ್ತದೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ಭರತಖಂಡದಲ್ಲಿ ಯಾವ ಯಾವ ಸ್ಥಳಗಳಿಗೆ ದಯಮಾಡಿಸುವರೋ ಅವುಗಳನ್ನೆಲ್ಲಾ ಮುಂದಾಗಿ ನೋಡಿಕೊಂಡು ಹೋಗುವುದಕ್ಕಾಗಿ ಅವರ ಸೈನಿಕ ಮತ್ತು ಸಹಾಯಕ ಕಾರ್ಯದರ್ಶಿಗಳು ಈ ತಿಂಗಳು ತಾ|| ೧೧ ರಿಂದ ಸೆಪ್ಟಂಬರ್ ೨೦ ರ ವರೆಗೆ ಸಂಚರಿಸುವರು.

ಮುದ್ರಣಶಾಸನ ರೌಲತ್‌ಶಾಸನ ಮೊದಲಾದುವನ್ನು ಸಂಪೂರ್ಣವಾಗಿ ತೆಗೆದುಬಿಡಬೇಕೆ? ಅಥವಾ ಇನ್ನೇನಾದರೂ ಸಂಸ್ಕರಣವನ್ನು ಮಾಡಬೇಕೆ? ಎಂಬ ವಿಷಯವನ್ನು ಕುರಿತು ಪರ್ಯಾಲೋಚಿಸುವುದಕ್ಕಾಗಿ ಭರತಖಂಡ ಪ್ರಭುತ್ವದಿಂದ ಏರ್ಪಡಿಸಲ್ಪಟ್ಟಿದ್ದ ಉಪಸಂಘದವರು ಮುದ್ರಣಶಾಸನವನ್ನೂ ಅವರ ಜತೆಗೆ ರೌಲತ್‌ಶಾಸನವನ್ನೂ ತೆಗೆದುಬಿಡಬೇಕೆಂದು ಸೂಚಿಸಿರುವುದಾಗಿ ಪ್ರಕಟವಾಗಿದೆ.

ಮದ್ರಾಸು ಆಧಿಪತ್ಯದಲ್ಲಿ ಕಳೆದ ೧೦ ವರ್ಷಗಳಿಂದಲೂ ವ್ಯವಸಾಯಶಾಖೆಯ ಡೈರೆಕ್ಟರಾಗಿದ್ದ ಜಿ. ಎ. ಡಿ. ಸ್ಟೂಯರ್ಟ್ ಐ.ಸಿ.ಎಸ್. ರವರು ಕಳೆದ ಸೋಮವಾರ ಬೆಳಿಗ್ಗೆ ರಿವಾಲ್ವರ್ ಗುಂಡಿನಿಂದ ಆತ್ಮಹತ್ಯಮಾಡಿಕೊಂಡರು. ಇವರು ಹೃದಯರೋಗದಿಂದ ಬಹಳ ಬಾಧೆಯನ್ನು ಅನುಭವಿಸುತ್ತಿದ್ದು ಮನಸ್ಸು ಅಸ್ವಸ್ಥವಾಗಿರುವಾಗ ರಿವಾಲ್ವರಿನಿಂದ ಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡರೆಂದು ಪಂಚಾಯಿತಿದಾರರು ತೀರ್ಮಾನಿಸಿರುವರು.

ಕರಾಚಿಪ್ರಾಂತದಲ್ಲಿ ವಿಪರೀತ ಮಳೆ ಸುರಿದು ಮಾಲೀರು ನದಿಯಲ್ಲಿ ಮಹಾ ಪ್ರವಾಹ ಬಂದು ಅನೇಕ ಗ್ರಾಮಗಳು ಕೊಚ್ಚಿಹೋದುವು. ಬಹಳ ಪಶುಗಳು ಸತ್ತವು. ಕೆಲ ಜನರೂ ಮುಳುಗಿಹೋದರು. ಅನೇಕ ಪ್ರಜೆಗಳಿಗೆ ನಿಲ್ಲಲು ಮನೆಯಿಲ್ಲವಾಗಿದೆ. ಪೈರುಪಚ್ಚೆಯಿಂದ ತುಂಬಿದ್ದ ಹೊಲಗದ್ದೆಗಳೆಲ್ಲಾ ಹಾಳಾದುವು. ಹೊಳೆಯ ದಡದಮೇಲೆ ಕಾಲು ಮೈಲಿಯವರೆಗೂ ಮಳಲು ಕೊಚ್ಚಿ ಬಂದು ಹೆಪ್ಪುಗಟ್ಟಿ ವಿಪ್ಲವಮಾಡಿದೆ. ವ್ಯವಸಾಯಗಾರರು ಹಲವರು ನಿರ್ಗತಿಕರಾದರು. ಅವರಿಗೆ ಸಹಾಯಮಾಡಲು ಸರ್ಕಾರದವರೂ ಪ್ರಜೆಗಳೂ ಪ್ರಯತ್ನಪಟ್ಟಿದ್ದಾರೆ.

ಕಳೆದವಾರ ಒಂದು ದಿನ ಲಾಲಾಲಜಪತರಾಯರೂ ಒಂದು ದಿನ ಪಂಡಿತ ಮದನಮೋಹನ ಮಾಳವ್ಯರವರೂ ಸಹ ಪುಣಾಪಟ್ಟಣಕ್ಕೆ ಹೋಗಿದ್ದರು. ಉಪನ್ಯಾಸಗಳನ್ನು ಮಾಡಿದಾಗ್ಗೆ ವಿದೇಶ ವಸ್ತ್ರಗಳನ್ನು ಸುಟ್ಟುಬಿಡಬೇಕೆಂದು ಲಾಲಾರವರು ಹೇಳಿ ಸೂಚಿಸಿದರು. ಮಾಳವ್ಯರವರು ಎಷ್ಟೋ ಬೆಲೆಕೊಟ್ಟು ತೆಗೆದುಕೊಂಡಿರುವ ವಿದೇಶೀಯ ವಸ್ತ್ರಗಳನ್ನು ಸುಟ್ಟು ಹಾಳ್ಮಾಡುವುದಕ್ಕಿಂತಲೂ ಮೈಗೆ ಬಟ್ಟೆಯೇ ಇಲ್ಲದೆ ಅಲೆಯುತ್ತಿರುವ ಬಡಬಗ್ಗರಿಗೆ ದಾನಮಾಡಿ ಬಿಡುವುದು ಯುಕ್ತವೆಂದು ಭಾಷಣಮಾಡಿದರು. ಉಗ್ರವಾದಿ ಮಿತವಾದಿಗಳ ನಡೆನುಡಿಯಲ್ಲಿ ಇಷ್ಟು ವ್ಯತ್ಯಾಸವಿದೆ.

೩ ನೆ ತರಗತಿ ರೈಲ್ವೆ ಪ್ರಯಾಣಿಕರು ಅನುಭವಿಸುತ್ತಿರುವ ಕಷ್ಟಗಳನ್ನು ನಿವಾರಿಸುವ ಉದ್ದೇಶದಿಂದಲೇ ಲಕ್ನೋಪಟ್ಟಣದಲ್ಲಿ “ರೈಲ್ವೆ ಕಷ್ಟನಿವಾರಕಸಮಿತಿ” ಎಂಬ ಹೆಸರಿನಿಂದ ಒಂದು ಸಂಘವು ಸ್ಥಾಪಿಸಲ್ಪಟ್ಟಿದೆ. ಪ್ರಜೆಗಳ ಕಷ್ಟಗಳನ್ನು ವಿಚಾರಿಸಿ ಅವನ್ನು ಅಧಿಕಾರಿಗಳಿಗೆ ತಿಳಿಯಪಡಿಸಿ ನ್ಯಾಯವನ್ನು ಮಾಡಿಸುವುದೇ ಸಮಿತಿಯ ಸಂಕಲ್ಪವಾಗಿದೆ. ಈ ಉದ್ದೇಶವು ಸಫಲವಾಗಬೇಕಾದರೆ ಉತ್ಸಾಹವುಳ್ಳ ಸ್ವಚ್ಛಂದಸೇವಕರೂ ಧನಸಹಾಯ್ಯವೂ ಬೇಕಾಗಿರುತ್ತದೆ. ಯಾವ ತೆರದಿಂದಲಾದರೂ ಆ ಪ್ರಯತ್ನಕ್ಕೆ ಸಹಾಯಮಾಡಬೇಕೆನ್ನುವವರು ಸಮಿತಿಯ ಕಾರ್ಯದರ್ಶಿಗಳಾದ ರಾಮಸ್ವರೂಪ ಶರ್ಮರವರಿಗೆ ಬರೆದುಕೊಂಡರೆ ವಿವರವು ತಿಳಿಯುವುದು.

“ನೀವು ವಿದೇಶ ವಸ್ತ್ರ ಬಹಿಷ್ಕಾರವನ್ನು ಕುರಿತ ತೀರ್ಮಾನವನ್ನು ತೆಗೆದುಹಾಕಬೇಕು. ನಮಗೆ ಸಲ್ಲಿಸಬೇಕಾದ ಹಣವನ್ನು ಕೂಡಲೇ ಸಲ್ಲಿಸಬೇಕು. ಇಲ್ಲದೆಹೋದರೆ ಎಕ್ಸ್‌ಛೇಂಜ್ ವಿಷಯವನ್ನು ಕುರಿತು ನಾವು ಆಲೋಚಿಸುವುದಿಲ್ಲ” ಎಂದು ಮಾಂಚೆಸ್ಟರ್ ಪಟ್ಟಣದ ವರ್ತಕಸಂಘದವರು ದಿಲ್ಲಿಯ ವಿದೇಶ ವಸ್ತ್ರ ವ್ಯಾಪಾರ ಸಂಘದವರಿಗೆ ತಂತ್ರೀವಾರ್ತೆಯನ್ನು ಕಳುಹಿಸಿದರು. ಅದಕ್ಕೆ ಇವರು—“ನೀವು ಸುಮ್ಮನೆ ಆಲಸ್ಯಮಾಡುವುದು ಸರಿಯಲ್ಲ. ಇದುವರೆಗೆ ಯಾವ ಸಂಘವೂ ವಿದೇಶ ವಸ್ತ್ರ ಬಹಿಷ್ಕರಣದ ತೀರ್ಮಾನವನ್ನು ಮಾಡಿಲ್ಲ. ದಿಲ್ಲಿಯ ಬಟ್ಟೆ ಕಂಟ್ರ್ಯಾಕ್ಟುಗಳನ್ನು ಸಮಾಧಾನಕರವಾಗಿ ಪರಿಷ್ಕರಿಸಬೇಕು. ೩ ಶಿಲ್ಲಿಂಗುಗಳ ತೀರ್ಮಾನವನ್ನು ಇದುವರೆಗೆ ಎಷ್ಟೋ ಸಲ ಮುಂದಿಸಿರುವೆವು” ಎಂದು ಪ್ರತ್ಯುತ್ತರ ಕೊಟ್ಟಿರುವರು.

ಹಿಂದೆ ಮದ್ರಾಸು ಹೈಕೋರ್ಟಿನ ಜಡ್ಜರಾಗಿದ್ದು ಈಗ ಸಾಮ್ರಾಜ್ಯ ಶಾಸನ ಸಭೆಯಲ್ಲಿ ಸಭಿಕರಾಗಿರುವ ಟಿ. ವಿ. ಶೇಷಗಿರಿಅಯ್ಯರವರು ವಾರಸ್ ಹಕ್ಕುಗಳನ್ನು ಕುರಿತು ಸಿವಿಲ್ ಲಾದಲ್ಲಿ ಕೆಲ ಮುಖ್ಯವಾದ ಮಾರ್ಪುಗಳನ್ನು ಮಾಡಬೇಕೆಂಬ ವಿಷಯದ ಬಿಲ್ಲನ್ನು ಸಾಮ್ರಾಜ್ಯಶಾಸನಸಭೆಯ ಮುಂದಿಡುವುದಕ್ಕೆ ವೈಸ್ರಾಯರ ಒಪ್ಪಿಗೆಯನ್ನು ಪಡೆದಿದ್ದಾರೆ. ಆ ಬಿಲ್ಲಿನ ವಿವರವೇನೆಂದರೆ–ಗಂಡಸು ವಾರಸಾದಾರರಿಲ್ಲದಿದ್ದರೆ ದಾಯಾದಿಗಳಿಗೆ ಸೊತ್ತಿನ ಹಕ್ಕು ಹೇಗೆ ಇರುವುದೋ ಹಾಗೆ ಹೆಣ್ಣುಮಕ್ಕಳು ಅವರ ಮಕ್ಕಳು ಮೊಮ್ಮಕ್ಕಳು ಅಕ್ಕತಂಗಿಯರು, ಸವತಿಯ ಅಕ್ಕತಂಗಿಯರು, ಸವತಿಯ ತಾಯಿ ಇವರಿಗೆಲ್ಲಾ ಆಸ್ತಿಯ ಹಕ್ಕಿರಬೇಕು. ಮತ್ತು ಕಿವುಡರು ಮೂಗರು ಕುಂಟರು ಮೊದಲಾದ ವಿಕಲಾಂಗರಿಗೆ ಪಿತ್ರಾರ್ಜಿತ ಆಸ್ತಿಯ ಹಕ್ಕಿಲ್ಲವೆಂಬ ನಿಬಂಧನೆಯನ್ನು ತೆಗೆದುಹಾಕಬೇಕು. ಅವರಿಗೇ ಮುಖ್ಯವಾಗಿ ಆಸ್ತಿಯ ಹಕ್ಕಿರಬೇಕು. ದತ್ತಸ್ವೀಕಾರವಿಷಯದಲ್ಲಿ ವಿತಂತುಗಳು ಭರ್ತನ ಅಪ್ಪಣೆಯಿಲ್ಲದಿದ್ದರೆ ದಾಯಾದಿಗಳ ಅನುಮತಿಯನ್ನು ಪಡೆಯಬೇಕೆಂಬ ನಿಬಂಧನೆಯನ್ನು ತಪ್ಪಿಸಬೇಕು. ಇತ್ಯಾದಿ.

ಧಾರವಾಡನಲ್ಲಿ ಆದ ಗದ್ದಲದ ಸಂಬಂಧದಲ್ಲಿ ನಡೆಯುತ್ತಿದ್ದ ವ್ಯಾಜ್ಯದ ವಿಚಾರಣೆಯು ಕಳೆದ ತಾ|| ೪ ಕ್ಕೆ ಮುಗಿಯಿತು. ಒಟ್ಟು ಇದ್ದ ೨೯ ಮಂದಿ ಅಪರಾಧಾರೋಪಿತರಲ್ಲಿ ಮ|| ಕೃಷ್ಣರಾವ್ ಮುದವೇಡಕರ ಮತ್ತು ಮಿ|| ಅಬ್ದುಲ್‌ಖಾದರ್ ಲಂಗೋಟಿ ಇವರಿಬ್ಬರನ್ನು ನಿರ್ದೋಷಿಗಳೆಂದು ಹೇಳಿ ಉಳಿದ ೨೭ ಮಂದಿಗಳ ಮೇಲೆ ಖೂನಿಮಾಡಲು ಪ್ರಯತ್ನಿಸಿದುದು, ಬೆಂಕಿಹಚ್ಚುವುದು, ಸೂರೆಮಾಡುವುದು ಇತ್ಯಾದಿ ಅಪರಾಧಗಳನ್ನು ಮಾಡಿದರೆಂಬ ಹೇತುವಿನಿಂದ ಕ್ರಿ. ಪ್ರೊ. ೧೪೬-೧೪೯, ೩೦೭, ೪೪೮, ೪೪೪, ೩೭೮, ೩೯೭, ೩೩೨, ಸೆಕ್ಷನ್ನುಗಳನ್ನನುಸರಿಸಿ ಮಿ|| ಲಾರೆನ್ಸ್ ಎಂಬ ಅಡಿಷನಲ್ ಮ್ಯಾಜಿಸ್ಟ್ರೇಟರು ಛಾರ್ಜುಮಾಡಿ, ಎಲ್ಲರನ್ನೂ ಸೆಷನ್ ಕಮಿಟ್‌ಮಾಡಿರುವರು. ಅದರಮೇಲೆ ಅಪರಾಧಿಗಳೆಲ್ಲರೂ ತಾವು ನಿರಪರಾಧಿಗಳೆಂದೂ, ಪೋಲೀಸರು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲಿಕ್ಕಾಗಿ ಈ ಸುಳ್ಳು ವ್ಯಾಜವನ್ನು ನಮ್ಮಮೇಲೆ ಹೂಡಿದ್ದಾರೆಂದೂ ಈ ಕೋರ್ಟಿನಲ್ಲಿ ಇದಕ್ಕಿಂತ ಹೆಚ್ಚಾಗಿಯೇನನ್ನೂ ಹೇಳುವುದಿಲ್ಲವೆಂದೂ ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟಿರುವರು. ಇವರಲ್ಲಿ ೪ ಮಂದಿ ಬ್ರಾಹ್ಮಣ ವಕೀಲರೂ ೩ ಮಂದಿ ಬ್ರಾಹ್ಮಣ ಪತ್ರಿಕಾ ಸಂಪಾದಕರೂ, ೬ ಮಂದಿ ಅಸಹಾಯ ಪ್ರಚಾರಕರಾದ ಮಹಾರಾಷ್ಟ್ರ ಬ್ರಾಹ್ಮಣರೂ, ೧೪ ಮಂದಿ ಮಹಮ್ಮದೀಯರೂ ಆಗಿರುವರು.

ವಿದೇಶ ವೃತ್ತಾಂತಗಳು.

ಇಂಗ್ಲೀಷ್ ಪಾರ್ಲಿಮೆಂಟಿನಲ್ಲಿ ಒಂದು ಮುಖ್ಯವಾದ ವಿಷಯವು ಏಕಕಂಠವಾಗಿ ತೀರ್ಮಾನಗೊಂಡಿತು. ಏನೆಂದರೆ—ಸಿವಿಲ್ ಸರ್ವೀಸ್ ಉದ್ಯೋಗಗಳಿಗೆ ಪುರುಷರಂತೆ ಸ್ತ್ರೀಯರೂ ಸಹ ಗ್ರೇಟ್ ಬ್ರಿಟನ್ ದ್ವೀಪಗಳಲ್ಲಿ ನಿಯಮಿಸಿಕೊಳ್ಳಲ್ಪಡಬೇಕು. ಉದ್ಯೋಗ ಗೌರವವೂ ಸಂಬಳವೂ ಕೂಡ ಸ್ತ್ರೀ ಪುರುಷರಿಗೆ ಸಮಾನವಾಗಿರಬೇಕು.

ಅಮೇರಿಕಾದ ವಾಷಿಂಗ್‌ಟನ್ ಪಟ್ಟಣದಲ್ಲಿ ಎಲ್ಲ ದೇಶಗಳವರೂ ಯುದ್ಧಸಾಮಗ್ರಿಯನ್ನು ಅಭಿವೃದ್ಧಿಪಡಿಸುವ ಉದ್ಯೋಗವನ್ನು ವಿರಮಿಸಬೇಕೆಂಬ ವಿಷಯವನ್ನು ಚರ್ಚಿಸುವುದಕ್ಕಾಗಿ ಒಂದು ಸಭೆಯು ಕೂಡುವುದಾಗಿದೆ. ಇದಕ್ಕೆ ಹೋಗುವ ವಿಷಯದಲ್ಲಿ ಕೆಲ ದೇಶಗಳವರಿಗೆ ಮೊದಮೊದಲು ಭಿನ್ನಾಭಿಪ್ರಾಯವಿದ್ದಿತು. ಈಗ ಅದೆಲ್ಲಾ ಸರಿಹೋಯಿತು, ಬ್ರಿಟನ್ನು, ಅಮೇರಿಕಾ, ಜಪಾನ್, ಚೀನಾ ಮೊದಲಾದ ದೇಶಗಳ ಪ್ರತಿನಿಧಿಗಳೆಲ್ಲಾ ಇದಕ್ಕೆ ಸೇರುವರು.

ಅಮೇರಿಕಾಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಯಾವತ್ಪ್ರಪಂಚದ ನೀಗ್ರೋ ಜನರ ಮಹಾ ಸಭೆಯು ಕೂಡಿದ್ದಿತು. ಅಮೇರಿಕಾ, ಯೂರೋಪು, ಏಷ್ಯಾ, ಆಫ್ರಿಕಾಖಂಡಗಳಿಂದೆಲ್ಲಾ ೧೫ ಸಾವಿರ ನೀಗ್ರೋಜನರು ಆ ಸಭೆಗೆ ಹೋಗಿದ್ದರು. ಈ ಆಗಸ್ಟ್ ತಿಂಗಳೆಲ್ಲಾ ಆ ಸಭಾಕಾರ್ಯಗಳು ಜರಗುವುವು. ಪ್ರಪಂಚದಲ್ಲಿ ೨೦ ಕೋಟಿ ಮಂದಿ ನೀಗ್ರೋ ಜನರಿರುವರು. ಆ ತಮ್ಮ ಜನರ ಭವಿಷ್ಯತ್ ಪರಿಪಾಲನಸ್ಥಿತಿಯನ್ನು ಕುರಿತು ಇವರು ಆಲೋಚಿಸುವರಂತೆ. ಅಷ್ಟೇಅಲ್ಲದೆ ಅವರು ಆಂಗ್ಲ ಮಂತ್ರಿಯವರಾದ ಲಾಯಿಡ್‌ಜಾರ್ಜ್‌ರವರಿಗೆ ಒಂದು ತಂತೀ ವಾರ್ತೆಯನ್ನು ಕಳುಹಿಸಿ ಐರ್ಲಂಡು ಈಜಿಪ್ಟು ಇಂಡ್ಯಾ ಈ ದೇಶಗಳಲ್ಲಿ ನಡೆಯುತ್ತಿರುವ ಜಾತಿ ವೈಷಮ್ಯವನ್ನು ನಿರ್ಮೂಲ ಮಾಡಿ ಸ್ವಾತಂತ್ರ್ಯವನ್ನು ಕೊಡಬೇಕೆಂದು ಅದರಲ್ಲಿ ತಿಳಿಯಿಸಿದ್ದಾರಂತೆ.

ಗ್ರೀಕರಿಗೂ ತುರುಕರಿಗೂ ನಡೆಯುತ್ತಿರುವ ಯುದ್ಧದಲ್ಲಿ ಇಂಗ್ಲೀಷರು ತಾಟಸ್ಥ್ಯವನ್ನು ಬಿಟ್ಟು ಗ್ರೀಕರಿಗೆ ಸಹಾಯಮಾಡುತ್ತಿರುವರೆಂದು ಹುಟ್ಟಿರುವ ಸುದ್ದಿಯು ಸಂಪೂರ್ಣವಾಗಿ ಸುಳ್ಳಾದುದು. ಗ್ರೀಕರು ಕಾನ್‌ಸ್ಟಾಂಟಿನೋಪಲ್ಲಿನ ಮೇಲೆ ಸಾಗಿಹೋಗುವರೆಂಬ ಮಾತೂ ಸುಳ್ಳೇ. ಗ್ರೀಕರು ಹಾಗೆ ಮಾಡಲಾಗದೆಂದು ಕೂಡ ಮಿತ್ರಮಂಡಲಿಯವರು ಅವರಿಗೆ ತಿಳಿಯಪಡಿಸಿರುವರಂತೆ. ಈಚೆಗೆ ಗ್ರೀಕರು ವಿಮಾನಗಳ ಮೇಲೆ ಹೋಗಿ ಅಂಗೋರಾದ ಮೇಲೆ ಸಿಡಿಮದ್ದುಗಳನ್ನು ಹಾಕುತ್ತಿದ್ದಾರೆ. ಅಲ್ಲಿಯ ತುರುಕರು ಪಟ್ಟಣವನ್ನು ಬಿಡುತ್ತಲಿದ್ದಾರಂತೆ. ಗ್ರೀಕರು ಕಾನ್‌ಸ್ಟಾಂಟಿನೋಪಲ್ಲಿನ ಮೇಲೆ ದಂಡೆತ್ತಿಹೋಗುವರೆಂದು ಹುಟ್ಟಿಸಿರುವ ಸುದ್ದಿಯು ಸುಳ್ಳು. ರಷ್ಯಾ ಪ್ರಭುತ್ವದವರು ಗ್ರೀಕ್ ತುರುಕರ ಯುದ್ಧದಲ್ಲಿ ಎಷ್ಟು ಮಾತ್ರಕ್ಕೂ ಸಂಬಂಧವಿಟ್ಟುಕೊಳ್ಳುವವರಾಗಿಲ್ಲವೆಂದು ರಷ ರಾಜ್ಯಭಾರಿಗಳು ತಿಳಿಯಿಸಿದ್ದಾರೆ. ಮಿತ್ರಮಂಡಲಿಯವರು ಮಧ್ಯವರ್ತಿಗಳಾಗಿ ಬಂದು ಸಮಾಧಾನಪಡಿಸಬೇಕೆಂದು ಅಂಗೋರಾದವರು ಮಿತ್ರಮಂಡಲಿಯವರನ್ನು ಕೋರಿ ಪತ್ರವ್ಯವಹಾರವನ್ನು ನಡೆಯಿಸುತ್ತಿರುವುದು ನಿಜವೆಂದು ಈಚೆಗೆ ಸುದ್ದಿ ಬಂದಿದೆ.

ಲಂಡನ್ ಪಟ್ಟಣದಲ್ಲಿ ಕೂಡಿದ್ದ ಸಾಮ್ರಾಜ್ಯ ಸಭೆಯ ಕಾರ್ಯಗಳೆಲ್ಲಾ ಕಳೆದ ತಾ|| ೫ ಕ್ಕೆ ಮುಗಿದು ಎಲ್ಲ ಕಡೆಯ ಪ್ರತಿನಿಧಿಗಳೂ ಅವರವರ ದೇಶಕ್ಕೆ ಹೊರಡಲು ಅಪ್ಪಣೆಪಡೆದರು. ಈ ಸಮಾವೇಶದಲ್ಲಿ ಚರ್ಚೆ ನಡೆದು ತೀರ್ಮಾನಗೊಂಡ ಅನೇಕ ವಿಷಯಗಳೊಳಗೆ ಭರತಖಂಡದ ವಿಷಯವೂ ಸ್ವಲ್ಪವಾಗಿದ್ದಿತು. “ಸಾಮ್ರಾಜ್ಯದ ಯಾವ ಭಾಗದಲ್ಲಿ ಭಾರತೀಯರು ನೆಲಸಿದ್ದರೂ ಅವರು ಅದೇ ದೇಶದಲ್ಲಿ ಹುಟ್ಟಿ ಬೆಳೆದವರಾಗಿದ್ದರೆ ಅವರಿಗೆ ಅಲ್ಲಿಯ ಪೌರತ್ವ ಹಕ್ಕಿರಬೇಕು” ಎಂಬ ವಿಷಯವು ಮುಖ್ಯವಾಗಿದ್ದಿತು. ಇದರಿಂದ ಅಧಿನಿವೇಶಗಳಲ್ಲಿ ನಡೆಯುತ್ತಿರುವ ಭಾರತೀಯರ ಅವಮಾನವೂ ಹಿಂಸೆಯೂ ತಪ್ಪುವುದಕ್ಕೆ ಅವಕಾಶವಾಗುವುದು. ಈ ತೀರ್ಮಾನಕ್ಕೆ ಇತರರೆಲ್ಲಾ ಒಪ್ಪಿದರು. ಆದರೆ ದಕ್ಷಿಣಾಫ್ರಿಕಾ ಪ್ರತಿನಿಧಿಗಳು ಮಾತ್ರ ಅಲ್ಲಿಯ ಕೆಲವು ಪ್ರತ್ಯೇಕ ಕಾರಣಾಂತರಗಳಿಂದ ಒಪ್ಪದೆಹೋದರಂತೆ. ಸಭೆಗೆ ಹೋಗಿದ್ದ ಭಾರತ ಪ್ರಭುತ್ವದವರು ದಕ್ಷಿಣಾಫ್ರಿಕಾ ಪ್ರಭುತ್ವದವರೊಡನೆ ಅಲ್ಲಿಯ ಭಾರತೀಯರ ಸ್ಥಿತಿಯನ್ನು ಕುರಿತು ಆಲೋಚಿಸಿ ಸಮನ್ವಯಮಾಡಿಕೊಳ್ಳಬೇಕಂತೆ. ಸಭೆಗೆ ಹೋಗಿದ್ದ ಭಾರತ ಪ್ರತಿನಿಧಿಗಳು ಈ ಮಾತಿಗೆ ಒಪ್ಪಿಕೊಂಡಿದ್ದಾರೆ.

ಪ್ಯಾರಿಸ್‌ಪಟ್ಟಣದಲ್ಲಿ ನಡೆಯುವ ಸುಪ್ರೀಂ ಕೌನ್ಸಿಲಿಗೆ ಬರಬೇಕೆಂದು ಫ್ರೆಂಚ್ ಮುಖ್ಯ ಮಂತ್ರಿಯವರು ಗ್ರೇಟ್‌ಬ್ರಿಟನ್, ಇಟಲಿ, ಜಪಾನ್, ಅಮೇರಿಕಾ ಪ್ರಭುತ್ವದವರುಗಳಿಗೆ ಆಹ್ವಾನವನ್ನು ಕಳುಹಿಸಿದ್ದರು. ಲೀಪ್ಜಿಗ್ ವಿಚಾರಣೆಯೂ ಸಭೆಯಲ್ಲಿ ನಡೆಯುವುದಾದರೆ ಬೆಲ್ಜಿಯಂ ದೇಶಕ್ಕೂ ಆಹ್ವಾನವು ಕೊಡಲ್ಪಡುವುದು. ಈ ಸಭೆಯಲ್ಲಿ ಅಪ್ಪರ್‌ಸೈಲೇಷಿಯಾಸಮಸ್ಯೆ, ಯುದ್ಧ ಕಾಲದ ಬಂದಿಗಳ ವಿಚಾರ, ಜರ್ಮನೀ ಪೂರ್ವ ದೇಶಗಳ ವಿಚಾರ ಇವುಗಳು ಚರ್ಚಿಸಲ್ಪಡುತ್ತವೆ. ಇದಕ್ಕೆ ಅಮೇರಿಕಾದ ಪಕ್ಷದಿಂದ ಪ್ರೆಸಿಡೆಂಟ್ ಹಾರ್ಡಿಂಜರವರಿಗೆ ಪ್ರತಿಯಾಗಿ ಕರ್ನಲ್ ಹಾರ್ವೆಯವರು ಆಗಲೇ ಪ್ಯಾರಿಸಿಗೆ ಬಂದು ಸೇರಿದ್ದಾರೆ. ಆಂಗ್ಲ ದೇಶದಿಂದ ಮುಖ್ಯಮಂತ್ರಿ ಲಾಯಿಡ್‌ಜಾರ್ಜರು, ಮಂತ್ರಿಮಂಡಲದ ಲಾರ್ಡ್ ಕರ್ಜನ್ ಸರ್ ರಾಬರ್ಟ್ ಮೊದಲಾದವರುಗಳು ತಾ|| ೭ ರಲ್ಲಿ ಹೊರಟು ಪ್ಯಾರಿಸ್ಸನ್ನು ಸೇರಿದರು. ಇಟಲಿಯ ಮುಖ್ಯ ಮಂತ್ರಿ ಅರ್ಥಸಮಂತ್ರಿ ವಿದೇಶಾಂಗಮಂತ್ರಿಗಳೂ ಬಂದಿದ್ದಾರೆ. ಜಪಾನಿನಿಂದ ಕೌಂಟ್‌ಯುಶಿಯೆಂಬುವರು ಬಂದಿದ್ದಾರೆ. ಅಮೇರಿಕಾದವರು ಈ ಕೂಟಕ್ಕೆ ಸೇರಿದ್ದರೂ ಅವರ ಉದ್ದೇಶವು ಯೂರೋಪಿನ ಅಂತರವ್ಯವಹಾರದಲ್ಲಿ ಸಂಬಂಧವನ್ನು ಅವರು ಇಟ್ಟುಕೊಳ್ಳುವುದಿಲ್ಲವಂತೆ. ಆದರೆ ಪ್ರಪಂಚದ ಶಾಂತಿಗೆಲ್ಲಾ ಸಂಬಂಧಪಡುವ ವಿಷಯವನ್ನು ಸ್ಥಿರಪಡಿಸುವುದಕ್ಕೂ, ಭಿನ್ನಾಭಿಪ್ರಾಯಗಳನ್ನು ತಪ್ಪಿಸಲಿಕ್ಕೂ ಸರ್ವರಿಗೂ ಸಮಾನವಾದ ವಾಣಿಜ್ಯಸಂಪದಭಿವೃದ್ಧಿಗವಕಾಶವಿರುವಂತೆ ಮಾಡುವುದಕ್ಕೂ ಉದ್ದೇಶಿಸಿರುವರಂತೆ.

ರಷ್ಯಾ ದೇಶದಲ್ಲಿ ಈಗ ಮಹಾಭಯಂಕರವಾದ ಕ್ಷಾಮವು ವ್ಯಾಪ್ತವಾಗಿದೆ. ಇಂಥ ಕ್ರೂರ ಕ್ಷಾಮವು ಹಿಂದೆ ಎಂದೂ ಸಂಭವಿಸಿರಲಿಲ್ಲವಂತೆ. ಹೆಂಗಸರು ಗಂಡಸರು ಮಕ್ಕಳು ಮುದಿಗಳನೇಕರು ಹುಲ್ಲು ಸೊಪ್ಪನ್ನೂ ಎಲೆಗಳನ್ನೂ ಪ್ರಾಣಿಗಳ ಮೂಳೆಯ ಪುಡಿಯನ್ನೂ ತಿಂದು ಜೀವಿಸುತ್ತಿದ್ದಾರೆ. ಬಹು ಜನರು ಊರುಗಳನ್ನು ಬಿಟ್ಟು ಎಲ್ಲೆಲ್ಲಿಗೋ ಹೋಗಿ ಅಲೆಯುತ್ತಿದ್ದಾರೆ. ದಾರಿಯಲ್ಲೇ ಹಲವರು ಸಾಯುತ್ತಿದ್ದಾರೆ. ೩ ಸಹಸ್ರ ಜನರಿರುವ ಒಂದೂರಿನಲ್ಲಿ ದಿನಕ್ಕೆ ೬೦ ಮಂದಿಗಳಂತೆ ಸಾಯುತ್ತಿದ್ದಾರೆ. ಇದರ ಜತೆಗೆ ಪಟ್ಟಣಗಳು ಬಹಳ ಕೊಳಕಾಗಿರುವುದರಿಂದ ಸಾಂಕ್ರಾಮಿಕ ವ್ಯಾಧಿಗಳು ಬೇರೆ ಹೆಚ್ಚಿ ಪ್ರಜಾನಾಶವನ್ನು ಮಾಡುತ್ತಿವೆ, ಕೆಲ ಕಡೆ ಧಾನ್ಯಗಳಿದ್ದರೂ ಇರ್ಕುಟ್ಸ್ಕ್, ಸೈಬೀರಿಯಾ ಪ್ರಾಂತಗಳಲ್ಲಿ ಪ್ರಜೆಗಳ ಗಾಗಳದಿಂದಲೂ, ಈ ಗಣ ಸೋವಿಯಟ್ ಪರಿಪಾಲನೆಯ ದುಷ್ಕ್ರಮದಿಂದಲೂ ಲಕ್ಷಾಂತರ ಜನರು ನಾನಾ ಸಂಕಟಗಳಿಗೆ ಗುರಿಯಾಗಿದ್ದಾರೆ. ಕೋಟಿ ಜನರು ಈ ನಾನಾತರದ ಸಂಕಟಗಳನ್ನು ಸೈರಿಸಲಾರದೆ ಮಾಸ್ಕೋ ಪಟ್ಟಣದ ಕಡೆಗೆ ಬಂದರಂತೆ. ಅವರನ್ನು ಊರೊಳಕ್ಕೆ ಬರಗೊಡದಂತೆ ಸೈನಿಕರು ಸುತ್ತಲೂ ಮುತ್ತಿಕೊಂಡು ತಡೆಯುತ್ತಿದ್ದಾರಂತೆ. ಈ ಕ್ಷಾಮಬಾಧೆಯಿಂದ ಜನರು ಪೋಲೆಂಡ್ ಲಿಥೂನಿಯಾ ಫಿನ್ಲಂಡು ದೇಶಗಳ ಕಡೆಗೆ ಸಾಗಿ ಹೋಗುತ್ತಿದ್ದಾರೆ. ಇವರನ್ನೆಲ್ಲಾ ಕಳ್ಳರೆಂದು ಹೇಳುತ್ತ ಮಾಸ್ಕೊ ಮೊದಲಾದ ಪಟ್ಟಣಗಳ ಹತ್ತಿರ ಪ್ರಭುತ್ವ ಸೈನಿಕರು ಇವರುಗಳ ಮೇಲೆ ವಿಷವಾಯುವನ್ನು ಪ್ರಯೋಗಿಸುತ್ತಿದ್ದಾರಂತೆ. ಈ ಆಪತ್ಕಾಲದಲ್ಲಿ ರಷ್ಯಾಕ್ಕೆ ಸಹಾಯಮಾಡಬೇಕೆಂದು ಅಲ್ಲಿಯ ಪ್ರತಿನಿಧಿಗಳು ಆಂಗ್ಲ ಮಂತ್ರಿಯವರೊಡನೆ ಮಾತನಾಡಿದರು. ಸಾಲದರೂಪವಾಗಿ ರಷ್ಯಾದಿಗೆ ಅವಶ್ಯಕವಾದ ಸಾಮಗ್ರಿಗಳನ್ನು ಕಳುಹಿಸಿಕೊಡಲು ಬ್ರಿಟನ್ನಿನವರು ಆಲೋಚಿಸುತ್ತಿದ್ದಾರೆ. ಫ್ರೆಂಚರು ಸ್ವತಃ ರಷ್ಯಾದಿಗೆ ಧಾನ್ಯಾದಿ ಸಹಾಯವನ್ನು ಮಾಡುವುದಲ್ಲದೆ ಅಮೇರಿಕಾ ಮೊದಲಾದ ಇತರ ದೇಶಗಳವರೆಲ್ಲಾ ಸಹಾಯಮಾಡಬೇಕೆಂದು ಕೋರಿರುತ್ತಾರೆ. ರಷ್ಯಾದ ಕ್ಷಾಮನಿವಾರಣೆಯ ಪ್ರಯತ್ನದ ಸಭೆಯಲ್ಲಿ ಪೋಲೆಂಡ್ ಮೊದಲಾದ ಎಲ್ಲ ದೇಶಗಳ ಪ್ರತಿನಿಧಿಗಳೂ ಸೇರಿ ಕೆಲಸಮಾಡುತ್ತಿದ್ದಾರೆ. ಜರ್ಮನಿಯವರು ಧನಧಾನ್ಯ ಸಹಾಯಮಾಡುವುದಕ್ಕೆ ತಮಗೆ ಶಕ್ತಿಯಿಲ್ಲದಿರುವುದರಿಂದ ವೈದ್ಯ ಸಹಾಯವನ್ನು ಮಾಡಲು ಒಪ್ಪಿಕೊಂಡಿದ್ದಾರೆ. ಲೋಕವನ್ನೆಲ್ಲಾ ನಿರ್ಭಯದಿಂದ ಪೀಡಿಸಲು ಪ್ರಯತ್ನಿಸಿದ ತಮ್ಮ ದುಷ್ಕರ್ಮದ ಫಲವು ಈಗಾಗಲೇ ರಷ್ಯಾದ ಬೋಲ್ಷೆವಿಕ್ಕರಿಗೆ ಈ ರೂಪವಾಗಿ ಗೋಚರಿಸಿರಬೇಕು. ಇದರಿಂದ ಬುದ್ಧಿಕಲಿತು ಅವರು ಸಾತ್ವಿಕರಾದರೆ ಬಂದ ವಿಪತ್ತು ಬೇಗನೆ ತೊಲಗಿಹೋದೀತು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಅಧಿಕಾರ ಸಂಪತ್ತಿನ ಗುಣಗಳು.

ಯಾವುದರಲ್ಲಿಯೂ ಹದ್ದುಮೀರಿ ಹೋಗಬಾರದು. ಅದರಲ್ಲಿಯೂ ಅಧಿಕಾರಶ್ರೀಯು ಈ ಸಂದರ್ಭದಲ್ಲಿ ಒಂದು ಪದ್ಯವನ್ನು ಎಲ್ಲಿಯೋ ಓದಿದ್ದು ಜ್ಞಾಪಕಕ್ಕೆ ಬಂದಿರುತ್ತದೆ. “ಸುರೆಯಿಂಸೋದರಂ ಸುರೋರ್ವೀರುಹಕೆಸಲಯದಿಂ ರಾಗಮಂಕೌಸ್ತುಭಪ್ರ | ಸ್ತರದಿಂನೈಷ್ಠುರ್ಯಮಂ ದುರ್ವಿಷಮವಿಷದಿನುನ್ಮೋಹಮಂ ಮುಗ್ಧದೋಷಾ || ಕರನಿಂ ವಕ್ರತ್ವಮಂದುಶ್ಚ್ಯವನನಹಯದಿಂವೇಗಮಂ ತಾಳ್ದುನೀರಾ | ಕರದಿಂದೇಳ್ತಂದಲಂತಾಸಿರಿ ಸಹಭವರಂ ಪೋಲ್ವುದೇಂಚೋದ್ಯಮಾಯ್ತೇ” ಈ ರೀತಿಯ ನಡತೆಯು ಮಿಲ್ಲರ್ ಕಮಿಟಿಯ ರಿಪೋರ್ಟು ಹೊರಗೆ ಬಂದ ತರುವಾಯ ಎಷ್ಟು ವೇಗವಾಗಿ ಈ ದೇಶವನ್ನು ಬಿಟ್ಟು ಹೊರಗೆ ಪ್ರಯಾಣಮಾಡುತ್ತಿದೆ. ಮದ್ರಾಸು ಬೊಂಬಾಯಿ ಕಲ್ಕತ್ತಾ ಪತ್ರಿಕೆಗಳಲ್ಲಿ ಸಮುದ್ರ ಮಥನದ ನೊರೆಯನ್ನು ನೋಡಿ ಕಾರಿಕಾರಿ ಎಷ್ಟು ದೂರ ಕಿಚ್ಚು ಹರಡುತ್ತಿದೆ. ಈ ಕಿಚ್ಚು ಮೇಲಿನ ಪದದಲ್ಲಿ ಕಾಣಬರುವ ಗುಣಾತಿಶಯಗಳ ರಾಶಿಯ ಫಲವೆಂದು ತೋರುತ್ತದೆ. ಮೈಸೂರು ದೇಶದ ನಮ್ಮ ಬ್ರಾಹ್ಮಣ ಸಹೋದರರ ಸಂಪತ್ತು ಹದ್ದುಮೀರಿ ಹೋಗಿರುತ್ತದೆ. ಅದಕ್ಕಾಗಿ ಯಾರೂ ದುಃಖಪಡುವುದಿಲ್ಲ. ಆದರೆ ದೇಶೋನ್ನತಿಗೆ ಎಲ್ಲಾ ಜನಾಂಗದವರೂ ವಿದ್ಯಾವಂತರಾಗಬೇಕು. ಸರ್ಕಾರದ ಎಲ್ಲಾ ತರಗತಿಯ ಉದ್ಯೋಗದಲ್ಲಿಯೂ ಆಯಾ ಪಂಗಡದ ಯೋಗ್ಯತಾನುಸಾರವಾಗಿ ಅಂದರೆ ಸಂಖ್ಯೆಯನ್ನು ಅನುಸರಿಸಿ ಜನರು ಸೇರಿ ಉದ್ಯೋಗವೆಂಬ ಭಾರವನ್ನು ಹೊರುವುದರಲ್ಲಿ ಭಾಗಿಗಳಾಗಿರಬೇಕು ಎಂಬುವದೇ ಮಿಲ್ಲರ್ ಕಮಿಟಿಯ ರಿಪೋರ್ಟಿನ ಮುಖ್ಯ ಉದ್ದೇಶವಾಗಿರುತ್ತದೆ. ಹೀಗಿರುತ್ತಾ ತಾವು ಆಡಿದ್ದೇ ಆಟ ಹೂಡಿದ್ದೇ ಲಗ್ಗೆಯೆಂಬುದನ್ನು ಅನುಸರಿಸಿ ಇತರ ಜನವರ್ಗದವರನ್ನು ತುಚ್ಛವಾಗಿ ಕಂಡುಕೊಂಡು ಬರುತ್ತಿರುವುದಕ್ಕೂ ಇತರರ ಹಣವನ್ನು ಲೆಕ್ಕವಿಲ್ಲದೆ ತಿನ್ನುವುದಕ್ಕೂ ಅಡ್ಡಿ ಬರುವುದೆಂದೂ ಸತ್ಯವಾದ ಮತ್ತು ಧರ್ಮದಿಂದ ಕೂಡಿದ ಸರ್ಕಾರದ ಹುಕುಂ ಉಲ್ಲಂಘನೆ ಮಾಡಲು ಆರಂಭಿಸಿರುತ್ತಾರೆ. ಪ್ರಪಂಚವು ಮುಳುಗಿ ಹೋಯಿತೋ ಎಂಬುವಂತೆ ಆರ್ಭಟಿಸುತ್ತಾರೆ. ಮೈ

are adopting all sorts of questionable ways to discredit the Government and what is more, are not sparing the Royalty too—a game which the loyal non-Brahmin subjects of His Highness the Maharaja detest and deplore. Under the cloak of Brahmana Vidya Sahaya Sangha in which official and non-official Brahmins join their hands in many places Brahmin officers taking leading part and even becoming Presidents and Office Bearers, a thing absolutely wrong in principle—the seeds of disaffection are being thrown broadcast and their unrighteous propoganda is being carried on most unrestrictedly. The entire Brahmin press of India is being approached by the wirepullers who are never ashamed of throwing all truth and fairplay into winds, and presenting altogether distorted facts. They go to journals who perhaps know as much of Mysore as a man in Jericho or Timbaktoo would who become like "clay in designing hands" for their nefarious propoganda. They are staunch *Varnashramadharmites*—men who have no *varna*, no *ashrama*, and no *dharma*. They join the Indian National Congress, the relevency or the propriety of which is impossible to see in Mysore, with no other object than scheming with the outside Brahmin politicians. What is more than all, they become Gandhites and the first and foremost virtue they display is unadulterated and concentrated selfishness a thing which if M. Gandhi sees committed by his so called desciples would be horror stricken. Yes, the Brahmins have unmasked themselves at last. Hitherto because of the ignorance of the masses on which they traded and plundered, they of course found it paying to put on the garb of very religious people and of being their well-wishers. Now that their interests have been affected or are likely to be affected their inherited true element of selfishness is exhibited in all its naked horror, and ugliness and the persons who once prided on their spirituality and their humility-be it noted they will never stop praying every morning for the good of all-are now revealed to the world as a set of people with whom self is everything and others nothing beyond instruments to serve their purpose and with whom principles, justice (it is idle to think of generosity when there is no justice) fairplay, and loyalty count for nothing. How could otherwise have India been reduced to this State!

They have forfeited the confidence of the people and it would be a folly and, much more, fatal to put any trust in them. It is inconceivable how a community so grossly selfish, and utterly unreliable could be entrusted with the responsible duties of officials where they are to serve the interests of the people at large, to the good of whom they are so openly and stoutly opposed. How they came as representatives of the people to the public institutions, Representative Assembly and the Legislative Council and how against the interests of the very people who elected them they became the champions of their own selfish interests has become too notorious a fact to need mention here. Needless to say that in every centre and in every constituency only non-Brahmins who are really interested in the welfare and progress of the masses should be elected. This should be the first item on the programme of the work of the people at the elections.

However it is well known that, all the din and the dust raised by them is bound to subside as they realise the futility of their propoganda in course of time if not from any ultruistic motives at least from the view of their own future welfare and good, and as they realise that the time are changed when the great democracy is to be the determining factor in our life in all spheres and not any priestly heirarchy or sacerdotalism nor selfseeking opportunists however clever and cunning they may be. In Mysore as Mr. Reddy stated, the two factors on which the State depended are the Prince and the people. Under the paternal and benevolent guidance of His Highness the Maharaja the people will look after their own affairs. They do not need any intermediaries.

N. B.

ಒಳದೇಶದ ವೃತ್ತಾಂತಗಳು.

ದಿವಾನ್ ಸರ್ ಕಾಂತರಾಜ ಅರಸಿನವರು ದೀರ್ಘಕಾಲ ರಜಾಪಡೆದುಕೊಳ್ಳುವರೆಂದೂ ಮ|| ಎ. ಬಾನರ್ಜಿಯವರು ದಿವಾನಗಿರಿಗೆ ಬರುವರೆಂದೂ ಹುಟ್ಟಿರುವ ಸುದ್ದಿಯು ಸಂಪೂರ್ಣವಾಗಿ ಸುಳ್ಳು, ಅಸೂಯಾಪರರು ನಮ್ಮ ಸರ್ಕಾರದ ವಿರುದ್ಧವಾಗಿ ತರತರಂಗವಾಗಿ ಹುಟ್ಟಿಸಿ ಹರಡುತ್ತಿರುವ ಸುಳ್ಳಿನ ಪ್ರವಾಹದಲ್ಲಿ ಇದೊಂದು ಸುಳಿಯಾಗಿರುತ್ತದೆ.

ಈಗ ಹೊಳಲಕೆರೆಯಲ್ಲಿರುವ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಸಕಲ ಬಿರುದಾವಳಿಗಳೊಡನೆ ಬರುವ ತಾ|| ೧೭ನೆ ಬುಧವಾರ ಬೆಳಗಿನ ೮ ಗಂಟೆಗೆ ದಾವಣಗೆರೆಯ ಪುರಪ್ರವೇಶ ಮಾಡುವುವೆಂದೂ, ಇದಕ್ಕಾಗಿ ದಾವಣಗೆರೆಯಲ್ಲಿ ಅತಿಶಯವಾಗಿ ಪುರಾಲಂಕಾರಾದಿ ಸಂರಂಭಗಳು ನಡೆಯುತ್ತಿರುವುವೆಂದೂ ಕೇಳುತ್ತೇವೆ.

ಶ್ರೀ ಕೇದಾರದಲ್ಲಿರುವ ಏಕೋರಾಮಶಿವಾಚಾರ್ಯ ಪೀಠಕ್ಕೆ ಹೊಸದಾಗಿ ಅಧಿಕಾರಿಗಳಾಗಿರುವ ಶ್ರೀ ನೀಲಕಂಠಶಿವಾಚಾರ್ಯರವರ ಪಟ್ಟಾಭಿಷೇಕ ಮಹೋತ್ಸವವು ಇದೇ ಶ್ರಾವಣ ಶುದ್ಧ ೧೩ ಸೋಮವಾರದ ದಿವಸ ನಡೆಯುವುದರಿಂದ ಯಾವದ್ಭರತಖಂಡದ ಸ್ವಮತೀಯರೂ ಆ ಉತ್ಸವಕ್ಕೆ ಆಗಮಿಸಬೇಕೆಂದು ಕಾಶೀ ಶ್ರೀ ವಿಶ್ವಾರಾಧ್ಯ ಪೀಠದ ಜಗದ್ಗುರುಗಳು ಅಪ್ಪಣೆ ಮಾಡಿರುತ್ತಾರೆ.

ರಾಜಧಾನಿಯಲ್ಲಿ ನಡೆದ ತಿಲಕರ ಪುಣ್ಯ ದಿವಸದ ಸಂಬಂಧದ ಉತ್ಸವದಲ್ಲಿ ಇಲ್ಲಿಯ ಶಾರದಾವಿಲಾಸ ಪಾಠಶಾಲೆಯ ವಿದ್ಯಾರ್ಥಿಗಳು ಬಾವ ಚಿತ್ರಗಳನ್ನು ಹಿಡಿದುಕೊಂಡು ಹೋಗುತ್ತಿದ್ದರೆಂದು ಕಳೆದ ಸಂಚಿಕೆಯಲ್ಲಿ ಬರೆದಿದ್ದೆವಷ್ಟೆ, ಅದು ನಿಜವಲ್ಲವೆಂದೂ ರಾಜಧಾನಿಯ ವಿದ್ಯಾರ್ಥಿ ವರ್ಗದಿಂದ ಅದು ಆಚರಿಸಲ್ಪಟ್ಟಿತೆಂದೂ ಆ ಶಾಲೆಯ ಹೆಡ್ಮಾಸ್ಟರು ನಮಗೆ ಬರೆದು ತಿಳಿಯಿಸಿರುತ್ತಾರೆ. ಸತ್ಕಾರ್ಯವೆಂದು ತಿಳಿದು ಆಚರಿಸಿದ ಕೃತ್ಯದಲ್ಲಿ ತಮ್ಮ ಸಂಬಂಧವಿರಲಿಲ್ಲವೆಂದು ಸಾಧಿಸಿಕೊಳ್ಳುವುದರಲ್ಲಿ ಏನಾಧಿಕ ?

ದಾವಣಗೆರೆ, ಕೊಯಮತ್ತೂರು, ನಿಜಾಮಾಬಾದ್ ಮತ್ತು ಒರಂಗಲ್ಲು ಈ ಸ್ಥಳಗಳಲ್ಲಿ ಭಾರಿ ವರ್ತಕತನವನ್ನು ನಡಿಸುತ್ತಿರುವ ದಾವಣಗೆರೆ ಪ್ರಸಿದ್ಧ ವೀರಶೈವ ದೊಡ್ಡ ಮನುಷ್ಯರಾದ ಮ|| ರಾ|| ಶಿವರುದ್ರಪ್ಪ ಮುರಿಗೆಪ್ಪ ಚಿಗಟೇರಿಯವರು ದಾವಣಗೆರೆಯಲ್ಲಿ ಕಟ್ಟಿಸಿರುವ ಬಂಗಲೆಯ ಪ್ರವೇಶೋತ್ಸವವನ್ನು ಈ ದಿವಸ ಅತ್ಯಂತ ವಿಜೃಂಭಣೆಯಿಂದಲೂ ದೊಡ್ಡ ಸಂತರ್ಪಣೆಯಿಂದಲೂ ನಡೆಯಿಸುವವರಾಗಿರುವರು ಮತ್ತು ಇದಕ್ಕಾಗಿ ಸಾವಿರಾರು ಮಿತ್ರಮಂಡಲಿಯವರಿಗೆ ಆಹ್ವಾನಪತ್ರಗಳನ್ನು ಕಳುಹಿಸಿರುವರು. ಈ ಮಹೋತ್ಸವಕ್ಕೆ ಚಿತ್ರದುರ್ಗದ ಜಗದ್ಗುರುಗಳೂ ಬೇಲೂರು ಸ್ವಾಮಿಗಳು ಮೊದಲಾದ ಗುರುವರ್ಯರೂ ದಯಮಾಡಿಸುವರು. ಅತಿಥಿ ಅಭ್ಯಾಗತರ ಸತ್ಕಾರಕ್ಕಾಗಿ ಸಂಗೀತ ಮತ್ತು ಶಿವಕಥಾಶ್ರವಣಕ್ಕೇರ್ಪಾಟು ಇಡಲ್ಪಟ್ಟಿರುವುದು.

ಬೆಂಗಳೂರಿನ ಜನೋಪಕಾರಿ ದೊಡ್ಡಣ್ಣಶೆಟ್ಟರು ಅಸ್ವಸ್ಥರಾಗಿದ್ದರೆಂದು ತಿಳಿಯಿಸಿದ್ದೆವಷ್ಟೆ, ಕಡೆಗೂ ಅವರು ತಮ್ಮ ೭೪ನೆ ವಯಸ್ಸಿನಲ್ಲಿ ಕಳೆದ ೫ನೆ ತಾರೀಖಿನಲ್ಲಿ ತಮ್ಮ ಗೃಹದಲ್ಲಿ ದೈವಾಧೀನರಾದರು. ಅವರ ಸಂಕಲ್ಪದಂತೆ ಅಲ್ಲಿಯ ಪುರಪ್ರಮುಖರು ಮುಂದಾಗಿನಿಂತು ಅವರ ಧರ್ಮಾರ್ಥ ಪಾಠಶಾಲೆಗೆ ಸೇರಿದಂತೆ ಇರುವ ತೋಟದಲ್ಲೇ ಅವರ ಸಮಾಧಿಯನ್ನು ಮಾಡಿಸುವುದಕ್ಕೆ ಪ್ರಯತ್ನಿಸಿ, ಕೆಲ ಬ್ರಾಹ್ಮಣರು ಅಡ್ಡಿಮಾಡಿದರೂ ಸರ್ಕಾರಕ್ಕೆ ಬಿನ್ನಯಿಸಿಕೊಂಡು, ಮ್ಯುನಿಸಿಪಾಲಿಟಿಯಲ್ಲಿ ಹೆಚ್ಚುಮಂದಿ ಕೌನ್ಸಿಲರುಗಳ ಅನುಮತಿಯನ್ನು ಪಡೆದೂ ಸಮಾಧಿಯನ್ನು ತೋಟದಲ್ಲೇ ಮಾಡಿಸಿದರು. ಸಮಾಧಿಮಾಡಿದ ತಾ|| ೬ನೆ ದಿವಸ ಊರಿಗೆ ಊರೇ ಬಹು ಆಡಂಬರದಿಂದ ನಡೆದ ಶವೋತ್ಸವದ ಜತೆಗೆ ಹೋಗಿದ್ದು ಗತಿಸಿದವರ ವಿಷಯದಲ್ಲಿ ತಮಗಿದ್ದ ಗೌರವಬುದ್ಧಿಯನ್ನು ವ್ಯಕ್ತಪಡಿಸಿದರು. ಲಕ್ಷಾಂತರ ದ್ರವ್ಯವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಿ ಶ್ರೀಮನ್ಮಹಾರಾಜರಿಂದ ಜನೋಪಕಾರಿ ಎಂಬ ಬಿರುದನ್ನು ಪಡೆದು ಕೇವಲಸಾತ್ವಿಕಸ್ಥಿತಿಯಲ್ಲಿ ಪರೋಪಕಾರಕರಾಗಿದ್ದ ಮ|| ಶೆಟ್ಟರು ಅಳಿದರೂ ಅವರ ಯಶಃಕಾಯವು ಅವರ ಧರ್ಮಪ್ರತಿಷ್ಠಾಪನೆಗಳ ಮೂಲಕ ಶಾಶ್ವತವಾಗಿರುವುದು, ಇಂಥವರ ಜನ್ಮವೇ ಧನ್ಯವು. ಅವರ ಶುದ್ಧವರ್ತನಕ್ಕೆ ತಕ್ಕ ಸತ್ಪದವಿಯನ್ನು ಜಗದೀಶ್ವರನು ಅನುಗ್ರಹಿಸಿರುವನೆಂಬುದಕ್ಕೆ ಸಂಶಯವೇ ಇಲ್ಲ.

ಅಮಲ್ದಾರ್ ಮ|| ಬಿ. ಲಿಂಗಯ್ಯ ಬಿ.ಎ., ಯವರ ಕುಮಾರರಾದ ಬಿ. ಮಂಜುನಾಥರವರು ಮದರಾಸು ವಿದ್ಯಾಪೀಠದ ಕಳೆದವರ್ಷದ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಯಸ್ಸು ಇನ್ನೂ ೧೯ ಆಗಿರುವುದರಿಂದ ಮುಂದೆ ಇವರು ತುಂಬಾವೃದ್ಧಿಗೆ ಬರುವವರಾಗಿದ್ದಾರೆ. ಮ|| ಎಂ. ಬಸವಯ್ಯನವರು ಇವರನ್ನು ಬಿ.ಎ. ಪರೀಕ್ಷೆಗೆ ಓದಿಸಲಿಕ್ಕೆ ಸೀಮೆಗೆ ಕಳುಹಿಸಬೇಕೆಂದು ಅವರಿದ್ದಾಗಲೇ ಆಲೋಚಿಸಿದ್ದರು. ಆದರೆ ಅಲ್ಲಿ ಸೀಟು ದೊರಕದೆ ಆ ಸಂಕಲ್ಪವು ನಿಂತಿತು. ಈಗ ಇವರ ತಂದೆಯವರೂ ತಾತಂದಿರಾದ ಪ್ರೊಫೆಸರ್ ಮ|| ಬಸವಲಿಂಗಪ್ಪನವರೂ ಮುಂದಣ ವಿದ್ಯಾಭ್ಯಾಸಕ್ಕಾಗಿ ಮಂಜುನಾಥರವರನ್ನು ಸೀಮೆಗೆ ಕಳುಹಿಸಿಕೊಡಲಿಕ್ಕೆ ನಿರ್ಣಯಿಸಿರುವುದು ಸಂತೋಷಕರವಾಗಿದೆ. ನಾಳೆ ಸೋಮವಾರ ಬೆಂಗಳೂರಿಂದ ಅವರನ್ನು ಪ್ರಯಾಣ ಮಾಡಿಸುವವರಾಗಿದ್ದಾರೆ. ಕೈ|| ಬಸವಯ್ಯನವರ ವಿದ್ಯಾರ್ಥಿದಶೆಯಲ್ಲಿ ಅವರ ಮೇಧಾಶಕ್ತಿಯನ್ನುನೋಡಿ ಕೈ|| ಚಾಮರಾಜಪ್ರಭುಗಳು ಅವರನ್ನು ಮುಂದಣ ವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಕಳುಹಿಸಿಕೊಡಬೇಕೆಂದು ಉದ್ದೇಶಪಟ್ಟರೂ ಪೂರ್ವಾಚಾರಪ್ರಿಯರೂ ಪುತ್ರರಲ್ಲಿ ವಿಶೇಷ ಮಮತೆಯುಳ್ಳವರೂ ಆಗಿದ್ದ ಮ|| ಬಸವಲಿಂಗಪ್ಪನವರು ಆಗ್ಗೆ ಅದಕ್ಕೆ ಒಡಂಬಟ್ಟಿರಲಿಲ್ಲ. ಈಗಲಾದರೂ ಗತಿಸಿದ ಬಸವಯ್ಯನವರ ಸಂಕಲ್ಪಕ್ಕೆ ಚ್ಯುತಿಯನ್ನು ಮಾಡಬಾರದೆಂಬ ಉದ್ದೇಶದಿಂದಲೇ ಈ ತಮ್ಮ ಮೊಮ್ಮಗನನ್ನು ಸೀಮೆಗೆ ಕಳುಹಿಸಿಕೊಡಲು ಅವರು ಒಪ್ಪಿದ್ದಾರೆ. ಮಂಜುನಾಥರು ಹೋದ ಕಾರ್ಯದಲ್ಲಿ ವಿಶೇಷಜಯವನ್ನು ಪಡೆದು ಕೈ|| ಬಸವಯ್ಯನವರನ್ನು ಮರೆಯಿಸುವಂಥ ಪುರುಷಕೇಸರಿಯಾಗಿ ಬರಲೆಂದೂ, ಪೌತ್ರನ ಅಭ್ಯುದಯವನ್ನು ಕಣ್ಣಾರನೋಡಿ ಆನಂದಿಸುವಂಥ ಯೋಗವು ಮ|| ಬಸವಲಿಂಗಪ್ಪನವರಿಗೆ ಜಗದೀಶ್ವರನು ಅನುಗ್ರಹಿಸಲೆಂದೂ ಕೋರುವೆವು.

ನಿದ್ರೆಯ ಪ್ರಯೋಜನ.

ಜೀವಿಯ ಆರೋಗ್ಯಕ್ಕೆ ಅವಶ್ಯಕವಾದ ಸಾಧನಗಳಲ್ಲಿ ನಿದ್ರೆಯು ಒಂದು ಮುಖ್ಯಸಾಧನವಾಗಿರುತ್ತದೆ. ಆಹಾರಕ್ಕಿಂತಲೂ ನಿದ್ರೆಯು ಅತ್ಯಂತ ಮುಖ್ಯವಾದುದೆಂದು ಹೇಳಬಹುದು. ಕೆಲಕಾಲ ಆಹಾರವನ್ನು ಬಿಟ್ಟಿದ್ದೂ ಕೂಡ ಬದುಕಿರಬಹುದು. ಅಂಥ ಕಾಲದಲ್ಲಿ ದೇಹದ ಚರ್ಮದೊಳಗೂ ಉಳಿದ ಕಡೆಯೂ ಇರುವ ಕೊಬ್ಬನ್ನು ಅಂತಶ್ಶಕ್ತಿಗಳು ಸೇವಿಸುತ್ತಿರುವುವು. ಆದುದರಿಂದ ಆಹಾರವಿಲ್ಲದೆಯೂ ಕೆಲಕಾಲ ಜೀವಿಸಿರಬಹುದು. ಆದರಂತೆ ನಿದ್ರೆಯನ್ನು ಬಿಟ್ಟು ಬದುಕಿರುವುದಕ್ಕಾಗುವುದಿಲ್ಲ. ಆಹಾರಕ್ಕೆ ಪ್ರತಿಯಾಗಿ ದೇಹದ ಕೊಬ್ಬು ಉಪಯೋಗಕ್ಕೆ ಬರುವಂತೆ ನಿದ್ರೆಯನ್ನು ಬಿಟ್ಟರೆ ಅದಕ್ಕೆ ಪ್ರತಿಯಾಗಿ ಮತ್ತೊಂದು ವಸ್ತುವು ಅದರ ಅಭಾವವನ್ನು ಪೂರ್ತಿಗೊಳಿಸತಕ್ಕದು ನಮ್ಮಲ್ಲಾವುದೂ ಇಲ್ಲ. ನಿದ್ರೆಯಿಲ್ಲದೆ ಹೋಗುವುದರಿಂದ ಉಂಟಾಗುವ ಮಾರ್ಪು ಕೂಡಲೇ ದೇಹದಲ್ಲಿ ವ್ಯಕ್ತವಾಗುವುದು. ಮುಖವು ಬಿಳಿಚಿಕೊಳ್ಳುವುದು. ಕೆಲಕಾಲ ಹಾಗೆಯೇ ನಿದ್ರೆಕೆಡುತ್ತಾ ಬಂದರೆ ರಕ್ತದಲ್ಲಿ ಮಾರ್ಪುಂಟಾಗುವುದು. ಅದರಿಂದ ಒಂದುತೆರದ ರೋಗವು ಹುಟ್ಟುವುದು, ಅದೇ ರಕ್ತಕ್ಷೀಣತೆ. ನಿದ್ರೆಯಿಂದ ಶರೀರದಲ್ಲಿ ನೂತನಾಣುಗಳು ನಿರ್ಮಿತವಾಗಿ, ವೆಚ್ಚವಾಗಿಹೋಗುತ್ತಿರುವ ದೇಹಶಕ್ತಿಯು ಮತ್ತೆ ಕೂಡಿಕೊಳ್ಳಲವಕಾಶವಾಗುವುದು. ಯುಕ್ತವಯಸ್ಸು ಬಂದವರು ಹಗಲುಹೊತ್ತು ಕೆಲಸಮಾಡುವುದರಿಂದ ಶಾರೀರಕ ಮಾನಸಿಕ ಪರಿಶ್ರಮಗಳಿಂದ ದೇಹಶಕ್ತಿಯು ಪ್ರತಿಕ್ಷಣದಲ್ಲೂ ಹೆಚ್ಚು ವೆಚ್ಚವಾಗಿ ಹೋಗುತ್ತಿರುವುದು. ಶಕ್ತಿಯ ಪುನರ್ನಿರ್ಮಾಣವು ಮಂದವಾಗಿರುವುದು. ರಾತ್ರಿಯಹೊತ್ತು ನಿದ್ರೆಮಾಡುವುದರಿಂದ ಶಕ್ತಿನಿರ್ಮಾಣವು ಹೆಚ್ಚಾಗಿಯೂ ಶಕ್ತಿವ್ಯಯವು ಬಹಳ ಕಡಿಮೆಯಾಗಿಯೂ ಆಗುತ್ತಿರುವುದು. ನಿದ್ರೆಯಲ್ಲಿ ಗುಂಡಿಗೆಯು ಬಹಳಮೆಲ್ಲಗೆ ಹೊಡೆದುಕೊಳ್ಳುತ್ತಿರುವುದು. ಅದರಿಂದ ಶ್ವಾಸವುಕೂಡ ಮೆಲ್ಲಗೆ ನಡೆಯುತ್ತಿರುವುದು. ಅನ್ನಕೋಶ ಮೊದಲಾದ ಎಲ್ಲ ಅವಯವಗಳೂ ಬಹಳ ಸ್ವಲ್ಪ ಕೆಲಸ ಮಾಡುವುವು. ಆದುಕಾರಣ ಹೊಟ್ಟೆತುಂಬಾ ಊಟಮಾಡಿದ ಕೂಡಲೇ ನಿದ್ರೆಮಾಡಕೂಡದು. ಅನ್ನಕೋಶ ಮಲಕೋಶಗಳು ಸರಿಯಾದ ಸ್ಥಿತಿಯಲ್ಲಿಲ್ಲದಿದ್ದರೆ ನಿದ್ರೆಯು ಸರಿಯಾಗಿ ಬರುವುದಿಲ್ಲ. ಸ್ವಪ್ನಗಳು ಹೆಚ್ಚಾಗಿ ಬೀಳುವುವು ಅನ್ನವನ್ನು ಜೀರ್ಣಗೊಳಿಸುವ ಭಾಗಗಳಿಗೂ ಮೆದುಳಿಗೂ ಸಂಬಂಧವಿರುವುದು. ಅಜೀರ್ಣವಾಗಿದ್ದರೆ ಮೆದುಳಿಗೆ ಉಷ್ಣವು ಹೆಚ್ಚುವುದು. ನಿದ್ರೆಯು ಗಾಢವಾಗಿ ಬರುವುದಿಲ್ಲ.

ನಿದ್ರೆಯಿಂದ ಬಾಹ್ಯೇಂದ್ರಿಯಗಳಿಗೂ ಸ್ನಾಯುಗಳಿಗೂ ಮಾತ್ರವೇ ಅಲ್ಲದೆ ಅಂತರಿಂದ್ರಿಯಗಳಿಗೂ ಶಕ್ತಿಗಳಿಗೂ ಕೂಡ ವಿಶ್ರಾಂತಿಯುಂಟಾಗುವುದು. ಮನಸ್ಸಿಗೂ ವಿಶ್ರಾಂತಿಯುಂಟಾಗುವುದು. ಮನಸ್ಸು ಸಬಲವಾಗುವುದು. ನಿದ್ರೆಹೋಗುವುದಕ್ಕೆ ಮುಂಚೆ ನಮ್ಮ ಮನಸ್ಸನ್ನು ಕೊರೆಯುತ್ತಿದ್ದ ಸಂಶಯಗಳೆಲ್ಲಾ ನಿದ್ರೆಮಾಡಿಕೊಂಡು ಎದ್ದಬಳಿಕ ಪೂರ್ತಿಯಾಗಿ ತೊಲಗಿಹೋಗಿರುವುವು. ಗಾಢನಿದ್ರೆಯಲ್ಲಿರುವವರು ಆಕಸ್ಮಿಕಧ್ವನಿಗಳನ್ನು (ಅಲಾರಂಧ್ವನಿ) ಇತ್ಯಾದಿಗಳನ್ನು ಕೇಳಿ ಥಟ್ಟನೆ ಏಳುವುದು ಅಯುಕ್ತವು. ಮತ್ತು ಅಕ್ರಮವು. ಎಚ್ಚರು ಒಳಗಿನಿಂದ ಉಂಟಾಗಬೇಕೇ ಹೊರತು ಹೊರಗಣಿಂದ ಉಂಟಾಗಬಾರದು. ದೇಹಶಕ್ತಿಗೆ ವಿಶ್ರಾಂತಿ (ನಿದ್ರೆಯು) ಎಷ್ಟು ಅವಶ್ಯಕವೆಂಬುದು ಉದ್ಬೋಧನಶಕ್ತಿ (ಎಚ್ಚರಿಸುವಿಕೆ) ಗೆ ಗೊತ್ತುಂಟು. ಅವಶ್ಯಕವಾದಷ್ಟು ಹೊತ್ತು ನಿದ್ರೆಯಾದಬಳಿಕ ಆ ಶಕ್ತಿಯೇ ಎಚ್ಚರನ್ನು ಮಾಡುವುದು. ಸಾಧಾರಣವಾಗಿ ಸ್ತ್ರೀಯರಿಗೂ ಪುರುಷರಿಗೂ ೭-೮ ಗಂಟೆಗಳಕಾಲ ಗಾಢನಿದ್ರೆಯನ್ನು ಮಾಡುವುದು ಅವಶ್ಯಕವು. ನಾವು ಮಲಗಿರುವಷ್ಟೂ ಉತ್ತಮವಾದ ನಿದ್ರೆಯೆನಿಸಿಕೊಳ್ಳುವುದಿಲ್ಲ. ಕೆಲರು ರಾತ್ರಿಯೆಲ್ಲಾ ಮಲಗಿದ್ದರೂ ಅವರಿಗೆ ಉತ್ತಮವಾದ ನಿದ್ರೆಯು ಲೇಶವೂ ಹತ್ತಿರುವುದಿಲ್ಲ. ಕೆಲರು ೩-೪ ಗಂಟೆ ಹೊತ್ತು ಮಲಗಿದ್ದರೂ ಗಾಢನಿದ್ರೆಗೊಳ್ಳುವರು. ಆದುಕಾರಣ ನಿದ್ರೆಯ ಪರಿಮಿತಿಯನ್ನು ಗಂಟೆಗಳನ್ನನುಸರಿಸಿ ನಿರ್ಣಯಿಸಲಾಗುವುದಿಲ್ಲ. ಕೆಲರು ರಾತ್ರಿಯೆಲ್ಲಾ ಎಚ್ಚರುಗೊಂಡಿದ್ದು ಹಗಲಹೊತ್ತು ನಿದ್ರೆಮಾಡುವರು. ಅವರಿಗೆ ಆ ನಿದ್ರೆಯು ಪ್ರಯೋಜನವಾದುದಲ್ಲ, ಅದು ಎಚ್ಚರವಾಗಿದ್ದಂತೆಯೇ ಸರಿ. ಅಂಥವರಿಗೆ ರಾತ್ರಿಯೂ ಹಗಲೂ ಎರಡೂ ಒಂದೇ. ಅವರು ಸುಮ್ಮನೆ ನಿದ್ರೆಮಾಡಿದೆವೆಂದು ತಿಳಿದುಕೊಂಡರೂ ಅವರು ಮಲಗಿದ್ದಾಗ ಅತ್ತಿಂದಿತ್ತ ಹೊರಳಾಡುತ್ತಿರುವುದೇ ಸರಿ. ಕೆಲತಿಂಗಳು ಹೀಗೆಯೇಮಾಡಿದರೆ ಅವರ ಆರೋಗ್ಯಕ್ಕೆಭಂಗವುಂಟಾಗುವುದು.

ನಿದ್ರೆಯಿಂದ ಮಾನಸಿಕ ನೈತಿಕಶಕ್ತಿಗಳು ವಿಕಾಸಗೊಳ್ಳುವುವು. ಸಂಕಲ್ಪಶಕ್ತಿಯು ವೃದ್ಧಿಹೊಂದುವುದು. ಹಗಲೆಲ್ಲಾ ಕೆಲಸಮಾಡಿ ಬಳಲಿಹೋದ ಬಳಿಕ ಸಾಯಂಕಾಲವಾಗುತ್ತಲೂ ಎಂಥ ಅಕೃತ್ಯವನ್ನು ಮಾಡುವುದಕ್ಕೂ ಹಿಂದೆಗೆಯದಿರುವ ಸ್ತ್ರೀ ಪುರುಷರುಸುದಾ ರಾತ್ರಿಯಲ್ಲಿ ಹಾಯವಾಗಿ ನಿದ್ರೆಮಾಡಿ ಬೆಳಗ್ಗೆ ಎದ್ದ ಬಳಿಕ ಕಳೆದ ಸಾಯಂಕಾಲದಲ್ಲಿ ತಾವು ತಡೆಯಿಲ್ಲದೆ ಮಾಡಿದ ಅಕೃತ್ಯವನ್ನು ಮತ್ತೆ ಮಾಡಬೇಕೆಂದರೆ ಅದು ಅವರಿಗೇ ಅಸಹ್ಯಕರವಾಗಿ ಕಾಣುವುದು.

ಕೆಲ ಮಕ್ಕಳು ರಾತ್ರಿಹೊತ್ತು ಹಾಸುಗೆಮೇಲೆ ಅಚಲವಾಗಿ ಮಲಗಿಕೊಳ್ಳದೆ ಒದೆದಾಡಿ ಹೊರಳುತ್ತಿರುವರು. ಅವರು ಭಯಗ್ರಸ್ತರೋ ಅಥವಾ ಇನ್ನಾವ ತೆರದ ಮಾನಸಿಕೋದ್ವೇಗವುಳ್ಳವರೋ ಆಗಿರುವರು. ಮಲಬದ್ಧ ಅಜೀರ್ಣ ಈ ದೋಷಗಳುಳ್ಳವರು ಭೋಜನಮಾಡಿದ ಕೂಡಲೇ ಮಲಗಿಕೊಳ್ಳಬಾರದು. ಅಚಲವಾಗಿ ಮನಸ್ಸನ್ನೊಂದುಕಡೆಯೇ ನಿಲ್ಲಿಸಿ ಚದುರಂಗ ಮೊದಲಾದ ಆಟಗಳನ್ನಾಡಿದವರು ಆಡಿ ಮುಗಿದೊಡನೆಯೇ ಮಲಗಿಕೊಳ್ಳಬಾರದು. ಮಲಗುವ ಮನೆಯ ಕಿಟಕಿಗಳನ್ನೆಲ್ಲಾ ಮುಚ್ಚಿಕೊಂಡಾಗಲಿ ಮುಖದ ಮೇಲೆ ದುಪ್ಪಟಿಯನ್ನು ಹೊದೆದಾಗಲೀ ನಿದ್ರಿಸಬಾರದು. ಈ ಪದ್ಧತಿಯು ಮಕ್ಕಳಿಗೂ ಮುಖ್ಯವಾಗಿ ಮಾನಸಿಕೋದ್ವೇಗವುಳ್ಳವರಿಗೂ ಕೂಡಲೇ ಕೂಡದು. ಅರ್ಧ ರಾತ್ರಿಗೆ ಮುಂಚೆ ಮಾಡುವ ನಿದ್ರೆಯ ಪ್ರಯೋಜನವು ಅರ್ಧ ರಾತ್ರಿಯಾದನಂತರ ಮಾಡುವ ನಿದ್ರೆಯಿಂದ ಲಭಿಸದು.

ನಿರ್ಮಲವಾಗಿರುವ ಕೊಟ್ಟಡಿಯ ಕಿಟಕಿಗಳ ಬಾಗಿಲನ್ನೆಲ್ಲಾ ತೆರೆದುಬಿಟ್ಟು ಮಲಗಿಕೊಳ್ಳುವ ಪದ್ಧತಿಯನ್ನಿಡಬೇಕು. ಆದರೆ ಕಿಟಕಿಯಿಂದ ಬೀಸುವ ಗಾಳಿಯು ದೇಹದ ಮೇಲೆ ನೇರವಾಗಿ ಬೀಳುವಂತಿರಬಾರದು. ಊರಿನ ಸದ್ದಿನಿಂದ ನಿದ್ರಾಭಂಗವಾಗುವುದೆಂಬ ಕಾರಣದಿಂದ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿ ಮಲಗಬಾರದು. ಅಂಥ ಸಂದರ್ಭದಲ್ಲಿ ಕಿವಿಗಳಿಗೆ ಅರಳೆಯನ್ನು ತುರುಕಿ ಮಲಗಿಕೊಳ್ಳಬೇಕು. ಕೆಲರಿಗೆ ರಾತ್ರಿಯೆಲ್ಲಾ ನಿದ್ರೆಹತ್ತದೆ ಹೊರಳಾಡುತ್ತ ಏನೇನೋ ಉಪಚಾರಗಳನ್ನು ಮಾಡಿಕೊಳ್ಳುತ್ತ ಗುಣಗುಟ್ಟಿಕೊಳ್ಳುತ್ತ ಎಂದಿಗೆ ಬೆಳಗಾಗುವುದೋ ಎಂದು ಯೋಚಿಸುತ್ತ ರಾತ್ರಿಯನ್ನು ನೂಕುತ್ತಿರುತ್ತಾರೆ. ಅಂಥವರು ಹಾಸುಗೆಯಿಂದ ಏಳುವಾಗ್ಗೆ ಬಹಳ ನೀರಸವಾಗಿರುವರು. ಅವರುಗಳು ರಾತ್ರಿಯ ಹೊತ್ತು ಬೇಗನೆ ಊಟ ಮಾಡಬೇಕು. ಟೀ ಕಾಫಿ ಮೊದಲಾದುವುಗಳನ್ನು ಕುಡಿಯಕೂಡದು. ಮನಸ್ಸಿಗೆ ಚಿಂತೆ ಕೋಪ ಮೊದಲಾದುವುಗಳ ಭಾರವನ್ನು ಹಚ್ಚಿಕೊಳ್ಳಲಾಗದು. ಯಾವ ವಿಷಯದ ಆಲೋಚನೆಯನ್ನೂ ಇಟ್ಟುಕೊಳ್ಳಬಾರದು. ನಿದ್ರೆ ಮಾಡಬೇಕೆಂಬುದರ ಹೊರತು ಮತ್ತಾವ ಯೋಚನೆಯೂ ಇರಬಾರದು. ೪ ಗಂಟೆಗೋ ೫ ಗಂಟೆಗೋ ಏಳಬೇಕೆಂಬ ಸಂಕಲ್ಪವಿಟ್ಟುಕೊಂಡು ನಿಶ್ಚಿಂತೆಯಿಂದ ಮಲಗಿದರೆ ಅಷ್ಟು ಹೊತ್ತಿಗೆ ಸರಿಯಾಗಿ ಎಚ್ಚರಾಗುವುದು; ಗಾಢನಿದ್ರೆಯೂ ಹತ್ತುವುದು. ಮಲಗುವುದಕ್ಕೆ ಮುಂಚೆ ಸ್ವಲ್ಪ ಹೊತ್ತು ನಿರ್ಮಲವಾದ ಗಾಳಿಯಲ್ಲಿ ತಿರುಗಾಡಿ ಮಲಗಿದರೆ ಸ್ವಪ್ನವಿಲ್ಲದ ನಿದ್ರೆ ಹತ್ತುವುದು. ಮಧ್ಯೆ ಎಚ್ಚರಾಗಿ ಮರಳಿ ನಿದ್ರೆ ಹತ್ತದಿದ್ದರೆ ಆಗಲೂ ಸ್ವಲ್ಪ ಹೊತ್ತು ಶತಪಥ ಮಾಡಿ ಸ್ವಲ್ಪ ಸಿಹಿನೀರನ್ನು ಕುಡಿದು ಮಲಗಿದರೆ ನಿದ್ರೆ ಹತ್ತುವುದು.

ನಿದ್ರೆ ಸರಿಯಾಗಿ ಹತ್ತದಿರುವುದು, ನಿದ್ರೆಯಲ್ಲಿ ಕನವರಿಸುವುದು, ಸ್ವಪ್ನ ಬೀಳುವುದು, ನಿದ್ರೆಯಲ್ಲೇ ಎದ್ದು ತಿರುಗಾಡುವುದು-ಇತ್ಯಾದಿ ದೋಷಗಳು ಚೆನ್ನಾಗಿ ಕಾಯಕಷ್ಟಪಟ್ಟು ಜೀವಿಸುವ ಕೂಲಿ ಜನರಿಗೆ ಸಾಮಾನ್ಯವಾಗಿ ಇರುವುದೇ ಇಲ್ಲ. ಹೆಚ್ಚಾಗಿ ಮೆದುಳಿನ ಕೆಲಸ ಮಾಡುವವರಿಗೂ ಒಂದು ಕಡೆಯೇ ಕುಳಿತಿರುವವರಿಗೂ ಒಂದು ಗೊತ್ತಾದ ಕೆಲಸವೇ ಇಲ್ಲದವರಿಗೂ ನಿದ್ರೆಯು ಸರಿಯಾಗಿ ಹತ್ತುವುದಿಲ್ಲ. ಅಂಥವರು ಸ್ವಲ್ಪ ದೇಹಶ್ರಮದ ಕೆಲಸಗಳನ್ನು ಮಾಡುತ್ತ ಬಂದರೆ ನಿದ್ರೆ ಹತ್ತುವುದು. ಬಹಳ ಹೊತ್ತು ಮನಸ್ಸಿನ ಯೋಚನೆಯ ಕೆಲಸವನ್ನು ಮಾಡಿ ನರಗಳು ಬಳಲಿರುವವರು ಸ್ವಲ್ಪ ಹೊತ್ತು ಊರಹೊರಗಣ ನಿರ್ಮಲವಾಯುವಿನಲ್ಲಿ ಪಾದಚಾರಿಗಳಾಗಿಯೋ ರಥಾರೂಢರಾಗಿಯೋ ಸಂಚರಿಸಿ ಬಂದರೆ ರಾತ್ರಿ ಸುಖನಿದ್ರೆ ಬರುವುದು.

ಭರತಖಂಡದ ವೃತ್ತಾಂತಗಳ.

ಬೊಂಬಾಯಿ ಬ್ಯಾಂಕಿನಲ್ಲಿ ೧೬ ಲಕ್ಷ ರೂ.ಗಳು ಅಪಹರಿಸಲ್ಪಟ್ಟಿವೆ.

ಬೊಂಬಾಯಿ ಅಧಿಪತ್ಯದಲ್ಲಿ ಕಳೆದ ವರ್ಷ ಸರ್ಪ ಕಚ್ಚುದುದರಿಂದ ೧೩೪೯ ಮಂದಿಗಳೂ ಕ್ರೂರಜಂತುಗಳಿಂದ ೫೪ ಮಂದಿಯೂ ಮೃತರಾದರು.

ಧಾರವಾಡದ ಪ್ರಾಂತದಲ್ಲಿ ಮಳೆಯು ಹೆಚ್ಚಾಗಿ ಸುರಿದು ೪ ದಿನ ತೆರವು ಕೊಟ್ಟರೆ ಸಾಕೆನ್ನಿಸಿಬಿಟ್ಟಿದೆ. ವ್ಯವಸಾಯ ಕಾರ್ಯಗಳಿಗೆ ಅನುಕೂಲವಾಗಿದೆ.

ಬರ್ಮಾದ ರಂಗೂನ್ ಪಟ್ಟಣದಲ್ಲಿ ನದಿಯ ಮಗ್ಗುಲ ಕಟ್ಟೆಯಲ್ಲಿ ಇಲಿಗಳು ಕನ್ನವನ್ನು ತೋಡಿದ್ದುದರಿಂದ ಕಟ್ಟೆಯು ಒಡೆದು ೮೦೦೦ ಎಕರೆ ಭೂಮಿಗಳ ಪೈರು ಹಾಳಾಗಿರುವುದು. ವಿಪರೀತ ನಷ್ಟವಾದಂತೆ ವರ್ತಮಾನ ಬಂದಿದೆ.

ಬೊಂಬಾಯಿಯ ಸ್ವರಾಜ್ಯ ಸಂಘದವರು ಈ ತಿಂಗಳು ತಾ|| ೨೯ರಲ್ಲಿ ಬೊಂಬಾಯಿ ಪಟ್ಟಣದೊಳಗೆ ಆನಿಬೆಸೆಂಟಮ್ಮನವರ ಅಧ್ಯಕ್ಷತೆಯಿಂದ ಒಂದು ಸಭೆಯನ್ನು ನಡೆಯಿಸುವರು. ಜಮ್ನಾದಾಸ್ ದ್ವಾರಕದಾಸ್‌ರವರು ಆಹ್ವಾನ ಸಂಘಾಧ್ಯಕ್ಷರಾಗಿರುವರು.

ಗೋರಕ್ಷಣಾರ್ಥವಾಗಿ ಪ್ರಬಲವಾದ ಯಾವ ಏರ್ಪಾಟನ್ನು ಮಾಡಬೇಕೆಂಬುದನ್ನು ಪರ್ಯಾಲೋಚಿಸುವುದಕ್ಕಾಗಿ ಪಂಡಿತ ಮದನಮೋಹನ ಮಾಳವ್ಯರವರ ಅಧ್ಯಕ್ಷತೆಯಿಂದ ಇದೇ ತಿಂಗಳು ತಾ|| ೨೬ರಲ್ಲಿ ಮಥುರಾ ಬೃಂದಾವನದೊಳಗೆ ಯಾವದ್ಭಾರತ ಹಿಂದೂ ಮಹಾಸಭೆಯು ಕೂಡುತ್ತದೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ಭರತಖಂಡದಲ್ಲಿ ಯಾವ ಯಾವ ಸ್ಥಳಗಳಿಗೆ ದಯಮಾಡಿಸುವರೋ ಅವುಗಳನ್ನೆಲ್ಲಾ ಮುಂದಾಗಿ ನೋಡಿಕೊಂಡು ಹೋಗುವುದಕ್ಕಾಗಿ ಅವರ ಸೈನಿಕ ಮತ್ತು ಸಹಾಯಕ ಕಾರ್ಯದರ್ಶಿಗಳು ಈ ತಿಂಗಳು ತಾ|| ೧೦ ರಿಂದ ಸೆಪ್ಟಂಬರ್ ೨೦ ರ ವರೆಗೆ ಸಂಚರಿಸುವರು.

ಮುದ್ರಣಶಾಸನ ರೌಲಟ್‌ಶಾಸನ ಮೊದಲಾದುವನ್ನು ಸಂಪೂರ್ಣವಾಗಿ ತೆಗೆದುಬಿಡಬೇಕೆ? ಅಥವಾ ಇನ್ನೇನಾದರೂ ಸಂಸ್ಕರಣವನ್ನು ಮಾಡಬೇಕೆ? ಎಂಬ ವಿಷಯವನ್ನು ಕುರಿತು ಪರ್ಯಾಲೋಚಿಸುವುದಕ್ಕಾಗಿ ಭರತಖಂಡ ಪ್ರಭುತ್ವದಿಂದ ಏರ್ಪಡಿಸಲ್ಪಟ್ಟಿದ್ದ ಉಪಸಂಘದವರು ಮುದ್ರಣಶಾಸನವನ್ನೂ ಅವರ ಜತೆಗೆ ರೌಲಟ್‌ಶಾಸನವನ್ನೂ ತೆಗೆದುಬಿಡಬೇಕೆಂದು ಸೂಚಿಸಿರುವುದಾಗಿ ಪ್ರಕಟವಾಗಿದೆ.

ಮದ್ರಾಸು ಅಧಿಪತ್ಯದಲ್ಲಿ ಕಳೆದ ೧೦ ವರ್ಷಗಳಿಂದಲೂ ವ್ಯವಸಾಯ ಶಾಖೆಯ ಡೈರೆಕ್ಟರಾಗಿದ್ದ ಜಿ. ಎ. ಡಿ. ಸ್ಟ್ಯುಯರ್ಟ್ ಐ.ಸಿ.ಎಸ್. ರವರು ಕಳೆದ ಸೋಮವಾರ ಬೆಳಗ್ಗೆ ರಿವಾಲ್ವರ್ ಗುಂಡಿನಿಂದ ಆತ್ಮಹತ್ಯಮಾಡಿಕೊಂಡರು. ಇವರು ಹೃದಯರೋಗದಿಂದ ಬಹಳ ಬಾಧೆಯನ್ನು ಅನುಭವಿಸುತ್ತಿದ್ದು ಮನಸ್ಸು ಅಸ್ವಸ್ಥವಾಗಿರುವಾಗ ರಿವಾಲ್ವರಿನಿಂದ ಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡರೆಂದು ಪಂಚಾಯಿತಿದಾರರು ತೀರ್ಮಾನಿಸಿರುವರು.

ಕರಾಚಿಪ್ರಾಂತದಲ್ಲಿ ವಿಪರೀತ ಮಳೆ ಸುರಿದು ಮಾಲೀರು ನದಿಯಲ್ಲಿ ಮಹಾ ಪ್ರವಾಹ ಬಂದು ಅನೇಕ ಗ್ರಾಮಗಳು ಕೊಚ್ಚಿಹೋದುವು. ಬಹಳ ಪಶುಗಳು ಸತ್ತವು. ಕೆಲ ಜನರೂ ಮುಳುಗಿಹೋದರು. ಅನೇಕ ಪ್ರಜೆಗಳಿಗೆ ನಿಲ್ಲಲು ಮನೆಯಿಲ್ಲವಾಗಿದೆ. ಪೈರುಪಚ್ಚೆಯಿಂದ ತುಂಬಿದ್ದ ಹೊಲಗದ್ದೆಗಳೆಲ್ಲಾ ಹಾಳಾದುವು. ಹೊಳೆಯ ದಡದಮೇಲೆ ಕಾಲು ಮೈಲಿಯವರೆಗೂ ಮಳಲು ಕೊಚ್ಚಿ ಬಂದು ಹೆಪ್ಪುಗಟ್ಟಿ ದಿಬ್ಬಮಾಡಿದೆ. ವ್ಯವಸಾಯಗಾರರು ಹಲವರು ನಿರ್ಗತಿಕರಾದರು. ಅವರಿಗೆ ಸಹಾಯಮಾಡಲು ಸರ್ಕಾರದವರೂ ಪ್ರಜೆಗಳೂ ಪ್ರಯತ್ನಪಟ್ಟಿದ್ದಾರೆ.

ಕಳೆದವಾರ ಒಂದು ದಿನ ಲಾಲಾಲಜಪತಿರಾಯರೂ ಒಂದು ದಿನ ಪಂಡಿತ ಮದನಮೋಹನ ಮಾಳವ್ಯರವರೂ ಸಹ ಪುನಾಪಟ್ಟಣಕ್ಕೆ ಹೋಗಿದ್ದರು. ಉಪನ್ಯಾಸಗಳನ್ನು ಮಾಡಿದಾಗ್ಗೆ ವಿದೇಶ ವಸ್ತ್ರಗಳನ್ನು ಸುಟ್ಟುಬಿಡಬೇಕೆಂದು ಲಾಲಾರವರು ಹೇಳಿ ಸೂಚಿಸಿದರು. ಮಾಳವ್ಯರವರು ಎಷ್ಟೋ ಬೆಲೆಕೊಟ್ಟು ತೆಗೆದುಕೊಂಡಿರುವ ವಿದೇಶೀಯ ವಸ್ತ್ರಗಳನ್ನು ಸುಟ್ಟು ಹಾಳ್ಮಾಡುವುದಕ್ಕಿಂತಲೂ ಮೈಗೆ ಬಟ್ಟೆಯೇ ಇಲ್ಲದೆ ಅಲೆಯುತ್ತಿರುವ ಬಡಬಗ್ಗರಿಗೆ ದಾನಮಾಡಿ ಬಿಡುವುದು ಯುಕ್ತವೆಂದು ಭಾಷಣಮಾಡಿದರು. ಉಗ್ರವಾದಿ ಮಿತವಾದಿಗಳ ನಡೆನುಡಿಯಲ್ಲಿ ಇಷ್ಟು ವ್ಯತ್ಯಾಸವಿದೆ.

೩ನೆ ತರಗತಿ ರೈಲ್ವೆ ಪ್ರಯಾಣಿಕರು ಅನುಭವಿಸುತ್ತಿರುವ ಕಷ್ಟಗಳನ್ನು ನಿವಾರಿಸುವ ಉದ್ದೇಶದಿಂದಲೇ ಲಕ್ನೋಪಟ್ಟಣದಲ್ಲಿ "ರೈಲ್ವೆ ಕಷ್ಟನಿವಾರಕಸಮಿತಿ" ಎಂಬ ಹೆಸರಿನಿಂದ ಒಂದು ಸಂಘವು ಸ್ಥಾಪಿಸಲ್ಪಟ್ಟಿದೆ. ಪ್ರಜೆಗಳ ಕಷ್ಟಗಳನ್ನು ವಿಚಾರಿಸಿ ಅವನ್ನು ಅಧಿಕಾರಿಗಳಿಗೆ ತಿಳಿಯಪಡಿಸಿ ನ್ಯಾಯವನ್ನು ಮಾಡಿಸುವುದೇ ಸಮಿತಿಯ ಸಂಕಲ್ಪವಾಗಿದೆ. ಈ ಉದ್ದೇಶವು ಸಫಲವಾಗಬೇಕಾದರೆ ಉತ್ಸಾಹವುಳ್ಳ ಸ್ವಚ್ಛಂದಸೇವಕರೂ ಧನಸಹಾಯ್ಯವೂ ಬೇಕಾಗಿರುತ್ತದೆ. ಯಾವ ತೆರದಿಂದಲಾದರೂ ಆ ಪ್ರಯತ್ನಕ್ಕೆ ಸಹಾಯಮಾಡಬೇಕೆನ್ನುವವರು ಸಮಿತಿಯ ಕಾರ್ಯದರ್ಶಿಗಳಾದ ರಾಮಸ್ವರೂಪ ಶರ್ಮರವರಿಗೆ ಬರೆದುಕೊಂಡರೆ ವಿವರವು ತಿಳಿಯುವುದು.

"ನೀವು ವಿದೇಶ ವಸ್ತ್ರ ಬಹಿಷ್ಕಾರವನ್ನು ಕುರಿತ ತೀರ್ಮಾನವನ್ನು ತೆಗೆದುಹಾಕಬೇಕು. ನಮಗೆ ಸಲ್ಲಿಸಬೇಕಾದ ಹಣವನ್ನು ಕೂಡಲೇ ಸಲ್ಲಿಸಬೇಕು. ಇಲ್ಲದೆಹೋದರೆ ಎಕ್ಸ್‌ಛೇಂಜ್ ವಿಷಯವನ್ನು ಕುರಿತು ನಾವು ಆಲೋಚಿಸುವುದಿಲ್ಲ" ಎಂದು ಮಾಂಚೆಸ್ಟರ್ ಪಟ್ಟಣದ ವರ್ತಕಸಂಘದವರು ದಿಲ್ಲಿಯ ವಿದೇಶ ವಸ್ತ್ರ ವ್ಯಾಪಾರ ಸಂಘದವರಿಗೆ ತಂತೀವಾರ್ತೆಯನ್ನು ಕಳುಹಿಸಿದರು. ಅದಕ್ಕೆ ಇವರು— "ನೀವು ಸುಮ್ಮನೆ ಆಲಸ್ಯಮಾಡುವುದು ಸರಿಯಲ್ಲ. ಇದುವರೆಗೆ ಯಾವ ಸಂಘವೂ ವಿದೇಶ ವಸ್ತ್ರ ಬಹಿಷ್ಕರಣದ ತೀರ್ಮಾನವನ್ನು ಮಾಡಿಲ್ಲ. ದಿಲ್ಲಿಯ ಬಟ್ಟೆ ಕಂಟ್ರಾಕ್ಟುಗಳನ್ನು ಸಮಾಧಾನಕರವಾಗಿ ಪರಿಷ್ಕರಿಸಬೇಕು. ೩ ಷಿಲ್ಲಿಂಗುಗಳ ತೀರ್ಮಾನವನ್ನು ಇದುವರೆಗೆ ಎಷ್ಟೋ ಸಲ ಖಂಡಿಸಿರುವೆವು" ಎಂದು ಪ್ರತ್ಯುತ್ತರ ಕೊಟ್ಟಿರುವರು.

ಹಿಂದೆ ಮದ್ರಾಸು ಹೈಕೋರ್ಟಿನ ಜಡ್ಜರಾಗಿದ್ದು ಈಗ ಸಾಮ್ರಾಜ್ಯ ಶಾಸನ ಸಭೆಯಲ್ಲಿ ಸಭಿಕರಾಗಿರುವ ಟಿ. ವಿ. ಶೇಷಗಿರಿಅಯ್ಯರವರು ವಾರಸ್ ಹಕ್ಕುಗಳನ್ನು ಕುರಿತು ಸಿವಿಲ್ ಲಾದಲ್ಲಿ ಕೆಲ ಮುಖ್ಯವಾದ ಮಾರ್ಪುಗಳನ್ನು ಮಾಡಬೇಕೆಂಬ ವಿಷಯದ ಬಿಲ್ಲನ್ನು ಸಾಮ್ರಾಜ್ಯಶಾಸನಸಭೆಯ ಮುಂದಿಡುವುದಕ್ಕೆ ವೈಸ್ರಾಯರ ಒಪ್ಪಿಗೆಯನ್ನು ಪಡೆದಿದ್ದಾರೆ. ಆ ಬಿಲ್ಲಿನ ವಿವರವೇನೆಂದರೆ--ಗಂಡಸು ವಾರಸಾರರಿಲ್ಲದಿದ್ದರೆ ದಾಯಾದಿಗಳಿಗೆ ಸೊತ್ತಿನ ಹಕ್ಕು ಹೇಗೆ ಇರುವುದೋ ಹಾಗೆ ಹೆಣ್ಣುಮಕ್ಕಳು ಅವರ ಮಕ್ಕಳು ಮೊಮ್ಮಕ್ಕಳು ಅಕ್ಕತಂಗಿಯರು, ಸವತಿಯ ಅಕ್ಕತಂಗಿಯರು, ಸವತಿಯ ತಾಯಿ ಇವರಿಗೆಲ್ಲಾ ಆಸ್ತಿಯ ಹಕ್ಕಿರಬೇಕು. ಮತ್ತು ಕಿವುಡರು ಮೂಗರು ಕುಂಟರು ಮೊದಲಾದ ವಿಕಲಾಂಗರಿಗೆ ಪಿತ್ರಾರ್ಜಿತ ಆಸ್ತಿಯ ಹಕ್ಕಿಲ್ಲವೆಂಬ ನಿಬಂಧನೆಯನ್ನು ತೆಗೆದುಹಾಕಬೇಕು. ಅವರಿಗೇ ಮುಖ್ಯವಾಗಿ ಆಸ್ತಿಯ ಹಕ್ಕಿರಬೇಕು. ದತ್ತಸ್ವೀಕಾರವಿಷಯದಲ್ಲಿ ವಿತಂತುಗಳು ಭರ್ತನ ಅಪ್ಪಣೆಯಿಲ್ಲದಿದ್ದರೆ ದಾಯಾದಿಗಳ ಅನುಮತಿಯನ್ನು ಪಡೆಯಬೇಕೆಂಬ ನಿಬಂಧನೆಯನ್ನು ತಪ್ಪಿಸಬೇಕು. ಇತ್ಯಾದಿ.

ಧಾರವಾಡದಲ್ಲಿ ಆದ ಗದ್ದಲದ ಸಂಬಂಧದಲ್ಲಿ ನಡೆಯುತ್ತಿದ್ದ ವ್ಯಾಜ್ಯದ ವಿಚಾರಣೆಯು ಕಳೆದ ತಾ|| ೪ಕ್ಕೆ ಮುಗಿಯಿತು. ಒಟ್ಟು ಇದ್ದ ೨೯ ಮಂದಿ ಅಪರಾಧಾರೋಪಿತರಲ್ಲಿ ಮ|| ಕೃಷ್ಣರಾವ್ ಮುದವೇಡಕರ ಮತ್ತು ಮಿ|| ಅಬ್ದುಲ್‌ಖಾದರ್ ಲಂಗೋಟಿ ಇವರಿಬ್ಬರನ್ನು ನಿರ್ದೋಷಿಗಳೆಂದು ಹೇಳಿ ಉಳಿದ ೨೭ ಮಂದಿಗಳ ಮೇಲೆ ಖೂನಿಮಾಡಲು ಪ್ರಯತ್ನಿಸಿದುದು, ಬೆಂಕಿಹಚ್ಚುವುದು, ಸೂರೆಮಾಡುವುದು ಇತ್ಯಾದಿ ಅಪರಾಧಗಳನ್ನು ಮಾಡಿದರೆಂಬ ಹೇತುವಿನಿಂದ ಕ್ರಿ. ಪ್ರೊ. ೧೪೬-೧೪೯, ೩೦೭, ೪೩೫, ೪೪೪, ೩೨೮, ೩೯೭, ೩೩೨, ಸೆಕ್ಷನ್ನುಗಳನ್ನನುಸರಿಸಿ ಮಿ|| ಲಾರೆನ್ಸ್ ಎಂಬ ಅಡಿಷನಲ್ ಮ್ಯಾಜಿಸ್ಟ್ರೇಟರು ಛಾರ್ಜುಮಾಡಿ, ಎಲ್ಲರನ್ನೂ ಸೆಷನ್ಸ್ ಕಮಿಟ್‌ಮಾಡಿರುವರು. ಅದರಮೇಲೆ ಅಪರಾಧಿಗಳೆಲ್ಲರೂ ತಾವು ನಿರಪರಾಧಿಗಳೆಂದೂ, ಪೊಲೀಸರು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲಿಕ್ಕಾಗಿ ಈ ಸುಳ್ಳು ವ್ಯಾಜ್ಯವನ್ನು ನಮ್ಮಮೇಲೆ ಹೂಡಿದ್ದಾರೆಂದೂ ಈ ಕೋರ್ಟಿನಲ್ಲಿ ಇದಕ್ಕಿಂತ ಹೆಚ್ಚಾಗಿಯೇನನ್ನೂ ಹೇಳುವುದಿಲ್ಲವೆಂದೂ ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟಿರುವರು. ಇವರಲ್ಲಿ ೪ ಮಂದಿ ಬ್ರಾಹ್ಮಣ ವಕೀಲರೂ ೩ ಮಂದಿ ಬ್ರಾಹ್ಮಣ ಪತ್ರಿಕಾ ಸಂಪಾದಕರೂ, ೭ ಮಂದಿ ಅಸಹಾಯ ಪ್ರಚಾರಕರಾದ ಮಹಾರಾಷ್ಟ್ರ ಬ್ರಾಹ್ಮಣರೂ, ೧೪ ಮಂದಿ ಮಹಮ್ಮದೀಯರೂ ಆಗಿರುವರು.

ವಿದೇಶ ವೃತ್ತಾಂತಗಳು.

ಇಂಗ್ಲೀಷ್ ಪಾರ್ಲಿಮೆಂಟಿನಲ್ಲಿ ಒಂದು ಮುಖ್ಯವಾದ ವಿಷಯವು ಏಕಕಂಠವಾಗಿ ತೀರ್ಮಾನಗೊಂಡಿತು. ಏನೆಂದರೆ—ಸಿವಿಲ್ ಸರ್ವೀಸ್ ಉದ್ಯೋಗಗಳಿಗೆ ಪುರುಷರಂತೆ ಸ್ತ್ರೀಯರೂ ಸಹ ಗ್ರೇಟ್ ಬ್ರಿಟನ್ ದ್ವೀಪಗಳಲ್ಲಿ ನಿಯಮಿಸಿಕೊಳ್ಳಲ್ಪಡಬೇಕು. ಉದ್ಯೋಗ ಗೌರವವೂ ಸಂಬಳವೂ ಕೂಡ ಸ್ತ್ರೀ ಪುರುಷರಿಗೆ ಸಮಾನವಾಗಿರಬೇಕು.

ಅಮೇರಿಕಾದ ವಾಷಿಂಗ್ಟನ್ ಪಟ್ಟಣದಲ್ಲಿ ಎಲ್ಲ ದೇಶಗಳವರೂ ಯುದ್ಧಸಾಮಗ್ರಿಯನ್ನು ಅಭಿವೃದ್ಧಿಪಡಿಸುವ ಉದ್ಯೋಗವನ್ನು ನಿರಮಿಸಬೇಕೆಂಬ ವಿಷಯವನ್ನು ಚರ್ಚಿಸುವುದಕ್ಕಾಗಿ ಒಂದು ಸಭೆಯು ಕೂಡುವುದಾಗಿದೆ. ಇದಕ್ಕೆ ಹೋಗುವ ವಿಷಯದಲ್ಲಿ ಕೆಲ ದೇಶಗಳವರಿಗೆ ಮೊದಮೊದಲು ಭಿನ್ನಾಭಿಪ್ರಾಯವಿತ್ತು. ಈಗ ಅದೆಲ್ಲಾ ಸರಿಹೋಯಿತು, ಬ್ರಿಟನ್ನು, ಅಮೇರಿಕಾ, ಜಪಾನ್, ಚೀನಾ ಮೊದಲಾದ ದೇಶಗಳ ಪ್ರತಿನಿಧಿಗಳೆಲ್ಲಾ ಇದಕ್ಕೆ ಸೇರುವರು.

ಅಮೇರಿಕಾಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಯಾವತ್ಪ್ರಪಂಚದ ನೀಗ್ರೋ ಜನರ ಮಹಾ ಸಭೆಯು ಕೂಡಿದ್ದಿತು. ಅಮೇರಿಕಾ, ಯೂರೋಪು, ಆಸಾ, ಆಫ್ರಿಕಾಖಂಡಗಳಿಂದೆಲ್ಲಾ ೧೫ ಸಾವಿರ ನೀಗ್ರೋಜನರು ಆ ಸಭೆಗೆ ಹೋಗಿದ್ದರು. ಈ ಆಗಸ್ಟ್ ತಿಂಗಳೆಲ್ಲಾ ಆ ಸಭಾಕಾರ್ಯಗಳು ಜರಗುವುವು. ಪ್ರಪಂಚದಲ್ಲಿ ೨೦ ಕೋಟಿ ಮಂದಿ ನೀಗ್ರೋ ಜನರಿರುವರು. ಆ ತಮ್ಮ ಜನರ ಭವಿಷ್ಯತ್ ಪರಿಪಾಲನಸ್ಥಿತಿಯನ್ನು ಕುರಿತು ಇವರು ಆಲೋಚಿಸುವರಂತೆ. ಅಷ್ಟೇಅಲ್ಲದೆ ಅವರು ಆಂಗ್ಲಮಂತ್ರಿಯವರಾದ ಲಾಯಿಡ್‌ಜಾರ್ಜರವರಿಗೆ ಒಂದು ತಂತೀ ವಾರ್ತೆಯನ್ನು ಕಳುಹಿಸಿ ಐರ್ಲಂಡು ಈಜಿಪ್ಟು ಇಂಡ್ಯಾ ಈ ದೇಶಗಳಲ್ಲಿ ನಡೆಯುತ್ತಿರುವ ಜಾತಿ ವೈಷಮ್ಯವನ್ನು ನಿರ್ಮೂಲ ಮಾಡಿ ಸ್ವಾತಂತ್ರ್ಯವನ್ನು ಕೊಡಬೇಕೆಂದು ಅದರಲ್ಲಿ ತಿಳಿಯಿಸಿದ್ದಾರಂತೆ.

ಗ್ರೀಕರಿಗೂ ತುರುಕರಿಗೂ ನಡೆಯುತ್ತಿರುವ ಯುದ್ಧದಲ್ಲಿ ಇಂಗ್ಲೀಷರು ತಾಟಸ್ಥ್ಯವನ್ನು ಬಿಟ್ಟು ಗ್ರೀಕರಿಗೆ ಸಹಾಯಮಾಡುತ್ತಿರುವರೆಂದು ಹುಟ್ಟಿರುವ ಸುದ್ದಿಯು ಸಂಪೂರ್ಣವಾಗಿ ಸುಳ್ಳಾದುದು. ಗ್ರೀಕರು ಕಾನ್‌ಸ್ಟಾಂಟಿನೋಪಲ್ಲಿನ ಮೇಲೆ ಸಾಗಿಹೋಗುವರೆಂಬ ವಾತೂ ಸುಳ್ಳೇ. ಗ್ರೀಕರು ಹಾಗೆ ಮಾಡಲಾಗದೆಂದು ಕೂಡ ಮಿತ್ರಮಂಡಲಿಯವರು ಅವರಿಗೆ ತಿಳಿಯಪಡಿಸಿರುವರಂತೆ. ಈಚೆಗೆ ಗ್ರೀಕರು ವಿಮಾನಗಳ ಮೇಲೆ ಹೋಗಿ ಅಂಗೋರಾದ ಮೇಲೆ ಸಿಡಿಮದ್ದುಗಳನ್ನು ಹಾಕುತ್ತಿದ್ದಾರೆ. ಅಲ್ಲಿಯ ತುರುಕರು ಪಟ್ಟಣವನ್ನು ಬಿಡುತ್ತಲಿದ್ದಾರಂತೆ. ಗ್ರೀಕರು ಕಾನ್‌ಸ್ಟಾಂಟಿನೋಪಲ್ಲಿನ ಮೇಲೆ ದಂಡೆತ್ತಿಹೋಗುವರೆಂದು ಹುಟ್ಟಿಸಿರುವ ಸುದ್ದಿಯು ಸುಳ್ಳು. ರಷ್ಯಾ ಪ್ರಭುತ್ವದವರು ಗ್ರೀಕ್ ತುರುಕರ ಯುದ್ಧದಲ್ಲಿ ಎಷ್ಟು ಮಾತ್ರಕ್ಕೂ ಸಂಬಂಧವಿಟ್ಟುಕೊಳ್ಳುವವರಾಗಿಲ್ಲವೆಂದು ರಷಾ ರಾಯಭಾರಿಗಳು ತಿಳಿಯಿಸಿದ್ದಾರೆ. ಮಿತ್ರಮಂಡಲಿಯವರು ಮಧ್ಯವರ್ತಿಗಳಾಗಿ ಬಂದು ಸಮಾಧಾನಪಡಿಸಬೇಕೆಂದು ಅಂಗೋರಾದವರು ಮಿತ್ರಮಂಡಲಿಯವರನ್ನು ಕೋರಿ ಪತ್ರವ್ಯವಹಾರವನ್ನು ನಡೆಯಿಸುತ್ತಿರುವುದು ನಿಜವೆಂದು ಈಚೆಗೆ ಸುದ್ದಿ ಬಂದಿದೆ.

ಲಂಡನ್ ಪಟ್ಟಣದಲ್ಲಿ ಕೂಡಿದ್ದ ಸಾಮ್ರಾಜ್ಯ ಸಭೆಯ ಕಾರ್ಯಗಳೆಲ್ಲಾ ಕಳೆದ ತಾ|| ೫ಕ್ಕೆ ಮುಗಿದು ಎಲ್ಲ ಕಡೆಯ ಪ್ರತಿನಿಧಿಗಳೂ ಅವರವರ ದೇಶಕ್ಕೆ ಹೊರಡಲು ಅಪ್ಪಣೆಪಡೆದರು. ಈ ಸಮಾವೇಶದಲ್ಲಿ ಚರ್ಚೆ ನಡೆದು ತೀರ್ಮಾನಗೊಂಡ ಅನೇಕ ವಿಷಯಗಳೊಳಗೆ ಭರತಖಂಡದ ವಿಷಯವೂ ಸ್ವಲ್ಪವಾಗಿದ್ದಿತು. "ಸಾಮ್ರಾಜ್ಯದ ಯಾವ ಭಾಗದಲ್ಲಿ ಭಾರತೀಯರು ನೆಲಸಿದ್ದರೂ ಅವರು ಅದೇ ದೇಶದಲ್ಲಿ ಹುಟ್ಟಿ ಬೆಳೆದವರಾಗಿದ್ದರೆ ಅವರಿಗೆ ಅಲ್ಲಿಯ ಪೌರತ್ವ ಹಕ್ಕಿರಬೇಕು" ಎಂಬ ವಿಷಯವು ಮುಖ್ಯವಾಗಿದ್ದಿತು. ಇದರಿಂದ ಅಧಿನಿವೇಶಗಳಲ್ಲಿ ನಡೆಯುತ್ತಿರುವ ಭಾರತೀಯರ ಅವಮಾನವೂ ಹಿಂಸೆಯೂ ತಪ್ಪುವುದಕ್ಕೆ ಅವಕಾಶವಾಗುವುದು. ಈ ತೀರ್ಮಾನಕ್ಕೆ ಇತರರೆಲ್ಲಾ ಒಪ್ಪಿದರು. ಆದರೆ ದಕ್ಷಿಣಾಫ್ರಿಕಾ ಪ್ರತಿನಿಧಿಗಳು ಮಾತ್ರ ಅಲ್ಲಿಯ ಕೆಲವು ಪ್ರತ್ಯೇಕ ಕಾರಣಾಂತರಗಳಿಂದ ಒಪ್ಪದೆಹೋದರಂತೆ. ಸಭೆಗೆ ಹೋಗಿದ್ದ ಭಾರತ ಪ್ರಭುತ್ವದವರು ದಕ್ಷಿಣಾಫ್ರಿಕಾ ಪ್ರಭುತ್ವದವರೊಡನೆ ಅಲ್ಲಿಯ ಭಾರತೀಯರ ಸ್ಥಿತಿಯನ್ನು ಕುರಿತು ಆಲೋಚಿಸಿ ಸಮನ್ವಯಮಾಡಿಕೊಳ್ಳಬೇಕಂತೆ. ಸಭೆಗೆ ಹೋಗಿದ್ದ ಭಾರತ ಪ್ರತಿನಿಧಿಗಳು ಈ ಮಾತಿಗೆ ಒಪ್ಪಿಕೊಂಡಿದ್ದಾರೆ.

ಪಾರಿಸ್‌ಪಟ್ಟಣದಲ್ಲಿ ನಡೆಯುವ ಸುಪ್ರೀಂ ಕೌನ್ಸಿಲಿಗೆ ಬರಬೇಕೆಂದು ಫ್ರೆಂಚ್ ಮುಖ್ಯ ಮಂತ್ರಿಯವರು ಗ್ರೇಟ್‌ಬ್ರಿಟನ್, ಇಟಲಿ, ಜಪಾನ್, ಅಮೇರಿಕಾ ಪ್ರಭುತ್ವದವರುಗಳಿಗೆ ಆಹ್ವಾನವನ್ನು ಕಳುಹಿಸಿದ್ದರು. ಲೀಪ್ಜಿಗ್ ವಿಚಾರಣೆಯೂ ಸಭೆಯಲ್ಲಿ ನಡೆಯುವುದಾದರೆ ಬೆಲ್ಜಿಯಂ ದೇಶಕ್ಕೂ ಆಹ್ವಾನವು ಕೊಡಲ್ಪಡುವುದು. ಈ ಸಭೆಯಲ್ಲಿ ಅಪ್ಪರ್‌ಸೈಲೇಷಿಯಾಸಮಸ್ಯೆ, ಯುದ್ಧಕಾಲದ ಬಂದಿಗಳ ವಿಚಾರ, ಜರ್ಮನೀ ಪೂರ್ವ ದೇಶಗಳ-ವಿಚಾರ ಇವುಗಳು ಚರ್ಚಿಸಲ್ಪಡುತ್ತವೆ. ಇದಕ್ಕೆ ಅಮೇರಿಕಾದ ಪಕ್ಷದಿಂದ ಪ್ರೆಸಿಡೆಂಟ್ ಹಾರ್ಡಿಂಜರವರಿಗೆ ಪ್ರತಿಯಾಗಿ ಕರ್ನಲ್ ಹಾರ್ವೆಯವರು ಆಗಲೇ ಫ್ರಾನ್ಸಿಗೆ ಬಂದು ಸೇರಿದ್ದಾರೆ. ಆಂಗ್ಲ ದೇಶದಿಂದ ಮುಖ್ಯಮಂತ್ರಿ ಲಾಯಿಡ್‌ಜಾರ್ಜರು, ಮಂತ್ರಿಮಂಡಲದ ಲಾರ್ಡ್ ಕರ್ಜನ್ ಸರ್ ರಾಬರ್ಟ್ ಮೊದಲಾದವರುಗಳು ತಾ|| ೭ ರಲ್ಲಿ ಹೊರಟು ಫ್ರಾನ್ಸನ್ನು ಸೇರಿದರು. ಇಟಲಿಯ ಮುಖ್ಯ ಮಂತ್ರಿ ಅರ್ಥಸಚಿವಮಂತ್ರಿ ವಿದೇಶಾಂಗಮಂತ್ರಿಗಳೂ ಬಂದಿದ್ದಾರೆ. ಜಪಾನಿನಿಂದ ಕೌಂಟ್‌ಯಿಷಿಯೆಂಬುವರು ಬಂದಿದ್ದಾರೆ. ಅಮೇರಿಕಾದವರು ಈ ಕೂಟಕ್ಕೆ ಸೇರಿದ್ದರೂ ಅವರ ಉದ್ದೇಶವು ಯೂರೋಪಿನ ಅಂತರ್ವ್ಯವಹಾರದಲ್ಲಿ ಸಂಬಂಧವನ್ನು ಅವರು ಇಟ್ಟುಕೊಳ್ಳುವುದಿಲ್ಲವಂತೆ. ಆದರೆ ಪ್ರಪಂಚದ ಶಾಂತಿಗೆಲ್ಲಾ ಸಂಬಂಧಪಡುವ ವಿಷಯವನ್ನು ಸ್ಥಿರಪಡಿಸುವುದಕ್ಕೂ, ಭಿನ್ನಾಭಿಪ್ರಾಯಗಳನ್ನು ತಪ್ಪಿಸಲಿಕ್ಕೂ ಸರ್ವರಿಗೂ ಸಮಾನವಾದ ವಾಣಿಜ್ಯಸಂಪದಭಿವೃದ್ಧಿಗವಕಾಶವಿರುವಂತೆ ಮಾಡುವುದಕ್ಕೂ ಉದ್ದೇಶಿಸಿರುವರಂತೆ.

ರಷ್ಯಾ ದೇಶದಲ್ಲಿ ಈಗ ಮಹಾಭಯಂಕರವಾದ ಕ್ಷಾಮವು ಪ್ರಾಪ್ತವಾಗಿದೆ. ಇಂಥ ಕ್ರೂರ ಕ್ಷಾಮವು ಹಿಂದೆ ಎಂದೂ ಸಂಭವಿಸಿರಲಿಲ್ಲವಂತೆ. ಹೆಂಗಸರು ಗಂಡಸರು ಮಕ್ಕಳು ಮುದಿಗಳನೇಕರು ಹುಲ್ಲು ಸೊಪ್ಪನ್ನೂ ಎಲೆಗಳನ್ನೂ ಪ್ರಾಣಿಗಳ ಮೂಳೆಯ ಪುಡಿಯನ್ನೂ ತಿಂದು ಜೀವಿಸುತ್ತಿದ್ದಾರೆ. ಬಹುಜನರು ಊರುಗಳನ್ನು ಬಿಟ್ಟು ಎಲ್ಲೆಲ್ಲಿಗೋ ಹೋಗಿ ಅಲೆಯುತ್ತಿದ್ದಾರೆ. ದಾರಿಯಲ್ಲೇ ಹಲವರು ಸಾಯುತ್ತಿದ್ದಾರೆ. ೩ ಸಹಸ್ರ ಜನರಿರುವ ಒಂದೂರಿನಲ್ಲಿ ದಿನಕ್ಕೆ ೭೦ ಮಂದಿಗಳಂತೆ ಸಾಯುತ್ತಿದ್ದಾರೆ. ಇದರ ಜತೆಗೆ ಪಟ್ಟಣಗಳು ಬಹಳ ಕೊಳಕಾಗಿರುವುದರಿಂದ ಸಾಂಕ್ರಾಮಿಕ ವ್ಯಾಧಿಗಳು ಬೇರೆ ಹೆಚ್ಚಿ ಪ್ರಜಾನಾಶವನ್ನು ಮಾಡುತ್ತಿವೆ, ಕೆಲ ಕಡೆ ಧಾನ್ಯಗಳಿದ್ದರೂ ಐರ್ಕ್ಯುಟ್ಸ್ಕ್, ಸೈಬೇರಿಯಾ ಪ್ರಾಂತಗಳಲ್ಲಿ ಪ್ರಜೆಗಳ ಗಾಗಳದಿಂದಲೂ, ಈಗಣ ಸೋವಿಯಟ್ ಪರಿಪಾಲನೆಯ ದುಷ್ಕ್ರಮದಿಂದಲೂ ಲಕ್ಷಾಂತರ ಜನರು ನಾನಾ ಸಂಕಟಗಳಿಗೆ ಗುರಿಯಾಗಿದ್ದಾರೆ. ಕೋಟಿ ಜನರು ಈ ನಾನಾತರದ ಸಂಕಟಗಳನ್ನು ಸೈರಿಸಲಾರದೆ ಮಾಸ್ಕೋ ಪಟ್ಟಣದ ಕಡೆಗೆ ಬಂದರಂತೆ. ಅವರನ್ನು ಊರೊಳಕ್ಕೆ ಬರಗೊಡದಂತೆ ಸೈನಿಕರು ಸುತ್ತಲೂ ಮುತ್ತಿಕೊಂಡು ತಡೆಯುತ್ತಿದ್ದಾರಂತೆ. ಈ ಕ್ಷಾಮಬಾಧೆಯಿಂದ ಜನರು ಪೋಲೆಂಡ್ ಲಿಥೂನಿಯಾ ಫಿನ್ಲೆಂಡು ದೇಶಗಳ ಕಡೆಗೆ ಸಾಗಿ ಹೋಗುತ್ತಿದ್ದಾರೆ. ಇವರನ್ನೆಲ್ಲಾ ಕಳ್ಳರೆಂದು ಹೇಳುತ್ತ ಮಾಸ್ಕೋ ಮೊದಲಾದ ಪಟ್ಟಣಗಳ ಹತ್ತಿರ ಪ್ರಭುತ್ವ ಸೈನಿಕರು ಇವರುಗಳ ಮೇಲೆ ವಿಷವಾಯುವನ್ನು ಪ್ರಯೋಗಿಸುತ್ತಿದ್ದಾರಂತೆ. ಈ ಆಪತ್ಕಾಲದಲ್ಲಿ ರಷ್ಯಾಕ್ಕೆ ಸಹಾಯ ಮಾಡಬೇಕೆಂದು ಅಲ್ಲಿಯ ಪ್ರತಿನಿಧಿಗಳು ಆಂಗ್ಲ ಮಂತ್ರಿಯವರೊಡನೆ ಮಾತನಾಡಿದರು. ಸಾಲದರೂಪವಾಗಿ ರಷ್ಯಾವಿಗೆ ಅವಶ್ಯಕವಾದ ಸಾಮಗ್ರಿಗಳನ್ನು ಕಳುಹಿಸಿಕೊಡಲು ಬ್ರಿಟನ್ನಿನವರು ಆಲೋಚಿಸುತ್ತಿದ್ದಾರೆ. ಫ್ರೆಂಚರು ಸ್ವತಃ ರಷಾವಿಗೆ ಧಾನ್ಯಾದಿ ಸಹಾಯವನ್ನು ಮಾಡುವುದಲ್ಲದೆ ಅಮೇರಿಕಾ ಮೊದಲಾದ ಇತರ ದೇಶಗಳವರೆಲ್ಲಾ ಸಹಾಯಮಾಡಬೇಕೆಂದು ಕೋರಿರುತ್ತಾರೆ. ರಷ್ಯಾದ ಕ್ಷಾಮನಿವಾರಣೆಯ ಪ್ರಯತ್ನದ ಸಭೆಯಲ್ಲಿ ಪೋಲೆಂಡ್ ಮೊದಲಾದ ಎಲ್ಲ ದೇಶಗಳ ಪ್ರತಿನಿಧಿಗಳೂ ಸೇರಿ ಕೆಲಸಮಾಡುತ್ತಿದ್ದಾರೆ. ಜರ್ಮನಿಯವರು ಧನಧಾನ್ಯ ಸಹಾಯಮಾಡುವುದಕ್ಕೆ ತಮಗೆ ಶಕ್ತಿಯಿಲ್ಲದಿರುವುದರಿಂದ ವೈದ್ಯ ಸಹಾಯವನ್ನು ಮಾಡಲು ಒಪ್ಪಿಕೊಂಡಿದ್ದಾರೆ. ಲೋಕವನ್ನೆಲ್ಲಾ ನಿರ್ದಯದಿಂದ ಪೀಡಿಸಲು ಪ್ರಯತ್ನಿಸಿದ ತಮ್ಮ ದುಷ್ಕರ್ಮದ ಫಲವು ಈಗಾಗಲೇ ರಷ್ಯಾದ ಬೋಲ್ಷೆವಿಕ್ಕರಿಗೆ ಈ ರೂಪವಾಗಿ ಗೋಚರಿಸಿರಬೇಕು. ಇದರಿಂದ ಬುದ್ಧಿಕಲಿತು ಅವರು ಸಾತ್ವಿಕರಾದರೆ ಬಂದ ವಿಪತ್ತು ಬೇಗನೆ ತೊಲಗಿಹೋದೀತು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಅಧಿಕಾರ ಸಂಪತ್ತಿನ ಗುಣಗಳು.

ಯಾವುದರಲ್ಲಿಯೂ ಹದ್ದುಮೀರಿ ಹೋಗಬಾರದು. ಅದರಲ್ಲಿಯೂ ಅಧಿಕಾರಶ್ರೀಯು ಈ ಸಂದರ್ಭದಲ್ಲಿ ಒಂದು ಪದವನ್ನು ಎಲ್ಲಿಯೋ ಓದಿದ್ದು ಜ್ಞಾಪಕಕ್ಕೆ ಬಂದಿರುತ್ತದೆ. "ಸುರೆಯಿಂ ಸೋರ್ಕಂ ಸುರೋರ್ವೀರುಹಕಿಸಲಯದಿಂ ರಾಗಮುಂ ಕೌಸ್ತುಭಪ್ರ | ಸ್ತರದಿಂ ನೈಷ್ಠುರ್ಯಮಂ ದುರ್ವಿಷಮವಿಷದಿನುನ್ಮೋಹಮಂ ಮುಗ್ಧದೋಷಾ || ಕರದಿಂ ವಕ್ರತ್ವಮಂ ದುಶ್ಶಕ್ಯವನಗಜದಿಂ ವೇಗಮಂ ತಾಳ್ದು ನೀರಾ | ಕರದಿಂದೇಳ್ತಂದ ಲಂತಾಸಿರಿ ಸಹಭವರಂ ಪೋಲ್ವುದೇಂಚೋದ್ಯಮಾಯ್ತೇ" ಈ ರೀತಿಯ ನಡತೆಯು ಮಿಲ್ಲರ್ ಕಮಿಟಿಯ ರಿಪೋರ್ಟು ಹೊರಗೆ ಬಂದ ತರುವಾಯ ಎಷ್ಟು ವೇಗವಾಗಿ ಈ ದೇಶವನ್ನು ಬಿಟ್ಟು ಹೊರಗೆ ಪ್ರಯಾಣಮಾಡುತ್ತಿದೆ! ಮದ್ರಾಸು ಬೊಂಬಾಯಿ ಕಲ್ಕತ್ತಾ ಪತ್ರಿಕೆಗಳಲ್ಲಿ ಸಮುದ್ರ ಮಥನದ ನೊರೆಯನ್ನು ನೋಡಿ ಕಾರಿಕಾರಿ ಎಷ್ಟು ದೂರ ಕಿಚ್ಚು ಹರಡುತ್ತಿದೆ. ಈ ಕಿಚ್ಚು ಮೇಲಿನ ಪದದಲ್ಲಿ ಕಾಣಬರುವ ಗುಣಾತಿಶಯಗಳ ರಾಶಿಯ ಫಲವೆಂದು ತೋರುತ್ತದೆ. ಮೈಸೂರು ದೇಶದ ನಮ್ಮ ಬ್ರಾಹ್ಮಣ ಸಹೋದರರ ಸಂಪತ್ತು ಹದ್ದುಮೀರಿ ಹೋಗಿರುತ್ತದೆ. ಅದಕ್ಕಾಗಿ ಯಾರೂ ದುಃಖಪಡುವುದಿಲ್ಲ. ಆದರೆ ದೇಶೋನ್ನತಿಗೆ ಎಲ್ಲಾ ಜನಾಂಗದವರೂ ವಿದ್ಯಾವಂತರಾಗಬೇಕು. ಸರ್ಕಾರದ ಎಲ್ಲಾ ತರಗತಿಯ ಉದ್ಯೋಗದಲ್ಲಿಯೂ ಆಯಾ ಪಂಗಡದ ಯೋಗ್ಯತಾನುಸಾರವಾಗಿ ಅಂದರೆ ಸಂಖ್ಯೆಯನ್ನು ಅನುಸರಿಸಿ ಜನರು ಸೇರಿ ಉದ್ಯೋಗವೆಂಬ ಭಾರವನ್ನು ಹೊರುವುದರಲ್ಲಿ ಭಾಗಿಗಳಾಗಿರಬೇಕು ಎಂಬುವದೇ ಮಿಲ್ಲರ್ ಕಮಿಟಿಯ ರಿಪೋರ್ಟಿನ ಮುಖ್ಯ ಉದ್ದೇಶವಾಗಿರುತ್ತದೆ. ಹೀಗಿರುತ್ತಾ ತಾವು ಆಡಿದ್ದೇ ಆಟ ಹೂಡಿದ್ದೇ ಲಗ್ಗೆಯೆಂಬುದನ್ನು ಅನುಸರಿಸಿ ಇತರ ಜನವರ್ಗದವರನ್ನು ತುಚ್ಛವಾಗಿ ಕಂಡುಕೊಂಡು ಬರುತ್ತಿರುವುದಲ್ಲದೆ ರೈತರ ಹಣವನ್ನು ಲೆಕ್ಕವಿಲ್ಲದೆ ತಿನ್ನುವುದಕ್ಕೆ ಅಡ್ಡಿಬರುವುದೆಂದೂ ಸತ್ಯವಾದ ಮತ್ತು ಧರ್ಮದಿಂದ ಕೂಡಿದ ಸರ್ಕಾರದ ಹುಕುಂ ಉಲ್ಲಂಘನೆ ಮಾಡಲು ಆರಂಭಿಸಿರುತ್ತಾರೆ. ಪ್ರಪಂಚವು ಮುಳುಗಿ ಹೋಯಿತೋ ಎಂಬುವಂತೆ ಆಕ್ರೋಶಿಸುತ್ತಾರೆ. ಮೈ

ಸೂರು ದೇಶವನ್ನೇ ಬಿಟ್ಟು ನೆರೆಹೊರೆಯಲ್ಲಿರುವ ಬ್ರಿಟಿಷ್ ಇಂಡಿಯಾದಲ್ಲಿ ಹೋಗಿ ಬ್ರಾಹ್ಮಣರೆಲ್ಲರೂ ವಾಸಿಸುವೆವೆಂದು ಹೇಳುವವರೊಬ್ಬರು; ಮೈಸೂರು ದೇಶಕ್ಕೆ ಹಾನಿಯುಂಟಾಗಲೆಂದು ಕೋರುವ ಅಭಿಪ್ರಾಯವನ್ನು ತೋರಿಸುವ ಶಬ್ದಗಳನ್ನು ಉಪಯೋಗಿಸುವವರು ಮತ್ತೊಬ್ಬರು; ನಿರ್ವಂಚಕರಾದ ಮ॥ ಸಿ. ಆರ್. ರಡ್ಡಿಯವರನ್ನೂ ಕೈಲಾಸವಾಸಿಯಾದ ಬಸವಯ್ಯನವರನ್ನೂ ದೂಷಿಸುವ ವ್ರತವನ್ನು ಹಿಡಿದಿರುವವರು ಕೆಲವರು! ಇವರುಗಳು ಯಾರು? ನಮ್ಮ ಸತ್ಯಪ್ರಭುವಿನ ಪ್ರಭಾವದಿಂದ ಪ್ರತಿ ಗ್ರಾಮದಲ್ಲಿಯೂ ಶಾನುಭೋಗಿ ಕೆಲಸ ಮಾಡುತ್ತಿದ್ದವನ ಮಕ್ಕಳು ಮೊಮ್ಮಕ್ಕಳು ವಿದ್ಯಾವಂತರಾಗಲು ಏರ್ಪಾಡುಗಳು ಮಾಡಿ ಮೇಲಕ್ಕೆ ಎತ್ತಲ್ಪಟ್ಟ ಮತ್ತು ಈಗ ಮುಂದಾಳುಗಳೆನ್ನಿಸಿಕೊಂಡಿರುವ ಜನರು. ಈಗ ಸರ್ಕಾರದ ಉದ್ಯೋಗದಲ್ಲಿರುವ ಬ್ರಾಹ್ಮಣೋತ್ತಮರ ಮೂಲವನ್ನು ಕಂಡು ಹಿಡಿಯಲು ಪ್ರಯತ್ನಿಸಿದರೆ ನೂರಕ್ಕೆ ತೊಂಭತ್ತೊಂಭತ್ತು ಜನರ ಪಟೇಲರ ಮನೆ ಬಾಗಲು ಕಾಯುತ್ತಿದ್ದವರು. ಇಂತಿರಲು ಈ ಕೂಗು ಯಾಕೆ? ಬೆದರಿಕೆಗೆ. ತುಯ್ಯೋ ಮರ್ರ್ರೋ ಎಂದು ಬ್ರಾಹ್ಮಣೇತರರಿಗೆ ಮೋಸದ ಮಾತುಗಳನ್ನು ಹೇಳಿ ಅವರ ಓಟುಗಳನ್ನು ಅಪಹರಿಸಿ ಲೆಜಿಸ್ಲೆಟಿವ್ ಮತ್ತು ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿ ಬಂದು ಅವರ ಪ್ರತಿನಿಧಿಯೆನ್ನಿಸಿಕೊಂಡು ಅವರಿಗೇನೇ ಪ್ರತಿಬಗೆಯುವುದು ಇದೊಂದು ಸರಿಯೆ? ಇದು ಅಸುರಸಂಪತ್ತಿನ ದುರ್ಲಕ್ಷಣವಲ್ಲವೆ? ಗೂಢವಾಗಿದ್ದ ಇವರ ವಂಚನೆಯ ಗಾಳವನ್ನು ಇವರುಗಳಿಗೆ ಓಟು ಕೊಟ್ಟವರು ಎಚ್ಚರಗೊಂಡು ನೋಡಿರಿ. ಮುಂದೆಯಾದರೂ ನಿಮ್ಮ ಅಭಿವೃದ್ಧಿಯೇ ಅವರ ಅಭಿವೃದ್ಧಿಯೆಂದು ಯೋಚಿಸುವ ದೊಡ್ಡಮನುಷ್ಯರಿಗೆ ಓಟು ಕೊಡಿ. ನಮ್ಮ ಹಣವನ್ನು ತೆಗೆದುಕೊಂಡು ಕೂಲಿಗಾಗಿ ಮೊಕದ್ದಮೆಗಳನ್ನು ನಡಿಸಿದರೆಂಬ ಅಭಿಮಾನದಿಂದ ನಮ್ಮ ಓಟುಗಳನ್ನು ಕೊಟ್ಟಿದ್ದಕ್ಕೆ ಇದೇನೇ ಪ್ರತಿಫಲ? ಇದು ಎಂಥ ವಂಚನೆಯ ಹೃದಯ! ಮಾತುಗಳಿಗೂ ಭಾಷಣಗಳಿಗೂ ಕೊನೆಯೇ ಇಲ್ಲ. ಇದನ್ನು ನಿಲ್ಲಿಸಲು ವಾಚಕರೆ! ಶಕ್ತಿಯು ನಿಮ್ಮ ಕೈಯಲ್ಲಿರುತ್ತದೆ. ಸಂಘಗಳನ್ನು ಪ್ರತಿ ತಾಲೂಕುಗಳಲ್ಲಿಯೂ ಈಗಿನಿಂದ ಮಾಡಿಕೊಂಡು ಮೂರು ವರ್ಷದ ಅಂತ್ಯದಲ್ಲಿ ಬರುವ ಎಲೆಕ್ಷನ್ ಕಾಲದಲ್ಲಿ ಬ್ರಾಹ್ಮಣನಾದ ಮೆಂಬರಿಗೆ ಓಟು ಕೊಡುವುದಿಲ್ಲವೆಂಬ ನಿರ್ಧಾರವನ್ನು ಮಾಡಿಕೊಳ್ಳಿರಿ. ಓಟರುಗಳ ಪಟ್ಟಿಗಳು ಮುಂಚಿತವಾಗಿಯೇ ದೊರೆಯುತ್ತವೆ. ಓಟು ಕೊಡಲು ಅರ್ಹರಾಗಿದ್ದಾಗ್ಯೂ ಹೆಸರು ನಮೂದಿಲ್ಲದಿದ್ದರೆ ತಂತಮ್ಮ ಹೆಸರುಗಳು ಅದರಲ್ಲಿ ಸೇರಲು ಏರ್ಪಾಡು ಮಾಡಿರಿ. ಮತ್ತು ಗ್ರಾಮದಲ್ಲಿ ಬ್ರಾಹ್ಮಣೇತರರಲ್ಲಿ ಹುಟ್ಟುವ ವ್ಯಾಜ್ಯಗಳನ್ನು ತಮ್ಮಲ್ಲಿಯೇ ಫೈಸಲು ಮಾಡಿಕೊಳ್ಳುವ ಸಭೆಗಳನ್ನು ಏರ್ಪಡಿಸಿರಿ. ಶಾನುಭೋಗನನ್ನು ದೂರ ಇಡಿ. ಯಾಕಂದರೆ ನಿಮ್ಮಲ್ಲಿ ವ್ಯಾಜ್ಯಗಳನ್ನು ಹೆಚ್ಚಿಸಿ ಅನ್ನ ಮಗನೋ ತಮ್ಮನೋ ಅಳಿಯನೋ ಭಾವಮೈದುನನೋ ಬೆಡಗಿನವನೋ ಆದ ಲಾಯರ ಬಳಿಗೆ ನಿಮ್ಮನ್ನು ಎಳೆದು ನಿಮ್ಮನ್ನು ಬಲಿಹಾಕುತ್ತಾನೆ. ಇದು ಖಂಡಿತ. ಆದ್ದರಿಂದ ಕೂಡಲೆ ಓಟುಗಳ ಮತ್ತು ವ್ಯಾಜ್ಯಪರಿಹಾರಗಳ ವಿಷಯವನ್ನು ಕುರಿತು ಯೋಚಿಸುವ ಸಂಘಗಳನ್ನು ಏರ್ಪಡಿಸಿ, ಹಾಗೆ ಮಾಡಿದ ಸಂಗತಿಯನ್ನು ಪತ್ರಿಕೆಗಳ ಮುಖಾಂತರ ಪ್ರಕಟಿಸುತ್ತಾ ಬಂದರೆ, ಹಾಗೆ ಮಾಡದಿರುವವರು ನೋಡಿ ತಾವೂ ಮಾಡಲು ಪ್ರಯತ್ನಿಸುತ್ತಾರೆ. ಇದು ಅತಿ ಅವಶ್ಯಕವಾದದ್ದು. ಮತ್ತು ಜಾಗ್ರತೆಯಲ್ಲಿ ಆಗಬೇಕಾದದ್ದು. ಮತ್ತು ಪ್ರತಿ ತಾಲೂಕು ಹೆಡ್‌ಕ್ವಾರ್ಟರಿನಲ್ಲಿಯೂ ಆಗಬೇಕು. ಹಾಗೆ ಮಾಡದಿದ್ದರೆ ನಾವು ಮೋಸಹೋಗುವದು ಖಂಡಿತ. ಈ ವಿಷಯವನ್ನು ಕುರಿತು ಈ ಪತ್ರಿಕಾಕರ್ತರು ಪ್ರತಿ ವಾರದಲ್ಲಿಯೂ ಸೂಚನೆಯನ್ನು ಕೊಡುತ್ತಾ ಬರುವರೆಂದು ಪ್ರತಿಯೊಬ್ಬ ದೇಶಾಭಿಮಾನಿಯೂ ನಿರೀಕ್ಷಿಸುತ್ತಾರೆ. ಪತ್ರಿಕಾಕರ್ತರೇ ಇದಕ್ಕಾಗಿ ನಿಮ್ಮ ಪತ್ರಿಕೆಯಲ್ಲಿ ಪ್ರಾಮುಖ್ಯವಾದ ಒಂದು ಭಾಗವನ್ನು ನೀವು ಗೊತ್ತಾಗಿ ವಿಂಗಡಿಸಿ ಇಡುವುದರಿಂದ ವಿಶೇಷವಾಗಿ ದೇಶಸೇವೆಯನ್ನು ಮಾಡಿದಂತಾಗುವುದು. ಸಂಗಡ ಸಂಗಡವನ್ನು ಭೇದಿಸಬಾರದೆಂದು ಹೇಳುವವರೇ ಭೇದವನ್ನು ಕಲ್ಪಿಸಲು ಪ್ರಯತ್ನಿಸಿರುತ್ತಾರೆ. ತಮ್ಮ ಪ್ರಯೋಜನ ತಮ್ಮ ಅಭಿವೃದ್ಧಿ ತಮ್ಮ ಸೌಖ್ಯ ಕಾವೇ ತಾವು ಮತ್ತಾರೂ ಮುಂದೆ ಬರಬಾರದು ಎಂಬ ಪ್ರಯತ್ನವನ್ನು ಪ್ರಬಲವಾಗಿ ಮಾಡುತ್ತಿದ್ದಾರೆ. ಇದಕ್ಕೆ ಬೇರೆ ವರ್ಗದವರೊಬ್ಬರನ್ನೂ ಸೇರಿಸುವದಿಲ್ಲ. ಈ ದೀಕ್ಷೆಯನ್ನೇ ಕೈಗೊಂಡಿರುವ ಪತ್ರಿಕೆಗಳಿಗೆ ನಿಮ್ಮ ಹಣವನ್ನು ದುರ್ವ್ಯಯ ಮಾಡುವುದಲ್ಲದೆ ನಿಮ್ಮ ಮನಸ್ಸಿಗೂ ಪ್ರತಿನಿತ್ಯವೂ ದುರ್ಮಂತ್ರಭೋಧೆಯನ್ನು ಮಾಡಿಸಿಕೊಳ್ಳುವುದು ನಿಮ್ಮ ಅಭಿವೃದ್ಧಿಗೆ ಹಾನಿಯಲ್ಲವೇ? ಬಿಡಿ; ನಿಮ್ಮ ಸುಖವನ್ನೇ ನಿಮ್ಮ ಅಭಿವೃದ್ಧಿಯನ್ನೇ ಕೋರುವ ಪತ್ರಿಕೆಗಳನ್ನು ಓದಿರಿ. ಇದನ್ನು ಬ್ರಾಹ್ಮಣೇತರರೆಲ್ಲರಿಗೂ ಅತಿ ವಿನಯದಿಂದ ಹೇಳಿಕೊಳ್ಳುತ್ತೇನೆ.

ಸತ್ಯವಾದಿ.

ತೆಂಗಿನಮರ.

ರಾಜಪ್ಪೈರು ಅಥವಾ ಧ್ರುವಪ್ಪೈರು ಅಂದರೆ ತೆಂಗಿನಮರವಲ್ಲದೆ ಬೇರೆ ಇಲ್ಲ, ಸಸಿಕಟ್ಟಿದ ಮೂರು ವರ್ಷಗಳ ಕಾಲ ಕಾಪಾಡಿದರೆ ಆ ಮೇಲೆ ಮೂರು ವರ್ಷಕ್ಕೆ ಫಸಲುಬಿಟ್ಟು ಎಂಥಾ ಗೊಟ್ಟಿನ ದುರ್ಭಿಕ್ಷವನ್ನಾದರೂ ಸಹಿಸಿಕೊಂಡು ಸದಾಕಾಲದಲ್ಲೂ ಫಲವನ್ನು ಕೊಡುತ್ತಾ ದಣಿಯನ್ನು ಕಾಪಾಡುತ್ತದೆ. ಈಗಿನ ಕಾಲದಲ್ಲಂತೂ ಸಮೃದ್ಧಿ ಮಳೆ ಬಂದು ಕೆರೆಗಳು ತುಂಬಿ ತರಿ ಬಾಗಾಯ್ತುಗಳ ಫಸಲು ಆಗದೆ ಬಾವಿಗಳಲ್ಲೂ ನೀರಿಲ್ಲದೆ ಅಡಿಕೆ ತೋಟಗಳು ಧಣಿಯ ಆಸ್ತಿಗಳನ್ನೆಲ್ಲಾ ಅಪಹರಿಸಿ ಸಾಲಗಾರರನ್ನ ಮಾಡಿ ಅಡಿಕೆ ಅಗ್ರಗಳೆಲ್ಲವೂ ನಾಶವಾದವು. ಆದುದರಿಂದ ಪುನಃ ಅಡಿಕೆ ಮರ ಮಾಡಿ ಲಾಗೋಡು ಇಟ್ಟು ನಷ್ಟಕ್ಕೆ ಈಡಾಗದೆ ಜಮೀನ್ದಾರರು ಸಾಧ್ಯವಾದಮಟ್ಟಿಗೂ ತೆಂಗಿನ ತೋಟದ ಆಸ್ತಿಯನ್ನು ಮಾಡುವದು ಶಾಶ್ವತವೆಂದು ಯೋಚಿಸಿ, ಒಳ್ಳೇ ಬೀಜದ ಗೋಟನ್ನು ತರಿಸಿ ನಾಟಿಸಿ ಸಸಿಗಳನ್ನ ಮಾಡಿರುತ್ತೇವೆ. ೪-೫ ಅಡಿಯ ಬುರುಡೆಸಸಿಗಳು ೬ ಮತ್ತು ೮ ಅಡಿಯ ಕೆಂಡೆಸಸಿಗಳು ಸಹ ಇರುತ್ತವೆ. ಈಗ ಸಸಿಗಳನ್ನು ಕಟ್ಟುವುದಕ್ಕೆ ಒಳ್ಳೇ ಹಯಾಂ ಕಾಲವಾಗಿರುವದರಿಂದ ಇಷ್ಟವುಳ್ಳವರು ಮೊಖ್ತಾ ಬಂದು ನೋಡಿ ತೆಗೆದುಕೊಂಡು ಹೋಗಬಹುದು. ಅಥವಾ ಹೆಚ್ಚು ಸಂಗತಿಯನ್ನು ತಿಳಿಯಬೇಕಾದರೆ ಈ ಕೆಳಗಿನ ವಿಳಾಸದಾರರಿಗೆ ಬರೆದು ಜವಾಬು ತರಿಸಿಕೊಳ್ಳಬಹುದು.

ಯಜಮಾನರ ಮುದ್ವೀರಪ್ಪ, ಹೊನ್ನುಡಿಕೆ,
2 ತಾಲ್ಲೂಕು ತುಮಕೂರು.

ಹೊಸ ಪುಸ್ತಕ! ಕ್ರಯ ೬ ಆಣೆ.

ವೀರಶೈವ ಸಮಾಜಸುಧಾರಣೆ.

ಲೇಖಕ ಎಂ. ಮಂಜಪ್ಪ ಹರ್ಡೇಕರ್.

ಈ ಪುಸ್ತಕದಲ್ಲಿ ವೀರಶೈವ ಸಮಾಜದ ಪೂರ್ವಸ್ಥಿತಿಯನ್ನೂ, ಧಾರ್ಮಿಕ, ಸಾಮಾಜಿಕ, ಮತ್ತು ವಿದ್ಯಾವಿಷಯಗಳಲ್ಲಿ ಈವರೆಗಾದ ಜಾಗ್ರತೆಯನ್ನೂ, ಗುರುವರ್ಗದಲ್ಲಿಯೂ ಮತ್ತು ಭಕ್ತವರ್ಗದಲ್ಲಿಯೂ ಈಗ ಉಂಟಾಗಿರುವ ಕಲಹಕ್ಕೆ ಕಾರಣಗಳಾದ ಸಂಗತಿಗಳ ಯುಕ್ತಾಯುಕ್ತತೆಗಳನ್ನೂ, ನಮ್ಮ ಸಮಾಜದ ಮುಂದಾಳುಗಳ ಕರ್ತವ್ಯವನ್ನೂ ಮತ್ತು ಬ್ರಾಹ್ಮಣೇತರರ ಸಂಗಡದಲ್ಲಿ ನಮ್ಮ ಸಮಾಜವು ಸೇರುವುದರಿಂದ ಇದಕ್ಕಾಗತಕ್ಕ ಅನರ್ಥವನ್ನೂ ಧಾರ್ಮಿಕ, ಸಾಂಪತ್ತಿಕಾದಿ ಸಕಲ ವಿಷಯಗಳಲ್ಲಿಯೂ ವೀರಶೈವ ಸಮಾಜಬಾಂಧವರು ಅತ್ಯಂತ ಮಹತ್ತರವಾದ ಈ ಕಾಲದಲ್ಲಿ ಮಾಡಬೇಕಾಗಿರುವ ಕರ್ತವ್ಯಗಳನ್ನೂ ಕುರಿತು ಸ್ಪಷ್ಟವಾಗಿಯೂ, ವಿಸ್ತಾರವಾಗಿಯೂ ವಿವರಿಸಿದೆ.

ಇದರಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳು ನಮ್ಮ ಸಮಾಜದ ಅನೇಕ ಸುಪ್ರಸಿದ್ಧ ಮುಂದಾಳುಗಳ ಅಭಿಪ್ರಾಯಗಳಿಂದ ದೃಢೀಕರಿಲ್ಪಟ್ಟಿವೆ.

ವಿಳಾಸ—ಎಸ್. ಕೆ. ಸೋಮನಾಥಯ್ಯ,
2 ಬುಕ್‌ಸೆಲರ್ ದಾವಣಗೆರೆ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2, 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

46 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ—ಶಿವನ ಪಂಚವಿಂಶತಿ ಲೀಲೆಗಳು—ಅನೇಕ ಶಿವಶರಣರ ಚರಿತ್ರೆಗಳು—ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ, ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದಿಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

---

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

46 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಫಕ್ತ ಶೋಧಕ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ!!

ಮಹದ್ರಾಕ್ಷಾದಿ ಚೂರ್ಣವು 44

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಉಷ್ಣ ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಿಕೆ, ಬುರುಗು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾ ವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆ ಕಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೈ ಧೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಿಜ್ವರ, ದಿನಬಿಟ್ಟು ದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಕರಿಬಸವಾರ್ಯ, ಬಳ್ಳಾರಿ.

೧೯೨೧ನೆಯ ಇಸವಿ ಆಗಸ್ಟ್ ತಾ॥೧೪ ರಿಂದ೧೯೨೧ ನೆಯ ಆಗಸ್ಟ್ ತಾ॥ ೨೦ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ಶ್ರಾವಣ ಶುದ್ಧ ಏಕಾದಶಿಯಿಂದ ಶ್ರಾವಣ ಬಹುಳ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
14	ಭಾನು	ಏಕಾ	16-5	ಮೂಲ	30-57	30
15	ಸೋಮ	ದ್ವಾದ	19-20	ಪೂಷಾ	38-5	31
16	[1]ಮಂಗಳ	ತ್ರಯೋ	23-31	ಉಷಾ	44-0	1
17	[2]ಬುಧ	ಚತು	28-23	ಶ್ರವ	50-30	2
18	[3]ಗುರು	ಪೌರ್ಣ	33-30	ಧನಿ	7-4	3
19	ಶುಕ್ರ	ಪಾಡ್ಯ	38-33	ಶತ	60	4
20	[4]ಶನಿ	ಬಿದಿ	42-58	ಶತ	3-22	5

(1) ಮಂಗಳಗೌರೀವ್ರತಂ. (2) ಋಗುಪಾಕರ್ಮ. (3) ಯಜುರುಪಾಕರ್ಮ. (4) ಶ್ರಾವಣಶನಿವಾರಂ.

ಮೈಸೂರು: ವೈ. ವಿರೂಪಾಕ್ಷಯ್ಯ ನವರಿಂದ ಕ್ಯಾ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧ್ವಗ್ರ್ಯಾಲವಾಲಂವಲಂ ||
ಸೀಪಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಆಗಸ್ಟ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೩೩

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
32 ಮೈಸೂರು.

SREE SITHARAGHAVA VAIDYASALA

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್ಡ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬವಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮೂರ್ನ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮೂನ್ ಲೈಟ್ ಸೋಪ್. ಗಂಧೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ ,, 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
47 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಪರಿಹಾಸ	೦—೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

೧. ಶ್ರೀ ಬಸವೇಶ್ವರ ಸಂಗೈಕ್ಯ.—ಇದರಲ್ಲಿ ಶ್ರೀ ಕಲ್ಯಾಣಬಸವೇಶ್ವರನು ಶ್ರೀ ಕೂಡಲಸಂಗಮೇಶ್ವರಲಿಂಗದಲ್ಲಿ ಐಕ್ಯ ಆಗುತ್ತ ಇದ್ದು ಶ್ರೀ ಸಂಗಮನಾಥಸ್ವರೂಪಿಯಾದ ಪರಶಿವನು ಶ್ರೀ ಬಸವಣ್ಣಗೇ ಪ್ರತ್ಯಕ್ಷ ಅಪ್ಪಿಕೊಂಡು ಇದ್ದಾನೆ. ಇದು ಅತ್ಯಂತ ಸುಂದರವಾಗಿ ಅದೆ. ಪ್ರತ್ಯೇಕ ವೀರಶೈವನು ಇದನ್ನು ಅವಶ್ಯ ಸಂಗ್ರಹಿಸಬೇಕು. ಫೂ॥ ಸಾ॥ ಪ್ರ॥ ೧ಕ್ಕೆ ರೂ. ೧-೪-೦. ಕ್ಯಾ॥ ಸಾ॥ ೧೨ ಆಣೆ.

೨. ಶ್ರೀ ಮಹಾದೇವಕಾಲಕೂಟ ವಿಷಪಾನ.—ಇದರಲ್ಲಿ ಶ್ರೀ ಬ್ರಹ್ಮ, ವಿಷ್ಣು, ಇಂದ್ರಾದಿ ದೇವತರು ಮತ್ತು ಅಸುರರು ಶ್ರೀ ಶಿವನಿಗೆ ಕಾಲಕೂಟವಿಷ ನಿವಾರಣಾರ್ಥಕ್ಕಾಗಿ ಪ್ರಾರ್ಥಿಸುತ್ತ ಇದ್ದಾರೆ. ಶ್ರೀ ಮಹಾದೇವನು ಕಾಲಕೂಟ ವಿಷವನ್ನು ಆನಂದದೊಡನೆ ಪಾನ ಮಾಡುತ್ತಾ ಇದ್ದಾನೆ. ಈ ಫೋಟೊ ಇದುವರೆವಿಗೂ ಪ್ರಸಿದ್ಧವಾಗಿಲ್ಲ. ಹಾಂಗು ಇದು ಪ್ರತ್ಯಕ್ಷ ನೋಡದೆ ಇದರ ಅಪೂರ್ವ ಸುಂದರತ್ವ ಕಂಡು ಬರುವದಿಲ್ಲ. ಕ್ರಯ ಫೂ॥ ಸಾ॥ ಪ್ರ॥ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

೩. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ಫೂ॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ೧೨ ಆಣೆ.

೪. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಎರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫೂ॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

೫. ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫೂ॥ ಸಾ॥ ಪ್ರ ೧ಕ್ಕೆ ೧-೪-೦ ಕ್ಯಾ॥ಸಾ॥ ೧೨ ಆಣೆ.

೬. ಶ್ರೀವಿಷ್ಣು ಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡೆದ ಈ ಫೋಟೊ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೊ ಇರುತ್ತದೆ. ಫೂ॥ಸಾ॥ಪ್ರ ೧ಕ್ಕೆ ೧-೪-೦. ಕ್ಯಾ॥ಸಾ॥ ೧೨ಆಣೆ.

೮. ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೊ ಇರುತ್ತದೆ. ಫೂ॥ ಪ್ರ ೧ಕ್ಕೆ ಸಾ॥ ರೂ. ೧—೪—೦. ಕಾ॥ ಸಾ॥ ಆಣೆ ೧೨.

ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

10 ವಿಳಾಸ—ಗಂಗಪ್ಪ ಜೇರಿಗೆ ಫೋಟೊ ಆರ್ಟಿಸ್ಟ್, ಸೊಲ್ಲಾಪೂರ ಸಿಟಿ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 15

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯುತ್ತರ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾಗುವುದು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0

ಬಿಡಿ ಮಣಿಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರೆಯುವವು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯುಕ್ಕೆ ಪತ್ರ ಬರೆದು ತಿಳಿಯಿರಿ.

ವಿಳಾಸ—ಎಸ್. ಯು. ನೇಪಾಳ ರುದ್ರಾಕ್ಷಿ
26 ಕಂಪನಿ, ಚೌಕಂಬಾ ಕಾಶೀ.

ಸೂರು ದೇಶವನ್ನೇ ಬಿಟ್ಟು ನೆರೆಹೊರೆಯಲ್ಲಿರುವ ಬ್ರಿಟಿಷ್ ಇಂಡಿಯಾದಲ್ಲಿ ಹೋಗಿ ಬ್ರಾಹ್ಮಣರೆಲ್ಲರೂ ವಾಸಿಸುವರೆಂದು ಹೇಳುವವರೊಬ್ಬರು; ಮೈಸೂರು ದೇಶಕ್ಕೆ ಹಾನಿಯುಂಟಾಗಲೆಂದು ಕೋರುವ ಅಭಿಪ್ರಾಯವನ್ನು ತೋರಿಸುವ ಶಬ್ದಗಳನ್ನು ಉಪಯೋಗಿಸುವವರು ಮತ್ತೊಬ್ಬರು; ನಿರ್ವಂಚಕರಾದ ಮ|| ಸಿ. ಆರ್. ರಡ್ಡಿಯವರನ್ನೂ ಕೈಲಾಸವಾಸಿಯಾದ ಬಸವಯ್ಯನವರನ್ನೂ ದೂಷಿಸುವ ವ್ರತವನ್ನು ಹಿಡಿದಿರುವವರು ಕೆಲವರು! ಇವರುಗಳು ಯಾರು? ನಮ್ಮ ಸತ್ಯಪ್ರಭುವಿನ ಪ್ರಭಾವದಿಂದ ಪ್ರತಿ ಗ್ರಾಮದಲ್ಲಿಯೂ ಶಾನುಭೋಗಿ ಕೆಲಸ ಮಾಡುತ್ತಿದ್ದವನ ಮಕ್ಕಳು ಮೊಮ್ಮಕ್ಕಳು ವಿದ್ಯಾವಂತರಾಗಲು ಏರ್ಪಾಡುಗಳು ಮಾಡಿ ಮೇಲಕ್ಕೆ ಎತ್ತಲ್ಪಟ್ಟು ಮತ್ತು ಈಗ ಮುಂದಾಳುಗಳೆನ್ನಿಸಿಕೊಂಡಿರುವ ಜನರು. ಈಗ ಸರ್ಕಾರದ ಉದ್ಯೋಗದಲ್ಲಿರುವ ಬ್ರಾಹ್ಮಣೋತ್ತಮರ ಮೂಲವನ್ನು ಕಂಡು ಹಿಡಿಯಲು ಪ್ರಯತ್ನಿಸಿದರೆ ನೂರಕ್ಕೆ ತೊಂಭತ್ತೊಂಭತ್ತು ಜನರ ಪಟೇಲರ ಮನೆಬಾಗಿಲು ಕಾಯುತ್ತಿದ್ದವರು. ಇಂತಿರಲು ಈ ಕೂಗು ಯಾಕೆ? ಬೆದರಿಕೆಗೆ. ಕುಯುಕ್ತಿ ಮಂತ್ರೀ ಎಂದು ಬ್ರಾಹ್ಮಣೇತರರಿಗೆ ಮೋಸದ ಮಾತುಗಳನ್ನು ಹೇಳಿ ಅವರ ಓಟುಗಳನ್ನು ಅಪಹರಿಸಿ ಲೆಜಿಸ್ಲೆಟಿವ್ ಮತ್ತು ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿ ಬಂದು ಅವರ ಪ್ರತಿನಿಧಿಯೆನ್ನಿಸಿಕೊಂಡು ಅವರಿಗೇನೇ ಪ್ರತಿಬಗೆಯುವುದು ಇದೊಂದು ಸರಿಯೆ? ಇದು ಅಸುರಸಂಪತ್ತಿನ ದುರ್ಲಕ್ಷಣವಲ್ಲವೆ? ಗೂಢವಾಗಿದ್ದ ಇವರ ವಂಚನೆಯ ಗಾಣವನ್ನು ಇವರುಗಳಿಗೆ ಓಟು ಕೊಟ್ಟವರು ಎಚ್ಚರಗೊಂಡು ನೋಡಿರಿ. ಮುಂದೆಯಾದರೂ ನಿಮ್ಮ ಅಭಿವೃದ್ಧಿಯೇ ಅವರ ಅಭಿವೃದ್ಧಿಯೆಂದು ಯೋಚಿಸುವ ದೊಡ್ಡಮನುಷ್ಯರಿಗೆ ಓಟು ಕೊಡಿ. ನಮ್ಮ ಹಣವನ್ನು ತಗದುಕೊಂಡು ಕೂಲಿಗಾಗಿ ಮೊಕದ್ದಮೆಗಳನ್ನು ನಡಿಸಿದರೆಂಬ ಅಭಿಮಾನದಿಂದ ನಮ್ಮ ಓಟುಗಳನ್ನು ಕೊಟ್ಟಿದ್ದಕ್ಕೆ ಇದೇನೇ ಪ್ರತಿಫಲ? ಇದು ಎಂಥ ವಂಚನೆಯ ಹೃದಯ! ಮಾತುಗಳಿಗೂ ಭಾಷಣಗಳಿಗೂ ಕೊನೆಯೇ ಇಲ್ಲ. ಇದನ್ನು ನಿಲ್ಲಿಸಲು ವಾಚಕರೆ! ಶಕ್ತಿಯು ನಿಮ್ಮ ಕೈಯ್ಯಲ್ಲಿರುತ್ತದೆ. ಸಂಘಗಳನ್ನು ಪ್ರತಿ ತಾಲ್ಲೂಕುಗಳಲ್ಲಿಯೂ ಈಗಿನಿಂದ ಮಾಡಿಕೊಂಡು ಮೂರು ವರ್ಷದ ಅಂತ್ಯದಲ್ಲಿ ಬರುವ ಎಲೆಕ್ಷನ್ ಕಾಲದಲ್ಲಿ ಬ್ರಾಹ್ಮಣನಾದ ಮೆಂಬರಿಗೆ ಓಟು ಕೊಡುವುದಿಲ್ಲವೆಂಬ ನಿರ್ಧಾರವನ್ನು ಮಾಡಿಕೊಳ್ಳಿರಿ. ಓಟರುಗಳ ಪಟ್ಟಿಗಳು ಮುಂಚಿತವಾಗಿಯೇ ಮೊರೆಯುತ್ತವೆ. ಓಟು ಕೊಡಲು ಅರ್ಹರಾಗಿದ್ದಾಗ್ಯೂ ಹೆಸರು ನಮೂದಿಲ್ಲದಿದ್ದರೆ ತಂತಮ್ಮ ಹೆಸರುಗಳು ಅದರಲ್ಲಿ ಸೇರಲು ಏರ್ಪಾಡು ಮಾಡಿರಿ. ಮತ್ತು ಗ್ರಾಮದಲ್ಲಿ ಬ್ರಾಹ್ಮಣೇತರರಲ್ಲಿ ಹುಟ್ಟುವ ವ್ಯಾಜ್ಯಗಳನ್ನು ತಮ್ಮಲ್ಲಿಯೇ ಫೈಸಲು ಮಾಡಿಕೊಳ್ಳುವ ಸಭೆಗಳನ್ನು ಏರ್ಪಡಿಸಿರಿ. ಶಾನುಭೋಗನನ್ನು ದೂರ ಇಡಿ. ಯಾಕೆಂದರೆ ನಿಮ್ಮಲ್ಲಿ ವ್ಯಾಜ್ಯಗಳನ್ನು ಹುಟ್ಟಿಸಿ ತನ್ನ ಮಗನೋ ತಮ್ಮನೋ ಅಳಿಯನೋ ಭಾವಮೈದುನನೋ ಬೆಡಗಿನವನೋ ಆದ ಲಾಯರ ಬಳಿಗೆ ನಿಮ್ಮನ್ನು ಎಳೆದು ನಿಮ್ಮನ್ನು ಬಲಿಹಾಕುತ್ತಾನೆ. ಇದು ಖಂಡಿತ. ಆದ್ದರಿಂದ ಕೂಡಲೆ ಓಟುಗಳ ಮತ್ತು ವ್ಯಾಜ್ಯಪರಿಹಾರಗಳ ವಿಷಯವನ್ನು ಕುರಿತು ಯೋಚಿಸುವ ಸಂಘಗಳನ್ನು ಏರ್ಪಡಿಸಿ, ಹಾಗೆ ಮಾಡಿದ ಸಂಗತಿಯನ್ನು ಪತ್ರಿಕೆಗಳ ಮುಖಾಂತರ ಪ್ರಕಟಿಸುತ್ತಾ ಬಂದರೆ, ಹಾಗೆ ಮಾಡದಿರುವವರು ನೋಡಿ ತಾವೂ ಮಾಡಲು ಪ್ರಯತ್ನಿಸುತ್ತಾರೆ. ಇದು ಅತಿ ಅವಶ್ಯಕವಾದದ್ದು. ಮತ್ತು ಜಾಗ್ರತೆಯಲ್ಲಿ ಆಗಬೇಕಾದದ್ದು. ಮತ್ತು ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿಯೂ ಆಗಬೇಕು. ಹಾಗೆ ಮಾಡದಿದ್ದರೆ ನಾವು ಮೋಸಹೋಗುವದು ಖಂಡಿತ. ಈ ವಿಷಯವನ್ನು ಕುರಿತು ಈ ಪತ್ರಿಕಾಕರ್ತರು ಪ್ರತಿ ವಾರದಲ್ಲಿಯೂ ಸೂಚನೆಯನ್ನು ಕೊಡುತ್ತಾ ಬರುವರೆಂದು ಪ್ರತಿಯೊಬ್ಬ ದೇಶಾಭಿಮಾನಿಯೂ ನಿರೀಕ್ಷಿಸುತ್ತಾರೆ. ಪತ್ರಿಕಾಕರ್ತರೇ ಇದಕ್ಕಾಗಿ ನಿಮ್ಮ ಪತ್ರಿಕೆಯಲ್ಲಿ ಪ್ರಾಮುಖ್ಯವಾದ ಒಂದು ಭಾಗವನ್ನು ನೀವು ಗೊತ್ತಾಗಿ ವಿಂಗಡಿಸಿ ಇಡುವುದರಿಂದ ವಿಶೇಷವಾಗಿ ದೇಶಸೇವೆಯನ್ನು ಮಾಡಿದಂತಾಗುವುದು. ಪಂಗಡ ಪಂಗಡವನ್ನು ಭೇದಿಸಬಾರದೆಂದು ಹೇಳುವವರೇ ಭೇದವನ್ನು ಕಲ್ಪಿಸಲು ಪ್ರಯತ್ನಿಸಿರುತ್ತಾರೆ. ತಮ್ಮ ಪ್ರಯೋಜನ ತಮ್ಮ ಅಭಿವೃದ್ಧಿ ತಮ್ಮ ಸೌಖ್ಯ ತಾವೇ ತಾವು ಮತ್ತಾರೂ ಮುಂದೆ ಬರಬಾರದು ಎಂಬ ಪ್ರಯತ್ನವನ್ನು ಪ್ರಬಲವಾಗಿ ಮಾಡುತ್ತಿದ್ದಾರೆ. ಇದಕ್ಕೆ ಬೇರೆ ವರ್ಣದವರೊಬ್ಬರನ್ನೂ ಸೇರಿಸುವದಿಲ್ಲ. ಈ ದೀಕ್ಷೆಯನ್ನೇ ಕೈಗೊಂಡಿರುವ ಪತ್ರಿಕೆಗಳಿಗೆ ನಿಮ್ಮ ಹಣವನ್ನು ದುರ್ವ್ಯಯ ಮಾಡುವುದಲ್ಲದೆ ನಿಮ್ಮ ಮನಸ್ಸಿಗೂ ಪ್ರತಿನಿತ್ಯವೂ ದುರ್ಮಂತ್ರಬೋಧೆಯನ್ನು ಮಾಡಿಸಿಕೊಳ್ಳುವುದು ನಿಮ್ಮ ಅಭಿವೃದ್ಧಿಗೆ ಹಾನಿಯಲ್ಲವೇ? ಬಿಡಿ; ನಿಮ್ಮ ಸುಖವನ್ನೇ ನಿಮ್ಮ ಅಭಿವೃದ್ಧಿಯನ್ನೇ ಕೋರುವ ಪತ್ರಿಕೆಗಳನ್ನು ಓದಿರಿ. ಇದನ್ನು ಬ್ರಾಹ್ಮಣೇತರರೆಲ್ಲರಿಗೂ ಅತಿ ವಿನಯದಿಂದ ಹೇಳಿಕೊಳ್ಳುತ್ತೇನೆ.

ಸತ್ಯವಾದಿ.

ತೆಂಗಿನಮರ.

ರಾಜವೃಕ್ಷರು ಅಥವಾ ಧ್ರುವವೃಕ್ಷರು ಅಂದರೆ ತೆಂಗಿನಮರವಲ್ಲದೆ ಬೇರೆ ಇಲ್ಲ, ಸಸಿ ನಟ್ಟಿದ ಮೂರು ವರ್ಷಗಳ ಕಾಲ ಕಾಪಾಡಿದರೆ ಆ ಮೇಲೆ ಮೂರು ವರ್ಷಕ್ಕೆ ಫಸಲುಬಿಟ್ಟು ಎಂಥಾ ಗೊಟ್ಟಿನ ದುರ್ಭಿಕ್ಷವನ್ನಾದರೂ ಸಹಿಸಿಕೊಂಡು ಸದಾಕಾಲದಲ್ಲೂ ಫಲವನ್ನು ಕೊಡುತ್ತಾ ದಣಿಯನ್ನು ಕಾಪಾಡುತ್ತದೆ. ಈಗಿನ ಕಾಲದಲ್ಲಂತೂ ಸಮೃದ್ಧಿ ಮಳೆ ಬಂದು ಕೆರೆಗಳು ತುಂಬಿ ತರಿ ಬಾಗಾಯ್ತುಗಳ ಫಸಲು ಆಗದೆ ಬಾವಿಗಳಲ್ಲೂ ನೀರಿಲ್ಲದೆ ಅಡಿಕೆ ತೋಟಗಳು ಧಣಿಯ ಆಸ್ತಿಗಳನ್ನೆಲ್ಲಾ ಅಪಹರಿಸಿ ಸಾಲಗಾರರನ್ನ ಮಾಡಿ ಅಡಿಕೆ ಅಗ್ರಗಳೆಲ್ಲವೂ ನಾಶವಾದವು. ಆದುದರಿಂದ ಪುನಃ ಅಡಿಕೆ ಮರ ಮಾಡಿ ಲಾಗೋಡು ಇಟ್ಟು ನಷ್ಟಕ್ಕೆ ಈಡಾಗದೆ ಜಮೀನ್ದಾರರು ಸಾಧ್ಯವಾದಮಟ್ಟಿಗೂ ತೆಂಗಿನ ತೋಟದ ಆಸ್ತಿಯನ್ನು ಮಾಡುವದು ಶಾಶ್ವತವೆಂದು ಯೋಚಿಸಿ, ಒಳ್ಳೇ ಬೀಜದ ಗೋಟನ್ನು ತರಿಸಿ ನಾಟಿಸಿ ಸಸಿಗಳನ್ನ ಮಾಡಿರುತ್ತೇವೆ. ೪-೫ ಅಡಿಯ ಬುರುಡೆಸಸಿಗಳು ೬ ಮತ್ತು ೮ ಅಡಿಯ ಕೆಂಡೆಸಸಿಗಳು ಸಹ ಇರುತ್ತವೆ. ಈಗ ಸಸಿಗಳನ್ನು ನಟ್ಟುವುದಕ್ಕೆ ಒಳ್ಳೇ ಹಯಾಂ ಕಾಲವಾಗಿರುವದರಿಂದ ಇಷ್ಟವುಳ್ಳವರು ಮೊಖ್ತಾ ಬಂದು ನೋಡಿ ತೆಗೆದುಕೊಂಡು ಹೋಗಬಹುದು. ಅಥವಾ ಹೆಚ್ಚು ಸಂಗತಿಯನ್ನು ತಿಳಿಯಬೇಕಾದರೆ ಈ ಕೆಳಗಿನ ವಿಳಾಸದಾರರಿಗೆ ಬರೆದು ಜವಾಬು ತರಿಸಿಕೊಳ್ಳಬಹುದು.

ಯಜಮಾನರ ಮುದ್ವೀರಪ್ಪ, ಹೊನ್ನುಡಿಕೆ,
2 ತಾಲ್ಲೂಕು ತುಮಕೂರು.

ಹೊಸ ಪುಸ್ತಕ! ಕ್ರಯ ೬ ಆಣೆ.

ವೀರಶೈವ ಸಮಾಜಸುಧಾರಣೆ.

ಲೇಖಕ ಎಂ. ಮಂಜಪ್ಪ ಹರ್ಡೇಕರ್.

ಈ ಪುಸ್ತಕದಲ್ಲಿ ವೀರಶೈವ ಸಮಾಜದ ಪೂರ್ವಸ್ಥಿತಿಯನ್ನೂ, ಧಾರ್ಮಿಕ, ಸಾಮಾಜಿಕ, ಮತ್ತು ವಿದ್ಯಾವಿಷಯಗಳಲ್ಲಿ ಈವರೆಗಾದ ಜಾಗ್ರತೆಯನ್ನೂ, ಗುರುವರ್ಗದಲ್ಲಿಯೂ ಮತ್ತು ಭಕ್ತವರ್ಗದಲ್ಲಿಯೂ ಈಗ ಉಂಟಾಗಿರುವ ಕಲಹಕ್ಕೆ ಕಾರಣಗಳಾದ ಸಂಗತಿಗಳ ಯುಕ್ತಾಯುಕ್ತತೆಗಳನ್ನೂ ನಮ್ಮ ಸಮಾಜದ ಮುಂದಾಳುಗಳ ಕರ್ತವ್ಯವನ್ನೂ ಮತ್ತು ಬ್ರಾಹ್ಮಣೇತರರ ಪಂಗಡದಲ್ಲಿ ನಮ್ಮ ಸಮಾಜವು ಸೇರುವುದರಿಂದ ಇದಕ್ಕಾಗತಕ್ಕ ಅನರ್ಥವನ್ನೂ ಧಾರ್ಮಿಕ, ಸಾಂಪತ್ತಿಕಾದಿ ಸಕಲ ವಿಷಯಗಳಲ್ಲಿಯೂ ವೀರಶೈವ ಸಮಾಜಬಾಂಧವರು ಅತ್ಯಂತ ಮಹತ್ತರವಾದ ಈ ಕಾಲದಲ್ಲಿ ಮಾಡಬೇಕಾಗಿರುವ ಕರ್ತವ್ಯಗಳನ್ನೂ ಕುರಿತು ಸ್ಪಷ್ಟವಾಗಿಯೂ, ವಿಸ್ತಾರವಾಗಿಯೂ ವಿವರಿಸಿದೆ.

ಇದರಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳು ನಮ್ಮ ಸಮಾಜದ ಅನೇಕ ಸುಪ್ರಸಿದ್ಧ ಮುಂದಾಳುಗಳ ಅಭಿಪ್ರಾಯಗಳಿಂದ ದೃಢೀಕರಿಸಲ್ಪಟ್ಟಿವೆ.

ವಿಳಾಸ—ಎಸ್. ಕೆ. ಸೋಮನಾಥಯ್ಯ,
2 ಬುಕ್‌ಸೆಲರ್ ದಾವಣಗೆರೆ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

46 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ. ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

---

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

46 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಫಲಶೋಧಕ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ!!

ಮಹದ್ರಾಕ್ಷಾದಿ ಚೂರ್ಣವು 44

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯ ರೋಗ, ಪಿತ್ತ ರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಉಷ್ಣ ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಪುಂಸಕತ್ವವಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಉರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೃಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ನೆಯ ಇಸವಿ ಆಗಸ್ಟ್ ತಾ|| ೧೪ ರಿಂದ ೧೯೨೧ ನೆಯ ಆಗಸ್ಟ್ ತಾ|| ೨೦ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ಶ್ರಾವಣ ಶುದ್ಧ ಏಕಾದಶಿಯಿಂದ ಶ್ರಾವಣ ಬಹುಳ ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
14	ಭಾನು	ಏಕಾ	16-5	ಮೂಲ	30-57	30
15	ಸೋಮ	ದ್ವಾದ	19-20	ಪೂಷಾ	38-5	31
16	1ಮಂಗಳ	ತ್ರಯೋ	23-31	ಉಷಾ	44-0	1
17	2ಬುಧ	ಚತು	28-23	ಶ್ರವ	50-30	2
18	3ಗುರು	ಪೌರ್ಣ	33-30	ಧನಿ	7-4	3
19	ಶುಕ್ರ	ಪಾಡ್ಯ	38-33	ಶತ	60	4
20	4ಶನಿ	ಬಿದಿ	42-58	ಶತ	3-22	5

(1) ಮಂಗಳಗೌರೀವ್ರತಂ. (2) ಋಗುಪಾಕರ್ಮ. (3) ಯಜುರುಪಾಕರ್ಮ. (4) ಶ್ರಾವಣಶನಿವಾರಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

REGISTERED NO. M. 124.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಪ್ಯತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಪಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಯೆಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೮) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಆಗಸ್ಟ್ ತಾರೀಖು ೧೪ ನೆಯ ಭಾನುವಾರ. (ಸಂಚಿಕೆ ೩೩

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
32 ಮೈಸೂರು.

ವಜ್ರದ ಬೆಂಡೋಲೆ.

ಬೆಂಡೋಲೆಗಳನ್ನು ರೋಲ್‌ಗೋಲ್ಡ್ ಭಂಗಾರದಿಂದ ಮಾಡಿ 7 ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ಇದನ್ನು ನೋಡಿದವರು ವಜ್ರದ ಬೆಂಡೋಲೆ ಎಂದು ಹೇಳುವರು. ಇದರ ಬವಣ್ಣ ಎಂದಿಗೂ ಹೋಗದಂತೆ ಭಂಗಾರದ ಗಿಲೀಟು ಕೊಟ್ಟಿದೆ.

ಬಿಳಿಕಲ್ಲಿನ ಬೆಂಡೋಲೆ 3—0—0
ಕೆಂಪುಕಲ್ಲಿನವು ಜೊತೆ 4—0—0

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ, ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1 ಕ್ಕೆ 1—4—0

ಮರ್ಕ್ ಲೈಯಿಟು ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವುದು. ನಮ್ಮ ಮರ್ಕ್ ಲೈಟ್ ಸೋಪ್. ಗಂಥೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ 1 ಕ್ಕೆ ರೂ. 1—4—0
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ „ 2—4—0

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ,
47 89 ನಾರಾಯಣಮೊದಲಿ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಪಂಪಾಸಿ	೦—೮—೦

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

೧. ಶ್ರೀ ಬಸವೇಶ್ವರ ಸಂಗೈಕ್ಯ.—ಇದರಲ್ಲಿ ಶ್ರೀ ಕಲ್ಯಾಣಬಸವೇಶ್ವರನು ಶ್ರೀ ಕೂಡಲಸಂಗಮೇಶ್ವರಲಿಂಗದಲ್ಲಿ ಐಕ್ಯ ಆಗುತ್ತ ಇದ್ದು ಶ್ರೀ ಸಂಗಮನಾಥಸ್ವರೂಪಿಯಾದ ಪರಶಿವನು ಶ್ರೀ ಬಸವಣ್ಣಗೇ ಪ್ರತ್ಯಕ್ಷ ಅಪ್ಪಿಕೊಂಡು ಇದ್ದಾನೆ. ಇದು ಅತ್ಯಂತ ಸುಂದರವಾಗಿ ಅದೆ. ಪ್ರತ್ಯೇಕ ವೀರಶೈವನು ಇದನ್ನು ಅವಶ್ಯ ಸಂಗ್ರಹಿಸಬೇಕು. ಫೋ|| ಸಾ|| ಪ್ರ|| ೧ಕ್ಕೆ ರೂ. ೧-೪-೦. ಕ್ಯಾ|| ಸಾ|| ೧೨ ಆಣೆ.

೨. ಶ್ರೀ ಮಹಾದೇವಕಾಲಕೂಟ ವಿಷಪಾನ.—ಇದರಲ್ಲಿ ಶ್ರೀ ಬ್ರಹ್ಮ, ವಿಷ್ಣು, ಇಂದ್ರಾದಿ ದೇವತರು ಮತ್ತು ಅಸುರರು ಶ್ರೀ ಶಿವನಿಗೆ ಕಾಲಕೂಟವಿಷ ನಿವಾರಣಾರ್ಥಕ್ಕಾಗಿ ಪ್ರಾರ್ಥಿಸುತ್ತ ಇದ್ದಾರೆ. ಶ್ರೀ ಮಹಾದೇವನು ಕಾಲಕೂಟ ವಿಷವನ್ನು ಆನಂದದೊಡನೆ ಪಾನ ಮಾಡುತ್ತಾ ಇದ್ದಾನೆ. ಈ ಫೋಟೊ ಇದುವರಿವಿಗೂ ಪ್ರಸಿದ್ಧವಾಗಿಲ್ಲ. ಹಾಂಗು ಇದು ಪ್ರತ್ಯಕ್ಷ ನೋಡದೆ ಇದರ ಅಪೂರ್ವ ಸುಂದರತ್ವ ಕಂಡು ಬರುವದಿಲ್ಲ. ಕ್ರಯ ಫೋ|| ಸಾ|| ಪ್ರ|| ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

೩. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ಫೋ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ೧೨ ಆಣೆ.

೪. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಏರಿದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫೋ|| ಸಾ|| ಪ್ರ ೧ಕ್ಕೆ ರೂ. ೧—೪—೦. ಕ್ಯಾ|| ಸಾ|| ಪ್ರ ೧ಕ್ಕೆ ೧೨ ಆಣೆ.

೫. ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫೋ|| ಸಾ|| ಪ್ರ ೧ಕ್ಕೆ ೧-೪-೦ ಕ್ಯಾ||ಸಾ|| ೧೨ ಆಣೆ.

೬. ಶ್ರೀವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡದ ಈ ಫೋಟೊ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

೭ ಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೊ ಇರುತ್ತದೆ. ಫೋ||ಸಾ||ಪ್ರ ೧ಕ್ಕೆ ೧-೪-೦. ಕ್ಯಾ||ಸಾ|| ೧೨ಆಣೆ.

೮. ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

೯ ರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೊ ಇರುತ್ತದೆ. ಫೋ|| ಪ್ರ ೧ಕ್ಕೆ ಸಾ|| ರೂ. ೧—೪—೦. ಕಾ|| ಸಾ|| ಆಣೆ ೧೨.

ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

10 ವಿಳಾಸ—ಗಂಗಪ್ಪ ಜೇರಿಗೆ ಫೋಟೊ ಆರ್ಟಿಸ್ಟ್, ಸೊಲ್ಲಾಪೂರ ಸಿಟಿ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ### ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 15

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟು ಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲು ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0.12-0	,,	50-0-0
5	0. 8-0	,,	100-0-0
6	0-12-0	,,	100-0-0
7	6. 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅಡಕ್ಕಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ತ್ರಿಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಳಿಕ್ಕೆ ಪತ್ರಬರೆ ಬರೆಯಿರಿ.

ವಿಳಾಸ.—ಎಸ್. ಯು. ನೇಪಾಳ ರುದ್ರಾಕ್ಷ,
26 ಕಂಪನಿ, ಚೌಕಂಬಾ ಕಾಶೀ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಅಗಸ್ಟ್ ತಾ|| ೨೧ ನೆಯ ಭಾನುವಾರ.

ದ್ವೇಷಶಾಂತಿಯು.

ನಮ್ಮ ಬ್ರಾಹ್ಮಣ ಸಹೋದರರಾದ ದೊಡ್ಡಮನುಷ್ಯರೊಬ್ಬರು ಪರಸ್ಪರ ಸೌಹಾರ್ದಾಪೇಕ್ಷೆಯಿಂದ ಬರೆದಿರುವ ಲೇಖನವೊಂದನ್ನು ಈ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಮತ್ತೂ ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ತಿಳಿಯಿಸುವುದು ಕೂಡ ಅವಶ್ಯಕವೆಂದು ಭಾವಿಸುತ್ತೇವೆ. ಬ್ರಾಹ್ಮಣಜನವರ್ಗದಲ್ಲಿ ಯುಕ್ತಾಯುಕ್ತ ಪರಿಜ್ಞಾನವುಳ್ಳವರು ಸುತರಾಂ ಇಲ್ಲವೆಂದು ನಾವು ಭಾವಿಸಿಲ್ಲ. ಹಿಂದುಳಿದ ಜನವರ್ಗಗಳ ಅಭ್ಯುನ್ನತಿಗಾಗಿ ಪ್ರಭುತ್ವದವರು ಮಾಡುತ್ತಿರುವ ನ್ಯಾಯವಾದ ಸಾಹಾಯ್ಯಪ್ರೋತ್ಸಾಹಗಳನ್ನು ಕುರಿತು ಅಸೂಯೆ ಪಡತಕ್ಕವರ ಸಂಖ್ಯೆಯು ತ್ರಿಮತಸ್ಥ ಬ್ರಾಹ್ಮಣರುಗಳಲ್ಲಿ ಎಷ್ಟಿದೆಯೋ ಅಷ್ಟು ಸಂಖ್ಯೆಯು "ಸರ್ವೇಜನಾಸ್ಸುಖಿನೋಭವಂತು" ಎಂಬುದನ್ನು ಅನುಷ್ಠಾನದಲ್ಲಿ ತೋರಿಸಿ, ಹಿಂದುಳಿದವರ ಅಭ್ಯುದಯಕ್ಕಾಗಿ ಈಗ ನಡೆಯುತ್ತಿರುವ ಪ್ರಯತ್ನಗಳಲ್ಲಿ ಸಾನುಭೂತಿ ಸಂತೋಷಗಳನ್ನೋ ಅಥವಾ ತಾಟಸ್ಥ್ಯವನ್ನೋ ವಹಿಸಿರತಕ್ಕವರ ಸಂಖ್ಯೆಯು ಬಹಳ ಕಡಿಮೆಯೆಂದು ಹಿಂದುಳಿದ ಜನವರ್ಗಗಳೆಲ್ಲಾ ತಿಳಿದುಕೊಂಡಿರುತ್ತವೆ. ಅದು ಸುಳ್ಳಾಗಿರುವ ಪಕ್ಷದಲ್ಲಿ ಮಿಲ್ಲರ್ ಸಂಘದ ವರದಿಯ ಮೇಲೂ ವಿದ್ಯಾಭ್ಯಾಸದ ಮೆಮೊರಾಂಡಮು, ಹಿಂದುಳಿದ ತರಗತಿಗಳ ವಿದ್ಯಾರ್ಥಿವೇತನಗಳು ಇತ್ಯಾದಿಗಳ ಸಂಬಂಧವಾಗಿಯೂ ಅಗ್ರಹಾಸಮಾಧಾನಾಸೂಯೆಗಳನ್ನು ಸೂಸುತ್ತಿರುವ ಬ್ರಾಹ್ಮಣ ಪತ್ರಿಕೆಗಳ ಮತ್ತು ಅವುಗಳ ಕೂಟದವರ ದ್ವೇಷಾಸೂಯಾ ಲೇಖನಗಳನ್ನು ಖಂಡಿಸುವ ಪ್ರತಿಲೇಖನಗಳನ್ನು ನಮ್ಮ ಬ್ರಾಹ್ಮಣ ಸಹೋದರರು ಬಹಿರಂಗವಾಗಿ ಪ್ರಕಟಿಸಬಹುದಾಗಿದ್ದಿತು. ಅಂಥ ಕಾರ್ಯವನ್ನು ಯಾರೂ ಮಾಡದೆ ಇತರರ ಅಭ್ಯುದಯವನ್ನು ಸೈರಿಸದೆ ವೃತ್ತಪತ್ರಿಕೆಗಳ ಮೂಲಕವೂ ಇತರ ರೀತಿಯಿಂದಲೂ ನಡೆಯುತ್ತಿರುವ ಕೋಲಾಹಲಗಳಿಗೆ ಅಂತ್ಯವೇ ಇಲ್ಲದಿರುವುದರಿಂದ ಬ್ರಾಹ್ಮಣ ಜನಸಾಮಾನ್ಯದ ಅಭಿಪ್ರಾಯಗಳೂ ಹೀಗೆಯೇ ಇರುವುವೆಂದು ಇತರರೆಲ್ಲಾ ಪರಿಭಾವಿಸಲು ಅವಕಾಶವಾಗಿರುತ್ತದೆ. ಆದರೂ ಅವರಲ್ಲಿ ಪರಶ್ರೇಯಸ್ಸಿನಲ್ಲಿ ಅಸೂಯೆ ಪಡದಿರತಕ್ಕವರೂ ಈ ಕೋಲಾಹಲಕ್ಕೆ ಸೇರದೆ ತಟಸ್ಥರಾಗಿರತಕ್ಕವರೂ ಎಷ್ಟೋ ಜನರು ಆ ಜನವರ್ಗದಲ್ಲಿ ಇಲ್ಲದೆ ಇಲ್ಲವೆಂದು ನಾವು ತಿಳಿದಿರುತ್ತೇವೆ. ಆದರೆ ಅಂಥವರುಗಳು ಇಂಥ ಸಮಯಗಳಲ್ಲಿ ತಾಟಸ್ಥ್ಯವನ್ನು ವಹಿಸಿ ಕುಳಿತುಕೊಳ್ಳುವುದರಿಂದ "ಮೌನಮಾರ್ಧಾಂಗೀಕಾರಃ" ಎಂಬಂತೆ ಈ ಕೋಲಾಹಲದಲ್ಲಿ ಅವರೂ ಭಾಗಿಗಳೇ ಎಂಬ ಪರಿಭಾವನೆಗೆ ಎಡೆಕೊಟ್ಟವರಾಗಿರುತ್ತಾರೆ. ಮತ್ತು "ಪಾವಕೋ ಲೋಹಸಂಸರ್ಗಾದ್ವಾತಿಮುದ್ಗರತಾಡನಂ" ಎಂಬಂತೆ ಅವರ ಸಜಾತೀಯ ಸಂಬಂಧದಿಂದ ವಾಕ್ಪ್ರಹಾರಗಳು ಸಂಭವಿಸಲೇಬೇಕಾಗುತ್ತದೆ.

ಕರ್ಣಕಠೋರಗಳಾದ ಬ್ರಾಹ್ಮಣೇತರರ ಲೇಖನಗಳನ್ನು ಸ್ಟಾರ್ ಪತ್ರದಲ್ಲಿ ಸದಾ ಬರೆಯುತ್ತಿರುವೆವೆಂದು ಈ ನಮ್ಮ ಮಿತ್ರರು ನಮ್ಮ ಮೇಲೆ ಹೊರಿಸಿರುವ ಅಪವಾದವು ಬರಿ ಮಾತ್ರಕಲ್ಪನೆಯೆಂದು ನಾವು ತಿಳಿಯಪಡಿಸಬೇಕಾಗಿರುತ್ತದೆ. ಮೊದಲನೆಯದಾಗಿ ಸರ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಹಿಂದುಳಿದವರ ವಿದ್ಯಾರ್ಥಿವೇತನಗಳು ಏರ್ಪಾಟಾದ್ದ ಮೊದಲು ಅವರ ಮೇಲೆ ಆಗ್ರಹದಿಂದ ಅಸಮಾಧಾನವನ್ನು ವ್ಯಕ್ತಪಡಿಸುವ ಲೇಖನಗಳನ್ನು ಯಾರು ಆರಂಭಿಸಿದರು? ಅಂಥ ಸಹಾಯವನ್ನು ಹಿಂದುಳಿದ ಪ್ರಜೆಗಳಿಗೆ ಮಾಡಬಲ್ಲುಗಿಸಿದ ಪ್ರಭುತ್ವದವರನ್ನು ಕೂಡ ನಿಂದಿಸುವುದಕ್ಕೆ ಯಾರು ತೊಡಗಿದರು? ಅದರಂತೆ ಈಚೆಗೆ ವಿದ್ಯಾಭ್ಯಾಸದ ಮೆಮೊರಾಂಡಮು ಮಿಲ್ಲರ್ ಸಂಘದ ವರದಿ ಇವುಗಳು ಹೊರಬಿದ್ದ ಬಳಿಕ ಅವುಗಳಿಂದ ಹಿಂದುಳಿದ ಜನವರ್ಗಗಳಿಗೆ ಲಾಭವಾಗುವುದೆಂಬುದನ್ನು ತಿಳಿದು ಅದನ್ನು ಸೈರಿಸಲಾರದೆ, ಹಿಂದುಳಿದವರನ್ನು ಅನುಗ್ರಹಿಸಲು ಪ್ರಯತ್ನಿಸಿದ ಶ್ರೀಮನ್ಮಹಾರಾಜರನ್ನೂ ಅವರ ಪ್ರಭುತ್ವದವರನ್ನೂ ವಾಚಾಮಗೋಚರವಾಗಿ ಸ್ವಲ್ಪ ಸ್ವಲ್ಪದ ಪತ್ರಿಕೆಗಳೆಲ್ಲಾ ದೂಷಿಸುವ ಕೋಲಾಹಲವನ್ನು ಯಾರು ಎಬ್ಬಿಸಿದರು ಎಂಬುದನ್ನು ಈ ಲೇಖಕರು ಪರ್ಯಾಲೋಚಿಸಿದರೆ ಚೆನ್ನಾಗಿ ಕಾಣಬರುವುದು. ಮತ್ತು ನಮ್ಮ ಸ್ಟಾರ್ ಪತ್ರದ ಲೇಖನಗಳನ್ನೆಲ್ಲಾ ನಿಷ್ಪಕ್ಷಪಾತದೃಷ್ಟಿಯಿಂದ ಅವಲೋಕಿಸಿದವರಿಗೆ ಅವುಗಳು ಇತರರ ಅಸೂಯಾ ಲೇಖನಗಳಿಂದ ಹುಟ್ಟಿದ ಲೇಖನಗಳೆಂದು ಸ್ಪಷ್ಟವಾಗಿ ವ್ಯಕ್ತವಾಗುವುವೇ ಹೊರತು ಆ ಪ್ರತಿಪಕ್ಷದವರಂತೆ ತೀಟೆಯ ಜಗಳಕ್ಕಾಗಿಯೂ ಪರೋಕ್ಷಾರ್ಜನೆಗಾಗಿಯೂ ಉದ್ದೇಶಿಸಲ್ಪಟ್ಟು ಹೊರಟ ಲೇಖನಗಳಲ್ಲವೆಂಬುದು ಚೆನ್ನಾಗಿ ಗೊತ್ತಾಗುವುದು.

ಸನಾತನ ಮಹರ್ಷಿಗಳು ಲೋಕಹಿತಾರ್ಥವಾಗಿ ವಿದ್ಯಾವೃದ್ಧಿಯನ್ನು ರಕ್ಷಣೆ ಮಾಡಿದವರೆಂದೂ ಅವರು ಸ್ವಾರ್ಥತ್ಯಾಗಿಗಳೆಂದೂ ಅವರ ವಂಶೀಯರಾದ ಬ್ರಾಹ್ಮಣರನ್ನು ಈಗಿನ ಜನರು ದೂಷಿಸುವುದರಿಂದ ಅನರ್ಥವನ್ನುಂಟುಮಾಡಿಕೊಳ್ಳುವರೆಂದೂ ಈ ನಮ್ಮ ಮಿತ್ರರು ಹೇಳುತ್ತಾರಷ್ಟೆ. ಸನಾತನ ಮಹರ್ಷಿಗಳೇ? ಅವರಿಂದ ಈಚೆಗೆ ಎಷ್ಟೋ ಕಾಲದವರೆಗೆ ಬ್ರಾಹ್ಮಣವರ್ಣೀಯರೇ ವಿದ್ಯಾರಕ್ಷಣೆಗಾಗಿ ಶ್ರಮಪಟ್ಟರೆಂಬುದನ್ನೂ ಅವರೇ ಜ್ಞಾನಮೂಲರೆಂದೂ ಅವರ ಉಪಕೃತಿಯು ಅನರ್ಘವೆಂದೂ ಹೇಳುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಈ ಸಂದರ್ಭದಲ್ಲಿ ನಾವು ಹೇಳುವುದಿಷ್ಟೇ ಇರುತ್ತದೆ. ಆಗಣ ಕಾಲದ ಬ್ರಾಹ್ಮಣ್ಯದಲ್ಲಿದ್ದ ಸಾದ್ಗುಣ್ಯದಲ್ಲಿ ಸಹಸ್ರದಲ್ಲೊಂದುಪಾಲೂ ಈಗಣವರಲ್ಲಿಲ್ಲ. ಅವರ ಪರಹಿತಾಚಾರಣೆಯು ತ್ರಿಕರಣಶುದ್ಧವಾಗಿದ್ದಿತು. "ಲೋಕಾಸ್ಸಮಸ್ತಾಸ್ಸುಖಿನೋಭವಂತು" ಎಂಬ ವಾಕ್ಯವು ಅವರ ಮಾತಿನಲ್ಲಿ ಮಾತ್ರವೇ ಅಲ್ಲದೆ ಆಚರಣೆಯಲ್ಲೂ ಇದ್ದಿತು. ವಿದ್ಯೆಯೂ ಜ್ಞಾನವೂ ಪರರಿಗೆ ಉಪಯೋಗಿಸಬಾರದು. ತಾವು ಮೂಲತಃ ಧರ್ಮಭ್ರಷ್ಟರಾಗಿದ್ದರೂ ಪರರ ಮೇಲೆ ಧಾರ್ಮಿಕಸ್ವಾಮ್ಯವನ್ನು ಸ್ಥಾಪಿಸಿಕೊಳ್ಳಲಿಕ್ಕೆ ಹಿಂದೆಗೆಯಬಾರದು. ಎಂಬ ಭಾವಗಳ ಗಂಧವು ಕೂಡ ಅವರುಗಳ ಮನಸ್ಸಿಗೆ ಅಂಟಿರಲಿಲ್ಲ. ಹೀಗಿರುವಾಗ ಅನ್ವರ್ಥಬ್ರಾಹ್ಮಣ್ಯವುಳ್ಳವರಾಗಿದ್ದ ಆಗಣವರಿಗೂ ನಾಮಮಾತ್ರದ ಬ್ರಾಹ್ಮಣರಾಗಿರುವ ಇವರಿಗೂ ಎಲ್ಲಿಯ ಸಂಬಂಧವು? ತಮ್ಮಲ್ಲಿ ಹೇಳಿಕೊಳ್ಳತಕ್ಕ ಸಾತ್ವಿಕಬ್ರಾಹ್ಮಣ್ಯದ ಬಂಡವಾಳವಿಲ್ಲದ್ದರಿಂದಲೇ ಈ ಸಮಯಕ್ಕೆ ತಮ್ಮ ಸನಾತನಬ್ರಾಹ್ಮಣ್ಯವನ್ನು ತಂದು ಒಡ್ಡಿಕೊಂಡು ನ್ಯಾಯವನ್ನು ಪ್ರದರ್ಶಿಸಲಿಕ್ಕೆ ಈ ನಮ್ಮ ಮಿತ್ರರು ಪ್ರವೃತ್ತರಾಗಬೇಕಾಯಿತಲ್ಲವೆ? ಪೂರ್ವಕಾಲದಂತಹ ಪಾರಮಾರ್ಥಿಕ ಲೋಕಹಿತಚಿಂತಕ ಸ್ವಾರ್ಥಪರಿತ್ಯಾಗಪೂರ್ವಕವಾದ ನಿಜಬ್ರಾಹ್ಮಣ್ಯವನ್ನು ಈಗ ಯಾರು ಹೊಂದಿರುವರೋ ಅಂಥವರ ವಿಷಯದಲ್ಲಿ ಇತರರಿಗೆಲ್ಲಾ ಗೌರವಾಭಿಮಾನಗಳೂ ಭಕ್ತಿವಿಶ್ವಾಸಗಳೂ ಇದ್ದೇ ಇರುತ್ತವೆ. ಅಜಾತಶತ್ರುಗಳಾದ ಅಂಥವರ ವಿಷಯದಲ್ಲಿ ಹಗೆಯನ್ನು ಯಾರುತಾನೇ ಮಾಡುವರು? ನಿಂದಿಸುವುದಕ್ಕೆ ಆಸ್ಪದವೆಲ್ಲಿರುವುದು? ನುಡಿಯಲ್ಲಿ ಪುರಾತನರಂತೆಯೂ ನಡೆಯಲ್ಲಿ ಕಿರಾತರಂತೆಯೂ ಇರುತ್ತ ಆತ್ಮೈಕಲಾಭಕ್ಕೋಸ್ಕರ ಲೋಕದ ಅಭ್ಯುದಯವನ್ನೆಲ್ಲಾ ಕರಬುತ್ತಿರುವ ನಾಮತಃ ಬ್ರಾಹ್ಮಣರೂ ಕೃತ್ಯತಃ ಅಸುರರೂ ಆಗಿ ಯಾರು ಇರುವರೋ ಅಂಥವರನ್ನು ಮಾತ್ರ ಲೋಕವು ಧಿಕ್ಕರಿಸುವುದೂ ದ್ವೇಷಿಸುವುದೂ ಸ್ವಭಾವವೇ ಆಗಿರುತ್ತದೆ. ಪರರಲ್ಲಿ ಪ್ರೀತಿಯನ್ನೂ ಗೌರವವನ್ನೂ ಹಿತಚಿಂತನೆಯನ್ನೂ ಹೊಂದದಿರುವವನಲ್ಲಿ ಇತರರು ಪ್ರೀತಿಗೌರವಹಿತಚಿಂತನೆಯನ್ನು ಹೇಗೆತಾನೇ ಮಾಡುವರು? ನಂಬಿದವರನ್ನುದ್ಧರಿಸದೆ ವಂಚಿಸುವ ಗುಣವು ಜಗದೀಶ್ವರನಲ್ಲಿದ್ದರೂ ಅವನನ್ನು ಲೋಕವು ಪರಿತ್ಯಜಿಸುವುದಲ್ಲವೆ?

ಸಂಪದಾರ್ಜನೆಯ ವೃತ್ತಿಗಳನ್ನೆಲ್ಲಾ ಬ್ರಾಹ್ಮಣರು ಪರರಿಗೆ ಬಿಟ್ಟು ತಾವು ಸಾತ್ವಿಕವೃತ್ತಿಯಲ್ಲಿರುವರೆಂದು ಈ ಲೇಖಕರು ಹೇಳುತ್ತಾರೆ. ಸಂಪದಾರ್ಜನೆಯ ವೃತ್ತಿಗಳಲ್ಲಿ ಪ್ರವೇಶಿಸಬಾರದೆಂದು ಆಗ್ಗೂ ಈಗ್ಗೂ ಕೂಡ ಇತರರಾರೂ ಇವರನ್ನು ನಿರೋಧಿಸಲಿಲ್ಲವಷ್ಟೆ? ಸಂಪದಾರ್ಜನೆಯ ವಿಮುಖತ್ವದಿಂದ ಸಾತ್ವಿಕರಾಗಿದ್ದವರು ತಮ್ಮ ಜಪತಪೋನುಷ್ಠಾನಗಳನ್ನು ಬಿಟ್ಟು ಸೇವಾರೂಪವಾದ ನೀಚವೃತ್ತಿಗಿಳಿದು ಆರೂಢಪತಿತರೆನಿಸಿಕೊಂಡುದೇಕೆ? ಹಾಗೆ ತಾವು ಪತಿತರಾಗಿದ್ದರೂ ಪತಿತತ್ವದಿಂದ ಉದ್ಧೃತರಾಗಿ ಉನ್ನತಸ್ಥಿತಿಗೆ ಹೋಗಬೇಕೆಂದು ಪ್ರಯತ್ನಿಸತಕ್ಕವರನ್ನು ದ್ವೇಷಿಸಿ ನಿರೋಧಿಸುವುದು ಇವರಿಗೆ ಮತ್ತು ಪಾತಿತ್ಯದಾಯಕವಲ್ಲವೆ? ಆ ಪರಿಜ್ಞಾನವು ಇವರಿಗೇಕಿಲ್ಲ? ತಮ್ಮ ವೃತ್ತಿಯಿಂದ ಭ್ರಷ್ಟರಾಗಿ ಆ ಸುರಸಂಪತ್ತಿಯಲ್ಲಿ ಕೆಲವು ಮುಳುಗುತ್ತಿರುವವರು ಪರರ ಅಭ್ಯುದಯವನ್ನು ಸೈರಿಸಲಾರದೆ ದ್ವೇಷಿಸಿ ಮಹಾಪ್ರಜಾಸ್ತೋಮದ ವೈರವನ್ನು ಕಟ್ಟಿಕೊಳ್ಳುವುದರಿಂದ ಇವರಿಗೆ ಇಹದ ಹಾನಿಯಲ್ಲದೆ, ಪರರ ತಂಟೆಗೆ ಹೋಗದೆ ಪರರ ಅಭ್ಯುದಯದಲ್ಲಿ ಸೈರಣೆಯನ್ನೇ ತೋರಿಸಿಕೊಂಡಿರುವ ಆ ಇತರ ಪ್ರಜೆಗಳಿಗೆ ಇಹಪರ ಹಾನಿಯೂ ಬಾಗುವುದಕ್ಕೆ ಯಾವ ಕಾರಣವೂ ಇಲ್ಲ.

ಮುಂದಾಳುಗಳಾದ ಬ್ರಾಹ್ಮಣರು ಹಿಂದುಳಿದವರೆಲ್ಲಾ ಅನುವರ್ತಿಸಿಕೊಂಡು ಇರಬೇಕೆಂಬ ಧರ್ಮಬೋಧೆಯನ್ನು ಈ ಲೇಖಕರು ಮಾಡಿತ್ತಾರೆ. ಬ್ರಾಹ್ಮಣರು ಮುಂಬರಿದವರೆನ್ನೋ ನಿಜ. ಇವರನ್ನು ಮುಂಬರಿಸಿಕೊಂಡೇ ಇತರರು ಇದುವರೆಗೂ ಇದ್ದರೆಂಬುದನ್ನು ಲೋಕವೇ ಬಲ್ಲದು. ಆ ಮುಂಬರಿದವರು ತಮ್ಮ ಹಿಂಬಾಲಕರೆಲ್ಲಾ ತಮ್ಮಂತೆ ಮುಂಬರಿಯುವುದಕ್ಕೆ ನಿರಾತಂಕವನ್ನು ಮಾಡಿ, ಆ ಹಿಂದುಳಿದವರ ಹಿತಚಿಂತನೆಯನ್ನು ನಿಷ್ಕಪಟವಾಗಿ ಮಾಡುತ್ತಿದ್ದರೆ ಆ ಮುಂಬರಿದವರಿಗೆ ಮುಂದಾಳುತನವು ನಿರುಪಾಧಿಕವಾಗಿ ಇದ್ದೇ ಇರುತ್ತಿದ್ದಿತು. ಆದರೆ ಇವರು ಹಾಗೆ ಮಾಡಲಿಲ್ಲ. ಇವರು ಮುಂಬರಿದರೇ ಹೊರತು ಮುಂದಾಳುತನವನ್ನು ಉಳಿಸಿಕೊಳ್ಳಲಿಲ್ಲ. ಅದಕ್ಕೆ ತಕ್ಕ ಗುಣವು ಇವರಲ್ಲಿರುವುದೆಂದು ಇತರರ ನಿದರ್ಶನಕ್ಕೆ ಬರಲಿಲ್ಲ. ಆದುಕಾರಣ ಇವರ ಮುಂಬರಿಯುವಿಕೆಯು ಸ್ವಾರ್ಥೈಕಪ್ರಯೋಜನಕವೇ ಹೊರತು ಪರಾರ್ಥೋದ್ದೇಶದಲ್ಲವೆಂದು ಇತರರು ಕಂಡುಕೊಂಡರು. ಇವರನ್ನು ಹಿಂಬಾಲಿಸುವುದರಿಂದ ತಮಗೆ ಆತ್ಮವಿನಾಶವೇ ಹೊರತು ಉದ್ಧಾರವಿಲ್ಲವೆಂದು ಅವರು ಅನುಭವಪೂರ್ವಕವಾಗಿ ಸಿದ್ಧಾಂತಪಡಿಸಿಕೊಂಡರು. ಮತ್ತು ತಮ್ಮ ಹಿಂದಾಳುತನವನ್ನು ಕಳೆದುಕೊಂಡು ಮುಂಬರಿಯುವುದಕ್ಕೆ ಆಕ್ಷೇಪಣೀಯವಲ್ಲದ ನ್ಯಾಯಮಾರ್ಗವನ್ನು ಹಿಡಿದುಕೊಂಡರು. ತಮ್ಮ ಕಾಲುಮೇಲೆ ತಾವು ನಿಂತುಕೊಳ್ಳಲಿಕ್ಕೂ ತಮ್ಮ ಬೊಗಸೆಯ ನೀರನ್ನು ತಾವು ಕುಡಿದು ದಣಿವಾರಿಸಿಕೊಳ್ಳಲಿಕ್ಕೂ ಅವರು ಪ್ರಯತ್ನಿಸಿದರು. ಅದರಲ್ಲಿ ತಪ್ಪೇನುಂಟು? ಹಿಂದಾಳುಗಳು ಕಣ್ಣಿಲ್ಲದ ಕುರುಡರಾಗಿದ್ದಾರೆಂದು ಭಾವಿಸಿ ಅವರ ಕೈಹಿಡಿದುಕೊಂಡುಹೋಗಿ ಹಳ್ಳಕ್ಕೆ ದಾಟಿಕೋರಿಸಿಬಿಟ್ಟು ತಾನು ನುಣುಚಿಕೊಳ್ಳುವುದು ಕಣ್ಣುಳ್ಳ ದೊಡ್ಡ ಮನುಷ್ಯನಿಗೆ ಧರ್ಮವಾದೀತೆ?

ಕೊನೆಯಲ್ಲಿ ಈ ಲೇಖಕರು ದೇಶಹಿತಾರ್ಥವಾಗಿ ವೃತ್ತಪತ್ರಿಕಾಕರ್ತೃಗಳೂ ಪ್ರಜಾಮಂಡಲಿಯಲ್ಲಿ ಪರಸ್ಪರ ವೈಮನಸ್ಯ ವೃದ್ಧಿಯಾಗತಕ್ಕ ಲೇಖನಗಳಿಗೆ ಎಡೆಗುಡಬಾರದೆಂದು ಹೇಳಿರುವ ಅಭಿಪ್ರಾಯವನ್ನು ನಾವು ಮನಃಪೂರ್ವಕವಾಗಿ ಗೌರವಿಸುತ್ತೇವೆ. ನಾವು ಮೇಲೆಯೇ ಹೇಳಿರುವಂತೆ ಪರಮತದ್ವೇಷಾಸೂಯೆಗಳು ನಮಗೆ ಬೇಕಿಲ್ಲ. ಅವುಗಳಿಂದ ಕುದಿಯುತ್ತಿರುವವರು ದೇಶಹಿತದೃಷ್ಟಿಯೂ ಇಲ್ಲದೆ ಆತ್ಮಕರ್ತವ್ಯ ಗೌರವದ ಪರಿಜ್ಞಾನವೂ ಇಲ್ಲದೆ ಹಿಂದುಳಿದವರ ಅಭ್ಯುದಯವನ್ನು ಮಚ್ಚರಿಸಿ ಅವರ ಏಳ್ಗೆಗೆ ಭಂಗವನ್ನು ತರಬೇಕೆಂದು ಇಂದ್ರಜಾಲ ಮಹೇಂದ್ರಜಾಲಗಳನ್ನು ಮಾಡಿದರೆ ಅದಕ್ಕೆ ಪ್ರತಿಮಂತ್ರ ತಂತ್ರಗಳನ್ನು ಮಾಡದಿದ್ದರೆ ಆ ಹಿಂದುಳಿದವರ ಆತ್ಮರಕ್ಷಣೆಗೆ ಮಾರ್ಗವೆಲ್ಲಿರುವುದು? ಹಿಂದುಳಿದವರ ಅಭ್ಯುದಯದಲ್ಲಿ ತ್ರಿಮತಸ್ಥ ಬ್ರಾಹ್ಮಣರಿಗೆ ಅಸೂಯೆಯಿಲ್ಲವೆಂಬುದು ನಿಜವಾಗಿದ್ದರೆ ಸಾಧ್ವೀ ಸಂಪದಭ್ಯುದಯ ಮೊದಲಾದ ಪತ್ರಿಕೆಗಳಲ್ಲಿಯೂ ಇತರ ರಾಜಕೀಯ ಸಭೆಗಳಲ್ಲಿಯೂ ಮಿಲ್ಲರ್ ಸಂಘದ ವರದಿ ವಿದ್ಯಾಭ್ಯಾಸದ ಮೆಮೊರಾಂಡಂ ಇವುಗಳ ಮೇಲಣ ಚರ್ಚೆಯನ್ನೂ ಅವುಗಳ ಉದಯಕ್ಕೆ ಮೂಲಭೂತರಾದ ಶ್ರೀಮತ್ ಮಹಾರಾಜರ ಸರ್ಕಾರವನ್ನೂ ದ್ವೇಷಿಸದೆ ದೂಷಿಸದೆ ೧ ತಿಂಗಳ ಮಟ್ಟಿಗಾದರೂ ಸುಮ್ಮನಿರಿಸುವಂತೆ ಮಾಡಿ ಆ ಬಳಿಕ ಇತರ ಪತ್ರಿಕೆಗಳೂ ಮಹಾಜನರೂ ಏನಾದರೂ ಇವರ ವಿಷಯವಾಗಿ ಖಂಡನೆಯ ಪ್ರಸ್ತಾಪವನ್ನೆತ್ತುವರೇನೆಂಬುದನ್ನು ತಿಳಿದುನೋಡಲಿ, ಆಗ ತೀಟೆಯ ಜಗಳವೂ ವೈರೋತ್ಪಾದನೆಯೂ ಯಾರ ಉದ್ದೇಶವೆಂಬುದು ಈ ನಮ್ಮ ಲೇಖಕ ಮಿತ್ರರಿಗೆ ಗೊತ್ತಾಗುವುದು.

ಈ ನಮ್ಮ ಬ್ರಾಹ್ಮಣ ಮಿತ್ರರಂಥ ದೊಡ್ಡ ಮನುಷ್ಯರು ಈಗಣ ಸಮಯದಲ್ಲಿ ದಾರಿತಪ್ಪಿ ನಡೆಯುತ್ತಿರುವ ತಮ್ಮ ಸಜಾತೀಯ ಪತ್ರಿಕಾಕರ್ತರಿಗೆ ಚತುರುಪಾಯದಿಂದಲೂ ಎಚ್ಚರಿಕೆ ಕೊಟ್ಟು ಅವರು ಈಗ ಬಿದ್ದುಹೋಗುತ್ತಿರುವ ಕಾಡುದಾರಿಯಿಂದ ಉದ್ಧರಿಸಿದರೇನೆಯೇ ಪ್ರಜಾಸಮುದಾಯದಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳೂ ಬ್ರಾಹ್ಮಣ್ಯ ಗೌರವವೂ ಉಳಿದುಕೊಂಡಾವಲ್ಲದೆ ಇತರರಿಗೆ ಎಚ್ಚರಿಸುವ ಮಾತ್ರದಿಂದ ಏನೂ ಚರಿತಾರ್ಥವಾಗುವುದಿಲ್ಲ. ವಿದ್ಯಾಬುದ್ಧಿ ವಿವೇಕ ಸಂಪತ್ತಿಯುಳ್ಳ ದೇಶಾಭಿಮಾನಿಗಳೂ ದೇಶಶಾಂತಿರಕ್ಷಣವೇ ಪ್ರಧಾನ ಧರ್ಮವಾಗುಳ್ಳ ಪ್ರಭುತ್ವದವರೂ ಈಗಣ ದ್ವೇಷದಾವಾನಲವನ್ನು ಆರಿಸುವುದಕ್ಕೆ ಪ್ರಯತ್ನಿಸುವಲ್ಲಿ ಉದಾಸೀನರಾಗತಕ್ಕುದಲ್ಲ; ಅಗ್ನಿಯ ಉತ್ಪತ್ತಿಸ್ಥಾನವೆಲ್ಲಿರುವುದೆಂಬುದನ್ನು ತಿಳಿದು ಬಲವಾದ ಮಣ್ಣನ್ನೊ ನೀರನ್ನೊ ಅದರ ಬಾಯ್ತುಂಬಾ ಹಾಕಿ ತಣ್ಣಗೆ ಮಾಡಿದಲ್ಲದೆ ಅದರ ದೇಶಾನರ್ಥ ಜ್ವಾಲಾವಿಜೃಂಭಣವು ನಿಲ್ಲಲಾರದು.

DOES HIGH EDUCATIONAL ATTAINMENT MEAN ALSO LARGENESS OF HEART?

The Indian mind is surcharged with serious problems of thought. The really thinking mind, the real well wisher of India, the Indian whose interests are really at sake is thrust into the background. The platform demagogues who are very few in number have been roaming about the country sowing seeds of disaffection and disunion in the minds of innocent people. These demagague perambulators got into our State at the invitation of some selfish people who have nothing to lose in either reputations or proprietory interests and did the mischief at an unfortunate time when we ourselves were busy with our own internal affairs. The activities of these disaffected few of the State are spreading unchecked and the riotous spirit has spread to capture the imagination of the young population. Some people who held offices of trust in the State and who have been honored by the beloved Sovereign of ours with titles are presiding over the lawless meetings of these youngsters and imparting to these young minds ideas which have no reason for development in a Native Indian State. The angle of loyalty has all of a sudden changed with the result that Tilak demonstrations without justification have become the events of the day. What is the aim and object of these mad-like parades in the streets with the cries of Jai Tilak? Do youngsters of 7 to 15 years of age understand the principle–if principle there is–underlying these demonstrations? There is only one irresistable conclusion to which these demonstrations point viz. the minds of the elders inciting the youngsters to these boistrous conduct, are diseased.

Another activity with which these disaffected minds have been associated is the Miller Committee Report, regarding which any amount of undeserved correspondence has got into the press. An unholy crusade is organised to embarrass a Government which unlike its predecessors wants to do its duty to the people, which is unbiassed in its constitution to do its service to the country and which has the interests—not of one favoured community gloating in its high educational attainments but which has the interests of the many communities whose voice has been smothered under the noxious influence of the one community administration. We invite perusal of the communication of a Mysorean in the Indian Social Reformer under date 27-7-21 who calls the rule in Mysore a Nabob Rule, and who indulges in miserably grovelling expressions in touching upon personal qualifications and who without an idea of what comparison is, goes to compare a Noble Dewan with

an individual whose claims he imagins have been superseded not caring to think who this latter in station of life was yesterday. It is safe to leave individuals untouched. Fields of strife, intrigues and machinations. What expressions these are and to whom by right of high attainments they belong? These are the fond expressions of the Mysorean at Bombay. We are sorry for the light talk in which the Monopolists are indulging, in the columns of News Papers. We are unable to see there is any occasion for this outburst of indignation. Their grievances are imaginary. They have the talking monopoly in the public because of their high educational attainments. This has given them a right to talk as the Mysorean at Bombay has talked in the Indian Social Reformer. The Mysorean at Bombay is mistaken in his calculation that the Lingayets are indecently vocal in propagating Brahmin hatred–as he calls the discussion on the Miller Committee Report. We regret to notice that he is trying to create bad blood by means of such unwarranted remarks. The public can see whose vocal note has spread high and wide. The Lingayet so far as we are able to know has not gone abroad advertising his imaginary grievance. He is by culture and habit a non-violent sufferer. Why should his name be dragged unnecessarily into a controversy which did not originate in him? We fear that it would be a wrong move if the broad issues of equal representation in Public service are to be involved with expressions which only indicate a desire, a clever desire to cause a split in the large and strong body of non-Monopolists, who are not represented in Public service, into small sections and then to begin to prey on their weaknesses. Who are the persons that are in the roll of agitators in the Bombay and Madras Presidencies which are on the frontiers of our Province? It is the same class of persons here who are taking a leading part in the dangerous non-co-operation movement. The best part of Western training was appropriated by them at the public expense. They are the very persons who are now up in arms against the Constitutional Government which conferred so many blessings on them. It is the same with us here. All the benefits of the Western education were theirs. So long as their joys and comforts are left uninterfered with, they are the most enlightened on earth. The blunder cannot ever be perpetuated. The fruits of blunder are in evidence in British India. The so called high educational attainment which was given to a small class at the expense of the public purse is now in evidence in the shape of heartless non-Co-operation. The mere brain-power is destructive. It results in revolt and rebelliousness at the slightest occasion for out-burst. We see it in the out-burst which has come out of the Miller Committee Report. Thank God that Mysore has come to know of the evils of monopolisation of power and influence by one class of people before it is too late. We are surprised at the vast noise which these handful of men are making. It is all the noise of powerful brains with no place for loving hearts. The country wants not that efficiency which brain attainment can give but she wants the joys of great hearts. The brain-power people are doing havoc of destroying peace in our neighbouring Provinces. We have a Maharaja whom we love, to whom we devote our hearts and we do not want that brain fever of Satyamurtis and Kasturis. We see that high brain attainment by itself is not largeness of heart as it is evidenced by that outburst on the Miller Committee Report.

SATAN MASQUERADING IN SHEEPSKIN.

The one thing in Mysore that has been attracting the public mind, more than anything else, is the subject of recruitment to Public service, which has been monopolised by one class of people, whose total population does not come to more than 2 lakhs out of a pupulation of 58 lakhs. Our opponents have been doubting–we do not know whether they are seriously doing so–the necessity of such an order. Though sufficient and proper reasons have been given in the preamble of the Government order itself, in the following few lines we will try to show that such a measure was very necessary and long due in the interests of Public service.

During the days of the British Commission i.e. previous to 1877 out of 264 officers in the Civil List, 124 were Europeans, and out of the remaining 140 officers, 62 were non-Brahmins. In the next 37 years the European element became gradually extinct and the Brahmin element became alarmingly disproportionate. So much so, in 1914 out of 602 men on the Civil List, 448 were Brahmins and other Hindus were only 60. The number of offices that fell to the lot of non-Brahmins in the Lower and Subordinate grades of services might have been still fewer. All possible care was taken not only to perpetuate but also to accentuate this state of affairs by formulating rules of recruitment, which are known for their rigorousness. As there was great paucity of educated men among non-Brahmins, who lived mostly in villages, where no such facilities for education as they existed in District and Taluk headquarters were available, there was no justification to raise the standard of educational qualification required to get the various appointments. The minimum qualification to get a certain appointment which was originally fixed as the passing of the Lower Secondary Examination, came to be suddenly raised to be either the Matriculation Examination or the Entrance Examination, whenever there were available a number of non-Brahmin candidates who had passed the former examination. Thus by systamatically revising the rules of recruitment from time to time, all the offices in the State were rendered inaccessible to members of the educationally Backward communities. The following will illustrate what we have said above:—"Claims of candidates for appointment or promotion to the post of Excise Assistant Inspector (carrying a pay of Rs. 30 a month) shall be accorded preferance in the following order i.e. (a) Graduates who have passed the Excise Test, (b) Under Graduates who have passed the Excise Test, and (c) non-Graduates who have passed the Excise Test.

This sort of self-aggrandisment naturally extended to the various Representative Institutions in the State. The Representative Assembly from the time of its inception until 1908, was called the Assembly of Representative Ryots and Merchants. In 1882 out of a total strength of 250 members, the Brahmins were only 50. The cunning Shanbogue, the influential school master, the all pervading lawyer, and the over-domineering Inamdar, all of whom were Brahmins, with the active co-operation of the local authorities, flattered and be-guiled the misinformed electorate, and got themselves elected to the Representative Bodies, posing themselves as the true representatives of the people of the State. Even in nominations they got the lion's share. Till the year 1914, there was no non-official non-Brahmin member on the Legislative Council. In 1917 out of 290 members in the Representative Assembly 150 were Brahmins. After fealing themselves quite secure in the respective places to which they were elected, they began to represent themselves and to misrepresent others, setting at naught all the hopes they held out to their constituents during the time of election, and we have no reason to think that our experience in the future would be different. No better illustration is required than the one we had in the Birthday sessions of the Representative Assembly. Now, can any one say that there was no justification for the order?

To

THE EDITOR "MYSORE STAR" MYSORE.

Sir,

Very recently a party known as the Nationalist party which is said to be the branch of the National Congress of British India has sprung up here—I think only to add insult to injury. What necessity is there for such an organisation in a Native State like Mysore is not clear. Mysore State has distinguished itself as an ideal State among its other sister States by being ruled by a most enlightened and up to date monarch who has always the interests of his subjects close to his heart and who is conceding year after year such rights to his subjects that he is bringing the people into closer touch with the administration of the State day after day.

In fact we have in Mysore such an accomplished administration that it is far in advance than any other State in India. There is the Representative Assembly where the representatives of the people meet and *discuss freely* the problems of the State, again there is the Legislative Council where the non-Official Members are in a majority and again there is the Executive Council and the Dewan who are all Indians with our beloved Maharaja at the head. When such being the case it is not possible to conceive the motive with which our privileged friends here have organised the so called Nationalist party. Probably they want to import into this State of peace and progress the germs of disturbance and disorder, and if that is the case is it not the duty of every partriotic loyal subject of H. H. the Maharaja to see that such mischievous organisations are nipped in the bud. There is no doubt that any organisation that is based upon malice and self elevation at the cost of others and seeks outwardly or inwardly to obstruct the progress of the dumb millions by protesting against measures calculated towards their uplift will certainly die the death of "The Peoples' Convention" and its organ the "Karnataka."

Probably our Brahmin friends in Mysore thought such an organisation a good device to split the united non-Brahmin camp into parties and thereby have their objects achieved. The people in Mysore should protest with all the power at their command against the inaguration of any Congress party in Mysore. There is absolutely no meaning why there should be any Congress party in a Native State where the conditions obtained are quite different from those of British India. We for Heaven's sake do not want any fire-brands amidst us.

We are sufficiently rewarded by keeping our trust all these years in the power-loving priestly class. These Monopolists are crying so loudly that there should exist no racial inequality and want perfect liberty, freternity and power; while these in their turn do not like to concede even an atom of liberty, freternity and power to the backward people of their own country. It is difficult to understand the sense of these people when they resent to see that their own countrymen are being made to befit themselves to stand on an equality with the others while they are clamouring both in the press and on the platform and spend a lot of money on deputations to see that they are made to stand on an equality with a foreign people whose religion, language, customs and manners are quite different. These people cannot tolerate the standing of a Panchama close to them while they heartily condescend to shake hands with the same man when he is converted a Christian.

These Monopolists complain so loudly about the treatment meted out to them by the Britishers. But I only want these people to turn their search light into their own affairs. Is not the scene more striking and appealing? Forgetting of the past, what was and is the attitute of these people when that democrat, the intellectual genius Mr. C. R. Reddy began to impart education to an unfortunate section of the people by advocating free admittance into all the public schools. Will not this show the conservative spirit of these people?

Further they are waging a fight with a Government which has shown such marked favour towards them in having allotted 50 percent of the appointments for two lacks of people and the other 50 percent to 56 lacks. By this the avaricious nature of these people has become all the more patent.

Another thing is could anything be more unjust than the unscrupulous attacks levelled against the people's man Sir Kantharaj Urs who is labouring day and night to do the greatest good to the greatest number. What was the state of affairs when he assumed the high office of Dewanship? The treasury had become empty. The country was drawn into a debt. A blind imitation, by that engineer statesman, of the administration of America and other countries unmindful of the disparity between this country and those countries only increased the number of departments which the people at large could not digest but all the same tended to increase the burden of the poor ryot. It was under these circumstances that our stalwart champion of the people's cause Sir Kantharaj Urs was asked to take up the high office. Able as he was he took up the offer and by giving a free play to the genius of his statesmanship has by reducing on one side all that was superfluous, and on the other supplying all that was necessary brought about such marvelous changes that when the history of Mysore comes to be written his name will standforth most prominent and as a symbol of equity, justice and progress. Dewans may come and Dewans may go but the name of Sir Kantaraj Urs will go on for ever.

The opposition that is being carried on by a microscopic minority is assuming such proportions that it is the imperative duty of every member of the backward classes to understand the gravity of the situation and act up to the times.

M. L. S.

ಉಪವಾಸ.

ಐರ್ಲಂಡಿನ ನಾಯಕರಲ್ಲಿ ಒಬ್ಬನೂ ಕಾರ್ಕ್ ಪಟ್ಟಣದ ಮೇಯರೂ ಆದ ಮಾರ್ ಸ್ವಿನಿಯವರು ಕಾರಗೃಹದಲ್ಲಿ ಆಹಾರಗಳನ್ನು ಸ್ವೀಕರಿಸದೆ ೭೪ ದಿನಗಳಿದ್ದು ಮೃತರಾದರಷ್ಟೆ. ಈ ಉಪವಾಸದ ವಿಷಯಕವಾದ ಚರ್ಚೆಯು ಸೀಮೆಯ ಪತ್ರಿಕೆಗಳಲ್ಲಿ ಇನ್ನೂ ತಪ್ಪಿಲ್ಲ. ಸ್ವಲ್ಪವೂ ಆಹಾರವಿಲ್ಲದೆ ೨|| ತಿಂಗಳವರೆಗೆ ಆತನು ಹೇಗೆ ಜೀವಿಸಿದ್ದನೆಂದು ಅಲ್ಲಿಯ ಜನರು ಆಶ್ಚರ್ಯಪಡುತ್ತಿರುವರು. ಆದರೆ ಶಾಸ್ತ್ರಜ್ಞರು ಮಾತ್ರ ಇದರಲ್ಲಿ ಆಶ್ಚರ್ಯಪಡದೆ ಅದು ಸಾಮಾನ್ಯವಾದುದೆಂದು ಅಭಿಪ್ರಾಯಪಡುತ್ತಾರೆ. ಮನುಷ್ಯನ ದೇಹದಲ್ಲಿ ಸಾಧಾರಣವಾಗಿ ಅವನ ಪ್ರತಿ ದಿನದ ಕೆಲಸಗಳಿಗೆ ಬೇಕಾಗುವುದಕ್ಕಿಂತ ಬಹಳ ಮಿಗಿಲಾಗಿ ಕೊಬ್ಬು ಅವನ ದೇಹದಲ್ಲಿ ಉಳಿದುಕೊಳ್ಳುವುದೆಂತಲೂ, ಮನುಷ್ಯನು ಆಹಾರವನ್ನು ಸ್ವೀಕರಿಸದೆ ಬಿಟ್ಟ ಕಾಲದಲ್ಲಿ ಹಾಗೆ ಉಳಿದಿರುವ ಹೆಚ್ಚು ಭಾಗದ ಕೊಬ್ಬೇ ಆಗಣ ಕಾಲದ ಉಪಯೋಗಕ್ಕೆ ಬರುವುದೆಂತಲೂ, ಆ ಕೊಬ್ಬು ಸಂಪೂರ್ಣವಾಗಿ ಮುಗಿದು ಹೋಗುವವರೆಗೂ ಅವನು ಬದುಕಿರುವುದು ಸಾಧ್ಯವೆಂತಲೂ ಶಾಸ್ತ್ರಜ್ಞರು ಹೇಳುತ್ತಾರೆ. ಕಳೆದ ೩೦ ವರ್ಷ ಕಾಲದಲ್ಲಿ ಉಪವಾಸ ಮಾಡಿಕೊಂಡು ದೀರ್ಘಕಾಲ ಬದುಕಿದ್ದವರು ಅನೇಕರು ಸೀಮೆಯಲ್ಲಿದ್ದರಂತೆ. ಸುಶಿಯೆಂಬುವನು ೩೦ ದಿನಗಳ ಕಾಲ ಉಪವಾಸ ಮಾಡಿಕೊಂಡು ಬದುಕಿದ್ದನು. ಡಾಕ್ಟರ್ ಟರ್ನರ್ ಎಂಬ ಪ್ರಖ್ಯಾತ ಶಾಸ್ತ್ರಜ್ಞನು ४೦ ದಿನಗಳವರೆಗೆ ಅಖಂಡೋಪವಾಸದಲ್ಲಿದ್ದನು. ಪ್ರಖ್ಯಾತ ಶಿಲ್ಪಿಯಾದ ಮಾರ್ಲಟಿ ಎಂಬಾತನು ೪೦ ದಿನಗಳವರೆಗೆ ತಿಂಡಿಯೇ ಇಲ್ಲದೆ ಜೀವಿಸಿದ್ದನು. ಉಪವಾಸವನ್ನಾರಂಭಿಸಿದಾಗ ೧೦-೧೨ ದಿನಗಳವರೆಗೆ ಆತನಿಗೆ ಯಾವ ಕಷ್ಟವೂ ತೋರಲಿಲ್ಲವಂತೆ. ಬಳಿಕ ಅವನಿಗೆ ಬಹಳ ಬಲಹೀನತೆಯುಂಟಾಯಿತು, ದೇಹದ ಶೀತೋಷ್ಣತೆಯು ಬಹಳ ತಗ್ಗಿಹೋ

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಅಗಸ್ಟ್ ತಾ|| ೨೧ ನೆಯ ಭಾನುವಾರ.

ದ್ವೇಷಶಾಂತಿಯು.

ನಮ್ಮ ಬ್ರಾಹ್ಮಣ ಸಹೋದರರಾದ ದೊಡ್ಡಮನುಷ್ಯರೊಬ್ಬರು ಪರಸ್ಪರ ಸೌಹಾರ್ದಾಪೇಕ್ಷೆಯಿಂದ ಬರೆದಿರುವ ಲೇಖನವೊಂದನ್ನು ಈ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಮತ್ತೂ ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ತಿಳಿಯಿಸುವುದು ಕೂಡ ಅವಶ್ಯಕವೆಂದು ಭಾವಿಸುತ್ತೇವೆ. ಬ್ರಾಹ್ಮಣಜನವರ್ಗದಲ್ಲಿ ಯುಕ್ತಾಯುಕ್ತ ಪರಿಜ್ಞಾನವುಳ್ಳವರು ಸುತರಾಂ ಇಲ್ಲವೆಂದು ನಾವು ಭಾವಿಸಿಲ್ಲ. ಹಿಂದುಳಿದ ಜನವರ್ಗಗಳ ಅಭ್ಯುನ್ನತಿಗಾಗಿ ಪ್ರಭುತ್ವದವರು ಮಾಡುತ್ತಿರುವ ನ್ಯಾಯವಾದ ಸಾಹಾಯ್ಯಪ್ರೋತ್ಸಾಹಗಳನ್ನು ಕುರಿತು ಅಸೂಯೆ ಪಡತಕ್ಕವರ ಸಂಖ್ಯೆಯು ತ್ರಿಮತಸ್ಥ ಬ್ರಾಹ್ಮಣರುಗಳಲ್ಲಿ ಎಷ್ಟಿದೆಯೋ ಅಷ್ಟು ಸಂಖ್ಯೆಯು "ಸರ್ವೇಜನಾಸ್ಸುಖಿನೋಭವಂತು" ಎಂಬುದನ್ನು ಅನುಷ್ಠಾನದಲ್ಲಿ ತೋರಿಸಿ, ಹಿಂದುಳಿದವರ ಅಭ್ಯುದಯಕ್ಕಾಗಿ ಈಗ ನಡೆಯುತ್ತಿರುವ ಪ್ರಯತ್ನಗಳಲ್ಲಿ ಸಾನುಭೂತಿ ಸಂತೋಷಗಳನ್ನೋ ಅಥವಾ ತಾಟಸ್ಥ್ಯವನ್ನೋ ವಹಿಸಿರತಕ್ಕವರ ಸಂಖ್ಯೆಯು ಬಹಳ ಕಡಿಮೆಯೆಂದು ಹಿಂದುಳಿದ ಜನವರ್ಗಗಳೆಲ್ಲಾ ತಿಳಿದುಕೊಂಡಿರುತ್ತವೆ. ಅದು ಸುಳ್ಳಾಗಿರುವ ಪಕ್ಷದಲ್ಲಿ ಮಿಲ್ಲರ್ ಸಂಘದ ವರದಿಯ ಮೇಲೂ ವಿದ್ಯಾಭ್ಯಾಸದ ಮೆಮೊರಾಂಡಮು, ಹಿಂದುಳಿದ ತರಗತಿಗಳ ವಿದ್ಯಾರ್ಥಿವೇತನಗಳು ಇತ್ಯಾದಿಗಳ ಸಂಬಂಧವಾಗಿಯೂ ಆಗ್ರಹಾಸಮಾಧಾನಾಸೂಯೆಗಳನ್ನು ಸೂಸುತ್ತಿರುವ ಬ್ರಾಹ್ಮಣ ಪತ್ರಿಕೆಗಳ ಮತ್ತು ಅವುಗಳ ಕೂಟದವರ ದ್ವೇಷಾಸೂಯಾ ಲೇಖನಗಳನ್ನು ಖಂಡಿಸುವ ಪ್ರತಿಲೇಖನಗಳನ್ನು ನಮ್ಮ ಬ್ರಾಹ್ಮಣ ಸಹೋದರರು ಬಹಿರಂಗವಾಗಿ ಪ್ರಕಟಿಸಬಹುದಾಗಿದ್ದಿತು. ಅಂಥ ಕಾರ್ಯವನ್ನು ಯಾರೂ ಮಾಡದೆ ಇತರರ ಅಭ್ಯುದಯವನ್ನು ಸೈರಿಸದೆ ವೃತ್ತಪತ್ರಿಕೆಗಳ ಮೂಲಕವೂ ಇತರ ರೀತಿಯಿಂದಲೂ ನಡೆಯುತ್ತಿರುವ ಕೋಲಾಹಲಗಳಿಗೆ ಅಂತ್ಯವೇ ಇಲ್ಲದಿರುವುದರಿಂದ ಬ್ರಾಹ್ಮಣ ಜನಸಾಮಾನ್ಯದ ಅಭಿಪ್ರಾಯಗಳೂ ಹೀಗೆಯೇ ಇರುವುವೆಂದು ಇತರರೆಲ್ಲಾ ಪರಿಭಾವಿಸಲು ಅವಕಾಶವಾಗಿರುತ್ತದೆ. ಆದರೂ ಅವರಲ್ಲಿ ಪರಶ್ರೇಯಸ್ಸಿನಲ್ಲಿ ಅಸೂಯೆ ಪಡದಿರತಕ್ಕವರೂ ಈ ಕೋಲಾಹಲಕ್ಕೆ ಸೇರದೆ ತಟಸ್ಥರಾಗಿರತಕ್ಕವರೂ ಎಷ್ಟೋ ಜನರು ಆ ಜನವರ್ಗದಲ್ಲಿ ಇಲ್ಲದೆ ಇಲ್ಲವೆಂದು ನಾವು ತಿಳಿದಿರುತ್ತೇವೆ. ಆದರೆ ಅಂಥವರುಗಳು ಇಂಥ ಸಮಯಗಳಲ್ಲಿ ತಾಟಸ್ಥ್ಯವನ್ನು ವಹಿಸಿ ಕುಳಿತುಕೊಳ್ಳುವುದರಿಂದ "ಮೌನಮಾರ್ಧಾಂಗೀಕಾರಃ" ಎಂಬಂತೆ ಈ ಕೋಲಾಹಲದಲ್ಲಿ ಅವರೂ ಭಾಗಿಗಳೇ ಎಂಬ ಪರಿಭಾವನೆಗೆ ಎಡೆಕೊಟ್ಟವರಾಗಿರುತ್ತಾರೆ. ಮತ್ತು "ಪಾವಕೋ ಲೋಹಸಂಸರ್ಗಾದ್ಯಾತಿಮುದ್ಗರತಾಡನಂ" ಎಂಬಂತೆ ಅವರ ಸಜಾತೀಯ ಸಂಬಂಧದಿಂದ ವಾಕ್ಪ್ರಹಾರಗಳು ಸಂಭವಿಸಲೇಬೇಕಾಗುತ್ತದೆ.

ಕರ್ಣಕಠೋರಗಳಾದ ಬ್ರಾಹ್ಮಣನಿಂದಾಪರ ಲೇಖನಗಳನ್ನು ಸ್ಟಾರ್ ಪತ್ರದಲ್ಲಿ ಸದಾ ಬರೆಯುತ್ತಿರುವೆವೆಂದು ಈ ನಮ್ಮ ಮಿತ್ರರು ನಮ್ಮ ಮೇಲೆ ಹೊರಿಸಿದ ಅಪವಾದವು ಭ್ರಮಾತ್ಮಕವಾದುದೆಂದು ನಾವು ತಿಳಿಯಿಸಬೇಕಾಗಿರುತ್ತದೆ. ಮೊಟ್ಟಮೊದಲು ಸರ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಹಿಂದುಳಿದವರ ವಿದ್ಯಾರ್ಥಿವೇತನಗಳು ಏರ್ಪಟ್ಟಾರಭ್ಯ ಮೊದಲು ಅವರಮೇಲೆ ಆಗ್ರಹಪಟ್ಟು ಅಸಮಾಧಾನವನ್ನು ವ್ಯಕ್ತಪಡಿಸುವ ಲೇಖನಗಳನ್ನು ಯಾರು ಆರಂಭಮಾಡಿದರು? ಅಂಥ ಸಹಾಯವನ್ನು ಹಿಂದುಳಿದ ಪ್ರಜೆಗಳಿಗೆ ಮಾಡಲುಜ್ಜುಗಿಸಿದ ಪ್ರಭುತ್ವದವರನ್ನು ಕೂಡ ನಿಂದಿಸುವುದಕ್ಕೆ ಯಾರು ತೊಡಗಿದರು? ಅದರಂತೆ ಈಚೆಗೆ ವಿದ್ಯಾಭ್ಯಾಸದ ಮೆಮೊರಾಂಡಮು ಮಿಲ್ಲರ್ ಸಂಘದ ವರದಿ ಇವುಗಳು ಹೊರಬಿದ್ದ ಬಳಿಕ ಅವುಗಳಿಂದ ಹಿಂದುಳಿದ ಜನವರ್ಗಗಳಿಗೆ ಲಾಭವಾಗುವುದೆಂಬುದನ್ನು ತಿಳಿದು ಅದನ್ನು ಸೈರಿಸಲಾರದೆ, ಹಿಂದುಳಿದವರನ್ನೂ ಅವರಿಗೆ ಸಹಾಯ ಮಾಡಲು ಪ್ರವರ್ತಿಸಿದ ಶ್ರೀಮನ್ಮಹಾರಾಜರನ್ನೂ ಅವರ ಪ್ರಭುತ್ವದವರನ್ನೂ ವಾಚಾಮಗೋಚರವಾಗಿ ಸ್ಥಳಪರಸ್ಥಳದ ಪತ್ರಿಕೆಗಳಲ್ಲೆಲ್ಲಾ ದೂಷಿಸುವ ಕೋಲಾಹಲವನ್ನು ಯಾರು ಎಬ್ಬಿಸಿದರು ಎಂಬುದನ್ನು ಈ ಲೇಖಕರು ಪರ್ಯಾಲೋಚಿಸಿದಂತೆ ಕಾಣುವುದಿಲ್ಲ. ಮತ್ತು ನಮ್ಮ ಸ್ಟಾರ್ ಪತ್ರದ ಲೇಖನಗಳನ್ನೆಲ್ಲಾ ವಿಮರ್ಶಾದೃಷ್ಟಿಯಿಂದ ಅವಲೋಕಿಸಿದವರಿಗೆ ಅವುಗಳು ಇತರರ ಅಸೂಯಾ ಲೇಖನಗಳ ಖಂಡನೆಗಾಗಿ ಹುಟ್ಟಿದ ಲೇಖನಗಳೆಂದು ಸ್ಪಷ್ಟವಾಗಿ ವ್ಯಕ್ತವಾಗುವುವೇ ಹೊರತು ಆ ಪ್ರತಿಪಕ್ಷದವರಂತೆ ತೀಟೆಯ ಜಗಳಕ್ಕಾಗಿಯೂ ಪರೋತ್ಕರ್ಷಾಸಹನೆಯ ಮೂಲಕವಾಗಿಯೂ ಉದ್ದೇಶಪಟ್ಟು ಹೊರಟ ಲೇಖನಗಳಲ್ಲವೆಂಬುದು ಚೆನ್ನಾಗಿ ಗೊತ್ತಾಗುವುದು.

ಸನಾತನ ಮಹರ್ಷಿಗಳು ಲೋಕಹಿತಾರ್ಥವಾಗಿ ವಿದ್ಯಾನಿಧಿಯನ್ನು ರಕ್ಷಣೆ ಮಾಡಿದವರೆಂದೂ ಅವರು ಸ್ವಾರ್ಥಪರಿತ್ಯಾಗಿಗಳೆಂದೂ ಅವರ ವಂಶೀಯರಾದ ಬ್ರಾಹ್ಮಣರನ್ನು ಈಗಣ ಜನರು ದೂಷಿಸುವುದರಿಂದ ಅನರ್ಥವನ್ನುಂಟುಮಾಡಿಕೊಳ್ಳುವರೆಂದೂ ಈ ನಮ್ಮ ಮಿತ್ರರು ಹೇಳಿರುತ್ತಾರಷ್ಟೆ. ಸನಾತನ ಮಹರ್ಷಿಗಳೇಕೆ? ಅವರಿಂದ ಈಚೆಗೆ ಎಷ್ಟೋಕಾಲದವರೆಗೂ ಬ್ರಾಹ್ಮಣವರ್ಣೀಯರೇ ವಿದ್ಯಾರಕ್ಷಣೆಗಾಗಿ ಶ್ರಮಪಟ್ಟರೆಂಬುದನ್ನೂ ಅವರೇ ಜ್ಞಾನಮೂಲರೆಂದೂ ಅವರ ಉಪಕೃತಿಯು ಅನರ್ಘವೆಂದೂ ಹೇಳಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಈ ಸಂದರ್ಭದಲ್ಲಿ ನಾವು ಹೇಳುವುದಿಷ್ಟೇ ಇರುತ್ತದೆ. ಆಗಣ ಕಾಲದ ಬ್ರಾಹ್ಮಣ್ಯದಲ್ಲಿದ್ದ ಸಾದ್ಗುಣ್ಯದಲ್ಲಿ ಸಹಸ್ರದಲ್ಲೊಂದುಪಾಲೂ ಈಗಣವರಲ್ಲಿಲ್ಲ. ಅವರ ಪರಹಿತಾಚಾರಣೆಯು ತ್ರಿಕರಣಶುದ್ಧವಾಗಿದ್ದಿತು. "ಲೋಕಾಸ್ಸಮಸ್ತಾಸ್ಸುಖಿನೋಭವಂತು" ಎಂಬ ವಾಕ್ಯವು ಅವರ ಮಾತಿನಲ್ಲಿ ಮಾತ್ರವೇ ಅಲ್ಲದೆ ಆಚರಣೆಯಲ್ಲೂ ಇದ್ದಿತು. ವಿದ್ಯೆಯೂ ಜ್ಞಾನವೂ ಪರರಿಗೆ ಉಪಯೋಗಿಸಬಾರದು. ತಾವು ಮೂಲತಃ ಧರ್ಮಭ್ರಷ್ಟರಾಗಿದ್ದರೂ ಪರರ ಮೇಲೆ ಧಾರ್ಮಿಕಸ್ವಾಮ್ಯವನ್ನು ಸ್ಥಾಪಿಸಿಕೊಳ್ಳಲಿಕ್ಕೆ ಹಿಂದೆಗೆಯಬಾರದು. ಎಂಬ ಭಾವಗಳ ಗಂಧವು ಕೂಡ ಅವರುಗಳ ಮನಸ್ಸಿಗೆ ಅಂಟಿರಲಿಲ್ಲ. ಹೀಗಿರುವಾಗ ಅನ್ವರ್ಥಬ್ರಾಹ್ಮಣ್ಯವುಳ್ಳವರಾಗಿದ್ದ ಆಗಣವರಿಗೂ ನಾಮಮಾತ್ರದ ಬ್ರಾಹ್ಮಣರಾಗಿರುವ ಇವರಿಗೂ ಎಲ್ಲಿಯ ಸಂಬಂಧವು? ತಮ್ಮಲ್ಲಿ ಹೇಳಿಕೊಳ್ಳತಕ್ಕ ಸಾತ್ವಿಕಬ್ರಾಹ್ಮಣ್ಯದ ಬಂಡವಾಳವಿಲ್ಲದ್ದರಿಂದಲೇ ಈ ಸಮಯಕ್ಕೆ ತಮ್ಮ ಸನಾತನಬ್ರಾಹ್ಮಣ್ಯವನ್ನು ತಂದು ಒಡ್ಡಿಕೊಂಡು ನ್ಯಾಯವನ್ನು ಪ್ರದರ್ಶಿಸಲಿಕ್ಕೆ ಈ ನಮ್ಮ ಮಿತ್ರರು ಪ್ರವೃತ್ತರಾಗಬೇಕಾಯಿತಲ್ಲವೆ? ಪೂರ್ವಕಾಲದಂತಹ ಪಾರಮಾರ್ಥಿಕ ಲೋಕಹಿತಚಿಂತಕ ಸ್ವಾರ್ಥಪರಿತ್ಯಾಗಪೂರ್ವಕವಾದ ನಿಜಬ್ರಾಹ್ಮಣ್ಯವನ್ನು ಈಗ ಯಾರು ಹೊಂದಿರುವರೋ ಅಂಥವರ ವಿಷಯದಲ್ಲಿ ಇತರರಿಗೆಲ್ಲಾ ಗೌರವಾಭಿಮಾನಗಳೂ ಭಕ್ತಿವಿಶ್ವಾಸಗಳೂ ಇದ್ದೇಇರುತ್ತವೆ. ಅಜಾತಶತ್ರುಗಳಾದ ಅಂಥವರ ವಿಷಯದಲ್ಲಿ ಹಗೆಯನ್ನು ಯಾರುತಾನೇ ಮಾಡುವರು? ನಿಂದಿಸುವುದಕ್ಕೆ ಆಸ್ಪದವೆಲ್ಲಿರುವುದು? ನುಡಿಯಲ್ಲಿ ಪುರಾತನರಂತೆಯೂ ನಡೆಯಲ್ಲಿ ಕಿರಾತರಂತೆಯೂ ಇರುತ್ತ ಆತ್ಮೈಕಲಾಭಕ್ಕೋಸ್ಕರ ಲೋಕದ ಅಭ್ಯುದಯವನ್ನೆಲ್ಲಾ ಕರಬುತ್ತಿರುವ ನಾಮತಃ ಬ್ರಾಹ್ಮಣರೂ ಕೃತ್ಯತಃ ಅಸುರರೂ ಆಗಿ ಯಾರು ಇರುವರೋ ಅಂಥವರನ್ನು ಮಾತ್ರ ಲೋಕವು ಧಿಕ್ಕರಿಸುವುದೂ ದ್ವೇಷಿಸುವುದೂ ಸ್ವಭಾವವೇ ಆಗಿರುತ್ತದೆ. ಪರರಲ್ಲಿ ಪ್ರೀತಿಯನ್ನೂ ಗೌರವವನ್ನೂ ಹಿತಚಿಂತನೆಯನ್ನೂ ಹೊಂದದಿರುವವನಲ್ಲಿ ಇತರರು ಪ್ರೀತಿಗೌರವಹಿತಚಿಂತನೆಯನ್ನು ಹೇಗೆತಾನೇ ಮಾಡುವರು? ನಂಬಿದವರನ್ನುದ್ಧರಿಸದೆ ವಂಚಿಸುವ ಗುಣವು ಜಗದೀಶ್ವರನಲ್ಲಿದ್ದರೂ ಅವನನ್ನು ಲೋಕವು ಪರಿತ್ಯಜಿಸುವುದಲ್ಲವೆ?

ಸಂಪದಾರ್ಜನೆಯ ವೃತ್ತಿಗಳನ್ನೆಲ್ಲಾ ಬ್ರಾಹ್ಮಣರು ಪರರಿಗೆ ಬಿಟ್ಟು ತಾವು ಸಾತ್ವಿಕವೃತ್ತಿಯಲ್ಲಿರುವರೆಂದು ಈ ಲೇಖಕರು ಹೇಳುತ್ತಾರೆ. ಸಂಪದಾರ್ಜನೆಯ ವೃತ್ತಿಗಳಲ್ಲಿ ಪ್ರವೇಶಿಸಬಾರದೆಂದು ಆಗ್ಗೂ ಈಗ್ಗೂ ಕೂಡ ಇತರರಾರೂ ಇವರನ್ನು ನಿರೋಧಿಸಲಿಲ್ಲವಷ್ಟೆ? ಸಂಪದಾರ್ಜನೆಯ ವಿಮುಖತ್ವದಿಂದ ಸಾತ್ವಿಕರಾಗಿದ್ದವರು ತಮ್ಮ ಜಪತಪೋನುಷ್ಠಾನಗಳನ್ನು ಬಿಟ್ಟು ಸೇವಾರೂಪವಾದ ನೀಚವೃತ್ತಿಗಿಳಿದು ಆರೂಢಪತಿತರೆನಿಸಿಕೊಂಡುದೇಕೆ? ಹಾಗೆ ತಾವು ಪತಿತರಾಗಿದ್ದರೂ ಪತಿತತ್ವದಿಂದ ಉದ್ಧೃತರಾಗಿ ಉನ್ನತಸ್ಥಿತಿಗೆ ಹೋಗಬೇಕೆಂದು ಪ್ರಯತ್ನಿಸತಕ್ಕವರನ್ನು ದ್ವೇಷಿಸಿ ನಿರೋಧಿಸುವುದು ಇವರಿಗೆ ಮತ್ತಷ್ಟು ಪಾತಿತ್ಯದಾಯಕವಲ್ಲವೆ? ಆ ಪರಿಜ್ಞಾನವು ಇವರಿಗೇಕಿಲ್ಲ? ತಮ್ಮ ವೃತ್ತಿಯಿಂದ ಭ್ರಷ್ಟರಾಗಿ ಆ ಸುರಸಂಪತ್ತಿಯಲ್ಲಿ ತೇಲಿ ಮುಳುಗುತ್ತಲಿರುವವರು ಪರರ ಅಭ್ಯುದಯವನ್ನು ಸೈರಿಸಲಾರದೆ ದ್ವೇಷಿಸಿ ಮಹಾಪ್ರಜಾಸ್ತೋಮದ ವೈರವನ್ನು ಕಟ್ಟಿಕೊಳ್ಳುವುದರಿಂದ ಇವರಿಗೆ ಇಹಪರ ಹಾನಿಯಲ್ಲದೆ, ಪರರ ತಂಟೆಗೆ ಹೋಗದೆ ಪರರ ಅಭ್ಯುದಯದಲ್ಲಿ ಸೈರಣೆಯನ್ನೇ ತೋರಿಸಿಕೊಂಡಿರುವ ಆ ಇತರ ಪ್ರಜೆಗಳಿಗೆ ಇಹಪರ ಹಾನಿಯುಂಟಾಗುವುದಕ್ಕೆ ಯಾವ ಕಾರಣವೂ ಇಲ್ಲ.

ಮುಂದಾಳುಗಳಾದ ಬ್ರಾಹ್ಮಣರನ್ನು ಹಿಂದುಳಿದವರೆಲ್ಲಾ ಅನುವರ್ತಿಸಿಕೊಂಡು ಇರಬೇಕೆಂಬ ಧರ್ಮಬೋಧೆಯನ್ನು ಈ ಲೇಖಕರು ಮಾಡಿರುತ್ತಾರೆ. ಬ್ರಾಹ್ಮಣರು ಮುಂಬರಿದವರೇನೋ ನಿಜ. ಅವರನ್ನು ಮುಂಬರಿಸಿಕೊಂಡೇ ಇತರರು ಇದುವರೆಗೂ ಇದ್ದರೆಂಬುದನ್ನು ಲೋಕವೇ ಬಲ್ಲುದು. ಆ ಮುಂಬರಿದವರು ತಮ್ಮ ಹಿಂಬಾಲಕರೆಲ್ಲಾ ತಮ್ಮಂತೆ ಮುಂಬರಿಯುವುದಕ್ಕೆ ನಿರಾತಂಕವನ್ನು ಮಾಡಿ, ಆ ಹಿಂದುಳಿದವರ ಹಿತಚಿಂತನೆಯನ್ನು ನಿಷ್ಕಪಟವಾಗಿ ಮಾಡುತ್ತಿದ್ದರೆ ಈ ಮುಂಬರಿದವರಿಗೆ ಮುಂದಾಳುತನವು ನಿರುಪಾಧಿಕವಾಗಿ ಇದ್ದೇಇರುತ್ತಿದ್ದಿತು. ಆದರೆ ಇವರು ಹಾಗೆ ಮಾಡಲಿಲ್ಲ. ಇವರು ಮುಂಬರಿದರೇ ಹೊರತು ಮುಂದಾಳುತನವನ್ನುಳಿಯಿಸಿಕೊಳ್ಳಲಿಲ್ಲ. ಅದಕ್ಕೆ ತಕ್ಕ ಗುಣವು ಇವರಲ್ಲಿರುವುದೆಂದು ಇತರರ ನಿದರ್ಶನಕ್ಕೆ ಭರಲಿಲ್ಲ. ಅದುಕಾರಣ ಇವರ ಮುಂಬರಿಯುವಿಕೆಯು ಸ್ವಾರ್ಥೈಕಪ್ರಯೋಜಕವೇ ಹೊರತು ಪರಾರ್ಥೋದ್ದೇಶದ್ದಲ್ಲವೆಂದು ಇತರರು ಕಂಡುಕೊಂಡರು. ಇವರನ್ನು ಹಿಂಬಾಲಿಸುವುದರಿಂದ ತಮಗೆ ಆತ್ಮವಿನಾಶವೇ ಹೊರತು ಉದ್ಧಾರವಿಲ್ಲವೆಂದು ಅವರು ಅನುಭವಪೂರ್ವಕವಾಗಿ ಸಿದ್ಧಾಂತಪಡಿಸಿಕೊಂಡರು. ಮತ್ತು ತಮ್ಮ ಹಿಂದಾಳುತನವನ್ನು ಕಳೆದುಕೊಂಡು ಮುಂಬರಿದಲ್ಲದೆ ಆತ್ಮೋದ್ಧಾರವಿಲ್ಲವೆಂದು ದೃಢನಿಶ್ಚಯಮಾಡಿಕೊಂಡರು. ತಮ್ಮ ಕಾಲುಮೇಲೆ ತಾವು ನಿಂತುಕೊಳ್ಳಲಿಕ್ಕೂ ತಮ್ಮ ಬೊಗಸೆಯ ನೀರನ್ನು ತಾವು ಕುಡಿದು ದಣಿವಾರಿಸಿಕೊಳ್ಳಲಿಕ್ಕೂ ಅವರು ಪ್ರಯತ್ನಿಸಿರುವರು. ಅದರಲ್ಲಿ ತಪ್ಪೇನುಂಟು? ಹಿಂದಾಳುಗಳು ಕಣ್ಣಿಲ್ಲದ ಕುರುಡರಾಗಿದ್ದಾರೆಂಬುದನ್ನು ತಿಳಿದೂ ಅವರ ಕೈಹಿಡಿದುಕೊಂಡುಹೋಗಿ ಹಳ್ಳಕ್ಕೆ ದಾರಿತೋರಿಸಿಬಿಟ್ಟು ತಾನು ನುಣುಚಿಕೊಳ್ಳುವುದು ಕಣ್ಣುಳ್ಳ ದೊಡ್ಡಮನುಷ್ಯನಿಗೆ ಧರ್ಮವಾದೀತೆ?

ಕೊನೆಯಲ್ಲಿ ಈ ಲೇಖಕರು ದೇಶಹಿತಾರ್ಥವಾಗಿ ವೃತ್ತಪತ್ರಿಕಾಕರ್ತರೆಲ್ಲರೂ ಪ್ರಜಾಮಂಡಲಿಯಲ್ಲಿ ಪರಸ್ಪರ ವೈಮನಸ್ಯ ವೃದ್ಧಿಯಾಗತಕ್ಕ ಲೇಖನಗಳಿಗೆ ಎಡೆಗುಡಬಾರದೆಂದು ಹೇಳಿರುವ ಅಭಿಪ್ರಾಯವನ್ನು ನಾವು ಮನಃಪೂರ್ವಕವಾಗಿ ಗೌರವಿಸುತ್ತೇವೆ. ನಾವು ಮೇಲೆಯೇ ಹೇಳಿರುವಂತೆ ಪರಮತದ್ವೇಷಾಸೂಯೆಗಳು ನಮಗೆ ಬೇಕಿಲ್ಲ. ಅವುಗಳಿಂದ ಕುದಿಯುತ್ತಿರುವವರು ದೇಶಹಿತದೃಷ್ಟಿಯೂ ಇಲ್ಲದೆ ಆತ್ಮಕರ್ತವ್ಯ ಗೌರವದ ಪರಿಜ್ಞಾನವೂ ಇಲ್ಲದೆ ಹಿಂದುಳಿದವರ ಅಭ್ಯುದಯವನ್ನು ಮಚ್ಚರಿಸಿ ಅವರ ಏಳ್ಗೆಗೆ ಭಂಗವನ್ನು ತರಬೇಕೆಂದು ಇಂದ್ರಜಾಲ ಮಹೇಂದ್ರಜಾಲಗಳನ್ನು ಮಾಡಿದರೆ ಅದಕ್ಕೆ ಪ್ರತಿಮಂತ್ರ ತಂತ್ರಗಳನ್ನು ಮಾಡದಿದ್ದರೆ ಆ ಹಿಂದುಳಿದವರ ಆತ್ಮರಕ್ಷಣೆಗೆ ಮಾರ್ಗವೆಲ್ಲಿರುವುದು? ಹಿಂದುಳಿದವರ ಅಭ್ಯುದಯದಲ್ಲಿ ತ್ರಿಮತಸ್ಥ ಬ್ರಾಹ್ಮಣರಿಗೆ ಅಸೂಯೆಯಿಲ್ಲವೆಂಬುದು ನಿಜವಾಗಿದ್ದರೆ ಸಾಧ್ವೀ ಸಂಪದಭ್ಯುದಯ ಮೊದಲಾದ ಪತ್ರಿಕೆಗಳಲ್ಲಿಯೂ ಇತರ ರಾಜಕೀಯ ಸಭೆಗಳಲ್ಲಿಯೂ ಮಿಲ್ಲರ್ ಸಂಘದ ವರದಿ ವಿದ್ಯಾಭ್ಯಾಸದ ಮೆಮೊರಾಂಡಂ ಇವುಗಳ ಮೇಲಣ ಚರ್ಚೆಯನ್ನೂ ಅವುಗಳ ಉದಯಕ್ಕೆ ಮೂಲಭೂತರಾದ ಶ್ರೀಮನ್ ಮಹಾರಾಜರ ಸರ್ಕಾರವನ್ನೂ ದ್ವೇಷಿಸದೆ ದೂಷಿಸದೆ ೧ ತಿಂಗಳ ಮಟ್ಟಿಗಾದರೂ ಸುಮ್ಮನಿರಿಸುವಂತೆ ಮಾಡಿ ಆ ಬಳಿಕ ಇತರ ಪತ್ರಿಕೆಗಳೂ ಮಹಾಜನರೂ ಏನಾದರೂ ಇವರ ವಿಷಯವಾಗಿ ಖಂಡನೆಯ ಪ್ರಸ್ತಾಪವನ್ನೆತ್ತುವರೇನೆಂಬುದನ್ನು ತಿಳಿದುನೋಡಲಿ, ಆಗ ತೀಟೆಯ ಜಗಳವೂ ವೈರೋತ್ಪಾದನೆಯೂ ಯಾರ ಉದ್ದೇಶವೆಂಬುದು ಈ ನಮ್ಮ ಲೇಖಕ ಮಿತ್ರರಿಗೆ ಗೊತ್ತಾಗುವುದು.

ಈ ನಮ್ಮ ಬ್ರಾಹ್ಮಣ ಮಿತ್ರರಂಥ ದೊಡ್ಡ ಮನುಷ್ಯರು ಈಗಣ ಸಮಯದಲ್ಲಿ ದಾರಿತಪ್ಪಿ ನಡೆಯುತ್ತಿರುವ ತಮ್ಮ ಸಜಾತೀಯ ಪತ್ರಿಕಾಕರ್ತರಿಗೆ ಚತುರುಪಾಯದಿಂದಲೂ ಎಚ್ಚರಿಕೆ ಕೊಟ್ಟು ಅವರು ಈಗ ಬಿದ್ದುಹೋಗುತ್ತಿರುವ ಕಾಡುದಾರಿಯಿಂದ ಉದ್ಧರಿಸಿದರೇನೆಯೇ ಪ್ರಜಾಸಮುದಾಯದಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳೂ ಬ್ರಾಹ್ಮಣ್ಯ ಗೌರವವೂ ಉಳಿದುಕೊಂಡಾವಲ್ಲದೆ ಇತರರಿಗೆ ಎಚ್ಚರಿಸುವ ಮಾತ್ರದಿಂದ ಏನೂ ಚರಿತಾರ್ಥವಾಗುವುದಿಲ್ಲ. ವಿದ್ಯಾಬುದ್ಧಿ ವಿವೇಕ ಸಂಪತ್ತಿಯುಳ್ಳ ದೇಶಾಭಿಮಾನಿಗಳೂ ದೇಶಶಾಂತಿರಕ್ಷಣವೇ ಪ್ರಧಾನ ಧರ್ಮವಾಗುಳ್ಳ ಪ್ರಭುತ್ವದವರೂ ಈಗಣ ದ್ವೇಷದಾವಾನಲವನ್ನು ಆರಿಸುವುದಕ್ಕೆ ಪ್ರಯತ್ನಿಸುವಲ್ಲಿ ಉದಾಸೀನರಾಗತಕ್ಕುದಲ್ಲ; ಅಗ್ನಿಯ ಉತ್ಪತ್ತಿಸ್ಥಾನವೆಲ್ಲಿರುವುದೆಂಬುದನ್ನು ತಿಳಿದು ಬಲವಾದ ಮಣ್ಣನ್ನೊ ನೀರನ್ನೊ ಅದರ ಬಾಯ್ತುಂಬಾ ಹಾಕಿ ತಣ್ಣಗೆ ಮಾಡಿದಲ್ಲದೆ ಅದರ ದೇಶಾನರ್ಥ ಜ್ವಾಲಾವಿಜೃಂಭಣವು ನಿಲ್ಲಲಾರದು.

DOES HIGH EDUCATIONAL ATTAINMENT MEAN ALSO LARGENESS OF HEART?

The Indian mind is surchatged with serious problems of thought. The really thinking mind, the real well wisher of India, the Indian whose interests are really at sake is thrust into the background. The platform demagogues who are very few in number have been roaming about the country sowing seeds of disaffection and disunion in the minds of innocent people. These demagague perambulators got into our State at the invitation of some selfish people who have nothing to lose in either reputations or proprietory interests and did the mischief at an unfortunate time when we ourselves were busy with our own internal affairs. The activities of these disaffected few of the State are spreading unchecked and the riotous spirit has spread to capture the imagination of the young population. Some people who held offices of trust in the State and who have been honored by the beloved Sovereign of ours with titles are presiding over the lawless meetings of these youngsters and imparting to these young minds ideas which have no reason for development in a Native Indian State. The angle of loyalty has all of a sudden changed with the result that Tilak demonstrations without justification have become the events of the day. What is the aim and object of these mad-like parades in the streets with the cries of Jai Tilak? Do youngsters of 7 to 15 years of age understand the principle–if principle there is–underlying these demonstrations? There is only one irresistable conclusion to which these demonstrations point viz. the minds of the elders inciting the youngsters to these boistrous conduct, are diseased.

Another activity with which these disaffected minds have been associated is the Miller Committee Report, regarding which any amount of undeserved correspondence has got into the press. An unholy crusade is organised to embarrass a Government which unlike its predecessors wants to do its duty to the people, which is unbiassed in its constitution to do its service to the country and which has the interests—not of one favoured community gloating in its high educational attainments but which has the interests of the many communities whose voice has been smothered under the noxious influence of the one community administration. We invite perusal of the communication of a Mysorean in the Indian Social Reformer under date 27-7-21 who calls the rule in Mysore a Nabob Rule, and who indulges in miserably grovelling expressions in touching upon personal qualifications and who without an idea of what comparison is, goes to compare a Noble Dewan with

an individual whose claims he imagins have been superseded not caring to think who this latter in station of life was yesterday. It is safe to leave individuals untouched. Fields of strife, intrigues and machinations. What expressions these are and to whom by right of high attainments they belong? These are the fond expressions of the Mysorean at Bombay. We are sorry for the light talk in which the Monopolists are indulging, in the columns of News Papers. We are unable to see there is any occasion for this outburst of indignation. Their grievances are imaginary. They have the talking monopoly in the public because of their high educational attainments. This has given them a right to talk as the Mysorean at Bombay has talked in the Indian Social Reformer. The Mysorean at Bombay is mistaken in his calculation that the Lingayets are indecently vocal in propagating Brahmin hatred–as he calls the discussion on the Miller Committee Report. We regret to notice that he is trying to create bad blood by means of such unwarranted remarks. The public can see whose vocal note has spread high and wide. The Lingayet so far as we are able to know has not gone abroad advertising his imaginary grievance. He is by culture and habit a non-violent sufferer. Why should his name be dragged unnecessarily into a controversy which did not originate in him? We fear that it would be a wrong move if the broad issues of equal representation in Public service are to be involved with expressions which only indicate a desire, a clever desire to cause a split in the large and strong body of non-Monopolists, who are not represented in Public service, into small sections and then to begin to prey on their weaknesses. Who are the persons that are in the roll of agitators in the Bombay and Madras Presidencies which are on the frontiers of our Province? It is the same class of persons here who are taking a leading part in the dangerous non-co-operation movement. The best part of Western training was appropriated by them at the public expense. They are the very persons who are now up in arms against the Constitutional Government which conferred so many blessings on them. It is the same with us here. All the benefits of the Western education were theirs. So long as their joys and comforts are left uninterfered with, they are the most enlightened on earth. The blunder cannot ever be perpetuated. The fruits of blunder are in evidence in British India. The so called high educational attainment which was given to a small class at the expense of the public purse is now in evidence in the shape of heartless non-Co-operation. The mere brain-power is destructive. It results in revolt and rebelliousness at the slightest occasion for out-burst. We see it in the out-burst which has come out of the Miller Committee Report. Thank God that Mysore has come to know of the evils of monopolisation of power and influence by one class of people before it is too late. We are surprised at the vast noise which these handful of men are making. It is all the noise of powerful brains with no place for loving hearts. The country wants not that efficiency which brain attainment can give but she wants the joys of great hearts. The brain-power people are doing havoc of destroying peace in our neighbouring Provinces. We have a Maharaja whom we love, to whom we devote our hearts and we do not want that brain fever of Satyamurtis and Kasturis. We see that high brain attainment by itself is not largeness of heart as it is evidenced by that outburst on the Miller Committee Report.

SATAN MASQUERADING IN SHEEPSKIN.

The one thing in Mysore that has been attracting the public mind, more than anything else, is the subject of recruitment to Public service, which has been monopolised by one class of people, whose total population does not come to more than 2 lakhs out of a population of 58 lakhs. Our opponents have been doubting–we do not know whether they are seriously doing so–the necessity of such an order. Though sufficient and proper reasons have been given in the preamble of the Government order itself, in the following few lines we will try to show that such a measure was very necessary and long due in the interests of Public service.

During the days of the British Commission i.e. previous to 1877 out of 264 officers in the Civil List, 124 were Europeans, and out of the remaining 140 officers, 62 were non-Brahmins. In the next 37 years the European element became gradually extinct and the Brahmin element became alarmingly disproportionate. So much so, in 1914 out of 602 men on the Civil List, 448 were Brahmins and other Hindus were only 60. The number of offices that fell to the lot of non-Brahmins in the Lower and Subordinate grades of services might have been still fewer. All possible care was taken not only to perpetuate but also to accentuate this state of affairs by formulating rules of recruitment, which are known for their rigorousness. As there was great paucity of educated men among non-Brahmins, who lived mostly in villages, where no such facilities for education as they existed in District and Taluk headquarters were available, there was no justification to raise the standard of educational qualification required to get the various appointments. The minimum qualification to get a certain appointment which was originally fixed as the passing of the Lower Secondary Examination, came to be suddenly raised to be either the Matriculation Examination or the Entrance Examination, whenever there were available a number of non-Brahmin candidates who had passed the former examination. Thus by systamatically revising the rules of recruitment from time to time, all the offices in the State were rendered inaccessible to members of the educationally Backward communities. The following will illustrate what we have said above:—"Claims of candidates for appointment or promotion to the post of Excise Assistant Inspector (carrying a pay of Rs. 30 a month) shall be accorded preferance in the following order i.e. (a) Graduates who have passed the Excise Test, (b) Under Graduates who have passed the Excise Test, and (c) non-Graduates who have passed the Excise Test.

This sort of self-aggrandisment naturally extended to the various Representative Institutions in the State. The Representative Assembly from the time of its inception until 1908, was called the Assembly of Representative Ryots and Merchants. In 1882 out of a total strength of 250 members, the Brahmins were only 50. The cunning Shanbogue, the influential school master, the all pervading lawyer, and the over-domineering Inamdar, all of whom were Brahmins, with the active co-operation of the local authorities, flattered and be-guiled the misinformed electorate, and got themselves elected to the Representative Bodies, posing themselves as the true representatives of the people of the State. Even in nominations they got the lion's share. Till the year 1914, there was no non-official non-Brahmin member on the Legislative Council. In 1917 out of 290 members in the Representative Assembly 150 were Brahmins. After fealing themselves quite secure in the respective places to which they were elected, they began to represent themselves and to misrepresent others, setting at naught all the hopes they held out to their constituents during the time of election, and we have no reason to think that our experience in the future would be different. No better illustration is required than the one we had in the Birthday sessions of the Representative Assembly. Now, can any one say that there was no justification for the order?

To

THE EDITOR "MYSORE STAR" MYSORE.

Sir,

Very recently a party known as the Nationalist party which is said to be the branch of the National Congress of British India has sprung up here—I think only to add insult to injury. What necessity is there for such an organisation in a Native State like Mysore is not clear. Mysore State has distinguished itself as an ideal State among its other sister States by being ruled by a most enlightened and up to date monarch who has always the interests of his subjects close to his heart and who is conceding year after year such rights to his subjects that he is bringing the people into closer touch with the administration of the State day after day.

In fact we have in Mysore such an accomplished administration that it is far in advance than any other State in India. There is the Representative Assembly where the representatives of the people meet and *discuss freely* the problems of the State, again there is the Legislative Council where the non-Official Members are in a majority and again there is the Executive Council and the Dewan who are all Indians with our beloved Maharaja at the head. When such being the case it is not possible to conceive the motive with which our privileged friends here have organised the so called Nationalist party. Probably they want to import into this State of peace and progress the germs of disturbance and disorder, and if that is the case is it not the duty of every partriotic loyal subject of H. H. the Maharaja to see that such mischievous organisations are nipped in the bud. There is no doubt that any organisation that is based upon malice and self elevation at the cost of others and seeks outwardly or inwardly to obstruct the progress of the dumb millions by protesting against measures calculated towards their uplift will certainly die the death of "The Peoples' Convention" and its organ the "Karnataka."

Probably our Brahmin friends in Mysore thought such an organisation a good device to split the united non-Brahmin camp into parties and thereby have their objects achieved. The people in Mysore should protest with all the power at their command against the inaguration of any Congress party in Mysore. There is absolutely no meaning why there should be any Congress party in a Native State where the conditions obtained are quite different from those of British India. We for Heaven's sake do not want any fire-brands amidst us.

We are sufficiently rewarded by keeping our trust all these years in the power-loving priestly class. These Monopolists are crying so loudly that there should exist no racial inequality and want perfect liberty, freternity and power; while these in their turn do not like to concede even an atom of liberty, freternity and power to the backward people of their own country. It is difficult to understand the sense of these people when they resent to see that their own countrymen are being made to befit themselves to stand on an equality with the others while they are clamouring both in the press and on the platform and spend a lot of money on deputations to see that they are made to stand on an equality with a foreign people whose religion, language, customs and manners are quite different. These people cannot tolerate the standing of a Panchama close to them while they heartily condescend to shake hands with the same man when he is converted a Christian.

These Monopolists complain so loudly about the treatment meted out to them by the Britishers. But I only want these people to turn their search light into their own affairs. Is not the scene more striking and appealing? Forgetting of the past, what was and is the attitute of these people when that democrat, the intellectual genius Mr. C. R. Reddy began to impart education to an unfortunate section of the people by advocating free admittance into all the public schools. Will not this show the conservative spirit of these people?

Further they are waging a fight with a Government which has shown such marked favour towards them in having allotted 50 percent of the appointments for two lacks of people and the other 50 percent to 56 lacks. By this the avaricious nature of these people has become all the more patent.

Another thing is could anything be more unjust than the unscrupulous attacks levelled against the people's man Sir Kantharaj Urs who is labouring day and night to do the greatest good to the greatest number. What was the state of affairs when he assumed the high office of Dewanship? The treasury had become empty. The country was drawn into a debt. A blind imitation, by that engineer statesman, of the administration of America and other countries unmindful of the disparity between this country and those countries only increased the number of departments which the people at large could not digest but all the same tended to increase the burden of the poor ryot. It was under these circumstances that our stalwart champion of the people's cause Sir Kantharaj Urs was asked to take up the high office. Able as he was he took up the offer and by giving a free play to the genius of his statesmanship has by reducing on one side all that was superfluous, and on the other supplying all that was necessary brought about such marvelous changes that when the history of Mysore comes to be written his name will standforth most prominent and as a symbol of equity, justice and progress. Dewans may come and Dewans may go but the name of Sir Kantaraj Urs will go on for ever.

The opposition that is being carried on by a microscopic minority is assuming such proportions that it is the imperative duty of every member of the backward classes to understand the gravity of the situation and act up to the times.

M. L. S.

ಉಪವಾಸ.

ಐರ್ಲಂಡಿನ ನಾಯಕರಲ್ಲಿ ಒಬ್ಬನೂ ಕಾರ್ಕ್ ಪಟ್ಟಣದ ಮೇಯರೂ ಆದ ಮಾರ್ ಸ್ವಿನಿಯವರು ಕಾರಾಗೃಹದಲ್ಲಿ ಆಹಾರಗಳನ್ನು ಸ್ವೀಕರಿಸದೆ ೭೫ ದಿನಗಳಿದ್ದು ಮೃತರಾದರಷ್ಟೆ. ಈ ಉಪವಾಸದ ವಿಷಯಕವಾದ ಚರ್ಚೆಯು ಸೀಮೆಯ ಪತ್ರಿಕೆಗಳಲ್ಲಿ ಇನ್ನೂ ತಪ್ಪಿಲ್ಲ. ಸ್ವಲ್ಪವೂ ಆಹಾರವಿಲ್ಲದೆ ೨|| ತಿಂಗಳವರೆಗೆ ಆತನು ಹೇಗೆ ಜೀವಿಸಿದ್ದನೆಂದು ಅಲ್ಲಿಯ ಜನರು ಆಶ್ಚರ್ಯಪಡುತ್ತಿರುವರು. ಆದರೆ ಶಾಸ್ತ್ರಜ್ಞರು ಮಾತ್ರ ಇದರಲ್ಲಿ ಆಶ್ಚರ್ಯಪಡದೆ ಅದು ಸಾಮಾನ್ಯವಾದುದೆಂದು ಅಭಿಪ್ರಾಯಪಡುತ್ತಾರೆ. ಮನುಷ್ಯನ ದೇಹದಲ್ಲಿ ಸಾಧಾರಣವಾಗಿ ಅವನ ಪ್ರತಿ ದಿನದ ಕೆಲಸಗಳಿಗೆ ಬೇಕಾಗುವುದಕ್ಕಿಂತ ಬಹಳ ಮಿಗಿಲಾಗಿ ಕೊಬ್ಬು ಅವನ ದೇಹದಲ್ಲಿ ಉಳಿದುಕೊಳ್ಳುವುದೆಂತಲೂ, ಮನುಷ್ಯನು ಆಹಾರವನ್ನು ಸ್ವೀಕರಿಸದೆ ಬಿಟ್ಟ ಕಾಲದಲ್ಲಿ ಹಾಗೆ ಉಳಿದಿರುವ ಹೆಚ್ಚು ಭಾಗದ ಕೊಬ್ಬೇ ಆಗಿನ ಕಾಲದ ಉಪಯೋಗಕ್ಕೆ ಬರುವುದೆಂತಲೂ, ಆ ಕೊಬ್ಬು ಸಂಪೂರ್ಣವಾಗಿ ಮುಗಿದು ಹೋಗುವವರೆಗೂ ಅವನು ಬದುಕಿರುವುದು ಸಾಧ್ಯವೆಂತಲೂ ಶಾಸ್ತ್ರಜ್ಞರು ಹೇಳುತ್ತಾರೆ. ಕಳೆದ ೩೦ ವರ್ಷ ಕಾಲದಲ್ಲಿ ಉಪವಾಸ ಮಾಡಿಕೊಂಡು ದೀರ್ಘಕಾಲ ಬದುಕಿದ್ದವರು ಅನೇಕರು ಸೀಮೆಯಲ್ಲಿದ್ದರಂತೆ. ಸುಶಿಯೆಂಬುವನು ೩೦ ದಿನಗಳ ಕಾಲ ಉಪವಾಸ ಮಾಡಿಕೊಂಡು ಬದುಕಿದ್ದನು. ಡಾಕ್ಟರ್ ಟರ್ನರ್ ಎಂಬ ಪ್ರಖ್ಯಾತ ಶಾಸ್ತ್ರಜ್ಞನು ೪೦ ದಿನಗಳವರೆಗೆ ಅಖಂಡೋಪವಾಸದಲ್ಲಿದ್ದನು. ಪ್ರಖ್ಯಾತ ಶಿಲ್ಪಿಯಾದ ಮಾರ್ಲಟಿ ಎಂಬಾತನು ೮೦ ದಿನಗಳವರೆಗೆ ತಿಂಡಿಯೇ ಇಲ್ಲದೆ ಜೀವಿಸಿದ್ದನು. ಉಪವಾಸವನ್ನಾರಂಭಿಸಿದಾಗ ೧೦-೧೨ ದಿನಗಳವರೆಗೆ ಆತನಿಗೆ ಯಾವ ಕಷ್ಟವೂ ತೋರಲಿಲ್ಲವಂತೆ. ಬಳಿಕ ಅವನಿಗೆ ಬಹಳ ಬಲಹೀನತೆಯುಂಟಾಯಿತು, ದೇಹದ ಶೀತೋಷ್ಣತೆಯು ಬಹಳ ತಗ್ಗಿಹೋ

ಯಿತು. ಅತ್ತಿತ್ತ ಎದ್ದು ತಿರುಗಾಡಲಿಕ್ಕೂ ಕುಳಿತುಕೊಳ್ಳಲಿಕ್ಕೂ ಕೂಡ ಶಕ್ತಿಯಿಲ್ಲದೆ ಮಂಚದ ಮೇಲೆಯೇ ಮಲಗಿದ್ದು ತನ್ನ ೪೦ ದಿನಗಳ ಕಾಲದ ಉಪವಾಸ ಸಂಕಲ್ಪವನ್ನು ಈಡೇರಿಸಿದನಂತೆ. ಜ್ವರ ಮೊದಲಾದ ಜಾಡ್ಯಗಳು ಸಂಭವಿಸಿದಾಗ ಉಂಟಾಗುವ ಬಲಹೀನತೆಯನ್ನೂ ರೋಗವನ್ನೂ ನಿವಾರಿಸುವುದಕ್ಕೆ ಅನೇಕ ವೈದ್ಯರು ಉಪವಾಸ ರೂಪವಾದ ಲಂಘನ ಚಿಕಿತ್ಸೆಯನ್ನು ಮಾಡಿಸುವುದು ನಮ್ಮ ದೇಶದಲ್ಲಿ ರೂಢಿಯುಂಟು. ಪಶ್ಚಿಮದೇಶದಲ್ಲೂ ಈ ತೆರದ ರೂಢಿಯುಂಟು. ಬೇಕಾದ ವ್ಯಾಧಿಗಳಿಗೆ ತುತ್ತಾಗಿದ್ದ ಅನ್ನಾಗಾರ್ಬೆರೊ ಎಂಬ ಪಾಶ್ಚಾತ್ಯ ಸ್ತ್ರೀಯು ೩೨ ತಿಂಗಳೂ ೧೧ ದಿನವೂ ಉಪವಾಸವಿದ್ದು ತನ್ನ ರೋಗಗಳನ್ನೆಲ್ಲಾ ಹೋಗಲಾಡಿಸಿಕೊಂಡಳಂತೆ !

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಮತ್ತೂ ಶ್ರೀಮದ್ಯುವರಾಜರವರ ಸ್ವಾರಿಗಳು ಕಳೆದ ಸೋಮವಾರ ಬೆಂಗಳೂರಿನಿಂದ ರಾಜಧಾನಿಗೆ ಚಿತ್ತೈಸಿದುವು.

ಶ್ರೀ ಕೇದಾರದಲ್ಲಿರುವ ಏಕೋರಾಮ ಶಿವಾಚಾರ್ಯ ಪೀಠಾಧಿಕಾರಿಗಳಾದ ಶ್ರೀ ನೀಲಕಂಠ ಶಿವಾಚಾರ್ಯರವರ ಪಟ್ಟಾಭಿಷೇಕ ಮಹೋತ್ಸವವು ಈ ಶ್ರಾವಣ ಶುದ್ಧ ೧೩ ಸೋಮವಾರದ ದಿವಸ ನಡಿಯುವುದೆಂದು ಕಳೆದವಾರದ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತಷ್ಟೆ ? ಆದರೆ ಹಿಮಾಲಯದಲ್ಲಿ ಅತಿವೃಷ್ಟಿಯಾಗಿ ಮಂದಾಕಿನೀ ನದಿಯಲ್ಲಿ ಪೂರ್ಣ ಪ್ರವಾಹ ಬಂದು ಸೇತು ಕಿತ್ತುಹೋಗಿರುವ ಪ್ರಯುಕ್ತ ಶ್ರೀಗಳವರ ಆಗಮನಕ್ಕೆ ಪ್ರತಿಬಂಧಕವಾಗಿರುವುದರಿಂದ ಪಟ್ಟಾಭಿಷೇಕ ಮಹೋತ್ಸವವು ೧೩ ರಲ್ಲಿ ನಡೆಯದೆ ಮುಂದಕ್ಕಿಡಲ್ಪಟ್ಟಿರುವುದಾಗಿ ಶ್ರೀ ವಿಶ್ವಾರಾಧ್ಯ ಪೀಠದ ಜಗದ್ಗುರು ಸನ್ನಿಧಿಯಿಂದ ಅಪ್ಪಣೆಯಾಗಿದೆ.

ಭೋರ್‌ಸಂಸ್ಥಾನದ ಮಹಾರಾಜರವರಾದ ಪಂಥರವರು ಕಳೆದ ಸೋಮವಾರ ಬೆಳಿಗ್ಗೆ ಪೂನಾ ಮೇಲ್ಬಂಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ನಿಲ್ದಾಣದಲ್ಲಿ ದಿವಾನರು, ಚೀಫ್ ಸೆಕ್ರೆಟರಿಯವರು ಮೊದಲಾದ ಅಧಿಕಾರಿಗಳೂ ಮ್ಯುನಿಸಿಪಲ್ ಪ್ರೆಸಿಡೆಂಟರೂ ಇದಿರ್ಗೊಂಡು ಮರ್ಯಾದಿಸಿದರು. ಮರ್ಯಾದಾರ್ಥವಾಗಿ ೧೧ ಗುಂಡುಗಳು ಹಾರಿಸಲ್ಪಟ್ಟುವು. ಈ ಮಹಾರಾಜರು ಕುಮಾರಪಾರ್ಕ್ ಭವನದಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಅತಿಥಿಗಳಾಗಿದ್ದುಕೊಂಡು ಬೆಂಗಳೂರಿನಲ್ಲಿ ಪ್ರೇಕ್ಷಣೀಯವಾದ ಸ್ಥಳಗಳನ್ನೆಲ್ಲಾ ಪರಾಂಬರಿಸಿಕೊಂಡು ತಾ॥ ೧೭ ರ ಬೆಳಿಗ್ಗೆ ಚಿನ್ನದ ಗಣಿಯನ್ನು ಪರಾಮರಿಸಲು ಪ್ರಯಾಣಮಾಡಿದರು.

ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟರಾಗಿದ್ದು ಉದ್ಯೋಗದಿಂದ ನಿವೃತ್ತರಾಗಿರುವ ಮ॥ ಬಿ. ಬಸವಾರಾಧ್ಯ, ಬಿ.ಎ., ಬಿ.ಎಲ್., ರವರು ಸಿವಿಲ್ ಮತ್ತು ಕ್ರಿಮಿನಲ್ ವಕೀಲಿಯನ್ನ ನಡೆಸಲುಪಕ್ರಮಿಸಿ ಅರಸೀಕೆರೆಯ ಮ॥ ಮರುಳಸಿದ್ಧಪ್ಪಶೆಟ್ಟರ ಹತ್ತುಸಾವಿರ ರೂಪಾಯಿನ ದೊಡ್ಡ ವ್ಯಾಜ್ಯವನ್ನು ಹಿಡಿದು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ದಾಖಲ್ಮಾಡಿರುತ್ತಾರೆಂದು ತಿಳುಹಲು ಬಹಳ ಸಂತೋಷವಾಗುತ್ತದೆ. ಇವರ ನಿಸ್ಪೃಹತೆ ನ್ಯಾಯವಿಮರ್ಶತೆ ಮೊದಲಾದ ಸದ್ಗುಣಗಳು ಪ್ರಖ್ಯಾತವಾಗಿರುವುದರಿಂದ ಇಲ್ಲಿ ಪುನಃ ಹೇಳಲ್ಪಡಬೇಕಾದುದಿಲ್ಲವು. ಸ್ವಮತೀಯರಾದ ವೀರಶೈವರು ಮ॥ ಆರಾಧ್ಯರಿಗೆ ಅವರ ಈ ನೂತನ ಪ್ರಯತ್ನದಲ್ಲಿ ವಿಶೇಷ ಪ್ರೋತ್ಸಾಹವನ್ನು ಕೊಡುವರೆಂದು ನಿರೀಕ್ಷಿಸುತ್ತೇವೆ.

ಕಂಟೋನ್ಮೆಂಟು ಹಲಸೂರಿನಲ್ಲಿರುವ ವೀರಶೈವರ ರೀಡಿಂಗ್‌ರೂಮಿಗೆ ಸೂಳಿನಲ್ಲಿರುವ ಮಿಲಿಟರಿ ಕಂಟ್ರಾಕ್ಟರ್ ಮ॥ ಸಾಹುಕಾರ್ ಸಿ. ಕೆಂಚಪ್ಪನವರು ೪ ರೂ. ಮ॥ ಯಜಮಾನ್ ಪುಟ್ಟಪ್ಪನವರು ೨ ರೂ. ಮ॥ ಸೂಳು ದೊಡ್ಡವೀರಪ್ಪನವರು ೨ ರೂ. ಸೂಳು ಮ॥ ರುದ್ರಪ್ಪನವರು ೨ ರೂ. ಮ॥ ಡೈರಿ ಪುಟ್ಟಪ್ಪನವರು ೨ ರೂ. ಗಳನ್ನೂ ಮೈಸೂರು ಹಳೇ ಅಗ್ರಹಾರದಲ್ಲಿ ಮಂಡಿವ್ಯಾಪಾರ ಮಾಡುವ ಮ॥ ಚನ್ನಬಸಪ್ಪನವರು ಚನ್ನಬಸವೇಶ ವಿಜಯವೆಂಬ ಪುಸ್ತಕವನ್ನೂ ಹಲಸೂರಿನಲ್ಲಿರುವ ಮ॥ ಯಜಮಾನ್ ಮರಿಯಪ್ಪನವರು ಒಂದು ಟೀಕ್‌ವುಡ್ ಟೇಬಲನ್ನೂ ಸಹಾಯಮಾಡಿರುತ್ತಾರೆ. ಇದಕ್ಕಾಗಿ ಈ ಮಹನೀಯರುಗಳಿಗೆ ಕಮಿಟಿಯವರ ವಂದನೆಯನ್ನು ಸೆಕ್ರೆಟರಿ ಮ॥ ಬಿ. ಎಸ್. ರುದ್ರಪ್ಪನವರು ಈ ಮೂಲಕ ತಿಳಿಸುತ್ತಾರೆ.

ಮದ್ರಾಸಾಧಿಪತ್ಯದಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರುಗಳ ಸಂಬಳವನ್ನು ೭೫ ರೂ. ನಿಂದ ಪ್ರಾರಂಭಿಸಿ ವರ್ಷಕ್ಕೆ ಐದೈದು ರೂ. ಗಳಂತೆ ಹೆಚ್ಚಿಸುತ್ತಾ ೧೭೫ ರೂ. ಗಳಿಗೆ ಕೊನೆಮುಟ್ಟುವಂತೆ ಮಾಡಬೇಕೆಂದೂ ಹತ್ತು ವರ್ಷಗಳಿಗಿಂತ ಹೆಚ್ಚು ಕಾಲ ಕೆಲಸಮಾಡಿದ ಕೆಲವರಿಗೆ ೨೦೦ ರೂ. ಗಳ ವರೆಗೂ ಹೆಚ್ಚಿಸಬಹುದೆಂದೂ, ಅಲ್ಲಿಯ ಸರ್ಕಾರದವರು ಈಗತಾನೇ ಅಪ್ಪಣೆಮಾಡಿದ್ದಾರೆ. ಈಗ ಕೊಡಲ್ಪಡುತ್ತಿರುವ ದುರ್ಭಿಕ್ಷದ ಅಲೋಯನ್ಸು ಮೊದಲಾದುವುಗಳು ತೆಗೆದುಹಾಕಲ್ಪಡುವುವು. ನಮ್ಮ ದೇಶದಲ್ಲಿ ಸಬ್ ಅ॥ ಸರ್ಜನರ ವೇತನಗಳು ೪೫ ರೂ. ನಿಂದ ಆರಂಭಿಸಿ ೯೦ ರೂ. ಗೆ ಕೊನೆಮುಟ್ಟುತ್ತವೆ. ೬೦ ರಿಂದ ಆರಂಭಿಸಿ ೧೨೫ ಕ್ಕೆ ಕೊನೆಮುಟ್ಟುವಂತೆಯಾದರೂ ಮಾಡಿದರೆ ಅವರುಗಳು ಮತ್ತಷ್ಟು ಮುತುವರ್ಜಿಯಿಂದ ಕೆಲಸಮಾಡಿಯಾರು.

ಕಳೆದ ಸೋಮವಾರ ಬಕರೀದ್ ಹಬ್ಬವಾದುದರಿಂದ ರಾಜಧಾನಿಯ ಮಹಮ್ಮದೀಯರು ಪ್ರಾಯಶಃ ಹತ್ತು ಸಾವಿರ ಜನರವರೆಗೆ ಈದಿಗಾಕ್ಕೆ ಆದಿನ ಪ್ರಾತಃಕಾಲ ಹೋಗಿ ಲಕ್ನೋ ಪಟ್ಟಣದಿಂದ ಬಂದಿರುವ ಅವರ ಗುರುಗಳ ಆಧಿಪತ್ಯದಲ್ಲಿ ದೇವರ ಪ್ರಾರ್ಥನೆಗಾಗಿ ನೆರೆದಿರುವಾಗ್ಗೆ ಸಮೀಪದಲ್ಲಿ ಒಂದು ದೊಡ್ಡ ಕೊಳವನ್ನು ಕಟ್ಟಲು ಹಳ್ಳವು ತೆಗೆಯಲ್ಪಟ್ಟು ಇಟ್ಟಿಗೆಯ ರಾಶಿಹಾಕಲ್ಪಟ್ಟಿದ್ದುದನ್ನು ಕಂಡು ಕುಪಿತರಾಗಿ ಅಷ್ಟು ಜನರೂ ರಾಶಿಬಿದ್ದಿದ್ದ ಇಟ್ಟಿಗೆಯನ್ನು ತೆಗೆದು ಹಳ್ಳಕ್ಕೆ ಹಾಕಿ ಮುಚ್ಚಿಬಿಟ್ಟರೆಂದೂ ಆ ಸಮಯದಲ್ಲಿ ದೊಡ್ಡ ಪೀರ್‌ರವರ ಮತ್ತು ಮೆ॥ ಎ. ಮಹಮದ್‌ಸೇಟರು ಮೊದಲಾದ ಪ್ರಮುಖರ ಶಾಂತ್ಯುಕ್ತಿಗಳಿಂದಲೂ ಮಹಮ್ಮದೀಯ ವಾಲಂಟಿಯರುಗಳ ಪ್ರಯತ್ನವಿಶೇಷದಿಂದಲೂ ಗದ್ದಲಕ್ಕೆ ಆಸ್ಪದವಾಗಲಿಲ್ಲವೆಂತಲೂ, ಆ ಹಳ್ಳವು ತೋಡಲ್ಪಟ್ಟಿದ್ದ ಸ್ಥಳವು ಮಹಮ್ಮದೀಯರ ಪ್ರಾರ್ಥನಾಸ್ಥಳದ ಎಲ್ಲೆಕಟ್ಟಿಗೆ ಸಂಬಂಧಪಟ್ಟಿದೆಂದೂ ಈ ಗೊಂದಲವು ನಡೆದಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಸಿಟಿ ಪೊಲೀಸು ಸೂಪರಿಂಟೆಂಡೆಂಟರೂ ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದರೆಂದೂ ತಿಳಿಯಬರುತ್ತದೆ.

ವರ್ತಮಾನಸಂಗ್ರಹ.

ನಮ್ಮ ಚಕ್ರವರ್ತಿಯವರು ಗುರೆನ್ಸೆ ಎಂಬ ಪಟ್ಟಣಕ್ಕೆ ಮೊನ್ನೆ ತಾನೇ ಹೋಗಿದ್ದಾಗ್ಗೆ ಅಲ್ಲಿ ಒಂದು ಅದ್ಭುತವಾದ ಆಕಳನ್ನು ಪರಾಮರಿಸಿದರು. ಅದು ಪ್ರತಿ ದಿನವೂ ಕೊಡುವ ಹಾಲಿನಿಂದ ೧ ವರ್ಷಕ್ಕೆ ೧ ಟನ್ ಬೆಣ್ಣೆಯಾಗುವುದು. ಎಂದರೆ ತಿಂಗಳೊಂದಕ್ಕೆ ೮ ಮಣ ಬೆಣ್ಣೆಯಾಗುವುದು.

ರಷ್ಯಾದಲ್ಲಿ ಇನ್ನೂ ಕ್ಷಾಮದ ಮತ್ತು ರೋಗಗಳ ಹಾವಳಿಯು ಇಳಿಮುಖವಾಗಿಲ್ಲ. ಪ್ಲೇಗಿನ ಬಾಧೆಯನ್ನು ಸೈರಿಸಲಾರದೆ ಲಕ್ಷಾಂತರ ಮಂದಿಗಳು ಊರು ಕೇರಿಗಳನ್ನು ಬಿಟ್ಟು ಹೊರಟು ಹೋಗುತ್ತಿದ್ದಾರೆ. ಜುಲೈ ತಿಂಗಳ ಕೊನೆವರೆಗೆ ಆ ದೇಶದಲ್ಲಿ ವಾಂತಿಭೇದಿ ರೋಗದಿಂದ ೧ ಲಕ್ಷದ ೩೦ ಸಾವಿರ ಜನರು ಸತ್ತಿದ್ದಾರೆ.

ಅಂಗೋರಾದ ತುರುಕರಿಗೆ ಬೋಲ್ಶೆವಿಕ್ಕರು ಈಗ ಸಹಾಯಮಾಡುವ ಸ್ಥಿತಿಯಲ್ಲಿಲ್ಲ. ಅವರ ಸಹಾಯವನ್ನು ಇವರು ಅಪೇಕ್ಷಿಸಿಯೂ ಇಲ್ಲ. ಗ್ರೀಕ್ ವಿಮಾನಿಕರ ಸಿಡಿಮದ್ದಿನ ಹಾವಳಿಯನ್ನು ತಾಳಿಕೊಳ್ಳಲಾರದೆ ಅಂಗೋರಾ ಪಟ್ಟಣವನ್ನು ಅಲ್ಲಿಯ ಪುರಜನರು ಬಿಟ್ಟು ಹೋಗುತ್ತಿದ್ದಾರೆ. ಕೇಮಲಿಸ್ಟ್ ಪ್ರಭುತ್ವದವರು ತಮ್ಮ ರಾಜಧಾನಿಯನ್ನು ಬೇರೊಂದು ಪಟ್ಟಣಕ್ಕೆ ವರ್ಗಾಯಿಸಿಕೊಂಡರು.

ಪ್ರಕೃತಿ ಶಾಸ್ತ್ರಜ್ಞರಲ್ಲಿ ವಿಶೇಷ ಪ್ರಖ್ಯಾತಿಪಡೆದ ಚಾರ್ಲೆಸ್ ನೈಟ್ ಎಂಬುವರು ಜರ್ಮನಿ ದೇಶದಲ್ಲಿ ಸಂಚಾರಮಾಡುತ್ತಿರುವಾಗ ನಿಯಾಂದರ್ ಎಂಬ ಪ್ರಾಂತದಲ್ಲಿರುವ ಗುಹೆಗಳಲ್ಲಿ ಮನುಷ್ಯನ ಅಸ್ಥಿಶಕಲಗಳು ದೊರೆದುವಂತೆ. ಅವನ್ನೆಲ್ಲಾ ಅವರು ಬಹಳ ಜಾಗರೂಕತೆಯಿಂದ ಒಟ್ಟುಗೂಡಿಸಿದ್ದಾರೆ. ಅವು ಬಹುಶಃ ೪೦ ಸಾಹಸ್ರ ವರ್ಷಗಳ ಕೆಳಗೆ ಜೀವಿಸಿದ್ದ ಮನುಷ್ಯರ ಅಸ್ಥಿಪಂಜರವೆಂದು ಈ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆ ಗುಹೆಯಲ್ಲೇ ಇದಕ್ಕೆ ಮೊದಲೇ ಅಂಥ ಅಸ್ಥಿಶಕಲಗಳು ಎಷ್ಟೋ ದೊರೆದಿದ್ದುವಂತೆ. ಈ ಮೂಳೆಗಳ ಸಹಾಯದಿಂದ ನೈಟ್‌ರವರು ೪೦ ಸಾವಿರ ವರ್ಷಗಳ ಹಿಂದಿದ್ದ ಮನುಷ್ಯರ ಪರಿಸ್ಥಿತಿಯನ್ನು ಸೂಚಿಸುವ ಪಟಗಳನ್ನು ಚಿತ್ರಿಸಿದ್ದಾರೆ. ಆ ಪಟಗಳು ಅನೇಕ ವಸ್ತುಪ್ರದರ್ಶನಾಲಯಗಳಲ್ಲಿ ಇಡಲ್ಪಟ್ಟಿವೆ.

ದಕ್ಷಿಣ ಮಹಾ ಸಮುದ್ರದ ಮಧ್ಯದಲ್ಲಿರುವ ದ್ವೀಪಗಳಲ್ಲಿ ತೆಂಗಿನ ಗಿಡಗಳು ಅಪಾರವಾಗಿವೆ. ಆ ಮರಗಳಿಂದ ಅಲ್ಲಿಯ ನಿವಾಸಿಗಳು ಅನೇಕ ವಿಧದ ಪ್ರಯೋಜನಗಳನ್ನು ಮಾಡಿಕೊಳ್ಳುತ್ತಾರೆ. ಅದರ ಮರಗಳಿಂದ ಮನೆಯ ಮುಟ್ಟುಗಳನ್ನೂ ದೋಣಿಗಳಿಗೆ ಹಲಗೆಗಳನ್ನೂ ಪಾತ್ರೆಗಳ ಹಾಗೆ ಉಪಯೋಗಿಸುವ ಮರಗೆಗಳನ್ನೂ ಮಾಡಿಕೊಳ್ಳುತ್ತಾರೆ. ಆ ಮರದ ಗರಿಗಳು ಎಳಸಾಗಿರುವಾಗ ಅವನ್ನು ಆಹಾರದಂತೆ ಉಪಯೋಗಿಸಿಕೊಳ್ಳುವರು. ಅವು ಬಲಿತು ಬಿದ್ದು ಹೋದ ಮೇಲೆ ಅವನ್ನು ಹೆಣೆದು ಮನೆಗಳ ಹೊದಿಕೆಗಳಿಗೂ ಹಂದರಗಳಿಗೂ ಉಪಯೋಗಿಸುವುದಲ್ಲದೆ ಬಟ್ಟೆಗಳನ್ನೂ ಕಾಗದವನ್ನೂ ನಿರ್ಮಿಸುವುದಕ್ಕೂ ಅವನ್ನುಪಯೋಗಿಸುವರು. ಆ ಮರದ ಹೊಂಬಾಳೆಯಿಂದ ಹೆಂಡವನ್ನಿಳಿಯಿಸಿಕೊಂಡು ಸಕ್ಕರೆಯನ್ನು ನಿರ್ಮಿಸುವರು. ಬಳಿಕ ಕೊಬರಿಯಿಂದ ಎಣ್ಣೆಯನ್ನು ತೆಗೆದು ಊಟಕ್ಕೆ ಉಪಯೋಗಿಸುವರು. ಆ ಮರದ ಬೇರುಗಳನ್ನೂ ಸಹ ಅಲ್ಲಿಯ ಜನರು ಒಂದು ವಿಧದ ಭೋಜನ ಪದಾರ್ಥವನ್ನಾಗಿ ನಿರ್ಮಿಸಿ ಸೇವಿಸುವರು.

ಈಗಣ ಕಾಲದಲ್ಲಿ ಬಾಲಕರು ಉಪಾಧ್ಯಾಯರಿರುವ ಸ್ಥಲಕ್ಕೆ ಹೋಗಿ ಅಲ್ಲಿ ತಮಗೆ ಬೇಕಾದ ಪಾಠಗಳನ್ನು ಹೇಳಿಸಿಕೊಂಡು ಬರುವ ಪದ್ಧತಿಯುಂಟಷ್ಟೆ. ಪ್ರಪಂಚದ ಮೇಲಿರುವ ಎಲ್ಲ ದೇಶಗಳಲ್ಲೂ ಇದೇ ಪದ್ಧತಿಯಿದೆ. ಆದರೆ ಇದು ಉತ್ತಮವಾದ ಪದ್ಧತಿಯಲ್ಲವೆಂದು ಸುವೈ ದೇಶದ ವಿದ್ವಾಂಸರುಗಳು ನಿಶ್ಚೈಸಿ, ನೂತನ ಪದ್ಧತಿಯೊಂದನ್ನು ಏರ್ಪಡಿಸಬೇಕೆಂದಿದ್ದಾರೆ. ಹೇಗೆಂದರೆ—ವಿದ್ಯಾರ್ಥಿಗಳು ತಮ್ಮ ಅಭ್ಯಾಸಕ್ಕಾಗಿ ಶಾಲೆಗಳಿಗೆ ಹೋಗುವುದಿಲ್ಲ. ಉಪಾಧ್ಯಾಯರೇ ಪ್ರತಿದಿನವೂ ವಿದ್ಯಾರ್ಥಿಗಳ ಮನೆಗೆ ಹೋಗಿ ಅವರಿಗೆ ಬೇಕಾದ ಪಾಠಗಳನ್ನು ಹೇಳಿ ಕೊಡುವರಂತೆ. ಪಾರಿಶ್ರಾಮಿಕ ವಿದ್ಯೆಗಳನ್ನೂ ಹೀಗೆಯೇ ಕಲಿಸಿಕೊಡುವರಂತೆ. ಈ ಪದ್ಧತಿಯನ್ನು ಕೊನೆಸಾಗಿಸುವುದಕ್ಕೆ ಪಾರ್ ಅಮೇರಿಕನ್ ವಿದ್ಯಾ ಪೀಠವೆಂಬ ಹೆಸರಿನಿಂದ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಅಲ್ಲಿಯ ಪ್ರಭುತ್ವದವರು ಇಷ್ಟರಲ್ಲೇ ಒಂದು ಶಾಸನವನ್ನು ಮಾಡುವವರಾಗಿದ್ದಾರೆ. ಈ ನೂತನ ವಿಶ್ವವಿದ್ಯಾಲಯದವರು ಕಿತ್ತಲೆ ಹಣ್ಣಿನ ಮತ್ತು ಸಕ್ಕರೆಯನ್ನು ಮಾಡುವ ತೋಟಗಳಲ್ಲಿ ಬಾಲಕರಿಗೆ ಕೃಷಿ ವಿದ್ಯೆಯನ್ನು ಬೋಧಿಸುವುದಕ್ಕೆ ಏರ್ಪಡಿಸಿದ್ದಾರೆ.

ಸವಿದೆಯನ್ನೂ ಕಸಕಡ್ಡಿಯನ್ನೂ ಕುಂಡದಲ್ಲಿ ಹಾಕಿ ಸುಟ್ಟು ಅದರಿಂದ ಅದ್ಭುತವಾದ ವಿದ್ಯುಚ್ಛಕ್ತಿಯನ್ನುಂಟುಮಾಡಿಕೊಳ್ಳುವ ವಿಧಾನವನ್ನು ಕಂಡುಹಿಡಿದು ಅದರ ಮೂಲಕ ಯಂತ್ರಗಳನ್ನು ನಡೆಯಿಸಿಕೊಳ್ಳುವ ಮತ್ತು ಬೆಳಕನ್ನು ಮಾಡಿಕೊಳ್ಳುವ ವಿಧಾನವನ್ನು ಮೊಟ್ಟಮೊದಲು ಕಂಡುಹಿಡಿದವನು ಕನಡಾ ದೇಶದ ಜಾರ್ಜ್ ಹಾರಿಸನ್ ಎಂಬ ಪ್ರಖ್ಯಾತ ಶಾಸ್ತ್ರಜ್ಞನಾಗಿರುತ್ತಾನೆ. ಈತನು ಕಂಡುಹಿಡಿದ ಈ ಹೊಸ ಪದ್ಧತಿಯನ್ನು ಅಮೇರಿಕಾ ದೇಶದ ಇತರ ಶಾಸ್ತ್ರಜ್ಞರೆಲ್ಲಾ ಪರಿಶೋಧಿಸಿ ಬಹುವಿಧವಾಗಿ ಶ್ಲಾಘಿಸಿ ಮೆಚ್ಚಿಕೊಂಡಿದ್ದಾರೆ. ಅಮೇರಿಕಾ ಸಂಯುಕ್ತರಾಷ್ಟ್ರಗಳ ಪ್ರಭುತ್ವದ ವ್ಯವಸಾಯ ಶಾಖೆಯವರು ಈ ಕೈಗಾರಿಕೆಗೆ ಪೋಷಕರಾಗಿದ್ದಾರೆ. ಈ ವಿಧಾನದಿಂದ ನಾವುಗಳು ನಿಷ್ಪ್ರಯೋಜಕವೆಂದು ಬಿಸಾಡಿಬಿಡುತ್ತಿರುವ ಕಸ ಸೆತ್ತೆ ಮೊದಲಾದುವನ್ನೆಲ್ಲಾ ಕೂಡಿಹಾಕಿ ಸುಟ್ಟು ಅದರಿಂದ ವಿದ್ಯುಚ್ಛಕ್ತಿಯನ್ನುಂಟುಮಾಡಿಕೊಂಡು ಅದರ ಮೂಲಕ ಎಷ್ಟೋ ಲಾಭವನ್ನು ಪಡೆಯಬಹುದು. ಈಗ ಈ ಶಕ್ತಿಯಿಂದ ಒಂದು ತೆರದ ಎಣ್ಣೆಯನ್ನುಂಟುಮಾಡಲಿಕ್ಕೆ ಅಮೇರಿಕಾ ಶಾಸ್ತ್ರಜ್ಞರು ಪ್ರಯತ್ನಮಾಡುತ್ತಿದ್ದಾರೆ. ಆ ಎಣ್ಣೆಯನ್ನು ಮೋಟಾರುಬಂಡಿಗಳಿಗೆ ಉಪಯೋಗಿಸಿಕೊಳ್ಳಬಹುದಂತೆ. ಪೆಟ್ರೋಲಿಗಿಂತಲೂ ಈ ಯೆಣ್ಣೆಯು ಅಗ್ಗವಾಗಿರುವುದಂತೆ.

ಚೀನಾ ದೇಶಕ್ಕೆ ಉತ್ತರ ಪ್ರಾಂತದಲ್ಲಿ ಕೋರಿಯಾ ಎಂಬ ದೇಶವಿರುವುದಷ್ಟೆ. ಅದರ ಸ್ಥಿತಿಯು ಎಷ್ಟೋ ಭಾಗದಲ್ಲಿ ನಮ್ಮ ಭರತಖಂಡದ ಸ್ಥಿತಿಗೆ ಹೋಲುತ್ತಿದೆ. ಹೇಗೆಂದರೆ-ಅಲ್ಲಿಯ ಪ್ರಜೆಗಳನ್ನು ಈಗಣ ಪಾಶ್ಚಾತ್ಯರು ಅನಾಗರಿಕರೆಂದೂ ದುರ್ಬಲರೆಂದೂ ಹೀನಯಿಸಿ ಚರಿತ್ರಗಳಲ್ಲೆಲ್ಲಾ ಬರೆದಿರುವರು. ಆದರೆ ಕೋರಿಯನ್ನರ ಪ್ರಾಚೀನ ಚರಿತ್ರೆಯನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸಿದರೆ ಅವರು ಅನಾದಿಕಾಲದಿಂದಲೂ ಪ್ರಸಿದ್ಧರಾದವರೆಂದು ಈ ಮಧ್ಯೆ ಆ ದೇಶದಲ್ಲಿ ಸಂಚರಿಸಿ ವಿಷಯಗಳನ್ನು ಪರಿಶೋಧಿಸಿದ ಅಮೇರಿಕನ್ ಪಾದ್ರಿಯೊಬ್ಬರು ವೃತ್ತಪತ್ರಿಕೆಗಳಲ್ಲಿ ಬರೆದಿರುವುದರಲ್ಲಿ ತಿಳಿಯಿಸಿರುವುದೇನೆಂದರೆ-ಅವರಲ್ಲಿ ಈಗಲೂ ಅನೇಕ ಪ್ರಖ್ಯಾತ ಶಾಸ್ತ್ರಜ್ಞರಿದ್ದಾರೆ. ಎಷ್ಟೋ ಸಾವಿರಾರು ವರ್ಷಗಳಿಂದಲೂ ಕೋರಿಯನ್ನರು ಕಬ್ಬಿಣದ ತಗಡುಗಳಿಂದ ದೋಣಿಗಳನ್ನೂ ಹಡಗುಗಳನ್ನೂ ಕಟ್ಟುತ್ತ ಅವುಗಳ ಮೂಲಕ ವಿದೇಶ ವ್ಯಾಪಾರವನ್ನು ನಡೆಯಿಸುತ್ತಿದ್ದರು. ಅನಾದಿಕಾಲದಿಂದಲೂ ಅವರು ಮುದ್ರಾಯಂತ್ರವನ್ನು ನಿರ್ಮಿಸಿ ಪುಸ್ತಕಗಳನ್ನು ಪ್ರಚುರಿಸುತ್ತಿದ್ದರು. ಜ್ಯೋತಿಶ್ಶಾಸ್ತ್ರದಲ್ಲಿ ಅವರಿಗೆ ಅದ್ಭುತ ಪ್ರಜ್ಞೆಯು ಅನಾದಿಕಾಲದಿಂದಿರುವುದು. ಕಮ್ಮಾರ ಕೆಲಸದಲ್ಲೂ ಶಿಲ್ಪಶಾಸ್ತ್ರದಲ್ಲೂ ಅದ್ಭುತಪಾಂಡಿತ್ಯವಿರುವುದು. ಹಿತ್ತಾಳೆ ತಾಮ್ರಗಳ ಸಾಮಗ್ರಿಗಳನ್ನು ನಿರ್ಮಿಸುವುದಕ್ಕೆ ದೇಶದಲ್ಲಿ ಅವರು ಎಷ್ಟೋ ಕರ್ಮಾಗಾರಗಳನ್ನು ಸ್ಥಾಪಿಸಿದ್ದಾರೆ. ವಸ್ತು ಶಾಸ್ತ್ರದಲ್ಲಿ ಅವರಿಗೆ ಸಮಾನವಾದ ಪಾಂಡಿತ್ಯವುಳ್ಳವರು ಇತರ ದೇಶಗಳಲ್ಲಿ ಎಲ್ಲೋ ಸ್ವಲ್ಪ ಮಂದಿ ಇರುವರು. ಚೀನಾದೇಶದಲ್ಲಿ ಪ್ರಖ್ಯಾತವಾಗಿರುವ ದೊಡ್ಡ ಕೋಟೆಯನ್ನು ಕಟ್ಟಿದ ಶಿಲ್ಪಿಗಳು ಈ ಕೋರಿಯಾ ದೇಶದವರೇ ಅಂತೆ. ಇಂಥ ದೇಶವನ್ನು ಆಕ್ರಮಿಸಿಕೊಳ್ಳುವುದಕ್ಕಾಗಿಯೇ ಯಾವಾಗಲೂ ಚೀನಾ ಜಪಾನ್ ರಷ್ಯಾ ದೇಶಗಳವರಿಗೆ ಪರಸ್ಪರವಾದ ಹೋರಾಟಗಳು ಜರುಗುತ್ತಲಿವೆ. ಆದರೆ ದುರ್ಬಲರಾಗಿರುವ ಕೋರಿಯನ್ನರು ಆ ಪರರಾಜ್ಯಗಳವರ ಪರಿಪಾಲನ ಬಂಧನದಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಪಡುತ್ತಿರುವ ಕಷ್ಟಗಳನ್ನೂ ಪ್ರಯತ್ನಗಳನ್ನೂ ವರ್ಣಿಸಲಸದಳವು.

ಉಪಯುಕ್ತ ವಿಷಯ.

ನೀರು ಕೆಂದದ (ವಾಟರ್‌ಪ್ರೂಫ್) ಬಟ್ಟೆಗಳನ್ನು ಹೆಚ್ಚು ವೆಚ್ಚವಿಲ್ಲದೆ ನಿರ್ಮಿಸುವ ವಿಧಾನವನ್ನು ಕುರಿತು ಒಬ್ಬ ಅನುಭವಸ್ಥರು ಹೀಗೆ ಬರೆದಿರುತ್ತಾರೆ :—

೮ ಔನ್ಸು ಜೇನುಮೇಣವನ್ನೂ, ಅಷ್ಟೇ ತೂಕದ ಗುಗ್ಗುಳವನ್ನೂ ೪ ಪೈಂಟ್ ಬಿಸಿಯೆಣ್ಣೆಯಲ್ಲಿ ಕರಗಿಸಿ ಗೊಟಾಯಿಸಿ ಆ ಮಿಶ್ರಣವನ್ನು ಬಟ್ಟೆಗಳಿಗೆ ಬ್ರಷ್ಷಿನಿಂದ ಬಳಿದು ಆರಹಾಕಿ ಬಳಿಕ ಅದನ್ನು ಹಲಗೆಯ ಮೇಲೆ ಹಾಕಿ ಇಸ್ತ್ರಿಮಾಡಬೇಕು.

ಮತ್ತೊಂದು ವಿಧ—೪ ಔನ್ಸು ತೂಕ ಭರತಖಂಡದ ರಬ್ಬರನ್ನು, ೪ ಪೈಂಟು ಅಗಸೆಯೆಣ್ಣೆಯಲ್ಲಿ ಹಾಕಿ ಕರಗಿಸಿ ಸೌಟಿನಿಂದ ಚೆನ್ನಾಗಿ ತಿರುವಿ ಅದು ಆರಿದ ಬಳಿಕ ಬಟ್ಟೆಗಳಿಗೆ ಬ್ರಷ್ಷಿನಿಂದ ಬಳಿಯಬೇಕು.

ಇನ್ನೊಂದು ವಿಧ—ಷುಗರ್ ಆಫ್ ಲೆಡ್ ಎಂಬ ಪದಾರ್ಥ ೧ ಪೌನು ತೂಕ, ಪಟಿಕ ೧ ಪೌನು ತೂಕ ಇವೆರಡನ್ನೂ ಬೇರೆ ಬೇರೆ ಪುಡಿಮಾಡಿಟ್ಟುಕೊಂಡು ೨ ಕ್ವಾರ್ಟರು ಬಿಸಿನೀರಿನಲ್ಲಿ ಹಾಕಿ ಚೆನ್ನಾಗಿ ಕಲಕಿ ಸೀಸೆಯಲ್ಲಿ ತುಂಬಿಟ್ಟುಕೊಂಡಿದ್ದು ಅದನ್ನು ಬಟ್ಟೆಯ ಮೇಲೆ ಬ್ರಷ್ಷಿನಿಂದಲೋ ಸ್ಪಂಜಿನಿಂದಲೋ ಲೇಪಿಸಿ, ಬಳಿಕ ಇಸ್ತ್ರಿಮಾಡಬೇಕು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಮ॥ ರಾ॥ ಸ್ಟಾರ್ ಎಡಿಟರವರಿಗೆ.

ಕ್ರೂರಲೇಖನಗಳು.

ಅಯ್ಯಾ,

ನಿಮ್ಮ ಪತ್ರಿಕೆಯಲ್ಲಿ ಬ್ರಾಹ್ಮಣವರ್ಣೀಯರನ್ನೆಲ್ಲಾ ಕುರಿತು ಕರ್ಣಕಠೋರವಾದ ವಚನಗಳನ್ನುಪಯೋಗಿಸಿ ಸಂತ ಲೇಖನಗಳನ್ನು ಬೆಳೆಯಿಸುತ್ತೀರಿ, ಇಲ್ಲವೆ ಅಂಥ ಕ್ರೂರಲೇಖನಗಳಿಗೆ ಅವಕಾಶವನ್ನಾದರೂ ಕೊಡುತ್ತೀರಿ. ಇದು ಸರ್ವಥಾ ಉಚಿತವಲ್ಲ. ಬ್ರಾಹ್ಮಣವರ್ಣೀಯರಲ್ಲಿ ಸರ್ವರೂ ಇತರರ ಅಭ್ಯುದಯವನ್ನು ದ್ವೇಷಿಸುವರೆಂದು ಯಾರಾದರೂ ಭಾವಿಸುತ್ತಿದ್ದರೆ ಅದು ಸಂಪೂರ್ಣವಾಗಿ ತಪ್ಪು ಮತ್ತು ಸುಳ್ಳು ಆಗಿರುತ್ತದೆ. ಮಿಲ್ಲರ್ ಕಮಿಟಿ ರಿಪೋರ್ಟೇ ಆಗಲಿ ಎಡ್ಯುಕೇಷನಲ್ ಮೆಮೊರಾಂಡಮ್ಮೇ ಆಗಲಿ ಬ್ರಾಹ್ಮಣರೆಲ್ಲರ ಆಕ್ಷೇಪಕ್ಕೂ ಆಕರವಾದದ್ದೆಂದು ಭಾವಿಸಬಾರದು. ಅವುಗಳ ಸಂಬಂಧವಾಗಿಯೋ ಇಲ್ಲವೆ ಮತ್ತೆ ಯಾವ ಸಂಬಂಧವಾಗಿಯೋ ಮನಸ್ಸಿನಲ್ಲಿ ಅನ್ಯಥಾ ಭಾವವನ್ನಿಟ್ಟುಕೊಂಡು ಕೆಲವರು ವಿರೋಧಿಸುತ್ತಿದ್ದರೆ ಅದಕ್ಕೆ ಒಂದಷ್ಟು ವಿಶಿಷ್ಟವ್ಯಕ್ತಿಗಳು ಬಾಧ್ಯರೇ ಹೊರತು ಬ್ರಾಹ್ಮಣಸಾಮಾನ್ಯವು ವಿರೋಧಿಸುವುದು ಸುಳ್ಳು. ನಮ್ಮ ಸನಾತನ ಮಹರ್ಷಿಗಳು ಲೋಕಹಿತಾರ್ಥವಾಗಿ ವಿದ್ಯಾನಿಧಿಯನ್ನು ರಕ್ಷಣೆಮಾಡಿದವರು; ಜ್ಞಾನವನ್ನು ಜಗದುದ್ಧಾರಾರ್ಥವಾಗಿ ಇತಿಹಾಸ ಪುರಾಣಾದಿಗಳ ಮೂಲಕವಾಗಿ ಉಪದೇಶಿಸಿದವರು. ಅದರಲ್ಲಿ ಅವರು ಮಾಡಿದ ಸ್ವಾರ್ಥತ್ಯಾಗ ಪರಹಿತಾಚರಣೆಗಳು ಎಷ್ಟು ನಿರ್ವ್ಯಾಜವಾಗಿದ್ದವು ಎಂಬುವದನ್ನು ಮತಿಯುಳ್ಳವರೆಲ್ಲರೂ ಆಲೋಚಿಸಿಕೊಳ್ಳಬಲ್ಲರು. ಸಕಲ ಸಂಪದಾರ್ಜನೆಯ ವೃತ್ತಿಗಳನ್ನೂ ಇತರರಿಗೆ ಬಿಟ್ಟುಕೊಟ್ಟು ಪಾರಮಾರ್ಥಿಕಬುದ್ಧಿಯಿಂದಲೂ ಸಾತ್ವಿಕ ವೃತ್ತಿಯಿಂದಲೂ ಲೋಕಕ್ಷೇಮವನ್ನು ಕೋರುತ್ತಾ ಯಥಾತ್ಮ್ಯರಾಗಿದ್ದ ಬ್ರಾಹ್ಮಣ ವರ್ಣೀಯರನ್ನು ಈಗಿನ ಜನರು ದ್ವೇಷಿಸುವುದರಿಂದ ಯಾರಿಗೆ ಕ್ಷೇಮ ಯಾರಿಗೆ ಹಾನಿಯೆನ್ನುವದನ್ನೂ ವಿಚಾರಪರರು ಆಲೋಚಿಸಬೇಕು. ಕಾಲು ಕೆದರಿ ಜಗಳಹೂಡುವುದೂ ಪರಸ್ಪರವಾಗಿ ದೂಷಣಗಳಿಗೆ ಮನಕೊಡುವದೂ ಯಾರಿಗೂ ಕ್ಷೇಮಕರವಲ್ಲ. ಇನ್ನಾದರೂ ಬ್ರಾಹ್ಮಣೇತರರು ತಮ್ಮ ತಪ್ಪನ್ನು ತಿದ್ದಿಕೊಂಡು ಬುದ್ಧಿವಂತರಾಗಿ ಇಂಥ ಗೋಜಿಗೆ ಹೋಗದೆ ಬ್ರಾಹ್ಮಣರನ್ನು ಅನುವರ್ತಿಸಿಕೊಂಡಿದ್ದರೆ ಅವರಿಗೇ ಲಾಭವುಂಟು. ಬ್ರಾಹ್ಮಣರನ್ನು ಮುಂದಾಳುಗಳೆಂದೂ ಇತರರನ್ನೆಲ್ಲಾ ಹಿಂದಾಳುಗಳೆಂದೂ ತಾವೇ ಕಲ್ಪಿಸಿಕೊಂಡು ಹೇಳುತ್ತಿರುವವರೇರಿಗೆ ಮುಂದಾಳುಗಳನ್ನು ಅನುವರ್ತಿಸಿಕೊಂಡು ಅವರ ಹಿಂದುಗಡೆ ಇರಬೇಕಾದದ್ದೇ ಹಿಂದಾಳುಗಳ ಧರ್ಮವಷ್ಟೆ. ಆ ಧರ್ಮವನ್ನುವಿಸಾರಿ ಮುಂದಾಳುಗಳನ್ನು ಹಗೆತನ ಮಾಡಿಕೊಂಡರೆ ಹಿಂದಾಳುಗಳು ಕಣ್ಣುಕಳೆದುಕೊಂಡ ಕುರುಡರಂತಾಗುವರು. ಸರ್ಕಾರದವರೇ ಆಗಲಿ ಇತರರೇ ಆಗಲಿ ಈ ಹಿಂದಾಳು ಮುಂದಾಳುಗಳೆಂಬ—ಬ್ರಾಹ್ಮಣ ಬ್ರಾಹ್ಮಣೇತರರೆಂಬ ಭಿನ್ನಭಾವನೆಗಳಿಗೆ ಪುಟಕೊಟ್ಟು ಬಲಿಸುವದು ಸರ್ಕಾರ ಪ್ರಜೆಗಳೆರಡಕ್ಕೂ ಅನಿಷ್ಟಕಾರಕವೇ ಸರಿ. ನೀವೂ ಕೂಡ ಅಂದರೆ ವರ್ತಮಾನಪತ್ರಿಕೆಯನ್ನು ನಡಸುವವರೆಲ್ಲರೂ ಕೂಡ ಇಂಥ ಭಿನ್ನಭೇದಗಳನ್ನು ವೃದ್ಧಿಪಡಿಸುವ ಲೇಖನಗಳಿಗೂ ಚರ್ಚೆಗಳಿಗೂ ಅವಕಾಶಕೊಡದಿರುವದೇ ಮೇಲು. ಪ್ರಜೆಗಳ ಸಹೋದರಭಾವವನ್ನು ವೃದ್ಧಿಪಡಿಸುವದಕ್ಕೂ ಸರ್ಕಾರದವರು ಒಬ್ಬರನ್ನುದ್ಧಾರಮಾಡುವದಕ್ಕಾಗಿ ಮತ್ತೊಬ್ಬರನ್ನು ಮೆಟ್ಟಿ ತುಳಿಯದಂತೆ ಇರುವದಕ್ಕೂ ಸರ್ವದಾ ಗಮನಕೊಡುವದೇ ಅವರುಗಳಿಗೆ ಧರ್ಮವು. ಮನಃಪೂರ್ವಕವಾಗಿ ಬ್ರಾಹ್ಮಣವರ್ಣೀಯರಮೇಲೆ ಜನಸಾಮಾನ್ಯದ ದ್ವೇಷವು ಬೆಳೆಯುವಂತೆಯಾಗಲಿ ಬ್ರಾಹ್ಮಣವರ್ಣೀಯರಿಗೆ ಇತರ ವರ್ಣೀಯರಮೇಲೆ ವೈಮನಸವು ಬೆಳೆಯುವಂತೆಯಾಗಲಿ ನೀವೂ ಇತರ ಪತ್ರಿಕೆಯವರೂ ಸಹ ಮಾಡುವುದು ನಿಮ್ಮಗಳ ಕರ್ತವ್ಯಕ್ಕೇ ಮೂಲಹಾನಿ ಕುಠಾರವಾದಂತೆ ನೀವುಗಳು ಯಾಕೆ ತಿಳಿಯುವುದಿಲ್ಲವೋ ಕಾಣೆ. ಇನ್ನುಮೇಲಾದರೂ ಅನ್ಯೋನ್ಯ ದ್ವೇಷವನ್ನು ಬೆಳಸುವ ಲೇಖನಗಳಿಗೆ ಅವಕಾಶಕೊಡುವದನ್ನು ಮನ್ನಾಮಾಡಿರಿ. ಹಿಂದೂ ಮಹಮ್ಮದೀಯರೆಂಬ ಭಿನ್ನಭಿನ್ನಧರ್ಮದ ಜನಾಂಗಗಳೇ ಈಗ ದೇಶಕ್ಷೇಮಕ್ಕಾಗಿ ತಮ್ಮ ಪುರಾತನ ವೈರಭಾವಗಳನ್ನೆಲ್ಲಾ ಬಿಟ್ಟು ಪರಸ್ಪರ ಸಹೋದರರಂತೆ ಕೆಲಸಮಾಡುತ್ತಿರುವಾಗ ನಮ್ಮ ಹಿಂದೂ ಜನಾಂಗದಲ್ಲೇ ಒಬ್ಬರಿಗೊಬ್ಬರು ದಾಯಾದಿಗಳಂತೆ ಮಚ್ಚರಿಸಿ ಕಾದಾಡುವದು ಬಹಳ ಹೇಯವೆಂಬುವದನ್ನು ನಾನು ಹೇಳಬೇಕಾಗಿಲ್ಲ. ವಾರ್ತಾಪತ್ರಿಕೆಯಿಂದ ದೇಶಕ್ಕೆ ಎಷ್ಟು ಕ್ಷೇಮವಾಗುವದೋ ಅಷ್ಟು ಅನರ್ಥವಾಗುವುದೂ ಉಂಟು. ಅವರು ಸನ್ಮಾರ್ಗದಲ್ಲೂ ದೇಶಹಿತದಲ್ಲೂ ದೂರಾಲೋಚನೆಯಲ್ಲೂ ದೃಷ್ಟಿಕೊಟ್ಟರೆ ವಾರ್ತಾಪತ್ರಿಕೆಗಳು ಲೋಕಕ್ಷೇಮಕರವಾಗುವುವು. ಅವೇ ಮಾರ್ಗತಪ್ಪಿ ದುಷ್ಟಸಂಕಲ್ಪವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡಿದರೆ ಬಹಳ ಅನರ್ಥವನ್ನು ಮಾಡುವವು. ಇದನ್ನು ಧ್ಯಾನದಲ್ಲಿಟ್ಟು ಉತ್ತರೋತ್ತರ ವೃತ್ತಪತ್ರಿಕಾಕರ್ತರುಗಳು ನಡೆದರೆ ಅವರುಗಳು ದೇಶವಂದ್ಯರಾಗುವರು. ಸಹೋದರ ಪ್ರೀತಿಯಿಂದ ನಾನು ಕಾಲೋಚಿತವಾಗಿ ಹೇಳಿರುವ ಈ ನಾಲ್ಕು ಮಾತುಗಳನ್ನು ಬುದ್ಧಿಹೇಳುವದಕ್ಕೆ ಪ್ರವರ್ತಿಸಿದ ದುರಭಿಮಾನಿಯ ಮಾತುಗಳೆಂದು ಭಾವಿಸದೆ ಇರಬೇಕೆಂದು ಕೋರುವ ನಿಮ್ಮ ಹಿತಾಭಿಲಾಷಿ,

H. S.

ಹಾವೇರಿ ಜನಗಳ ಸುದೈವ.

ಹಾವೇರಿ ಜನಗಳ ಸುದೈವದಿಂದ ವಿಜಾಪೂರದ ಶ್ರೀ ಶಂಭುಲಿಂಗಸ್ವಾಮಿಗಳು ಕೆಲವು ದಿವಸಗಳ ಹಿಂದೆ ಅಕಸ್ಮಾತ ಹಾವೇರಿಗೆ ದಯಮಾಡಿಸಿ ಮಾಗಾವಿ ಸಿದ್ದಪ್ಪನವರ ಹಾಲಿನಲ್ಲಿ ಪಾರಮಾರ್ಥಿಕ ವಿಷಯವಾಗಿಯೂ ಭಕ್ತಿ ವಿಷಯವಾಗಿಯೂ ವ್ಯಾಖ್ಯಾನಗಳನ್ನು ಅಮೃತವಾಣಿಯಿಂದ ಹೇಳಿ ಜನಗಳ ಮನಸ್ಸನ್ನು ಬಹಳ ಆನಂದಗೊಳಿಸಿದರು. ಓರ್ವ ಪ್ರೇಕ್ಷಕ.

ತರೀಕೆರೆ.

ಇಲ್ಲಿನ ಶ್ರೀ ಜಯದೇವ ಜಗದ್ಗುರು ರೀಡಿಂಗ್‌ರೂಮಿನಲ್ಲಿ ಇದೇ ತಿಂಗಳು ೮ ನೆ ತಾ॥ ಸೋಮವಾರ ರಾತ್ರಿ ಮದ್ದಗಿರಿ ತಾ॥ ಚನ್ನಸಾಗರದ ಪೇರಣಿ ವಿದಾ ಪ್ರೊಫೆಸರ್ ತಿಪ್ಪಾವಧಾನಿಗಳು ಅಷ್ಟಾಂಗಯೋಗ ತಾಂಡವಲೀಲೆಯೆಂಬ ವಿದ್ಯೆಯನ್ನ ಮಾಡಿ ತೋರಿಸಿದರು. ಈ ಅಪೂರ್ವವಾದ ವಿದ್ಯೆಯನ್ನು ನೋಡಿದ ಮಹಾಜನಗಳಿಗೆ ಆದ ಆಶ್ಚರ್ಯವನ್ನು ಮತ್ತು ಆನಂದವನ್ನು ವರ್ಣಿಸಲು ಸಾಧ್ಯವಲ್ಲ. ಬಿ. ಚಂದಪ್ಪ.

ಶಿವಕಥಾ ಸಂತೋಷಕೂಟ.

ತುಮಕೂರು ತಾ॥ ಹೆಬ್ಬೂರು ಸಮ್ಮತು ಅರಿಯೂರೆಂಬ ಗ್ರಾಮಕ್ಕೆ ಗುಬ್ಬಿ ವೇ॥ ವೀರಾರಾಧ್ಯರ ಮಕ್ಕಳು ಶಿವಕಥಾ ಶಿವರುದ್ರಶಾಸ್ತ್ರಿಗಳವರು ದಯಮಾಡಿಸಿ ತಾ॥ ೧೨-೮-೨೧ ನೆ ಶುಕ್ರವಾರ ರಾತ್ರಿ ರಾಜಶೇಖರವಿಲಾಸವೆಂಬ ಕಥೆಯನ್ನು ಲೌಕಿಕ ಪಾರಮಾರ್ಥಿಕಾನುಸಾರವಾಗಿ ನಡೆಸಿದರು. ಈ ಶಿವಕಥಾ ಶ್ರವಣಕ್ಕೋಸ್ಕರ ನೆರೆದಿದ್ದ ಮಹಾಜನರು ಮಹದಾನಂದಪಟ್ಟು ವೇ॥ ಶಾಸ್ತ್ರಿಗಳನ್ನು ಶ್ಲಾಘಿಸಿದರು. ಎಂ.ಆರ್. ಚನ್ನದೇವರು.

ವೀರಶೈವಾಶ್ರಮ.

ಮುಂಬಯಿಯಲ್ಲಿಯ ವೀರಶೈವ ಆಶ್ರಮವು ಬಹಳಮಂದಿ ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಸ್ಥರಿಗೂ ಉಪಯೋಗವಾಗಿತ್ತು. ಅದು ಈಗ ಬಂದಾಗಿರುತ್ತದೆ. ಯಾವತ್ತು ದೊಡ್ಡದೊಡ್ಡ ಸಮಾಜದವರ ಆಶ್ರಮಗಳು ಈ ಪಟ್ಟಣದಲ್ಲಿ ಇರುವುವು. ವೀರಶೈವರು ಇದ್ದದ್ದು ಒಂದನ್ನು ಮುರಿದುಹಾಕಿ ಅದರ ಕಡೆಗೆ ಯಾರೂ ತಿರುಗಿನೋಡವಲ್ಲರು. ಇದು ಬಹು ಶೋಚನೀಯವಾದ ಮಾತು. ಯಾವ ಪುಣ್ಯಾತ್ಮರಾದರೂ ಈ ಮಾತಿನ ಕಡೆಗೆ ಲಕ್ಷವಿಟ್ಟು ಮತ್ತೆ ಆಶ್ರಮವನ್ನು ಸ್ಥಾಪಿಸಿ ಪುಣ್ಯಭಾಗಿಗಳಾಗಲೆಂದು ಪರಮೇಶ್ವರನಿಗೆ ಬೇಡಿಕೊಳ್ಳುತ್ತೇನೆ. ಎಂ. ಎಸ್. ಕೆ.

ಗದಗ.

ತಾ॥ ೮-೮-೧೯೨೧ ಸೋಮವಾರ ಸಂಜೆ ೫ ಗಂಟೆಗೆ ಇಲ್ಲಿಯ ಕಾಮನಕಟ್ಟೆಯ ಮೇಲೆ ಶ್ರೀ ಹಾವೇರಿ ಮಹಾಪಾದದ ಅಧ್ಯಕ್ಷತೆಯ ಕೆಳಗೆ ಅಜಮಾಸು ೩-೪ ನೂರು ಜನರ ಪ್ರಚಂಡವಾದ ಸಭೆಯು ನೆರೆವಿತ್ತು. ವೀರಶೈವಧರ್ಮ ಈ ವಿಷಯದ ಮೇಲೆ ಕೆಲವು ಜನರ ವ್ಯಾಖ್ಯಾನವಾಯಿತು. ನಂತರ ಶ್ರೀ ಶಿವಯೋಗಮಂದಿರದಿಂದ ದಯಮಾಡಿಸಿದ ಶ್ರೀ ಮಹಾಂತ ಶಿವಯೋಗಿಗಳು ಅದೇ ವಿಷಯದ ಮೇಲೆ ವೇದಾಗಮೋಪನಿಷತ್ತಿನ ಅನೇಕ ವಾಕ್ಯಗಳಿಂದ ಜನರಲ್ಲಿ ಭಕ್ತಿ ಹುಟ್ಟುವ ಹಾಗೆ ಅಗದಿಸ್ಫೂರ್ತಿದಾಯಕ ವಾಕ್ಚಟುತ್ವದಿಂದ ಅಜಮಾಸು ೨-೩ ತಾಸಿನವರೆಗೆ ಭಾಷಣಮಾಡಿದರು. ನಂತರ ನಮ್ಮ ಸಮಾಜದಲ್ಲಿ ಇಂಥ ಶಿವಯೋಗಿಗಳು ಸಿಗುವದು ಅಗದಿ ಕಠಿಣ ಯಿಂತಲೂ ಮತ್ತು ನಮ್ಮ ಸಮಾಜದ ಗುರುಗಳು ಅಂತಃಕಲಹವನ್ನು ಬಿಟ್ಟು ಸಮಾಜವನ್ನು ಸುಧಾರಿಸುವ ಮಹತ್ಕಾರ್ಯವನ್ನು ಕೈಕೊಳ್ಳಬೇಕೆಂತಲೂ ಅಗದಿ ಸ್ಫೂರ್ತಿದಾಯಕ ಚಿತ್ತಾಕರ್ಷಕ ಭಾಷಣವನ್ನು ವೀ. ಸ. ಸಂ. ವೈ. ಪ್ರೆಸಿಡೆಂಟರಾದ ವೀರಪ್ಪ ಅಣ್ಣಾ ಪುಮಚಗಿ ಹುಬಳೀಕರ ಇವರು ವ್ಯಾಖ್ಯಾನ ಮಾಡಿ ಅಧ್ಯಕ್ಷರ ಆಭಾರಮನ್ನಿಸಿದ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಮಹಾದೇವಪರಪ್ಪ ಮುಧೋಳ.

ಬಿದಾರ್ರ.

ಯಾವತ್ತು ಜನರಿಗೆ ಶೃತಪಡಿಸುವದೇನಂದರೆ—ಸನ್ಮಾನದರ್ಶಕ ಚಿಕ್ಕೋಡಿ ಕರ್ನಾಟಕನಾಟಕ ಕಂಪನಿಯ ಮ್ಯಾನೇಜರರಾದ ಶಿ॥ ಚನ್ನಯ್ಯ ಗುರುವಯ್ಯ ಸಾವಳಗಿಮಠ ಇವರು ಇಲ್ಲಿಯ ಜೋಗ ಇವರ ನಾಟಕಗೃಹದಲ್ಲಿ ತಾ॥ ೧೯-೬-೨೧ ರ ದಿವಸ ತಮ್ಮ ಪ್ರಸಿದ್ಧವಾದ ಶ್ರೀಮಹತ್ವಾಕಾಂಕ್ಷಾವೆಂಬ ನಾಟಕವನ್ನು ಮಾಡಿತೋರಿಸಿ ಆದರಿಂದ ಬಂದ ರಕಮಿನ ಅರ್ಧಭಾಗವನ್ನು ಇಲ್ಲಿಯ ಶ್ರೀ ಗಚ್ಚಿನಮಠದ ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳವರ ಸನ್ನಿಧಿಯಲ್ಲಿ ಜರಗತಕ್ಕ ದಾಸೋಹಕ್ಕೆ ಮತ್ತು ಅರ್ಧಭಾಗವನ್ನು ಸಾವಳಗಿಯ ಶ್ರೀ ಶಿವಲಿಂಗೇಶ್ವರ ಮಠದ ದಾಸೋಹಕ್ಕೆ ಕೊಟ್ಟಿರುತ್ತಾರೆ. ಮತ್ತು ವಿಶೇಷ ಆನಂದಸಂಗತಿಯೇನಂದರೆ--ಇದೇ ಪ್ರಕಾರ ಪ್ರತಿಯೊಂದು ಗ್ರಾಮದಲ್ಲಿ ಮಾಡಿ ಕಡೆಯ ನಾಟಕದ ಉತ್ಪನ್ನದ ಅರ್ಧಭಾಗವನ್ನು ಇಲ್ಲಿಯ ಮಠಕ್ಕೂ ಮತ್ತು ಅರ್ಧಭಾಗವನ್ನು ಸಾವಳಗಿ ಮಠಕ್ಕೂ ಕೊಡುವೆವೆಂದು ಇಲ್ಲಿಯ ಗಚ್ಚಿನ ಮಠಾಧಿಕಾರಿಗಳಾದ ಶ್ರೀಮನ್ಮಹಾಸಿದ್ಧಲಿಂಗೇಶ್ವರ ಚರಮೂರ್ತಿಗಳವರ ಸನ್ನಿಧಿಯಲ್ಲಿ ನಾಟಕದ ಮಾಲಕರು ಅಭಿವಚನವನ್ನು ಕೊಟ್ಟಿರುವರು. ಸದರಿ ನಾಟಕಕ್ಕೆ ಇಲ್ಲಿಯ ಪ್ರಮುಖಜನರೂ ಮತ್ತು ಅಧಿಕಾರಸ್ಥರೂ ಬಂದು ತಮ್ಮ ಕೈಲಾದ ಮಟ್ಟಿಗೆ ದ್ರವ್ಯಸಹಾಯ ಮಾಡಿದರು. ಇದೇ ಪ್ರಕಾರ ಯಾವತ್ತು ಗ್ರಾಮದವರು ಈ ಕಂಪನಿಯವರಿಗೆ ದ್ರವ್ಯಸಹಾಯ ಮಾಡುವರೆಂದು ಸವಿನಯ ಪ್ರಾರ್ಥನೆ. ಧರ್ಮಬಂಧು.

ಹಾನಗಲ್ಲ ತಾ॥ ಅಲೂರಲ್ಲಿ ಆದ ಆನಂದಪ್ರದರ್ಶನ.

ಅರಸರ ವಾರ್ಷಿಕ ಜನ್ಮೋತ್ಸವದ ಸಮಾರಂಭದೊಳಗೆ ರಾವಸಾಹೇಬ ಚನ್ನಬಸಪ್ಪ ಪಂಚಪ್ಪ ಕುರುಬಗೊಂಡ ದೇವಿಹೊಸೂರ ಈ ಪುಣ್ಯಾತ್ಮರಿಗೆ ಸರಕಾರದವರು ರಾವಬಹದ್ದೂರ ಎಂಬ ಪದವಿಯನ್ನು ದಯಪಾಲಿಸಿದ್ದಕ್ಕಾಗಿ ಇವರ ಅಭಿನಂದನದ ಬಗ್ಗೆ ತಾರೀಖು ೧೦-೬-೨೧ ನೇ ಇಸವಿಯ ವಿರಕ್ತಮಠದಲ್ಲಿ ನಮ್ಮೂರ ಶ್ರೀಗಳವರ ಸನ್ನಿಧಿಯೊಳಗೆ ಶ್ರಿಯುತ ಚನ್ನವೀರಪ್ಪ ಗಂಗಪ್ಪಶೆಟ್ಟರ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಇಲ್ಲಿಯ ಯಾವತ್ತು ಮಂಡಳಿಯು ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದ್ದಲ್ಲದೆ, ಇವರು ಲೋಕೋಪಯುಕ್ತ ಕಾರ್ಯಗಳನ್ನು ಮಾಡಿ, ಸರಕಾರದ ಸನ್ಮಾನ, ಜನಗಳ ಪ್ರೀತಿ ಸಂಪಾದಿಸಿದ್ದರ ಅಭಿನಂದನವು ಮಾಡಲ್ಪಟ್ಟಿತು. ಈ ಸಭೆಯಲ್ಲಿಯೇ ಶ್ರೀಮಂತ ದೊಡ್ಡ ಅಡಿವೆಪ್ಪನವರು ಕುಸ್ಸದ ಹಿರೆಕೇರೂರ ಇವರು ಕಳುಹಿಸಿದ ಸುವರ್ಣ ಪದಕವನ್ನು ಹಿರೆಕೇರೂರ ತಾಲ್ಲೂಕಿನಲ್ಲಿ ಸಮಾಜ ಜಾಗ್ರತೆಮಾಡಿದ ಮಹತ್ಕಾರ್ಯಕ್ಕಾಗಿ ವೇ॥ ಬಸವಾರ್ಯ ಬೂದಿಹಾಳ ಶಾಲಾಗುರು ಆಲೂರ (ಹಾನಗಲ್ಲ) ಇವರಿಗೆ ಶ್ರೀಗಳವರ ಹಸ್ತದಿಂದ ಅರ್ಪಿಸಲ್ಪಟ್ಟಿತು. ಮತ್ತು ಅರಸರ ವರ್ಧಂತ್ಯುತ್ಸವದ ಶಾಂತ್ಯರ್ಥವಾಗಿ ಶ್ರೀಗಳವರ ಪಂಚಾಮೃತಾಭಿಷೇಕಯುಕ್ತವಾದ ಪಾದಪೂಜೆಯೂ ಮಹಾಗಣಾರಾಧನೆಯೂ ವಿಜೃಂಭಣೆಯಿಂದ ಜರುಗಿದವು.

ಆನಂದಪ್ರದರ್ಶನ ಕಮಿಟಿಯ ಸೆಕ್ರೆಟರಿ.

ವಿದ್ಯಾಭಿವೃದ್ಧಿಗೆ ಹೆಚ್ಚಿನ ಧನಸಹಾಯ.

ಹರಪನಹಳ್ಳಿ ತಾಲ್ಲೂಕು ಅಲಿಗಲವಾಡದ ಪಾಟೀಲ ವಿರೂಪಾಕ್ಷಪ್ಪನವರು ಐಶ್ವರ್ಯದಿಂದಲೂ, ವಿನಯಾದಿ ಸದ್ಗುಣಗಳಿಂದಲೂ, ಈ ಪ್ರಾಂತ್ಯದಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದರು. ಇವರು ಶಿವೈಕ್ಯರಾದ ಕೆಲವು ದಿವಸಗಳ ಮೇಲೆ ಇವರ ಮನೆತನದಲ್ಲಿ ಸ್ವಲ್ಪ ಗೃಹಕಲಹವು ಪ್ರಾರಂಭವಾಗಲು ಅದನ್ನು ನಿವಾರಣೆಮಾಡಿ ಆ ಮನೆತನದ ಗೌರವ ಘನತೆಗಳನ್ನು ರಕ್ಷಿಸಬೇಕೆಂದು ಆ ಕುಟುಂಬಕ್ಕೆ ಸೇರಿದವರೂ, ಅವರ ಹಿತಚಿಂತಕರೂ, ಪ್ರಯತ್ನಿಸಿದುದು ಅತ್ಯಂತ ಸ್ತುತ್ಯವಾದದ್ದಾಗಿದೆ. ಈ ಸಂದರ್ಭದಲ್ಲಿ ಕೈ॥ ವಿರೂಪಾಕ್ಷಪ್ಪನವರ ಧರ್ಮಪತ್ನಿಯವರಾದ ಚನ್ನವೀರಮ್ಮನವರು ಮತ್ತು ಅವರ ಮನೆತನದ ಮ॥ ಸಿದ್ಧಲಿಂಗಪ್ಪನವರು, ಮ॥ ಪುಟ್ಟಬಸಪ್ಪನವರು ಮತ್ತು ಪಂಚಾಯತರಾದ ಮ॥ ನಲಕುದುರಿ ಕೊಟ್ರಬಸಪ್ಪನವರು, ಮ॥ ಅಂದನೂರು ಸಂಗಪ್ಪನವರು, ಮ॥ ಹನುಮಂತಾಚಾರ್ಯರೇ ಮೊದಲಾದ ದೊಡ್ಡ ಮನುಷ್ಯರು ಕೂಡಿ ಯೋಚಿಸಿ ಕೈ॥ ವಿರೂಪಾಕ್ಷಪ್ಪನವರ ಜ್ಞಾಪಕಾರ್ಥವಾಗಿ ಅವರ ಹೆಸರಿನಿಂದ ಹತ್ತು ಸಹಸ್ರ ರೂ. ಗಳನ್ನು ವೀರಶೈವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೋಸ್ಕರ ತೆಗೆದಿಡಬೇಕೆಂದು ನಿರ್ಧರಿಸಿರುವುದಾಗಿ ಕೇಳುತ್ತೇನೆ. ಇದು ಈ ಮಹಾಶಯರಿಗೆ ತುಂಬಾ ಭೂಷಣಪ್ರದವಾದುದಾಗಿದೆ. ಧನಿಕರಿಗೆ ಶೋಭಿಸುವ ಇಂಥ ದಾನವನ್ನು ಅವರ ಪಶ್ಚಾತ್ ಕೂಡಾ ಮಾಡಿ ಅವರ ಕೀರ್ತಿ ಶರೀರವು ಶಾಶ್ವತವಾಗಿರುವಂತೆ ಈ ಪ್ರಕಾರ ಮಾಡುವವರೇ ನಿಜವಾದ ಹಿತಚಿಂತಕರೂ, ಬಂಧು ಬಾಂಧವರೂ ಅಲ್ಲವೇ ? ವಿದ್ಯಾಭಿಮಾನಿ.

ವಿಜಾಪುರ.

ಇದೇ ಶ್ರಾವಣ ಶು॥ ೯ ಮಂಗಳವಾರ ಸಾಯಂಕಾಲ ೫ ಗಂಟೆಗೆ ಸರಿಯಾಗಿ ಇಲ್ಲಿಯ ಶ್ರೀ ಸಿದ್ಧೇಶ್ವರ ಸಂಸ್ಥೆಗೆ ಸೇರಿದ ಹೆಪ್ಪರಪಾಠಶಾಲೆಯಲ್ಲಿ ಒಂದು ಧಾರ್ಮಿಕ ಸಭೆಯು ನೆರದಿದ್ದಿತು. ಸಭೆಗೆ ಇಲ್ಲಿಯ ವೀರಶೈವ ಪ್ರಮುಖರೂ ಮತ್ತು ಅನೇಕ ವಿದ್ಯಾರ್ಥಿಗಳೂ ಸೇರಿದ್ದರು ಮ॥ ರಾ॥ ಸಿ. ಡಿ. ಅರಬಳ್ಳಿ ಬಿ. ಎ. ಎಲ್. ಎಲ್. ಬಿ. ಯವರು ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದರು. ಮ॥ ರಾ॥ ಗುಂಡಪ್ಪಣ್ಣಾ ಶಾಬಾದಿಯವರು ಇಲ್ಲಿಗೆ ಬಂದಿದ್ದ ಮತ್ತು ಹರಪ್ಪನಹಳ್ಳಿಯ ಬ್ರ॥ ಶ್ರೀ॥ ಸಿದ್ಧಾಂತಿ ಹೋಳಿಬಸವಶಾಸ್ತ್ರಿಗಳವರ ಚಿರಂಜೀವರಾದ ನಂಜುಂಡಯ್ಯ ಮತ್ತು ಸದಾಶಿವಯ್ಯ ಇವರನ್ನು ನೆರದಿದ್ದ ಸಭ್ಯರಿಗೆ ಪರಿಚಯಮಾಡಿಸಿಕೊಟ್ಟರು. ತದನಂತರ ನಂಜುಂಡಯ್ಯನವರು ಶ್ರೀ ಸಿದ್ಧೇಶ್ವರ ಸ್ತೋತ್ರ ರೂಪಕವಾದ ಕೆಲ ಪದ್ಯಗಳನ್ನೂ "ವೀರಶೈವ ಗತವೈಭವ" ದ ಮೇಲೆ ಒಂದು ಸೀಸಮಾಲಿಕೆಯನ್ನೂ ಓದಿ ಸಭ್ಯರನ್ನು ಆನಂದಗೊಳಿಸಿದರು. ಆ ಮೇಲೆ ಸದಾಶಿವಯ್ಯನವರು "ವೀರಶೈವ ಧರ್ಮಸಿದ್ಧಾಂತ" ದ ಮೇಲೆ ಸುಮಾರು ಒಂದುವರೆ ತಾಸಿನವರಿದಿಗೂ ಉಪನ್ಯಾಸವನ್ನು ಕೊಟ್ಟರು. ಬಳಿಕ ಮ॥ ರಾ॥ ಶಾಬಾದಿ ಗುಂಡಪ್ಪನವರು ವ್ಯಾಖ್ಯಾತರನ್ನೂ ಅವರನ್ನು ಇಲ್ಲಿಗೆ ಕಳುಹಿಸಿದ ವೇ॥ ಹೋಳಿಬಸವಶಾಸ್ತ್ರಿಗಳನ್ನೂ ಅಭಿನಂದಿಸಿ ಆಂಗ್ಲೇಯ ವಿದ್ಯಾಭ್ಯಾಸದಿಂದ ಸಮಾಜಕ್ಕುಂಟಾಗುವ ಪ್ರಯೋಜನಗಳನ್ನು ವಿವರಿಸಿ ತಿಳುಹಿಸಿದರು. ಅಧ್ಯಕ್ಷರ ಭಾಷಣಾನಂತರ ಮ॥ ರಾ॥ ಧನಶೆಟ್ಟಿಯವರು ಅಧ್ಯಕ್ಷರನ್ನೂ ಉಪನ್ಯಾಸಕರನ್ನೂ ಅಭಿನಂದಿಸುತ್ತಾ ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ತದನಂತರ ಜಯಘೋಷದೊಡನೆ ಸಭೆಯು ಮುಕ್ತಾಯಗೊಂಡಿತು.

ಓರ್ವ ಪ್ರತ್ಯಕ್ಷದರ್ಶೀ.

ಜಾಹೀರಾತು.

ವಿಜಾಪೂರ ತಾ॥ ಪೈಕಿ ಮೋಟಿ ಬಬಲೇಶ್ವರ ಗ್ರಾಮದ ವಿದ್ಯಾವರ್ಧಕಸಂಘದ ಸೆಕ್ರೆಟರಿಗಳವರ ಕಡೆಯಿಂದ ಯಾವತ್ತು ಪಂಡಿತ ಮತ್ತು ಶೋಧಕಮಹನೀಯರಿಗೆ ಈ ಪ್ರಕಟನೆಯ ಮೂಲಕ ತಿಳಿಸುವದೇನಂದರೆ-ನಮ್ಮ ಗ್ರಾಮ ಅಂದರೆ ಮೋಟಿ ಬಬಲೇಶ್ವರ ಗ್ರಾಮದ ಹಿರೇಮಠದಲ್ಲಿ ಶ್ರೀಮದ್ವನಲಿಂಗಚಕ್ರವರ್ತಿಗಳಾದ ಪಟ್ಟದ ಮಹಾಸ್ವಾಮಿಗಳವರ ಅಧ್ಯಕ್ಷತ ಕೆಳಗೆ ೫-೯-೨೧ ನೇ ದಿವಸ ಕೆಳಗೆ ಕಾಣಿಸಿದ ವಿಷಯಗಳ ಬಗ್ಗೆ ವಿವೇಚನಾ ಮಾಡುವ ಕುರಿತು ಸಭೆಯನ್ನೇರ್ಪಡಿಸುವುದು ಗೊತ್ತುಮಾಡಿದೆ. ಕಾರಣ ತಾವೆಲ್ಲರೂ ತಮ್ಮ ದೀರ್ಘಪ್ರಯತ್ನದಿಂದ ತಮಗೆ ಗೋಚರಿಸಿದ ಮಟ್ಟಿಗೆ ಲೇಖನ ದ್ವಾರಾ ಸದರಿ ತಾರೀಖಿನೊಳಗಾಗಿ ಸದರಿ ಸ್ವಾಮಿಗಳವರ ಸನ್ನಿಧಿಗೆ ರವಾನಿಸಬೇಕು. ಇದರ ಪ್ರೋತ್ಸಾಹಕ್ಕಾಗಿ ಶ್ರೀಮಂತ ಮಲ್ಲನಗೌಡ ವೀರನಗೌಡ ಪಾಟೀಲ ಬಬಲೇಶ್ವರ ಇವರು ಕೆಳಗೆ ಬರೆದಂತೆ ಇನಾಮುಗಳನ್ನು ಹಂಚುವರು. ಈ ವಿದ್ಯಾಭಿಮಾನಿಗಳವರ ಕೋರಿಕೆಯನ್ನು ನೆರವೇರಿಸುವ ಭಾಗವು ತಮ್ಮ ಕಡೆಯಿರುವದು.

ವಿಷಯಗಳ ವಿವರ.

೧. ವೀರಶೈವರಲ್ಲಿ ಆಗಿಹೋದ ರಾಜರ ಇತಿಹಾಸ ಇಸವಿ ಸಹಿತ.

೨. ವಿಜಯನಗರದ ವೀರಶೈವ ಪಾಳ್ಯಗಾರರ ಮನೆತನಗಳ ಸಂಕ್ಷಿಪ್ತ ಇತಿಹಾಸ ಇಸವಿ ಸಹಿತ.

೩. ವಿಜಾಪೂರ ಬಾದಶಹರ ಕೆಳಗಿನ ಪಾಳ್ಯಗಾರರ ಇತಿಹಾಸ ಇಸವಿ ಸಹಿತ.

೪. ಮೇಲೆ ಬರೆದ ವಿಷಯಗಳ ಬಗ್ಗೆ ಶಿಲಾಲೇಖ ತಾಮ್ರಪಟಗಳ ಸಾಂದ್ರ ಉಲ್ಲೇಖ.

೫. ವೀರಶೈವ ಧರ್ಮವು ಯುಗಯುಗಾಂತರ ಇತ್ತೆಂಬ ಬಗ್ಗೆ ಯೋಗ್ಯ ಆಧಾರಗಳು.

ಈ ಪ್ರಕಾರ ವಿಷಯಗಳನ್ನು ತಮ್ಮ ಪ್ರಯತ್ನದಿಂದ ಶೋಧಮಾಡಿ ತಮಗೆ ಗೊತ್ತಾದ ಮಟ್ಟಿಗೆ ಸದರಿ ತಾರೀಖಿನ ಒಳಗಾಗಿ ರವಾನಿಸಿದಲ್ಲಿ ಅಂಥ ಲೇಖನಗಳ ಯೋಗ್ಯತೆಯ ಪ್ರಕಾರ ಅನುಕ್ರಮವಾಗಿ ೨೫-೨೦-೧೫-೧೦-೫ ರೂಪಾಯಿಗಳ ಇನಾಮುಗಳನ್ನು ಹಂಚುವುದರಲ್ಲಿ ಬರುವದು. ಮಹನೀಯರೇ ಈ ಕಾರ್ಯದಲ್ಲಿ ತಾವು ತ್ರಿಕರಣಶುದ್ಧವಾದ ಪ್ರಯತ್ನಮಾಡಿದಲ್ಲಿ ನಮ್ಮ ಸಮಾಜದ ಏಳ್ಗೆಗೆ ಕಾರಣಭೂತರಾಗುವಿರಲ್ಲದೆ ಇನಾಮುಗಳನ್ನು ಪಡೆದ ಕೀರ್ತಿಭಾಜನರಾಗುವಿರಿ. ಈ ಸುಸಂಧಿಯನ್ನು ಕಳೆಯದೆ ಪ್ರಯತ್ನಪುರಸ್ಸರಾಗಿರಿ.

ಬಿ. ಸಿ. ಪುರಾಣೀಕ್,
ಸೆಕ್ರೆಟರಿ ವಿದ್ಯಾವರ್ಧಕಸಂಘ ಬಬಲೇಶ್ವರ.

ಶಿಡ್ಲಘಟ್ಟದ ಪ್ರಜಾಮಿತ್ರಮಂಡಲಿ.

ಈ ಸಂಘದ ಜನರಲ್ ಮೀಟಿಂಗ್ ಕಳೆದ ೨೩ ನೆಯ ತಾರೀಖಿನ ದಿನ ಸಂಘದ ಪ್ರೆಸಿಡೆಂಟರವರಾದ ಮ॥ ಎಸ್. ಹಂಪಯ್ಯನವರ ಮನೆಯ ಮಹಡಿಯಲ್ಲಿ ಸದರಿಯವರ ಅಧ್ಯಕ್ಷತೆಯಲ್ಲಿ ನಡಿಯಿತು. ಮಂಡಲಿಯ ಒಟ್ಟು ೧೦೫ ಮಂದಿ ಮೆಂಬರುಗಳ ಪೈಕಿ ೪೦ ಮಂದಿ ಮೆಂಬರುಗಳು ಹಾಜರಾಗಿದ್ದರು. ಸರ್ವಾನುಮತಿಯಿಂದ ಇದರಡಿ ಕಂಡ ತೀರ್ಮಾನಗಳಾಗಿರುತ್ತವೆ.—

ತೀರ್ಮಾನಗಳು.

೧. ನಮ್ಮ ಸಂಸ್ಥಾನದ ಮಂತ್ರಿವರ್ಯರವರಾದ ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್ ಬಿ.ಎ., ಕೆ.ಸಿ.ಐ.ಇ., ಸಿ.ಎಸ್.ಐ. ಯವರಿಗೆ ಶ್ರೀಮತ್ ಜಾರ್ಜ ಸಾರ್ವಭೌಮರವರಿಂದ (ಕೆ.ಸಿ.ಐ.ಇ.) ಎಂಬ ಘನತರವಾದ ಬಿರುದು ಲಭ್ಯವಾಗಿರುವದಕ್ಕೆ ಸಂಘದವರು ಅತ್ಯಂತ ಸಂತೋಷವುಳ್ಳವರಾಗಿರುತ್ತಾರೆಂಬ ಅಂಶವನ್ನು ರಾಜಭಕ್ತಿಯೊಡನೆ ಅರಿಕೆ ಮಾಡತಕ್ಕದ್ದು.

೨. ನಮ್ಮ ಸರ್ಕಾರದ ಒಂದನೆಯ ಕೌನ್ಸಿಲರವರಾದ ಮಿ॥ ಎ. ಆರ್. ಬಾನರ್ಜಿಯವರು ಸಿ.ಐ.ಇ., ಎಂ.ಎ., ಐ.ಸಿ.ಎಸ್., ಯವರಿಗೆ ಸಾರ್ವಭೌಮರವರಿಂದ ಸಿ.ಎಸ್.ಐ. ಎಂಬ ಬಿರುದು ಲಭ್ಯವಾಗಿರುವದಕ್ಕಾಗಿ ಸಂಘದವರು ತಮ್ಮ ಸಂತೋಷವನ್ನು ವ್ಯಕ್ತಪಡಿಸುವದು.

೩. ಮ॥ ಬಿ. ನಾಗಪ್ಪನವರು, ಬಾರ್-ಅಟ್-ಲಾ ಯವರಿಗೆ ಚೀಫ್ ಕೋರ್ಟ್ ಜಡ್ಜಿಯಪದವಿಯು ದೊರೆತಿರುವದಕ್ಕೆ ಸಂಘದವರು ತಮ್ಮ ಸಂತೋಷವನ್ನು ಕೇವಲ ಭ್ರಾತೃಭಾವದಿಂದ ಜಡ್ಜರವರಲ್ಲಿ ಅರಿಕೆ ಮಾಡುವದು.

೪. ಹಿಂದುಳಿದ ಜನಾಂಗದವರ ಏಳಿಗೆಗಾಗಿ ಏರ್ಪಾಡಾದ ಮಿಲ್ಲರ್ ಕಮಿಟಿ ರಿಪೋರ್ಟು ಮತ್ತು ಎಜ್ಯುಕೇಷನ್ ಮೆಮೊರಾಂಡಮ್ಮನ್ನೂ ಮಂಜೂರ್ಮಾಡಿರುವದಕ್ಕೆ ಸಂಘದವರು ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯವರಲ್ಲಿಗೆ ತಮ್ಮ ವಂದನೆಗಳನ್ನು ತಿಳಿಸುವದು.

೫. ಸನ್ ೧೯೧೯ ನೆ ಇಸ್ವಿಯ ಮ್ಯುನಿಸಿಪಲ್ ಚುನಾವಣೆಯ ನಿಬಂಧನೆಯನ್ನು ಅನುಸರಿಸಿ ಮುಂದಿನತಿಂಗಳಲ್ಲಿ ನಡಿಯಲಿಕ್ಕಿರುವ ಎಲೆಕ್ಷನ್ನಿನ ವೇಳೆಗೆ ಶಿಡ್ಲಘಟ್ಟದ ಮುನ್ಸಿಪಲ್ ಕೌನ್ಸಿಲ್ಲಿಗೆ ಶಿಡ್ಲಘಟ್ಟದ ಪ್ರಜಾಮಿತ್ರ ಮಂಡಲಿ ಸಂಘದಿಂದ ಒಬ್ಬ ಮೆಂಬರನ್ನು ಆರಿಸಿಕೊಳ್ಳುವ ಹಕ್ಕನ್ನು ಕೊಡಿಸಿಕೊಡಬೇಕೆಂಬದಾಗಿ ಗೌರ್ನಮೆಂಟನ್ನು ಪ್ರಾರ್ಥಿಸುವದಲ್ಲದೆ ಅಂ

ಮೆಂಬರುಗಳು ರುಜುಮಾಡಿದ ಅರ್ಜಿಯನ್ನು ಸಂಘದ ನಡವಳಿಕೆಗಳ ರಿಪೋರ್ಟಿನೊಡನೆ ಚೀಫ್ ಸೆಕ್ರೆಟರಿ ಸಾಹೇಬರವರಲ್ಲಿಗೆ ರವಾನಿಸಬೇಕೆಂಬುವದು.

೬. ಈ ಸಂಘದ ಪ್ರೆಸಿಡೆಂಟರಾದ ಮ॥ ಎಸ್. ಹಂಪಯ್ಯನವರು ಕೆಂಪದಭಿವೃದ್ಧಿ ವಿಚಾರದಲ್ಲಿ ಬಹಳಮಟ್ಟಿಗೆ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿರುವದರ ಗುರ್ತಾಗಿ ಇವರಿಗೆ ಮಾರ್ಚ ೫-೬-೭ನೆಯ ತಾರೀಖುಗಳಲ್ಲಿ ನಡೆದ ಕೋಲಾರ ಡಿಸ್ಟ್ರಿಕ್ಟ್ ಕಾನ್ಫರೆನ್ಸಿನಲ್ಲಿ ಎರಡು ಫಸ್ಟ್ ಪ್ರೈಜ್ ಮೆಡಲುಗಳು ದೊರೆತಿರುವದಲ್ಲದೆ ರೇಷ್ಮೆ ಕೈಗಾರಿಕೆ ಅಭಿವೃದ್ಧಿ ವಿಚಾರದಲ್ಲಿ ತಕ್ಕ ಸಲಹೆಗಳನ್ನು ಕೊಡಲು ನಮ್ಮ ಸರ್ಕಾರದವರು ಇವರನ್ನು ದಕ್ಷಿಣ ಇಂಡಿಯಾದ ಮುಖ್ಯಸ್ಥಳಗಳಲ್ಲಿ ಸಂಚರಿಸಿಬರಲು ಚುನಾಯಿಸಿದ್ದರಮೇಲೆ ಪ್ರಯಾಣವನ್ನು ಸುಖಕರವಾಗಿ ನಡಿಸಿಬಂದಿರುವದಕ್ಕೆ ನಮ್ಮ ಸಂತೋಷವನ್ನು ಸೂಚಿಸುವದು. ಶ್ರೀಮನ್ಮಹಾರಾಜರವರಿಗೆ ಶ್ರೇಯಃಪ್ರಾರ್ಥನೆ ಮಾಡಿ ಸಭೆಮುಗಿಯಿತು. ಸೆಕ್ರೆಟರಿ ಪ್ರಜಾಮಿತ್ರಮಂಡಲಿ.

ಕಣವಿಮಠ ಹಮ್ಮಿಗಿ.

ತಾ॥ ೧೦-೭-೨೧ ನೇ ದಿವಸ ಗದಗ ತಾಲ್ಲೂಕು ಹಮ್ಮಿಗಿ ಗ್ರಾಮದಲ್ಲಿ ಸಾರ್ವಜನಿಕಸಭೆಯು ಕೂಡಿತ್ತು. ವೇ॥ ಸಂ॥ ಚಂದ್ರಶೇಖರಶಾಸ್ತ್ರಿ ಹಿರೇಮಠ ಹೊಳಲ ಇವರು ಸರ್ವಜನರ ಪ್ರಾರ್ಥನಾನುಸಾರವಾಗಿ ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಭೆಯಲ್ಲಿ ಬಾಲೇಹೊಸೂರು ಶ್ರೀ ವೀರಭದ್ರ ಶಿವಯೋಗಿಗಳು ಕಣವಿಮಠದ ಸಿದ್ಧಾಂತಿ, ವೀರಭದ್ರಶಾಸ್ತ್ರಿಗಳು, ಗರ್ಲಸ್ಕೂಲ ಮಾಸ್ತರ ನಾಗಭೂಷಣಮಠದ ಶರಭಯ್ಯನವರು, ಕಲ್ಲಮಠದ ರಾಚಯ್ಯನವರು, ಉಪಾಧ್ಯಾಯ ಅನಂತಯ್ಯನವರು, ಸ್ಕೂಲ ಹೆಡ್‌ಮಾಸ್ತರರು, ಅಸಿಸ್ಟೆಂಟ್ ಮಾಸ್ತರರು, ಮುಂಡರಗಿ ಸರ್ಕಲ್ ಇನ್ಸ್‌ಪೆಕ್ಟರರು, ಶ್ರೀಯುತ ವಿರೂಪಾಕ್ಷಗೌಡ ಪಾಟೀಲ, ರಾಮಚಂದ್ರರಾವ ಕುಲಕರ್ಣಿ ಚನ್ನಬಸಪ್ಪ ಗದ್ದಿಕೇರಿ ಹೊಂಬಳ ಜನಲಿವರದ ಫಕೀರಪ್ಪ ವೀರಪ್ಪ ಸಿರಹಟ್ಟಿ ರುದ್ರಪ್ಪ ಶಿರಿವಾರದ ಶಾಂತಪ್ಪ ಕುಬಸದ, ಫಕೀರುದ್ದೀನಸಾಹೇಬ ಜವಳಿ, ಶಂಕರಪ್ಪ ಎಲಿಗಾರ ಮೊದಲಾದ ಪ್ರಮುಖಮಂಡಲಿಯು ಕೂಡಿತ್ತು. ಸ್ವಾಗತ ಪರಿಭಾಷಣವನ್ನು ಫಕೀರುದ್ದೀನ ಸಾಹೇಬ ಜವಳಿ ಇವರು ಮಾಡಿದರು. ಅನಂತರ ಬಾಲೇಹೊಸೂರು ಶ್ರೀಗಳು ಸ್ವಧರ್ಮಪರಿಪಾಲನದ ವಿಷಯವಾಗಿ ಒಂದು ತಾಸಿನವರೆಗೆ ಸುಶ್ರಾವ್ಯವಾಗಿ ಭಾಷಣವನ್ನು ಮಾಡಿದರು. ಆಮೇಲೆ ಐಕಮತ್ಯದ ವಿಷಯವನ್ನು ಕುರಿತು ಶಾಂತಪ್ಪ ಕುಬಸದ ಅಸಹಕಾರ ಸೇವೆಯನ್ನು ಕುರಿತು ವಿರೂಪಾಕ್ಷಗೌಡ ಪಾಟೀಲ ಇವರ ಈ ವಿಷಯದಲ್ಲಿ ಗರ್ಲಸ್ಕೂಲ ಮಾಸ್ತರ ಶರಭಯ್ಯನವರು ಬಹಳ ಮಾರ್ಮಿಕವಾಗಿ ಪ್ರತಿಪಾದಿಸುವಂತೆ ಭಾಷಣವನ್ನು ಮಾಡಿದರು. ಆ ಮೇಲೆ ಅಧ್ಯಕ್ಷರು ಮೇಲಿನ ಎಲ್ಲ ವಿಷಯಗಳಮೇಲೆ ಒಳ್ಳೆ ಉತ್ತಮವಾಗಿ ಒಂದು ತಾಸಿನವರೆಗೆ ವ್ಯಾಖ್ಯಾನವನ್ನು ಕೊಟ್ಟ ತರುವಾಯ ಹಮ್ಮಿಗಿಯ ಪ್ರಮುಖಮಂಡಲಿಯವರು ಈ ಪ್ರಕಾರ ಗ್ರಾಮಸುಧಾರಣೆಯನ್ನು ಮಾಡಿಕೊಳ್ಳಲಿಕ್ಕೆ ಪ್ರಯತ್ನಮಾಡಿದ್ದಕ್ಕಾಗಿ ಸಂತೋಷಿಸಿ ಈ ಸುಧಾರಣೆಗೆ ಮುಖ್ಯಕಾರಣರಾದ ವಿರೂಪಾಕ್ಷಗೌಡರು ರಾಜಕೀಯಧಾರ್ಮಿಕ ಈ ಉಭಯ ಕಾರ್ಯಗಳಲ್ಲಿ ದಕ್ಷರಾಗಿ ಮಾಡಿದ ಪರೋಪಕಾರಗಳಲ್ಲಿ ಕೆಲವುಗಳನ್ನು ಈ ರೀತಿಯಾಗಿ ವರ್ಣಿಸಿದರು. ಈ ವಿರೂಪಾಕ್ಷಗೌಡರು ಜಾಗಿನಕೇರಿ ಪಾಟೀಲರೇ ಕೆಲಸಮಾಡಲಿಕ್ಕೆ ಹತ್ತಿ (ಆರಂಭಿಸಿ) ಐದು ವರ್ಷವಾಯಿತು. ಈ ಅವಧಿಯಲ್ಲಿ ಬಂದಂಥ ಸಂಪೂರ್ಣ ಪೋಟಿಗಿಯನ್ನು ಅಂದರೆ ಎರಡುವರ್ಷ ಯುದ್ಧಫಂಡಿಗೆ ಕೊಟ್ಟಿರುವರು. ಇತ್ತೀಚಿಗೆ ತಮ್ಮ ಪೋಟಿಗಿಯನ್ನು ಧರ್ಮಾರ್ಥ ಔಷಧೋಪಚಾರಕ್ಕಾಗಿ ಖರ್ಚುಮಾಡುತ್ತಿದ್ದು ಅವುಗಳಲ್ಲಿ ಉಳಿದ ರೂಪಾಯಿ ೨೫ ಗಳನ್ನು ಶ್ರೀ ಜಗದ್ಗುರು ಉಜ್ಜಯಿನೀ ಸಂಸ್ಥಾನದ ಪಾಠಶಾಲೆಗೆ ಕಳಿಸಲಿಕ್ಕೆ ಸಂತೋಷದಿಂದ ಸಭೆಯಲ್ಲಿಯೇ ಕೊಟ್ಟರು. ಇದಲ್ಲದೆ ವಾರಫಂಡ್ ವಾರಲೋನ ಲೇಡಿಸಿಲ್ವರ್‌ಫಂಡ್ ಇತ್ಯಾದಿ ಕೆಲಸಗಳಲ್ಲಿ ಸರಕಾರಕ್ಕೆ ವಿಶೇಷಶ್ರಮ ವಹಿಸಿ ಸಹಾಯಮಾಡಿದ್ದಕ್ಕಾಗಿ ಸರಕಾರದವರು ಹಮ್ಮಿಗಿಗ್ರಾಮದ ಪಾಟೀಲ ಕೆಲಸವನ್ನು ಇವರಿಗೆ ನೇಮಿಸಿರುವರಲ್ಲದೆ ಗ್ರಾಮ ಪೋಲೀಸ್ ಆಕ್ಟ ೧೫ ನೇ ಕಲ್ಮನನ್ವಯ ಸ್ಪೆಷಲ್ ಅಧಿಕಾರವನ್ನು ಸಹ ದಯಪಾಲಿಸಿರುವರು. ಇದರಂತೆ ಮುಂದಾದರೂ ರೈತಜನರಿಗೂ ಸರಕಾರಕ್ಕೂ ಪ್ರೀತಿಯುಳ್ಳವರಾಗಿ ಇದಕ್ಕಿಂತಲೂ ಹೆಚ್ಚಿನ ಪದವೀಧರರಾಗುವ ಸದ್ಬುದ್ಧಿಯನ್ನು ಜಗದೀಶನು ಕೊಡಲೆಂದು ಹೇಳಿದಮೇಲೆ ಅಧ್ಯಕ್ಷರ ಅಪ್ಪಣೆಯಮೇರೆಗೆ ಈ ಊರಲ್ಲಿ ಒಂದು ವಾಚನಾಲಯವನ್ನು (ಓದುವ ಮನೆ) ಸ್ಥಾಪಿಸುವದು ನಿರ್ಣಯವಾಗಿ ಸಾರ್ವಭೌಮ ದಂಪತಿಗಳ ಶ್ರೀವಾರಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು.

ಸಿದ್ಧಾಂತಿ ವೀರಭದ್ರಶಾಸ್ತ್ರಿ.

ತೆಂಗಿನಮರ.

ರಾಜಪೈರು ಅಥವಾ ಧ್ರುವಪೈರು ಅಂದರೆ ತೆಂಗಿನಮರವಲ್ಲದೆ ಬೇರೆ ಇಲ್ಲ, ಸಸಿಕಟ್ಟಿದ ಮೂರು ವರ್ಷಗಳ ಕಾಲ ಕಾಪಾಡಿದರೆ ಆ ಮೇಲೆ ಮೂರು ವರ್ಷಕ್ಕೆ ಫಸಲುಬಿಟ್ಟು ಎಂಥಾ ಗೊಟ್ಟಿನ ದುರ್ಭಿಕ್ಷವನ್ನಾದರೂ ಸಹಿಸಿಕೊಂಡು ಸದಾಕಾಲದಲ್ಲೂ ಫಲವನ್ನು ಕೊಡುತ್ತಾ ಧಣಿಯನ್ನು ಕಾಪಾಡುತ್ತದೆ. ಈಗಿನ ಕಾಲದಲ್ಲಂತೂ ಸಮೃದ್ಧಿ ಮಳೆ ಬಂದು ಕೆರೆಗಳು ತುಂಬಿ ತರಿ ಬಾಗಾಯ್ತುಗಳ ಫಸಲು ಆಗದೆ ಬಾವಿಗಳಲ್ಲೂ ನೀರಿಲ್ಲದೆ ಅಡಿಕೆ ತೋಟಗಳು ಧಣಿಯ ಆಸ್ತಿಗಳನ್ನೆಲ್ಲಾ ಅಪಹರಿಸಿ ಸಾಲಗಾರರನ್ನ ಮಾಡಿ ಅಡಿಕೆ ಅಗ್ರಗಳೆಲ್ಲವೂ ನಾಶವಾದವು. ಆದುದರಿಂದ ಪುನಃ ಅಡಿಕೆ ಮರ ಮಾಡಿ ಲಾಗೋಡು ಇಟ್ಟು ನಷ್ಟಕ್ಕೆ ಈಡಾಗದೆ ಜಮೀನ್ದಾರರು ಸಾಧ್ಯವಾದಮಟ್ಟಿಗೂ ತೆಂಗಿನ ತೋಟದ ಆಸ್ತಿಯನ್ನು ಮಾಡುವದು ಶಾಶ್ವತವೆಂದು ಯೋಚಿಸಿ, ಒಳ್ಳೇ ಬೀಜದ ಗೋಟನ್ನು ತರಿಸಿ ನಾಟಿಸಿ ಸಸಿಗಳನ್ನ ಮಾಡಿರುತ್ತೇವೆ. ೪-೫ ಅಡಿಯ ಬುರುಡೆಸಸಿಗಳು ೬ ಮತ್ತು ೮ ಅಡಿಯ ತೆಂಡೆಸಸಿಗಳು ಸಹ ಇರುತ್ತವೆ. ಈಗ ಸಸಿಗಳನ್ನು ಕಟ್ಟುವುದಕ್ಕೆ ಒಳ್ಳೇ ಹಯಾಂ ಕಾಲವಾಗಿರುವದರಿಂದ ಇಷ್ಟವುಳ್ಳವರು ಮೊಖ್ತಾ ಬಂದು ನೋಡಿ ತೆಗೆದುಕೊಂಡು ಹೋಗಬಹುದು. ಅಥವಾ ಹೆಚ್ಚು ಸಂಗತಿಯನ್ನು ತಿಳಿಯಬೇಕಾದರೆ ಈ ಕೆಳಗಿನ ವಿಳಾಸದಾರರಿಗೆ ಬರೆದು ಜವಾಬು ತರಿಸಿಕೊಳ್ಳಬಹುದು.

ಯಜಮಾನರ ಮುಪ್ಪಿರಪ್ಪ, ಹೊನ್ನುಡಿಕೆ,
3 ತಾಲ್ಲೂಕು ತುಮಕೂರು.

ಹೊಸ ಪುಸ್ತಕ! ಕ್ರಯ ೬ ಆಣೆ.

ವೀರಶೈವ ಸಮಾಜಸುಧಾರಣೆ.

ಲೇಖಕ ಎಂ. ಮಂಜಪ್ಪ ಹರ್ಡೇಕರ್.

ಈ ಪುಸ್ತಕದಲ್ಲಿ ವೀರಶೈವ ಸಮಾಜದ ಪೂರ್ವಸ್ಥಿತಿಯನ್ನೂ, ಧಾರ್ಮಿಕ, ಸಾಮಾಜಿಕ, ಮತ್ತು ವಿದ್ಯಾವಿಷಯಗಳಲ್ಲಿ ಈವರೆಗಾದ ಜಾಗ್ರತೆಯನ್ನೂ, ಗುರುವರ್ಗದಲ್ಲಿಯೂ ಮತ್ತು ಭಕ್ತವರ್ಗದಲ್ಲಿಯೂ ಈಗ ಉಂಟಾಗಿರುವ ಕಲಹಕ್ಕೆ ಕಾರಣಗಳಾದ ಸಂಗತಿಗಳ ಯುಕ್ತಾಯುಕ್ತತೆಗಳನ್ನೂ, ನಮ್ಮ ಸಮಾಜದ ಮುಂದಾಳುಗಳ ಕರ್ತವ್ಯವನ್ನೂ ಮತ್ತು ಬ್ರಾಹ್ಮಣೇತರರ ಪಂಗಡದಲ್ಲಿ ನಮ್ಮ ಸಮಾಜವು ಸೇರುವುದರಿಂದ ಇದಕ್ಕಾಗತಕ್ಕ ಅನರ್ಥವನ್ನೂ ಧಾರ್ಮಿಕ, ಸಾಂಪತ್ತಿಕಾದಿ ಸಕಲ ವಿಷಯಗಳಲ್ಲಿಯೂ ವೀರಶೈವ ಸಮಾಜಬಾಂಧವರು ಅತ್ಯಂತ ಮಹತ್ತರವಾದ ಈ ಕಾಲದಲ್ಲಿ ಮಾಡಬೇಕಾಗಿರುವ ಕರ್ತವ್ಯಗಳನ್ನೂ ಕುರಿತು ಸ್ಪಷ್ಟವಾಗಿಯೂ, ವಿಸ್ತಾರವಾಗಿಯೂ ವಿವರಿಸಿದೆ.

ಇವರಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳು ನಮ್ಮ ಸಮಾಜದ ಅನೇಕ ಸುಪ್ರಸಿದ್ಧ ಮುಂದಾಳುಗಳ ಅಭಿಪ್ರಾಯಗಳಿಂದ ದೃಢೀಕರಿಸಲ್ಪಟ್ಟಿದೆ.

ವಿಳಾಸ—ಎಸ್. ಕೆ. ಸೋಮನಾಥಯ್ಯ,
3 ಬುಕ್‌ಸೆಲರ್ ದಾವಣಗೆರೆ.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈ ಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು ಸೇವಿಸುವದರಿಂದ ಪೂರಾ ಗುಣಕೊಡುವುದು. 2. 3, ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2—0—0

ಪ್ರಮೇಹನಿವಾರಿಣಿ ಭಸ್ಮ.

ಅನೇಕರು ಯೌವ್ವನ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಹಸರು) ಬರುತ್ತಿದ್ದರೂ, ಬಿಳುಪುಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ

ಡಬ್ಬಿ 1 ಕ್ಕೆ 1—4—0

47 ವಿಳಾಸ.—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಫ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

18 ಮೊಳ ಪೂರ ಇರುವದು. ದೊಡ್ಡ ಪನ್ನ.

ಬುಗುಡಿ ಅಂಚಿನ ಸೀರೆಗಳು.

ಬೆಂಗಳೂರು ಅರಳೆಪೇಟೆಯ ಸೀರೆಯಂತೆಯೇ ಇರುವವು. ಉಡುವದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇರುವದು. ಸುಂದರವಾದ ರೇಷ್ಮೆಯ ಸೆರಗು ಮತ್ತು ದೊಡ್ಡ ಅಂಚು ಬಣ್ಣ ಹೋಗದು ಶ್ರೀಮಂತರಿಗೂ, ಗರೀಬರಿಗೂ ಲಾಯಖಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಪಟ್ಟಣದಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುವೆವು. ಒಂದೆರಡನನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 6—8—0
ನಂ. 2 7—8—0

46 ವಿಳಾಸ —ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542 ಪಾರ್ಕ್‌ಟೌನ್ ಮದರಾಸು.

ಫಲ ಶೀಘ್ರ ! ಮನೋಲ್ಲಾಸಿತವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 44

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯನ್ನಿದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲೆಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಗಳಿಗೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲೆ ಬಿಳೆಸೆರಗು ಸೋರುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೈಫಲ್ಯ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಕೀಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತ[illegible]ಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ನೆಯ ಇಸವಿ ಆಗಸ್ಟ್ ತಾ॥ ೨೧ ರಿಂದ ೧೯೨೧ ನೆಯ ಆಗಸ್ಟ್ ತಾ॥ ೨೭ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಶ್ರಾವಣ ಬಹುಳ ತದಿಗೆಯಿಂದ ಶ್ರಾವಣ ಬಹುಳ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
21	ಭಾನು	ತದಿ	46-25	ಪೂಭಾ	8-55	6
22	ಸೋಮ	ಚೌತಿ	49-2	ಉಭಾ	13-28	7
23	[1]ಮಂಗಳ	ಪಂಚ	50-11	ರೇವ	16-56	8
24	ಬುಧ	ಷಷ್ಠಿ	50-4	ಅಶ್ವಿ	19-6	9
25	[2]ಗುರು	ಸಪ್ತ	48-37	ಭರ	20-2	10
26	[3]ಶುಕ್ರ	ಅಷ್ಟ	46-1	ಕೃತ್ತಿ	19-49	11
27	[4]ಶನಿ	ನವ	42-18	ರೋಹಿ	18-26	12

(1) ಮಂಗಳಗೌರೀವ್ರತಂ. (2) ಪ್ರಸನ್ನಕೃಷ್ಣಸ್ವಾಮಿ ತ್ರಿರಥ. (3) ಜನ್ಮಾಷ್ಟಮಿ, ದಶಫಲವ್ರತಂ. (4) ಶ್ರಾವಣಶನಿವಾರಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾರಾ ಪಶ್ಯಜ್ಞ ನಕ್ಷತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತ ಮಾಲಾಕುಲಂ | ಪ್ರೇಮಂಬೆತ್ತಿ ಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಆಗಸ್ಟ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೩೫

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
33 ಮೈಸೂರು.

ಕತ್ತಲೆಯಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ

ರೇಡಿಯಂ ರಿಸ್ಟ್‌ಲೆಟ ವಾಚ್



ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಿಗೆ ಬೆಳಕು ಬೇಕಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟೂ ಚನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇದು ಅಮೆರಿಕಾ ದೇಶದಲ್ಲಿ ತಯಾರಾದದ್ದು. ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹು ಬಾಳಿಕೆ ಬರುವುವು. ಇವಕ್ಕೆ 4 ವರ್ಷ ಗ್ಯಾರಂಗಿಯುಂಟು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಗಡಿಯಾರ 1ಕ್ಕೆ 8-0-0. ಇಂಗ್ಲೀಷ್ ಪಟ್ಟಿ ಸಹಿತ 6-8-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕೊ.,
48 102 ಜೈನಬಜಾರ್ ಮದರಾಸು.

ಇಲ್ಲಿ ನೋಡಿ!

ನರೆಕೂದಲಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ರಾಯಲ್ ಕೂದಲ ರಂಗು.

ನರೆತೂದಲುಗಳಿಗೆ ಒಂದು ಸಲ ಹಚ್ಚಿದರೆ 20 ವರ್ಷದ ಪ್ರಾಯಸಮರ್ಥರಂತೆ ಕಾಣುವಿರಿ. ಈ ರಂಗನ್ನು ಹಚ್ಚಿಕೊಂಡರೆ ಕೂದಲು ಅಚ್ಚಕಪ್ಪಾಗಿ ರೇಷ್ಮೆಯ ಹಾಗೆ ಕಂಗೊಳಿಸುವುದು. ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷಿಸಿದರೆ ನೀವೇ ಸಂತೋಷಪಡುವಿರಿ.

ಕ್ರಯ ಬಾಟ್ಲಿ 1ಕ್ಕೆ 1—4—0.

ಏಜಂಟರು—ಮಾರ್ಟಿನ್ ಕಂಪನಿ, ರತನ್ ಬಜಾರ್,
48 ಮದರಾಸ್ ಇ. ಸಿ.

೨೪ ಗಂಟೆಗಳಲ್ಲಿ ಗುಣ.

ನಮ್ಮ ಡಾ॥ ವಿ. ಜಿ. ಎನ್. ರವರ ರಿಂಗ್‌ವರ್ಮ್ ದ್ರಾವಕವು ಎಲ್ಲಾ ವಿಧವಾದ ಉಗುರುಸುತ್ತು, ಚರ್ಮಸಂಬಂಧವಾದ ವ್ಯಾಧಿಗಳನ್ನು 24 ಗಂಟೆಗಳೊಳಗೆ ಗುಣಪಡಿಸುವುದು. ಗುಣ ಖಂಡಿತ.

ಬೆಲೆ ಸೀಸೆ 1ಕ್ಕೆ ರೂ. 0—10—0 ಮಾತ್ರ.

ಏಜಂಟ್ಸ್:—ಮಾರ್ಟಿನ್ ಮತ್ತು ಕಂಪೆನಿ,
48 ಪಾರ್ಕ್‌ಟೌನ್ ಚಿತ್ರದ ಬಜಾರ್, ಮದರಾಸ್.

ಸಂಗ್ರಾಹ್ಯವಾದ ಅಪೂರ್ವ ಫೋಟೋಗಳು.

೧. ಶ್ರೀ ಬಸವೇಶ್ವರ ಸಂಗಮೈಕ್ಯ.—ಇದರಲ್ಲಿ ಶ್ರೀ ಕಲ್ಯಾಣಬಸವೇಶ್ವರನು ಶ್ರೀ ಕೂಡಲಸಂಗಮೇಶ್ವರಲಿಂಗದಲ್ಲಿ ಐಕ್ಯವಾಗುತ್ತ ಇದ್ದು ಶ್ರೀ ಸಂಗಮನಾಥಸ್ವರೂಪಿಯಾದ ಪರಶಿವನು ಶ್ರೀ ಬಸವಣ್ಣಗೇ ಪ್ರತ್ಯಕ್ಷ ಅಪ್ಪಿಕೊಂಡು ಇದ್ದಾನೆ. ಇದು ಅತ್ಯಂತ ಸುಂದರವಾಗಿ ಅದೆ. ಪ್ರತ್ಯೇಕ ವೀರಶೈವನು ಇದನ್ನು ಅವಶ್ಯ ಸಂಗ್ರಹಿಸಬೇಕು. ಫೂ॥ ಸಾ॥ ಪ್ರ॥ ೧ಕ್ಕೆ ರೂ. ೧-೪-೦. ಕ್ಯಾ॥ ಸಾ॥ ೧೨ ಆಣೆ.

೨. ಶ್ರೀ ಮಹಾದೇವಕಾಲಕೂಟ ವಿಷಪಾನ.—ಇದರಲ್ಲಿ ಶ್ರೀ ಬ್ರಹ್ಮ, ವಿಷ್ಣು, ಇಂದ್ರಾದಿ ದೇವತರು ಮತ್ತು ಅಸುರರು ಶ್ರೀ ಶಿವನಿಗೆ ಕಾಲಕೂಟವಿಷ ನಿವಾರಣಾರ್ಥಕ್ಕಾಗಿ ಪ್ರಾರ್ಥಿಸುತ್ತ ಇದ್ದಾರೆ. ಶ್ರೀ ಮಹಾದೇವನು ಕಾಲಕೂಟ ವಿಷವನ್ನು ಆನಂದದೊಡನೆ ಪಾನ ಮಾಡುತ್ತಾ ಇದ್ದಾನೆ. ಈ ಫೋಟೊ ಇದುವರಿವಿಗೂ ಪ್ರಸಿದ್ಧವಾಗಿಲ್ಲ. ಹಾಂಗು ಇದು ಪ್ರತ್ಯಕ್ಷ ನೋಡದೆ ಇದರ ಅಪೂರ್ವ ಸುಂದರತ್ವ ಕಂಡುಬರುವದಿಲ್ಲ. ಕ್ರಯ ಫೂ॥ ಸಾ॥ ಪ್ರ॥ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

೩. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರರು, ಶ್ರೀ ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವತಾಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ಫೂ॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ೧೨ ಆಣೆ.

೪ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ:—ಇದರಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಿಂಗಾರ್ಚನೆ ಮಾಡುತ್ತ ಇದ್ದು ಅವರ ಮೇಲೆ ಹುತ್ತ ಎರದೆ. ಅದರ ಮೇಲೆ ಗೋವು ಹಾಲು ಸುರಿಸುತ್ತಿರುವದು. ಇದರಿಂದ ವೀರಶೈವ ಮಹಾತ್ಮರ ತಪೋಬಲವು ಸ್ಪಷ್ಟವಾಗಿ ಗೋಚರಕ್ಕೆ ಬರುವದು. ಫೂ॥ ಸಾ॥ ಪ್ರ ೧ಕ್ಕೆ ರೂ. ೧—೪—೦. ಕ್ಯಾ॥ ಸಾ॥ ಪ್ರ ೧ಕ್ಕೆ ೧೨ ಆಣೆ.

೫. ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:—ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ಫೂ॥ ಸಾ॥ ಪ್ರ ೧ಕ್ಕೆ ೧-೪-೦ ಕ್ಯಾ॥ ಸಾ॥ ೧೨ ಆಣೆ.

೬. ಶ್ರೀವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ನೇತ್ರವು ಕಮಲವೆಂದು ಶಿವನಿಗೆ ವಹಿಸಿ ಸುದರ್ಶನಚಕ್ರ ಪಡೆದ ಈ ಫೋಟೊ ಫುಲ್‌ಸೈಜು ಪ್ರ ೧ಕ್ಕೆ ರೂ. ೧—೪—೦. ಕ್ಯಾಬಿನೇಟ್ ೧೨ ಆಣೆ. ಟಪಾಲುಖರ್ಚು ಬೇರೆ.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

ಇದು ಹನುಮಂತನು ಮೋಕ್ಷಾರ್ಥವಾಗಿ ಲಿಂಗಧಾರಣ ಮಾಡಿಕೊಂಡ ಫೋಟೊ ಇರುತ್ತದೆ. ಫೂ॥ ಸಾ॥ ಪ್ರ ೧ಕ್ಕೆ ೧-೪-೦. ಕ್ಯಾ॥ ಸಾ॥ ೧೨ಆಣೆ.

೮. ಶ್ರೀ ಶಿವಯೋಗಿಸಂಘ:—ಇದರಲ್ಲಿ ಪ್ರಸಿದ್ಧರಾದ ೧೮ ಶಿವಯೋಗಿಗಳ ಪಟ ಇರುತ್ತವೆ. ೧೮ × ೧೨ ಸೈಜು ಕ್ರಯ ಪ್ರತಿ ೧ಕ್ಕೆ ೮ ಆಣೆ. ಟಪಾಲುಖರ್ಚು ಬೇರೆ.

ಶ್ರೀರೇಣುಕಾಚಾರ್ಯರ-ಲಿಂಗೋದ್ಭವವು.

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವಫೋಟೊ ಇರುತ್ತದೆ. ಫೂ॥ ಪ್ರ ೧ಕ್ಕೆ ಸಾ॥ ರೂ. ೧—೪—೦. ಕಾ॥ ಸಾ॥ ಆಣೆ ೧೨.

ಸೂಚನೆ:—ಊರೂರಿಗೆ ಮಾರಾಟಮಾಡುವ ಏಜಂಟರು ಬೇಕು. ಅರ್ಧಾಣೆ ಟಿಕಿಟ್ ಕಳಿಸಿ ನಿಯಮ ತರಿಸಿಕೊಳ್ಳಿ.

11 ವಿಳಾಸ—ಗಂಗಪ್ಪಾ ಜೇರಿಗೆ ಫೋಟೋ ಆರ್ಟಿಸ್ಟ್, ಸೊಲ್ಲಾಪೂರ ಸಿಟಿ.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	,,	100-0-0
6	0-12-0	,,	100-0-0
7	6. 0-0	,,	100-0-0

ಬಿಡಿ ಮಣಿಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉಪ್ಪಿನ	,, 15-0-0	,, 40-0-0
ಮಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ಸಣ್ಣಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, 0-8-0	,, 1-0-0
ಅವಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರವ್ಯವಹರಿಸಿ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
27 ಕಂಪನಿ, ಚೌಕಂಬಾ ಕಾಶೀ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ವಾಪಸ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 16

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯುತ್ತರ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಸಿ, ಉತ್ತರಕನ್ನಡಾ.

ವ್ರತಪಂಚಕ

ಮಂಗಳಗೌರಿ, ಸ್ವರ್ಣಗೌರಿ, ವಿಘ್ನೇಶ್ವರ, ಸರಸ್ವತಿ ಮತ್ತು ಕೇದಾರೇಶ್ವರ ಈ ವ್ರತಗಳು ಕನ್ನಡದಲ್ಲಿ ಟೀಕಿಸಿದ ಕಥೆಗಳೊಡನೆ ವ್ರತಪಂಚಕವೆಂಬ ಹೆಸರಿನಿಂದ ಮುದ್ರಣವಾಗಿ ವಿಕರಿಗೆ ಸಿದ್ಧವಾಗಿದೆ. ಕ್ರಯ ಪ್ರತಿ ೧ಕ್ಕೆ ೪ ಆಣೆ, ಅಂಚೆ ವೆಚ್ಚ ಸೇರಿ ೪ ಆ. ೬ ಪೈ. ವಿ. ಪಿ. ಮೂಲಕ ೯ ಆಣೆ.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ತಮ್ಮ ಅಭ್ಯುದಯಕ್ಕೆ ವೀರಶೈವರು ಮಾಡಬೇಕಾದ ಕರ್ತವ್ಯ.

ಬಾಂಧವರೇ ಕಾಲಸ್ಥಿತಿಯು ಬದಲಾಯಿಸುತ್ತಿದೆ. ನಮ್ಮ ಬ್ರಾಹ್ಮಣ ಸಹೋದರರು ಶ್ಲಾಘನೀಯವಾದ ಸಂಘಗಳನ್ನು ಸ್ಥಾಪಿಸುತ್ತಿದ್ದಾರೆ. ಅಭಿವೃದ್ಧಿಗೆ ಅತ್ಯವಶ್ಯಕವಾದ ಏರ್ಪಾಡುಗಳನ್ನು ಅತಿಜಾಗರೂಕತೆಯಿಂದ ಮಾಡುತ್ತಿದ್ದಾರೆ. ಅವರನ್ನು ಹಿಂಬಾಲಿಸಿ ನಾವುಗಳೂ ಹೋಗಬೇಕು. ಇಲ್ಲವಾದರೆ ನಾಶಸ್ಥಿತಿಯು ಅಶ್ರದ್ಧೆಯಿಂದಿರುವವರ ಪಾಲಾಗುತ್ತದೆ. ನಾವು ಮಾಡಬೇಕೆಂದಿರುವ ಏರ್ಪಾಟುಗಳು ಮೈಸೂರುದೇಶದ ಎಲ್ಲಾ ಭಾಗಗಳಲ್ಲಿಯೂ ತಿಳಿಯಬಂದು ಪ್ರತಿಯೊಬ್ಬರ ಸಹಾಯವೂ ಅಭಿವೃದ್ಧಿಗೆ ಅವಶ್ಯಕವಾಗಿರುತ್ತದೆ. ಆದುದರಿಂದ ಪ್ರತಿ ತಾಲ್ಲೂಕಿನಿಂದಲೂ ನಮಗೆ ವೀರಶೈವ ಮಂಡಳಿಯಲ್ಲಿ ೫ ಜನ ದೊಡ್ಡಮನುಷ್ಯರ ಹೆಸರುಗಳು ತಿಳಿಯಬೇಕಾಗಿರುತ್ತವೆ. ಅವರ ಮುಖಾಂತರ ವಿದ್ಯಾಭಿವೃದ್ಧಿ ಮುಂತಾದ ಕಾರ್ಯಗಳಿಗೆ ಮುಂದೆ ಮಾಡಬೇಕಾದ ಏರ್ಪಾಟುಗಳು ತಿಳಿಯಿಸಲ್ಪಡುತ್ತವೆ. ಅಂಥಾ ಸಂಗತಿಗಳು ಪ್ರತಿಗ್ರಾಮಕ್ಕೂ ತಿಳಿಯಬೇಕಾಗುತ್ತವೆ. ಈ ಪತ್ರಿಕೆಯನ್ನು ಓದುವಂಥ ಯಾವ ವೀರಶೈವ ಮಹನೀಯರಾದರೂ ೫ಕ್ಕೆ ಕಮ್ಮಿಯಿಲ್ಲದೆ ಒಂದೊಂದು ತಾಲ್ಲೂಕಿನಿಂದಲೂ ವೀರಶೈವಮುಖಂಡರ ಹೆಸರನ್ನು ಈ ಪತ್ರಿಕಾಕರ್ತರಿಗೆ ತಿಳಿಸಬೇಕೆಂದು ಕೋರಿಕೆ. ಯಾವುದಾದರೂ ತಾಲ್ಲೂಕುಗಳಲ್ಲಿ ಈ ಪತ್ರಿಕೆಯನ್ನು ತರಿಸಿ ಓದುವವರಿಲ್ಲದಿದ್ದರೆ ನೆರೆಯ ತಾಲ್ಲೂಕಿನವರು ಈ ಸಹಾಯವನ್ನು ನಮಗೆ ಮಾಡಬೇಕೆಂದು ಅಪೇಕ್ಷಿಸುತ್ತೇವೆ. ಮುಂದಣ ತಿಂಗಳ ಅಂತ್ಯದೊಳಗೆ ಎಲ್ಲಾ ತಾಲ್ಲೂಕುಗಳಿಂದಲೂ ನಮಗೆ ಹೆಸರುಗಳು ತಿಳಿಯಬರುವುವೆಂದು ನಂಬಿರುತ್ತೇವೆ. ಈ ಹೆಸರುಗಳನ್ನು ನಾವು ಪ್ರಕಟಿಸುವುದಿಲ್ಲ. ಒಂದು ತಾಲ್ಲೂಕಿನಿಂದ ಒಬ್ಬರಿಗಿಂತ ಹೆಚ್ಚು ಜನರು ಐದುಐದರಂತೆ ಹೆಸರುಗಳನ್ನು ಕೊಟ್ಟರೆ ಅವೆಲ್ಲವನ್ನೂ ನಾವು ತೆಗೆದುಕೊಳ್ಳುತ್ತೇವೆ. ಕನಿಷ್ಠಪಕ್ಷ ೫ ಜನರ ಹೆಸರು ತಿಳಿಯಬೇಕಾಗಿರುತ್ತದೆ. ಹೆಚ್ಚು ಎಷ್ಟಿದ್ದರೆ ಅಷ್ಟೂ ಉತ್ತಮ. ತಾಲ್ಲೂಕು ಒಂದಕ್ಕೆ ನೂರಾರು ಜನರು ನಮಗೆ ದೊರೆತರೆ ಮತ್ತೂ ಅನುಕೂಲವು. ಎಲ್ಲಾ ತಾಲ್ಲೂಕಿನಿಂದಲೂ ಹೆಸರುಗಳು ತಿಳಿದನಂತರ ಒಂದು ಒಟ್ಟುಪಟ್ಟಿಯನ್ನು ಮಾಡಿ, ಎಲ್ಲಾ ಹೆಸರುಗಳೂ ಪ್ರತಿಯೊಬ್ಬರಿಗೂ ತಿಳಿಯುವಂತೆ ಒಬ್ಬೊಬ್ಬರಿಗೆ ಒಂದೊಂದು ಪಟ್ಟಿಯನ್ನು ಕಳುಹಿಸುತ್ತೇವೆ. ಅದರಿಂದ ಎಲ್ಲರಿಗೂ ಅಂತರಂಗವಾಗಿ ಯಾರುಯಾರು ಮತಾಭಿಮಾನದಿಂದ ಮತಾಭಿವೃದ್ಧಿಗೆ ಸಹಾಯಕರಾಗಿದ್ದಾರೆಂಬುದು ತಿಳಿಯಬಹುದು. ಅತಿ ಜಾಗ್ರತೆಯಿಂದ ಹೆಸರುಗಳನ್ನು ತಿಳಿಸುವಿರೆಂದು ನಂಬಿರುತ್ತೇವೆ.

ಈ ಮೇಲೆ ಕಂಡ ವಿಜ್ಞಾಪನೆಯನ್ನು ನಾವು ಮಾಡಿಕೊಂಡ ಕೂಡಲೇ ಪ್ರತಿದಿನವೂ ನಮಗೆ ಹಲವು ತಾಲ್ಲೂಕುಗಳಿಂದ ನಾಮುಂದು ತಾಮುಂದೆಂದು ಅನೇಕಾಭಿಮಾನಶಾಲಿಗಳು ಪತ್ರಿಕೆಗಳನ್ನು ಬರೆದು ಮುಂದಾಳುಗಳ ಹೆಸರುಗಳ ಪಟ್ಟಿಗಳನ್ನು ಕಳುಹಿಸಿಕೊಡುತ್ತಿರುವುದನ್ನು ಕಂಡು ನಾವು ಸಂತೋಷಪಟ್ಟೆವು. ಇದು ನಮ್ಮ ಸಮಾಜವು ಎಚ್ಚತ್ತಿರುವುದಕ್ಕೆ ನಿದರ್ಶನವು. ಇಂಥ ಅಭಿಮಾನಶಾಲಿಗಳ ಸಂಖ್ಯೆಯು ಯಾವ ಸಮಾಜದಲ್ಲಿ ಅಧಿಕವಾಗಿರುವುದೋ ಆ ಸಮಾಜದ ಅಭ್ಯುದಯವು ದೂರವಾಗಿರುವುದಿಲ್ಲ. ಅದಕ್ಕೆ ಉಂಟಾಗುವ ವಿಘ್ನಗಳೆಲ್ಲಾ ಹುಲ್ಲಿಗೆಣೆಯಾಗಿ ತೂರಿಹೋಗುವುದರಲ್ಲಿ ಸಂಶಯವಿಲ್ಲ. ಕಾರಣಾಂತರಗಳಿಂದ ಸುಪ್ತಾವಸ್ಥೆಯಲ್ಲಿದ್ದ ನಮ್ಮ ಸಮಾಜದ ಜಾಗರೂಕಾವಸ್ಥೆಗೆ ಈಗ ನಾವು ಯಾವ ಏರ್ಪಾಟನ್ನು ಮಾಡಬೇಕೆಂದಿರುವೆವೋ ಆ ಸಂಕಲ್ಪಕ್ಕೆ ಈ ಸಮಯದಲ್ಲಿ ನಮ್ಮ ಸಮಾಜದವರೊಳಗೆ ಕಾಣಬರುವ ಉತ್ಸಾಹವು ಅತ್ಯಂತೋತ್ತೇಜಕವಾಗುವುದರಲ್ಲಿ ಸಂಶಯವಿಲ್ಲ. ಆದುಕಾರಣ ಇನ್ನುಳಿದ ಕಡೆಗಳ ವೀರಶೈವ ಮಹಾಜನರೂ ತ್ವರ್ಯವಾಗಿ ತಂತಮ್ಮ ಸ್ಥಳಗಳ ದೊಡ್ಡಮನುಷ್ಯರುಗಳ ಹೆಸರುಗಳನ್ನು ತಿಳಿಯಿಸಬೇಕೆಂದು ಕೋರುತ್ತೇವೆ.

ಮೈಸೂರು ಸ್ಟಾರ್ ಪತ್ರದ ಆದರ್ಶ.

೧. ಮೈಸೂರು ರಾಜವಂಶದ ಶ್ರೇಯೋಭಿವೃದ್ಧಿಯೇ ನಮ್ಮ ಅಭಿವೃದ್ಧಿ; ರಾಜವರ್ಗದ ಕಷ್ಟಸುಖಗಳೇ ನಮ್ಮ ಕಷ್ಟಸುಖಗಳೆಂಬ ಭಾವನೆಯನ್ನು ತ್ರಿಕರಣಶುದ್ಧಿಯಿಂದ ಹೊಂದಿ, ಅಂಥ ರಾಜಭಕ್ತಿ ವಿಶ್ವಾಸಗಳನ್ನು ಪ್ರಜಾಮಂಡಲಿಯಲ್ಲಿ ಅಭಿವೃದ್ಧಿಪಡಿಸುವುದು.

೨. ವಿಶೇಷ ಸಂಖ್ಯಾಕರಾಗಿರುವ ಹಿಂದುಳಿದ ಜನರ ಸಮುದ್ಧಾರವಾದಲ್ಲದೆ ನಿಜವಾದ ದೇಶಾಭ್ಯುದಯವಾಗುವುದಿಲ್ಲವಾದಕಾರಣ ಹಿಂದುಳಿದ ಸಕಲ ಪ್ರಜೆಗಳ ಏಳ್ಗೆಯನ್ನೂ ಮನಃಪೂರ್ವಕವಾಗಿ ಸಾಧಿಸುವುದು.

೩. ಪ್ರಜಾಸಮುದಾಯಕ್ಕೆ ಸರ್ಕಾರದ ಉದ್ಯೋಗಿಗಳ ಆಲಸತೆ ಪಕ್ಷಪಾತ ಮೊದಲಾದ ಕಾರಣಗಳಿಂದ ಉಂಟಾಗುವ ಕಷ್ಟನಿಷ್ಠುರಗಳನ್ನು ಪ್ರಭುತ್ವದವರ ಗಮನಕ್ಕೆ ತಂದು ಪರಿಹಾರಕ್ಕೆ ದಾರಿಮಾಡುವುದು. ಮತ್ತು ಪಾಲ್ಯಪಾಲಕರ ಮಧ್ಯದ ಪ್ರೀತಿವಿಶ್ವಾಸಗಳನ್ನು ದೃಢಪಡಿಸಿ ಸರ್ವವಿಧದಿಂದಲೂ ದೇಶಕ್ಷೇಮವನ್ನು ಕೋರುವುದು.

೪. ಈ ಸದುದ್ದೇಶಗಳಿಗೆ ಸಹಾಯಕರೂ ಪ್ರೋತ್ಸಾಹಕರೂ ಆದವರನ್ನೆಲ್ಲಾ ಸಹೋದರರಂತೆ ಪ್ರೀತಿಸಿ ಸಮ್ಮಾನಿಸುವುದು. ನಮ್ಮ ಉದ್ದೇಶಗಳಿಗೆ ಪ್ರತ್ಯಕ್ಷಪರೋಕ್ಷವಾಗಿ ವಿರೋಧಿಸುವವರನ್ನು ದೂರೀಕರಿಸಿ, ಅವರಿಂದ ಉಂಟುಮಾಡಲ್ಪಡುವ ವಿಘ್ನಗಳ ನಿವಾರಣೆಗೆ ನಡುಕಟ್ಟಿ ನಿಲ್ಲುವುದು.

೫. ಈ ಮೇಲೆ ಕಂಡ ಸದುದ್ದೇಶಗಳ ಸಾಫಲ್ಯಕ್ಕಾಗಿ ಸರ್ವಪರಿತ್ಯಾಗವನ್ನು ಮಾಡುವುದಕ್ಕೂ ಸಿದ್ಧವಾಗಿರುವುದು.

ಈ ಉದ್ದೇಶಗಳ ಸಾಧನೆಗಾಗಿಯೇ ಸ್ಟಾರ್ ಪತ್ರವು ಇದುವರೆಗೆ ದುಡಿದಿರುತ್ತದೆಂಬುದನ್ನು ವಾಚಕವರ್ಗವೆಲ್ಲವೂ ಬಲ್ಲುದು. ಇನ್ನುಮುಂದೆ ಅದನ್ನು ಮತ್ತಷ್ಟೂ ಜುರುಕಾಗಿ ನಡೆಯಿಸಲು ಸ್ಟಾರ್‌ಪತ್ರವು ಮತ್ತಷ್ಟು ಹುರುಪುಗೊಂಡಿರುವುದು. ದೇಶಾಭಿಮಾನಿಗಳಾದ ಮಹಾಜನರು ಸಕಲ ವಿಧದಿಂದಲೂ ಪ್ರೋತ್ಸಾಹಿಸಿ ಚಿರಕಾಲ ಸ್ಟಾರ್‌ಪತ್ರದ ಸೇವೆಯು ದೇಶಕ್ಕೆ ನಡೆಯುವಂತೆ ಮಾಡುವವರಾಗಬೇಕು.

ಎಲ್ಲಕಡೆಯೂ ಸ್ಟಾರ್ ಪತ್ರಕ್ಕೆ ಚಂದಾದಾರರು ಹೆಚ್ಚುವಂತೆ ಮಾಡಬೇಕು. ಚಂದಾದಾರರ ಆಶ್ರಯವು ಹೆಚ್ಚಿದಷ್ಟೂ ಪತ್ರದ ಆಕೃತಿಯೂ ವಿಷಯವಿಶೇಷಗಳೂ ಹೆಚ್ಚಲವಕಾಶವಾಗುವುದು. ಏಜಂಟರಾಗತಕ್ಕವರಿಗೆ ಉಚಿತವಾದ ಕಮಿಷನ್ ಕೊಡಲ್ಪಡುವುದು. ಪ್ರತ್ಯಕ್ಷವಾಗಿ ಅಥವಾ ಲಿಖಿತಮೂಲಕವಾಗಿ ಆ ವಿಷಯವನ್ನು ಗೊತ್ತುಮಾಡಿಕೊಳ್ಳಬಹುದು. ಚಂದಾಹಣವು ಮುಂದಾಗಿ ಬಂದ ಹೊರತು ಯಾರಿಗೂ ಪತ್ರವನ್ನು ಆರಂಭಮಾಡಲಾಗುವುದಿಲ್ಲ. ಪತ್ರಿಕಾ ವಾಚಕವರ್ಗವೆಲ್ಲವೂ ಇದನ್ನು ಗಮನಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಆಗಸ್ಟ್ ತಾ|| ೨೮ ನೆಯ ಭಾನುವಾರ.

ಅಲ್ಲಿಗೆ ಧರ್ಮವಾದುದು ಇಲ್ಲಿಗೆ ಅಧರ್ಮವೆ?

ರಾಷ್ಟ್ರೀಯಸಭೆ (ಕಾಂಗ್ರೆಸ್) ಯ ಭಕ್ತರೆಂದು ಹೇಳಿಕೊಂಡು, ಅದರ ಲಕ್ಷ್ಯವು ದೇಶೋದ್ಧಾರಕವಾದುದೆಂದು ಸಾರುತ್ತ, ತಾವು ಅದರ ಪರಮಭಕ್ತರಂತೆ ನಟಿಸುತ್ತ, ಅದರ ಶಾಖಾಸಂಘಗಳನ್ನು ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಸ್ಥಾಪಿಸಲಿಕ್ಕೆ ಪ್ರಯತ್ನಿಸಿರುವ ಕೆಲವರ ಆಟಗಳನ್ನು ನೋಡಿದರೆ ನಗೆ ಬರುತ್ತದೆ. ರಾಷ್ಟ್ರೀಯ ಸಭೆಯು ಹುಟ್ಟಿದಾರಭ್ಯ ಅದು ಮಾಡುತ್ತ ಬಂದ ನಿರ್ಧಾರಗಳೊಳಗೆ ವಿದೇಶೀಯರನ್ನು ಸರ್ಕಾರದ ಉದ್ಯೋಗಸ್ಥಾನಗಳಿಗೆ ಸೇರಿಸುವುದನ್ನು ಕಡಿಮೆಮಾಡಿ ಸ್ವದೇಶೀಯರಿಗೇ ಹೆಚ್ಚುಹೆಚ್ಚಾಗಿ ಅಧಿಕಾರಸ್ಥಾನಗಳನ್ನು ಕೊಡಬೇಕೆಂದು ಪ್ರಭುತ್ವದವರನ್ನು ಎಚ್ಚರಿಸುವ ನಿರ್ಧಾರವು ಮುಖ್ಯವಾಗಿದ್ದೇ ಇರುತ್ತಿದ್ದಿತೆಂಬುದನ್ನು ಸರ್ವರೂ ಬಲ್ಲರಷ್ಟೆ. "ಬ್ರಿಟಿಷ್ ಇಂಡ್ಯಾ" ದಲ್ಲಿ ಆಂಗ್ಲಜನರ ವ್ಯಾಪಕತೆಯನ್ನೂ ಪ್ರಾಬಲ್ಯವನ್ನೂ ಅವರಲ್ಲಿ ಕೆಲವರ ಉಪಟಳವನ್ನೂ ಪಕ್ಷಪಾತವನ್ನೂ ಸೈರಿಸಲಾರದ ಕಾರಣದಿಂದ ಅಲ್ಲಿಯ ಭಾರತೀಯರು ಆತ್ಮೋದ್ಧಾರಕ್ಕಾಗಿ ಮೇಲೆಕಂಡ ನಿರ್ಧಾರಗಳನ್ನು ರಾಷ್ಟ್ರೀಯ ಸಭೆಯಲ್ಲಿ ಮಾಡಬೇಕಾದವಶ್ಯಕತೆಯು ಉಂಟಾಗಿದ್ದರೆ ಹಾಗೆಯೇ ಮೈಸೂರು ಸಂಸ್ಥಾನದಲ್ಲೂ ಮುಂಬರಿದ ಜನವರ್ಗಗಳ ಪ್ರಾಬಲ್ಯವು ಹೆಚ್ಚಾಗಿ ಅವರುಗಳಲ್ಲಿ ಅನೇಕರು ತೋರಿಸುತ್ತ ಬಂದ ಪಕ್ಷಪಾತ ಅನ್ಯಾಯ ಸ್ವಾರ್ಥೈಕಪರತೆ ಪರೋತ್ಕರ್ಷಾಸಹನೆ ಪರಧರ್ಮಾಪಮಾನ ಇವುಗಳನ್ನು ನೋಡಿನೋಡಿ ಸಾಕಾಗಿ ಸೈರಿಸಲಾರದೆಹೋದ ಹಿಂದುಳಿದ ಜನವರ್ಗಗಳವರು ಕೂಡ ತಮ್ಮ ಅವನತಿಯನ್ನೂ ವ್ಯಾಪೃತ್ವವನ್ನೂ ತಪ್ಪಿಸಿಕೊಂಡಲ್ಲದೆ ತಮ್ಮ ಉದ್ಧಾರವಾಗುವುದಿಲ್ಲವೆಂಬುದನ್ನು ತಿಳಿದುಕೊಂಡವರಾಗಿ, ತಮ್ಮ ವ್ಯಾಪಕತ್ವಕ್ಕೆ ಅವಶ್ಯಸಾಧನಗಳಾದ ವಿದ್ಯಾಭಿವೃದ್ಧಿ ಪ್ರಭುತ್ವೋದ್ಯೋಗಸಂಪಾದನೆ ರಾಜಕೀಯಾಂಗಪ್ರಾತಿನಿಧ್ಯ ಮೊದಲಾದುವುಗಳನ್ನು ಪಡೆದುಕೊಳ್ಳಲಿಕ್ಕೆ ಚಳವಳವನ್ನು ಆರಂಭಿಸಿದರು. ಇದರಲ್ಲಿ ಮಾಡಬಾರದುದೂ ಆಗಬಾರದುದೂ ಏನುಂಟು? ರಾಷ್ಟ್ರೀಯ ಮಹಾಸಭೆಯವರ ಚಳವಳಿಗೆ ಭಾರತಪ್ರಭುತ್ವದವರು ಕಿವಿಗೊಟ್ಟು ಅವರ ಇಷ್ಟಾರ್ಥಪೂರಣವನ್ನು ಸಾಸಾರೀತಿಯಿಂದ ಮಾಡಲು ಉದಾರಚಿತ್ತವನ್ನು ತೋರಿಸುತ್ತಿರುವಂತೆಯೇ, ಮೈಸೂರು ದೇಶದ ಹಿಂದುಳಿದ ಪ್ರಜೆಗಳ ನ್ಯಾಯವಾದ ಕೋರಿಕೆಯನ್ನು ನೆರವೇರಿಸುವುದಕ್ಕೆ ಇಲ್ಲಿಯ ಶ್ರೀಮನ್ಮಹಾರಾಜರ ಪ್ರಭುತ್ವದವರಾದರೂ ಪ್ರವೃತ್ತಿಸಿರುವರು. ಅದರಿಂದಲೇ ಮಿಲ್ಲರ್ ಸಂಘದ ವರದಿ, ವಿದ್ಯಾಭ್ಯಾಸದ ಮೆಮೊರಾಂಡಮು ಮೊದಲಾದುವುಗಳು ಹುಟ್ಟಿರುವುವು. ಹೀಗಿರುವಲ್ಲಿ ಮೈಸೂರು ದೇಶದ ಹೊರಗಣ ಆಂಗ್ಲಭಾರತ ದೇಶದಲ್ಲಿ ರಾಷ್ಟ್ರೀಯಸಭೆಯವರು ನಡೆಯಿಸುತ್ತಲಿರುವ ಚಳವಳಿಯೂ ಅದರ ಇಷ್ಟಪೂರಣಕ್ಕಾಗಿ ಅಲ್ಲಿಯ ಸರ್ಕಾರದವರು ಮಾಡಿಕೊಡುತ್ತಿರುವ ಪ್ರಜಾಸೌಕರ್ಯದ ಏರ್ಪಾಟುಗಳೂ ಕೂಡ ನಮ್ಮ ದೇಶದ ರಾಷ್ಟ್ರೀಯಸಭಾಭಕ್ತವೇಷದ ಬ್ರಾಹ್ಮಣ ಸಹೋದರರಿಗೆ ಪ್ರಿಯವಾದುದು ಹೇಗೆ? ಅದೇ ತೆರದಿಂದ ಇಲ್ಲಿಯ ಹಿಂದುಳಿದ ಜನವರ್ಗಗಳವರು ಆತ್ಮೋದ್ಧಾರಾರ್ಥವಾಗಿ ನಡೆಯಿಸುತ್ತಿರುವ ಚಳವಳಿಯೂ, ಅವರ ಸೌಕರ್ಯಾರ್ಥವಾಗಿ ಸರ್ಕಾರದವರು ಮಾಡಿಕೊಡುತ್ತಿರುವ ಏರ್ಪಾಟುಗಳೂ ಕೂಡ ಅಪ್ರಿಯವಾದುದು ಹೇಗೆ? ಬ್ರಿಟಿಷ್ ಇಂಡ್ಯಾದಲ್ಲಿ ಭಾರತೀಯ ಪ್ರಜೆಗಳನ್ನು ಕೆಲ ಆಂಗ್ಲಜನರು ಹೀನತರವಾಗಿ ಕಾಣುತ್ತಿದ್ದರೆ ಇಲ್ಲಿಯ ಕೆಲ ಬ್ರಾಹ್ಮಣನಾಮಧಾರಿಗಳು ಇತರರನ್ನೆಲ್ಲಾ ಅತ್ಯಂತ ತುಚ್ಛವಾಗಿ ಕಾಣುತ್ತಿರುವರು. ಅಲ್ಲಿ ಕೆಲ ಆಂಗ್ಲರ ಹಿಂಸೆಯು ದುಸ್ಸಹವಾಗಿದ್ದರೆ ಇಲ್ಲಿ ಈ ಕೆಲ ಮುಂಬರಿದವರ ಹಿಂಸೆಯು ದುಸ್ಸಹವಾಗಿರುವುದು. ಭಾರತೀಯರ ಪ್ರಾರ್ಥನೆಯನ್ನು ನೆರವೇರಿಸಿಕೊಡುವುದು ಆಂಗ್ಲಸರ್ಕಾರಕ್ಕೆ ಅವಶ್ಯಕವಾದ ಧರ್ಮವಾದುದಾಗಿದ್ದರೆ, ಈ ದೇಶದ ಹಿಂದುಳಿದ ಸ್ವದೇಶೀಯ ಪ್ರಜೆಗಳ ಇಷ್ಟಾರ್ಥವನ್ನು ನೆರವೇರಿಸಿಕೊಟ್ಟು ಉದ್ಧರಿಸುವುದೂ ಕೂಡ ಶ್ರೀಮನ್ಮಹಾರಾಜರ ಪ್ರಭುತ್ವದವರಿಗೆ ಅವಶ್ಯಕವಾದ ಧರ್ಮವೇ ಅಲ್ಲವೆ?

ಹೀಗಿರುವಾಗ್ಗೆ ಮಿಲ್ಲರ್ ಸಂಘದ ವರದಿ ಮೊದಲಾದುವುಗಳ ಮೇಲೆ ಅಸೂಯೆಯನ್ನೂ ಆಗ್ರಹವನ್ನೂ ಪಡುವವರು ರಾಷ್ಟ್ರೀಯಸಭಾಭಕ್ತರೆ? ದೇಶಾಭಿಮಾನಿಗಳೆ? ಅವರದೆಲ್ಲಾ ಸ್ವಾರ್ಥೈಕಪರತೆಯಿಂದ ತುಂಬಿರುವ ಕಪಟನಾಟಕವಲ್ಲದೆ ಬೇರೆಯಲ್ಲವೆಂದು ವಿಚಾರಪರರು ಅರ್ಥಮಾಡದೆ ಇರುವರೆ?

ಸಾ|| ಹಲ್ಕೂರು ಮರುಳಸಿದ್ಧಪ್ಪನವರು.

"ದರೆಯೊಳ್ಕೊಟ್ಟಂಗೆ ಬಡತನಂ ಬಂದಪುದೆ?" ಎಂಬ ನೀತಿವಚನವು ಸುಳ್ಳಲ್ಲವೆಂಬುದನ್ನು ತಮ್ಮ ನಡೆಯಿಂದ ನಿದರ್ಶನಪಡಿಸತಕ್ಕವರು ದೇಶಮಧ್ಯದಲ್ಲಿ ಅನೇಕರುಂಟು. ಅಂಥವರಲ್ಲಿ ಅರಸೀಕೆರೆ ತಾ|| ಹಲ್ಕೂರಿನ ಸಾ|| ಮರುಳಸಿದ್ಧಪ್ಪನವರು ಒಬ್ಬರಾಗಿರುತ್ತಾರೆ. ಇವರೂ ಇವರ ಅಳಿಯಂದಿರಾದ ಮ|| ರುದ್ರಪ್ಪನವರೂ ಸಹ ಈಶ್ವರಾನುಗ್ರಹದಿಂದ ಸಂಪತ್ತು ಒದಗಿರುವ ಕಾರ್ಯದಲ್ಲಿ ಉಚಿತವಾದ ಧರ್ಮಕಾರ್ಯಗಳನ್ನು ಮಾಡಲು ಹಿಂದೆಗೆಯತಕ್ಕವರಲ್ಲ. ಕಳೆದ ತಾ|| ೧೦ ರಲ್ಲಿ ನಮ್ಮ ಸಂಸ್ಥಾನದ ಮಂತ್ರಿವರ್ಯರಾದ ಸರ್ ಕಾಂತರಾಜ ಅರಸಿನವರಿಂದ ಪ್ರವೇಶಮಹೋತ್ಸವಗೊಳಿಸಲ್ಪಟ್ಟ ಅರಸೀಕೆರೆಯ ಶ್ರೀ ಕೃಷ್ಣರಾಜ ಬಾಲಿಕಾಪಾಠಶಾಲೆಯು ೧೦ ಸಾವಿರ ರೂ. ಗಳನ್ನು ಮುಟ್ಟಿಸಿ ಇವರಿಂದಲೇ ಕಟ್ಟಿಸಲ್ಪಟ್ಟುದು. ಅದರ ಪ್ರವೇಶ ಮಹೋತ್ಸವವನ್ನು ಕೂಡ ಇವರು ಎಷ್ಟು ಉತ್ಸಾಹದಿಂದಲೂ ಔದಾರ್ಯದಿಂದಲೂ ನಡೆಯಿಸಿದರೆಂಬುದು ಇದುವರೆಗೆ ಅನೇಕ ಪತ್ರಗಳಲ್ಲಿ ಪ್ರಕಟವಾಗಿರುವುದರಿಂದ ಮತ್ತೆ ಅದನ್ನು ನಾವು ಎತ್ತಿ ಹೇಳಬೇಕಾದುದಿಲ್ಲ. ಇದೇ ಅಲ್ಲದೆ ಇವರು ಪ್ರಜಾಸೇವೆ ದೈವಸೇವೆಗಳಿಗಾಗಿ ಇನ್ನೂ ಅನೇಕ ಧರ್ಮಕಾರ್ಯಗಳನ್ನು ನೆರವೇರಿಸಿರುವರು. ಹಲ್ಕೂರು ಗ್ರಾಮದಲ್ಲಿ ಪ್ರಯಾಣಿಕರಿಗೆ ಇಳಿದುಕೊಳ್ಳಲು ಸಾರ್ವಜನಿಕವಾದ ಯಾವುದೊಂದು ಛತ್ರವೂ ಇಲ್ಲದುದನ್ನು ಕಂಡು ೧೫ ಸಾವಿರ ರೂ. ಗಳನ್ನು ಮುಟ್ಟಿಸಿ ಒಂದು ಛತ್ರವನ್ನು ಕಟ್ಟಿಸಿರುವರು. ಮತ್ತು ೬ ಸಾವಿರ ರೂ. ಗಳ ವೆಚ್ಚದಿಂದ ಒಂದು ವೈದ್ಯಶಾಲೆಯನ್ನು ಕಟ್ಟಿಸಿಕೊಟ್ಟಿರುವರು. ತಮ್ಮ ಗ್ರಾಮವಾದ ಚಿಕ್ಕಹಲ್ಕೂರಿನಲ್ಲಿ ೩ ಸಾವಿರ ರೂ. ಗಳ ವೆಚ್ಚದಿಂದ ಒಂದು ಸಿಹಿನೀರಿನ ಬಾವಿಯನ್ನು ತೋಡಿಸಿಕೊಟ್ಟು, ಪ್ರಾಚೀನವಾದ ಶಿವಾಲಯವೊಂದನ್ನು ಜೀರ್ಣೋದ್ಧಾರ ಮಾಡಿಸಿರುವರು. ಮತ್ತು ಹಲ್ಕೂರಿನಲ್ಲಿ ಮತ್ತೊಂದು ಶಿವಾಲಯ ಜೀರ್ಣೋದ್ಧಾರಕ್ಕಾಗಿ ೩ ಸಾವಿರ ರೂ. ಗಳನ್ನು ವ್ಯಯಮಾಡಿರುವರು. ಕುಪ್ಪೂರು ಗದ್ದಿಗೆಯಲ್ಲಿ ಸದಾ ನಡೆಯುವ ದಾಸೋಹದ ಸೇವಾರ್ಥವಾಗಿ ೧೦ ಸಾವಿರ ರೂ. ಬಾಳುವ ತೋಟವನ್ನು ದಾನಮಾಡಿರುವರು. ಅಲ್ಲದೆ ತಿಬಟೂರಿನ ವೀರಶೈವಾಶ್ರಮಕ್ಕೆ ೧ ಸಾವಿರ ರೂ. ಹಲ್ಕೂರಿನ ಎ. ವಿ. ಬಾಯ್ಸ್ ಸ್ಕೂಲಿಗೆ ೧ ಸಾವಿರ ರೂ. ಗಳನ್ನು ಧರ್ಮಮಾಡಿರುವರು. ಹೀಗೆಯೇ ಧರ್ಮಕಾರ್ಯಗಳಲ್ಲಿ ಸದಾ ನಿರತರಾಗಿರುವುದಲ್ಲದೆ ಬಡಬಗ್ಗರಿಗೆ ವಿಶೇಷವಾಗಿ ಆಶ್ರಯಭೂತರಾಗಿಯೂ ಉಪಕಾರಿಗಳಾಗಿಯೂ ಇರುವರು ಎಂಬುದನ್ನು ತಿಳಿಯಿಸಲು ಸಂತೋಷಿಸುವೆವು. ಆದರೆ ಇಂಥ ಉದಾರಚರಿತರ ಧರ್ಮಬುದ್ಧಿಯು ಸ್ವಮತೀಯರ ವಿದ್ಯಾಭಿವೃದ್ಧಿಯಂಥ ಅತ್ಯವಶ್ಯಕವಾದ ಶಾಶ್ವತಪ್ರಯೋಜಕವಾದ ಕಾರ್ಯದ ಕಡೆಗೆ ಇನ್ನೂ ತಿರುಗದಿರುವುದು ಮಾತ್ರ ವಿಚಾರಾಸ್ಪದವಾಗಿದೆ. ಉಚಿತವಾಗಿಯೂ ಚಿರಸ್ಮರಣೀಯವಾಗಿಯೂ ಇರುವಂತೆ ಅದೊಂದು ಧರ್ಮವನ್ನು ನೆರವೇರಿಸಿ ಸಮಾಜಬಾಂಧವರೆಲ್ಲರ ಮನ್ನಣೆಗೂ ಶಿವಾನುಗ್ರಹಕ್ಕೂ ಶಾಶ್ವತಕೀರ್ತಿಗೂ ಪಾತ್ರರಾಗುವ ವಿಷಯದಲ್ಲಿ ಇವರು ತಕ್ಕ ಯತ್ನವನ್ನು ಮಾಡಲು ಹಿಂದೆಗೆಯಲಾರರೆಂದು ನಂಬಿ ಜಗದೀಶ್ವರನು ಇವರಿಗೆ ಇತೋಪ್ಯತಿಶಯವಾದ ಅಭಿವೃದ್ಧಿಯನ್ನೂ ದೀರ್ಘಾಯುರಾರೋಗ್ಯಗಳನ್ನೂ ಅನುಗ್ರಹಿಸಲೆಂದು ಕೋರುವೆವು.

OUR CREED.

The people of Mysore are well known for their sublime loyalty to the Royal House of Mysore. The sacred name of the Maharaja is always kept disassociated from the Politics of the Country. This has been our creed and this will always be our creed.

The non-co-operation creed is raging war aginst peace. It is a creed with which, of course, the people of Mysore are utterly unconcerned. But a section of the discontented people amongst whom are mostly the non-Mysoreans residing in our country, are showing by their discourses on the subject of non-co-operation, an inclination to usher it into our midst. A careful reading of certain recent publications in our local journals which are of an inflammatory nature, induces us to declare that a spirit of that nature should not have any room in a country like ours. We would be failing in our duty to our country if we do not as a loyal journal, declare our policy and state that we are emphatically opposed to the creed of non-co-operation taking any form of circulation in a country where a Government is doing its best to do what is right and just for the people of the country.

Where is the occasion for a Congress Committee in Mysore and what has it to do here? But we see that one is formed and it is supposed to have members. It is worth while to know who those members are and to what caste or creed they belong. We say that it has no business to do with the people of Mysore and that such of them as are interesting themselves in that propoganda cannot evidently have any heart for Mysore.

It is our duty to co-operate with the Government of Sirdar Sir M. Kantharaj Urs, C.S.I., K.C.I.E., who has undertaken to carry on a reform to befit the country for a responsible and representative Government. It was the misfortune of the country that in succession there were a series of men at the head of the administration who paid little or no attention to take the real people of the country to their confidence and who did not afford opportunities to the Mysore people to share in the administration of the country. It is all tall talk to say that the schools and colleges were open to them and that they did not care for the sort of education which was required for the Governmental work. It is all futile talk to say that such as were available were admitted to Public service and well treated. The past Governments did not take measures to bring forward the people of the country to take part in the administration and the accumulated neglect on their part has made the task of Sirdar Sir M. Kantharaj Urs all the harder. But for his courage, but for his sincerity, but for his love of the people of the country we could not have had the memorable document against which there is the sinful crusade which cannot in the name of Right and Justice live long.

Our creed is loyalty to the Royal House and co-operation with our righteous Government and it is the sincere desire of our subscribers that we should combat the unholy war. This is the reason for our opening an English column and we hope to continue the same for the benefit of our readers.

TO-DAY.

"Now we know where we stand" is a comprehensive expression used in connection with another grave question of "To-day" involving the fate of India, just as we in Mysore could similarly exclaim and say "Now we know what our dangers are" because we were foolish enough to surrender our rights to a handful of our countrymen in electing them to represent our causes and interests in the administration of the country. The order of Government on the Miller Committee Report has caused an explosion bringing to light the dangerous situation in which we are placed "To-day."

We have been unwilling to discuss the question of the disrespectful conduct of a section of the people of Mysore with reference to the Miller Committee Report. It would be cowardice on our part to disregard the reports which reach us every day and refrain from expressing ourself on the important topic of "To-day."

It is said that "efficiency" is the essence of Government service and that efficiency is measured by the number of University examinations that one has passed. We would point out that this view of efficiency is wrong. If the Public service wants 20 ounces of the Mighty Intellect, what will the service do if its members drawn from one class of people have each 100 ounces of that intellect coming from a class which Mr. C. P. Ramachandra Rao calls the "Noble order of intellectual aristocracy," in the series of his articles "The Brahman's place." There is a tremendous excess quantity of intellect which goes to produce destructive and dangerous effects on the society, and that is where we stand "To-day," as regards Public service. Even an astute civilian like the Hon. Mr. Knapp of the Madras Government appears to be under this spell of the wrong impression of efficiency as he made himself known in his reply in the Madras Legislative Council as regards the Secretariat Staff not imagining for a moment that the Noble order of Intellectual Aristocracy is overcharged with an excess quantity of intellect which might burst out in rebellion at any moment as it has done "To-day" in Mysore. In this same Council debates we see Mr. C. V. Venkatarama Iyengar saying that the Public service has a glamour for the eyes of the non-Brahmans. No. It is not any glamour in Public service which has attracted the attention of the non-Brahmans. But it is a sense of duty which every one in the name of justice and equity owes to his country. It is a desire to suffer and to release the country from the burden of iniquities which have become abundant in the one class public service. It is not the glamour of the service.

There is an order of the Revenue Board of Madras, as we understand from these discussions, which directs that in the District Offices appointments should be so given as to afford no room for a large number of members of Influential Families in one Office. What applies to families applies with greater force to classes. This is the spirit of the Miller Committee Report. Such stalwarts as Dewan Bahadurs M. Krishna Nair and P. Kesava Pillay who are known to be the most level headed publicists of the day, have come to see the justice of the policy of all classes of people sharing the burden of the Government service in the interests of the country.

Unlike Mr. C. P. Ramachandra Rao, the non-Brahmans have always considered that trade and agriculture are nobler professions than Government service. But when the country is in danger of one-class rule, the service must be purged of its evil effects by introducing checking elements and this is the spirit of the Miller Committee Report. This same writer seems to think that when the Brahmans take to agriculture, they will raise the status of agriculture to a higher degree of aristocracy and envy of non-Brahmans will recur. He quotes from ancient Sastras to prove his "Tapasi." No ancient history of sages will help us to solve the trouble of "To-Day," at the bottom of which these ancient "Noble order of intellectual aristocrats" are. Let them take to ploughing by all means to-morrow. The fields welcome the Brahmans. The non-Brahmans will join hands with them and will not grudge to give them plenty of ragi to eat.

We are concerned "To-Day" with an actual dangerous situation and it would be a folly to listen to ancient lores which the Brahmans Chant. Let the non-Brahmans open their eyes and see the facts of "To-Day" instead of hearing the facts of the noble order of the intellectual aristocracy in the ancient India. The danger is in the hearing and the safety is in seeing hard facts which are revealed to us in the Miller Committee Report. The non-Brahmans interests lay not only in the Government service, but also do they lay in a larger measure in the public bodies like the Representative Assembly and the Legistative Council. Such men as truly represent and guard their interests should be elected to these bodies and not those people who with selfish ends in view go in there to safeguard their own interests and not the interests of their constituents.

ಮ್ಯು|| ಕೌನ್ಸಿಲರ ಆರಿಸುವಿಕೆ.

ಮೂರುವರ್ಷಕ್ಕೊಂದು ಸಲ ನಡೆಯಬೇಕಾದ ಮ್ಯು|| ಕೌನ್ಸಿಲರುಗಳ ಆರಿಸುವಿಕೆಯು ರಾಜಧಾನಿಯಲ್ಲಿ ಕಳೆದ ತಾ|| ೨೨ ರಿಂದ ಆರಂಭವಾಗಿ ೨೫ ನೆ ತಾ|| ಮಧ್ಯಾಹ್ನಕ್ಕೆ ಮುಗಿದು, ಅದೇ ದಿನ ಸಾಯಂಕಾಲ ಮ್ಯು|| ಕೌನ್ಸಿಲರ ಸ್ಪೆಷಲ್ ವೋಟಿಂಗು ಕೂಡಿದ್ದು ಓಟುಗಳನ್ನೆಲ್ಲಾ ಲೆಕ್ಕಾಚಾರ ಮಾಡಿದ ಬಳಿಕ ಪರಿಣಾಮವು ವ್ಯಕ್ತವಾಯಿತು. ಈ ಕೆಳಗೆ ಕಂಡಂತೆ ಆಯಾ ಮೊಹಲ್ಲೆಗಳಿಗೆ ಹೊಸದಾಗಿ ಮ್ಯು|| ಕೌನ್ಸಿಲರುಗಳು ಆರಿಸಲ್ಪಟ್ಟಿರುತ್ತಾರೆ.—

ಲಷ್ಕರ್ ಮೊಹಲ್ಲಾಕ್ಕೆ—೧. ಮ|| ಗಳಾದ ಎ. ಮಹಮ್ಮದ್‌ಸೇಟರು, ೨. ಬಿ. ಬಸವಾರಾಧ್ಯ ಬಿ. ಎ., ಬಿ. ಎಲ್., ರವರು, ೩. ಕೆ. ಧನಕೋಟಿಶೆಟ್ಟರು, ೪. ವೈ. ವಿರೂಪಾಕ್ಷಯ್ಯನವರು.

ಮಂಡಿಮೊಹಲ್ಲಾ—೧. ಮ|| ಗಳಾದ ಎಂ. ಮಾದಪ್ಪನವರು, ೨. ಈ ಪುರುಷೋತ್ತಮಾನಂದಗಿರಿ ಗೋಸ್ವಾಮಿಯವರು, ೩. ಅಜೀಜ್‌ಪಾಷಾ ಸಾಹೇಬರು.

ನಜರ್ಬಾದ್ ಮೊಹಲ್ಲಾ—೧. ಮ|| ತಿರುವೆಂಗಡಂಮೊದಲ್ಯಾರರು.

ಕೋಟೆಮೊಹಲ್ಲಾ—೧. ಮ|| ಎಂ. ನಾರಾಯಣಸ್ವಾಮಿಯವರು.

ದೇವರಾಜಮೊಹಲ್ಲಾ—೧. ಮ|| ಗಳಾದ ಧರ್ಮಪ್ರಕಾಶ ಡಿ. ಬನುಮಯ್ಯನವರು, ೨. ಸಾ|| ವಿ. ತಿಮ್ಮಯ್ಯನವರು, ೩. ಎಚ್. ಚೆಟ್ಟ್ಯಾಜಿರಾಯರು.

ಕೃಷ್ಣರಾಜಮೊಹಲ್ಲಾ—೧. ಮ|| ಗಳಾದ ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು, ೨. ಎಂ. ಎಲ್. ವಾಸುದೇವಯ್ಯನವರು, ೩. ಎಂ. ಕೆ. ಮಾಧವರಾವ್‌ಪವಾರ್‌ರವರು, ೪. ಚಿಟ್ಟಪ್ಪಸಿದ್ಧಪ್ಪನವರು

ಚಾಮರಾಜಮೊಹಲ್ಲಾ—೧. ಮ|| ಗಳಾದ ಮ|| ಬಿ. ಮುನಿವೆಂಕಟಪ್ಪನವರು, ೨. ಪಿ. ಎಸ್. ಅನಂತರಾವ್‌ರವರು, ೩. ಲಿಂಗೋಜಿರಾವ್‌ರವರು.

ಚಾಮರಾಜಮೊಹಲ್ಲೆಗೆ ನಾಲ್ಕುಮಂದಿ ಕೌನ್ಸಿಲರುಗಳು ಆಗಬೇಕಾಗಿರುವಲ್ಲಿ ಮೂವರೇ ಉಮೇದುವಾರರಾಗಿ ನಿಂತು ಉಳಿದವರು ತಮ್ಮ ಉಮೇದುವಾರಿಯನ್ನು ಹಿಂದೆಗೆಗಿಸಿಕೊಂಡುದರಿಂದ, ಮತ್ತೊಂದು ಸ್ಥಾನಕ್ಕೆ ಎಲೆಕ್ಷನ್ ಮುಂದೆ ಆಗಬೇಕಾಗಿದೆ.

ಹೊಸದಾಗಿ ನಡೆದ ಆರಿಸುವಿಕೆಯಲ್ಲಿ ಜಯಶಾಲಿಗಳಾಗಿ ಬಂದ ಮೇಲೆಕಂಡ ಕೌನ್ಸಿಲುಗಳನ್ನೆಲ್ಲಾ ನಾವು ಅಭಿನಂದಿಸುವುದಲ್ಲದೆ, ಪುರಜನರು ನಂಬುಗೆಯಿಟ್ಟು ಕೊಟ್ಟ ಓಟುಗಳು ಸಾರ್ಥಕವಾಗುವಂತೆ ತಮ್ಮ ಕರ್ತವ್ಯವನ್ನು ನೆರವೇರಿಸಿ ಅವರುಗಳ ವಿಶ್ವಾಸಪ್ರೀತಿಗಳಿಗೆ ಮತ್ತಷ್ಟು ಪಾತ್ರರಾಗುವಂತೆ ಇವರುಗಳು ಮಾಡಿಕೊಳ್ಳುವವರಾಗಲೆಂದು ಕೋರುತ್ತೇವೆ.

ಮತ್ತೊಂದು ಸಹಾಯನಿರಾಕರಣ.

ಕೆಲ ಬ್ರಾಹ್ಮಣರು ಪ್ರಜಾಪ್ರತಿನಿಧಿಸಭೆಯಲ್ಲಿ ಸಹಾಯನಿರಾಕರಣ ಪ್ರದರ್ಶನವನ್ನು ಮಾಡಿದ್ದರಷ್ಟೆ. ಅದಕ್ಕೆ ಮ|| ಎಂ. ವೆಂಕಟಕೃಷ್ಣಯ್ಯನವರೇ ಮುಂದಾಳುಗಳಾಗಿದ್ದರೆಂದು ಜನರು ಆಡಿಕೊಳ್ಳುತ್ತಿರುವರು. ಈಗ ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯ ಸಂದರ್ಭದಲ್ಲೂ ಮತ್ತೊಂದುಸಲ ಸಹಾಯನಿರಾಕರಣವನ್ನು ಮಾಡಿ ತೋರಿಸಿರುವರು. ಪ್ರಜಾಮಿತ್ರಮಂಡಲಿಯವರು ಮೊನ್ನೆತಾನೇ ಪ್ರಕಟಿಸಿರುವ ಪತ್ರಿಕೆಯನ್ನೂ ಒಕ್ಕಲಿಗರಪತ್ರಿಕೆ ಸ್ಟಾರ್‌ಪತ್ರಿಕೆ ಮದ್ರಾಸ್ ಜಸ್ಟಿಸ್‌ಪತ್ರಿಕೆ ಇತ್ಯಾದಿಗಳಲ್ಲಿ ಬರೆದಿರುವ ಲೇಖನಗಳನ್ನೂ ನೋಡಿದಬಳಿಕ ಮ್ಯುನ್ಸಿಪಲ್ ಕೌನ್ಸಿಲರ ಕೆಲಸಕ್ಕೆ ಉಮೇದುವಾರರಾಗುವುದು ಸರಿಯಲ್ಲವೆಂದು ಎಂ. ವೆಂಕಟಕೃಷ್ಣಯ್ಯನವರಿಗೆ ತೋರಿತಂತೆ. ಅದಕ್ಕಾಗಿ ಇವರು ತಮ್ಮ ಉಮೇದುವಾರಿಯನ್ನು ವಾಪಸ್ ತೆಗೆದುಕೊಂಡು ತಮ್ಮ ಕೂಟದವರಿಗೆಲ್ಲಾ ಮೇಲ್ಪಂಗ್ತಿ ಹಾಕಿಕೊಟ್ಟರು. ಕಳೆದ ತಾ|| ೨೨ ರಲ್ಲಿ ರಾಜಧಾನಿಯ ಭಾಗವತ ಸುಬ್ರಾಯರ ದೇವಸ್ಥಾನದಲ್ಲಿ ಬ್ರಾಹ್ಮಣರ ಒಂದು ಸಭೆಯನ್ನು ಕೂಡಿಸಿ, ಅಲ್ಲಿ ಮ|| ವೆಂಕಟಕೃಷ್ಣಯ್ಯನವರು ಮೇಲೆಕಂಡ ಅಭಿಪ್ರಾಯದ ಉಪನ್ಯಾಸಮಾಡಿ, ಬ್ರಾಹ್ಮಣ ಉಮೇದುವಾರರೆಲ್ಲಾ ತಮ್ಮ ಉಮೇದುವಾರಿಗೆ ರಾಜೀನಾಮೆಯನ್ನು ಕೊಡಲಿ, ಬ್ರಾಹ್ಮಣ ಓಟರುಗಳು ತಮ್ಮ ಓಟುಕೊಡತಕ್ಕ ಅಧಿಕಾರಕ್ಕೆ ರಾಜೀನಾಮೆ ಕೊಡಲಿ ಎಂಬ ತೀರ್ಮಾನವನ್ನು ದೇವತಾಸನ್ನಿಧಿಯಲ್ಲಿ ಮಾಡಿಸಿದರು.

ಮೈಸೂರು ಸಂಸ್ಥಾನದಲ್ಲಿ ಜಾತಿದ್ವೇಷ ಮತದ್ವೇಷದ ಪ್ರಯತ್ನವೂ ಲೇಖನಗಳೂ ಹುಟ್ಟುವುದಕ್ಕೆ ಮ|| ವೆಂಕಟಕೃಷ್ಣಯ್ಯನವರೂ ಅವರ ಸಂಪದಭ್ಯುದಯ ಸಾಧ್ವೀ ಪತ್ರಿಕೆಗಳೂ ಮುಖ್ಯಕಾರಣಭೂತಗಳೆಂಬುದನ್ನು ದೇಶವೇ ಬಲ್ಲುದು. ಆ ಪತ್ರಿಕೆಗಳಲ್ಲಿ ಆ ತೆರದ ಲೇಖನಗಳು ಮೊದಲು ಉದ್ಭವಿಸಿದುದರಿಂದಲೇ ಅವಕ್ಕೆ ಪ್ರತೀಕಾರವಾಗಿ ಇತರ ಪತ್ರಿಕೆಗಳಲ್ಲಿ ಲೇಖನಗಳು ಉಪಕ್ರಮಿಸಿರುವುವೆಂಬುದನ್ನು ೨ ಪಕ್ಷದ ಪತ್ರಿಕೆಗಳನ್ನೂ ಇದುವರೆಗೆ ಓದಿದವರು ಈಗಲಾದರೂ ಅವನ್ನು ಬಿಚ್ಚಿ ಓದುವವರೂ ನಿಸ್ಸಂಶಯವಾಗಿ ತಿಳಿದುಕೊಳ್ಳಬಲ್ಲರು. ಅಂಥ ದ್ವೇಷಾಸೂಯೆಯ ಲೇಖನಗಳನ್ನು ಇನ್ನಾದರೂ ಮ|| ವೆಂಕಟಕೃಷ್ಣಯ್ಯನವರು ನಿಲ್ಲಿಸಿಬಿಟ್ಟರೆ ನಾವುಗಳು ಕಲಹದ ಲೇಖನಗಳಿಗೆ ಸ್ಥಳವನ್ನೇ ಕೊಡುವುದಿಲ್ಲವೆಂದು ಶಪಥಪೂರ್ವಕವಾಗಿ ಒಕ್ಕಲಿಗರ ಪತ್ರಿಕಾಕರ್ತರೂ ಸ್ಟಾರ್ ಪತ್ರಿಕಾಕರ್ತರೂ ಸಹ ತಿಳಿಯಿಸಿದ್ದರೂ ಅಷ್ಟನ್ನುಮಾಡಿ ದೇಶಶಾಂತಿಯನ್ನು ಕೋರುವ ಬುದ್ಧಿಯು ವೆಂಕಟಕೃಷ್ಣಯ್ಯನವರಿಗೆ ಹುಟ್ಟಲಿಲ್ಲ. ದೀಪದಡಿಯಲ್ಲಿ ಕತ್ತಲೆಯಿರುವಂತೆ ಇವರ ಬಾಯಲ್ಲಿ ಹೊರಡುವ ವೈರಾಗ್ಯವಚನಗಳು ಹೃದಯದಲ್ಲಿಲ್ಲದಿರುವುದನ್ನು ಕಂಡು ಅನೇಕರು ವಿಷಾದಪಡುತ್ತಾರೆ. ಪ್ರಭುತ್ವದವರಾದರೂ ಪ್ರವರ್ತಿಸಿ ಸಾಧ್ವೀ ಸಂಪದಭ್ಯುದಯಗಳಲ್ಲಿ ಇನ್ನು ಮುಂದಾದರೂ ಜಾತಿ ಮತ ದ್ವೇಷಾಸೂಯೆಯ ಲೇಖನಗಳು ಬಾರದಂತೆ ಮಾಡಿದರೆ ನಾವು ಈ ದಿನದಿಂದಲೇ ಅಂಥ ಪ್ರಸಕ್ತಿಗೆ ತಿಲಾಂಜಲಿಯನ್ನು ಕೊಡಲು ಸಿದ್ಧರಾಗಿರುವೆವು.

ತಮ್ಮ ತಪ್ಪನ್ನು ತಾವು ತಿದ್ದಿಕೊಳ್ಳಲಾರದೆ ದಿವಾನರೇ ಮೊದಲಾದ ನಿಷ್ಪಕ್ಷಪಾತಾಧಿಕಾರಿಗಳ ಮೇಲೂ ಪುರೋವೃದ್ಧಿಗೆ ಬರುತ್ತಲಿರುವ ಹಿಂದುಳಿದ ಜನವರ್ಗಗಳ ಮೇಲೂ ಅಸೂಯೆಪಟ್ಟು ವೃಥಾ ದೋಷಾರೋಪಣೆಗಳನ್ನೂ ನಾನಾತಂತ್ರಗಳನ್ನೂ ಮಾಡುತ್ತಾಬಂದರೆ ಪ್ರತಿತಂತ್ರಗಳು ಸಿದ್ಧವಾಗಿಯೇ ಆಗುತ್ತವೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಸಹಾಯನಿರಾಕರಣ ಮಾಡಲು ಕೆಲವರು ಕಲ್ಪಿಸಿಕೊಂಡ ಕಾರಣಾಭಾಸದಂತೆ ಈಗಣ ಮ್ಯು|| ಕೌನ್ಸಿಲಿನ ಸಹಾಯನಿರಾಕರಣಕ್ಕೆ ಪ್ರಜಾಮಿತ್ರಮಂಡಲಿಯ ಪ್ರಕಟನೆಯನ್ನು ಕಾರಣವನ್ನಾಗಿ ಹೇಳಿಕೊಂಡಿರುವುದೂ ಆಭಾಸವಾಗಿಯೇ ಇರುತ್ತದೆ. ಏಕೆಂದರೆ ಈ ತೆರದ ಪ್ರಕಟನೆಯನ್ನು ಪ್ರಜಾಮಿತ್ರಮಂಡಲಿಯವರು ಈಗಳೇ ಮಾಡಿಲ್ಲ. ಮೊನ್ನೆವರ್ಷ ಪ್ರಜಾಪ್ರತಿನಿಧಿಸಭೆಯಿಂದ ನಿಯಮನಿರ್ಮಾಣಸಭೆ ಮೊದಲಾದುವುಗಳಿಗೆ ಪ್ರತಿನಿಧಿಗಳನ್ನಾರಿಸಬೇಕಾದ ಸಂದರ್ಭದಲ್ಲಿಯೂ ಇಂಥ ಅಭಿಪ್ರಾಯವನ್ನೇ ಪ್ರಕಟಮಾಡಿದ್ದರು. ಆಗ ಅದರ ಕಾರಣವನ್ನು ಹೇಳಿಕೊಂಡು ಮ|| ವೆಂಕಟಕೃಷ್ಣಯ್ಯನವರೇ ಮೊದಲಾದ ಅವರ ಕೂಟದವರೊಬ್ಬರೂ ಉಮೇದುವಾರಿಯನ್ನು ಬಿಟ್ಟುಕೊಡಲಿಲ್ಲ. ಪ್ರಜಾಮಿತ್ರಮಂಡಲೀ ಪ್ರಕಟನಪತ್ರವನ್ನು ತಮ್ಮ ತಾ|| ೧೯ ನೆ ಸಂಪದಭ್ಯುದಯ ಸಂಚಿಕೆಯಲ್ಲಿ ಪ್ರಕಾಶಪಡಿಸಿಕೊಂಡು, ಅದೇಪತ್ರಿಕೆಯಲ್ಲೇ ಚಾಮರಾಜಮೊಹಲ್ಲಾ ಕೌನ್ಸಿಲರ್ ಪದವಿಗೆ ತಾವುಗಳು ಉಮೇದುವಾರರಾಗಿ ನಿಂತಿರುವೆವೆಂಬುದನ್ನು ಪ್ರಜೆಗಳಿಗೆ ತಿಳಿಯಿಸಿ, ಓಟುಗಳನ್ನು ಕೊಡಬೇಕೆಂದು ವೆಂಕಟಕೃಷ್ಣಯ್ಯನವರು ಕೇಳಿರುತ್ತಾರೆ. ಆ ಪ್ರಕಟನಪತ್ರವೇ ಇವರ ರಾಜೀನಾಮೆಗೆ ಕಾರಣವಾಗಿದ್ದರೆ ಅದನ್ನು ನೋಡಿದಮೇಲೆ ಇವರು ಉಮೇದುವಾರಿಗೇ ನಿಲ್ಲದಿರಬೇಕಾಗಿತ್ತು. ಹಾಗೆಮಾಡದಿರುವುದರಿಂದ ಅದು ನೆಪಮಾತ್ರದ ಕಾರಣವೆಂದೂ ಸಹಾಯನಿರಾಕರಣವನ್ನು ಬೆಳೆಯಿಸುವುದೇ ಇವರ ಮುಖ್ಯಸಂಕಲ್ಪವೆಂದೂ ಎಂಥವರಿಗೂ ತೋರುವುದಿಲ್ಲವೆ? ಅಲ್ಲದೆ ಆ ಪ್ರಕಟನಪತ್ರಿಕೆಯು ಮೈಸೂರಿನಲ್ಲಿ ಮಾತ್ರ ಪ್ರಕಟವಾಗಿಲ್ಲ. ಬೆಂಗಳೂರು ಮೊದಲಾದ ಕಡೆಗಳಲ್ಲೂ ಪ್ರಕಟವಾಗಿದೆ. ಅಲ್ಲಿಯ ಬ್ರಾಹ್ಮಣರುಗಳೆಲ್ಲಾ ಇವರಂತೆಯೇ ಮಾಡಿರುವರೆ?

ಇವರು ಪ್ರಜಾಮಿತ್ರಮಂಡಲಿಯ ಮೇಲೂ ಅದರ ಕಾರ್ಯವಿಧಾನದ ಮೇಲೂ ಮಾಡುವ ಆಕ್ಷೇಪಗಳೆಲ್ಲಾ ಅಸೂಯಾ ಮೂಲಕವಾದುವುಗಳೇ ಹೊರತು ನಿಜವಾದುವುಗಳಲ್ಲ. ಪ್ರಜಾಮಿತ್ರಮಂಡಲಿಗೇ ಆಗಲಿ ಅದರ ಅನುಯಾಯಿಗಳಿಗೇ ಆಗಲಿ ಬ್ರಾಹ್ಮಣಸಾಮಾನ್ಯವನ್ನೂ ದೂರೀಕರಿಸಬೇಕೆಂಬ ಅಭಿಪ್ರಾಯವೇನೂ ಇಲ್ಲ. ಹಿಂದುಳಿದವರ ಅಭ್ಯುದಯದಲ್ಲಿ ಅಸೂಯೆ ಪಡದಿರುವ ಬ್ರಾಹ್ಮಣರಲ್ಲೆಲ್ಲಾ ಅವರು ವಿಶೇಷ ಪ್ರೀತಿಗೌರವಗಳನ್ನಿಟ್ಟುಕೊಂಡಿದ್ದೇ ಇರುವರು. ಅಂಥ ಬ್ರಾಹ್ಮಣರೂ ಇತರರೂ ಸರ್ವರೂ ಸೌಹಾರ್ದದಿಂದ ದೇಶಕಾರ್ಯದಲ್ಲಿ ಒಂದು ಬಂಡಿಗೆ ಹೂಡಿದ ಎರಡು ಅಶ್ವಗಳಂತೆ ಸೇರಿ ಕೆಲಸ ಮಾಡಬೇಕೆಂಬುದೇ ಅವರ ತತ್ವವಾಗಿದೆ. ಹಾಗಿದ್ದುದರಿಂದಲೇ ಮೈಸೂರಿನ ಮಿ|| ಮಹಮ್ಮದ್‌ಸೇಟರೇ ಮೊದಲಾದವರು ತಮ್ಮ ಜತೆಗೆ ಮ್ಯು|| ಕೌನ್ಸಿಲರಾಗಿರಲು ಅಡ್ವೋಕೇಟ್ ಮ|| ರಾಮಸ್ವಾಮಿಯವರನ್ನೂ, ಮ|| ಪಿ. ಎಸ್. ಅನಂತರಾಯರನ್ನೂ ಉಮೇದುವಾರರನ್ನಾಗಿ ನಿಲ್ಲಿಸಿ, ಅವರುಗಳಿಗೆ ಪ್ರಜೆಗಳ ಓಟುಗಳು ದೊರೆಯುವಂತೆ ಮಾಡಲು ಎಷ್ಟೋ ಸಾಹಸಮಾಡಿದರು. ಈ ವಿಷಯವಾಗಿ ಮ|| ರಾಮಸ್ವಾಮಿಯವರು ಲಿಖಿತಮೂಲಕವಾಗಿ ತಿಳಿಯಿಸಿರುವ ಅಭಿಪ್ರಾಯವನ್ನು ಇಲ್ಲಿ ಉದಹರಿಸುವುದು ಪ್ರಸಂಗೋಚಿತವಾದುದರಿಂದ ಅದನ್ನೇ ಕೆಳಗೆ ಮುದ್ರಿಸಿರುತ್ತೇವೆ.

Mysore, 25-8-1921.

Dear Mr. Mahamad Sait,

I hope you won't mistake my words for undue flattery when I say that you and Mr. Bavaji have done me a service which I cannot easily forget. Quite unasked and in all sincerity, and in spite of my habitual indifference you both evinced an interest in me, and worked heart and soul to support my candidature. I am not only particular about the result of the poll, but I sincerely appreciate your magnanimity and I thank you both for your kindness and courtesy.

With kind regard
Yours sincerely,
Sd./ K. RAMASWAMI.

ಮ|| ವೆಂಕಟಕೃಷ್ಣಯ್ಯನವರೂ ಅವರ ಕೂಟದವರೂ ಪರಸ್ಪರ ವಿರೋಧಭಾವವನ್ನು ಹುಟ್ಟಿಸಬೇಕೆಂದು ಎಷ್ಟು ಪ್ರಯತ್ನಮಾಡಿದರೂ, ಉಮೇದುವಾರರಾಗಲಿಕ್ಕೂ ಓಟರುಗಳಾಗಲಿಕ್ಕೂ ಬ್ರಾಹ್ಮಣಸಮುದಾಯಕ್ಕೆ ನಿರ್ಬಂಧವನ್ನು ಕಲ್ಪಿಸಿದರೂ ಯುಕ್ತಾಯುಕ್ತವಿಚಾರಪರರಾದ ಅನೇಕ ಬ್ರಾಹ್ಮಣಜನರು ಬಂದು ಓಟುಗಳನ್ನು ಕೊಟ್ಟೇಕೊಟ್ಟರು. ಮೂರು ಮಂದಿಗಳು ಕೌನ್ಸಿಲ್‌ಗಂತೂ ಉಮೇದುವಾರರಾಗಿದ್ದೇ ಇದ್ದರು. ಹೇ

ಳಿಕೆ ಮಾತನ್ನು ಕೇಳಿಕೊಂಡೋ ಅಥವಾ ಹೆರರು ಹೀಯೊಳಿಸುವರೆಂದೋ ಹೆಂಡತಿಯನ್ನು ಬಿಟ್ಟು ಬಿಡುವವರೂ ಉಂಟೇ? ಮ|| ವೆಂಕಟಕೃಷ್ಣಯ್ಯನವರು ಇನ್ನುಮೇಲಾದರೂ ಇಂಥ ಪ್ರವರ್ತನೆಗಳಿಂದ ವಿಶ್ರಾಂತಿಪಡೆದುಕೊಂಡು ಸ್ವಸ್ಥರಾಗಿದ್ದರೆ ದೇಶದಲ್ಲೆಲ್ಲಾ ಸುಖಶಾಂತಿಗಳುಂಟಾಗುವುದರಲ್ಲಿ ಸಂಶಯವಿಲ್ಲ.

ಮಲಬಾರಿನಲ್ಲಿ ಮಾಪಿಳ್ಳೆಗಳ ಅವಾಂತರ.

ಕಲ್ಲಿಕೋಟೆ ಜಿಲ್ಲೆಗೆ ಸೇರಿದ ಅನಮೂ, ತಿರುರಂಗಡಿ, ತಿರೂರು, ತಾನೂರು ಮೊದಲಾದ ಸ್ಥಳಗಳಲ್ಲಿ ಸಾವಿರಾರು ಮಂದಿ ಮಾಪಿಳ್ಳೆಗಳು ಸರ್ಕಾರದ ಮೇಲೆ ತಿರುಗಿಬಿದ್ದು ಬಹಳ ಅನರ್ಥಮಾಡಿದ್ದಾರೆ. ೨-೩ ತಿಂಗಳುಗಳಿಂದಲೂ ಇವರ ಮುಖಂಡರು ರಾಜದ್ರೋಹದ ಕರಪತ್ರಗಳನ್ನು ಹಂಚುತ್ತಲೂ ಮದ್ಯಪಾನನಿರೋಧದ ಚಳವಳಿಯ ನೆಪದಿಂದ ಜನರಿಗೆ ಹಿಂಸೆಕೊಡುತ್ತಲೂ ಇದ್ದು ಅದನ್ನು ಸರ್ಕಾರದವರು ತಡೆದುದರಮೇಲೆ ರೇಗಿ ಬಹಳ ಅನರ್ಥಮಾಡುತ್ತಿದ್ದಾರೆ. ನಡೆದಿರುವ ಹಾವಳಿಗಳ ವಿವರಣವು ಮಾತ್ರ ಈ ಕೆಳಗೆ ಕಂಡಂತೆ ಇರುತ್ತವೆ. ಮಾಪಿಳ್ಳಾ ಗುಂಪಿನವರು ಪರಪನ್ನಾಂಗಡಿಯಿಂದ ಕಡಲೂಡಿವರೆಗೆ ರೈಲ್ವೆಕಂಬಿಗಳನ್ನೆಲ್ಲಾ ಕಿತ್ತುಹಾಕಿಬಿಟ್ಟರು. ಟೆಲಿಗ್ರಾಫ್ ಕಂಬಿಗಳನ್ನು ಮುರಿದು ತಂತಿಗಳನ್ನು ಕಿತ್ತುಹಾಕಿದರು. ಸಬ್ ಮೇಜಿಸ್ಟ್ರೇಟನ್ನೂ ಪೋಲೀಸ್ ಇನ್ಸ್‌ಪೆಕ್ಟರನ್ನೂ ಇಬ್ಬರು ಸೈನಿಕರನ್ನೂ ಒಬ್ಬ ಯೂರೋಪ್ಯನನ್ನೂ ಹಿಡಿದುಕೊಂಡರು. ತಿರೂರಿನಲ್ಲಿದ್ದ ಸರ್ಕಾರಿ ಕಚೇರಿಗಳನ್ನೆಲ್ಲಾ ಸುಟ್ಟುಹಾಕಿದರು. ಅವರ ಮೇಲೆ ಆ ಸ್ಥಳಗಳಿಗೆ ಸೈನ್ಯವನ್ನೂ ಸಾಯುಧರಾದ ಪೋಲೀಸರನ್ನೂ ಕಳುಹಿಸಿಕೊಟ್ಟರು. ತಾ|| ೨೦ ರಲ್ಲಿ ಲೋಹಮಾರ್ಗಗಳ ಮೇಲೆ ಹೊಸ ಕಂಬಿಗಳನ್ನು ಹಾಕಿಸಿ ಸರಿಪಡಿಸಲಿಕ್ಕಾಗಿ ಸಾಯುಧರಾದ ಪೋಲೀಸರು ಆಳುಗಳನ್ನು ಕರೆದುಕೊಂಡು ಕಡಲೂರಿಗೆ ಹೋದರು. ಅಲ್ಲಿ ಮಾಪಿಳ್ಳೆಗಳ ಗುಂಪು ಬಹಳ ಬಲವಾಗಿದ್ದಿತು. ತಮ್ಮ ಕೆಲಸವು ಸಾಗದೆ ಇವರೆಲ್ಲಾ ಹಿಂದಿರುಗಿ ಬಂದುಬಿಟ್ಟರು. ತಾನೂರಿನಲ್ಲೂ ಪರಪನಗುಡಿಯಲ್ಲಿಯೂ ಗುಂಪಿನ ಜನರು ಅಂಚೆಮನೆಗೆ ನುಗ್ಗಿ ಸ್ಟಾಂಪು ಮೊದಲಾದುವುಗಳನ್ನು ದೋಚಿಕೊಂಡು ಟೆಲಿಗ್ರಾಫ್ ಯಂತ್ರಸಾಮಗ್ರಿಗಳನ್ನು ಹಾಳ್ಮಾಡಿದರು. ತಾ|| ೨೧ರಲ್ಲೂ ಲೋಹಮಾರ್ಗಗಳನ್ನು ಸರಿಮಾಡಿಸಲಾಗಲಿಲ್ಲ. ಗುಂಪಿನವರ ಹಾವಳಿಯು ಬಲವಾಗಿದ್ದಿತು. ಮದ್ರಾಸಿನಿಂದ ಪೋರನೂರಿಗೆ ಹೋಗೆಬಂಡಿಯ ತಿರುಗಾಟವೇ ನಿಂತುಹೋಯಿತು. ತಾ|| ೨೦ ರಲ್ಲಿ ಮಾಪಿಳ್ಳೆಗಳು ಸೈನಿಕರ ಮೇಲೂ ಪೋಲೀಸರ ಮೇಲೂ ತಿರುಗಿಬಿದ್ದು ಪರಸ್ಪರ ಹೊಡೆದಾಟ ಬಡಿದಾಟಗಳಾದುವು. ಪಾಲ್‌ಘಾಟ್ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟ್ ರಾಲಿಯವರೂ, ಲೆಫ್ಟನೆಂಟ್ ಜಾನ್ಸನ್‌ರವರೂ ಇಬ್ಬರು ಪೋಲೀಸಾಳುಗಳೂ, ಇಬ್ಬರು ಹೆಡ್‌ಕಾನ್‌ಸ್ಟೆಬಲುಗಳೂ ಬಲವಾದ ಪೆಟ್ಟುಗಳು ಬಿದ್ದು ಸತ್ತುಹೋದರು. ತಾ|| ೨೧ ರಲ್ಲಿ ೪೧ ಮಂದಿ ಮಾಪಿಳ್ಳೆಗಳನ್ನು ಪೋಲೀಸರು ಬಂಧಿಸಿ ಕಲ್ಲಿಕೋಟೆಗೆ ತೆಗೆದುಕೊಂಡುಹೋಗಿ, ಅಲ್ಲಿಂದ ಸ್ಪೆಷಲ್ ಟ್ರೇನಿನ ಮೇಲೆ ಸಾಯುಧರಾದ ಸೋಲ್ಜರುಗಳ ಕಾವಲಿನಿಂದ ಕನ್ನನೂರಿಗೆ ಸಾಗಿಸಿದರು. ಆ ೪೧ ಮಂದಿಗಳೊಳಗೆ ಎರ್ನಾಡಿನ ಕಿಲಾಫತ್ ಸಂಘದ ಮುಖ್ಯನಾಯಕನೂ ಇರುವನು. ಆ ಬಂಡಿಯ ಮೇಲೆ ಟ್ರಾಫಿಕ್ ಇನ್ಸ್‌ಪೆಕ್ಟರೇ ಯಾಜಮಾನ್ಯವನ್ನು ವಹಿಸಿ ಬಹಳ ಕಟ್ಟುಪಾಡಿನಿಂದ ಸಾಗಿಸಿದರು. ಕನ್ನಾನೂರು ನಿಲ್ದಾಣದಲ್ಲಿ ೧೦೦ ಮಂದಿ ರಿಜರ್ವ್ ಪೋಲೀಸರೂ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟೂ ಸಾಯುಧರಾಗಿ ನಿಂತಿದ್ದರು. ಬೀದಿಗಳಲ್ಲಿ ಜನರು ಗುಂಪುಗುಂಪಾಗಿದ್ದುದರಿಂದ ಊರಿನೊಳಗೆಲ್ಲಾ ಪೋಲೀಸರನ್ನು ಕಾವಲಾಗಿ ನಿಲ್ಲಿಸಿದ್ದರು. ಬಲು ಎಚ್ಚರಿಕೆಯಿಂದ ಆ ೪೧ ಮಂದಿಯನ್ನೂ ಕಾರಾಗೃಹಕ್ಕೆ ಸೇರಿಸಿದರು.

ಕಲ್ಲಿಕೋಟೆಗೆ ಸುತ್ತುಮುತ್ತಣ ಗ್ರಾಮಾಂತರಗಳಿಂದೆಲ್ಲಾ ಬಹುಮಂದಿ ಮಾಪಿಳ್ಳೆಗಳು ಬಂದು ಸೇರಿದ್ದರು. ಅವರೆಲ್ಲಾ ಸೂರೆಮಾಡಿಯಾರೆಂದು ಭಯಪಟ್ಟು ವರ್ತಕರು ಅಂಗಡಿಗಳನ್ನು ತೆರೆಯಲಿಲ್ಲ. ತಿರುರಂಗಡಿಯಲ್ಲಿ ನಡೆದ ಗದ್ದಲದ ಕಾಲದಲ್ಲಿ ಪೋಲೀಸರೂ ಸೈನಿಕರೂ ಹೊಡೆದ ತುಪಾಕಿ ಗುಂಡೇಟಿನಿಂದ ಎಷ್ಟು ಮಂದಿ ಸತ್ತರೆಂಬುದು ಇನ್ನೂ ಗೊತ್ತಾಗಿಲ್ಲ. ಪೊನ್ನಾನಿಯಲ್ಲೂ ಕೂಡ ಗುಂಪಿನ ಜನರು ಅಂಚೆಮನೆಯನ್ನು ಸುಟ್ಟುಬಿಟ್ಟರು. ಕಲೆಕ್ಟರ ಅಂಚೆಯನ್ನು ತಿರುರಂಗಡಿಗೆ ಸಾಗಿಸಿಕೊಂಡು ಹೋಗುತ್ತಿದ್ದವನೊಬ್ಬನನ್ನು ಮಾಪಿಳ್ಳೆಯವರು ಅಡ್ಡಗಟ್ಟಿ ಹೊಡೆದು ಕಿತ್ತುಕೊಂಡರು. ತಾ|| ೨೧ ರಲ್ಲಿ ಪರಪನಗುಡಿ ತಾನೂರುಗಳ ಮಧ್ಯದಲ್ಲಿರುವ ರೈಲ್ವೆಸೇತುವನ್ನು ಒಡೆದುಬಿಡಬೇಕೆಂದು ಮಾಪಿಳ್ಳೆಗಳು ಪ್ರಯತ್ನಿಸಿದರು. ಅಷ್ಟರಲ್ಲಿ ಪೋಲೀಸರೂ ಸೈನಿಕರೂ ಹೋಗಿ ತಡೆದು ಅವರನ್ನೆಲ್ಲಾ ಓಡಿಸಿದರು. ಪರಪನಗುಡಿ ನಿಲ್ದಾಣದ ಮನೆಯನ್ನೆಲ್ಲಾ ಮಾಪಿಳ್ಳೆಗಳು ಧ್ವಂಸಮಾಡಿಬಿಟ್ಟರು. ತಾ|| ೨೨ ರಿಂದ ಲೋಹಮಾರ್ಗಗಳ ಮೇಲೆ ಹೊಸ ಕಂಬಿಗಳನ್ನು ಬಹಳ ಸಾಹಸಪಟ್ಟು ಬಲವಾದ ಕಾವಲಿನಿಂದ ಹಾಕಿಸಿದರು. ತಾ|| ೨೪ ರಿಂದ ಬಂಡಿಗಳ ತಿರುಗಾಟಕ್ಕೆ ಆರಂಭವಾಯಿತು. ಎರ್ನಾಡಿನಲ್ಲೂ ಉತ್ತರ ಪೊನ್ನಾನಿಯಲ್ಲೂ ಸಹ ರೈಲ್ವೆಕಂಬಿಗಳನ್ನು ಕಿತ್ತು ಹಲವುಕಡೆ ರೈಲ್ವೆಸ್ಟೇಷನನ್ನೂ ಕಚೇರಿಗಳನ್ನೂ ಕೆಡಹಿಬಿಟ್ಟರು. ಕಲ್ಲಿಕೋಟೆಯಲ್ಲೂ ಕೂಡ ಗದ್ದಲವು ಹುಟ್ಟಬಹುದೆಂಬ ಚಿಹ್ನೆಯು ತೋರಿಬಂದಿತು. ಪಟ್ಟಣದ ಯಾವಲ್ಲಿಯೂ ಮೂವರಿಗಿಂತ ಹೆಚ್ಚಾಗಿ ಒಂದುಕಡೆ ಕೂಡಬಾರದೆಂದೂ, ಲೋಹಮಾರ್ಗಗಳ ಮೇಲಾಗಲಿ ಅವುಗಳ ಸಮೀಪಕ್ಕಾಗಲಿ ಯಾರೂ ಹೋಗಕೂಡದೆಂದೂ ಹೋದರೆ ಕೂಡಲೆ ತುಪಾಕಿಯಿಂದ ಸುಡಲ್ಪಡುವರೆಂದೂ ಸೂರ್ಯಾಸ್ತಮಯಾನಂತರ ಸಾಧ್ಯವಾದ ಮಟ್ಟಿಗೆ ಪ್ರಜೆಗಳು ಮನೆಯನ್ನು ಬಿಟ್ಟು ಹೊರಕ್ಕೆ ಬರಕೂಡದೆಂದೂ, ಮೋಟಾರು ಬಸ್ಸು ಮೋಟಾರುಕಾರು ಮೊದಲಾದುವುಗಳನ್ನಿಟ್ಟುಕೊಂಡಿರುವವರೆಲ್ಲಾ ಅವುಗಳ ನಂಬರನ್ನು ತಿಳಿಯಿಸಿ ಕೂಡಲೇ ಸರ್ಕಾರದ ವಶಕ್ಕೆ ಕೊಟ್ಟರಬೇಕೆಂದೂ ಜಿಲ್ಲಾ ಕಲೆಕ್ಟರೂ ಮಲಬಾರ್ ಸೇನಾಪತಿಯೂ ಪ್ರಕಟಿಸಿದ್ದಾರೆ. ತಿರೂರಿನಲ್ಲಿ ಮಾಪಿಳ್ಳೆಗಳಿಂದ ಉಂಟಾಗಿರುವ ದಾಂಧಲೆಯನ್ನು ಕಂಡು ಅಲ್ಲಿಂದ ತಲೆತಪ್ಪಿಸಿಕೊಂಡು ೩೦ ಮೈಲಿಗಳ ದೂರ ನಡೆದುಬಂದು ೨೨ ನೆ ತಾ|| ರಾತ್ರಿ ಕಲ್ಲಿಕೋಟೆಗೆ ಸೇರಿದವನೊಬ್ಬನು ಹೀಗೆ ತಿಳಿಯಿಸಿರುತ್ತಾನೆ.—"ಮಾಪಿಳ್ಳೆಗಳು ತಿರೂರಿನಲ್ಲಿ ಪೋಲೀಸು ಸ್ಟೇಷನನ್ನೂ ಕಚೇರಿಗಳನ್ನೂ ನುಗ್ಗಿ ಕತ್ತಿಗಳನ್ನೂ ತುಪಾಕಿಗಳನ್ನೂ ದೋಚಿಕೊಂಡರು. ಅಲ್ಲಿಯ ಸಬ್‌ಜೈಲಿನಲ್ಲಿದ್ದ ಬಂದಿಗಳನ್ನೆಲ್ಲಾ ಬಿಡಿಸಿ ಓಡಿಸಿಬಿಟ್ಟರು. ಇಬ್ಬರು ಪೋಲೀಸ್ ಇನ್ಸ್‌ಪೆಕ್ಟರನ್ನೂ ಒಬ್ಬ ಸಬ್ ಇನ್ಸ್‌ಪೆಕ್ಟರನ್ನೂ ಅಕ್ರಮವಾಗಿ ಕಟ್ಟಿಹಾಕಿದರು". ಈಚೆಗೆ ಕಲ್ಲಿಕೋಟೆ, ಮಾಲಾಪುರ, ಮಂಜೇರಿ, ತಿರೂರು, ಪೊನ್ನಾನಿ ಮೊದಲಾದ ಸ್ಥಳಗಳ ತಂತಿಯ ಸಂಬಂಧವೂ ಇಲ್ಲ, ರೈಲುಗಳೂ ಹೋಗಿ ಬರುವುದಿಲ್ಲ. ಹಾಗೂ ಹೀಗೂ ಬಂದಿರುವ ಸುದ್ದಿಗಳನ್ನು ಕೇಳಲಾಗಿ ಎರ್ನಾಡಿನೊಳಗೆ ವಿಪ್ಲವವು ಬಹಳ ವಿಪರೀತವಾಗಿದೆಯೆಂದು ಗೊತ್ತಾಗುತ್ತದೆ. ಕಲ್ಲಿಕೋಟೆಯಲ್ಲಿ ಸಾಯಂಕಾಲ ೬ ಗಂಟೆಗೇ ಅಂಗಡಿಗಳನ್ನೆಲ್ಲಾ ಮುಚ್ಚಿಬಿಡುತ್ತಾರೆ. ಹುಜೂರು ಕಚೇರಿಯ ಸುತ್ತಲೂ ಪೋಲೀಸರ ಕಾವಲನ್ನಿಟ್ಟಿದ್ದಾರೆ. ಪರಪನಗುಡಿ ಮೊದಲಾದ ಅನೇಕ ಗ್ರಾಮಗಳು ನಿರ್ಜನಗಳಾಗಿವೆ. ವ್ಯಾಪಾರವೆಲ್ಲಾ ನಿಂತುಹೋಗಿದೆ. ನೆಲಂಬೂರು ಅರಮನೆಗೆ ಗುಂಪಿನವರು ನುಗ್ಗಿ ೧೩ ಮಂದಿಯನ್ನು ಕತ್ತರಿಸಿಹಾಕಿ ಅಸ್ತ್ರಗಳನ್ನು ದೋಚಿಕೊಂಡರು. ಇನ್ನು ೧ ವಾರದವರೆಗೂ ರೈಲ್‌ಬಂಡಿಗಳು ತಿರುಗಾಡುವ ಹಾಗಿಲ್ಲ.

ತಿರೂರಿಗೆ ಹೋಗುತ್ತಿದ್ದ ರಿಜರ್ವ್ ಪೋಲೀಸರ ಮೇಲೆ ಗುಂಪಿನವರು ಬಿದ್ದು ಅವರ ಉಡುಪುಗಳನ್ನೂ ಆಯುಧಗಳನ್ನೂ ಮದ್ದುಗುಂಡುಗಳನ್ನೂ ಕಿತ್ತುಕೊಂಡರು. ಯೂರೋಪ್ಯರನ್ನೂ ಹಿಂದುಗಳನ್ನೂ ಇವರು ಬಹಳ ಚಿತ್ರವಸ್ಥೆಗೆ ಗುರಿಮಾಡಿದ್ದಾರೆ. ಮೋಟಾರಿನ ಸಮೇತ ಒಬ್ಬಬ್ಬ ಯೂರೋಪ್ಯರನ್ನು ಹೊಳೆಗೆ ಹಾಕಿಬಿಟ್ಟಿದ್ದಾರೆ. ರೈಲ್ವೆಸೇತುಗಳನ್ನೆಲ್ಲಾ ಧ್ವಂಸಮಾಡಿ, ಬಂಡಿಮಾರ್ಗಗಳ ಮೇಲೆ ಸಾಲುಮರಗಳನ್ನು ಕಡಿದುರುಳಿಸಿ, ಎತ್ತಕಡೆಯಿಂದಲೂ ಸೈನ್ಯ ಮೊದಲಾದುವುಗಳು ಬರದಂತೆಯೂ, ತಂತಿಕಂಬಗಳನ್ನು ಕಿತ್ತು ಸಮಾಚಾರವು ತಿಳಿಯದಂತೆಯೂ ಮಾಡಿದ್ದಾರೆ. ಸರ್ಕಾರದವರು ಬೆಂಗಳೂರು ಮದ್ರಾಸುಗಳಿಂದ ಸೈನ್ಯಗಳನ್ನೂ ರಿಜರ್ವ್ ಪೋಲೀಸರನ್ನೂ ಮಿಷನ್ ಗನ್ನುಗಳನ್ನೂ ಸ್ಪೆಷಲ್ ರೈಲುಗಳ ಮೇಲೂ ಮೋಟಾರುಗಳ ಮೇಲೂ ಸಾಗಿಸಿ ಗದ್ದಲವನ್ನಡಗಿಸಿ ಶಾಂತಿಯನ್ನುಂಟುಮಾಡಲು ಬಹಳ ಸಾಹಸಪಡುತ್ತಿದ್ದಾರೆ. ಕಲ್ಲಿಕೋಟೆ ಪಾಲಘಾಟಿನ ಕಡೆಗೆ ಅಂಚೆಯಲ್ಲಿ ಬಾಂಗಿಗಳನ್ನೇ ತೆಗೆದುಕೊಳ್ಳುತ್ತಲಿಲ್ಲ. ನೀಲಗಿರಿಯ ಮೇಲೆ ಹಾಯ್ದು ಮೋಟಾರುಗಳ ಮೇಲೆ ಅಂಚೆಯನ್ನು ಬಹಳ ಶ್ರಮಪಟ್ಟು ಸಾಗಿಸುತ್ತಿದ್ದಾರೆ. ಆ ದಿಕ್ಕಿನ ರೈಲ್ವೆಪ್ರಯಾಣವೇ ಕಷ್ಟವಾಗಿದೆ.

ಒಳದೇಶದ ವೃತ್ತಾಂತಗಳು.

ಮಿ|| ಕೆ. ವಿ. ಅನಂತರಾಮ್‌ರವರು ಕೋಲಾರದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ಬಿಸಿಲು ಕಾಯುತ್ತಿದೆ. ಆಗಾಗ್ಗೆ ಮೋಡವಾಡುವುದರ ಹೊರತು ದೊಡ್ಡಮಳೆಯಿಲ್ಲ. ರಾಗಿ ಮೊದಲಾದ ಪೈರುಗಳಿಗೆ ಮಳೆಯು ಅವಶ್ಯಕವಾಗಿದೆ.

ಮೈಸೂರು ರೈಲ್ವೆಗಳಲ್ಲಿ ಸಾಗಿಸುವ ಸಾಮಾನುಗಳ ಬಾಡಿಗೆ ದರವನ್ನು ಹೆಚ್ಚಿಸಲಿಕ್ಕಾಗಿ ಕಳೆದ ಜುಲೈ ತಿಂಗಳಲ್ಲಿ ಹೊರಟಿದ್ದ ಸರ್ಕಾರಿ ಅಪ್ಪಣೆಯು ಸದ್ಯಕ್ಕೆ ನಿಲ್ಲಿಸಲ್ಪಟ್ಟಿರುತ್ತದೆ.

೧೯೨೧-೨೨ ನೆ ವರ್ಷದಲ್ಲಿ ಮೈಸೂರು ಸಂಸ್ಥಾನದ ನಿರ್ಣೀತವಾದ ಬಜೆಟ್ಟಿನ ಪ್ರಕಾರ ೩೦೬೨೫೦೦೦ ರೂ. ಆದಾಯವೂ ೩೦೫೬೧೦೦೦ ರೂ. ವ್ಯಯವೂ, ಆಗಿ ೬೪೦೦೦ ರೂ. ಗಳು ಉಳಿಯುವುವು

ಎಕ್ಸೈಸ್ ಕಮಿಷನರಾದ ಮಿ|| ಕೆ. ಚಾಂಡಿಯವರು ತಮ್ಮ ಕುಮಾರಿಯವರನ್ನು ಮುಂದಣ ವಿದ್ಯಾಭ್ಯಾಸಕ್ಕಾಗಿ ಸೀಮೆಯಲ್ಲಿ ಬಿಟ್ಟುಬರಲು ಕಳೆದ ತಾ|| ೧೭ ರಲ್ಲಿ ಬೆಂಗಳೂರಿಂದ ಬೊಂಬಾಯಿಗೆ ಪ್ರಯಾಣಮಾಡಿದರು.

ಮಿ|| ಕೆ. ಚಾಂಡಿಯವರು ೩ ತಿಂಗಳ ರಜಾ ಪಡೆದಿರುವುದರಿಂದ ಮಿ|| ಎಫ್. ಬೌರಿಂಗ್‌ರವರು ಎಕ್ಸೈಜ್ ಕಮಿಷನರಾಗಿಯೂ, ಮ|| ಹಿರಣ್ಣಯ್ಯನವರು ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಮೈಸೂರಿನಲ್ಲಿ ಏರ್ಪಡಿಸಿಕೊಂಡಿರುವ ಕಾಂಗ್ರೆಸ್ ಶಾಖಾಸಂಘಕ್ಕೆ ತಮ್ಮನ್ನು ಮೆಂಬರಾಗಿ ಆರಿಸಿಕೊಂಡಿರುವುದಕ್ಕೆ ತಾವು ಒಪ್ಪಿಲ್ಲವೆಂದು ಮಿ|| ಎ. ಮಹಮ್ಮದ್‌ಸೇಟರು ನಡೆಸಿರುವ ಪತ್ರವ್ಯವಹಾರವು ಬೇರೆಕಡೆ ಪ್ರಕಟಿಸಲ್ಪಟ್ಟಿದೆ.

ಅರಸೀಕೆರೆ ಬಳಿಯಣ ತಿರುಪತಿಯಲ್ಲಿ ಶಾನುಭೋಗರ ಸಭೆಯು ನೆರವೇರಿತು. ಅದರಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ಮ|| ಕರ್ಪೂರ್ ಶ್ರೀನಿವಾಸರಾಯರ ಭಾಷಣದಲ್ಲೆಲ್ಲಾ ಮುಖ್ಯವಾಗಿ ಮಿಲ್ಲರ್ ಕಮಿಟಿ ಮೇಲಣ ಹಗೆಯೇ ತುಂಬಿತುಳುಕಿರುವುದು.

ಕಾರಣಾಂತರದಿಂದ ಈ ಮಧ್ಯೆ ೩ ತಿಂಗಳ ಕಾಲ ನಿಂತುಹೋಗಿದ್ದ ಅರ್ಥಸಾಧಕ ಪತ್ರಿಕೆಯು ಈ ವಾರದಿಂದ ಮತ್ತೆ ಮ|| ಗೋಪಾಲಯ್ಯಂಗಾರರ ಸಂಪಾದಕತ್ವದಿಂದಲೇ ಪ್ರಕಟಗೊಳ್ಳಲಾರಂಭವಾಗಿರುವುದನ್ನು ತಿಳಿಯಿಸಲು ಸಂತೋಷಿಸುತ್ತೇವೆ.

ಮಹಮ್ಮದೀಯರ ದೊಡ್ಡ ಗುರುಗಳೂ ಪರಮಸಾತ್ವಿಕರೂ ಆದ ಆಲಿಪುರಿನ ಹಾಜೆ ಹಾಫಿಜ್ ಸುಫಿ ಪೀರ್ ಸಯ್ಯದ್ ಜಮತ್ ಅಲ್ಲೀಷಾ ಷೇಕ್ ಖಾದ್ರಿ ನಕ್ಷಬಂದಿ ಮುಜದ್ದಾದಿಯವರು ಕೊಡಗಿನ ಕಡೆಯಿಂದ ರಾಜಧಾನಿಗೆ ಬಂದು ೨೫ ದಿನಗಳವರೆಗೆ ಇದ್ದು ಕಳೆದ ಮಂಗಳವಾರ ಬೆಂಗಳೂರು ಮಾರ್ಗವಾಗಿ ಬೊಂಬಾಯಿ ಕಡೆಗೆ ತೆರಳಿದರು. ರಾಜಧಾನಿಯ ಮಹಮ್ಮದೀಯರು ಬಹಳ ಗೌರವಭಕ್ತಿಗಳಿಂದ ಅವರ ಸತ್ಕಾರವನ್ನು ನಡೆಯಿಸಿದರು.

ಚನ್ನಪಟ್ಟಣದ ತಾ|| ಅಕ್ಕೂರು ಗುಂಡಪ್ಪನವರ ಕೊಲೆಯ ಸಂಬಂಧದ ಅಪರಾಧಿಗಳ ವಿಚಾರಣೆಯು ಬೆಂಗಳೂರು ಸೆಷನ್ ಕೋರ್ಟಿನಲ್ಲಿ ನಡೆದು ಕಳೆದ ಸೋಮವಾರ ತೀರ್ಮಾನವು ಹೇಳಲ್ಪಟ್ಟಿತು. ೧ನೆ ಅಪರಾಧಿ ಸಿದ್ದೇಗೌಡನಿಗೆ ಮರಣದಂಡನೆ; ಚನ್ನೇಗೌಡ, ಕರೀಗೌಡನಸಿದ್ದ, ಈರನಾಯಕ, ಮಳವಳ್ಳಿ, ತಿಮ್ಮ ಈ ೫ ಮಂದಿಗಳಿಗೆ ಜನ್ಮಾವಧಿ ಕಾರಾಗೃಹಪ್ರಾಪ್ತಿಶಿಕ್ಷೆಯಾಗಿ ಉಳಿದವರೆಲ್ಲಾ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಸಿದ್ದೇಗೌಡನು ಅಪ್ಪೀಲ್ ಮಾಡಿಕೊಳ್ಳುವುದರಲ್ಲಿದ್ದಾನೆಂದು ಕೇಳಿದೆವು.

ಚಾಮರಾಜನಗರದ ತಾ|| ರಾಮಸಮುದ್ರದಲ್ಲಿ ಆ ತಾಲ್ಲೂಕಿನ ವೀರಶೈವ ಸಭೆಯನ್ನು ಬರುವ ಸೆಪ್ಟಂಬರ್ ತಿಂಗಳಲ್ಲಿ ಕೂಡಿಸಲಿಕ್ಕಾಗಿ ಒಂದು ಆಲೋಚನ ಸಭೆಯು ಕಳೆದ ತಾ|| ೨೦ ರಲ್ಲಿ ರಾಮಸಮುದ್ರದಲ್ಲಿ ಕೂಡಿದ್ದು, ಸತ್ಕಾರಕ ಸಂಘವು ಏರ್ಪಟ್ಟಿದೆಯೆಂತಲೂ, ಸಭೆಯ ಅಧ್ಯಕ್ಷತೆಯನ್ನು ವಹಿಸಲು ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ರವರನ್ನು ಪ್ರಾರ್ಥಿಸಲಿಕ್ಕಾಗಿ ಕೆಲ ದೊಡ್ಡ ಮನುಷ್ಯರು ಹೋಗತಕ್ಕವರಾಗಿದ್ದಾರೆಂತಲೂ, ತಿಳಿದು ಅವರುಗಳ ಉತ್ಸಾಹಾಭಿಮಾನಗಳನ್ನು ಅಭಿನಂದಿಸುತ್ತೇವೆ.

ಭರತಖಂಡದ ಸರ್ವಸೇನಾಪತಿಗಳಾದ ಲಾರ್ಡ್ ರಾಲಿನ್ಸನ್‌ರವರು ಕೋಲಾರದ ಗಣಿಗಳಿಂದ ಕಳೆದ ತಾ|| ೧೯ ರ ಸಾಯಂಕಾಲ ಬೆಂಗಳೂರಿಗೆ ದಯಮಾಡಿಸಿದರು. ಬ್ರಿಟಿಷ್ ರೆಸಿಡೆಂಟರಿಂದ ಇದಿರ್ಗೊಳ್ಳಲ್ಪಟ್ಟು ೧೭ ಮರ್ಯಾದಾರ್ಥವಾದ ಗುಂಡುಗಳು ಹಾರುತ್ತಿರುವಾಗ ಸೇನಾ ಮರ್ಯಾದೆಯೊಡನೆ ರೆಸಿಡೆಂಟರ ಭವನವನ್ನು ಸೇರಿದರು. ಆ ದಿನ ರಾತ್ರಿ ಬ್ರಿಟಿಷ್ ರೆಸಿಡೆಂಟ್ ಕರ್ನಲ್ ಎಸ್. ಜಿ. ನಾಕ್ಸ್‌ರವರು ತಮ್ಮ ಬಂಗಲೆಯಲ್ಲಿ ಘನವಾದ ಔತಣವನ್ನು ಮಾಡಿಸಿದರು. ಅದಕ್ಕೆ ಅನೇಕ ಯೂರೋಪ್ಯ ಸೈನಿಕಾಧಿಕಾರಿಗಳೂ, ಸರ್ದಾರ್ ಕರ್ನಲ ದೇಶರಾಜ ಅರಸಿನವರೂ ಇತರ ದೊಡ್ಡ ದೊಡ್ಡ ಯೂರೋಪಿಯನ್ನರೂ ಕರೆಯಲ್ಪಟ್ಟಿದ್ದರು. ಮರುದಿನ ಬೆಳಿಗ್ಗೆ ಅಲ್ಲಿರುವ ಯೂರೋಪ್ಯದೇಶೀಯ ಸೇನೆಗಳ ಕವಾಯತ್ತನ್ನು ಪರಾಮರಿಸಿದರು.

“ಬೆಂಗಳೂರು ಚಿಕ್ಕಬಳ್ಳಾಪುರ ಶ್ರೀನಿವಾಸಪುರಗಳ ಮಧ್ಯೆ ಸಂಚರಿಸುವ ಹೊಗೆಬಂಡಿಯ ದುರವಸ್ಥೆಯನ್ನು ಹೇಳತೀರದು. ಕಾಲಕ್ಕೆ ಸರಿಯಾಗಿ ಅದು ತಲುಪುವುದೇ ಅಪೂರ್ವ. ತಿಟ್ಟಿಗೆ ಬಂದರೆ ಮುಲಕುವುದೂ ಹಳ್ಳಕ್ಕೆ ಬಂದರೆ ಧುಮುಕುವುದೂ, ಅದರ ಸ್ವಭಾವವಾಗಿದೆ. ಸದ್ಯಃ ಅದರಲ್ಲಿ ಪ್ರಯಾಣ ಮಾಡುವವರು ದಿಣ್ಣೆಗಳಲ್ಲಿ ಕೆಳಕ್ಕಿಳಿದು ಬಂಡಿಗಳನ್ನು ನೂಕದಂತೆ ಆಗಿರುವುದೇ ವಿಶೇಷವೆನ್ನಬೇಕು. ಈ ಮಧ್ಯೆ ಅದು ಕಳೆದ ಸೋಮವಾರ ಆವತಿಹಳ್ಳಿಗೂ ನಂದಿಸ್ಟೇಷನ್ನಿಗೂ ಮಧ್ಯೆ ಕಂಬಿತಪ್ಪಿ ಉರುಳಿಕೊಂಡಿತು. ಎಂಜನ್ನೂ ಗೂಡ್ಸುವಾಗಿನ್ನುಗಳೂ ಪ್ರಯಾಣಿಕರ ಒಂದೆರಡು ಬಂಡಿಗಳೂ ಉರುಳಿಕೊಂಡುವು. ಅನೇಕರಿಗೆ ಪೆಟ್ಟುಬಿದ್ದು ಗಾಯಗಳಾದುವು. ಪ್ರಾಣಾಪಾಯವಾರಿಗೂ ಆಗಲಿಲ್ಲ. ಇದನ್ನು ಕೇಳಿ ಈ ಸುತ್ತಿನ ಪ್ರಯಾಣಿಕರೆಲ್ಲಾ ತತ್ತರಿಸುತ್ತಿದ್ದಾರೆ” ಎಂದು ಒಬ್ಬ ಬಾತ್ಮೀದಾರರು ಬರೆದಿದ್ದಾರೆ.

ಭೋರ್ ಸಂಸ್ಥಾನದ ಪ್ರಭುಗಳಾದ ಶ್ರೀಮಾನ್ ಪಂತ್‌ರವರು ಕಳೆದ ಮಂಗಳವಾರದ ಮೇಲ್ ಬಂಡಿಯಲ್ಲಿ ಸಪರಿವಾರರಾಗಿ ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿದರು. ನಿಲ್ದಾಣವು ತಕ್ಕಮಟ್ಟಿಗೆ ಅಲಂಕರಿಸಲ್ಪಟ್ಟಿದ್ದಿತು. ಅರಮನೆಯ ಅಧಿಕಾರಿಗಳು ಇದಿರ್ಗೊಂಡು ಖಾಸಬಂಗಲೆಯಲ್ಲಿಳಿಯಿಸಿದರು. ಮರ್ಯಾದಾರ್ಥವಾಗಿ ೧೧ ಗುಂಡುಗಳು ಹಾರಿಸಲ್ಪಟ್ಟುವು. ಆದಿನ ಮಧ್ಯಾಹ್ನಾನಂತರ ಶ್ರೀಮನ್ಮಹಾರಾಜರು ತಮ್ಮ ಮೋಟಾರಿನಲ್ಲಿ ಪಂತರವರನ್ನು ಕುಳ್ಳಿರಿಸಿಕೊಂಡು ಪಟ್ಟಣದ ಭಾಗಗಳನ್ನೆಲ್ಲಾ ತೋರಿಸಿಕೊಂಡು ಬಂದರು. ಇವರು ಕನ್ನಂಬಾಡಿ, ಚಾಮುಂಡೇಶ್ವರಿಬೆಟ್ಟ, ಶ್ರೀರಂಗಪಟ್ಟಣ ಮೊದಲಾದ ಸ್ಥಳಗಳನ್ನು ಪರಾಮರಿಸಿ ನಮ್ಮ ಮಹಾರಾಜರವರ ಸತ್ಕಾರಾತಿಶಯದಿಂದ ಸಂತುಷ್ಟರಾಗಿ ನೆನ್ನೆಯದಿನ ಬೆಳಿಗ್ಗೆ ಅರಸೀಕೆರೆ ಮಾರ್ಗವಾಗಿ ಪ್ರಯಾಣಮಾಡಿದರು. ಮರ್ಯಾದಾರ್ಥವಾಗಿ ೧೧ ಗುಂಡುಗಳು ಹಾರಿಸಲ್ಪಟ್ಟುವು.

ರಾಜಧಾನಿಯಲ್ಲಿರುವ ಎಂ. ಎಲ್. ಜೈನಬೋರ್ಡಿಂಗ್ ಹೋಮಿನ ವಿದ್ಯಾರ್ಥಿಗಳು ಈ ಹೋಮಿನ ಸ್ಥಾಪಕರೂ ಮತ್ತು ಪೋಷಕರೂ ಆದ ಶ್ರೀಮಾನ್ ಎಂ. ಎಲ್. ವರ್ಧಮಾನಯ್ಯನವರ ಜನ್ಮದಿನೋತ್ಸವವನ್ನು ಈ ದಿವಸ ಸಾಯಂಕಾಲ ೬|| ಗಂಟೆಗೆ ತಮ್ಮ ಬೋರ್ಡಿಂಗ್ ಹೌಸಿನಲ್ಲಿ ಮಹಾರಾಜಾ ಕಾಲೇಜಿನ ಇಂಗ್ಲಿಷ್ ಪ್ರೊಫೆಸರಾದ ಮ|| ಬಿ. ಎಂ. ಶ್ರೀಕಂಠಯ್ಯ, ಎಂ. ಎ., ಬಿ. ಎಲ್., ರವರ ಅಧ್ಯಕ್ಷತೆಯಲ್ಲಿ ನಡೆಯಿಸಿ ತಮ್ಮ ಭಕ್ತಿವಿಶ್ವಾಸವನ್ನು ಪ್ರದರ್ಶಿಸುವವರಾಗಿರುವರು. ವಿದ್ಯಾದಾನಕ್ಕಿನ್ನ ಮಿಗಿಲಾದ ದಾನವಿಲ್ಲವೆಂಬ ತತ್ವವನ್ನು ತಿಳಿದು ಸ್ವಜನರ ವಿದ್ಯಾಭಿವೃದ್ಧಿಗಾಗಿ ಪ್ರತಿತಿಂಗಳಲ್ಲೂ ೪೦೦-೫೦೦ ರೂಪಾಯಿಗಳನ್ನು ವೆಚ್ಚಮಾಡಿ ೪೦-೫೦ ವಿದ್ಯಾರ್ಥಿಗಳನ್ನು ಮಕ್ಕಳಂತೆ ಪೋಷಿಸಿಕೊಂಡು ಬರುತ್ತ ಖ್ಯಾತಿಗೊಂಡಿರುವ ಶ್ರೀಮಂತ ವರ್ಧಮಾನಯ್ಯನವರು ಇಂತಹ ಜನ್ಮದಿನೋತ್ಸವವನ್ನು ಬಹುಕಾಲದವರೆಗೆ ನಡೆಯಿಸಿಕೊಂಡು ಇತೋಪ್ಯತಿಶಯವಾದ ಕೀರ್ತಿಯನ್ನು ಪಡೆಯುವವರಾಗಲೆಂದು ಹಾರೈಸುತ್ತೇವೆ.

ಭರತಖಂಡದ ಸರ್ವ ಸೇನಾಪತಿಗಳಾದ ಲಾರ್ಡ್ ರಾಲಿನ್ಸನ್‌ರವರು ಕಳೆದ ಭಾನುವಾರ ಬೆಂಗಳೂರಿಂದ ಹೊರಟು ಮಧ್ಯಾಹ್ನ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದರು. ಅಲ್ಲಿಗೆ ನಮ್ಮ ಶ್ರೀಮನ್ಮಹಾರಾಜರವರು ದಯಮಾಡಿಸಿದ್ದರು. ಅಲ್ಲಿ ನೋಡತಕ್ಕ ಸ್ಥಲಗಳನ್ನೆಲ್ಲಾ ನೋಡಿ, ಭೋಜನವನ್ನು ತೀರಿಸಿಕೊಂಡು ಎಲ್ಲರೂ ಕೃಷ್ಣರಾಜಸಾಗರದ ಕಟ್ಟೆಗೆ ದಯಮಾಡಿಸಿ ನೋಡಿಕೊಂಡು ಸಾಯಂಕಾಲ ೫ ಗಂಟೆಗೆ ರಾಜಧಾನಿಗೆ ಮೋಟಾರುಗಳ ಮೇಲೆ ದಯಮಾಡಿಸಿದರು. ಗೌರವಾರ್ಥವಾದ ೧೭ ಗುಂಡುಗಳು ಹಾರಿಸಲ್ಪಟ್ಟುವು. ಸೋಮವಾರ ಬೆಳಿಗ್ಗೆ ಶ್ರೀಮನ್ಮಹಾರಾಜರ ಜತೆಯಲ್ಲಿ ಮೋಟಾರಿನಲ್ಲಿ ಕುಳಿತು ಇಲ್ಲಿ ನೋಡತಕ್ಕ ಸ್ಥಲಗಳನ್ನೆಲ್ಲಾ ಪರಾಮರಿಸಿ ನೀಲಗಿರಿಗೆ ಪ್ರಯಾಣಮಾಡುವವರಾಗಿದ್ದರು. ಆದರೆ ಸರಾತ್ರಿಯಲ್ಲೇ ಕೂಡಲೇ ಬರಬೇಕೆಂಬುದಾಗಿ ಸಿಮ್ಲಾದಿಂದ ಅವರಿಗೆ ತಂತ್ರೀವಾರ್ತೆ ಬಂದುದರ ಮೇಲೆ ಬೆಳಗಿನಜಾವದಲ್ಲೇ ಅವರು ಶ್ರೀಮನ್ಮಹಾರಾಜರೊಡನೆ ಕಾರಾಪುರದ ಶಿಕಾರಿ ಕ್ಯಾಂಪಿಗೆ ಹೋಗಿ ಅಲ್ಲಿಯ ಏರ್ಪಾಟುಗಳನ್ನು ಪರಾಮರಿಸಿ ರಾಜಧಾನಿಗೆ ಬಂದು ಆ ದಿನ ಸಾಯಂಕಾಲವೇ ಬೆಂಗಳೂರಿಗೆ ಪ್ರಯಾಣಮಾಡಿದರು.

To

THE EDITOR MYSORE STAR, MYSORE.

Dear Sir,

Please publish the following letters and oblige.

Yours truly,
A. M. SAIT.

Post card dated the 8th August 1921 from the Hony: Secretary, Mysore District Congress Sub-Committee, Mysore to Mr. Mahomed Sait, Mysore.

I have much pleasure to inform you that you have been unanimously elected at the last meeting of the members of the Indian National Congress, residing at Mysore held on the 6th instant, to be a member of the above Committee. The first meeting of the Committee will be held on Tuesday the 9th instant at 6 p.m. precisely and I request you to kindly make it convenient to attend the meeting which will be held in Sadvidya Sala, Mysore.

Letter dated the 11th August 1921 from the Hony. Secretary of the above Committee to Mr. Mahomed Sait.

At a meeting of the Members of the Congress held in Mosore on 6-8-1921, in the Sadvidya Pathasala, under the Presidency of Mr. Sitharamiah, Advocate, a Congress Sub-Committee was formed in Mysore, and the Sub-Committee have unanimously elected you to be a Member of their Executive Committee.

I hope you will give us your valuable help, and by your presence and co-operation enlighten the public and bringing them to a sense of their duty to their country.

General Bazaar, Mysore,
17th August 1921.

(Reply)

Dear Sir,

I was surprised to learn from your card and letter dated 8th and 11th August 1921 that I was elected unanimously as a member of the National Congress Sub Commiitee at Mysore ex-parte, and I thank you very sincerely for the great honour you have done me.

As regards becoming a member, I have given the matter my best consideration; after according my hearty sympathy to the movement as an Indian, I have to state that I do not want to associate my name with the movement in a Native State like Mysore. For, I am absolutely certain that my loyalty to the present Ruler, whose motto of rule is the "welfare of the people" is sure to come into conflict with my sincerity to the cause of the Congress. Therefore, for reasons best known to me, I have to plead my inability to accept the membership and shall feel much obliged if you will kindly treat this as my resignation for the membership.

Yours sincerely,
(Sd) M. MAHOMED SAIT.

The Hon. Secretary,
National Congress Sub-Committee,
Lansdowne Buildings, Mysore.

ಭರತಖಂಡದ ವೃತ್ತಾಂತಗಳು.

ಪಂಜಾಬಿನಲ್ಲಿ ಗೋದುವೆಯ ಬೆಲೆಯು ಹೆಚ್ಚಿ ಹೋಗುತ್ತಿದೆ.

ಬಿದಿರಿನಿಂದ ಕಾಗದವನ್ನು ನಿರ್ಮಿಸಬೇಕೆನ್ನುವವರು ತಮಗೆ ತಿಳಿಯಿಸಿಕೊಳ್ಳಬಹುದೆಂದೂ ಸಾಧ್ಯವಾದ ಸಹಾಯವು ಮಾಡಲ್ಪಡುವುದೆಂದೂ ಬೊಂಬಾಯಿ ಸರ್ಕಾರದವರು ಪ್ರಕಟಿಸಿದ್ದಾರೆ.

ಮದ್ಯಪಾನವಿಂದ ನಿರೋಧಿತರಾದ ಅಮೇರಿಕಾದ ಫುಸ್ಸಿಫುಟ್ ಮತ್ತು ಜಾನ್ಸನ್ ಎಂಬುವವರು ಲಂಡನ್ನಿನಿಂದ ಬರುವ ಸೆಪ್ಟಂಬರ್ ತಾ|| ೨ರಲ್ಲಿ ಬೊಂಬಾಯಿ ಮಾರ್ಗವಾಗಿ ಪೂನಾಕ್ಕೆ ಬಂದು ೧೨ ಉಪನ್ಯಾಸಗಳನ್ನು ಮಾಡುವವರಾಗಿದ್ದಾರೆ.

ಬರುವ ಡಿಸೆಂಬರ್ ತಿಂಗಳಲ್ಲಿ ಅಹಮ್ಮದಾಬಾದಿನಲ್ಲಿ ಕೂಡಲಿಕ್ಕಿರುವ ದೇಶೀಯ ಮಹಾಸಭೆಗೆ ಪ್ರೇಕ್ಷಕರು ವಿಶೇಷವಾಗಿ ಬರುವಂತಿರುವುದರಿಂದ ಸ್ಥಲಸಂಕೋಚದಕಾರಣ ೩೦೦೦ ಮಂದಿ ಪ್ರತಿನಿಧಿಗಳು ಮಾತ್ರ ಬರಬೇಕೆಂದು ಏರ್ಪಡಿಸಿದ್ದಾರೆ.

ತಮಗೆ ಓಟನ್ನು ಕೊಡುವ ಅಧಿಕಾರವಾಗಬೇಕೆಂದು ಮದ್ರಾಸು ಬೊಂಬಾಯಿ ಶಾಸನಸಭೆಗಳಲ್ಲಿ ಸ್ತ್ರೀಯರು ಪ್ರಯತ್ನವನ್ನು ನಡೆಯಿಸಿರುವಂತೆಯೇ ಬಂಗಾಳಾದೇಶದ ಸ್ತ್ರೀಯರೂ ಅಲ್ಲಿಯಸಭೆಯಲ್ಲಿ ಇದೇ ತೆರದ ತೀರ್ಮಾನವೊಂದನ್ನು ಚರ್ಚೆಗೆ ಇಡಿಸುವ ಪ್ರಯತ್ನಮಾಡಿದ್ದಾರೆ.

ಕೋರ್ಟುಗಳಲ್ಲಿ ಮ್ಯಾಜಿಸ್ಟ್ರೇಟರೂ ನ್ಯಾಯಮೂರ್ತಿಗಳೂ ತಂತಮ್ಮ ಗೌನುಗಳನ್ನು ತೊಟ್ಟುಕೊಳ್ಳದೆ ವಿಚಾರಣೆಯನ್ನು ನಡೆಯಿಸುತ್ತಿರುವಲ್ಲಿ ಅಂಥವರುಗಳ ಕೋರ್ಟುಗಳಿಗೆ ಹೋಗಿ ವಾದಿಸುವ ಲಾಯರುಗಳೂ ಕೂಡ ತಂತಮ್ಮ ಗೌನುಗಳನ್ನು ತೊಟ್ಟುಕೊಂಡಿರಬೇಕಾದ ನಿರ್ಬಂಧವೇನೂ ಇಲ್ಲವೆಂದು ಕಲ್ಕತ್ತಾ ಹೈಕೋರ್ಟಿನವರು ತೀರ್ಮಾನಿಸಿರುವರು.

ಧಾರವಾಡದಲ್ಲಿ ಪ್ರಸಿದ್ಧ ವಕೀಲರಲ್ಲಿ ಒಬ್ಬರಾಗಿಯೂ, ದೇಶಕಾರ್ಯ ವಿದ್ಯಾಭಿವೃದ್ಧಿ ಭಾಷಾಭ್ಯುದಯ ಮೊದಲಾದ ಪ್ರಯತ್ನಗಳಲ್ಲಿ ಮುಂದಾಳುಗಳಾಗಿಯೂ ಅಲ್ಲಿಯ ಮ್ಯುನಿಸಿಪಾಲಿಟಿಯ ಗೌರವಾಧ್ಯಕ್ಷರಾಗಿಯೂ ಇದ್ದ ಮ|| ನಾರಾಯಣರಾವ್ ಕರಗುದರಿ ಬಿ. ಎ. ಎಲ್‌ಎಲ್. ಬಿ. ಯವರು ಕಳೆದ ತಾ|| ೧೭ ನೆ ಬುಧವಾರ ಪಾರ್ಶ್ವವಾಯುರೋಗದಿಂದ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

ಸೀಮೆಗೆ ಹೋಗಿರುವ ಅ|| ಶ್ರೀನಿವಾಸಶಾಸ್ತ್ರಿಯವರೂ ಕಚ್ ಮಹಾರಾಜರವರೂ ಬೆಲ್ಜಿಯಂ ದೇಶದ ಸಂಚಾರವನ್ನು ಮುಗಿಸಿಕೊಂಡು ಕಳೆದ ತಾ|| ೧೯ ರಲ್ಲಿ ಲಂಡನ್ನನ್ನು ಸೇರಿದರು. ಬೆಲ್ಜಿಯಂ ರಾಜದಂಪತಿಗಳ ದರ್ಶನವನ್ನು ಇವರು ಮಾಡಿ ಬಂದರು. ಶಾಸ್ತ್ರಿಯವರು ಇಷ್ಟರಲ್ಲೇ ಕಾನಡಾದಿಗೂ, ಫಿಜಿಗೂ, ಆಸ್ಟ್ರೇಲಿಯಾದಿಗೂ ಹೋಗಿದ್ದು ೧೯೨೨ ನೆ ಫೆಬ್ರವರಿ ತಿಂಗಳಲ್ಲಿ ಭರತಖಂಡಕ್ಕೆ ಬರುವರು.

ಪ್ರಿನ್ಸ್‌ಆಫ್‌ವೇಲ್ಸ್‌ರವರು ಭರತಖಂಡದ ಸಂಚಾರವನ್ನೆಲ್ಲಾ ಮುಗಿಸಿದ ಬಳಿಕ ೧೯೨೨ ನೆ ವರ್ಷದಲ್ಲಿ ಜಪಾನ್‌ದೇಶಕ್ಕೂ ತೆರಳಲು ತಮ್ಮ ಮಿತ್ರರಾದ ಜಪಾನ್ ಯುವರಾಜರವರ ಆಹ್ವಾನಕ್ಕೆ ಅಂಗೀಕಾರವನ್ನು ಕೊಟ್ಟಿರುತ್ತಾರೆ. ಈ ಏರ್ಪಾಟನ್ನು ನಮ್ಮ ಸಾರ್ವಭೌಮರೂ ಒಪ್ಪಿಕೊಂಡರು. ಪ್ರಿನ್ಸ್‌ಆಫ್‌ವೇಲ್ಸರು ೧೯೨೨ ನೆ ಮಾರ್ಚಿ ತಾ|| ೧೭ ರಲ್ಲಿ ಕರಾಚಿಯಲ್ಲಿ ಹಡಗನ್ನೇರಿ ಸಿಲೋನ್, ಸಿಂಗಪೂರ್, ಪಿನಾಂಗ್, ಹಾಂಕಾಂಗ್, ಮೊದಲಾದ ಪಟ್ಟಣಗಳನ್ನು ನೋಡಿಕೊಂಡು ಜಪಾನಿಗೆ ದಯಮಾಡಿಸುವರು.

ದಿಲ್ಲಿಪ್ರಾಂತದಲ್ಲಿರುವ ನಿಮ್ನಜಾತಿ ಜನರೆಲ್ಲಾ ಒಂದು ಸಭೆಗೂಡಿ ಆಂಗ್ಲಸಾಮ್ರಾಜ್ಯದಲ್ಲಿ ತಮಗಿರುವ ಭಕ್ತಿಯನ್ನೂ ಪ್ರದರ್ಶಿಸುವ ಒಂದು ತೀರ್ಮಾನವನ್ನು ಮಾಡಿದುದಲ್ಲದೆ, ಸಹಾಯನಿರಾಕರಣಾವಲಂಬಿಗಳ ಚರ್ಯೆಯು ತಮಗೆ ಸಮ್ಮತವಲ್ಲವೆಂದೂ, ಮತ್ತೊಂದು ತೀರ್ಮಾನಮಾಡಿದರು. ಮತ್ತು ತಮ್ಮ ಪ್ರತಿನಿಧಿಗಳಾಗಿ ಕೆಲವರು ಡೆಪ್ಯುಟಿಕಮಿಷನರುಗಳಿಗೆ ಪ್ರತ್ಯಕ್ಷವಾಗಿ ಹೋಗಿ ಮ|| ಗಾಂಧಿಯವರು ಕೋರತಕ್ಕ ಸ್ವರಾಜವು ಭರತಖಂಡಕ್ಕೆ ಕೊಡಲ್ಪಡಕೂಡದೆಂಬರ್ಥಕ್ಕೆ ಒಂದು ಅರ್ಜಿಯನ್ನು ಕೊಟ್ಟು ಅದನ್ನು ವೈಸ್ರಾಯರಿಗೆ ಮುಟ್ಟಿಸುವಂತೆ ಪ್ರಾರ್ಥಿಸಿಕೊಂಡರು

ಇಂಡ್ಯಾಸರ್ಕಾರದ ಅನುಮತಿಯನ್ನು ಪಡೆದು ಮದ್ರಾಸು ಸರ್ಕಾರದವರು ತಮ್ಮ ಪೋಲೀಸ್‌ಶಾಖೆಯ ಇನ್ಸ್‌ಪೆಕ್ಟರುಗಳ ಸಂಬಳವನ್ನು ಈ ಕೆಳಗೆ ಕಂಡಂತೆ ಏರ್ಪಡಿಸಿದ್ದಾರೆ. ಮದ್ರಾಸುಪಟ್ಟಣದಲ್ಲಿರುವ ಪೋಲೀಸ್ ಇನ್ಸ್‌ಪೆಕ್ಟರುಗಳಿಗೆ ೨೨೫—ರಂತೆ ೩೨೫ ರ ವರೆಗೆ. ಇತರ ಪಟ್ಟಣಗಳಲ್ಲಿ ೧೭೫ ರೂ. ನ ಸಂಬಳದ ೪೦ ಮಂದಿಗಳು, ೨೨೫ ರೂ. ನವರು ೫೦ ಮಂದಿಗಳು, ೨೭೫ ನವರು ೧೦ ಮಂದಿಗಳು ನಿಯಮಿಸಲ್ಪಡುವರು. ಸಬ್ ಇನ್ಸ್‌ಪೆಕ್ಟರುಗಳಿಗೆ ಸಿಟಿಗಳಲ್ಲಿ ೯೫...೧೨೫...೧೫೦ ಸಂಬಳವು. ಉಳಿದಕಡೆ ೭೫ ಮಂದಿಗೆ ೬೫--೩--೧೧೦ ರ ವರೆಗೆ. ೨೫ ಮಂದಿಗೆ ೧೧೫--೫--೧೨೫ ರ ವರೆಗೆ. ಇದರಮೇಲೆ ಉಡುಪು ಮೊದಲಾದುವುಗಳಿಗೆ ಪ್ರತ್ಯೇಕವಾದ ಅಲೋಯನ್ಸುಗಳೂ ಕೊಡಲ್ಪಡುವುವು.

ಪ್ರಿನ್ಸ್‌ಆಫ್‌ವೇಲ್ಸ್‌ರವರು ಬೊಂಬಾಯಿಗೆ ದಯಮಾಡಿಸಿದಾಗ್ಗ ಅವರನ್ನು ಉಚಿತ ಗೌರವದಿಂದ ಸ್ವಾಗತಿಸುವುದನ್ನು ಕುರಿತು ಆಲೋಚಿಸುವ ಬಗೆಗಾಗಿ ಬೊಂಬಾಯಿ ಗೌರ್ನರ ಅಧ್ಯಕ್ಷತೆಯಿಂದ ಒಂದು ಸಭೆ ಕೂಡಿದ್ದು ಒಂದು ಸನ್ಮಾನಸಂಘವೇರ್ಪಟ್ಟಿತು. ಅದಕ್ಕೆ ಸರ್ ಸಾಸೂನ್ ಡೇವಿಡ್‌ರವರು ಅಧ್ಯಕ್ಷರು. ಕಾಲವು ಸಮೀಪಿಸಿರುವುದರಿಂದ ಸತ್ಕಾರದೇರ್ಪಾಟಿಗೆ ಹಣವನ್ನು ಬೇಗನೆ ಕೂಡಿಸಬೇಕೆಂದೂ ಮಹಾವೈಭವದಿಂದ ಸತ್ಕಾರವನ್ನು ಮಾಡಬೇಕೆಂದೂ ತೀರ್ಮಾನವಾಯಿತು. ಸರ್ ಸಾಸೂನ್‌ರವರು ೪೦ ಸಾವಿರ ರೂ. ಡುಮಾಷಿಯಾರವರು ೨೫ ಸಾವಿರ ರೂ. ಆಸ್ಪಾರಾಂರವರು ೨೫ ಸಾವಿರ ರೂ, ಗಳನ್ನು ವಾಗ್ದಾನಮಾಡಿದರು. ಪುರಜನರಿಂದ ದ್ರವ್ಯವನ್ನು ಇನ್ನೂ ಹೇರಳವಾಗಿ ಕೂಡಿಸಬೇಕೆಂದು ನಿಶ್ಚಯಿಸಿದರು.

ತಂತಿಯಿಲ್ಲದ ಟೆಲಿಫೋನುಗಳ ದ್ವಾರಾ ಬೊಂಬಾಯಿಂದ ಪೂನಾಪಟ್ಟಣಕ್ಕೆ ವರ್ತಮಾನವನ್ನು ಕಳುಹಿಸುವ ಪ್ರಯತ್ನವನ್ನು ಬೊಂಬಾಯಿ ಜನರಲ್ ಪೋಸ್ಟಾಫೀಸಿನವರು ನಡೆಯಿಸಿದರು; ಅದು ಸಫಲವೂ ಆಯಿತು. ಆದರೆ ಇದರಲ್ಲಿ ತೋರಿಬರುವ ದೋಷವೇನೆಂದರೆ—ಆ ವಾರ್ತೆಯನ್ನು ರಹಸ್ಯವಾಗಿ ಕಳುಹಿಸಲಾಗುವುದಿಲ್ಲ ಮಾರ್ಗದಲ್ಲಿ ಯಾವಯಾವಕಡೆ ಆತರದ ಯಂತ್ರಗಳಿರುವುವೋ ಅಲ್ಲೆಲ್ಲಾ ಆ ವಾರ್ತೆಗಳು ಗೊತ್ತಾಗುವುವು. ಆದಿನ ಈ ಯಂತ್ರದಮೂಲಕ ಕಳುಹಿಸಿದ ವಾರ್ತೆಯನ್ನು ಸಮುದ್ರದಲ್ಲಿ ೧೪೦ ಮೈಲಿಗಳದೂರದ ಹಡಗಿನ ನಾವಿಕನೊಬ್ಬನು ತನ್ನಲ್ಲಿದ್ದ ಆ ಯಂತ್ರದಲ್ಲೂ ಕಂಡುಕೊಂಡನಂತೆ. ಈ ಯಂತ್ರದಲ್ಲಿ ಬೊಂಬಾಯಿ ಗೌರ್ನರವರೇ ಸ್ವತಃ ಪೂನಾದಲ್ಲಿ ಕುಳಿತು ಮಾತನಾಡಿದರು. ಬೊಂಬಾಯಿಪಟ್ಟಣದಲ್ಲಿ ನಾರ್ಮನ್‌ಹರಿಯವರು ಈ ಯಂತ್ರದಮೂಲಕ ಹಾಡಿದ ಪದಗಳೂ, ಪೋಸ್ಟ್‌ಮ್ಯಾಸ್ಟರ್ ಜನರಲ್ ಸಾಮ್ಸ್‌ರವರು ಹೇಳಿದ ಪದ್ಯಗಳೂ ಕೂಡ ಪೂನಾದಲ್ಲಿದ್ದ ಗೌರ್ನರಿಗೆ ಕೇಳಿಬಂದುವು. ಅದನ್ನು ಕೇಳಿ ಅವರು ಬಹಳ ಸಂತೋಷಪಟ್ಟರು. ಇಂಥ ಟೆಲಿಫೋನು ಈ ದೇಶದಲ್ಲೆಲ್ಲಾ ಉತ್ತರೋತ್ತರ ಹರಡಿಕೊಳ್ಳುವುದೆಂದು ಗೌರ್ನರು ಹೇಳಿದರು.

ವಿದೇಶ ವಸ್ತ್ರಗಳನ್ನು ಬಹಿಷ್ಕರಿಸಿ ಸ್ವದೇಶ ವಸ್ತ್ರಗಳನ್ನು ಅಭಿವೃದ್ಧಿಗೊಳಿಸಬೇಕೆಂದು ರಾಷ್ಟ್ರೀಯ ಮಹಾಸಭೆಯವರು ಪ್ರೋತ್ಸಾಹಿಸುತ್ತಾರಷ್ಟೆ. ಈ ಸಂಬಂಧವಾಗಿ ಮದ್ರಾಸ್ ಸರ್ಕಾರದವರು ಹೀಗೆ ಒಂದು ಪ್ರಕಟನೆಯನ್ನು ಮಾಡಿರುತ್ತಾರೆ. ವಿದೇಶ ವಸ್ತ್ರ ಬಹಿಷ್ಕಾರ ಪ್ರಯತ್ನವನ್ನು ಕುರಿತೂ ಅದರಲ್ಲೂ ಮುಖ್ಯವಾಗಿ ಬಟ್ಟೆಗಳ ಅಂಗಡಿಯವರು ವಿದೇಶದ ವಸ್ತ್ರಗಳನ್ನು ಕೊಂಡುಕೊಳ್ಳದಂತೆ ಮಾಡುವ ಪ್ರಯತ್ನಗಳನ್ನು ಕುರಿತೂ ಸರ್ಕಾರದವರು ಅವರ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಯಬೇಕೆಂದಿರುತ್ತಾರೆ. ಇಲ್ಲಿಯ ಜನಸಂಖ್ಯೆಗೆ ಸಾಕಷ್ಟು ಬಟ್ಟೆಗಳನ್ನು ಭರತಖಂಡವು ನಿರ್ಮಿಸುವುದಿಲ್ಲ. ಆದುದರಿಂದ ವಿದೇಶವಸ್ತ್ರ ಬಹಿಷ್ಕಾರಪ್ರಯತ್ನವು ಬಟ್ಟೆಗಳ ಬೆಲೆಯನ್ನು ಕೂಡಲೇ ಹೆಚ್ಚಿಸಿ ಜನಗಳಲ್ಲಿ ಗದ್ದಲವನ್ನೂ ಸೂರೆಯ ಹಾವಳಿಯನ್ನೂ ಉಂಟುಮಾಡಬಹುದು. ಅದನ್ನು ನೋಡಿಕೊಂಡು ಸರ್ಕಾರದವರು ಸುಮ್ಮನಿರಲಾರರು. ವಿದೇಶವಸ್ತ್ರ ವ್ಯಾಪಾರವನ್ನು ಬಲವಂತದಿಂದ ಅಡಗಿಸುವುದಕ್ಕೆ ಅಕ್ರಮಪ್ರಯತ್ನಗಳು ನಡೆದರೆ ಅದನ್ನು ಅಡಗಿಸುವುದಕ್ಕೆ ಸರ್ಕಾರದವರು ಸಹಾಯಮಾಡುವರೆಂಬುದನ್ನೂ ಈ ಮೂಲಕ ವಾಗ್ದಾನಮಾಡಿ ತಿಳಿಯಿಸುತ್ತಾರೆ. ವಿದೇಶವಸ್ತ್ರ ವ್ಯಾಪಾರವು ಕೊನೆಸಾಗದಂತೆ ನ್ಯಾಯವಿರುದ್ಧವಾಗಿ ಮಾಡುವ ಕಾರ್ಯಗಳನ್ನು ತಡೆಯುವುದಕ್ಕೆ ಶಾಸನಗಳನ್ನು ಪ್ರಯೋಗಿಸಬೇಕೆಂತಲೂ, ವಿದೇಶವಸ್ತ್ರ ವ್ಯಾಪಾರಮಾಡುವ ವರ್ತಕರಿಗೂ ಅವರಲ್ಲಿ ಆ ಬಟ್ಟೆಗಳನ್ನು ಕೊಳ್ಳುವವರಿಗೂ ಯಾವ ಆತಂಕವೂ ಉಂಟಾಗದಂತೆ ಕಾಪಾಡಬೇಕೆಂತಲೂ ಎಲ್ಲಾ ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೂ ಮದ್ರಾಸು ಪೋಲೀಸ್ ಕಮಿಷನರಿಗೂ ಸೂಚನೆ ಕೊಡಲ್ಪಟ್ಟಿದೆ.

ವಿದೇಶ ವೃತ್ತಾಂತಗಳು.

ಸಾಮ್ರಾಜ್ಯ ಶಾಸನ ಸಭೆಗಾಗಿ ಈ ದೇಶದಿಂದ ಹೋಗಿರುವ ಅ|| ವಿ. ಎಸ್. ಶ್ರೀನಿವಾಸಶಾಸ್ತ್ರಿಯವರು ಪ್ರಿವಿ ಕೌನ್ಸಿಲರಾಗಿ ನಿಯಮಿಸಲ್ಪಟ್ಟರೆಂದು ವಾರ್ತೆ ಬಂದಿದೆ.

ರಷ್ಯಾ ದೇಶಕ್ಕೂ ಆಂಗ್ಲ ದೇಶಕ್ಕೂ ವ್ಯಾಪಾರ ವಿಷಯಕವಾದ ಸಂಧಿಯು ನೆರವೇರಿದುದರಿಂದ ೨ ದೇಶಗಳ ವ್ಯಾಪಾರವೂ ವೃದ್ಧಿಗೊಂಡಿದೆ. ಈಗ ಇಂಗ್ಲಂಡಿನಲ್ಲಿ ೧೦೦ ಕ್ಕೆ ೪೦ ರಷ್ಟು ರಷ್ಯ ಸರಕುಗಳ ಆಯತಿಯು ಹೆಚ್ಚಾಗಿದೆ. ಇದುವರೆಗೆ ೪೦ ಹಡಗುಗಳ ಸರಕನ್ನು ಇಂಗ್ಲೀಷರು ರಷ್ಯಾರಿಗೆ ಕಳುಹಿಸಿಕೊಟ್ಟರು.

ಮೆಸಪೊಟೋಮಿಯಾವಿಗೆ ಅಮೀರ್ ಫುಸಲ್ ಪ್ರಭುವಾಗಿರಬೇಕೆಂದು ಅಲ್ಲಿಯ ಪ್ರಜೆಗಳಲ್ಲಿ ೧೦೦ ಕ್ಕೆ ೯೬ ರಂತೆ ಒಪ್ಪಿಗೆ ಕೊಟ್ಟುದರಿಂದ ಇದೇ ತಿಂಗಳು ತಾ|| ೨೩ ರಲ್ಲಿ ಅವರ ಪಟ್ಟಾಭಿಷೇಕ ಮಹೋತ್ಸವವು ಬಹಳ ವೈಭವದಿಂದ ಜರುಗಲೇರ್ಪಾಟಾಗಿ ನಡೆದಿತು. ಎಲ್ಲ ಪಕ್ಷದವರೂ ಈ ನೂತನ ಪ್ರಭುವಿನಲ್ಲಿ ಭಕ್ತಿವಿಶ್ವಾಸಗಳನ್ನಿಟ್ಟು ನಂಬಿಸಿದರು.

ಪ್ಯಾರಿಸ್ ಪಟ್ಟಣದಲ್ಲಿ ಸುಪ್ರೀಂ ಕೌನ್ಸಿಲು ಕೂಡಿ, ಅದರೊಳಗೆ ಸೈಲೇಶಿಯಾ ಸಮಸ್ಯೆಯು ಇತ್ಯರ್ಥವಾಗುವುದೆಂದು ಹಿಂದೆ ತಿಳಿಯಿಸಿದ್ದೆವಷ್ಟೆ. ಅತ್ಯಂತ ಪ್ರಮುಖವಾಗಿದ್ದ ಈ ಸಭೆಯೇನೋ ಕೂಡಿ ಮುಗಿದಿತು. ಸೈಲೇಸಿಯಾದ ಉತ್ತರಭಾಗವು ಯಾರಿಗೆ ಸೇರಬೇಕೆಂಬುದೇ ಚರ್ಚಾವಿಷಯವಾಗಿದ್ದಿತು. ಆ ಭಾಗದಲ್ಲಿ ಜರ್ಮನ್ ಪ್ರಜೆಗಳ ಸಂಖ್ಯೆಯೇ ಹೆಚ್ಚಾಗಿದೆ. ಪ್ರಜಾಸಂಖ್ಯಾಧಿಕ್ಯವನ್ನು ಗಮನಿಸಿದರೆ ಅದು ತಮಗೇ ಸೇರಬೇಕೆಂದು ಜರ್ಮನರು ವಾದಿಸುತ್ತಿದ್ದಾರೆ. ಪೋಲಂಡಿನವರು ಅದು ತಮಗೆ ಸೇರಬೇಕೆಂದು ವಾದಿಸುತ್ತಿದ್ದಾರೆ. ಫ್ರಾನ್ಸ್ ದೇಶವು ಪೋಲಂಡಿನವರ ಪಕ್ಷವಾಗಿದೆ. ಜರ್ಮನರ ಬಲವನ್ನು ಇನ್ನೂ ಕುಗ್ಗಿಸಿಬಿಡಬೇಕೆಂಬುದೇ ಫ್ರೆಂಚರ ಉದ್ದೇಶವಾಗಿರುವಂತೆ ತೋರುತ್ತದೆ. ಆಂಗ್ಲರ ಅಭಿಪ್ರಾಯವು ಈ ವಿಷಯದಲ್ಲಿ ಫ್ರೆಂಚರ ಅಭಿಪ್ರಾಯದೊಡನೆ ಏಕೀಭವಿಸಿಲ್ಲ. ಇದರಿಂದ ಫ್ರೆಂಚ್‌ದೇಶ ಪ್ರಜೆಗಳಿಗೆ ಆಂಗ್ಲರ ಮೇಲೆ ಕೋಪವು ಹೆಚ್ಚುತ್ತಿರುವಂತೆ ಕಾಣುತ್ತದೆ. ಸುಪ್ರೀಂ ಕೌನ್ಸಿಲಿನಲ್ಲಿ ಆಂಗ್ಲ ಮಂತ್ರಿ ಲಾಯಿಡ್ ಜಾರ್ಜರವರು ತಮ್ಮ ಸದಭಿಪ್ರಾಯವನ್ನು ಖಂಡಿತವಾಗಿ ತಿಳಿಯಿಸಿ ಉಪನ್ಯಾಸಮಾಡಿದರು. "ಜರ್ಮನ್ ಪ್ರಜಾಧಿಕ್ಯವನ್ನು ತಗ್ಗಿಸುವ ಪ್ರಯತ್ನಗಳಿಗೆ ಆಂಗ್ಲಸಾಮ್ರಾಜ್ಯವು ಎಂದಿಗೂ ಒಪ್ಪುವುದಿಲ್ಲ; ಫ್ರಾನ್ಸ್ ದೇಶದ ಮೇಲೆ ಜರ್ಮನರು ಅನ್ಯಾಯವಾಗಿ ದಂಡೆತ್ತಿ ಬಂದಾಗ್ಗೆ ಆಂಗ್ಲ ದೇಶವು ಫ್ರೆಂಚರಿಗೆ ಸಹಾಯಮಾಡುವುದೇ ಹೊರತು, ತನ್ನ ಬಲಾಧಿಕ್ಯವನ್ನು ನೋಡಿಕೊಂಡು ಅದನ್ನು ಫ್ರಾನ್ಸ್ ದೇಶವು ದುರ್ವಿನಿಯೋಗಪಡಿಸಲು ಪ್ರಯತ್ನಿಸಿದಾಗ್ಗೆ ಆಂಗ್ಲದೇಶವು ಫ್ರಾನ್ಸಿಗೆ ಸಹಾಯಮಾಡಲಾರದು" ಎಂದು ಸುಸ್ಪಷ್ಟವಾಗಿ ಹೇಳಿಬಿಟ್ಟರು, ಎಂದರೆ ಸೈಲೇಸಿಯಾ ಊರ್ಧ್ವಭಾಗದಲ್ಲಿ ಜರ್ಮನರು ಹೆಚ್ಚಾಗಿರುವುದರಿಂದ ಅದು ಜರ್ಮನರಿಗೆ ಸೇರಬೇಕೇ ಹೊರತು ಅಲ್ಲಿರುವ ಜರ್ಮನ್ ಆಧಿಕ್ಯವನ್ನು ತಪ್ಪಿಸುವುದು ಧರ್ಮವಲ್ಲವೆಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಅಷ್ಟೇ ಅಲ್ಲದೆ ಈ ಸಮಸ್ಯೆಯನ್ನು ನಾವೇ ಚರ್ಚಿಸಿ ತೀರ್ಮಾನಿಸುವುದಕ್ಕಿಂತ ನಾನಾದೇಶೀಯ ಸಂಘಸಭೆಯವರ ಪರ್ಯಾಲೋಚನೆಗೆ ವಹಿಸುವುದು ಯುಕ್ತವೆಂತಲೂ ಅಭಿಪ್ರಾಯಕೊಟ್ಟುದರ ಮೇಲೆ ಫ್ರಾನ್ಸ್ ಇಟಲಿ ಮೊದಲಾದ ಮಿತ್ರಮಂಡಲೀ ಮಂತ್ರಿಗಳೆಲ್ಲರೂ ಅದಕ್ಕೆ ಒಪ್ಪಿಕೊಂಡರು.

ತುರ್ಕಿ ಗ್ರೀಕ್ ಯುದ್ಧವು ಭೀಕರವಾಗಿ ನಡೆಯುತ್ತಲೇ ಇದೆ. ಗ್ರೀಕರ ಕೈ ಮೇಲಾಗಿದೆ. ಕೇಮಲ್‌ಪಾಷಾ ಸೈನ್ಯವು ಬಹಳ ಹಿಂದಾಗಿಹೋಗಿದೆ. ೬೦ ಮೈಲಿಗಳ ದೂರ ಅವರನ್ನು ಗ್ರೀಕರು ಹಿಂದಟ್ಟಿಕೊಂಡು ಹೋಗಿ ದೇಶವನ್ನು ಹಿಡಿದು ಅಲ್ಲೆಲ್ಲಾ ಗ್ರೀಕ್ ಪ್ರಭುತ್ವವನ್ನು ಸ್ಥಾಪಿಸಿದ್ದಾರೆ. ಗ್ರೀಕ್ ಸೈನ್ಯವು ಅತಿ ವೇಗವಾಗಿ ನುಗ್ಗುತ್ತಿರುವುದನ್ನು ಕಂಡು ಕೇಮಲಿಸ್ಟರು ಬೆರಗಾಗಿದ್ದಾರೆ. ತುರುಕರು ತಮ್ಮ ೬೦ ಸಾವಿರ ಸೈನ್ಯವನ್ನು ಸೈಕೇಲಿಯಾದ ಪೂರ್ವಭಾಗದಲ್ಲಿ ಕೂಡಿಸುತ್ತಿದ್ದಾರೆ. ಯಾವ ಕಡೆಯಲ್ಲಿ ಅವರಿವರಿಗೆ ಮತ್ತೊಂದು ಮಹಾಯುದ್ಧವು ನಡೆಯುವುದೋ ಗೊತ್ತಿಲ್ಲ. ಆಂಗ್ಲ ಮುಖ್ಯಮಂತ್ರಿಯವರು ಕಾಮನ್ಸ್ ಸಭೆಯಲ್ಲಿ ಆಸಾಮೈನರ್ ವಿಷಯದಲ್ಲಿ ಮಾತನಾಡುವಾಗ್ಗೆ ಹೀಗೆ ಹೇಳಿದರು. ಗ್ರೀಕರೂ ತುರುಕರೂ ಕೂಡ ಈಗ ಮಧ್ಯಸ್ಥಗಾರರು ಹೇಳಿದಂತೆ ನಡೆದುಕೊಳ್ಳಲು ಒಪ್ಪುವುದಿಲ್ಲ. ಈ ಸಂಬಂಧವಾಗಿ ಮಿತ್ರಮಂಡಲಿಯವರ ಕರ್ತವ್ಯ ಮಾರ್ಗಗಳು ಎರಡೇ ಇರುವುವು. ಮೊದಲನೆಯದು-ಮಿತ್ರಮಂಡಲಿಯವರು ಹೇಳಿದಂತೆ ಒಪ್ಪಿಕೊಳ್ಳಲು ಎರಡು ದೇಶಗಳವರೂ ಬದ್ಧರಾಗುವಂತೆ ಮಾಡುವುದು. ೨ ನೆಯದು. ಕಡೆಯವರೆಗೂ ಯುದ್ಧಮಾಡಿ ನಿಲ್ಲುವವರೆಗೆ ಬಿಟ್ಟುಬಿಡುವುದು. ಇವೆರಡರಲ್ಲಿ ಮೊದಲನೆ ಮಾರ್ಗವು ಅಸಂಭವವಾಗಿದೆ. ಆದರೆ ಆ ಮಾರ್ಗವೇ ಸುಸಾಧ್ಯವೂ ಒಳ್ಳೆಯದೂ ಆಗಿರುವುದು. ತುರುಕರು ತಮ್ಮ ಬಲವು ಬಹಳ ದೊಡ್ಡದೆಂದು ನಂಬಿಕೊಂಡಿದ್ದಾರೆ. ಮತ್ತು ಅವರಿಗೆ ಗ್ರೀಕರ ಮೇಲೆ ಅಸಾಹ್ಯಭಾವವೂ ಇದೆ. ಗ್ರೀಕರಾದರೆ ತಮ್ಮ ಶಕ್ತಿಗೂ ನಿಪುಣತೆಗೂ ಧೈರ್ಯಕ್ಕೂ ಮಿತಿಯುಂಟೆಂದು ತಿಳಿದುಕೊಂಡಿರುವರು. ಅವರೀರ್ವರಿಗೂ ಅವರವರ ಶಕ್ತಿಯ ಪರಿಮಾಣವು ಅನುಭವಪೂರ್ವಕವಾಗಿ ತಿಳಿದುಬಂದ ಮೇಲೆ ತಲೆತಾಗಿ ಆಗ ಮಧ್ಯವರ್ತಿಗಳು ಹೇಳಿದಂತೆ ಕೇಳುವರು. ಆಗ ನಮ್ಮಗಳ ಮಾತು ಅವರಿಗೆ ವೇದ್ಯವಾಗುವುದು. ಅವರುಗಳ ಕಲಹದ ಮಧ್ಯದಲ್ಲಿ ಇತರರು ಪ್ರವರ್ತಿಸಿ ತೀರ್ಮಾನಿಸಬೇಕಾಗಿ ಬಂದಾಗ ಸೆವರ್ಸ್ ಸಂಧಿನಿಬಂಧನೆಗಳಲ್ಲಿ ಏನಾದರು ಮಾರ್ಪನ್ನು ಮಾಡಬಹುದು. ೧೯೧೩ ನೆ ವರ್ಷದಲ್ಲಿ ಬಾಲ್ಕನ್ ಯುದ್ಧಾನಂತರ ಬಲ್ಗೇರಿಯನ್ನರು ಮಾಡಿದಂತೆ ಈಗ ಗ್ರೀಕರೂ ಕೂಡ ಮಾಡಿದರೆ ಅವರಂತೆಯೇ ಇವರೂ ಕೂಡ ಕೆಟ್ಟುಹೋಗುವರು. ಎಂದು ಹೇಳಿರುವರು.

ಆಂಗ್ಲ ಪ್ರಭುತ್ವದವರು ಐರ್ಲಂಡ್ ಸಿನ್‌ಫೀನಿಯನ್ ನಾಯಕರೊಡನೆ ಸಂಧಿ ವಿಷಯಕವಾಗಿ ಮಾತುಕತೆಗಳನ್ನು ನಡೆಯಿಸಿದ ಬಳಿಕ ಅಧಿನಿವೇಶ ಪ್ರಭುತ್ವ ಸ್ವಾತಂತ್ರ್ಯವನ್ನು ಐರ್ಲಂಡಿಗೆ ಕೊಡಲು ಒಪ್ಪಿ ಕೆಲವಿಷಯದಲ್ಲಿ ಮಾತ್ರ ಮಾರ್ಪುಗಳನ್ನು ಹೇಳಿರುವರು. ಸಂಧಿ ನಿಬಂಧನೆಗಳಲ್ಲಿ ಮುಖ್ಯ

ವಾದುವುಗಳಾವುವೆಂದರೆ—ಸಂಪೂರ್ಣವಾದ ಡೆಮಿನಿಯನ್ ಪ್ರಭುತ್ವವು ಕೊಡಲ್ಪಡುವುದು. ಎಂದರೆ ದ್ರವ್ಯ ವಿಷಯಕ ಸ್ವಾತಂತ್ರ್ಯ, ನ್ಯಾಯಸ್ಥಾನ ಪರಿಪಾಲನೆ, ಸೈನ್ಯ, ಪೊಲೀಸು, ವ್ಯವಸಾಯ, ಗನೆಗಳು, ಅಡವಿಗಳು, ಅಂಚೆ, ವ್ಯಾಪಾರ, ಮೊದಲಾದ ಎಲ್ಲ ವಿಷಯಗಳ ಪರಿಪಾಲನೆಯಲ್ಲೂ ಸ್ವಾತಂತ್ರ್ಯವು ಕೊಡಲ್ಪಡುವುದು. ಆದರೆ ಉಭಯ ದೇಶಗಳ ಕ್ಷೇಮಕ್ಕೋಸ್ಕರವು ಈ ಕೆಳಗಣ ನಿಬಂಧನೆಗಳಿರಬೇಕು. ಆಂಗ್ಲ ದೇಶದ ಹಡಗುಗಳು ಐರ್ಲೆಂಡ್ ತೀರಗಳನ್ನು ರಕ್ಷಿಸುತ್ತಿರಬೇಕು. ಅವುಗಳಿಗೆ ಐರ್ಲೆಂಡ್ ರೇವುಗಳಲ್ಲಿ ಸ್ಥಲವಿರಬೇಕು. ಐರಿಷ್ ಸೇನಾ ಸಂಖ್ಯೆಯು ಸಂಯುಕ್ತ ರಾಷ್ಟ್ರಗಳಲ್ಲಿರುವ ಇತರ ಸೈನ್ಯಗಳ ಸಂಖ್ಯೆಗಿಂತ ಹೆಚ್ಚಾಗಿರಕೂಡದು. ರಾಷ್ಟ್ರರಕ್ಷಣೆ ಮೊದಲಾದ ವಿಷಯದಲ್ಲಿ ಸಾಮ್ರಾಜ್ಯಕ್ಕೆ ತಕ್ಕ ಸಹಾಯವನ್ನು ಮಾಡುತ್ತಿರಬೇಕು. ಐರ್ಲೆಂಡಿನ ಯೋಗ್ಯತೆಗೆ ತಕ್ಕಂತೆ ಆಂಗ್ಲ ಸಾಮ್ರಾಜ್ಯ ಸೈನ್ಯಕ್ಕೆ ಯೋಧರನ್ನೂ ಧನಸಹಾಯವನ್ನೂ ಒದಗಿಸಬೇಕು. ವ್ಯಾಪಾರರಕ್ಷಣೆಗಾಗಿ ತಕ್ಕಷ್ಟು ತೆರುಗೆಗಳನ್ನು ಐರ್ಲೆಂಡ್ ಇಂಗ್ಲೆಂಡ್ ಪ್ರಭುತ್ವದವರೀರ್ವರೂ ಸೇರಿ ವಿಧಿಸಬೇಕು. ಈಗ ಆಂಗ್ಲ ಸಾಮ್ರಾಜ್ಯಕ್ಕೆ ಉಂಟಾಗಿರುವ ಋಣದಲ್ಲಿ ಸ್ವಲ್ಪ ಭಾಗವನ್ನೂ ಪಿಂಚನುಗಳಲ್ಲಿ ಸ್ವಲ್ಪ ಭಾಗದ ಭಾರವನ್ನು ಸಹ ಐರ್ಲೆಂಡು ವಹಿಸಿಕೊಳ್ಳಬೇಕು. ಈ ನಿಬಂಧನೆಗಳುಳ್ಳ ಸಂಧಿ ಪತ್ರವನ್ನು ಉಭಯರಾಷ್ಟ್ರಗಳ ಪಾರ್ಲಿಮೆಂಟಿನವರೂ ಒಪ್ಪಬೇಕು. ಈ ನಿಬಂಧನೆಗಳನ್ನು ಸಿನ್‌ಫೀನಿಯರ್ ನಾಯಕರು ಒಪ್ಪಿರುವುದಿಲ್ಲ, ಐರ್ಲೆಂಡು ಆಂಗ್ಲ ಸಾಮ್ರಾಜ್ಯ ಸಂಬಂಧವನ್ನು ಸಂಪೂರ್ಣವಾಗಿ ಕಳೆದುಕೊಂಡು ಹೋಗಬೇಕೆಂಬುದು ಅವರಪೇಕ್ಷೆಯಾಗಿರುತ್ತದೆ. ಅದಕ್ಕೆ ಆಂಗ್ಲ ಪ್ರಭುತ್ವದವರು ಎಂದಿಗೂ ಒಪ್ಪುವಹಾಗಿಲ್ಲ. ಎರಡು ದೇಶಗಳೂ ಪರಸ್ಪರ ಮೈತ್ರಿಯುಳ್ಳವುಗಳಾಗಿರಬೇಕೆಂಬುದು ಅವರ ಉದ್ದೇಶವಾಗಿರುತ್ತದೆ. ಅದು ಕಾರಣ ಈ ಸಲವು ಸಂಧಿ ಕುದುರುವುದೋ ಅಥವಾ ಮತ್ತೆ ಪ್ರಳಯಕರ್ಮಕ್ಕೆ ಆರಂಭವಾಗುವುದೋ ತಿಳಿಯಲಿಲ್ಲ.

ರಷ್ಯಾ ದೇಶದ ಕ್ಷಾಮನಿವಾರಣೆಯನ್ನು ಕುರಿತು ಆಲೋಚಿಸಲಿಕ್ಕೆ ಸುಪ್ರೀಂ ಕೌನ್ಸಿಲಿನವರು ಒಂದು ಉಪಸಂಘವನ್ನೇರ್ಪಡಿಸಿದರು. ಅಲ್ಲಿಯ ಸೋವಿಯಟ್ ಪ್ರಭುತ್ವದ ವಿಷಯದಲ್ಲಿ ತಮಗೆ ಸಾನುಭೂತಿಯಿಲ್ಲದಿದ್ದರೂ ಅದರ ಭೀಕರಕ್ಷಾಮದ ಪೀಡೆಯನ್ನು ತಪ್ಪಿಸುವಲ್ಲಿ ಸಹಕರಿಸುವುದು ಅವಶ್ಯಕವೆಂದು ಲಾಯಿಡ್ ಜಾರ್ಜ್‌ರವರು ಉಪನ್ಯಾಸಮಾಡಿದರು. ಭರತಖಂಡವು ಕೂಡ ಸಹಾಯಮಾಡುವುದು ಅವಶ್ಯಕವೆಂದು ಲಾರ್ಡ ಕರ್ಜನ್‌ರವರು ಹೇಳಿದರು. ರಷ್ಯಾ ಸೋವಿಯಟ್ ಪ್ರಭುತ್ವದ ನಾಯಕರಾದ ಲೆನಿನ್‌ರವರು ಒಂದು ಪ್ರಕಟನವನ್ನು ಮಾಡಿ ೧೮೯೧ನೆ ವರ್ಷದಲ್ಲಿ ಸಂಭವಿಸಿದ್ದ ಮಹಾ ಕ್ಷಾಮಕ್ಕಿಂತಲೂ ಈಗಣ ಕ್ಷಾಮವು ಘೋರವಾಗಿರುವುದೆಂತಲೂ, ದೇಶದ ಪ್ರಜೆಗಳೆಲ್ಲಾ ೭ ವರ್ಷಗಳ ಕಾಲ ಯುದ್ಧದಲ್ಲಿ ತೊಡಗಿದುದರಿಂದ ಇಂಥ ವಿಪತ್ತು ಬಂದಿತೆಂತಲೂ ಪ್ರಕಟಿಸಿದ್ದಾರೆ. ಅಮೇರಿಕಾದವರ ಸಹಾಯದಿಂದ ರಷ್ಯಾದಲ್ಲಿ ಕ್ಷಾಮನಿವಾರಣಾ ಸಂಘವು ಸ್ಥಾಪಿಸಲ್ಪಟ್ಟಿದೆ. ರಷ್ಯಾ ಎಲ್ಲೆಯನ್ನು ಮೀರಿ ಹೊರಕ್ಕೆ ಹೋದ ಪ್ರಜೆಗಳನ್ನು ಗುಂಡಿನಿಂದ ಸುಡಿಸುವೆವೆಂದು ಅಲ್ಲಿಯ ಪ್ರಭುತ್ವದವರು ಪ್ರಕಟಿಸಿದ್ದಾರೆ. ಈಗಣ ದುಸ್ಥಿತಿಯಿಂದ ರಷ್ಯಾದಲ್ಲಿ ಲೆನಿನ್ ಟ್ರಾಟ್ಸ್ಕಿಯವರ ಪ್ರಭುತ್ವವು ಕೊನೆಗಂಡು ಹೋಗುವುದೆಂದು ಹೇಳುತ್ತಿದ್ದಾರೆ. ಸೇನೆಯನ್ನು ಬಿಟ್ಟುಹೋದ ಜನರು ಜೂ ಜನರ ಮನೆಗಳಿಗೆ ನುಗ್ಗಿ ಅವರ ಆಸ್ತಿಗಳನ್ನು ಸೂರೆಮಾಡುತ್ತಿದ್ದಾರೆ. ಕ್ಷಾಮ ಪೀಡೆಯಿಂದ ರಾಷ್ಟ್ರದ ಒಂದು ಭಾಗವನ್ನು ಬಿಟ್ಟು ಮತ್ತೊಂದು ಭಾಗಕ್ಕೆ ಓಡಿಹೋಗುವ ಪ್ರಜೆಗಳನ್ನು ಸುಟ್ಟುಬಿಡುತ್ತೇವೆಂದು ಅಲ್ಲಿಯ ಪ್ರಭುತ್ವದವರು ಪ್ರಕಟಿಸಿದ್ದಾರೆ. ಆ ದೇಶದೊಳಗೆ ೬ ಕೋಟಿ ಎಕರೆ ಭೂಮಿಯಲ್ಲಿ ಬೆಳಸಾಗಲಿಲ್ಲವೆಂತಲೂ ಈಗ ಕ್ಷಾಮನಿವಾರಣಾರ್ಥವಾಗಿ ೬ ಕೋಟಿ ಪೌನ್ ಧಾನ್ಯಗಳು ಬೇಕಾಗಿದೆಯೆಂತಲೂ ಮುಂದಣ ಬಿತ್ತನೆಕ್ಕಾಗಿ ೫|| ಲಕ್ಷ ಪೌನು ಧಾನ್ಯವು ಬೇಕೆಂತಲೂ ಗೊತ್ತಾಗುತ್ತದೆ. ಅಲ್ಲಿಯ ಪ್ರಭುತ್ವದವರು ಪ್ರಜೆಗಳಿಗೆ ತಕ್ಕ ಸಹಾಯವನ್ನು ಮಾಡಲಾರದವರಾಗಿದ್ದಾರೆ. ೨ ಕೋಟಿ ಜನರು ಕ್ಷಾಮಪೀಡಿತರಾಗಿದ್ದಾರೆ. ಅಲ್ಲಿ ೧ ಪೌನು ಬೆಣ್ಣೆಗೆ ೧೫೦ ರೂಬಲ್ಸು ೧ ಪೌನು ರೊಟ್ಟಿಗೆ ೩೦೦ ರೂಬಲ್ಸು, ೧ ಪೌನು ಉರುಳಗಡ್ಡೆಗೆ ೨೦೦ ರೂಬಲ್ಸು, ಬೆಲೆಯಾಗಿದೆಯಂತೆ. ಒಂದು ರೂಬಲ್ ಎಂದರೆ ನಮ್ಮ ದೇಶದ ೫೧ ಆಣೆಗೆ ಸಮಾನವೆಂದು ಹೇಳಬಹುದು.

ಮಂಜರಾಬಾದು ತಾಲ್ಲೂಕು ವೀರಶೈವ ವಿದ್ಯಾವರ್ಧಕಸಂಘ

ಸನ್ ೧೯೨೧ ನೇ ಸೆಪ್ಟಂಬರ್ ಮಾಹೆ ೪ನೇ ತಾರೀಖು ಭಾನುವಾರ ಮೇಲ್ಕಂಡ ಸಂಘದ ಕಮಿಟಿಯವರಿಂದ ಸಕಲೇಶಪುರದಲ್ಲಿ ಒಂದು ವೀರಶೈವ ವಿದ್ಯಾರ್ಥಿನಿಲಯವು (ಸ್ಟೂಡೆಂಟ್ಸ್ ಹೋಂ) ಪ್ರಾರಂಭಿಸಲ್ಪಡುವುದು. ಭೋಜನದ ಖರ್ಚನ್ನು ವಹಿಸುವ ವಿದ್ಯಾರ್ಥಿಗಳಿಗೆ ಮಾತ್ರ ಸದ್ಯಕ್ಕೆ ಪ್ರವೇಶವು ದೊರೆಯುತ್ತದೆ. ವಿದ್ಯಾರ್ಥಿಗಳ ನಡತೆ, ಶರೀರಾರೋಗ್ಯ, ವಿದ್ಯಾಭ್ಯಾಸ, ಇವುಗಳ ಮೇಲ್ವಿಚಾರಣೆಗೆ ಅವಶ್ಯಕವಾದ ಏರ್ಪಾಟು ಮಾಡಲ್ಪಡುತ್ತವೆ. ಈ ಸ್ಟೂಡೆಂಟ್ಸ್ ಹೋಮಿಗೆ ವಿದ್ಯಾರ್ಥಿಗಳನ್ನು ಕಳುಹಿಸಲಪೇಕ್ಷಿಸುವ ವೀರಶೈವರು ಸಂಘದ ಸೆಕ್ರೆಟರಿಯವರಿಗೆ ದರಖಾಸ್ತು ಕೂಡಲೆ ಮಾಡಿಕೊಳ್ಳಬಹುದು. ಹೆಚ್ಚು ವಿಷಯಗಳನ್ನು ತಿಳಿಯಬೇಕಾದರೆ ಸಂಘದ ಸೆಕ್ರೆಟರಿಯವರಿಗೆ ಬರೆದ ಪಕ್ಷದಲ್ಲಿ ಜವಾಬ್ ದೊರೆಯುತ್ತೆ.

ಬಿ. ದೇವಪ್ಪಗೌಡ, ಸೆಕ್ರೆಟರಿ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಶರಣಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦

ರೈಲ್ವೆ ಲೀವರ್ ವಾಚ್.

15 ಬಹುಮಾನಗಳ ಸಹಿತ ಕ್ರಯ ರೂ. 5—0—0.

ಈ ತಿಂಗಳೊಳಗಾಗಿ ಈ ಗಡಿಯಾರವನ್ನು ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ಬಹುಮಾನಗಳನ್ನು ಕೊಡುವೆವು. ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಿಸಿದ್ದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೂಮೂ ನಿಕ್ಕಲ್‌ಬೆಳ್ಳಿಯ ಮುಚ್ಚಳವೂ ಇದೆ. ಕಾಲವನ್ನು ವ್ಯತ್ಯಾಸವಿಲ್ಲದೆ ತೋರಿಸುವದು. ಈ ಗಡಿಯಾರವು ಲೋಕ ಪ್ರಸಿದ್ಧಿಯಾಗುವ ಹಾಗೆ 15 ಬಹುಮಾನಗಳನ್ನೂ ಕೊಡುವೆವು. ತುರಾಯಿ 1, ಭಂಗಾರದ ಗಿಲೀಟಿನ ಜಡೆಬಿಲ್ಲೆ 1, ಸೆಂಟ್‌ಬಾಟಲ್ 1, ಬಾಚಣಿಗೆ 1, ರಾಗಮಾಲಿಕೆ 1, ಉತ್ತರಮುಖಿ 1, ಹೇರಾಯಿಲ್ 1, ಷರಟು ಗುಂಡಿಗಳು 1, ಕೈವಸ್ತ್ರ 1, ವಜ್ರದ ಉಂಗುರ 1, ಸರಪಣಿ 1, ಕನ್ನಡಿ 1 ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ ರೂ. 5—0—0.

ವಿಳಾಸ—ಎಲ್ಜಿನ್ ವಾಚ್ ಕಂಪೆನಿ,
102 ಜೈನಬಜಾರ್ ರೋಡು ಮದರಾಸು.

ವಜ್ರದ ಗುಂಡಿಗಳು.



ಈ ಗುಂಡಿಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ಕಟ್ಟಡ ಕಟ್ಟಿದೆ. ನೋಡುವವರಿಗೆ ಸಾಚಾ ವಜ್ರದ ಗುಂಡಿಗಳೆಂದೆ ಹೇಳುವರು. ಈ ಗುಂಡಿಗಳು ಆಸ್ಟ್ರೇಲಿಯಾ ದೇಶದಲ್ಲಿ ತಯಾರಿಸಿದ್ದು. ಷರಟು, ಕುಪ್ಪಸ, ಜಾಕೀಟು ಮುಂತಾದವುಗಳಿಗೆ ಪ್ರತಿಯೊಬ್ಬರೂ ಹಾಕಿಕೊಳ್ಳಬಹುದು.

ಕ್ರಯ 4 ಗುಂಡಿಗಳ ಸೆಟ್ 1ಕ್ಕೆ 1—4—0.

ಎಲೆಕ್ಟ್ರಿಕ್ ದೀಪ.

ಇದು ವಿದುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದು ಹಚ್ಚುವುದಕ್ಕೆ ಬೆಂಕಿಕಡ್ಡಿ ಅಗತ್ಯವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆಗೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವುದಿಲ್ಲ. ಬೀಡಿ ಸಿಗರೇಟು ಸೇದುವವರಿಗೂ ಪ್ರಯಾಣಿಕರಿಗೂ ಬೇಕಾದದ್ದು.

ಕ್ರಯ 1—12—0

ವಿಳಾಸ—ಎಸ್. ಎಸ್. ರಾಮ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 214, ಮದರಾಸು.

ಹೊಸ ಪುಸ್ತಕ! ಕ್ರಯ ೬ ಆಣೆ.

ವೀರಶೈವ ಸಮಾಜಸುಧಾರಣೆ.

ಲೇಖಕ ಎಂ. ಮಂಜಪ್ಪ ಹರ್ಡೇಕರ್.

ಈ ಪುಸ್ತಕದಲ್ಲಿ ವೀರಶೈವ ಸಮಾಜದ ಪೂರ್ವಸ್ಥಿತಿಯನ್ನೂ, ಧಾರ್ಮಿಕ, ಸಾಮಾಜಿಕ, ಮತ್ತು ವಿದ್ಯಾವಿಷಯಗಳಲ್ಲಿ ಈವರೆಗಾದ ಜಾಗ್ರತೆಯನ್ನೂ, ಗುರುವರ್ಗದಲ್ಲಿಯೂ ಮತ್ತು ಭಕ್ತವರ್ಗದಲ್ಲಿಯೂ ಈಗ ಉಂಟಾಗಿರುವ ಕಲಹಕ್ಕೆ ಕಾರಣಗಳಾದ ಸಂಗತಿಗಳ ಯುಕ್ತಾಯುಕ್ತತೆಗಳನ್ನೂ ನಮ್ಮ ಸಮಾಜದ ಮುಂದಾಳುಗಳ ಕರ್ತವ್ಯವನ್ನೂ ಮತ್ತು ಬ್ರಾಹ್ಮಣೇತರರ ಪಂಗಡದಲ್ಲಿ ನಮ್ಮ ಸಮಾಜವು ಸೇರುವುದರಿಂದ ಇದಕ್ಕಾಗತಕ್ಕ ಅನರ್ಥವನ್ನೂ ಧಾರ್ಮಿಕ, ಸಾಂಪತ್ತಿಕಾದಿ ಸಕಲ ವಿಷಯಗಳಲ್ಲಿಯೂ ವೀರಶೈವ ಸಮಾಜಬಾಂಧವರು ಅತ್ಯಂತ ಮಹತ್ತರವಾದ ಈ ಕಾಲದಲ್ಲಿ ಮಾಡಬೇಕಾಗಿರುವ ಕರ್ತವ್ಯಗಳನ್ನೂ ಕುರಿತು ಸ್ಪಷ್ಟವಾಗಿಯೂ, ವಿಸ್ತಾರವಾಗಿಯೂ ವಿವರಿಸಿದೆ.

ಇದರಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳು ನಮ್ಮ ಸಮಾಜದ ಅನೇಕ ಸುಪ್ರಸಿದ್ಧ ಮುಂದಾಳುಗಳ ಅಭಿಪ್ರಾಯಗಳಿಂದ ದೃಢೀಕರಿಸಲ್ಪಟ್ಟಿದೆ.

ವಿಳಾಸ—ಎಸ್. ಕೆ. ಸೋಮನಾಥಯ್ಯ,
4 ಬುಕ್‌ಸೆಲರ್ ದಾವಣಗೆರೆ.

ಫಲಶೋಧಕ! ಮನೋಲ್ಲಾಸಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 45

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತ ರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರ ಕೃಚ್ಛ್ರ ರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಟ್ಟೆ ಉಬ್ಬು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಸೆಳೆಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರೆಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ ರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ಪಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಕ್ಕೆಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಸಹಿಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

೧೯೨೧ನೆಯ ಇಸವಿ ಆಗಸ್ಟ್ ತಾ|| ೨೮ ರಿಂದ ೧೯೨೧ ನೆಯ ಸೆಪ್ಟಂಬರ್ ತಾ|| ೩ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿ ನಾಮಸಂವತ್ಸರದ ಶ್ರಾವಣ ಬಹುಳ ದಶಮಿಯಿಂದ ಭಾದ್ರಪದ ಶುದ್ಧ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
28	ಭಾನು	ದಶ	37-44	ಮೃಗ	16-10	13
29	[1] ಸೋಮ	ಏಕಾ	32-28	ಆರ್ದ್ರಾ	13-8	14
30	[2] ಮಂಗಳ	ದ್ವಾದ	26-42	ಪುನ	9-32	15
31	ಬುಧ	ತ್ರಯೋ	20-39	ಪುಷ್ಯ	5-30	16
1	ಗುರು	ಚತು	14-29	ಆಶ್ಲೆ	1-19	17
2	ಶುಕ್ರ	ಅಮಾ	8-26	ಪುಬ್ಬ	53-4	18
3	[3] ಶನಿ	ಪಾ ಉ	2-40 54-23	ಉತ್ತರ	49-36	19

(1) ಸರ್ವತ್ರೈಕಾದಶಿ. (2) ಪ್ರದೋಷ, ಮಂಗಳಗೌರೀವ್ರತಂ. (3) ಮೊಹರಂ ಪ್ರಾರಂಭ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸನ್ಮಾನಪತ್ರವನ್ನು ಸಮರ್ಪಿಸಲು ಅನುಮತಿಹೊಂದಿರುವ ಸಂಘಗಳಿಗೆ ಮಾತ್ರ ಅನ್ವಯಿಸುವುದಿಲ್ಲ.

ಭರತಖಂಡದ ಸರ್ಕಾರದ ರಾಜಕೀಯ ವಿದೇಶ ಶಾಖೆಯಲ್ಲಿ ಭಾರತೀಯೋದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು ಸ್ಟೇಟ್ ಸೆಕ್ರೆಟರಿಯವರು ಒಪ್ಪಿರುವುದರಿಂದ ಮುಂದಣ ವರ್ಷದಲ್ಲಿ ನವಾಬ್‌ಖಾನ್ ಬಹದೂರ್ ಸರ್ ಜಿರಾರ್‌ಹಸನ್‌ಷಾ, ಖಾನ್ ಬಹದೂರ್ ಮಿರ್ ಶರಬತ್‌ಖಾನ್, ಖಾನ್ ಬಹದೂರ್ ಹಮೀದುಲ್ಲಾಖಾನ್, ಖಾನ್ ಬಹದೂರ್ ಸದುಲ್ಲಾಖಾನರವರುಗಳು ನಿಯಮಿಸಲ್ಪಡುವವರಾಗಿದ್ದಾರಂತೆ.

ಬೃಂದಾವನದಲ್ಲಿ ಪಂಡಿತ ಮದನಮೋಹನ ಮಾಳವ್ಯರವರ ಅಧ್ಯಕ್ಷತೆಯಿಂದ ಕಳೆದ ತಾ|| ೨೭ ರಲ್ಲಿ ಕೂಡಿದ್ದ ಗೋರಕ್ಷಣ ಮಹಾಸಭೆಯಲ್ಲಿ ಮಾಡಲ್ಪಟ್ಟ ತೀರ್ಮಾನಗಳೊಳಗೆ ಮುಸಲ್ಮಾನ ಪ್ರಮುಖರು ಗೋವಧೆಯನ್ನು ನಿವಾರಿಸುವುದಕ್ಕೆ ಪ್ರಯತ್ನಿಸಿದುದಕ್ಕಾಗಿ ಅವರಿಗೆ ಸಭೆಯ ವಂದನೆಯನ್ನು ತಿಳಿಯಿಸುವುದು, ಮತ್ತು ಕಿಲಾಫತ್ ಉದ್ಯಮದಲ್ಲಿ ಹಿಂದುಗಳೆಲ್ಲಾ ಯಥಾಪ್ರಕಾರ ಸಹಾಯಮಾಡಬೇಕೆಂಬುದು ಮುಖ್ಯವಾಗಿದ್ದವು.

ಮದ್ರಾಸು ಬೊಂಬಾಯಿ ಅಧಿಪತ್ಯಗಳ ಶಾಸನಸಭೆಗಳಲ್ಲಿ ಸ್ತ್ರೀಯರಿಗೆ ಓಟುಕೊಡುವ ಅಧಿಕಾರವಿರಬೇಕೆಂಬ ತೀರ್ಮಾನವಾದ ಬಳಿಕ ಬಂಗಾಳದ ನಾರೀಮಣಿಯರೂ ಅಂಥ ಹಕ್ಕು ತಮಗೂ ಇರಬೇಕೆಂದು ಕೋರಿ ಆ ವಿಷಯದಲ್ಲಿ ಅಲ್ಲಿಯ ಶಾಸನ ನಿರ್ಮಾಣಸಭೆಗೆ ಒಂದು ತೀರ್ಮಾನವನ್ನು ತರಿಸಿದ್ದರು. ಆದರೆ ಅದು ತಿರಸ್ಕೃತವಾಯಿತು. ಅಂಥ ಸಂಸ್ಕರಣವನ್ನು ಮಾಡುವುದಕ್ಕೆ ಇನ್ನೂ ಕಾಲವು ಬರಲಿಲ್ಲವೆಂದು ಅವರು ನಿರಾಕರಿಸಿಬಿಟ್ಟರು.

ಧಾರವಾಡದ ಮ್ಯುನ್ಸಿಪಾಲಿಟಿಯಲ್ಲಿ ನಾರಾಯಣರಾವ್ ಕೆಂಗುವರಿಯವರ ಮೃತ್ಯುವಿನಿಂದ ತೆರವಾದ ಪ್ರೆಸಿಡೆಂಟ್ ಸ್ಥಾನಕ್ಕೆ ಅಲ್ಲಿಯ ಮ|| ಚನ್ನಪ್ಪ ಹುಲಕೋಟಿ ಬಿ. ಎ., ಎಲ್‌ಎಲ್. ಬಿ., ಯವರು ಆರಿಸಲ್ಪಟ್ಟರೆಂದು ತಿಳಿಯಿಸುವುದಕ್ಕೆ ಸಂತೋಷಿಸುತ್ತೇವೆ. ಇವರು ಇನ್ನೂ ಕೇವಲ ೩೩ ವಯಸ್ಸಿನವರಾಗಿದ್ದರೂ, ತಮ್ಮ ವಕೀಲತನದಲ್ಲೂ ಸಾರ್ವಜನಿಕ ಕಾರ್ಯಗಳಲ್ಲೂ ಸುಪ್ರಸಿದ್ಧಿಯನ್ನು ವಹಿಸಿ ಸಂಮಾನ್ಯರಾಗಿರುವುದು ಸಮಾಜಕ್ಕೆ ಭೂಷಣವಾಗಿದೆ.

ಮ|| ಗಾಂಧಿಯವರು ಮೊನ್ನೆವಾರ ಕಲ್ಕತ್ತಾಕ್ಕೆ ಹೋಗಿದ್ದಾಗ ವಿದೇಶವಸ್ತ್ರ ಬಹಿಷ್ಕಾರ ವಿಷಯವಾಗಿ ಬಹಳ ಚಳವಳಿಯು ನಡೆಯಿತು. ತಾ|| ೭ ರಲ್ಲಿ ಅಲ್ಲಿಯ ಮಾರ್ವಾಡಿ ಬಟ್ಟೆಯ ವರ್ತಕರೊಡನೆ ಗಾಂಧಿಯವರು ಬಹಳಹೊತ್ತು ಸಂಭಾಷಿಸಿದರು. ಡಿಸಂಬರ್ ತಿಂಗಳವರೆಗೆ ನಾವು ವಿದೇಶದ ಬಟ್ಟೆಗಳನ್ನು ತರಿಸುವುದಿಲ್ಲವೆಂದು ಅವರುಗಳು ವಾಗ್ದಾನಮಾಡಿದರು. ನೀವು ಇನ್ನೆಂದೆಂದಿಗೂ ವಿದೇಶದ ಬಟ್ಟೆಗಳನ್ನು ತರಿಸುವುದೇ ಇಲ್ಲವೆಂದು ಪ್ರಮಾಣಪತ್ರಿಕೆಯನ್ನು ಬರದುಕೊಡಬೇಕೆಂದು ಗಾಂಧಿಯವರು ಹೇಳಿದರು. ಅದಕ್ಕೆ ಅವರುಗಳು ಒಪ್ಪಲಿಲ್ಲ.

ಹಿಮಾಲಯದ ಎವರೆಸ್ಟ್ ಶಿಖರವನ್ನು ಹತ್ತುವುದಕ್ಕಾಗಿ ಕೆಲವುಂದಿ ಪಾಶ್ಚಾತ್ಯರು ಈಗ ಹೋಗಿರುವರಷ್ಟೆ. ಎಷ್ಟೋದೂರ ಅವರು ಮುಂದಕ್ಕೆ ಹೋಗಿರುವರು. ಆದರೆ ತುದಿ ಮುಟ್ಟಲಿಕ್ಕೆ ಅವರಿಗೆ ಯಾವಕಡೆಯೂ ಮಾರ್ಗವು ತೋರಿಲ್ಲ. ಈಗ ಸುರಿಯುತ್ತಿರುವ ಮಳೆಯು ನಿಂತಮೇಲೆ ಈಶಾನ್ಯದ ಕಡೆಯಿಂದ ದಾರಿಯೇನಾದರೂ ಇದೆಯೆ ಎಂಬುದನ್ನು ಪರಿಶೋಧಿಸುವವರಾಗಿದ್ದಾರೆ. ಈಗ ಅವರುಗಳೆಲ್ಲಾ ಎವರೆಸ್ಟ್ ಶಿಖರಕ್ಕೆ ೨೦ ಮೈಲಿಗಳ ದೂರದಲ್ಲಿ ಪೂರ್ವಕ್ಕೆ ಇರುವ ಖಾರ್ತಾ ಎಂಬ ಗ್ರಾಮದಲ್ಲಿ ವಾಸವಾಗಿದ್ದಾರೆ. ಇದುವರೆಗೆ ಅವರು ೧೦ ಸಾವಿರ ಚದರಮೈಲಿಗಳು ಸಂಚಾರಮಾಡಿದ್ದಾರೆ.

ಸೊಲ್ಲಾಪುರ್ ಜಿಲ್ಲೆಗೆ ಸೇರಿದ ತಕ್ಕಿ ಬರೂರು ಎಂಬ ಗ್ರಾಮಗಳಿಗೆ ೩-೪ ಮಂದಿ ಮೋಸಗಾರ ಫಕೀರ ವೇಷದವರು ಹೋಗಿ ಮಂತ್ರಜ್ಞರಂತೆಯೂ ಪಂಡಿತರಂತೆಯೂ ಮೌಲ್ವಿಗಳಂತೆಯೂ ನಟಿಸಿ, ನಂಬುಗೆ ಹುಟ್ಟಿಸಿ, ವೇದಾಂತ ಬೋಧೆಯನ್ನು ಮಾಡುತ್ತಿದ್ದು, ಕೊಟ್ಟ ಧನಕನಕಾದಿಗಳನ್ನು ತಮ್ಮ ಪೂಜೆಗಳಿಂದ ದ್ವಿಗುಣೀಕೃತವನ್ನಾಗಿ ಮಾಡಿಕೊಡುತ್ತೇವೆಂಬ ನಂಬುಗೆಯನ್ನು ಪ್ರಜೆಗಳಲ್ಲಿ ಹುಟ್ಟಿಸಿ, ೪-೫ ಮಂದಿಗಳ ಬಹುಶಃ ೭೫ ಸಾವಿರ ರೂ. ಗಳ ಬೆಲೆಯ ನಗನಾಣ್ಯಗಳನ್ನು ಅಪಹರಿಸಿಕೊಂಡು ಮಾಯವಾಗಿದ್ದಾರೆ. ಪೊಲೀಸರು ಅವರುಗಳನ್ನು ತಡಕುತ್ತಿದ್ದಾರೆ. ಇಂಥ ವೇಷಧಾರಿಗಳನ್ನು ನಂಬಿ ಬಹುಜನರು ದುರಾಸೆಯಿಂದ ಕೆಟ್ಟುಹೋಗುತ್ತಿದ್ದಾರೆ.

ಪಂಜಾಬು ಅಧಿಪತ್ಯದಲ್ಲಿ ಸರ್ಕಾರದ ಉದ್ಯೋಗಿಗಳು ಲಂಚವನ್ನು ತೆಗೆದುಕೊಳ್ಳುವ ಹಾವಳಿಯು ಪ್ರಬಲವಾಗಿದೆ. ಇದರಿಂದ ಪ್ರಜೆಗಳಿಗೆ ಉಂಟಾಗುತ್ತಿರುವ ಬಾಧೆಯನ್ನು ನಿವಾರಿಸಬೇಕೆಂದು ಅಲ್ಲಿಯ ಸರ್ಕಾರದವರು ನಿರ್ಧರಿಸಿ ಲಂಚವನ್ನು ನಿರ್ಮೂಲವಮಾಡಲು ಯತ್ನಿಸಿದ್ದಾರೆ. ಪ್ರಜೆಗಳು ಯಾರೂ ಲಂಚವನ್ನು ಕೊಡಕೂಡದೆಂದು ಪ್ರಕಟಿಸಿರುವುದಲ್ಲದೆ ಲಂಚವನ್ನು ತೆಗೆದುಕೊಂಡ ಉದ್ಯೋಗಿಗಳನ್ನು ಕಠಿನವಾಗಿ ಶಿಕ್ಷಿಸಲು ಏರ್ಪಡಿಸಿದ್ದಾರೆ. ಅತ್ತ ಪಾಟ್ನಾ ಜಿಲ್ಲೆಯ ರಿಜಿಸ್ಟ್ರೇಷನ್ ಶಾಖೆಯಲ್ಲಿಯ ಉದ್ಯೋಗಿಗಳು ಮೋಸವನ್ನೂ ಲಂಚಕೋರತನವನ್ನೂ ವಿಶೇಷವಾಗಿ ನಡೆಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದುದರ ಮೇಲೆ ಆ ಶಾಖಾಧಿಕಾರಿಗಳಾದ ಮಂತ್ರಿಯವರು ಅಂಥ ದುಷ್ಟರನ್ನೆಲ್ಲಾ ಪ್ರಾಸಿಕ್ಯೂಷನ್ ಮಾಡುವ ವಿಷಯದಲ್ಲಿ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ, ಇನ್ಸ್‌ಪೆಕ್ಟರುಗಳಿಗೂ ಕಟ್ಟಪ್ಪಣೆಮಾಡಿದ್ದಾರೆ. ಪ್ರಬಲಪ್ರಯತ್ನವು ನಡೆಯುತ್ತಿದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಮಾತ್ರ ಈ ಲಂಚಗೋರತನದ ಹಾವಳಿಯನ್ನು ಅಡಗಿಸುವ ಪ್ರಯತ್ನವು ಸ್ವಲ್ಪವೂ ನಡೆದಿಲ್ಲ.

ಮದ್ರಾಸಿಗೆ ಸೀತಾರಾಮುಜಿ ಎಂಬುವರೊಬ್ಬರು ಬಂದಿದ್ದಾರೆ. ಅವರು ಅದ್ಭುತವಾದ ಕೆಲಪ್ರದರ್ಶನಗಳನ್ನು ಅಲ್ಲಿಯ ಪ್ರಮುಖ ಜನರಿದಿರಿಗೆ ಮಾಡಿದ್ದಾರೆ. ಅದೇನೆಂದರೆ—ಗಾಜಿನ ಚೂರುಗಳು ಬೆಣಚುಕಲ್ಲುಗಳು ಮರದ ಚೂರುಗಳು ಕೊಬ್ಬರಿಯ ತುಣುಕುಗಳು ಕಬ್ಬಿಣದ ಮೊಳೆಗಳು ಇವುಗಳನ್ನೆಲ್ಲಾ ಕರಕರನೆ ಅಗಿದು ನುಂಗಿ ನೀರು ಕುಡಿದರು. ಮತ್ತು ವತ್ಸನಾಭ (ಪಾಷಾಣ) ವನ್ನು ಎಲ್ಲರಿಗೂ ತೋರಿಸಿ ನುಂಗಿದರು. ಗಂಧಕದ್ರಾವಕವನ್ನು ಕೈಗೆ ಸುರಿಸಿಕೊಂಡು ನಾಲಗೆಯಿಂದ ನೆಕ್ಕಿದರು. ಕುದಿಯುತ್ತಿದ್ದ ಸೀಸವನ್ನು ಗಂಟಲಿಗೆ ಹಾಕಿಕೊಂಡರು. ತನಿಕೆಂಡಗಳನ್ನು ಪುಡಿಮಾಡಿ ಬಾಯ್ಗೆ ಹಾಕಿಕೊಂಡು ನುಂಗಿದರು. ಈ ರಾಮುಜಿಯವರು ಮಧ್ಯ ಮಧ್ಯ ಸ್ವಲ್ಪ ಗೋಪೀಚಂದನವನ್ನು ಮಾತ್ರ ನಾಲಗೆಗೆ ಸವರಿಕೊಳ್ಳುತ್ತಿದ್ದುದರ ಹೊರತು ಮತ್ತೇನನ್ನೂ ಮಾಡುತ್ತಲಿರಲಿಲ್ಲ. ಸೇರಿದ್ದವರೆಲ್ಲಾ ಇದನ್ನು ನೋಡಿ ಪರಮಾಶ್ಚರ್ಯಪಟ್ಟರು. ಬಳಿಕ ಅವರ ಬಾಯನ್ನು ತೆರೆಯಿಸಿ ನೋಡಲಾಗಿ ನಾಲಗೆಯು ಸ್ವಲ್ಪ ಮಾತ್ರ ಕಂದಿದ್ದಂತೆ ಕಂಡಿತು. ರಾತ್ರಿಯ ಹೊತ್ತು ಯಾವುದೋ ಕೆಲವು ಬೇರುಗಳನ್ನು ಅಗಿಯುತ್ತೇನೆಂತಲೂ ಪಾದರಸದ ಹೊರತು ಮತ್ತಾವ ಪದಾರ್ಥವನ್ನಾದರೂ ಅಗಿದು ನುಂಗಿ ಜೀರ್ಣಿಸಿಕೊಳ್ಳಬಲ್ಲೆನೆಂತಲೂ ರಾಮುಜಿಯವರು ಹೇಳಿದರಂತೆ. ಅಲ್ಲದೆ ಕಳೆದ ೩೦ ವರ್ಷಗಳಿಂದಲೂ ಇಂಥ ಪ್ರದರ್ಶನವನ್ನು ಮಾಡುತ್ತಿರುವೆನೆಂತಲೂ, ಉತ್ತರ ಹಿಂದೂಸ್ಥಾನದಲ್ಲಿ ಸಾಧುಗಳ ಸೇವೆಮಾಡಿ ಈ ಸಾಮರ್ಥ್ಯವನ್ನು ಸಂಪಾದಿಸಿದನೆಂತಲೂ, ೫೦ ಮಂದಿ ಬ್ರಾಹ್ಮಣರಿಗೆ ಯಾರಾದರೂ ಸಂತರ್ಪಣೆಮಾಡಿಸಿದರೆ ಅವರು ಭೋಜನಕ್ಕೆ ಆರಂಭಿಸಿ ಮುಗಿಸುವವರೆಗೂ ತಾನು ಬೆಂಕಿ ಕುಂಡದ ಮಧ್ಯದಲ್ಲಿ ಒಂದು ಬಟ್ಟೆಯನ್ನು ಹಾಕಿಕೊಂಡು ಕುಳಿತಿರಬಲ್ಲೆನೆಂತಲೂ ಹೇಳಿದರಂತೆ.

ಸಿಮ್ಲಾ ಪಟ್ಟಣದಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ಸಾಮ್ರಾಜ್ಯ ಶಾಸನಸಭಾ ಭವನದಲ್ಲಿ ಶಾಸನಸಭೆಯ ಸ್ಟೇಟ್ ಕೌನ್ಸಿಲಿನ ಸಮ್ಮೇಳನವು ಮೊದಲನೆಸಲ ಕಳೆದ ತಾ|| ೩ ರಲ್ಲಿ ಕೂಡಿದ್ದಿತು. ಆಗ ವೈಸ್ರಾಯರು ಪ್ರಾರಂಭೋಪನ್ಯಾಸವನ್ನು ಬಹಳ ಗಂಭೀರವಾಗಿ ೧ ಗಂಟೆ ಕಾಲ ಮಾಡಿದರು. ಮೊಟ್ಟಮೊದಲು ಆಂಗ್ಲ ಯುವರಾಜರ ಆಗಮನ ವಿಷಯವನ್ನು ಎತ್ತಿಕೊಂಡು, ಅವರು ಈಗ ಪ್ರಭುತ್ವಪಕ್ಷದವರಾಗಿಯಾಗಲೀ ರಾಜಕೀಯ ಪಕ್ಷಾಭಿವೃದ್ಧಿಗೇ ಆಗಲೀ ಈ ದೇಶಕ್ಕೆ ಬರುವವರಾಗಿಲ್ಲವೆಂದೂ ಪ್ರತ್ಯಕ್ಷವಾಗಿ ಭಾರತೀಯ ಸಂಸ್ಥಾನಾಧಿಪತಿಗಳನ್ನೂ ಪ್ರಜೆಗಳನ್ನೂ ನೋಡಿಕೊಂಡು ಹೋಗುವುದಕ್ಕಾಗಿ ಮಾತ್ರ ಬರುವರೆಂತಲೂ, ಅನಾದಿಯಾಗಿ ರಾಜಭಕ್ತಿ ಧುರಂಧರರೆಂದು ವಿಖ್ಯಾತರಾಗಿರುವ ಭಾರತೀಯರು ಅವರಿಗೆ ಉಚಿತವಾದ ಸ್ವಾಗತವನ್ನು ಮಾಡುವರೆಂದು ನಂಬುತ್ತೇನೆಂದೂ ಹೇಳಿದರು. ಇದನ್ನು ನೋಡಲಾಗಿ ಯುವರಾಜರು ಈ ದೇಶಕ್ಕೆ ಯಾವುದೊಂದು ರಾಜಕೀಯ ಸಂದೇಶವನ್ನೂ ಈಗ ತರುವವರಾಗಿಲ್ಲವೆಂದು ನಂಬಬಹುದಾಗಿದೆ. ಮತ್ತು ವೈಸ್ರಾಯರ ಉಪನ್ಯಾಸದೊಳಗೆ ಕಂಡ ನಾನಾ ವಿಷಯಗಳಲ್ಲಿ ಮಲಬಾರ್ ದಂಗೆಯ ವಿಷಯವೂ ಸೇರಿದ್ದಿತು. ಅದರ ವರ್ಣನೆಯನ್ನು ಸ್ವಲ್ಪವಾಗಿ ಮಾಡಿ ಕಡೆಗೆ ಹೀಗೆ ಹೇಳಿದರು—"ಈ ವಿಪ್ಲವಕ್ಕೆ ಕಾರಣಭೂತರಾಗಿದ್ದವರನ್ನು ಶಿಕ್ಷಿಸದೆ ಬಿಡಲಾಗುವುದಿಲ್ಲ. ಶಾಸನೋಲ್ಲಂಘನೆಯನ್ನು ಮಾಡಿರಿ ಅಧಿಕಾರಿಗಳಿಗೆ ವಿಧೇಯರಾಗಬೇಡಿರಿ ಎಂದು ಮೊದಲಾಗಿ ಸಾಮಾನ್ಯ ಪ್ರಜೆಗಳಿಗೆ ಸದಾ ಬೋಧಿಸುವುದಕ್ಕೆ ತೊಡಗಿದರೆ ದೌರ್ಜನ್ಯವೂ ವಿಪ್ಲವವೂ ಹುಟ್ಟುವುದರಲ್ಲಾಶ್ಚರ್ಯವೇನೂ ಇಲ್ಲ. ಮೂಢರಿಗೆ ಇಂಥ ದುರ್ಬೋಧನೆ ಮಾಡಿದರೆ ದೇಶಶಾಂತಿಯು ಎಲ್ಲುಳಿಯುವುದು? ಈ ಉದ್ಯಮಕ್ಕೆ ನಾಯಕನಾದ ಮಹನೀಯನು ದೌರ್ಜನ್ಯರಾಹಿತ್ಯದಲ್ಲಿ ದೃಢವಿಶ್ವಾಸವುಳ್ಳವನಾಗಿದ್ದರೂ ಆತನ ಅನುಚರರಲ್ಲಿ ಅದೇತೆರದ ಭಾವವುಳ್ಳವರೂ ಆತನ ಉಪದೇಶಕ್ಕೆ ಒಳಪಡುವವರೂ ಬಹಳ ಕಡಿಮೆ. ಸರ್ಕಾರವನ್ನು ತಿರಸ್ಕರಿಸುವುದು ಶಾಸನವನ್ನು ಉಲ್ಲಂಘಿಸುವುದು ಇತ್ಯಾದಿ ಕಾರ್ಯಗಳಿಗೆ ಪ್ರಜೆಗಳು ತೊಡಗಿದರೆ ದೇಶದಲ್ಲಿ ಅಶಾಂತಿಯೂ ವಿಪ್ಲವವೂ ಅಕ್ರಮವೂ ಹೆಚ್ಚುವುವು. ಅಸಹಾಯ ನಾಯಕರು ಕೆಲವರು ಸ್ವತಃ ಸರ್ಕಾರಕ್ಕೆ ಪ್ರತಿಭಟಿಸಿದ ಸೂಚನೆಗಳಿರುವುವು. ಶಾಸನೋಲ್ಲಂಘನೆಯನ್ನು ಆರಂಭಿಸಬೇಕೆಂದು ಕೆಲವರು ಅತಿವಾದಿ ಪ್ರಮುಖರು ಹೇಳುತ್ತಿದ್ದಾರೆ. ಆದರಿಂದ ಅತ್ಯಾಚಾರಗಳೂ ಹತ್ಯಗಳೂ ಸಂಭವಿಸದೆ ತಪ್ಪುವುದಿಲ್ಲ. ಕೆಲ ಅತಿವಾದಿಗಳು ಸೈನಿಕರೂ ಪೊಲೀಸರೂ ತಂತಮ್ಮ ವೃತ್ತಿಗಳನ್ನು ಬಿಟ್ಟುಬಿಡಬೇಕೆಂದು ದುರ್ಬೋಧನೆ ಮಾಡುತ್ತಿದ್ದಾರೆ. ಆದರೆ ಆ ದುರ್ಬೋಧನೆಯು ಫಲಿಸಲಿಲ್ಲ. ನಾವು ನಮ್ಮ ಕರ್ತವ್ಯವನ್ನು ನೆರವೇರಿಸದೆ ತಪ್ಪದು. ನಮ್ಮಿಂದ ಪರಿಪಾಲಿಸಲ್ಪಡುತ್ತಿರುವ ಪ್ರಜೆಗಳ ಪ್ರಾಣವಿತ್ತಗಳನ್ನು ನಾವು ಕಾಪಾಡಬೇಕು. ಅವರ ವ್ಯಕ್ತಿಗಳಿಗೆ ಅಭ್ಯಂತರಗಳೊಂದೂ ಬರದಂತೆ ಮಾಡಬೇಕು. ಪ್ರಜೆಗಳಿಗೆ ಪ್ರಭುತ್ವಶಾಸನದ ಮೇಲೆ ಮರ್ಯಾದೆಯಿರಬೇಕು. ರಾಜಭಕ್ತಿಯಿರುವ ಪ್ರತಿಯೊಬ್ಬ ಪ್ರಜೆಯೂ ಅಪಾಯಕರವಾದ ಉದ್ಯಮದ ವ್ಯಾಪನೆಗೆ ಪ್ರತಿಭಟಿಸಬೇಕು. ಈ ಸಮಯದಲ್ಲಿ ಭಾರತೀಯರ ಸುಖಶಾಂತಿಗಳನ್ನು ಕಾಪಾಡುವುದಕ್ಕೆ ನಾನೂ ನನ್ನ ಕಾರ್ಯನಿರ್ವಾಹಕ ಸಭಾಸಭಿಕರೂ ತಕ್ಕ ಪ್ರಯತ್ನವನ್ನು ಮಾಡುವೆವು. ಪ್ರಜಾಪ್ರತಿನಿಧಿಗಳಾದ ನೀವೆಲ್ಲರೂ ಅದಕ್ಕೆ ಸಹಾಯ ಮಾಡಬೇಕು."

ವಿದೇಶದ ವೃತ್ತಾಂತಗಳು

ಜಪಾನ್ ಯುವರಾಜರಾದ ಪ್ರಿನ್ಸ್ ಹಿರ್‌ಹಿಟೋರವರು ತಮ್ಮ ವಿದೇಶ ಸಂಚಾರವನ್ನೆಲ್ಲಾ ಮುಗಿಸಿಕೊಂಡು ಕಳೆದ ತಾ|| ೪ ರಲ್ಲಿ ಸ್ವದೇಶವನ್ನು ಸೇರಿದರು.

ಬವೇರಿಯಾ ದೇಶವು ಜರ್ಮನ್ ಪ್ರಭುತ್ವಕ್ಕೆ ಅಧೀನವಾಗಿದ್ದುಕೊಂಡಿರುವ ಲಕ್ಷಣವಿಲ್ಲ. ಪ್ರತಿಭಟಿಸಿ ಸ್ವತಂತ್ರಿಸುವ ಸೂಚನೆಗಳು ಕಾಣುತ್ತಿವೆ. ಉಭಯರಾಜ್ಯಗಳಿಗೂ ಮನಸ್ಪರ್ಧೆಯು ಹೆಚ್ಚುತ್ತಿದೆ.

ಆಂಗ್ಲಜನರು ನಿರ್ಮಿಸಲಾರದ ಕೆಲವು ರಂಗುಗಳನ್ನು ಈಗ ಜರ್ಮನರ ಒಂದು ಸಂಘದವರು ನಿರ್ಮಾಣಮಾಡಿದ್ದಾರೆ. ಅದು ರೇಶ್ಮೆಗೆ ಬಣ್ಣಕಟ್ಟಲು ಉಪಯೋಗಿಸತಕ್ಕದು. ಅದರ ಬೆಲೆಯನ್ನು ೧ಕ್ಕೆ ಮೂರುಮಾಡಿದ್ದಾರೆ. ಯುದ್ಧಕ್ಕೆ ಮುಂಚೆ ಇದ್ದ ಬೆಲೆಗೆ ಇದು ೧೨ ರಷ್ಟಾಗಿದೆ.

ಚೀನಾದೇಶದ ಕಾನ್ಸ್ಯಾಪ್ರಾಂತದಲ್ಲಿ ಕಳೆದ ಡಿಸಂಬರ್ ತಿಂಗಳಲ್ಲಿ ಆದ ದೊಡ್ಡ ಭೂಕಂಪದಿಂದ ಆಗಿರುವ ಅನರ್ಥವನ್ನು ಅಲ್ಲಿಯ ಸರ್ಕಾರದವರು ಈಗ ಪ್ರಕಟಮಾಡಿದ್ದಾರೆ. ಅದರಿಂದ ೭೫ ಮೈಲಿಗಳ ದೂರದವರೆಗೆ ಭೂಮಿಯ ಮೇಲಿದ್ದ ಮನೆಮಠಗಳೂ ಗುಡ್ಡಗಳೂ ಬೆಟ್ಟಗಳೂ ನಡುಗಿ ಬಿದ್ದುಹೋದುವೆಂದೂ ೨ ಲಕ್ಷ ಮಂದಿಗಳು ಸತ್ತರೆಂದೂ ತಿಳಿಯಬಂದಿದೆ.

ರಷ್ಯಾದಲ್ಲಿ ಈಗ ಕ್ಷಾಮಪೀಡಿತರಾಗಿರತಕ್ಕ ಜನರಿಗೆಲ್ಲಾ ದಿನಕ್ಕೆ ಒಬ್ಬೊಬ್ಬರಿಗೆ ಒಂದೊಂದುಪೌನು ರೊಟ್ಟಿಯಂತೆ ಕೊಟ್ಟರೂ ದಿನಃ ೧ಕ್ಕೆ ೧೦ ಲಕ್ಷ ಡಾಲರ್ ವೆಚ್ಚವು ಹಿಡಿಯುವುದಂತೆ. ಎಷ್ಟು ಸಹಾಯಮಾಡಿದರೂ ಈಗಣ ಕ್ಷಾಮದಿಂದ ೨೦ ಲಕ್ಷ ರಷ್ಯನ್ನರು ಆಹಾರವಿಲ್ಲದೆ ಸಾಯುವುದು ಸಿದ್ಧವೆಂದು ಅಮೇರಿಕಾ ರೆಡ್‌ಕ್ರಾಸ್ ಸಂಘದ ಕಮಿಷನರು ಪ್ರಕಟಿಸಿದ್ದಾರೆ.

ಜರ್ಮನಿಯಲ್ಲಿ ಈಗಣ ಪ್ರಜಾಪ್ರಭುತ್ವದ ನಾಯಕನಾಗಿದ್ದ ಹರ್ ಎಜ್ಬರ್ಗರ್ ರವರನ್ನು ಯಾರೋ ಕೊಂದುಹಾಕಿದಂತೆಯೂ, ಕೈಜರನನ್ನೇ ಪುನಃ ಚಕ್ರವರ್ತಿತ್ವಕ್ಕೆ ತರುವ ಪ್ರಯತ್ನವನ್ನು ಆ ದೇಶೀಯರಲ್ಲಿ ಕೆಲವರು ಪ್ರಬಲವಾಗಿ ಮಾಡುತ್ತಿರುವಂತೆಯೂ, ಕೈಜರು ಆಕಾಶವಿಮಾನದಲ್ಲಿ ಕುಳಿತು ಹಾಲಂಡಿನಿಂದ ತಪ್ಪಿಸಿಕೊಂಡು ಜರ್ಮನಿಗೆ ಬಂದುಬಿಟ್ಟಿರುವಂತೆಯೂ ಸುದ್ದಿಯುಂಟಾಗಿದೆ. ಆದರೆ ಇದರನಿಜಸ್ಥಿತಿಯು ಇನ್ನೂ ದೃಢಪಟ್ಟಿಲ್ಲ.

ದಕ್ಷಿಣ ಅಮೇರಿಕಾದಲ್ಲಿರುವ ಚಿಲ್ಲಿರಾಷ್ಟ್ರಕ್ಕೆ ಸೇರಿದ ಒಂದು ಪಟ್ಟಣದಲ್ಲಿ ಮಕಾಪಿ ಎಂಬ ಒಬ್ಬ ಕೋಟೀಶ್ವರನು ಒಂದು ದೊಡ್ಡ ದುರ್ಬೀನನ್ನು ನಿರ್ಮಿಸುವುದಕ್ಕೆ ಪ್ರಯತ್ನಿಸಿದ್ದಾನೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಶಾಸ್ತ್ರಜ್ಞರಾದ ಪ್ರೊ|| ಟಾಡ್‌ರವರು ಇವರಿಗೆ ಸಹಾಯಮಾಡುತ್ತಿದ್ದಾರೆ. ಈ ದುರ್ಬೀನನ್ನು ರಚಿಸುವುದಕ್ಕೆ ೩ ವರ್ಷ ಕಾಲಹಿಡಿಯುವುದು. ಇದರಿಂದ ಖಗೋಳವನ್ನು ನೋಡಿದರೆ ಅಂಗಾರಕ ಗ್ರಹವು ಭೂಮಿಗೆ ೧|| ಮೈಲಿಯ ದೂರದಲ್ಲಿರುವಂತೆ ಕಾಣುವುದು. ಅಂಗಾರಕ ಗ್ರಹದಲ್ಲಿ ಮನುಷ್ಯಸಂಚಾರವು ಇರುವುದನ್ನೂ ಇಲ್ಲದಿರುವುದನ್ನೂ ಅಲ್ಲಿನವರ ನಾಗರಕತಾವಿಗಳನ್ನೂ ಕಂಡುಹಿಡಿಯುವುದಕ್ಕೆ ಇದು ವಿಶೇಷಸಾಧಕವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಗ್ರೀಕ್ ತುರ್ಕಿ ಯುದ್ಧದಲ್ಲಿ ಅಂಗೋರಾವು ಗ್ರೀಕರಿಗೆ ವಶವಾಯಿತೆಂದು ಬಂದಿದ್ದ ಸುದ್ದಿಯು ಸುಳ್ಳು. ಇನ್ನೂ ಆ ಪಟ್ಟಣವು ತುರುಕರ ವಶದಲ್ಲೇ ಇದೆ. ಅದರ ಪ್ರಾಪ್ತಿಗಾಗಿ ನಡೆದ ಯುದ್ಧದಲ್ಲಿ ಆ ಪಟ್ಟಣಕ್ಕೆ ೫೦ ಮೈಲಿಗಳ ದೂರದಲ್ಲೇ ಕಡುಕಾಳಗಗಳಾಗಿ ಗ್ರೀಕರು ತಡೆಯಲ್ಪಟ್ಟು ಹಿಮ್ಮೆಟ್ಟಿರುವರು. ಆದರೂ ಗ್ರೀಸ್ ಪ್ರಭುವಾದ ಕಾನ್ಸ್ಟಾಂಟೈನರು ಡೇಲಿ ಟೆಲಿಗ್ರಾಫ್‌ಪತ್ರಿಕಾ ಪ್ರತಿನಿಧಿಯೊಡನೆ ಕಳೆದ ತಾ|| ೬ ರಲ್ಲಿ ಮಾತನಾಡಿದಾಗ್ಗೆ—ಸ್ವಲ್ಪ ಕಾಲದೊಳಗೇ ಗ್ರೀಕ್‌ಸೈನ್ಯಗಳು ಮುಸ್ತಫಾಕೇಮಲ್‌ಸೈನ್ಯವನ್ನು ಜಯಿಸಿ ಅಂಗೋರಾವನ್ನು ವಶಪಡಿಸಿಕೊಳ್ಳುವುದು ನಿಜವೆಂದೂ, ಕಾನ್ಸ್ಟಾಂಟಿನೋಪಲನ್ನು ಕೂಡ ವಶಪಡಿಸಿಕೊಳ್ಳುವುದು ಅಸಾಧ್ಯವಲ್ಲವೆಂದೂ, ಹಾಗಾದರೆ ನಿರಂತರವೂ ಕಂಟಕದಂತೆ ಬಾಧಿಸುತ್ತಿರುವ ಪೂರ್ವದೇಶೀಯ ಸಮಸ್ಯೆಯು ಕೊನೆಗಂಡು ಹೋಗುವುದೆಂದೂ, ಆದರೆ ಮಿತ್ರಮಂಡಲಿಯವರು ಅದಕ್ಕೆ ಒಪ್ಪುವುದಿಲ್ಲವೆಂದೂ, ಅಂತರ್ಜಾತೀಯ ಮನಸ್ಪರ್ಧೆಗಳು ಈಗಲೇ ಹೆಚ್ಚಾಗಿರುವಾಗ ಅವನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ತನಗಿಷ್ಟವಿಲ್ಲವೆಂದೂ ಹೇಳಿಕೊಂಡಿರುವರು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ವಿದ್ಯಾಭ್ಯಾಸದ ಇಲಾಖಾಧಿಕಾರಿಗಳಲ್ಲಿ ವಿಜ್ಞಾಪನೆ.

ದಾವಣಗೆರೆ ತಾ|| ಹದಡಿ.

ಈ ಗ್ರಾಮದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ಹೋಬಳಿ ಹೆಡ್‌ಕ್ವಾರ್ಟರ್ ಆದ್ದರಿಂದ ಕಂಪಲ್‌ಸರಿ ಸ್ಕೂಲ್ ಮಾಡುವುದಾಗಿಯೂ ಮತ್ತು ಎರಡುವರೆ ಸಾವಿರ ರೂಪಾಯಿಗಳನ್ನು ಮುಟ್ಟಿಸಿ ಒಂದು ಸ್ಕೂಲ್ ಕಟ್ಟಿಸುವುದಾಗಿಯೂ ಅಪ್ಪಣೆಕೊಡಿಸಿ ನಮ್ಮಿಂದ ೫೦೦ ರೂಪಾಯಿ ವಸೂಲ್ಮಾಡಿದ್ದಲ್ಲದೆ ಡಾಕ್ಟರ್‌ಸಾಹೇಬರವರು ಚುನಾಯಿಸಿದ ಎರಡೆಕರೆ ಜಮೀನನ್ನೂ ೧೦೦ ರೂಪಾಯಿಗಳನ್ನೂ ನಾವುಗಳು ಕೊಟ್ಟು ಜಾಗವನ್ನು ಸರ್ಕಾರಿ ಸುಫರ್ದುಮಾಡಿರುತ್ತೇವೆ. ಈ ಕೆಲಸವಾಗಿ ಒಂದು ವರ್ಷವಾದರೂ ಸರ್ಕಾರದಿಂದ ಯಾವ ತರದೂದನ್ನೂ ನಡೆಸಲಿಲ್ಲ. ಇದರಿಂದ ಜನಗಳಿಗೆ ಪ್ರೋತ್ಸಾಹ ತಪ್ಪಿ ಸ್ಕೂಲ್ ಹೀನಸ್ಥಿತಿ ಬರುವ ಸಂದರ್ಭವಾಗಿದೆ. ಸರ್ಕಾರದವರು ಜಾಗ್ರತೆಯಿಂದ ಮಂಜೂರು ಮಾಡಿಸಿಕೊಡಬೇಕಾಗಿ ಪ್ರಾರ್ಥನೆ.

ನಂಜುಂಡಯ್ಯ, ಹದಡಿ.

ಬೈಲಹೊಂಗಲ.

ತಾ|| ೧-೯-೧೯೨೧ ನೆ ಗುರುವಾರ ದಿವಸ ಇಲ್ಲಿಯ ಶ್ರೀ ಬಸವೇಶ್ವರ ದೇವರ ಶ್ರಾವಣಮಾಸದ ವಾರ್ಷಿಕೋತ್ಸವದ ಕಾಲಕ್ಕೆ - ಶ್ರೀಮನ್ನಿರಂಜನ ಮುರಘರಾಜೇಂದ್ರ ಮಹಾಸ್ವಾಮಿಯವರು ಯಕ್ಕುಂಡಿಮಠ" ಇವರ ಅಡ್ಡಪಲ್ಲಕ್ಕಿಯ ಮಹೋತ್ಸವವು ವ್ಯಾಸನತೋಳು ಮೊದಲಾದ ಸಮಸ್ತ ಬಿರುದಾವಳಿಗಳಿಂದೊಡಗೂಡಿ ಮಧ್ಯಾಹ್ನದ ಮೂರು ಘಂಟೆಗೆ ಹೊರಟು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಶಿವನಾಮ ಜಯಘೋಷದೊಡನೆ ಸಾಯಂಕಾಲದ ಆರು ಘಂಟೆಗೆ ಶ್ರೀ ಬಸವೇಶ್ವರ ದೇವಾಲಯ (ಗೊಂಬಿಗುಡಿ) ಕ್ಕೆ ಬಂದು ತಲ್ಪಿತು. ನಂತರ ಗುಡಿಯ ಪಟಾಂಗಣದ ಮುಂದೆ ವೇದಮೂರ್ತಿ ಕಾಶೀನಾಥ ಶಾಸ್ತ್ರಿಗಳವರು ವೀರಶೈವ ಧಾರ್ಮಿಕತತ್ವ ಈ ವಿಷಯದ ಮೇಲೆ ವಕ್ತೃತ್ವ ಪೂರ್ಣಭಾಷಣಮಾಡಿದರು. ಆಮೇಲೆ ಜಂಗಮಾರ್ಚನವಾದ ನಂತರ ಯಾವತ್ತೂ ಬಡಜನರಿಗೆ ಅನ್ನಸಂತರ್ಪಣಮಾಡಲ್ಪಟ್ಟಿತು.

ಓರ್ವಪ್ರೇಕ್ಷಕ.

ಬೀರೂರು.

ಕಡೂರು ತಾ|| ಬೀರೂರಿನ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಉಬ್ರಾಣಿಮಠದ ಎನ್. ಎಂ. ಶಿವಲಿಂಗಪ್ಪಯ್ಯನವರ ಮಾತೃಶ್ರೀಯವರು (ಬಲಕಾಯಿಯವರು) ಕಳೆದ ತಾ|| ೨೨ರಲ್ಲಿ ಕೈಲಾಸವಾಸಿಗಳಾದರು. ಇವರು ಗುರುದೇವತಾಭಕ್ತಿಯುಳ್ಳವರೂ ಪರೋಪಕಾರಿಗಳೂ ಆಗಿದ್ದು ಹೆಸರ್ವಡೆದಿದ್ದರು. ಶಿವಲಿಂಗಪ್ಪಯ್ಯನವರು ತಮ್ಮ ಘನತೆಗೆ ತಕ್ಕಂತೆ ಮಾತೃಶ್ರೀಯವರ ಉತ್ತರಕ್ರಿಯಾದಿಗಳನ್ನು ವಿಶೇಷ ದಾನಧರ್ಮಗಳಿಂದಲೂ ವೈಭವದಿಂದಲೂ ನೆರವೇರಿಸಿದರು. ಅಲ್ಲದೆ ಈ ತಾ|| ೧ ರಲ್ಲಿ ಭಕ್ತಮಹೇಶ್ವರರುಗಳಿಗೂ ತಮ್ಮಾಪ್ತೇಷ್ಟರಿಗೂ ಆಹ್ವಾನಪತ್ರಿಕೆಗಳನ್ನು ಕೊಟ್ಟು ಅವರೆಲ್ಲರನ್ನೂ ಬರಮಾಡಿಕೊಂಡು ಗುರುದೇವತಾರ್ಚನೆಯನ್ನೂ ಮೃಷ್ಟಾನ್ನ ಭೋಜನವನ್ನೂ ಮಾಡಿಸಿ ಭೂರಿದಕ್ಷಿಣೆಯಿಂದ ಸಂತೃಪ್ತಿಪಡಿಸಿದರು. ಮ|| ಶಿವಲಿಂಗಪ್ಪಯ್ಯನವರ ಅತಿಥಿ ಸತ್ಕಾರಾತಿಶಯಕ್ಕೆ ನೆರೆದಿದ್ದ ಭಕ್ತಮಾಹೇಶ್ವರರೆಲ್ಲರೂ ಬಹಳವಾಗಿ ಮೆಚ್ಚಿ ಅವರನ್ನು ಕೊಂಡಾಡಿದರೆಂದು ತಿಳುಹಲು ಹರ್ಷವಾಗುತ್ತದೆ.

ಓರ್ವ ಪ್ರತ್ಯಕ್ಷದರ್ಶಿ.

ಕಡ್ತಿ ಸ್ಕೂಲು.

ಮ|| ತೋಟಪ್ಪಯ್ಯನವರು ದಾವಣಗೆರೆಯಿಂದ ೫ ತಿಂಗಳುಗಳ ಕೆಳಗೆ ಈ ಗ್ರಾಮಕ್ಕೆ ಬಂದು ಒಂದು ಸ್ಕೂಲನ್ನು ಸ್ಥಾಪಿಸಿ ಬಹಳ ಶ್ರದ್ಧೆಯಿಂದ ಪಾಠಹೇಳುತ್ತಿರುವುದರಿಂದ ಸ್ಕೂಲು ನಿತ್ಯದಲ್ಲೂ ಅಭಿವೃದ್ಧಿಯಾಗುತ್ತ ಮೇಷ್ಟರು ಒಳ್ಳೇ ಹೆಸರನ್ನು ಪಡೆದಿರುವರು. ಮತ್ತು ಇವರು ಇಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿ ವಿದ್ಯಾರ್ಥಿಗಳ ಉಪನ್ಯಾಸವನ್ನು ಮಾಡಿಸುತ್ತಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ಕಳೆದ ತಾ|| ೨೬ ರಲ್ಲಿ ಇಲ್ಲಿಯ ಗುರುದೇವರ ಮಠದ ಹಣ್ಣಕೊಟ್ರಪ್ಪನವರು ರೇವಣಸಿದ್ಧೇಶ್ವರ ಪುರಾಣವನ್ನು ಓದಿ ನೆರೆದಿದ್ದ ಜನರ ಮನಸ್ಸಿನಲ್ಲಿ ಬಹಳ ಭಕ್ತಿಯನ್ನು ಹುಟ್ಟಿಸಿದರು. ಸಾಯಂಕಾಲದಲ್ಲಿ ಅಘಣಿ ಶ್ರೀ ಶಿವಯೋಗಿಗಳ ಭಾವಚಿತ್ರವನ್ನೂ ಪುರಾಣವನ್ನೂ ಪಾಲಕ್ಕಿಯಲ್ಲಿಟ್ಟು ಶೃಂಗರಿಸಿ ಬೀದಿಗಳಲ್ಲಿ ಮೆರೆವಣಿಗೆಮಾಡಿ ಬಂದು ಶ್ರೀಗುರುದೇವರಮಠದ ಚನ್ನವೀರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಕೂಡಿ ಗುರು ಆಧಿಕ್ಯದ ಮೇಲೆ ಅಧ್ಯಕ್ಷರೂ ಮತ್ತೆ ಕೆಲರೂ ಭಾಷಣಗಳನ್ನು ಮಾಡಿದರು. ೧೫ ದಿನಗಳಿಗೊಂದಾವೃತ್ತಿ ಈ ಊರಲ್ಲಿ ಕೂಡುವ ಈ ಸಭೆಯ ಖರ್ಚನ್ನು ವಹಿಸಿಕೊಳ್ಳುವುದಾಗಿ ಮ|| ಬಕ್ಕಾರಕೊಟ್ರಪ್ಪನವರು ಒಪ್ಪಿ ವಾಗ್ದಾನಮಾಡಿದರು.

ವಿದ್ಯಾಭಿಮಾನಿ.

ವಿಜಾಪುರ.

ವಿಜಾಪುರ ಷಹರ ಚರಮೂರ್ತಿ ಮಠದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಶ್ರಾವಣಮಾಸದಲ್ಲಿ ಶ್ರೀ ದೇಶಿಕಮೂರ್ತಿ ಶಂಭುಲಿಂಗಸ್ವಾಮಿಗಳವರಿಂದ ಪುರಾಣ ಪ್ರವಚನವು ನಡೆಯಿತು. ಸ್ವಾಮಿಗಳವರು ಶ್ರೀ ವ್ಯಾಸಪ್ರಣೀತವಾದ ಬ್ರಹ್ಮ ಪುರಾಣದ ಉಪಪುರಾಣವೆನಿಸುವ ಶಿವಮಾಹಾತ್ಮ್ಯ, ಶಿವಪೂಜಾಧಿಕ್ಯವನ್ನು ವ್ಯಕ್ತಪಡಿಸುವ ಸೌರಪುರಾಣದ ವಿಷಯವನ್ನು ಭಗವದ್ಗೀತಾ ಉಪನಿಷತ್ತು ಆಗಮ ಮೊದಲಾದ ಸಂಸ್ಕೃತ ಕನ್ನಡ, ಮರಾಠಿ, ಗ್ರಂಥಗಳ ಆಧಾರಗಳಿಂದ ಪುಷ್ಟೀಕರಿಸಿ ಅಷ್ಟಾವರಣದ ಮಹಿಮೆ ವ್ಯಕ್ತವಾಗುವಂತೆ ಶ್ರೋತೃಗಳ ಮನದಲ್ಲಿ ಪರಿಣಾಮವಾಗುವಂತೆ ಹೇಳಿದರು. ಈ ಪುರಾಣ ಪ್ರವಚನವು ಇದೇ ಶ್ರಾವಣ ಶು|| ೫ ಗೆ ಆರಂಭವಾಗಿ ಭಾದ್ರಪದ ಶು|| ೬ ಗೆ ಗಣಾರಾಧನೆ ಪುರಾಣೋತ್ಸವಗಳು ಜರುಗಿ ಮುಗಿಸಲ್ಪಟ್ಟಿತು. ಪುರಾಣವು ಪ್ರತಿ ದಿವಸ ಸಂಜೆಯ ೬ ರಿಂದ ೮ ಘಂಟೆಯವರೆಗೆ ನಿಯಮಿತವಾಗಿ ನಡೆದು ಪ್ರತಿ ದಿನವೂ ೩೦೦-೪೦೦ ಜನರು ವೇಳೆಗೆ ಸರಿಯಾಗಿ ಒಳ್ಳೇ ಆತುರದಿಂದ ಬರುವಂತೆ ಮಾಡಿತು. ಈ ಊರು [illegible]

ಸ್ಥಾನ ವಿದ್ವಾಂಸರಿಂದ ಪ್ರಸಂಗವಶಾತ್ ಬಂದ ಪ್ರವಾಸಿಕ ಸಾಧುಸತ್ಪುರುಷರು ಈ ಶ್ರವಣ ಸಮಯಕ್ಕೆ ಒದಗಿ ಆಶಾನಂದವನ್ನು ಪಟ್ಟರು. ಸ್ವಾಮಿಗಳವರು ಸಂಗೀತಯುಕ್ತ ಅಸ್ಖಲಿತವಾಗಿ ಪಾಮರರಿಗೂ ಸಹ ತಿಳಿಯುವಂತೆ ಮಾಡಿದ ಪುರಾಣಪ್ರವಚನವು ಈಗಿನ ಕಾಲಕ್ಕೆ ಅವಶ್ಯವಾದ ಧಾರ್ಮಿಕ ನೈತಿಕ ಸಂಗತಿಗಳ ಜಾಗ್ರತೆಯನ್ನು ಚೆನ್ನಾಗಿ ಉಂಟುಮಾಡಿತು. ಈ ಲಾಭವನ್ನು ತಾವು ಪಡೆದುಕೊಂಡು ಪರರಿಗೂ ಅನುಕೂಲವಾಡಿಕೊಟ್ಟದ್ದು ಶ್ರೀಮುಂಡಪ್ಪ ಅಕ್ಕಿ ವ ಗುರುಲಿಂಗಪ್ಪ ಗೂಗವಾದ ಮೊದಲಾದ ಭಕ್ತಜನರಿಗೆ ಭೂಷಣವದೆ. ಓರ್ವ ಪ್ರೇಕ್ಷಕ.

ಬಳ್ಳಾರಿ.

ಈ ಪಟ್ಟಣಕ್ಕೆ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸ್ವಾರಿಯು ದಯಮಾಡಿಸಿ ೧ ತಿಂಗಳಾಯಿತು. ಪ್ರತಿ ದಿವಸ ಮಹಾ ಸನ್ನಿಧಿಯಲ್ಲಿ ಆಸ್ಥಾನ ಪಂಡಿತ ಧರ್ಮರತ್ನ ಶ್ರೀ ಶಂಕರ ಶಾಸ್ತ್ರಿಗಳವರ ಧಾರ್ಮಿಕೋಪನ್ಯಾಸಗಳು ಜರುಗುತ್ತಿರುವವು. ತಾ|| ೩-೯-೧೯೨೧ರಲ್ಲಿ ಸನ್ನಾ ಮಹಾರಾಜರು ಜಗದ್ಗುರುಗಳವರ ಕೀರ್ತಿಯನ್ನು ಕೇಳಿ ದರ್ಶನಕ್ಕೋಸ್ಕರ ಆಗಮಿಸಿದರು. ಮಹಾರಾಜರು ಗುರುವರ್ಯರನ್ನು ಅತಿ ಭಕ್ತಿಯಿಂದ ನಮಸ್ಕರಿಸಿ ಉಚಿತಾಸನದಲ್ಲಿ ಕುಳಿತುಕೊಂಡನಂತರ ಸಂಸ್ಥಾನದ ವೈದಿಕ ಮಂಡಲಿಯಿಂದ ಮಂತ್ರಾಕ್ಷತ ಪುಷ್ಪಹಾರಾದಿಗಳು ಸಮರ್ಪಿಸಲ್ಪಟ್ಟವು. ಆ ಮೇಲೆ ಪಂ|| ಕಾಶೀನಾಥ ಶಾಸ್ತ್ರಿಗಳು ಮಹಾರಾಜರ ಬಗ್ಗೆ ತಮ್ಮಿಂದ ರಚಿಸಲ್ಪಟ್ಟ ಸಂಸ್ಕೃತ ಪ್ರಬಂಧವನ್ನು ಸಮರ್ಪಿಸಿ ವೀರಶೈವ ಸಿದ್ಧಾಂತದ ಬಗ್ಗೆಯೂ ಹಾಗೂ ಈ ಪರಮ ಪವಿತ್ರ ಸಿದ್ಧಾಂತವನ್ನು ಸ್ಥಾಪಿಸಿದಂಥ ಜಗದ್ಗುರು ಪಂಚಾಚಾರ್ಯರ ವಿಷಯದಲ್ಲಿಯೂ ಮಹಾರಾಜರಿಗೆ ತಿಳಿಯುವಂತೆ ಹಿಂದೀಭಾಷೆಯಲ್ಲಿ ಅತಿ ಮನೋಹರವಾದ ಭಾಷಣವನ್ನು ಮಾಡಿದರು. ಮಹಾರಾಜರು ಸಂತುಷ್ಟ ಚಿತ್ತರಾಗಿ ಲಿಂಗೋದ್ಭವರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಪಟವನ್ನೂ ಹಾಗೂ ಭಸ್ಮ ರುದ್ರಾಕ್ಷಿಗಳನ್ನೂ ಆಶೀರ್ವದಿಸಬೇಕೆಂದು ಬೇಡಿಕೊಳ್ಳಲಾಗಿ ಗುರುವರ್ಯರು ಬೋಧರೂಪವಾಗಿ ಆಶೀರ್ವದಿಸಿದರು. ಮಹಾರಾಜರು ಆಶೀರ್ವಾದವನ್ನು ಸ್ವೀಕರಿಸಿ ತಮ್ಮ ಸ್ಥಾನಕ್ಕೆ ತೆರಳಿದರು. ಮಹಾರಾಜರ ಸ್ವಾಗತಾದಿ ಕಾರ್ಯಗಳಲ್ಲಿ ಇಲ್ಲಿಯ ಸುಪ್ರಸಿದ್ಧ ಶ್ರೀಮಂತರಾದ ಗಡಿಗಿ ಮುದ್ದಪ್ಪನವರು ಹಾಗೂ ಚಿಕ್ಕವೀರಪ್ಪನವರೇ ಮೊದಲಾದ ಪ್ರಮುಖರು ವಿಶೇಷ ಶ್ರದ್ಧೆಯನ್ನು ವಹಿಸಿದ್ದರು. ಇದೇ ಅಲ್ಲವೆ ನಿಜವಾದ ಗುರುಭಕ್ತಿಯು? ಆ ಮೇಲೆ ವೇ|| ಪಂ|| ಶಂಕರಶಾಸ್ತ್ರಿಗಳವರು ಆಸ್ತಿಕ್ಯವೆಂಬ ವಿಷಯದ ಮೇಲೆ ಸರಸವಾದ ಭಾಷಣವನ್ನು ಮಾಡಿದರು. ಅಷ್ಟಕ್ಕೆ ರಾತ್ರಿ ೮ ಘಂಟೆಯಾದಕಾರಣ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಬಳ್ಳಾರಿ ಡಿಸ್ಟ್ರಿಕ್ಟ್ ಚಿತ್ರವಾಡಿಗಿ.

ಈ ಗ್ರಾಮದಲ್ಲಿ ತಾ|| ೩೧-೮-೧೯೨೧ ನೇ ದಿವಸ ಶಾಂತಪ್ಪ, ವೀರಭದ್ರಪ್ಪ, ಕುಬಸದ ಹಮ್ಮಿಗಿ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಕೂಡಿತ್ತು. ಸಭೆಗೆ ರಾ|| ಗುರುರಾಜಗೌಡರು ಪಾಟೀಲ್, ಸೋಮಪ್ಪ ಶೆಟ್ಟರ, ಸಾಂಬಣ್ಣ ಹೊಸಅಂಗಡಿ, ಸಿದ್ಧನಂಜಯ್ಯನವರು ಹೊಸಹಳ್ಳಿಮಠ, ಸಂಗನಬಸವಯ್ಯ ಕಂಚಕೇರಿಮಠ, ಸಿದ್ಧರಾಮಯ್ಯ ಮಠದ, ಬಸಪ್ಪ ಸೂರಶೆಟ್ಟಿ, ಟಿ. ಎಂ. ಶಾಂತಲಿಂಗಯ್ಯ, ಹನುಮಂತಪ್ಪ ಮಾದನೂರು ಇವರೇ ಮೊದಲಾದ ಪ್ರಮುಖಜನರು ಕೂಡಿದ್ದರಲ್ಲದೆ ಗದಿಗಿನಿಂದ ಗುರುಸಿದ್ದಪ್ಪ ಬಳ್ಳಾರಿ, ಮುದಿಬಸಪ್ಪ ಬೊಳ್ಳೊಳ್ಳಿ, ದೊಡ್ಡಪ್ಪ ಗುಗ್ಗರಿ, ಪುಟ್ಟಯ್ಯನವರು ಕಲ್ಲುಮಠ, ಶಿವರುದ್ರಪ್ಪ ಹೂಲಿ ಇವರುಗಳು ಆಗಮಿಸಿದ್ದರು. ಸಭೆಯಲ್ಲಿ ಮನುಷ್ಯಕರ್ತವ್ಯ ಎಂಬುವ ವಿಷಯದ ಮೇಲೆ ಮುದಿಬಸಪ್ಪ ಬೊಳ್ಳೊಳ್ಳಿ ಇವರೂ, ವೇಳೆಯ ಮಹತ್ವ ಎಂಬುವ ವಿಷಯದ ಬಗ್ಗೆ ಗುರುಸಿದ್ಧಪ್ಪ ಬಳ್ಳಾರಿ ಇವರೂ, ಧರ್ಮ ಈ ವಿಷಯದಲ್ಲಿ ಟಿ. ಎಂ. ಶಾಂತಲಿಂಗಯ್ಯನವರೂ, ವಾಚನಾಲಯವನ್ನು ಸ್ಥಾಪಿಸುವ ವಿಷಯದಲ್ಲಿ ಕಂಚಿಕೇರಿ ಮಠದ ಸಂಗನಬಸವಯ್ಯನವರೂ, ಒಳ್ಳೇ ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿದರು. ಆಮೇಲೆ ಅಧ್ಯಕ್ಷರು ಮೇಲಿನ ಎಲ್ಲಾ ವಿಷಯಗಳನ್ನೂ ಸಂಕ್ಷಿಪ್ತವಾಗಿ ತಿಳಿಸಿದ್ದಲ್ಲದೆ, ವಾಚನಾಲಯದಿಂದ ಆಗತಕ್ಕ ಪ್ರಯೋಜನವನ್ನು ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಬಿಂಬಿಸುವಂತೆ ಹೇಳಿದರು. ಕೂಡಲೇ ಸರ್ವಜನರ ಸಮ್ಮತಿಯ ಮೇರೆಗೆ ಒಂದು ವಾಚನಾಲಯವನ್ನು ಸ್ಥಾಪಿಸುವದು ನಿರ್ಣಯವಾಗಿ ೧೩ ಜನ ಮೆಂಬರುಗಳಿಂದ ೧೩೦ ರೂಪಾಯಿ ಚಂದಾ ಕೂಡಿಸಲ್ಪಟ್ಟದ್ದಲ್ಲದೆ ಪ್ರತಿವರ್ಷ ತಪ್ಪದೆ ೭೫ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ಚಂದಾಹಣವನ್ನು ಕೊಡುವಂತೆಯೂ ವಾಗ್ದಾನವನ್ನಿತ್ತರು. ಈ ವಾಚನಾಲಯಕ್ಕಾಗಿ ಗುಗ್ರಿ ದೊಡ್ಡಪ್ಪನವರು ತಮ್ಮ ಮಳಿಗೆಯನ್ನು ಬಾಡಿಗೆಯಿಲ್ಲದಂತೆ ಕೊಡುತ್ತೇವೆಂದು ಸಭೆಯಲ್ಲಿಯೇ ಅಭಿವಚನವನ್ನಿತ್ತರು. ಆ ಪ್ರಕಾರಕ್ಕೆ ಸದರಿಯವರ ಮಳಿಗೆಯಲ್ಲಿಯೇ ಶ್ರೀ ವಿರೂಪಾಕ್ಷೇಶ್ವರ ವಾಚನಾಲಯ ಎಂಬ ಹೆಸರಿನಿಂದ ಒಂದು ವಾಚನಾಲಯವನ್ನು ಸ್ಥಾಪಿಸಿ ಹೊಸಹಳ್ಳಿಮಠದ ಸಿದ್ಧನಂಜಯ್ಯನವರನ್ನು ಪ್ರೆಸಿಡೆಂಟರನ್ನಾಗಿಯೂ ಕಂಚಿಕೇರಿಮಠದ ಸಂಗನಬಸವಯ್ಯನವರನ್ನು ಸೆಕ್ರೆಟರಿಗಳನ್ನಾಗಿಯೂ ನಿಯಮಿಸಿ ಈ ಕಾರ್ಯವನ್ನು ನಿರ್ವಿಘ್ನತೆಯಿಂದ ಸಾಂಗಗೊಳಿಸಲು ಆ ದಯಾನಿಧಿಯಾದ ಪರಮಾತ್ಮನನ್ನು ಧ್ಯಾನಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಮೈಸೂರು ಡಿ||ನಲ್ಲಿ ಬ್ರಾಹ್ಮಣೇತರ ನೌಕರರ ದೌರ್ಭಾಗ್ಯ.

ಬ್ರಾಹ್ಮಣೇತರರ ಏಳಿಗೆಯನ್ನು ಸೈರಿಸಲಾರದೆ ಹೊಟ್ಟೆ ಹಿಸುಕಿಕೊಂಡು ನಾನಾವಿಧವಾಗಿ ಗಲಭೆಮಾಡುತ್ತಿರುವ ಕೆಲವು ಬ್ರಾಹ್ಮಣನಾಮಧಾರಿಗಳ ವಿಚಾರವಾಗಿ ತಾವು ಪದೇ ಪದೇ ಬರೆಯುತ್ತಿರುವಿರಿ. ತಮ್ಮ ಬರವಣಿಗೆಗಳಿಂದ ಸದ್ಯ! ಫಲವಿಲ್ಲವಾದಾಗ್ಯೂ, ಜನರು ಚೆನ್ನಾಗಿ ಎಚ್ಚತ್ತುಕೊಂಡಾಗ ಮತ್ತು ಪ್ರಜಾಮಿತ್ರಮಂಡಲಿಯ ಬ್ರಾಂಚುಸಂಘಗಳು ಪ್ರತಿ ತಾಲ್ಲೂಕುಗಳಲ್ಲೂ ಏರ್ಪಟ್ಟಾಗ ಅವುಗಳ ಪ್ರಯೋಜನಗಳನ್ನು ವರ್ಣಿಸಲು ಸಾಧ್ಯವಲ್ಲ. ಇದಿರಲಿ. ನಮ್ಮ ಡಿಸ್ಟ್ರಿಕ್ಟುಗಳಲ್ಲಿರುವ ಬ್ರಾಹ್ಮಣೇತರ ನೌಕರರಿಗೆ ತುಂಬಾ ತೊಂದರೆ ಇರುವುದನ್ನು ನಾನು ಬಹಿರಂಗಪಡಿಸಲು ಇಚ್ಛಿಸುತ್ತೇನೆ. ಅವರಿಗೆ ಯಾವ ವಿಧವಾಗಿಯೂ ಸಹಾಯವಿಲ್ಲದೆ ಇದ್ದಹಾಗೆಯೇ ಇದ್ದು ಹೋಗುತ್ತಿದ್ದಾರೆ. ನಮ್ಮ ಡಿ|| ಆಫೀಸಿನಲ್ಲಿ Personal Assistant or District Sherastedar ರೂ ಸಹ ಬ್ರಾಹ್ಮಣರೇ ಆದ್ದರಿಂದಲೂ, ಮೆ|| ಬೌರಿಂಗ್ ಸಾಹೇಬರ ಆಡಳಿತದಲ್ಲಿ ಬ್ರಾಹ್ಮಣ ನೌಕರರ ಹಾವಳಿಯೇ ಹೆಚ್ಚಾಗಿದ್ದದ್ದರಿಂದಲೂ ಇತರರಿಗೆ ಯಾವ ವಿಧವಾಗಿಯೂ ಪ್ರಯೋಜನವಾಗಲಿಲ್ಲವೆಂತ ಜನರು ಅಂದುಕೊಳ್ಳುತ್ತಾರೆ. ಕೆಲ ಅಮಲ್ದಾರರುಗಳನ್ನಂತೂ ಸ್ವೇಚ್ಛಾಪ್ರವರ್ತನೆಯಲ್ಲಿ ಹೇಳತೀರದು. ಬ್ರಾಹ್ಮಣ ಶೇಕದಾರ್ರಿಗೆ ಪ್ರಮೋಷನ್ ಕೊಡಬೇಕಾಗಿ ಬಂದಾಗ ಲಿಂಗಾಯತ ಶೇಕದಾರರೊಬ್ಬರಿಗೆ ಕೊಡಲ್ಪಟ್ಟಿದ್ದ ಪ್ರಮೋಷನ್ ತೆಗೆದು ಕೊಟ್ಟರು! ಎಂತಹನ್ಯಾಯ! ಬ್ರಾಹ್ಮಣೇತರ ಶೇಕದಾರರೊಬ್ಬರ ಮೇಲೆ ೫-೬ ಜನ ಬ್ರಾಹ್ಮಣ ನೌಕರರನ್ನು ಏರಿಸಿಬಿಟ್ಟು ಕೇಳಿದರೆ ಇಲ್ಲದಸಲ್ಲದ ಸುದ್ದಿಗಳನ್ನು ಹೇಳುತ್ತಾರಂತೆ! ಅವರೂ ಸರ್ಕಾರದಲ್ಲಿ ಅಪೀಲು ಮಾಡಿರುವುದರಿಂದ ನಾನು ಹೆಚ್ಚಿಗೆ ಬರೆಯುವುದಿಲ್ಲ. ನಂಜನಗೂಡು ತಾಲ್ಲೂಕಿನಲ್ಲಂತು ಅಮಲ್ದಾರರ ಹಾವಳಿ ಹೇಳತೀರದಾಗಿದೆ. ಬ್ರಹ್ಮದ್ವೇಷಿಗಳೆಂತ ನಮ್ಮನ್ನು ದೂರುವ ಇವರು ತಮ್ಮ ಬ್ರಾಹ್ಮಣೇತರ ನೌಕರರ ವಿಚಾರದಲ್ಲಿ ನಡೆದುಕೊಳ್ಳುತ್ತಿರುವ ಭಾವವನ್ನು ನೋಡಿದರೆ ಇಂಥವರ ಪಕ್ಷಪಾತವನ್ನೂ ಅನ್ಯಾಯವನ್ನೂ ಉದ್ಘಾಟನೆ ಮಾಡದಿದ್ದರೆ ದೇಶಕ್ಕೆ ಕ್ಷೇಮವೇ ಆಗುವ ಹಾಗಿಲ್ಲ. ಒಂದು ವರ್ಷದಲ್ಲಿ ೩ ಜನ ಮುಸಲ್ಮಾನರು, ೨ ಒಕ್ಕಲಿಗರು, ೧ ನಾಯ್ಡು, ೧ ಜಟ್ಟಿ ಈ ಮೇರೆ ಈ ತಾಲ್ಲೂಕಿಗೆ ಬಂದು ಹೊರಟುಹೋದರು. ಅಮಲ್ದಾರರ ಬರವಣಿಗೆಯೇ ಈ ನೌಕರರ ಮೃತ್ಯುವಾಗಿ, ಸುಳ್ಳುನಿಜವನ್ನು ಪರಿಶೀಲಿಸುವವರೇ ಇಲ್ಲವಾದರು. "ಎತ್ತು ಈಯಿತೆಂದರೆ ಕೊಟ್ಟಿಗೆಯಲ್ಲಿ ಕಟ್ಟು" ಎಂಬ ಗಾದೆಗೆ ಸಮನಾಗಿಯೇ ನಡೆಯುತ್ತಿದೆ. ಈಗ ಒಬ್ಬ Christian ಶೇಕದಾರರ ಕಾಲ ಒದಗಿದೆ. ಇವರು ಕೌಲಂದೆ ಮುಸಾಫರಖಾನೆಯಲ್ಲಿ ತಂಗಬಾರದೆಂತಲೂ, ಬ್ರಾಹ್ಮಣ ಚತ್ರದಲ್ಲಿ ಊಟಮಾಡಬಾರದೆಂತಲೂ ಮೊದಲಾಗಿ ಬ್ರಾಹ್ಮಣ ಪಾರುಪತ್ತೆಗಾರರಿಗೆ ಈ ಬ್ರಾಹ್ಮಣ ಅಮಲ್ದಾರ್ರಿಂದ ಹುಕುಂ ಮಾಡಲ್ಪಟ್ಟ ಕೂಡಲೇ ಪಾಪ! ಕ್ರಿಶ್ಚಿಯನ್ ಶೇಕದಾರರು ಚಿಂದಿಯೆತ್ತಬೇಕಾಯಿತು! ಇದೆಂತಹನ್ಯಾಯ? ಈ ಶೇಕದಾರರಿಗೆ ಚತ್ರದಲ್ಲಿ ಮುಫತ್ತು ಅನ್ನಹಾಕುತ್ತಿದ್ದರೆ? ಇಲ್ಲ. ನಾನು ವಿಚಾರಮಾಡಿದ್ದರಲ್ಲಿ ಪಾರುಪತ್ತೆಗಾರನೊಡನೆ ಶೇಕದಾರರು ಕಲೆತು ಸ್ವಂತ ಏರ್ಪಾಡು ಮಾಡಿಕೊಂಡಿದ್ದಂತೆಯೂ, ಅದಕ್ಕಾಗಿ ಸ್ವಲ್ಪ ರೂಪಾಯಿಗಳನ್ನು ಮಾತನಾಡಿದ್ದಂತೆಯೂ ತಿಳಿಯಬರುತ್ತದೆ. ಹೀಗಿದ್ದೂ ಅನಾವಶ್ಯಕವಾಗಿ ಅಮಲ್ದಾರರು ಪ್ರವೇಶ ಮಾಡಿ ಕಿರುಕುಳವನ್ನು ಹುಟ್ಟಿಸುವುದು ನೋಡಿದರೆ ಇವರ ಸ್ವಭಾವವನ್ನು ವಾಚಕರು ಸುಲಭವಾಗಿ ತಿಳಿಯಬಹುದು. ಅಲ್ಲದೆ ಈ ಕ್ರಿಶ್ಚಿಯನ್ ಶೇಕದಾರರು ಅಂಜುಬುರುಕರೆಂದೂ ಸಹ ಅಮಲ್ದಾರರು ಮೇಲಿನವರಿಗೆ ತಿಳಿಯಪಡಿಸಿದರಂತೆ! ಅಮಲ್ದಾರರ ಸಾಮರ್ಥ್ಯವನ್ನೂ ಮತ್ತು ಇವರು ನಂಜನಗೂಡಿನಲ್ಲಿ ನಡೆಸುವ ಆಡಳಿತವನ್ನೂ ಮುಂದೆ ಕ್ರಮವಾಗಿ ಬರೆಯುತ್ತೇನೆ. ಶ್ರೀಕಂಠ.

ಮಂಜರಾಬಾದು ತಾಲ್ಲೂಕು ವೀರಶೈವ ವಿದ್ಯಾವರ್ಧಕ ಸಂಘ.

ಸನ್ ೧೯೨೧ನೆ ಆಗಸ್ಟ್ ಮಾಹೆ ೨೯ನೆ ತಾರೀಖು ಸೋಮವಾರ ಮಂಜರಾಬಾದು ತಾ|| ಬಾಳ್ಳುಪೇಟೆಯಲ್ಲಿ ಮ|| ರಾ|| ಕಾಫಿ ಪ್ಲಾಂಟರು ಬಸವಪ್ಪಗೌಡರವರ ಮನೆ ಮಹಡಿಮೇಲೆ ಸಕಲೇಶಪುರದ ರೆವಿನ್ಯೂ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮ|| ಜಿ. ನಾರಾಯಣರಾವ್ ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ಇದೇ ತಾಲ್ಲೂಕು ಬೆಳಗೋಡು ಹೋಬಳಿ ಮತ್ತು ಕೆಂಚಮ್ಮನ ಹೊಸಕೋಟೆ ಹೋಬಳಿಗಳ ವೀರಶೈವ ಮಹಾಜನಗಳ ಸಭೆ ಸೇರಿದ್ದಿತು. ಈ ಸಭೆಗೆ ಸಕಲೇಶಪುರದಿಂದ ಅಮಲ್ದಾರ್ ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರೂ, ಡಾಕ್ಟರ್ ಮ|| ಸಿ. ಶಾಮರಾವ್ ಬಿ. ಎ. ಎಲ್. ಎಂ. ಅಂಡ್ ಯಸ್. ರವರೂ, ಹೆಡ್ಮಾಸ್ಟರ್ ಮ|| ಟಿ. ಜಿ. ಲಿಂಗಪ್ಪಯ್ಯನವರೂ, ಮ|| ಮಳಲಿ ವೆಂಕಟರಾಮಯ್ಯನವರೂ, ಸಂಘದ ಸೆಕ್ರೆಟರಿ ಬಿ. ದೇವಪ್ಪಗೌಡರು ಸಹ ದಯಮಾಡಿಸಿದ್ದರು. ಅದುವರೆಗೆ ಆಗಿದ್ದ ಸಂಘದ ಅಭಿವೃದ್ಧಿ ರಿಪೋರ್ಟನ್ನು ಮ|| ದೇವಪ್ಪಗೌಡರು ಓದಿದರು. ವಿದ್ಯೆಯ ವಿಚಾರವಾಗಿ ಸಂಘದ ಎಗ್ಜಿಕ್ಯುಟೀವ್ ಮೆಂಬರಾದ ಬಾಳ್ಳುಪೇಟೆ ಮ|| ಗುರಪ್ಪಗೌಡರು ಮತ್ತು ಜಮ್ಮನಹಳ್ಳಿ ಫಿರ್ಕಾ ಶಾ|| ಚೆನ್ನಪ್ಪಯ್ಯನವರು ಸಹ ಉಪನ್ಯಾಸಮಾಡಿದರು. ತರುವಾಯ ಅಮಲ್ದಾರ್ ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರು ವಿದ್ಯೆಯ ವಿಚಾರದಲ್ಲಿ ಮಂಜರಾಬಾದು ತಾಲ್ಲೂಕು ವೀರಶೈವರು ಎಷ್ಟು ಹಿಂದುಳಿದಿದ್ದಾರೆಂಬುದನ್ನೂ ಇದರಿಂದ ಅವರಿಗುಂಟಾಗುತ್ತಿರುವ ಅರ್ಥಹಾನಿ, ಮಾನಹಾನಿಗಳನ್ನೂ, ಸಕಲೇಶಪುರದಲ್ಲಿ ಸ್ಟೂಡೆಂಟ್ಸ್ ಹೋಂ ಸ್ಥಾಪಿಸುವುದರ ಅವಶ್ಯಕತೆಯನ್ನೂ, ಅದರಿಂದ ಉಂಟಾಗುವ ವಿಶೇಷ ಫಲಗಳನ್ನೂ ಕುರಿತು ಸಭೆಯವರ ಮನಸ್ಸಿಗೆ ಚೆನ್ನಾಗಿ ನಾಟುವಂತೆ ಕೆಲವು ಉದಾರಿಗಳಾದ ದೊಡ್ಡ ಮನುಷ್ಯರ ಧರ್ಮಕಾರ್ಯಗಳನ್ನು ಉದಹರಿಸಿ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿ, ಮ|| ಬೆಳ್ಳೂರು ದೇವಪ್ಪಗೌಡರು ವೀರಶೈವ ಜನಾಂಗದ ವಿದ್ಯಾಭಿವೃದ್ಧಿಗಾಗಿ ಏರ್ಪಡಿಸಿರುವ ಈ ಸಂಘದ ಸೆಕ್ರೆಟರಿಯ ಕೆಲಸವನ್ನು ಅಂಗೀಕರಿಸಿ ತದಾರಭ್ಯ ತಮ್ಮ ತನುಮನಗಳನ್ನು ಈ ಸಂಘಕ್ಕೆ ಧಾರೆಯೆರೆದು ಅದರ ಉದ್ದೇಶವನ್ನು ನೆರವೇರಿಸುವುದರಲ್ಲಿ ಬದ್ಧಕಂಕಣರಾಗಿ ಸಮಾಜಸೇವೆಯನ್ನು ಮಾಡುತ್ತಿರುವುದೇ ಈ ತಾಲ್ಲೂಕಿನ ಮಹಾಜನಗಳ ಅಭ್ಯುದಯಕ್ಕೆ ಶುಭಸೂಚನೆಯೆಂದೂ ತಿಳಿಸಿದರು. ತರುವಾಯ ಮಳಲಿ ಮ|| ವೆಂಕಟರಾಮಯ್ಯನವರು ಸಭಿಕರಿಂದ ನಿರೀಕ್ಷಿಸಲ್ಪಟ್ಟಿರುವ ಸಹಾಯವು ಅವರವರ ಶಕ್ತಿಗೆ ಕೇವಲ ಕಡಿಮೆಯಾಗಿದ್ದಾಗ್ಯೂ, ಅದರಿಂದ ಅವರಿಗೆ ಅಮೋಘವಾದ ಶಾಶ್ವತ ಫಲವು ದೊರೆಯುವುದರಲ್ಲಿ ಸಂಶಯವಿಲ್ಲವೆಂದು ತಿಳಿಸಿದರು. ಅನಂತರ ಅಲ್ಲಿ ನೆರೆದಿದ್ದ ವೀರಶೈವ ಮಹನೀಯರು ಕೇವಲ ಉತ್ಸಾಹದಿಂದ ಮುಂಬರಿದು ಸಂಘಕ್ಕೆ ೪೩೦ ರೂಪಾಯಿಗಳವರೆಗೆ ಚಂದಾಹಾಕಿದುದಲ್ಲದೆ ಸಾಲೀಯಾನಾ ಸ್ಟೂಡೆಂಟ್ಸ್ ಹೋಮಿಗೆ ಕೊಡುವದಾಗಿ ವಾಗ್ದಾನ ಮಾಡಿದ ಬತ್ತವು ೩೦ ಹೇರಿನ ವರೆಗೆ ಆಯಿತು. ತರುವಾಯ ಸಭಾಧ್ಯಕ್ಷರು ಅಲ್ಲಿ ನೆರೆದಿದ್ದ ವೀರಶೈವರು ತಮ್ಮ ಏಳ್ಗೆಗಾಗಿ ಧಾರಾಳವಾಗಿ ಧನವನ್ನೂ ಧಾನ್ಯವನ್ನೂ ಸಹ ವಾಗ್ದಾನಮಾಡಿದುದಕ್ಕಾಗಿ ಅವರನ್ನು ಶ್ಲಾಘಿಸಿ ತಮ್ಮ ತಮ್ಮ ನೆರೆಹೊರೆಯಲ್ಲಿರುವ ವೀರಶೈವರನ್ನು ತಮ್ಮಂತೆಯೇ ಉದಾರ ಬುದ್ಧಿಯಿಂದ ಸಂಘಕ್ಕೆ ಸಹಾಯಕರಾಗುವಂತೆ ಅವರನ್ನು ಪ್ರೋತ್ಸಾಹಿಸುವುದು ಪ್ರತಿಯೊಬ್ಬ ವೀರಶೈವ ದೊಡ್ಡಮನುಷ್ಯರ ಮುಖ್ಯ ಕರ್ತವ್ಯವೆಂದು ಅಪ್ಪಣೆ ಕೊಡಿಸಿದರು. ಬಾಳ್ಳುಪೇಟೆಯ ಕಾಫಿ ಪ್ಲಾಂಟರುಗಳಾದ ಮ|| ರಾ|| ಶ್ರೀಗಳಾದಂಥ ಗುರಪ್ಪಗೌಡರೂ, ಬಸಪ್ಪಗೌಡರೂ, ಶಾಂತಮಲ್ಲೇಗೌಡರೂ, ಪಟೇಲ್ ಪುಟ್ಟಸೋಮೇಗೌಡರೂ, ಮಲ್ಲೇಗೌಡರ ಮಗ ಸಿದ್ದಪ್ಪನವರೂ, ಚಾವಡಿ ಮನೆ ಬಸವೇಗೌಡರೂ, ಇನ್ನೂ ಮುಂತಾದ ವೀರಶೈವ ದೊಡ್ಡಮನುಷ್ಯರು ಈ ಸಭೆಯ ಏರ್ಪಾಟಿನಲ್ಲಿ ವಹಿಸಿದ ಆದರವೂ, ಶ್ರಮವೂ, ಬಹಳ ಶ್ಲಾಘನೀಯವಾಗಿದ್ದವು. ಇದೇ ರೀತಿ ಈ ತಾಲ್ಲೂಕಿನ ಇತರ ವೀರಶೈವ ಮಹನೀಯರೂ ಇವರ ಮೇಲ್ಪಂಗ್ತಿಯನ್ನೇ ಅನುಸರಿಸಿ ಕೀರ್ತಿಯುತರಾಗುವರೆಂದು ನಂಬಿದೆ. ತರುವಾಯ ಪ್ರಜೆಗಳ ಅಭಿವೃದ್ಧಿಯಲ್ಲಿ ಆಸಕ್ತರಾಗಿರುವ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ, ಅವರ ಸರ್ಕಾರದವರಿಗೂ, ಮತ್ತು ಸಭಾಧ್ಯಕ್ಷರಿಗೂ, ಜಯಘೋಷಮಾಡಿ ಸಭಾಕಾರ್ಯವು ಭರಕಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಶಕ್ತಿಶೋಧಕ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 47

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ ರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಳಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ರೈಲ್ವೆ ಲೀವರ್ ವಾಚ್.

15 ಬಹುಮಾನಗಳ ಸಹಿತ ಕ್ರಯ ರೂ. 5—0—0.

ಈ ತಿಂಗಳೊಳಗಾಗಿ ಈ ಗಡಿಯಾರವನ್ನು ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ಬಹುಮಾನಗಳನ್ನು ಕೊಡುವೆವು. ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಿಸಿದ್ದು. ಧೂಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೂಮೂ ನಿಕ್ಕಲ್‌ಬೆಳ್ಳಿಯ ಮುಚ್ಚಳವೂ ಇದೆ. ಕಾಲವನ್ನು ವ್ಯತ್ಯಾಸವಿಲ್ಲದೆ ತೋರಿಸುವದು. ಈ ಗಡಿಯಾರವು ಲೋಕ ಪ್ರಸಿದ್ಧಿಯಾಗುವ ಹಾಗೆ 15 ಬಹುಮಾನಗಳನ್ನೂ ಕೊಡುವೆವು. ತುರಾಯಿ 1, ಬಂಗಾರದ ಗಿಲೀಟಿನ ಜಡೆಬಿಲ್ಲೆ 1, ಸೆಂಟ್‌ಬಾಟಲ್ 1, ಬಾಚಣಿಗೆ 1, ರಾಗಮಾಲಿಕೆ 1, ಉತ್ತರಮುಖಿ 1, ಹೇರಾಯಿಲ್ 1, ಷರಟು ಗುಂಡಿಗಳು 1, ಕೈವಸ್ತ್ರ 1, ವಜ್ರದ ಉಂಗುರ 1, ಸರಪಣಿ 1, ಕನ್ನಡಿ 1 ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ ರೂ. 5—0—0.



ವಿಳಾಸ—ಎಲ್ಜಿನ್ ವಾಚ್ ಕಂಪೆನಿ,
50 102 ಜೈನಬಜಾರ್ ರೋಡು ಮದರಾಸು.

೧೯೨೧ ನೆಯ ಇಸವಿ ಸೆಪ್ಟೆಂಬರ್ ತಾ|| ೧೮ ರಿಂದ ೧೯೨೧ ನೆಯ ಸೆಪ್ಟೆಂಬರ್ ತಾ|| ೨೪ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ ನೆಯ ದುರ್ಮತಿನಾಮ ಸಂವತ್ಸರದ ಭಾದ್ರಪದ ಬಹುಳ ಪಾಡ್ಯಮಿಯಿಂದ ಭಾದ್ರಪದ ಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾಮಾಸ
18	ಭಾನು	ಪಾಡ್ಯ	17-40	ಉಭಾ	31-49	3
19	ಸೋಮ	ಬಿದಿಗೆ	20-9	ರೇವ	35-31	4
20	ಮಂಗಳ	ತದಿಗೆ	21-22	ಅಶ್ವಿ	38-3	5
21	ಬುಧ	ಚೌತಿ	21-20	ಭರ	39-18	6
22	ಗುರು	ಪಂಚ	20-0	ಕೃತ್ತಿ	39-16	7
23	ಶುಕ್ರ	ಷಷ್ಠಿ	17-28	ರೋಹಿ	38-12	8
24	ಶನಿ	ಸಪ್ತ	14-0	ಮೃಗ	36-4	9

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಪೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೇಯ ಇಸವಿ ಸೆಪ್ಟೆಂಬರ್ ತಾರೀಖು ೨೫ ನೇಯ ಭಾನುವಾರ (ಸಂಚಿಕೆ ೩೮

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೇಡೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
36 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
30 ಕಂಪನಿ, ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 19

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಶಕ್ತಿಶೋಧಕ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 48

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ ರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿಯಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಶೀತಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ಥಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಳಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲ ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ದಸರಾ ಮಹೋತ್ಸವ.

(ದುರ್ಮತಿನಾಮಸಂವತ್ಸರದ ಆಶ್ವಯುಜ ಶುದ್ಧ)

ಅಕ್ಟೋಬರ್ ೧೯೨೧.

೨ ಭಾನುವಾರ (೧)—ಪ್ರಾತಃಕಾಲ ೯ ಘಂಟೆಗೆ ಸಿಂಹಾಸನಾರೋಹಣ, ದಿವಾನರಿಂದಲೂ, ಖಾಸಾ ಅಳಿಯಂದರುಗಳು, ಇತರ ಸರದಾರರುಗಳು, ಸಿವಿಲ್ ಆಫೀಸರುಗಳು ಮತ್ತು ಇತರರಿಂದಲೂ ನಜರ್, ಸಾಯಂಕಾಲ ೬ ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವದು. ೭ ಘಂಟೆಗೆ ದರ್ಬಾರ್-ಮಿಲಿಟರಿ ಆಫೀಸರುಗಳಿಂದಲೂ ಮತ್ತು ಪೊಲೀಸು ಆಫೀಸರುಗಳಿಂದಲೂ ನಜರ್.

೩ ಸೋಮವಾರ (೨) ೪ ಮಂಗಳವಾರ (೩) ೫ ಬುಧವಾರ (೪) ೬ ಗುರುವಾರ (೫) ೭ ಶುಕ್ರವಾರ (೬) ೮ ಶನಿವಾರ (೭) ೯ ಭಾನುವಾರ (೮)	ಪ್ರಾತಃಕಾಲ ೮ ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವದು. ಸಾಯಂಕಾಲ ೬ ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವದು. ೭ ಘಂಟೆಗೆ ದರ್ಬಾರ್.

೧೦ ಸೋಮವಾರ (೯)—ಪ್ರಾತಃಕಾಲ ೮. ಘಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧ ಕೆರೆಯಿಂದ ಅರಮನೆಗೆ ಬಿಜಮಾಡುವದು, ಅನಂತರ ಆಯುಧ ಗಜಾಶ್ವಾದಿಗಳ ಪೂಜೆ. ಸಾಯಂಕಾಲ ೭ ಘಂಟೆಗೆ ದರ್ಬಾರ್.

(ಯೂರೋಪಿಯನ್ ಗೆಸ್ಟ್ಸ್).

೧೧ ಮಂಗಳವಾರ (೧೦)-ಪ್ರಾತಃಕಾಲ ೯ ಘಂಟೆಗೆ ಆಯುಧ ಗಜಾಶ್ವಬನ್ನಿ ಮಂಟಪಕ್ಕೆ ಬಿಜಮಾಡುವದು, ಅನಂತರ ಜಟ್ಟೀಕಾಳಗ. ಸಾಯಂಕಾಲ ೪ ಘಂಟೆಗೆ ಜಂಬೂಸವಾರಿ. ಅನಂತರ ಅಂಬಾವಿಳಾಸದಲ್ಲಿ ದರ್ಬಾರ್.

೧೨ ಬುಧವಾರ (೧೧)-ಸಾಯಂಕಾಲ ೭ ಘಂಟೆಗೆ ದರ್ಬಾರ್, ಸೆಜ್ಜೆ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದಿರುವ ಸಿವಿಲ್, ಮಿಳಿಟರಿ ಮತ್ತು ಪೊಲೀಸ್ ಆಫೀಸರುಗಳಿಂದಲೂ ಮತ್ತು ಕೆಲವು ಪ್ರಜಾಪ್ರತಿನಿಧಿಗಳಿಂದಲೂ ನಜರ್.

೧೩ ಗುರುವಾರ (೧೨)-ಸಾಯಂಕಾಲ ೭ ಘಂಟೆಗೆ ದರ್ಬಾರ್, ಉಳಿದ ಪ್ರಜಾಪ್ರತಿನಿಧಿಗಳಿಂದ ನಜರ್.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಸೆಪ್ಟಂಬರ್ ತಾ|| ೨೫ ನೆಯ ಭಾನುವಾರ.

ಪ್ರಜಾಮಿತ್ರಮಂಡಲಿ.

ಈ ಮಂಡಲಿಯು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದರೂ ಇದರ ಕರ್ತೃತ್ವಶಕ್ತಿಯನ್ನು ನೋಡಿ ನಮ್ಮ ಸಂಸ್ಥಾನದ ಸ್ವಾರ್ಥೈಕಸಾಧಕರೂ ಪರೋತ್ಕರ್ಷಾಸಹನರೂ ಆದ ಕೆಲವರು ತತ್ತರಿಸಿ ಹೋಗಿರುವರು. ಮರೆಯಲ್ಲಿ ನಿಂತು ಕೊಡಲಿಯನ್ನು ಬೀಸಿದರೆ ಇದರ ಶಿರಚ್ಛೇದವಾಗಬಹುದೆಂದು ಅವರು ಯೋಚಿಸಿಕೊಂಡಿರುವರು. ಅವರ ಮುಗ್ಧತೆಯನ್ನು ನೋಡಿದರೆ ನಗೆ ಬರುತ್ತದೆ. ಏಕೆಂದರೆ—ದುಃಖಾರ್ತರಾದ ದೀನಪ್ರಜೆಗಳ ಸಮುದ್ಧಾರಕ್ಕಾಗಿ ಜಗದೀಶ್ವರನ ಅನುಗ್ರಹದಿಂದ ಅವತರಿಸಿರುವ ಸತ್ಪುತ್ರನೇ ಈತನೆಂಬುದು ಅವರಿಗೆ ತಿಳಿಯದು. ಬಾವಿಯನ್ನು ತೋಡಿದಷ್ಟೂ ಜಲಸಮೃದ್ಧಿಯು ಹೇಗೆ ಆಗುವುದೋ, ಉಜ್ಜಿದಷ್ಟೂ ರತ್ನತೇಜಸ್ಸು ಹೇಗೆ ಹೆಚ್ಚುವುದೋ, ತಿಕ್ಕಿದಷ್ಟೂ ಶ್ರೀಗಂಧದ ಪರಿಮಳವು ಹೇಗೆ ವೃದ್ಧಿಗೊಳ್ಳುವುದೋ ಹಾಗೆ ಪ್ರತಿಪಕ್ಷದವರಿಂದ ಇದಕ್ಕಾಗಿ ಬಯಸಲ್ಪಡುವ ಕೇಡುಗಳೆಲ್ಲಾ ಇದರ ಅಭ್ಯುದಯಕ್ಕೇ ಸಾಧಕವಾಗುವುವು ಮತ್ತು ದ್ರಾಕ್ಷಾದಿಲತೆಗಳಿಗೂ, ತೇಗು ಮೊದಲಾದ ವೃಕ್ಷಗಳಿಗೂ, ಕಾಫಿ ಟೀ ಮೊದಲಾದ ಗಿಡುಗಳಿಗೂ ಕವೆ ತರಿಯುವಿಕೆಯ (ಕಪಾತ್) ಕೆಲಸವು ಅವುಗಳ ಫಲ ಸಮೃದ್ಧಿ ಅಂಗಪುಷ್ಟಿಗಳಿಗೆ ಅತ್ಯವಶ್ಯಕವಾದ ದೋಹಳಕ್ರಿಯೆ ಯೆನಿಸಿಕೊಂಡಿರುವಂತೆಯೇ ಪರರು ಈ ಮಂಡಲಿಯ ಮೇಲೆ ಮಾಡುವ ದೋಷಾರೋಪಣೆ ಹೀನಯಿಸುವಿಕೆ ಮೊದಲಾದುವುಗಳೆಲ್ಲಾ ಇದರ ಪರಿಪುಷ್ಟಿಗೆ ನಿಜವಾಗಿಯೂ ಸಾಧಕವೇ ಆಗುವುದು.

ಈ ಪ್ರಜಾಮಿತ್ರಮಂಡಲಿಯನ್ನು ಪ್ರಜಾಮೃತ್ಯುಮಂಡಲಿಯೆಂದು ಕೆಲವರು ಕರೆದಿದ್ದಾರೆ. ಅದು ನಿಜ. ಪ್ರಜೆಗಳಲ್ಲಿ ಸತ್ಪ್ರಜೆಗಳು ದುಷ್ಪ್ರಜೆಗಳೆಂದು ಎರಡು ವಿಧವುಂಟು. ದೀನಪ್ರಜೆಗಳ ಉದ್ಧಾರಕ್ಕೆ ಶ್ರೀಮನ್ಮಹಾರಾಜರವರು ಕೃಪೆಯಿಟ್ಟು ಮಾಡುತ್ತಿರುವ ಏರ್ಪಾಟುಗಳನ್ನೂ ಸಾಹಾಯ್ಯವನ್ನೂ ನೋಡಿ ಸಂತೋಷಪಡುತ್ತ ತಮ್ಮ ಸಹೋದರ ಪ್ರಜೆಗಳ ಸರ್ವವಿಧವಾದ ಏಳ್ಗೆಗೂ ತ್ರಿಕರಣಪೂರ್ವಕವಾಗಿ ಸಾಹಾಯ್ಯಮಾಡುತ್ತ, ರಾಜಭಕ್ತಿ ದೇಶಭಕ್ತಿ ಪರಿಪೂರ್ಣರಾಗಿ, ಪರಹಿತಾಚರಣ ತತ್ಪರರಾಗಿ, ಸರ್ವ ಪ್ರಜೆಗಳ ಸೌಹಾರ್ದವನ್ನೂ ಬಯಸುತ್ತ, ಸದ್ಧರ್ಮ ಸುನೀತಿಪರಾಯಣರಾಗಿರುವ ಪ್ರಜೆಗಳೇ ಸತ್ಪ್ರಜೆಗಳು. ಇದು ಅಂಥ ಪ್ರಜಾ-ಪ್ರಜೆಗಳಿಗೆ, ಮಿತ್ರ-ಸ್ನೇಹಿತನಾಗಿರುವುದು. ರಾಜದ್ರೋಹ ಪ್ರಜಾದ್ರೋಹ ದೇಶದ್ರೋಹ ಸತ್ಯದ್ರೋಹ ಧರ್ಮದ್ರೋಹವೆಂಬ ಪಂಚದ್ರೋಹಗಳಿಗೆ ನಿಧಿಗಳಾಗಿ, ಕಪಟನಾಟಕ ಸೂತ್ರಧಾರಿಗಳಾಗಿ, ಪರೋತ್ಕರ್ಷಾಸಹನರಾಗಿ, ಸ್ವಾರ್ಥೈಕ ಲಾಲಸರಾಗಿ, ದೀನರಲ್ಲಿ ನಿಷ್ಕರುಣರಾಗಿ ಸಹೋದರ ವಾತ್ಸಲ್ಯಶೂನ್ಯರಾಗಿ, ಅಸತ್ಯಪ್ರಲಪನ ಶೀಲರಾಗಿ ದುರ್ನಯ ಧುರೀಣರಾಗಿ, ಗೋಮುಖವ್ಯಾಘ್ರರಾಗಿ, ಯಾರಿರುವರೋ ಅಂಥವರೇ ದುಷ್ಪ್ರಜೆಗಳು. ಇದು ಅಂಥ ಪ್ರಜಾ-ದುಷ್ಪ್ರಜೆಗಳಿಗೆ, ಅಮಿತ್ರ-ಶತ್ರುವಾಗಿರುವುದು. ಎಂದರೆ ಅಂಥವರ ಭಾಗಕ್ಕೆ ಇದು ಮೃತ್ಯುವೇ ಸರಿ.

ಆದರೆ ಪಟಿಂಗನಾದ ಒಬ್ಬ ಹುಡುಗನೂ ಕುರುಡನಾದ ಅಜ್ಜನೊಬ್ಬನೂ ಹೋಗಿಬಿದ್ದು ಪ್ರಾಣ ಕಳೆದುಕೊಂಡ ಮಾತ್ರದಿಂದಲೇ ತುಂಬಿದಕೆರೆಯನ್ನು ಮೃತ್ಯುಕುಂಡವೆಂದು ಹೇಳಿ ದೇಶವೆಲ್ಲಾ ಅದನ್ನು ದೂರೀಕರಿಸುವುದೆ? ಲೋಕಪ್ರಕಾಶಕವಾದ ವಿದ್ಯುಚ್ಛಕ್ತಿವಾಹಿನಿಯ ಉಪಯೋಗವನ್ನರಿಯದ ಮೂಢನು ಅದನ್ನು ಪ್ರಾಣಘಾತಕವಾದ ಮೃತ್ಯುಶಲಾಕೆಯೆಂದು ಜರೆದರೆ ಲೋಕವೆಲ್ಲಾ ಅದರ ಉಪಯೋಗವನ್ನು ತ್ಯಜಿಸಿಬಿಡುವುದುಂಟೆ? ಅದರಂತೆ ದುಷ್ಟರಿಗೂ ಅಜ್ಞರಿಗೂ ಪ್ರಜಾಮಿತ್ರಮಂಡಲಿಯು ಭೀಕರವಾಗಿದ್ದ ಮಾತ್ರಕ್ಕೇ ಸಜ್ಜನರಿಗೂ ಸತ್ಪುರುಷರಿಗೂ ಅದು ಹಿತಕರವಾಗಿಯೂ ಪ್ರೀತ್ಯಾಸ್ಪದವಾಗಿಯೂ ಇರದೆ ಹೋಗುವುದಿಲ್ಲ.

ಬಾಲ್ಯಾವಸ್ಥೆಯಲ್ಲಿ ಅದಕ್ಕಿರುವ ಕೃಶಾಂಗವನ್ನು ನೋಡಿ ಕುಹಕಿಗಳು ಕೆಲವರು ಅಣಕವಾಡುತ್ತಿದ್ದಾರೆ. "ನ್ಯಗ್ರೋಧಬೀಜಂ ಕೆಲಂ ನಿಡಿದೇಂ ಪೆರ್ಮರನಾಗದೆ?" ಎಂಬ ನೀತಿವಚನವು ಇವರ ಜ್ಞಪ್ತಿಗೆ ಬಂದಿರಲಾರದು. ಗಂಗಾನದಿಯೂ ಕಾವೇರೀನದಿಯೂ ಜನಿಸುವ ಸ್ಥಲದಲ್ಲಿ ಅದರ ಸ್ವರೂಪವೆಷ್ಟು ಮಟ್ಟಿಗಿರುವುದೆಂಬುದನ್ನು ಈ ಅಣಕವಾಡುವ ಕೂರರುಗಳು ಪರ್ಯಾಲೋಚಿಸಬೇಕು. ನದಿಯು ಒಂದು ಸಣ್ಣ ಪಾತ್ರದಲ್ಲಿ ಹರಿದುಹೋಗುತ್ತಿದ್ದರೂ ಅದರ ಸಣ್ಣ ದೊಡ್ಡ ಕಾಲ್ವೆಗಳೆಲ್ಲಾ ದೇಶದ ತುಂಬಾ ಹರಡಿ ಎಷ್ಟು ಲೋಕೋಪಕಾರ ಮಾಡುತ್ತಿವೆಯೆಂಬುದನ್ನಾದರೂ ಪರ್ಯಾಲೋಚಿಸಿದರೆ, ಈಗ ಒಂದೊಂದು ಮೂಲೆಯಲ್ಲಿ ಮಿಣುಗುಟ್ಟುತ್ತಿರುವ ಪ್ರಜಾಮಿತ್ರಮಂಡಲೀಜ್ಯೋತಿಯ ಪ್ರಕಾಶವು ಎಷ್ಟುಮಟ್ಟಿಗೆ ದೇಶದಲ್ಲೆಲ್ಲಾ ಹರಡಬಲ್ಲುದಾಗಿದೆಯೆಂಬುದು ಗೊತ್ತಾದೀತು. ಚಾಣಾಕ್ಷರುಗಳು ಅದರ ಶಕ್ತಿಯನ್ನು ತೊಟಿಲಲ್ಲೇ ಅರಿತುಕೊಂಡುದರಿಂದಲೇ ಶ್ರೀ ಕೃಷ್ಣವಧೆಗೆ ಕಂಸನು ಪ್ರಯತ್ನಪಟ್ಟಂತೆ ಇದರಮೇಲೆ ಸಾಹಸಮಾಡುತ್ತಿರುವರು. ಲೋಕೋಪಕಾರಕರಾದ ಸೂರ್ಯಚಂದ್ರರನ್ನು ಕೂಡ ದ್ವೇಷಿಸುವ ಪ್ರಾಣಿಗಳು ಲೋಕದಲ್ಲಿರುವಾಗ ದೇಶಹಿತೈಕಚಿಂತಕವಾದ ಈ ಮಂಡಲಿಯನ್ನು ದ್ವೇಷಿಸತಕ್ಕವರು ದೇಶಮಧ್ಯದಲ್ಲಿರುವುದರಲ್ಲಾಶ್ಚರ್ಯವೇನುಂಟು? "ನಿಂದಕರಿರಬೇಕಿರಬೇಕು" ಎಂಬ ನೀತಿವಚನದಂತೆ ನಮ್ಮ ಮಗ್ಗುಲಲ್ಲಿ ಅಂಥವರಿದ್ದರೇ ನಾವು ಎಚ್ಚತ್ತು ನಮ್ಮ ಲೋಪಾಲೋಪಗಳನ್ನು ಸರಿಪಡಿಸಿಕೊಂಡು ಮತ್ತಷ್ಟು ಸಮರ್ಥರೂ ಜಾಗರೂಕರೂ ಆಗಿರುವುದಕ್ಕೆ ಅವಕಾಶವಾಗುವುದಲ್ಲವೆ?

ಈ ನಿಂದಕರು ಮಾಡುವ ಕುಚೋದ್ಯಗಳಿಂದ ನಾವು ಆಗ್ರಹಪಡದೆ ಅಥವಾ ಮನಕುಗ್ಗದೆ ನಮ್ಮ ಯತ್ನಕ್ಕೆ ಮತ್ತಷ್ಟು ಪುಷ್ಟಿಯನ್ನು ಕೊಟ್ಟು ನಮ್ಮ ಪುರುಷಸಿಂಹತ್ವವನ್ನೂ ಕಾರ್ಯಕ್ಷಮತ್ವವನ್ನೂ ವ್ಯಕ್ತಮಾಡುತ್ತ ಬಂದರೆ, ಬೆಳಗಿನಜಾವದಲ್ಲಿದ್ದ ಮಂಜು ದಿನಮಣಿಯು ಆಕಾಶಮಂಡಲವನ್ನೇರುತ್ತ ಬಂದ ಹಾಗೆಲ್ಲಾ ಹೇಳಹೆಸರಿಲ್ಲದೆ ಹರಿದುಹೋಗುವಂತೆ ಕುಚೇಷ್ಟಾವಚನಜಾಲಗಳೆಲ್ಲಾ ನಿರ್ಮೂಲವಾಗಿ ಹೋಗುವುವು. ಅದಕ್ಕಾಗಿ ಹಿಂದುಳಿದ ಜನವರ್ಗಗಳವರು ತಂತಮ್ಮ ಪ್ರತಿಯೊಂದು ಸ್ಥಲಗಳಲ್ಲೂ ಇದರ ಶಾಖೆಯನ್ನೇರ್ಪಡಿಸಿಕೊಂಡು ಏಕಮತ್ಯದಿಂದ ಸ್ವಲಾಭಗಳನ್ನೂ ದೇಶಲಾಭವನ್ನೂ ಮಾಡಿಕೊಳ್ಳಬೇಕು. ಸಂಘಶಕ್ತಿಯ ಮುಂದೆ ವ್ಯಕ್ತಿಶಕ್ತಿಯು ಬಾಳಲಾರದೆಂಬುದು ಸರ್ವರಿಗೂ ಗೊತ್ತಿದೆ. ನಮ್ಮ ಶ್ರೇಯೋವಿರೋಧಿಗಳು ನಮಗೆ ಹಿತರಂತೆ ನಟಿಸಿ ದುರ್ಬೋಧೆ ಮಾಡಿ ನಮ್ಮಲ್ಲಿ ಒಡಕನ್ನು ಹುಟ್ಟಿಸಿ ಕಾರ್ಯಹಾನಿಮಾಡುವುದಕ್ಕೆ ಎಷ್ಟೋ ವಿಧದ ಇಂದ್ರಜಾಲ ಮಹೇಂದ್ರಜಾಲಗಳನ್ನು ಮಾಡುತ್ತಾರೆ. ಅವುಗಳನ್ನೆಲ್ಲಾ ದೀರ್ಘಾಲೋಚನೆಯಿಂದ ತಿಳಿದುಕೊಂಡು, ಆ ಮಾಯಾಜಾಲಕ್ಕೆ ಒಳಗಾಗದೆ, ತಮ್ಮ ಹಿತದಲ್ಲಿ ತ್ರಿಕರಣಪೂರ್ವಕವಾಗಿ ಬದ್ಧಾದರರಾದ ಸಕಲ ಪ್ರಜೆಗಳಲ್ಲೂ ವಿಶ್ವಾಸವಿಟ್ಟು, ಏಕಮತ್ಯದಿಂದ ಪ್ರಜಾಮಿತ್ರಮಂಡಲಿಯ ಶಾಖಾಸಂಘಗಳನ್ನೇರ್ಪಡಿಸಿಕೊಂಡು ಅದರ ಮೂಲಕ ತಮ್ಮಗಳ ಸಕಲ ವಿಧವಾದ ಐಹಿಕ ಸಂಪತ್ತನ್ನೂ ಸಾಧಿಸಿಕೊಳ್ಳಲು ವ್ಯಗ್ರರಾಗಬೇಕು.

ಪ್ರಜಾಮಿತ್ರಮಂಡಲಿಯು ಜಾತಿದ್ವೇಷ ಮತದ್ವೇಷವನ್ನು ಹುಟ್ಟಿಸುತ್ತಿದೆಯೆಂದು ಇದರ ಶತ್ರುಗಳು ಆರೋಪಿಸುವ ದೋಷವು, ಜಾರೆಯು ಪತಿವ್ರತೆಯ ಮೇಲೆ ಹೇರುವ ದೂರಿನಂತೆ ಸಂಪೂರ್ಣವಾಗಿ ನಿರಾಧಾರವಾಗಿರುತ್ತದೆ. ಏಕೆಂದರೆ-ಸಕಲ ಪ್ರಜೆಗಳೂ ತಮತಮಗೆ ಅಭಿರುಚಿಯುಳ್ಳ ಉದ್ಯೋಗಗಳಲ್ಲಿ ನಿರಾತಂಕರಾಗಿ ಪ್ರವರ್ತಿಸಿ ಏಳ್ಗೆಗೆ ಬಂದು ದೇಶವನ್ನು ಮುಂದಕ್ಕೆ ತರಬೇಕೆಂಬುದೂ, ಎಲ್ಲರಿಗೂ ಎಲ್ಲತೆರದ ನ್ಯಾಯಬದ್ಧವಾದ ಧರ್ಮವಾದ ಸ್ವಾತಂತ್ರ್ಯವು ಇದ್ದೇ ತೀರಬೇಕೆಂದೂ ಇದರ ಮುಖ್ಯೋದ್ದೇಶವಾಗಿರುತ್ತದೆ. ವಿದ್ಯಾಬುದ್ಧಿಗಳಲ್ಲಿ ಸಕಲ ಪ್ರಜೆಗಳೂ ಮುಂದಕ್ಕೆಬಂದು ಹಿಂದುಳಿದವರೆಂಬ ಕೀಳ್ತನವನ್ನು ಕಳೆದುಕೊಂಡು ಗೌರವಸಂಪತ್ತಿಯಿಂದ ಬಾಳುವಂತಾಗಬೇಕೆಂಬುದೇ ಇದರ ಅಪೇಕ್ಷೆಯಾಗಿರುತ್ತದೆ. ಇದಕ್ಕಾಗಿ ಆಳುವ ಪ್ರಭುಗಳೇ ತಮ್ಮ ಕಷ್ಟದುಃಖಗಳ ಪರಿಮಾರ್ಜಕರೆಂದು ತ್ರಿಕರಣಪೂರ್ವಕವಾದ ರಾಜಭಕ್ತಿ ವಿಧೇಯತೆಗಳಿಂದ ನಂಬಿ, ಅವರ ಕೃಪಾವಲಂಬನೆಯಿಂದಲೂ ಸ್ವಪ್ರಯತ್ನದಿಂದಲೂ ದೇಶೀಯರೆಲ್ಲರೂ ಪ್ರವರ್ಧಮಾನರಾಗಬೇಕೆಂದು ಬೋಧಿಸುವುದೇ ಇದರ ಶಾಸನವಾಗಿರುತ್ತದೆ. ತನ್ನನ್ನು ದ್ವೇಷಿಸುವವರನ್ನು ದ್ವೇಷಿಸುವುದೂ ಪ್ರೀತಿಸುವವರನ್ನು ಪ್ರೀತಿಸುವುದೂ ಇದರ ಸ್ವಭಾವವಾಗಿದೆ. ಅದು ಲೋಕವಿರುದ್ಧವಾದ ಧರ್ಮವಲ್ಲ. ಹೀಗಿರುವಾಗ ಅದರ ಬುಡದಲ್ಲಿ ಜಾತಿದ್ವೇಷವಿರುವುದೆ? "ಸರ್ಕಾರದ ಉದ್ಯೋಗಗಳ ಪಾಲಿಗೆ ಪರರು ಬಂದರಲ್ಲಾ! ಪತಿತರಾಗಿದ್ದ ಜನರು ಉದ್ಧೃತರಾಗುವರಲ್ಲಾ! ನಮ್ಮ ಪ್ರತಿಷ್ಠೆ ನಮ್ಮ ಗೌರವ ನಮ್ಮ ವಾಚಾಲತ್ವ ನಮ್ಮ ಸಂಪತ್ತಿ ಇವುಗಳ ಸಮಗದ್ದುಗೆಗೆ ಇತರರೆಲ್ಲಾ ಬರುವಂತಾಯಿತಲ್ಲಾ!" ಎಂದು ಕುದಿಯುತ್ತ, ದೇಶದ ಮಹಾ ಪ್ರಜೆಗಳ ಅಭ್ಯುದಯವನ್ನೆಲ್ಲಾ ಕರಬುತ್ತ ಇರುವವರ ಕೂಟದಲ್ಲಿ ಜಾತಿದ್ವೇಷ ಮತದ್ವೇಷಗಳಿಗೆ ಪುಟಹಾಕುವ ತಂತ್ರವಿರುವುದೆ? ಎಂಬುದನ್ನು ನಿರ್ಮತ್ಸರ ಮತಿಗಳಾದ ವಾಚಕರು ಪರ್ಯಾಲೋಚಿಸಬೇಕು.

MAY IT DIE? OR IT OUGHT TO CEASE?

The oracle has again spoken and this time in the cultured columns of the Wealth of Mysore of the 16th September 21. The theme for the oracle is "Praja Mitra Mandali." It is an account of the origin and working of the Praja Mitra Mandali. We gather from this acccount that this much desired Association is of very recent origin and is in the early stages of development. It does not make the Mandali less useful in serving the interests of the people if it has not been registered under Regulation III of 1904. We do not believe that any person is excluded from becoming a member of this Association. All that the Mandalis' rules require is selflessness for the sake of the people who have been systematically neglected by one class of people to whom a mind of charity is unknown. We are not able to see how it comes that the progress of Brahman education is impeded by the activities of the Mandali. It has absolutely nothing to do with the collection of funds of this community or of that community for purposes of education. If perhaps the Brahmana Vidya Sahaya Sangha is engaged in other business than the education of the Brahmana class, there might have been some impediment in carrying out a programme underlying the ostensible object.

What is the attack on the pronoun "We"? Cannot a number of persons however few and still representing a large interest, use the word we? Whether an organisation is a Provincial one or one of a country, it does not make any difference in the use of the word "We." Mr. Iyer is not understandandable in his argument and it is better to leave him to be judged by the public.

In commenting on Mr. Iyer's communication, our contemporary deduces a conclusion which it calls plain and that is, that the persons constituting the Prajamitra Mandali pose themselves as Dewan-makers. This is a clear betrayal of wrong-mindedness, arriving at a conclusion unwarranted by the premises. It is a weakness and that weakness is again corroborated by the further statements in which expressions like "Satans", "Headless Mandali", "Internal policy", "It deserves to die", "May it die" appear. These expressions bespeak of the heart of the persons who are unreasonably discontented because once at least in these 40 years between 1881 and 1921, they are told that they cannot have everything absolutely as they like, that they should not domineer and impose their self interested opinions as those of the people. The very just check on the unchecked career of a handful of men in our Representative Assembly has produced this volume of unreasonableness. "May the Prajamitra Mandali die" is a bad wish, and God will not be pleased with it. We would say that a spirit of this kind ought to cease. Bad spirit out to cease. "May the Praja Mitra Mandali prosper", however few may be the men composed in it so long as the interest they represent is the interest of the people and not alone the interests of the handful of men-gloating under the pride of "Intelligentia" without the heart to preserve it.

Do people who admit such expressions as appear in the correspondence of "Nishpakshapati" (7-9-21) para 2 of "Desabhimani (19-9-21) of the Wealth of Mysore (Sampathabhyudaya) call themselves patriotic? We emphatically say that the spirit is bad. Another expression viz. "Satanic" is making its appearance with a spirit of non-co-operation. The author of this expression is challenged by great men. The great living poet Dr. Rabindranatha Tagore has revised his opinion. The great judge Dr. S. Subramanyam has come out from seclusion and broken his silence. Mr. J. Pollak has protested. Then eminent men do not like a spirit which is absorbed in calling constitutional authorities satanic. Our brothren here who are imbibing this spirit are opposed to the activities of the Praja Mitra Mandali and call it "Prajamrutyu Mandali." It is only a satanic mind which can coin an expression like it. We desire that it ought to cease. Let everyone join the Praja Mitra Mandali and make it the people-maker. We desire that a spirit of co-operation should arise. It is a bad spirit to wish for the death of a Mitra Mandali. This spirit ought to cease.

MUNICIPAL MEMBERS TO THE DASARA REPRESENTATIVE ASSEMBLY.

There have been all over the province new elections to the several Municipal Councils. Elections out of these Council Members to the D. R. Assembly had been made 3 years ago some of whom have been re-elected in the recent elections to their respective Municipal Councils. A question has arisen as to wnether there should be fresh elections to the D. R. Assembly from amongst the new candidates notwithstanding that some of these latters are already on the D. R. Assembly by virtue of the elections which had been made 3 years ago. Supposing that all the elected or nominated members now are new persons, what should have been done. New members to the D. R. Assembly should also be elected again. That is the principle and it does not become different if some or all of them are already members of the D. R. Assembly as previously elected. They cannot be considered as duly elected members to the Assembly from the new constitution. With a fresh election, the former members lose the right of deputation as a matter of course.

Representations are received by us from which it is seen that some old members are likely to go and represent the Municipal Council in the coming D. R. Assembly on the strength of their election made in their favour 3 years ago. We further hear that the Government would accede to such proposals from the councils if made. We very much doubt if this is correct in principle. They have no locus standi as eleeted members by the new council. The council has had a re-birth and members of every other delegation which has to receive its authority from the new body should be re-elected.

We have no doubt that the Government will decide this question in the light which as stated above appears to us as correct. If not, it cuts at the very root of the principle of election.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರು ಪೂನಾಪ್ರಾಂತದಿಂದ ಕಳೆದ ಸೋಮವಾರ ರಾಜಧಾನಿಗೆ ದಯಮಾಡಿಸಿದರು.

ಶ್ರೀಮನ್ಮಹಾರಾಜರು ಹಾಸನ ಡಿಸ್ಟ್ರಿಕ್ಟು ಸಂಚಾರವನ್ನು ಮುಗಿಸಿಕೊಂಡು ಕಳೆದ ಸೋಮವಾರ ರಾಜಧಾನಿಗೆ ದಯಮಾಡಿಸಿದರು.

ದಿವಾನರವರು ರಾಜಧಾನಿಗೆ ದಯಮಾಡಿಸಿದ್ದಾರೆ. ಮಿ|| ಮಿರ್ ಹಂಜಾಹುಸೇನ್‌ರವರು ೧ ವಾರದ ರಜಾ ಪಡೆದು ಮದ್ರಾಸಿಗೆ ಹೋಗಿದ್ದಾರೆ.

ತುಮಕೂರು ತಾಲ್ಲೂಕಿಗೆ ಸೇರಿದ ತರೂರು ಎಂಬ ಗ್ರಾಮದ ಹೆಸರನ್ನು ನಾಗವಲ್ಲಿ ಎಂದು ಕರೆಯಬೇಕೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಮೈಸೂರು ಸರ್ಕಾರದವರು ಬೇಕೆಂದು ಕೇಳಿದ್ದ ಸಾಲಕ್ಕಿಂತಲೂ ಮಿಗಿಲಾಗಿಯೇ ದರಖಾಸ್ತುಗಳು ಆಗಲೇ ಬಂದು ಹೋಗಿವೆಯೆಂದು ಕೇಳುತ್ತೇವೆ.

ಮ|| ಇಂ|| ಶಾಂತಪ್ಪಶೆಟ್ಟರು ನರಸಿಂಹರಾಜಪುರದ ಮ್ಯುನ್ಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರೆಂದು ತಿಳಿಯಿಸಲು ಸಂತೋಷಿಸುತ್ತೇವೆ.

ನಮ್ಮ ಸರ್ಕಾರದವರು ಬೆಂಗಳೂರಿನ ಮ|| ಎ. ಪಾಪಯ್ಯಶೆಟ್ಟರಿಗೆ ಕೆಲ ನಿಬಂಧನೆಗಳಮೇಲೆ ಸಾಬೂನಿನ ಕಾರಖಾನೆಯನ್ನು ವಹಿಸಿಕೊಟ್ಟಿರುತ್ತಾರೆ.

ಮದರಾಸಿನಲ್ಲಿರುವ ಮಿನಿರ್ವಾ ಎಂಬ ಹೆಸರಿನ ಹತ್ತಿಯ ಕರ್ಮಾಗಾರವನ್ನು ಅದರ ಯಜಮಾನರು ಬೆಂಗಳೂರು ಮಲ್ಲೇಶ್ವರಕ್ಕೆ ತಂದು ಸ್ಥಾಪಿಸಬೇಕೆಂದು ಪ್ರಯತ್ನಿಸಿದ್ದಾರೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರಾಗಿದ್ದ ಮ|| ಸಿ. ಗೋಪಾಲಾಚಾರ್ ಬಿ.ಎ., ಯವರು ಅದೇ ಡಿಸ್ಟ್ರಿಕ್ಟಿನ ಟ್ರೆಜರಿ ಇನ್‌ಛಾರ್ಜ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದವರು ಸರ್. ಎಂ. ವಿಶ್ವೇಶ್ವರಯ್ಯನವರ ೬೧ ನೆ ವರ್ಷದ ವರ್ಧಂತ್ಯುತ್ಸವವನ್ನು ಜನೋಪಕಾರಿ ದೊಡ್ಡಣ್ಣನವರ ಹಾಲಿನಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ರಾಜಧಾನಿಯ ಕಲಾಶಾಲಾ ವಿದ್ಯಾರ್ಥಿಗಳು ಕಳೆದ ಭಾನುವಾರ ತಮ್ಮ ವಿದ್ಯಾರ್ಥಿನಿಲಯದಲ್ಲಿ ಗಣೇಶನ ಮಂಗಳಾರತಿಯನ್ನು ವಿಜೃಂಭಣೆಯಿಂದ ನಡೆಯಿಸಿದರು. ವೈ|| ಶ್ರೀ|| ಶೇಷಣ್ಣನವರ ವೀಣಾವಾದನವೂ, ಮ|| ಶ್ರೀನಿವಾಸಯ್ಯಂಗಾರರ ಹಾಡುಗಾರಿಕೆಯೂ ನಡೆದುವು.

ಬೆಂಗಳೂರಿನಲ್ಲಿರುವ ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರು ತಮಗೆ ಕೊಡಲ್ಪಡುತ್ತಿರುವ ಅಲೋಯನ್ನು ಕಡಮೆಯೆಂದು ಮುಷ್ಕರಹಿಡಿಯುವುದರಲ್ಲಿದ್ದರು. ಚೀಫ್ ಕಮ್ಯಾಂಡೆಂಟರಾದ ಲೆ|| ಕ|| ಚಾಮರಾಜ ಅರಸಿನವರು ಪಡಿಸಿದ ಸಮಾಧಾನದಿಂದ ಅವರು ಶಾಂತರಾಗಿರುವರು.

ನಮ್ಮ ದರಬಾರ್ ಭಕ್ಷಿಯವರಾದ ಮ|| ಹೆಚ್. ಲಿಂಗರಾಜ ಅರಸಿನವರ ಯಜಮಾನರಾದ ಎಚ್. ಚಿಕ್ಕೇ ಅರಸಿನವರು ವಾರ್ಧಿಕ್ಯದಿಂದ ಮೊನ್ನೆವಾರ ದೈವಾಧೀನರಾದರು. ಅವರ ಉತ್ತರಕ್ರಿಯೆಗಳನ್ನು ಭಕ್ಷಿಯವರು ಉದಾರವಾಗಿಯೂ ಭಕ್ತಿಭಾವದಿಂದಲೂ ಮೊನ್ನೆಯವರೆಗೂ ನಡೆಯಿಸಿದರು.

ಬರುವ ಅಕ್ಟೋಬರ್ ತಾ|| ೨ ನೆ ಭಾನುವಾರ ನವರಾತ್ರಿಯ ಉತ್ಸವಗಳಿಗೆ ಆರಂಭವಾಗುತ್ತದೆ. ಆದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣಮಾಡುತ್ತಾರೆ. ತಾ|| ೧೧ ನೆ ಮಂಗಳವಾರ ವಿಜಯದಶಮಿಯುತ್ಸವವು ಜರಗುತ್ತದೆ. ಆ ಸಂಬಂಧದ ಪ್ರೋಗ್ರಾಮನ್ನು ಬೇರೆಕಡೆ ಮುದ್ರಿಸಿದ್ದೇವೆ.

ಇನಾಂ ಕಮಿಷನ್ ವರದಿಯಮೇಲೆ ಇನಾಂದಾರರ ಅಭಿಪ್ರಾಯಗಳನ್ನು ತಿಳಿಯಿಸುವುದಕ್ಕೆ ಬರುವವರ್ಷದ ಜೂನ್ ತಿಂಗಳ ಕೊನೆಯವರೆಗೆ ಅವಧಿಯನ್ನು ಸರ್ಕಾರದವರು ಕೊಟ್ಟಿರುತ್ತಾರೆ. ತಮ್ಮ ಅಭಿಪ್ರಾಯವನ್ನು ಚರ್ಚಾಮೂಲಕ ನಿರ್ಧರಿಸುವುದಕ್ಕಾಗಿ ಬರುವ ನವರಾತ್ರಿಯ ಕಾಲದಲ್ಲಿ ರಾಜಧಾನಿಯೊಳಗೆ ಇನಾಂದಾರರ ಸಭೆಯೊಂದು ನಡೆಯುವುದಾಗಿದೆ.

ಮೈಸೂರು ದೊಡ್ಡಪೇಟೆಯ ಆಸ್ಪತ್ರೆರೋಡಿನ ಚೌಕದಲ್ಲಿರುವ ಮ|| ಕಾಡಯ್ಯನವರ ಜವಳಿ ಮಳಿಗೆಗೆ ಮೇಲಿನ ಅಂತಸ್ತಿನಿಂದ ಕನ್ನಕೊರೆದು ಕಳ್ಳರು ಇಳಿಬಿದ್ದು ಕಬ್ಬಿಣದ ಪೆಟ್ಟಿಗೆಯ ಬೀಗವನ್ನು ತೆಗೆದು ಒಳಗಿದ್ದ ನಗದು ೧೩೦೦ ರೂ. ಗಳನ್ನೂ ಕೆಲವು ನಗಗಳನ್ನೂ ಅಪಹರಿಸಿಕೊಂಡು ಹೋಗಿರುವರು. ಸೆಂಟರಲ್ ಪೊಲೀಸ್ ಸ್ಟೇಷನ್ನಿಗೆ ಸಮೀಪವಾಗಿರುವ ಇಂಥ ದೊಡ್ಡಬೀದಿಯ ಚೌಕದಲ್ಲಿ ಇದೂಸೇರಿ ೧ ವರ್ಷದೊಳಗೆ ೩ ಕಳವುಗಳಾದುದನ್ನು ನೋಡಿದರೆ ಪೊಲೀಸು ಬೀಟಿನ ಏರ್ಪಾಟು ಎಷ್ಟು ಶಿಥಿಲವಾಗಿದೆಯೆಂಬುದು ಗೊತ್ತಾಗುತ್ತದೆ.

ಬರುವ ಪ್ರಜಾಪ್ರತಿನಿಧಿಸಭೆಯಲ್ಲಿ ಮಿಲ್ಲರ್ ಕಮಿಟಿವರದಿ, ಹಿಂದುಳಿದವರ ವಿದ್ಯಾರ್ಥಿವೇತನ, ವಿದ್ಯಾಭ್ಯಾಸದ ಮೆಮೋರಾಂಡಂ ಇವುಗಳನ್ನು ನಿರ್ಮೂಲಮಾಡಿಸುವ ಸಾಹಸದ ಪ್ರಶ್ನೆಗಳನ್ನು ಕೆಲವು ಸಭಿಕರು ಕೊಟ್ಟಿರುವುದಾಗಿ ಕೇಳುತ್ತೇವೆ. ದೇಶಾಭ್ಯುದಯಕ್ಕೆ ಸಾಧಕಗಳಾದ ಆ ಯೇರ್ಪಾಟುಗಳನ್ನು ಉಳಿಯಿಸಿಕೊಳ್ಳಲು ಹಿಂದುಳಿದವರ್ಗಗಳ ಅಸೆಂಬ್ಲಿ ಮೆಂಬರುಗಳೆಲ್ಲಾ ಸಿದ್ಧರಾಗಬೇಕು. ಇಲ್ಲದಿದ್ದರೆ ಪ್ರಮಾದವಾದೀತು. ಅದುಕಾರಣ ಯಾವೊಬ್ಬ ಪ್ರತಿನಿಧಿಗಳೂ ಯಾವಕಾರಣಗಳಿಂದಲೂ ತಪ್ಪಿಸಿಕೊಳ್ಳದೆ ಪ್ರಜಾಪ್ರತಿನಿಧಿಸಭೆಗೆ ಬಂದು ತಮ್ಮ ಕರ್ತವ್ಯವನ್ನು ನೆರವೇರಿಸಿ ತಮ್ಮ ಪ್ರಜಾಪ್ರಾತಿನಿಧ್ಯವನ್ನು ಸಾರ್ಥಕಪಡಿಸಿಕೊಳ್ಳಲು ತಪ್ಪಬಾರದು.

ಬೆಂಗಳೂರಿನಲ್ಲಿ ಅಡ್ವೋಕೇಟರಾಗಿದ್ದ ಮ|| ಡಿ. ರಾಘವೇಂದ್ರರಾಯರಿಗೆ ಮುನ್ಸೀಫ್‌ಗಿರಿಯನ್ನು ಕೊಟ್ಟು ಸಾಗರಕ್ಕೆ ಕಳುಹಿಸಿದ್ದಾರೆ. ಅಲ್ಲಿದ್ದ ಮ|| ಸಿ. ಬಿ. ನಾಗಭೂಷಣರಾಯರು ರಜಾಪಡೆದುಕೊಂಡಿದ್ದಾರೆ. ಮೈಸೂರಿನ ಮುನ್ಸೀಫರಾದ ಮ|| ಟಿ. ಸಿಂಗಾರವೇಲು ಮೊದಲಿಯಾರರು ೨೦ ದಿನಗಳ ರಜಾಪಡೆದಿರುವುದರಿಂದ ಬೆಂಗಳೂರಿನ ಅಡ್ವೋಕೇಟರಾದ ಮ|| ಬಿ. ಲಕ್ಷ್ಮೀನಾರಾಯಣ ಜೋಯಿಸ್ ಬಿ.ಎ., ಎಲ್.ಎಲ್.ಬಿ., ಯವರು ಆಕ್ಟಿಂಗ್ ಮುನಸೀಫರಾಗಿ ನಿಯಮಿಸಲ್ಪಟ್ಟಿದ್ದಾರೆ. ಮಿಲ್ಲರ್ ಕಮಿಟಿ ವರದಿ ಪ್ರಕಟವಾದಮೇಲೆ ಯಾವೊಬ್ಬ ಹಿಂದುಳಿದವನಿಗೂ ಇಂಥ ಹೊಸನೇಮಣೂಕಿಯು ಒಂದಾದರೂ ದೊರೆದಿಲ್ಲ. ಆದರೂ ಹೊಟ್ಟೆಬಡಿದುಕೊಳ್ಳುತ್ತಿರುವ ಬ್ರಾಹ್ಮಣಪತ್ರಿಕೆಗಳ ಸೌಜನ್ಯವನ್ನು ಏನೆಂದು ಹೇಳಬೇಕು?

ಬೆಂಗಳೂರು ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯ ಪರ್ಯವಸಾನವು ಕಳೆದ ಶುಕ್ರವಾರ ವ್ಯಕ್ತವಾಯಿತು. ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳು ಆರಿಸಲ್ಪಟ್ಟರು. ಮ|| ಗಳಾದ ಸಿ. ವಿ. ನರಸಿಂಹಯ್ಯಂಗಾರರು, ಬಿ. ವಿ. ಕೃಷ್ಣಯ್ಯಂಗಾರರು, ಪಿ, ಮುನಿಬಸಪ್ಪನವರು, ದೇಶದ ವೀರಭದ್ರಶೆಟ್ಟರು, ಜಿ. ಸಿದ್ಧವೀರಪ್ಪನವರು, ಬಿ. ಕೆ. ಗರುಡಾಚಾರ್ಯರು, ಎಂ. ಸುಬ್ಬಯ್ಯ, ಬಿ. ಎ. ಯವರು, ಗೋಪಾಲಸ್ವಾಮಯ್ಯರು, ವೆಂಕಟರಾಮಯ್ಯ ಬಿ. ಎ. ಯವರು, ಬಿ. ವಿ. ರಾಮಸ್ವಾಮಿಶೆಟ್ಟರು, ಆದಪ್ಪನವರು, ಅಡ್ವೋಕೇಟ್ ವೆಂಕಟಾಚಲಯ್ಯಂಗಾರರು, ಅಡ್ವೋಕೇಟ್ ಎಚ್. ಕೃಷ್ಣಪ್ಪನವರು, ಚಿನ್ನಸಾಮಿಶೆಟ್ಟರು, ಪಿ. ಸುಬ್ಬಯ್ಯಶೆಟ್ಟರು, (ವರ್ತಕಸಂಘ ಪ್ರತಿನಿಧಿ) ಹನುಮಂತಪ್ಪನವರು, ಸಿ. ಹಯವದನರಾಯರು, ಎಚ್. ವಿ. ಚಂದ್ರಶೇಖರಯ್ಯನವರು, ಮ್ಯಾಕಲ್ ಮುನಿಯಪ್ಪನವರು. ಇವರೆಲ್ಲರನ್ನೂ ನಾವು ಅಭಿನಂದಿಸುವುದಲ್ಲದೆ, ಪ್ರಜಾಮಿತ್ರಮಂಡಲಿಯ ಪ್ರಕಟನಪತ್ರದ ನೆಪವನ್ನು ಹೇಳಿಕೊಂಡು ತಮ್ಮ ಉಮೇದುವಾರಿಯನ್ನು ಹಿಂದೆಗೆದುಕೊಳ್ಳುವಂಥ ಸಹಾಯನಿರಾಕರಣವನ್ನೊ ಸಂಕುಚಿತಮತಿಯನ್ನೊ ಭೀತಿಯನ್ನೊ ಬೆಂಗಳೂರಿನ ಬ್ರಾಹ್ಮಣವರ್ಗೀಯರು ವಹಿಸದೆ ಅವರಲ್ಲಿ ೯ ಮಂದಿಗಳು ಜಯಶೀಲರಾಗಿ ಬಂದುದು ಅವರ ವಿವೇಕಕ್ಕೆ ಗುರ್ತಾಗಿದೆ.

ತುರುಕ ಗ್ರೀಕರ ಯುದ್ಧದಲ್ಲಿ ಗ್ರೀಕರಕಡೆ ೨೦ ಸಹಸ್ರಜನರ ಮೇಲೆಯೇ ಮೃತಪಟ್ಟಿರುವರು. ಗ್ರೀಕ್ ಸೈನ್ಯದ ಕೈಯಿ ಬಹಳ ಹಿಂದಾಗಿ ಓಡಿ ಹೋಗುತ್ತಿದ್ದಾರೆ. ತುರುಕರಿಗೆ ಮದ್ದುಗುಂಡು ಮೊದಲಾದವುಗಳ ಸಮೃದ್ಧಿಯು ಚೆನ್ನಾಗಿದೆ. ಥಟ್ಟನೆ ತುರುಕರು ಸನ್ನದ್ಧರಾಗಿ ಮೇಲೆ ಬಿದ್ದರೆ ಗ್ರೀಕರು ಸಂಪೂರ್ಣ ಪರಾಜಿತರಾಗುವ ಸ್ಥಿತಿಯಲ್ಲಿದ್ದಾರಂತೆ.

ಮೈಸೂರು ಅರಸೀಕೆರೆ ಲೋಹಮಾರ್ಗದಲ್ಲಿ ಕೆಲದಿನಗಳಿಂದ ಬಂಡಿಗಳು ಕ್ಲ್ಪ್ತಕಾಲಕ್ಕೆಬಂದು ಸೇರದೆ ೧-೨ ಗಂಟೆಗಳಹೊತ್ತು ತಡವಾಗುತ್ತ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿದೆ. ಮತ್ತು ಮೈಸೂರು ಕಡೆಯಿಂದ ಅರಸೀಕೆರೆಗೆ ಹಗಲುಹೊತ್ತು ಹೋಗುವ ಬಂಡಿಯು ನರಸೀಪುರದಿಂದಾಚೆಗೆ ಇರುವುದೇ ಇಲ್ಲ. ಆಕಡೆಯ ನಿಲ್ದಾಣಗಳೆಲ್ಲಾ ಊರಿಗೆ ದೂರವಾಗಿರುವುದೇ ಹೆಚ್ಚು. ಇದರಿಂದ ಪ್ರಯಾಣಿಕರು ಬಹಳ ತೊಂದರೆಪಡುತ್ತಿದ್ದಾರೆ. ಮಧ್ಯಾಹ್ನದಹೊತ್ತು ೧ ಗಂಟೆಗೆ ಇಲ್ಲಿಂದ ಹೊರಡುವ ಬಂಡಿಯನ್ನು ಬೆಳಗಿನ ೮-೯ ಗಂಟೆಯೊಳಗಾಗಿ ಹೊರಡುವಂತೆ ಮಾಡಿದರೆ ಅನುಕೂಲವಾಗುವುದು. ಪ್ರಯಾಣಿಕರ ಸೌಕರ್ಯದಕಡೆಗೆ ಇಲಾಖೆಯವರು ಗಮನಕೊಡಬೇಕು. ಕಳೆದ ಸೋಮವಾರ ಹಗಲು ಅರಸೀಕೆರೆಯಿಂದ ಹೊರಟಬಂಡಿಯು ಹಾರ್ನಹಳ್ಳಿ ನಿಲ್ದಾಣದ ಬಳಿಯಲ್ಲಿಯೇ ಕೆಟ್ಟುಹೋಗಿ, ಅರಸೀಕೆರೆಯಿಂದ ಬೇರೆ ಇಂಜನನ್ನು ತರಿಸಿಕೊಳ್ಳುವುದಕ್ಕೆ ಅಭಾವವಾದುದರಿಂದ ಮೈಸೂರಿಗೆ ತಂತಿಕೊಟ್ಟು ಇಂಜನನ್ನು ತರಿಸಿಕೊಂಡು ಆ ಬಂಡಿಯನ್ನು ಮೈಸೂರಿಗೆ ರಾತ್ರಿ ೮|| ಗಂಟೆಗೆ ಸೇರಿಸಬೇಕಾಯಿತು. ಇದರಿಂದ ೧೩ ಗಂಟೆ ತಡವಾಗಿ, ಅದರಲ್ಲಿದ್ದ ಪ್ರಯಾಣಿಕರು ಪಟ್ಟ ತೊಂದರೆಯು ಅಪಾರವಾಗಿದ್ದಿತು. ಸರ್ಕಾರಕ್ಕೆ ಸರಿಯಾದ ಆದಾಯವೂ ಇಲ್ಲದೆ ಪ್ರಜೆಗಳಿಗೆ ಸುಖವೂ ಇಲ್ಲದೆ ಇರುವ ಈ ಶಾಖೆಯನ್ನು ನಮ್ಮ ಸರ್ಕಾರವು ಏತಕ್ಕೆ ಕಟ್ಟಿಕೊಂಡಿರುವುದೋ ತಿಳಿಯದು. ಇದಕ್ಕಿಂತಲೂ ಎಂ.ಎಸ್.ಎಂ. ಕಂಪೆನಿಯವರಿಗೆ ವಹಿಸಿಬಿಡುವುದೇ ಕ್ಷೇಮವಲ್ಲವೆ? ಎಂದು ಒಬ್ಬ ಬಾತ್ಮೀದಾರರು ಬರೆದಿರುವರು.

ಬೆಂಗಳೂರಿಗೆ ವ್ಯಾಪಾರಕ್ಕಾಗಿ ೨ ತಿಂಗಳಕೆಳಗೆ ಬೊಂಬಾಯಿಂದ ಬಂದಿದ್ದ ನಗಗಳ ವ್ಯಾಪಾರಿ ನಾರಾಯಣಗೋಸ್ ಎಂಬಾತನು ತನ್ನ ಮಗ ಮತ್ತು ಒಬ್ಬ ಚಿಕ್ಕವಯಸ್ಸಿನ ಮಗಳು ಇವರೊಡನೆ ಕೂಡಿ ಒಂದು ಅಮಾವಾಸ್ಯೆಯ ದಿವಸ ಕೆಂಪಾಂಬುಧಿ ಕೆರೆಗೆ ಸ್ನಾನಮಾಡುವುದಕ್ಕೆ ಹೋಗಿ, ತನ್ನ ನಗಗಳನ್ನು ಕಾದುಕೊಂಡಿರುವುದಕ್ಕೆ ಮಗಳನ್ನು ದಡದಮೇಲೆ ಕುಳ್ಳಿರಿಸಿ, ತಾನೂ ತನ್ನ ಮಗನೂ ಕೆರೆಗೆ ಈಜುಬಿದ್ದರು. ಅದನ್ನೇ ಕಾದುಕೊಂಡು ತುರುಕನವೇಷವನ್ನು ಧರಿಸಿಕೊಂಡಿದ್ದ ಆ ಸಾಹುಕಾರನ ಬಳಿಯಲ್ಲಿ ಪರಿಚಾರಕನಾಗಿದ್ದವನೊಬ್ಬನು ಆ ಹೆಣ್ಣುಮಗುವಿನ ಬಾಯಿಗೆ ಬಟ್ಟೆ ತುರುಕಿ ನಗಗಳನ್ನು ಅಪಹರಿಸಿಕೊಳ್ಳಲುಜ್ಜುಗಿಸಿರುವಲ್ಲಿ ಆ ಮಗುವಿನ ಆರ್ತಧ್ವನಿಯನ್ನು ಕೆರೆ ದಡದಮೇಲೆ ಹೋಗುತ್ತಿದ್ದ ಬಿ. ಎನ್. ಕೃಷ್ಣಮೂರ್ತಿ ಯೆಂಬ ಗೌ|| ಹೈಸ್ಕೂಲು ಸ್ಕೌಟ್ ವಿದ್ಯಾರ್ಥಿಯು ಕೇಳಿ ಥಟ್ಟನೆ ಹೋಗಿ ಕಳ್ಳನಮೇಲೆ ಬೀಳಬೇಕೆನ್ನುವಷ್ಟರಲ್ಲಿ ಅವನು ಹೆಣ್ಣನ್ನು ಬಿಟ್ಟು ತನ್ನ ಚಾಕುವಿನಿಂದ ಇವನನ್ನು ತಿವಿಯುವುದಕ್ಕೆ ಬರುತ್ತಿರಲು ಈತನು ಅವನ ಕೈಗಳನ್ನು ಹಿಡಿದುಕೊಳ್ಳುವಾಗ್ಗೆ ಚಾಕುವಿನ ಮೊನೆ ತಗುಲಿ ಸ್ವಲ್ಪ ಗಾಯಗೊಂಡರೂ ಕಳ್ಳನ ಹೊಟ್ಟೆಗೆ ಬಲವಾದ ಪೆಟ್ಟುಕೊಟ್ಟು ಮೂರ್ಛೆಗೊಳಿಸಿ, ಹೆಣ್ಣುಮಗುವಿನ ಕಡೆಗೆ ಹೋಗುತ್ತಿರುವಾಗ್ಗೆ, ಕೆರೆಯೊಳಗೆ ಈಜಿ ಸುಸ್ತಾಗಿರುವ ತನ್ನ ಮಗನನ್ನು ಹಿಡಿದುಕೊಂಡು ದಡಸೇರಲಾರದೆ ಸಾಹುಕಾರನು ಅರಚಿಕೊಳ್ಳುತ್ತಿರಲು, ಅದನ್ನು ಕೇಳಿ ವಿದ್ಯಾರ್ಥಿಯು ಕೆರೆಗೆ ಈಜುಬಿದ್ದು ಅವರಿಬ್ಬರನ್ನೂ ಸಾಹಸದಿಂದ ದಡ ಸೇರಿಸುವಷ್ಟರಲ್ಲಿ ಕಳ್ಳನು ಎಚ್ಚತ್ತು ಪಲಾಯನ ಹೇಳಿದ್ದನು. ಹೀಗೆ ಈ ವಿದ್ಯಾರ್ಥಿಯಿಂದ ಹೆಣ್ಣುಮಗುವಿನ ಪ್ರಾಣವೂ ಆಸ್ತಿಯೂ, ಕೆರೆಯಲ್ಲಿ ಪ್ರಾಣಾಂತಿಕವಾಗಿ ಪೇಚಾಡುತ್ತಿದ್ದ ತಂದೆ ಮಕ್ಕಳ ಪ್ರಾಣವೂ ರಕ್ಷಿತವಾಯಿತು. ಈ ವಿದ್ಯಾರ್ಥಿಯು ಮೈಸೂರು ದೇಶದ ಬಾಲಚಮೂವಿನಲ್ಲಿರುವುದು ದೇಶಕ್ಕೆ ಕೀರ್ತಿದಾಯಕವಾಯಿತು. ಅದರ ಕೃತಜ್ಞತಾ ಬಹುಮಾನಗಳಿಗಾಗಿ ಸಾಹುಕಾರನು ವಿದ್ಯಾರ್ಥಿಗೆ ಒಂದು ಭಂಗಾರದ ಪದಕವನ್ನೂ, ಆತನ ಮಗನು ಒಂದು ಭಂಗಾರದ ಗಡಿಯಾರವನ್ನೂ ಕಳುಹಿಸಿಕೊಟ್ಟಿರುವರಂತೆ. ಶ್ರೀಮನ್ಮಹಾರಾಜರೂ ಸಹ ಆತನ ಸಾಹಸಕ್ಕೆ ಮೆಚ್ಚಿ ಒಂದು ಬಹುಮಾನ ಮಾಡುವವರಾಗಿದ್ದಾರೆ. ದಿವಾನರವರು ಅಭಿನಂದನಪತ್ರವನ್ನು ಕಳುಹಿಸಿದ್ದಾರೆ. ಘಾತಕನಾದ ಪರಿಚಾರಕನು ಮಾಡಿದ ಅತ್ಯುತ್ಕಟವಾದ ಪಾಪಕೃತ್ಯಕ್ಕೆ ಸಮೀಪದಲ್ಲೇ ತಕ್ಕ ಫಲವು ಲಭಿಸಿದಂತೆ ಆತನು ಬೊಂಬಾಯಿಯಲ್ಲಿ ಸರ್ಪದಷ್ಟನಾಗಿ ಸಾಯುತ್ತಿರುವಾಗ್ಗೆ ತನ್ನ ಪಾಪಕೃತ್ಯಗಳನ್ನೆಲ್ಲಾ ತಾನೇ ಹೇಳಿ ಒಪ್ಪಿಕೊಂಡು ಕ್ಷಮೆಯನ್ನು ಬೇಡಿ ಸತ್ತನು.

ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ— ಚನ್ನಪಟ್ಟಣದಲ್ಲಿರುವ ರೇಷ್ಮೆ ಜವಳಿ ವ್ಯಾಪಾರದ ರಾಮಸಂಜೀವಯ್ಯನಾದ ನಾನು ನನ್ನ ಹೆಸರನ್ನು ರಾಮಸಂಜೀವರೆಡ್ಡಿಯೆಂಬು ಮಾರ್ಪಡಿಸಿರುತ್ತೇನಾಗಿ ಮುಂದೆ ನನ್ನ ಹೆಸರಿಗೆ ಬರೆಯತಕ್ಕವರು ರಾಮಸಂಜೀವರೆಡ್ಡಿ ಎಂದು ಬರೆಯತಕ್ಕದ್ದು.

ರಾಮಸಂಜೀವರೆಡ್ಡಿ, ಚೆನ್ನಪಟ್ಣ.

ವರ್ತಮಾನಸಂಗ್ರಹ.

ಮ|| ಗಾಂಧಿಯವರು ಮದ್ರಾಸಿಗೆ ದಯಮಾಡಿಸಿ ಒಂದೆರಡು ಉಪನ್ಯಾಸಗಳನ್ನು ಮಾಡಿದರು. ಈ ವಾರ ತಿರುಪತಿ ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿ ಉಪನ್ಯಾಸ ಮಾಡುವವರಾಗಿದ್ದಾರೆ.

ವಿದೇಶದಿಂದ ಬಟ್ಟೆಗಳನ್ನು ತರಿಸಕೂಡದೆಂದು ಮದ್ರಾಸಿನ ಬಟ್ಟೆ ವ್ಯಾಪಾರಿಗಳಿಗೆ ಮ|| ಗಾಂಧಿಯವರು ಮಾಡಿದ ಉಪದೇಶಕ್ಕೆ ಅವರುಗಳು ಒಪ್ಪಲಿಲ್ಲ. ಸದ್ಯದಲ್ಲಿ ಅದನ್ನು ಬಹಿಷ್ಕರಿಸಲಾಗುವುದಿಲ್ಲವೆಂದು ತೀರ್ಮಾನಿಸಿದರು.

ರಷ್ಯಾದಲ್ಲಿ ಕ್ಷಾಮಪೀಡಿತರಾಗಿರುವವರ ಸಹಾಯಕ್ಕಾಗಿ ಅಮೇರಿಕಾದವರು ೨೫ ಹಡಗುಗಳಲ್ಲಿ ಆಹಾರಪದಾರ್ಥಗಳನ್ನು ತುಂಬಿ ಕಳುಹಿಸಿಕೊಟ್ಟಿದ್ದಾರೆ. ನಮಗೆ ಹಣವಿಲ್ಲದುದರಿಂದ ನಾವು ಸಹಾಯಮಾಡಲಾರೆವೆಂದು ಫ್ರೆಂಚ್ ಸರ್ಕಾರದವರು ತಿಳಿಯಿಸಿದ್ದಾರೆ.

ಕಲ್ಕತ್ತಾದಲ್ಲಿ ವಿದೇಶದ ಬಟ್ಟೆಗಳನ್ನು ಕೊಂಡುಕೊಳ್ಳಲಾಗದೆಂದು ಬೋಧಿಸಿದ ೪೬ ಮಂದಿ ಸ್ವಯಂಸೇವಕರನ್ನು ಪೋಲೀಸರು ಹಿಡಿದು ವಿಚಾರಣೆಗೆ ಗುರಿಮಾಡಿದರು. ಮ್ಯಾಜಿಸ್ಟ್ರೇಟರು ೫-೧೦ ರೂ. ಗಳಂತೆ ದಂಡ ವಿಧಿಸಿ, ಕೊಡದೆ ತಿರಸ್ಕರಿಸಿದವರನ್ನು ಕಾರಾಗೃಹಕ್ಕೆ ಕಳುಹಿಸಿದರು.

ತುರುಕರು ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಮಿತ್ರಮಂಡಲಿ ಮೇಲೆ ಏನೋ ದ್ರೋಹಾಚರಣೆ ಮಾಡುವುದರಲ್ಲಿದ್ದಾರೆಂಬುದು ಗೊತ್ತಾದುದರಿಂದ ಮಿತ್ರಮಂಡಲಿಯವರು ಮೆಡಿಟರೇನಿಯನ್ ಸಮುದ್ರದಲ್ಲಿದ್ದ ಇಂಗ್ಲೀಷ್ ನೌಕಾಸೈನ್ಯವನ್ನು ಬಾಸ್ಪರಸ್ ಜಲಸಂಧಿಗೆ ಕಳುಹಿಸಿಕೊಟ್ಟಿದ್ದಾರೆ. ಮತ್ತು ಗೂಢ ಪ್ರಯತ್ನ ಮಾಡುತ್ತಿದ್ದವರಲ್ಲಿ ಮುಖ್ಯರಾದ ೧೪ ಮಂದಿಗಳು ಹಿಡಿಯಲ್ಪಟ್ಟು ಇಂಗ್ಲೀಷರ ವಶಗೊಳಿಸಲ್ಪಟ್ಟಿದ್ದಾರೆ.

ಸೀಮೆಯಲ್ಲಿರುವ ಇಂಡ್ಯಾ ಕೌನ್ಸಿಲ್ಲಿನಲ್ಲಿ ಸಭಿಕರಾಗಿರುವ ಸರ್ ಶಂಕರನ್ ನಾಯರ್‌ರವರು ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟರು. ಅವರು ಭರತಖಂಡಕ್ಕೆ ಬಂದಮೇಲೆ ಒಂದು ದೊಡ್ಡ ಉದ್ಯೋಗದಲ್ಲಿ ನಿಯಮಿಸಲ್ಪಡುವರೆಂಬ ವಾರ್ತೆಯಿದೆ. ಮತ್ತು ಅವರ ಜತೆಯಲ್ಲೇ ಕೆಲಸದಲ್ಲಿರುವ ಭೂಪೇಂದ್ರನಾಥಬಾಸುರವರು ಕೂಡ ನವಂಬರ್ ತಿಂಗಳಲ್ಲಿ ಭರತಖಂಡಕ್ಕೆ ಬರುವವರಾಗಿದ್ದಾರೆ. ಮತ್ತೊಬ್ಬ ಸಾಹಿಬ್ಜಾದಾ ಆಪ್ತಬೇಅಹಮ್ಮದ್ ಖಾನ್‌ರವರೂ ಕೂಡ ಈಗಾಗಲೇ ಸೀಮೆಯಿಂದ ಹೊರಟುಬರುತ್ತಿದ್ದಾರಂತೆ. ಆ ಕೌನ್ಸಿಲ್ಲಿನಲ್ಲಿ ನಾಮ್ಕಾವಾಸ್ತೆಯಿರುವುದಕ್ಕೆ ಭಾರತೀಯರಿಗೆ ಯಾರಿಗೂ ಇಷ್ಟವಿಲ್ಲದಿರುವಂತೆ ಇದರಿಂದ ತೋರುತ್ತದೆ.

ಜಿ. ಐ. ಪಿ. ರೈಲ್ವೆ ಕಂಪೆನಿಯಲ್ಲಿ ಗಾರ್ಡುಗಳಾಗಿರುವ ಈಸ್ಟಿಂಡಿಯನ್ ಮತ್ತು ಭಾರತೀಯ ಗಾರ್ಡುಗಳಲ್ಲಿ ಕೆಲವರು ರೈಲ್ವೆಯಮೇಲೆ ಕಳುಹಿಸಲ್ಪಡುತ್ತಿದ್ದ ಪಾರ್ಸಲುಗಳನ್ನು ಅನೇಕವಾಗಿ ಅಪಹರಿಸಿದರೆಂಬುದು ಗೊತ್ತಾಗಿ ಅವರುಗಳ ಮೇಲೆ ಬೊಂಬಾಯಿ ಸರ್ಕಾರದವರು ಕೇಸುಮಾಡಿಸಿರುವರು. ಇದನ್ನು ಒಬ್ಬ ಪ್ರತ್ಯೇಕ ಮ್ಯಾಜಿಸ್ಟ್ರೇಟರು ವಿಚಾರಿಸುತ್ತಿರುವರು. ಎಷ್ಟೋ ಸಾಮಗ್ರಿಗಳು ಆ ಗಾರ್ಡುಗಳ ಮನೆಗಳಲ್ಲೂ ಹೂತಿಟ್ಟಿದ್ದ ಅಟವೀ ಪ್ರದೇಶಗಳಲ್ಲೂ ಸಿಕ್ಕಿರುವುವು. ಸಾಮಾನುಗಳನ್ನು ಕಳೆದುಕೊಂಡಿರುವ ಜನರು ಅಸ್ಸಾಂ ಪಂಜಾಬು ಮೊದಲಾದ ಕಡೆಗಳಿಂದ ಬಂದು ಅವನ್ನು ಗುರ್ತಿಸಿರುವರು. ಇದುವರೆಗೆ ೪೦೦೦೦ ರೂ. ಗಳ ಸೊತ್ತು ಸಿಕ್ಕಿರುತ್ತದೆ.

ಮದರಾಸಿನ ದೇಶಭಕ್ತನ್ ಎಂಬ ತಮಿಳುಪತ್ರಿಕೆಯಲ್ಲಿ ರಾಜದ್ರೋಹಾತ್ಮಕವಾದ ಲೇಖನವನ್ನು ಪ್ರಕಟಿಸಿದುದರಿಂದ ಪತ್ರಿಕೆಯ ಕರ್ತ ಸಂಪಾದಕ ಮುದ್ರಾಪಕ ಮೊದಲಾದ ನಾಲ್ವರ ಮೇಲೆ ಕೇಸು ಬಂದು ವಿಚಾರಣೆ ನಡೆಯುವಾಗ ೧-೩-೪ನೆ ಅಪರಾಧಿಗಳು ಕ್ಷಮಾಪಣೆ ಬೇಡಿಕೊಂಡು ಇತಃಪರಃ ಅಂಥ ತಪ್ಪನ್ನು ಮಾಡುವುದಿಲ್ಲವೆಂದು ಕೇಳಿಕೊಂಡುದರಿಂದ ಮನ್ನಿಸಿ ಬಿಡಲ್ಪಟ್ಟರು. ಸಂಪಾದಕನಾದ ಪಿ. ಎ. ಸುಬ್ರಹ್ಮಣ್ಯಯ್ಯರು ಮಾತ್ರ ಹಾಗೆ ಮಾಡದೆಯೂ ತಾನಿಲ್ಲದ ಸಂದರ್ಭದಲ್ಲಿ ಆ ಲೇಖನವು ಪ್ರಕಟಿಸಲ್ಪಟ್ಟಿರುವುದರಿಂದ ನಾನು ಅದಕ್ಕೆ ಉತ್ತರವಾದಿಯಲ್ಲವೆಂತಲೂ, ಅದು ರಾಜದ್ರೋಹಾತ್ಮಕವಾಗಿಯೂ ಇಲ್ಲವೆಂತಲೂ ವಾದಿಸಿದನು. ಆತನು ಅದನ್ನು ಪ್ರಕಟಿಸುವಾಗ ಊರಿನಲ್ಲಿಲ್ಲದಿದ್ದರೂ ಎಡಿಟರ್ ಕೆಲಸದ ಮೇಲೆಯೇ ಇದ್ದುದರಿಂದ ಅವನ ಜವಾಬ್ದಾರಿಯು ತಪ್ಪಿದುದಲ್ಲವೆಂದು ಹೇಳಿ ಮ್ಯಾಜಿಸ್ಟ್ರೇಟರು ೬ ತಿಂಗಳ ಸಾಮಾನ್ಯ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಆಲಿಸೋದರರೇ ಮೊದಲಾದವರನ್ನು ಹಿಡಿದುದು.

ಮ|| ಗಾಂಧಿಯವರು, ಮೌ|| ಮಹಮ್ಮದಾಲಿಯವರು, ಮತ್ತು ಅವರ ಪತ್ನಿ, ಮೌ|| ಅಜದ್ ಸೋಬಾನಿ, ಮತ್ತು ಇವರ ಪರಿವಾರದ ೪ ಮಂದಿಗಳು ಇವರೆಲ್ಲಾ ಕಲ್ಕತ್ತಾದಿಂದ ಮದರಾಸಿಗೆ ಬರುತ್ತಿರುವಾಗ ತಾ|| ೧೪ನೆ ಮಧ್ಯಾಹ್ನ ೨|| ಗಂಟೆಗೆ ವಾಲ್ತೇರು ನಿಲ್ದಾಣಕ್ಕೆ ಬಂಡಿ ಬಂದು ನಿಂತಿತು. ಅಲ್ಲಿಯ ಪ್ಲಾಟ್‌ಫಾರಮ್ಮಿನಲ್ಲಿ ಜಿಲ್ಲಾ ಕಲೆಕ್ಟರೂ ಪೊ|| ಸೂಪರಿಂಟೆಂಡೆಂಟರೂ ಸೈನಿಕರ ಸಾಲೂ ನಿಂತಿದ್ದರು. ಅದರಿಂದಲೇ ಪ್ರಮುಖರನ್ನು ಸರ್ಕಾರದವರು ಹಿಡಿಯಬಹುದೆಂದು ಜನರು ತರ್ಕಿಸಿದ್ದರು. ಬಂಡಿ ನಿಂತಕೂಡಲೇ ಅಲ್ಲಿ ಸೇರಿದ್ದ ವಿಶಾಖಪಟ್ಟಣದ ಜಿಲ್ಲಾ ಪ್ರಮುಖಜನರು ಹೋಗಿ, ಹೊರಕ್ಕೆ ಬಂದು ನಮಗಾಗಿ ಒಂದು ಚಿಕ್ಕ ಉಪನ್ಯಾಸವನ್ನು ಮಾಡಬೇಕೆಂದು ಗಾಂಧಿಯವರನ್ನೂ ಆಲಿಯವರನ್ನೂ ಪ್ರಾರ್ಥಿಸಲು ಅವರಿಬ್ಬರೂ ಬಂಡಿಯಿಂದ ಹೊರಕ್ಕೆ ಇಳಿದುಬಂದರು. ೪-೬ ಹೆಜ್ಜೆಯಿಟ್ಟು ಬರುವುದರೊಳಗೇ ವಿಶಾಖಪಟ್ಟಣದ ಜಿಲ್ಲಾ ಪೊ|| ಸೂಪರಿಂಟೆಂಡೆಂಟರು ಮಹಮ್ಮದಾಲಿಯವರ ಇದಿರಿಗೆ ಹೋಗಿ ತಮ್ಮ ಕೈಯಲ್ಲಿದ್ದ ವಾರಂಟನ್ನು ತೋರಿಸಿದರು. ನಗುತ್ತ ಅದನ್ನು ಅವರು ಗಾಂಧಿಯವರಿಗೆ ಓದಿಹೇಳಿದರು. ೧ ವರ್ಷ ಕಾಲದವರೆಗೆ ಸತ್ಪ್ರವರ್ತನೆ ಹೊಂದಿ ಶಾಂತವಾಗಿರುವುದಕ್ಕಾಗಿ ಕ್ರಿ. ಪ್ರೊ. ೧೦೭-೧೦೮ ನೆ ಸೆಕ್ಷನ್ನುಗಳ ಪ್ರಕಾರ ಹೊಣೆ ಕೊಡುವುದಕ್ಕಾಗಿ ಮಹಮ್ಮದಾಲಿಯವರನ್ನು ಸೆರೆಹಿಡಿದು ನನ್ನ ಬಳಿಗೆ ತರಬೇಕೆಂದು ವಿಶಾಖಪಟ್ಟಣದ ಜಿಲ್ಲಾ ಮೇಜಿಸ್ಟ್ರೇಟ್ ಜಿ. ಆರ್. ಹಗ್ಗಿನ್ಸ್‌ರವರು ಆ ವಾರಂಟನ್ನು ಕಳುಹಿಸಿದ್ದರು. ಕೂಡಲೇ ಆಲಿಯವರು ಸೂಪರಿಂಟೆಂಡೆಂಟರೊಡನೆ ಹೊರಟರು. ಸ್ವಲ್ಪಹೊತ್ತಿನ ಮೇಲೆ ಅವರ ಪತ್ನಿಯೂ ಅವರ ಪ್ರೈ|| ಸೆಕ್ರೆಟರಿ ಹಯಾತ್‌ರವರೂ ಹೋಗಿ ಅವರೊಡನೆ ಮಾತನಾಡಿಕೊಂಡು ಬಂದರು. ಆಗ ತನ್ನ ಪತಿಯಾದ ಮಹಮ್ಮದಾಲಿಯವರೊಡನೆ ಅವರ ಪತ್ನಿಯು ಹೀಗೆಹೇಳಿ ಬಂದರಂತೆ.- "ನಾನು ಧೈರ್ಯವಾಗಿದ್ದೇನೆ. ಭಗವಂತನು ನಮಗೆ ಸಹಾಯಮಾಡುವನು. ನನಗಾಗಿಯೂ ಮಕ್ಕಳಿಗಾಗಿಯೂ ನೀವು ಭಯಪಡಕೂಡದು. ದೇವರು ನಮ್ಮನ್ನು ಕಾಪಾಡುವನು. ನಮ್ಮ ಪ್ರಯತ್ನವು ಧರ್ಮಬದ್ಧವಾಗಿದೆ. ತಪ್ಪದೆ ನಮಗೆ ಜಯವಾಗುತ್ತದೆ". ಮಹಮ್ಮದಾಲಿಯವರನ್ನು ಕಂಡು ಬರುವುದಕ್ಕೆ ಅಪ್ಪಣೆಯನ್ನು ಗಾಂಧಿಯವರು ಕೇಳಲಾಗಿ ಅದಕ್ಕೆ ತನಗೆ ಅಪ್ಪಣೆಯಿಲ್ಲವೆಂದು ಪೋಲೀಸ್ ಸೂಪರಿಂಟೆಂಡೆಂಟರು ಹೇಳಿದರು. ಮಹಮ್ಮದಾಲಿಯವರು ತನ್ನ ಪ್ರೈ|| ಸೆಕ್ರೆಟರಿಯವರ ಮೂಲಕ ಗಾಂಧಿಯವರಿಗೆ ಹೇಳಿಕಳುಹಿಸಿದುದೇನೆಂದರೆ—ಮಹಾತ್ಮರೂ ನಾನೂ ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿದವರಾದುದರಿಂದ ಈಗ ಪ್ರತ್ಯೇಕವಾಗಿ ಅವರಿಗೆ ನಾನು ಹೇಳಬೇಕಾದುದೇನೂ ಇಲ್ಲ. ನನ್ನ ಪಕ್ಷವಾಗಿ ಅವರ ಹಸ್ತಚುಂಬನವನ್ನು ಮಾಡಬೇಕು ಎಂಬುದಾಗಿ. ಮತ್ತು ನಮ್ಮ ಉದ್ಯಮವು ಮಹಾತ್ಮರ ನಾಯಕತ್ವದಿಂದ ಚೆನ್ನಾಗಿ ಕೊನೆಸಾಗುವುದೆಂದೂ, ಭಾರತಸ್ವಾತಂತ್ರ್ಯವು ತನಗೆ ವಿಮೋಚನವನ್ನುಂಟುಮಾಡುವುದೆಂದೂ, ಭಾರತೀಯರೆಲ್ಲಾ ಕಾಂಗ್ರೆಸ್ ಕಾರ್ಯಕ್ರಮವನ್ನು ನೆರವೇರಿಸಬೇಕೆಂದೂ, ಹಿಂದೂಮಹಮ್ಮದೀಯರ ಸ್ನೇಹವೂ ಅಹಿಂಸಾಬದ್ಧವಾದ ಸಹಾಯನಿರಾಕರಣವೂ ಸ್ವದೇಶಿ ಚಳವಳಿಯೂ ಮುಖ್ಯವಾಗಿ ಆಚರಿಸಲ್ಪಡಬೇಕೆಂದೂ ದೇಶೀಯರಿಗೆ ಸಂದೇಶವನ್ನು ಹೇಳಿದರು. ಈಮಧ್ಯೆ ಮ|| ಗಾಂಧಿಯವರು ಪ್ಲಾಟ್‌ಫಾರಮ್ಮಿನಲ್ಲಿ ಕೂಡಿದ್ದ ಜನರಿಗೆ ಒಂದು ಚಿಕ್ಕ ಉಪನ್ಯಾಸವನ್ನು ಮಾಡಿ ಮಹಮ್ಮದಾಲಿಯವರನ್ನು ಸೆರೆಹಿಡಿದುದಕ್ಕೆ ನಾವೆಲ್ಲಾ ಸಂತೋಷಿಸಬೇಕೆಂದೂ, ಸ್ವರಾಜ್ಯವು ಸಮೀಪಿಸುವುದಕ್ಕೆ ಇದು ಶುಭಚಿಹ್ನೆಯೆಂದೂ, ಇದಕ್ಕಾಗಿ ಯಾರೊಬ್ಬರೂ ಹರಿತಾಳ ಮೊದಲಾದುವನ್ನು ಜರುಗಿಸದೆ ಸಭೆಗಳನ್ನು ಮಾಡದೆ ರಾಟೆಯಾಡುವುದು ಕಾಂಗ್ರೆಸ್ಸಿನ ಸಂದೇಶಗಳನ್ನು ಆಚರಣೆಗೆ ತರುವುದು ಈ ಕೃತ್ಯಗಳಲ್ಲಿ ತತ್ಪರರಾಗಿರಬೇಕೆಂದೂ, ನಮಗೆ ಸ್ವರಾಜ್ಯ ಬಂದಕೂಡಲೇ ನಮ್ಮ ಕಡೆಯ ಬಂಧಿತರನ್ನೆಲ್ಲಾ ಕಾರಾಗೃಹದಿಂದ ಬಿಡಿಸಬೇಕೆಂದೂ ಉಪದೇಶಿಸಿದರು. ಬಳಿಕ ಗಾಂಧಿಯವರೇ ಮೊದಲಾದವರೆಲ್ಲಾ ಬಂಡಿಯನ್ನೇರಿ ಮದ್ರಾಸು ಕಡೆಗೆ ಪ್ರಯಾಣಮಾಡಿದರು.

ಆಲಿಸೋದರರನ್ನು ಹಿಡಿಯುವರೆಂಬ ವಾರ್ತೆಯು ಕೆಲದಿನಗಳಿಂದಲೂ ದೇಶದಲ್ಲಿ ಹರಡಿಕೊಂಡಿದ್ದಿತು. ಕಲ್ಕತ್ತಾದಿಂದ ಇವರು ಹೊರಡುವಾಗಲೇ ಮಹಮ್ಮದಾಲಿಯವರು ಪ್ರಜೆಗಳನ್ನು ಕುರಿತು—"ಸರ್ಕಾರದವರು ನನ್ನನ್ನು ಹಿಡಿಯುವುದರಲ್ಲಿದ್ದಾರಂತೆ. ಹಾಗೆ ಮಾಡಿದರೆ ಅದಕ್ಕಾಗಿ ನೀವುಗಳು ಆಗ್ರಹಪಡಬಾರದು. ನನಗಾಗಿ ನೀವು ಯಾವ ದೌರ್ಜನ್ಯವನ್ನಾದರೂ ಮಾಡಿದ ಸಂಗತಿಯು ಕಾರಾಗೃಹದಲ್ಲಿ ನನಗೆ ತಿಳಿದರೆ ಬಹಳ ಸಂಕಟವಾಗುವುದು. ಸರ್ಕಾರದವರು ಎಷ್ಟು ತೊಂದರೆ ಕೊಟ್ಟು ಆಗ್ರಹ ಹುಟ್ಟಿಸಬೇಕೆಂದು ಯತ್ನಿಸಿದರೂ ನೀವುಗಳು ಶಾಂತಿಯನ್ನು ಬಿಡಕೂಡದು. ದೃಢವಿಶ್ವಾಸದಿಂದ ಸ್ವರಾಜ್ಯ ಸಂಪಾದನೆಯನ್ನು ಮಾಡಬೇಕು" ಎಂದು ಹೇಳಿ ಬಂದಿದ್ದರಂತೆ.

ಬಳಿಕ ವಾಲ್ತೇರು ನಿಲ್ದಾಣದಲ್ಲಿ ನಿಂತಿದ್ದ ಮೋಟಾರಿನಲ್ಲಿ ಮಹಮ್ಮದಾಲಿಯವರನ್ನು ಜಿಲ್ಲಾ ಕಲೆಕ್ಟರೂ ಡಿ. ಐ. ಜಿ. ಪೋಲೀಸ್ ಸೂಪರಿಂಟೆಂಡೆಂಟರೂ ಕುಳ್ಳಿರಿಸಿಕೊಂಡು ವಿಶಾಖಪಟ್ಟಣದ ಸೆಂಟ್ರಲ್‌ಜೈಲಿಗೆ ಸೇರಿಸಿ ಅಲ್ಲಿಯ ಒಂದು ಮಾಡದಲ್ಲಿಟ್ಟರು. ಊರಿನ ಜನರೇ ಅವರಿಗೆ ಆಹಾರವನ್ನು ಕೊಡುತ್ತಿದ್ದರು. ಕರಾಚಿಯ ಪೋಲೀಸಾಧಿಕಾರಿಗಳು ಬರುವವರೆಗೂ ಇವರನ್ನು ಅಲ್ಲಿಟ್ಟಿದ್ದು ಅವರು ಬಂದ ಕೂಡಲೇ ಅವರ ವಶಕ್ಕೆ ತಾ|| ೧೭ರಲ್ಲಿ ಒಪ್ಪಿಸಿದರು. ತಾ|| ೧೭ರ ಬೆಳಗಿನ ಜಾವದಲ್ಲಿ ನಿಲ್ದಾಣದಲ್ಲಿ ಪೋಲೀಸು ಸೈನ್ಯವನ್ನು ಸಾಯುಧರನ್ನಾಗಿ ನಿಲ್ಲಿಸಿದ್ದು ಮಹಮ್ಮದಾಲಿಯವರನ್ನು ಮೋಟಾರಿನ ಮೇಲೆ ಕರತಂದು ಎರಡು.೧ನೆ ತರಗತಿ ಬಂಡಿಗಳೂ ೧ ಮೂರನೆ ತರಗತಿ ಬಂಡಿಯೂ ಇದ್ದ ಸ್ಪೆಷಲ್ ಟ್ರೇನಿನಲ್ಲಿ ಕುಳ್ಳಿರಿಸಿ ಒಡನೆಯೇ ಪೋಲೀಸುದ್ಯೋಗಿಗಳೂ ಕುಳಿತು ಮೊಗಲ್ಸರಾಯಿ ಮಾರ್ಗವಾಗಿ ಕರಾಚಿಗೆ ಸಾಗಿಸಿಕೊಂಡು ಹೋದರು.

ಇವರ ಅಣ್ಣ ಮೌಲಾನಾ ಷೌಕತಾಲಿಯವರನ್ನು ಬೊಂಬಾಯಿಯಲ್ಲಿ ಹಿಡಿದರು. ತಾ|| ೧೫ನೆ ರಾತ್ರಿ ಅಲ್ಲಿಯ ಒಂದು ಸಭೆಯಲ್ಲಿ ಷೌಕತಾಲಿಯವರು ಉಪನ್ಯಾಸ ಮಾಡುವಾಗಲೇ ತಮ್ಮನ್ನು ಸರ್ಕಾರದವರು ಸೆರೆಹಿಡಿಯುವುದರಲ್ಲಿದ್ದಾರೆಂಬ ಧ್ವನಿಯನ್ನು ತೋರಿಸಿದ್ದರು. ಮರುದಿನ ಸರ್ಕಾದವರು ಪೋಲೀಸ್ ದಳವನ್ನೂ ಸೈನ್ಯವನ್ನೂ ಸಿದ್ಧಪಡಿಸಿ ಸೆಂಟರಲ್ ಕಿಲಾಪತ್ ಆಫೀಸಿನಲ್ಲಿದ್ದ ಷೌಕತಾಲಿಯವರನ್ನು ಹಿಡಿದರು. ಸಂಗತಿಯು ಮೊದಲೇ ನಾಯಕರಿಗೆಲ್ಲಾ ಗೊತ್ತಿದ್ದುದರಿಂದಲೂ ಎಲ್ಲರೂ ಶಾಂತಿಯಿಂದಿರಬೇಕೆಂದೂ ಆಗ್ರಹವನ್ನೂ ದೌರ್ಜನ್ಯವನ್ನೂ ತೋರಿಸಕೂಡದೆಂದೂ ಪ್ರಜೆಗಳಿಗೆ ಅವರುಗಳು ಬೋಧಿಸಿದ್ದುದರಿಂದಲೂ ಗದ್ದಲವೇನೂ ನಡೆಯಲಿಲ್ಲ. ಅವರ ಸಾಮಾನುಗಳನ್ನೆಲ್ಲಾ ತೆಗೆದುಕೊಳ್ಳಲಿಕ್ಕೆ ಷೌಕತಾಲಿಯವರಿಗೆ ಪೋಲೀಸಧಿಕಾರಿಗಳು ಅವಕಾಶ ಕೊಟ್ಟು ಬಳಿಕ ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಕಾರಾಗೃಹಕ್ಕೆ ತೆರಳಿ ಅಲ್ಲಿಂದ ತಾ|| ೧೮ ರಲ್ಲಿ ಹಡಗನ್ನೇರಿಸಿ ಕರಾಚಿಗೆ ತಾ|| ೨೦ ರಲ್ಲಿ ಕರೆದುಕೊಂಡು ಹೋದರು.

ತಾ|| ೧೫ನೆ ದಿವಸ ಡಾಕ್ಟರ್ ಕಿಚ್ಲೂಯವರನ್ನು ಸಿಮ್ಲಾ ಪಟ್ಟಣದಲ್ಲಿ ಹಿಡಿದರು. ಇವರು ವೈದ್ಯರ ಸೂಚನೆಯ ಪ್ರಕಾರ ದೇಹಾರೋಗ್ಯಕ್ಕಾಗಿ ಸಿಮ್ಲಾ ಪಟ್ಟಣದಲ್ಲಿದ್ದುಬರುವುದಕ್ಕಾಗಿ ಅಲ್ಲಿಗೆ ಹೋಗಿದ್ದರು. ಆದಿನ ಇವರು ಒಂದುಪನ್ಯಾಸವನ್ನು ಕೊಡುವುದಕ್ಕೆ ಏರ್ಪಾಟಾಗಿದ್ದಿತು. ಮಧ್ಯಾಹ್ನವೇ ಪೋಲೀಸರು ಅವರ ಬಳಿಗೆ ಹೋಗಿ ವಾರಂಟನ್ನು ತೋರಿಸಿದರು. ಕಿಚ್ಲೂಯವರು ತನ್ನ ಹೆಂಡಿರು ಮಕ್ಕಳಿಗೆ ಕಾಗದವನ್ನು ಬರೆದುಹಾಕಿ ಪೋಲೀಸರ ಅಧೀನರಾದರು. ಅವರನ್ನು ನಿಲ್ದಾಣಕ್ಕೆ ಸಾಗಿಸಿ ಅಲ್ಲಿಂದ ಸ್ಪೆಷಲ್‌ಟ್ರೇನ್ ಮೋಟಾರಿನಮೇಲೆ ಕಾಲ್ಕಾವಿಗೆ ಸಾಗಿಸಿಕೊಂಡುಹೋಗಿ ತಾ|| ೧೭ ರಲ್ಲಿ ಅಲ್ಲಿಂದ ಕರಾಚಿಯ ಕಾರಾಗೃಹಕ್ಕೆ ಮೋಟಾರಿನ ಮೇಲೆ ಸಾಗಿಸಿ ಸೇರಿಸಿದರು.

ಹೀಗೆಯೇ ಹೈದರಾಬಾದಿನ ಖಿಲಾಪತ್ ಸಂಘಾಧ್ಯಕ್ಷನೂ ಜಮ್ಮತುಲ್ ಉಲೇಮಾ ಸಂಘದ ಕಾರ್ಯದರ್ಶಿಯೂ ಆದ ಪೀರ್ ಗುಲಾಂಮುಜಾದಿದ್ ರವರನ್ನು ತಾ|| ೧೫ನೆ ರಾತ್ರಿ ತಾಂಡಬಲಾಯರ್ ನಿಲ್ದಾಣದಲ್ಲಿ ಹಿಡಿದರು. ಮತ್ತು ಕರವೀರಪೀಠದ ಗುರುವಾದ ಶಂಕರಾಚಾರ್ಯರನ್ನೂ ಹಿಡಿದರು. ಇವರೀರ್ವರನ್ನು ಸಹ ಕರಾಚಿ ಕಾರಾಗೃಹಕ್ಕೆ ಸೇರಿಸಿದರು.

ಇವರುಗಳನ್ನೆಲ್ಲಾ ಹಿಡಿಯುವುದಕ್ಕೆ ಕಾರಣವೇನೆಂದರೆ-ಕಳೆದ ಜುಲೈ ತಾ|| ೮ ರಿಂದ ೧೦ರ ವರೆಗೆ ಕರಾಚಿಪಟ್ಟಣದಲ್ಲಿ ಕೂಡಿದ್ದ ಯಾವದ್ಭಾರತ ಕಿಲಾಪತ್ ಸಂಘದಲ್ಲಿ—"ಮಹಮ್ಮದೀಯರಾರೂ ಈಗ ಬ್ರಿಟಿಷ್ ಸೈನ್ಯದಲ್ಲಿರಕೂಡದು. ಸೇರಕೂಡದು. ಸೇರುವಹಾಗೆ ಇತರರನ್ನು ಪ್ರೋತ್ಸಾಹಿಸಕೂಡದು. ಸೈನ್ಯದಲ್ಲಿರುವ ಮಹಮ್ಮದೀಯರಿಗೆಲ್ಲಾ ಈ ವಿಷಯವನ್ನು ತಿಳಿಯಿಸುವುದು ಪ್ರತಿಯೊಬ್ಬ ಮಹಮ್ಮದೀಯನ ಕರ್ತವ್ಯವಾಗಿದೆ" ಎಂಬ ತೀರ್ಮಾನವನ್ನು ಆಲಿಸೋದರರೂ ಇನ್ನು ಕೆಲವರೂ ಏಕಕಂಠ್ಯದಿಂದ ಮಾಡಿ ಅನುಮೋದಿಸಿದ್ದರಿಂದ ಸೈನಿಕರಿಗೆ ಇಂಥ ದುರ್ಬೋಧನೆ ಮಾಡುವುದು ಶಿಕ್ಷಾರ್ಹವಾದಕಾರಣ, ಬೊಂಬಾಯಿ ಸರ್ಕಾರದವರು ಇಂಡ್ಯಾ ಸರ್ಕಾರದವರ ಸಂಪೂರ್ಣಾನುಮೋದನೆಯನ್ನು ಪಡೆದು ೧೨೦, ೧೩೧, ೫೦೫, ಇಂ. ಪಿ. ಕೋಡು ಸೆಕ್ಷನ್ ಪ್ರಕಾರ ಆಲಿಸೋದರರುಗಳ ಮೇಲೆ ಕೇಸು ಮಾಡಲಿಕ್ಕೂ, ಮತ್ತು ಅದೇ ಆಲಿಸೋದರರು ಸಿಂಧುದೇಶದಲ್ಲಿ ಕೊಟ್ಟ ಉಪನ್ಯಾಸಗಳು ರಾಜದ್ರೋಹೋದ್ಬೋಧಕವಾಗಿದ್ದುದರಿಂದ ೧೨೪ಎ, ೧೫೩ಎ, ಸೆಕ್ಷನ್ನುಗಳ ಪ್ರಕಾರ ಕೇಸುಮಾಡುವುದಕ್ಕೂ ನಿಶ್ಚಯಿಸಿರುವರು. ಇತರರ ಮೇಲೂ ಹೀಗೆಯೇ ಬೇರೆಬೇರೆ ಅಪರಾಧಗಳು ಹೇರಲ್ಪಟ್ಟಿರುವುವು. ಆದರ ಮೇಲೆ ಕರಾಚಿಯ ದಂಡಾಧಿಕಾರಿಗಳು ಒಟ್ಟು ಏಳುಮಂದಿಗಳಮೇಲೆ ವಾರಂಟು ಹುಟ್ಟಿಸಿದರು. ಅವರಲ್ಲಿ ೬ ಮಂದಿಗಳನ್ನು ಹಿಡಿದುತಂದರು. ನಿಸದ್‌ಅಹಮ್ಮದ್ ಎಂಬಾತನು ಇಷ್ಟರೊಳಗೇ ಶಿಕ್ಷಿತನಾಗಿ ಕಾರಾಗೃಹದಲ್ಲಿದ್ದಾನೆ. ಇವರೆಲ್ಲರ ಪ್ರಾರಂಭವಿಚಾರಣೆಯು ಕರಾಚಿಯಲ್ಲಿ ದಂಡಾಧಿಕಾರಿಯಿದಿರಿಗೆ ನಡೆದು ಬಳಿಕ ಜ್ಯುಡಿಷಿಯಲ್ ಕಮಿಷನರ ಕೋರ್ಟಿನ ವಿಚಾರಣೆಯು ಜರುಗುವುದು.

ಮಾಪಿಳ್ಳೆಗಳ ದಂಗೆ.

ಈ ದಂಗೆಯೆಲ್ಲಾ ಇನ್ನೂ ಶಾಂತವಾಗಿಲ್ಲ. ಬೆಂಗಳೂರಿನಿಂದ ಕೆಲ ಹೊಸಸೈನ್ಯಗಳನ್ನು ಮತ್ತೆ ಮಲಬಾರಿಗೆ ಕಳುಹಿಸಿಕೊಟ್ಟಿದ್ದಾರೆ. ಪಾಲಘಾಟನ್ನು ಬಿಟ್ಟು ಅನೇಕ ಕುಟುಂಬಗಳು ಹೊರಕ್ಕೆ ಹೋಗಿಯೂ ಹೋಗುತ್ತಲೂ ಇರುವುವು. ಆಲಂದೂರಿನ ಬಳಿಯಲ್ಲಿ ಮತ್ತೆ ಮಾಪಿಳ್ಳೆಗಳಿಗೂ ಸೈನಿಕರಿಗೂ ಯುದ್ಧವಾಗಿ ಬಹುಜನ ಮಾಪಿಳ್ಳೆಗಳು ಸತ್ತರು. ದೇವಲಾದಿಂದ ಎಟ್ಟಕರಾವಿಗೆ ಹೋದ ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನೂ ಇಬ್ಬರು ಕಾನ್‌ಸ್ಟೆಬಲ್ಲುಗಳನ್ನೂ ಮಾಪಿಳ್ಳೆಗಳು ಕೊಂದುಬಿಟ್ಟರಂತೆ. ನೆಲಂಬೂರು ಅರಮನೆಗೆ ಮತ್ತೊಂದುಸಲ ಮಾಪಿಳ್ಳೆಗಳು ಬೆಂಕಿಯಿಕ್ಕಿ ಉರಿಯಿಸಿಬಿಟ್ಟರೆಂದೂ ಮಲಬಾರಿಗೂ ನೆಲಂಬೂರಿಗೂ ಮಧ್ಯದಲ್ಲಿದ್ದ ಸೇತುವನ್ನು ಹಾಳ್ಮಾಡಿದರೆಂತಲೂ ಗೊತ್ತಾಗಿದೆ.

ಜುವ್ವೂರಿಗೆ ೨ ಮೈಲಿಗಳ ಸಮೀಪದಲ್ಲಿ ದಟ್ಟವಾಗಿರುವ ಅಡವಿಯಲ್ಲಿ ಅಡಗಿದ್ದ ಮಾಪಿಳ್ಳೆಗಳು ಸೈನಿಕರ ಮೇಲೆ ತುಪಾಕಿಗುಂಡುಗಳನ್ನು ಪ್ರಯೋಗಿಸಿದರು. ಪ್ರತಿಯಾಗಿ ಇವರು ಹಾರಿಸಿದರು. ದಂಡಾಧಿಕಾರಿಗಳ ಬಳಿಯಲ್ಲಿ ವಿಚಾರಣೆ ನಡೆಯುತ್ತ ಅನೇಕರು ಶಿಕ್ಷಿಸಲ್ಪಡುತ್ತಿದ್ದಾರೆ. ಅಪರಾಧಿಗಳಾದ ಮಾಪಿಳ್ಳೆಗಳನ್ನು ಅಲ್ಲಲ್ಲಿ ತಡಕಿ ಪೋಲೀಸರೂ ಸೈನಿಕರೂ ಹಿಡಿಯುತ್ತಲೇ ಇದ್ದಾರೆ. ಹಿಂದೂದೇಶ ಸೇವಕಸಂಘದ ಸಭಿಕರಾದ ದೇವಧರ್, ವೇಜು, ಬಾರ್ನೆ ಮೊದಲಾದ ಮಿತವಾದಿಗಳು ಕೆಲವರು ಮಲಬಾರು ಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಲಿಕ್ಕೆ ಹೋಗಿದ್ದಾರೆ. ಕಾರಿಂಬಾಯ ಪ್ರಾಂತದಲ್ಲಿ ದಂಗೆಕಾರರು ಗ್ರಾಮಗಳನ್ನು ಸುಲಿಯುತ್ತಿದ್ದಾರೆ. ಕೊಟ್ಟಪಾಡೆ, ಮನ್ನಾರುಘಾಟು ಮೊದಲಾದ ಕಡೆಯಲ್ಲೂ ಧನಿಕರ ಮನೆಗಳನ್ನು ನುಗ್ಗಿ ಆಸ್ತಿಯನ್ನು ದೋಚಿಕೊಂಡಿದ್ದಾರೆ. ವರಿಯನ್ ಕುನ್ನತ್‌ಕುಂಜಿಯೆಂಬಾತನು ಎರ್ನಾಡು, ಉಲವನಾಡು ತಾಲ್ಲೂಕುಗಳಲ್ಲಿ ಖಿಲಾಪತ್ ರಾಜ್ಯವನ್ನು ಸಾರಿ ಸ್ವತಂತ್ರಾಧಿಕಾರವನ್ನು ಪ್ರಕಟಿಸಿದನು. ಇದೆಲ್ಲಾ ಸುಳ್ಳೆಂದೂ ಅಂಥ ತಪ್ಪಿತಸ್ಥರನ್ನೂ ಸುಳ್ಳುಸುದ್ದಿಯನ್ನು ಹರಡುವವರನ್ನೂ ಹಿಡಿದುಕೊಟ್ಟವರಿಗೆ ೧೦೦ ರೂ.ನಂತೆ ಬಹುಮಾನ ಕೊಡುವೆವೆಂದೂ ಅಧಿಕಾರಿಗಳು ಪ್ರಕಟಿಸಿದ್ದಾರೆ. ಕುನ್ಹಂಹಾಜಿಯೆಂಬಾತನು ಖಿಲಾಪತ್ ಯೂನಿಫಾರಂ ಉಡುಪನ್ನೂ ಕತ್ತಿಯನ್ನೂ ಧರಿಸಿಕೊಂಡು ಅನೇಕ ಮಾಪಿಳ್ಳೆಗಳ ಗುಂಪನ್ನು ಸೇರಿಸಿಕೊಂಡಿರುವನು. ನಾನು ಪಾಶ್ಚಾತ್ಯರನ್ನೂ ಸೋಲ್ಜರುಗಳನ್ನೂ ಪುನಮಾಪ್ತಿ ಮಾಡುವುದಕ್ಕೆ ಮಾಪಿಳ್ಳಾ ಸೈನ್ಯವನ್ನು ಕಳುಹಿಸಿಕೊಟ್ಟಿರುವೆನೆಂದೂ ೧೪ ಕಡೆಗಳಲ್ಲಿ ತನ್ನ ಸೈನ್ಯವಿರುವುದೆಂದೂ ಎರ್ನಾಡು ಉಲವನಾಡುಗಳನ್ನು ನಾನು ಜಯಿಸಿರುವೆನೆಂದೂ, ಖಿಲಾಪತ್ ಪರಿಪಾಲನದಲ್ಲಿ ಭೂಮಿಕಂದಾಯವೇ ಇಲ್ಲವೆಂದೂ, ಯಾರ್ಯಾರ ಹಿಡುವಳಿಯಲ್ಲಿರುವ ಭೂಮಿಯು ಅವರವರಿಗೇ ಸೇರಿದ್ದೆಂದೂ, ನೆಲಂಬೂರು ಅರಮನೆಯಿಂದ ೬ ಫಿರಂಗಿಗಳನ್ನು ತೆಗೆದುಕೊಂಡುಬಂದಿರುವೆನೆಂದೂ ಮೊದಲಾಗಿ ಪ್ರಗಲ್ಭವನ್ನು ಕೊಚ್ಚಿಕೊಳ್ಳುತ್ತಿರುವನಂತೆ. ಈತನನ್ನು ಹಿಡಿದ ಸುದ್ದಿಯು ಇನ್ನೂ ಬಂದಿಲ್ಲ. ಕನ್ನನೂರು ಕಾರಾಗೃಹದಲ್ಲಿದ್ದ ಕುನ್ನಿತಾಂಗಲ್ ಎಂಬ ಪ್ರಮುಖನು ಮೃತನಾದನು. ಅವನ ಶವವನ್ನು ಮಾಪಿಳ್ಳೆಗಳು ಈಸಿಕೊಂಡು ಮರ್ಯಾದೆಯಿಂದ ಗೋರಿಮಾಡಿದರು. ನಿರ್ಗತಿಕರ ಮತ್ತು ದುರ್ಭಿಕ್ಷಕ್ಕೆ ಗುರಿಯಾಗಿರುವ ಪ್ರಜೆಗಳ ಸಹಾಯಕ್ಕಾಗಿ ಸರ್ಕಾರದವರೂ ಪ್ರಜಾಪ್ರಮುಖರೂ ಕೊಚ್ಚಿ ಸರ್ಕಾರದವರೂ ಪ್ರಯತ್ನಪಟ್ಟಿದ್ದಾರೆ. ಹಣವನ್ನು ಕೊಡಿಸುತ್ತಿದ್ದಾರೆ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಪದಭ್ಯುದಯದ ದುರಭಿಸಂಧಿ.

ಈ ಪತ್ರಿಕೆಗೆ ಮ|| ವೆಂಕಟಕೃಷ್ಣಯ್ಯನವರು ಜನಕರಾಗಿಯೂ ಹಾಲುಬೆಣ್ಣೆಗಳನ್ನು ಉಣ್ಣಿಸಿ ಸಾಕುವವರಾಗಿಯೂ ಸ್ವತಃ ಎಡಿಟರಾಗಿದ್ದುಕೊಂಡು ಅದನ್ನು ಸಾಗಿಸುತ್ತಿರುವವರಾಗಿಯೂ ಇದ್ದರೂ, ನೆಪಕ್ಕೆ ಬೇರೊಬ್ಬರನ್ನು ಮುಂಚೂರಿಗೆ ನಿಲ್ಲಿಸಿರುವರು. ವೆಂಕಟಕೃಷ್ಣಯ್ಯನವರನ್ನು ಹೊಗಳಬೇಕಾದ ಸಂದರ್ಭಗಳಲ್ಲೆಲ್ಲಾ ಆತ್ಮಪ್ರಶಂಸಾದೋಷವು ತಮಗೆ ಬಂದೀತೆಂಬ ಯೋಚನೆಯಿಂದ ಅವರು ಈ ಯುಕ್ತಿಯನ್ನು ಪರಿಗ್ರಹಿಸಿರುವರು. ಪತ್ರಿಕೆಯ ಬರವಣಿಗೆಗಳು ಬೇರೆಜನರವೆಂದೂ ಅವಕ್ಕೂ ವೆಂಕಟಕೃಷ್ಣಯ್ಯನವರ ಅಭಿಪ್ರಾಯಕ್ಕೂ ಸಂಬಂಧವಿಲ್ಲವೆಂದೂ ತೋರಿಸುವ ತಂತ್ರಕ್ಕಾಗಿಯೂ ಸಹ ಈ ಏರ್ಪಾಡು ಮಾಡಿಕೊಳ್ಳಲ್ಪಟ್ಟಿದೆ. ಮಹಾತ್ಮ ಗಾಂಧಿ, ಸರ್ ಸುರೇಂದ್ರನಾಥಬಾನರ್ಜಿ, ಮ|| ಮೋತೀಲಾಲ್‌ಘೋಷ್, ಅನಿಬೆಸೆಂಟ್, ಕಸ್ತೂರಿ ರಂಗಯ್ಯಂಗಾರ್‌ರವರಂಥ ದೇಶಭಕ್ತರುಗಳು ಎಂಗ್‌ಇಂಡ್ಯಾ, ಬಂಗಾಳಿ, ಅಮೃತಬಜಾರ್, ನ್ಯೂಇಂಡ್ಯಾ, ಹಿಂದೂಪತ್ರಿಕೆಗಳಿಗೆ ಸ್ವತಃ ಎಡಿಟರುಗಳಾಗಿದ್ದುಕೊಂಡು ಮುಚ್ಚುಮರೆಯಿಲ್ಲದೆ ನಿಷ್ಕಪಟದೇಶಭಕ್ತಿಯಿಂದ ದೇಶಸೇವೆ ಮಾಡುವಂಥ ಧೈರ್ಯವೂ ಸಹಜವರ್ತನವೂ ಮ|| ವೆಂಕಟಕೃಷ್ಣಯ್ಯನವರಿಗೆ ಇಲ್ಲವೆಂದೂ, ಅವರಿಗೆ ನೈತಿಕಧೈರ್ಯವೂ ನಿಷ್ಕಪಟ ದೇಶಭಕ್ತಿಯೂ, ಸರ್ವಸಮದೃಷ್ಟಿಯೂ ಇಲ್ಲದಿರುವದೇ ಈ ತೆರೆಮರೆ ಆಟಕ್ಕೆ ಕಾರಣವೆಂದೂ, ಎಲ್ಲರೂ ತಿಳಿದುಕೊಂಡಿದ್ದಾರೆ. ನಾನಲ್ಲ ಗಾಂಧಾರಿಯೆಂಬ ಗಾಥೆಯಂತೆ ಅವರು ನಡೆಯಿಸುವ ನಾಟಕಕ್ಕೆ ಅನುಸಾರವಾಗಿಯೇ ಅವರ ಪತ್ರಿಕೆಗಳ ಬಾಕೀ ಲೇಖನಗಳ ಹುರುಳೂ ಆಗಿರುತ್ತದೆ.

ಸಂಪದಭ್ಯುದಯದ ಉದ್ದೇಶವೆಲ್ಲಾ ತನ್ನ ಬ್ರಾಹ್ಮಣಜನರ ಸಮುದ್ಧಾರವೊಂದೇ ಆಗಿರುತ್ತದೆ. ದೇಶದ ಹಿತಚಿಂತನೆಯು ಅದರ ಮನಸ್ಸಿನಲ್ಲಿ ಲೇಶವೂ ಇರುವದಿಲ್ಲ. ತಾನು ಹೊಳೆಯಲ್ಲಿ ಮುಳುಗಿಹೋಗುತ್ತಿರುವಾಗ ಪ್ರಪಂಚವೇ ಹಾಳಾಯಿತೆಂದು ಕೂಗಿಕೊಂಡ ನರಿಯಂತೆ ತನ್ನ ಜನರ ಲಾಭಕ್ಕೆ ಸ್ವಲ್ಪ ನ್ಯೂನತೆ ಬಂದರೆ ದೇಶವೆಲ್ಲಾ ಹಳಸಿಕೊಳಸಿ ಹೋಯಿತೆಂದು ಕೂಗುವದೂ, ತನ್ನವರ ಹೊಟ್ಟೆ ತುಂಬುತ್ತಿದ್ದರೆ ದೇಶವೆಲ್ಲಾ ಸ್ವರ್ಗಸುಖದಲ್ಲಿ ಅಜ್ಜಿಮುಳುಗುತ್ತಿದೆಯೆಂದೂ ಕೂಗುವದೇ ಈ ಪತ್ರಿಕೆಯ ಮೊದಲನೆ ತತ್ವವಾಗಿರುತ್ತದೆ. ಇದರಿಂದ ಇದಕ್ಕೆ ಇಟ್ಟುಕೊಂಡಿರುವ ಸಂಪದಭ್ಯುದಯವೆಂಬ ನಾಮವು ಬಾಂಬಿಗೆ ಅಮೃತಫಲವೆಂದೂ, ಪಾಷಾಣಕ್ಕೆ ಸಕ್ಕರೆಯೆಂದೂ ಹೆಸರಿಟ್ಟರೆ ಎಷ್ಟು ಒಪ್ಪುವದೋ ಹಾಗೆ ಒಪ್ಪುತ್ತ ಆಕಾರ ಮಾತ್ರ ರಮ್ಯವಾಗಿ ಲೋಕವನ್ನು ಮರುಳುಗೊಳಿಸಲು ಸಾಧಕವಾಗಿ ಇರುತ್ತದೆ. ನಿಜವಾದ ಮತ್ತು ಸಾರ್ಥಕವಾದ ನಾಮವನ್ನು ಇದಕ್ಕಿಡಬೇಕಾದರೆ ದೇಶದ ವಿಷಯದಲ್ಲಿ ಆಪದಭ್ಯುದಯವೆಂತಲಾಗಲಿ ತನ್ನ ವಿಷಯಕ್ಕಾದರೆ ಸ್ವಾರ್ಥೈಕಸಾಧಕ ಎಂತಲಾಗಲಿ ಇಟ್ಟುಕೊಳ್ಳುವದು ಒಪ್ಪತಕ್ಕದ್ದಾಗಿದೆ.

ಈ ತನ್ನ ಉದ್ದೇಶದ ಸಾಧನೆಯಲ್ಲಿ ಇದು ಕೆಲವು ತತ್ವಗಳನ್ನು ಅವಲಂಬಿಸಿಕೊಂಡಿದೆ. ಕೂಲಂಕಷವಾಗಿ ಅದರ ಚರಿತ್ರೆಯನ್ನೆಲ್ಲಾ ವಿಮರ್ಶೆಮಾಡಿರುವವರಿಗೆ ಮಾತ್ರ ಅದು ಗೊತ್ತಾಗುತ್ತದೆ. ಮುಂದಾಗಿ ಬರುವ ಯಾರೊಬ್ಬರನ್ನೂ ಮೊದಲು ಇಂದ್ರಚಂದ್ರನೆಂದು ಹೊಗಳಿ ಮಿತ್ರನಂತೆ ನಟಿಸಿ ಸಾಮೋಪಾಯದಿಂದ ವಶಪಡಿಸಿಕೊಳ್ಳಲಿಕ್ಕೆ ತೊಡಗುವದು. ಮತ್ತು ತನ್ನ ಸ್ತೋತ್ರರತ್ನಗಳನ್ನು ಸಮರ್ಪಿಸಿ ದಾನೋಪಾಯವನ್ನಾಚರಿಸುವುದು. ಅವೆರಡೂ ಸಫಲವಾಗದಿದ್ದರೆ ಅವರಮೇಲೆ ಇತರರನ್ನು ಎತ್ತಿ ಕಟ್ಟುವದಕ್ಕೆ ತೊಡಗಿ ಭೇದೋಪಾಯವನ್ನು ಪ್ರಯೋಗಿಸುವದು. ಅದರಿಂದಲೂ ಚರಿತಾರ್ಥವಾಗದಿದ್ದರೆ ಬೊಗಳಿ ಬೈಲಿಗೆಳೆಯುವ ದಂಡೋಪಾಯವನ್ನವಲಂಬಿಸುವುದು. ಇವುಗಳಲ್ಲಿ ಯಾವುದರಿಂದ ಉದ್ದಿಷ್ಟವ್ಯಕ್ತಿಯು ತನ್ನವರಿಗೆ ಹಿತಕರವಾಗಿ ಪರಿಣಮಿಸುವದೋ ಅದರಿಂದ ತನ್ನ ಉದ್ದೇಶವನ್ನು ಪರಿಪೂರಣ ಮಾಡಿಕೊಳ್ಳುವದೇ ಅದರ ಪರಮಾರ್ಥವಾಗಿರುತ್ತದೆ. ಅಷ್ಟೇ ಹೊರತು ಶ್ರೀಮನ್ಮಹಾರಾಜರ ಸಂಸ್ಥಾನದ ಆಗುಹೋಗುಗಳೊಂದೂ ಅದರ ಲಕ್ಷ್ಯದಲ್ಲಿ ಲೇಶಮಾತ್ರವೂ ಇಲ್ಲ.

ಈ ಸಂಗತಿಯನ್ನು ಇದರ ಚರಿತ್ರಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳ ಉದಾಹರಣೆಯಿಂದ ಯಾರೊಬ್ಬರೂ ಸಿದ್ಧಾಂತಪಡಿಸಬಲ್ಲರು. ಸಮಯ ಸಂದರ್ಭಬಿದ್ದಾಗ ಎಂದರೆ ಹಿಂದಿನ ದಿವಾನರನ್ನೆಲ್ಲಾ ಹೊಗಳಿ ಈಗಿನ ಸರ್ ಕಾಂತರಾಜಅರಸಿನವರನ್ನು ದೂಷಿಸಬೇಕಾದ ಸಂದರ್ಭದಲ್ಲಿ ಮೈಸೂರನ್ನು ಮಾಡಲ್‌ಸ್ಟೇಟನ್ನಾಗಿ ಮಾಡಲು ಸರ್ ಕೆ. ಶೇಷಾದ್ರಿಅಯ್ಯರವರ ಅಸಾಧಾರಣ ಮೇಧಾವಿತೆಯೇ ಕಾರಣವೆಂದು ಈ ಪತ್ರಿಕೆಯು ಸತ್ತ ಮೇಲೆ ಶೇಷಾದ್ರಿಅಯ್ಯರನ್ನು ಈಗ ಹೊಗಳುತ್ತಿದೆ. ಅವರಿದ್ದಾಗ ಈ ಪತ್ರಿಕೆಯು ಬೇರೆ ನಾಮಾಂತರವನ್ನು ತಾಳಿದ್ದಾಗ ತನ್ನನ್ನು ಅವರು ಪುರಸ್ಕರಿಸಲಿಲ್ಲವಾದ ಕಾರಣ, ತನ್ನವರುಣ್ಣುವ ಅನ್ನಕ್ಕೆ ಕಣಿವೆಕೆಳಗಿನ ಶೇಷಾದ್ರಿ ಅಯ್ಯರೂ ಅವರ ಕಡೆಯ ಅಯ್ಯರ್ ಪರಂಪರೆಯೂ ಮೈಸೂರು ದೇಶಕ್ಕೆ ಬಂದು ಸೂರೆಮಾಡುತ್ತಿರುವರೆಂದೂ ದೇಶವೆಲ್ಲಾ ಹಾಳಾಗುತ್ತಿದೆಯೆಂದೂ ಅಹರ್ನಿಶಿಯೂ ಅವರಮೇಲೆ ನಿಂದಾರೋಪಣೆಯನ್ನು ಮಾಡುತ್ತ ಬಡಿದುಕೊಳ್ಳುತ್ತಿದ್ದದ್ದನ್ನು ಕಂಡವರು ಈಗಲೂ ಅನೇಕರಿದ್ದಾರೆ. ಅದರಂತೆ ಮಾಧವರಾಯರನ್ನೂ ಅದೇ ಕಾರಣಕ್ಕಾಗಿಯೇ ಇದು ಮೊದಲಿಂದ ಕಡೆಯವರೆಗೂ ದ್ವೇಷಿಸುತ್ತಲೂ ಅವರ ಸಾಹಸಗಳನ್ನೂ ಮೇಧಾವಿತೆಯನ್ನೂ ಸಹ ದೋಷವನ್ನಾಗಿಯೇ ವರ್ಣಿಸುತ್ತಲೂ, ಅವರನ್ನು ದೇಶದ್ರೋಹಿಗಳೆಂದು ಉಪವಾದನೆ ಮಾಡಲೂ ಇದು ಹಿಂಜರಿಯಲಿಲ್ಲ. ಮ|| ವೆಂಕಟಕೃಷ್ಣಯ್ಯನವರ ಲಕ್ಷಣವು ಅವರಿಗೆ ಚೆನ್ನಾಗಿ ತಿಳಿದದ್ದರಿಂದಲೇ ಶಾಸನನಿರ್ಮಾಣಸಭೆಯ ಮೆಟ್ಟಲನ್ನು ಹತ್ತಿಸುವದಕ್ಕೂ ಅವರು ಇವರಿಗೆ ಅವಕಾಶ ಕೊಡಲಿಲ್ಲ. ಅದರಿಂದ ಮತ್ತಷ್ಟು ಈ ಪತ್ರಿಕೆಯು ಅವರನ್ನು ಪ್ರಾಣದ ಮೇಲೆ ಅಂಗೀಜಿಲ್ಲದೆ ತೆಗಳುವದಕ್ಕೆ ಯತ್ನಿಸಿತು.

ಟಿ. ಆನಂದರಾಯರು ಇದರ ಜನರ ಬಾಯ್ಮುತ್ತಿಗೆ ಏನೂ ಅಡ್ಡಿ ಮಾಡದೆ ಇದರ ಸ್ತುತಿಗೆ ಪ್ರಸನ್ನರಾಗಿದ್ದುದರಿಂದ ಅವರ ಪಾರುಪತ್ಯವು ಪಾರಾಗಿಹೋಯಿತು. ಸರ್ ವಿಶ್ವೇಶ್ವರಯ್ಯನವರು ಇದರ ಜೋಳಿಗೆಗೆ ಬಿದ್ದುಹೋದರು. ಬೊಕ್ಕಸದಲ್ಲಿ ಕೂಡಿದ್ದ ಕೋಟ್ಯಂತರ ರೂ. ಗಳನ್ನೆಲ್ಲಾ ಹೊಸಹೊಸ ಇಲಾಖೆಗಳ ಮತ್ತು ನೌಕರಿಗಳ ಕಲ್ಪನೆಮಾಡಿ ಅವರಲ್ಲೆಲ್ಲಾ ಬ್ರಾಹ್ಮಣ್ಯಸ್ಥಾಪನೆ ಮಾಡುತ್ತ ಬಂದುದರಿಂದ ಈ ಪತ್ರಿಕೆಯ ಉದರಶಾಂತಿಯೂ ಚೆನ್ನಾಗಿ ನಡೆಯಿತು. ಎಲ್ಲೆಲ್ಲೂ ಯಾವಯಾವ ಸಭೆಯಲ್ಲೂ ವೆಂಕಟಕೃಷ್ಣಯ್ಯನವರ ಅವತಾರವೇ ಆಗಿತ್ತು. ಮರಿಮಲ್ಲಪ್ಪನವರ ಹೈಸ್ಕೂಲಿನಿಂದ ರಿಟೈರ್ಮಾಡಿಸದಂತೆ ಮಾಡುವ ಸಾಮಾನ್ಯಕಾರ್ಯಕ್ಕೂ ಕೂಡ ವಿಶ್ವೇಶ್ವರಯ್ಯನವರು ಪ್ರವರ್ತಿಸುವಂಥ ಸ್ಥಿತಿಯು ಬಂದಿತು. ಹಾಗಿದ್ದದ್ದರಿಂದಲೇ ಈ ಪತ್ರಿಕೆಯಲ್ಲಿ ವಿಶ್ವೇಶ್ವರಯ್ಯನವರ ಸ್ತುತಿವಾಚನವು ಆಗ ಆರಂಭವಾದದ್ದು ಇನ್ನೂ ನಿಂತೇ ಇಲ್ಲ.

ಅಖಂಡವಾಗಿ ೩೮ ವರ್ಷಕಾಲ ನಡೆದ ಬ್ರಾಹ್ಮಣದಿವಾನಗಿರಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಜನೋದ್ಧಾರವು ಶೇಕಡಾ ೯೮ ಭಾಗ ನಡೆದು ಇತರರ ಯೋಗಕ್ಷೇಮವು ಶೇಕಡಾ ೨ ರಂತೆ ನೋಡಲ್ಪಟ್ಟರೂ ಅದಕ್ಕಾಗಿ ಸಂಪದಭ್ಯುದಯವು ಒಂದು ಕಿರುದನಿಯನ್ನಾದರೂ ತೋರಿಸಿ ಪಶ್ಚಾತ್ತಾಪಪಡಲಿಲ್ಲ. ಉದ್ಧಾರದ ದಾರಿಯೇ ಇಲ್ಲದೆ ಬಳಲುತ್ತ ಹಿಂದೆ ಬಿದ್ದಿದ್ದ ದೇಶದ ಬಹುಭಾಗದ ಪ್ರಜೆಗಳಾದ ಹಿಂದುಳಿದವರು ತಮ್ಮ ಹೀನಸ್ಥಿತಿಯನ್ನು ಸ್ವಲ್ಪಸ್ವಲ್ಪವಾಗಿ ಅರಿತುಕೊಳ್ಳುತ್ತ, ಶ್ರೀಮನ್ಮಹಾರಾಜರು ಸ್ವತಃ ಸಂಸ್ಥಾನದ ಕಾರುಬಾರಿನ ಲೋಪಾಲೋಪಗಳನ್ನೆಲ್ಲ ತಿಳಿದುಕೊಂಡಮೇಲಾದರೂ ತಮ್ಮಗಳ ಕಷ್ಟವನ್ನು ನಿವಾರಿಸಲು ಕೃಪೆಮಾಡಿಯಾರೆಂಬ ನಿರೀಕ್ಷಣೆಯಿಂದ ತಮ್ಮ ಕಷ್ಟವನ್ನು ಜಗದೀಶ್ವರನಲ್ಲಿ ಮೊರೆಯಿಡುತ್ತ ಕಾಲಯಾಪನೆ ಮಾಡುತ್ತ ಇದ್ದರು. ಭಗವತ್ಕಟಾಕ್ಷವೊದಗಿತು. ಶ್ರೀಮನ್ಮಹಾಪ್ರಭು ಸಹೋದರರುಗಳ ಮನದಲ್ಲಿ ಈಶ್ವರಪ್ರೇರಣೆಯಾಯಿತು. ಹಿಂದುಳಿದಜನರ ಸಮುದ್ಧಾರಕ್ಕೆ ಅವರು ಬದ್ಧದೀಕ್ಷರಾದರು. ಅವರ ಛಾಯಾನುವರ್ತಿಗಳಾಗಿ ಕೆಲಸಮಾಡಬಲ್ಲ ಮತ್ತು ಸಂಸ್ಥಾನದ ಆಗುಹೋಗುಗಳಿಗೆ ಶ್ರೀಮನ್ಮಹಾಪ್ರಭುಗಳಿಗೆ ಎಷ್ಟು ನಿಕಟಸಂಬಂಧವಿದೆಯೋ ಅದರಂತೆಯೇ ವಿಶ್ವಾಸಸಂಬಂಧವುಳ್ಳ ಸರ್ ಕಾಂತರಾಜೇ ಅರಸಿನವರು ದಿವಾನರಾಗಿ ಬಂದರು. ಇದರಿಂದ ಹಿಂದುಳಿದವರ ಅದೃಷ್ಟವು ಕುಲಾಯಿಸುವ ಹೊತ್ತು ಬಂದಿತು.

ಇದನ್ನು ನೋಡಿ ಸಂಪದಭ್ಯುದಯವು ಸೈರಿಸಿಕೊಂಡಿರುವದುಂಟೆ? ತನ್ನವರು ತಿನ್ನುತ್ತಿದ್ದ ರೊಟ್ಟಿಯ ಚೂರನ್ನು ಇತರರಿಗೆ ಪಾಲುಮಾಡಿಕೊಡುವದಕ್ಕೆ ಶ್ರೀಮನ್ಮಹಾರಾಜ ಸಹೋದರರೂ ಅವರ ದಿವಾನರೂ ತೊಡಗಿದ್ದನ್ನು ಕಂಡು ಅವರುಗಳನ್ನು ಬ್ರಹ್ಮದ್ವೇಷಿಗಳೆಂಬುದೇ ಮೊದಲಾದ ನಿಂದಾವಚನಗಳಿಂದ ಅಭಿಷೇಕಿಸುತ್ತಲೂ, ಅವರ ಸಂಸ್ಥಾನಕ್ಕೂ ಹಿಂದುಳಿದ ಪ್ರಜೆಗಳಿಗೂ ಅನಿಷ್ಟವನ್ನು ಕೋರುತ್ತಲೂ, ಪ್ರಳಯವನ್ನುಂಟುಮಾಡುವುದಕ್ಕೂ ಕೂಡ ಹವಣಿಸುತ್ತಲೂ ಇರುವದು. ಈಗಿನ ಏರ್ಪಾಡಿನಲ್ಲಿ ೧೦೦ ರೂ. ಸಂಬಳದ ಕೆಲಸವನ್ನು ಕೊಡಬೇಕಾದರೂ ಶ್ರೀಮನ್ಮಹಾರಾಜರ ಅನುಮತಿಯ ಶಿವಾಯಿ ನಡೆಯದೆ ಇರುತ್ತಿರುವಾಗ, ಸಂಸ್ಥಾನದ ಹೊಸಹೊಸದಾದ ದೊಡ್ಡ ಏರ್ಪಾಟುಗಳೆಲ್ಲಾ ಶ್ರೀಮನ್ಮಹಾರಾಜರ ಅಪ್ಪಣೆಯಿಲ್ಲದೆ ಜರಗುವುದುಂಟೆ? ಇದನ್ನೆಲ್ಲಾ ಸಂಪದಭ್ಯುದಯವು ತಿಳಿದಿದ್ದರೂ, ಹಿಂದುಳಿದವರ ಸಮುದ್ಧಾರದ ಪ್ರೊಸಿಡಿಂಗ್ಸಿಗಾಗಿ ಶ್ರೀಮನ್ಮಹಾರಾಜರನ್ನು ಪ್ರತ್ಯಕ್ಷವಾಗಿ ನಿಂದಿಸಿದರೆ ಎಲ್ಲಾದರೂ ಹಲ್ಲು ಮುರಿದುಬಿಟ್ಟಾರೆಂಬ ಭಯದಿಂದ ಅವರಮೇಲೆ ಸುರಿಸುವ ನಿಂದಾವೃಷ್ಟಿಯನ್ನೆಲ್ಲಾ ದುರಾರೋಪಣೆಗಳನ್ನೆಲ್ಲಾ ದಿವಾನರ ಮೇಲೆ ಸುರಿಸುತ್ತಲಿರುವುದು. (ಈ ತೆರೆಮರೆಯ ದೋಷಾಪಾದನೆಗಳಿಗೆಲ್ಲಾ ಶ್ರೀಮನ್ಮಹಾರಾಜರು ಸಂಪದಭ್ಯುದಯದ ಲಕ್ಷ್ಯದಲ್ಲಿರುವರೇ ಹೊರತು ಇತರರು ಯಾರೂ ಅಲ್ಲವೆನ್ನುವದು ಸಿದ್ಧವಾಗಿಯೇ ಇದೆ. ಅಲ್ಲದೆ ಶ್ರೀಮನ್ಮಹಾರಾಜರನ್ನು ಹೊಗಳಿ ದೋಷಾರೋಪಣೆಗಳಿಗೆಲ್ಲಾ ದಿವಾನರನ್ನು ಗುರಿಮಾಡಿ ಪ್ರಭುತ್ವದ ಗುಣವನ್ನೆಲ್ಲಾ ದೋಷವನ್ನಾಗಿ ದೂರಿ ಅದು ನಡೆಸುತ್ತಿರುವ ಕಪಟತಂತ್ರವು ಮುಖ್ಯವಾಗಿ ಮಹಾರಾಜರಿಗೂ ಸರ್ ಕಾಂತರಾಜ ಅರಸಿನವರಿಗೂ ಮನಃಕಾಲುಷ್ಯವನ್ನು ತಂದಿಕ್ಕಬೇಕೆನ್ನುವದೇ ಆಗಿರುತ್ತದೆ. ಅಲ್ಲದೆ ಹೇಗಾದರೂಮಾಡಿ ಶ್ರೀಮನ್ಮಹಾರಾಜರಿಗೆ ಬೇಸರವನ್ನು ಹುಟ್ಟಿಸಿ, ಅಥವಾ ಸಂಸ್ಥಾನದಲ್ಲಿ ಯಾವ ತೆರದಿಂದಲಾದರೂ ಗದ್ದಲಹುಟ್ಟಿಸಿ ಅರಸರುಗಳಿಗೆ ದಿವಾನಗಿರಿ ಮಾಡಿ ನಿರ್ವಹಿಸುವಷ್ಟು ಶಕ್ತಿಯಿಲ್ಲವೆನ್ನಿಸುವ ಬುದ್ಧಿ ಹುಟ್ಟಿಸಿಬಿಟ್ಟರೆ ದಿವಾನಗಿರಿಯಂಥ ಅಧ್ಯಕ್ಷಪದಾಧಿಕಾರವು ರಾಜಬಂಧುವರ್ಗದವರಿಗೆ ಮುಂದೆ ಎಂದೆಂದಿಗೂ ತಪ್ಪಿಸಿಬಿಟ್ಟಂತೆಯೇ ಆಗುವುದೆಂದೂ, ಆ ಜನ ಪಂಗಡದವರು ಬರುವುದು ನಿಂತುಹೋದರೆ ಇತರರ್‍ಯಾರಿಗೂ ಆ ಹುದ್ದೆಯು ಸಿಕ್ಕದಂತೆ ಬೇಕಾದಷ್ಟು ತಂತ್ರಗಳನ್ನು ತಮ್ಮವರು ನಡೆಸುವುದೇನೂ ಅಸಾಧ್ಯವಲ್ಲವೆಂದೂ ಈ ಪತ್ರಿಕೆಯು ಯೋಚಿಸಿಕೊಂಡಿರುತ್ತದೆ. ಈ ದುರಭಿಸಂಧಿಯನ್ನು ಮನದಲ್ಲಿಟ್ಟು ಕೆಲಸಮಾಡುತ್ತಿರುವದರಿಂದ ಸಂಪದಭ್ಯುದಯ ಪತ್ರಿಕೆಯ ಮಾತುಕತೆಗಳೂ ನಿಂದಾಸ್ತುತಿಗಳೂ ದೇಶಕ್ಕೆ ಎಷ್ಟು ಪ್ರಯೋಜನಕರವೆನ್ನುವದನ್ನೂ ಅದರ ಮಾತುಗಳನ್ನು ಯಾರು ನಂಬಬಹುದೆಂಬುದನ್ನೂ, ಅದು ಸಾಮಾನ್ಯಪ್ರಜೆಗಳಿಗೂ ಸರ್ಕಾರಕ್ಕೂ ಎಷ್ಟು ಮಿತ್ರನೆಂಬುದನ್ನೂ ಸರ್ವರೂ ಯೋಚಿಸಿ ಎಚ್ಚತ್ತು ನಡೆದುಕೊಳ್ಳಬೇಕು.

ಸರ್ ಕಾಂತರಾಜೆ ಅರಸಿನವರು ಮೈಸೂರಿನಲ್ಲೇ ಹುಟ್ಟಿಬೆಳೆದವರು. ಸಂಸ್ಥಾನದ ಮತ್ತು ಪ್ರಜೆಗಳ ಆಗುಹೋಗುಗಳನ್ನೂ ಜನರ ಶೀಲಸ್ವಭಾವಗಳನ್ನೂ ಸಂಪದಭ್ಯುದಯದ ಜನ್ಮಜನ್ಮಾಂತರ ಚರಿತ್ರೆಗಳನ್ನೂ ಆಮೂಲಾಗ್ರವಾಗಿ ತಿಳಿದವರು. ದೇಶದ ಪ್ರಜೆಗಳಲ್ಲಿ ಪುತ್ರವಾತ್ಸಲ್ಯವಿಟ್ಟ ದಿವಾನರೆಂದರೆ ಅವರಿಗೆ ಮೀರಿದವರು ಯಾರೂ ಬಂದಿರಲಿಲ್ಲ. ಅವರ ಕರುಣಾರ್ದ್ರ ಹೃದಯವನ್ನು ಅರಿಯದವರೇ ಇಲ್ಲ. ಶಿಷ್ಟರಿಗೆ ಅವರು ಸಂಪೂರ್ಣ ಚಂದ್ರನಂತೆ ಸುಪ್ರಸನ್ನರಾಗಿರುವರು. ಆದರೆ ದುಷ್ಟರಿಗೆ ಯಮಸ್ವರೂಪರಾಗಿರುವಂಥ ಕಠಿನಸ್ವಭಾವವು ಅವರಲ್ಲಿಲ್ಲ. ಅದುಕಾರಣ ಮೃದುವಿಗಿಂತ ಮೃದುವೆಂದರೆ ಅವರೇಸರಿ. ಆ ಸ್ವಭಾವವು ಸಂಪದಭ್ಯುದಯದ ಉಚ್ಛೃಂಖಲವರ್ತನೆಗೆ ಮತ್ತಷ್ಟು ಬಲವನ್ನುಂಟುಮಾಡಿರುವದು. ಊರಿಗೊಂದು ಹೆಸರನ್ನೂ ವೇಷವನ್ನೂ ಬದಲಾಯಿಸಿಕೊಳ್ಳುವವರಂತೆ ಕಾಲಕಾಲಕ್ಕೆ ಸಂಪದಭ್ಯುದಯದ ಹೆಸರುಗಳು ಬದಲಾದವೇ ಹೊರತು ಅದರ ಗುಣಗಳು ಮಾತ್ರ ಮಾರ್ಪಡಲಿಲ್ಲ. ಪರಹಿತದಲ್ಲಿ ಉದಾರಬುದ್ಧಿಯನ್ನು ತೋರದಿರುವ ಮತ್ತು ಸಮದೃಷ್ಟಿಯಿಲ್ಲದಿರುವ ಮ|| ವೆಂಕಟಕೃಷ್ಣಯ್ಯನವರಂಥವರ ಈರಾಟಿಕೆಗೆ ಈಗಣ ದವಲತ್ತಿನಲ್ಲಿ ಅವಕಾಶವಾಗಿಲ್ಲ. ಈ ಕಾರಣದಿಂದ ಕುರುಡನಿಗೆ ಲೋಕವೇ ಅಂಧಕಾರಮಯವಾಗಿರುವಂತೆ ಮ|| ವೆಂಕಟಕೃಷ್ಣಯ್ಯನವರಿಗೂ ಸಂಪದಭ್ಯುದಯ ಕೂಟದವರಿಗೂ ದೇಶವೆಲ್ಲಾ ಅಧರ್ಮಮಯವಾಗಿ ತೋರುತ್ತಿದ್ದರೆ ಆಶ್ಚರ್ಯವೇನೂ ಇಲ್ಲ. ದೇಶವೆಲ್ಲಾ ಕುರುಡಲ್ಲ. ಸರ್ವವನ್ನೂ ಸಹಸ್ರಾಕ್ಷಿಗಳಿಂದ ಅವಲೋಕಿಸುತ್ತಿರುವ ಭಗವಂತನು ಕುರುಡನಲ್ಲ. ಧೂರ್ತರಿಗೂ, ವಂಚಕರಿಗೂ, ಹೀನರಿಗೂ, ದೀನರಿಗೂ ಅವರವರ ಕೃತಕರ್ಮಕ್ಕೆ ತಕ್ಕ ಫಲವನ್ನು ಪರಿಪಾಕ ಸಮಯವನ್ನರಿತು ಉಣ್ಣಿಸಲು ಆತನು ಸಾಕ್ಷೀಭೂತನಾಗಿದ್ದೇ ಇರುವನು. ಧರ್ಮವನ್ನೇ ಅಧರ್ಮವನ್ನಾಗಿ ಸಾರಿ ಸಾಧಿಸುವ ಶಕ್ತಿಯು ಸಂಪದಭ್ಯುದಯ ಪತ್ರಿಕೆಗೆ ಇರುವದೆ? ನರಿಯು ಕೂಗಿದರೆ ದೇವಲೋಕವು ಹಾಳಾದೀತೆ? ಎಂದಿಗೂ ಇಲ್ಲ. ಮಿಲ್ಲರ್‌ಕಮಿಟಿ ರಿಪೋರ್ಟು ಎಜುಕೇಷನ್ ಮೆಮೋರಾಂಡಮ್ಮು ಸಹ ಹಿಂದುಳಿದವರ ಸಮುದ್ಧಾರಕ್ಕೋಸ್ಕರ ಶ್ರೀಮನ್ಮಹಾರಾಜರಿಂದ ಅನುಗ್ರಹಿಸಲ್ಪಟ್ಟ ವರವಾಗಿರುತ್ತವೆ. ಅವನ್ನು ಹಿಂದೆಗೆಯಿಸಿ ತಪ್ಪಿಸಿಬಿಡಬೇಕೆನ್ನುವದು ಸಂಪದಭ್ಯುದಯ ಕೂಟದವರ ಮುಖ್ಯ ಸಂಕಲ್ಪವಾಗಿದೆ. ಇವುಗಳು ಹಿಂದೆಗೆದುಕೊಂಡು ಹೋಗುವುದೆಂದರೆ ಹಿಂದುಳಿದವರ ಪ್ರಾಣವನ್ನು ಹೀರಿಬಿಡುವುದೇ ಸರಿ. ಇದಕ್ಕೆ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಎಂದಿಗೂ ಅವಕಾಶಕೊಡಲಾರರು. ಆದರೆ ಹಿಂದುಳಿದ ಪ್ರಜೆಗಳು ಉಪೇಕ್ಷೆಮಾಡಿ ಕುಳಿತುಕೊಳ್ಳತಕ್ಕದ್ದಲ್ಲ. ಅವರೂ ಅವರ ಪ್ರತಿನಿಧಿಗಳೂ ಆ ಆರ್ಡರುಗಳ ರಕ್ಷಣೆಗೆ ಸಮರ್ಥವಾಗಿ ನಿಂತೇ ಇರಬೇಕು. ಬ್ರಾಹ್ಮಣರ ಹೊರತು ಇತರರು ದಿವಾನಗಿರಿಗೂ ಇತರಾಧಿಕಾರಗಳಿಗೂ ಬಂದರೆ ರಾಜನು ಅಗಸನಿಗೆ ಮಂತ್ರಿತ್ವ ಕೊಟ್ಟು ದೇಶವನ್ನು ಹಾಳ್ಮಾಡಿಕೊಂಡಂತೆ ಆಗುವದೆಂಬ ಕಥೆಯನ್ನು ಹೇಳಿ ಸಂಪದಭ್ಯುದಯ ಕೂಟದ ನಾಲ್ಕಾರು ಜನರು ಪರಿಹಾಸಮಾಡುತ್ತಲೂ ಜರಿಯುತ್ತಲೂ ಎದೆಗೆಡಿಸಬೇಕೆನ್ನುತ್ತಾರೆ. ಆದಕಾರಣ ದೇಶದ ೫೬ ಲಕ್ಷ ಪ್ರಜೆಗಳೆಲ್ಲಾ ಇಂಥ ಅವರ ದುಷ್ಟಪ್ರಯತ್ನಗಳಿಗೂ ನಿಂದಾರೋಪಣೆಗಳಿಗೂ ಸೋತು ಸುಮ್ಮನಿದ್ದು ಹುಟ್ಟಿಬೆಳೆದು ಒಂದು ದಿವಸ ಸಾಯುವ ಪಶುಗಳಂತೆ ಕಾಲಕಳೆದು ಬಿಟ್ಟುಹೋಗುವುದು ಸರಿಯೆ? ಭಗವಂತನು ಇತರರಂತೆಯೇ ನಮ್ಮನ್ನೂ ಪಾಂಚಭೌತಿಕ ಶರೀರವನ್ನು ಕೊಟ್ಟು ಹುಟ್ಟಿಸಿರುವನೆಂದೂ ನಮ್ಮಲ್ಲೂ ಕರ್ತೃತ್ವ ಶಕ್ತಿಯಿರುವುದೆಂದೂ ತೋರಿಸಲಿಕ್ಕೆ ವಿದ್ಯಾವಿವೇಕಸಂಪನ್ನರಾಗಲು ತೊಡಗದಿರುವದು ಸರಿಯೆ? ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸಬೇಕು. ಸಂಪದಭ್ಯುದಯ ಕೂಟದವರ ವಿಷಯದಲ್ಲೂ ಆ ಪತ್ರಿಕೆಯ ಕೂಗಾಟದ ವಿಷಯದಲ್ಲೂ ಎಷ್ಟು ಎಚ್ಚರದಿಂದ ನಡೆದುಕೊಳ್ಳಬೇಕೆನ್ನುವದನ್ನು ಸರ್ವರೂ ಅರಿತುಕೊಂಡು ತಂತಮ್ಮ ಉದ್ಧಾರಪ್ರಯತ್ನದಲ್ಲಿ ತತ್ಪರರಾಗಿರಬೇಕು.

ದೇಶಭಕ್ತ.

ಅರಸೀಕೆರೆ ವೃತ್ತಾಂತ.

ಮಿಲ್ಲರ್ ಕಮಿಟಿ ರಿಪೋರ್ಟ್.—ಇಲ್ಲಿಯ ಮ್ಯುನ್ಸಿಪಲ್ ಆಫೀಸಿನಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರ್ ನೌಕರಿಯು ಖಾಲಿಯಿರಲು ೩ ಜನ ಇತರರೂ ಓರ್ವ ಬ್ರಾಹ್ಮಣನೂ ಅಪ್ಲಿಕೇಷನ್ ಹಾಕಿಕೊಂಡರು. ಬ್ರಾಹ್ಮಣೇತರರಿಂದ ತುಂಬಿತುಳುಕುವ ಮ್ಯುನ್ಸಿಪಲ್ ಕಮಿಟಿಯವರು ಬ್ರಾಹ್ಮಣೇತರರಿಗೆ ಎಲ್ಲಿ ಆಸ್ಪದ ಕೊಡುವರೋ ಎಂಬ ಅಸೂಯೆಯಿಂದ ಇಲ್ಲಿದ್ದ ಬ್ರಾಹ್ಮಣ ಪ್ರೆಸಿಡೆಂಟರು ಇಂದ್ರಜಾಲ ನಡೆಸಿ ವೈಸ್ ಪ್ರೆಸಿಡೆಂಟರ ಮತ್ತು ಮ್ಯುನ್ಸಿಪಲ್ ಬೋರ್ಡಿನವರ ತೀರ್ಮಾನಕ್ಕೆ ಬಿಟ್ಟವರಂತೆ ಬಿಟ್ಟು, ತಾವು ಬೇರೆ ಗ್ರಾಮಕ್ಕೆ ವರ್ಗವಾಗಿ ಹೋಗುವ ಸಂದರ್ಭದಲ್ಲಿ ಆ ಒಂಟಿ ಬ್ರಾಹ್ಮಣನಿಗೆ ಕೆಲಸ ಖಾಯಂ ಮಾಡಿ ತನ್ನ ಹೃದಯಗತವಾದ ಅಸೂಯಾಗ್ನಿಯನ್ನು ಹೊರಹಾಕಿ ಬ್ರಾಹ್ಮಣೇತರ ಅಪ್ಲಿಕೆಂಟರುಗಳಿಗೆ ಆಶಾಭಂಗಮಾಡಿದ್ದಲ್ಲದೆ ಇಲ್ಲಿಯ ಪ್ರಜಾವರ್ಗದವರ ಜುಗುಪ್ಸೆಗೂ ಅನಾದರಣೆಗೂ ಗುರಿಯಾದರು. ಗೋಮುಖವ್ಯಾಘ್ರದಂತೆ ನಟಿಸುವ ಜನಗಳ ನಡತೆಯ ಪ್ರದರ್ಶನವು ಇದೇ ರೀತಿ ಎಲ್ಲೆಲ್ಲಿಯೂ ಇರಬಹುದಲ್ಲವೇ?

ಅಯ್ಯೋ.—ಮಿಲ್ಲರ್‌ಕಮಿಟಿ ರಿಪೋರ್ಟು ಇನ್ನೂ ತರುಣಾವಸ್ಥೆಯಲ್ಲಿರುವಾಗಲೇ ತಾಲ್ಲೂಕಾಮುಳಿ ಇಷ್ಟು ಪಕ್ಷಪಾತ ದುರಭಿಮಾನಗಳು ಜರಗುವ ಸಮಯ ಬಂದಿದೆ. ಮುಂದೆ ಯಾವ ರೀತಿ ಪರಿಣಮಿಸಿ ಸ್ವಪರಹಾನಿಮಾಡುವದೋ ತಿಳಿಯದು. ಇಂಥ ಅವರ ಅಸೂಯಾಗ್ನಿಯಿಂದ ಅನ್ಯಾಯಪಕ್ಷಪಾತಾಚರಣೆಯಿಂದ ಪ್ರಜಾಸ್ತೋಮದ ಮನಸ್ಸೆಲ್ಲಾ ಬಹಳ ಮಟ್ಟಿಗೆ ಕೆಡಲು ಆಸ್ಪದವಾಗಿದೆ. ತನ್ಮೂಲಕ ಉತ್ಪತ್ತಿಯಾಗುವ ಫಲಾಂಶಗಳಿಗೆ ಇವರುಗಳು ಎಲ್ಲಿ ಈಡಾಗುವರೋ ಎಂದು ತುಂಬಾ ವ್ಯಸನವುಂಟಾಗಿದೆ.

ಬ್ರಾಹ್ಮಣ ವಿದ್ಯಾಸಹಾಯ ಸಂಘ.—ಈ ಸಂಘದ ಪರವಾಗಿ ನಂಜುಂಡಯ್ಯನವರು ಇಲ್ಲಿಗೆ ದಯಮಾಡಿಸಿ ಬ್ರಾಹ್ಮಣೇತರರಿಂದ ಬಲವಂತವಾಗಿ ತಮ್ಮ ನಿಧಿಗೆ ಧನಶೇಖರಿಸುತ್ತಿರುವಂತೆ ವದಂತಿ ಇದೆ. ಸ್ಥಳಾಧಿಕಾರಿಗಳ ಬಲವಂತದಿಂದಲೂ ಬಡರೈತರ ಮತ್ತು ವರ್ತಕರ ಸುಲಿಗೆ ಕೋರರಾದ ಕೆಲವು ಲಾಯರುಗಳ ಕಪಟಬೋಧೆಗೆ ಕಟ್ಟುಬಿದ್ದು ಬ್ರಾಹ್ಮಣೇತರ ಬಾಂಧವರು ನಿರ್ವಾಹವಿಲ್ಲದೆ ಸಹಾಯಸಂಪತ್ತಿಯನ್ನು ಒದಗಿಸಿಕೊಡುತ್ತಿರುವಂತೆ ತಿಳಿದುಬಂದಿದೆ.

ಬ್ರಾಹ್ಮಣೇತರರನ್ನು ನಿರ್ಮೂಲಮಾಡಬೇಕೆಂದು ಮಾಡುತ್ತಿರುವ ಜನರ ಪ್ರಯತ್ನಕ್ಕೆ ಸಾಧ್ಯವಾದಮಟ್ಟಿಗೆ ಇತರರೆಲ್ಲಾ ದೂರಸ್ಥರಾಗಿರಬೇಕಲ್ಲದೆ ತಂತಮ್ಮ ಜನ ಪಂಗಡಗಳ ಉದ್ಧಾರಕ್ಕೆ ಮೊದಲು ಮನಕೊಡುವದುತ್ತಮ, ಮತ್ತು ತಮಗೆ ಹಿತಬಗೆಯುವ ಸಂಘಗಳಿಗೆ ಸಹಾಯಸಂಪತ್ತಿಯನ್ನು ಕೊಡುತ್ತಲೂ ನಿದ್ರಾವಸ್ಥೆಯಲ್ಲಿರುವವರನ್ನು ಎಚ್ಚರಗೊಳಿಸಿ ದೇಶಸೇವೆಯಲ್ಲಿ ನಿರತರಾಗಿರಬೇಕೆಂದೂ ಕೋರುತ್ತೇನೆ.

ಶಿರಾಳಕೊಪ್ಪ.

ಶಿಕಾರಿಪುರದ ತಾಲ್ಲೂಕು ಶಿರಾಳಕೊಪ್ಪದಲ್ಲಿ ಪ್ಲೇಗು ಆರಂಭವಾಗಿ ೧೦, ೧೨ ಕೇಸುಗಳಾಗಿವೆ. ಇಲ್ಲಿಯ ಡಾಕ್ಟರ್ ಸಚ್ಚಿದಾನಂದ ಮೊದಲಿಯಾರರವರು ಪ್ರಜೆಗಳ ವಿಷಯದಲ್ಲಿ ತುಂಬಾ ಗಮನವನ್ನು ಕೊಟ್ಟಿರುತ್ತಾರೆ. ಸುಮಾರು ಒಂದು ಸಾವಿರ ಜನರಿಗೆ ಇನಾಕ್ಯುಲೇಷನ್ ಮಾಡಿರುತ್ತಾರೆ. ಹವಾ ಚೆನ್ನಾಗಿಲ್ಲ. ಮಳೆ ಆಗುತ್ತಲಿದೆ. ಈ ಟವನ್ನಿನಲ್ಲಿ ತಾ|| ೮-೮-೨೧ ರಲ್ಲು ಮ್ಯುನ್ಸಿಪಲ್ ಮೆಂಬರ್ ಚುನಾವಣೆ ನಡೆಯಿತು. ಅದರಲ್ಲಿ ಪ್ರಜಾಪಕ್ಷಿಗಳಾದ ನಾಲ್ಕು ಜನ ಹಿಂದುಳಿದವರು. (ವೀರಶೈವರು) ಓಟುಗಳನ್ನು ಹೆಚ್ಚಾಗಿ ಪಡೆದರು. ಇದಕ್ಕೆ ಇಲ್ಲಿಯ ಮೆಂಬರು ಕೆಲಸಕ್ಕೆ ಕ್ಯಾಂಡಿಡೇಟುಗಳಾಗಿದ್ದ ಇನ್ನುಬ್ಬರಿಗೆ ಸಾಕಾದಷ್ಟು ಓಟುಗಳು ಬಾರದಿದ್ದದ್ದಕ್ಕೆ ಇವರು ಪಡುವ ಹೊಟ್ಟೆಕಿಚ್ಚನ್ನು ಹೇಳಲುಸಾಧ್ಯವಾಗಿದೆ. ಸರ್ಕಾ

ರದವರು ನಾಮಿನೇಟ್ ಮೆಂಬರುಗಳನ್ನ ನೇಮಿಸಿಕೊಳ್ಳುವಾಗ ಈ ಊರಿನಲ್ಲಿ ಬ್ರಾಹ್ಮಣರ ಪ್ರಜಾಸಂಖ್ಯೆಯು ೬೦, ೭೦ ಮಾತ್ರ ಇರುವದರಿಂದ ಹೆಚ್ಚು ಪ್ರಜಾಸಂಖ್ಯೆಯುಳ್ಳ ಮಹಮ್ಮದೀಯರು, ಲಿಂಗಾಯಿತರು, ವೈಶ್ಯರು, ಇತರ ಹಿಂದುಗಳು ಮೊದಲಾದ ಪಂಗಡಗಳಿಂದ ಒಬ್ಬೊಬ್ಬರನ್ನ ನೇಮಿಸಿಕೊಳ್ಳುವರೆಂದು ಸಂಪೂರ್ಣವಾಗಿ ನಂಬಿಧೇನೆ. ಪುರನಿವಾಸಿ.

ಸಿಡಲಘಟ್ಟ.

ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟದ ಮ್ಯುನಿಸಿಪಾಲಿಟಿಗೆ ಮೆಂಬರುಗಳನ್ನು ಚುನಾಯಿಸುವ ಎಲೆಕ್ಷನ್ ವೋಟಿಂಗು ೧೫-೯-೨೧ನೆಯ ತಾರೀಖು ಗುರುವಾರ ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ನಡೆಯಿತು. ಹೆಚ್ಚು ಸಮ್ಮತಿಗಳನ್ನು ಪಡೆದ ಮ|| ಗಳಾದ ಎಸ್. ಹಂಪಯ್ಯನವರು, ದೊಡ್ಡ ಅಲ್ಲೀಸಾಹೇಬರು, ಎಸ್. ಗೋಪಾಲಸ್ವಾಮಿನಾಯಿಡುಯವರು, ಸಿ. ರಡ್ಡಿಯಪ್ಪನವರು, ಬಿ. ಆಂಜನೇಯಪ್ಪನವರು, ಸಯ್ಯದ್‌ಹುಸೇನ್ ಸಾಹೇಬರು ಕೆ. ರಾಮಣ್ಣನವರು, ಸಿ. ಬಾದ್ರೆಪ್ಪನವರು ಮೆಂಬರುಗಳಾಗಿ ಚುನಾಯಿಸಲ್ಪಟ್ಟರು. ಹಿಂದೆಯಾವಾಗಲೂ ಇಷ್ಟು ಮಂದಿ ಓಟರುಗಳು ಕಚೇರಿಬಳಿ ಬಂದಿರಲಿಲ್ಲವೆಂಬುವಷ್ಟು ಅಧಿಕವಾಗಿ ಸೇರಿದ್ದರು. ಕೆಲವು ಕುಹಕರು ಓಟರುಗಳನ್ನು ಬಾರದಂತೆ ದರ್ಪವನ್ನು ತೋರಿಸಿ ತಡೆದರೂ ಪ್ರಜಾಮಿತ್ರ ಮಂಡಲಿಯ ಪ್ರವಾಹವು ಈ ಅಲ್ಪವಾದ ತಡೆಗಳನ್ನು ಲಕ್ಷ್ಯಮಾಡಲಿಲ್ಲ. ೮೦ ವರುಷದ ಮುದುಕರು ಸಹ ಈ ಗದ್ದಲದಲ್ಲಿ ಸಾಯಂಕಾಲದವರೆಗೂ ಕಾದು ಓಟ್ ಮಾಡಿರುವದನ್ನು ನೋಡಿದರೆ ಇಲ್ಲಿನ ಪ್ರಜೆಗಳು ಈ ಮೂರು ವರ್ಷಗಳಲ್ಲಿ ಎಷ್ಟು ಹಿಂಸೆಗೆ ಗುರಿಯಾಗಿದ್ದರೆಂಬುವದು ವ್ಯಕ್ತವಾಗುತ್ತಿದೆ. ಪುನಃ ಚಾಣಿಕ್ಯತಂತ್ರ ಆರಂಭವಾಗಿರುತ್ತದೆ. ತಪಶೀಲಾಗಿ ಮುಂದಣವಾರ ಬರೆಯುತ್ತೇನೆ.

ಮೈಸೂರು ಡಿ|| ನಲ್ಲಿ ಹಿಂದುಳಿದ ವರ್ಗಗಳ ನೌಕರರ ದೌರ್ಭಾಗ್ಯ.

ಹಿಂದಿನ ಸಂಚಿಕೆಯಲ್ಲಿ ಹಿಂದುಳಿದ ವರ್ಗಗಳ ನೌಕರರಿಗೆ ನಂಜನಗೂಡು ತಾಲ್ಲೂಕಿನಲ್ಲಿರುವ ತೊಂದರೆಗಳನ್ನು ಪ್ರಕಟಗೊಳಿಸಿದ್ದೇನೆ. ಹುಣಸೂರಲ್ಲಿ ಪಿರಿಯಾಪಟ್ಟಣದ ಶೇಕದಾರಿ ಕೆಲಸದಲ್ಲಿದ್ದ ಪುಟ್ಟರುದ್ರಪ್ಪನವರೆಂಬ ಮತ್ತೊಬ್ಬ ಲಿಂಗಾಯಿತ ನೌಕರರು ನಾಲಾಯಖಿಸಬುಬು "ರಿಕಾರ್ಡ್ ಕೀಪರ್" ಕೆಲಸಕ್ಕೆ ರಿವರ್ಟು ಮಾಡಲ್ಪಟ್ಟಿದ್ದಾರೆ. ಇವರು Matriculation ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಗಟ್ಟಿಗರೆಂದು ಪ್ರಜೆಗಳಲ್ಲಿ ಒಳ್ಳೆ ಹೆಸರನ್ನು ಪಡೆದು, ನಾಗಮಂಗಲದ ಅಮಲ್ದಾರರಾಗಿದ್ದು ಹಾಲಿ ರಿಟೈರಾಗಿರುವ ಮ|| ಬುರ್ಲಿ ಕೃಷ್ಣರಾಯರಿಂದ ಬಲವಾದ ಶಿಫಾರಸು ಹೊಂದಿದ್ದರು. ಹೀಗಿದ್ದರೂ ಸ್ವಂತ ಕಾರಣದಿಂದ ಅಂದರೆ ಮಾಮೂಲು ಸರಬರ್ಕೈ ವಗೈರೆ ವಿಚಾರದಲ್ಲಿ ಹುಣಸೂರು ಅಮಲ್ದಾರರಿಗೂ ಇವರಿಗೂ ಮಾತು ಬೆಳೆದು ಈ ರೀತಿ ಅಕಾರಣವಾಗಿ ತೊಂದರೆಗೊಳಗಾಗಬೇಕಾಯಿತು. ಇವರಿಗಿಂತಲೂ ನಾಲಾಯಖಾದ ಬ್ರಾಹ್ಮಣ ಶೇಕದಾರರಿದ್ದರೂ ಅವರುಗಳನ್ನು ಸ್ವಲ್ಪವೂ ಕಿರುಕುಳ ಗೊಳಿಸದೆ ದ್ವೇಷಮಾಡಿ ಇವರಿಗೆ ತೊಂದರೆಮಾಡಿದ್ದು ಇವರ ಪಕ್ಷಪಾತ ಭಾವವನ್ನು ಹೊರಪಡಿಸುತ್ತದೆ. ಅಡಿಗೆ ಪರಿಚಾರಕನಾಗಿದ್ದ ಮಹಾನುಭಾವನೊಬ್ಬನು ಆ ತಾಲ್ಲೂಕಿನಲ್ಲಿ ಶೇಕದಾರಿ ಮಾಡಿ ಈ ಅಮಲ್ದಾರರಿಗೆ ತುಂಬಾ ಗಟ್ಟಿಗನಾಗಿದ್ದದ್ದನ್ನು ನೋಡಿದರೆ ಇವರಲ್ಲಿ ಇತರರ ವಿಚಾರವಾಗಿ ಇರುವ ಅಸೂಯೆಯನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಆ ಅಮಲ್ದಾರರಿಗೂ ಸಹ ಈಚೆಗೆ ರಿವರ್ಟಾಗಿದೆ. ಇಂಥವರ ಬರವಣಿಗೆಗಳಿಗೂ ಬೆಲೆಕೊಟ್ಟು ವೃಥಾ ಇತರ ನೌಕರರಿಗೆ ತೊಂದರೆ ಮಾಡಿದ ಮೇಲ್ಪಟ್ಟ ಅಧಿಕಾರಿಗಳ ವಿವೇಚನೆಯೂ ಸಹ ಸ್ತೋತ್ರಾರ್ಹವೇ ಸರಿ ! ಶ್ರೀಕಂಠ.

ಪರಶುರಾಮಪುರ ತಾಲ್ಲೂಕು ಚಳ್ಳಕೆರೆ.

ಚಳ್ಳಕೆರೆ ರೇಂಜು ಸ್ಕೂಲುಗಳ ಶಾರದಾವಿಗ್ರಹ ಬಹುಮಾನದ ಕಮಿಟಿ.

ಈ ಗ್ರಾಮದಲ್ಲಿ ಸ್ಥಾಪಿತವಾಗಿರುವ ಮೇಲ್ಕಂಡ ಕಮಿಟಿಯವರು ತಮ್ಮ ನಿಬಂಧನೆ ಪ್ರಕಾರ ೧೯೧೯-೨೦ನೆ ಸಾಲಿನಲ್ಲಿ ಮೊಳಕಾಲ್ಮೂರು ತಾಲ್ಲೂಕು ಬೊಮ್ಮಗೊಂಡನ ಕೆರೆ ರೂರಲ್ ಎ. ವಿ. ಸ್ಕೂಲಿನ ಲೋವರ್ ಸೆಕೆಂಡರಿ ಫಲಿತಾಂಶವು ಈ ಚಳ್ಳಕೆರೆ ರೇಂಜಿನಲ್ಲಿ ಮೇಲಾಗಿದ್ದುದರಿಂದ ಆ ಸ್ಕೂಲಿಗೇನೇ ಕಳೆದ ಎಪ್ರೇಲ್ ಮಾಹೆಯಲ್ಲಿ ವೃತ್ತಾಂತರತ್ನಾಕರ ಪತ್ರಿಕೆಯ ಮೂಲಕ ಪ್ರಚುರಮಾಡಿದ್ದ ಪ್ರಕಾರ ಶಾರದಾವಿಗ್ರಹವನ್ನು ಕೊಡಲು ಇದರ ಸಂಬಂಧವಾದ ನಡವಳಿಕೆಗಳು ಮುಗಿಯುವುದಕ್ಕೆ ಜೂನ್ ಕೊನೆಯವರೆಗೂ ಹಿಡಿದಿದ್ದರಿಂದ ೧೯೧೯-೨೦ನೆ ವರ್ಷದ ಮೀಟಿಂಗನ್ನ ತಾ|| ೮-೭-೨೧ರಲ್ಲಿ ನಡಿಸಿ ಶಾರದಾವಿಗ್ರಹವನ್ನು ಪಡೆದ ಮೇಲ್ಕಂಡ ಬೊಮ್ಮಗೊಂಡನ ಕೆರೆ ಗ್ರಾಮದ ಸ್ಕೂಲ್ ಮೆಂಬರುಗಳಿಗೆ ೧೯೨೦-೨೧ನೆ ವರ್ಷದ ಮೀಟಿಂಗ್ ಮುಗಿಯುವವರೆಗೆ ಸದರಿ ವಿಗ್ರಹವನ್ನ ತರಿಸಿಕೊಳ್ಳಬೇಕಾಗಿ ತಿಳಿಸಿತ್ತಾದರೂ ಆ ಸ್ಕೂಲ್ ಕಮಿಟಿ ಮೆಂಬರುಗಳು ಯಾವ ಕಾರಣದಿಂದಲೋ ತರಿಸಿಕೊಂಡವರಾಗಲಿಲ್ಲ. ೧೯೨೦-೨೧ನೆ ವರ್ಷದ ಲೋವರ್ ಸೆಕೆಂಡರಿ ಫಲಿತಾಂಶವು ಈ ರೇಂಜಿನ ಸ್ಕೂಲುಗಳಲ್ಲೆಲ್ಲಾ ತಳಕಿನ ರೂರಲ್ ಎ. ವಿ. ಸ್ಕೂಲಿನ ಫಲಿತಾಂಶವು ಉತ್ತಮವಾಗಿರುವದರಿಂದ ಆ ಸ್ಕೂಲಿಗೆ ಶಾರದಾವಿಗ್ರಹವನ್ನು ಕೊಡತಕ್ಕದ್ದೆಂದು ಈ ಗ್ರಾಮದ ರೂರಲ್ ಎ. ವಿ. ಸ್ಕೂಲಿನಲ್ಲಿ ಈ ಹೋಬಳಿ ಶೇಕದಾರ್ ಮ|| ಪಿ. ಎಸ್. ಕೃಷ್ಣಪ್ಪನವರ ಅಧ್ಯಕ್ಷತೆಯಿಂದ ತಾ|| ೨೭-೭-೨೧ರಲ್ಲಿ ನಡೆದ ಮೀಟಿಂಗಿನಲ್ಲಿ ನಿರ್ಧರಿಸಲ್ಪಟ್ಟಿದೆ. ಕಮಿಟಿಯವರು ತಮ್ಮ ಕೆಲಸಕ್ಕೆ ಪೂರ್ಣ ಸಹಾಯ ಮಾಡಿದ ಮ|| ಈ ರೇಂಜ್ ಅ|| ಇನ್ಸ್‌ಪೆಕ್ಟರ್ ಶ್ರೀಕಂಠಯ್ಯರವರಿಗೂ, ಡಿ|| ಇ|| ಸಾ|| ರವರಿಗೂ ಬಹಳವಾಗಿ ವಂದನೆಗಳನ್ನು ಅರ್ಪಿಸಿರುತ್ತಾರೆ. ಮುಂದಿನ ವರ್ಷ ಎಲ್. ಎಸ್. ಪರೀಕ್ಷೆಯಲ್ಲಿ ಮೇಲಾದ ಫಲಿತಾಂಶವನ್ನು ಹೊಂದತಕ್ಕ ಸ್ಕೂಲಿನವರೇ ಈ ಬೆಳ್ಳಿಯ ಶಾರದಾವಿಗ್ರಹವನ್ನು ಪಡೆಯಲು ಅರ್ಹರಾದವರು. ಕಮಿಟಿಯ ಪ್ರೊಸಿಡೆಂಗ್ಸು ಹಿಂದಿನಿಂದ ಪ್ರಚುರಮಾಡಲಾಗುತ್ತದೆ.

ಕಮಿಟಿಯವರು.

(೧) ಮ|| ತುಪ್ಪದಮಲ್ಲಪ್ಪನವರು, ತಾಲ್ಲೋಕು ಬೋರ್ಡ್ ಮೆಂಬರ್, (೨) ಮ|| ಪಟೇಲ್ ದೊಡ್ಡಪ್ಪನವರು, ತಾ|| ಬೋ|| ಮೆಂ|| (೩) ಮ|| ಶಾ|| ಹನುಮಂತಪ್ಪನವರು, ತಾ|| ಬೋ|| ಮೆಂ|| (೪) ಮ|| ಗಾರೆಮನೆ ಚನ್ನಮಲ್ಲಪ್ಪನವರು, ಕೊರಲಕುಂಟೆ, (೫) ಮ|| ಗೌಡರ ವೀರಪ್ಪನವರು, ಜೌಳಾರು.

ಪ|| ದೊಡ್ಡಪ್ಪ,
ಸಂಘದ ಸೆಕ್ರಟರಿ.

ಶ್ರೀ ಕಲ್ಮೇಶ್ವರದೇವರ ರಥೋತ್ಸವ.

ನರಗುಂದ ಪೇಟಾ ಕೊಣಿಕೆಕೊಪ್ಪದಲ್ಲಿ ಪದ್ಧತಿ ಪ್ರಕಾರ ಈ ಶ್ರಾವಣ ಮಾಸದಲ್ಲಿ ಪುರಾಣಶ್ರವಣವೂ ಕೀರ್ತನಗಳೂ ಆಗಿ ಇದೇ ತಾ|| ೧-೯-೨೧ ಗುರುವಾರ ಶ್ರೀ ಕಲ್ಮೇಶ್ವರ ರಥೋತ್ಸವವು ಹೂಲಿಯಿಂದ ಆಗಮಿಸಿದ ಶ್ರೀ ಪೂಜ್ಯಪಾದ ಚರಪಟ್ಟಾಧ್ಯಕ್ಷ ಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಅಮೋಘವಾದ ಆಶೀರ್ವಾದದಿಂದ ಅತಿ ವೈಭವದೊಡನೆ ಜರಗಿ ಸಾಯಂಕಾಲ ಆರು ಗಂಟೆ ಸುಮಾರಿಗೆ ಉತ್ಸವವು ಶ್ರೀ ಕಲ್ಮೇಶ್ವರ ದೇವಾಲಯವನ್ನು ಪ್ರವೇಶಿಸಲು ತಕ್ಷಣವೇ ಈ ದೇವಾಲಯದಲ್ಲಿ ಶ್ರೀ ಸಂಗಮೇಶ್ವರ ಶಿವಾಚಾರ್ಯರ ಆಶೀರ್ವಾದ ಬಲದಿಂದ ಇಲ್ಲಿಯ ಹಿರೇಮಠದ ವೇದಮೂರ್ತಿ ಚನ್ನಬಸವಸ್ವಾಮಿಗಳ ವ್ಯವಸ್ಥೆಯ ಬಲದಿಂದ ಇಲ್ಲಿ ಕೂಡಿದ ಸಾವಿರಾರು ಜನರ ಅನುಮತಿಪ್ರಕಾರ ಈ ಗ್ರಾಮದ ಮ|| ಭೀಮರಡ್ಡಿಯವರನ್ನು ಅಧ್ಯಕ್ಷರನ್ನಾಗಿ ಮತ್ತು ಮ|| ವೆಂಕಟರಡ್ಡಿಯವರನ್ನು ಉಪಾಧ್ಯಕ್ಷರನ್ನಾಗಿಯೂ ನೇಮಿಸಿದ ಮೇಲೆ—ಸಕ್ತಿ ಶಿಕ್ಷಣದ ಅವಶ್ಯಕತೆ.. ಈ ವಿಷಯದ ಮೇಲೆ ವೇ|| ವೀರಾಚಾರ್ಯರವರು ಕೆಲವು ಹೊತ್ತು ಭಾಷಣ ಮಾಡಿದ ಮೇಲೆ ಸಿದ್ಧಾಂತಿ ಹೂಲಿ ಇತರ ಭಾಷಣವು ಜರಗಿತು. ಆ ಮೇಲೆ ಯಾವತ್ತು ಸಭಿಕರು ಒಪ್ಪಿಕೊಂಡ ಪ್ರಕಾರವೇ ಸಕ್ತಿ ಶಿಕ್ಷಣವು ಅಮಲಿನಲ್ಲಿ ತಂದು ಕಾರ್ಯ ಪ್ರಾರಂಭಮಾಡುವದೇ ಮುಖ್ಯವೆಂದು ಸೂಚನೆ ಕೊಡಲು ಸಭಾಧ್ಯಕ್ಷರ ಅನುಮತಿಪ್ರಕಾರ ಸಕ್ತಿ ಶಿಕ್ಷಣ ಮೊದಲಾದ ಮೂರು ವಿಷಯದ ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು. ಮುಂದೆ ದುಶ್ಚಟದಿಂದ ಆಗುವ ದುಷ್ಪರಿಣಾಮವು ಈ ವಿಷಯದ ಮೇಲೆ ಸಿದ್ಧಾಂತಿ ಹೂಲಿಯವರ ಭಾಷಣವಾಗಿ ಮುಂದೆ ವೀರಾಚಾರ್ಯ ಇವರ ಭಾಷಣವು ಸಭಿಕರಿಗೆಲ್ಲ ಆನಂದಕರವಾದ ಮೇಲೆ ಮುಂದೆ ಹತ್ತು ಘಂಟೆ ಸುಮಾರಿಗೆ ಮಂಗಲ ವಾದ್ಯದೊಡನೆ ಪುರಾಣವು ವೀರಾಚಾರ್ಯರಿಂದ ಸಮಾಪ್ತಿಗೊಳಿಸಿ ಜಗದ್ಗುರು ಪಂಚಾಚಾರ್ಯ ಸ್ತೋತ್ರದೊಡನೆ ಯಾವತ್ತರಿಗೂ ಫಲಾಶೀರ್ವಾದವು ವಿನಿಯೋಗಿಸಿದ ಮೇಲೆ ತಮ್ಮತಮ್ಮ ಗೃಹಗಳಿಗೆ ತೆರಳಿದರು. ಈ ಕಾರ್ಯಕ್ಕೆ ಹತ್ತು ಗ್ರಾಮದ ಜನರು ಬಂದು ಈ ಪ್ರಕಾರ ಜರಗಿಸಿದರು ತಮ್ಮ ಅಭಿಮಾನ ಪ್ರದರ್ಶನ ಮಾಡಿದ್ದಕ್ಕಾಗಿ ನಾವು ಆನಂದದಿಂದ ತಮಗೆ ತಿಳಿಸಿದೆವು.

ಶೋಚನೀಯಮೃತ್ಯು.

ಸೋಲಾಪುರ ಕಿರೀಟಮಠದ ಶ್ರೀ ಸಂಗಮೇಶ್ವರ ಶಾಸ್ತ್ರಿಗಳು ತಮ್ಮ ೨೫ ನೆ ವರ್ಷದಲ್ಲಿ ಕ್ಷಯರೋಗದಿಂದ ತಮ್ಮ ಜನ್ಮಸ್ಥಾನವಾದ ಅಣದುರ್ಗದಲ್ಲಿ ತಾ|| ೧೧-೯-೨೧ ರವಿವಾರದ ದಿವಸ ಜಡಭೌತಿಕ ಶರೀರವನ್ನು ಬಿಟ್ಟು ಶಿವಸಾನ್ನಿಧ್ಯವನ್ನೈದಿದರೆಂದು ತಿಳಿಸಲಿಕ್ಕೆ ಅತ್ಯಂತ ದುಃಖವಾಗುತ್ತದೆ. ಇವರು ನೈಜಾಮು ಇಲಾಖಾಪೈಕಿ ಅಣದುರ್ಗದ ವಿರಕ್ತಮಠದವರಿದ್ದು ಚಿಕ್ಕವಯಸ್ಸಿನಲ್ಲಿ ಸೋಲ್ಲಾಪುರ ವಾರದ ಪಾಠಶಾಲೆಯಲ್ಲಿ ಕೋಶಾದಿ ಅಲಂಕಾರಾಂತ ಸಾಹಿತ್ಯವನ್ನು ಚೆನ್ನಾಗಿ ಓದಿ ಕಾಶಿಗೆ ನ್ಯಾಯಶಾಸ್ತ್ರಾಭ್ಯಾಸಕ್ಕೆ ಹೋಗಿ ಅಲ್ಲಿ ನ್ಯಾಯಶಾಸ್ತ್ರವನ್ನು ಓದುತ್ತ ಕಲ್ಕತ್ತಾದಲ್ಲಿ ವಾರದಪಾಠಶಾಲೆಯ ವತಿಯಿಂದ ಕಾವ್ಯಮಧ್ಯಮ, ಕಾವ್ಯತೀರ್ಥ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಕಾಶಿಯ ಸಂಸ್ಕೃತಗೌರ್ನಮೆಂಟ್ ಕಾಲೇಜಿನಲ್ಲಿ ನ್ಯಾಯಮಧ್ಯಮ, ಸಾಂಖ್ಯಮಧ್ಯಮ ಪರೀಕ್ಷೆಗಳನ್ನು ಕೊಟ್ಟಿದ್ದರು. ನ್ಯಾಯದಲ್ಲಿ ಪೂರ್ವಪಂಚವಾದ ಗ್ರಂಥಗಳು ಇವರಿಗೆ ಆಗಿದ್ದವು. ಇವರ ಪಾಂಡಿತ್ಯಕ್ಕೂ ಸುಸ್ವಭಾವಕ್ಕೂ ಮನಸೋತು ಇವರನ್ನು ತಮ್ಮ ಮಠದ ಉತ್ತರಾಧಿಕಾರಿಗಳನ್ನಾಗಿ ಇಲ್ಲಿಯ ಶ್ರೀ ನಿಜಗುಣಸ್ವಾಮಿಗಳು ಮಾಡಿಕೊಂಡು ಕಾಶಿಯಲ್ಲಿ ಅಭ್ಯಾಸಕ್ಕೆ ಬೇಕಾಗುವ ದ್ರವ್ಯಾದಿಸೌಕರ್ಯವನ್ನು ಮಾಡುತ್ತಿದ್ದರು. ಇವರಿಗೆ ಕಾಶಿಯಲ್ಲಿ ೨ ವರ್ಷಗಳ ಮುಂಚೆ ಕ್ಷಯರೋಗವಾಗಿ ಇಲ್ಲಿಗೆಬಂದು ೩-೪ ತಿಂಗಳು ಡಾಕ್ಟರರ ಉಪಚಾರವನ್ನು ಹೊಂದಿ ಸ್ವಾಮಿಗಳು ಪ್ರೇಮಾತಿಶಯದಿಂದ ಬೇಡವೆಂದರೂ ಪುನಃ ಅಭ್ಯಾಸಕ್ಕಾಗಿ ಕಾಶಿಗೆಹೋದರು. ಅಲ್ಲಿ ಒಂದು ವರ್ಷದಲ್ಲಿಯೇ ಪೂರ್ವದಕ್ಷಯವು ಪ್ರಾದುರ್ಭವಿಸಿ ಇಲ್ಲಿಗೆಬಂದು ೪-೫ ತಿಂಗಳು ಎಷ್ಟು ಉಪಚರಿಸಿದರೂ ಸಾಧ್ಯವಾಗದೆಹೋಯಿತು. ಇವರು ಪಂಡಿತರೂ ಸತ್ಸ್ವಭಾವದವರೂ ಇದ್ದು ಕಾಲಕ್ಕನುಸರಿಸಿ ಸಮಾಜಸುಧಾರಣವೇ ಅತ್ಯದ ಏಳ್ಗೆಯೆಂದು ಮನಸಾ ತಿಳಿಯುತ್ತಿದ್ದರು. ಇಂಥವರು ಅಕಾಲದಲ್ಲಿಯೇ ಕೈಬಿಟ್ಟು ಹೋದುದಕ್ಕೆ ಸಮಾಜದ ಹಾನಿಯಾದಂತಾಯಿತು. ಇವರ ಅತ್ಯಂತವಿಯೋಗದಿಂದ ಇಲ್ಲಿಯ ಶ್ರೀಗಳಿಗೂ ಶಾಸ್ತ್ರಿಗಳ ಅನುಯಾಯಿಗಳಿಗೂ ಸಮಾಜಪ್ರಮುಖರಿಗೂ ಅತಿ ದುಃಖವಾಗಿದೆ. ಪರಲೋಕವಾಸಿಗಳ ಆತ್ಮಕ್ಕೆ ಜಗದೀಶನು ಶಾಂತಿಯನ್ನೀಯಲೆಂದು ಕೋರುತ್ತೇವೆ.

ಇನ್ನೂ ವೀರಶೈವ ಬಾಂಧವರು ಕಣ್ಣು ತೆರೆಯಲಿಲ್ಲವೇನು ?

ವೀರಶೈವ ಮಹಾಸಭೆ.

ಶ್ರೀಮದ್ವೀರಶೈವ ಮಹಾಸಭೆಯೆಂಬ ಶಿಶುವು ಪ್ರಥಮತಃ ಧಾರವಾಡದಲ್ಲಿ ಜನಿಸಿ ತನ್ನ ೯ ವರ್ಷವನ್ನು ಕಳೆದು ೧೦ ನೇ ವರ್ಷ ತುಂಬುವದರೊಳಗೆ ಯಾವ ವಿಷಧೂಳಿಯಿಂದಲೋ ಅಥವಾ ಸಮಾಜದಲ್ಲಿ ಜನಿಸಿದ ಮನೋರೋಗದಿಂದಲೋ ಪ್ರೌಢಾವಸ್ಥೆಗೆ ಬರುತ್ತಿದ್ದ ಬಾಲಕನು ಚಿಂತಾಗ್ನಿಯಲ್ಲಿರುವದರಿಂದ ನಮ್ಮ ಸಮಾಜಕ್ಕೆ ಒಂದು ತರದ ಹಾನಿಯೊದಗಿದಂತಾಗಿರುವುದು. ಸಮಾಜಬಾಂಧವರೇ ಕಣ್ಣು ಮುಚ್ಚಿಕೊಂಡು ಕೂತಿರುವಿರೇನು ? ಇತರ ಸಮಾಜಗಳು ಸುಧಾರಣಶಿಖರವನ್ನು ಮುಟ್ಟಲು ಪ್ರಯತ್ನಮಾಡುತ್ತಿರುವಾಗ್ಯೆ ನಾವು ಸುಮ್ಮನೇ ಹೇಡಿಗಳಂತಿರುವದೆಂದರೇನು ? ವೀರತ್ವವು ಎಲ್ಲಿಹೋಯಿತು? ಗುರುತ್ವವು ಯಾವಕಡೆಗೆ ಮಾಯವಾಯಿತು? ಅರವತ್ತು ಸಾವಿರ ರೂಪಾಯಿಯ ಫಂಡು ಏನಾಯಿತು ? ಅಯ್ಯೋ ಕೇಳುವವರೇ ದಿಕ್ಕಿಲ್ಲದೆ ಹೋಯಿತೆ? ಆ ಮಗುವನ್ನು ಉದ್ಧಾರಮಾಡುವವರು ಇಲ್ಲದಂತಾದರೆ? ಅಂತೇ ಆ ಬಾಲಕನಿಗಾದರೂ ಎಷ್ಟು ಪೀಡೆಯಾಗಿರಲಿಕ್ಕಿಲ್ಲ ? ಪ್ರಿಯಸಹೋದರರೇ—ಇನ್ನಾದರೂ ಕಣ್ಣು ತೆರೆಯಿರಿ. ಸುಧಾರಿಸಿದ ಸಮಾಜಗಳನ್ನು ನೋಡಿರಿ. ನಮ್ಮ ಸಮಾಜದ ಸ್ಥಿತಿಯನ್ನು ಪರಿಶೀಲಿಸಿರಿ ಎಲ್ಲಿಯವರೆಗೆ ನಾವು ಅಜ್ಞಾನದಲ್ಲಿರುವದು ? ನಮ್ಮಲ್ಲಿರುವ ವ್ಯಸನಗಳನ್ನು ಬಿಟಿಗೊತ್ತಿರಿ. ಅಹಂ ಶ್ರೇಷ್ಠತ್ವವೆಂಬ ಹೆಮ್ಮೆಯನ್ನು ಮುಂಬಡಿಯಿರಿ. ಯಾವ ನಮ್ಮ ಮತವು ಹೀನಾವಸ್ಥೆಯನ್ನು ಹೊಂದಿದೆಯೋ ಅದರ ಕಡೆಗೆ ಲಕ್ಷ್ಯವಿಟ್ಟು ಟೊಂಕ ಕಟ್ಟಿರಿ. ಧೈರ್ಯಗುಂದದೆ. ಐಕ್ಯಹೊಂದಿ ಮಹಾಸಭೆಯ ಸ್ಥಳವನ್ನು ತಿಳಿಯಪಡಿಸುವಿರೆಂದು ಆಶಿಸುತ್ತೇವೆ. ಕಾಲವು ಸ್ವಲ್ಪ ದಿವಸವೇ ಉಳಿದಿರುವದು. ಮಹಾಸ್ವಾಮಿಗಳೇ ನೀವಾದರೂ ದೂರದೃಷ್ಟಿಯಿಂದ ವಿಚಾರಿಸಿರಿ. ಕಾಲದ ಪರಿಸ್ಥಿತಿಯ ಕಡೆಗೆ ಜ್ಞಾನದೃಷ್ಟಿಯನ್ನಿಡಿರಿ. ನಿಮ್ಮ ಆಡಂಬರಗಳಲ್ಲೇ ನೀವು ಮುಳುಗುವುದೆ? ನೀವೂ ಕಣ್ಣು ಮುಚ್ಚಿಕೊಂಡರೆ ಮುಂದಿನ ಗತಿಯೇನು ? ಆದಷ್ಟು ಏಕಮತಿಯಿಂದ ಆಶೀರ್ವಾದಮಾಡಿರಿ, ಅಂದರೆ ಸಮಾಜವು ಶಿರಸಾವಹಿಸಿ ನಡೆಕೊಳ್ಳುವದು. ಬಹಳ ಹೇಳುವದೇನು ? ಜಾಗ್ರತೆಯಾಗಿ ಸಭೆಯ ಕೆಲಸಕ್ಕೆ ಮುಖವಿಟ್ಟು ಯಾವ ಸ್ಥಳದವರಾದರೂ ಮುಂದಾಗಿಯೇ ತಿಳಿಸಿದರೆ ಸಮಾಜಕ್ಕೆ ಉಪಕಾರ ಮಾಡಿದಂತಾಗುತ್ತದೆ.

ಓರ್ವ ವೀರಶೈವ ಮತಾಭಿಮಾನಿ, ಹಿರೇಕೆರೂರ.

ದಾವಣಗೆರೆ ವೀರಭದ್ರದೇವಸ್ಥಾನ.

ದಾವಣಗೆರೆ ಟವನ್ ಹಳೆಪೇಟೆಯಲ್ಲಿ ಶ್ರೀ ವೀರಭದ್ರದೇವರ ದೇವಸ್ಥಾನವು ೨೦-೩೦ ವರ್ಷಗಳಿಂದ ಬಹಳ ಶಿಥಿಲವಾಗಿದ್ದು ಈಗ ೩-೪ ವರ್ಷಗಳಿಂದೀಚೆ ಹೊಸದಾಗಿ ಕಟ್ಟಡಮಾಡಿಸುವದಕ್ಕೆ ಊರಲ್ಲಿರತಕ್ಕ ಛತ್ರಾದಿಗಳು ಅಲ್ಲದೆ ಎಲ್ಲಾ ಜನಾಂಗದವರಿಂದ ಅಂದಾಜು ೩೦೦೦ ರೂಪಾಯಿ ಪಟ್ಟಿಕೊಟ್ಟಿರುತ್ತಾರೆಂತ ಹೇಳುತ್ತಾರೆ. ಈ ಹಣಕ್ಕೆ ಸ್ವಲ್ಪಭಾಗ ಕಟ್ಟಡ ನಡೆಸಿರುತ್ತಾರೆ, ಇದರಪೈಕಿ ಹಣಇಲ್ಲ ಎಷ್ಟು ಉಳಿದಿರುತ್ತದೆಯೋ ಗೊತ್ತಿಲ್ಲ. ಇದಲ್ಲದೆ ದೇವರಿಗೆ ಪೂಜೆನಡಸುವದಕ್ಕೆ ಕೆಲವರು ಜಮಿನುತೆಗೆದುಕೊಳ್ಳುವದಕ್ಕೆ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಇದುವರೆಗೂ ಜಮೀನೂ ತೆಗೆದುಕೊಂಡಿಲ್ಲ. ಪೂಜಾರಿಗೆ ಇರತಕ್ಕ ತೊಂದರೆ ದೇವರೇ ಬಲ್ಲ. ಹೋದವರ್ಷ ಮಾಘಮಾಸದಲ್ಲಿ ಹೊಸದಾಗಿ ಕಟ್ಟಿಸಿರುವ ದೇವಸ್ಥಾನದಲ್ಲಿ ದೇವರಪ್ರತಿಷ್ಠೆ ಮಾಡಿಸುವಾಗ್ಗೆ ದೇವರಿಗೆ ಆಭರಣಗಳನ್ನು ಮಾಡಿಸುವದಕ್ಕೆ ೪೦೦-೫೦೦ ತೋಲ ಬೆಳ್ಳಿ ಕೊಡುವದಕ್ಕೆ ವಾಗ್ದಾನಮಾಡಿದರು. ಸದರೀ ಬೆಳ್ಳಿ ಯಾರಕಡೆಗೆ ವಸೂಲಾಗಿರುವದೋ ಯಾರಿಗೂ ಗೊತ್ತಿಲ್ಲ ಆಭರಣಗಳೂ ಮಾಡಿಸಿಲ್ಲ. ಇದಲ್ಲದೆ ಈಗಲೂ ಕೆಲವರು ಸದರಿ ದೇವಸ್ಥಾನದ ಕಟ್ಟಡದಬಗ್ಗೆ ರೂಪಾಯಿ ಕೊಟ್ಟಿರುತ್ತಾರೆ. ಅಜಮಾಸು ಒಂದೂವರೆತಿಂಗಳ ಕೆಳಗೆ ಅವರಹೆಸರು ನನಗೆಗೊತ್ತಿಲ್ಲ. ಇವರು ಕ್ರೈಸ್ತಮತದವರು ಈವೂರಿಗೆ ಕುದುರೆಸರ್ಕಸ್ ತೆಗೆದುಕೊಂಡು ಬಂದಿದ್ದರು. ಕೆಲವುಜನ ದೊಡ್ಡಮನುಷ್ಯರು ಹೋಗಿ ವೀರಭದ್ರದೇವರ ದೇವಸ್ಥಾನಕ್ಕೆ ಒಂದು ಆಟ ಆಡಿ ಒಂದು ಆಟದರೂಪಾಯಿ ದೇವಸ್ಥಾನಕ್ಕೆ ಕೊಡಬೇಕೆಂದು ಕೇಳಿಕೊಂಡದ್ದಕ್ಕೆ ಸರ್ಕಸ್ಸಿನ ಏಜಂಟರಿಗೆ ಭಕ್ತಿಹುಟ್ಟಿ ಒಂದು ಆಟದರೂಪಾಯಿ ಕೊಡುತ್ತೇವೆಂತ ಒಪ್ಪಿಕೊಂಡು ಆ ದಿವಸ ಒಂದು ಆಟದ ರೂಪಾಯನ್ನು ಸದರಿ ವೀರಭದ್ರ ದೇವಸ್ಥಾನಕ್ಕೆ ಕೊಟ್ಟಿರುತ್ತಾರೆ. ಈಗ ಹಾಲಿಯಿರತಕ್ಕ ಆಭರಣಗಳು ಎಷ್ಟು? ಯಾರಲ್ಲಿರುವುದು ನಿರ್ಣಯವಿಲ್ಲ. ಈ ಹಿಂದೆ ದೇವಸ್ಥಾನದ ಹೆಸರುಹೇಳಿ ಚಿಲ್ಲರೆಪಟ್ಟಿ ವಸೂಲು ಆದದ್ದು ಅಡಗಿಕೊಂಡು ಹೋಗಿರುತ್ತದೆ. ಮುಂದಾದರೂ ಇಂಥ ಕೆಲಸಗಳಿಗೆ ಆಸ್ಪದಕೊಡದೆ ಈ ಊರಲ್ಲಿರತಕ್ಕ ಮಹನೀಯರು ಸರಿಪಡಿಸುತ್ತಾರೆಂದು ನಂಬಿದ್ದೇನೆ.

ಸೂಡಿ.

ನಮ್ಮ ಶಾಲೆಯ ಹೆಡ್‌ಮಾಸ್ತರ ಶಿವನಗೌಡ ರಾಮನಗೌಡ ಪಾಟೀಲ ಇವರಿಗೆ ಹುಬ್ಬಳ್ಳಿ ಕ|| ಗ|| ನ್ತಂ|| ಶಾಲೆಯ ಹೆಡ್‌ಮಾಸ್ತರ ಸ್ಥಳಕ್ಕೆ ವರ್ಗವಾದುದರಿಂದ ತಾ|| ೧೦-೯-೨೧ನೆ ದಿವಸ ಸಾರ್ವಜನಿಕ ಸಭೆ ನೆರೆದು ಹಾರ ತುರಾಯಿ ತಾಂಬೂಲಾದಿಗಳಿಂದ ಸತ್ಕರಿಸಿ ಇವರ ಸನ್ಮಾನಮಾಡಿದರು. ಇವರು ರಾಜನಿಷ್ಠರೂ ಸ್ವಾವಲಂಬಿಗಳೂ ಸತತೋದ್ಯೋಗಿಗಳೂ ಕರ್ತವ್ಯದಕ್ಷರೂ ಚಟವಟಿಕೆಯುಳ್ಳವರೂ ಇದ್ದು ಒಳ್ಳೇ ಉತ್ಸುಕತೆಯಿಂದ ಕೆಲಸಮಾಡಿದ್ದರಿಂದ ಅಧಿಕಾರಸ್ಥರಿಗೂ ಊರವರಿಗೂ ಪ್ರಿಯರೆನಿಸಿ ಶಾಲೆಯ ಕೆಲಸದಲ್ಲಿ ಯಶಸ್ಸು ಪಡೆದರು. ಇವರ ಕಾಲದಲ್ಲಿ ನಮ್ಮ ಶಾಲೆಯು ಕ್ರಮೇಣ ಊರ್ಜಿತಾವಸ್ಥೆಯನ್ನು ಹೊಂದುತ್ತ ಬಂದಿರುತ್ತದೆ. ಇವರು ನಮ್ಮಲ್ಲಿ ಬ್ರಾ|| ಪೋ|| ಮಾಸ್ತರರಾಗಿಯೂ ಪ|| ಸ|| ಸಂಘದ ವ್ಯವಸ್ಥಾಪಕ ಕಮಿಟಿಯ ಮೆಂಬರರಾಗಿಯೂ ಇದ್ದು ಜನರಿಗೆ ಪ್ರಿಯರೆನಿಸಿ ಹಿತವಾಗುವಂತೆ ಕೆಲಸಮಾಡಿದರು. ಇದನ್ನೆಲ್ಲ ಸ್ಮರಿಸಿ ಈ ಸಭೆಯವರು ಇವರ ಗುಣಾನುವಾದಮಾಡಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ನೆಲಮಂಗಲದ ತಾಲ್ಲೋಕ್ ಎಲೇಕ್ಯಾತನಹಳ್ಳಿಯಲ್ಲಿ ನಡೆದ ನೂತನ ಬಾಲಿಕಾಪಾಠಶಾಲೆಯ ಪ್ರವೇಶಮಹೋತ್ಸವ.

ಮೇಲ್ಕಂಡ ಮಹೋತ್ಸವವು ಬೆಂಗಳೂರು ಪಾಕ್ರ್ ಅಂಗಡಿ ಪದ್ಮರಾಜಪ್ಪನವರ ಪುತ್ರ ಜಿನದತ್ತಪ್ಪನವರಿಂದ ತಾ|| 10-9-21 ರಲ್ಲಿ ನಡಿಸಲ್ಪಟ್ಟಿತು. ಹಜರತ್ ಘನವನ್ನೈದಿದ ಮೈಸೂರುಸೀಮೆಯ ಅ|| ಇನ್ಸ್‌ಪೆಕ್ಟರ್ ಜನರಲ್ ಬಹದ್ದೂರರವರಾದ ಬಿ. ದಾಸಪ್ಪನವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಈ ಮಹೋತ್ಸವಕ್ಕೆ ಸರ್ಕಲ್ ಇನ್ಸ್‌ಪೆಕ್ಟರವರೂ, ಡೆಪ್ಯುಟಿ ಇನ್ಸ್‌ಪೆಕ್ಟರವರೂ, ಅಸಿಸ್ಟೆಂಟ್ ಇನ್ಸ್‌ಪೆಕ್ಟರವರೂ, ಇನ್ಸ್‌ಪೆಕ್ಟ್ರೆಸ್ ರವರಾದ ಶ್ರೀಮತಿ ವೆಂಗಡಮ್ಮನವರೂ ದಯಮಾಡಿಸಿದ್ದರು. ಮ|| ರಾ|| ದಾಸಪ್ಪನವರು ಸಭೆಯನ್ನಲಂಕರಿಸಿದ ಕೂಡಲೇ ಹೆಣ್ಣುಮಕ್ಕಳು ತಮ್ಮ ಇಂಪಾದ ಗಾನದಿಂದ ಸಭೆಯವರಿಗೆಲ್ಲಾ ಉತ್ಸಾಹವನ್ನುಂಟುಮಾಡಿದರು. ಮ|| ರಾ|| ಎಸ್. ದೇವೇಂದ್ರಪ್ಪನವರೂ, ಕೆ. ಎಸ್. ಧರಣೇಂದ್ರಯ್ಯನವರೂ, ವೈ. ಪದ್ಮರಾಜಯ್ಯನವರೂ, ಮತ್ತು ವೈ. ಡಿ. ವಜ್ರನಾಭಯ್ಯನವರೂ ಬಹಳ ಸಾರವತ್ತಾದ ಭಾಷಣಗಳನ್ನು ಮಾಡಿದ ನಂತರ, ಸಭಾಧ್ಯಕ್ಷರು ತಮ್ಮ ಭಾವಗರ್ಭಿತವಾದ ಭಾಷಣದಿಂದ ಸಭೆಯನ್ನು ಆನಂದ ಸಮುದ್ರದಲ್ಲಿ ಮುಳುಗಿಸಿದರು. ಮತ್ತು ಆ ಪೂರಿನ ಸ್ಕೂಲಿನ ನ್ಯೂನತೆಗಳನ್ನೆಲ್ಲಾ ಶೀಘ್ರವಾಗಿ ಹೋಗಲಾಡಿಸುತ್ತೇವೆಂದು ವಾಗ್ದಾನಮಾಡಿದ ವಿಚಾರವು ಬಹಳ ಶ್ಲಾಘನೀಯವಾಗಿರುತ್ತದೆ.

ಅನಂತರ ಅಲ್ಲಿ ನೆರೆದಿದ್ದ ದೊಡ್ಡಮನುಷ್ಯರುಗಳಲ್ಲರಿಗೂ ಹೂವಿನ ಮಾಲೆಗಳನ್ನು ಹಾಕಿದನಂತರ ಸಭೆಯು ನಮ್ಮ ಪ್ರಭುಗಳ ಶ್ರೇಯಃಪ್ರಾರ್ಥನೆಯೊಡನೆ ಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ.

೧೯೨೧ ನೆಯ ಇಸವಿ ಸೆಪ್ಟಂಬರ್ ತಾ|| ೨೫ ರಿಂದ ೧೯೨೧ ನೆಯ ಅಕ್ಟೋಬರ್ ತಾ|| ೧ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ ನೆಯ ದುರ್ಮತಿನಾಮ ಸಂವತ್ಸರದ ಭಾದ್ರಪದ ಬಹುಳ ಅಷ್ಟಮಿಯಿಂದ ಭಾದ್ರಪದ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
25	ಭಾನು	ಅಷ್ಟ	9-35	ಆರ್ದ್ರಾ	34-11	10
26	ಸೋಮ	ನ-ಉ	4-8 54-45	ಪುನ	29-38	11
27	[1]ಮಂಗಳ	ಏಕಾ	53-12	ಪುಷ್ಯ	25-38	12
28	ಬುಧ	ದ್ವಾದ	46-55	ಆಶ್ಲೇ	27-25	13
29	[2]ಗುರು	ತ್ರಯೋ	40-50	ಮಘಾ	16-14	14
30	ಶುಕ್ರ	ಚತು	35-2	ಪುಬ್ಬ	13-14	15
1	[3]ಶನಿ	ಅಮಾ	29-48	ಉತ್ತ	9-41	16

(1) ಸ್ಮಾರ್ತಾನಾಮೇಕಾದಶಿ. (2) ಪ್ರದೋಷಃ. (3) ಮಹಾಲಯಾಮಾವಾಸ್ಯ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೇಯ ಇಸವಿ ಅಕ್ಟೋಬರ್ ತಾರೀಖು ೨ ನೇಯ ಭಾನುವಾರ ಸಂಚಿಕೆ ೩೯

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
37 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಾಲೆಗಳು, ಕಸ್ತೂರಿ, ರೇಷ್ಮೆ ವಗೈರೆಗಳು ಮೊದಲಾದ ಮಾಲುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0.12.0	,	50.0.0
5	0. 8.0	..	100.0.0
6	0.12.0	,,	100.0.0
7	6. 0.0	,,	100.0.0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0. 6.0	ಇಂದ	10.0.0
8	0. 8.0	,,	100.0.0
9	0.12.0	,,	100.0.0
10	0.14.0	,,	100.0.0
11	3. 8.0	,,	100.0.0
12	4. 0.0	,,	100.0.0
13	4. 8.0	,,	100.0.0
14	6. 0.0	,,	100.0.0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15.0.0	,, 40.0.0
[illegible]	,, 7.8.0	,, 15.0.0
ಕಡಲೆ	,, 2.8.0	,, 7.0.0
ನೆನೆದಕಡಲೆ	,, 1.8.0	,, 3.0.0
ಕಮಲಾಕ್ಷಿ	,, 1.0.0	,, 2.0.0
ದೊಡ್ಡ ,	,, 0.8.0	,, 1.0.0
ಅದಕ್ಕಿಂತ	,, 0.6.0	,, 0.8.0
ಸ್ಫಟಿಕ108ಕ್ಕೆ	4.8.0	,, 30.0.0
ಶ್ರೀಚಕ್ರ 1ಕ್ಕೆ	8.0.0	,, 100.0.0
ಲಿಂಗ 1ಕ್ಕೆ	1.0.0	,, 100.0.0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80.0.0 ಬಿ. 50.0.0 ಸಿ. 40.0.0 ಡಿ. 25.0.0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ: —ಎಸ್. ಯು. ನೇಪಾಳ ರುದ್ರಾಕ್ಷಿ
31 ಕಂಪನಿ. ಚೌಕಂಬಾ ಕಾಶೀ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 20

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ ಶಿರ್ಶಿ, ಉತ್ತರಕನಡಾ.

ರಕ್ತಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 49

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಠರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾತರಕ್ತ, ಸನ್ನಿಪಾತರೋಗ, ಕಣ್ಣು ಉರಿಯುವುದು. ಅಂಗಾಲು ಅಂಗೈ ಬಿಸಿಯುವುದು, ತಲ್ಲಣಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು. ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಸೊಂಟಕಟ್ಟು, ಹೊಟ್ಟೆಶೂಲೆ ಬಿಳೆಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಉರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿಯಿರುತ್ತೇನೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ವಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ತಿಗತಜ್ವರ, ಎಂಥಾ ತೀವ್ರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫರೋಗಸಂಜೀವಿನಿ ೧ ಡಜನ್ ಮಾತ್ರೆಗಳು ಇದರ ಸೇವನೆಯಿಂದ ಕ್ಷಯ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊಡಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅನ್ಯಕತಮಹಿಂದ್ರಿಯವಾಕ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ. ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ; ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪ್ರಕಟನೆ.

ಒಬ್ಬರು ಸ್ವಾಮಿಗಳು ಬೇಕಾಗಿದೆ.

ಶ್ರೀ ಜಗದ್ಗುರು ಗಂಗಾಧರ ಮಹಾಸ್ವಾಮಿಗಳ ಉತ್ತರಾಧಿಕಾರಿಗಳನ್ನು ಹುಬ್ಬಳ್ಳಿ ಮೂರುಸಾವಿರ ಮಠಕ್ಕೆ ನೇಮಿಸಬೇಕಾಗಿದೆ. ಅಪೇಕ್ಷೆಯುಳ್ಳ ಸದ್ವಂಶಜರೂ ವಿದ್ಯಾಸಂಪನ್ನರೂ ಆದ ಮಾಹೇಶ್ವರಸ್ಥಳದ ಬ್ರಹ್ಮಚಾರಿಗಳು ತಮ್ಮ ಸ್ಥಳ, ಕುಲ ವಿಚಾರವನ್ನೂ ವಿದ್ಯಾಭ್ಯಾಸಂಗದ ವಿಷಯವನ್ನೂ ವಯಸ್ಸನ್ನೂ ತಿಳುಹಿಸಿ ಕೆಳಗೆ ಸಹಿಮಾಡಿದ ಗೃಹಸ್ಥರಿಗೆ ಆದಷ್ಟುಬೇಗ ಪತ್ರಬರೆಯಬೇಕು. ಹಾಂಗು ಪತ್ರದೊಡನೆ ತಮ್ಮ ಫೋಟೋ ಕಳಿಸಬೇಕು. ಇತರರು ಸಹಾ ತಮಗೆ ಪರಿಚಯವಿದ್ದ ಯೋಗ್ಯರ ಸ್ಥಳ, ಕುಲ ವಿಚಾರಗಳನ್ನೂ ವಿದ್ಯಾಭ್ಯಾಸವನ್ನೂ ತಿಳಿಸಬೇಕು; ಸಾಧ್ಯವಿದ್ದರೆ ಫೋಟೋ ಕಳಿಸಬೇಕು.

(ಸಹಿ) ಚಿಕ್ಕವೀರಯ್ಯನವರು ಚಿಕ್ಕಮೇರಿ ಸಾಕೀನ ಹುಬ್ಬಳ್ಳಿ.
(ಸಹಿ) ಚನ್ನಯ್ಯನವರು ಹಂದಿಗೋಳಮಠ ಸಕೀನ ಹುಬ್ಬಳ್ಳಿ.
(ಸಹಿ) ಮಲ್ಲಪ್ಪಾ ವಾರಕಾರ ಸಾ|| ಹುಬ್ಬಳ್ಳಿ
(ಸಹಿ) ಮಹದೇವಪ್ಪಾ ಸಿಂದಗಿ ಸಾಕೀನ ಹುಬ್ಬಳ್ಳಿ.
(ಸಹಿ) ಗುರುಸಿದ್ದಪ್ಪಾ ಕೋರಿ ಸಾಕೀನ ಹುಬ್ಬಳ್ಳಿ.
(ಸಹಿ) ಗುರಪ್ಪ ನೀಲಿ ಸಾಕೀನ ಹುಬ್ಬಳ್ಳಿ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಅಕ್ಟೋಬರ್ ತಾ|| ೨ ನೆಯ ಭಾನುವಾರ.

ಮುದ್ರಣಶಾಸನ.

ಈ ಶಾಸನವನ್ನು ತೆಗೆದುಹಾಕಿಬಿಡುವ ವಿಷಯದಲ್ಲಿ ವಿಚಾರಿಸಿ ವರದಿ ಮಾಡುವುದಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ಸಂಘದವರು ಕೊಟ್ಟಿದ್ದ ಸೂಚನೆಗಳನ್ನನುಸರಿಸಿ ಸರ್ ವಿಲಿಯಂ ವಿನ್ಸೆಂಟ್‌ರವರು ಸಾಮ್ರಾಜ್ಯಶಾಸನಸಭೆಯಲ್ಲಿ ಒಂದು ಬಿಲ್ಲನ್ನು ನಿರ್ಮಿಸಿ ಪ್ರತಿಪಾದಿಸಿದರು. ಪತ್ರಿಕೆಗಳ ಪ್ರತಿಯೊಂದು ಸಂಚಿಕೆಯ ಮೇಲೂ ಸಂಪಾದಕನ ಹೆಸರಿರಬೇಕೆಂದು ವಿಚಾರಣಾ ಸಂಘದವರು ಕೊಟ್ಟಿದ್ದ ಸೂಚನೆಯ ಮೇಲೆ ಅನೇಕ ಪತ್ರಿಕೆಗಳು ಅಸಂಮತಿಯನ್ನು ವ್ಯಕ್ತಪಡಿಸಿರುವುವು. ಆ ವಿಷಯವನ್ನು ಮುಂದೆ ನಿಯಮಿಸಲ್ಪಡುವ ಸೆಲೆಕ್ಟ್ ಕಮಿಟಿಯವರು ಪರ್ಯಾಲೋಚಿಸುವರೆಂದು ವಿನ್ಸೆಂಟ್‌ರವರು ಹೇಳಿದರು. ಸ್ಥಳಿಕ ಪ್ರಭುತ್ವಗಳೂ ಸುಂಕದ ಮತ್ತು ಅಂಚೆಯ ಶಾಖೆಗಳವರೂ ಸಹ ರಾಜದ್ರೋಹಪೂರಿತಗಳಾದ ಪ್ರಕಟನಗಳನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಈ ಬಿಲ್ಲಿನ ಪ್ರಕಾರ ಅಧಿಕಾರ ಹೊಂದುವರು. ಅನ್ಯಾಯವು ಜರುಗಿತೆಂದು ತೋರಿದರೆ ಹೈಕೋರ್ಟಿನ ಸ್ಪೆಷಲ್ ಬೆಂಚಿಗೆ ಅಪೀಲು ಮಾಡಿಕೊಳ್ಳಲಿಕ್ಕೆ ಪಕ್ಷಕಾರರಿಗೆ ಅವಕಾಶ ಕೊಡಲ್ಪಟ್ಟಿರುವುದು. ಮತ್ತು ಪ್ರಕಟನವು ರಾಜದ್ರೋಹ ಸ್ವಭಾವವುಳ್ಳದೆಂಬುದನ್ನು ರುಜುವಾತು ಮಾಡಿಕೊಡುವ ಬಾಧ್ಯತೆಯು ಸರ್ಕಾರದವರ ಮೇಲೆಯೇ ಇರುವುದು. ಅವರು ರುಜುವಾತು ಮಾಡಿಕೊಡದಿದ್ದರೆ ಸರ್ಕಾರದ ಆಜ್ಞೆಯನ್ನು ಹೈಕೋರ್ಟಿನವರು ತಳ್ಳುಪಡಿಮಾಡಬಹುದು. ಸುಂಕದ ಮತ್ತು ಅಂಚೆಯ ಅಧಿಕಾರಿಗಳ ಜಪ್ತಿಯನ್ನು ಕುರಿತು ಸ್ಥಾನಿಕ ಪ್ರಭುತ್ವಗಳವರಲ್ಲಿ ಮುಂದಾಗಿ ಅಪ್ಪೀಲು ಮಾಡಿಕೊಳ್ಳಬಹುದು. ಅಲ್ಲದೆ ಸರ್ಕಾರಿ ಉತ್ತರದ ಮೇಲೆ ಹೈಕೋರ್ಟಿನಲ್ಲಿ ದೂರಿಟ್ಟುಕೊಳ್ಳಬಹುದು. ಪ್ರತಿ ಪತ್ರಿಕೆಯ ಸಂಚಿಕೆಗಳ ಎರಡೆರಡು ಪ್ರತಿಗಳನ್ನು ಉಚಿತವಾಗಿ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ತಪ್ಪಿದರೆ ೫೦ ರೂ. ಅರ್ಥದಂಡಕ್ಕೆ ಗುರಿಯಾಗಬೇಕು. ಸಂಪಾದಕನ ಹೆಸರನ್ನು ಪ್ರಕಟಿಸುವಲ್ಲಿ ತಪ್ಪುಂಟಾದರೆ ಅದನ್ನು ೪ ವಾರಗಳೊಳಗಾಗಿ ದಂಡಾಧಿಕಾರಿಗೆ ತಿಳಿಯಿಸಿಕೊಳ್ಳಬಹುದು. ಇತ್ಯಾದಿಯಾಗಿ ಅದರಭಿಪ್ರಾಯವಿರುತ್ತದೆ. ಮುದ್ರಣಶಾಸನವನ್ನು ಸಂಪೂರ್ಣವಾಗಿ ತೆಗೆದುಬಿಡುವ ಸ್ಥಿತಿಯು ಸದ್ಯದ ಭರತಖಂಡದ ವಾತಾವರಣವನ್ನು ನೋಡಿದರೆ ಅಸಾಧ್ಯವೆಂದೇ ಕಾಣುವುದು. ಆದರೂ ಈಗಣ ಬಿಲ್ಲು ಶಾಸನವಾಗುವುದಾದರೆ ಲಾರ್ಡ್ ರೀಡಿಂಗ್‌ರವರ ಕಾಲದಲ್ಲಿ ಪೂರ್ವದ ಶಾಸನದ ಕ್ರೌರ್ಯವು ಎಷ್ಟೋ ಮಟ್ಟಿಗೆ ಕಡಿಮೆಯಾಯಿತೆಂದು ಹೇಳಬಹುದು. ದೇಶದಲ್ಲಿ ಶಾಂತಸ್ಥಿತಿಯು ವ್ಯಾಪಿಸಿದರೆ ಮುದ್ರಣಶಾಸನವು ಸಂಪೂರ್ಣವಾಗಿ ತೊಲಗಿಹೋಗಬಲ್ಲುದು.

ನಿರ್ಬಂಧಶಾಸನಗಳು.

ಈಗ ಭರತಖಂಡದಲ್ಲಿ ವ್ಯವಹಾರದಲ್ಲಿರುವ ನಿರ್ಬಂಧಶಾಸನಗಳನ್ನೆಲ್ಲಾ ತೆಗೆದುಬಿಡಬಹುದೆ? ಬೇಡವೆ? ಎಂಬ ವಿಷಯವನ್ನು ವಿಚಾರಪೂರ್ವಕವಾಗಿ ನಿರ್ಧರಿಸಿ ಹೇಳುವುದಕ್ಕಾಗಿ ಈಗಣ ವೈಸ್ರಾಯರಾದ ಲಾರ್ಡ್ ರೀಡಿಂಗ್‌ರವರು ಶಾಸನಸಭೆಯವರ ತೀರ್ಮಾನದಂತೆ ಒಂದು ಸಂಘವನ್ನೇರ್ಪಡಿಸಿದ್ದರು. ಆ ಸಂಘದವರು ಮಾಡಿದ ಸೂಚನೆಗಳನ್ನೆಲ್ಲಾ ಈಗ ಸಭಾಸಮೇತರಾದ ವೈಸ್ರಾಯರು ಒಪ್ಪಿರುತ್ತಾರೆ. ಸಾಧ್ಯವಾದಷ್ಟು ಬೇಗನೆ ಆ ಸೂಚನೆಗಳ ಪ್ರಕಾರ ಶಾಸನಗಳು ಮಾಡಲ್ಪಡುತ್ತವೆ. ಆ ಸೂಚನೆಗಳ ಮುಖ್ಯಭಾಗವೇನೆಂದರೆ—ಸಹಾಯನಿರಾಕರಣೋದ್ಯಮನಾಯಕರು ತಮ್ಮ ಪ್ರಯತ್ನಗಳನ್ನು ಬಿಟ್ಟು ದೇಶದೊಳಗೆ ಈ ಉದ್ಯಮದಿಂದ ಉಂಟಾಗಿರುವ ಭಯವು ನಿರ್ನಾಮವಾಗುವಂತೆ ಮಾಡುವವರೆಗೂ ರಾಜದ್ರೋಹಸಭಾ ನಿರೋಧಶಾಸನವನ್ನೂ ಅಪರಾಧಶಾಸನಸವರಣದ ೨ನೆ ಭಾಗವನ್ನೂ ಸದ್ಯಃ ತೆಗೆದುಹಾಕಕೂಡದು. ಅಸಹಾಯೋದ್ಯಮ ಮೊದಲಾದ ಅಪಾಯಕರ ಪ್ರಯತ್ನಗಳು ಊಹಾಪೋಹಶಕ್ತಿಯುಳ್ಳ ಬುದ್ಧಿವಂತರನ್ನು ಮರುಳುಗೊಳಿಸಲಿಲ್ಲ. ಆದರೆ ಅವು ಮೂಢಜನರ ಮನಸ್ಸಿನಲ್ಲಿ ಪ್ರಭುತ್ವದ ಮೇಲೆ ಕೋಪದ್ವೇಷಗಳನ್ನು ಹುಟ್ಟಿಸಿರುತ್ತವೆ. ಮತ್ತು ಅವು ದೇಶದಲ್ಲಿ ರಾಜಕೀಯ ಪರಿಶ್ರಮಾಭಿವೃದ್ಧಿಗೆ ಆತಂಕವನ್ನುಂಟುಮಾಡಿವೆ. ಅದುಕಾರಣ ದೇಶಸ್ಥಿತಿಯು ಸಾಮಾನ್ಯವಾಗಿದೆಯೆಂದು ಹೇಳಲಾಗುವುದಿಲ್ಲ. ಆದರೆ ಯುದ್ಧಕಾಲದಂಥ ಅಸಾಮಾನ್ಯ ಪರಿಸ್ಥಿತಿಗೋಸ್ಕರ ಏರ್ಪಟ್ಟಿದ್ದ ದೇಶಸಂರಕ್ಷಣಶಾಸನವೂ ರೌಲತ್ ಶಾಸನವೂ ಈಗ್ಗೆ ಅನವಶ್ಯಕವಾದ ಕಾರಣ ಅವನ್ನು ಕೂಡಲೇ ತೆಗೆದುಬಿಡಬೇಕು. ದೇಶದಲ್ಲಿ ವಿಪರೀತವಾದ ಅಲ್ಲೋಲಕಲ್ಲೋಲಸ್ಥಿತಿಯುಂಟಾದಾಗ ಅದನ್ನಣಗಿಸುವ ವಿಷಯವನ್ನು ಯೋಚಿಸಿಕೊಳ್ಳಬಹುದು. ಮತ್ತು ೧೯೦೮ನೇ ವರ್ಷದ ಆಂಗ್ಲೇಯ ಸಭಾಶಾಸನದಂಥ ಶಾಸನವೊಂದನ್ನು ಹೊಸದಾಗಿ ಏರ್ಪಡಿಸಿ, ಸಭೆಗಳಲ್ಲಿ ಗದ್ದಲವನ್ನು ಮಾಡುವುದು, ಪ್ರಜಾಪ್ರತಿನಿಧಿಗಳ ಸಭೆಗೆ ಸಭಿಕರನ್ನು ಆರಿಸುವಾಗ್ಗೆ ಗದ್ದಲವನ್ನೂ ತಡೆಯನ್ನೂ ಮಾಡುವುದು—ಇಂಥ ದೊಡ್ಡ ತಪ್ಪಿತಗಳಿಗೆ ಕಠಿನಶಿಕ್ಷೆಯನ್ನು ವಿಧಿಸುವಂತೆ ಮಾಡಬೇಕು. ಪ್ರತಿಯೊಂದು ಸಭೆಯಲ್ಲೂ ಸರ್ಕಾರದ ವರದಿಗಾರರಿರುವುದಕ್ಕೆ ತಕ್ಕ ಏರ್ಪಾಟನ್ನು ಮಾಡಬೇಕೆಂಬ ವಿಷಯವನ್ನು ಈ ನೂತನಶಾಸನದಲ್ಲಿ ಸೇರಿಸಬೇಕು. ಎಂಬುದೇ ವರದಿಯಲ್ಲಿ ಕಂಡ ಮುಖ್ಯ ಸೂಚನೆಗಳಾಗಿರುತ್ತವೆ. ಇವಕ್ಕೆಲ್ಲಾ ಭಾರತಪ್ರಭುತ್ವದವರು ಒಪ್ಪಿರುವುದರಿಂದ ರೌಲತ್ ಶಾಸನವೇ ಮೊದಲಾದ ಕ್ರೂರಶಾಸನಗಳೆಲ್ಲಾ ತೊಲಗಿಹೋಗುವುದು ಖಂಡಿತವಾಯಿತು. ಇದು ಲಾರ್ಡ್ ರೀಡಿಂಗ್‌ರವರು ಭರತಖಂಡಕ್ಕೆ ಬಂದಮೇಲೆ ಉಂಟಾದ ಫಲವಾಗಿರುತ್ತದೆ. ಅಸಹಾಯೋದ್ಯಮ ಪ್ರತಾಪವಿಲ್ಲದಿದ್ದರೆ ಉಳಿದ ಕೆಲವು ಶಾಸನಗಳೂ ಕೂಡ ನಿರ್ನಾಮವಾಗಿಹೋಗುತ್ತಿದ್ದುವು. ಉಗ್ರವಾದಿಗಳ ಬೋಧನೆಯ ಫಲವಾಗಿ ಅಜ್ಞಜನರಿಂದ ಆಚರಿಸಲ್ಪಡುತ್ತಿರುವ ಅತ್ಯಾಚಾರಗಳೇ ಕೆಲವು ನಿರ್ಬಂಧಶಾಸನಗಳು ದೇಶದಲ್ಲಿ ಉಳಿದಿರುವಂತೆ ಮಾಡುವುದಕ್ಕೆ ಮೂಲಭೂತಗಳಾಗಿರುತ್ತವೆ.

ಪೂರ್ವದೇಶಗಳಲ್ಲಿ ಬೋಲ್ಷೆವಿಕ್ ಉದ್ಯಮವ್ಯಾಪನೆ.

ಈ ಮಧ್ಯೆ ಆಂಗ್ಲೇಯರಿಗೂ ರಷ್ಯಾದ ಸೋವಿಯಟ್ ಪ್ರಭುತ್ವದವರಿಗೂ ನಡೆದ ಒಪ್ಪಂದದ ವಿಷಯವನ್ನು ನಮ್ಮ ವಾಚಕರು ಮರೆತಿರಲಾರರು. ಅದರಲ್ಲಿದ್ದ ಮುಖ್ಯವಾದ ನಿಬಂಧನೆಯೇನೆಂದರೆ—ಆಂಗ್ಲಪ್ರಭುತ್ವದವರು ರಷ್ಯಾದ ಅಂತಃಕಲಹದಲ್ಲಿ ಪ್ರವೇಶಿಸಲಾಗದು, ರಷ್ಯಾ ಪ್ರಭುತ್ವದವರು ತಮ್ಮ ಬೋಲ್ಷೆವಿಕ್ ಉದ್ಯಮವನ್ನು ಭರತಖಂಡ ಅಫ್ಘಾನಿಸ್ಥಾನ ಮೊದಲಾದ ಆಂಗ್ಲಸಾಮ್ರಾಜ್ಯಕ್ಕೆ ಸಂಬಂಧಿಸಿದ ದೇಶಗಳಲ್ಲಿ ವ್ಯಾಪಿಸುವ ಪ್ರಯತ್ನವನ್ನು ಮಾಡಕೂಡದು ಎಂಬುದಾಗಿದ್ದಿತು. ಇದಕ್ಕೆ ಎರಡು ಪ್ರಭುತ್ವದವರೂ ಒಪ್ಪಿ ಸಂಧಿ ಮಾಡಿಕೊಂಡರು. ಆಂಗ್ಲರು ಆ ನಿಬಂಧನೆಯಂತೆಯೇ ನಡೆದುಕೊಂಡರು. ಸೋವಿಯಟ್ ಪ್ರಭುತ್ವದವರು ಮಾತ್ರ ಸಂಧಿಯ ಒಡಂಬಡಿಕೆಯನ್ನು ಮೀರಿ ನಡೆಯುತ್ತಿದ್ದಾರೆ. ಹಾಗೆ ಅವರು ನಡೆಯುತ್ತಿರುವರೆಂಬುದಕ್ಕೆ ಅನೇಕ ದೃಷ್ಟಾಂತಗಳನ್ನು ಆಧಾರಪೂರ್ವಕವಾಗಿ ಆಂಗ್ಲ ಪ್ರಭುತ್ವದವರು ಶೇಖರಿಸಿದ್ದಾರೆ. ಮತ್ತು ಅದನ್ನೆಲ್ಲಾ ಕಾಣಿಸಿ ಈಗ ರಷ್ಯಾ ಸೋವಿಯಟ್ ಪ್ರಭುತ್ವದವರಿಗೆ ಒಂದು ಸಂದೇಶವನ್ನು ಕಳುಹಿಸಿದ್ದಾರೆ. ಆ ಸಂದೇಶದಲ್ಲಿ ಕಂಡ ಮುಖ್ಯ ಭಾಗಗಳು ಹೀಗಿರುತ್ತವೆ:—

ಭರತಖಂಡದಲ್ಲಿ ಬೋಲ್ಷೆವಿಕ್ ತತ್ವಗಳನ್ನು ಹರಡಬೇಕೆಂಬ ಉದ್ದೇಶದಿಂದ ರಷ್ಯಾದವರು ಅಫ್ಘಾನಿಸ್ಥಾನದೊಡನೆ ಸಂಧಿಮಾಡಿಕೊಂಡಿದ್ದಾರೆ. ಟಾಷ್ಕಂಡಿನ ಪಾಠಶಾಲೆಯಲ್ಲಿ ಅನೇಕ ಮಂದಿ ಭಾರತೀಯರಿಗೆ ಬೋಲ್ಷೆವಿಕ್ ಉದ್ಯಮವ್ಯಾಪನೆಯ ಪಾಠಗಳು ಹೇಳಿಕೊಡಲ್ಪಡುತ್ತಿವೆ. ಭಾರತೀಯರಿಗೆ ಸೋವಿಯಟ್ ಪ್ರಭುತ್ವದವರು ಧನಸಹಾಯ ಮಾಡುತ್ತಿದ್ದಾರೆ. ಅಫ್ಘಾನಿಸ್ಥಾನದವರಿಗೆ ಹೆಚ್ಚಾಗಿ ಧನಸಹಾಯ ಮಾಡುವುದಕ್ಕೆ ರಷ್ಯಾದವರು ಒಪ್ಪಿ ಆ ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ರಷ್ಯಾ ಪ್ರತಿನಿಧಿಗಳನ್ನು ನಿಯಮಿಸುತ್ತಿದ್ದಾರೆ. ಇವನ್ನೆಲ್ಲಾ ನೋಡಿದರೆ ರಷ್ಯನ್ನರು ಭರತಖಂಡದ ಮೇಲೆ ಕಣ್ಣಿಟ್ಟಿರುವರೆಂಬುದು ಸ್ಪಷ್ಟವಾಗುತ್ತದೆ. ಮತ್ತು ಸೋವಿಯಟ್ ಪ್ರಭುತ್ವದ ಬೋಲ್ಷೆವಿಕ್ ಉದ್ಯಮವ್ಯಾಪನ ಶಾಖೆಯ ಮುಖ್ಯೋದ್ಯೋಗಿಯಾದ ನೋರ್ಟಿವಾಯವರು ಜೂನ್ ತಾ|| ೨೦ ರಲ್ಲಿ ಹೀಗೆ ಹೇಳಿರುತ್ತಾರೆ.—"ಪೂರ್ವಭಾಗದಲ್ಲಿ ನಾವು ಹೆಚ್ಚಾಗಿ ಕೆಲಸಮಾಡಿದೆವು. ಕಲೋನಿಯಲ್ ಪ್ರಭುತ್ವದವರು ಬಹು ಜಾಗರೂಕತೆಯಿಂದ ಪ್ರವರ್ತಿಸುತ್ತಿರುವ ಕಾರಣ ಇನ್ನೂ ಹೆಚ್ಚು ತೃಪ್ತಿಕರವಾಗಿ ಕೆಲಸಮಾಡಲು ಅವಕಾಶವಾಗಲಿಲ್ಲ. ಮುಂದಣ ಸೂಚನೆಗಳು ತೃಪ್ತಿಕರವಾಗಿವೆ. ಪರ್ಷಿಯಾದಲ್ಲಿ ದೊಡ್ಡ ಮಾರ್ಪು ಉಂಟಾಗುತ್ತಲಿದೆ. ಈ ಬದಲಾವಣೆಯಿಂದ ನಾವು ಭರತಖಂಡದ ಸಮೀಪದಲ್ಲಿ ಮುಖ್ಯ ಸ್ಥಾನವನ್ನೇರ್ಪಡಿಸಿಕೊಂಡು ಮುಂದಣ ಕೆಲಸಮಾಡಬಹುದು."

ಇಷ್ಟೇ ಅಲ್ಲದೆ ಸೋವಿಯಟ್ ಪ್ರಭುತ್ವದವರು ಯೂರೋಪುಖಂಡದಲ್ಲಿರುವ ವಿಪ್ಲವಕಾರರೊಡನೆ ಕಾಗದ ಪತ್ರಗಳನ್ನು ನಡೆಯಿಸುತ್ತಿದ್ದಾರೆ. ಬರ್ಲಿನ್ ಪಟ್ಟಣದಲ್ಲಿರುವ ಚಟ್ಟೋಪಾಧ್ಯಾಯ ಎಂಬುವನನ್ನೂ ಇನ್ನು ಕೆಲರನ್ನೂ ರಷ್ಯಾಕ್ಕೆ ಕಳೆದ ಮೇ ತಿಂಗಳಲ್ಲಿ ಕರೆಯಿಸಿಕೊಂಡು ಭರತಖಂಡದಲ್ಲಿ ವಿಪ್ಲವವನ್ನು ಉದ್ರೇಕಗೊಳಿಸುವ ಉಪಾಯವನ್ನು ಕುರಿತು ಅವರುಗಳೊಡನೆ ಆಲೋಚಿಸಿದ್ದಾರೆ. ಇವರೆಲ್ಲರಿಗೂ ಬರ್ಲಿನ್ನಿನಲ್ಲಿರುವ ಸೋವಿಯಟ್ ರಾಯಭಾರಿಯಾದ ಕಾಪ್ಪರವರು ಹಣವನ್ನು ಕೊಟ್ಟಿರುತ್ತಾರೆ. ಇದೇ ಅಲ್ಲದೆ ಭರತಖಂಡದ ಎಲ್ಲೆ ಕಟ್ಟುಗಳಲ್ಲಿ ಒಂದು ಸಿಡಿಮದ್ದಿನ ನಿರ್ಮಾಣದ ಯಂತ್ರಾಲಯವನ್ನು ಸ್ಥಾಪಿಸಿ, ಅಲ್ಲಿ ನಿರ್ಮಿಸಿದ ಸಿಡಿಮದ್ದುಗಳನ್ನು ಭರತಖಂಡಕ್ಕೆ ಕಳುಹಿಸಿಕೊಡಲು ಪ್ರಯತ್ನಮಾಡುತ್ತಿದ್ದಾರೆ.

ಪರ್ಷಿಯಾ ರಾಜಧಾನಿಯಾದ ತೆಹರಾನಿನಲ್ಲಿರುವ ತಮ್ಮ ರಾಯಭಾರಿಗೆ ಸೋವಿಯಟ್ ಪ್ರಭುತ್ವದವರು ಹೆಚ್ಚಾಗಿ ಹಣವನ್ನು ಕಳುಹಿಸಿಕೊಟ್ಟು ಅದನ್ನೆಲ್ಲಾ ಬೋಲ್ಷೆವಿಕ್ ಉದ್ಯಮವ್ಯಾಪನೆಗಾಗಿ ಉಪಯೋಗಮಾಡಿಸುತ್ತಿದ್ದಾರೆ. ಸೋವಿಯಟ್ ಪ್ರತಿನಿಧಿಗಳು ಆಗಾಗ್ಗೆ ಪರ್ಷಿಯಾ ಪ್ರಭುತ್ವಾಧಿಕಾರಿಗಳನ್ನು ಕಂಡು ಮಾತನಾಡುತ್ತಲೂ, ವೃತ್ತಪತ್ರಿಕೆಗಳಿಗೆ ಹೇರಳವಾಗಿ ಹಣವನ್ನು ಕೊಟ್ಟು ಆಂಗ್ಲರ ಮೇಲೆ ಜನಗಳಿಗೆ ದ್ವೇಷಹುಟ್ಟುವಂಥ ಲೇಖನಗಳನ್ನು ಬರೆಯಿಸುತ್ತಲೂ ಇದ್ದಾರೆ.

ಪೂರ್ವ ದೇಶಗಳಲ್ಲಿ ಬೋಲ್ಷೆವಿಕ್ ಉದ್ಯಮ ವ್ಯಾಪನೆ ಮಾಡಿಸುವುದಕ್ಕಾಗಿ ಸೋವಿಯಟ್ ಪ್ರಭುತ್ವದವರು ೨೦ ಲಕ್ಷ ಬಂಗಾರದ ರೂಬಲ್ಸುಗಳನ್ನು ವೆಚ್ಚಮಾಡಲು ಅಪ್ಪಣೆ ಮಾಡಿದ್ದಾರೆ. ಮತ್ತು ಈ ಸಂಧಾನದಲ್ಲಿ ಮುಖ್ಯ ಭಾಗವೇನೆಂದರೆ—ರಷ್ಯನರು ಅಫ್ಘಾನಿಸ್ಥಾನದವರಿಗೆ ವರ್ಷಕ್ಕೆ ೧೦ ಲಕ್ಷ ರೂಬಲ್ಲುಗಳನ್ನು ಕೊಡಲು ಒಪ್ಪಿಕೊಂಡಿರುವುದೇ ಆಗಿರುತ್ತದೆ (ಒಂದು ರೂಬಲ್ಲಿಗೆ ಬೆಲೆ ೨ ಷಿಲಿಂಗೂ ೧೦ ಪೆನ್ನಿ). ಮತ್ತು ಸೋವಿಯಟ್ ಪ್ರಭುತ್ವದವರು ದುರುದ್ದೇಶದಿಂದಲೇ ಅಂಗೋರಾ ಪ್ರಭುತ್ವದವರಿಗೆ ಯುದ್ಧ ಸಾಮಗ್ರಿಯನ್ನೂ ಹಣವನ್ನೂ ಕಳುಹಿಸಿಕೊಡುತ್ತಿದ್ದಾರೆ. ತುರುಕರಿಗೂ ಗ್ರೀಕರಿಗೂ ಹೇಗೂ ಸಂಧಿಯಾಗಬಾರದೆಂಬುದೇ ಇವರ ಉದ್ದೇಶವಾಗಿದೆ. ಈ ಉದ್ದೇಶದಿಂದಲೇ ಅನಟೋಲಿಯಾ ಎಲ್ಲೆಯಲ್ಲಿ ರಷ್ಯಾ ಸೈನ್ಯವನ್ನು ನಿಲ್ಲಿಸಿದ್ದಾರೆ. ವ್ಯಾಪಾರದ ನೆಪದಿಂದ ಅಫ್ಘಾನಿಸ್ಥಾನದಲ್ಲಿ ಸೋವಿಯಟ್ ಪ್ರತಿನಿಧಿಗಳನ್ನು ಇಟ್ಟಿದ್ದಾರೆ. ರಷ್ಯಾದ ವ್ಯಾಪಾರಾಭಿವೃದ್ಧಿಗೆ ಇಷ್ಟು ಮಂದಿ ಪ್ರತಿನಿಧಿಗಳು ಅಲ್ಲಿ ಇರಬೇಕಾದುದಿಲ್ಲ. ಈ ತಂತ್ರಕ್ಕೆಲ್ಲಾ ಅವರ ಉದ್ಯಮ ವ್ಯಾಪನೆಯೇ ಮುಖ್ಯೋದ್ದೇಶವಾಗಿದೆ. ಜಮಾಲ್ ಪಾಷಾರವರು ಅಫ್ಘಾನಿಸ್ಥಾನದಲ್ಲಿದ್ದುಕೊಂಡು ಮಾಸ್ಕೋನಗರದಿಂದ ಸೋವಿಯಟ್ ಪ್ರಭುತ್ವದವರು ಕಳುಹಿಸಿಕೊಡುತ್ತಿರುವ ಲೇಖನಗಳನ್ನನುಸರಿಸಿ ಕಾರ್ಯಭಾರಗಳನ್ನು ಜರುಗಿಸುತ್ತಿದ್ದಾರೆಂಬುದಕ್ಕೆ ಅನೇಕ ನಿದರ್ಶನಗಳಿವೆ.

ಅಸ್ಪೃಶ್ಯತ್ವ.

ಅಸಹಾಯಾವಲಂಬಿಗಳ ನಾಯಕರಾದ ಮ|| ಗಾಂಧಿಯವರು ತಮ್ಮ ಸ್ವರಾಜ್ಯಸಂಪಾದನೆಯ ಸಾಧನಗಳಲ್ಲಿ ನಿಮ್ನಜಾತಿ ಜನರ ಅಸ್ಪೃಶ್ಯತ್ವವನ್ನು ತೊಲಗಿಸಬೇಕಾದುದು ಮೊಟ್ಟಮೊದಲನೆಯ ಸಾಧನವೆಂದು ಬೋಧಿಸುತ್ತ ಅದರಂತೆ ಆಚರಿಸುತ್ತಲೂ ಇದ್ದಾರೆ. ಅವರ ಅನುಯಾಯಿಗಳಾದ ಎಷ್ಟೋ ಸಭೆಗಳು ಕೂಡ ಆ ತೆರದ ನಿರ್ಧಾರವನ್ನು ಮಾಡುತ್ತಲಿವೆ. ಕಳೆದ ತಾ|| ೨೮ರಲ್ಲಿ ಬರ್ಹಾಂಪುರದಲ್ಲಿ ಕೂಡಿದ್ದ ೯ನೇ ಆಂಧ್ರಮಹಾಸಭೆಯಲ್ಲಿ "ಅಸ್ಪೃಶ್ಯತ್ವ"ವೆಂಬ ಭಯಂಕರಾಚಾರವನ್ನು ಅಣಗಿಸಿಬಿಡುವವರೆಗೂ ನಮ್ಮ ದೇಶವು ನೆಟ್ಟಗಾಗುವುದಿಲ್ಲವೆಂತಲೂ, ಅಂಥ ದುರಾಚಾರವನ್ನು ಹೋಗಲಾಡಿಸಲಿಕ್ಕೆ ಇದುವರೆಗೆ ಆಂಧ್ರರು ಮಾಡುತ್ತಿರುವ ಪ್ರಯತ್ನಗಳು ಎಷ್ಟು ಮಾತ್ರಕ್ಕೂ ಸಾಲವೆಂತಲೂ, ಆ ದುರಾಚಾರ ನಿರ್ಮೂಲನಕ್ಕೆ ಎಲ್ಲರೂ ದೃಢಪ್ರಯತ್ನವನ್ನು ಮಾಡಬೇಕೆಂತಲೂ ಒಂದು ತೀರ್ಮಾನವನ್ನು ಮಾಡಿರುವರು. ತಿರುವಾಂಕೂರಿನಲ್ಲಿ ಎಜುವಾ ಎಂಬ ಒಂದುಜಾತಿಯ ಜನವರ್ಗದವರಿದ್ದಾರೆ. ಅವರು ಅಸ್ಪೃಶ್ಯಕೋಟಿಯಲ್ಲಿ ಗಣಿಸಲ್ಪಟ್ಟಿದ್ದಾರೆ. ಅಲ್ಲಿಯ ದೇವಾಲಯಗಳಿಗೆ ಅವರನ್ನು ಇತರರು ಹೋಗಗೊಡಿಸುತ್ತಲಿಲ್ಲ. ಕಳೆದವಾರ ಮ|| ಗಾಂಧಿಯವರು ತಿರುನಲ್ವೇಲಿಯಲ್ಲಿದ್ದಾಗ್ಗೆ ಆ ಎಜುವಾ ಜನರ ನಾಯಕರಾದ ಟಿ. ಕೆ. ಮಾಧವನ್ ನಾಯರ್‌ರವರು ಹೋಗಿ ಕಂಡು, ಎಜುವಾ ಜನರ ಅಸ್ಪೃಶ್ಯತ್ವ ವಿಷಯವಾಗಿ ಚರ್ಚಿಸಿದಾಗ್ಗೆ ಅವರು—"ಪ್ರಜೆಗಳ ಉಪಯೋಗಾರ್ಥವಾಗಿ ಕಟ್ಟಿರುವ ದೇವಾಲಯಗಳಲ್ಲಿ ಇತರ ಬ್ರಾಹ್ಮಣೇತರರಂತೆಯೇ ಈ ಎಜುವಾ ಜನರೂ ಹೋಗಿ ದೇವತಾಸೇವೆ ಮಾಡಿಕೊಂಡು ಬರುವ ಹಕ್ಕು ಅವರಿಗೆ ಇರುವುದೆಂತಲೂ, ಒಂದು ವೇಳೆ ಶಾಸನವು ಅದಕ್ಕೆ ವಿರುದ್ಧವಾಗಿದ್ದರೆ ನಿರೋಧಿಸಿ ಕಾರಾಗೃಹಶಿಕ್ಷೆಯನ್ನಾದರೂ ಅವರುಗಳು ಅನುಭವಿಸುವಲ್ಲಿ ಆತ್ಮನಿಗ್ರಹವನ್ನು ಮಾಡಬಹುದೆಂತಲೂ, ಆದರೆ ವರ್ಣಾಂತರಭೋಜನ ವಿವಾಹಸಂಬಂಧಗಳು ಆಧ್ಯಾತ್ಮಿಕ ಆರೋಗ್ಯ ವಿಷಯಗಳ ಮೇಲೆ ಆಧಾರಪಟ್ಟಿರುವ ಕಾರಣ ಅವನ್ನು ಬಿಟ್ಟು ಅಸ್ಪೃಶ್ಯತ್ವವನ್ನು ಮಾತ್ರ ಖಂಡಿತವಾಗಿ ದೂರೀಕರಿಸಬೇಕೆಂತಲೂ ಅಭಿಪ್ರಾಯ ಕೊಟ್ಟಿರುವರು.

ಗಾಂಧಿಯವರು ಅಸ್ಪೃಶ್ಯತ್ವ ವಿಷಯದಲ್ಲಿ ಪಟ್ಟಿರುವ ಈ ತೆರದ ಅಭಿಪ್ರಾಯವನ್ನು ಕೆಲವರು ನೋಡಿ ಗಾಂಧಿಯು ರಾಜಕೀಯಗುರುವೇ ಹೊರತು ಮತವಿಷಯದಲ್ಲಿ ಆದರ್ಶಪ್ರಾಯರಲ್ಲವೆಂತಲೂ ಅದುಕಾರಣ ಅಸ್ಪೃಶ್ಯತ್ವ ವಿಷಯದಲ್ಲಿ ಅವರು ತಪ್ಪುದಾರಿಯಲ್ಲಿ ಹೋಗುತ್ತಿರುವರೆಂತಲೂ ಆಡುತ್ತಿದ್ದಾರೆ. ಆದರೆ ಕೇವಲ ಪಾರಮಾರ್ಥಿಕ ವಿಷಯದಲ್ಲೇ ಮಗ್ನರಾಗಿ ಸರ್ವಸಂಗಪರಿತ್ಯಾಗಿಗಳಾಗಿ ಬ್ರಹ್ಮಾನಂದನಿಮಗ್ನರಾಗಿ ೧೨ ವರ್ಷ ಕಾಲ ಸಾಧನಸಂಪನ್ನರಾಗಿ ಪರಮರ್ಷಿಗಳಂತಿರುವ ಅರವಿಂದ ಯೋಗಿವರ್ಯರು ಈ ಅಸ್ಪೃಶ್ಯತ್ವ ವಿಷಯದಲ್ಲಿ ಪಟ್ಟಿರುವ ಅಭಿಪ್ರಾಯವನ್ನು ಜ. ವೇ. ಕೃಷ್ಣ ಎಂಬುವರು ತಿಳಿಯಿಸಿರುವರು. ಇವರು ಪ್ರತ್ಯಕ್ಷವಾಗಿ ಅವರಲ್ಲಿಗೆ ಹೋಗಿ ಸಂಭಾಷಣ ಮಾಡಿದಾಗ್ಗೆ—ಅಸ್ಪೃಶ್ಯತ್ವವೆಂಬುದನ್ನು ನಾನ್‌ಸೆನ್ಸ್ ಎಂತಲೂ ಅಮಾನುಷವೆಂತಲೂ ಅರವಿಂದ ಯೋಗಿಗಳು ಖಂಡಿಸಿದುದಲ್ಲದೆ ಅಮೇರಿಕಾದಲ್ಲಿ ನೀಗ್ರೋ ಜನರನ್ನೂ, ದಕ್ಷಿಣಾಫ್ರಿಕಾದಲ್ಲಿ ಭಾರತೀಯರನ್ನೂ ಕಾಣುತ್ತಿರುವಂತೆ ನಾವು ಈ ದೇಶದ ಪಂಚಮಸೋದರರ ವಿಷಯದಲ್ಲಿ ಪ್ರವರ್ತಿಸಿ ಅವರನ್ನು ನಿಂದಿಸುತ್ತ ದೇಶಕ್ಕೆ ಸ್ವಾತಂತ್ರ್ಯವನ್ನು ಕೋರುತ್ತಿರುವುದು ಅತ್ಯಂತ ವಿಚಿತ್ರವೆಂದು ಹೇಳಿದರಂತೆ. ಅಸ್ಪೃಶ್ಯತ್ವವನ್ನು ಶಾಸ್ತ್ರೀಯವಾಗಿ ಸಾಧಿಸಲಾಗುವುದಿಲ್ಲವೆಂತಲೂ, ಮತ್ತು ಶಾಸ್ತ್ರವಿಧಿಯೆಂಬುದು ಆಯಾ ಕಾಲಸ್ಥಿತಿಯನ್ನನುಸರಿಸಿ ಏರ್ಪಟ್ಟ ಸಂಘನಿಯಮವೆಂತಲೂ, ಆ ನಿಯಮಗಳು ನಿತ್ಯಗಳಲ್ಲವೆಂತಲೂ ಅವರು ಅಭಿಪ್ರಾಯ ಪಟ್ಟಿರುವರು.

ಮದರಾಸು ಸರ್ಕಾರದ ಹೊಸಅಪ್ಪಣೆ.

"ಸರ್ಕಾರದಲ್ಲಿ ಮುಂದೆ ತೆರವಾಗುವ ಪ್ರತಿಯೊಂದು ಶಾಖೆಯ ಉದ್ಯೋಗಸ್ಥಾನಗಳಿಗೂ ಬ್ರಾಹ್ಮಣೇತರ ಸಂಖ್ಯೆಯೇ ಹೆಚ್ಚಾಗಿರುವಂತೆ ಮಾಡುವುದಕ್ಕಾಗಿ ಆ ಉಮೇದುವಾರರುಗಳಿಗೇ ಉದ್ಯೋಗಗಳನ್ನು ಕೊಡಬೇಕು" ಎಂಬುದಾಗಿ ಮದರಾಸು ಸರಕಾರದವರು ಎಲ್ಲಾ ಕಲೆಕ್ಟರು ಜಿಲ್ಲಾ ಜಡ್ಜಿಗಳು ಮೊದಲಾದ ಮುಖ್ಯೋದ್ಯೋಗಸ್ಥರಿಗೆಲ್ಲಾ ಈಗತಾನೇ ಜಿ. ಓ. ೬೧೫ನೆ ನಂ. ಅಪ್ಪಣೆಯನ್ನು ಕೊಟ್ಟಿರುತ್ತಾರೆ. ಇದನ್ನು ಕೂಡ ಬ್ರಹ್ಮದ್ವೇಷದಿಂದ ಮಾಡಿದ ಅಪ್ಪಣೆಯೆಂದು ನಮ್ಮ ಮೈಸೂರಿನ ಅಸೂಯಾಳುಗಳು ಹೇಳುವರೋ ಏನೋ ನೋಡಬೇಕು.

MUNICIPAL ELECTIONS.

The two cities have returned their elected members and these elections declare the conditions prevailing in the two large cities. The voters in the Mysore City deserve the hearty congratulations on their solidarity and consciousness of their rights. The policy of the people as it transcends in these popular elections, is in keeping with the modern aspirations of "no surrender" to the machinations of the class of people who have preserved power and influence in their hands for so many years to serve their own ends and not those of the people whom they represented. Mysore City is not under the thumb of official influence as Bangalore is. Here is an atmosphere of greater freedom to mind and action. The people's men here are more united and attached to a great cause viz. the civic education of the masses. The leaders here are devoted to the cause whole-heartedly and therefore the results achieved by them are praiseworthy and are a landmark between the gloomy past and the bright future. The election campaign at Mysore was characterised by a volunteer conduct on the part of the voters and a chord of cheerfulness was the ruling passion knitting together the candidates and the constituents. The agreeable conduct of business was visible. Such was this picture and let us look at that picture at Bangalore.

Information reaches us that canvassing at Bangalore has been going on for some days past, the two parties at work being the peoples' party—a new organ which is working under many disadvantages and a party of conservatism which is backed up by under-current influences and which has certain vested interests to guard. This is the body in receipt of encomiums at the hands of our contemporary, the Wealth of Mysore through its correspondent "Satyavadi" in the issue for 24-9-21. What is stated here is that there were proclaimers in the campaign who from the top of their voice declared the policy of "no distinction of caste, creed, sect and other things" in voting for competent candidates. These proclaimers happened to be non-brahmans. It needs examination of the strata behind this state of mind. This is a complex world of complex interests and it certainly needs overpowering interests to conquer the natural instincts of blood and relationship. The voter has been in general and till recently a means in the hands of persons whose ends were being worked out by these means. In particular cases where they are intelligent enough to understand the value of voting for a representative, they are subject to be controlled by personal interests. Thus the fate of right of voting has been in the past regulated by the means of two instruments viz., ignorance and personal interests. The former is giving way before democratic influences, but the latter is not so easily to be made to retire. It withstands all such good movements of general interests. Bangalore is such a one as its people have not yet overcome the personal interests. The Mahomadan and non-Brahman population has to an extent been a victim to this condition.

Divide and rule is the principle of "Intelligentia" and it cannot be on the agenda of any demoratic movement. In the issue of the Sampathabhyudaya referred to above, one can read that line of action in the English portion of the paper under the signature of that frank gentleman Mr. R. Gopalasamy Iyer. Oh! the mighty and monstrous intelligentic which has evolved in the form of non-co-operations!!! Where all are thine hands at work? Thou goest in the name of culture! Thus the democrat, thus the loyalist, thus the patriot has to exclaim before he extricates himself from the snares of intelligentia. Great minds in the west have fallen a prey to this intricate snare of intelligentia which from its birth place of Ramesvaram is invading other countries to its north. Is it a wonder then that the simple minds of Bangalore non-brahman voters have come to proclaim "no caste, no creed &c?" Rank Sophistry!!! We have taken a few extracts from one of our correspondents of Bangalore in depicting in his words, the condition of election in Bangalore. Our correspondent tells us that (1) Chamarajapet (3 seats) Basavangudi (2 seats) and Mallesvaram (1 seat) are out of the pale of this distinction. A non-brahman dare not enter this arena in competition. The Mighty Intellect rules this land of Heaven. We do not believe that the conditions are as violent as our correspondent puts it. However the Bangalore elections have not been encouraging for the people's cause. That 9 out of 18 seats should go to a minor class in self-government means that blood will play its part and prove that it is thicker than water. We hope that in result it will not prove so as in a place like Bangalore in the light of democratic feeling, nothing like personal interest can any longer survive detection. Well! in this competition Mysore has beaten Bangalore. We hope that in the next elections Bangalore will try for a win in this healthy competition over Mysore.

ಒಳದೇಶದ ವೃತ್ತಾಂತಗಳು

ಬರುವ ತಾ|| ೧೫ರಲ್ಲಿ ಪ್ರಜಾಪ್ರತಿನಿಧಿಸಭಾ ಕಾರ್ಯಗಳು ಆರಂಭವಾಗುತ್ತವೆ.

ರಾಜಧಾನಿಯಲ್ಲಿ ಪ್ಲೇಗಿನವ್ಯಾಧಿಯು ಸಾಧಾರಣವಾಗಿದೆ. ದಿನಕ್ಕೆ ೩ ರೋಗದಿಂದ ೪-೫ ಮರಣಗಳಷ್ಟು ಆಗುತ್ತಿವೆ.

ಕಳೆದ ಬುಧವಾರ ನಡೆದ ರಾಜಧಾನಿಯ ಮುನ್ಸಿಪಲ್ ಮೀಟಿಂಗಿನಲ್ಲಿ ಮ|| ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್., ರವರು ವೈಸ್‌ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

ನಮ್ಮ ವಿಶ್ವವಿದ್ಯಾಲಯದ ಕಾನ್ವೋಕೇಷನ್ನು ಬರುವ ತಾ|| ೧೮ನೆ ಬೆಳಗ್ಗೆ ೮|| ಗಂಟೆಗೆ ನಡೆಯುವುದು. ಶ್ರೀಮನ್ಮಹಾರಾಜರವರು ಅಧ್ಯಕ್ಷತೆಯನ್ನು ವಹಿಸುವರು.

ನವರಾತ್ರಿ ಮಹೋತ್ಸವಕ್ಕಾಗಿ ಸಂಸ್ಥಾನದ ಕೌನ್ಸಿಲರುಗಳೂ ಸೆಕ್ರಟೆರಿಯಟ್ಟೂ ಬಂದೂ ಶಾಖಾಧಿಕಾರಿಗಳೂ ಡಿಸ್ಟ್ರಿಕ್ಟ್ ಡಿ|| ಕಮಿಷನರುಗಳೂ ಬರುತ್ತಲೂ ಇದ್ದಾರೆ.

ನವಯುಗವೆಂಬ ಹೆಸರಿನಿಂದ ಒಂದು ವಾರಪತ್ರಿಕೆಯು ಮಂಗಳೂರಿನಿಂದ ಪ್ರತಿ ಗುರುವಾರ ಪ್ರಕಟಗೊಳ್ಳಲಾರಂಭಿಸಿರುತ್ತದೆ. ರಾಜಕೀಯ ವೀರಪಕ್ಷದ ಲೇಖನಗಳು ಇದರಲ್ಲಿ ವಿಶೇಷವಾಗಿವೆ.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮೊನ್ನೆವಾರ ಸಮೃದ್ಧಿಯಾದ ಮಳೆಯಾಗಿ ಕೆರೆಕಟ್ಟೆಗಳು ತುಂಬಿದವೆಂದೂ ನಿಂತಿರುವ ರಾಗಿ ಮೊದಲಾದ ಪೈರುಗಳಿಗೆಲ್ಲಾ ಬಹಳ ಅನುಕೂಲವಾಯಿತೆಂದೂ ವಾರ್ತೆ ಬಂದಿದೆ.

ಸೀಮೆಗೆಹೋಗಿದ್ದ ಮಿ|| ಪಿ. ಜಿ. ಡಿಸೌಜಾ, ಬಿ. ಎ., ಬಿ. ಎಲ್., ರವರು ಈ ವಾರದಲ್ಲಿ ಹಿಂದಿರುಗಿ ಬೆಂಗಳೂರಿಗೆ ಬರುವವರಾಗಿದ್ದಾರೆ. ಬಂದನಂತರ ವಿದ್ಯಾಭ್ಯಾಸ ಶಾಖೆಯ ಇನ್|| ಜನರಲ್ ಪದವಿಯು ಅವರಿಗೆ ಒಪ್ಪಿಸಲ್ಪಡುವುದರಲ್ಲಿದೆಯೆಂದು ಕೇಳುತ್ತೇವೆ.

ಸಿರಾ ಮದ್ದಗಿರಿ ತಾಲ್ಲೂಕುಗಳಲ್ಲಿ ಕಳೆದ ವರ್ಷದಲ್ಲಿ ಮಳೆ ಸಾಲದೆ ಕೆರೆಕಟ್ಟೆಗಳು ತುಂಬಲಿಲ್ಲ. ಈ ವರ್ಷ ಹಾಕಿದ ಪೈರೆಲ್ಲಾ ಮಳೆಯಿಲ್ಲದೆ ಒಣಗಿಹೋಗಿ ಗದ್ದೆನಾಟಿ ಹಾಕುವುದಕ್ಕೂ ನೀರಿಲ್ಲದೆ ಆ ತಾಲ್ಲೂಕುಗಳಲ್ಲಿ ಕ್ಷಾಮವು ಕಾಲಿಕ್ಕಿಕೊಂಡು ಬಡಬಗ್ಗರು ಬಹಳ ತಾಪತ್ರಯ ಪಡುತ್ತಿದ್ದಾರೆಂದು ಕೇಳಿದೆವು.

ಭರತಖಂಡದ ವೃತ್ತಾಂತಗಳು.

ಸರ್ಕಾರದಪ್ಪಣೆಯನ್ನು ತಿರಸ್ಕರಿಸುವ ವಿಷಯವನ್ನು ಕುರಿತು ಆಲೋಚಿಸುವುದಕ್ಕಾಗಿ ಕಳೆದ ತಾ|| ೨೫ ರಲ್ಲಿ ಕರಾಚಿಯಲ್ಲಿ ಖಿಲಾಪತ್ ಸಂಘದವರು ಸಭೆಗೂಡಿದ್ದರು.

ಬಾಲಕೃಷ್ಣರಾಜಾರಾಮ್ ಸಾವಂತ್‌ಭಾನ್ಸ್ಲೇ ಎಂಬುವರು ೨ ತಿಂಗಳ ಹಿಂದೆ ಕ್ರಿಸ್ತಮತವನ್ನು ಸ್ವೀಕರಿಸಿದ್ದು ಈಗ ಮರಳಿ ಕಳೆದ ತಾ|| ೧೧ ರಲ್ಲಿ ಹಿಂದೂಮತಕ್ಕೆ ಸೇರಿಕೊಂಡರು.

ಹಸರು ಬಣ್ಣವನ್ನು ಕಂಡರೆ ಸೊಳ್ಳೆಗಳಿಗೆ ಸೇರದಂತೆ. ಅದುಕಾರಣ ಮಲಗುವ ಕೋಣೆಯ ಗೋಡೆಗಳಿಗೆಲ್ಲಾ ಹಸರು ಬಣ್ಣವನ್ನು ತುಂಬಿಸಿದರೆ ಸೊಳ್ಳೆಗಳ ಕಾಟವು ಬಹಳ ಕಡಿಮೆಯಾಗುವುದೆಂದು ಒಬ್ಬ ಪರಿಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಲಾಹೋರಿನಲ್ಲಿ ಕಳೆದ ತಾ|| ೨೫ ರಲ್ಲಿ ಕಾಂಗ್ರೆಸ್ ಖಿಲಾಪತ್ ಸ್ವಯಂ ಸೇವಕರು ವಿದೇಶದ ಬಟ್ಟೆಗಳನ್ನೆಲ್ಲಾ ಕೂಡಿಸಿ, ಶವಪೇಟಿಕೆಯಂತೆ ಒಂದನ್ನು ನಿರ್ಮಿಸಿ ಅದರಲ್ಲಿ ತುಂಬಿ ಹೊತ್ತುಕೊಂಡು ಸಂತಾಪಕರವಾದ ಪದಗಳನ್ನು ಹೇಳಿಕೊಂಡು ನೆರೆವಣಿಗೆ ಮಾಡಿ ಕಡೆಗೆ ಅವನ್ನೆಲ್ಲಾ ಸುಟ್ಟುಬಿಟ್ಟರು.

ಭರತಖಂಡದಲ್ಲೆಲ್ಲಾ ಒಂದೇ ವಿಧವಾದ ಅಳತೆಯ ಮತ್ತು ತೂಕದ ಸಾಧನಗಳಿರುವಂತೆ ಏರ್ಪಡಿಸಬೇಕೆಂಬ ತೀರ್ಮಾನವು ಸ್ಟೇಟ್ ಕೌನ್ಸಿಲಿಗೆ ಬಂದಿದ್ದಿತು. ಇಂಥ ಪದ್ಧತಿಗೆ ಬರ್ಮಾ ದೇಶವು ಒಪ್ಪುವುದಿಲ್ಲವಾದುದರಿಂದ ಉಳಿದ ಭಾಗದಲ್ಲೆಲ್ಲಾ ರೈಲ್ವೆಯ ತೂಕವನ್ನು ಅಂಗೀಕರಿಸಬಹುದೆಂದು ಪರಿಶ್ರಮ ಶಾಖಾ ಕಾರ್ಯದರ್ಶಿಯವರು ಉಪಸೂಚನೆಯನ್ನು ಮಾಡಿದರು. ಈ ಏರ್ಪಾಟನ್ನು ತತ್‌ಕ್ಷಣವೇ ಮಾಡಬೇಕಾದುದಿಲ್ಲವೆಂತಲೂ ಕಾಲಕ್ರಮದಿಂದ ಮಾಡಬಹುದೆಂತಲೂ ಸೂಚಿತವಾಗಿ ಕಡೆಗೆ ಅಂಗೀಕೃತವಾಯಿತು.

ಹೊಸದಾಗಿ ಏರ್ಪಟ್ಟಿರುವ ಮದ್ರಾಸ್ ಮ್ಯುನ್ಸಿಪಲ್ ಶಾಸನದ ಪ್ರಕಾರ ಕೌನ್ಸಿಲರನ್ನು ಆರಿಸುವಾಗ್ಗೆ ಓಟನ್ನು ಕೊಡುವ ಅಧಿಕಾರವು ಸ್ತ್ರೀಯರಿಗೂ ಉಂಟಾಗಿರುತ್ತದೆ. ಆದರೆ ಕೌನ್ಸಿಲರ್ ತನಕ್ಕೆ ಉಮೇದುವಾರರಾಗಿ ನಿಲ್ಲುವ ಅಧಿಕಾರವು ಅವರಿಗಿಲ್ಲ ಅದನ್ನೂ ಉಂಟುಮಾಡಿಕೊಡುವಂತೆ ಶಾಸನವನ್ನೇರ್ಪಡಿಸಬೇಕೆಂಬ ವಿಷಯವು ಮದರಾಸು ಶಾಸನನಿರ್ಮಾಣಸಭೆಯ ಚರ್ಚೆಗೆ ನಿನ್ನೆ ತಾನೇ ಬಂದುದರಲ್ಲಿ ಬಹುಮಂದಿ ಸಭಿಕರು ಅದಕ್ಕೆ ವಿರೋಧಿಸಿದುದರಿಂದ ಅದು ಬಿದ್ದುಹೋಯಿತು. ಆದರೆ ಸ್ತ್ರೀಯರು ಪ್ರತ್ಯೇಕ ಸಭೆಮಾಡಿ ತಮಗೆ ಕೌನ್ಸಿಲರಾಗುವ ಅಧಿಕಾರವನ್ನು ಕೊಡಬೇಕೆಂಬ ವಿಷಯದಲ್ಲಿ ತೀರ್ಮಾನಮಾಡಿದ್ದಾರೆ.

ಮ|| ಗಾಂಧಿಯವರ ಶಾಂತಪ್ರವರ್ತನವು ಕಡುಗಾವುರಕ್ತದ ಮರಾಠಾಜನರಿಗೆ ಸರಿಬೀಳುವಂತೆ ಕಾಣುವುದಿಲ್ಲ. ಪುನಾ ಪಟ್ಟಣದಲ್ಲಿ ನಿನ್ನೆತಾನೇ ಕೂಡಿದ್ದ ಒಂದುಸಭೆಯಲ್ಲಿ ಸಹಾಯನಿರಾಕರಣತತ್ವವನ್ನು ಕುರಿತು ಜಯಕರ್‌ರವರು ಉಪನ್ಯಾಸ ಮಾಡುವಾಗ್ಗೆ—ಮಹಾರಾಷ್ಟ್ರರು ಎಂದೆಂದೂ ಕೈಕಾಲು ಮುದುರಿಕೊಂಡು ಕುಳಿತಿರುವ ತತ್ವಕ್ಕೆ ಒಪ್ಪುವರಲ್ಲವೆಂದೂ, ಮತ್ತು ಬಾಯಲ್ಲಿ ಬರಿಯ ಪ್ರತಿವಾದಗಳನ್ನು ಹರಟಿಕೊಳ್ಳುವುದರಿಲ್ಲೇ ಅವರು ತೃಪ್ತಿಪಡತಕ್ಕವರಲ್ಲವೆಂದೂ, ಬರುವ ಡಿಶಂಬರ್ ಕಡೆಯವರೆಗೂ ಮ|| ಗಾಂಧಿಯವರ ಉದ್ಯಮಕ್ಕೆ ಯಾರೂ ಬಂಧಕರವಾಗಿ ಪ್ರವರ್ತಿಸುವುದಿಲ್ಲವೆಂದೂ ಹೇಳಿದರು. ಇದರಿಂದ ಡಿಶಂಬರ್ ಕಡೆಯೊಳಗೆ ಗಾಂಧಿಯವರ ಸಂಕಲ್ಪದಂತೆ ಸ್ವರಾಜ್ಯ ಸಿದ್ಧಿಯಾಗದಿದ್ದರೆ ಮಹಾರಾಷ್ಟ್ರರು ಬೇರೆ ತರದ ಪೌರುಷ ಪ್ರಯತ್ನಕ್ಕೆ ತೊಡಗಬಹುದೆಂದು ಕಾಣುತ್ತದೆ.

ಮೌಲಾನಾಮಹಮ್ಮದಾಲಿ ಮೊದಲಾದ ೭ ಮಂದಿಗಳ ವಿಚಾರಣೆಯು ಕರಾಚಿಯ ಸಿಟಿ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಕಳೆದ ತಾ|| ೨೬ ರಿಂದ ಆರಂಭವಾಗಿ ನಡೆಯುತ್ತಿರುವುದು. ಸರ್ಕಾರದ ವಕೀಲರು ಫಿರ್ಯಾದಿಪಕ್ಷವಾಗಿನಿಂತು ೧೨೦, ೧೩೧, ೫೦೫ ಸೆಕ್ಷನ್ನುಗಳ ಪ್ರಕಾರ ಎಲ್ಲ ಅಪರಾಧಿಗಳ ಮೇಲೂ, ಅಲಿಸೋದರರುಗಳ ಮೇಲೆ ಪ್ರತ್ಯೇಕವಾಗಿ ೧೨೪ ಎ ೧೫೩ ಸೆಕ್ಷನ್ನುಗಳ ಪ್ರಕಾರವೂ ಕೇಸು ಮಾಡಲ್ಪಟ್ಟಿರುವುದೆಂದು ಹೇಳಿದರು. ಕೋರ್ಟಿಗೆ ಬಂದು ನೋಡುವುದಕ್ಕೆ ೫೦೦ ಮಂದಿಗಳಿಗೆ ಟಿಕೀಟು ಕೊಡಲ್ಪಟ್ಟಿರುವುದು. ಫಿರ್ಯಾದಿಪಕ್ಷದ ಸಾಕ್ಷಿಗಳ ವಿಚಾರಣೆಯು ನಡೆಯುತ್ತಿರುವುದು. ವಿಚಾರಣೆಯ ಕಾಲದಲ್ಲಿ ದಂಡಾಧಿಕಾರಿಯು ನಿಮ್ಮ ಹೆಸರುಗಳೇನೆಂದು ಅಪರಾಧಿಗಳನ್ನು ಕೇಳಲು ಒಬ್ಬರೂ ಹೇಳಲಿಲ್ಲ. ಕೋರ್ಟಿನ ಹೊರಗೂ ಒಳಗೂ ಸಾಯುಧರಾದ ಪೊಲೀಸರೂ ಸೈನಿಕರೂ ಕಾವಲಿರುತ್ತಿರುವರು. ಹೊರಗಣಿಂದ ಅನೇಕ ಖಿಲಾಪತ್ ಪ್ರಮುಖರೂ ಅಲಿಸೋದರರ ಆಪ್ತಬಾಂಧವರೂ ಕರಾಚಿಗೆ ಬಂದಿರುವರು. ನಮ್ಮ ೭ ಮಂದಿಗಳನ್ನು ಕಾರಾಗೃಹದಲ್ಲಿ ಒಂದೇ ಕೋಣೆಯಲ್ಲಿರಿಸಿದರೆ ನಾವೆಲ್ಲಾ ಆಲೋಚಿಸಿಕೊಂಡು ಸ್ಟೇಟ್‌ಮೆಂಟನ್ನು ಕೊಡಲು ಅನುಕೂಲವಾಗುವುದೆಂದೂ, ಇಸ್ಲಾಂ ಧರ್ಮಶಾಸ್ತ್ರ ಪಂಡಿತರಾದ ಕರಾಚಿಯ ಅಬ್ದುಲ್‌ಬಾರಿಯವರನ್ನೂ ಇನ್ನು ಕೆಲವುಲೇಮಾಗಳನ್ನೂ ನಾವು ನೋಡಬೇಕೆಂದೂ ಮಹಮ್ಮದಾಲಿಯವರು ಕೋರ್ಟಿಗೆ ಹೇಳಿಕೊಂಡರು. ನೀವೆಲ್ಲರೂ ೧ ಕಡೆ ಸೇರಿರುವುದಕ್ಕೆ ದಿನಕ್ಕೆ ೨ ಗಂಟೆ ಹೊತ್ತು ಅವಕಾಶ ಕೊಡುತ್ತಿರುವಂತೆ ಕಾರಾಗೃಹಾಧಿಕಾರಿಯು ಹೇಳುತ್ತಾರಲ್ಲಾ ಎಂದು ದಂಡಾಧಿಕಾರಿಯು ಹೇಳಲು, ಅಷ್ಟುಕಾಲವು ಸಾಕಾಗುವುದಿಲ್ಲವೆಂದು ಮಹಮ್ಮದಾಲಿಯವರು ಹೇಳಲು, ಸೂಪರಿಂಟೆಂಡೆಂಟರಿಗೆ ತಿಳಿಯಿಸಿಕೊಳ್ಳಿರೆಂದು ಮೇಜಿಸ್ಟ್ರೇಟರು ಉತ್ತರಕೊಟ್ಟರು. ನಾವು ನಮ್ಮ ವಿಚಾರಣಕರ್ತರ ಮೂಲಕವೇ ಹೇಳಿಕೊಳ್ಳುವುದು ನ್ಯಾಯವೆಂದು ಆಲಿಯವರು ಹೇಳಲು, ಹಾಗಲ್ಲವೆಂದು ಕೋರ್ಟಿನವರು ಪ್ರತ್ಯುತ್ತರ ಕೊಟ್ಟರು. ತಾ|| ೨೮ ರಲ್ಲಿ ಫಿರ್ಯಾದಿ ಪಕ್ಷದ ಸಾಕ್ಷಿಗಳ ವಾಜ್ಮೂಲವೆಲ್ಲಾ ಮುಗಿದ ಬಳಿಕ ಕೋರ್ಟಿನವರು ಅಪರಾಧಿಗಳನ್ನು ಕುರಿತು ಫಿರ್ಯಾದಿಗಳ ವಾದವನ್ನು ನೀವು ಖಂಡಿಸುವಿರಾ? ಎಂದು ಕೇಳಲು, ಮಹಮ್ಮದಾಲಯವರು—ನಾನು ಅಸಹಾಯವಾದಿಯಾದುದರಿಂದ ಈ ವಿಚಾರಣೆಯಲ್ಲಿ ನಾವು ಸಂಬಂಧವಿಟ್ಟುಕೊಳ್ಳುವುದಿಲ್ಲ. ನಿಜಸ್ಥಿತಿಯನ್ನು ಜನರು ತಿಳಿದುಕೊಳ್ಳಲಿಕ್ಕಾಗಿ ಲಿಖಿತಮೂಲಕವಾದ ಸ್ಟೇಟುಮೆಂಟೊಂದನ್ನು ಮಾತ್ರ ಕೊಡುತ್ತೇವೆಂದು ಹೇಳಿಕೊಟ್ಟರು.

ವಿದೇಶದ ವೃತ್ತಾಂತಗಳು.

ಜರ್ಮನಿಯವರು ೭೪ ಕೋಟಿಯೂ ೫ ಲಕ್ಷ ಭಂಗಾರದ ಮಾರ್ಕುಗಳನ್ನು ನಷ್ಟಪರಿಹಾರಕ್ಕಾಗಿ ಮಿತ್ರಮಂಡಲಿಯವರಿಗೆ ಕೊಟ್ಟಿದ್ದಾರೆ.

ಮೆಸಪೊಟೇಮಿಯಾವಿನಲ್ಲಿ ತುರುಕರ ಪಿತೂರಿಯಿಂದ ಕುರ್ದುಜನರು ತಿರುಗಿಬಿದ್ದಿದ್ದರು. ಇಂಗ್ಲೀಷ್ ಸೈನ್ಯವು ಅವರನ್ನೆಲ್ಲಾ ಅಣಗಿಸಿತು.

ಸಂಧಿಪ್ರಕಾರ ಜರ್ಮನರು ಸೇನಾಸಂಖ್ಯೆಯನ್ನು ಹೊರಗೆ ಕಡಿಮೆಮಾಡುತ್ತಿದ್ದರೂ ಒಳಗೊಳಗೆ ೮ ಲಕ್ಷದವರೆಗೆ ಸೇನೆಯನ್ನು ಕೂಡಿಸುತ್ತಿರುವರಂತೆ.

ಪಾರ್ಲಿಮೆಂಟಿನಲ್ಲಿ ಇದುವರೆಗೆ ಒಬ್ಬ ಸ್ತ್ರೀಯು ಮೆಂಬರಾಗಿದ್ದಳು. ಈಗ ಮಿಂಟ್ರಿಂಗ್‌ಹಾಮ್ ಪತ್ನಿಯವರು ಲಿಂಕನ್ ಶೈರ್ ಸೌತ್‌ಡಿವಿಜನ್ನಿನಿಂದ ಉಮೇದುವಾರಳಾಗಿ ನಿಂತು ತನ್ನ ಜತೆಯಲ್ಲಿ ಉಮೇದುವಾರರಾಗಿದ್ದ ಇನ್ನಿಬ್ಬರು ಗಂಡುಸರಿಗಿಂತಲೂ ಹೆಚ್ಚಾಗಿ ಓಟುಪಡೆದು ೨ನೆ ಸ್ತ್ರೀ ಭಿಕಳಾಗಿ ಏರ್ಪಟ್ಟರು.

ಗ್ರೀಕು ಸರ್ಕಾರದ ಪ್ರತಿನಿಧಿಯಾದ ಗೋನಾರಿಸ್‌ರವರು ಇಂಗ್ಲಂಡಿಗೆ ಹೋಗಿ ತುರುಕರಿಗೂ ಗ್ರೀಕರಿಗೂ ಯಾವನಿಬಂಧನೆಯ ಮೇಲೆ ಸಂಧಿ ಕುದುರಬಹುದೆಂಬ ವಿಷಯವಾಗಿ ಮುಖ್ಯಮಂತ್ರಿಯವರೊಡನೆಯೂ ಲಾರ್ಡ್ ಕರ್ಜನ್‌ರವರೊಡನೆಯೂ ಮಾತನಾಡುವವರಾಗಿದ್ದಾರಂತೆ. ಅಂಗೋರಾ ತುರ್ಕಿ ಸೈನ್ಯಕ್ಕೆ ಯೂರೋಪುಖಂಡದ ಮುಖ್ಯದೇಶಗಳವರು ಯುದ್ಧಸಾಮಗ್ರಿಯನ್ನು ವಿಶೇಷವಾಗಿ ಒದಗಿಸಿಕೊಟ್ಟುದರಿಂದಲೇ ತಮ್ಮ ಸೈನ್ಯವು ಹಿಂದೆಗೆಯಬೇಕಾಯಿತೆಂದು ಗ್ರೀಕ್ ಸೈನ್ಯಾಧಿಕಾರಿಗಳು ಹೇಳುತ್ತಿದ್ದಾರೆ.

ಲಂಡನ್ನಿಗೆ ಹೋಗಿರುವ ವಾಲಿಖಾನ್ ಎಂಬುವರು ಲಾರ್ಡ್ ಕರ್ಜನ್‌ರವರನ್ನು ಕಾಣಿಸಿಕೊಂಡು ತಾನು ಅಫ್ಘನ್ ಪ್ರತಿನಿಧಿಯೆಂದು ಹೇಳಲು, ಅದಕ್ಕೆ ಕರ್ಜನ್‌ರವರು, ಅಫ್ಘಾನಿಸ್ಥಾನದ ವಿಷಯವನ್ನು ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರು ಗಮನಿಸುತ್ತಿದ್ದಾರೆ. ಅಫ್ಘನ್ ಪ್ರಭುತ್ವದವರು ಇಂಡ್ಯಾ ಪ್ರಭುತ್ವದೊಡನೆ ಸಂಧಿಮಾಡಿಕೊಳ್ಳದೆ ಎಷ್ಟೋ ಅಭ್ಯಂತರಗಳನ್ನು ಕಲ್ಪಿಸುತ್ತಿದ್ದಾರೆ. ಸಂಧಿಯು ನಮ್ಮನಿಮ್ಮಲ್ಲಿ ಕುದುರುವವರೆಗೂ ಲಂಡನ್ನಿನಲ್ಲಿ ನಿಮ್ಮನ್ನು ಅಫ್ಘನ್ ಪ್ರತಿನಿಧಿಯಾಗಿ ನಾವು ಪರಿಗಣಿಸುವುದಕ್ಕೆ ಅವಕಾಶವಿಲ್ಲ ಎಂದು ಪ್ರತ್ಯುತ್ತರ ಕೊಟ್ಟರು.

ಅಮೇರಿಕಾದವರು ಮಿತ್ರಮಂಡಲಿಯವರೊಡನೆ ಯುದ್ಧಕಾಲದಲ್ಲಿ ಸೇರಿದ್ದರೂ ಸಂಧಿಪತ್ರಕ್ಕೆ ಅವರು ರುಜುಮಾಡಲಿಲ್ಲ. ಮತ್ತು ನಾನಾರಾಷ್ಟ್ರಸಂಘದಲ್ಲೂ ಅವರು ಸೇರಿಲ್ಲ. ಈಗ ಅವರು ಜರ್ಮನಿ, ಆಸ್ಟ್ರಿಯಾ, ಹಂಗೇರಿ ದೇಶಗಳವರೊಡನೆ ಪ್ರತ್ಯೇಕ ಸಂಧಿಯನ್ನು ಮಾಡಿಕೊಂಡಿರುತ್ತಾರೆ. ಇದರಿಂದ ಅಮೇರಿಕಾದವರ ಶತ್ರುಕೋಟಿಯಿಂದ ಜರ್ಮನಿ ಮೊದಲಾದ ಆ ಮೂರು ದೇಶಗಳೂ ತಪ್ಪಿದಂತಾದುವು. ಏತೇನ ಯುದ್ಧಕಾಲದಲ್ಲಿ ಜರ್ಮನಿಯ ರೈನ್ ನದಿಯ ಹತ್ತಿರ ನಿಲ್ಲಿಸಿದ್ದ ಅಮೇರಿಕನ್ ಸೈನ್ಯವನ್ನು ಅವರು ಹಿಂದಕ್ಕೆ ಕರೆಯಿಸಿಕೊಳ್ಳಬಹುದು, ಆದರೆ ಯುದ್ಧಕಾಲದಲ್ಲಿ ಜರ್ಮನಿಯಿಂದ ಕಿತ್ತುಕೊಂಡ ದೇಶದಲ್ಲಿ ಅಮೇರಿಕಾದವರಿಗೆ ಇರುವ ಭಾಗದಹಕ್ಕನ್ನು ಮಾತ್ರ ಅವರು ಬಿಟ್ಟುಕೊಡುವಂತೆ ತೋರುವುದಿಲ್ಲ. ಈ ವಿಷಯವು ಹೇಗೆ ಪರಿಷ್ಕಾರವಾಗುವುದೋ ನೋಡಬೇಕು.

ಆಯುರ್ದಾಯವನ್ನು ವೃದ್ಧಿಪಡಿಸಲಿಕ್ಕಾಗಿ ಅಮೇರಿಕಾದ ವೈದ್ಯರೂ ಶಾಸ್ತ್ರಜ್ಞರೂ ಪ್ರಯತ್ನಪಡುತ್ತಿದ್ದಾರೆ. ಇದಕ್ಕಾಗಿ ಒಂದು ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. ಅದಕ್ಕೆ ಟಾಫ್ಟ್‌ರವರು ಅಧ್ಯಕ್ಷರು. ಅದರಲ್ಲಿ ೧೦೦ ಮಂದಿ ಶಾಸ್ತ್ರಜ್ಞರೂ ೫೦೦ ಮಂದಿ ವೈದ್ಯರೂ ಸೇರಿ ಕೆಲಸ ಮಾಡುತ್ತಿರುವರು. ಅಮೇರಿಕಾದ ಒಂದು ದೊಡ್ಡ ಭೀಮಾಕಂಪೆನಿಯು ಇದನ್ನೇರ್ಪಡಿಸಿದೆ. ತಮ್ಮ ಕಂಪೆನಿಯಲ್ಲಿ ಜೀವವಿಮೆ ಮಾಡಿಸಿಕೊಂಡವರ ಆಯುರ್ದಾಯವನ್ನು ವೃದ್ಧಿಪಡಿಸಬೇಕೆಂಬುದೇ ಅವರ ಉದ್ದೇಶ. ಅವರ ಸಭಿಕರು ಇದಕ್ಕಾಗಿ ವರ್ಷಕ್ಕೆ ೪೫ ರೂ. ಗಳ ಚಂದಾವನ್ನು ಕೊಡಬೇಕು. ಕಂಪೆನಿಯವರು ಆ ಸಭಿಕರಿಗೆ ವೈದ್ಯಸಹಾಯವನ್ನೇನೂ ಮಾಡಿಸುವುದಿಲ್ಲ. ಆದರೆ ಅವರ ದೇಹಸ್ಥಿತಿಯನ್ನು ಪರೀಕ್ಷೆಮಾಡಿಸಿ, ಆರೋಗ್ಯವಿಷಯದಲ್ಲಿ ವೈದ್ಯರಿಂದ ಸಲಹೆಕೊಡಿಸುವರು. ಮೊದಲು ದೇಹಪರೀಕ್ಷೆಮಾಡಿಸುವಾಗ ಅವರ ಚರಿತ್ರೆ ಅವರ ವಂಶಚರಿತ್ರೆ ಆರೋಗ್ಯ ಮೊದಲಾದುವನ್ನೆಲ್ಲಾ ಕೇಳಿ ಸ್ಪಷ್ಟವಾಗಿ ಬರೆದುಕೊಳ್ಳುವರು. X ರೇ ಸಹಾಯದಿಂದ ಸರ್ವಾಂಗವನ್ನೂ ಪರೀಕ್ಷೆಮಾಡಿಸುವರು. ಮುಂದೆ ಅವರು ಅನುಸರಿಸಬೇಕಾದ ಆಹಾರ ವ್ಯವಹಾರ ವಿಧಾನಗಳನ್ನು ಸೂಚಿಸಿಕೊಡುವರು. ಅದರಂತೆ ಸಭಿಕರು ನಡೆದುಕೊಂಡು ೬ ತಿಂಗಳಿಗೊಂದಾವೃತ್ತಿ ಕಂಪೆನಿಯ ವೈದ್ಯರ ಆರೋಗ್ಯಪರೀಕ್ಷೆಗೆ ಒಳಪಡಬೇಕು. ಸಾಂಕ್ರಾಮಿಕ ವ್ಯಾಧಿಗಳು ಉಂಟಾದಾಗ ಕಂಪೆನಿಯವರು ಕೊಟ್ಟ ಸೂಚನೆಯಂತೆ ನಡೆದುಕೊಳ್ಳಬೇಕು. ಮನುಷ್ಯರ ದೇಹದ ತೂಕದಮೇಲೆ ಅವರ ದೇಹಾರೋಗ್ಯಾನಾರೋಗ್ಯ ಮತ್ತು ಆಯುರ್ದಾಯಗಳನ್ನು ಗೊತ್ತುಮಾಡಲು ಅವಕಾಶವಿರುತ್ತದೆ. ಮಧ್ಯವಯಸ್ಸಿನವರು ತಾವು ಇರಬೇಕಾದ ತೂಕಕ್ಕಿಂತಲೂ ಹೆಚ್ಚು ತೂಕವುಳ್ಳವರಾಗಿರುವವರೇ ಹೆಚ್ಚು. ಹೆಚ್ಚು ತೂಕವುಳ್ಳವರು ಮುಪ್ಪಿನಕಾಲ ಬರುವವರೆಗೂ ನಾವು ಬದುಕಿರುವುದಿಲ್ಲವೆಂಬಂಶವನ್ನು ಅವರು ತಿಳಿಯರು. ೩೦ ವರ್ಷ ತುಂಬಿದವರು ತಮ್ಮ ದೇಹದ ತೂಕದ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕು. ೫೦ ವರ್ಷ ತುಂಬಿದವರು ತಾವು ನ್ಯಾಯವಾಗಿ ಇರಬೇಕಾದ ತೂಕಕ್ಕಿಂತ ೧೦ ಪೌಂಡು ತೂಕ ಹೆಚ್ಚಾಗಿರುವವರಾದರೆ ಅವರು ದೀರ್ಘಕಾಲ ಜೀವಿಸಿರಬೇಕಾದುದರಲ್ಲಿ $\frac{1}{8}$ ಭಾಗದಷ್ಟನ್ನು ತಗ್ಗಿಸಿಕೊಂಡವರಾಗುವರು. ಈ ವಿಧಾನಗಳನ್ನೆಲ್ಲಾ ವೈದ್ಯರಮೂಲಕ ಆ ಕಂಪೆನಿಯವರು ಆಗಾಗ್ಗೆ ಪರಿಶೋಧನೆಮಾಡಿಸಿ ಸರಿಯಾದ ಆರೋಗ್ಯದಿಂದಿರುವುದಕ್ಕೆ ತಕ್ಕ ಸೂಚನೆಗಳನ್ನು ತಮ್ಮ ಸಭಿಕರಿಗೆ ಕೊಡಿಸುವುದಕ್ಕೆ ಏರ್ಪಡಿಸಿರುವರು.

ಶ್ರೀ ಕಾಶೀಸ್ಥ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನಾರೂಢ ಶ್ರೀ ೧೦೮ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸನ್ನಿಧಿಯಲ್ಲಿ.

ಶ್ರೀ ಹಿಮವತ್ಕೇದಾರ ಜಗದ್ಗುರು ಏಕೋರಾಮ ಸಿಂಹಾಸನ ಪಟ್ಟಾಧಿಕಾರ ಮಹೋತ್ಸವ ಸಮಾರಂಭವು.

(ಬರೆದು ಬಂದುದು.)

ಈ ಸಮಾರಂಭವು ಶ್ರಾವಣ ಶು|| ೧೨ ಸೋಮವಾರ ನಿಯಮಿಸಿ ಪ್ರಸಿದ್ಧಪತ್ರಿಕೆಯಲ್ಲಿ ಪ್ರಕಟಿಸಿರಲು ಹಿಮಾಲಯದಲ್ಲಿ ಅತಿವೃಷ್ಟಿಯಿಂದ ಶ್ರೀ ರಾವಲ್ ನೀಲಕಂಠಲಿಂಗ ಶಿವಾಚಾರ್ಯರ ಆಗಮನಕ್ಕೆ ಪ್ರತಿಬಂಧಕವಾದ ಪ್ರಯುಕ್ತ ಈ ಮಹಾಸಮಾರಂಭವು ಭಾದ್ರಪದ ಶು|| ೭ ಬುಧವಾರ ತಾರೀಖು ೭ಕ್ಕೆ ನಿಯಮಿಸುವಲ್ಲಿ ಬಂದಿತು. ಕಾಶೀಕ್ಷೇತ್ರಕ್ಕೆ ಶ್ರೀ ರಾವಲರವರು ಸೆಪ್ಟಂಬರ್ ತಾ|| ೫ ನೇ ಮಂಗಳವಾರ ಪ್ರಾತಃಕಾಲ ೮ ಘಂಟೆಗೆ ದಯಮಾಡಿಸಿದರು. ಶ್ರೀಗಳವರ ದರ್ಶನಂಗೈದು ಬಿಜಯಂಗೈಸಿಕೊಂಡು ಬರಬೇಕೆಂಬ ಕುತೂಹಲದಿಂದ ಮೊದಲೇ ಬಂದಿದ್ದ ಶ್ರೀ ಪಟ್ಟಚರಾಧಿಕಾರಿಗಳು, ಸಂಸ್ಥಾನದ ಸೆಕ್ರಟರಿ, ದಿವಾನ, ವ್ಯವಸ್ಥಾಪಕಮಂಡಳಿ, ದೂರದೇಶದಿಂದ ಬಂದಿದ್ದ ವೀರಶೈವ ಭಕ್ತಮಾಹೇಶ್ವರರು, ಕಾಶೀನಗರವಾಸಿಗಳಾದ ಅನೇಕ ಪ್ರಮುಖರು, ಶ್ರೀಗಳವರಂಕಂಡು ನಮಸ್ಕರಿಸಿ ಸಿಬ್ಬಂದಿಯೊಡನೆ ಮ್ಯಾನೆಯಲ್ಲಿ ಶ್ರೀಗಳನ್ನು ಬಿಜಯಂಗೈಸಿಕೊಂಡು ೯|| ಘಂಟೆಗೆ ಶ್ರೀಮಜ್ಜಗದ್ಗುರು ಪಂಚಾಚಾರ್ಯಾ ವಿಜಯಂತೇತರಾಮ್, ಎಂಬ ಜಯಘೋಷದೊಡನೆ ಸಂಸ್ಥಾನಮಠ ಜಂಗಮವಾಡಿಗೆ ಬಂದರು. ರಾವಲ್ಲರು ಜಗದ್ಗುರು ಮೂಲಪೀಠದ ದರ್ಶನಂಗೈದು ಸದ್ಯಃ ಸಿಂಹಾಸನದಲ್ಲಿ ವಿರಾಜಿಸುವ ಭಗವತ್ಪಾದರ ದರ್ಶನಂಗೈದು ತಮ್ಮಸಲುವಾಗಿ ಏರ್ಪಡಿಸಿದ ಭವ್ಯಮಂದಿರಕ್ಕೆ ತೆರಳಿದರು. ಅನಂತರ ಸರ್ವರೂ ಅಪ್ಪಣೆಯಂಪಡೆದು ಸ್ವಸ್ಥಾನಗಳಿಗೆ ತೆರಳಿದರು. ಬುಧವಾರ ಪ್ರಾತಃಕಾಲ ೮ ಘಂಟೆಗೆ ಅನೇಕ ಮಂಗಲವಾದ್ಯಗಳಿಂದಲೂ ಸುಶ್ರಾವ್ಯವೇದಧ್ವನಿಯಿಂದಲೂ, ಗುರುಕುಲವು ಕಿಕ್ಕಿರಿದಿದ್ದಿತು, ರಾವಲರವರ ಮಂಗಲಸ್ನಾನ ಪೂಜಾಕಾರ್ಯವಾದ ಕೂಡಲೇ ೯ ಘಂಟೆಗೆ ಪೂರ್ವಾಚಾರ್ಯಸ್ಥಾಪಿತ ಜಗನ್ನಿಯಾಮಕನಾದ ಶ್ರೀ ಕೇದಾರೇಶ್ವರನ ರುದ್ರಾಭಿಷೇಕವು ಜರುಗಿಸಲ್ಪಟ್ಟಿತು, ನಂತರ ಜಗದ್ಗುರು ವಿಶ್ವಾರಾಧ್ಯ ಮೂಲಪೀಠಕ್ಕೆ ರುದ್ರಾಭಿಷೇಕವಾಯಿತು. ಹಾಗೆಯೇ ಪೂರ್ವಾಚಾರ್ಯಸ್ಥಾಪಿತ ಶ್ರೀ ಸೋಮೇಶ್ವರ, ಸಿದ್ಧೇಶ್ವರ, ಮಲ್ಲಿಕಾರ್ಜುನ, ವಿಶ್ವನಾಥಲಿಂಗಗಳಿಗೂ ಪೂಜೆಯಾದನಂತರ ಶಾಸ್ತ್ರೋಕ್ತಪ್ರಕಾರ, ವ. ಸಾಂಪ್ರದಾಯಾನುಸಾರ ಪಟ್ಟಾಧಿಕಾರಕ್ಕೆ ಮೂಲಪೀಠದಲ್ಲಿಯೇ ಪ್ರಾರಂಭವಾಯಿತು, ೫ ಘಂಟೆಯವರೆಗೆ ಪೂಜಾಕಾರ್ಯವು ನಡೆಯಿತು. ನಂತರ ಸರ್ವೌಷಧಿ ಸಮೇತ ಪೂಜಾದ್ರವ್ಯಗಳಿಂದ ಸಿದ್ಧಮಾಗಿದ್ದ ಸುವರ್ಣರಜತಾದಿ ಕಲಶಗಳಿಂದ ಶ್ರೀಗಳವರಿಗೆ ಅಭಿಷೇಕವು ಮಾಡಿಸಲ್ಪಟ್ಟಿತು. ನಂತರ ಜಗದ್ಗುರುಗಳ ಪಕ್ಕದಲ್ಲಿಯೇ ಸಿದ್ಧವಾದ ಸಿಂಹಾಸನಾರೋಹಣವಂ ಮಾಡಿಸಿ, ಶ್ವೇತಛತ್ರ ಚಾಮರಾದಿಗಳಿಂದ ಗೌರವಿಸಿ ಶ್ರೀ ಕಾಶೀ ಜಗದ್ಗುರುಗಳವರು ವರದಹಸ್ತಗಳಿಂದ ಪಂಚಮುದ್ರಾದಿಗಳನ್ನಿತ್ತು ಶ್ರೀ ೧೦೮ ಏಕೋರಾಮ ಜಗದ್ಗುರು ಪಟ್ಟಧಾರಣವಂಗೈದು ಮುದ್ರೆಯನ್ನು ದಯಪಾಲಿಸಿದರು. ತತಃ ಮಂಗಲಾರತಿಯಾಗಿ ಕಾಣಿಕಾರ್ಪಣಕಾರ್ಯವು ನಡೆದಿತು. ಶ್ರೀ ಪಟ್ಟಚರಾಧಿಕಾರಿಗಳೂ, ದೇಶಿಕ ಬ್ರಹ್ಮಚಾರಿಗಳೂ, ಶಾಸ್ತ್ರಿಮಂಡಳಿಯವರೂ, ನಂತರ ಭಕ್ತಾದಿಗಳೂ ಸರ್ವರೂ ಕಾಣಿಕೆಯನ್ನರ್ಪಿಸಿದರು, ಸರ್ವರಿಗೂ ಆಶೀರ್ವಾದವನ್ನು ದಯಪಾಲಿಸಿದ ನಂತರ ಜಗದ್ಗುರು ಏಕೋರಾಮ ಶಿವಾಚಾರ್ಯ ಮಹಾರಾಜಕೀಜಯ, ಜಗದ್ಗುರು ವಿಶ್ವರಾಧ್ಯ ಶಿವಾಚಾರ್ಯ ಮಹಾರಾಜಕೀಜಯ, ಜಗದ್ಗುರು ಪಂಚಾಚಾರ್ಯ ಮಹಾರಾಜಕೀಜಯ, ಎಂಬ ಜಯಘೋಷದೊಡನೆ ಮೂಲಪೀಠ ದರ್ಶನಂಗೈದು ಜಗದ್ಗುರು ಏಕೋರಾಮ ಸಿಂಹಾಸನಾಧೀಶ್ವರ ಮಹಾಸ್ವಾಮಿಗಳವರ ಪ್ರಾಚೀನಸಮಾಧಿದರ್ಶನಂಗೈದು ಶ್ರೀ ಕೇದಾರೇಶ್ವರ ದರ್ಶನಮಾಡಿದ್ದಾಯಿತು. ನಂತರ ಉಭಯ ಶ್ರೀಗಳ ಸ್ನಾನವಾಗಿ, ಜಗದ್ಗುರೂಭಯಸ್ವಾಮಿಗಳು ಜ್ಞಾನಮಂಟಪಕ್ಕೆ ದಯಮಾಡಿಸಿದವು. ರಾತ್ರಿ ೮ ಘಂಟೆಗೆ ಮಹಾಗಣಾರಾಧನೆಯು ಜರಗಿಸಲ್ಪಟ್ಟಿತು. ನಂತರ ೪-೫ ದಿನ ಪರ್ಯಂತರ ಪೂಜೋಪದೇಶಾದಿ ಕ್ರಿಯೆಗಳು ಜರಗಿದವು. ತತಃ ಏಕಾದಶೀ ಸೋಮವಾರ ತಾ|| ೧೨ರಲ್ಲಿ ಸಾಯಂಕಾಲ ೭ ಘಂಟೆಗೆ ಜಗದ್ಗುರು ಮೂಲಪೀಠದಲ್ಲಿ ಮಹಾ ಪೂಜೆಯಾಯಿತು. ೭ ಘಂಟೆಗೆ ಕಾಶಿಯಲ್ಲಿ ಸುಪ್ರಸಿದ್ಧರಾದ ಮಹಾ ಮಹೋಪಾಧ್ಯಾಯ, ಆಚಾರ್ಯತೀರ್ಥ ರತ್ನಾದಿ ಪದವೀಧರ ಪಂಡಿತ ಮಂಡಲಿಯ ಆಗಮನವಾಯಿತು. ಅಷ್ಟರಲ್ಲಿಯೇ ಜಗದ್ಗುರೂಭಯಸ್ವಾಮಿಗಳು ಜಗದ್ಗುರು ಪಂಚಾಚಾರ್ಯ ವಿಜಯಂತೇತರಾಮ್ ಎಂಬ ಜಯಘೋಷದೊಡನೆ ದಯಮಾಡಿಸುತ್ತಿರಲು ಪಂಡಿತ ಮಂಡಲಿಯವರು ಸಮ್ಮುಖಕ್ಕೆ ಗಮಿಸಿ ಬಿಜಯಂಗೈಸಿಕೊಂಡು ಬಂದರು. ಉಭಯ ಶ್ರೀಗಳ ಸ್ವಾಮಿಗಳು ಸಿಂಹಾಸನಗಳಲ್ಲಿ ಮುಹೂರ್ತಗೊಂಡವು.

ಪೂಜ್ಯಪಾದ ಜಗದ್ಗುರುಗಳ ಅಪ್ಪಣೆಮೇರೆಗೆ ಮೊದಲೇ ಸಿದ್ಧವಾದ ತಮ್ಮತಮ್ಮ ಯೋಗ್ಯಾಸನಗಳಲ್ಲಿ ಪಂಡಿತರು ಅಲಂಕರಿಸಿದರು. ನಂತರ ಕಾಶೀ ಜಗದ್ಗುರು ಪೂಜ್ಯಪಾದರವರು ನಮ್ಮ ಜಗದ್ಗುರು ಪಂಚಪೀಠಗಳ ಪೈಕಿ ಶ್ರೀ ಹಿಮಾಲಯದಲ್ಲಿ ಜಗದ್ಗುರು ಏಕೋರಾಮ ಪೀಠವೊಂದಾಗಿದೆ. ಆ ವೈರಾಗ್ಯ ಸಿಂಹಾಸನಕ್ಕೆ ಜಗದ್ಗುರು ಪಟ್ಟಾಧಿಕಾರವನ್ನು ನಾವು ಶ್ರೀ ರಾವಲ್ ನೀಲಕಂಠಲಿಂಗ ಶಿವಾಚಾರ್ಯರಿಗೆ ದಯಪಾಲಿಸಿದ್ದೇವೆ. ಈ ಮಹೋತ್ಸವ ನಿಮಿತ್ತವಾಗಿ ನಿಮ್ಮಗಳನ್ನು ಬರಮಾಡಿಕೊಂಡದ್ದಾಯಿತೆಂದು ಅಪ್ಪಣೆಕೊಡಿಸಿ, ನಂತರ ವೇದಾಂತ ವಿಷಯದಲ್ಲಿ ಶಾಸ್ತ್ರಾರ್ಥ ಜರುಗಿಸಲು, ಅಪ್ಪಣೆಯನ್ನಿತ್ತರು. ಮೊದಲು ವೇದಾಂತದಲ್ಲಿ ಶಾಸ್ತ್ರಾರ್ಥವಾಗಿ ತತಃ ಶಕ್ತಿವಿಶಿಷ್ಟಾದ್ವೈತ ವಿಚಾರನಡೆದು ಸಿದ್ಧಾಂತಮಾಡಿದ್ದಾಯಿತು. ೮|| ಘಂಟೆಯಮೇಲೆ ವೈದಿಕಪಂಡಿತರಿಂದ ವೇದಘೋಷಮಾಡಿಸಲ್ಪಟ್ಟಿತು. ನಂತರ ಸಂಸ್ಥಾನ ಶಾಸ್ತ್ರಿಮಂಡಲಿಯವರಲ್ಲಿ ನ್ಯಾಯವ್ಯಾಕರಣಾದಿ ಶಾಸ್ತ್ರಗಳಲ್ಲಿ ಪ್ರಶ್ನೋತ್ತರಗಳು ಜರಗಿದವು. ನಂತರ ಸರ್ವರಿಗೂ ಆಶೀರ್ವಾದಪೂರ್ವಕ ಉಪಹಾರವು ಕೊಡಲ್ಪಟ್ಟಿತು. ಸರ್ವರಿಗೂ ಗಂಧ ಪುಷ್ಪಾದಿಗಳನ್ನರ್ಪಿಸಿ ೧೧ ಘಂಟೆಗೆ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ವಿದ್ವತ್ಸಭೆಯು ವಿಸರ್ಜಿಸಲ್ಪಟ್ಟಿತು. ಮಂಗಳವಾರ ಬುಧವಾರದಿನ ಜಗದ್ಗುರು ಶ್ರೀ ೧೦೮ ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸಭೆಕೂಡಿ ನ್ಯಾಯವ್ಯಾಕರಣಶಾಸ್ತ್ರಗಳಲ್ಲಿ ಶಾಸ್ತ್ರಾರ್ಥವಾಯಿತು. ಈ ಎರಡು ದಿನದ ಸಭೆಗಳಲ್ಲಿ ಗಡವಾಲ ತೆಹರಿ ಪ್ರಾಂತದ ಪಂಡಿತರಿಗೂ ಸಂಸ್ಥಾನದಲ್ಲಿರತಕ್ಕ ಪಂಡಿತರಿಗೂ ಚನ್ನಾಗಿ ವಿಚಾರನಡೆದಿತು. ನಂತರ ಹಗಲಿರುಳು ೩, ೪ ದಿನ ಅಧಿಕವೃಷ್ಟಿಯಾಗುತ್ತಿದ್ದುದರಿಂದ ೪ ದಿನ ಬಿಟ್ಟು ಸೋಮವಾರ ತಾ|| ೧೯ ನೇ ದಿನ ಜಗದ್ಗುರುಗಳವರ ಅಡ್ಡಪಲ್ಲಕ್ಕಿಯುತ್ಸವಕ್ಕೋಸ್ಕರ ಕಾಶೀ ಸಿಂಹಾಸನದಲ್ಲಿ ಪೂರ್ವದಿಂದ ನಡೆಯುತ್ತಾ ಬಂದ ಸಮಸ್ತ ಬಿರುದಾವಳಿಗನುಸಾರವಾಗಿ ಸಕಲ ವ್ಯವಸ್ಥೆಮಾಡಲ್ಪಟ್ಟು ೩ ಘಂಟೆ ಸುಮಾರಿಗೆ ಪಂಚಕಲಶ ರಾಜಗೊಂಡೆ ಮೊದಲಾದವುಗಳಿಂದ ಅಲಂಕರಿಸಲ್ಪಟ್ಟ ಬೆಳ್ಳಿಯ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಭಗವತ್ಪಾದರು ವಿರಾಜಿಸಲು ಅಡ್ಡಪಲ್ಲಕ್ಕಿಯ ಮಹೋತ್ಸವವು ಮಕರತೋರಣ, ನಂದಿಧ್ವಜ, ವ್ಯಾಸಭುಜ, ಶ್ವೇತಛತ್ರ ಹಗಲುದೀವಟಿಗೆ ಮೊದಲಾದ ೭೨ ಬಿರುದಾವಳಿಗಳೊಡನೆ ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದ ರಾಜಮಾರ್ಗದಿಂದ ಹೊರಟಿತು. ಅಡ್ಡಪಲ್ಲಕ್ಕಿಯ ಮುಂಭಾಗದಲ್ಲಿ ಸ್ವಯಂಭಕ್ತಿ ಯುಕ್ತರಾಗಿ ಬಂದ ಸ್ಮಾರ್ತಪಂಡಿತರು ವೀರಶೈವಪಂಡಿತರುಗಳ ವೇದಘೋಷವು ಒಂದೇಸಮನೇ ನಡೆದಿದ್ದವು. ಅವರ ಮುಂದೆ, ಕರ್ನಾಟಕ ತೈಲಂಗ ಮಹಾರಾಷ್ಟ್ರ ವೀರಶೈವ ಶಿಷ್ಯಮಂಡಲಿಯವರು ಜಗದ್ಗುರು ಪಂಚಾಚಾರ್ಯ ಮಹಾರಾಜಕೀಜಯ ಎಂಬ ಜಯಘೋಷದೊಡನೆ ಆನಂದದಿಂದ ಸಾಗಿದ್ದರು. ಇವರ ಮುಂದೆ ಭಂಗಾರ ಬೆಳ್ಳಿ ಚಿತ್ರ ಭಾಲ ತ್ರಿಶೂಲ ಛತ್ರ ಚಾಮರಾದಿಗಳನ್ನು ಹಿಡಿದುಕೊಂಡವರ ಪಂಕ್ತಿಯೂ, ಇವರ ಮುಂದೆ ಅಮೌಲ್ಯಾಭರಣಗಳಿಂದ ಅಲಂಕರಿಸಲ್ಪಟ್ಟ ಕುದುರೆಗಳ ಸಾಲೂ ರಾಹುತರ ಸಾಲೂ ಉತ್ಸವದ ವ್ಯವಸ್ಥೆಯ ಬಗ್ಗೆ ದಯಾಲು ಗೌರ್ನಮೆಂಟ್ ಸರಕಾರದವರಿಂದ ಕಳುಹಿಸಲ್ಪಟ್ಟ ಸಿಪಾಯಿಗಳ ಪಂಕ್ತಿಯೂ, ಒಪ್ಪುತ್ತಿದ್ದವು. ಅಲ್ಲದೆ ಜಗದ್ಗುರುಗಳ ಆನಂದಪ್ರದರ್ಶನಕ್ಕಾಗಿ ವಿಜಯನಗರದ ಮಹಾರಾಜರಿಂದ ಕಳುಹಿಸಲ್ಪಟ್ಟ ಆನೆಯು ಉತ್ಸವದ ಮುಂಭಾಗದಲ್ಲಿ ಮೆರೆಯುತ್ತಿತ್ತು ಈ ಸತ್ಸಮಯದಲ್ಲಿ ಪ್ರತ್ಯಕ್ಷದೃಷ್ಟಿಗೆ ಬೀಳುತ್ತಿರುವ ೭೨ ಬಿರುದಾವಳಿಯನ್ನು ನೋಡಿ ಪಟ್ಟಣದ ಜನರು ಸಿಂಹಾಸನದ ರಾಜಗೌರವಾದಿ ಮನ್ನಣೆಗಳನ್ನು ಹೊಗಳುತ್ತಿದ್ದರು.

ಜಗದ್ಗುರುಗಳ ಉತ್ಸವವು ಜಂಗಮವಾಡಿ ಮಹಲ್ಲಾ ಸರಹದ್ದು ಗೋಧುಲಿಯಾದಲ್ಲಿ ಹಾದು ವಿಸ್ತಾರವಾದ ದಶಾಶ್ವಮೇಧ ಮಾರ್ಗದಿಂದ ಹೊರಟಿತು. ಆ ಮಾರ್ಗದಲ್ಲಿ ಮೊದಲೇ ಭಗವತ್ಪಾದರ ದರ್ಶನಾಪೇಕ್ಷಿಗಳಾಗಿ ನಿಂತಿದ್ದ ಬಂಗಾಲ ಪ್ರಾಂತದ ಅನೇಕ ಶ್ರೀಮಂತರು ಸಪರಿವಾರರಾಗಿ ಭಗವತ್ಪಾದರು ಅಲಂಕರಿಸಿದ್ದ ಪಲ್ಲಕ್ಕಿಯಮೇಲೆ ಪುಷ್ಪವೃಷ್ಟಿಯಂಗೈದರು. ನಂತರ ಪಾಪೌಘವಿಧ್ವಂಸಿನಿಯಾದ ಗಂಗಾತೀರಕ್ಕೆ ಉತ್ಸವವು ತಲ್ಪಲಾಗಿ ಜಗದ್ಗುರುಗಳು ಪಲ್ಲಕ್ಕಿಯಿಂದಿಳಿದು ಗಂಗಾತರಂಗಗಳಿಂದ ಪವಿತ್ರೀಕೃತಮಾದ ಶಿಲೆಯಲ್ಲಿ ಸಿದ್ಧಗೊಳಿಸಿದ ಶ್ರೀಸ್ವಾಸನದಲ್ಲಿ ವಿರಾಜಿಸಿದರು. ಶ್ರೀ ಜಗದ್ಗುರು ಏಕೋರಾಮಾರಾಧ್ಯರ ವ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪಾದುಕೆಗಳನ್ನು ಷೋಡಶೋಪಚಾರದಿಂದ ಪೂಜೆಯಂಗೈದು ಮಂಗಳವನ್ನಾಚರಿಸಿ ದಕ್ಷಿಣವನ್ನು ಹಂಚಿಸಿ ಪುನಃ ಮೊದಲಿನಂತೆ ಸ್ವಸ್ಥಾನವನ್ನಲಂಕರಿಸಿದರು. ಗಂಗಾತೀರದಿಂದ ಉತ್ಸವವು ಹೊರಟು ೭ ಘಂಟೆಗೆ ಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನಕ್ಕೆ ಬಂದು ತಲ್ಪಿತು. ಈ ಪ್ರಕಾರ ಯಾವತ್ತು ಕಾರ್ಯಗಳು ನಿರ್ವಿಘ್ನತೆಯಿಂದ ಜರಗಿದುವು.

ಮಾಪಿಳ್ಳೆಗಳ ದಂಗೆ.

ವರಿಯಂಕುನ್ನತ್‌ಹಾಜಿಯು ಏರ್ನಾಡು ಉಲವನಾಡು ತಾಲ್ಲೂಕುಗಳಲ್ಲಿ ಖಿಲಾಫತ್ ಪ್ರಭುತ್ವವನ್ನು ಪ್ರಕಟಿಸಿದುದನ್ನು ಕಂಡು ಸೀತಿಕೋಯಿಲ್ ಎಂಬಾತನು ತಾನು ಒಬ್ಬ ಗೌರ್ನರೆಂದು ಹೇಳಿಕೊಂಡು ಖಿಲಾಫತ್ ಪ್ರಭುತ್ವವನ್ನು ಸಾರಿರುವುದಲ್ಲದೆ, ದೇಶವು ತಮ್ಮ ಸ್ವಾಧೀನವಾಗಿರುವುದೆಂತಲೂ ಇನ್ನು ಯಾರೂ ಊರು ಕೇರಿಗಳನ್ನು ದೋಚಿಕೊಳ್ಳಬಾರದೆಂತಲೂ ತನ್ನ ದಂಡಿಗೆ ಸಾರಿಸಿದ್ದಾನೆ. ಅದನ್ನು ಮೀರಿ ಮೂವರು ನಡೆದುದಕ್ಕಾಗಿ ಅವರನ್ನು ವಿಚಾರಿಸಿ ಶಿಕ್ಷಿಸಿದನು. ಎಂದರೆ ತುಪಾಕಿಯಿಂದ ಅವರನ್ನು ಸುಟ್ಟುಬಿಡುವಂತೆ ಅಪ್ಪಣೆ ಮಾಡಿದನು. ಆದರೆ ಹುಸಿಮದ್ದನ್ನು ಹಾಕಿ ತುಪಾಕಿಯನ್ನು ಅವರಮೇಲೆ ಹಾರಿಸುವಂತೆ ರಹಸ್ಯವಾಗಿ ಹೇಳಿಕೊಟ್ಟಿದ್ದನು. ಆ ತುಪಾಕಿಗಳು ತಮ್ಮ ಮೇಲೆ ಪ್ರಯೋಗಿಸಲ್ಪಟ್ಟ ಕೂಡಲೇ ಆ ಅಪರಾಧಿಗಳು ಭಯಭ್ರಾಂತರಾಗಿ ಬಿದ್ದು ಮೂರ್ಛಿತರಾದರು. ಎದ್ದಬಳಿಕ ಅವರ ದೇಹದಮೇಲೆ ಗುಂಡಿನ ಗಾಯಗಳೇ ಇರಲಿಲ್ಲ. ಅದು ತನ್ನ ಮಹಿಮೆಯೆಂದು ಆ ಮಾಪಿಳ್ಳೆನಾಯಕನು ಪ್ರಗಲ್ಭವನ್ನು ಕೊಚ್ಚಿಕೊಂಡುದಲ್ಲದೆ, ಇದರಂತೆಯೇ ಇಂಗ್ಲೀಷರು ತನ್ನ ಸೈನಿಕರಮೇಲೆ ಹಾರಿಸುವ ಗುಂಡುಗಳೂ ಕೂಡ ತಗಲುವುದಿಲ್ಲವೆಂತಲೂ, ಫಿರಂಗಿಗಳು ಹಾರುವುದೇ ಇಲ್ಲವೆಂತಲೂ ಹೇಳಿ ತನ್ನ ಜನರನ್ನು ಮೋಸಗೊಳಿಸುತ್ತಿರುವನು.

ಮಾಪಿಳ್ಳೆಗಳ ಗುಂಪುಗಳು ಅಲ್ಲಲ್ಲಿ ಅಡಗಿಕೊಂಡಿದ್ದು ಸೈನಿಕರಮೇಲೆ ಬೀಳುವುದೂ ಹಳ್ಳಿಗಳಿಗೆ ನುಗ್ಗಿ ಧನಿಕರ ಮನೆಯ ನಗನಾಣ್ಯಗಳನ್ನು ದೋಚಿಕೊಳ್ಳುವುದೂ ದೇವಾಲಯಗಳನ್ನು ಭ್ರಷ್ಟಗೊಳಿಸಿ ದೋಚುವುದೂ ಅಲ್ಲಲ್ಲಿ ಸೈನಿಕರಿಗೆ ಸಿಕ್ಕಿದ ದಂಗೆಗಾರರನ್ನು ಸೆರೆಹಿಡಿದು ವಿಚಾರಣೆಗೆ ಒಳಪಡಿಸುತ್ತಿರುವುದೂ, ಸ್ಪೆಷಲ್ ಮ್ಯಾಜಿಸ್ಟ್ರೇಟರ ವಿಚಾರಣೆಗಳೂ ದಂಡನೆಗಳೂ ಇವೆಲ್ಲಾ ನಡೆಯುತ್ತಲೇ ಇವೆ. ನಿರ್ಗತಿಕರಾಗಿ ಹೋಗಿರುವ ಪ್ರಜೆಗಳ ಸಹಾಯಕ್ಕಾಗಿ ದೇಶೀಯರ ಸಹಾಯವನ್ನು ಸರ್ಕಾರದವರು ಕೋರಿದ್ದಾರೆ. ಅನೇಕರು ಸಹಾಯಮಾಡುತ್ತಿದ್ದಾರೆ. ಈಗ ನಡೆಯುತ್ತಿರುವ ಕೋರ್ಟಿನ ವಿಚಾರಣೆಯಲ್ಲಿ ಸಾಕ್ಷಿಗಳ ಮುಖದಿಂದ ಬರುತ್ತಿರುವ ಸಂಗತಿಗಳು ಮಲಬಾರಿನ ಮಾಪಿಳ್ಳೆಗಳ ಘೋರಕೃತ್ಯವನ್ನೆಲ್ಲಾ ವಿಶದಪಡಿಸುತ್ತಲಿವೆ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಕೈಹಿಡಿದು ತುಳಿಸಿದರು.

ಸ್ವಾಮಿ,

ನಾನು ಡಾಕ್ಟರ್ ಟಿ. ಎಸ್. ನಂಜಪ್ಪನವರ ಬಾಲ್ಯಸ್ನೇಹಿತ. ಅವರಷ್ಟು ಉದಾರಮತಿಗಳೂ ಸರಳಹೃದಯರೂ ಸಾಧುಸ್ವಭಾವದವರೂ ಆದ ಜನರು ದೇಶಮಧ್ಯದಲ್ಲಿ ಬಹಳ ವಿರಳ. ಕೆಲವರು ಕುತಂತ್ರಗಾರರು ನಿನ್ನೆ ನಡೆದ ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲರ್ ಎಲಕ್ಷನ್ ಕಾಲದಲ್ಲಿ ಡಾಕ್ಟರವರ ಒಳಹೊಕ್ಕು ತಾವುಗಳೆಲ್ಲಾ ಓಟುಕೊಟ್ಟು ನಿಮಗೆ ಸಹಾಯ ಮಾಡುತ್ತೇವೆಂದು ಬರವಸೆಕೊಟ್ಟು ಅವರಿಂದ ಪ್ರಜಾಮಿತ್ರ ಮಂಡಲಿ ಮೆಂಬರುತನಕ್ಕೆ ರಾಜೀನಾಮೆ ಕೊಡುವಂತೆ ಮಾಡಿಸಿದರು. ಅಷ್ಟು ಮಾಡಬೇಕೆನ್ನುವದೇ ಇವರ ಉದ್ದೇಶವಾಗಿತ್ತಲ್ಲದೆ ಡಾ|| ನಂಜಪ್ಪನವರನ್ನು ಮ್ಯು|| ಕೌನ್ಸಿಲರನ್ನಾಗಿ ಮಾಡಬೇಕೆಂಬುದೇನೂ ಅವರ ಕಲ್ಮಷಹೃದಯದಲ್ಲಿರಲಿಲ್ಲ. ಇವರಿಗೆ ಅವರು ಕೌನ್ಸಿಲರಾದರೆಷ್ಟು ? ಹೋದರೆಷ್ಟು ? ಮೆಡಿಕಲ್ ಅನುಭವವನ್ನು ಮ್ಯುನಿಸಿಪಾಲಿಟಿಯಲ್ಲಿ ವಿನಿಯೋಗಿಸಿ ದೇಶಸೇವೆ ಮಾಡಬೇಕೆಂಬ ಕುತೂಹಲವು ಡಾಕ್ಟರ ಮನಸ್ಸಿನಲ್ಲಿ ಬಹಳವಾಗಿದ್ದರೂ ಇರಬಹುದು. ಆದರೇನು ? ಡಾಕ್ಟರು ನಂಬಿ ಮೋಸಹೋದರು. ತಮ್ಮ ಆಪ್ತವೇಷಧಾರಿಗಳು ಕೈಹಿಡಿದು ತುಳಿಸಿದರೆಂಬುದನ್ನು ಡಾಕ್ಟರು ಈಗಲಾದರೂ ತಿಳಿದುಕೊಂಡಿದ್ದಾರು.

ಹಳೆಯ ಮಿತ್ರ.

ಮೊಹರಂ ೧೦ನೆ ದಿನದ ತಮಾಷೆ.

ಸ್ವಾಮೀ,

ಈ ವರ್ಷದ ಮೊಹರಂ ಹಬ್ಬದಲ್ಲಿ ಯಾರೋ ಕೆಲವುಜನಗಳು ಮೈಸೂರ್ ಟವನ್ನಿನಲ್ಲಿ ಹಿಂದೂಮುಸಲ್ಮಾನರಿಗೆ ಜಗಳ ತಂದುಹಾಕಬೇಕೆಂದೂ ಸರ್ಕಾರಕ್ಕೆ ಮುಸಲ್ಮಾನರಮೇಲೆ ಅಪನಂಬಿಕೆ ಹುಟ್ಟಿಸಬೇಕೆಂದೂ ಅವರನ್ನು ಪುಂಡುಜನರೆನ್ನಿಸಬೇಕೆಂದೂ ಹಿಂದೂಜನಗಳಿಗೆ ಎಚ್ಚರಿಸುತ್ತಾ ಮುಸಲ್ಮಾನರಿಗೆ ಬೋಧಿಸುತ್ತಾ. ಆ ೧೦ನೆ ದಿನದಲ್ಲಿ ಮುಸಲ್ಮಾನರು ಮನೆಮನೆಗೆ ನುಗ್ಗಿ ಲೂಟಿಮಾಡುತ್ತಾರೆಂದು ಸುಳ್ಳುಸುದ್ದಿ ಹುಟ್ಟಿಸಿ ಜನರಲ್ಲಿ ಗಾಬರಿಹುಟ್ಟಿಸಿದರು.

ಆದರೆ ದೂರಯೋಚನೆ ಮಾಡಬಲ್ಲ ಹಿಂದೂ ಮುಸಲ್ಮಾನ್ ಜನರುಗಳು ಇದು ಯಾರೋ ಹೊಟ್ಟೆಕಿಚ್ಚಿನಿಂದ ಹುಟ್ಟಿಸಿದ ನಿರಾಧಾರವಾದ ಪೊಳ್ಳುಸುದ್ದಿಯೆಂದು ತಿಳಿದು ಮಾಮೂಲಿನಂತೆ ಮೊಹರಂಹಬ್ಬ ನಡೆಯಿಸಿದರು. ಇದನ್ನು ಪೋಲೀಸ್ ಆಫೀಸರುಗಳು ತಿಳಿದುಕೊಳ್ಳಲಾರದೆ ಸಂಗೀತಕ್ಕೆ ತಾಳಹಾಕಿದಂತೆ ಆ ಕಾಲದಲ್ಲಿ ಮಾಮೂಲಿಗಿಂತ ಜಾಸ್ತಿ ಪೋಲೀಸು ಸಿಬ್ಬಂದಿಯನ್ನೂ ಬಾರ್‌ಸಿಪಾಯಿಗಳನ್ನೂ ಬಂದೂಕು ತೋಟಾಗಳನ್ನೂ ಸಿದ್ಧಪಡಿಸಿ ಬಂದೋಬಸ್ತು ಮಾಡಿಸಿ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರು ಖುದ್ದು ದಯಮಾಡಿಸಿ ಆಗತಕ್ಕ ಲೂಟಿಯನ್ನು ನಿಲ್ಲಿಸಿದಹಾಗೆ ತೋರ್ಪಡಿಸಿರುತ್ತಾರೆ.

ಹಿಂದೆ ಈ ಊರಿನಲ್ಲಿ ತಿಲಕರ ಪುಣ್ಯದಿನ ಮಾಡಿದ ದಿವಸ ಕೆಲವು ಮುಖಂಡ ಜನಗಳು ಯಾವದೋ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ತಿಲಕರ ಉತ್ಸವವೇಷ ಧುಸಿಕೊಂಡು ಮೆರವಣಿಗೆ ಮಾಡಿದರೆ ಹಿಂದೂಸ್ಥಾನದಲ್ಲಿ ಮುಸಲ್ಮಾನರು ಗಾಂಧಿಯವರ ಉತ್ಸವಕ್ಕೆ ಸೇರಿದಹಾಗೆ ಇಲ್ಲಿಯೂ ತಿಲಕರ ಉತ್ಸವಕ್ಕೆ ಸೇರುತ್ತಾರೆಂದೂ ಪೋಲೀಸಿನವರು ಬಂದು ಉತ್ಸವಕ್ಕೆ ಅಡ್ಡಿಮಾಡಿದರೆ ಮುಸಲ್ಮಾನರೂ ನಾವುಗಳೂ ಒಟ್ಟಿಗೆಸೇರಿ ಮನ್ಮಾನೆಗಲಾಟೆ ವಗೈರೆ ಮಾಡಿ ಮೈಸೂರು ಗೌರ್ನಮೆಂಟಿಗೆ ಒಂದು ಕೆಟ್ಟಹೆಸರು ತರಬಹುದೆಂದೂ ಯೋಚಿಸಿಯೋ ಏನೋ ಬೇಮಾಮೂಲಾಗಿ ಹಿಂದೆ ದೊಡ್ಡದೊಡ್ಡ ಮುಖಂಡರು ನಿಂತು ಮುಂದೆ ಸ್ಕೂಲ್ ವಿದ್ಯಾರ್ಥಿಗಳನ್ನು ಬಿಟ್ಟುಕೊಂಡು ಮೆರವಣಿಗೆ ಹೊರಟರು. ಪೋಲೀಸು ಆಫೀಸರು ಅಡ್ಡಿಮಾಡಿ ತಿಲಕರ ಫೋಟೋ ಕಿತ್ತುಕೊಳ್ಳಲಿಕ್ಕೆ ಹೋದಾಗ ಶ್ರೀಮನ್ಮಹಾರಾಜರ ಫೋಟೋವನ್ನು ಕೊಟ್ಟು ಮಹಾರಾಜರ ಫೋಟೋಗೆ ಅಪಮಾನಪಡಿಸಿದರೆಂದು ಸುಳ್ಳುಪುಕಾರು ಹುಟ್ಟಿಸಿ ಪೋಲೀಸು ಆಫೀಸರುಗಳಿಗೆ ಹೃಸ್ಸಿನಮೇಲೆ ಹೊಡೆದು ತುಳಿದು ಅಪಮಾನಪಡಿಸಿ ಮನ್ಮಾನೆ ಕೂಗುತ್ತಾ ಪೋಲೀಸ್ ಸ್ಟೇಷನ್ನುಗಳ ರೂಬರೂಬು ಹೋಗಿ ಕೂಗಿ ಬೈದು ಡಿಸ್ಟ್ರಿಕ್ಟ್ ಡೆ|| ಕಮಿಷನರ್ ಸಾಹೇಬರ ಮೋಟಾರಿನಹಿಂದೆ ಕೂಗಿಕೊಂಡು ಓಡಿಸಿಕೊಂಡು ಕಚರಾ ಕಲ್ಲು ವಗೈರೆ ಅವರ ಮೋಟಾರಿನಲ್ಲಿ ಬಿಸಾಡಿ ಅವಮಾನಮಾಡಿ ಕೊನೆಗೆ ರತ್ನಾವಳಿ ಥಿಯೇಟರಿನಲ್ಲಿ ಮನ್ಮಾನೆ ಲೆಕ್ಚರುಗಳನ್ನು ಮಾಡಿದರು. ಆ ಕಾಲದಲ್ಲಿ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ಸಾಹೇಬರವರು ದಯಮಾಡಿಸಿ ತೋಟಾಬಂದೂಕ ವಗೈರೆ ತಂದು ಆ ಗಲಾಟೆಗಳ ಪೈಕಿ ಒಂದಕ್ಕೂ ಅಡ್ಡಿಪಡಿಸಲಿಲ್ಲ. ತಮ್ಮ ಕೈಕೆಳಗಿನ ಪೋಲೀಸು ಆಫೀಸರುಗಳನ್ನು ಹೊಡೆದು ತುಳಿದು ಅವಮಾನಮಾಡಿದ ಹುಡುಗರಿಗೇ ಆಗಲಿ ಅಥವಾ ಅವರುಗಳ ಹಿಂದೆ ಇದ್ದು ಇಷ್ಟು ಗಲಾಟೆ ಅವಮಾನಮಾಡಿಸಿದ ಮುಖಂಡರಿಗೇ ಆಗಲಿ ಬಂದೋಬಸ್ತು ಮಾಡಿಸಲಿಲ್ಲ.

ಮತ್ತು ಮೊನ್ನೆ ಗೋಕುಲಾಷ್ಟಮಿ ಕಾಲದಲ್ಲಿ ಉತ್ಸವ ಹೊರಟ ಕೊನೇದಿನ ಅರಮನೆಮುಂದೆ ಲೈಟ್‌ಹೌಸ್ ಬಳಿ ನೋಟಕ್ಕೆ ಅನೇಕ ಗೃಹಸ್ಥರ ಹೆಂಗಸರೂ ಮತ್ತು ವಿಡೋಸ್ ಹೋಂ ಹೆಂಗಸರೂ ಮತ್ತು ೩-೪ ಮಂದಿ ಕ್ರಿಶ್ಚಿಯನ್ ಹೆಂಗಸರೂ ಬಂದು ನಿಂತಿರಲು, ಕೆಲವು ಸ್ಕೂಲು ಹುಡುಗರು ಕ್ರಿಶ್ಚಿಯನ್ ಹುಡುಗಿಗೆ ಪಿಚಕಾರಿ ನೀರನ್ನು ಹಾರಿಸಿ ಕೂಗುವುದಕ್ಕೆ ಶುರುಮಾಡಿದರು. ಹೀಗೆ ತನಗೆ ಅವಮಾನ ಪಡಿಸಿದ್ದಕ್ಕಾಗಿ ಸದರಿ ಹುಡುಗಿಯು ಅಳುತ್ತಾ ಇದ್ದಳು. ಅಲ್ಲಿ ನಿಂತಿದ್ದ ಒಬ್ಬ ದೊಡ್ಡಮನುಷ್ಯರು ಈರೀತಿ ಬೀದಿಯಲ್ಲಿ ನಿಮ್ಮಂಥ ವಿದ್ಯಾವಂತರು ಮಾಡುವದು ಸರಿಯಲ್ಲವೆಂದು ಹೇಳಲು, ಅವರಿಗೆ ಹೊಡೆದು ಮನ್ಮಾನೆ ಬೈದುದಲ್ಲದೆ ೫೦೦-೬೦೦ ಮಂದಿಗಳು ಸೇರಿ ಹೆಂಗಸರಿಗೆ ಅವಮಾನದ ಮಾತುಗಳನ್ನಾಡುತ್ತ ಜೋರಾಗಿ ಕೂಗುತ್ತಾ ಇದ್ದರು. ಅಲ್ಲಿದ್ದ ಜನಗಳು ಸದರಿ ಹೆಂಗಸರನ್ನು ಮಹಡಿಮೇಲಕ್ಕೆ ಕಳುಹಿಸಿದರು. ಮಹಡಿಮೇಲಕ್ಕೂ ಕೂಡ ಮಣ್ಣುಕಲ್ಲುಗಳನ್ನು ಬಿಸಾಡುತ್ತಲೂ ಕೂಗುತ್ತಲೂ ಇದ್ದರು. ಆಗ ಇಬ್ಬರು ಸವಾರರು ಬಂದು ಅರಮನೆಮೇಲೆ ಜನಾನಾ ಸವಾರಿಗಳು ಇವೆ. ಹೀಗೆ ಕೂಗಾಡಬ್ಯಾಡಿ ಎಂದು ಹೇಳಿದ್ದಕ್ಕೆ ಅವರಿಗೂ ಬೈದು ಕಲ್ಲುಮಣ್ಣುಗಳಿಂದ ಹೊಡೆದು ಅವಮಾನಮಾಡಿ, ಸದರಿ ಹೆಂಗಸರು ಹೋಗುತ್ತಿರುವಾಗ ಅವರ ಸುತ್ತಲೂ ಮುತ್ತಿಕೊಂಡು ಕೂಗುತ್ತಾ ಲೇವಡಿಮಾಡಿಕೊಂಡು ಅವರುಗಳ ಮನೆವರಿಗೂ ಹೋದರು. ಇದಕ್ಕೂ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ಸಾಹೇಬರು ಪೋಲೀಸ್ ಬಂದೋಬಸ್ತನ್ನು ಮಾಡಿಸಲಿಲ್ಲ.

ಯಾವ ಗದ್ದಲಕ್ಕೂ ಆಸ್ಪದವಿಲ್ಲದೆ ಮಾಮೂಲಿನಂತೆ ಹಿಂದೂಮುಸಲ್ಮಾನರೆಲ್ಲಾ ಅಣ್ಣತಮ್ಮಂದಿರಂತೆ ಸೇರಿ ವೇಷ ಹಾಕಿಕೊಂಡು ಪಂಜಾಗಳನ್ನು ಹೊತ್ತುಕೊಂಡು ಸಂತೋಷದಿಂದ ನಡಸಿದ ಮೊಹರಂ ಹಬ್ಬಕ್ಕೆ ಮಾತ್ರ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರು ಸಪರಿವಾರ ಖುದ್ದು ದಯಮಾಡಿಸಿದರು. ನಿಜವಾಗಿ ಅಂಥ ಗಲಾಟೆ ಆಗುತ್ತಾ ಇದ್ದರೆ ಇನ್|| ಜನರಲ್ ಸಾಹೇಬರು ಮನೆಯಿಂದ ಆಚೆಗೆ ಹೊರಡುತ್ತಲೇ ಇದ್ದರೋ ಇಲ್ಲವೋ! ಸದ್ಯಃ ಮುಸಲ್ಮಾನರಿಗೆ ದುರ್ದೈವವಾಗಿದೆ. ನಮ್ಮ ಮಹಾಪ್ರಭುಗಳು ಬಡಮಕ್ಕಳಂತೆ ಈ ಜನರನ್ನು ಕಂಡು ಕಾಪಾಡದೆ ಇರುತ್ತಿದ್ದರೆ ಹೊಟ್ಟೆಕಿಚ್ಚಿನಿಂದ ಬೇಯುತ್ತಿರುವ ಜನರ ಮಧ್ಯದಲ್ಲಿ ನಾವು ಬದುಕುವುದಕ್ಕೇ ಆಗುತ್ತಿರಲಿಲ್ಲ. ಭಗವಂತನು ನಮ್ಮ ಮಹಾರಾಜರಿಗೂ ಅವರ ಸರ್ಕಾರಕ್ಕೂ ಶ್ರೇಯಸ್ಸು ಕೊಡಲಿ.

Easu.

ಎಡತೊರೆ ತಾಲ್ಲೂಕಿನಲ್ಲಿ ಬ್ರಾಹ್ಮಣ ನೌಕರರ ದಾಂಧಲೆಗಳು.

ಸ್ವಾಮಿ !

ಈ ತಿಂಗಳು ೧೮ನೇ ತಾರೀಖು ಸ್ಟಾರ್ ಪತ್ರಿಕೆಯಲ್ಲಿ - ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬ್ರಾಹ್ಮಣೇತರ ನೌಕರರ ದೌರ್ಭಾಗ್ಯ - ಎಂಬ ವಿಚಾರವನ್ನು ಓದಿ ನೋಡಿದೆನು. ಅದರಲ್ಲಿ ನಂಜನಗೂಡು ತಾಲ್ಲೂಕಿನ ವಿಚಾರ ಮಾತ್ರ ಇತ್ತು. ಈ ಎಡತೊರೆ ತಾಲ್ಲೂಕಿನ ವಿದ್ಯಮಾನವನ್ನ ನೋಡಿದರೆ ಈ ತಾಲ್ಲೂಕಿನಲ್ಲಿ ಬ್ರಾಹ್ಮಣ ನೌಕರರಿಂದ ಬ್ರಾಹ್ಮಣೇತರರಿಗೆ ಆಗುತ್ತಿರುವ ತೊಂದರೆಯೂ ಸರ್ಕಾರಕ್ಕೆ ಉಂಟಾಗತಕ್ಕ ನಷ್ಟವೂ ಸಹ ವ್ಯಕ್ತವಾಗದೆ ಇರಲಾರದು. ಕೃಷ್ಣರಾಜಸಾಗರದಿಂದ ಮುಳುಗಡೆ ಆಗುವ ಜಮೀನುಗಳಿಗೆ ಬದಲಾಗಿ ಈ ತಾಲ್ಲೂಕಿನಲ್ಲಿ ಹೊಸ ನಾಲಾಕೆಳಗೆ ಬೇರೆ ಜಮೀನು ಕೊಡುತ್ತಿರುವುದು ಸರಿಯಷ್ಟೆ. ಒಂದು ಎಕರೆ ತರೀ ಜಮೀನಿಗೆ ಒಂದು ಎಕರೆ ತರೀ ಜಮೀನು, ಒಂದು ಎಕರೆ ಖುಷ್ಕಿಗೆ ಒಂದು ಎಕರೆ ಖುಷ್ಕಿ ಜಮೀನು, ಕೊಡಬೇಕೆಂತ ವಿಧಾಯಕವಾಗಿದೆ. ಹೀಗಿರುವಲ್ಲಿ ಇಲ್ಲಿನ ಮತ್ತು ಅಕ್ವಿಜಿಷನ್ ಆಫೀಸಿನ ಕೆಲವು ಬ್ರಾಹ್ಮಣ ಗುಮಾಸ್ತರು ಸೇರಿ ಸರ್ಕಾರಿ ಲೆಕ್ಕಗಳನ್ನ ತಿದ್ದಿ ತಮ್ಮಕಡೆ ಒಬ್ಬೊಬ್ಬರಿಗೆ ಒಂದು ಎಕರೆ ಖುಷ್ಕಿ ಜಮೀನಿಗೆ ಬದಲಾಗಿ ಒಂದು ಎಕರೆ ತರೀ ಜಮೀನಿನಂತೆ ಅವಾರ್ಡು ಮಾಡಿರುತ್ತಾರೆ. ಈ ರೀತಿ ಸುಮಾರು ೪೦ ಎಕರೆ ತರೀ ಜಮೀನನ್ನ ತಮ್ಮ ಕಡೆಯವರಿಗೆ ಮಾಡಿ ಅವರಿಂದ ತಾವು ಪುನಃ ಕ್ರಯಕ್ಕೆ ತೆಗೆದುಕೊಂಡಂತೆ ಮಾಡಿಕೊಂಡಿರುತ್ತಾರೆ. ಈ ತಾಲ್ಲೂಕಿನಲ್ಲಿ ಅದರಲ್ಲೂ ಇವರಕಡೆಯವರು ಅಂದರೆ ನಾರಾಯಣಪುರದ ಸುಬ್ರಹ್ಮಣ್ಯಜೋಯಿಸರೆಂಬವರಿಗೆ ಈ ರೀತಿ ಖುಷ್ಕಿ ಜಮೀನಿನಂತೆ ಅವಾರ್ಡಾಗಿರುವ ತರೀ ಜಮೀನು ಎಕರೆ ಒಂದಕ್ಕೆ ೮೦೦ ರೂಪಾಯಿ ಲಾಗಾಯಿತು ೧೦೦೦ ರೂ. ಬೆಲೆ ಬಾಳತಕ್ಕದ್ದಾಗಿದೆ. ಇಂಥಾ ಭಾರಿ ಬೆಲೆಬಾಳುವ ತರೀ ಜಮೀನನ್ನ ಎಕರೆ ಒಂದಕ್ಕೆ ೩೦ ರೂ. ಕಿಮ್ಮತ್ತಿನ ಮೇಲೂ ಮುಳುಗಡೆ ಆಗದಿರುವ ಸುಮಾರು ೨೦ ರೂ. ಬೆಲೆ ಬಾಳುವ ಖುಷ್ಕಿ ಜಮೀನಿಗೆ ಬದಲಿಯಾಗಿಯೂ ಕೊಟ್ಟಿರುವುದರಿಂದ ಸರ್ಕಾರಕ್ಕೆ ೩೦-೪೦ ಸಾವಿರ ರೂ. ನಷ್ಟವಾಗಿದೆ. ಮತ್ತು ಇಂಥ ಕೇಸುಗಳು ಅನೇಕವಿರುತ್ತವೆ. ಇದನ್ನು ಮೇಲ್ಪಟ್ಟ ಆಫೀಸರು ಬ್ರಾಹ್ಮಣರಾದದ್ದರಿಂದ ತನಿಖೆ ಮಾಡುವುದೇ ಇಲ್ಲ. ರೈತರು ಅರ್ಜಿಕೊಟ್ಟರೆ ಅವರಿಗೆ ಯಾವುದಾದರೂ ಒಂದು ಕೆಲಸಕ್ಕೆ ಬಾರದ ಜವಾಬು ಹೇಳಿ ಅರ್ಜಿಯನ್ನು ಗೊಟ್ಟಿಕ್ಕೆ ಹಾಕುತ್ತಾರೆ. ತಾಲ್ಲೂಕು ಆಫೀಸಿನಲ್ಲಿಯೂ ಮತ್ತು ಅಕ್ವಿಜಿಷನ್ ಆಫೀಸಿನಲ್ಲಿಯೂ ಬ್ರಾಹ್ಮಣೇತರ ನೌಕರರು ಕೆಲವರಾದರೂ ಇದ್ದ ಭಾಗದಲ್ಲಿ ಈ ರೀತಿ ಸರ್ಕಾರಕ್ಕೆ ದ್ರೋಹವಾಗುತ್ತಿರಲಿಲ್ಲ. ರೈತರ ಅರ್ಜಿಯನ್ನು ಕೇಳುವರೇ ಇಲ್ಲವಾದ್ದರಿಂದ ಈ ವಿಚಾರ ತಮ್ಮ ಪತ್ರಿಕೆಯಲ್ಲಾದರೂ ಬಿದ್ದು ಈ ಮೂಲಕ ಸರ್ಕಾರದವರ ಗಮನಕ್ಕೆ ಬಂದು ತನಿಖೆಮಾಡಿ ಸಂಬಂಧಪಟ್ಟ ನೌಕರರಿಗೆ ತಕ್ಕ ಬಂದೋಬಸ್ತುಮಾಡಿ ರೈತರನ್ನು ಕಾಪಾಡಬೇಕೆಂದು ಈ ಲೇಖನವನ್ನು ಬರೆದಿರುತ್ತೇನೆ. ಮುಂದಿನ ವಾರದಲ್ಲಿ ಇನ್ನು ಕೆಲವು ವಿಷಯಗಳನ್ನು ತಿಳಿಸುತ್ತೇನೆ.

ಸ್ಥಳವಾಸಿ.

ರೈಲ್ವೆಯವರ ಗೋಳಾಟ.

ಅಯ್ಯಾ,

ನಮ್ಮ ಮೈಸೂರು ರೈಲ್ವೆಯಲ್ಲಿ ನೌಕರಿಯಲ್ಲಿರುವ ಕೆಲವು ಮಂದಿಗಳು ಎಂ. ಎಸ್. ಕಂಪನಿಯವರಿಂದ ಲೆಂಟಾಗಿ ಕೊಡಲ್ಪಟ್ಟರಷ್ಟೆ. ಅವರ ಗೋಳಾಟವನ್ನು ಸೂಚಿಸಲು ಅಸಾಧ್ಯವಾಗಿದೆ. ಎಲ್ಲಾ ರೈಲ್ವೆಯ ನೌಕರರಿಗೂ ಈಗ ಸೇಕಡ ೭೫ ರಂತೆ ಸಂಬಳಗಳನ್ನು ಜಾಸ್ತಿಮಾಡಿರುತ್ತಾರೆ. ಈ ರೈಲ್ವೆಯಲ್ಲಿ ಈಗ ಸೇಕಡ ೩೦ ರಂತೆ ಕೊಟ್ಟಿರುವದೇ ಕಷ್ಟವಾಗಿದೆ. ರೈಲ್ವೆ ಡಿಪಾರ್ಟ್‌ಮೆಂಟಿನವರಲ್ಲಿ ಅನೇಕರು ವಿದ್ಯೆಯಿಲ್ಲದೆ ಸರ್ವೀಸಿನ ಮೇಲೆ ಕಾಲವನ್ನು ತಳ್ಳುತ್ತಿದ್ದಾರೆ. ಈ ಮೈಸೂರು ರೈಲ್ವೆಯಲ್ಲಿ ಅಂಥವರನ್ನು ಮುಂದಕ್ಕೆ ತರುವದಿಲ್ಲವಾಗಿ ತೋರುತ್ತದೆ. ಈ ರೈಲ್ವೆಯಲ್ಲಿರತಕ್ಕ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟರು ತಮಗೆ ಬೇಕಾದ ಬ್ರಾಹ್ಮಣರನ್ನು ಮಾತ್ರ ನೌಕರಿಗೆ ಸೇರಿಸಿಕೊಳ್ಳುತ್ತ ಇತರರಿಗೆ ಕೆಲಸವನ್ನು ಕೊಡದೆ ಖಾಲಿಯಿಲ್ಲವೆಂದು ಹೇಳುತ್ತಾ ಬ್ರಾಹ್ಮಣರಿಗೆ ಮಾತ್ರ ಕೆಲಸಕೊಡುತ್ತಲಿದ್ದಾರೆ. ಎಂ. ಎಸ್. ಎಂ. ರೈಲ್ವೆಯಲ್ಲಿ ೧೦-೧೫ ವರುಷಗಳಿಂದ ಕೆಲಸಮಾಡಿ ಸರ್ವೀಸ್ಸಿರುವವರಿಗೂ ಅಷ್ಟು ಸಂಬಳವಿರುವದಿಲ್ಲ. ನಿನ್ನೆ ಮೊನ್ನೆ ಬಂದವರಿಗೆ ಮೇಲ್ಪಟ್ಟ ಆಫೀಸರುಗಳು ಹೆಚ್ಚಾಗಿ ವೇತನವನ್ನು ಕೊಟ್ಟು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ಆಫೀಸರುಗಳು ಒಬ್ಬರಿಗೊಂದು ಒಬ್ಬರಿಗೊಂದು ಮಾಡಬಹುದೆ ? ಇದಕ್ಕಾಗಿ ರೈಲ್ವೆಯ ನೌಕರರಲ್ಲಿ ಅನೇಕರು ತಮ್ಮಗಳಿಗೆ ಬರುವ ದಸರಾದೊಳಗಾಗಿ ಇತರ ರೈಲ್ವೆಯವರು ಕೊಡುವಂತೆ ಸಂಬಳವನ್ನು ಕೊಡಬೇಕೆಂದು ತಾ|| ೨೨-೯-೨೧ ರಲ್ಲಿ ರೈಲ್ವೆಯ ಟ್ರಾಫಿಕ್ ಮ್ಯಾನೇಜರವರಿಗೂ, ರೈಲ್ವೆ ಸೆಕ್ರೆಟರಿಯವರಿಗೂ ಎಂ. ಎಸ್. ಎಂ. ರೈಲ್ವೆಯ ಏಜಂಟರಿಗೂ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಗೂ ಟೆಲಿಗ್ರಾಂ ಮಾಡಿರುತ್ತಾರೆ. ದಸರಾ ಒಳಗಾಗಿ ಈ ನೌಕರರಿಗೆ ಸಂಬಳ ಬಡಾಯಿಸಿದರೆ ಸರಿ ಇಲ್ಲವಾದರೆ ದಸರಾದಲ್ಲಿ ಅಸಮಾಧಾನವು ಹೆಚ್ಚಿಹೋಗುವುದು. ಆದರಿಂದ ಯಾವ ತೊಂದರೆಯೂ ಆಗಗೊಡದಂತೆ ಮೇಲ್ಪಟ್ಟ ಆಫೀಸರುಗಳು ಗಮನಕೊಟ್ಟು ನೌಕರರೆಲ್ಲರಿಗೂ ಸರಿಯಾದ ವೇತನವನ್ನು ಕೊಡುತ್ತಾರೆಂದು ನಂಬಿರುತ್ತೇನೆ.

ಇತಿ ಹಿತಚಿಂತಕ.

ಕೋಲಾರಡಿಸ್ಟ್ರಿಕ್ಟ್ ವೃತ್ತಾಂತ.

ಈಗ ೧೫ ದಿನಗಳಿಂದ ಮಳೆಬೀಳದೆ ಇರುವದರಿಂದ ಖುಷ್ಕಿ ಪೈರುಗಳು ಒಣಗುತ್ತಿವೆ. ಧಾರಣೆವಾಸಿಗಳು ಏರುತ್ತ ಘಾಬರಿಯಾಗಿರುವದರ ಜೊತೆಗೆ ಬ್ರಾಹ್ಮಣ ಬ್ರಾಹ್ಮಣೇತರ ಚಳುವಳಿಯು ಪರಾಕಾಷ್ಠವನ್ನು ಹೊಂದುತ್ತಿರುವದು ವಿಷಾದಕರವಾಗಿದೆ. ಮೊನ್ನೆದಿನ ಬ್ರಾಹ್ಮಣ ವಿದ್ಯಾಸಹಾಯದ ಮೀಟಿಂಗ್ ಎಂದು ಒಂದುಸಭೆ ನಡೆದದ್ದರಲ್ಲಿ ಒಬ್ಬ ದೊಡ್ಡ ಮನುಷ್ಯರು ತಮ್ಮ ಬ್ರಾಹ್ಮಣ ಪ್ರಭಾವವನ್ನು ತೋರ್ಪಡಿಸುವ ಉಪನ್ಯಾಸದ ಜೋರಾವರಿಯಲ್ಲಿ ಮುಸಲ್ಮಾನ್, ಮರಾಟಾ ಮುಂತಾದಜಾತಿಯ ಜನರಲ್ಲಿ ದರೋಡೆ, ಥಕಾಯಿತಿ ಮುಂತಾದ ಕ್ರೂರಕೃತ್ಯಗಳನ್ನು ಮಾಡುವ ರಕ್ತಸಂಬಂಧವಿರುವಂತೆ ತಮ್ಮಜನಗಳಲ್ಲಿ ಇಲ್ಲವೆಂದು ಪಬ್ಲಿಕ್ಕಿನಲ್ಲಿ ಹೇಳಿ ಅನೇಕರ ಮನಸ್ಸಿಗೆ ನೋವನ್ನುಂಟುಮಾಡಿದರು. ಆ ಜಾತಿಯ ಕೆಲವು ದೊಡ್ಡಮನುಷ್ಯರು ಡೆಪ್ಯುಟಿಕಮಿಷನರಾದ ಮೆ|| ಜಹಿರುದ್ದೀನ್ ಮಕ್ಕೆಯವರನ್ನು ಕಂಡು ತಮ್ಮವ್ಯಥೆಯನ್ನು ಅರಿಕೆಮಾಡಲು ಅವರು ಕಾಲೋಚಿತವಾದ ಸಮಾಧಾನ ಹೇಳಿದರೆಂದು ತಿಳಿಯಬಂದಿದೆ. ಬೆಳಿಗ್ಗೆ ಆರಂಭಿಸಿ ರಾತ್ರಿ ೧೦ ಘಂಟೆವರೆಗೆ ಪ್ರತಿದಿನವೂ ನಮ್ಮ ಬ್ರಾಹ್ಮಣವರ್ಗದವರು ನಡೆಸುತ್ತಿರುವ ಸಣ್ಣಪುಟ್ಟ ಮೀಟಿಂಗುಗಳಲ್ಲಿ ಬ್ರಾಹ್ಮಣೇತರ ಹಿಂದೂಗಳನ್ನು ವಾಚಾಮಗೋಚರವಾಗಿ ನಿಂದಿಸುವ ಮಾತುಗಳನ್ನೇ ಪ್ರಯೋಗಿಸುತ್ತಿದ್ದಾರೆ. ಸರ್ಕಾರಿ ನೌಕರಿಯಲ್ಲಿರುವ ಬ್ರಾಹ್ಮಣೇತರರಿಗಂತೂ ನಿತ್ಯವೂ ಸಹಸ್ರನಾಮವಾಗುತ್ತಿದೆ. ಕೆಲವು ನೌಕರರು ಮಾಮೂಲಿನಂತೆ ಒಂದುಕಡೆ ಸೇರಿ ತಮಾಷೆಯಾಗಿರುವಾಗ್ಗೆ ಬ್ರಾಹ್ಮಣೇತರರೆಂಬುವ ಮಾತು ಅನೇಕಸಾರಿ ಉಪಯೋಗಿಸಬೇಕಾದ ಕಷ್ಟನಿವಾರಣೆಗಾಗಿ ಇಟ್ಟುಕೊಂಡಿರುವ ಎನ್.ಬಿ. ಎಂಬ ಪದಕ್ಕೆ ಅರ್ಥವೇನು ಎಂಬ ಚರ್ಚೆಬಂದು, ಎನ್.ಬಿ ಅಂದರೆ (ನೋಬ್ರೇನ್—ಬುದ್ಧಿಹೀನರು) ಎಂದು ಹಾಸ್ಯಮಾಡಿದಾಗ್ಗೆ ಆ ಗುಂಪಿನಲ್ಲಿ ಒಂಟಿಯಾಗಿಸಿಕ್ಕಿದ್ದ ಒಬ್ಬ ಬ್ರಾಹ್ಮಣೇತರ ದೊಡ್ಡಮನುಷ್ಯರು ಎನ್.ಬಿ. ಅಂದರೆ ನೋ ಬೆಗ್ಗಿಂಗ್ (ಭಿಕ್ಷೆಮಾಡತಕ್ಕವರಲ್ಲ) ಎಂದು

ವಿದೇಶದ ವೃತ್ತಾಂತಗಳು

ಜರ್ಮನಿಯವರು ೭೪ ಕೋಟಿಯೂ ೫ ಲಕ್ಷ ಭಂಗಾರದ ಮಾರ್ಕುಗಳನ್ನು ನಷ್ಟಪರಿಹಾರಕ್ಕಾಗಿ ಮಿತ್ರಮಂಡಲಿಯವರಿಗೆ ಕೊಟ್ಟಿದ್ದಾರೆ.

ಮೆಸಪೊಟೇಮಿಯಾವಿನಲ್ಲಿ ತುರುಕರ ಪಿತೂರಿಯಿಂದ ಕುರ್ದುಜನರು ತಿರುಗಿಬಿದ್ದಿದ್ದರು. ಇಂಗ್ಲೀಷ್ ಸೈನ್ಯವು ಅವರನ್ನೆಲ್ಲಾ ಅಣಗಿಸಿತು.

ಸಂಧಿಪ್ರಕಾರ ಜರ್ಮನರು ಸೇನಾಸಂಖ್ಯೆಯನ್ನು ಹೊರಗೆ ಕಡಿಮೆಮಾಡುತ್ತಿದ್ದರೂ ಒಳಗೊಳಗೆ ೮ ಲಕ್ಷದವರೆಗೆ ಸೇನೆಯನ್ನು ಕೂಡಿಸುತ್ತಿರುವರಂತೆ.

ಪಾರ್ಲಿಮೆಂಟಿನಲ್ಲಿ ಇದುವರೆಗೆ ಒಬ್ಬ ಸ್ತ್ರೀಯು ಮೆಂಬರಾಗಿದ್ದಳು. ಈಗ ಮಿಂಟ್ರಿಂಗ್‌ಹಾಮ್ ಪತ್ನಿಯವರು ಲಿಂಕನ್ ಷೈರ್ ಸೌತ್‌ಡಿವಿಜನ್ನಿನಿಂದ ಉಮೇದುವಾರಳಾಗಿ ನಿಂತು ತನ್ನ ಜತೆಯಲ್ಲಿ ಉಮೇದುವಾರರಾಗಿದ್ದ ಇನ್ನಿಬ್ಬರು ಗಂಡಸರಿಗಿಂತಲೂ ಹೆಚ್ಚಾಗಿ ಓಟುಪಡೆದು ೨ನೆ ಸ್ತ್ರೀ ಸಭಿಕಳಾಗಿ ಏರ್ಪಟ್ಟರು.

ಗ್ರೀಕು ಸರ್ಕಾರದ ಪ್ರತಿನಿಧಿಯಾದ ಗೋನಸಿಸ್‌ರವರು ಇಂಗ್ಲೆಂಡಿಗೆ ಹೋಗಿ ತುರುಕರಿಗೂ ಗ್ರೀಕರಿಗೂ ಯಾವನಿಬಂಧನೆಯ ಮೇಲೆ ಸಂಧಿ ಕುದುರಬಹುದೆಂಬ ವಿಷಯವಾಗಿ ಮುಖ್ಯಮಂತ್ರಿಯವರೊಡನೆಯೂ ಲಾರ್ಡ್ ಕರ್ಜನ್‌ರವರೊಡನೆಯೂ ಮಾತನಾಡುವವರಾಗಿದ್ದಾರಂತೆ. ಅಂಗೋರಾ ತುರ್ಕಿ ಸೈನ್ಯಕ್ಕೆ ಯೂರೋಪುಖಂಡದ ಮುಖ್ಯದೇಶಗಳವರು ಯುದ್ಧಸಾಮಗ್ರಿಯನ್ನು ವಿಶೇಷವಾಗಿ ಒದಗಿಸಿಕೊಟ್ಟುದರಿಂದಲೇ ತಮ್ಮ ಸೈನ್ಯವು ಹಿಂದೆಗೆಯಬೇಕಾಯಿತೆಂದು ಗ್ರೀಕ್ ಸೈನ್ಯಾಧಿಕಾರಿಗಳು ಹೇಳುತ್ತಿದ್ದಾರೆ.

ಲಂಡನ್ನಿಗೆ ಹೋಗಿರುವ ವಾಲಿಖಾನ್ ಎಂಬುವರು ಲಾರ್ಡ್ ಕರ್ಜನ್‌ರವರನ್ನು ಕಾಣಿಸಿಕೊಂಡು ತಾನು ಆಫ್ಘನ್‌ಪ್ರತಿನಿಧಿಯೆಂದು ಹೇಳಲು, ಅದಕ್ಕೆ ಕರ್ಜನ್‌ರವರು, ಅಫ್ಘಾನಿಸ್ಥಾನದ ವಿಷಯವನ್ನು ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರು ಗಮನಿಸುತ್ತಿದ್ದಾರೆ. ಆಫ್ಘನ್ ಪ್ರಭುತ್ವದವರು ಇಂಡ್ಯಾ ಪ್ರಭುತ್ವದೊಡನೆ ಸಂಧಿಮಾಡಿಕೊಳ್ಳದೆ ಎಷ್ಟೋ ಅಭ್ಯಂತರಗಳನ್ನು ಕಲ್ಪಿಸುತ್ತಿದ್ದಾರೆ. ಸಂಧಿಯು ನಮ್ಮನಿಮ್ಮಲ್ಲಿ ಕುದುರುವವರೆಗೂ ಲಂಡನ್ನಿನಲ್ಲಿ ನಿಮ್ಮನ್ನು ಆಫ್ಘನ್‌ಪ್ರತಿನಿಧಿಯಾಗಿ ನಾವು ಪರಿಗಣಿಸುವುದಕ್ಕೆ ಅವಕಾಶವಿಲ್ಲ ಎಂದು ಪ್ರತ್ಯುತ್ತರ ಕೊಟ್ಟರು.

ಅಮೇರಿಕಾದವರು ಮಿತ್ರಮಂಡಲಿಯವರೊಡನೆ ಯುದ್ಧಕಾಲದಲ್ಲಿ ಸೇರಿದ್ದರೂ ಸಂಧಿಪತ್ರಕ್ಕೆ ಅವರು ರುಜುಮಾಡಲಿಲ್ಲ. ಮತ್ತು ನಾನಾರಾಷ್ಟ್ರಸಂಘದಲ್ಲೂ ಅವರು ಸೇರಿಲ್ಲ. ಈಗ ಅವರು ಜರ್ಮನಿ, ಆಸ್ಟ್ರಿಯಾ, ಹಂಗೇರಿ ದೇಶಗಳವರೊಡನೆ ಪ್ರತ್ಯೇಕ ಸಂಧಿಯನ್ನು ಮಾಡಿಕೊಂಡಿರುತ್ತಾರೆ. ಇದರಿಂದ ಅಮೇರಿಕಾದವರ ಶತ್ರುಕೋಟಿಯಿಂದ ಜರ್ಮನಿ ಮೊದಲಾದ ಆ ಮೂರು ದೇಶಗಳೂ ತಪ್ಪಿದಂತಾದುವು. ಏತೇನ ಯುದ್ಧಕಾಲದಲ್ಲಿ ಜರ್ಮನಿಯ ರೈನ್‌ನದಿಯ ಹತ್ತಿರ ನಿಲ್ಲಿಸಿದ್ದ ಅಮೇರಿಕನ್ ಸೈನ್ಯವನ್ನು ಅವರು ಹಿಂದಕ್ಕೆ ಕರೆಯಿಸಿಕೊಳ್ಳಬಹುದು, ಆದರೆ ಯುದ್ಧಕಾಲದಲ್ಲಿ ಜರ್ಮನಿಯಿಂದ ಕಿತ್ತುಕೊಂಡ ದೇಶದಲ್ಲಿ ಅಮೇರಿಕಾದವರಿಗೆ ಇರುವ ಭಾಗದಹಕ್ಕನ್ನು ಮಾತ್ರ ಅವರು ಬಿಟ್ಟುಕೊಡುವಂತೆ ತೋರುವುದಿಲ್ಲ. ಈ ವಿಷಯವು ಹೇಗೆ ಪರಿಷ್ಕಾರವಾಗುವುದೋ ನೋಡಬೇಕು.

ಆಯುರ್ದಾಯವನ್ನು ವೃದ್ಧಿಪಡಿಸಲಿಕ್ಕಾಗಿ ಅಮೇರಿಕಾದ ವೈದ್ಯರೂ ಶಾಸ್ತ್ರಜ್ಞರೂ ಪ್ರಯತ್ನಪಡುತ್ತಿದ್ದಾರೆ. ಇದಕ್ಕಾಗಿ ಒಂದು ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. ಅದಕ್ಕೆ ಟಾಫ್ಟ್‌ರವರು ಅಧ್ಯಕ್ಷರು. ಅದರಲ್ಲಿ ೧೦೦ ಮಂದಿ ಶಾಸ್ತ್ರಜ್ಞರೂ ೫೦೦ ಮಂದಿ ವೈದ್ಯರೂ ಸೇರಿ ಕೆಲಸ ಮಾಡುತ್ತಿರುವರು. ಅಮೇರಿಕಾದ ಒಂದು ದೊಡ್ಡ ಭೀಮಾಕಂಪೆನಿಯು ಇದನ್ನೇರ್ಪಡಿಸಿದೆ. ತಮ್ಮ ಕಂಪೆನಿಯಲ್ಲಿ ಜೀವವಿಮೆ ಮಾಡಿಸಿಕೊಂಡವರ ಆಯುರ್ದಾಯವನ್ನು ವೃದ್ಧಿಪಡಿಸಬೇಕೆಂಬುದೇ ಅವರ ಉದ್ದೇಶ. ಅವರ ಸಭಿಕರು ಇದಕ್ಕಾಗಿ ವರ್ಷಕ್ಕೆ ೪೫ ರೂ. ಗಳ ಚಂದಾವನ್ನು ಕೊಡಬೇಕು. ಕಂಪೆನಿಯವರು ಆ ಸಭಿಕರಿಗೆ ವೈದ್ಯಸಹಾಯವನ್ನೇನೂ ಮಾಡಿಸುವುದಿಲ್ಲ. ಆದರೆ ಅವರ ದೇಹಸ್ಥಿತಿಯನ್ನು ಪರೀಕ್ಷೆಮಾಡಿಸಿ, ಆರೋಗ್ಯವಿಷಯದಲ್ಲಿ ವೈದ್ಯರಿಂದ ಸಲಹೆಕೊಡಿಸುವರು. ಮೊದಲು ದೇಹಪರೀಕ್ಷೆಮಾಡಿಸುವಾಗ ಅವರ ಚರಿತ್ರೆ ಅವರ ವಂಶಚರಿತ್ರೆ ಆರೋಗ್ಯ ಮೊದಲಾದುವನ್ನೆಲ್ಲಾ ಕೇಳಿ ಸ್ಪಷ್ಟವಾಗಿ ಬರೆದುಕೊಳ್ಳುವರು. X ರೇ ಸಹಾಯದಿಂದ ಸರ್ವಾಂಗವನ್ನೂ ಪರೀಕ್ಷೆಮಾಡಿಸುವರು. ಮುಂದೆ ಅವರು ಅನುಸರಿಸಬೇಕಾದ ಆಹಾರವ್ಯವಹಾರ ವಿಧಾನಗಳನ್ನು ಸೂಚಿಸಿಕೊಡುವರು. ಅದರಂತೆ ಸಭಿಕರು ನಡೆದುಕೊಂಡು ೬ ತಿಂಗಳಿಗೊಂದಾವೃತ್ತಿ ಕಂಪೆನಿಯ ವೈದ್ಯರ ಆರೋಗ್ಯಪರೀಕ್ಷೆಗೆ ಒಳಪಡಬೇಕು. ಸಾಂಕ್ರಾಮಿಕ ವ್ಯಾಧಿಗಳು ಉಂಟಾದಾಗ ಕಂಪೆನಿಯವರು ಕೊಟ್ಟ ಸೂಚನೆಯಂತೆ ನಡೆದುಕೊಳ್ಳಬೇಕು. ಮನುಷ್ಯರ ದೇಹದ ತೂಕದಮೇಲೆ ಅವರ ದೇಹಾರೋಗ್ಯಾನಾರೋಗ್ಯ ಮತ್ತು ಆಯುರ್ದಾಯಗಳನ್ನು ಗೊತ್ತುಮಾಡಲು ಅವಕಾಶವಿರುತ್ತದೆ. ಮಧ್ಯವಯಸ್ಸಿನವರು ತಾವು ಇರಬೇಕಾದ ತೂಕಕ್ಕಿಂತಲೂ ಹೆಚ್ಚು ತೂಕವುಳ್ಳವರಾಗಿರುವವರೇ ಹೆಚ್ಚು. ಹೆಚ್ಚು ತೂಕವುಳ್ಳವರು ಮುಪ್ಪಿನಕಾಲ ಬರುವವರೆಗೂ ತಾವು ಬದುಕಿರುವುದಿಲ್ಲವೆಂಬಂಶವನ್ನು ಅವರು ತಿಳಿಯರು. ೩೦ ವರ್ಷ ತುಂಬಿದವರು ತಮ್ಮ ದೇಹದ ತೂಕದ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕು. ೫೦ ವರ್ಷ ತುಂಬಿದವರು ತಾವು ನ್ಯಾಯವಾಗಿ ಇರಬೇಕಾದ ತೂಕಕ್ಕಿಂತ ೧೦ ಪೌಂಡು ತೂಕ ಹೆಚ್ಚಾಗಿರುವವರಾದರೆ ಅವರು ದೀರ್ಘಕಾಲ ಜೀವಿಸಿರಬೇಕಾದುದರಲ್ಲಿ $\frac{1}{8}$ ಭಾಗದಷ್ಟನ್ನು ತಗ್ಗಿಸಿಕೊಂಡವರಾಗುವರು. ಈ ವಿಧಾನಗಳನ್ನೆಲ್ಲಾ ವೈದ್ಯರಮೂಲಕ ಆ ಕಂಪೆನಿಯವರು ಆಗಾಗ್ಗೆ ಪರಿಶೋಧನೆಮಾಡಿಸಿ ಸರಿಯಾದ ಆರೋಗ್ಯದಿಂದಿರುವುದಕ್ಕೆ ತಕ್ಕ ಸೂಚನೆಗಳನ್ನು ತಮ್ಮ ಸಭಿಕರಿಗೆ ಕೊಡಿಸುವುದಕ್ಕೆ ಏರ್ಪಡಿಸಿರುವರು.

ಶ್ರೀ ಕಾಶೀಸ್ಥ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನಾರೂಢ ಶ್ರೀ ೧೦೮ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸನ್ನಿಧಿಯಲ್ಲಿ.

ಶ್ರೀ ಹಿಮವತ್ಕೇದಾರ ಜಗದ್ಗುರು ಏಕೋರಾಮ ಸಿಂಹಾಸನ ಪಟ್ಟಾಧಿಕಾರ ಮಹೋತ್ಸವ ಸಮಾರಂಭವು.

(ಬರೆದು ಬಂದುದು.)

ಈ ಸಮಾರಂಭವು ಶ್ರಾವಣ ಶು|| ೧೨ ಸೋಮವಾರ ನಿಯಮಿಸಿ ಪ್ರಸಿದ್ಧಪತ್ರಿಕೆಯಲ್ಲಿ ಪ್ರಕಟಿಸಿರಲು ಹಿಮಾಲಯದಲ್ಲಿ ಅತಿವೃಷ್ಟಿಯಿಂದ ಶ್ರೀ ರಾವಲ್ ನೀಲಕಂಠಲಿಂಗ ಶಿವಾಚಾರ್ಯರ ಆಗಮನಕ್ಕೆ ಪ್ರತಿಬಂಧಕವಾದ ಪ್ರಯುಕ್ತ ಈ ಮಹಾಸಮಾರಂಭವು ಭಾದ್ರಪದ ಶು|| ೬ ಬುಧವಾರ ತಾರೀಖು ೭ಕ್ಕೆ ನಿಯಮಿಸುವಲ್ಲಿ ಬಂದಿತು. ಕಾಶೀಕ್ಷೇತ್ರಕ್ಕೆ ಶ್ರೀ ರಾವಲರವರು ಸೆಪ್ಟಂಬರ್ ತಾ|| ೫ ನೇ ಮಂಗಳವಾರ ಪ್ರಾತಃಕಾಲ ೮ ಘಂಟೆಗೆ ದಯಮಾಡಿಸಿದರು. ಶ್ರೀಗಳವರ ದರ್ಶನಂಗೈದು ಬಿಜಯಂಗೈಸಿಕೊಂಡು ಬರಬೇಕೆಂಬ ಕುತೂಹಲದಿಂದ ಮೊದಲೇ ಬಂದಿದ್ದ ಶ್ರೀ ಪಟ್ಟಚರಾಧಿಕಾರಿಗಳು, ಸಂಸ್ಥಾನದ ಸೆಕ್ರೆಟರಿ, ದಿವಾನ, ವ್ಯವಸ್ಥಾಪಕಮಂಡಳಿ, ದೂರದೇಶದಿಂದ ಬಂದಿದ್ದ ವೀರಶೈವ ಭಕ್ತಮಾಹೇಶ್ವರರು, ಕಾಶೀನಗರವಾಸಿಗಳಾದ ಅನೇಕ ಪ್ರಮುಖರು, ಶ್ರೀಗಳವರಂ ಕಂಡು ನಮಸ್ಕರಿಸಿ ಸಿಬ್ಬಂದಿಯೊಡನೆ ಮ್ಯಾನೆಯಲ್ಲಿ ಶ್ರೀಗಳನ್ನು ಬಿಜಯಂಗೈಸಿಕೊಂಡು ೯|| ಘಂಟೆಗೆ ಶ್ರೀಮಜ್ಜಗದ್ಗುರು ಪಂಚಾಚಾರ್ಯಾ ವಿಜಯಂತೆತರಾಮ್, ಎಂಬ ಜಯಘೋಷದೊಡನೆ ಸಂಸ್ಥಾನಮಠ ಜಂಗಮವಾಡಿಗೆ ಬಂದರು. ರಾವಲ್ಲರು ಜಗದ್ಗುರು ಮೂಲಪೀಠದ ದರ್ಶನಂಗೈದು ಸದ್ಯಃ ಸಿಂಹಾಸನದಲ್ಲಿ ವಿರಾಜಿಸುವ ಭಗವತ್ಪಾದರ ದರ್ಶನಂಗೈದು ತಮ್ಮಸಲುವಾಗಿ ಏರ್ಪಡಿಸಿದ ಭವ್ಯಮಂದಿರಕ್ಕೆ ತೆರಳಿದರು. ಅನಂತರ ಸರ್ವರೂ ಅಪ್ಪಣೆಯಂ ಪಡೆದು ಸ್ವಸ್ಥಾನಗಳಿಗೆ ತೆರಳಿದರು. ಬುಧವಾರ ಪ್ರಾತಃಕಾಲ ೮ ಘಂಟೆಗೆ ಅನೇಕ ಮಂಗಲವಾದ್ಯಗಳಿಂದಲೂ ಸುಶ್ರಾವ್ಯ ವೇದಧ್ವನಿಯಿಂದಲೂ, ಗುರುಕುಲವು ಕಿಕ್ಕಿರಿದಿದ್ದಿತು, ರಾವಲರವರ ಮಂಗಲಸ್ನಾನ ಪೂಜಾಕಾರ್ಯವಾದ ಕೂಡಲೇ ೯ ಘಂಟೆಗೆ ಪೂರ್ವಾಚಾರ್ಯಸ್ಥಾಪಿತ ಜಗನ್ನಿಯಾಮಕನಾದ ಶ್ರೀ ಕೇದಾರೇಶ್ವರನ ರುದ್ರಾಭಿಷೇಕವು ಜರುಗಿಸಲ್ಪಟ್ಟಿತು, ನಂತರ ಜಗದ್ಗುರು ವಿಶ್ವಾರಾಧ್ಯ ಮೂಲಪೀಠಕ್ಕೆ ರುದ್ರಾಭಿಷೇಕವಾಯಿತು. ಹಾಗೆಯೇ ಪೂರ್ವಾಚಾರ್ಯಸ್ಥಾಪಿತ ಶ್ರೀ ಸೋಮೇಶ್ವರ, ಸಿದ್ಧೇಶ್ವರ, ಮಲ್ಲಿಕಾರ್ಜುನ, ವಿಶ್ವನಾಥಲಿಂಗಗಳಿಗೂ ಪೂಜೆಯಾದನಂತರ ಶಾಸ್ತ್ರೋಕ್ತಪ್ರಕಾರ, ಮ. ಸಾಂಪ್ರದಾಯಾನುಸಾರ ಪಟ್ಟಾಧಿಕಾರಕ್ಕೆ ಮೂಲಪೀಠದಲ್ಲಿಯೇ ಪ್ರಾರಂಭವಾಯಿತು, ೫ ಘಂಟೆಯವರೆಗೆ ಪೂಜಾಕಾರ್ಯವು ನಡೆಯಿತು. ನಂತರ ಸರ್ವೌಷಧಿ ಸಮೇತ ಪೂಜಾದ್ರವ್ಯಗಳಿಂದ ಸಿದ್ಧಮಾಗಿದ್ದ ಸುವರ್ಣರಜತಾದಿ ಕಲಶಗಳಿಂದ ಶ್ರೀಗಳವರಿಗೆ ಅಭಿಷೇಕವು ಮಾಡಿಸಲ್ಪಟ್ಟಿತು. ನಂತರ ಜಗದ್ಗುರುಗಳ ಪಕ್ಕದಲ್ಲಿಯೇ ಸಿದ್ಧವಾದ ಸಿಂಹಾಸನಾರೋಹಣವಂ ಮಾಡಿಸಿ, ಶ್ವೇತಚ್ಛತ್ರ ಚಾಮರಾದಿಗಳಿಂದ ಗೌರವಿಸಿ ಶ್ರೀ ಕಾಶೀ ಜಗದ್ಗುರುಗಳವರು ವರದಹಸ್ತಗಳಿಂದ ಪಂಚಮುದ್ರಾದಿಗಳನ್ನಿತ್ತು ಶ್ರೀ ೧೦೮ ಏಕೋರಾಮ ಜಗದ್ಗುರು ಪಟ್ಟಧಾರಣವಂಗೈದು ಮುದ್ರೆಯನ್ನು ದಯಪಾಲಿಸಿದರು. ತತಃ ಮಂಗಲಾರತಿಯಾಗಿ ಕಾಣಿಕಾರ್ಪಣಕಾರ್ಯವು ನಡೆಯಿತು. ಶ್ರೀ ಪಟ್ಟಚರಾಧಿಕಾರಿಗಳೂ, ದೇಶಿಕ ಬ್ರಹ್ಮಚಾರಿಗಳೂ, ಶಾಸ್ತ್ರಿಮಂಡಳಿಯವರೂ, ನಂತರ ಭಕ್ತಾದಿಗಳೂ ಸರ್ವರೂ ಕಾಣಿಕೆಯನ್ನರ್ಪಿಸಿದರು, ಸರ್ವರಿಗೂ ಆಶೀರ್ವಾದವನ್ನು ದಯಪಾಲಿಸಿದ ನಂತರ ಜಗದ್ಗುರು ಏಕೋರಾಮ ಶಿವಾಚಾರ್ಯ ಮಹಾರಾಜಕೀಜಯ, ಜಗದ್ಗುರು ವಿಶ್ವರಾಧ್ಯ ಶಿವಾಚಾರ್ಯ ಮಹಾರಾಜಕೀಜಯ, ಜಗದ್ಗುರು ಪಂಚಾಚಾರ್ಯ ಮಹಾರಾಜಕೀಜಯ, ಎಂಬ ಜಯಘೋಷದೊಡನೆ ಮೂಲಪೀಠ ದರ್ಶನಂಗೈದು ಜಗದ್ಗುರು ಏಕೋರಾಮ ಸಿಂಹಾಸನಾಧೀಶ್ವರ ಮಹಾಸ್ವಾಮಿಗಳವರ ಪ್ರಾಚೀನಸಮಾಧಿದರ್ಶನಂಗೈದು ಶ್ರೀ ಕೇದಾರೇಶ್ವರ ದರ್ಶನಮಾಡಿದ್ದಾಯಿತು. ನಂತರ ಉಭಯ ಶ್ರೀಗಳ ಸ್ನಾನವಾಗಿ, ಜಗದ್ಗುರೂಭಯಸ್ವಾಮಿಗಳು ಜ್ಞಾನಮಂಟಪಕ್ಕೆ ದಯಮಾಡಿಸಿದವು. ರಾತ್ರಿ ೮ ಘಂಟೆಗೆ ಮಹಾಗಣಾರಾಧನೆಯು ಜರಗಿಸಲ್ಪಟ್ಟಿತು. ನಂತರ ೪-೫ ದಿನ ಪರ್ಯಂತರ ಪೂಜೋಪದೇಶಾದಿ ಕ್ರಿಯೆಗಳು ಜರಗಿದವು. ತತಃ ಏಕಾದಶೀ ಸೋಮವಾರ ತಾ|| ೧೨ರಲ್ಲಿ ಸಾಯಂಕಾಲ ೬ ಘಂಟೆಗೆ ಜಗದ್ಗುರು ಮೂಲಪೀಠದಲ್ಲಿ ಮಹಾ ಪೂಜೆಯಾಯಿತು. ೭ ಘಂಟೆಗೆ ಕಾಶಿಯಲ್ಲಿ ಸುಪ್ರಸಿದ್ಧರಾದ ಮಹಾಮಹೋಪಾಧ್ಯಾಯ, ಆಚಾರ್ಯತೀರ್ಥ ರತ್ನಾದಿ ಪದವೀಧರ ಪಂಡಿತ ಮಂಡಲಿಯ ಆಗಮನವಾಯಿತು. ಅಷ್ಟರಲ್ಲಿಯೇ ಜಗದ್ಗುರೂಭಯಸ್ವಾಮಿಗಳು ಜಗದ್ಗುರು ಪಂಚಾಚಾರ್ಯ ವಿಜಯಂತೆತರಾಮ್ ಎಂಬ ಜಯಘೋಷದೊಡನೆ ದಯಮಾಡಿಸುತ್ತಿರಲು ಪಂಡಿತ ಮಂಡಲಿಯವರು ಸಮುಖಕ್ಕೆ ಗಮಿಸಿ ಬಿಜಯಂಗೈಸಿಕೊಂಡು ಬಂದರು. ಉಭಯ ಶ್ರೀಗಳ ಸ್ವಾಮಿಗಳು ಸಿಂಹಾಸನಗಳಲ್ಲಿ ಮುಹೂರ್ತಗೊಂಡವು.

ಪೂಜ್ಯಪಾದ ಜಗದ್ಗುರುಗಳ ಅಪ್ಪಣೆಮೇರೆಗೆ ಮೊದಲೇ ಸಿದ್ಧವಾದ ತಮ್ಮ ತಮ್ಮ ಯೋಗ್ಯಾಸನಗಳಲ್ಲಿ ಪಂಡಿತರು ಅಲಂಕರಿಸಿದರು. ನಂತರ ಕಾಶೀ ಜಗದ್ಗುರು ಪೂಜ್ಯಪಾದರವರು ನಮ್ಮ ಜಗದ್ಗುರು ಪಂಚಪೀಠಗಳ ಪೈಕಿ ಶ್ರೀ ಹಿಮಾಲಯದಲ್ಲಿ ಜಗದ್ಗುರು ಏಕೋರಾಮ ಪೀಠವೊಂದಾಗಿದೆ. ಆ ವೈರಾಗ್ಯ ಸಿಂಹಾಸನಕ್ಕೆ ಜಗದ್ಗುರು ಪಟ್ಟಾಧಿಕಾರವನ್ನು ನಾವು ಶ್ರೀ ರಾವಲ್ ನೀಲಕಂಠಲಿಂಗ ಶಿವಾಚಾರ್ಯರಿಗೆ ದಯಪಾಲಿಸಿದ್ದೇವೆ. ಈ ಮಹೋತ್ಸವ ನಿಮಿತ್ತವಾಗಿ ನಿಮ್ಮಗಳನ್ನು ಬರಮಾಡಿಕೊಂಡದ್ದಾಯಿತೆಂದು ಅಪ್ಪಣೆಕೊಡಿಸಿ, ನಂತರ ವೇದಾಂತ ವಿಷಯದಲ್ಲಿ ಶಾಸ್ತ್ರಾರ್ಥ ಜರುಗಿಸಲು, ಅಪ್ಪಣೆಯಿತ್ತರು. ಮೊದಲು ವೇದಾಂತದಲ್ಲಿ ಶಾಸ್ತ್ರಾರ್ಥವಾಗಿ ತತಃ ಶಕ್ತಿವಿಶಿಷ್ಟಾದ್ವೈತ ವಿಚಾರನಡೆದು ಸಿದ್ಧಾಂತಮಾಡಿದ್ದಾಯಿತು. ೮|| ಘಂಟೆಯಮೇಲೆ ವೈದಿಕಪಂಡಿತರಿಂದ ವೇದಘೋಷಮಾಡಿಸಲ್ಪಟ್ಟಿತು. ನಂತರ ಸಂಸ್ಥಾನ ಶಾಸ್ತ್ರಿಮಂಡಲಿಯವರಲ್ಲಿ ನ್ಯಾಯವ್ಯಾಕರಣಾದಿ ಶಾಸ್ತ್ರಗಳಲ್ಲಿ ಪ್ರಶ್ನೋತ್ತರಗಳು ಜರಗಿದವು. ನಂತರ ಸರ್ವರಿಗೂ ಆಶೀರ್ವಾದಪೂರ್ವಕ ಉಪಹಾರವು ಕೊಡಲ್ಪಟ್ಟಿತು. ಸರ್ವರಿಗೂ ಗಂಧ ಪುಷ್ಪಾದಿಗಳನ್ನರ್ಪಿಸಿ ೧೧ ಘಂಟೆಗೆ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ವಿದ್ವತ್ಸಭೆಯು ವಿಸರ್ಜಿಸಲ್ಪಟ್ಟಿತು. ಮಂಗಳವಾರ ಬುಧವಾರದಿನ ಜಗದ್ಗುರು ಶ್ರೀ ೧೦೮ ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸಭೆಕೂಡಿ ನ್ಯಾಯವ್ಯಾಕರಣಶಾಸ್ತ್ರಗಳಲ್ಲಿ ಶಾಸ್ತ್ರಾರ್ಥವಾಯಿತು. ಈ ಎರಡು ದಿನದ ಸಭೆಗಳಲ್ಲಿ ಗರವಾಲ ತೆಹರಿ ಪ್ರಾಂತದ ಪಂಡಿತರಿಗೂ ಸಂಸ್ಥಾನದಲ್ಲಿರತಕ್ಕ ಪಂಡಿತರಿಗೂ ಚನ್ನಾಗಿ ವಿಚಾರನಡೆದಿತು. ನಂತರ ಹಗಲಿರುಳು ೩, ೪ ದಿನ ಅಧಿಕವೃಷ್ಟಿಯಾಗುತ್ತಿದ್ದುದರಿಂದ ೪ ದಿನ ಬಿಟ್ಟು ಸೋಮವಾರ ತಾ|| ೧೯ ನೇ ದಿನ ಜಗದ್ಗುರುಗಳವರ ಅಡ್ಡಪಲ್ಲಕ್ಕಿಯುತ್ಸವಕ್ಕೋಸ್ಕರ ಕಾಶೀ ಸಿಂಹಾನದಲ್ಲಿ ಪೂರ್ವದಿಂದ ನಡೆಯುತ್ತಾ ಬಂದ ಸಮಸ್ತ ಬಿರುದಾವಳಿಗನುಸಾರವಾಗಿ ಸಕಲ ವ್ಯವಸ್ಥೆಮಾಡಲ್ಪಟ್ಟು ೩ ಘಂಟೆ ಸುಮಾರಿಗೆ ಪಂಚಕಲಶ ರಾಜಗೊಂಡೆ ಮೊದಲಾದವುಗಳಿಂದ ಅಲಂಕರಿಸಲ್ಪಟ್ಟ ಬೆಳ್ಳಿಯ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಭಗವತ್ಪಾದರು ವಿರಾಜಿಸಲು ಅಡ್ಡಪಲ್ಲಕ್ಕಿಯ ಮಹೋತ್ಸವವು ಮಕರತೋರಣ, ನಂದಿಧ್ವಜ, ವ್ಯಾಸಭುಜ, ಶ್ವೇತಚ್ಛತ್ರ ಹಗಲುದೀವಟಿಗೆ ಮೊದಲಾದ ೭೨ ಬಿರುದಾವಳಿಗಳೊಡನೆ ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದ ರಾಜಮಾರ್ಗದಿಂದ ಹೊರಟಿತು. ಅಡ್ಡಪಲ್ಲಕ್ಕಿಯ ಮುಂಭಾಗದಲ್ಲಿ ಸ್ವಯಂಭಕ್ತಿ ಯುಕ್ತರಾಗಿ ಬಂದ ಸ್ಮಾರ್ತಪಂಡಿತರು ವೀರಶೈವಪಂಡಿತರುಗಳ ವೇದಘೋಷವು ಒಂದೇ ಸವನೇ ನಡೆದಿದ್ದವು. ಅವರ ಮುಂದೆ, ಕರ್ನಾಟಕ ತೈಲಂಗ ಮಹಾರಾಷ್ಟ್ರ ವೀರಶೈವ ಶಿಷ್ಯಮಂಡಲಿಯವರು ಜಗದ್ಗುರು ಪಂಚಾಚಾರ್ಯ ಮಹಾರಾಜಕೀಯ ಎಂಬ ಜಯಘೋಷದೊಡನೆ ಆನಂದದಿಂದ ಸಾಗಿದ್ದರು. ಇವರ ಮುಂದೆ ಭಂಗಾರ ಬೆಳ್ಳಿ ಚಿತ್ರ ಭಾಲ ತ್ರಿಶೂಲ ಛತ್ರ ಚಾಮರಾದಿಗಳನ್ನು ಹಿಡಿದುಕೊಂಡವರ ಪಂಕ್ತಿಯೂ, ಇವರ ಮುಂದೆ ಅಮೌಲ್ಯಾಭರಣಗಳಿಂದ ಅಲಂಕರಿಸಲ್ಪಟ್ಟ ಕುದುರೆಗಳ ಸಾಲೂ ರಾಹುತರ ಸಾಲೂ ಉತ್ಸವದ ವ್ಯವಸ್ಥೆಯ ಬಗ್ಗೆ ದಯಾಲು ಗೌರ್ನಮೆಂಟ್ ಸರಕಾರದವರಿಂದ ಕಳುಹಿಸಲ್ಪಟ್ಟ ಸಿಪಾಯಿಗಳ ಪಂಕ್ತಿಯೂ, ಒಪ್ಪುತ್ತಿದ್ದವು. ಅಲ್ಲದೆ ಜಗದ್ಗುರುಗಳ ಆನಂದಪ್ರದರ್ಶನಕ್ಕಾಗಿ ವಿಜಯನಗರದ ಮಹಾರಾಜರಿಂದ ಕಳುಹಿಸಲ್ಪಟ್ಟ ಆನೆಯು ಉತ್ಸವದ ಮುಂಭಾಗದಲ್ಲಿ ಮೆರೆಯುತ್ತಿತ್ತು ಈ ಸತ್ಸಮಯದಲ್ಲಿ ಪ್ರತ್ಯಕ್ಷದೃಷ್ಟಿಗೆ ಬೀಳುತ್ತಿರುವ ೭೨ ಬಿರುದಾವಳಿಯನ್ನು ನೋಡಿ ಪಟ್ಟಣದ ಜನರು ಸಿಂಹಾಸನದ ರಾಜಗೌರವಾದಿ ಮನ್ನಣೆಗಳನ್ನು ಹೊಗಳುತ್ತಿದ್ದರು.

ಜಗದ್ಗುರುಗಳ ಉತ್ಸವವು ಜಂಗಮವಾಡಿ ಮಹಲ್ಲಾ ಸರಹದ್ದು ಗೋಧೂಲಿಯಾದಲ್ಲಿ ಹಾದು ವಿಸ್ತಾರವಾದ ದಶಾಶ್ವಮೇಧ ಮಾರ್ಗದಿಂದ ಹೊರಟಿತು. ಆ ಮಾರ್ಗದಲ್ಲಿ ಮೊದಲೇ ಭಗವತ್ಪಾದರ ದರ್ಶನಾಪೇಕ್ಷಿಗಳಾಗಿ ನಿಂತಿದ್ದ ಬಂಗಾಲ ಪ್ರಾಂತದ ಅನೇಕ ಶ್ರೀಮಂತರು ಸಪರಿವಾರರಾಗಿ ಭಗವತ್ಪಾದರು ಅಲಂಕರಿಸಿದ್ದ ಪಲ್ಲಕ್ಕಿಯಮೇಲೆ ಪುಷ್ಪವೃಷ್ಟಿಯಂಗೈದರು. ನಂತರ ಪಾಪೌಘವಿಧ್ವಂಸಿನಿಯಾದ ಗಂಗಾತೀರಕ್ಕೆ ಉತ್ಸವವು ತಲ್ಪಲಾಗಿ ಜಗದ್ಗುರುಗಳು ಪಲ್ಲಕ್ಕಿಯಿಂದಿಳಿದು ಗಂಗಾತರಂಗಗಳಿಂದ ಪವಿತ್ರೀಕೃತಮಾದ ಶಿಲೆಯಲ್ಲಿ ಸಿದ್ಧಗೊಳಿಸಿದ ಶ್ರೀಸ್ವಾಮ್ಯಾಸನದಲ್ಲಿ ವಿರಾಜಿಸಿದರು. ಶ್ರೀ ಜಗದ್ಗುರು ಏಕೋರಾಮಾರಾಧ್ಯರ ವ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪಾದುಕೆಗಳನ್ನು ಷೋಡಶೋಪಚಾರದಿಂದ ಪೂಜೆಯಂಗೈದು ಮಂಗಳವನ್ನಾಚರಿಸಿ ದಕ್ಷಿಣವನ್ನು ಹಂಚಿಸಿ ಪುನಃ ಮೊದಲಿನಂತೆ ಸ್ವಸ್ಥಾನವನ್ನಲಂಕರಿಸಿದರು. ಗಂಗಾತೀರದಿಂದ ಉತ್ಸವವು ಹೊರಟು ೭ ಘಂಟೆಗೆ ಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನಕ್ಕೆ ಬಂದು ತಲ್ಪಿತು. ಈ ಪ್ರಕಾರ ಯಾವತ್ತು ಕಾರ್ಯಗಳು ನಿರ್ವಿಘ್ನತೆಯಿಂದ ಜರಗಿದುವು.

ಮಾಪಿಳ್ಳೆಗಳ ದಂಗೆ.

ಮಯಂಕುನ್ನತ್‌ಹಾಜಿಯು ಎರ್ನಾಡು ಉಲವನಾಡು ತಾಲ್ಲೂಕುಗಳಲ್ಲಿ ಖಿಲಾಫತ್ ಪ್ರಭುತ್ವವನ್ನು ಪ್ರಕಟಿಸಿದುದನ್ನು ಕಂಡು ಸೀತಿಕೋಯಿಲ್ ಎಂಬಾತನು ತಾನು ಒಬ್ಬ ಗೌರ್ನರೆಂದು ಹೇಳಿಕೊಂಡು ಖಿಲಾಫತ್ ಪ್ರಭುತ್ವವನ್ನು ಸಾರಿರುವುದಲ್ಲದೆ, ದೇಶವು ತಮ್ಮ ಸ್ವಾಧೀನವಾಗಿರುವುದೆಂತಲೂ

ಇನ್ನು ಯಾರೂ ಊರು ಕೇರಿಗಳನ್ನು ದೋಚಿಕೊಳ್ಳಬಾರದೆಂತಲೂ ತನ್ನ ದಂಡಿಗೆ ಸಾರಿಸಿದ್ದಾನೆ. ಅದನ್ನು ವಿಾರಿ ಮೂವರು ನಡೆದುದಕ್ಕಾಗಿ ಅವರನ್ನು ವಿಚಾರಿಸಿ ಶಿಕ್ಷಿಸಿದನು. ಎಂದರೆ ತುಪಾಕಿಯಿಂದ ಅವರನ್ನು ಸುಟ್ಟುಬಿಡುವಂತೆ ಅಪ್ಪಣೆ ಮಾಡಿದನು. ಆದರೆ ಹುಸಿಮದ್ದನ್ನು ಹಾಕಿ ತುಪಾಕಿಯನ್ನು ಅವರಮೇಲೆ ಹಾರಿಸುವಂತೆ ರಹಸ್ಯವಾಗಿ ಹೇಳಿಕೊಟ್ಟಿದ್ದನು. ಆ ತುಪಾಕಿಗಳು ತಮ್ಮ ಮೇಲೆ ಪ್ರಯೋಗಿಸಲ್ಪಟ್ಟ ಕೂಡಲೇ ಆ ಅಪರಾಧಿಗಳು ಭಯಭ್ರಾಂತರಾಗಿ ಬಿದ್ದು ಮೂರ್ಛಿತರಾದರು. ಎದ್ದಬಳಿಕ ಅವರ ದೇಹದಮೇಲೆ ಗುಂಡಿನ ಗಾಯಗಳೇ ಇರಲಿಲ್ಲ. ಅದು ತನ್ನ ಮಹಿಮೆಯೆಂದು ಆ ಮಾಪಿಳ್ಳೆನಾಯಕನು ಪ್ರಗಲ್ಭವನ್ನು ಕೊಚ್ಚಿಕೊಂಡುದಲ್ಲದೆ, ಇದರಂತೆಯೇ ಇಂಗ್ಲೀಷರು ತನ್ನ ಸೈನಿಕರಮೇಲೆ ಹಾರಿಸುವ ಗುಂಡುಗಳೂ ಕೂಡ ತಗಲುವುದಿಲ್ಲವೆಂತಲೂ, ಫಿರಂಗಿಗಳು ಹಾರುವುದೇ ಇಲ್ಲವೆಂತಲೂ ಹೇಳಿ ತನ್ನ ಜನರನ್ನು ಮೋಸಗೊಳಿಸುತ್ತಿರುವನು.

ಮಾಪಿಳ್ಳೆಗಳ ಗುಂಪುಗಳು ಅಲ್ಲಲ್ಲಿ ಅಡಗಿಕೊಂಡಿದ್ದು ಸೈನಿಕರಮೇಲೆ ಬೀಳುವುದೂ ಹಳ್ಳಿಗಳಿಗೆ ನುಗ್ಗಿ ಧನಿಕರ ಮನೆಯ ನಗನಾಣ್ಯಗಳನ್ನು ದೋಚಿಕೊಳ್ಳುವುದೂ ದೇವಾಲಯಗಳನ್ನು ಭ್ರಷ್ಟಗೊಳಿಸಿ ದೋಚುವುದೂ ಅಲ್ಲಲ್ಲಿ ಸೈನಿಕರಿಗೆ ಸಿಕ್ಕಿದ ದಂಗೆಗಾರರನ್ನು ಸೆರೆಹಿಡಿದು ವಿಚಾರಣೆಗೆ ಒಳಪಡಿಸುತ್ತಿರುವುದೂ, ಸ್ಪೆಷಲ್ ಮ್ಯಾಜಿಸ್ಟ್ರೇಟರ ವಿಚಾರಣೆಗಳೂ ದಂಡನೆಗಳೂ ಇವೆಲ್ಲಾ ನಡೆಯುತ್ತಲೇ ಇವೆ. ನಿರ್ಗತಿಕರಾಗಿ ಹೋಗಿರುವ ಪ್ರಜೆಗಳ ಸಹಾಯಕ್ಕಾಗಿ ದೇಶೀಯರ ಸಹಾಯವನ್ನು ಸರ್ಕಾರದವರು ಕೋರಿದ್ದಾರೆ. ಅನೇಕರು ಸಹಾಯಮಾಡುತ್ತಿದ್ದಾರೆ. ಈಗ ನಡೆಯುತ್ತಿರುವ ಕೋರ್ಟಿನ ವಿಚಾರಣೆಯಲ್ಲಿ ಸಾಕ್ಷಿಗಳ ಮುಖದಿಂದ ಬರುತ್ತಿರುವ ಸಂಗತಿಗಳು ಮಲಬಾರಿನ ಮಾಪಿಳ್ಳೆಗಳ ಘೋರಕೃತ್ಯವನ್ನೆಲ್ಲಾ ವಿಶದಪಡಿಸುತ್ತಲಿವೆ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಕೈಹಿಡಿದು ತುಳಿಸಿದರು.

ಸ್ವಾಮಿ,

ನಾನು ಡಾಕ್ಟರ್ ಟಿ. ಎಸ್. ನಂಜಪ್ಪನವರ ಬಾಲ್ಯಸ್ನೇಹಿತ. ಅವರಷ್ಟು ಉದಾರಮತಿಗಳೂ ಸರಳಹೃದಯರೂ ಸಾಧುಸ್ವಭಾವದವರೂ ಆದ ಜನರು ದೇಶಮಧ್ಯದಲ್ಲಿ ಬಹಳ ವಿರಳ. ಕೆಲವರು ಕುತಂತ್ರಗಾರರು ನಿನ್ನೆ ನಡೆದ ಬೆಂಗಳೂರು ಮ್ಯುನ್ಸಿಪಲ್ ಕೌನ್‌ಸಿಲರ್ ಎಲಕ್ಷನ್ ಕಾಲದಲ್ಲಿ ಡಾಕ್ಟರವರ ಒಳಹೊಕ್ಕು ತಾವುಗಳೆಲ್ಲಾ ಓಟುಕೊಟ್ಟು ನಿಮಗೆ ಸಹಾಯಮಾಡುತ್ತೇವೆಂದು ಬರವಸೆಕೊಟ್ಟು ಅವರಿಂದ ಪ್ರಜಾಮಿತ್ರ ಮಂಡಲಿ ಮೆಂಬರುತನಕ್ಕೆ ರಾಜೀನಾಮೆ ಕೊಡುವಂತೆ ಮಾಡಿಸಿದರು. ಅಷ್ಟು ಮಾಡಬೇಕೆನ್ನುವದೇ ಇವರ ಉದ್ದೇಶವಾಗಿತ್ತಲ್ಲದೆ ಡಾ|| ನಂಜಪ್ಪನವರನ್ನು ಮ್ಯು|| ಕೌನ್‌ಸಿಲರನ್ನಾಗಿ ಮಾಡಬೇಕೆಂಬುದೇನೂ ಅವರ ಕಲ್ಮಷಹೃದಯದಲ್ಲಿರಲಿಲ್ಲ. ಇವರಿಗೆ ಅವರು ಕೌನ್‌ಸಿಲರಾದರೆಷ್ಟು ? ಹೋದರೆಷ್ಟು ? ಮೆಡಿಕಲ್ ಅನುಭವವನ್ನು ಮ್ಯುನ್ಸಿಪಾಲಿಟಿಯಲ್ಲಿ ವಿನಿಯೋಗಿಸಿ ದೇಶಸೇವೆ ಮಾಡಬೇಕೆಂಬ ಕುತೂಹಲವು ಡಾಕ್ಟರ ಮನಸ್ಸಿನಲ್ಲಿ ಬಹಳವಾಗಿದ್ದರೂ ಇರಬಹುದು. ಆದರೇನು ? ಡಾಕ್ಟರು ನಂಬಿ ಮೋಸಹೋದರು. ತಮ್ಮ ಆಪ್ತವೇಷಧಾರಿಗಳು ಕೈಹಿಡಿದು ತುಳಿಸಿದರೆಂಬುದನ್ನು ಡಾಕ್ಟರು ಈಗಲಾದರೂ ತಿಳಿದುಕೊಂಡಿದ್ದಾರು.

ಹಳೆಯ ಮಿತ್ರ.

ಮೊಹರಂ ೧೧ನೆ ದಿನದ ತಮಾಷೆ.

ಸ್ವಾಮಿ,

ಈ ವರ್ಷದ ಮೊಹರಂ ಹಬ್ಬದಲ್ಲಿ ಯಾರೋ ಕೆಲವುಜನಗಳು ಮೈಸೂರ್ ಟವನ್ನಿನಲ್ಲಿ ಹಿಂದೂಮುಸಲ್ಮಾನರಿಗೆ ಜಗಳ ತಂದುಹಾಕಬೇಕೆಂದೂ ಸರ್ಕಾರಕ್ಕೆ ಮುಸಲ್ಮಾನರಮೇಲೆ ಅಪನಂಬಿಕೆ ಹುಟ್ಟಿಸಬೇಕೆಂದೂ ಅವರನ್ನು ಪುಂಡುಜನರೆನ್ನಿಸಬೇಕೆಂದೂ ಹಿಂದೂಜನಗಳಿಗೆ ಎಚ್ಚರಿಸುತ್ತಾ ಮುಸಲ್ಮಾನರಿಗೆ ಬೋಧಿಸುತ್ತಾ. ಆ ೧೧ನೆ ದಿನದಲ್ಲಿ ಮುಸಲ್ಮಾನರು ಮನೆಮನೆಗೆ ನುಗ್ಗಿ ಲೂಟಿಮಾಡುತ್ತಾರೆಂದು ಸುಳ್ಳುಸುದ್ದಿ ಹುಟ್ಟಿಸಿ ಜನರಲ್ಲಿ ಗಾಬರಿಹುಟ್ಟಿಸಿದರು.

ಆದರೆ ದೂರಯೋಚನೆ ಮಾಡಬಲ್ಲ ಹಿಂದೂ ಮುಸಲ್ಮಾನ್ ಜನರುಗಳು ಇದು ಯಾರೋ ಹೊಟ್ಟೆಕಿಚ್ಚಿನಿಂದ ಹುಟ್ಟಿಸಿದ ನಿರಾಧಾರವಾದ ಪೊಳ್ಳುಸುದ್ದಿಯೆಂದು ತಿಳಿದು ಮಾಮೂಲಿನಂತೆ ಮೊಹರಂಹಬ್ಬ ನಡೆಯಿಸಿದರು. ಇದನ್ನು ಪೊಲೀಸ್ ಆಫೀಸರುಗಳು ತಿಳಿದುಕೊಳ್ಳಲಾರದೆ ಸಂಗೀತಕ್ಕೆ ತಾಳಹಾಕಿದಂತೆ ಆ ಕಾಲದಲ್ಲಿ ಮಾಮೂಲಿಗಿಂತ ಜಾಸ್ತಿ ಪೊಲೀಸು ಸಿಬ್ಬಂದಿಯನ್ನೂ ಬಾರ್‌ಸಿಪಾಯಿಗಳನ್ನೂ ಬಂದೂಕು ತೋಟಾಗಳನ್ನೂ ಸಿದ್ಧಪಡಿಸಿ ಬಂದೋಬಸ್ತು ಮಾಡಿಸಿ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರು ಖುದ್ದು ದಯಮಾಡಿಸಿ ಆಗತಕ್ಕ ಲೂಟಿಯನ್ನು ನಿಲ್ಲಿಸಿದಹಾಗೆ ತೋರ್ಪಡಿಸಿರುತ್ತಾರೆ.

ಹಿಂದೆ ಈ ಊರಿನಲ್ಲಿ ತಿಲಕರ ಪುಣ್ಯದಿನ ಮಾಡಿದ ದಿವಸ ಕೆಲವು ಮುಖಂಡ ಜನಗಳು ಯಾವದೋ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ತಿಲಕರ ಉತ್ಸವವೇಷ ಧರಿಸಿಕೊಂಡು ಮೆರವಣಿಗೆ ಮಾಡಿದರೆ ಹಿಂದೂಸ್ಥಾನದಲ್ಲಿ ಮುಸಲ್ಮಾನರು ಗಾಂಧಿಯವರ ಉತ್ಸವಕ್ಕೆ ಸೇರಿದಹಾಗೆ ಇಲ್ಲಿಯೂ ತಿಲಕರ ಉತ್ಸವಕ್ಕೆ ಸೇರುತ್ತಾರೆಂದೂ ಪೊಲೀಸಿನವರು ಬಂದು ಉತ್ಸವಕ್ಕೆ ಅಡ್ಡಿಮಾಡಿದರೆ ಮುಸಲ್ಮಾನರೂ ನಾವುಗಳೂ ಒಟ್ಟಿಗೆಸೇರಿ ಮನ್ಮಾನೆಗಲಾಟೆ ವಗ್ಯೆರೆ ಮಾಡಿ ಮೈಸೂರು ಗೌರ್ನಮೆಂಟಿಗೆ ಒಂದು ಕೆಟ್ಟಹೆಸರು ತರಬಹುದೆಂದೂ ಯೋಚಿಸಿಯೋ ಏನೋ ಬೇಮಾಮೂಲಾಗಿ ಹಿಂದೆ ದೊಡ್ಡದೊಡ್ಡ ಮುಖಂಡರು ನಿಂತು ಮುಂದೆ ಸ್ಕೂಲ್ ವಿದ್ಯಾರ್ಥಿಗಳನ್ನು ಬಿಟ್ಟುಕೊಂಡು ಮೆರವಣಿಗೆ ಹೊರಟರು. ಪೊಲೀಸು ಆಫೀಸರು ಅಡ್ಡಿಮಾಡಿ ತಿಲಕರ ಫೋಟೋ ಕಿತ್ತುಕೊಳ್ಳಲಿಕ್ಕೆ ಹೋದಾಗ ಶ್ರೀಮನ್ಮಹಾರಾಜರ ಫೋಟೋವನ್ನು ಕೊಟ್ಟು ಮಹಾರಾಜರ ಫೋಟೋಗೆ ಅವಮಾನಪಡಿಸಿದರೆಂದು ಸುಳ್ಳುಪುಕಾರು ಹುಟ್ಟಿಸಿ ಪೊಲೀಸು ಆಫೀಸರುಗಳಿಗೆ ಪ್ರೆಸ್ಸಿನಮೇಲೆ ಹೊಡೆದು ತುಳಿದು ಅವಮಾನಪಡಿಸಿ ಮನ್ಮಾನೆ ಕೂಗುತ್ತಾ ಪೊಲೀಸ್ ಸ್ಟೇಷನ್ನುಗಳ ರೂಬರೂಬು ಹೋಗಿ ಕೂಗಿ ಬೈದು ಡಿಸ್ಟ್ರಿಕ್ಟ್ ಡೆ|| ಕಮಿಷನರ್ ಸಾಹೇಬರ ಮೋಟಾರಿನಹಿಂದೆ ಕೂಗಿಕೊಂಡು ಓಡಿಸಿಕೊಂಡು ಕಚರಾ ಕಲ್ಲು ವಗ್ಯೆರೆ ಅವರ ಮೋಟಾರಿನಲ್ಲಿ ಬಿಸಾಡಿ ಅವಮಾನಮಾಡಿ ಕೊನೆಗೆ ರತ್ನಾವಳಿ ಥಿಯೇಟರಿನಲ್ಲಿ ಮನ್ಮಾನೆ ಲೆಕ್ಚರುಗಳನ್ನು ಮಾಡಿದರು. ಆ ಕಾಲದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್‌ಸಾಹೇಬರವರು ದಯಮಾಡಿಸಿ ತೋಟಾಬಂದೂಕ ವಗ್ಯೆರೆ ತಂದು ಆ ಗಲಾಟೆಗಳ ಪೈಕಿ ಒಂದಕ್ಕೂ ಅಡ್ಡಿಪಡಿಸಲಿಲ್ಲ. ತಮ್ಮ ಕೈಕೆಳಗಿನ ಪೊಲೀಸು ಆಫೀಸರುಗಳನ್ನು ಹೊಡೆದು ತುಳಿದು ಅವಮಾನಮಾಡಿದ ಹುಡುಗರಿಗೇ ಆಗಲಿ ಅಥವಾ ಅವರುಗಳ ಹಿಂದೆ ಇದ್ದು ಇಷ್ಟು ಗಲಾಟೆ ಅವಮಾನಮಾಡಿಸಿದ ಮುಖಂಡರಿಗೇ ಆಗಲಿ ಬಂದೋಬಸ್ತು ಮಾಡಿಸಲಿಲ್ಲ.

ಮತ್ತು ಮೊನ್ನೆ ಗೋಕುಲಾಷ್ಟಮಿ ಕಾಲದಲ್ಲಿ ಉತ್ಸವ ಹೊರಟ ಕೊನೇದಿನ ಅರಮನೆಮುಂದೆ ಲೈಟ್‌ಹೌಸ್ ಬಳಿ ನೋಟಕ್ಕೆ ಅನೇಕ ಗೃಹಸ್ಥರ ಹೆಂಗಸರೂ ಮತ್ತು ವಿಡೋಸ್ ಹೋಂ ಹೆಂಗಸರೂ ಮತ್ತು ೩-೪ ಮಂದಿ ಕ್ರಿಶ್ಚಿಯನ್ ಹೆಂಗಸರೂ ಬಂದು ನಿಂತಿರಲು, ಕೆಲವು ಸ್ಕೂಲು ಹುಡುಗರು ಕ್ರಿಶ್ಚಿಯನ್ ಹುಡುಗಿಗೆ ಪಿಚಕಾರಿ ನೀರನ್ನು ಹಾರಿಸಿ ಕೂಗುವುದಕ್ಕೆ ಶುರುಮಾಡಿದರು. ಹೀಗೆ ತನಗೆ ಅವಮಾನ ಪಡಿಸಿದ್ದಕ್ಕಾಗಿ ಸದರಿ ಹುಡುಗಿಯು ಅಳುತ್ತಾ ಇದ್ದಳು. ಅಲ್ಲಿ ನಿಂತಿದ್ದ ಒಬ್ಬ ದೊಡ್ಡಮನುಷ್ಯರು ಈರೀತಿ ಬೀದಿಯಲ್ಲಿ ನಿಮ್ಮಂಥ ವಿದ್ಯಾವಂತರು ಮಾಡುವದು ಸರಿಯಲ್ಲವೆಂದು ಹೇಳಲು, ಅವರಿಗೆ ಹೊಡೆದು ಮನ್ಮಾನೆ ಬೈದುದಲ್ಲದೆ ೫೦೦-೬೦೦ ಮಂದಿಗಳು ಸೇರಿ ಹೆಂಗಸರಿಗೆ ಅವಮಾನದ ಮಾತುಗಳನ್ನಾಡುತ್ತ ಜೋರಾಗಿ ಕೂಗುತ್ತಾ ಇದ್ದರು. ಅಲ್ಲಿದ್ದ ಜನಗಳು ಸದರಿ ಹೆಂಗಸರನ್ನು ಮಹಡಿಮೇಲಕ್ಕೆ ಕಳುಹಿಸಿದರು. ಮಹಡಿಮೇಲಕ್ಕೂ ಕೂಡ ಮಣ್ಣುಕಲ್ಲುಗಳನ್ನು ಬಿಸಾಡುತ್ತಲೂ ಕೂಗುತ್ತಲೂ ಇದ್ದರು. ಆಗ ಇಬ್ಬರು ಸವಾರರು ಬಂದು ಅರಮನೆಮೇಲೆ ಜನಾನಾ ಸವಾರಿಗಳು ಇವೆ. ಹೀಗೆ ಕೂಗಾಡಬ್ಯಾಡಿ ಎಂದು ಹೇಳಿದ್ದಕ್ಕೆ ಅವರಿಗೂ ಬೈದು ಕಲ್ಲುಮಣ್ಣುಗಳಿಂದ ಹೊಡೆದು ಅವಮಾನಮಾಡಿ, ಸದರಿ ಹೆಂಗಸರು ಹೋಗುತ್ತಿರುವಾಗ ಅವರ ಸುತ್ತಲೂ ಮುತ್ತಿಕೊಂಡು ಕೂಗುತ್ತಾ ಲೇವಡಿಮಾಡಿಕೊಂಡು ಅವರುಗಳ ಮನೆವರಿಗೂ ಹೋದರು. ಇದಕ್ಕೂ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್‌ಸಾಹೇಬರು ಪೊಲೀಸ್ ಬಂದೋಬಸ್ತನ್ನು ಮಾಡಿಸಲಿಲ್ಲ.

ಯಾವ ಗದ್ದಲಕ್ಕೂ ಆಸ್ಪದವಿಲ್ಲದೆ ಮಾಮೂಲಿನಂತೆ ಹಿಂದೂಮುಸಲ್ಮಾನರೆಲ್ಲಾ ಅಣ್ಣತಮ್ಮಂದಿರಂತೆ ಸೇರಿ ವೇಷಹಾಕಿಕೊಂಡು ಪಂಜಾಗಳನ್ನು ಹೊತ್ತುಕೊಂಡು ಸಂತೋಷದಿಂದ ನಡಸಿದ ಮೊಹರಂ ಹಬ್ಬಕ್ಕೆ ಮಾತ್ರ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರು ಸಪರಿವಾರ ಖುದ್ದು ದಯಮಾಡಿಸಿದರು. ನಿಜವಾಗಿ ಅಂಥ ಗಲಾಟೆ ಆಗುತ್ತಾ ಇದ್ದರೆ ಇನ್|| ಜನರಲ್ ಸಾಹೇಬರು ಮನೆಯಿಂದ ಆಚೆಗೆ ಹೊರಡುತ್ತಲೇ ಇದ್ದರೋ ಇಲ್ಲವೋ! ಸದ್ಯಃ ಮುಸಲ್ಮಾನರಿಗೆ ದುರ್ದೈವವಾಗಿದೆ. ನಮ್ಮ ಮಹಾಪ್ರಭುಗಳು ಬಡಮಕ್ಕಳಂತೆ ಈ ಜನರನ್ನು ಕಂಡು ಕಾಪಾಡದೆ ಇರುತ್ತಿದ್ದರೆ ಹೊಟ್ಟೆಕಿಚ್ಚಿನಿಂದ ಬೇಯುತ್ತಿರುವ ಜನರ ಮಧ್ಯದಲ್ಲಿ ನಾವು ಬದುಕುವುದಕ್ಕೇ ಆಗುತ್ತಿರಲಿಲ್ಲ. ಭಗವಂತನು ನಮ್ಮ ಮಹಾರಾಜರಿಗೂ ಅವರ ಸರ್ಕಾರಕ್ಕೂ ಶ್ರೇಯಸ್ಸು ಕೊಡಲಿ.

Easu.

ಎಡತೊರೆ ತಾಲ್ಲೂಕಿನಲ್ಲಿ ಬ್ರಾಹ್ಮಣ ನೌಕರರ ದಾಂಧಲೆಗಳು.

ಸ್ವಾಮಿ !

ಈ ತಿಂಗಳು ೧೮ನೇ ತಾರೀಖು ಸ್ಟಾರ್ ಪತ್ರಿಕೆಯಲ್ಲಿ “ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬ್ರಾಹ್ಮಣೇತರ ನೌಕರರ ದೌರ್ಭಾಗ್ಯ” ಎಂಬ ವಿಚಾರವನ್ನು ಓದಿ ನೋಡಿದೆನು. ಅದರಲ್ಲಿ ನಂಜನಗೂಡು ತಾಲ್ಲೂಕಿನ ವಿಚಾರ ಮಾತ್ರ ಇತ್ತು. ಈ ಎಡತೊರೆ ತಾಲ್ಲೂಕಿನ ವಿದ್ಯಮಾನವನ್ನ ನೋಡಿದರೆ ಈ ತಾಲ್ಲೂಕಿನಲ್ಲಿ ಬ್ರಾಹ್ಮಣ ನೌಕರರಿಂದ ಬ್ರಾಹ್ಮಣೇತರರಿಗೆ ಆಗುತ್ತಿರುವ ತೊಂದರೆಯೂ ಸರ್ಕಾರಕ್ಕೆ ಉಂಟಾಗತಕ್ಕ ನಷ್ಟವೂ ಸಹ ವ್ಯಕ್ತವಾಗದೆ ಇರಲಾರದು. ಕೃಷ್ಣರಾಜಸಾಗರದಿಂದ ಮುಳುಗಡೆ ಆಗುವ ಜಮೀನುಗಳಿಗೆ ಬದಲಾಗಿ ಈ ತಾಲ್ಲೂಕಿನಲ್ಲಿ ಹೊಸ ನಾಲಾಕೆಳಗೆ ಬೇರೆ ಜಮೀನು ಕೊಡುತ್ತಿರುವುದು ಸರಿಯಷ್ಟೆ. ಒಂದು ಎಕರೆ ತರೀ ಜಮೀನಿಗೆ ಒಂದು ಎಕರೆ ತರೀ ಜಮೀನು, ಒಂದು ಎಕರೆ ಖುಷ್ಕಿಗೆ ಒಂದು ಎಕರೆ ಖುಷ್ಕಿ ಜಮೀನು, ಕೊಡಬೇಕೆಂತ ವಿಧಾಯಕವಾಗಿದೆ. ಹೀಗಿರುವಲ್ಲಿ ಇಲ್ಲಿನ ಮತ್ತು ಅಕ್ವಿಜಿಷನ್ ಆಫೀಸಿನ ಕೆಲವು ಬ್ರಾಹ್ಮಣ ಗುಮಾಸ್ತರು ಸೇರಿ ಸರ್ಕಾರಿ ಲೆಕ್ಕಗಳನ್ನ ತಿದ್ದಿ ತಮ್ಮ ಕಡೆ ಒಬ್ಬೊಬ್ಬರಿಗೆ ಒಂದು ಎಕರೆ ಖುಷ್ಕಿ ಜಮೀನಿಗೆ ಬದಲಾಗಿ ಒಂದು ಎಕರೆ ತರೀ ಜಮೀನಿನಂತೆ ಅವಾರ್ಡು ಮಾಡಿರುತ್ತಾರೆ. ಈ ರೀತಿ ಸುಮಾರು ೪೦ ಎಕರೆ ತರೀ ಜಮೀನನ್ನ ತಮ್ಮ ಕಡೆಯವರಿಗೆ ಮಾಡಿ ಅವರಿಂದ ತಾವು ಪುನಃ ಕ್ರಯಕ್ಕೆ ತೆಗೆದುಕೊಂಡಂತೆ ಮಾಡಿಕೊಂಡಿರುತ್ತಾರೆ. ಈ ತಾಲ್ಲೂಕಿನಲ್ಲಿ ಅದರಲ್ಲೂ ಇವರಕಡೆಯವರು ಅಂದರೆ ನಾರಾಯಣಪುರದ ಸುಬ್ರಹ್ಮಣ್ಯಜೋಯಿಸರೆಂಬವರಿಗೆ ಈ ರೀತಿ ಖುಷ್ಕಿ ಜಮೀನಿನಂತೆ ಅವಾರ್ಡಾಗಿರುವ ತರೀ ಜಮೀನು ಎಕರೆ ಒಂದಕ್ಕೆ ೮೦೦ ರೂಪಾಯಿ ಲಾಗಾಯಿತು ೧೦೦೦ ರೂ. ಬೆಲೆ ಬಾಳತಕ್ಕದ್ದಾಗಿದೆ. ಇಂಥಾ ಭಾರಿ ಬೆಲೆಬಾಳುವ ತರೀ ಜಮೀನನ್ನ ಎಕರೆ ಒಂದಕ್ಕೆ ೩೦ ರೂ. ಕಿಮ್ಮತ್ತಿನ ಮೇಲೂ ಮುಳಗಡೆ ಆಗದಿರುವ ಸುಮಾರು ೨೦ ರೂ. ಬೆಲೆಬಾಳುವ ಖುಷ್ಕಿ ಜಮೀನಿಗೆ ಬದಲಿಯಾಗಿಯೂ ಕೊಟ್ಟಿರುವುದರಿಂದ ಸರ್ಕಾರಕ್ಕೆ ೩೦-೪೦ ಸಾವಿರ ರೂ. ನಷ್ಟವಾಗಿದೆ. ಮತ್ತು ಇಂಥ ಕೇಸುಗಳು ಅನೇಕವಿರುತ್ತವೆ. ಇದನ್ನು ಮೇಲ್ಪಟ್ಟ ಆಫೀಸರು ಬ್ರಾಹ್ಮಣರಾದದ್ದರಿಂದ ತನಿಖೆ ಮಾಡುವುದೇ ಇಲ್ಲ. ರೈತರು ಅರ್ಜಿಕೊಟ್ಟರೆ ಅವರಿಗೆ ಯಾವುದಾದರೂ ಒಂದು ಕೆಲಸಕ್ಕೆ ಬಾರದ ಜವಾಬು ಹೇಳಿ ಅರ್ಜಿಯನ್ನು ಗೊಟ್ಟಕ್ಕೆ ಹಾಕುತ್ತಾರೆ. ತಾಲ್ಲೂಕು ಆಫೀಸಿನಲ್ಲಿಯೂ ಮತ್ತು ಅಕ್ವಿಜಿಷನ್ ಆಫೀಸಿನಲ್ಲಿಯೂ ಬ್ರಾಹ್ಮಣೇತರ ನೌಕರರು ಕೆಲವರಾದರೂ ಇದ್ದ ಭಾಗದಲ್ಲಿ ಈ ರೀತಿ ಸರ್ಕಾರಕ್ಕೆ ದ್ರೋಹವಾಗುತ್ತಿರಲಿಲ್ಲ. ರೈತರ ಅರ್ಜಿಯನ್ನು ಕೇಳುವರೇ ಇಲ್ಲವಾದ್ದರಿಂದ ಈ ವಿಚಾರ ತಮ್ಮ ಪತ್ರಿಕೆಯಲ್ಲಾದರೂ ಬಿದ್ದು ಈ ಮೂಲಕ ಸರ್ಕಾರದವರ ಗಮನಕ್ಕೆ ಬಂದು ತನಿಖೆಮಾಡಿ ಸಂಬಂಧಪಟ್ಟ ನೌಕರರಿಗೆ ತಕ್ಕ ಬಂದೋಬಸ್ತುಮಾಡಿ ರೈತರನ್ನು ಕಾಪಾಡಬೇಕೆಂದು ಈ ಲೇಖನವನ್ನು ಬರೆದಿರುತ್ತೇನೆ. ಮುಂದಿನ ವಾರದಲ್ಲಿ ಇನ್ನು ಕೆಲವು ವಿಷಯಗಳನ್ನು ತಿಳಿಸುತ್ತೇನೆ.

ಸ್ಥಳವಾಸಿ.

ರೈಲ್ವೆಯವರ ಗೋಳಾಟ.

ಅಯ್ಯಾ,

ನಮ್ಮ ಮೈಸೂರು ರೈಲ್ವೆಯಲ್ಲಿ ನೌಕರಿಯಲ್ಲಿರುವ ಕೆಲವು ಮಂದಿಗಳು ಎಂ. ಎಸ್. ಕಂಪನಿಯವರಿಂದ ಲೆಂಟಾಗಿ ಕೊಡಲ್ಪಟ್ಟರಷ್ಟೆ. ಅವರ ಗೋಳಾಟವನ್ನು ಸೂಚಿಸಲು ಅಸಾಧ್ಯವಾಗಿದೆ. ಎಲ್ಲಾ ರೈಲ್ವೆಯ ನೌಕರರಿಗೂ ಈಗ ಸೇಕಡ ೭೫ ರಂತೆ ಸಂಬಳಗಳನ್ನು ಜಾಸ್ತಿಮಾಡಿರುತ್ತಾರೆ. ಈ ರೈಲ್ವೆಯಲ್ಲಿ ಈಗ ಸೇಕಡ ೩೦ ರಂತೆ ಕೊಟ್ಟಿರುವದೇ ತಪ್ಪಾಗಿದೆ. ರೈಲ್ವೆ ಡಿಪಾರ್ಟುಮೆಂಟಿನವರಲ್ಲಿ ಅನೇಕರು ವಿದ್ಯೆಯಿಲ್ಲದೆ ಸರ್ವೀಸಿನ ಮೇಲೆ ಕಾಲವನ್ನು ತಳ್ಳುತ್ತಿದ್ದಾರೆ. ಈ ಮೈಸೂರು ರೈಲ್ವೆಯಲ್ಲಿ ಅಂಥವರನ್ನು ಮುಂದಕ್ಕೆ ತರುವದಿಲ್ಲವಾಗಿ ತೋರುತ್ತದೆ. ಈ ರೈಲ್ವೆಯಲ್ಲಿರತಕ್ಕ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟರು ತಮಗೆ ಬೇಕಾದ ಬ್ರಾಹ್ಮಣರನ್ನು ಮಾತ್ರ ನೌಕರಿಗೆ ಸೇರಿಸಿಕೊಳ್ಳುತ್ತ ಇತರರಿಗೆ ಕೆಲಸವನ್ನು ಕೊಡದೆ ಖಾಲಿಯಿಲ್ಲವೆಂದು ಹೇಳುತ್ತಾ ಬ್ರಾಹ್ಮಣರಿಗೆ ಮಾತ್ರ ಕೆಲಸಕೊಡುತ್ತಲಿದ್ದಾರೆ. ಎಂ. ಎಸ್. ಎಂ. ರೈಲ್ವೆಯಲ್ಲಿ ೧೦-೧೫ ವರುಷಗಳಿಂದ ಕೆಲಸಮಾಡಿ ಸರ್ವೀಸ್ಸಿರುವವರಿಗೂ ಅಷ್ಟು ಸಂಬಳವಿರುವದಿಲ್ಲ. ನಿನ್ನೆ ಮೊನ್ನೆ ಬಂದವರಿಗೆ ಮೇಲ್ಪಟ್ಟ ಆಫೀಸರುಗಳು ಹೆಚ್ಚಾಗಿ ವೇತನವನ್ನು ಕೊಟ್ಟು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ಆಫೀಸರುಗಳು ಒಬ್ಬರಿಗೊಂದು ಒಬ್ಬರಿಗೊಂದು ಮಾಡಬಹುದೆ ? ಇದಕ್ಕಾಗಿ ರೈಲ್ವೆಯ ನೌಕರರಲ್ಲಿ ಅನೇಕರು ತಮ್ಮಗಳಿಗೆ ಬರುವ ದಸರಾದೊಳಗಾಗಿ ಇತರ ರೈಲ್ವೆಯವರು ಕೊಡುವಂತೆ ಸಂಬಳವನ್ನು ಕೊಡಬೇಕೆಂದು ತಾ|| ೨೨-೯-೨೧ ರಲ್ಲಿ ರೈಲ್ವೆಯ ಟ್ರಾಫಿಕ್ ಮ್ಯಾನೇಜರವರಿಗೂ, ರೈಲ್ವೆ ಸೆಕ್ರೆಟರಿಯವರಿಗೂ ಎಂ. ಎಸ್. ಎಂ. ರೈಲ್ವೆಯ ಏಜಂಟರಿಗೂ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಗೂ ಟೆಲಿಗ್ರಾಂ ಮಾಡಿರುತ್ತಾರೆ. ದಸರಾ ಒಳಗಾಗಿ ಈ ನೌಕರರಿಗೆ ಸಂಬಳ ಬಡಾಯಿಸಿದರೆ ಸರಿ ಇಲ್ಲವಾದರೆ ದಸರಾದಲ್ಲಿ ಅಸಮಾಧಾನವು ಹೆಚ್ಚಿ ಹೋಗುವುದು. ಆದರಿಂದ ಯಾವ ತೊಂದರೆಯೂ ಆಗಗೊಡದಂತೆ ಮೇಲ್ಪಟ್ಟ ಆಫೀಸರುಗಳು ಗಮನಕೊಟ್ಟು ನೌಕರರೆಲ್ಲರಿಗೂ ಸರಿಯಾದ ವೇತನವನ್ನು ಕೊಡುತ್ತಾರೆಂದು ನಂಬಿರುತ್ತೇನೆ.

ಇತಿ ಹಿತಚಿಂತಕ.

ಕೋಲಾರಡಿಸ್ಟ್ರಿಕ್ಟು ವೃತ್ತಾಂತ.

ಈಗ ೧೫ ದಿನಗಳಿಂದ ಮಳೆಬೀಳದೆ ಇರುವದರಿಂದ ಖುಷ್ಕಿ ಪೈರುಗಳು ಒಣಗುತ್ತಿವೆ. ಧಾರಣೆವಾಸಿಗಳು ಏರುತ್ತ ಘಾಬರಿಯಾಗಿರುವದರ ಜೊತೆಗೆ ಬ್ರಾಹ್ಮಣ ಬ್ರಾಹ್ಮಣೇತರ ಚಳುವಳಿಯು ಪರಾಕಾಷ್ಠವನ್ನು ಹೊಂದುತ್ತಿರುವದು ವಿಷಾದಕರವಾಗಿದೆ. ಮೊನ್ನೆದಿನ ಬ್ರಾಹ್ಮಣ ವಿದ್ಯಾಸಹಾಯದ ಮೀಟಿಂಗ್ ಎಂದು ಒಂದುಸಭೆ ನಡೆದದ್ದರಲ್ಲಿ ಒಬ್ಬ ದೊಡ್ಡ ಮನುಷ್ಯರು ತಮ್ಮ ಬ್ರಾಹ್ಮಣ ಪ್ರಭಾವವನ್ನು ತೋರ್ಪಡಿಸುವ ಉಪನ್ಯಾಸದ ಜೋರಾವರಿಯಲ್ಲಿ ಮುಸಲ್ಮಾನ್, ಮರಾಟಾ ಮುಂತಾದಜಾತಿಯ ಜನರಲ್ಲಿ ದರೋಡೆ, ಢಕಾಯತಿ ಮುಂತಾದ ಕ್ರೂರಕೃತ್ಯಗಳನ್ನು ಮಾಡುವ ರಕ್ತಸಂಬಂಧವಿರುವಂತೆ ತಮ್ಮ ಜನಗಳಲ್ಲಿ ಇಲ್ಲವೆಂದು ಪಬ್ಲಿಕ್ಕಿನಲ್ಲಿ ಹೇಳಿ ಅನೇಕರ ಮನಸ್ಸಿಗೆ ನೋವನ್ನುಂಟುಮಾಡಿದರು. ಆ ಜಾತಿಯ ಕೆಲವು ದೊಡ್ಡ ಮನುಷ್ಯರು ಡೆಪ್ಯುಟಿಕಮಿಷನರಾದ ಮೆ|| ಜಹಿರುದ್ದೀನ್ ಮಕ್ಕೆಯವರನ್ನು ಕಂಡು ತಮ್ಮವ್ಯಥೆಯನ್ನು ಅರಿಕೆಮಾಡಲು ಅವರು ಕಾಲೋಚಿತವಾದ ಸಮಾಧಾನ ಹೇಳಿದರೆಂದು ತಿಳಿಯಬಂದಿದೆ. ಬೆಳಿಗ್ಗೆ ಆರಂಭಿಸಿ ರಾತ್ರಿ ೧೦ ಘಂಟೆವರೆಗೆ ಪ್ರತಿದಿನವೂ ನಮ್ಮ ಬ್ರಾಹ್ಮಣವರ್ಗದವರು ನಡೆಸುತ್ತಿರುವ ಸಣ್ಣಪುಟ್ಟ ಮೀಟಿಂಗುಗಳಲ್ಲಿ ಬ್ರಾಹ್ಮಣೇತರ ಹಿಂದೂಗಳನ್ನು ವಾಚಾಮಗೋಚರವಾಗಿ ನಿಂದಿಸುವ ಮಾತುಗಳನ್ನೇ ಪ್ರಯೋಗಿಸುತ್ತಿದ್ದಾರೆ. ಸರ್ಕಾರಿ ನೌಕರಿಯಲ್ಲಿರುವ ಬ್ರಾಹ್ಮಣೇತರರಿಗಂತೂ ನಿತ್ಯವೂ ಸಹಸ್ರನಾಮವಾಗುತ್ತಿದೆ. ಕೆಲವು ನೌಕರರು ಮಾಮೂಲಿನಂತೆ ಒಂದುಕಡೆ ಸೇರಿ ತಮಾಷೆಯಾಗಿರುವಾಗ್ಗೆ ಬ್ರಾಹ್ಮಣೇತರರೆಂಬುವ ಮಾತು ಅನೇಕಸಾರಿ ಉಪಯೋಗಿಸಬೇಕಾದ ಕಷ್ಟನಿವಾರಣೆಗಾಗಿ ಇಟ್ಟುಕೊಂಡಿರುವ ಎನ್.ಬಿ. ಎಂಬ ಪದಕ್ಕೆ ಅರ್ಥವೇನು ಎಂಬ ಚರ್ಚೆಬಂದು, ಎನ್.ಬಿ ಅಂದರೆ (ನೋಬ್ರೇನ್—ಬುದ್ಧಿಹೀನರು) ಎಂದು ಹಾಸ್ಯಮಾಡಿದಾಗ್ಗೆ ಆ ಗುಂಪಿನಲ್ಲಿ ಒಂಟಿಯಾಗಿ ಕುಳಿತಿದ್ದ ಒಬ್ಬ ಬ್ರಾಹ್ಮಣೇತರ ದೊಡ್ಡಮನುಷ್ಯರು ಎನ್.ಬಿ. ಅಂದರೆ ನೋ ಬೆಗ್ಗಿಂಗ್ (ಭಿಕ್ಷೆಮಾಡತಕ್ಕವರಲ್ಲ) ಎಂದು

ಅರ್ಥವಾಗುವದಿಲ್ಲವೇ? ತಾವು ಶಾಸ್ತ್ರೀಯವಾಗಿಯೋಚಿಸಿ ಎಂದು ಹೇಳಿ ಸಮಾಧಾನ ಹೇಳಿದರಂತೆ. ಈ ಮೈಸೂರು ಸೀಮೆಯಲ್ಲಿರುವ ಬ್ರಾಹ್ಮಣೇತರ ಅಧಿಕಾರಿಗಳ ಹೆಸರೆತ್ತಿ ಅವರ ಸ್ವಜಾತಿಜನರ ಮುಂದೆಯೇ ಹೀಯಾಳಿಸುವುದೂ, ಶ್ರೀಮಾನ್ ದಿವಾನ್ ಸಾಹೇಬರನ್ನೇ ನಮ್ಮವರು ಲಕ್ಷ್ಯ ಮಾಡದೆ ಹೀಯಾಳಿಸಿ ಪತ್ರಿಕೆಗಳಲ್ಲಿ ಬರೆಯುತ್ತಿದ್ದಾರೆ. ಯಾರೇನು ಮಾಡಿದರು? ಎಂದು ಲೀಲಾಜಾಲವಾಗಿ ಮನಸ್ಸಿಗೆ ಮಾತುಗಳಾಡುತ್ತಾ ಆಫೀಸುಗಳ ಬಳಿ ರೈತಾಬಿಗಳಿಗೆ ಆಗಬೇಕಾದ ಕೆಲಸಗಳಿಗೆ ಅವರು ಬಂದರೆ ಅವರನ್ನು ಹೀಯಾಳಿಸುವುದೂ, ನೀವು ಇನ್ನುಮೇಲೆ ಮಿಲ್ಲರ್‌ರಿಪೋರ್ಟ್ ಅನುಸರಿಸಿ ದೊರೆಗಳಾಗುತ್ತೀರಿ ಇತ್ಯಾದಿ ಹಾಸ್ಯವಚನಗಳನ್ನಾಡುತ್ತಿರುವದರಿಂದ ಯಾರಿಗೆ ತಾನೇ ಸಿಟ್ಟುಬರುವದಿಲ್ಲ? ಮುಸಲ್ಮಾನ್ ಜನರನ್ನು ತಾವು ನಿಂದಿಸಿರುವದರಲ್ಲಿ ಅವರು ಸಿಟ್ಟುಮಾಡಬಹುದೆಂಬ ಯೋಚನೆಹುಟ್ಟಿ ಇದಕ್ಕೆ ಡೆಪ್ಯುಟೀ ಕಮಿಷನರವರು ಕಾರಣರೆಂದು ಅರ್ಥಬರುವಂತೆ ತಮ್ಮ ಜನಾಂಗದ ಪತ್ರಿಕೆಗಳಾದ ಟ್ರುತ್, ಸಾಕ್ಷಿ ಮುಂತಾದ ಪತ್ರಿಕೆಗಳಲ್ಲಿ ಹಿಂದೂ ಮುಸಲ್ಮಾನರುಗಳಿಗೆ ತುಂಬಾ ವಿರೋಧಹುಟ್ಟಿರುವದೆಂತಲೂ ಡೆ|| ಕ|| ರವರು ಇದಕ್ಕೆ ಕಾರಣರೆಂತಲೂ ಬರೆಸುತ್ತಿದ್ದಾರೆ. ಹೀಗಿರುವದು ನಿಜವಾದರೆ ಈಸಲದ ಮೊಹರಂ ಹಬ್ಬದಲ್ಲಿ ಯಾವ ಗಲಾಟೆಯೂ ನಡೆಯದಿರಲು ಇವರು ಏನು ಹೇಳುವರೋ ತಿಳಿಯದು. ಕೆಲವು ನಿರಂಕುಶ ಅಧಿಕಾರಿಗಳಿಗೆ ಈ ಡೆ|| ಕ|| ರವರ ಕಾಲದಲ್ಲಿ ಅವಕಾಶ ತಪ್ಪಿರುವದರಿಂದ ಅವರ ಬಂಧುಗಳಮುಖಾಂತ್ರ ಈ ಚಳುವಳಿ ನಡೆಯುತ್ತಿದೆ. ತಪಸೀಲು ಕ್ರಮೇಣ ಬರೆಯುತ್ತೇನೆ.

ಟವನ್ ನಿವಾಸಿ.

ಚಿಕ್ಕಮಗಳೂರು ರಿಜಿಸ್ಟ್ರಾರ್ ಆಫೀಸು.

ಚಿಕ್ಕಮಗಳೂರು ತಾಲ್ಲೂಕು ಜಾಗ್ರದಮಾಗಣೆ ಗಾಳಿಪೂಜೆ ದೇವರಹಳ್ಳಿ ಕಾಫೀ ಪ್ಲಾಂಟರ್ ವೀರೇಗೌಡನು ಸೂಚಿಸುವದೇನೆಂದರೆ—ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೋಕಿನಲ್ಲಿ ರಿಜಿಸ್ಟ್ರಾರ್ ಆಫೀಸು ಇರುವುದು ಸರಿಯಷ್ಟೆ. ಇಲ್ಲಿ ಒಬ್ಬಮುನ್ಷಿಯು ಈಗ್ಗೆ ಸುಮಾರು ೨೦ ವರ್ಷದಲಾಗಾಯ್ತು ಗೌರ್ನಮೆಂಟ್ ಮುನ್ಷಿಕೆಲಸವನ್ನು ಮಾಡುತ್ತಾ ಇರುವುದು ಸರ್ವರಿಗೂ ತಿಳಿದು ಇದೆ. ಈಗ ಸುಮಾರು ಒಂದುವರ್ಷದ ಒಳಗಾಗಿ ಮೇಲೆಕಂಡ ವೀರೇಗೌಡನಾದ ನಾನು ಸುಮಾರು ಒಂದುವರೆಸಾವಿರ ರೂಪಾಯಿಗಳ ಕ್ರಯಪತ್ರ ಮತ್ತು ಭೋಗ್ಯಪತ್ರವನ್ನು ರಿಜಿಸ್ಟ್ರಿಗೆಕೊಟ್ಟು ರಿಜಿಸ್ಟ್ರರ್ ಮಾಡಿಸಿರುತ್ತೇನೆ. ಮೇಲೆಕಂಡ ಮುನ್ಷಿಗೆ ಎಷ್ಟೋ ಗ್ರಹಶಾಂತಿ ಮಾಡಬೇಕಾಯಿತು. ಈರೀತಿ ಕೊಡದೆಹೋದಲ್ಲಿ ೧೫ ದಿವಸಗಳಾದರೂ ರಿಜಿಸ್ಟರ್ ಮಾಡುವುದೇಕಷ್ಟ. ಕೇಳಿದಾಗ್ಗೆ ನಾಳೆ ಅಥವಾ ನಾಡಿದ್ದು ಬಾ ಎಂಬ ಸ್ವಭಾವವನ್ನೇ ತೋರುತ್ತಾರೆ. ಈರೀತಿ ಎಂದು ೧೫ ದಿವಸಗಳವರೆಗೆ ಕಾದುನಿಂತು ರಿಜಿಸ್ಟರ್ ಮಾಡಿಸುವುದೇ ದೊಡ್ಡದೇವರ ಹರಿಕೆಯಾಗಿರುತ್ತೆ. ಮಲ್ನಾಡು ಎಂಬುದು ಚಿಕ್ಕಮಗಳೂರಿಗೆ ೩೦-೪೦ ಮೈಲಿ ಗುಡ್ಡಗಳನ್ನು ಹತ್ತಿ ಬರಬೇಕಾಗಿರುತ್ತೆ. ಇಂಥಾದ್ದರಲ್ಲಿ ಬಹಳದೂರದ ಪಾಸಲೆಯಾದುದರಿಂದ ಹೊಟ್ಟೆಗೆ ಅನ್ನವಿಲ್ಲದೆ ಕೊಡುವದಕ್ಕಿಂತ ಇವರು ಕೇಳಿದ ಲಂಚವನ್ನುಕೊಟ್ಟು ರಿಜಿಸ್ಟರ್‌ಮಾಡಿಸಲೇ ಬೇಕಾಗುತ್ತದೆ. ನಂತರ ಈ ಪತ್ರವನ್ನು ತೆಗೆದುಕೊಳ್ಳಬೇಕಾದರೆ ದಿನೇದಿನೇ ಕೇಳಿದಾಗ್ಯೂ ತಯಾರಾಗಿಲ್ಲಾ ಎಂಬ ಸಬೂಬನ್ನೇ ತೋರಿಸುತ್ತಾರೆ. ೫ ರೂಪಾಯಿ ಲಂಚಕೊಟ್ಟರೆ ಕೂಡಲೇ ಕೊಡುತ್ತಾರೆ. ಇಲ್ಲವಾದರೆ ಹೊರಗೆನಿಲ್ಲು, ಒಳಗೆ ಬರಬೇಡ ಎಂತ ದಬ್ಬಿಸುವರು. ಲಂಚವನ್ನುಕೊಟ್ಟರೆ ಕುರ್ಚಿ ಬೆಂಚುಮೇಲೆ ಆದರೂ ಕೂಡ್ರಿಸಬಹುದು. ಮೇಲೆಕಂಡ ವೀರೇಗೌಡನಾದ ನಾನು ಈಗ ಸುಮಾರು ೨೩-೫-೧೯೨೧ರಲ್ಲಿ ಕಾಫಿಭೋಗ್ಯದ ದಸ್ತವೇಜನ್ನು ರಿಜಿಸ್ಟ್ರಾರ್‌ಗೆ ಕೊಟ್ಟಿದ್ದಾಯ್ತು ಅದನ್ನು ತರುವುದಕ್ಕೆ ೩-೪ ದಫೆ ಸುಮಾರು ೨೦ ಮೈಲಿ ಪಾಸಲೆಯಿಂದ ಹೋಗಿ ಕೇಳಿದಾಗ್ಗೆ ಈಗ ತಯಾರಾಗಿಲ್ಲ ಇನ್ನು ನಾಲ್ಕುದಿನ ಕಳೆದನಂತರ ತೆಗೆದುಕೊಂಡುಹೋಗು ಎಂತ ಸೂಚಿಸಿದರು. ನಂತರ ಹೋಗಿ ಕೇಳಿದಲ್ಲಿ ಈವರೆಗೆ ಬಾರದೆನಿಂತದ್ದರಿಂದ ವಾಯಿದೆಹೋಗಿದೆ ಎಂತ ಹೇಳುತ್ತಾರೆ. ಲಂಚ ಹತ್ತುರೂಪಾಯಿಗಳನ್ನು ಕೊಟ್ಟರೆ ಕೊಡುತ್ತೇನೆಂತ ಹೇಳುತ್ತಾರೆ. ಆದಕಾರಣ ಸುಮ್ಮನೆನಿಂತರೆ ಇಲ್ಲಿ ನಿಲ್ಲಬೇಡ ಹೊರಗೆಹೋಗು ಎಂತ ಹೇಳುತ್ತಾರೆ. ಶ್ರೀಮನ್ಮಹಾರಾಜರವರು ಬ್ರಾಹ್ಮಣರಿಗೆ ಮಾತ್ರ ಕುರ್ಚಿ ಬೆಂಚು ಇಡಿಸಿರುತ್ತಾರೆಯೋ ಹೊರತು ಬೇರೆ ಯಾರಿಗೂ ಇಲ್ಲವೆ? ಮತ್ತು ಮಹಾಸ್ವಾಮಿ ಈ ಹಾವಳಿಯನ್ನು ಎಷ್ಟು ದಿವಸಕ್ಕೆ ತಪ್ಪಿಸಿ ದೇವರು ಕಾಪಾಡುತ್ತಾನೋ ಗೊತ್ತಿಲ್ಲ. ಪ್ಲೇಗು ಇನ್‌ಫ್ಲುಯಂಜಾ ಇಂಥವರಿಗೆ ಈವರೆಗೆ ಬಂದಿಲ್ಲ. ಯಾಕಂದರೆ ಇವರ ಅಧರ್ಮಕ್ಕೆ ಅಂಥ ಮಾರಿಗಳೂ ಹೆದರಿ ಹಿಂದೆ ನಿಂತಿರಬಹುದು. ಬಡರೈತರು ಈ ರೀತಿಯಾಗಿ ಲಂಚವನ್ನು ಕೊಟ್ಟರೆ ಗೌರ್ನಮೆಂಟಿನ ಕಂದಾಯಕ್ಕಿಂತ ಈ ಲಂಚವೇ ಮೂರುಪಾಲಾಗಿರುತ್ತೆ. ಈರೀತಿಯಾದರೆ ಬಡರೈತರು ಜೀವನಮಾಡುವುದೇ ಕಷ್ಟ.

ಪೋಸ್ಟಿನಲ್ಲಿ ಮೋಸ.

ಈ ಕೆಳಗೆ ಕಂಡ ಮೋಸದ ವಿಷಯವನ್ನು ಸರ್ವ ಜನಗಳಿಗೂ ತಿಳುವಳಿಕೆ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಕೊಡಗುಜಿಲ್ಲಾ ಕೊಡ್ಲಿಪೇಟೆಯಲ್ಲಿರುವ ಬಾಚಳ್ಳಿ ಸಿದ್ಲಿಂಗಮ್ಮನೆಂಬುವರಿಗೆ ಕೃಷ್ಣರಾಜಪೇಟೆಯಿಂದ ತನ್ನಳ್ಳಿ ಸಿದ್ಲಿಂಗಶೆಟ್ಟರೆಂಬುವರು ೨೪೦ ರೂಪಾಯಿನ ಒಂದು ಇನ್‌ಷೂರ್ ರಿಜಿಸ್ಟರನ್ನು ಟಪ್ಪಾಲ್ ದ್ವಾರಾ ಕಳುಹಿಸಿಕೊಟ್ಟಿದ್ದರು. ಸದರಿ ಇನ್‌ಷೂರ್ ರಿಜಿಸ್ಟರನ್ನು ಮೇಲೆ ಕಂಡ ಸಿದ್ಲಿಂಗಮ್ಮನವರಿಗೆ ಪಾವತಿ ಬಗ್ಗೆ ಕೊಡ್ಲಿಪೇಟೆ ಪೋಸ್ಟುಮಾಸ್ಟರು ಒಂದು ಇನ್‌ಷೂರ್ ರಿಜಿಸ್ಟರು ರಸೀತಿಗೆ ಸೈನ್ ತೆಗೆದುಕೊಳ್ಳುವ ಬಗ್ಗೆ ಪಂಚಾಯತಿದಾರರನ್ನು ಹಾಜರ್ ಪಡಿಸಿಕೊಂಡು ಇನ್‌ಷೂರ್ ರಿಜಿಸ್ಟರನ್ನ ಪಂಚಾಯತಿದಾರರ ರೂಬರೂಬು ಒಡೆದು ತೋರಿಸಬೇಕೆಂದು ಅಪೇಕ್ಷಿಸಿದ್ದರ ಮೇಲೆ ಪಂಚಾಯತರ ರೂಬರೂಬು ಒಡಸಿ ನೋಡುವಲ್ಲಿ ಅದರಲ್ಲಿ ಸದರಿ ಸಿದ್ಲಿಂಗಶೆಟ್ಟರು ಬರೆದಿರುವ ಒಂದು ಕಾಗದವೂ ಬರೆ ಚೂರು ಕಾಗದಗಳೂ ಮಾತ್ರ ಇದ್ದದ್ದೇ ಹೊರತು ನೋಟುಗಳು ಯಾವುದೊಂದೂ ಇರಲಿಲ್ಲ. ಇನ್ನುಮೇಲೆ ಇನ್‌ಷೂರ್ ರಿಜಿಸ್ಟರ್ ತೆಗೆದುಕೊಳ್ಳುವವರು ಎಚ್ಚರಿಕೆಯಲ್ಲಿ ಇರತಕ್ಕದ್ದು ಅವಶ್ಯಕ. ವಿಚಾರ ಪರ್ಯಾವಸಾನ ಮುಂದೆ ತಿಳಿಯಬೇಕಾಗಿದೆ.

ಹಿತಚಿಂತಕ.

ಶ್ರೀ ಬಸವೇಶ್ವರ ವಾಚನಾಲಯ ಸ್ಥಾಪನೆ.

ಹುಲಿಯೂರ್‌ದುರ್ಗ, ತಾಲ್ಲೂಕ್ ಕುಣಿಗಲು.

ನಮ್ಮ ವೀರಶೈವಮತವು ಅಲ್ಪಸ್ವಲ್ಪ ವಿದ್ಯಾವಂತರಾದ ಜನಬಾಹುಳ್ಯವನ್ನುಂಟಾಗಿರುವ ಕಾರಣ ಲೌಕಿಕಜ್ಞಾನ, ಮತಸದಾಚಾರ, ಪಾರಮಾರ್ಥವಿಚಾರಗಳು ಮತೀಯರಲ್ಲಿ ಕಡಿಮೆಯಾಗುತ್ತಾ ಬರುತ್ತಿರುವುದು ಶೋಚನೀಯವಾಗಿದೆ. ಈ ಕಾರಣದಿಂದ ಪ್ರಜಾಸಾಮಾನ್ಯಕ್ಕೆ ಈ ಮತದಲ್ಲಿ ಪ್ರೀತಿಯು ತಗ್ಗಿಹೋಗಿ, ಮತೀಯರಲ್ಲಿ ಅನೇಕ ದುರಾಚಾರ, ಅನೈಕಮತ್ಯ ಮತಾಭಿಮಾನಹಾನಿಗಳುಂಟಾಗಿ ದುರ್ಬಲದಶೆಗೆ ಬರಲುಪಕ್ರಮಿಸಿರುವ ಕಾರಣ ಸಾಧ್ಯವಾದಮಟ್ಟಿಗಾದರೂ ಈ ದುರ್ಬಲದಶೆಯನ್ನು ಕಡಿಮೆಮಾಡಬೇಕೆಂಬ ಸದುದ್ದೇಶದಿಂದ ಈ ವಾಚನಾಲಯವು ಈದಿನ ಈ ಬಸವೇಶ್ವರ ದೇವಾಲಯದಲ್ಲಿ ಸ್ಥಾಪಿಸಲ್ಪಟ್ಟಿದೆ. ಇದನ್ನು ಮತಾಭಿಮಾನಶೀಲರು ದಯವಿಟ್ಟು ತಕ್ಕಸಹಾಯ, ಪ್ರೀತಿ, ವಿಶ್ವಾಸಗಳಿಂದ ಅಭಿವೃದ್ಧಿಗೊಳಿಸುತ್ತಾ ಬರಬೇಕಾದುದು ಈ ಸಮಾಜದ ಪ್ರತಿಯೊಬ್ಬ ವೀರಶೈವರ ಕರ್ತವ್ಯವಾಗಿದೆ. ಈ ಯಂಶವನ್ನು ವಿಶ್ವಭರಿತನಾದ ಶ್ರೀ ಪರಶಿವನು ಸರ್ವರಹೃದಯದಲ್ಲಿಯೂ ಪ್ರೇರಿಸಿ ಜಯಲಾಭವನ್ನುಂಟುಮಾಡಬೇಕಾಗಿ ಪ್ರಾರ್ಥನೆ. ಮೇಲೆಕಂಡ ಉದ್ದೇಶಕ್ಕಾಗಿ ಸೇರಿದ್ದ ಸಭೆಯಲ್ಲಿ ಈ ವಿಷಯ ನಿರೂಪಣವೆಲ್ಲಾ ಆಗಿ ಶ್ರೀ ಜಯನಮಃಪಾರ್ವತೀಪತೇ ಹರಹರಮಹಾದೇವ ಎಂಬ ಜಯಘೋಷದೊಡನೆ, ಸಭೆಯು ವಿರಮಿಸಲ್ಪಟ್ಟು, ಇದರಡಿ ಕಂಡಮೇರೆ ಸರ್ವಾನುಮತದಿಂದ ಕಾರ್ಯನಿರ್ವಾಹಕ ಮಂಡಲಿಯು ಏರ್ಪಡಿಸಲ್ಪಟ್ಟಿದೆ.

ಕಾರ್ಯನಿರ್ವಾಹಕಮಂಡಲಿಯ ವಿವರ.

ಮೆಂಬರುಗಳು.—

ಮ|| ರಾ|| ಗಳಾದ ಮಠದ ಎಡೆಯೂರಪ್ಪನವರು, ಸಂಗಪ್ಪದೇವರು ಸಿದ್ಧಗಂಗಾಮಠ, ಸಿದ್ಧಲಿಂಗಪ್ಪನವರು ಎಡಿಯೂರು, ಎಡಿಯೂರಪ್ಪನವರು ಹಳೇಪೇಟೆ, ಶೆಟ್ಟರ ಸಿದ್ಧಲಿಂಗಯ್ಯನವರು, ಯಜಮಾನ್ ಶಿವಬಸವಯ್ಯನವರು, ನಂಜುಂಡಶೆಟ್ಟರು ಜವಳಿಯಂಗಡಿ, ಶಿವಬಸವಯ್ಯನವರು ಜವಳಿಯಂಗಡಿ, ಚನ್ನಪ್ಪನವರು ಹಳೇಪೇಟೆ, ಅಪ್ಪಾಜಿಶೆಟ್ಟರು, ಸಿದ್ದನಂಜಪ್ಪನವರು, ಚಿ|| ಸಿದ್ಧಲಿಂಗಯ್ಯನವರು, ಅಡವಿಯಪ್ಪನವರು, ಮಾ. ಬಸವಲಿಂಗಯ್ಯನವರು, ಕ. ಬಸವಯ್ಯನವರು, ಚಿಕ್ಕಣ್ಣನವರು.

ಸೆಕ್ರಟರಿ,
ಎಂ. ಚನ್ನಮಲ್ಲಯ್ಯ, ಎ.ವಿ. ಸ್ಕೂಲ್ ಮಾಸ್ಟರ್,
ಹುಲಿಯೂರ್‌ದುರ್ಗ.

ಬಳ್ಳಾರಿ.

ಶ್ರೀಮಜ್ಜಗದ್ಗುರು ಶ್ರೀ ಸಿದ್ಧಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳ ಮಹೋತ್ಸವ.

ಶ್ರೀಮದುಜ್ಜಯನೀ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳ ಮಹೋತ್ಸವವು ತಾ|| ೧೬-೯-೨೧ನೆ ಶುಕ್ರವಾರ ಸಾಯಂಕಾಲ ೮ ಗಂಟೆಗೆ ಮಠಸ್ವಾಮಿಗಳವರ ಮಠದಿಂದ ಹೊರಟು, ಅನೇಕ ಬಿರುದಾವಳಿಗಳ ಸಮೇತ ದಿವ್ಯವಾದ ಪಲ್ಲಕ್ಕಿಯಲ್ಲಿ ಮಂಡಿಸಿ ಅನೇಕ ವಾದ್ಯಘೋಷದೊಡನೆ ಹೊರಟು ಪಲ್ಲಕ್ಕಿಯ ಮುಂಭಾಗದಲ್ಲಿ ಅನೇಕ ಶ್ರೀಮಂತರೂ ಪದವೀಧರರೂ ಅವರ ಮುಂಭಾಗದಲ್ಲಿ ಮಹೋತ್ಸವವನ್ನು ನೋಡುವದಕ್ಕೆ ಬಂದ ಮಹಾಜನರುಗಳೂ ವಾದ್ಯಘೋಷಗಳೂ ಅವರಮುಂದೆ ಗಜಗಳೂ ಹೀಗೆ ಬಾಜಾರಿನ ಉಭಯಪಾರ್ಶ್ವದಲ್ಲಿಯೂ ಲೈನಿನಲ್ಲಿಯೂ ಮಾಳಿಗೆಗಳ ಮೇಲೂ ಮಾಡಿಗಳಮೇಲೂ ಸಂದಿಲ್ಲದಂತೆ ಜನಗಳು ಕಿಕ್ಕಿರಿದು ನಿಂತಿದ್ದರು. ಮಹೋತ್ಸವದ ಮಧ್ಯಭಾಗದಲ್ಲಿ ಶ್ರೀಮಂತ ಗಡಿಗಿ ಷಡಕ್ಷರಪ್ಪನವರ ಪುತ್ರರು ದಿವ್ಯಾಶ್ವಗಳಮೇಲೆ ಅನೇಕ ಹಾರಹೀರಾವಳಿಗಳೊಂದಿಗೆ ನೋಡುವವರ ಕಣ್ಣಿಗೆ ಅತಿಮನೋಹರವಾಗಿ ತೋರುತ್ತಿದ್ದರು. ಆದರೆ ಈ ಪಟ್ಟಣಕ್ಕೆ ದಿನಮಣಿಯಂತೆ ಒಪ್ಪುವ ಶ್ರೀಮಾನ್ ಗಡಿಗಿ ಚನ್ನಪ್ಪ ಮೂರುಕುದುರೆ ಸಾರ್ವಾಟ್‌ರವರು ಮತ್ತು ಅವರ ಸಂಬಂಧಿಗಳ ಪೈಕಿ ಯಾರೂ ಬಂದಿರಲಿಲ್ಲವಾಗಿ ತೋರುತ್ತಿತ್ತು. ಏನುಕಾರಣವೋ ಜಗದೀಶ್ವರನೇ ಬಲ್ಲ. ಆದರೆ ಇದಕ್ಕೆ ಒಂದು ಕಾರಣವುಂಟೆಂದು ಅನೇಕರು ಅಂದುಕೊಳ್ಳುತ್ತಿದ್ದರು. ಅದು ಏನಂದರೆ—ಸ್ವಾಮಿಗಳ ಇಲಾಖಾ ಕಾಶೀನಾಥಶಾಸ್ತ್ರಿಗಳವರು ದ್ವಿತೀಯ ಶಂಭುವೆಂದು ಹೇಳಲ್ಪಡುವ ಶ್ರೀ ಬಸವೇಶನನ್ನು ನಿಂದೆಮಾಡುತ್ತಾರೆಂತಲೂ ಅವರನ್ನು ಆ ವಿಷಯದವಾದಕ್ಕೆ ಕರೆದರೆ ನೋಟೀಸ್‌ಮೂಲಕವಾದರೆ ವಾದಕೊಡುತ್ತೇನೆ ಎಂದು ಹೇಳಿದರೆಂತಲೂ ಈ ವಿಷಯವಾಗಿ ಬಳ್ಳಾರಿ ಪಟ್ಟಣದಲ್ಲಿ ಕಾಶೀನಾಥರಮೇಲೆ ನೋಟಿಸ್‌ದ್ವಾರಾ ತಿಳಿಯಪಡಿಸಿದರೂ ಸುಮ್ಮನೆ ಇರುವರೆಂತಲೂ ಆದುಕಾರಣ ಅವರು ಬರಲಿಲ್ಲವೆಂತಲೂ ಹೇಳುತ್ತಿದ್ದರು. ಈ ಕಾಶೀನಾಥರು ವೀರಶೈವನೇ ಸರಿ. ಆದರೂ ವೀರಶೈವಮತದಲ್ಲಿ ಅನೇಕಗೊಂದಲವನ್ನು ಎಬ್ಬಿಸಿ ಬಹಳ ಕಷ್ಟನಿಷ್ಠುರಗಳಿಗೀಡುಮಾಡಿದರು. ಆದರೆ ಶ್ರೀ ಬಸವೇಶನ ನಿಂದೆಮಾಡುವುದರಿಂದ, ವೀರಶೈವರೆಲ್ಲಾ ಬಹಳ ವ್ಯಾಕುಲಗೊಂಡಿರುತ್ತಾರೆ.

ಒಬ್ಬ ವೀರಶೈವ.

ಕೊಡಗು.

ಹಂಡ್ಲಿ ಹೆಚ್. ಡಿ. ಚನ್ನಮಲ್ಲಪ್ಪನ ಪ್ರಾರ್ಥನೆ—ಈ ಕೆಳಗೆ ನಾನು ಅರಿಕೆಮಾಡಿಕೊಳ್ಳುವ ಸಂಗತಿಯನ್ನು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರುತ್ತೇನೆ.

ಕೊಡಗು ದೇಶದಲ್ಲಿ ಇರುವ ವೀರಶೈವ ಮಹನೀಯರು ವಿದ್ಯಾಫಂಡನ್ನು ಹೊಸದಾಗಿ ತೆರೆಯಲು ಏರ್ಪಡಿಸಿ, ಇದೇ ಸಂಬಂಧದ ಸಭೆಯು ಈ ಸೆಪ್ಟಂಬರ್ ತಾ|| ೧೪ ರಲ್ಲು ಶನಿವಾರ ಸಂತೆಪೇಟೆಯಲ್ಲಿ ಮ|| ಗೋಪಾಲಪುರದ ಎಸ್ಟೇಟ್ ಕಾಫಿಪ್ಲಾಂಟರು ಕಾಳೇಗೌಡರ ಅಧ್ಯಕ್ಷತೆಯಲ್ಲಿ ಸೇರಿ ನಡೆಯಿತು. ಈ ಸಭೆಗೆ ೨೫ ಜನ ಮಹನೀಯರು ದಯಮಾಡಿಸಿದ್ದರು. ಅಧ್ಯಕ್ಷರು ಉಪನ್ಯಾಸಮಾಡಿದ್ದಕ್ಕೆ ಸಭೆಯವರೆಲ್ಲರೂ ಕರತಾಡನಗಳಿಂದ ಸಂತೃಪ್ತಿಹೊಂದಿದರಲ್ಲದೆ ತಮ್ಮ ತಮ್ಮ ಶಕ್ತ್ಯನುಸಾರ ಚಂದಾ ಕೊಡುವುದಾಗಿ ಒಪ್ಪಿ ಚಂದಾಪಟ್ಟಿಯು ಆಯ್ತು. ೭೫೦ ರೂ. ವರೆಗೆ ಲೆಕ್ಕವಾಯ್ತು. ಹಿಂದೆನಿಂದ ಪ್ರತಿಯೊಂದು ಗ್ರಾಮಕ್ಕೂ ಆರಿಸಲ್ಪಟ್ಟ ಮೆಂಬರುಗಳು ಗ್ರಾಮಾಂತರಗಳ ಮೇಲೆ ಸಂಚರಿಸಿ ಆಬಗ್ಗೆ ಗ್ರಾಮಗಳಲ್ಲಿ ಜಮೆಯಾಗಬಹುದಾದ ಮೊಬಲಗಿನ ಚಂದಾಪಟ್ಟಿಯನ್ನು ತಯಾರಿಸಿಕೊಡಬೇಕಾಗಿ ಹೇಳಿ, ಸಭೆಯು ಮುಕ್ತಾಯವಾಯ್ತು.

ಶೋಕಜನಕ ಮೃತ್ಯು.

ಕಾಶಿಯಲ್ಲಿ ೮-೯ ವರ್ಷಗಳವರೆಗೆ ನ್ಯಾಯಶಾಸ್ತ್ರವನ್ನು ಅಭ್ಯಾಸಮಾಡಿ ಶರೀರದ ಅಸ್ವಾಸ್ಥ್ಯದಿಂದ ಸ್ವಲ್ಪ ದಿನಗಳ ಹಿಂದೆ ಸ್ವದೇಶಕ್ಕೆ ಹೋಗಿದ್ದ ಶ್ರೀ|| ಸಂಗಮೇಶ್ವರಶಾಸ್ತ್ರೀ ಅಣದುರ್ಗ ಇವರು (ಸೊಲ್ಲಾಪುರ ಕಿರೀಟಮಠದ ಉತ್ತರಾಧಿಕಾರಿ) ಭಾದ್ರಪದ ಶು|| ೧೦ ಭಾನುವಾರ ಸ್ವಗ್ರಾಮದಲ್ಲಿ ಭೌತಿಕ ಶರೀರವನ್ನು ತ್ಯಾಗ ಮಾಡಿದರೆಂದು ತಿಳಿಸಲು ಬಹು ವ್ಯಸನವಾಗುತ್ತದೆ. ಇವರು ಇನ್ನೂ ಅಲ್ಪವಯಸ್ಕರಿದ್ದು ವಿದ್ಯಾವ್ಯಸನಿಗಳೂ ಮುಂದೆ ಸಮಾಜದ ಉನ್ನತಿಗಾಗಿ ಪ್ರಯತ್ನಮಾಡುವವರೂ ಆಗಿದ್ದು ಇಷ್ಟರಲ್ಲೇ ಸಮಾಜವನ್ನು ಬಿಟ್ಟು ಹೋದುದರಿಂದ ನಮಗಾದ ವ್ಯಸನವನ್ನು ಎಷ್ಟು ಹೇಳಿದರೂ ಸ್ವಲ್ಪವೇ.

ವ್ಯವಸ್ಥಾಪಕ ವೀರಶೈವ ಮಂದಿರ,
ವಿದ್ಯಾರ್ಥಿ ಬನಾರಸ್ ಸಿಟಿ.

ತಾಳೀಕೋಟೆ.

ತಾರೀಖು ೧೭-೯-೧೯೨೧ನೆಯ ಶನಿವಾರ ದಿವಸ ಶ್ರೀ ಖಾಸಗತ ಸ್ವಾಮಿಗಳವರ ಮಠದಲ್ಲಿ ಇಲ್ಲಿಯ - ನ್ಯೂ ಇಂಗ್ಲೀಷ್ ಸ್ಕೂಲಿನ ವ ಸಂಸ್ಕೃತ ಪಾಠಶಾಲೆಯ "ವಾರ್ಷಿಕ ಸಭಾ ಕೂಡಿತ್ತು ಸಭೆಗೆ ಯಾವತ್ತು ಪ್ರಸಿದ್ಧ ವರ್ತಕರು ಪ್ರಾಥಮಿಕ ಶಾಲೆಯ ಮಾಸ್ತರರೂ ಪ್ರೇಕ್ಷಕರೂ ಕೂಡಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ಇಲ್ಲಿಯ ಸುಪ್ರಸಿದ್ಧ ವರ್ತಕರಾದ ಶ್ರೀಯುತ ವೀರಭದ್ರಪ್ಪಾ ಅಣ್ಣಾ ಶೀಲವಂತ ಇವರು ವಹಿಸಿದ್ದರು. ಸಭೆಯಲ್ಲಿ ಮೊದಲಿಗೆ ಪಾಠಶಾಲೆಯ ವ ಇಂಗ್ಲೀಷ್ ಶಾಲೆಯ ವಿದ್ಯಾರ್ಥಿಗಳ ಕಡೆಯಿಂದ ಶ್ರೀ ಗಜಾನನ ಈಶ್ವರಸ್ತುತಿಪರ ಪದಗಳು ಆದವು. ಆ ಮೇಲೆ ಶ್ರೀಯುತ ರಾ|| ಸಿದ್ಧರಾಮಪ್ಪಾ ಅಣ್ಣಾಚಪ್ಪಳಗಿ ಇವರು ಸಂಸ್ಕೃತ ಪಾಠಶಾಲೆಯ ವಾರ್ಷಿಕ ರಿಪೋರ್ಟನ್ನು ಓದಿ ಹೇಳಿದರು. ಇಂಗ್ಲೀಷ್ ಶಾಲೆಯ ರಿಪೋರ್ಟನ್ನು ತಯಾರುಮಾಡಿ ಅದರ ವ್ಯವಸ್ಥಾಪಕರಾದ ಮಿ|| ಪರಪ್ಪಾ ಅಣ್ಣಾಸರಸೆಟ್ಟಿ ಇವರು ಓದಿ ಹೇಳಿದರು. ಮತ್ತು ಮುಂದಿನ ವರ್ಷದ ಕೆಲಸಮಾಡಲಿಕ್ಕೆ ಯಾರನ್ನು ನೇಮಿಸಬೇಕೆಂದು ಯಾವತ್ತರಿಗೂ ವಿಚಾರಮಾಡುತ್ತಿರಲಿಕ್ಕಾಗಿ ಭಿನ್ನಭಿನ್ನ ಮತಗಳು ಇದ್ದು - ಬಲಾಚಪೃಥ್ವೀ - ಈ ನ್ಯಾಯದಂತೆ ಸ್ವಾಮಿಯವರ ಮನಸ್ಸಿಗೆ ಬಂದಂತೆ ಗತವರ್ಷದ ಚಾಲಕರಿಗೇ ಹಂಗಾಮಿಯಾಗಿ ನೇಮಿಸಲ್ಪಟ್ಟಿತು. ಸಭೆಯ ಅಧ್ಯಕ್ಷರು ಎಲ್ಲ ದಾನದಲ್ಲಿ ಅನ್ನದಾನ ವಿದ್ಯಾದಾನ ಇವು ಬಹಳೇ ಮಹತ್ತರವಾದುವುಗಳಾದುದರಿಂದ ಮೇಲಿನ ಎರಡು ಸಂಸ್ಥೆಗಳು (ಪಾ. ಇ.) ನಿಯಮಿತವಾಗಿ ನಡೆಯಲಿಕ್ಕೆ ಒಂದು ಕಮಿಟಿಯನ್ನು ನೇಮಿಸಬೇಕು. ಕಮಿಟಿಗೆ ಪ್ರೆಸಿಡೆಂಟ್ ವೈಸ್‌ಪ್ರೆಸಿಡೆಂಟ್, ಮೆಂಬರರು, ಸೆಕ್ರೆಟರಿಗಳು ಹೀಗೆ ಅನುಕ್ರಮವಾಗಿ ಜನರನ್ನು ನೇಮಿಸಬೇಕಾಗುತ್ತದೆ. ಹೀಗಾದರೇ ಸಂಸ್ಥೆಗಳು ಬಿನ್ ಜವಾಬದಾರಿಯಿಂದ ಬಹು ದಿವಸ ನಡೆಯುತ್ತವೆಂದು ಎಷ್ಟು ಪ್ರಯತ್ನದಿಂದ ಹೇಳಿದರೂ ಸಭಿಕರು ಮನ್ನಿಸಲಿಲ್ಲ. ಸಭಿಕರು ಹೀಗೆ ಹೇಳಿದರು-ನಮ್ಮೂರಲ್ಲಿ ಯಾವ ಕಾರ್ಯವಾದರೂ ವ್ಯವಸ್ಥೆಯಿಂದ ನಡೆಯುವದಿಲ್ಲ. ಹೀಗೆ ಸ್ವಲ್ಪ ಹೆಚ್ಚು ಕಡಿಮೆ ಒದ್ದಾಡುತ್ತ ಹೋಗೋಣವೆಂದು ಹೇಳಿದರು. ಗುರುವಿಲ್ಲದ ಮಠ ಹಿರಿಯರಿಲ್ಲದ ಮನೆ ಇವು ಹೇಗೆ ನಡೆಯುತ್ತವೆಯೋ ಹಾಗಾಗದೆ ಸಂಸ್ಥೆಗಳಿಗೆ ಪ್ರೆಸಿಡೆಂಟರು ಬೇಕು. ಅದ್ದರಿಂದ ಮೇಲಿನ ಎರಡೂ ಸಂಸ್ಥೆಗಳಿಗೆ ಬೇರೆ ಬೇರೆ ಮೆಂಬರರನ್ನು ನೇಮಿಸಿ ಅವರಿಂದ ಕೆಲಸಮಾಡಿಸಿಕೊಂಡು ಸಂಸ್ಥೆಗಳು ಚಿರಾಯುಗಳಾಗಿ ನಡೆಯಲಿಕ್ಕೆ ಮೆಂಬರ ಜನರನ್ನು ಪ್ರೋತ್ಸಾಹಿಸುತ್ತ ಹೋದರೆ ಬಹುದಿವಸ ನಡೆಯುವದು. ಇಲ್ಲವಾದರೆ ಅಸೂಯೆಯಿಂದ ಹೀಯಾಳಿಸುತ್ತಾ ಹೋದದ್ದಾದರೆ ಎಂದೂ ನಿಮ್ಮ ಸಂಸ್ಥೆಗಳು ಊರ್ಜಿತಾವಸ್ಥೆಗೆ ಬರಲಾರವು. ಅಯ್ಯಾ ಸಮಾಜಸೇವಕರೇ ನಿಮ್ಮ ರಿಪೋರ್ಟನ್ನು ನೋಡಲಿಕ್ಕಾಗಿ ಬೊಕ್ಕಸದಲ್ಲಿ ಭಾಂಡಾರ ವಿದ್ದಂತೆ ಕಂಡು ಬರುವದಿಲ್ಲ. ಸದರಿ ಸಂಸ್ಥೆಗಳಿಗೆ ರೊಕ್ಕವೇ ಮೂಲಾಧಾರವು. ನಡು ನೀರಲ್ಲಿ ಕೈಬಿಟ್ಟು ನೋಡುತ್ತ ಆರಂಭಶೂರರಾಗಿ ಕೂಡ್ರಬೇಡಿರಿ. ವಿದ್ಯಾವರ್ಧಕ ಸಂಘಕ್ಕೆ ಫಂಡು ಕೂಡಿಸಿ ಹೆಚ್ಚಿನ ಉತ್ತೇಜನಕ್ಕೆ ತಂದು ಸಂಸ್ಥೆಗಳು ಚಿರಾಯುವಾಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಕೈಕೊಂಡ ಮಹತ್ಕಾರ್ಯವು ಯಶಸ್ವಿ ಆಗುವುದಕ್ಕೆ ಜಗದೀಶ್ವರನ ಅಪ್ಪಣೆಯ ಮೇರೆಗೆ ಮೇಘರಾಜನು ತತ್‌ಕ್ಷಣದಲ್ಲಿಯೇ ಸುವೃಷ್ಟಿಯನ್ನು ಕೊಟ್ಟದ್ದಕ್ಕೆ ಸಭೆಯ ಯಾವತ್ತೂ ಜನರು ಸಂತೋಷಭರಿತರಾಗಿ ಶ್ರೀ ಖಾಸಗತಸ್ವಾಮಿ ಮಹಾರಾಜಕೀಜಯ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

೧೯೨೧ ನೆಯ ಇಸವಿ ಅಕ್ಟೋಬರ್ ತಾ|| ೨ ರಿಂದ ೧೯೨೧ ನೆಯ ಅಕ್ಟೋಬರ್ ತಾ|| ೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮ ಸಂವತ್ಸರದ ಆಶ್ವೀಜ ಶುದ್ಧ ಪಾಡ್ಯಮಿಯಿಂದ ಆಶ್ವೀಜ ಶುದ್ಧ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾಮಾಸ
2	[1]ಭಾನು	ಪಾಡ್ಯ	25-11	ಹಸ್ತ	6-37	17
3	ಸೋಮ	ಬಿದಿಗೆ	21-32	ಚಿತ್ತ	4-25	18
4	ಮಂಗಳ	ತದಿಗೆ	18-47	ಸ್ವಾತಿ	3-7	19
5	ಬುಧ	ಚೌತಿ	17-11	ವಿಶಾ	2-52	20
6	ಗುರು	ಪಂಚ	16-50	ಅನೂ	3-51	21
7	[2]ಶುಕ್ರ	ಷಷ್ಠಿ	17-41	ಜ್ಯೇಷ್ಠ	6-0	22
8	[3]ಶನಿ	ಸಪ್ತ	19-52	ಮೂಲ	9-25	23

(1) ನವರಾತ್ರಾರಂಭಃ, ಜಯಲಕ್ಷ್ಮೀವ್ರತಂ. (2) ಸರಸ್ವತೀಪೂಜಾ. (3) ಕಾಳರಾತ್ರಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರಾನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಸಭಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಅಕ್ಟೋಬರ್ ತಾರೀಖು ೯ ನೆಯ ಭಾನುವಾರ. ಸಂಚಿಕೆ ೪೦

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.
38

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.		ಇಂದ ರೂ. ವರೆಗೆ.
4	0.12-0	,	50-0-0
5	0- 8-0	..	100-0-0
6	0-12-0	,,	100-0-0
7	6. 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ		ರೂ ವರೆಗೆ.
ಉದ್ದಿನ ,,	15-0-0	,,	40-0-0
ಮಣಸು ,,	7-8-0	,,	15-0-0
ಕಡಲೆ ,,	2-8-0	,,	7-0-0
ನೆನೆವಳಕಡಲೆ,,	1-8-0	,,	3-0-0
ಕಮಲಾಕ್ಷಿ,,	1-0-0	,,	2-0-0
ದೊಡ್ಡ ,,	0-8-0	,,	1-0-0
ಅದಕ್ಕಿಂತ ,,	0-6-0	,,	0-8-0
ಸ್ಫಟಿಕ108ಕ್ಕೆ	4-8-0	,,	30-0-0
ಶ್ರೀಚಕ್ರ1ಕ್ಕೆ	8-0-0	,,	100-0-0
ಲಿಂಗ 1ಕ್ಕೆ	1-0-0	,,	100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
ಕಂಪನಿ, ಚೌಕಂಬಾ ಕಾಶೀ.
32

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ವಾಪಸ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 21

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಶಕ್ತಿಶೋಧಕ ! ಮನೋಲ್ಲಾಸಿಕವೆಂಬ ಧಾತುಪೌಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 50

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರಕೃಚ್ಛ್ರರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಣಿಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಷ್ಟೇಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನುವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆ ಕುಟ್ಟು, ಹೊಟ್ಟೆಶೂಲೆ ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸರಿಯಾಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚುರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ತಿಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಅಸ್ಥಿಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತತ್‌ಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತತ್‌ಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗಿ ಕೊಡುತ್ತೇವೆ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಡಜನ್ ಮಾತ್ರೆಗಳಿಗೆ ವಿ. ಪಿ. ಸಹಿತ ರೂ. ೦—೮—೦ ಮತ್ತು ನೀವು ಈ ಔಷಧಿಯನ್ನು ಪ್ರಾರಂಭ ಮಾಡುವ ಕಾಲದಲ್ಲಿ ನಮ್ಮ ನೋಟೀಸಿನಲ್ಲಿ ಹೇಳಿರುವ ಮುಹೂರ್ತರಾಜನೆಂಬ ಶಿವಲಿಖಿತದಲ್ಲಿ ಅಮೃತಮಹೇಂದ್ರಿಯವಾಳ್ಯಗಳನ್ನು ನೋಡಿ ಮೊದಲು ಔಷಧ ತೆಗೆದುಕೊಳ್ಳಬೇಕು. ನಿಮ್ಮ ವಿಳಾಸ ಚೆನ್ನಾಗಿಲ್ಲದಿದ್ದರೆ ಗಮನ ಕೊಡುವುದಿಲ್ಲ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹ ರೂ. ೩—೪—೦.

ನಮ್ಮ ವಿಳಾಸ:—ಎಚ್. ಎಂ. ಶರಣಬಸವಾರ್ಯ, ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ. ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ; ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪ್ರಕಟನೆ.

ಒಬ್ಬರು ಸ್ವಾಮಿಗಳು ಬೇಕಾಗಿದೆ.

ಶ್ರೀ ಜಗದ್ಗುರು ಗಂಗಾಧರ ಮಹಾಸ್ವಾಮಿಗಳ ಉತ್ತರಾಧಿಕಾರಿಗಳನ್ನು ಹುಬ್ಬಳ್ಳಿ ಮೂರುಸಾವಿರ ಮಠಕ್ಕೆ ನೇಮಿಸಬೇಕಾಗಿದೆ. ಅಪೇಕ್ಷೆಯುಳ್ಳ, ಸದ್ವಂಶಜರೂ ವಿದ್ಯಾಸಂಪನ್ನರೂ ಆದ ಮಾಹೇಶ್ವರಸ್ಥಳದ ಬ್ರಹ್ಮಚಾರಿಗಳು ತಮ್ಮ ಸ್ಥಳ, ಕುಲ ವಿಚಾರವನ್ನೂ ವಿದ್ಯಾಭ್ಯಾಸಂಗದ ವಿಷಯವನ್ನೂ ವಯಸ್ಸನ್ನೂ ತಿಳುಹಿಸಿ ಕೆಳಗೆ ಸಹಿಮಾಡಿದ ಗೃಹಸ್ಥರಿಗೆ ಆದಷ್ಟುಬೇಗ ಪತ್ರಬರೆಯಬೇಕು. ಹಾಂಗು ಪತ್ರದೊಡನೆ ತಮ್ಮ ಫೋಟೋ ಕಳಿಸಬೇಕು. ಇತರರು ಸಹಾ ತಮಗೆ ಪರಿಚಯವಿದ್ದ ಯೋಗ್ಯರ ಸ್ಥಳ, ಕುಲ ವಿಚಾರಗಳನ್ನೂ ವಿದ್ಯಾಭ್ಯಾಸವನ್ನೂ ತಿಳಿಸಬೇಕು; ಸಾಧ್ಯವಿದ್ದರೆ ಫೋಟೋ ಕಳಿಸಬೇಕು. 2

(ಸಹಿ) ಚಿಕ್ಕವೀರಯ್ಯನವರು ಚಿಕ್ಕವೇರಿ ಸಾಕೀನ ಹುಬ್ಬಳ್ಳಿ.
(ಸಹಿ) ಚನ್ನಯ್ಯನವರು ಹಂದಿಗೋಳಮಠ ಸಕೀನ ಹುಬ್ಬಳ್ಳಿ.
(ಸಹಿ) ಮಲ್ಲಪ್ಪಾ ವಾರಕಾರ ಸಾ|| ಹುಬ್ಬಳ್ಳಿ
(ಸಹಿ) ಮಹದೇವಪ್ಪಾ ಸಿಂದಗಿ ಸಾಕೀನ ಹುಬ್ಬಳ್ಳಿ.
(ಸಹಿ) ಗುರುಸಿದ್ದಪ್ಪಾ ಕೋರಿ ಸಾಕೀನ ಹುಬ್ಬಳ್ಳಿ.
(ಸಹಿ) ಗುರಪ್ಪ ನೀಲಿ ಸಾಕೀನ ಹುಬ್ಬಳ್ಳಿ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಅಕ್ಟೋಬರ್ ತಾ|| ೯ ನೆಯ ಭಾನುವಾರ.

ಮಿಲ್ಲರ್ ಸಂಘದ ವರದಿಯ ಕದಳೀಫಲ

ದೇವತಾಬಿಂಬಗಳ ಮುಂದೆ ನೈವೇದ್ಯಕ್ಕಾಗಿ ಕಾಯಿಹಣ್ಣುಗಳನ್ನು ಇಟ್ಟು ನಿವೇದನೋಪಚಾರವನ್ನು ಸಲ್ಲಿಸುವುದುಂಟಷ್ಟೆ. ಆ ಉಪಚಾರವಾದ ಬಳಿಕ ಆ ಫಲಭಕ್ಷ್ಣಗೆಯು ಘಂಟಾನಾದವನ್ನು ಮಾಡಿದ ಪೂಜಾರಿಯ ಪಾಲು ತಾನೇ ಆಗುವುದು ? ಅದರಂತೆ ಮೈಸೂರು ಸರ್ಕಾರದಲ್ಲಿ ಏರ್ಪಟ್ಟಿರುವ ಮಿಲ್ಲರ್ ಸಂಘದ ವರದಿಯ ಫಲಿತಾಂಶವೂ ಆಗಿದೆಯೆಂದು ಹೇಳಬೇಕಾಗಿದೆ. ಮಿಲ್ಲರ್ ಸಂಘವು ೨ ವರ್ಷ ಕಷ್ಟಪಟ್ಟು ಬೆಳೆದು ಆಣಿಮಾಡಿದ ವರದಿಯ ರೂಪವಾದ ಫಲವನ್ನು ಪ್ರಭುತ್ವದವರೇನೋ ಹಿಂದುಳಿದ ಜನವರ್ಗಗಳ ಉದ್ಧಾರಕ್ಕಾಗಿ ಏರ್ಪಡಿಸಿಕೊಟ್ಟಿರುವುದಾಗಿ ಅಪ್ಪಣೆಮಾಡಿಟ್ಟರು. ಆದರೆ ಆ ಫಲದ ಅನುಭವವನ್ನು ಮಾತ್ರ ಉದ್ದಿಷ್ಟರಾದ ಜನರಿಗೆ ಯಾವ ವಿಧದಿಂದಲೂ ಇದುವರೆಗೂ ನಡೆಯಿಸಿಕೊಟ್ಟುದು ಗೋಚರಕ್ಕೆ ಬರಲಿಲ್ಲ. ಮಿಲ್ಲರ್ ಸಂಘದ ವರದಿಯ ಅವತರಣವನ್ನು ನೋಡಿ ಅಸೂಯೆಪಟ್ಟು ಬೊಬ್ಬೆಯಿಡುವ ಜನರಿಗೇ ಇನ್ನಷ್ಟು ಫಲಲಾಭವು ಹೆಚ್ಚಾಗಿಯೇ ಆಗುತ್ತಲಿದೆ. ಹಣ್ಣಿನ ಸಿಪ್ಪೆಯು ಕೂಡ ಈ ಬಡಪಾಯಿಗಳಿಗೆ ಲಭಿಸಿಲ್ಲ.

ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರಿ ಅಪ್ಪಣೆಯು ಹೊರಬಿದ್ದೀಚೆಗೆ ಮುಂಬರಿದ ಜನವರ್ಗಗಳಿಗೆ ಸೇರಿದ ನಾಲ್ವರಿಗೆ ನಾಲ್ಕು ಉದ್ಯೋಗಗಳು ಎಂದರೆ ಒಂದು ಗೌರ್ನಮೆಂಟ್ ಅಡ್ವೋಕೇಟ್ ಪದವಿಯೂ, ಮೂರು ಮುನ್ಸೀಫ್‌ಗಿರಿಗಳೂ ಕೊಡಲ್ಪಟ್ಟಿವೆ. ಇವಲ್ಲದೆ ಇನ್ನೂ ಸಣ್ಣಪುಟ್ಟ ಉದ್ಯೋಗಗಳ ವಿನಿಯೋಗವು ಹೀಗೆಯೇ ಎಷ್ಟೋ ಆಗಿರುತ್ತವೆ, ಮತ್ತು ಇದಕ್ಕೆ ಮುಂಚೆಯೇ ಸರ್ಕಾರಿ ಉದ್ಯೋಗಗಳಿಗೆ ಸೇರಿಕೊಂಡಿರುವವರುಗಳಿಗೆ ಪ್ರಮೋಷನ್ ಕೊಟ್ಟಿರುವ ವಿಷಯವೂ ಕೂಡ ಕೇವಲ ಪಕ್ಷಪಾತವಾಗಿರುತ್ತಿವೆಯೇ ಹೊರತು ಹಿಂದುಳಿದವರ ಸಂಖ್ಯೆಯನ್ನು ಹೆಚ್ಚಿಸುವ ಸೂಚನೆಗಳೇನೂ ಕಾಣುವುದಿಲ್ಲ. ಹಿಂದುಳಿದ ಉದ್ಯೋಗಿಗಳಲ್ಲಿ ಸಂಪೂರ್ಣವಾದ ಯೋಗ್ಯತೆಯೂ ಅನುಭವವೂ ಇದ್ದರೂ ಅಂಥವರಿಗೆ ನ್ಯಾಯವಾಗಿ ಸಲ್ಲಬೇಕಾದ ಪ್ರಮೋಷನ್ನುಗಳನ್ನು ಕೊಡದೆ ರಿಟ್ರೆಂಚ್‌ಮೆಂಟಿನ ನೆಪದಿಂದ ಪಾತಾಳಕ್ಕೆ ಕೆಡಹಿ, ಯೋಗ್ಯತೆಯಲ್ಲಿ ಕಡಿಮೆಯಾಗಿದ್ದವರಿಗೂ ಸಹ ಜಾತಿ ಸಂಬಂಧ ದೇಹಸಂಬಂಧಾದಿಗಳ ಅಭಿಮಾನದಿಂದ ಅಂಥವರುಗಳಿಗೇ ಪ್ರಮೋಷನ್ನುಗಳನ್ನು ಅಧಿಕಾರಿಗಳು ಕೊಡುವುದು ತಪ್ಪಲಿಲ್ಲ. ಮತ್ತು ಮಿಲ್ಲರ್‌ಸಂಘದ ವರದಿಯ ಮೇಲಣ ಆಗ್ರಹದಿಂದ ಮುಂಬರಿದ ಜನವರ್ಗಗಳಲ್ಲಿ ಅನೇಕರು ಸ್ವಜನಪಕ್ಷಪಾತವನ್ನು ಪ್ರತ್ಯಕ್ಷವಾಗಿಯೇ ತೋರಿಸುತ್ತ ಇತರರಿಗೆ ಸಂಪೂರ್ಣವಾದ ಅನ್ಯಾಯವನ್ನೇ ಮಾಡಲು ಧಾರ್ಷ್ಟ್ಯವನ್ನು ವಹಿಸಿರುತ್ತಾರೆ.

ಶ್ರೀಮನ್ಮಹಾರಾಜರೂ ಅವರ ಪ್ರಭುತ್ವದವರೂ ಸಹ ಹಿಂದುಳಿದವರನ್ನು ಮುಂದಕ್ಕೆ ತರುವುದಕ್ಕಾಗಿಯೇ ಈ ವರದಿಯ ಮೇಲಣ ಅಪ್ಪಣೆಯನ್ನು ಮಾಡಿರುವುದು ನಿಜವಾದರೆ ಅದನ್ನು ಆಕಾರಮಾತ್ರ ಪ್ರಯೋಜಕವನ್ನಾಗಿ ಮಾಡಿಟ್ಟರೆ ಚರಿತಾರ್ಥವಾಗುವುದೆ ? ಹಿಂದುಳಿದ ವರ್ಗಗಳ ಜನರು ಶಿಲಾವಿಗ್ರಹ ಲೋಹವಿಗ್ರಹಗಳಿಗೆ ಸಮಾನರೆಂದೂ ಉಪಚಾರಮಾತ್ರದಿಂದಲೇ ಹಿಗ್ಗಿಹೋಗುವ ಅಲ್ಪತೃಪ್ತರೆಂದೂ ಭಾವಿಸಿ ಅವರಿಗೆ ಈ ಮಿಲ್ಲರ್ ಸಂಘದ ವರದಿಯ ಕದಳೀಫಲನಿವೇದನವನ್ನು ಏರ್ಪಡಿಸಿರುವರೆಂದು ಭಾವಿಸೋಣವೆ ? ಇದು ಬೊಬ್ಬೆಯಿಕ್ಕುವವರಿಗೇ ಕಾಲವೆ ? ಹಾಗಿದ್ದಪಕ್ಷದಲ್ಲಿ ವಿಗ್ರಹಾರಾಧನ ವಿರೋಧಿಗಳು ಹೇಳುವಂತೆ ಮೂಗಿದ್ದರೂ ಮೂಸಿನೋಡದ, ಕಿವಿಯಿದ್ದರೂ ಕೇಳದ, ಕಣ್ಣಿದ್ದರೂ ನೋಡದ ವಿಗ್ರಹಗಳ ಸ್ಥಿತಿಯಲ್ಲಿ ಹಿಂದುಳಿದ ಜನವರ್ಗಗಳು ಇರುವುದನ್ನು ಇನ್ನು ಮುಂದೆ ದೂರೀಕರಿಸಬೇಕು. ಆ ದೋಷವನ್ನು ಅವರುಗಳು ಕಳೆದುಕೊಂಡು ತಮಗೂ ಇತರರಂತೆ ಕಣ್ಣು ಮೂಗು ಕೈ ಬಾಯಿಗಳಿರುವ ಸ್ಥಿತಿಯನ್ನು ತಮ್ಮ ಕದಲಿಕೆಯಿಂದ ನಿದರ್ಶನಕ್ಕೆ ತಂದುಕೊಟ್ಟೇ ತೀರಬೇಕಾದುದು ಯುಕ್ತವಾಗಿ ತೋರುತ್ತದೆ.

ರಾಜಧಾನಿಯ ಆರೋಗ್ಯ.

ಶ್ರೀಮನ್ಮಹಾರಾಜರಿಗೆ ಈ ಮುಖ್ಯಪಟ್ಟಣದ ಮೇಲೆ ಇರುವ ಅಭಿಮಾನವು ಅನ್ಯಾದೃಶವಾಗಿರುತ್ತದೆ. ಅಲಂಕಾರದಲ್ಲೂ ಆರೋಗ್ಯದಲ್ಲೂ ಸಂಪತ್ತಿನಲ್ಲೂ ಇದನ್ನು ದೇಶದ ಎಲ್ಲ ಪಟ್ಟಣಗಳಿಗಿಂತಲೂ ಅಗ್ರೇಸರವನ್ನಾಗಿ ಮಾಡಬೇಕೆಂಬ ಕುತೂಹಲವು ಅವರಿಗೆ ಅಪರಿಮಿತವಾಗಿದೆ. ಆ ಕಾರಣದಿಂದಲೇ ಲಕ್ಷಗಟ್ಟಲೆಯ ರೂಪಾಯಿಗಳು ಪ್ರಭುತ್ವದ ಬೊಕ್ಕಸದಿಂದ ಇದರ ಅಭಿವೃದ್ಧಿಗೆಂದು ಪ್ರವಾಹರೂಪವಾಗಿ ಸುರಿಯಲ್ಪಟ್ಟೂ ಪಡುತ್ತಲೂ ಇವೆ. ಆದರೇನು ? ಕೆಲ ಅಲಂಕಾರರಚನೆಯ ಹೊರತು ವಿಶೇಷಫಲವೇನೂ ಆಗಿಲ್ಲ. ಅಂತರ್ಯವನ್ನು ನೋಡುವವರಿಗೆ "ತೋಟ ಮಾತ್ರ ಶೃಂಗಾರ ಒಳಗೆ ಗೋಣಿಸೊಪ್ಪು" ಎಂಬ ಗಾಥೆಯಂತೆ ಇದರ ಪರಿಸ್ಥಿತಿಯಾಗಿರುವುದನ್ನು ಕಂಡು ವಿಷಾದಿಸಬೇಕಾಗಿದೆ. ಪುರಾಭಿವೃದ್ಧಿ ಕಾರ್ಯಗಳು ನಡೆಯದಿರುವ ಪಟ್ಟಣಗಳಿಗಿಂತಲೂ ಈ ಪಟ್ಟಣದ ಜನಾರೋಗ್ಯಸ್ಥಿತಿಯು ಆಧಿಕ್ಯವನ್ನೇನೂ ಪಡೆದುಕೊಂಡಿಲ್ಲ. ತಾಲ್ಲೂಕು ಸ್ಥಳಗಳಲ್ಲೂ ಗ್ರಾಮಾಂತರಗಳಲ್ಲೂ ಪ್ಲೇಗು ಮೊದಲಾದ ಸಾಂಕ್ರಾಮಿಕ ರೋಗಗಳು ಯಾವಾಗ ಹೇಗೆ ಹುಟ್ಟಿ ಹರಡಿ ಪ್ರಾಣಾಹುತಿ ತೆಗೆದುಕೊಳ್ಳುವುವೋ ಹಾಗೆಯೇ ಇಲ್ಲೂ ಆಗುತ್ತಿದೆ. ಕಳೆದ ೨-೩ ವರ್ಷಗಳಿಗಿಂತ ಈ ಸಂವತ್ಸರದಲ್ಲಿ ಈ ಪಟ್ಟಣದೊಳಗೆ ಇದರ ಹಾವಳಿಯು ಹೆಚ್ಚಾಗಿಯೇ ಇದೆ. ಅಲ್ಲದೆ ಒಂದೇಸಲ ಎಲ್ಲ ಮೊಹಲ್ಲೆಗಳಲ್ಲೂ ಅದರ ವ್ಯಾಪನೆಯು ಕಾಣಿಸಿಕೊಂಡಿರುವುದು ಭೀಕರವಾಗಿದೆ. ಜಲಮಲಗಳ ಶುಚೀಕರಣವು ಕಾಲಕಾಲಕ್ಕೆ ಚೊಕ್ಕಟವಾಗಿ ಆಗದಿರುವುದರಿಂದ ಪಟ್ಟಣದ ಕೆಲವು ಭಾಗಗಳಲ್ಲಿ ದುಸ್ಸಹವಾಗಿರುವ ದುರ್ಗಂಧ ವ್ಯಾಪನೆಯು ಎಷ್ಟೋ ಗ್ರಾಮಾಂತರಗಳಿಗಿಂತಲೂ ಹೀನತರವೂ ಅಪಾಯಕರವೂ ಆಗಿರುತ್ತದೆ. ವಿಷಾಣುಭರಿತವಾಗಿ ಬಚ್ಚಲುಗಳಲ್ಲಿ ತುಂಬಿರುವ ಮಣ್ಣನ್ನು ಅಗೆದು ಮನೆಗಳ ಮುಂದಣ ಮಾರ್ಗಗಳಮೇಲೆಯೇ ಹರಡುತ್ತಿರುವುದರಿಂದ ಬಿಸಿಲಿಗೆ ಒಣಗಿ ಗಾಳಿಗೆ ಅದರ ವಿಷಾಣುವೆಲ್ಲಾ ಹಾರಿ ಪ್ರಜೆಗಳ ಮೂಗು ಬಾಯಿಗಳಿಗೆ ತುಂಬಿ ಮಹಾಪಾಯಮಾಡುತ್ತಿರುವ ಈ ಅವಿವೇಕದ ದುಷ್ಟ ಕ್ರೂರ ಪದ್ಧತಿಯನ್ನು ತಪ್ಪಿಸಲು ಯಾವೊಬ್ಬ ಆರೋಗ್ಯಶಾಸ್ತ್ರ ಪಾರಂಗತರಾದ ಅಧಿಕಾರಿಯೂ ಇದುವರೆಗೂ ಎತ್ನಿಸದಿರುವುದು ಅವರುಗಳಿಗೆ ತುಂಬಾ ಕಳಂಕದಾಯಕವಾಗಿರುತ್ತದೆ. ಮುಖ್ಯವಾಗಿ ಜಲಮಲಗಳ ಕೋಶವು ನಿರ್ಮಲವಾಗಿರದಿದ್ದರೆ ದೇಹಿಯೇ ರೋಗಗ್ರಸ್ತನಾಗುವುದು ಪ್ರತ್ಯಕ್ಷವಾಗಿರುತ್ತದೆ. ಹೀಗಿರುವಾಗ ಎಷ್ಟೋ ಸಹಸ್ರ ಪ್ರಜೆಗಳು ವಾಸಿಸುವ ಪಟ್ಟಣದಲ್ಲಿ ಜಲಮಲ ವಿಸರ್ಜನಸ್ಥಾನಗಳು ಶುಚಿಯಾಗಿರಬೇಕಾದುದರ ಅವಶ್ಯಕತೆಯು ಎಷ್ಟಿರಬೇಕೆಂಬುದನ್ನು ಹೇಳಬೇಕಾಗಿಲ್ಲ. ಈ ಭಾಗಕ್ಕೆ ಮ್ಯುನ್ಸಿಪಾಲಿಟಿಯವರೂ ಆರೋಗ್ಯ ಶಾಖಾಧಿಕಾರಿಗಳೂ ತಕ್ಕಷ್ಟು ಗಮನವನ್ನು ಕೊಡದೆ ಇರುವುದು ಪಟ್ಟಣದ ದುರ್ದೈವವು. ಪ್ರತಿ ದಿನವೂ ಮನೆಗಳ ಶೌಚಕೂಪಗಳು ಶುದ್ಧಮಾಡಲ್ಪಡುವ ಏರ್ಪಾಟು ಸಮರ್ಪಕವಾಗಿಲ್ಲ. ಸಾರ್ವಜನಿಕವಾದ ಶೌಚಸ್ಥಲಗಳು ಯಾವ ಬೀದಿಯಲ್ಲೂ ಇಲ್ಲವೇ ಇಲ್ಲ. ಕೆಲಕಡೆ ಆಕಾರ ಮಾತ್ರಕ್ಕೆ ಇರತಕ್ಕುವು ಉಪಯೋಗಕ್ಕೇಬರುವಂತೆ ಇಲ್ಲ. ಇದರಿಂದ ಊರ ಜನರು ಸಿಕ್ಕಿದ ಕಡೆಯಲ್ಲಿ ಜಲಮಲಗಳನ್ನು ವಿಸರ್ಜಿಸಿ ಕೆಡಿಸುತ್ತಿರುವರು. ಇದರಿಂದ ಕೆಲಕಡೆ ಕ್ಷಣಮಾತ್ರ ನಿಂತುಕೊಳ್ಳಲೂ ಆಗದಷ್ಟು ದುಸ್ಸಹವಾದ ದುರ್ಗಂಧವು ತುಂಬಿರುವುದು. ಪ್ರತಿ ದಿನವೂ ಊರ ಕಸ ಕುಪ್ಪೆಗಳನ್ನು ಹೊರಕ್ಕೆ ಸಾಗಿಸುವ ಬಂಡಿಗಳು ಎಷ್ಟುಮಟ್ಟಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುವುವೋ ಅದನ್ನು ವಿಚಾರಿಸುವವರೇ ಇಲ್ಲ. ಅಷ್ಟಗ್ರಾಮದ ಕಡೆಯ ರೈತರ ಗೊಬ್ಬರದ ಬಂಡಿಗಳು ರಾಜಧಾನಿಗೆ ೨-೩ ದಿನ ಬರದೆ ಹೋದರೆ ಬೀದಿ ಬೀದಿಯೆಲ್ಲಾ ಕಸದ ಕುಪ್ಪೆಗಳಿಂದಲೇ ಭರಿತಿಯಾಗುವುದು ಖಂಡಿತ. ಇಂಥ ಸ್ಥಿತಿಯು ಇದ್ದರೂ ಆಗತಕ್ಕ ವೆಚ್ಚವೇನು ಕಡಿಮೆಯಾಗಿರುವುದೆ ? ಮೊಹಲ್ಲೆಗೊಬ್ಬೊಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಮೇಲೆ ೪೦೦ ರೂ. ಸಂಬಳದ ಹೆಲ್ತಾಫೀಸರು, ಅವರಿಗೆ ೧೦೦ ರೂ. ಅಲೋಯನ್ಸು ಬೇರೆ. ಈ ವ್ಯಯಭಾರವೆಲ್ಲಾ ಏತಕ್ಕೆ ? ಗುಡಿಸುವ ಸಾಗಿಸುವ ಸಿಬ್ಬಂದಿಗಳೂ ಅವರ ಮೇಲಣ ಓವರ್ಸಿಗಳೂ ಎಷ್ಟು ಹೆಚ್ಚಾಗಿದ್ದರೆ ಅಷ್ಟು ಕೆಲಸವು ಸಮರ್ಪಕವಾಗಿ ಸಾಗುವುದು. ಮೇಲಧಿಕಾರಿಗಳ ಸಂಖ್ಯೆಯು ಹೆಚ್ಚಿದಷ್ಟೂ ಧನವ್ಯಯವೂ ಕಾಗದ ಮಸಿಗಳ ವ್ಯಯವೂ ಹೆಚ್ಚಾಗುವುವು. ಇಷ್ಟೇ ಅಲ್ಲದೆ ಡಾ|| ಎ. ಕೆ. ಪಾಣೆಯವರ ಈಚೆಗೆ ಬಂದ ಹೆಲ್ತಾಫೀಸರುಗಳಲ್ಲಿ ಯಾರೊಬ್ಬರೂ ಅವರಷ್ಟು ಮುತವರ್ಜಿಯನ್ನು ವಹಿಸುತ್ತಲಿಲ್ಲ. ಮ್ಯು|| ಕೌನ್ಸಿಲರುಗಳ ಮತ್ತು ಮ್ಯು|| ಅಧಿಕಾರಿಗಳ ಸಂಖ್ಯೆಯು ಹೆಚ್ಚಾಗಿರುವ ಈಗಣ ಕಾಲದಲ್ಲಿ ಪಟ್ಟಣದ ಶುಚೀಕರಣದ ಲೋಪಾಲೋಪಗಳನ್ನು ಗಮನಿಸಿ ಬಂದೋಬಸ್ತು ಮಾಡುವ ಅಧಿಕಾರಸ್ವಾತಂತ್ರ್ಯಗಳನ್ನು ಈ ಆನರರಿ ಅಧಿಕಾರಿಗಳಿಗೆ ಹೆಚ್ಚಾಗಿ ವಹಿಸಿ, ಸಂಬಳದ ಜನರ ಅಧಿಕಸಂಖ್ಯೆಯನ್ನೂ ಪಾರುಪತ್ಯವನ್ನೂ ತಪ್ಪಿಸಿದರೆ ಮ್ಯುನ್ಸಿಪಲ್ ಹಣದ ದುರ್ವಿನಿಯೋಗವು ತಪ್ಪಲಿಕ್ಕೂ ಪಟ್ಟಣದ ಆರೋಗ್ಯಕ್ಷೇಮಗಳು ಸರಿಪಡುವುದಕ್ಕೂ ಮಿತವ್ಯಯಕ್ಕೂ ಎಷ್ಟೋ ಅವಕಾಶವಾದೀತು. ದೀರ್ಘಕಾಲದಿಂದ ಇಲ್ಲಿಯ ಮ್ಯುನ್ಸಿಪಾಲಿಟಿಯ ನ್ಯೂನಾತಿರೇಕಗಳನ್ನೆಲ್ಲಾ ಚೆನ್ನಾಗಿ ಅರಿತವರಾದುದರಿಂದಲೇ ಕೌನ್ಸಿಲರುಗಳು ತಮಗೆ ೪೦೦-೫೦೦ ರೂ. ಸಂಬಳದ ಹೆಲ್ತಾಫೀಸರೂ ಅಷ್ಟೊಂದು ಸ್ಯಾನಿಟರಿ ಇನ್ಸ್‌ಪೆಕ್ಟರುಗಳೂ ಅವಶ್ಯಕವಿಲ್ಲವೆಂದೂ ತೀರ್ಮಾನಮಾಡಿ ಗೌರ್ನಮೆಂಟಿಗೆ ಕಳುಹಿಸಿಕೊಟ್ಟಿರುವರೆಂದು ಕೇಳುತ್ತೇವೆ ಇದು ಯುಕ್ತವಾಗಿರುತ್ತದೆ. ಆನರರಿ ಪ್ರೆಸಿಡೆಂಟರೇ ಮೊದಲಾದವರು ತಮ್ಮ ಇನ್ಸ್‌ಪೆಕ್ಷನ್ ಮೊದಲಾದ ಶ್ರಮಗಳ ಭಾರವನ್ನು ಕಡಿಮೆಮಾಡಿಕೊಳ್ಳಲಿಕ್ಕಾಗಿ ಸಂಬಳದ ಅಧಿಕಾರಿ ಪರಿವಾರವನ್ನು ಹೆಚ್ಚಿಸಿಕೊಂಡು ಪಟ್ಟಣದ ಆರೋಗ್ಯಸ್ಥಿತಿಯನ್ನು ಹಾಳುಗೆಡಹುವುದು ಉಚಿತವಲ್ಲ. ಅಧಿಕಾರಿಗಳ ಸಂಬಳಸಾರಿಕೆಗಳಿಗೇ ಹೆಚ್ಚು ಹಣವನ್ನು ವಿನಿಯೋಗ ಮಾಡುವುದಕ್ಕಿಂತಲೂ ಗುಡಿಸುವ ಸಾಗಿಸುವ ಸಿಬ್ಬಂದಿಗಳನ್ನು ಹೆಚ್ಚಿಸಿ, ಮುಖ್ಯವಾಗಿ ಸಾರ್ವಜನಿಕ ಜಲಮಲ ಶೌಚಸ್ಥಲಗಳ ಏರ್ಪಾಟಿಗೂ, ತತ್ತತ್ಕಾಲದಲ್ಲಿ ಪ್ರತಿ ಮನೆಗಳ ಹೊಲಸೂ ಊರ ಹೊರಕ್ಕೆ ಸಾಗಿಹೋಗುವಂತೆ ಮಾಡುವುದಕ್ಕೂ ಹೆಚ್ಚು ಧನವನ್ನು ವಿನಿಯೋಗಿಸಿ ಪುರಜನರಿಂದ ಕಂದಾಯ ಕೌಳಿಗೆಗಳ ಮೂಲಕವಾಗಿ ಎತ್ತುವ ಹಣಕ್ಕೆಲ್ಲಾ ತಕ್ಕ ಪ್ರತಿಫಲವುಂಟಾಗುವಂತೆ ಮಾಡಿ ಅವರುಗಳ ಸನ್ಮಾನ ಕೃತಜ್ಞತೆಗಳಿಗೆ ಪಾತ್ರರಾಗುವಂತೆ ನಡೆದುಕೊಂಡಾರೆಂದೂ, ಅನುಭವಸ್ಥರಾದ ಮ್ಯು|| ಕೌನ್ಸಿಲರುಗಳ ಸೂಚನೆಗಳಿಗೆ ಗೌರ್ನಮೆಂಟಿನವರು ಕೂಡ ಗಮನವನ್ನು ಕೊಟ್ಟಾರೆಂದೂ ನಂಬಿ ನಿರೀಕ್ಷಿಸುತ್ತೇವೆ.

ಸ್ವಪರಿಪಾಲನ.

ಸಿಮ್ಲಾ ಪಟ್ಟಣದಲ್ಲಿ ಕೂಡಿದ್ದ ಸಾಮ್ರಾಜ್ಯಶಾಸನಸಭೆಯಲ್ಲಿ ರಾ|| ಬ|| ಮಜುಂದಾರ್ ರವರು "ಭರತಖಂಡಕ್ಕೆ ಇನ್ನು ೩ನೆ ಸಲದ ಶಾಸನ ಸಭೆಯೇರ್ಪಾಟಾಗುವುದರೊಳಗೆ ಅಧಿನಿವೇಶಗಳಲ್ಲಿರುವಂಥ ಸ್ವರಾಜ್ಯವನ್ನು ಕೊಡಿಸುವ ವಿಷಯದಲ್ಲಿ ತಕ್ಕ ಚರ್ಯೆಯನ್ನು ಅವಲಂಬಿಸಬೇಕೆಂದು ಸಭಾಸಮೇತರಾದ ಗೌರ್ನರ್ ಜನರಲ್‌ರವರು ಸ್ಟೇಟ್ ಸೆಕ್ರೆಟರಿಯವರಿಗೆ ಬರೆಯಬೇಕು" ಎಂಬ ತೀರ್ಮಾನವನ್ನು ತಂದರು. ಅದರ ಮೇಲೆ ಬಹಳ ಚರ್ಚೆನಡೆಯಿತು. ಸಭಿಕರಲ್ಲಿ ಕೆಲರು ಈ ತೀರ್ಮಾನಕ್ಕೆ ಪೋಷಕರಾಗಿಯೂ ಕೆಲವರು ವಿರೋಧಿಸಿಯೂ ವಾದ ಮಾಡಿದರು. ಮಜುಂದಾರರು ಹೇಳುವಷ್ಟು ಕಾಲಯಾಪನೆಯು ಕೂಡದು; ತತ್‌ಕ್ಷಣವೇ ಸ್ವರಾಜ್ಯ ಪ್ರಾಪ್ತಿಯಾಗಬೇಕೆಂದು ಒಬ್ಬೊಬ್ಬರು ವಾದಿಸಿದರು. ದೇಶವೆಲ್ಲಾ ಸ್ವರಾಜ್ಯವನ್ನು ಕೋರುತ್ತಲೂ ಇಲ್ಲ; ಅದನ್ನು ಪಡೆದು ನಿರ್ವಹಿಸಲು ಸಾಮರ್ಥ್ಯವನ್ನು ಹೊಂದಿಯೂ ಇಲ್ಲವೆಂದು ಒಬ್ಬೊಬ್ಬರು ವಾದಿಸಿದರು. ಕಡೆಗೆ ಜಮುನಾದಾಸ್ ದ್ವಾರಕದಾಸ್‌ರವರು ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯವನ್ನು ತ್ವರಿತವಾಗಿ ಭರತಖಂಡಕ್ಕೆ ಉಂಟುಮಾಡಿಕೊಡಲು ಉತ್ತಮ ಮಾರ್ಗವಾವುದೆಂಬುದನ್ನು ವಿಚಾರಿಸಿ ವರದಿ ಮಾಡುವುದಕ್ಕಾಗಿ ಒಂದು ಉಪಸಂಘವನ್ನೇರ್ಪಡಿಸಬೇಕೆಂಬ ಸವರಣೆಯನ್ನು ಸೂಚಿಸಿದರು. ಅದರಮೇಲೆ ಬೊಂಬಾಯಿ ವರ್ತಕರಾದ ದಲಾಲ್‌ರವರು ದೇಶದಲ್ಲಿ ಇನ್ನೂ ವಿದ್ಯಾವ್ಯಾಪನೆಯಾಗದಿರುವಾಗ ಈ ತೆರದ ಸ್ವಾತಂತ್ರ್ಯಾಪೇಕ್ಷೆಯ ತೀರ್ಮಾನಗಳನ್ನು ಈಗಾಗಲೇ ತರುವುದು ಯುಕ್ತವಲ್ಲವೆಂದರು. ಆಂಗ್ಲವರ್ತಕರಾದ ಫ್ರೈಸ್‌ರವರು ಈಗ ಉಂಟಾಗಿರುವ ಸಂಸ್ಕರಣಗಳನ್ನು ಮೀರಿ ಇಷ್ಟು ಬೇಗನೆ ಪ್ರವರ್ತಿಸುವುದು ಅಪಾಯಕರವು; ಮತ್ತು ಇಂಥ ಸ್ವರಾಜ್ಯದ ಕಾಂಕ್ಷೆಯನ್ನು ನಾವುಗಳು ಇಲ್ಲಿ ತೋರಿಸುವುದಕ್ಕೆ ದೇಶದ ಪ್ರಜೆಗಳಿಂದ ನಮಗೆ ಒತ್ತರವೇನಾದೂ ಉಂಟಾಗಿದೆಯೆ ? ಎಂದರು. ಕೊನೆಗೆ ಸರ್ಕಾರದಪಕ್ಷದಿಂದ ಸರ್ ವಿಲಿಯಂ ವಿನ್‌ಸೆಂಟರು ಹೀಗೆ ಹೇಳಿದರು-ಭರತಖಂಡದ ಪ್ರಭುತ್ವದ ಮೇಲೆ ಅಧಿಕಾರವನ್ನು ಕೋರುವ ನಿಮ್ಮ ಪೇಕ್ಷೆಯು ಯುಕ್ತವಾಗಿದೆ ನಿಮ್ಮ ಅಪೇಕ್ಷೆಯಲ್ಲಿ ಉಚಿತವಾಗಿ ತೋರಿದುವುಗಳನ್ನು ಸರ್ಕಾರದವರು ನೆರವೇರಿಸಿಕೊಟ್ಟಿದ್ದಾರೆ. ಆಗಸ್ಟ್ ತಾ|| ೨೦ ರಲ್ಲಿ ಮಾಡಿದ ಪ್ರಕಟನೆಯ ಪ್ರಕಾರ ರಾಜಕೀಯಾಭಿವೃದ್ಧಿಯು ಕಾಲಕ್ರಮದಿಂದ ಹೆಚ್ಚತಕ್ಕುದಾಗಿದೆ. ಭರತಖಂಡದ ನವೀನಶಾಸನದ ಪ್ರಕಾರ ೧೦ ವರ್ಷಗಳನಂತರ ಒಂದು ವಿಚಾರಣಸಂಘವು ಸೀಮೆಯಿಂದ ಬಂದು ಆಗಣ ಸ್ಥಿತಿಗತಿಯನ್ನು ಅವಲೋಕಿಸತಕ್ಕುದಾಗಿದೆ. ಅದರೊಳಗೆ ಯಾವಮಾರ್ಪನ್ನು ಮಾಡಕೂಡದೆಂದು ಜಾಯಿಂಟ್ ಕಮಿಟಿಯವರು ಅಭಿಪ್ರಾಯಪಟ್ಟಿದ್ದಾರೆ. ಈಗಣ ಶಾಸನ ಸಭೆಯ ಕಾರ್ಯದಕ್ಷತೆಯು ಹೆಚ್ಚಾಗಿದ್ದರೂ ಇದು ಆರಂಭವಾಗಿರುವ ೮-೯ ತಿಂಗಳ ಕಾಲದೊಳಗೇ ನೀವು ಕೋರುವಂಥ ಮಾರ್ಪುಗಳನ್ನು ಮಾಡುವುದು ಶಕ್ಯವೆ ? ಆ ಕೋರಿಕೆಯನ್ನು ಆಂಗ್ಲಪ್ರಭುತ್ವದವರೂ ಪಾರ್ಲಿಮೆಂಟಿನವರೂ ಒಪ್ಪುವರೆ ? ಸಂಪೂರ್ಣಸ್ವರಾಜ್ಯವನ್ನು ನಿರ್ವಹಿಸಲು ತಕ್ಕಷ್ಟು ಅನುಭವವು ನಿಮಗೆ ಇದೆಯೆ ? ಅದನ್ನು ಶಾಂತಮನಸ್ಸಿನಿಂದಲೂ ನಿಷ್ಕಳಂಕಭಾವದಿಂದಲೂ ಪರ್ಯಾಲೋಚಿಸಿ ನೋಡಿ. ಸ್ವರಾಜ್ಯಪ್ರಾಪ್ತಿಗೆ ಪ್ರತಿನಿಧಿಗಳನ್ನಾರಿಸಿಕೊಡುವ ಪ್ರಜಾವರ್ಗವು ಮುಖ್ಯವಾದುದು. ಸ್ವರಾಜ್ಯಬಾಧ್ಯತೆಯನ್ನು ವಹಿಸುವುದಕ್ಕೆ ಈ ದೇಶದ ನಿಯೋಗಕ ಪ್ರಜಾಸ್ತೋಮಕ್ಕೆ ತಕ್ಕಷ್ಟು ವಿದ್ಯಾನುಭವವೂ ಪ್ರಜ್ಞಾವಿಶೇಷವೂ ಉಂಟೆಂದು ನಿಮ್ಮಲ್ಲಿ ಯಾರಾದರೂ ಹೇಳಬಲ್ಲಿರಾ ? ಸಾಮಾನ್ಯ ಪ್ರಜೆಗಳ ಪ್ರಾತಿನಿಧ್ಯವನ್ನು ವಹಿಸದಿರುವ ಭಾಧ್ಯತೆಯನ್ನು ಶಾಸನ ಸಭೆಗಳಿಗೆ ಕೊಡಕೂಡದು. ಬಾಧ್ಯತಾಯುತ ಪ್ರಭುತ್ವಕ್ಕೆ ಇದೇ ಅರ್ಥವೆಂದು ನನಗೆ ತೋರುತ್ತದೆ. ಈ ದೇಶದ ೩೦ ಕೋಟಿ ಪ್ರಜೆಗಳಲ್ಲಿ ೧೦ ಲಕ್ಷ ಜನರು ಮಾತ್ರ ಓಟು ಕೊಡುವ ಅಧಿಕಾರವನ್ನು ಪಡೆದಿದ್ದಾರೆ. ಅವರಲ್ಲೂ ೧೮೨೦೦೦ ಮಂದಿಗಳು ಮಾತ್ರ ಬಂದು ಶಾಸನ ಸಭಾಸಭಿಕರಾಗತಕ್ಕವರಿಗೆ ಓಟುಗಳನ್ನು ಕೊಟ್ಟಿದ್ದಾರೆ ಸ್ವಪರಿಪಾಲನೆಗೆ ಕೆಲವು ಪರೀಕ್ಷೆಗಳುಂಟು. ಪೌರಸತ್ವ, ಜಾತೀಯತೆಯನ್ನನುಭವಿಸುವುದಕ್ಕೆ ಶಕ್ತಿ, ವಿದೇಶ ಶತ್ರುಗಳಿಂದ ಆತ್ಮಸಂರಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯ ದೇಶದಲ್ಲುಂಟಾಗುವ ವಿಪ್ಲವಗಳನ್ನಡಗಿಸುವ ಶಕ್ತಿ—ಇವುಗಳೆಲ್ಲಾ ಇರಬೇಕು. ಆಂಗ್ಲ ಪ್ರಭುತ್ವವು ಭರತಖಂಡದಲ್ಲಿರುವ ನಾನಾಮತವರ್ಗಗಳವರನ್ನೆಲ್ಲಾ ಒಂದು ಶಕ್ತಿಯಾಗಿ ಕೂಡಿಸಿದೆ. ಒಬ್ಬರೊಬ್ಬರಲ್ಲಿ ಒಡಕನ್ನು ಹುಟ್ಟಿಸಿ ರಾಜ್ಯವನ್ನಾಳುವುದು ಆಂಗ್ಲ ಪರಿಪಾಲನಾಪದ್ಧತಿಯೆಂಬುದನ್ನು ನಾನು ನಂಬಲಾರೆ. ಅನಾದಿಯಿಂದಲೂ ಈಗಲೂ ಭಾರತೀಯರಲ್ಲಿ ಪೌರುಷ ಶಕ್ತಿಯನ್ನೂ ಜಾತೀಯ ವಿಕಾಸವನ್ನೂ ಆಂಗ್ಲಪ್ರಭುತ್ವವು ಉಂಟುಮಾಡುತ್ತಲಿದೆ. ಭರತಖಂಡದ ವಿದ್ಯಾಗಂಧವಿಲ್ಲದ ಮೂಢ ಜನರನ್ನು ರಷ್ಯಾ ದೇಶದ ಸಾಮಾನ್ಯ ಪ್ರಜೆಗಳಿಗೂ, ಇಲ್ಲಿಯ ವಿದ್ಯಾಧಿಕರಾದ ಜನರನ್ನು ರಷ್ಯಾ ದೇಶದ ಬೋಲ್ಷೆವಿಕ್ಕರಿಗೂ ಹೋಲಿಸಬಹುದಾಗಿದೆ. ಇಂಥ ದೇಶದಲ್ಲಿ ಪ್ರಜಾಸಾಮಾನ್ಯಕ್ಕೆ ರಾಜ್ಯಾಧಿಕಾರವನ್ನು ವಹಿಸಿಕೊಟ್ಟರೆ ಉಂಟಾಗುವ ಫಲವೇನೆಂದರೆ-ಅರಾಜಕತನ, ಹತ್ಯ, ವಿನಾಶ, ಕ್ಷಾಮಡಾಮರ—ಇವುಗಳೇ ಆಗುತ್ತವೆ. ೨ನೆ ಪರೀಕ್ಷೆಯೇನೆಂದರೆ—ಭರತಖಂಡದ ಸೈನಿಕರು ಈ ದೇಶದ ಸೈನ್ಯಾಧಿಕಾರಿಗಳ ಕೈಕೆಳಗೆ ಭರತಖಂಡವನ್ನು ಸಂರಕ್ಷಿಸಿಕೊಳ್ಳಬೇಕು. ಅಧಿಕ ಸಂಖ್ಯಾಕರಾದ ಜನರ ಕ್ಷೇಮಲಾಭರಕ್ಷಣೆಗಾಗಿ ಆಂಗ್ಲೇಯರು ಇನ್ನೂ ಅನೇಕ ವರ್ಷಗಳಕಾಲ ಇಲ್ಲಿರಬೇಕಾದುದು ಅವಶ್ಯಕವಲ್ಲವೆ? ಪ್ರತಿನಿಧಿಗಳನ್ನಾರಿಸತಕ್ಕ ನಿಯೋಜಕ ಜನವರ್ಗಕ್ಕೆ ವಿದ್ಯಾದಾನವನ್ನು ಮಾಡಬೇಕಾದುದು ಉತ್ತಮವಲ್ಲವೆ ? ಈ ದೇಶಕ್ಕೆ ಸ್ವಪರಿಪಾಲನವನ್ನು ಕೊಟ್ಟುಬಿಟ್ಟರೆ ಇಲ್ಲಿಯ ಅತಿವಾದಿಗಳು ಸಂತೃಪ್ತಿಗೊಂಡು ಸುಮ್ಮನಿರುವರೆ ? ಈಗತಾನೇ ಗಾಂಧಿಯವರು ತಮ್ಮ ಯಂಗ್ ಇಂಡ್ಯಾಪತ್ರದಲ್ಲಿ "ಈಗ ನಮಗಿರುವ ಪ್ರಭುತ್ವವು ಶನೈಶ್ಚರನ ಪ್ರಭುತ್ವವಾಗಿದೆ. ಈ ರಾಕ್ಷಸಪ್ರಭುತ್ವವನ್ನು ಕಿತ್ತುಹಾಕಿ ಇದರ ಸ್ಥಾನದಲ್ಲಿ ದೇವತಾ ಪ್ರಭುತ್ವವನ್ನು ನಾವು ಸ್ಥಾಪಿಸಬೇಕು" ಎಂದು ಬರೆದಿರುವರು. ಅಲಿಸೋದರರು ಕೂಡ ಸ್ವತಂತ್ರ ಸ್ವರಾಜ್ಯವನ್ನು ಸ್ಥಾಪಿಸಬೇಕೆಂದು ಕೋರುತ್ತಿರುವರು. ನೀವು ಕೋರುತ್ತಿರುವಂಥ ರಾಜಕೀಯ ಸಂಸ್ಕರಣಗಳನ್ನೇ ಉಂಟುಮಾಡಿಕೊಡುತ್ತೇವೆಂದು ಇಟ್ಟುಕೊಳ್ಳಿರಿ. ಆಗ ಏನಾಗುತ್ತದೆ? ಅಸಹಾಯವಾದಿಗಳು ಆ ಕೂಡಲೇ ಸಾಮ್ರಾಜ್ಯ ಶಾಸನಸಭೆಗೆ ಅಸಂಖ್ಯಾಕರಾಗಿ ಬಂದು ತುಂಬಿಕೊಂಡು, ಅವರುಗಳು ಪ್ರಭುತ್ವವನ್ನು ಏಕೆ ತಲೆಕೆಳಗು ಮಾಡಕೂಡದು ? ನಿಮಗಿರುವಂಥ ಬಾಧ್ಯತೆಯನ್ನು ಅವರುಗಳು ಪಡೆದುಕೊಂಡ ಬಳಿಕ ಆ ಅಸಹಾಯವಾದಿಗಳು ವಿವೇಕದಿಂದ ಸರ್ಕಾರಕ್ಕೆ ಸಹಾಯಮಾಡುವರೆ ? ಸ್ವಪರಿಪಾಲನವನ್ನು ಕೊಡದಿದ್ದರೆ ಭರತಖಂಡಕ್ಕೆ ಐರ್ಲಂಡಿನ ದುಸ್ಥಿತಿಯು ಬರುವುದೆಂದು ನಿಮ್ಮಲ್ಲಿ ಕೆಲವರು ಬೋಯಿಸವನ್ನು ಹೇಳಿದ್ದಾರೆ ಶಾಸನಶಾಖೆ ರೆವಿನ್ಯೂಶಾಖೆ ರಕ್ಷಣಶಾಖೆ ಇವುಗಳನ್ನೆಲ್ಲಾ ಇಷ್ಟುಬೇಗನೆ ಪ್ರಜಾಧೀನಗೊಳಿಸಬಹುದೆ? ಅಲ್ಪಸಂಖ್ಯಾಕರಾದ ಪ್ರಜೆಗಳ ಕ್ಷೇಮವನ್ನೇ ನೋಡುವುದು ಅನ್ಯಾಯವಲ್ಲವೆ? ಅದುಕಾರಣ ನೀವು ಅವಸರಪಟ್ಟು ತೀರ್ಮಾನಮಾಡಕೂಡದು. ಪಾರ್ಲಿಮೆಂಟಿನವರು ಕಳುಹಿಸಿಕೊಡತಕ್ಕ ಸಂಘದವರು ಈ ದೇಶಕ್ಕೆ ಬರುವುದರಿಂದ ಬಹಳ ಲಾಭವುಂಟು. ಅವರು ಬಂದು ನೋಡಿಹೋಗುವುದರಿಂದ ಈ ದೇಶಕ್ಕೆ ಸ್ವಪರಿಪಾಲನವನ್ನು ಕೊಡಬೇಕೆಂಬ ಬುದ್ಧಿಯು ಆಂಗ್ಲ ಪ್ರಜೆಗಳಿಗೆ ಹುಟ್ಟುವುದು.

ಬಳಿಕ ಸರ್ಕಾರದ ಕೋಶಾಧಿಕಾರಿಯಾದ ಮಿ|| ಹೆಯಿಲಿಯವರು—ಈ ಚರ್ಚೆಯನ್ನೆಲ್ಲಾ ಇಂಡ್ಯಾ ಸರ್ಕಾರದವರು ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಯಿಸಿ ಪಾರ್ಲಿಮೆಂಟಿನ ಸಂಘವು ಇಲ್ಲಿಗೆ ಬರುವುದಕ್ಕೆ ನಿಯಮಿತವಾಗಿರತಕ್ಕ ೧೦ ವರ್ಷದ ಗಡುವನ್ನು ಸ್ವಲ್ಪ ತಗ್ಗಿಸಿಕೊಡಬೇಕೆಂದು ಕೇಳಿಕೊಳ್ಳುವವರಾಗಿದ್ದಾರೆಂದು ಸರ್ಕಾರದ ಪಕ್ಷವಾಗಿ ಹೇಳಿದರು. ಅಷ್ಟರಲ್ಲಿ ಸರ್ ವಿಲಿಯಂ ವಿನ್‌ಸೆಂಟ್‌ರವರು ಸರ್ಕಾರದ ಉದ್ದೇಶವನ್ನನುಸರಿಸಿ ಈ ಮುಂದೆ ಹೇಳುವಂತೆ ಸವರಣೆಯ ತೀರ್ಮಾನವನ್ನು ಹೇಳಿದರು.—ಈಗಣ ಬಾಧ್ಯತಾಯುತ ಪ್ರಭುತ್ವದಲ್ಲಿ ಭರತಖಂಡವು ಅತ್ಯಂತ ಶ್ರದ್ಧೆಯಿಂದ ಕೆಲಸಮಾಡಿದೆಯಾದ ಕಾರಣ, ೧೯೨೯ನೆ ವರ್ಷಕ್ಕೆ ಮುಂಚೆಯೇ ಈಗಣ ಪ್ರಭುತ್ವವಿಧಾನವನ್ನು ಪುನಃ ವಿಮರ್ಶಿಸಿ ಮಾರ್ಪಡಿಸಬೇಕೆಂದು ಸಾಮ್ರಾಜ್ಯಶಾಸನಸಭೆಯವರು ಅಭಿಪ್ರಾಯಪಡುತ್ತಾರೆಂದು ಸಭಾಸಮೇತರಾದ ಗೌರ್ನರ್ ಜನರಲ್‌ರವರು ಸ್ಟೇಟ್ ಸೆಕ್ರಟರಿಯವರಿಗೆ ಶ್ರುತಪಡಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.

ಈ ಪ್ರಕಾರವಾದ ತೀರ್ಮಾನಕ್ಕೆ ಮಜುಂದಾರರು ಒಪ್ಪಿದರು. ಸಭಿಕರಲ್ಲಿ ಹೆಚ್ಚು ಜನರು ಇದಕ್ಕೇ ಒಪ್ಪಿದರು.

ಈ ಮೇಲೆಕಂಡ ವಿದ್ಯಮಾನದಿಂದ ಆತುರ ಸ್ವರಾಜ್ಯಸಿದ್ಧಿಗೆ ಅತಿವಾದಿಗಳಹೊರತು ಯಾರೂ ಒಪ್ಪುವುದಿಲ್ಲವೆಂಬುದೂ ಅದನ್ನು ಆಂಗ್ಲಪ್ರಭುತ್ವದವರು ಇಷ್ಟುಬೇಗನೆ ನೆರವೇರಿಸಿಕೊಡುವವರಾಗಿಲ್ಲವೆಂದೂ ಸಿದ್ಧವಾಗುತ್ತದೆ. ಪಾರ್ಲಿಮೆಂಟಿನವರು ಆಗಿಂದಾಗ್ಗೆ ಒಂದು ಸಂಘದವರನ್ನು ಇಲ್ಲಿಗೆ ಕಳುಹಿಸಿಕೊಟ್ಟು ದೇಶದ ಅರ್ಹತೆಯನ್ನು ತಿಳಿದುಕೊಂಡಬಳಿಕವೇ ಕ್ರಮಾಂತರ ಕಾಲಾಂತರದಲ್ಲಿ ಸ್ವರಾಜ್ಯವು ಕೊಡಲ್ಪಡುವುದೇ ನಿಶ್ಚಿತವಾಗಿರುತ್ತದೆ. ಅದು ಯುಕ್ತವೆಂದೇ ಹೇಳಬಹುದು. ಆದರೆ ಆಕಾಲಪ್ರಸವಾಪೇಕ್ಷಿಗಳಂತೆ ಅತಿವಾದಿಗಳು ೩ ತಿಂಗಳಲ್ಲಿ ಸ್ವರಾಜ್ಯ ಸ್ಥಾಪನಾತುರದಲ್ಲಿರುವಾಗ ಅದು ಎಷ್ಟುಮಟ್ಟಿಗೆ ಫಲಿಸಿ, ದೇಶಕ್ಕೆ ಎಷ್ಟು ಹಿತಪ್ರದವಾದೀತೆಂಬುದನ್ನು ಕಾಲವೇ ತಿಳಿಯಿಸಿಕೊಡುತ್ತದೆ.

"THE RIGHT THING IN RIGHT TIME."

We have emphasized the fact that the spirit of the Miller Committee Report is the right sign of the day. Our benevolent Government was the earliest to take note of the aspirations of the people and to adopt measures in appreciation of the right aspirations of the people. There was a loud clamour against this just Order of Government by a certain class of people in the State, who regarded the Government employment as personal property having been in an undisturbed condition of this enjoyment owing to the accident that the Dewans of Mysore happened to be drawn from one class of people. Its evil effects are far reaching on the interests of the people, and it was the defect of the system of Government which has been responsible for this deplorable condition. An unreasonable cry and an indecent attack on Government has been in development during the past few months and the Dasara Representative Assembly which meets next week is likely to witness a determined attack. Communications are reaching us showing how vigorous has been the preparation to wage this war.

That this aspiration of the people is in evidence elsewhere is shown from the discussions of the Legislative Councils at Madras and Bombay. There is in both the places a kind of defence put up by Government behind the "Efficiency Barricade," in favour of the existing conditions. But one can at once see that it is an ineffectual defence, because the evil of the system is apparent. In Madras it was clear that the one class influence was predominating to induce the strong British mind to defend the evil system. But all the same the principle had to be accepted. The refreshing discussions at the Bombay Legislative Council bespeak of the fair atmosphere of the Northern India where one class influence has not attained its evil supremacy. All the members without an exception appreciated the aspiration on the part of the people and readily agreed to see that others came forward to share the troubles of the Government Service. The Government member Mr. Lawrance's reply of assurance to meet the desire of the people was praiseworthy. There was no scene in the Council Chamber as there was one in ours of the Representative Assembly in the last Birth-Day Session. The conditions as exhibited at Mysore, at Madras and at Bombay are a lesson to us. We can see where the disease has developed seriously so as to affect the body of administration if remedial measures to effect equal representation are not taken in time and vigorously. The determined attack which is being engineered must be repulsed. We know that the Miller Committee Report has done little as yet and that is due not for want of sympathy on the part of the Government but it is traceable to the monopoly of that class of people who have built up a system of brotherhood in the unhappy service of Mysore, which time alone can break. We warn the class of Monopolists that they are ill advised in opposing on unreasonable grounds a principle of justice and fairplay, that it would speak against their great learning and position which Manu has gratuitously placed in their hands, and that it would betray traces of ungratefulness to a Sovereign who has been so kind, so generous, so loving and so attached to his subjects amongst whom these are having the greatest share of that benevolence in all shapes and forms by means of which benevolence can be bestowed. We warn again against the least signs of weakness when attacked by the mighty intelligentia whose onslaught is merciless and which is backed up by powers unseen. The destructive non-co-operation abroad is again a warning against creating strongholds of monopolies in Public Service. We are impelled to make these statements by a sense of loyalty and love of the Mysore people.

ದಸರಾಮಹೋತ್ಸವ.

ಅಕ್ಟೋಬರ್ ತಾ|| 9ನೆಯ ಭಾನುವಾರ-ಸಾಯಂಕಾಲ 7 ಗಂಟೆಗೆ ಸಜ್ಜೆಯಲ್ಲಿ ದರ್ಬಾರು ನಡಿಯುವುದು-ಅಕ್ಟೋಬರ್ ತಾ|| 10ನೆಯ ಸೋಮವಾರ—ಬೆಳಗ್ಗೆ 8 ಗಂಟೆಗೆ ಪಟ್ಟದಾನೆ ಪಟ್ಟದ ಕುದುರೆ ಮತ್ತು ಆಯುಧಗಳು ದೊಡ್ಡಕೆರೆಗೆ ಹೋಗಿ ತೊಳೆಯಲ್ಪಟ್ಟು ಅರಮನೆಗೆ ಹಿಂದಿರುಗಿ ಬಂದಮೇಲೆ ಪೂಜಿಸಲ್ಪಡುವುವು. ಮಧ್ಯಾಹ್ನ 4 ಗಂಟೆಗೆ ಪೋಲೋಪಂದ್ಯವೂ ಸಾಯಂಕಾಲ 7 ಗಂಟೆಗೆ ಅರಮನೆಯಲ್ಲಿ ದರ್ಬಾರೂ ನಡಿಯುವುವು (ಯೂರೋಪ್ಯಾತಿಥಿಗಳು ಬರುವರು).

ಅಕ್ಟೋಬರ್ ತಾ|| 11 ನೆಯ ಮಂಗಳವಾರ—ಬೆಳಗ್ಗೆ 8 ಗಂಟೆಗೆ ಅರಮನೆ ಮುಂದೆ ಜಟ್ಟಿಕಾಳಗ; 9 ಗಂಟೆಗೆ ಆಯುಧ ಗಜಾಶ್ವಗಳು ಸಕಲ ಬಿರುದಾವಳಿಗಳ ಸಮೇತ ಬನ್ನಿಮಂಟಪಕ್ಕೆ ಉತ್ಸವಪೂರ್ವಕವಾಗಿ ಹೊರಡುವುವು. ಮಧ್ಯಾಹ್ನ 4 ಗಂಟೆಗೆ ಶ್ರೀಮನ್ ಮಹಾರಾಜರವರು ಶ್ರೀಮದ್ಯುವರಾಜರ ಸಮೇತ ಚತುರಂಗ ಸೇನೆಯೊಡನೆ ಜಂಬೂಸವಾರಿ ಹೊರಟು ಬನ್ನಿ ಮಂಟಪದ ಬಳಿ ಶಮೀವೃಕ್ಷವನ್ನು ಪೂಜಿಸಿ ಅನಂತರ ದೀವಿಟಿಗೆಗಳ ಬೆಳಕಿನಲ್ಲಿ ಸೇನೆಯ ಮರ್ಯಾದೆಯನ್ನು ಕೈಕೊಂಡು ಯಥಾಪ್ರಕಾರ ಹಿಂದಿರುಗಿ ಉತ್ಸವ ಹೊರಟು ಅರಮನೆಯನ್ನು ತಲುಪಿದ ಮೇಲೆ ಅಂಬಾವಿಲಾಸದಲ್ಲಿ ದರ್ಬಾರು ನಡಿಯುವುದು.

ಅಕ್ಟೋಬರ್ ತಾ|| 12ನೆಯ ಬುಧವಾರ—ಮಧ್ಯಾಹ್ನ 3-30 ರಿಂದ 6 ಗಂಟೆಯವರೆಗೆ ಚಾಮುಂಡಿ ಜಂಖಾನಾಬೈಲಿನಲ್ಲಿ ದಸರಾ ಸಿವಿಲ್ ಮತ್ತು ಮಿಲಿಟರಿ ಸ್ಪೋರ್ಟ್ಸ್ ಅಂದರೆ-ಓಡುವುದು ಕುಪ್ಪಳಿಸುವುದು ಮೊದಲಾದ ವಿನೋದಗಳು ನಡಿಯುವುವು. ಇದೇ ಮಧ್ಯಾಹ್ನ 4½ ಯಿಂದ 5½ ವರೆಗೆ ಪೋಲೋಪಂದ್ಯವು; 5½ ಯಿಂದ 6½ ವರೆಗೆ ವಿನೋದ ; ಸಾಯಂಕಾಲ 7 ಗಂಟೆಗೆ ಅರಮನೆಯಲ್ಲಿ ದರ್ಬಾರು ನಡೆದು, ಸಿವಿಲ್ ಮಿಲಿಟರಿ ಮತ್ತು ಅರಮನೆಯಧಿಕಾರಿಗಳಿಂದಲೂ, ಪ್ರಜಾಪ್ರತಿನಿಧಿಗಳಿಂದಲೂ ನಜರೊಪ್ಪಿಸಲ್ಪಡುವುದು.

ಅಕ್ಟೋಬರ್ ತಾ|| 13ನೆಯ ಗುರುವಾರ—ಬೆಳಗ್ಗೆ 7½ ಯಿಂದ 10½ ಗಂಟೆವರೆಗೆ ಸಿವಿಲ್ ಮತ್ತು ಮಿಲ್ಟರಿ ಸ್ಪೋರ್ಟ್ಸ್‌ಗಳು ಚಾಮುಂಡಿ ಜಂಖಾನಾ ಬೈಲಿನಲ್ಲಿ ನಡಿಯುವುವು. ಮಧ್ಯಾಹ್ನ 12 ಗಂಟೆಗೆ ಪ್ರಜಾಪ್ರತಿನಿಧಿಸಭೆಯು ಆರಂಭಗೊಳ್ಳುವುದು; ಮಧ್ಯಾಹ್ನ 3½ ಗಂಟೆಗೆ ಕುದುರೆ ಪಂದ್ಯವು ನಡಿಯುವುದು; ಸಾಯಂಕಾಲ 9 ಗಂಟೆಗೆ ಅರಮನೆಯಲ್ಲಿ ದರ್ಬಾರು ನಡೆದು ಹಿಂದೆ ನಜರೊಪ್ಪಿಸದಿದ್ದ ಪ್ರಜಾಪ್ರತಿನಿಧಿ ಮೆಂಬರುಗಳಿಂದ ನಜರೊಪ್ಪಿಸಲ್ಪಡುವುದು; ರಾತ್ರಿ 9½ ಗಂಟೆಗೆ ಗೌರ್ನಮೆಂಟ್‌ಹೌಸಿನಲ್ಲಿ ಯೂರೋಪ್ಯಾತಿಥಿಗಳ ಔತಣ ಮತ್ತು ನರ್ತನ.

ಅಕ್ಟೋಬರ್ ತಾ|| 14 ನೆಯ ಶುಕ್ರವಾರ—ಬೆಳಗ್ಗೆ 7½ ಯಿಂದ 10½ ಗಂಟೆಯವರೆಗೆ ಚಾಮುಂಡಿ ಜಮಖಾನಾ ಬೈಲಿನಲ್ಲಿ ದಸರಾ ಸಿವಿಲ್ ಮತ್ತು ಮಿಲ್ಟರಿ ಸ್ಪೋರ್ಟ್ಸ್ ನಡಿಯುವುವು; 9 ಗಂಟೆಗೆ ವಿಶ್ವವಿದ್ಯಾಲಯದ ಪಟ್ಟ ಪ್ರಧಾನೋತ್ಸವವು ಜರಗುವುದು ; ಮಧ್ಯಾಹ್ನ 4½ ಇಂದ 5 ಗಟೆವರೆಗೆ ಪೋಲೋಪಂದ್ಯದ ಕಡೇ ಆಟವು ನಡಿಯುವುದು.

ಅಕ್ಟೋಬರ್ ತಾ|| 15 ನೆಯ ಶನಿವಾರ—ಬೆಳಗ್ಗೆ 4 ಗಂಟೆಗೆ ಕುದುರೆ ಪಂದ್ಯವು ಜಯಲಕ್ಷ್ಮಿವಿಲಾಸಪ್ರಾಸಾದದ ಬೈಲಿನಲ್ಲಿ ನಡಿಯುವುದು ; ಮಧ್ಯಾಹ್ನ 12 ಗಂಟೆಗೆ ಪ್ರಜಾಪ್ರತಿನಿಧಿ ಸಭೆಯು ಕೂಡುವುದು; ಮಧ್ಯಾಹ್ನದಲ್ಲಿ ಕುದುರೆ ಪಂದ್ಯವೂ ಚಾಮುಂಡಿ ಬೆಟ್ಟದಲ್ಲಿ ಶ್ರೀಚಾಮರಾಜಮುಡಿಯುತ್ಸವವೂ ಜರಗುವುವು; ರಾತ್ರಿ 9½ ಗಂಟೆಗೆ ಗೌರ್ನಮೆಂಟ್‌ಹೌಸಿನಲ್ಲಿ ನರ್ತನವಾಗುವುದು.

ಅಕ್ಟೋಬರ್ ತಾ|| 16ನೆಯ ಭಾನುವಾರ—ಮಹಾರಾಜಾಕಾಲೇಜಿನ ಜನ್ಮದಿನೋತ್ಸವ; ರಾತ್ರಿ ಚಂದ್ರಗ್ರಹಣ.

ಅಕ್ಟೋಬರ್ ತಾ|| 17ನೆಯ ಸೋಮವಾರ—ಮಧ್ಯಾಹ್ನ 12 ಗಂಟೆಗೆ ಪ್ರಜಾಪ್ರತಿನಿಧಿಸಭೆಯು ನಡೆಯುವುದು.

ಅಕ್ಟೋಬರ್ ತಾ|| 18ನೆಯ ಮಂಗಳವಾರ—ಬೆಳಗ್ಗೆ ಶ್ರೀ ಚಾಮುಂಡೇಶ್ವರಿ ರಥೋತ್ಸವವು ; ಮಧ್ಯಾಹ್ನ 12 ಗಂಟೆಗೆ ಪ್ರಜಾಪ್ರತಿನಿಧಿಸಭೆಯು ನಡಿಯುವುವು.

ಅಕ್ಟೋಬರ್ ತಾ|| 19 ನೆ ಬುಧವಾರ ಮತ್ತು 20ನೆಯ ಗುರುವಾರ ಬೆಳಗ್ಗೆ 12 ಗಂಟೆಗೆ ಪ್ರಜಾಪ್ರತಿನಿಧಿಸಭೆಯು ನಡಿಯುವುದು.

ಒಳದೇಶದ ವೃತ್ತಾಂತಗಳು.

ಇದುವರೆಗೆ ಕೈಗಾರಿಕೆ ಮತ್ತು ವ್ಯಾಪಾರದ ಶಾಖೆಯ ಡೈರೆಕ್ಟರ್ ಕೆಲಸದಮೇಲಿದ್ದ ಮ|| ಸಿ. ಎಸ್. ಬಾಲಸುಂದರಂ ಐಯ್ಯರವರಿಗೆ ವಿದ್ಯಾಶಾಖಾ ಇನ್ಸ್‌ಪೆಕ್ಟರ್ ಜನರಲ್ ಪದವಿಯು ತತ್ಕಾಲಿಕವಾಗಿ ಕೊಡಲ್ಪಟ್ಟಿದೆ.

ಬೆಂಗಳೂರಿನ ವೀರಶೈವ ಶೇಣಿಗರು ತಮ್ಮ ದೇವಸ್ಥಾನಗಳಲ್ಲಿ ದೇವರ ಸೇವೆಯು ಕ್ರಮವಾಗಿ ನಡೆಯುವುದಕ್ಕಾಗಿಯೂ, ತಮ್ಮ ಬಾಲಕರ ವಿದ್ಯಾಭಿವೃದ್ಧಿಗಾಗಿಯೂ ಒಂದು ಫಂಡನ್ನು ಏರ್ಪಡಿಸಿರುತ್ತಾರೆ. ಇದಕ್ಕೆ ೩೦೫೫ ರೂಪಾಯಿನ ಚಂದಾ ವಾಗ್ದಾನವಾಗಿ ೩೨೦ ರೂ. ಶೇಖರವಾಗಿರುತ್ತದೆ.

ಬೆಂಗಳೂರು ಟ್ರೂತ್‌ಪತ್ರಿಕಾ ಸಂಪಾದಕರು ಮಿ|| ಗಳಾದ ಅಬ್ಬಾಸ್‌ಖಾನ್ ಮಿ|| ಕಲಾಮಿ, ಮಹಮ್ಮದ್‌ಸೇಟರುಗಳಮೇಲೆ ದೋಷಾರೋಪಣೆಮಾಡಿ ಲೇಖನವನ್ನು ತಮ್ಮ ಪತ್ರಿಕೆಯಲ್ಲಿ ಬರೆದಿರುವರೆಂದು ಅವರಮೇಲೆ ಕ್ರಿಮಿನಲ್ ಮಾನನಷ್ಟದ ವ್ಯಾಜ್ಯವನ್ನು ಬೆಂಗಳೂರಿನಲ್ಲಿ ಮಿ|| ಅಬ್ಬಾಸ್‌ಖಾನರು ಹೂಡಿದ್ದಾರೆ.

ಮೈಸೂರು ಸೀಮೆಯ ಒಕ್ಕಲಿಗರ ವಿದ್ಯಾರ್ಥಿಗಳ ಪ್ರಥಮ ಮಹಾಸಭೆಯು ಈ ಅಕ್ಟೋಬರ್ ತಾ|| ೧೨ ಮತ್ತು ೧೩ ರಲ್ಲಿ ರಾಜಧಾನಿಯ ಟವ್ನ್‌ಹಾಲಿನಲ್ಲಿ ಚೀಫ್‌ಕೋರ್ಟ್ ಜಡ್ಜರಾದ ಬ್ಯಾರಿಸ್ಟರ್ ಮ|| ಬಿ. ನಾಗಪ್ಪನವರ ಅಧ್ಯಕ್ಷತೆಯಲ್ಲಿ ಜರುಗುವುದು. ಮತ್ತು ಸಭೆಗೆ ಬರತಕ್ಕವರ ವಾಸಕ್ಕೂ ಊಟಕ್ಕೂ ತಕ್ಕೇರ್ಪಾಟು ಮಾಡಲ್ಪಟ್ಟಿರುವುದು.

ನವರಾತ್ರಿಯ ಉತ್ಸವಕ್ಕಾಗಿ ರಾಜಧಾನಿಗೆ ಬರುವ ಪರಸ್ಥಲದ ಜನರಿಗೆ ವಸತಿ ಮೊದಲಾದ ಸೌಕರ್ಯಗಳನ್ನು ಒದಗಿಸಿಕೊಡುವ ಏರ್ಪಾಟನ್ನು ಶ್ರೀಮನ್ಮಹಾರಾಜರು ಈಸಲ ಏರ್ಪಡಿಸಿರುವುದು ಅವರ ಪ್ರಜಾರಂಜನೈಕಪರಾಯಣತೆಗೆ ನಿದರ್ಶನವಾಗಿದೆ. ಇದಕ್ಕಾಗಿ ಚಾಮರಾಜನಗರದ ತಾ|| ಅಮಲ್ದಾರರಾಗಿರುವ ಮಿ|| ಅಬ್ದುಲ್‌ಕಾಲಕ್‌ಸಾಹೇಬರವರು ಸ್ಪೆಷಲ್ ಡ್ಯೂಟಿಯಮೇಲೆ ರಾಜಧಾನಿಗೆ ಬರಮಾಡಿಕೊಳ್ಳಲ್ಪಟ್ಟಿದ್ದಾರೆ.

ರಾಜಧಾನಿಯ ವೈಶ್ಯಮಂಡಲಿಯಲ್ಲಿ ಪ್ರತಿಷ್ಠಾಕಾಂಕ್ಷೆಯಿಲ್ಲದೆ ಧರ್ಮಬುದ್ಧಿಯಿಂದ ಪುಣ್ಯಕಾರ್ಯವನ್ನು ನಡೆಯಿಸುವವರಲ್ಲಿ ಮ|| ಅತ್ತಿಗುಪ್ಪೆ ಸೂರ್ಯನಾರಾಯಣಶೆಟ್ಟರು ಗಣ್ಯರಾಗಿದ್ದಾರೆ. ಒಂದೆರಡು ವರ್ಷಗಳಿಂದ ರಾಜಧಾನಿಗೆ ನವರಾತ್ರಿ ಮೊದಲಾದ ವಿಶೇಷಕಾಲಗಳಲ್ಲಿ ಬರತಕ್ಕ ವೈಶ್ಯಜನವರ್ಗದವರಿಗೆ ಬೆಂಕಿನವಾಬ್ ಬೀದಿಯಲ್ಲಿರುವ ತಮ್ಮ ಸತ್ರದಲ್ಲಿ ಊಟ ಉಪಚಾರಗಳಿಗೆ ಏರ್ಪಡಿಸುತ್ತಿರುವಂತೆಯೇ ಈವರ್ಷವಾದರೂ ಏರ್ಪಡಿಸಿರುವುದು ಸ್ತುತ್ಯವಾಗಿದೆ.

ಪದ್ಧತಿಯಂತೆ ಕಳೆದ ಭಾನುವಾರದಿಂದ ರಾಜಧಾನಿಯಲ್ಲಿ ನವರಾತ್ರಿಯ ಉತ್ಸವಗಳು ನಡೆಯುತ್ತಿವೆ. ಪ್ಲೇಗಿನ ಸುದ್ದಿಯು ಹರಡಿದ್ದುದರಿಂದ ಈಸಲ ಪರಸ್ಥಲದ ಜನರು ಬಂದಿರುವುದು ಬಹಳಕಡಿಮೆ. ಇಂಥ ವಿಶೇಷಕಾಲದಲ್ಲಿ ಪರಸ್ಥಲದ ಪ್ರಯಾಣಿಕರ ಸೌಕರ್ಯಕ್ಕಾಗಿ ಹೆಚ್ಚುಗಟ್ಟಲೆಯ ರೈಲುಬಂಡಿಗಳನ್ನು ಬಿಡುವ ಪದ್ಧತಿಯುಂಟಷ್ಟೆ? ತಕ್ಕಷ್ಟು ಬಂಡಿಗಳು ಮೈಸೂರು ಸರ್ಕಾರದಲ್ಲಿಲ್ಲದುದರಿಂದ ಇಂಥ ಕಾಲದಲ್ಲಿ ಕೆಲವು ದಿನಗಳಮಟ್ಟಿಗೆ ಎಂ. ಎಸ್. ಎಂ. ರೈಲ್ವೆ ಕಂಪನಿಯವರಿಂದ ಕೆಲ ಬಂಡಿಗಳನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದರು. ಈಸಲ ಅವರು ಕೊಡಲಿಲ್ಲವೆಂದು ಕೇಳುತ್ತೇವೆ. ಆದರೂ ಇದ್ದುದರಲ್ಲಿ ಸ್ಪೆಷಲ್‌ಬಂಡಿಗಳನ್ನು ಬಿಡುವುದಕ್ಕೆ ರೈಲ್ವೆ ಇಲಾಖೆಯವರು ಏರ್ಪಡಿಸಿದ್ದಾರೆ.

ರಾಜಧಾನಿಯ ಮ್ಯುನಿಸಿಪಲ್ ಅ|| ಪ್ರೆಸಿಡೆಂಟರಾದ ದಿವಾನ್ ಬಹದ್ದೂರ್ ಸಿ. ಶ್ರೀಕಂಠೇಶ್ವರ ಅಯ್ಯರ್‌ರವರು ತಮ್ಮ ಬಂಗಲೆಯ ಕಾಂಪೌಂಡ್ ಗೋಡೆಯನ್ನು ಕಿತ್ತು ಹೊಸದಾಗಿ ಹಾಕುವಾಗ್ಗೆ ಪಶ್ಚಿಮ ಭಾಗದಲ್ಲಿ ಸರ್ಕಾರಿಯ ಜಾಗವನ್ನು ೩ ಅಡಿಯವರೆಗೆ ಆಕ್ರಮಿಸಿಕೊಂಡಿರುವುದಾಗಿ ಮ್ಯುನಿಸಿಪಲ್ ಕೌನ್ಸಿಲಿಗೆ ಅರ್ಜಿಯು ಬಂದಿದ್ದುದರ ಮೇಲೆ ಕಳೆದ ಕೌನ್ಸಿಲ್ ಮೀಟಿಂಗಿನಲ್ಲಿ ಪ್ರೆಸಿಡೆಂಟರು ಈ ವಿಚಾರವನ್ನು ಮೆಂಬರುಗಳ ಗಮನಕ್ಕೆ ತಂದು, ತಮ್ಮ ಬಂಗಲೆಯ ಪೂರ್ವದ ಪ್ಲಾನನ್ನೂ ಈಗ ಗೋಡೆಹಾಕುತ್ತಿರುವುದರ ಪ್ಲಾನನ್ನೂ ತೋರಿಸಿ, ತಮಗೆ ಸೇರಿರುವ ಜಾಗದಲ್ಲೇ ಕೆಲಭಾಗವನ್ನು ರಸ್ತೆಗೆ ಬಿಟ್ಟು, ಗೋಡೆಯನ್ನು ಹಾಕುತ್ತಿರುವುದಾಗಿ ತಿಳಿಯ ಹೇಳಿದಮೇಲೆ, ಯಾರೋ ಅಸೂಯೆಯಿಂದ ಹೀಗೆ ಅರ್ಜಿಯನ್ನು ಬರೆದಿದ್ದಾರೆಯೇ ಹೊರತು ಪ್ರೆಸಿಡೆಂಟರು ಜಾಗವನ್ನೊತ್ತರಿಸಿಕೊಂಡಿರುವುದು ಸುಳ್ಳೆಂದು ಅಭಿಪ್ರಾಯಪಟ್ಟುದಲ್ಲದೆ ಕೆಲವರು ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರಬೇಕೆಂದು ಗೊತ್ತುಮಾಡಿದರು. ಅದೇ ಪ್ರಕಾರ ಆಜೆ ಶನಿವಾರ ಕೆಲ ಮೆಂಬರುಗಳು ಪ್ರೆಸಿಡೆಂಟರ ಬಂಗಲೆ ಬಳಿಗೆ ಹೋಗಿ ಸ್ಥಳವನ್ನು ಪ್ಲಾನ್ ಪ್ರಕಾರ ಪರೀಕ್ಷಿಸಿ ನೋಡಿ ಸರ್ಕಾರಿ ಜಾಗವನ್ನು ಆಕ್ರಮಿಸಿಲ್ಲವೆಂದು ನಿರ್ಧರಿಸಿಕೊಂಡು ಬಂದುದಾಗಿ ಕೇಳುತ್ತೇವೆ. ಮತ್ತು ದೇವರಾಜ ಮಾರ್ಕಟ್ಟಿನ ಮೇಲ್ವಿಚಾರಣೆಗೆ ನೇಮಿಸಲ್ಪಟ್ಟಿರುವ ಕೆಲಸಗಾರರ ಮೇಲೆ ದೂರು ಬಹಳವಾಗಿದ್ದುದರಿಂದ ಮಾರ್ಕೆಟ್ ಕಮಿಟಿ ಮೆಂಬರುಗಳು ಈಗಿರತಕ್ಕ ಕೆಲಸಗಾರರನ್ನು ಬದಲಾಯಿಸಬೇಕೆಂದು ನಿರ್ಧಾರ ಮಾಡಿರುವುದಾಗಿ ವರ್ತಮಾನವಿದೆ. ಕಮಿಟಿಯವರು ಈ ನಿರ್ಧಾರವನ್ನು ಕೂಡಲೇ ಆಚರಣೆಗೆ ತಂದು ಮಾರ್ಕಟ್ಟಿನ ವ್ಯಾಪಾರಸ್ಥರಿಗುಂಟಾಗಿರುವ ತೊಂದರೆಯನ್ನು ಪರಿಹರಿಸುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಮ|| ಗುಪ್ತರವರು ಬೊಂಬಾಯಿ ನಿಯಮನಿರ್ಮಾಣಸಭೆಯಲ್ಲಿ ಮದ್ಯಪಾನ ನಿಷೇಧವನ್ನು ಕುರಿತು ಒಂದು ಬಿಲ್ಲನ್ನು ತರುವುದಕ್ಕೆ ಅಪ್ಪಣೆ ಕೇಳಲು, ಆಗಲಾರದೆಂದು ಗೌವರ್ನರ್ ಜನರಲ್‌ರವರು ತಿಳಿಸಿರುತ್ತಾರೆ.

ಈಸಲ ಸೀಮೆಯಲ್ಲಿ ಜರುಗಿದ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಕೆ. ಪಿ. ಶಿವಶಂಕರಮೆನನ್‌ರವರು ಎಲ್ಲರಿಗಿಂತಲೂ ಮೊದಲನೆಯವರಾಗಿ ತೇರ್ಗಡೆಹೊಂದಿರುತ್ತಾರೆ. ಇದುವರೆಗೂ ಭಾರತೀಯ ವಿದ್ಯಾರ್ಥಿಗಳಾರೂ ಇಂಥ ಅಗ್ರಸ್ಥಾನವನ್ನು ಪಡೆದಿರಲಿಲ್ಲ.

ಅಲಹಾಬಾದ್ ಪಟ್ಟಣದಲ್ಲಿ ಬೀದಿ ಗುಡಿಸುವವರು ಮುಷ್ಕರ ಹಿಡಿದು ನಿಂತುಬಿಟ್ಟರು. ಇವರ ಗುಂಪಿನ ಪ್ರಮುಖರ ಮೇಲೆ ಪ್ರಾಸಿಕ್ಯೂಷನ್ ಮಾಡಬೇಕೆಂದು ಅಲ್ಲಿಯ ಮ್ಯುನಿಸಿಪಲ್ ಅಧಿಕಾರಿಗಳು ನಿರ್ಧರಿಸಿದರು. ಆದರಮೇಲೆ ಅವರೆಲ್ಲರೂ ಮುಷ್ಕರವನ್ನು ಬಿಟ್ಟು ಕೆಲಸದ ಮೇಲೆ ಬಂದರು.

ಶ್ರೀಮನ್ ಪ್ರಿನ್ಸ್‌ಆಫ್‌ವೇಲ್ಸ್‌ರವರು ಬರುವ ತಾ|| ೨೬ರಲ್ಲಿ ಲಂಡನ್‌ಪಟ್ಟಣದಿಂದ ಪ್ರಯಾಣಮಾಡಿ ಮಾರ್ಗಮಧ್ಯದಲ್ಲಿ ಮಾಲ್ಟಾದಲ್ಲಿ ೨ ದಿನಗಳಿದ್ದು, ನವಂಬರ್ ತಾ|| ೧೭ರಲ್ಲಿ ಬೊಂಬಾಯಿಗೆ ಬಂದಿಳಿಯುವರು. ಈ ದೇಶದಲ್ಲಿ ೪ ತಿಂಗಳಿದ್ದು ಏಪ್ರಿಲ್ ತಾ|| ೧೬ರಲ್ಲಿ ಜಪಾನಿಗೆ ದಯಮಾಡಿಸಿ ಅಲ್ಲಿ ಮೂರುವಾರಗಳಿದ್ದು ಸೂಯೆಜ್‌ಕಾಲ್ವೆಯ ಮಾರ್ಗವಾಗಿ ಸ್ವದೇಶಕ್ಕೆ ತೆರಳುವರು.

ಬಾಲವಿದ್ಯಾಭ್ಯಾಸವನ್ನು ಉಚಿತವಾಗಿಯೂ ನಿರ್ಬಂಧವಾಗಿಯೂ ಮಾಡಿಸಲಾಗುವುದಿಲ್ಲವೆಂದು ಪೂನಾ ಪಟ್ಟಣದ ಮ್ಯುನ್ಸಿಪಲ್ ಸಂಘದವರು ತೀರ್ಮಾನಿಸಿರುವರು. ಪ್ರಜೆಗಳಲ್ಲಿ ವಿದ್ಯಾಪ್ರಸಾರವನ್ನು ಸರಿಯಾಗಿ ಮಾಡಿಸಲಿಲ್ಲವೆಂದು ಆಂಗ್ಲಪ್ರಭುತ್ವದವರಮೇಲೆ ಅಖಂಡವಾಗಿ ಆಕ್ಷೇಪಿಸುವವರಲ್ಲಿ ಅಗ್ರೇಸರರಾದ ಮರಾಠಾ ವಿದ್ಯಾಧಿಕರು ತಮ್ಮ ಸ್ಥಳಿಕ ಸ್ವರಾಜ್ಯದಲ್ಲೇ ಇಂಥ ತೀರ್ಮಾನವನ್ನು ನಾಚುಗೆಯಿಲ್ಲದೆ ಹೇಗೆ ಮಾಡಿದರು? ಇಂಥ ಮುಂದಾಳುಗಳ ಕೈಗೆ ಸ್ವರಾಜ್ಯಸ್ವಾತಂತ್ರ್ಯವು ಸಿಕ್ಕಿಬಿಟ್ಟರೆ ಸಾಮಾನ್ಯಪ್ರಜೆಗಳ ಗತಿಯೇನು?

ಸ್ಟೇಟ್ ಕೌನ್ಸಿಲಿನಲ್ಲಿ ಮಾಪ್ಳೆಗಳ ಸೈನ್ಯವು ಮಲಬಾರಿನಲ್ಲಿ ಈಗ ಎಷ್ಟಿದೆ? ಎಂದು ರಜಾ ಅಲಿಯವರು ಕೇಳಲಾಗಿ ಈಗತಾನೇ ಸರ್ಕಾರಕ್ಕೆ ಬಂದಿರುವ ಸುದ್ದಿಯ ಪ್ರಕಾರ ಅವರು ೧೦೦೦೦ ಮಂದಿಯಿರುವರೆಂದೂ, ಅವರು ಧೈರ್ಯದಿಂದ ಹೋರಾಡುತ್ತಿರುವರಲ್ಲದೆ ಅಲ್ಲಲ್ಲಿ ಮನೆಗಳನ್ನು ದೋಚಿಕೊಂಡು ಜನರನ್ನು ಭಯಪಡಿಸಿ, ಸರ್ಕಾರದ ಸೈನಿಕರಿಗೆ ವಂಚಿಸಿ ತಲೆತಪ್ಪಿಸಿಕೊಂಡು ಹೋಗಿದ್ದು ಮೋಸದಿಂದ ಮೇಲೆಬಿದ್ದು ಯುದ್ಧಮಾಡುತ್ತಿರುವರೆಂದೂ, ಇನ್ನೂ ಕೆಲದಿನ ಅಲ್ಲಿ ಸೈನಿಕಶಾಸನವನ್ನೇ ಜರುಗಿಸಬೇಕಾಗಿದೆಯೆಂದೂ ಸರ್ಕಾರದ ಪಕ್ಷದಿಂದ ಮಿ|| ಕ್ರೇಕ್‌ರವರು ಉತ್ತರಕೊಟ್ಟರು.

ಧನ್ಜೀಭಾಯಿ ಬೊಮ್ಮಂಜೆ ಎಂಬ ಪಾರ್ಸಿ ವರ್ತಕರು ತಮ್ಮ ಜನರ ವಿದ್ಯಾಭಿವೃದ್ಧಿಗಾಗಿ ೧ ಕೋಟಿ ರೂಪಾಯಿಗಳನ್ನು ದಾನ ಮಾಡಿರುತ್ತಾರೆ. ಇಷ್ಟು ದೊಡ್ಡ ಮೊತ್ತವನ್ನು ಇದುವರೆಗೆ ಯಾವೊಬ್ಬ ಪಾರ್ಸಿಯೂ ದಾನಮಾಡಿದುದಿಲ್ಲ. ನಾನಾವಿಧವಾದ ಕಳೆಗಳನ್ನೂ ಶಿಲ್ಪಶಾಸ್ತ್ರವನ್ನೂ ವ್ಯಾಪಾರವಿದ್ಯೆಯನ್ನೂ ಪಾರ್ಸಿ ಜನವರ್ಗದಲ್ಲಿ ೮ ವರ್ಷಕ್ಕೆ ಮೇಲ್ಪಟ್ಟು ೧೮ ವರ್ಷಗಳ ವಯಸ್ಸಿನೊಳಗಣ ತರುಣರಿಗೆ ಅಭ್ಯಾಸಮಾಡಿಸುವುದಕ್ಕಾಗಿ ಈ ಹಣದ ವೃದ್ಧ್ಯಂಶವನ್ನು ವಿನಿಯೋಗಿಸಬೇಕೆಂದು ಈ ದಾನಕರ್ಣರು ತಿಳಿಯಪಡಿಸಿದ್ದಾರೆ. ಸ್ವಜನಾಭ್ಯುದಯದ ಅಭಿಮಾನವನ್ನು ಇಂಥ ಮಹನೀಯರ ಉದಾಹರಣೆಯಿಂದ ಇತರ ಶ್ರೀಮಂತರೆಲ್ಲಾ ಕಲಿಯಬೇಕು.

ಮ|| ಗಾಂಧಿಯವರು ಆಂಧ್ರದೇಶ ಸಂಚಾರವನ್ನು ಮುಗಿಸಿಕೊಂಡು ಕಳೆದ ಭಾನುವಾರವೇ ಬೊಂಬಾಯನ್ನು ಸೇರಿದರು. ಸರ್ಕಾರದವರು ಅವರನ್ನು ಗುಂತಕಲ್ಲಿನ ಬಳಿಯಲ್ಲಿ ಹಿಡಿಯುವವರಾಗಿದ್ದಾರೆಂದು ಹುಟ್ಟಿದ್ದ ಸುದ್ದಿಯು ಸುಳ್ಳಾಯಿತು. ಕಳೆದ ಮಂಗಳವಾರ ಅವರು ಬೊಂಬಾಯಿಗೆ ಎಲ್ಲಪ್ರಾಂತಗಳ ಕೆಲಕೆಲ ಪ್ರಮುಖರನ್ನು ಬರಮಾಡಿಕೊಂಡು ಕೆಲ ಮುಖ್ಯವಿಷಯಗಳನ್ನು ಕುರಿತು ಆಲೋಚಿಸಿದರಂತೆ. ಚರ್ಚಾಂಶಗಳೊಳಗೆ ಪ್ರಕೃತಸ್ಥಿತಿಯಲ್ಲಿ ಸಹಾಯನಿರಾಕರಣ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡುವುದು ಆವಶ್ಯಕವೆ? ಎಂಬ ವಿಷಯವೊಂದಾಗಿದ್ದಿತಂತೆ. ತಾ|| ೭ರಲ್ಲಿ ಕಾಂಗ್ರೆಸ್ ಕಾರ್ಯಕಾರಿಸಂಘವು ಕೂಡಿದ್ದಿತು. ಅಲ್ಲೂ ಕೂಡ ನಿರಾಕರಣವಾದಿಗಳು ಪ್ರಕೃತ ಕಾರ್ಯಾಚರಣಕ್ರಮವನ್ನು ಕುರಿತು ತೀರ್ಮಾನ ಮಾಡುವವರಾಗಿದ್ದರು.

ಮ|| ಗಾಂಧಿ, ಲಜಪತಿರಾಯಿ, ಅಬ್ದುಲ್‌ಬಾರಿ, ನೆಹ್ರೂ, ಕೇಲ್ಕರ್ ತಯಾಬ್ಜಿ, ಸರೋಜಿನೀದೇವಿ ಮೊದಲಾದ ೫೦ ಮಂದಿ ಕಾಂಗ್ರೆಸ್ ನಾಯಕರು ರುಜುಮಾಡಿ ಕಳೆದ ತಾ|| ೫ರಲ್ಲಿ ಬೊಂಬಾಯಿಯಿಂದ ಒಂದು ಪ್ರಕಟನಪತ್ರವನ್ನು ಹೊರಡಿಸಿದ್ದಾರೆ. ಭಾರತೀಯರಲ್ಲಿ ಯಾರೇ ಆಗಲಿ ಸರ್ಕಾರದ ಸಿವಿಲ್ ಮಿಲಟರಿ ಉದ್ಯೋಗಗಳಲ್ಲಿ ಸೇರಿ ಕೆಲಸಮಾಡುವುದು ಜಾತೀಯಾತ್ಮಗೌರವಕ್ಕೆ ಭಂಗಕರವಾದ ಕಾರಣ ಎಲ್ಲರೂ ಆ ಉದ್ಯೋಗಗಳನ್ನು ಬಿಟ್ಟು ಬೇರೆ ವೃತ್ತಿಯನ್ನು ನೋಡಿಕೊಳ್ಳಬೇಕು ಎಂದು ತಿಳಿಯಿಸಿರುತ್ತಾರೆ. ಹೀಗೆ ಬೋಧಿಸಿದರೆಂಬ ಕಾರಣಕ್ಕಾಗಿಯೇ ಅಲಿಸೋದರರೇ ಮೊದಲಾದವರ ಮೇಲೆ ಕೇಸು ನಡೆಯುತ್ತಿರುವುದು. ಇನ್ನುಮುಂದೆ ಅಸಹಾಯವಾದಿಗಳು ಎಲ್ಲೆಲ್ಲೂ ಸಭೆ ನಡಿಸಿ ಇದೇತೆರದ ಬೋಧೆಯನ್ನೂ ತೀರ್ಮಾನವನ್ನೂ ಮಾಡುವುದು ಸಿದ್ಧ. ಮದರಾಸಿನ ಸಮುದ್ರತೀರದಲ್ಲಿ ೫ನೆ ತಾ|| ಸಾಯಂಕಾಲವೇ ಒಂದುಸಭೆಯು ಟಿ. ಎಸ್. ವರದಾಚಾರಿ ಎಂ.ಎ., ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ಕೂಡಿದ್ದು ಇದೇತೆರದ ತೀರ್ಮಾನಮಾಡಿದರು. ಪ್ರಭುತ್ವದವರು ಮುಂದೇನು ಮಾಡುವರೋ ನೋಡಬೇಕು.

ಕಳೆದ ತಾ|| ೨೮ರಲ್ಲಿ ಮ|| ಗಾಂಧಿಯವರು ತಿರುಪತಿಗೆ ಹೋಗಿದ್ದಾಗ ಅಲ್ಲಿಯ ಪುರನಿವಾಸಿಗಳು ಒಂದು ವಿಜ್ಞಾಪನಪತ್ರವನ್ನು ಬೆಳ್ಳಿಯ ಪೆಟ್ಟಿಗೆಯುಲ್ಲಿಟ್ಟು ಒಪ್ಪಿಸಲು, ಗಾಂಧಿಯವರು-ಚಿನ್ನಬೆಳ್ಳಿಗಳನ್ನು ರಕ್ಷಿಸಿಟ್ಟುಕೊಳ್ಳುವುದಕ್ಕೆ ನನ್ನಲ್ಲಿ ಸ್ಥಳವಿಲ್ಲವಾದಕಾರಣ ಈ ಪೆಟ್ಟಿಗೆಯನ್ನು ಮಾರಿ ಬಂದ ಹಣದಿಂದ ಈ ಪ್ರಾಂತದಲ್ಲಿ ಕ್ಷಾಮಪೀಡಿತರಾಗಿರುವ ಜನರ ಸಹಾಯಕ್ಕೆ ವಿನಿಯೋಗಿಸಿರಿ, ಎಂದು ಹೇಳಿದುದಲ್ಲದೆ ತಮ್ಮ ಪ್ರತ್ಯುತ್ತರದಲ್ಲಿ ಸ್ವದೇಶವಸ್ತ್ರಧಾರಣಾವಶ್ಯಕತೆಯನ್ನು ಉಪದೇಶಿಸಿ, ಕಡೆಗೆ ಹೀಗೆ ಹೇಳಿದರು—"ಪಂಚಮ ಸಹೋದರರು ಈ ಪರ್ವತವನ್ನೇರಿ ವೆಂಕಟೇಶ್ವರನನ್ನು ದರ್ಶಿಸುವುದಕ್ಕೆ ಅಡ್ಡಿಯುಂಟೆಂಬುದನ್ನು ಕೇಳಿದ ಕೂಡಲೇ ನನ್ನ ಹೊಟ್ಟೆಯಲ್ಲಿ ಬೆಂಕಿಬಿದ್ದಂತಾಯಿತು. ನಾನು ಸನಾತನ ಧರ್ಮವನ್ನವಲಂಬಿಸಿರುವ ಹಿಂದುವಾಗಿದ್ದೇನೆ. ನಮ್ಮ ಶಾಸ್ತ್ರಗಳಲ್ಲಿ ಎಲ್ಲಿ ನೋಡಿದರೂ ಪಂಚಮನಿಗೂ ವೈದಿಕನಿಗೂ ಯಾವ ಭೇದವೂ ಕಾಣುವುದಿಲ್ಲ. ಸದಾಚಾರನಿರತನೂ ದೈವಭಕ್ತಿಸಂಪನ್ನನೂ ಆದ ಪಂಚಮನು ಭಗವಂತನ ಸಾನ್ನಿಧ್ಯವನ್ನು ಸೇರುವನು. ಕಪಟಿಯೂ ದುರಾಚಾರತತ್ಪರನೂ ಆದ ವೈದಿಕನು ನರಕವನ್ನೈದುವನು. ಭಗವದ್ಗೀತೆಯಲ್ಲಿ ಈ ರಹಸ್ಯವು ವಿಸ್ತಾರವಾಗಿ ಹೇಳಲ್ಪಟ್ಟಿದೆ. ಆದುದರಿಂದ ಪಂಚಮಸಹೋದರರನ್ನು ಅಸ್ಪೃಶ್ಯರನ್ನಾಗಿ ಗಣಿಸುವವರೆಲ್ಲರೂ ದೈವವನ್ನೂ ಮತವನ್ನೂ ಪರಿತ್ಯಜಿಸುತ್ತಿದ್ದಾರೆಂದು ತಿಳಿದುಕೊಳ್ಳಬೇಕು.

ಬಂಧನದಂಡನಗಳು.

ಮದರಾಸು ಆಧಿಪತ್ಯದಲ್ಲಿ ಸಹಕಾರನಿರಾಕರಣ ಮೊದಲಾದ ಚಳವಳಿಗಳು ವಿಶೇಷವಾಗಿ ನಡೆಯುತ್ತಿವೆ. ಸರ್ಕಾರದ ಕಾರ್ಯಸ್ತಂಭನ ಯತ್ನಗಳಿಗೆ ವಿಶೇಷ ಪ್ರೋತ್ಸಾಹವು ಅತಿವಾದಿಗಳಿಂದ ಬಲವತ್ತರವಾಗಿ ಮಾಡಲ್ಪಡುತ್ತಿದೆ. ಪ್ರಭುತ್ವದವರುಕೂಡ ಮುಖಂಡರ ಬಂಧನ ದಂಡನ ಪದ್ಧತಿಗಳನ್ನು ಬಲವಾಗಿ ನಡೆಯಿಸುತ್ತಿದ್ದಾರೆ. ಕಳೆದ ತಾ|| ೨೮ರಲ್ಲಿ ಬರ್ಹಾಂಪುರದಲ್ಲಿ ೯ನೆ ಆಂಧ್ರಮಹಾಸಭೆಗೆ ಅಧ್ಯಕ್ಷರಾಗಿದ್ದ ಗಂಪಲಗೂಡೆಂ ಜಮೀನ್ದಾರರಾದ ಕೋಟಗಿರಿ ವೆಂಕಟಕೃಷ್ಣಾರಾವ್‌ರವರನ್ನು ವಾರಂಟುಕೊಟ್ಟು ಹಿಡಿಯಿಸಿ, ವಿಚಾರಣೆ ನಡೆಯಿಸಿ ೧ ವರ್ಷ ಕಾರಾಗೃಹಶಿಕ್ಷೆಯನ್ನು ವಿಧಿಸಿದರು. ಇವರು ಕೆಲಕಾಲದಿಂದ ಅಸಹಯವಾದಿಗಳಲ್ಲಿ ಪ್ರಮುಖರಾಗಿ ತೀವ್ರವಾದ ಉಪನ್ಯಾಸಗಳನ್ನು ಮಾಡುತ್ತಲಿದ್ದರು. ಬರ್ಹಾಂಪುರಂ ಸಭಾಧ್ಯಕ್ಷತೆಯಲ್ಲಿ "ನಾವು ಸರ್ಕಾರದ ಆಜ್ಞಾತಿರಸ್ಕಾರವನ್ನು ಮಾಡಬೇಕು, ಅದರಿಂದ ದೌರ್ಜನ್ಯವು ಮೂಡುವುದೆಂದು ಆಂಧ್ರಜನರು ಭಯಪಡಕೂಡದು. ದೌರ್ಜನ್ಯವು ಹುಟ್ಟೇಹುಟ್ಟುವುದು ಖಂಡಿತ. ಈಗಣ ಪಾಪಿಷ್ಠಪ್ರಭುತ್ವದ ಸೈನ್ಯದಲ್ಲಿ ಮಹಮ್ಮದೀಯರೇ ಆಗಲಿ ಹಿಂದುಗಳೇ ಸೇರಕೂಡದು. ಈಗಿನ ಮದ್ರಾಸು ದುಷ್ಟಪ್ರಭುತ್ವವನ್ನು ಒಬ್ಬ ದೇವಾಂಗದವನು ಒಬ್ಬ ವೇಲಮಕುಲದವನು ಒಬ್ಬ ಪಾತ್ರ ಇನ್ನೊಬ್ಬ ಅಪಾತ್ರ ಇಂಥವರು ಆಶ್ರಯಿಸಿಕೊಂಡಿದ್ದಾರೆ. ಪ್ರಭುತ್ವದ ಪಾಪವೆಲ್ಲಾ ಪರಿಪಾಕವಾಗಿ ಬಂದಿದೆ. ಮರವನ್ನು ಅಲ್ಲಾಡಿಸಿಬಿಟ್ಟರೆ ಹಣ್ಣು ಉದುರಿಹೋಗುವುವು." ಇತ್ಯಾದಿಯಾದ ವಾಕ್ಯಗಳನ್ನು ಉಪಯೋಗಿಸಿ ರಾಜಭಕ್ತಿಗೆ ವಿರುದ್ಧವಾಗಿ ಪ್ರವರ್ತಿಸಿದರೆಂದು ಗಂಜಾಂ ಜಿಲ್ಲಾಧಿಕಾರಿಗಳು ೧೦೭-೧೦೮ ಸೆಕ್ಷನ್ನುಗಳ ಪ್ರಕಾರ ಅಪರಾಧವನ್ನು ಆರೋಪಿಸಿ, ವಾರಂಟನ್ನು ಹುಟ್ಟಿಸಿದರು. ಇವರು ಸಭಾಕಾರ್ಯವನ್ನು ಮುಗಿಸಿಕೊಂಡು ಊರಿಗೆ ಹೋಗುತ್ತಿರುವಾಗ ತಾ|| ೨೭ನೆ ನಡುರಾತ್ರಿಯಲ್ಲಿ ಚಿಕಾಕೋಲು ರೋಡ್ ನಿಲ್ದಾಣದಲ್ಲಿ ಇವರು ಬಂಡಿಯಲ್ಲಿ ಮಲಗಿರುವಾಗಲೇ ಬರ್ಹಾಂಪುರಂ ಪೊಲೀಸ್ ಡೆಪ್ಯುಟಿಸೂಪರಿಂಟೆಂಡೆಂಟರು ಎಬ್ಬಿಸಿ ವಾರಂಟನ್ನು ತೋರಿಸಿ ಹಿಡಿದು, ನಿಲ್ದಾಣದಲ್ಲೇ ಪ್ರಯಾಣಿಕರು ಇಳಿಯುವ ಮನೆಯಲ್ಲಿ ಇಳಿಯಿಸಿದ್ದರು. ಮರುದಿನ ಸಾಯಂಕಾಲ ಗಂಜಾಂಜಿಲ್ಲಾ ಮ್ಯಾಜಿಸ್ಟ್ರೇಟ್ ಮಿ|| ರದರ್‌ಫರ್ಡ್‌ರವರು ಬಂದು ಅಲ್ಲೇ ವಿಚಾರಣೆ ನಡೆಯಿಸಿ, ೧೦೭ನೆ ಸೆಕ್ಷನ್ ಪ್ರಕಾರ ಸತ್ಪ್ರವರ್ತನೆಯಲ್ಲಿರುವುದಕ್ಕೆ ೧೦೦೦ ರೂ. ಗಳ ಹೊಣೆ ಕೊಡಬೇಕೆಂದು ಕೇಳಿದರು. ನಾನು ಅಸಹಯವಾದಿಯಾದುದರಿಂದ ಹೊಣೆಕೊಡುವುದಿಲ್ಲವೆಂದು ಜಮೀನ್‌ದಾರರು ತಿರಸ್ಕರಿಸಿದರು. ಆದರಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸಾಕ್ಷಿಗಳ ವಿಚಾರಣೆಯನ್ನೆಲ್ಲಾ ಮುಗಿಸಿ ೧ ವರ್ಷ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ಇನ್ನೊಬ್ಬ ದುಗ್ಗಿರಾಲಗೋಪಾಲಕೃಷ್ಣಯ್ಯ ಎಂಬುವರಿಗೆ ತಿಂಗಳವರೆಗೆ ಯಾವ ಸಭೆಯಲ್ಲೂ ಉಪನ್ಯಾಸಮಾಡಕೂಡದೆಂದು ಗಂಜಾಂಜಿಲ್ಲಾ ಡಿ|| ಮ್ಯಾಜಿಸ್ಟ್ರೇಟರು ಮಾಡಿದ್ದ ಆಜ್ಞೆಯನ್ನು ಅವರು ಮೀರಿ ನಡೆದುದರಿಂದ ಕಳೆದ ತಾ|| ೧ರಲ್ಲಿ ಬರ್ಹಂಪುರಂ ನಿಲ್ದಾಣದಲ್ಲಿ ವಾರಂಟಿನಿಂದ ಹಿಡಿದರು. ಜಿಲ್ಲಾ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ನಡೆದಿತು. ಹೊಣೆಕೊಡಲು ನಿರಾಕರಿಸಿದುದರಿಂದ ಇವರಿಗೂ ೧ ವರ್ಷ ಕಾರಾಗೃಹವಾಸಶಿಕ್ಷೆಯಾಯಿತು. ಹೀಗೆಯೇ ಅನೇಕರಿಗೆ ವಾಗ್ಬಂಧನ ಸೂಚನೆಗಳೂ ಕಾರಾಗೃಹಶಿಕ್ಷೆಗಳೂ ನಡೆಯುತ್ತಿವೆ.

ಅಲಿಸೋದರರೇ ಮೊದಲಾದ ೭ ಮಂದಿಗಳ ವಿಚಾರಣೆ.

ಮಹಮ್ಮದಾಲಿಯವರು ತಮ್ಮಗಳ ಹೇಳಿಕೆಯೆಂಬುದಾಗಿ ಬಹುದೀರ್ಘವಾದ ಭಾಷಣವೊಂದನ್ನು ಮಾಡಿದರು. ಅದರಲ್ಲಿ ಬಹು ನಿರ್ಭೀತಿಯಿಂದಲೂ ಅಲಕ್ಷ್ಯದಿಂದಲೂ ಕಠಿನವಾದ ಅಭಿಪ್ರಾಯಗಳನ್ನು ವಿಶೇಷವಾಗಿ ವ್ಯಕ್ತಪಡಿಸಿದರು. "ಇಂಗ್ಲೀಷರು ಖಿಲಾಪತ್ತಿಗೆ ವಿರೋಧವಾಗಿ ನಡೆಯುವುದರಿಂದ ಅವರು ಮಹಮ್ಮದೀಯಮತಕ್ಕೂ ದೇಶಕ್ಕೂ ಶತ್ರುಗಳೆಂದು ಮಹಮ್ಮದೀಯರು ಗ್ರಹಿಸಿದ್ದಾರೆ. ಆಂಗ್ಲರು ವಚನಭ್ರಷ್ಟರು. ಅವರು ಮಹಮ್ಮದೀಯ ಮತಕ್ಕೆ ಶತ್ರುಗಳಾಗಿರುವುದರಿಂದ ಅಂಥ ಪ್ರಭುತ್ವದಮೇಲೆ ಯುದ್ಧಮಾಡಲಿಕ್ಕೆ ಸಾಮರ್ಥ್ಯವು ಮುಸಲ್ಮಾನರಿಗಿದ್ದರೆ ಅವರ ಮತವು ಭ್ರಷ್ಟವಾಗಲವಕಾಶಕೊಡದಂತೆ ಇಷ್ಟರೊಳಗೇ ಇಂಗ್ಲೀಷರಮೇಲೆ ಯುದ್ಧವನ್ನು ಸಾರಿರುತ್ತಿದ್ದರು. ಹಾಗೆ ಜರುಗಿದ್ದರೆ ಈಗ ಈ ಮನೆಯಲ್ಲಿ ಜರುಗುತ್ತಿರುವ ಈ ವಿವಾದವು ಬೇರೊಂದು ಸ್ಥಲದಲ್ಲಿ ಪರಿಷ್ಕಾರವಾಗುತ್ತಿದ್ದಿತು. ಅಂಥ ಶಕ್ತಿಯಿಲ್ಲದವರು ಸರ್ಕಾರಿ ವಕೀಲರ ತೊಂದರೆಯನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಪ್ರಕೃತಕ್ಕೆ ಈ ದೇಶವನ್ನು ಬಿಟ್ಟು ಅನ್ಯದೇಶಕ್ಕಾದರೂ ಹೋಗಿರಬೇಕು. ಮಹಮ್ಮದೀಯರು ಯಾವರಾಜ್ಯದಲ್ಲಿದ್ದರೂ ಆ ಪ್ರಭುವಿನ ಆಜ್ಞೆಗಿಂತಲೂ ದೈವಾಜ್ಞೆಯು ಅಧಿಕವಾದುದರಿಂದ ಆ ದೈವಾಜ್ಞೆಗೆ ವಿರುದ್ಧವಾಗಿ ನಡೆಯುವ ಪ್ರಭುತ್ವದ ಆಜ್ಞೆಯನ್ನು ಮಹಮ್ಮದೀಯರು ಉಲ್ಲಂಘಿಸದೆ ಇರುವುದಕ್ಕಾಗುವುದಿಲ್ಲ." ಇತ್ಯಾದಿಯಾಗಿ ಅನೇಕ ಖುರಾನ್ ವಚನಗಳ ಆಧಾರದೊಡನೆ ಭಾಷಣಮಾಡುತ್ತಿದ್ದರು. ಆಗ ಸರ್ಕಾರಿ ವಕೀಲರು ಮಧ್ಯದಲ್ಲಿ ಬಾಯಿಹಾಕಿ, ನೀವು ಉಪನ್ಯಾಸಮಾಡುತ್ತಿದ್ದೀರೇ ಹೊರತು ಈ ಕೇಸಿಗೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ಹೇಳುತ್ತಲಿಲ್ಲ ಎಂದು ಹೇಳಲು, ದಂಡಾಧಿಕಾರಿಯು ನೀವು ಕೇಸಿಗೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರವೇ ಹೇಳಬೇಕೆಂದು ಮಹಮ್ಮದಾಲಿಯವರಿಗೆ ತಿಳಿಯಪಡಿಸಿದರು. ಆದರಮೇಲೂ ಅವರು ಮತ್ತೊಂದುಪನ್ಯಾಸಕ್ಕೆ ಆರಂಭಿಸಿದರು. ದಂಡಾಧಿಕಾರಿಯು ನೀವು ಇನ್ನೂ ಹೀಗೆಯೇ ಎಷ್ಟುಹೊತ್ತು ಉಪನ್ಯಾಸಮಾಡುತ್ತೀರಿ? ಎನ್ನಲು, ಇನ್ನು ೧೪ ಪುಟಗಳು ಉಳಿದಿವೆಯೆಂದು ಅವರು ಉತ್ತರಕೊಟ್ಟರು. ನೀವು ಹೇಳಬೇಕಾದುದನ್ನೆಲ್ಲಾ ಬರೆದುಕೊಟ್ಟರೆ ಒಳ್ಳೇದು ಎಂದು ದಂಡಾಧಿಕಾರಿಯು ಹೇಳಲು, ಮಹಮ್ಮದಾಲಿಯವರು—ಇನ್ನು ಕೆಲಸಂಗತಿಯನ್ನು ಮಾತ್ರ ಹೇಳಿಬಿಟ್ಟು ಬಳಿಕ ಹಾಗೆಯೇ ಬರೆದುಕೊಡುವೆನು ಎನ್ನಲು, ದಂಡಾಧಿಕಾರಿಯು-ಗೋಕಾಕಿನಲ್ಲಿನಡೆದ ಸಭೆಯಲ್ಲಿ ಮಾಡಲ್ಪಟ್ಟ ತೀರ್ಮಾನದಪ್ರತಿಯು ನಿಮ್ಮಲ್ಲಿದೆಯೋ ಎಂದು ಕೇಳಲು, ಆದರಮೇಲೆ ಸ್ವಲ್ಪ ಚರ್ಚೆನಡೆಯಿತು. ಮ|| ಅಲಿಯವರು ಅದನ್ನು ನಾನೇ ಉರುದಿನಲ್ಲಿ ಬರೆದು ಆಂಗ್ಲಭಾಷೆಗೆ ಪರಿವರ್ತನೆಮಾಡಿದೆನು. ಅದರಂತೆಯೇ ಗೋಕಾಕ್ ಸಭೆಯಲ್ಲೂ ಕರಾಚಿ ಸಭೆಯಲ್ಲೂ ಅನುಮೋದಿಸಲ್ಪಟ್ಟಿತು ಎಂದು ಹೇಳಿದರು. ಬಳಿಕ ಹಸನ್ ಅಹಮ್ಮದ್‌ರವರು ಉರುದಿನಲ್ಲಿ ತಮ್ಮ ಹೇಳಿಕೆಯನ್ನು ಹೇಳಿದರು. ಡಾಕ್ಟರ್ ಕಿಚ್ಲುಯವರೂ ಉರುದುವಿನಲ್ಲೇ ತಮ್ಮ ಅಭಿಪ್ರಾಯವನ್ನು ಹೇಳಿದರು. ಗುಲಾಂ ಮುಜದೀನ್‌ರವರು ಸಿಂಧಿಭಾಷೆಯಲ್ಲಿ ಆವೇಶಗೊಂಡು ಮಾತನಾಡಿದರು. ಬಳಿಕ ಡಾ|| ಕಿಚ್ಲೂಯವರಿಗೂ ದಂಡಾಧಿಕಾರಿಗೂ ಸ್ವಲ್ಪ ಚರ್ಚೆನಡೆದಿತು.

ಬಳಿಕ ದಂಡಾಧಿಕಾರಿಯು ಶೌಕತಾಲಿಯವರನ್ನು ಕುರಿತು-ನೀವು ಕರಾಚಿ ಸಭೆಯಲ್ಲಿದ್ದಿರಾ? ಎಂದು ಪ್ರಶ್ನೆಮಾಡಲು, ದೇಶದಲ್ಲಿ ನಾನು ಹೋಗದಿರುವ ಖಿಲಾಪತ್ ಸಭೆಯೇ ಇಲ್ಲ. ಕರಾಚಿ ಸಭೆಯಲ್ಲಿ ೬ ನೆ ತೀರ್ಮಾನವನ್ನು ಕುರಿತು

ನಾನು ಯಾವ ಮಾತನ್ನು ಆಡದೆ ಹೋದೆನೇ ಎಂದು ನನಗೆ ಈಗ ಸಂತಾಪವಾಗುತ್ತಿದೆ. ಆ ತೀರ್ಮಾನವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಎಂದು ಹೇಳಿ, ರಾಜಕೀಯ ವಿಷಯವನ್ನೆತ್ತಿಕೊಂಡು ಸರ್ಕಾರವನ್ನು ದೂಷಿಸಲುಪಕ್ರಮಿಸಿದರು.

ದಂಡಾ-ಕೇಸಿಗೆ ಸಂಬಂಧಪಟ್ಟ ವಿಷಯವನ್ನು ಮಾತ್ರ ಹೇಳಬೇಕು. ಶೌ-ನಾನು ಹೇಳಿದುದನ್ನು ನೀವು ಬರೆದುಕೊಳ್ಳಬೇಕು.

ದಂ-ನೀವು ರಾಜಕೀಯ ವಿಷಯವಾಗಿ ಮಾಡುವ ಉಪನ್ಯಾಸವನ್ನೂ ಸರ್ಕಾರದ ದೂಷಣೆಯನ್ನೂ ನಾನು ಬರೆದುಕೊಳ್ಳಬೇಕಾದುದಿಲ್ಲ; ಹೋಗಲಿ. ನೀವು ಕುಳಿತುಕೊಳ್ಳಿರಿ. ಮಹಮ್ಮದಾಲಿ-ನಿಮಗೆ ದೇವರ ವಿಷಯದಲ್ಲಿ ನಂಬುಗೆಯೇನೂ ಇಲ್ಲವೆ? ದಂಡಾ—ನೀವು ಕುಳಿತುಕೊಳ್ಳಿರಿ. ಮಹ-ನಾನು ಕುಳಿತುಕೊಳ್ಳುವುದಿಲ್ಲ, ಎಂದು ಹೇಳಿ, ಸ್ವಲ್ಪ ಹೊತ್ತಿಗೆ ಕುಳಿತುಕೊಂಡರು. ಅಷ್ಟರಲ್ಲಿ ಒಬ್ಬ ಪೊಲೀಸ್ ಕಾನ್‌ಸ್ಟೆಬಲು ಮಹಮ್ಮದಾಲಿಯವರ ಬಳಿಗೆ ಬರಲು, ಅದನ್ನು ಶೌಕತಾಲಿಯವರು ಕಂಡು, ಈತನು ಯಾರ ಸೂಚನೆ ಮತ್ತು ಅಪ್ಪಣೆಯಮೇಲೆ ಮಹಮ್ಮದಾಲಿಯವರ ಬಳಿಗೆ ಹೋದನು? ಎಂದು ರೌದ್ರಾವೇಶದಿಂದ ಗರ್ಜಿಸಿ ಮಾತನಾಡಲುಪಕ್ರಮಿಸಿದರು.

ದಂಡಾ-ನೀವು ಕೇಸಿಗೆ ಸಂಬಂಧಿಸಿದಷ್ಟು ವಿಷಯವನ್ನು ಮಾತ್ರ ಹೇಳಿದರೆ ಕೇಳುತ್ತೇನೆ. ರಾಜಕೀಯ ವಿಷಯದ ಉಪನ್ಯಾಸವನ್ನು ಮಾತಕೂಡದು. ಶೌಕ-ಕರಾಚಿ ಸಭೆಯ ೬ನೆ ತೀರ್ಮಾನಕ್ಕೂ ಅಸಹಾಯೋದ್ಯಮಕ್ಕೂ ಇರುವ ಸಂಬಂಧವನ್ನು ನಾನು ತಿಳಿಯಿಸಬೇಕಾಗಿದೆ. ನಾನು ಭಗವಂತನ ಅಪ್ಪಣೆಯ ಹೊರತು ಮತ್ತಾರ ಅಧಿಕಾರವನ್ನೂ ಒಪ್ಪುವುದಿಲ್ಲ. ನಾನು ಸ್ವತಂತ್ರ, ನೀವು ನನ್ನನ್ನು ಕುರಿತು ಕರಾಚಿ ಗೋಕಾಕ್ ಸಭೆಗಳ ವಿಷಯವನ್ನು ಕುರಿತು ಪ್ರಶ್ನೆಮಾಡುವುದರಿಂದ ಲಾಭವೇನು? ಮಹಮ್ಮದೀಯ ಮತಧರ್ಮವನ್ನು ಕುರಿತು ಬೇಕಿದ್ದರೆ ಕೇಳಿರಿ.

ದಂಡಾ-ನೀವು ಉಪನ್ಯಾಸಮಾಡಬೇಡಿ, ಕುಳಿತುಕೊಳ್ಳಿರಿ

ಶೌಕ-ನಾನೇತಕ್ಕೆ ಕುಳಿತುಕೊಳ್ಳಲಿ?

ಬಳಿಕ ಅಪರಾಧಿ ಶಂಕರಾಚಾರ್ಯರು ಕುಳಿತುಕೊಂಡೇ ಮಾತನಾಡುವುದಕ್ಕುಪಕ್ರಮಿಸಿದರು. ಹಾಗೆ ಕುಳಿತು ಮಾತನಾಡಕೂಡದೆಂದು ದಂಡಾಧಿಕಾರಿಯು ಎಚ್ಚರಿಸಿದರು.

ಆಗ ಮಹಮ್ಮದಾಲಿಯವರು ಉದ್ರೇಕಗೊಂಡು-ಅವರು ಸನ್ಯಾಸಿಗಳು, ಆದುಕಾರಣ ಎದ್ದು ಮಾತನಾಡುವುದು ಅವರ ಮತಧರ್ಮಕ್ಕೆ ವಿರುದ್ಧವು ಎಂದರು.

ದಂಡಾಧಿಕಾರಿಯು-ನಿಮ್ಮ ಉಪನ್ಯಾಸಗಳನ್ನು ಕೇಳುವುದಕ್ಕೆ ನಾನಿಲ್ಲಿ ಕುಳಿತಿಲ್ಲ. ಎಂದರು.

ಬಳಿಕ ನಿಸರ್ ಮಹಮ್ಮದರು—ಮಹಮ್ಮದಾಲಿಯವರು ಹೇಳಿದ ಹೇಳಿಕೆಗಳಿಗೆಲ್ಲಾ ನಾನು ಒಪ್ಪಿರುವೆನೆಂದರು. ಅಲ್ಲಿಗೆ ಅಪರಾಧಿಗಳ ಹೇಳಿಕೆಗಳೆಲ್ಲಾ ಮುಗಿದಂತಾಯಿತು.

ಬಳಿಕ ಸರ್ಕಾರಿ ವಕೀಲರಾದ ಮಿ|| ಎಲ್ಫಿನ್‌ಸ್ಟನ್‌ರವರು ತಮ್ಮ ಆರ್ಗ್ಯುಮೆಂಟನ್ನು ಆರಂಭಿಸಿ-ಅಪರಾಧಿಗಳು ನನ್ನ ಕಾರ್ಯಭಾರವನ್ನು ಬಹಳ ತಗ್ಗಿಸಿದರು. ಜುಲೈ ತಿಂಗಳಲ್ಲಿ ಜರುಗಿದ ಖಿಲಾಪತ್ ಸಭೆಯಲ್ಲಿ ಮಾಡಲ್ಪಟ್ಟ ೬ನೆ ತೀರ್ಮಾನವೇ ಈ ಕೇಸಿಗೆ ಮೂಲಾಧಾರವು. ಗೋಕಾಕ್ ಸಭೆಯಲ್ಲಿ ಮಾಡಿದ ತೀರ್ಮಾನಕ್ಕೂ ಕರಾಚಿ ಸಭೆಯ ತೀರ್ಮಾನಕ್ಕೂ ಭೇದವೇನೂ ಇಲ್ಲವೆಂದು ರುಜುವಾತಾಗಿದೆ. ೨-೩-೪-೫-೬ನೆ ಅಪರಾಧಿಗಳು ಆ ವಿಷಯವಾಗಿ ಮಾತನಾಡಿದ್ದಾರೆ. ೬ನೆ ಅಪರಾಧಿಗೆ ಇವರಲ್ಲಿರುವ ಸಂಬಂಧವು ಸಿದ್ಧವಾಗಿದೆ. ಈಗ ಅಪರಾಧಿಗಳು ಮಾಡಿದ ಭಾಷಣವು ಆ ತೀರ್ಮಾನಗಳಲ್ಲಿರುವ ವಾಕ್ಯಗಳಿಗಿಂತಲೂ ಪರುಷವಾಗಿವೆ. ಸೈನಿಕರು ತಮ್ಮ ಉದ್ಯೋಗವನ್ನು ಬಿಡಬೇಕೆಂದು ಇವರುಗಳು ಅವರಿಗೆ ಹಂಚಿದ ಪ್ರಕಟನಪತ್ರಿಕೆಗಳ ವಿಷಯವೂ ಅದಕ್ಕಾಗಿ ಮಾಡಿದ್ದ ಗೂಢಪ್ರಯತ್ನವೂ ರುಜುವಾತಾಗಿದೆ. ಹಂಚಿದ ಕರಪತ್ರಗಳಲ್ಲಿ ೨-೪-೫ನೆ ಅಪರಾಧಿಗಳ ರುಜುಗಳೇ ಇವೆ. ಆದುಕಾರಣ ೭ ಮಂದಿಗಳ ಮೇಲೂ ೧೨೦-೧೩೧ನೆ ಸೆಕ್ಷನ್‌ಗಳ ಪ್ರಕಾರ ಛಾರ್ಜು ಮಾಡಬೇಕೆಂದು ಹೇಳಿದರು.

ಆಗ ದಂಡಾಧಿಕಾರಿಯು ಅಪರಾಧಿಗಳಮೇಲೆಲ್ಲಾ ತಪ್ಪನ್ನು ಸ್ಥಾಪಿಸಿ ಮುಂದೆ ಸೆಷನ್ ವಿಚಾರಣೆ ನಡೆಯಬೇಕೆಂದು ನಿರ್ಧಾರಮಾಡಿದರು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

MY DEAR CHLORIS,

You had asked me in your letter to write to you the news of this place and should I send you the present soul of Mysore you will be much vexed at the end. Anyhow in compliance with your request I am writing to you my own views on the Brahmin and non-Brahmin movement which is now the chief subject of politics in Mysore.

The present state of Mysore is analogous with that of Europe (Mediaeval). The rise of the Papacy was chiefly due to the general ignorance of the people spiritually, morally and mentally. In those days the chief characteristic of a gentleman was general ignorance and this doctrine was rigidly enforced by the selfish, narrow-minded, pleasure and power seeking clergy, the adoption and pursuance of which policy by kings who were ignorant of their infernal designs not only told upon the German Empire and Italy but also contributed to the rise of other states which resorted to such institutions as would enlighten the people and widen their angle of vision and what and where those states are, you know well. And later on the Renaisance marked the dawn of a general intellectual awakening on the part of the people and the consequent decline and downfall of Papacy. Similarly, the present Brahmin and non-Brahmin movement in Mysore marks the dawn of intellectual and political consciousness on the part of the latter and the consequent eventual, inevitable, political decline of the Brahmin.

Quite a small percentage of non-Brahmins formed the enlightened sect at first among them. Mr. Basavayya of revered memory and few others began to face their adversaries with stoic calmness. They laboured incessantly and with a single-mindedness of purpose and loftiness of aim which should be a priceless heritage to us (the non-Brahmins) for ever. They worked for a goal which their eye of faith and of hope discerned even when it was enshrouded by race antagonism, caste egotism, class interests and hatreds. Thank God, we are no longer in it. We are on the threshold and are advancing to get out of the intellectual darkness that enshrouded us. The right path is hit and we are to advance and attain to the end through co-operation of our antagonists and on lines of our patriots whose foresight and wisdom combined with their enthusiasm for a just and noble cause are as creditable to them as they are essential for the stability and permanence of the Mysore State. The benign Government has recognised the importance of the movement and has done its best to give effect to the just claims of the backward classes, with the result the Miller's Committee Report and the Education Memorandum were formulated. The Report and the Memorandum are the offspring of the accumulated force of years' discontent. But what is the result?

The publication of the Report as a result of the popular aspiration has plunged the whole Brahmin community into a state of intense hysteric excitement. It has stimulated thought and provoked keen controversy. The question is being hotly debated, mercilessly attacked and criticised as to whether the just principles should be accepted by the State or not, whether or not the proposals it contains satisfy the aspirations and expectations raised by the announcement itself; whether in one word, they continue towards the realisation of responsible Government.

That the Report has caused disappointment to the Brahmins cannot and need not be denied. Since the Report has failed to fulfil their natural expectations, the Brahmins have begun to attack. In what manner?

The Sadhvis, Satyavadis, Sampatabhudaya, the Patriots and the so called Lovers of Truth edited by our relentless adversaries are so sectarian in their outlook and teem with such venomous personal attacks made out of motiveless malignity that it is so hard for me to divine the actual truth. A careful perusal of the papers clearly convince that the stereotyped Brahmin leaders bear a base grudge against the non-Brahmins, and the criticisms levelled against center, not around the Report and the action of the benign Durbar, but around the moral personality of a few respectable non-Brahmin gentlemen who hold responsible posts in the State. Their fatal darts spare neither the prince nor the peasant, the venom injected leaves a wound which not only rankles and festers but finally goads the individual to lunacy and violent action. The attacks are made under Pseudo-names which stand for certain noble virtues, which do not warrant the deed and what hideous delight the merciless adversary gets the fiend alone can understand and better depict. The Editors of the abovesaid papers in their devotion to duty, love of truth and justice allow their papers to be pregnant with attacks on their innocent foes. The petty greatnesses of their heroes and the trivial acts of their community are liberally euologized. Evidently this attitude tantamounts to an admission of the fact that there are no black sheep among the Brahmins. Yes, certainly now could there be in a community which is divinely ordained to rule, not serve, to teach not practise, to monopolize the good, not share. Oh! what damned hypocrisy is this Chloris! Show me any time when the non-Brahmin measured his will in such bitter antogonism against the Brahmins in the recent or the distant past? Did any Brahmin officer bear such odium inspite of his weaknesses? Was ever the private life or past antecedents raked up? All this is done not out of love of justice or healthy morality but out of spite. The poor Brahmin cannot bear the sight of the Plebian dictating to him while he was his slave in the past pandering to his conveniences out of ignorance.

Are the Editors of the papers faithful to what they advocate? The tongue that now vents its spleen shall not hesitate to praise its unfortunate victim when it is no longer an obstacle to its rise. Reddy had become the object of all attacks and eternal ridicule, and when he was gone the poor noble Dewan Saheb was taken up. Which of the non-Brahmin gentlemen have satisfied your requirements? Sir Seshadri Aiyar and others were cruelly criticised when they held office and when accounting for the premier position of the State and the chronic poverty with which it is now beset, Sir Seshadri Aiyar is given the top place and the Dewan Saheb the lowest possible. In their opinion he is not even better than the curds-seller of Chamarajnagar. The Satyavadi while narrating the dream of his correspondent clearly helps the Reader to understand that the Dewan Saheb largely owes his rise to his wife. Whatever that is best and profitable is ascribed to the Dewan's predecessors and whatever that is bad and detrimental to the State is imputed to him. My dear Editors you do not know what you are doing. You are conscious of others' defects but blind to your own. Remember it is detrimental to your own rise and prosperity; one cannot deceive all people, always and at all times. The intrinsic worth of any official depends upon your good looks. You want that they should humour you inspite of your weaknesses. You are not fair-minded in your criticisms; you show your bias. How do you say that the present poverty is all due to the Dewan Saheb? He is only giving effect to the will of his noble predecessor who left his work half-done. Think well before you criticise. Your minds are getting tenebrous—they are wasted over paltry things. Use the same energy for the betterment of the people at large, for something good and permanent. In your endeavours of deluding others you are deluding yourselves. You are inciting the people to have no confidence in the Government. These ways will not avail you much. You may in your sincerity to the false ideal you are advocating think that you are countenancing good for evil, but I assure you it is the reverse. It is the undue advantage the press has assumed to encourage such attacks. Without such sentimental nonsense and humbug it cannot subsist. You are going headlong and a check is necessary and it shall be sudden.

As regards the loyalty, you so much speak of, I want to assure you that all of us are aware of your sham loyalty. You, who have not the courtesy to spare the Royalty in your papers praise it to gain your ground. Is it of the lip or of the heart? And further, you have the audacity to condemn the private subjects of the Durbar of perfidy, of chicane, of covert sincerity etc. Men who have the least prejudice whatever and who are doing their best to amalgamate the various disintegrated parts into one compact whole and inculcate among them the love of community pride, the pride of calling themselves a body politic, a body which forms the mainstay of the Government such you call the propagandists of the Khilafat and Non-co-operation. Are such people covert Khilaphatists? Do they sow seeds of indiscipline and rebellion? Are they favoured by the apparent leniency and apparent indifference of the Government? It is not they but you that are causing all this confusion and disturbance. You wish to see the seeds you are sowing rapidly germinate and mark the beginning of a great harvest of lawlessness. What have Khilafat and Non-co-operation to do with the Mysore Durbar? One is purely a religious movement and the other political. How can you say that both are detrimental to the Durbar. It is the latter. Did you not non-cooperate with the Durbar in the recent Representative Assembly meeting? Having given cause for provocation by non-co-operating with the Durbar, you went the length of dinouncing the Durbar and the benevolent Ruler and felt the necessity of British intervention and protection. Are you loyal? Inspite of all this, you advise the Government to deport these innocent law-abiding subjects. Who are the better deserving?

When the world is moving under "formidable omens to a new era" and while there has been a general awakening in the whole Indian Empire and when culture is becoming international and the really enlightened of both the communities are doing their best to break away from the social fetters which were self-imposed in the past out of necessity and merge all their differences in the one noble cause of unity, in a premier State like Mysore, aa Lord Curzon calls it, it is lamentable to note misunderstanding, strife, class-autaganism and hatred.

Well, my Brahmin friend is it not the birthright of the non-brahmin to reclaim himself to humanity? Will not humanity rejoice to see its lost children arising from amidst the chaos to prove that they possess life, power to do good, and a right to share the priceless heritage of the past which has been selfishly monopolized and do their best to promote the welfare of humanity? You thought that we were lost for ever and we were of that opinion too when we were denied the chances. And when we felt that we were done for and there was nothing to live for, the chances were presented and we some how felt that our real life was beginning and as to what that is and whether t would be beneficial to the State we are now serving, and to humanity at large, the near future will bear better witness. Ah my hollow neighbour you do not know what sin you have committed and are still committing. What secret remorse rankles your heart! What makes you look down upon us with blood-shot eyes? Do not despair of thy sad lot, enough amends will be made to keep you happy and maintain your social prestige. But give up your conceit—that overweening sense of the pride of birth, intellectual superiority and capacity to do good. Do you forget that we too are men? Are we worth nothing? Should you do and deny the full play of genius, should you snub the free operation of one's moral will, should you obstruct the conscientious efforts of the non-Brahmins to attain to that intellectual level which you are now occupying and prevent them from contributing their poor mite to the rise of their premier State and the moral, intellectual and material advance of mankind. Remember, you are not a sociable creature and the society has no place for you since you take a fiendish delight in thus fomenting strife and setting up class against class. I beseech you to retire to a place which is most congenial to the free play of your infernal designs. It is high time that you should disabuse your minds of all social bias, caste prejudice and intellectual conceit and revise your opinion about human nature and understand the intellectual height it can rise to and the extent to which it can make its power felt when united. You think that without you the State cannot go on, but I tell you the State can subsist without you or me, but cannot rise to prominence without either of us. We have to depend upon each other and work together in sweet concord. Am I wrong my brother? Have I not been magnanimous in putting up with your charges? You may fight shy to call me your brother but I look upon you as my brother. Give up basking in the lime light you are so fond of, come to the open light and shake hands and get reconciled and concede my claims. Give up those perfidious methods of retaliating you have now resorted to; you stab me from behind, is it manly? What harm have I done you? I have got a clean conscience. Purge your heart of the base grudge lest your pugnacious attacks tickle the most tender chords of human nature to violent action. Cease thy attacks, you are going too far; stop and fall to love thy noble adversary who has been chivalrous in not retaliating and who loves you all the more for the wrong by thus beseeching. Am I in the wrong Chloris? You may dislike this cringing but here lies the strength.

Yours etc.,
Unfortunatus,
Nom-de-Plume.

A CASE OF DEFAMATION.

IN THE COURT OF THE CITY MAGISTRATE, BANGALORE.

Complainant:—Mr. Mohamed Abbas Khan, residing in No. 37, Arcot Srinivasachar Street, Bangalore City.

Accused:—K. Narayanaswamy Iyer, Editor, "The Truth" residing in No. 5, Mysore Road, Bangalore City.

The complainant begs to state as follows:—

1. That he is a resident of Bangalore residing in Arcot Srinivasachar Street, Bangalore City.

2. That the accused the said Narayanaswamy Iyer is the Editor, Printer and Publisher of the paper called the Truth published in Bangalore City.

3. That the said accused has been for some-time past publishing articles in the said paper against the Mahomedan Community and has been trying to bring the said Community and its leaders in particular into disrepute, contempt, and ridicule in the eyes of the Government and the people.

4. That the accused the said Narayanaswamy Iyer has published in the issue of the said paper dated the 15th September 1921 a copy of which is herewith filed, a leading article under the heading "Covert non-co-operators" against the complainant and two others mentioned by name.

5. That the said article is highly defamatory and the allegations in para 3 of the said article which begins with the words "These cautious men …………and ending with "The good graces of the Durbar" impute to the complainant, dishonest and dishonorable conduct and are intended to convey the impression that the complainant does not scruple to employ deliberate trickery and deception or to have recourse to false pretences to carry on the work of secretly plotting against the Government of His Highness the Maharaja and that of His Majesty the King Emperor.

6. That the allegations in paras 5 and 6 beginning with the words "As His Excellency Lord Willingdon" and ending with the words "Take early action in the matter", are intended to convey and do convey the impression that the complainant is a dangerous seditionist and that he should be sent out of Mysore as his presence in the State would be dangerous during the proposed visit of His Royal Highness the Prince of Wales.

7. That the imputations in the said article are all false and highly defamatory calculated to expose the complainant to hatred, contempt and ridicule or to cause him to be shunned or avoided by the Government and the people and deliberately published with the knowledge that such imputations would harm the reputation of the complainant.

8. That the complainant believes that the said article is published with the deliberate intention of prejudicing his claims to the nominations and elections to the various representative bodies.

9. That the complainant is a very respectable gentleman a member of the Representative Assembly, a member of the Legislative Council, the Vice-President of the Bangalore City Municipality and a rich timber merchant and a loyal and law abiding subject of His Highness the Maharaja and an ardent co-operator with the Government.

10. That the complainant has suffered seriously on account of the said false imputations in the said paper.

11. That the said article was published in Bangalore City in the issue of the said paper dated the 15th Sptember 1921.

Werefore the complainant humbly prays that this Honorable Court may be pleased to deal with the accused accordingly to Law.

Bangalore, 30th Sept. 1921. } Mohamed Abbas Khan.

The complainant was examined and the complaint admitted. Orders were issued for process.

M. A. K.

ಸ್ತುತ್ಯಕರ್ತವ್ಯಕರ್ಮ.

ಮುಳಗುಂದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಮಠಕ್ಕೆ ದಾವಣಗೆರೆಯ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಅಧಿಕಾರಿಗಳಾದದ್ದು ಇಲ್ಲಿಯ ವೀರಶೈವ ವೃಂದದ ಮಹದ್ಭಾಗ್ಯವೇ ಸರಿ. ಎಲ್ಲ ರೀತಿಯಿಂದ ಭಕ್ತರ ಉದ್ಧಾರವೇ ಇವರ ನೈಸರ್ಗಿಕ ಗುಣವಾಗಿದ್ದು ಇಲ್ಲಿಗೆ ಆಗಮಿಸಿದಂದಿನಿಂದ ಆ ಕಾರ್ಯವು ಇಲ್ಲಿಯೂ ಅವ್ಯಾಹತವಾಗಿ ನಡೆಯುತ್ತಿರುವುದು ಆಶ್ಚರ್ಯವಲ್ಲ. ಇಲ್ಲಿ ಎರಡು ವರ್ಷಗಳ ಪೂರ್ವದಲ್ಲಿ ಏಕಾದಶರುದ್ರರ ಪೂಜೆ ನಡೆದು ಇಂಗ್ಲೀಷ್ ಸ್ಕೂಲಿಗಾಗಿ ಫಂಡಿನ ವ್ಯವಸ್ಥೆಯಾಗಿರುವುದು ಸರ್ವಶ್ರುತವಷ್ಟೆ. ಈ ವರ್ಷ ಶ್ರಾವಣಮಾಸದಲ್ಲಿ ಶ್ರೀ ಮಠದೊಳಗೆ ಪ್ರತಿದಿನವೂ ನಂದಿಗವಾಡ ಮಠದ ವಿರೂಪಾಕ್ಷಶಾಸ್ತ್ರಿಗಳ ಶಿವಕೀರ್ತನವೂ, ಶಿವಯೋಗಿಗಳ ನೈತಿಕವ್ಯಾಖ್ಯಾನವೂ ನಡೆದವು. ಕಡೆಯ ಹನ್ನೊಂದನೆದಿವಸ ಶ್ರೀ ರುದ್ರಾಭಿಷೇಕ ಮಹಾಪೂಜೆಯೂ ಕೊನೆಯದಿವಸ ಮಹಾ ಗಣಾರಾಧನೆಯೂ ಬಹು ವಿಜೃಂಭಣೆಯಿಂದ ಸಾಂಗವಾದವು. ಮಧ್ಯದಲ್ಲಿ ಶ್ರೀ ಶಿವಯೋಗಮಂದಿರದ ಶ್ರೀಮನ್ನಿರಂಜನ ಮಹಾಂತ ಶಿವಯೋಗಿಗಳೂ, ಧಾರವಾಡ ಜಿಲ್ಲೆಯ ಅ. ಡಿ. ಎ. ಇನಸ್ಪೆಕ್ಟರ ಬಂಡೆಪ್ಪನವರೂ ಬೆಂಗಳೂರ ಬಾಣಾವಾರದ ಹುಚ್ಚಪ್ಪನವರೂ ಚಿಂಚಲ ಹೆಡ್‌ಮಾಸ್ತರ ಗೂಳಯ್ಯನವರೂ ಇವರುಗಳಿಂದ ಲಿಂಗಮಹತ್ವ, ಶಿವಪಂಚಾಯತನ, ಸದಾಚಾರ, ಸ್ವಧರ್ಮನಿಷ್ಠೆ ಈ ವಿಷಯಗಳ ಮೇಲೆ ವ್ಯಾಖ್ಯಾನಗಳಾದವು. ವೆ|| ಮಾ|| ಇ. ಮಹಾದೇವಪ್ಪನವರು ಚನ್ನವೀರಶೆಟ್ಟರ ಬಸಪ್ಪನವರು ಇವರು ಇಲ್ಲಿ ನಡೆದ ಸತ್ಕಾರ್ಯಗಳ ವಿಷಯವಾಗಿ ಆನಂದವನ್ನು ವ್ಯಕ್ತಪಡಿಸಿ ದೇಣಿಗೆಯನ್ನು ಅರ್ಪಿಸಿದ್ದಾರೆ. ಅತ್ಯುತ್ಕಟವಾದ ಪುಣ್ಯದ ಫಲವು ಆಗಲೇ ಲಭಿಸುವದೆಂಬಂತೆ ಈ ಕಾರ್ಯಾಂತ್ಯದಲ್ಲಿ ಸಂಸ್ಕೃತ, ಜ್ಯೋತಿಷ ವೈದಿಕ ಪಾಠಶಾಲೆಯು ಸ್ಥಾಪಿಸಲ್ಪಟ್ಟು, ಸದರಿ ವಿರೂಪಾಕ್ಷಶಾಸ್ತ್ರಿಗಳವರನ್ನು ಅಧ್ಯಾಪಕರನ್ನಾಗಿಯೂ, ಶಿವಮೂರ್ತಿ ಮಳ್ಳಯ್ಯನವರು ಹಿರೇಮಠ ಗದಗ ಇವರನ್ನು ವ್ಯವಸ್ಥಾಪಕರನ್ನಾಗಿಯೂ ನೇಮಿಸುವುದಾಗಿದೆ. ಈ ಮೃತ್ಯುಂಜಯಸ್ವಾಮಿಗಳಿಂದ ಈ ಮೊದಲು ಸನ್ ೧೯೧೬ನೆ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ ಧಾರವಾಡ ಮುರುಘಾಮಠದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೋರ್ಡಿಂಗು, ಹಾಂಸಭಾವಿ, ಹಿರೇಕೆರೂರ ಗ್ರಾಮಗಳ ಇಂಗ್ಲೀಷ್ ಶಾಲೆಗಳೂ ಬೋಗಾಂವಿ ಶಾಲೆಯೂ ಹಾಂಸಭಾವಿ ಬೋರ್ಡಿಂಗೂ ಮತ್ತು ಅನೇಕ ಸ್ಥಳಗಳ ವೀರಶೈವ ತರುಣಸಂಘ, ಹಿತೋಪದೇಶಕಸಂಘ ಮುಂತಾದವುಗಳೂ ಇವರ ಮತ ಸುಧಾರಣೆಯ ಪ್ರಯತ್ನದ ದ್ಯೋತಕಗಳಾಗಿರುವುವು. ಇದಲ್ಲವೇ ವಿರಕ್ತಿಯ ಮುಖ್ಯಲಕ್ಷಣ? ಶ್ರೇಯೋಭಿವೃದ್ಧಿಯ ನಿಜವಾದ ಮಾರ್ಗ? ಇವರ ಮೇಲ್ಪಂಕ್ತಿಯನ್ನು ಇನ್ನುಳಿದ ಶ್ರೀಗಳವರೂ ಅನುಕರಿಸಿದಲ್ಲಿ ಆತ್ಮೋನ್ನತಿಯೂ ಸಮಾಜದ ಏಳ್ಗೆಯೂ, ಎಷ್ಟು ಸುಲಭವಾಗಿಯೂ ಶೀಘ್ರವಾಗಿಯೂ ಆಗುವುದೆಂಬುವದನ್ನು ಸುಜ್ಞರು ತರ್ಕಿಸತಕ್ಕದ್ದು.

ಓರ್ವಸಮಾಜಹಿತೈಷಿ,

ಮಹಮ್ಮದೀಯರ ಜಾಹೀರಸಭೆ ಗೋರೋಬಾಳ್.

ಇದೇ ತಾರೀಖು ೨೮-೯-೧೯೨೧ನೆ ಇಸ್ವಿ ಮಂಗಳವಾರ ಸಾಯಂಕಾಲ ೪ ಘಂಟೆಯ ಸುಮಾರಿಗೆ ಇಲ್ಲಿಯ ಜುಮ್ಮಾ ಮಸೀದಿಯಲ್ಲಿ ಮಹಮ್ಮದೀಯರ ಸಭೆಯು ಸೇರಲು, ಈ ಸಭೆಗೆ ಇಲ್ಲಿಯ ಬ್ರಾಹ್ಮಣೇತರ ಮುಂದಾಳುಗಳೂ ಬಂದಿದ್ದರಲ್ಲದೆ ಇಲ್ಲಿಯ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ಸೆಕ್ರೆಟರಿಗಳೂ ಮತ್ತು ಮೆಂಬರರೂ ಆಗಮಿಸಿದ್ದರು. ಈ ಸಭೆಗೆ ಇಲ್ಲಿಯ ಕೋ|| ಆ|| ಸೊಸಾಯಟಿ ಚೇರಮನ್ ಮ|| ರಾ|| ರಾ|| ಮಲ್ಲಪ್ಪಾ ಕೌಜಲಗಿಯವರನ್ನು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ನೇಮಿಸಿದ ಮೇಲೆ ಈ ಸಭೆಯಲ್ಲಿ ಮೊದಲು ರಾ|| ರಾ|| ಬಸವಣ್ಣೆಪ್ಪಾ ಗೋರೋಬಾಳಯವರು "ಅಸಹಕಾರದಿಂದಾಗುವ ಅನರ್ಥ" ಈ ವಿಷಯದಮೇಲೂ ರಾ|| ರಾ|| ಶಿವಮೂರ್ತಪ್ಪಾ ಗೋರೋಬಾಳಯವರು "ಮಹಮ್ಮದೀಯರ ಮುಖ್ಯಕರ್ತವ್ಯ" ಶ್ರೀ|| ರಾ|| ರಾ|| ಮರುಳಸಿದ್ಧಯ್ಯಾ ಸಾ|| ಸಂ|| ರಾಮದುರ್ಗಯವರು, "ಅಸಹಕಾರಖಂಡನ" ಈ ವಿಷಯದಮೇಲೂ ಕೆಲಹೊತ್ತು ಭಾಷಣಗಳಾದಮೇಲೆ ಮೇಲಿನ ಮೂರು ವಿಷಯಗಳಮೇಲೆ ಎಚ್. ಎಮ್. ಸಿದ್ಧಾಂತಿಗಳ ಭಾಷಣಗಳಾದಮೇಲೆ ಇದಕ್ಕೆ ಹಜರತ್ ವಲ್ಲದ ಖರೀಮಖಾನ, ರಾಮದುರ್ಗ ಇವರು ಅನುಮೋದನ ಕೊಟ್ಟ ಪ್ರಕಾರ ಕೆಳಗೆ ಬರೆದ ವಿಷಯಗಳು ಪಾಸಾದವು.

(೧) ಈಗ್ಗೆ ಅಸಹಕಾರಿಗಳೆಂದು ದೇಶದಲ್ಲಿ ಜನರ ಶಾಂತತಾಭಂಗ ನಡಿಸಿ ಫಂಡನ್ನು ತೆಗೆಸಿದ ಅಸಹಕಾರವಾದಿಗಳಾದ ಜನರನ್ನು ಸರಕಾರದವರು ತೀವ್ರ ಬಂಧನೆಯನ್ನು ಮಾಡುವದು.

(೨) ಇಂಥ ಅಸಹಕಾರಿಗಳಾದ ಜನರ ಬೋಧೆಯನ್ನು ಖಂಡಿಸುವದು.

(೩) ಮಹಮ್ಮದೀಯರೇ ಮೊದಲಾದ ಹಿಂದುಳಿದ ಜಾತಿಯವರು ಕೌನ್ಸಿಲಿನಮುಖದಿಂದ ಸರಕಾರದವರ ಕಡೆಯಿಂದ ನಮಗೆ ಬೇಕಾಗುವ ಸವಲತ್ತುಗಳನ್ನು ಒದಗಿಸಿಕೊಳ್ಳುವದೇ ಯೋಗ್ಯವು.

(೪) ಇದರಂತೆ, ಮಹಮ್ಮದೀಯರೇ ಮೊದಲಾದವರು ಅಲ್ಲಲ್ಲಿ ಸಭೆಮಾಡಿ ಅಸಹಕಾರಿಗಳ ಸಂಘವನ್ನು ಬಿಟ್ಟು ನಮ್ಮ ನಮ್ಮ ಕಾರ್ಯಗಳನ್ನು ಮಾಡಿಕೊಳ್ಳುವದು.

ಇವೇ ಮೊದಲಾದ ವಿಷಯಗಳು ಸರ್ವಾನುಮತದಿಂದ ಪಾಸಾದಮೇಲೆ ಸಂಜೆಯ ೬ ಘಂಟೆಗೆ ನಮ್ಮ "ಪಂಚಮಜಾರ್ಜ ಬಾದಶಹರ ಭಾವಪಟದ ಮೆರವಣಿಗೆಯು ಜುಮ್ಮಾ ಮಸೀದೆಯಿಂದ ಹೊರಟು ಒಳ್ಳೆ ವಿಜೃಂಭಣೆಯಿಂದ ಜಗದ್ಗುರು ವಿಶ್ವಾರಾಧ್ಯ ವಾಚನಾಲಯಕ್ಕೆ ಬಂದು ತಲ್ಪಿತು. ದಾರಿಯಲ್ಲಿ "ಪಂಚಮಜಾರ್ಜ ಬಾದಶಹರ" ಜಯಘೋಷವು ಜನರ ಬಾಯಿಯಿಂದ ಒಳ್ಳೆ ಆನಂದದಿಂದ ಹೊರಡುತ್ತಿತ್ತೆಂದು ತಿಳಿಸುವದಕ್ಕೆ ಆನಂದವಾಗುತ್ತದೆ.

ಪ್ರತ್ಯಕ್ಷದರ್ಶಿ.

ಕಡೂರು ತಾಲ್ಲೂಕು ೧ ನೇ ಗ್ರಾಂಟ್‌ಸ್ಕೂಲ್ ಮಾಸ್ಟರುಗಳ ಸಂಘ, ಕಡೂರಹಳ್ಳಿ.

ಗ್ರಾಂಟ್‌ಸ್ಕೂಲ್ ಮಾಸ್ಟರುಗಳಲ್ಲಿ ವಿನಂತಿಯೇನಂದರೆ.

೧. ಈ ಸಂಘವನ್ನು ಕಡೂರಳ್ಳಿಯಲ್ಲಿ ನಡಿಸಬೇಕಾಗಿ ಮಲಿದೇವಿಹಳ್ಳಿ ಗ್ರಾಂಟ್‌ಸ್ಕೂಲ್ ಮಾಸ್ಟರ್ ಮ|| ರಾ|| ಎ. ಚನ್ನಪ್ಪನವರು ಪ್ರೋತ್ಸಾಹಿಸಿದ್ದರಮೇರೆ ಈ ಅಕ್ಟೋಬರ್ ತಾ|| ೩೦ ಮತ್ತು ೩೧ ರಲ್ಲಿ ನಡಸುವುದಾಗಿ ಸ್ಕೂಲ್ ಕಮಿಟಿ ಮೆಂಬರುಗಳೂ ಮತ್ತು ಗ್ರಾಮಸ್ಥರು ಸಹಾ ಅನುಮೋದಿಸಿರುತ್ತಾರೆ. ೨. ಈ ಸಂತೋಷಪ್ರದವಾದ ಸಂಘವು ಇದೇ ೧೯೨೧ನೆ ಅಕ್ಟೋಬರ್ ೩೦-೩೧ ಈ ಎರಡು ದಿವಸಗಳು ನಡೆಯುವಂತೆ ನಿಷ್ಕರ್ಷಿಸಲ್ಪಟ್ಟಿದೆ. ೩. ಈ ಸಂಘಕ್ಕಾಗಿ ದಯಮಾಡಿಸತಕ್ಕ ಗ್ರಾಂಟ್‌ಸ್ಕೂಲ್ ಮಾಸ್ಟರುಗಳಿಗೂ, ಇವರಸಂಗಡ ಬರತಕ್ಕ ಮಹನೀಯರಿಗೂ ಸಹ ಭೋಜನಕ್ಕೂ ವಾಸಕ್ಕೂ ತಕ್ಕ ಏರ್ಪಾಡು ಮಾಡಿದೆ. ೪. ಈ ಸಂಘದಲ್ಲಿ ಉಪನ್ಯಾಸ ಮಾಡತಕ್ಕವರು ತಮ್ಮತಮ್ಮ ಉಪನ್ಯಾಸಗಳನ್ನು ಕಾಗದದ ಒಂದೇಪಕ್ಕದಲ್ಲಿ ಬರೆದು ಸಂಘದ ಸೆಕ್ರಿಟರಿಯವರಿಗೆ ಅಕ್ಟೋಬರ್ ತಾ|| ೨೪ ರೊಳಗೆ ಕಳುಹಿಸತಕ್ಕದ್ದು. ೫. ಈ ಸಂಘಕ್ಕೆ ಮಲಿದೇವಿಹಳ್ಳಿ ಗ್ರಾಂಟ್‌ಸ್ಕೂಲ್ ಮಾಸ್ಟರ್ ಮ|| ರಾ|| ಎ. ಚನ್ನಪ್ಪನವರು ಛೇರ್‌ಮೆನ್ ರಾಗಲು ಅಂಗೀಕರಿಸಿರುತ್ತಾರೆಂಬ ವಿಷಯವನ್ನು ತಿಳಿಸಲು ಸಂತೋಷಪಡುತ್ತೇವೆ. ೬. ಈ ಸಂಘದಲ್ಲಿ ಚರ್ಚಿಸತಕ್ಕ ಎಲ್ಲಾ ವಿಷಯಗಳನ್ನೂ ಪ್ರಸಿದ್ಧಪತ್ರಿಕೆಯಲ್ಲಿ ನಮೂದಿಸಿ ಹಂಚಲಾಗುತ್ತದೆ.

ಎಲ್. ತಿಮ್ಮಯ್ಯ,
ಗ್ರಾಂಟ್‌ಸ್ಕೂಲ್‌ಸಂಘದ ಸೆಕ್ರಿಟರಿ,
ಕಡೂರು.

೧೯೨೧ ನೆಯ ಇಸವಿ ಅಕ್ಟೋಬರ್ ತಾ|| ೯ ರಿಂದ ೧೯೨೧ ನೆಯ ಅಕ್ಟೋಬರ್ ತಾ|| ೧೫ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಆಶ್ವೀಜ ಶುದ್ಧ ಅಷ್ಟಮಿಯಿಂದ ಆಶ್ವೀಜ ಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾಮಾಸ
9	[1]ಭಾನು	ಅಷ್ಟ	23-13	ಪೂಷಾ	14-0	24
10	[2]ಸೋಮ	ನವ	27-30	ಉಷಾ	19-19	25
11	[3]ಮಂಗಳ	ದಶಮಿ	32-34	ಶ್ರವ	25-42	26
12	[4]ಬುಧ	ಏಕಾ	37-54	ಧನಿ	32-16	27
13	ಗುರು	ದ್ವಾದ	43-8	ಶತ	38-48	28
14	[5]ಶುಕ್ರ	ತ್ರಯೋ	47-47	ಪೂಭಾ	44-47	29
15	[6]ಶನಿ	ಚತು	51-38	ಉಭಾ	49-57	30

(1) ದುರ್ಗಾಷ್ಟಮಿ. (2) ಮಹಾನವಮಿ, ಆಯುಧಗಜಾಶ್ವಪೂಜಾ, ಹಯಗ್ರೀವಪೂಜಾ. (3) ವಿಜಯದಶಮಿ, ಶಮೀಪೂಜಾ. (4) ಸರ್ವತ್ರೈಕಾದಶಿ. (5) ಪ್ರದೋಷಃ. (6) ಚೆಟ್ಟಿದಲ್ಲಿ ಚಾಮರಾಜಮುಡೀ ಉತ್ಸವ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಚಿಕಿತ್ಸಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೇಯ ಇಸವಿ ಅಕ್ಟೋಬರ್ ತಾರೀಖು ೧೬ ನೇಯ ಭಾನುವಾರ. (ಸಂಚಿಕೆ ೪೧

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
39 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ಕೇಸರಿ ಮಣಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0
ಬಿಡಿ ಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 6-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ		ರೂ ವರೆಗೆ.
ಉದ್ದಿನ	,, 15-0-0	,,	40-0-0
ಮೆಣಸು	,, 7-8-0	,,	15-0-0
ಕಡಲೆ	,, 2-8-0	,,	7-0-0
ನೆನೆದಕಡಲೆ	,, 1-8-0	,,	3-0-0
ಕಮಲಾಕ್ಷಿ	,, 1-0-0	,,	2-0-0
ದೊಡ್ಡ ,,	,, 0-8-0	,,	1-0-0
ಅದಕ್ಕಿಂತ	,, 0-6-0	,,	0-8-0
ಸ್ಫಟಿಕ108ಕ್ಕೆ	4-8-0	,,	30-0-0
ಶ್ರೀಚಕ್ರ1ಕ್ಕೆ	8-0-0	,,	100-0-0
ಲಿಂಗ 1ಕ್ಕೆ	1-0-0	,,	100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
33 ಕಂಪನಿ, ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ವಾಪಸ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 22

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ. ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ; ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಫ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪ್ರಕಟನೆ.

ಒಬ್ಬರು ಸ್ವಾಮಿಗಳು ಬೇಕಾಗಿದೆ.

ಶ್ರೀ ಜಗದ್ಗುರು ಗಂಗಾಧರ ಮಹಾಸ್ವಾಮಿಗಳ ಉತ್ತರಾಧಿಕಾರಿಗಳನ್ನು ಹುಬ್ಬಳ್ಳಿ ಮೂರುಸಾವಿರ ಮಠಕ್ಕೆ ನೇಮಿಸಬೇಕಾಗಿದೆ. ಅಪೇಕ್ಷೆಯುಳ್ಳ ಸದ್ವಂಶಜರೂ ವಿದ್ಯಾಸಂಪನ್ನರೂ ಆದ ಮಾಹೇಶ್ವರಸ್ಥಳದ ಬ್ರಹ್ಮಚಾರಿಗಳು ತಮ್ಮ ಸ್ಥಳ, ಕುಲ ವಿಚಾರವನ್ನೂ ವಿದ್ಯಾವ್ಯಾಸಂಗದ ವಿಷಯವನ್ನೂ ವಯಸ್ಸನ್ನೂ ತಿಳುಹಿಸಿ ಕೆಳಗೆ ಸಹಿಮಾಡಿದ ಗೃಹಸ್ಥರಿಗೆ ಆದಷ್ಟುಬೇಗ ಪತ್ರಬರೆಯಬೇಕು. ಹಾಂಗು ಪತ್ರದೊಡನೆ ತಮ್ಮ ಫೋಟೋ ಕಳಿಸಬೇಕು. ಇತರರು ಸಹಾ ತಮಗೆ ಪರಿಚಯವಿದ್ದ ಯೋಗ್ಯರ ಸ್ಥಳ, ಕುಲ ವಿಚಾರಗಳನ್ನೂ ವಿದ್ಯಾಭ್ಯಾಸವನ್ನೂ ತಿಳಿಸಬೇಕು; ಸಾಧ್ಯವಿದ್ದರೆ ಫೋಟೋ ಕಳಿಸಬೇಕು. 3

(ಸಹಿ) ಚಿಕ್ಕವೀರಯ್ಯನವರು ಚಿಕ್ಕವೇರಿ ಸಾಕೀನ ಹುಬ್ಬಳ್ಳಿ.
(ಸಹಿ) ಚನ್ನಯ್ಯನವರು ಹಂದಿಗೋಳಮಠ ಸಕೀನ ಹುಬ್ಬಳ್ಳಿ.
(ಸಹಿ) ಮಲ್ಲಪ್ಪಾ ವಾರಕಾರ ಸಾ|| ಹುಬ್ಬಳ್ಳಿ
(ಸಹಿ) ಮಹದೇವಪ್ಪಾ ಸಿಂದಗಿ ಸಾಕೀನ ಹುಬ್ಬಳ್ಳಿ.
(ಸಹಿ) ಗುರುಸಿದ್ದಪ್ಪಾ ಕೋರಿ ಸಾಕೀನ ಹುಬ್ಬಳ್ಳಿ.
(ಸಹಿ) ಗುರಪ್ಪ ನೀಲಿ ಸಾಕೀನ ಹುಬ್ಬಳ್ಳಿ.

ಬೆಂಗಳೂರು ಮ್ಯುನ್ಸಿಪಾಲಿಟಿ.

ನಮ್ಮ ಬೆಂಗಳೂರು ಮ್ಯುನ್ಸಿಪಲ್ ಹೊಸ ಕೌನ್ಸಿಲು ಏರ್ಪಟಾಯಿತು. ಮುಂದೆ ಇದಕ್ಕೆ ಪ್ರೆಸಿಡೆಂಟ್ ವೈಸ್‌ಪ್ರೆಸಿಡೆಂಟ್‌ರುಗಳ ಚುನಾವಣೆ ನಡೆಯಬೇಕಾಗಿದೆ. ಈಗಾಗಲೇ ಕೆಲವರು ಸಂಧಾನಕ್ಕೆ ಆರಂಭಿಸಿದ್ದಾರೆ. ಪ್ರೆಸಿಡೆಂಟ್‌ಗಿರಿಯ ಉಮೇದ್ವಾರಿಗೆ ನಿಲ್ಲತಕ್ಕವರು ಕೌನ್ಸಿಲರ ಪೈಕಿ ಇಬ್ಬರ ನಾಮಿನೇಷನ್ನಿನೊಡನೆ ತಮ್ಮ ಅಪ್ಲಿಕೇಷನನ್ನು ಹಾಕಬೇಕೆಂಬ ರೂಲ್ಸಿರುವದಷ್ಟೆ. ಅದರಂತೆ ಇಬ್ಬರ ರುಜುವನ್ನು ತೆಗೆದುಕೊಳ್ಳುವದಕ್ಕೆ ಬದಲಾಗಿ ಹತ್ತಾರುಜನರ ರುಜುಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಇದರಿಂದೇನೂ ಬಾಧಕವಿಲ್ಲ. ಈಗ ನಾಮಿನೇಷನ್ನಿಗೋಸ್ಕರ ರುಜುಮಾಡಿಕೊಟ್ಟವರೆಲ್ಲರೂ ಮುಂದೆ ಎಲಕ್ಷನ್ನಿನ ಕಾಲದಲ್ಲೂ ಅದರಂತೆಯೇ ಓಟುಕೊಡಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ. ಆಗ ತಮಗೆ ಇಷ್ಟಬಂದವರಿಗೆ ಓಟನ್ನು ಕೊಡುವಲ್ಲಿ ಕೌನ್ಸಿಲರುಗಳು ಸ್ವತಂತ್ರರಾಗಿರುತ್ತಾರೆ. ನಮ್ಮಲ್ಲಿಗೆ ಬಂದು ನಾಮಿನೇಷನ್ನಿಗೆ ರುಜು ತೆಗೆದುಕೊಂಡು ಹೋದವರು ಮುಂದೆ ಇದಕ್ಕೆ ವಿರುದ್ಧವಾಗಿ ಬೇರೆ ಜನರಿಗೆ ಓಟು ಕೊಡಕೂಡದೆಂದೂ ಹಾಗೆ ಮಾಡಿದರೆ ತಪ್ಪಾಗುವದೆಂದೂ ಬೋಧಿಸುತ್ತಲೂ ಬೆದರಿಸುತ್ತಲೂ ಒಬ್ಬೊಬ್ಬರು ವಂಚಿಸುತ್ತಿದ್ದಾರೆ. ಇದಕ್ಕಾಗಿ ನನ್ನ ಜತೆಗಾರರಾದ ಕೌನ್ಸಿಲರುಗಳಿಗೆ ನಾನು ಅರಿಕೆಮಾಡಿಕೊಳ್ಳುವದೇನೆಂದರೆ— ಎಲೆಕ್ಷನ್ ಕಾಲದಲ್ಲಿ ನಿಮಗಿಷ್ಟತೋರಿದವರಿಗೆ ಓಟನ್ನು ಕೊಡುವಲ್ಲಿ ಅಭ್ಯಂತರವೇನೂ ಇಲ್ಲ. ನೀವು ಸ್ವತಂತ್ರರಾಗಿರುತ್ತೀರಿ. ಯಾರ ಕಪಟದಮಾತಿಗೂ ಬೆದರಿ ಮೋಸಹೋಗಬೇಡಿ.

ಒಬ್ಬ ಕೌನ್ಸಿಲರ್.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಅಕ್ಟೋಬರ್ ತಾ|| ೧೬ ನೆಯ ಭಾನುವಾರ.

ದಿವಾನರ ಭಾಷಣ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂತ್ರಿವರ್ಯರು ಮಾಡತಕ್ಕ ಭಾಷಣದಲ್ಲಿ ಮುಖ್ಯವಾದ ಸಂಗತಿಗಳನ್ನು ಬೇರ್ಪಡಿಸಿ ೧ನೆಯ ಭಾಗವನ್ನಾಗಿ ಮಾಡಿ, ಗೌಣವಾದ ವಿಷಯಗಳನ್ನೆಲ್ಲಾ ೨ನೆಯ ಭಾಗವನ್ನಾಗಿ ಮಾಡಿ ಮುದ್ರಿಸುವುದು ಕೆಲವು ವರ್ಷಗಳಿಂದ ವಾಡಿಕೆಯಾಗಿ ಬಂದಿದೆಯಷ್ಟೆ. ಅದರಂತೆಯೇ ಈ ಸಲವೂ ಮಾಡಲ್ಪಟ್ಟಿದ್ದರೂ, ಮುಖ್ಯಸಂಗತಿಗಳೆಂದು ಪ್ರಥಮ ಭಾಗ

ದಲ್ಲಿ ಸೇರಿಸುತ್ತಿದ್ದ ಇನ್ನು ಕೆಲವು ವಿಷಯಗಳನ್ನೂ ೨ನೆಯ ಭಾಗಕ್ಕೆ ಹಾಕಿ, ಅತ್ಯಂತ ಪ್ರಮುಖ ವಿಷಯಗಳನ್ನು ಮಾತ್ರ ಮೊದಲಭಾಗದಲ್ಲಿ ಈಸಲ ಸೇರಿಸಿರುತ್ತಾರೆ. ಪ್ರಥಮಭಾಗವೊಂದನ್ನು ಮಾತ್ರ ಆಂಗ್ಲಭಾಷೆಯಲ್ಲಿ ಮಂತ್ರಿವರ್ಯರು ಓದಿ ಮುಗಿಸಿಬಿಟ್ಟು ದ್ವಿತೀಯ ಭಾಗವನ್ನು ಹಾಗೆಯೇ ಉಳಿಯಿಸುವುದೂ, ಕನ್ನಡದ ಪ್ರತಿಯನ್ನು ಎಲ್ಲ ಸಭಿಕರಿಗೂ ಹಂಚಿಬಿಟ್ಟಿರುವುದರಿಂದ ಅದನ್ನು ಓದಿದಂತೆಯೇ ಪರಿಗಣಿಸಲ್ಪಡುತ್ತಿರುವುದೂ ಈಚೆಗೆ ಕೆಲಕಾಲದಿಂದ ಪದ್ಧತಿಯಾಗಿ ಬಂದಿದೆ. ದೇಶೀಯ ಭಾಷೆಯ ಮೇಲೆ ತೋರಿಸುತ್ತಿರುವ ಉಪೇಕ್ಷೆಗೆ ಇದೊಂದು ನಿದರ್ಶನವಾಗಿ ಕುಳಿತಿದೆ. ಕನ್ನಡವನ್ನು ಬಲ್ಲ ಪ್ರತಿನಿಧಿಗಳೇ ಹೆಚ್ಚಾಗಿರುವ ಸಭೆಯಲ್ಲಿ ಕನ್ನಡದ ಪ್ರತಿಗೇ ಪ್ರಾಮುಖ್ಯವನ್ನು ಕೊಟ್ಟು ಅದನ್ನೇ ಪ್ರಥಮತಃ ಓದುವಂತೆ ಮಾಡಿದಲ್ಲಿ ಇಂಥ ಭಾಷಣಗಳಲ್ಲಿ ಕಂಡ ಅಭಿಪ್ರಾಯಗಳು ಸಭಿಕರ ಮನಸ್ಸಿನಲ್ಲಿ ವಿಶೇಷವಾಗಿ ಪ್ರತಿಫಲಿಸುವುದಕ್ಕೆ ಅವಕಾಶವಾಗಬಹುದು. ಪದ್ಧತಿಯಂತೆ ಕನ್ನಡದ ಪ್ರತಿಯನ್ನೂ ಓದಿಸಬೇಕೆಂದು ಈ ಸಲದ ಸಭೆಯಲ್ಲಿ ಕೆಲವರು ಪ್ರಾರ್ಥಿಸಿದುದರಿಂದ ರೆವಿನ್ಯೂ ಸೆಕ್ರೆಟರಿಯವರು ಓದುತ್ತಿದ್ದ ಪದ್ಧತಿಯನ್ನೇ ಪ್ರಭುತ್ವದವರೂ ಅನುಸರಿಸಿದರು. ಆದರೇನು? ಅಸ್ಪಷ್ಟವಾದ ಮಂದಧ್ವನಿಯಿಂದ ಕೂಡಿದ ಅವರ ಉಚ್ಚಾರಣವು ಸಭೆಯಲ್ಲಿ ಯಾವ ಫಲೋದಯವನ್ನೂ ಮಾಡಲಿಲ್ಲ. ದೊಡ್ಡ ಗಂಟಲುಳ್ಳ ಕನ್ನಡದ ವಾಚನದಲ್ಲಿ ಸಮರ್ಥರಾದ ಒಬ್ಬ ಉದ್ಯೋಗಿಯನ್ನು ಆರಿಸಿ ಈ ಕೆಲಸವನ್ನು ಏತಕ್ಕೆ ಮಾಡಿಸಬಾರದೋ ತಿಳಿಯಲಿಲ್ಲ.

ದಿವಾನರು ಮಾಡಿದ ಭಾಷಣದೊಳಗೆ ಪ್ರಕೃತ ಸಂದರ್ಭದಲ್ಲಿ ಸಂಸ್ಥಾನದೊಳಗೆಲ್ಲಾ ಬುದ್ಬುದಾಕಾರವಾಗಿ ಚರ್ಚೆಗೀಡಾಗಿರುವ ಪ್ರಮುಖ ಸಂಗತಿಗಳೇ ಹೆಚ್ಚಾಗಿ ನಿರೂಪಿತವಾಗಿರುವುದು ಯುಕ್ತವಾಗಿದೆ. ಅವರು ಹಾಗೆ ಮಾಡಬೇಕಾದುದು ಅವಶ್ಯಕವಾಗಿದ್ದಿತೆಂದೇ ನಾವಾದರೂ ತಿಳಿಯುವೆವು. ಈಗಣ ಸರ್ಕಾರದವರು ಹಿಂದೆ ಯಾವಾಗಲೂ ಮಾಡದಿದ್ದ ಸಾಲವನ್ನು ಮಾಡಿ ಸಂಸ್ಥಾನವನ್ನು ದಿವಾಳಿಗೆ ಈಡುಮಾಡುತ್ತಿರುವರೆಂದು ಕ್ಷುದ್ರತನದಿಂದ ಕೆಲವರು ಹುಟ್ಟಿಸುತ್ತಿರುವ ಕೂಗು ಎಷ್ಟು ಅನ್ಯಾಯವಾದುದೆಂಬುದನ್ನು ಕಳೆದ ಅಧಿವೇಶನದಲ್ಲಿ ದಿವಾನರು ಮಾಡಿದ ಭಾಷಣವನ್ನು ಸಮಗ್ರವಾಗಿ ಓದಿರುವವರೆಲ್ಲಾ ಸ್ಪಷ್ಟವಾಗಿಯೇ ತಿಳಿದುಕೊಂಡಿದ್ದಾರೆ. ಪ್ರಭುತ್ವದ ಕಾರ್ಯನಿರ್ವಾಹಕ್ಕಾಗಿ ಅವರು ಸಾಲವನ್ನೇನೂ ಮಾಡಬೇಕಾಗಿರುವುದಿಲ್ಲ. ಹಿಂದೆ ನಾನಾ ಶಾಖೆಗಳಲ್ಲಿ ಹೆಚ್ಚು ಸಿಬ್ಬಂದಿಗಳನ್ನೇರ್ಪಡಿಸಿ ವೆಚ್ಚವನ್ನು ಅಧಿಕಪಡಿಸಿದ್ದ ದೋಷಗಳನ್ನೆಲ್ಲಾ ಈಗಣ ಪ್ರಭುತ್ವದವರು ರಿಟ್ರೆಂಚ್‌ಮೆಂಟ್ ಕಮಿಟಿಯ ಮೂಲಕವೂ ಸ್ವತಃ ಪರಿಶೋಧನೆಯಿಂದಲೂ ಎಷ್ಟೋ ಭಾಗ ಕಡಿಮೆ ಮಾಡಿಸುತ್ತಲೂ ಆದಾಯದ ಭಾಗಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಲೂ ಇದ್ದಾರೆ. ಆ ಭಾಗದಲ್ಲಿ ಇನ್ನೂ ವಿಶೇಷ ಗಮನವನ್ನು ಕೊಟ್ಟಿದ್ದಾರೆಂಬುದು ದಿವಾನರ ಭಾಷಣದ ೫-೬-೭ನೆ ವಿಷಯ ಭಾಗಗಳಿಂದ ಸುವ್ಯಕ್ತವಾಗಿದೆ. ಬಡ್ಜೆಟ್ ಅಂದಾಜಾದ ಈಚೆಗೂ ಕೂಡ ಕೆಲ ಶಾಖೆಗಳಲ್ಲಿಯ ಸಿಬ್ಬಂದಿಯನ್ನು ಕಡಿಮೆ ಹಾಕಿದುದರಿಂದ ೬,೩೦,೦೦೦ ರೂ. ಗಳ ವರೆಗೆ ವೆಚ್ಚವನ್ನು ಕಡಿಮೆ ಮಾಡಿಸಿದ್ದಾರೆ. ಒಂದುಸಲ ಹೆಚ್ಚಿಹೋಗಿರುವ ವೆಚ್ಚಗಳನ್ನು ಹೀಗೆ ಕುಗ್ಗಹಾಕುವುದು ಸುಲಭವಾದ ಕೆಲಸವಲ್ಲ. ಆದರೂ ಕಾರ್ಯನಿರ್ವಾಹಕ್ರಮಕ್ಕೆ ಅಭ್ಯಂತರ ಬರದಂತೆ ಪ್ರಕೃತದ ದುಡ್ಡಿನ ಮುಕ್ಕಟ್ಟನ್ನು ಅನುಲಕ್ಷಿಸಿ ವ್ಯಯಭಾರವನ್ನು ತಗ್ಗಿಸುವುದರಲ್ಲಿ ಈಗಣ ಸರ್ಕಾರದವರು ತೋರಿಸುತ್ತಿರುವ ಸಾಹಸವೂ ಅಭಿಮಾನವೂ ಪ್ರಶಂಸನೀಯವಾಗಿರುತ್ತವೆ. ಆದರೆ ಬೊಕ್ಕಸದ ಹಣವನ್ನು ವಿನಿಯೋಗಿಸುವಲ್ಲಿ ಔದಾರ್ಯವನ್ನು ತೋರಿಸಿದವರ ಭಾಗಕ್ಕೆ ಸ್ತೋತ್ರಪರಂಪರೆಗಳು ಕಾದಿರುವಂತೆ ವ್ಯಯವನ್ನು ತಗ್ಗಿಸುವುದಕ್ಕಾಗಿ ಹಿಡಿತವನ್ನು ತೋರಿಸುವವರ ಭಾಗಕ್ಕೆ ಕಾದಿರುವುದು ಲೋಕಸ್ವಭಾವವಲ್ಲ. ಆದರೆ ನಿಜದೇಶಸೇವೆಗೆ ಸ್ತೋತ್ರವೇ ಫಲವಲ್ಲವಷ್ಟೆ.

ಮುಂದೆ ಶಾಶ್ವತವಾದ ಲಾಭವನ್ನುಂಟುಮಾಡತಕ್ಕ ಕಾಮಗಾರಿಗಳ ಬಂಡವಾಳಕ್ಕಾಗಿಯೇ ಹಿಂದೆ ೧ ಕೋಟಿ ಚಿಲ್ಲರೆ ರೂ. ಗಳ ಸಾಲವನ್ನು ಸರ್ಕಾರದವರು ಮಾಡಿದುದಲ್ಲದೆ ಈಗಲೂ ೨ನೆ ಸಾಲಕ್ಕೆ ಉಪಕ್ರಮಿಸಿದರು. ಆದರೆ ಇದಕ್ಕೆ ಕೆಟ್ಟಹೆಸರಿಟ್ಟು ಆತಂಕವನ್ನುಂಟುಮಾಡಲು ಕೆಲವರು ಪ್ರಯತ್ನಿಸಿದರೂ ಕ್ಲುಪ್ತಕಾಲಕ್ಕೆ ಮೊದಲೇ ಸ್ವಲ್ಪ ಕಡಿಮೆ ೨ ಕೋಟಿಯ ರೂ. ಗಳ ವರೆಗೆ ಸಾಲವು ದೊರೆದುಹೋಗಿರುವುದೆಂಬುದನ್ನು ಕೇಳಿ ಸಂತೋಷಿಸಬೇಕಾಗಿದೆ. ಈ ಸಾಲವನ್ನು ೨ ಕೋಟಿಗೆ ಏರಿ ಮಾಡುವುದಿಲ್ಲವೆಂದೂ. ಮುಂದಣ ೨ ವರ್ಷಗಳಲ್ಲಿ ಬಂಡವಾಳದ ಕಾಮಗಾರಿಗಳಿಗಾಗಿ ಇದನ್ನು ಉಪಯೋಗಿಸಿಕೊಳ್ಳುತ್ತೇವೆಂದೂ ಸರ್ಕಾರದವರು ತಿಳಿಯಿಸಿದ್ದಾರೆ. ಮುಖ್ಯವಾಗಿ ಈ ಸಾಲದ ಹಣವನ್ನೆಲ್ಲಾ ತಿನ್ನುವುದಕ್ಕೆ ಕೃಷ್ಣರಾಜಸಾಗರದ ಮತ್ತು ಭದ್ರಾವತಿಯ ಕಬ್ಬಿಣದ ಯಂತ್ರಾಲಯದ ಕೆಲಸಗಳೇ ಹೆಚ್ಚು ಬಾಯಿ ತೆರೆದುಕೊಂಡಿರತಕ್ಕವುಗಳು. ಒಂದೊಂದು ಕೋಟಿಯ ವೆಚ್ಚದಲ್ಲಿ ಮುಗಿದುಹೋಗುವುವೆಂದು ಹೇಳಿ ಹಿಂದೆ ಆರಂಭಿಸಿಬಿಟ್ಟ ಈ ಕಾರ್ಯಗಳು ಈಗ ದ್ವಿಗುಣ ತ್ರಿಗುಣ ಚತುರ್ಗುಣವಾಗಿ ವೆಚ್ಚವನ್ನು ಸೆಳೆದುಕೊಳ್ಳುತ್ತಿವೆ. ಇಷ್ಟು ಮಾಡಿದರೂ ಕಡೆಗೆ ಆಗುವ ಪ್ರತಿಫಲವೇನೋ ಹೇಳಲಾಗುವುದಿಲ್ಲ. ಕೃಷ್ಣರಾಜಸಾಗರದ ಅಣೆಕಟ್ಟಿನ ಪ್ರಥಮಭಾಗದ ೮೦ ಅಡಿಯ ಕಟ್ಟೆಯ ಕೆಲಸವೇನೋ ಮುಗಿದಿದೆ. ಮುಂದೆ ೧೨೪ ಅಡಿಯವರೆಗೆ ಕಟ್ಟೆಯನ್ನೆತ್ತರಿಸಿ, ಜಲಸಂಚಯವನ್ನು ಹೆಚ್ಚುಮಾಡಿ ಉತ್ತರದಕ್ಷಿಣದ ಕಾಲ್ವೆಗಳನ್ನು ತೋಡಿ ವ್ಯವಸಾಯಗಳಿಗೂ ವಿದ್ಯುಚ್ಛಕ್ತಿ ಸಮುತ್ಪಾದನೆಗೂ ಉಪಯೋಗಿಸುವುದರಿಂದ ಲಾಭನಷ್ಟಗಳು ಎಷ್ಟುಮಟ್ಟಿಗುಂಟಾಗಬಹುದೆಂಬುದನ್ನು ಗೊತ್ತುಮಾಡಿಸುವುದಕ್ಕಾಗಿ ಸರ್ಕಾರದವರು ಒಂದು ಅನುಭವಸ್ಥರ ಸಂಘವನ್ನೇರ್ಪಡಿಸಿ ಕಳೆದ ಕೆಲವು ತಿಂಗಳುಗಳಿಂದ ವಿಚಾರ ಮಾಡಿಸುತ್ತಿದ್ದಾರೆ. ಈ ಸಂಘದವರು ನಿನ್ನೆ ಭಾನುವಾರ ಕಟ್ಟೆಯ ಬಳಿಗೆ ಪ್ರತ್ಯಕ್ಷವಾಗಿ ಹೋಗಿದ್ದು ಅಲ್ಲಿಯೂ ವಿಚಾರ ನಡೆಯಿಸಿ ಬಂದರು. ಈ ಕಟ್ಟೆಗೆ ಇದುವರೆಗೇ ೨ ಕೋಟಿ ರೂ. ಗಳ ವರೆಗೆ ವೆಚ್ಚಮಾಡಲಾಗಿದೆ. ಮುಂದಣ ಕೆಲಸವನ್ನಾರಂಭಿಸಿದರೆ ಇನ್ನೂ ೩-೪ ಕೋಟಿ ರೂ. ಗಳ ಮೇಲೆಯೇ ಹಿಡಿಯುವುದು. ಇಷ್ಟು ದೊಡ್ಡ ಮೊತ್ತವನ್ನು ಸಾಲಮಾಡಿ ಇಂಥ ಪ್ರತಿಷ್ಠಾಪನೆಗಳಿಗೆ ಉಪಯೋಗಿಸಿದರೆ ನಾವು ೬ ರೂ. ನಂತೆ ಬಡ್ಡಿ ಕೊಡುತ್ತಿರುವಾಗ ಮುಂದೆ ಇವುಗಳಿಂದ ೨-೩ ರಂತೆಯೂ ಬಡ್ಡಿ ಗಿಟ್ಟದೆ ಹೋದರೆ ಪ್ರಯೋಜನವೇನು? ಇದನ್ನು ನಿಯಮಿತ ಸಂಘದವರೂ ಪ್ರಭುತ್ವದವರೂ ಚೆನ್ನಾಗಿ ವಿಮರ್ಶೆಮಾಡಿ ಸಂಸ್ಥಾನಕ್ಕೆ ನಷ್ಟವುಂಟಾಗದ ರೀತಿಯಲ್ಲಿ ಕೊನೆಮುಟ್ಟಿಸುವಲ್ಲಿ ಜಾಗರೂಕರಾಗಿದ್ದೇ ಇರುವರೆಂದು ನಂಬುತ್ತೇವೆ.

ಭದ್ರಾವತಿಯ ಕಬ್ಬಿಣದ ಯಂತ್ರಾಲಯ ಪ್ರತಿಷ್ಠಾಪನೆಯ ವಿಷಯವೂ ಹೀಗೆಯೇ ಆಗಬೇಕು. ವಿದೇಶದ ಅನುಭವಸ್ಥರೊಬ್ಬರು ಇದರ ವಿಷಯವನ್ನು ಪರಿಶೀಲಿಸಿ, ಇದು ಎಷ್ಟೇ ಫಲವತ್ತಾಗಿ ಮುಂದೆ ನಡೆದರೂ ಇದರಿಂದ ಸೇಕಡಾ ೩ ಅಥವಾ ೩। ರೂ. ಗಳಿಗಿಂತ ಹೆಚ್ಚು ಲಾಭವು ಗಿಟ್ಟುವುದಿಲ್ಲವೆಂದು ಅಭಿಪ್ರಾಯಪಟ್ಟಿರುವುದಾಗಿ ಕೇಳಿಕೆಯಲ್ಲುಂಟು. ಹಾಗಿದ್ದರೆ ಈ ಕಾರ್ಯಕ್ಕೆ ಕೈಹಾಕಿದುದೇ ವಿವೇಕವಲ್ಲವೆಂದು ತೋರುವುದು. ಅದರ ಹೊಟ್ಟೆಗೆ ದೊಡ್ಡದೊಡ್ಡ ಕಾಡುಗಳನ್ನೆಲ್ಲಾ ಕಡಿದು ಸವೆದೆಯಾಗಿ ಉಪಯೋಗಿಸಿ ಅದೊಂದು ತೆರದ ನಷ್ಟವನ್ನುಂಟುಮಾಡಿಕೊಂಡು, ನಾವು ಹಾಕುತ್ತಿರುವ ಬಂಡವಾಳದ ಹಣಕ್ಕೆ ಬಡ್ಡಿಯ ರೂಪದಲ್ಲಿ ಅನುಭವಿಸುತ್ತಿರುವ ನಷ್ಟದಲ್ಲಿ ಅರ್ಧಭಾಗವನ್ನು ಮಾತ್ರ ಲಾಭವನ್ನಾಗಿ ಇದರಿಂದ ಪಡೆದುಕೊಳ್ಳುವಂತಾದರೆ, ಆದಾಯಕ್ಕಿಂತ ವೆಚ್ಚವನ್ನು ಹೆಚ್ಚುಮಾಡಿಕೊಳ್ಳುವ ಕುಟುಂಬಿಯ ಅವಸ್ಥೆಯೇ ಸರ್ಕಾರಕ್ಕೆ ಕಾದಿರುವುದೆಂದು ಹೇಳಬೇಕಾಗುವುದು. ಆದರೆ ಈಗಣ ಪ್ರಭುತ್ವದವರು ಈ ಮಧ್ಯಕಾಲದಲ್ಲಿ ಮಾಡತಕ್ಕುದೇನು? ಇದು ಹಿಂದಣ ಪ್ರಭುತ್ವದವರಿಂದಲೇ ಆರಂಭಿಸಲ್ಪಟ್ಟು ೧ ಕೋಟಿಯವರೆಗೆ ಹಣವನ್ನು ತಿಂದಿರತಕ್ಕ ಪ್ರತಿಷ್ಠಾಪನೆಯಾಗಿರುತ್ತದೆ. ಅದನ್ನು ಇಲ್ಲಿಗೇ ಕೈಬಿಟ್ಟರೆ ಇದುವರೆಗೆ ಮಾಡಿದ ವೆಚ್ಚವು ವ್ಯರ್ಥವಾಗಿ ಹೋಗುತ್ತದೆಯೆಂಬ ಶಂಕೆಯು ಪೀಡಿಸುತ್ತಿದೆ. ಆದರೆ ಮುಂದೆ ನಿಜವಾಗಿಯೂ ತಕ್ಕ ಲಾಭವು ಇದರಿಂದ ಸಂಭವಿಸುವ ಸ್ಥಿತಿಯಿಲ್ಲದಿದ್ದರೆ ಮುಂದೆಯೂ ಇನ್ನಷ್ಟು ಬಂಡವಾಳವನ್ನು ಹಾಕಿ ಅಖಂಡವಾಗಿ ನಷ್ಟಪರಂಪರೆಯನ್ನು ಅನುಭವಿಸುವಂತೆ ಮಾಡಿಕೊಳ್ಳುವುದಕ್ಕಿಂತಲೂ, ಕೊಳೆತ ಕಾಲನ್ನು ಅಲ್ಲಿಗೇ ಕತ್ತರಿಸಿಬಿಟ್ಟು ಉಳಿದ ಅಂಗವನ್ನೆಲ್ಲಾ ಕಾಪಾಡಿಕೊಳ್ಳುವಂತೆ ಇಲ್ಲಿಗೇ ಅದರ ಸಂಬಂಧವನ್ನು ಕಳೆದುಕೊಂಡು ಮುಂದಣ ವಿಶೇಷ ನಷ್ಟವನ್ನು ತಪ್ಪಿಸಿಕೊಳ್ಳುವುದು ಯುಕ್ತವಾಗಿರುತ್ತದೆ. ಅದುಕಾರಣ ಕೃಷ್ಣರಾಜಸಾಗರದ ವಿಚಾರಕ್ಕಾಗಿ ತಜ್ಞಜನರ ಸಂಘವೊಂದನ್ನೇರ್ಪಡಿಸಿದಂತೆ ಕಬ್ಬಿಣದ ಯಂತ್ರಾಲಯದ ವಿಷಯವಾಗಿಯೂ ಒಂದು ಸಂಘವನ್ನೇರ್ಪಡಿಸುವುದು ಅವಶ್ಯಕವೆಂದು ತೋರುತ್ತದೆ. ಇಂಥ ಸ್ಥಿತಿಯಲ್ಲಿ ಭಟ್ಕಲ್ ರೇವೆಯ ಪ್ರಯತ್ನವೊಂದು ಗಂಟುಬಿದ್ದಿದ್ದರೆ ದೇಶದ ಅವಸ್ಥೆಯೇನಾಗುತ್ತಿದ್ದಿತೋ! ಅದನ್ನು ದೇವರೇ ತಪ್ಪಿಸಿದನೆಂದು ಭಾವಿಸಬೇಕು.

ದಿವಾನರ ಭಾಷಣದಲ್ಲಿ ಮುಖ್ಯವಾದ ಹೆಚ್ಚು ಭಾಗವನ್ನು ಆಕ್ರಮಿಸಿರುವ ವಿದ್ಯಾಸಂಸ್ಕರಣ, ಹಿಂದುಳಿದ ವಿದ್ಯಾರ್ಥಿವೇತನ, ಮಿಲ್ಲರ್ ಸಂಘದ ವರದಿ ಇವುಗಳಿಗೆ ಸಂಬಂಧಪಟ್ಟ ವಿಷಯದ ವಿಚಾರವು ಅತ್ಯಂತ ಗಮನೀಯವಾಗಿದೆ. ಪ್ರಭುತ್ವದವರು ಸರ್ವಸಮದೃಷ್ಟಿಯನ್ನಿಡಬೇಕೆಂಬ ಉದಾತ್ತಧರ್ಮಕ್ಕೆ ಕಟ್ಟುಬಿದ್ದು, ಹಿಂದೆ ನಡೆದುಹೋದ ಅನ್ಯಾಯ ಅಧರ್ಮಗಳನ್ನು ತಿದ್ದಿಕೊಳ್ಳುವುದಕ್ಕಾಗಿ ಮಾಡಿರುವ ಹಿಂದುಳಿದವರ ಸಮುದ್ಧಾರಾರ್ಥವಾದ ಏರ್ಪಾಟುಗಳು ಎಷ್ಟು ಸತ್ಯವಾದ ಸದುದ್ದೇಶದಿಂದ ಮಾಡಲ್ಪಟ್ಟವುಗಳಾಗಿವೆಯೆಂಬುದನ್ನೂ, ಅದರಲ್ಲಿ ಯಾರೊಬ್ಬರಿಗೂ ಅನ್ಯಾಯವು ಸಂಭವಿಸುವುದಕ್ಕೆ ಲೇಶವೂ ಅವಕಾಶವಿಲ್ಲವೆಂಬುದನ್ನೂ ಸ್ಪಷ್ಟಗೊಳಿಸುವ ವಿಚಾರಗಳು ಇಲ್ಲಿ ಚೆನ್ನಾಗಿ ನಿರೂಪಿಸಲ್ಪಟ್ಟಿವೆ. ಸರ್ಕಾರದ ಉದ್ಯೋಗಗಳಿಗೆ ಬ್ರಾಹ್ಮಣರು ಮಾತ್ರವೇ ಅಲ್ಲದೆ ಎಲ್ಲ ಜನವರ್ಗಗಳವರೂ ಸೇರಿರಬೇಕಾದುದು ಅವಶ್ಯಕವೆಂಬ ವಿಷಯವನ್ನು ಹಿಂದಣ ಸರ್ ಕೆ. ಶೇಷಾದ್ರಿ ಅಯ್ಯರವರೇ ಮೊದಲಾದ ಬ್ರಾಹ್ಮಣ ಮಂತ್ರಿಗಳು ನಿರ್ಧರಿಸಿ, ಅವರ ಕಾಲದಿಂದಲೇ ಅದಕ್ಕೆ ಆರಂಭಮಾಡಿ ಅಪ್ಪಣೆಗಳನ್ನು ಕೊಟ್ಟಿದ್ದರೆಂಬ ಸಂಗತಿಯು ಗಮನಾರ್ಹವಾಗಿದೆ. ಹಿಂದಣ ಬ್ರಾಹ್ಮಣ ಮಂತ್ರೀಶ್ವರರು ಯಾವ ತತ್ತ್ವವನ್ನು ಧರ್ಮವಾದುದೆಂದು ಈಗ್ಗೆ ೫೦ ವರ್ಷಗಳಲ್ಲೇ ಆರಂಭಿಸಿದರೋ ಯಾವುದನ್ನು ಕುರಿತು ಆಗಣ ಕಾಲದಲ್ಲಿ ಯಾವೊಬ್ಬ ಮುಂಬರಿದ ಜನವರ್ಗದವರೂ ಲೇಶವೂ ಆಕ್ಷೇಪಿಸಲಿಲ್ಲವೋ ಅದೇ ತತ್ತ್ವವನ್ನೇ ಪರಿಪೋಷಿಸಿ ವೃದ್ಧಿಪಡಿಸಲು ಈಗಣ ಪ್ರಭುತ್ವದವರು ಮಿಲ್ಲರ್‌ಸಂಘದ ವರದಿಯಮೇಲಣ ಅಪ್ಪಣೆಯ ಮೂಲಕ ಪ್ರಯತ್ನಿಸಿರುವರು. ಅದಮಾತ್ರದಿಂದಲೇ ಜಾತಿಮತದ್ವೇಷೋತ್ಪಾದನೆಗೆ ಇದು ಸಹಾಯಕವೆಂದೂ, ಸರ್ಕಾರದ ಬಗಿಯು ತಪ್ಪಿಹೋಗುವುದೆಂದೂ, ಇನ್ನುಮೇಲೆ ಬ್ರಾಹ್ಮಣರೊಬ್ಬರಿಗೂ ಸರ್ಕಾರದ ಕೆಲಸವೇ ಸಿಕ್ಕುವುದಿಲ್ಲವೆಂದೂ, ಸರ್ಕಾರಕ್ಕೆ ಜಾತಿಮತ ಪ್ರಾಧಾನ್ಯವು ಅಂಗೀಕರಣೀಯವಲ್ಲವೆಂದೂ, ಇದೆಲ್ಲಾ ಬ್ರಹ್ಮದ್ವೇಷಮೂಲಕವಾದ ಪ್ರಯತ್ನವೆಂದೂ, ಬುದ್ಬುದಾಕಾರವಾಗಿ ಕೋಲಾಹಲ ಮಾಡಿ ಈಗ ದೂರುತ್ತಿರುವ ಮುಂಬರಿದ ಜನವರ್ಗದವರ ಪ್ರವರ್ತನವನ್ನು ನೋಡಿದರೆ, ಆಗಣ ಬ್ರಾಹ್ಮಣ್ಯದಲ್ಲೂ ೫೦ ವರ್ಷದ ಈಚಿನ ರಾಜಕೀಯ ಬ್ರಾಹ್ಮಣ್ಯದಲ್ಲೂ ಉಂಟಾಗಿರುವ ಗುಣಪರಿವರ್ತನವೇ ಇದಕ್ಕೆ ಕಾರಣವಲ್ಲದೆ ಪ್ರಭುತ್ವದವರ ಏರ್ಪಾಟಿನಲ್ಲಿ ಯಾವ ಮಾತ್ರದ ದೋಷವೂ ದುರುದ್ದೇಶವೂ ಸ್ವಲ್ಪವೂ ಇಲ್ಲವೆಂದು ನಿಷ್ಪಕ್ಷಪಾತಿಗಳು ಹೇಳದೆ ಇರಲಾರರು. ಆದರೆ ಪ್ರಭುತ್ವದವರು ನ್ಯಾಯವಾಗಿ ಮಾಡುವ ನಿರೂಪಣಗಳೂ, ತೋರಿಸುವ ಆಧಾರವೂ ಸಹ "ತಾನುಂಟೋ ಮೂರುಲೋಕವುಂಟೋ" ಎಂದು ತಿಳಿದಿರುವ ಸ್ವಾರ್ಥೈಕಧುರಂಧರರಿಗೆ ಮನಸ್ತೃಪ್ತಿಯನ್ನು ಎಷ್ಟುಮಟ್ಟಿಗೆ ಮಾಡುವುವೋ ನಾವರಿಯೆವು.

ಮಿಲ್ಲರ್ ಸಂಘದ ವರದಿಯ ಮೇಲಣ ಅಪ್ಪಣೆ, ವಿದ್ಯಾಶಾಖಾ ಸಂಸ್ಕರಣ, ಹಿಂದುಳಿದ ಜನವರ್ಗಗಳ ವಿದ್ಯಾರ್ಥಿವೇತನ ಮೊದಲಾದ ಹಿಂದುಳಿದ ಜನವರ್ಗಗಳ ಸಮುದ್ಧಾರಕ್ಕೆ ಸಾಧಕಗಳಾದ ಸರ್ಕಾರಿ ಅಪ್ಪಣೆಗಳನ್ನೆಲ್ಲಾ ನಿರ್ಮೂಲಮಾಡಬೇಕೆಂಬ ದುರುದ್ದೇಶದ ಹಲವು ಸಬ್ಜೆಕ್ಟುಗಳು ಮುಂಬರಿದ ಜನವರ್ಗ ಪ್ರತಿನಿಧಿಗಳಿಂದ ಈ ಸಲದ ಪ್ರಜಾಪ್ರತಿನಿಧಿ ಸಭೆಯ ಚರ್ಚೆಗೆ ಕೊಡಲ್ಪಟ್ಟಿವೆ. ಅವುಗಳ ಮೇಲಣ ಚರ್ಚೆಯೆಲ್ಲಾ ಇಷ್ಟರಲ್ಲೇ ನಡೆದು ಪರ್ಯವಸಾನವು ಗೊತ್ತಾಗುವುದರಿಂದ ಅವುಗಳ ವಿಷಯವನ್ನು ನಾವು ಈಗ ಹೆಚ್ಚಾಗಿ ಚರ್ಚಿಸಲೆಳಸುವುದಿಲ್ಲ. ಮುಖ್ಯವಾಗಿ ಈ ಸಂಬಂಧದಲ್ಲಿ ನಾವು ಹೇಳುವ ಒಂದು ಮಾತೇನೆಂದರೆ—ಮಿಲ್ಲರ್‌ಸಂಘದ ವರದಿ, ವಿದ್ಯಾಭ್ಯಾಸದ ಮೆಮೊರಾಂಡಂ ಇತ್ಯಾದಿಯಾದ ಹಿಂದುಳಿದ ಜನವರ್ಗಗಳ ಹಿತಕ್ಕೆ ಸಂಬಂಧಪಟ್ಟ ಅಪ್ಪಣೆಗಳಿಗೆ ಅಡ್ಡಿಯನ್ನು ತರುವುದಕ್ಕೆ ಮುಂಬರಿದ ಜನವರ್ಗಗಳವರು ಎದುವರೆಗೆ ವಿಘ್ನವನ್ನು ತರುತ್ತಿರುವರೋ ಅಲ್ಲಿಯವರೆಗೂ ಮುಂಬರಿದ ಜನವರ್ಗಗಳವರ ಮತ್ತು ಇತರರ ಮಧ್ಯದಲ್ಲಿ ಶಾಂತಿಯೂ ಪರಸ್ಪರ ಪ್ರೀತಿಯೂ ಹುಟ್ಟಲಾರವು. ಪರೋತ್ಕರ್ಷದಲ್ಲಿ ಸಹನೆಯೇ ಸಜ್ಜನರ ಚಿಹ್ನೆಯಾಗಿರಬೇಕು. ಮಿಲ್ಲರ್ ಸಂಘದ ವರದಿ ಮೊದಲಾದುವುಗಳು ಜಾತಿಮತ ದ್ವೇಷವನ್ನು ಹೆಚ್ಚಿಸುವುವೆಂಬುದು ಸಂಪೂರ್ಣವಾಗಿ ಸುಳ್ಳು, ಪ್ರಭುತ್ವದವರು ಸರ್ವಪ್ರಜಾ ಸಮದೃಷ್ಟಿಯನ್ನಿಟ್ಟಿದ್ದಾರೆಂಬುದಕ್ಕೆ ಅದು ನಿದರ್ಶನರೂಪವಾಗಿದೆ. ಅದನ್ನು ಕೆಡಿಸಬೇಕೆನ್ನುವವರು ಸರ್ವಸಮದೃಷ್ಟಿಗೂ ಸಹೋದರಪ್ರೀತಿಗೂ ದೂರರಾದವರೆಂದು ಸಿದ್ಧಾಂತವಾಗಿರುತ್ತದೆ. ವಿದ್ಯಾವಿವೇಕಗಳಲ್ಲಿ ಮುಂದಾದವರು ಅವುಗಳ ಗೌರವಕ್ಕಾದರೂ ತಮ್ಮ ಈಗಣ ವಿರುದ್ಧಪ್ರವರ್ತನವನ್ನು ಬಿಡಬೇಕು. ಇಲ್ಲವೆ ಶ್ರೀಮನ್ಮಹಾರಾಜರ ಸತ್ಯ ಸದ್ಧರ್ಮಪ್ರೀತಿ ಸರ್ವಪ್ರಜಾ ಸಮದೃಷ್ಟಿಗಳ ಮೇಲಣ ನಂಬುಗೆಯಿಂದಲಾದರೂ, ಅವರ ಮೇಲಣ ರಾಜಭಕ್ತಿಯಿಂದಲಾದರೂ ತಮ್ಮ ಸಂಕುಚಿತ ಸ್ವಭಾವವನ್ನು ಬದಲಾಯಿಸಿಕೊಳ್ಳಬೇಕು. ಹಾಗೆ ನಡೆಯದೆ ಹೋಗುವ ಸಂದರ್ಭದಲ್ಲಿ ಹಿಂದುಳಿದ ಜನವರ್ಗಗಳೆಲ್ಲಾ ಆತ್ಮರಕ್ಷಣೆಗೆ ತಕ್ಕ ಯತ್ನವನ್ನು ಮತ್ತಷ್ಟು ಬಲಪಡಿಸಿಕೊಳ್ಳಬೇಕಾದುದು ಅಪರಿಹಾರ್ಯವಾದ ಸಂಗತಿಯೆಂಬುದನ್ನು ನಾವು ಹೇಳಬೇಕಾಗಿಲ್ಲ.

THE DASARA ADDRESS.

The address of the Dewan to the Representative Assembly is one of the most straightforward addresses ever delivered to the members of this Assembly. It has given in detail the various measures of retrenchments, which were given effect to during the year, to meet the stringent financial position of the State without, at the same time affecting the efficiency of the administration in the departments to which those retrenchments relate.

It is a matter for gratification that the question of the remission of assessment of lands under tanks which do not receive a sufficient supply of water in any year or series of years, which has been on the anvil of the Representative Assembly for more than a decade, has at last received due consideration at the hands of our worthy Dewan. The concessions which are now announced viz. the suspension of collection of half the assessment during the first year of partial failure and its remittance in the following year, if the same bad conditions repeat, are substantial, and it is hoped that the rules relating thereto will soon be issued.

The subject of educational reforms has been explained at considerable length, and it is mainly concerned with Village Primary Schools and the A. V. Schools of a uniform type, which received the most earnest consideration of the Government during the last two years. But the last statement in para 15 of Part I of the address is not encouraging in that it states that for a time the execution of the reforms might be delayed. If out of the total expenditure on education two-thirds of it is devoted to higher education, and if the financial situation is fit to devote more than 4 lakhs of rupees to freeships and scholarships in addition to

one lakh of rupees for scholarships to Backward Classes—the last a most legitimate expenditure much delayed in execution likewise—it is very much disappointing to see that to meet the much desired reforms, the funds are unavailing, and that even the Local Funds general have not been able to come to the rescue of education reforms. Is it after all going to be much Ado about Nothing? We hope not. The man who cries most, whether reasonably or unreasonably, gets the greatest benefit, even when funds are arare commodity. Primary education is food absolutely necessary for the development of mental culture in rural areas. Scholarships for highereducation to sons of persons who want intellectual luxuries are a further luxury leading to surfeit. We are not the first in the field in this century to advocate rural education. Primary education first, and luxury education next. We may point out that if more attention is paid to the expenses concerned with higher education, and if the legitimate charges required for rural education are put off, the present deplorable conditions will never improve, and those who are already "out of the wood" will begin to "Halloo" for more and more, and we doubt not that the latter will increase notwithstanding. We have strong faith in the present administration, and we hope earnestly that the delay in carrying out the reforms will not be much longer than a couple of months.

The admirable feature of the address is contained in the statements under the heading "Back ward communities and the Public Service." There is a full explanation for the measure taken up by Government necessitating the issue of orders on the Miller Committee Report. We do not intend to reiterate those solemn reasons for the just orders of Government. We appreciate the candid manner and the out-spokenness of the Dewan. It has pained him more than it has pained anyone else to see the indignation this order gave rise to, notwithstanding the entire strength of equity and justice being on the side of the Government order. The Dewan's appeal must appeal to all and evoke a response of satisfaction. Bitterness and strife must yield before this appeal. The true heart of a true Mysore Sirdar, the genuine feeling of a genuine nobleman, and the patriotism of the first patriot of the State, are writ in brilliant letters in those words of appeal. Hark and the heart will respond! Hark not and the brain will agitate. We are one with our generous Dewan in the sentiments expressed in his noble words of reconciliation. We do not care to examine what present gain there is in that benevolent order of Government, limited as it is in its execution, so long as the spirit of the order is for the improvement of the Public Service. Let bitterness and strife end here with this memorable session of the Representative Assembly, whereat meet the true sons of the State. We join our hands in appealing to the good sense and patriotism of our brethren.

The statement of the Dewan with reference to certain remarks made by him at the last Birth-day Session of the Representative Assembly in respect tof the withdrawal of subjects by certain members is a remarkable expression of frankness and statesmanship. As no one in the past in his exalted position made that kind of assurance, will there be anyone to hesitate to accept this noble offer? We do not think so. The Dewan's greatness is revealed in these kind and sympathetic words. We hope that the short lived agitation is at an end.

ಪ್ರಜಾಪ್ರತಿನಿಧಿಸಭೆ.

ಗೊತ್ತಾಗಿದ್ದ ಮೇರೆಗೆ ಕಳೆದ ತಾ|| ೧೩ನೆಯ ಗುರುವಾರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಸಭಾಭವನದಲ್ಲಿ ದಿವಾನ್ ಸರ್ ಕಾಂತರಾಜ ಅರಸ್, ಬಿ.ಎ., ಸಿ.ಎಸ್.ಐ., ಕೆ.ಸಿ.ಐ.ಇ. ರವರ ಅಧ್ಯಕ್ಷತೆಯಲ್ಲಿ ಆರಂಭಗೊಂಡಿತು. ಪದ್ಧತಿಯಂತೆ ಸಭಾಂಗಣವು ಕೌನ್ಸಿಲರುಗಳಿಂದಲೂ ಕೆಲವು ಯೂರೋಪ್ಯಾತಿಥಿಗಳಿಂದಲೂ, ಶಾಖಾಮುಖ್ಯಾಧಿಕಾರಿಗಳು ಡಿ|| ಕಮಿಷನರುಗಳು ಪೆನ್ಷಂಡ್ ಆಫೀಸರುಗಳು ಇವರೆಲ್ಲರಿಂದಲೂ, ಪಟ್ಟಣದ ಅನೇಕ ಪ್ರಮುಖಜನರಿಂದಲೂ ನಿಬಿಡವಾಗಿದ್ದಿತು. ಪ್ಲೇಗುಕಾಲವೆಂದು ಪ್ರತಿನಿಧಿಗಳ ಸಂಖ್ಯೆಯು ಕಡಿಮೆ ಬೀಳಬಹುದೆಂದು ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚಾಗಿಯೇ ಪ್ರಜಾಪ್ರತಿನಿಧಿಗಳು ದಯಮಾಡಿಸಿದ್ದರು. ೧೨ ಗಂಟೆಗೆ ಸರಿಯಾಗಿ ದಿವಾನರು ತಮ್ಮ ಇಂಗ್ಲಿಷ್ ಭಾಷಣವನ್ನು ಓದಿ ಮುಗಿಸಿದರು. ಬಳಿಕ ಈ ಕೆಳಗಣ ವಿವರಣೆಯಂತೆ ಕೋಲಾರದ ಚಿನ್ನದ ಗಣಿಗಳ ಬೋರ್ಡಿನ ಪರವಾದ ವಿಜ್ಞಾಪನಪತ್ರವನ್ನು ಕರ್ನಲ್ ಸಿ. ಎಚ್. ರಿಚರ್ಡ್ಸ್ ರವರೂ, ಒಕ್ಕಲಿಗರಸಂಘದ ಪರವಾಗಿ ಮ|| ಬಿ. ಎಲ್. ವಿಜಯದೇವರವರೂ, ಸೆಂಟರಲ್ ಮಹಮ್ಮದೀಯ ಸಂಘದ ಪರವಾಗಿ ಮಿ|| ಮಹಮ್ಮದ್ ಅಬ್ಬಾಸ್‌ಖಾನರೂ, ಕಾಫಿಪ್ಲಾಂಟರುಗಳ ಸಂಘದ ಪರವಾಗಿ ಕ್ಯಾಪ್ಟನ್ ಹರ್ಬರ್ಟ್‌ಟ್ರಾನ್ ರವರೂ, ವೀರಶೈವ ವಿದ್ಯಾಭಿವೃದ್ಧಿಸಂಘದ ಪರವಾಗಿ ಮ|| ಜಿ. ಪರಮಶಿವಯ್ಯನವರೂ, ಇಂಡಿಯನ್ ಕ್ರೈಸ್ತಸಂಘದ ಪರವಾಗಿ ಮಿ|| ಜೆ. ಆರ್. ಇಸಾಕ್‌ರವರೂ, ಜೈನವಿದ್ಯಾಭಿವೃದ್ಧಿಸಂಘದ ಪರವಾಗಿ ಮ|| ಉಪಾಧ್ಯಾಯರ ನಾಗರಾಜಯ್ಯನವರೂ, ಆದಿದ್ರಾವಿಡಾಭಿವೃದ್ಧಿಸಂಘದ ಪರವಾಗಿ ಮಿ|| ಮುರುಗೇಶಂಪಿಳ್ಳೆಯವರೂ, ಮಲ್ನಾಡ್ ಜಮೀನ್ದಾರರ ಸಂಘದ ಪರವಾಗಿ ಮ|| ಹೊನ್ನಯ್ಯಹೆಗ್ಗಡೆಯವರೂ, ಚನ್ನಪಟ್ಟಣದ ಅಂಜುಮಾನ ಮಹಾದೇವಿಯ ಪರವಾಗಿ ಮಿ|| ಸಯ್ಯದ್ ಅಬ್ದುಲ್‌ಷರೀಫ್‌ರವರೂ ವಿಜ್ಞಾಪನಪತ್ರಗಳನ್ನು ಓದಿ ದಿವಾನರಿಗೆ ಅರ್ಪಿಸಿದರು. ಇವುಗಳನ್ನೆಲ್ಲಾ ಸ್ವೀಕರಿಸಿ, ಅವರು ಸಂಕ್ಷೇಪವಾಗಿ ಎಲ್ಲಕ್ಕೂ ಉತ್ತರವನ್ನು ಹೇಳಿದರು. ಅವನ್ನು ಭಾಷಾಂತರಿಸಿ ಬೇರೆಕಡೆಗೆ ಮುದ್ರಿಸಿದ್ದೇವೆ. ಅಷ್ಟರಲ್ಲಿ ದಿವಾನರ ಭಾಷಣದ ಮುದ್ರಿತಪ್ರತಿಗಳು ಪ್ರತಿನಿಧಿಗಳಿಗೆಲ್ಲಾ ಕೊಡಲ್ಪಟ್ಟಿದ್ದುವು. ಆದುದರಿಂದ ಕನ್ನಡದ ಪ್ರತಿಯನ್ನು ಓದಿಸುವುದು ಅವಶ್ಯಕವೆ? ಎಂದು ದಿವಾನರು ಸಭಿಕರನ್ನು ಪ್ರಶ್ನೆಮಾಡಲು, ಬಹುಜನರು ಅನವಶ್ಯಕವೆಂದೂ ಮ|| ಕೆ. ಟಿ. ಶೇಷಯ್ಯನವರೇ ಮೊದಲಾದ ಕೆಲವರು ಪದ್ಧತಿಯಂತೆ ಅದನ್ನೂ ಓದಿಸಬೇಕೆಂದೂ ಹೇಳಲು, ರೆವಿನ್ಯೂ ಸೆಕ್ರೆಟರಿಯವರಿಂದ ಅದು ಓದಲ್ಪಟ್ಟಿತು. ೪ ಗಂಟೆಗೆ ಪ್ರತಿನಿಧಿಗಳ ಸಪ್ಲಿಮೆಂಟರಿ ಸಬ್‌ಜಕ್ಟುಗಳನ್ನು ಕೊಡಬಹುದೆಂದು ಹೇಳಿ ದಿವಾನರು ಆ ದಿನದ ಸಭಾಕಾರ್ಯವನ್ನು ಅಲ್ಲಿಗೆ ಸಮಾಪ್ತಿಮಾಡಿದರು. ವಿಶ್ವವಿದ್ಯಾಲಯದ ಕಾನ್ವೊಕೇಷನು ಜಗನ್ಮೋಹನ ಪ್ರಾಸಾರದಲ್ಲಿ ನಡೆಯಲು ಏರ್ಪಾಡಾಗಿದ್ದು ಆಕಸ್ಮಿಕವಾದ ಅನಿವಾರ್ಯದಿಂದ ಅಲ್ಲಿ ತಪ್ಪಿ ಪಬ್ಲಿಕ್ ಆಫೀಸ್ ಸಭಾಭವನದಲ್ಲೇ ತಾ|| ೧೪ರಲ್ಲಿ ನಡೆಯಬೇಕಾಗಿ ಬಂದುದರಿಂದ ತಾ|| ೧೫ ರಿಂದ ಪ್ರತಿನಿಧಿಸಭೆಯ ಮುಂದಣ ಕಾರ್ಯಗಳು ನಡೆಯುತ್ತಿರುವುವು. ನಡೆದ ಸಂಗತಿಯನ್ನೆಲ್ಲಾ ಮುಂದಣ ಸಂಚಿಕೆಯಲ್ಲಿ ತಿಳಿಯಿಸುವೆವು.

ಒಳದೇಶದ ವೃತ್ತಾಂತಗಳು.

ಸಣ್ಣಸಂಬಳದ ನೌಕರರುಗಳ ಅಲೋಯೆನ್ಸನ್ನು ೧೦ ರೂ. ನೊಳಗಣ ಸಂಬಳಗಾರರಿಗೆ ೩ ರೂ. ೫೦ ರೂ. ನೊಳಗಣ ಸಂಬಳಗಾರರಿಗೆ ೫ ರೂ. ಅಲ್ಲಿಂದ ೧೦೦ ರೂ. ನೊಳಗಣ ಸಂಬಳಗಾರರಿಗೆ ೬ ರೂ. ನಂತೆ ಕೊಡಲು ಸರ್ಕಾರದವರು ಈಗತಾನೇ ಅಪ್ಪಣೆಮಾಡಿರುವರು.

ಸರ್ಕಾರದ ರಿಟ್ರೆಂಚ್‌ಮೆಂಟ್ ಎಲ್ಲ ಶಾಖೆಗಳಿಗೂ ಪ್ರವೇಶಿಸಿರುವಂತೆ ಪ್ರಜಾಪ್ರತಿನಿಧಿಸಭಾ ಕಾರ್ಯಕ್ರಮಕ್ಕೂ ಪ್ರವೇಶಿಸಿತು. ಪ್ರಜಾಪ್ರತಿನಿಧಿಗಳೆಲ್ಲಾ ಈ ಕಾಲದಲ್ಲಿ ನಡೆಯುತ್ತಿದ್ದ ಔತಣವು ಈ ಸಲ ನಿಲ್ಲಿಸಲ್ಪಟ್ಟಿತು. ಇದಕ್ಕಾಗಿ ಬೇಸರಗೊಳ್ಳುವ ಪ್ರತಿನಿಧಿಗಳು ಯಾರೂ ಇರಲಾರರೆಂದು ನಂಬುತ್ತೇವೆ.

ಚಿಂತಾಮಣಿಯ ವೈಶ್ಯರು ತಮಗೂ ಅಲ್ಲಿಯ ಮಹಮ್ಮದೀಯರಿಗೂ ಉಂಟಾಗಿರುವ ವಿವಾದದ ವಿಚಾರದಲ್ಲಿ ಶ್ರೀಮನ್ಮಹಾರಾಜರವರಿಗೆ ಅರ್ಜಿಯನ್ನು ಬರೆದುಕೊಂಡಿರುವುದಲ್ಲದೆ ಕೆಲ ಪ್ರಮುಖರು ಮ|| ಚಂಗಯ್ಯಸೆಟ್ಟರನ್ನು ಮುಂದಿಟ್ಟುಕೊಂಡು ಶ್ರೀಮನ್ ಮಹಾರಾಜರವರನ್ನು ಕಂಡು ಪ್ರತ್ಯಕ್ಷವಾಗಿ ಬಿನ್ನೈಸಿಕೊಂಡಿರುವುದಾಗಿ ತಿಳಿಯುತ್ತೇವೆ.

ಕಳೆದ ತಾ|| ೧೪ರ ಬೆಳಗಿನ ೯ ಗಂಟೆಗೆ ಪಬ್ಲಿಕ್ ಆಫೀಸು ಕಟ್ಟಡದಲ್ಲಿ ವಿಶ್ವವಿದ್ಯಾಲಯದ ಕಾನ್ವೊಕೇಷನು ಛಾನ್ಸಲರಾದ ಶ್ರೀಮನ್ಮಹಾರಾಜರ ಅಧ್ಯಕ್ಷತೆಯಲ್ಲಿ ಪದ್ಧತಿಯ ಪ್ರಕಾರ ನಡೆದಿತು. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದವರಿಗೆಲ್ಲಾ ಪಟ್ಟಗಳು ಕೊಡಲ್ಪಟ್ಟುವು. ವೈಸ್‌ಛಾನ್ಸಲರ ಪ್ರಜ್ಞಾಮಂಡಿತವಾದ ಭಾಷಣವನ್ನು ಶ್ರಾವ್ಯವಾಗಿ ಮಾಡಿದರು.

ಮೈಸೂರ ಜೈನ ವಿದ್ಯಾವರ್ಧಕ ಸಂಘದ ಮೂರನೆಯ ವರ್ಷದ ಅಧಿವೇಶನವು ಕಳೆದ ತಾ|| ೧೩ರಲ್ಲಿ ರಾಜಧಾನಿಯ ಜೈನ ಬೋರ್ಡಿಂಗ್ ಹೌಸಿನಲ್ಲಿ ಸಾಲಿಗ್ರಾಮದ ಮ|| ಸರಾಫ್ ಪದ್ಮರಾಜಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆದಿತು. ಅಧ್ಯಕ್ಷರು ಸ್ವಜನ ವಿದ್ಯಾಭಿವೃದ್ಧಿಗಾಗಿ ಫಂಡಿಗೆ ೧೦೦೦ ರೂಪಾಯಿಗಳನ್ನು ಕೊಡಲು ವಾಗ್ದಾನ ಮಾಡಿದರೆಂದು ತಿಳುಹಲು ಹರ್ಷವಾಗುತ್ತದೆ. ಈ ಮಹನೀಯರ ಮೇಲುಪಂಗ್ತಿಯನ್ನು ಇತರರೂ ಅನುಸರಿಸುವರೆಂದು ನಿರೀಕ್ಷಿಸುತ್ತೇವೆ.

ಅರಮನೆಯಲ್ಲಿ ನೆರೆದ ಯೂರೋಪಿಯನ್ ದರಬಾರಿನಲ್ಲಿ ಈಚೆಗೆ ಸ್ವಲ್ಪ ಹೊಸ ಬದಲಾವಣೆಯಾಯಿತು. ಆ ದಿವಸ ಮೊದಲು ಯೂರೋಪ್ಯರ ದರಬಾರನ್ನು ನಡೆಯಿಸುವುದೂ, ಆಗ್ಗೆ ಭಾರತೀಯರೆಲ್ಲಾ ಕೆಳಗಿದ್ದು ಅನಂತರ ಸಜ್ಜೆಗೆ ಹೋಗಿ ಹಿಂದೂ ದರಬಾರನ್ನು ನಡೆಯಿಸುವುದೂ ಪೂರ್ವಪದ್ಧತಿಯಾಗಿದ್ದಿತು. ಈಗ ಅದನ್ನು ತಪ್ಪಿಸಿ, ಇಂಗ್ಲಿಷರ ದರಬಾರಿನಲ್ಲೇ ಸರ್ಕಾರಿ ಅಧಿಕಾರಿಗಳು ಪಟ್ಟಣದ ಕೆಲಪ್ರಮುಖರು ಕೆಲವು ವೈದಿಕ ವಿದ್ವಾಂಸರುಗಳು ಇವರನ್ನೆಲ್ಲಾ ಕರೆಯಿಸಿ, ಇವರುಗಳಿಗೂ ಕುರ್ಚಿಯನ್ನು ಕೊಡಿಸಿ ಒಂದೇ ದರಬಾರು ನಡೆಯುವಂತೆ ಏರ್ಪಡಿಸಿದ್ದರು.

ವಿಜಯದಶಮಿಯ ಜಂಬೂಸ್ವಾರಿಯ ಮಹೋತ್ಸವವು ಕಳೆದ ಮಂಗಳವಾರ ನಡೆದಿತು. ಕೋಟೆಬಾಗಲಿಂದ ಬನ್ನೀಮಂಟಪದವರೆಗೂ ರಾಜವೀಧಿಯು ಧ್ವಜಪತಾಕಾದಿಗಳಿಂದೆಲ್ಲಾ ಅಲಂಕೃತವಾಗಿದ್ದಿತು. ಪರಸ್ಥಲದ ಜನರೂ ಸ್ಥಳಿಕರೂ ಉದ್ದಕ್ಕೂ ಮಾಡಗಳ ಮೇಲೂ ಅಂಗಡಿ ಸಾಲುಗಳಲ್ಲೂ ನಿಬಿಡವಾಗಿ ನಿಂತಿದ್ದರು. ಶ್ರೀಮನ್ಮಹಾರಾಜಸಹೋದರರು ದಿವ್ಯವಸ್ತ್ರಾಭರಣಾಲಂಕಾರವಿಭೂಷಿತರಾಗಿ ಆನೆಯಮೇಲಣ ಚಿನ್ನದ ಅಂಬಾರಿಯಲ್ಲಿ ಕುಳಿತು ಸಕಲ ಚತುರಂಗಬಲ ಸಮೇತರಾಗಿ ಸಾಯಂಕಾಲ ೪। ಗಂಟೆಗೆ ಅರಮನೆಯಿಂದ ಉತ್ಸವವಾಗಿ ಹೊರಟರು. ಮರ್ಯಾದಾರ್ಥವಾದ ೨೧ ಗುಂಡುಗಳು ಹಾರಿಸಲ್ಪಟ್ಟುವು. ದಾರಿಯುದ್ದಕ್ಕೂ ಅಲ್ಲಿಗಲ್ಲಿಗೆ ಪ್ರಮುಖವರ್ತಕರು ತಂತಮ್ಮ ಮನೆಗಳ ಅಂಗಡಿಗಳ ಮುಂದೆ ಅಲಂಕಾರ ಮಾಡಿ ಫಲಪುಷ್ಪಹಾರಗಳನ್ನು ಮಹಾರಾಜಸಹೋದರರಿಗೆ ಒಪ್ಪಿಸಿದರು. ಮ್ಯುನಿಸಿಪಾಲಿಟಿಯವರು ಸೆಂಟರಲ್ ಪೋಲೀಸ್ ಠಾಣದ ಮುಂದೆ ಹಾಕಿದ್ದ ಚಪ್ಪರದಲ್ಲಿ ಫಲಪುಷ್ಪಗಳನ್ನೊಪ್ಪಿಸಿದರು. ಆದರೆ ಆದಿನ ಮಧ್ಯಮಾರ್ಗದಲ್ಲೇ ಬಲವಾದ ಮಳೆಗೆ ಆರಂಭವಾದುದರಿಂದ ನೋಟಕರೇ ಮೊದಲಾದವರಿಗೆಲ್ಲಾ ಸ್ವಲ್ಪ ತೊಂದರೆಯಾಯಿತು. ಆದರೂ ಉತ್ಸವವು ಯಥಾಪ್ರಕಾರ ಸಾಗಿತು. ಬನ್ನಿಮಂಟಪಕ್ಕೆ ಸ್ವಾರಿಯು ದಯಮಾಡಿಸಿ ಅಲ್ಲಿಯ ಕವಾಯತು ಮೊದಲಾದುವುಗಳ ಮರ್ಯಾದೆಯನ್ನೆಲ್ಲಾ ನೆರವೇರಿಸಿ ಯಥಾಪ್ರಕಾರ ಉತ್ಸವವು ಹಿಂದಿರುಗಿ ದಯಮಾಡಿಸುವಾಗ್ಗೆ ಮಳೆಯೇನೂ ಇಲ್ಲದಿದ್ದುದರಿಂದ ವಿದ್ಯುಚ್ಛಕ್ತಿಯಬೆಳಕಿನ ದೀಪೋತ್ಸವದ ವೈಭವದೊಡನೆ ಆಗಣ ನೋಟವು ಪ್ರೇಕ್ಷಕರಿಗೆ ಆನಂದಪ್ರದವಾಯಿತು. ಉತ್ಸವವು ಅರಮನೆಗೆ ರಾತ್ರಿ ೧೦ ಗಂಟೆಗೆ ಸೇರಿತು. ಆ ರಾತ್ರಿಯೂ ಮರುದಿನ ರಾತ್ರಿಯೂ ಅಂಬಾವಿಲಾಸದಲ್ಲಿ ದರಬಾರೂ ನಜರೂ ನಡೆದುವು.

ಈ ಸಲ ನಡೆದ ದಸರಾ ದರ್ಬಾರಿನಲ್ಲಿ ಶ್ರೀಮನ್‌ಮಹಾರಾಜರವರಿಂದ ಪ್ರಶಸ್ತಿಗಳನ್ನೂ, ಮೆಡಲುಗಳನ್ನೂ, ಖಾಸಾಹಾರದ ಮರ್ಯಾದೆಯನ್ನೂ ಅನುಗ್ರಹಿಸಲ್ಪಟ್ಟಿರುವ ದೊಡ್ಡಮನುಷ್ಯರುಗಳು —(೧) ಚೀಫ್‌ಕೋರ್ಟಿನ ಎರಡನೆ ಜಡ್ಜಿಯರಾದ ಮ|| ಕೆ. ಎಸ್. ಚಂದ್ರಶೇಖರಯ್ಯನವರಿಗೆ ರಾಜಧರ್ಮಪ್ರವೀಣ; (೨) ಎರಡನೆಯಕೌನ್ಸಿಲ್ ಮ|| ಪಿ. ರಾಘವೇಂದ್ರರಾಯರಿಗೆ ರಾಜಮಂತ್ರಪ್ರವೀಣ; (೩) ಬೆಂಗಳೂರು ಮಿಥಿಕ್‌ಸೊಸೈಟಿಯ ಫಾದರ್ ಟೆಬಾರ್ಡ್‌ರವರಿಗೆ ರಾಜಸಭಾಭೂಷಣ; (೪) ವೇ|| ಕುಣಿಗಲ್ ರಾಮಶಾಸ್ತ್ರಿಗಳಿಗೆ ವಿದ್ಯಾವಿಶಾರದ; (೫) ವೇ|| ನರಹರಿಜೋಯಿಸರಿಗೆ ಜೋತಿಷರತ್ನ ಎಂಬ ಪ್ರಶಸ್ತಿಗಳೂ- (೧) ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡಿನ ಆನರೆರಿ ವೈಸ್‌ಪ್ರೆಸಿಡೆಂಟರಾಗಿದ್ದ ಮಿ|| ಬಿ. ಉಸ್ಮಾನ್‌ಖಾನರವರು ಶ್ರದ್ಧೆಯಿಂದ ಕೆಲಸಮಾಡಿರುವುದಕ್ಕಾಗಿ; (೨) ಮಹಾರಾಣೀಕಾಲೇಜ್ ಸಹಾಯೋಪಾಧ್ಯಾಯನಿಯರಾದ ಶ್ರೀಮತಿ ಸುಬ್ಬಮ್ಮ ಬಿ. ಎ. ಯವರು ಧರ್ಮಾರ್ಥವಾಗಿ ಕೋಲಾರ ಡಿ|| ನಲ್ಲಿ ಆಸ್ಪತ್ರೆಯನ್ನು ಕಟ್ಟಿಸಿದುದಕ್ಕಾಗಿ; (೩) ಬೆಂಗಳೂರಿನ ಮ|| ಎಸ್. ಕೆ. ನರಸಿಂಹಯ್ಯನವರು ಅಕ್ಕಿಗೆ ತೊಂದರೆಯಾಗಿದ್ದಕಾಲದಲ್ಲಿ ಅಕ್ಕಿಯನ್ನು ತರಿಸಿ ಜನರಿಗೆ ಒದಗಿಸಿಕೊಟ್ಟುದಕ್ಕಾಗಿ; (೪) ಶಿವಮೊಗ್ಗೆಯ ಅಡ್ವೋಕೇಟ್ ಮ|| ಸಿ. ಸುಬ್ಬರಾಯರು ಅಲ್ಲಿಯ ಮ್ಯುನಿಸಿಪಲ್ ಆನರೆರಿ ಪ್ರೆಸಿಡೆಂಟರಾಗಿದ್ದು ಶ್ರದ್ಧೆಯಿಂದ ಕೆಲಸಮಾಡಿದುದಕ್ಕಾಗಿ; (೫) ಹಾಸನದ ಮಿ|| ಮಹಮದ್‌ರಜಾಯವರು ಆನರೆರಿ ಮ್ಯುನಿಸಿಪಲ್ ಪ್ರೆಸಿಡೆಂಟರಾಗಿದ್ದು ಶ್ರದ್ಧೆಯಿಂದ ಕೆಲಸಮಾಡಿದುದಕ್ಕಾಗಿ; (೬) ಚಿಕ್ಕಬಳ್ಳಾಪುರದ ಮ|| ನಾರಾಯಣಸೆಟ್ಟರು ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿದ್ದು ಶ್ರದ್ಧೆಯಿಂದ ಕೆಲಸಮಾಡಿದುದಕ್ಕಾಗಿ; (೭) ಮತ್ತೊಬ್ಬಯ್ಯಂಗಾರರಿಗೂ ಭಂಗಾರದ ಪದಕಗಳೂ ಶಾಲುಜೋಡಿಯೂ, ವಲ್ಲಿಗಳೂ, ಮ|| ಗಳಾದ (೧) ಎಂ. ವೆಂಕಟಪ್ಪಾಜಿ ಅರಸ್ ಬಿ. ಎ. ಯವರು, (೨) ಎಂ. ಹಂಪೆಅರಸ್, ಬಿ. ಎ. ಯವರು, (೩) ಎಂ. ಮಾದಪ್ಪನವರು, (೪) ವಿ. ತಿರುವೆಂಗಡಂಮೊದಲಿಯಾರರ, (೫) ಎಂ. ಎಲ್. ವಾಸುದೇವಯ್ಯನವರು, (೬) ಸಟ್ವಾಜಿರಾಯರು (೭) ಎಂ. ನರಸಿಂಹಸ್ವಾಮಿಯವರು, (೮) ಅಬ್ದುಲ್ ಸತ್ತಾರ್‌ಸೇಟರು, (೯) ವೈ. ವಿರೂಪಾಕ್ಷಯ್ಯನವರು, (೧೦) ಎಂ. ಕೆ. ಮಾಧವರಾಯರು, (೧೧) ಸಾಹುಕಾರ್ ತಮ್ಮಯ್ಯನವರು, (೧೨) ತೋತಿಖಾನೆ ಸಾಹುಕಾರ್ ಸೂರಪ್ಪನವರು, (೧೩) ಲಾಡರಪೇಟೆ ಸುಬ್ಬರಂಗಯ್ಯನವರು, (೧೪) ಲಾಡರಪೇಟೆ ಚಿಕ್ಕಶೇಷಯ್ಯನವರು, (೧೫) ಮೌಲ್ವಿ ಸುಲ್ತಾನ್ ಮಹಮದ್‌ಖಾನ್ ಸಾಹೇಬರು ಇವರುಗಳಿಗೆ ಖಾಸಾಹಾರದ ಮರ್ಯಾದೆಯೂ ಅನುಗ್ರಹಿಸಲ್ಪಟ್ಟುವು.

ವಿಜ್ಞಾಪನ ಪತ್ರಗಳಿಗೆಲ್ಲಾ ದಿವಾನರವರು ಒಟ್ಟಾಗಿ ಕೊಟ್ಟ ಉತ್ತರ.

ಮಹನೀಯರೇ,

ಕಳೆದ ವರ್ಷದಲ್ಲಿ ಗೌರ್ನಮೆಂಟಿನವರು ಕೈಕೊಂಡ ಕೆಲವು ಮುಖ್ಯವಾದ ಏರ್ಪಾಟುಗಳ ವಿಚಾರದಲ್ಲೂ ಮತ್ತು ಧನದ ಕೊರತೆ ಮೊದಲಾದ ಇತರ ತೊಂದರೆಗಳ ನಿವಾರಣೆಗಾಗಿ

ಸರ್ಕಾರದವರು ಮಾಡಿರುವ ಪ್ರಯತ್ನಗಳ ವಿಷಯದಲ್ಲೂ, ಶ್ಲಾಘಿಸಿಬರೆದು ಈ ದಿವಸ ನೀವು ಒಪ್ಪಿಸಿರುವ ವಿಜ್ಞಾಪನಾ ಪತ್ರಿಕೆಗಳಿಗಾಗಿ ನಾನು ನಿಮ್ಮಗಳನ್ನು ಮನಃಪೂರ್ವಕವಾಗಿ ಅಭಿನಂದಿಸುವೆನು.

ಈ ನಿಮ್ಮ ವಿಜ್ಞಾಪನಾ ಪತ್ರಿಕೆಗಳು ಅನೇಕ ವಿಷಯಗಳನ್ನು ಒಳಗೊಂಡಿರುವುವು. ಇವುಗಳಲ್ಲಿರುವ ಎಲ್ಲಾ ವಿಷಯಗಳಿಗೂ ನೀವು ನನ್ನಿಂದ ಈಗಲೇ ಉತ್ತರಗಳನ್ನ ನಿರೀಕ್ಷಿಸಲಾರಿರೆಂದು ನಾನು ದೃಢವಾಗಿ ನಂಬುತ್ತೇನೆ. ಈ ನಿಮ್ಮ ಎಲ್ಲಾ ವಿಜ್ಞಾಪನ ಪತ್ರಿಕೆಗಳಲ್ಲೂ ವಿದ್ಯಾಭ್ಯಾಸ ಸಂಬಂಧವಾದ ವಿಷಯಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟಿರುವಿರಿ; ನೀವು ಸೂಚಿಸಿರುವ ಕೆಲವು ಮುಖ್ಯ ವಿಷಯಗಳು ಎಜ್ಯುಕೇಷನ್ ಮೆಮೊರಾಂಡಮ್ಮಿನಲ್ಲಿ ಈ ಮೊದಲೇ ಇತ್ಯರ್ಥಪಡಿಸಲ್ಪಟ್ಟಿರುವುವು; ಹಣದ ಕೊರತೆಯು ಕಡಮೆಯಾದೊಡನೆಯೇ ಕನ್ನಡದ ಮತ್ತು ಹಿಂದೂಸ್ತಾನಿಯ ಮಿಡಲ್ ಸ್ಕೂಲುಗಳು ಆಂಗ್ಲೊ ವರ್ನಾಕ್ಯುಲರ್ ಸ್ಕೂಲುಗಳಾಗಿ ಮಾಡಲ್ಪಡುವುವೆಂಬುದಾಗಿ ಒಕ್ಕಲಿಗರ ಸಂಘದ ಮತ್ತು ಎರಡು ಮಹಮ್ಮದೀಯ ಸಂಘಗಳ ಪ್ರತಿನಿಧಿಗಳಾದ ನಿಮಗೆ ಭರವಸೆಯಿಂದ ಹೇಳಬಲ್ಲೆನು. ವರ್ಷಂಪ್ರತಿಯಲ್ಲೂ ೫೦ ದೇಶಭಾಷಾ ಮಿಡಲ್ ಸ್ಕೂಲುಗಳು ಆಂಗ್ಲೊ ವರ್ನಾಕ್ಯುಲರ್ ಸ್ಕೂಲುಗಳಾಗಿ ಮಾಡಲ್ಪಡುವುವೆಂಬುದು ನಿಮಗೆ ತಿಳಿದಿರುವ ವಿಷಯವೇ ಆಗಿದೆ. ಹಿಂದೂಸ್ತಾನಿ ಮಿಡಲ್‌ಸ್ಕೂಲುಗಳಿಗೂ ಮುಖ್ಯ ಗಮನಕೊಡಲ್ಪಡುವುದು. ಮೈಸೂರು ಪಟ್ಟಣದಲ್ಲಿ ಲಿಂಗಾಯಿತ ವಿದ್ಯಾರ್ಥಿಗಳಿಗೋಸ್ಕರ ಕಟ್ಟಬೇಕೆಂದಿರುವ ವಿದ್ಯಾರ್ಥಿನಿಲಯಕ್ಕಾಗಿ ತಕ್ಕ ನಿವೇಶನವನ್ನು ಕೊಡುವ ವಿಚಾರವು ಈಗ ಗೌರ್ನಮೆಂಟಿನವರ ಪರ್ಯಾಲೋಚನೆಯಲ್ಲಿದೆ. ಈ ವಿಷಯವು ಜಾಗ್ರತೆಯಾಗಿಯೇ ಇತ್ಯರ್ಥವಾಗಬಹುದೆಂದು ಭಾವಿಸುತ್ತೇನೆ.

ಕೋಲಾರದ ಗಣಿಗಳ ಮತ್ತು ಯೂರೋಪಿಯನ್ ಕಾಫಿ ಪ್ಲಾಂಟರುಗಳ ಪ್ರತಿನಿಧಿಗಳು, ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಡಬೇಕಾದ ವಿಚಾರಗಳಲ್ಲಿ ಹೆಚ್ಚು ಗಮನಕೊಡಬೇಕೆಂದು ಹೇಳಿಕೊಂಡಿರುತ್ತಾರೆ. ಕಾಫಿಪ್ಲಾಂಟರು ಸಂಘಗಳ ಪ್ರತಿನಿಧಿಗಳು ಕೇಳುವಂತೆ ಇದರ ತನಿಖೆಗಾಗಿ ದೊಡ್ಡಮನುಷ್ಯರ ಒಂದು ಕಮಿಟಿಯನ್ನ ಏರ್ಪಡಿಸುವುದರಿಂದ ಅಷ್ಟೇನೂ ಪ್ರಯೋಜನವಾಗುವದಿಲ್ಲ. ಸರ್ಕಾರದವರೇ ರಸ್ತೆಗಳ ಕುಂದುಕೊರತೆಗಳ ವಿಚಾರವಾಗಿ ಸರಿಯಾದ ತನಿಖೆಮಾಡುವರು. ಕಾಫಿ ಬೆಳೆಯುವ ಡಿಸ್ಟ್ರಿಕ್ಟುಗಳಲ್ಲಿ ಹಾಕಿರುವ ಡಿಸ್ಟ್ರಿಕ್ಟು ಮತ್ತು ಪ್ರಾವಿನ್ಷಿಯಲ್ ರಸ್ತೆಗಳ ವಿಷಯವಾಗಿ ವಿಚಾರಮಾಡಿ ನೋಡಿದುದಾದರೆ ರಸ್ತೆಗಳ ವಿಸ್ತಾರವು ಇತರ ಡಿಸ್ಟ್ರಿಕ್ಟುಗಳಿಗಿಂತಲೂ ಹೆಚ್ಚಾಗಿರುವುದು. ಆದುದರಿಂದ ಈಗಿನ ಸಂದರ್ಭದಲ್ಲಿ ಒಂದೊಂದು ಮೈಲಿಗೆ ಈಗ ವೆಚ್ಚವಾಗುವ ಮೊಬಲಗನ್ನ ಹೆಚ್ಚಿಸಲಾಗುವದಿಲ್ಲ. ರಸ್ತೆಗಳೂ ಕಟ್ಟಡಗಳೂ ಆ ಆ ಕಾಲಗಳಲ್ಲಿ ಸರಿಯಾಗಿ ತನಿಖೆಮಾಡತಕ್ಕ ಬಗ್ಗೆ ಡಿಸ್ಟ್ರಿಕ್ಟುಗಳಲ್ಲೇ ಒಂದೊಂದು ಸಿಬ್ಬಂದಿಯನ್ನ ಏರ್ಪಡಿಸಿ, ಈ ಕೆಲಸಗಳಿಗಾಗಿ ಮಂಜೂರಾಗಿರುವ ಮೊಬಲಗನ್ನ ಉಳಿಸದೆ ಪ್ರಯೋಜನಕಾರಿಯಾಗುವಂತೆ ವ್ಯಯಮಾಡಲಾಗುವುದು.

ಮೈಸೂರು ಸೀಮೆಯ ಕೋರ್ಟುಗಳಲ್ಲಿ ಹುಟ್ಟಿರುವ ವಾರಂಟುಗಳಿಂದ ಬ್ರಿಟಿಷ್ ಇಂಡಿಯಾ ಪ್ರದೇಶಗಳಿಗೆ ತಪ್ಪಿಸಿಕೊಂಡು ಹೋಗಿರತಕ್ಕ ಕಾಫಿತೋಟದ ಕೂಲೀಜನರ ಮತ್ತು ಮೇಸ್ತ್ರಿಗಳಮೇಲೆ ಜಾರಿಮಾಡಿ ಅವರನ್ನ ಹಿಡಿಯತಕ್ಕ ವಿಚಾರವು ಒಂದು ಮುಖ್ಯವಾದ ವಿಷಯವಾಗಿರುವುದು. ಕೆಲವು ವರುಷಗಳ ಹಿಂದೆ ಇಂಡಿಯಾ ಸರ್ಕಾರದವರೊಡನೆ ಈ ವಿಷಯವಾದ ಕಾಗದಪತ್ರಗಳನ್ನು ನಡೆಸಲಾಯಿತು. ಮೈಸೂರು ದೇಶದಲ್ಲಿ ಮಾಡಲ್ಪಡುವ ನ್ಯಾಯನಿಬಂಧನೆಗಳಿಂದಲೇ ಈ ಉದ್ದೇಶವು ಸಾರ್ಥಕವಾಗುವಂತಿಲ್ಲ. ಈಗಿನ ಪರಿಸ್ಥಿತಿಯನ್ನು ತೋರಿಸತಕ್ಕ ಒಂದು ವಿವರಣೆ ಪತ್ರವನ್ನ ತಕ್ಕ ದಾಖಲೆಗಳ ಸಮೇತ ಕಾಫಿಪ್ಲಾಂಟರುಗಳು ಕಳುಹಿಸಿಕೊಟ್ಟರೆ, ಗೌರ್ನಮೆಂಟಿನವರು ಈ ವಿಚಾರದಲ್ಲಿ ಇಂಡಿಯಾ ಗೌರ್ನಮೆಂಟಿನವರ ಕೂಡ ಪುನಃ ಕಾಗದಪತ್ರಗಳನ್ನ ಬೆಳೆಸಲು ಸಿದ್ಧರಾಗಿರುವರು.

ಮಲನಾಡು ಭೂಸ್ವಾಮಿಗಳ ಸಂಘದ ಪ್ರತಿನಿಧಿಗಳ ವಿಜ್ಞಾಪನಾಪತ್ರಿಕೆಯಲ್ಲಿ ಮಲನಾಡು ಅಭಿವೃದ್ಧಿಗಾಗಿ ವೆಚ್ಚಮಾಡಲ್ಪಡುವ ಮೊಬಲಗು ಕಡಮೆಮಾಡಲ್ಪಟ್ಟಿರುವುದೆಂದು ಆಕ್ಷೇಪಿಸಲ್ಪಟ್ಟಿರುತ್ತದೆ. ಈ ಅಭಿವೃದ್ಧಿಕಾರ್ಯಕ್ಕಾಗಿ ಮಂಜೂರ್ಮಾಡಲ್ಪಟ್ಟ ಮೊತ್ತದ ವಿಶೇಷ ಭಾಗವೆಲ್ಲಾ ಸಿಬ್ಬಂದಿಯ ಸಂಬಳಕ್ಕಾಗಿಯೇ ವೆಚ್ಚವಾಗಿ ಹೋಗುತ್ತಿದ್ದುದರಿಂದ ಈ ಮಲನಾಡು ಅಭಿವೃದ್ಧಿಕಾರ್ಯಕ್ಕಾಗಿ ನೇಮಿಸಿಕೊಂಡಿದ್ದ ಸಿಬ್ಬಂದಿಯು ವಜಾಮಾಡಲ್ಪಟ್ಟಿತು. ಆದರೆ ಪ್ರಾರಂಭಿಸಲ್ಪಟ್ಟಿರುವ ಈ ಅಭಿವೃದ್ಧಿಕಾರ್ಯಗಳು ಎಂದಿನಂತೆ ಕೆಲವು ಇಲಾಖೆಗಳಲ್ಲಿ ಆ ಆ ಇಲಾಖೆಯ ಸಕ್ರಮವಾದ ಕೆಲಸಗಳಾಗಿ ಈಗಲೂ ನಡೆಸಲ್ಪಡುತ್ತಲಿರುವುವು. ಮಲೆನಾಡಿನ ಅಡಿಕೆ ತೋಟಗಳಲ್ಲಿ ಕೆಲಸಮಾಡಲು ಕೂಲಿಗಳನ್ನು ಒದಗಿಸಿಕೊಳ್ಳಲು ಮಾಡಬೇಕಾದ ಏರ್ಪಾಟಿನ ವಿಚಾರದಲ್ಲಿ ಗೌರ್ನಮೆಂಟಿನವರು ಹೆಚ್ಚಾದ ಸಾನುಭೂತಿಯುಳ್ಳವರಾಗಿರುವರು; ಇದಕ್ಕಾಗಿ ಬೇಕಾದ ಸಹಾಯಗಳನ್ನೆಲ್ಲಾ ಮಾಡುವರಾಗಿ ಈ ಮೊದಲೇ ಅಭಯಕೊಟ್ಟಿರುವರು. ಆದರೆ ಮಲೆನಾಡಿನ ಜಮೀನ್ದಾರರು ಈ ತಮ್ಮ ಸ್ವಕಾರ್ಯದಲ್ಲಿ ಅಭಿಮಾನವನ್ನು ತೋರಿಸದ ಪಕ್ಷದಲ್ಲಿ ಈ ಏರ್ಪಾಟು ಅನುಷ್ಠಾನಕ್ಕೆ ಬರುವ ಭರವಸೆಯೇ ಇರುವುದಿಲ್ಲ.

ಜೈನ ವಿದ್ಯಾಭಿವೃದ್ಧಿ ಸಂಘದವರು ಹೇಮಾವತೀ ನದಿಗೆ ಈಗ ಅಕ್ಕಿಹೆಬ್ಬಾಳು ಸಮೀಪದಲ್ಲಿ ಕಟ್ಟಬೇಕೆಂದಿರುವ ಸೇತುಯನ್ನ ಮಂದಗೆರೆ ಸಮೀಪದಲ್ಲಿ ಕಟ್ಟಿಸಿಕೊಡಬೇಕೆಂದು ಕೇಳಿಕೊಂಡಿರುವುದರ ಜತೆಯಲ್ಲಿ ಇದಕ್ಕೆ ಮುಟ್ಟುವ ಮೊಬಲಿಗಾಗಿ ಕಂಟ್ರಿಬ್ಯೂಷನ್ ಸಹ ಕೊಡುವದಾಗಿ ವಾಗ್ದಾನಮಾಡಿರುವುದು ಸಂತೋಷಕರವಾಗಿದೆ. ನಿಮಗೆಲ್ಲರಿಗೂ ತಿಳಿದಿರುವ ಹಾಗೆ, ಈ ವಿಷಯವು ಇಲಾಖೆಯವರಿಂದಲೂ, ನನ್ನ ಸಹಾಯೋದ್ಯೋಗಿಗಳಾಗಿರುವ ರಾಜಮಂತ್ರಪ್ರವೀಣ ಮ|| ಪಿ. ರಾಘವೇಂದ್ರರಾಯರವರ ಖುದ್ದು ವಿಚಾರಣೆಯಿಂದಲೂ ತೀರ್ಮಾನಮಾಡಲ್ಪಟ್ಟಿರುವುದು. ಹೀಗಿದ್ದಾಗ್ಯೂ ಒಳ್ಳೆಕಂಟ್ರಿಬ್ಯೂಷನ್ನು ಸರ್ಕಾರಕ್ಕೆ ಬರುವುದಾದರೆ, ಗೌರ್ನಮೆಂಟಿನವರು ಈ ವಿಷಯವನ್ನ ಪುನರಾಲೋಚನೆಯಿಂದ ವ್ಯವಸ್ಥೆಮಾಡುವರು.

ಆದಿದ್ರಾವಿಡ ವರ್ಗದ ಪ್ರತಿನಿಧಿಯು, ನಿಮ್ನಜಾತಿವರ್ಗಗಳ ಅಭಿವೃದ್ಧಿಗಾಗಿ ಒಂದು ಬೋರ್ಡು ನಿರ್ಮಿಸಲ್ಪಡುವ ತನಕ ತಮ್ಮ ಕೋಮಿನ ಜನರ ಅಭಿವೃದ್ಧಿಗಾಗಿ ಕೆಲವು ಪ್ರಾರ್ಥನೆಗಳನ್ನು ಮಾಡಿಕೊಂಡಿರುವರು. ಗೌರ್ನಮೆಂಟಿನಿಂದ ಈ ಪ್ರಾರ್ಥನೆಗಳು ಸಾನುಭೂತಿಯಿಂದ ಪರ್ಯಾಲೋಚಿಸಲ್ಪಡುವುವು. ಗೌರ್ನಮೆಂಟು ಇಲಾಖೆಗಳಲ್ಲಿ ಕೆಲಸಕ್ಕೆ ಸೇರಬೇಕೆನ್ನುವ ಯೋಗ್ಯತಾಸಂಪನ್ನರಾದ ನಿಮ್ನಜಾತಿಯ ಉಮೇದುವಾರರ ಪ್ರಾರ್ಥನೆಯನ್ನು ಇತರರೆಲ್ಲರಿಗಿಂತಲೂ ಮೊದಲು ನೆರವೇರಿಸಿಕೊಡಬೇಕೆಂಬದಾಗಿ ಮಾಡಿರುವ ಕೋರಿಕೆಯನ್ನು ಗೌರ್ನಮೆಂಟಿನವರು ಸಾನುಭೂತಿಯಿಂದ ಪರ್ಯಾಲೋಚಿಸುವರು.

ಇಂಡಿಯನ್ ಕ್ರಿಶ್ಚಿಯನ್ ಸಂಘದ ಪ್ರತಿನಿಧಿಯು ಕ್ರಿಶ್ಚಿಯನ್ ಮತಕ್ಕೆ ಸೇರಿರುವ ಹಿಂದೂಜನಗಳಿಗೆ, ಪಿತರಾರ್ಜಿತ ಆಸ್ತಿಗಳ ಹಕ್ಕುಬಾಧ್ಯತೆಗಳ ವಿಚಾರದಲ್ಲಿ ಉಂಟಾಗಿರುವ ಕೆಲವು ಅನಾನುಕೂಲತೆಗಳ ವಿಷಯವಾಗಿ ಬರೆದುಕೊಂಡಿರುತ್ತಾರೆ. 1911 ರಲ್ಲಿ ಇಂತಹ ಅನಾನುಕೂಲಗಳ ನಿವೃತ್ತಿಗಾಗಿ ಗೌರ್ನಮೆಂಟಿನವರು ನ್ಯಾಯವಿಧಾಯಕ ಸಭೆಯಮುಂದೆ ಒಂದು ಬಿಲ್ಲನ್ನ ತಂದರೂ, ಇದನ್ನ ಚರ್ಚಿಸಿ ಅನುಷ್ಠಾನಕ್ಕೆ ಬರುವಂತೆ ಮಾಡಲು ಕೌನ್ಸಿಲ್ ಸಭೆಯವರು ಬಿಲ್ಲನ್ನ ಅಂಗೀಕರಿಸಲ್ಲಿಲ್ಲ. ಇಂತಹ ವಿಷಯಗಳಲ್ಲಿ ಜನರ ಅಭಿಪ್ರಾಯಕ್ಕೆ ವಿರೋಧವಾಗಿ ಗೌರ್ನಮೆಂಟಿನವರು ವಿಧಿನಿಬಂಧನೆಗಳನ್ನು ಮಾಡುವದಕ್ಕಾಗುವದಿಲ್ಲ. ಕೆಲವು ವರ್ಷಗಳು ಕಳೆದ ತರುವಾಯ ಜನರ ಅಭಿಪ್ರಾಯಗಳು ಕೂಡ ಬದಲಾವಣೆ ಹೊಂದುವುವು. ಈ ವಿಷಯವು ಮತ್ತೊಮ್ಮೆ ಹೊಸದಾಗಿ ಪ್ರಜಾಪ್ರತಿನಿಧಿಸಭೆಯಲ್ಲೂ ಮತ್ತು ನ್ಯಾಯವಿಧಾಯಕ ಸಭೆಯಲ್ಲೂ ಪರಿಶೀಲನೆಯಾಗುವುದರಲ್ಲಿ ಗೌರ್ನಮೆಂಟಿನವರ ಆಕ್ಷೇಪಣೆ ಏನೂ ಇರುವುದಿಲ್ಲ.

ಮಹಮ್ಮದೀಯ ಜನಸಮುದಾಯದ ಪ್ರತಿನಿಧಿಗಳು ಒಂದೆರಡು ಸ್ಥಳಗಳಲ್ಲಿ ಹಿಂದೂಜನರಿಗೂ ಮುಸಲ್ಮಾನರಿಗೂ ಉಂಟಾಗಿದ್ದ ಅಸಮಾಧಾನಗಳನ್ನು ಕೆಲವರು ಉತ್ಪ್ರೇಕ್ಷಿಸಿರುವ ವಿಚಾರದಲ್ಲೂ ಮತ್ತು ಜವಾಬ್ದಾರಿಯಿಲ್ಲದ (ಅಂಕೆ ಇಲ್ಲದಿರುವ) ಕೆಲವರು ಇವರನ್ನು ರಾಜದ್ರೋಹಿಗಳೆಂದೂ, ಪಿತೂರಿಕಾರರೆಂದೂ ದೂರಿರುವ ವಿಚಾರದಲ್ಲೂ ತಮ್ಮ ವಿಜ್ಞಾಪನಾಪತ್ರಿಕೆಗಳಲ್ಲಿ ನಮೂದಿಸಿರುವರು. ಇತರ ಪ್ರಜೆಗಳಂತೆಯೇ ಮಹಮ್ಮದೀಯ ಪ್ರಜೆಗಳೆಲ್ಲರೂ ರಾಜಭಕ್ತಿ ವಿಶ್ವಾಸವುಳ್ಳವರಾಗಿಯೂ, ನ್ಯಾಯಬದ್ಧರಾಗಿಯೂ ಇರುವರೆಂದು ನಾನು ಈ ಸಂದರ್ಭದಲ್ಲಿ ದೃಢವಾಗಿ ಹೇಳುತ್ತೇನಲ್ಲದೆ, ಅಲ್ಲಲ್ಲಿ ಸ್ಥಳಿಕ ವಿಚಾರವಾದ ಕೆಲವು ವಿಷಯಗಳಲ್ಲುಂಟಾಗಿರುವ ಸ್ವಲ್ಪವಾದ ಭಿನ್ನಾಭಿಪ್ರಾಯಗಳನ್ನು ದೊಡ್ಡದು ಮಾಡಿಕೊಂಡು ಮುಸಲ್ಮಾನರಲ್ಲೂ ಹಿಂದೂಜನರಲ್ಲೂ ಮೊದಲಿನಿಂದಲೂ ಇರುವ ಸೌಹಾರ್ದಕ್ಕೆ ಕುಂದಕವುಂಟಾಗದಂತೆ ನಡೆದುಕೊಳ್ಳುವರೆಂದು ನಂಬುತ್ತೇನೆ.

ಮಹನೀಯರೆ, ಇಂತಹ ಸಮಯದಲ್ಲಿ ಈ ವಿಜ್ಞಾಪನಾ ಪತ್ರಿಕೆಗಳಲ್ಲಿ ಬಿನ್ನಯಿಸಿಕೊಂಡಿರುವ ಪ್ರತಿಯೊಂದು ವಿಷಯವನ್ನು ಕುರಿತು ಪ್ರಸ್ತಾಪಿಸಲಾಗುವುದಿಲ್ಲ. ವಿರಾಮವಿದ್ದಷ್ಟು ಮಟ್ಟಿಗೆ ಕೆಲವು ವಿಷಯಗಳ ವಿಚಾರದಲ್ಲಿ ಮಾತ್ರ ಈಗ ಹೇಳಲ್ಪಟ್ಟಿರುವುದು. ಉಳಿದ ವಿಷಯಗಳ ವಿಚಾರದಲ್ಲಿ ಗೌರ್ನಮೆಂಟಿನವರು ಸಾವಧಾನವಾಗಿ ಪರ್ಯಾಲೋಚಿಸುವರೆಂದು ದೃಢವಾಗಿ ಹೇಳಬಲ್ಲೆನು.

ಇದನ್ನು ಮುಗಿಸುವದಕ್ಕೆ ಮುಂಚೆ ನನ್ನ ಮತ್ತು ಮಿ|| ಬಾನರ್ಜಿಯವರ ಪರವಾಗಿ ನೀವು ನಮ್ಮಗಳಿಗೆ ಮಾಡಿರುವ ಧನ್ಯವಾದಗಳಿಗಾಗಿ ಅಭಿವಂದಿಸುತ್ತೇನೆ.

ನಿಮ್ಮಗಳ ವಿಜ್ಞಾಪನ ಪತ್ರಿಕೆಗಳಲ್ಲಿ ಶ್ರೀಮನ್ಮಹಾರಾಜರವರಲ್ಲಿ ನಿಮಗಿರುವ ರಾಜಭಕ್ತಿಯನ್ನು ತೋರ್ಪಡಿಸಿರುವುದನ್ನು ಮಹಾಸ್ವಾಮಿಯವರಲ್ಲಿ ನಾನು ಅರಿಕೆಮಾಡುತ್ತೇನೆ.

ವಿದ್ಯಾರ್ಥಿಗಳ ಎರಡು ಕೂಟಗಳು.

ಹಿಂದುಳಿದ ಜನವರ್ಗಗಳಿಗೆ ಸೇರಿದ ೨ ಪಂಗಡಗಳ ವಿದ್ಯಾರ್ಥಿಗಳು ತಮ್ಮಗಳ ಅಭ್ಯುದಯಾರ್ಥವಾಗಿ ೨ ಸಮ್ಮೇಳನಗಳನ್ನು ಕಳೆದವಾರ ರಾಜಧಾನಿಯಲ್ಲಿ ನಡೆಯಿಸಿದರು. ೧ ಕುಂಚಿಟಿಗರದಾಗಿಯೂ ೧ ಒಕ್ಕಲಿಗರದಾಗಿಯೂ ಇದ್ದುವು. ಮೊದಲನೆಯದು ಧರ್ಮಪ್ರಕಾಶ ಡಿ. ಬನುಮಯ್ಯನವರ ಪಾಠಶಾಲಾ ಭವನದಲ್ಲಿ ವಿದ್ಯಾಭ್ಯಾಸ ಶಾಖಾಧ್ಯಕ್ಷರಾದ ಮ|| ಸಿ.ಎಸ್. ಬಾಲಸುಂದರಂ ಅಯ್ಯರ್ ಬಿ.ಎ., ಯವರ ಅಧ್ಯಕ್ಷತೆಯಿಂದಲೂ, ೨ನೆಯದು ಟವುನ್ ಹಾಲಿನಲ್ಲಿ ಚೀಫ್ ಕೋರ್ಟು ನ್ಯಾಯಮೂರ್ತಿಗಳಾದ ಮ|| ಬಿ. ನಾಗಪ್ಪ ಬ್ಯಾ|| ಅಟ್‌ಲಾಯವರ ಅಧ್ಯಕ್ಷತೆಯಿಂದಲೂ ನಡೆದುವು. ೨ ಸಭೆಗಳಿಗೂ ಸ್ಥಳದ ಪ್ರಮುಖರೂ ಪ್ರಜಾಪ್ರತಿನಿಧಿಸಭಾ ಸಭಿಕರೂ ಸರ್ಕಾರದ ಉದ್ಯೋಗಸ್ಥರುಗಳೂ ಆಹ್ವಾನಮಾಡಲ್ಪಟ್ಟಿದ್ದರು. ಪದ್ಧತಿಯಂತೆ ಸಭಾರಂಭದಲ್ಲಿ ದೇವತಾಸ್ತುತಿ ಮತ್ತು ಸ್ವಾಗತಪದ್ಯಗಳ ಪಠನೆಯೊಡನೆ ಕಾರ್ಯಾರಂಭವಾಯಿತು. ಕುಂಚಿಟಿಗರ ವಿದ್ಯಾರ್ಥಿಗಳ ಹಿತಾರ್ಥವಾಗಿ ಒಂದು ಸಂಘವನ್ನು ಸ್ಥಾಪಿಸುವುದಲ್ಲದೆ ಮೈಸೂರು, ಬೆಂಗಳೂರು, ಸಿರಾ ಈ ಸ್ಥಳಗಳಲ್ಲಿ ಅವರುಗಳ ವಿದ್ಯಾರ್ಥಿಗಳಿಗೆ ಒಂದೊಂದು ಹಾಸ್ಟಲುಗಳನ್ನು ಏರ್ಪಡಿಸುವುದೂ, ತಮ್ಮ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಒಂದು ಫಂಡನ್ನು ಸ್ಥಾಪಿಸುವುದೂ ಇವರುಗಳ ಉದ್ದೇಶವಾಗಿರುವುದು. ಈ ಮಹಾಕಾರ್ಯ ಸಮಾಲೋಚನೆಗಾಗಿ ದೇಶದ ಎಲ್ಲಭಾಗಗಳಲ್ಲಿರುವ ತಮ್ಮ ಜನರನ್ನೂ ಕರೆದು ಬರುವ ನವಂಬರ್ ತಿಂಗಳಲ್ಲಿ ಬೆಂಗಳೂರು ಗವೀಪುರದೊಳಗೆ ಒಂದು ಸಭೆಯನ್ನು ಕೂಡಿಸಬೇಕೆಂಬುದು ಅವರ ಸಂಕಲ್ಪವಾಗಿರುವುದು. ಇದರ ಆವಶ್ಯಕತೆಯನ್ನೂ ತಮ್ಮ ಜನರ ಏಳ್ಗೆಯನ್ನೂ ಕುರಿತು ಬೆಂಗಳೂರಿನ ಮ|| ಹನುಮಂತಪ್ಪನವರು ತುಂಬಾ ಶ್ರದ್ಧಾಭಿಮಾನಗಳನ್ನು ವ್ಯಕ್ತಗೊಳಿಸಿರುವರು. ಸಭಾಕಾಲಕ್ಕೆ ಅಲ್ಲಿಗೆ ಬರುವವರಿಗೆ ಭೋಜನಾದ್ಯುಪಚಾರಗಳಿಗೆಲ್ಲಾ ಅವರು ತಕ್ಕೇರ್ಪಾಟನ್ನು ಮಾಡಿರುವುದಾಗಿಯೂ ಕೂಡ ತಿಳಿಯಿಸಿರುವರು. ಇದು ಸಂತೋಷಕರವಾದ ವಿಷಯ. ರಾಜಧಾನಿಯಲ್ಲಿ ಪ್ರಸಿದ್ಧರಾದ ಶ್ರೀಮಂತರ ಶ್ರೇಣಿಯಲ್ಲಿ ಕುಂಚಿಟಿಗ ಜನವರ್ಗದವರೂ ಗಣ್ಯರಾಗಿ ಬಂದವರು. ಲಕ್ಷಾಂತರವನ್ನು ಸಂಪಾದಿಸಿ ಲಕ್ಷಾಂತರವನ್ನು ಮದುವೆ ಮೊದಲಾದ ಆಡಂಬರಗಳಿಗೂ ಕ್ಷಣಿಕಫಲಪ್ರದಗಳಾದ ಇತರ ದಾನಧರ್ಮಗಳಿಗೂ ವಿಷಯಲೋಲುಪ್ತಿಗೂ ವಿನಿಯೋಗಿಸಿದವರೂ ಈಗ್ಗೂ ವಿನಿಯೋಗಿಸುತ್ತಲಿರುವವರೂ ಅವರಲ್ಲಿ ಅನೇಕರುಂಟು. ಆದರೆ ಅವರುಗಳ ವೆಚ್ಚದಲ್ಲಿ ಹತ್ತನೆ ಒಂದುಭಾಗವನ್ನು ವೆಚ್ಚಮಾಡದಿದ್ದರೂ ಮ|| ಬನುಮಯ್ಯನವರ ಹೆಸರು ಚಿರಸ್ಮರಣೀಯವಾಗಿ ಉಳಿದಂತೆ ಮತ್ತಾರ ಹೆಸರೂ ಉಳಿಯಲಿಲ್ಲ. ಏತಕ್ಕೆಂದರೆ ಕಾಲೋಚಿತವಾದ ಸದ್ಧರ್ಮವೂ ದಾನಪಾತ್ರತೆಯೂ ಯಾವುದೆಂಬುದನ್ನು ಅರಿತು ಅದಕ್ಕೆ ತಮ್ಮ ಕಷ್ಟಾರ್ಜಿತವನ್ನು ಇವರು ವಿನಿಯೋಗಿಸಿದರು. ಪಾತ್ರಾಪಾತ್ರವನ್ನರಿತು ಮಾಡಿದ ದಾನವು ಮುತ್ತಿನಚಿಪ್ಪಿನಲ್ಲಿ ಬಿದ್ದ ಸ್ವಾತಿಯ ಹನಿಗಳಂತೆ ಹೀಗೆ ಫಲಪ್ರದವಾಗುವುದು. ಮ|| ಬನುಮಯ್ಯನವರು ಪಾಠಶಾಲೆಯನ್ನು ಸ್ಥಾಪಿಸಿದೀಚೆಗೆ ಅವರ ಜನವರ್ಗದಲ್ಲಿ ವಿದ್ಯಾಸಕ್ತಿಯು ಹೆಚ್ಚಲು ಪ್ರೋತ್ಸಾಹವಾಯಿತು. ಅವರು ಈ ಶಾಲೆಗೆ ಅಂಗವಾಗಿರುವಂತೆ ಒಂದು ವಿದ್ಯಾರ್ಥಿಭವನವನ್ನು ಕಟ್ಟಿಸಬೇಕೆಂಬ ಉದ್ದೇಶವನ್ನು ಸಹ ಹೊಂದಿರುವರು. ಅದು ಕೂಡ ಬೇಗನೆ ಫಲಿಸಿ ಆ ಜನವರ್ಗದಲ್ಲಿ ವಿದ್ಯಾವಿವೇಕಗಳು ಅಭಿವೃದ್ಧಿಗೊಳ್ಳಲು ಅವಕಾಶವಾಗಲೆಂದೂ ಮ|| ಬನುಮಯ್ಯನವರ ಉದಾಹರಣೆಯನ್ನು ಮುಂದಿಟ್ಟು ಧನಿಕರೂ ಸಾಮಾನ್ಯರೂ ಆದ ಅವರ ಜನವರ್ಗಗಳವರೆಲ್ಲಾ ತಮ್ಮವರ ವಿದ್ಯಾಭ್ಯಾಸಕ್ಕೆ ಸಾಧ್ಯವಾದಷ್ಟು ಸಾಹಾಯ್ಯಗಳನ್ನೆಲ್ಲಾ ಮಾಡಿ, ತಮ್ಮದನ್ನೂ ಒಂದು ಗಣ್ಯವಾದ ಪ್ರಜಾವರ್ಗವನ್ನಾಗಿ ಕಾಣುವಂತೆ ಮಾಡಿಕೊಳ್ಳಲು ಬದ್ಧಸಂಕಲ್ಪರಾಗಲೆಂದೂ ಕೋರುವೆವು.

ಈ ಕುಂಚಟಿಗ ವಿದ್ಯಾರ್ಥಿಗಳ ಸಭೆಯಲ್ಲಿ ಕಾಲೋಚಿತವಾದ ಕೆಲವು ಭಾಷಣಗಳು ನಡೆದುವು. ಅವುಗಳಲ್ಲಿ ಮ|| ಎಚ್. ಕೆ. ಮಲ್ಲಪ್ಪನವರೂ, ಮ|| ಕೆ. ಎಚ್. ರಾಮಯ್ಯನವರೂ ಮಾಡಿದ ಉಪನ್ಯಾಸಗಳು ಯುಕ್ತಿಯುಕ್ತವಾಗಿಯೂ ಪ್ರೋತ್ಸಾಹಜನಕಗಳಾಗಿಯೂ ಇದ್ದುವು. ಸರ್ವಜನವರ್ಗಗಳಲ್ಲೂ ಇರುವ ಚೈತನ್ಯವೆಲ್ಲಾ ಭಗವದಂಶವೇ ಆಗಿರುತ್ತ ಅವರವರಿಗೆ ಉಂಟುಮಾಡಿಕೊಟ್ಟ ಸಂಸ್ಕಾರಬಲಕ್ಕೆ ಅನುಗುಣವಾಗಿ ಅವರವರ ಶಕ್ತಿಸಾಮರ್ಥ್ಯಗಳು ಫಲಿಸುವುವೆಂಬುದನ್ನು, ವಿದ್ಯಾಭ್ಯಾಸ ರೂಪವಾದ ಸಂಸ್ಕಾರವು ಯಾರಿಗೆ ಉಂಟಾಗುವುದಿಲ್ಲವೋ ಅಂಥವರು ಯಾವ ಉದ್ಯೋಗವನ್ನವಲಂಬಿಸಿದ್ದರೂ ಅವರುಗಳ ಸ್ಥಿತಿಯು ಪಶುಸಮಾನವಾಗಿದ್ದೀತೇ ಹೊರತು ತೇಜೋಭೂಯಿಷ್ಠವಾಗುವುದಿಲ್ಲವೆಂಬುದನ್ನೂ ಉದಾಹರಣಪೂರ್ವಕವಾಗಿ ಮ|| ಮಲ್ಲಪ್ಪನವರೂ, ಪಾಶ್ಚಾತ್ಯದೇಶದ ಜನರ ಚಟುವಟಿಕೆಯಿಂದ ಆ ದೇಶದ ಸಂಪದಭಿವೃದ್ಧಿಯಾಗುವುದಕ್ಕೂ ನಮ್ಮ ದೇಶದ ಜನರ ಸೋಂಬೇರಿತನವೇ ಇಲ್ಲಿಯ ಬಡತನಕ್ಕೂ ಮುಖ್ಯಾಧಾರವೆಂಬುದನ್ನು ಉದಾಹರಣ ಪೂರ್ವಕವಾಗಿ ಮ|| ರಾಮಯ್ಯನವರೂ ಮಾಡಿದ ಉಪನ್ಯಾಸಗಳು ಸಭಿಕರನ್ನು ತುಂಬಾ ಸಂತೋಷಗೊಳಿಸಿದುವು. ಕಡೆಗೆ ಸಭಾಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಪ್ರತಿಯೊಂದು ಜನವರ್ಗವೂ ತಂತಮ್ಮವರ ವಿದ್ಯಾಭಿವೃದ್ಧಿಗೆ ತಕ್ಕ ಪ್ರಯತ್ನಗಳನ್ನು ಮಾಡಿ ಮುಂದಕ್ಕೆ ಬಂದರೆ ದೇಶವೇ ಅಭ್ಯುದಯಗೊಳ್ಳುವುದೆಂದು ಅಪ್ಪಣೆ ಕೊಡಿಸಿದುದಲ್ಲದೆ ಈಗ ಆರಂಭಿಸಿರುವ ಕುಂಚಿಟಿಗರ ಉದ್ದೇಶವು ಸಫಲವಾಗಲೆಂದು ಕೋರಿದರು. ಸಭಿಕರಿಗೆಲ್ಲಾ ಹಾರಗುಚ್ಛಾದಿಗಳು ಅರ್ಪಿಸಲ್ಪಟ್ಟು ಸಭಾಕಾರ್ಯವು ಮುಗಿದಿತು.

ಟವುನ್ ಹಾಲಿನಲ್ಲಿ ನೆರೆದಿದ್ದ ಸಭೆಯ ಉದ್ದೇಶವು ಮೈಸೂರು ಬೆಂಗಳೂರು ಚನ್ನಪಟ್ಟಣಗಳಲ್ಲಿ ಸ್ಥಾಪಿತವಾಗಿರುವ ಒಕ್ಕಲಿಗ ವಿದ್ಯಾರ್ಥಿಗಳ ಸಂಘಗಳನ್ನೆಲ್ಲಾ ಒಟ್ಟುಗೂಡಿಸಿ, ಎಲ್ಲವುಗಳ ಉದ್ದೇಶವೂ ಏಕಸೂತ್ರವಾಗಿ ನಡೆಯುವಂತೆ ಮಾಡುವುದಕ್ಕಾಗಿ ಒಂದು ಸ್ಟಾಂಡಿಂಗ್ ಕಮಿಟಿಯನ್ನು ಸ್ಥಾಪಿಸುವುದೂ, ಮತ್ತು ಈ ಸಂಘಗಳ ಕಾರ್ಯಸಾಫಲ್ಯಕ್ಕಾಗಿ ಒಂದು ಧನನಿಧಿಯನ್ನು ಸ್ಥಾಪಿಸುವುದೂ ಆಗಿದ್ದಿತು. ಸಭಾಧಕ್ಷರೂ ಪ್ರೊ|| ಎ. ಆರ್. ವಾಡಿಯಾರವರೂ, ಮ|| ಕೆ. ಎಚ್. ರಾಮಯ್ಯನವರೂ, ಮ|| ಬಿ. ಎನ್. ವಿಜಯದೇವರವರೂ, ಆರ್ಯಸಮಾಜದ ಶ್ರೀಯುತ ಗೋಪಾಲದತ್ತಶಾಸ್ತ್ರಿಯವರೂ ಸಹ ವಿದ್ಯಾರ್ಥಿಗಳ ಕರ್ತವ್ಯವನ್ನು ಕುರಿತು ಹಿತೋಪದೇಶಗಳನ್ನು ತಂತಮ್ಮ ಭಾಷಣಗಳಲ್ಲಿ ಮಾಡಿದರು, ಮ|| ಕೆ. ಸಂಜೀವಕಾಮತ್‌ರವರು ವಿದ್ಯಾರ್ಥಿಗಳು ಬಾಲಘಟರಾಗಿ ಏರ್ಪಡುವುದರಲ್ಲಿರುವ ಪ್ರಯೋಜನಗಳನ್ನೂ ಆ ಬಾಲಚಮೂವಿನ ಉದ್ದೇಶಗಳನ್ನೂ ಉದಾಹರಣ ಸಮೇತವಾಗಿ ಉಪನ್ಯಾಸಮಾಡಿದರು. ಕಡೆಯಲ್ಲಿ ವಿದ್ಯಾರ್ಥಿ ಸಂಘ ಸಹಾಯಕ್ಕಾಗಿ ಚಂದಾಧನವನ್ನು ಕೂಡಿಸುವುದಕ್ಕೆ ಪ್ರಯತ್ನವಾಗಲಾಗಿ ಶ್ರೀರಂಗಪಟ್ಟಣದ ಮ|| ತಮ್ಮಯ್ಯನವರು ೧೦೦ ರೂ. ಗಳನ್ನು ಆಗಲೇ ಕೊಟ್ಟರು. ಕಾಂತರಾಜಪುರದ ಮ|| ನಂಜಪ್ಪನವರು ೨೫೦ ರೂ. ಗಳನ್ನುವಾಗ್ದಾನಮಾಡಿ ೫೦ ರೂ. ಗಳನ್ನು ಆಗಲೇ ಸಲ್ಲಿಸಿದರು. ಒಬ್ಬ ಬ್ರಾಹ್ಮಣ ಸ್ಕೂಲ್ ಮಾಸ್ಟರು ೨೫ ರೂ. ವಾಗ್ದಾನಮಾಡಿದ್ದು ಮೊದಲನೆ ಕಂತಾಗಿ ೫ ರೂ. ಗಳನ್ನು ಸಲ್ಲಿಸಿದರು. ಅಲ್ಲಿಗೆ ಹೊತ್ತಾದುದರಿಂದ ಸಭಾಕಾರ್ಯವು ನಿಲ್ಲಿಸಲ್ಪಟ್ಟು ಮ|| ವಿಜಯದೇವರರವರ ಅಧ್ಯಕ್ಷತೆಯಲ್ಲಿ ಮರುದಿನ ಬೆಳಗ್ಗೆ ಸಭಾಕಾರ್ಯವು ಜರುಗಿ ಚಂದಾಪಟ್ಟಿಯೂ, ಕೆಲವು ವಿದ್ಯಾರ್ಥಿಗಳ ಭಾಷಣವೂ ನಿರ್ಧಾರಗಳೂ ಮಾಡಲ್ಪಟ್ಟುವು.

ಈ ಮೇಲೆ ಕಂಡಂತೆ ನಡೆದ ೨ ಸಭೆಗಳಲ್ಲೂ ೨ ಮುಖ್ಯ ವಿಷಯಗಳು ಗಮನೀಯವಾಗಿದ್ದುವು. ೧ ನೆಯ ದೇನೆಂದರೆ—ಮ|| ಕೆ. ಎಚ್ ರಾಮಯ್ಯನವರು ತಮ್ಮ ಉಪನ್ಯಾಸದಲ್ಲಿ ವಿದ್ಯಾಭ್ಯಾಸದ ಮೆಮೋರಾಂಡಂ ಸಂಗತಿಯನ್ನು ಪ್ರಸಂಗವಶಾತ್ ಮಾತನಾಡಲಾರಂಭಿಸಿ, ತಮಗೆ ಪರಮ ಸ್ನೇಹಿತರಾಗಿದ್ದ ಮ|| ರಾಮಲಿಂಗರಡ್ಡಿಯವರು ಈ ದೇಶದ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟುಬಿಟ್ಟು ಹೋಗುವ ಕಾಲದಲ್ಲಿ "ನೀವಂತೂ ಹೋಗುತ್ತೀರಿ. ನಿಮ್ಮ ಕಾಲದಲ್ಲಿ ಉದಯಗೊಂಡ ವಿದ್ಯಾಭ್ಯಾಸದ ಮೆಮೋರಾಂಡಮ್ಮಿನ ಪರ್ಯವಸಾನವೇನು ?" ಎಂದು ತಾವು ಕೇಳಲಾಗಿ, ನಾನು ಉದ್ಯೋಗವನ್ನು ಬಿಟ್ಟು ಹೋದರೂ ಅದನ್ನು ಫಲಪ್ರದವಾಗಿ ಮಾಡುವುದಕ್ಕೆ ತಕ್ಕ ಅರ್ಹತೆಯೂ ಅಭಿಮಾವವೂ ಇರತಕ್ಕವರು ಮ|| ಬಾಲಸುಂದರಂ ಅಯ್ಯರೇ ಸರಿ ಎಂದು ರಡ್ಡಿಯವರು ಅಪ್ಪಣೆ ಕೊಡಿಸಿದ್ದರೆಂತಲೂ, ಮುಖಸ್ತುತಿಗಾಗಿ ಇದನ್ನು ತಾವೇನೂ ಹೇಳುವುದಿಲ್ಲವೆಂತಲೂ, ಅಂತರಂಗವಾಗಿ ನಡೆದಿದ್ದ ಸಂಗತಿಯನ್ನು ಪ್ರಸ್ತಾಪವಶಾತ್ ಈಗ ಬಹಿರಂಗಪಡಿಸಿದುದಕ್ಕಾಗಿ ಕ್ಷಮಿಸಬೇಕೆಂತಲೂ, ಅದರಂತೆ ಸರ್ಕಾರದವರೂ ಮ|| ಬಾಲಸುಂದರಂ ಅಯ್ಯರನ್ನೇ ಅವರ ಸ್ಥಾನಕ್ಕೆ ನಿಯಮಿಸಿದುದು ನಮ್ಮ ಪುಣ್ಯೋದಯವೆಂತಲೂ, ಇವರ ಕಾಲದಲ್ಲಿ ಅದು ಸಂಪೂರ್ಣ ಸಫಲವಾಗುವುದರಲ್ಲಿ ಸಂಶಯವಿಲ್ಲವೆಂತಲೂ ಅದಕ್ಕೆ ಪ್ರಜೆಗಳೆಲ್ಲಾ ಒತ್ತಾಸೆಯಾಗಿರಬೇಕೆಂತಲೂ ಹೇಳಿದರು. ಇದನ್ನು ಕೇಳಿ ಸಭಿಕರೆಲ್ಲಾ ಆನಂದಪಟ್ಟರು. ಒಕ್ಕಲಿಗರ ವಿದ್ಯಾರ್ಥಿ ಸಭೆಯಲ್ಲೂ ಸಹ ಸಭಾಧ್ಯಕ್ಷರು ಮ|| ಬಾಲಸುಂದರಂ ಅಯ್ಯರವರು ಮೆಟ್ರಿಕ್ಯುಲೇಷನ್ ಮೊದಲುಗೊಂಡು ಬಿ. ಎ. ಪರೀಕ್ಷೆಯವರೆಗೂ ಪ್ರೆಸಿಡೆನ್ಸಿಗೇ ಮೊದಲನೆಯವರಾಗಿ ಉತ್ತೀರ್ಣರಾಗಿ ಬಂದವರೆಂಬುದಾಗಿ ಅವರ ಮೇಧಾವಿತೆ, ವಿದ್ಯಾಪ್ರಸಾರಾಭಿಮಾನ ಮೊದಲಾದುವುಗಳನ್ನು ಕೊಂಡಾಡಿ, ಅವರ ಕಾಲದಲ್ಲಿ ವಿದ್ಯಾಭ್ಯಾಸದ ಮೆಮೋರಾಂಡಮ್ಮು ಸಂಪೂರ್ಣವಾಗಿ ಫಲೋನ್ಮುಖವಾಗದಿರಲಾರದೆಂದೂ, ಅದಕ್ಕೆ ದ್ರವ್ಯಸಹಾಯವು ಅತ್ಯವಶ್ಯಕವಾದುದರಿಂದ ದೇಶಪ್ರಜೆಗಳೆಲ್ಲಾ ವಿದ್ಯಾಭ್ಯಾಸದ ತೆರಿಗೆಯನ್ನಾದರೂ ಕೊಟ್ಟು ಸಹಾಯಮಾಡಲು ಹಿಂದೆಗೆಯಬಾರದೆಂದೂ ಹಾರೈಸಿದರು. ಮ|| ರಾಮಯ್ಯನವರು ಕೂಡ ಮ|| ಅಯ್ಯರವರು ಇದರ ಸಾಫಲ್ಯಕ್ಕೆ ಮನಸ್ಸನ್ನಿತ್ತು ಕೆಲಸಮಾಡಲು ಅರ್ಧಭಾರವನ್ನು ಅವರು ಹೊತ್ತರೆ ಉಳಿದರ್ಧಭಾರವನ್ನು ಪ್ರಜೆಗಳು ಹೊರಲು ಸಿದ್ಧರಾಗಿರುವರೆಂದು ಆಡಿ ತೋರಿಸಿದರು. ಆದರೆ ಮ|| ಬಾಲಸುಂದರಂ ಅಯ್ಯರವರು ಈ ಸಭೆಯಲ್ಲೂ ಸಾನುಭೂತಿಪರವಾದ ಸಾಮಾನ್ಯ ಭಾಷಣವನ್ನು ಮಾಡಿದರೇ ಹೊರತು ಮೆಮೊರಾಂಡಮ್ಮಿನ ಸಂಬಂಧವಾಗಿ ಒಂದು ಚಕಾರವನ್ನು ಕೂಡ ಉಚ್ಚರಿಸಲಿಲ್ಲ. ಅವರು ವಿದ್ಯಾಶಾಖಾಧ್ಯಕ್ಷತೆಯನ್ನು ವಹಿಸಿದ ಮೇಲೆ ಮಾಡಿದ ಭಾಷಣಗಳಲ್ಲಿ ಇವೇ ಅವರ ಪ್ರಥಮ ಭಾಷಣಗಳಾಗಿದ್ದುವು. ಮ|| ರಾಮಯ್ಯನವರು ಆಡಿದ್ದ ಮಾತನ್ನೆಲ್ಲಾ ಕೇಳಿ ಮ|| ಅಯ್ಯರವರ ಬಾಯಿಂದ ಯಾವ ರೂಪವಾದ ಆಶ್ವಾಸನವು ಬರುವುದೋ ಎಂದು ಕುತೂಹಲದಿಂದ ನಿರೀಕ್ಷಿಸುತ್ತಲಿದ್ದವರಿಗೆಲ್ಲಾ ಆಶಾಭಂಗವಾಯಿತು, ಆದರೆ ಇಷ್ಟರಿಂದಲೇ ಪರಿಣಾಮವು ಹೀಗೆಯೇ ಸರಿಯೆಂದು ನಿರ್ಧರಿಸುವುದು ಸರಿಯಾದುದಲ್ಲ, ಮ|| ಅಯ್ಯರು ಆ ಪದವಿಗೆ ಬಂದು ಸ್ವಲ್ಪ ದಿನಗಳು ಮಾತ್ರವೇ ಆಗಿರುವುವು. ಆದರಿಂದ ಯಾವ ಭವಿಷ್ಯದಾಶ್ವಾಸನವನ್ನೂ ಅವರು ಕೊಡಲು ಅಸಮರ್ಥರಾಗಿರಬಹುದು. ದೇಶದ ಸಕಲಪ್ರಜೆಗಳ ವಿದ್ಯಾಭ್ಯುದಯಕ್ಕೂ ಸಾಧಕವಾಗಿ ಶ್ರೀಮನ್ಮಹಾರಾಜರಿಂದ ಅನುಮೋದಿತವಾಗಿರುವ ಆ ಮೆಮೋರಾಂಡಮ್ಮನ್ನು ಅನುಷ್ಠಾನಕ್ಕೆ ತರಿಸುವುದೇ ಆ ಪದವಿಗೆ ಬಂದವರ ಅವಶ್ಯಕರ್ತವ್ಯಗಳಲ್ಲಿ ಮೊದಲನೆಯದಾಗಿರುತ್ತದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಅದನ್ನು ಯಾವ ವಿದ್ಯಾಶಾಖಾಧಿಕಾರಿಯು ಸಫಲಗೊಳಿಸುವರೋ ಅವರು ಮ|| ರಡ್ಡಿಯವರನ್ನೂ ಕೂಡ ಮೀರಿಸಿದ ಯಶಸ್ಸನ್ನೂ ಪ್ರಜಾಪ್ರೇಮವನ್ನೂ ಪಡೆದುಕೊಳ್ಳುವುದು ಖಂಡಿತ. ಮಗುವನ್ನು ಹೆತ್ತವರಿಗಿಂತಲೂ ಅದನ್ನು ಪರಿಪಾಲಿಸುವವರ ಶ್ರಮಸಾಹಸಗಳೇ ಮಹತ್ತರವೆಂಬುದನ್ನು ಲೋಕವೇ ಬಲ್ಲುದು. "ಸ್ವದತ್ತಾದ್ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ" ಎಂಬ ಅನಾದಿನೀತಿಯನ್ನು ಮ|| ಅಯ್ಯರವರೂ ಕೂಡ ಅರಿಯದೆ ಇದ್ದವರಲ್ಲ. ಮತ್ತು ಶ್ರೀಮನ್ಮಹಾರಾಜ ಸರ್ಕಾರದವರೂ ಕೂಡ ಇವರನ್ನು ಆ ಶಾಖಾಧ್ಯಕ್ಷಪದವಿಗೆ ತರಬೇಕಾಗಿದ್ದರೆ ಆ ಮೆಮೋರಾಂಡಮ್ಮನ್ನು ಚರಿತಾರ್ಥಗೊಳಿಸಲಿಕ್ಕೆ ತಕ್ಕ ಅರ್ಹತೆಯೂ ಅಭಿಮಾನವೂ ಇವರಲ್ಲಿದೆಯೆಂದು ನಂಬಿಯೇ ನಿಯಮಿಸಿರುತ್ತಾರೆ. ಅವರ ನಿರೀಕ್ಷಣೆಯನ್ನು ಇವರು ಎಂದಿಗೂ ವಿಫಲ ಮಾಡಿಕೊಳ್ಳಲಾರರು. ಆದುಕಾರಣ ಇವರ ಮುಂದಣ ಕಾರ್ಯಧೋರಣೆಯ ವಿಷಯದಲ್ಲಿ ಈಗಾಗಲೇ ಸಂಶಯಗೊಳ್ಳುವುದಕ್ಕೆ ಕಾರಣವೇನೂ ಇಲ್ಲವೆಂದು ನಮಗೆ ತೋರುವುದು. ಲೋಕದಲ್ಲಿ ಆಡಿ ಮಾಡದಿರುವ ಅಧಮರು, ಆಡಿ ಮಾಡುವ ಮಧ್ಯಮರು, ಆಡದೆ ಮಾಡುವ ಉತ್ತಮರು—ಎಂಬ ಮೂರುತೆರದ ಜನರಿರುವರು. ಅವರಲ್ಲಿ ಉತ್ತಮತರಗತಿಗೆ ಮ|| ಬಾಲಸುಂದರಂ ಅಯ್ಯರ್ರವರು ಸೇರಿದವರೆಂದು ನಂಬಿ ಅವರ ಭವಿಷ್ಯಚ್ಚರಿತವನ್ನು ನಿರೀಕ್ಷಿಸುತ್ತಿರುವೆವು.

೨ ನೆಯ ಮುಖ್ಯ ವಿಷಯವೇನೆಂದರೆ—ಒಕ್ಕಲಿಗರ ವಿದ್ಯಾರ್ಥಿಗಳ ಸಭೆಯಲ್ಲಿ ಮ|| ಬಿ. ನಾಗಪ್ಪನವರ ಅಧ್ಯಕ್ಷರಾಗಿ ಕುಳಿತು ವಿದ್ಯಾರ್ಥಿಗಳಿಗೆ ಮಾಡಿದ ಹಿತೋಪದೇಶದಲ್ಲಿ-ಸರ್ಕಾರದ ಉದ್ಯೋಗಗಳ ಮೋಹಕ್ಕೆಬಿದ್ದು ನೀವು ಅಂಥ ವಿದ್ಯಾಭ್ಯಾಸ ಮಾಡಬೇಡಿರೆಂದೂ, ನಾನು ಸ್ವತಂತ್ರ ವೃತ್ತಿಯಾದ ವಕೀಲತನದಲ್ಲೂ ಸರ್ಕಾರದ ಉದ್ಯೋಗದಲ್ಲೂ ಅನುಭವವುಳ್ಳವನಾಗಿರುವುದರಿಂದ ಎರಡರ ಕಷ್ಟಸುಖವನ್ನು ಬಲ್ಲೆನೆಂದೂ, ನೀನಿಮ್ಮ ಕುಲದ ಸ್ವತಂತ್ರವೃತ್ತಿಯಲ್ಲಿ ಮುಂದಕ್ಕೆ ಬರುವುದಕ್ಕಾಗಿ ಅಭ್ಯಾಸಮಾಡಬೇಕೆಂದೂ ಸಭಾ ಪರಿಸಮಾಪ್ತಿಯ ಕಾಲದಲ್ಲಿ ಮಾಡಿದ ಬೋಧೆಯು ನಮಗೆ ವಿಸ್ಮಯವನ್ನುಂಟುಮಾಡಿತು. ಇದು ಇವರ ಆತ್ಮಸಾಕ್ಷಿಯಾದ ಮಾತೆ? ಎಂದು ನಾವು ಕೇಳಬೇಕಾಗಿರುವುದು. ಹಾಗಿದ್ದಪಕ್ಷದಲ್ಲಿ ತಮ್ಮ ಆತ್ಮವು ಒಪ್ಪದಿರುವ ಸರ್ಕಾರಿ ಉದ್ಯೋಗಕ್ಕೆ ಇವರು ಇನ್ನೂ ಏತಕ್ಕೆ ರಾಜೀನಾಮೆ ಕೊಡಲಿಲ್ಲವೋ ತಿಳಿಯದು. ಮತ್ತೂ ತಮ್ಮ ಕುಮಾರರಾಗಿರುವ ವಿಜಯದೇವಯವರು ಸರ್ಕಾರಿ ಉದ್ಯೋಗಕವಚವನ್ನು ತೊಟ್ಟುಕೊಳ್ಳಬೇಕೆಂದು ಇಟ್ಟುಕೊಂಡಿರುವ ಕುತೂಹಲವನ್ನು ಇವರು ಎಂದಿಗೂ ನಡೆಯಗೊಡದೆ, ಅವರನ್ನು ಸ್ವತಂತ್ರವಾದ ವಕೀಲತನದಲ್ಲಿಯೋ ಅಥವಾ ಕುಲವೃತ್ತಿಯಾದ ಕೃಷಿವಾಣಿಜ್ಯಾದಿಗಳಲ್ಲೋ ಇರಿಸುವುದಕ್ಕೆ ಪ್ರಯತ್ನಿಸುವರೋ ಹೇಗೋ ನೋಡಬೇಕು. ತಾನು ನಡೆಯುವುದೊಂದು ಪರರಿಗೆ ಬೋಧಿಸುವುದೊಂದು ಆಗಿ ಯಾರಿರುವರೋ ಅವರು ಸಮಾಜದ ಮುಂದಾಳುಗಳಾಗಿರುವುದಕ್ಕೆ ಎಂದಿಗೂ ಅರ್ಹರಲ್ಲ. ನಡೆಗೆ ಇರುವ ತೂಕವು ನುಡಿಗಿರುವುದಿಲ್ಲ. ಮ|| ನಾಗಪ್ಪನವರು ಬರೆದುತಂದು ಮೊದಲು ಓದಿದ ಅವರ ಭಾಷಣದಲ್ಲಿ ಸರ್ವಸಮರ್ಪಕವಾದ ಅಭಿಪ್ರಾಯಗಳೇ ಇದ್ದುವು. ವಿದ್ಯಾರ್ಥಿಗಳು ಯಾವುದೊಂದು ರಾಜಕೀಯಪಕ್ಷಗಳಿಗೂ ಸ್ವದೇಶಿ ಚಳವಳಿಗೂ ಸೇರದೆ ಬ್ರಹ್ಮಚರ್ಯೆಯಲ್ಲಿ ತಮ್ಮ ಅಭ್ಯಾಸವೊಂದನ್ನೇ ಮುಖ್ಯಲಕ್ಷ್ಯವಾಗಿಟ್ಟುಕೊಂಡಿರಬೇಕೆಂದು ಮೊದಲಾಗಿ ಹೇಳಿದ ಉಪದೇಶಗಳೆಲ್ಲಾ ಸರ್ವೋತ್ತಮವಾಗಿದ್ದುವು. ಕಡೆಯಲ್ಲಿ ಆಡಿದ ಮಾತುಗಳುಮಾತ್ರ ಅನವಶ್ಯಕವಾಗಿದ್ದುವು. ಅವು ಯಾವ ದೃಷ್ಟಿಯಿಂದ ಹೇಳಲ್ಪಟ್ಟುವೋ ತಿಳಿಯಲಿಲ್ಲ. ಪರರನ್ನು ತೃಪ್ತಿಪಡಿಸಿ ಅವರಿಂದ ಹೊಗಳಿಸಿಕೊಳ್ಳಬೇಕೆಂಬ ಸ್ವಾರ್ಥಮಯವಾದ ಅತ್ಯಲ್ಪಫಲದಮೇಲೆ ಇಂಥ ಘನತೆವಂತ ಮುಖಂಡರ ದೃಷ್ಟಿಯು ಬೀಳಬೇಕಾದುದೇ ಇಲ್ಲ. ಯಾರು ಅಧಿಕಾರದ ಸಿಂಹಾಸನವನ್ನೇರಿರಲಿ ಗಲ್ಲಿಗೇರಿಸುವ ಹಲಗೆಯಮೇಲೆ ನಿಂತಿರಲಿ ಯಾವಾಗಲೂ ತನ್ನ ಸ್ವಾರ್ಥವನ್ನು ಬಿಟ್ಟು ಸಮಾಜಹಿತವನ್ನೇ ಧ್ಯೇಯವನ್ನಾಗಿಟ್ಟುಕೊಂಡಿರುವರೋ ಅಂಥವರೇ ಆಯಾ ಸಮಾಜಗಳಿಗೆ ಮುಂದಾಳುಗಳಾಗಿ ಸರ್ವವಂದ್ಯರಾಗುವುದಕ್ಕೆ ಅರ್ಹರಾಗುವರೇ ಹೊರತು ಇತರರೆಂದಿಗೂ ಅಲ್ಲ. ಆತ್ಮೋದ್ಧಾರದ ಗಮನವೇ ಇಲ್ಲದೆ ಕತ್ತಲಿನಲ್ಲಿ ತಟ್ಟಾಡುತ್ತಿರುವ ಹಿಂದುಳಿದ ಜನವರ್ಗಗಳಿಗೆ ತಾನುರಿದು ನಾಶವಾದರೂ ಮನೆಗೆ ಬೆಳಕನ್ನು ಮಾಡುವ ದೀಪದಬತ್ತಿಯಂಥ ಸ್ವಾರ್ಥಪರಿತ್ಯಾಗಿ ಜನರೇ ಅವಶ್ಯಕವಾದವರು. ಹಿಂದುಳಿದವರ ದೃವವು ತೆರೆದಿದ್ದರೆ ಭಗವತ್ಕಟಾಕ್ಷದಿಂದ ಅಂಥ ಮುಂದಾಳುಗಳು ದೊರೆದೇದೊರೆಯುವರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ

ಮಹಾಶಯರೇ,

ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹದ್ದೂರವರ ಆಜ್ಞಾನುಸಾರವಾಗಿ ಪ್ರಜಾಪ್ರತಿನಿಧಿಸಭೆಯ ಮೂವತ್ತೆಂಟನೆಯ ದಸರಾ ಅಧಿವೇಶನಕ್ಕೆ ತಮ್ಮಗಳನ್ನು ಆದರದಿಂದ ಬರಮಾಡಿಕೊಂಡು, ಕಳೆದ ವರ್ಷದಲ್ಲಿ ನಡೆದ ಆಡಳಿತದ ಸಂಕ್ಷಿಪ್ತ ವಿವರಣೆಯನ್ನೂ, ಈ ವರ್ಷದಲ್ಲಿ ನಡೆಸಬೇಕೆಂದಿರುವ ಏರ್ಪಾಟುಗಳನ್ನೂ ಪದ್ಧತಿಯಪ್ರಕಾರ ಸೂಚಿಸುತ್ತೇವೆ. ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಸಾಧಾರಣ ವಿಷಯಗಳನ್ನೆಲ್ಲಾ ಎಂದಿನಂತೆ ಈ ಭಾಷಣದ ಎರಡನೆಯ ಭಾಗದಲ್ಲಿ ವಿವರಿಸಲಾಗಿದೆ. ಮುಖ್ಯವಾದ ಅಂಶಗಳು ಗಮನಕ್ಕೆ ಬರಲೆಂಬ ಉದ್ದೇಶದಿಂದ, ಇದುವರೆಗೆ ಮೊದಲನೆಯ ಭಾಗದಲ್ಲಿ ವಿವರಿಸುತ್ತಿದ್ದ ವಿಷಯಗಳಲ್ಲಿ ಕೆಲವನ್ನು ಎರಡನೆಯ ಭಾಗದಲ್ಲಿ ನಮೂದಿಸಿರುತ್ತೇವೆ. ಈ ಏರ್ಪಾಟು ತಮಗೂ ಸಮರ್ಪಕವಾಗಿರುವುದೆಂದು ನಂಬಿ ಇದೆ.

ಕಾಲಸ್ಥಿತಿ.

ಕಳೆದ ವರ್ಷ ಮಳೆ ಕಡಿಮೆಯಾದ್ದರಿಂದ ಮುಸ್ಕಿ ತರೀ ಫಸಲಿನ ವಿಸ್ತೀರ್ಣವು ಬಹುಮಟ್ಟಿಗೆ ಕಡಿಮೆಯಾಯಿತು. ಕೆಲವು ತಾಲ್ಲೂಕುಗಳಲ್ಲಿ ಬೆಳೆ ತುಂಬಾ ಕಮ್ಮಿಯಾದ್ದರಿಂದ ತರೀ ಕಂದಾಯದ ಒಂದು ಭಾಗದ ವಸೂಲಾತಿಯನ್ನು ಹಂಗಾಮಿಯಾಗಿ ನಿಲ್ಲಿಸಬೇಕಾಯಿತು. ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಕೆಲವು ಭಾಗಗಳು ಹೊರತು ಸಂಸ್ಥಾನದ ಬಾಕಿ ಪ್ರದೇಶದಲ್ಲೆಲ್ಲಾ ಈ ವರ್ಷ ಕಾಲಸ್ಥಿತಿಯು ಅನುಕೂಲವಾಗಬಹುದೆಂತ ತೋರುತ್ತದೆ. ಮುಂಗಾರು ಮಳೆಯು ಏಪ್ರಿಲ್ ತಿಂಗಳ ಎರಡನೆಯ ವಾರದಲ್ಲಿ ಪ್ರಾರಂಭವಾಗಿ ಮುಂದೆಯೂ ಮಳೆ ಚೆನ್ನಾಗಿ ಆಗಬಹುದೆಂಬ ನಿರೀಕ್ಷಣೆಯನ್ನು ಹುಟ್ಟಿಸಿತು. ಈ ನಿರೀಕ್ಷಣೆಯಂತೆ ಮೇ ತಿಂಗಳಲ್ಲಿ ಮಳೆ ಬಾರದೆ ಇದ್ದಾಗ್ಯೂ, ಜೂನ್ ತಿಂಗಳಲ್ಲಿ ಚೆನ್ನಾಗಿ ಬಂತು. ಕಳೆದ ಎರಡು ತಿಂಗಳಲ್ಲಿ ಹಿಂಗಾರು ಮಳೆಯು ಯಥೇಚ್ಛವಾಗಿ ಬಿದ್ದು ಬೆಂಗಳೂರು, ಮೈಸೂರು, ಕೋಲಾರ ಡಿಸ್ಟ್ರಿಕ್ಟುಗಳಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಇರುವ ಅನೇಕ ಕೆರೆಗಳು ತುಂಬಿದವು. ಸಾಕಾದಷ್ಟು ಮಳೆ ಆಗದೆ ದನಗಳ ಮೇವಿಗೆ ಕಷ್ಟವಾದ ಪ್ರದೇಶಗಳಲ್ಲಿ ಕೆಲವು ಮನ್ನಾ ಜಂಗಲುಗಳಲ್ಲಿ ಮುಫತ್ತಾಗಿ ದನ ಮೇಯಿಸುವುದಕ್ಕೆ ಅವಕಾಶ ಕೊಟ್ಟಿದೆ. ಅಂಥ ಪ್ರದೇಶಗಳಲ್ಲಿ ಕಾಲಸ್ಥಿತಿ ಯೇನಾದರೂ ಬದಲಾಯಿಸಿ ಉತ್ತಮವಾಗೀತೆ ಎಂಬುದನ್ನು ಗಮನಿಸುತ್ತಲಿದೆ. ಹಾಗೆ ಬದಲಾಯಿಸಿ ಉತ್ತಮಕ್ಕೆ ಬರುವ ಚಿಹ್ನೆಗಳು ಕಂಡುಬರದೇ ಇದ್ದರೆ ಆಗತ್ಯವಾದ ಏರ್ಪಾಟುಗಳನ್ನೆಲ್ಲಾ ಕೈಗೊಳ್ಳಲಾಗುವುದು.

ಸಾಲ.

ಕಳೆದ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ನಾವು ಕೊಟ್ಟ ಭಾಷಣದಲ್ಲಿ, ಬಂಡವಾಳದ ಕಾಮುಗಾರಿಗಳನ್ನು ಮಾಡಿಸುವುದಕ್ಕೋಸ್ಕರ ಬಜೆಟ್ಟಿನಲ್ಲಿ ತೋರಿಸಿದ್ದ ಖರ್ಚಿಗೆ ಹಣವನ್ನು ಒದಗಿಸುವುದಕ್ಕಾಗಿ ಈ ವರ್ಷ ಹೊಸದಾಗಿ ಮತ್ತೊಂದು ಸಾಲವನ್ನು ತೆಗೆಯಬೇಕೆಂದು ಸರ್ಕಾರದವರು ತೀರ್ಮಾನಿಸಿದ ಸಂಗತಿಯನ್ನು ಸೂಚಿಸಿದ್ದೆವಷ್ಟೆ. ಈ ಹೊಸ ಸಾಲದ ಷರತ್ತುಗಳನ್ನು ಜುಲೈ ತಿಂಗಳ ಆದಿಭಾಗದಲ್ಲಿ ಪ್ರಕಟಿಸಲಾಯಿತು. ಈ ಸಾಲಕ್ಕೆ ಹಣ ಕೊಡತಕ್ಕವರ ಅನುಕೂಲ್ಯಕ್ಕೆ ತಕ್ಕಂತೆ ಎರಡುತರಹೆಯ ಸಾಲಗಳನ್ನು ಏರ್ಪಡಿಸಲಾಯಿತು. ಈ ಪೈಕಿ ಒಂದು ಹತ್ತು ವರುಷದಲ್ಲಿ ತೀರತಕ್ಕದ್ದು. ಇದಕ್ಕೆ ಬಡ್ಡಿ ಶೇಕಡಾ 7 ರಂತೆ ಇದೆ. ಮತ್ತು ಇದನ್ನು ಆಯಾ ಪತ್ರದಲ್ಲಿ ಕಾಣಿಸಿದ ಮೊಬಲಿಗಿಗೇ ಸಾದರ್ಮಾಡಿದೆ. ಇನ್ನೊಂದು 20 ರಿಂದ 30 ವರ್ಷಗಳೊಳಗಾಗಿ ತೀರತಕ್ಕದ್ದು. ಇದು ಶೇಕಡ 6½ ಯಂತೆ ಬಡ್ಡಿಯುಳ್ಳದ್ದು. ಇದನ್ನು ಆಯಾ ಪತ್ರದಲ್ಲಿ ಕಾಣಿಸಿದ ಮೊಬಲಗಿಗೆ ಶೇಕಡ 97½ ಯಂತೆ ಸಾದರ್ಮಾಡಿದೆ. ಇಂಡಿಯಾ ದೇಶದ ಎಲ್ಲಾಭಾಗದಜನರೂ ಈ ಸಾಲಗಳಿಗೆ ಹಣ ಹಾಕಬಹುದೆಂದು ಇಂಡಿಯಾ ಸರ್ಕಾರದವರ ಅನುಮತಿಯನ್ನು ಪಡೆದು ಆಗಸ್ಟ್ ತಿಂಗಳ ಪ್ರಾರಂಭದಲಾಗಾಯಿತು ಸಾಲವನ್ನು ಪ್ರಕಟಿಸಲಾಯಿತು. ಈ ಸಾಲಗಳಿಗೆ, ಮುಖ್ಯವಾಗಿ ಶೇಕಡಾ 7ರ ಬಡ್ಡಿಯ ಸಾಲಕ್ಕೆ, ದರಖಾಸ್ತುಗಳು ಬಂದಿರುವದು ತುಂಬಾ ತೃಪ್ತಿಕರವಾಗಿದೆ. ಈ ವರ್ಷದ ಬಜೆಟ್ಟಿನಲ್ಲಿ ಖರ್ಚುಬಾಬಿಗಾಗಿ ಪ್ರಾರಂಭದಲ್ಲಿ ಗೊತ್ತುಮಾಡಿದ್ದ ಒಂದು ಕೋಟಿ ರೂಪಾಯಿಯ ಸಾಲವು ಬಹಳ ಜಾಗ್ರತೆಯಾಗಿಯೇ ಬಂದು ಹೋಯಿತು. ಈ ತಿಂಗಳು 7 ನೇ ತಾರೀಖಿನವರೆಗೆ ಸಾಲಕ್ಕಾಗಿ ಬಂದಿರುವ ಚಂದಾ ಮೊಬಲಗು 198 ಲಕ್ಷ ರೂಪಾಯಿಯಾಗಿದೆ. ಸಂಸ್ಥಾನದ ಹೊರಭಾಗದಿಂದ ಭಾರೀ ಮೊಬಲಗು ಸಾಲವಾಗಿ ಬಂದಿರುವುದನ್ನು ನೋಡಿದರೆ ನಮ್ಮ ಸಾಲದ ಪತ್ರಗಳನ್ನು ಅನೇಕರು ಪುರಸ್ಕರಿಸಿರುವ ವಿಷಯವು ವ್ಯಕ್ತಪಡುತ್ತದೆ. ಇದು ಗಮನೀಯವಾದುದೇಸರಿ. ಎರಡುಕೋಟಿ ರೂಪಾಯಿಗೆ ಮೀರದಷ್ಟು ಸಾಲ ತೆಗೆಯಬೇಕೆಂತಲೂ ಮುಂದಿನ ಎರಡು ವರ್ಷಗಳಲ್ಲಿ ಮಾಡತಕ್ಕ ಬಂಡವಾಳದ ಕಾಮುಗಾರಿಗಳ ಖರ್ಚನ್ನು ಈ ಮೊಬಲಗಿಗೆ ಮೀರದಂತೆ ಮಿತಪಡಿಸಬೇಕೆಂತಲೂ ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಬಜೆಟ್.

4. ಪ್ರಸಕ್ತವರ್ಷದ ಬಜೆಟ್ ಅಂದಾಜುಗಳನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ನ್ಯಾಯವಿಧಾಯಕ ಸಭೆಯಲ್ಲಿಯೂ ಸಹ ಈ ಮೊದಲೇ ತಪಶೀಲಾಗಿ ಚರ್ಚಿಸಿದೆ. ಈ ಅಂದಾಜುಗಳನ್ನು ಮಂಜೂರ್ಮಾಡಿದ ಈಚೆಗೆ ಆದಾಯದ ಬಾಬಿನಲ್ಲಿಯೂ ಖರ್ಚಿನ ಬಾಬಿನಲ್ಲಿಯೂ ವ್ಯತ್ಯಾಸವನ್ನುಂಟುಮಾಡತಕ್ಕ ಕೆಲವು ಅಂಶಗಳು ಕಂಡುಬಂದಿರುತ್ತವೆ. ಬಹಳ ದಿವಸದಿಂದ ಗಿರಾಕಿ ಇಲ್ಲದೆ ನಿಂತು ಇದ್ದ ಗಂಧದಎಣ್ಣೆಗೆ ಕ್ಷಿಪ್ರದಲ್ಲಿಯೇ ಗಿರಾಕಿವುಂಟಾಗಿ ಈ ಎಣ್ಣೆಯ ಮಾರಾಟದಿಂದ ಎರಡು ಲಕ್ಷರೂಪಾಯಿ ಹುಟ್ಟುವಳಿಯಾಗಬಹುದೆಂತ ಅಂದಾಜುಮಾಡಿತ್ತು. ಆದರೆ ಈ ನಿರೀಕ್ಷಣೆ ನೆರವೇರುವ ಸಂಭವ ಕಾಣುವುದಿಲ್ಲ. ಈ ಅನಿರೀಕ್ಷಿತ ಸಂಭವದ ನಿವಾರಣೆಗಾಗಿ ತಕ್ಕ ಏರ್ಪಾಡನ್ನು ಸರ್ಕಾರದವರು ಆಲೋಚಿಸುತ್ತಿದ್ದಾರೆ. ಇದೂ ಅಲ್ಲದೆ, ಈಗ ತೆಗೆದುಕೊಳ್ಳುವ ಸಾಲವನ್ನು ಎರಡು ಕೋಟಿಯವರೆಗೆ ಹೆಚ್ಚಿಸಿರುವುದರಿಂದ ಇದರ ಸಿಂಕಿಂಗ್ ಫಂಡಿಗೂ ಬಡ್ಡಿಗೂ ಮತ್ತು ಇತರ ಖರ್ಚಿಗೂ ಸಹ ಹೆಚ್ಚು ಹಣವನ್ನು ಒದಗಿಸಬೇಕಾಗುತ್ತದೆ. ಬಜೆಟ್ಟಿನ ನಿರೀಕ್ಷಣೆಗಳು ಮುಂದೆ ಎಷ್ಟರಮಟ್ಟಿಗೆ ನೆರವೇರದೇ ಹೋದೀತೆಂಬದನ್ನು ಈಗಲೇ ಹೇಳುವದಕ್ಕಾಗದೇ ಇದ್ದಾಗ್ಯೂ, ದ್ರವ್ಯಾನುಕೂಲತೆಯನ್ನು ವೃದ್ಧಿಪಡಿಸುವುದಕ್ಕೆ ಇನ್ನೂ ಹೆಚ್ಚಾಗಿ ಸಾಹಸಪ್ರಯತ್ನಗಳನ್ನು ಮಾಡುವುದು ಅತ್ಯವಶ್ಯಕವೆಂತ ಈಗಿನ ಸ್ಥಿತಿಯಿಂದ ವ್ಯಕ್ತವಾಗುತ್ತದೆ. ಇದಕ್ಕಾಗಿ ಸರ್ಕಾರದವರು ಈಗಾಗಲೇ ಕೈಗೊಂಡಿರುವ ಏರ್ಪಾಡುಗಳನ್ನು ಈಗ ವಿವರಿಸುತ್ತೇವೆ.

5. ತಾಲ್ಲೂಕುಗಳ ರೀ ಸೆಟ್ಲ್‌ಮೆಂಟಿನ ವಿಚಾರದಲ್ಲಿ ಸರ್ವೆ ಸೆಟ್ಲ್‌ಮೆಂಟ್ ಇಲಾಖೆಯವರು ಹಾಲಿ ಅನುಸರಿಸುತ್ತಿರುವ ಕಾರ್ಯಕ್ರಮದಲ್ಲಿ ತೊಡಕುಗಳಿರುವುದರಿಂದ ರೀ ಸೆಟ್ಲ್‌ಮೆಂಟ್ ಕೆಲಸಗಳು ಸಕಾಲದಲ್ಲಿ ನಡೆಯದೆ ತಮಗೆ ವೇದ್ಯವಿರುವಂತೆ ಬಹಳ ಮಟ್ಟಿಗೆ ಸುಸ್ತಿಯಾಗಿ ಸರ್ಕಾರಕ್ಕೆ ನ್ಯಾಯವಾಗಿ ಬರಬೇಕಾದ ಹುಟ್ಟುವಳಿಯು ಬರದೆ ಬಹಳ ನಷ್ಟವುಂಟಾಗುತ್ತಿದೆ. ರೀ ಸೆಟ್ಲ್‌ಮೆಂಟಿಗೆ ಪೂರ್ವಭಾವಿಯಾಗಿ ಜಮೀನಿನ ಮೇಲೆ ಮಾಡಬೇಕಾದ ಕಾರ್ಯಗಳನ್ನು ಇನ್ನು ಮುಂದೆ ರೀ ಸೆಟ್ಲ್‌ಮೆಂಟಿಗೆ ಅವಶ್ಯಕವಾಗುವಷ್ಟರಮಟ್ಟಿಗೆ ಮಾತ್ರ ನಡೆಸಬೇಕೆಂತಲೂ ತಪಶೀಲ್ವಾರಾದ ಜಮೀನಿನ ಅಳತೆಗಳನ್ನು ಮತ್ತು ಬಾಂದುಗಳ ಇನ್ಸ್‌ಪೆಕ್ಷನ್ ಕೆಲಸಗಳನ್ನು ಎಷ್ಟು ಅವಶ್ಯಕವೋ ಅಷ್ಟರ ಮಟ್ಟಿಗೆ ಮಾತ್ರವೇ ಮಾಡತಕ್ಕದ್ದೆಂತಲೂ ಸರ್ಕಾರದವರು ತೀರ್ಮಾನಿಸಿರುತ್ತಾರೆ. ಈ ರೀತಿಯಾದ ಸುಲಭಕ್ರಮವನ್ನು ಅನುಸರಿಸಿದರೆ ವರ್ಷ ಒಂದಕ್ಕೆ ಸುಮಾರು 6 ತಾಲ್ಲೂಕುಗಳಲ್ಲಿ ರೀ ಸೆಟ್ಲ್‌ಮೆಂಟ್ ಜಾರಿಗೆ ತರಬಹುದೆಂತಲೂ ಹಾಲಿ ಬಾಕಿಯಲ್ಲಿರುವ ತಾಲ್ಲೂಕುಗಳ ರೀ ಸೆಟ್ಲ್‌ಮೆಂಟ್ ಕೆಲಸವನ್ನು ಜಾಗ್ರತೆಯಾಗಿ ಪೂರೈಸಬಹುದೆಂತಲೂ ನಿರೀಕ್ಷಿಸಲಾಗಿದೆ.

ಖರ್ಚುಬಾಬಿನಲ್ಲಿ ಬಹುಮಟ್ಟಿಗೆ ಜೋತಾಮಾಡತಕ್ಕ ಬಗ್ಗೆ ಹುಕುಂ ಸಾದರ್ಮಾಡಿರುವುದಲ್ಲದೆ ಮಂಜೂರಾದ ಈ ವರ್ಷದ ಬಜೆಟ್ಟಿನಲ್ಲಿ ಅವುಗಳಂತೆ ಜಾರೀಮಾಡಿದೆ. ಅವುಗಳ ಪೈಕಿ ಮುಖ್ಯವಾದವುಗಳನ್ನು ತಮ್ಮ ತಿಳುವಳಿಕೆ ಒಗ್ಗೆ ಇಲ್ಲಿ ಪ್ರಸ್ತಾಪಿಸುತ್ತೇವೆ. ಸರ್ವೆ ಇಲಾಖೆಯ ಸಿಬ್ಬಂದಿಯನ್ನು ಕಮ್ಮಿಮಾಡಿದ್ದರಿಂದ 33,000 ರೂಪಾಯಿ ಉಳಿಸಲಾಯಿತು. ತಾಲ್ಲೂಕು ಕಚೇರಿಗಳಲ್ಲಿ ಗ್ರಾಮಾಭಿವೃದ್ಧಿಯ ಕೆಲಸಕ್ಕಾಗಿ ನೇಮಕವಾಗಿದ್ದ ಗುಮಾಸ್ತೆಯರ ಸಿಬ್ಬಂದಿಯನ್ನೂ ಶೇಕದಾರಿ ಸ್ಕೂಲನ್ನೂ ಅನಾವಶ್ಯಕವಾದವುಗಳೆಂದು ವಜಾಮಾಡಿದ ಪ್ರಯುಕ್ತ 15,000 ರೂಪಾಯಿ ಉಳಿಯಿತು. ಫಾರೆಸ್ಟ್ ಸ್ಕೂಲಿನ ಸಿಬ್ಬಂದಿಯನ್ನು ಕಮ್ಮಿಮಾಡಿದ್ದರಿಂದಲೂ ಬೇಟೆಮೃಗಗಳ ರಕ್ಷಣೆಯ ಸಿಬ್ಬಂದಿಯನ್ನು ವಜಾ ಮಾಡಿದ್ದರಿಂದಲೂ ಫಾರೆಸ್ಟ್ ಇಲಾಖೆಯಲ್ಲಿ 28,000 ರೂಪಾಯಿ ಮಿಗುತೆಯಾಯಿತು. ಎಕ್ಸೈಜ್ ಇಲಾಖೆಯಲ್ಲಿ ಕೆಲವು ಸಿಬ್ಬಂದಿಗಳನ್ನು ವಜಾಮಾಡಿದ್ದರಿಂದಲೂ, ಜುಡಿಷಿಯಲ್ ಮತ್ತು ಎಗ್ಸಿಕ್ಯುಟಿವ್ ಕರ್ತವ್ಯಗಳನ್ನು ಪ್ರತ್ಯೇಕಿಸಿರುವ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಪ್ರತ್ಯೇಕ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರುಗಳನ್ನು ವಜಾಮಾಡಿ ಅವರುಗಳು ಮಾಡುತ್ತಿದ್ದ ಕೆಲಸವನ್ನು ರೆವಿನ್ಯೂ ಆಫೀಸರುಗಳಿಗೆ ವಹಿಸಿದ್ದರಿಂದಲೂ 37,000 ರೂಪಾಯಿವರೆಗೂ ಖರ್ಚು ಕಮ್ಮಿಯಾಯಿತು.

ಕಂಟ್ರೋಲರವರ ಆಫೀಸ್ ಸಿಬ್ಬಂದಿಯಲ್ಲಿ ಸುಮಾರು 33,000 ರೂಪಾಯಿನ ಖರ್ಚು ಖೋತಾಮಾಡಲಾಯಿತು. ಭೂಗರ್ಭಶೋಧನೆ ಇಲಾಖೆಯಲ್ಲಿ ಕೆಲವು ಕೆಲಸಗಳನ್ನು ಭರ್ತಿಮಾಡದೆ ಹೋದಪ್ರಯುಕ್ತ ಸುಮಾರು 22,000 ರೂಪಾಯಿನ ಖರ್ಚನ್ನು ಉಳಿಸಲಾಯಿತು. ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರವರನ್ನು ವಜಾ ಮಾಡಿದ್ದರಿಂದಲೂ ಸಂಪದಭ್ಯುದಯ ಸಮಾಜದ ಕೆಳ ದರ್ಜೆಯ ಸಿಬ್ಬಂದಿಗಳನ್ನು ಕಮ್ಮಿ ಮಾಡಿದ್ದರಿಂದಲೂ ಒಂದುಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಉಳಿಯಿತು. ಮಿಲಿಟರಿ ಇಲಾಖೆಯಲ್ಲಿ ಕ್ಯಾವಲ್ರಿ ರೆಜಿಮೆಂಟುಗಳಲ್ಲಿ ಸವಾರರ ಸಂಖ್ಯೆಯನ್ನು ಕಮ್ಮಿ ಮಾಡಿದ್ದರಿಂದಲೂ, ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ರಾಸುಗಳ ಸಂರಕ್ಷಣೆಗೆ ಮಿತವ್ಯಯದ ಏರ್ಪಾಡನ್ನು ಮಾಡಿದ್ದರಿಂದಲೂ ಸುಮಾರು ನಾಲ್ಕು ಲಕ್ಷ ರೂಪಾಯಿನಷ್ಟು ಭಾರೀ ಖರ್ಚನ್ನು ಖೋತಾ ಮಾಡಲಾಯಿತು. ಕಾವೇರಿ ವ್ಯಾಲಿ ಇರಿಗೇಷನ್ ಚೀಫ್ ಇಂಜನಿಯರ್ ಕೆಲಸವನ್ನೂ ವಜಾ ಮಾಡಲಾಯಿತು.

6. ಖರ್ಚು ಖೋತಾ ಆಗುವ ಇನ್ನೂ ಕೆಲವು ಏರ್ಪಾಡುಗಳಿಗೆ ಸರ್ಕಾರದವರು ಗಮನಕೊಡುತ್ತಲೇ ಇದ್ದಾರೆ. ಇವುಗಳ ಪೈಕಿ ಬಡ್ಜೆಟ್ ತಯಾರಾದಮೇಲೆ ಮಂಜೂರಾದ ಕೆಲವು ಮುಖ್ಯವಾದ ಏರ್ಪಾಡುಗಳನ್ನು ಈ ಕೆಳಗೆ ವಿವರಿಸಿ ಇದೆ:—

ಸಿವಿಲ್ ಸರ್ವಿಸ್ಸಿನ ಕಾಯಂ ಹುದ್ದೆಗಳ ಪೈಕಿ 14ನ್ನು ಕಡಮೆ ಮಾಡಲಾಗಿದೆ. ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯೆಟ್ಟಿನಲ್ಲಿ ಎಫಿಸಿಯನ್ಸಿ ಆಡಿಟ್ ಕೆಲಸಕ್ಕೋಸ್ಕರ ಪ್ರತ್ಯೇಕವಾಗಿ ನೇಮಕವಾಗಿದ್ದ ಆಫೀಸರನ್ನೂ ಬೇರೆ ಎರಡು ಗೆಜೆಟೆಡ್ ಹುದ್ದೆಯ ಕೆಲಸಗಳನ್ನೂ ವಜಾಮಾಡಲಾಯಿತು. ಕ್ಲಾರ್ಕುಗಳ ಮತ್ತು ಜವಾನರುಗಳ ದರ್ಜೆಯಲ್ಲಿಯೂ ಬಹುಮಟ್ಟಿಗೆ ಖೋತಾ ಮಾಡಿರುತ್ತದೆ. ಇದರಿಂದ ಸುಮಾರು 33,000 ರೂಪಾಯಿ ಮಿಗುತೆಯಾಯಿತು. ಫಾರೆಸ್ಟ್ ಎಕಾನಮಿಸ್ಟ್ ಎಂಬ ಕೆಲಸವು ವಜಾ ಮಾಡಲ್ಪಟ್ಟಿತು. ಪೋಲೀಸ್ ಇಲಾಖೆಯಲ್ಲಿ ಸೂಪರಿಂಟೆಂಡೆಂಟರ ಹುದ್ದೆಯ ಇಬ್ಬರು ಆಫೀಸರರ ಕೆಲಸವನ್ನು ವಜಾಮಾಡಿ ಆಸ್ಥಳಗಳಿಗೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನು ನೇಮಿಸಲಾಯಿತು. ಅಲ್ಲದೆ ಸಿಬ್ಬಂದಿಗಳಲ್ಲಿಯೂ ಸಹ ಕೆಲವು ಖೋತಾಮಾಡಿದೆ. ಜನಾರೋಗ್ಯ ಇಲಾಖೆಯಲ್ಲಿ ಡಿಸ್ಟ್ರಿಕ್ಟ್ ಸ್ಯಾನಿಟರಿ ಸಿಬ್ಬಂದಿಗಳನ್ನು ಪುನರ್ವಿಮರ್ಶೆ ಮಾಡಿ ಸುಮಾರು 20,000 ರೂಪಾಯಿಯನ್ನು ಉಳಿಸಿಕೊಳ್ಳಲಾಯಿತು.

ಸೆನ್ಸಸ್.

7. ಹತ್ತು ವರ್ಷಕ್ಕೊಂದು ಸಾರಿ ತೆಗೆಯುವ ಆರನೇ ಖಾನೇಷುಮಾರಿಗೆ ಮೊದಲು ಆಗಬೇಕಾದ ಏರ್ಪಾಟುಗಳು ಸಕಾಲದಲ್ಲಿ ಪೂರೈಸಿ ಅಪ್ಪೈರಿಗೆ ನಡೆಸಬೇಕಾದ ಜನಗಳ ಎಣಿಕೆಯನ್ನು ಇಂಡಿಯಾ ದೇಶದ ಇತರ ಭಾಗಗಳಲ್ಲಿ ನಡೆಸಿದಂತೆ ಏಕಕಾಲದಲ್ಲಿ 1921ನೆಯ ಮಾರ್ಚಿ 18ನೆಯ ರಾತ್ರಿ ನಡೆಸಲಾಯಿತು. ಹಂಗಾಮಿ ತೇರೀಜಿನ ಮೇರೆಗೆ, ಸಿವಿಲ್ ಮಿಲಿಟರಿ ಸ್ಟೇಷನ್ ದೇಖೀಲು ಸಂಸ್ಥಾನದ ಜನಸಂಖ್ಯೆ 59,76,660 ಆಗಿತ್ತು. ಇದರಲ್ಲಿ 30,45,999 ಮಂದಿ ಗಂಡಸರೂ, 29,31,661 ಜನ ಹೆಂಗಸರೂ ಇದ್ದರು. ಒಕ್ಕಲಿದ್ದ ಮನೆಗಳ ಒಟ್ಟು ಸಂಖ್ಯೆ 12,05,959. ಜನ ಸಂಖ್ಯೆಯು ಹಿಂದಿನ ಖಾನೇಷುಮಾರಿಯಿಂದೀಚೆಗೆ ಶೇಕಡಾ 2·93ರಷ್ಟು ಮಾತ್ರ ಹೆಚ್ಚಿರುತ್ತದೆ. ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟುಗಳು ಹೊರತು ಬಾಕಿ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಜನಸಂಖ್ಯೆ ಹೆಚ್ಚಿ ಈ ಎರಡು ಡಿಸ್ಟ್ರಿಕ್ಟುಗಳಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಬೆಂಗಳೂರು ಸಿಟಿಯಲ್ಲಿಯೂ, ಕೋಲಾರದ ಚಿನ್ನದ ಗಣಿಗಳಲ್ಲಿಯೂ, ಮೈಸೂರು ಸಿಟಿಯಲ್ಲಿಯೂ, ಜನ ಸಂಖ್ಯೆ ಹೆಚ್ಚಿದ್ದು ಗಣನೀಯವಾಗಿದೆ. ಈ ಹತ್ತು ವರ್ಷಗಳಲ್ಲಿ ಹೆಚ್ಚಿದ ಜನಸಂಖ್ಯೆಯು ಹಿಂದಣ ಖಾನೇಷುಮಾರಿಗಳೆಲ್ಲಕ್ಕಿಂತಲೂ ಕಮ್ಮಿಯಾಗಿದೆ. ಕಳೆದ ಹತ್ತು ವರ್ಷದಲ್ಲಿ ಈ ರೀತಿ ಪ್ರಜಾಸಂಖ್ಯೆಯು ವಿಶೇಷ ಜಾಸ್ತಿಯಾಗದೆ ಇರುವುದಕ್ಕೆ 1918ನೆಯ ಇಸವಿಯಲ್ಲಿ ಸಂಭವಿಸಿದ ಘೋರವಾದ ಇನ್‌ಫ್ಲುಯೆಂಜಾ ಜ್ವರವೇ ಮುಖ್ಯವಾದ ಕಾರಣವಾಗಿದೆ.

ಜಮೀನುಕಂದಾಯ.

8. ಈವರ್ಷ ಒಟ್ಟು 111 ಲಕ್ಷ ರೂಪಾಯಿ ಜಮೀನುಕಂದಾಯವು ಎಂದರೆ ಸರ್ಕಾರಕ್ಕೆ ಬರಬೇಕಾದ ಪೂರಾ ಮೊಬಲಗಿನ ಪೈಕಿ ಶೇಕಡಾ 92·5ರಷ್ಟು ವಸೂಲಾಯಿತು.

10. ಪ್ರಸಕ್ತವರ್ಷದಲ್ಲಿ ದನಕರುಗಳ ಖಾನೇಷುಮಾರಿಯನ್ನು ತೆಗೆದುಕೊಳ್ಳಲಾಯಿತು. ಇದರ ಪ್ರಕಾರ ಸಂಸ್ಥಾನದಲ್ಲಿ ಒಟ್ಟು 16,97,000 ಗೂಳಿ ಮತ್ತು ಎತ್ತುಗಳೂ, 17,17,156 ಹಸುಗಳೂ ಇರುವಂತೆ ಕಂಡುಬರುತ್ತದೆ. ಇದರಿಂದ ಈ ಹಿಂದಿನ ವರ್ಷದ ಖಾನೇಷುಮಾರಿಯ ಸಂಖ್ಯೆಗಳಿಗಿಂತ ಶೇಕಡ 8ರಷ್ಟು ಗೂಳಿಗಳೂ 6·6 ರಷ್ಟು ಹಸುಗಳೂ ಹೆಚ್ಚಿರುವುದು ವ್ಯಕ್ತವಾಗುತ್ತದೆ.

11. ಯಾವುದಾದರೊಂದು ಅಥವಾ ಹೆಚ್ಚು ವರ್ಷಗಳಲ್ಲಿ ಸಾಕಾದಷ್ಟು ನೀರು ಬರದೆ ಇರುವ ಕೆರೆಗಳ ಕೆಳಗಿನ ಜಮೀನುಗಳಿಗೆ ಕಂದಾಯದ ಮಾಫೀ ವಿಷಯದಲ್ಲಿ ಸರ್ಕಾರದವರು ಈ ವರ್ಷ ಒಂದು ತೀರ್ಮಾನವಮಾಡಿರುತ್ತಾರೆ. ಈ ವಿಷಯವನ್ನು ಈ ಸಭೆಯವರು ಅನೇಕವೇಳೆ ಸರ್ಕಾರದವರ ಗಮನಕ್ಕೆ ತಂದಿರುತ್ತಾರೆ. ಆದ್ದರಿಂದ, ಯಾವುದೊಂದು ಭಾಗದಲ್ಲಿಯಾದರೂ ಯಾವದೊಂದು ವರ್ಷವೇ ಆಗಲಿ ಒಂದು ಕೆರೆಯ ಕೆಳಗಿನ ಅಚ್ಚುಕಟ್ಟಿನಲ್ಲಿ ಅರ್ಧಕ್ಕಿಂತ ಕಡಮೆಯಲ್ಲದಷ್ಟು ಜಮೀನು ಸಾಗುವಳಿಯಾಗದೆ ನಿಂತಿರವಾಗ, ಅಥವಾ ಸಾಗುವಳಿಯಾಗಿದ್ದರೆ ನಾಲ್ಕಾಣೆ ಬೆಳಗಿಂತ ಹೆಚ್ಚಾಗಿ ಉತ್ಪತ್ತಿಯಾಗದಿರುವಾಗ, ಸದರಿ ಕೆರೆಯ ಕೆಳಗಿನ ಎಲ್ಲಾ ತರೀ ಜಮೀನುಗಳ ಮೇಲೂ ಅರ್ಧ ಕಂದಾಯವನ್ನು ಮುಂದಿನ ಒಂದು ವರ್ಷದವರೆಗೂ ವಸೂಲ್ಮಾಡದೆ ತಡೆದಿದ್ದು ಮುಂದಿನವರ್ಷವೂ ಸಹ ಅದೇ ರೀತಿಯಾದರೆ, ವಸೂಲು ಮಾಡದೆ ತಡೆದಿದ್ದ ಕಂದಾಯವನ್ನು ಮಾಫ್ ಮಾಡತಕ್ಕದ್ದೆಂದು ಸರ್ಕಾರದವರು ತೀರ್ಮಾನಿಸಿರುವುದನ್ನು ತಿಳಿಸಲು ಸಂತೋಷಿಸುತ್ತೇವೆ. ಈ ತೀರ್ಮಾನಕ್ಕೆ ಅನುಸಾರವಾದ ನಿಬಂಧನೆಗಳನ್ನು ತಯಾರು ಮಾಡುತ್ತಲಿದೆ. ಸದರಿ ನಿಬಂಧನೆಗಳು ಮಂಜೂರಾದ ಕೂಡಲೆ ಈ ರಿಯಾಯಿತಿಗಳನ್ನು ಜಾರಿಗೆ ತರಲಾಗುವುದು.

ವಿದ್ಯಾಶಾಲೆಗಳು.

12. ಸ್ಥಳೀಯ ಸಹಾಯವಿಲ್ಲದೆ ಈ ವರ್ಷದಲ್ಲಿ ಕೆಲಸ ಮಾಡದೆ ನಿಂತ 704 ಎಯುಡೆಡ್ ವಿಲೇಜ್ ಪ್ರೈಮರಿ ಸ್ಕೂಲುಗಳು ವಿನಾ ಇತರ ಎಲ್ಲಾ ವಿದ್ಯಾಶಾಲೆಗಳಲ್ಲಿಯೂ ತೃಪ್ತಿಕರವಾಗಿ ಕೆಲಸ ನಡೆಯಿತು. ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯು ಒಟ್ಟು 832 ಇದ್ದುದು 1,005ಕ್ಕೆ ಹೆಚ್ಚಿತು. ಹೈ ಸ್ಕೂಲು ವಿದ್ಯಾರ್ಥಿಗಳ ಸಂಖ್ಯೆಯು 6,193 ರಿಂದ 6,386ಕ್ಕೂ, ಎ. ವಿ. ಸ್ಕೂಲ್ ವಿದ್ಯಾರ್ಥಿಗಳ ಸಂಖ್ಯೆಯು 42,501 ರಿಂದ 49,664 ಕ್ಕೂ ಹೆಚ್ಚಿತು. ಪಬ್ಲಿಕ್ ಪರೀಕ್ಷೆಗಳ ಫಲಿತಾಂಶವು ಸಾಮಾನ್ಯವಾಗಿ ತೃಪ್ತಿಕರವಾಗಿತ್ತು. ಆದರೆ, ಎಂಟ್ರೆನ್ಸು ಪರೀಕ್ಷೆಯಲ್ಲಿ ಮಾತ್ರ 911 ಮಂದಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳುಹಿಸಿದ್ದದ್ದಕ್ಕೆ 282 ಮಂದಿ ಮಾತ್ರ, ಅಂದರೆ ಶೇಕಡ ಸುಮಾರು 30 ರಷ್ಟು ಮಾತ್ರವೆ ಉತ್ತೀರ್ಣರಾದರು. ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹೋದ 1,780 ಮಂದಿ ವಿದ್ಯಾರ್ಥಿಗಳ ಪೈಕಿ 777 ಮಂದಿ ವಿದ್ಯಾರ್ಥಿಗಳು ಕಾಲೇಜು ವ್ಯಾಸಂಗಕ್ಕೆ ಅರ್ಹರಾದರು. ಇವರ ಪೈಕಿ 18 ಮಂದಿ ಹುಡಿಗಿಯರು. ಕಳೆದ ಲೋಯರ್ ಸೆಕಂಡರಿ ಪರೀಕ್ಷೆಗೆ ಇಂಗ್ಲೀಷಿನಲ್ಲಿ 3,732 ಮಂದಿಯೂ ಕನ್ನಡದಲ್ಲಿ 4,738 ಮಂದಿಯೂ ಹೋಗಿದ್ದರು. ಈ ಪೈಕಿ, ಇಂಗ್ಲೀಷಿನಲ್ಲಿ ಶೇಕಡ 61 ಮಂದಿಯೂ ಕನ್ನಡದಲ್ಲಿ ಶೇಕಡ 46·3 ಮಂದಿಯೂ ತೇರ್ಗಡೆಯಾದರು.

13. ಗಣಿತ ಮತ್ತು ಶಾಸ್ತ್ರಭಾಗಗಳನ್ನು ಐಚ್ಛಿಕ ವಿಷಯಗಳನ್ನಾಗಿ ತೆಗೆದುಕೊಂಡು ಯುನಿವರ್ಸಿಟಿ ಎಂಟ್ರೆನ್ಸು ತರಗತಿಗಳಿಗೆ ಸೇರಲು ಅಪೇಕ್ಷಿಸಿದ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ಸ್ಥಳವಸತಿಯನ್ನು ಕಲ್ಪಿಸುವುದಕ್ಕಾಗಿ ಬೆಂಗಳೂರು, ಮೈಸೂರು ತುಮಕೂರುಗಳಲ್ಲಿರುವ ಕೊಲಿಜಿಯೇಟು ಹೈ ಸ್ಕೂಲುಗಳಲ್ಲಿ ಈಗಿರುವ ಸೈನ್ಸ್ ಸೆಕ್ಷನ್‌ಗಳ ಜತೆಗೆ ಹೆಚ್ಚು ತರಗತಿಗಳನ್ನು ಏರ್ಪಡಿಸಲಾಯಿತು. ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ಸೈನ್ಸ್ ಮತ್ತು ಗಣಿತ ಶಾಸ್ತ್ರವನ್ನು ಬೋಧಿಸಲು ಯೂನಿವರ್ಸಿಟಿಯ ಎಂಟ್ರೆನ್ಸು ತರಗತಿಯೊಂದು ಸ್ಥಾಪಿತವಾಗಿದೆ. ಮೈಸೂರು ಬನುಮಯ್ಯನವರ ಹೈಸ್ಕೂಲಿನಲ್ಲಿ ಚರಿತ್ರೆಯನ್ನು ಬೋಧಿಸುವುದಕ್ಕೂ ಸಹ ಒಂದು ಯೂನಿವರ್ಸಿಟಿಯ ಎಂಟ್ರೆನ್ಸು ತರಗತಿ ಏರ್ಪಾಡಾಗಿದೆ.

ವಿದ್ಯಾಭ್ಯಾಸ ವಿಷಯಕವಾದ ಸುಧಾರಣೆಗಳು.

14. ಸಂಸ್ಥಾನದ ವಿದ್ಯಾಭ್ಯಾಸದ ಕ್ರಮವನ್ನು ಸಮರ್ಪಕವಾಗಿ ಪರಿಷ್ಕರಿಸಿ ಯುಕ್ತವಾದ ಮಾರ್ಗದಲ್ಲಿ ಅಭಿವೃದ್ಧಿಪಡಿಸುವಂತೆ ಅದನ್ನು ಸಮಗ್ರವಾಗಿ ಪುನರ್ವ್ಯವಸ್ಥೆ ಮಾಡಬೇಕೆಂಬ ವಿಷಯವು ಕಳೆದ ಎರಡು ಮೂರು ವರ್ಷಗಳಿಂದಲೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆಯೆಂಬುದು ತಮ್ಮಗಳೆಲ್ಲರಿಗೂ ತಿಳಿದ ವಿಷಯವಾಗಿದೆ. ಕಳೆದ ಮೇ ಮಾಹೆಯಲ್ಲಿ ವಿದ್ಯಾಭ್ಯಾಸದ ಮೆಮೊರಾಂಡಮ್ಮಿನ ವಿಚಾರದಲ್ಲಿ ಸರ್ಕಾರದವರು ತಮ್ಮ ಅಪ್ಪೈರು ಹುಕುಮುಗಳನ್ನು ಸಾದರ್‌ಮಾಡಿದರು. ಇದರಲ್ಲಿ ಮಂಜೂರಾದ ಮುಖ್ಯ ಬದಲಾವಣೆಗಳು ಯಾವುವೆಂದರೆ:—ಸಹಾಯಹೊಂದಿದ ಗ್ರಾಮ ಪ್ರಾಥಮಿಕ ಪಾಠಶಾಲೆಗಳನ್ನು ಕ್ರಮವಾಗಿ ಸರ್ಕಾರದ ಸ್ಕೂಲುಗಳನ್ನಾಗಿ ಮಾಡುವುದೂ, ದೇಶಭಾಷೆಯ ಮಿಡಲ್‌ಸ್ಕೂಲುಗಳನ್ನು ಒಂದೇ ತರಹವಾದ ಎ. ವಿ. ಸ್ಕೂಲುಗಳಾಗುವಂತೆ ಮೇಲ್ಪಡಿಸುವುದೂ, ಓದುಬರಹದ ಜತೆಗೆ ಕೈಗಾರಿಕೆ ಕೆಲಸಗಳನ್ನು ಬೋಧಿಸುವುದೂ, ಮತ್ತು ಅನೇಕ ಕೈಗಾರಿಕೆಯ ಸ್ಕೂಲುಗಳನ್ನು ಸ್ಥಾಪಿಸುವುದೂ ಆಗಿವೆ. ಉಪಾಧ್ಯಾಯರ ಶಿಕ್ಷಣೆಯ ಅವಧಿಯನ್ನು ಬಡಾಯಿಸುವುದೂ, ಪಂಚಮರ ವಿದ್ಯಾಭ್ಯಾಸಕ್ಕೆ ವಿಶೇಷ ಅನುಕೂಲ್ಯಗಳನ್ನು ಏರ್ಪಡಿಸುವುದೂ, ಎಲ್ಲಾ ದರ್ಜೆಯ ಉಪಾಧ್ಯಾಯರುಗಳ ಮತ್ತು ಇನ್‌ಸ್ಪೆಕ್ಟರುಗಳ ತಲುಬಿನ ಸ್ಕೇಲನ್ನು ಮಾರ್ಪಡಿಸುವುದೂ ಸಹ ಮಂಜೂರಾಗಿವೆ.

15. ಈ ಕಾರ್ಯಕ್ರಮವನ್ನು ಜಾರಿಯಲ್ಲಿ ತರಬೇಕಾದರೆ ಬರುವ ಐದು ವರುಷಗಳಲ್ಲಿ ಈಗಾಗುವುದಕ್ಕಿಂತ ಹೆಚ್ಚಾಗಿ 14 ಲಕ್ಷದಿಂದ 21 ಲಕ್ಷದವರೆಗೂ ಹಣ ಖರ್ಚಾಗಬೇಕಾಗಿದೆ. ಈ ಭಾರೀ ಖರ್ಚಿಗೆ ಹಣ ಒದಗಿಸುವುದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಮತ್ತು ವೈದ್ಯ ಸಹಾಯಗಳಿಗಾಗಿ ಹೆಚ್ಚು ಅನುಕೂಲ್ಯಗಳನ್ನು ಕಲ್ಪಿಸುವುದಕ್ಕೆ 1917 ನೆಯ ಇಸವಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಒಪ್ಪಿಸಲಾಗಿದ್ದ ಲೋಕಲ್ ಫಂಡ್ಸ್ ಜನರಲ್ ಮತ್ತು ಮೊಹತರ್ಫ ಬಾಬಿನ ಹುಟ್ಟುವಳಿಗಳನ್ನು ಸರ್ಕಾರಕ್ಕೆ ವಾಪ್ಸು ತೆಗೆದುಕೊಳ್ಳುವಂತೆ ಹುಕುಂ ಮಾಡಲಾಯಿತು. ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ತಗಲುವ ಖರ್ಚಿಗೆ ಸ್ಥಳೀಯ ಸಂಸ್ಥೆಯವರು ಚಂದಾ ಮೊಬಲಗು ಕೊಡುವುದಕ್ಕೆ ಅನುಕೂಲವಾಗುವುದಕ್ಕಾಗಿ ಕ್ರಮವಾಗಿ ಲೋಕಲ್ ಬೋರ್ಡುಗಳು ಮತ್ತು ಮ್ಯುನಿಸಿಪಲ್ ರೆಗ್ಯುಲೇಷನ್ನುಗಳನ್ನನುಸರಿಸಿ ವಿದ್ಯಾಭ್ಯಾಸದ ಸೆಸ್ಸನ್ನು ವಿಧಿಸಲಾಯಿತು. ಸರ್ಕಾರದವರು ಲೋಕಲ್‌ಫಂಡ್ಸ್ ಜನರಲ್ ಮತ್ತು ಮೊಹತರ್ಫ ಬಾಬಿನ ಹುಟ್ಟುವಳಿಯನ್ನು ಕೂಡಲೇ ತೆಗೆದುಕೊಂಡು ಅದರಿಂದ ಈ ಪೈಕಿ ಅತ್ಯಂತ ಜರೂರಾದ ಏರ್ಪಾಡುಗಳನ್ನು ಈ ವರ್ಷದ ಆದಿಯಲ್ಲಿಯೇ ಜಾರಿಗೆತರಲು ಸಾಧ್ಯವಾದೀತೆಂದು ನಿರೀಕ್ಷಿಸಿದ್ದರು. ಆದರೆ, ಸ್ಥಳೀಯ ಸಂಸ್ಥೆಗಳವರು ಈ ಹುಟ್ಟುವಳಿಗಳ ಆಧಾರದ ಮೇಲೆ ತಾವು ಈಚೆಗೆ ಅಭಿವರ್ಧಕ ಕಾರ್ಯಗಳನ್ನು ಕೈಗೊಂಡಿರುವುದಾಗಿಯೂ 1917 ನೆಯ ಇಸವಿಯ ಲಾಗಾಯಿತು ತಮ್ಮ ಖರ್ಚುಬಾಬು ಹೆಚ್ಚಿರುವುದಾಗಿಯೂ ತಿಳಿಸುತ್ತಾರೆ. ಸ್ಥಳೀಯ ಸಂಸ್ಥೆಗಳವರಿಂದ ಎಷ್ಟುಮಟ್ಟಿಗೆ ಈ ಬಾಬುಗಳ ಹುಟ್ಟುವಳಿಯನ್ನು ಅವರ ವರಮಾನಗಳಿಗೆ ವಿಶೇಷವಾಗಿ ಕುಂದಕಬಾರದಂತೆ ವಾಪ್ಸು ತೆಗೆದುಕೊಳ್ಳಬಹುದೆಂಬುದನ್ನೂ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಎಷ್ಟರಮಟ್ಟಿಗೆ ಖರ್ಚುಬಾಬು ಖೋತಾ ಮಾಡಬೇಕೆಂಬುದರಲ್ಲಿ ಅವರಿಗೆ ತಿಳವಳಿಕೆ ಕೊಡಬೇಕೆಂಬುದನ್ನೂ ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಈ ಕಾರಣಗಳಿಂದ ಮಂಜೂರಾಗಿರುವ ಸುಧಾರಣೆಗಳನ್ನು ಜಾರಿಯಲ್ಲಿ ತರುವುದಕ್ಕೆ ಸ್ವಲ್ಪ ಸಾವಕಾಶವಾದರೂ, ಸರ್ಕಾರದವರು ತಮ್ಮ ಕಾರ್ಯಕ್ರಮವನ್ನು ಜಾರಿಗೆ ತರಲು ಕ್ಷಿಪ್ರದಲ್ಲಿಯೇ ಸಾಧ್ಯವಾದೀತೆಂದು ನಂಬುತ್ತಾರೆ.

ವಿದ್ಯಾಭ್ಯಾಸಕ್ಕೆ ಹಣ ಒದಗಿಸುವುದು.

16. ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ತಗಲುವ ಖರ್ಚನ್ನು ಒದಗಿಸುವುದಕ್ಕೆ ದಿನೇ ದಿನೇ ಹೆಚ್ಚು ಹೆಚ್ಚಾಗಿ ಪ್ರಾಪ್ತವಾಗುತ್ತಿರುವ ಕಷ್ಟಗಳನ್ನು ಸಂಕ್ಷೇಪವಾಗಿ ಈ ಸಂದರ್ಭದಲ್ಲಿ ನಾವು ನಮೂದಿಸಬಹುದು. ಕಳೆದ ಕೆಲವು ವರ್ಷಗಳಿಂದಲೂ ಸೆಕೆಂಡರಿ ಸ್ಕೂಲುಗಳು ಮತ್ತು ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯು ವಿಶೇಷವಾಗಿ ಹೆಚ್ಚುತ್ತಿದೆ. ಸ್ಕೂಲುಗಳಿಗೆ ಸೇರಬೇಕೆಂಬ ವಿದ್ಯಾರ್ಥಿಗಳಿಗೆ ಸ್ಥಳ ಒದಗಿಸುವುದು ದಿನೇ ದಿನೇ ಬಹಳ ಕಷ್ಟಕ್ಕೆ ಬರುತ್ತಾ ಇದೆ. ಈಗಾಗಲೆ ವಿದ್ಯಾಭ್ಯಾಸಕ್ಕಾಗಿ ಸಂಸ್ಥಾನದ ಹುಟ್ಟುವಳಿಯಲ್ಲಿ ಶೇಕಡ 14 ರಷ್ಟು ಖರ್ಚಾಗುತ್ತಿದೆ. ಈ ಪೈಕಿ ಪ್ರೌಢವಿದ್ಯಾಭ್ಯಾಸಕ್ಕಾಗಿ ಮೂರನೆಯ ಎರಡು ಭಾಗವನ್ನು ಈಗಾಗಲೆ ಖರ್ಚು ಮಾಡುತ್ತಿದ್ದಾಗ್ಯೂ, ಅದಕ್ಕೆ ಇನ್ನೂ ಹೆಚ್ಚು ಹಣ ಬೇಕಾಗುತ್ತಲೇ ಇದೆ. ಅಲ್ಲದೆ ಗ್ರಾಮಾಂತರಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಸರಣೆಯ ಸಾವಕಾಶ ಮಾಡುವುದು ಸಾಧ್ಯವಲ್ಲ. ಈಗಿನ ನಮ್ಮ ದ್ರವ್ಯಾನುಕೂಲಸ್ಥಿತಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಇನ್ನೂ ಹೆಚ್ಚು ಹಣವನ್ನು ಒದಗಿಸುವುದು ಸಾಧ್ಯವೇ ಇಲ್ಲ. ಆದ್ದರಿಂದ ಪ್ರಾಥಮಿಕ ಮತ್ತು ಪ್ರೌಢವಿದ್ಯಾಭ್ಯಾಸಕ್ಕೆ ದಿನೇ ದಿನೇ ಹೆಚ್ಚು ಹೆಚ್ಚಾಗಿ ಬೇಕಾಗುತ್ತಿರುವ ಹಣವನ್ನು, ವಿದ್ಯಾಭ್ಯಾಸದ ಖರ್ಚುಬಾಬಿನಲ್ಲಿ ಯುಕ್ತವಾದ ಬದಲಾವಣೆಗಳನ್ನು ಮಾಡುವುದರಿಂದಲೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತಗಲುವ ಒಂದು ಭಾಗದ ಖರ್ಚನ್ನು ಸ್ಥಳೀಯತೆರಿಗೆಗಳ ಮೂಲಕ ಸ್ಥಳೀಯ ಸಂಸ್ಥೆಗಳಿಂದ ಸಹಾಯವಾಗಿ ಪಡೆಯುವುದರಿಂದಲೂ ಒದಗಿಸಬೇಕಾಗಿದೆ.

ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್‌ಗಳು.

17. ನಮ್ಮ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ವಿಧಿಸಿರುವ ಫೀಜುಗಳು ಇಂಡಿಯಾ ದೇಶದ ಇತರ ಭಾಗಗಳಲ್ಲಿರುವುದಕ್ಕಿಂತಲೂ ಬಹಳ ಕಮ್ಮಿಯಾಗಿವೆ. ಆರ್ಟ್ಸ್ ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳ ಪೈಕಿ ಸಾಮಾನ್ಯವಾಗಿ ಶೇಕಡಾ 40 ರಷ್ಟು ಮಂದಿಗೆ ಫೀಜು ಮಾಫ್ಮಾಡಲ್ಪಟ್ಟಿದೆ. B. Sc. ತರಗತಿಗಳಲ್ಲಿ ಭೌತಿಕಶಾಸ್ತ್ರವನ್ನೂ, ರಸಾಯನಶಾಸ್ತ್ರವನ್ನೂ ವ್ಯಾಸಂಗ ಮಾಡತಕ್ಕ ವಿಶಿಷ್ಟ ವಿದ್ಯಾರ್ಥಿಗಳಿಗೂ ಫೀಜು ಮಾಫ್ಮಾಡಿದೆ. ಇಂಜನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಪೈಕಿ ಶೇಕಡಾ 50 ಮಂದಿಗೆ ಫೀಜು ಮಾಫ್ಮಾಡಿದೆ; ಮಹಾರಾಣಿ ಕಾಲೇಜಿನಲ್ಲಿ ಫೀಜು ವಸೂಲ್ಮಾಡುವುದೇ ಇಲ್ಲ. ಯೂನಿವರ್ಸಿಟಿ ಎಂಟ್ರೆನ್ಸ್ ತರಗತಿಗಳ ವಿದ್ಯಾರ್ಥಿಗಳ ಪೈಕಿ ಶೇಕಡಾ 33⅓ ರಂತೆಯೂ, ಹೈಸ್ಕೂಲುಗಳಲ್ಲಿ ಶೇಕಡಾ 20 ರಂತೆಯೂ ಸ್ಕೂಲ್ ಫೀಜನ್ನು ಕೊಡುತ್ತಿಲ್ಲ. ಯೂನಿವರ್ಸಿಟಿ ಮತ್ತು ಹೈಸ್ಕೂಲು ತರಗತಿಗಳಲ್ಲಿ ಮಾಫ್ಮಾಡಲ್ಪಟ್ಟಿರುವ ಫೀಜಿನ ಒಟ್ಟು ಮೊಬಲಗು 87,000 ರೂಪಾಯಿ ಆಗುತ್ತದೆ. ಈಚೆಗೆ ಮಿಡಲ್ ಸ್ಕೂಲುಗಳಲ್ಲಿ ವಜಾಮಾಡಿರುವ ಫೀಜುಗಳನ್ನು ಸಹ ಲೆಕ್ಕಕ್ಕೆ ತೆಗೆದುಕೊಂಡರೆ ಫೀಜಿನಿಂದ ಬರುವ 2,37,000 ರೂಪಾಯಿನಷ್ಟು ವರಮಾನವು ತಪ್ಪಿಹೋದಂತಾಗುವುದು. ಇದೂ ಅಲ್ಲದೆ, ಹಿಂದುಳಿದ ಪಂಗಡಗಳ ವಿದ್ಯಾರ್ಥಿಗಳಿಗೆ ಕೊಡುವುದಕ್ಕೋಸ್ಕರ ಗೊತ್ತಾದ ಒಂದುಲಕ್ಷವೂ ಸೇರಿ ವಿದ್ಯಾರ್ಥಿವೇತನಗಳಿಗೆ ಒಟ್ಟು 4,47,828 ರೂಪಾಯಿ ಖರ್ಚಾಗುತ್ತದೆ. ಒಟ್ಟಿನಲ್ಲಿ ವಿದ್ಯಾರ್ಥಿವೇತನಗಳೂ, ಫ್ರೀಷಿಪ್‌ಗಳೂ, ಮಿಡಲ್ ಸ್ಕೂಲುಗಳಲ್ಲಿ ಮುಫತ್ತಾಗಿ ವಿದ್ಯಾವ್ಯಾಸಂಗ ಮಾಡಿಸುತ್ತಿರುವುದೂ ಸೇರಿಕೊಂಡು 6¾ ಲಕ್ಷ ರೂಪಾಯಿಗೆ ಜಾಸ್ತಿಯಾಗುತ್ತದೆ; ಈ ಮೊಬಲಗು ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ಬಡ್ಜೆಟ್ಟಿನಲ್ಲಿ ಒದಗಿಸಿರುವ ಒಟ್ಟು ಮೊಬಲಗಿನ ಪೈಕಿ ಶೇಕಡಾ 15½ ಯಷ್ಟಾಗುತ್ತದೆ. ಎಲ್ಲಾ ದರ್ಜೆಗಳ ವಿದ್ಯಾವ್ಯಾಸಂಗಕ್ಕೆ ಬೇಕಾಗುವ ಖರ್ಚಿಗೆ ಹಣ ಒದಗಿಸತಕ್ಕದ್ದು ಅತ್ಯಾವಶ್ಯಕವಾಗಿರುವುದರಿಂದ ಈಗ ಸಲ್ಲುತ್ತಿರುವ ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್‌ಗಳನ್ನು ಕಡಿಮೆ ಮಾಡುವುದು ಸಾಧ್ಯವೇ ಎಂಬುದು ಪರ್ಯಾಲೋಚಿಸತಕ್ಕ ವಿಷಯವಾಗಿದೆ. ಈ ವೇತನಗಳನ್ನು ಕ್ರಮಪಡಿಸತಕ್ಕ ವಿಷಯವು ಕೆಲವುಕಾಲದಿಂದ ಯೋಚನೆಯಲ್ಲಿದೆ. ಈ ವಿಷಯದಲ್ಲಿ ಯೂನಿವರ್ಸಿಟಿ ಕೌನ್ಸಿಲಿನವರೂ ವಿದ್ಯಾಭ್ಯಾಸದ ಬೋರ್ಡಿನವರೂ ಮತ್ತು ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರೂ ಕೊಟ್ಟಿರುವ ಅಭಿಪ್ರಾಯಗಳು ಸರ್ಕಾರದವರಿಗೆ ತಲುಪಿವೆ; ಈ ವಿಷಯವನ್ನು ಆಮೂಲಾಗ್ರವಾಗಿ ಪರಿಶೀಲನೆ ಮಾಡುವುದಕ್ಕೆ ಈಚೆಗೆ ನೇಮಕವಾದ ಕಮಿಟಿಯವರು ಸಂಸ್ಥಾನದಲ್ಲಿ ಕೊಡುತ್ತಿರುವ ವಿದ್ಯಾರ್ಥಿವೇತನಗಳನ್ನು 3,77,000 ರೂಪಾಯಿನಿಂದ 3,12,000 ರೂಪಾಯಿಗೂ ಬ್ರಿಟಿಷ್ ಇಂಡಿಯಾದಲ್ಲಿ ವ್ಯಾಸಂಗ ಮಾಡುವುದಕ್ಕೆ ಕೊಡುತ್ತಿರುವುದನ್ನು 66,680 ರೂಪಾಯಿನಿಂದ 32,620 ರೂಪಾಯಿಗೂ ಕಮ್ಮಿಮಾಡಿ, ಸ್ಕೂಲ್ ಫೀ ಮಾಫಿಗಳನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಿ ಒಂದು ತಿದ್ದುಪಾಟಾದ ಏರ್ಪಾಡನ್ನು ಜಾಹಿರ್ ಮಾಡಿರುತ್ತಾರೆ. ಅವರ ಸಲಹೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಸದ್ಯಕ್ಕೆ ಪ್ರಸಕ್ತ ವರ್ಷದಲ್ಲಿ ಇದುವರೆಗೂ ಇದ್ದ ರೀತಿಯಲ್ಲಿಯೇ ಸ್ಕೂಲ್‌ಫೀ ಮಾಫಿಗಳನ್ನು ನಡಿಸಿಕೊಂಡು ಬರತಕ್ಕದ್ದೆಂದು ಅನುಜ್ಞೆಗಳನ್ನು ಕೊಡಲಾಗಿದೆ.

ಕೈಗಾರಿಕೆಗಳು.

18. ಹೊಸ ಕೈಗಾರಿಕೆಗಳನ್ನು ಸರ್ಕಾರದವರೇ ಕೈಗೊಂಡು ಅವುಗಳು ಸರಿಯಾಗಿ ನಡೆಯುತ್ತವೆಯೆಂಬುದನ್ನು ದೃಢಪಡಿಸಿಕೊಂಡನಂತರ ಅವುಗಳನ್ನು ಖಾಸಗಿ ಜನಗಳಿಗೆ ಒಪ್ಪಿಸಿಬಿಡುವಂತೆ ಸರ್ಕಾರದವರು ಮಾಡಿದ ಏರ್ಪಾಡಿನಿಂದ ಪ್ರಯೋಜನವು ಕಂಡುಬಂದಿದೆ ಎಂಬುವುದಕ್ಕೆ ಕಳೆದ ವರ್ಷ ನಿದರ್ಶನವು ದೊರೆತಿರುವುದು ಸಂತೋಷಕರವಾಗಿದೆ. ಪಾತ್ರೆ ಮೊದಲಾದ ಸಾಮಾನುಗಳು ಸಂಸ್ಥಾನದಲ್ಲೇ ತಯಾರಾಗತಕ್ಕ ಬಗ್ಗೆ 1917 ನೆಯ ಇಸವಿಯ ಅಕ್ಟೋಬರ್ ಮಾಹೆಯಲ್ಲಿ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಲೋಹದ ಕಾರ್ಖಾನೆಯನ್ನು ಫರಾಣೆಯಾದ ಒಂದು ಕಂಪೆನಿಯವರು ತೆಗೆದುಕೊಂಡಿರುತ್ತಾರೆ. ಸರ್ಕಾರದ ಸಾಬೂನು ಕಾರ್ಖಾನೆಯನ್ನು ಸಹ ಸ್ಥಳೀಯ ಕಂಪೆನಿಗೆ ಕೊಟ್ಟುಬಿಡತಕ್ಕ ಬಗ್ಗೆ ವಿಚಾರನಡೆಯುತ್ತಿದೆ. ಕೈಗಾರಿಕೆಯ ಇಲಾಖೆಯವರು ಪ್ರಾರಂಭಿಸಿದ ಕೈಗಾರಿಕೆಗಳನ್ನು ನ್ಯಾಯವಾದ ಷರತ್ತುಗಳ ಮೇಲೆ ಸ್ವಂತಾಡಳಿತಕ್ಕೆ ತೆಗೆದುಕೊಳ್ಳುವುದಕ್ಕೆ ವರ್ತಕ ಜನಗಳು ಮುಂದಾಳುಗಳಾಗಿ ಬರುವಂತೆ ಕೆಲಸನಡಿಸಿದ್ದಕ್ಕಾಗಿ ಅವರು ಮೆಚ್ಚಿರುವುದರಿಂದ ಈ ಇಲಾಖೆಯವರು ಅಭಿನಂದನಗಳಿಗೆ ಪಾತ್ರರಾಗಿರುತ್ತಾರೆ. ಈ ಇಲಾಖೆಯವರು ಬೆಂಗಳೂರು ಹತ್ತಿರ ಕಂಡುಹಿಡಿದ ಕೆಯೋಲಿನ್ ಎಂಬ ಒಂದು ತರಹೆಯ ಜೇಡಿಮಣ್ಣನ್ನು ಉಪಯೋಗಿಸಿಕೊಳ್ಳುವ ಹಕ್ಕನ್ನು ಸದರಿ ಮಣ್ಣನ್ನು, ಸಂಸ್ಥಾನದಿಂದ ಹೊರಗೆ ರಫ್ತು ಮಾಡಕೂಡದೆಂಬ ಷರತ್ತಿಗೆ ಒಳಪಡಿಸಿ, ಕೆಲವು ರಿಯಾಯಿತಿ ಷರತ್ತುಗಳ ಮೇಲೆ ಖಾಸಗಿ ಕಂಪೆನಿಗೆ ವರ್ಗಾಯಿಸಿದೆ.

19. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿಯೂ ಅವುಗಳ ಸಮೀಪದಲ್ಲಿಯೂ ಕೈಗಾರಿಕೆಗಳ ಸಂಬಂಧವಾದ ಚಟುವಟಿಕೆಯು ಬಹಳ ಮಟ್ಟಿಗೆ ಕಂಡುಬರುತ್ತಿದೆ. ಮತ್ತು ನಾನಾವಿಧವಾದ ಭಾರೀ ಕಾರ್ಖಾನೆಗಳು ಬೇಗಬೇಗನೆ ಪ್ರಾರಂಭವಾಗುತ್ತಲಿವೆ. ಆಯಾ ಸ್ಥಳಗಳಲ್ಲಿ ಅನುಕೂಲತೆ ಇರುವ ಕೆಲವು ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಅವಶ್ಯಕವಾಗಬಹುದಾದ ರಿಯಾಯಿತಿಗಳಿಗೋಸ್ಕರ ಜಾಯಿಂಟ್‌ಸ್ಟಾಕ್ ಕಂಪನಿಗಳವರೂ, ವರ್ತಕರೂ ದರಖಾಸ್ತುಗಳನ್ನು ಕೊಡಬಹುದೆಂತ ಸರ್ಕಾರದವರು ತಿಳಿಯಿಸಿರುತ್ತಾರೆ. ಒಂದು ಭಾರೀ ಸಕ್ಕರೇ ಕಾರ್ಖಾನೆಯನ್ನು ಸ್ಥಾಪಿಸಲು ರಿಯಾಯತಿಗಳನ್ನು ಕೋರಿ ನಾಲ್ಕು ದರಖಾಸ್ತುಗಳು ಬಂದು ಅವು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

20. ಮಿ|| ಪಿ. ಜಿ. ಡಿಸೌಜಾಯವರು ಯೂರೋಪ್ ಮತ್ತು ಅಮೆರಿಕಾಖಂಡಗಳಲ್ಲಿ ನಡಿಯುತ್ತಿರುವ ಕೈಗಾರಿಕೆ ಮತ್ತು ವ್ಯಾಪಾರಗಳ ಅಭಿವೃದ್ಧಿಯ ಕ್ರಮವನ್ನೂ ಸಂವಿಧಾನಗಳನ್ನೂ ಕಳೆದ ಹತ್ತು ತಿಂಗಳಕಾಲ ಪರಿಶೀಲನೆಮಾಡಿ ನೋಡಿಕೊಂಡು ಈಗತಾನೇ ಮೈಸೂರಿಗೆ ವಾಪಸು ಬಂದಿರುತ್ತಾರೆ. ಇವರಿಗೆ ಈ ಇಲಾಖೆಯ ಆಡಳಿತವನ್ನು ವಹಿಸಿದೆ. (ಸಶೇಷ.)

೧೯೨೧ ನೆಯ ಇಸವಿ ಅಕ್ಟೋಬರ್ ತಾ|| ೧೬ರಿಂದ ೧೯೨೧ ನೆಯ ಅಕ್ಟೋಬರ್ ತಾ|| ೨೨ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಆಶ್ವೀಜ ಶುದ್ಧ ಪೌರ್ಣಿಮಿಯಿಂದ ಆಶ್ವೀಜ ಬಹುಳ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕ.ತು ಮಾಸ
16	[1]ಭಾನು	ಪೌರ್ಣ	54-17	ರೇವ	54-7	31
17	[2]ಸೋಮ	ಪಾಡ್ಯ	55-44	ಅಶ್ವಿ	56-57	1
18	[3]ಮಂಗಳ	ಬಿದಿ	55-37	ಭರ	58-28	2
19	ಬುಧ	ತದಿ	54-27	ಕೃತ್ತಿ	58-44	3
20	ಗುರು	ಚೌತಿ	50-57	ರೋಹಿ	57-56	4
21	ಶುಕ್ರ	ಪಂಚ	48-22	ಮೃಗ	56-0	5
22	ಶನಿ	ಷಷ್ಠಿ	43-48	ಆರ್ದ್ರಾ	54-15	6

(1) ಚಂದ್ರಗ್ರಹಣಂ. (2) ತುಲಾವಿಷುವತ್ಪುಣ್ಯಕಾಲಂ. (3) ಶ್ರೀ ಚಾಮುಂಡೇಶ್ವರೀರಥಃ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಮಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೮) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಅಕ್ಟೋಬರ್ ತಾರೀಖು ೨೩ ನೆಯ ಭಾನುವಾರ (ಸಂಚಿಕೆ ೪೦

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
40 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0

ಬಿಡಿ ಮಣಿಗಳು 1ಕ್ಕೆ ಕ್ರಯ

ಮುಖ	ರೂ.	ಇಂದ	ರೂ. ವರೆಗೆ.
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ಸಿಸಿಪಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅವಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ.40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
34 ಕಂಪನಿ, ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವೃತಪಂಚಕ	೦— ೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 23

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☛ ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರಪುರಾಣ, ತತ್ವಪ್ರಕಾಶಿಕೆ, ಸಟೀಕಶತಕತ್ರಯ, ಈ ಗ್ರಂಥಗಳ ಅಚ್ಚಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಅಚ್ಚಾದನಂತರ ಪ್ರಕಟಿಸುತ್ತೇವೆ. ಅದುವರೆಗೂ ಈ ಗ್ರಂಥಗಳನ್ನುಕೋರಿ ಯಾರೂ ಬರೆಯಕೂಡದು.

☛ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ತಿದ್ದುವಿಕೆ.

ಕಳೆದ ಆಗಸ್ಟ್ ತಾ|| ೭ರ ಸ್ಟಾರ್‌ಪತ್ರದಲ್ಲಿ ನಮ್ಮ ತಿ|| ನರಸಿಪುರದ ಬಾತ್ಮೀದಾರರೊಬ್ಬರು ಅಲ್ಲಿಯ ತಿರುಕುಲದವರ ಸಂಬಂಧವಾಗಿ ಕೊಟ್ಟಿರುವ ಪತ್ರವ್ಯವಹಾರದಲ್ಲಿ ತಿರುಕುಲದ ಹೊಲೆಯರೆಂದು ಕಾಣಿಸಿದ್ದಾರೆ. ಇವರಿಗೆ ತಿರುಕುಲನೆಂದು ಹೆಸರಿದೆಯೇ ಹೊರತು ಇನ್ನೇನೂ ಇಲ್ಲವೆಂದು ಆ ಜನರಲ್ಲಿ ಕೆಲವರು ನಮ್ಮಲ್ಲಿಗೆ ಬಂದು ತಿಳಿಯಿಸಿರುವುದರಿಂದ, ಹೊಲೆಯರೆಂಬ ಹೆಸರನ್ನು ಬಿಟ್ಟು ತಿರುಕುಲದವರು ಎಂದು ಮಾತ್ರ ಆ ಲೇಖನದಲ್ಲಿ ತಿದ್ದಿ ಓದಿಕೊಳ್ಳಬೇಕೆಂದು ನಮ್ಮ ವಾಚಕರಿಗೆ ಶ್ರುತಪಡಿಸುತ್ತೇವೆ. ಸಂ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್ನಿನ ತೃತೀಯಾಧಿವೇಶನ.

ಕಳೆದ ಆಶ್ವಯುಜಶುದ್ಧ ಏಕಾದಶಿ (ತಾ|| 12-10-21) ಬುಧವಾರ ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್ನಿನ ತೃತೀಯ ವಾರ್ಷಿಕಾಧಿವೇಶನವು ಸಾಲಿಗ್ರಾಮದ ಶ್ರೀಯುತ ಸರಾಫ್ ಪದ್ಮರಾಜಯ್ಯನವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಶ್ರೀಮಾನ್ ಮೋತೀಖಾನಾ ಲಕ್ಷ್ಮೀಪತಯ್ಯನವರ ವಿದ್ಯಾರ್ಥಿನಿಲಯದಲ್ಲಿ ನಡೆಯಿತು. ಈ ಸಭೆಗೆ ಮೈಸೂರು ದೇಶದ ಮತ್ತು ಹೊರಗಿನ ಅನೇಕ ದೊಡ್ಡ ಮನುಷ್ಯರು ದಯಮಾಡಿಸಿದ್ದರು. ಸಭೆಯಲ್ಲಿ ಪ್ರಥಮತಃ ದೇವತಾಪ್ರಾರ್ಥನೆಯಾದನಂತರ ಮ|| ಎ. ಶಾಂತಿರಾಜ ಶಾಸ್ತ್ರಿಗಳವರು ಸಭಾಧ್ಯಕ್ಷರ ಜೀವನಚರಿತ್ರೆಯನ್ನು ಸಂಕ್ಷೇಪವಾಗಿ ಹೇಳಿ ಸಭಾಧ್ಯಕ್ಷತೆಯನ್ನು ವಹಿಸಬೇಕೆಂದು ಸೂಚಿಸಿದ್ದನ್ನು ಶ್ರವಣಬೆಳುಗೊಳದ ಶ್ರೀಯುತ ಪದ್ಮರಾಜಯ್ಯನವರು ಅನುಮೋದಿಸಿದರು. ಬಳಿಕ ಈ ಅಸೋಸಿಯೇಷನ್ನಿನ ಪ್ರೆಸಿಡೆಂಟರಾಗಿಯೂ ಮತ್ತು ನಮ್ಮ ಸಮಾಜಕ್ಕೆ ರತ್ನಪ್ರಾಯರಾಗಿಯೂ ಇರುವ ಶ್ರೀಯುತ ಎಂ. ಎಲ್. ವರ್ಧಮಾನಯ್ಯನವರು ಜೈನಸಮಾಜದ ನ್ಯೂನತೆಗಳನ್ನೂ ಈ ಸಮಾಜದಲ್ಲಿರುವ ಅನೇಕ ಐಶ್ವರ್ಯವಂತರುಗಳು ಕೇವಲ ಸ್ವಪ್ರಯೋಜನಪರರಾಗಿ ತಮ್ಮ ಕರ್ತವ್ಯವನ್ನು ಮರೆತು ಸಂಪೂರ್ಣವಾಗಿ ಧನವನ್ನು ಯಾವಾಗಲೂ ಕೂಡಿಹಾಕುವ ಪ್ರಯತ್ನ ಮಾಡುತ್ತಲಿದ್ದಾರೆಯೇ ಹೊರ್ತು ಸರಿಯಾದ ರೀತಿಯಲ್ಲಿ ಧರ್ಮಪ್ರಸಾರಕ್ಕಾಗಿ ಗಳಿಸಲಾರದವರಾಗಿ ಇರುವರೆಂಬ ವಿಷಯವನ್ನೂ ನಮ್ಮ ಭಟ್ಟಾರಕಸ್ವಾಮಿಗಳು ನಮ್ಮ ಸಮಾಜೋನ್ನತಿಗೆ ಮಾಡಬೇಕಾದಕರ್ತವ್ಯಗಳ ವಿಷಯದಲ್ಲಿಯೂ ಶ್ಲಾಘನೀಯವಾದ ಉಪನ್ಯಾಸವನ್ನು ಮಾಡಿದರು. ಸೆಕ್ರೆಟರಿಗಳು ತಮ್ಮ ರಿಪೋರ್ಟನ್ನು ಓದಿ ತಿಳಿಸಿದನಂತರ ಸಭಾಧ್ಯಕ್ಷರು ಈ ಅಸೋಸಿಯೇಷನ್ನನ್ನು ಅಭಿವೃದ್ಧಿಗೆ ತರಲು ಜೈನಬಾಂಧವರು ಮಾಡಬೇಕಾದ ಕರ್ತವ್ಯಗಳನ್ನೂ ಸಮಾಜದವರು ಈ ಮತೋನ್ನತಿಗೆ ಮಾಡಬೇಕಾದ ಇತರ ಕರ್ತವ್ಯಗಳನ್ನೂ ಸಮಾಜದಲ್ಲಿರುವ ನ್ಯೂನಾತಿರಿಕ್ತಗಳನ್ನೂ ಕುರಿತು ಅತ್ಯಂತ ಮಧುರವಾದ ಭಾಷಣಮಾಡಿ ಈ ಈ ಫಂಡಿಗೆ 1000 ರೂಪಾಯಿಗಳ ಧರ್ಮಸಹಾಯ ಮಾಡಿದರು. ಪುನಃ ಸಾಯಂಕಾಲ 4 ಗಂಟೆಗೆ ಸಭೆಯು ಪ್ರಾರಂಭವಾಗಿ ಅನೇಕ ಚರ್ಚೆಗಳು ನಡೆದು ಹಲವು ರೆಸಲ್ಯೂಷನ್‌ಗಳು ಪ್ಯಾಸ್ ಮಾಡಲ್ಪಟ್ಟವು. ಬೆಂಗಳೂರು ಶ್ರೀಯುತ ಎಂ. ಪದ್ಮನಾಭಯ್ಯನವರು ಸ್ವರ್ಗಸ್ಥರಾದ ತಮ್ಮ ಪೂಜ್ಯಪಿತೃ ಶ್ರೀಮಾನ್ ತಿಮ್ಮಪ್ಪಯ್ಯನವರ ಜ್ಞಾಪಕಾರ್ಥವಾಗಿ ಬೆಂಗಳೂರಿನಲ್ಲಿ ಕಟ್ಟಿಸಿರುವ ಸುಮಾರು ಇಪ್ಪತ್ತೈದು ಸಹಸ್ರ ರೂಪಾಯಿ ಬೆಲೆ ಬಾಳುವ ಜೈನ ವಿದ್ಯಾರ್ಥಿನಿಲಯವನ್ನು ನಮ್ಮ ಅಸೋಸಿಯೇಷನ್ನಿಗೆ ವಹಿಸಿಕೊಟ್ಟದ್ದಕ್ಕಾಗಿ ಅವರಿಗೆ ಈ ಅಸೋಸಿಯೇಷನ್ನಿನ ಪರವಾಗಿ ವಂದನೆಗಳನ್ನು ಅರ್ಪಿಸಬೇಕೆಂದು ತೀರ್ಮಾನವಾಯಿತು. ನಂತರ ಮಾರನೇ ದಿನದಿಂದ ಬಂದಿದ್ದ ಪಂಡಿತ ಖೂಬ್‌ಚಂದ್ರಜಿಯವರು ಸಮ್ಯಕ್‌ಜ್ಞಾನ ಮತ್ತು ಅದರ ಫಲದ ವಿಷಯವಾಗಿಯೂ ಮತ್ತು ಅವರ ಜೊತೆಯಲ್ಲಿ ಬಂದಿದ್ದ ಮ|| ಬಾಲಕೃಷ್ಣಜೀ ಬಿ. ಎ. ಯವರು "ಪುರುಷಾರ್ಥ" ದ ಮೇಲೆಯೂ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಕೊನೆಯಲ್ಲಿ ಶ್ರೀಮಾನ್ ಮಹಾರಾಜರವರಿಗೂ ರಾಜಮನೆತನಕ್ಕೂ ಸಭಾಧ್ಯಕ್ಷರಿಗೂ ಆಯುರಾರೋಗ್ಯಾದಿಗಳು ಚಿರಕಾಲ ವೃದ್ಧಿಯಾಗಲೆಂದು ಭಗವಂತನನ್ನು ಪ್ರಾರ್ಥಿಸಿದನಂತರ ಜಯಘೋಷಗಳಿಂದ ಸಭೆಯು ಮುಕ್ತಾಯವಾಯಿತು. ತರುವಾಯ ಸರ್ವರೂ ದೇವಸ್ಥಾನಕ್ಕೆ ದಯಮಾಡಿಸಿ ಪೂಜೋತ್ಸವಗಳನ್ನು ತೀರಿಸಿಕೊಂಡು ತಮ್ಮ ಬಿಡಾರಕ್ಕೆ ತೆರಳಿದರು.

ಪ್ರತ್ಯಕ್ಷದರ್ಶಿ.

ದೊಡ್ಡಬಳ್ಳಾಪುರ.

ಇದೇ ತಾಲ್ಲೂಕು ಅಮಲ್ದಾರರಾಗಿದ್ದ ಮೆ|| ಆರ್. ತಮ್ಮಾಜಿರಾವ್ ಬಿ. ಎ. ಎಲ್. ಎಲ್. ಬಿ., ಯವರು ಮಂಜರಾಬಾದಿಗೆ ವರ್ಗಾಯಿಸಲ್ಪಟ್ಟರು. ಈ ರೀತಿಯಾಗಿ ಅವರು ಈ ತಾಲ್ಲೂಕನ್ನು ಬಿಟ್ಟು ಹೊರಡುವ ಸಂದರ್ಭದಲ್ಲಿ ಇಲ್ಲಿನ ಪುರನಿವಾಸಿಗಳು ತಮಗೆ ಅವರಮೇಲಿದ್ದ ಪ್ರೀತಿವಿಶ್ವಾಸವನ್ನೂ ಅವರ ವರ್ಗದಿಂದುಂಟಾದ ವಿಷಾದವನ್ನೂ ೩ನೆ ತಾ|| ನಲ್ಲಿ ತೋರ್ಪಡಿಸಿದರು. ಅದಿನ ಮಧ್ಯಾಹ್ನ ೪ ಗಂಟೆಗೆ ಅಮಲ್ದಾರರನ್ನು ಊರಿನ ಪ್ರಮುಖರೆಲ್ಲರೂ ಸೇರಿ ವಾದ್ಯಘೋಷದೊಡನೆ ಆಸ್ಪತ್ರೆಬಳಿಗೆ ಕರೆದುಕೊಂಡುಬಂದು. ಅಲ್ಲಿ ಅವರೊಡನೆ ಫೋಟೊತೆಗಿಸಿಕೊಂಡನಂತರ ಫಲಾ

ಹಾರವನ್ನು ಮಾಡಲು ಆ ದಿನದ ಮುಖ್ಯ ಅತಿಥಿಯೂ ಊರಿನ ಮುಂದಾಳುಗಳೂ ಗೊತ್ತಾದಸ್ಥಳಕ್ಕೆ ಹೋದರು. ಮುಖ್ಯ ಅತಿಥಿಸತ್ಕಾರ ನಡೆಯುತ್ತಿದ್ದಾಗ ಸುಖವಾದ ನಾಗಸ್ವರದ ಶಬ್ದವು ಆ ಕೂಟದಲ್ಲಿ ನೆರೆದಿದ್ದವರನ್ನೆಲ್ಲರನ್ನೂ ಬಹಳ ಆನಂದಪಡಿಸಿತು. ಈ ವಿಧವಾದ ಉಪಚಾರಗಳೆಲ್ಲವೂ ನಡೆದನಂತರ ಅತಿಥಿಗಳನ್ನು ವಾದ್ಯಘೋಷ ಸಮಾರಂಭದೊಡನೆ ಅಲಂಕರಿಸಲ್ಪಟ್ಟಿದ್ದ ಗ|| ಗರ್ಲ್ಸ್ ಸ್ಕೂಲಿಗೆ ಕರೆದುಕೊಂಡುಬಂದು ಸ್ಥಳದ ಮುನ್ಸೀಫರು ಮ|| ಟಿ. ಶಾಮಯ್ಯಂಗಾರ ರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡಿಸಿದರು. ಹರಿಕಥೆ, ಸಂಗೀತ, ತತ್ವಜ್ಞಾನಬೋಧೆ ಇವುಗಳಿಂದ ನೆರೆದಿದ್ದ ಸಮಸ್ತ ಜನರನ್ನೂ ಆನಂದಗೊಳಿಸಿದರು ಹರಿಕಥೆಯು ಮುಕ್ತಾಯವಾದನಂತರ ಅತಿಥಿಗಳ ಗೌರವಾರ್ಥವಾಗಿ ಮಾಡಿದ್ದ ಕೆಲವು ಪದ್ಯಗಳು ಸಮಯೋಚಿತವಾದ ಅರ್ಥದೊಡನೆ ಮೃದುಸ್ವರದಲ್ಲಿ ಹೇಳಲ್ಪಟ್ಟವು. ಹಿಂದೂಸ್ತಾನಿ; ತೆಲುಗು ಮತ್ತು ಕನ್ನಡ ಈ ಭಾಷೆಗಳಲ್ಲಿ ಅತಿಥಿಗಳ ಅಗಲುವಿಕೆಯಿಂದುಂಟಾದ ಮನಃಕ್ಲೇಶವನ್ನು ಸೂಚಿಸಿದರು. ಅನಂತರ ಅವುಲ್ದಾರರವರು ನಿಂತು ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿ ಪುರನಿವಾಸಿಗಳು ಮಾಡಿದ ಗೌರವಕ್ಕೆ ತಮ್ಮ ವಂದನೆಗಳನ್ನು ಸಮರ್ಪಿಸಿ, ಈ ಸ್ಥಳವನ್ನೂ ಮತ್ತು ಪ್ರಜೆಗಳನ್ನೂ ನಾನು ಎಂದಿಗೂ ಮರೆಯುವುದಿಲ್ಲವೆಂದು ಹೇಳಿ ಕೋಲಾಹಲದ ಮಧ್ಯೆ ತಮ್ಮ ಸ್ಥಾನವನ್ನು ಅಲಂಕರಿಸಿದರು. ಅವರ ಸ್ಥಾನಕ್ಕೆ ಈಗ ದಯಮಾಡಿಸಿರುವ ಅವುಲ್ದಾರ್ ಮಿ|| ಬಿ. ಮೊಹಿಯುದ್ದೀನ್ ಷರೀಫ್ ಸಾಹೇಬರವರು ಪ್ರಜೆಗಳೆಲ್ಲರೂ ಇದೇ ರೀತಿಯಾದ ಪ್ರೀತಿ ವಿಶ್ವಾಸವನ್ನಿಟ್ಟು ತಮ್ಮ ಕಾರ್ಯದಲ್ಲಿ ಸಹಾಯಮಾಡಬೇಕೆಂದು ಭಾಷಣ ಕೊಟ್ಟರು. ಸಭಾಧ್ಯಕ್ಷರು ಸಮಯಕ್ಕನುಸಾರವಾಗಿ ಭಾಷಣಮಾಡಿದನಂತರ ಗಂಧ, ಪುಷ್ಪ, ತಾಂಬೂಲಗಳು ಹಂಚಲ್ಪಟ್ಟಮೇಲೆ ಸಭೆಯು ಮುಕ್ತಾಯವಾಯಿತು. ಅನಂತರ ಅತಿಥಿಗಳನ್ನು ವಾದ್ಯಘೋಷದೊಡನೆ ಅವರ ಬಿಡಾರಕ್ಕೆ ಬಿಟ್ಟುಬಂದರು. ಮರುದಿನ ಪುನಃ ಬ್ಯಾಂಡು ಸಮೇತ ಮ|| ಆರ್. ತಮ್ಮಾಜಿರಾಯರನ್ನು ರೈಲ್ವೆ ಸ್ಟೇಷನ್ ಬಳಿಗೆ ಕರೆದುಕೊಂಡು ಬಂದು ಉಚಿತ ಸಂಭಾಷಣೆಗಳಿಂದ ಕಳುಹಿಸಿಕೊಟ್ಟರು.

ಡಿ. ಕೊಂಗಾಡಿಯಪ್ಪ, ರಿಟೈರ್ಡ್ ಹೆಡ್ಮಾಸ್ಟರ್.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಅಕ್ಟೋಬರ್ ತಾ|| ೨೩ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆ

ಈ ಸಭೆಯ ಕಾರ್ಯಗಳು ಕಳೆದ ಗುರುವಾರ ಸಾಯಂಕಾಲ ೬ ಗಂಟೆಗೆ ಪೂರ್ಣವಾದುದರಿಂದ ಒಟ್ಟು ೬ ದಿನಗಳ ಕಾಲ ನಡೆದಂತಾಯಿತು. ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಗಳಲ್ಲಿ ಈಸಲದ ಸಭೆಯು ವಿಶೇಷ ಗಣನೀಯವಾದುದೆಂದು ಹೇಳಿಕೊಳ್ಳಲು ಅರ್ಹವಾಯಿತು. ಅತ್ಯಂತ ಪ್ರಾಮುಖ್ಯವುಳ್ಳ ಕೆಲವು ವಿಷಯಗಳ ಚರ್ಚೆಯು ವಿಸ್ತಾರವಾಗಿ ನಡೆಯುವುದಕ್ಕೆ ಇದರಲ್ಲಿ ಅವಕಾಶ ಕೊಡಲ್ಪಟ್ಟಿದ್ದುದರಿಂದಲೂ, ಅವುಗಳ ಪರ್ಯವಸಾನವು ಹೇಗಾಗುವುದೋ ನೋಡಬೇಕೆಂದು ಬಹುಭಾಗದ ಜನರಿಗೆ ಕುತೂಹಲವಿದ್ದುದರಿಂದಲೂ, ಕಳೆದವರ್ಷ ವಿಷಯ ಚರ್ಚೆಯನ್ನೇ ಮಾಡದೆ ಸಹಾಯನಿರಾಕರಣವನ್ನು ಮಾಡಿದ್ದ ಬ್ರಾಹ್ಮಣ ಪ್ರತಿನಿಧಿಗಳು ಈಸಲ ಹೇಗೆ ಮಾಡುವರೋ ನೋಡಬೇಕೆಂಬ ನಿರೀಕ್ಷಣೆಯು ಬಹುಜನರಿಗಿ ಇದ್ದುದರಿಂದಲೂ ಈಸಲದ ಸಭೆಗೆ ವಿಶೇಷಪ್ರಾಶಸ್ತ್ಯವು ಬಂದಿದ್ದಿತು. ಅಷ್ಟೇಅಲ್ಲದೆ ರಾಜಧಾನಿಯಲ್ಲಿ ಪ್ಲೇಗು ವ್ಯಾಪಿಸಿದೆಯೆಂಬ ಸುದ್ದಿಯು ಹರಡಿದ್ದರೂ ಅದನ್ನು ಲೆಕ್ಕಿಸದೆ ಪ್ರಜಾಪ್ರತಿನಿಧಿಗಳಲ್ಲಿ ೨೦೦ ಮಂದಿಗಿಂತಲೂ ಹೆಚ್ಚಾಗಿಯೇ ಬಂದು ಸಭಾಕಾರ್ಯದಲ್ಲಿ ಅಂಗವಾಗಿದ್ದುಕೊಂಡು ಕೊನೆಯವರೆಗೂ ನಡೆಯಿಸಿದರು. ಪ್ರತಿನಿಧಿಗಳು ಚರ್ಚೆ ನಡೆಯಿಸುವಾಗ ಕೆಲಕೆಲರು ಆವೇಶದಿಂದಲೋ ದುಡುಕಿನಿಂದಲೋ ಪೂರ್ವೋತ್ತರವನ್ನು ಅರಿಯದ ಸಂದರ್ಭದಿಂದಲೋ ಕೆಲಕೆಲವು ಹೆಚ್ಚು ಕಡಿಮೆ ಮಾತುಗಳನ್ನು ಆಡಿದರೂ ಸಭಾಧ್ಯಕ್ಷರಾದ ದಿವಾನರವರು ಅವೊಂದನ್ನೂ ಗಮನಿಸದೆ ಮುಖ್ಯವಾಗಿ ಪ್ರಜಾಭಿಪ್ರಾಯವನ್ನು ತಿಳಿಯಬೇಕೆಂಬ ಒಂದು ಉದಾರವಾದ ತತ್ತ್ವಕ್ಕೇ ಗಮನಕೊಟ್ಟು ಸಭಿಕರನ್ನು ಗದರಿಸದೆ ಎಲ್ಲರೂ ಅವರವರ ಅಭಿಪ್ರಾಯಗಳನ್ನು ಸಂಕೋಚವಿಲ್ಲದೆ ಸರಾಗವಾಗಿ ಹೇಳಿಕೊಳ್ಳುವುದಕ್ಕೆ ಅವಕಾಶಕೊಟ್ಟು ಪ್ರಜೆಗಳ ಮೇಲೆ ಸ್ವಭಾವವಾಗಿ ತಮಗಿರುವ ಪ್ರೀತಿ, ಕಾರುಣ್ಯ, ಅಭಿಮಾನ, ಸಹನೆ-ಈ ಶ್ರೇಷ್ಠ ಗುಣಗಳನ್ನೆಲ್ಲಾ ವ್ಯಕ್ತಪಡಿಸಿ, ಗೌರವ ದರ್ಪಗಳಿಗೆ ಕೊರತೆ ಬರದಂತೆ ಸಭಾಕಾರ್ಯಗಳನ್ನು ಜರುಗಿಸಿದರು. ಹಿಂದೆ ಎಷ್ಟೋ ಅಧಿವೇಶನಗಳಲ್ಲಿ ೫೦-೬೦-೭೦ ಮಂದಿ ಪ್ರತಿನಿಧಿಗಳು ಸಭೆಗೆ ಬರುವುದೂ, ಸಭಾಕಾರ್ಯಗಳು ಉತ್ಸಾಹವಿಲ್ಲದೆ ನಡೆಯುವುದೂ, ಚರ್ಚೆಗಿಡಲ್ಪಟ್ಟಿದ್ದ ಪ್ರತಿಯೊಂದು ವಿಷಯಕ್ಕೂ ಪ್ರಮುಖರಾದ ಕೆಲ ಮೆಂಬರುಗಳೇ ಮುಂದೆನಿಂತು ಬಾಯಿಹಾಕಿ ಇತರ ಸಭಿಕರುಗಳು ಸರಳವಾಗಿ ತಂತಮ್ಮ ಅಭಿಪ್ರಾಯಗಳನ್ನು ಹೇಳಲಿಕ್ಕೆ ಅವಕಾಶವಿಲ್ಲದಂತೆ ಮಾಡುವುದೂ ಸಂಪ್ರದಾಯವಾಗಿದ್ದಿತು. ಅವೆಲ್ಲಾ ಈಗ ಬದಲಾವಣೆಗೊಂಡುವು. ಈ ಕಾರಣದಿಂದ ಪ್ರತಿಯೊಬ್ಬ ಸಭಿಕರಿಗೂ ಉತ್ಸಾಹಧೈರ್ಯಗಳೂ ಅಭಿಮಾನವೂ ಹೆಚ್ಚಿದುವು. ಎಲ್ಲರೂ ಧಾರಾಳವಾಗಿ ತಮ್ಮ ಅಭಿಪ್ರಾಯಗಳನ್ನು ತಾವುತಾವೇ ತಿಳಿಯಿಸಿ ರಾಜ್ಯಕಾರ್ಯದಲ್ಲಿ ತಮಗೆ ಎಷ್ಟು ಕುತೂಹಲವಿದೆಯೆಂಬುದನ್ನು ವ್ಯಕ್ತಪಡಿಸಿದರು. ಇದು ಮುಂದೆ ಹೀಗೆಯೇ ಅಭಿವೃದ್ಧಿಗೊಳ್ಳುತ್ತಬಂದರೆ ಸಭಾಕಾರ್ಯಗಳು ತುಂಬಾ ಫಲಪ್ರದವಾಗುತ್ತಾ ಬರುವುವೆಂಬುದರಲ್ಲಿ ಸಂಶಯವಿಲ್ಲ.

ಇಂಥ ಪರಿಣಾಮವಾಗುವುದಕ್ಕೆ ಮುಖ್ಯವಾಗಿ ಕೇವಲ ರಾಜಸಮೀಪಬಂಧುಗಳೂ ವಿದ್ಯಾವಂತರೂ ಪ್ರಜಾಭಿಮಾನಿಗಳೂ ಆದ ಮಹನೀಯರೊಬ್ಬರು ಸಂಸ್ಥಾನದ ಮಂತ್ರಿಪದವಿಯನ್ನು ಅಲಂಕರಿಸಿದುದೇ ಕಾರಣವಾಗಿರುತ್ತದೆ. ನಮ್ಮ ಸಹೋದರರಾದ ಭಾರತೀಯ ಪ್ರಜೆಗಳು ಈ ಭರತಖಂಡದ ರಾಜಪ್ರತಿನಿಧಿ (ವೈಸ್ರಾಯಿ ಮತ್ತು ಗೌರ್ನರ್‌ಜನರಲ್) ಪದವಿಗೆ ಯಾವಾಗಲೂ ಚಕ್ರವರ್ತಿಗಳ ಸಮೀಪಬಂಧುಗಳೊಬ್ಬರನ್ನು ನಿಯಮಿಸುವಂತೆ ಮಾಡಬೇಕೆಂದು ರಾಷ್ಟ್ರೀಯ ಮಹಾಸಭೆಯ ಮೂಲಕ ಬಹುಕಾಲದಿಂದಲೂ ಪ್ರಾರ್ಥಿಸುತ್ತ ಬರುತ್ತಿದ್ದುದಕ್ಕೆ ಕಾರಣವೇನು ಅದರ ಪ್ರಯೋಜನಗಳೆಷ್ಟು ಎಂಬುದನ್ನು ಈ ನಮ್ಮ ಮೈಸೂರು ಸಂಸ್ಥಾನದ ಮಂತ್ರಿಪದವಿಗೆ ಶ್ರೀಮನ್ಮಹಾರಾಜರ ಪ್ರತಿನಿಧಿಗಳಾಗಿ ಸರ್ ಸರ್ದಾರ್ ಎಂ. ಕಾಂತರಾಜಅರಸಿನವರು ಬಂದುದರಿಂದ ಉಂಟಾಗಿರುವ ಫಲಗಳನ್ನು ನೋಡಿ ಪ್ರತಿಯೊಬ್ಬರೂ ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ.

ಇಂಥವರು ಎಷ್ಟು ದೀರ್ಘಕಾಲ ಈ ಮಂತ್ರಿಪದವಿಯಲ್ಲಿರುವರೋ ಅಷ್ಟೂ ನಮ್ಮ ಸಂಸ್ಥಾನಕ್ಕೆ ಕ್ಷೇಮಕರವಾಗುವುದೆಂಬುದು ಇದುವರೆಗೆ ನಡೆದಿರುವ ಸಂಸ್ಥಾನದ ಕಾರ್ಯಭಾರದ ಎಂದರೆ ಎಲ್ಲಕ್ಕೂ ಮುಖ್ಯವಾದ ಹಣದ ಮುಗ್ಗಟ್ಟಿನ ಕಷ್ಟವನ್ನು ಪರಿಹಾರಮಾಡುವುದು, ಸಂಸ್ಥಾನದ ಹೆಚ್ಚು ವೆಚ್ಚಗಳನ್ನು "ತಹಬಂದಿಗೆ" ತರುವುದು, ಎಲ್ಲ ಪ್ರಜೆಗಳನ್ನೂ ಸಮಾನವಾಗಿ ವೃದ್ಧಿಗೆ ತರುವುದು,—ಇತ್ಯಾದಿ ಕಾರ್ಯಗಳಲ್ಲಿ ತೋರಿಸಿದ ವಿಚಕ್ಷಣತೆಯಿಂದ ವ್ಯಕ್ತವಾಗಿರುತ್ತದೆ. ಅದುಕಾರಣ ಇವರ ದಿವಾನ್‌ಗಿರಿಯ ಸುಯೋಗಲಾಭವು ಸಂಸ್ಥಾನಕ್ಕೆ ಚಿರಕಾಲವಿರಬೇಕೆಂದು ಪ್ರಜೆಗಳು ಕೋರುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಕಳೆದವರ್ಷ ಯಾರ ದುಷ್ಪ್ರೇರಣೆಯಿಂದಲೋ ವಿಷಯ ಚರ್ಚೆಗೆ ನಿಲ್ಲದೆ ಮೌನವನ್ನು ಧರಿಸಿದ್ದು ಹೋದ ಪ್ರತಿನಿಧಿಗಳೆಲ್ಲಾ ಸಭಾಧ್ಯಕ್ಷರು ತಮ್ಮ ಸಭಾಪರಿಸಮಾಪ್ತಿ ಕಾಲದಲ್ಲಿ ಕೊಟ್ಟಿದ್ದ ಎಚ್ಚರಿಕೆಯ ಮಾತುಗಳಿಂದ ಎಚ್ಚತ್ತು, ತಮ್ಮ ಹಟವನ್ನು ಬಿಟ್ಟು, ಆಗಣ ತಮ್ಮ ನಡತೆಯಿಂದ ತಮಗೂ ದೇಶಕ್ಕೂ ಉಂಟುಮಾಡಿಕೊಂಡ ನಷ್ಟವನ್ನು ಪರಿಭಾವಿಸಿ ವಿವೇಕವನ್ನು ತಂದುಕೊಂಡು ಈ ಸಲದ ಸಭಾಕಾರ್ಯದಲ್ಲಿ ಅಂಗವಾಗಿದ್ದುದಕ್ಕಾಗಿ ನಾವು ಸಂತೋಷಿಸುತ್ತೇವೆ.

ಈಸಲದ ಸಭೆಯ ಚರ್ಚೆಗೆ ಸಾರ್ವತ್ರಿಕ ವಿಷಯಗಳು ೧೯೭, ಸ್ಥಳಿಕವಿಷಯಗಳು ೧೦೬, ಉಪವಿಷಯಗಳು ೧೭ ಬಂದಿದ್ದುವು. ಅವುಗಳೊಳಗೆ ಸಾಧಾರಣವಾದ ಕೆಲ ವಿಷಯಗಳು ಮಾತ್ರ ಉಳಿದುಹೋಗಿ ಮುಖ್ಯಮುಖ್ಯ ವಿಷಯಗಳೆಲ್ಲಾ ಚರ್ಚೆಗೊಂಡೇ ಮುಗಿದುವು. ಚರ್ಚೆಗಳೊಳಗೆಲ್ಲಾ ಎಲ್ಲಕ್ಕಿಂತಲೂ ಮುಖ್ಯಸ್ಥಾನವನ್ನು ಪಡೆದಿದ್ದುದು ಮಿಲ್ಲರ್‌ಸಂಘದ ವರದಿಯ ಮೇಲಣ ಸರ್ಕಾರಿ ಅಪ್ಪಣೆಯ ಸಂಬಂಧವಾದುದಾಗಿದ್ದಿತು. ಇದಕ್ಕಾಗಿಯೇ ಸಭೆಯಲ್ಲಿ ೪ ದಿನಗಳ ವಿಶೇಷ ಕಾಲವು ವಿನಿಯೋಗಿಸಲ್ಪಟ್ಟಿತು. ಈ ವಿಷಯದಲ್ಲಿ ಬೇಕಾದಷ್ಟು ಚರ್ಚೆನಡೆಯಿಸಿ ಇದನ್ನು ನಾಮಮಾತ್ರಾವಶಿಷ್ಟವನ್ನಾಗಿ ಮಾಡಬೇಕೆಂದು ಇದಿರುಪಕ್ಷದವರಿಗೆ ಎಷ್ಟು ಉತ್ಸಾಹವಿದ್ದಿತೋ ಇದರ ಅನುಕೂಲಪಕ್ಷದವರಿಗೂ ಇದರಲ್ಲಿನ ನ್ಯಾಯಸತ್ಯಸಂಮತತ್ವವನ್ನು ಹೊರಹಾಕಿ ಸಮರ್ಥನಮಾಡಬೇಕೆಂಬ ಉತ್ಸಾಹ ಕುತೂಹಲಗಳೂ ಅಷ್ಟೇ ಇದ್ದುವು. ಅದುಕಾರಣ ಉಭಯಪಕ್ಷದವರೂ ಸಾಕು ಎನ್ನುವಮಟ್ಟಿಗೆ ಚರ್ಚೆಗೆ ಅವಕಾಶವನ್ನೂ ಕಾಲವನ್ನೂ ಸಭಾಧ್ಯಕ್ಷರು ದಯಪಾಲಿಸಿದ್ದರು. ಈ ವಿಚಾರವಾಗಿ ಮುಂಬರಿದ ಜನವರ್ಗ ಪ್ರತಿನಿಧಿಗಳು ೧೬ ವಿಷಯಗಳನ್ನು ಚರ್ಚೆಗಿಟ್ಟಿದ್ದರು. ಮಿಲ್ಲರ್ ಸಂಘದ ವರದಿಯಮೇಲಣ ಅಪ್ಪಣೆಯನ್ನು ತೆಗೆದುಬಿಡಬೇಕು ಇಲ್ಲವೆ ಅದು ಉಳಿದರೂ ಜೀವಚ್ಛವದಂತೆ ಇರುವ ಹಾಗೆ ಮಾಡಬೇಕು ಎಂಬುದೇ ಅವರ ಉದ್ದೇಶವಾಗಿದ್ದಿತೆಂದು ಅವರು ತಂದಿದ್ದ "ಸಬ್ಜೆಕ್ಟು" ಗಳಿಂದ ಗೊತ್ತಾಗುತ್ತದೆ. "ಈ ಅಪ್ಪಣೆಯನ್ನು ವ್ಯವಹಾರಕ್ಕೆ ತಂದರೆ ಬ್ರಾಹ್ಮಣಪಂಗಡಗಳ ಜೀವನೋಪಾಯಕ್ಕೂ ಅವರ ಚಿತ್ತಸ್ವಾಸ್ಥ್ಯಕ್ಕೂ ಭಂಗಬರುತ್ತದೆ; ಸರ್ಕಾರದ ಕಾರ್ಯದಕ್ಷತೆಗೆ ಲೋಪಬರುತ್ತದೆ. ಸರ್ಕಾರದವರು ಜಾತಿ ಮತ ಭೇದವನ್ನಿಡಕೂಡದು. ವಿದ್ಯೆಯಲ್ಲಿ ಹೆಚ್ಚಾದ ಯೋಗ್ಯತೆಯನ್ನು ಪಡೆದುಬಂದವರು ಯಾವ ಜಾತಿಯವರಾಗಿದ್ದರೂ ಅವರಿಗೆ ಅಧಿಕಾರಕೊಡುವ ಕ್ರಮವನ್ನಿಡಬೇಕು. ಈ ಮಿಲ್ಲರ್‌ಸಂಘದ ವರದಿಯು ದೇಶದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದವನ್ನೂ ಪರಸ್ಪರ ದ್ವೇಷವನ್ನೂ ಹುಟ್ಟಿಸಿದೆ, ಮತ್ತು ಕುಲಕ್ರಮಾಗತವಾದ ವೃತ್ತಿಗಳನ್ನು ಬಿಟ್ಟು ಬೇರೆಬೇರೆ ವೃತ್ತಿಗೆ ಪ್ರವೇಶಿಸುವುದಕ್ಕೆ ಪ್ರಜೆಗಳಿಗೆ ಪ್ರೋತ್ಸಾಹಿಸುತ್ತದೆ. ಬ್ರಾಹ್ಮಣರನ್ನು ದಂಡಿಸಿ ಹಳ್ಳಕ್ಕೆ ಕೆಡಹುವುದಕ್ಕಾಗಿಯೇ ಇದು ಹುಟ್ಟಿದೆ. ಮುಂದೆ ೭ ವರ್ಷಗಳ ವರೆಗೂ ಬ್ರಾಹ್ಮಣರಿಗೆ ಸರ್ಕಾರಿ ಉದ್ಯೋಗವೇ ಸಿಕ್ಕುವುದಿಲ್ಲ" ಎಂಬವುಗಳೇ ಆ ಸಭಿಕರುಗಳು ಮಾಡಿರುವ ಮುಖ್ಯವಾದ ಆಕ್ಷೇಪಗಳಾಗಿರುತ್ತವೆ. ಇವುಗಳನ್ನು ಸಮರ್ಥನಮಾಡುವುದಕ್ಕಾಗಿ ಆ ಸಭಿಕರುಗಳು ಎಷ್ಟೋ ವಾದಗಳನ್ನು ನಡೆಯಿಸಿದ್ದುದಲ್ಲದೆ ತಮ್ಮ ಹೇಳಿಕೆಯನ್ನೆಲ್ಲಾ ಬರೆದ ಒಂದು ಪತ್ರಿಕೆಯನ್ನು ದಿವಾನ್ ಸಾಹೇಬರವರಿಗೆ ಒಪ್ಪಿಸಿದರು. ಇದಿರುಪಕ್ಷದವರೂ ಕೂಡ ಪ್ರತಿವಾದಗಳನ್ನು ಬಹಳವಾಗಿ ನಡೆಯಿಸಿ, ಆ ಪಕ್ಷದವರ ವಾದಗಳ ಹುರುಳನ್ನು ಹೊರಪಡಿಸಿ ಖಂಡಿಸಿದರು. ಆ ವಾದಾನುವಾದಗಳೆಲ್ಲಾ ಸ್ವಾರಸ್ಯವಾಗಿರುವುದರಿಂದ ಮುಂದಣ ಸಂಚಿಕೆಯಲ್ಲಿ ಮುದ್ರಿಸುವವರಾಗಿದ್ದೇವೆ. ಅಲ್ಲದೆ ಇದರ ಸಂಬಂಧವಾಗಿ ನಾವು ಕೂಡ ಕೆಲವು ಮಾತುಗಳನ್ನು ಇಲ್ಲಿ ಹೇಳುತ್ತೇವೆ. ಏನೆಂದರೆ—

ಮಿಲ್ಲರ್‌ಸಂಘದ ವರದಿ.

ಮೈಸೂರು ಸಂಸ್ಥಾನದ ವಿಶೇಷಭಾಗದ ಎಂದರೆ ೫೬ ಲಕ್ಷ ಸಂಖ್ಯಾಕರಾದ ಪ್ರಜೆಗಳು ವಿದ್ಯೆಯಲ್ಲಿ ಹಿಂದುಳಿದಿರುವುದರಿಂದಲೂ, ಈಗಣ ರಾಜಕೀಯ ವಿದ್ಯಾಭ್ಯಾಸಕ್ಕೆಲ್ಲಾ ಸರ್ಕಾರಿ ಉದ್ಯೋಗದ ನಿರ್ವಾಹಕ್ಕೆ ಅರ್ಹತೆಯನ್ನು ಕಲ್ಪಿಸುವುದೇ ಬಹುಶಃ ಗುರಿಯಾಗಿರುವುದರಿಂದಲೂ, ಹಿಂದುಳಿದ ಜನವರ್ಗಗಳವರಿಗೆ ತಮ್ಮ ಸಂಸ್ಥಾನದ ಸರ್ಕಾರಿ ಉದ್ಯೋಗಗಳಲ್ಲಿ ತಕ್ಕಷ್ಟು ಭಾಗವನ್ನು ಪಡೆಯುವುದಕ್ಕೆ ಹಕ್ಕುಬಾಧ್ಯತೆಗಳು ಇದ್ದರೂ ಅವರುಗಳಿಗೆ ಸ್ವಲ್ಪಸ್ಥಾನಗಳು ಮಾತ್ರ ಸಿಕ್ಕಿದ್ದುದರಿಂದಲೂ, ತಕ್ಕ ಪ್ರೋತ್ಸಾಹವಿಲ್ಲದುದರಿಂದ ಅವರುಗಳಲ್ಲಿ ಎಲ್ಲೋ ಸ್ವಲ್ಪಮಂದಿಗಳು ವಿದ್ಯಾಯೋಗ್ಯತೆಯನ್ನು ಸಂಪಾದಿಸಿದ್ದರೂ ಅಂಥವರಿಗೂ ಸರಿಯಾದ ಸರ್ಕಾರಿ ಉದ್ಯೋಗಗಳನ್ನು ಕೊಟ್ಟು ಪ್ರೋತ್ಸಾಹಿಸದೆ ಅವರನ್ನು ತುಳಿಯುತ್ತ ಬಂದುದರಿಂದಲೂ, ಸರ್ಕಾರಿ ಉದ್ಯೋಗಪ್ರಾಪ್ತಿಗೆ ತಮಗೆ ವಿಶೇಷಾವಕಾಶಕೊಟ್ಟು ಪ್ರೋತ್ಸಾಹಿಸಿದಲ್ಲದೆ ತಮ್ಮ ಬಾಲಕರಲ್ಲಿ ವಿದ್ಯಾಭ್ಯಾಸದ ಅಭಿರುಚಿಯು ಹೆಚ್ಚುವುದಿಲ್ಲವೆಂದು ಹಿಂದುಳಿದ ಜನವರ್ಗಗಳ ಮುಂದಾಳುಗಳು ಶ್ರೀಮನ್ಮಹಾರಾಜರ ಸರ್ಕಾರದವರನ್ನು ಪ್ರಾರ್ಥಿಸುತ್ತಿದ್ದುದರಿಂದಲೂ, ಇವೆಲ್ಲಾ ನ್ಯಾಯವಾದ ಕಾರಣಗಳೆಂಬುದನ್ನು ಪ್ರಭುತ್ವದವರು ನಿರ್ಧರಿಸಿ, ಮಿಲ್ಲರ್‌ಸಂಘದ ವರದಿಯಾಗುವುದಕ್ಕೆ ಏರ್ಪಡಿಸಿದರು. ಈ ಯೇರ್ಪಾಟು ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲೇ ಆರಂಭಮಾಡಲ್ಪಟ್ಟಿತು. ಹೇಗೆಂದರೆ—ಸರ್ ಎಂ. ವಿಶ್ವೇಶ್ವರಯ್ಯನವರು ಸಂಸ್ಥಾನದ ಮಂತ್ರಿಪದವಿಯಿಂದ ಬಿಡುಗಡೆಹೊಂದಿದುದು ೧೯೧೮ನೆ ವರ್ಷದ ಡಿಸೆಂಬರ್ ತಾ|| ೧೦ ರಲ್ಲಿ. ಮಿಲ್ಲರ್ ಸಂಘದ ಏರ್ಪಾಟಾದುದು ಅದೇವರ್ಷದ ಆಗಸ್ಟ್ ತಾ|| ೨೩ ರಲ್ಲಿ. ಅದುಕಾರಣ ಇದು ಅವರ ಕಾಲದಲ್ಲೇ ಆರಂಭಗೊಂಡುದು. ಈಗ ಸರ್ ಕಾಂತರಾಜ ಅರಸಿನವರಲ್ಲದೆ ವಿಶ್ವೇಶ್ವರಯ್ಯನವರೇ ಮಂತ್ರಿಪದವಿಯಲ್ಲಿದ್ದರೂ ಅವರೇ ಇದನ್ನು ವ್ಯವಹಾರಕ್ಕೆ ತರದೆ ಇರುತ್ತಿರಲಿಲ್ಲ.

ಮಿಲ್ಲರ್ ಸಂಘದ ವರದಿಯಮೇಲೆ ಪ್ರಭುತ್ವದವರು ಮಾಡಿರತಕ್ಕ ಅಪ್ಪಣೆಯಲ್ಲಿ ಪ್ರಕೃತಕಾಲದ ಹಿಂದುಳಿದ ವರ್ಗಗಳ ವಿದ್ಯಾಯೋಗ್ಯತೆ ಮೊದಲಾದ ಸನ್ನಿವೇಶಗಳನ್ನೆಲ್ಲಾ ಗಮನಿಸಿ ಹಿಂದುಳಿದ ಜನವರ್ಗಗಳು ದೊಡ್ಡ ಪ್ರಜಾಸಂಖ್ಯೆಯುಳ್ಳವುಗಳಾಗಿದ್ದರೂ ಅವುಗಳ ಭಾಗಕ್ಕೆ ಸರ್ಕಾರಿ ಉದ್ಯೋಗಗಳಲ್ಲಿ ಅರ್ಧಭಾಗವನ್ನು ೭ ವರ್ಷಗಳಲ್ಲಿ ಭರ್ತಿಮಾಡುವುದಕ್ಕೆ ಏರ್ಪಡಿಸಿ, ಉಳಿದರ್ಧಭಾಗವನ್ನು ಮುಂಬರಿದ ಜನವರ್ಗದವರಿಗೇ ಉಳಿದಿರುವಂತೆ ಮಾಡಿದ್ದರೂ, ಅದನ್ನು ಕೂಡ ಸೈರಿಸಲಾರದ ಮುಂಬರಿದ ಜನವರ್ಗದ ಕೆಲವರು ಈ ಅಪ್ಪಣೆಯನ್ನೇ ತೆಗೆದುಹಾಕಿಸಬಿಡಬೇಕೆಂದೂ ಅಥವಾ ಉಳುಹಿಸಿದರೂ ಜೀವಚ್ಛವವಾಗಿ ಇರಿಸುವಂತೆ ಮಾಡಬೇಕೆಂದೂ ಪ್ರಯತ್ನಿಸಿದುದು ವಿಷಾದಕರವೇ ಸರಿ.

ಪ್ರತಿಪಕ್ಷದವರು ಈ ಅಪ್ಪಣೆಯಮೇಲೆ ಮಾಡುವ ಆಕ್ಷೇಪಗಳಿಗೆಲ್ಲಾ ದಿವಾನ್ ಸಾಹೇಬರವರು ಈ ಅಧಿವೇಶನದ ಪ್ರಾರಂಭಕಾಲದ ಭಾಷಣದಲ್ಲಿಯೂ, ಕಡೆಯಲ್ಲಿ ಮಾಡಿದ ಉಪಸಂಹಾರ ಭಾಷಣದಲ್ಲಿಯೂ ತಕ್ಕ ಸಮಾಧಾನಗಳನ್ನು ಚೆನ್ನಾಗಿ ಹೇಳಿರುತ್ತಾರೆ. ಮಿಲ್ಲರ್ ಸಂಘದ ವರದಿಯ ಮೇಲಣ ಅಪ್ಪಣೆಯಂತೆ ಕಾರ್ಯವು ಜರುಗಿದರೆ ಸರ್ಕಾರದ ಕಾರ್ಯದಕ್ಷತೆ (Efficiency) ಕೆಡುತ್ತದೆಂಬ ಕಾರಣವನ್ನು ದೊಡ್ಡ ಭೂತವನ್ನಾಗಿ ಆ ಪಕ್ಷದವರು ತೋರಿಸಿ ವಾದಿಸಿದ್ದಾರೆ. ಇದು ಸಂಪೂರ್ಣವಾಗಿ ನಿರಾಧಾರವಾದ ವಾದವೆಂದು ನಾವು ಹೇಳುತ್ತೇವೆ. ಏಕೆಂದರೆ-ಈ ಅಪ್ಪಣೆಯಪ್ರಕಾರ ವಿದ್ಯಾದಿಯೋಗ್ಯತೆಯಿಲ್ಲದವರಿಗೆ ಉದ್ಯೋಗಗಳನ್ನು ಪ್ರಭುತ್ವದವರು ಕೊಡುತ್ತಾರೆಂದು ಹೇಳುವುದಕ್ಕೆ ಅವರಿಗೆ ಅವಕಾಶವೇ ಇಲ್ಲ. ಅಂಥ ಯೋಗ್ಯತೆಯಿಲ್ಲದವರಿಗೆ ಉದ್ಯೋಗಗಳನ್ನು ಕೊಡಬೇಕೆಂದು ಹಿಂದುಳಿದವರು ಕೇಳುವುದೂ ಇಲ್ಲ. ಸರ್ಕಾರದ ಅಪ್ಪಣೆಯಲ್ಲೂ ಆ ಭಾವವು ಇಲ್ಲವೇಇಲ್ಲ. ಮತ್ತು ವಿದ್ಯಾಯೋಗ್ಯತೆಯೊಂದೇ ಪ್ರಭುತ್ವದ ಕಾರ್ಯದಕ್ಷತೆಗೆ ಲಕ್ಷಣವೆಂದು ಅವರು ಮಾಡುವ ವಾದವು ಒಪ್ಪತಕ್ಕ ಮಾತಲ್ಲ. ಸಭೆಯಲ್ಲಿ ಮ|| ಬಿ. ಎಚ್. ವಿಜಯದೇವರವರು ಹೇಳಿದಂತೆ ಪ್ರಜೆಗಳ ತೃಪ್ತಿಯೇ ಪ್ರಭುತ್ವದ ಕಾರ್ಯದಕ್ಷತೆಗೆ ಗುರ್ತಲ್ಲದೆ ಕೇವಲ ವಿಶ್ವವಿದ್ಯಾಲಯದ ಪಟ್ಟಗಳನ್ನು ಪಡೆದವರ ಹಿಂದಿನಿಂದಲೇ ಕಾರ್ಯದಕ್ಷತೆಯು ಸಿದ್ಧಿಸುವುದಿಲ್ಲ. ಹಾಗಿದ್ದರೆ ಭರತಖಂಡದ ಸ್ವರಾಜ್ಯವಾದಿಗಳು ಆಂಗ್ಲಪ್ರಭುತ್ವದಮೇಲೆ ಅಸಮಾಧಾನಪಟ್ಟು ತಮಗೆ ಸ್ವರಾಜ್ಯ ಬೇಕೆಂದು ಕೇಳುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಏಕೆಂದರೆ-ಅಲ್ಲಿ ಬಿಎ., ಬಿ.ಎಲ್., ಎಂ.ಎ., ಐ.ಸಿ.ಎಸ್. ಮೊದಲಾದ ಪಟ್ಟಾಂಚಿತರ "ಪಟಾಲಮ್ಮಿಗೆ" ಕೊರತೆಯುಂಟೆ? ಹಾಗಿದ್ದರೂ ಆ ಪ್ರಭುತ್ವವು ಆಕ್ಷೇಪಿಸಲ್ಪಡುತ್ತಿರುವುದಕ್ಕೆ ಪ್ರಜೆಗಳಿಗೆ ಮನಸ್ತೃಪ್ತಿಯನ್ನುಂಟುಮಾಡದೆ ಇರುವುದೇ ಕಾರಣವಲ್ಲವೆ?

ವಿಚಾರಮಾಡಿ ನೋಡಿದರೆ ನಮ್ಮ ಸಂಸ್ಥಾನದಲ್ಲೇ ಅನೇಕೋದಾಹರಣೆಗಳು ಸಿಕ್ಕುವುವು. ಸಿ. ರಂಗಾಚಾರ್ಲುಯವರು ವಿಶ್ವವಿದ್ಯಾಲಯಪಟ್ಟಾಂಚಿತರಲ್ಲ. ಆದರೂ ಅವರ ಅಧಿಕಾರದಲ್ಲ ಪ್ರಭುತ್ವಕ್ಕೆ ಉಂಟಾದ ಕೀರ್ತಿಯು ಸಾಮಾನ್ಯವಾಗಿರಲಿಲ್ಲ. ಮ|| ತಂಬೂಶೆಟ್ಟರವರು ಪಟ್ಟಾಂಚಿತರಲ್ಲ, ಆದರೂ ಚೀಫ್ ಕೋರ್ಟು ಮುಖ್ಯ ನ್ಯಾಯಮೂರ್ತಿಪದವಿಯಲ್ಲಿ ಅವರು ಪಡೆದುಕೊಂಡ ಲೋಕವಿಖ್ಯಾತಿಯನ್ನು ಎಂ. ಎ. ಎಂ. ಎಲ್. ಪ್ರಶಸ್ತಿ ಪಡೆದಿದ್ದ ಎಚ್. ವಿ. ನಂಜುಂಡಯ್ಯನವರು ಕೂಡ ಪಡೆಯಲಿಲ್ಲ. ಹೀಗೆಯೇ ಪಟ್ಟಾಂಚಿತರಲ್ಲದ ಚಂಚಲರಾಯರು, ಸಭಾಪತಿಮೊದಲ್ಯಾರರು, ಕೆ. ಪಿ. ಪುಟ್ಟಣ್ಣಶೆಟ್ಟರು, ವಿ. ಎನ್. ನರಸಿಂಹಯ್ಯಂಗಾರರು ಮೊದಲಾದವರೆಲ್ಲಾ ತಮ್ಮ ಯೋಗ್ಯತೆಯಿಂದ ಸರ್ಕಾರದ ಕಾರ್ಯದಕ್ಷತೆಗೆ ಎಷ್ಟೋ ತೇಜಸ್ಸನ್ನುಂಟುಮಾಡಿರುವರೇ ಹೊರತು ಅದನ್ನು ಕೆಡಿಸಲಿಲ್ಲ. ಈಗಲೂ ಕೂಡ ಸರ್ಕಾರದ ಉದ್ಯೋಗಗಳಲ್ಲಿ ವಿಶ್ವವಿದ್ಯಾಲಯ ಪಟ್ಟಾಂಚಿತರಲ್ಲದ ಮುಂಬರಿದ ಜನವರ್ಗಗಳವರು ಎಷ್ಟೋ ಮಂದಿಗಳಿರುವರು. ಪಾಪಭೀತಿ, ಜನಾಪವಾದಭೀತಿ, ಪ್ರಜಾಭಿಮಾನ, ಸತ್ಯಸಂಧತೆ, ನಿಸ್ಪೃಹತೆ, ನಿಷ್ಪಕ್ಷಪಾತ—ಇತ್ಯಾದಿ ಸದ್ಗುಣಗಳನ್ನು ಹೆಚ್ಚು ಗಮನಿಸದೆ ವಿದ್ಯೆಯಲ್ಲಿ ದೊಡ್ಡ ಪರೀಕ್ಷೆ ಕೊಟ್ಟು ಬರುವುದನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡು ಈಚೀಚೆಗೆ ಸರ್ಕಾರದ ಉದ್ಯೋಗಗಳನ್ನು ಕೊಡುತ್ತ ಬಂದುದರಿಂದ ನಮ್ಮ ಸಂಸ್ಥಾನದ ಎಫಿಷೆನ್ಸಿಯು ಕೆಟ್ಟುಹೋಗಿರುತ್ತದೆಯೇಹೊರತು ಉತ್ತಮವಾಗಿಲ್ಲ. ಸಣ್ಣಸಣ್ಣ ಸಾಮಾನ್ಯಜನರು ಮೊದಲುಗೊಂಡು ದೊಡ್ಡದೊಡ್ಡ ರಾಜಕೀಯವಿಶಾರದರೆಲ್ಲಾ ಎಫಿಷೆನ್ಸಿಯ ದುರವಸ್ಥೆಯನ್ನು ತಿಳಿದೇಇದ್ದಾರೆ. ಲಂಚದ ಹಾವಳಿಯು ವರ್ಣನಾತೀತವಾಗಿದೆ. ಪಕ್ಷಪಾತವು ಬೇರುಬಿಟ್ಟುಕೊಂಡಿದೆ. ಧರ್ಮಸತ್ಯ ನ್ಯಾಯದೃಷ್ಟಿಯು ಮೃಗ್ಯವಾಗುತ್ತಿದೆ. ಸ್ವಾರ್ಥಪ್ರಿಯತೆಯು ತಾಂಡವವಾಡುತ್ತಿದೆ. ಪ್ರಜಾಸೌಖ್ಯವು ಕಡಿಮೆಯಾಗಿ ಹಿಂಸೆಯೇ ಹೆಚ್ಚುತ್ತಿದೆ. ಇದಕ್ಕೆಲ್ಲಾ ಕಾರಣವೇನೆಂದರೆ-ಸರ್ಕಾರದ ಉದ್ಯೋಗಗಳಲ್ಲಿ ಶಿಷ್ಟರ ಸಂಖ್ಯೆಯು ಕಡಿಮೆಯಾಗಿ ದುಷ್ಟರ ಸಂಖ್ಯೆಯು ಹೆಚ್ಚಿರುವುದೇ ಆಗಿದೆ. ಅದರಲ್ಲೂ ಒಂದು ಜನವರ್ಗದವರೇ ಹೆಚ್ಚಿಕೊಂಡಿರುವುದರಿಂದ ಅನ್ಯಾಯಗಳೂ ಅಧರ್ಮಗಳೂ ವಂಚನೆಗಳೂ ಪ್ರಬಲಿಸಿಕೊಂಡಿವೆ. ಇದರಿಂದ ಪ್ರಜಾಮನಸ್ತೃಪ್ತಿಯೆಂಬ ಎಫಿಷೆನ್ಸಿಯು ಕ್ಷೀಣಿಸಿ ಹೋಗುತ್ತಲಿದೆ. ಇಂಥ ನ್ಯೂನಾತಿರೇಕಗಳನ್ನು ನಿವೃತ್ತಿಮಾಡುವುದು ಅತ್ಯಾವಶ್ಯಕವೆಂದು ಶ್ರೀಮನ್ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ಸಂಪೂರ್ಣವಾಗಿ ತೋರಿದುದರಿಂದಲೇ "ಸದ್ಯಃ ಸರ್ಕಾರಿ ನೌಕರಿಗಳಲ್ಲಿ ಬ್ರಾಹ್ಮಣರ ಸಂಖ್ಯೆ ಹೆಚ್ಚಾಗಿದೆ. ಯೋಗ್ಯತೆಯಿರುವ ಜನಗಳು ದೊರೆಯುವ ಪಕ್ಷದಲ್ಲಿ ಹಿಂದುಳಿದ ಪಂಗಡಗಳ ಜನರು ಒಂದು ಗೊತ್ತಾದ ಪ್ರಮಾಣದಲ್ಲಿ ಸರ್ಕಾರಿ ನೌಕರಿಯಲ್ಲಿರುವಂತೆ ಪ್ರಯತ್ನಪಡುವುದು ಪ್ರಜಾಕ್ಷೇಮಕ್ಕೆ ಅವಶ್ಯಕವಾಗಿರುತ್ತದೆಂದು ಸರ್ಕಾರದವರು ಭಾವಿಸಿರುತ್ತಾರೆ." ಎಂಬ ಪೀಠಿಕೆಯನ್ನು ಹಾಕಿಕೊಂಡು ಮಿಲ್ಲರ್ ಸಂಘವನ್ನು ಅವರು ಏರ್ಪಡಿಸಿದರು. ಇದರಿಂದ ಇನ್ನು ಮುಂದೆ ಸಂಸ್ಥಾನದ ನಾನಾವರ್ಗಪ್ರಜೆಗಳೆಲ್ಲಾ ಪ್ರೋತ್ಸಾಹಿತರಾಗಿ ವಿದ್ಯಾಯೋಗ್ಯತೆಯನ್ನು ಸಂಪಾದಿಸಿಕೊಂಡು ಸರ್ಕಾರದ ಉದ್ಯೋಗಗಳನ್ನು ಆಕ್ರಮಿಸುವುದರಿಂದ, ಇದುವರೆಗೆ ಒಂದೇ ಜನವರ್ಗದವರು ಹೆಚ್ಚಿಕೊಂಡಿದ್ದಕಾರಣ ಪರಸ್ಪರ ಭಯವಿಲ್ಲದೆ ಜರುಗುತ್ತಿದ್ದ ಅನ್ಯಾಯಗಳೂ ಅಕ್ರಮಗಳೂ ತಪ್ಪಿ ಪ್ರಜೆಗಳಿಗೆ ಸಮಾಧಾನಕರವಾದ ಎಫಿಷೆನ್ಸಿಯು ರೂಢಮೂಲವಾಗುವುದೆಂಬುದಕ್ಕೆ ಸಂಶಯವೇ ಇಲ್ಲ.

ಇದಲ್ಲದೆ ಸರ್ಕಾರದ ಕಾರ್ಯದಕ್ಷತೆಯ ಅಭಿಮಾನವು ಈ ಮುಂಬರಿದ ಕೆಲವು ಜನರಿಗೆ ಮಾತ್ರವೇ ಇರುವುದೆ? ಆ ಅಭಿಮಾನವು ಉಳಿದ ಮಹಾಪ್ರಜೆಗಳಿಗೆಲ್ಲಾ ಇರುವುದಿಲ್ಲವೆ? ಶ್ರೀಮನ್ ಮಹಾರಾಜರವರಿಗೆ ತಮ್ಮ ಸಂಸ್ಥಾನದ ಎಫಿಷೆನ್ಸಿಯ ಮೇಲೆ ಇರುವ ಅಭಿಮಾನಕ್ಕಿಂತ ಇವರ ಅಭಿಮಾನವು ದೊಡ್ಡದೆ?

ಮಿಲ್ಲರ್‌ಸಂಘ ಸ್ಥಾಪನೆಯು ಸರ್ಕಾರದ ಸ್ವಂತ ಕಾರ್ಯನಿರ್ವಾಹಸವಿಾಕರಣಕ್ಕೆ ಸಂಬಂಧಪಟ್ಟುದಾಗಿದ್ದ ಕಾರಣ, ಇದೇ ತೆರದ ಏರ್ಪಾಡಿಗಾಗಿ ಹಿಂದೆ ಸರ್ ಕೆ. ಶೇಷಾದ್ರಿ ಅಯ್ಯರೇ ಮೊದಲಾದ ದಿವಾನರುಗಳು ಮಾಡುತ್ತ ಬಂದಿದ್ದ ಅಪ್ಪಣೆಗಳಂತೆಯೂ, ಸಿವಿಲ್ ಸರ್ವೀಸ್ ಪರೀಕ್ಷೆಗೆ ಸಂಬಂಧಪಟ್ಟ ನಿಬಂಧನೆಗಳು ಏರ್ಪಟ್ಟಂತೆಯೂ, ಇದನ್ನು ಮಾಡಬೇಕೆಂದು ಉದ್ದೇಶಿಸಿ ಸರ್ಕಾರದವರು ೧೯೧೮ನೆ ವರ್ಷದಲ್ಲಿ ಇದನ್ನು ಆರಂಭಿಸುವಾಗ್ಗೆ ಈ ಸಂಘದ ನಡವಳಿಕೆಗಳೂ ವರದಿಗಳೂ ಅತ್ಯಂತ ರಹಸ್ಯವಾಗಿರಬೇಕೆಂದು ಅಪ್ಪಣೆ ಮಾಡಿದ್ದರು. ಆದರೆ ಅದನ್ನು ಸರ್ಕಾರದವರು ಯಾವುದೋ ಗೂಢೋದ್ದೇಶದಿಂದ ರಹಸ್ಯಮಾಡಿಟ್ಟುಕೊಂಡಿರುವರೆಂದೂ, ಇದರಿಂದ ಏನೋ ನೋಸವು ಆಗಿಹೋಗುವುದೆಂದೂ ಕೆಲವರು ಸಭೆಗಳಲ್ಲೂ ವಾರ್ತಾಪತ್ರಿಕೆಗಳಲ್ಲೂ ಕೂಗಾಟವನ್ನೆಬ್ಬಿಸಿದುದರಿಂದ ಸರ್ಕಾರದವರು ಈ ಅಪ್ಪಣೆಯನ್ನೂ ವರದಿಯನ್ನೂ ಪ್ರಕಟಮಾಡಬೇಕಾಯಿತು. ಅದರ ಮೇಲೂ ಕೆಲ ಬ್ರಾಹ್ಮಣವರ್ಗದವರು ತಮಗೆ ಮುಂದಾಗಿ ತಿಳಿಸದೆ ತಮ್ಮ ಒಪ್ಪಿಗೆಯನ್ನು ತೆಗೆದುಕೊಳ್ಳದೆ ಸರ್ಕಾರದವರು ತೀರ್ಮಾನಮಾಡಿಬಿಟ್ಟರೆಂದು ಆಕ್ಷೇಪಿಸಲಿಕ್ಕೆ ಆರಂಭಿಸಿ, ಅದರ ಮೇಲೆ ಪ್ರಭುತ್ವದವರನ್ನು ವಾಚಾಮಗೋಚರವಾಗಿ ನಿಂದಿಸಿ, ಇದರ ಮೇಲಣ ಮುಳಿಸಿನಿಂದಲೇ ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಷಯಚರ್ಚೆಯನ್ನು ಮಾಡದೆ ಹಟತೊಟ್ಟು ಅವಾಂತರ ಮಾಡಿದರು. ಕಡೆಗೆ ಆದುದೇನು? ಸರ್ಕಾರದವರಿಗೇ ಆಗಲಿ ಇತರರಿಗೇ ಆಗಲಿ ಇದನ್ನು ಪ್ರಕಟಿಸುವುದರಲ್ಲೂ ಚರ್ಚಿಸುವುದರಲ್ಲೂ ಹಿಂದೆಗೆಯಬೇಕಾದುದೇನೂ ಇರಲಿಲ್ಲ. ಈ ಸಲದ ಸಭೆಯಲ್ಲಿ ಲೋಕಾಭಿರಾಮವಾಗಿ ಅದರಮೇಲೆ ನಡೆದ ಚರ್ಚೆಯಿಂದ ಅದರಲ್ಲಿರುವ ನ್ಯಾಯದೃಷ್ಟಿ ಸದುದ್ದೇಶ ಮೊದಲಾದುವುಗಳೂ ಪ್ರತಿಪಕ್ಷದವರ ಸ್ವಾರ್ಥೈಕಪರತ್ವ ಪರೋತ್ಕರ್ಷಾಸಹನಗಳೂ ಸರ್ವರಿಗೂ ಗೊತ್ತಾಗಲು ಮಾರ್ಗವಾಯಿತು. ಮಿಲ್ಲರ್ ಸಂಘದ ವರದಿಯು ದಿಗ್ವಿಜಯಗೊಂಡಿತು. ಹಾರಾಡುತ್ತಿದ್ದ ಕುದುರೆಗಳನ್ನು ಕಟ್ಟಿನಿಂದ ಬಿಚ್ಚಿಬಿಟ್ಟರೆ ಓಡಾಡಿ ದಣಿದು ತಾವೇ ನಿಂತುಕೊಳ್ಳುವಂತೆ ಅವರು ಸ್ತಬ್ಧರಾದರು. ಮಿಲ್ಲರ್ ಸಂಘದ ಏರ್ಪಾಟೂ ಅದರ ವರದಿಯ ಮೇಲಣ ಅಪ್ಪಣೆಯೂ ನ್ಯಾಯವಾದುವುಗಳೆಂದು ಸ್ವದೇಶಪರದೇಶದವರೆಲ್ಲಾ ನಿಸ್ಸಂದೇಹವಾಗಿ ತಿಳಿದುಕೊಳ್ಳುವಂತಾಯಿತು. ಇದಕ್ಕಾಗಿ ನಾವು ಸಂತೋಷಿಸುತ್ತೇವೆ.

ದಿವಾನರು ಕ್ಷಮಾಪಣೆ ಕೇಳಿದರೆ?

ಹೀಗೆಂಬದಾಗಿ ನಮ್ಮ ಪತ್ರಿಕಾವಾಚಕರೊಬ್ಬರು ನಮಗೆ ಬರೆದು ಕೇಳಿರುತ್ತಾರೆ. ೧೭ನೆ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಅದರ ಸಂಪಾದಕರು "ಕಳೆದ ವರ್ಷದ ಅಖೈರು ಉಪನ್ಯಾಸದಲ್ಲಿ ಬ್ರಾಹ್ಮಣರಿಗೆ ಇವರು (ದಿವಾನರು) ಮಾಡಿದ ವಾಗ್ದಂಡನೆಗೋಸ್ಕರ ತಮಗೆ ಉಂಟಾಗಿರತಕ್ಕ ವಿಷಾದವನ್ನು ತೋರಿಸಿರುವರು. ಈ ಕ್ಷಮಾಪಣೆಯು ಇವರಿಗೆ ತುಂಬಾ ಗೌರವವನ್ನು ಉಂಟುಮಾಡುವುದು" ಎಂಬದಾಗಿ ಬರೆದುಕೊಂಡಿರುತ್ತಾರೆ. ಇದರಿಂದ ದೇಶದ ಪ್ರಜೆಗಳಲ್ಲಿ ಮೇಲೆಕಂಡಂಥ ಪ್ರಶ್ನೆಯು ಹುಟ್ಟುವುದಕ್ಕೆ ಅವಕಾಶವಾಗಿರುತ್ತದೆ. ಈ ಸಲದ ದಿವಾನರ ಭಾಷಣದಲ್ಲಿ ಈ ಸಂಬಂಧವಾಗಿ ಆಡಿರುವ ಮಾತುಗಳೇನೆಂಬುದನ್ನು ಈ ಪತ್ರದ ಬೇರೆಕಡೆಯಲ್ಲಿ ಮುದ್ರಿಸಿರುವ ಭಾಗಗಳಿಂದ ಚೆನ್ನಾಗಿ ತಿಳಿದುಕೊಳ್ಳಬಹುದು. "ಆ ಮಾತುಗಳು ಮೆಂಬರುಗಳನ್ನೂ ಅವರ ಪಂಗಡದವರನ್ನೂ ದೂಷಿಸುವುದಕ್ಕೋಸ್ಕರ ಉಪಯೋಗಿಸಲ್ಪಟ್ಟವೆಂದು ಭಾವಿಸಿರುವುದನ್ನು ಕೇಳಿ ವಿಷಾದಿಸುತ್ತೇನೆ" ಎಂದು ದಿವಾನರ ಭಾಷಣದಲ್ಲಿರುತ್ತದೆ. ವಿದ್ಯಾಧಿಕರೂ ಬುದ್ಧಿವಂತರೂ ಆದ ಜನರು ಹಾಗೆ ಅಪಾರ್ಥಮಾಡಿಕೊಂಡುದಕ್ಕಾಗಿ ದಿವಾನರವರು ವಿಷಾದವನ್ನು ವ್ಯಕ್ತಪಡಿಸಿರುವರೆಂದು ಇದರಿಂದ ಸಿದ್ಧವಾಗುವದೇ ಹೊರತು ತಾವು ಆಡಿದುದೇ ತಪ್ಪೆಂದೂ ಅದಕ್ಕಾಗಿ ಕ್ಷಮಾಪಣೆ ಕೇಳುತ್ತೇನೆಂದೂ ಇಲ್ಲಿ ಅವರಾಡಿರುವರೆಂದು ಯಾವೊಬ್ಬ ಬಾಲವಿದ್ಯಾರ್ಥಿಯೂ ಅರ್ಥಮಾಡಲಾರನು. ಕ್ಷಮಾಪಣೆ ಕೇಳುವುದೇ ಅವರ ಉದ್ದೇಶವಾಗಿದ್ದಲ್ಲಿ ಆ ವಾಕ್ಯದ ಮುಂದೆ "ಸಭೆಯ ಚರ್ಚೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು ಸಭಾಧ್ಯಕ್ಷರಾದ ನಮ್ಮ ಕರ್ತವ್ಯವಾದ್ದರಿಂದ ಅಂಥ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಆ ಮಾತುಗಳನ್ನುಪಯೋಗಿಸಿದೆ" ಎಂಬ ಮಾತುಗಳನ್ನು ಹೇಳುತ್ತಿರಲಿಲ್ಲ. ಈ ಉತ್ತರವಾಕ್ಯದಿಂದ ಅವರು ತಾವು ಪೂರ್ವದಲ್ಲಿ ಆಡಿರುವ ಮಾತನ್ನು ನ್ಯಾಯವೆಂದು ಮತ್ತಷ್ಟು ಸಮರ್ಥನಮಾಡಿದ್ದಾರೆ. ಸಂಪದಭ್ಯುದಯದಲ್ಲಿ ಬರೆದಿರುವುದು ಸುಳ್ಳಾಗಿದ್ದುದರಿಂದಲೇ ಅದೇ ದಿನದ ಪ್ರಜಾಪ್ರತಿನಿಧಿಸಭೆಯಲ್ಲಿ ಒಬ್ಬ ಸಭಿಕರು ಮೇಲೆಕಂಡ ಸಂಪದಭ್ಯುದಯದ ಲೇಖನವನ್ನು ಓದಿ ಅದರ ಸುಳ್ಳನ್ನು ಬಹಿರಂಗಪಡಿಸಿದರು. ಆ ಪತ್ರಿಕಾಕರ್ತರು ಅಲ್ಲೇ ಕುಳಿತಿದ್ದರೂ ಅದರ ವಿಷಯವಾಗಿ ಯಾವೊಂದು ಮಾತನ್ನೂ ಆಡಲಿಲ್ಲ. ಕೆಲದಿನಗಳ ಹಿಂದೆ ಮೈಸೂರಿನಿಂದ ಹೊರಗಣ ಸ್ಥಲಗಳಿಗೆ ಹೋದ ಕೆಲವರು ಗ್ರಾಮಾಂತರದ ಜನರನ್ನು ಮರುಳುಗೊಳಿಸುವುದಕ್ಕಾಗಿ "ನಾವು ಮಿಲ್ಲರ್ ಕಮಿಟಿ ರಿಪೋರ್ಟನ್ನು ವಜಾಮಾಡಿಸುತ್ತೇವೆ; ದಿವಾನರನ್ನು ಕ್ಷಮಾಪಣೆ ಕೇಳುವ ಹಾಗೆ ಮಾಡುತ್ತೇವೆ" ಎಂದು ಉಪನ್ಯಾಸಗಳನ್ನು ಮಾಡಿದ್ದರೆಂದು ನಮಗೆ ಆಗಲೇ ಸುದ್ದಿಗಳು ಬಂದಿದ್ದುವು. ಅದನ್ನು ತಾವು ಸಾಧಿಸಿದಂತೆ ತೋರ್ಪಡಿಸಿ ದೂರದಲ್ಲಿ ಹೊರಗೆ ಇರುವವರನ್ನು ಮರುಳುಗೊಳಿಸಲಿಕ್ಕೆ ಕಲ್ಪಿಸಿ ಬರೆದ ಸುಳ್ಳು ಬರೆವಣಿಗೆಯೇ ಇದಲ್ಲದೆ ಯಥಾರ್ಥವಲ್ಲವೆಂಬುದನ್ನು ವಿಚಾರವಂತರೆಲ್ಲರೂ ತಿಳಿದುಕೊಳ್ಳಬೇಕು. ದಿವಾನರು ಕ್ಷಮಾಪಣೆ ಕೇಳಿಕೊಳ್ಳುವಂಥ ಕೆಲಸವನ್ನೇನೂ ಮಾಡಿಲ್ಲ. ನಿಜವಾಗಿ ತಪ್ಪುಮಾಡಿದವರನ್ನು ಅವರು ತಮ್ಮ ದೊಡ್ಡ ಮನೆತನದ ಮತ್ತು ದೊಡ್ಡ ಪದವಿಯ ಘನಗೌರವಗಳಿಗೆ ಅನುಗುಣವಾಗಿ ಕೇವಲ ವಾಙ್ಮಾತ್ರದಿಂದ ಎಚ್ಚರಿಸಿಬಿಟ್ಟುದಕ್ಕಾಗಿ ವಂದನೀಯರಾಗಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರು ಕಳೆದ ಶುಕ್ರವಾರ ನೀಲಗಿರಿಗೆ ದಯಮಾಡಿಸಿದರು.

ಇಷ್ಟರಲ್ಲೇ ಕೆಲವು ಡಿಸ್ಟ್ರಿಕ್ಟ್ ಡಿ|| ಕಮಿಷನರ ವರ್ಗಾವಣೆಯಾಗುವುದೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆ ಸುದ್ದಿಯು ನಿಜವೆಂದು ಕಾಣುವುದಿಲ್ಲ.

ಕಳೆದ ಶುಕ್ರವಾರ ಬೆಳಗ್ಗೆ ಡಿ|| ಕಮಿಷನರುಗಳ ಮೀಟಿಂಗು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಜರುಗಿತು. ಶನಿವಾರ ಎಗ್ಜಿಕ್ಯುಟೀವ್ ಕೌನ್ಸಿಲ್ ಸಭೆಯು ಜರುಗಿತು.

ರಾಜಧಾನಿಗೆ ದಯಮಾಡಿಸಿದ್ದ ಮುಖ್ಯಾಧಿಕಾರಿಗಳನೇಕರು ನಿನ್ನೆಯದಿನ ತಂತಮ್ಮ ಸ್ಥಲಗಳಿಗೆ ಪ್ರಯಾಣಮಾಡಿದರು. ದಿವಾನ್ ಸಾಹೇಬರು ನಾಳೆ ನಾಡಿದ್ದರಲ್ಲಿ ಪ್ರಯಾಣಮಾಡುವವರಾಗಿದ್ದಾರೆ.

ರಾಜಧಾನಿಯಲ್ಲಿ ಬೆಳಗಿನ ಹೊತ್ತು ಹಿಮವು ಸುರಿಯುತ್ತ ಮಧ್ಯಾಹ್ನದವೇಳೆ ತೀಕ್ಷ್ಣವಾಗಿ ಬಿಸಿಲು ಕಾಯುತ್ತಿದೆ. ಮಳೆ ಹಿಂದೆಗೆದಿದೆ. ನಿಂತಿರುವ ಪೈರುಗಳಿಗೆ ಇನ್ನೂ ೧-೨ ಹದ ಮಳೆಯು ಬೇಕಾಗಿದೆ.

ಈಸಲದ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದಿರುವ ಮ|| ಬಿ. ದೇವರಾಜೇಅರಸ್, ಬಿ.ಎ. ಯವರು ರಾಜಧಾನಿಯಲ್ಲಿ ಅಡ್ವೊಕೇಟರಾಗಿ ಕೆಲಸಮಾಡಲು ಸಂಕಲ್ಪಿಸಿರುತ್ತಾರೆಂಬುದನ್ನು ತಿಳಿಯಿಸಲು ಸಂತೋಷಿಸುತ್ತೇವೆ.

ಸ್ತ್ರೀಯರಿಗೆ ಸ್ವಾತಂತ್ರ್ಯಾಧಿಕಾರವನ್ನು ಕೊಡಬೇಕೆಂಬ ವಿಷಯದ ಚರ್ಚೆಯು ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದಮೇಲೆ ಓಟುಗಳನ್ನು ತೆಗೆದುಕೊಳ್ಳಲಾಗಿ ೪೯ ಮಂದಿ ಅನುಕೂಲವಾಗಿಯೂ ೫೮ ಮಂದಿ ಪ್ರತಿಕೂಲವಾಗಿಯೂ ಓಟುಕೊಟ್ಟರು. ಎಷ್ಟೋಮಂದಿ ಬ್ರಾಹ್ಮಣ ಮೆಂಬರುಗಳೇ ಅದನ್ನು ನಿರೋಧಿಸಿದರು; ಇತರರೂ ನಿರೋಧಿಸಿದರು. ಈ ಚರ್ಚೆನಡೆಯುವಾಗ ಸಭೆಗೆ ಕೆಲಮಂದಿ ವಿದ್ಯಾವತಿಯರು ಬಂದಿದ್ದರು.

ಮಿ|| ಬಿ. ಆರ್. ಪ್ಲಮರ್‌ರವರು ರಜವನ್ನು ಪೂರೈಸಿಕೊಂಡು ಬಂದಕೂಡಲೇ ಮ|| ಬಿ. ನಾಗಪ್ಪನವರು ಬೆಂಗಳೂರಿಗೂ ಮ|| ಸುಬ್ಬಣ್ಣನವರು ಮೈಸೂರಿಗೂ, ಮ|| ರಾಮಸ್ವಾಮಯ್ಯಂಗಾರರು ಶಿವಮೊಗ್ಗೆಗೂ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರಾಗಿ ವರ್ಗಾಯಿಸಲ್ಪಡುವರೆಂದೂ, ಮ|| ಶ್ರೀನಿವಾಸಯ್ಯರ್‌ರವರು ಚೀಫ್‌ಕೋರ್ಟು ರಿಜಿಸ್ಟ್ರಾರ್ ಕೆಲಸಕ್ಕೇ ಮರಳಿ ಕಳುಹಿಸಲ್ಪಡುವವರಾಗಿದ್ದಾರೆಂದೂ ಕೇಳುತ್ತೇವೆ.

ವ್ಯಾಪಾರಶಾಖೆಯ ಡಿ|| ಡೈರೆಕ್ಟರಾದ ಮ|| ಕೆ. ಎಚ್. ರಾಮಯ್ಯನವರು ೧೯೧೯-೨೦ನೆ ವರ್ಷದಲ್ಲಿ ಮೈಸೂರು ದೇಶಕ್ಕೂ ಹೊರಕ್ಕೂ ನಡೆದಿರುವ ವ್ಯಾಪಾರದ ವಿವರಣೆಗಳುಳ್ಳ ಗ್ರಂಥವನ್ನು ಪ್ರಕಟಿಸಿರುತ್ತಾರೆ. ದೇಶದ ಸಂಪದಭ್ಯುದಯದಲ್ಲಿ ಗಮನವುಳ್ಳವರೆಲ್ಲರಿಗೂ ತಿಳಿಯಲವಶ್ಯಕವಾದ ಅನೇಕ ಸಂಗತಿಗಳನ್ನು ಮ|| ರಾಮಯ್ಯನವರು ಇದರಲ್ಲಿ ಕನ್ನಡಿಯಂತೆ ವಿವರಗೊಳಿಸುವಲ್ಲಿ ಪಟ್ಟ ಶ್ರಮವು ಅಭಿನಂದನೀಯವಾಗಿದೆ.

ಸ್ತ್ರೀಯರಿಗೆ ಲೋಕಲ್ ಬೋರ್ಡುಗಳಲ್ಲಿ ಮೆಂಬರಾಗುವ ಮತ್ತು ಓಟುಕೊಡುವ ಅಧಿಕಾರವನ್ನು ಕೊಡಬೇಕು. ವಿದ್ಯಾಭ್ಯಾಸದ ಮೆಮೊರಾಂಡಮ್ಮಿನಂತೆ ಕೆಲಸಗಳನ್ನು ಜರುಗಿಸಲಿಕ್ಕಾಗಿ ಬೇಕಾಗುವ ಹಣವನ್ನು ಒಂದು ಹೊಸಕಂದಾಯದ ಮೂಲಕ ಎತ್ತಿಕೊಳ್ಳಬೇಕು ಇತ್ಯಾದಿ ಕೆಲವು ವಿಷಯಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಶೇಷವಾಗಿ ಚರ್ಚಿಸಲ್ಪಟ್ಟವು. ಅವುಗಳ ವಿವರವನ್ನೆಲ್ಲಾ ಮುಂದಣ ಸಂಚಿಕೆಗಳಲ್ಲಿ ಪ್ರಕಟಿಸುತ್ತೇವೆ.

ಸಂಪದಭ್ಯುದಯ ಪತ್ರಿಕೆಯ ಸ್ವಭಾವವು ಕಳೆದ ತಾ|| ೨೨ ರಲ್ಲಿ ಬದಲಾಯಿಸಿರುವುದನ್ನು ಕಂಡು ನಾವು ಬಹಳವಾಗಿ ಸಂತೋಷಿಸಿದೆವು. ದಿವಾನರವರನ್ನು ಶಕಪುರುಷರನ್ನಾಗಿ ಹೊಗಳಿರುವುದು. ಇದಕ್ಕೆ ಪ್ರಬಲವಾದ ಕಾರಣವು ಯಾವುದಾದರೂ ಆಗಿರಲಿ, ಇದರ ಸ್ತುತಿನಿಂದೆಗಳು ಬಿಸಿಲ್ಗುದುರೆಯಂತಹವೆಂದು ಜನರಲ್ಲಿ ಉಂಟಾಗಿರುವ ಪ್ರತಿಪತ್ತಿಯು ಇನ್ನುಮೇಲಾದರೂ ತೊಲಗಿ ಹೋಗುವಂತೆ ಪರಿಣಮಿಸಲೆಂದು ನಾವು ಕೋರುವೆವು.

ಚಳ್ಳಕೆರೆ ತಾ|| ನಾಯಕನಹಟ್ಟಿ ಎಂಬ ಗ್ರಾಮದಲ್ಲಿ ಒಬ್ಬ ಹೆಂಗುಸು ಕಳೆದ ಸೆಪ್ಟಂಬರ್ ತಿಂಗಳಲ್ಲಿ ಮೂರು ಮಕ್ಕಳನ್ನು ಏಕಕಾಲದಲ್ಲಿ ಹೆತ್ತಿರುವುದಾಗಿಯೂ, ಇವುಗಳಲ್ಲಿ ಒಂದು ಮಗುವಿನ ಮುಂಡವು ಹಾವಿನಾಕಾರವಾಗಿಯೂ, ಇನ್ನೊಂದರ ಮುಖವು ಮಂಗನಾಕಾರವಾಗಿಯೂ ಮೂರನೆಯದು ವಿಕಾರವಿಲ್ಲದೆಯೂ ಇರುವುದಾಗಿಯೂ, ಈ ಆಶ್ಚರ್ಯವನ್ನು ನೋಡಲು ನೆರೆಹೊರೆಯ ಗ್ರಾಮಗಳಿಂದ ನೂರಾರು ಜನರು ನಿತ್ಯದಲ್ಲೂ ಬಂದು ಹೋಗುತ್ತಿರುವುದಾಗಿಯೂ ಆ ಗ್ರಾಮಸ್ಥರೊಬ್ಬರು ತಿಳಿಸಿರುತ್ತಾರೆ.

ಕಳೆದ ಶುಕ್ರವಾರ ಮಧ್ಯಾಹ್ನಾತ್ಪರ ದಿವಾನ್ ಸಾಹೇಬರು ಲೇಕ್‌ವ್ಯೂ ಬಂಗಲೆಯಲ್ಲಿ ಆಟ್‌ಹೋಂ ಪಾರ್ಟಿಯನ್ನೇರ್ಪಡಿಸಿದ್ದರು. ಪ್ರಜಾಪ್ರತಿನಿಧಿ ಸಭಾಸಭಿಕರು, ಸಂಸ್ಥಾನದ ಮುಖ್ಯಾಧಿಕಾರಿಗಳು, ರಾಜಬಂಧುವರ್ಗದವರು, ಮ್ಯುನಿಸಿಪಲ್ ಕೌನ್ಸಿಲರುಗಳು, ಕೆಲಪ್ರಮುಖವರ್ತಕರು ಇವರುಗಳನ್ನೆಲ್ಲಾ ಬರಮಾಡಿಕೊಂಡು ದಿವ್ಯವಾದ ಫಲಾಹಾರಗಳು ಅರಮನೆಯ ಹಿಂದೂಬ್ಯಾಂಡು ಟೆನಿಸ್ ಮೊದಲಾದ ಆಟಗಳು ಇವುಗಳಿಂದೆಲ್ಲಾ ಸತ್ಕರಿಸಿ ಸ್ವತಃ ಪ್ರತಿಯೊಬ್ಬರ ಯೋಗಕ್ಷೇಮವನ್ನೂ ವಿಚಾರಿಸುತ್ತ ನಡೆಯಿಸಿದ ಸಂತೋಷಕೂಟವು ಬಹಳ ಮನೋಹರವಾಗಿದ್ದಿತು. ದಿವಾನರ ಸರಸತೆಯನ್ನೂ ಸಾರಳ್ಯವನ್ನೂ ಕಂಡು ಸರ್ವರೂ ಆನಂದಿಸಿದರು.

ಶಿವೈಕ್ಯ ಶ್ರೀ ಅಥಣಿ ಶಿವಯೋಗೀಶ್ವರರ ಸ್ಮಾರಕಕ್ಕಾಗಿ ದಾವಣಗೆರೆಯಲ್ಲಿ ಒಂದು ಭವನವನ್ನು ಕಟ್ಟಿಸಿ, ಅದನ್ನು ಉಪನ್ಯಾಸಾದಿಗಳಿಗೂ, ಸಂಸ್ಕೃತ ಪಾಠಶಾಲೆಗೂ ವಿನಿಯೋಗಿಸಿ, ಅದರಲ್ಲಿ ಆ ಶಿವಯೋಗಿಗಳ ಶಿಲಾಪ್ರತಿಮೆಯೊಂದನ್ನು ಸ್ಥಾಪಿಸುವುದಕ್ಕೆ ಶ್ರೀಮನ್ನಿರಂಜನ ಜಗದ್ಗುರು ಚಿತ್ರದುರ್ಗದ ಮಹಾಸ್ವಾಮಿಗಳ ಅಪ್ಪಣೆಯಮೇರೆ ಏರ್ಪಾಟಾಗಿದೆಯೆಂದೂ, ಅದಕ್ಕೆ ೨೦ ಸಹಸ್ರ ರೂ.ಗಳ ಅಂದಾಜು ಮಾಡಲ್ಪಟ್ಟು ಅದರಲ್ಲಿ ೧೦ ಸಹಸ್ರವನ್ನು ತಮ್ಮ ಸಂಸ್ಥಾನದಿಂದ ಕೊಡುವುದಕ್ಕೆ ಮಹಾಸ್ವಾಮಿಗಳು ಅಪ್ಪಣೆಮಾಡಿರುವರೆಂದೂ, ದಾವಣಗೆರೆಯ ಎಲ್ಲ ಮತದ ಮಹಾಜನಗಳು ಸೇರಿ ೧೦ ಸಹಸ್ರ ರೂಪಾಯಿಗಳನ್ನು ಒಪ್ಪಿಸಲು ಅಂಗೀಕರಿಸಿ ಆಗಲೇ ೬-೭ ಸಾವಿರ ರೂ. ಗಳನ್ನು ಕೂಡಿಸಿರುವರೆಂದೂ ಕೇಳಿ ಅವರುಗಳ ಉಚಿತ ಕಾರ್ಯಪ್ರವರ್ತನೆಯನ್ನು ಸಂಪೂರ್ಣವಾಗಿ ಅಭಿನಂದಿಸುತ್ತೇವೆ.

ಕಳೆದ ಭಾನುವಾರ ಬೆಳಗ್ಗೆ ಪ್ರಜಾಮಿತ್ರಮಂಡಲಿಯ ಕ್ಯಾಂಪಾಗಿದ್ದ ಹಾಲಮ್ಮನವರ ಛತ್ರದಲ್ಲಿ ರಾ|| ಸಾ|| ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಪ್ರಜಾಮಿತ್ರಮಂಡಲಿಯ ವಾರ್ಷಿಕಾಧಿವೇಶನವು ನಡೆದಿತು. ಸ್ಥಲದ ಅನೇಕ ದೊಡ್ಡ ಮನುಷ್ಯರೂ ಪರಸ್ಥಲದ ಅನೇಕ ಪ್ರಜಾಪ್ರತಿನಿಧಿಗಳೂ ದಯಮಾಡಿಸಿದ್ದರು. ಪ್ರಜಾಮಿತ್ರಮಂಡಲಿಯ ಶಾಖೋಪಶಾಖೆಗಳನ್ನು ಎಲ್ಲೆಲ್ಲೂ ಸ್ಥಾಪಿಸಬೇಕಾದ ಆವಶ್ಯಕತೆಯನ್ನು ಕುರಿತು ಅನೇಕ ಮೆಂಬರುಗಳು ಉತ್ಸಾಹಕರವಾದ ಉಪನ್ಯಾಸಗಳನ್ನು ಮಾಡಿದುದಲ್ಲದೆ ಅನೇಕರು ಇಷ್ಟರೊಳಗೇ ತಮ್ಮ ಕಡೆಗಳಲ್ಲೆಲ್ಲಾ ಶಾಖಾಸಂಘಗಳನ್ನು ಸ್ಥಾಪಿಸುವುದಕ್ಕೆ ವಾಗ್ದಾನವನ್ನಿತ್ತರು. ಇಲ್ಲಿಯ ಸಭೆಗೆ ಮ|| ಬಸವಾರಾಧ್ಯ ಬಿ.ಎ., ಬಿ.ಎಲ್.ರವರು ಅಧ್ಯಕ್ಷರಾಗಿಯೂ ಮ||ಗಳಾದ ಎಂ. ಪಿ. ಭೋಗಯ್ಯ, ಬಿ.ಎ., ಬಿ.ಎಲ್.ರವರೂ, ಎಂ. ಮಹಮ್ಮದ್ ಸೇಟರೂ ಆನರೆರಿ ಸೆಕ್ರೆಟರಿಗಳಾಗಿಯೂ ಸರ್ವಾನುಮತದಿಂದ ನಿಯಮಿಸಲ್ಪಟ್ಟರು. ಶ್ರೀಮನ್ಮಹಾರಾಜರ ಯುವರಾಜರ ಮತ್ತು ದಿವಾನ್ ಸಾಹೇಬರವರ ಶ್ರೇಯಃಪ್ರಾರ್ಥನೆಯಾದನಂತರ ಸಭೆಯು ಮುಗಿದಿತು.

THE DEWAN'S CONCLUDING REMARKS TO THE REPRESENTATIVE ASSEMBLY ON THE 20th OCTOBER 1921.

GENTLEMEN,

In concluding the proceedings of this Session, I wish, with your permission, to make a few remarks. One noteworthy feature of the discussions this time was that an unusually large number of members took part in the debates on the more important subjects and I should like to compliment the members on the able and intelligent manner in which facts were presented and arguments marshalled. It is also a great satisfaction that the discussions were on the whole characterised by moderation and mutual goodwill.

Educational subjects have as usual elicited the greatest interest. The levy of the "Education Cess" was one of the subjects discussed at great length. The question is one of the utmost importance as the liberal policy of extending education in rural parts cannot be carried out unless additional funds are made available. The ryot population naturally views with disfavour any proposal that increases the burden of taxation on them, but they are extremely keen on securing improved facilities in the matter of education; and it is very gratifying indeed that the members representing the rural population were generally agreeable to the levy of the cess. The power of levying the cess as you know is in the hands of the local bodies, and I ask you all to use your influence with the District Boards and Municipal Councils with a view to their adopting early measures for levying the cess to the extent necessary to enable the Department to carry out at least the urgent items in the programme of reforms.

As regards the question of scholarships and freeships, I have explained the position in my opening address. I need here say only that it is not the intention of Government to reduce existing educational facilities although some readjustments of the expenditure on education will be necessary. You have urged that the system of merit scholarships should not be abolished. This, I may say, is not contemplated. You have also drawn attention to the promise contained in my address of October 1919 that the expenditure on scholarships will be brought up to three lakhs. It is not intended to reduce scholarships below this limit.

Another subject which elicited a certain amount of discussion is that referred to by the members as the "Sringeri Circular." The Government Order in question consists of two paragraphs. The first is to the effect that all subjects of His Highness are entitled to admission to every institution maintained from State funds, without difference of caste, colour or creed. I am glad to find that this principle is generally agreed to, althopgh some members demur to its application in particular localities.

Under the second para of the order, schools started as a protest against the admission of panchamas into Government institutions are not entitled to grants-in-aid, although they are not denied recognition if they conform to departmental standards. Some cases in which recognition has not been granted were referred to in the course of the discussion. If the managers are dissatisfied with the orders of the Department, it is open to them to appeal to the Government, and the facts will then be carefully gone into. As regards grants-in-aid the question of amending the grant-in-aid rules so as to admit of grants being given to schools not open to all communities has been under consideration and early orders may be expected. While on this subject I might also refer to the representation that admission to Sanskrit Colleges maintained by the State should not be restricted to certain classes. As mentioned during the discussions, the report of the Committee appointed to consider the subject is before Government, and it will be published for general information and discussion, before orders are passed.

Some of the members urged the need for providing facilities for Industrial and Commercial Education. I trust that the statistics furnished by my worthy colleague the First Member of Council in regard to the action taken by the Government will show that Government are fully alive to their responsibilities in this matter. I am glad that undue expenditure of public money on school buildings was deprecated. I may say I am fully in sympathy with this view having personally seen the structures which are used for schools in Ceylon. A Committee had been appointed to go into the question of designs for school buildings and their recommendations are now under the consideration of Government.

Among subjects relating to the Revenue Department, the re-establishment of Taluk Treasuries at District Head Quarters will receive early consideration. The fact that the kists for land revenue in the malnad are fixed earlier than in the maidan has been a standing complaint of the malnad ryots. I have already stated that the Government are prepared to grant your request in this connection and formal orders will issue before the next collection season.

In regard to the remission of wet assessment for failure of crops, it was urged that the the new rules as foreshadowed in my opening address do not go as far as the Bombay rules. I can however assure you that when the rules are published you will see that the relief given will not compare unfavourably with what is given elsewhere.

Another subject of perennial interest which has been discussed with some vehemence during this session relates to the responsibility of an entire holding for the assessment on every survey number comprised in it. The complaint that lands on which assessment has been paid by a co-sharer are not infrequently forfeited and brought to sale is not without foundation. With a view to obviate the hardships involved in the present system, the Government have already directed that when any person pays the assessment for a particular survey number included in a holding the fact should be recorded in the *Khirdi*. The Revenue Commissioner has also issued circular instructions directing that in the recovery of the arrears due on a holding, lands of which the assessment has not been paid should first be proceeded against. These directions will be incorporated in the Revenue Rules, with such subsidiary instructions as are necessary, so as to remove as far as possible, the hardship complained of.

Turning to the judicial subjects I am glad to be able to tell you that the question of permitting suits against Government which has been repeatedly urged by the Assembly has nearly reached a final stage and that a decision may be expected within the next few months. The extension of the scheme of separation of judicial and executive functions to the remaining four districts has been urged but I fear the present financial situation does not admit of this. It is hardly possible to open second class Magistrate's Courts in all Taluk Head-quarter towns. Government will endeavour to meet the present inconvenience by conferring second class powers on Bench Courts wherever possible. The scheme of village courts appears to be widely appreciated and the request of the representative of the Chamber of Commerce for the establishment of Panchayet courts in the cities on the lines of these courts affords testimony to the usefulness of these institutions.

Amongst the subjects discussed at great length the one that took up the longest time was the recent order of Government on the subject of the representation of all communities in the public service. I believe the discussion on this subject which was continued for three days, has been of value in clearing misunderstandings and enabling each side to appreciate the other's point of view. A large number of the Brahmin members of the Assembly have presented a memorandum explaining their position with regard to this question. They have expressed themselves as "perfectly sympathising with the legitimate aspirations of the non-Brahmins to secur a larger representation in Government servic" and this must be as gratifying to the backward communities as it is to the Government. While agreeing that preference may be shown to qualified candidates of backward communities, they have asked that the result aimed at should not be brought about by the complete exclusion of the Brdhmins from admission to the service for any particular period. Such exclusion, as I have explained more than once, is not contemplated by the Government. The chief point emphasised in this memorandum is that in attempting to satisfy the aspirations of the backward classes, the efficiency of the service should not be reduced or sacrificed. This is quite a legitimate position to take up and I can assure the members that in giving effect to their orders, the Government will take care to see that efficiency is in no way impaired. The educational and other qualifications required for first entry into the various grades and classes of appointment will be very carefully examined and prescribed, and persons not possessing such qualifications, whether Brahmins or non-Brahmins, will not be appointed. After this discussion and interchange of ideas, I venture to hope that the cordial relations which subsisted between the several communities in the State will be restored.

The Mysore Newspapers Regulation was the subject of an interesting discussion. In view of the tone of recent writings in certain sections of the Press some of the members were in favour of the provisions of the Regulation being put into operation in respect of offending newspapers and one member even went the length of suggesting the suppression of vernacular newspapers altogether. The general sense, I take it, is that the drastic provisions of the Regulation may be removed from the statute book, but that some effective control over the Press should be retained by the Government. The question of amending the law on the subject is, as I said in my opening address, now before the Government and the views of this Assembly will receive due consideration. The spirit of mutual forbearance and goodwill that has generally characterised the discussions on controversial subjects during this session encourages me to hope that the Press will also be animated by the same spirit and that its tone in future will be such as to justify its being given a full measure of liberty.

The discussion of the question of women's franchise was a lively one. Although a new question in Mysore, it has been debated upon in some of the British Indian Provinces; and the franchise has been extended to women in respect of local bodies and of the local legislative Councils in varying degrees in some of the Provinces and sister States. Here, after a spirited discussion, lasting for nearly three hours, the Assembly has given an adverse vote, 39 voting for and 58 against the extension of the franchise to women. This was perhaps to be expected in view of the inherent conservatism of the representatives of the rural population. Speaking for myself, I hope that at no distant date a strong body of public opinion will be created in favour of women, who possess the necessary qualifications, being enabled to take their legitimate share in the direction of public affairs. Meantime the question will also be placed before the Legislative Council at an early opportunity.

In regard to the important question of constitutional reform which was discussed this evening, I may say that while sympathising with the natural aspiration of the people in this matter, the Government feel that this subject cannot be rushed. Conditions in Mysore are not on all fours with those in British India and it will not do merely to copy what is considered suitable for British India. The question of adopting measures for giving the people an increasing share in the administration is engaging the earnest attention of the Government. The views of the Assembly as indicated in the discussions to-day will be submitted to His Highness the Maharaja for his gracious consideration, and I trust it will be possible to evolve a scheme of reforms which may be placed before the Assembly for discussion when we meet next.

Gentlemen—Before concluding let me again express my appreciation of the high level at which the discussions were maintained and of the spirit of harmony that generally pervaded the Session. It will give me great pleasure to submit to His Highness the Maharaja the sentiments of loyalty and devotion that you have expressed in the course of the discussions and your resolution of loyal welcome to his illustrious guest, His Royal Highness the Prince of Wales to whose visit to the State next January we are all so eagerly looking forward.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಪ್ರಶ್ನಾಂಶಗಳು.

ಮಿ|| ಎಸ್. ಸೀತಾರಾಮಯ್ಯನವರು, ಶಿವಮೊಗ್ಗ ತಾಲ್ಲೂಕು.

ಪ್ರಶ್ನೆ 1.—ಈ ಕೆಳಗಿನ ಅಂಶಗಳನ್ನು ಸರ್ಕಾರದವರು ದಯವಿಟ್ಟು ತಿಳಿಸುವರೇ ?

(a) 1918-19, 1919-20 ಮತ್ತು 1020-21 ಈ ಮೂರು ವರ್ಷಗಳಲ್ಲಿ ಮೈಸೂರು-ಅರಸೀಕೆರೆ ರೈಲ್ವೆಗಾಗಿ ಮಾಡಿರುವ ಒಟ್ಟು ಸಿಬ್ಬಂದಿಖರ್ಚು ಮತ್ತು ಇತರ ಬಾಬುಗಳ ಖರ್ಚುಎಷ್ಟು? ಮತ್ತು ಈ ಪ್ರತಿಯೊಂದು ವರ್ಷದ ಒಟ್ಟು ಹುಟ್ಟುವಳಿಯೆಷ್ಟು?

(b) ಪ್ರಯಾಣಿಕರಿಗಾಗಿಯೂ ಇತರ ಬಾಬುಗಳಿಗಾಗಿಯೂ ವಸೂಲುಮಾಡಿದ ಚಾರ್ಜುಗಳ ವಿಷಯದಲ್ಲಿ ಆ ಲೈನಿನಲ್ಲಿ ನಡೆಯುತ್ತಿರುವ ಮೋಸದ ವಿಚಾರವಾಗಿ ಏನಾದರೂ ಫಿರ್ಯಾದುಗಳು ಬಂದಿವೆಯೇ ? ಬಂದಿದ್ದರೆ, ಎಷ್ಟು ಬಂದಿವೆ ? ಅವುಗಳ ಪೈಕಿ ಎಲ್ಲಾ ಅಥವಾ ಯಾವುದಾದರೊಂದು ಫಿರ್ಯಾದನ್ನು ವಿಚಾರಣೆಮಾಡಿ ಫೈಸಲ್ಮಾಡಿದೆಯೇ ? ಮಾಡಿದ್ದರೆ, ಅದರ ಫಲಿತಾಂಶವೇನು ?

ಸರ್ಕಾರದ ರೈಲ್ವೆ ಸೆಕ್ರೆಟರಿಗಳವರು.—

ಉತ್ತರ.—(a) ಕಳೆದ ಮೂರು ವರ್ಷಗಳಲ್ಲಿ ಮೈಸೂರು-ಅರಸೀಕೆರೆ ರೈಲ್ವೆಯನ್ನು ನಡೆಸುವುದರಲ್ಲಿ ಈ ಕೆಳಗೆ ಕಂಡಂತೆ ಒಟ್ಟುಖರ್ಚು ಆಗಿದೆ :—

1918-19	ರೂ. 4,10,076
1919-20	ರೂ. 3,48,053
1920-21	ರೂ. 3,89,568

ಸದರಿ ವರ್ಷಗಳಲ್ಲಿನ ಒಟ್ಟು ಹುಟ್ಟುವಳಿಯನ್ನು ಈ ಕೆಳಗೆ ಕಾಣಿಸಿದೆ :—

1918-19	ರೂ. 3,99,338
1919-20	ರೂ. 5,11,067
1920-21	ರೂ. 4,95,406

1920-21ನೆಯ ವರ್ಷದ ಲೆಕ್ಕಗಳನ್ನು ಆಖೈರಾಗಿ ಪೈದುಮಾಡಿದಾಗ ಆ ವರ್ಷದ ಸಂಖ್ಯೆಗಳು ಸ್ವಲ್ಪ ಬದಲಾಯಿಸಬಹುದು.

(b) ಏಜೆಂಟರಲ್ಲಿಗೆ ಮೂರು ಫಿರ್ಯಾದುಗಳು ಬಂದಿವೆ. ಈ ಪೈಕಿ ಎರಡು ಫೈಸಲಾಗಿ ಒಂದು ವಿಚಾರಣೆಯಲ್ಲಿದೆ. ಒಂದರಲ್ಲಿ ಫಿರ್ಯಾದು ರುಜುವಾತಾಗಿ, ಸಂಬಂಧಪಟ್ಟ ರೈಲ್ವೆ ನೌಕರನಿಗೆ ಸಂಬಳವನ್ನೂ ಗ್ರೇಡನ್ನೂ ಕಡಮೆಮಾಡಿ ಅವನನ್ನು ಇನ್ನೊಂದು ಸೆಕ್ಷನ್ನಿಗೆ ವರ್ಗಮಾಡಲಾಯಿತು. ಎರಡನೆಯ ಫಿರ್ಯಾದು ದ್ವೇಷದಿಂದ ಹುಟ್ಟಿದ್ದಾಗಿ ಕಂಡುಬಂತು. ಮೂರನೆಯ ಫಿರ್ಯಾದಿಗೆ ಇನ್ನೂ ರುಜುವಾತು ಬೇಕಾಗಿರುವುದರಿಂದ ಈ ವಿಷಯದಲ್ಲಿ ಏಜೆಂಟರು ಫಿರ್ಯಾದಿಗಳೊಡನೆ ಕಾಗದಪತ್ರ ನಡೆಸುತ್ತಲಿದಾರೆ.

ಮಿ|| ಎಸ್. ಸೀತಾರಾಮಯ್ಯನವರು, ಶಿವಮೊಗ್ಗ ತಾಲ್ಲೂಕು.

ಪ್ರ.—(a) ಲೇಟ್ ಇಂಜನಿಯರಾದ ಮಿ|| ಅರುಣಾಚಲಯ್ಯರವರಿಂದ ಸರ್ವೆಚಾರ್ಜು ಮೊದಲಾದುವುಗಳು ಸೇರಿ ಶಿವಮೊಗ್ಗ-ಅರಸಾಳು ರೈಲ್ವೆ ಕಾಂಗಾರಿಗಾಗಿ ಮೊದಲಿನಿಂದ ಇದುವರೆಗೂ ಮಾಡಲ್ಪಟ್ಟಿರುವ ಒಟ್ಟು ಖರ್ಚು ಎಷ್ಟು ?

(b) ಪ್ರಾರಂಭದಲ್ಲಿ ಎಂದರೆ ಅದನ್ನು ನ್ಯಾರೋ ಗೇಜು ಮಾಡಬೇಕೆಂದಿದ್ದಾಗ ಈ ಕಾಂಗಾರಿಯ ಒಟ್ಟು ಅಂದಾಜು ಎಷ್ಟು ? ಅದನ್ನು ಮೀಟರ್ ಗೇಜಿಗೆ ಬದಲಾಯಿಸಿದಾಗ ಅಂದಾಜು ಎಷ್ಟಾಯಿತು ?

(c) ಪುನಃ ಈ ಕೆಲಸವನ್ನು ಬಹುಶಃ ಯಾವಾಗ ಪ್ರಾರಂಭಿಸಿ ಮುಂದುವರಿಸಲಾಗುವುದು ?

(d) ಈ ಲೈನನ್ನು ರಿಪ್ಪನ್‌ಪೇಟೆ ಮಾರ್ಗವಾಗಿ ಸಾಗರಕ್ಕೂ ಹುಮುಚದಕಟ್ಟೆ ಮಾರ್ಗವಾಗಿ ತೀರ್ಥಹಳ್ಳಿಗೂ ಬಡಾಯಿಸುತ್ತದೆಯೇ ?

(e) ಹಾಗೆ ಬಡಾಯಿಸಿದರೆ, ಈ ಲೈನು ಮುಗಿಯುವುದಕ್ಕೆ ಬಹುಶಃ ಎಷ್ಟುಕಾಲ ಹಿಡಿಯುತ್ತದೆ ?

(f) ಹಾಗೆ ಬಡಾಯಿಸದಿದ್ದರೆ ಈ ಲೈನಿನ ಪೂರ್ಣಪ್ರಯೋಜನವನ್ನು ಹೇಗೆ ಪಡೆಯಬೇಕೆಂದು ಯೋಚಿಸಿದೆ ?

ಸರ್ಕಾರದ ರೈಲ್ವೆ ಸೆಕ್ರೆಟರಿಗಳವರು.—

ಉತ್ತರ.—(a) 3,34,305 ರೂಪಾಯಿ.

(b) 2 ಅಡಿ, 6 ಅಂಗುಲ ಪ್ರಮಾಣದ ಲೈನಿನ ಖರ್ಚು ಮೊದಲು ಕಚ್ಚಾ ಅಂದಾಜು ಮಾಡಿದಂತೆ ಮೈಲಿ ಒಂದಕ್ಕೆ 30,000 ರೂಪಾಯಿಯಾಯಿತು. ಅಂದರೆ ಶಿವಮೊಗ್ಗದಿಂದ ಅರಸಾಳಿಗೆ ಇರುವ 27 ಮೈಲಿಗಳಿಗೆ ಒಟ್ಟು 8,10,000 ರೂಪಾಯಿಯಾಯಿತು. ಈಗ ಪದಾರ್ಥಗಳ ಖರೀದಿ ಹೆಚ್ಚಿರುವದರಿಂದ ಖರ್ಚು ಸುಮಾರು ದ್ವಿಗುಣವಾಗಬಹುದು.

ಈಗಿನ ಸ್ಥಿತಿಯಲ್ಲಿ ಮೀಟರ್‌ಗೇಜಿನ ಖರ್ಚು 22,50,000 ರೂಪಾಯಿಯಾಗುತ್ತದೆಂದು ಅಂದಾಜುಮಾಡಿದೆ.

(c), (d), (e) ಮತ್ತು (f). ಶಿವಮೊಗ್ಗ-ಅರಸಾಳು ರೈಲ್ವೆ ಲೈನನ್ನು ಪುನಃ ಕೈಗೊಳ್ಳುವುದಕ್ಕೆ ಅಥವಾ ಬಡಾವಣೆ ಮಾಡುವುದಕ್ಕೆ ಅನುಕೂಲವಾಗುವಂತೆ ಕಾಲಸ್ಥಿತಿಯು ಯಾವಾಗ ಉತ್ತಮವಾಗುವುದೆಂಬುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ.

ಮಿ|| ಪಿ. ವೆಂಕಪ್ಪಯ್ಯನವರು, ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೋರ್ಡು.—

ಪ್ರ.—(a) ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸವನ್ನು ಕಲಿತು ಉತ್ತರೋತ್ತರ ಅಲ್ಲಿ ನಡೆಯುವ ಕೆಲಸವನ್ನು ತನಿಖೆ ಮಾಡುವುದಕ್ಕೂ ಸ್ವಂತವಾಗಿ ಜರುಗಿಸುವುದಕ್ಕೂ ಸದರಿ ಕಾರ್ಖಾನೆಗೆ ಚಿಕ್ಕವಯಸ್ಸಿನ ನಮ್ಮ ಸ್ವಂತ ಇಂಜನಿಯರನ್ನು ಉಮೇದುವಾರರನ್ನಾಗಿ ನೇಮಿಸಬೇಕೆಂಬ ಉದ್ದೇಶವಿರುವುದೆ ?

(b) ಅಲ್ಲಿ ನಮ್ಮ ಜನಗಳನ್ನು ತರಬೇತುಮಾಡಿಸುವ ಬಗ್ಗೆ ಯಾವ ಪ್ರಯತ್ನಗಳು ನಡೆದಿವೆ ಮತ್ತು ತರಬೇತನ್ನು ಹೊಂದಲು ನಮ್ಮ ಇಂಜನಿಯರಲ್ಲಿ ಎಷ್ಟುಜನ ಕಳುಹಿಸಲ್ಪಟ್ಟಿರುತ್ತಾರೆ ?

(c) ಪ್ರತಿವರ್ಷವೂ ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ಕೆಲಸ ಕಲಿಯುವ ಬಗ್ಗೆ ಕನಿಷ್ಠಪಕ್ಷ ಒಬ್ಬ ಅಥವಾ ಇಬ್ಬರು ಇಂಜನಿಯರಿಂಗ್ ಆಫೀಸರರನ್ನಾದರೂ ಕಳುಹಿಸಲು ಸರ್ಕಾರದವರು ದಯವಿಟ್ಟು ತಕ್ಕ ಏರ್ಪಾಡುಗಳನ್ನು ಮಾಡುವರೆ ?

(d) ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ನಡೆಯುವ ಕೆಲಸಗಳ ವಿಷಯದಲ್ಲಿ ಸರಿಯಾದ ಯೋಗ್ಯತೆಗಳಿಲ್ಲದಿರುವ ಜನರನ್ನು ಭಾರಿ ಸಂಬಳಗಳ ಮೇಲೆ ವಿವೇಚನೆಯಿಲ್ಲದೆ ನೌಕರಿಗಳಿಗೆ ನೇಮಕ ಮಾಡುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೆ ?

(e) ಗುಮಾಸ್ತೆಯರ ಸಿಬ್ಬಂದಿಗೆ ಜನರನ್ನು ನೇಮಿಸುವ ಭಾಗದಲ್ಲಿ ಸರ್ಕಾರದವರು ಕಂಪೆನಿಯವರಿಗೆ ಸರ್ವಸ್ವಾತಂತ್ರ್ಯವನ್ನೂ ಕೊಟ್ಟಿರುವರೆ ?

(f) ಲಾಯಖಾದವರು ಸಂಸ್ಥಾನದಲ್ಲಿಯೇ ದೊರೆಯುವಲ್ಲಿ ಅಂಥವರನ್ನು ನೇಮಕಮಾಡುವಂತೆ ಸರ್ಕಾರದವರು ಏಕೆ ಏರ್ಪಾಡು ಮಾಡಕೂಡದು ?

(g) ಈಗಿರುವ ಸಿಬ್ಬಂದಿಯವರು ದಕ್ಷರಾಗಿರುತ್ತಾರೆಯೆ ಮತ್ತು ಈಗ ಪಡೆಯುತ್ತಿರುವ ಸಂಬಳಗಳಿಗೆ ಅವರು ಅರ್ಹರಾಗಿರುತ್ತಾರೆಯೇ ಎಂಬ ಅಂಶಗಳನ್ನು ಸರ್ಕಾರದವರು ವಿಚಾರಿಸುವರೇ ?

(h) ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ಈಚೆಗೆ ಬೆಂಕಿಯಿಂದ ಆದ ಲುಕ್ಸಾನನ್ನು ಕುರಿತು ಸರ್ಕಾರದವರು ವಿಚಾರಣೆಗಳನ್ನು ನಡೆಸಿದ್ದಾರೆಯೆ ? ಎಷ್ಟು ನಷ್ಟವಾಯಿತು ಮತ್ತು ಅದಕ್ಕೆ ಜವಾಬ್ದಾರರಾದ ಜನರನ್ನು ಶಿಕ್ಷಿಸಲು ಯಾವ ಪ್ರಯತ್ನಗಳು ನಡದಿವೆ ?

ಸರ್ಕಾರದ ಜನರಲ್ ಸೆಕ್ರೆಟರಿಯವರು.—

ಉತ್ತರ.—(a) ಸರ್ಕಾರದವರ ಉದ್ದೇಶವೂ ಹಾಗೆಯೇ ಇದೆ.

(b) ಮತ್ತು (c) ಕಬ್ಬಿಣದ ಕಾರ್ಖಾನೆಯ ನಾನಾ ಶಾಖೆಗಳಿಗೆ ಮುಂದೆ ನೇಮಕಮಾಡುವುದಕ್ಕಾಗಿ ಸ್ಥಳೀಯ ಜನರನ್ನು ಅಪ್ರೆಂಟಿಸುಗಳನ್ನಾಗಿ ತರಬೇತುಮಾಡಬೇಕೆಂಬ ಅಂಶವನ್ನು ಏಜೆಂಟರೊಡನೆ ಮಾಡಿಕೊಂಡಿರುವ ಕರಾರಿನಲ್ಲಿ ಕಾಣಿಸಿದೆ. ಸ್ಥಳೀಯ ಜನರನ್ನು ತರಬೇತು ಮಾಡುವ ವಿಷಯವನ್ನು ಈಗ ಸರ್ಕಾರದವರು ಆಸಕ್ತಿಯಿಂದ ಪರ್ಯಾಲೋಚಿಸುತ್ತಿದಾರೆ. ಈಚೆಗೆ ಜಮ್‌ಷೆಡ್‌ಪುರದಲ್ಲಿ ಹೊಸದಾಗಿ ಒಂದು ಟೆಕ್ನೋಲಾಜಿಕಲ್ ಇನ್‌ಸ್ಟಿಟ್ಯೂಟ್ ಎಂಬ ವಿದ್ಯಾಶಾಲೆಯು ಸ್ಥಾಪಿತವಾಗಿರುವುದರಿಂದ ಮೈಸೂರು ಸೀಮೆಯ ಕೆಲವು ಇಂಜನಿಯರು ವಿದ್ಯಾರ್ಥಿಗಳನ್ನು ತರಬೇತು ಮಾಡುವುದಕ್ಕೂ ಪ್ರಯತ್ನಿಸುತ್ತಲಿದಾರೆ.

(d) ವಿವೇಚನೆಯಿಲ್ಲದೆ ಆಗಲಿ ಸರಿಯಾದ ಯೋಗ್ಯತೆಗಳು ಇಲ್ಲದವರನ್ನೇ ಆಗಲಿ ನೇಮಕಮಾಡಿರುವುದು ನಿಜವಲ್ಲ.

(e) ಮತ್ತು (f) ಸರ್ಕಾರದವರು ಗೊತ್ತುಮಾಡಿರುವ ಪರಿಮಿತಿಗಳಿಗೂ ದರ್ಜೆಗಳಿಗೂ ಒಳಪಟ್ಟು ಗುಮಾಸ್ತೆಯರ ಸಿಬ್ಬಂದಿಯನ್ನೆಲ್ಲಾ ನೇಮಿಸುವುದಕ್ಕೆ ಕಂಪೆನಿಯವರಿಗೆ ಹಕ್ಕಿರುತ್ತದೆ. ಈ ಭಾಗದಲ್ಲಿ ಪ್ರವೇಶಿಸುವುದು ಸರ್ಕಾರದವರಿಗೆ ಯುಕ್ತವಾಗಿ ತೋರುವುದಿಲ್ಲ.

(g) ಮೇಲೆ ಕಂಡ (d), (e) ಮತ್ತು (f) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರಗಳನ್ನು ನೋಡತಕ್ಕದ್ದು. (ಸಶೇಷ).

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

(ಕಳೆದವಾರದ ಶೇಷ.)

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

21. ಮರದಿಂದ ಭಟ್ಟಿ ಇಳಿಸುವ ಯಂತ್ರದ ಸ್ಥಾಪನೆಗೂ, ಗಾಳಿ ಕುಲುಮೆಗಳನ್ನು ಕಟ್ಟುವುದಕ್ಕೂ, ಸಾಮಗ್ರಿಗಳನ್ನು ಶೇಖರಿಸುವುದಕ್ಕೂ ಸಂಬಂಧಪಟ್ಟ ಕೆಲಸವು ತೃಪ್ತಿಕರವಾಗಿ ನಡೆಯುತ್ತಿದೆ. 1921 ನೆಯ ಆಗಸ್ಟ್ ಆಖೈರಿನವರೆಗೆ ಈ ಕೆಲಸಗಳಿಗಾಗಿ ಒಟ್ಟು 1 ಕೋಟಿ 20 ಲಕ್ಷ ರೂಪಾಯಿಗಿಂತ ಸ್ವಲ್ಪ ಹೆಚ್ಚಾಗಿ ಖರ್ಚಾಗಿದೆ. ಮರದಿಂದ ಭಟ್ಟಿ ಇಳಿಸುವ ಯಂತ್ರಕ್ಕೂ ಗಾಳಿ ಕುಲುಮೆಯ ಯಂತ್ರಕ್ಕೂ ಅಂದಾಜು ಮಾಡಿದ ಹಣದ ಪೈಕಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲವನ್ನೂ ಖರ್ಚುಮಾಡಿ ಇದೆ. ಬಾಕಿ ಉಳಿದ ಬಂಡವಾಳದ ಖರ್ಚು ಮುಖ್ಯವಾಗಿ ಟ್ರಾಂವೆ ಲೈನುಗಳನ್ನು ಹಾಕಿಸುವುದಕ್ಕೂ ಕೆಮ್ಮಣ್ಣುಗುಂಡಿಯಿಂದ ಬೆಟ್ಟದ ಬುಡಕ್ಕೆ ಅದುರುಗಳನ್ನು ಇಳಿಸುವುದಕ್ಕಾಗಿ ತಂತಿ ಮಾರ್ಗಕ್ಕೆ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೂ ಸಂಬಂಧಪಡುತ್ತದೆ. ಮರದಿಂದ ಬಟ್ಟಿ ಇಳಿಸುವ ಯಂತ್ರವೂ ಗಾಳಿ ಕುಲುಮೆಗಳ ಯಂತ್ರವೂ ಸಹ ಕೆಲಸಕ್ಕೆ ಸಿದ್ಧವಾಗುವುದರಲ್ಲಿವೆ. ನೀರು ಸರಬರಾಯಿಗೂ ಸೌದೆಯನ್ನು ತುಂಡುತುಂಡು ಮಾಡುವ ಗರಗಸದ ಯಂತ್ರಕ್ಕೂ ಅವಶ್ಯಕವಾದ ಉಪಕರಣಗಳು ಬರುವುದಕ್ಕೆ ಸ್ವಲ್ಪ ಸಾವಕಾಶವಾಗಿದೆ ಆದರೆ, ಈ ಯಂತ್ರವೆಲ್ಲಾ 1922 ನೆಯ ಜುಲೈ ತಿಂಗಳ ಒಳಗಾಗಿ ಕೆಲಸಕ್ಕೆ ಸಿದ್ಧವಾಗಬಹುದೆಂತ ನಿರೀಕ್ಷಿಸಿ ಇದೆ.

22. ಕೆಮ್ಮಣ್ಣುಗುಂಡಿಯ ತಂತಿಯ ಮಾರ್ಗವನ್ನು ಹಾಕುವ ನಿರೀಕ್ಷಣೆಯಲ್ಲಿ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಬೆಟ್ಟನಹಳ್ಳಿ ಮತ್ತು ಶಂಕರಗುಡ್ಡದ ಸಮೀಪದಲ್ಲಿ ಹಂಗಾಮಿಯಾಗಿ ಕಬ್ಬಿಣದ ಅದುರನ್ನೂ ಟಂಕವನ್ನೂ ತೆಗೆಯುವುದಕ್ಕೆ ಏರ್ಪಾಡುಗಳನ್ನು ಮಾಡಿದೆ. ಕೆಲಸವನ್ನು ಪ್ರಾರಂಭಿಸುವುದಕ್ಕೆ ಸಾಕಾದಷ್ಟು ಸಾಮಗ್ರಿಯನ್ನು ಗಣಿಯಿಂದ ತೆಗೆದು ಜಮಾಯಿಸಲಾಗಿದೆ. ಅದುರನ್ನೂ ಟಂಕವನ್ನೂ ಪುಡಿಮಾಡುವುದಕ್ಕೆ ತಕ್ಕ ಯಂತ್ರದ ನಕಾಶೆಯನ್ನು ಕಲ್ಪಿಸಿ, ಅದರಂತೆ ಯಂತ್ರವನ್ನು ತಯಾರ್ಮಾಡಿ ಕಳುಹಿಸಲು ಇಂಗ್ಲೆಂಡಿಗೆ ಬರೆದಿದೆ.

23. ಕಾರ್ಖಾನೆಗೆ ಸೌದೆಯನ್ನು ಸಾಗಿಸುವುದಕ್ಕಾಗಿ ಭದ್ರಾವತಿ-ಕೆಮ್ಮಣ್ಣುಗುಂಡಿ ಮತ್ತು ಭದ್ರಾವತಿ-ಅಗಸನಹಳ್ಳಿ, ಒಟ್ಟು 45 ಮೈಲಿಗಳ ಫಾಸಲೆಯ ಈ ಎರಡು ಟ್ರಾಮ್ವೆ ಲೈನುಗಳೂ ಸ್ವಲ್ಪ ಹೆಚ್ಚು ಕಡಿಮೆ ಪೂರೈಸಿವೆ; ಕ್ಷಿಪ್ರದಲ್ಲಿಯೆ ಕಲ್ಲು ಮಣ್ಣು ಸಾಗಿಸುವ ಗಾಡಿಗಳನ್ನು ಆ ಲೈನುಗಳಲ್ಲಿ ಬಿಡಬಹುದೆಂತ ನಿರೀಕ್ಷಿಸಲಾಗಿದೆ.

24. ಹೊಸ ಭದ್ರಾವತಿ ಟವನಿನಲ್ಲಿ ಸಿಬ್ಬಂದಿಯ ಅನುಕೂಲಕ್ಕಾಗಿ ಕಟ್ಟುತ್ತಿರುವ ಕಟ್ಟಡಗಳು 1921 ನೆಯ ಡಿಸೆಂಬರು ಆಖೈರಿನೊಳಗಾಗಿ ಪೂರೈಸುವುವೆಂದು ನಿರೀಕ್ಷಿಸಿದೆ. ಫಾರೆಸ್ಟು ಮತ್ತು ರೈಲ್ವೆಯ ಸಿಬ್ಬಂದಿಗಳಿಗೂ ಸಹ ವಾಸಸ್ಥಳಗಳನ್ನು ಕಟ್ಟಿಸಲು ಅಂದಾಜುಗಳು ಈಚೆಗೆ ಮಂಜೂರಾಗಿವೆ. ಹೊಸ ಟವನಿನ ನೀರು ಸರಬರಾಯಿ ಮತ್ತು ಚರಂಡಿಗಳಿಗಾಗಿ 1½ ಲಕ್ಷ ರೂಪಾಯಿಯ ಖರ್ಚಿನಲ್ಲಿ ಒಂದು ಪಕ್ಕಾ ಏರ್ಪಾಡು ಮಂಜೂರಾಗಿರುತ್ತದೆ. ಕೆಲಸವೂ ನಡೆಯುತ್ತಿದೆ.

ಕೃಷ್ಣರಾಜಸಾಗರದ ಕಾಂಗಾರಿ.

25. ಈ ವರ್ಷ ಈ ಕಾಂಗಾರಿಯು ಬಹುಮಟ್ಟಿಗೆ ಮುಂದುವರಿದಿದೆ. ಕಟ್ಟೆಯ ಮಧ್ಯಭಾಗವು ನದಿ ಮಟ್ಟದಮೇಲೆ 80 ಅಡಿಯವರೆಗೆ ಎತ್ತರಿಸಿದೆ. ಕಾಂಗಾರಿಯ ಮೊದಲನೆಯ ಅಂತಸ್ಥಿನಲ್ಲಿ ದಾಸ್ತಾನ ಮಾಡಬೇಕೆಂದಿದ್ದಷ್ಟು ನೀರು ಪೂರ್ತಿಯಾಗಿ ನಿಂತಿದೆ. ಕೋಡಿಯ ಒಂದು ಭಾಗದ ಗೋಡೆಯು ನದಿ ಮಟ್ಟದಮೇಲೆ 77 ಅಡಿ ಎದ್ದಿದೆ. ಕೈಗೊಂಡಿದ್ದ ಕಾಂಗಾರಿಯೆಲ್ಲಾ ಮಳೆಗಾಲಕ್ಕೆ ಮೊದಲೇ ಮುಗಿದು ಕಳೆದ ಜುಲೈ ತಿಂಗಳಿನಲ್ಲಿ ನಡುಕಟ್ಟೆಯಮೇಲೆಯೂ ಕೋಡಿ ಗೋಡೆಯಮೇಲೆಯೂ 9 ಅಡಿ ಪ್ರವಾಹ ಬಂದು ಅಪಾಯವೇನೂ ಆಗಲಿಲ್ಲ.

26. ಮೊದಲನೆಯ ಅಂತಸ್ತಿನಲ್ಲಿ ದಾಸ್ತಾನ ಮಾಡಬೇಕೆಂದು ಪರ್ಯಾಲೋಚಿಸಿದ್ದಷ್ಟು ನೀರು ತುಂಬಿರುವುದರಿಂದ, ಇದುವರೆಗೂ ಈ ಕಟ್ಟೆಗಾಗಿ ಖರ್ಚಾಗಿರುವ ಹಣಕ್ಕೆ ತಕ್ಕಂತೆ ಸಾಧ್ಯವಿರುವಷ್ಟು ಉಪಯೋಗ ಹೊಂದುವುದಕ್ಕೆ ಯಾವುದು ಅತ್ಯುತ್ತಮವಾದ ಮಾರ್ಗವೆಂಬುದನ್ನು ನಿರ್ಧರಿಸುವುದಕ್ಕಾಗಿಯೂ ಈ ಕಾಂಗಾರಿಯ ಮುಂದಣ ಅಂತಸ್ತುಗಳಿಗೆ ಪ್ರಾಯಶಃ ತಗಲಬಹುದಾದ ಖರ್ಚಿನ ಅಂದಾಜನ್ನು ತಿದ್ದುಪಾಟು ಮಾಡುವುದಕ್ಕಾಗಿಯೂ ಅದರಿಂದ ಬರಬಹುದಾದ ಆದಾಯದ ಅಂದಾಜುಗಳನ್ನು ತಯಾರುಮಾಡುವುದಕ್ಕಾಗಿಯೂ ಈ ಕೃಷ್ಣರಾಜಸಾಗರದ ವಿಷಯವನ್ನು ಪುನಃ ಪರಿಶೀಲನೆ ಮಾಡುವುದು ಅವಶ್ಯಕವೆಂದು ಸರ್ಕಾರದವರಿಗೆ ಕಂಡುಬಂದಿದೆ. ಈ ಉದ್ದೇಶದಿಂದ ಈ ವಿಷಯವನ್ನು ಕೂಲಂಕಷವಾಗಿ ಪರಿಶೋಧಿಸಿ ಶೀಘ್ರದಲ್ಲಿಯೇ ರಿಪೋರ್ಟನ್ನು ಕಳುಹಿಸಲು ಒಂದು ಕಮಿಟಿಯನ್ನು ಏರ್ಪಡಿಸಿ ಅದಕ್ಕೆ ಚೀಫ್ ಇಂಜನಿಯರವರನ್ನು ಅಧ್ಯಕ್ಷರನ್ನಾಗಿ ನಿಯಮಿಸಿರುತ್ತದೆ. ಸದರಿ ಕಮಿಟಿಯವರು ಪರ್ಯಾಲೋಚಿಸಬೇಕಾದ ಮುಖ್ಯ ವಿಷಯಗಳು ಯಾವುವೆಂದರೆ :—

(1) ಎರಡನೆಯ ಅಂತಸ್ತಿನ ಕಾಮಗಾರಿಗೆ ಹೊಸದಾಗಿ ಮಾಡಿದ ಅಂದಾಜು ಸರಿಯಾಗಿದೆಯೇ ? ಮುಂದಿನ ಹತ್ತು ವರ್ಷಗಳಕಾಲದಲ್ಲಿ ನಡೆಯಬೇಕಾದ ಕಾಂಗಾರಿಗಳಿಗೆ ಕನಿಷ್ಠಪಕ್ಷ ಎಷ್ಟು ಹಣ ಬೇಕಾಗುವುದು ?

(2) ಮೊದಲನೆಯ ಅಂತಸ್ತಿನಿಂದ ನೀರಾವರಿ ಕಾಮಗಾರಿ ನಡಿಸುವುದಕ್ಕೂ ವಿದ್ಯುಚ್ಛಕ್ತಿಯ ಏರ್ಪಾಡುಗಳನ್ನು ನಡೆಸುವುದಕ್ಕೂ ತಾರತಮ್ಯವೇನು ? ಮೊದಲನೆಯ ಅಂತಸ್ತಿನ ಕಾಮಗಾರಿಯ ಖರ್ಚನ್ನೆಲ್ಲಾ ಕಾವೇರಿ ವಿದ್ಯುಚ್ಛಕ್ತಿ ಕಾಂಗಾರಿಗಳ ಬಾಬಿಗೆ ವಹಿಸುವುದು ಯುಕ್ತವೇ ?

(3) ಎರಡನೆಯ ಅಂತಸ್ತಿನಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಕಾಮಗಾರಿಗಳ ಮೂಲಕ ಎಷ್ಟರಮಟ್ಟಿಗೆ ಹುಟ್ಟುವಳಿಯಾಗಬಹುದು ?

(4) ಮೇಲ್ಮಟ್ಟದ ಕಾಲುವೆ ಕಾಮಗಾರಿಯನ್ನು ಕೈಗೊಳ್ಳುವುದು ಯುಕ್ತವೇ ? ಅದಕ್ಕೆ ಸುಮಾರು ಎಷ್ಟು ಖರ್ಚು ತಗುಲಬಹುದು ? ಮತ್ತು ಅದರಿಂದ ಎಷ್ಟು ವರಮಾನ ಬರಬಹುದು ?

(5) ಈ ಏರ್ಪಾಡಿನಲ್ಲಿಯೇ ನೀರಾವರಿಯನ್ನು ಇನ್ನೂ ಅಭಿವೃದ್ಧಿಪಡಿಸುವ ಉದ್ದೇಶದಿಂದ, ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವ ಇರಿಗೇಷನ್ ಆಕ್ಟುಗಳ ಮಾದರಿಯಮೇಲೆ ಒಂದು ರೆಗ್ಯುಲೇಷನನ್ನು ಜಾರಿಗೆ ತರುವುದು ಉಚಿತವೇ ?

27. ಸರ್ಕಾರೀ ಟೆಕ್ನಿಕಲ್ ಇಲಾಖೆಯ ಆಫೀಸರುಗಳು, ಕಾವೇರಿ ಆರ್ಬಿಟ್ರೇಷನ್ ವಿಷಯಕ್ಕೆ ಸಂಬಂಧಪಟ್ಟ ಟೆಕ್ನಿಕಲ್ ಅಂಶಗಳಲ್ಲಿ ತೃಪ್ತಿಕರವಾದ ಒಂದು ತೀರ್ಮಾನವನ್ನು ಮಾಡುವ ಉದ್ದೇಶದಿಂದ ಮದರಾಸು ಸರ್ಕಾರದಲ್ಲಿ ನೀರಾವರಿ ವಿಷಯದಲ್ಲಿ ನಿಪುಣರಾದವರೊಡನೆ ಕೆಲವು ಕಾಲದಿಂದ ಪರ್ಯಾಲೋಚಿಸುತ್ತಲಿದಾರೆ. ವಿವಾದವು ನ್ಯಾಯಸಮ್ಮತವಾಗಿ ತೀರ್ಮಾನವಾಗುವುದಕ್ಕೆ ಎರಡು ಸರ್ಕಾರದ ಟೆಕ್ನಿಕಲ್ ಆಫೀಸರುಗಳು ಮಾಡುವ ಸಲಹೆಗಳನ್ನು ನಮೂದಿಸಿ ಸದರಿ ಆಫೀಸರುಗಳು ರಿಪೋರ್ಟು ಮಾಡಿರುತ್ತಾರೆ. ಆ ರಿಪೋರ್ಟು ಈಗ ಪರ್ಯಾಲೋಚನೆಯಲ್ಲಿದೆ.

ರೈಲ್ವೆಗಳು.

28. ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ (21 ಮೈಲಿಗಳು) ಒಂದು ಮೀಟರ್ ಗೇಜ್ ಲೈನಿನಲ್ಲಿ ಗಾಡಿಗಳನ್ನು ಬಿಡುವುದಕ್ಕೆ ಕಳೆದ ಮೇ ತಿಂಗಳಲ್ಲಿ ಪ್ರಾರಂಭಿಸಲಾಯಿತು. ತಡಸದಿಂದ ಹೆಬ್ಬೆಗೆ (9·8 ಮೈಲಿ ಫಾಸಲೆ) ಎರಡು ಅಡಿ ಅಗಲದ ಒಂದು ಜಂಗಲು ಟ್ರಾಂವೆಯನ್ನೂ ಸಹ ಮರಮುಟ್ಟುಗಳನ್ನು ಸಾಗಿಸುವುದಕ್ಕಾಗಿ ಏರ್ಪಡಿಸಲಾಯಿತು. ಪ್ರಕೃತದಲ್ಲಿ ಸರ್ಕಾರದವರ ಆಡಳಿತದಲ್ಲಿ ಒಟ್ಟು 402 ಮೈಲಿ ಫಾಸಲೆಯ ರೈಲ್ವೆಲೈನು ಇರುತ್ತದೆ. ಈ ವರ್ಷದಲ್ಲಿ ರೈಲ್ವೆ ಲೈನುಗಳನ್ನು ಹಾಕಿದುದಕ್ಕೆ 21,68,000 ರೂಪಾಯಿಯೂ ಸರ್ವೆಕೆಲಸಗಳಿಗಾಗಿ 30,600 ರೂಪಾಯಿಯೂ ಖರ್ಚಾಯಿತು. ಓಪನ್ ಲೈನುಗಳಿಗೆ ಸಲಕರಣೆಗಳನ್ನೊದಗಿಸಿ ಸರಿಯಾದ ದರ್ಜೆಗೆ ತರುವುದರಲ್ಲಿ ವಿಶೇಷ ಖರ್ಚು ಆಗಿಯೇತೀರಬೇಕಾಗಿರುವುದರಿಂದ, ಶಿವಮೊಗ್ಗಾದಿಂದ ಅರಸಾಳಿಗೂ, ನಂಜನಗೂಡಿನಿಂದ ಚಾಮರಾಜನಗರಕ್ಕೂ ಮೀಟರ್ ಗೇಜ್ ಲೈನು ಹಾಕುವುದನ್ನು ಹಾಲ್ಯದಲ್ಲಿ ನಿಲ್ಲಿಸುವುದು ಯುಕ್ತವೆಂದು ಭಾವಿಸಲಾಗಿದೆ.

ಹಿಂದುಳಿದ ಪಂಗಡಗಳು, ಮತ್ತು ಸರ್ಕಾರೀ ನೌಕರಿ.

29. ಸರ್ಕಾರಿ ನೌಕರಿಯಲ್ಲಿ ಹಿಂದುಳಿದ ಪಂಗಡಗಳ ಪ್ರಾತಿನಿಧ್ಯವನ್ನು ಹೆಚ್ಚಿಸಲು ಮಾಡಬೇಕಾದ ವಿಶೇಷ ಏರ್ಪಾಟುಗಳನ್ನೂ, ಸಂಬಂಧಪಟ್ಟ ಇತರ ವಿಷಯಗಳನ್ನೂ ಪರ್ಯಾಲೋಚಿಸುವುದಕ್ಕಾಗಿ ನಿಯಮಿತವಾದ ಕಮಿಟಿಯ ಶಿಫಾರಸ್ಸಿನ ಮೇಲೆ ಸರ್ಕಾರದವರು ಪ್ರಸಕ್ತವರ್ಷದಲ್ಲಿ ಹುಕುಂ ಸಾದರ್ಮಾಡಿದ್ದಾರೆ. ಬ್ರಾಹ್ಮಣ ಬ್ರಾಹ್ಮಣೇತರ ಪಂಗಡಗಳ ಪ್ರತಿನಿಧಿಗಳಾದ ಸರ್ಕಾರೀ ಉದ್ಯೋಗಸ್ಥರಲ್ಲದ ಆರುಮಂದಿ ದೊಡ್ಡಮನುಷ್ಯರುಗಳನ್ನು ಆ ಕಮಿಟಿಗೆ ನೇಮಕಮಾಡಲಾಗಿತ್ತು. ಇದಕ್ಕೆ ಚೀಫ್ ಕೋರ್ಟಿನ ಚೀಫ್ ಜಡ್ಜ್‌ರವರಾದ ಸರ್ ಲೆಸ್ಲಿ ಮಿಲ್ಲರ್‌ರವರು ಅಧ್ಯಕ್ಷರಾಗಿದ್ದರು. ಈ ಕಮಿಟಿಯವರು ತಮ್ಮ ರಿಪೋರ್ಟನ್ನು 1919 ನೆ

ಆಗಸ್ಟ್ ತಿಂಗಳಲ್ಲಿ ಕಳುಹಿಸಿಕೊಟ್ಟರು. ಸರ್ಕಾರದವರು ಅದನ್ನು ಸಾವಧಾನವಾಗಿ ಪರ್ಯಾಲೋಚಿಸಿ ಮುಖ್ಯವಾದ ಇಲಾಖಾ ಮೊಖ್ತೇಸರುಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಕಳೆದ ಮೇ ತಿಂಗಳಲ್ಲಿ ಆಖೈರು ಹುಕುಮನ್ನು ಸಾದರ್ಮಾಡಿದರು.

30. ಸರ್ಕಾರದವರು ಆ ಕಮಿಟಿಯವರ ಶಿಫಾರಸುಗಳನ್ನು ಸಂಪೂರ್ಣವಾಗಿ ಅಂಗೀಕರಿಸದಿದ್ದಾಗ್ಯೂ, ಅರ್ಹರಾದ ಉಮೇದುವಾರರು ದೊರೆಯುವಪಕ್ಷದಲ್ಲಿ, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ಹಿಂದುಳಿದ ಪಂಗಡಗಳಿಗೆ ಸೇರಿದ ನೌಕರರಸಂಖ್ಯೆಯನ್ನು ಏಳು ವರ್ಷಗಳೊಳಗಾಗಿ, ಕೀಳ್ದರ್ಜೆಯ ನೌಕರಿಯಲ್ಲಿರುವವರು ಹೊರತು, ಒಟ್ಟು ಸರ್ಕಾರಿ ನೌಕರರ ಸಂಖ್ಯೆಯಲ್ಲಿ ಶೇಕಡ 50 ರಷ್ಟಕ್ಕೆ ಕ್ರಮೇಣ ಹೆಚ್ಚಿಸಬೇಕೆಂದು ನಿರ್ಧರಿಸಿದ್ದಾರೆ. ಈ ಉದ್ದೇಶವನ್ನು ನೆರವೇರಿಸುವುದಕ್ಕಾಗಿ, ಮೇಲೆ ನಮೂದಿಸಿದ ಏಳು ವರ್ಷಗಳ ಅವಧಿಯಲ್ಲಿ ಹಿಂದುಳಿದ ಪಂಗಡಗಳ ಉಮೇದುವಾರರುಗಳು ವಿಧಾಯಕವಾದ ಯೋಗ್ಯತಾವಿಶೇಷಗಳನ್ನು ಪಡೆದಿದ್ದ ಪಕ್ಷದಲ್ಲಿ ಅವರಿಗೆ ಇತರ ಉಮೇದುವಾರರಿಗಿಂತ ಮುಂಚೆ ಶುರುನೌಕರಿಗಳನ್ನು ಕೊಡಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

31. ಬೇರೆಬೇರೆ ನೌಕರಿಗಳಿಗೆ ವಿಧಾಯಕವಾದ ಯೋಗ್ಯತೆಯ ವಿಷಯದಲ್ಲಿ ಹಾಲಿ ಜಾರಿಯಲ್ಲಿರುವ ನಿಬಂಧನೆಗಳನ್ನು ಆಯಾಯ ಕೆಲಸದ ಸ್ವಭಾವಕ್ಕನುಗುಣವಾಗಿ ತಿದ್ದುಪಡಿ ಮಾಡಬೇಕೆಂದು ಸರ್ಕಾರದವರು ಅಪ್ಪಣೆ ಕೊಟ್ಟಿದ್ದಾರೆ. ಮತ್ತು ನೌಕರಿಗಾಗಿ ಬರುವ ಅರ್ಜಿಗಳನ್ನೆಲ್ಲಾ ದಾಖಲ್ಮಾಡಿಕೊಳ್ಳುವುದಕ್ಕಾಗಿಯೂ, ನೌಕರಿ ಖಾಲಿ ಇರುವ ಆಫೀಸುಗಳಿಗೂ ಅರ್ಜಿದಾರರಿಗೂ ಪರಸ್ಪರಸಂಬಂಧವನ್ನು ಕಲ್ಪಿಸುವುದಕ್ಕಾಗಿಯೂ, ನಿಬಂಧನೆಗಳು ಕ್ರಮವಾಗಿ ಜಾರಿಯಲ್ಲಿ ಬರುತ್ತವೆಯೋ ಇಲ್ಲವೆ ಎಂಬುದನ್ನು ನೋಡಿಕೊಳ್ಳುವುದಕ್ಕಾಗಿಯೂ ಸೆಂಟ್ರಲ್ ರಿಕ್ರೂಟ್ಮೆಂಟ್ ಬೋರ್ಡನ್ನೂ ಸಹ ಸರ್ಕಾರದವರು ಮಂಜೂರ್ಮಾಡಿದ್ದಾರೆ. ಈ ಬೋರ್ಡಿಗೆ ಕೌನ್ಸಿಲಿನ ಮೆಂಬರುಗಳ ಪೈಕಿ ಒಬ್ಬರು ಅಧ್ಯಕ್ಷರಾಗಿರುತ್ತಾರೆ.

32. ಈ ಹುಕುಮನ್ನು ಸಂಸ್ಥಾನದಲ್ಲಿನ ಅಧಿಕ ಸಂಖ್ಯೆಯ ಪ್ರಜೆಗಳು ತೃಪ್ತಿಕರವಾಗಿರುವಂತೆ ಭಾವಿಸಿರುತ್ತಾರೆ. ಇದರಿಂದ ಕೆಲವು ಪಂಗಡದವರಿಗೆ ಮಾತ್ರ ಭಯವುಂಟಾಗಿದೆ. ಈ ಹುಕುಮನ್ನು ಸಾದರ್ಮಾಡುವುದರಲ್ಲಿ ಸಮಸ್ತ ಪ್ರಜೆಗಳನ್ನೂ ಸಮದೃಷ್ಟಿಯಿಂದ ನೋಡಬೇಕೆಂಬುವುದೇ ಸರ್ಕಾರದವರ ಮುಖ್ಯೋದ್ದೇಶವೆಂಬುದನ್ನು ವಿವರಿಸುವುದಕ್ಕೂ, ಈ ಹುಕುಮಿನಿಂದ ಮುಂದಿನ ಏಳು ವರ್ಷಗಳಕಾಲದಲ್ಲಿ ಬ್ರಾಹ್ಮಣರಿಗೆ ಸರ್ಕಾರದ ನೌಕರಿಗಳೇ ದೊರೆಯದೇ ಹೋಗಬಹುದೆಂದು ಕೆಲವರಲ್ಲಿ ನಿಷ್ಕಾರಣವಾಗಿ ಹುಟ್ಟಿರುವ ಭೀತಿಯನ್ನು ಹೋಗಲಾಡಿಸುವುದಕ್ಕೂ ನ್ಯಾಯವಿಧಾಯಕ ಸಭೆಯ ಬಜೆಟ್ ಸೆಷನ್ನಿನಲ್ಲಿ ನಾವು ಪ್ರಯತ್ನಪಟ್ಟೆವು. ಆದಾಗ್ಯೂ, ಈ ಹುಕುಮಿನ ಉದ್ದೇಶ ಮತ್ತು ಫಲಿತಾಂಶಗಳ ವಿಷಯದಲ್ಲಿ ಇನ್ನೂ ಬಹಳಮಟ್ಟಿಗೆ ತಪ್ಪು ಅಭಿಪ್ರಾಯವಿರುವಂತೆ ಕಾಣುತ್ತದೆ. ಈ ಹುಕುಮಿಗೆ ಸಂಬಂಧಪಟ್ಟ ಅನೇಕ ವಿಷಯಗಳು ಈ ಅಧಿವೇಶನದಲ್ಲಿ ಚರ್ಚೆಗೆ ತರಲ್ಪಟ್ಟಿರುತ್ತವೆ. ಆದ್ದರಿಂದ ಈ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸುವುದಕ್ಕೋಸ್ಕರ ಈ ವಿಷಯವನ್ನು ಚೆನ್ನಾಗಿ ವಿವರಿಸುವುದು ಅವಶ್ಯಕವೆಂದ ಭಾವಿಸುತ್ತೇವೆ.

33. ಮೊದಲನೆಯದಾಗಿ, ಈಚೆಗೆ ಸಾದರಾಗಿರುವ ಹುಕುಮಿನಿಂದ ಸರ್ಕಾರದವರು ತಮ್ಮ ಉದ್ದೇಶವನ್ನು ಹಠಾತ್ತಾಗಿಯೂ ಕಠಿಣವಾಗಿಯೂ ಬದಲಾಯಿಸಿದರೆಂದು ಭಾವಿಸಲಾಗದು. ವಾಸ್ತವಾಂಶವೇನೆಂದರೆ, ಹಿಂದಿನ ದಿವಾನರುಗಳು ಪ್ರಾರಂಭಿಸಿದ್ದ ಉದ್ದೇಶವನ್ನೇ ಸಾರ್ಥಕಗೊಳಿಸುವುದಕ್ಕೋಸ್ಕರ ನ್ಯಾಯವಾಗಿ ಮಾಡಲೇಬೇಕಾದ ಏರ್ಪಾಟನ್ನು ಈ ಹುಕುಮಿನಲ್ಲಿ ಮಾಡಿದೆಯೇ ಹೊರತು ಅನ್ಯಥಾ ಅಲ್ಲ. ಸುಮಾರು 29 ವರ್ಷಗಳ ಹಿಂದೆಯೇ, ಎಂದರೆ 1892 ನೆಯ ಇಸವಿಯಲ್ಲಿ ಸಿವಿಲ್ ಸರ್ವಿಸ್ಸಿಗೆ ಆಫೀಸರುಗಳನ್ನು ಚುನಾಯಿಸುವ ವಿಷಯವನ್ನು ಪರ್ಯಾಲೋಚಿಸುವಾಗ್ಗೆ, ಸರ್ ಕೆ. ಶೇಷಾದ್ರಿ ಅಯ್ಯರವರು, "ಎಲ್ಲಾ ಕೋಮಿನವರೂ ಸರ್ಕಾರೀ ಉದ್ಯೋಗದಲ್ಲಿ ಯುಕ್ತಪರಿಮಾಣದಲ್ಲಿರುವಂತೆ ನೋಡಿಕೊಳ್ಳುವುದು" ಆವಶ್ಯಕವೆಂದು ತಮ್ಮ ಅಭಿಪ್ರಾಯವನ್ನು ಬರೆದಿಟ್ಟಿರುವುದಲ್ಲದೆ, "ಬ್ರಾಹ್ಮಣರು ಈಗಾಗಲೇ ಬೇಕಾದಷ್ಟು ಮಂದಿ ಸರ್ಕಾರೀ ಉದ್ಯೋಗದಲ್ಲಿದ್ದಾರೆಂದು" ಸೂಚಿಸಿರುತ್ತಾರೆ. ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ ಸರ್ಕಾರಿ ನೌಕರಿಯಲ್ಲಿ ಬ್ರಾಹ್ಮಣೇತರರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ಅನೇಕ ಏರ್ಪಾಟುಗಳು ಮಾಡಲ್ಪಟ್ಟವು. 1914ನೆಯ ಇಸವಿಯಲ್ಲಿ, ಅಮಲ್ದಾರೀ ಕೆಲಸಕ್ಕೆ ಬ್ರಾಹ್ಮಣೇತರ ಉಮೇದುವಾರರಿಗೆ ವಿದ್ಯಾಸಂಬಂಧವಾದ ಯೋಗ್ಯತೆಗಳು ಸ್ವಲ್ಪಮಟ್ಟಿಗೆ ಕಡಮೆಯಾಗಿದ್ದರೂ ಬಾಧಕವಿಲ್ಲವೆಂದು ವಿಧಿಸಲಾಯಿತು. 1915 ನೆಯ ಇಸವಿಯಲ್ಲಿ ಇದೇ ನಿಯಮವನ್ನು ಶೇಕದಾರರಿಗೂ ಅನ್ವಯಿಸುವಂತೆ ಹುಕುಂ ಮಾಡಲಾಯಿತು. 1916ರಲ್ಲಿ, ವಿದ್ಯಾಭ್ಯಾಸದಲ್ಲಿ ಹಿಂದುಳಿದ ಜನಾಂಗದವರನ್ನು ಸರ್ಕಾರೀ ಉದ್ಯೋಗದಲ್ಲಿ ಇನ್ನೂ ಹೆಚ್ಚಾಗಿ ನೇಮಿಸಬೇಕೆಂತ ಸರ್ಕಾರದವರು ಹುಕುಂಮಾಡಿ, ಒಂದು ಇಲಾಖೆಯಲ್ಲಿಯಾಗಲಿ ಡಿಸ್ಟ್ರಿಕ್ಟಿನಲ್ಲಿಯಾಗಲಿ ಮಾಡಲ್ಪಡುವ ಮೊಕರರಾತಿಗಳ ಪೈಕಿ ಶೇಕಡಾ 25 ರಷ್ಟನ್ನು ಅಂಥಾ ಪಂಗಡದವರ ಪೈಕಿ ಯೋಗ್ಯತೆಯನ್ನು ಹೊಂದಿದ ಜನರಿಗೆ ಕೊಡಬೇಕೆಂತ ಅಪ್ಪಣೆ ಮಾಡಿದರು. 1918 ನೆಯ ಆಗಸ್ಟ್ ತಿಂಗಳಲ್ಲಿ, ಮಿಲ್ಲರ್ ಕಮಿಟಿಯನ್ನು ನೇಮಿಸುವಾಗ "ಸರ್ಕಾರೀ ನೌಕರಿಯಲ್ಲಿ ಬ್ರಾಹ್ಮಣರು ಈಗ ಬಹುಮಂದಿ ಇರುವುದರಿಂದ, ಸಂಸ್ಥಾನದಲ್ಲಿರುವ ಇತರ ಎಲ್ಲಾ ಮುಖ್ಯ ಜಾತಿಯವರ ಪರವಾಗಿ ತಕ್ಕಷ್ಟು ಮಂದಿ ಸರ್ಕಾರಿ ಉದ್ಯೋಗದಲ್ಲಿ ಇರಬೇಕೆಂಬುದು ಶ್ರೀಮನ್ಮಹಾರಾಜಾಸಾಹೇಬ್ಬಹದ್ದುರವರ ಸರ್ಕಾರದ ಅಭಿಲಾಷೆಯಾಗಿದೆ; ಅಂಥಾ ಪಂಗಡದವರ ಪೈಕಿ ಹೆಚ್ಚು ಹೆಚ್ಚು ಮಂದಿ ಸರ್ಕಾರೀ ಕೆಲಸಕ್ಕೆ ಬಂದು ಸೇರುವಂತೆ ಅವರಿಗೆ ಪ್ರೋತ್ಸಾಹಕೊಡಲು ಯಾವ ಏರ್ಪಾಡುಗಳನ್ನು ಮಾಡಬೇಕೆಂಬ ವಿಷಯವು ಬಹುಕಾಲದಿಂದ ಪರ್ಯಾಲೋಚನೆಯಲ್ಲಿದೆ" ಎಂದು ಸರ್ಕಾರದವರು ತಿಳಿಸಿದರು.

34. ಎರಡನೆಯದಾಗಿ, ಸರ್ಕಾರಿ ನೌಕರಿಗೆ ಸೇರುವುದಕ್ಕಾಗಿ ಬೇರೆ ಬೇರೆ ಪಂಗಡದವರಿಗೆ ಬೇರೆಬೇರೆ ಯೋಗ್ಯತೆಗಳನ್ನು ವಿಧಿಸಬೇಕೆಂಬ ಉದ್ದೇಶವಿಲ್ಲ. ಯಾವ ನೌಕರಿಗೇ ಆಗಲಿ ವಿಧಿಸಲ್ಪಟ್ಟ ಯೋಗ್ಯತೆಯು ಎಲ್ಲಾ ಉಮೇದುವಾರರಿಗೂ ಒಂದೇ ಆಗಿರುವುದು ಮತ್ತು ಹಿಂದುಳಿದ ಪಂಗಡದವರಿಗೆ ಪ್ರಾಶಸ್ತ್ಯವನ್ನು ತೋರಿಸುವುದರಲ್ಲಿ, ಅಂಥಾ ಯೋಗ್ಯತೆಯನ್ನು ಹೊಂದಿರುವುದು ಆವಶ್ಯಕವಿಲ್ಲವೆಂದು ವಿನಾಯಿಸುವುದಿಲ್ಲ. ಆದರೆ, ಸರಿಯಾದ ಯೋಗ್ಯತೆಯನ್ನು ಪಡೆದ ಹಿಂದುಳಿದ ಪಂಗಡದ ಉಮೇದುವಾರನನ್ನು ಬಿಟ್ಟು ಸದರಿ ನೌಕರಿಗೆ ವಿಧಿಸಲ್ಪಟ್ಟಿರುವುದಕ್ಕಿಂತಲೂ ಹೆಚ್ಚಾದ ಯೋಗ್ಯತೆಯನ್ನು ಪಡೆದಿರಬಹುದಾದಂಥಾ ಇತರ ಪಂಗಡಗಳ ಉಮೇದುವಾರರಿಗೆ ಆ ಉದ್ಯೋಗವನ್ನು ಕೊಡುವುದಿಲ್ಲ.

35. ಮೂರನೆಯದಾಗಿ, ಶುರು ನೌಕರಿಗಳಿಗೆ ಮಾತ್ರವೇ ಈ ಹುಕುಂ ಅನ್ವಯಿಸುತ್ತದೆ. ಬಡ್ತಿ ಹೊಂದುವುದಕ್ಕೆ ಕಾರ್ಯದಕ್ಷತೆಯೂ ವಿಚಕ್ಷಣೆಯೂ ಮಾತ್ರವೇ ಮುಖ್ಯಾಧಾರವಾಗಿರುತ್ತವೆ.

36. ಆಖೈರಿನಲ್ಲಿ, ನ್ಯಾಯವಿಧಾಯಕ ಸಭೆಯಲ್ಲಿ ನಾವು ವಿವರಿಸಿರುವ ಮೇರೆಗೆ, ಮುಂದಿನ ಏಳುವರ್ಷಗಳ ವರೆಗೆ ಸರ್ಕಾರೀ ಉದ್ಯೋಗಕ್ಕೆ ಸೇರಲು ಬ್ರಾಹ್ಮಣರಿಗೆ ಅವಕಾಶವೇ ಇಲ್ಲವೆಂದು ಭಯಪಡಲು ಕಾರಣವಿಲ್ಲ. ಖಾಲಿಯಾಗತಕ್ಕ ಎಲ್ಲಾ ಉದ್ಯೋಗಗಳಿಗೂ ಯೋಗ್ಯತೆಯುಳ್ಳ ಬ್ರಾಹ್ಮಣೇತರರು ಸಿಕ್ಕುವಹಾಗಿದ್ದರೆ ಅಂಥಾ ಸಂಭವವು ಉಂಟಾಗುವುದರಲ್ಲಿ ಸಂದೇಹವಿರಲಿಲ್ಲ. ಆದರೆ, ಈ ಪಂಗಡಗಳವರು ಪ್ರೌಢವಿದ್ಯಾಭ್ಯಾಸದಲ್ಲಿ ಕೇವಲ ಹಿಂದುಳಿದಿರುವುದರಿಂದ ಮುಂದೆ ಕೆಲವು ಕಾಲದವರೆಗೆ ಅವರ ಪೈಕಿ ತಕ್ಕಷ್ಟುಮಂದಿ ಉಮೇದುವಾರರು ಸಿಕ್ಕುವ ಸಂಭವವಿರುವುದಿಲ್ಲ.

37. 1918 ನೆಯ ಇಸವಿಯ ಆಖೈರಿನಲ್ಲಿ ಸಂಸ್ಥಾನಾಮಲಿ ಇದ್ದ 13,946 ಸುಪೀರಿಯರ್ ನೌಕರಿಗಳ ಪೈಕಿ 9,712 ರಲ್ಲಿ ಅಥವಾ ಸೇಕಡ 70 ರಷ್ಟು ನೌಕರಿಗಳಲ್ಲಿ ಬ್ರಾಹ್ಮಣರೂ ಬಾಕಿ ಉಳಿದ ಸೇಕಡ 30 ರಷ್ಟು ನೌಕರಿಗಳಲ್ಲಿ ಇತರರೂ ಇದ್ದರೆಂಬ ವಿಷಯವನ್ನು ತಾವು ಕುತೂಹಲದಿಂದ ತಿಳಿಯಬಹುದು. ಆದ್ದರಿಂದ, ಬರುವ 7 ವರುಷಗಳ ಕಾಲದಲ್ಲಿ ಸರ್ಕಾರಿ ನೌಕರಿಗಳಿಗೆ ಬ್ರಾಹ್ಮಣೇತರರ ಸಂಖ್ಯೆಯನ್ನು ಸೇ|| 30 ರಿಂದ 50 ಕ್ಕೆ ಕ್ರಮೇಣ ಹೆಚ್ಚಿಸಬೇಕೆಂಬುದೇ ಸರ್ಕಾರದವರು ಈಚೆಗೆ ಸಾದರ್ಮಾಡಿರುವ ಹುಕುಮಿನ ಉದ್ದೇಶವಾಗಿರುತ್ತದೆ.

38. ಶ್ರೀಮನ್ಮಹಾರಾಜರವರ ಪ್ರಜಾಸಮುದಾಯದ ಬಹುಭಾಗದವರಿಗೆ ಸಲ್ಲಬೇಕಾದ ನ್ಯಾಯವನ್ನು ತೋರಿಸುವುದಕ್ಕೆ ಎಷ್ಟು ಏರ್ಪಾಟು ಮಾಡಬೇಕೋ ಅಷ್ಟನ್ನು ಮಾತ್ರ ಈ ಹುಕುಮಿನಲ್ಲಿ ಮಾಡಿದೆಯೇ ಹೊರತು ಹೆಚ್ಚಾಗಿ ಏನೂ ಮಾಡಿಲ್ಲವೆಂಬ ಅಂಶವು ನಾವು ಈ ಮೇಲೆ ವಿವರಿಸಿರುವ ಸಂಗತಿಗಳಿಂದ ವ್ಯಕ್ತವಾಗಬಹುದು. ಹೀಗಿದ್ದಾಗ್ಯೂ ಈ ಹುಕುಮಿನ ದೆಸೆಯಿಂದ ಕೆಲವು ತಿಂಗಳಿಂದೀಚೆಗೆ ವರ್ತಮಾನ ಪತ್ರಿಕೆಗಳಲ್ಲಿಯೂ ಉಪನ್ಯಾಸಗಳಲ್ಲಿಯೂ ಕಠೋರವಾದ ವಿವಾದಗಳಿಗೆ ಅವಕಾಶವುಂಟಾಗಿರುವುದು ಶೋಚನೀಯವೇ ಸರಿ. ಬ್ರಾಹ್ಮಣ ಪಂಗಡದ ಮುಖಂಡರು ಈ ವಿಷಯವನ್ನು ಕೇವಲ ಜಾತ್ಯಭಿಮಾನದಲ್ಲಿಯೇ ದೃಷ್ಟಿಯಿಟ್ಟು ನೋಡದೆ ಪ್ರಜಾಸಾಮಾನ್ಯದ ಕ್ಷೇಮಾಭ್ಯುದಯದಲ್ಲಿ ದೃಷ್ಟಿ ಇಡಬೇಕೆಂದು ಕೋರಿದರೆ ಇದು ಅಸಾಧ್ಯಪ್ರಮೇಯವೆಂದು ಭಾವಿಸಲಾರರಲ್ಲವೇ? ಬ್ರಾಹ್ಮಣೇತರರಿಗೆ ನಾವು ಹೇಳಬೇಕಾಗಿರುವುದೇನೆಂದರೆ:—ಹೆಚ್ಚುಹೆಚ್ಚಾಗಿ ನೀವು ಸಂಸ್ಥಾನದ ಆಡಳಿತದಲ್ಲಿ ಭಾಗಿಗಳಾಗುತ್ತಾ ಬರಬೇಕೆಂಬ ನಿಮ್ಮ ಅಭಿಲಾಷೆಯು ನ್ಯಾಯವಾದುದೆಂಬುದನ್ನು ಸರ್ಕಾರದವರು ಅಂಗೀಕರಿಸಿ ಈ ವಿಷಯದಲ್ಲಿ ನಿಮಗೆ ವಿಶೇಷ ಅನುಕೂಲಗಳನ್ನು ಕಲ್ಪಿಸಿ ಕೊಟ್ಟಿರುತ್ತಾರೆ. ನೀವುಗಳಾದರೋ ನಿಮ್ಮ ಪೈಕಿ ಅನೇಕಮಂದಿ ಯುವಕರನ್ನು ಸರ್ಕಾರಿ ಉದ್ಯೋಗಕ್ಕೆ ಯೋಗ್ಯರಾಗುವಂತೆ ತರಬಿಯತ್ತು ಮಾಡಿ ಈ ಸುಸಮಯದ ಪ್ರಯೋಜನವನ್ನು ಹೊಂದಿರಿ. ಆದರೆ ನಿಮ್ಮ ಹಕ್ಕುಬಾಧ್ಯತೆಗಳನ್ನು ಸ್ಥಾಪಿಸಿಕೊಳ್ಳುವುದರಲ್ಲಿ ಮಿತಿಮೀರಬೇಡಿರಿ. ಈಗಾಗಲೇ ಉಭಯಪಕ್ಷದ ಹಲವು ಮುಖಂಡರು ಈ ಕಠಿಣವಾದ ವೈಷಮ್ಯವು ತಮಗಾಗಲೀ ದೇಶಕ್ಕಾಗಲೀ ಕ್ಷೇಮಕರವಾದುದಲ್ಲವೆಂದು ಭಾವಿಸುತ್ತಾರೆಂತಲೂ, ಯುಕ್ತಾಯುಕ್ತ ವಿವೇಚನೆಯುಳ್ಳ ಜನರೆಲ್ಲರೂ ವಿದ್ಯಾಭಿವೃದ್ಧಿಗೂ ಭಾಗ್ಯಾಭಿವೃದ್ಧಿಗೂ ಸಂಘಪರಿಷ್ಕರಣಕ್ಕೂ ಸಹಕಾರಿಯಾದ ಕಾರ್ಯಗಳನ್ನು ಈಡೇರಿಸುವುದರಲ್ಲಿ ತಮ್ಮ ಶಕ್ತಿಸಾಮರ್ಥ್ಯಗಳನ್ನು ವಿನಿಯೋಗಿಸುವವರಾದಾರೆಂತಲೂ ನಾವು ನಂಬಿರುತ್ತೇವೆ. ನಾವು ಬ್ರಾಹ್ಮಣರೂ, ಬ್ರಾಹ್ಮಣೇತರರೂ ಸರ್ವರಲ್ಲಿಯೂ ಶ್ರುತಪಡಿಸುವುದೇನೆಂದರೆ, ತಾವುಗಳು ಯುಕ್ತಾಯುಕ್ತ ವಿವೇಚನೆಯಿಂದ ದೇಶಾಭಿಮಾನದಮೇಲೆ ದೃಷ್ಟಿಯಿಟ್ಟು ವೈಷಮ್ಯವನ್ನೂ ಕಲಹವನ್ನೂ ದೂರೀಕರಿಸಿ ಸಂಸ್ಥಾನದ ಕ್ಷೇಮಾಭ್ಯುದಯಕ್ಕೂ ಪುರೋಭಿವೃದ್ಧಿಗೂ ಐಕಮತ್ಯದಿಂದ ಕೆಲಸಮಾಡುತ್ತಾ ಬರಬೇಕೆಂದು ಪ್ರಾರ್ಥಿಸುತ್ತೇವೆ. ಈ ಸಂದರ್ಭದಲ್ಲಿ 1918 ನೆಯ ಜೂನ್ ತಿಂಗಳಿನಲ್ಲಿ ಬ್ರಾಹ್ಮಣೇತರರು ಶ್ರೀಮನ್ಮಹಾರಾಜರವರಲ್ಲಿ ಅರಿಕೆಮಾಡಿಕೊಂಡಾಗ ಅವರಿಗೆ ಉತ್ತರವಾಗಿ ಮಹಾಸ್ವಾಮಿಯವರು ಅಪ್ಪಣೆಕೊಡಿಸಿರುವ ಕೃಪಾಪೂರಿತವಾದ ವಾಕ್ಯಗಳನ್ನು ತಮ್ಮ ಗಮನಕ್ಕೆ ತರಲಪೇಕ್ಷಿಸುತ್ತೇವೆ. ಅವು ಯಾವುವೆಂದರೆ—

"ಮಹನೀಯರೇ, ಈ ವಿಷಯಗಳು ನಮ್ಮ ಪ್ರಜೆಗಳಲ್ಲಿ ವೈಷಮ್ಯವನ್ನು ಹುಟ್ಟಿಸದೇ ಇರಬೇಕೆಂಬುದೇ ನಮ್ಮ ಕುತೂಹಲವಾಗಿದೆ. ನಾವು ಮೊದಲೇ ನಿಮಗೆ ತಿಳಿಸಿರುವಂತೆ ಸಾಮಾನ್ಯವಾಗಿ ನೀವು ದೃಷ್ಟಿಯಲ್ಲಿಟ್ಟಿರುವ ಉದ್ದೇಶಗಳಲ್ಲಿ ನಮಗೂ ತುಂಬಾ ಅಭಿಮಾನವಿರುತ್ತದೆ; ನಮ್ಮ ಸರ್ಕಾರದವರು ನಿಮ್ಮ ಪುರೋಭಿವೃದ್ಧಿಗೋಸ್ಕರ ಸಾಧ್ಯವಾದಷ್ಟು ಸಹಾಯವನ್ನು ಮಾಡುವರು. ಆದರೆ, ನಿಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳುವುದಕ್ಕಾಗಿ, ಇದುವರೆಗೂ ನಮ್ಮ ಪ್ರಜೆಗಳ ಬೇರೆಬೇರೆ ಪಂಗಡಗಳಲ್ಲಿ ನೆಲೆಗೊಂಡಿರುವ ಮತ್ತು ನಮ್ಮ ಅಭಿಪ್ರಾಯದಲ್ಲಿ ನಿಜವಾದ ಎಲ್ಲಾ ಅಭಿವೃದ್ಧಿಗೂ ಕಾರಣವಾಗಿರುವ ಐಕಮತ್ಯಕ್ಕೂ ಸೌಹಾರ್ದಭಾವಕ್ಕೂ ಭಂಗಬರುವಂಥಾ ಯಾವಕೆಲಸವನ್ನೂ ಮಾಡದಂತೆ ಜಾಗರೂಕರಾಗಿರಬೇಕೆಂಬುದೇ ನಮ್ಮ ಅಭಿಲಾಷೆಯಾಗಿದೆ. ಬ್ರಾಹ್ಮಣರೂ ಸಹ ಇತರ ಪಂಗಡಗಳ ವಿಷಯದಲ್ಲಿ ಸಮಾಧಾನವನ್ನೂ ಸಹನವನ್ನೂ ತೋರಿಸಿ ತಾವೂ ಸಹ ಪುರೋಭಿವೃದ್ಧಿಗೆ ಬರಬೇಕೆಂಬ ಅವರ ಸ್ವಾಭಾವಿಕವಾದ ಅಭಿಲಾಷೆಗಳಲ್ಲಿ ಕಾರ್ಯತಃ ಅಭಿಮಾನವನ್ನು ಪ್ರದರ್ಶಿಸುವರೆಂದು ನಂಬಿದ್ದೇವೆ."

ಈ ವಿಷಯವನ್ನು ಮುಕ್ತಾಯಮಾಡುವುದಕ್ಕೆ ಮುಂಚೆ, ಬ್ರಾಹ್ಮಣ ಪಂಗಡದಲ್ಲಿ ಕೆಲವು ಮೆಂಬರುಗಳು ತಾವು ಕೊಟ್ಟಿದ್ದ ವಿಷಯಗಳನ್ನು ವಾಪಸುತೆಗೆದುಕೊಂಡದ್ದರ ಸಂಬಂಧವಾಗಿ ಕಳೆದ ಅಧಿವೇಶನದಲ್ಲಿ ನಾವು ಮಾಡಿದ ಭಾಷಣದ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇವೆ. ಆ ಮಾತುಗಳು ಮೆಂಬರುಗಳನ್ನೂ ಅವರ ಪಂಗಡದವರನ್ನೂ ದೂಷಿಸುವುದಕ್ಕೋಸ್ಕರ ಉಪಯೋಗಿಸಲ್ಪಟ್ಟವೆಂದು ಭಾವಿಸಿರುವುದನ್ನು ಕೇಳಿ ವಿಷಾದಿಸುತ್ತೇವೆ. ಈ ಸಭೆಯ ಚರ್ಚೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು ಸಭಾಧ್ಯಕ್ಷರಾದ ನಮ್ಮ ಕರ್ತವ್ಯವಾದ್ದರಿಂದ ಅಂಥಾ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಆ ಮಾತುಗಳನ್ನು ಉಪಯೋಗಿಸಿದ್ದೇ ಹೊರತು ದೂಷಣೆಯನ್ನಾಗಲೀ ಅವಮಾನವನ್ನಾಗಲೀ ಮಾಡುವುದಕ್ಕೋಸ್ಕರ ಉಪಯೋಗಿಸಲಿಲ್ಲವೆಂದು ದೃಢವಾಗಿ ತಾವುಗಳು ನಂಬಬಹುದು.

ಹೆಂಗಸರಿಗೆ ಚುನಾವಣೆಯ ಸ್ವಾತಂತ್ರ್ಯ.

39. ಹೆಂಗಸರಿಗೆ ಚುನಾವಣೆಯ ಸ್ವಾತಂತ್ರ್ಯವನ್ನು ಕೊಡಬೇಕೆಂಬ ವಿಷಯವು ಇಂಡಿಯಾದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ಈಗ ಚರ್ಚೆಯಲ್ಲಿದೆ ಎಂಬ ಅಂಶವು ತಮಗೆಲ್ಲಾ ವೇದ್ಯವೇ ಇದೆಯಷ್ಟೆ. ಈ ವಿಚಾರದಲ್ಲಿ ಶ್ರದ್ಧೆಯನ್ನು ವಹಿಸಿದ್ದ ಕೆಲವು ಮಹಿಳೆಯರು ಕಳೆದ ಜುಲೈ ತಿಂಗಳಲ್ಲಿ ನಮ್ಮಲ್ಲಿಗೆ ಬಂದು ಪ್ರಜಾಪ್ರತಿನಿಧಿ ಸಭೆಗೂ, ನ್ಯಾಯವಿಧಾಯಕ ಸಭೆಗೂ ಲೋಕಲ್ ಬೋರ್ಡು ಮತ್ತು ಮ್ಯುನಿಸಿಪಲ್ ಕೌನ್ಸಿಲುಗಳಿಗೂ ಮೆಂಬರುಗಳನ್ನು ಚುನಾಯಿಸುವ ಮತ್ತು ಮೆಂಬರುಗಳಾಗಿ ನಿಲ್ಲುವ ಸ್ವಾತಂತ್ರ್ಯವನ್ನು ಸ್ತ್ರೀಯರಿಗೂ ಸಹ ಕೊಡಬೇಕೆಂತ ಕೇಳಿಕೊಂಡರು. ಈ ವಿಷಯವನ್ನು ಪ್ರಜಾಪ್ರತಿನಿಧಿ ಸಭೆಯವರ ಮತ್ತು ನ್ಯಾಯವಿಧಾಯಕ ಸಭೆಯವರ ಪರ್ಯಾಲೋಚನೆಗೆ ವಹಿಸಲಾಗುವುದೆಂತ ಅವರಿಗೆ ತಿಳಿಸಿ ಇದೆ.

40. ಸ್ತ್ರೀಯರನ್ನು ಸ್ಥಳೀಯ ಸಂಸ್ಥೆಗಳಿಗೆ ಚುನಾಯಿಸಬೇಕೆಂಬ ವಿಷಯವನ್ನು ಈ ಸಭೆಯ ಇದೇ ಸೆಷನ್ನಿನಲ್ಲಿ ಒಬ್ಬ ಮೆಂಬರು ಚರ್ಚೆಗೆ ತಂದಿರುತ್ತಾರೆ. ಈ ವಿಷಯದಲ್ಲಿ ಈ ಸಭೆಯ ಅಭಿಪ್ರಾಯವನ್ನೂ ನ್ಯಾಯವಿಧಾಯಕ ಸಭೆಯ ಅಭಿಪ್ರಾಯವನ್ನೂ ತಿಳಿದುಕೊಂಡನಂತರ ಸರ್ಕಾರದವರು ಮುಂದೆ ನಡೆಸಬೇಕಾದ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡುವರು.

ಮೈಸೂರು ವರ್ತಮಾನಪತ್ರಿಕೆಗಳ ರೆಗ್ಯುಲೇಷನ್.

41. 1908 ನೆಯ ಇಸವಿಯ III ನೆ ನಂಬರಿನ ಮೈಸೂರು ವರ್ತಮಾನ ಪತ್ರಿಕೆಗಳ ರೆಗ್ಯುಲೇಷನ್ನನ್ನು ರದ್ದುಪಡಿಸಬೇಕೆಂದು ಈ ಸಭೆಯ ಮೆಂಬರುಗಳು ಸರ್ಕಾರದವರ ಪರ್ಯಾಲೋಚನೆಗೆ ಪದೇ ಪದೇ ತರುತ್ತಲಿದ್ದಾರೆ. ಈ ಕಾನೂನು ಜಾರಿಗೆ ಬಂದ ಈಚೆಗೆ ಪತ್ರಿಕೆಗಳನ್ನು ಪ್ರಕಟಿಸುವುದಕ್ಕೆ ಕೊಟ್ಟಿದ್ದ ಅಪ್ಪಣೆಯನ್ನು ಯಾವ ಸಂದರ್ಭದಲ್ಲಿಯೂ ವಾಪ್ಸು ತೆಗೆದುಕೊಳ್ಳಲಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಪತ್ರಿಕಾಕರ್ತರಿಗೆ ಎಚ್ಚರಿಕೆಯನ್ನು ಕೊಡಬೇಕಾಗಿ ಬಂತು. ಮತ್ತು ಅನೇಕ ಸಂದರ್ಭಗಳಲ್ಲಿ ಎಂದರೆ, ಪತ್ರಿಕೆಗಳನ್ನು ಪ್ರಕಟಿಸಲು ಅಪ್ಪಣೆಯನ್ನು ಅಪೇಕ್ಷಿಸಿದವರ ಪೂರ್ವಾಪರ ವಿಚಾರವು ಸಂದೇಹಾಸ್ಪದವಾಗಿದ್ದ ಸಂದರ್ಭದಲ್ಲಿ ಅಥವಾ ಜನಾಭಿಪ್ರಾಯಕ್ಕೆ ಮಾರ್ಗದರ್ಶಿಯಾಗಲು ತಕ್ಕ ಯೋಗ್ಯತೆಯುಳ್ಳವರಾಗಿ ಕಾಣದೇ ಇರುವ ಸಂದರ್ಭದಲ್ಲಿ ವರ್ತಮಾನಪತ್ರಿಕೆಗಳನ್ನು ಪ್ರಕಟಿಸಲು ಕೊಡದೇ ತಿರಸ್ಕರಿಸಲಾಯಿತು. ಈ ರೆಗ್ಯುಲೇಷನ್ನಿನಲ್ಲಿ ವಿಧಿಸಿರುವ ಶಿಕ್ಷೆಗಳು ತಕ್ಸೀರಿನ ಸ್ವಭಾವಕ್ಕೆ ತಕ್ಕಂತೆ ಏರ್ಪಟ್ಟಿಲ್ಲವಾಗಿರುವುದರಿಂದಲೂ ಮತ್ತು ಬಹಳ ಕಠಿಣವಾಗಿರುವುದರಿಂದಲೂ ಧಾರಾಳವಾಗಿ ಸ್ವತಂತ್ರಾಭಿಪ್ರಾಯವನ್ನು ಸೂಚಿಸುವ ವರ್ತಮಾನಪತ್ರಿಕೆಗಳ ಏಳಿಗೆಗೆ ಒಂದು ದೊಡ್ಡ ಅಡಚಣೆಯಾಗಿ ಪರಿಣಮಿಸಿವೆ ಎಂದು ನಂಬುವದಕ್ಕೆ ಕಾರಣವಿದೆ. ಈ ಕಾನೂನನ್ನು ರದ್ದುಮಾಡುವ ಅಥವಾ ತಿದ್ದುಪಡಿಮಾಡುವ ವಿಷಯವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

42. ಈ ನಮ್ಮ ಸಂಸ್ಥಾನದ ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಈಚೀಚೆಗೆ ಪ್ರಕಟವಾಗುತ್ತಿರುವ ಕೆಲವು ಲೇಖನ ಮತ್ತು ಬಾತ್ಮಿಗಳ ಸ್ವಭಾವವನ್ನು ಕುರಿತು ತಾವುಗಳು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಲಪೇಕ್ಷಿಸುತ್ತೇವೆ. ಇವುಗಳಲ್ಲಿ ಅನೇಕ ಲೇಖನಗಳು ಜನರಲ್ಲಿ ಜಾತಿ ಮಾತ್ಸರ್ಯವನ್ನೂ ದ್ವೇಷಾಸೂಯೆಗಳನ್ನೂ ಹುಟ್ಟಿಸಬೇಕೆಂಬ ಉದ್ದೇಶದಿಂದಲೇ ಹುಟ್ಟಿರುವುದಾಗಿ ಕಾಣಬರುತ್ತದೆ. ಆದಾಗ್ಯೂ, ಜನಗಳಲ್ಲಿರುವ ಪ್ರಬಲವಾದ ವಿವೇಚನಾಶಕ್ತಿಯೇ ಅಂಥಾ ಪತ್ರಿಕೆಗಳನ್ನು ಸರಿಪಡಿಸುವುದೆಂಬ ಭರವಸೆಯಿಂದ ಸರ್ಕಾರದವರು ಅವುಗಳ ಮೇಲೆ ಇದುವರೆಗೂ ಕ್ರಮಜರುಗಿಸದೇ ಸುಮ್ಮನಿದ್ದಾರೆ. ಎಲ್ಲಾ ಪಂಗಡದವರೂ ದೇಶಾಭ್ಯುದಯಕ್ಕೋಸ್ಕರ ಜಾತಿವೈಷಮ್ಯವನ್ನು ಬಿಟ್ಟುಬಿಡಬೇಕೆಂದು ನಾವು ಪ್ರಾರ್ಥಿಸಿಕೊಂಡಿರುತ್ತೇವೆಯಾದ್ದರಿಂದ ಅಂತಹ ಲೇಖನಗಳು ಇನ್ನು ಮುಂದೆ ಪ್ರಕಟವಾಗುವುದು ನಿಂತು ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾಗುವ ಲೇಖನಗಳ ಶೈಲಿಯು ಬಹುಮಟ್ಟಿಗೆ ಉತ್ತಮವಾದೀತೆಂತ ದೃಢವಾಗಿ ನಂಬುತ್ತೇವೆ.

ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನ.

43. ಈ ಭಾಷಣವನ್ನು ಪರಿಸಮಾಪ್ತಿ ಮಾಡುವುದಕ್ಕೆ ಮೊದಲು, ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಮುಂದಿನ ಛಳಿಗಾಲದಲ್ಲಿ ಇಂಡಿಯಾ ದೇಶದಲ್ಲಿ ಸಂಚಾರ ಮಾಡುವವರಾಗಿರುವುದರಿಂದ ಅವರು ಸಂಚಾರಬೆಳೆಸುವ ಸಂಸ್ಥಾನಗಳಂತೆ ನಮ್ಮ ಸಂಸ್ಥಾನಕ್ಕೂ ದಯಮಾಡಿಸಬೇಕೆಂಬ ಶ್ರೀಮನ್ಮಹಾರಾಜರವರ ಆಹ್ವಾನವನ್ನು ಅಂಗೀಕಾರ ಮಾಡಿರುತ್ತಾರೆಂಬ ವಿಷಯವನ್ನು ತಮ್ಮಗಳಿಗೆ ತಿಳಿಯಪಡಿಸಲು ನಮಗೆ ಸಂತೋಷವಾಗುತ್ತದೆ. ಹದಿನೈದು ವರ್ಷಗಳ ಹಿಂದೆ ಮಹಾಮಹಿಮರಾದ 5 ನೇ ಜಾರ್ಜ್ ಚಕ್ರವರ್ತಿಗಳವರು ಪ್ರಿನ್ಸ್ ಆಫ್ ವೇಲ್ಸ್‌ರವರಾಗಿದ್ದಾಗ ಮೈಸೂರು ಸಂಸ್ಥಾನಕ್ಕೆ ದಯಮಾಡಿಸಿ ಅವರನ್ನು ಸತ್ಕರಿಸುವ ಭಾಗ್ಯವು ನಮಗೆ ಲಭಿಸಿತ್ತು. ಅದೇ ಪ್ರಕಾರವಾಗಿ ಈಗಲೂ ಸಹ ನಮ್ಮಮೇಲೆ ಸಾರ್ವಭೌಮರವರ ಕೃಪಾಕಟಾಕ್ಷವು ಪ್ರಸರಿಸಿರುವುದಕ್ಕಾಗಿ ಆನಂದಪಡುತ್ತೇವೆ. ಬ್ರಿಟಿಷ್ ರಾಜಮನೆತನದವರಿಗೆ ಮೈಸೂರು ಸಂಸ್ಥಾನದ ವಿಷಯದಲ್ಲಿ ಕೇವಲ ಅಭಿಮಾನವಿದೆ ಯೆಂಬುದಕ್ಕೆ ಅವರ ಆಗಮನವು ನಿದರ್ಶನವಾಗಿರುವುದರಿಂದಲೂ ಈ ಮಹಾಚಕ್ರಾಧಿಪತ್ಯದ ಎಲ್ಲಾ ಭಾಗಗಳಲ್ಲಿಯೂ ಇರುವ ಸಮಸ್ತ ಜನರ ಪ್ರೀತಿಗೂ ಮೆಚ್ಚುಗೆಗೂ ಪಾತ್ರವಾಗಿರುವಂಥಾ ಗಂಭೀರಾಕೃತಿಯುಳ್ಳವರಾಗಿರುವುದರಿಂದಲೂ ಈ ಮಹಾನುಭಾವರ ಆಗಮನವು ನಮಗೆ ಉಭಯತಃ ಮನೋರಂಜಕವಾಗಿರುವುದು. ಯಾವ ಮಹಾಚಕ್ರಾಧಿಪತ್ಯಕ್ಕೆ ಸೇರಿರುವ ಗೌರವವು ನಮಗೆ ಲಭಿಸಿರುತ್ತದೆಯೋ ಯಾವ ಮಹಾ ಚಕ್ರಾಧಿಪತ್ಯದ ಶಕ್ತಿ ಸಾಮರ್ಥ್ಯವೂ ನ್ಯಾಯಪರತೆಯೂ ಪ್ರಪಂಚದ ಶಾಂತಿಗೂ ಅಭ್ಯುದಯಕ್ಕೂ ಮುಖ್ಯ ಕಾರಣಗಳಾಗಿವೆಯೋ ಅಂಥಾ ಚಕ್ರಾಧಿಪತ್ಯದೊಡನೆ ಮೈಸೂರು ಸಂಸ್ಥಾನಕ್ಕೆ ಇರುವ ಸ್ನೇಹವನ್ನು ಇನ್ನೂ ಬಲಪಡಿಸುವುದಕ್ಕೆ ಈ ಮಹಾನುಭಾವರ ಆಗಮನವು ಕಾರಣವಾಗುವುದೆಂದು ಕುತೂಹಲದಿಂದ ನಿರೀಕ್ಷಿಸುತ್ತೇವೆ. ಇವರು ಮುಂದಿನ ಜನವರಿ 18 ನೆಯ ತಾರೀಖಿನದಿವಸ ಬೆಳಿಗ್ಗೆ ಬೆಂಗಳೂರಿಗೆ ದಯಮಾಡಿಸಿ ಅದೇ ರಾತ್ರಿ ಮೈಸೂರಿಗೆ ಪ್ರಯಾಣ ಬೆಳಸಿ ಅಲ್ಲಿ ಐದು ದಿವಸಗಳ ಪರ್ಯಂತ ಇದ್ದು, ಈ ಮಧ್ಯೆ ಮೃಗಯಾವಿಹಾರಕ್ಕಾಗಿ ಕಾರಾಪುರಕ್ಕೆ ಚಿತ್ತೈಸುವವರಾಗಿರುತ್ತಾರೆ. ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಶ್ರೀಮನ್ಮಹಾರಾಜರವರ ಪ್ರಜೆಗಳು ಬ್ರಿಟಿಷ್ ರಾಜಪೀಠದ ವಿಷಯದಲ್ಲಿ ತಮ್ಮಲ್ಲಿ ನೆಲೆಸಿರುವ ಅನ್ಯಾದೃಶವಾದ ರಾಜಭಕ್ತಿ ವಿಶ್ವಾಸಗಳಿಗೆ ಅನುಗುಣವಾಗಿ ಈ ಅತಿಥಿವರ್ಯರಿಗೆ ಪರಮೋತ್ಸಾಹದಿಂದ ಸ್ವಾಗತವನ್ನು ಬಯಸಿ ಈ ಮಹೋತ್ಸವದಲ್ಲಿ ಭಾಗಿಗಳಾಗುತ್ತಾರೆಂದು ಶ್ರೀ ಮಹಾಸ್ವಾಮಿಯವರು ದೃಢವಾಗಿ ನಂಬಿರುತ್ತಾರೆ.

ಎಂ. ಕಾಂತರಾಜ ಅರಸ್,
ಮೈಸೂರು ಸಂಸ್ಥಾನದ ದಿವಾನರವರು.

೧೯೨೧ ನೆಯ ಇಸವಿ ಅಕ್ಟೋಬರ್ ತಾ|| ೨೩ರಿಂದ ೧೯೨೧ ನೆಯ ಅಕ್ಟೋಬರ್ ತಾ|| ೨೯ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಆಶ್ವೀಜ ಬಹುಳ ಸಪ್ತಮಿಯಿಂದ ಆಶ್ವೀಜ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾಮಾಸ
23	ಭಾನು	ಸಪ್ತ	38-50	ಪುನ	49-45	7
24	ಸೋಮ	ಅಷ್ಟ	33-13	ಪುಷ್ಯ	45-43	8
25	ಮಂಗಳ	ನವ	27-16	ಆಶ್ಲೆ	41-34	9
26	ಬುಧ	ದಶ	21-12	ಮಘಾ	38-12	10
27	ಗುರು	ಏಕಾ	15-17	ಪುಬ್ಬ	33-10	11
28	ಶುಕ್ರ	ದ್ವಾ	9-38	ಉತ್ತ	29-25	12
29	ಶನಿ	ತ್ರಯೋ	4-5	ಹಸ್ತ	26-16	13

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸ್ ೧೯೨೧ ನೆಯ ಇಸವಿ ಅಕ್ಟೋಬರ್ ತಾರೀಖು ೩೦ ನೆಯ ಭಾನುವಾರ (ಸಂಚಿಕೆ ೪೩

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆಸೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.
41

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮುಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0.12.0	,	50.0.0
5	0. 8.0	..	100.0.0
6	0.12.0	,,	100.0.0
7	6. 0.0	,,	100.0.0

ಬಿಡಿಮಣಿಗಳು 1ಕ್ಕೆ ಕ್ರಯ

ಮುಖ	ರೂ. ಇಂದ.		ರೂ. ವರೆಗೆ.
3	0- 6.0	ಇಂದ	10.0.0
8	0- 8.0	,,	100.0.0
9	0-12-0	,,	100.0.0
10	0-14.0	,,	100.0.0
11	3- 8.0	,,	100.0.0
12	4- 0.0	,,	100.0.0
13	4- 8.0	,,	100.0.0
14	6- 0.0	,,	100.0.0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15.0.0	,, 40.0.0
ಮಣಸು	,, 7-8.0	,, 15.0.0
ಕಡಲೆ	,, 2-8.0	,, 7.0.0
ನೆನೆದಕಡಲೆ	,, 1-8.0	,, 3.0.0
ಕಮಲಾಕ್ಷಿ	,, 1-0.0	,, 2-0.0
ದೊಡ್ಡ	,, 0-8.0	,, 1.0.0
ಅದಕ್ಕಿಂತ	,, 0-6.0	,, 0-8.0
ಸ್ಫಟಿಕ108ಕ್ಕೆ	4-8.0	,, 30.0.0
ಶ್ರೀಚಕ್ರ1ಕ್ಕೆ	8-0.0	,,100-0.0
ಲಿಂಗ 1ಕ್ಕೆ	1-0.0	,, 100-0.0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80.0.0 ಬಿ. 50-0.0 ಸಿ.40-0.0 ಡಿ. 25-0.0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
ಕಂಪನಿ, ಚೌಕಂಬಾ ಕಾಶೀ.
35

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ ೦—೧೩—೦
ಚಾರುಶೀಲೆಚರಿತ್ರೆ ೦—೧೦—೦
ಹರಿದಾಸಿ ೦—೮—೦
ವ್ರತಪಂಚಕ ೦—೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ, ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 24

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ವೀರಶೈವ ಸಿದ್ಧಾಂತಶಿಖಾಮಣಿ.

(ದ್ವಿತೀಯ ಮುದ್ರಣ)

ಕಾಗದದ ಬೆಲೆಯು ತಗ್ಗಾಗಿದ್ದರೂ ಅನೇಕರ ಕೋರಿಕೆಯ ಮೇರೆಗೆ ಈ ಗ್ರಂಥದ ದ್ವಿತೀಯ ಮುದ್ರಣವನ್ನು ಮಾಡಿಸಿ ಪೂರೈಸಿರುವೆವು. ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦ ಅಂಚೆವೆಚ್ಚ ಬೇರೆ.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಚ್. ಆರ್. ಚರಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಪ್ರಸಿದ್ಧಪತ್ರಿಕೆ.

ಮುಳಗುಂದ ಶ್ರೀ ಬಾಲಲೀಲಾ ಮಹಂತಸ್ವಾಮಿಮಠ (ಗವಿಮಠ) ದ ಶ್ರೀಮನ್ನಿರಂಜನ ಪ್ರಣಮಸ್ವರೂಪಿಗಳಾದ ಶ್ರೀ ಮೃತ್ಯುಂಜಯಸ್ವಾಮಿಗಳವರ ಸನ್ನಿಧಾನದಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ—

ಯಾವನೋ ಒಬ್ಬ ಮನುಷ್ಯನು "ತಾನು ಮುಳಗುಂದ ಶ್ರೀ ಬಾಲಲೀಲಾ ಮಹಂತಸ್ವಾಮಿಮಠದ ಸರ್ವಾಧಿಕಾರಿಯೆಂದೂ ತನ್ನ ಹೆಸರು ರುದ್ರಸ್ವಾಮಿಯೆಂದೂ ಹೇಳುತ್ತಾ ಹಮ್ಮಿಗಿ ಎತ್ತಿನಟ್ಟಿ, ಕೊಪ್ಪ ಜಿಲ್ಲಾ ಪೈಕಿ ಕುಷ್ಟಗಿ ಈ ಗ್ರಾಮಗಳಲ್ಲಿ ಜನಗಳಿಗೆ ಮೋಸಪಡಿಸಿದಂತೆ ಅರಿಕೆಯಾಗಿದೆ. ಪ್ರಯುಕ್ತ ಈ ಮಠಕ್ಕೆ ಸರ್ವಾಧಿಕಾರಿಯೆಂದು ಯಾರನ್ನೂ ನಿಯಮಿಸಿಲ್ಲ. ರುದ್ರಸ್ವಾಮಿಯೆಂಬ ಹೆಸರಿನವರು ಈ ಗ್ರಾಮದಲ್ಲಿ ಯಾರೂ ಇರುವುದಿಲ್ಲ. ಆದ್ದರಿಂದ ಮಹಾತ್ಮರ ಹೆಸರು ಹೇಳಿಕೊಂಡು ತಿರುಗುವ ಇಂಥ ಜನರನ್ನು ಸರಿಯಾದ ಖಾತ್ರಿಯಿಲ್ಲದೆ ಯಾರೂ ನಂಬಿ ಮೋಸಕ್ಕೆ ಒಳಗಾಗಬಾರದಾಗಿ ಸೂಚಿಸಿದೆ. ಸದರಿ ಮನುಷ್ಯನ ಚಹರೆಯು ಗುರ್ತಾದನಂತರ ಪುನಃ ತಿಳಿಸಲಾಗುವುದು.

FALSE PROFESSORS.

(ಅನೃತಪಂಡಿತರು)

ಸ್ವಾಮಿಾ,

ಲೋಕದಲ್ಲಿ ಸೈನ್ಸ್ ಪ್ರೊಫೆಸರು, ಹಿಸ್ಟರಿ ಪ್ರೊಫೆಸರು, ಮ್ಯಾತ್‌ಮ್ಯಾಟಿಕ್ಸ್ ಪ್ರೊಫೆಸರು, ಲಾ ಪ್ರೊಫೆಸರು ಎಂಬುದಾಗಿ ನಾನಾತರದ ಪಂಡಿತರುಗಳಿರುವುದನ್ನು ಎಲ್ಲರೂ ಬಲ್ಲರು. ಫಾಲ್ಸ್ ಪ್ರೊಫೆಸರುಗಳಿರುವುದನ್ನು ಯಾರೂ ಕೇಳಿರಲಾರರು. ಅಂಥ ಪ್ರೊಫೆಸರುಗಳ ಅವಶ್ಯಕತೆಯು ಯಾರಿಗಾದರೂ ಇದ್ದರೆ ಅವರು ಸಂಪದಭ್ಯುದಯ ಕರ್ತರಿಗೆ ಅಪ್ಲಿಕೇಷನ್ ಹಾಕಿಕೊಳ್ಳಬಹುದು. ಯಾತಕ್ಕೆಂದರೆ ಅವರ ಕರಸ್ಪಾಂಡೆಂಟರುಗಳಲ್ಲಿ ಅಂಥ ಪ್ರೊಫೆಸರುಗಳಿಗೆ ಕಡಮೆಯಿಲ್ಲ. ನಿನ್ನೆ ನಡೆದ ರಿಪ್ರಜೆಂಟೇಟಿವ್ ಅಸೆಂಬ್ಲಿಯಲ್ಲಿ ಊರೆಲ್ಲಾ ಕಾಣುವಂತೆ ನಡೆದ ವಿಷಯವನ್ನೂ ಸಹ ಈ ಪತ್ರಿಕೆಯ ಕರಸ್ಪಾಂಡೆಂಟರೊಬ್ಬರು "An eye-witness" ಎಂಬ ಹೆಸರಿನಿಂದಲೂ, ಪ್ರತ್ಯಕ್ಷದರ್ಶಿ ಎಂಬ ನಾಮದಿಂದಲೂ ಬರೆದುಕೊಂಡಿರುವ ಸಂಗತಿಯು ಎಲ್ಲರ ಕಣ್ಣಿಗೂ ಮಣ್ಣೆರಚುವ ಸಾಹಸದಷ್ಟು ಕ್ರೂರವಾಗಿದೆ. ಆ ಸಂಗತಿ ಯಾವದೆಂದರೆ—ಸ್ತ್ರೀಯರಿಗೆ ಓಟುಕೊಡುವ ಹಕ್ಕಿನ ವಿಷಯವಾಗಿ ಆ ಸಭೆಯಲ್ಲಿ ನಡೆದ ಚರ್ಚೆಯ ಸಂಬಂಧವಾಗಿ ಬರೆದಿರುವ ಅಸತ್ಯ ವಿವರಣವೇ ಆಗಿರುತ್ತದೆ. ಈ ಕರಸ್ಪಾಂಡೆನ್ಸುಗಳಲ್ಲಿ—ಆ ಸಬ್ಜೆಕ್ಟನ್ನು ಬ್ರಾಹ್ಮಣ ಮೆಂಬರುಗಳೆಲ್ಲಾ ಅನುಮೋದಿಸಿದರೆಂದೂ, ಬಳಿಕ ದಿವಾನರು ಇತರರ ಅಭಿಪ್ರಾಯಗಳೆಲ್ಲಾ ಹೇಗೆ? ಎಂದು ಕೇಳಲಾಗಿ ಇತರ ಪಂಗಡಗಳವರೆಲ್ಲಾ ಅದಕ್ಕೆ ವಿರುದ್ಧವಾಗಿ ಅಭಿಪ್ರಾಯಗಳನ್ನು ಕೊಟ್ಟರೆಂದೂ, ಮತ್ತು ಬ್ರಾಹ್ಮಣೇತರರು ಸ್ತ್ರೀಯರ ಗೌರವಕ್ಕೆ ಹಾನಿಕರವಾದ ಭಾಷಣಗಳನ್ನು ಮಾಡಿದರೆಂದೂ, ಅವನ್ನು ಕೇಳಿ ದಿವಾನರೇ ಮೊದಲಾದ ಬ್ರಾಹ್ಮಣೇತರಾಧಿಕಾರಿಗಳೂ, ಬ್ರಾಹ್ಮಣೇತರ ಮೆಂಬರುಗಳೂ ತಮ್ಮ ಪರಿಹಾಸಗಳಿಂದ ಅಲ್ಲಿಗೆ ಬಂದಿದ್ದ ಸ್ತ್ರೀಯರಿಗೆ ತೇಜೋವಧೆ ಮಾಡಿದರೆಂದೂ ಅದರಿಂದ ಅವರು ನೊಂದುಕೊಂಡು ಹೊರಟುಹೋದರೆಂದೂ, ಆದಿನದ ಸಭೆಯು ನಾಟಕಶಾಲೆಯ ಪಾರ್ಸಿನಂತೆ ಇತ್ತೆಂದೂ ಮುಂತಾಗಿ ಬರೆದು, ಈ ಸಬ್ಜೆಕ್ಟಿಗೆ ವಿರೋಧಾಭಿಪ್ರಾಯ ಕೊಡಿಸುವುದಕ್ಕೆ ದಿವಾನರೇ ಪ್ರೇರಕರೆಂತಲೂ ಬ್ರಾಹ್ಮಣ

ಸಂಗಡದವರೆಲ್ಲಾ ಇದಕ್ಕೆ ಸಹಾಯಕರಾಗಿದ್ದರೆಂತಲೂ ಇತರರೆಲ್ಲಾ ದಿವಾನರ ಎಚ್ಚರಿಕೆಯಿಂದ ವಿರೋಧಿಸಿದರೆಂತಲೂ ದೇಶಕ್ಕೆಲ್ಲಾ ತೋರ್ಪಡಿಸುವ ದುರುದ್ದೇಶದಿಂದ ಆದ್ಯಂತವಾಗಿ ಸುಳ್ಳಾದ ಅಭಿಪ್ರಾಯಗಳೇ ತುಂಬಿರುತ್ತವೆ.

ಆದಿವಸದ ಸಭೆಗೆ ಮೆಂಬರುಗಳೇ ಅಲ್ಲದೆ ನನ್ನಂತೆ ನೂರಾರು ಜನರು ಪ್ರೇಕ್ಷಕರಾಗಿಯೂ ಬಂದಿದ್ದರು. ಈ ಸಬ್ಜೆಕ್ಟನ್ನು ಸಪೋರ್ಟುಮಾಡುವುದರಲ್ಲಿ ಬ್ರಾಹ್ಮಣರೂ ಇದ್ದರು, ಬ್ರಾಹ್ಮಣೇತರರೂ ಇದ್ದರು. ವಿರೋಧಿಸುವುದರಲ್ಲೂ ಕೂಡ ಎರಡು ಸಂಗಡದವರೂ ಇದ್ದರು. ವಿರೋಧಿಸುವ ಭಾಷಣವನ್ನು ಮಾಡಿದವರೊಳಗೆ ಬ್ರಾಹ್ಮಣ ಮೆಂಬರುಗಳಲ್ಲಿ ಕೆಲವರ ಹೆಸರನ್ನು ನನಗೆ ಜ್ಞಾಪಕವಿರುವಮಟ್ಟಿಗೆ ಹೇಳುತ್ತೇನೆ. ಯಾರೆಂದರೆ— ಮ|| ಗಳಾದ ಕೆ. ಎಂ. ಕೃಷ್ಣಪ್ಪನವರು, ಡಿ. ಎಸ್. ಹನುಮಂತರಾಯರು, ಜಿ. ರಾಮಸ್ವಾಮಯ್ಯಂಗಾರರು, ಕೆ. ಕೃಷ್ಣಮೂರ್ತ್ಯಾಚಾರರು, ಎಚ್. ಶ್ರೀನಿವಾಸಯ್ಯಂಗಾರರು, ನಾಗಪ್ಪನವರು ಇತ್ಯಾದಿ. ಇವರುಗಳಲ್ಲಿ ಒಬ್ಬೊಬ್ಬರು ಮಾತನಾಡುವಾಗ್ಗೆ ಅವರ ನಿಜ ಮನೋದಯವನ್ನು ಮುಚ್ಚುಮರೆಯಿಲ್ಲದೆ ವಿವರಿಸಿದ್ದನ್ನು ಕೇಳಿ ಸಭೆಯಲ್ಲಿ ನಗದೆ ಇದ್ದ ಪ್ರಾಣಿಯು ಒಂದೆರಡುಕೂಡ ಇತ್ತೋ ಇಲ್ಲವೋ! ಬ್ರಾಹ್ಮಣರಲ್ಲೇ ವಿರೋಧಾಭಿಪ್ರಾಯವನ್ನು ಕೊಡುವವರು ಅನೇಕರಿದ್ದರು. ಆದರೆ ಒಬ್ಬೊಬ್ಬ ಮುಂದಾಳುಗಳು ಚೀಟಿಬರೆದು ಕಳುಹಿಸಿಕೊಟ್ಟದ್ದರಿಂದ ಕೆಲವರು ತಟಸ್ಥರಾದರು. ಕೆಲವರು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಸಪೋರ್ಟುಮಾಡಿದರು. ಹಿಂದುಗಳಲ್ಲಿ ಸಾಮಾನ್ಯವಾಗಿ ಎಲ್ಲ ಸಂಗಡಗಳವರೂ ತಂತಮ್ಮ ಅಭಿಪ್ರಾಯವನ್ನು ತಿಳಿಯಿಸಿದ ಬಳಿಕ ಮುಸಲ್ಮಾನರಲ್ಲಿ ಯಾರೂ ಮಾತನಾಡದೆ ಇದ್ದದ್ದರಿಂದ, ಈ ವಿಷಯವಾಗಿ ಮಹಮ್ಮದೀಯರ ಅಭಿಪ್ರಾಯವೇನೋ ತಿಳಿಯಲಿಲ್ಲ ಎಂದು ದಿವಾನರು ಅಪ್ಪಣೆ ಕೊಡಿಸಿದರು. ಆದರಮೇಲೆ ಮಿ|| ಅಬ್ಬಾಸ್ ಖಾನರು ಎದ್ದು— "ಅಂಥ ಅಧಿಕಾರವನ್ನು ಸ್ತ್ರೀಯರಿಗೆ ಕೊಡುವುದಕ್ಕೆ ತಕ್ಕಕಾಲವು ಬಂದಿಲ್ಲ; ಇನ್ನೂ ಅನೇಕಕಾಲ ಹೋಗಬೇಕು" ಎಂದು ಹೇಳಿದರು. ಹೀಗೆನಡೆದ ನಡೆವಳಿಕೆಯನ್ನು ಮರೆಮಾಚಿ ಸುಳ್ಳು ಕಂತೆಯನ್ನು ಊರಿಗೆಲ್ಲಾ ಹಂಚುವುದಕ್ಕೆ ಯತ್ನಿಸಿರುವ ಈ ಧೂರ್ತಶಿಖಾಮಣಿಯಾರೋ ತಿಳಿಯಲಿಲ್ಲ. ಇಂಥ ಅಸತ್ಯವಿಧಾನಗಳಿಗೆ ತಮ್ಮ ಪತ್ರಿಕೆಯಲ್ಲಿ ಸಂಪದಭ್ಯುದಯಕರ್ತರು ಸ್ಥಳ ಕೊಡುವುದರಲ್ಲಿ ಅವರ ಉದ್ದೇಶವೇನಾಗಿರಬಹುದೋ ಸರ್ಕಾರದವರು ಪರ್ಯಾಲೋಚಿಸಬೇಕು. ಸುಳ್ಳುಸುದ್ದಿಗಳನ್ನು ಹರಡಿ ಸರ್ಕಾರದಧಿಕಾರಿಗಳ ವಿಷಯವಾಗಿ ಪ್ರಜೆಗಳ ಮನಸ್ಸನ್ನು ಕಲುಷಗೊಳಿಸತಕ್ಕವರನ್ನು ತಕ್ಕ ಬಂದೋಬಸ್ತಿನಿಂದ ದಾರಿಗೆ ತರುವದು ಪ್ರಭುತ್ವಧರ್ಮಕ್ಕೆ ಅನುಚಿತವೆಂದೂ ಪಾಪಕೃತ್ಯವೆಂದೂ ನಮ್ಮ ಸರ್ಕಾರಕ್ಕೆ ತೋರಿದ್ದರೆ, ಇಂಥ ಘಾಟಿ ಸುಳ್ಳುಗಾರರಿಗೆ ಮೆಡಲುಗಳನ್ನು ಕೊಡುವುದಕ್ಕೆ ಸಂಪದಭ್ಯುದಯಕರ್ತರು ಇನ್ನುಮೇಲೆ ಏರ್ಪಡಿಸಬಹುದು. ಒಬ್ಬಬ್ರಾಹ್ಮಣ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಅಕ್ಟೋಬರ್ ತಾ|| ೩೦ ನೆಯ ಭಾನುವಾರ.

ವಿದ್ಯಾಭ್ಯಾಸದ ಕಂದಾಯ.

ದೇಶದ ಪ್ರಜೆಗಳಲ್ಲಿ ವಿದ್ಯಾಪ್ರಸಾರವು ಬಹಳ ಕಡಿಮೆಯಾಗಿರುವ ಕಾರಣ ಆ ಲೋಪವನ್ನು ಪರಿಹರಿಸಬೇಕಾದ ಸಮಸ್ಯೆಯು ಎಲ್ಲಕ್ಕಿಂತಲೂ ಮುಖ್ಯವಾದ ಕಾರ್ಯವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸರ್ಕಾರದವರು ಕೂಡ ಇದನ್ನು ಉದಾಸೀನ ಮಾಡಿಲ್ಲವೆಂಬುದಕ್ಕೆ ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನು ಏರ್ಪಡಿಸಿರುವುದೇ ನಿದರ್ಶನವಾಗಿದೆ. ಆ ಮೆಮೊರಾಂಡಮ್ಮಿನಂತೆ ಕೆಲಸವೆಲ್ಲಾ ನಡೆಯುವುದಾದರೆ ನಮ್ಮ ದೇಶದ ವಿದ್ಯಾದಾರಿದ್ರ್ಯವು ಹತವಾಗಿ ಹೋಗುವುದು; ೫ ವರ್ಷಗಳಲ್ಲಿ ೧೦೦೦೦ ಬಾಲಪಾಠಶಾಲೆಗಳು ಸ್ಥಾಪಿಸಲ್ಪಡುವುವು; ಗ್ರಾಮಾಂತರಗಳಲ್ಲೆಲ್ಲಾ ಗ್ರಾಂಟಿನೇಡ್ ಶಾಲೆಗಳು ತಪ್ಪಿ ಸರ್ಕಾರಿಶಾಲೆಗಳು ಏರ್ಪಡುವುವು; ಪ್ರತಿ ೨೯ ಚದರ ಮೈಲಿಗೂ ಒಂದೊಂದು ಪಾಠಶಾಲೆಗಳಿರುವುವು; ಕೇವಲ ದೇಶಭಾಷಾ ಶಾಲೆಗಳೆಲ್ಲಾ ಆಂಗ್ಲೋವರ್ನಾಕ್ಯುಲರ್ ಶಾಲೆಗಳಾಗುವುವು; ಪಾಠಶಾಲೆಗಳಲ್ಲೆಲ್ಲಾ ಕೈಗಾರಿಕೆಗಳು ಕಲಿಸಲ್ಪಡುವುವು; ಅಲ್ಲದೆ ದೇಶದ ಎಲ್ಲ ಭಾಗಗಳಲ್ಲೂ ಕೈಗಾರಿಕೆಯ ಪಾಠಶಾಲೆಗಳು ಸ್ಥಾಪಿಸಲ್ಪಡುವುವು; ಉತ್ತಮರಾದ ಶಾಲೋಪಾಧ್ಯಾಯರುಗಳು ಒದಗಿಸಲ್ಪಡುವರು; ಅವರ ಸಂಬಳಗಳೂ ಹೆಚ್ಚುವುವು; ಶಾಲೆಗಳ ಮೇಲ್ವಿಚಾರಣೆಯು ಸಮೀಚೀನವಾಗಿ ನಡೆಯುವುದು. ಇಷ್ಟೇ ಅಲ್ಲದೆ ಮಾಧ್ಯಮಿಕ ಪ್ರೌಢಶಾಲೆಗಳ ಪಾಠಗಳೆಲ್ಲಾ ಉಚಿತವಾಗಿ ನಡೆಯುವುದಕ್ಕೆ ಅವಕಾಶವೂ ಆಗಬಹುದು. ಇಷ್ಟೆಲ್ಲಾ ಏರ್ಪಾಟುಗಳು ನಡೆಯಬೇಕಾದರೆ ತಕ್ಕ ಧನಸಹಾಯವು ಆಗಬೇಕು. ಈಗಲೇ ನಮ್ಮ ಸಂಸ್ಥಾನದಲ್ಲಿ ವರ್ಷ ೧ ಕ್ಕೆ ೪೩|| ಲಕ್ಷ ರೂ. ಗಳು ವಿದ್ಯಾಭ್ಯಾಸನೆಗಾಗಿಯೇ ವಿನಿಯೋಗಿಸಲ್ಪಡುತ್ತಿರುವುವು. ಮುಂದಣ ಏರ್ಪಾಟುಗಳನ್ನೆಲ್ಲಾ ಮಾಡುವುದಾದರೆ ಸರ್ಕಾರದವರು ವರ್ಷ ೧ ಕ್ಕೆ ಈಗಿಗಿಂತಲೂ ೧೪ ರಿಂದ ೨೧ ಲಕ್ಷದವರೆಗೆ ಹೆಚ್ಚು ವೆಚ್ಚವನ್ನು ಮಾಡಬೇಕಾಗುವುದು. ಈಗಳಾದರೊ ಸರ್ಕಾರದವರು ತಮ್ಮ ಆದಾಯದಲ್ಲಿ ಸೇಕಡಾ ೧೪ ಭಾಗದಷ್ಟು ವಿದ್ಯಾಭ್ಯಾಸದ ಶಾಖೆಗೆ ಕೊಡುತ್ತಿರುವರು. ಅದರಲ್ಲಿ ೩ ಭಾಗವು ಪ್ರೌಢವಿದ್ಯಾಭ್ಯಾಸಕ್ಕೇ ವೆಚ್ಚವಾಗಿಹೋಗುತ್ತಿರುವುದು. ಗ್ರಾಮಾಂತರದವರ ಬಾಲವಿದ್ಯಾಭ್ಯಾಸಕ್ಕಾಗಿ ಈಗ ನಡೆದಿರುವ ಏರ್ಪಾಟು ಬಹಳಕಡಿಮೆ. ಆ ಕೊರತೆಯ ಪರಿಹಾರಕ್ಕೆ ವಿಶೇಷ ಗಮನಕೊಡಬೇಕಾಗಿದೆ. "ಗ್ರಾಮಾಂತರಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಸರಣೆಯನ್ನು ಸಾವಕಾಶಮಾಡುವುದು ಸಾಧ್ಯವಲ್ಲ" ವೆಂದು ದಿವಾನರು ಕೂಡ ಅಪ್ಪಣೆಕೊಡಿಸಿರುವುದರಿಂದ ಈ ವಿಷಯವು ಸರ್ಕಾರದ ಮನಸ್ಸಿಗೆ ಚೆನ್ನಾಗಿ ಹತ್ತಿದೆಯೆಂದು ಹೇಳಬಹುದು. ಆದರೇನು ? ಸರ್ಕಾರಕ್ಕೆ ಈಗ ಪ್ರಾಪ್ತನಾಗಿರುವ ದುಡ್ಡಿನ ಕ್ಷಾಮದಲ್ಲಿ ವಿದ್ಯಾಭ್ಯಾಸಕ್ಕಾಗಿ ೧೦-೨೦ ಲಕ್ಷವನ್ನು ಇನ್ನೂ ಹೆಚ್ಚಾಗಿ ಒದಗಿಸುವುದು ಸಾಧ್ಯವಾಗಿಲ್ಲವೆಂಬುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ.

ವಿದ್ಯಾಶಾಖೆಯಲ್ಲಿ ಸರ್ಕಾರಕ್ಕೆ ಬರುತ್ತಿರುವ ಆದಾಯವು ಬಹಳ ಕಡಿಮೆ. ನಮ್ಮ ವಿದ್ಯಾಪೀಠದಲ್ಲಿ ವಿಧಿಸಲ್ಪಟ್ಟಿರುವ ಫೀಜುಗಳು ಉಳಿದ ವಿಶ್ವವಿದ್ಯಾಲಯಗಳಲ್ಲಿ ವಿಧಿಸಲ್ಪಟ್ಟಿರುವುದಕ್ಕಿಂತಲೂ ಎಷ್ಟೋ ಕಡಿಮೆ. ಸ್ತ್ರೀವಿದ್ಯಾಭ್ಯಾಸವು ಆದ್ಯಂತವಾಗಿ ಉಚಿತವಾಗಿ ಮಾಡಿಸಲ್ಪಡುತ್ತಿದೆ. ಸಂಸ್ಕೃತ ವಿದ್ಯಾಭ್ಯಾಸವು ಕೂಡ ಉಚಿತವಾಗಿಯೇ ನಡೆಯಿಸಲ್ಪಡುವುದಲ್ಲದೆ ವಿದ್ಯಾರ್ಥಿವೇತನಗಳೂ ಅಶನವಸತಿಗಳೂ ಸಹ ಕಲ್ಪಿಸಿಕೊಡಲ್ಪಟ್ಟಿವೆ. ಪ್ರೌಢಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ೧೦೦ ಕ್ಕೆ ೪೦ ಮಂದಿಗೂ ಇಂಜನಿಯರಿಂಗ್ ತರಗತಿಗಳಲ್ಲಿ ೧೦೦ಕ್ಕೆ ೫೦ ಮಂದಿಗೂ ಫೀಜೇ ಇಲ್ಲ. ಬಿ. ಎಸ್. ಸಿ ತರಗತಿಗಳಲ್ಲಿ ಭೌತಿಕ ರಸಾಯನ ಶಾಸ್ತ್ರಗಳನ್ನು ಕಲಿಯುವ ವಿದ್ಯಾರ್ಥಿಗಳಿಗೆಲ್ಲಾ ಫೀಜೇ ಇಲ್ಲ. ವಿಶ್ವವಿದ್ಯಾಲಯದ ಪ್ರವೇಶ ತರಗತಿಗಳಲ್ಲಿ ೧೦೦ಕ್ಕೆ ೩೩⅓ ಮಂದಿಗೂ ಹೈಸ್ಕೂಲುಗಳಲ್ಲಿ ೧೦೦ಕ್ಕೆ ೨೦ ಮಂದಿಗೂ ಫೀಜು ಮನ್ನಿಸಲ್ಪಟ್ಟಿದೆ. ಮತ್ತು ಈಚೆಗೆ ಮಿಡಲ್ ಸ್ಕೂಲುಗಳವರೆಗೂ ಫೀಜನ್ನು ತಪ್ಪಿಸಿಯೇ ಬಿಟ್ಟಿರುತ್ತಾರೆ. ಇವೆಲ್ಲ ಕಾರಣಗಳಿಂದ ೨,೩೭,೦೦೦ ರೂ. ನಷ್ಟು ಫೀಜನ್ನು ಮನ್ನಿಸಿಬಿಟ್ಟಂತಾಗಿದೆ. ಅದುಕಾರಣ ಈ ಶಾಖೆಯಲ್ಲಿ ಫೀಜಿಗಾಗಿ ಬರುವ ಹಣವು ೮೩|| ಸಾವಿರ ರೂ. ಮಾತ್ರವೇ. ಪರೀಕ್ಷೆಯ ಫೀಜುಗಳು ಪ್ರಜೆಗಳಿಂದ ಬರುವ ಸಹಾಯದ್ರವ್ಯ ಇತ್ಯಾದಿಗಳೆಲ್ಲಾ ಸೇರಿದರೆ ವರ್ಷಕ್ಕೆ ೧|| ಲಕ್ಷಕ್ಕೆ ಸ್ವಲ್ಪ ಹೆಚ್ಚಾಗಬಹುದು. ಹೀಗಿರುವಲ್ಲಿ ಸರ್ಕಾರದವರು ಈ ಶಾಖೆಗಾಗಿ ಮೇಲೆ ಕಂಡಷ್ಟು ಹೆಚ್ಚು ವೆಚ್ಚವನ್ನು ಮಾಡುತ್ತಿರುವುದು ಅವರ ವಿದ್ಯಾಪ್ರಸರಣಾಭಿಮಾನಕ್ಕೆ ನಿದರ್ಶನವಾಗಿದೆ. ಆದರೇನು? ಬಾಲ ವಿದ್ಯಾಭ್ಯಾಸಕ್ಕಾಗಿ ಇವರು ಮಾಡುವಷ್ಟು ಹೀನತರವಾದ ವೆಚ್ಚವನ್ನೂ ತೋರಿಸುತ್ತಿರುವ ಅಶ್ರದ್ಧೆಯನ್ನೂ ನೆರೆಹೊರೆಯ ಬೊಂಬಾಯಿ ಮದ್ರಾಸು ಮೊದಲಾದ ಯಾವ ಸರ್ಕಾರದವರೂ ಮಾಡಿರುವುದಿಲ್ಲ. ನಮ್ಮವರು ಬಾಲವಿದ್ಯಾಭಿವೃದ್ಧಿಗೆ ೯·೨ ರಷ್ಟನ್ನು ವೆಚ್ಚಮಾಡುತ್ತಿರುವಲ್ಲಿ ಬೊಂಬಾಯಿ ಸರ್ಕಾರದವರು ೫೪·೦ ರಷ್ಟನ್ನೂ ಮದರಾಸಿನವರು ೭೨·೫ ರಷ್ಟನ್ನೂ ವೆಚ್ಚಮಾಡುತ್ತಿದ್ದಾರೆ. ಈ ಲೋಪವನ್ನು ಸರ್ಕಾರದವರೂ ಪ್ರಜೆಗಳೂ ಸಹ ಸೇರಿ ಅವಶ್ಯಕವಾಗಿ ಪರಿಹರಿಸದಿದ್ದರೆ ಸಾಮಾನ್ಯ ಪ್ರಜೆಗಳ ಋಣದಿಂದ ಇವರು ಮುಕ್ತರಾಗುವುದೂ ಇಲ್ಲ, ಕರ್ತವ್ಯವನ್ನು ನೆರವೇರಿಸಿದ ಯಶಸ್ಸಿಗೆ ಪಾತ್ರರಾಗುವುದೂ ಇಲ್ಲ.

ಅತ್ಯವಶ್ಯಕವಾಗಿ ಕುಳಿತಿರುವ ಈ ಬಾಲವಿದ್ಯಾಪ್ರಸಾರಕ್ಕೆ ಮೊದಲನೆಯ ಸಾಧನವು ಹಣವೇ ತಾನೇ? ಅದು ಕೂಡ ಅಲ್ಪಸ್ವಲ್ಪವಾಗಿರದೆ ಹತ್ತಾರು ಲಕ್ಷಗಟ್ಟಲೆಯಾಗಬೇಕಾಗಿರುವುದರಿಂದ ಅದನ್ನೊದಗಿಸುವುದಕ್ಕೆ ಈಗಣ ನಿಯತವಾದ ಸರ್ಕಾರಿ ಆದಾಯದಲ್ಲಿ ಮಾರ್ಗವೇ ಇಲ್ಲ. ಹಿಂದೆ ಆರಂಭಿಸಲ್ಪಟ್ಟಿರುವ ಕಾಮಗಾರಿಗಳನ್ನು ಮುಗಿಸುವುದಕ್ಕಾಗಿ ಅವರೇ ಸಾಲಮಾಡುತ್ತಿದ್ದಾರೆ. ಹೀಗಿರುವಾಗ ವಿದ್ಯಾಪ್ರಸಾರಕ್ಕಾಗಿ ಮಾಡಬೇಕಾದ ಹೆಚ್ಚು ವೆಚ್ಚದ ಹುಟ್ಟುವಳಿಗೋಸ್ಕರ ಬೇರೆ ಮಾರ್ಗವನ್ನು ಕಲ್ಪಿಸಿಕೊಳ್ಳಲೇಬೇಕು, ಇಲ್ಲವೆ ಅದರಾಸೆಯನ್ನು ಬಿಟ್ಟುಬಿಡಬೇಕು. ಈ ಸ್ಥಿತಿಯು ಪ್ರಾಪ್ತವಾಗಿರುತ್ತದೆ. ಇದರಮೇಲೆ ಸರ್ಕಾರದವರು ವಿದ್ಯಾಭ್ಯಾಸದ ಕಂದಾಯವೆಂಬುದಾಗಿ ಒಂದನ್ನು ಹೊಸದಾಗಿ ಏರ್ಪಡಿಸಿ, ಭೂಗಂದಾಯದ ಮೇಲೆ ರೂಪಾಯಿಗೆ ೧ ಆಣೆಯಂತೆಯೂ, ಮ್ಯುನ್ಸಿಪಲ್ ತೆರುಗೆಗಳಮೇಲೆ ರೂಪಾಯಿಗೆ ೨ ಆಣೆಯಂತೆಯೂ ಹೊಸಕಂದಾಯವೊಂದನ್ನು ವಿಧಿಸಿ ಎತ್ತಿದರೆ ವರ್ಷ ೧ ಕ್ಕೆ ೧೨|| ಲಕ್ಷದವರೆಗೆ ಹೊಸಹುಟ್ಟುವಳಿಯಾಗುವುದೆಂದೂ, ಅದನ್ನು ಉದ್ದಿಷ್ಟವಾದ ವಿದ್ಯಾಪ್ರಸಾರ ಕಾರ್ಯಕ್ಕೆ ವಿನಿಯೋಗಿಸಿಕೊಳ್ಳಬಹುದೆಂದೂ ಯೋಚಿಸಿದ್ದಾರೆ.

ಈ ವಿಷಯವು ಈಗ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ೨ ಗಂಟೆಗಳಕಾಲ ಚೆನ್ನಾಗಿ ಚರ್ಚಿಸಲ್ಪಟ್ಟಿತು. ಈಗಲೇ ಕಂದಾಯಗಳು ಹೆಚ್ಚಾಗಿರುವುವೆಂದೂ, ಈ ತೆರುಗೆಯನ್ನು ಹೊಸದಾಗಿ ವಿಧಿಸಿದರೆ ಭಾರವಾಗುವುದೆಂದೂ, ಬಾಲವಿದ್ಯಾಭ್ಯಾಸವನ್ನು ಪ್ರಜೆಗಳಿಗೆ ಮಾಡಿಸುವುದು ಸರ್ಕಾರದವರ ಕರ್ತವ್ಯವೆಂದೂ, ಸರ್ಕಾರದ ಇತರ ವ್ಯಯಗಳನ್ನು ಕಡಿಮೆಹಾಕಿ ಇದಕ್ಕೆ ಹಣವನ್ನು ಒದಗಿಸಿಕೊಳ್ಳಬಹುದೆಂದೂ ಕೆಲವರು ವಾದಿಸಿದರು. ಆದರೆ ಹೀಗೇ ವಾದಿಸಿ ತಡೆಹೇಳಿದವರು ೫-೬ ಮಂದಿ ಮಾತ್ರವಾಗಿದ್ದರು. ಗ್ರಾಮಾಂತರದ ನಮ್ಮ ಮಕ್ಕಳು ವಿದ್ಯಾವಂತರಾದರೆ ಸಾಕು. ರೂ. ಗೆ ೪ ಆಣೆವರೆಗಾದರೂ ವಿದ್ಯಾಭ್ಯಾಸದ ಕಂದಾಯವನ್ನು ಕೊಡಲು ನಾವು ಸಿದ್ಧರಾಗಿದ್ದೇವೆ. ದಂಡಕ್ಕೆ ಲಂಚಕ್ಕೆ ದುರ್ವ್ಯಾಜ್ಯಕ್ಕೆ ಎಷ್ಟೋ ತೆರುತ್ತೇವೆ. ಇದೊಂದು ಭಾರವಲ್ಲ. ನಾವು ಈ ಕಂದಾಯದ ರೂಪವಾಗಿ ಕೊಡುವುದು ಎಲ್ಲೋ ಸ್ವಲ್ಪ; ಅದರಿಂದ ನಮಗೆ ಆಗುವಲಾಭವು ಅಪರಿಮಿತವಾಗಿರುತ್ತದೆ. ಅದುಕಾರಣ ಬಲಾತ್ಕಾರದಿಂದಲಾದರೂ ಈ ತೆರುಗೆಯನ್ನು ವಿಧಿಸಿ ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿರಿ. ಆದರೆ ಈ ಸೆಸ್ಸಿನ ರೂಪದಲ್ಲಿಬರುವ ಆದಾಯವನ್ನೆಲ್ಲಾ ಬಾಲವಿದ್ಯಾಭ್ಯಾಸಕ್ಕೇ ವಿನಿಯೋಗಿಸುತ್ತೇವೆಂದು ಬರವಸೆ ಕೊಡಿರಿ, ಅದರಜತೆಗೆ ಸರ್ಕಾರದವರೂ ತಕ್ಕಷ್ಟು ಹಣವನ್ನು ಭರ್ತಿಹಾಕಿ ಬಾಲವಿದ್ಯಾಪ್ರಸಾರವನ್ನು ಬೇಗಬೇಗನೆ ಮಾಡಿಸಿರಿ, ಎಂದು ಬಹಳ ಅಭಿಮಾನಕುತೂಹಲಗಳಿಂದ ಹೇಳಿಕೊಂಡವರ ಸಂಖ್ಯೆಯು ೨೦ ಕ್ಕೆ ಮೇಲಾಗಿದ್ದಿತು. ಅದರಲ್ಲೂ ರೈತಜನವರ್ಗಗಳೇ ಮುಂದಾಗಿಬಂದು ಹೀಗೆ ಹೇಳಿಕೊಂಡುದನ್ನು ನೋಡಿದರೆ ಗ್ರಾಮಾಂತರದ ಜನರಲ್ಲಿ ವಿದ್ಯಾದಾಹವು ಎಷ್ಟು ಹೆಚ್ಚಾಗಿದೆಯೆಂಬುದು ಗೊತ್ತಾಗುತ್ತದೆ. ಪ್ರಭುತ್ವದವರು ವಿದ್ಯಾಭ್ಯಾಸ ವಿಷಯದಲ್ಲಿ ಗ್ರಾಮಾಂತರದವರನ್ನು ಬಹಳವಾಗಿ ಕಡೆಗಣ್ಣಿನಿಂದ ಕಂಡಿದ್ದಾರೆ. ಆದರೂ ಅವರುಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪಾಠಶಾಲೆಗಳ ಕಟ್ಟಡಗಳಿಗೂ ಉಪಾಧ್ಯಾಯರ ಸಂಬಳಗಳಿಗೂ ಪ್ರತ್ಯೇಕವಾದ ಧನಸಹಾಯವನ್ನು ಮಾಡುತ್ತಾಬಂದಿದ್ದಾರೆ. ಅಂಥ ದಂಡವನ್ನು ಕೂಡ ಅವರಮೇಲೆ ಹೊರಿಸಲು ಸರ್ಕಾರದವರು ಹಿಂದುಮುಂದೆ ನೋಡಿಲ್ಲ. ಹಾಗೆ ಧನಸಹಾಯವನ್ನು ಮಾಡುತ್ತಾಬಂದಿರುವ ಗ್ರಾಮಾಂತರದ ಜನರು ಈ ಅಲ್ಪವಾದ ವಿದ್ಯೆಯ ಸೆಸ್ಸನ್ನು ತೆರಲು ಎಂದಿಗೂ ಹಿಂದೆಗೆಯಲಾರರು. ಮತ್ತು ಸರ್ಕಾರದವರು ಮಿಡಲ್ ಸ್ಕೂಲುಗಳವರೆಗೂ ಫೀಜುಗಳನ್ನು ತೆಗೆದುಹಾಕಿರುವುದರಿಂದ ಆ ಭಾರವು ಕೂಡ ಪ್ರಜೆಗಳಿಗೆ ತಪ್ಪಿಹೋಗಿದೆ. ಹೀಗಿರುವಲ್ಲಿ ಕೆಲಮಂದಿಗಳು ರೈತರಿಗೆ ಇದರಿಂದ ಭಾರವಾಗುವುದೆಂದು ವಾದಿಸುತ್ತ ತಡೆ ಹೇಳುತ್ತಿರುವುದನ್ನು ನೋಡಿದರೆ ರೈತರ ಹಿತಕ್ಕಾಗಿಯೇ ಈ ವಾದವೋ ಅಥವಾ ಸಾಮಾನ್ಯ ಜನವರ್ಗದಲ್ಲೆಲ್ಲಾ ವಿದ್ಯಾಪ್ರಸಾರವು ಹೆಚ್ಚಾಗಿ ಅವರಲ್ಲಿ ವಿದ್ಯಾಪಾಂಡಿತ್ಯ ಸಂಪಾದಿಸಿದವರು ಸರ್ಕಾರಿ ಉದ್ಯೋಗಗಳ ಪಾಲಿಗೆ ಎಲ್ಲಿ ಬಂದಾರೋ ಎಂಬ ದಿಗುಲಿನಿಂದಲೇ ಇಂಥ ಅಡ್ಡಿಯನ್ನು ಈಗಲೇ ಹೇಳಿ ವಿದ್ಯಾಭ್ಯಾಸದ ಮೆಮೋರಾಂಡಮ್ಮಿನ ಕಾರ್ಯಾಚರಣೆಗೆ ಪರೋಕ್ಷವಾಗಿ ವಿಘ್ನವನ್ನು ತರುತ್ತಿರುವರೋ ಎಂದು ಅನೇಕರು ಶಂಕಿಸುತ್ತಿರುವರು. ಈ ಕಂದಾಯಕ್ಕೆ ಅಡ್ಡಿ ಹೇಳುವವರು ಬೇರೆ ವಿಧದಲ್ಲಿ ಸರ್ಕಾರಕ್ಕೆ ಆದಾಯಮಾರ್ಗವನ್ನೇನೂ ಸೂಚಿಸುವುದಿಲ್ಲ. ಅಲ್ಲದೆ ಪ್ರೌಢವಿದ್ಯಾಭ್ಯಾಸದವರೆಗೂ ಶಾಲೆಗಳ ಫೀಜುಗಳನ್ನೆಲ್ಲಾ ತೆಗೆದುಬಿಡಿ; ಕಾಲೇಜು ಹೈಸ್ಕೂಲುಗಳ ಸಂಖ್ಯೆಯನ್ನು ಹೆಚ್ಚಿಸಿಕೊಡಿ; ಲಾ ತರಗತಿ ಮೊದಲಾದುವುಗಳನ್ನು ಏರ್ಪಡಿಸಿಕೊಡಿ ಎಂದು ಮೊದಲಾದ ಪ್ರಾರ್ಥನೆಗಳನ್ನು ಸರ್ಕಾರಕ್ಕೆ ನಿರಂತರವಾಗಿ ಮಾಡುತ್ತಿದ್ದಾರೆ. ಅವಕ್ಕೆಲ್ಲಾ ಸರ್ಕಾರದವರು ಎಲ್ಲಿಂದ ದುಡ್ಡನ್ನು ಒದಗಿಸಬೇಕೆಂಬ ಯೋಚನೆಯನ್ನು ಸ್ವರಾಜ್ಯವನ್ನಪೇಕ್ಷಿಸುವ ಜಾಣರು ತಮ್ಮ ತಲೆಗೆ ಅಂಟಿಸಿಕೊಳ್ಳುವುದೇ ಇಲ್ಲ. ಇಲ್ಲವೆಂದು ಹೇಳಿಸಿಕೊಳ್ಳದಂತೆ ಮಾಡುವುದಕ್ಕೋ ಏನೋ ದೊಡ್ಡದೊಡ್ಡ ಅಧಿಕಾರಿಗಳ ಸಂಬಳವನ್ನು ಕಡಿಮೆ ಹಾಕಿ ಈ ವೆಚ್ಚಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ಕೆಲವರು ವಾದಿಸುತ್ತಾರೆ. ಹಿಂದಣ ದಿವಾನರುಗಳು ಬಹುಕಾಲದ ಹಿಂದೆ ಏರ್ಪಟ್ಟಿದ್ದ ಉದ್ಯೋಗಸ್ಥರಸಂಬಳಗಳು ಈಗಣಕಾಲಕ್ಕೆ ಸಾಲವೆಂದು ಹೇಳಿ ಸಂಬಳಗಳನ್ನೂ ನೂತನಪದವಿಗಳನ್ನೂ ಹೆಚ್ಚಿಸಿಹೋಗಿರುವರು. ಈಗ ಹೊರಗೆ ಹೆಚ್ಚು ಸಂಬಳಗಳು ಸಿಕ್ಕುತ್ತಿರುವುವೆಂದು ಅನೇಕರು ನಮ್ಮ ಸಂಸ್ಥಾನದ ಉದ್ಯೋಗಗಳನ್ನು ಬಿಟ್ಟುಹೋಗಿಯೂ ಹೋಗುತ್ತಲೂ ಇರುವರು. ಸಂಬಳಗಳನ್ನು ಇನ್ನಷ್ಟು ಹೆಚ್ಚಿಸದಿದ್ದರೆ ಒಟ್ಟಾಗಿ ಮುಷ್ಕರಹಿಡಿದು ಕೆಲಸಬಿಟ್ಟು ಹೋಗುವೆವೆಂದು ಕೆಲವರು ಬೆದರಿಸುತ್ತಿರುವರು. ಇಂಥ ಸ್ಥಿತಿಯಲ್ಲಿ ಈಗಣ ಸರ್ಕಾರದವರು ಎಷ್ಟುಮಟ್ಟಿಗೆ ವ್ಯಯಸಂಕೋಚವನ್ನು ಕಲ್ಪಿಸಬಹುದು ? ಆದರೂ ಸಾಧ್ಯವಾದಮಟ್ಟಿಗೂ ವ್ಯಯಭಾರವನ್ನು ತಗ್ಗಿಸುತ್ತಲೇ ಇರುವರು. ಅಷ್ಟೂ ಇಷ್ಟು ಮಿಗುವ ಆ ಹಣದಿಂದ ವಿದ್ಯಾಪ್ರಸಾರಕ್ಕಾಗಿ ಬೇಕಾಗುವ ಮಹಾಧನವ್ಯಯವನ್ನೆಲ್ಲಾ ನಿರ್ವಾಹಮಾಡುವುದು ಸಾಧ್ಯವೆ?

ಈಗ ಪಟ್ಟಣವಾಸಿಗಳಿಗೇನೂ ವಿದ್ಯಾಭ್ಯಾಸದ ತಾಪತ್ರಯವಿಲ್ಲ. ಬಂದಿರುವ ಕಷ್ಟವು ಗ್ರಾಮಾಂತರದವರಿಗೇನೆಯೇ. ಸರ್ಕಾರದವರೇ ತಮಗೆ ಹಣವೊದಗಿದಾಗ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಸಮಗ್ರವಾಗಿ ಮಾಡಿಸಲಿ ಎಂದು ಗ್ರಾಮಾಂತರದ ಜನರು ಕುಳಿತುಬಿಟ್ಟರೆ ಯುಗಾಂತದವರೆಗೂ ಅವರ ಮಕ್ಕಳು ವಿದ್ಯಾವಂತರಾಗುವರೋ ಇಲ್ಲವೋ ಹೇಳಲಾಗುವುದಿಲ್ಲ. ಈಗ ಗಟ್ಟಿಮನಸ್ಸುಮಾಡಿ ವಿದ್ಯಾಭ್ಯಾಸದ ಸೆಸ್ಸಿಗೋಸ್ಕರ ತಮ್ಮ ಭೂಗಂದಾಯದ ಮೇಲೆ ೧ ಆಣೆಯಂತೆ ಕೊಡಲು ಒಪ್ಪಿಕೊಳ್ಳುವುದು ರೈತರ ಕ್ಷೇಮಕ್ಕೇ ಸಾಧಕವಾಗುತ್ತದೆ. ತಮಗೆ ಆಪ್ತರಂತೆಯೂ ಹಿತವನ್ನು ಕೋರುವವರಂತೆಯೂ ಈ ಸೆಸ್ಸಿಗೆ ವಿರುದ್ಧವಾಗಿ ಬೋಧಿಸುವವರ ಮಾತಿಗೆ ಗ್ರಾಮಾಂತರದ ಜನರು ಮರುಳಾಗಿ ಹಿಂದೆಗೆದರೆ ಅವರೇ ಕೆಡುತ್ತಾರೆ. ಇದನ್ನು ಸರ್ವರೂ ಶಾಂತಮನಸ್ಸಿನಿಂದ ಪರ್ಯಾಲೋಚಿಸಬೇಕು.

ಈಗಳಾದರೊ ಸರ್ಕಾರದವರು ಈ ಸೆಸ್ಸನ್ನು ವಿಧಿಸುವ ಅಥವಾ ಬಿಡುವ ಅಧಿಕಾರವನ್ನು ಲೋಕಲ್ ಬೋರ್ಡುಗಳಿಗೇ ವಹಿಸಿಬಿಟ್ಟಿದ್ದಾರೆ. ಇದನ್ನು ಉಚಿತವೆಂದು ಹೇಳಲಾಗುವುದಿಲ್ಲ. ದೇಶದ ಸಕಲ ಪ್ರಜೆಗಳ ಪ್ರಾತಿನಿಧ್ಯವೂ ಪ್ರಜಾಪ್ರತಿನಿಧಿಸಭೆಗೆ ಇರುವುದೆಂಬುದು ಸಿದ್ಧವಾಗಿರುವಾಗ, ಇಲ್ಲಿ ಚರ್ಚೆಗೆ ಬಂದು ಮುಗಿದ ವಿಷಯವನ್ನು ಪ್ರಜಾಭಿಪ್ರಾಯಕ್ಕೋಸ್ಕರವೆಂದು ಡಿಸ್ಟ್ರಿಕ್ಟು ಬೋರ್ಡುಗಳಿಗೆ ವಹಿಸುವುದಾದರೆ ನಿಜವಾದ ಪ್ರಜಾಪ್ರಾತಿನಿಧ್ಯವು ಈ ಮಹಾಸಭೆಗೆ ಇಲ್ಲವೆಂದೇ ಹೇಳಿದಂತಾಯಿತು. ಅಲ್ಲದೆ ವರಮಾನದ ತೆರುಗೆಯನ್ನು ವಿಧಿಸುವಾಗ ಈ ಕ್ರಮವನ್ನೇನೂ ಅನುಸರಿಸಲಿಲ್ಲ. ಡಿಸ್ಟ್ರಿಕ್ಟ್

ಡಿ|| ಕಮಿಷನರೇ ಮೊದಲಾದವರ ಅಧಿಕಾರಕ್ಕೊಳಪಟ್ಟ ಆ ಬೋರ್ಡುಗಳಲ್ಲಿ ಇದರ ಅವಸ್ಥೆಯೇನಾಗುವುದೋ ತಿಳಿಯಲಿಲ್ಲ. ಮುಖ್ಯವಾಗಿ ಅಲ್ಲಿಯ ಸಭಾಸದರುಗಳು ಗ್ರಾಮಾಂತರದ ಜನರ ವಿದ್ಯಾದಾರಿದ್ರ್ಯಪರಿಹಾರದ ಕಡೆಗೆ ಮನಸ್ಸಿತ್ತು ಅಭಿಪ್ರಾಯ ಕೊಡುವುದಾದರೆ ಅಲ್ಲಿಯೂ ಈ ಸಮಸ್ಯೆಯು ಅನುಕೂಲವಾಗಿಯೇ ಪರ್ಯವಸಾನಗೊಳ್ಳುವುದರಲ್ಲಿ ಸಂಶಯವಿಲ್ಲ.

THE PRESIDENT OF THE BANGALORE CITY MUNICIPALITY.

We read in the Bangalore Daily Post that there are two candidates for election as President of the Bangalore City Municipality viz. Mr. B. K. Garudachar and Mr. M. Subbayya, B.A. Three years ago when Mr. Garudachar was elected he was elected unanimously. All the non-Brahmans present joined the Brahmans and elected him with one voice and that was the good sense of the non-Brahman representatives. He has done his term and now Mr. Subbayya wants to do his service as President. Will not Brahman members now join hands with the non-Brahmans to unanimously elect Mr. Subbayya whose qualifications in general education and in experience as a Commissioner are second to none? Here is an occasion for the manifestation of that good will on the part of the Brahmans which they have so much advertised. Would it be right for Mr. Garudachar to compete with Mr. Subbayya? Would it not be right to expect the Brahman Commissioners to show the same kind of consideration towards a non-Brahman candidate to Presidentship as the latter showed to former three years ago? Here is the test and before the 5th Nov. 1921 we hope to hear Mr. Garudachar withdrawing in favour of Mr. Subbiah. If he does not, the inference is clear. Here is a representative of the people who has served the Municipality for so many years with distinction and we have no doubt that the Brahman representatives will rise up to the occasion and manifest their liberal spirit. Wait and see.

THE CHANGE OF TACTICS.

Of course the Dewan's closing address has satisfied the people of Mysore. He has spoken from the bottom of his heart. It is not like any of those autocratic addresses of the past. Every word is ringing with a feeling of sympathy and a sense of appreciation of the aspirations of the people. The discussions were not confined to a few favorites as it was the case in the previous years. They were shared by one and all and the Dewan was glad to notice this fact. He was equally glad that they were characterised by moderation and good will. The emphatic assurance of the Dewan that the efficiency of Government Service will not at all be impaired by the employment of qualified men from all classes of people is pleasing to all the parties concerned. The opening and the closing addresses do alike resound with profound feelings of anxiety for the well being and advancement of the loyal subjects of His Highness the Maharaja and for their uplift from a condition of servility to one of just equilibrium.

But will all that be in vain? We read with great disappointment the correspondence in English in the Wealth of Mysore of the issue for the 25th instant. Five days have not elapsed the tirade has begun. It is numbered I and it looks to be the first of the series. From Tumkur a new weekly has come out with the same tirade. The tactics have changed and the attitude is worse. From editorial notes to correspondence are conveyed the expressions of discontentment. The attacks are direct and indirect. The Dewan Saheb is now assailed through his secretary. The secretary is made responsible for the entire closing address as if the administrator is only a phonograph. This is too severe. The head of the administration is treated like a school boy, and his secretary is thrust mercilessly. Does this correspondent really believe all that he says? Where is the wickedness? The attack on the secretary is personal. And at the same time there is a slur on the ability of the Dewan. Is this tolerable? Would we be right to look on this state of outburst of disaffection with folded arms? We say as a loyal organ of the sovereign and as a mouthpiece of the people that it is intolerable. The few people to guard whose interests these organs—the daily of Mysore and the weekly of Tumkur—appear to exist and they are avowedly such—are suffering from a surplus of conceit and intelligence which arose from a surplus of conferences of the last few years. It is really intolerable to countenance such direct attacks on officers of the State simply because the vested interests are likely to be affected. It will be culpable and weakness to keep quiet and to allow this kind of matter to be served for the people to read.

We thought that with the soothing address of the Dewan, the graceless attack had come to an end and that there were no more defences to put up. The nameless correspondent—not even X-Y-Z is—is bare-faced. The wording is rough and this is a specimen of culture—culture alike German. We fear we are at the threshold of another battle-field in which the tactics are different from those which were in use in the recent campaign.

What graceless attack and how suddenly the tactics have changed!! We invite the attention of the Government to this English correspondence and to the Kannada leader in the same issue of the Wealth of Mysore and we have no doubt that the vision point of this daily and of its kin the Tumkur weekly will be made clear and we hope that the Government will do what is right to put an end to such irresponsible publications which if not checked in time, we are afraid will tend to weaken the hands of our righteous Government. For the first time in the history of the Representative Assembly of Mysore, the real representatives of the people had freedom to talk and that the privileged in the past grudge. And thus the change of tactics.

ಒಳದೇಶದ ವೃತ್ತಾಂತಗಳು

ಬರುವ ತಾ|| ೧೫ ರಲ್ಲಿ ನಿಯಮನಿರ್ಮಾಣ ಸಭೆಯು ಬೆಂಗಳೂರಲ್ಲಿ ಜರಗುವುದಾಗಿದೆ.

ದಿವಾನರೇ ಮೊದಲಾದ ಅಧಿಕಾರಿಗಳೆಲ್ಲಾ ಕಳೆದವಾರ ಬೆಂಗಳೂರಿಗೆ ದಯಮಾಡಿಸಿದರು.

ಶ್ರೀಮನ್ ಮಹಾರಾಜರು ನೀಲಗಿರಿಯಿಂದ ರಾಜಧಾನಿಗೆ ನೆನ್ನೆಯದಿನ ದಯಮಾಡಿಸುವವರಾಗಿದ್ದರು.

ದೀಪಾವಳಿ ಹಬ್ಬದ ನಿಮಿತ್ತದಿಂದ ನಾಳೆಯದಿನ ಎಲ್ಲ ಕೋರ್ಟುಕಚೇರಿ ಪಾಠಶಾಲೆಗಳಿಗೂ ರಜಾ ಕೊಡಲ್ಪಟ್ಟಿದೆ.

ರಾಜಧಾನಿಯಲ್ಲಿ ಈಗಲೂ ಒಂದೊಂದುದಿನ ೮-೯ ರಂತೆಯೂ ಒಂದೊಂದು ದಿನ ೨-೩ ರಂತೆಯೂ ಪ್ಲೇಗು ಮರಣಗಳಾಗುತ್ತಿವೆ.

ಸರ್ಕಾರದವರು ಕೇಳಿದ್ದ ಸಾಲಕ್ಕಿಂತಲೂ ಹೆಚ್ಚಾಗಿಯೇ ದರಖಾಸ್ತುಗಳು ಬಂದಿರುವುದರಿಂದ ಸಾಲ ತೆಗೆದುಕೊಳ್ಳುವುದನ್ನು ಕ್ಲಪ್ತಕಾಲಕ್ಕೆ ಮೊದಲೇ ನಿಲ್ಲಿಸಿಬಿಟ್ಟಿರುವರು.

ಮದ್ಯಪಾನನಿರೋಧಕರಲ್ಲಿ ಅಗ್ರೇಸರರಾದ ಪುಸ್ಸಿಫೂಟ್ ಜಾನ್‌ಸನ್‌ರವರೆಂಬ ಅಮೇರಿಕನ್ನರು ನಾಳೆಯದಿನ ಬೆಂಗಳೂರಿಗೆ ಬಂದು ಆದಿನ ಒಂದು ಉಪನ್ಯಾಸ ಮಾಡುವವರಾಗಿದ್ದಾರೆಂದು ಕೇಳಿದೆವು.

ಕಳೆದ ಶುಕ್ರವಾರ ರಾಜಧಾನಿಯಲ್ಲಿ ಕೊಂಚ ಮಳೆಯಾಯಿತು, ಮತ್ತು ಇನ್ನೂ ಬರುವ ಚಿನ್ಹೆಯಿದೆ. ಇದರಂತೆ ಎಲ್ಲ ಕಡೆಯೂ ಆಗಿದ್ದರೆ ಒಣಗುತ್ತಿರುವ ರಾಗಿ ಪೈರಿಗೆ ಬಹಳ ಅನುಕೂಲವಾಗುತ್ತದೆ.

ಬೆಂಗಳೂರು ಮ್ಯುನ್ಸಿಪಾಲಿಟಿಯ ಅಧ್ಯಕ್ಷರ ಆರಿಸುವಿಕೆಯು ಬರುವ ತಿಂಗಳು ತಾ|| ೫ ರಲ್ಲಿ ನಡೆಯುವುದು. ಅದಕ್ಕೆ ಮ|| ಎಂ ಸುಬ್ಬಯ್ಯನವರೂ ಮ|| ಬಿ. ಗರುಡಾಚಾರ್ಯರೂ ಉಮೇದುವಾರರಾಗಿ ನಿಂತಿದ್ದಾರೆ.

ರಾಜಧಾನಿಯ ನಿಲ್ದಾಣದಲ್ಲಿ ಬರುವ ನವಂಬರ್ ತಿಂಗಳಿಂದ ಪ್ಲಾಟ್‌ಫಾರಂ ಟಿಕೆಟ್ಟುಗಳನ್ನು ೧ ಆಣೆಯ ಬೆಲೆಗೆ ಕೊಂಡು ಒಳಕ್ಕೆ ಪ್ರವೇಶಮಾಡಬೇಕೆಂಬ ನಿಯಮವು ಏರ್ಪಟ್ಟಿದೆ. ಪ್ರಯಾಣಿಕರ ಟಿಕೆಟ್ಟನ್ನು ಇಟ್ಟುಕೊಂಡಿರುವವರಿಗೆ ಈ ನಿರ್ಬಂಧವಿಲ್ಲ.

ಮದರಾಸು ಹೈಕೋರ್ಟು ಮುಖ್ಯ ನ್ಯಾಯಮೂರ್ತಿಗಳಾದ ಜಸ್ಟಿಸ್‌ವಲಿಂಗ್‌ರವರು ನಮ್ಮ ಚೀಫ್‌ಕೋರ್ಟು ನ್ಯಾಯಮೂರ್ತಿಗಳಾಗಿ ತರಲ್ಪಡುವರೆಂದೂ, ಜಸ್ಟಿಸ್ ಮಿಲ್ಲರ್‌ರವರು ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾಗುವರೆಂದೂ ವದಂತಿಯಿದೆ.

ಚಾಮರಾಜನಗರದ ತಾ|| ಅಮಲ್ದಾರರಾಗಿರುವ ಮಿ|| ಅಬ್ದುಲ್ ಕಾಲಕ್‌ರವರು ರಾಜಧಾನಿಯ ಪೋಲೀಸ್ ಸೂಪರಿಂಟೆಂಡೆಂಟರಾಗಿ ಬರುವರೆಂಬ ವಾರ್ತೆಯಿದೆ. ಇಂಥ ನಿಸ್ಪೃಹರೂ ಚಟುವಟಿಕೆಯುಳ್ಳವರೂ ಆದ ಆಫೀಸರು ನಮ್ಮ ಮ್ಯುನ್ಸಿಪಾಲಿಟಿಗೆ ದೊರೆತರೆ ಅದರೊಳಗಣ ಹೊಲಸೆಲ್ಲಾ ನಿವೃತ್ತಿಯಾದೀತು.

ಮಿಲ್ಲರ್‌ಕಮಿಟಿ ವರದಿಯಮೇಲಣ ಅಪ್ಪಣೆಯು ಪ್ರಜಾಪ್ರತಿನಿಧಿಸಭೆಯಲ್ಲಿ ಕೂಲಂಕಷವಾಗಿ ಚರ್ಚಿತವಾಗಿ ತೀರ್ಮಾನವಾಗಿದ್ದರೂ ಅದರ ಮೇಲಣ ಹಗೆಯನ್ನು ಸಂಪದಭ್ಯುದಯಕರ್ತರು ಇನ್ನೂ ಬಿಡಲಿಲ್ಲ. ಈ ವರದಿಯಮೇಲೆ ಗಲಾಟೆಯು ಹುಟ್ಟುವುದಕ್ಕೆ ಈ ಪತ್ರಿಕಾಕರ್ತರೇ ಕಾರಣರೆಂಬುದನ್ನು ಪ್ರಜೆಗಳೂ ಪ್ರಭುತ್ವದವರೂ ಕೂಡ ತಿಳಿದುಕೊಂಡರು. ಹೀಗಿರುವಾಗ ಅದರ ವಿಷಯವನ್ನು ಮರಳಿಮರಳಿ ಎತ್ತಿ ಆಡಿ ಜನರ ಮನಸ್ಸಿನಲ್ಲಿ ಉಂಟಾಗಿರುವ ಶಾಂತಿಯನ್ನು ಅಳಿಸುವುದಕ್ಕೆ ಈ ಪತ್ರಕರ್ತರು ಈಗಲೂ ಮಾಡುತ್ತಿರುವ ಪ್ರಯತ್ನವನ್ನು ಪ್ರಭುತ್ವದವರು ಏತಕ್ಕೆ ನಿರೋಧಿಸಬಾರದೋ ತಿಳಿಯಲಿಲ್ಲ.

ಕಳೆದ ಸಂಚಿಕೆಯಲ್ಲಿ ದಿವಾನರು ಕ್ಷಮಾಪಣೆ ಕೇಳಿದರೆ? ಎಂಬ ಶಿರೋಲೇಖನದಿಂದ ನಾವು ಬರೆದಿದ್ದ ಲೇಖನವನ್ನು ಕುರಿತು ಕಳೆದ ತಾ|| ೨೬ ನೆ ಸಂಪದಭ್ಯುದಯದಲ್ಲಿ ಒಬ್ಬ ಪ್ರತಿನಿಧಿಸಭೆಯ ಮೆಂಬರು ಎಂಬ ಅಂಕಿತದಿಂದ ಒಂದು ಲೇಖನವು ಬಂದಿದೆ. ಅದರಲ್ಲಿ ಉಕ್ತವಾಗಿರುವ ಅಭಿಪ್ರಾಯಗಳನ್ನೂ, ಅದರ ಕಡೆಯಲ್ಲಿ "ಸಂಪದಭ್ಯುದಯ ಪತ್ರಿಕಾಕರ್ತರು ಯಾವಾಗಲೂ ದಿವಾನರ ಮೇಲಾಗಲಿ ಸರ್ಕಾರದವರ ಮೇಲಾಗಲಿ ಆಕ್ಷೇಪಣೀಯವಾದ ಯಾವ ಅಂಶವನ್ನೂ ಬರೆಯುವುದಿಲ್ಲ" ಎಂದು ಬರೆದಿರುವುದನ್ನೂ ಆ ಪತ್ರಿಕಾಕರ್ತರೇ ಆಡಿದ್ದ ಪಕ್ಷದಲ್ಲಿ ಅದಕ್ಕೆ ತಕ್ಕ ಉತ್ತರವನ್ನು ನಾವು ಕೊಡುತ್ತಿದ್ದೆವು.

ಪ್ರಜಾಪ್ರತಿನಿಧಿಸಭೆ.

(ಮಿಲ್ಲರ್‌ಸಂಘದ ವರದಿಯಮೇಲಣ ಚರ್ಚೆ.)

ತಾ|| ೧೬-೧೦-೨೧ನೆ ಮಧ್ಯಾಹ್ನ ೧೨ ಗಂಟೆಗೆ ದಿವಾನರ ಅಧ್ಯಕ್ಷತೆಯಲ್ಲಿ ಸಭೆ ಕೂಡಿದಕೂಡಲೇ ಮ|| ಕೆ. ಟಿ. ಶೇಷಯ್ಯನವರು–ಮಿಲ್ಲರ್‌ಕಮಿಟಿ ರಿಪೋರ್ಟಿನ ಮೇಲಣ ಚರ್ಚೆಯು ಈಹೊತ್ತೇ ಆದರೆ ಅನುಕೂಲ. ಆದರೆ ಈ ವಿಷಯದ ಚರ್ಚೆಯಲ್ಲಿ ತೀರ್ಮಾನವನ್ನು ಓಟುಗಳಮೇಲೆ ನಿರ್ಧಾರಮಾಡಕೂಡದು. ಪ್ರತಿಯೊಂದು ವಿಷಯಕ್ಕೂ ಹಾಗೆ ಮಾಡುತ್ತಾ ಇಲ್ಲ ಎಂದರು. ಮ|| ಸಿ. ವಾಸುದೇವರಾಯರವರು—ಈ ಸಬ್ಜೆಕ್ಟನ್ನೇ ಮೊದಲು ತೆಗೆದುಕೊಳ್ಳಬೇಕೆಂಬುದು ಶೇಷಯ್ಯನವರೊಬ್ಬರ ಅಭಿಪ್ರಾಯವೇ ಆಗಿದೆ; ನಮ್ಮದೆಲ್ಲಾ ಅಲ್ಲ. ದಿವಾನರಿಗೆ ಸೂಕ್ತತೋರಿದಂತೆ ಸಬ್ಜೆಕ್ಟುಗಳನ್ನು ತೆಗೆದುಕೊಳ್ಳಬಹುದು.

ಮ|| ಎಚ್. ಕೃಷ್ಣಶಾಸ್ತ್ರಿಗಳು—ನಾನೂ ವಾಸುದೇವರಾಯರ ಮತವನ್ನೇ ಅನುಮೋದಿಸುತ್ತೇನೆ. ಅನುಕ್ರಮವಾಗಿ ಮೊದಲಿಂದಲೂ ವಿಷಯಗಳ ಚರ್ಚೆಯನ್ನು ಆರಂಭಿಸಬಹುದು.

ಮ|| ಸಿ. ರಸೂಲ್ಖಾನರವರು—ಮೊದಲಿಂದಲೂ ಕ್ರಮವಾಗಿ ವಿಷಯಗಳ ಚರ್ಚೆಯನ್ನು ನಡೆಯಿಸಿಕೊಂಡು ಹೋಗಬೇಕು. ಎಲ್ಲಾ ಮೆಂಬರುಗಳೂ ಕೊನೆಯವರೆಗೂ ಇದ್ದು ಎಲ್ಲಾ ಸಬ್ಜೆಕ್ಟುಗಳನ್ನೂ ಮುಗಿಸಬೇಕು.

ಮ|| ಅನಂತಯ್ಯನವರು—ಭಾನುವಾರವೂ ಸಭಾಕಾರ್ಯವನ್ನು ನಡೆಯಿಸಬೇಕು. ಸೋಮವಾರ ಕೋರ್ಟುಕೆಲಸಗಳಿಗೆ ನಾವುಗಳು ಹೋಗಬೇಕಾಗುತ್ತದೆ.

ಸಭಾಧ್ಯಕ್ಷರು—ಕೆಲವರು ಯೂರೋಪಿಯನ್ ಆಫೀಸರೂ ಮೆಂಬರುಗಳೂ ಇದ್ದಾರೆ. ಅವರಿಗೆಲ್ಲಾ ಅನನುಕೂಲವಾಗುತ್ತದೆ.

ಮಿ|| ಅಬ್ಬಾಸ್ ಖಾನರು—೩ ಗಂಟೆಯವರೆಗೆ ಅನುಕ್ರಮವಾಗಿ ಜನರಲ್ ಸಬ್‌ಜೆಕ್ಟುಗಳ ಚರ್ಚೆಯನ್ನು ನಡೆಯಿಸಿ ೩|| ಗಂಟೆಯಮೇಲೆ ಮಿಲ್ಲರ್‌ಕಮಿಟಿ ರಿಪೋರ್ಟು ಚರ್ಚೆಯನ್ನು ಇಟ್ಟುಕೊಳ್ಳಬಹುದು.

ಎಲ್ಲರೂ ಇದಕ್ಕೆ ಒಪ್ಪಿದರು. ಬಳಿಕ ಆದಿಯಿಂದ ಸಾರ್ವತ್ರಿಕ ವಿಷಯಗಳ ಚರ್ಚೆಗೆ ಆರಂಭವಾಗಿ ೨೬ ವಿಷಯಗಳು ಮುಗಿದುವು.

ಫಲಾಹಾರಾನಂತರ ೩|| ಗಂಟೆಗೆ ಸಭೆಕೂಡಿತು.

ಮ|| ಎಂ. ವೆಂಕಟಕೃಷ್ಣಯ್ಯನವರು—ಮಿಲ್ಲರ್‌ಕಮಿಟಿ ರಿಪೋರ್ಟು ಗೆಜೆಟ್ಟಿನಲ್ಲಿ ಪ್ರಕಟವಾಗಿತ್ತು; ಅನೇಕರು ಅದನ್ನು ಇನ್ನೂ ಚೆನ್ನಾಗಿ ನೋಡಿಲ್ಲ. ಆದಕಾರಣ ಇದರ ಚರ್ಚೆಯನ್ನು ಮುಂದಕ್ಕಿಟ್ಟುಕೊಂಡರೆ ಅನುಕೂಲ.

ಮಿ|| ಅಬ್ಬಾಸ್ ಖಾನರು—ಶ್ರೀಮನ್ಮಹಾರಾಜರವರು ಕೊಟ್ಟಿರುವ ಅಪ್ಪಣೆಯನ್ನೇ ಎಲ್ಲರೂ ಶಿರಸಾ ವಹಿಸಿ ನಡೆದುಕೊಂಡರೆ ಸಂತೋಷ. ಹಾಗಲ್ಲದೆ ಚರ್ಚೆ ನಡೆಯಿಸಲೇಬೇಕಾಗಿದ್ದರೆ ಈಹೊತ್ತೇ ನಡೆಯಿಸಬೇಕು. ನಾಳೆನಾಡಿದ್ದು ಪ್ರತಿನಿಧಿಗಳೆಲ್ಲಾ ಪ್ಲೇಗಿನಭಯದಿಂದ ಹೊರಟುಹೋಗುತ್ತಾರೆ.

ದಿವಾನರು—ಮೊದಲೇ ಚರ್ಚೆನಡೆದು ಈಗ ನಡೆಯಿಸಬೇಕೆಂದು ಗೊತ್ತಾಗಿರುವುದರಿಂದ ಈಗಲೇ ನಡೆಯಿಸುವುದು ಯುಕ್ತವಾಗಿದೆ.

ಚರ್ಚೆಗೆ ಆರಂಭವಾಯಿತು.

ಟಿ. ಕೆ. ಶೇಷಯ್ಯನವರು— ಮಿಲ್ಲರ್‌ಕಮಿಟಿ ರಿಪೋರ್ಟಿನಮೇಲಣ ಸರ್ಕಾರಿ ಅಪ್ಪಣೆಯನ್ನು ತೆಗೆದುಬಿಡಬೇಕು, ತಪ್ಪಿದರೆ ಸಹಾಯನಿರಾಕರಣ ಮಾಡಬೇಕು ಎಂಬುದು ನಮ್ಮಭಿಪ್ರಾಯವಲ್ಲ. ಬ್ರಾಹ್ಮಣರಿಗೆ ಸರ್ಕಾರಿಕೆಲಸ ಹೋಗಿಬಿಟ್ಟಿತು ಅವರಿಗೆ ಅನನುಕೂಲವಾಯಿತು ಎಂಬಭಿಪ್ರಾಯದಿಂದ ನಾನು ಇದರ ಚರ್ಚೆಯನ್ನು ಮಾಡುವುದಿಲ್ಲ. ಅವರಿಗೆ ಸರ್ಕಾರಿಕೆಲಸ ತಪ್ಪಿಹೋಗುವುದೇ ಕ್ಷೇಮಕರ; ಅದೇ ನನಗೆ ಇಷ್ಟ. ಯಾರಿಗೆ ಯೋಗ್ಯತೆಯಿದೆಯೋ ಅವರಿಗೆ ಕೆಲಸ ಕೊಡಬೇಕೆಂಬುದೇ ರಾಜನೀತಿ. ಪಾಶ್ಚಾತ್ಯದೇಶಗಳಲ್ಲೂ ಹಾಗೆಯೇ ಇದೆ. ಮತಜಾತಿಭೇದಗಳ ಮೇಲೆ ಹೋಗುವುದಿಲ್ಲ. ಈ ಪದ್ಧತಿಯು ನಮ್ಮಲ್ಲಿ ಹಿಂದೂ ಇರಲಿಲ್ಲ; ಯಾವದೇಶದಲ್ಲೂ ಇರುವುದಿಲ್ಲ.

ಕೋಮುವಾರು ಪ್ರಾತಿನಿಧ್ಯವು ಊಟದಲ್ಲೇ ಹೊರತು ರಾಜಕೀಯಸಂದರ್ಭದಲ್ಲಿಲ್ಲ. ಬ್ಯಾಕ್ವರ್ಡ್‌ಕಮ್ಯುನಿಟಿ ಫಾರ್ವರ್ಡ್ ಕಮ್ಯುನಿಟಿ ಎಂಬುದನ್ನು ಯಾವ ಆಧಾರದಮೇಲೆ ಮಾಡಿದ್ದಾರೋ ನನಗೆ ಗೊತ್ತಾಗುವುದಿಲ್ಲ. ಸರ್ಕಾರಿ ಉದ್ಯೋಗಗಳಿಗೆ ಸೇರದಿದ್ದಮಾತ್ರದಿಂದಲೇ ಅವರನ್ನು ಬ್ಯಾಕ್ವರ್ಡ್‌ಕಮ್ಯುನಿಟಿ ಎಂದು ಹೇಳಬಹುದೆ? ಅಧಿಕಾರ ಬರುವುದರಿಂದ ದೊಡ್ಡಸ್ತಿಕೆ ಬರುತ್ತದೆಂದು ತಿಳಿದುಕೊಳ್ಳುವ ಕಾಲವು ಇದಲ್ಲ. ದೇಶೀಯನು ಯಾವನೇ ಆಗಲಿ ಅಧಿಕಾರಕ್ಕೆ ಬರಬಹುದೆಂಬ ಸಾಮಾನ್ಯ ನಿಯಮವನ್ನು ಮಾಡಬಹುದೇ ಹೊರತು ಜಾತಿ ಮೊದಲಾದ ಭೇದಗಳಿಗೆ ಪ್ರಾಶಸ್ತ್ಯ ಕೊಡುವುದು ಸರಿಯಲ್ಲ. ಅಪಾಯಿಂಟ್‌ಮೆಂಟಿಗೆ ತಕ್ಕಷ್ಟು ಕ್ವಾಲಿಫಿಕೇಷನ್ನಿದ್ದರೆ ಸಾಕೆಂದು ಅದನ್ನು ಖಂಡಿತವಾಗಿ ನಿಷ್ಕರ್ಷಿಸಲು ಯಾರಿಂದಲೂ ಸಾಧ್ಯವಲ್ಲ, ಈಗ ಉದ್ಯೋಗಸ್ಥರ ಯೋಗ್ಯತೆಯು ೧ಕ್ಕೆ ೪ ರಷ್ಟಿರಬೇಕಾಗಿರುವಾಗ ಹೆಚ್ಚು ಮೇಧಾಶಕ್ತಿಯನ್ನು ಗಮನಿಸಬೇಕೇ ಹೊರತು ಬೇರೆ ಯೇನನ್ನೂ ನೋಡಕೂಡದು. ವೈಶ್ಯರಿಗೆ ಹಣದ ಬಂಡವಾಳವು ಹೇಗೋ ಹಾಗೆ ಬ್ರಾಹ್ಮಣರಿಗೆ ಮೇಧಾಶಕ್ತಿಯೇ ಬಂಡವಾಳ. ಅವರು ಸ್ವಕೀಯ ಪುರುಷಪ್ರಯತ್ನದಿಂದ ವಿದ್ಯಾ ಸಂಪಾದನೆ ಮಾಡುತ್ತಾರೆ. ಈ ತತ್ವವನ್ನಿಟ್ಟುಕೊಂಡರೆ ೧ ಕಾಫಿ ತೋಟಕ್ಕೆ ಯಾರಾದರೂ ದರಖಾಸ್ತು ಕೊಟ್ಟರೆ ಮೊದಲು ಬ್ರಾಹ್ಮಣನಿಗೇ ಕೊಡಬೇಕೆಂದು ಹೇಳಬೇಕಾಗುತ್ತದೆ. ಏಕೆಂದರೆ ಆ ವ್ಯವಸಾಯದಲ್ಲಿ ಅವರು ಹಿಂದುಳಿದಿದ್ದಾರೆ. ಪರ್ಸಂಟೇಜನ್ನು ಅನುಸರಿಸಿ ಉದ್ಯೋಗ ಕೊಡಬೇಕೆಂದರೆ ದೇಶದಲ್ಲಿ ತುಂಬಾ ಅನರ್ಥವಾಗುತ್ತದೆ. ದೇಶದಲ್ಲಿ ಬ್ರಾಹ್ಮಣೇತರ ಪ್ರಜಾಸಂಖ್ಯೆಯೇ ಹೆಚ್ಚು. ಅದನ್ನು ನೋಡಿ ತಕ್ಕ ಯೋಗ್ಯತೆಯಿಲ್ಲದ ಮನುಷ್ಯರನ್ನು ಕೆಲಸಕ್ಕೆ ತೆಗೆದುಕೊಂಡರೆ ಸರ್ಕಾರದ ಕಾರ್ಯವು ಕೆಡುತ್ತದೆ. ಮತ್ತು ಇತರರು ಸರ್ಕಾರಿ ಉದ್ಯೋಗಗಳಲ್ಲಿ ಸೇರಿದರೆ ಸ್ವಲ್ಪ ಸಂಬಳದಲ್ಲಿ ತೃಪ್ತಿಯಿಲ್ಲದೆ ಬಿಟ್ಟುಬಿಡುತ್ತಾರೆ. ಬ್ರಾಹ್ಮಣರಿಗೆ ಇನ್ನಾವುದೂ ಮಾರ್ಗವಿಲ್ಲದಿರುವುದರಿಂದ ಸಿಕ್ಕಿದ ಸಂಬಳಕ್ಕೆ ಸೇರಿಕೊಳ್ಳುತ್ತಾರೆ. ಈಗಿನ ಕಾಲದಲ್ಲಿ ಒಬ್ಬ ಬ್ರಾಹ್ಮಣೇತರನು ಲೋ|| ಪರೀಕ್ಷೆ ಕೊಟ್ಟರೆ ದಿವಾನಗಿರಿಯಾಗಿ ಹೋಗುತ್ತದೆಂದು ಭ್ರಾಂತಿಪಟ್ಟುಕೊಂಡಿದ್ದಾರೆ. ತಮ್ಮ ಭಾಷಣದಲ್ಲಿ—ನಾನೇನೂ ಈ ವಿಧಿಯನ್ನು ಹೊಸದಾಗಿ ಮಾಡಲಿಲ್ಲ; ಸರ್ ಕೆ. ಶೇಷಾದ್ರಿ ಅಯ್ಯರು ಮಾಡಿದರೆಂದು ಅಪ್ಪಣೆಕೊಡಿಸಿದ್ದೀರಿ. ಅವರು ದೊಡ್ಡವರಾದರೂ ಅವರ ಈ ತೆರದ ತತ್ವವು ಸೂಕ್ತವಾದುದಲ್ಲ. ಮತ್ತು ಆಗಿನ ಕಾಲಕ್ಕಿಂತಲೂ ಈಗಿನ ಕಾಲಸ್ಥಿತಿ ಎಷ್ಟೋ ಬದಲಾಗಿಹೋಗಿದೆ. ಅವರು ಮಾಡಿದ್ದರೂ ಇರಬಹುದು. ಈಗ್ಗೆ ಅನುಕೂಲವಾದುದಲ್ಲ. ಮಹಮ್ಮದೀಯರ ಅಡ್ರೆಸ್ಸಿನಲ್ಲಿ ನ್ಯಾಷನಲ್ ಕಾಂಗ್ರಸ್ಸಿನವರು ಮುಸಲ್ಮಾನರಿಗೆ ಲೆ|| ಕೌನ್ಸಿಲುಗಳಲ್ಲಿ ಬೇರೆಸೀಟು ಕೊಡಲು ಒಪ್ಪಿದ್ದರಿಂದ ಹಿಂದೂ ಮುಸಲ್ಮಾನರಲ್ಲಿ ಪರಸ್ಪರ ಏಕಮತ್ಯವುಂಟಾಯಿತೆಂದು ಹೇಳಿದ್ದಾರೆ. ಅದು ಇಲ್ಲಿಗೆ ಅನ್ವಯಿಸುವುದಿಲ್ಲ. ಮಾಂಟೂಗ್‌ರವರು ಕೂಡ ಯೋಗ್ಯತೆಯಿಂದ ಸ್ಥಾನವನ್ನು ಸಂಪಾದಿಸಬೇಕೆಂದು ಹೇಳಿದ್ದಾರೆ. ಲೆ|| ಕೌನ್ಸಿಲಿನಲ್ಲಿ ಮ|| ಗಡ್ಲ ಬಸಪ್ಪನವರು ಒಂದೇ ಸಂಗಡದವರೇ ಸರ್ಕಾರಿ ನೌಕರಿಯಲ್ಲಿ ಹೆಚ್ಚಿಕೊಂಡರೆ ಅನರ್ಥವೆಂದೂ ಪ್ರತಿಪಕ್ಷವೂ ಇರಬೇಕೆಂದೂ ಹೇಳಿದ್ದಾರೆ. ಅದರ ಅರ್ಥವೇನೋ ನನಗೆ ತಿಳಿಯಲಿಲ್ಲ. ಇದು ಯಾವ ಸಿದ್ಧಾಂತವೋ! ಸೆಂಟರಲ್ ರಿಕ್ರೂಟ್‌ಮೆಂಟ್ ಬೋರ್ಡಿನಲ್ಲಿ ಬ್ರಾಹ್ಮಣೇತರ ಕೌನ್ಸಿಲರೊಬ್ಬರು ಪ್ರಸಿಡೆಂಟರಾಗಿರಬೇಕೆಂದು ನಿರ್ಣಯವಾಗಿದೆ. (ದಿವಾನರು-ಹಾಗೇನೂ ಇಲ್ಲ; ಒಬ್ಬ ಕೌನ್ಸಿಲರು ಪ್ರಸಿಡೆಂಟರಾಗಿರಬೇಕೆಂದಿದೆ) ಈಗ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಜಗಳವೆ ಹುಟ್ಟಿ ಬಹಳ ಅನರ್ಥದಾಯಕವಾಗಿದೆ. ಆದಕಾರಣ ಈ ಮಿಲ್ಲರ್ ಕಮಿಟಿ ರಿಪೋರ್ಟನ್ನೂ ಅದರ ಮೇಲಣ ಅಪ್ಪಣೆಯನ್ನೂ ವಾಪಸ್ ತೆಗೆದುಕೊಳ್ಳಬೇಕು.

ಮ|| ಗೋಪಾಲಸ್ವಾಮಯ್ಯರು—ದೇವರ ಸೃಷ್ಟಿಯಲ್ಲಿ ನಮ್ಮ ದುರದೃಷ್ಟದಿಂದ ಕಡಿಮೆಯ ಸಂಖ್ಯಾಕರಾಗಿ ಹುಟ್ಟಿರುವವರನ್ನು ಬೇರೆಮಾಡಿ, ಅಧಿಕ ಸಂಖ್ಯಾಕರಾಗಿರುವ ೫೭ ಲಕ್ಷ ಜನರನ್ನು ಒಂದುಗುಂಪು ಮಾಡಿರುವುದು ಯಾವನ್ಯಾಯ? ಆಸ್ಪತ್ರೆ ದೊಡ್ಡದೊಡ್ಡ ಕಾಲೇಜು ಮೊದಲಾದುವುಗಳು ದೊಡ್ಡದೊಡ್ಡ ಪಟ್ಟಣಗಳಲ್ಲಿರಬೇಕೇ ಹೊರತು ಗ್ರಾಮಾಂತರಗಳಲ್ಲಿಡುವುದಿಲ್ಲ. ಗ್ರಾಮಾಂತರದಲ್ಲಿರುವವರನ್ನು ಪಟ್ಟಣಗಳಿಗೆ ಹೋಗಿ ಓದಬೇಡಿರೆಂದು ಯಾರು ಹೇಳಿದರು? ಇಂಟರ್ಪಲೇಷನ್ನಿನಲ್ಲಿ ಬಂದಿರುವ ಒಕ್ಕಲಿಗ ವಿದ್ಯಾವಂತರ ಸಂಖ್ಯೆಯನ್ನು ನೋಡಿ. ಹೀಗೆ ವಿದ್ಯೆಯಲ್ಲಿ ಇಷ್ಟು ಹೀನಸ್ಥಿತಿಯಲ್ಲಿರುವವರನ್ನು ೭ ವರ್ಷಗಳಲ್ಲಿ ಸೇಕಡಾ ಅರ್ಧ ಸರ್ಕಾರಿ ಉದ್ಯೋಗಗಳಿಗೆ ಭರ್ತಿಮಾಡಬೇಕೆಂದು ಯಾವ ತತ್ವದಮೇಲೆ ನಿರ್ಧರಿಸಿದರೋ ತಿಳಿಯುವುದಿಲ್ಲ. ಕಮಿಟಿಯಲ್ಲಿ ೭ ಜನ ಮೆಂಬರುಗಳಿದ್ದುದರಿಂದ ೭ ವರ್ಷವೆಂದು ನಿರ್ಧರಿಸಿದರೆಂಬದಾಗಿ ಕೆಲವರು ಹೇಳುತ್ತಾರೆ. ಬ್ಯಾಕ್ವರ್ಡ್ ಕಮ್ಯುನಿಟಿ ಎಂದರೆ ಸೇಕಡಾ ೫ ಕ್ಕೆ ಕಡಿಮೆಯಾಗಿ ವಿದ್ಯಾವಂತರುಳ್ಳ ಜನಸಂಗಡವೆಂದು ಹೇಳಿದ್ದಾರೆ. ಮೊದಲ್ಯಾರರು ಪಿಳ್ಳೆಗಳು ಆ ಸಂಖ್ಯಾಪರಿಮಿತಿಗೆ ಮೀರಿದ್ದರೂ ಅವರನ್ನು ಬ್ಯಾಕ್ವರ್ಡ್ ಕ್ಲಾಸಿನಲ್ಲಿ ಸೇರಿಸಿದ್ದಾರೆ. ಅವರವರಿಗೆ ಪಾರಂಪರ್ಯವಾಗಿ ಬಂದ ಉದ್ಯೋಗಗಳಲ್ಲಿ ಅವರವರು ಹೋಗಬೇಕು. ನಾವು ಮಿಲಟರಿ ಕೆಲಸಗಳಿಗೆ ಹೋಗಬೇಕೆಂದು ಕೇಳುತ್ತೇವೆಯೆ? ಮುಂದೆ ಈ ದೇಶದಲ್ಲಿ ಪ್ಯಾಸ್‌ಮಾಡುವ ಬ್ರಾಹ್ಮಣರಿಗೆ ಸರ್ಕಾರಿನೌಕರಿ ದೊರೆಯುತ್ತದೆಯೆಂಬ ನಂಬಿಕೆಯಿಲ್ಲವೆಂದು ಮಿಲ್ಲರ್‌ಕಮಿಟಿ ರಿಪೋರ್ಟಿನಿಂದ ಅರ್ಥವಾಗುತ್ತದೆ. ೧೯೨೦ ನೆ ಮಾರ್ಚಿ ತಿಂಗಳಲ್ಲಿ ಮದರಾಸ್ ಸರ್ಕಾರದವರು ನಿರ್ಣಯಿಸಿರುವಂತೆ ವಿದ್ಯಾಯೋಗ್ಯತೆಯಮೇಲೆ ಸರ್ಕಾರಿ ಉದ್ಯೋಗ ವಿನಿಯೋಗಮಾಡುವುದಕ್ಕಾಗಿ ಒಂದು ಕಮಿಟಿಯನ್ನೇರ್ಪಡಿಸಬೇಕು. ಮರಿಮಲ್ಲಪ್ಪನವರ ಮತ್ತು ಬನುಮಯ್ಯನವರ ಹೈಸ್ಕೂಲುಗಳೆರಡೂ ರಾಜಧಾನಿಯಲ್ಲಿವೆ. ಇವೆರಡೂ ಪ್ರೈವೇಟ್ ಸ್ಕೂಲುಗಳು. ಅಲ್ಲಿ ಇಬ್ಬರಹೊರತು ಎಲ್ಲರೂ ಬ್ರಾಹ್ಮಣ ಟೀಚರುಗಳೇ ಇದ್ದಾರೆ. ಇದರಿಂದ ಅವರಲ್ಲಿ ಕ್ವಾಲಿಫಿಕೇಷನ್ನು ಎಷ್ಟಿದೆಯೆಂಬುದು ಗೊತ್ತಾಗುತ್ತದೆ. ೧೯೨೦ ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಕ್ಕಲಿಗರು ಓದಿ ಒಪ್ಪಿಸಿದ ಅಡ್ರೆಸ್ಸಿನಲ್ಲಿ—ನಮ್ಮೊಳಗೆ ಎಷ್ಟೋಜನರು ಅಮಲ್ದಾರಿ ಮಾಡುವುದಕ್ಕೆ ಅರ್ಹತೆಯುಳ್ಳವರು ಇದ್ದರೂ ಅವರುಗಳಿಗೆ ಕೆಲಸ ಕೊಡಲಿಲ್ಲವೆಂದು ಹೇಳಿರುತ್ತಾರೆ. ಅಡ್ರೆಸ್ಸುಗಳನ್ನು ಹೀಗೆ ಮನಸ್ವೀಬರೆಯುವುದನ್ನು ನಿರೋಧಿಸಬೇಕು. ಇತರರೆಲ್ಲಾ ವಿದ್ಯಾವಂತರಾಗಿ ತಯಾರಾಗುವವರೆಗೆ ಈ ರಿಪೋರ್ಟಿನಂತೆ ಜಾರಿ ಮಾಡುವುದನ್ನು ನಿಲ್ಲಿಸಬೇಕು. ಬಾಡಿಗೆಗೆ ಕೊಟ್ಟಿದ್ದ ಮನೆಯನ್ನು ಬಿಡಿಸುವುದಕ್ಕೂ ಕೂಡ ೩ ತಿಂಗಳು ವಾಯಿದೆಕೊಡುತ್ತಾರೆ. ಬಹುಕಾಲದಿಂದ ಅನುಭವಿಸಿಕೊಂಡು ಬಂದಿರುವ ಸರ್ಕಾರಿ ನೌಕರಿಗಳನ್ನು ಬ್ರಾಹ್ಮಣರಿಂದ ಕಿತ್ತು ಇತರರಿಗೆ ಕೊಡುವುದಕ್ಕಾದರೂ ಸ್ವಲ್ಪ ಕಾಲ ವ್ಯವಧಿ ಬೇಕಲ್ಲವೇ? ಬ್ರಾಹ್ಮಣರಿಗೆ ವ್ಯಾಪಾರಮೊದಲಾದ ವೃತ್ತಿಗಳೊಳಗೆ ಅಭಿವೃದ್ಧಿಗೆ ಅವಕಾಶ ಪ್ರೋತ್ಸಾಹಗಳನ್ನು ಮಾಡಿಕೊಟ್ಟು ಬಳಿಕ ಅದರಂತೆ ಇತರರಿಗೆ ಸರ್ಕಾರಿ ಸರ್ವೀಸಿನೊಳಗೆ ಅವಕಾಶ ಮಾಡಿಕೊಡಬಹುದು. ಆದಕಾರಣ ನಾವುಗಳು ಬೇರೆ ವೃತ್ತಿಗಳಲ್ಲಿ ಅಭಿವೃದ್ಧಿಗೆ ಬರುವತನಕ ಮಿಲ್ಲರ್‌ಕಮಿಟಿ ರಿಪೋರ್ಟನ್ನು ಜಾರಿಗೆ ತರದೆ ನಿಲ್ಲಿಸಬೇಕು.

ಮ|| ಎಚ್. ಕೃಷ್ಣಶಾಸ್ತ್ರಿಗಳು—ಪ್ರಜೆಗಳಿಗೆ ವೃತ್ತಿಕಲ್ಪನೆಯು ಪ್ರಭುತ್ವಧರ್ಮ. ಪಾಶ್ಚಾತ್ಯ ದೇಶದಲ್ಲಿ ಜೀವನನಿರ್ವಾಹಕ್ಕೆ ಪ್ರಜೆಗಳಿಗೆ ಎಷ್ಟು ಸಲಕರಣೆಗಳಿವೆಯೋ ನಮ್ಮಲ್ಲಿ ಅಷ್ಟಿಲ್ಲ. ಎಲ್ಲಾ ಪ್ರಜೆಗಳೂ ಒಂದೇ ವೃತ್ತಿಯನ್ನು ಅವಲಂಬಿಸುವುದು ದೇಶಕ್ಕೆ ಲಾಭಕರವಲ್ಲ. ಅವರವರೇ ತಮಗೆ ಬೇಕಾದ ವೃತ್ತಿಗಳನ್ನು ಆರಿಸಿಕೊಳ್ಳುವಲ್ಲಿ ಪ್ರಜೆಗಳೊಳಗೆ ವಿಶೇಷಜ್ಞರು ಸಾಧಾರಣಜ್ಞರು ಅಲ್ಪಜ್ಞರು ಎಂಬ ಭೇದಗಳಿರುವಕಾರಣ, ವಿಶೇಷಜ್ಞರು ತಮ್ಮ ವೃತ್ತಿಯನ್ನು ಕಲ್ಪಿಸಿಕೊಂಡು ಇತರರಿಗೂ ಕಲ್ಪಿಸಿಕೊಡುತ್ತಾರೆ. ಸಾಧಾರಣಜ್ಞರು ತಮ್ಮ ವೃತ್ತಿಯನ್ನು ಕಲ್ಪಿಸಿಕೊಳ್ಳುತ್ತಾರೆ. ಅಲ್ಪಜ್ಞರು ತಮ್ಮ ವೃತ್ತಿಯನ್ನು ಕಲ್ಪಿಸಿಕೊಳ್ಳುವುದೇ ಕಷ್ಟ. ಪಾಶ್ಚಾತ್ಯ ದೇಶಗಳಲ್ಲಿ ಈ ಮೂರು ತೆರದವರೂ ಇದ್ದಾರೆ. ಸರ್ಕಾರಿ ಉದ್ಯೋಗಸ್ಥರಲ್ಲದವರು ಸ್ವತಂತ್ರ ವೃತ್ತಿಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಅಲ್ಲಿ ಬೇಕಾದಷ್ಟು ಯಂತ್ರಾಲಯಗಳು ಸೈನ್ಯಶಾಖೆ ಮೊದಲಾದುವುಗಳು ಇವೆ. ಪ್ರಜೆಗಳ ಜೀವನೋಪಾಯಗಳಿಗೆ ಅಲ್ಲಿ ನಾನಾತರದ ಸಾಧನಗಳಿವೆ. ಅಂಥ ಸ್ಥಲಗಳಿಗೆ ನಾನಾತರದ ಜನರೆಲ್ಲಾ ಬೇಕು. ನಮ್ಮ ದೇಶದಲ್ಲಿ ತಕ್ಕಷ್ಟು ಮಿಲಟರಿ ಮೊದಲಾದ ಏರ್ಪಾಟುಗಳಿಲ್ಲ; ದೊಡ್ಡದೊಡ್ಡ ಕಾರ್ಖಾನೆಗಳಿಲ್ಲ. ಸರ್ಕಾರದವರು ಈ ತೆರದ ಏರ್ಪಾಟುಗಳನ್ನು ಕಲ್ಪಿಸದೆ ಇರುವುದರಿಂದ ಓದಿದ ಪ್ರತಿಯೊಬ್ಬ ಮನುಷ್ಯನೂ ಉದ್ಯೋಗವೆಂದರೆ ಸರ್ಕಾರಿ ನೌಕರಿಯೆಂಬುದನ್ನೇ ಮುಖ್ಯವೃತ್ತಿಯನ್ನಾಗಿ ಇಟ್ಟುಕೊಳ್ಳುತ್ತಿದ್ದಾನೆ. ಯಾವ ವಿಧವಾದ ಜಾತಿವಿಮರ್ಶೆಯೂ ಇಲ್ಲದೆ ಇದ್ದ ಈ ಸಂಸ್ಥಾನದಲ್ಲಿ ಯಾರು ವಿದ್ಯಾವಂತರಾಗಿ ಬರುವರೋ ಅಂಥವರೆಲ್ಲಾ ಸರ್ಕಾರಿ ಉದ್ಯೋಗವನ್ನು ಸಂಪಾದಿಸಿಕೊಳ್ಳುತ್ತಿದ್ದರು. ೧೮೭೮–೭೯ ನೆ ವರ್ಷದಿಂದ ಇಂಗ್ಲೀಷ್ ವಿದ್ಯಾಪರೀಕ್ಷೆಗೆ ಪ್ರಾರಂಭವಾದ ನಂತರ ನಮ್ಮಲ್ಲನೇಕರು ಅದರಕಡೆಗೆ ಹೆಚ್ಚಾಗಿ ಗಮನಕೊಟ್ಟು ಪ್ಯಾಸ್‌ಮಾಡಿ ಸರ್ಕಾರಿ ಕೆಲಸಗಳಿಗೆ ಸೇರುತ್ತಾ ಬಂದರು. ಆ ಕಾಲದಲ್ಲಿ ಮೈಸೂರು ದೇಶದ ನಾವೆಲ್ಲರೂ ಒಂದೇ ಆಗಿದ್ದುಕೊಂಡು ಮೈಸೂರು ಪಾರ್ಟಿಯಾಗಿ, ಹೊರಗಣಿಂದ ಇಲ್ಲಿಯ ಉದ್ಯೋಗಗಳಿಗೆ ಬಂದುಸೇರಿದ್ದ ಮದ್ರಾಸುಪಾರ್ಟಿಯವರ ಮೇಲೆ ಬಿದ್ದು ಜಗಳವಾಡುತ್ತಿದ್ದೆವು. ಆಗ ಬ್ರಾಹ್ಮಣ ಸಂಗಡದವರು ತಮಗೆ ವೃತ್ತ್ಯಂತರವಿಲ್ಲದ್ದರಿಂದ ವಿದ್ಯೆಯಲ್ಲಿ ಹೆಚ್ಚಾಗಿ ಪರಿಶ್ರಮಪಟ್ಟು ಅಧಿಕಾರವನ್ನು ಹೆಚ್ಚಾಗಿ ಸಂಪಾದಿಸಿಕೊಂಡರು. ಅದನ್ನು ನೋಡಿ ಈಗ ನಮ್ಮಲ್ಲೇ ಬ್ರಾಹ್ಮಣ-ಅಬ್ರಾಹ್ಮಣ ಭೇದಗಳು ಹುಟ್ಟಿ ಭಿನ್ನಭಾವಗಳಿಗೆ ಅವಕಾಶವಾಗಿರುವುದು. ಇದಕ್ಕೆ ಸರ್ಕಾರದವರೇ ಆಗಲಿ ಪ್ರಜೆಗಳೇ ಆಗಲಿ ಕಾರಣರಲ್ಲ. ಅಂತೂ ಸ್ಥಿತಿಯು ತನ್ನಷ್ಟಿಗೆ ತಾನೇ ಹೇಗೋ ಬೆಳೆದುಹೋಯಿತು. ಆದರೆ ಸರ್ಕಾರದವರೂ ಇದರಲ್ಲಿ ಪ್ರವೇಶಿಸಿದುದರಿಂದ ತಲೆ ಹೊರೆಗೆ ಸುಂಕ ಕೇಳಿದಂತಾಯಿತು. ಕೆಲಸ ಮಾಡತಕ್ಕವನು ತಾನೇ ಬಂದು ನನ್ನನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಬಲಾತ್ಕರಿಸುವುದುಂಟೆ? ತಮ್ಮ ಮರ್ಜಿಗೆ ಬಂದರೆ ಸೇರಿಸಿಕೊಳ್ಳುತ್ತೀರಿ. ಗತಿಸಿದ ಎಂ. ಬಸವಯ್ಯನವರು ಜನಾಂಗ ಪ್ರಾತಿನಿಧ್ಯವಿರಬೇಕೆಂದು ಒಂದು ಪ್ರಾಪೋಜಿಷನ್ನನ್ನು ೧೯೧೮ನೆ ವರ್ಷದಲ್ಲಿ ತಂದರು. ಆಗ ಸರ್ಕಾರದವರು ಆಗಬಹುದು ಎಂದರು. ೧೯೧೫ನೆ ವರ್ಷದಲ್ಲಿ ಆಗಲಾರದು ಎಂದರು. ಆಗಲೇ ಈ ವಿಷಯವನ್ನು ಒಂದು ಕಮಿಟಿಯ ಮೂಲಕ ವಿಮರ್ಶೆಮಾಡಿಸಿಬಿಟ್ಟಿದ್ದರೆ ಆಗಲೇ ಇತ್ಯರ್ಥವಾಗಿ ಹೋಗುತ್ತಿತ್ತು. ೧೯೧೮ನೆ ವರ್ಷದಲ್ಲಿ ಆ ಜನರು ಶ್ರೀಮನ್ಮಹಾರಾಜರ ಬಳಿಗೆ ಡೆಪ್ಯುಟೇಷನ್ ಹೋಗಿದ್ದುದರ ಮೇಲೆ ಮಿಲ್ಲರ್ ಕಮಿಟಿ ಯೇರ್ಪಾಡಾಯಿತು. ಅದನ್ನಾರಂಭಿಸುವಾಗ್ಗೆ ಸರ್ಕಾರದವರು ಅದರ ನಡವಳಿಕೆಯನ್ನು ಸ್ಟ್ರಿಕ್ಟ್ಲಿ ಕಾನ್ಫಿಡೆನ್ಸಿಯಲ್ (ಅತ್ಯಂತರಹಸ್ಯ) ವಾಗಿರಬೇಕೆಂದು ಅಪ್ಪಣೆಮಾಡಿದ್ದರು. ಆದರೆ ಅದು ನಮ್ಮ ಕೈಗೆಲ್ಲಾ ಹೇಗಿಬಂತು? ಆ ರಿಪೋರ್ಟಿನಲ್ಲಿ ಕಂಡ ಅಭಿಪ್ರಾಯಗಳಲ್ಲಿ ಯಾವುದು ರಿಪೋರ್ಟು, ಯಾವುದು ಸರ್ಕಾರಿ ಅಪ್ಪಣೆಯೆಂಬುದು ಸಾಮಾನ್ಯ ಜನರಿಗೆ ತಿಳಿಯದೆ ಇರುವಕಾರಣ ಕಾನುಭಾಗರನ್ನೆಲ್ಲಾ ಈ ಅಪ್ಪಣೆಯ ಆಧಾರದಿಂದ ತೆಗೆದುಬಿಡುತ್ತಾರೆಂದು ತಿಳಿದುಕೊಂಡಿದ್ದಾರೆ. ರೆವಿನ್ಯು ಇಲಾಖೆ ಪೋಲೀಸ್ ಇಲಾಖೆಗಳಿಗೆ ವಿಶೇಷ ವಿದ್ಯಾಯೋಗ್ಯತೆಯು ಬೇಕಿಲ್ಲವೆಂದು ರಿಪೋರ್ಟಿನಲ್ಲಿ ಹೇಳೋಣವಾಗಿದೆ. ಆ ಇಲಾಖೆಗಳ ಸಾಮಾನ್ಯ ದರ್ಜೆಯ ಉದ್ಯೋಗಗಳಿಗೆ ವಿಶೇಷ ವಿದ್ಯಾಯೋಗ್ಯತೆಯವರು ಬೇಕಿಲ್ಲವೆಂದು ಹೇಳಿದ್ದರೂ ಅಷ್ಟು ಆಕ್ಷೇಪಣೆಯಾಗುತ್ತಿರಲಿಲ್ಲ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್, ರೆವಿನ್ಯೂ ಕಮಿಷನರ್ ಇಂಥ ಉದ್ಯೋಗಗಳಿಗೂ ಸಾಮಾನ್ಯ ಜನರನ್ನೇ ನಿಯಮಿಸಬಹುದೆ? ಆದಕಾರಣ ಈ ವಿಚಾರವನ್ನು ಪುನರ್ವಿಮರ್ಶೆಮಾಡಬೇಕಾಗಿದೆ. ಹಾಗೆ ಮಾಡದಿದ್ದರೆ ಸರ್ಕಾರದ ಎಫಿಷೆನ್ಸಿಯು ಕಡಮೆಯಾಗುತ್ತದೆ. ಎಫಿಷಿಯೆನ್ಸಿ ಬಂದರೆ ಬಾಧಕವಿಲ್ಲ. ಆಗ್ಗೆ ಇತರರೂ ಹೆಚ್ಚಿಗೆ ಬರಲಿ. ಕುತೂಹಲ ಆಸಕ್ತಿಯಿರುವವರು ಬೇಡ ಎಂದರೆ ಬಿಡುವುದಿಲ್ಲ. ಅವರೂ ಸರ್ಕಾರಿ ನೌಕರಿಯನ್ನು ಅನುಭವಿಸಿ ಅದರ ಕಷ್ಟ ಸುಖವನ್ನು ತಿಳಿಯಲಿ. ಈಗ ಸರ್ಕಾರದಲ್ಲಿ ರಿಟ್ರೆಂಚ್‌ಮೆಂಟು ಮೊದಲಾದುವುಗಳೆಲ್ಲಾ ನಡೆಯುತ್ತಿರುವ ತೊಂದರೆ ೧ ಕಡೆ. ಅದರ ಮೇಲೆ ಈ ರಿಪೋರ್ಟಿನ ಅವಾಂತರ ೧ ಕಡೆ. ತಮ್ಮಂಥವರು ನಾಲ್ಕು ಜನ ಒಂದು ದಿನ ಕುಳಿತುಕೊಂಡು ಈಕಡೆಯ ೨೦ ಜನರನ್ನೂ ಆಕಡೆಯ ೨೦ ಜನರನ್ನೂ ಕರೆಯಿಸಿ ಅವರಿವರ ಅಭಿಪ್ರಾಯಗಳನ್ನೆಲ್ಲಾ ಕೇಳಿ ಪರಸ್ಪರ ಸಮಾಧಾನಪಡಿಸಿದ್ದರೆ ಸುಲಭವಾಗಿ ನಡೆದುಹೋಗುತ್ತಿತ್ತು. ಹಿಂದೆ ಕ್ರಿಶ್ಚಿಯನ್ ದಾಯಭಾಗದ ಆಕ್ಟು ಮೊದಲಾದುವುಗಳು ಈ ಸಭೆಯ ಚರ್ಚೆಗೆ ಎಷ್ಟೋ ಬಂದುಹೋಗಿವೆ. ಒಂದು ಪ್ರೆಸ್ ಆಕ್ಟು ಒಂದು ಮಿಲ್ಲರ್ ಕಮಿಟಿ ರಿಪೋರ್ಟು ಇವೆರಡನ್ನು ಈ ಸಭೆಯ ಚರ್ಚೆಗೆ ತಂದಿಡದೆ ಹೋದದ್ದರಿಂದಲೇ ಇಷ್ಟು ಅಸಮಾಧಾನಕ್ಕೂ ಗದ್ದಲಕ್ಕೂ ಅವಕಾಶವಾಯಿತು. ಯಾವ ಆಫೀಸಿಗೂ ಖಾಲಿಬಿದ್ದ ನೌಕರಿಯನ್ನು ಭರ್ತಿ ಮಾಡಕೂಡದು ಎಂದು ಆರ್ಡರಿನ ಮೇಲೆ ಆರ್ಡರು ಒಳಗೊಳಗೇ ಬರುವುದಕ್ಕುಪಕ್ರಮಿಸಿತು. ಇದನ್ನೆಲ್ಲಾ ನೋಡಿ ಓಹೋ ನಮ್ಮ ಗತಿಯೇನೋ ಆಗುವುದೆಂದು ಭಯಪಡುವುದಕ್ಕುಪಕ್ರಮವಾಯಿತು. ಎಲ್ಲಿ ಇದೆಲ್ಲಾ ಹುಟ್ಟಿತೋ ಅಲ್ಲೇ ಇದೆಲ್ಲಾ ಸಮಂಜಸವಾಗಬೇಕು. ಈ ವಿಷಯದಲ್ಲಿ ತಮಗೆ ಅಧಿಕಾರದ ಕೆಪಾಸಟಿಯೇ ಅಲ್ಲ. ಇತರ ವಿಷಯದಲ್ಲೂ ನಮ್ಮ ಕಷ್ಟ ಸುಖಗಳನ್ನು ಕೇಳಿ ಕಾಪಾಡುವುದರಲ್ಲೂ ತಾವು ಅಧಿಕಾರಿಗಳಾಗಿದ್ದೀರಿ. ಇತರ ದಿವಾನರಲ್ಲಿ ೨ ಅಧಿಕಾರವಿತ್ತು; ತಮ್ಮಲ್ಲಿ ೩ ಅಧಿಕಾರವಿವೆ. ತಾವು ದಿವಾನರೂ ಈ ಸಭೆಯ ಪ್ರೆಸಿಡೆಂಟರೂ ಕೇವಲ ರಾಜಬಂಧುಗಳೂ ಆಗಿದ್ದೀರಿ. ಈಗ ಯಾರ ಬಾಯಲ್ಲೂ ಮಿಲ್ಲರ್ ಕಮಿಟಿ ರಿಪೋರ್ಟಿನ ಮಾತೇ ಆಗಿದೆ. ಇತರರು ನೌಕರಿಗೆ ಬರಬಾರದೆಂಬುದು ನಮ್ಮಭಿಪ್ರಾಯವಲ್ಲ; ಅವರು ಈಗ ತಯಾರಾಗುತ್ತಿದ್ದಾರೆ. ತಯಾರಾಗಿ ಬರಲಿ. ಮಾಡಿದ ಆರ್ಡರನ್ನು ಪುನಃ ಹಿಂದೆಗೆದುಕೊಳ್ಳಲಾಗುವುದಿಲ್ಲವೆಂಬ ತತ್ವಕ್ಕೆ ತಾವು ಗಮನಕೊಟ್ಟು ಅಪ್ಪಣೆ ಮಾಡಿದರೆ ಬಲಾತ್ಕಾರದಿಂದ ನಾವು ತಮ್ಮ ಅಪ್ಪಣೆಗೆ ಒಪ್ಪಿಕೊಳ್ಳಬೇಕಾಗುತ್ತದೆ. ರಿಪೋರ್ಟನ್ನು ಪುನರಾಲೋಚನೆ ಮಾಡಬೇಕೆಂದು ನನ್ನ ಪ್ರಾರ್ಥನೆ.

ಮ|| ಎ. ಶ್ರೀನಿವಾಸಯ್ಯಂಗಾರರು ಶ್ರೀರಂಗಪಟ್ಣ.- ಇವರು ತಮ್ಮ ಅಭಿಪ್ರಾಯವನ್ನೆಲ್ಲಾ ಮುದ್ರಣ ಮಾಡಿಸಿದ್ದ ಆ ಪತ್ರಿಕೆಯನ್ನೇ ಓದಿ ದಿವಾನರಿಗೆ ಒಪ್ಪಿಸಿದರು. ಅದರಲ್ಲಿ- ಸರ್ಕಾರಿ ಉದ್ಯೋಗಗಳಲ್ಲಿ ಸೇಕಡಾ ೭೦ ಮಂದಿ ಬ್ರಾಹ್ಮಣರೂ ೩೦ ಮಂದಿ ಇತರರೂ ಇದ್ದಾರೆ. ಇನ್ನು ೭ ವರ್ಷದಲ್ಲಿ ಸಮಸಮವಾಗಬೇಕೆಂಬುದು ರಿಪೋರ್ಟಿನ ಉದ್ದೇಶ. ಇದುವರೆಗೆ ಬ್ರಾಹ್ಮಣರು ಸರ್ಕಾರಿ ನೌಕರಿಯೆಂಬ ದಾಸ್ಯದಲ್ಲೂ ಇತರರು ಸ್ವತಂತ್ರವೃತ್ತಿಯಲ್ಲೂ ಬಂದಿದ್ದಾರೆ. ಸ್ವತಂತ್ರವೃತ್ತಿಯು ಗೌರವಾಸ್ಪದವು. ದಾಸ್ಯವನ್ನು ಪಡೆದಿರುವ ಬ್ರಾಹ್ಮಣರೇ ಉತ್ತಮರೋ ಸ್ವಾತಂತ್ರ್ಯದಲ್ಲಿರುವ ಬ್ರಾಹ್ಮಣೇತರರೇ ಉತ್ತಮರೋ ವಿಚಾರಣೀಯವು. ಈ ರಿಪೋರ್ಟಿನಿಂದ ಉತ್ತಮವಾದ ಸ್ವಾತಂತ್ರ್ಯ ವೃತ್ತಿಯಿಂದ ೨೦ ಭಾಗವನ್ನು ಕಿತ್ತುಕೊಂಡು ಬ್ರಾಹ್ಮಣರಿಗೆ ಕೊಟ್ಟಂತಾಯಿತು. ಇವರ ದಾಸ್ಯವೃತ್ತಿಯಲ್ಲಿ ೨೦ ರಷ್ಟನ್ನು ಇತರರಿಗೆ ಕೊಟ್ಟಂತಾಯಿತು. ಬ್ರಾಹ್ಮಣೇತರರಿಗೆ ನೌಕರಿಯನ್ನೊದಗಿಸಿಕೊಟ್ಟ ಸರ್ಕಾರದವರು ಬ್ರಾಹ್ಮಣರಿಗೆ ಸ್ವತಂತ್ರವೃತ್ತಿಯಲ್ಲಿ ಮುಂದೆ ಬರಲು ಪ್ರೋತ್ಸಾಹಕೊಡಬೇಕು ಎಂಬುದೇ ಆ ಪತ್ರಿಕೆಯ ಅಭಿಪ್ರಾಯವಾಗಿದ್ದಿತು.

ಮ|| ಕೆ. ವೆಂಕಟಸ್ವಾಮಯ್ಯನವರು, ನಂಜನಗೂಡು.- ಈ ಅಪ್ಪಣೆಯಿಂದ ದೇಶದ ಎಲ್ಲಾ ಕೋಮಿನವರಿಗೂ ಸರ್ಕಾರಿ ಕೆಸಲಕೊಟ್ಟು ತೃಪ್ತಿಪಡಿಸುವುದು ಸಾಧ್ಯವೆ? ಸೇಕಡಾ ೫೦ ರಂತೆ ಕೊಟ್ಟರೆ ಅವರಿಗೆಲ್ಲಾ ಸಮಾಧಾನವಾಗುತ್ತದೆಯೆ? ಈಗ ೫ ರಷ್ಟು ಕೊಟ್ಟರೆ ಮುಂದೆ ೭೫ ರಷ್ಟನ್ನು ಕೊಡಬೇಕೆಂದೂ ಅನಂತರ ೧೦೦ ಕ್ಕೆ ೧೧೦ ರನ್ನೂ ನಮಗೇ ಕೊಡಬೇಕೆಂದೂ ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುವುದಿಲ್ಲವೆ? ಬ್ರಾಹ್ಮಣ ಬ್ರಾಹ್ಮಣೇತರ ಎಂಬ ೨ ಸಂಗಡವು ಯಾವ ತತ್ತ್ವದ ಮೇಲೆ ಮಾಡಿದ್ದೋ ಗೊತ್ತಾಗುವುದಿಲ್ಲ. ಇದು ಧರ್ಮಶಾಸ್ತ್ರಕ್ಕೆ ಸಂಬಂಧಪಟ್ಟ ಭೇದವಲ್ಲ. ಸರ್ಕಾರದ ಥಿಯರಿಗೆ ಸಂಬಂಧಪಟ್ಟದ್ದಲ್ಲ. ಸರ್ಕಾರದವರು ಈ ಭೇದಗಳನ್ನಿಟ್ಟುಕೊಳ್ಳುವುದು ನ್ಯಾಯವಲ್ಲ. ಈಗ ೨ ಸಂಗಡವಾಯಿತು; ೭ ವರ್ಷದಲ್ಲಿ ಸೇಕಡಾ ೫೦ ಹಂಚಿಹೋಯಿತು

ಂದುಕೊಳ್ಳಿ. ಅನಂತರ ಅವರವರಲ್ಲೇ ನಮಗೆ ಸಾಲದು ಮಗೆ ಸಾಲದು ಎಂದು ಜಗಳಬರುವುದಕ್ಕೆ ಅವಕಾಶವಾಗುದಿಲ್ಲವೆ? ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಈ ಅನಿಷ್ಟ ಬ್ದದ ಉಪಯೋಗವು ತಪ್ಪಿಹೋಗಬೇಕು.

ಮ|| ಉಸ್ಮಾನ್ ಖಾನರವರು, ಬೆಂಗಳೂರು— ಮಿಲ್ಲರ್‌ಕಮಿಟಿ ರಿಪೋರ್ಟಿಗೆ ಸಂಬಂಧಪಟ್ಟ ಸಬ್ಜಕ್ಟು ೧ ಇವೆ. ಅವುಗಳಲ್ಲಿ ೩ ಪಾಯಿಂಟಿನವಿಷಯವಾಗಿ ಮಾತ್ರ ದುವರೆಗೆ ನಮ್ಮ ಬ್ರಾಹ್ಮಣ ಸಹೋದರರು ಮಾತನಾಡಿದ್ದಾರೆ. ಆದಕಾರಣ ನಾನು ಆ ೩ ಪಾಯಿಂಟನ್ನು ಕುರಿತು ಮಾತ್ರವೇ ಮಾತನಾಡುತ್ತೇನೆ—ಇತರರಿಗೂ ಸರ್ಕಾರಿ ನೌಕರಿಗಳನ್ನು ಕೊಟ್ಟು ಎಲ್ಲರ ಪ್ರಾತಿನಿಧ್ಯವೂ ಇರುವಂತೆ ಮಾಡಬೇಕೆಂಬ ವಿಷಯವು ೧೯೧೮ ನೆ ವರ್ಷದಲ್ಲೇ ಈ ಸಭೆಗೆ ಬಂದಿತ್ತು. ಸಬ್‌ಕಮಿಟಿಗೆ ಹಾಕಬೇಕೆಂದು ತೀರ್ಮಾನವಾಗಿತ್ತು. ಆದರಂತೆಯೇ ಈಗ ನಡೆದಿದೆ. ಹೀಗಿರುವಕಾರಣ ಮಿಲ್ಲರ್ ಕಮಿಟಿ ರಿಪೋರ್ಟಿನ ವಿಷಯವಾಗಿ ಈಗ ಚರ್ಚಿಸಲು ಅವಕಾಶವೇ ಇಲ್ಲ. ಇತರ ಆಕ್ಟಿನಂತೆ ಇದೂ ಈ ಸಭೆಯ ಚರ್ಚೆಗೆ ಬರಬೇಕಾಗಿತ್ತೆಂದು ಇವರು ಹೇಳಿದರು. ಅವಕ್ಕೂ ಇವಕ್ಕೂ ಸಂಬಂಧವಿಲ್ಲ. ಇದು ಸರ್ಕಾರದ ಸ್ವಂತಕಾರ್ಯಭಾರಕ್ಕೆ ಸಂಬಂಧಪಟ್ಟದ್ದು. ಮಿಲ್ಲರ್‌ಕಮಿಟಿ ರಿಪೋರ್ಟಿನಲ್ಲಿ ಸೇಕಡಾ ೫೦ ರಂತೆ ಇತರರಿಗೆ ಕೊಡಬೇಕೆಂದು ಮಾಡಿರುವುದರಲ್ಲೂ ತಕ್ಕ ಯೋಗ್ಯತೆಯಿದ್ದರೆ ಕೊಡಬೇಕೆಂದು ಮಾಡಿದ್ದಾರೆ. ಅಷ್ಟು ಜನರು ಇತರರಲ್ಲಿ ಸಿಕ್ಕದೆ ಇದ್ದರೆ ಈ ಜನರೇ ಆ ಸ್ಥಲಗಳಿಗೂ ಬರಲು ಅವಕಾಶವಿದ್ದೇ ಇದೆ. ಒಬ್ಬತಂದೆಗೆ ೪ ಜನ ಮಕ್ಕಳಿದ್ದರೆ ಅವನ ಆಸ್ತಿಯು ೪ ಜನರಿಗೂ ಹಂಚಿಹೋಗಬೇಕಲ್ಲವೆ? ನೀವೂ ಪಾಲುಗಾರರು ನಾವೂ ಪಾಲುಗಾರರು. ನೀವು ದೊಡ್ಡವರೇ ಹೌದು. ನಾವು ನಿಮ್ಮ ಸಹೋದರರಲ್ಲವೆ? ನಿಮ್ಮ ಜನಸಂಖ್ಯೆಯೆಷ್ಟು? ನಮ್ಮ ಜನಸಂಖ್ಯೆಯೆಷ್ಟು? ಎಷ್ಟೋ ಲಕ್ಷಾಂತರ ಪ್ರಜೆಗಳಿರುವ ಸಂಗಡಗಳಿಗೆ ಶ್ರೀಮನ್ಮಹಾರಾಜಾ ಸರ್ಕಾರದವರು ಅನುಕೂಲಮಾಡಿಕೊಡಬೇಡವೆ? ಹಾಗೆ ಧರ್ಮವಾಗಿ ಕೊಡಬೇಕಾದುದನ್ನು ಕೊಡಬೇಡಿರೆಂದು ಹೇಳಿದರೆ ಪಾಪಿಷ್ಠರಾಗುವುದಿಲ್ಲವೇ? ಇಷ್ಟಕ್ಕೇ ಪೇಪರುಗಳಲ್ಲೆಲ್ಲಾ ಗಲಾಟೆ! ಈ ಮಿಲ್ಲರ್‌ಕಮಿಟಿ ರಿಪೋರ್ಟಾದಾಗಿನಿಂದ ಯಾವಯಾವ ಕೋರ್ಟಿನಲ್ಲಿ ಯಾವಯಾವ ಸ್ಥಲದಲ್ಲಿ ಎಷ್ಟೆಷ್ಟು ಅಧಿಕಾರಗಳನ್ನು ಇತರರಿಗೆ ಕೊಟ್ಟಿದ್ದಾರೆ? ವಿಚಾರಮಾಡಿ ತರಿಸಿನೋಡಿ. ಏನೋ ಕಾಗದದಲ್ಲಿ ಆರ್ಡರ್‌ಮಾಡಿದ್ದು ಬಾಹ್ಯತೃಪ್ತಿ ಮಾತ್ರ. ನಾವು ಓದಿ ಮುಂದಕ್ಕೆ ಬಂದಕಾಲಕ್ಕೆ ನೋಡಿಕೊಳ್ಳೋಣ. ಶ್ರೀಮನ್ಮಹಾರಾಜರು ನಮಗೆ ಏನೂ ಇಲ್ಲವೆಂದು ಹೇಳಿ ಕಳಿಸಲಿ. ಎಲ್ಲಾದರೂ ಹೋಗಿ ಜೀವಿಸಿಕೊಳ್ಳುತ್ತೇವೆ. ಈಗಲೂ ನಾವು ನಿಮಗೆ ಹೆದರಿ ಜೀವಿಸಿಕೊಂಡಿರತಕ್ಕವರು. ಈಗ ಮಾಡಿಕೊಟ್ಟಿರುವ ರಿಪೋರ್ಟಿನಿಂದ ನಮಗೆ ಅನುಕೂಲಕವೇನು. ೫೦ ಎನ್ನುವದು ಕಡಮೆ. ಅದನ್ನು ಇನ್ನಷ್ಟು ಹೆಚ್ಚಿಸಿ ಕೊಡಬೇಕೆಂಬುದೇ ನನ್ನ ಪ್ರಾರ್ಥನೆ.

ಮ|| ಈ. ಪುರುಷೋತ್ತಮಾನಂದಗಿರಿಬಾವಾಜಿಯವರು- ಇಂಗ್ಲೀಷ್ ವಿದ್ಯಾಭ್ಯಾಸದಲ್ಲಿ ಮುಂದಾಗಿರುವವರಿಗೆ ಫಾರ್ವರ್ಡ್ ಎಂತಲೂ ಅದರಲ್ಲಿ ಹಿಂದಾಗಿರುವವರಿಗೆ ಬ್ಯಾಕ್ವರ್ಡ್ ಎಂತಲೂ ಹೆಸರಿಡೋಣವಾಗಿದೆ. ಸಂಸ್ಥಾನದಲ್ಲಿರುವ ೨ ಲಕ್ಷ ಬ್ರಾಹ್ಮಣ ಪ್ರಜೆಗಳಲ್ಲಿ ಸರ್ಕಾರಿ ನೌಕರಿಯೊಳಗೆ ೧೦ ಸಾವಿರ ಜನರಿದ್ದಾರೆ. ಉಳಿದ ೫೭ ಲಕ್ಷ ಪ್ರಜೆಗಳಿಗೆ ೪ ಸಾವಿರ ಮಂದಿ ಮಾತ್ರ ಸರ್ಕಾರಿ ನೌಕರಿಯಲ್ಲಿದ್ದಾರೆಂದು ಅಪ್ಪಣೆಕೊಡಿಸಿದ್ದೀರಿ. ಬ್ರಾಹ್ಮಣೋದ್ಯೋಗಗಳಿಗೆ ಸುಮಾರು ೧|| ಕೋಟಿ ರೂ. ಗಳು ಸಂಬಳದ ರೂಪವಾಗಿ ಹೋಗುತ್ತದೆ. ಸರ್ಕಾರಿ ನೌಕರಿಯಲ್ಲಿರುವವರು ಎಕ್ಸ್‌ಟೆನ್ಷನ್ನುಗಳಲ್ಲಿ ಬಂಗಲೆ ಕಟ್ಟಿಕೊಂಡು ಸುಖವಾಗಿದ್ದಾರೆಯೋ ಮಹಮ್ಮದೀಯರು ಹಾಗೆ ಇದ್ದಾರೆಯೋ ವಿಚಾರಮಾಡಿ ನೋಡಿದರೆ ಸರ್ಕಾರಿ ವೃತ್ತಿಯಿಂದ ಎಷ್ಟು ಪ್ರಯೋಜನವಿದೆಯೆಂಬುದು ಗೊತ್ತಾಗುತ್ತದೆ. ಸರ್ಕಾರಿ ನೌಕರಿಯಲ್ಲಿ ಬ್ರಾಹ್ಮಣರ ಸಂಖ್ಯೆ ಕಡಿಮೆಯಾದರೆ ಅವರು ಕೈಗಾರಿಕೆಗಳಿಗೆ ನುಗ್ಗಿ ಆ ವೃತ್ತಿಯನ್ನು ವೃದ್ಧಿಪಡಿಸುತ್ತಾರೆ. ನಮ್ಮ ದೇಶದಲ್ಲಿ ಈಗ ಕೃಷಿ ಕೈಗಾರಿಕೆ ಮೊದಲಾದ ಉದ್ಯೋಗಗಳಲ್ಲಿ ಅವಿದ್ಯಾವಂತರೇ ಹೆಚ್ಚಾಗಿ ಸೇರಿಕೊಂಡಿರುವುದರಿಂದ ಆ ವೃತ್ತಿಗಳು ಅಭಿವೃದ್ಧಿಗೊಳ್ಳದೆ ದೇಶದ ಸಂಪದಭಿವೃದ್ಧಿಗೆ ಮಾರ್ಗವಿಲ್ಲವಾಗಿದೆ. ಆದಕಾರಣ ಆ ಪ್ರಯೋಜನಕ್ಕಾಗಿ ಸರ್ಕಾರದವರು ಇವರನ್ನು ನೌಕರಿಯಲ್ಲಿ ಕಡಿಮೆ ಹಾಕಿ ಬೇರೆ ವೃತ್ತಿಗಳಿಗೆ ಹಾಕಬೇಕು. ಇವರುಗಳು ಹಿಂದೆ ಮದ್ರಾಸು ಪಾರ್ಟಿಯವರನ್ನು ವಿರೋಧಿಸಿದ್ದಕ್ಕೆ ಅಧಿಕಾರದ ಆಸೆಯೇ ಮುಖ್ಯಕಾರಣ. ಈಗ ಇತರರನ್ನು ವಿರೋಧಿಸುವುದಕ್ಕೂ ಸಹ ಅದನ್ನು ಕಳೆದುಕೊಳ್ಳಲಾರದ ಸಂಕಟವೇ ಕಾರಣ.

ಮ|| ಕೆ. ಸುಬ್ರಾಯಶೆಟ್ಟರು:—ಈ ರಿಪೋರ್ಟಿನ ಮೇಲೆ ಗಲಾಟೆ ಹುಟ್ಟುವುದಕ್ಕೆ ಪತ್ರಿಕಾಕರ್ತರೇ ಕಾರಣರೆಂದು ತೋರುತ್ತದೆ. ದಾಸತ್ವವು ತೊಲಗಿಹೋಗುವುದೇ ಸಂತೋಷವೆಂದು ನಮ್ಮ ಬ್ರಾಹ್ಮಣ ಸಹೋದರರು ಹೇಳಿದ್ದಾರೆ. ಅಂತಹದನ್ನು ಅವರು ಕಳೆದುಕೊಳ್ಳುವಲ್ಲಿ ಅಸಮಾಧಾನವೇಕೆ? ರಿಪೋರ್ಟಿನ ಮೇಲಣ ಸರ್ಕಾರಿ ಅಪ್ಪಣೆಯಲ್ಲಿ ಹೊರಗಣಿಂದ ನೌಕರಿಗೆ ಯಾರನ್ನೂ ತರುವುದಿಲ್ಲ; ಈ ದೇಶದವರಲ್ಲಿ ತಕ್ಕ ಯೋಗ್ಯತೆಯುಳ್ಳವರನ್ನೇ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಈಗ ಸರ್ಕಾರದಲ್ಲಿರುವ ೧೪ ಸಾವಿರ ಸ್ಥಾನಗಳಲ್ಲಿ ೧೦ ಸಾವಿರ ಜನರು ಬ್ರಾಹ್ಮಣರೇ ಇದ್ದಾರೆ. ೪ ಸಾವಿರ ಇತರರಿದ್ದಾರೆ. ಇನ್ನು ಮೂರುಸಾವಿರ ಇವರಿಗೆ ಬಂದರೆ ಸೂರೆ ಹೋಗುವುದೇನೂ ಇಲ್ಲ. ಅವರಿಗೆ ಇದರಿಂದ ನಷ್ಟವಾಗುವುದೇನೂ ಇಲ್ಲ. ಸಂತೋಷದಿಂದ ಅವರು ಇದಕ್ಕೆ ಒಪ್ಪಿದರೆ ಪರಸ್ಪರ ಸ್ನೇಹ ಸಂತೋಷಗಳು ಎಷ್ಟೋ ವೃದ್ಧಿಯಾಗುವುವು. ಗೌರ್ನಮೆಂಟ್ ಆರ್ಡರನ್ನು ಮಾರ್ಪಾಟು ಮಾಡಬೇಕೆಂದು ಅವರುಗಳು ಹೇಳುತ್ತಿದ್ದಾರೆಯೇ ಹೊರತು ಹೇಗೆ ಮಾರ್ಪಡಿಸಿ ಅನುಕೂಲಪಡಿಸಬೇಕೆಂಬುದನ್ನೇನೂ ಹೇಳಲಿಲ್ಲ. ಸರ್ಕಾರದ ಎಫಿಷೆನ್ಸಿ ಕಡಿಮೆಯಾಗುವುದೆಂದು ದೊಡ್ಡದಾಗಿ ಹೇಳಿಕೊಳ್ಳುತ್ತಾರೆ. ಅದಕ್ಕೆ ಅವಕಾಶವೇನೂ ಇಲ್ಲ. ತಕ್ಕ ರೂಲ್ಸೂ ರಿಕ್ರೂಟ್‌ಮೆಂಟ್ ಬೋರ್ಡು ಮೊದಲಾದುವೂ ಏರ್ಪಟ್ಟೇ ಇವೆ. ಈಗಣ ಸರ್ಕಾರಿ ಆರ್ಡರು ಸೌಮ್ಯವಾಗಿ ಸಕಲರಿಗೂ ಅನುಕೂಲವಾಗಿದೆಯೇ ಹೊರತು ಯಾವ ವಿಧವಾದ ದೋಷಾರೋಪಣೆಗೂ ಅವಕಾಶವಿಲ್ಲ.

ಮ|| ಸಾಗರದ ರುದ್ರಪ್ಪಗೌಡರು— ಕುಟುಂಬದಲ್ಲಿರುವ ನಾಲ್ಕು ಮಕ್ಕಳಲ್ಲಿ ಎಲ್ಲರೂ ವಿದ್ಯಾಬುದ್ಧಿವಂತರಾಗಿದ್ದರೆ ಕುಟುಂಬವೃದ್ಧಿಯಾಗುವಂತೆ ದೇಶದ ಎಲ್ಲ ಪ್ರಜೆಗಳನ್ನೂ ಒಂದೇತೆರನಾಗಿ ವಿದ್ಯಾಬುದ್ಧಿ ಕೌಶಲವುಳ್ಳವರನ್ನಾಗಿಮಾಡುವ ಉದ್ದೇಶದಿಂದ ಹುಟ್ಟಿರುವ ಈ ರಿಪೋರ್ಟು ಯುಕ್ತವಾಗಿರುತ್ತದೆ. ಆದರೆ ೭ ವರ್ಷದಲ್ಲಿ ಇತರರು ಮುಂಬರಿದ ಜನರಷ್ಟು ಪ್ರಬುದ್ಧಮಾನರಾಗಿ ಬರುವುದು ಅಸಾಧ್ಯ. ಏಕೆಂದರೆ ಅವರು ನೂರಾರು ವರ್ಷಗಳಿಂದ ತರಬಿಯತ್ತಾದವರು. ಅಂಥ ವಿದ್ಯಾಬುದ್ಧಿವಂತರಾದ ಜನರು ಹಿಂದುಳಿದ ತಮ್ಮ ಸಹೋದರರ ಹಿತಕ್ಕೆ ಸಂಬಂಧಪಟ್ಟ ಈ ರಿಪೋರ್ಟನ್ನು ನೋಡಿ ಅಗ್ನಿ ಗಾಬರಿಪಟ್ಟು ಹೋಗಿರುವುದು ವಿಸ್ಮಯಕರವಾಗಿದೆ. ಸರ್ಕಾರದವರು ಒಳ್ಳೆ ಉದ್ದೇಶದಿಂದ ಮಾಡಿರುವ ಅಪ್ಪಣೆಯನ್ನು ನೋಡಿ ಸೈರಿಸಲಾರದವರು ಪರಸ್ಪರ ವಿರೋಧಭಾವವನ್ನು ಹುಟ್ಟಿಸಲು ಪ್ರಯತ್ನಿಸಿರುವರು. ಈ ಅಪ್ಪಣೆಯನ್ನು ಪಕ್ಷಪಾತವೆಂದು ತಿಳಿದುಕೊಂಡಿರುವುದು ಉಚಿತವಾಗಿಲ್ಲ.

ಇಲ್ಲಿಗೆ ೫|| ಗಂಟೆಯಾದುದರಿಂದ ಆದಿನದ ಸಭಾಕಾರ್ಯಗಳು ಮುಗಿದುವು. ಮುಂದೆ ತಾ|| ೧೭-೧೮ ನೆ ಸೋಮವಾರ ಮಂಗಳವಾರಗಳಲ್ಲಿ ಇದೇ ರಿಪೋರ್ಟಿನಮೇಲೆ ನಡೆದಿರುವ ಚರ್ಚೆಯ ವಿವರಣವನ್ನು ಮುಂದಣ ಸಂಚಿಕೆಯಲ್ಲಿ ಕೊಡುತ್ತೇನೆ.

ಪ್ರಜಾಪ್ರತಿನಿಧಿಸಭೆಯ ಪರಿಸಮಾಪ್ತಿ ಕಾಲದಲ್ಲಿ ದಿವಾನರು ಮಾಡಿದ ಭಾಷಣ.

ಮಹನೀಯರೇ,

ಪ್ರಜಾಪ್ರತಿನಿಧಿಸಭೆಯ ಈ ಸಲದ ಅಧಿವೇಶನದ ಸಭಾಕಾರ್ಯಗಳನ್ನು ಪರಿಸಮಾಪ್ತಿಮಾಡುವ ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಲಪೇಕ್ಷಿಸುತ್ತೇನೆ. ಹೆಚ್ಚು ಪ್ರಾಮುಖ್ಯವುಳ್ಳ ಕೆಲವು ವಿಷಯಗಳ ಸಂಬಂಧವಾದ ಚರ್ಚೆಗಳಲ್ಲಿ ಹೆಚ್ಚುಮಂದಿ ಮೆಂಬರುಗಳು ಭಾಗಿಗಳಾಗಿದ್ದುದು ಗಣನೀಯವಾದ ಅಂಶವಾಗಿದೆ. ಮೆಂಬರುಗಳು ಪ್ರದರ್ಶಿಸಿರುವ ವಿಷಯನಿರೂಪಣ ಸಮರ್ಥನ ಶಕ್ತಿಗಳಿಗಾಗಿ ನಾನು ಅವರುಗಳನ್ನು ಅಭಿನಂದಿಸುತ್ತೇನೆ. ಒಟ್ಟಿನಲ್ಲಿ ಸಭೆಯ ಚರ್ಚೆಗಳು ಪರಸ್ಪರ ಮೈತ್ರೀಭಾವದಿಂದಲೂ, ಸಾವಧಾನಚಿತ್ತದಿಂದಲೂ ನಡೆದುದು ತುಂಬಾ ತೃಪ್ತಿಕರವು.

ಎಂದಿನಂತೆ ವಿದ್ಯಾವಿಷಯಕವಾದ ಚರ್ಚೆಗಳಲ್ಲಿ ಮೆಂಬರುಗಳು ವಿಶೇಷ ಆಸಕ್ತಿಯನ್ನು ತೋರಿಸಿರುವರು. ವಿದ್ಯಾಭ್ಯಾಸದ ತೆರುಗೆಯ ವಿಷಯವು ವಿಸ್ತಾರವಾಗಿ ಚರ್ಚಿಸಲ್ಪಟ್ಟಿತು. ಗ್ರಾಮಾಂತರ ಪ್ರದೇಶಗಳ ವಿದ್ಯಾಪ್ರಸರಣೆಯ ಕಾರ್ಯವನ್ನು ವ್ಯವಹರಣೆಗೆ ತರಬೇಕೆಂಬ ಸರಕಾರದವರ ಉದಾರವಾದ ಉದ್ದೇಶವನ್ನು ಹೆಚ್ಚು ಹಣ ಒದಗಿದ ಹೊರತು ಅನುಷ್ಠಾನಕ್ಕೆ ತರಲಾಗುವುದಿಲ್ಲವಾದ ಪ್ರಯುಕ್ತ ಇದೊಂದು ಅತ್ಯಂತ ಪ್ರಮುಖವಾದ ಸಮಸ್ಯೆಯಾಗಿದೆ. ಸರ್ಕಾರದವರಿಂದ ವಿಧಿಸಲ್ಪಡುವ ಹೊಸ ಕಂದಾಯಗಳ ಏರ್ಪಾಟುಗಳಿಗೆಲ್ಲಾ ರೈತರು ಪರಾಙ್ಮುಖರಾಗುವುದು ಸ್ವಭಾವವೇ. ಆದರೆ ವಿದ್ಯಾವಿಷಯಕವಾದ ಹೊಸ ಹೊಸ ಸೌಲಭ್ಯಗಳನ್ನು ಪಡೆದುಕೊಳ್ಳುವುದರಲ್ಲಿ ಮಾತ್ರ ಇವರ ಕಾಂಕ್ಷೆಯು ತೀವ್ರವಾಗಿಯೇ ಇರುವುದು. ವಿದ್ಯೆಯ ತೆರುಗೆಯನ್ನು ವಿಧಿಸುವ ವಿಚಾರದಲ್ಲಿ ಗ್ರಾಮನಿವಾಸಿಗಳ ಪ್ರತಿನಿಧಿಗಳಾಗಿರುವ ಮೆಂಬರುಗಳು ಸಮ್ಮತಿಸಿರುವುದು ಅತ್ಯಂತ ಸಂತೋಷಕರವಾಗಿದೆ. ಈ ತೆರುಗೆಯನ್ನು ವಿಧಿಸುವ ಅಧಿಕಾರವು ನಿಮಗೆ ತಿಳಿದಿರುವ ಹಾಗೆಯೇ ಸ್ಥಳೀಕ ಸಂಸ್ಥೆಗಳವರ ಕೈಯಲ್ಲಿರುವುದು. ವಿದ್ಯಾಭ್ಯಾಸದ ಮೆಮೊರಾಂಡಮ್ಮಿನ ಪ್ರಕಾರ ಅತ್ಯಾವಶ್ಯಕವಾದ ಭಾಗಗಳನ್ನಾದರೂ ವಿದ್ಯಾಶಾಖೆಯವರು ಅನುಷ್ಠಾನಕ್ಕೆ ತರಲನುಕೂಲವಾಗುವಂತೆ ಡಿಸ್ಟ್ರಿಕ್ಟು ಬೋರ್ಡಿನವರೂ ಮ್ಯುನ್ಸಿಪಾಲಿಟಿಯವರೂ ಶೀಘ್ರವಾಗಿ ತೆರುಗೆಯನ್ನು ವಿಧಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳುವಂತೆ ನೀವುಗಳೆಲ್ಲರೂ ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡಬೇಕು.

ವಿದ್ಯಾರ್ಥಿವೇತನಗಳ ಮತ್ತು ಫ್ರೀಷಿಪ್‌ಗಳ ವಿಚಾರವಾಗಿ ಪ್ರಜಾಪ್ರತಿನಿಧಿಸಭೆಯಲ್ಲಿ ನಾನು ಮಾಡಿದ ಭಾಷಣದಲ್ಲಿ ವಿಸ್ತಾರವಾಗಿ ಹೇಳಿರುತ್ತೇನೆ. ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ಕಲ್ಪಿಸಿಕೊಟ್ಟಿರುವ ಸೌಲಭ್ಯಗಳನ್ನು ಕಡಮೆಮಾಡಬೇಕೆಂಬ ತಾತ್ಪರ್ಯವು ಗೌರ್ನಮೆಂಟಿನವರಿಗೆ ಇರುವುದಿಲ್ಲ. ವಿದ್ಯಾಭ್ಯಾಸ ಸಂಬಂಧವಾದ ವೆಚ್ಚದ ಭಾಗಗಳಲ್ಲಿ ಮಾತ್ರ ಕೆಲವು ಬದಲಾವಣೆಗಳನ್ನು ಮಾಡುವೆವು. ವಿದ್ಯಾಪ್ರಾವೀಣ್ಯದ ವೇತನಗಳನ್ನು (ಮೆರಿಟ್ ಸ್ಕಾಲರ್ಷಿಪ್) ಕೊಡುವ ಪದ್ಧತಿಯನ್ನು ನಿಲ್ಲಿಸಕೂಡದೆಂದು ನೀವು ಹೇಳಿಕೊಳ್ಳುತ್ತೀರಿ. ಇದನ್ನು ನಿಲ್ಲಿಸಿಬಿಡುವ ಯೋಚನೆಯನ್ನು ಗೌರ್ನಮೆಂಟಿನವರು ಮಾಡಿಯೇ ಇಲ್ಲ. 1919ನೇ ಅಕ್ಟೋಬರು ತಿಂಗಳಿನಲ್ಲಿ ವಿದ್ಯಾರ್ಥಿವೇತನಗಳಿಗಾಗಿ 3 ಲಕ್ಷ ರೂಪಾಯಿಗಳನ್ನು ಒದಗಿಸಿಕೊಡುವುದಾಗಿ ನನ್ನ ಭಾಷಣದಲ್ಲಿ ವಾಗ್ದಾನಮಾಡಿರುವ ಪ್ರಕಾರವೇ ನಡೆಯುವುದು. ಅದರಲ್ಲೇನೂ ಕಡಮೆಮಾಡಲ್ಪಡುವುದಿಲ್ಲ. ಶೃಂಗೇರಿ ಸರ್ಕ್ಯುಲರ್ ಎಂಬ ನಾಮಾಂಕಿತದಿಂದ ಮೆಂಬರುಗಳಿಂದ ತರಲ್ಪಟ್ಟಿದ್ದ ಮತ್ತೊಂದು ವಿಷಯದಲ್ಲಿ ಹೆಚ್ಚು ಚರ್ಚೆಗಳು ನಡೆದುವು. ಈ ವಿಷಯದಲ್ಲಿ ಗೌರ್ನಮೆಂಟಿನವರು ಮಾಡಿರುವ ಅಪ್ಪಣೆಯು ಎರಡು ಭಾಗಗಳುಳ್ಳದಾಗಿರುವುದು—ಸರ್ಕಾರದ ಧನಸಹಾಯದಿಂದ ನಡೆಯುತ್ತಿರುವ ಪ್ರತಿಯೊಂದು ಪಾಠಶಾಲೆಗೂ ಜಾತಿ ಮತ ಭೇದಭಾವನೆಗಳಿಲ್ಲದೆ ಶ್ರೀಮನ್ಮಹಾರಾಜರವರ ಪ್ರತಿಯೊಬ್ಬ ಪ್ರಜೆಯೂ ಸೇರಿ ವಿದ್ಯಾಭ್ಯಾಸಮಾಡಲು ಬಾಧ್ಯನಾಗಿರುವನೆಂಬ ವಿಷಯವು ಮೊದಲನೆಯ ಪ್ರಕರಣದಲ್ಲಿ ಹೇಳಲ್ಪಟ್ಟಿರುವುದು. ಕೆಲವೆಡೆಗಳಲ್ಲಿ ಈ ನಿಬಂಧನೆಯನ್ನು ಆಚರಣೆಗೆ ತರುವ ವಿಷಯದಲ್ಲಿ ಕೆಲವರು ಸಂದೇಹಯುಕ್ತರಾಗಿದ್ದರೂ, ಅನೇಕರು ಈ ನಿರ್ಣಯವನ್ನು ಅಂಗೀಕರಿಸಿದುದು ಸಂತೋಷಕರವಾಗಿದೆ.

ಸರ್ಕಾರಿ ಪಾಠಶಾಲೆಗಳಿಗೆ ಪಂಚಮರನ್ನು ಸೇರಿಸಿದರೆಂಬ ಕಾರಣದಿಂದ ಪ್ರತಿಭಟಿಸಿ ಏರ್ಪಡಿಸಿದ ಇತರ ಸ್ಕೂಲುಗಳು ಸರ್ಕಾರದವರಿಂದ ದ್ರವ್ಯಸಹಾಯ ಪಡೆಯಲು ಅರ್ಹವಾದವುಗಳಲ್ಲವೆಂದೂ, ಇವು ವಿದ್ಯಾಶಾಖೆಯ ನಿಬಂಧನೆಗಳಿಗನುಸರಿಸಿ ನಡೆಯುತ್ತಿದ್ದರೆ ಮಾತ್ರ ಸರ್ಕಾರದವರಿಂದ ಅಂಗೀಕರಿಸಲ್ಪಡುವುವೆಂದೂ ಎರಡನೆಯ ಭಾಗದಲ್ಲಿ ಹೇಳಲ್ಪಟ್ಟಿರುವುದು. ಸಭೆಯಲ್ಲಿ ಚರ್ಚೆನಡೆಯುತ್ತಿರುವಾಗ ಸರ್ಕಾರದವರಿಂದ ಅಂಗೀಕರಿಸಲ್ಪಡದಿದ್ದ ಕೆಲವು ಶಾಲೆಗಳ ವಿಚಾರವು ಹೇಳಲ್ಪಟ್ಟಿತು. ವಿದ್ಯಾಶಾಖೆಯವರು ಮಾಡಿರುವ ಅಪ್ಪಣೆಯು ಅಸಮಾಧಾನಕರವಾಗಿರುವ ಪಕ್ಷದಲ್ಲಿ ಅಂತಹ ಶಾಲೆಗಳ ಮ್ಯಾನೇಜರುಗಳು ಗೌರ್ನಮೆಂಟಿಗೆ ಅಪ್ಪೀಲುಮಾಡಿ ಇತ್ಯರ್ಥಪಡಿಸಿಕೊಳ್ಳಬಹುದು. ಸರ್ಕಾರದ ಹಣದ ವೆಚ್ಚದಿಂದ ನಡೆಯುತ್ತಿರುವ ಸಂಸ್ಕೃತಪಾಠಶಾಲೆಗಳಲ್ಲಿ ಒಂದು ಗೊತ್ತಾದ ಜನಾಂಗದವರೇ ವ್ಯಾಸಂಗಮಾಡಬೇಕೆಂಬ ನಿರ್ಬಂಧವನ್ನು ತಪ್ಪಿಸಬೇಕೆಂಬ ವಿಷಯವು ಅರಿಕೆಮಾಡಲ್ಪಟ್ಟಿರುವುದು. ಇದರ ವಿಚಾರಣೆಗಾಗಿ ನಿಯಮಿತವಾಗಿದ್ದ ಸಂಘದ ವರದಿಯು ಗೌರ್ನಮೆಂಟಿನವರ ಮುಂದೆ ಇದೆ. ಎಲ್ಲರ ತಿಳುವಳಿಕೆ ಮತ್ತು ಅಭಿಪ್ರಾಯಗಳಿಗಾಗಿ ಅದನ್ನು ಪ್ರಕಟನೆ ಮಾಡಿದನಂತರ ಆ ವಿಷಯವನ್ನು ಇತ್ಯರ್ಥಪಡಿಸುವೆವು.

ಶಿಲ್ಪವಾಣಿಜ್ಯ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ತಮ್ಮ ಕರ್ತವ್ಯವನ್ನು ಮಾಡುತ್ತಿರುವರು. ಪಾಠಶಾಲೆಗಳ ಕಟ್ಟಡಗಳಿಗಾಗಿ ವಿಶೇಷವಾಗಿ ಧನವ್ಯಯವಾಗುತ್ತಿರುವ ವಿಚಾರದಲ್ಲಿ ಇದಕ್ಕಾಗಿ ಸರ್ಕಾರದವರಿಂದ ನಿಯಮಿತವಾಗಿರುವ ಸಂಘದವರು ಕೊಟ್ಟಿರುವ ಸೂಚನೆಗಳು ಗೌರ್ನಮೆಂಟಿನವರ ಪರ್ಯಾಲೋಚನೆಯಲ್ಲಿವೆ.

ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ತಾಲ್ಲೂಕು ಖಜಾನೆಗಳನ್ನು ಪುನಃ ಇಡಿಸಿಕೊಡಬೇಕೆಂಬ ಪ್ರಾರ್ಥನೆಯು ಇಷ್ಟರಲ್ಲೇ ಇತ್ಯರ್ಥವಾಗುವುದು. ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಕಂದಾಯದ ಕಂತುಗಳು ಮೈದಾನ ಡಿಸ್ಟ್ರಿಕ್ಟುಗಳಿಗಿಂತಲೂ ಮುಂದಾಗಿ ವಸೂಲ್ಮಾಡುವುವೆಂಬ ದೂರು ಬಹಳದಿವಸಗಳಿಂದಲೂ ಬರುತ್ತಿದೆ. ಅದು ಕೂಡ ಜಾಗ್ರತೆಯಾಗಿ ನಿಮ್ಮಗಳ ಕೋರಿಕೆಯಂತೆ ವ್ಯವಸ್ಥೆಮಾಡಲ್ಪಡುವುದು.

ಬೆಳೆಯಾಗದಿರುವ ತರೀ ಭೂಮಿಗಳ ಕಂದಾಯವನ್ನು ಮನ್ನಿಸಿಬಿಡುವ ವಿಷಯದಲ್ಲಿ ಅನುಕೂಲವಾದ ನಿಬಂಧನೆಗಳು ಇತರ ಕಡೆಗಳಲ್ಲಿ ವ್ಯವಹಾರದಲ್ಲಿರುವಂತೆಯೇ ಏರ್ಪಡಿಸಲ್ಪಡುವುವು.

ಒಂದೇ ಖಾತೆಯಲ್ಲಿ ಸೇರಿರುವ ಕೆಲವು ನಂಬರುಗಳೊಳಗೆ ಯಾವುದಾದರೊಂದು ಸರ್ವೆ ನಂಬರಿನ ಕಂದಾಯದ ಬಾಕಿಗಾಗಿ ಒಟ್ಟು ಜಮೀನನ್ನು ಸರ್ಕಾರಕ್ಕೆ ಕಟ್ಟಿಕೊಂಡು ಹರಾಜುಮಾಡುವ ಪದ್ಧತಿಯಿಂದ, ಕಂದಾಯವನ್ನು ಸಲ್ಲಿಸಿರುವ ಹಿಡುವಳೀದಾರರಿಗೂ ತೊಂದರೆಗಳುಂಟಾಗುತ್ತಿರುವುದರಿಂದ, ಕಂದಾಯವನ್ನು ಸಲ್ಲಿಸಿರುವ ಸರ್ವೆನಂಬರನ್ನು ಬಿಟ್ಟು, ಉಳಿದ ಭೂಮಿಯಮೇಲೆ ಮೊದಲು ಹರಾಜುಕ್ರಮ ನಡೆಸುವದಕ್ಕೂ, ಮತ್ತು ಕಿರಿದಿಯಲ್ಲಿ ಕಂದಾಯವು ಸಂದ ಸರ್ವೆನಂಬರಿನ ವಿವರಣೆಯನ್ನು ಬರೆಯಬೇಕೆಂಬದಾಗಿಯೂ ಗೌರ್ನಮೆಂಟಿನವರು ಅಪ್ಪಣೆಮಾಡಿರುತ್ತಾರೆ. ರೆವಿನ್ಯೂ ಕಮಿಷನರವರು ಕೂಡ ಕಂದಾಯದ ಬಾಕಿ ನಿಂತಿರುವ ಭೂಮಿಯ ಮೇಲೆ ಮೊದಲು ಕ್ರಮಜರುಗಿಸಬೇಕೆಂದು ಸರ್ಕ್ಯುಲರ್ ಕೊಟ್ಟಿರುತ್ತಾರೆ. ಇದರಿಂದ ರೈತರಿಗೆ ಉಂಟಾಗುವ ತೊಂದರೆಗಳನ್ನು ತಪ್ಪಿಸುವುದಕ್ಕಾಗಿ ರೆವಿನ್ಯೂ ರೂಲ್ಸುಗಳಲ್ಲಿ ಅವಶ್ಯಕವಾದ ತಿಳುವಳಿಕೆಗಳ ಟಿಪ್ಪಣವು ಸೇರಿಸಲ್ಪಡುವುದು.

ಗೌರ್ನಮೆಂಟಿನವರ ಮೇಲೆ ವಿವಾದಹೂಡತಕ್ಕ ಬಗ್ಗೆ ಅಪ್ಪಣೆಯಾಗಬೇಕೆಂಬ ವಿಷಯವು ಕೆಲವು ತಿಂಗಳುಗಳೊಳಗಾಗಿಯೇ ವ್ಯವಸ್ಥೆಮಾಡಲ್ಪಡುವುದು. ಕ್ರಿಮಿನಲ್ ಮತ್ತು ರೆವಿನ್ಯೂ ಅಧಿಕಾರಿಗಳನ್ನು ಪ್ರತ್ಯೇಕಿಸುವ ಏರ್ಪಾಟನ್ನು ಉಳಿದ ನಾಲ್ಕು ಡಿಸ್ಟ್ರಿಕ್ಟುಗಳಲ್ಲೂ ವ್ಯವಹಾರಕ್ಕೆ ತರಬೇಕೆಂಬ ಪ್ರಾರ್ಥನೆಯಪ್ರಕಾರ ನಡೆಸಲು ಸದ್ಯದಲ್ಲಿ ಹಣದಬಿಕ್ಕಟ್ಟಿನ ದೆಸೆಯಿಂದ ಸಾಧ್ಯವಲ್ಲ. ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಯೂ ಎರಡನೆತರಗತಿ ಮ್ಯಾಜಿಸ್ಟ್ರೇಟರ ಕೋರ್ಟುಗಳನ್ನು ಸ್ಥಾಪಿಸುವುದು .ಅಸಾಧ್ಯ. ಜನಗಳ ಅನನುಕೂಲತೆಗಳನ್ನು ತಪ್ಪಿಸುವುದಕ್ಕಾಗಿ ಸಾಧ್ಯವಾಗುವ ಕಡೆಗಳಲ್ಲೆಲ್ಲಾ ಬೆಂಚು

ಕೋರ್ಟುಗಳಿಗೆ ೨ನೆ ತರಗತಿ ಮ್ಯಾಜಿಸ್ಟ್ರೇಟು ಅಧಿಕಾರವು ಕೊಡಲ್ಪಡುವುದು.

ಗ್ರಾಮಕೋರ್ಟುಗಳ ಪ್ರಯೋಜನವು ಬಹುಜನರ ಮನಸ್ಸಿಗೆ ನಾಟಿದೆ. ಈ ಕೋರ್ಟುಗಳ ಕ್ರಮವನ್ನೇ ಅನುಸರಿಸಿ ಪಟ್ಟಣಗಳಲ್ಲೂ ಪಂಚಾಯಿತಿ ಕೋರ್ಟುಗಳನ್ನು ಸ್ಥಾಪಿಸಬೇಕೆಂದು ವರ್ತಕಸಂಘದ ಪ್ರತಿನಿಧಿಯು ಮಾಡಿದ ಪ್ರಾರ್ಥನೆಯು ಈ ಕೋರ್ಟುಗಳ ಪ್ರಯೋಜನಾಂಶವನ್ನು ನಿದರ್ಶನಪಡಿಸುತ್ತಿರುವುದು. ಸರ್ಕಾರಿ ಉದ್ಯೋಗಗಳಲ್ಲಿ ಎಲ್ಲಾ ಜನವರ್ಗಗಳ ಪ್ರತಿನಿಧಿಗಳೂ ಇರಬೇಕೆಂಬ ವಿಚಾರದಲ್ಲಿ ಈಚೆಗೆ ಹುಟ್ಟಿರುವ ಸರ್ಕಾರಿ ಅಪ್ಪಣೆಯಮೇಲೆ ದೀರ್ಘಕಾಲ ಬಹು ವಿಸ್ತಾರವಾದ ಚರ್ಚೆಯು ನಡೆದಿತು. ಮೂರುದಿವಸಗಳವರೆಗೂ ನಡೆದ ಈ ಚರ್ಚೆಗಳ ದೆಸೆಯಿಂದ ಎರಡುಪಂಗಡಗಳ ಜನರಲ್ಲೂ ಇದ್ದ ತಪ್ಪುಅಭಿಪ್ರಾಯಗಳು ತಿದ್ದುಪಾಟಾಗಿ ಮಾರ್ಪಟ್ಟಿರಬೇಕಲ್ಲದೆ, ಪರಸ್ಪರ ಅಭಿಪ್ರಾಯದ ಕಾರಣವನ್ನು ಸ್ಪಷ್ಟವಾಗಿ ಗ್ರಹಿಸಿಕೊಳ್ಳಲು ಅವಕಾಶ ದೊರೆತು ವಿಷಯಸ್ವರೂಪವು ವಿಶದವಾಗಿ ಕಂಡಬಂದಿರಬಹುದೆಂದು ನಂಬುತ್ತೇನೆ. ಬ್ರಾಹ್ಮಣ ಪ್ರತಿನಿಧಿಗಳನೇಕರು ಇದರಿಂದ ತಮಗೆ ಉಂಟಾಗುವ ಸ್ಥಿತಿಯನ್ನು ವಿವರಿಸಿ ಒಂದು ಮೆಮೊರಾಂಡಮ್ಮನ್ನು ಬರೆದು ಒಪ್ಪಿಸಿರುವರು. ಸರ್ಕಾರಿ ಉದ್ಯೋಗಗಳಲ್ಲಿ ಮಿಗಿಲಾದ ಪ್ರಾತಿನಿಧ್ಯವನ್ನು ಪಡೆಯಬೇಕೆಂಬ ನ್ಯಾಯವಾದ ಬ್ರಾಹ್ಮಣೇತರರ ಕಾಂಕ್ಷೆಯ ವಿಷಯದಲ್ಲಿ ಸಂಪೂರ್ಣವಾದ ಸಾನುಭೂತಿಯನ್ನು ಇವರುಗಳು ಅದರಲ್ಲಿ ತೋರಿಸಿರುತ್ತಾರೆ. ಇದು ಹಿಂದುಳಿದ ಜನವರ್ಗದವರಿಗೂ ಸರ್ಕಾರದವರಿಗೂ ಆಹ್ಲಾದವನ್ನುಂಟುಮಾಡತಕ್ಕದ್ದಾಗಿರುವುದು. ಯೋಗ್ಯತೆ ಪಡೆದಿರತಕ್ಕ ಹಿಂದುಳಿದ ಜನಾಂಗದವರಿಗೆ ರಿಯಾಯತಿ ತೋರಿಸುವ ವಿಚಾರದಲ್ಲಿ ಸಮ್ಮತಿಸುವ ಸಂದರ್ಭದಲ್ಲಿ ಸರ್ಕಾರದವರು ಉದ್ದೇಶಿಸಿರುವ ಕಾರ್ಯವನ್ನು ಈಡೇರಿಸುವುದರಲ್ಲಿ ಒಂದು ಗೊತ್ತಾದ ಕಾಲದ ಪರ್ಯಂತ ಬ್ರಾಹ್ಮಣರನ್ನು ಸರ್ಕಾರದ ಉದ್ಯೋಗಗಳಿಂದ ಸಂಪೂರ್ಣವಾಗಿ ತಪ್ಪಿಸಬಾರದೆಂದು ಅದರಲ್ಲಿ ಕೇಳಿಕೊಂಡಿರುತ್ತಾರೆ. ನಾವು ಮೊದಲೇ ವಿವರಿಸಿ ಹೇಳಿರುವ ಪ್ರಕಾರ ಹೀಗೆ ಸರ್ಕಾರಿ ಉದ್ಯೋಗಗಳಿಂದ ಬ್ರಾಹ್ಮಣರನ್ನು ಸಂಪೂರ್ಣವಾಗಿ ತಪ್ಪಿಸಬೇಕೆಂದು ಸರ್ಕಾರದವರು ಯೋಚಿಸಿರುವುದಿಲ್ಲ. ಮತ್ತು ಈ ಮೆಮೊರಾಂಡಮ್ಮಿನಲ್ಲಿ ಅವರು ಒತ್ತಿಹೇಳಿರುವ ಮತ್ತೊಂದು ಮುಖ್ಯವಿಷಯವೇನೆಂದರೆ-ಹಿಂದುಳಿದ ಜನವರ್ಗಗಳ ಉದ್ದೇಶಗಳನ್ನು ಸಫಲಗೊಳಿಸಿಕೊಡುವ ಕಾರ್ಯದಲ್ಲಿ ಸರ್ಕಾರಿ ಉದ್ಯೋಗದ ಕಾರ್ಯದಕ್ಷತೆಯು ಕಂದಿಕುಂದದಂತೆ ನೋಡಿಕೊಳ್ಳಬೇಕೆಂಬುದು. ಇದೇನೋ ನ್ಯಾಯವಾದ ವಿಷಯವೇ. ಗೌರ್ನಮೆಂಟಿನವರು ಈ ಅಪ್ಪಣೆಯನ್ನು ಆಚರಣೆಗೆ ತರುವುದರಲ್ಲಿ ಸರ್ಕಾರದ ಕಾರ್ಯದಕ್ಷತೆಗೆ ಸ್ವಲ್ಪವೂ ಲೋಪಬಾರದಂತೆ ಜಾಗರೂಕತೆಯಿಂದ ನೋಡಿಕೊಳ್ಳುವರೆಂದು ನಾನು ದೃಢವಾಗಿ ಹೇಳಬಲ್ಲೆನು. ಆಯಾ ಉದ್ಯೋಗಗಳಿಗೂ ಗ್ರೇಡುಗಳಿಗೂ ಅವಶ್ಯಕವಾದ ವಿದ್ಯೆ ಮೊದಲಾದ ಯೋಗ್ಯತೆಗಳನ್ನು ಚೆನ್ನಾಗಿ ಪರಿಶೋಧನೆಯನ್ನು ಮಾಡಿಯೇ ವಿಧಾಯಕ ಮಾಡಲ್ಪಡುವುದು. ಈ ಯೋಗ್ಯತೆಗಳನ್ನು ಪಡೆಯದೆ ಇರುವ ಬ್ರಾಹ್ಮಣನಿಗೇ ಆಗಲಿ ಬ್ರಾಹ್ಮಣೇತರನಿಗೇ ಆಗಲಿ ಉದ್ಯೋಗಗಳು ಕೊಡಲ್ಪಡುವುದಿಲ್ಲ.

ಮೈಸೂರು ವರ್ತಮಾನಪತ್ರಿಕೆಗಳ ವಿಧಿಯ ವಿಚಾರದಲ್ಲಿ ಸ್ವಾರಸ್ಯವಾದ ಚರ್ಚೆಗಳು ನಡೆದುವು. ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಲೇಖನಗಳ ಸ್ವಭಾವವನ್ನು ನೋಡಿ ಕೆಲವು ಮೆಂಬರುಗಳು-ತಪ್ಪಿತಸ್ಥರಾಗುವ ಪತ್ರಿಕಾಕರ್ತರ ಮೇಲೆ ಕ್ರಮ ಜರುಗಿಸಲು ಈ ರೆಗ್ಯುಲೇಷನ್ನಿನಲ್ಲಿ ಕಠಿನವಾದ ನಿಬಂಧನೆಗಳು ಇರಬೇಕೆಂದು ಹೇಳಿದರು. ಒಬ್ಬ ಮೆಂಬರು ಕನ್ನಡದ ವರ್ತಮಾನಪತ್ರಿಕೆಗಳನ್ನೇ ನಿಲ್ಲಿಸಿಬಿಡಬೇಕೆಂದು ಹೇಳಿದರು. ಈ ರೆಗ್ಯುಲೇಷನ್ನಿನ ಕಠಿನವಾದ ನಿಬಂಧನೆಗಳನ್ನು ತೆಗೆದುಬಿಟ್ಟು ವರ್ತಮಾನಪತ್ರಿಕೆಗಳ ಮೇಲೆ ತಕ್ಕಷ್ಟು ಸರ್ಕಾರದವರ ಹತೋಟಿ ಇರುವಮಟ್ಟಿಗೆ ವಿಧಿಯನ್ನು ಬದಲಾಯಿಸಬೇಕೆಂಬುದೇ ಈ ಸಭೆಯವರ ಅಭಿಪ್ರಾಯವೆಂದು ನಾನು ನಂಬುತ್ತೇನೆ. ಈ ವಿಧಿಯನ್ನು ತಿದ್ದುಪಾಟುಮಾಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಪ್ರಜಾಪ್ರತಿನಿಧಿ ಸಭೆಯವರ ಅಭಿಪ್ರಾಯಗಳಿಗನುಸಾರವಾಗಿಯೇ ನಡೆಸಲ್ಪಡುವುದು. ಹೆಂಗಸರಿಗೆ ಮತಸ್ವಾತಂತ್ರ್ಯವನ್ನು ಕೊಡುವ ವಿಚಾರದಲ್ಲಿ ನಡೆದ ಚರ್ಚೆಯು ಸ್ವಾರಸ್ಯವಾಗಿದ್ದಿತು. ಇದು ಮೈಸೂರಿಗೆ ಒಂದು ಹೊಸ ವಿಷಯವಾಗಿದ್ದರೂ, ಬ್ರಿಟಿಷ್ ದೇಶದ ಕೆಲವು ಸಂಸ್ಥಾನಗಳಲ್ಲಿ ಈ ಸಂಬಂಧವಾದ ಚರ್ಚೆಗಳು ನಡೆದಿವೆ. ಕೆಲವು ಆಧಿಪತ್ಯಗಳಲ್ಲೂ, ಇತರ ದೇಶೀಯ ಸಂಸ್ಥಾನಗಳಲ್ಲೂ, ಸ್ಥಳಿಕ ಸಂಸ್ಥೆಗಳಿಗೂ ನ್ಯಾಯವಿಧಾಯಕ ಸಭೆಗಳಿಗೂ ಮೆಂಬರುಗಳನ್ನು ಚುನಾಯಿಸುವ ಸ್ವಾತಂತ್ರ್ಯವು ಸ್ತ್ರೀಯರಿಗೆ ಕೊಡಲ್ಪಟ್ಟಿರುವುದು. ಈ ಸಭೆಯಲ್ಲಾದರೊ ಈ ಸಂಬಂಧವಾದ ಚರ್ಚೆಗಳು ಬಹಳ ತೀಕ್ಷ್ಣರಾಗಿ ಮೂರು ಗಂಟೆಗಳ ಕಾಲ ನಡೆದು ಹೆಂಗಸರಿಗೆ ಈ ಅಧಿಕಾರವನ್ನು ವಹಿಸತಕ್ಕ ವಿಚಾರದಲ್ಲಿ ೩೯ ಮಂದಿ ಅನುಕೂಲವಾಗಿಯೂ, ೫೮ ಮಂದಿ ವಿರುದ್ಧವಾಗಿಯೂ ಅಭಿಮತಗಳನ್ನು ಕೊಟ್ಟಿರುವುದರಿಂದ ಈ ಸಭೆಯ ಅಭಿಪ್ರಾಯವು ಆ ಸ್ವಾತಂತ್ರ್ಯದ ವಿಷಯವಾಗಿ ವಿರುದ್ಧವಾಗಿದೆಯೆಂದೇ ಅರ್ಥವು. ಜಾಗ್ರತೆಯಾಗಿಯೇ ಈ ವಿಷಯದಲ್ಲಿ ಜನಾಭಿಪ್ರಾಯವು ಮಾರ್ಪುಗೊಂಡು, ಯೋಗ್ಯತೆಗಳನ್ನು ಪಡೆದಿರತಕ್ಕ ಹೆಂಗಸರಿಗೆ ಈ ಸ್ವಾತಂತ್ರ್ಯವನ್ನು ಕೊಡಬಹುದೆಂಬ ಅಭಿಪ್ರಾಯವು ಪ್ರಬಲಿಸಿ, ಸರ್ಕಾರಿ ಕಾರ್ಯಗಳಲ್ಲಿ ಭಾಗಿಗಳಾಗಬೇಕೆಂಬ ಸ್ತ್ರೀಯರ ನ್ಯಾಯವಾದ ಕೋರಿಕೆಯು ಕೈಕೂಡಲೆಂದು ನಾನು ಹಾರೈಸುವೆನು. ಇಷ್ಟರಲ್ಲೇ ಈ ವಿಷಯವು ನ್ಯಾಯವಿಧಾಯಕ ಸಭೆಯವರ ಪರ್ಯಾಲೋಚನೆಗೆ ತರಲ್ಪಡುವುದು.

ರಾಜ್ಯಾಡಳಿತದ ಕಾರ್ಯಕ್ರಮಗಳ ವಿಧಾನಗಳಲ್ಲಿ ಕೆಲವು ಸುಧಾರಣೆಗಳನ್ನು ಮಾಡಬೇಕೆಂದು ಈ ಸಾಯಂಕಾಲ ಚರ್ಚೆಗಳು ನಡೆದವು. ಈ ವಿಷಯದಲ್ಲಿ ಜನರಿಗೆ ಸ್ವಾಭಾವಿಕವಾಗಿ ಉಂಟಾಗಿರುವ ಅಭಿಲಾಷೆಗಳನ್ನು ಕುರಿತು ನಾನು ತುಂಬಾ ಸಾನುಭೂತಿಯುಳ್ಳವನಾಗಿರುವೆನು. ಗೌರ್ನಮೆಂಟಿನವರು ಇಂತಹ ವಿಚಾರಗಳಲ್ಲಿ ದುಡುಂ ಪ್ರವೇಶಮಾಡಲಾಗುವುದಿಲ್ಲ. ನಮ್ಮ ಸಂಸ್ಥಾನದ ಸ್ಥಿತಿಗತಿಗಳೂ ಬ್ರಿಟಿಷ್ ರಾಜ್ಯದ ಸೀಮೆಗಳ ಸ್ಥಿತಿಗತಿಗಳೂ ಒಂದೇ ಆಗಿರುವುದಿಲ್ಲ. ಆ ಸೀಮೆಗಳಲ್ಲಿ ಅನುಷ್ಠಾನದಲ್ಲಿರುವ ರಾಜ್ಯಾಡಳಿತ ಸಂಬಂಧವಾದ ಕಾರ್ಯಕ್ರಮಗಳನ್ನೇ ನಮ್ಮ ಸಂಸ್ಥಾನದಲ್ಲೂ ಆಚರಣೆಗೆ ತರಲಾಗುವುದಿಲ್ಲ. ಈ ವಿಷಯದಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಭಿಲಾಷೆಗಳನ್ನು ಶ್ರೀಮನ್ ಮಹಾರಾಜರವರಲ್ಲಿ ಅರಿಕೆಮಾಡುತ್ತೇನೆ. ಮುಂದಣ ಪ್ರಜಾಪ್ರತಿನಿಧಿ ಸಭೆಯ ಮುಂದೆ ಈ ಸಂಬಂಧವಾದ ಸುಧಾರಣೆಯ ಮಸೂದೆಯೊಂದನ್ನು ಚರ್ಚೆಗೆ ತರಲು ಸಾಧ್ಯವಾದೀತೆಂದು ನಂಬುತ್ತೇನೆ.

ಮಹಾಶಯರೇ,

ಈ ಭಾಷಣವನ್ನು ಮುಗಿಸುವುದಕ್ಕೆ ಮೊದಲು ಈ ಅಧಿವೇಶನದಲ್ಲಿ ಘನತರವಾದ ರೀತಿಯಲ್ಲಿ ನೀವು ನಡೆಸಿದ ಚರ್ಚೆಗಳಿಗಾಗಿಯೂ ಮತ್ತು ಸಭೆಯಲ್ಲಿ ನೀವು ತೋರಿಸಿರುವ ಪರಸ್ಪರ ಸೌಹಾರ್ದಕ್ಕೂ ನಾನು ಬಹಳವಾಗಿ ಮೆಚ್ಚಿರುತ್ತೇನೆ. ವಿಷಯಗಳ ಚರ್ಚೆಗಳು ನಡೆಯುತ್ತಿದ್ದಾಗ ನೀವು ಪ್ರದರ್ಶಿಸಿರುವ ರಾಜಭಕ್ತಿವಿಶ್ವಾಸಗಳನ್ನೂ, ಬರುವ ಜನವರಿ ತಿಂಗಳಲ್ಲಿ ನಮ್ಮ ಸಂಸ್ಥಾನಕ್ಕೆ ಶ್ರೀಮನ್ ಮಹಾರಾಜರವರ ಅತಿಥಿವರ್ಯರಾಗಿ ದಯಮಾಡಿಸುವವರಾಗಿರುವ ಪ್ರಿನ್ಸ್ ಆಫ್ ವೇಲ್ಸರವರ ಸುಸ್ವಾಗತದ ಬಗ್ಗೆ ನೀವು ಮಾಡಿರುವ ನಿರ್ಧಾರದ ವಿಚಾರವನ್ನೂ ಶ್ರೀಮನ್ ಮಹಾರಾಜರವರಲ್ಲಿ ಬಹಳ ಸಂತೋಷದಿಂದ ಅರಿಕೆಮಾಡುತ್ತೇನೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಪ್ರಶ್ನಾಂಶಗಳು.

(ಕಳೆದವಾರದ ಶೇಷ.)

(h) ವಿಚಾರಣೆ ಮಾಡಿರುತ್ತಾರೆ. ಆಕಸ್ಮಿಕವಾಗಿ ಬಿದ್ದ ಬೆಂಕಿಯಿಂದ 42,130 ರೂಪಾಯಿಯ ಬೆಲೆ ಬಾಳುವ ವಿದ್ಯುಚ್ಛಕ್ತಿಯ ಸಾಮಾನು ನಷ್ಟವಾಗಿದೆ. ಬೆಂಕಿ ಮೊದಲಾದವುಗಳಿಂದ ಪುನಃ ಅಂಥ ಲುಕ್ಸಾನಿಗೆ ಅವಕಾಶವಿಲ್ಲದಂತೆ ಏರ್ಪಾಡುಗಳನ್ನು ಮಾಡಿದೆ. ಈ ಅನಾಹುತಕ್ಕೆ ಯಾವ ನೌಕರನ ಉಪೇಕ್ಷೆಯೂ ಕಾರಣವಾಗಿರಲಿಲ್ಲವಾಗಿ, ನಷ್ಟಕ್ಕೆ ಯಾರನ್ನೂ ಜವಾಬ್ದಾರರನ್ನಾಗಿ ಮಾಡುವುದು ಸಾಧ್ಯವಲ್ಲ.

ಮಿ|| ಟಿ. ಸೈಯದ್ ಖಾಜಾ ಪೀರಾನ್ ಸಾಬರು, ಮುಸ್ಲಿಂ ಸಂಘ, ತರೀಕೆರೆ.—

ಪ್ರ.—(a) ತರೀಕೆರೆ ತಾಲ್ಲೂಕಿನ ಕಲ್ಹತ್ತಿ ನಾಲೆಯಿಂದ ಎಷ್ಟು ಕೆರೆಗಳಿಗೆ ನೀರು ಸರಬರಾಯಾಗುತ್ತಿದೆ?

(b) ಸದರಿ ನಾಲೆಯಿಂದ ನೀರು ಸರಬರಾಯಿ ಆಗುವುದರ ಮೂಲಕ ಯಾವ ಕೆರೆಗಳ ಕೆಳಗೆ ಬೆಳೆಗಳು ದೊರೆಯುತ್ತಿರುತ್ತವೆ?

(c) ಅಂಥ ಕೆರೆಗಳ ಕೆಳಗೆ ನೀರು ಇಲ್ಲದೆ ಬೆಳೆಗಳು ಕೆಟ್ಟುಹೋದ ಜಮೀನುಗಳ ಯಾವ ಹಿಡುವಳಿದಾರರಿಗಾದರೂ ಕಂದಾಯವನ್ನು ರಿಮಿಷನ್ ಮಾಡಿದೆಯೆ?

ಈ ಸಂದರ್ಭಗಳಲ್ಲಿ ರಿಮಿಷನ್ ಕೊಡದೆ ಇದ್ದಲ್ಲಿ, ಹಾಗೆ ಕೊಡದಿರುವುದಕ್ಕೆ ಕಾರಣಗಳೇನು?

(d) ದೋರ್ನಾಳು ಗ್ರಾಮದ ಸುಣ್ಣದಹಳ್ಳಿ ಕೆರೆಯ ಕೆಳಗಿನ ಜಮೀನುಗಳ ಹಿಡುವಳಿದಾರರಿಂದ ಕಂಟ್ರಿಬ್ಯೂಷನ್ ವಸೂಲಾದುದು ಯಾವಾಗ?

(e) ಸದರಿ ಕೆರೆಗೆ ಇದುವರಿವಿಗೂ ನಾಲೆಯನ್ನು ತೆಗೆಯದಿರುವುದಕ್ಕೆ ಕಾರಣವೇನು?

ಪಬ್ಲಿಕ್ ವರ್ಕ್ಸ್ ಇಲಾಖೆಯ ಸೆಕ್ರೆಟರಿಯವರು.—

ಉತ್ತರ.—(a) ಆರು ಕೆರೆಗಳು.

(b) (1) ರಾಮನಾಯಕನಕೆರೆ.
(2) ಚಿಕ್ಕೆರೆ.
(3) ದೊಡ್ಡಕೆರೆ.
(4) ಚಿಕ್ಕಾತೂರುಕೆರೆ.
(5) ಸೀತಾಪುರಕೆರೆ.
(6) ದಳವಾಯಿಕೆರೆ.

(c) ಇಲ್ಲ. ಬೆಳೆ ಕೆಟ್ಟುಹೋಯಿತೆಂದು ರಿಪೋರ್ಟುಗಳಿಲ್ಲ; ಆದಕಾರಣ ರಿಮಿಷನ್ ಪ್ರಸಕ್ತಿಗೇ ಅವಕಾಶವಿಲ್ಲ.

(d) 1912—13 ನೆಯ ವರ್ಷದಲ್ಲಿ.

(e) ಈಚೆಗೆ ಕಲ್ಹತ್ತಿ ನಾಲೆಯು ಪೂರೈಸಿದ ತರುವಾಯ ಈ ವಿಷಯವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಯಿತು. ಸುಣ್ಣದಹಳ್ಳಿ ಕೆರೆಗೆ ನೀರು ತರುವುದಕ್ಕಾಗಿ ಕೆಲವು ಚಿಲ್ಲರೆ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ರೆವಿನ್ಯೂ ಇಲಾಖೆಯವರೊಂದಿಗೆ ಆಲೋಚಿಸಿ ಈ ವಿಷಯದಲ್ಲಿ ಕ್ರಮಜರುಗಿಸುತ್ತಿದ್ದಾರೆ.

ಮಿ|| ಎಂ. ಎಚ್. ನಾರಾಯಣರಾಯರು, ಮೊಳಕಾಲ್ಮುರು ತಾಲ್ಲೂಕು.—

ಪ್ರ.—(a) ಸರ್ಕಾರಿ ಉದ್ಯೋಗಸ್ಥರಲ್ಲದ ವೈಸ್ ಪ್ರೆಸಿಡೆಂಟರುಗಳನ್ನು ಎಷ್ಟು ತಾಲ್ಲೂಕು ಬೋರ್ಡುಗಳಿಗೆ ನೇಮಿಸಲಾಗಿದೆ? ಅವರಲ್ಲಿ ಎಷ್ಟುಮಂದಿ ಚುನಾಯಿಸಲ್ಪಟ್ಟವ ಮತ್ತು ಎಷ್ಟುಮಂದಿ ನೇಮಿಸಲ್ಪಟ್ಟವರು?

(b) ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ಮಾಡಿರು ಹೆಚ್ಚು ಅಧಿಕಾರಗಳನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡಲಿಲ್ಲ?

(c) ಅಂತಹ ಹೆಚ್ಚು ಅಧಿಕಾರಗಳನ್ನು ಕೊಡುವ ಯವು ಪರ್ಯಾಲೋಚನೆಯಲ್ಲಿದೆಯೆ? ಇದ್ದ ಪಕ್ಷದಲ್ಲಿ, ನ್ನು ಯಾವ ತಾರೀಖಿನ ಲಾಗಾಯ್ತು ಕೊಡಲಾಗುವುದು?

ಸರ್ಕಾರದ ರೆವಿನ್ಯೂ ಇಲಾಖಾ ಸೆಕ್ರೆಟರಿಯವರು:

ಉತ್ತರ.—(a) ಸರ್ಕಾರಿ ಉದ್ಯೋಗಸ್ಥರಲ್ಲದ ವೈ ಪ್ರೆಸಿಡೆಂಟರುಗಳನ್ನು 61 ತಾಲ್ಲೂಕು ಬೋರ್ಡುಗಳಿಗೆ ನೇ ಸಲಾಗಿದೆ. ಈ ಪೈಕಿ 56 ಮಂದಿ ಚುನಾಯಿಸಲ್ಪಟ್ಟವ 5 ಮಂದಿ ನೇಮಿಸಲ್ಪಟ್ಟವರು.

(b) ಮತ್ತು (c) ತಮ್ಮ ಪ್ರಶ್ನೆಯು ಸ್ಪಷ್ಟವಾಗಿ ಖರ್ಚುಬಾಬಿನ ಅಧಿಕಾರಗಳನ್ನು ಕೊಡಬೇಕೆಂಬುದು ತಮ್ಮ ಅಭಿಪ್ರಾಯವಾಗಿದ್ದಲ್ಲಿ, ಆ ವಿಷಯವು ಪರ್ಯಾಲೋಚನೆಯಲ್ಲಿದೆ.

ಮಿ|| ಎಂ. ಎಚ್. ನಾರಾಯಣರಾಯರು, ಮೊಳಕಾಲ್ಮುರು ತಾಲ್ಲೂಕು.—

ಪ್ರ.—(a) ಮೊಳಕಾಲ್ಮುರುವಿನಲ್ಲಿ ಹೊಸ ಎ. ವಿ. ಸ್ಕೂಲು ಕಟ್ಟಡವನ್ನು ಕಟ್ಟಬೇಕೆಂಬ ವಿಷಯವು ಯಾವಾ ಮಂಜೂರಾಯಿತು?

(b) ಕಟ್ಟಡವನ್ನು ಇನ್ನೂ ಮುಗಿಸದಿರುವುದಕ್ಕೆ ಕಾರಣವೇನು?

(c) ಹೊಸ ಎ. ವಿ. ಸ್ಕೂಲು ಕಟ್ಟಡವನ್ನು ಜಾಗ್ರ ಯಾಗಿ ಮುಗಿಸಿ, ಬಾಲಿಕಾ ಪಾಠಶಾಲೆಯ ಉಪಯೋಗಕ್ಕಾಗಿ ಹಳೆಯ ಕಟ್ಟಡವನ್ನು ಬಿಟ್ಟುಕೊಡದಿರುವುದರಿಂದ ಬಾಲಿ ಯರ ವಿದ್ಯಾಭ್ಯಾಸಕ್ಕೆ ಉಂಟಾಗಿರುವ ಅನಾನುಕೂಲ ಸರ್ಕಾರದವರಿಗೆ ಗೊತ್ತಿದೆಯೇ?

(d) ಹೊಸ ಕಟ್ಟಡವು ಯಾವಾಗ ಮುಗಿಯುವದೆಂ ನಿರೀಕ್ಷಿಸಬಹುದು?

ಸರ್ಕಾರದ ಚೀಫ್ ಸೆಕ್ರೆಟರಿಯವರು.—

ಉತ್ತರ.—(a) 1916 ನೆಯ ಏಪ್ರಿಲ್ ತಿಂಗಳಲ್ಲಿ ಮಂಜೂರಾಯಿತು.

(b), (c) ಮತ್ತು (d) ಈ ವಿಷಯವನ್ನು ಸರ್ಕಾರದವರು ವಿಚಾರಿಸುವರು.

ಮಿ|| ಜಿ. ರಾಮಸ್ವಾಮಯ್ಯಂಗಾರ್ಯರು, ಹಾಸನ ತಾಲ್ಲೂಕು.—

ಪ್ರ.-(a) ಸಂಸ್ಥಾನದಲ್ಲಿರುವ ಬ್ರಾಹ್ಮಣರ ಸಂಖ್ಯೆ ಎಷ್ಟು

(b) ಬ್ರಾಹ್ಮಣರಿಂದ ಸಂದಾಯವಾದ ಜಮೀನು ಕಂದಾಯದ ಮೊಬಲಗು.

(c) ಸಂಸ್ಥಾನದಲ್ಲಿರುವ ಬ್ರಾಹ್ಮಣೇತರರ ಸಂಖ್ಯೆ ಮತ್ತು (d) ಬ್ರಾಹ್ಮಣೇತರರಿಂದ ಸಂದಾಯವಾದ ಜಮೀನು ಕಂದಾಯದ ಮೊಬಲಗು ಎಷ್ಟು?

ಸರ್ಕಾರದ ರೆವಿನ್ಯು ಇಲಾಖಾ ಸೆಕ್ರೆಟರಿಯವರು.—

ಉತ್ತರ.—(a) ಮತ್ತು (c) 1911 ನೆಯ ಇಸವಿಯ ಖಾನೇಷುಮಾರಿಯ ಪ್ರಕಾರ, ಒಟ್ಟು 57,05,359 ಜನಸಂಖ್ಯೆಯ ಪೈಕಿ ಬ್ರಾಹ್ಮಣರ ಸಂಖ್ಯೆಯು 1,93,137. 19 ನೆಯ ಇಸವಿಯ ಖಾನೇಷುಮಾರಿಯ ಲೆಕ್ಕಗಳು ಇನ್ನೂ ಸಿದ್ಧವಾಗಿಲ್ಲ.

(b) ಮತ್ತು (d) ಈ ಸಮಾಚಾರವು ದೊರಕುವುದಿಲ್ಲ; ಮತ್ತು ಜಮೀನು ಹಿಡುವಳಿದಾರರ ಪಂಗಡಗಳ ವಿವರಣೆಯು ವಿಧಾಯಕವಾದ ಗ್ರಾಮವಾರ್ ಲೆಕ್ಕಗಳಲ್ಲಿ ವ್ಯಕ್ತವಾಗು ದಿಲ್ಲವಾದುದರಿಂದ ಅದನ್ನು ಶೇಖರಿಸುವುದು ಸಾಧ್ಯವಲ್ಲ.

(ಸಶೇಷ.)

೧೯೨೧ ನೆಯ ಇಸವಿ ಅಕ್ಟೋಬರ್ ತಾ|| ೩೦ರಿಂದ ೧೯೨೧ ನೆಯ ನವಂಬರ್ ತಾ|| ೫ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಆಶ್ವೀಜ ಬಹುಳ ಚತುರ್ದಶಿಯಿಂದ ಕಾರ್ತೀಕಶುದ್ಧ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲ ಮಾ
30	[1] ಭಾನು	ಚ-ಉ	0-2 55-50	ಚಿತ್ತ	23-47	14
31	[2] ಸೋಮ	ಪಾಡ್ಯ	53-11	ಸ್ವಾತಿ	22-15	15
1	ಮಂಗಳ	ಬಿದಿ	51-40	ವಿಶಾ	21-45	16
2	ಬುಧ	ತದಿ	51-22	ಅನೂ	22-24	17
3	ಗುರು	ಚೌತಿ	52-25	ಜ್ಯೇಷ್ಠ	24-15	18
4	ಶುಕ್ರ	ಪಂಚ	54-44	ಮೂಲ	22-39	19
5	ಶನಿ	ಷಷ್ಠಿ	58-16	ಪೂಷಾ	31-45	20

(1) ಸರ್ವತ್ರಾಮಾವಾಸ್ಯ, ನರಕಚತುರ್ದಶಿ, ಕೇದಾರೇಶ್ವರವ್ರತ (2) ದೀಪಾವಳೀ, ಕಾಮಧೇನುಪೂಜಾ, ಬಲೀಂದ್ರಪೂಜಾ, ಕಾರ್ತೀ ಸೋಮವಾರಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರು ಸ್ಟಾರ್

REGISTERED No. M. 124.

REGISTERED No. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಚಿಹ್ನಿತಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮುಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸೆ ೧೯೨೧ ನೆಯ ಇಸವಿ ನವಂಬರ್ ತಾರೀಖು ೬ ನೆಯ ಭಾನುವಾರ ಸಂಚಿಕೆ ೪೪

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
42 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಸಾಮಾನುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಸಾಮಾನುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಸಾಮಾನು ಕಳುಹಿಸಲಾಗುವುದು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ		ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ಬೆಂಡು	,, 0-8-0	,, 1-0-0
ಅನಕ್ಕಂಠ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರಮೂಲಕ ತಿಳಿಯುವಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
36 ಕಂಪನಿ. ಚೌಕಂಬಾ ಕಾಶೀ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 25

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಸಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಕಾಗದದ ಬೆಲೆಯು ತಗ್ಗಾಗಿದ್ದರೂ ಅನೇಕರ ಕೋರಿಕೆಯ ಮೇರೆಗೆ ಈ ಗ್ರಂಥದ ದ್ವಿತೀಯ ಮುದ್ರಣವನ್ನು ಮಾಡಿಸಿ ಪೂರೈಸಿರುವೆವು. ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦ ಅಂಚೆವೆಚ್ಚ ಬೇರೆ.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಟೀಕ ವೀರಶೈವ ವಿವಾಹವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಈಗ ತಾನೆ ಅಚ್ಚಾಗಿ ಕ್ರಯಕ್ಕೆ ಸಿದ್ಧವಾಗಿದೆ.

ಮೈಸೂರು ಸೀಮೆಯಲ್ಲಿ ಕೈತೋಟಗಳ ವ್ಯವಸಾಯ.

ಈ ಪುಸ್ತಕವು ಹಿಂದೆ ಲಾಲ್‌ಬಾಗ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಜಿ. ಕ್ಯಾಮಿರಾನ್ ಸಾಹೇಬರಿಂದ ಇಂಗ್ಲೀಷು ಭಾಷೆಯಲ್ಲಿ ರಚಿತವಾಗಿ ಮೈಸೂರು ಸಂಪದಭ್ಯುದಯ ಸಮಾಜದ ವ್ಯವಸಾಯ ಶಾಖೆಯವರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಲ್ಪಟ್ಟಿರುತ್ತದೆ. ತರಕಾರಿ ಬೆಳೆಯತಕ್ಕವರಿಗೂ ಫಲಪುಷ್ಪ ವ್ಯವಸಾಯಗಾರರಿಗೂ ಅತ್ಯಂತ ಉಪಯೋಗವಾದದ್ದು. ಕ್ರಯ ಒಂದು ರೂಪಾಯಿ ಎಂಟಾಣೆ.

ಈ ಪುಸ್ತಕವು ದೊರೆಯುವ ಸ್ಥಳ.
ಕ್ಯೂರೇಟರ್, ಗೌರ್ನಮೆಂಟ್ ಬುಕ್ ಡಿಪೋ,
ಬೆಂಗಳೂರು ಸಿಟಿ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರು ಈ ವಾರದಲ್ಲಿ ಮತ್ತೆ ನೀಲಗಿರಿಗೆ ದಯಮಾಡಿಸುವವರಾಗಿದ್ದಾರೆ.

ರಾಜಧಾನಿಯ ಲಷ್ಕರ್ ಮೊಹಲ್ಲಾ ಆಸ್ಪತ್ರೆ ರೋಡಿನಲ್ಲಿ ಒಂದೇ ಮನೆಯೊಳಗೆ ೧ ವಾರಕಾಲದಲ್ಲಿ ೪ ಪ್ಲೇಗು ಮರಣಗಳಾಗಿವೆ.

ಸ್ವಾತಿಮಳೆಯು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಲವುಕಡೆ ಚೆನ್ನಾಗಿ ಹೊಯ್ದು ಸಾಕುಮಾಡಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲೂ ಸಮೃದ್ಧವಾಗಿ ಆಗಿರುವುದೆಂದು ತಿಳಿದುಬಂದಿದೆ.

ಬಹುಕಾಲ ರಾಜಧಾನಿಯಲ್ಲಿ ಜವಳಿ ವರ್ತಕರೂ, ಮ್ಯುನ್ಸಿಪಲ್ ಕೌನ್ಸಿಲರೂ ಸರಸಿಗಳೂ ಆಗಿದ್ದ ಮ|| ಕುಂದೂರು ಶ್ರೀಕಂಠಯ್ಯನವರು ಕಳೆದವಾರ ಸ್ವರ್ಗಸ್ಥರಾದರೆಂದು ತಿಳಿಯಿಸಲು ವ್ಯಸನಪಡುತ್ತೇವೆ.

ಆಂಗ್ಲ ಯುವಸಾರ್ವಭೌಮರು ರಾಜಧಾನಿಗೆ ದಯಮಾಡಿಸಿದ ಕಾಲದಲ್ಲಿ ಇಲ್ಲಿಯ ಮ್ಯುನ್ಸಿಪಾಲಿಟಿಯವರು ಬಡಬಗ್ಗರಿಗೆ ಅಕ್ಕಿಯನ್ನೂ ಬಟ್ಟೆಬರೆಯನ್ನೂ ಧರ್ಮವಾಗಿ ಹಂಚುವುದಕ್ಕೆ ಏರ್ಪಡಿಸಿದ್ದಾರೆ. ಪಾಠಶಾಲೆಗಳಲ್ಲಿ ತಿಂಡಿಗಳು ಹಂಚಲ್ಪಡುವುವು.

ದಿವಾನ್ ಸರ್ ಕಾಂತರಾಜಅರಸಿನವರು ವಿಶ್ರಾಂತಿಗಾಗಿ ೧ ವಾರ ರಜಾ ಪಡೆದು ಕಳೆದ ತಾ|| ೨೯ರಲ್ಲಿ ಕೊಡೆಕೆನಾಲ್ ಎಂಬ ಪರ್ವತಪ್ರಾಂತಕ್ಕೆ ದಯಮಾಡಿಸಿರುವರು. ಆ ಕಾಲದಲ್ಲಿ ಮ|| ಎ. ಆರ್. ಬಾನರ್ಜಿಯವರು ಆಕ್ಟಿಂಗಾಗಿ ದಿವಾನಗಿರಿಯನ್ನು ವಹಿಸಿರುವರು.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯ ಮುಕ್ಕಾಮು ಈ ಕೆಳಗೆ ಕಂಡ ಮೇರೆಗೆ ಏರ್ಪಟ್ಟಿದೆ. ಬುಕ್ಕಾಂಬುಧಿ-ನವಂಬರ್ ತಾ|| ೩-೪. ಚೀರನಹಳ್ಳಿ ತಾ|| ೫. ರಾಮಗಿರಿ ತಾ|| ೬-೭-೮. ಹೋದಿಗ್ಗೆರೆ ತಾ|| ೯-೧೦. ಚೆನ್ನಗಿರಿಗೆ ತಾ|| ೧೧ರ ಬೆಳಗಿನ ೮ ಗಂಟೆಗೆ ದಯಮಾಡಿಸುವುದು.

ಕೊಲ್ಲಾಪುರ ಸಂಸ್ಥಾನದಲ್ಲಿರುವ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠದ ಚರಮೂರ್ತಿಗಳಾದ ಶ್ರೀ ಶಾಂತವೀರಸ್ವಾಮಿಗಳು ಬುಕ್ಕಾಂಬುಧಿಯಲ್ಲಿ ಶಿವೈಕ್ಯರಾದರೆಂದು ಕೇಳಿ ವಿಷಾದಿಸುತ್ತೇವೆ. ಇವರು ಅಸ್ಖಲಿತ ಬ್ರಹ್ಮಚರ್ಯೆಯಿಂದ ಅತ್ಯಂತ ಸಾತ್ವಿಕರಾಗಿಯೂ ಸದಾಚಾರಪರಾಯಣರಾಗಿಯೂ ಭಕ್ತಮಂಡಲಿಯಲ್ಲಿ ವಿಶೇಷಾದರವುಳ್ಳವರಾಗಿಯೂ ಇದ್ದರು.

ರಾಜಧಾನಿಯ ಪೌರಾಣೀಕ ರಾಮಾಭಟ್ಟರ ಮಗ ೨೫ ವರ್ಷದ ಯುವಕನು ತನ್ನ ಮೇಲಾಗಿದ್ದ ಸಿವಿಲ್‌ಕೋರ್ಟಿನ ಡಿಕ್ರಿಗಾಗಿ ಈ ತಾ|| ೩ರಲ್ಲಿ ಹಿಡಿಯಲ್ಪಟ್ಟು ಕೋರ್ಟಿಗೆ ಕರೆ

ದುಕೊಂಡು ಹೋಗಲ್ಪಟ್ಟಿದ್ದು ಸಾಯಂತರದಲ್ಲಿ ಬಿಡಲ್ಪಟ್ಟ ಮೇಲೆ ಸಮೀಪದಲ್ಲಿದ್ದ ಕುಕ್ಕರಹಳ್ಳಿ ಕೆರೆಯೊಳಗೆ ಬಿದ್ದು ಆತ್ಮಹತ್ಯ ಮಾಡಿಕೊಂಡನೆಂದು ತಿಳಿಯಬರುತ್ತದೆ.

ಅರಮನೆಯ ಹಿಂದೂಬ್ಯಾಂಡ್ ಮ್ಯಾಸ್ಟರಾಗಿದ್ದ ವೆಂಕಟಪ್ಪನವರು ಕೇಕಾಲದಿಂದ ಅಸ್ವಸ್ಥರಾಗಿದ್ದು ಮೊನ್ನೆ ಶನಿವಾರ ಸ್ವರ್ಗಸ್ಥರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಮೈಸೂರು ಹಿಂದೂಬ್ಯಾಂಡು ಉತ್ಕೃಷ್ಟತೆಯನ್ನು ಪಡೆಯುವುದಕ್ಕೆ ಇವರ ಮೆಹನತ್ತೇ ಬಹಳ ಮುಖ್ಯವಾಗಿತ್ತು. ಕೆಲ ತಿಂಗಳಿಂದ ಇವರಿಗೆ ತುಂಬಾ ಸಂಬಳದ ಪೆನ್ಷನ್ನನ್ನು ಶ್ರೀಮನ್ಮಹಾರಾಜರು ಅನುಗ್ರಹಿಸಿ, ಇವರ ಕುಮಾರನಿಗೆ ಬ್ಯಾಂಡ್ ಮ್ಯಾಸ್ಟರ್ ಕೆಲಸವನ್ನು ದಯಪಾಲಿಸಿರುವರು.

ಕೊಳ್ಳೇಗಾಲದಲ್ಲಿ ಕನ್ನಡ ಮತ್ತು ಇಂಗ್ಲೀಷನ್ನು ಓದುತ್ತಿರುವ ಪರಸ್ಥಳದ ವೀರಶೈವವಿದ್ಯಾರ್ಥಿಗಳ ವಾಸಕ್ಕೂ ಭೋಜನಕ್ಕೂ ಬಹಳ ತೊಂದರೆಯಾಗಿರುವದನ್ನು ಮುಡುಗುಂಡದ ಮ|| ಗುಲಿಕಾರ್ ಮಾದಪ್ಪನವರು ನೋಡಿ ಕನಿಕರಪಟ್ಟು ಇವರುಗಳ ಉಪಯೋಗಾರ್ಥವಾಗಿ ಒಂದು ವೀರಶೈವ ಹಾಸ್ಟಲನ್ನು ಕೊಳ್ಳೇಗಾಲದಲ್ಲಿ ಕಟ್ಟಿಸಲು ೧೦೦೦೦ ರೂಪಾಯಿಗಳನ್ನು ಕೊಡಲು ವಾಗ್ದಾನಮಾಡಿರುವರೆಂದು ಕೇಳಿ ಅವರನ್ನು ಈ ಸತ್ಕಾರ್ಯಕ್ಕಾಗಿ ವಂದಿಸುತ್ತೇವಲ್ಲದೆ ಆ ತಾಲ್ಲೂಕಿನ ಇತರ ಶ್ರೀಮಂತರುಗಳು ಇವರ ಮೇಲುಪಂಙ್ತಿಯನ್ನು ಅನುಸರಿಸಲೆಂದೂ, ಕಟ್ಟಡದ ಕಾರ್ಯವು ಕೂಡಲೆ ಆರಂಭಗೊಳ್ಳಲೆಂದೂ ಅಪೇಕ್ಷಿಸುತ್ತೇವೆ.

ಬೆಂಗಳೂರಿನ ಬಳೇಪೇಟೆಯಲ್ಲಿರುವ ತಮ್ಮ ಮಠದಲ್ಲಿ ಅಲ್ಲಿಯ ಕುರುಬಜನವರ್ಗದ ಕೆಲ ಪ್ರಮುಖರು ಸಭೆಗೂಡಿ ತಮ್ಮ ಜನರ ವಿದ್ಯಾದಿ ಅಭಿವೃದ್ಧಿಗಳಿಗಾಗಿ ಯಾವ ಏರ್ಪಾಟನ್ನು ಮಾಡಬೇಕೆಂಬುದನ್ನು ಕುರಿತು ಆಲೋಚಿಸಿ ಅದಕ್ಕಾಗಿ ಒಂದು ಮ್ಯಾನೇಜಿಂಗ್‌ಕಮಿಟಿಯನ್ನು ನಿಯಮಿಸಿದರೆಂದು ಕೇಳಿ ಸಂತೋಷಿಸುತ್ತೇವೆ. ಸಂಸ್ಥಾನದಲ್ಲಿರುವ ಎಲ್ಲಭಾಗದ ಕುರುಬವರ್ಗದ ಜನರೂ ಇಂಥ ಸ್ವಜನಾಭಿವೃದ್ಧಿವಿಷಯದಲ್ಲಿ ಪ್ರೋತ್ಸಾಹ ಸಾಹಾಯ್ಯಗಳನ್ನು ಮಾಡುವುದು ಅತ್ಯವಶ್ಯಕವಾಗಿರುತ್ತದೆ. ಸಕಲ ಜನವರ್ಗಗಳೂ ಮುಖ್ಯವಾಗಿ ಪಂಚಮರು ಕೂಡ ಆತ್ಮೋದ್ಧಾರದಲ್ಲಿ ಎಚ್ಚರುಗೊಂಡಿರುವಾಗ ಕುರುಬಜನವರ್ಗದಂಥ ಪ್ರಮುಖಜನರು ತಟಸ್ಥರಾಗಿರುವುದು ಜಾಣತನವಲ್ಲ.

ಮಿ|| ಪುಸ್ಸಿಫೂಟ್ ಜಾನ್ಸನ್‌ರವರು ಕಳೆದ ತಾ|| ೩೦ರಲ್ಲಿ ಬೆಂಗಳೂರಿಗೆ ಬಂದರು. ಅಲ್ಲಿಯ ಗ|| ಹೈಸ್ಕೂಲು ಹಾಲಿನಲ್ಲಿ ಪುರಜನರು ಸುಸ್ವಾಗತಮಾಡಿ ಮರ್ಯಾದಿಸಿದರು. ಆ ಸಭೆಗೆ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ರಾ|| ಬ|| ಎಂ. ಶ್ಯಾಮರಾಯರು ರಾಜಸಭಾಭೂಷಣ ಫಾದರ್ ಟ್ಯಾಬರ್ಡ್, ಸಿ. ಎಸ್. ಬಾಲಸುಂದರಂಅಯ್ಯರೇ ಮೊದಲಾದ ಅನೇಕ ದೊಡ್ಡ ಮನುಷ್ಯರು ನೆರೆದಿದ್ದರು. ರಾ|| ಬ|| ಎಂ. ಶ್ಯಾಮರಾಯರ ಅಧ್ಯಕ್ಷತೆಯ ಕೆಳಗೆ ಮಿ|| ಜಾನ್ಸನ್‌ರವರು ಅಮೇರಿಕಾದ ಮಧ್ಯಪಾನನಿಷೇಧವಿಷಯವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಮಾಡಿದರು. ಸಾಯಂಕಾಲ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನೆರೆದಿದ್ದ ದೊಡ್ಡ ಸಭೆಯಲ್ಲೂ ಮತ್ತೊಂದುಪನ್ಯಾಸವನ್ನು ಮಾಡಿ ಆ ರಾತ್ರಿಯೇ ಈರೋಡಿಗೆ ಪ್ರಯಾಣಮಾಡಿದರು.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ನವಂಬರ್ [illegible] ೬ ನೆಯ ಭಾನುವಾರ.

ಮಿ|| ಪುಸ್ಸಿಫೂಟ್ ಜಾನ್ಸನ್‌ರವರ ಉಪದೇಶ.

ಮದ್ಯಪಾನ ನಿಷೇಧ ಪ್ರಯತ್ನದಲ್ಲಿ ತಮ್ಮ ಜೀವಿತವನ್ನೆಲ್ಲಾ ಸಮೆಯಿಸಿ ಜಗದ್ವಿಖ್ಯಾತರಾಗಿರುವ ಮಿ|| ಜಾನ್ಸನ್‌ರವರು ಭರತಖಂಡಕ್ಕೆ ಅಡಿಯಿಟ್ಟಂದಿನಿಂದ ಹೋದಹೋದ ಕಡೆಯಲ್ಲೆಲ್ಲಾ ಮದ್ಯಪಾನಾಭ್ಯಾಸ ನಿರ್ಮೂಲನ ಸಂಬಂಧವಾಗಿ ಮಾಡುತ್ತಿರುವ ಉಪನ್ಯಾಸಗಳಲ್ಲಿ ಅಮೇರಿಕಾವು ಕಳೆದ ೧ ಶತಮಾನದಿಂದಲೂ ಈ ದುರಭ್ಯಾಸ ನಿರ್ಮೂಲನಕ್ಕಾಗಿ ಎಂಥ ಪ್ರಯತ್ನಗಳನ್ನು ಮಾಡಿ ಜಯವನ್ನು ಹೊಂದಿ ಜಗತ್ತಿಗೆಲ್ಲಾ ಮಾರ್ಗದರ್ಶಕವಾಗಿರುವುದೋ ಅದನ್ನು ನಿರೂಪಿಸುತ್ತ ಬಂದಿದ್ದಾರೆ. ನಮ್ಮ ಭರತಖಂಡವು ಬಹುಕಾಲದಿಂದಲೂ ಮದ್ಯಪಾನವನ್ನು ಪಂಚಮಹಾಪಾತಕಗಳಲ್ಲಿ ಸೇರಿಸಿ ನಿಷೇಧಿಸಿಬಿಟ್ಟಿದ್ದಿತು. ಈಗ ಪರದೇಶ ಪ್ರಭುತ್ವ ಸಂಬಂಧದಿಂದಲೂ ಪ್ರಭುತ್ವಗಳ ಆತ್ಮಲಾಭ ದೃಷ್ಟಿಯಿಂದಲೂ ಮದದ್ರವ್ಯಗಳ ವ್ಯಾಪನೆಯು ದೇಶವಲ್ಲಿ ಹೆಚ್ಚಿಕೊಂಡಿರುತ್ತದೆ. ಸರ್ಕಾರದ ಬೊಕ್ಕಸಕ್ಕೆ ಈ ಶಾಖೆಯಿಂದ ಬಹು ದೊಡ್ಡ ಮೊತ್ತವು ಸಂಗ್ರಹವಾಗುತ್ತಿರುವುದರಿಂದ ಇದನ್ನು ಸಂಪೂರ್ಣವಾಗಿ ನಿಷೇಧಿಸಿ ತೊಲಗಿಸಿ ಬಿಡುವುದಕ್ಕೆ ಅವರು ಹಿಂಜರಿಯುತ್ತಿದ್ದಾರೆ. ಹಾಗೆ ಭಯಪಡಬೇಕಾದ ಅವಶ್ಯಕತೆಯಿಲ್ಲವೆಂಬುದಕ್ಕೆ ಈಗ ಮಿ|| ಜಾನ್ಸನ್‌ರವರು ಅಮೇರಿಕೆಯ ನಿದರ್ಶನವನ್ನು ಕೊಟ್ಟು ಹೇಳುತ್ತಿರುವುದೇನೆಂದರೆ—ಈ ಮದದ್ರವ್ಯಶಾಖೆಯನ್ನು ತೆಗೆದುಬಿಡುವುದರಿಂದ ಸರ್ಕಾರಕ್ಕೆ ಆದಾಯದಲ್ಲೊಂದು ಭಾಗವು ತಪ್ಪಿಹೋಗುವುದು ನಿಜವಾದರೂ ಅದರಂತೆ ವೆಚ್ಚವಾದರೂ ಕಡಿಮೆಯಾಗುವುದು. ಹೇಗೆಂದರೆ—ಕುಡಿಕತನದಿಂದಲೇ ಪ್ರಜೆಗಳಲ್ಲಿ ದುರ್ನೀತಿಯೂ ದುರಾಚಾರಗಳೂ ತಪ್ಪುಗಳೂ ಹೆಚ್ಚುವುವು. ಕುಡಿಕತನವು ತಪ್ಪಿದರೆ ಆ ಅಪರಾಧಗಳೂ ತಗ್ಗಿಹೋಗುವುವು. ಆಗ್ಗೆ ಕಾರಾಗೃಹಗಳ ಸಂಖ್ಯೆಯನ್ನು ತಗ್ಗಿಸಬಹುದು. ಪೊಲೀಸು ಕ್ರಿಮಿನಲ್ ಕೋರ್ಟುಗಳು ಇವುಗಳ ಸಂಖ್ಯೆಯನ್ನೆಲ್ಲಾ ಕಡಮೆಮಾಡಬಹುದು. ಅನಾಥ ಶರಣಾಲಯಗಳು ಅನವಶ್ಯಕವಾಗುವುವು. ಇವುಗಳಿಗಾಗಿ ಮಾಡಲ್ಪಡುತ್ತಿರುವ ವೆಚ್ಚವೆಲ್ಲವೂ ಉಳಿಯುವುದು. ಅಮೇರಿಕಾದಲ್ಲಿ ಹೀಗೆಯೇ ಆಯಿತು. ಪ್ರಜೆಗಳು ದುರ್ವ್ಯಸನದಿಂದ ವಿಮುಕ್ತರಾದ ಕಾರಣ ಅವರಲ್ಲಿ ದುಡ್ಡು ಉಳಿಯುವುದಕ್ಕವಕಾಶವಾಯಿತು. ಐಶ್ವರ್ಯವೃದ್ಧಿಯಾದಂತೆಲ್ಲಾ ಸರ್ಕಾರಕ್ಕೆ ವರಮಾನದ ತೆರುಗೆಯ ಮೂಲಕ ಆದಾಯ ವೃದ್ಧಿಯಾಯಿತು. ಅದುಕಾರಣ ಮದದ್ರವ್ಯಶಾಖೆಯು ತಪ್ಪಿಹೋದರೆ ಸರ್ಕಾರದ ವೆಚ್ಚಗಳಿಗೆ ಹಣ ಸಾಲದೆ ಹೋಗುವುದೆಂದು ಭಯಪಡಲು ಕಾರಣವಿಲ್ಲವೆಂದು ಜಾನ್ಸನ್‌ರವರು ಹೇಳಿದಮಾತು ಭರತಖಂಡದ ಎಲ್ಲ ಪ್ರಭುತ್ವಗಳವರಿಗೂ ಗಮನೀಯವಾಗಿರುತ್ತದೆ.

ಇದೇ ಸಂದರ್ಭದಲ್ಲಿ ಮಿ|| ಜಾನ್ಸನ್‌ರವರು ಹೇಳಿದ ಮತ್ತೊಂದು ವಿಷಯವು ಪ್ರಜೆಗಳಿಗೆ ಮುಖ್ಯವಾಗಿ ಹಿಂದುಳಿದ ಜನವರ್ಗಗಳಿಗೆ ಗಮನೀಯವಾಗಿರುತ್ತದೆ. ಅದೇನೆಂದರೆ—ಮದ್ಯಪಾನ ನಿರೋಧವು ಪಿಕೆಟಿಂಗಿನಿಂದ ಅಷ್ಟು ಪೂರ್ತಿಯಾಗಿ ನೆರವೇರುವುದಿಲ್ಲ. ಅಮೇರಿಕಾದಲ್ಲಿ ಇದು ಅನುಭವಸಿದ್ಧವಾಗಿದೆ. ಮತ್ತೇನೆಂದರೆ—ಪ್ರಜೆಗಳು ರಾಜಕೀಯಸಭೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವಾಗ್ಗೆ ತಮ್ಮ ಓಟುಗಳನ್ನು ಕೊಡುವ ಸಂದರ್ಭದಲ್ಲಿ ಉಮೇದುವಾರರು ತಮ್ಮಭಿಪ್ರಾಯಕ್ಕೆ ಅನುಮೋದಿಸುವವರಾಗಿದ್ದಲ್ಲಿ ಅಂಥವರಿಗೇ ತಮ್ಮ ಓಟುಗಳನ್ನು ಕೊಡುತ್ತಾಬಂದರು. ಈಗ ಅಮೇರಿಕಾದ ಅಧ್ಯಕ್ಷರಾಗಿರುವ ಹಾರ್ಡಿಂಗ್‌ರವರು ಮದ್ಯಪಾನ ನಿಷೇಧಕಕೋಟಿಗೆ ಸೇರಿದವರು. ಅದುಕಾರಣವೇ ೫ ಕೋಟಿಗಿಂತ ಹೆಚ್ಚಾದಷ್ಟು ಓಟುಗಳು ಅವರಿಗೆ ಸಿಕ್ಕಿದುವು, ಎಂದು ಹೇಳಿರುತ್ತಾರೆ. ಈ ತತ್ವವನ್ನನುಸರಿಸಿ ದೇಶದ ಮಹಾಪ್ರಜೆಗಳು ತಮ್ಮ ಇಷ್ಟಾರ್ಥಕ್ಕೆ ಅನುಕೂಲರಾಗಿರುವವರನ್ನೇ ರಾಜ್ಯಾಂಗಸಭೆಗಳಲ್ಲಿ ತಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸುತ್ತಾಬಂದರೆ ಪ್ರಜಾಶಯಕ್ಕೆ ಜಯವು ಸುಲಭವಾಗಿ ಸಿದ್ಧಿಸುವುದು ಎಂಬುದೇ ಅವರು ಮಾಡಿದ ಉಪದೇಶವಾಗಿರುತ್ತದೆ.

ಈ ಉಪದೇಶತತ್ವವನ್ನು ಅನುಸರಿಸುವುದರಿಂದ ಪ್ರಜಾಶಯಸಿದ್ಧಿಗೆ ಸರ್ವತ್ರ ನಿಷ್ಕಂಟಕವಾದ ದಾರಿಯಾಗುತ್ತದೆ. ಹಿಂದುಳಿದ ಜನವರ್ಗಗಳು ಕೂಡ ತಮ್ಮ ಹಿತಪ್ರಾಪ್ತಿಗಾಗಿ ಇತರ ವಿಧದಲ್ಲಿ ಪಾಡುಪಡುವುದಕ್ಕಿಂತಲೂ ತಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡು ತಮ್ಮ ಆಶಯಕ್ಕೆ ಪರಿಪೋಷಣೆಯನ್ನು ಕೊಡುವ ತಮ್ಮೊಳಗಣ ಜನರನ್ನೇ ತಮ್ಮ ಪ್ರತಿನಿಧಿಗಳನ್ನಾಗಿ ಲೋಕಲ್ ಬೋರ್ಡುಗಳು ಪ್ರಜಾಪ್ರತಿನಿಧಿಸಭೆ ನಿಯಮನಿರ್ಮಾಣಸಭೆ ಮೊದಲಾದುವುಗಳಿಗೆಲ್ಲಾ ಓಟುಕೊಟ್ಟು ಆರಿಸಿ ಕಳುಹಿಸುತ್ತಾ ಬಂದರೆ ತಮ್ಮ ಪಕ್ಷಕ್ಕೆ ಜಯವುಂಟಾಗಲು ಸಹಾಯವಾಗುತ್ತದೆ. ಮಿ|| ಜಾನ್ಸನ್‌ರವರಂಥ ಕಾರ್ಯದಕ್ಷರ ಅನುಭವಪೂರ್ವಕವಾದ ಉಪದೇಶಗಳನ್ನು ಪುರೋವೃದ್ಧಿಗೆ ಬರಲೆಳಸುವ ದೇಶದ ಪ್ರಭುತ್ವದವರೂ ಪ್ರಜೆಗಳೂ ಸಹ ಗಮನಿಸುವುದು ಅವಶ್ಯಕವಾಗಿರುತ್ತದೆ.

ಶ್ರೀಮದಾಂಗ್ಲ ಯುವರಾಜರವರು.

ಘನತೆಯನ್ನೈದಿದ ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್‌ರವರು ಭರತಖಂಡಕ್ಕೆ ಪ್ರಯಾಣೋನ್ಮುಖರಾಗಿ ಕಳೆದ ತಾ|| ೨೬ರಲ್ಲಿ ಲಂಡನ್ ಪಟ್ಟಣದಿಂದ ಹೊರಡುವುದಕ್ಕೆ ಮುಂಚೆ ಮುಖ್ಯಮಂತ್ರಿ ಲಾಯಡ್ ಜಾರ್ಜ್‌ರವರೊಡನೆ ಸ್ವಲ್ಪಹೊತ್ತು ಸಂಭಾಷಿಸಿಕೊಂಡು ನಿಲ್ದಾಣಕ್ಕೆ ದಯಮಾಡಿಸಿದರು. ಅಲ್ಲಿಗೆ ಜಾರ್ಜ್ ಸಾರ್ವಭೌಮರೂ ರಾಜ್ಞಿಯವರೂ ಡ್ಯೂಕ್ ಆಫ್ ಕನ್ನಾಟ್‌ರವರೂ ದಯಮಾಡಿಸಿ ನಿಂತಿದ್ದು ಯುವರಾಜರನ್ನು ಹರಸಿ ಸಾಗಕಳುಹಿಸಿದರು. ಇವರು ಪೋರ್ಟ್ಸ್‌ಮತ್ತಿನಲ್ಲಿ ರಿನೌನ್ ಎಂಬ ಹಡಗನ್ನು ಹತ್ತಿದ ಕೂಡಲೇ ಮರ್ಯಾದಾರ್ಥವಾದ ೨೧ ಗುಂಡುಗಳು ಹಾರಿಸಲ್ಪಟ್ಟುವು. ಆ ಹಡಗಿನ ಜತೆಗೆ ಡನೆಡಿನ್ ಎಂಬ ಕ್ರ್ಯುಯಿಝರೂ ಅನುವರ್ತಿಸಿ ಹೊರಟಿತು. ಅವರು ಮರುದಿವಸ ಜಿಬ್ರಾಲ್ಟರನ್ನು ಸೇರಿ, ಅಲ್ಲಿಯ ಗೌರ್ನರಿಂದ ಸತ್ಕರಿಸಲ್ಪಟ್ಟು ಅಲಂಕೃತವಾಗಿದ್ದ ಆ ಪಟ್ಟಣಕ್ಕೆ ದಯಮಾಡಿಸಿ, ಪುರಜನರ ವಿಜ್ಞಾಪನ ಪತ್ರವನ್ನು ಸ್ವೀಕರಿಸಿ ಸ್ವಲ್ಪಕಾಲವನ್ನು ವಿನೋದದಿಂದ ಅಲ್ಲಿ ಕಳೆದು ಅದೇ ದಿನವೇ ಹಡಗನ್ನೇರಿ ಮಾಲ್ಟಾದ ಕಡೆಗೆ ಪ್ರಯಾಣಮಾಡಿ ತಾ|| ೨ ರಲ್ಲಿ ಆ ಪಟ್ಟಣವನ್ನು ಸೇರಿದರು. ಅಲ್ಲಿಯೂ ರಾಜಯೋಗ್ಯವಾದ ಮರ್ಯಾದೆಗಳು ಅಧಿಕಾರಿಗಳಿಂದಲೂ ಪ್ರಜೆಗಳಿಂದಲೂ ನಡೆಯಿಸಲ್ಪಟುವು. ಈ ಮುಂದಣವಾರದಲ್ಲಿ ಅವರು ಭರತಖಂಡದ ಎಲ್ಲೆಯಲ್ಲಿ ಪದಾರ್ಪಣಮಾಡುವವರಾಗಿದ್ದಾರೆ. ತಾ|| ೧೭ರಲ್ಲಿ ಭರತಖಂಡದ ಮಹಾದ್ವಾರವಾದ ಬೊಂಬಾಯಿ ಪಟ್ಟಣದಲ್ಲಿ ಬಂದು ಇಳಿಯುತ್ತಾರೆ. ಅಲ್ಲಿ ಅವರ ಸುಖಾಗಮನ ಸತ್ಕರಣಗಳಿಗಾಗಿ ಘನತರವಾದ ಏರ್ಪಾಟುಗಳು ಜರುಗುತ್ತಿವೆ. ಅನೇಕ ಮಂದಿ ಸಂಸ್ಥಾನಾಧೀಶ್ವರರುಗಳೂ ಅಧಿಕಾರಿಗಳೂ ಪ್ರಜಾಪ್ರಮುಖರೂ ಇದಿರ್ಗೊಂಡು ಸನ್ಮಾನಿಸುವವರಾಗಿದ್ದಾರೆ. ಅವರು ಈ ದೇಶದಲ್ಲಿ ಸಂಚರಿಸುವ ಕಾಲದಲ್ಲೆಲ್ಲಾ ರಾಜಯೋಗ್ಯವಾದ ಸನ್ಮಾನಗಳು ಜರುಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಮ|| ಗಾಂಧಿಯವರೂ ಅವರ ಪಕ್ಷದ ಕೆಲವರೂ ಸಹ ಅವರ ಆಗಮನದಲ್ಲಿ ಅನಭಿಮತವನ್ನು ಸೂಚಿಸಿ, ಅವರು ಬಂದೆಡೆಯಲ್ಲೆಲ್ಲಾ ಹರತಾಳವನ್ನಾಚರಿಸಬೇಕೆಂದೂ ಅವರಿಗೋಸ್ಕರ ಮಾಡಲ್ಪಡುವ ಸನ್ಮಾನಸಮಾರಂಭಗಳು ಉತ್ಸವಗಳು ವಿನೋದಗಳು ಮೊದಲಾದುವುಗಳಲ್ಲಿ ಬೆರೆಯುವುದಕ್ಕೂ ನೋಡುವುದಕ್ಕೂ ಸಹ ಯಾರೂ ಹೋಗಕೂಡದೆಂದೂ ಪ್ರಕಟಿಸಿಕೊಳ್ಳುತ್ತಿದ್ದಾರೆ. ಆದರೆ ಭರತಖಂಡದಲ್ಲಿ ಇದಕ್ಕೆ ಅನುಮೋದಿಸುವವರು ಎಲ್ಲೋ ಸ್ವಲ್ಪ ಮಂದಿಗಳೇ ಇದ್ದಾರು. ಮ|| ಗಾಂಧಿಯವರು ಈ ವಿಷಯದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಸಮುಚಿತವಾದುದೆಂದು ಹೇಳಲು ಸಾಧ್ಯವಲ್ಲ. ಭರತಖಂಡದ ರಾಜಭಕ್ತಿ ಪಾವಿತ್ರ್ಯಕ್ಕೆ ಅದು ಕಳಂಕಪ್ರದವು. ಜಾರ್ಜ್‌ಸಾರ್ವಭೌಮರ ವಿಷಯದಲ್ಲಿ ಗೌರವಕೃತಜ್ಞತಾಬುದ್ಧಿಯುಳ್ಳವರು ಅವರಿಗಿಂತಲೂ ಹೆಚ್ಚಾದ ಪ್ರೀತಿಗೌರವಗಳನ್ನು ಅವರ ಈ ಜ್ಯೇಷ್ಠ ಚಿರಂಜೀವಿಗಳ ವಿಷಯಗಳಲ್ಲಿ ತೋರಿಸುವುದು ಅವಶ್ಯಕ. ಒಂದು ವೇಳೆ ಜಾರ್ಜ್‌ಸಾರ್ವಭೌಮರೇ ಈ ದೇಶಕ್ಕೆ ಬಂದಿದ್ದರೆ ಅವರ ವಿಷಯದಲ್ಲಿ ತಮ್ಮ ಅಸಮಾಧಾನಾತೃಪ್ತಿಗಳನ್ನು ತೋರಿಸುವುದಕ್ಕಾಗಿ ಹೇಗಾದರೂ ನಡೆಯಬಹುದಾಗಿದ್ದಿತು. ಏಕೆಂದರೆ ರಾಜ್ಯಾಧಿಕಾರ ಸೂತ್ರವು ಅವರ ಕೈಯಲ್ಲಿದೆ. ಈ ಪ್ರಿನ್ಸ್ ಆಫ್ ವೇಲ್ಸ್‌ರವರಾದರೊ ಯಾವ ನಿಗ್ರಹಾನುಗ್ರಹಾಧಿಕಾರವನ್ನೂ ಪಡೆದು ಬಂದವರಲ್ಲ. ಇವರು ಸಾಮ್ರಾಜ್ಯಕ್ಕೊಳಪಟ್ಟ ಈ ಖಂಡವನ್ನು ದರ್ಶನಮಾಡಿಕೊಂಡು ಹೋಗುವುದಕ್ಕೆ ಮಾತ್ರವೇ ಬರುವವರಾಗಿದ್ದಾರೆ. ಈ ಕಾರಣವನ್ನನುಲಕ್ಷಿಸಿ ಇವರ ವಿಷಯದಲ್ಲಿ ಮಾತ್ರ ಭಾರತೀಯರೆಲ್ಲಾ ತಮ್ಮ ಸಹಜಸೌಜನ್ಯಗೌರವಗಳಿಗನುಗುಣವಾಗಿ ಮರ್ಯಾದಿಸಿ ನಡೆದುಕೊಳ್ಳಬಹುದೆಂದು ಪ್ರಕಟಿಸಿ ಗಾಂಧಿಯವರು ಪ್ರಭುತ್ವಾಧಿಕಾರಿಗಳ ವಿಷಯದಲ್ಲಿ ಯಾವ ಅಸಹಾಯವನ್ನು ವ್ಯಕ್ತಪಡಿಸಿದ್ದರೂ ಅನುಚಿತವೆನಿಸಿಕೊಳ್ಳುತ್ತಿರಲಿಲ್ಲ. ಮ|| ಗಾಂಧಿಯವರ ಸ್ಥಿತಿಯೂ ನಡವಳಿಯೂ ಬರುಬರುತ್ತ ವಿಕಾರಕ್ಕೀಡಾಗುವುದೋ ಏನೋ ಎಂದು ಈಗಣ ಅವರ ಲೇಖನಭಾಷಣಗಳಿಂದ ವ್ಯಕ್ತವಾಗುತ್ತಿದೆ. ಮುಂದಣ ಸ್ಥಿತಿಯನ್ನು ಕಾಲವೇ ವ್ಯಕ್ತಪಡಿಸುವುದು. ಸದ್ಯಃ ಮ|| ಗಾಂಧಿಯವರೂ ಅವರ ಈಗಣ ಮಾತುಗಳೂ ಶಾಶ್ವತವಲ್ಲ. ಆಂಗ್ಲಸಾಮ್ರಾಜ್ಯದ ಮತ್ತು ಭರತಖಂಡದ ಅನ್ಯೋನ್ಯಾಶ್ರಯಗಳು ಶಾಶ್ವತವಾದುವುಗಳು. ಅದನ್ನು ಅನುಲಕ್ಷಿಸಿ ಭಾರತಪ್ರಜೆಗಳೆಲ್ಲಾ ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸರ ವಿಷಯದಲ್ಲಿ ಘನತರವಾದ ಸ್ವಾಗತಸನ್ಮಾನಗಳನ್ನು ಆಚರಿಸದಿರಲಾರರೆಂದು ನಂಬುತ್ತೇವೆ.

ಅಲಿಸೋದರರೇ ಮೊದಲಾದವರ [illegible] ವಿಚಾರಣೆ ಮತ್ತು ಶಿಕ್ಷೆ.

ಕರಾಚಿಪಟ್ಟಣದಲ್ಲಿ ಮೌ|| ಮಹಮ್ಮದಾಲಿಯವರೇ ಮೊದಲಾದ ೭ ಮಂದಿಗಳ ವಿಚಾರಣೆಯು ಜುಡಿಷಿಯಲ್ ಕಮಿಷನರ್ ಮಿ|| ಜೆ. ಸಿ. ಕೆನ್ನಡಿಯವರ ಮುಂದೆ ಕಳೆದ ತಿಂಗಳು ತಾ|| ೨೪ ರಿಂದ ಆರಂಭಗೊಂಡು ನಡೆದಿತು. ಟಿಕೆಟ್ಟನ್ನು ಪಡೆದ ಕೆಲವರನ್ನು ಮಾತ್ರ ಕೋರ್ಟಿನೊಳಕ್ಕೆ ಬಿಡುತ್ತಿದ್ದರು. ಅನೇಕ ಮಂದಿ ಯೂರೋಪ್ಯ ಸ್ತ್ರೀಯರೂ ಮಹಮ್ಮದಾಲಿಯವರ ಗಂಡು ಹೆಣ್ಣು ಮಕ್ಕಳೂ ಅಪರಾಧಿಗಳ ಕೆಲ ಸಂಬಂಧಿಗಳೂ ಕೋರ್ಟಿಗೆ ಬರುತ್ತಿದ್ದರು. ಸರ್ಕಾರದ ಪಕ್ಷದಿಂದ ಮಿ|| ಟಿ. ಜಿ. ಎಲ್‌ಫಿನ್‌ಸ್ಟನ್‌ರವರೂ (ಪಬ್ಲಿಕ್ ಪ್ರಾಸಿಕ್ಯೂಟರು) ಮತ್ತು ಸಿರೋಜ್ ಅಲ್ಸ್ಟನ್‌ರವರೂ, ಮೌಲಾನಾ ಇನಾಯತ್ತುಲ್ಲಾ ಎಂಬ ಮಹಮ್ಮದೀಯ ಧರ್ಮಶಾಸ್ತ್ರಜ್ಞರೂ ಸಹ ವಾದಿಸುವುದಕ್ಕೆ ಬಂದಿದ್ದರು. ಮ||ಗಳಾದ ದಯಾರಾಂ ಗಿಡುಮಲ್, ಸಿ. ಡಿ. ಲೋಬಾರಾಮಚಂದ್ ತುಲಸೀದಾಸ್, ಆರ್. ಡಿ. ಕೂಬ್ರಿಜ್, ಡಿ. ಕ್ರಿಚುಲುಯರೇ ಮೊದಲಾದ ೫ ಮಂದಿ ಸೈನಿಕರಿಗೆ ದುರ್ಬೋಧನೆಯನ್ನು ಮಾಡಲಿಕ್ಕೆ ಅಪರಾಧಿಗಳು ಪ್ರಯತ್ನಿಸಿದರೆಂಬ ಒಂದು ಕೇಸಿನಲ್ಲಿ ಮಾತ್ರ ಜ್ಯೂರರುಗಳಾಗಿಯೂ ಉಳಿದ ಛಾರ್ಜುಗಳಲ್ಲೆಲ್ಲಾ ಅಸೇಸರುಗಳಾಗಿಯೂ ನಿಯಮಿಸಲ್ಪಟ್ಟಿದ್ದರು. ಅಪರಾಧಿಗಳು ಕೋರ್ಟಿನ ವಿಷಯದಲ್ಲಿ ಭಯಭಕ್ತಿಗಳೊಂದೂ ಇಲ್ಲದೆ ಉದ್ದಂಡವಾಗಿಯೇ ನಡೆದುಕೊಂಡರು. ನ್ಯಾಯಾಧಿಪತಿಗಳು ಕೋರ್ಟಿಗೆ ಬಂದಕೂಡಲೇ ಪ್ರೇಕ್ಷಕರೇ ಮೊದಲಾದವರೆಲ್ಲಾ ಎದ್ದು ನಿಂತು ಮರ್ಯಾದಿಸಿದರೂ ಈ ಅಪರಾಧಿಗಳು ಮಾತ್ರ ಕುಳಿತೇ ಇರುತ್ತಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರು ಜ್ಯೂರರುಗಳಿಗೆ ಕೇಸಿನ ಸ್ವರೂಪವನ್ನೆಲ್ಲಾ ವಿವರಿಸಿ ಹೇಳಿದರು. ನ್ಯಾಯಾಧಿಪತಿಗಳು ಅಪರಾಧಿಗಳನ್ನು ಕುರಿತು ತಪ್ಪನ್ನು ನೀವು ಒಪ್ಪಿಕೊಳ್ಳುವಿರಾ ಎಂದು ಕೇಳಲು ಯಾರೂ ಉತ್ತರಕೊಡಲಿಲ್ಲ. ಮಹಮ್ಮದಾಲಿಯವರು ಮಾತ್ರ ಖುರಾನ್ ವಿಷಯಾಧಾರದಿಂದ ಬಹಳ ಆಕ್ಷೇಪಮಾಡಿದರು. ನೀವು ಎದ್ದುನಿಂತು ನ್ಯಾಯಾಸನಕ್ಕೆ ಮರ್ಯಾದೆಮಾಡತಕ್ಕುದು ಧರ್ಮವು. ಹಾಗೆ ಮಾಡದಿದ್ದರೆ ನಿಮ್ಮ ಕುರ್ಚಿಗಳನ್ನೆಲ್ಲಾ ತೆಗೆಯಿಸಿಬಿಡುತ್ತೇನೆಂದು ಜಡ್ಜರು ಹೇಳಲು, ಅಪರಾಧಿಗಳೆಲ್ಲಾ ಕುರ್ಚಿಗಳನ್ನು ಬಿಟ್ಟು ನೆಲದಮೇಲೆ ಬಟ್ಟೆಗಳನ್ನು ಹಾಸಿ ಕುಳಿತುಕೊಂಡರು. ನೀವು ಎದ್ದು ನಿಲ್ಲಬೇಕೆಂದು ಜಡ್ಜರು ಹೇಳಲು, ಗೌರವಕ್ಕೆ ಅರ್ಹವಲ್ಲದ ಈ ಪ್ರಭುತ್ವಕ್ಕೆ ನಾವು ಯಾವ ಗೌರವವನ್ನೂ ತೋರಿಸುವುದಿಲ್ಲವಾದಕಾರಣ ಏಳುವುದಿಲ್ಲವೆಂದರು. ಹಾಗಾದರೆ ಇದನ್ನೊಂದು ತಪ್ಪನ್ನಾಗಿ ನಾನು ಎಣಿಸುವೆನೆಂದು ಜಡ್ಜರು ಹೇಳಲು ಅದನ್ನು ನಾವು ಲಕ್ಷ್ಯಮಾಡುವುದಿಲ್ಲವೆಂದು ಅಪರಾಧಿಗಳು ಹೇಳಿದರು. ಬಳಿಕ ಸ್ವಲ್ಪಹೊತ್ತಿಗೆ ಮಹಮ್ಮದಾಲಿಯವರು ಎದ್ದು ನಿಂತು ಏನನ್ನೋ ಹೇಳುವುದಕ್ಕುಪಕ್ರಮಿಸಿದರು. ನೀವು ಕೋರ್ಟನ್ನು ಅಪಮಾನಪಡಿಸಿದಿರಾದಕಾರಣ ನಿಮ್ಮ ಮಾತನ್ನು ನಾನು ಕೇಳುವುದಿಲ್ಲವೆಂದು ಜಡ್ಜರು ಹೇಳಲು, ಮಹಮ್ಮದಾಲಿಯವರು—ನಮ್ಮ ಮೇಲೆ ಅನ್ಯಾಯವಾಗಿ ಈ ಕಲ್ಪನೆಯ ಕೇಸನ್ನು ತಂದಿರುವ ಪ್ರಭುತ್ವವನ್ನು ನಾವು ಗೌರವಿಸಬಾರದೆಂದು ಏಳಲಿಲ್ಲವೇ ಹೊರತು ನಿಮ್ಮ ಸ್ವಕೀಯ ಸಂಬಂಧವಾಗಿ ನಮಗೆ ಯಾವ ಅಗೌರವಬುದ್ಧಿಯೂ ಇಲ್ಲವೆಂದು ಹೇಳಲು, ಜಡ್ಜರು ಅದು ಅವಿವೇಕವೆಂದರು. ಮಹಮ್ಮದಾಲಿಯವರು—ನಾನು ಏನನ್ನಾದರೂ ಹೇಳಬೇಕಾಗಿದ್ದರೆ ಏಳುತ್ತೇನೆ. ಅದನ್ನು ನೀವು ಕೇಳದಿದ್ದರೆ ಶಿಕ್ಷೆಯನ್ನು ಈಗಲೇ ವಿಧಿಸಿಬಿಡಿ ಈ ವಿಚಾರಣೆಯೇ ಒಂದು ನಕಲಿಯಾಗಿದೆ. ತುಪಾಕಿಯಿಂದ ಸುಟ್ಟುಬಿಡಿರೆಂದೋ ಅಥವಾ ಗಲ್ಲಿಗೇರಿಸಿಬಿಡಿರೆಂದೋ ಶಿಕ್ಷೆಯನ್ನು ವಿಧಿಸಿ ಮುಗಿಸಿಬಿಡಿ ಎಂದರು. ಅದಕ್ಕೆ ಜಡ್ಜರು ಕಿವಿಯನ್ನೇ ಕೊಡದೆ ಹೋದುದರಮೇಲೆ ಮಹಮ್ಮದಾಲಿಯವರು ಕುಳಿತುಬಿಟ್ಟರು.

ಪೂನಾ ಸಬ್ ಇನ್‌ಸ್ಪೆಕ್ಟರು, ಕರಾಚಿಯ ಜೈಲರು, ಅಸ್ಸಾಂ ಪೊಲೀಸ್ ಡಿ|| ಸೂಪರಿಂಟೆಂಡೆಂಟರು ಮೊದಲಾದವರ ವಾಜ್ಮೂಲಗಳನ್ನು ಕೋರ್ಟಿನವರು ತೆಗೆದುಕೊಂಡರು. ಅವರ ಕ್ರಾಸ್ ಪರೀಕ್ಷೆಯನ್ನು ಅಪರಾಧಿಗಳು ಮಾಡಲಿಲ್ಲ. ಮಧ್ಯೇ ಮಧ್ಯೇ ಮಹಮ್ಮದಾಲಿಯವರು ಅನೇಕಾಕ್ಷೇಪಗಳನ್ನು ಮಾಡುತ್ತಿದ್ದರು. ಕೆಳಕೋರ್ಟಿನಲ್ಲಿ ಅಪರಾಧಿಗಳು ಕೊಟ್ಟಿರುವ ಸ್ಟೇಟ್‌ಮೆಂಟು ಸರಿಯಾಗಿ ಸಮಾಧಾನಕರವಾಗಿಲ್ಲವೆಂದು ಜಡ್ಜರು ಹೇಳಲು, ‘‘ಅವೆಲ್ಲಾ ಸರಿಯಾದ ಸಮಾಧಾನಗಳೆ ಅವನ್ನೇ ಈ ಕೋರ್ಟಿನಲ್ಲೂ ಅಂಗೀಕರಿಸಬೇಕು. ಮಹಮ್ಮದೀಯ ಧರ್ಮಶಾಸ್ತ್ರವನ್ನು ಅನುಸರಿಸುವುದಕ್ಕೆ ನಾವು ಸ್ವತಂತ್ರರು. ಅದರಲ್ಲಿರುವ ವಿಧಿಗೆ ಅನುಸಾರವಾಗಿ ನಾವು ಮಾಡಿದ ತೀರ್ಮಾನವು ತಪ್ಪಲ್ಲ. ಆಯಾ ಮತಧರ್ಮಗಳನ್ನು ಗೌರವಿಸುವೆನೆಂದು ವಿಕ್ಟೋರಿಯಾ ಮಹಾರಾಜ್ಞಿಯವರು ಸ್ಪಷ್ಟವಾಗಿ ಅಪ್ಪಣೆ ಕೊಟ್ಟಿರುವರು. ಹಾಗಿಲ್ಲದಿದ್ದರೆ ಅವರ ಪ್ರಭುತ್ವವನ್ನು ಪ್ರಜೆಗಳು ಒಪ್ಪುತ್ತಲೇ ಇರಲಿಲ್ಲ. ಇಂಗ್ಲೆಂಡ್ ಪ್ರಭುವು ಪ್ರಾಟೆಸ್ಟೆಂಟ್ ಮತವನ್ನನುಸರಿಸಿ ಪ್ರಮಾಣಮಾಡಬೇಕು. ಅದನ್ನು ಅವನು ಉಲ್ಲಂಘಿಸಿದರೆ ಓಡಿಸಿಬಿಡುವರು. ಪ್ರಭುತ್ವದವರು ಮಾಡಬಾರದ ಕೆಲಸವನ್ನು ಮಾಡಿದರೆ ಅಂಥ ಪ್ರಭುತ್ವದ ಸೇವೆಯನ್ನು ಮಾಡಬಾರದೆಂದು ಖುರಾನಿನಲ್ಲಿ ಹೇಳಿದೆ. ಅದುಕಾರಣ ಮಹಮ್ಮದೀಯರು ಪ್ರಭುತ್ವದ ಸಿವಿಲ್‌ಶಾಖೆ ಸೈನ್ಯಶಾಖೆಗಳಲ್ಲಿ ಉದ್ಯೋಗಕ್ಕೆ ಸೇರಬಾರದೆಂದು ಬೋಧಿಸುವುದು ಅಪರಾಧವಲ್ಲ’’ ಎಂದು ಮಹಮ್ಮದಾಲಿಯವರು ವಾದಿಸಿದರು.

ಒಬ್ಬನು ನರಬಲಿಯನ್ನು ಕೊಟ್ಟರೆ ದೇವತಾಪ್ರೀತಿಯಾಗುವುದೆಂಬ ತನ್ನ ಮತ ಸಿದ್ಧಾಂತವನ್ನು ನಂಬಿ ನರಹತ್ಯವನ್ನು ಮಾಡಿದರೆ ಸರ್ಕಾರದವರು ಆತನನ್ನು ಸುಮ್ಮನೆ ಬಿಟ್ಟಿರಬಹುದೆ? ಎಂದು ಜಡ್ಜರು ಪ್ರಶ್ನೆಮಾಡಲು, ಆತನು ಹಾಗೆ ರುಜುವಾತು ಮಾಡಿಕೊಟ್ಟರೆ ಬಿಟ್ಟೇಬಿಡಬೇಕು ಎಂದು ಮಹಮ್ಮದಾಲಿಯವರು ಹೇಳಿದರು.

ಬಳಿಕ ಜಡ್ಜರು ಕೆಳಕೋರ್ಟಿನಲ್ಲಿ ಕೊಟ್ಟಿದ್ದ ಅಪರಾಧಿಗಳ ವಾಜ್ಮೂಲವನ್ನು ಓದಿದರು. ಆಗ ಮಹಮ್ಮದಾಲಿಯವರು—ನಾನು ಸಭೆಯಲ್ಲಿ ಸೈನಿಕರಿಗೆ ದುರ್ಬೋಧೆಮಾಡುವ ತೀರ್ಮಾನವನ್ನು ಓದಿ ಹೇಳಿದೆನೆಂಬುದು ತಾನೇ ನನ್ನಮೇಲಣ ಕೇಸು? ನಾನು ಅದನ್ನು ಮಾಡಿದುದು ನನ್ನ ಮತಧರ್ಮವಾಗಿದೆ. ವಿಕ್ಟೋರಿಯಾ ಮಹಾರಾಣಿಯವರೂ ಎಡ್ವರ್ಡ್ ಚಕ್ರವರ್ತಿಯವರೂ ಮಾಡಿರುವ ಪ್ರಕಟನವನ್ನನುಸರಿಸಿಯೇ ಮತಸ್ವಾತಂತ್ರ್ಯವನ್ನು ಹಿಡಿದು ನಾನು ಆ ತೀರ್ಮಾನದ ಪ್ರಕಟನವನ್ನು ಮಾಡಿರುವೆನು ಎಂದರು.

ಜಡ್ಜರು ಈ ವಿಷಯದಲ್ಲಿ ಅಭಿಪ್ರಾಯಕೊಡಲು ನೀವು ಅಂಥ ಪ್ರಾಮಾಣಿಕರಲ್ಲ ಎನ್ನಲು, ಮಹಮ್ಮದಾಲಿಯವರು—‘‘ನೀವು ನಿಮ್ಮ ಈ ಪದವಿಗೆ ರಾಜೀನಾಮೆಕೊಟ್ಟು ನಿಮಗಿಂತಲೂ ಉತ್ತಮರಾದವರನ್ನು ಈ ಕೇಸನ್ನು ವಿಚಾರಿಸಲು ಕಳುಹಿಸಿಕೊಡಬೇಕು. ಖುರಾನಿನಲ್ಲಿ ಸ್ವಲ್ಪಭಾಗವನ್ನು ಮಾತ್ರವೇ ಅನುಸರಿಸಬೇಕೆಂದು ಪ್ರಭುವು ಶಾಸನಮಾಡಿಲ್ಲ. ನಿಮಗೆ ಮಹಮ್ಮದೀಯ ಧರ್ಮಶಾಸ್ತ್ರವು ತಿಳಿಯದು’’ ಎಂದರು. ಹೀಗೆ ಸ್ವಲ್ಪ ವಾಗ್ವಾದ ನಡೆದಬಳಿಕ ಜಡ್ಜರು—ನೀವೆಲ್ಲರೂ ಸೈನ್ಯದಿಂದ ಮಹಮ್ಮದೀಯರನ್ನೆಲ್ಲಾ ಬಿಡಿಸಿಬಿಡಬೇಕೆಂದು ಯೋಚನೆಮಾಡಿದಿರಾ? ಎನ್ನಲು, ಮಹಮ್ಮದಾಲಿಯವರು—ಮಹಮ್ಮದೀಯರ ಮೇಲೆ ಯುದ್ಧಮಾಡಬೇಕಾಗಿ ಬಂದಾಗ ಅದನ್ನು ಮಹಮ್ಮದೀಯ ಸೈನಿಕರು ತಿರಸ್ಕರಿಸಬಿಡಬೇಕೆಂಬುದೇ ನಮ್ಮಭಿಪ್ರಾಯ. ಹಂದಿಯ ಮಾಂಸವನ್ನು ತಿನ್ನಕೂಡದು ಸಾರಾಯನ್ನು ಕುಡಿಯಕೂಡದು ಎಂಬ ನಿಯಮದಂತೆ ಇದನ್ನೂ ಕೂಡ ಮಹಮ್ಮದೀಯರೆಲ್ಲರೂ ಅಂಗೀಕರಿಸಬೇಕು. ನಾವು ಸೈನಿಕರನ್ನು ರಾಜದ್ರೋಹಿಗಳನ್ನಾಗಿ ಮಾಡಲಿಲ್ಲ, ಮತಧರ್ಮನಿಷ್ಠರನ್ನಾಗಿ ಮಾಡಬೇಕೆಂದು ಪ್ರಯತ್ನಿಸಿದೆವು, ಎಂದರು.

ಬಳಿಕ ಜಡ್ಜರು ಉಳಿದ ಅಪರಾಧಿಗಳ ಹೇಳಿಕೆಯೇನೆಂದು ಕೇಳಲು, ಪ್ರತ್ಯುತ್ತರವನ್ನು ಕೊಡುವುದಿಲ್ಲವೆಂದರು. ಶಂಕರಾಚಾರ್ಯರು ಕುಳಿತುಕೊಂಡೇ ತಮ್ಮ ಹೇಳಿಕೆಯನ್ನು ಕೊಡಬಹುದೆಂದು ಜಡ್ಜರು ಅಪ್ಪಣೆ ಮಾಡಲು, ಮಹಮ್ಮದೀಯರು ಹೇಗೆ ಮಾಡಿದರೆ ಹಿಂದುಗಳೂ ಹಾಗೆಯೇ ಮಾಡಬೇಕೆಂಬುದೇ ನನ್ನ ಅಪ್ಪಣೆಯೆಂದು ಅವರು ಉತ್ತರಕೊಟ್ಟರು.

ತಾ|| ೨೭ರಲ್ಲಿ ಸರ್ಕಾರಪಕ್ಷದ ವಕೀಲರು ಆರ್ಗ್ಯುಮೆಂಟನ್ನು ೪ ಗಂಟೆಗಳ ಕಾಲ ಮಾಡಿದರು. ಅದರ ಮುಖ್ಯಾಶಯವೇನೆಂದರೆ—ಮತಧರ್ಮವನ್ನನುಸರಿಸಿ ಮಾಡಿದ ಕೃತ್ಯವು ಅಪರಾಧವಾಗುವುದಿಲ್ಲವೆಂದು ಹೇಳುವುದು ಒಪ್ಪತಕ್ಕುದಲ್ಲ. ಯಾರಾದರೂ ಪಾತಕವನ್ನು ಮಾಡಿ ತಪ್ಪಿಸಿಕೊಳ್ಳಲಿಕ್ಕೆ ಇದು ಒಳ್ಳೆ ಮಾರ್ಗವಾಗುವುದು. ಒಬ್ಬನು ತನ್ನ ಮತದ ಪ್ರಕಾರ ಒಂದು ಹೆಣ್ಣನ್ನು ಬಲಿ ಕೊಡಬೇಕೆಂದು ಯೋಚಿಸಿ ಮಹಮ್ಮದಾಲಿಯವರ ಮಗಳನ್ನು ಕೊಂದು ನಾನು ಅಪರಾಧವನ್ನು ಮಾಡಲಿಲ್ಲವೆಂದು ಹೇಳಿಬಿಡಬಹುದು. ಇನ್ನೊಬ್ಬನು ಮಸೀದಿಯನ್ನು ಪವಿತ್ರಸ್ಥಳವಲ್ಲವೆಂದು ನಂಬಿ ಅದನ್ನು ಧ್ವಂಸಮಾಡಿಬಿಡಬಹುದು. ಹೀಗೆ ಮತವಿಷಯದಲ್ಲಿ ಪರಸ್ಪರ ವಿರುದ್ಧಾಭಿಪ್ರಾಯವಿರುವುದಲ್ಲದೆ ಒಂದು ಮತದಲ್ಲೇ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿರುವುದುಂಟು. ಅವುಗಳನ್ನೆಲ್ಲಾ ನಂಬಿ ಪರಸ್ಪರ ವಿಘಾತಕವಾದ ಕೆಲಸಗಳನ್ನು ಮಾಡಿದರೆ ಅವರನ್ನು ಅಪರಾಧಿಗಳಲ್ಲವೆಂದು ಮಹಮ್ಮದೀಯರು ಅಂಗೀಕರಿಸುವರೆ? ಅಪರಾಧಿಗಳ ವಾದದ ಫಲಿತಾಂಶವು ಇದೇ ಆಗಿರುತ್ತದೆ. ಅದು ಅಸಂಗತವು. ತಾವು ಸೈನಿಕರನ್ನು ಸೈನ್ಯದಿಂದ ಬಿಡಿಸುವುದಕ್ಕೆ ಪ್ರಯತ್ನಮಾಡಿದುದು ನಿಜವೆಂದು ಅಪರಾಧಿಗಳೇ ಒಪ್ಪಿಕೊಂಡಿದ್ದಾರೆ. ಮತ್ತು ಹಾಗೆ ಸೈನ್ಯದಿಂದ ಬಿಡುಗಡೆಹೊಂದಿದವರ ಪೋಷಣೆಗಾಗಿ ಒಂದು ಫಂಡನ್ನು ಕೂಡ ಏರ್ಪಡಿಸಿದ್ದಾರೆ. ಅದುಕಾರಣ ಇವರು ನಿಸ್ಸಂದಿಗ್ಧವಾಗಿ ಅಪರಾಧಿಗಳಾಗಿದ್ದಾರೆ. ಎಂದರು.

ಬಳಿಕ ಮಹಮ್ಮದಾಲಿಯವರು ವಾದಿಸುವುದಕ್ಕೆ ಆರಂಭಿಸಿ ೧ ಗಂಟೆ ಹೊತ್ತು ಮಾತನಾಡಿದರು. ತಾವು ಮಾಡಿದ ಕಾರ್ಯವು ಖುರಾನಿಗೂ ವಿಕ್ಟೋರಿಯಾರವರ ಆಜ್ಞೆಗೂ ಅನುಸಾರವಾಗಿದೆ. ಪ್ರಭುವಿನ ಆಜ್ಞೆಗಿಂತ ಖುರಾನಿನ ಆಜ್ಞೆಯು ದೊಡ್ಡದು; ಅದುಕಾರಣ ನಾವು ಮಾಡಿದುದು ತಪ್ಪಲ್ಲ. ಹಿಂದೂ ಸೈನಿಕರು ಗೋವನ್ನು ಕೊಲ್ಲಬೇಕೆಂಬ ಆಜ್ಞೆಯನ್ನು ಹೇಗೆ ತಿರಸ್ಕರಿಸುವರೋ ಹಾಗೆ ಮಹಮ್ಮದೀಯ ಸೈನಿಕನು ಮತ್ತೊಬ್ಬ ಮುಸಲ್ಮಾನ್ ಸೈನಿಕನನ್ನು ಕೊಲ್ಲಬೇಕೆಂದು ಮಾಡಲ್ಪಡುವ ಆಜ್ಞೆಯನ್ನು ತಿರಸ್ಕರಿಸುವುದಕ್ಕೆ ಅವನಿಗೆ ಹಕ್ಕಿರುವುದು ಎಂಬುದೇ ಅವರ ವಾದವು. ತಾ|| ೨೮ನೆಯ ದಿನವೂ ಇವರ ವಾದವು ೩ಗಂಟೆಗಳಕಾಲ ಜರುಗಿತು. ಕಡೆಕಡೆಗೆ ಅವರು ಮಾತನಾಡುವಾಗ ಬಹಳ ಉದ್ರೇಕಗೊಂಡಿದ್ದರು. ಅವರ ಕಣ್ಣುಗಳಿಂದ ನೀರು ಸುರಿಯುತ್ತಿದ್ದಿತು. ಈ ಜಗತ್ತು ಭಗವಂತನದೇ ಹೊರತು ಜಾರ್ಜ್ ಚಕ್ರವರ್ತಿಯವರದೂ ಅಲ್ಲ ಮತ್ತಾರದೂ ಅಲ್ಲವೆಂಬುದನ್ನು ಜ್ಯೂರರುಗಳು ಯೋಚಿಸಿಕೊಳ್ಳಬೇಕು. ನಾನು ಏಸುಕ್ರಿಸ್ತನ ಪಾದಧೂಳಿಯ ೧ ಕಣಕ್ಕೂ ಸರಿಹೋಲತಕ್ಕವನಲ್ಲ; ನನ್ನಲ್ಲಿ ಎಷ್ಟು ಲೋಪಗಳಿದ್ದರೂ ಮನುಷ್ಯ ಸಿದ್ಧಾಂತಕ್ಕಿಂತಲೂ ದೈವಸಿದ್ಧಾಂತವು ದೊಡ್ಡದೆಂಬುದನ್ನು ನಿರೂಪಿಸಲಿಕ್ಕೆ ನಿಂತಿದ್ದೇನೆ. ಹಿಂದೆ ಕ್ರಿಸ್ತನು ವಿಚಾರಣೆಗೆ ಗುರಿಮಾಡಲ್ಪಟ್ಟಂತೆ ನಾವೂ ಈಗ ವಿಚಾರಣೆಗೆ ಒಳಗಾಗಿದ್ದೇವೆ. ಕ್ರಿಸ್ತನನ್ನು ಸಿಲುಬೆಗೆ ಹಾಕಿಸುವುದಕ್ಕೆ ಮುಂಚೆ ನ್ಯಾಯಾಧಿಪತಿಯು ತನ್ನ ಆತ್ಮನನ್ನು ಕುರಿತು ವಿಚಾರಿಸಿಕೊಳ್ಳಬೇಕಾಗಿ ಬಂದಿತು. ಪ್ರಪಂಚದ ಅಂತ್ಯ ದಿನದಲ್ಲಿ ಭಗವಂತನು ಎಲ್ಲರ ಪಾಪಪುಣ್ಯಗಳನ್ನೂ ವಿಚಾರಿಸಿ ತೀರ್ಪನ್ನು ಹೇಳುವನು. ಆತನು ಲಾಯಿಡ್‌ಜಾರ್ಜರು ಏನನ್ನು ಹೇಳಿದರು? ಜಡ್ಜರು ಏನನ್ನು ಹೇಳಿದರು? ಸರ್ಕಾರಿ ವಕೀಲರು ಏನು ಹೇಳಿದರು? ಎಂಬುದಾವುದನ್ನೂ ವಿಚಾರಿಸುವುದಿಲ್ಲ. ಅದುಕಾರಣ ನಿಂನಿಮ್ಮ ಅಂತರಾತ್ಮನ ಪ್ರೇರಣೆಯಂತೆ ಕೆಲಸಮಾಡಿರಿ. ಎಂದು ಹೇಳುತ್ತ ಕಡೆಗೆ ಜಡ್ಜರು ಬೇಸತ್ತುಮಾಡಿದ ಬಲಾತ್ಕಾರದಿಂದ ಕುಳಿತುಬಿಟ್ಟರು.

ಬಳಿಕ ೨ನೆ ಅಪರಾಧಿ ಹಸೇನ್ ಮಹಮ್ಮದ್‌ರವರು—೨|| ಗಂಟೆಗಳ ಹೊತ್ತು ತಮ್ಮ ವಾಜ್ಮೂಲವನ್ನು ಹೇಳಿದರು. ಅದರಲ್ಲೂ ಖುರಾನಿನ ೧೫ ವಚನಗಳನ್ನುದಹರಿಸಿ, ಒಬ್ಬ ಮಹಮ್ಮದೀಯನು ಇನ್ನೊಬ್ಬ ಮಹಮ್ಮದೀಯನನ್ನು ಕೊಲ್ಲಕೂಡದೆಂಬ ಅಭಿಪ್ರಾಯವೇ ತಿಳಿಯಿಸಲ್ಪಟ್ಟಿತು. ಕಡೆಗೆ ಪ್ರಭುತ್ವದವರು ನಮ್ಮ ಮತಸ್ವಾತಂತ್ರ್ಯವನ್ನು ತಪ್ಪಿಸಿಬಿಟ್ಟರೆ ನಾವು ೧ ತಿಂಗಳಲ್ಲೇ ಸ್ವರಾಜ್ಯವನ್ನು ಪಡೆದುಕೊಳ್ಳುತ್ತೇವೆಂದು ಹೇಳಿದರು.

ಅನಂತರ ೩ನೆ ಅಪರಾಧಿ ಡಾಕ್ಟರ್ ಕಿಚ್ಲುಯವರು.—ಪೊಲೀಸ್ ಆಫೀಸರು ಮಾಡಿದ ಕೆಲಸದಲ್ಲಿನ ಲೋಪಗಳು ಪಬ್ಲಿಕ್ ಪ್ರಾಸಿಕ್ಯೂಟರ ಚರ್ಯೆಯದೋಷಗಳು ಇತ್ಯಾದಿಗಳನ್ನೆಲ್ಲಾ ವಿವರಿಸಿ,—ಈ ಕೇಸು ಬಹಳ ಮುಖ್ಯವಾದುದು, ನಾನು ಹಠತೊಟ್ಟ ಆಂದೋಳನಕಾರನಾಗಿದ್ದೇನೆ. ವಿಪ್ಲವದಲ್ಲಿ ನನಗೆ ದೃಢವಾದ ನಂಬುಗೆಯುಂಟು. ಇಂಗ್ಲೆಂಡು, ಫ್ರಾನ್ಸು ಮೊದಲಾದುವುಗಳಂತೆ ವಿಪ್ಲವದಿಂದ ಸ್ವರಾಜ್ಯವನ್ನು ಪಡೆಯದೆ ಹೋದರೆ ಇನ್ನೇನನ್ನಾದರೂ ಮಾಡುವೆನು. ಕಳ್ಳತನದಿಂದ ನಾನು ಸಂಧಾನವನ್ನೇನೂಮಾಡಲಿಲ್ಲ. ನಾನು ಮತಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇನೆ. ಯಾವ ಶಿಕ್ಷೆಗಾದರು ನಾನು ಸಿದ್ಧನಾಗಿದ್ದೇನೆ. ಈ ಪ್ರಭುತ್ವವನ್ನು ನಾಶಗೊಳಿಸಬೇಕೆಂಬುದೇ ನನ್ನುದ್ದೇಶ. ಅದಕ್ಕಾಗಿ ನಾನು ದೌರ್ಜನ್ಯರಹಿತವಾದ ಅಸಹಾಯವನ್ನವಲಂಬಿಸಿದೆ. ಈಗ್ಗೂ ಹಾಗೆಯೇ ಇರುವೆನು. ಸರ್ಕಾರದವರು ಪರಮತಸಹನೆಯನ್ನು ತೋರಿಸದಿದ್ದರೆ ನಾನು ದೌರ್ಜನ್ಯಯುಕ್ತವಾದ ಅಸಹಾಯೋದ್ಯಮವನ್ನವಲಂಬಿಸುವೆನು ಎಂದರು.

ಬಳಿಕ ಇನ್ನೊಬ್ಬ ಅಪರಾಧಿ ಪೀರ್‌ಗುಲಾಮ್ ಅಜೀದ್‌ರವರು ಸಿಂಧಿಭಾಷೆಯಲ್ಲಿ ವಾದಮಾಡಿದರು. ಅದರಲ್ಲೂ ಖುರಾನಿನ ಮಾತೇ ಮುಖ್ಯವಾಗಿದ್ದಿತು. ಕಡೆಯಲ್ಲಿ ನನಗೆ ೧೦-೧೨ ಲಕ್ಷ ಶಿಷ್ಯರಿದ್ದಾರೆ. ನನ್ನ ತಾತನು ಜಹಾಂಗೀರ್ ಚಕ್ರವರ್ತಿಯಿಂದ ಆತನಿಗೆ ಸಲಾಮು ಮಾಡದೆ ಹೋದನೆಂಬ ಕಾರಣದಿಂದ ಸೆರೆಯಿಡಲ್ಪಟ್ಟಿದ್ದನು. ಬಳಿಕ ಚಕ್ರವರ್ತಿಯು ತಾನೇ ಪಶ್ಚಾತ್ತಾಪಪಟ್ಟು ಬಿಡಿಸಿ ಕ್ಷಮಾಪಣೆ ಬೇಡಿಕೊಂಡನು. ಅದರಂತೆಯೇ ಪ್ರಭುತ್ವದವರು ನನ್ನ ವಿಷಯದಲ್ಲಿ ಅನ್ಯಾಯವಾಗಿ ಕೇಸುಮಾಡಿದ ತಪ್ಪಿಗಾಗಿ ಕೋರ್ಟಿನವರು ಕ್ಷಮಾಪಣೆ ಬೇಡಿಕೊಂಡು ಬಿಡಬೇಕು ಎಂದರು.

ಅನಂತರ ಮೌಲ್ವಿ ಹಸನ್ ಅಹಮ್ಮದ್ ಎಂಬ ಅಪರಾಧಿಯು ಉರ್ದುವಿನಲ್ಲಿ ವಾಜ್ಮೂಲವನ್ನು ಹೇಳಿ ಹಿಂದೆ ಹೇಳಿದವರಂತೆಯೇ ಅಭಿಪ್ರಾಯ ಕೊಟ್ಟು, ತನ್ನ ಮೇಲೆ ಅಬದ್ಧಸಾಕ್ಷ್ಯಗಳನ್ನು ಹೇಳಿದರೆಂಬ ಕಾರಣದಿಂದ ಸಾಕ್ಷಿಗಾರರಾಗಿದ್ದ ಮಹಮ್ಮದೀಯರನ್ನು ಕಠಿನವಾಗಿ ನಿಂದಿಸಿದರು.

ಅನಂತರ ಶಂಕರಾಚಾರ್ಯಮಠದ ಸ್ವಾಮಿಗಳು—ನಾನು ಧರ್ಮೋಪದೇಶವನ್ನು ಮಾಡುತ್ತಿದ್ದೆನು ಅದು ನನ್ನ ಕರ್ತವ್ಯ. ಮಹಮ್ಮದೀಯರು ಸೈನ್ಯದಲ್ಲಿ ಸೇರುವುದು ಪಾಪವೆಂಬ ತೀರ್ಮಾನವನ್ನು ಮಾಡಿದ ವಿಷಯದಲ್ಲಿ ನನಗೇನೂ ತಿಳಿಯದು. ನಾನು ರಾಜಕೀಯ ಶಂಕರಾಚಾರ್ಯನಲ್ಲ. ನಾನು ಶಾರದಾಪೀಠಾಧಿಪತಿಯಾದ ಜಗದ್ಗುರು ಶಂಕರಾಚಾರ್ಯನು. ಬಹುಮಂದಿಗಳು ನನ್ನನ್ನು ಹಾಗೆ ಅಂಗೀಕರಿಸಿರುವರು ಎಂದು ಹೇಳಿದರು.

ಕಡೆಗೆ ಮೌ|| ಶೌಕತಾಲಿಯವರು—ಈ ಕೇಸನ್ನು ಈ ರಾತ್ರಿಯೇ ಮುಗಿಸಿದರೆ ಸಂತೋಷ. ನಮ್ಮ ತಾಯಿಯು ನಮ್ಮೊಡನೆಯೋ ಅಥವಾ ನಮ್ಮನ್ನು ಬಿಟ್ಟೋ ಕರಾಚಿಯಿಂದ ಈ ದಿವಸವೇ ಹೊರಟುಹೋಗಬೇಕಾಗಿದೆ. ನಾನು ನಮ್ಮಣ್ಣ ಮಹಮ್ಮದಾಲಿಯವರಂತೆಯೂ ಶಂಕರಾಚಾರ್ಯರಂತೆಯೂ ವಿಶೇಷ ಪಾಂಡಿತ್ಯವುಳ್ಳವನಲ್ಲ. ನನ್ನನ್ನು ನಾನು ರಕ್ಷಿಸಿಕೊಳ್ಳಬೇಕೆಂದು ಯತ್ನಿಸುವುದಿಲ್ಲ. ನಾನು ದೈವವನ್ನು ನಂಬಿರುವೆನು. ನಾನು ಹೇಳುವುದು ಸತ್ಯ. ನಾನು ಖಿಲಾಫತ್ ಕಾರ್ಯದರ್ಶಿಯು. ಖಿಲಾಫತ್ ಕೆಲಸಕ್ಕಾಗಿ ಭರತಖಂಡದಲ್ಲೆಲ್ಲಾ ೩ ಆವೃತ್ತಿ ಸಂಚರಿಸಿ ಬಂದೆ. ಮಹಮ್ಮದೀಯರಿಗೆ ಖಿಲಾಫತು ಅತ್ಯಂತ ಮುಖ್ಯವೆಂಬುದನ್ನು ತಿಳಿಯಿಸಲಿಕ್ಕಾಗಿ ವೈಸ್ರಾಯರ ಬಳಿಗೆ ರಾಯಭಾರವನ್ನು ಕಳುಹಿಸಿ ಈ ಸಮಸ್ಯೆಯನ್ನು ನ್ಯಾಯವಾಗಿ ಪರಿಷ್ಕರಿಸದಿದ್ದರೆ ಪ್ರಜಾಶಾಂತಿಯು ಉಳಿಯುವುದಿಲ್ಲವೆಂದು ತಿಳಿಯಿಸಿದೆವು. ವೈಸ್ರಾಯರು ಸಾನುಭೂತಿಯನ್ನು ತೋರಿಸಿ, ಆಂಗ್ಲ ಮುಖ್ಯ ಮಂತ್ರಿಯವರ ಬಳಿಗೆ ಇಲ್ಲಿಂದ ರಾಯಭಾರಿಗಳನ್ನು ಕಳುಹಿಸಿಕೊಡಲು ಏರ್ಪಡಿಸಿದರು. ಅದಕ್ಕಾಗಿ ನಮ್ಮ ಪ್ರತಿನಿಧಿಗಳನ್ನು ಕಳುಹಿಸಿ ೧ ಕೋಟಿ ರೂ.ಗಳನ್ನು ವೆಚ್ಚಮಾಡಿದೆವು. ಏನೂ ಫಲವಾಗಲಿಲ್ಲ. ತುರ್ಕಿ ಸಂಧಿ ಸಮಯದಲ್ಲಿ ಮತ್ತೊಂದು ರಾಯಭಾರವು ಕಳುಹಿಸಲ್ಪಟ್ಟಿದ್ದಿತು. ಅದೂ ವ್ಯರ್ಥವಾಯಿತು. ನಾನು ಆದಿಯಿಂದಲೂ ಪ್ರಭುತ್ವಕ್ಕೆ ಪ್ರತಿಭಟನಲ್ಲ. ೧೭ ವರ್ಷಕಾಲ ಎಕ್ಸೈಜು ಶಾಖೆಯಲ್ಲಿ ಕೆಲಸಮಾಡಿದೆ. ನನ್ನ ಹೆಸರು ಪೆನ್ಷನ್ಡ್ ಆಫೀಸರುಗಳ ಪಟ್ಟಿಯಲ್ಲಿದೆ. ಆದರೆ ನಾನು ಪಿಂಚನನ್ನು ತೆಗೆದುಕೊಳ್ಳುತ್ತಿಲ್ಲ. ನನಗೆ ಅನೇಕ ಆಂಗ್ಲಜನರು ಸ್ನೇಹಿತರಾಗಿದ್ದಾರೆ. ಆದರೆ ಆಂಗ್ಲೇಯರು ನನ್ನ ಮತಕ್ಕೆ ಶತ್ರುಗಳೆಂದು ತಿಳಿದಿದ್ದೇನೆ. ಅಂಥವರಿಗೆ ನಾನು ಮಿತ್ರನಾಗಿರಲಾರೆ. ಖಿಲಾಫತ್ತಿಗೆ ಸಹಾಯಮಾಡುವವರನ್ನೆಲ್ಲಾ ಮಿತ್ರರೆಂದು ತಿಳಿಯುತ್ತೇನೆ. ಕರ್ನಲ್ ವೆಡ್ಜ್‌ವುಡ್ಡರು ನನ್ನ ಮಿತ್ರರು. ಮ|| ಗಾಂಧಿಯವರು ನಮ್ಮ ನಾಯಕರು. ನಮ್ಮ ಸ್ವರಾಜ್ಯ ಸಾಧನಯತ್ನವು ವ್ಯರ್ಥವಾಗಿಲ್ಲ. ದೇಶದಲ್ಲೆಲ್ಲಾ ಈ ಉದ್ಯಮವು ವ್ಯಾಪಿಸಿದೆ. ಅಲ್ಲದೆ ಅಫ್ಘಾನಿಸ್ಥಾನ್, ತುರ್ಕಿ, ಪರ್ಷಿಯಾ, ಅಂಗೋರಾ, ಮೊರಾಕೊ, ಈಜಿಪ್ಟ್ ಈ ದೇಶಗಳಲ್ಲೆಲ್ಲಾ ಈ ಉದ್ಯಮಖ್ಯಾತಿಯು ವ್ಯಾಪಿಸಿದೆ. ಬರುವ ಡಿಶಂಬರ್ ತಾ|| ೩೧ರೊಳಗೆ ನಮ್ಮ ದೌರ್ಜನ್ಯರಹಿತ ಅಸಹಾಯೋದ್ಯಮವು ಫಲಿಸದಿದ್ದರೆ ಸ್ಥಿತಿಗತಿಗಳು ಅನುಕೂಲವಾಗಿದ್ದರೆ ನಾವು ದೌರ್ಜನ್ಯಕ್ಕೂ ಕೂಡ ತೊಡಗುತ್ತೇವೆ. ಪ್ರಾಸಿಕ್ಯೂಷನ್ನುಗಳನ್ನು ಮಾಡುವುದರಿಂದ ಪ್ರಭುತ್ವದವರ ಆಟವು ಸಾಗುವಹಾಗಿಲ್ಲ. ನಮ್ಮನ್ನು ದ್ವೀಪಾಂತರಕ್ಕೆ ಕಳುಹಿಸಿದರೂ ಇತರ ನಾಯಕರು ಹೊರಬೀಳುವರು. ಮಹಮ್ಮದೀಯರು ಕೇಳುವುದನ್ನು ಪ್ರಭುತ್ವದವರು ಕೊಡದಿದ್ದರೆ ದೇಶದಲ್ಲಿ ಶಾಂತಿ ಉಳಿಯುವುದಿಲ್ಲ. ಸರ್ಕಾರವು ತನ್ನ ದಾರಿಯನ್ನು ನೋಡಿಕೊಂಡು ಹೋಗಬೇಕು. ಅವರು ಮಾಡಬೇಕಾದ ಕೆಲಸಗಳು ಮೂರಿರುವುವು. ಯಾವುವೆಂದರೆ—೧ ಖಿಲಾಫತ್ ಸಮಸ್ಯೆಯನ್ನು ಪರಿಷ್ಕರಿಸಬೇಕು. ೨—ಪಂಜಾಬಿನಲ್ಲಿ ನಡೆದ ಅನ್ಯಾಯಗಳನ್ನು ಪರಿಮಾರ್ಜನೆ ಮಾಡಬೇಕು. ೩—ಭರತಖಂಡಕ್ಕೆ ಸಂಪೂರ್ಣ ಸ್ವರಾಜ್ಯವನ್ನು ಕೊಡಬೇಕು.

ನವಂಬರ್ ತಾ|| ೧ ರಲ್ಲಿ ಎಂದಿನಂತೆ ಕೋರ್ಟು ನೆರೆದಬಳಿಕ ಜಡ್ಜರು ಬರೆದಿಟ್ಟಿದ್ದ ಹೇಳಿಕೆಯನ್ನು (ಕೇಸಿನ ವಿದ್ಯಮಾನ) ಕೋರ್ಟು ಶಿರಸ್ತೇದಾರರು ಜೂರರುಗಳಿಗೆ ಓದಿಹೇಳಿದರು. ಬಳಿಕ ಜೂರರುಗಳು ಕೊಟ್ಟಡಿಯೊಳಕ್ಕೆ ಹೋಗಿ ತಂತಮ್ಮಲ್ಲಿ ೨ ಗಂಟೆಗಳಕಾಲ ಆಲೋಚನೆ ಮಾಡಿಕೊಂಡು ಕೋರ್ಟಿಗೆ ಬಂದು, ೩ ಅಪರಾಧಗಳಲ್ಲಿ ಮೊದಲನೆ ೨ನ್ನು ಅಪರಾಧಿಗಳಲ್ಲಿ ಯಾರೂ ಮಾಡಿರುವುದಿಲ್ಲವೆಂದೂ, ಅದನ್ನು ಮೇಜಿಸ್ಟ್ರೇಟರೂ ಒಪ್ಪಿರುವರೆಂದೂ, ೩ನೆ ಅಪರಾಧವನ್ನು ಶಂಕರಾಚಾರ್ಯಸ್ವಾಮಿಯ ಹೊರತು ಇತರ ೬ ಮಂದಿ ಅಪರಾಧಿ

ಉಚಿತವಾಗಿ ನೂಲುತೆಗೆಯುವುದನ್ನು ಹೇಳಿಕೊಡುವ
ಪಾಠಶಾಲಾ (ಫ್ರೀಸ್ಪಿನ್ನಿಂಗ್ ಸ್ಕೂಲ್.)

ಈ ಪಾಠಶಾಲೆಯು 1921ನೇ ಇಸ್ವಿ ನವಂಬರ್ 1ನೇ ತಾರೀಖಿನ ದಿವಸ ಪ್ರಾರಂಭವಾಗಿರುತ್ತೆ. ಇಲ್ಲಿ ಬೆಳಿಗ್ಗೆ 8 ಗಂಟೆಯಿಂದ 6 ಗಂಟೆವರಿಗೂ ನೂಲು ತೆಗೆಯುವುದನ್ನು ಉಚಿತವಾಗಿ 1 ತಿಂಗಳವರೆಗೂ ಎರಡುವೇಳೆಯೂ ಸರಿಯಾಗಿ ಬರತಕ್ಕಂಥ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತೆ. ಅಲ್ಲದೆ ಸುಮ್ಮನೆ ನೋಡಿಕೊಂಡು ವಿಷಯ ತಿಳಿದುಕೊಳ್ಳತಕ್ಕವರು ಬೆಳಿಗ್ಗೆ 7½ ಗಂಟೆಯಿಂದ 12 ಗಂಟೆವರೆಗೂ ಮಧ್ಯಾಹ್ನ 3½ ಗಂಟೆಯಿಂದ 7 ಗಂಟೆ ವರೆಗೂ ಬಂದು ವಿಷಯಗಳನ್ನು ತಿಳಿದುಕೊಂಡುಹೋಗಬಹುದು.

ಎಸ್. ರಾಮಚಂದ್ರರಾವ್,
ಮೂವಿಂಗ್‌ಷಾಪ್, ನಾರ್ತ್‌ಗೇಟ್, ಟೌನ್‌ಹಾಲ್, ಮೈಸೂರು.

ಗಳೂ ಮಾಡಿರುವರೆಂದೂ ಜೂರರುಗಳಲ್ಲಿ ಒಬ್ಬರ ಹೊರತು ನಾಲ್ಕು ಮಂದಿಗಳೂ ಅಭಿಪ್ರಾಯಕೊಟ್ಟರು. ಜಡ್ಜರು ೬ ಮಂದಿಗಳಿಗೂ ೫೦೫ ನೆ ಸೆಕ್ಷನ್‌ಪ್ರಕಾರ (ಪ್ರಭುತ್ವ ಸೈನಿಕರನ್ನು ಅವರ ವಿಧ್ಯುಕ್ತಧರ್ಮವನ್ನು ನೆರವೇರಿಸದಿರುವಂತೆ ಪ್ರೋದ್ಬಲವನ್ನು ಮಾಡಿದ ತಪ್ಪು) ೨ ವರ್ಷಗಳ ಕಾರಾಗೃಹವಾಸ ಶಿಕ್ಷೆಯನ್ನೂ, ಅದರಮೇಲೆ ಮಹಮ್ಮದಾಲಿಯವರಿಗೆ ಆ ಶಿಕ್ಷೆಯ ಜತೆಗೆ ೧೧೭ ನೆ ಸೆಕ್ಷನ್‌ಪ್ರಕಾರ (ಹತ್ತುಮಂದಿಗಿಂತ ಹೆಚ್ಚು ಜನರು ಮಾಡುವ ತಪ್ಪಿಗೆ ಪ್ರೇರೇಪಿಸುವ ಅಪರಾಧ) ೨ ವರ್ಷ ಕಠಿನಕಾರಾಗೃಹವಾಸ ಶಿಕ್ಷೆಯನ್ನೂ, ಆದರೆ ಏಕಕಾಲದಲ್ಲೇ ಇದನ್ನು ಅನುಭವಿಸುವಂತೆ (ಎಂದರೆ ೨ ವರ್ಷವೇ ಹೊರತು ೪ ವರ್ಷವಲ್ಲ) ಜಡ್ಜರು ತೀರ್ಮಾನಹೇಳಿದರು. ಶಂಕರಾಚಾರ್ಯ ಮಠದ ಕೃಷ್ಣತೀರ್ಥ ಭಾರತಿಗಳು ನಿರ್ದೋಷಿಗಳೆಂದು ಬಿಡಲ್ಪಟ್ಟರು. ಜಡ್ಜರು ಈ ತೀರ್ಮಾನವನ್ನು ಓದಿದಕೂಡಲೇ ಅಲ್ಲಾಹೋ ಅಕ್ಬರ್ ಎಂಬ ಧ್ವನಿಯಿಂದ ಕೋರ್ಟುಹೊಳಗೆ ಹೋಯಿತು. ೨ ವರ್ಷಗಳೊಳಗೇ ನಮಗೆ ಸ್ವರಾಜ್ಯವು ಬಂದುಹೋಗಿರುವುದು, ಈ ಜಡ್ಜರು ಹೇಳಿರುವ ತೀರ್ಮಾನವು ತಪ್ಪು ಎಂದು ಮಹಮ್ಮದಾಲಿಯವರು ಕೂಗಿಹೇಳಿದರು.

ಪ್ರಜಾಪ್ರತಿನಿಧಿಸಭೆ. ತಾ॥ ೧೬-೧೦-೨೧.

(ಮಿಲ್ಲರ್‌ಸಂಘದ ವರದಿಯ ಮೇಲಣ ಚರ್ಚೆ)

ಕಳೆದವಾರದ ಶೇಷ.

ಈದಿವಸ ಮಧ್ಯಾಹ್ನ ೧೨ ಗಂಟೆಯಿಂದ ೩ ಗಂಟೆಯವರೆಗೆ ಬಜೆಟಲ್ ವಿಷಯಗಳ ಚರ್ಚೆ ನಡೆದು ಮುಗಿದ ಬಳಿಕ ೩॥ ಗಂಟೆಯಮೇಲೆ ಮಿಲ್ಲರ್‌ಸಂಘದ ವರದಿಯಮೇಲಣ ಚರ್ಚೆಗೆ ಆರಂಭವಾಯಿತು.

ಮ॥ ವೆಂಕಟರಮಣಶಾಸ್ತ್ರಿಗಳು—ನಮ್ಮ ಮೈಸೂರು ರಾಜ್ಯವು ಮಾದರಿ ಸಂಸ್ಥಾನ. ಇಂಥ ಕಡೆಯಲ್ಲಿ ಪರದೇಶದವರು ಕೇಳಿ ನಗುವಂತೆ ಬ್ರಾಹ್ಮಣ-ಅಬ್ರಾಹ್ಮಣ, ಹಿಂದುಳಿದವರು-ಮುಂಬರಿದವರು, ಎಂದು ವಿಭಾಗಮಾಡಿಕೊಂಡಿರುವುದು ಸರಿಯಲ್ಲ. ನನ್ನ ಜಮೀನ್ ಸಾಗುವಳಿದಾರನು ಭೂಮಿಯನ್ನು ಪಾಳುಗೆಡಹಿಕೊಂಡಿದ್ದ. ಅದೇಕೆ ಎಂದು ನಾನು ಆಕ್ಷೇಪಿಸಲು, ನನ್ನ ಒಬ್ಬನೇ ಮಗನು ಬಲಾತ್ಕಾರ ವಿದ್ಯಾಭ್ಯಾಸದಿಂದ ಸ್ಕೂಲಿಗೆ ಸೇರಿ ವ್ಯವಸಾಯಕ್ಕೆ ಬರದೆಹೋದ. ಆದರಿಂದ ಭೂಮಿ ಪಾಳುಬಿದ್ದಿದೆ. ನಾನೊಬ್ಬ ಏನು ಮಾಡಲಿ? ಎಂದು ಹೇಳಿದ. ಅವರವರಿಗೆ ಪರಂಪರೆಯಾಗಿ ನಡೆದುಬಂದ ವೃತ್ತಿಯಲ್ಲಿ ಅವರವರಿದ್ದರೆ ರಾಜ್ಯಕ್ಕೆ ಕ್ಷೇಮ.

ಮ॥ ಎಸ್. ಆರ್. ಬಾಲಕೃಷ್ಣರಾಯರು—ಬ್ರಾಹ್ಮಣ ಪ್ರತಿನಿಧಿಗಳಾದ ನಾವುಗಳು ಈ ವಿಷಯದಲ್ಲಿ ಹೇಳಬೇಕಾದುದನ್ನೆಲ್ಲಾ ಬರೆದು ತಂದಿರುವೆವೆಂದು ಹೇಳಿ ಟೈಪ್‌ಮಾಡಿದ್ದ ಮೆಮೊರಾಂಡಮನ್ನು ಓದಿ ದಿವಾನರಿಗೆ ಒಪ್ಪಿಸಿದರು. ಅದರಲ್ಲಿ ಮ॥ ಎಂ. ವೆಂಕಟಕೃಷ್ಣಯ್ಯನವರೇ ಮೊದಲಾದ ೩೦ ಮಂದಿಗೆ ಮೇಲ್ಪಟ್ಟವರ ರುಜುಗಳು ಇದ್ದುವು. ಅದರಲ್ಲಿದ್ದ ಮುಖ್ಯಾಂಶಗಳು—ಉದ್ಯೋಗಕ್ಕೆ ಯಾರುಬೇಕಾದರೂ ಸೇರಬಹುದು. ಆದರೆ ಜಾತಿ ವಯಸ್ಸು ಮೊದಲಾದ ತಾರತಮ್ಯಗಳು ಇರಕೂಡದು. ಪೋಟಾಪೋಟಿ ಇರಬೇಕು. ರಿಕ್ರೂಟ್‌ಮೆಂಟ್ ಬೋರ್ಡನ್ನು ತೆಗೆದುಬಿಡಬೇಕು. ಮೆರಿಟ್ ಸ್ಕಾಲರ್ಷಿಪ್ ಪದ್ಧತಿಯು ಇದ್ದೇಇರಬೇಕು. ಸ್ಕಾಲರ್ಷಿಪ್ ಮೊಬಲಗು ೩ ಲಕ್ಷ ರೂ.ಗಳೆಂದು ಹೇಳಲ್ಪಟ್ಟಿರುವುದು ಹಾಗೆಯೇ ಏರ್ಪಟ್ಟಿರಬೇಕು. ಜಾತಿವಾರ್ ಸ್ಕಾಲರ್ಷಿಪ್ ಏರ್ಪಾಟು ಉಚಿತವಲ್ಲ. ಬ್ರಾಹ್ಮಣೇತರರಿಗೆ ಸೇಕಡಾ ಇಷ್ಟು ಸರ್ಕಾರಿ ಉದ್ಯೋಗಗಳನ್ನು ಕೊಡಬೇಕೆಂದು ಬೊಂಬಾಯಿಯ ಕೌನ್ಸಿಲಿನಲ್ಲಿ ಚರ್ಚೆ ಬಂದಾಗ್ಗೆ ಸರ್ಕಾರದ ಪಕ್ಷದಿಂದ ಕೊಡಲ್ಪಟ್ಟಿರುವ ಉತ್ತರವು ಕ್ರಾನಿಕಲ್ ಪತ್ರಿಕೆಯಲ್ಲಿ ಬಂದಿದೆ. ಇತ್ಯಾದಿ.

ಮ॥ ಎ. ಅನಂತಯ್ಯನವರು—ಸರ್ಕಾರದವರು ಸಂಬಳ ಕೊಡುವಾಗ ಉತ್ತಮವಾದ ಹೆಚ್ಚು ಯೋಗ್ಯತೆಯ ಮನುಷ್ಯರನ್ನೇ ಕೆಲಸಕ್ಕೆ ಇಟ್ಟುಕೊಳ್ಳಬೇಕು. ದುಡ್ಡುಕೊಟ್ಟು ಒಳ್ಳೆ ಪದಾರ್ಥವನ್ನೇ ತೆಗೆದುಕೊಳ್ಳಬೇಕಲ್ಲವೆ? ಕಡಿಮೆ ಯೋಗ್ಯತೆಯ ನಕಾರಿ ಜನರನ್ನು ತೆಗೆದುಕೊಂಡರೆ ಸರ್ಕಾರಿ ಎಫಿಷೆನ್ಸಿ ಕೆಡುತ್ತದೆ. ಮತ್ತು ಅವರ ವಿದ್ಯಾಭ್ಯಾಸಕ್ಕೂ ಉಮೇದು ಕಡಮೆಯಾಗುತ್ತದೆ. ಅದು ಅವರಿಗೂ ಅನರ್ಥ. ಉಮೇದುವಾರರಲ್ಲಿ ಸಮಾನಯೋಗ್ಯತೆಗಳು ತೋರಿಬಂದರೆ ಇತರರಿಗೇ ಕೊಡಿ. ಇಲಾಖಾ ಮುಖ್ಯಾಧಿಕಾರಿಗಳಲ್ಲಿ ನಂಬುಗೆಯಿಲ್ಲವೆ? ರಿಕ್ರೂಟ್‌ಮೆಂಟ್ ಬೋರ್ಡು ಬೇಕಿಲ್ಲ. ಆ ಬೋರ್ಡಿನವರು ತಂತಮ್ಮವರಿಗೇ ಶಿಫಾರಸ್ಸು ಮಾಡುತ್ತಾರೆ. ಉಮೇದುವಾರರಾಗಿ ಬರುವವರಲ್ಲಿ ವಯಸ್ಸಿನ ತಾರತಮ್ಯವನ್ನು ಇಟ್ಟಿರುವುದು ಸರಿಯಲ್ಲ.

ಮ॥ ಇ. ಕೃಷ್ಣಪ್ಪನವರು—ಲೇ॥ ಕೌನ್ಸಿಲಿನಲ್ಲಿ ಮಿ॥ ಮಿರ್ ಹಂಜಾಹುಸೇನ್ ಸಾಹೇಬರು ಆಡಿದ್ದ ಭಾಷಣದ ಒಂದು ಭಾಗವನ್ನು ಓದಿ ಹೇಳಿ, ಮಿಲ್ಲರ್ ಕಮಿಟಿ ವರದಿ ಹುಟ್ಟಿದುದರಿಂದ ಎಲ್ಲರೂ ತಂತಮ್ಮ ವೃತ್ತಿಗಳನ್ನು ಬಿಡುವುದರಿಂದ ದೇಶದ ಸಂಪದಭ್ಯುದಯಕ್ಕೆ ತೊಂದರೆಬಂತು. ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಹೆಸರನ್ನು ಗೌರ್ನಮೆಂಟ್ ರಿಕಾರ್ಡುಗಳಿಂದ ತೆಗೆದುಬಿಡಬೇಕು. ಹವ್ಯಕರು ಮೊದಲಾದ ಪ್ರಭೇದದವರಿಗೆ ಬ್ಯಾಕ್ವರ್ಡ್ ಕ್ಲಾಸ್ ಸ್ಕಾಲರ್ಷಿಪ್ಪನ್ನು ಕೊಡಬೇಕು.

ಮ॥ ನಾಗವಾಲದ ಲಿಂಗಣ್ಣನವರು—ಮಿಲ್ಲರ್‌ಕಮಿಟಿ ರಿಪೋರ್ಟು ಪ್ಯಾಸ್ ಆದಮೇಲೆ ನಮ್ಮ ಹುಡುಗರು ಸರ್ಕಾರಿ ಕೆಲಸವು ಸಿಕ್ಕುವುದೆಂಬ ಆಶೋತ್ತರದಿಂದ ಓದುವುದಕ್ಕೆ ನುಗ್ಗುತ್ತಿದ್ದಾರೆ. ಮೊದಲು ನಾವು ಬಲಾತ್ಕರಿಸಿದರೂ ವಿದ್ಯಾಭ್ಯಾಸಕ್ಕೆ ಹೋಗುತ್ತಿರಲಿಲ್ಲ. ಇದರಿಂದ ಅವರಲ್ಲಿ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾದರೂ ಅವಕಾಶವಾಯಿತು. ಸರ್ಕಾರದಲ್ಲಿ ಎಲ್ಲ ಜನವರ್ಗದವರೂ ಸೇರಿದ್ದರೆ ಪರಸ್ಪರ ಭಯದಿಂದ ಕೆಲಸವು ಚೆನ್ನಾಗಿ ನಡೆಯುತ್ತದೆ. ಒಂದೇ ಕೋಮಿನವರೇ ಸೇರಿದ್ದರೆ ಇತರರಿಗೆ ಅಲ್ಲಿ ಯಾವ ಸೌಲಭ್ಯವೂ ಆಗುವುದಿಲ್ಲ. ನನ್ನದೇ ಒಂದು ಉದಾಹರಣೆ ಹೇಳುತ್ತೇನೆ. ಸಿವಿಲ್ ಕೋರ್ಟಿನಲ್ಲಿ ಒಂದು ಸಣ್ಣ ಕೆಲಸಕ್ಕೆ ನಾನೇ ಹೋಗಿ ೨-೩ ಸಲ ಕೇಳಿದರೂ ಆಗಲಿಲ್ಲ. ನಾವು ಕೊಟ್ಟ ಫೀಜನ್ನು ತೆಗೆದುಕೊಂಡು ಹೋದ ಲಾಯರು ಹೋಗಿ ಕೇಳಲು ಆ ಕೂಡಲೇ ಆಯಿತು. ಹೀಗೆ ಸ್ವತಃ ಕಕ್ಷಿದಾರರು ಹೋದರೂ ಆಗದಿದ್ದ ಕಾರ್ಯವು ಬ್ರಾಹ್ಮಣ ಜಾತಿಯ ಲಾಯರು ಹೋದರೆ ಬೇಗನೆ ಆಗುತ್ತದೆ. ಮುಂಬರಿದ ಜನರು ಮೊದಮೊದಲು ಅವರೂ ನಮ್ಮಂತೆಯೇ ಮೌಢ್ಯದಲ್ಲಿದ್ದರು. ಬಳಿಕ ಅವರು ಮುಂದಕ್ಕೆ ನುಗ್ಗಿದರು ಅದರಂತೆ ಈಗ ನಾವೂ ಮುಂದಕ್ಕೆ ನುಗ್ಗುತ್ತಿದ್ದೇವೆ. ಮಿಲ್ಲರ್‌ಕಮಿಟಿ ರಿಪೋರ್ಟಿನ ಮೇಲಣ ಆರ್ಡರನ್ನು ಬದಲಾಯಿಸಕೂಡದು. ಈಗ್ಗೆ ಅದನ್ನು ದೃಢಪಡಿಸುವುದಲ್ಲದೆ ಮುಂದೆ ೫೦ ಎಂಬ ಪರಿಮಿತಿಯನ್ನು ವಿನಕ್ರಮೇಣ ಹೆಚ್ಚಿಸಿಕೊಡಬೇಕು. ಈಗ ಕೊಟ್ಟಿರುವುದು ಅಲ್ಪಭಾಗವಾಗಿದೆ. ಹಿಂದುಳಿದವರ ಮೌಢ್ಯವು ನಿವೃತ್ತವಾಗಬೇಕಾದರೆ ಇಂಥ ಆರ್ಡರುಗಳನ್ನು ಪದೇಪದೇ ಮಾಡುತ್ತ ಬರಬೇಕು. ಹಿಂದೆ ಬಿದ್ದುಹೋಗಿರುವವರನ್ನು ಉದ್ಧಾರಮಾಡುವುದಕ್ಕಾಗಿ ಸರ್ಕಾರದವರು ಈಗ ಮಾಡಿರುವ ಅಪ್ಪಣೆಯನ್ನು ನೋಡಿ ಮುಂಬರಿದವರು ಸಂತೋಷಪಡಬೇಕಾಗಿತ್ತು; ಇಲ್ಲದಿದ್ದರೆ ಸುಮ್ಮನೆಯಾದರೂ ಇರಬೇಕಾಗಿತ್ತು; ಅವೆರಡನ್ನೂ ಬಿಟ್ಟು ಇದಕ್ಕೆ ವಿರೋಧಿಸಿರುವುದು ಬಹಳ ವ್ಯಸನಕರವಾಗಿದೆ. ಆದಕಾರಣ ಈ ಸಬ್ಜೆಕ್ಟನ್ನು ವಜಾಮಾಡಿ ಸರ್ಕಾರಿ ಅಪ್ಪಣೆಯನ್ನು ಖಾಯಂ ಮಾಡಬೇಕೆಂದು ನನ್ನ ಪ್ರಾರ್ಥನೆ.

ಮ॥ ಜಿ. ರಾಮಸ್ವಾಮಯ್ಯಂಗಾರರು—ದೇವರಿಗೆ ಜಾತಿಯಿಲ್ಲ. ಸರ್ಕಾರಕ್ಕೂ ಜಾತಿಯಿಲ್ಲ. ಮನುಷ್ಯರಿಗೂ ಜಾತಿಯಿಲ್ಲ. ಬುದ್ಧಿಶಕ್ತಿಗಳೇ ಜಾತಿಗಳಿಗೆ ಕಾರಣಗಳು. ವಿದ್ಯೆಯಲ್ಲೂ ಐಶ್ವರ್ಯದಲ್ಲೂ ಹಿಂದುಳಿದವರನ್ನೇ ಹಿಂದುಳಿದವರನ್ನಾಗಿ ಭಾವಿಸಬೇಕು.

ಮ॥ ಡಿ. ಎಸ್. ಮಲ್ಲಪ್ಪನವರು—ಈ ರಿಪೋರ್ಟಿನಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಸಹ ಕ್ಷೇಮವುಂಟಾಗಲು ಅನುಕೂಲವಾಗಿದೆ. ನಾನಾ ಜನವರ್ಗಗಳ ಜನರು ಸರ್ಕಾರಿ ಕೆಲಸಗಳಲ್ಲಿದ್ದರೆ ಸರ್ಕಾರದ ಕೆಲಸಗಳೂ ಸಮರ್ಪಕವಾಗಿ ನಡೆಯುತ್ತವೆ; ಪ್ರಜೆಗಳ ಕಾರ್ಯವೂ ಪಕ್ಷಪಾತವಿಲ್ಲದೆ ನಡೆಯಲು ಅನುಕೂಲವಾಗುತ್ತದೆ. ಒಂದೇ ವರ್ಗದವರು ತುಂಬಿಕೊಂಡಿದ್ದರೆ ಒಬ್ಬರು ಮಾಡಿದ ತಪ್ಪನ್ನು ಒಬ್ಬರು ಮುಚ್ಚಿಕೊಂಡೋ ವಹಿಸಿಕೊಂಡೋ ಹೋಗುತ್ತಾರೆ. ಹೀಗಾಗುವುದೆಂಬುದನ್ನು ತಿಳಿದುಕೊಂಡು ಅವರುಗಳು ತಪ್ಪುಗಳನ್ನು ಮತ್ತಷ್ಟು ನಿರ್ಭಯವಾಗಿ ಮಾಡಲು ಯತ್ನಿಸುತ್ತಾರೆ. ಇದರಿಂದ ಸರ್ಕಾರದ ಎಫಿಷೆನ್ಸಿಯು ಕೆಡುವುದಲ್ಲದೆ ಪ್ರಜೆಗಳಿಗೂ ಹಾನಿಯಾಗುತ್ತದೆ. ಯೂನಿವರ್ಸಿಟಿ ಕ್ವಾಲಿಫಿಕೇಷನ್ನೊಂದೇ ಎಫಿಷೆನ್ಸಿಯಲ್ಲ. ಹಿಂದಣಕಾಲದಲ್ಲಿ ಮ॥ಗಳಾದ ಜಂಜಲರಾಯರು ಪಿ. ಎನ್. ನರಸಿಂಹಯ್ಯಂಗಾರರು, ದೊರೆಸ್ವಾಮಯ್ಯರು, ಎಂ. ವೆಂಕಟಕೃಷ್ಣಯ್ಯನವರು ಮೊದಲಾದವರು ಯಾವ ಯೂನಿವರ್ಸಿಟಿ ಡಿಗ್ರಿಗಳನ್ನೂ ಪಡೆಯದಿದ್ದರೂ ದೊಡ್ಡದೊಡ್ಡ ಉದ್ಯೋಗಗಳನ್ನು ಎಷ್ಟೋ ಚೆನ್ನಾಗಿ ನಿರ್ವಾಹಮಾಡಿದ್ದಾರೆ. ಪಶ್ಚಿಮದೇಶಗಳಲ್ಲಿ ಜಾತಿಭೇದವೇ ಇಲ್ಲ. ಆ ದೇಶಪದ್ಧತಿಯನ್ನು ನಮ್ಮ ಸಂಸ್ಥಾನಕ್ಕೆ ಹೋಲಿಸಿ ಸರ್ಕಾರವು ಜಾತಿಮತಗಳನ್ನು ನೋಡಕೂಡದೆಂದು ಹೇಳುವುದು ಸರಿಯಲ್ಲ. ಆ ಹೋಲಿಕೆಯು ನಮ್ಮಲ್ಲಿಗೆ ಸರಿಬೀಳುವುದಿಲ್ಲ. ನಾವು ಮಿಲಿಟರಿ ನೌಕರಿಯನ್ನು ಕೇಳುತ್ತೇವೆಯೆ? ಎಂದು ಒಬ್ಬ ಮೆಂಬರು ಆಕ್ಷೇಪಿಸಿದರು; ನಿಜ. ಬೆಳಗಾದರೆ ಕುದುರೆಯನ್ನುಜ್ಜಿ ಕಷ್ಟಪಡುವ ಕೆಲಸಗಳಿಗೆ ಇವರು ಯಾತಕ್ಕೆ ಹೋಗುತ್ತಾರೆ? ಅದು ಕಷ್ಟಮಯ; ಇವರು ಸುಖವಾಗಿರತಕ್ಕವರು; ಅದನ್ನಪೇಕ್ಷಿಸುವುದುಂಟೆ? ಎಷ್ಟೋ ವೇದಾಂತ ವೈರಾಗ್ಯ ಬೋಧಿಸುವ ಈ ಪ್ರವೀಣರುಗಳು ತಮ್ಮ ಸಹೋದರರಾದ ಹಿಂದುಳಿದ ಪ್ರಜೆಗಳಿಗೆ ಸರ್ಕಾರಿ ನೌಕರಿಯಲ್ಲಿ ಈಗ ಇರುವ ಸೇಕಡಾ ೫೦ ಭಾಗದ ಜತೆಗೆ ಇನ್ನು ೨೦ರಷ್ಟನ್ನು ಹೆಚ್ಚಿಸಿ ಕೊಡುವ ಏರ್ಪಾಡಿಗೆ ಇಷ್ಟು ಸಹನೆ ತೋರಿಸದಿರುವುದು ಆಶ್ಚರ್ಯ! ಈ ಮಿಲ್ಲರ್ ಕಮಿಟಿಯನ್ನು ನಮ್ಮ ಸರ್ ವಿಶ್ವೇಶ್ವರಯ್ಯನವರೇ ಆರಂಭಿಸಿದವರು. ನಮ್ಮಲ್ಲಿ ಆದ ಈ ಏರ್ಪಾಟನ್ನು ಮದರಾಸಿನವರು ಕಾಪಿ ಮಾಡಿದ್ದಾರೆ. ಸರ್ಕಾರಿ ಕೆಲಸಗಳನ್ನು ಸರಿಯಾದ ಯೋಗ್ಯತೆಯಿರುವವರಿಗೆ ಕೊಡಿಯೆಂದು ನಾವು ಕೇಳುತ್ತೇವೆಯೋ ಹೊರತು ಅನರ್ಹರಿಗೆ ಕೊಡಿರೆಂದು ಕೇಳುವುದಿಲ್ಲ. ಇದರಿಂದ ಅಶಾಂತಿ ಹುಟ್ಟುತ್ತದೆಯೆಂದು ಇದಿರುಪಕ್ಷದವರು ಹೇಳುತ್ತಾರೆ. ದೇಶದಲ್ಲಿ ಈ ಆರ್ಡರನ್ನು ತಪ್ಪಿಸಿಬಿಟ್ಟರೆ ಅಶಾಂತಿ ಹುಟ್ಟುತ್ತದೆಯೇ ಹೊರತು ಇದನ್ನು ಜಾರಿಗೆ ತಂದರೆ ಯಾರಲ್ಲೂ ಅಶಾಂತಿ ಹುಟ್ಟುವುದಿಲ್ಲ. ಆದರೆ ಇಂಥ ಆರ್ಡರನ್ನು ಹುಟ್ಟಿಸಿದರಲ್ಲಾ ಎಂದು ಅತೃಪ್ತಿಪಡುವವರು ದೇಶದಲ್ಲಿ ಅಶಾಂತಿಯನ್ನು ಹುಟ್ಟಿಸಬಹುದು. ಆದರೆ ೨ ಲಕ್ಷ ಜನರ ಅಶಾಂತಿ ದೊಡ್ಡದೋ ೫೬ ಲಕ್ಷ ಜನರ ಅಶಾಂತಿ ದೊಡ್ಡದೋ ಅದನ್ನು ಸರ್ಕಾರವು ಪರ್ಯಾಲೋಚಿಸಬೇಕು. ಈ ಮಿಲ್ಲರ್ ಕಮಿಟಿ ವರದಿಯ ಮೇಲೆ ಹಿಂದುಳಿದವರಿಗೆ ಸೇಕಡಾ ೫೦ ಸ್ಥಾನಗಳೆಂದು ಏರ್ಪಡಿಸಿರುವುದು ನ್ಯಾಯವಾಗಿಲ್ಲ. ಹಿಂದುಳಿದವರ ಜನಸಂಖ್ಯೆಯೆಷ್ಟಿವೆಯೆಂಬುದನ್ನು ನೋಡಿ ಅದಕ್ಕೆ ಅನುಗುಣವಾಗಿ ಇದನ್ನು ಹೆಚ್ಚಿಸಬೇಕಲ್ಲದೆ ಇದನ್ನು ವಜಾಮಾಡಕೂಡದು, ಮತ್ತು ಬದಲಾಯಿಸಲೂ ಕೂಡದು.

ಮ॥ ಅನಂತಯ್ಯಶೆಟ್ಟರು—ಸರ್ಕಾರದವರು ಅನಾಲೋಚನೆಯಿಂದ ಇದನ್ನು ಜಾರಿಗೆ ತರಲಿಲ್ಲ. ಇದಕ್ಕೆ ಸರಿಯಾದ ಕಮಿಟಿಯನ್ನು ಮಾಡಿದ್ದರು. ಸಂಸ್ಥಾನದ ಮುಖ್ಯ ನ್ಯಾಯಮೂರ್ತಿಗಳಾಗಿಯೂ ದೇಶದ ಯಾವ ಒಳಪಂಗಡಕ್ಕೂ ಸೇರದ ಯುರೋಪ್ಯರಾಗಿಯೂ ಇದ್ದ ಸರ್ ಲೇಸ್ಲಿ ಮಿಲ್ಲರ್‌ರವರನ್ನು ಅಧ್ಯಕ್ಷರನ್ನುಮಾಡಿ, ಹಿಂದುಳಿದ ಮುಂಬರಿದ ಜನಗಳಲ್ಲಿ ವಿದ್ಯಾಬುದ್ಧಿವಂತರಾದವರನ್ನು ಆ ಕಮಿಟಿಯ ಮೆಂಬರುಗಳಾಗಿ ಮಾಡಿದ್ದರು. ಅವರುಗಳು ಪೂರ್ವೋತ್ತರಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ಮಾಡಿದ ರಿಪೋರ್ಟನ್ನು ಸರ್ಕಾರದವರು ೨ ವರ್ಷಕಾಲ ಚೆನ್ನಾಗಿ ಪರಿಶೀಲನೆಮಾಡಿದರು. ಮುಖ್ಯಾಧಿಕಾರಿಗಳ ಅಭಿಪ್ರಾಯಗಳನ್ನೆಲ್ಲಾ ತರಿಸಿಕೊಂಡರು. ಇಷ್ಟನ್ನೆಲ್ಲಾ ಮಾಡಿದ ಅನಂತರ ಅದರಮೇಲೆ ಮಾಡಿದ ಅಪ್ಪಣೆಯನ್ನು ಶ್ರೀಮನ್ಮಹಾರಾಜರ ಅನುಜ್ಞೆಪಡೆದು ಜಾರಿಗೆತಂದರು. ಹಾಗೆ ಮಹಾಪ್ರಭುಗಳು ಮಾಡಿ ಮುಗಿಸಿದ ಅಪ್ಪಣೆಯನ್ನು ಮರಳಿ ಈ ಸಭೆಯ ಚರ್ಚೆಗೆ ತರಿಸುವುದೂ, ಆ ಅಪ್ಪಣೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುವುದೂ ಸರಿಯಲ್ಲ. ಏಕೆಂದರೆ ಶ್ರೀಮನ್ಮಹಾರಾಜರು ಮಾಡಿದ ಅಪ್ಪಣೆಯು ತಪ್ಪು ಎಂದು ನಾವು ಹೇಳಿದಹಾಗೆ ಆಗುತ್ತದೆ. ವಿದ್ಯಾವಿವೇಕವಂತರಾದ ಜನರು ಹೀಗೆ ಆಡಬಹುದೆ? ಸರ್ಕಾರದವರು ಯೋಗ್ಯತೆಯಿಲ್ಲದಿದ್ದವರಿಗೆಲ್ಲಾ ಕೆಲಸಕೊಡುವುದಿಲ್ಲ; ಅವರು ವಿಚಾರ ಮಾಡದೆ ಹಿಂದುಳಿದವರೆಂದಮಾತ್ರಕ್ಕೇ ಎಲ್ಲರಿಗೂ ಕೊಟ್ಟುಬಿಡುತ್ತಾರೆಯೆ? ಆ ಆರ್ಡರಿನಲ್ಲಿ ಹಾಗೇನಾದರೂ ಇದೆಯೆ? ಸಿಕ್ಕಿದಂತೆ ಕೆಲಸಗಳನ್ನು ಕೊಟ್ಟುಬಿಟ್ಟು ಅನಂತರ ಸರ್ಕಾರಿ ಕೆಲಸಗಳು ಹೀನಸ್ಥಿತಿಗೆ ಬಂದರೆ ಆಗ್ಗೆ ಸರ್ಕಾರದವರನ್ನು ಆಕ್ಷೇಪಿಸಬೇಕೇಹೊರತು ಮುಂದೆ ಹೀಗೆ ಆಗುತ್ತದೆಂದು ಈಗಲೇ ಕಲ್ಪಿಸಿಕೊಂಡು ಆಕ್ಷೇಪಿಸಿ ಅಡ್ಡಿಮಾಡುವುದು ಯುಕ್ತವಲ್ಲ. ಈಗ ಚರ್ಚೆಮಾಡಲಿಕ್ಕೆ ವ್ಯಾಜ್ಯಕಾರಣವು ಹುಟ್ಟಲಿಲ್ಲ. “ಹೀಗೆ ಹೊಸ ರೂಲೊಂದನ್ನು ಮಾಡಿ ಅಧಿಕಾರ ಕೊಡಬೇಕಾದದ್ದೇನು? ಅದನ್ನು ಮಾಡದೆಯೇ ಅಧಿಕಾರಕೊಟ್ಟರೆ ಯಾರು ಬೇಡ ಎನ್ನುತ್ತಿದ್ದರು?” ಎಂದು ಇವರುಗಳು ಆಕ್ಷೇಪಿಸುತ್ತಾರಷ್ಟೆ. ಹಾಗೆ ಸಮಾಧಾನವಾಗಿದ್ದರೆ ರೂಲ್ಸನ್ನು ಮಾಡಿದಮಾತ್ರಕ್ಕೇ ಆಕ್ಷೇಪಿಸುವುದೇಕೆ? ಅದುಕಾರಣ, ಈ ಆಕ್ಷೇಪಣೆಯಲ್ಲಿ ಸದುದ್ದೇಶವು ಎಷ್ಟುಮಟ್ಟಿಗಿದೆಯೆಂಬುದು ಗೊತ್ತಾಗುತ್ತದೆ. ಹಿಂದೆ ಸರ್ ಶೇಷಾದ್ರಿಅಯ್ಯರವರು ಒಂದು ಆರ್ಡರನ್ನು ಮಾಡಿದ್ದರೂ ಅದರಿಂದ ವಿಶೇಷ ಫಲವೇನೂ ಆಗಲಿಲ್ಲ. ಸುಮ್ಮನೆ ರೂಲ್ಸು ಕಾಗದದಲ್ಲಿತ್ತು; ಕಾರ್ಯದಲ್ಲಿ ಫಲವಾಗಲಿಲ್ಲ. ಅದನ್ನು ಈ ರೂಲ್ಸಿನಿಂದ ಕಾರ್ಯರೂಪಕ್ಕೆ ತರಿಸುವುದೇ ಉದ್ದೇಶವಾಗಿರುತ್ತದೆ. ಇದನ್ನು ಕಾರ್ಯರೂಪಕ್ಕೆ ಬರುವಂತೆ ಮಾಡಿಸುವುದಕ್ಕೆ ರಿಕ್ರೂಟ್‌ಮೆಂಟ್‌ಬೋರ್ಡು ಏರ್ಪಟ್ಟಿರುವುದು. ಅದನ್ನು ತೆಗೆದುಬಿಟ್ಟರೆ ಈಗಿನ ರೂಲ್ಸುಕೂಡ ಹಿಂದಣ ರೂಲ್ಸಿನಂತೆಯೇ ನಿಷ್ಫಲವಾಗಿ ಹೋಗುವುದು. ಆದಕಾರಣ ಆ ಬೋರ್ಡು ಖಾಯಮ್ಮಾಗಿ ಇದ್ದೇ ತೀರಬೇಕು. ಅದು ಇದ್ದರೇನೆಯೇ ಈ ಆರ್ಡರು ಕಾರ್ಯರೂಪವಾಗಿ ಜರುಗುತ್ತದೆ.

ಮ॥ ಬಿ. ಎನ್. ವಿಜಯದೇವರವರು—ನಮ್ಮ ಬ್ರಾಹ್ಮಣಸಹೋದರರು ಸರ್ಕಾರಕ್ಕೆ ಈಗತಾನೇ ಓದಿ ಒಪ್ಪಿಸಿದ ಮೆಮೋರಾಂಡಮ್ಮಿನಲ್ಲಿ ಮಿಲ್ಲರ್‌ಕಮಿಟಿ ರಿಪೋರ್ಟಿನಿಂದ ಬ್ರಾಹ್ಮಣರಿಗೆ ಹಾನಿಯುಂಟಾಗುವುದೆಂದೂ, ಸರ್ಕಾರದ ಎಫಿಷಿಯೆನ್ಸಿ ಕೆಟ್ಟುಹೋಗುವುದೆಂದೂ ಆಕ್ಷೇಪಗಳನ್ನು ಮುಖ್ಯವಾಗಿ ಮಾಡಿರುತ್ತಾರೆ. ಸರ್ಕಾರಕ್ಕೆ ಮುಖ್ಯವಾದ ಕರ್ತವ್ಯಗಳು ಎರಡುಂಟು. ೧ ನೆಯದು—ಪ್ರತಿಯೊಬ್ಬ ಪ್ರಜೆಯ ಅಭಿವೃದ್ಧಿಗೂ ಅವಕಾಶಕೊಡುವುದು. ೨ನೆಯದು—ಎಲ್ಲರನ್ನೂ ಸಮೂಹತ್ವೇನ ಮುಂದಕ್ಕೆ ತಂದು ತನ್ಮೂಲಕ ರಾಜ್ಯವನ್ನು ಅಭಿವೃದ್ಧಿಪಡಿಸುವುದು. ಒಂದೇ ಜನವರ್ಗದವರನ್ನು ಮುಂಬರಿಸಿ ಇತರರನ್ನೆಲ್ಲಾ ಹಿಂದಾಳುಗಳನ್ನಾಗಿಟ್ಟು ಆ ಲೋಪವನ್ನು ಪರಿಹರಿಸದೆ ಹಾಗೇ ನೋಡಿಕೊಂಡಿದ್ದರೆ ಸರ್ಕಾರವು ತನ್ನ ಕರ್ತವ್ಯವನ್ನು ನೆರವೇರಿಸಿದ್ದಾಗುವುದಿಲ್ಲ. ಬ್ರಾಹ್ಮಣರನ್ನು ಕೆಡಿಸಿ ಇತರರನ್ನು ಉದ್ಧಾರಮಾಡಿರೆಂದು ನಾವು ಕೇಳುವುದಿಲ್ಲ. ಹಾಗೆ ಮಾಡಬೇಕೆಂಬುದು ಸರ್ಕಾರದ ಉದ್ದೇಶ ಕೂಡ ಇಲ್ಲ. ಮಿಲ್ಲರ್‌ಕಮಿಟಿ ಆರ್ಡರಿನಲ್ಲೂ ಹಾಗೆ ಇಲ್ಲ. ಸರ್ಕಾರದವರು ಅರ್ಧಭಾಗವನ್ನು ಅವರಿಗೇ ಕೊಟ್ಟಿದ್ದಾರೆ. ನಮಗೆಲ್ಲಾ ನ್ಯಾಯವಾಗಿ ೧೦೦ಕ್ಕೆ ೯೦ರಷ್ಟನ್ನು ಕೊಡಬೇಕು. ಆದರೆ ನಾವು ಈಗ ಅದನ್ನು ಕೇಳುವುದಿಲ್ಲ. ಮ॥ ಕೆ. ಟಿ. ಶೇಷಯ್ಯನವರು ಪ್ರತ್ಯೇಕ ಪ್ರಾತಿನಿಧ್ಯವು ಎಲ್ಲೂ ಇಲ್ಲವೆಂದು ಹೇಳಿದರು. ಇಂಗ್ಲೆಂಡ್ ಮೊದಲಾದ ಪಶ್ಚಿಮದೇಶಗಳಲ್ಲಿ ಹಿಂದೆ ಯುದ್ಧದ ಅನರ್ಥ ಮೊದಲಾದುವುಗಳೆಲ್ಲಾ ಈ ಜಾತಿಭೇದಗಳಿಂದಲೇ ಆಗಿರತಕ್ಕವು. ನಮ್ಮ ದೇಶದಲ್ಲಿ ಜಾತಿಗಳ ಮಾತ್ಸರ್ಯವು ಇನ್ನಷ್ಟು ಮುಂದಕ್ಕೆ ಹೋಗಿದೆ. ಇಲ್ಲಿ ಒಂದು ಜಾತಿಯವರಿಗೂ ಮತ್ತೊಂದು ಜಾತಿಯವರಿಗೂ ಸೌಹಾರ್ದವಿಲ್ಲ. ಬ್ರಾಹ್ಮಣ ಸಹೋದರರೇ! ತಾವು ಬಹುದಿನದಿಂದ ಎಷ್ಟೋ ಲಾಭವನ್ನು ಹೊಂದಿದ್ದೀರಿ. ಇತರರ ಅಭಿವೃದ್ಧಿಯಲ್ಲಿ ಸ್ವಲ್ಪ ಸಾನುಭೂತಿಯನ್ನು ತೋರಿಸಿ. “ಅವರು ವಿದ್ಯೆಯಲ್ಲಿ ಹಿಂದೆಬಿದ್ದಿದ್ದರೆ ನಾವು ಸಂಪತ್ತಿನಲ್ಲಿ ಹಿಂದೆಬಿದ್ದಿದ್ದೇವೆ. ನಮಗೂ ಅದರ ಸಾಧನಗಳನ್ನು ಕಲ್ಪಿಸಿಕೊಡಿ” ಎಂದು ಹೇಳುತ್ತೀರಿ. ಇದು ನ್ಯಾಯವೆ? ಎಲ್ಲಾ ಪ್ರಜೆಗಳ ನಾನಾತರದ ಕೊರತೆಗಳನ್ನೆಲ್ಲಾ ಪರಿಹಾರ

ಮಾಡಿಕೊಡುವುದೇ ಸರ್ಕಾರದ ಕರ್ತವ್ಯವೆ? “ಸಂತಾನವಿಲ್ಲ; ಅದರಲ್ಲಿ ನಾನು ಹಿಂದೆಬಿದ್ದಿದ್ದೇನೆ; ನನಗೊಂದು ಮದುವೆ ಮಾಡಿಕೊಡಿ” ಎಂದು ಸರ್ಕಾರವನ್ನು ಕೇಳಬಹುದೆ? ಸರ್ಕಾರದ ಎಫಿಷಿಯೆನ್ಸಿ ಎಫಿಷಿಯೆನ್ಸಿ, ಎಂದು ಈ ನಮ್ಮ ಸಹೋದರರು ಜೋರಾಗಿ ಹೇಳುತ್ತಾರೆ. ಎಫಿಷೆನ್ಸಿ ಎಂದರೇನು? ಪ್ರಜೆಗಳ ತೃಪ್ತಿಯೇ ಎಫಿಷೆನ್ಸಿ ಎಂದು ಲಾರ್ಡ್ ಕರ್ಜನ್‌ರವರು ಹೇಳಿದ್ದಾರೆ. ಸಂಸ್ಥಾನದಲ್ಲಿ ಬಿ. ಎ. ಮೊದಲಾದ ಡಿಗ್ರಿಯನ್ನು ಪಡೆದವರು ತುಂಬಿಕೊಂಡಿದ್ದಾರೆಂದು ತೋರಿಸಿಬಿಟ್ಟಮಾತ್ರಕ್ಕೇ ದೇಶದ ಅಭಿವೃದ್ಧಿ ಯೋಗ್ಯತೆಯು ವ್ಯಕ್ತವಾಗುವುದೆ? ಪ್ರಜೆಗಳ ತೃಪ್ತಿಯಿಲ್ಲದ ಬರೀ ಎಫಿಷೆನ್ಸಿಯು ಎಂಥಾದ್ದು? ಅದರಿಂದ ಫಲವೇನು?

ಮ॥ ಎಂ. ಸುಬ್ಬಯ್ಯನವರು—ಬ್ರಾಹ್ಮಣರು “ಇತರರಿಗೆ ೫೦ ಅಲ್ಲ ೧೦೦ಕ್ಕೆ ೧೦೦ ಕೊಟ್ಟರೂ ನಮಗೆ ಅಸಮಾಧಾನವಿಲ್ಲ” ಎಂದು ಬಾಯಲ್ಲಿಮಾತ್ರ ಹೇಳುತ್ತಾರೆ; ನಡತೆಯಲ್ಲಿಲ್ಲ. ಇದುವರೆಗೂ ಸರ್ಕಾರದಲ್ಲಿದ್ದ ಎಫಿಷೆನ್ಸಿಯು ಇನ್ನು ಈ ಆರ್ಡರಿನಿಂದ ಕೆಟ್ಟುಹೋಗುತ್ತದೆಂದು ಹೇಳುತ್ತಾರೆ. ಇದುವರೆಗಣ ಸ್ಥಿತಿಯನ್ನು ನೋಡಿದರೆ ಎಫಿಷೆನ್ಸಿಯು ಸಂಪೂರ್ಣವಾಗಿ ಸಮರ್ಪಕವಾಗಿತ್ತೆಂದು ಹೇಳಲಾಗುವುದಿಲ್ಲ. ೪೦ ವರ್ಷಗಳಿಂದಲೂ ನಡೆದ ದವಲತ್ತನ್ನು ನೋಡಿದರೆ ೮-೧೦ ಜನ ಅಸಿಸ್ಟೆಂಟ್ ಕಮಿಷನರುಗಳು ಗ್ರಾಜುಯೇಟರಾಗದಿದ್ದರೂ ಕೆಲಸದಲ್ಲಿ ಸೇರಿಕೊಂಡಿದ್ದಾರೆ. ಅಮಲ್ದಾರರೂ ಎಷ್ಟೋಮಂದಿ ಹಾಗೆಯೇ ಸೇರಿದ್ದಾರೆ. ಸೆಕ್ರೆಟೆರಿಯಟ್ಟಿನಲ್ಲೂ ಕಂಟ್ರೋಲರ್ಸ್ ಆಫೀಸಿನಲ್ಲೂ ಅಂಥವರು ಎಷ್ಟೋ ಜನರಿದ್ದಾರೆ. ಆಯಾ ಕೋಮಿನ ಆಫೀಸರು ಮೇಲ್ಪಟ್ಟ ಹುದ್ದೆಗೆ ಬಂದಾಗ್ಗೆ ತಂತಮ್ಮ ಜಾತಿಯವರನ್ನೇ ಮುಂದಕ್ಕೆ ತರುತ್ತ ಬಂದಿದ್ದಾರೆ. ಇದರಿಂದ ವಿದ್ಯೆಯ ಕ್ವಾಲಿಫಿಕೇಷನ್ನಿನಿಂದಲೇ ಸಿದ್ಧವಾಗುವುದೆಂಬ ಎಫಿಷೆನ್ಸಿಯು ಅಷ್ಟು ಸರ್ವೋತ್ತಮವಾಗೇನೂ ಇಲ್ಲ. ಸರ್ಕಾರದ ಮುಖ್ಯಾಧಿಕಾರಿಗಳು ಹಿಂದುಳಿದವರಿಗೆ ಉದ್ಯೋಗಗಳನ್ನು ಕೊಡಿಸಬೇಕೆಂಬುದರಲ್ಲಿ ಸಾನುಭೂತಿಯುಳ್ಳವರಾಗಿದ್ದರೂ ಸಬಾರ್ಡಿನೇಟುಗಳು ಆ ಉದ್ದೇಶವನ್ನು ನೆರವೇರಿಸಲಿಲ್ಲ. ನಾವು ಈಗ ಸರ್ಕಾರಿ ನೌಕರಿಯ ಭಿಕ್ಷ ಬೇಡುವುದಿಲ್ಲ; ಮತ್ತು ಅನರ್ಹರಿಗೆ ಕೊಡಿಯೆಂದೂ ಕೇಳುವುದಿಲ್ಲ. ರಿಪೋರ್ಟಿನಮೇಲಣ ಆರ್ಡರೂ ಹಾಗೆ ಮಾಡಬೇಕೆಂದು ಹೇಳುವುದಿಲ್ಲ. ಹಿಂದೆ ನಮ್ಮವರು ಬಿ. ಎ. ಪ್ಯಾಸ್ ಮಾಡಿಕೊಂಡು ಬಂದರೂ ಅವರುಗಳಿಗೆ ಅಧಿಕಾರ ಸಿಕ್ಕುತ್ತಿರಲಿಲ್ಲ. ಪ್ರೋತ್ಸಾಹದ ಅವಕಾಶವಿದ್ದರೆ ಇಷ್ಟುಹೊತ್ತಿಗೆ ನಮ್ಮಲ್ಲೂ ಸಾವಿರಾರುಮಂದಿ ಬಿ. ಎ. ಗಳು ಆಗುತ್ತಿದ್ದರು. ಈ ರಿಪೋರ್ಟಿನಿಂದ ಮುಂದೆ ಅಂಥ ಪ್ರೋತ್ಸಾಹವು ವಿಶೇಷವಾಗಿ ನಮ್ಮವರ ವಿದ್ಯಾಭಿವೃದ್ಧಿಗೂ ಅವಕಾಶವಾಗುತ್ತದೆ. ಇವರ ಸಮಕ್ಕೆ ನಮ್ಮವರೂ ಬರುತ್ತಾರೆ. ಅಂಥವರಿಗೆ ಅಧಿಕಾರ ಕೊಡಿ ಎಂದೇ ನಾವು ಕೇಳುತ್ತೇವೆ. ಇವರು ಕೈಹಿಡಿದು ನಮ್ಮನ್ನು ಜತೆಗೆ ಕರೆದುಕೊಂಡಿದ್ದರೆ ನಾವು ಈಗಿನಷ್ಟು ಹಿಂದೆ ಬೀಳುತ್ತಲೇ ಇರಲಿಲ್ಲ. ನಮ್ಮ ಹೀನಸ್ಥಿತಿಯನ್ನು ಹೋಗಲಾಡಿಸಲಿಕ್ಕಾಗಿ ಸರ್ಕಾರದವರು ಈ ರಿಪೋರ್ಟಿನದ್ವಾರಾ ಮಾಡಿರುವ ಪ್ರಯತ್ನವನ್ನು ನೋಡಿ ಇವರು ಸಾನುಭೂತಿಯನ್ನು ತೋರಿಸದಿರುವುದು ಧರ್ಮವಲ್ಲ.

ಮ॥ ಎ. ಅನಂತಯ್ಯನವರು— “ವಾಣಿಜ್ಯೇವಸತೇ ಲಕ್ಷ್ಮೀಃ ತದರ್ಧಂ ಕೃಷಿ ಶಿಲ್ಪಯೋಃ। ತದರ್ಧಂ ರಾಜಸೇವಾಯಾಂ” ಎಂದು ರಾಮಯ್ಯನವರು ಹೇಳಿದ್ದಾರೆ. ಆದಕಾರಣ ಮುಖ್ಯವಾದ ವ್ಯವಸಾಯವೃದ್ಧಿಗೆ ಪ್ರೋತ್ಸಾಹಕೊಟ್ಟರೆ ದೇಶಕ್ಕೆ ಅಭ್ಯುದಯವುಂಟಾಗುತ್ತದೆ.

ಮ॥ ಟಿ. ನಂಜಪ್ಪನವರು—ಎಲ್ಲ ಜನಾಂಗದಲ್ಲೂ ಈಗ ಚಳವಳಿ ಹುಟ್ಟಿದೆ. ಏನೆಂದರೆ—ರಾಜ್ಯಾಂಗದಲ್ಲಿ ಪ್ರತಿಯೊಬ್ಬರೂ ಮುಂದಕ್ಕೆ ಬರಬೇಕೆಂದು. ಇದು ನಮ್ಮಲ್ಲೇ ಅಲ್ಲ ಹೋಲ್ ಇಂಡ್ಯಾದಲ್ಲೇ. ಇಂಡ್ಯಾದೇಶದಲ್ಲಿ ಪ್ರಜೆಗಳು ರಾಜಕೀಯಾಭಿವೃದ್ಧಿಯನ್ನು ಕೇಳುತ್ತಿರುವಂತೆಯೇ ನಾವೂ ಈ ದೇಶದ ರಾಜಕೀಯಾಡಳತದಲ್ಲಿ ಪುರೋಭಿವೃದ್ಧಿಗೆ ಬರಬೇಕೆಂಬ ಆಸೆಯುಳ್ಳವರಾಗಿದ್ದೇವೆ. ನಾವು ನಮ್ಮ ಕುತೂಹಲವನ್ನೆಲ್ಲಾ ನಮ್ಮ ಮಹಾಪ್ರಭುಗಳಲ್ಲಿ ಬಿನ್ನೈಸಿಕೊಳ್ಳಲಾಗಿ ಅವರು—“ನಿಮ್ಮ ಅಪೇಕ್ಷೆಯು ಯುಕ್ತವಾದದ್ದು; ನಿಮ್ಮ ಅಭ್ಯುದಯ ಪ್ರಯತ್ನದಲ್ಲಿ ಪರಸ್ಪರ ಕಲಹಮಾಡಬೇಡಿ” ಎಂದು ಅಪ್ಪಣೆಕೊಡಿಸಿ, ಅದರಮೇಲೆ ಮಿಲ್ಲರ್‌ಕಮಿಟಿ ರಿಪೋರ್ಟಿಗೆ ಏರ್ಪಡಿಸಿದರು. ಅದರಲ್ಲಿ ಎಲ್ಲಾ ಸಮರ್ಥರಾದ ಮೆಂಬರುಗಳೇ ಇದ್ದರು ಉಚಿತವಾದ ರಿಪೋರ್ಟೂ ಸರಿಯಾದ ಸರ್ಕಾರಿ ಅಪ್ಪಣೆಯೂ ಆಯಿತು. ತಕ್ಕಯೋಗ್ಯತೆಯನ್ನು ಪಡೆದುಬಂದರೆ ನಿಮಗೂ ಸರ್ಕಾರಿ ಉದ್ಯೋಗದಲ್ಲಿ ಭಾಗಕೊಡುತ್ತೇವೆಂಬ ಬರವಸೆಯು ಆ ಅಪ್ಪಣೆಯಲ್ಲಿದೆಯೇ ಹೊರತು ಮತ್ತೇನೂ ಇಲ್ಲ. ಇಷ್ಟಕ್ಕೇ ಕೆಲವರು ಇದರಿಂದ ಸರ್ಕಾರದ ಎಫಿಷೆನ್ಸಿ ಕೆಡುತ್ತದೆಂದು ಮೊದಲಾಗಿ ಹೇಳಿಕೊಂಡು ಗದ್ದಲಮಾಡುತ್ತಿದ್ದಾರೆ. ಇದಕ್ಕೆಲ್ಲಾ ಗೌರ್ನಮೆಂಟಿನವರು ತಕ್ಕ ಉತ್ತರವನ್ನು ಕೊಟ್ಟಿದ್ದೀರಿ. ಸರ್ಕಾರದಲ್ಲಿ ಒಂದೇಜನವರ್ಗದವರಿದ್ದರೆ ಬಹಳ ಅನರ್ಥವಾಗುತ್ತದೆ. ರಿಕ್ರೂಟ್‌ಮೆಂಟ್ ಬೋರ್ಡೂ ಜನವರ್ಗ ಪ್ರಾತಿನಿಧ್ಯವೂ ಕೂಡದೆಂದು ಇವರು ಹೇಳುತ್ತಾರೆ. ಸಿವಿಲ್ ಸರ್ವೀಸ್ ಪ್ಯಾಸನ್ನು ನಮ್ಮಲ್ಲಿ ಏರ್ಪಡಿಸಿದಾಗ, ತಮಗಿಂತಲೂ ಸಾಮರ್ಥ್ಯ ಹೆಚ್ಚಾಗಿದ್ದ ಕಣಿವೆಕೆಳಗಣವರೇ ಮೊದಲಾದವರನ್ನು ಈ ದೇಶದ ಪರೀಕ್ಷೆಗೆ ಸೇರಿಸದಂತೆ ಮಾಡಬೇಕೆಂದು ಹೇಳಿಕೊಂಡು ಅವರ ಪೈಪೋಟಿಯನ್ನು ಇವರು ತಪ್ಪಿಸಿ ತಾವು ಹೇಗೆ ಕ್ರಮವಾಗಿ ಮೆಟ್ಟಿಲನ್ನು ಹತ್ತಿಕೊಂಡುಬಂದರೋ ಅಂಥ ಕ್ರಮವಾಗಿ ಏರುವ ಅನುಕೂಲವು ಈಗ ನಮಗೂ ಇರಬೇಕು. ಒಂದೇಜಾತಿಯಲ್ಲಿ ಸಕಲಾಧಿಕಾರವೂ ಅಡಗಿದ್ದರೆ ದೇಶಕ್ಕೆ ಅನರ್ಥವಾಗುತ್ತದೆಂಬುದಕ್ಕೆ ಚರಿತ್ರೆಯಲ್ಲಿ ಎಷ್ಟೋ ಉದಾಹರಣೆಗಳಿವೆ. ಎಫಿಷೆನ್ಸಿಗೆ ವಿದ್ಯೆಯ ಕ್ವಾಲಿಫಿಕೇಷನ್ನನ್ನೇ ಮುಖ್ಯವೆಂದು ಗ್ರಹಿಸಿದರೆ ಪ್ರಪಂಚದ ಪೈಪೋಟಿಯಲ್ಲಿ ಇಂಡ್ಯಾದೇಶವೇ ನಿಲ್ಲುವುದಿಲ್ಲ; ಇಂಡ್ಯಾ ದೇಶವನ್ನೆಲ್ಲಾ ತೆಗೆದುಕೊಂಡರೆ ಮೈಸೂರು ದೇಶವೇ ನಿಲ್ಲುವುದಿಲ್ಲ. ಒಬ್ಬಾನೊಬ್ಬ ಮೆಂಬರು ಸರ್ಕಾರದ ನೌಕರಿಯು ನೀರಿನ ಲೋಟವೆಂದೂ ಅದು ದಾಸ್ಯವೆಂದೂ ಉಪಮಿಸಿ ಹೇಳಿದರು. ದಾಸತ್ವಭಾವನೆಯಿಂದ ಸರ್ಕಾರಿ ಕೆಲಸವನ್ನು ಮಾಡಿದರೆ ದೇಶೋಪಕಾರವಾಗುವುದಿಲ್ಲ. ದೇಶಾಭಿಮಾನದಿಂದ ಕೆಲಸಮಾಡಿದರೇನೆಯೇ ದೇಶಕ್ಕೆ ಹಿತವಾಗುತ್ತದೆ. ಈಗಣ ಮಿಲ್ಲರ್‌ರಿಪೋರ್ಟಿನಿಂದ ಸರ್ಕಾರದ ಎಫಿಷೆನ್ಸಿಯು ಮತ್ತೆ ಉತ್ತಮವಾಗುತ್ತದೆ. ಇತರರನ್ನೆಲ್ಲಾ ವಿದ್ಯಾಭ್ಯಾಸಮಾಡಿ ಮುಂದಕ್ಕೆ ಬರಬೇಡಿರೆಂದು ಯಾರೂ ಅಡ್ಡಿಮಾಡಿರಲಿಲ್ಲವೆಂದು ಒಬ್ಬಮೆಂಬರು ಹೇಳಿದರು. ಈಗ್ಗೂ ಗ್ರಾಮಾಂತರದವರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವೇ ಇಲ್ಲ. ಇಂಗ್ಲೀಷ್ ಸ್ಕೂಲುಗಳು ಗ್ರಾಮಾಂತರಗಳಲ್ಲಿಲ್ಲ. ಇಂಗ್ಲೀಷು ಬರದಿದ್ದರೆ ಸರ್ಕಾರಿ ಕೆಲಸವು ಸಿಕ್ಕುವುದಿಲ್ಲ. ಈ ಆರ್ಡರನ್ನು ಮನ್ನಾಮಾಡಿದರೆ ಇತರ ಸಕಲಪ್ರಜೆಗಳನ್ನೂ ಹಿಂದಕ್ಕೆ ನೆರೆದುಹಾಕಿದಂತಾಗುತ್ತದೆ.

ಮ॥ ಜಿ. ಪರಮಶಿವಯ್ಯನವರು—ಇತರರು ಅಭಿವೃದ್ಧಿಗೆ ಬಾರದಿರುವುದಕ್ಕೆ ಅವರ ಸ್ವಯಂಕೃತಾಪರಾಧವೇ ಕಾರಣವೆಂದು ನಮ್ಮ ಬ್ರಾಹ್ಮಣ ಸಹೋದರರು ಹೇಳುತ್ತಾರೆ. ಪೂರ್ವದಲ್ಲಿ ಅಧಿಕಾರವು ವಂಶಪಾರಂಪರ್ಯವಾಗಿ ಬರುತ್ತಿತ್ತು. ಶ್ಯಾನುಬೋಗಿಕೆಯು ಈಗಲೂ ಹಾಗೆಯೇ ನಡೆದುಬರುತ್ತಿದೆ. ೧೮೬೧ನೆ ಇಸವಿಯಿಂದೀಚೆಗೆ ಇಂಗ್ಲೀಷು ಅಭ್ಯಾಸವು ಮುಖ್ಯವಾಗಿ ಬಂದಿತು. ಸರ್ಕಾರದವರು ಮೊದಮೊದಲು ಲೋ॥ ಸೆಕೆಂಡರಿವರೆಗೆ ಪಾಠಶಾಲೆಗಳನ್ನೂ, ಸ್ವಲ್ಪ ಕಾಲವಾದ ಮೇಲೆ ಮೆಟ್ರಿಕ್ ತರಗತಿವರೆಗಣ ಶಾಲೆಗಳನ್ನೂ, ಬಳಿಕ ಹೀಗೆಯೇ ಎಫ್. ಎ., ಬಿ. ಎ. ತರಗತಿಗಳ ಪ್ರೌಢಪಾಠಶಾಲೆಗಳನ್ನೂ ಸ್ಥಾಪಿಸುತ್ತ ಬಂದರು. ಪೂರ್ವದಿಂದಲೂ ಸರ್ಕಾರದಧಿಕಾರವನ್ನು ಗುರಿಯಾಗಿಟ್ಟುಕೊಂಡೇ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಮಾಡುತ್ತ ಇದ್ದಾರೆ. ಸರ್ಕಾರದಧಿಕಾರಗಳಿಗೆ ಸೇರಲು ಇತರರಿಗೆ ಸುಲಭವಾದ ಅವಕಾಶವಿರಲಿಲ್ಲ. ಒಂದು ಸಂಗತಿಯನ್ನು ಉದಾಹರಣೆಯಾಗಿ ಹೇಳುತ್ತೇನೆ. ದಿವಾನ್ ಅಧಿಕಾರವನ್ನು ಅನುಭವಿಸಿ ಹೋದವರೊಬ್ಬರು ೫೦ ವರ್ಷಗಳ ಕೆಳಗೆ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಪದವಿಯಲ್ಲಿರುವಾಗ್ಗೆ ಬ್ರಾಹ್ಮಣೇತರ ಯೌವನಸ್ಥನೊಬ್ಬನು ಎಫ್.ಎ. ಪ್ಯಾಸ್ ಮಾಡಿಕೊಂಡು ಆ ಡೆಪ್ಯುಟಿ ಕಮಿಷನರ ಬಳಿಗೆ ಹೋಗಿ ಯಾವುದಾದರೂ ಕೆಲಸ ಪಡೆದುಕೊಳ್ಳಲಿಕ್ಕಾಗಿ ೫ ತಿಂಗಳ ಕಾಲ ಆಜೂಜುವಾರಿಮಾಡಿದನು. ಒಂದು ದಿವಸ ಅವರು ಕಣ್ಣುಬಿಟ್ಟು ನೋಡಿ ಏನಪ್ಪ ನಿನ್ನ ಅಹವಾಲು ಎಂದು ಕೇಳಿದರು. ತನ್ನ ಸಂಗತಿಯನ್ನು ಆ ಯೌವನಸ್ಥನು ಕನಿಕರಬರುವಂತೆ ಹೇಳಿಕೊಂಡನು. ಆ ಅಧಿಕಾರಿಯು ಒಳಕ್ಕೆ ಹೋಗಿ ಎಲ್ಲೋ ಜೋಪಾನಮಾಡಿಟ್ಟಿದ್ದ ಸರಮೋಡಿಯ ಕಾಗದವೊಂದನ್ನು ತಂದು ಈತನ ಮುಂದೆ ಹಾಕಿ ಓದು ಎಂದು ಹೇಳಿದರು. ಹುಟ್ಟಿದಾಗಣಿಂದ ಅಂಥ ಅಕ್ಷರಗಳನ್ನು ನೋಡದಿದ್ದ ಈ ಬಡಪಾಯಿಯು ಎಷ್ಟೆಷ್ಟು ಉರುಗಿಸಿ ತಿರುಗಿಸಿ ನೋಡಿದರೂ ಅದರಲ್ಲಿ ಹತ್ತಾರು ಶಬ್ದಗಳನ್ನೂ ಸರಿಯಾಗಿ ಕೂಡಿಸಿ ಓದಲಿಕ್ಕಾಗದಿರಲು ಬೆವತುಕೊಂಡನು. ಅದು ಯಾವ ಜಾತಿಯ ಲಿಪಿಯೆಂದು ಕಂಡು ಹಿಡಿಯುವುದಕ್ಕೂ ಸಾಧ್ಯವಾಗದಿದ್ದಷ್ಟು ಮೋಡಿಯಾಗಿ ಕರಡೆ ಕಾಗದದಲ್ಲಿ ಬರೆದಿತ್ತು. ಆಗ ಅಧಿಕಾರಿಯು ಥಟ್ಟನೆ ಆ ಕಾಗದವನ್ನು ಯುವಕನ ಕೈಯಿಂದ ಕಿತ್ತುಕೊಂಡು, “ಇದೇ ನೀನು ಓದಿ ಪ್ಯಾಸ್ ಮಾಡಿದ್ದು? ನಿನಗೂ ನಿನ್ನ ವಿದ್ಯೆಗೂ ಬೆಂಕಿಹಾಕಿತು ಹೋಗು” ಎಂದು ಹೇಳಿ ಗದ್ದರಿಸಿ ಅಟ್ಟಿಬಿಟ್ಟರಂತೆ. ಕಡೆಗೆ ಆ ಪಾಪಿಯು ಎಲ್ಲೋ ಒಂದು ಪ್ರೈವೇಟ್ ಇನ್‌ಸ್ಟಿಟ್ಯೂಷನ್ನಿನಲ್ಲಿ ೧೫ ರೂ. ಸಂಬಳಕ್ಕೆ ಸೇರಿಕೊಳ್ಳಬೇಕಾಯಿತು. ಪೂರ್ವದಲ್ಲಿ ಇತರರು ವಿದ್ಯಾವಂತರಾದರೂ ಸರ್ಕಾರಿ ನೌಕರಿಯನ್ನು ಸಂಪಾದಿಸುವುದು ಇಷ್ಟು ಕಠಿನವಾಗಿತ್ತು. ಮುಂಬರಿದ ಜನವರ್ಗದವರು ತಾವು ಅಧಿಕಾರಕ್ಕೆ ಸೇರಿಕೊಂಡಬಳಿಕ ತಮಗೆ ಸಂಬಂಧಪಟ್ಟವರಿಗೆ ಹಸ್ತಾವಲಂಬನ ಕೊಟ್ಟು ಮೇಲಕ್ಕೆ ಸೆಳೆದುಕೊಳ್ಳುತ್ತ ಬಂದದ್ದೇ ಹೊರತು ಇತರರನ್ನು ಸಾನುಭೂತಿಯಿಂದ ಮುಂದಕ್ಕೆ ತರಲಿಲ್ಲ. ಮಿಲ್ಲರ್‌ಕಮಿಟಿ ರಿಪೋರ್ಟನ್ನು ಪ್ಯಾಸ್‌ಮಾಡಿದ್ದು ಸರಿ. ಅದನ್ನು ಸಫಲಮಾಡಬೇಕಾದರೆ ರಿಕ್ರೂಟ್‌ಮೆಂಟ್ ಬೋರ್ಡು ಇರುವುದು ಅತ್ಯವಶ್ಯಕ. ಹಿಂದೆ ಸೇಕಡಾ ೨೫ ಸ್ಥಾನಗಳನ್ನು ಹಿಂದುಳಿದವರಿಗೆ ಕೊಡಬೇಕೆಂದು ಇದ್ದ ಸರ್ಕಾರಿ ಅಪ್ಪಣೆಯು ನಮಗೆ ಗೊತ್ತಿರಲಿಲ್ಲ. ಗೊತ್ತಿದ್ದರೆ ಅದರಂತೆ ಕೊಡಿ ಎಂದು ಆಗಲೇ ಕೇಳುತ್ತಿದ್ದೆವು. ಆ ರೂಲ್ಸು ಗುಟ್ಟಾಗಿತ್ತು, ಮತ್ತು ಕಾರ್ಯತಃ ನಡೆಯಲೂ ಇಲ್ಲ. ಈಗಣ ಆರ್ಡರೂ ಕೂಡ ಗುಟ್ಟಾಗಿದ್ದರೆ ಹಿಂದಿನಂತೆಯೇ ಆಗುತ್ತಿತ್ತೋ ಏನೋ. ರಿ॥ ಬೋರ್ಡು ಇಲ್ಲದಿದ್ದರೆ ಈ ಆರ್ಡರೂ ವ್ಯವಹಾರಕ್ಕೆ ಬರುವುದಿಲ್ಲ. ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದವನ್ನು ಇವರೇ ಹಜ್ಜೆಹಜ್ಜೆಗೂ ಕಲ್ಪಿಸಿದವರು. ಮೈಸೂರಿನ ನಂಜರಾಜಬಹದ್ದೂರ್ ಛತ್ರವನ್ನು ನೋಡಿ; ಅದನ್ನು ಕಟ್ಟಿ ಎಷ್ಟು ಕಾಲವಾಯಿತು. ಅದರ ೨ ಭಾಗಗಳಲ್ಲಿ ಒಂದರ ಬಾಗಿಲಮೇಲೆ ಇದು ಬ್ರಾಹ್ಮಣರಿಗೆಂದೂ, ಇನ್ನೊಂದುಬಾಗಿಲಮೇಲೆ ಇದು ಕ್ಷತ್ರಿಯ ವೈಶ್ಯಾದಿಗಳೆಲ್ಲರಿಗೂ ಎಂದೂ ಬರೆಯಿಸಿದ್ದಾರೆ. ಅದರಂತೆಯೇ ಸುಬ್ಬರಾಯನಕೆರೆಯಲ್ಲಿ ೨ ಕೊಳಗಳಿದ್ದರೆ ಅವಕ್ಕೂ ೨ ಬೋರ್ಡುಗಳನ್ನು ಹಾಕಿ ಹೀಗೆಯೇ ವಿಂಗಡಿಸಿದ್ದಾರೆ. ಇದರಿಂದ ಭೇದಕಲ್ಪನೆಯು ಯಾರಿಂದ ಆಯಿತೆಂಬುದು ಸ್ಪಷ್ಟವಾಗುತ್ತದೆ. ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಜಾಪ್ರತಿನಿಧಿಸಭೆಯ ತಮ್ಮ ಒಂದು ಭಾಷಣದಲ್ಲಿ ದೇಶದ ಅಭ್ಯುದಯಕ್ಕೆ ಬ್ರಾಹ್ಮಣಾದಿ ಸಕಲ ವರ್ಗಗಳ ಸಹಾಯವೂ ಅವಶ್ಯಕವೆಂದು ಹೇಳಿದ್ದಾರೆ. ಹೀಗಿರುವಾಗ ವಿದ್ಯಾವಿವೇಕಗಳಲ್ಲಿ ಮುಂದಾದವರು ಮಿಲ್ಲರ್ ಕಮಿಟಿ ರಿಪೋರ್ಟಿನಿಂದ ಉಂಟಾಗಬಹುದಾದ ಹಿಂದುಳಿದವರ ಅಭ್ಯುದಯವನ್ನು ಆಕ್ಷೇಪಿಸಿ ಅಡ್ಡಿಮಾಡುತ್ತಿರುವುದು ವಿಷಾದಕರವಲ್ಲವೆ? ಪಾಶ್ಚಾತ್ಯದೇಶದಲ್ಲಿ ಇಂಥ ಭೇದವಿಲ್ಲವೆಂದು ಒಬ್ಬ ಮೆಂಬರು ಹೇಳಿದರು. ಆ ದೇಶದಲ್ಲಿ ಎಲ್ಲರದೂ ಕ್ರೈಸ್ತಮತವೇ. ಅದರೊಳಗೆ ಪ್ರಾಟೆಸ್ಟೆಂಟ್ ಕೆಥೋಲಿಕ್ ಎಂಬ ಭೇದವಿದ್ದರೂ ಒಟ್ಟಿನಲ್ಲಿ ಒಂದೇ ಮತದವರಾಗಿದ್ದಾರೆ. ಅದರಂತೆಯೇ ನಮ್ಮ ದೇಶದಲ್ಲಿ ತ್ರಿಮತಸ್ಥರೂ ಒಂದೇ ಆದ್ದರಿಂದ ಒಬ್ಬರೊಬ್ಬರ ವೃದ್ಧಿಗೆ ಅಸೂಯೆಪಟ್ಟು ದ್ವೇಷಿಸಲಿಲ್ಲ. ಪ್ರತ್ಯೇಕ ಪ್ರಾತಿನಿಧ್ಯವು ಯುಕ್ತವಲ್ಲ ಎಂದು ಒಬ್ಬರು ಆಕ್ಷೇಪಿಸಿದರು. ಹಾಗಿದ್ದರೆ ಸರ್ಕಾರದವರು ನಾಮಿನೇಷನ್ನಿಗೆ ಯಾತಕ್ಕೆ ಅವಕಾಶಕೊಟ್ಟರು? ರಾಜ್ಯಾಡಳತವು ಸುಸೂತ್ರವಾಗಿ ನಡೆಯಲಿಕ್ಕಾಗಿ ಹುಟ್ಟಿದ ಈ ರೂಲ್ಸನ್ನು ಈ ಸಭೆಯ ಚರ್ಚೆಗೆ ತರಬೇಕಾದ ಅವಶ್ಯಕತೆಯೇ ಇರಲಿಲ್ಲ. ಇದುವರೆಗೆ ಇವರು ಮಾಡಿದ ವಾದವೆಲ್ಲಾ ವಿತಂಡವಾದವೇ ಹೊರತು ಸಕಾರಣವಲ್ಲ. ಮಿ॥ ಮಾಂಟೊಗ್‌ರವರು ಪ್ರತ್ಯೇಕ ಪ್ರಾತಿನಿಧ್ಯಕ್ಕೆ ವಿರುದ್ಧರೆಂದು ಮ॥ ಶೇಷಯ್ಯನವರು ಹೇಳಿದರು. ೧೯೧೧ನೆ ವರ್ಷದಲ್ಲಿ ಇವರು ಮಿ॥ ಮಾರ್ಲೆಯವರ ಬಳಿಯಲ್ಲಿ ಅ॥ ಸೆಕ್ರಟೆರಿಯಾಗಿದ್ದಾಗ್ಗೆ ಈ ತತ್ತ್ವಕ್ಕೆ ಸಾನುಭೂತಿಯನ್ನು ತೋರಿಸಿ ಭಾಷಣಮಾಡಿದ್ದಾರೆ. ಅವರು ಪಾಶ್ಚಾತ್ಯರು; ನಮ್ಮ ದೇಶದ ಜಾತಿ ಮತಾದಿ ಪರಿಸ್ಥಿತಿಯು ಅವರಿಗೆ ಅಷ್ಟು ಗೊತ್ತಿಲ್ಲ. ಈ ವಿಷಯದಲ್ಲಿ ಅವರಿಗಿಂತಲೂ ನಮ್ಮ ದೇಶದ ರಾಜಕೀಯ ಗುರುಗಳ ಅಭಿಪ್ರಾಯವು ವಿಶೇಷ ಪ್ರಮಾಣಭೂತವು. ಕೈ॥ ಗೋಖಲೆಯವರು ಸ್ವರ್ಗಸ್ಥರಾದ ನಂತರ ಎಚ್. ಎಚ್. ಆಗಾಖಾನರು ಬೊಂಬಾಯಿಯಲ್ಲಿ ಸಾನುತಾಪ ಪ್ರದರ್ಶನಾರ್ಥವಾಗಿ ನೆರೆದಿದ್ದ ಒಂದು ಸಭೆಯಲ್ಲಿ ಭಾಷಣಮಾಡಿದಾಗ್ಗೆ—ಸಣ್ಣಸಣ್ಣ ಜನವರ್ಗಗಳಿಗೆ ತಕ್ಕ ಪ್ರಾತಿನಿಧ್ಯವು ಲೆ॥ ಕೌನ್ಸಿಲ್ ಮೊದಲಾದವುಗಳಲ್ಲಿ ಇರುವುದು ಅತ್ಯವಶ್ಯಕವೆಂದು ಗೋಖಲೆಯವರು ಅಭಿಪ್ರಾಯಪಟ್ಟಿದ್ದರೆಂದು ಉಪನ್ಯಾಸಮಾಡಿದರೆಂಬುದಾಗಿ ಅವರು ನುಡಿದ ವಾಕ್ಯಗಳನ್ನೇ ಓದಿ ಹೇಳಿದರು. ಶ್ರೀಮನ್ಮಹಾರಾಜರು ಸಕಲಪ್ರಜೆಗಳನ್ನೂ ಪುತ್ರನಿರ್ವಿಶೇಷವಾದ ಕಾರುಣ್ಯದಿಂದ ಸಮಾನವೃದ್ಧಿಯಲ್ಲಿ ತರಬೇಕೆಂದು ಮಾಡಿರುವ ಅಪ್ಪಣೆಯನ್ನು ರಾಜಭಕ್ತಿಯಿಂದಲಾದರೂ ಈ ನಮ್ಮ ಸಹೋದರರು ಗೌರವಿಸುವುದು ವಿಹಿತವಾಗಿರುತ್ತದೆ.

ಇಲ್ಲಿಗೆ ೬ ಗಂಟೆಯಾದುದರಿಂದ ಆದಿನದ ಸಭಾಕಾರ್ಯಗಳು ಮುಗಿದುವು. ಮರುದಿನವೂ ಇದೇ ವಿಷಯದ ಚರ್ಚೆಗೆ ಇನ್ನೂ ೧॥ ಗಂಟೆಯಕಾಲ ಕೊಡಲ್ಪಟ್ಟಿದ್ದಿತು. ಆ ವಿವರವನ್ನು ಮುಂದಿನ ಸಂಚಿಕೆಯಲ್ಲಿ ಕೊಡುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಪ್ರಶ್ನಾಂಶಗಳು.

(ಕಳೆದವಾರದ ಶೇಷ.)

ಮಿ॥ ಜಿ. ರಾಮಸ್ವಾಮಯ್ಯಂಗಾರ್ಯರು, ಹಾಸನ ತಾಲ್ಲೂಕು.—

ಪ್ರ.—ಶಾನುಭಾಗರ ಪೋಟಗಿಯನ್ನೂ ಸಾದಿಲ್ವಾರು ಖರ್ಚಿನ ಹಣವನ್ನೂ ಸೇಕಡ 50 ರಷ್ಟಕ್ಕೆ ಹೆಚ್ಚಿಸಿದ ಸರ್ಕಾರಿ ಹುಕುಮನ್ನು ಇದುವರೆಗೂ ಜಾರಿಗೆ ತರದೆ ಇರುವುದಕ್ಕೆ ಕಾರಣವನ್ನು ಸರ್ಕಾರದವರು ದಯೆಯಿಟ್ಟು ತಿಳಿಸುವರೆ?

ಸರ್ಕಾರದ ರೆವಿನ್ಯೂ ಇಲಾಖಾ ಸೆಕ್ರೆಟರಿಯವರು.—

ಉತ್ತರ.—ಸರ್ಕಾರಿ ಹುಕುಮಿಗನುಸಾರವಾಗಿ ಪೋಟಗಿಯ ತಿದ್ದುಪಾಟುಗಳಿಗೆ ಆಗಬೇಕಾದ ಪ್ರಾಥಮಿಕ ತಖ್ತೆಗಳು ಸರ್ವೆ ಇಲಾಖೆಯಲ್ಲಿ ತಯಾರಾಗುತ್ತಿವೆ; ಈ ಕೆಲಸವನ್ನು ತ್ವರೆಪಡಿಸುವಂತೆ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರನ್ನು ಕೇಳಿದೆ.

ಮಿ॥ ಸೂರ್ಯನಾರಾಯಣರಾಯರು ಮತ್ತು ಮಿ॥ ಎಚ್. ರಾಮಣ್ಣನವರು, ತುಮಕೂರು ತಾಲ್ಲೂಕು.—

ಪ್ರ.—(a) ಜಮೀನು ಕಂದಾಯ.
(b) ಜೋಡಿ.
(c) ಮೊಹತರ್ಫಾ.

ತಾಲ್ಲೂಕುವಾರ್ ಅಥವಾ ಹೋಬಳಿವಾರ್ ವಿವರಗಳನ್ನು ದಯವಿಟ್ಟು ಒದಗಿಸಬೇಕು.

ಸರ್ಕಾರದ ರೆವಿನ್ಯೂ ಇಲಾಖಾ ಸೆಕ್ರೆಟರಿಯವರು.—

ಉತ್ತರ.—7ನೆಯ ನಂಬರಿನ ಪ್ರಶ್ನಾಂಶಕ್ಕೆ ಕೊಟ್ಟಿರುವ ಉತ್ತರಗಳಿಗೆ ಮೆಂಬರು ಗಮನವನ್ನು ಕೊಡಬೇಕು.

ಮಿ॥ ಡಿ. ಎಸ್. ಮಲ್ಲಪ್ಪನವರು ಮತ್ತು ಮಿ॥ ಜಿ. ಕೆ. ಗುರಪ್ಪನವರು, ತಿಪಟೂರು ತಾಲ್ಲೂಕು.—

ಪ್ರ.—(a) ಸಂಸ್ಥಾನದಲ್ಲಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳ ಸಂಖ್ಯೆ ಎಷ್ಟು?

(b) ಇವುಗಳ ಪೈಕಿ ಎಷ್ಟು ಕಂಪೆನಿಗಳು ಕೆಲಸ ನಡೆಸುತ್ತಿವೆ?

(c) ಎಷ್ಟು ಕಂಪೆನಿಗಳನ್ನು ಸರ್ಕಾರದವರು ಅಜಮಾಯಿಷಿಮಾಡಿದರು? ಮತ್ತು ಗಮನಕ್ಕೆಬಂದ ಲೋಪಗಳ ವಿಷಯದಲ್ಲಿ ಯಾವ ಕ್ರಮಜರುಗಿಸಲಾಯಿತು?

ಗಳೂ ಮಾಡಿರುವರೆಂದೂ ಜೂರರುಗಳಲ್ಲಿ ಒಬ್ಬರ ಹೊರತು ನಾಲ್ಕು ಮಂದಿಗಳೂ ಅಭಿಪ್ರಾಯಕೊಟ್ಟರು. ಜಡ್ಜರು ೬ ಮಂದಿಗಳಿಗೂ ೫೦೫ ನೆ ಸೆಕ್ಷನ್‌ಪ್ರಕಾರ (ಪ್ರಭುತ್ವ ಸೈನಿಕರನ್ನು ಅವರ ವಿಧ್ಯುಕ್ತಧರ್ಮವನ್ನು ನೆರವೇರಿಸದಿರುವಂತೆ ಪ್ರೋದ್ಬಲವನ್ನು ಮಾಡಿದ ತಪ್ಪು) ೨ ವರ್ಷಗಳ ಕಾರಾಗೃಹವಾಸ ಶಿಕ್ಷೆಯನ್ನೂ, ಅದರಮೇಲೆ ಮಹಮ್ಮದಾಲಿಯವರಿಗೆ ಆ ಶಿಕ್ಷೆಯ ಜತೆಗೆ ೧೧೭ ನೆ ಸೆಕ್ಷನ್‌ಪ್ರಕಾರ (ಹತ್ತುಮಂದಿಗಿಂತ ಹೆಚ್ಚು ಜನರು ಮಾಡುವ ತಪ್ಪಿಗೆ ಪ್ರೇರೇಪಿಸುವ ಅಪರಾಧ) ೨ ವರ್ಷ ಕಠಿನಕಾರಾಗೃಹವಾಸ ಶಿಕ್ಷೆಯನ್ನೂ, ಆದರೆ ಏಕಕಾಲದಲ್ಲೇ ಇದನ್ನು ಅನುಭವಿಸುವಂತೆ (ಎಂದರೆ ೨ ವರ್ಷವೇ ಹೊರತು ೪ ವರ್ಷವಲ್ಲ) ಜಡ್ಜರು ತೀರ್ಮಾನಹೇಳಿದರು. ಶಂಕರಾಚಾರ್ಯ ಮಠದ ಕೃಷ್ಣತೀರ್ಥ ಭಾರತಿಗಳು ನಿರ್ದೋಷಿಗಳೆಂದು ಬಿಡಲ್ಪಟ್ಟರು. ಜಡ್ಜರು ಈ ತೀರ್ಮಾನವನ್ನು ಓದಿದಕೂಡಲೇ ಅಲ್ಲಾಹೋ ಅಕ್ಬರ್ ಎಂಬ ಧ್ವನಿಯಿಂದ ಕೋರ್ಟುಮೊಳಗಿ ಹೋಯಿತು. ೨ ವರ್ಷಗಳೊಳಗೇ ನಮಗೆ ಸ್ವರಾಜ್ಯವು ಬಂದುಹೋಗಿರುವುದು, ಈ ಜಡ್ಜರು ಹೇಳಿರುವ ತೀರ್ಮಾನವು ತಪ್ಪು ಎಂದು ಮಹಮ್ಮದಾಲಿಯವರು ಕೂಗಿಹೇಳಿದರು.

ಪ್ರಜಾಪ್ರತಿನಿಧಿಸಭೆ. ತಾ|| ೧೭-೧೦-೨೧.

(ಮಿಲ್ಲರ್‌ಸಂಘದ ವರದಿಯ ಮೇಲಣ ಚರ್ಚೆ)

ಕಳೆದವಾರದ ಶೇಷ.

ಈದಿವಸ ಮಧ್ಯಾಹ್ನ ೧೨ ಗಂಟೆಯಿಂದ ೩ ಗಂಟೆಯವರೆಗೆ ಜುಡಿಷಲ್ ವಿಷಯಗಳ ಚರ್ಚೆ ನಡೆದು ಮುಗಿದ ಬಳಿಕ ೩|| ಗಂಟೆಯಮೇಲೆ ಮಿಲ್ಲರ್‌ಸಂಘದ ವರದಿಯಮೇಲಣ ಚರ್ಚೆಗೆ ಆರಂಭವಾಯಿತು.

ಮ|| ವೆಂಕಟರಮಣಶಾಸ್ತ್ರಿಗಳು—ನಮ್ಮ ಮೈಸೂರು ರಾಜ್ಯವು ಮಾದರಿ ಸಂಸ್ಥಾನ. ಇಂಥ ಕಡೆಯಲ್ಲಿ ಪರದೇಶದವರು ಕೇಳಿ ನಗುವಂತೆ ಬ್ರಾಹ್ಮಣ-ಅಬ್ರಾಹ್ಮಣ, ಹಿಂದುಳಿದವರು-ಮುಂಬರಿದವರು, ಎಂದು ವಿಭಾಗಮಾಡಿಕೊಂಡಿರುವುದು ಸರಿಯಲ್ಲ. ನನ್ನ ಜಮೀನ್ ಸಾಗುವಳಿದಾರನು ಭೂಮಿಯನ್ನು ಪಾಳುಗೆಡಹಿಕೊಂಡಿದ್ದ. ಅದೇಕೆ ಎಂದು ನಾನು ಆಕ್ಷೇಪಿಸಲು, ನನ್ನ ಒಬ್ಬನೇ ಮಗನು ಬಲಾತ್ಕಾರ ವಿದ್ಯಾಭ್ಯಾಸದಿಂದ ಸ್ಕೂಲಿಗೆ ಸೇರಿ ಬೇಸಾಯಕ್ಕೆ ಬರದೆಹೋದ. ಅದರಿಂದ ಭೂಮಿ ಪಾಳುಬಿದ್ದಿದೆ. ನಾನೊಬ್ಬ ಏನು ಮಾಡಲಿ? ಎಂದು ಹೇಳಿದ. ಅವರವರಿಗೆ ಪರಂಪರೆಯಾಗಿ ನಡೆದುಬಂದ ವೃತ್ತಿಯಲ್ಲಿ ಅವರವರಿದ್ದರೆ ರಾಜ್ಯಕ್ಕೆ ಕ್ಷೇಮ.

ಮ|| ಎಸ್. ಆರ್. ಬಾಲಕೃಷ್ಣರಾಯರು—ಬ್ರಾಹ್ಮಣ ಪ್ರತಿನಿಧಿಗಳಾದ ನಾವುಗಳು ಈ ವಿಷಯದಲ್ಲಿ ಹೇಳಬೇಕಾದುದನ್ನೆಲ್ಲಾ ಬರೆದು ತಂದಿರುವೆವೆಂದು ಹೇಳಿ ಟೈಪ್‌ಮಾಡಿದ್ದ ಮೆಮೊರಾಂಡಮನ್ನು ಓದಿ ದಿವಾನರಿಗೆ ಒಪ್ಪಿಸಿದರು. ಅದರಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರೇ ಮೊದಲಾದ ೩೦ ಮಂದಿಗೆ ಮೇಲ್ಪಟ್ಟವರ ರುಜುಗಳು ಇದ್ದುವು. ಅದರಲ್ಲಿದ್ದ ಮುಖ್ಯಾಂಶಗಳು—ಉದ್ಯೋಗಕ್ಕೆ ಯಾರುಬೇಕಾದರೂ ಸೇರಬಹುದು. ಆದರೆ ಜಾತಿ ವಯಸ್ಸು ಮೊದಲಾದ ತಾರತಮ್ಯಗಳು ಇರಕೂಡದು. ಪೋಟಾಪೋಟಿ ಇರಬೇಕು. ರಿಕ್ರೂಟ್‌ಮೆಂಟ್ ಬೋರ್ಡನ್ನು ತೆಗೆದುಬಿಡಬೇಕು. ಮೆರಿಟ್ ಸ್ಕಾಲರ್ಷಿಪ್ ಪದ್ಧತಿಯು ಇದ್ದೇಇರಬೇಕು. ಸ್ಕಾಲರ್ಷಿಪ್ ಮೊಬಲಗು ೩ ಲಕ್ಷ ರೂ.ಗಳೆಂದು ಹೇಳಲ್ಪಟ್ಟಿರುವುದು ಹಾಗೆಯೇ ಏರ್ಪಟ್ಟಿರಬೇಕು. ಜಾತಿವಾರ್ ಸ್ಕಾಲರ್ಷಿಪ್ ಏರ್ಪಾಟು ಉಚಿತವಲ್ಲ. ಬ್ರಾಹ್ಮಣೇತರರಿಗೆ ಸೇಕಡಾ ಇಷ್ಟು ಸರ್ಕಾರಿ ಉದ್ಯೋಗಗಳನ್ನು ಕೊಡಬೇಕೆಂದು ಬೊಂಬಾಯಿಯ ಕೌನ್ಸಿಲಿನಲ್ಲಿ ಚರ್ಚೆ ಬಂದಾಗ್ಗೆ ಸರ್ಕಾರದ ಪಕ್ಷದಿಂದ ಕೊಡಲ್ಪಟ್ಟಿರುವ ಉತ್ತರವು ಕ್ರಾನಿಕಲ್ ಪತ್ರಿಕೆಯಲ್ಲಿ ಬಂದಿದೆ. ಇತ್ಯಾದಿ.

ಮ|| ಎ. ಅನಂತಯ್ಯನವರು—ಸರ್ಕಾರದವರು ಸಂಬಳ ಕೊಡುವಾಗ ಉತ್ತಮವಾದ ಹೆಚ್ಚು ಯೋಗ್ಯತೆಯ ಮನುಷ್ಯರನ್ನೇ ಕೆಲಸಕ್ಕೆ ಇಟ್ಟುಕೊಳ್ಳಬೇಕು. ದುಡ್ಡು ಕೊಟ್ಟು ಒಳ್ಳೆ ಪದಾರ್ಥವನ್ನೇ ತೆಗೆದುಕೊಳ್ಳಬೇಕಲ್ಲವೆ? ಕಡಿಮೆ ಯೋಗ್ಯತೆಯ ನಕಾರಿ ಜನರನ್ನು ತೆಗೆದುಕೊಂಡರೆ ಸರ್ಕಾರಿ ಎಫಿಷೆನ್ಸಿ ಕೆಡುತ್ತದೆ. ಮತ್ತು ಅವರ ವಿದ್ಯಾಭ್ಯಾಸಕ್ಕೂ ಉಮೇದು ಕಡಮೆಯಾಗುತ್ತದೆ. ಅದು ಅವರಿಗೂ ಅನರ್ಥ. ಉಮೇದುವಾರರಲ್ಲಿ ಸಮಾನಯೋಗ್ಯತೆಗಳು ತೋರಿಬಂದರೆ ಇತರರಿಗೇ ಕೊಡಿ. ಇಲಾಖಾ ಮುಖ್ಯಾಧಿಕಾರಿಗಳಲ್ಲಿ ನಂಬುಗೆಯಿಲ್ಲವೆ? ರಿಕ್ರೂಟ್‌ಮೆಂಟ್ ಬೋರ್ಡು ಬೇಕಿಲ್ಲ. ಆ ಬೋರ್ಡಿನವರು ತಂತಮ್ಮವರಿಗೇ ಶಿಫಾರಸ್ಸು ಮಾಡುತ್ತಾರೆ. ಉಮೇದುವಾರರಾಗಿ ಬರುವವರಲ್ಲಿ ವಯಸ್ತಾರತಮ್ಯವನ್ನು ಇಟ್ಟಿರುವುದು ಸರಿಯಲ್ಲ.

ಮ|| ಇ. ಕೃಷ್ಣಪ್ಪನವರು—ಲೇ|| ಕೌನ್ಸಿಲಿನಲ್ಲಿ ಮಿ|| ಮಿರ್ ಹಂಜಾಹುಸೇನ್ ಸಾಹೇಬರು ಆಡಿದ್ದ ಭಾಷಣದ ಒಂದು ಭಾಗವನ್ನು ಓದಿ ಹೇಳಿ, ಮಿಲ್ಲರ್ ಕಮಿಟಿ ವರದಿ ಹುಟ್ಟಿದುದರಿಂದ ಎಲ್ಲರೂ ತಂತಮ್ಮ ವೃತ್ತಿಗಳನ್ನು ಬಿಡುವುದರಿಂದ ದೇಶದ ಸಂಪದಭ್ಯುದಯಕ್ಕೆ ತೊಂದರೆಬಂತು. ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಹೆಸರನ್ನು ಗೌರ್ನಮೆಂಟ್ ರಿಕಾರ್ಡುಗಳಿಂದ ತೆಗೆದುಬಿಡಬೇಕು. ಹವ್ಯಕರು ಮೊದಲಾದ ಪ್ರಭೇದದವರಿಗೆ ಬ್ಯಾಕ್ವರ್ಡ್ ಕ್ಲಾಸ್ ಸ್ಕಾಲರ್ಷಿಪ್ಪನ್ನು ಕೊಡಬೇಕು.

ಮ|| ನಾಗವಾಲದ ಲಿಂಗಣ್ಣನವರು—ಮಿಲ್ಲರ್‌ಕಮಿಟಿ ರಿಪೋರ್ಟು ಪ್ಯಾಸ್ ಆದಮೇಲೆ ನಮ್ಮ ಹುಡುಗರು ಸರ್ಕಾರಿ ಕೆಲಸವು ಸಿಕ್ಕುವುದೆಂಬ ಆಶೋತ್ತರದಿಂದ ಓದುವುದಕ್ಕೆ ನುಗ್ಗುತ್ತಿದ್ದಾರೆ. ಮೊದಲು ನಾವು ಬಲಾತ್ಕರಿಸಿದರೂ ವಿದ್ಯಾಭ್ಯಾಸಕ್ಕೆ ಹೋಗುತ್ತಿರಲಿಲ್ಲ. ಇದರಿಂದ ಅವರಲ್ಲಿ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾದರೂ ಅವಕಾಶವಾಯಿತು. ಸರ್ಕಾರದಲ್ಲಿ ಎಲ್ಲ ಜನವರ್ಗದವರೂ ಸೇರಿದ್ದರೆ ಪರಸ್ಪರ ಭಯದಿಂದ ಕೆಲಸವು ಚೆನ್ನಾಗಿ ನಡೆಯುತ್ತದೆ. ಒಂದೇ ಕೋಮಿನವರೇ ಸೇರಿದ್ದರೆ ಇತರರಿಗೆ ಅಲ್ಲಿ ಯಾವ ಸೌಲಭ್ಯವೂ ಆಗುವುದಿಲ್ಲ. ನನ್ನದೇ ಒಂದು ಉದಾಹರಣೆ ಹೇಳುತ್ತೇನೆ. ಸಿವಿಲ್ ಕೋರ್ಟಿನಲ್ಲಿ ಒಂದು ಸಣ್ಣ ಕೆಲಸಕ್ಕೆ ನಾನೇ ಹೋಗಿ ೨-೩ ಸಲ ಕೇಳಿದರೂ ಆಗಲಿಲ್ಲ. ನಾವು ಕೊಟ್ಟ ಫೀಜನ್ನು ತೆಗೆದುಕೊಂಡು ಹೋದ ಲಾಯರು ಹೋಗಿ ಕೇಳಲು ಆ ಕೂಡಲೇ ಆಯಿತು. ಹೀಗೆ ಸ್ವತಃ ಕಕ್ಷಿದಾರರು ಹೋದರೂ ಆಗದಿದ್ದ ಕಾರ್ಯವು ಬ್ರಾಹ್ಮಣ ಜಾತಿಯ ಲಾಯರು ಹೋದರೆ ಬೇಗನೆ ಆಗುತ್ತದೆ. ಮುಂಬರಿದ ಜನರು ಮೊದಮೊದಲು ಅವರೂ ನಮ್ಮಂತೆಯೇ ಮೌಢ್ಯದಲ್ಲಿದ್ದರು. ಬಳಿಕ ಅವರು ಮುಂದಕ್ಕೆ ನುಗ್ಗಿದರು ಅದರಂತೆ ಈಗ ನಾವೂ ಮುಂದಕ್ಕೆ ನುಗ್ಗುತ್ತಿದ್ದೇವೆ. ಮಿಲ್ಲರ್‌ಕಮಿಟಿ ರಿಪೋರ್ಟಿನ ಮೇಲಣ ಆರ್ಡರನ್ನು ಬದಲಾಯಿಸಕೂಡದು. ಈಗ್ಗೆ ಅದನ್ನು ದೃಢಪಡಿಸುವುದಲ್ಲದೆ ಮುಂದೆ ೫೦ ಎಂಬ ಪರಿಮಿತಿಯನ್ನು ದಿನಕ್ರಮೇಣ ಹೆಚ್ಚಿಸಿಕೊಡಬೇಕು. ಈಗ ಕೊಟ್ಟಿರುವುದು ಅಲ್ಪಭಾಗವಾಗಿದೆ. ಹಿಂದುಳಿದವರ ಮೌಢ್ಯವು ನಿವೃತ್ತವಾಗಬೇಕಾದರೆ ಇಂಥ ಆರ್ಡರುಗಳನ್ನು ಪದೇಪದೇ ಮಾಡುತ್ತ ಬರಬೇಕು. ಹಿಂದೆ ಬಿದ್ದುಹೋಗಿರುವವರನ್ನು ಉದ್ಧಾರಮಾಡುವುದಕ್ಕಾಗಿ ಸರ್ಕಾರದವರು ಈಗ ಮಾಡಿರುವ ಅಪ್ಪಣೆಯನ್ನು ನೋಡಿ ಮುಂಬರಿದವರು ಸಂತೋಷಪಡಬೇಕಾಗಿತ್ತು; ಇಲ್ಲದಿದ್ದರೆ ಸುಮ್ಮನೆಯಾದರೂ ಇರಬೇಕಾಗಿತ್ತು; ಅವೆರಡನ್ನೂ ಬಿಟ್ಟು ಇದಕ್ಕೆ ವಿರೋಧಿಸಿರುವುದು ಬಹಳ ವ್ಯಸನಕರವಾಗಿದೆ. ಆದಕಾರಣ ಈ ಸಬ್ಜೆಕ್ಟನ್ನು ವಜಾಮಾಡಿ ಸರ್ಕಾರಿ ಅಪ್ಪಣೆಯನ್ನು ಖಾಯಂ ಮಾಡಬೇಕೆಂದು ನನ್ನ ಪ್ರಾರ್ಥನೆ.

ಮ|| ಜಿ. ರಾಮಸ್ವಾಮಯ್ಯಂಗಾರರು—ದೇವರಿಗೆ ಜಾತಿಯಿಲ್ಲ. ಸರ್ಕಾರಕ್ಕೂ ಜಾತಿಯಿಲ್ಲ. ಮನುಷ್ಯರಿಗೂ ಜಾತಿಯಿಲ್ಲ. ಬುದ್ಧಿಶಕ್ತಿಗಳೇ ಜಾತಿಗಳಿಗೆ ಕಾರಣಗಳು. ವಿದ್ಯೆಯಲ್ಲೂ ಐಶ್ವರ್ಯದಲ್ಲೂ ಹಿಂದುಳಿದವರನ್ನೇ ಹಿಂದುಳಿದವರನ್ನಾಗಿ ಭಾವಿಸಬೇಕು.

ಮ|| ಡಿ. ಎಸ್. ಮಲ್ಲಪ್ಪನವರು—ಈ ರಿಪೋರ್ಟಿನಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಸಹ ಕ್ಷೇಮವುಂಟಾಗಲು ಅನುಕೂಲವಾಗಿದೆ. ನಾನಾ ಜನವರ್ಗಗಳ ಜನರು ಸರ್ಕಾರಿ ಕೆಲಸಗಳಲ್ಲಿದ್ದರೆ ಸರ್ಕಾರದ ಕೆಲಸಗಳೂ ಸಮರ್ಪಕವಾಗಿ ನಡೆಯುತ್ತವೆ; ಪ್ರಜೆಗಳ ಕಾರ್ಯವೂ ಪಕ್ಷಪಾತವಿಲ್ಲದೆ ನಡೆಯಲು ಅನುಕೂಲವಾಗುತ್ತದೆ. ಒಂದೇ ವರ್ಗದವರು ತುಂಬಿಕೊಂಡಿದ್ದರೆ ಒಬ್ಬರು ಮಾಡಿದ ತಪ್ಪನ್ನು ಒಬ್ಬರು ಮುಚ್ಚಿಕೊಂಡೋ ವಹಿಸಿಕೊಂಡೋ ಹೋಗುತ್ತಾರೆ. ಹೀಗಾಗುವುದೆಂಬುದನ್ನು ತಿಳಿದುಕೊಂಡು ಅವರುಗಳು ತಪ್ಪುಗಳನ್ನು ಮತ್ತಷ್ಟು ನಿರ್ಭಯವಾಗಿ ಮಾಡಲು ಯತ್ನಿಸುತ್ತಾರೆ. ಇದರಿಂದ ಸರ್ಕಾರದ ಎಫಿಷೆನ್ಸಿಯು ಕೆಡುವುದಲ್ಲದೆ ಪ್ರಜೆಗಳಿಗೂ ಹಾನಿಯಾಗುತ್ತದೆ. ಯೂನಿವರ್ಸಿಟಿ ಕ್ವಾಲಿಫಿಕೇಷನ್ನೊಂದೇ ಎಫಿಷೆನ್ಸಿಯಲ್ಲ. ಹಿಂದಣಕಾಲದಲ್ಲಿ ಮ||ಗಳಾದ ಹಂಚಲರಾಯರು ವಿ.ಎನ್. ನರಸಿಂಹಯ್ಯಂಗಾರರು, ದೊರೆಸಾಮಯ್ಯರು, ಎಂ. ವೆಂಕಟಕೃಷ್ಣಯ್ಯನವರು ಮೊದಲಾದವರು ಯಾವ ಯೂನಿವರ್ಸಿಟಿ ಡಿಗ್ರಿಗಳನ್ನೂ ಪಡೆಯದಿದ್ದರೂ ದೊಡ್ಡದೊಡ್ಡ ಉದ್ಯೋಗಗಳನ್ನು ಎಷ್ಟೋ ಚೆನ್ನಾಗಿ ನಿರ್ವಾಹಮಾಡಿದ್ದಾರೆ. ಪಶ್ಚಿಮದೇಶಗಳಲ್ಲಿ ಜಾತಿಭೇದವೇ ಇಲ್ಲ. ಆ ದೇಶಪದ್ಧತಿಯನ್ನು ನಮ್ಮ ಸಂಸ್ಥಾನಕ್ಕೆ ಹೋಲಿಸಿ ಸರ್ಕಾರವು ಜಾತಿಮತಗಳನ್ನು ನೋಡಕೂಡದೆಂದು ಹೇಳುವುದು ಸರಿಯಲ್ಲ. ಆ ಹೋಲಿಕೆಯು ನಮ್ಮಲ್ಲಿಗೆ ಸರಿಬೀಳುವುದಿಲ್ಲ. ನಾವು ಮಿಲಟರಿ ನೌಕರಿಯನ್ನು ಕೇಳುತ್ತೇವೆಯೆ? ಎಂದು ಒಬ್ಬ ಮೆಂಬರು ಆಕ್ಷೇಪಿಸಿದರು; ನಿಜ. ಬೆಳಗಾದರೆ ಕುದುರೆಯನ್ನುಜ್ಜಿ ಕಷ್ಟಪಡುವ ಕೆಲಸಗಳಿಗೆ ಇವರು ಯಾತಕ್ಕೆ ಹೋಗುತ್ತಾರೆ? ಅದು ಕಷ್ಟಮಯ; ಇವರು ಸುಖವಾಗಿರತಕ್ಕವರು; ಅದನ್ನಪೇಕ್ಷಿಸುವುದುಂಟೆ? ಎಷ್ಟೋ ವೇದಾಂತ ವೈರಾಗ್ಯ ಬೋಧಿಸುವ ಈ ಪ್ರವೀಣರುಗಳು ತಮ್ಮ ಸಹೋದರರಾದ ಹಿಂದುಳಿದ ಪ್ರಜೆಗಳಿಗೆ ಸರ್ಕಾರಿ ನೌಕರಿಯಲ್ಲಿ ಈಗ ಇರುವ ಸೇಕಡಾ ೩೦ ಭಾಗದ ಜತೆಗೆ ಇನ್ನು ೨೦ ರಷ್ಟನ್ನು ಹೆಚ್ಚಿಸಿ ಕೊಡುವ ಏರ್ಪಾಡಿಗೆ ಇಷ್ಟು ಸಹನೆ ತೋರಿಸದಿರುವುದು ಆಶ್ಚರ್ಯ! ಈ ಮಿಲ್ಲರ್ ಕಮಿಟಿಯನ್ನು ನಮ್ಮ ಸರ್ ವಿಶ್ವೇಶ್ವರಯ್ಯನವರೇ ಆರಂಭಿಸಿದವರು. ನಮ್ಮಲ್ಲಿ ಆದ ಈ ಏರ್ಪಾಟನ್ನು ಮದರಾಸಿನವರು ಕಾಪಿ ಮಾಡಿದ್ದಾರೆ. ಸರ್ಕಾರಿ ಕೆಲಸಗಳನ್ನು ಸರಿಯಾದ ಯೋಗ್ಯತೆಯಿರುವವರಿಗೆ ಕೊಡಿಯೆಂದು ನಾವು ಕೇಳುತ್ತೇವೆಯೋ ಹೊರತು ಅನರ್ಹರಿಗೆ ಕೊಡಿರೆಂದು ಕೇಳುವುದಿಲ್ಲ. ಇದರಿಂದ ಅಶಾಂತಿ ಹುಟ್ಟುತ್ತದೆಯೆಂದು ಇದಿರುಪಕ್ಷದವರು ಹೇಳುತ್ತಾರೆ. ದೇಶದಲ್ಲಿ ಈ ಆರ್ಡರನ್ನು ತಪ್ಪಿಸಿಬಿಟ್ಟರೆ ಅಶಾಂತಿ ಹುಟ್ಟುತ್ತದೆಯೇ ಹೊರತು ಇದನ್ನು ಜಾರಿಗೆ ತಂದರೆ ಯಾರಲ್ಲೂ ಅಶಾಂತಿ ಹುಟ್ಟುವುದಿಲ್ಲ. ಆದರೆ ಇಂಥ ಆರ್ಡರನ್ನು ಹುಟ್ಟಿಸಿದರಲ್ಲಾ ಎಂದು ಅತೃಪ್ತಿಪಡುವವರು ದೇಶದಲ್ಲಿ ಅಶಾಂತಿಯನ್ನು ಹುಟ್ಟಿಸಬಹುದು. ಆದರೆ ೨ ಲಕ್ಷ ಜನರ ಅಶಾಂತಿ ದೊಡ್ಡದೋ ೫೭ ಲಕ್ಷ ಜನರ ಅಶಾಂತಿ ದೊಡ್ಡದೋ ಅದನ್ನು ಸರ್ಕಾರವು ಪರ್ಯಾಲೋಚಿಸಬೇಕು. ಈ ಮಿಲ್ಲರ್ ಕಮಿಟಿ ವರದಿಯ ಮೇಲೆ ಹಿಂದುಳಿದವರಿಗೆ ಸೇಕಡಾ ೫೦ ಸ್ಥಾನಗಳೆಂದು ಏರ್ಪಡಿಸಿರುವುದು ನ್ಯಾಯವಾಗಿಲ್ಲ. ಹಿಂದುಳಿದವರ ಜನಸಂಖ್ಯೆಯೆಷ್ಟಿದೆಯೆಂಬುದನ್ನು ನೋಡಿ ಅದಕ್ಕೆ ಅನುಗುಣವಾಗಿ ಇದನ್ನು ಹೆಚ್ಚಿಸಬೇಕಲ್ಲದೆ ಇದನ್ನು ವಜಾಮಾಡಕೂಡದು, ಮತ್ತು ಬದಲಾಯಿಸಲೂ ಕೂಡದು.

ಮ|| ಅನಂತಯ್ಯಶೆಟ್ಟರು—ಸರ್ಕಾರದವರು ಅನಾಲೋಚನೆಯಿಂದ ಇದನ್ನು ಜಾರಿಗೆ ತರಲಿಲ್ಲ. ಇದಕ್ಕೆ ಸರಿಯಾದ ಕಮಿಟಿಯನ್ನು ಮಾಡಿದ್ದರು. ಸಂಸ್ಥಾನದ ಮುಖ್ಯ ನ್ಯಾಯಮೂರ್ತಿಗಳಾಗಿಯೂ ದೇಶದ ಯಾವ ಒಳಪಂಗಡಕ್ಕೂ ಸೇರದ ಯೂರೋಪ್ಯರಾಗಿಯೂ ಇದ್ದ ಸರ್ ಲೇಸ್ಲಿ ಮಿಲ್ಲರ್‌ರವರನ್ನು ಅಧ್ಯಕ್ಷರನ್ನುಮಾಡಿ, ಹಿಂದುಳಿದ ಮುಂಬರಿದ ಜನಗಳಲ್ಲಿ ವಿದ್ಯಾಬುದ್ಧಿವಂತರಾದವರನ್ನು ಆ ಕಮಿಟಿಯ ಮೆಂಬರುಗಳಾಗಿ ಮಾಡಿದ್ದರು. ಅವರುಗಳು ಪೂರ್ವೋತ್ತರಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ಮಾಡಿದ ರಿಪೋರ್ಟನ್ನು ಸರ್ಕಾರದವರು ೨ ವರ್ಷಕಾಲ ಚೆನ್ನಾಗಿ ಪರಿಶೀಲನೆಮಾಡಿದರು. ಮುಖ್ಯಾಧಿಕಾರಿಗಳ ಅಭಿಪ್ರಾಯಗಳನ್ನೆಲ್ಲಾ ತರಿಸಿಕೊಂಡರು. ಇಷ್ಟನ್ನೆಲ್ಲಾ ಮಾಡಿದ ಅನಂತರ ಅದರಮೇಲೆ ಮಾಡಿದ ಅಪ್ಪಣೆಯನ್ನು ಶ್ರೀಮನ್ಮಹಾರಾಜರ ಅನುಜ್ಞೆಪಡೆದು ಜಾರಿಗೆತಂದರು. ಹಾಗೆ ಮಹಾಪ್ರಭುಗಳು ಮಾಡಿ ಮುಗಿಸಿದ ಅಪ್ಪಣೆಯನ್ನು ಮರಳಿ ಈ ಸಭೆಯ ಚರ್ಚೆಗೆ ತರಿಸುವುದೂ, ಆ ಅಪ್ಪಣೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುವುದೂ ಸರಿಯಲ್ಲ. ಏಕೆಂದರೆ ಶ್ರೀಮನ್ಮಹಾರಾಜರು ಮಾಡಿದ ಅಪ್ಪಣೆಯು ತಪ್ಪು ಎಂದು ನಾವು ಹೇಳಿದಹಾಗೆ ಆಗುತ್ತದೆ. ವಿದ್ಯಾವಿವೇಕವಂತರಾದ ಜನರು ಹೀಗೆ ಆಡಬಹುದೆ? ಸರ್ಕಾರದವರು ಯೋಗ್ಯತೆಯಿಲ್ಲದಿದ್ದವರಿಗೆಲ್ಲಾ ಕೆಲಸಕೊಡುವುದಿಲ್ಲ; ಅವರು ವಿಚಾರಮಾಡದೆ ಹಿಂದುಳಿದವರೆಂದಮಾತ್ರಕ್ಕೇ ಎಲ್ಲರಿಗೂ ಕೊಟ್ಟುಬಿಡುತ್ತಾರೆಯೆ? ಆ ಆರ್ಡರಿನಲ್ಲಿ ಹಾಗೇನಾದರೂ ಇದೆಯೆ? ಸಿಕ್ಕಿದಂತೆ ಕೆಲಸಗಳನ್ನು ಕೊಟ್ಟುಬಿಟ್ಟು ಅನಂತರ ಸರ್ಕಾರಿ ಕೆಲಸಗಳು ಹೀನಸ್ಥಿತಿಗೆ ಬಂದರೆ ಆಗ್ಗೆ ಸರ್ಕಾರದವರನ್ನು ಆಕ್ಷೇಪಿಸಬೇಕೇಹೊರತು ಮುಂದೆ ಹೀಗೆ ಆಗುತ್ತದೆಂದು ಈಗಲೇ ಕಲ್ಪಿಸಿಕೊಂಡು ಆಕ್ಷೇಪಿಸಿ ಅಡ್ಡಿಮಾಡುವುದು ಯುಕ್ತವಲ್ಲ. ಈಗ ಚರ್ಚೆಮಾಡಲಿಕ್ಕೆ ವ್ಯಾಜ್ಯಕಾರಣವು ಹುಟ್ಟಲಿಲ್ಲ. ''ಹೀಗೆ ಹೊಸ ರೂಲ್ಸೊಂದನ್ನು ಮಾಡಿ ಅಧಿಕಾರ ಕೊಡಬೇಕಾದದ್ದೇನು? ಅದನ್ನು ಮಾಡದೆಯೇ ಅಧಿಕಾರಕೊಟ್ಟರೆ ಯಾರು ಬೇಡ ಎನ್ನುತ್ತಿದ್ದರು?'' ಎಂದು ಇವರುಗಳು ಆಕ್ಷೇಪಿಸುತ್ತಾರಷ್ಟೆ. ಹಾಗೆ ಸಮಾಧಾನವಾಗಿದ್ದರೆ ರೂಲ್ಸನ್ನು ಮಾಡಿದಮಾತ್ರಕ್ಕೇ ಆಕ್ಷೇಪಿಸುವುದೇಕೆ? ಅದುಕಾರಣ, ಈ ಆಕ್ಷೇಪಣೆಯಲ್ಲಿ ಸದುದ್ದೇಶವು ಎಷ್ಟುಮಟ್ಟಿಗಿದೆಯೆಂಬುದು ಗೊತ್ತಾಗುತ್ತದೆ. ಹಿಂದೆ ಸರ್ ಶೇಷಾದ್ರಿಅಯ್ಯರವರು ಒಂದು ಆರ್ಡರನ್ನು ಮಾಡಿದ್ದರೂ ಅದರಿಂದ ವಿಶೇಷ ಫಲವೇನೂ ಆಗಲಿಲ್ಲ. ಸುಮ್ಮನೆ ರೂಲ್ಸು ಕಾಗದದಲ್ಲಿತ್ತು; ಕಾರ್ಯದಲ್ಲಿ ಫಲವಾಗಲಿಲ್ಲ. ಅದನ್ನು ಈ ರೂಲ್ಸಿನಿಂದ ಕಾರ್ಯರೂಪಕ್ಕೆ ತರಿಸುವುದೇ ಉದ್ದೇಶವಾಗಿರುತ್ತದೆ. ಇದನ್ನು ಕಾರ್ಯರೂಪಕ್ಕೆ ಬರುವಂತೆ ಮಾಡಿಸುವುದಕ್ಕೆ ರಿಕ್ರೂಟ್‌ಮೆಂಟ್‌ಬೋರ್ಡು ಏರ್ಪಟ್ಟಿರುವುದು. ಅದನ್ನು ತೆಗೆದುಬಿಟ್ಟರೆ ಈಗಿನ ರೂಲ್ಸುಕೂಡ ಹಿಂದಣ ರೂಲ್ಸಿನಂತೆಯೇ ನಿಷ್ಫಲವಾಗಿ ಹೋಗುವುದು. ಆದಕಾರಣ ಆ ಬೋರ್ಡು ಖಾಯಮ್ಮಾಗಿ ಇದ್ದೇ ತೀರಬೇಕು. ಅದು ಇದ್ದರೇನೆಯೇ ಈ ಆರ್ಡರು ಕಾರ್ಯರೂಪವಾಗಿ ಜರುಗುತ್ತದೆ.

ಮ|| ಬಿ. ಎನ್. ವಿಜಯದೇವರವರು—ನಮ್ಮ ಬ್ರಾಹ್ಮಣಸಹೋದರರು ಸರ್ಕಾರಕ್ಕೆ ಈಗತಾನೇ ಓದಿ ಒಪ್ಪಿಸಿದ ಮೆಮೋರಾಂಡಮ್ಮಿನಲ್ಲಿ ಮಿಲ್ಲರ್‌ಕಮಿಟಿ ರಿಪೋರ್ಟಿನಿಂದ ಬ್ರಾಹ್ಮಣರಿಗೆ ಹಾನಿಯುಂಟಾಗುವುದೆಂದೂ, ಸರ್ಕಾರದ ಎಫಿಷಿಯೆನ್ಸಿ ಕೆಟ್ಟುಹೋಗುವುದೆಂದೂ ಆಕ್ಷೇಪಗಳನ್ನು ಮುಖ್ಯವಾಗಿ ಮಾಡಿರುತ್ತಾರೆ. ಸರ್ಕಾರಕ್ಕೆ ಮುಖ್ಯವಾದ ಕರ್ತವ್ಯಗಳು ಎರಡುಂಟು. ೧ ನೆಯದು—ಪ್ರತಿಯೊಬ್ಬ ಪ್ರಜೆಯ ಅಭಿವೃದ್ಧಿಗೂ ಅವಕಾಶಕೊಡುವುದು. ೨ನೆಯದು—ಎಲ್ಲರನ್ನೂ ಸಮೂಹತ್ವೇನ ಮುಂದಕ್ಕೆ ತಂದು ತನ್ಮೂಲಕ ರಾಜ್ಯವನ್ನು ಅಭಿವೃದ್ಧಿಪಡಿಸುವುದು. ಒಂದೇ ಜನವರ್ಗದವರನ್ನು ಮುಂಬರಿಸಿ ಇತರರನ್ನೆಲ್ಲಾ ಹಿಂದಾಳುಗಳನ್ನಾಗಿಟ್ಟು ಆ ಲೋಪವನ್ನು ಪರಿಹರಿಸದೆ ಹಾಗೇ ನೋಡಿಕೊಂಡಿದ್ದರೆ ಸರ್ಕಾರವು ತನ್ನ ಕರ್ತವ್ಯವನ್ನು ನೆರವೇರಿಸಿದ್ದಾಗುವುದಿಲ್ಲ. ಬ್ರಾಹ್ಮಣರನ್ನು ಕೆಡಿಸಿ ಇತರರನ್ನು ಉದ್ಧಾರಮಾಡಿರೆಂದು ನಾವು ಕೇಳುವುದಿಲ್ಲ. ಹಾಗೆ ಮಾಡಬೇಕೆಂಬುದು ಸರ್ಕಾರದ ಉದ್ದೇಶ ಕೂಡ ಇಲ್ಲ. ಮಿಲ್ಲರ್‌ಕಮಿಟಿ ಆರ್ಡರಿನಲ್ಲೂ ಹಾಗೆ ಇಲ್ಲ. ಸರ್ಕಾರದವರು ಅರ್ಧಭಾಗವನ್ನು ಅವರಿಗೇ ಕೊಟ್ಟಿದ್ದಾರೆ. ನಮಗೆಲ್ಲಾ ನ್ಯಾಯವಾಗಿ ೧೦೦ಕ್ಕೆ ೯೦ರಷ್ಟನ್ನು ಕೊಡಬೇಕು. ಆದರೆ ನಾವು ಈಗ ಅದನ್ನು ಕೇಳುವುದಿಲ್ಲ. ಮ|| ಕೆ. ಟಿ. ಶೇಷಯ್ಯನವರು ಪ್ರತ್ಯೇಕ ಪ್ರಾತಿನಿಧ್ಯವು ಎಲ್ಲೂ ಇಲ್ಲವೆಂದು ಹೇಳಿದರು. ಇಂಗ್ಲೆಂಡ್ ಮೊದಲಾದ ಪಶ್ಚಿಮದೇಶಗಳಲ್ಲಿ ಹಿಂದೆ ಯುದ್ಧದ ಅನರ್ಥ ಮೊದಲಾದುವುಗಳೆಲ್ಲಾ ಈ ಜಾತಿಭೇದಗಳಿಂದಲೇ ಆಗಿರತಕ್ಕವು. ನಮ್ಮ ದೇಶದಲ್ಲಿ ಜಾತಿಗಳ ಮಾತ್ಸರ್ಯವು ಇನ್ನಷ್ಟು ಮುಂದಕ್ಕೆ ಹೋಗಿದೆ. ಇಲ್ಲಿ ಒಂದು ಜಾತಿಯವರಿಗೂ ಮತ್ತೊಂದು ಜಾತಿಯವರಿಗೂ ಸೌಹಾರ್ದವಿಲ್ಲ. ಬ್ರಾಹ್ಮಣ ಸಹೋದರರೇ! ತಾವು ಬಹುದಿನದಿಂದ ಎಷ್ಟೋ ಲಾಭವನ್ನು ಹೊಂದಿದ್ದೀರಿ. ಇತರರ ಅಭಿವೃದ್ಧಿಯಲ್ಲಿ ಸ್ವಲ್ಪ ಸಾನುಭೂತಿಯನ್ನು ತೋರಿಸಿರಿ. ''ಅವರು ವಿದ್ಯೆಯಲ್ಲಿ ಹಿಂದೆಬಿದ್ದಿದ್ದರೆ ನಾವು ಸಂಪತ್ತಿನಲ್ಲಿ ಹಿಂದೆಬಿದ್ದಿದ್ದೇವೆ. ನಮಗೂ ಅದರ ಸಾಧನಗಳನ್ನು ಕಲ್ಪಿಸಿಕೊಡಿ'' ಎಂದು ಹೇಳುತ್ತೀರಿ. ಇದು ನ್ಯಾಯವೆ? ಎಲ್ಲಾ ಪ್ರಜೆಗಳ ನಾನಾತರದ ಕೊರತೆಗಳನ್ನೆಲ್ಲಾ ಪರಿಹಾರಮಾಡಿಕೊಡುವುದೇ ಸರ್ಕಾರದ ಕರ್ತವ್ಯವೆ? ''ಸಂತಾನವಿಲ್ಲ; ಅದರಲ್ಲಿ ನಾನು ಹಿಂದೆಬಿದ್ದಿದ್ದೇನೆ; ನನಗೊಂದು ಮದುವೆ ಮಾಡಿಕೊಡಿ'' ಎಂದು ಸರ್ಕಾರವನ್ನು ಕೇಳಬಹುದೆ? ಸರ್ಕಾರದ ಎಫಿಷಿಯೆನ್ಸಿ ಎಫಿಷಿಯೆನ್ಸಿ, ಎಂದು ಈ ನಮ್ಮ ಸಹೋದರರು ಜೋರಾಗಿ ಹೇಳುತ್ತಾರೆ. ಎಫಿಷೆನ್ಸಿ ಎಂದರೇನು? ಪ್ರಜೆಗಳ ತೃಪ್ತಿಯೇ ಎಫಿಷೆನ್ಸಿ ಎಂದು ಲಾರ್ಡ್ ಕರ್ಜನ್‌ರವರು ಹೇಳಿದ್ದಾರೆ. ಸಂಸ್ಥಾನದಲ್ಲಿ ಬಿ. ಎ. ಮೊದಲಾದ ಡಿಗ್ರಿಯನ್ನು ಪಡೆದವರು ತುಂಬಿಕೊಂಡಿದ್ದಾರೆಂದು ತೋರಿಸಿಬಿಟ್ಟಮಾತ್ರಕ್ಕೇ ದೇಶದ ಅಭಿವೃದ್ಧಿ ಯೋಗ್ಯತೆಯು ವ್ಯಕ್ತವಾಗುವುದೆ? ಪ್ರಜೆಗಳ ತೃಪ್ತಿಯಿಲ್ಲದ ಬರೀ ಎಫಿಷೆನ್ಸಿಯು ಎಂಥಾದ್ದು? ಅದರಿಂದ ಫಲವೇನು?

ಮ|| ಎಂ. ಸುಬ್ಬಯ್ಯನವರು—ಬ್ರಾಹ್ಮಣರು ''ಇತರರಿಗೆ ೫೦ ಅಲ್ಲ ೧೦೦ಕ್ಕೆ ೧೦೦ ಕೊಟ್ಟರೂ ನಮಗೆ ಅಸಮಾಧಾನವಿಲ್ಲ'' ಎಂದು ಬಾಯಲ್ಲಿಮಾತ್ರ ಹೇಳುತ್ತಾರೆ; ನಡತೆಯಲ್ಲಿಲ್ಲ. ಇದುವರೆಗೂ ಸರ್ಕಾರದಲ್ಲಿದ್ದ ಎಫಿಷೆನ್ಸಿಯು ಇನ್ನು ಈ ಆರ್ಡರಿನಿಂದ ಕೆಟ್ಟುಹೋಗುತ್ತದೆಂದು ಹೇಳುತ್ತಾರೆ. ಇದುವರೆಗಣ ಸ್ಥಿತಿಯನ್ನು ನೋಡಿದರೆ ಎಫಿಷೆನ್ಸಿಯು ಸಂಪೂರ್ಣವಾಗಿ ಸಮರ್ಪಕವಾಗಿತ್ತೆಂದು ಹೇಳಲಾಗುವುದಿಲ್ಲ. ೪೦ ವರ್ಷಗಳಿಂದಲೂ ನಡೆದ ದವಲತ್ತನ್ನು ನೋಡಿದರೆ ೮-೧೦ ಜನ ಅಸಿಸ್ಟೆಂಟ್ ಕಮಿಷನರುಗಳು ಗ್ರಾಜುಯೇಟರಾಗದಿದ್ದರೂ ಕೆಲಸದಲ್ಲಿ ಸೇರಿಕೊಂಡಿದ್ದಾರೆ. ಅಮಲ್ದಾರರೂ ಎಷ್ಟೋಮಂದಿ ಹಾಗೆಯೇ ಸೇರಿದ್ದಾರೆ. ಸೆಕ್ರೆಟೆರಿಯಟ್ಟಿನಲ್ಲೂ ಕಂಟ್ರೋಲರ್ಸ್ ಆಫೀಸಿನಲ್ಲೂ ಅಂಥವರು ಎಷ್ಟೋ ಜನರಿದ್ದಾರೆ. ಆಯಾ ಕೋಮಿನ ಆಫೀಸರು ಮೇಲ್ಪಟ್ಟ ಹುದ್ದೆಗೆ ಬಂದಾಗ್ಗೆ ತಂತಮ್ಮ ಜಾತಿಯವರನ್ನೇ ಮುಂದಕ್ಕೆ ತರುತ್ತ ಬಂದಿದ್ದಾರೆ. ಇದರಿಂದ ವಿದ್ಯೆಯ ಕ್ವಾಲಿಫಿಕೇಷನ್ನಿನಿಂದಲೇ ಸಿದ್ಧವಾಗುವುದೆಂಬ ಎಫಿಷೆನ್ಸಿಯು ಅಷ್ಟು ಸರ್ವೋತ್ತಮವಾಗೇನೂ ಇಲ್ಲ. ಸರ್ಕಾರದ ಮುಖ್ಯಾಧಿಕಾರಿಗಳು ಹಿಂದುಳಿದವರಿಗೆ ಉದ್ಯೋಗಗಳನ್ನು ಕೊಡಿಸಬೇಕೆಂಬುದರಲ್ಲಿ ಸಾನುಭೂತಿಯುಳ್ಳವರಾಗಿದ್ದರೂ ಸಬಾರ್ಡಿನೇಟುಗಳು ಆ ಉದ್ದೇಶವನ್ನು ನೆರವೇರಿಸಲಿಲ್ಲ. ನಾವು ಈಗ ಸರ್ಕಾರಿ ನೌಕರಿಯ ಭಿಕ್ಷ ಬೇಡುವುದಿಲ್ಲ; ಮತ್ತು ಅನರ್ಹರಿಗೆ ಕೊಡಿಯೆಂದೂ ಕೇಳುವುದಿಲ್ಲ. ರಿಪೋರ್ಟಿನಮೇಲಣ ಆರ್ಡರೂ ಹಾಗೆ ಮಾಡಬೇಕೆಂದು ಹೇಳುವುದಿಲ್ಲ. ಹಿಂದೆ ನಮ್ಮವರು ಬಿ. ಎ. ಪ್ಯಾಸ್ ಮಾಡಿಕೊಂಡು ಬಂದರೂ ಅವರುಗಳಿಗೆ ಅಧಿಕಾರ ಸಿಕ್ಕುತ್ತಿರಲಿಲ್ಲ. ಪ್ರೋತ್ಸಾಹದ ಅವಕಾಶವಿದ್ದರೆ ಇಷ್ಟುಹೊತ್ತಿಗೆ ನಮ್ಮಲ್ಲೂ ಸಾವಿರಾರುಮಂದಿ ಬಿ. ಎ. ಗಳು ಆಗುತ್ತಿದ್ದರು. ಈ ರಿಪೋರ್ಟಿನಿಂದ ಮುಂದೆ ಅಂಥ ಪ್ರೋತ್ಸಾಹವು ವಿಶೇಷವಾಗಿ ನಮ್ಮವರ ವಿದ್ಯಾಭಿವೃದ್ಧಿಗೂ ಅವಕಾಶವಾಗುತ್ತದೆ. ಇವರ ಸಮಕ್ಕೆ ನಮ್ಮವರೂ ಬರುತ್ತಾರೆ. ಅಂಥವರಿಗೆ ಅಧಿಕಾರ ಕೊಡಿ ಎಂದೇ ನಾವು ಕೇಳುತ್ತೇವೆ. ಇವರು ಕೈಹಿಡಿದು ನಮ್ಮನ್ನು ಜತೆಗೆ ಕರೆದುಕೊಂಡಿದ್ದರೆ ನಾವು ಈಗಿನಷ್ಟು ಹಿಂದೆ ಬೀಳುತ್ತಲೇ ಇರಲಿಲ್ಲ. ನಮ್ಮ ಹೀನಸ್ಥಿತಿಯನ್ನು ಹೋಗಲಾಡಿಸಲಿಕ್ಕಾಗಿ ಸರ್ಕಾರದವರು ಈ ರಿಪೋರ್ಟಿನದ್ವಾರಾ ಮಾಡಿರುವ ಪ್ರಯತ್ನವನ್ನು ನೋಡಿ ಇವರು ಸಾನುಭೂತಿಯನ್ನು ತೋರಿಸದಿರುವುದು ಧರ್ಮವಲ್ಲ.

ಮ|| ಎ. ಅನಂತಯ್ಯನವರು— ''ವಾಣಿಜ್ಯೇವಸತೇ ಲಕ್ಷ್ಮೀಃ ತದರ್ಧಂ ಕೃಷಿ ಶಿಲ್ಪಯೋಃ| ತದರ್ಧಂ ರಾಜಸೇವಾಯಾಂ'' ಎಂದು ರಾಮಯ್ಯನವರು ಹೇಳಿದ್ದಾರೆ. ಆದಕಾರಣ ಮುಖ್ಯವಾದ ವ್ಯವಸಾಯವೃದ್ಧಿಗೆ ಪ್ರೋತ್ಸಾಹಕೊಟ್ಟರೆ ದೇಶಕ್ಕೆ ಅಭ್ಯುದಯವುಂಟಾಗುತ್ತದೆ.

ಮ|| ಟಿ. ನಂಜಪ್ಪನವರು—ಎಲ್ಲ ಜನಾಂಗದಲ್ಲೂ ಈಗ ಹಳವಳ ಹುಟ್ಟಿದೆ. ಏನೆಂದರೆ—ರಾಜ್ಯಾಂಗದಲ್ಲಿ ಪ್ರತಿಯೊಬ್ಬರೂ ಮುಂದಕ್ಕೆ ಬರಬೇಕೆಂದು. ಇದು ನಮ್ಮಲ್ಲೇ ಅಲ್ಲ ಹೋಲ್ ಇಂಡ್ಯಾದಲ್ಲೇ. ಇಂಡ್ಯಾದೇಶದಲ್ಲಿ ಪ್ರಜೆಗಳು ರಾಜಕೀಯಾಭಿವೃದ್ಧಿಯನ್ನು ಕೇಳುತ್ತಿರುವಂತೆಯೇ ನಾವೂ ಈ ದೇಶದ ರಾಜಕೀಯಾಡಳತದಲ್ಲಿ ಪುರೋಭಿವೃದ್ಧಿಗೆ ಬರಬೇಕೆಂಬ ಆಸೆಯುಳ್ಳವರಾಗಿದ್ದೇವೆ. ನಾವು ನಮ್ಮ ಕುತೂಹಲವನ್ನೆಲ್ಲಾ ನಮ್ಮ ಮಹಾಪ್ರಭುಗಳಲ್ಲಿ ಬಿನ್ನೈಸಿಕೊಳ್ಳಲಾಗಿ ಅವರು—''ನಿಮ್ಮ ಅಪೇಕ್ಷೆಯು ಯುಕ್ತವಾದದ್ದು; ನಿಮ್ಮ ಅಭ್ಯುದಯ ಪ್ರಯತ್ನದಲ್ಲಿ ಪರಸ್ಪರ ಕಲಹಮಾಡಬೇಡಿ'' ಎಂದು ಅಪ್ಪಣೆಕೊಡಿಸಿ, ಅದರಮೇಲೆ ಮಿಲ್ಲರ್‌ಕಮಿಟಿ ರಿಪೋರ್ಟಿಗೆ ಏರ್ಪಡಿಸಿದರು. ಅದರಲ್ಲಿ ಎಲ್ಲಾ ಸಮರ್ಥರಾದ ಮೆಂಬರುಗಳೇ ಇದ್ದರು ಉಚಿತವಾದ ರಿಪೋರ್ಟೂ ಸರಿಯಾದ ಸರ್ಕಾರಿ ಅಪ್ಪಣೆಯೂ ಆಯಿತು. ತಕ್ಕಯೋಗ್ಯತೆಯನ್ನು ಪಡೆದುಬಂದರೆ ನಿಮಗೂ ಸರ್ಕಾರಿ ಉದ್ಯೋಗದಲ್ಲಿ ಭಾಗಕೊಡುತ್ತೇವೆಂಬ ಬರವಸೆಯು ಆ ಅಪ್ಪಣೆಯಲ್ಲಿದೆಯೇ ಹೊರತು ಮತ್ತೇನೂ ಇಲ್ಲ. ಇಷ್ಟಕ್ಕೇ ಕೆಲವರು ಇದರಿಂದ ಸರ್ಕಾರದ ಎಫಿಷೆನ್ಸಿ ಕೆಡುತ್ತದೆಂದು ಮೊದಲಾಗಿ ಹೇಳಿಕೊಂಡು ಗದ್ದಲಮಾಡುತ್ತಿದ್ದಾರೆ. ಇದಕ್ಕೆಲ್ಲಾ ಗೌರ್ನಮೆಂಟಿನವರು ತಕ್ಕ ಉತ್ತರವನ್ನು ಕೊಟ್ಟಿದ್ದೀರಿ. ಸರ್ಕಾರದಲ್ಲಿ ಒಂದೇಜನವರ್ಗದವರಿದ್ದರೆ ಬಹಳ ಅನರ್ಥವಾಗುತ್ತದೆ. ರಿಕ್ರೂಟ್‌ಮೆಂಟ್ ಬೋರ್ಡೂ ಜನವರ್ಗ ಪ್ರಾತಿನಿಧ್ಯವೂ ಕೂಡದೆಂದು ಇವರು ಹೇಳುತ್ತಾರೆ. ಸಿವಿಲ್ ಸರ್ವೀಸ್ ಪ್ಯಾಸನ್ನು ನಮ್ಮಲ್ಲಿ ಏರ್ಪಡಿಸಿದಾಗ, ತಮಗಿಂತಲೂ ಸಾಮರ್ಥ್ಯ ಹೆಚ್ಚಾಗಿದ್ದ ಕಣಿವೆಕೆಳಗಣವರೇ ಮೊದಲಾದವರನ್ನು ಈ ದೇಶದ ಪರೀಕ್ಷೆಗೆ ಸೇರಿಸದಂತೆ ಮಾಡಬೇಕೆಂದು ಹೇಳಿಕೊಂಡು ಅವರ ಪೈಪೋಟಿಯನ್ನು ಇವರು ತಪ್ಪಿಸಿ ತಾವು ಹೇಗೆ ಕ್ರಮವಾಗಿ ಮೆಟ್ಟಲನ್ನು ಹತ್ತಿಕೊಂಡುಬಂದರೋ ಅಂಥ ಕ್ರಮವಾಗಿ ಏರುವ ಅನುಕೂಲವು ಈಗ ನಮಗೂ ಇರಬೇಕು. ಒಂದೇಜಾತಿಯಲ್ಲಿ ಸಕಲಾಧಿಕಾರವೂ ಅಡಗಿದ್ದರೆ ದೇಶಕ್ಕೆ ಅನರ್ಥವಾಗುತ್ತದೆಂಬುದಕ್ಕೆ ಚರಿತ್ರೆಯಲ್ಲಿ ಎಷ್ಟೋ ಉದಾಹರಣೆಗಳಿವೆ. ಎಫಿಷೆನ್ಸಿಗೆ ವಿದ್ಯೆಯ ಕ್ವಾಲಿಫಿಕೇಷನ್ನನ್ನೇ ಮುಖ್ಯವೆಂದು ಗ್ರಹಿಸಿದರೆ ಪ್ರಪಂಚದ ಪೈಪೋಟಿಯಲ್ಲಿ ಇಂಡ್ಯಾದೇಶವೇ ನಿಲ್ಲುವುದಿಲ್ಲ; ಇಂಡ್ಯಾ ದೇಶವನ್ನೆಲ್ಲಾ ತೆಗೆದುಕೊಂಡರೆ ಮೈಸೂರು ದೇಶವೇ ನಿಲ್ಲುವುದಿಲ್ಲ. ಒಬ್ಬಾನೊಬ್ಬ ಮೆಂಬರು ಸರ್ಕಾರದ ನೌಕರಿಯು ನೀರಿನ ಲೋಟವೆಂದೂ ಅದು ದಾಸ್ಯವೆಂದೂ ಉಪಮಿಸಿ ಹೇಳಿದರು. ದಾಸತ್ವಭಾವನೆಯಿಂದ ಸರ್ಕಾರಿ ಕೆಲಸವನ್ನು ಮಾಡಿದರೆ ದೇಶೋಪಕಾರವಾಗುವುದಿಲ್ಲ. ದೇಶಾಭಿಮಾನದಿಂದ ಕೆಲಸಮಾಡಿದರೇನೆಯೇ ದೇಶಕ್ಕೆ ಹಿತವಾಗುತ್ತದೆ. ಈಗಣ ಮಿಲ್ಲರ್‌ರಿಪೋರ್ಟಿನಿಂದ ಸರ್ಕಾರದ ಎಫಿಷೆನ್ಸಿಯು ಮತ್ತೆ ಉತ್ತಮವಾಗುತ್ತದೆ. ಇತರರನ್ನೆಲ್ಲಾ ವಿದ್ಯಾಭ್ಯಾಸಮಾಡಿ ಮುಂದಕ್ಕೆ ಬರಬೇಡಿರೆಂದು ಯಾರೂ ಅಡ್ಡಿಮಾಡಿರಲಿಲ್ಲವೆಂದು ಒಬ್ಬ ಮೆಂಬರು ಹೇಳಿದರು. ಈಗ್ಲೂ ಗ್ರಾಮಾಂತರದವರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವೇ ಇಲ್ಲ. ಇಂಗ್ಲೀಷ್ ಸ್ಕೂಲುಗಳು ಗ್ರಾಮಾಂತರಗಳಲ್ಲಿಲ್ಲ. ಇಂಗ್ಲೀಷು ಬರದಿದ್ದರೆ ಸರ್ಕಾರಿ ಕೆಲಸವು ಸಿಕ್ಕುವುದಿಲ್ಲ. ಈ ಆರ್ಡರನ್ನು ಮನ್ನಾಮಾಡಿದರೆ ಇತರ ಸಕಲಪ್ರಜೆಗಳನ್ನೂ ಹಿಂದಕ್ಕೆ ನೆದುಹಾಕಿದಂತಾಗುತ್ತದೆ.

ಮ|| ಜಿ. ಪರಮಶಿವಯ್ಯನವರು—ಇತರರು ಅಭಿವೃದ್ಧಿಗೆ ಬಾರದಿರುವುದಕ್ಕೆ ಅವರ ಸ್ವಯಂಕೃತಾಪರಾಧವೇ ಕಾರಣವೆಂದು ನಮ್ಮ ಬ್ರಾಹ್ಮಣ ಸಹೋದರರು ಹೇಳುತ್ತಾರೆ. ಪೂರ್ವದಲ್ಲಿ ಅಧಿಕಾರವು ವಂಶಪಾರಂಪರ್ಯವಾಗಿ ಬರುತ್ತಿತ್ತು. ಶ್ಯಾನುಬೋಗಿಕೆಯು ಈಗಲೂ ಹಾಗೆಯೇ ನಡೆದುಬರುತ್ತಿದೆ. ೧೮೬೧ನೆ ಇಸವಿಯಿಂದೀಚೆಗೆ ಇಂಗ್ಲೀಷು ಅಭ್ಯಾಸವು ಮುಖ್ಯವಾಗಿ ಬಂದಿತು. ಸರ್ಕಾರದವರು ಮೊದಮೊದಲು ಲೋ|| ಸೆಕೆಂಡರಿವರೆಗೆ ಪಾಠಶಾಲೆಗಳನ್ನೂ, ಸ್ವಲ್ಪ ಕಾಲವಾದ ಮೇಲೆ ಮೆಟ್ರಿಕ್ ತರಗತಿವರೆಗಣ ಶಾಲೆಗಳನ್ನೂ, ಬಳಿಕ ಹೀಗೆಯೇ ಎಫ್. ಎ., ಬಿ. ಎ. ತರಗತಿಗಳ ಪ್ರೌಢಪಾಠಶಾಲೆಗಳನ್ನೂ ಸ್ಥಾಪಿಸುತ್ತ ಬಂದರು. ಪೂರ್ವದಿಂದಲೂ ಸರ್ಕಾರದಧಿಕಾರವನ್ನು ಗುರಿಯಾಗಿಟ್ಟುಕೊಂಡೇ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಮಾಡುತ್ತ ಇದ್ದಾರೆ. ಸರ್ಕಾರದಧಿಕಾರಗಳಿಗೆ ಸೇರಲು ಇತರರಿಗೆ ಸುಲಭವಾದ ಅವಕಾಶವಿರಲಿಲ್ಲ. ಒಂದು ಸಂಗತಿಯನ್ನು ಉದಾಹರಣೆಯಾಗಿ ಹೇಳುತ್ತೇನೆ. ದಿವಾನ್ ಅಧಿಕಾರವನ್ನು ಅನುಭವಿಸಿ ಹೋದವರೊಬ್ಬರು ೩೦ ವರ್ಷಗಳ ಕೆಳಗೆ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಪದವಿಯಲ್ಲಿರುವಾಗ್ಗೆ ಬ್ರಾಹ್ಮಣೇತರ ಯೌವನಸ್ಥನೊಬ್ಬನು ಎಫ್.ಎ. ಪ್ಯಾಸ್ ಮಾಡಿಕೊಂಡು ಆ ಡೆಪ್ಯುಟಿ ಕಮಿಷನರ ಬಳಿಗೆ ಹೋಗಿ ಯಾವುದಾದರೂ ಕೆಲಸ ಪಡೆದುಕೊಳ್ಳಲಿಕ್ಕಾಗಿ ೩ ತಿಂಗಳ ಕಾಲ ಆಜೂಜುವಾರಿಮಾಡಿದನು. ಒಂದು ದಿವಸ ಅವರು ಕಣ್ಣುಬಿಟ್ಟು ನೋಡಿ ಏನಪ್ಪ ನಿನ್ನ ಅಹವಾಲು ಎಂದು ಕೇಳಿದರು. ತನ್ನ ಸಂಗತಿಯನ್ನು ಆ ಯೌವನಸ್ಥನು ಕನಿಕರಬರುವಂತೆ ಹೇಳಿಕೊಂಡನು. ಆ ಅಧಿಕಾರಿಯು ಒಳಕ್ಕೆ ಹೋಗಿ ಎಲ್ಲೋ ಜೋಪಾನಮಾಡಿಟ್ಟಿದ್ದ ಸರಮೋಡಿಯ ಕಾಗದವೊಂದನ್ನು ತಂದು ಈತನ ಮುಂದೆ ಹಾಕಿ ಓದು ಎಂದು ಹೇಳಿದರು. ಹುಟ್ಟಿದಾಗಣಿಂದ ಅಂಥ ಅಕ್ಷರಗಳನ್ನು ನೋಡದಿದ್ದ ಈ ಬಡಪಾಯಿಯು ಎಷ್ಟೆಷ್ಟು ಉರುಗಿಸಿ ತಿರುಗಿಸಿ ನೋಡಿದರೂ ಅದರಲ್ಲಿ ಹತ್ತಾರು ಶಬ್ದಗಳನ್ನೂ ಸರಿಯಾಗಿ ಕೂಡಿಸಿ ಓದಲಿಕ್ಕಾಗದಿರಲು ಬೆವತುಕೊಂಡನು. ಅದು ಯಾವ ಜಾತಿಯ ಲಿಪಿಯೆಂದು ಕಂಡು ಹಿಡಿಯುವುದಕ್ಕೂ ಸಾಧ್ಯವಾಗದಿದ್ದಷ್ಟು ಮೋಡಿಯಾಗಿ ಕರಡಿ ಕಾಗದದಲ್ಲಿ ಬರೆದಿತ್ತು. ಆಗ ಅಧಿಕಾರಿಯು ಥಟ್ಟನೆ ಆ ಕಾಗದವನ್ನು ಯುವಕನ ಕೈಯಿಂದ ಕಿತ್ತುಕೊಂಡು, ''ಇದೇ ನೀನು ಓದಿ ಪ್ಯಾಸ್ ಮಾಡಿದ್ದು? ನಿನಗೂ ನಿನ್ನ ವಿದ್ಯೆಗೂ ಬೆಂಕಿಹಾಕಿತು ಹೋಗು'' ಎಂದು ಹೇಳಿ ಗದ್ದರಿಸಿ ಅಟ್ಟಿಬಿಟ್ಟರಂತೆ. ಕಡೆಗೆ ಆ ಪಾಯಿಯು ಎಲ್ಲೋ ಒಂದು ಪ್ರೈವೇಟ್ ಇನ್‌ಸ್ಟಿಟ್ಯೂಷನ್ನಿನಲ್ಲಿ ೧೫ ರೂ. ಸಂಬಳಕ್ಕೆ ಸೇರಿಕೊಳ್ಳಬೇಕಾಯಿತು. ಪೂರ್ವದಲ್ಲಿ ಇತರರು ವಿದ್ಯಾವಂತರಾದರೂ ಸರ್ಕಾರಿ ನೌಕರಿಯನ್ನು ಸಂಪಾದಿಸುವುದು ಇಷ್ಟು ಕಠಿನವಾಗಿತ್ತು. ಮುಂಬರಿದ ಜನವರ್ಗದವರು ತಾವು ಅಧಿಕಾರಕ್ಕೆ ಸೇರಿಕೊಂಡಬಳಿಕ ತಮಗೆ ಸಂಬಂಧಪಟ್ಟವರಿಗೆ ಹಸ್ತಾವಲಂಬನ ಕೊಟ್ಟು ಮೇಲಕ್ಕೆ ಸೆಳೆದುಕೊಳ್ಳುತ್ತ ಬಂದದ್ದೇ ಹೊರತು ಇತರರನ್ನು ಸಾನುಭೂತಿಯಿಂದ ಮುಂದಕ್ಕೆ ತರಲಿಲ್ಲ. ಮಿಲ್ಲರ್‌ಕಮಿಟಿ ರಿಪೋರ್ಟನ್ನು ಪ್ಯಾಸ್‌ಮಾಡಿದ್ದು ಸರಿ. ಅದನ್ನು ಸಫಲಮಾಡಬೇಕಾದರೆ ರಿಕ್ರೂಟ್‌ಮೆಂಟ್ ಬೋರ್ಡು ಇರುವುದು ಅತ್ಯವಶ್ಯಕ. ಹಿಂದೆ ಸೇಕಡಾ ೨೫ ಸ್ಥಾನಗಳನ್ನು ಹಿಂದುಳಿದವರಿಗೆ ಕೊಡಬೇಕೆಂದು ಇದ್ದ ಸರ್ಕಾರಿ ಅಪ್ಪಣೆಯು ನಮಗೆ ಗೊತ್ತಿರಲಿಲ್ಲ. ಗೊತ್ತಿದ್ದರೆ ಅದರಂತೆ ಕೊಡಿ ಎಂದು ಆಗಲೇ ಕೇಳುತ್ತಿದ್ದೆವು. ಆ ರೂಲ್ಸು ಗುಟ್ಟಾಗಿತ್ತು, ಮತ್ತು ಕಾರ್ಯತಃ ನಡೆಯಲೂ ಇಲ್ಲ. ಈಗಣ ಆರ್ಡರೂ ಕೂಡ ಗುಟ್ಟಾಗಿದ್ದರೆ ಹಿಂದಿನಂತೆಯೇ ಆಗುತ್ತಿತ್ತೋ ಏನೋ. ಸೆಂ|| ರಿ|| ಬೋರ್ಡು ಇಲ್ಲದಿದ್ದರೆ ಈ ಆರ್ಡರೂ ವ್ಯವಹಾರಕ್ಕೆ ಬರುವುದಿಲ್ಲ. ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದವನ್ನು ಇವರೇ ಹಜ್ಜೆಹಜ್ಜೆಗೂ ಕಲ್ಪಿಸಿದವರು. ಮೈಸೂರಿನ ನಂಜರಾಜಬಹದ್ದೂರ್ ಛತ್ರವನ್ನು ನೋಡಿ; ಅದನ್ನು ಕಟ್ಟಿ ಎಷ್ಟು ಕಾಲವಾಯಿತು. ಅದರ ೨ ಭಾಗಗಳಲ್ಲಿ ಒಂದರ ಬಾಗಿಲಮೇಲೆ ಇದು ಬ್ರಾಹ್ಮಣರಿಗೆಂದೂ, ಇನ್ನೊಂದುಬಾಗಿಲಮೇಲೆ ಇದು ಕ್ಷತ್ರಿಯ ವೈಶ್ಯಾದಿಗಳೆಲ್ಲರಿಗೂ ಎಂದೂ ಬರೆಯಿಸಿದ್ದಾರೆ. ಅದರಂತೆಯೇ ಸುಬ್ಬರಾಯನಕೆರೆಯಲ್ಲಿ ೨ ಕೊಳಗಳಿದ್ದರೆ ಅವಕ್ಕೂ ೨ ಬೋರ್ಡುಗಳನ್ನು ಹಾಕಿ ಹೀಗೆಯೇ ವಿಂಗಡಿಸಿದ್ದಾರೆ. ಇದರಿಂದ ಭೇದಕಲ್ಪನೆಯು ಯಾರಿಂದ ಆಯಿತೆಂಬುದು ಸ್ಪಷ್ಟವಾಗುತ್ತದೆ. ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಜಾಪ್ರತಿನಿಧಿಸಭೆಯ ತಮ್ಮ ಒಂದು ಭಾಷಣದಲ್ಲಿ ದೇಶದ ಅಭ್ಯುದಯಕ್ಕೆ ಬ್ರಾಹ್ಮಣಾದಿ ಸಕಲ ವರ್ಗಗಳ ಸಹಾಯವೂ ಅವಶ್ಯಕವೆಂದು ಹೇಳಿದ್ದಾರೆ. ಹೀಗಿರುವಾಗ ವಿದ್ಯಾವಿವೇಕಗಳಲ್ಲಿ ಮುಂದಾದವರು ಮಿಲ್ಲರ್ ಕಮಿಟಿ ರಿಪೋರ್ಟಿನಿಂದ ಉಂಟಾಗಬಹುದಾದ ಹಿಂದುಳಿದವರ ಅಭ್ಯುದಯವನ್ನು ಆಕ್ಷೇಪಿಸಿ ಅಡ್ಡಿಮಾಡುತ್ತಿರುವುದು ವಿಷಾದಕರವಲ್ಲವೆ? ಪಾಶ್ಚಾತ್ಯದೇಶದಲ್ಲಿ ಇಂಥ ಭೇದವಿಲ್ಲವೆಂದು ಒಬ್ಬ ಮೆಂಬರು ಹೇಳಿದರು. ಆ ದೇಶದಲ್ಲಿ ಎಲ್ಲರದೂ ಕ್ರೈಸ್ತಮತವೇ. ಅದರೊಳಗೆ ಪ್ರಾಟಸ್ಟೆಂಟ್ ಕೆಥೋಲಿಕ್ ಎಂಬ ಭೇದವಿದ್ದರೂ ಒಟ್ಟಿನಲ್ಲಿ ಒಂದೇ ಮತದವರಾಗಿದ್ದಾರೆ. ಅದರಂತೆಯೇ ನಮ್ಮ ದೇಶದಲ್ಲಿ ತ್ರಿಮತಸ್ಥರೂ ಒಂದೇ ಆದ್ದರಿಂದ ಒಬ್ಬರೊಬ್ಬರ ವೃದ್ಧಿಗೆ ಅಸೂಯೆಪಟ್ಟು ದ್ವೇಷಿಸಲಿಲ್ಲ. ಪ್ರತ್ಯೇಕ ಪ್ರಾತಿನಿಧ್ಯವು ಯುಕ್ತವಲ್ಲ ಎಂದು ಒಬ್ಬರು ಆಕ್ಷೇಪಿಸಿದರು. ಹಾಗಿದ್ದರೆ ಸರ್ಕಾರದವರು ನಾಮಿನೇಷನ್ನಿಗೆ ಯಾತಕ್ಕೆ ಅವಕಾಶಕೊಟ್ಟರು? ರಾಜ್ಯಾಡಳತವು ಸುಸೂತ್ರವಾಗಿ ನಡೆಯಲಿಕ್ಕಾಗಿ ಹುಟ್ಟಿದ ಈ ರೂಲ್ಸನ್ನು ಈ ಸಭೆಯ ಚರ್ಚೆಗೆ ತರಬೇಕಾದ ಅವಶ್ಯಕತೆಯೇ ಇರಲಿಲ್ಲ. ಇದುವರೆಗೆ ಇವರು ಮಾಡಿದ ವಾದವೆಲ್ಲಾ ವಿತಂಡವಾದವೇ ಹೊರತು ಸಕಾರಣವಲ್ಲ. ಮಿ|| ಮಾಂಟೊಗ್‌ರವರು ಪ್ರತ್ಯೇಕ ಪ್ರಾತಿನಿಧ್ಯಕ್ಕೆ ವಿರುದ್ಧರೆಂದು ಮ|| ಶೇಷಯ್ಯನವರು ಹೇಳಿದರು. ೧೯೧೧ನೆ ವರ್ಷದಲ್ಲಿ ಇವರು ಮಿ|| ಮಾರ್ಲೆಯವರ ಬಳಿಯಲ್ಲಿ ಅ|| ಸೆಕ್ರಟರಿಯಾಗಿದ್ದಾಗ್ಗೆ ಈ ತತ್ತ್ವಕ್ಕೆ ಸಾನುಭೂತಿಯನ್ನು ತೋರಿಸಿ ಭಾಷಣಮಾಡಿದ್ದಾರೆ. ಅವರು ಪಾಶ್ಚಾತ್ಯರು; ನಮ್ಮ ದೇಶದ ಜಾತಿ ಮತಾದಿ ಪರಿಸ್ಥಿತಿಯು ಅವರಿಗೆ ಅಷ್ಟು ಗೊತ್ತಿಲ್ಲ. ಈ ವಿಷಯದಲ್ಲಿ ಅವರಿಗಿಂತಲೂ ನಮ್ಮ ದೇಶದ ರಾಜಕೀಯ ಗುರುಗಳ ಅಭಿಪ್ರಾಯವು ವಿಶೇಷ ಪ್ರಮಾಣಭೂತವು. ಕೈ|| ಗೋಖಲೆಯವರು ಸ್ವರ್ಗಸ್ಥರಾದ ನಂತರ ಎಚ್. ಎಚ್. ಆಗಾಖಾನರು ಬೊಂಬಾಯಿಯಲ್ಲಿ ಸಾನುತಾಪ ಪ್ರದರ್ಶನಾರ್ಥವಾಗಿ ನೆರೆದಿದ್ದ ಒಂದು ಸಭೆಯಲ್ಲಿ ಭಾಷಣಮಾಡಿದಾಗ್ಗೆ—ಸಣ್ಣಸಣ್ಣ ಜನವರ್ಗಗಳಿಗೆ ತಕ್ಕ ಪ್ರಾತಿನಿಧ್ಯವು ಲೆ|| ಕೌನ್ಸಿಲ್ ಮೊದಲಾದವುಗಳಲ್ಲಿ ಇರುವುದು ಅತ್ಯವಶ್ಯಕವೆಂದು ಗೋಖಲೆಯವರು ಅಭಿಪ್ರಾಯಪಟ್ಟಿದ್ದರೆಂದು ಉಪನ್ಯಾಸಮಾಡಿದರೆಂಬುದಾಗಿ ಅವರು ನುಡಿದ ವಾಕ್ಯಗಳನ್ನೇ ಓದಿ ಹೇಳಿದರು. ಶ್ರೀಮನ್ಮಹಾರಾಜರು ಸಕಲಪ್ರಜೆಗಳನ್ನೂ ಪುತ್ರನಿರ್ವಿಶೇಷವಾದ ಕಾರುಣ್ಯದಿಂದ ಸಮಾನವೃದ್ಧಿಯಲ್ಲಿ ತರಬೇಕೆಂದು ಮಾಡಿರುವ ಅಪ್ಪಣೆಯನ್ನು ರಾಜಭಕ್ತಿಯಿಂದಲಾದರೂ ಈ ನಮ್ಮ ಸಹೋದರರು ಗೌರವಿಸುವುದು ವಿಹಿತವಾಗಿರುತ್ತದೆ.

ಇಲ್ಲಿಗೆ ೬ ಗಂಟೆಯಾದುದರಿಂದ ಆದಿನದ ಸಭಾಕಾರ್ಯಗಳು ಮುಗಿದುವು. ಮರುದಿನವೂ ಇದೇ ವಿಷಯದ ಚರ್ಚೆಗೆ ಇನ್ನೂ ೧|| ಗಂಟೆಯಕಾಲ ಕೊಡಲ್ಪಟ್ಟಿದ್ದಿತು. ಆ ವಿವರವನ್ನು ಮುಂದಿನ ಸಂಚಿಕೆಯಲ್ಲಿ ಕೊಡುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಪ್ರಶ್ನಾಂಶಗಳು.

(ಕಳೆದವಾರದ ಶೇಷ.)

ಮಿ|| ಜಿ. ರಾಮಸ್ವಾಮಯ್ಯಂಗಾರ್ಯರು, ಹಾಸನ ತಾಲ್ಲೂಕು.—

ಪ್ರ.—ಶಾನುಭಾಗರ ಪೋಟಗಿಯನ್ನೂ ಸಾದಿಲ್ವಾರು ಖರ್ಚಿನ ಹಣವನ್ನೂ ಸೇಕಡ ೩೦ ರಷ್ಟಕ್ಕೆ ಹೆಚ್ಚಿಸಿದ ಸರ್ಕಾರಿ ಹುಕುಮನ್ನು ಇದುವರೆಗೂ ಜಾರಿಗೆ ತರದೆ ಇರುವುದಕ್ಕೆ ಕಾರಣವನ್ನು ಸರ್ಕಾರದವರು ದಯೆಯಿಟ್ಟು ತಿಳಿಸುವರೆ?

ಸರ್ಕಾರದ ರೆವಿನ್ಯೂ ಇಲಾಖಾ ಸೆಕ್ರೆಟರಿಯವರು.—

ಉತ್ತರ.—ಸರ್ಕಾರಿ ಹುಕುಮಿಗನುಸಾರವಾಗಿ ಪೋಟಗಿಯ ತಿದ್ದುಪಾಟುಗಳಿಗೆ ಆಗಬೇಕಾದ ಪ್ರಾಥಮಿಕ ತಖ್ತೆಗಳು ಸರ್ವೆ ಇಲಾಖೆಯಲ್ಲಿ ತಯಾರಾಗುತ್ತಿವೆ; ಈ ಕೆಲಸವನ್ನು ತ್ವರೆಪಡಿಸುವಂತೆ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರನ್ನು ಕೇಳಿದೆ.

ಮಿ|| ಸೂರ್ಯನಾರಾಯಣರಾಯರು ಮತ್ತು ಮಿ|| ಎಚ್. ರಾಮಣ್ಣನವರು, ತುಮಕೂರು ತಾಲ್ಲೂಕು.—

ಪ್ರ.—(a) ಜಮೀನು ಕಂದಾಯ.
(b) ಜೋಡಿ.
(c) ಮೊಹತರ್ಫಾ.

ತಾಲ್ಲೂಕುವಾರ್ ಅಥವಾ ಹೋಬಳಿವಾರ್ ವಿವರಗಳನ್ನು ದಯವಿಟ್ಟು ಒದಗಿಸಬೇಕು.

ಸರ್ಕಾರದ ರೆವಿನ್ಯೂ ಇಲಾಖಾ ಸೆಕ್ರೆಟರಿಯವರು.—

ಉತ್ತರ.—7ನೆಯ ನಂಬರಿನ ಪ್ರಶ್ನಾಂಶಕ್ಕೆ ಕೊಟ್ಟಿರುವ ಉತ್ತರಗಳಿಗೆ ಮೆಂಬರು ಗಮನವನ್ನು ಕೊಡಬೇಕು.

ಮಿ|| ಡಿ. ಎಸ್. ಮಲ್ಲಪ್ಪನವರು ಮತ್ತು ಮಿ|| ಜಿ. ಕೆ. ಗುರಪ್ಪನವರು, ತಿಪಟೂರು ತಾಲ್ಲೂಕು.—

ಪ್ರ.—(a) ಸಂಸ್ಥಾನದಲ್ಲಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳ ಸಂಖ್ಯೆ ಎಷ್ಟು?

(b) ಇವುಗಳ ಪೈಕಿ ಎಷ್ಟು ಕಂಪೆನಿಗಳು ಕೆಲಸ ನಡೆಸುತ್ತಿವೆ?

(c) ಎಷ್ಟು ಕಂಪೆನಿಗಳನ್ನು ಸರ್ಕಾರದವರು ಅಜಮಾಷಿಮಾಡಿದರು? ಮತ್ತು ಗಮನಕ್ಕೆಬಂದ ಲೋಪಗಳ ವಿಷಯದಲ್ಲಿ ಯಾವ ಕ್ರಮಜರುಗಿಸಲಾಯಿತು?

ಸರ್ಕಾರದ ಜನರಲ್ ಸೆಕ್ರೆಟರಿಯವರು.—

ಉತ್ತರ—(a) 101.

(b) 82.

(c) 30. ಕಂಪನಿಗಳನ್ನು ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರವರು ತನಿಖೆಮಾಡಿದ್ದಾರೆ; ಮತ್ತು ಹಾಲಿ ಇರುವ ನ್ಯೂನತೆಗಳನ್ನು ನಿವಾರಣೆಮಾಡಲು ಆವಶ್ಯಕವಾದ ಕಡೆಗಳಲ್ಲೆಲ್ಲಾ ತಿಳಿವಳಿಕೆಯನ್ನು ಕೊಟ್ಟಿದ್ದಾರೆ.

ಮಿ|| ಟಿ. ಜಿ. ನಾಗಪ್ಪನವರು, ತುರುವೇಕೆರೆ ಸಬ್ ತಾಲ್ಲೂಕು.—

ಪ್ರ.—(a) ಬಲಾತ್ಕಾರವಾದ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಸಾರಣೆಗೊಳಪಟ್ಟ ಪ್ರದೇಶಕ್ಕೆ ಸೇರಿದುವೆಂದು ಪ್ರಕಟವಾಗಿದ್ದಾಗ್ಯೂ ಸ್ಕೂಲುಗಳನ್ನು ವಸ್ತುತಃ ಸ್ಥಾಪಿಸದಿರುವ ಸ್ಥಳಗಳಲ್ಲಿ ಬಲಾತ್ಕಾರ ವಿದ್ಯಾಭ್ಯಾಸದ ಸ್ಕೂಲಿನ ಉಪಾಧ್ಯಾಯರುಗಳಿಗೆ ಸಂಬಳವನ್ನು ಕೊಡುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೆ?

(b) ಇಂತಹ ಅನಾವಶ್ಯಕವಾದ ಖರ್ಚು ಎಷ್ಟು ಸಂದರ್ಭಗಳಲ್ಲಿ ಆಗಿದೆ? ಮತ್ತು ಹಾಗೆ ಸಂದಾಯಮಾಡಿದ ಒಟ್ಟು ಮೊಬಲಗು ಎಷ್ಟು?

ಸರ್ಕಾರದ ಚೀಫ್ ಸೆಕ್ರೆಟರಿಯವರು.—

ಉ—(a) ಮತ್ತು (b) ಬಲಾತ್ಕಾರ ವಿದ್ಯಾಭ್ಯಾಸದ ರೆಗ್ಯುಲೇಷನ್ ಪ್ರಕಾರ, ಅದರ ವ್ಯಾಪನೆಗೊಳಪಡಿಸಲ್ಪಟ್ಟ ಪ್ರದೇಶಗಳಲ್ಲಿ ಸ್ಕೂಲು ಉಪಾಧ್ಯಾಯರುಗಳಿಗೆ ಯಾವ ಸಂಬಳವನ್ನೂ ಕೊಟ್ಟಿಲ್ಲ; ಆದರೆ ಮೊದಲೇ ಸ್ಥಾಪಿಸಲ್ಪಟ್ಟಿರುವ ಸ್ಕೂಲಿನಲ್ಲಿ ಕೆಲಸ ಮಾಡಿದ ಅಥವಾ ಹೊಸ ಸ್ಕೂಲನ್ನು ಏರ್ಪಡಿಸುವುದಕ್ಕೆ ಸಂಬಂಧಪಟ್ಟ ಆರಂಭದ ಕೆಲಸವನ್ನು ನಡೆಸಿದ ಉಪಾಧ್ಯಾಯರುಗಳಿಗೆ ಮಾತ್ರ ಸಂಬಳವನ್ನು ಕೊಡಲಾಯಿತು. ಸರ್ಕಾರಿ ಹಣವು ದುರ್ವಿನಿಯೋಗಪಡಿಸಲ್ಪಟ್ಟ ಸಂದರ್ಭಗಳ್ಯಾವುವೂ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರ ಗಮನಕ್ಕೆ ಬಂದಿರುವುದಿಲ್ಲ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಗರ್ಲ್ಸ್‌ಸ್ಕೂಲಿನ ವಾರ್ಷಿಕೋತ್ಸವ.

ತಾ|| ೧೧-೧೦-೨೧ನೇ ಇಸವಿಯಲ್ಲು ಕೋಡ ತಾಲ್ಲೂಕು ಹಾಂಸಭಾವಿಯಲ್ಲಿ ವಿಜಯದಶಮಿ ದಿವಸ ಇಲ್ಲಿಯ ಗರ್ಲ್ಸ್‌ಸ್ಕೂಲಿನ ವಾರ್ಷಿಕಾಧಿವೇಶನವು ನಮ್ಮ ತಾಲ್ಲೂಕಿನ ಸಮಾಜಸೇವಾಧುರಂಧರರಾದ ರಾಮಪ್ಪ ಬಸಪ್ಪ ಚಿಗಟೇರಿಯವರ ಅಧ್ಯಕ್ಷತೆಯ ಕೆಳಗೆ ಜರುಗಿತು. ಸಭೆಗೆ ಯಾವತ್ತು ಪುರಪ್ರಮುಖರೂ ಕಾರವಾರ ಜಿಲ್ಲಾ ಸಿದ್ದಾಪುರದ ನ್ಯಾಸಣಗಿ ಹೋಳಿ ಬಸಪ್ಪನವರೂ ಭೋಗಾವಿ ರುದ್ರಪ್ಪನವರೇ ಮುಂತಾದ ದೊಡ್ಡ ಮನುಷ್ಯರೂ ಆಗಮಿಸಿದ್ದರು. ಎಲ್ಲರೂ ಸಮಾಜಸೇವಕರೇ ಇದ್ದುದರಿಂದ ಸಭೆಯು ಒಳ್ಳೇ ಅಲಂಕಾರದಿಂದ ಶೋಭಿಸುತ್ತಿತ್ತು. ಸಿದ್ದಾಪುರದ ಹೋಳಿಬಸಪ್ಪನವರು ಅಸಹಕಾರ ಮತ್ತು ಸಹಕಾರ ಇವುಗಳ ಮರ್ಮವನ್ನು, ಪರದೇಶದ ಅರಿವೆಗಳನ್ನು ಸುಡುವುದರಿಂದ ಆಗುವ ಅನರ್ಥಗಳನ್ನೂ ಕುರಿತು ಸಭಿಕರಿಗೆ ಒಳ್ಳೇ ಪರಿಣಾಮವಾಗುವಂತೆ ಆವೇಶಯುಕ್ತ ಭಾಷಣವನ್ನು ಮಾಡಿದರು. ಮತ್ತು ಅಲ್ಲಿಯ ಮೃತ್ಯುಂಜಯ ಎ. ವ್ಹಿ. ಸ್ಕೂಲಿನ ಮಾಸ್ತರರಾದ ಹಿರೂರ ಪಾಟೀಲರು ಸ್ವಾವಲಂಬನದ ಬಗ್ಗೆಯೂ ದುಶ್ಚಟಗಳ ಬಗ್ಗೆಯೂ ಒಳ್ಳೇ ಉತ್ಸುಕತೆಯಿಂದ ಭಾಷಣಮಾಡಿದರು. ಅಲ್ಲಿಯ ಕನ್ನಡ ಶಾಲೆಯ ಹೆಡ್ಮಾಸ್ತರರಾದ ಮಿ|| ದೀಕ್ಷಿತ ಇವರು ಗರ್ಲ್ಸ್‌ಸ್ಕೂಲಿನ ಮಾಸ್ತರರಾದ ಬಸೆಟ್ಟೆಪ್ಪ ವೀರಸಂಗಪ್ಪನವರು ಸಂಬಳವಿಲ್ಲದೆ ಕೆಲವುದಿವಸ ಸ್ಕೂಲನ್ನು ಉತ್ತಮಸ್ಥಿತಿಯಿಂದ ನಡೆಸಿದ ಬಗ್ಗೆ ಅವರು ಸಮಾಜದ ಮೇಲೆ ಮಾಡಿರುವ ಉಪಕಾರವನ್ನು ವರ್ಣಿಸಿದ್ದಲ್ಲದೆ, ಅವರಿಗೆ ಜಾಗ್ರತೆ ವರ್ಗಣಿಯನ್ನು ಹೆಚ್ಚಾಗಿ ಕೂಡಿಸಲಿಕ್ಕೆ ಸಭಿಕರಿಗೆ ಚನ್ನಾಗಿ ತಿಳಿಯುವಂತೆ ಸರಸವಾಗಿ ಭಾಷಣಮಾಡಿದರು. ಇನ್ನೂ ಅನೇಕ ವಿದ್ವಾಂಸರು ನಮ್ಮ ಉನ್ನತಸ್ಥಿತಿಯ ಬಗ್ಗೆ ಭಾಷಣ ಮಾಡಿದನಂತರ, ಅಧ್ಯಕ್ಷರು ವೀರಶೈವವಿದ್ಯಾವರ್ಧಕ ಸಂಘವನ್ನೂ ಶಿವಯೋಗೀಶ್ವರ ಲೈಬ್ರರಿಯನ್ನೂ ಗರ್ಲ್ಸ್‌ಸ್ಕೂಲನ್ನು ಊರ್ಜಿತಸ್ಥಿತಿಗೆ ತರುವ ಬಗ್ಗೆ ಸಮಾಜಸೇವಕರು ಮಾಡಬೇಕಾದ ಕೆಲಸವನ್ನೂ ವಿಶದವಾಗಿ ತಿಳಿಸಿ ಸಮಾಜಸೇವೆಗೆ ಇನ್ನೂ ಹುರುಪು ಬೇಕಾದರೆ ವರ್ತಮಾನ ಪತ್ರಗಳನ್ನೂ ಧರ್ಮಗ್ರಂಥಗಳನ್ನೂ ಸರಿಯಾಗಿ ಓದಲಿಕ್ಕೆ ಮನೆಯ ಲೆಕ್ಕಪತ್ರಗಳನ್ನು ತಿಳಿದುಕೊಳ್ಳುವ ಮಟ್ಟಿಗೆ ಈಗ ಅಜ್ಞಾನಿಗಳಾಗಿರುವ ೨೦ ವರ್ಷದ ಮೇಲಿನ ಜನರ ಬಗ್ಗೆ ಅಲ್ಲಿಯೇ ರಾತ್ರಿ ಸ್ಕೂಲನ್ನು ಸ್ಥಾಪಿಸುವ ಬಗ್ಗೆ ಆಲೋಚನೆಮಾಡಲು ಮಿ|| ಚನ್ನಬಸಪ್ಪಾ ಕೊಳ್ಳಿ ಮಾಸ್ತರ ಇವರು ಈ ದಿವಸವೇ ರಾತ್ರಿಶಾಲೆಯನ್ನು ಸ್ಥಾಪಿಸಬೇಕೆಂದು ಸೂಚಿಸಲು ಆ ಕೆಲಸವು ಸರ್ವಾನುಮತದಿಂದ ಪಾಸಾಗಿ ಅದೇ ದಿವಸ ರಾತ್ರಿಸ್ಕೂಲು ಸ್ಥಾಪಿಸಲ್ಪಟ್ಟಿತು. ೩೦-೩೫ ಜನ ವಿದ್ಯಾರ್ಥಿಗಳು ಆಗಿಂದಾಗಲೇ ತಮ್ಮ ಹೆಸರನ್ನು ದಾಖಲ್ಮಾಡಿಸಿದರು. ಗರ್ಲ್ಸ್‌ಸ್ಕೂಲಿನ ಮಾಸ್ತರರೂ ಸ್ವಾರ್ಥತ್ಯಾಗಿಗಳೂ ಆದ ವೀರಸಂಗಪ್ಪನವರೇ ಮಾಸ್ತರರಾಗಲಿಕ್ಕೆ ಒಪ್ಪಿಕೊಂಡಿದ್ದನ್ನು ಸಭಿಕರು ಕೊಂಡಾಡಿ ಅವರ ಮೇಲಿನ ಪ್ರೀತಿಯನ್ನು ಕರತಾಡನದಿಂದ ತೋರಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಲಕ್ಷ್ಮೇಶ್ವರ.

ಇಲ್ಲಿ ತಾ|| ೨೩-೧೦-೧೯೨೧ನೆ ಇಸವಿಯ ದಿವಸ ಯಾವತ್ತು ವೀರಶೈವರದೊಂದು ಸಭೆಯು ಶ್ರೀಯುತ ಬಸೆಟ್ಟೆಪ್ಪಣ್ಣಾ ತಟ್ಟಿ ಇವರ ಅಧ್ಯಕ್ಷತೆಯಿಂದ ಕೂಡಿತ್ತು. ಸಭೆಗೆ ರಾ|| ಸಾ|| ಮಾಮಲೇದಾರ ಮೊದಲಾದ ಸರಕಾರಿ ಅಮಲ್ದಾರರೂ ಮತ್ತು ಯಾವತ್ತು [illegible] ಹಾಜರ ಇದ್ದರು. ಮೊದಲು [illegible] ಇವರು, ಶ್ರೀಮದ್ಬಸವ ಜಯಂತ್ಯುತ್ಸವ [illegible] ವೀರಶೈವ ತರುಣಸಂಘದ [illegible] ಕಾಲಕ್ಕೆ ಶ್ರೀಮದ್ಬಸವ ಜಯಂತ್ಯುತ್ಸವವನ್ನು ಸಾರ್ವಜನಿಕ ಹಬ್ಬದಂತೆ ಆಚರಿಸಲಿಕ್ಕೆ ಸುಟಿ (ರಜಾ) ಮಂಜೂರ ಆಗಬೇಕೆಂದು ನಮ್ಮನ್ನಾಳುವ ಶ್ರೀಮಂತ ಸರಕಾರ ಬಾಳಸಾಹೇಬ ಸಂಸ್ಥಾನ ಮಿರಜ ಇವರಕಡೆಗೆ ಕಳಿಸಲ್ಪಟ್ಟ ಠರಾವಿನಪ್ರಕಾರ ರಜಾ ಮಂಜೂರ ಆಗಿಬಂದದ್ದರಿಂದ ಶ್ರೀಮಂತರಿಗೆ ಆಭಾರಮನ್ನಿಸುವ ಕುರಿತು ನಾವೆಲ್ಲರೂ ಈ ಹೊತ್ತು ನೆರೆದಿದ್ದೇವೆಂದು ಸಭಿಕರಿಗೆ ತಿಳಿಸಿದರು. ಸಭೆಯಲ್ಲಿ ಮಿ|| ಚನ್ನಪ್ಪಣ್ಣಾ ಗಾಂಜೀ, ಜಿ. ಎಮ್. ಸಾಲೀಮಠ ಮತ್ತು ಎಸ್. ಐ. ಫಿರಜಾದೆ ಬಿ.ಎ. ಇವರ ಭಾಷಣಗಳಾದವು, ಆನಂತರ ಅಧ್ಯಕ್ಷರು ಕೆಳಗೆಬರೆದ ಠರಾವನ್ನು ಸಭಿಕರಿಗೆ ಓದಿಹೇಳಿದರು—ಲಕ್ಷ್ಮೇಶ್ವರದ ವೀರಶೈವಸಮಾಜದವರ ವತಿಯಿಂದ ನೆರೆದ ಈ ಸಭೆಯು ಅಭಿಪ್ರಾಯಪಡುವುದೇನೆಂದರೆ “ಶ್ರೀಮಂತ ಬಾಳಾಸಾಹೇಬ ಸರಕಾರ ಮಿರಜಸಂಸ್ಥಾನ ಇವರು ನಮ್ಮ ಮತೋದ್ಧಾರಕರಾದ ಶ್ರೀಮದ್ಬಸವೇಶ್ವರನ ಜನ್ಮದಿವಸವನ್ನು ಸಾರ್ವಜನಿಕ ಹಬ್ಬವನ್ನಾಗಿ ಆಚರಿಸಬೇಕೆಂದು ರಜಾಮಂಜೂರು ಮಾಡಿದ್ದಕ್ಕಾಗಿ ನಾವೆಲ್ಲರೂ ಶ್ರೀಮಂತರಿಗೆ ಆಭಾರಮನ್ನಿಸುವದಲ್ಲದೆ, ಬಹಳ ಋಣಿಗಳಾಗಿರುತ್ತೇವೆ.” ಈ ಠರಾವು ಮ|| ರಾ|| ಬಸವಣ್ಣೆಪ್ಪಣ್ಣಾ ಕೋಟಿಗಿ ಮತ್ತು ಗುರುಸಿದ್ದಯ್ಯಾ ಹಿರೇಮಠ ಇವರಿಂದ ಅನುಮೋದಿಸಲ್ಪಟ್ಟು ನಂತರ ಸರ್ವಾನುಮತದಿಂದ ಪಾಸಾಯಿತು. ಇಷ್ಟಾದನಂತರ ಶ್ರೀಮಂತರ ಹೆಸರಿನಿಂದ ತ್ರಿವಾರ ಜಯಘೋಷವಾಗಿ ಸಭಾ ವಿಸರ್ಜನೆಯಾಯಿತು.

ಸೆಕ್ರೆಟರಿ, ವೀರಶೈವ ತರುಣಸಂಘ.

ಮಂಜರಾಬಾದು ತಾಲ್ಲೂಕು ಹಾರ್ನಬಾಳು.

ತಾ|| ೩೦-೯-೨೧ರಲ್ಲು ಇಲ್ಲಿ ನಡೆದ ವೀರಶೈವ ವಿದ್ಯಾವರ್ಧಕ ಸಂಘದ ಮೀಟಿಂಗ್ ಸಂದರ್ಭದಲ್ಲಿ ಈ ಹೋಬಳಿ ರೈತರುಗಳು ವರ್ಗಪಟ್ಟ ಅಮಲ್ದಾರ್ ಮಿ. ಕೆ. ಸಿದ್ಧರಾಮಪ್ಪ ಬಿ.ಎ., ಯವರನ್ನು ಬಹಳ ಆದರಪೂರ್ವಕವಾಗಿ ಬರಮಾಡಿಕೊಂಡು ಸನ್ಮಾನಮಾಡಿದರು. ಆಗ್ಗೆ ಹ. ರೆವಿನ್ಯೂ ಸಬ್‌ಡಿವಿಜನ್ ಆಫೀಸರವರು, ಡಾಕ್ಟರು ಮೊದಲಾದ ದೊಡ್ಡ ಮನುಷ್ಯರುಗಳು ದಯಮಾಡಿಸಿದ್ದರು. ಇವರು ಎಷ್ಟು ಸ್ವಲ್ಪಕಾಲದಲ್ಲಿ ರೈತರುಗಳ ಮತ್ತು ಶಾಬೇದಾರರ ಕಷ್ಟಸುಖಗಳನ್ನು ಚೆನ್ನಾಗಿ ವಿಚಾರಮಾಡಿ ಪ್ರಜಾಕಾರ್ಯದಲ್ಲಿಯೂ ಸರ್ಕಾರಿ ಕೆಲಸದಲ್ಲಿಯೂ ನಿಸ್ಪೃಹರೆನಿಸಿಕೊಂಡು ಬಹಳ ಒಳ್ಳೆಯವರಾಗಿದ್ದದ್ದರಿಂದ ಸ್ವಲ್ಪಕಾಲದಲ್ಲಿಯೇ ವರ್ಗಪಟ್ಟ ಸಬಬು ಎಲ್ಲರೂ ಬಹಳ ವಿಷಾದಪಟ್ಟು ಅವರ ಗುಣಕಥನಮಾಡಿ ಹಾರ ತುರಾಯಿಗಳನ್ನು ಸಮರ್ಪಿಸಿದರು.

ಸ್ಥಳಿಕ.

ಚಿತ್ರದುರ್ಗದ ಶ್ರೀ|| ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ತಾ|| ೬-೯-೨೧ನೆ ಮಂಗಳವಾರ ಮಧ್ಯಾಹ್ನ ೨ ಘಂಟೆಗೆ ಮುತ್ತುಗದೂರು ಮುಕ್ಕಾಮಿನಿಂದ ಹೊಳಲಕೆರೆ ತಾಲ್ಲೂಕು ಭರಮಣ್ಣನಾಯಕನ ದುರ್ಗಕ್ಕೆ ದಯಮಾಡಿಸಿತು. ಬೆಳ್ಳಿಪಲ್ಲಕ್ಕಿ ವಗೈರೆ ಸಕಲ ಅಜಬಾಬಿನಿಂದ ಶ್ರೀ|| ಗಳವರ ಉತ್ಸವನಡೆದು ಸುಮಾರು ೪ ಘಂಟೆಗೆ ಮೆರವಣಿಗೆ ಪೂರೈಸಿದ ನಂತರ ಶ್ರೀ|| ಗಳವರಿಗೋಸ್ಕರ ಚಪ್ಪರದಲ್ಲಿ ನಿರ್ಮಿಸಲ್ಪಟ್ಟಿದ್ದ ಜಗತಿಯಲ್ಲಿ ಬೆಳ್ಳಿಸಿಂಹಾಸನದ ಮೇಲೆ ಶ್ರೀ|| ಗಳವರನ್ನು ಮುಹೂರ್ತಮಾಡಿಸಲಾಯಿತು. ಆಮೇಲೆ ಮಂಗಳವಾಗಿ ಸರ್ವರಿಗೂ ಶ್ರೀ|| ಗಳವರಿಂದ ಆಶೀರ್ವಾದವಾಯಿತು. ಪುನಃ ೫ ಘಂಟೆಯಿಂದ ಸಾಯಂಕಾಲ ೮ ಘಂಟೆವರೆಗೂ ಚಿತ್ರದುರ್ಗದ ಕರ್ನಾಟಕಾಂಧ್ರ ಕವಿ ಮತ್ತೂ ಕೀರ್ತನಕಾರ ಬಿ. ಭೀಮರಾಜು ಇವರಿಂದ ಶಿವಕೀರ್ತನ ನಡೆಯಿತು, ಅಬಳಿಕ ಸಭಾಬರ್ಕಾಸ್ತಾಯಿತು. ಈ ಮಹೋತ್ಸವಕ್ಕೆ ಅರಸೀಕೆರೆ, ಹಾರನಹಳ್ಳಿ, ಭೀಮಸಮುದ್ರ, ದಾವಣಗೆರೆ, ಮಾಯಕೊಂಡ, ಹೊಳಲಕೆರೆ ಮೊದಲಾದ ಅನೇಕ ಕಡೆಗಳಿಂದ ಸುಮಾರು ೩-೪ ಸಾವಿರ ಜನರು ಸೇರಿದ್ದರು. ಆ ದಿವಸ ೩-೪ ಸಾವಿರ ಜನಗಳಿಗೂ ಸಂತರ್ಪಣೆ ನಡೆಯಿತು. ಈ ಉತ್ಸವಕ್ಕೋಸ್ಕರ ಬೀದಿಗಳಲ್ಲೆಲ್ಲಾ ಅನೇಕ ಕಡೆ ಚಪ್ಪರಗಳು, ಆರ್ಚುಗಳು, ಶೃಂಗಾರದೊಡನೆ ಹಾಕಲ್ಪಟ್ಟಿತ್ತಲ್ಲದೆ ತಳಿರು ತೋರಣಗಳು ಕದಳೀಸ್ತಂಭಗಳಿಂದ ಬೀದಿಗಳೆಲ್ಲಾ ಬಹಳ ರಮಣೀಯವಾಗಿದ್ದವು. ಶ್ರೀ|| || ಗಳವರು ಇಲ್ಲಿಗೆ ದಯಮಾಡಿಸಲು ಕೊಡಲ್ಪಟ್ಟ ನಿರೂಪವು ೧ ವಾರಕ್ಕೆ ಮುಂಚೆ ತಲಪಿದರೂ ಅಷ್ಟು ಸ್ವಲ್ಪ ಕಾಲದಲ್ಲೇ ಮೇಲ್ಕಂಡ ಸರಿಯಾದ ಏರ್ಪಾಡುಗಳೆಲ್ಲಾ ಇಲ್ಲಿನ ವೀರಶೈವ ಪ್ರಮುಖರಾದ ಮ|| ನಾಡಿಗಮಲ್ಲಪ್ಪನವರೇ ಮೊದಲಾದವರ ಮೆಹನತ್ತಿನಿಂದ ನಡೆಸಿದ್ದಾಗಿದೆ. ತಾ|| ೭-೯-೨೧ ರಲ್ಲು ಶ್ರೀ|| || ಗಳವರು ನಾಡಿಗಮಲ್ಲಪ್ಪನವರ ಪ್ರಾರ್ಥನೆಮೇರೆ ಬಿನ್ನಹಕ್ಕೆಕೊಂಡು ಅವರ ಗೃಹಕ್ಕೆ ದಯಮಾಡಿಸಿ ಪೂಜಾ ಆದನಂತರ ಪುನಃ ಅದಿವಸ ಶಿವಕೀರ್ತನೆಯು ನಡೆಯಿತು. ತಾ|| ೮-೯ ರಲ್ಲಿ ಪಟ್ಟಣಶೆಟ್ಟಿ ಸಿದ್ಧಲಿಂಗಪ್ಪನವರ ಮನೆಯ ಬಿನ್ನಹವೂ, ತಾ|| ೯-೧೦ ರಲ್ಲಿ ಮಠದ ಬಸಪ್ಪಯ್ಯನವರಮನೆಯ ಬಿನ್ನಹವೂ ನಡೆಯಿತು. ತಾ|| ೧೦-೯-೨೧ರಲ್ಲಿ ಶ್ರೀ|| || ಗಳವರು ಇದೇ ಹೋಬಳಿ ತಡವೂರು ಮುಕ್ಕಾಮಿಗೆ ದಯಮಾಡಿಸಿ ಊರಲ್ಲಿ ಉತ್ಸವ ಆದನಂತರ ಇಲ್ಲಿನ ಶ್ರೀ|| || ಗಳವರ ಅಧಿಕಾರಕ್ಕೆ ಒಳಪಟ್ಟ ಶ್ರೀ|| ವೀರಭದ್ರ ದೇವಸ್ಥಾನಕ್ಕೆ ದಯಮಾಡಿಸಿ ಪೂಜೆನಡಿಸಿ ಆಮೇಲೆ ದೇವಸ್ಥಾನದ ಜಮಾಖರ್ಚು ಮತ್ತೂ ಆಭರಣದ ಬುಕ್ಕುಗಳನ್ನು ಧರ್ಮದರ್ಶಿಗಳು ಯಾ ಸೆಕ್ರೆಟರಿ ಭರಮಣ್ಣನಾಯಕನದುರ್ಗದ ನಾಡಿಗಮಲ್ಲಪ್ಪನವರು ಮತ್ತೂ ಮೆಂಬರು ಮರುಳಪ್ಪಯ್ಯ ವಗೈರೆಯವರಿಂದ ಹಾಜರುಪಡಿಸಿಕೊಂಡು ಚಕ್ಕುಮಾಡಿಸಿ, ಆದಿವಸ ದೇವಸ್ಥಾನದಲ್ಲಿ ಮುಕ್ಕಾಂಮಾಡಿ ತಾ|| ೧೧-೯-೨೧ರಲ್ಲು ಪುನಃ ಭರಮಣ್ಣನಾಯಕನದುರ್ಗಕ್ಕೆ ದಯಮಾಡಿಸಿ ತಾ|| ೧೪ ರವರೆಗೂ ಈ ಮುಕ್ಕಾಮಿನಲ್ಲೇ ಇದ್ದು ಸುತ್ತುಮುತ್ತಣ ಮತ್ತೂ ಈ ಗ್ರಾಮದ ಭಕ್ತರುಗಳಿಂದ ಕಪ್ಪಕಾಣಿಕೆಗಳನ್ನರ್ಪಿಸಿಕೊಂಡು. ತಾ|| ೧೪-೯-೨೧ರಲ್ಲಿ ಪುನಃ ನಾಡಿಗಮಲ್ಲಪ್ಪನವರ ಪ್ರಾರ್ಥನೆಮೇರೆ ಅವರಗೃಹಕ್ಕೆ ಬಿನ್ನಹಕ್ಕೆ ದಯಮಾಡಿಸಿ ಪೂಜಾಪೂರೈಸಿ ತಾ|| ೧೫-೯-೨೧ನೆ ಗುರುವಾರದಿವಸ ಮ|| ನಾಡಿಗಮಲ್ಲಪ್ಪನವರು ಮಠದ ಬಸಪ್ಪಯ್ಯನವರು ಪ|| ಸಿದ್ಧಲಿಂಗಪ್ಪನವರು ವಗೈರೆ ಭಕ್ತರುಗಳು ಶ್ರೀಗಳವರು ತಮ್ಮ ಗ್ರಾಮದಲ್ಲಿ ಮುಕ್ಕಾಂಮಾಡಿದ್ದ ೧೦ ದಿವಸಗಳಲ್ಲೂ [illegible] ಶ್ರೀ|| || ಗಳವರು ತುಂಬಾ ಹರ್ಷಿತರಾಗಿ ಇವರ ಶ್ರೇಯೋವಿಚಾರದಲ್ಲಿ ಪೂರ್ಣಕೃಪಾಕಟಾಕ್ಷದ ಆಶೀರ್ವಾದವನ್ನಿತ್ತು ಮಧ್ಯಾಹ್ನ ೧೨ ಘಂಟೆಗೆ ಚಿಕ್ಕಜಾಜೂರು ಮುಕ್ಕಾಮಿಗೆ ದಯಮಾಡಿಸಿದರು.

ಪ್ರತ್ಯಕ್ಷದರ್ಶಿ.

ಬಳ್ಳಾರಿ ಜಿಲ್ಲಾ ಆದವಾನಿ.

ಮ|| ವಡ್ಡಿಗಿರಿ ಸಿದ್ದಪ್ಪನವರ ಔದಾರ್ಯವು.—ಇವರು ತಮ್ಮ ಗೇಕಲ್ಲು ತೋಟದಲ್ಲಿ ಇದೇ ತಿಂಗಳು ೨೪-೨೫-೨೬ ಈ ಮೂರು ದಿ ಗಳಲ್ಲಿಯೂ ಕೀರ್ತಿಶೇಷರಾದ ತಮ್ಮ ತಂದೆ ದಾಸಪ್ಪನವರ ಜ್ಞಾಪಕಾರ್ಥವಾಗಿ ಜಾತಿಮತಭೇದವನ್ನೆಣಿಸದೆ ಸುಮಾರು ೧೫೦೦ ಜನರಿಗೆ ಭಕ್ಷ್ಯ ಯಸಂಗಳ ಸಹಿತ ಭೋಜನವು ಮಾಡಿಸಿದರು. ಚಂದನತಾಂಬೂಲ ಸ ನಗಳಿಂದ ತೃಪ್ತರಾದ ತುಂಬಾದೀನ ಸ್ತ್ರೀಪುರುಷ ಬಾಲಕರು ಅತಿ ಹ ದಿಂದ ಸಿದ್ದಪ್ಪನವರ ಶ್ರೇಯಸ್ಸನ್ನು ಹಾರೈಸುತ್ತಾ ಇದ್ದದ್ದನ್ನು ಆ ದವನದಲ್ಲಿ ನೋಡಲಿಕ್ಕೆ ಬಹು ರಮಣೀಯವಾಗಿದ್ದಿತು. ಈ ಉದಾರ ಸಂಪನ್ನರು ಬಡಬಗ್ಗರಿಗೆ ಇಂಥ ವನಭೋಜನವು ಮಾಡಿಸಿದ್ದು ಇತರ ಮೇಲ್ಪಂಕ್ತಿ ಹಾಕಿಕೊಟ್ಟಂತಾಯಿತು. ಹಾಲ್ವಿ ನಿವಾಸಿಗಳಾದ ಶ್ರೀ ಮುನಿ ಸ್ವಾಮಿಗಳಿಗೆ ೨೫೦ ರೂ. ಕ್ರಯವುಳ್ಳ ಅಕ್ಕಿ ಮುಂತಾದ ಕು ಸಾಮಗ್ರಿಯು ಅರ್ಪಿಸಿದರು. ಮೊತ್ತದಲ್ಲಿ ೧೨೦೦ ರೂ. ಖ ಮಾಡಿದರೆಂದು ಕೇಳಲು ಬಹಳ ಸಂತೋಷವಾಗುತ್ತದೆ. ವಡ್ಡಿಗಿರಿ ಸಿದ್ದ ಎಂಬುವರು ೨೮ವರ್ಷ ವಯಸ್ಸಿನವರು, ಲಿಂಗಾಯತಮತಸ್ಥರು. ಮು ಸಿಪಲ್ ಕೌನ್ಸಿಲರು, ಪ್ರೆಸಿಡೆಂಟು ಆಲ್ಬರ್ಟ್ ಮೆಮೋರಿಯಲ್ ರೀಡಿಂಗ್ ರೂ ಮತ್ತು ಲೈಬ್ರರಿ, ಪ್ರೆಸಿಡೆಂಟು ಆದವಾನಿ ಕೋಆಪರೇಟಿವ್ ಬ್ಯಾಂಕು.

ಓರ್ವ ಪ್ರೇಕ್ಷಕ.

ರಾಯಚೂರು ತಾಲ್ಲೂಕು ಪೈಕಿ ಮರಿಕಲ್ಯಾಣವೆನಿಸಿರುವ ಚಿಕ್ಕಸಾಗರ ಚೌಕೀ ಮಠಾಧ್ಯಕ್ಷ ಶ್ರೀಗುರು ಸಿದ್ದರಾಮ ಶಿವಯೋಗಿಗಳ ಯಾತ್ರೋತ್ಸವವು.

ಪ್ರತಿ ವರ್ಷವೂ ನಡೆಯುವಂತೆ ಈ ದುರ್ಮತಿನಾಮಸಂವತ್ಸ ಉತ್ಸವವೂ ನಡೆಯಿತು. ಮಹಾಪೂಜಾದಿಗಳಿಂದ ಸಹಸ್ರಾರುಮಂದಿ ಗಣಾಧೀಶ್ವರರ ಭೋಜನವಾದನಂತರ ಸದ್ಭಕ್ತರಾದ ರಾಯಚೂರು ಗಂಜೀಹ ಭೀಮಣ್ಣ ತಮ್ಮಣ್ಣನವರು ದಕ್ಷಿಣತಾಂಬೂಲಾದಿಗಳಿಂದ ಮಾಹೇಶ್ವರ ಸಮುದಾಯವನ್ನು ಆನಂದಗೊಳಿಸಿದ ತರುವಾಯ ರಥದ ಮುಂಭಾಗದಲ್ಲಿ ಅನೇಕ ಶ್ರೀಮಂತರುಗಳಿಂದಲೂ, ವೈದಿಕರಿಂದಲೂ, ವಿದ್ಯಾರ್ಥಿಗಳಿಂದಲೂ ಗುಂಪಾಗಿ ವೇದಘೋಷದೊಡನೆ ಸಾಗಿರುವ ರಥವು ಮೃದಂಗಾದಿ ವಾದ್ಯಧ್ವನಿಗಳಿಂದ ಉಭಯಪಾರ್ಶ್ವಗಳಲ್ಲಿಯ ಜನರಿಗೆ ನೇತ್ರಾನಂದಕರವಾಗಿತ್ತು. ಮಹತ್ತರವಾದ ಬಿರುದಾವಳಿಗಳಿಂದ ಯುಕ್ತರಾಗಿ ಶ್ರೀ ಪಕ್ಷಿವಾ ನೀರುಡುಗುಂಭದ ಬೃಹನ್ಮಠಾಧ್ಯಕ್ಷ ಶ್ರೀಗುರು ಸಿದ್ಧಲಿಂಗ ಯ ರ್ಯರು ಸೇವಕಜನರಿಂದ ರಥವನ್ನು ಸ್ಥಳಕ್ಕೆ ಮುಟ್ಟಿಸಿದರು. ಅದೇ ಸಾಯಂಕಾಲ ೬ ಗಂಟೆಯಲ್ಲಿ ಸಮಸ್ತಬಾಂಧವರೂ ಪೂರ್ವೋಕ್ತ ಶ್ರೀಗಳವರ ಅಧ್ಯಕ್ಷತೆಯಿಂದ ರೌದ್ರಿನಾಮ ಸಂ|| ಆ|| ಬ|| ೫ ಸೋಮವಾರದ ದಿ ಸ್ಥಾಪಿಸಲ್ಪಟ್ಟ ಧರ್ಮಸಂಜೀವಿನೀ ಸಭೆಯನ್ನು ಕುರಿತು ಶ್ರೀಕ್ಷೇತ್ರ ಸಿ ಗಂಗಾಮಠದ ಬಸವರಾಜಶರ್ಮ ಇವರು ಈ ಸಭೆಯನ್ನು ಅಭಿವೃದ್ಧಿಗೊಳಿಸಬೇಕೆಂದು ಹೇಳಿದರು. ಅಷ್ಟರಲ್ಲೇ ರಾಯಚೂರು ಸಂಗೀತ ಪಾಠಶಾಲಾಧ್ಯಾಪಕ ನೀಲಗಲ್ಲು ಅಮರಯ್ಯನವರು ಶಿಷ್ಯ ಪಂಚಾಕ್ಷರಯ್ಯನೊ ನೆ ಆನಂದಲ್ಲಿ ಶಾಂತಮೂರ್ತಿ ಶಾಸ್ತ್ರಿಗಳೂ ಸಹ ಸಭಿಕರಿಗೆ ಆನಂದವಾಗುವಂತೆ ಮಂಗಲಸ್ತುತಿಗಳನ್ನು ಹಾಡಿದರು. ವಿದ್ಯಾರ್ಥಿ ಹೊಸಪೇಟೆ ರಯ್ಯ ವಿದ್ಯಾವಿಷಯವನ್ನೂ, ಶಿವಪುರ ಸೂಗೂರಯ್ಯನವರು ಜ್ಞಾನಕ್ರಿಯಾ ವಿಷಯವನ್ನೂ ಅಳ್ಳಿಗೆ ಗುರುಶಾಂತದೇವರು ಭಕ್ತಿವಿಷಯವನ್ನೂ ಅರಿಷಣಿಗೆ ಮಠದ ಚನ್ನವೀರಯ್ಯನವರು ಮೋಕ್ಷ ವಿಷಯವನ್ನೂ ಪು ಬಸವರಾಜಶರ್ಮ ಇವರು ಬ್ರಹ್ಮಚರ್ಯ ವಿಷಯವನ್ನೂ ಕುರಿತು ಭಾಷಣಗಳನ್ನು ಸುವಾಣಿಯಿಂದ ಮಾಡಿದ ಮೇಲೆ ಗದ್ವಾಲಿ ಸೂಗೂರಪ್ಪನವರು ಅದುವರೆಗೆ ನಡೆದ ವಿಷಯಗಳನ್ನೇಕ್ರೋಢೀಕರಿಸಿ ಸುಬೋಧಾಮೃತಗಳನ್ನು ಸಭಿಕರ ಮೇಲೆ ಸುರಿದನಂತರ ರಾಯಚೂರು ವೀರಶೈವ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಪ|| ಬಸವಲಿಂಗಶಾಸ್ತ್ರಿಗಳು ಡಿ|| ಪರ್ವತಶಾಸ್ತ್ರಿಗಳೂ ಡಿ|| ವೇ|| ಪ|| ಚನ್ನಬಸವಶಾಸ್ತ್ರಿಗಳೂ ಗುರು, ಅನ್ನದಾನ ಇವೇ ಮೊದಲಾದ ವಿಷಯಗಳನ್ನು ಕುರಿತು ಭಾಷಣಮಾಡಿ ಸಮಾಜಬಾಂಧವರನ್ನು ಆಹ್ಲಾದಗೊಳಿಸಿದರು.

೧೯೨೧ ನೆಯ ಇಸವಿ ನವಂಬರ್ ತಾ|| ೬ರಿಂದ ೧೯೨೧ ನೆಯ ನವಂಬರ್ ತಾ|| ೧೨ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ನೆಯ ದುರ್ಮತಿನಾಮ ಸಂವತ್ಸರದ ಕಾರ್ತಿಕಶುದ್ಧ ಸಪ್ತಮಿಯಿಂದ ಕಾರ್ತಿಕಶುದ್ಧ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
6	ಭಾನು	ಸಪ್ತ	60	ಉಷಾ	37-3	21
7	[1]ಸೋಮ	ಸಪ್ತ	3-15	ಶ್ರವ	43-9	22
8	ಮಂಗಳ	ಅಷ್ಟ	8-20	ಧನಿ	49-42	23
9	ಬುಧ	ನವ	13-45	ಶತ	56-16	24
10	ಗುರು	ದಶ	18-50	ಪೂಭಾ	60	25
11	[2]ಶುಕ್ರ	ಏಕಾ	23-26	ಪೂಭಾ	2-19	26
12	[3]ಶನಿ	ದ್ವಾದ	27-20	ಉಭಾ	7-34	27

(1) ಕಾರ್ತಿಕಸೋಮವಾರ. (2) ಸರ್ವತ್ರೈಕಾದಶಿ. (3) ಉತ್ಥಾನದ್ವಾದಶಿ, ಭೀಷ್ಮಪಂಚಕದಾರಂಭ, ಉಡುಪಿಯಲ್ಲಿ ಲಕ್ಷದೀಪೋತ್ಸವ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ವೀನ್ ಎಲಿಜಬೆತ್ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಚ್ಛೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ನವಂಬರ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೪೫

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
43 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ		ರೂ. ವರೆಗೆ.
4	0-12-0	,,	50-0-0
5	0-8-0	,,	100-0-0
6	0-12-0	,,	100-0-0
7	6-0-0	,,	100-0-0

ಬಿಡಿಮಣಿಗಳು 1ಕ್ಕೆ ಕ್ರಯ

ಮುಖ	ರೂ.		ರೂ.
3	0-6-0	ಇಂದ	10-0-0
8	0-8-0	,,	100-0-0
9	0-12-0	,,	100-0-0
10	0-14-0	,,	100-0-0
11	3-8-0	,,	100-0-0
12	4-0-0	,,	100-0-0
13	4-8-0	,,	100-0-0
14	6-0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅವಕ್ಕಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
37 ಕಂಪನಿ. ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
[illegible]	೦—೧೦—೦
[illegible]	[illegible]
[illegible]	[illegible]

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 26

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಸಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಕಾಗದದ ಬೆಲೆಯು ತಗ್ಗಾಗಿದ್ದರೂ ಅನೇಕರ ಕೋರಿಕೆಯ ಮೇರೆಗೆ ಈ ಗ್ರಂಥದ ದ್ವಿತೀಯ ಮುದ್ರಣವನ್ನು ಮಾಡಿಸಿ ಪೂರೈಸಿರುವೆವು. ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦ ಅಂಚೆವೆಚ್ಚ ಬೇರೆ.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ—ಶಿವನ ಪಂಚವಿಂಶತಿ ಲೀಲೆಗಳು—ಅನೇಕ ಶಿವಶರಣರ ಚರಿತ್ರೆಗಳು—ಷಟ್ಸ್ಥಲಪ್ರಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. [illegible]

★ ಸಟೀಕ ವೀರಶೈವ ವಿವಾಹವಿಧಿ 3 ನೆ ಮುದ್ರಣದ [illegible] ಪುಸ್ತಕಗಳು ಸಿದ್ಧವಾಗಿವೆ. ಮೊದಲಿನಂತೆಯೇ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಈಗ ತಾನೆ ಅಚ್ಚಾಗಿ ಕ್ರಯಕ್ಕೆ ಸಿದ್ಧವಾಗಿದೆ.

ಮೈಸೂರು ಸೀಮೆಯಲ್ಲಿ ಕೈತೋಟಗಳ ವ್ಯವಸಾಯ.

ಈ ಪುಸ್ತಕವು ಹಿಂದೆ ಲಾಲ್‌ಬಾಗ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಜಿ. ಕ್ಯಾಮಿರಾನ್ ಸಾಹೇಬರಿಂದ ಇಂಗ್ಲೀಷು ಭಾಷೆಯಲ್ಲಿ ರಚಿತವಾಗಿ ಮೈಸೂರು ಸಂಪದಭ್ಯುದಯ ಸಮಾಜದ ವ್ಯವಸಾಯ ಶಾಖೆಯವರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಲ್ಪಟ್ಟಿರುತ್ತದೆ. ತರಕಾರಿ ಬೆಳೆಯತಕ್ಕವರಿಗೂ ಫಲಪುಷ್ಪ ವ್ಯವಸಾಯಗಾರರಿಗೂ ಅತ್ಯಂತ ಉಪಯೋಗವಾದದ್ದು. ಕ್ರಯ ಒಂದು ರೂಪಾಯಿ ಎಂಟಾಣೆ.

ಈ ಪುಸ್ತಕವು ದೊರೆಯುವ ಸ್ಥಳ.

2 ಕ್ಯೂರೇಟರ್, ಗೌರ್ನಮೆಂಟ್ ಬುಕ್ ಡಿಪೋ,
ಬೆಂಗಳೂರು ಸಿಟಿ.

ಉಚಿತವಾಗಿ ನೂಲುತೆಗೆಯುವುದನ್ನು ಹೇಳಿಕೊಡುವ ಪಾಠಶಾಲಾ (ಫ್ರೀಸ್ಪಿನ್ನಿಂಗ್ ಸ್ಕೂಲ್.)

ಈ ಪಾಠಶಾಲೆಯು 1921ನೇ ಇಸ್ವಿ ನವಂಬರ್ 1ನೇ ತಾರೀಖಿನ ದಿವಸ ಪ್ರಾರಂಭವಾಗಿರುತ್ತೆ. ಇಲ್ಲಿ ಬೆಳಗ್ಗೆ 8 ಗಂಟೆಯಿಂದ 6 ಗಂಟೆವರೆಗೂ ನೂಲು ತೆಗೆಯುವುದನ್ನು ಉಚಿತವಾಗಿ 1 ತಿಂಗಳವರೆಗೂ ಎರಡುವೇಳೆಯೂ ಸರಿಯಾಗಿ ಬರತಕ್ಕಂಥ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತೆ. ಅಲ್ಲದೆ ಸುಮ್ಮನೆ ನೋಡಿಕೊಂಡು ವಿಷಯ ತಿಳಿದುಕೊಳ್ಳತಕ್ಕವರು ಬೆಳಗ್ಗೆ 7½ ಗಂಟೆಯಿಂದ 12 ಗಂಟೆವರೆಗೂ ಮಧ್ಯಾಹ್ನ 3½ ಗಂಟೆಯಿಂದ 7 ಗಂಟೆ ವರೆಗೂ ಬಂದು ವಿಷಯಗಳನ್ನು ತಿಳಿದುಕೊಂಡುಹೋಗಬಹುದು.

ಎಸ್. ರಾಮಚಂದ್ರರಾವ್,
ಮೂವಿಂಗ್‌ಷಾಪ್, ನಾರ್ತ್‌ಗೇಟ್, ಟೌನ್‌ಹಾಲ್, ಮೈಸೂರು.

ಮಾಪಿಳ್ಳೆಗಳ ದಂಗೆ.

ಇದು ಇನ್ನೂ ನಡೆಯುತ್ತಲೇ ಇದೆ; ನಿಶ್ಶೇಷವಾಗಿಲ್ಲ. ಪ್ರಭುತ್ವದವರು ಗೂರ್ಖ ಸೈನ್ಯವನ್ನೂ ಬರ್ಮಾ ಸೈನ್ಯವನ್ನೂ ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಜರ್ಮನರ ಎದೆಬಿರಿಯಿಸಿದ ಗೂರ್ಖಾ ಸೈನಿಕರ ಬಿಸಿಯು ಈಗ ಮಾಪಿಳ್ಳೆಗಳಿಗೆ ಚೆನ್ನಾಗಿ ತಟ್ಟಿದೆ. ಏತಕ್ಕೂ ಹೆದರದ ಮಾಪಿಳ್ಳೆಗಳು ಈಗ ಗೂರ್ಖರ ಕುಕ್ರಿ ಆಯುಧದ ಹುರುಕಿನಿಂದ ಬೆದರಿ ಬಿದ್ದಿದ್ದಾರೆ. ಪ್ರಭುತ್ವ ಸೈನ್ಯದ ಮೇಲೆ ಕೈಮಾಡುತ್ತ ಅನೇಕ ಮಾಪಿಳ್ಳೆಗಳು ಹತರಾಗುತ್ತಿದ್ದಾರೆ. ಅಲ್ಲಲ್ಲಿ ಗ್ರಾಮಾಂತರಗಳಲ್ಲಿ ಹಿಂದುಗಳನ್ನು ಭಯಪಡಿಸಿ ಹಿಂಸಿಸಿ ಮಹಮ್ಮದೀಯ ಮತಕ್ಕೆ ಸೇರಿಸಿಕೊಳ್ಳುವ ಮತ್ತು ಆಸ್ತಿಯನ್ನು ದೋಚಿಕೊಳ್ಳುವ ಕೆಲಸವನ್ನು ಅಲ್ಪಸ್ವಲ್ಪ ಮಾಡುತ್ತಲೇ ಇದ್ದಾರೆ. ಅಲ್ಲಿಯ ಜನರದೇ ಒಂದು ಸೈನ್ಯವನ್ನು ಸರ್ಕಾರದವರು ಈಗ ಅಣಿಮಾಡುತ್ತಿದ್ದಾರೆ. ಮದರಾಸು ಸರ್ಕಾರದ ಎಕ್ಸಿ|| ಕೌನ್ಸಿಲ್ ಮೆಂಬರಾದ ಗೌ|| ನಾಪುರವರನ್ನು ಮಲಬಾರಿನ ಸ್ಪೆಷಲ್ ಕಮಿಷನ್ನರನ್ನಾಗಿ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಅವರು ಅಲ್ಲಿಯ ಸ್ಥಿತಿಗತಿಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುತ್ತ ಬಾಧಿತರಿಗೆ ಸಹಾಯಮಾಡುವುದೇ ಮೊದಲಾದ ಏರ್ಪಾಟುಗಳನ್ನು ಸಾಗಿಸುತ್ತಿದ್ದಾರೆ. ಅಲ್ಲಿ ನಿರ್ಗತಿಕರಾಗಿ ನಿಂತಿರುವ ಜನರಿಗೆ ದಿನ ೧ಕ್ಕೆ ೧ ಸಹಸ್ರ ರೂ. ಗಳವರೆಗೆ ವೆಚ್ಚಮಾಡಿ ಅನ್ನಾಹಾರಾದಿಗಳನ್ನು ಕೊಡಿಸುತ್ತಿದ್ದಾರೆ. ಅದಕ್ಕೆ ಪ್ರಜೆಗಳಲ್ಲಿ ಧನಿಕರಾದವರೂ ಸರ್ಕಾರದವರೂ ಸಹ ಸಹಾಯಮಾಡುತ್ತಿದ್ದಾರೆ. ಅಪರಾಧಿಗಳ ವಿಚಾರಣೆಯು ಸೈನಿಕಶಾಸನವನ್ನನುಸರಿಸಿದ ದಂಡಾಧಿಕಾರಿಗಳ ಕೋರ್ಟಿನಲ್ಲಿ ನಡೆದು ಅನೇಕರಿಗೆ ದೇಹಾಂತ ಶಿಕ್ಷೆಗಳೂ ಕಾರಾಗೃಹವಾಸಶಿಕ್ಷೆಗಳೂ ವಿಧಿಸಲ್ಪಡುತ್ತಿವೆ. ತಾನೂರು ಖಿಲಾಫತ್ ಕಾರ್ಯದರ್ಶಿಯಾದ ಕುನ್ನಿ ಖಾದರಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು. ತಿರುರಂಗಾಡಿಯಲ್ಲಿ ಮಸೀದಿಯ ಸುತ್ತ ಕಂದಕವನ್ನು ತೋಡಿಕೊಂಡು ಪ್ರಭುತ್ವಸೈನ್ಯದ ಮೇಲೆ ತನ್ನ ಕಡೆಯ ಸೈನಿಕರನ್ನು ಯುದ್ಧಮಾಡಿಸಿದ ಆಲಿಮುಸಲಿಯಾರನ ಮೇಲಣ ಕೇಸು ವಿಚಾರಿತವಾಗಿ ೧ನೆ ಅಪರಾಧಿಯಾದ ಆತನ ಜತೆಗೆ ೨-೩-೪-೫-೬-೧೮-೨೦-೩೦-೩೧-೩೩-೩೪—೩೮ನೆ ಅಪರಾಧಿಗಳಿಗೂ ಸಹ ಮರಣದಂಡನೆಯು ವಿಧಿಸಲ್ಪಟ್ಟದ್ದಲ್ಲದೆ ಅವರುಗಳ ಆಸ್ತಿಯೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳುವ ಹಾಗೆ ತೀರ್ಮಾನ ಹೇಳಲ್ಪಟ್ಟಿತು.

ಸರ್ಕಾರದ ಜನರಲ್ ಸೆಕ್ರೆಟರಿಯವರು.—

ಉತ್ತರ—(a) 101.

(b) 82.

(c) 30. ಕಂಪನಿಗಳನ್ನು ಜಾಯಿಂಟ್‌ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರರವರು ತನಿಖೆಮಾಡಿದ್ದಾರೆ; ಮತ್ತು ಹಾಲಿ ಇರುವ ನ್ಯೂನತೆಗಳನ್ನು ನಿವಾರಣೆಮಾಡಲು ಆವಶ್ಯಕವಾದ ಕಡೆಗಳಲ್ಲೆಲ್ಲಾ ತಿಳುವಳಿಕೆಯನ್ನು ಕೊಟ್ಟಿದ್ದಾರೆ.

ಮಿ|| ಟಿ. ಜಿ. ನಾಗಪ್ಪನವರು, ತುರುವೇಕೆರೆ ಸಬ್ ತಾಲ್ಲೂಕು.—

ಪ್ರ.—(a) ಬಲಾತ್ಕಾರವಾದ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರಣೆಗೊಳಪಟ್ಟ ಪ್ರದೇಶಕ್ಕೆ ಸೇರಿದುವೆಂದು ಪ್ರಕಟವಾಗಿದ್ದಾಗ್ಯೂ ಸ್ಕೂಲುಗಳನ್ನು ವಸ್ತುತಃ ಸ್ಥಾಪಿಸದಿರುವ ಸ್ಥಳಗಳಲ್ಲಿ ಬಲಾತ್ಕಾರ ವಿದ್ಯಾಭ್ಯಾಸದ ಸ್ಕೂಲಿನ ಉಪಾಧ್ಯಾಯರುಗಳಿಗೆ ಸಂಬಳವನ್ನು ಕೊಡುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೆ ?

(b) ಇಂತಹ ಅನಾವಶ್ಯಕವಾದ ಖರ್ಚು ಎಷ್ಟು ಸಂದರ್ಭಗಳಲ್ಲಿ ಆಗಿದೆ ? ಮತ್ತು ಹಾಗೆ ಸಂದಾಯಮಾಡಿದ ಒಟ್ಟು ಮೊಬಲಗು ಎಷ್ಟು ?

ಸರ್ಕಾರದ ಚೀಫ್ ಸೆಕ್ರೆಟರಿಯವರು.—

ಉ.—(a) ಮತ್ತು (b) ಬಲಾತ್ಕಾರ ವಿದ್ಯಾಭ್ಯಾಸದ ರೆಗ್ಯುಲೇಷನ್ ಪ್ರಕಾರ, ಅದರ ವ್ಯಾಪನೆಗೊಳಪಡಿಸಲ್ಪಟ್ಟ ಪ್ರದೇಶಗಳಲ್ಲಿ ಸ್ಕೂಲು ಉಪಾಧ್ಯಾಯರುಗಳಿಗೆ ಯಾವ ಸಂಬಳವನ್ನೂ ಕೊಟ್ಟಿಲ್ಲ; ಆದರೆ ಮೊದಲೇ ಸ್ಥಾಪಿಸಲ್ಪಟ್ಟಿರುವ ಸ್ಕೂಲಿನಲ್ಲಿ ಕೆಲಸ ಮಾಡಿದ ಅಥವಾ ಹೊಸ ಸ್ಕೂಲನ್ನು ಏರ್ಪಡಿಸುವುದಕ್ಕೆ ಸಂಬಂಧಪಟ್ಟ ಆರಂಭದ ಕೆಲಸವನ್ನು ನಡೆಸಿದ ಉಪಾಧ್ಯಾಯರುಗಳಿಗೆ ಮಾತ್ರ ಸಂಬಳವನ್ನು ಕೊಡಲಾಯಿತು. ಸರ್ಕಾರಿ ಹಣವು ದುರ್ವಿನಿಯೋಗಪಡಿಸಲ್ಪಟ್ಟ ಸಂದರ್ಭಗಳ್ಯಾವುವೂ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್‌ಜನರಲ್‌ರವರ ಗಮನಕ್ಕೆ ಬಂದಿರುವುದಿಲ್ಲ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಗರ್ಲ್ಸ್‌ಸ್ಕೂಲಿನ ವಾರ್ಷಿಕೋತ್ಸವ.

ತಾ|| ೧೧-೧೦-೨೧ನೇ ಇಸವಿಯಲ್ಲು ಕೋಡ ತಾಲ್ಲೂಕು ಹಾಂಸಭಾವಿಯಲ್ಲಿ ವಿಜಯದಶಮಿ ದಿವಸ ಇಲ್ಲಿಯ ಗರ್ಲ್ಸ್‌ಸ್ಕೂಲಿನ ವಾರ್ಷಿಕಾಧಿವೇಶನವು ನಮ್ಮ ತಾಲ್ಲೂಕಿನ ಸಮಾಜಸೇವಾಧುರಂಧರರಾದ ರಾಮಪ್ಪ ಬಸಪ್ಪ ಚಿಗಟೇರಿಯವರ ಅಧ್ಯಕ್ಷತೆಯ ಕೆಳಗೆ ಜರುಗಿತು. ಸಭೆಗೆ ಯಾವತ್ತು ಪುರಪ್ರಮುಖರೂ ಕಾರವಾರ ಜಿಲ್ಲಾ ಸಿದ್ದಾಪುರದ ನ್ಯಾಸಣಿಗಿ ಹೋಳಿ ಬಸಪ್ಪನವರೂ ಭೋಗಾವಿ ರುದ್ರಪ್ಪನವರೇ ಮುಂತಾದ ದೊಡ್ಡ ಮನುಷ್ಯರೂ ಆಗಮಿಸಿದ್ದರು. ಎಲ್ಲರೂ ಸಮಾಜಸೇವಕರೇ ಇದ್ದುದರಿಂದ ಸಭೆಯು ಒಳ್ಳೇ ಅಲಂಕಾರದಿಂದ ಶೋಭಿಸುತ್ತಿತ್ತು. ಸಿದ್ದಾಪುರದ ಹೋಳಿಬಸಪ್ಪನವರು ಅಸಹಕಾರ ಮತ್ತು ಸಹಕಾರ ಇವುಗಳ ಮರ್ಮವನ್ನೂ ಪರದೇಶದ ಅರಿವೆಗಳನ್ನು ಸುಡುವುದರಿಂದ ಆಗುವ ಅನರ್ಥಗಳನ್ನೂ ಕುರಿತು ಸಭಿಕರಿಗೆ ಒಳ್ಳೇ ಪರಿಣಾಮವಾಗುವಂತೆ ಆವೇಶಯುಕ್ತ ಭಾಷಣವನ್ನು ಮಾಡಿದರು. ಮತ್ತು ಅಲ್ಲಿಯ ಮೃತ್ಯುಂಜಯ ಎ. ವಿ. ಸ್ಕೂಲಿನ ಮಾಸ್ತರರಾದ ಹಿರೂರ ಪಾಟೀಲರು ಸ್ವಾವಲಂಬನದ ಬಗ್ಗೆಯೂ ದುಷ್ಟರ ಬಗ್ಗೆಯೂ ಒಳ್ಳೇ ಉತ್ಸುಕತೆಯಿಂದ ಭಾಷಣಮಾಡಿದರು. ಅಲ್ಲಿಯ ಕನ್ನಡ ಶಾಲೆಯ ಹೆಡ್ಮಾಸ್ತರರಾದ ಮಿ|| [illegible] ದೀಕ್ಷಿತ ಇವರು ಗರ್ಲ್ಸ್‌ಸ್ಕೂಲಿನ ಮಾಸ್ತರರಾದ ಬಸಪ್ಪ [illegible] ನವರು ಸಂಬಳವಿಲ್ಲದೆ ಕೆಲವುದಿವಸ ಸ್ಕೂಲನ್ನು ಉತ್ತಮಸ್ಥಿ[illegible] ನಡೆಸಿದ ಬಗ್ಗೆ ಅವರು ಸಮಾಜದ ಮೇಲೆ ಮಾಡಿರುವ ಉಪಕಾರವನ್ನು ವರ್ಣಿಸಿದ್ದಲ್ಲದೆ, ಅವರಿಗೆ ಜಾಗ್ರತ ವರ್ಗಣಿಯನ್ನು ಹೆಚ್ಚಾಗಿ ಕೊಡಿಸಲಿಕ್ಕೆ ಸಭಿಕರಿಗೆ ಚನ್ನಾಗಿ ತಿಳಿಯುವಂತೆ ಸರಸವಾಗಿ ಭಾಷಣಮಾಡಿದರು. ಇನ್ನೂ ಅನೇಕ ವಿದ್ವಾನರು ನಮ್ಮ ಉನ್ನತಸ್ಥಿತಿಯ ಬಗ್ಗೆ ಭಾಷಣ ಮಾಡಿದನಂತರ, ಅಧ್ಯಕ್ಷರು ವೀರಶೈವವಿದ್ಯಾವರ್ಧಕ ಸಂಘವನ್ನೂ ಶಿವಯೋಗೀಶ್ವರ ಲೈಬ್ರರಿಯನ್ನೂ ಗರ್ಲ್ಸ್‌ಸ್ಕೂಲನ್ನು ಊರ್ಜಿತಸ್ಥಿತಿಗೆ ತರುವ ಬಗ್ಗೆ ಸಮಾಜಸೇವಕರು ಮಾಡಬೇಕಾದ ಕೆಲಸವನ್ನೂ ವಿಶದವಾಗಿ ತಿಳಿಸಿ ಸಮಾಜಸೇವೆಗೆ ಇನ್ನೂ ಹುರುಪು ಬೇಕಾದರೆ ವರ್ತಮಾನ ಪತ್ರಗಳನ್ನೂ ಧರ್ಮಗ್ರಂಥಗಳನ್ನೂ ಸರಿಯಾಗಿ ಓದಲಿಕ್ಕೆ ಮನೆಯ ಲೆಕ್ಕಪತ್ರಗಳನ್ನು ತಿಳಿದುಕೊಳ್ಳುವ ಮಟ್ಟಿಗೆ ಈಗ ಅಜ್ಞಾನಿಗಳಾಗಿರುವ ೨೦ ವರ್ಷದ ಮೇಲಿನ ಜನರ ಬಗ್ಗೆ ಅಲ್ಲಿಯೇ ರಾತ್ರಿ ಸ್ಕೂಲನ್ನು ಸ್ಥಾಪಿಸುವ ಬಗ್ಗೆ ಆಲೋಚನೆಮಾಡಲು ಮಿ|| ಚನ್ನಬಸಪ್ಪಾ ಕೊಳ್ಳಿ ಮಾಸ್ತರ ಇವರು ಈ ದಿವಸವೇ ರಾತ್ರಿಶಾಲೆಯನ್ನು ಸ್ಥಾಪಿಸಬೇಕೆಂದು ಸೂಚಿಸಲು ಆ ಕೆಲಸವು ಸರ್ವಾನುಮತದಿಂದ ಪಾಸಾಗಿ ಅದೇ ದಿವಸ ರಾತ್ರಿಸ್ಕೂಲು ಸ್ಥಾಪಿಸಲ್ಪಟ್ಟಿತು. ೩೦-೩೫ ಜನ ವಿದ್ಯಾರ್ಥಿಗಳು ಆಗಿಂದಾಗಲೇ ತಮ್ಮ ಹೆಸರನ್ನು ದಾಖಲ್ಮಾಡಿಸಿದರು. ಗರ್ಲ್ಸ್‌ಸ್ಕೂಲಿನ ಮಾಸ್ತರರೂ ಸ್ವಾರ್ಥತ್ಯಾಗಿಗಳೂ ಆದ ವೀರಸಂಗಪ್ಪನವರೇ ಮಾಸ್ತರರಾಗಲಿಕ್ಕೆ ಒಪ್ಪಿಕೊಂಡಿದ್ದನ್ನು ಸಭಿಕರು ಕೊಂಡಾಡಿ ಅವರ ಮೇಲಿನ ಪ್ರೀತಿಯನ್ನು ಕರತಾಡನದಿಂದ ತೋರಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಲಕ್ಷ್ಮೇಶ್ವರ.

ಇಲ್ಲಿ ತಾ|| ೨೩-೧೦-೧೯೨೧ನೆ ಇಸವಿಯ ದಿವಸ ಯಾವತ್ತು ವೀರಶೈವರದೊಂದು ಸಭೆಯು ಶ್ರೀಯುತ ಬಸೆಟ್ಟೆಪ್ಪಣ್ಣಾ ತಟ್ಟಿ ಇವರ ಅಧ್ಯಕ್ಷತೆಯಿಂದ ಕೂಡಿತ್ತು. ಸಭೆಗೆ ರಾ|| ಸಾ|| ಮಾಮಲೇದಾರ ಮೊದಲಾದ ಸರಕಾರಿ ಅಮಲ್ದಾರರೂ ಮತ್ತು ಯಾವತ್ತು ಪ್ರಮುಖಗೃಹಸ್ಥರೂ ಬಂದಿದ್ದರು. ಮೊದಲು ಸಿದ್ಧರಾಮೇಶ್ವರ ತಳ್ಳಿಮಠ ಇವರು, ಶ್ರೀಮದ್ಬಸವಜಯಂತ್ಯುತ್ಸವ ಮತ್ತು ವೀರಶೈವ ತರುಣಸಂಘದ ೩ನೆ ವಾರ್ಷಿಕಸಮ್ಮೇಲನದ ಕಾಲಕ್ಕೆ ಶ್ರೀಮದ್ಬಸವ ಜಯಂತ್ಯುತ್ಸವವನ್ನು ಸಾರ್ವಜನಿಕ ಹಬ್ಬದಂತೆ ಆಚರಿಸಲಿಕ್ಕೆ ಸುಟಿ (ರಜಾ) ಮಂಜೂರ ಆಗಬೇಕೆಂದು ನಮ್ಮನ್ನಾಳುವ ಶ್ರೀಮಂತ ಸರಕಾರ ಬಾಳಸಾಹೇಬ ಸಂಸ್ಥಾನ ಮಿರಜ ಇವರಕಡೆಗೆ ಕಳಿಸಲ್ಪಟ್ಟ ಠರಾವಿನಪ್ರಕಾರ ರಜಾ ಮಂಜೂರ ಆಗಬಂದದ್ದರಿಂದ ಶ್ರೀಮಂತರಿಗೆ ಆಭಾರಮನ್ನಿಸುವ ಕುರಿತು ನಾವೆಲ್ಲರೂ ಈ ಹೊತ್ತು ನೆರೆದಿದ್ದೇವೆಂದು ಸಭಿಕರಿಗೆ ತಿಳಿಸಿದರು. ಸಭೆಯಲ್ಲಿ ಮಿ|| ಚನ್ನಪ್ಪಣ್ಣಾ ಗಾಂಜೀ, ಜಿ. ಎಮ್. ಸಾಲೀಮಠ ಮತ್ತು ಎಸ್. ಐ. ಫಿರಜಾದೆ ಬಿ.ಎ. ಇವರ ಭಾಷಣಗಳಾದವು, ಆನಂತರ ಅಧ್ಯಕ್ಷರು ಕೆಳಗೆಬರೆದ ಠರಾವನ್ನು ಸಭಿಕರಿಗೆ ಓದಿಹೇಳಿದರು—ಲಕ್ಷ್ಮೇಶ್ವರದ ವೀರಶೈವಸಮಾಜದವರ ವತಿಯಿಂದ ನೆರೆದ ಈ ಸಭೆಯು ಅಭಿಪ್ರಾಯಪಡುವುದೇನೆಂದರೆ “ಶ್ರೀಮಂತ ಬಾಳಸಾಹೇಬ ಸರಕಾರ ಮಿರಜಸಂಸ್ಥಾನ ಇವರು ನಮ್ಮ ಮತೋದ್ಧಾರಕನಾದ ಶ್ರೀಮದ್ಬಸವೇಶ್ವರನ ಜನ್ಮದಿವಸವನ್ನು ಸಾರ್ವಜನಿಕ ಹಬ್ಬವನ್ನಾಗಿ ಆಚರಿಸಬೇಕೆಂದು ರಜಾಮಂಜೂರು ಮಾಡಿದ್ದಕ್ಕಾಗಿ ನಾವೆಲ್ಲರೂ ಶ್ರೀಮಂತರಿಗೆ ಆಭಾರಮನ್ನಿಸುವದಲ್ಲದೆ, ಬಹಳ ಋಣಿಗಳಾಗಿರುತ್ತೇವೆ.” ಈ ಠರಾವು ಮ|| ರಾ|| ಬಸವಣ್ಣಪ್ಪಣ್ಣಾ ಕೊಟಗಿ ಮತ್ತು ಗುರುಸಿದ್ದಯ್ಯಾ ಹಿರೇಮಠ ಇವರಿಂದ ಅನುಮೋದಿಸಲ್ಪಟ್ಟು ನಂತರ ಸರ್ವಾನುಮತದಿಂದ ಪಾಸಾಯಿತು. ಇಷ್ಟಾದನಂತರ ಶ್ರೀಮಂತರ ಹೆಸರಿನಿಂದ ತ್ರಿವಾರ ಜಯಘೋಷವಾಗಿ ಸಭಾ ವಿಸರ್ಜನೆಯಾಯಿತು.

ಸೆಕ್ರೆಟರಿ, ವೀರಶೈವ ತರುಣಸಂಘ.

ಮಂಜರಾಬಾದು ತಾಲ್ಲೂಕು ಹಾಸಬಾಳು.

ತಾ|| ೩೦-೯-೨೧ರಲ್ಲು ಇಲ್ಲಿ ನಡೆದ ವೀರಶೈವ ವಿದ್ಯಾವರ್ಧಕ ಸಂಘದ ಮೀಟಿಂಗ್ ಸಂದರ್ಭದಲ್ಲಿ ಈ ಹೋಬಳಿ ರೈತರುಗಳು ವರ್ಗಪಟ್ಟ ಅಮಲ್ದಾರ್ ಮಿ. ಕೆ. ಸಿದ್ಧರಾಮಪ್ಪ ಬಿ.ಎ., ಯವರನ್ನು ಬಹಳ ಆದರಪೂರ್ವಕವಾಗಿ ಬರಮಾಡಿಕೊಂಡು ಸನ್ಮಾನಮಾಡಿದರು. ಆಗ್ಗೆ ಹ. ರೆವಿನ್ಯೂ ಸಬ್‌ಡಿವಿಜನ್ ಆಫೀಸರವರು, ಡಾಕ್ಟರು ಮೊದಲಾದ ದೊಡ್ಡ ಮನುಷ್ಯರುಗಳು ದಯಮಾಡಿಸಿದ್ದರು. ಇವರು ಎಷ್ಟು ಸ್ವಲ್ಪಕಾಲದಲ್ಲಿ ರೈತರುಗಳ ಮತ್ತು ಶಾಬೇದಾರರ ಕಷ್ಟಸುಖಗಳನ್ನು ಚೆನ್ನಾಗಿ ವಿಚಾರಮಾಡಿ ಪ್ರಜಾಕಾರ್ಯದಲ್ಲಿಯೂ ಸರ್ಕಾರಿ ಕೆಲಸದಲ್ಲಿಯೂ ನಿಸ್ಪೃಹರೆನಿಸಿಕೊಂಡು ಬಹಳ ಒಳ್ಳೆಯವರಾಗಿದ್ದದ್ದರಿಂದ ಸ್ವಲ್ಪಕಾಲದಲ್ಲಿಯೇ ವರ್ಗಪಟ್ಟ ಸಬಬು ಎಲ್ಲರೂ ಬಹಳ ವಿಷಾದಪಟ್ಟು ಅವರ ಗುಣಕಥನಮಾಡಿ ಹಾರ ತುರಾಯಿಗಳನ್ನು ಸಮರ್ಪಿಸಿದರು.

ಸ್ಥಳಿಕ.

ಚಿತ್ರದುರ್ಗದ ಶ್ರೀ|| ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ತಾ|| ೬-೯-೨೧ನೆ ಮಂಗಳವಾರ ಮಧ್ಯಾಹ್ನ ೨ ಘಂಟೆಗೆ ಮುತ್ತುಗದೂರು ಮುಕ್ಕಾಮಿನಿಂದ ಹೊಳಲಕೆರೆ ತಾಲ್ಲೂಕು ಭರಮಣ್ಣನಾಯಕನ ದುರ್ಗಕ್ಕೆ ದಯಮಾಡಿಸಿತು. ಬೆಳ್ಳಿಪಲ್ಲಕ್ಕಿ ವಗೈರೆ ಸಕಲ ಅಜಬಾಬಿನಿಂದ ಶ್ರೀ|| ಗಳವರ ಉತ್ಸವನಡೆದು ಸುಮಾರು ೪ ಘಂಟೆಗೆ ಮೆರೆವಣಿಗೆ ಪೂರೈಸಿದ ನಂತರ ಶ್ರೀ|| ಗಳವರಿಗೋಸ್ಕರ ಚಪ್ಪರದಲ್ಲಿ ನಿರ್ಮಿಸಲ್ಪಟ್ಟಿದ್ದ ಜಗತಿಯಲ್ಲಿ ಬೆಳ್ಳಿಸಿಂಹಾಸನದ ಮೇಲೆ ಶ್ರೀ|| ಗಳವರನ್ನು ಮುಹೂರ್ತಮಾಡಿಸಲಾಯಿತು. ಆಮೇಲೆ ಮಂಗಳವಾಗಿ ಸರ್ವರಿಗೂ ಶ್ರೀ|| ಗಳವರಿಂದ ಆಶೀರ್ವಾದವಾಯಿತು. ಪುನಃ ೫ ಘಂಟೆಯಿಂದ ಸಾಯಂಕಾಲ ೮ ಘಂಟೆವರೆಗೂ ಚಿತ್ರದುರ್ಗದ ಕರ್ನಾಟಕಾಂಧ್ರ ಕವಿ ಮತ್ತೂ ಕೀರ್ತನ ಕಾರ ಬಿ. ಭೀಮರಾಜು ಇವರಿಂದ ಶಿವಕೀರ್ತನ ನಡೆಯಿತು, ಆಬಳಿಕ ಸಭಾಭಂಗವಾಯಿತು. ಈ ಮಹೋತ್ಸವಕ್ಕೆ ಅರಸೀಕೆರೆ, ಹಾರನಹಳ್ಳಿ, ಭೀಮಸಮುದ್ರ, ದಾವಣಗೆರೆ, ಮಾಯಕೊಂಡ, ಹೊಳಲಕೆರೆ ಮೊದಲಾದ ಅನೇಕ ಕಡೆಗಳಿಂದ ಸುಮಾರು ೩-೪ ಸಾವಿರ ಜನರು ಸೇರಿದ್ದರು. ಆ ದಿವಸ ೩-೪ ಸಾವಿರ ಜನಗಳಿಗೂ ಸಂತರ್ಪಣೆ ನಡೆಯಿತು. ಈ ಉತ್ಸವಕ್ಕೋಸ್ಕರ ಬೀದಿಗಳಲ್ಲೆಲ್ಲಾ ಅನೇಕ ಕಡೆ ಚಪ್ಪರಗಳು, ಆರ್ಚುಗಳು, ಶೃಂಗಾರದೊಡನೆ ಹಾಕಲ್ಪಟ್ಟಿತಲ್ಲದೆ ತಳಿರು ತೋರಣಗಳು ಕದಳೀಸ್ತಂಭಗಳಿಂದ ಬೀದಿಗಳೆಲ್ಲಾ ಬಹಳ ರಮಣೀಯವಾಗಿದ್ದವು. ಶ್ರೀ|| ಗಳವರು ಇಲ್ಲಿಗೆ ದಯಮಾಡಿಸಲು ಕೊಡಲ್ಪಟ್ಟ ನಿರೂಪವು ೧ ವಾರಕ್ಕೆ ಮುಂಚೆ ತಲಪಿದರೂ ಅಷ್ಟು ಸ್ವಲ್ಪ ಕಾಲದಲ್ಲೇ ಮೇಲ್ಕಂಡ ಸರಿಯಾದ ಏರ್ಪಾಡುಗಳೆಲ್ಲಾ ಇಲ್ಲಿನ ವೀರಶೈವ ಪ್ರಮುಖರಾದ ಮ|| ನಾಡಿಗಮಲ್ಲಪ್ಪನವರೇ ಮೊದಲಾದವರ ಮೆಹನತ್ತಿನಿಂದ ನಡೆಸಿದ್ದಾಗಿದೆ. ತಾ|| ೭-೯-೨೧ ರಲ್ಲು ಶ್ರೀ|| ಗಳವರು ನಾಡಿಗಮಲ್ಲಪ್ಪನವರ ಪ್ರಾರ್ಥನಮೇರೆ ಬಿನ್ನಹಕ್ಕೆಕೊಂಡು ಅವರ ಗೃಹಕ್ಕೆ ದಯಮಾಡಿಸಿ ಪೂಜಾ ಆದನಂತರ ಪುನಃ ಆದಿವಸ ಶಿವಕೀರ್ತನೆಯು ನಡೆಯಿತು. ತಾ|| ೮-೯ ರಲ್ಲಿ ಪಟ್ಟಣಶೆಟ್ಟಿ ಸಿದ್ಧಲಿಂಗಪ್ಪನವರ ಮನೆಯ ಬಿನ್ನಹವೂ, ತಾ|| ೯-೧೦ ರಲ್ಲಿ ಮಠದ ಬಸಪ್ಪಯ್ಯನವರಮನೆಯ ಬಿನ್ನಹವೂ ನಡೆಯಿತು. ತಾ|| ೧೦-೯-೨೧ರಲ್ಲಿ ಶ್ರೀ|| ಗಳವರು ಇದೇ ಹೋಬಳಿ ತಡವೂರು ಮುಕ್ಕಾಮಿಗೆ ದಯಮಾಡಿಸಿ ಊರಲ್ಲಿ ಉತ್ಸವ ಆದನಂತರ ಇಲ್ಲಿನ ಶ್ರೀ|| ಗಳವರ ಅಧಿಕಾರಕ್ಕೆ ಒಳಪಟ್ಟ ಶ್ರೀ|| ವೀರಭದ್ರ ದೇವಸ್ಥಾನಕ್ಕೆ ದಯಮಾಡಿಸಿ ಪೂಜೆನಡಿಸಿ ಆಮೇಲೆ ದೇವಸ್ಥಾನದ ಜಮಾಖರ್ಚು ಮತ್ತೂ ಆಭರಣದ ಬುಕ್ಕುಗಳನ್ನು ಧರ್ಮದರ್ಶಿಗಳು ಯಾ ಸೆಕ್ರೆಟರಿ ಭರಮಣ್ಣನಾಯಕನದುರ್ಗದ ನಾಡಿಗಮಲ್ಲಪ್ಪನವರು ಮತ್ತೂ ಮೆಂಬರು ಮುರುಳಪ್ಪಯ್ಯ ವಗೈರೆಯವರಿಂದ ಹಾಜರುಪಡಿಸಿಕೊಂಡು ಚೆಕ್ಕುಮಾಡಿಸಿ, ಆದಿವಸ ದೇವಸ್ಥಾನದಲ್ಲಿ ಮುಕ್ಕಾಂಮಾಡಿ ತಾ|| ೧೧-೯-೨೧ರಲ್ಲು ಪುನಃ ಭರಮಣ್ಣನಾಯಕನದುರ್ಗಕ್ಕೆ ದಯಮಾಡಿಸಿ ತಾ|| ೧೪ ರವರೆಗೂ ಈ ಮುಕ್ಕಾಮಿನಲ್ಲೇ ಇದ್ದು ಸುತ್ತುಮುತ್ತಣ ಮತ್ತೂ ಈ ಗ್ರಾಮದ ಭಕ್ತರುಗಳಿಂದ ಕಪ್ಪಕಾಣಿಕೆಗಳನ್ನರ್ಪಿಸಿಕೊಂಡು, ತಾ|| ೧೪-೯-೨೧ ರಲ್ಲಿ ಪುನಃ ನಾಡಿಗಮಲ್ಲಪ್ಪನವರ ಪ್ರಾರ್ಥನೆಮೇರೆ ಅವರಗೃಹಕ್ಕೆ ಬಿನ್ನಹಕ್ಕೆ ದಯಮಾಡಿಸಿ ಪೂಜಾಪೂರೈಸಿ ತಾ|| ೧೫-೯-೨೧ ನೆ ಗುರುವಾರದಿವಸ ಮ|| ನಾಡಿಗಮಲ್ಲಪ್ಪನವರು ಮಠದ ಬಸಪ್ಪಯ್ಯನವರು ಪ|| ಸಿದ್ಧಲಿಂಗಪ್ಪನವರು ವಗೈರೆ ಭಕ್ತರುಗಳು ಶ್ರೀಗಳವರು ತಮ್ಮ ಗ್ರಾಮದಲ್ಲಿ ಮುಕ್ಕಾಂಮಾಡಿದ ೧೦ ದಿವಸಗಳಲ್ಲೂ ತಾವುಗಳು ತಮ್ಮ ಸ್ವಜವಾದ ಭಕ್ತಿಯಿಂದ ಸಮರ್ಪಕವಾದ ಸೇವಾಮಾಡಿದ್ದಕ್ಕೆ ಶ್ರೀ|| ಗಳವರು ತುಂಬಾ ಹರ್ಷಿತರಾಗಿ ಇವರ ಶ್ರೇಯೋವಿಚಾರದಲ್ಲಿ ಪೂರ್ಣಕೃಪಾಕಟಾಕ್ಷದ ಆಶೀರ್ವಾದವನ್ನಿತ್ತು ಮಧ್ಯಾ ೧೨ ಘಂಟೆಗೆ ಚಿಕ್ಕಜಾಜೂರು ಮುಕ್ಕಾಮಿಗೆ ದಯಮಾಡಿಸಿದರು.

ಪ್ರತ್ಯಕ್ಷದರ್ಶಿ.

ಬಳ್ಳಾರಿ ಜಿಲ್ಲಾ ಆದವಾನಿ.

ಮ|| ವಡ್ಡಿಗಿರಿ ಸಿದ್ದಪ್ಪನವರ ಔದಾರ್ಯವು.—ಇವರು ತಮ್ಮ ನೇಕಲ್ಲು ತೋಟದಲ್ಲಿ ಇದೇ ತಿಂಗಳು ೨೪-೨೫-೨೬ ಈ ಮೂರು ದಿ ಗಳಲ್ಲಿಯೂ ಕೀರ್ತಿಶೇಷರಾದ ತಮ್ಮ ತಂದೆ ದಾಸಪ್ಪನವರ ಜ್ಞಾಪಕಾ ವಾಗಿ ಜಾತಿಮತಭೇದವನ್ನಿಡದೆ ಸುಮಾರು ೧೫೦೦ ಜನರಿಗೆ ಭಕ್ಷ್ಯ ಯಸಂಗಳ ಸಹಿತ ಭೋಜನವಂ ಮಾಡಿಸಿದರು. ಚಂದನತಾಂಬೂಲ ಸ ನಗಳಿಂದ ತೃಪ್ತರಾದ ತುಂಬಾದೀನ ಸ್ತ್ರೀಪುರುಷ ಬಾಲಕರು ಅತಿ ಹ ದಿಂದ ಸಿದ್ದಪ್ಪನವರ ಶ್ರೇಯಸ್ಸನ್ನು ಹಾರೈಸುತ್ತಾ ಇದ್ದದ್ದನ್ನು ಅ ದವನದಲ್ಲಿ ನೋಡಲಿಕ್ಕೆ ಬಹು ರಮಣೀಯವಾಗಿದ್ದಿತು. ಈ ಉದಾರ ಸಂಪನ್ನರು ಬಡಬಗ್ಗರಿಗೆ ಇಂಥ ವನಭೋಜನವಂ ಮಾಡಿಸಿದ್ದು ಇತರ ಮೇಲ್ಪಂಕ್ತಿ ಹಾಕಿಕೊಟ್ಟಂತಾಯಿತು. ಹಾಲ್ವಿನಿವಾಸಿಗಳಾದ ಶ್ರೀ ಮುನಿ ಸ್ವಾಮಿಗಳಿಗೆ ೨೫೦ ರೂ. ಕ್ರಯವುಳ್ಳ ಅಕ್ಕಿ ಮುಂತಾದ ಕು ಸಾಮಗ್ರಿಯಂ ಅರ್ಪಿಸಿದರು. ಮೊತ್ತದಲ್ಲಿ ೧೨೦೦ ರೂ. ಖ ಮಾಡಿದರೆಂದು ಕೇಳಲು ಬಹಳ ಸಂತೋಷವಾಗುತ್ತದೆ. ವಡ್ಡಿಗಿರಿ ಸಿದ್ದ ಎಂಬುವರು ೨೮ವರ್ಷ ವಯಸ್ಸಿನವರು, ಲಿಂಗಾಯತಮತಸ್ಥರು. ಮ್ಯು ಸಿಪಲ್ ಕೌನ್ಸಿಲರು, ಪ್ರೆಸಿಡೆಂಟು ಅಲತು ಮೆಮೋರಿಯಲ್ ರೀಡಿಂಗ್‌ರೂ ಮತ್ತು ಲೈಬ್ರರಿ, ಪ್ರೆಸಿಡೆಂಟು ಆದವಾನಿ ಕೋಆಪರೇಟಿವ್ ಬ್ಯಾಂಕು.

ಓರ್ವ ಪ್ರೇಕ್ಷಕ.

ರಾಯಚೂರು ತಾಲ್ಲೂಕು ಪೈಕಿ ಮಟಕಲ್ಯಾಣವೆನಿಸಿರುವ ಚಿಕ್ಕಸಾಗ ಚೌಕೀ ಮಠಾಧ್ಯಕ್ಷ ಶ್ರೀಗುರು ಸಿದ್ದರಾಮ ಶಿವಯೋಗಿಗಳ ಯಾತ್ರೋತ್ಸವವು.

ಪ್ರತಿ ವರ್ಷವೂ ನಡೆಯುವಂತೆ ಈ ದುರ್ಮತಿನಾಮಸಂವತ್ಸ ಉತ್ಸವವೂ ನಡೆಯಿತು. ಮಹಾಪೂಜಾದಿಗಳಿಂದ ಸಹಸ್ರಾರುಮಂದಿ ಗಣಾ ಧೀಶ್ವರರ ಭೋಜನವಾದನಂತರ ಸದ್ಭಕ್ತರಾದ ರಾಯಚೂರು ಗಂಜೀಹ ಭೀಮಣ್ಣ ತಮ್ಮಣ್ಣನವರು ದಕ್ಷಿಣತಾಂಬೂಲಾದಿಗಳಿಂದ ಮಾಹೇಶ್ವರ ಸಮುದಾಯವನ್ನು ಆನಂದಗೊಳಿಸಿದ ತರುವಾಯ ರಥದ ಮುಂಭಾಗನ ಅನೇಕ ಶ್ರೀಮಂತರುಗಳಿಂದಲೂ, ವೈದಿಕರಿಂದಲೂ, ವಿದ್ಯಾರ್ಥಿಗಳಿಂದ ಗುಂಪಾಗಿ ವೇದಘೋಷದೊಡನೆ ಸಾಗಿರುವ ರಥವು ಮೃದಂಗಾದಿ ವಾದ್ಯ ಧ್ವನಿಗಳಿಂದ ಉಭಯಪಾರ್ಶ್ವಗಳಲ್ಲಿಯ ಜನರಿಗೆ ನೇತ್ರಾನಂದಕರವಾಗಿತ್ತು. ಮಹತ್ತರವಾದ ಬಿರುದಾವಳಿಗಳಿಂದ ಯುಕ್ತರಾಗಿ ಶ್ರೀ ಪಶ್ಚಿಮ ನೀರುಡುಗುಂಭದ ಬೃಹನ್ಮಠಾಧ್ಯಕ್ಷ ಶ್ರೀಗುರು ಸಿದ್ಧಲಿಂಗ ಯತಿ ರ್ಯರು ಸೇವಕಜನರಿಂದ ರಥವನ್ನು ಸ್ಥಳಕ್ಕೆ ಮುಟ್ಟಿಸಿದರು. ಅದೇ ಸಾ ಯಂಕಾಲ ೬ ಗಂಟೆಯಲ್ಲಿ ಸಮಸ್ತಬಾಂಧವರೂ ಪೂರ್ವೋಕ್ತ ಶ್ರೀಗಳವ ಅಧ್ಯಕ್ಷತೆಯಿಂದ ರೌದ್ರಿನಾಮ ಸಂ|| ಆ|| ಬ|| ೫ ಸೋಮವಾರದ ದಿವ ಸ್ಥಾಪಿಸಲ್ಪಟ್ಟ ಧರ್ಮಸಂಜೀವಿನೀ ಸಭೆಯನ್ನು ಕುರಿತು ಶ್ರೀಕ್ಷೇತ್ರ ಸಿದ್ದ ಗಂಗಾಮಠದ ಬಸವರಾಜಶರ್ಮ ಇವರು ಈ ಸಭೆಯನ್ನು ಅಭಿವೃದ್ಧಿಗೊಳಿಸಬೇಕೆಂದು ಹೇಳಿದರು. ಅಷ್ಟರಲ್ಲೇ ರಾಯಚೂರು ಸಂಗೀತ ಪಾಠ ಶಾಲಾಧ್ಯಾಪಕ ನೀಲಗಲ್ಲು ಅಮರಯ್ಯನವರು ಶಿಷ್ಯ ಪಂಚಾಕ್ಷರಯ್ಯನೊಡ ನೆ ಆನಂಗಲ್ಲಿ ಶಾಂತಮೂರ್ತಿ ಶಾಸ್ತ್ರಿಗಳೂ ಸಹ ಸಭಿಕರಿಗೆ ಆನಂದವಾಗುವಂತೆ ಮಂಗಲಸ್ತುತಿಗಳನ್ನು ಹಾಡಿದರು. ವಿದ್ಯಾರ್ಥಿ ಹೊಸಪೇಟೆ [illegible] ರಯ್ಯ ವಿದ್ಯಾವಿಷಯವನ್ನೂ, ಶಿವಪುರ ಸೂಗೂರಯ್ಯನವರು ಜ್ಞಾನಕ್ರಿಯಾ ವಿಷಯವನ್ನೂ, ಅಳ್ಳಿಗೆ ಗುರುಶಾಂತದೇವರು ಭಕ್ತಿವಿಷಯವನ್ನೂ ಆರಿಷಣಿಗೆ ಮಠದ ಚನ್ನವೀರಯ್ಯನವರು ಮೋಕ್ಷ ವಿಷಯವನ್ನೂ [illegible] ಬಸವರಾಜಶರ್ಮ ಇವರು ಬ್ರಹ್ಮಚರ್ಯ ವಿಷಯವನ್ನೂ ಕುರಿತು ಭಾಷಣಗಳನ್ನು ಸುಮಾಣಿಯಿಂದ ಮಾಡಿದ ಮೇಲೆ ಗದ್ವಾಲಿ ಸೂಗೂರಪ್ಪನವರು ಅದುವರೆಗೆ ನಡೆದ ವಿಷಯಗಳನ್ನೇ ಕ್ರೋಡೀಕರಿಸಿ ಸುಬೋಧಾಮೃತಗಳನ್ನು ಸಭಿಕರ ಮೇಲೆ ಸುರಿದನಂತರ ರಾಯಚೂರು ವೀರಶೈವ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಪ|| ಬಸವಲಿಂಗಶಾಸ್ತ್ರಿಗಳು ಡಿ|| ಪರ್ವತಶಾಸ್ತ್ರಿಗಳೂ ಡಿ|| ವೇ|| ಪ|| ಚನ್ನಬಸವಶಾಸ್ತ್ರಿಗಳೂ ಗುರು, ಅನ್ನದಾನ ಇವೇ ಮೊದಲಾದ ವಿಷಯಗಳನ್ನು ಕುರಿತು ಭಾಷಣಮಾಡಿ ಸಮಾಜಬಾಂಧವರನ್ನು ಆಹ್ಲಾದಗೊಳಿಸಿದರು.

೧೯೨೧ ನೆಯ ಇಸವಿ ನವಂಬರ್ ತಾ|| ೬ರಿಂದ ೧೯೨೧ ನೆಯ ನವಂಬರ್ ತಾ|| ೧೨ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಕಾರ್ತಿಕಶುದ್ಧ ಸಪ್ತಮಿಯಿಂದ ಕಾರ್ತಿಕಶುದ್ಧ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾ
6	ಭಾನು	ಸಪ್ತ	60	ಉಷಾ	37.3	21
7	[1]ಸೋಮ	ಸಪ್ತ	3.15	ಶ್ರವ	43.9	22
8	ಮಂಗಳ	ಅಷ್ಟ	8.20	ಧನಿ	49.42	23
9	ಬುಧ	ನವ	13.45	ಶತ	56.16	24
10	ಗುರು	ದಶ	18.50	ಪೂಭಾ	60	25
11	[2]ಶುಕ್ರ	ಏಕಾ	23.26	ಪೂಭಾ	2.19	26
12	[3]ಶನಿ	ದ್ವಾದ	27.20	ಉಭಾ	7.34	27

(1) ಕಾರ್ತಿಕಸೋಮವಾರ. (2) ಸರ್ವತ್ರೈಕಾದಶಿ. (3) ಉತ್ಥಾನದ್ವಾದಶಿ, ಪುಷ್ಪಬೃಂದಾವನೋತ್ಸವ, ಉಡುಪಿಯಲ್ಲಿ ಲಕ್ಷದೀಪೋತ್ಸವ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ನವಂಬರ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೪೫

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಸಾಳ್ವದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
43 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0.12.0	,	50.0.0
5	0. 8.0	..	100.0.0
6	0.12.0	,,	100.0.0
7	6. 0.0	,,	100.0.0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6.0	ಇಂದ	10-0-0
8	0- 8.0	,,	100.0.0
9	0.12.0	,,	100.0.0
10	0.14.0	,,	100.0.0
11	3- 8.0	,,	100.0.0
12	4- 0.0	,,	100.0.0
13	4- 8.0	,,	100.0.0
14	6- 0.0	,,	100.0.0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

[illegible]	ರೂ. ಇಂದ	ರೂ. ವರೆಗೆ.
ಉಬ್ಬಿನ	,, 15.0.0	,, 40.0.0
ಮೆಣಸು	,, 7-8.0	,, 15.0.0
ಕಡಲೆ	,, 2-8.0	,, 7.0.0
ನೆನೆಗಡಲೆ	,, 1-8.0	,, 3.0.0
ಕಮಲಾಕ್ಷಿ	,, 1-0.0	,, 2.0.0
ದೊಡ್ಡ	,, 0-8.0	,, 1.0.0
ಅವಕ್ಯಂತ	,, 0-6.0	,, 0.8.0
ಸ್ಫಟಿಕ108ಕ್ಕೆ	4-8.0	,, 30.0.0
ಶ್ರೀಚಕ್ರ1ಕ್ಕೆ	8.0.0	,, 100.0.0
ಲಿಂಗ 1ಕ್ಕೆ	1-0.0	,, 100.0.0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80.0.0 ಬಿ. 50-0-0 ಸಿ. 40.0.0 ಡಿ. 25.0.0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
37 ಕಂಪನಿ. ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 26

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಕಾಗದದ ಬೆಲೆಯು ತಗ್ಗಾಗಿದ್ದರೂ ಅನೇಕರ ಕೋರಿಕೆಯ ಮೇರೆಗೆ ಈ ಗ್ರಂಥದ ದ್ವಿತೀಯ ಮುದ್ರಣವನ್ನು ಮಾಡಿಸಿ ಪೂರೈಸಿರುವೆವು. ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦ ಅಂಚೆವೆಚ್ಚ ಬೇರೆ.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತಿಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಈಗ ತಾನೆ ಅಚ್ಚಾಗಿ ಕ್ರಯಕ್ಕೆ ಸಿದ್ಧವಾಗಿದೆ.

ಮೈಸೂರು ಸೀಮೆಯಲ್ಲಿ ಕೈತೋಟಗಳ ವ್ಯವಸಾಯ.

ಈ ಪುಸ್ತಕವು ಹಿಂದೆ ಲಾಲ್‌ಬಾಗ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಜೆ. ಕ್ಯಾಮಿರಾನ್ ಸಾಹೇಬರಿಂದ ಇಂಗ್ಲೀಷು ಭಾಷೆಯಲ್ಲಿ ರಚಿತವಾಗಿ ಮೈಸೂರು ಸಂಪದಭ್ಯುದಯ ಸಮಾಜದ ವ್ಯವಸಾಯ ಶಾಖೆಯವರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಲ್ಪಟ್ಟಿರುತ್ತದೆ. ತರಕಾರಿ ಬೆಳೆಯತಕ್ಕವರಿಗೂ ಫಲಪುಷ್ಪ ವ್ಯವಸಾಯಗಾರರಿಗೂ ಅತ್ಯಂತ ಉಪಯೋಗವಾದದ್ದು. ಕ್ರಯ ಒಂದು ರೂಪಾಯಿ ಎಂಟಾಣೆ.

ಈ ಪುಸ್ತಕವು ದೊರೆಯುವ ಸ್ಥಳ.

2 ಕ್ಯೂರೇಟರ್, ಗೌರ್ನಮೆಂಟ್ ಬುಕ್ ಡಿಪೋ,
ಬೆಂಗಳೂರು ಸಿಟಿ.

ಉಚಿತವಾಗಿ ನೂಲುತೆಗೆಯುವುದನ್ನು ಹೇಳಿಕೊಡುವ ಪಾಠಶಾಲಾ (ಫ್ರೀಸ್ಪಿನ್ನಿಂಗ್ ಸ್ಕೂಲ್.)

ಈ ಪಾಠಶಾಲೆಯು 1921ನೇ ಇಸ್ವಿ ನವಂಬರ್ 1ನೇ ತಾರೀಖಿನ ದಿವಸ ಪ್ರಾರಂಭವಾಗಿರುತ್ತೆ. ಇಲ್ಲಿ ಬೆಳಗ್ಗೆ 8 ಗಂಟೆಯಿಂದ 6 ಗಂಟೆವರೆಗೂ ನೂಲು ತೆಗೆಯುವುದನ್ನು ಉಚಿತವಾಗಿ 1 ತಿಂಗಳವರೆಗೂ ಎರಡುವೇಳೆಯೂ ಸರಿಯಾಗಿ ಬರತಕ್ಕಂಥ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತೆ. ಅಲ್ಲದೆ ಸುಮ್ಮನೆ ನೋಡಿಕೊಂಡು ವಿಷಯ ತಿಳಿದುಕೊಳ್ಳತಕ್ಕವರು ಬೆಳಗ್ಗೆ 7½ ಗಂಟೆಯಿಂದ 12 ಗಂಟೆವರೆಗೂ ಮಧ್ಯಾಹ್ನ 3½ ಗಂಟೆಯಿಂದ 7 ಗಂಟೆ ವರೆಗೂ ಬಂದು ವಿಷಯಗಳನ್ನು ತಿಳಿದುಕೊಂಡುಹೋಗಬಹುದು.

ಎಸ್. ರಾಮಚಂದ್ರರಾವ್,
ಮೂವಿಂಗ್‌ಷಾಪ್, ನಾರ್ತ್‌ಗೇಟ್, ಟವನ್‌ಹಾಲ್, ಮೈಸೂರು.

ಮಾಪಿಳ್ಳೆಗಳ ದಂಗೆ.

ಇದು ಇನ್ನೂ ನಡೆಯುತ್ತಲೇ ಇದೆ: ನಿಶ್ಶೇಷವಾಗಿಲ್ಲ. ಪ್ರಭುತ್ವದವರು ಗೂರ್ಖ ಸೈನ್ಯವನ್ನೂ ಬರ್ಮಾ ಸೈನ್ಯವನ್ನೂ ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಜರ್ಮನರ ಎದೆಬಿರಿಯಿಸಿದ ಗೂರ್ಖಾ ಸೈನಿಕರ ಬಿಸಿಯು ಈಗ ಮಾಪಿಳ್ಳೆಗಳಿಗೆ ಚೆನ್ನಾಗಿ ತಟ್ಟಿದೆ. ಏತಕ್ಕೂ ಹೆದರದ ಮಾಪಿಳ್ಳೆಗಳು ಈಗ ಗೂರ್ಖರ ಕುಕ್ರಿ ಆಯುಧದ ಚುರುಕಿನಿಂದ ಬೆದರಿ ಬಿದ್ದಿದ್ದಾರೆ. ಪ್ರಭುತ್ವ ಸೈನ್ಯದ ಮೇಲೆ ಕೈಮಾಡುತ್ತ ಅನೇಕ ಮಾಪಿಳ್ಳೆಗಳು ಹತರಾಗುತ್ತಿದ್ದಾರೆ. ಅಲ್ಲಲ್ಲಿ ಗ್ರಾಮಾಂತರಗಳಲ್ಲಿ ಹಿಂದುಗಳನ್ನು ಭಯಪಡಿಸಿ ಹಿಂಸಿಸಿ ಮಹಮ್ಮದೀಯ ಮತಕ್ಕೆ ಸೇರಿಸಿಕೊಳ್ಳುವ ಮತ್ತು ಆಸ್ತಿಯನ್ನು ದೋಚಿಕೊಳ್ಳುವ ಕೆಲಸವನ್ನು ಅಲ್ಪಸ್ವಲ್ಪ ಮಾಡುತ್ತಲೇ ಇದ್ದಾರೆ. ಅಲ್ಲಿಯ ಜನರದೇ ಒಂದು ಸೈನ್ಯವನ್ನು ಸರ್ಕಾರದವರು ಈಗ ಅಣಿಮಾಡುತ್ತಿದ್ದಾರೆ. ಮದರಾಸು ಸರ್ಕಾರದ ಎ|| ಕೌನ್ಸಿಲ್ ಮೆಂಬರಾದ ಗೌ|| ನಾಪುರವರನ್ನು ಮಲಬಾರಿನ ಸ್ಪೆಷಲ್ ಕಮೀಷನ್ನರನ್ನಾಗಿ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಅವರು ಅಲ್ಲಿಯ ಸ್ಥಿತಿಗತಿಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುತ್ತ ಬಾಧಿತರಿಗೆ ಸಹಾಯಮಾಡುವುದೇ ಮೊದಲಾದ ಏರ್ಪಾಟುಗಳನ್ನು ಸಾಗಿಸುತ್ತಿದ್ದಾರೆ. ಅಲ್ಲಿ ನಿರ್ಗತಿಕರಾಗಿ ನಿಂತಿರುವ ಜನರಿಗೆ ದಿನ ೧ಕ್ಕೆ ೧ ಸಹಸ್ರ ರೂ. ಗಳವರೆಗೆ ವೆಚ್ಚಮಾಡಿ ಅನ್ನಾಹಾರಾದಿಗಳನ್ನು ಕೊಡಿಸುತ್ತಿದ್ದಾರೆ. ಅದಕ್ಕೆ ಪ್ರಜೆಗಳಲ್ಲಿ ಧನಿಕರಾದವರೂ ಸರ್ಕಾರದವರೂ ಸಹ ಸಹಾಯಮಾಡುತ್ತಿದ್ದಾರೆ. ಅಪರಾಧಿಗಳ ವಿಚಾರಣೆಯು ಸೈನಿಕಶಾಸನವನ್ನನುಸರಿಸಿದ ದಂಡಾಧಿಕಾರಿಗಳ ಕೋರ್ಟಿನಲ್ಲಿ ನಡೆದು ಅನೇಕರಿಗೆ ದೇಹಾಂತ ಶಿಕ್ಷೆಗಳೂ ಕಾರಾಗೃಹವಾಸಶಿಕ್ಷೆಗಳೂ ವಿಧಿಸಲ್ಪಡುತ್ತಿವೆ. ತಾನೂನು ಖಿಲಾಫತ್ ಕಾರ್ಯದರ್ಶಿಯಾದ ಕುಂಞಿಖಾದರಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು. ತಿರುರಂಗಾಡಿಯಲ್ಲಿ ಮಸೀದಿಯ ಸುತ್ತ ಕಂದಕವನ್ನು ತೋಡಿಕೊಂಡು ಪ್ರಭುತ್ವಸೈನ್ಯದ ಮೇಲೆ ತನ್ನ ಕಡೆಯ ಸೈನಿಕರನ್ನು ಯುದ್ಧಮಾಡಿಸಿದ ಆಲಿಮುಸಲಿಯಾರನ ಮೇಲಣ ಕೇಸು ವಿಚಾರಿತವಾಗಿ ೧ನೆ ಅಪರಾಧಿಯಾದ ಆತನ ಜತೆಗೆ ೨-೩-೪-೫-೬-೧೮-೨೦-೩೦-೩೧-೩೨-೩೩—೩೮ನೆ ಅಪರಾಧಿಗಳಿಗೂ ಸಹ ಮರಣದಂಡನೆಯು ವಿಧಿಸಲ್ಪಟ್ಟದ್ದಲ್ಲದೆ ಅವರುಗಳ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳುವ ಹಾಗೆ ತೀರ್ಮಾನ ಹೇಳಲ್ಪಟ್ಟಿತು.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ನವಂಬರ್ ತಾ|| ೧೩ ನೆಯ ಭಾನುವಾರ.

ಶಾನುಭೋಗರುಗಳ ಪಟಾಟೋಪ.

ಗ್ರಾಮಾಂತರಗಳಲ್ಲಿ ಶ್ಯಾನುಭೋಗರೇ ಸರ್ವಾಧಿಕಾರಿಗಳು. ಅನೇಕರು ತಮ್ಮ ಉತ್ತಮಯೋಗ್ಯತೆಯಿಂದ ಆ ಗೌರವವನ್ನು ಕಾಪಾಡಿಕೊಂಡು ಪ್ರಜಾಪ್ರೀತಿಪಾತ್ರರಾಗಿರುವರು. ಆದರೆ ಇತ್ತೀಚೆಗೆ ಅಲ್ಲಲ್ಲಿ ಕೆಲವರು ದುರಾಶಾಪ್ರೇರಿತರಾಗಿ ಗ್ರಾಮಗಳಿಗೆ ದುಷ್ಕಂಟಕರಂತೆ ಪರಿಣಮಿಸುತ್ತಿರುವರು. ಶ್ಯಾನುಭೋಗರ ಕಾನ್ಫರೆನ್ಸು ಎಂಬುದು ಅವರುಗಳ ಹಿತಪ್ರಾಪ್ತಿ ಅನಿಷ್ಟನಿವಾರಣೆಗೆ ಸಾಧನವಾಗಿ ಏರ್ಪಟ್ಟರೂ ಈಚೆಗೆ ಅದರ ರೀತಿಯು ಬದಲಾವಣೆಯಿಂದ ಅನೇಕ ಶಾನುಬೋಗರಿಗೆ ಅದು ಹಾವಿಗೆ ರಕ್ಕೆಯನ್ನು ಹುಟ್ಟಿಸಿಕೊಟ್ಟಂತೆ ಔದ್ಧತ್ಯಸಂಪಾದಕವಾಗಿ ಪರಿಣಮಿಸಿದಂತೆ ತೋರುತ್ತದೆ. ಕೆಲವು ಶಾನುಬೋಗರು ಗ್ರಾಮಾಂತರದವರ ಮೇಲೆ ತೋರಿಸುತ್ತಿದ್ದ ತಮ್ಮ ಕೈಯನ್ನು ತಮ್ಮ ಮೇಲ್ಪಟ್ಟ ಅಧಿಕಾರಿಗಳ ಮೇಲೂ ತೋರಿಸುವುದಕ್ಕೆ ಹಿಂಜರಿಯದ ಸ್ಥಿತಿಗೆ ಬಂದಿದ್ದಾರೆ. ಚಿಂತಾಮಣಿಯಲ್ಲಿ ಸಬ್ ಡಿವಿಜನಲ್ ಆಫೀಸರಾಗಿರುವ ಮ|| ಎಂ. ಸಿ. ಚನ್ನರಾಜೇಅರಸ್ ಬಿ.ಎ.ಬಿ.ಎಲ್. ರವರು ಜಮಾಬಂದಿಕಾಲದಲ್ಲಿ ಅಕ್ಕಿಮಂಗಲ ಮೊದಲಾದ ಗ್ರಾಮಗಳ ಶಾನುಬಾಗರೊಬ್ಬರಲ್ಲಿ ಏನೋ ತಪ್ಪನ್ನು ಕಂಡು ಕೆಲಸದಿಂದ ಸಸ್ಪೆಂಡ್ ಮಾಡಲಾಗಿ, ತನ್ನನ್ನು ಆಫೀಸರು ಬೈದು ಅಪಮಾನಪಡಿಸಿದರು ಎಂದು ಮೊದಲಾಗಿ ಕ್ರಿಮಿನಲ್ ಮಾನನಷ್ಟದ ವ್ಯಾಜ್ಯವನ್ನು ಕೋಲಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಹೂಡಿರುವರಂತೆ. ಇತ್ತ ಚೆನ್ನಪಟ್ಟಣದ ತಾ|| ಅಮಲ್ದಾರ್ ಮ|| ಕೆ. ಸಿದ್ದರಾಮಪ್ಪನವರು ಜಮಾಬಂದಿ ಕಾಲದಲ್ಲಿ ಕೆಲ ಶ್ಯಾನುಭೋಗರುಗಳಿಗೆ ಕಿಸ್ತೆಪಟ್ಟಿಯ ಲೆಕ್ಕವನ್ನಿಡದಿದ್ದ ತಪ್ಪಿತಕ್ಕಾಗಿ ಐದೈದು ರೂ. ಗಳ ಅರ್ಥದಂಡವನ್ನು ವಿಧಿಸಿದುದಕ್ಕಾಗಿ, ಒಂದುವರ್ಷದ ರಜಾಕ್ಕೆ ಬರೆದುಕೊಂಡು, ಆ ತಾಲ್ಲೂಕಿನ ಶ್ಯಾನುಭೋಗರೆಲ್ಲಾ ಸೇರಿ ಗುಂಪುಕಟ್ಟಿ ರೆವಿನ್ಯೂ ಕಮಿಷನರ ಡಿ|| ಕಮಿಷನರ ಬಳಿಗೆ ಹೋಗಿ ಅಮಲ್ದಾರರಮೇಲೆ ಕಾರ್ಯಭಾಗಮಾಡಲು ಪ್ರಯತ್ನಿಸಿರುವರಂತೆ,

ಮೇಲೆಕಂಡ ೨ ವಿಷಯವೂ ಬ್ರಾಹ್ಮಣ ಶಾನುಭೋಗರುಗಳಿಂದ ಬ್ರಾಹ್ಮಣೇತರಾಧಿಕಾರಿಗಳ ಮೇಲೆ ನಡೆಯಿಸಲ್ಪಡುತ್ತಿರುವ ಕಾರ್ಯಭಾಗಗಳಾಗಿರುತ್ತವೆ. ಇದು ಗಮನೀಯವಾದುದು. ಅವೆರಡು ವಿಷಯವೂ ವಿಚಾರಣೆಯಿಂದ ಇತ್ಯರ್ಥವಾಗಲಿಕ್ಕಿರುವುದರಿಂದ ನಾವು ಇಲ್ಲಿ ಹೆಚ್ಚಿಗೆ ವಿಮರ್ಶೆಮಾಡಲು ಇಚ್ಛೈಸುವುದಿಲ್ಲ. ಮಿಲ್ಲರ್ ಕಮಿಟಿ ವರದಿಯು ಪ್ರಕಟವಾದ ಮೇಲೆ ಸಂಸ್ಥಾನದ ಶಾನುಬೋಗರೆಲ್ಲಾ ಸ್ಟ್ರೈಕ್ ಮಾಡುವರೆಂದು ಒಂದು ಪ್ರವಾದಹುಟ್ಟಿದ್ದಿತು. ಅದೇನೂ ಹೊರಬೀಳಲಿಲ್ಲ. ಇದು ಅದರ ಅಂಕುರದಂತೆ ಕಾಣುತ್ತಿದೆಯೆಂದು ಕೆಲವರು ಆಡಿಕೊಳ್ಳುತ್ತಿದ್ದಾರೆ. ರೆ|| ಕಮಿಷನರಾದ ಮ|| ಕೆ. ಶ್ರೀನಿವಾಸಯ್ಯಂಗಾರರು ಬ್ರಾಹ್ಮಣವಿದ್ಯಾಸಹಾಯಸಂಘದ ಕಾರ್ಯಕಾರಿಮಂಡಲಿಯ ಸಭ್ಯರಾಗಿರುವುದರಿಂದ ಬ್ರಾಹ್ಮಣೋದ್ಯೋಗಿಗಳು ಮಾಡುವ ದಾಂಧಲೆಗಳೆಲ್ಲಾ ಅವರಿಂದ ಬೆನ್ನುಹಾಕಿಕೊಳ್ಳಲ್ಪಡುವುವೆಂದು ಕೆಲವರು ಭ್ರಮಿಸಿರುವಂತೆ ತೋರುತ್ತದೆ. ಪರ್ಯವಸಾನವು ಮುಂದೆ ಗೊತ್ತಾಗುವುದು. ಮುಖ್ಯವಾಗಿ ನೆರೆಹೊರೆಯ ಸರ್ಕಾರಗಳಲ್ಲಿರುವಂತೆ ಶಾನುಬೋಗರುಗಳಿಗೆ ಉಚಿತವಾದ ಸಂಬಳಗಳನ್ನು ಗೊತ್ತುಮಾಡಿ ೨-೩ ವರ್ಷಗಳಿಗೆ ಒಂದೊಂದುಸಲ ಬೇರೆಬೇರೆ ಸ್ಥಳಗಳಿಗೆ ವರ್ಗಾಯಿಸುವಂತೆ ಆದರೆ ಸರ್ಕಾರಕ್ಕೂ ಕ್ಷೇಮ ಪ್ರಜೆಗಳಿಗೂ ಕ್ಷೇಮ.

A NOTEABLE SPEECH.

The address of Mr. A. R. Bannerji, Senior Member of Council, to the members of the Civil Service Association at Bangalore on Saturday the 5th instant is a noteable utterance of the day. It deals with more than one burning topics of the present day politics in Mysore and elsewhere. It sounds more than one warnings to the responsible body of the Civil Service in view of the changed conditions of the mentality and awakening in respect of individual rights as belonging to the masses. It reveals the new influences which are working to beget new and healthy organisations out of the deteriorating conditions of the past. It points out that the life of the Mysore Civil Service is passing through a critical stage of its existence and that its vigorous future lies in its loyalty and faithfulness to His Highness the Maharaja and in its co-operation with the Government in every measure which may be undertaken for the improvement of the administration as a whole. It foresees constitutional reconstruction in the Indian States in the light of the reforms in British India and in view of the just aspirations of the people of the country for an adequate share in the administration. It is all in all a homily of sound maxims for the guidance of the members of the Civil Service in their dealings with the changed situation. The speech is pregnant with wisdom and all through there runs a stream of advice. Mr. Bannerji most emphatically invites attention to the study of the new conditions with a broadminded freedom from bias and communal jealousies by means of self sacrifice and loyalty to the Soverign in a more marked manner than its members are known to have done in the past. These sound wise and practical views of this statesman are punctuated by the authoritative statements of eminent men like Ghokale and others. We reiterate those meaningful expressions of the Indian Political Sage-Ghokale, "Let it not be said that the Civil Services look at every question from the standard of their own power or that they are zealously anxious to guard their own monopoly of power and subordinate everything to such consideration" and Mr. Bannerji concludes this portion of his address with the following inspiring words "The interests of the people should take precedence over every other interest." Gospel truth! An effective hit at the conduct of the monopolists! Here the vested interests are shred into pieces. These are the words of a real statesman who speaks from a careful and considered study of the awakened spirit which spirit is expressed by him in the following words—"The masses have been awakened to a sense of their political life." Smother this spirit with a view to guard selfish interests and it means explosion. Try to kill this awakening and it means annihilations of that system which obstructs the development of Representative Government in which the people's interests are the main interests of administration. Above all these points of grave consideration Mr. Bannerji has in a most befitting manner touched on the much misinterpreted condition of official work viz., efficiency. We have before this explained in our columns what this efficiency means in an administration and on account of frequent reference to it by the monopolists it has become as he calls it "hackneyed." Certainly it is the means rather than the end and an artificial value should not be placed on any standard. It is neither the routine nor original nature of the work which marks the standard of efficiency. And it is certainly not the heaps of examinations. But it is definitely and accurately measured by the material and moral happiness which that efficiency affords to the people. It is this system of work promoting the happiness of the governed which is efficient and not that vain glorious M. As. & M. Ls. who are required only to an extent for the purpose of maintaining the form rather than the spirit of the administration. False standards of efficiency and merit are the means not of efficiency but of the aggrandzisation of self interests. We congratulate the Association on the opportunity that it has had to hear an advice which will serve them in good stead in their future career. We have great pleasure to note the wisdom of this address of Mr. Bannerji in which are surveyed the agitating conditions of the present day politics of Mysore.

We also congratulate the master of that speech which was well said and in time.

BANGALORE CITY PRESIDENTS' ELECTION.

This is a disappointing thing. We expected that unanimity would come to prevail in this. In our last note on this subject we said that in the right course of things Mr. M. Subbayya should have been elected unanimously just as on the last occasion it proved so in the case of Mr. Garudachar. But our expectations have failed and it appears to be that the object of franchise has not been realised by the councillors. The results are—Mr. Garudachar secured 16 votes and Mr. Subbayya 10. Neither has secured the required number of minimum votes. Both have failed and a third person should necessarily be appointed. It needs no statement as to whether either of these two has a chance for nomination. Absolutely not. A failure is a failure whether it be by one vote or by one hundred votes. The rule has fixed the minimum and that decides the chance of nomination in the case of the either.

We hear that as in Madras rules, a chance may be given for a 2nd election though we have no rule of the kind with us. But it must be clearly understood that this choice comes in only when the election could not take place on the appointed day or there is some irregularity. In a case in which all the members have been present and votes have been taken and no one has secured the required number of votes, the right has gone for ever and for the time being. The only course under the Regulation is for the Government to nominate one who did not stand for election. It may be any one who has shown capacity for it. If on the other hand a further election is solicited and if either of the failed candidates is nominated, it is going beyond the scope of the Regulation. We believe that none of it will happen and create unnecessary disputation. Amongst the remaining councillors there are candidates for Presidentship who are equally competent and thus there is no difficulty for the Government to decide.

ಒಳದೇಶದ ವೃತ್ತಾಂತಗಳು.

ಜಸ್ಟಿಸ್ ಪ್ಲಮರ್ ಸಾಹೇಬರು ರಜವನ್ನು ಪೂರೈಸಿಕೊಂಡು ಬಂದಮೇಲೆ ಡಿ|| ಜಡ್ಜಿಗಳಾದ ಮ|| ಬ್ಯಾರಿಸ್ಟರ್ ಬಿ. ನಾಗಪ್ಪನವರು ಬೆಂಗಳೂರಿಗೂ, ಮ|| ಬಿ. ಸುಬ್ಬಣ್ಣನವರು ಮೈಸೂರಿಗೂ, ಮ|| ಕೆ. ರಾಮಸ್ವಾಮಯ್ಯಂಗಾರರು ಶಿವಮಗ್ಗೆಗೂ ವರ್ಗವಾಗಿ ಹೋಗಬೇಕಾಗಿದೆ.

ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಅಸಹಾಯವಾದಿಪಕ್ಷದ ಕೆಲವರು ಉಪನ್ಯಾಸಗಳನ್ನು ಮಾಡುವುದು ಹೆಚ್ಚುತ್ತಿದೆ. ಆಂಗ್ಲಜನರ ಮೇಲೆ ಮನಃ ಕಾಲುಷ್ಯವನ್ನುಂಟುಮಾಡತಕ್ಕ ಇಂಥ ಪ್ರಯತ್ನಕ್ಕೆ ಎಳೆಸಿನಲ್ಲೇ ಪ್ರತಿಬಂಧಕವನ್ನು ಕಲ್ಪಿಸದಿರುವುದು ನಮ್ಮ ಸಂಸ್ಥಾನಕ್ಕೆ ಹಿತಕರವಲ್ಲ.

ವೀರಶೈವಮತೋದ್ಧಾರವನ್ನು ಮಾಡಿ ಜಗತ್ ಪ್ರಸಿದ್ಧನಾದ ಶ್ರೀ ಬಸವೇಶ್ವರನ ಜನ್ಮ ಚಿತ್ರಪಟವನ್ನು ಎಚ್. ಜಿ. ಲಿಂಗಣ್ಣ ಅಂಡ್ ಕೋಯವರಿಂದ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಇದರ ಸಂಬಂಧವಾದ ಪ್ರಕಟನಪತ್ರಿಕೆಯು ಈ ಸಂಚಿಕೆಯಲ್ಲಿ ಗರ್ಭೀಕರಿಸಲ್ಪಟ್ಟಿದೆ. ವಾಚಕಮಹಾಶಯರು ಅದನ್ನು ಗಮನಿಸಿ ಪ್ರಕಾಶಕರಿಗೆ ಪ್ರೋತ್ಸಾಹವನ್ನುಂಟುಮಾಡುವವರಾಗಲೆಂದು ಕೋರುತ್ತೇವೆ.

ಮ|| ಗಳಾದ ಬಿ. ರಾಮಸ್ವಾಮಯ್ಯನವರು ಬೆಂಗಳೂರು ಡಿ|| ಕಮಿಷನರಾಗಿಯೂ, ಎಸ್. ಪಿರಿಯಣ್ಣಯ್ಯನವರು ಜನರಲ್ ಡಿಪಾರ್ಟ್‌ಮೆಂಟ್ ಆಕ್ಟಿಂಗ್ ಸೆಕ್ರೆಟರಿಯಾಗಿಯೂ, ಚಿತ್ರದುರ್ಗದ ಡಿ|| ಕ|| ಸಿ. ವೆಂಕಟರಾಯರು ರೆವಿನ್ಯೂ ಡಿಪಾರ್ಟ್‌ಮೆಂಟಿನ ಆಕ್ಟಿಂಗ್ ಸೆಕ್ರೆಟರಿಯಾಗಿಯೂ, ಎ. ಕೆ. ಎಸ್. ತಾಜ್ ಪಿರಾನ್ ರವರು ಚಿತ್ರದುರ್ಗದ ಆಕ್ಟಿಂಗ್ ಡಿ|| ಕಮಿಷನರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಆಸ್ಥಾನ ವಿದ್ವಾಂಸರಾಗಿದ್ದ ವೇ|| ರಾಜಕೋಟಿಶಾಸ್ತ್ರಿಗಳು ಶಿವಾಧೀನರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಕೈ|| ಬಸವಪ್ಪಶಾಸ್ತ್ರಿಗಳು ಗತಿಸಿದಮೇಲೆ ಪದ್ಯಕಾವ್ಯಗಳ ಓದುಗಾರಿಕೆಯಲ್ಲಿ ಇವರು ಪ್ರಸಿದ್ಧರಾಗಿದ್ದರು. ಇದೇ ವಿಷಯದಲ್ಲಿ ಇವರು ಟ್ರೇನಿಂಗ್ ಕಾಲೇಜಿನಲ್ಲಿ ಬೋಧಕರಾಗಿ ನಿಯಮಿಸಲ್ಪಟ್ಟಿದ್ದರು. ಇವರು ಹಿಂದೆ ಮಹಾರಾಜಾ ಕಾಲೇಜ್ ಕನ್ನಡ ಪಂಡಿತರಾಗಿದ್ದ ಚಿ. ಸಿದ್ಧಲಿಂಗಪ್ಪನವರ ದ್ವಿತೀಯಕುಮಾರರು.

ರಾಜಕುಮಾರಿ ಕೃಷ್ಣಾಜಮ್ಮಣ್ಣಿಯವರ ಹೆಸರಿನ ಮೇಲೆ ರಾಜಧಾನಿಯ ಕುಂಬಾರಕೊಪ್ಪಲ ಬಳಿ ಹೊಸದಾಗಿ ಕಟ್ಟಲ್ಪಟ್ಟಿರುವ ಕ್ಷಯರೋಗದ ಆಸ್ಪತ್ರೆಯ ಪ್ರಾರಂಭೋತ್ಸವವು ಈ ತಾ|| ೧೮ ರ ಬೆಳಗ್ಗೆ ೧೦ ಗಂಟೆಗೆ ಶ್ರೀಮನ್ ಮಹಾರಾಜರವರಿಂದ ನಡಿಸಲ್ಪಡುವುದು. ಆಗ್ಗೆ ಸೀನಿಯರ್ ಸರ್ಜನರು ಈ ಆಸ್ಪತ್ರೆಯ ಸಂಬಂಧವಾಗಿ ಒಂದು ವಿಜ್ಞಾಪನ ಪತ್ರಿಕೆಯನ್ನೋದಿ ಒಪ್ಪಿಸುವರು. ಮತ್ತು ಶ್ರೀಮನ್ ಮಹಾರಾಜರವರು ಅದಕ್ಕುತ್ತರವನ್ನು ದಯಪಾಲಿಸಿ ವಾರ್ಡುಗಳನ್ನು ಪರಾಮರ್ಶಿಸುವರು.

ರಾಜಧಾನಿಯಲ್ಲಿ ಪ್ಲೇಗಿನ ಹಾವಳಿಯು ಇನ್ನೂ ಶಾಂತವಾಗಿಲ್ಲ. ಹೆಲ್ತ್ ಆಫೀಸಿನವರು ಆಯಾದಿನಗಳಲ್ಲಿ ಪ್ಲೇಗು ಸೋಂಕುತಗಲಿದ ಮತ್ತು ಸತ್ತ ಜನರ ಸಂಖ್ಯೆಯನ್ನು ಬಹಿರಂಗಸ್ಥಲದಲ್ಲಿ ಆಯಾದಿನವೇ ಬರೆದು ಪ್ರಕಟಿಸುತ್ತಿದ್ದುದರಿಂದ ಅದರ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಪ್ರಜೆಗಳಿಗೆ ಅನುಕೂಲವಾಗುತ್ತಿದ್ದಿತು. ಹೀಗೆ ಪ್ರಕಟಿಸುವುದು ಈಗ್ಲೂ ಬೆಂಗಳೂರಿನಲ್ಲಿ ಪದ್ಧತಿಯಾಗಿದೆ. ಮೈಸೂರಿನಲ್ಲಿ ಮಾತ್ರ ತಪ್ಪಿಸಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ.

ತುಮಕೂರಿನಲ್ಲಿ ಕಟ್ಟಲ್ಪಡಕ್ಕಿರುವ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನ ಮಹೋತ್ಸವವು ತುಮಕೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ್ ಮ|| ಸಿರ್ಸಿ ಆನಂದರಾವ್ ರವರ ಹಸ್ತದಿಂದ ನಿನ್ನೆಯದಿವಸ ಬೆಳಗಿನ ೧೧ ಗಂಟೆಯಲ್ಲಿ ಯಥಾವಿಧಿಯಾಗಿ ವೈಭವದಿಂದ ನಡೆಯಿಸಲ್ಪಟ್ಟಿತು. ವಿದ್ಯಾಸಹಾಯಾರ್ಥವಾದ ಈ ಕಾರ್ಯಕ್ಕೆ ತಕ್ಕ ಸ್ಥಳಾನುಕೂಲ್ಯ ಮೊದಲಾದುವುಗಳನ್ನು ಕಲ್ಪಿಸಿಕೊಟ್ಟ ಮ|| ಆನಂದರಾಯರು ವಂದನೀಯರಾಗಿರುವುದಲ್ಲದೆ ಹಿಡಿದ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದ ತುಮಕೂರು ವೀರಶೈವ ಮಹನೀಯರು ಪ್ರಶಂಸಾಪಾತ್ರರಾಗಿದ್ದಾರೆ.

ನಮ್ಮ ಶ್ರೀಮನ್ಮಹಾರಾಜರು ಬರುವ ಡಿಶಂಬರ್ ತಿಂಗಳ ಆದಿಭಾಗದಲ್ಲಿ ಕಾಶೀಪಟ್ಟಣಕ್ಕೆ ದಯಮಾಡಿಸುವರು. ಅಲ್ಲಿರುವ ಭಾರತೀಯ ವಿಶ್ವವಿದ್ಯಾಲಯಕ್ಕೆ ಇವರು ಚಾನ್ಸಲರಾಗಿರುವಕಾರಣ, ಆ ಪೀಠದಿಂದ ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಕೊಡಲ್ಪಡಬೇಕೆಂದು ನಿರ್ಧರಿಸಿರುವ ಎಲ್.ಎಲ್.ಡಿ. ಎಂಬ ಪ್ರಶಸ್ತಿಯನ್ನು ಇವರೇ ಕೊಡುವರು. ಮತ್ತು ಅದೇ ಸಮಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರಿಗೂ, ನಮ್ಮ ವಿದ್ಯಾಪೀಠದ ವೈಸ್ ಚಾನ್ಸಲರಾದ ಮ|| ವ್ರಜೇಂದ್ರನಾಥ ಶೀಲ್ ರವರಿಗೂ ನಮ್ಮ ಪ್ರಾಚ್ಯಪುಸ್ತಕಭಂಡಾರದ ಕ್ಯೂರೇಟರಾದ ಮ|| ಶ್ಯಾಮಶಾಸ್ತ್ರಿಗಳಿಗೂ ಪ್ರೊ|| ಕೃಷ್ಣಯ್ಯಂಗಾರರಿಗೂ ಸಹ ಬಿರುದುಗಳನ್ನು ದಯಪಾಲಿಸುವರು.

ನೇಮತಿಯ ವೀರಶೈವ ವರ್ತಕರಲ್ಲಿ ಒಬ್ಬರಾದ ಮ|| ರಾ|| ಕಮಿದೊಡ್ಡಿ ತಮ್ಮಪ್ಪಯೆಂಬುವರು ಒಂದು ಕಟ್ಟಡವನ್ನು ಧರ್ಮಾರ್ಥವಾಗಿ ಬಾಲಿಕಾಪಾಠಶಾಲೆಗಾಗಿ ಸರ್ಕಾರಕ್ಕೆ ಒಪ್ಪಿಸಿದರು. ಅದರ ಪ್ರವೇಶಮಹೋತ್ಸವವು ಶಿವಮೊಗ್ಗಾ ಸಬ್ ಜಡ್ಜರವರಾದ ಮ|| ಪಿ. ಮಹಾದೇವಯ್ಯನವರಿಂದ ಕಳೆದ ತಾ|| ೭ರಲ್ಲಿ ನೆರವೇರಿಸಲ್ಪಟ್ಟಿತು. ಬಾಲಿಕೆಯರ ಇಂಪಾದ ಸಂಗೀತವೂ, ಸರಸವಾದ ಸಂಭಾಷಣೆಯೂ ಸಭಿಕರನ್ನು ವಿಶೇಷವಾಗಿ ಆನಂದಗೊಳಿಸಿದುವು. ಶಿವಮೊಗ್ಗ ಡಾಕ್ಟರು ಪುಟ್ಟಯ್ಯನವರೂ, ಮುನಸೀಫರು ಕೃಷ್ಣರಾಯರೂ, ಪ್ಲೀಡರ್ ಅನಂತಯ್ಯನವರೂ, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರು ಹೆಚ್. ಜಿ. ಬಸಪ್ಪನವರೂ, ಹೊನ್ನಾಳಿ ತಾ|| ಅಮಲ್ದಾರರವರು ಮೊದಲಾದ ದೊಡ್ಡಮನುಷ್ಯರೂ ಈ ಸಮಾರಂಭಕ್ಕೆ ದಯಮಾಡಿಸಿದ್ದರು.

ಬೆಂಗಳೂರು ಸಿಟಿಮ್ಯುನ್ಸಿಪಲ್ ಪ್ರಸಿಡೆಂಟರನ್ನು ಆರಿಸುವ ಕೆಲಸವು ಕಳೆದ ತಾ|| ೫ರಲ್ಲಿ ನಡೆದುದರಮೇಲೆ ಒಟ್ಟು ಬಂದಿದ್ದ ೨೬ ಮಂದಿ ಕೌನ್ಸಿಲರುಗಳೊಳಗೆ ೧೬ ಮಂದಿಗಳು ಮ|| ಗರುಡಾಚಾರ್ಯರಿಗೂ ೧೦ ಮಂದಿಗಳು ಮ|| ಎಂ. ಸುಬ್ಬಯ್ಯನವರಿಗೂ ಓಟುಗಳನ್ನು ಕೊಟ್ಟರು. ಗೊತ್ತಾದ ೧೮ ಓಟುಗಳು ಯಾರಿಗೂ ಬಾರದುದರಿಂದ ಚುನಾವಣೆಯೇ ವ್ಯರ್ಥವಾಯಿತು. ಇನ್ನು ಮುಂದೆ ಸರ್ಕಾರದವರೇ ಕೌನ್ಸಿಲರುಗಳಲ್ಲಿ ಯಾರೋ ಒಬ್ಬರನ್ನು ನಾಮಿನೇಷನ್ ಮಾಡಿ ನಿಯಮಿಸಬಹುದಾಗಿದೆ. ಈ ಸಂದರ್ಭದಲ್ಲಿ ಓಟನ್ನು ಕೊಟ್ಟ ಕೌನ್ಸಿಲರೊಳಗೆ ೯ ಮಂದಿ ಬ್ರಾಹ್ಮಣರೆಲ್ಲಾ ಬ್ರಾಹ್ಮಣರಾದ ಗರುಡಾಚಾರ್ಯರಿಗಲ್ಲದೆ ಒಕ್ಕಲಿಗರಾದ ಮ|| ಸುಬ್ಬಯ್ಯನವರಿಗೆ ಒಬ್ಬರೂ ಓಟನ್ನು ಕೊಡಲಿಲ್ಲ. ಇತರರಲ್ಲಿ ೭ ಜನರೂ ಗರುಡಾಚಾರ್ಯರಿಗೇ ಕೊಟ್ಟಿರುವರು. ಬಾಯಲ್ಲಿ ಸಮದೃಷ್ಟಿ ಸಾಹಾರ್ದಗಳ ಮಳೆಕರೆಯಿಸುವವರು ಸಮಯಬಿದ್ದಾಗ ಸ್ವಜಾತ್ಯಭಿಮಾನವನ್ನು ಎಷ್ಟು ಗಾಢವಾಗಿ ತೋರಿಸುವರೆಂಬುದಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತಬೇಕೆ ? ವಿದ್ಯಾಬುದ್ಧಿವಂತರಾದ ಮುಂಬರಿದ ಜನರೇ ತೋರಿಸಿಕೊಡುವ ಈ ನೇಲುಪಂತಿಯನ್ನು ವಿದ್ಯಾವಿವೇಕಗಳಲ್ಲಿ ಕಡಿಮೆಯಾಗಿ ಹಿಂದುಳಿದಿರುವವರೂ ಅವಲಂಬಿಸದಿದ್ದರೆ ಅವರಿಗೆ ಉದ್ಧಾರವೆಲ್ಲಿರುವುದು ? ಸ್ವಾಭಿಮಾನದಿಂದ ಬ್ರಾಹ್ಮಣರು ಮುಂಬರಿದರು. ಅದನ್ನು ಬಿಟ್ಟವರು ಕೆಟ್ಟರು.

ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರರನ್ನು ಹೆಚ್ಚು ಹೆಚ್ಚಾಗಿ ಸೇರಿಸಬೇಕೆಂಬ ವಿಷಯದಲ್ಲಿ ಬೋರ್ಡಿನವರು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಕೊಟ್ಟಿರುವ ೧೨೮ ನೆಯ ಸ್ಟಾಂಡಿಂಗ್ ಆರ್ಡರನ್ನೇ ಎಲ್ಲ ಶಾಖೆಗಳಿಗೂ ಅನುವರ್ತಿಸುವಂತೆ ಮಾಡಬೇಕೆಂದೂ, ಉದ್ಯೋಗಗಳನ್ನು ವಿನಿಯೋಗಿಸುವ ಅಧಿಕಾರವುಳ್ಳ ಪ್ರತಿಯೊಬ್ಬ ಉದ್ಯೋಗಿಯೂ ಈ ಸೂತ್ರವನ್ನವಲಂಬಿಸಬೇಕೆಂದೂ, ಕಲೆಕ್ಟರುಗಳು ಜಿಲ್ಲಾ ಜಡ್ಜಿಗಳು ಶಾಖಾಮುಖ್ಯೋದ್ಯೋಗಿಗಳೂ ಸಹ ೬ ತಿಂಗಳಿಗೆ ಒಂದು ಸಲ ಎಂದರೆ ಜನವರಿ ತಾ|| ೧೫ ಜೂನ್ ತಾ|| ೧೫ರಲ್ಲಿ ಈ ಕೆಳಗೆ ಕಾಣಿಸಿರುವ ವಿವರಣೆಯಂತೆ ಎಂದರೆ ಬ್ರಾಹ್ಮಣರು, ಬ್ರಾಹ್ಮಣೇತರ ಹಿಂದುಗಳು, ದೇಶೀಯ ಕ್ರೈಸ್ತರು, ಮಹಮ್ಮದೀಯರು, ಯೂರೋಪಿಯನ್ನರು, ಆಂಗ್ಲೋ ಇಂಡಿಯನ್ನರು, ಮತ್ತು ಇತರರು-ಇವರುಗಳಲ್ಲಿ ಎಷ್ಟೆಷ್ಟು ಜನರು ಯಾವ ಯಾವ ಶಾಖೆಯಲ್ಲಿ ಸೇರಿಸಲ್ಪಟ್ಟಿರುವರೆಂಬುದನ್ನು ತಿಳಿಯಿಸಬೇಕೆಂದೂ, ಮದ್ರಾಸ್ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಇದು ಮೈಸೂರುದೇಶದಲ್ಲಿ ಮಿಲ್ಲರ್ ಕಮಿಟಿಯ ವರದಿಯ ಮೇಲೆ ಹುಟ್ಟಿರುವ ಸರ್ಕಾರಿ ಅಪ್ಪಣೆಯಲ್ಲಿ ಕಂಡಿರುವ ಸೆಂಟರಲ್ ರಿಕ್ರೂಟ್ ಮೆಂಟ್ ಬೋರ್ಡಿನ ಅನುಕರಣವಾಗಿದೆ. ಶಾಖಾಮುಖ್ಯಾಧಿಕಾರಿಗಳು ಜಿಲ್ಲಾ ಕಲೆಕ್ಟರು ಮೊದಲಾದವರೆಲ್ಲಾ ಅಲ್ಲಿ ಬಹುಶಃ ಯೂರೋಪ್ಯರೇ ಆಗಿರುವುದರಿಂದ ಪಕ್ಷಪಾತಕ್ಕೆಡೆ ಇರಲಾರದೆಂದು ಮದ್ರಾಸಿನಲ್ಲಿ ರಿಕ್ರೂಟ್ ಮೆಂಟ್ ಬೋರ್ಡು ರಚಿಸಲ್ಪಡಲಿಲ್ಲ. ನಮ್ಮಲ್ಲಿ ಬೋರ್ಡಿನಅವಶ್ಯಕತೆಯು ವಿಶೇಷವಾಗಿರುವುದರಿಂದಲೇ ಅದು ಏರ್ಪಡಿಸಲ್ಪಟ್ಟಿದೆ.

ಪ್ರಿನ್ಸ್ ಆಫ್ ವೇಲ್ಸ್ ರವರು ಬರುವ ಜನವರಿ ತಾ|| ೧೮ ರ ಬೆಳಗ್ಗೆ ೮ ಗಂಟೆಗೆ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿಳಿದು ಧರ್ಮಾಂಬುಧಿ ಕೆರೆಯೇರಿಯಮೇಲೆ ಹೊರಟು ಶೇಷಾದ್ರಿರೋಡು ಕಬ್ಬನ್ ಪಾರ್ಕು, ಕಿಂಗ್ಸ್ ರೋಡು ಈ ಮಾರ್ಗವಾಗಿ ಹೊರಟು ಚಕ್ರವರ್ತಿನಿಯವರ ಪ್ರತಿಮೆಯಬಳಿ ದಂಡಿನ ಮ್ಯುನಿಸಿಪಾಲಿಟಿಯವರೊಪ್ಪಿಸುವ ವಿಜ್ಞಾಪನ ಪತ್ರವನ್ನು ಸ್ವೀಕರಿಸಿ ರೆಸಿಡೆನ್ಸಿ ಬಂಗಲಿಗೆ ಚಿತ್ತೈಸುವರು; ೧೧ ಗಂಟೆಯಲ್ಲಿ ಸೇನೆಯ ಅಂಗವಿನ್ಯಾಸವನ್ನೂ ಮಧ್ಯಾನ್ಹ ೪|| ಗಂಟೆಯಲ್ಲಿ ಪೋಲೋ ಆಟವನ್ನೂ ಪರಾಮರಿಸುವರು; ರೆಸಿಡೆಂಟರ ಅಟ್ ಹೋಂ ನಡೆಯುವುದು. ಆ ರಾತ್ರಿ ರೆಸಿಡೆನ್ಸಿಯಲ್ಲಿ ಔತಣವಾದನಂತರ ನರ್ತನವನ್ನು ಪರಾಮರಿಸಿ ೧೧|| ಗಂಟೆಗೆ ಮೈಸೂರಿಗೆ ಪ್ರಯಾಣಮಾಡುವರು. ಮಾರನೆ ಬೆಳಗ್ಗೆ ೮|| ಗಂಟೆಗೆ ರಾಜಧಾನಿಯನ್ನು ತಲಪುವರು. ನಿಲ್ದಾಣದಲ್ಲಿ ಶ್ರೀಮನ್ ಮಹಾರಾಜ ಸಹೋದರರು, ದಿವಾನರು ಮೊದಲಾದ ಅಧಿಕಾರಿಗಳಿಂದ ಸುಸ್ವಾಗತಿಸಲ್ಪಟ್ಟು ಸೇನೆಯ ಮರ್ಯಾದೆಯೊಡನೆ ರಥಾರೂಢರಾಗಿ ಶ್ರೀಮನ್ಮಹಾರಾಜರವರ ಸಂಗಡ ಉತ್ಸವಪೂರ್ವಕವಾಗಿ ಹೊರಟು ಮಧ್ಯಮಾರ್ಗದಲ್ಲಿ ಮ್ಯುನಿಸಿಪಾಲಿಟಿಯವರಿಂದ ವಿಜ್ಞಾಪನಪತ್ರವನ್ನು ಸ್ವೀಕರಿಸಿ ಗೌರ್ನಮೆಂಟ್ ಹೌಸಿಗೆ ದಯಮಾಡಿಸುವರು. ಅನಂತರ ೯|| ಗಂಟೆಯಲ್ಲಿ ಮಿಜಾಜ್ ಪರ್ಶಿಯಾಗುವುದು. ೧೧ ಗಂಟೆಗೆ ಶ್ರೀಮನ್ಮಹಾರಾಜರವರು ಮೋಟಾರುಬಂಡಿಯಲ್ಲಿ ಗೌರ್ನಮೆಂಟ್ ಹೌಸಿಗೆ ದಯಮಾಡಿಸಿ ದರ್ಶನಸಂಭಾಷಣವನ್ನು ಮಾಡಿಕೊಂಡು ಬಂದಮೇಲೆ ಪ್ರಿನ್ಸ್ ರವರು ೧೨ ಗಂಟೆಗೆ ಮೋಟಾರುಬಂಡಿಯಲ್ಲಿ ಅರಮನೆಗೆದಯಮಾಡಿ ಮಹಾರಾಜರ ದರ್ಶನಸಂಭಾಷಣಗಳನ್ನು ಮಾಡಿಕೊಂಡು ಬರುವರು. ಅದೇರಾತ್ರಿ ೮|| ಗಂಟೆಗೆ ಗೌರ್ನಮೆಂಟ್ ಹೌಸಿನಲ್ಲಿ ಅರಸೌತಣವಾಗುವುದು. ಜನವರಿ ತಾ|| ೨೦ ರ ರಾತ್ರಿ ಅರಮನೆಯಲ್ಲಿ ಸಂಗೀತವಾಗುವುದು. ೨೧ ರ ಬೆಳಗ್ಗೆ ೧೦ ಗಂಟೆಗೆ ಕಾರಾಪುರಕ್ಕೆ ಬೇಂಟೆಗಾಗಿ ಚಿತ್ತೈಸಿ ತಾ|| ೨೨ ರ ವರೆಗೂ ಅಲ್ಲಿದ್ದು ತಾ|| ೨೩ರ ಮಧ್ಯಾನ್ಹ ೪ ಗಂಟೆಗೆ ರಾಜಧಾನಿಗೆ ಹಿಂದಿರುಗಿ ಚಿತ್ತೈಸಿ ಅದೇರಾತ್ರಿ ೧೦|| ಗಂಟೆಗೆ ಪ್ರಯಾಣಮಾಡುವರು.

ಭರತಖಂಡದ ವೃತ್ತಾಂತಗಳು.

ದಿಲ್ಲಿ ಖಿಲಾಫತ್ ಕಾರ್ಯದರ್ಶಿ ಅಬ್ದುಲ್ ಅಜಾಬು ಅನ್ಸಾರಿಯವರು ಹೊಣೆಕೊಡದೆ ಹೋದುದರಿಂದ ೧ ವರ್ಷ ಕಠಿನ ಕಾರಾಗೃಹವಾಸಶಿಕ್ಷೆಗೆ ಗುರಿಯಾದರು.

ಜೋಟಾನಿ ಮಿಯರ್ಖಾನ್ ರವರು ೧ ಲಕ್ಷ ರಾಟೆಗಳನ್ನು ಧರ್ಮಾರ್ಥವಾಗಿ ಮಾಡಿಸಿಕೊಡುತ್ತೇನೆಂದು ಮ|| ಗಾಂಧಿಯವರಿಗೆ ಬರೆದು ೫ ಸಾವಿರವನ್ನು ಆಗಲೇ ಕಳುಹಿಸಿಕೊಟ್ಟಿದ್ದಾರೆ.

ಸರ್ ಟಿ. ತ್ಯಾಗರಾಯಶೆಟ್ಟಿಯವರು ಮದರಾಸು ಮ್ಯುನ್ಸಿಪಾಲಿಟಿಗೆ ಗೌರವಾಧ್ಯಕ್ಷರಾಗಿ ಈಸಲವೂ ಆರಿಸಲ್ಪಟ್ಟರು. ಇದೂ ಸಹಿತ ೩ ಸಲ ಅಲ್ಲಿಯ ಕಾರ್ಪೋರೇಷನ್ ಷರೀಫರಾಗಿ ಅವರು ಆರಿಸಲ್ಪಟ್ಟಂತಾಯಿತು.

ಅಮೃತಸರದ ಸಿಕ್ ದೇವಾಲಯದಲ್ಲಿ ಮಹಾ ಪ್ರಾಣಹತ್ಯೆಯನ್ನು ನಡೆಯಿಸಿದ ನಾರಾಯಣದಾಸ್ ಮೊದಲಾದ ಅಪರಾಧಿಗಳಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಅವರು ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಿದ್ದಾರೆ.

ಇದಕ್ಕೆ ಮುಂಚೆ ಬಂಗಾಳಾ ಕೋರ್ಟ್ ಆಫ್ ವಾರ್ಡ್ಸ್ ಶಾಖೆಯಲ್ಲಿ ಕೆಲಸಮಾಡುತ್ತಿದ್ದ ಕಾರ್ನ್ತಿಯಾ ಸೊರಾಬ್ಜಿ ಎಂಬ ಕನ್ಯೆಯನ್ನು ಅಲಹಾಬಾದ್ ಹೈಕೋರ್ಟಿನವರು ವಕೀಲಳನ್ನಾಗಿ ಅಂಗೀಕರಿಸಿದರು. ಭರತಖಂಡದಲ್ಲಿ ಅಡ್ವೋಕೇಟಾಗಿ ಕೆಲಸಮಾಡುವುದಕ್ಕೆ ಈಕೆಯೇ ಮೊದಲನೆಯವಳು.

ಮ|| ಗಾಂಧಿಯವರು ಸಾಗಿಸುತ್ತಿರುವ ಬಹಿಷ್ಕಾರೋದ್ಯಮವು ಪಾರ್ಲಿಮೆಂಟಿನಲ್ಲಿ ಚರ್ಚೆಗೆಬರಲು, ಗಾಂಧಿಯವರ ಚರ್ಯೆಯನ್ನು ಇಂಡ್ಯಾ ಸರ್ಕಾರದವರು ಜಾಗರೂಕತೆಯಿಂದ ಪರಿಶೀಲಿಸುತ್ತಿರುವರೆಂದೂ ಸಮಯಸಿಕ್ಕಿದಾಗ ತಕ್ಕಚರ್ಯೆಯನ್ನು ಕೈಕೊಳ್ಳುವರೆಂದೂ, ಸ್ಟೇಟ್ ಸೆಕ್ರೆಟರಿಯವರು ಉತ್ತರ ಕೊಟ್ಟರು.

ಯಾವದ್ಭಾರತ ಖಿಲಾಫತ್ ಸಂಘ ಸಭೆಯು ಕಳೆದ ತಾ|| ೫ರಲ್ಲಿ ದಿಲ್ಲಿಪಟ್ಟಣದೊಳಗೆ ಸೇಟ್ ಜೋಟಾನಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಅಂಗೋರಾದ ಫಂಡಿಗೆ ೧ ಕೋಟಿ ರೂ. ಗಳನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ಜೋಟಾನಿ, ಅನ್ಸಾರಿ, ಅಜ್ಮಲ್ ಖಾನ್, ಸರೋಜಿನೀದೇವಿ ಮೊದಲಾದ ೨೨ ಮಂದಿಗಳು ನಿಯಮಿಸಲ್ಪಟ್ಟರು.

ಮದರಾಸಿನಲ್ಲಿ ಬಕಿಂಗ್ಹಾಮ್ ಕರ್ನಾಟಿಕ್ ಮಿಲ್ ಕೂಲಿ ಜನರು ಮುಷ್ಕರಹಿಡಿದು ೪-೫ ತಿಂಗಳಿಂದ ಕೆಲಸಕ್ಕೆ ಹೋಗದೆ ನಿಂತು ತಾವೂ ನಷ್ಟಪಟ್ಟು ಮಿಲ್ ಯಜಮಾನರಿಗೂ ನಷ್ಟಕಷ್ಟಗಳನ್ನುಂಟುಮಾಡಿದ್ದರು. ಕಡೆಗೆ ಕೂಲಿಕಾರರು ತಾವಾಗಿ ಹೋಗಿ ಕೆಲಸವನ್ನು ಕೊಡಬೇಕೆಂದು ಮಿಲ್ ಯಜಮಾನರನ್ನು ಪ್ರಾರ್ಥಿಸಿ ಸೇರಿಕೊಂಡರು.

ದಿಲ್ಲಿಪಟ್ಟಣದಲ್ಲಿ ಕಳೆದ ತಾ|| ೪-೫ರಲ್ಲಿ ಯಾವದ್ಭಾರತ ರಾಷ್ಟ್ರೀಯಸಂಘ ಸಭಿಕರು ಸಭೆಗೂಡಿ ಮುಖ್ಯವಾದ ಕೆಲ ತೀರ್ಮಾನಗಳನ್ನು ಮಾಡಿದರು. ಪ್ರಭುತ್ವಶಾಸನವನ್ನುಲ್ಲಂಘಿಸುವ ಅಧಿಕಾರವನ್ನು ಆಯಾ ಪ್ರಾಂತಿಕ ಕಾಂಗ್ರೆಸ್ ಸಂಘದವರು ವಹಿಸಿಕೊಂಡು ಈ ರೂಪವಾದ ಸಹಾಯನಿರಾಕರಣವನ್ನು ಅನುವರ್ತಿಸಬಹುದೆಂದು ತೀರ್ಮಾನಿಸಿದರು.

ಭರತಖಂಡದ ಎಲ್ಲ ಅಧಿಪತ್ಯಗಳಲ್ಲೂ ಅಸಹಾಯವಾದಿಗಳಾದ ಮುಂದಾಳುಗಳನ್ನು ಒಬ್ಬೊಬ್ಬರನ್ನಾಗಿ ಹಿಡಿದು ಕಾರಾಗೃಹಕ್ಕೆ ಕಳುಹಿಸುವ ಕೆಲಸವು ಒತ್ತರದಿಂದ ನಡೆಯುತ್ತಿದೆ. ಮದ್ರಾಸಿನ ಯಾಕೂಬ್ ಹುಸೇನರನ್ನು ತಂಜಾವೂರು ಜಿಲ್ಲಾ ಮೇಜಿಸ್ಟ್ರೇಟರು ಹಿಡಿಯಿಸಿ, ೧೨೪ ಎ ೧೫೩ ಎ ಸೆಕ್ಷನ್ ಮೇರೆ ಅಪರಾಧಮಾಡಿದರೆಂದು ವಿಚಾರಣೆಮಾಡಿ ೨ ವರ್ಷ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಮ|| ಗಾಂಧಿಯವರು ಎಂಗ್ ಇಂಡ್ಯಾ ಎಂಬ ತಮ್ಮ ಪತ್ರಿಕೆಯಲ್ಲಿ ಮೃತ್ಯುಭಯವೆಂಬ ಶಿರೋಲೇಖನದಿಂದ ಒಂದು ಪ್ರಕಟನೆಯನ್ನು ಮಾಡಿ, ಅದರಲ್ಲಿ- '' ನಮಗೆ ಸ್ವರಾಜ್ಯವು ಸಿದ್ಧಿಸಿ ಶಾಶ್ವತವಾಗಿ ಅದನ್ನನುಭವಿಸಬೇಕೆಂಬ ಇಚ್ಛೆಯಿದ್ದರೆ ನಮಗೆ ಮೃತ್ಯುಭಯವು ತೊಲಗಿಹೋಗಬೇಕು. ಮಾತೃದೇಶಭಕ್ತಿಯುಳ್ಳವರು ಸಾಯುವುದಕ್ಕೂ ಕಾರಾಗೃಹದಲ್ಲಿ ವಾಸಿಸುವುದಕ್ಕೂ ಹಿಂದೆಗೆಯಕೂಡದು ,, ಎಂದು ಹೇಳಿರುತ್ತಾರೆ.

ಮೊನ್ನೆ ಶನಿವಾರ ಮದ್ರಾಸಿನ ಪಚ್ಚೆಯಪ್ಪಕಲಾಶಾಲಾ ಭವನದಲ್ಲಿ ಕೀರ್ತಿಶೇಷ ಡಾಕ್ಟರ್ ನಾಯರ್ ರವರ ಭಾವಚಿತ್ರಪಟ ಪ್ರತಿಷ್ಠಾಪನ ಕಾರ್ಯವನ್ನು ಸರ್ ಪಿ. ತ್ಯಾಗರಾಯಶೆಟ್ಟರ ಅಧ್ಯಕ್ಷತೆಯಿಂದ ಕೂಡಿದ್ದ ಸಭೆಯೊಳಗೆ ಮ|| ಸಿ. ರಾಮಲಿಂಗರಡ್ಡಿ ಎಂ. ಎ. ಯವರು ನೆರವೇರಿಸಿದರು. ಆ ಸಮಯದಲ್ಲಿ ರಡ್ಡಿಯವರು ನಾಯರ್ ರವರ ಉದಾತ್ತ ಗುಣಾವಳಿಗಳನ್ನು ರಸವತ್ತಾದ ಭಾಷಣದಿಂದ ವಿವರಿಸಿ ಸಭಿಕರನ್ನು ಆನಂದಗೊಳಿಸಿದರು.

ಕಾರಾಗೃಹದಲ್ಲಿರುವ ಡಾಕ್ಟರ್ ಕಿಚಲುಯವರಿಗೆ ಮೂಲವ್ಯಾಧಿಯ ಬಾಧೆಯಂತೆ. ಅವರ ಕಾಲಿನ ಜೋಡನ್ನು ತೆಗೆಯಿಸಿಬಿಟ್ಟು ಚಡ್ಡಿಯನ್ನು ತೊಡಿಸಿದುದರಿಂದ ಅವರು ಆಹಾರವನ್ನೇ ಸ್ವೀಕರಿಸದೆಹೋಗಿರುವರೆಂದು ಸುದ್ದಿ ಬಂದಿದ್ದಿತು. ಈಚೆಗೆ ಹೇಗೋ ತಿಳಿಯಲಿಲ್ಲ. ಮಹಮ್ಮದಾಲಿಯವರಿಗೆ ಅತಿಮೂತ್ರವ್ಯಾಧಿಯಿರುವುದರಿಂದ ಕಾರಾಗೃಹದ ಆಹಾರವು ಅವರಿಗೆ ಸರಿಬೀಳದೆಹೋಗಿದೆಯಂತೆ. ಅವರ ಬೆನ್ನಮೇಲೆ ಎದ್ದಿದ್ದ ಹುಣ್ಣು ವಾಸಿಯಾಗಿ ಮತ್ತೆ ಹೊಸಹುಣ್ಣು ಮೂಡಿದೆ.

ಮೆಲಗಾನಿನಲ್ಲಿ ದಂಗೆಯೆದ್ದು ದೇವಾಲಯದ ಸಮೇತ ಪೊಲೀಸ್ ಇನ್ಸ್‌ಪೆಕ್ಟರನ್ನು ಸುಟ್ಟುಬಿಟ್ಟ ಅಪರಾಧಿಗಳ ವಿಚಾರಣೆಯು ನಾಸಿಕಾದ ಸೆಷನ್ ಜಡ್ಜರಮುಂದೆ ನಡೆದು, ೧೧೩ ಮಂದಿ ಅಪರಾಧಿಗಳಲ್ಲಿ ೪೭ ಮಂದಿಗಳು ನಿರ್ದೋಷಿಗಳೆಂದು ಬಿಡಲ್ಪಟ್ಟರು. ೫ ಮಂದಿಗೆ ಮರಣದಂಡನೆಯೂ, ಮೂವರಿಗೆ ೭ ವರ್ಷಗಳ ಕಠಿನಕಾರಾಗೃಹವಾಸಶಿಕ್ಷೆಯೂ, ಉಳಿದವರಿಗೆ ಕೆಲಕೆಲ ತಿಂಗಳ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟುವು. ಈ ಅಪರಾಧಿಗಳಲ್ಲೆಲ್ಲಾ ೫ ಮಂದಿ ಮಾತ್ರವೇ ಹಿಂದುಗಳು.

ಮ|| ಗಾಂಧಿಯವರು ಎಲ್ಲ ಭಾಷೆಗಳಲ್ಲೂ ಒಂದು ಪ್ರಕಟನೆಯನ್ನು ಮಾಡಿ ಅದರಲ್ಲಿ ಹೀಗೆ ತಿಳಿಯಿಸಿದ್ದಾರೆ. '' ಹಿಂದೂಮತದಲ್ಲಿ ಅಸ್ಪೃಶ್ಯತ್ವದೋಷವಿರುವುದು ಕೇವಲ ರಾಕ್ಷಸಕೃತ್ಯ. ಆ ದೋಷವನ್ನು ಹೋಗಲಾಡಿಸಿದರೇನೇ ಸ್ವರಾಜ್ಯವು ಸುಲಭವಾಗಿ ಸಿದ್ಧಿಸುವುದು. ಆದುದರಿಂದಲೇ ಇದಕ್ಕೆ ನಾನು ಪ್ರಾಧಾನ್ಯವನ್ನು ಕೊಟ್ಟದ್ದೇನೆ. ಭಗವಂತನ ಸೃಷ್ಟಿಗೊಳಪಟ್ಟ ಜನವರ್ಗದಲ್ಲಿ ಮಾನುಷ ಮಾತ್ರ ಬುದ್ಧಿಯನ್ನೂ ಕರುಣೆಯನ್ನೂ ಇಡದಿರುವುದು ಭಗವತ್ಸಂಕಲ್ಪಕ್ಕೆ ವಿರುದ್ಧವಾದುದು. ನಾನು ಮರಳಿ ಜನಿಸುವುದು ಭಗವತ್ಸಂಕಲ್ಪವಾಗಿದ್ದರೆ ನಾನು ಬ್ರಾಹ್ಮಣನಾಗಿ ಹುಟ್ಟುತ್ತೇನೆಂದೂ, ವೈಶ್ಯನಾಗಿ ಜನಿಸುವೆನೆಂದೂ, ಶೂದ್ರನಾಗಿ ಜನ್ಮಿಸುವೆನೆಂದೂ ಕೋರಿಕೊಳ್ಳುವುದಿಲ್ಲ. ಪಂಚಮನಾಗಿಯೇ ಹುಟ್ಟಿ ಅವರೊಡನೆ ಕಷ್ಟವನ್ನನುಭವಿಸಿ ಅವರನ್ನುದ್ಧರಿಸಿ ನಾನೂ ಜನ್ಮೋತ್ತಾರವನ್ನು ಮಾಡಿಕೊಳ್ಳುವೆನು. ಅಸ್ಪೃಶ್ಯತ್ವವು ಮುಂದಣ ವರ್ಷಾರಂಭದೊಳಗೆ ಕಳೆದುಹೋಗಬೇಕು.''

ಗುಜರಾತ್ ಕಲಾಶಾಲೆಯಲ್ಲಿ ಪ್ರೊಫೆಸರಾಗಿರುವ ಚಾರ್ಲಿಯರ್ ವರು ಒಂದು ನೂತನ ವಸ್ತುವನ್ನು ಕಂಡುಹಿಡಿದಿದ್ದಾರೆ. ಅದು ಒಂದು ಲಾಂದ್ರದಂತಿರುವ ದೀಪವಾಗಿದೆ. ಇದರ ಸಹಾಯದಿಂದ ಕತ್ತಲೆಯಿಲ್ಲದಿರುವ ಕೊಟ್ಟಡಿಯ ಸುಣ್ಣದ ಗೋಡೆಯಮೇಲೂ ತೆರೆಗಳಮೇಲೂ ಸೂರ್ಯನ ಪ್ರಕಾಶವನ್ನು ಕೆಡಹುವುದರಿಂದ ಸ್ಫಟಿಕದ ಹಲಗೆಯು ಹೇಗೆ ಪಾರದರ್ಶಕವಾಗಿರುವುದೋ ಹಾಗೆ ಗೋಡೆಯಿಂದಾಚೆಗೂ ತೆರೆಯಿಂದಾಚೆಗೂ ಇರುವ ವಸ್ತುಗಳನ್ನೆಲ್ಲಾ ನೋಡಬಹುದಂತೆ.

ನಾಳೆ ಜನವರಿಯೊಳಗೆ ಸ್ವರಾಜ್ಯವು ಬರದಿದ್ದರೆ ನೀವೇನುಮಾಡುವಿರಿ ? ಎಂದು ಯಾರೋ ಕೆಲವರು ಮ|| ಗಾಂಧಿಯವರನ್ನು ಕೇಳಿದರಂತೆ. ಅದಕ್ಕೆ ಅವರು ಹೀಗೆ ಉತ್ತರಕೊಟ್ಟಿದ್ದಾರೆ—ಜನವರಿಯಲ್ಲಿ ನಾನೇನುಮಾಡುವೆನೋ ಅದನ್ನು ಹೇಳುವುದಿಲ್ಲ. ಆ ತಿಂಗಳಲ್ಲಿ ನನ್ನ ನೆರೆಯ ಪ್ರಜೆಗಳನ್ನು ಬಿಟ್ಟು ನಿರ್ಮಾನುಷ್ಯಪ್ರದೇಶಕ್ಕೆ ಹೋಗುವುದೋ, ಅಥವಾ ಜಾತೀಯ ಪ್ರಭುತ್ವನಿರ್ಮಾಣಕ್ಕೆ ಸಹಾಯವನ್ನೋ ಮಾಡುತ್ತಿರುವೆನು. ಈ ವರ್ಷದೊಳಗೆ ಸ್ವರಾಜ್ಯವು ಬರದಿದ್ದರೆ ನನ್ನ ಜೀವಿತವು ದುರ್ಭರವಾಗುವುದು. ಆತ್ಮನು ಅತ್ಯಂತವಾಗಿ ಬಾಧೆಗೊಂಡು ಶರೀರವು ಶಿಥಿಲವಾಗಬಹುದು.

ಕಳೆದ ಸೋಮವಾರ ದಿಲ್ಲಿಯಲ್ಲಿ ಸಂಸ್ಥಾನಿಕರ ಸಭೆಯು ವೈಸ್ರಾಯರ ಅಧ್ಯಕ್ಷತೆಯಿಂದ ನೆರವೇರಿತು. ೩೫ ಮಂದಿ ಪ್ರಭುಗಳು ಸಭೆಗೆ ಬಂದಿದ್ದರು. ಗ್ವಾಲಿಯರ್ ಮಹಾರಾಜರು ವೈಸ್ರಾಯಿ ದಂಪತಿಗಳಿಗೆ ಸ್ವಾಗತವನ್ನು ಮಾಡಿದರು. ರೀಡಿಂಗ್ ಪ್ರಭುಗಳು ಅಧ್ಯಕ್ಷಪೀಠವನ್ನಲಂಕರಿಸಿ || ಗಂಟೆಯ ಹೊತ್ತು ಪ್ರಾರಂಭ ಭಾಷಣವನ್ನು ಮಾಡಿದರು. ಸಭಾಚರ್ಚೆಗಳೂ ತೀರ್ಮಾನಗಳೂ ರಹಸ್ಯಗಳಾದುದರಿಂದ ವೃತ್ತಪತ್ರಿಕೆಗಳಿಗೆ ತಿಳಿಯುವುದಿಲ್ಲ. ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸರ ಸುಸ್ವಾಗತವನ್ನು ಮಾಡಿ ಸತ್ಕರಿಸಲು ಸಂಸ್ಥಾನಿಕರೆಲ್ಲರೂ ಹಾರೈಸಿರುವ ತೀರ್ಮಾನವನ್ನುಮಾಡಿ ವೈಸ್ರಾಯರಿಗೆ ತಿಳಿಯಿಸಿದರು.

ಹಿಮವತ್ಪರ್ವತದ ಎವರೆಸ್ಟ್ ಶಿಖರವನ್ನೇರುವುದಕ್ಕೆ ಹೋಗಿದ್ದ ಪಾಶ್ಚಾತ್ಯ ಯಾತ್ರಿಕರೆಲ್ಲಾ ೨೩೦೦೦ ಅಡಿಗಳ ಎತ್ತರಕ್ಕೆ ಹತ್ತಿದ್ದರು. ಅಲ್ಲಿಂದ ಮುಂದಕ್ಕೆ ಹೋಗಲು ಅವರಿಂದ ಸಾಧ್ಯವಾಗಲಿಲ್ಲ. ಅದರ ಮುಂದೆ ಉಸಿರಾಡಲಿಕ್ಕೇ ಅವಕಾಶಕೊಡದಷ್ಟು ಹಿಮವು ದಟ್ಟವಾಗಿ ವ್ಯಾಪಿಸಿದ್ದಿತಂತೆ. ಮತ್ತು ಭಯಂಕರವಾದ ಗಾಳಿಯು ಬೀಸುತ್ತಿದೆಯಂತೆ. ಅದುಕಾರಣ ಅವರು ಆ ಶಿಖರದ ಉತ್ತರಭಾಗದಲ್ಲಿ ತಾವು ಹೋಗಿದ್ದ ಸ್ಥಲದಲ್ಲಿ ಒಂದು ಗುರ್ತನ್ನೇರ್ಪಡಿಸಿ, ಅಲ್ಲಿಯ ವಿದ್ಯಮಾನಗಳನ್ನೆಲ್ಲಾ ಬರೆದುಕೊಂಡು ಅಕ್ಟೋಬರ್ ತಾ|| ೫ರಲ್ಲಿ ಅಲ್ಲಿಂದ ಹಿಂದಿರುಗಿದರು. ಅವರಲ್ಲಿ ಒಬ್ಬ ಪ್ರಮುಖನು ಮೃತನಾದನು. ಈ ತಿಂಗಳಲ್ಲಿ ಅವರೆಲ್ಲಾ ಸೀಮೆಗೆ ಪ್ರಯಾಣಮಾಡುವರು. ಮುಂದಣ ವರ್ಷದಲ್ಲಿ ಇದೇ ಉದ್ದೇಶದಿಂದ ಮತ್ತೊಂದು ಯಾತ್ರಿಕರ ಗುಂಪು ಈ ದೇಶಕ್ಕೆ ಬರುವುದಾಗಿದೆ.

ವಿದೇಶದ ವೃತ್ತಾಂತಗಳು.

ಬಲ್ಗೇರಿಯಾದೇಶದ ಮುಖ್ಯಮಂತ್ರಿ ಎಂ. ಡಮಿಟ್ರಾವ್ ರವರು ಮೋಟಾರಿನಲ್ಲಿ ಹೋಗುತ್ತಿರುವಾಗ ಯಾರೋ ರಿವಾಲ್ವರಿನಿಂದ ಹೊಡೆದು ಕೊಂದುಬಿಟ್ಟರು.

ಈಗಣ ಸ್ಥಿತಿಯನ್ನು ಪರ್ಯಾಲೋಚಿಸಿ ತುರ್ಕಿಯ ವಿಷಯವನ್ನು ತುರುಕರ ಮನಸ್ಸಿಗೆ ನೋವಾಗದಂತೆ ಪರಿಷ್ಕರಿಸುವುದೇ ವಿಹಿತವೆಂದು ಲಂಡನ್ ಟೈಮ್ಸ್ ಪತ್ರಿಕೆಯು ಆಂಗ್ಲಪ್ರಭುತ್ವಕ್ಕೆ ಹಿತಸೂಚನೆಮಾಡಿರುತ್ತದೆ.

ಹಂಗೇರಿಯಾ ಶಾಸನಸಭೆಯವರು ಕಾರಲ್ ರವರನ್ನು ರಾಜ್ಯ ಸಿಂಹಾಸನದಿಂದ ಬಹಿಷ್ಕರಿಸಿ ಒಂದು ವಿಧಿಯನ್ನು ಮಾಡಿ

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ನವಂಬರ್ ತಾ|| ೧೩ ನೆಯ ಭಾನುವಾರ.

ಶಾನುಬೋಗರುಗಳ ಪಟಾಟೋಪ.

ಗ್ರಾಮಾಂತರಗಳಲ್ಲಿ ಶ್ಯಾನುಬೋಗರೇ ಸರ್ವಾಧಿಕಾರಿಗಳು. ಅನೇಕರು ತಮ್ಮ ಉತ್ತಮಯೋಗ್ಯತೆಯಿಂದ ಆ ಗೌರವವನ್ನು ಕಾಪಾಡಿಕೊಂಡು ಪ್ರಜಾಪ್ರೀತಿಪಾತ್ರರಾಗಿರುವರು. ಆದರೆ ಇತ್ತೀಚೆಗೆ ಅಲ್ಲಲ್ಲಿ ಕೆಲವರು ದುರಾಶಾಪ್ರೇರಿತರಾಗಿ ಗ್ರಾಮುಗಳಿಗೆ ದುಷ್ಕಂಟಕರಂತೆ ಪರಿಣಮಿಸುತ್ತಿರುವರು. ಶ್ಯಾನುಬೋಗರ ಕಾನ್ಫರೆನ್ಸು ಎಂಬುದು ಅವರುಗಳ ಹಿತಪ್ರಾಪ್ತಿ ಅನಿಷ್ಟನಿವಾರಣೆಗೆ ಸಾಧನವಾಗಿ ಏರ್ಪಟ್ಟರೂ ಈಚೆಗೆ ಅದರ ರೀತಿಯ ಬದಲಾವಣೆಯಿಂದ ಅನೇಕ ಶಾನುಬೋಗರಿಗೆ ಅದು ಹಾವಿಗೆ ರಕ್ಕೆಯನ್ನು ಹುಟ್ಟಿಸಿಕೊಟ್ಟಂತೆ ಔದ್ಧತ್ಯಸಂಪಾದಕವಾಗಿ ಪರಿಣಮಿಸಿದಂತೆ ತೋರುತ್ತದೆ. ಕೆಲವು ಶಾನುಬೋಗರು ಗ್ರಾಮಾಂತರದವರ ಮೇಲೆ ತೋರಿಸುತ್ತಿದ್ದ ತಮ್ಮ ಕೈಯನ್ನು ತಮ್ಮ ಮೇಲ್ಪಟ್ಟ ಅಧಿಕಾರಿಗಳ ಮೇಲೂ ತೋರಿಸುವುದಕ್ಕೆ ಹಿಂಜರಿಯದ ಸ್ಥಿತಿಗೆ ಬಂದಿದ್ದಾರೆ. ಚಿಂತಾಮಣಿಯಲ್ಲಿ ಸಬ್ ಡಿವಿಜನಲ್ ಆಫೀಸರಾಗಿರುವ ಮ|| ಎಂ. ಸಿ. ಚನ್ನರಾಜೇಅರಸ್ ಬಿ.ಎ.ಬಿ.ಎಲ್. ರವರು ಜಮಾಬಂದಿಕಾಲದಲ್ಲಿ ಅಕ್ಕಿಮಂಗಲ ಮೊದಲಾದ ಗ್ರಾಮುಗಳ ಶಾನುಬಾಗರೊಬ್ಬರಲ್ಲಿ ಏನೋ ತಪ್ಪನ್ನು ಕಂಡು ಕೆಲಸದಿಂದ ಸಸ್ಪೆಂಡ್ ಮಾಡಲಾಗಿ, ತನ್ನನ್ನು ಆಫೀಸರು ಬೈದು ಅಪಮಾನಪಡಿಸಿದರು ಎಂದು ಮೊದಲಾಗಿ ಕ್ರಿಮಿನಲ್ ಮಾನನಷ್ಟದ ವ್ಯಾಜ್ಯವನ್ನು ಕೋಲಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಹೂಡಿರುವರಂತೆ. ಇತ್ತ ಚೆನ್ನಪಟ್ಟಣದ ತಾ|| ಅಮಲ್ದಾರ್ ಮ|| ಕೆ. ಸಿದ್ಧರಾಮಪ್ಪನವರು ಜಮಾಬಂದಿ ಕಾಲದಲ್ಲಿ ಕೆಲ ಶ್ಯಾನುಬೋಗರುಗಳಿಗೆ ಪಿಸ್ಸೆಪಟ್ಟಿಯ ಲೆಕ್ಕವನ್ನಿಡದಿದ್ದ ತಪ್ಪಿತಕ್ಕಾಗಿ ಐದೈದು ರೂ.ಗಳ ಅರ್ಥದಂಡವನ್ನು ವಿಧಿಸಿದುದಕ್ಕಾಗಿ, ಒಂದುವರ್ಷದರಜಾಕ್ಕೆ ಬರೆದುಕೊಂಡು, ಆ ತಾಲ್ಲೂಕಿನ ಶ್ಯಾನುಬೋಗರೆಲ್ಲಾ ಸೇರಿ ಗುಂಪುಕಟ್ಟಿ ರೆವಿನ್ಯೂಕಮಿಷನರ ಡಿ|| ಕಮಿಷನರ ಬಳಿಗೆ ಹೋಗಿ ಅಮಲ್ದಾರರಮೇಲೆ ಕಾರ್ಯಭಾಗಮಾಡಲು ಪ್ರಯತ್ನಿಸಿರುವರಂತೆ,

ಮೇಲೆಕಂಡ ೨ ವಿಷಯವೂ ಬ್ರಾಹ್ಮಣ ಶಾನುಬೋಗರುಗಳಿಂದ ಬ್ರಾಹ್ಮಣೇತರಾಧಿಕಾರಿಗಳ ಮೇಲೆ ನಡೆಯಿಸಲ್ಪಡುತ್ತಿರುವ ಕಾರ್ಯಭಾಗಗಳಾಗಿರುತ್ತವೆ. ಇದು ಗಮನೀಯವಾದುದು. ಅವೆರಡು ವಿಷಯವೂ ವಿಚಾರಣೆಯಿಂದ ಇತ್ಯರ್ಥವಾಗಲಿಕ್ಕಿರುವುದರಿಂದ ನಾವು ಇಲ್ಲಿ ಹೆಚ್ಚಿಗೆ ವಿಮರ್ಶೆಮಾಡಲು ಇಚ್ಛೈಸುವುದಿಲ್ಲ. ಮಿಲ್ಲರ್ ಕಮಿಟಿ ವರದಿಯು ಪ್ರಕಟವಾದ ಮೇಲೆ ಸಂಸ್ಥಾನದ ಶಾನುಬೋಗರೆಲ್ಲಾ ಸ್ಟ್ರೈಕ್ ಮಾಡುವರೆಂದು ಒಂದು ಪ್ರವಾದಹುಟ್ಟಿದ್ದಿತು. ಅದೇನೂ ಹೊರಬೀಳಲಿಲ್ಲ. ಇದು ಅದರ ಅಂಕುರದಂತೆ ಕಾಣುತ್ತಿದೆಯೆಂದು ಕೆಲವರು ಆಡಿಕೊಳ್ಳುತ್ತಿದ್ದಾರೆ. ರೆ|| ಕಮಿಷನರರಾದ ಮ|| ಕೆ. ಶ್ರೀನಿವಾಸಯ್ಯಂಗಾರರು ಬ್ರಾಹ್ಮಣವಿದ್ಯಾಸಹಾಯಸಂಘದ ಕಾರ್ಯಕಾರಿಮಂಡಲಿಯ ಸಭ್ಯರಾಗಿರುವುದರಿಂದ ಬ್ರಾಹ್ಮಣೋದ್ಯೋಗಿಗಳು ಮಾಡುವ ದಾಂಧಲೆಗಳೆಲ್ಲಾ ಅವರಿಂದ ಬೆನ್ನು ಹಾಕಿಕೊಳ್ಳಲ್ಪಡುವುವೆಂದು ಕೆಲವರು ಭ್ರಮಿಸಿರುವಂತೆ ತೋರುತ್ತದೆ. ಪರ್ಯವಸಾನವು ಮುಂದೆ ಗೊತ್ತಾಗುವುದು. ಮುಖ್ಯವಾಗಿ ನೆರೆಹೊರೆಯ ಸರ್ಕಾರಗಳಲ್ಲಿರುವಂತೆ ಶಾನುಬೋಗರುಗಳಿಗೆ ಉಚಿತವಾದ ಸಂಬಳಗಳನ್ನು ಗೊತ್ತುಮಾಡಿ ೨-೩ ವರ್ಷಗಳಿಗೆ ಒಂದೊಂದುಸಲ ಬೇರೆಬೇರೆ ಸ್ಥಲಗಳಿಗೆ ವರ್ಗಾಯಿಸುವಂತೆ ಆದರೆ ಸರ್ಕಾರಕ್ಕೂ ಕ್ಷೇಮ ಪ್ರಜೆಗಳಿಗೂ ಕ್ಷೇಮ.

A NOTEABLE SPEECH.

The address of Mr. A. R. Bannerji, Senior Member of Council, to the members of the Civil Service Association at Bangalore on Saturday the 5th instant is a noteable utterance of the day. It deals with more than one burning topics of the present day politics in Mysore and elsewhere. It sounds more than one warnings to the responsible body of the Civil Service in view of the changed conditions of the mentality and awakening in respect of individual rights as belonging to the masses. It reveals the new influences which are working to beget new and healthy organisations out of the deteriorating conditions of the past. It points out that the life of the Mysore Civil Service is passing through a critical stage of its existence and that its vigorous future lies in its loyalty and faithfulness to His Highness the Maharaja and in its co-operation with the Government in every measure which may be undertaken for the improvement of the administration as a whole. It foresees constitutional reconstruction in the Indian States in the light of the reforms in British India and in view of the just aspirations of the people of the country for an adequate share in the administration. It is all in all a homily of sound maxims for the guidance of the members of the Civil Service in their dealings with the changed situation. The speech is pregnant with wisdom and all through there runs a stream of advice. Mr. Bannerji most emphatically invites attention to the study of the new conditions with a broadminded freedom from bias and communal jealousies by means of self sacrifice and loyalty to the Soverign in a more marked manner than its members are known to have done in the past. These sound wise and practical views of this statesman are punctuated by the authoritative statements of eminent men like Ghokale and others. We reiterate those meaningful expressions of the Indian Political Sage-Ghokale, "Let it not be said that the Civil Services look at every question from the standard of their own power or that they are zealously anxious to guard their own monopoly of power and subordinate everything to such consideration" and Mr. Bannerji concludes this portion of his address with the following inspiring words "The interests of the people should take precedence over every other interest." Gospel truth! An effective hit at the conduct of the monopolists! Here the vested interests are shred into pieces. These are the words of a real statesman who speaks from a careful and considered study of the awakened spirit which spirit is expressed by him in the following words—"The masses have been awakened to a sense of their political life." Smother this spirit with a view to guard selfish interests and it means explosion. Try to kill this awakening and it means annihilations of that system which obstructs the development of Representative Government in which the people's interests are the main interests of administration. Above all these points of grave consideration Mr. Bannerji has in a most befitting manner touched on the much misinterpreted condition of official work viz., efficiency. We have before this explained in our columns what this efficiency means in an administration and on account of frequent reference to it by the monopolists it has become as he calls it "hackneyed." Certainly it is the means rather than the end and an artificial value should not be placed on any standard. It is neither the routine nor original nature of the work which marks the standard of efficiency. And it is certainly not the heaps of examinations. But it is definitely and accurately measured by the material and moral happiness which that efficiency affords to the people. It is this system of work promoting the happiness of the governed which is efficient and not that vain glorious M. As. & M. Ls. who are required only to an extent for the purpose of maintaining the form rather than the spirit of the administration. False standards of efficiency and merit are the means not of efficiency but of the aggrandzisation of self interests. We congratulate the Association on the opportunity that it has had to hear an advice which will serve them in good stead in their future career. We have great pleasure to note the wisdom of this address of Mr. Bannerji in which are surveyed the agitating conditions of the present day politics of Mysore.

We also congratulate the master of that speech which was well said and in time.

BANGALORE CITY PRESIDENTS' ELECTION.

This is a disappointing thing. We expected that unanimity would come to prevail in this. In our last note on this subject we said that in the right course of things Mr. M. Subbayya should have been elected unanimously just as on the last occasion it proved so in the case of Mr. Garudachar. But our expectations have failed and it appears to be that the object of franchise has not been realised by the councillors. The results are—Mr. Garudachar secured 16 votes and Mr. Subbayya 10. Neither has secured the required number of minimum votes. Both have failed and a third person should necessarily be appointed. It needs no statement as to whether either of these two has a chance for nomination. Absolutely not. A failure is a failure whether it be by one vote or by one hundred votes. The rule has fixed the minimum and that decides the chance of nomination in the case of the either.

We hear that as in Madras rules, a chance may be given for a 2nd election though we have no rule of the kind with us. But it must be clearly understood that this choice comes in only when the election could not take place on the appointed day or there is some irregularity. In a case in which all the members have been present and votes have been taken and no one has secured the required number of votes, the right has gone for ever and for the time being. The only course under the Regulation is for the Government to nominate one who did not stand for election. It may be any one who has shown capacity for it. If on the other hand a further election is solicited and if either of the failed candidates is nominated, it is going beyond the scope of the Regulation. We believe that none of it will happen and create unnecessary disputation. Amongst the remaining councillors there are candidates for Presidentship who are equally competent and thus there is no difficulty for the Government to decide.

ಒಳದೇಶದ ವೃತ್ತಾಂತಗಳು.

ಜಸ್ಟಿಸ್ ಪ್ಲಮರ್ ಸಾಹೇಬರು ರಜವನ್ನು ಪೂರೈಸಿಕೊಂಡು ಬಂದಮೇಲೆ ಡಿ|| ಜಡ್ಜಿಗಳಾದ ಮ|| ಬ್ಯಾರಿಸ್ಟರ್ ಬಿ. ನಾಗಪ್ಪನವರು ಬೆಂಗಳೂರಿಗೂ, ಮ|| ಬಿ. ಸುಬ್ಬಣ್ಣನವರು ಮೈಸೂರಿಗೂ, ಮ|| ಕೆ. ರಾಮಸ್ವಾಮಯ್ಯಂಗಾರರು ಶಿವಮಗ್ಗಿಗೂ ವರ್ಗವಾಗಿ ಹೋಗಬೇಕಾಗಿದೆ.

ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಅಸಹಾಯವಾದಿಪಕ್ಷದ ಕೆಲವರು ಉಪನ್ಯಾಸಗಳನ್ನು ಮಾಡುವುದು ಹೆಚ್ಚುತ್ತಿದೆ. ಆಂಗ್ಲಜನರ ಮೇಲೆ ಮನಃ ಕಾಲುಷ್ಯವನ್ನುಂಟುಮಾಡತಕ್ಕ ಇಂಥ ಪ್ರಯತ್ನಕ್ಕೆ ಎಳಸಿನಲ್ಲೇ ಪ್ರತಿಬಂಧಕವನ್ನು ಕಲ್ಪಿಸದಿರುವುದು ನಮ್ಮ ಸಂಸ್ಥಾನಕ್ಕೆ ಹಿತಕರವಲ್ಲ.

ವೀರಶೈವಮತೋದ್ಧಾರವನ್ನು ಮಾಡಿ ಜಗತ್ಪ್ರಸಿದ್ಧನಾದ ಶ್ರೀ ಬಸವೇಶ್ವರನ ಜನ್ಮ ಚಿತ್ರಪಟವನ್ನು ಎಚ್. ಜಿ. ಲಿಂಗಣ್ಣ ಅಂಡ್ ಕೋಯವರಿಂದ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಇದರ ಸಂಬಂಧವಾದ ಪ್ರಕಟನಪತ್ರಿಕೆಯು ಈ ಸಂಚಿಕೆಯಲ್ಲಿ ಗರ್ಭೀಕರಿಸಲ್ಪಟ್ಟಿದೆ. ವಾಚಕಮಹಾಶಯರು ಅದನ್ನು ಗಮನಿಸಿ ಪ್ರಕಾಶಕರಿಗೆ ಪ್ರೋತ್ಸಾಹವನ್ನುಂಟುಮಾಡುವವರಾಗಲೆಂದು ಕೋರುತ್ತೇವೆ.

ಮ|| ಗಳಾದ ಬಿ. ರಾಮಸ್ವಾಮಯ್ಯನವರು ಬೆಂಗಳೂರು ಡಿ|| ಕಮಿಷನರಾಗಿಯೂ, ಎಸ್. ಪಿರಿಯಣ್ಣಯ್ಯನವರು ಜನರಲ್ ಡಿಪಾರ್ಟ್‌ಮೆಂಟ್ ಆಕ್ಟಿಂಗ್ ಸೆಕ್ರೆಟರಿಯಾಗಿಯೂ, ಚಿತ್ರದುರ್ಗದ ಡಿ|| ಕ|| ಸಿ. ವೆಂಕಟರಾಯರು ರೆವಿನ್ಯೂ ಡಿಪಾರ್ಟ್‌ಮೆಂಟಿನ ಆಕ್ಟಿಂಗ್ ಸೆಕ್ರೆಟರಿಯಾಗಿಯೂ, ಎ. ಕೆ. ಎಸ್. ತಾಜ್ ಪೀರ್ಖಾರವರು ಚಿತ್ರದುರ್ಗದ ಆಕ್ಟಿಂಗ್ ಡಿ|| ಕಮಿಷನರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಆಸ್ಥಾನ ವಿದ್ವಾಂಸರಾಗಿದ್ದ ವೇ|| ರಾಜೋಟಿಶಾಸ್ತ್ರಿಗಳು ಶಿವಾಧೀನರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಕೈ|| ಬಸವಪ್ಪಶಾಸ್ತ್ರಿಗಳು ಗತಿಸಿದಮೇಲೆ ಪದ್ಯಕಾವ್ಯಗಳ ಓದುಗಾರಿಕೆಯಲ್ಲಿ ಇವರು ಪ್ರಸಿದ್ಧರಾಗಿದ್ದರು. ಇದೇ ವಿಷಯದಲ್ಲಿ ಇವರು ಟ್ರೇನಿಂಗ್ ಕಾಲೇಜಿನಲ್ಲಿ ಬೋಧಕರಾಗಿ ನಿಯಮಿಸಲ್ಪಟ್ಟಿದ್ದರು. ಇವರು ಹಿಂದೆ ಮಹಾರಾಜಾ ಕಾಲೇಜ್ ಕನ್ನಡ ಪಂಡಿತರಾಗಿದ್ದ ಚಿ. ಸಿದ್ಧಲಿಂಗಪ್ಪನವರ ದ್ವಿತೀಯಕುಮಾರರು.

ರಾಜಕುಮಾರಿ ಕೃಷ್ಣಾಜಮ್ಮಣ್ಣಿಯವರ ಹೆಸರಿನ ಮೇಲೆ ರಾಜಧಾನಿಯ ಕುಂಬಾರಕೊಪ್ಪಲ ಬಳಿ ಹೊಸದಾಗಿ ಕಟ್ಟಲ್ಪಟ್ಟಿರುವ ಕ್ಷಯರೋಗದ ಆಸ್ಪತ್ರೆಯ ಪ್ರಾರಂಭೋತ್ಸವವು ಈ ತಾ|| ೧೮ ರ ಬೆಳಗ್ಗೆ ೧೦ ಗಂಟೆಗೆ ಶ್ರೀಮನ್ ಮಹಾರಾಜರವರಿಂದ ನಡಿಸಲ್ಪಡುವುದು. ಆಗ್ಗೆ ಸೀನಿಯರ್ ಸರ್ಜನರು ಈ ಆಸ್ಪತ್ರೆಯ ಸಂಬಂಧವಾಗಿ ಒಂದು ವಿಜ್ಞಾಪನ ಪತ್ರಿಕೆಯನ್ನೋದಿ ಒಪ್ಪಿಸುವರು. ಮತ್ತು ಶ್ರೀಮನ್ ಮಹಾರಾಜರವರು ಅದಕ್ಕುತ್ತರವನ್ನು ದಯಪಾಲಿಸಿ ವಾರ್ಡುಗಳನ್ನು ಪರಾಮರ್ಶಿಸುವರು.

ರಾಜಧಾನಿಯಲ್ಲಿ ಪ್ಲೇಗಿನ ಹಾವಳಿಯು ಇನ್ನೂ ಶಾಂತವಾಗಿಲ್ಲ. ಹೆಲ್ತ್ ಆಫೀಸಿನವರು ಆಯಾದಿನಗಳಲ್ಲಿ ಪ್ಲೇಗು ಸೋಂಕುತಗಲಿದ ಮತ್ತು ಸತ್ತ ಜನರ ಸಂಖ್ಯೆಯನ್ನು ಬಹಿರಂಗಸ್ಥಲದಲ್ಲಿ ಆಯಾದಿನವೇ ಬರೆದು ಪ್ರಕಟಿಸುತ್ತಿದ್ದುದರಿಂದ ಅದರ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಪ್ರಜೆಗಳಿಗೆ ಅನುಕೂಲವಾಗುತ್ತಿದ್ದಿತು. ಹೀಗೆ ಪ್ರಕಟಿಸುವುದು ಈಗ್ಗೂ ಬೆಂಗಳೂರಿನಲ್ಲಿ ಪದ್ಧತಿಯಾಗಿದೆ. ಮೈಸೂರಿನಲ್ಲಿ ಮಾತ್ರ ತಪ್ಪಿಸಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ.

ತುಮಕೂರಿನಲ್ಲಿ ಕಟ್ಟಲ್ಪಡತಕ್ಕಿರುವ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನ ಮಹೋತ್ಸವವು ತುಮಕೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ್ ಮ|| ಸಿರ್ಸಿ ಆನಂದರಾವ್ ರವರ ಹಸ್ತದಿಂದ ನಿನ್ನೆಯದಿವಸ ಬೆಳಗಿನ ೧೧ ಗಂಟೆಯಲ್ಲಿ ಯಥಾವಿಧಿಯಾಗಿ ವೈಭವದಿಂದ ನಡೆಯಿಸಲ್ಪಟ್ಟಿತು. ವಿದ್ಯಾಸಹಾಯಾರ್ಥವಾದ ಈ ಕಾರ್ಯಕ್ಕೆ ತಕ್ಕ ಸ್ಥಳಾನುಕೂಲ್ಯ ಮೊದಲಾದುವುಗಳನ್ನು ಕಲ್ಪಿಸಿಕೊಟ್ಟ ಮ|| ಆನಂದರಾಯರು ವಂದನೀಯರಾಗಿರುವುದಲ್ಲದೆ ಹಿಡಿದ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದ ತುಮಕೂರು ವೀರಶೈವ ಮಹನೀಯರು ಪ್ರಶಂಸಾಪಾತ್ರರಾಗಿದ್ದಾರೆ.

ನಮ್ಮ ಶ್ರೀಮನ್ಮಹಾರಾಜರು ಬರುವ ಡಿಶಂಬರ್ ತಿಂಗಳ ಆದಿಭಾಗದಲ್ಲಿ ಕಾಶೀಪಟ್ಟಣಕ್ಕೆ ದಯಮಾಡಿಸುವರು ಅಲ್ಲಿರುವ ಭಾರತೀಯ ವಿಶ್ವವಿದ್ಯಾಲಯಕ್ಕೆ ಇವರು ಚಾನ್ಸಲರಾಗಿರುವಕಾರಣ, ಆ ಪೀಠದಿಂದ ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಕೊಡಲ್ಪಡಬೇಕೆಂದು ನಿರ್ಧರಿಸಿರುವ ಎಲ್ ಎಲ್. ಡಿ. ಎಂಬ ಪ್ರಶಸ್ತಿಯನ್ನು ಇವರೇ ಕೊಡುವರು. ಮತ್ತು ಅದೇ ಸಮಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರಿಗೂ, ನಮ್ಮ ವಿದ್ಯಾಪೀಠದ ವೈಸ್ ಚಾನ್ಸಲರಾದ ಮ|| ವ್ರಜೇಂದ್ರನಾಥ ಶೀಲ್ ರವರಿಗೂ ನಮ್ಮ ಪ್ರಾಚ್ಯಪುಸ್ತಕಭಂಡಾರದ ಕ್ಯೂರೇಟರಾದ ಮ|| ಶ್ಯಾಮಶಾಸ್ತ್ರಿಗಳಿಗೂ ಪ್ರೊ|| ಕೃಷ್ಣಯ್ಯಂಗಾರರಿಗೂ ಸಹ ಬಿರುದುಗಳನ್ನು ದಯಪಾಲಿಸುವರು.

ನೇಮತಿಯ ವೀರಶೈವ ವರ್ತಕರಲ್ಲಿ ಒಬ್ಬರಾದ ಮ|| ರಾ|| ಕಮಿದೊಡ್ಡಿ ತಮ್ಮಪ್ಪಯೆಂಬುವರು ಒಂದು ಕಟ್ಟಡವನ್ನು ಧರ್ಮಾರ್ಥವಾಗಿ ಬಾಲಿಕಾಪಾಠಶಾಲೆಗಾಗಿ ಸರ್ಕಾರಕ್ಕೆ ಒಪ್ಪಿಸಿದರು. ಅದರ ಪ್ರವೇಶಮಹೋತ್ಸವವು ಶಿವಮೊಗ್ಗಾ ಸಬ್ ಜಡ್ಜರವರಾದ ಮ|| ಪಿ. ಮಹಾದೇವಯ್ಯನವರಿಂದ ಕಳೆದ ತಾ|| ೬ರಲ್ಲಿ ನೆರವೇರಿಸಲ್ಪಟ್ಟಿತು. ಬಾಲಿಕೆಯರ ಇಂಪಾದ ಸಂಗೀತವೂ, ಸರಸವಾದ ಸಂಭಾಷಣೆಯೂ ಸಭಿಕರನ್ನು ವಿಶೇಷವಾಗಿ ಆನಂದಗೊಳಿಸಿದುವು. ಶಿವಮೊಗ್ಗ ಡಾಕ್ಟರು ಪುಟ್ಟಯ್ಯನವರೂ, ಮುನಸೀಫರು ಕೃಷ್ಣರಾಯರೂ, ಪ್ಲೀಡರ್ ಅನಂತಯ್ಯನವರೂ, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರು ಹೆಚ್. ಜಿ. ಬಸಪ್ಪನವರೂ, ಹೊನ್ನಾಳಿ ತಾ|| ಅಮಲ್ದಾರವರು ಮೊದಲಾದ ದೊಡ್ಡಮನುಷ್ಯರೂ ಈ ಸಮಾರಂಭಕ್ಕೆ ದಯಮಾಡಿಸಿದ್ದರು.

ಬೆಂಗಳೂರು ಸಿಟಿಮ್ಯುನ್ಸಿಪಲ್ ಪ್ರಸಿಡೆಂಟರನ್ನು ಆರಿಸುವ ಕೆಲಸವು ಕಳೆದ ತಾ|| ೫ರಲ್ಲಿ ನಡೆದುದರಮೇಲೆ ಓಟ್ಟು ಬಂದಿದ್ದ ೨೬ ಮಂದಿ ಕೌನ್ಸಿಲರುಗಳೊಳಗೆ ೧೬ ಮಂದಿಗಳು ಮ|| ಗರುಡಾಚಾರ್ಯರಿಗೂ ೧೦ ಮಂದಿಗಳು ಮ|| ಎಂ. ಸುಬ್ಬಯ್ಯನವರಿಗೂ ಓಟುಗಳನ್ನು ಕೊಟ್ಟರು. ಗೊತ್ತಾದ ೧೮ ಓಟುಗಳು ಯಾರಿಗೂ ಬಾರದುದರಿಂದ ಚುನಾವಣೆಯೇ ವ್ಯರ್ಥವಾಯಿತು. ಇನ್ನು ಮುಂದೆ ಸರ್ಕಾರದವರೇ ಕೌನ್ಸಿಲರುಗಳಲ್ಲಿ ಯಾರೋ ಒಬ್ಬರನ್ನು ನಾಮಿನೇಷನ್ ಮಾಡಿ ನಿಯಮಿಸಬಹುದಾಗಿದೆ. ಈ ಸಂದರ್ಭದಲ್ಲಿ ಓಟನ್ನು ಕೊಟ್ಟ ಕೌನ್ಸಿಲರೊಳಗೆ ೯ ಮಂದಿ ಬ್ರಾಹ್ಮಣರೆಲ್ಲಾ ಬ್ರಾಹ್ಮಣರಾದ ಗರುಡಾಚಾರ್ಯರಿಗಲ್ಲದೆ ಒಕ್ಕಲಿಗರಾದ ಮ|| ಸುಬ್ಬಯ್ಯನವರಿಗೆ ಒಬ್ಬರೂ ಓಟನ್ನು ಕೊಡಲಿಲ್ಲ. ಇತರರಲ್ಲಿ ೭ ಜನರೂ ಗರುಡಾಚಾರ್ಯರಿಗೇ ಕೊಟ್ಟಿರುವರು. ಬಾಯಲ್ಲಿ ಸಮದೃಷ್ಟಿ ಸೌಹಾರ್ದಗಳ ಮಳೆಕರೆಯಿಸುವವರು ಸಮಯಬಿದ್ದಾಗ ಸ್ವಜಾತ್ಯಭಿಮಾನವನ್ನು ಎಷ್ಟು ಗಾಢವಾಗಿ ತೋರಿಸುವರೆಂಬುದಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತಬೇಕೆ ? ವಿದ್ಯಾಬುದ್ಧಿವಂತರಾದ ಮುಂಬರಿದ ಜನರೇ ತೋರಿಸಿಕೊಡುವ ಈ ಮೇಲುಪಂಕ್ತಿಯನ್ನು ವಿದ್ಯಾವಿವೇಕಗಳಲ್ಲಿ ಕಡಿಮೆಯಾಗಿ ಹಿಂದುಳಿದಿರುವವರೂ ಅವಲಂಬಿಸದಿದ್ದರೆ ಅವರಿಗೆ ಉದ್ಧಾರವೆಲ್ಲಿರುವುದು ? ಸ್ವಾಭಿಮಾನದಿಂದ ಬ್ರಾಹ್ಮಣರು ಮುಂಬರಿದರು. ಅದನ್ನು ಬಿಟ್ಟವರು ಕೆಟ್ಟರು.

ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬ್ರಾಹ್ಮಣೇತರರನ್ನು ಹೆಚ್ಚು ಹೆಚ್ಚಾಗಿ ಸೇರಿಸಬೇಕೆಂಬ ವಿಷಯದಲ್ಲಿ ಬೋರ್ಡಿನವರು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಕೊಟ್ಟಿರುವ ೧೨೮ ನೆಯ ಸ್ಟಾಂಡಿಂಗ್ ಆರ್ಡರನ್ನೇ ಎಲ್ಲ ಶಾಖೆಗಳಿಗೂ ಅನುವರ್ತಿಸುವಂತೆ ಮಾಡಬೇಕೆಂದೂ, ಉದ್ಯೋಗಗಳನ್ನು ವಿನಿಯೋಗಿಸುವ ಅಧಿಕಾರವುಳ್ಳ ಪ್ರತಿಯೊಬ್ಬ ಉದ್ಯೋಗಿಯೂ ಈ ಸೂತ್ರವನ್ನವಲಂಬಿಸಬೇಕೆಂದೂ, ಕಲೆಕ್ಟರುಗಳು ಜಿಲ್ಲಾ ಜಡ್ಜಿಗಳು ಶಾಖಾಮುಖ್ಯೋದ್ಯೋಗಿಗಳೂ ಸಹ ೬ ತಿಂಗಳಿಗೆ ಒಂದುಸಲ ಎಂದರೆ ಜನವರಿ ತಾ|| ೧೫ ಜೂನ್ ತಾ|| ೧೫ರಲ್ಲಿ ಈ ಕೆಳಗೆ ಕಾಣಿಸಿರುವ ವಿವರಣೆಯಂತೆ ಎಂದರೆ ಬ್ರಾಹ್ಮಣರು, ಬ್ರಾಹ್ಮಣೇತರ ಹಿಂದುಗಳು, ದೇಶೀಯ ಕ್ರೈಸ್ತರು, ಮಹಮ್ಮದೀಯರು, ಯೂರೋಪಿಯನ್ನರು, ಆಂಗ್ಲೋ ಇಂಡಿಯನ್ನರು, ಮತ್ತು ಇತರರು-ಇವರುಗಳಲ್ಲಿ ಎಷ್ಟೆಷ್ಟು ಜನರು ಯಾವ ಯಾವ ಶಾಖೆಯಲ್ಲಿ ಸೇರಿಸಲ್ಪಟ್ಟಿರುವರೆಂಬುದನ್ನು ತಿಳಿಯಿಸಬೇಕೆಂದೂ, ಮದ್ರಾಸ್ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಇದು ಮೈಸೂರುದೇಶದಲ್ಲಿ ಮಿಲ್ಲರ್ ಕಮಿಟಿಯ ವರದಿಯ ಮೇಲೆ ಹುಟ್ಟಿರುವ ಸರ್ಕಾರಿ ಅಪ್ಪಣೆಯಲ್ಲಿ ಕಂಡಿರುವ ಸೆಂಟರಲ್ ರಿಕ್ರೂಟ್‌ಮೆಂಟ್ ಬೋರ್ಡಿನ ಅನುಕರಣವಾಗಿದೆ. ಶಾಖಾಮುಖ್ಯಾಧಿಕಾರಿಗಳು ಜಿಲ್ಲಾ ಕಲೆಕ್ಟರು ಮೊದಲಾದವರೆಲ್ಲಾ ಅಲ್ಲಿ ಬಹುಶಃ ಯೂರೋಪ್ಯರೇಆಗಿರುವುದರಿಂದ ಪಕ್ಷಪಾತಕ್ಕೆಡೆ ಇರಲಾರದೆಂದು ಮದ್ರಾಸಿನಲ್ಲಿ ರಿಕ್ರೂಟ್‌ಮೆಂಟ್ ಬೋರ್ಡು ರಚಿಸಲ್ಪಡಲಿಲ್ಲ. ನಮ್ಮಲ್ಲಿ ಬೋರ್ಡಿನಅವಶ್ಯಕತೆಯು ವಿಶೇಷವಾಗಿರುವುದರಿಂದಲೇ ಅದು ಏರ್ಪಡಿಸಲ್ಪಟ್ಟಿದೆ.

ಪ್ರಿನ್ಸ್ ಆಫ್ ವೇಲ್ಸ್ ರವರು ಬರುವ ಜನವರಿ ತಾ|| ೧೮ ರ ಬೆಳಗ್ಗೆ ೮ ಗಂಟೆಗೆ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿಳಿದು ಧರ್ಮಾಂಬುಧಿ ಕೆರೆಯೇರಿಯಮೇಲೆಹೊರಟು ಶೇಷಾದ್ರಿರೋಡು ಕಬ್ಬನ್ ಪಾರ್ಕು, ಕಿಂಗ್ಸ್ ರೋಡು ಈ ಮಾರ್ಗವಾಗಿ ಹೊರಟು ಚಕ್ರವರ್ತಿನಿಯವರ ಪ್ರತಿಮೆಯಬಳಿ ದಂಡಿನ ಮ್ಯುನ್ಸಿಪಾಲಿಟಿಯವರೊಪ್ಪಿಸುವ ವಿಜ್ಞಾಪನ ಪತ್ರವನ್ನು ಸ್ವೀಕರಿಸಿ ರೆಸಿಡೆನ್ಸಿ ಬಂಗಲಿಗೆ ಚಿತ್ತೈಸುವರು; ೧೧ ಗಂಟೆಯಲ್ಲಿ ಸೇನೆಯ ಅಂಗವಿನ್ಯಾಸವನ್ನೂ ಮಧ್ಯಾನ್ಹ ೪|| ಗಂಟೆಯಲ್ಲಿ ಪೋಲೋ ಆಟವನ್ನೂ ಪರಾಮರಿಸುವರು; ರೆಸಿಡೆಂಟರ ಆಟ್ ಹೋಂ ನಡೆಯುವುದು. ಆ ರಾತ್ರಿ ರೆಸಿಡೆನ್ಸಿಯಲ್ಲಿ ಔತಣವಾದನಂತರ ನರ್ತನವನ್ನು ಪರಾಮರಿಸಿ ೧೧|| ಗಂಟೆಗೆ ಮೈಸೂರಿಗೆ ಪ್ರಯಾಣಮಾಡುವರು. ಮಾರನೆ ಬೆಳಗ್ಗೆ ೮|| ಗಂಟೆಗೆ ರಾಜಧಾನಿಯನ್ನು ತಲಪುವರು. ನಿಲ್ದಾಣದಲ್ಲಿ ಶ್ರೀಮನ್ ಮಹಾರಾಜ ಸಹೋದರರು, ದಿವಾನರು ಮೊದಲಾದ ಅಧಿಕಾರಿಗಳಿಂದ ಸುಸ್ವಾಗತಿಸಲ್ಪಟ್ಟು ಸೇನೆಯ ಮರ್ಯಾದೆಯೊಡನೆ ರಥಾರೂಢರಾಗಿ ಶ್ರೀಮನ್ಮಹಾರಾಜರವರ ಸಂಗಡ ಉತ್ಸವಪೂರ್ವಕವಾಗಿ ಹೊರಟು ಮಧ್ಯಮಾರ್ಗದಲ್ಲಿ ಮ್ಯುನಿಸಿಪಾಲಿಟಿಯವರಿಂದ ವಿಜ್ಞಾಪನಪತ್ರವನ್ನು ಸ್ವೀಕರಿಸಿ ಗೌರ್ನಮೆಂಟ್ ಹೌಸಿಗೆ ದಯಮಾಡಿಸುವರು. ಅನಂತರ ೯|| ಗಂಟೆಯಲ್ಲಿ ಮಿಜಾಜ್ ಪರ್ಸಿಯಾಗುವುದು. ೧೧ ಗಂಟೆಗೆ ಶ್ರೀಮನ್ಮಹಾರಾಜರವರು ಮೋಟಾರುಬಂಡಿಯಲ್ಲಿ ಗೌರ್ನಮೆಂಟ್ ಹೌಸಿಗೆ ದಯಮಾಡಿಸಿ ದರ್ಶನಸಂಭಾಷಣವನ್ನು ಮಾಡಿಕೊಂಡು ಬಂದಮೇಲೆ ಪ್ರಿನ್ಸ್ ರವರು ೧೨ ಗಂಟೆಗೆ ಮೋಟಾರುಬಂಡಿಯಲ್ಲಿ ಅರಮನೆಗೆದಯಮಾಡಿ ಮಹಾರಾಜರ ದರ್ಶನಸಂಭಾಷಣಗಳನ್ನು ಮಾಡಿಕೊಂಡು ಬರುವರು. ಅದೇರಾತ್ರಿ ೮|| ಗಂಟೆಗೆ ಗೌರ್ನಮೆಂಟ್ ಹೌಸಿನಲ್ಲಿ ಅರಸೌತಣವಾಗುವುದು. ಜನವರಿ ತಾ|| ೨೦ ರ ರಾತ್ರಿ ಅರಮನೆಯಲ್ಲಿ ಸಂಗೀತವಾಗುವುದು. ೨೧ ರ ಬೆಳಗ್ಗೆ ೧೦ ಗಂಟೆಗೆ ಕಾರಾಪುರಕ್ಕೆ ಬೇಟೆಗಾಗಿ ಚಿತ್ತೈಸಿ ತಾ|| ೨೨ ರ ವರೆಗೂ ಅಲ್ಲಿದ್ದು ತಾ|| ೨೩ರ ಮಧ್ಯಾನ್ಹ ೪ ಗಂಟೆಗೆ ರಾಜಧಾನಿಗೆ ಹಿಂದಿರುಗಿ ಚಿತ್ತೈಸಿ ಅದೇರಾತ್ರಿ ೧೦|| ಗಂಟೆಗೆ ಪ್ರಯಾಣಮಾಡುವರು.

ಭರತಖಂಡದ ವೃತ್ತಾಂತಗಳು.

ದಿಲ್ಲಿ ಖಿಲಾಫತ್ ಕಾರ್ಯದರ್ಶಿ ಅಬ್ದುಲ್ ಅಜಾಬು ಅನ್ಸಾರಿಯವರು ಹೊಣೆಕೊಡದೆ ಹೋದುದರಿಂದ ೧ ವರ್ಷ ಕಠಿನ ಕಾರಾಗೃಹವಾಸಶಿಕ್ಷೆಗೆ ಗುರಿಯಾದರು.

ಚೋಟಾನಿ ಮಿಯಾನ್ ರವರು ೧ ಲಕ್ಷ ರಾಟೆಗಳನ್ನು ಧರ್ಮಾರ್ಥವಾಗಿ ಮಾಡಿಸಿಕೊಡುತ್ತೇನೆಂದು ಮ|| ಗಾಂಧಿಯವರಿಗೆ ಬರೆದು ೫ ಸಾವಿರವನ್ನು ಆಗಲೇ ಕಳುಹಿಸಿಕೊಟ್ಟಿದ್ದಾರೆ.

ಸರ್ ಟಿ. ತ್ಯಾಗರಾಯಶೆಟ್ಟಿಯವರು ಮದರಾಸು ಮ್ಯುನ್ಸಿಪಾಲಿಟಿಗೆ ಗೌರವಾಧ್ಯಕ್ಷರಾಗಿ ಈಸಲವೂ ಆರಿಸಲ್ಪಟ್ಟರು. ಇದೂ ಸಹಿತ ೩ ಸಲ ಅಲ್ಲಿಯ ಕಾರ್ಪೊರೇಷನ್ ಷರೀಫರಾಗಿ ಅವರು ಆರಿಸಲ್ಪಟ್ಟಂತಾಯಿತು.

ಅಮೃತಸರದ ಸಿಕ್ ದೇವಾಲಯದಲ್ಲಿ ಮಹಾ ಪ್ರಾಣಹತ್ಯೆಯನ್ನು ನಡೆಯಿಸಿದ ನಾರಾಯಣದಾಸ್ ಮೊದಲಾದ ಅಪರಾಧಿಗಳಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಅವರು ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಿದ್ದಾರೆ.

ಇದಕ್ಕೆ ಮುಂಚೆ ಬಂಗಾಳಾ ಕೋರ್ಟ್ ಆಫ್ ವಾರ್ಡ್ಸ್ ಶಾಖೆಯಲ್ಲಿ ಕೆಲಸಮಾಡುತ್ತಿದ್ದ ಕಾರ್ನಿತಿಯಾ ಸೊರಾಬ್ಜಿ ಎಂಬ ಕನ್ಯೆಯನ್ನು ಅಲಹಾಬಾದ್ ಹೈಕೋರ್ಟಿನವರು ವಕೀಲಳನ್ನಾಗಿ ಅಂಗೀಕರಿಸಿದರು. ಭರತಖಂಡದಲ್ಲಿ ಅಡ್ವೊಕೇಟಾಗಿ ಕೆಲಸಮಾಡುವುದಕ್ಕೆ ಈಕೆಯೇ ಮೊದಲನೆಯವಳು.

ಮ|| ಗಾಂಧಿಯವರು ಸಾಗಿಸುತ್ತಿರುವ ಬಹಿಷ್ಕಾರೋದ್ಯಮವು ಪಾರ್ಲಿಮೆಂಟಿನಲ್ಲಿ ಚರ್ಚೆಗೆಬರಲು, ಗಾಂಧಿಯವರ ಚರ್ಯೆಯನ್ನು ಇಂಡ್ಯಾ ಸರ್ಕಾರದವರು ಜಾಗರೂಕತೆಯಿಂದ ಪರಿಶೀಲಿಸುತ್ತಿರುವರೆಂದೂ ಸಮಯಸಿಕ್ಕಿದಾಗ ತಕ್ಕಚರ್ಯೆಯನ್ನು ಕೈಕೊಳ್ಳುವರೆಂದೂ, ಸ್ಟೇಟ್ ಸೆಕ್ರೆಟರಿಯವರು ಉತ್ತರ ಕೊಟ್ಟರು.

ಯಾವದ್ಭಾರತ ಖಿಲಾಫತ್ ಸಂಘ ಸಭೆಯು ಕಳೆದ ತಾ|| ೩ರಲ್ಲಿ ದಿಲ್ಲಿಪಟ್ಟಣದೊಳಗೆ ಸೇಟ್ ಚೋಟಾನಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಅಂಗೋರಾದ ಫಂಡಿಗೆ ೧ ಕೋಟಿ ರೂ. ಗಳನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ಚೋಟಾನಿ, ಅನ್ಸಾರಿ, ಅಜ್ಮಲ್ ಖಾನ್, ಸರೋಜನೀದೇವಿ ಮೊದಲಾದ ೨೨ ಮಂದಿಗಳು ನಿಯಮಿಸಲ್ಪಟ್ಟರು.

ಮದರಾಸಿನಲ್ಲಿ ಬಕಿಂಗ್ಹಾಮ್ ಕರ್ನಾಟಿಕ್ ಮಿಲ್ ಕೂಲಿ ಜನರು ಮುಷ್ಕರಹಿಡಿದು ೪-೫ ತಿಂಗಳಿಂದ ಕೆಲಸಕ್ಕೆ ಹೋಗದೆ ನಿಂತು ತಾವೂ ನಷ್ಟಪಟ್ಟು ಮಿಲ್ ಯಜಮಾನರಿಗೂ ನಷ್ಟಕಷ್ಟಗಳನ್ನುಂಟುಮಾಡಿದ್ದರು. ಕಡೆಗೆ ಕೂಲಿಕಾರರು ತಾವಾಗಿ ಹೋಗಿ ಕೆಲಸವನ್ನು ಕೊಡಬೇಕೆಂದು ಮಿಲ್ ಯಜಮಾನರನ್ನು ಪ್ರಾರ್ಥಿಸಿ ಸೇರಿಕೊಂಡರು.

ದಿಲ್ಲಿಪಟ್ಟಣದಲ್ಲಿ ಕಳೆದ ತಾ|| ೪-೫ರಲ್ಲಿ ಯಾವದ್ಭಾರತ ರಾಷ್ಟ್ರೀಯಸಂಘ ಸಭಿಕರು ಸಭೆಗೂಡಿ ಮುಖ್ಯವಾದ ಕೆಲ ತೀರ್ಮಾನಗಳನ್ನು ಮಾಡಿದರು. ಪ್ರಭುತ್ವಶಾಸನವನ್ನುಲ್ಲಂಘಿಸುವ ಅಧಿಕಾರವನ್ನು ಆಯಾ ಪ್ರಾಂತಿಕ ಕಾಂಗ್ರೆಸ್ ಸಂಘದವರು ವಹಿಸಿಕೊಂಡು ಈ ರೂಪವಾದ ಸಹಾಯನಿರಾಕರಣವನ್ನು ಅನುವರ್ತಿಸಬಹುದೆಂದು ತೀರ್ಮಾನಿಸಿದರು.

ಭರತಖಂಡದ ಎಲ್ಲ ಅಧಿಪತ್ಯಗಳಲ್ಲೂ ಅಸಹಾಯವಾದಿಗಳಾದ ಮುಂದಾಳುಗಳನ್ನು ಒಬ್ಬೊಬ್ಬರನ್ನಾಗಿ ಹಿಡಿದು ಕಾರಾಗೃಹಕ್ಕೆ ಕಳುಹಿಸುವ ಕೆಲಸವು ಬಿತ್ತರದಿಂದ ನಡೆಯುತ್ತಿದೆ. ಮದ್ರಾಸಿನ ಯಾಕೂಬ್ ಹುಸೇನರನ್ನು ತಂಜಾವೂರು ಜಿಲ್ಲಾ ಮೇಜಿಸ್ಟ್ರೇಟರು ಹಿಡಿಯಿಸಿ, ೧೨೪ ಎ ೧೫೩ ಎ ಸೆಕ್ಷನ್ ಮೇರೆ ಅಪರಾಧಮಾಡಿದರೆಂದು ವಿಚಾರಣೆಮಾಡಿ ೨ ವರ್ಷ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಮ|| ಗಾಂಧಿಯವರು ಎಂಗ್ ಇಂಡ್ಯಾ ಎಂಬ ತಮ್ಮ ಪತ್ರಿಕೆಯಲ್ಲಿ ಮೃತ್ಯುಭಯವೆಂಬ ಶಿರೋಲೇಖನದಿಂದ ಒಂದು ಪ್ರಕಟನೆಯನ್ನು ಮಾಡಿ, ಅದರಲ್ಲಿ-"ನಮಗೆ ಸ್ವರಾಜ್ಯವು ಸಿದ್ಧಿಸಿ ಶಾಶ್ವತವಾಗಿ ಅದನ್ನನುಭವಿಸಬೇಕೆಂಬ ಇಚ್ಛೆಯಿದ್ದರೆ ನಮಗೆ ಮೃತ್ಯುಭಯವು ತೊಲಗಿಹೋಗಬೇಕು. ಮಾತೃದೇಶಭಕ್ತಿಯುಳ್ಳವರು ಸಾಯುವುದಕ್ಕೂ ಕಾರಾಗೃಹದಲ್ಲಿ ವಾಸಿಸುವುದಕ್ಕೂ ಹಿಂದೆಗೆಯಕೂಡದು ,, ಎಂದು ಹೇಳಿರುತ್ತಾರೆ.

ಮೊನ್ನೆ ಶನಿವಾರ ಮದ್ರಾಸಿನ ಪಚ್ಚೆಯಪ್ಪಕಲಾಶಾಲಾ ಭವನದಲ್ಲಿ ಕೀರ್ತಿಶೇಷ ಡಾಕ್ಟರ್ ನಾಯರ್ ರವರ ಭಾವಚಿತ್ರಪಟ ಪ್ರತಿಷ್ಠಾಪನ ಕಾರ್ಯವನ್ನು ಸರ್ ಪಿ. ತ್ಯಾಗರಾಯಶೆಟ್ಟರ ಅಧ್ಯಕ್ಷತೆಯಿಂದ ಕೂಡಿದ್ದ ಸಭೆಯೊಳಗೆ ಮ|| ಸಿ. ರಾಮಲಿಂಗರಡ್ಡಿ ಎಂ. ಎ. ಯವರು ನೆರವೇರಿಸಿದರು. ಆ ಸಮಯದಲ್ಲಿ ರಡ್ಡಿಯವರು ನಾಯರ್ ರವರ ಉದಾತ್ತ ಗುಣಾವಳಿಗಳನ್ನು ರಸವತ್ತಾದ ಭಾಷಣದಿಂದ ವಿವರಿಸಿ ಸಭಿಕರನ್ನು ಆನಂದಗೊಳಿಸಿದರು.

ಕಾರಾಗೃಹದಲ್ಲಿರುವ ಡಾಕ್ಟರ್ ಕಿಚಲುಯವರಿಗೆ ಮೂಲವ್ಯಾಧಿಯ ಬಾಧೆಯಂತೆ. ಅವರ ಕಾಲಿನ ಜೋಡನ್ನು ತೆಗೆಯಿಸಿಬಿಟ್ಟು ಚಡ್ಡಿಯನ್ನು ತೊಡಿಸಿದುದರಿಂದ ಅವರು ಆಹಾರವನ್ನೇ ಸ್ವೀಕರಿಸದೆಹೋಗಿರುವರೆಂದು ಸುದ್ದಿ ಬಂದಿದ್ದಿತು. ಈಚೆಗೆ ಹೇಗೋ ತಿಳಿಯಲಿಲ್ಲ. ಮಹಮ್ಮದಾಲಿಯವರಿಗೆ ಅತಿಮೂತ್ರವ್ಯಾಧಿಯಿರುವುದರಿಂದ ಕಾರಾಗೃಹದ ಆಹಾರವು ಅವರಿಗೆ ಸರಿಬೀಳದೆಹೋಗಿದೆಯಂತೆ. ಅವರ ಬೆನ್ನಮೇಲೆ ಎದ್ದಿದ್ದ ಹುಣ್ಣು ವಾಸಿಯಾಗಿ ಮತ್ತೆ ಹೊಸಹುಣ್ಣು ಮೂಡಿದೆ.

ಮೆಲಗಾನಿನಲ್ಲಿ ದಂಗೆಯೆದ್ದು ದೇವಾಲಯದ ಸಮೇತ ಪೋಲೀಸ್ ಇನ್ಸ್ಪೆಕ್ಟರನ್ನು ಸುಟ್ಟುಬಿಟ್ಟ ಅಪರಾಧಿಗಳ ವಿಚಾರಣೆಯು ನಾಸಿಕಾದ ಸೆಷನ್ ಜಡ್ಜರಮುಂದೆ ನಡೆದು, ೧೧೩ ಮಂದಿ ಅಪರಾಧಿಗಳಲ್ಲಿ ೯೬ ಮಂದಿಗಳು ನಿರ್ದೋಷಿಗಳೆಂದು ಬಿಡಲ್ಪಟ್ಟರು. ೫ ಮಂದಿಗೆ ಮರಣದಂಡನೆಯೂ, ಮೂವರಿಗೆ ೭ ವರ್ಷಗಳ ಕಠಿನಕಾರಾಗೃಹವಾಸಶಿಕ್ಷೆಯೂ, ಉಳಿದವರಿಗೆ ಕೆಲಕೆಲ ತಿಂಗಳ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟುವು. ಈ ಅಪರಾಧಿಗಳಲ್ಲೆಲ್ಲಾ ೫ ಮಂದಿ ಮಾತ್ರವೇ ಹಿಂದುಗಳು.

ಮ|| ಗಾಂಧಿಯವರು ಎಲ್ಲ ಭಾಷೆಗಳಲ್ಲೂ ಒಂದು ಪ್ರಕಟನೆಯನ್ನು ಮಾಡಿ ಅದರಲ್ಲಿ ಹೀಗೆ ತಿಳಿಯಿಸಿದ್ದಾರೆ. " ಹಿಂದೂಮತದಲ್ಲಿ ಅಸ್ಪೃಶ್ಯತ್ವದೋಷವಿರುವುದು ಕೇವಲ ರಾಕ್ಷಸಕೃತ್ಯ. ಆ ದೋಷವನ್ನು ಹೋಗಲಾಡಿಸಿದರೇನೇ ಸ್ವರಾಜ್ಯವು ಸುಲಭವಾಗಿ ಸಿದ್ಧಿಸುವುದು. ಆದುದರಿಂದಲೇ ಇದಕ್ಕೆ ನಾನು ಪ್ರಾಧಾನ್ಯವನ್ನು ಕೊಟ್ಟದ್ದೇನೆ. ಭಗವಂತನ ಸೃಷ್ಟಿಗೊಳಪಟ್ಟ ಜನವರ್ಗದಲ್ಲಿ ಮಾನುಷ ಮಾತ್ರ ಬುದ್ಧಿಯನ್ನೂ ಕರುಣೆಯನ್ನೂ ಇಡದಿರುವುದು ಭಗವತ್ಸಂಕಲ್ಪಕ್ಕೆ ವಿರುದ್ಧವಾದುದು. ನಾನು ಮರಳಿ ಜನಿಸುವುದು ಭಗವತ್ಸಂಕಲ್ಪವಾಗಿದ್ದರೆ ನಾನು ಬ್ರಾಹ್ಮಣನಾಗಿ ಹುಟ್ಟುತ್ತೇನೆಂದೂ, ವೈಶ್ಯನಾಗಿ ಜನಿಸುವೆನೆಂದೂ, ಶೂದ್ರನಾಗಿ ಜನ್ಮಿಸುವೆನೆಂದೂ ಕೋರಿಕೊಳ್ಳುವುದಿಲ್ಲ. ಪಂಚಮನಾಗಿಯೇ ಹುಟ್ಟಿ ಅವರೊಡನೆ ಕಷ್ಟವನ್ನನುಭವಿಸಿ ಅವರನ್ನುದ್ಧರಿಸಿ ನಾನೂ ಜನ್ಮೋತ್ತಾರವನ್ನು ಮಾಡಿಕೊಳ್ಳುವೆನು. ಅಸ್ಪೃಶ್ಯತ್ವವು ಮುಂದಣ ವರ್ಷಾರಂಭದೊಳಗೆ ಕಳೆದುಹೋಗಬೇಕು."

ಗುಜರಾತ್ ಕಲಾಶಾಲೆಯಲ್ಲಿ ಪ್ರೊಫೆಸರಾಗಿರುವ ಚಾರ್ಲಿಯರ್ ವರು ಒಂದು ನೂತನ ವಸ್ತುವನ್ನು ಕಂಡುಹಿಡಿದಿದ್ದಾರೆ. ಅದು ಒಂದು ಲಾಂದ್ರದಂತಿರುವ ದೀಪವಾಗಿದೆ. ಇದರ ಸಹಾಯದಿಂದ ಕತ್ತಲೆಯಿಲ್ಲದಿರುವ ಕೊಟ್ಟಡಿಯ ಸುಣ್ಣದ ಗೋಡೆಯಮೇಲೂ ತೆರೆಗಳಮೇಲೂ ಸೂರ್ಯನ ಪ್ರಕಾಶವನ್ನು ಕೆಡಹುವುದರಿಂದ ಸ್ಫಟಿಕದ ಹಲಗೆಯು ಹೇಗೆ ಪಾರದರ್ಶಕವಾಗಿರುವುದೋ ಹಾಗೆ ಗೋಡೆಯಿಂದಾಚೆಗೂ ತೆರೆಯಿಂದಾಚೆಗೂ ಇರುವ ವಸ್ತುಗಳನ್ನೆಲ್ಲಾ ನೋಡಬಹುದಂತೆ.

ನಾಳೆ ಜನವರಿಯೊಳಗೆ ಸ್ವರಾಜ್ಯವು ಬರದಿದ್ದರೆ ನೀವೇನುಮಾಡುವಿರಿ ? ಎಂದು ಯಾರೋ ಕೆಲವರು ಮ|| ಗಾಂಧಿಯವರನ್ನು ಕೇಳಿದರಂತೆ. ಅದಕ್ಕೆ ಅವರು ಹೀಗೆ ಉತ್ತರ ಕೊಟ್ಟಿದ್ದಾರೆ—ಜನವರಿಯಲ್ಲಿ ನಾನೇನುಮಾಡುವೆನೋ ಅದನ್ನು ಹೇಳುವುದಿಲ್ಲ. ಆ ತಿಂಗಳಲ್ಲಿ ನನ್ನ ನೆರೆಯ ಪ್ರಜೆಗಳನ್ನು ಬಿಟ್ಟು ನಿರ್ಮಾನುಷ್ಯಪ್ರದೇಶಕ್ಕೆ ಹೋಗುವುದೋ, ಅಥವಾ ಜಾತೀಯ ಪ್ರಭುತ್ವನಿರ್ಮಾಣಕ್ಕೆ ಸಹಾಯವನ್ನೋ ಮಾಡುತ್ತಿರುವೆನು. ಈ ವರ್ಷದೊಳಗೆ ಸ್ವರಾಜ್ಯವು ಬರದಿದ್ದರೆ ನನ್ನ ಜೀವಿತವು ದುರ್ಭರವಾಗುವುದು. ಆತ್ಮನು ಅತ್ಯಂತವಾಗಿ ಬಾಧೆಗೊಂಡು ಶರೀರವು ಶಿಥಿಲವಾಗಬಹುದು.

ಕಳೆದ ಸೋಮವಾರ ದಿಲ್ಲಿಯಲ್ಲಿ ಸಂಸ್ಥಾನಿಕರ ಸಭೆಯು ವೈಸ್ರಾಯರ ಅಧ್ಯಕ್ಷತೆಯಿಂದ ನೆರವೇರಿತು. ೩೫ ಮಂದಿ ಪ್ರಭುಗಳು ಸಭೆಗೆ ಬಂದಿದ್ದರು. ಗ್ವಾಲಿಯರ್ ಮಹಾರಾಜರು ವೈಸ್ರಾಯಿ ದಂಪತಿಗಳಿಗೆ ಸ್ವಾಗತವನ್ನು ಮಾಡಿದರು. ರೀಡಿಂಗ್ ಪ್ರಭುಗಳು ಅಧ್ಯಕ್ಷಪೀಠವನ್ನಲಂಕರಿಸಿ || ಗಂಟೆಯ ಹೊತ್ತು ಪ್ರಾರಂಭ ಭಾಷಣವನ್ನು ಮಾಡಿದರು. ಸಭಾ ಚರ್ಚೆಗಳೂ ತೀರ್ಮಾನಗಳೂ ರಹಸ್ಯಗಳಾದುದರಿಂದ ವೃತ್ತಪತ್ರಿಕೆಗಳಿಗೆ ತಿಳಿಯುವುದಿಲ್ಲ. ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸರ ಸುಸ್ವಾಗತವನ್ನು ಮಾಡಿ ಸತ್ಕರಿಸಲು ಸಂಸ್ಥಾನಿಕರೆಲ್ಲರೂ ಹಾರೈಸಿರುವ ತೀರ್ಮಾನವನ್ನುಮಾಡಿ ವೈಸ್ರಾಯರಿಗೆ ತಿಳಿಯಿಸಿದರು.

ಹಿಮವತ್ಪರ್ವತದ ಎವರೆಸ್ಟ್ ಶಿಖರವನ್ನೇರುವುದಕ್ಕೆ ಹೋಗಿದ್ದ ಪಾಶ್ಚಾತ್ಯ ಯಾತ್ರಿಕರೆಲ್ಲಾ ೨೩೦೦೦ ಅಡಿಗಳ ಎತ್ತರಕ್ಕೆ ಹತ್ತಿದ್ದರು. ಅಲ್ಲಿಂದ ಮುಂದಕ್ಕೆ ಹೋಗಲು ಅವರಿಂದ ಸಾಧ್ಯವಾಗಲಿಲ್ಲ. ಅದರ ಮುಂದೆ ಉಸಿರಾಡಲಿಕ್ಕೇ ಅವಕಾಶ ಕೊಡದಷ್ಟು ಹಿಮವು ದಟ್ಟವಾಗಿ ವ್ಯಾಪಿಸಿದ್ದಿತಂತೆ. ಮತ್ತು ಭಯಂಕರವಾದ ಗಾಳಿಯು ಬೀಸುತ್ತಿದೆಯಂತೆ. ಆದುಕಾರಣ ಅವರು ಆ ಶಿಖರದ ಉತ್ತರಭಾಗದಲ್ಲಿ ತಾವು ಹೋಗಿದ್ದ ಸ್ಥಲದಲ್ಲಿ ಒಂದು ಗುರ್ತನ್ನೇರ್ಪಡಿಸಿ, ಅಲ್ಲಿಯ ವಿದ್ಯಮಾನಗಳನ್ನೆಲ್ಲಾ ಬರೆದುಕೊಂಡು ಅಕ್ಟೋಬರ್ ತಾ|| ೫ರಲ್ಲಿ ಅಲ್ಲಿಂದ ಹಿಂದಿರುಗಿದರು. ಅವರಲ್ಲಿ ಒಬ್ಬ ಪ್ರಮುಖನು ಮೃತನಾದನು. ಈ ತಿಂಗಳಲ್ಲಿ ಅವರೆಲ್ಲಾ ಸೀಮೆಗೆ ಪ್ರಯಾಣಮಾಡುವರು. ಮುಂದಣ ವರ್ಷದಲ್ಲಿ ಇದೇ ಉದ್ದೇಶದಿಂದ ಮತ್ತೊಂದು ಯಾತ್ರಿಕರ ಗುಂಪು ಈ ದೇಶಕ್ಕೆ ಬರುವುದಾಗಿದೆ.

ವಿದೇಶದ ವೃತ್ತಾಂತಗಳು.

ಬಲ್ಗೇರಿಯಾದೇಶದ ಮುಖ್ಯಮಂತ್ರಿ ಎಂ. ಡಮಿಟ್ರೋವ್ ರವರು ಮೋಟಾರಿನಲ್ಲಿ ಹೋಗುತ್ತಿರುವಾಗ ಯಾರೋ ರಿವಾಲ್ವರಿನಿಂದ ಹೊಡೆದು ಕೊಂದುಬಿಟ್ಟರು.

ಈಗಣ ಸ್ಥಿತಿಯನ್ನು ಪರ್ಯಾಲೋಚಿಸಿ ತುರ್ಕಿಯ ವಿಷಯವನ್ನು ತುರುಕರ ಮನಸ್ಸಿಗೆ ನೋವಾಗದಂತೆ ಪರಿಷ್ಕರಿಸುವುದೇ ಹಿತವೆಂದು ಲಂಡನ್ ಟೈಮ್ಸ್ ಪತ್ರಿಕೆಯು ಆಂಗ್ಲಪ್ರಭುತ್ವಕ್ಕೆ ಹಿತಸೂಚನೆಮಾಡಿರುತ್ತದೆ.

ಹಂಗೇರಿಯಾ ಶಾಸನಸಭೆಯವರು ಕಾರಲ್ ರವರನ್ನು ರಾಜ್ಯಸಿಂಹಾಸನದಿಂದ ಬಹಿಷ್ಕರಿಸಿ ಒಂದು ವಿಧಿಯನ್ನು ಮಾಡಿ

ದರು. ಕಾರಲ್ ದಂಪತಿಗಳನ್ನು ಮೆಡೈರಾ ಎಂಬ ಕಡೆ ನಿರ್ಬಂಧದಲ್ಲಿಡುವುದಕ್ಕೆ ಪ್ರಯತ್ನವು ನಡೆಯುತ್ತಿದೆ.

ಐರ್ಲಂಡ್ ಸಂಧಿ ವಿಷಯಕವಾಗಿ ಲಂಡನ್ ಪಟ್ಟಣದಲ್ಲಿ ಏರ್ಪಡಿಸಿದ್ದ ಸಭೆಗೆ ಮುಖ್ಯ ಮಂತ್ರಿಯವರೊಡನೆ ಮಾತನಾಡಲು ಐರ್ಲಂಡ್ ನಾಯಕರು ಬಂದಿದ್ದರು. ಅಧಿನಿವೇಶ ರಾಜ್ಯಗಳಿಗೆ ಸಮನಾದ ಸ್ಥಾನವನ್ನು ಐರ್ಲಂಡಿಗೆ ಕೊಟ್ಟು ಆಂಗ್ಲ ಸಾಮ್ರಾಜ್ಯಾಧೀನವಾಗಿರುವಂತೆ ಮಾಡಲು ಉಭಯಪಕ್ಷದವರೂ ಒಪ್ಪುವ ಶುಭಸೂಚನೆಯು ಕಂಡುಬಂದಿದೆ.

ಫ್ರೆಂಚರು ಅಂಗೋರಾದ ಕೇಮಲ್ ಪಾಷಾರವರೊಡನೆ ಸಂಧಿಮಾಡಿಕೊಂಡರು. ಅದರಲ್ಲಿ ಅಲೆಗ್ಸಾಂಡ್ರೆಟ್ಟಾ ಎಂಬ ರೇವೆಯು ಸ್ವತಂತ್ರವಾಗಿರಬೇಕೆಂದೂ ಅಯೋನಾ, ಪೂರ್ವ ಥ್ರೇಸುಗಳಲ್ಲಿ ತುರುಕರ ಹಕ್ಕುಗಳ ಸ್ಥಾಪನೆಗಾಗಿ ಪ್ರಯತ್ನಿಸತಕ್ಕದೆಂದೂ ನಿಯಮಗಳಿರುವುವಂತೆ. ಈ ಸಂಧಿಯ ನೇರೆಗೆ ಫ್ರೆಂಚರು ಫಿರಂಗಿ ಮದ್ದು ಗುಂಡು ಮೊದಲಾದುವುಗಳನ್ನು ತುರ್ಕಿಗೆ ಕಳುಹಿಸಿಕೊಡುವುದಕ್ಕೂ ಅವಕಾಶವಿರುವುದಂತೆ. ಅಲ್ಲದೆ ಫ್ರೆಂಚರು ರಷ್ಯನ್ನರೊಡನೆಯೂ ಸಂಧಿಮಾಡಿಕೊಂಡಿದ್ದಾರೆ.

ಅಮೇರಿಕಾದ ವಾಷಿಂಗ್‌ಟನ್ ಪಟ್ಟಣದಲ್ಲಿ ಒಂದು ಮಹಾಸಭೆಯು ಈ ತಾ|| ೧೨ರಿಂದ ಕೂಡುವುದಾಗಿದೆ. ಪ್ರಪಂಚದ ಮುಖ್ಯಮುಖ್ಯ ರಾಜ್ಯಗಳವರೆಲ್ಲಾ ಯುದ್ಧಸಾಮಗ್ರಿಗಳ ನಿರ್ಮಾಣವನ್ನು ಕಡಿಮೆಮಾಡಿ ತನ್ಮೂಲಕ ಪ್ರಪಂಚಶಾಂತಿಗೆ ಅನುಕೂಲಪಡಿಸಬೇಕೆಂಬುದೇ ಸಮ್ಮೇಳನದ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಅಮೇರಿಕನ್ನರು ಬಹಳ ಪ್ರಬಲಪ್ರಯತ್ನವನ್ನು ಮಾಡಿದ್ದಾರೆ. ರಷ್ಯಾದೇಶಕ್ಕೆ ಆಹ್ವಾನವನ್ನು ಇವರು ಕೊಟ್ಟಿಲ್ಲ. ಅಲ್ಲಿಯ ಬೋಲ್ಷೆವಿಕ್ ಪ್ರಭುತ್ವವನ್ನು ಅಮೇರಿಕಾದವರು ಅಂಗೀಕರಿಸಿಲ್ಲ. ಆಂಗ್ಲಸಾಮ್ರಾಜ್ಯದ ಅಧಿನಿವೇಶ ರಾಷ್ಟ್ರಗಳಿಗೂ ಈ ಸಭಾಸಭ್ಯತ್ವವಿಲ್ಲ. ಸಭೆಯ ಉದ್ದೇಶಗಳು ಎಷ್ಟುಮಟ್ಟಿಗೆ ಚರಿತಾರ್ಥವಾಗುವುವೋ ನೋಡಬೇಕು.

ಪೋರ್ಚುಗಲ್‌ದೇಶದಲ್ಲಿ ಪ್ರಜಾವಿಪ್ಲವವುಂಟಾಗುವುದೆಂಬ ಸುದ್ದಿಯು ೨-೩ ತಿಂಗಳಿಂದಲೂ ಇದ್ದಿತು. ಕಳೆದ ಅಕ್ಟೋಬರ್ ತಾ|| ೧೯ರಲ್ಲಿ ವಿಪ್ಲವಕಾರರ ಸಂಧಾನಪ್ರಕಾರ ಸಮುದ್ರತೀರದಲ್ಲಿ ಯುದ್ಧದ ಹಡಗಿನಿಂದ ಫಿರಂಗಿ ಗುಂಡನ್ನು ಹಾರಿಸಿ ಸೂಚಿಸಿದ ಕೂಡಲೇ ಲಿಸ್ಬನ್ ಪಟ್ಟಣದಲ್ಲಿದ್ದ ವಿಪ್ಲವಕಾರರ ನಾಯಕನಾದ ಕರ್ನಲ್ ಕೋಲ್ಹೊ ಎಂಬಾತನು ಪ್ರಭುತ್ವದ ಮದ್ದುಗುಂಡು ಮೊದಲಾದ ಸಾಮಗ್ರಿಗಳಿರುವ ಸ್ಥಲಗಳನ್ನೂ ಸರ್ಕಾರಿ ಮುಖ್ಯ ಆಫೀಸುಗಳನ್ನೂ ವಶಪಡಿಸಿಕೊಂಡುಬಿಟ್ಟನು. ಮುಖ್ಯ ಮಂತ್ರಿ ಮೊದಲಾದವರು ಕೊಲ್ಲಲ್ಪಟ್ಟರು. ಈ ವಿಪ್ಲವಕಾರಕ ಜನರು ನೂತನ ಪ್ರಭುತ್ವವನ್ನು ಏರ್ಪಡಿಸಿಕೊಂಡಿರುವರು. ಮತ್ತು ಪೂರ್ವದ ಮಂತ್ರಿಮಂಡಲದವರನ್ನು ಕೊಂದ ಕೃತ್ಯವನ್ನು ನಿಷೇಧಿಸಿರುವುದಲ್ಲದೆ ಹಂತಕರನ್ನು ಕಂಡುಹಿಡಿದು ಶಿಕ್ಷಿಸುತ್ತೇವೆಂದು ಪ್ರಕಟಿಸಿರುವರು. ಈ ವಿಪ್ಲವವು ಬೋಲ್ಷೆವಿಕ್ ಪ್ರೇರಣೆಯಿಂದ ನಡೆದಿದೆಯಂತೆ.

ಹಿಂದೆ ಹಂಗೇರಿಯಾವಿಗೆ ಚಕ್ರವರ್ತಿಯಾಗಿದ್ದ ಕಾರಲ್‌ರವರು ಈಗ ಆ ದೇಶದಲ್ಲಿರಲಿಲ್ಲ. ಅದು ಪ್ರಜಾಪ್ರಭುತ್ವಕ್ಕೊಳಪಟ್ಟಿದೆ. ಆದರೆ ಕಾರಲ್ ಪಕ್ಷದವರೂ ಕೆಲವರಿದ್ದಾರೆ. ಅವರ ಸಹಾಯದಿಂದ ಕಾರಲ್‌ರವರು ಬುಡಾಪೆಸ್ಟ್ ಪಟ್ಟಣವನ್ನು ವಶಪಡಿಸಿಕೊಳ್ಳಲು ಆಸೆಪಟ್ಟು ಸ್ವಿಡ್ಜರ್ಲ್ಯಾಂಡಿನಿಂದ ವಾಯುವಿಮಾನದ ಮೂಲಕ ಕಳೆದ ತಾ|| ೧೯ರಲ್ಲಿ ಯಾರಿಗೂ ತಿಳಿಯದಂತೆ ಹಂಗೇರಿಯಾದ ಊಡೆನ್‌ಬರ್ಗ್ ಪಟ್ಟಣದಲ್ಲಿಳಿದರು. ಆ ವಿಮಾನವನ್ನು ಜರ್ಮನ್ ಮನುಷ್ಯನೊಬ್ಬನು ನಡೆಯಿಸುತ್ತಿದ್ದನಂತೆ. ಈ ಸುದ್ದಿಯನ್ನು ಹಂಗೇರಿಯ ಪ್ರಜೆಗಳೂ ಪ್ರಭುತ್ವದವರೂ ತಿಳಿದು ಬುಡಾಪೆಸ್ಟಿಗೆ ಅವರು ಬರದಂತೆ ಮಾಡುವುದಕ್ಕಾಗಿ ರೈಲ್ವೇ ಕಂಬಿಗಳನ್ನು ಕಿತ್ತುಬಿಟ್ಟರು. ಬುಡಾಪೆಸ್ಟಿನಲ್ಲಿದ್ದ ಪರದೇಶದ ರಾಯಭಾರಿಗಳೆಲ್ಲಾ ಕಾರಲ್‌ರವರನ್ನು ದೇಶದಿಂದ ಹೊರಕ್ಕೆ ಹೊರಡಿಸಬೇಕೆಂದು ಸೂಚನೆಕೊಟ್ಟರು. ಪ್ರಭುತ್ವದವರು ತಕ್ಕ ಸೇನಾಸನ್ನಾಹವನ್ನು ಮಾಡಿ ಕಾರಲ್‌ರವರನ್ನು ಹೊರಕ್ಕೆ ಓಡಿಸಲಿಕ್ಕೆ ಸಜ್ಜಾದರು, ಮತ್ತು ಸೈನಿಕ ಶಾಸನವನ್ನು ಸಾರಿದರು. ಕಾರಲ್ ಪಕ್ಷದ ಸೈನ್ಯಕ್ಕೂ ಪ್ರಭುತ್ವ ಪಕ್ಷ ಸೈನ್ಯಕ್ಕೂ ಸ್ವಲ್ಪ ಯುದ್ಧವಾಗಿ ಕಾರಲ್ ಕಡೆಯವರು ಸೋತರು. ಆಗ ಕಾರಲ್‌ರವರು ಓಡಿಹೋದರು. ರೈಲ್ವೆಯಲ್ಲಿ ಹೋಗುತ್ತಿರುವಾಗ ಕಂಬಿಗಳನ್ನು ಕಿತ್ತು ಹಾಕಿಬಿಟ್ಟಿದ್ದುದರಿಂದ ಪ್ರಭುತ್ವ ಸೈನಿಕರ ಕೈಗೆ ಅವರು ಸಿಕ್ಕಿಬಿದ್ದರು. ಈಗ ಸೆರೆಯಲ್ಲಿಟ್ಟಿದ್ದಾರೆ. ಇವರು ತಪ್ಪಿಸಿಕೊಂಡು ಹೋಗಲು ಅವಕಾಶಕೊಟ್ಟ ಸ್ವಿಡ್ಜರ್ಲ್ಯಾಂಡ್ ಪ್ರಭುತ್ವದವರು ಆಕ್ಷೇಪಕ್ಕೆ ಗುರಿಯಾದರು. ಇನ್ನು ಎಂದೆಂದಿಗೂ ತಮ್ಮ ದೇಶಕ್ಕೆ ಕಾರಲ್‌ರವರನ್ನು ಸೇರಿಸುವುದಿಲ್ಲವೆಂದು ಅವರು ಹೇಳಿಬಿಟ್ಟರು. ಇವರನ್ನು ಸೆಂಟ್‌ಹೆಲಿನಾ (ನೆಪೋಲಿಯನ್ ಬೋನಾಪಾರ್ಟನ್ನು ಸೆರೆಯಿಟ್ಟಿದ್ದ ದ್ವೀಪ) ದಲ್ಲಿಟ್ಟುಬಿಡಬೇಕೆಂದು ಫ್ರೆಂಚರು ಹೇಳಿರುವರು.

ಪ್ರಜಾಪ್ರತಿನಿಧಿಸಭೆ.

(ಮಿಲ್ಲರ್‌ಸಂಘದ ವರದಿಮೇಲಣ ಚರ್ಚೆ).

ತಾ|| ೧೮-೧೦-೨೧.

ಕಳೆದವಾರದ ಶೇಷ.

ಈ ಚರ್ಚೆಯು ನಡೆದುದರಲ್ಲಿ ಇದು ೩ನೆಯ ದಿವಸ. ಮಧ್ಯಾಹ್ನ ೧೨ ಗಂಟೆಯಿಂದ ೧|| ಗಂಟೆವರೆಗೆ ಜರುಗಿತು.

ಮ|| ಜೆ. ಪರಮಶಿವಯ್ಯನವರು—ಸರ್ ಎಂ. ವಿಶ್ವೇಶ್ವರಯ್ಯನವರು ತುಮಕೂರು ಮೊದಲಾದ ಡಿಸ್ಟ್ರಿಕ್ಟುಗಳ ಸಂಚಾರವನ್ನು ಮಾಡಿದಾಗ್ಗೆ ಗ್ರಾಮಾಂತರದ ಜನರು ಹಣದ ಚೀಲಗಳನ್ನು ತಮಗೆ ಕೊಟ್ಟು ತಂತಮ್ಮ ಗ್ರಾಮಗಳಲ್ಲಿ ಪಾಠಶಾಲೆಗಳನ್ನೇರ್ಪಡಿಸಿಕೊಡಬೇಕೆಂದು ಪ್ರಾರ್ಥಿಸಿದರೆಂತಲೂ, ಅದರಮೇಲೆ ಆ ಜನರಿಗೆ ವಿದ್ಯಾಭ್ಯಾಸಾಭಿಮಾನವು ಎಷ್ಟಿದೆಯೆಂಬುದು ಗೊತ್ತಾಯಿತೆಂತಲೂ ಅವರು ಪ್ರಜಾಪ್ರತಿನಿಧಿಸಭೆಯಲ್ಲಿ ಮಾಡಿದ್ದ ಭಾಷಣದ ಭಾಗವನ್ನು ಓದಿ ಹೇಳಿದರು. ಮತ್ತು ಈ ಮಿಲ್ಲರ್‌ಸಂಘದ ವರದಿಯಾದ ಈಚೆಗೆ ಹಿಂದುಳಿದ ಜನವರ್ಗಗಳಿಗೆ ವಿದ್ಯಾಪ್ರೋತ್ಸಾಹವು ಮತ್ತಷ್ಟು ಅಧಿಕವಾಗಿದೆ. ೧-೨ ವರ್ಷಗಳೀಚೆಗೆ ವೀರಶೈವಸಮಾಜದಲ್ಲೂ ಮಹಮ್ಮದೀಯರಲ್ಲೂ ಗ್ರ್ಯಾಜುಯೇಟರ ಸಂಖ್ಯೆಯು ವರ್ಷೇವರ್ಷೇ ಹೆಚ್ಚುತ್ತಲಿದೆ. ಕಳೆದವರ್ಷ ನಮ್ಮಲ್ಲಿ ೯-೧೦ ಜನರು ಗ್ರ್ಯಾಜುಯೇಟರಾಗಿದ್ದಾರೆ. ಅದುಕಾರಣ ಈ ಮಿಲ್ಲರ್‌ಸಂಘದ ವರದಿಯು ಪ್ರೋತ್ಸಾಹಕವಾದ ವಸ್ತುವಾಗಿದೆ. ಯೂನಿವರ್ಸಿಟಿಗಳ ಡಿಕ್ರಿಯೇ ಎಫಿಷೆನ್ಸಿಯೆಂದು ಹೇಳುವುದು ಯುಕ್ತಿಯುಕ್ತವಲ್ಲ. ಇದುವರೆಗೆ ಹಿಂದುಳಿದ ಜನವರ್ಗಗಳು ಎಷ್ಟೋ ದೊಡ್ಡದೊಡ್ಡ ಸರ್ಕಾರಿ ಉದ್ಯೋಗಕ್ಕೆ ಬಂದಿರುವರೆಂದೂ ಅದಕ್ಕೇನೂ ತಡೆಯಿಲ್ಲವೆಂದೂ ಇವರುಗಳು ಹೇಳಿರುತ್ತಾರೆ. ಆ ಹಿಂದುಳಿದವರುಗಳು ಸ್ವಸಮಾಜದ ಅಭಿಮಾನವನ್ನು ಬಿಟ್ಟು ಇತರ ತಮ್ಮ ಸಹೋದ್ಯೋಗಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ನಡೆದುಕೊಂಡುದರಿಂದಲೇ ಅವರು ಅಧಿಕಾರದಲ್ಲಿ ಮುಂದಕ್ಕೆ ಬಂದರು. ಅಂಥವರೂ ಎಲ್ಲೋ ಅಲ್ಪಸ್ವಲ್ಪಮಂದಿಯೇ ಆಗಿರುತ್ತಾರೆ. ಸರ್ಕಾರದವರು ಮೊದಲುಮೊದಲು ನಾಮಿನೇಷನ್ನಿನಲ್ಲಿಯೂ ಬ್ರಾಹ್ಮಣರನ್ನೇ ಉದ್ಯೋಗಕ್ಕೆ ಸೇರಿಸಿಕೊಂಡಿದ್ದಾರೆ. ಈ ರಿಪೋರ್ಟು ಎಫಿಷೆನ್ಸಿಗೆ ಸಹಾಯಕವಾಗುತ್ತದೆಯೇ ಹೊರತು ಕೆಡಿಸುವುದಕ್ಕಲ್ಲ. ಸರ್ಕಾರ ಉದ್ಯೋಗವನ್ನು ಬಾಡಿಗೆಮನೆಗೆ ಒಬ್ಬ ಮೆಂಬರು ಹೋಲಿಸಿದರಷ್ಟೆ. ಇವರು ಅಂಥ ಬಾಡಿಗೆಮನೆಯನ್ನು ಆಗಾಗ್ಗೆ ರಿಪೇರಿಮಾಡಿಕೊಂಡು ಉತ್ತಮಸ್ಥಿತಿಯಲ್ಲಿ ಇಟ್ಟುಕೊಳ್ಳಲಿಲ್ಲ; ಅದುಕಾರಣ ಸರಿಯಾದಸ್ಥಿತಿಗೆ ತರುವುದಕ್ಕೇ ಇತರರಿಗೂ ಅರ್ಧಭಾಗವನ್ನು ಸರ್ಕಾರದವರು ಹಂಚಿಕೊಟ್ಟು ಅದನ್ನು ಉತ್ತಮಸ್ಥಿತಿಗೆ ತರಬೇಕೆಂದು ನಿಶ್ಚಯಿಸಿರುವುದು ಯುಕ್ತವಾಗಿರುತ್ತದೆ ಎಂದು ಹೇಳಿದರು.

ಮ|| ಎಲ್. ವೇಮಾರೆಡ್ಡಿಯವರು—ಈ ರಿಪೋರ್ಟಿನ ಮೇಲಣ ಚರ್ಚೆಯನ್ನು ಈ ಸಭೆಗೆ ತರಬೇಕಾದ ಆವಶ್ಯಕತೆಯಿರಲಿಲ್ಲ. ಇದರಲ್ಲಿ ಯಾರಿಗೂ ತೊಂದರೆಯಿಲ್ಲ. ಈ ರಿಪೋರ್ಟಿನ ಸಂಬಂಧದಲ್ಲಿ ೮ ಸಬ್ಜೆಕ್ಟುಗಳು ಚರ್ಚೆಗಾಗಿ ಹಾಕಲ್ಪಟ್ಟಿವೆ. (ಅವುಗಳನ್ನೆಲ್ಲಾ ಓದಿ ಹೇಳಿದರು) ಇದರಿಂದ ಸರ್ಕಾರದ ಕಾರ್ಯದಕ್ಷತೆಯು ಹೋಗುತ್ತದೆ. ಬ್ರಾಹ್ಮಣರ ಜೀವನೋಪಾಯಕ್ಕೂ ಅಭಿವೃದ್ಧಿಗೂ ಅವರ ಚಿತ್ತಸ್ವಾಸ್ಥ್ಯಕ್ಕೂ ಭಂಗಬರುತ್ತದೆ ಎಂದು ಮೊದಲಾಗಿ ೧೫ ದೋಷಗಳನ್ನು ಇದರಮೇಲೆ ಆಪಾದಿಸಿರುತ್ತಾರೆ. ವಿಚಾರಮಾಡಿ ನೋಡಿದರೆ ಈ ರಿಪೋರ್ಟಿನಂತೆ ನಡೆಯುವುದರಿಂದ ಅಂಥ ತೊಂದರೆಗಳು ಯಾವುವೂ ಆಗುವುದಿಲ್ಲ. ಏಕೆಂದರೆ ಈಗಲೇ ಸರ್ಕಾರಿ ಉದ್ಯೋಗಗಳಲ್ಲಿ ಸೇಕಡಾ ೩೦ ಭಾಗವು ಹಿಂದುಳಿದವರಿಗೆ ಇದೆ. ಇನ್ನು ೨೦ರಷ್ಟನ್ನು ಹೆಚ್ಚಿಸಿಬಿಟ್ಟರೆ ಈಗ ಪ್ರತಿಪಕ್ಷದವರು ಹೇಳುವಂಥ ದೋಷಗಳು ಆಗುವುವೆಂದು ಹೇಳುವುದಾದರೆ ಆ ೨೦ರಷ್ಟನ್ನು ಹೆಚ್ಚಿಸದೆ ಬಿಟ್ಟರೆ ಈ ದೋಷಗಳೆಲ್ಲಾ ಆಗದೆ ನಿಲ್ಲುತ್ತವೆಯೆ? ೨೦ರಷ್ಟನ್ನು ಹೆಚ್ಚಿಸದೆಬಿಟ್ಟರೆ ಈ ದೋಷಗಳೆಲ್ಲಾ ಆಗಬಹುದೇ ಹೊರತು ಹೆಚ್ಚಿಸಿದರೆ ಎಂದಿಗೂ ಆಗುವುದಿಲ್ಲ. ಹಿಂದೆ ಬ್ರಾಹ್ಮಣರನ್ನು ಇತರರು ಕಾಣುತ್ತಿದ್ದಂತೆ ಈಗ ಕಾಣುವುದಿಲ್ಲ. ಹಿಂದೆ ಅವರನ್ನು ಇತರರು ದೇವರಂತೆ ಕಾಣುತ್ತಿದ್ದರು. ದೇವರ ದಯೆಯನ್ನು ಮೊದಲು ಪ್ರಾರ್ಥಿಸದೆ ಯಾವ ಕಾರ್ಯವನ್ನೂ ಉಪಕ್ರಮಿಸುವುದಿಲ್ಲ. ಅಂಥ ದೇವತಾ ಸಮಾನವಾದ ಸಾತ್ವಿಕಗುಣಾತಿಶಯವೂ ಮೇಧಾಶಕ್ತಿಯೂ ಇವರಲ್ಲಿತ್ತು. ಅಂಥ ಇವರುಗಳು ಆ ತಮ್ಮ ಪೂರ್ವದ ಉದ್ಯೋಗವನ್ನು ಬಿಟ್ಟು ಬೇರೆ ದಾಸ್ಯವೃತ್ತಿಗೆ ಪ್ರವೃತ್ತಿಸಿದ್ದರಿಂದ ಪೂರ್ವದ ಪೂಜ್ಯತೆಯು ಇವರಿಗೆ ತಪ್ಪಿಹೋಗಿದೆ. ವಿದ್ಯೆಯನ್ನು ಕಲಿಯಲು ಯಾರಿಗೂ ಆಶೋತ್ತರವಿರಬೇಕು. ಅಂಥ ಆಶೋತ್ತರವನ್ನು ಹುಟ್ಟಿಸಲು ಈ ರಿಪೋರ್ಟು ಸಾಧಕವಾಗಿದೆ. ಆದಕಾರಣ ಇದರಂತೆ ಜಾರಿಗೆ ಬರುವುದು ಯುಕ್ತವಾಗಿದೆ.

ಮ|| ಎಸ್. ಹಂಪಯ್ಯನವರು—ಸರ್ವೇಜನಾಸ್ಸುಖಿನೋಭವಂತು ಎಂಬ ಮಂತ್ರವನ್ನು ಚಾಲ್ತಿಯಲ್ಲಿಟ್ಟುಕೊಂಡಿರುವುದಾಗಿ ಹೇಳಿಕೊಳ್ಳುವ ಜನರು ಇದಕ್ಕೆ ಅಡ್ಡಿಮಾಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅಧಿಕಾರವೆಂಬ ಲಕ್ಷ್ಮಿಯು ತಮ್ಮ ಕೈಬಿಟ್ಟುಹೋಗುವಳೆಂದು ಅವರುಗಳು ಇಷ್ಟು ತಾಪತ್ರಯ ಪಡುತ್ತಿರುವಂತೆ ತೋರುತ್ತದೆ. ದಫ್ತರ ಬಂದಿ ಮೊದಲುಗೊಂಡು ದಿವಾನಗಿರಿವರೆಗೆ ಒಂದೇ ಜನವರ್ಗದವರು ತುಂಬಿರುವುದರಿಂದ ಇತರರಿಗೆ ಸರ್ಕಾರದಲ್ಲಿ ಆಗಬೇಕಾದ ಕೆಲಸಗಳು ಜರುಗುವುದರಲ್ಲಿ ಬಹು ಕಷ್ಟಗಳಿವೆ. ಸರ್ಕಾರಿ ಆಫೀಸುಗಳಲ್ಲಿ ನಾಲ್ಕಾರು ತರದ ಕೋಮುಗಳವರಿದ್ದರೆ ಒಬ್ಬರಿಂದೊಬ್ಬರಿಗೆ ಪರಸ್ಪರ ಭೀತಿಯೂ ಎಚ್ಚರಿಕೆಯೂ ಇದ್ದು ಕೆಲಸವು ಅಚ್ಚುಕಟ್ಟಾಗಿ ಸಾಗುತ್ತದೆ. ಆ ದೃಷ್ಟಿಯಿಂದಲೇ ಮಿಲ್ಲರ್ ಕಮಿಟಿಯೂ ಅದರ ಈ ರಿಪೋರ್ಟೂ ಏರ್ಪಡಿಸಲ್ಪಟ್ಟಿವೆ. ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲಣ ಅಪ್ಪಣೆಯನ್ನು ಜಾರಿಗೆ ತರುವುದರಿಂದ ಇನ್ನುಮುಂದೆ ಕೆಲಸಕ್ಕೆ ಬರತಕ್ಕವರು ಇದುವರೆಗಣಂತೆ ಲೋಪಗಳಿಗೆ ಅವಕಾಶ ಕೊಡದೆ ಸರ್ಕಾರಿ ಕೆಲಸಗಳನ್ನು ದಕ್ಷತೆಯಿಂದ ನೆರವೇರಿಸುತ್ತಾರೆ. ಜರ್ಮನ್ ಮಂತ್ರಿಯವರು ದೇಶದ ಸಂಪದಭಿವೃದ್ಧಿಗೆ ಕೈಗಾರಿಕೆಗಳ ಅಭಿವೃದ್ಧಿಯೇ ಸಾಧಕವೆಂದು ಹೇಳಿದ ಉಪನ್ಯಾಸವನ್ನು ಒಬ್ಬ ಬ್ರಾಹ್ಮಣಮೆಂಬರು ಉದಹರಿಸಿದರಷ್ಟೆ. ನಮ್ಮ ಸಹೋದರರಾದ ಈ ವಿದ್ಯಾಧಿಕಜನರು ಅಂಥ ಕೈಗಾರಿಕೆ ಮೊದಲಾದ ವೃತ್ತಿಗಳಿಗೆ ನುಗ್ಗಿ ಅವುಗಳನ್ನು ಮುಂದಕ್ಕೆ ತರಬಹುದು. 'ಬ್ರಹ್ಮವಿದ್ಬ್ರಹ್ಮಣೋಭವತಿ, ಬ್ರಹ್ಮಜ್ಞಾನೇನಬ್ರಾಹ್ಮಣಃ' ಎಂಬ ವಚನಾರ್ಥಕ್ಕೆ ದೃಷ್ಟಾಂತರಾಗಿ ಬ್ರಾಹ್ಮಣರೆಲ್ಲರೂ ಪರಿಣಮಿಸಿದರೆ ಸರ್ವರೂ ಅವರಿಗೆ ಮನ್ನಣೆ ಕೊಡುವುದರಲ್ಲಿ ಅಭ್ಯಂತರವಿಲ್ಲ. ಲೋಕಲ್‌ಬೋರ್ಡುಗಳ ರೂಲ್ಸನ್ನು ತಿದ್ದುಪಾಟುಮಾಡಿದ ಹೊಸ ಅಪ್ಪಣೆಯನ್ನು ಸರ್ಕಾರದವರು ಮಾಡಿದಮೇಲೆ ಈಚೆಗೆ ಇತರ ಹಿಂದುಳಿದ ಜನವರ್ಗಗಳೆಲ್ಲಾ ಆ ಬೋರ್ಡುಗಳಲ್ಲಿ ಸೇರಿ ಎಷ್ಟು ಉತ್ಸಾಹದಿಂದಲೂ ದಕ್ಷತೆಯಿಂದಲೂ ಮೆಡಲುಗಳನ್ನು ಪಡೆಯುವವರೆಗೂ ಕೆಲಸಮಾಡಿರುತ್ತಾರೆ. ಅದನ್ನು ಪರಿಭಾವಿಸಿದರೆ ಈ ಮಿಲ್ಲರ್‌ಕಮಿಟಿ ರಿಪೋರ್ಟಿನ ಫಲವೂ ಮುಂದೆ ಹಾಗೆಯೇ ಪರಿಣಮಿಸುವುದರಲ್ಲಿ ಅಭ್ಯಂತರವಿರುವುದಿಲ್ಲವೆಂದು ಹೇಳಬಹುದಾಗಿದೆ. ಮಿಲ್ಲರ್‌ಕಮಿಟಿಮೇಲಣ ಅಪ್ಪಣೆಯಿದ್ದರೂ ಸೆಂಟರಲ್ ರಿಕ್ರೂಟ್‌ಮೆಂಟ್ ಬೋರ್ಡನ್ನು ವಜಾಮಾಡಬೇಕೆಂದು ಅವರುಗಳುಹೇಳುತ್ತಾರೆ. ಅದನ್ನು ವಜಾಮಾಡುವುದೂ ಒಂದೇ, ರಿಪೋರ್ಟನ್ನು ವಜಾಮಾಡುವುದೂ ಒಂದೇ. ಹಾಗಾದರೆ ಕಷ್ಟಪಟ್ಟು ಕಮಿಟಿಯವರು ಮಾಡಿದ ರಿಪೋರ್ಟೆಲ್ಲಾ ವ್ಯರ್ಥವೇ ಆಗುವುದು. ಸರ್ಕಾರದವರು ಅದಕ್ಕಾಗಿ ಮಾಡಿದ ಪ್ರಯತ್ನವೂ ವ್ಯರ್ಥವೇ ಆಗುವುದು. ಶ್ರೀಮನ್ಮಹಾರಾಜರು ಬಹು ದೀರ್ಘಕಾಲ ಪರಿಶೀಲನೆಯಿಂದ ಕಮಿಟಿಯನ್ನೇರ್ಪಡಿಸಿ, ಅವರ ರಿಪೋರ್ಟನ್ನು ಸಾವಧಾನವಾಗಿ ಪರ್ಯಾಲೋಚಿಸಿ, ಕಡೆಗೆ ಒಪ್ಪಿ ಮಾಡಿದ ಆರ್ಡರನ್ನು ವಜಾಮಾಡಿಸಬೇಕೆನ್ನುವುದು ರಾಜಭಕ್ತಿವಂತರ ಕೃತ್ಯವಲ್ಲವೆಂದು ಹೇಳಬೇಕಾಗುತ್ತದೆ. ಅಲ್ಲದೆ ಈಗ ಇತರ ಪ್ರಜೆಗಳಿಗೆ ೫೦ರಂತೆ ಭಾಗಿಸಿಕೊಟ್ಟಿರುವುದನ್ನು ೭೫ಕ್ಕಾದರೂ ಹೆಚ್ಚಿಸಬೇಕು. ಏಕೆಂದರೆ ಕಮಿಟಿ ರಿಪೋರ್ಟಾದದ್ದು ೧೯೧೮ರಲ್ಲಿ. ಅಗ್ಗೇ ೫೦ರಷ್ಟು ಎಂದು ಹೇಳಿರುವಾಗ ೨ ವರ್ಷ ಕಳೆದೀಚೆಗೆ ಇನ್ನಷ್ಟು ಹೆಚ್ಚಿಸಿ ಸರ್ಕಾರದವರು ಅಪ್ಪಣೆಮಾಡಬೇಕಾದುದು ನ್ಯಾಯವಾಗಿರುತ್ತದೆ.

ಮ|| ದಾವಣಗೆರೆ ನಾರಾಯಣಶೆಟ್ಟರು—ಈ ರಿಪೋರ್ಟು ವಿದ್ಯಾಭ್ಯಾಸಕ್ಕೆ ಒಂದು ಪ್ರೋತ್ಸಾಹಕವಾಗಿದೆಯೇ ಹೊರತು ಪ್ರಜೆಗಳಿಗೆ ಜೀವನವನ್ನು ಕಲ್ಪಿಸುವುದೇ ಇದರ ಉದ್ದೇಶವಲ್ಲ. ಸಂಸ್ಥಾನದಲ್ಲಿ ವಿನಿಯೋಗವಾಗುತ್ತಿರುವ ೬ ಲಕ್ಷ ರೂ. ಸ್ಕಾಲರ್ಷಿಪ್ಪಿನಲ್ಲಿ ೫|| ಲಕ್ಷ ರೂ. ಗಳು ಯಾರಲ್ಲಿ ವಿದ್ಯೆಯು ಹೆಚ್ಚಾಗಿದೆಯೋ ಅವರಲ್ಲಿಗೇ ಹೋಗುತ್ತದೆ. ದೇಶದ ಅಭಿವೃದ್ಧಿಗೆ ಪ್ರಜೆಗಳೂ ಸರ್ಕಾರವೂ ಎರಡೂಸೇರಿ ಕೆಲಸಮಾಡಬೇಕು. ಬಿ. ಎ. ಪ್ಯಾಸ್ ಮಾಡಿ ಬಂದಕೂಡಲೇ ಅಂಥವರಿಗೆ ಕೆಲಸ ಕೊಟ್ಟುಬಿಟ್ಟರೆ ಆದಿನವೇ ಅದನ್ನು ನಿರ್ವಹಮಾಡಲು ಸಾಧ್ಯವಾಗುವುದಿಲ್ಲ. ಅನುಭವ ಬಂದೇಬರಬೇಕು. ಅಮೇರಿಕೆಯ ಆಂಡ್ರೂಕಾರ್ನಿಗಿಗೆ ವಿದ್ಯೆಯಿಲ್ಲದಿದ್ದರೂ ಕಾಮನ್‌ಸೆನ್ಸು ಅವನಲ್ಲಿತ್ತು. ಅವನಿಗೆ ೨೫೦ ಕೋಟಿ ರೂ. ಗಳ ಆಸ್ತಿಯಿತ್ತು. ಆತನು ೨ ಲಕ್ಷ ಜನರಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟಿರುವನು. ಅದುಕಾರಣ ಅಭಿವೃದ್ಧಿಗೆ ಬರಿಯ ವಿದ್ಯೆಯೇ ಮುಖ್ಯವಲ್ಲ. ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದವನ್ನು ಗೌರ್ನಮೆಂಟಿನವರು ಮಾಡಲಿಲ್ಲ. ಪ್ರಜೆಗಳೂ ಮಾಡಲಿಲ್ಲ. ದೇವರೇ ಹಾಗೆ ಮಾಡಿದ್ದಾನೆ. ಮಿಲ್ಲರ್‌ಕಮಿಟಿ ರಿಪೋರ್ಟಿಗೆ ಒಪ್ಪದಿದ್ದವರು ದೇಶದಲ್ಲಿ ಎಲ್ಲೋ ಸ್ವಲ್ಪಮಂದಿಯಿರಬಹುದು. ದೇಶಕ್ಕೆಲ್ಲಾ ಇದು ಇಷ್ಟವೇ ಆಗಿರುತ್ತದೆ. ಅವಕಾಶಕೊಟ್ಟರೆ ಇದರ ಒಪ್ಪಿಗೆಗಾಗಿ ೫೦ ಲಕ್ಷ ಪ್ರಜೆಗಳ ರುಜುಮಾಡಿಸಿ ಸ್ಪೆಷಲ್‌ಟ್ರೇನಿನ ಮೂಲಕ ತರಿಸಿಕೊಡಲು ಸಿದ್ಧರಾಗಿದ್ದೇವೆ. ಅವರನ್ನು ಇರಕೂಡದೆಂದು ಇವರೂ, ಇವರನ್ನು ಬರಕೂಡದೆಂದು ಅವರೂ, ಭಿನ್ನಭಾವವಿಟ್ಟುಕೊಳ್ಳದೆ ಸರ್ವಾನುಮೋದನೆಯೊಡನೆ ಏಕಮತ್ಯದಿಂದ ನಡೆದುಕೊಂಡರೆ ದೇಶಕ್ಕೆ ಕ್ಷೇಮವಾಗುತ್ತದೆ.

ಮ|| ಕಂಚುಗಾರ ಕಾಳಪ್ಪನವರು—ಸರ್ಕಾರದವರು ಲಾಯಖ್ಖಾಗಿದ್ದವರಿಗೇ ಕೆಲಸ ಕೊಡುತ್ತಾರೆ. ನಾವು ನೌಕರಿಯಿಂದಲೇ ಜೀವಿಸಬೇಕು ಬೇರೆ ಗತ್ಯಂತರವಿಲ್ಲವೆಂಬುದಕ್ಕಾಗಿ ನಾವೇನೂ ಇದನ್ನು ಕೋರುತ್ತಾ ಇಲ್ಲ. ನಮಗೂ ಸರ್ಕಾರದ ಉದ್ಯೋಗವನ್ನು ವಹಿಸಲು ಹಕ್ಕಿರುತ್ತದೆ. ಮತ್ತು ಈ ರಿಪೋರ್ಟಿನ ಪ್ರೋತ್ಸಾಹದಿಂದ ಪ್ರಜಾಸಾಮಾನ್ಯದಲ್ಲೂ ವಿದ್ಯಾಭ್ಯಾಸ ಕುತೂಹಲವು ಹೆಚ್ಚುತ್ತದೆ ಎಂಬ ಕಾರಣದಿಂದಲೇ ನಾವು ಇದನ್ನು ಕೋರುತ್ತೇವೆ. ಮಿಲ್ಲರ್ ಕಮಿಟಿ ರಿಪೋರ್ಟು ಪ್ಯಾಸಾದ ಮೇಲೂ ಸರ್ಕಾರದವರು ಬ್ರಾಹ್ಮಣರಿಗೇ ಅಧಿಕಾರ ಕೊಡುತ್ತ ಬಂದಿದ್ದಾರೆ. ಈಗ ಸೇಕಡಾ ೫೦ ನ್ನು ಕೊಡಲು ಏರ್ಪಡಿಸಿರುವುದನ್ನು ೭೫ ಕ್ಕೆ ಹೆಚ್ಚಿಸಿಕೊಡಬೇಕು.

ಮ|| ತಿ|| ನರಸಿಪುರದ ಶ್ಯಾಮಯ್ಯಂಗಾರರು—ಮೊದಲು ಹಿಂದೂ ಮುಸಲ್ಮಾನ್ ಎಂಬ ಭೇದವಿತ್ತು, ಈಗ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದಹುಟ್ಟಿದೆ. ಅಧಿಕಾರಪ್ರಾಪ್ತಿಗೆ ವಿದ್ಯೆಯೇ ಮುಖ್ಯಕಾರಣವಲ್ಲ; ಅವರವರ ಅದೃಷ್ಟವೇ ಕಾರಣ. ಮ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಮೊದಲಾದವರಿಗೆ ದೊಡ್ಡ ಅಧಿಕಾರಸಿಕ್ಕಲು ಅವರವರ ಅದೃಷ್ಟವೇ ಕಾರಣ. ಆದುದರಿಂದಲೇ ಅವರು ಅಭಿವೃದ್ಧಿಗೆ ಬಂದದ್ದು. ಬ್ರಾಹ್ಮಣರೇ ಪಂಚಮರ ಉದ್ಧಾರಕ್ಕೆ ಆರಂಭಮಾಡಿದವರು. ಇನ್ಕಂಟ್ಯಾಕ್ಸು ಯಾರಿಂದ ಸರ್ಕಾರಕ್ಕೆ ಹೆಚ್ಚಾಗಿಬರುತ್ತದೆಯೆಂಬುದನ್ನು ವಿಚಾರಮಾಡಿ ನೋಡಿದರೆ ಯಾರು ವೃದ್ಧಿಯಾಗಿದ್ದಾರೆ ಯಾರು ಹಿಂದೆಬಿದ್ದಿದ್ದಾರೆ ಎಂಬುದು ಗೊತ್ತಾಗುತ್ತದೆ. ಅವರವರ

ಶಕ್ತಿಯಿಂದ ಅಧಿಕಾರಪ್ರಾಪ್ತಿಯಾಗುತ್ತದೆಯೇ ಹೊರತು ಈ ರಿಪೋರ್ಟಿನಿಂದ ಅಧಿಕಾರವು ಬರುವುದಿಲ್ಲ. ನಾವು ಮಿಲ್ಲರ್ ಕಮಿಟಿ ರಿಪೋರ್ಟಿನ ಚರ್ಚೆಯನ್ನೇ ಇಲ್ಲಿ ಇಷ್ಟು ದೀರ್ಘಕಾಲ ಇಟ್ಟುಕೊಂಡು ಪ್ರಜೆಗಳಿಗೆ ಅತ್ಯಾವಶ್ಯಕವಾಗಿರುವ ಅನೇಕಾನೇಕ ವಿಷಯಗಳ ಚರ್ಚೆಗೆ ಅವಕಾಶವಿಲ್ಲದಂತೆ ಮಾಡಿಕೊಳ್ಳಬಾರದು. ಕಳೆದ ಸೆಷನ್ನಿನಲ್ಲಿ ನಾವು ಬಾಯಿಮುಚ್ಚಿ ಕುಳಿತುಕೊಂಡದ್ದೇ ತಪ್ಪಾಯಿತು. ನಂನಮ್ಮ ಸ್ಥಲಗಳಿಗೆ ಸಂಬಂಧಪಟ್ಟ ಎಷ್ಟೋ ವಿಷಯಗಳನ್ನು ಚರ್ಚೆಮಾಡದೆ ತಪ್ಪಿಸಿಕೊಂಡದ್ದಾಯಿತು. ಈಗಲಾದರೂ ಈ ರಿಪೋರ್ಟಿನ ಚರ್ಚೆಯನ್ನು ಸಾಕುಮಾಡಿ ಬೇರೆ ಸಬ್ಜೆಕ್ಟುಗಳನ್ನು ತೆಗೆದುಕೊಂಡರೆ ಚೆನ್ನಾಗಿದೆ.

ಮ|| ಸೂರ್ಯನಾರಾಯಣಪ್ಪನವರು—ಮುಂದೆ ಹೋಗುವವರನ್ನು ಹಿಂದಕ್ಕೆ ಎಳೆಯಬೇಡಿ. ಯಾರಿಗಾದರೂ ಕೆಲಸವನ್ನು ಕೊಟ್ಟುಕೊಳ್ಳಿ. ನಮಗೆ ಇದುವರೆಗೆ ಇದ್ದ ಫ್ರೀಷಿಪ್ಪು ಮೆರಿಟ್ ಸ್ಕಾಲರ್ಷಿಪ್ಪು ಮೊದಲಾದ ಸಲಕರಣೆಗಳನ್ನೆಲ್ಲಾ ಉಳಿಸಿಕೊಟ್ಟು ಸರ್ಕಾರದ ಎಫಿಷೆನ್ಸಿ ಕೆಡದಂತೆ ಇತರರಿಗೆ ೫೦ಕ್ಕೆ ಪ್ರತಿಯಾಗಿ ೮೦ ರಷ್ಟನ್ನಾದರೂ ಕೊಟ್ಟುಕೊಳ್ಳಿ. ಈ ರಿಪೋರ್ಟು ಜಾರಿಗೆ ಬಂದರೆ ಬ್ರಾಹ್ಮಣರಿಗೆ ತೊಂದರೆಯಿಲ್ಲವೆಂದು ಹೇಳುವುದು ಸರಿಯಲ್ಲ. ಬ್ರಾಹ್ಮಣರಿಗೆ ಸರ್ಕಾರಿ ನೌಕರಿಯಿಂದಲೇ ಜೀವನವೆಂಬುವದನ್ನು ಎಲ್ಲರೂ ತಿಳಿದಿದ್ದಾರೆ. ಇತರರಲ್ಲಿ ಎಷ್ಟು ಮಂದಿಗಳು ಬಿ. ಎ. ಮೊದಲಾದ ಪ್ಯಾಸುಗಳನ್ನು ಮಾಡಿದ್ದಾರೋ ಬ್ರಾಹ್ಮಣರಲ್ಲಿ ಎಷ್ಟು ಮಂದಿ ಪ್ಯಾಸ್ ಮಾಡಿ ಕುಳಿತಿದ್ದಾರೋ ವಿಚಾರಿಸಿ ನೋಡಿ ಹಾಗೆ ಕುಳಿತಿರುವವರ ಗತಿಯೆಲ್ಲಾ ಮುಂದೆ ಏನಾಗಬೇಕು?

ಮ|| ಮುಳಬಾಗಲು ಕೃಷ್ಣಮೂರ್ತ್ಯಾಚಾರರು—ಸರ್ಕಾರವು ಕಾರ್ಯದಕ್ಷತೆಯನ್ನು ಮುಖ್ಯವಾಗಿ ನೋಡಬೇಕು. ಈ ಕಮಿಟಿ ರಿಪೋರ್ಟು ಹುಟ್ಟುವುದಕ್ಕೆ ಏನು ಮೂಲವೆಂಬುದೇ ತೋರುವುದಿಲ್ಲ. ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಪರಸ್ಪರ ದ್ವೇಷಾಸೂಯಾಜನಕ ಶಬ್ದಗಳನ್ನು ಹುಟ್ಟಿಸಿ ಯಾತಕ್ಕೆ ಅನರ್ಥಮಾಡಬೇಕೋ ತಿಳಿಯಲಿಲ್ಲ. ಪೂರ್ವದಲ್ಲಿ ಈ ಬ್ರಾಹ್ಮಣರು ತಾವಾಗಿ ಹೋಗಿ ಸರ್ಕಾರದ ಅಧಿಕಾರವನ್ನು ತಮಗೆ ಕೊಡಬೇಕೆಂದು ಕೇಳಿಕೊಳ್ಳಲಿಲ್ಲ. ಕಾರ್ಯನಿರ್ವಾಹಕ್ಕೆ ಯಾರು ಸಮರ್ಥರೆಂಬುದನ್ನು ಗೌರ್ನಮೆಂಟಿನವರು ತಾವೇ ಯೋಚಿಸಿ, ಬ್ರಾಹ್ಮಣರನ್ನು ಅವರಾಗಿ ಕರೆದು ಕೆಲಸವನ್ನು ಕೊಟ್ಟರು. ಈಗ ಅವರನ್ನು ಕುರಿತು ಹೀಗೆ ಹಾಗೆ ಎಂದು ಆಕ್ಷೇಪಿಸುವುದು ಅನ್ಯಾಯ. ನೌಕರಿಯೆಂಬುದು ಯಾರಿಗೂ ಹಕ್ಕುದಾರಿಯಲ್ಲ. ಲೋಕಲ್ ಸೆಲ್ಫ್ ಗೌರ್ನಮೆಂಟ್ ಸ್ಕೀಮನ್ನು ಜಾರಿಮಾಡಿದಮೇಲೆ ಎಷ್ಟುಮಟ್ಟಿಗೆ ಯಾರ್ಯಾರು ಮುಂದಕ್ಕೆ ಬಂದರೆಂಬುದನ್ನು ನಿದರ್ಶನಕ್ಕೆ ತೆಗೆದುಕೊಂಡರೆ ಕಾರ್ಯದಕ್ಷತೆ ಯಾರಲ್ಲಿದೆಯೆಂಬುದು ಗೊತ್ತಾಗುವುದು. ಯಾರಲ್ಲಿ ಯೋಗ್ಯತೆಯಿದೆ ಅವರಿಗೆ ನೂರಕ್ಕೆ ನೂರು ಸ್ಥಾನಗಳನ್ನೂ ಕೊಡಬಹುದು.

ಮ|| ಶ್ಯಾ|| ಡಿ. ಎಸ್. ಹನುಮಂತರಾಯರು—ಸೇಕಡಾ ೭೫ನ್ನು ಬೇಕಿದ್ದರೂ ಅವರಿಗೆ ಕೊಡಲಿ. ನಮಗೆ ೨೫ನ್ನಾದರೂ ಖಾಯಮ್ಮಾಗಿ ಉಳಿಸಿಕೊಡಲಿ. ನಮನಮಗೆ ಮೈತ್ರಿಯು ಉಳಿದುಕೊಳ್ಳುವುದು.

ಮ|| ಕೆ. ಎಂ. ಕೃಷ್ಣಪ್ಪನವರು—ಸ್ವಾಮಿ, ನನ್ನದು ''ಮುರಾರೇಸ್ತೃತೀಯಃ ಪಂಥಾಃ.'' ೭ ವರ್ಷ ಕಳೆದನಂತರ ಕೊರಮರು ಕೊರಚರು ಮೊದಲಾದವರಿಗೆಲ್ಲಾ ಅಮಲ್ದಾರಿ ವಗೈರೆ ಕೆಲಸಗಳನ್ನು ಕೊಡುವಂತೆ ಆಗಬೇಕು.

ಮ|| ಸಂಗನಬಸವಪ್ಪನವರು—೨ ಲಕ್ಷ ಜನರು ನೂರಾರುವರ್ಷಗಳಿಂದಲೂ ಸುಖವನ್ನು ಅನುಭವಿಸುತ್ತಿದ್ದರು. ಆಗ ಇತರರೆಲ್ಲಾ ಕಷ್ಟವನ್ನು ಅನುಭವಿಸುತ್ತಿದ್ದರು. ಈಗ ಅವರೂ ಕೂಡ ಸ್ವಲ್ಪ ಅಧಿಕಾರಸುಖವನ್ನು ಅನುಭವಿಸಬಾರದೆ? ಈ ಮಿಲ್ಲರ್‌ಕಮಿಟಿ ರಿಪೋರ್ಟು ಪ್ರಜೆಗಳ ಏಳ್ಗೆಗೆ ಸಾಧಕವಾಗಿದೆ. ಅದನ್ನು ತೆಗೆಯತಕ್ಕದ್ದಲ್ಲ. ಬದಲಾಯಿಸಲೂ ಕೂಡದು. ಎಲ್ಲಾ ಕೋರ್ಟುಕಚೇರಿಗಳಲ್ಲೂ ಬೇರೆಬೇರೆ ಕೋಮುಗಳವರು ಇದ್ದೇಇರಬೇಕು. ಒಬ್ಬರು ಲಂಚ ತೆಗೆದುಕೊಂಡರೆ ಇನ್ನೊಬ್ಬರು ಜೈಲಿಗೆ ಹಾಕುತ್ತಾರೆಂದು ಹೆದರಿಕೆ ಇರುತ್ತದೆ. ಹಳ್ಳಿ ಪಂಚಾಯತಿಗಳಲ್ಲೂ ನಾಲ್ಕು ಜಾತಿಯವರನ್ನು ಸೇರಿಸಿಕೊಳ್ಳುವ ಪದ್ಧತಿಯುಂಟು. ಮೈಸೂರು ರೈಲ್ವೆ ಸ್ಟೇಷನ್ನಿನಲ್ಲಿ ಒಬ್ಬ ನಾಯಡು ಜಾತಿಯವರು ಸ್ಟೇಷನ್‌ಮಾಸ್ಟರಾಗಿದ್ದರು. ಅವರಮೇಲೆ ಯಾರೋ ಬ್ರಾಹ್ಮಣರು ಏನೋ ದೂರುತಂದು ಅರ್ಜಿಮಾಡಿ ಪುಕಾರುಹುಟ್ಟಿಸಿದರು. ಅಷ್ಟಕ್ಕೇ ಮೇಲ್ಪಟ್ಟ ಬ್ರಾಹ್ಮಣಾಧಿಕಾರಿಗಳು ಆ ಮ್ಯಾಸ್ಟರನ್ನು ಡಿಸ್‌ಮಿಸ್‌ಮಾಡಿ ಮನೆಗೆ ಕಳಿಸಿಬಿಟ್ಟರು. ಆದಕಾರಣ ಯೋಗ್ಯತೆಯುಳ್ಳ ಎಲ್ಲ ಜಾತಿಯ ಜನರೂ ಸರ್ಕಾರದ ಅಧಿಕಾರದಲ್ಲಿರುವಂತೆ ಮಾಡುವುದಕ್ಕೆ ಸಾಧಕವಾದ ಈ ರಿಪೋರ್ಟು ಜಾರಿಗೆ ಬರುವುದೇ ಆವಶ್ಯಕ.

ಮಿ|| ಅಬ್ಬಾಸ್‌ಖಾನರವರು—ಈ ರಿಪೋರ್ಟಿನಿಂದ ಮುಸಲ್ಮಾನರೊಬ್ಬರಿಗೇ ಪ್ರಯೋಜನವಲ್ಲ. ದೇಶಕ್ಕೇ ಇದರಿಂದ ಪ್ರಯೋಜನವುಂಟು. ಮತ್ತು ನಮ್ಮ ಪ್ರಯೋಜನಕ್ಕಾಗಿಯೇ ನಾವು ಇದನ್ನು ಕೋರುತ್ತಾ ಇಲ್ಲ. ಸೆನ್ಸಸ್ ಪಟ್ಟಿಯನ್ನು ನೋಡಿದರೆ ಬ್ರಾಹ್ಮಣರಿಗೆ ಸೇಕಡಾ ೪ಕ್ಕಿಂತ ಹೆಚ್ಚಾಗಿ ಸರ್ಕಾರಿ ನೌಕರಿಸ್ಥಾನಗಳನ್ನು ಕೊಡಬೇಕಾಗಿಲ್ಲ. ಹೀಗಿರುವಲ್ಲಿ ೫೦ ರಷ್ಟನ್ನು ಅವರಿಗೆ ಕೊಟ್ಟಿದ್ದರೂ ಅವರು ಅತೃಪ್ತಿಪಟ್ಟು ಇದಕ್ಕೆ ತಡೆಮಾಡುವುದು ಎಷ್ಟು ನ್ಯಾಯವೋ ಪರ್ಯಾಲೋಚಿಸಬೇಕು. ಶ್ರೀಮನ್ಮಹಾರಾಜರವರು ಹಿಂದುಳಿದ ಜನವರ್ಗಗಳ ಪ್ರಾರ್ಥನೆಯನ್ನು ನಿಜವೆಂದು ಭಾವಿಸಿ ಮಿಲ್ಲರ್ ಕಮಿಟಿ ರಚನೆಗೂ ಅವರ ರಿಪೋರ್ಟನ್ನು ಜಾರಿಗೆ ತರುವುದಕ್ಕೂ ಆರ್ಡರ್ ಮಾಡಿಸಿಕೊಟ್ಟರು. ಆ ಮಾತ್ರಕ್ಕೇ ಅವರನ್ನೂ ಅವರ ಕೈಕೆಳಗಣ ಅಧಿಕಾರಿಗಳನ್ನೂ ಪತ್ರಿಕೆಗಳಲ್ಲಿ ನಾನಾವಿಧವಾಗಿ ದೂಷಿಸಿ ಬರೆಯುತ್ತಿದ್ದಾರೆ. ಇವೆಲ್ಲಾ ಅವರ ರಾಜಭಕ್ತಿಗೆ ನ್ಯೂನತೆಯಲ್ಲವೆ ಎಂಬುದನ್ನು ಪರ್ಯಾಲೋಚಿಸಬೇಕು. ೫೫ ಲಕ್ಷ ಜನರ ಹಿತದ ಕಡೆಗೆ ದೃಷ್ಟಿಯನ್ನೇ ಇಡದೆ ಸರ್ಕಾರಿ ಆರ್ಡರಿಗೆ ವಿರೋಧಿಸಿ ತಡೆಮಾಡುವುದು ಸರಿಯಲ್ಲ. ಇದರಿಂದ ದಿನೇದಿನೇ ಪ್ರಜೆಗಳ ಮಧ್ಯದಲ್ಲಿ ಜಿದ್ದು ವೃದ್ಧಿಯಾಗುತ್ತದೆಯೇ ಇಲ್ಲವೇ ಎಂಬುದನ್ನು ವಿಚಾರಮಾಡಬೇಕು. ''ಫಾಸಿ ಶಿಕ್ಷೆ ವಿಧಿಸಲ್ಪಟ್ಟವನ ಅಹವಾಲನ್ನು ಶ್ರೀಮನ್ಮಹಾರಾಜರು ಕೇಳಲು ಅವಕಾಶಕೊಡುತ್ತಾರೆ. ಹೀಗಿರುವಾಗ ನಮ್ಮ ಅಹವಾಲನ್ನು ಕೇಳಬಾರದೆ?'' ಎಂದು ಗೋಪಾಲಸ್ವಾಮಯ್ಯರು ಈ ಸಭೆಯಲ್ಲಿ ಇಂಥ ಉಪಮಾನವನ್ನು ತಮಗೆ ಆರೋಪಿಸಿಕೊಂಡು ಹೇಳುವುದೂ, ಸರ್ಕಾರಿ ಉದ್ಯೋಗವನ್ನು ಬಾಡಿಗೆ ಮನೆಗೆ ಹೋಲಿಸುವುದೂ ಸಹ ವಿದ್ಯಾವಂತರಾದ ಜನರಿಗೆ ಯೋಗ್ಯವೆ? ಎಂಬುದನ್ನು ಪರ್ಯಾಲೋಚಿಸಬೇಕು. ಹಿಂದುಳಿದವರನ್ನು ಸರ್ಕಾರದ ಉದ್ಯೋಗದಲ್ಲಿ ಸೇರಿಸಬೇಕೆಂಬ ಉದ್ದೇಶದ ಆರ್ಡರು ೧೮೭೪ನೆ ವರ್ಷದಲ್ಲೇ ಹುಟ್ಟಿದೆ. ಪೋಲೀಸ್ ಖಾತೆಯಲ್ಲಿ ಸೇಕಡಾ ೨೦ ಕ್ಕಿಂತ ಹೆಚ್ಚಾದ ಸ್ಥಾನಗಳನ್ನು ಬ್ರಾಹ್ಮಣರಿಗೆ ಕೊಡಕೂಡದೆಂದು ಆರ್ಡರಾಗಿದೆ. ಸರ್ ಕೆ. ಶೇಷಾದ್ರಿಅಯ್ಯರವರು ೩೦ ವರ್ಷದ ಕೆಳಗೇ ಈ ತೆರದ ಆರ್ಡರನ್ನು ಮಾಡಿದ್ದರು. ಸರ್ ಎಂ. ವಿಶ್ವೇಶ್ವರಯ್ಯನವರು ಕೂಡ ೧೯೧೪-೧೫-೧೬ ನೆ ವರ್ಷಗಳಲ್ಲಿ ಇದೇ ಸಂಬಂಧವಾಗಿ ಬೇರೆಬೇರೆ ಆರ್ಡರುಗಳನ್ನು ಮಾಡಿದ್ದಾರೆ. ಹೀಗೆ ಪೂರ್ವದಿಂದ ನಡೆದು ಬಂದಿರುವುದನ್ನೆಲ್ಲಾ ಗಮನಿಸಿದರೆ ಈಗಿನ ಗೌರ್ನಮೆಂಟಿನವರೇ ಈ ಆರ್ಡರನ್ನು ಹೊಸದಾಗಿ ಹುಟ್ಟಿಸಿದರೆಂದು ಹೇಳಲು ಅವಕಾಶವೇ ಇಲ್ಲ. ಆದರೂ ಇವರ ಮೇಲೆ ದೂರುತಂದು ಗದ್ದಲಹುಟ್ಟಿಸಿ ತಡೆಮಾಡುವುದು ಯುಕ್ತವೆ? ನಿನ್ನೆ ಒಬ್ಬ ಮೆಂಬರು ಬೊಂಬಾಯಿ ಲೆ|| ಕೌನ್ಸಿಲ್ ವಿಷಯವನ್ನು ಎತ್ತಿ ಹೇಳಿದರು. ಮದ್ರಾಸು ಲೆ|| ಕೌನ್ಸಿಲಿನಲ್ಲಿ ಚರ್ಚೆ ನಡೆದು ಸೇಕಡಾ ೭೫ ರಂತೆ ಬ್ರಾಹ್ಮಣೇತರರಿಗೆ ಸರ್ಕಾರಿ ನೌಕರಿಗಳನ್ನು ಕೊಡಬೇಕೆಂದು ಅಲ್ಲಿ ತೀರ್ಮಾನವಾಗಿದೆ. ಅಲ್ಲಿನ ಮೆಂಬರುಗಳಲ್ಲಿ ಅನೇಕಜನ ಬ್ರಾಹ್ಮಣರು ಅದಕ್ಕೆ ಸಹಾಯಮಾಡಿ ಬ್ರಾಹ್ಮಣೇತರರ ವಂದನೆಗೆ ಪಾತ್ರರಾದರು. ಅದರಂತೆ ಇಲ್ಲಿಯೂ ನಮ್ಮ ಬ್ರಾಹ್ಮಣ ಸಹೋದರರು ಸಹಾಯಮಾಡಿ ಪರಸ್ಪರ ಪ್ರೀತಿ ವಿಶ್ವಾಸಗಳ ಅಭಿವೃದ್ಧಿಗೆ ಅವಕಾಶಕೊಡುವುದು ಉತ್ತಮ. ಸಾವಿರಾರು ಜನ ವಿದ್ಯಾರ್ಥಿಗಳ ಮತ್ತು ವಿದ್ಯಾನಂತರ ಗತಿಯೇನಾಗಬೇಕೆಂದು ಒಬ್ಬ ಮೆಂಬರು ಕೇಳುತ್ತಾರೆ. ಈಗ ಬ್ರಾಹ್ಮಣೇತರ ವಿದ್ಯಾರ್ಥಿಗಳ ಸಂಖ್ಯೆಯು ಸೇಕಡಾ ೫೩ ಆಗಿದೆ. ಅವರುಗಳ ಗತಿಯೆಲ್ಲಾ ಏನೆಂಬುದನ್ನೂ ಇವರು ಆಲೋಚಿಸಬೇಕೋ ಬೇಡವೊ? ಈ ರಿಪೋರ್ಟಿನ ಸಂಬಂಧವಾಗಿ ತಪ್ಪು ಅಭಿಪ್ರಾಯವನ್ನು ಪೇಪರುಗಳಲ್ಲಿಯೂ ಸಭೆಗಳಲ್ಲಿಯೂ ಹರಡಿ ಗಲಾಟೆಮಾಡಬಹುದೆ? ೨ ಲಕ್ಷ ಸಂಖ್ಯಾಕರಾಗಿರುವ ಬ್ರಾಹ್ಮಣರಲ್ಲಿ ಹೆಂಗುಸರೂ ಮಕ್ಕಳೂ ೧|| ಲಕ್ಷವಿದ್ದಾರೆಂದು ಅವರನ್ನು ವಜಾಮಾಡಿದರೆ, ಉಳಿದಿರುವ ೫೦ ಸಹಸ್ರ ಜನರು ಮಾತ್ರ ಈ ಸಂಸ್ಥಾನವನ್ನೆಲ್ಲಾ ಆಳಬೇಕೆ? ೫೫ ಲಕ್ಷ ಜನರೆಲ್ಲಾ ಮೂಲೆಗೆ ಕುಳಿತಿರಬೇಕೆ? ಪತ್ರಿಕಾಕರ್ತರುಗಳು ಸತ್ಯವಾದ ಅಭಿಪ್ರಾಯಗಳನ್ನೂ ಒಳ್ಳೆ ಅಭಿಪ್ರಾಯವನ್ನೂ ಹರಡಿ ದೇಶದಲ್ಲಿ ಶಾಂತಿ ಸ್ನೇಹಗಳು ಅಭಿವೃದ್ಧಿಗೊಳ್ಳುವುದಕ್ಕೆ ಸಹಾಯಮಾಡಬೇಕಾದದ್ದು ಧರ್ಮವಾಗಿದೆ.

ಮ|| ಹುಚ್ಚವೀರೇಗೌಡರು—ಮಹಾಸ್ವಾಮಿ! ಈ ವಿಷಯವನ್ನು ಇಲ್ಲಿಗೆ ಕ್ಲೋಸ್ ಮಾಡುವಂತೆ ಅಪ್ಪಣೆ ಮಾಡಬೇಕು. ಈ ಚರ್ಚೆಗಳನ್ನೆಲ್ಲಾ ಇಲ್ಲೇ ಬಿಟ್ಟು ಈ ಬೀಜವನ್ನು ಹಳ್ಳಿಗಳಿಗೆ ಬಿತ್ತದಂತೆ ಮಾಡಬೇಕು.

ಮ|| ಜವರಯ್ಯನವರು—ಬ್ರಾಹ್ಮಣರೇ ಪಂಚಮರನ್ನು ಉದ್ಧಾರಮಾಡಿದರೆಂದು ಒಬ್ಬ ಮೆಂಬರು ಹೇಳಿದರು. ಅವರನ್ನು ತಮಗೆ ಇಷ್ಟು ಫರ್ಲಾಂಗ್ ದೂರದಲ್ಲಿ ಇರಬೇಕೆಂದು ಕಲ್ಪಿಸಿದವರೇ ಇವರು. ಅನಾದಿಯಿಂದಲೂ ಬ್ರಾಹ್ಮಣೇತರರೇ ಅವರನ್ನು ಸಮೀಪಕ್ಕೆ ಸೇರಿಸಿಕೊಂಡು ಕಾಪಾಡುತ್ತಾ ಬಂದವರು. ಇವರು ಸ್ವಲ್ಪ ಸಂಖ್ಯಾಕರಾದ ಜನರಾಗಿ ಮೇಲ್ಗಡೆ ಇದ್ದಾರೆ. ಬಹು ಜನಸಂಖ್ಯಾಕರಾದ ಇತರ ಪ್ರಜೆಗಳೆಲ್ಲಾ ಹಿಂದೆಬಿದ್ದು ಕೆಳಗಿದ್ದಾರೆ. ಮೇಲಿರುವವರ ಕಾಲನ್ನು ಕೆಳಗೆ ನಿಂತಿರುವ ಜನರು ಹಿಡಿದು ಸೆಳೆಯುತ್ತಿದ್ದಾರೆ. ಆದ್ದರಿಂದ ಒಂದಾನೊಂದು ಕಾಲದಲ್ಲಿ ಮೇಲಿದ್ದವರು ಕೆಳಕ್ಕೆ ಬೀಳುವುದೇ ಖಂಡಿತ ಅಂಥ ಪ್ರಮಾದಕ್ಕೆ ಇವರು ಅವಕಾಶಕೊಡದೆ ಸ್ನೇಹವೃದ್ಧಿಗೆ ಅವಕಾಶಮಾಡಬೇಕೆಂದು ಕೋರುತ್ತೇನೆ.

ಇಲ್ಲಿಗೆ ಮಿಲ್ಲರ್‌ಕಮಿಟಿ ರಿಪೋರ್ಟಿನಮೇಲಣ ಚರ್ಚೆಯು ಪರಿಸಮಾಪ್ತವಾಯಿತು.

ಆಗ ಮಿ|| ಅಬ್ಬಾಸ್‌ಖಾನರು ಎದ್ದು—ಈ ಸಬ್ಜೆಕ್ಟಿನ ವಿಷಯದಲ್ಲಿ ಪ್ರಸಿಡೆಂಟರ ತೀರ್ಮಾನದ ಆರ್ಡರೇನೆಂಬುದನ್ನು ಕೊನೆಯಲ್ಲಿ ದಯವಿಟ್ಟು ಅಪ್ಪಣೆಕೊಡಿಸಬೇಕು. ಹಾಗೆ ಮಾಡದೆ ತಪ್ಪಿದರೆ ಇದು ಇನ್ನೂ ಕೊನೆಮುಟ್ಟಲಿಲ್ಲವೆಂದು ಮುಂದೆ ಪ್ರತಿವರ್ಷವೂ ಬರುತ್ತಲೇ ಇರುತ್ತದೆ ಎಂದು ಹೇಳಿದರು.

ಸಭಾ ಪರಿಸಮಾಪ್ತಿ ಕಾಲದಲ್ಲಿ ಮುಖ್ಯಮುಖ್ಯ ವಿಷಯಗಳಿಗೆಲ್ಲಾ ಉತ್ತರವನ್ನು ದಿವಾನರು ಅಪ್ಪಣೆಕೊಡಿಸಿರುವುದರಲ್ಲಿ ಮಿಲ್ಲರ್‌ಸಂಘದ ವರದಿಯಮೇಲಣ ಚರ್ಚೆಯ ಸಂಬಂಧವಾಗಿ ಕೊಟ್ಟಿರುವ ತೀರ್ಮಾನವು ಕಳೆದ ಅಕ್ಟೋಬರ್ ತಾ|| ೨೩ ಮತ್ತು ೩೦ರ ಸ್ಟಾರ್‌ಪತ್ರಿಕೆಗಳಲ್ಲಿ ಪ್ರಕಟವಾಗಿಯೇ ಇದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ.

ಲಗ್ನದ ಕಾಣಿಕೆ.

೧. ಕೊರಟಗೆರೆ ಸಬ್ ತಾ|| ತೀತದ ಯಜಮಾನ್ ಮ|| ರಾ|| ಭದ್ರಪ್ಪನವರ ಮೂಲಕ ಮ|| ರಾ|| ಕೋಡಿ ಮಲ್ಲೇಗೌಡರ ಲಗ್ನದಲ್ಲಿ ೫ ರೂ. ಮ|| ರಾ|| ಚಿಕ್ಕವೀರಶೆಟ್ಟರಪುತ್ರಿ ಚಿ|| ಸೌ|| ವೀರಮ್ಮನ ಲಗ್ನದಲ್ಲಿ ೧ ರೂ. ಮ|| ರಾ|| ಉದ್ದಂಡಪ್ಪನವರ ಮಕ್ಕಳು ಮ|| ರಾ|| ವೀರಭದ್ರಯ್ಯನವರ ಲಗ್ನದಲ್ಲಿ ೧ ರೂ. ಮ|| ರಾ|| ವೀರಭದ್ರಯ್ಯನವರ ಅತ್ತೆಯವರು ಶ್ರೀಮತಿ ಪುಟ್ಟನಮ್ಮನವರ ಪುತ್ರಿ ಚಿ|| ಸೌ|| ಚೆನ್ನಮ್ಮನಲಗ್ನದಲ್ಲಿ ೧ ರೂ. ಜುಮ್ಲಾ ೮ ರೂ.

೨. ಬೆಂಗಳೂರು ತಾ|| ಕಾಕೋಳು ಮ|| ರಾ|| ಕೆ. ವೀರಣ್ಣನವರ ಮೂಲಕ ಶಿಡ್ಲಘಟ್ಟ ತಾ|| ಸಾದಲಿಯಲ್ಲಿನಡೆದ ರಾಚಾರ್ಜ ಕುಂಟೆ ಕಂಟ್ರಾಕ್ಟರ್ ಮ|| ರಾ|| ಚನ್ನಬಸಪ್ಪನವರ ಮಕ್ಕಳು ಮ|| ರಾ|| ಚಿಕ್ಕಬಸಪ್ಪನವರಿಗೂ, ಅಡಿಕೆ ಅಂಗಡಿ ಮ|| ರಾ|| ಶ್ರೀಕಂಠಪ್ಪನವರತಂಗಿ ಚಿ|| ಸೌ|| ಪಾರ್ವತಮ್ಮನವರಿಗೂನಡೆದ ಲಗ್ನದಲ್ಲಿ ವರನಕಡೆಯಿಂದ ೧೦ ರೂ. ವಧುವಿನಕಡೆಯಿಂದ ೫ ರೂ. ಮೇಲ್ಕಂಡ ಮ|| ರಾ|| ಶ್ರೀಕಂಠಪ್ಪನವರ ತಮ್ಮಂದಿರು ಮ|| ರಾ|| ಚಂದ್ರಶೇಖರಯ್ಯನವರಿಗೂ ಮತ್ತು ಗಂಟಿಗಾನಹಳ್ಳಿ ಮ|| ರಾ|| ಗಂಗಾಧರಪ್ಪನವರಪುತ್ರಿ ಚಿ|| ಸೌ|| ಕಂಬಮ್ಮನವರಿಗೂ ನಡೆದ ಲಗ್ನದಲ್ಲಿ ವರನಪರವಾಗಿ ೨ ರೂ. ವಧುವಿನಕಡೆಯಿಂದ ೨ ರೂ. ಜುಮ್ಲಾ ೧೯ ರೂ.

೩. ತುಮಕೂರು ವಿದ್ಯಾರ್ಥಿ ಟಿ. ಗುರುಸಂಗಯ್ಯನವರ ಮೂಲಕ ನೆಲಮಂಗಲದ ತಾ|| ಗಬ್ಬೂರು ಮ|| ರಾ|| ನಂಜುಂಡಪ್ಪನವರ ಮಕ್ಕಳು ಮ|| ರಾ|| ಶಿವರುದ್ರಯ್ಯನವರಿಗೆ ಸೂಗ್ರೆ ಮ|| ರಾ|| ಕೋಡಿಮಲ್ಲಯ್ಯನವರ ಪುತ್ರಿ ಚಿ|| ಸೌ|| ಬಸಮ್ಮನನ್ನು ತಂದು ಗಬ್ಬೂರಿನಲ್ಲಿ ನಡೆದ ಲಗ್ನದಲ್ಲಿ ವರನಪರವಾಗಿ ೫ ರೂ. ವಧುವಿನಪರವಾಗಿ ೩ ರೂ. ಜುಮ್ಲಾ ೮ ರೂ.

೪. ವೈಟ್‌ಫೀಲ್ಡ್ ರೋಡಿಗೆ ಸೇರಿದ ಗುಂಜೂರುಗ್ರಾಮದ ಮ|| ರಾ|| ದೊಡ್ಡಬಸಪ್ಪನವರ (ವರನಕಡೆಯವರು) ನೆಲಮಂಗಲದ ಮ|| ರಾ|| ಮಲ್ಲಪ್ಪನವರ (ವಧುವಿನಕಡೆಯವರು) ಮನೆಯಲಗ್ನದಲ್ಲಿ ೪ ರೂ.

೫. ಶಿವಮೊಗ್ಗ ಡಿ|| ಶಿಕಾರಿಪುರದ, ವೀರಶೈವ ವಿದ್ಯಾವರ್ಧಕ ಸಂಘದ ಸೆಕ್ರೆಟರಿಯವರು ಮ|| ರಾ|| ಎಂ. ಚನ್ನವೀರಪ್ಪನವರ ಮೂಲಕ ಶಿಕಾರಿಪುರದ ಮ|| ರಾ|| ಗುರುಶಾಂತಶಾಸ್ತ್ರಿಯವರಮನೆ ಲಗ್ನದಲ್ಲಿ ೧ ರೂ. ಮ|| ರಾ|| ಹಾರ್ನಭಾವಿ ಸ್ವಾಮಪ್ಪನವರ ಲಗ್ನದಲ್ಲಿ ೧ ರೂ. ಮ|| ರಾ|| ಬಗಳಿಗೌಡರ ಬಸಪ್ಪನವರಮನೆ ಲಗ್ನದಲ್ಲಿ ೧ ರೂ. ಶಿಕಾರಿಪುರ ತಾ|| ಗಾಮದ ಮ|| ರಾ|| ಮಳೂರು ಹಾಲಪ್ಪಯ್ಯನವರಮನೆ ಲಗ್ನದಲ್ಲಿ ೧ ರೂ. ಶಿಕಾರಿಪುರ ತಾ|| ಈಸೂರು ಮ|| ರಾ|| ಮಾರವಳ್ಳಿ ಬಸಪ್ಪನವರಮನೆ ಲಗ್ನದಲ್ಲಿ ೧ ರೂ. ಮ|| ರಾ|| ಪುಣಜಿ ಹಾಲಪ್ಪನವರಮನೆ ಲಗ್ನದಲ್ಲಿ ೧ ರೂ. ಶಿಕಾರಿಪುರ ತಾ|| ಸಾಲೂರು ಮ|| ರಾ|| ಜಂಬೂರು ಶಿವಪ್ಪನವರಮನೆ ಲಗ್ನದಲ್ಲಿ ೧ ರೂ. ಶಿಕಾರಿಪುರ ತಾ|| ದೊಡ್ಡಜೋಗಿಹಳ್ಳಿ ಪಟೇಲ್ ಮ|| ರಾ|| ವೀರಪ್ಪಗೌಡರಮನೆ ಲಗ್ನದಲ್ಲಿ ೧ ರೂ. ಜುಮ್ಲಾ ೮ ರೂ.

೬. ಹಾಸನದ ಡಿ|| ಎಸಳೂರುಪೇಟೆ ಶೆಟ್ಟರು ಮ|| ರಾ|| ಪಟ್ಟಣಶೆಟ್ಟರು ನಂಜುಂಡಪ್ಪನವರ ಮೂಲಕ ಮ|| ರಾ|| ಬೆಡಗಿನ ಲಿಂಗಂಬರಯ್ಯನವರ ಮಕ್ಕಳು ಚಿ|| ರಾ|| ಸಿದ್ದಲಿಂಗಯ್ಯನಿಗೂ ಮತ್ತು ಹದಾಳ್ ಮ|| ರಾ|| ಸಿದ್ದನಂಜಯ್ಯನವರ ಪುತ್ರಿ ಚಿ|| ಸೌ|| ಸಿದ್ದಲಿಂಗಮ್ಮನಿಗೂ ನಡೆದ ಲಗ್ನದಲ್ಲಿ ೨ ರೂ. ಮ|| ರಾ|| ಹದಾಳ್ ಸಿದ್ದನಂಜಯ್ಯನವರ ಮಕ್ಕಳು ಚಿ|| ರಾ|| ಪ್ರಭುವಯ್ಯನಿಗೂ, ಮ|| ರಾ|| ಬೆಡಗಿನ ಸಿದ್ದಲಿಂಗಯ್ಯನವರ ಪುತ್ರಿ ಚಿ|| ಸೌ|| ಸಿದ್ದಲಿಂಗಮ್ಮನಿಗೂ ನಡೆದ ಲಗ್ನದಲ್ಲಿ ೨ ರೂ. ಸೋಮವಾರಪೇಟೆ ಮ|| ರಾ|| ಅಬ್ಬಿಮಠದ ಸೋಮಯ್ಯನವರ ಮಗ ಚಿ|| ರಾ|| ಶಾಂತಯ್ಯನಿಗೂ ಮ|| ರಾ|| ಹಂಚಿನಮಠದ ನಂಜಯ್ಯನವರ ಮಗಳು ಚಿ|| ಸೌ|| ರಾಚಮ್ಮನಿಗೂ ನಡೆದ ಲಗ್ನದಲ್ಲಿ ೨ ರೂ. ಕೊಡ್ಲಿಪೇಟೆ ಮ|| ರಾ|| ಮಸಳೆ ರುದ್ರಪ್ಪನವರಮಗ ಚಿ|| ರಾ|| ವೀರಭದ್ರಪ್ಪನಿಗೂ ಎಸಳೂರುಪೇಟೆ ಮ|| ರಾ|| ಅಜ್ಜಶೆಟ್ಟಿ ನಂಜಲಗೋಡಪ್ಪನವರ ಮಗಳು ಚಿ|| ಸೌ|| ನಂಜಮ್ಮನಿಗೂ ನಡೆದ ಲಗ್ನದಲ್ಲಿ ೨ ರೂ. ಕೊಡ್ಲಿಪೇಟೆ ಮ|| ರಾ|| ಚಿನಿವಾರರ ಚನ್ನಬಸಪ್ಪನಮಗ ಚಿ|| ರಾ|| ವೀರಪ್ಪನಿಗೂ ಎಸಳೂರುಪೇಟೆ ಮ|| ರಾ|| ಕೊಟ್ರಯ್ಯನವರ ಗುರುವಯ್ಯನವರಪುತ್ರಿ ಚಿ|| ಸೌ|| ನೀಲಮ್ಮನಿಗೂ ನಡೆದ ಲಗ್ನದಲ್ಲಿ ೨ ರೂ. ಜುಮ್ಲಾ ೧೦ ರೂ.

೭. ಕುಣಿಗಲ್ ತಾ|| ಎಡೆಯೂರುಹೋಬಳಿ ಶೇಕ್‌ದಾರ್ ಜಿ. ವೈ. ಅಣ್ಣಪ್ಪನವರ ಮೂಲಕ, ಎಡೆಯೂರು ತೋಟಶೆಟ್ಟರಪುತ್ರಿ ಚಿ|| ಸೌ|| ಸಿದ್ದಮ್ಮನಿಗೂ ಮಂಡ್ಯ ತಾ|| ಬಸರಾಳು ಮ|| ರಾ|| ಸಿದ್ದಬಸವಶೆಟ್ಟರ ಪುತ್ರ ಚಿ|| ಸೌ|| ಸಿದ್ದಲಿಂಗಪ್ಪನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ೫ ರೂ.

೮. ಮಾಗಡಿ ತಾ|| ತಾವರೆಕೆರೆ ಚಿಲ್ಲರೆ ಅಂಗಡಿ ಮ|| ರಾ|| ಆದಪ್ಪನವರಮೂಲಕ ಬೈಂಡಹಳ್ಳಿ ಮ|| ರಾ|| ಚಿಕ್ಕರುದ್ರಪ್ಪನವರ ತಂಗಿಯವರ ಲಗ್ನದಲ್ಲಿ ೨ ರೂ.

೯. ಮಾಗಡಿ ತಾ|| ಸೋಲೂರುಶೆಟ್ಟರ ಮ|| ರಾ|| ವೀರಶೆಟ್ಟರವರ ಮೂಲಕ ಚಲುವೆಮಠದಲ್ಲಿ ವೇ|| ಕಂಬಾಳುಮಠದ ಲಿಂಗದೇವರ ಲಗ್ನದಲ್ಲಿ ವರನಕಡೆಯಿಂದ ೩ ರೂ. ವಧುವಿನಪರವಾಗಿ ಚಲುವೆಮಠದ ವೇ|| ಶ್ರೀ ಬಸವಲಿಂಗದೇವರಿಂದ ೨ ರೂ. ಜುಮ್ಲಾ ೫ ರೂ.

೧೦. ದೊಡ್ಡಬಳ್ಳಾಪುರದ ವಿದ್ಯಾರ್ಥಿ ಜಿ. ಮುದ್ದಪ್ಪನವರ ಮೂಲಕ ದೊಡ್ಡಬಳ್ಳಾಪುರ ತಾ|| ಹಣಬೆಗ್ರಾಮದಲ್ಲಿ ಮ|| ರಾ|| ಗಂಗಪ್ಪನವರಪುತ್ರ ಚಿ|| ರಾ|| ಚನ್ನಬಸಪ್ಪನಿಗೂ ಮ|| ರಾ|| ಚಿಕ್ಕಪ್ಪನವರ ಪುತ್ರಿ ಚಿ|| ಸೌ|| ಹುಚ್ಚಮ್ಮನಿಗೂ ನಡೆದ ಲಗ್ನದಲ್ಲಿ ೩ ರೂ.

೧೧. ಚಾಮರಾಜನಗರ ತಾ|| ಆಲೂರು ಅಪ್ಪೆಗೌಡರ ಪುಟ್ಟಬಸಪ್ಪನವರ ಮೂಲಕ ಮ|| ರಾ|| ಕಾಶೀಕಿ ಪುಟ್ಟಪ್ಪನವರಮಕ್ಕಳು ಮ|| ರಾ|| ಚನ್ನಪ್ಪನವರಮನೆಯಲ್ಲಿ ನಡೆದ ಲಗ್ನದಲ್ಲಿ ೩ ರೂ.

೧೨. ಬೆಂಗಳೂರು ಮಿ|| ವೀರಭದ್ರಪ್ಪನವರ ಮೂಲಕ ಮಂಡ್ಯದಲ್ಲಿರುವ ಮ|| ರಾ|| ದೊಡ್ಡಪ್ಪನವರಕುಮಾರ ಹುಚ್ಚಪ್ಪನವರಪುತ್ರಿ ಚಿ|| ಸೌ|| ಹೊನ್ನಮ್ಮನಿಗೂ ಎಡತೊರೆ ಜವಳಿಅಂಗಡಿ ಮ|| ರಾ|| ವೀರಣ್ಣನವರ ಪುತ್ರ ಚಿ|| ರಾ|| ಶಿವಪ್ಪನವರಿಗೂ ನಡೆದ ಲಗ್ನದಲ್ಲಿ ೪ ರೂ.

೧೩. ಮೈಸೂರು ವೇ|| ಎನ್. ಆರ್. ಕಂಬಸವಶಾಸ್ತ್ರಿಗಳವರ ಮೂಲಕ ಮೈಸೂರಿನಲ್ಲಿರುವ ಚನ್ನಪಟ್ಟಣದ ಮ|| ರಾ|| ಪಿ. ಆರ್. ಬಸವರಾಜಯ್ಯನವರ ಅಣ್ಣಂದಿರು ಮ|| ರಾ|| ಬಸವರಾಜಪ್ಪನವರ ಕುಮಾರ ಚಿ|| ರಾ|| ಶಿವರುದ್ರಪ್ಪನಿಗೂ ದೇಂಕಣಿಕೋಟೆಯಲ್ಲಿರುವ ಮ|| ರಾ|| ನಂಜಪ್ಪನವರಕುಮಾರಿ ಚಿ|| ಸೌ|| ನಂಜಮ್ಮಣ್ಣಿಯವರಿಗೂ ಮೈಸೂರಿನಲ್ಲಿ ನಡೆದ ಲಗ್ನದಲ್ಲಿ ೫ ರೂ.

೧೪. ದೇಂಕಣಿಕೋಟೆ ಮ|| ರಾ|| ಡಿ. ಎನ್. ನೀಲಕಂಠಪ್ಪನವರ ಮೂಲಕ ಮ|| ರಾ|| ನೋಟಿಕಾರ್ ನಂಜಪ್ಪನವರಮನೆಯಲ್ಲಿ ನಡೆದ ನಿಷೇಕಪ್ರಸ್ತದಲ್ಲಿ ೨ ರೂ. ಮ|| ರಾ|| ನೋಟಿಕಾರ ಮುದ್ದಪ್ಪನವರ ಕುಮಾರ್ತಿ ಪ್ರಸ್ತದಲ್ಲಿ ೧ ರೂ. ಮ|| ರಾ|| ಟಿಂ. ನಂಜಪ್ಪನವರ ಕುಮಾರ್ತಿಯವರ ಪ್ರಸ್ತದಲ್ಲಿ ವಧೂವರರಿಂದ ೫ ರೂ. ಮ|| ರಾ|| ಡಿ. ಎನ್. ನೀಲಕಂಠಪ್ಪನವರ ತಾಯಿಯವರ ಆರಾಧನೆಯಲ್ಲಿ ೫ ರೂ. ಮ|| ರಾ|| ಟಿಂ. ನಂಜಪ್ಪನವರಮಗನ ಲಗ್ನದಲ್ಲಿ ವಧೂವರರಿಂದ ೫ ರೂ. ಮ|| ರಾ|| ನಕ್ಕದ ಶ್ರೀಕಂಠಪ್ಪನವರಮಗಳ ಲಗ್ನದಲ್ಲಿ ವಧುವಿನಕಡೆಯಿಂದ ೨ ರೂ. ಮ|| ರಾ||

ನಾರಂಗಹಳ್ಳಿ ಮುದ್ದಪ್ಪನವರಮಗಳ ಲಗ್ನದಲ್ಲಿ ವಧುವಿನಕಡೆಯಿಂದ ೨ ರೂ. ಮ|| ರಾ|| ಟಿ. ಶಂಕರಪ್ಪನವರ ಕುಮಾರ್ತಿಯವರ ನಿಷೇಕಪ್ರಸ್ತದಲ್ಲಿ ೧ ರೂ. ಮ|| ರಾ|| ಗಂಡದಕಟ್ಟಿ ವೀರಪ್ಪನವರ ಲಗ್ನದಲ್ಲಿ ೩ ರೂ. ಜುಮ್ಲಾ ೨೬ ರೂ.

೧೫. ಬೆಂಗಳೂರು ಹಲಸೂರಿನಲ್ಲಿರುವ ಮ|| ರಾ|| ಯು. ಎಸ್. ಕಾಳಪ್ಪನವರ ಮೂಲಕ ಮ|| ರಾ|| ಹಲಸೂರು ಬಿ. ಎಸ್. ರುದ್ರಪ್ಪನವರ ಮನೆ ಲಗ್ನದಲ್ಲಿ ೫ ರೂ. ಮ|| ರಾ|| ಹಲಸೂರು ದೇವಪ್ಪನವರಮನೆ ಲಗ್ನದಲ್ಲಿ ೫ ರೂ. ಮ|| ರಾ|| ಅಕ್ಕಿಪೇಟೆ ಕುಣಿಗಲ್ ಲಿಂಗಪ್ಪನವರಮನೆ ಲಗ್ನದಲ್ಲಿ ೫ ರೂ. ಜುಮ್ಲಾ ೧೫.

೧೬. ಮಂಡ್ಯ ತಾ|| ಮದ್ದೂರು ಕೆ. ಚನ್ನಮಲ್ಲಪ್ಪನವರ ಮೂಲಕ ಮದ್ದೂರು ಕೊತ್ತತ್ತಿ ಯಜಮಾನ್ ಮ|| ರಾ|| ದೊಡ್ಡಬಸಪ್ಪನವರಮನೆ ಲಗ್ನದಲ್ಲಿ ೨-೨-೦ ರೂ. ದೇಶದಶೆಟ್ಟರು ಮ|| ರಾ|| ಸುಬ್ಬಣ್ಣನವರ ಮನೆಯಲ್ಲಿನಡೆದ ಲಗ್ನದಲ್ಲಿ ೨-೨-೦ ರೂ. ಜುಮ್ಲಾ ೪-೪-೦ ರೂ.

೧೭. ಚಾಮರಾಜನಗರ ತಾ|| ಆಲೂರು ಅಪ್ಪೆಗೌಡರ ಮ|| ರಾ|| ಪುಟ್ಟಬಸಪ್ಪನವರ ಮೂಲಕ ಮ|| ರಾ|| ಚನ್ನಬಸಪ್ಪನವರಮನೆ ಲಗ್ನದಲ್ಲಿ ೧ ರೂ. ಮ||ರಾ|| ಮುದ್ದಬಸಪ್ಪನವರಮನೆ ಲಗ್ನದಲ್ಲಿ ೧ ರೂ. ಮ||ರಾ|| ಕಾನಪ್ಪನವರಮನೆ ಲಗ್ನದಲ್ಲಿ ೨ ರೂ. ಜುಮ್ಲಾ ೪ ರೂ.

೧೮. ಕುಣಿಗಲ್ ತಾ|| ಹುಲಿಯೂರುದುರ್ಗ ಗ್ರಾಮದ ಪಟೇಲ್ ಮ|| ರಾ|| ಸಿದ್ಧಬಸವಯ್ಯನವರಮೂಲಕ ಹಳೆಯೂರಿನಲ್ಲಿರುವ ಮ||ರಾ|| ಬಳೆಕಪನಶೆಟ್ಟರವರ ಮನೆಲಗ್ನದಲ್ಲಿ ೫ ರೂ. ಜುಮ್ಲಾ ೧೩೪-೪-೦.

ಸಶೇಷ.

ಬೆಂಗಳೂರು ಸಿಟಿ, } ಜಿ. ಪರಮಶಿವಯ್ಯ, ಬಿ.ಎ. ಎಲ್.ಎಲ್.ಬಿ.,
ತಾ|| 26-7-1921. } ಆನರರಿ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುವುದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು.

(1) ಬಳ್ಳಾರಿಯ ಸುಳ್ಳುಸುದ್ದಿ—ಲೇಖನವು ನಮ್ಮ ನಿಯಮಕ್ಕೆ ವಿರುದ್ಧವಾಗಿಯೂ, ವ್ಯಕ್ತಿ ವಿಷಯಕವಾಗಿಯೂ ಇರುವುದರಿಂದ ತಿರಸ್ಕರಿಸಲ್ಪಟ್ಟಿದೆ. (2) ಕರ್ಜಗಿಯ ಹೆಡ್‌ಮಾಸ್ತರು—ನಿಮ್ಮ ಬರವಣಿಗೆಯು ಬಹಿರಂಗಪಡಿಸಲ್ಪಡತಕ್ಕುದಾಗಿಲ್ಲ (3) ಬಾಗೇವಾಳು ಪ್ರತ್ಯಕ್ಷದರ್ಶಿ—ನಿಮ್ಮ ಲೇಖನವು ಅಸ್ಪಷ್ಟವಾಗಿಯೂ, ದೊಡ್ಡದಾಗಿಯೂ ಇರುವುದರಿಂದ ಪ್ರಕಟನೆಗೆ ಸಾಧ್ಯವಿಲ್ಲವು. ಗುರುವರ್ಗ ಸಭೆ—ಬಹಳ ಹಳೆಯಸುದ್ದಿಯಾದುದರಿಂದ ಪ್ರಕಟಿಸಲಿಲ್ಲ. ಪ. ಪ್ರ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಕಡೂರು ತಾಲ್ಲೂಕು ೧ ನೇ ಗ್ರಾಂಟ್ ಸ್ಕೂಲ್ಮಾಸ್ಟರುಗಳ ಸಂಘ; ಕಡೂರಳ್ಳಿ.

ಗ್ರಾಂಟ್ ಸ್ಕೂಲ್ಮಾಸ್ಟರುಗಳಲ್ಲಿ ವಿನಂತಿ:—ಸದರಿ ಸಂಘವನ್ನು ಇದೇ ೧೯೨೧ನೆ ಅಕ್ಟೋಬರ್ ತಾ|| ೩೦-೩೧ರಲ್ಲಿ ನಡೆಸುವಂತೆ ಪ್ರಕಟಿಸಲ್ಪಟ್ಟಿದ್ದುದು ಸರಿಯಷ್ಟೆ. ಕೆಲವು ಅನಿವಾರ್ಯಗಳ ದೆಸೆಯಿಂದ ಇದೇ ನವಂಬರ್ ತಾ|| ೨೭-೨೮ನೆ ಭಾನುವಾರ ಮತ್ತು ಸೋಮವಾರ ಈ ಎರಡು ದಿವಸಗಳಲ್ಲಿ ನಡೆಸುವುದಾಗಿ ನಿರ್ಧರಿಸಿದೆ.

ಎಲ್. ತಿಮ್ಮಯ್ಯ,
ಸಂಘದ ಸೆಕ್ರೆಟರಿ, ಕಡೂರಳ್ಳಿ.

ನರಗುಂದ.—ತಾ|| ೨೪-೯-೨೧ ನೆ ದಿವಸ ನಿರಸಂಗೀಕರ ಲೈಬ್ರರಿಯಲ್ಲಿ ಸಭೆಯು ಕೂಡಿತ್ತು. ನಮ್ಮ ಗುರುಗಳಾದ ಶ್ರೀಮದ್ವಿಶ್ವಕರ್ಮ ಶ್ರೀ ಜನಾರ್ದನಸ್ವಾಮಿ ರಾಟಿಜ ಇವರು ಈ ಸಭಾಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಸದರಿ ಸ್ವಾಮಿಗಳವರು ಧರ್ಮ ಈ ವಿಷಯದ ಮೇಲೆ ಮತ್ತು ವೇ|| ಓಂಕಾರಶಾಸ್ತ್ರಿಗಳವರು ಭಕ್ತಿಯೆಂಬ ವಿಷಯದ ಮೇಲೆ ಮತ್ತು ಶಿ. ಸಿದ್ಧಪ್ಪಯ್ಯಸ್ವಾಮಿ ಪತ್ತಾರ ಇವರು ಸಾಂಸರ್ಗಿಕ ವಿಷಯದ ಮೇಲೆ ಸ್ಫೂರ್ತಿದಾಯಕವಾದ ಭಾಷಣಮಾಡಿದರು. ಈ ಸಭೆಗೆ ಪೇಟೆಯ ದೊಡ್ಡದೊಡ್ಡ ಗೃಹಸ್ಥರೂ ಮತ್ತು ನಮ್ಮ ವಿಶ್ವಕರ್ಮ ಸಮಾಜದವರು ಮೊದಲಾದ ೫೦೦ ಜನರು ಕೂಡಿದ್ದರು. ಸಭೆಯು ಒಳ್ಳೇ ವಿಜೃಂಭಣೆಯಿಂದ ನಡೆಯಿತು.

ಬೆಳಗಾಂಜಿಲ್ಲಾ ಪರಮಾನಂದವಾಡಿ.

ಈ ಊರಲ್ಲಿ ತಾ|| ೯-೧೦-೧೯೨೧ ಸೋಮವಾರದದಿವಸ ರಾತ್ರಿ ೮ ಘಂಟೆಯಿಂದ ೧೦|| ಘಂಟೆಯವರೆಗೆ ಮಳೆಯು ಭಯಂಕರವಾಗಿ ಬಿತ್ತು. ಈ ಮಳೆಯು ಅಜಮಾಸು ೧೬ ಇಂಚು ಆಗಿತ್ತು. ಊರಲ್ಲಿ ತಿರುಗಾಡಲಿಕ್ಕೆ ಅನುಕೂಲವಿಲ್ಲದಂತೆ ಆಯಿತು. ಕಾರಣ ಓಣಿಗಳಲ್ಲಿ ನೀರು ಹಳ್ಳಗಳಂತೆ ಮನುಷ್ಯರ ನಡುಯೆದೆಯವರೆಗೆ ನೀರು ಹರಿದವು. ಎಷ್ಟೋ ಮನೆಗಳು ಬಿದ್ದವು ಮತ್ತು ಯಾವತ್ತು ಜನರ ಮನೆಯಲ್ಲಿ ನೀರೇ ಆಗಿದ್ದಿತು. ಇದಲ್ಲದೆ ಹಳ್ಳಗಳೊಳಗೆ ಎಷ್ಟೋ ರೈತರಕೊಯಿಡೊಳಗಿನ ಬೆಳೆಗಳಲ್ಲದೆ ಅವರ ಮನೆಗಳು, ಗುಡಿಸಲುಗಳು ಕೊಚ್ಚಿ ಹೋದವು. ಇಲ್ಲಿ ಆದ ಹಾನಿಯನ್ನು ವಿವರಿಸುತ್ತ ಕುಳಿತರೆ ಬಹಳ ಆಗುವದು.

ಬಬಲೇಶ್ವರ.

ತಾ|| ೧-೧೦-೧೯೨೧ನೆ ದಿವಸ ಬಬಲೇಶ್ವರ ಗ್ರಾಮದಲ್ಲಿ ಒಂದು ಜಾಹೀರ ಸಭೆಯು ಕೂಡಿತ್ತು. ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಯುತ ಮುತ್ತಪ್ಪಾ ಸಿದ್ಧಲಿಂಗಪ್ಪಾ ಬಗಲಿ ಬಿ. ಎ. ಇವರು ವಹಿಸಿದ್ದರು. ಸಭೆಗೆ ಬಹುಶಃ ಎರಡು ಸಾವಿರ ಜನರವರೆಗೂ ನೆರೆದಿದ್ದರು. ಸಭೆಯಲ್ಲಿ ಪಾಸಾದ ಠರಾವುಗಳು:—

(೧) ಯಾವತ್ತು ಜನರು ರಾಜನಿಷ್ಠೆಯಿಂದ ಇರುವ ಬಗ್ಗೆ ಮಿ|| ವೀರನಗೌಡ ಸಂಗನಗೌಡ ಇವರು ತಂದ ಠರಾವು ಸರ್ವಾನುಮತಿಯಿಂದ ಪಾಸಾಯಿತು. (೨) ದುಷ್ಕಾಳ ನಿವಾರಣಾರ್ಥವಾಗಿ ಬಡಜನರಿಗೆ ರಿಲೀಫ್ ವರ್ಕನ್ನು ಆರಂಭಮಾಡುವಬಗ್ಗೆ ಸರ್ಕಾರದವರಿಗೆ ಸಹಾಯಬೇಡುವ ಕುರಿತು ಮಿ|| ಬಸಪ್ಪ ರಾಚಪ್ಪ ಮಂಗಳವೇಡೆ ಇವರು ತಂದ ಠರಾವು ಸರ್ವಾನುಮತಿಯಿಂದ ಪಾಸಾಯಿತು. (೩) ಸಕ್ತಿಶಿಕ್ಷಣ ಕಮಿಟಿಯ ಮುಂದೆ ಸಾಕ್ಷಿಕೊಡುವ ಬಗ್ಗೆ ಮಿ|| ಬಸಪ್ಪಾ ರಾಚಪ್ಪಾ ಮಂಗಳವೇಡೆ ಇವರನ್ನು ಕಳಿಸುವ ಕುರಿತು ತಂದ ಠರಾವು ಸರ್ವಾನುಮತಿಯಿಂದ ಪಾಸಾಯಿತು. (೪) ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಪ್ರಿನ್ಸಿಪಾಲ ಮಹಿಸಿರಾಯರು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ತೋರಿಸಿದ ಅತ್ಯಾಚಾರವನ್ನು ನಿಷೇಧಮಾಡುವ ಕುರಿತು ಮತ್ತು ಸದರೀ ಪ್ರಿನ್ಸಿಪಾಲರನ್ನು ತೆಗೆದು ಅವರ ಜಾಗೆಗೆ ಒಬ್ಬ ಬ್ರಾಹ್ಮಣೇತರ ಪ್ರಿನ್ಸಪಾಲರನ್ನು ನೇಮಿಸಬೇಕೆಂದು ವೇ|| ಬಸಯ್ಯ ಚನ್ನಬಸಯ್ಯ ಪುರಾಣಿಕ ಇವರು ತಂದಠರಾವು ಸರ್ವಾನುಮತಿಯಿಂದ ಪಾಸಾಯಿತು. (೫) ಮೇಲಿನ ಎಲ್ಲ ಠರಾವುಗಳನ್ನೂ ನೇಕನಾಮದಾರ ಗೌರ್ನರ್ ಸಾಹೇಬರವರ ಕಡೆಗೂ ನೇಕನಾಮದಾರ ಫರಂಜಪೆಯವರ ಕಡೆಗೂ ಮತ್ತು ಸಕ್ತಿಶಿಕ್ಷಣ ಕಮಿಟಿಯ ಕಡೆಗೂ ಕಳಿಸಿರುತ್ತದೆ. ಈ ಠರಾವುಗಳಿಗೆ ವಿರುದ್ಧ ಮತಗಳು ಬೀಳಲಿಲ್ಲ.

ಚಿಕ್ಕೆರೂರು.

ತಾ|| ೬-೧೦-೧೯೨೧ ನೇ ದಿವಸ ರಾತ್ರಿ ೮ ಘಂಟೆಗೆ ಚಿಕ್ಕೆರೂರು ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಮ|| ರಾ|| ರಾ|| ಶ್ರೀಮಂತ ಆಲೂರ ಲಿಂಗಪ್ಪಣ್ಣಾ ಕೂಬಿಹಾಳದ ಇವರ ಅಧ್ಯಕ್ಷತೆಯಕೆಳಗೆ ಸಭೆಯು ನಡೆದು ಮ|| ರಾ|| ರಾ|| ಸಾಗರದ ನ್ಯಾಸಣಗಿ ಹೊಳೆಬಸಪ್ಪನವರು ಸಹಕಾರ ಮತ್ತು ಅಸಹಕಾರದ ತಾರತಮ್ಯದ ನಿಜಸ್ಥಿತಿಯನ್ನು ತಿಳಿಸಿ ಸದ್ಯದಸ್ಥಿತಿಯಲ್ಲಿ ಲಿಂಗಾಯತರೂ ಮತ್ತು ಬ್ರಾಹ್ಮಣೇತರ ಜನರೂ ಸಹಕಾರವನ್ನು ನಡೆಸುವುದೇ ಯೋಗ್ಯವೆಂತಲೂ ಸದ್ಯಕ್ಕೆ ಚಿಕ್ಕೆರೂರಲ್ಲಿ ಒಂದು ಸಾರ್ವಜನಿಕ ಲೈಬ್ರರಿಯು ಅವಶ್ಯಕವಾಗಿರುವುದೆಂತಲೂ ತಿಳಿಸಿದಮೇಲೆ ಚಿಕ್ಕೆರೂರ ಉದಾರ ಗೃಹಸ್ಥರಾದ ವೀರಪ್ಪ ಚನ್ನಬಸಪ್ಪ ದಂಡೂರ ಮಲ್ಲಪ್ಪ ಪ್ಯಾಟಿ ಚನವೀರಪ್ಪ ಅಜ್ಜಪ್ಪ ಯಾಣಿ ವೀರಪ್ಪ ಸ್ವಾದಪ್ಪ ಯಾಣಿ ಇವರಿಂದಲೂ ಮತ್ತು ನಮ್ಮ ವೈಶ್ಯ ಬಂಧುಗಳಾದ ಗೋಪಾಲಪ್ಪನವರು ಚನ್ನಗಿರಿ, ಮತ್ತು ಸೋಮಪ್ಪಣ್ಣಾ ಚನ್ನಗಿರಿ ಈ ಎಲ್ಲರ ಅಭಿಪ್ರಾಯದಿಂದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಮೃತ್ಯುಂಜಯಸ್ವಾಮಿಗಳವರ ಸ್ಮಾರಕಾರ್ಥವಾಗಿ ಶ್ರೀ ಮೃತ್ಯುಂಜಯಸ್ವಾಮಿ ಲೈಬ್ರರಿಯೆಂಬ ಹೆಸರಿನಿಂದ ಲೈಬ್ರರಿಯ ಸ್ಥಾಪನವಾಡಲ್ಪಟ್ಟಿತು. ಈ ಲೈಬ್ರರಿಗಾಗಿ ಅಧ್ಯಕ್ಷ ಮಹಾಶಯರಾದ ಶ್ರೀಮಂತ ಮ|| ಆಲೂರ ಲಿಂಗಪ್ಪಣ್ಣಾ ಕೂಬಿಹಾಳ ಇವರು ಈ ದಿವಸ ಐದು ರೂಪಾಯಿಗಳನ್ನು ಧರ್ಮಮಾಡಿದ್ದಾರೆ. ಇದರಂತೆ ನಮ್ಮ ಚಿಕ್ಕೇರೂರ ಬಂಧುಗಳು ಉದಾರಾಶ್ರಯ ಕೊಟ್ಟು ಲೈಬ್ರರಿ ಚಿರಕಾಲ ಉಳಿಯುವಂತೆ ಮಾಡಲೆಂದು ಶ್ರೀ ಮೃತ್ಯುಂಜಯನನ್ನು ಪ್ರಾರ್ಥಿಸುತ್ತೇನೆ. ಅಧ್ಯಕ್ಷ ಮಹಾಶಯರ ಸೂಚನೆಯಂತೆ ಒಂದು ಸಹಕಾರ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಸಕ್ತಿಯಾದ ಪ್ರಾಥಮಿಕ ಶಿಕ್ಷಣದ ಬಗ್ಗೆ ವಿದ್ಯಾಖಾತೆಯ ಮಂತ್ರಿಗಳಕಡೆಗೂ ಗೌರ್ನರ ಕಡೆಗೂ ಸಕ್ತಿ ಶಿಕ್ಷಣದ ಬಗ್ಗೆ ಠರಾವು ನಕಲು ಕಳಿಸುವದಕ್ಕೆ ಪಾಸಾಯಿತು.

ಸೊಂಡೂರ.

ಇಲ್ಲಿಯ ಮಹಾರಾಜರವರ ಪ್ರಾರ್ಥನೆಯಂತೆ ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಭಸ್ಮರುದ್ರಾಕ್ಷಿಗಳನ್ನು ಆಶೀರ್ವಾದರೂಪವಾಗಿ ನಾಗನೂರು ಬೃಹನ್ಮಠದ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಕಡೆಯಿಂದ ಕಳುಹಿಸಿದ್ದರು. ಪಂಡಿತರು ತಾ|| ೨೩-೯-೨೧ರಲ್ಲಿ ಸೊಂಡೂರು ರಾಜಧಾನಿಗೆ ಆಗಮಿಸಿದರು. ಪಂಡಿತರ ಸಂಗಡ ಬಳ್ಳಾರಿ ಗಡಿಗಿ ರಾ|| ಚಿಕ್ಕವೀರಪ್ಪನವರು ರಾ|| ಗುಗ್ಗರಿ ಹುಚ್ಚಪ್ಪನವರು, ರಾ|| ಹಮ್ಮಿಗಿ ಶಾಂತಪ್ಪನವರು, ರಾ|| ಹಮ್ಮಿಗಿ ಪಾಟೀಲ ವಿರೂಪಾಕ್ಷಗೌಡರು, ರಾ|| ಧಾರವಾಡ ಮೆಣಸಿನಕಾಯಿ ಫಕ್ಕೀರಪ್ಪನವರು ಬಂದಿದ್ದರು. ಆ ದಿನ ಸಾಯಂಕಾಲ ೪ ಗಂಟೆಗೆ ಮಹಾರಾಜರು ಪಂಡಿತರನ್ನು ತಮ್ಮ ರಾಜವಾಡೆಗೆ ಕರೆಯಿಸಿಕೊಂಡು ಯಥೋಚಿತವಾಗಿ ಸತ್ಕರಿಸಿ ಅವರ ಹಸ್ತದಿಂದ ಭಸ್ಮರುದ್ರಾಕ್ಷಿಗಳನ್ನೂ ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋತ್ಪತ್ತಿಯ ಭಾವಚಿತ್ರವನ್ನೂ ಹಾಗೂ ಜಗದ್ಗುರುಗಳವರ ಆಶೀರ್ವಾದ ಪತ್ರಿಕೆಯನ್ನೂ ಒಳ್ಳೇ ಭಕ್ತಿಪೂರ್ವಕ ಗ್ರಹಿಸಿದರು. ಆ ವೇಳೆ ಪಂಡಿತರು ಮಹಾರಾಜರಿಗೂ ಹಾಗೂ ಮಹಾರಾಣಿಯವರಿಗೂ ಭಸ್ಮರುದ್ರಾಕ್ಷಧಾರಣದ ಮಹಿಮೆಯನ್ನೂ ಹಾಗೂ ವೀರಶೈವ ಮತಸ್ಥಾಪಕರ ಸ್ವರೂಪವನ್ನೂ ಮಹಾರಾಷ್ಟ್ರ ಭಾಷೆಯಿಂದ ಹೇಳಿದರು. ಮರುದಿವಸ ರಾಜಧಾನಿಯಿಂದ ೬ ಮೈಲು ದೂರವಿರುವ ಲೋಕಪ್ರಸಿದ್ಧನಾದ ಶ್ರೀ ಕುಮಾರಸ್ವಾಮಿಯ ದರ್ಶನಕ್ಕೆ ಹೋಗುವದಕ್ಕೋಸ್ಕರ ಸರ್ವೋತ್ತಮವಾದ ವ್ಯವಸ್ಥೆಯನ್ನು ಇಡಿಸಿದ್ದರು. ಸೃಷ್ಟಿಸೌಂದರ್ಯದಲ್ಲಿ ಕಾಶ್ಮೀರ ಪ್ರದೇಶವನ್ನು ಮರೆಯಿಸತಕ್ಕಂಥ ಶ್ರೀ ಕುಮಾರಸ್ವಾಮಿಯ ಸ್ಥಾನದಲ್ಲಿ ಸರ್ವರೂ ಸ್ನಾನ ಶಿವಾರ್ಚನಾದಿಗಳನ್ನು ತೀರಿಸಿಕೊಂಡು ದರ್ಶನವನ್ನು ತೆಗೆದುಕೊಂಡರು. ಅತಿ ಪ್ರಾಚೀನವಾದ ಶ್ರೀ ಕುಮಾರಸ್ವಾಮಿಯ ಮಸ್ತಕದಲ್ಲಿಯೂ ಹಾಗೂ ಶ್ರೀ ಪಾರ್ವತೀದೇವಿಯ ಹಸ್ತದಲ್ಲಿಯೂ ಶೋಭಿಸುತ್ತಿರುವ ಲಿಂಗಧಾರಣವನ್ನು ಕಂಡು ಪಂಡಿತರು ಆ ಸ್ಥಾನದ ಮಹಿಮೆಯನ್ನು ಅತಿಶಯವಾಗಿ ಬಣ್ಣಿಸಿದರು. ಪುನಃ ೨೫ನೆ ತಾರೀಖಿನ ದಿವಸ ಮಹಾರಾಜರವರ ಅಧ್ಯಕ್ಷತೆಯ ಕೆಳಗೆ ಸತ್ರದಲ್ಲಿ ಸಭೆಗೂಡಿತು. ಸಭೆಗೆ ನೂರಾರು ಜನ ಬ್ರಾಹ್ಮಣಾಧಿಕಾರಿಗಳೂ ಹಾಗೂ ವೀರಶೈವ ಪ್ರಮುಖರೂ ಆಗಮಿಸಿದ್ದರು. ಸಭೆಯಲ್ಲಿ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೊದಲು ಸ್ವಮತ ಪರಮತ ಸಿದ್ಧಾಂತಸ್ವರೂಪಗಳನ್ನು ತೋರಿಸಿ ತದನಂತರ ವೀರಶೈವ ಮತಸ್ಥಾಪಕರಾದ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಅವತಾರವನ್ನು ಆ ಮಹನೀಯರು ಲೋಕಕ್ಕೆ ಮಾಡಿದ ಭಸ್ಮರುದ್ರಾಕ್ಷ-ಲಿಂಗಧಾರಣಾದಿಗಳ ಮಹಿಮೆಯನ್ನೂ ವರ್ಣಿಸಿದರು. ಪೂರ್ವದಲ್ಲಿ ಮನುಸ್ವಾದಿ ಮಹಾದೇವತೆಗಳೂ ಕೂಡ ಲಿಂಗಧಾರಣವನ್ನು ಮಾಡಿಕೊಂಡಿದ್ದರೆಂದೂ ಇದಕ್ಕೆ ಭರತಖಂಡದಲ್ಲಿರತಕ್ಕ ಅತಿಪ್ರಾಚೀನತರಗಳಾದ ಪಂಢರಪುರದ ವಿಠೋಬ ಕೊಲ್ಹಾಪುರ ಮಹಾಲಕ್ಷ್ಮಿ-ತುಳಜಾಪೂರಭವಾನಿ-ರಾಜಕುಲದೇವತೆಯಾದ ಕುಮಾರಸ್ವಾಮಿ ಮೊದಲಾದ ದೇವತೆಗಳ ಮಸ್ತಕದಲ್ಲಿ ಲಿಂಗಧಾರಣವಿರುವದೇ ಬಲವಾದ ಸಾಕ್ಷಿಯೆಂದೂ ಹೇಳಿದರು. ಮಹಾರಾಜರವರು ಈ ಯಾವತ್ತು ವಿಷಯಗಳನ್ನು ಕೇಳಿ ಸಂತುಷ್ಟಚಿತ್ತರಾಗಿ ಪಂಡಿತರ ಗುಣಕಥನವನ್ನು ಮಾಡಿದರು.

ವಿಪತ್ಕಾಲದಲ್ಲಿ ಸಮಯೋಚಿತೌದಾರ್ಯವು.

ತಮ್ಮ ಲೋಕಪ್ರಸಿದ್ಧವಾದ ಪತ್ರದಲ್ಲಿ ನನ್ನ ಅಲ್ಪಲೇಖನಕ್ಕೆ ಸ್ಥಳ ದೊರೆಯಬೇಕೆಂದು ವಿನಯದಿಂದ ಪ್ರಾರ್ಥಿಸುವೆನು. ಸದ್ಯಃ ಜಗತ್ತಿನ ಬಹು ಭಾಗಗಳಲ್ಲಿ ತನ್ನ ಸರ್ವಾಧಿಕಾರವನ್ನು ನೆಲೆಗೊಳಿಸಿ ಸಾಮ್ರಾಜ್ಯಪ್ರಭುವಿನಂತೆ ಶಾಸನಮಾಡುತ್ತಿರುವ ಕ್ಷಾಮಮಹಾರಾಜನ ದೀರ್ಘಕಾಲದ ಆಳಿಕೆಯಲ್ಲಿ ಬಡವರೂ, ಬಲ್ಲಿದರೂ ತಳಮಳಿಸುತ್ತಿರುವರು. ಅದರಲ್ಲಿ ವಿಜಾಪೂರ ಡಿಸ್ಟ್ರಿಕ್ಟು ಈ ಮಹಾರಾಜನ ರಾಜಧಾನಿಯಾಗಿರುವುದು. ಅಂದಮೇಲೆ ಕೇಳುವದೇನು? ಬಡವರಗೋಳು ಕೇಳುವರಾರು? ಮಹಾರಾಜನ ಪ್ರಚಂಡಶಾಸನದಿಂದ ಎಷ್ಟೋ ಬಡಜನರು ಅಕಾಲಿಕವೆರಾತ್ರಿ ವ್ರತವನ್ನಾಚರಿಸುತ್ತಿರುವರು. ಅಲ್ಲದೆ ವಸ್ತ್ರಾದಿಗಳಿಲ್ಲದೆ ಮರ್ಯಾದೆಯರಕ್ಷಣೆಯಲ್ಲಿ ಭಯಚಕಿತರಾಗಿರುವರು. ಇಂಥ ಘೋರಪ್ರಸಂಗದಲ್ಲಿ "ಯದ್ದದಾತಿಯದಶ್ನಾತಿ ತದೇವಧನಿನೋಧನಂ....ಧನಾಢ್ಯರು ಶಾಸ್ತ್ರೀಯವಾಗಿ ಯಾವದನ್ನು ಕೊಡುವರೋ ಯಾವದನ್ನು ಭೋಗಿಸುತ್ತಿರುವರೋ ಅದೇ ಅವರ ನಿಜವಾದ ಸಂಪತ್ತು....ಎನ್ನುವ ನೀತಿಯವಾಕ್ಯದ ನಿಜವಾದ ರಹಸ್ಯವನ್ನು ಅರಿತು ಸಮಯೋಚಿತವಾದ ಔದಾರ್ಯವನ್ನು ತೋರಿಸಿ ಜನಸ್ತುತಿಗೂ ದೇವಾನುಗ್ರಹಕ್ಕೂ ಪಾತ್ರರಾದ ಮಲ್ಲನಗೌಡರೇ ನೀವೇ ಧನ್ಯರು ಧನ್ಯರು. ಇವರು ವಿಜಾಪೂರ ಡಿ|| ಬಬಲೇಶ್ವರಗ್ರಾಮದ ಪಾಟೀಲರು. ಇವರು ವಯಸ್ಸಿನಿಂದ ಸಣ್ಣವರಿದ್ದರೂ ಗುಣಗಳಿಂದ ದೊಡ್ಡವರಿರುವರು. ಈ ಶ್ರೀಮಂತರ ಧನವ್ಯಯವು ಎಷ್ಟು ಪ್ರಶಂಸನೀಯವಾಗಿರುವದೆನ್ನುವದು ಮುಂದಿನ ಉದಾಹರಣೆಗಳಿಂದ ಗೊತ್ತಾಗುತ್ತದೆ, ಬಡಜನರು ಕ್ಷಾಮತಾಪದಿಂದ ತಪ್ತರಾಗಿರುವದನ್ನು ನೋಡಿ ಇವರು ಕನಿಕರಪಟ್ಟು ತಾ|| ೨-೩-೪ ಜುಲೈ ೧೯೨೧ ಇಸವಿಯವರೆಗೆ ಬಬಲೇಶ್ವರ ಮತ್ತು ಸುತ್ತುಮುತ್ತಿನ ಹಳ್ಳಿಗಳಿಗೆಹೋಗಿ ಬಡಜನರಿಗೆ ಸೀರೆ, ಕುಪ್ಪಸ, ಧೋತ್ರ, ಅಂಗಿ, ರುಮಾಲು ಮೊದಲಾದ ವಸ್ತ್ರಗಳನ್ನೇ ಅಲ್ಲದೆ ಎಲ್ಲಾ ಜನರಿಗೂ ಎರಡುದಿವಸ ಸಾಲುವಷ್ಟು ಅನ್ನಸಾಮಗ್ರಿಗಳನ್ನು ಕೊಟ್ಟು ಬಡಜನರಲ್ಲಿ ನಿಸ್ಸೀಮ ಕರುಣಾಪ್ರೇಮವನ್ನು ತೋರಿಸಿದ್ದಕ್ಕಾಗಿ ಬಡಜನರೆಲ್ಲರೂ ಶ್ರೀಮಂತರ ವಿಷಯವಾಗಿ ಅತ್ಯಂತ ಕೃತಜ್ಞತಾಬುದ್ಧಿಯುಳ್ಳವರಾಗಿದ್ದಾರೆ. ಅಲ್ಲದೆ ೧೯೧೮ ನೆ ಇಸವಿಯಲ್ಲಿ ದೇಶಮಧ್ಯದಲ್ಲಿ ಇಂಫ್ಲುಯಂಜಾ ರೋಗವು ಹುಟ್ಟಿದ್ದಾಗ ಜನರಕಷ್ಟಕ್ಕೆ ಪಾರಾವಾರವೇ ಇದ್ದಿಲ್ಲ. ಒಂದುಮಗ್ಗಲಿಗೆ ಕ್ಷಾಮಬಾಧಾ ಮತ್ತೊಂದುಮಗ್ಗಲಿಗೆ ರೋಗಬಾಧೆ ಈ ಉಭಯ ಬಾಧೆಗಳ ಇಕ್ಕಟ್ಟಿನೊಳಗೆ ಸಿಕ್ಕಿ ಅನನ್ಯಗತಿಕರಾದ ದರಿದ್ರಜನರ ಮೇಲೆ ತೋರಿಸಿದ ಇವರ ಪ್ರಾಣಿದಯಾಪರತ್ವವಾದರೂ ಸ್ತುತ್ಯವೇ ಸರಿ. ಯಾಕಂದರೆ ಅಂಥಪ್ರಸಂಗದಲ್ಲಿ ಸ್ವಧನವ್ಯಯದಿಂದ ಔಷಧಾದಿಗಳನ್ನು ತರಿಸಿ ಸ್ವತಃ ರೋಗಿಗಳನ್ನುಪಚರಿಸಿದ ಛಾಯೆಯು ಇನ್ನೂ ಬಡಜನರ ಹೃತ್ಪಟಲದಮೇಲೆ ಅಚ್ಚಳಿಯದೆ ಇತ್ತು. ಇಷ್ಟರಲ್ಲಿಯೇ ಈಗಣ ಮಹೌದಾರ್ಯದಿಂದ ಬಡವರ ಸಂತೋಷವು ದ್ವಿಗುಣವಾಯಿತು.

ಗಜೇಂದ್ರಗಡದ ಮಹಾಂತಶಿವಯೋಗಿ ವಾಚನಾಲಯ.

ಗಜೇಂದ್ರಗಡ ಸಂಸ್ಥಾನದ ಚೌಕಿವಿರಕ್ತಮಠದ ಮಹಾಂತ ಶಿವಯೋಗಿ ವಾಚನಾಲಯದಲ್ಲಿ ಇದೇ ಆಶ್ವೀಜ ಶುದ್ಧ ೯ ಸೋಮವಾರ ಸಾಯಂಕಾಲ ೫ ಘಂಟೆಗೆ ಪ್ರಚಂಡವಾದ ಸಾರ್ವಜನಿಕ ಸಭೆಯು ನೆರೆಯಿತು. ಸಭಾಮಂಟಪವು ನಾನಾತರದ ನಕ್ಷೆಗಳಿಂದಲೂ ಅನೇಕ ಮಹನೀಯರ ಭಾವಚಿತ್ರಗಳಿಂದಲೂ ಬಹು ಸುಂದರವಾಗಿ ಕಂಗೊಳಿಸುತ್ತಿತ್ತು. ಸಭೆಯ ಅಗ್ರಭಾಗದ ಸಿಂಹಾಸನದಮೇಲೆ ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳವರ ಹಾಗು ಹಾಲಕೆರೆಯ ಶ್ರೀಮನ್ನಿರಂಜನ ಸ್ವಾಮಿಗಳವರ ಭಾವಪಟಗಳೆರಡು ಇಡಲ್ಪಟ್ಟಿದ್ದವು. ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವಬಗ್ಗೆ ಮ|| ರಾ|| ರುದ್ರಪ್ಪ ಸಿದ್ಧಪ್ಪ ಕೊಟಗಿ ಇವರು ಶ್ರೀಮನ್ನಿರಂಜನ ಸದಾಶಿವ ದೇವರವರಿಗೆ ವಿನಂತಿಮಾಡಿಕೊಳ್ಳಲು ಸರ್ವಾನುಮತದಿಂದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅನಂತರ ವಾಚನಾಲಯದವರ ಆಮಂತ್ರಣದ ಮೇರೆಗೆ ಬಂದಿದ್ದ ಸೂಡಿಯ ಹೆಡ್‌ಮಾಸ್ತರರಾದ ಮ|| ರಾ|| ರಾ|| ಲಿಂಗಪ್ಪ ಮಾಸ್ತರರವರು "ಧರ್ಮ" ಹಾಗು "ವಾಚನಾಲಯ" ಗಳ ಬಗ್ಗೆ ೧|| ತಾಸಿನವರೆಗೆ ಸಭಿಕರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಸರಸವಾಗಿ ವ್ಯಾಖ್ಯಾನಮಾಡಿದರು. ಆಮೇಲೆ ಮಿ|| ಕೊಟಗಿ ಇವರು ವಾಚನಾಲಯದ ಸಾದ್ಯಂತವೃತ್ತಾಂತವನ್ನು ಸಭಿಕರ ಮುಂದಿಟ್ಟು ಅದರ ಊರ್ಜಿತಾವಸ್ಥೆಯಬಗ್ಗೆ ಮಾಡತಕ್ಕ ಕಾರ್ಯಗಳನ್ನು ವಿವರಿಸಿಹೇಳಿದರು. ನಂತರ ವಾಚನಾಲಯದವರ ಆಮಂತ್ರಣದಮೇರೆಗೆ ಬಂದಿದ್ದ ವೇದಮೂರ್ತಿಗಳಾದ ಶಾಂತವೀರಾರ್ಯರು ವಿರಕ್ತಮಠ ದಾವಣಗೆರೆ ಇವರು ವಾಚನಾಲಯವು ಅವಿಚ್ಛಿನ್ನವಾಗಿ ನಡೆಕೊಂಡುಹೋಗುವ ಬಗ್ಗೆ ಪೌರ್ವಾತ್ಯ ಪಾಶ್ಚಿಮಾತ್ಯರ ಉದಾಹರಣೆಗಳೊಂದಿಗೆ ಶ್ರೋತೃವೃಂದಕ್ಕೆ ಸ್ಫೂರ್ತಿಯುಂಟಾಗುವಂತೆ ಆವೇಶಯುಕ್ತ ಭಾಷಣಮಾಡಿದರು. ಆಮೇಲೆ ಈ ವಾಚನಾಲಯವು ಲೋಕಪ್ರಿಯವಾಗಿ ನಡೆಯುವಬಗ್ಗೆ ಇಲ್ಲಿಯ ಕನ್ನಡಶಾಲೆಯ ಹೆಡ್‌ಮಾಸ್ತರರಾದ ಚನಪನಹಳ್ಳಿ ಮಾಸ್ತರರವರು ಭಾಷಣಮಾಡಿದರು. ವೇ|| ಶಾಂತವೀರಾರ್ಯರು ವಿರಕ್ತಮಠ ದಾವಣಗೆರೆ ಇವರು ಯಾವುದಾದರೊಂದು ಕಾರ್ಯವು ಊರ್ಜಿತಸ್ಥಿತಿಗೆ ಬರಬೇಕಾದರೆ ಅದರ ಸಾಂಪತ್ತಿಕಸ್ಥಿತಿಯು ತಕ್ಕಷ್ಟು ತೃಪ್ತಿಕರವಾಗಿ ಇದ್ದೇತೀರಬೇಕು ಎಂಬ ವಿಷಯವನ್ನು ಅನೇಕ ಉದಾಹರಣೆಗಳೊಂದಿಗೆ ಹೇಳಿ ತಮ್ಮ ಉದಾರವಾದ ಹಸ್ತವನ್ನು ಮುಂದೆಮಾಡುವಬಗ್ಗೆ ಸೂಚಿಸಲು ತತ್‍ಕ್ಷಣದಲ್ಲಿಯೇ ಅಧ್ಯಕ್ಷರು ೨೫ ರೂಪಾಯಿಗಳನ್ನು ಆಶೀರ್ವದಿಸಿದರು. ನಂತರ ಉಳಿದ ಸಭಿಕರೆಲ್ಲರೂ ತಮ್ಮ ಶಕ್ತ್ಯನುಸಾರ ಧನಸಹಾಯ ಮಾಡಲು ೧೫೧ ರೂಪಾಯಿಗಳ ವಾರ್ಷಿಕ ವರ್ಗಣಿಯಾಯಿತು. ಇನ್ನೂ ಕೊಡುವವರೆಷ್ಟೋಮಂದಿ ಹಾಗೇ ಉಳಿದರು. ಅನಂತರ ಮಿ|| ಕೊಟಗಿ ಇವರು ಆಮಂತ್ರಣದಮೇರೆಗೆ ಆಗಮಿಸಿದ ವ್ಯಾಖ್ಯಾತರಿಂದಾದ ಪ್ರಯೋಜನದಬಗ್ಗೆ ಅವರ ಆಭಾರವನ್ನು ಹಾಗೂ ಅಧ್ಯಕ್ಷರ ಮತ್ತು ಮಹಬೂಬ್ ಸಬ್ ಇನ್ಸ್ಪೆಕ್ಟರ್ ಕರೆಕಟ್ಟ ಇವರ ಆಭಾರವನ್ನು ಮನ್ನಿಸಿದರು. ಅನಂತರ ಸಾರ್ವಭೌಮ ಪಂಚಮಜಾರ್ಜರವರಿಗೂ ಹಿಂದೂಸ್ಥಾನಕ್ಕೆ ಬಿಜಯಂಗೈಯುತ್ತಲಿರುವ ಪ್ರಿನ್ಸ್ ಆಫ್ ವೇಲ್ಸ್‌ರವರಿಗೂ ಸದಾ ಭಗವಂತನು ಜಯವನ್ನುಂಟುಮಾಡಲೆಂಬ ಜಯಘೋಷದೊಡನೆ ಸಭೆಯ ಪರಿಸಮಾಪ್ತಿಕಾರ್ಯವನ್ನು ಮಾಡಲು ಹಾರ ತುರಾಯಿಗಳು ಹಂಚಲ್ಪಟ್ಟು ಸಭಾ ವಿಸರ್ಜನೆಯಾಯಿತು.

೧೯೨೧ ನೆಯ ಇಸವಿ ನವಂಬರ್ ತಾ|| ೧೩ರಿಂದ ೧೯೨೧ ನೆಯ ನವಂಬರ್ ತಾ|| ೧೯ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ನೆಯ ದುರ್ಮತಿನಾಮ ಸಂವತ್ಸರದ ಕಾರ್ತೀಕಶುದ್ಧ ತ್ರಯೋದಶಿಯಿಂದ ಕಾರ್ತೀಕ ಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುವೃ ಮಾಸ
13	[1]ಭಾನು	ತ್ರಯೋ	30-0	ರೇವ	11-49	28
14	[2]ಸೋಮ	ಚತು	31-19	ಅಶ್ವಿ	14-55	29
15	[3]ಮಂಗಳ	ಪೌರ್ಣ	30-20	ಭರ	6-44	30
16	[4]ಬುಧ	ಪಾಡ್ಯ	30-5	ಕೃತ್ತಿ	17-18	1
17	[5]ಗುರು	ಬಿದಿ	27-45	ರೋಹಿ	16-45	2
18	ಶುಕ್ರ	ತದಿ	24-15	ಮೃಗ	15-6	3
19	ಶನಿ	ಚೌತಿ	19-52	ಆರ್ದ್ರಾ	12-34	4

(1) ಪ್ರದೋಷಃ, ವೈಕುಂಠಚತುರ್ದಶಿ. (2) ಕಾರ್ತೀಕಸೋಮವಾರಂ. (3) ವ್ಯಾಸಪೂರ್ಣಿಮಾ, ಧರ್ಮಸ್ಥಳದಲ್ಲಿ ದೀಪೋತ್ಸವಃ. (4) ವಿಷ್ಣುದೀಪಃ. (5) ನಂಜನಗೂಡು ಶ್ರೀಕಂಠೇಶ್ವರಸ್ವಾಮಿರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ನವಂಬರ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೪೬

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೋರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‍ಫ್ಲುಯಂಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
44 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲು ಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.	ರೂ. ವರೆಗೆ.
4	0-12-0	50-0-0
5	0-8-0	100-0-0
6	0-12-0	100-0-0
7	6-0-0	100-0-0
ಬಿಡಿಮಣಿಗಳು 1ಕ್ಕೆ ಕ್ರಯ		
3	0-6-0 ಇಂದ	10-0-0
8	0-8-0	100-0-0
9	0-12-0	100-0-0
10	0-14-0	100-0-0
11	3-8-0	100-0-0
12	4-0-0	100-0-0
13	4-8-0	100-0-0
14	6-0-0	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	15-0-0	40-0-0
ಮೆಣಸು	7-8-0	15-0-0
ಕಡಲೆ	2-8-0	7-0-0
ನೆನೆದಕಡಲೆ	1-8-0	3-0-0
ಕಮಲಾಕ್ಷಿ	1-0-0	2-0-0
ದೊಡ್ಡ ,,	0-8-0	1-0-0
ಅದಕ್ಕಿಂತ	0-6-0	0-8-0
ಸ್ಫಟಿಕ108ಕ್ಕೆ	4-8-0	30-0-0
ಶ್ರೀಚಕ್ರ1ಕ್ಕೆ	8-0-0	100-0-0
ಲಿಂಗ 1ಕ್ಕೆ	1-0-0	100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
38 ಕಂಪನಿ, ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವೃತಪಂಚಕ	೦—೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 27

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಕಾಗದದ ಬೆಲೆಯು ತಗ್ಗಾಗಿದ್ದರೂ ಅನೇಕರ ಕೋರಿಕೆಯ ಮೇರೆಗೆ ಈ ಗ್ರಂಥದ ದ್ವಿತೀಯ ಮುದ್ರಣವನ್ನು ಮಾಡಿಸಿ ಪೂರೈಸಿರುವೆವು. ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦ ಅಂಚೆವೆಚ್ಚ ಬೇರೆ.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತಿಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎಲ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಈಗ ತಾನೆ ಅಚ್ಚಾಗಿ ಕ್ರಯಕ್ಕೆ ಸಿದ್ಧವಾಗಿದೆ.

ಮೈಸೂರು ಸೀಮೆಯಲ್ಲಿ ಕೈತೋಟಗಳ ವ್ಯವಸಾಯ.

ಈ ಪುಸ್ತಕವು ಹಿಂದೆ ಲಾಲ್‌ಬಾಗ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಜೆ. ಕ್ಯಾಮಿರಾನ್ ಸಾಹೇಬರಿಂದ ಇಂಗ್ಲೀಷು ಭಾಷೆಯಲ್ಲಿ ರಚಿತವಾಗಿ ಮೈಸೂರು ಸಂಪದಭ್ಯುದಯ ಸಮಾಜದ ವ್ಯವಸಾಯ ಶಾಖೆಯವರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಲ್ಪಟ್ಟಿರುತ್ತದೆ. ತರಕಾರಿ ಬೆಳೆಯತಕ್ಕವರಿಗೂ ಫಲಪುಷ್ಪ ವ್ಯವಸಾಯಗಾರರಿಗೂ ಅತ್ಯಂತ ಉಪಯೋಗವಾದದ್ದು. ಕ್ರಯ ಒಂದು ರೂಪಾಯಿ ಎಂಟಾಣೆ.

ಈ ಪುಸ್ತಕವು ದೊರೆಯುವ ಸ್ಥಳ.
3 ಕ್ಯೂರೇಟರ್, ಗೌರ್ನಮೆಂಟ್ ಬುಕ್ ಡಿಪೊ,
ಬೆಂಗಳೂರು ಸಿಟಿ.

NOTICE.

The Star Tileries Ltd., Mysore.

Notice is hereby given that the Registered Office of the above Company has been changed to No. 321 Sayaji Rao Road, Mysore, from 389 Chamarajpet, Mysore.

MYSORE, **M. C. MALLAPPA,**
Dated 19-11-21. **For the Managing Agents.**

ಭರತಖಂಡದ ವೃತ್ತಾಂತಗಳು.

ಮದರಾಸು ವಿಶ್ವವಿದ್ಯಾಲಯ ಪರೀಕ್ಷೆಗಳನ್ನು ಮಾರ್ಚಿ ಅಥವಾ ಏಪ್ರಿಲ್ ತಿಂಗಳಲ್ಲಿ ಒಂದುಸಲ, ನವಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಒಂದುಸಲ ಹೀಗೆ ೨ ಆವೃತ್ತಿ ನಡೆಯಿಸಲಿಕ್ಕೆ ಅಲ್ಲಿಯ ಸೆನೇಟ್ ಸಭೆಯಲ್ಲಿ ಒಪ್ಪಿತವಾಯಿತು.

ಇಂಡ್ಯಾಸರ್ಕಾರದವರು ಸೈನ್ಯಗಳಿಗಾಗಿ ಆಸ್ಟ್ರೇಲಿಯಾದಿಂದ ೧೬೪೦೦ ಟನ್ ಗೋದುವೆಯನ್ನು ಈ ದೇಶಕ್ಕೆ ತರಿಸಿಕೊಂಡರು. ಇದಲ್ಲದೆ ಬೇರೆ ಬೇರೆ ವರ್ತಕಸಂಘಗಳವರು ಕೂಡ ಪ್ರಜೆಗಳಿಗೆ ಮಾರಾಟಕ್ಕಾಗಿ ೮ ಹಡಗುಗಳ ತುಂಬಾ ತರಿಸುತ್ತಲಿದ್ದಾರಂತೆ. ಇದರಲ್ಲಿ ಕೆಲಭಾಗವು ಆಗಲೇ ಬಂದಿದೆ. ಈ ದೇಶದಲ್ಲಿ ಗೋದುವೆಯ ಬೆಲೆ ಕಡಿಮೆಯಾದುದೇ ಇದಕ್ಕೆ ಕಾರಣ. ಮೈಸೂರಿನಲ್ಲಿ ರೂಪಾಯಿಗೆ ೩ ಸೇರಿನಂತೆ ಗೋದುವೆಯ ಮಾರಾಟವಾಗುತ್ತಿದೆ.

ಕಳೆದ ತಾ|| ೫ರಲ್ಲಿ ಕಲ್ಕತ್ತಾಕ್ಕೆ ಸೇರಿದ ಹೌರಾದಲ್ಲಿ ಬಯಲಿನೊಳಗೆ ಒಂದು ದೊಡ್ಡ ಸಭೆ ಜರುಗಿತು. ವಿದೇಶ ವಸ್ತ್ರ ಬಹಿಷ್ಕಾರ ಮೊದಲಾದ ವಿಷಯಗಳ ಮೇಲೆ ಉಪನ್ಯಾಸಗಳಾದ ಬಳಿಕ ಸಭಿಕರು ಗಾಂಧಿಕಿಜಯ್, ಅಲ್ಲಾಹೋ ಅಕ್ಬರ್, ಮಹಮ್ಮದಾಲಿ ಷೌಕತಾಲೀಕು ಜಯ್ ಎಂದು ಮೊದಲಾಗಿ ಉದ್ಘೋಷಮಾಡಿದರು. ಹೌರಾಜಾಯಿಂಟ್ ಮೇಜಿಸ್ಟ್ರೇಟರೂ ಪೋಲೀಸ್ ಅ|| ಸೂಪರಿಂಟೆಂಡೆಂಟರೂ ಬಂದರು. ಪ್ರಜೆಗಳನ್ನು ಚದುರಿಹೋಗಲಿಕ್ಕೆ ಆಜ್ಞಾಪಿಸಿದರು. ಕೆಲರು ಮಾತ್ರ ಅದಕ್ಕೆ ವಿಧೇಯರಾಗಿ ಹೊರಟುಹೋದರು. ಉಳಿದವರು ಅವಿಧೇಯರಾಗಿ ಪೋಲೀಸ್ ಅ|| ಸೂಪರಿಂಟೆಂಡೆಂಟರನ್ನು ದೊಣ್ಣೆಯಿಂದ ಹೊಡೆದರು. ಪೋಲೀಸರು ನುಗ್ಗಿ ಜನರನ್ನೆಲ್ಲಾ ಚದರಿಸಿದರು. ಒಬ್ಬಿಬ್ಬರನ್ನು ಹಿಡಿದು ಠಾಣಕ್ಕೆ ಸೇರಿಸಿದರು. ಕೂಡಲೇ ನಾಲ್ಕು ದಿಕ್ಕಿನಿಂದಲೂ ಖಿಲಾಫತ್ ಸ್ವಚ್ಛಂದ ಸೇವಕರು ಬಂದು ಪೋಲೀಸ್ ಠಾಣದ ಮೇಲೆ ಇಟ್ಟಿಗೆಗಳನ್ನು ಬೀರಿದರು. ಪೋಲೀಸರನ್ನು ದೊಣ್ಣೆಗಳಿಂದ ಹೊಡೆದರು. ಆಗ ಪೋಲೀಸರು ತುಪಾಕಿ ಗುಂಡುಗಳನ್ನು ಪ್ರಯೋಗಿಸಿದರು. ಒಬ್ಬಪೋಲೀಸನು ಗುಂಪಿನವರ ಏಟುತಿಂದು ಆಸ್ಪತ್ರೆಯಲ್ಲಿ ಆ ರಾತ್ರಿಯೇ ಸತ್ತನು. ಇನ್ನೊಬ್ಬನು ಚಿಕಿತ್ಸೆಯಲ್ಲಿದ್ದಾನೆ. ಖಿಲಾಫತ್ ಸ್ವಚ್ಛಂದ ಸೈನಿಕರಲ್ಲೂ ಒಬ್ಬನು ಸತ್ತನಂತೆ. ಪೋಲೀಸರು ೧೧ ಮಂದಿಗಳನ್ನು ಹಿಡಿದು ವಿಚಾರಣೆಗೆ ಗುರಿಪಡಿಸಿದ್ದಾರೆ. ಈಚೆಗೆ ಗೂರ್ಖಾಸೈನಿಕರು ಪಟ್ಟಣದಲ್ಲೆಲ್ಲಾ ನಿಂತು ಗದ್ದಲ ನಡೆಯದಂತೆ ನೋಡಿಕೊಂಡರು.

ಮಾರಂಡಹಳ್ಳಿ ಮುದ್ದಪ್ಪನವರಮಗಳ ಲಗ್ನದಲ್ಲಿ ವಧುವಿನಕಡೆಯಿಂದ ೨ ರೂ. ಮ|| ರಾ|| ಟಿ. ಶಂಕರಪ್ಪನವರ ಕುಮಾರಿಯವರ ನಿಷೇಕಪ್ರಸ್ತದಲ್ಲಿ ೧ ರೂ. ಮ|| ರಾ|| ಗಂಡದಕಟ್ಟಿ ವೀರಪ್ಪನವರ ಲಗ್ನದಲ್ಲಿ ೩ ರೂ. ಜುಮ್ಲಾ ೨೬ ರೂ.

೧೫. ಬೆಂಗಳೂರು ಹಲಸೂರಿನಲ್ಲಿರುವ ಮ|| ರಾ|| ಯು. ಎಸ್. ಕಾಳಪ್ಪನವರ ಮೂಲಕ ಮ|| ರಾ|| ಹಲಸೂರು ಬಿ. ಎಸ್. ರುದ್ರಪ್ಪನವರ ಮನೆ ಲಗ್ನದಲ್ಲಿ ೫ ರೂ. ಮ|| ರಾ|| ಹಲಸೂರು ದೇವಪ್ಪನವರಮನೆ ಲಗ್ನದಲ್ಲಿ ೫ ರೂ. ಮ|| ರಾ|| ಅಕ್ಕಿಪೇಟೆ ಕುಣಿಗಲ್ ಲಿಂಗಪ್ಪನವರಮನೆ ಲಗ್ನದಲ್ಲಿ ೫ ರೂ. ಜುಮ್ಲಾ ೧೫.

೧೬. ಮಂಡ್ಯ ತಾ|| ಮದ್ದೂರು ಕೆ. ಚನ್ನಮಲ್ಲಪ್ಪನವರ ಮೂಲಕ ಮದ್ದೂರು ಕೊತ್ತತ್ತಿ ಯಜಮಾನ್ ಮ|| ರಾ|| ದೊಡ್ಡಬಸಪ್ಪನವರಮನೆ ಲಗ್ನದಲ್ಲಿ ೨-೨-೦ ರೂ. ದೇಶದಶೆಟ್ಟರು ಮ|| ರಾ|| ಸುಬ್ಬಣ್ಣನವರ ಮನೆಯಲ್ಲಿನಡೆದ ಲಗ್ನದಲ್ಲಿ ೨-೨-೦ ರೂ. ಜುಮ್ಲಾ ೪-೪-೦ ರೂ.

೧೭. ಚಾಮರಾಜನಗರ ತಾ|| ಆಲೂರು ಅಪ್ಪೆಗೌಡರ ಮ|| ರಾ|| ಪುಟ್ಟಬಸಪ್ಪನವರ ಮೂಲಕ ಮ|| ರಾ|| ಚನ್ನಬಸಪ್ಪನವರಮನೆ ಲಗ್ನದಲ್ಲಿ ೧ ರೂ. ಮ|| ರಾ|| ಮುದ್ದಬಸಪ್ಪನವರಮನೆ ಲಗ್ನದಲ್ಲಿ ೧ ರೂ. ಮ|| ರಾ|| ಕಾಣಪ್ಪನವರಮನೆ ಲಗ್ನದಲ್ಲಿ ೨ ರೂ. ಜುಮ್ಲಾ ೪ ರೂ.

೧೮. ಕುಣಿಗಲ್ ತಾ|| ಹುಲಿಯೂರುದುರ್ಗ ಗ್ರಾಮದ ಪಟೇಲ್ ಮ|| ರಾ|| ಸಿದ್ದಬಸವಯ್ಯನವರಮೂಲಕ ಹಳೇಯೂರಿನಲ್ಲಿರುವ ಮ|| ರಾ|| ಬಳೆಕಪನಶೆಟ್ಟರವರ ಮನೆಲಗ್ನದಲ್ಲಿ ೫ ರೂ. ಜುಮ್ಲಾ ೧೩೮-೪-೦.
ಸಕೇಷ.

ಬೆಂಗಳೂರು ಸಿಟಿ, } ಜಿ. ಪರಮಶಿವಯ್ಯ, ಬಿ.ಎ. ಎಲ್.ಎಲ್.ಬಿ.,
ತಾ|| 26-7-1921. } ಆನರರಿ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಸ್ಥೆ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು.

(1) ಬಳ್ಳಾರಿಯ ಸುಳ್ಳುಸುದ್ದಿ—ಲೇಖನವು ನಮ್ಮ ನಿಯಮಕ್ಕೆ ವಿರುದ್ಧವಾಗಿಯೂ, ವ್ಯಕ್ತಿವಿಷಯಕವಾಗಿಯೂ ಇರುವುದರಿಂದ ತಿರಸ್ಕರಿಸಲ್ಪಟ್ಟಿದೆ. (2) ಕರ್ಜಗಿ ಹೆಡ್‌ಮಾಸ್ತರು—ನಿಮ್ಮ ಬರವಣಿಗೆಯು ಬಹಿರಂಗಪಡಿಸಲ್ಪಡತಕ್ಕದ್ದಾಗಿಲ್ಲ (3) ಬಾಗೇವಾಳು ಪ್ರತ್ಯಕ್ಷದರ್ಶಿ—ನಿಮ್ಮ ಲೇಖನವು ಅಸ್ಪಷ್ಟವಾಗಿಯೂ, ದೊಡ್ಡದಾಗಿಯೂ ಇರುವುದರಿಂದ ಪ್ರಕಟನೆಗೆ ಸಾಧ್ಯವಿಲ್ಲವು. ಗುರುವರ್ಗ ಸಭೆ—ಬಹಳ ಹಳೆಯಸುದ್ದಿಯಾದುದರಿಂದ ಪ್ರಕಟಿಸಲಿಲ್ಲ. ಪ. ಪ್ರ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಕಡೂರು ತಾಲ್ಲೂಕು ೧ ನೇ ಗ್ರಾಂಟ್ ಸ್ಕೂಲ್ಮಾಸ್ಟರುಗಳ ಸಂಘ; ಕಡೂರಳ್ಳಿ.

ಗ್ರಾಂಟ್ ಸ್ಕೂಲ್ಮಾಸ್ಟರುಗಳಲ್ಲಿ ವಿನಂತಿ:—ಸದರಿ ಸಂಘವನ್ನು ಇದೇ ೧೯೨೧ನೆ ಅಕ್ಟೋಬರ್ ತಾ|| ೩೦-೩೧ ರಲ್ಲಿ ನಡೆಸುವಂತೆ ಪ್ರಕಟಿಸಲ್ಪಟ್ಟಿದ್ದುದು ಸರಿಯಷ್ಟೆ. ಕೆಲವು ಅನಿವಾರ್ಯಗಳ ದೆಸೆಯಿಂದ ಇದೇ ನವಂಬರ್ ತಾ|| ೨೭-೨೮ನೆ ಭಾನುವಾರ ಮತ್ತು ಸೋಮವಾರ ಈ ಎರಡು ದಿವಸಗಳಲ್ಲಿ ನಡೆಸುವುದಾಗಿ ನಿರ್ಧರಿಸಿದೆ.

ಎಲ್. ತಿಮ್ಮಯ್ಯ,
ಸಂಘದ ಸೆಕ್ರೆಟರಿ, ಕಡೂರಳ್ಳಿ.

ನರಗುಂದ—ತಾ|| ೨೪-೯-೨೧ ನೆ ದಿವಸ ನಿರಸಂಗೀಕರ ಲೈಬ್ರರಿಯಲ್ಲಿ ಸಭೆಯು ಕೂಡಿತ್ತು. ನಮ್ಮ ಗುರುಗಳಾದ ಶ್ರೀಮದ್ವಿಶ್ವಕರ್ಮ ಶ್ರೀ ಜನಾರ್ದನಸ್ವಾಮಿ ರಾಟಿಣ ಇವರು ಈ ಸಭಾಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಸದರಿ ಸ್ವಾಮಿಗಳವರು ಧರ್ಮ ಈ ವಿಷಯದ ಮೇಲೆ ಮತ್ತು ವೇ|| ಓಂಕಾರಶಾಸ್ತ್ರಿಗಳವರು ಭಕ್ತಿಯೆಂಬ ವಿಷಯದ ಮೇಲೆ ಮತ್ತು ಶಿ. ಸಿದ್ಧಪ್ಪಯ್ಯಸ್ವಾಮಿ ಪತ್ತಾರ ಇವರು ಸಾಂಸರಿಕ ವಿಷಯದ ಮೇಲೆ ಸ್ಫೂರ್ತಿದಾಯಕವಾದ ಭಾಷಣಮಾಡಿದರು. ಈ ಸಭೆಗೆ ಪೇಟೆಯ ದೊಡ್ಡದೊಡ್ಡ ಗೃಹಸ್ಥರೂ ಮತ್ತು ನಮ್ಮ ವಿಶ್ವಕರ್ಮ ಸಮಾಜದವರು ಮೊದಲಾದ ೫೦೦ ಜನರು ಕೂಡಿದ್ದರು. ಸಭೆಯು ಒಳ್ಳೇ ವಿಜೃಂಭಣೆಯಿಂದ ನಡೆಯಿತು.

ಬೆಳಗಾಂಜಿಲ್ಲಾ ಪರಮಾನಂದವಾಡಿ.

ಈ ಊರಲ್ಲಿ ತಾ|| ೭-೧೦-೧೯೨೧ ಸೋಮವಾರದದಿವಸ ರಾತ್ರಿ ೮ ಘಂಟೆಯಿಂದ ೧೦|| ಘಂಟೆಯವರೆಗೆ ಮಳೆಯು ಭಯಂಕರವಾಗಿ ಬಿತ್ತು. ಈ ಮಳೆಯು ಅಜಮಾಸು ೧೬ ಇಂಚು ಆಗಿತ್ತು. ಊರಲ್ಲಿ ತಿರುಗಾಡಲಿಕ್ಕೆ ಅನುಕೂಲವಿಲ್ಲದಂತೆ ಆಯಿತು. ಕಾರಣ ಓಣಿಗಳಲ್ಲಿ ನೀರು ಹಳ್ಳಗಳಂತೆ ಮನುಷ್ಯರ ನಡುಯಿದೆಯವರೆಗೆ ನೀರು ಹರಿದವು. ಎಷ್ಟೋ ಮನೆಗಳು ಬಿದ್ದವು ಮತ್ತು ಯಾವತ್ತು ಜನರ ಮನೆಯಲ್ಲಿ ನೀರೇ ಆಗಿದ್ದಿತು. ಇದಲ್ಲದೆ ಹಳ್ಳಗಳೊಳಗೆ ಎಷ್ಟೋ ರೈತರಕೋಟಿದೊಳಗಿನ ಬೆಳೆಗಳಲ್ಲದೆ ಅವರ ಮನೆಗಳು, ಗುಡಿಸಲುಗಳು ಕೊಚ್ಚಿ ಹೋದವು. ಇಲ್ಲಿ ಆದ ಹಾನಿಯನ್ನು ವಿವರಿಸುತ್ತ ಕುಳಿತರೆ ಬಹಳ ಆಗುವದು.

ಬಬಲೇಶ್ವರ.

ತಾ|| ೧-೧೦-೧೯೨೧ನೆ ದಿವಸ ಬಬಲೇಶ್ವರ ಗ್ರಾಮದಲ್ಲಿ ಒಂದು ಜಾಹೀರ ಸಭೆಯು ಕೂಡಿತ್ತು. ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಯುತ ಮುತ್ತಪ್ಪಾ ಸಿದ್ಧಲಿಂಗಪ್ಪಾ ಬಗಲಿ ಬಿ. ಎ. ಇವರು ವಹಿಸಿದ್ದರು. ಸಭೆಗೆ ಬಹುಶಃ ಎರಡು ಸಾವಿರ ಜನರವರೆಗೂ ನೆರೆದಿದ್ದರು. ಸಭೆಯಲ್ಲಿ ಪಾಸಾದ ಠರಾವುಗಳು:—

(೧) ಯಾವತ್ತು ಜನರು ರಾಜನಿಷ್ಠೆಯಿಂದ ಇರುವ ಬಗ್ಗೆ ಮಿ|| ವೀರನಗೌಡ ಸಂಗನಗೌಡ ಇವರು ತಂದ ಠರಾವು ಸರ್ವಾನುಮತಿಯಿಂದ ಪಾಸಾಯಿತು. (೨) ದುಷ್ಕಾಳ ನಿವಾರಣಾರ್ಥವಾಗಿ ಬಡಜನರಿಗೆ ರಿಲೀಫ್ ವರ್ಕನ್ನು ಆರಂಭಮಾಡುವಬಗ್ಗೆ ಸರ್ಕಾರದವರಿಗೆ ಸಹಾಯಬೇಡುವ ಕುರಿತು ಮಿ|| ಬಸಪ್ಪ ರಾಚಪ್ಪ ಮಂಗಳವೇಡೆ ಇವರು ತಂದ ಠರಾವು ಸರ್ವಾನುಮತಿಯಿಂದ ಪಾಸಾಯಿತು. (೩) ಸಕ್ತಿಶಿಕ್ಷಣ ಕಮಿಟಿಯ ಮುಂದೆ ಸಾಕ್ಷಿಕೊಡುವ ಬಗ್ಗೆ ಮಿ|| ಬಸಪ್ಪಾ ರಾಚಪ್ಪಾ ಮಂಗಳವೇಡೆ ಇವರನ್ನು ಕಳಿಸುವ ಕುರಿತು ತಂದ ಠರಾವು ಸರ್ವಾನುಮತಿಯಿಂದ ಪಾಸಾಯಿತು. (೪) ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಪ್ರಿನ್ಸಿಪಾಲ ಮಹಿಷಿರಾಯರು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ತೋರಿಸಿದ ಅತ್ಯಾಚಾರವನ್ನು ನಿಷೇಧಮಾಡುವ ಕುರಿತು ಮತ್ತು ಸದರೀ ಪ್ರಿನ್ಸಿಪಾಲರನ್ನು ತೆಗೆದು ಅವರ ಜಾಗೆಗೆ ಒಬ್ಬ ಬ್ರಾಹ್ಮಣೇತರ ಪ್ರಿನ್ಸಪಾಲರನ್ನು ನೇಮಿಸಬೇಕೆಂದು ವೇ|| ಬಸಯ್ಯ ಚನ್ನಬಸಯ್ಯ ಪುರಾಣಿಕ ಇವರು ತಂದಠರಾವು ಸರ್ವಾನುಮತಿಯಿಂದ ಪಾಸಾಯಿತು. (೫) ಮೇಲಿನ ಎಲ್ಲಾ ಠರಾವುಗಳನ್ನೂ ನೇಕನಾಮದಾರ ಗೌರ್ನರ್ ಸಾಹೇಬರವರ ಕಡೆಗೂ ನೇಕನಾಮದಾರ ಫರಂಜಪೆಯವರ ಕಡೆಗೂ ಮತ್ತು ಸಕ್ತಿಶಿಕ್ಷಣ ಕಮಿಟಿಯ ಕಡೆಗೂ ಕಳಿಸಿರುತ್ತದೆ. ಈ ಠರಾವುಗಳಿಗೆ ವಿರುದ್ಧ ಮತಗಳು ಬೀಳಲಿಲ್ಲ.

ಚಿಕ್ಕೆರೂರು.

ತಾ|| ೬-೧೦-೧೯೨೧ ನೇ ದಿವಸ ರಾತ್ರಿ ೮ ಘಂಟೆಗೆ ಚಿಕ್ಕೆರೂರು ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಮ|| ರಾ|| ರಾ|| ಶ್ರೀಮಂತ ಆಲೂರ ಲಿಂಗಪ್ಪಣ್ಣಾ ಕೂಬಿಹಾಳದ ಇವರ ಅಧ್ಯಕ್ಷತೆಯಕೆಳಗೆ ಸಭೆಯು ನಡೆದು ಮ|| ರಾ|| ರಾ|| ಸಾಗರದ ನ್ಯಾಸನಾಗಿ ಹೊಳೆಬಸಪ್ಪನವರು ಸಹಕಾರ ಮತ್ತೂ ಅಸಹಕಾರದ ತಾರತಮ್ಯದ ನಿಜಸ್ಥಿತಿಯನ್ನು ತಿಳಿಸಿ ಸದ್ಯದಸ್ಥಿತಿಯಲ್ಲಿ ಲಿಂಗಾಯತರೂ ಮತ್ತು ಬ್ರಾಹ್ಮಣೇತರ ಜನರೂ ಸಹಕಾರವನ್ನು ನಡೆಸುವುದೇ ಯೋಗ್ಯವೆಂತಲೂ ಸದ್ಯಕ್ಕೆ ಚಿಕ್ಕೆರೂರಲ್ಲಿ ಒಂದು ಸಾರ್ವಜನಿಕ ಲೈಬ್ರರಿಯು ಅವಶ್ಯಕವಾಗಿರುವುದೆಂತಲೂ ತಿಳಿಸಿದಮೇಲೆ ಚಿಕ್ಕೆರೂರ ಉದಾರ ಗೃಹಸ್ಥರಾದ ವೀರಪ್ಪ ಚನ್ನಬಸಪ್ಪ ದಂಡೂರ ಮಲ್ಲಪ್ಪ ಪ್ಯಾಟಿ ಚನವೀರಪ್ಪ ಅಜ್ಜಪ್ಪ ಯಣಿ ವೀರಪ್ಪ ಸ್ವಾದಪ್ಪ ಯಣಿ ಇವರಿಂದಲೂ ಮತ್ತು ನಮ್ಮ ವೈಶ್ಯ ಬಂಧುಗಳಾದ ಗೋಪಾಲಪ್ಪನವರು ಚನ್ನಗಿರಿ, ಮತ್ತು ಸೋಮಪ್ಪಣ್ಣಾ ಚನ್ನಗಿರಿ ಈ ಎಲ್ಲರ ಅಭಿಪ್ರಾಯದಿಂದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಮೃತ್ಯುಂಜಯಸ್ವಾಮಿಗಳವರ ಸ್ಮಾರಕಾರ್ಥವಾಗಿ ಶ್ರೀ ಮೃತ್ಯುಂಜಯಸ್ವಾಮಿ ಲೈಬ್ರರಿಯೆಂಬ ಹೆಸರಿನಿಂದ ಲೈಬ್ರರಿಯ ಸ್ಥಾಪನವಾಡಲ್ಪಟ್ಟಿತು. ಈ ಲೈಬ್ರರಿಗಾಗಿ ಅಧ್ಯಕ್ಷ ಮಹಾಶಯರಾದ ಶ್ರೀಮಂತ ಮ|| ಆಲೂರ ಲಿಂಗಪ್ಪಣ್ಣಾ ಕೂಬಿಹಾಳ ಇವರು ಈ ದಿವಸ ಐದು ರೂಪಾಯಿಗಳನ್ನು ಧರ್ಮಮಾಡಿದ್ದಾರೆ. ಇದರಂತೆ ನಮ್ಮ ಚಿಕ್ಕೇರೂರ ಬಂಧುಗಳು ಉದಾರತ್ವಯ ಕೊಟ್ಟು ಲೈಬ್ರರಿ ಚಿರಕಾಲ ಉಳಿಯುವಂತೆ ಮಾಡಲೆಂದು ಶ್ರೀ ಮೃತ್ಯುಂಜಯನನ್ನು ಪ್ರಾರ್ಥಿಸುತ್ತೇನೆ. ಅಧ್ಯಕ್ಷ ಮಹಾಶಯರ ಸೂಚನೆಯಂತೆ ಒಂದು ಸಹಕಾರ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಸಕ್ತಿಯಾದ ಪ್ರಾಥಮಿಕ ಶಿಕ್ಷಣದ ಬಗ್ಗೆ ವಿದ್ಯಾಖಾತೆಯ ಮಂತ್ರಿಗಳಕಡೆಗೂ ಗೌರ್ನರ ಕಡೆಗೂ ಸಕ್ತಿ ಶಿಕ್ಷಣದ ಬಗ್ಗೆ ಠರಾವು ನಕಲು ಕಳಿಸುವದಕ್ಕೆ ಪಾಸಾಯಿತು.

ಸೊಂಡೂರ.

ಇಲ್ಲಿಯ ಮಹಾರಾಜರವರ ಪ್ರಾರ್ಥನೆಯಂತೆ ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಭಸ್ಮರುದ್ರಾಕ್ಷಿಗಳನ್ನು ಆಶೀರ್ವಾದರೂಪವಾಗಿ ನಾಗನೂರು ಬೃಹನ್ಮಠದ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಕಡೆಯಿಂದ ಕಳುಹಿಸಿದ್ದರು. ಪಂಡಿತರು ತಾ|| ೨೩-೯-೨೧ರಲ್ಲಿ ಸೊಂಡೂರು ರಾಜಧಾನಿಗೆ ಆಗಮಿಸಿದರು. ಪಂಡಿತರ ಸಂಗಡ ಬಳ್ಳಾರಿ ಗಡಿಗಿ ರಾ|| ಚಿಕ್ಕವೀರಪ್ಪನವರು ರಾ|| ಗುಗ್ಗರಿ ಹುಚ್ಚಪ್ಪನವರು, ರಾ|| ಹಮ್ಮಿಗಿ ಶಾಂತಪ್ಪನವರು, ರಾ|| ಹಮ್ಮಿಗಿ ಪಾಟೀಲ ವಿರೂಪಾಕ್ಷಗೌಡರು, ರಾ|| ಧಾರವಾಡ ಮೆಣಸಿನಕಾಯಿ ಫಕ್ಕೀರಪ್ಪನವರು ಬಂದಿದ್ದರು. ಆ ದಿನ ಸಾಯಂಕಾಲ ೪ ಗಂಟೆಗೆ ಮಹಾರಾಜರು ಪಂಡಿತರನ್ನು ತಮ್ಮ ರಾಜವಾಡೆಗೆ ಕರೆಯಿಸಿಕೊಂಡು ಯಥೋಚಿತವಾಗಿ ಸತ್ಕರಿಸಿ ಅವರ ಹಸ್ತದಿಂದ ಭಸ್ಮರುದ್ರಾಕ್ಷಿಗಳನ್ನೂ ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋತ್ಪತ್ತಿಯ ಭಾವಚಿತ್ರವನ್ನೂ ಹಾಗೂ ಜಗದ್ಗುರುಗಳವರ ಆಶೀರ್ವಾದ ಪತ್ರಿಕೆಯನ್ನೂ ಒಳ್ಳೇ ಭಕ್ತಿಪೂರ್ವಕ ಗ್ರಹಿಸಿದರು. ಆ ಮೇಲೆ ಪಂಡಿತರು ಮಹಾರಾಜರಿಗೂ ಹಾಗೂ ಮಹಾರಾಣಿಯವರಿಗೂ ಭಸ್ಮರುದ್ರಾಕ್ಷಧಾರಣದ ಮಹಿಮೆಯನ್ನೂ ಹಾಗೂ ವೀರಶೈವ ಮತಸ್ಥಾಪಕರ ಸ್ವರೂಪವನ್ನೂ ಮಹಾರಾಷ್ಟ್ರ ಭಾಷೆಯಿಂದ ಹೇಳಿದರು. ಮರುದಿವಸ ರಾಜಧಾನಿಯಿಂದ ೬ ಮೈಲು ದೂರವಿರುವ ಲೋಕಪ್ರಸಿದ್ಧವಾದ ಶ್ರೀ ಕುಮಾರಸ್ವಾಮಿಯ ದರ್ಶನಕ್ಕೆ ಹೋಗುವಬಗ್ಗೆ ಸರ್ವೋತ್ತಮವಾದ ವ್ಯವಸ್ಥೆಯನ್ನು ಇಡಿಸಿದ್ದರು. ಸೃಷ್ಟಿಸೌಂದರ್ಯದಲ್ಲಿ ಕಾಶ್ಮೀರ ಪ್ರದೇಶವನ್ನು ಮರೆಯಿಸತಕ್ಕಂಥ ಶ್ರೀ ಕುಮಾರಸ್ವಾಮಿಯ ಸ್ಥಾನದಲ್ಲಿ ಸರ್ವರೂ ಸ್ನಾನ ಶಿವಾರ್ಚನಾದಿಗಳನ್ನು ತೀರಿಸಿಕೊಂಡು ದರ್ಶನವನ್ನು ತೆಗೆದುಕೊಂಡರು. ಅತಿ ಪ್ರಾಚೀನವಾದ ಶ್ರೀ ಕುಮಾರಸ್ವಾಮಿಯ ಮಸ್ತಕದಲ್ಲಿಯೂ ಹಾಗೂ ಶ್ರೀ ಪಾರ್ವತೀದೇವಿಯ ಹಸ್ತದಲ್ಲಿಯೂ ಶೋಭಿಸುತ್ತಿರುವ ಲಿಂಗಧಾರಣವನ್ನು ಕಂಡು ಪಂಡಿತರು ಆ ಸ್ಥಾನದ ಮಹಿಮೆಯನ್ನು ಅತಿಶಯವಾಗಿ ಬಣ್ಣಿಸಿದರು. ಪುನಃ ೨೫ನೆ ತಾರೀಖಿನ ದಿವಸ ಮಹಾರಾಜರವರ ಅಧ್ಯಕ್ಷತೆಯ ಕೆಳಗೆ ಸತ್ರದಲ್ಲಿ ಸಭೆಗೂಡಿತು. ಸಭೆಗೆ ನೂರಾರು ಜನ ಬ್ರಾಹ್ಮಣಾಧಿಕಾರಿಗಳೂ ಹಾಗೂ ವೀರಶೈವ ಪ್ರಮುಖರೂ ಆಗಮಿಸಿದ್ದರು. ಸಭೆಯಲ್ಲಿ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೊದಲು ಸ್ವಮತ ಪರಮತ ಸಿದ್ಧಾಂತಸ್ವರೂಪಗಳನ್ನು ತೋರಿಸಿ ತದನಂತರ ವೀರಶೈವ ಮತಸ್ಥಾಪಕರಾದ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಅವತಾರವನ್ನು ಆ ಮಹನೀಯರು ಲೋಕಕ್ಕೆ ಮಾಡಿದ ಭಸ್ಮರುದ್ರಾಕ್ಷ-ಲಿಂಗಧಾರಣಾದಿಗಳ ಮಹಿಮೆಯನ್ನೂ ವರ್ಣಿಸಿದರು. ಪೂರ್ವದಲ್ಲಿ ಮನುಸ್ವಾದಿ ಮಹಾದೇವತೆಗಳೂ ಕೂಡ ಲಿಂಗಧಾರಣವನ್ನು ಮಾಡಿಕೊಂಡಿದ್ದರೆಂದೂ ಇದಕ್ಕೆ ಭರತಖಂಡದಲ್ಲಿರತಕ್ಕ ಅತಿಪ್ರಾಚೀನತರಗಳಾದ ಪಂಢರಪುರದ ವಿಠೋಬ ಕೊಲ್ಹಾಪುರ ಮಹಾಲಕ್ಷ್ಮಿ-ತುಳಜಾಪೂರ ಭವಾನಿ-ರಾಜಕುಲದೇವತೆಯಾದ ಕುಮಾರಸ್ವಾಮಿ ಮೊದಲಾದ ದೇವತೆಗಳ ಮಸ್ತಕದಲ್ಲಿ ಲಿಂಗಧಾರಣವಿರುವದೇ ಬಲವಾದ ಸಾಕ್ಷಿಯೆಂದೂ ಹೇಳಿದರು. ಮಹಾರಾಜರವರು ಈ ಯಾವತ್ತು ವಿಷಯಗಳನ್ನು ಕೇಳಿ ಸಂತುಷ್ಟಚಿತ್ತರಾಗಿ ಪಂಡಿತರ ಗುಣಕಥನವನ್ನು ಮಾಡಿದರು.

ವಿಪತ್ಕಾಲದಲ್ಲಿ ಸಮಯೋಚಿತೌದಾರ್ಯವು.

ತಮ್ಮ ಲೋಕಪ್ರಸಿದ್ಧವಾದ ಪತ್ರದಲ್ಲಿ ನನ್ನ ಅಲ್ಪಲೇಖನಕ್ಕೆ ಸ್ಥಳ ದೊರೆಯಬೇಕೆಂದು ವಿನಯದಿಂದ ಪ್ರಾರ್ಥಿಸುವೆನು. ಸದ್ಯಃ ಜಗತ್ತಿನ ಬಹು ಭಾಗಗಳಲ್ಲಿ ತನ್ನ ಸರ್ವಾಧಿಕಾರವನ್ನು ನೆಲೆಗೊಳಿಸಿ ಸಾಮ್ರಾಜ್ಯಪ್ರಭುವಿನಂತೆ ಶಾಸನಮಾಡುತ್ತಿರುವ ಕ್ಷಾಮಮಹಾರಾಜನ ದೀರ್ಘಕಾಲದ ಆಳಿಕೆಯಲ್ಲಿ ಬಡವರೂ, ಬಲ್ಲಿದರೂ ತಳಮಳಿಸುತ್ತಿರುವರು. ಅದರಲ್ಲಿ ವಿಜಾಪೂರ ಡಿಸ್ಟ್ರಿಕ್ಟು ಈ ಮಹಾರಾಜನ ರಾಜಧಾನಿಯಾಗಿರುವುದು. ಅಂದಮೇಲೆ ಕೇಳುವದೇನು? ಬಡವರಗೋಳು ಕೇಳುವರಾರು? ಮಹಾರಾಜನ ಪ್ರಚಂಡಶಾಸನದಿಂದ ಎಷ್ಟೋ ಬಡಜನರು ಅಕಾಲಶಿವರಾತ್ರಿ ವ್ರತವನ್ನಾಚರಿಸುತ್ತಿರುವರು. ಅಲ್ಲದೆ ವಸ್ತ್ರಾದಿಗಳಿಲ್ಲದೆ ಮರ್ಯಾದೆಯರಕ್ಷಣೆಯಲ್ಲಿ ಭಯಚಕಿತರಾಗಿರುವರು. ಇಂಥ ಘೋರಪ್ರಸಂಗದಲ್ಲಿ “ಯದ್ದದಾತಿಯದಶ್ನಾತಿ ತದೇವಧನಿನೋಧನಂ....ಧನಾಢ್ಯರು ಶಾಸ್ತ್ರೀಯವಾಗಿ ಯಾವದನ್ನು ಕೊಡುವರೋ ಯಾವದನ್ನು ಭೋಗಿಸುತ್ತಿರುವರೋ ಅದೇ ಅವರ ನಿಜವಾದ ಸಂಪತ್ತು....ಎನ್ನುವ ನೀತಿಯಮಾತಿನ ನಿಜವಾದ ರಹಸ್ಯವನ್ನು ಅರಿತು ಸಮಯೋಚಿತವಾದ ಔದಾರ್ಯವನ್ನು ತೋರಿಸಿ ಜನಸ್ತುತಿಗೂ ದೇವಾನುಗ್ರಹಕ್ಕೂ ಪಾತ್ರರಾದ ಮಲ್ಲನಗೌಡರೇ ನೀವೇ ಧನ್ಯರು ಧನ್ಯರು. ಇವರು ವಿಜಾಪೂರ ಡಿ|| ಬಬಲೇಶ್ವರಗ್ರಾಮದ ಪಾಟೀಲರು. ಇವರು ವಯಸ್ಸಿನಿಂದ ಸಣ್ಣವರಿದ್ದರೂ ಗುಣಗಳಿಂದ ದೊಡ್ಡವರಿರುವರು. ಈ ಶ್ರೀಮಂತರ ಧನವ್ಯಯವು ಎಷ್ಟು ಪ್ರಶಂಸನೀಯವಾಗಿರುವದೆನ್ನುವದು ಮುಂದಿನ ಉದಾಹರಣೆಗಳಿಂದ ಗೊತ್ತಾಗುತ್ತದೆ, ಬಡಜನರು ಕ್ಷಾಮತಾಪದಿಂದ ತಪ್ತರಾಗಿರುವದನ್ನು ನೋಡಿ ಇವರು ಕನಿಕರಪಟ್ಟು ತಾ|| ೨-೩-೪ ಜುಲೈ ೧೯೨೧ ಇಸವಿಯವರೆಗೆ ಬಬಲೇಶ್ವರ ಮತ್ತು ಸುತ್ತುಮುತ್ತಿನ ಹಳ್ಳಿಗಳಿಗೆಹೋಗಿ ಬಡಜನರಿಗೆ ಸೀರೆ, ಕುಪ್ಪಸ, ಧೋತ್ರ, ಅಂಗಿ, ರುಮಾಲು ಮೊದಲಾದ ವಸ್ತ್ರಗಳನ್ನೇ ಅಲ್ಲದೆ ಎಲ್ಲಾ ಜನರಿಗೂ ಎರಡುದಿವಸ ಸಾಲುವಷ್ಟು ಅನ್ನಸಾಮಗ್ರಿಗಳನ್ನು ಕೊಟ್ಟು ಬಡಜನರಲ್ಲಿ ನಿಸ್ಸೀಮ ಕರುಣಾಪ್ರೇಮವನ್ನು ತೋರಿಸಿದ್ದಕ್ಕಾಗಿ ಬಡಜನರೆಲ್ಲರೂ ಶ್ರೀಮಂತರ ವಿಷಯವಾಗಿ ಅತ್ಯಂತ ಕೃತಜ್ಞತಾಬುದ್ಧಿಯುಳ್ಳವರಾಗಿದ್ದಾರೆ. ಅಲ್ಲದೆ ೧೯೧೮ ನೆ ಇಸವಿಯಲ್ಲಿ ದೇಶಮಧ್ಯದಲ್ಲಿ ಇಂಫ್ಲುಯಂಜಾ ರೋಗವು ಹುಟ್ಟಿದ್ದಾಗ ಜನರಕಷ್ಟಕ್ಕೆ ಪಾರಾವಾರವೇ ಇದ್ದಿಲ್ಲ. ಒಂದುಮಗ್ಗುಲಿಗೆ ಕ್ಷಾಮಬಾಧಾ ಮತ್ತೊಂದುಮಗ್ಗುಲಿಗೆ ರೋಗಬಾಧೆ ಈ ಉಭಯ ಬಾಧೆಗಳ ಇಕ್ಕಟ್ಟಿನೊಳಗೆ ಸಿಕ್ಕ ಅನನ್ಯಗತಿಕರಾದ ದರಿದ್ರಜನರ ಮೇಲೆ ತೋರಿಸಿದ ಇವರ ಪ್ರಾಣಿದಯಾಪರತ್ವವಾದರೂ ಸ್ತುತ್ಯವೇ ಸರಿ. ಯಾಕಂದರೆ ಅಂಥಪ್ರಸಂಗದಲ್ಲಿ ಸ್ವಧನವ್ಯಯದಿಂದ ಔಷಧಾದಿಗಳನ್ನು ತರಿಸಿ ಸ್ವತಃ ರೋಗಿಗಳನ್ನುಪಚರಿಸಿದ ಛಾಯೆಯು ಇನ್ನೂ ಬಡಜನರ ಹೃತ್ಪಟಲದಮೇಲೆ ಅಚ್ಚೊಳಿಯದೆ ಇತ್ತು. ಇಷ್ಟರಲ್ಲಿಯೇ ಈಗಿನ ಮಹೌದಾರ್ಯದಿಂದ ಬಡವರ ಸಂತೋಷವು ದ್ವಿಗುಣವಾಯಿತು.

ಗಜೇಂದ್ರಗಡದ ಮಹಾಂತಶಿವಯೋಗಿ ವಾಚನಾಲಯ.

ಗಜೇಂದ್ರಗಡ ಸಂಸ್ಥಾನದ ಚೌಕಿವಿರಕ್ತಮಠದ ಮಹಾಂತಶಿವಯೋಗಿ ವಾಚನಾಲಯದಲ್ಲಿ ಇದೇ ಆಶ್ವೀಜ ಶುದ್ಧ ೯ ಸೋಮವಾರ ಸಾಯಂಕಾಲ ೫ ಘಂಟೆಗೆ ಪ್ರಚಂಡವಾದ ಸಾರ್ವಜನಿಕ ಸಭೆಯು ನೆರೆದಿತ್ತು. ಸಭಾಮಂಟಪವು ನಾನಾತರದ ನಕ್ಷೆಗಳಿಂದಲೂ ಅನೇಕ ಮಹನೀಯರ ಭಾವಚಿತ್ರಗಳಿಂದಲೂ ಬಹು ಸುಂದರವಾಗಿ ಕಂಗೊಳಿಸುತ್ತಿತ್ತು. ಸಭೆಯ ಅಗ್ರಭಾಗದ ಸಿಂಹಾಸನದಮೇಲೆ ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳವರ ಹಾಗು ಹಾಲಕೆರೆಯ ಶ್ರೀಮನ್ನಿರಂಜನ ಸ್ವಾಮಿಗಳವರ ಭಾವಪಟಗಳೆರಡು ಇಡಲ್ಪಟ್ಟಿದ್ದವು. ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವಬಗ್ಗೆ ಮ|| ರಾ|| ರುದ್ರಪ್ಪ ಸಿದ್ಧಪ್ಪ ಕೊಟಗಿ ಇವರು ಶ್ರೀಮನ್ನಿರಂಜನ ಸದಾಶಿವದೇವರವರಿಗೆ ವಿನಂತಿಮಾಡಿಕೊಳ್ಳಲು ಸರ್ವಾನುಮತದಿಂದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅನಂತರ ವಾಚನಾಲಯದವರ ಆಮಂತ್ರಣದ ಮೇರೆಗೆ ಬಂದಿದ್ದ ಸೂಡಿಯ ಹೆಡ್‌ಮಾಸ್ತರರಾದ ಮ|| ರಾ|| ರಾ|| ಲಿಂಗಪ್ಪ ಮಾಸ್ತರರವರು “ಧರ್ಮ” ಹಾಗು “ವಾಚನಾಲಯ” ಗಳ ಬಗ್ಗೆ ೧|| ತಾಸಿನವರೆಗೆ ಸಭಿಕರ ಮನಸ್ಸಿನಮೇಲೆ ಸುಪರಿಣಾಮವಾಗುವಂತೆ ಸರಸವಾಗಿ ವ್ಯಾಖ್ಯಾನಮಾಡಿದರು. ಆಮೇಲೆ ಮಿ|| ಕೊಟಗಿ ಇವರು ವಾಚನಾಲಯದ ಸಾದ್ಯಂತವೃತ್ತಾಂತವನ್ನು ಸಭಿಕರ ಮುಂದಿಟ್ಟು ಅದರ ಊರ್ಜಿತಾವಸ್ಥೆಯಬಗ್ಗೆ ಮಾಡತಕ್ಕ ಕಾರ್ಯಗಳನ್ನು ವಿವರಿಸಿಹೇಳಿದರು. ನಂತರ ವಾಚನಾಲಯದವರ ಆಮಂತ್ರಣದಮೇರೆಗೆ ಬಂದಿದ್ದ ವೇದಮೂರ್ತಿಗಳಾದ ಶಾಂತವೀರಾರ್ಯರು ನಿಶಾನಿಮಠ ದಾವಣಗೆರೆ ಇವರು ವಾಚನಾಲಯವು ಅವಿಚ್ಛಿನ್ನವಾಗಿ ನಡಕೊಂಡುಹೋಗುವ ಬಗ್ಗೆ ಪೌರ್ವಾತ್ಯ ಪಾಶ್ಚಿಮಾತ್ಯರ ಉದಾಹರಣೆಗಳೊಂದಿಗೆ ಶ್ರೋತೃವೃಂದಕ್ಕೆ ಸ್ಫೂರ್ತಿಯುಂಟಾಗುವಂತೆ ಆವೇಶಯುಕ್ತ ಭಾಷಣಮಾಡಿದರು. ಆಮೇಲೆ ಆ ವಾಚನಾಲಯವು ಲೋಕಪ್ರಿಯವಾಗಿ ನಡೆಯುವಬಗ್ಗೆ ಇಲ್ಲಿಯ ಕನ್ನಡಶಾಲೆಯ ಹೆಡ್‌ಮಾಸ್ತರರಾದ ಚನಬನಹಳ್ಳಿ ಮಾಸ್ತರರವರು ಭಾಷಣಮಾಡಿದರು. ವೇ|| ಶಾಂತವೀರಾರ್ಯರು ನಿಶಾನಿಮಠ ದಾವಣಗೆರೆ ಇವರು ಯಾವುದಾದರೊಂದು ಕಾರ್ಯವು ಊರ್ಜಿತಸ್ಥಿತಿಗೆ ಬರಬೇಕಾದರೆ ಅದರ ಸಾಂಪತ್ತಿಕಸ್ಥಿತಿಯು ತಕ್ಕಷ್ಟು ತೃಪ್ತಿಕರವಾಗಿ ಇದ್ದೇತೀರಬೇಕು ಎಂಬ ವಿಷಯವನ್ನು ಅನೇಕ ಉದಾಹರಣೆಗಳೊಂದಿಗೆ ಹೇಳಿ ತಮ್ಮ ಉದಾರವಾದ ಹಸ್ತವನ್ನು ಮುಂದೆಮಾಡುವ ಬಗ್ಗೆ ಸೂಚಿಸಲು ತತ್‌ಕ್ಷಣದಲ್ಲಿಯೇ ಅಧ್ಯಕ್ಷರು ೨೫ ರೂಪಾಯಿಗಳನ್ನು ಆಶೀರ್ವದಿಸಿದರು. ನಂತರ ಉಳಿದ ಸಭಿಕರೆಲ್ಲರೂ ತಮ್ಮ ಶಕ್ತ್ಯನುಸಾರ ಧನಸಹಾಯ ಮಾಡಲು ೧೫೫ ರೂಪಾಯಿಗಳ ವಾರ್ಷಿಕ ವರ್ಗಣಿಯಾಯಿತು. ಇನ್ನೂ ಕೂಡುವವರೆಷ್ಟೋ ಮಂದಿ ಹಾಗೇ ಉಳಿದರು. ಅನಂತರ ಮಿ|| ಕೊಟಗಿ ಇವರು ಆಮಂತ್ರಣದಮೇರೆಗೆ ಆಗಮಿಸಿದ ವ್ಯಾಖ್ಯಾತರಿಂದಾದ ಪ್ರಯೋಜನದಬಗ್ಗೆ ಅವರ ಆಭಾರವನ್ನು ಹಾಗೂ ಅಧ್ಯಕ್ಷರ ಮತ್ತು ಮಹಬೂಬ ಸಬ್ ಇನ್ಸ್‌ಪೆಕ್ಟರ್ ಕಲಿಕಟ್ಟಿ ಇವರ ಆಭಾರವನ್ನು ಮನ್ನಿಸಿದರು. ಅನಂತರ ಸಾರ್ವಭೌಮ ಪಂಚಮಜಾರ್ಜರವರಿಗೂ ಹಿಂದೂಸ್ಥಾನಕ್ಕೆ ಬಿಜಯಂಗೈಯುತ್ತಲಿರುವ ಪ್ರಿನ್ಸ್ ಆಫ್ ವೇಲ್ಸರವರಿಗೂ ಸದಾ ಭಗವಂತನು ಜಯವನ್ನುಂಟುಮಾಡಲೆಂಬ ಜಯಘೋಷದೊಡನೆ ಸಭೆಯ ಪರಿಸಮಾಪ್ತಿಕಾರ್ಯವನ್ನು ಮಾಡಲು ಹಾರ ತುರಾಯಿಗಳು ಹಂಚಲ್ಪಟ್ಟು ಸಭಾ ವಿಸರ್ಜನೆಯಾಯಿತು.

೧೯೨೧ ನೆಯ ಇಸವಿ ನವಂಬರ್ ತಾ|| ೧೩ರಿಂದ ೧೯೨೧ ನೆಯ ನವಂಬರ್ ತಾ|| ೧೯ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೪ನೆಯ ದುರ್ಮತಿನಾಮ ಸಂವತ್ಸರದ ಕಾರ್ತಿಕಶುದ್ಧ ತ್ರಯೋದಶಿಯಿಂದ ಕಾರ್ತಿಕ ಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಮ್ಮ ಮಾಸ
13	[1]ಭಾನು	ತ್ರಯೋ	30-0	ರೇವ	11-49	28
14	[2]ಸೋಮ	ಚತು	31-19	ಅಶ್ವಿ	14-55	29
15	[3]ಮಂಗಳ	ಪೌರ್ಣ	30-20	ಭರ	6-44	30
16	[4]ಬುಧ	ಪಾಡ್ಯ	30-5	ಕೃತ್ತಿ	17-18	1
17	[5]ಗುರು	ಬಿದಿ	27-45	ರೋಹಿ	16-45	2
18	ಶುಕ್ರ	ತದಿ	24-15	ಮೃಗ	15-6	3
19	ಶನಿ	ಚೌತಿ	19-52	ಆರ್ದ್ರಾ	12-34	4

(1) ಪ್ರದೋಷಃ, ವೈಕುಂಠಚತುರ್ದಶಿ. (2) ಕಾರ್ತಿಕಸೋಮವಾರಂ. (3) ವ್ಯಾಸಪೂರ್ಣಿಮಾ, ಧರ್ಮಸ್ಥಳದಲ್ಲಿ ದೀಪೋತ್ಸವಃ. (4) ವಿಷ್ಣುದೀಪಃ. (5) ನಂಜನಗೂಡು ಶ್ರೀಕಂಠೇಶ್ವರಸ್ವಾಮಿರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೮) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ನವಂಬರ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೪೬

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

SREE SITHARAGHAVA VAIDYASALA

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
44 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಗೈರೆಗಳು ಮೊದಲಾದ ಮಾಲುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲು ಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0 0
	ಬಿಡಿಮಣಿಗಳು 1ಕ್ಕೆ ಕ್ರಯ		
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
38 ಕಂಪನಿ, ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವೃಷಪಂಚಕ	೦— ೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 27

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

(ಈ ಕೆಳಗಣ ದರದಲ್ಲಿ ಪೋಸ್ಟೇಜು ಸೇರಿಲ್ಲ.)

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಕಾಗದದ ಬೆಲೆಯು ತಗ್ಗಾಗಿದ್ದರೂ ಅನೇಕರ ಕೋರಿಕೆಯ ಮೇರೆಗೆ ಈ ಗ್ರಂಥದ ದ್ವಿತೀಯ ಮುದ್ರಣವನ್ನು ಮಾಡಿಸಿ ಪೂರೈಸಿರುವೆವು. ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦ ಅಂಚೆವೆಚ್ಚ ಬೇರೆ.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡುದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ.

ಪಂಚಶ್ಲೋಕೀ.—ಬೆಲೆ ೧-೦-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾ.

ಸೌಂದರಪುರಾಣಂ.—೧-೨-೦; ಸಟೀಕಶತಕತ್ರಯ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆ. ಸ್ತುತಿಮುಕ್ತಾವಳಿ ೪ ಆ. ರಕ್ಷಾಶತಕ ೨ ಆ. ಶಂಕರಲಿಂಗಕಂದಂ ೧ ಆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ಅಂಚೆವೆಚ್ಚ ಬೇರೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಈಗ ತಾನೆ ಅಚ್ಚಾಗಿ ಕ್ರಯಕ್ಕೆ ಸಿದ್ಧವಾಗಿದೆ.

ಮೈಸೂರು ಸೀಮೆಯಲ್ಲಿ ಕೈತೋಟಗಳ ವ್ಯವಸಾಯ.

ಈ ಪುಸ್ತಕವು ಹಿಂದೆ ಲಾಲ್‌ಬಾಗ್ ಸೂಪರಿಂಟೆಂಡೆಂಟರಾಗಿದ್ದ ಮಿ|| ಜಿ. ಕ್ರಾಮಿರಾನ್ ಸಾಹೇಬರಿಂದ ಇಂಗ್ಲೀಷು ಭಾಷೆಯಲ್ಲಿ ರಚಿತವಾಗಿ ಮೈಸೂರು ಸಂಪದಭ್ಯುದಯ ಸಮಾಜದ ವ್ಯವಸಾಯ ಶಾಖೆಯವರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಲ್ಪಟ್ಟಿರುತ್ತದೆ. ತರಕಾರಿ ಬೆಳೆಯತಕ್ಕವರಿಗೂ ಫಲಪುಷ್ಪ ವ್ಯವಸಾಯಗಾರರಿಗೂ ಅತ್ಯಂತ ಉಪಯೋಗವಾದದ್ದು. ಕ್ರಯ ಒಂದು ರೂಪಾಯಿ ಎಂಟಾಣೆ.

ಈ ಪುಸ್ತಕವು ದೊರೆಯುವ ಸ್ಥಳ.

3 ಕ್ಯೂರೇಟರ್, ಗೌರ್ನಮೆಂಟ್ ಬುಕ್ ಡಿಪೊ,
ಬೆಂಗಳೂರು ಸಿಟಿ.

NOTICE.

The Star Tileries Ltd., Mysore.

Notice is hereby given that the Registered Office of the above Company has been changed to No. 321 Sayaji Rao Road, Mysore, from 389 Chamarajpet, Mysore.

MYSORE, **M. C. MALLAPPA,**
Dated 19-11-21. **For the Managing Agents.**

ಭರತಖಂಡದ ವೃತ್ತಾಂತಗಳು.

ಮದರಾಸು ವಿಶ್ವವಿದ್ಯಾಲಯ ಪರೀಕ್ಷೆಗಳನ್ನು ಮಾರ್ಚಿ ಅಥವಾ ಏಪ್ರಿಲ್ ತಿಂಗಳಲ್ಲಿ ಒಂದುಸಲ, ನವಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಒಂದುಸಲ ಹೀಗೆ ೨ ಆವೃತ್ತಿ ನಡೆಯಿಸಲಿಕ್ಕೆ ಅಲ್ಲಿಯ ಸೆನೇಟ್ ಸಭೆಯಲ್ಲಿ ಒಪ್ಪಿತವಾಯಿತು.

ಇಂಡ್ಯಾಸರ್ಕಾರದವರು ಸೈನ್ಯಗಳಿಗಾಗಿ ಆಸ್ಟ್ರೇಲಿಯಾದಿಂದ ೧೬೪೦೦ ಟನ್ ಗೋದುಮೆಯನ್ನು ಈ ದೇಶಕ್ಕೆ ತರಿಸಿಕೊಂಡರು. ಇದಲ್ಲದೆ ಬೇರೆ ಬೇರೆ ವರ್ತಕಸಂಘಗಳವರು ಕೂಡ ಪ್ರಜೆಗಳಿಗೆ ಮಾರಾಟಕ್ಕಾಗಿ ೮ ಹಡಗುಗಳ ತುಂಬಾ ತರಿಸುತ್ತಲಿದ್ದಾರಂತೆ. ಇದರಲ್ಲಿ ಕೆಲಭಾಗವು ಆಗಲೇ ಬಂದಿದೆ. ಈ ದೇಶದಲ್ಲಿ ಗೋದುವೆಯ ಬೆಳಸು ಕಡಿಮೆಯಾದುದೇ ಇದಕ್ಕೆ ಕಾರಣ. ಮೈಸೂರಿನಲ್ಲಿ ರೂಪಾಯಿಗೆ ೩ ಸೇರಿನಂತೆ ಗೋದುವೆಯ ಮಾರಾಟವಾಗುತ್ತಿದೆ.

ಕಳೆದ ತಾ|| ೫ರಲ್ಲಿ ಕಲ್ಕತ್ತಾಕ್ಕೆ ಸೇರಿದ ಹೌರಾದಲ್ಲಿ ಬಯಲಿನೊಳಗೆ ಒಂದು ದೊಡ್ಡ ಸಭೆ ಜರುಗಿತು. ವಿದೇಶ ವಸ್ತ್ರ ಬಹಿಷ್ಕಾರ ಮೊದಲಾದ ವಿಷಯಗಳ ಮೇಲೆ ಉಪನ್ಯಾಸಗಳಾದ ಬಳಿಕ ಸಭಿಕರು ಗಾಂಧೀಕಿಜಯ್, ಅಲ್ಲಾಹೋ ಅಕ್ಬರ್, ಮಹಮ್ಮದಾಲಿ ಶೌಕತಾಲೀಕು ಜಯ್ ಎಂದು ಮೊದಲಾಗಿ ಉದ್ಘೋಷಮಾಡಿದರು. ಹೌರಾಜಾಯಿಂಟ್ ಮೇಜಿಸ್ಟ್ರೇಟರೂ ಪೋಲೀಸ್ ಅ|| ಸೂಪರಿಂಟೆಂಡೆಂಟರೂ ಬಂದರು. ಪ್ರಜೆಗಳನ್ನು ಚದುರಿಹೋಗಲಿಕ್ಕೆ ಆಜ್ಞಾಪಿಸಿದರು. ಕೆಲರು ಮಾತ್ರ ಅದಕ್ಕೆ ವಿಧೇಯರಾಗಿ ಹೊರಟುಹೋದರು. ಉಳಿದವರು ಅವಿಧೇಯರಾಗಿ ಪೋಲೀಸ್ ಅ|| ಸೂಪರಿಂಟೆಂಡೆಂಟರನ್ನು ದೊಣ್ಣೆಯಿಂದ ಹೊಡೆದರು. ಪೋಲೀಸರು ನುಗ್ಗಿ ಜನರನ್ನೆಲ್ಲಾ ಚದರಿಸಿದರು. ಒಬ್ಬಿಬ್ಬರನ್ನು ಹಿಡಿದು ಠಾಣಕ್ಕೆ ಸೇರಿಸಿದರು. ಕೂಡಲೇ ನಾಲ್ಕು ದಿಕ್ಕಿನಿಂದಲೂ ಖಿಲಾಫತ್ ಸ್ವಚ್ಛಂದ ಸೇವಕರು ಬಂದು ಪೋಲೀಸ್ ಠಾಣದ ಮೇಲೆ ಇಟ್ಟಿಗೆಗಳನ್ನು ಬೀರಿದರು. ಪೋಲೀಸರನ್ನು ದೊಣ್ಣೆಗಳಿಂದ ಹೊಡೆದರು. ಆಗ ಪೋಲೀಸರು ತುಪಾಕಿ ಗುಂಡುಗಳನ್ನು ಪ್ರಯೋಗಿಸಿದರು. ಒಬ್ಬಪೋಲೀಸನು ಗುಂಪಿನವರ ಏಟುತಿಂದು ಆಸ್ಪತ್ರೆಯಲ್ಲಿ ಆ ರಾತ್ರಿಯೇ ಸತ್ತನು. ಇನ್ನೊಬ್ಬನು ಚಿಕಿತ್ಸೆಯಲ್ಲಿದ್ದಾನೆ. ಖಿಲಾಫತ್ ಸ್ವಚ್ಛಂದ ಸೈನಿಕರಲ್ಲೂ ಒಬ್ಬನು ಸತ್ತನಂತೆ. ಪೋಲೀಸರು ೧೧ ಮಂದಿಗಳನ್ನು ಹಿಡಿದು ವಿಚಾರಣೆಗೆ ಗುರಿಪಡಿಸಿದ್ದಾರೆ. ಈಚೆಗೆ ಗೂರ್ಖಾಸೈನಿಕರು ಪಟ್ಟಣದಲ್ಲೆಲ್ಲಾ ನಿಂತು ಗದ್ದಲ ನಡೆಯದಂತೆ ನೋಡಿಕೊಂಡರು.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ನವಂಬರ್ ತಾ|| ೨೦ ನೆಯ ಭಾನುವಾರ.

ಶ್ರೀ ಯುವಸಾರ್ವಭೌಮರ ಆಗಮನ.

ಮಹನೀಯರಾದ ಎಡ್ವರ್ಡ್ ನಾಮಾಂಕಿತ ಆಂಗ್ಲಯುವಸಾರ್ವಭೌಮರವರು (H. H. ಪ್ರಿನ್ಸ್ ಆಫ್ ವೇಲ್ಸ್, ಕೆ. ಜಿ.ಎಂ.ಸಿ. ಯವರು) ಕಳೆದ ತಾ|| ೧೭ನೆ ಗುರುವಾರ ಭರತಖಂಡದ ಹೆಬ್ಬಾಗಿಲೆನಿಸಿರುವ ಬೊಂಬಾಯಿ ಪಟ್ಟಣಕ್ಕೆ ದಯಮಾಡಿಸಿ ಸಂದರ್ಶನವನ್ನಿತ್ತರು. ಹಿಂದೆ ಇದೇ ಪಟ್ಟಣಕ್ಕೆ ಸಾರ್ವಭೌಮರು ದಯಮಾಡಿಸಿದ್ದಾಗ್ಗೆ ಎಷ್ಟು ಶ್ಲಾಘನೀಯಗಳಾದ ಅಲಂಕಾರಗಳನ್ನು ಮಾಡಿದ್ದರೋ ತದ್ವತ್ತು ಈಗಲೂ ಮುಖ್ಯ ವೀಧಿಗಳನ್ನೂ ಸಮುದ್ರತೀರವನ್ನೂ ಅವರ ಬಿಡದಿಯ ಭವನವನ್ನೂ ಬಹು ಸುಂದರವಾಗಿ ಅಲಂಕರಿಸಿರುವರು. ವೈಸ್‌ರಾಯಿ ದಂಪತಿಗಳೂ ಮುಖ್ಯ ಸೇನಾಪತಿಗಳೂ ಪರಿವಾರ ಸಮೇತ ತಾ|| ೧೭ ರಲ್ಲೇ ಬೊಂಬಾಯಿಗೆ ಬಂದು ಸೇರಿದ್ದರು. ಅಲ್ಲದೆ ಯುವಸಾರ್ವಭೌಮರನ್ನು ಸ್ವಾಗತಿಸುವುದಕ್ಕಾಗಿ ಗ್ವಾಲಿಯರ್, ಕೊಲ್ಲಾಪುರ, ಜೋಧಪುರ, ಉದಯಪುರ, ಪಾಟಿಯಾಲಾ, ಧಾರ್, ಬೋಲ್ಪುರ, ರಟ್ಲಾಂ, ಬಿದಾರ್, ಜಯಪುರ, ಜುನಘಡ, ನವನಗರ್, ಭಾವನಗರ್, ರಾಜಪಿಪ್ಲ, ಮಯೂರ್‌ಭಂಜ್ ಮೊದಲಾದ ಸಂಸ್ಥಾನಗಳ ಮಹಾರಾಜರೂ, ಬಿಲಾಸಪೂರ್, ರಾಧಾನಪೂರ್, ಜಾಂಜೀರಾ, ಬಾಸೋಹರ್, ಮೌರ್ವಿ, ಪಾಲಿಟಾನಾ, ಲಿಮ್ಡಿ, ರಾಜಕೋಟೆ, ವಧ್ವಾನ್, ಪಾಲನ್ಪೂರ್ ಮೊದಲಾದ ಅನೇಕ ಸಂಸ್ಥಾನಗಳ ರಾಜರೂ ನವಾಬರುಗಳೂ ಸುಲ್ತಾನರೂ, ಜಮಖಂಡಿ, ಅಕ್ಕಲಕೋಟೆ, ಸಾವಂತವಾಡಿ, ಸಾಂಗ್ಲಿ ಮೊದಲಾದ ಪಾಳೆಯಗಾರರೂ ಗುಜರಾತ್ ದರ್ಬಾರ್ ಸರದಾರರುಗಳೂ ಸಹ ದಯಮಾಡಿಸಿರುವುದರಿಂದ ಮೊದಲೇ ಅಮರಾವತಿಯಂತಿರುವ ಬೊಂಬಾಯಿ ಪಟ್ಟಣದ ಶೋಭೆಯು ಮತ್ತಷ್ಟು ಹೆಚ್ಚಿರುವುದು. ಅಲ್ಲದೆ ಉತ್ಸವಸಂದರ್ಶನಾರ್ಥವಾಗಿ ಬೊಂಬಾಯಿ ಅಧಿಪತ್ಯದ ಅನೇಕ ಕಡೆಗಳಿಂದ ಎಷ್ಟೋ ಪ್ರಜೆಗಳು ಹೋಗಿ ಸೇರಿರುವರು.

ಯುವಸಾರ್ವಭೌಮರವರನ್ನು ಕರೆತಂದ ರಿನೌನ್ ಹಡಗು ಗುರುವಾರ ಬೆಳಗಿನ ೭ ಗಂಟೆಗೆ ಬೊಂಬಾಯಿ ನೌಕಾಶ್ರಯಕ್ಕೆ ಬಂದು ಸೇರಿತು. ಕೂಡಲೇ ಮರ್ಯಾದಾರ್ಥವಾದ ೩೧ ಗುಂಡುಗಳು ಹಾರಿಸಲ್ಪಟ್ಟುವು. ವೈಸ್‌ರಾಯರೂ ಬೊಂಬಾಯಿ ಗೌರ್ನರೂ ಚೀಫ್‌ಜಸ್ಟಿಸರೇ ಮೊದಲಾದವರೂ ೯ ಗಂಟೆ ಹೊತ್ತಿಗೆ ಹಡಗಿಗೆ ಹೋಗಿ ರಾಜಕುಮಾರರನ್ನು ಸ್ವಾಗತಿಸಿ ಗೌರವಿಸಿದರು. ಬಳಿಕ ಶ್ರೀಯವರು ೧೦| ಗಂಟೆಗೆ ಅಪೋಲೋಬಂದರಿನಲ್ಲಿಳಿದು ಪಾವಟಿಗೆಗಳನ್ನೇರಿ ದಡದಲ್ಲಿ ಏರ್ಪಡಿಸಿದ್ದ ಸ್ವಾಗತಮಂಟಪಕ್ಕೆ ದಯಮಾಡಿಸಿ, ಉತ್ತಮಾಸನವನ್ನಲಂಕರಿಸಿದರು. ಅಲ್ಲಿಯೇ ಸಂಸ್ಥಾನಿಕರ ಪರಿಚಯವೆಲ್ಲಾ ಮಾಡಿಸಲ್ಪಟ್ಟು ಅವರೆಲ್ಲಾ ಸ್ವಾಗತಗೌರವವನ್ನಾಚರಿಸಿದರು. ಸಾರ್ವಭೌಮರು ಕಳುಹಿಸಿಕೊಟ್ಟಿದ್ದ ಸಂದೇಶಪತ್ರವನ್ನು ಯುವರಾಜರು ಅಪ್ಪಣೆ ಕೊಡಿಸಿದರು. ಬಳಿಕ ಬೊಂಬಾಯಿ ಪುರಪಾಲಕಸಂಘದವರ ಸನ್ಮಾನಪತ್ರವು ಪರೀಖರಾದ ಸರ್ ಡೇವಿಡ್‌ಸಾಸೂನರಿಂದ ಓದಿ ಸಮರ್ಪಿಸಲ್ಪಟ್ಟಿತು. ಅದಕ್ಕೆ ಯುವಸಾರ್ವಭೌಮರು "ನೀವು ಪ್ರೇಮಪುರಸ್ಸರವಾಗಿ ನನ್ನನ್ನು ಸ್ವಾಗತಿಸಿ ವಿಜ್ಞಾಪನಪತ್ರವನ್ನರ್ಪಿಸಿದುದಕ್ಕಾಗಿ ಆನಂದದಿಂದ ನಿಮ್ಮನ್ನು ವಂದಿಸುತ್ತೇನೆ. ಭರತಖಂಡವನ್ನು ನೋಡಿ ಭಾರತೀಯರ ಮೈತ್ರಿಪರಿಚಯವನ್ನು ಸಂಪಾದಿಸುವುದಕ್ಕೆ ನಾನು ಕುತೂಹಲಪಟ್ಟಿದ್ದೆ. ಭರತಖಂಡವು ಹಿಂದೆಮಾಡಿದ ಈಗ ಮಾಡುತ್ತಿರುವ ಮುಂದೆಮಾಡುವ ಕಾರ್ಯಗಳನ್ನೆಲ್ಲಾ ನಾನು ಅನೋದಿಸುತ್ತೇನೆ. ನಿಮ್ಮ ಕಷ್ಟಗಳೂ ಆಶಯಗಳೂ ಏನೆಂಬುದನ್ನು ನಾನು ಗ್ರಹಿಸಬೇಕೆಂದಿದ್ದೇನೆ. ನಾನು ಪಶ್ಚಿಮದೇಶದಿಂದ ಈ ಪೂರ್ವದೇಶಕ್ಕೆ ಆಗಮಿಸಿದ ಹೊಸಬನೂ ಯುವಕನೂ ಆಗಿರುವುದರಿಂದ ಪ್ರಾಚೀನವಾದ ಈ ವಿಶಾಲದೇಶದ ವಿಷಯಗಳನ್ನೆಲ್ಲಾ ಗ್ರಹಿಸುವುದು ಕಷ್ಟವಾಗಿದ್ದರೂ, ಗ್ರಹಿಸಬೇಕೆಂಬ ಉತ್ಸಾಹಧೈರ್ಯಗಳು ನನ್ನಲ್ಲಿ ವಿಶೇಷವಾಗಿವೆ. ಚಿಕ್ಕಂದಿನಿಂದಲೂ ನಾನು ಭರತಖಂಡದಮೇಲೆ ಸಾನುಭೂತಿಯುಳ್ಳವನಾಗಿದ್ದೇನೆ. ವಿಕ್ಟೋರಿಯಾಮಹಾರಾಜ್ಞಿಯವರಿಗೆ ಈ ದೇಶದಮೇಲೆ ಅಧಿಕಪ್ರೇಮವಿದ್ದಿತು. ಎಡ್ವರ್ಡ್ ಚಕ್ರವರ್ತಿಯವರು ಯುವರಾಜರಾಗಿದ್ದಾಗ ಈ ದೇಶಕ್ಕೆ ದಯಮಾಡಿಸಿದ್ದು ಅಂದಿನಿಂದ ಈ ದೇಶದಮೇಲೆ ಯಾವಜ್ಜೀವವೂ ಪ್ರೇಮವನ್ನಿಟ್ಟಿದ್ದರು. ನನ್ನ ಮಾತಾಪಿತೃಗಳು ೨ ಸಲ ಈ ದೇಶಕ್ಕೆ ದಯಮಾಡಿಸಿದ್ದರು. ಅವರಿಗೆ ಈ ದೇಶದಮೇಲೆ ಎಷ್ಟು ಗಾಢಾನುರಾಗವಿದೆಯೆಂಬುದು ನಿಮಗೆ ಗೊತ್ತೇ ಇದೆ. ಈ ಪ್ರೇಮಾತಿಶಯವು ಹೀಗೆ ಪುರಾತನಕಾಲದಿಂದಲೂ ಪರಂಪರಾಗತವಾಗಿದೆ. ಅದೇ ಸಾನುಭೂತಿಸಂಸ್ಕಾರದಿಂದಲೇ ನಾನು ಈ ದೇಶಕ್ಕೆ ಕಾಲಿಟ್ಟಿರುವೆನು. ನಿಮ್ಮ ಸ್ವಾಗತಪತ್ರವು ಬೋಧಪ್ರದವಾಗಿರುವುದು. ಬೊಂಬಾಯಿನಗರಪರಿಪಾಲನವು ಸುಲಭವಾದುದಲ್ಲ. ಈ ಪಟ್ಟಣದ ಸ್ಥಿತಿಯು ಅಸದೃಶವಾದುದು. ವಾಣಿಜ್ಯ, ಕೈಗಾರಿಕೆ, ಪ್ರಾಚೀನಚರಿತ್ರೆ, ಪ್ರಕೃತಿಶೋಭೆ-ಇತ್ಯಾದಿಗಳಲ್ಲಿ ಈ ಪಟ್ಟಣವನ್ನು ಮೀರಿದ ನಗರಗಳು ಎಷ್ಟೋ ಇರಬಹುದು. ಆದರೆ ಬೊಂಬಾಯಿ ಪಟ್ಟಣವನ್ನು ಆಶ್ರಯಿಸಿರುವ ಕಾಲ್ಪನಿಕ ವಿಷಯಗಳಲ್ಲಿ ಇದನ್ನು ಮೀರಿಸುವುದು ಯಾವುದೂ ಇಲ್ಲ. ಇದು ಭರತಖಂಡಕ್ಕೆ ಮುಖದ್ವಾರವು. ಎಷ್ಟೋಮಂದಿ ಭಾರತೀಯರು ಈ ಪಟ್ಟಣದಮೂಲಕವಾಗಿಯೇ ಪರದೇಶಗಳಿಗೆಹೋಗಿ ಕಲಿಯಬೇಕಾದುದನ್ನು ಕಲಿತು ಅಲ್ಲಿಂದ ಮರಳಿ ಈ ನಗರಿಗೇ ಬಂದು ತಮ್ಮ ಅನುಭವವನ್ನು ಸ್ವದೇಶೀಯರಿಗೆ ಹಂಚಿರುವರು. ನೂರಾರುಮಂದಿ ಆಂಗ್ಲಜನರು ಈ ಪಟ್ಟಣಕ್ಕೆ ಬಂದು ಐಶ್ವರ್ಯವನ್ನೂ ಅಭಿವೃದ್ಧಿಯನ್ನೂ ಶಾಂತಿಯನ್ನೂ ಈ ದೇಶಕ್ಕೆ ಉಂಟುಮಾಡುವುದಕ್ಕಾಗಿ ಕೆಲಸಮಾಡಿರುವರು. ಅವರು ಸ್ವದೇಶಕ್ಕೆ ಹೋದಮೇಲೂ ಈ ಪಟ್ಟಣವನ್ನೇ ಸ್ಮರಿಸಿಕೊಳ್ಳುತ್ತಿರುವರು. ರಣರಂಗಕ್ಕೆ ಈ ಪಟ್ಟಣದದ್ವಾರಾ ಹೋದ ಸೈನಿಕಸ್ತೋಮವನ್ನು ಆಂಗ್ಲಸಾಮ್ರಾಜ್ಯವು ಎಂದಿಗೂ ಮರೆಯದು. ಈ ಪುರನಿವಾಸಿಗಳು ಯುದ್ಧಕಾಲದಲ್ಲಿ ಮಾಡಿದ ಸಹಾಯಕ್ಕಾಗಿ ಈ ಸಂದರ್ಭದಲ್ಲಿ ನಾನು ವಂದನೆಯನ್ನರ್ಪಿಸುತ್ತೇನೆ. ಈ ಪಟ್ಟಣವನ್ನೂ ಈ ದೇಶವನ್ನೂ ಅಭಿವೃದ್ಧಿಗೊಳಿಸುವ ವಿಷಯದಲ್ಲಿ ನಾನು ಅತ್ಯಂತ ಸಾನುಭೂತಿಯುಳ್ಳವನಾಗಿರುವೆನು. ನಿಮ್ಮ ರಾಜಭಕ್ತಿಯನ್ನು ಸಾರ್ವಭೌಮರಿಗೆ ಅರಿಕೆಮಾಡುತ್ತೇನೆ. ಮತ್ತೊಮ್ಮೆ ನಿಮಗೆ ನಾನು ವಂದಿಸುತ್ತೇನೆ."

ಇದಾದಬಳಿಕ ಅಪೋಲೋಬಂದರಿನಿಂದ ಉತ್ಸವ ಹೊರಟಿತು. ಮೊದಲಬಂಡಿಯಲ್ಲಿ ಯುವರಾಜರ ಜತೆಗೆ ಲಾರ್ಡ್ ಕ್ರೋಮಾರೂ, ಅಡ್ಮಿರಲ್ ಸರ್ ಲಿಯೋನಲ್‌ಹೆಲ್ಸೆಯೂವರೂ, ಇದ್ದರು. ಉಳಿದ ಬಂಡಿಗಳಲ್ಲಿ ಜನರಲ್ ವಾರ್ಡನ್‌ರವರೂ, ಮಿಲಿಟರಿ ಸೆಕ್ರೆಟರಿ ಕರ್ನಲ್ ಹರ್ವೆಯವರೂ ಅವರ ಇತರ ಪರಿವಾರದವರೂ ಪಾಲನ್‌ಪೂರ್ ನವಾಬರೇ ಮೊದಲಾದವರೂ ಇದ್ದರು. ಅಪೋಲೋಬಂದರಿನಲ್ಲೂ ರಾಜಮಾರ್ಗಗಳಲ್ಲೂ ಸೈನಿಕರ ಪೋಲೀಸರ ಏರ್ಪಾಟುಗಳು ಸಮರ್ಪಕವಾಗಿದ್ದುವು. ದಾರಿಯುದ್ದಕ್ಕೂ ಲಕ್ಷಾಂತರ ಪ್ರೇಕ್ಷಕಜನರು ನಿಂತು ಉತ್ಸವವನ್ನು ನೋಡಿ ಸಂತೋಷದಿಂದ ಜಯಧ್ವನಿಯನ್ನೂ ಕರತಾಳನಗಳನ್ನೂ ಮಾಡಿದರು. ಯುವರಾಜರು ಅವರಿಗೆಲ್ಲಾ ಪ್ರತಿವಂದನೆಮಾಡುತ್ತ ಪ್ರಭುತ್ವಭವನವನ್ನು ಸೇರಿದರು. ಹಿಂದು ಮುಂದುಗಡೆ ಅಶ್ವಸೇನೆಯು ಹೋಗುತ್ತಿದ್ದಿತು.

ಯುವರಾಜರು ಬೊಂಬಾಯಿಗೆ ಬಂದಿಳಿದ ಕಾಲದಲ್ಲೇ ಪಟ್ಟಣದಲ್ಲಿ ಹರತಾಳವನ್ನಾಚರಿಸಬೇಕೆಂದೂ, ಅವರ ಉತ್ಸವಾದಿಗಳನ್ನು ನೋಡುವುದಕ್ಕೂ ಕೂಡ ಯಾರೂ ಹೋಗಕೂಡದೆಂದೂ, ಅಸಹಕಾರಿಗಳು ಬಹಳ ಪ್ರಯತ್ನಮಾಡಿ ಬೋಧಿಸಿದ್ದುದಲ್ಲದೆ ಅದೇ ಸಮಯದಲ್ಲಿ ಗಾಂಧಿಯವರು ಎಲ್ಫಿನ್‌ಸ್ಟನ್ ಮಿಲ್ಲಿನ ಬಳಿಯಲ್ಲಿ ದೊಡ್ಡ ಸಭೆಗೂಡಿಸಿ ಉಪನ್ಯಾಸಮಾಡುತ್ತ ವಿದೇಶ ವಸ್ತ್ರಗಳ ದಹನವನ್ನು ನಡೆಯಿಸಿದರು. ಆದರೂ ಅವರ ಪ್ರಯತ್ನವು ಅಷ್ಟೇನೂ ಚರಿತಾರ್ಥಗೊಳ್ಳಲಿಲ್ಲ. ಇದೇ ತೆರದ ಪ್ರಯತ್ನಗಳನ್ನು ಅಸಹಾಯಕಾರಿಗಳು ಇತರ ಪಟ್ಟಣಗಳಲ್ಲೂ ನಡೆಯಿಸಬಹುದು. ಆದರೇನು? ೨೭ ವರ್ಷದ ವಯಸ್ಸಿನ ನವತರುಣರಾದ ರಾಜಕುಮಾರರು-ಭವಿಷ್ಯಚ್ಚಕ್ರವರ್ತಿಯವರು ಇಲ್ಲಿಯ ಸ್ಥಿತಿಗತಿಗಳೇನೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿಯೇ ಈ ರಾಷ್ಟ್ರಕ್ಕೆ ಬಂದಿರುವಾಗ್ಗೆ ಇಂಥ ಮೂರ್ಖತನವನ್ನು ಅಸಹಾಯವಾದಿಗಳು ತೋರಿಸಿದರೂ, ಭರತಖಂಡವು ತನ್ನ ಸನಾತನವಾದ ರಾಜಭಕ್ತಿಮರ್ಯಾದೆಗಳಿಂದ ಯುವರಾಜರನ್ನು ಸ್ವಾಗತಿಸಿ ಗೌರವಿಸಿ ಕಳುಹಿಸಿಕೊಡುವುದರಲ್ಲಿ ಸಂದೇಹವೇನೂ ಇಲ್ಲ. ಶ್ರೀಮದ್ಯುವರಾಜರು ಈ ದೇಶದಲ್ಲಿ ಸಂಚರಿಸುವ ಕಾಲದಲ್ಲೆಲ್ಲಾ ಆರೋಗ್ಯಭಾಗ್ಯದಿಂದಿದ್ದು, ಇಲ್ಲಿಯ ಸ್ಥಿತಿಗತಿಗಳನ್ನೆಲ್ಲಾ ಅರಿತುಕೊಳ್ಳುವುದರಿಂದ ಉತ್ತರತ್ರ ಈ ದೇಶದ ಮೇಲೆ ಅವರ ಅಭಿಮಾನಪ್ರೀತಿಗಳು ಹೆಚ್ಚುವುದಕ್ಕೆ ಅವಕಾಶವುಂಟಾಗಲೆಂದು ಕೋರಿ, ನಮ್ಮ ರಾಜಭಕ್ತಿಪರಿಪೂರ್ಣವಾದ ಸ್ವಾಗತಾಭಿನಂದನವನ್ನು ಈ ಮೂಲಕ ಸಮರ್ಪಿಸುವೆವು.

ಕ್ಷಯರೋಗ ವೈದ್ಯಾಲಯದ ಆರಂಭಮಹೋತ್ಸವ.

ಶ್ರೀಮನ್ಮಹಾರಾಜ ಕುಮಾರಿಯವರೂ, ಶ್ರೀಮನ್ಮಹಾರಾಜರವರ ಅಕ್ಕಂದಿರೂ, ಕರ್ನಲ್ ದೇಶರಾಜ ಅರಸಿನವರ ಧರ್ಮಪತ್ನಿಯವರೂ ಆಗಿದ್ದು ಸ್ವರ್ಗವಾಸಿಯರಾದ ಕೃಷ್ಣಾಜಮ್ಮಣ್ಣಿಯವರ ಸ್ಮರಣಾರ್ಥವಾಗಿ ಈ ವೈದ್ಯಶಾಲೆಯು ರಾಜಧಾನಿಗೆ ೩ ಮೈಲಿಗಳ ದೂರದಲ್ಲಿ ಬಳಗೊಳಕ್ಕೆ ಹೋಗುವ ಮಾರ್ಗದ ಪಕ್ಕದಲ್ಲಿ ಕಟ್ಟಲ್ಪಟ್ಟಿದೆ. ಇದರ ಆರಂಭಮಹೋತ್ಸವವು ಕಳೆದ ಶುಕ್ರವಾರ ಶ್ರೀಮನ್ಮಹಾರಾಜರವರಿಂದ ನೆರವೇರಿಸಲ್ಪಟ್ಟಿತು. ಪ್ರಕೃತೋಚಿತವಾಗಿ ವೈದ್ಯಾಲಯದ ಸುತ್ತಣಪ್ರದೇಶಗಳೆಲ್ಲಾ ಧ್ವಜಪತಾಕಾದಿಗಳಿಂದ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತು. ದಿವಾನರೇ ಮೊದಲಾದ ರಾಜಬಂಧುವರ್ಗದವರೂ ಅನೇಕಮಂದಿ ಯೂರೋಪ್ಯರೂ ದೇಶೀಯ ನಾರೀಮಣಿಗಳೂ ಡಿ|| ಕಮಿಷನರೇ ಮೊದಲಾದ ಸ್ಥಲಾಧಿಕಾರಿಗಳೂ ಮ್ಯು|| ಕೌನ್ಸಿಲರೇ ಮೊದಲಾದ ಪುರಪ್ರಮುಖರೂ ವಕೀಲರುಗಳೂ ಸಹ ದಯಮಾಡಿಸಿದ್ದರು. ಶ್ರೀಮನ್ಮಹಾರಾಜರು ದಯಮಾಡಿಸಿದ ಕೂಡಲೇ ವಾದ್ಯವು ಘೋರ್ಗರೆದಿತು. ಸೀನಿಯರ್ ಸರ್ಜನರೂ ಡಾಕ್ಟರ್ ಉಸ್ಮಾನರೇ ಮೊದಲಾದವರೂ ದ್ವಾರದಲ್ಲಿ ಕಾದಿದ್ದು ಇದಿರ್ಗೊಂಡರು. ಸಭೆಯಲ್ಲಿ ಗೊತ್ತಾಗಿದ್ದ ಪೀಠವನ್ನು ಶ್ರೀಮನ್ಮಹಾರಾಜರು ಅಲಂಕರಿಸಿದ ಕೂಡಲೇ ಸೀನಿಯರ್ ಸರ್ಜನ್ ಮೈಲ್ವಾಗನಂ ರವರು ವೈದ್ಯಶಾಲೆಯ ಚರಿತ್ರೆಯನ್ನೂ ಸಂಸ್ಥಾನದಲ್ಲಿ ಕ್ಷಯರೋಗವು ಪ್ರಬಲಿಸುತ್ತಿರುವುದನ್ನೂ, ಅದರ ಪರಿಹಾರಕ್ಕೆ ಇದು ಸಹಾಯಕವಾಗುವುದನ್ನೂ ವಿವರಿಸುವ ತಮ್ಮ ವಿಜ್ಞಾಪನಪತ್ರವನ್ನು ಓದಿ, ವೈದ್ಯಾಲಯವನ್ನು ಆರಂಭಿಸುವುದಕ್ಕಾಗಿ ಶ್ರೀಮನ್ಮಹಾರಾಜರನ್ನು ಪ್ರಾರ್ಥಿಸಿದರು. ಶ್ರೀಮನ್ಮಹಾರಾಜರು ಸಮಯೋಚಿತವಾಗಿ ಮಾಡಿದ ಭಾಷಣದ ಅಭಿಪ್ರಾಯವೇನೆಂದರೆ-

"ಕರ್ನಲ್ ದೇಶರಾಜ ಅರಸಿನವರ ಮತ್ತು ನಮ್ಮ ಸೋದರಅಳಿಯಂದಿರ (ಕರ್ನಲ್ ದೇಶರಾಜ ಅರಸಿನವರ ಕುಮಾರರ) ಉದಾರ ಸಹಾಯದಿಂದ ನಿರ್ಮಿತವಾಗಿರುವ ಈ ಕ್ಷಯರೋಗ ಚಿಕಿತ್ಸಾಲಯದ ಆರಂಭೋತ್ಸವದಿಂದ ನಮ್ಮ ಮಾತೃಶ್ರೀಯವರಿಗೂ ನಮಗೂ ಕರ್ನಲ್ ದೇಶರಾಜ ಅರಸಿನವರಿಗೂ ನಮ್ಮ ಸೋದರಅಳಿಯಂದರಿಗೂ ವಿಶೇಷ ಆನಂದವುಂಟಾಗಿದೆ. ಅವರುಗಳ ಉದಾರವಾದ ಸಹಾಯಕ್ಕಾಗಿ ನಾವು ವಂದಿಸುತ್ತೇವೆ.

ಆರೋಗ್ಯಶಾಖಾಧಿಕಾರಿಗಳು ನಿಗ್ರಹಕ್ಕೆ ತರಲು ಯತ್ನಿಸಿರುವ ರೋಗಗಳಲ್ಲೆಲ್ಲಾ ಈ ಕ್ಷಯರೋಗದಷ್ಟು ಭೀಕರವೂ ಮತ್ತು ಉತ್ಸಾಹಭಂಗಕರವೂ ಆದುದು ಬೇರೊಂದಿಲ್ಲ. ಪ್ರಾಯಸ್ಥರಿಗೂ ದುಡಿದು ಕೆಲಸಮಾಡುವವರಿಗೂ ಈ ರೋಗವು ವಿಶೇಷವಾಗಿ ಪ್ರಾಪ್ತವಾಗಿ ಅನರ್ಥಗಳನ್ನುಂಟುಮಾಡುತ್ತಲಿರುವುದರಿಂದ ಇದರ ಹಬ್ಬುವಿಕೆಯನ್ನು ನಿಲ್ಲಿಸಿ ಇದರ ಹಾವಳಿಯನ್ನು ಕಡಿಮೆಮಾಡಲು ಸರ್ಕಾರದವರೂ ಪ್ರಜೆಗಳೂ ಸಾಧ್ಯವಾದ ಪ್ರಯತ್ನಗಳನ್ನು ಮಾಡಬೇಕಾದುದು ಅತ್ಯವಶ್ಯಕವಾಗಿದೆ. ಇದರ ನಿವಾರಣೋಪಾಯದ ವಿಚಾರದಲ್ಲಿ ಎಷ್ಟು ತಿಳುವಳಿಕೆಯನ್ನು ಕೊಟ್ಟರೂ ಸಾಲದುದಾಗಿರುತ್ತದೆ.

ಜನಗಳು ಎದುವರೆಗೆ ನಿರುತ್ಸಾಹರಾಗಿಯೂ, ಉದಾಸೀನರಾಗಿಯೂ ಇರುವರೋ ಅವರೆಗೂ ಅವರಿಗಾಗಿ ಎಷ್ಟು ಪ್ರಯೋಜನಕರವಾದ ಏರ್ಪಾಟುಗಳನ್ನು ಮಾಡಿದರೂ ಅವು ಫಲಕಾರಿಯಾಗುವುದಿಲ್ಲ. ಈ ರೋಗನಿವಾರಣೋಪಾಯವನ್ನ ತಕ್ಕಮಟ್ಟಿಗಾದರೂ ಮಾಡಬೇಕಾದಲ್ಲಿ ಆರೋಗ್ಯವಿಚಾರವಾಗಿ ತತ್ರಾಪಿ ಈ ಕ್ಷಯರೋಗವಿಚಾರವಾಗಿ ಪಾಠಶಾಲೆಗಳಲ್ಲೂ, ಪ್ರೌಢ ವಿದ್ಯಾಲಯಗಳಲ್ಲೂ ಬೋಧೆಮಾಡುವುದಲ್ಲದೆ, ಅಜ್ಞಾನಿಜನರು ಈ ರೋಗವು ಎಷ್ಟು ಸಾಂಕ್ರಾಮಿಕವಾದುದು ಮತ್ತು ಮನೆಯ ಆರೋಗ್ಯಾಭಿವೃದ್ಧಿಯು ಎಷ್ಟು ಅವಶ್ಯಕವಾದುದು ಎಂಬುದನ್ನು ತಿಳಿದುಕೊಳ್ಳುವದಕ್ಕಾಗಿ ಸಾಧ್ಯವಾದ ಪ್ರಯತ್ನವು ಮಾಡಲ್ಪಡತಕ್ಕದಾಗಿರುತ್ತದೆ. ಜನರು ಗಾಳಿ, ಬೆಳಕುಗಳ ಪ್ರಯೋಜನವನ್ನು ಎಷ್ಟು ಹೆಚ್ಚಾಗಿ ತಿಳಿದುಕೊಳ್ಳುತ್ತಾರೊ ಅಷ್ಟು ಹೆಚ್ಚಾದ ಪ್ರಯೋಜನವಾಗುವ ಸಂಭವವಿದೆ.

ತಕ್ಕ ಸಲಕರಣೆಗಳಿಂದೊಡಗೂಡಿರುವ ಆರೋಗ್ಯಸ್ಥಾನಗಳ ಏರ್ಪಾಟಿನಿಂದ ಕ್ಷಯರೋಗದ ಹಾವಳಿಯು ಬಹುಮಟ್ಟಿಗೆ ಕಡಿಮೆಯಾಗುವುದೆಂಬುದು ವೈದ್ಯರ ಅಭಿಪ್ರಾಯವಾಗಿರುತ್ತದೆ. ಪ್ರಬಲವಾದ ರೋಗವು ಚಿಕಿತ್ಸೆಯಿಂದ ಗುಣವಾಗುವ ಸಂಭವವಿಲ್ಲದಿದ್ದರೂ, ರೋಗಿಷ್ಠರನ್ನು ನಿರೋಗಿಗಳ ಸಂಪರ್ಕವಿಲ್ಲದಂತೆ ಬೇರ್ಪಡಿಸುವುದರಿಂದ ಈ ಭೀಕರವಾದ ರೋಗವು ಹರಡದಂತೆ ಮಾಡಲು ಸಾಧ್ಯವು. ಇದೇ ಈ ಆರೋಗ್ಯಸ್ಥಾನಗಳಿಂದ ಆಗತಕ್ಕ ಮುಖ್ಯ ಪ್ರಯೋಜನವು. ರಾಜಧಾನಿಯಲ್ಲಿ ಇಷ್ಟರಲ್ಲೇ ಒಂದೆರಡು ಕ್ಷಯರೋಗದ ಆಸ್ಪತ್ರೆಗಳು ಏರ್ಪಾಟಾಗುವ ಸಂಭವವುಂಟಾಗಬಹುದೆಂದು ನಾವು ನಂಬಿದ್ದೇವೆ. ಅವುಗಳಿಂದ ಸಕಾಲದಲ್ಲಿ ಸಹಾಯವೂ ಚಿಕಿತ್ಸೆಯೂ ದೊರೆಯುವುವು ಮತ್ತು ಅವು ಈ ಆರೋಗ್ಯಸ್ಥಾನಕ್ಕೆ ಸಹಕಾರಿಗಳಾಗಿರುವುವು.

ಈ ರೋಗದ ಅನರ್ಥದ ವಿಚಾರದಲ್ಲಿ ಎಂತಹ ಅನುಭವವು ನಮಗೆ ಉಂಟಾಗಿರುವದೆಂಬುದನ್ನು ಇಲ್ಲಿ ನೆರೆದಿರತಕ್ಕ ಅನೇಕರು ಬಲ್ಲವರಾಗಿದ್ದಾರೆ. ಈಗ ಯಾರ ಸ್ಮಾರಕವಾಗಿ ಈ ಆರೋಗ್ಯಸ್ಥಾನಾಲಯವು ಸ್ಥಾಪಿಸಲ್ಪಟ್ಟಿರುತ್ತದೆಯೋ ಅಂಥ ನಮ್ಮ ಪ್ರಿಯ ಅಕ್ಕಯ್ಯನವರೊಬ್ಬರೇ ಅಲ್ಲದೆ ಅವರ ಮೂವರು ಕುಮಾರಿಯರೂ ಈ ಘೋರವ್ಯಾಧಿಗೆ ತುತ್ತಾದರು. ಬಡವರಾದ ರೋಗಪೀಡಿತರಿಗೆ ಈ ಆಸ್ಪತ್ರೆಯಿಂದ ಪ್ರಯೋಜನವುಂಟಾಗಲೆಂದೂ ಯಾವ ಉದ್ದೇಶದಿಂದ ಈ ದಿವಸ ಆರಂಭಿಸುತ್ತೇವೋ ಅಂತಹ ಉದ್ದೇಶಸಾಫಲ್ಯವಿಚಾರದಲ್ಲಿ ಪರಮೇಶ್ವರನು ಸಹಾಯಮಾಡಲೆಂದೂ ನಮ್ಮ ಮಾತೃಶ್ರೀಯವರೂ ಮತ್ತು ನಾವೂ ಎಷ್ಟು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇವೆಂಬುದನ್ನು ನೀವು ತಿಳಿಯಬಲ್ಲಿರಿ."

ಎಂದು ಅಪ್ಪಣೆಕೊಡಿಸಿ, ವೈದ್ಯಾಲಯಪ್ರಾರಂಭವನ್ನು ಮಾಡಿದರು. ಶ್ರೀಮನ್ಮಹಾರಾಜರೇ ಮೊದಲಾದ ಸರ್ವರಿಗೂ ಹಾರಗುಚ್ಛಾದಿಗಳು ಸಮರ್ಪಿಸಲ್ಪಟ್ಟುವು. ವೈದ್ಯಾಲಯದ ಭಾಗಗಳನ್ನು ಸರ್ವರೂ ಪರಾಮರಿಸಿದರು. ಅಲ್ಲಿಗೆ ಉತ್ಸವಕಾರ್ಯಗಳು ಮುಗಿದುವು. ಈ ವೈದ್ಯಾಲಯದ ಕಟ್ಟುವಿಕೆಗೆ ಒಟ್ಟು ೧೦೩೯೦ ರೂ. ಗಳು ವೆಚ್ಚವಾಗಿರುವುದೆಂದೂ, ಶ್ರೀ ರಾಜಕುಮಾರಿ ಕೃಷ್ಣಾಜಮ್ಮಣ್ಣಿಯವರ ಆಸ್ತಿಯಿಂದ ||| ಲಕ್ಷ ರೂಪಾಯಿಯೂ, ಉಳಿದುದೆಲ್ಲಾ ಸರ್ಕಾರದಿಂದಲೂ ಒದಗಿಸಲ್ಪಟ್ಟಿತೆಂದೂ, ಮ|| ಧರ್ಮನಿರತ ಅಣ್ಣಯ್ಯಪಂಡಿತರು ಇಲ್ಲಿ ಒಂದು ವಾರ್ಡನ್ನು ಕಟ್ಟಲಿಕ್ಕೆ ೨ ಸಾವಿರ ರೂ. ಗಳನ್ನು ಕೊಟ್ಟಿರುವರೆಂದೂ ಮುಂದೆ ಇದರ ವಾರ್ಷಿಕವ್ಯಯಕ್ಕಾಗಿ ಸರ್ಕಾರದಿಂದ ೨೦೩೨೮ ರೂ. ಗಳು ಕೊಡಲ್ಪಡುತ್ತವೆಂದೂ, ಸಂಸ್ಥಾನದ ಎಲ್ಲ ಭಾಗದ ಕ್ಷಯರೋಗಿಗಳ ಚಿಕಿತ್ಸೆಗೂ ಇಲ್ಲಿ ಏರ್ಪಾಟುಮಾಡಲ್ಪಟ್ಟಿರುವುದೆಂದೂ, ಸದ್ಯಃ ೨೦ ಮಂದಿ ರೋಗಿಗಳು ಇಲ್ಲಿ ಇದ್ದುಕೊಂಡು ಚಿಕಿತ್ಸೆಹೊಂದಲು ಅವಕಾಶಮಾಡಲ್ಪಟ್ಟಿರುವುದೆಂದೂ ಡಾ|| ಮೈಲ್ವಾಗನಂರವರ ಭಾಷಣದಿಂದ ವ್ಯಕ್ತವಾಯಿತು. ಸಂಸ್ಥಾನದಲ್ಲೆಲ್ಲಾ ಪ್ರತಿವರ್ಷವೂ ಸಾವಿರಾರು ಪ್ರಜೆಗಳು ಕ್ಷಯರೋಗದಿಂದ ಸಾಯುತ್ತಿದ್ದಾರೆ. ರಾಜಧಾನಿಯಲ್ಲೇ ಪ್ರತಿತಿಂಗಳಲ್ಲೂ ೧೦-೧೨ ಮಂದಿಗೆ ಕಡಿಮೆಯಿಲ್ಲದೆ ಈ ರೋಗಕ್ಕೆ ತುತ್ತಾಗುತ್ತಿದ್ದಾರೆ. ಮಹಾರೋಗಗಳ ಕೋಟಿಗೆ ಸೇರಿದ ಭೀಕರವಾದ ಈ ಸಾಂಕ್ರಾಮಿಕ ರೋಗಪರಿಹಾರಕ್ಕೆ ತಕ್ಕ ಸಾಧನವಿಲ್ಲದೆ ಇದ್ದ ಕೊರತೆಯು ಈ ಪ್ರತಿಷ್ಠಾಪನೆಯಿಂದ ನಿವಾರಿತವಾಯಿತು. ಇದನ್ನು ಸ್ಥಾಪಿಸಿಕೊಟ್ಟ ರಾಜಕುಟುಂಬದವರಿಗೆ ಜಗದೀಶ್ವರನು ಸಕಲಸನ್ಮಂಗಳನ್ನೂ ಉಂಟುಮಾಡಲೆಂದೂ ಇದರಿಂದ ವಿಶೇಷ ಸಹಾಯವು ಪ್ರಜಾಕೋಟಿಗೆ ಒದಗುವಂತೆ ಅಭಿವರ್ಧಿಸುತ್ತ ಬರಲೆಂದೂ ನಾವು ಕೋರುತ್ತೇವೆ. ಆದರೆ ಇಂಥ ಪ್ರತಿಷ್ಠಾಪನೆಗಳು ಉದಯಗೊಂಡ ಮಾತ್ರದಿಂದಲೇ ಫಲವಾಗುವುದಿಲ್ಲ. ತಕ್ಕ ವೈದ್ಯೋತ್ತಮರನ್ನು ಅದಕ್ಕೆ ಒದಗಿಸುವುದರಲ್ಲೇ ಅದರ ಚರಿತಾರ್ಥತ್ವವಿರುವುದು. ಅತ್ತಕಡೆಗೆ ಶ್ರೀಮನ್ಮಹಾರಾಜರೂ ಅವರ ಪ್ರಭುತ್ವದವರೂ ವಿಶೇಷ ಲಕ್ಷ್ಯವನ್ನು ಕೊಡದೆ ಇರಲಾರರೆಂದು ನಂಬುತ್ತೇವೆ

ಟ್ರೂತ್ ಪತ್ರಿಕೆಯ ಸಂಪಾದಕರು ಚೀಫ್ ಕೋರ್ಟಿಗೆ ಮಾಡಿಕೊಂಡಿದ್ದ ಅಪ್ಪೀಲಿನಲ್ಲಿ ಕೆಳಕೋರ್ಟಿನವರು ಮಾಡಿದ್ದ ತೀರ್ಮಾನವು ರದ್ದಾಗಿ, ದಂಡದ್ರವ್ಯವನ್ನು ಅವರು ಸಲ್ಲಿಸಿದ್ದರೆ ಹಿಂದಿರುಗಿ ಕೊಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಮ|| ನಾರಾಯಣಸ್ವಾಮಯ್ಯರು ನಿರ್ದೋಷಿಗಳೆಂದು ಸಿದ್ಧರಾದುದಕ್ಕಾಗಿ ಸಂತೋಷಿಸುತ್ತೇವೆ.

THE MADRAS UNIVERSITY CONVOCATION ADDRESS.

The author of that remarkable address delivered at the Non-Brahman Conference at Trichinopoly on 24-9-1921 as President of that Conference, was again the Orator to deliver the Convocation Address of the Madras University this year on the 10th instant. The way from the region of education to that of politics is long enough but with persons of Mr. C. R. Reddy's genius, the journey is performed in no time. Here he is in the front rank of politics, delivering a political address in one week and in the next fortnight delivering a convocation address to the young graduates of a University. There is one idea of new life common to both the addresses—the revelation of a new life in India. In Trichinopoly it was a torrent of light and knowledge which came down to sweep out deep darkness and stupendous ignorance which had come to remain with the millions of India. In Madras the same thing was clarified and made fit for assimilation into the minds of the young graduates. The stream of advice to youngmen rolled on in sweet cadence. Any one who reads this address will feel the magic charm of the overflowing intelligence and sincerity and how far could those fortunate persons who heard the address could have been spell-bound.

This year's address has struck a new path and it is unique in all that it has conveyed to the young minds. A new note is struck and it has opened the young minds to look at a new world before them. He has ushered a new life into the hearts of the youngmen who from a training under others guidance have passed into a training of self-guidance and self-reliance. The old university world has given birth to a new life-world. Mr. C. R. Reddy's words come to this in a few words "Ring out the Old, Ring in the New," as the greatest politician of England Mr. Gladstone said to his constituents. The Old India is past and the New India is awakening. The Old India of unreal form and selfish system is making room for the real spirit and firm judgment. A condition of stagnation is being replaced by a world in which, as Mr. Reddy has expressed, "Time and change are real and transition is a permanent institution." The political map of India is being re-written in that the masses are being educated to know their rights and privileges. The key note of Mr. Reddy's address is contained in these words of his—"Party politics and Government in their present form are a new element in our country carrying with them peculiar duties and responsibilities which deserve to be pondered over by the educated youth entering on life." And these duties and responsibilities are loyalty to a constitution which has brought peace to the country and which is being constantly revised to bring contentment to the people. Mr. C. R. Reddy's love and loyalty to His Highness the Maharaja of ours is pursuing him wherever he goes and whatever are his new environments. He concludes his memorable address with those Angelic words "Indian Universities will be judged by the number and the quality of men whom they send forth filled with a genuine devotion to the good of India and to the service of their fellow countrymen of all grades and ranks irrespective of caste and creed."

Mr. C. R. Reddy's convocation address has evoked admiration in the minds of elder men and enthusiasm in those of the young graduates. The Madras Mail on the one hand and the New India on the other hand have equally appreciated the Great Address of the Day. But the Hindu is struck dumb. We on this side of the Western Ghauts have greater reverence for this politically inspiring convocation address as we have had the benefits of that master mind's toils for over 12 years in the balmiest days of that vigorously powerful and versatile mind. That which is loss to us is gain to Madras, but Mr. Reddy belonged to Madras to render service to whom in his mature days he has gone. This and the Trichinopoly addresses mark the beginning of his great service to his birth land.

"HESITATION"

The election of the President for the Bangalore City Municipality is the topic of considerable interest just now not confined to Bangalore alone but widespread all over the Province. A serious principle is involved in this election problem. It is one of good will and liberalism. There are parties and parties there should be in all advancing administrations. It is one of healthy rivalry and constitutional check. There are great countries in the West in which party Governments have worked satisfactorily. There is an amount of ignorance in us in respect of this party Government and there are people who exploit on this ignorance of ours. This accounts for the non-decisive election which is called abortive. From the results of the abortive election it is clear that some Non-Brahmans have given their votes to Mr. B. R. Garudachar and no Brahman has given his precious vote to Mr. M. Subbayya. Next soon after the election results were published, there is said to have gone a memorial to the Government signed by 18 commissioners. And that is that two more Non-Brahmans have been captured. This is the point of principle. There is a certain unknown influence which is at work and wins Non-Brahman votes. There is another principle and that is that the Brahman vision is altogether blindly one sided. Is Mr. Subbayya's candidature so void of consideration that not a single Brahman Commissioner could see merit in him? This speaks a world of illiberelism and selfishness.

We are tired of reading and hearing a sermon on "Hatred between castes and creeds. Who are those that hate? Is it the 9 Brahmans that have voted for Mr. Garudachar or the 7 Non-Brahmans that have voted for him or the extra two Non-Brahmans that are said to have signed a memorial on his behalf or is it the whole body of the Non-Brahmans that voted for him a year and a half ago?

Is it the ground of efficiency on which the battle of election is fought? Well! We know that in a Municipal administration all the efficiency consists in looking into all interests with an impartial eye. Here again the Brahman solidarity for Mr. Garudachar shows that the interest is one sided.

In the face of all this, the Government have given a further choice for election knowing as we believe that the tide is favourable to Mr. Garudachar as he has been able to win extra two votes after the election. There are influences and influences amongst which some are very powerful and might win all the Non-Brahman votes if the influence works with havoc.

We fear that there is hesitation in the action of Government in ordering a re-election in the face of the unsatisfactory state of mind of the Commissioners with whom freedom appears also to hesitate. But what about the Non-Brahman Commissioners? Have they no vision? Could they not be as charitable as our Brahman Commissioners? Are they still under the cloud of illusion? Is there no appeal which could reach their hearts? Is it not high time that they should see that they are something different from Brahmans in matters of worldly interests? No doubt all our souls meet in Heaven. But here on earth a Non-Brahman is a different person from a Brahman. The interests do clash and more they clash the clerer will be the light in which the defective side could be seen. It is hoped that the Non-Brahman Commissioners will pause and see the justice of the party Government and more so in a country where the one class rule has dominated for years for the benefit of that one class—be it the Service under Government, be it the village heriditary service, be it the service under the Municipality or any Local Board.

We are sorry for the hesitation which in our opinion is weakness.

ಒಳದೇಶದ ವೃತ್ತಾಂತಗಳು

ದಿವಾನ್ ಸರ್ ಕಾಂತರಾಜಅರಸಿನವರು ಕಳೆದ ತಾ|| ತಾ|| ೧೭ರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದ್ದಾರೆ.

ರಾಜಧಾನಿಯಲ್ಲಿ ಹೊಸದಾಗಿ ಏರ್ಪಟ್ಟಿರುವ ಶ್ರೀ ಚಾಮುಂಡೇಶ್ವರೀ ಕರ್ನಾಟಕನಾಟಕ ಸಂಘದವರು ಬರುವ ಡಿಸೆಂಬರ್ ತಾ|| ೩-೧೦-೧೭-೨೪-೩೧ ರಲ್ಲಿ ಶಾಕುಂತಲಾದಿ ನಾಟಕಗಳನ್ನು ರಾಜಧಾನಿಯಲ್ಲಿ ಅಭಿನಯಿಸುವವರಾಗಿದ್ದಾರೆ.

ರಾಜಧಾನಿಯ ಪೋಲೀಸಿನ ಮೇಲೆ ಬಹಳ ದೂರುಗಳು ನಮ್ಮಲ್ಲಿಗೆ ಬಂದಿವೆ. ತತ್ರಾಪಿ ಕೃಷ್ಣರಾಜಮೊಹಲ್ಲಾ ಪೋಲೀಸಿನ ದುರವಸ್ಥೆಯು ವಿಪರೀತವಾಗಿದೆ. ವಿವರವನ್ನು ಮುಂದೆ ತಿಳಿಯಿಸುತ್ತೇವೆ. ಮೇಲ್ಪಟ್ಟ ಉದ್ಯೋಗಿಗಳು ಗಮನಕೊಡುವುದು ಅತ್ಯಾವಶ್ಯಕ.

ರಾಜಧಾನಿಯ ದೊಡ್ಡ ಹೊಲಗೇರಿಯಲ್ಲಿ ಮದದ್ರವ್ಯವನ್ನು ಕುಡಿಯುವ ಪಕ್ಷದವರಿಗೂ ಕುಡಿಯದಿರುವ ಪಕ್ಷದವರಿಗೂ ಕಲಹ ಹುಟ್ಟಿ ಬಡಿದಾಟವಾಗಿ ಒಬ್ಬನು ಮೃತಪಟ್ಟನೆಂದೂ ಮತ್ತೊಬ್ಬನು ವೈದ್ಯಶಾಲೆಯ ಚಿಕಿತ್ಸೆಯಲ್ಲಿರುವನೆಂದೂ ಅಪರಾಧಿಗಳಲ್ಲಿ ಕೆಲವರು ತಲೆತಪ್ಪಿಸಿಕೊಂಡಿದ್ದಾರೆಂದೂ ಕೇಳಿದೆವು.

ಬೆಂಗಳೂರು ಮ್ಯುನಿಸಿಪಲ್ ಪ್ರಸಿಡೆಂಟರ ಆರಿಸುವಿಕೆಯು ಮೊದಲುಸಲ ವ್ಯರ್ಥವಾದುದರಿಂದ ಮತ್ತೊಂದುಸಲ ಆರಿಸುವುದಕ್ಕೆ ಸರ್ಕಾರದವರು ಅಪ್ಪಣೆ ಮಾಡಿದ್ದಾರೆ. ಇದು ಬರುವ ಡಿಸೆಂಬರ್ ತಾ|| ೭ ರಲ್ಲಿ ನಡೆಯುವುದು. ಈ ಸಲವಾದರೂ ಕೌನ್ಸಿಲರುಗಳು ದಾಕ್ಷಿಣ್ಯಕ್ಕೆ ಪರವಶರಾಗದೆ ತಮ್ಮ ಕರ್ತವ್ಯವನ್ನೂ ಅಭಿಮಾನವನ್ನೂ ಗುರ್ತಿಸಿ ಕೆಲಸಮಾಡಿ ಎಲಕ್ಷನ್ ಸಾರ್ಥಕವಾಗುನಂತೆ ಮಾಡಿಕೊಂಡಾರೆಂದು ಹೇಳಲಾಗುವುದಿಲ್ಲ. ಸರ್ಕಾರದವರು ೩ನೆ ಆರಿಸುವಿಕೆಗೆ ಅವಕಾಶ ಕೊಟ್ಟದೇ ಯುಕ್ತವಾಗಿಲ್ಲ. ಈಗ ನಿಂತಿದ್ದವರಲ್ಲಿ ಯಾರೊಬ್ಬರು ಪ್ರಸಿಡೆಂಟರಾಗಿ ಬಂದರೂ ಮುಂದೆ ಕೌನ್ಸಿಲಿನ ಕಾರ್ಯಗಳು ಸುಲಲಿತವಾಗಿ ನಡೆಯುವುವೆಂದು ತೋರುವುದಿಲ್ಲ.

ಕಳೆದ ತಾ|| ೧೫ರಲ್ಲಿ ದಿವಾನರ ಅಧ್ಯಕ್ಷತೆಯಿಂದ ಬೆಂಗಳೂರಿನಲ್ಲಿ ನಿಯಮನಿರ್ಮಾಣ ಸಭೆಯು ಕೂಡಿದ್ದಿತು. ಸಂಮಾನ್ಯರಾದ ಪ್ರಿನ್ಸ್‌ಆಫ್‌ವೇಲ್ಸ್‌ರವರು ಮೈಸೂರು ದೇಶಕ್ಕೆ ದಯಮಾಡಿಸಲು ಅನುಮತಿಯನ್ನಿತ್ತುದನ್ನು ಕುರಿತು ಸಭಾಧ್ಯಕ್ಷರು ಹೇಳಿ, ಅವರನ್ನು ಸ್ವಾಗತಿಸುವ ವಿಷಯವನ್ನು ಸೂಚಿಸಲು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಅದಕ್ಕೆ ಅನುಮೋದನೆಯಿತ್ತು ಪುಷ್ಟೀಕರಿಸಿದರು. ಸಭಿಕರೆಲ್ಲರೂ ಅತ್ಯಾನಂದದಿಂದ ಅವರ ಸ್ವಾಗತದಲ್ಲಿ ತಮ್ಮ ಆದರೋತ್ಸಾಹಗಳನ್ನು ಪ್ರದರ್ಶಿಸಿದರು. ಬಳಿಕ ರಾ|| ಬ|| ಎಂ. ಶ್ಯಾಮರಾಯರು ೨ ನೆಯ ಕೌನ್ಸಿಲರ್ ಮ|| ಪಿ. ರಾಘವೇಂದ್ರರಾಯರಿಗೆ ಶ್ರೀಮನ್ಮಹಾರಾಜರಿಂದ ರಾಜಮಂತ್ರಪ್ರವೀಣ ಎಂಬ ಬಿರುದು ಪ್ರಾಪ್ತವಾದುದಕ್ಕಾಗಿ ಸಭಿಕರ ಸಂತೋಷವನ್ನು ವ್ಯಕ್ತಪಡಿಸಿ ಭಾಷಣಮಾಡಿದರು. ಬಳಿಕ ಉಳಿದ ಸಭಾಕಾರ್ಯಗಳು ಜರುಗಿದುವು.

ಚೆನ್ನಪಟ್ಟಣದ ಅಮಲ್ದಾರರಮೇಲೆ ಕಾರ್ಯಭಾಗಕ್ಕೆ ಹೋಗಿದ್ದ ಶ್ಯಾನುಭೋಗರುಗಳು ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಲ್ಲಿ ದೂರುಹೇಳಿಕೊಳ್ಳಲು, ಅವರು ಸ್ಥಳಕ್ಕೆಹೋಗಿ ಸಂಗತಿಗಳನ್ನೆಲ್ಲಾ ಕೂಲಂಕಷವಾಗಿ ವಿಚಾರಿಸಿದಾಗ ಅಮಲ್ದಾರರು ಕೇಳಿದ ವಿಷಯವು ನ್ಯಾಯವಾದುದೆಂದೂ ಶ್ಯಾನುಭೋಗರುಗಳು ಮಾಡಿದುದು ತಪ್ಪೆಂದೂ ಅಭಿಪ್ರಾಯಪಟ್ಟುದರಮೇಲೆ, ಅವರುಗಳು ಕ್ಷಮಾಪಣೆ ಕೇಳಿಕೊಂಡು ತಂತಮ್ಮ ಕೆಲಸಗಳಮೇಲೆ ಹೋದರೆಂದು ಕೇಳುತ್ತೇವೆ. ತಮ್ಮಲ್ಲಿ ತಪ್ಪಿದ್ದರೂ ತಮ್ಮ ಅಧಿಕಾರಿಗಳಮೇಲೆ ಇಷ್ಟು ಔದ್ಧತ್ಯದಿಂದ ನಡೆದುಕೊಳ್ಳುತ್ತಿರುವ ಜನರು ಗ್ರಾಮಾಂತರದ ಮೂಢಜನರನ್ನು ಎಷ್ಟುಮಟ್ಟಿಗೆ ಚಿಟಿಗುಮುಳ್ಳಾಡಿಸುತ್ತಿರಬಹುದೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ಶ್ಯಾನುಭೋಗರುಗಳನ್ನು ಸಂಬಳಗಾರರನ್ನಾಗಿಮಾಡಿ ವರ್ಗಾಯಿಸುವುದೇ ಅದಕ್ಕೆ ತಕ್ಕ ಪರಿಹಾರವು.

ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆ.

(ವಿದ್ಯಾಭ್ಯಾಸದ ವಿಷಯಗಳಮೇಲೆ)

ವಿದ್ಯಾಭ್ಯಾಸ ಸಂಬಂಧವಾಗಿ ಚರ್ಚೆಗಿಡಲ್ಪಟ್ಟಿದ್ದ ವಿಷಯಗಳೊಳಗೆಲ್ಲಾ ವಿದ್ಯಾಭ್ಯಾಸದ ಕಂದಾಯವನ್ನು ವಸೂಲುಮಾಡುವ ವಿಷಯವು ಮೊದಲನೆಯದಾಗಿದ್ದಿತು. ಇದನ್ನು ಚರ್ಚೆಗಿಟ್ಟಿದ್ದ ಸಭಿಕರುಗಳು ೧೯ ಮಂದಿಗಳಲ್ಲಿ ೧೫ ಮಂದಿಗಳು ಬ್ರಾಹ್ಮಣರಾಗಿಯೂ ೪ ಮಂದಿಗಳು ಇತರರಾಗಿಯೂ ಇದ್ದರು. ಇಟ್ಟಿದ್ದ ಸಜ್ಜೆಕ್ಷನ್‌ಗಳ ಮುಖ್ಯಾಭಿಪ್ರಾಯವೇನೆಂದರೆ—"ವಿದ್ಯಾಭ್ಯಾಸದ ವೆಚ್ಚಕ್ಕೋಸ್ಕರವೇ ಎಂದು ಹೇಳಿ ವರಮಾನದ ತೆರುಗೆಯನ್ನು ವಿಧಿಸಿ ಎತ್ತುತ್ತಿರುವುದರಿಂದ ಈ ಹೊಸ ತೆರುಗೆಯನ್ನು ವಿಧಿಸಕೂಡದು. ಇದನ್ನು ವಿಧಿಸುವುದಾದರೆ ವರಮಾನದ ತೆರುಗೆಯನ್ನು ತಪ್ಪಿಸಿಬಿಡಬೇಕು. ಎರಡರಲ್ಲಿ ಯಾವುದಾದರೊಂದು ಮಾತ್ರ ಇರಬೇಕು. ಈಗಿರುವ ಲೋಕಲ್‌ಇರಿಗೇಷನ್ ಮೊದಲಾದ ತೆರುಗೆಗಳೇ ರೈತರುಗಳಿಗೆ ದುರ್ಭರವಾಗಿವೆ. ವಿದ್ಯಾಭ್ಯಾಸದ ಸೆಸ್ಸನ್ನು ವಿಧಿಸುವುದಾದರೆ ಭೂಕಂದಾಯವನ್ನಾಗಲೀ ಮೊಹತರ್ಫವನ್ನಾಗಲೀ ಕೊಡದಿರುವವರ ಸಂಬಳದಮೇಲೆ ಇಷ್ಟೆಂದು ವಿಧಿಸಿ ಎತ್ತಬೇಕು" ಎಂಬುದಾಗಿ. ಈ ವಿಷಯದ ಮೇಲೆ ಸಭೆಯೊಳಗೆ ನಡೆದ ಚರ್ಚೆಯು ಹೀಗಿದ್ದಿತು—

ಮ|| ಎಚ್. ಕೃಷ್ಣಶಾಸ್ತ್ರಿಗಳು—ಇದರ ಸಂಬಂಧವಾಗಿ ಲೆಜಿಸ್ಲೇಟೀವ್ ಕೌನ್ಸಿಲಿನಲ್ಲಿ ಹೆಚ್ಚಾಗಿ ಚರ್ಚೆನಡೆದು ಒಂದು ಸ್ಥಿತಿಗೆ ಬಂದು ನಿಂತಿದೆ. ಪ್ರಕೃತದಲ್ಲಿ ಈ ಸೆಸ್ಸು ಅವಶ್ಯಕವೆಂದೇ ಕಾಣುತ್ತಿದೆ. ಸರ್ಕಾರಕ್ಕೆ ಹಣದಕೊರತೆ ಇರುವವರೆಗೆ ಮಾತ್ರ ಇದನ್ನು ತಾತ್ಕಾಲಿಕವಾಗಿ ವಸೂಲ್ಮಾಡುವಂತೆ ಆಗಬೇಕು.

ಮ|| ಆಂಜನೇಯಸೆಟ್ಟರು—ವರಮಾನದ ತೆರುಗೆಯನ್ನು ವಿದ್ಯಾಭ್ಯಾಸದ ವೆಚ್ಚಕ್ಕೆ ಉಪಯೋಗಿಸುತ್ತೇವೆಂದು ಹೇಳಿದ್ದರು. ಈಗ ಇದನ್ನು ಬೇರೆ ಹೊಸದಾಗಿ ಹಾಕಬಾರದು. ಈಗಿರುವ ತೆರುಗೆಗಳೇ ಹೆಚ್ಚಾಗಿವೆ. ಜವಳಿಸುಂಕ ಮೊದಲಾದುವುಗಳೆಷ್ಟೋ ಬಿದ್ದಿವೆ.

ಕೌನ್ಸಿಲ್ ೩ನೆ ಮೆಂಬರು—ಈ ತೆರುಗೆಯ ವಿಷಯವನ್ನು ನಿಂನಿಮ್ಮ ಲೋಕಲ್ ಬೋರ್ಡುಗಳಲ್ಲಿ ಚರ್ಚೆಮಾಡಿ ಬೇಕ

ದ್ದರೆ ವಸೂಲ್ಮಾಡಿಕೊಳ್ಳುವ ಇಲ್ಲವೆ ಬಿಟ್ಟುಬಿಡುವ ಏರ್ಪಾಟನ್ನು ಮಾಡಿಕೊಳ್ಳಬಹುದು. ನಿಮಗೆ ಇಂಗ್ಲೀಷ್ ಮೊದಲಾದ ವಿದ್ಯಾಭ್ಯಾಸದ ಸೌಕರ್ಯಗಳು ಬೇಕೊ ಬೇಡವೋ? ಬೇಕಿದ್ದರೆ ಅದರವೆಚ್ಚಕ್ಕೆಲ್ಲಾ ಹಣವನ್ನು ಎಲ್ಲಿಂದ ತರಬೇಕು? ವಿದ್ಯಾಭ್ಯಾಸದ ಮೆಮೊರಾಂಡಮ್ಮಿನ ವಿಮರ್ಶೆಯ ಸಂದರ್ಭದಲ್ಲಿ ಇದರ ಚರ್ಚೆಯೆಲ್ಲಾ ಆಗಿದೆ. ತಾಲ್ಲೂಕು ಡಿಸ್ಟ್ರಿಕ್ಟು ಬೋರ್ಡುಗಳವರು ಒಪ್ಪಿದರೆ ಈ ತೆರುಗೆಯನ್ನು ವಸೂಲ್ಮಾಡಬಹುದೆಂದು ನಿರ್ಧರವಾಗಿದೆ.

ಮಿ|| ಅಬ್ಬಾಸ್ ಖಾನರು—ಈ ತೆರುಗೆಯನ್ನು ಪ್ರಜೆಗಳು ಕೊಡಬೇಕಾದ ಆವಶ್ಯಕತೆಯು ಬಹಳ ಇದೆ. ಇಂಗ್ಲೀಷು ಸ್ಕೂಲುಗಳು ೬೦೦ ರ ವರೆಗೆ ಹೆಚ್ಚಾಗಬೇಕಾಗಿದೆ. ಗ್ರಾಂಟ್ ಸ್ಕೂಲುಗಳೆಲ್ಲಾ ವಜಾ ಆಗಿ ೧೦೦೦೦ ಗೌರ್ನಮೆಂಟ್ ಸ್ಕೂಲುಗಳು ಆಗಬೇಕೆಂದು ಮೊದಲಾಗಿ ಮೆಮೊರಾಂಡಮ್ಮಿನಲ್ಲಿದೆ. ಇವೆಲ್ಲವುಗಳ ಏರ್ಪಾಟಿಗೆ ೭೫ ಲಕ್ಷ ರೂ. ಗಳ ವರೆಗೆ ವೆಚ್ಚವಾಗಬೇಕಾಗುತ್ತದೆ. ಈ ತೆರುಗೆಯೇನೂ ಅತ್ಯಂತ ಭಾರವಾಗುವುದಿಲ್ಲ. ಪ್ರಜೆಗಳಾದ ನಾವುಗಳೆಲ್ಲಾ ಅಲ್ಪಸ್ವಲ್ಪ ಈ ತೆರುಗೆಯ ರೂಪವಾಗಿ ಕೊಟ್ಟು, ಹೆಚ್ಚಾದ ಸಹಾಯದ್ರವ್ಯವನ್ನು ಸರ್ಕಾರದಿಂದ ಪಡೆದು ನಮ್ಮಗಳ ವಿದ್ಯಾಭ್ಯಾಸಕ್ಕೆ ವಿಶೇಷ ಅವಕಾಶವನ್ನು ಕಲ್ಪಿಸಿಕೊಳ್ಳಬೇಕಾಗಿದೆ.

ಮ|| ಹನುಮಂತರಾಯರು—ವ್ಯವಸಾಯಗಾರರ ಮೇಲೆಯೇ ಈ ಭಾರವು ವಿಶೇಷವಾಗಿ ಬೀಳುತ್ತದೆ. ಈಗಲೇ ಅವರಿಂದ ಕಂದಾಯವನ್ನು ವಸೂಲು ಮಾಡುವುದು ಕಷ್ಟ. ಈಗಿರುವುದನ್ನೇ ಅನೇಕರು ತೆರಲಾರರು.

ಎ|| ಇ|| ಜನರಲ್‌ರವರು—ಈ ಕಂದಾಯವು ರೈತರ ಮೇಲೆಯೇ ಅಲ್ಲ; ವ್ಯಾಪಾರಿಗಳು ಮೊದಲಾದವರ ಮೇಲೆಲ್ಲಾ ಬೀಳುತ್ತದೆ. ಅವರುಗಳು ರೂಪಾಯಿಗೆ ೨ ಆಣೆ ಮೇರೆಗೆ ಕೊಡಬೇಕಾಗುತ್ತದೆ.

ಮ|| ಆಂಜನೇಯಸೆಟ್ಟರು—ಈ ತೆರುಗೆಯ ರೂಪದಿಂದ ಸರ್ಕಾರಕ್ಕೆ ೪-೫ ಲಕ್ಷ ರೂ. ಗಳು ಬರಬಹುದು. ಉಳಿದುದನ್ನೆಲ್ಲಾ ಸರ್ಕಾರದವರೇ ವಹಿಸಬೇಕಾಗುವುದು. ಹಾಗಿರುವಾಗ ಈ ಅಲ್ಪವಾದ ಮೊಬಲಗನ್ನು ಅವರೇ ವಹಿಸಿಕೊಂಡರೆ ಅನುಕೂಲವಾಗಿರುತ್ತದೆ. ರೈತರು ಹೊಸಹೊಸ ಕಂದಾಯಗಳನ್ನು ಹೊರಲಾರರು.

ಮ|| ಮಳಲಿ ವೆಂಕಟರಾಮಯ್ಯನವರು:—ಈಗಿರುವ ಕಂದಾಯಗಳೇ ಹೆಚ್ಚಾಗಿರುವಾಗ ಹೊಸ ಕಂದಾಯವನ್ನು ತೆರಲು ಪ್ರಜೆಗಳು ಶಕ್ತರಾಗಿಲ್ಲ. ಅದನ್ನು ಮನ್ನಾಮಾಡಬೇಕು.

ಎ|| ಇ|| ಜನರಲ್‌ರವರು—ಈ ವಿದ್ಯಾಭ್ಯಾಸದ ತೆರುಗೆಯನ್ನು ವಿಧಿಸಿದರೆ ೧೧|| ಲಕ್ಷ ರೂ. ಗಳು ಬರುತ್ತವೆಂದು ಅಂದಾಜಾಗಿದೆ. ಭೂಕಂದಾಯದ ಮೇಲೆಯೇ ಅಲ್ಲದೆ ಮ್ಯುನ್ಸಿಪಲ್ ಕಂದಾಯ ವರಮಾನದ ಕಂದಾಯ ಮೊದಲಾದುವುಗಳ ಮೇಲೆಲ್ಲಾ ರೂಪಾಯಿಗೆ ಇಷ್ಟೆಂದು ಈ ತೆರುಗೆಯು ಬೀಳುವುದು. ಅದರಿಂದ ಒಟ್ಟು ೧೨|| ಲಕ್ಷ ರೂ. ಗಳ ಆದಾಯವಾಗುತ್ತದೆ.

ಮ|| ಟಿ. ನರಸಿಂಗರಾವ್‌ರವರು—ಇದಕ್ಕೆ ಬ್ರಾಹ್ಮಣರನ್ನೈಕಿ ಬಹುಜನರು ವಿರೋಧಿಸಲಾರರು. ಈ ತೆರುಗೆಯನ್ನು ವಿಧಿಸುವುದು ಯುಕ್ತವು. ಇದರ ಸಹಾಯದಿಂದ ದೇಶದಲ್ಲಿ ಹೆಚ್ಚು ಜನರು ವಿದ್ಯಾವಂತರಾಗುತ್ತ ಬಂದರೆ ಯೂನಿವರ್ಸಿಟಿಗೂ ಆದಾಯವು ಹೆಚ್ಚಾಗುತ್ತದೆ. ಅದರಲ್ಲಿ ಫ್ಯಾಕಲ್ಟಿಗಳನ್ನು ಹೆಚ್ಚಿಸಲು ಅವಕಾಶವಾಗುತ್ತದೆ. ಎಲ್ಲರೂ ಏಕಮತ್ಯದಿಂದ ಅನುಮತಿಕೊಡಬೇಕು.

ಮ|| ಟಿ. ನಂಜಪ್ಪನವರು—ಈ ತೆರುಗೆಯನ್ನು [illegible]ಲು ನಾವು ಒಪ್ಪುತ್ತೇವೆ. ಆದರೆ ಇದರಿಂದ ಬರುವ ಧನವನ್ನೆಲ್ಲಾ ಪ್ರೈಮರಿ ವಿದ್ಯಾಭ್ಯಾಸಕ್ಕೇ ಉಪಯೋಗಿಸುತ್ತೇವೆಂದು ಸರ್ಕಾರದವರು ವಾಗ್ದಾನಮಾಡಬೇಕೆಂದು ಕೋರುತ್ತೇನೆ.

ಮ|| ಗೋಪಾಲಸ್ವಾಮಯ್ಯರು—ನಿರ್ಬಂಧ ವಿದ್ಯಾಭ್ಯಾಸ ಪದ್ಧತಿಯನ್ನು ಎಲ್ಲರೂ ಕೋರುತ್ತಿರುವಾಗ ಅದಕ್ಕೆ ತಕ್ಕ ಸಿಬ್ಬಂದಿಯ ವೆಚ್ಚವು ಆಗಲೇಬೇಕು. ಈ ವಿಷಯವನ್ನೆಲ್ಲಾ ಸರ್ಕಾರದವರು ಚೆನ್ನಾಗಿ ಪರ್ಯಾಲೋಚನೆ ಮಾಡಿಯೇ ಏರ್ಪಡಿಸಿರುತ್ತಾರೆ. ಆದರೆ ಈ ತೆರುಗೆಯ ಮ್ಯಾಗ್ಜಿಮಮ್ (ಪರಿಮಿತಿ) ಇಷ್ಟೇ ಸರಿಯೆಂದು ಬರೆದಿಟ್ಟು ಕೊಡಬೇಕು. ಏಕೆಂದರೆ ವರ್ಷೇ ವರ್ಷೇ ವೆಚ್ಚವು ಹೆಚ್ಚುತ್ತಲೇ ಹೋಗುತ್ತದೆ. ಸಂಸ್ಥಾನದಲ್ಲಿ ೧೦೦೦೦ ಸ್ಕೂಲುಗಳು ಸ್ಥಾಪಿತವಾದರೆ ಆಗ್ಗೆ ವೆಚ್ಚವು ಹೆಚ್ಚಿಕೊಂಡು ಪ್ರಜೆಗಳು ಈ ತೆರುಗೆಯನ್ನು ರೂಪಾಯಿಗೆ ೫-೬ ಆಣೆಯಂತೆ ಕೊಡಬೇಕಾದೀತೋ ಏನೋ. ಅದು ಕಾರಣ ಆ ವಿಷಯವಾಗಿ ಮಿನಿಮಮ್ ಗೊತ್ತುಮಾಡಿ ಹೇಳಿಬಿಡಬೇಕು. ಈ ವಿಷಯವನ್ನು ಸಭಿಕರ ಓಟಿಗಾಗಿ ಇಡುವುದಾದರೆ ಮೊದಲು ಖರ್ಚಿನ ಅಂದಾಜನ್ನೆಲ್ಲಾ ಕಾಣಿಸಿ ಮೆಮೊರಾಡಂ ಮಾಡಿಕೊಟ್ಟು ಆ ಬಳಿಕ ಓಟಿಗೆ ಹಾಕಬೇಕು.

ಮ|| ವಿಜಯದೇವರವರು—ಹೊಸ ತೆರುಗೆಯನ್ನು ಕೊಡುವುದೂ ಅದನ್ನು ವಿಧಿಸುವುದೂ ಇವೆರಡೂ ವಿಚಾರಣೆಯಿಂದ ಆಗಬೇಕಾದದ್ದೇ. ವಿದ್ಯಾಭ್ಯಾಸ ಸಂಸ್ಕಾರಕ್ಕಾಗಿ ಮೆಮೊರಾಡಂ ಏರ್ಪಟ್ಟಿರುವುದು ಎಲ್ಲರಿಗೂ ಗೊತ್ತೇ ಇದೆ. ದೇಶದಲ್ಲಿ ಬಹಳ ಜನರು ಅವಿದ್ಯಾವಂತರಾಗಿದ್ದಾರೆ. ಆ ಲೋಪವನ್ನು ಪರಿಹರಿಸುವ ಕೆಲಸಕ್ಕಾಗಿ ವರ್ಷ ೧ಕ್ಕೆ ೩೭ ಲಕ್ಷದವರೆಗೂ ವೆಚ್ಚವಾಗಬೇಕಾಗುತ್ತದೆ. ಇಷ್ಟು ಹಣವನ್ನು ಒದಗಿಸಲು ಸರ್ಕಾರಕ್ಕೆ ರಹ ಇಲ್ಲವೆಂಬುದು ನಿಮಗೆಲ್ಲಾ ಗೊತ್ತೇ ಇದೆ. ಅವರೇ ಸಾಲಮಾಡುತ್ತಿದ್ದಾರೆ. ಪ್ರಜೆಗಳಿಗೆ ಅತ್ಯಂತ ಪ್ರಯೋಜಕವೂ ಮತ್ತು ಅವಶ್ಯಕವೂ ಆದ ಎಂದರೆ ಅವಿದ್ಯಾವಂತರ ಸಂಖ್ಯೆಯನ್ನು ಕಡಮೆಮಾಡಬೇಕೆಂಬ ಉದ್ದೇಶವು ನಿಮ್ಮಗಳಿಗೆಲ್ಲಾ ಇಷ್ಟವಾಗಿದ್ದರೆ ತೆರುಗೆಯನ್ನು ಕೊಡಲು ಸಿದ್ಧರಾಗಬೇಕು. ವೆಚ್ಚಕ್ಕೆ ಹಣವಿಲ್ಲವೆಂಬ ಕಾರಣದಿಂದ ಮೆಮೊರಾಡಮ್ಮನ್ನು ಜಾರಿಗೆತರಲಿಕ್ಕಿಲ್ಲದೆ ನಿಲ್ಲಿಸಿಬಿಟ್ಟರೆ ಪ್ರಜೆಗಳಾದ ನಾವೇ ಕೆಟ್ಟುಹೋಗುತ್ತೇವೆ. ಅದುಕಾರಣ ನಾವು ತೆರುಗೆಯನ್ನು ಕೊಟ್ಟು ನಮ್ಮ ಮತ್ತು ನಮ್ಮ ಮಕ್ಕಳ ಕ್ಷೇಮವನ್ನು ನಾವೇ ಅಭಿವೃದ್ಧಿಪಡಿಸಿಕೊಳ್ಳಬೇಕು.

ಮ|| ಕಾಳಪ್ಪನವರು—ರೂ. ಗೆ ೧ ಆಣೆ ೨ ಆಣೆಯಲ್ಲ; ೪ ಆಣೆಯಂತೆ ಸೆಸ್ಸನ್ನು ವಿಧಿಸಿದರೂ ನಾವು ಕೊಡಲು ಸಿದ್ಧರಾಗಿದ್ದೇವೆ. ಮುಖ್ಯವಾಗಿ ನಮ್ಮಗಳ ಮಕ್ಕಳು ವಿದ್ಯಾವಂತರಾದರೆ ಸಾಕು.

ಮ|| ಕೃಷ್ಣಮೂರ್ತ್ಯಾಚಾರ್ಯರು—ಇನ್ನು ಮುಂದಕ್ಕೆ ಈ ತೆರುಗೆಯು ಸೆಂಟ್‌ಪರ್ಸೆಂಟು (ನೂರಕ್ಕೆ ನೂರು) ಬೀಳುವಂತೆ ಆದರೂ ಆಗಬಹುದು. ಅದನ್ನು ತಪ್ಪಿಸಲಿಕ್ಕಾಗಿ ಸಂಸ್ಥಾನದಲ್ಲಿರುವ ಎಲ್ಲಾ ಮನೆಗಳ ಮೇಲೂ ಒಂದು ನಿಯತವಾದ ತೆರುಗೆಯನ್ನು ವಿಧಿಸಿಬಿಡಬಹುದು. ಮುಂದೆ ಮ್ಯಾಸ್ಟರುಗಳ ಸಂಖ್ಯೆಯು ಹೆಚ್ಚಾದರೆ ಸಂಬಳದ ವೆಚ್ಚವು ಹೆಚ್ಚುತ್ತದೆ. ಮತ್ತು ಅವರುಗೆಲ್ಲಾ ಪೆನ್ಷನ್ ಕೊಡಬೇಕಾಗುತ್ತದೆ. ಅದುಕಾರಣ ಮೊದಲು ಲೋಕಲ್ ಬೋರ್ಡುಗಳಲ್ಲಿ ಈ ವಿಷಯವನ್ನು ಚರ್ಚಿಸಿ ತೀರ್ಮಾನಿಸಲಿಕ್ಕೆ ಅವಕಾಶಕೊಟ್ಟು ತದನಂತರ ವಿಧಿಸುವುದು ಒಳ್ಳೇದು.

ಮ|| ಡಿ. ಎಸ್. ಮಲ್ಲಪ್ಪನವರು—ದೇಶದ ಸಕಲಪ್ರಜೆಗಳಲ್ಲೂ ವಿದ್ಯಾವ್ಯಾಪನೆಯಾಗಬೇಕಾದರೆ ಅದಕ್ಕೆ ಹಣವು ಅವಶ್ಯಕ. ಆದುದರಿಂದ ಈ ತೆರುಗೆಗೆ ನಾವು ವಿರೋಧವನ್ನು ಹೇಳಬಾರದು. ಸರ್ಕಾರಕ್ಕೆ ಧನಸಹಾಯವನ್ನು ನಾವು ಮಾಡಿಕೊಡದಿದ್ದರೆ ಅವರು ನಮ್ಮಗಳ ಹಿತಾರ್ಥವಾದ ಏರ್ಪಾಟನ್ನು ಮಾಡಿಕೊಡಲಾರರು. ಇದಕ್ಕಾಗಿ ಮನೆಗಳ ಮೇಲೆ ಕಂದಾಯವನ್ನು ಹಾಕುವುದು ಸರಿಯಲ್ಲ. ರೈತರು ಮೊದಲಾದವರಿಗೆಲ್ಲಾ ಈ ಹೊಸತೆರುಗೆಯು ದಾಮಾಷಾಯಿ ೧ ಅಥವಾ ೧|| ರೂ. ನಷ್ಟು ಬೀಳಬಹುದು. ಈ ತೆರುಗೆಯನ್ನು ನಮ್ಮ ಅಭಿವೃದ್ಧಿಗೆ ಬಂಡವಾಳವೆಂದು ತಿಳಿದು ಕೊಡಬೇಕು. ಮಿಲ್ಲರ್ ಕಮಿಟಿ ರಿಪೋರ್ಟು ಜಾರಿಗೆ ಬಂದು ಸಫಲವಾಗಬೇಕಾದರೆ ವಿದ್ಯಾಭ್ಯಾಸವು ಪ್ರಜೆಗಳಲ್ಲಿ ಹೆಚ್ಚಲೇಬೇಕು. ಅದುಕಾರಣ ಸರ್ವರೂ ಈ ಹೊಸ ತೆರುಗೆಗೆ ಅನುಮೋದಿಸಬೇಕು. ಲೋಕಲ್ ಬೋರ್ಡುಗಳ ವಿಚಾರಕ್ಕೆ ಇದನ್ನು ಕೊಟ್ಟು ಕಾಲಯಾಪನೆ ಮಾಡುವುದಕ್ಕಿಂತಲೂ ಸರ್ಕಾರದವರೇ ಬೇಗನೆ ಇದನ್ನಾರಂಭಿಸಿ ಕೆಲಸಮಾಡಬೇಕು.

ಮ|| ಜಿ. ನಾರಣಯ್ಯಂಗಾರರು—ಈ ತೆರುಗೆಯು ವಿದ್ಯಾಭ್ಯಾಸ ಸಹಾಯಾರ್ಥವಾಗಿರುವುದರಿಂದ ಇದಕ್ಕೆ ಅಭ್ಯಂತರವಿರಕೂಡದು. ಪ್ರಜೆಗಳಲ್ಲಿ ಕೆಲವರಿಗೆ ಯಾವ ವಿಧವಾದ ತೆರುಗೆಯ ಭಾರವೂ ಇಲ್ಲದೆ ಅವರುಗಳು ವಿದ್ಯಾಭ್ಯಾಸದ ಅನುಕೂಲವನ್ನು ಹೊಂದುತ್ತಿದ್ದಾರೆ. ಜಮೀನ್ದಾರರು ಮೊಹತರ್ಪಾಕೊಡುವವರು ಇಂಥವರುಗಳ ಮೇಲೆಯೇ ಈ ಸೆಸ್ಸುಗಳೆಲ್ಲಾ ಬೀಳುತ್ತವೆ. ಮನೆಕಂದಾಯವನ್ನು ಮನೆಯ ಮಾಲಿಕರೇ ಕೊಡುತ್ತಾರೆ. ಸ್ವಂತಮನೆಯಿಲ್ಲದೆ ಬೇರೆಬೇರೆ ಉದ್ಯೋಗದಿಂದ ಜೀವಿಸತಕ್ಕವರು ಯಾವ ಸೆಸ್ಸನ್ನೂ ಕೊಡದೆ ಕೊಟ್ಟವರ ಜತೆಯಲ್ಲೇ ಎಲ್ಲಾ ಅನುಕೂಲ್ಯಗಳನ್ನೂ ಅನುಭವಿಸುತ್ತಾರೆ. ಅಂಥವರಿಂದೆಲ್ಲಾ ನ್ಯಾಯವಾಗಿ ಸೆಸ್ಸು ವಸೂಲಾಗಲೇಬೇಕು. ಹೀಗೆ ಮಾಡಿದರೇನೆಯೇ ಅವಶ್ಯಕವಾದ ಸರ್ಕಾರದ ವೆಚ್ಚಗಳಿಗೆ ಹಣವು ಒದಗುತ್ತದೆ.

ಮ|| ಓಂಕಾರಪ್ಪನವರು—ರೈತರು ಇದನ್ನೊಂದು ಭಾರವಾಗಿ ತಿಳಿಯುವುದಿಲ್ಲ. ಅವರು ಹೊರುವ ಭಾರವು ಸ್ವಲ್ಪ, ಪಡೆಯುವ ಲಾಭವು ವಿಶೇಷವಾಗಿರುತ್ತದೆ. ಅದುಕಾರಣ ಅವಶ್ಯಕವಾಗಿ ಈ ತೆರುಗೆಯನ್ನು ವಿಧಿಸಬಹುದು.

ಮ|| ಶ್ರೀನಿವಾಸಯ್ಯಂಗಾರರು—ಮೆಮೊರಾಂಡಮ್ಮನ್ನು ನೋಡಿದರೆ ಬಾಲ ವಿದ್ಯಾಭ್ಯಾಸಕ್ಕಾಗಿ ೨೧ ಲಕ್ಷವೂ ಚಿಲ್ಲರೆ ವೆಚ್ಚವೆಂದು ಗೊತ್ತಾಗುತ್ತದೆ. ಇದರಲ್ಲಿ ಲೋಕಲ್ ಟ್ಯಾಕ್ಸೇಷನ್ ರೂಪವಾಗಿ ಪ್ರಜೆಗಳಿಂದ ಒದಗತಕ್ಕದ್ದೆಷ್ಟೋ ಇರುತ್ತದೆ. ಅದರ ಮೇಲೂ ಈ ಹೊಸ ತೆರುಗೆ ಬೇರೆಯೆ? ಪ್ರೌಢ ವಿದ್ಯಾಭ್ಯಾಸಕ್ಕಾಗಿ ತಗಲುವ ವೆಚ್ಚವನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡು, ಬಾಲವಿದ್ಯಾಭ್ಯಾಸದ ವೆಚ್ಚಕ್ಕಾಗಿ ಸರ್ಕಾರದವರು ಕೊಡುವುದೆಷ್ಟು? ಪ್ರಜೆಗಳು ಕೊಡಬೇಕಾದುದೆಷ್ಟು? ಎಂಬುದು ಗೊತ್ತಾಗಬೇಕು.

ಸರ್ಕಾರದ ಉತ್ತರ—ಬಾಲವಿದ್ಯಾಭ್ಯಾಸಕ್ಕೆ ೧೦ ಲಕ್ಷ ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ೨೫ ಲಕ್ಷ ವೆಚ್ಚವು ಹಿಡಿಯುತ್ತದೆ.

ಮೆಂಬರು—ಈ ೨೫ ಲಕ್ಷದಲ್ಲಿ ಸರ್ಕಾರವು ಕೊಡುವುದೆಷ್ಟು? ಪ್ರಜೆಗಳಿಂದ ಬರುವುದೆಷ್ಟು? ಎಜುಕೇಷನ್ ಕೊಡುವಾಗ ಪ್ರಜೆಗಳಲ್ಲಿ ಭಿನ್ನಭಾವ ಇಡಬಾರದು.

ಮಿ|| ನೂರ್ ಮಹಮ್ಮದ್ ಸಾಬ್‌ರವರು—ಸರ್ಕಾರದವರು ಮಿಡಲ್ ಸ್ಕೂಲುಗಳವರೆಗೆ ಫ್ರೀ ಮಾಡಿಕೊಟ್ಟಿರುವುದರಿಂದ ಅವರ ಪ್ರತಿಫಲಕ್ಕಾಗಿ ಪ್ರಜೆಗಳು ಈ ಸೆಸ್ಸನ್ನು ಕೊಡಬೇಕಾದುದು ಧರ್ಮವಾಗಿದೆ.

ಮ|| ನಾ|| ಲಿಂಗಣ್ಣನವರು—ಈ ತೆರುಗೆಯನ್ನು ಕೊಡುವುದು ಅವಶ್ಯಕ. ಆದರೆ ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸದ ಅನುಕೂಲ್ಯಗಳನ್ನು ಹೆಚ್ಚಿಸಿಕೊಡಬೇಕು. ಮತ್ತು ಈ ಸೆಸ್ಸಿಗೆ ಲಿಮಿಟ್ ಇರಬೇಕು.

ಮ|| ಜಿ. ಪರಮಶಿವಯ್ಯನವರು—ಗ್ರಾಮಾಂತರದ ಜನರಿಗೆ ವಿದ್ಯಾಭ್ಯಾಸದ ಅನುಕೂಲ್ಯವನ್ನು ಕಲ್ಪನೆಮಾಡಿಕೊಡಬೇಕೆಂದು ಹಿಂದುಳಿದವರ ಪ್ರತಿನಿಧಿಗಳು ಸರ್ಕಾರದವರನ್ನು ಪ್ರಾರ್ಥಿಸುತ್ತ ಬಂದುದರ ಮೇಲೆ ಮಿ|| ರಾಮಲಿಂಗರಡ್ಡಿಯವರು ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನು ಕಲ್ಪಿಸಿದರು. ಅದನ್ನು ಸರ್ಕಾರದವರು ಅನುಮೋದಿಸಿ ಜಾರಿಗೆ ತರುವುದರಲ್ಲಿದ್ದಾರೆ. ಅದೂ ಜಾರಿಗೆ ಬಾರದ ಹೊರತು ಹಿಂದುಳಿದ ಜನವರ್ಗಗಳು ಮುಂದಕ್ಕೆ ಬರುವುದಿಲ್ಲ. ಗ್ರಾಮಾಂತರದ ಜನರು ತಂತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲಿಕ್ಕಾಗಿ ತಲೆಗೆ ೫೦-೧೦೦ ರೂ. ಗಳಂತೆ ಮೂಗುವಳಿ ಮಾಡಿ ಉಪಾಧ್ಯಾಯರಿಗೆ ಕೊಡುತ್ತಿದ್ದಾರೆ. ಅವರಿಗೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಅಷ್ಟೊಂದು ಉತ್ಸಾಹವಿದೆ. ಆದುದರಿಂದ ಈ ಅಲ್ಪವಾದ ತೆರುಗೆಯನ್ನು ಕೊಡಲು ಅವರು ಹಿಂದೆಗೆಯಬಾರದು; ತೆಗೆಯಲೂ ಆರರು. ಅವರು ಈ ಅಲ್ಪವಾದ ತೆರುಗೆಯನ್ನು ಕೊಡಲು ಹಿಂಜರಿದು ಅಪಾರವಾದ ಲಾಭವನ್ನು ಕಳೆದುಕೊಳ್ಳುವಂತೆ ಮಾಡಿಕೊಳ್ಳಬಾರದು. ಅದುಕಾರಣ ಈ ತೆರುಗೆಯನ್ನು ಕೊಡಲು ಸಿದ್ಧರಾಗಿ ದೇಶದೊಳಗೆ ಹಿಂದುಳಿದವರೂ ಮುಂಬರಿದವರೂ ಎಂಬ ಭೇದವೇ ಇಲ್ಲದಂತೆ ಮಾಡಲು ಸಹಾಯಕರಾಗಬೇಕು.

ಮ|| ವೇಮಾರಡ್ಡಿಯವರು—ತೆರುಗೆಯನ್ನು ಕೊಡುವವರಿಗೆ ಕಷ್ಟ. ನಮ್ಮಲ್ಲಿ ಬಡವರೇ ಹೆಚ್ಚು. ಸರ್ಕಾರದವರು ವಿಧಿಸಿಬಿಟ್ಟರೆ ನಿರ್ಬಂಧದಿಂದ ಕೊಟ್ಟೇಕೊಡಬೇಕಾಗುತ್ತದೆ. ಸರ್ಕಾರದವರು ವಿದ್ಯಾಭ್ಯಾಸದ ಹೆಚ್ಚು ಖರ್ಚಿಗೆ ವರಮಾನದ ತೆರುಗೆಯ ಹಣವನ್ನು ಉಪಯೋಗಿಸಿಕೊಳ್ಳಬಹುದು. ದುರ್ನೀತಿಪರರಾದ ಕುಡಿಕರ ಮೂಲಕ ಎಕ್ಸೈಜು ಶಾಖೆಯಿಂದ ಸರ್ಕಾರಕ್ಕೆ ಬರುವ ಹಣವನ್ನು ರೈತರ ಜ್ಞಾನಾಭಿವೃದ್ಧಿಗೆ ಸಾಧಕವಾದ ವಿದ್ಯಾಭ್ಯಾಸಕ್ಕೆ ಉಪಯೋಗಿಸುವುದು ಧರ್ಮವಾಗಿದೆ. ಆ ದುಷ್ಕೃತ್ಯದ ಮೂಲಕ ಬಂದ ಹಣವನ್ನು ಖಜಾನೆಗೆ ಸೇರಿಸಿಕೊಳ್ಳುವುದು ಅಧರ್ಮ. ವಿದ್ಯಾಭ್ಯಾಸಕ್ಕೆ ಆ ಶಾಖೆಯ ವರಮಾನವನ್ನು ಉಪಯೋಗಿಸಿ ಉಳಿದುದನ್ನು ಜನರಲ್ ಫಂಡಿಗೆ ಸೇರಿಸಬಹುದು.

ಮ|| ಸಿ. ವಾಸುದೇವರಾವ್‌ರವರು—ಪ್ರಜೆಗಳಿಗೆಲ್ಲಾ ಇದನ್ನು ತಿಳಿಸಿ ಅವರಭಿಪ್ರಾಯವನ್ನು ಕೇಳಿ ಅನಂತರ ಈ ತೆರುಗೆಯನ್ನು ವಿಧಿಸಬೇಕು. ಪ್ರಜೆಗಳಿಗೆ ಬಾಲವಿದ್ಯಾಭ್ಯಾಸವನ್ನು ಜನರಲ್ ಫಂಡಿನಿಂದಲೇ ಸರ್ಕಾರವು ಮಾಡಿಸಬೇಕಾದುದು ಕರ್ತವ್ಯ. ಪ್ರೌಢವಿದ್ಯಾಭ್ಯಾಸದ ವೆಚ್ಚಕ್ಕೆ ಬೇಕಾದರೆ ತೆರುಗೆಯನ್ನು ವಿಧಿಸಬಹುದು. ಅದುಕಾರಣ ಬಾಲವಿದ್ಯಾಭ್ಯಾಸದ ವೆಚ್ಚಕ್ಕೆಂದು ಒಂದು ಸೆಸ್ಸನ್ನು ವಿಧಿಸುವುದು ಧರ್ಮವಲ್ಲ. ರಿಟ್ರೆಂಚಮೆಂಟ್ ಕೆಲಸವನ್ನೆಲ್ಲಾ ಪೂರೈಸಿ ಸಾಲದೆ ಹೋದರೆ ಆಗ್ಗೆ ಹೊಸ ತೆರುಗೆಯ ವಿಷಯವನ್ನು ಪರ್ಯಾಲೋಚಿಸಬೇಕು.

ಮ|| ಚೆನ್ನವೀರಪ್ಪಯ್ಯನವರು—ವಿದ್ಯಾಭ್ಯಾಸದ ಮೆಮೊರಾಂಡಂ ಏರ್ಪಾಟು ಮಾಡಿದುದನ್ನು ಕೇಳಿ ಹಳ್ಳಿಗಾಡಿನವರು ಬಹಳ ಸಂತೋಷಿಸುತ್ತಿದ್ದಾರೆ. ತಮ್ಮ ಮಕ್ಕಳಿಗೆ ಸರ್ಕಾರದವರು ವಿದ್ಯಾಭ್ಯಾಸಕ್ಕೆ ಅನುಕೂಲಪಡಿಸಿಕೊಡುವುದಾದರೆ ಒಂದು ಸೆಸ್ಸನ್ನು ಕೊಡಲು ತಾವು ಸಂತೋಷದಿಂದ ಒಪ್ಪಿಕೊಳ್ಳುತ್ತೇವೆಂದು ಗ್ರಾಮಾಂತರದ ಅನೇಕರು ತಿಳಿಸಿದ್ದಾರೆ. ಎಷ್ಟೆಷ್ಟೋ ದುರ್ವ್ಯಾಜ್ಯಗಳಿಗೆ ಅವರು ನೂರಾರು ಸಾವಿರಗಟ್ಟಲೆ ಖರ್ಚುಮಾಡುತ್ತಾರೆ. ಈ ಅಲ್ಪವಾದ ಸೆಸ್ಸನ್ನು ಕೊಡಲು ಅವರು ಹಿಂಜರಿಯುವುದಿಲ್ಲ.

ಮ|| ಕರಣಿಕ ಕೃಷ್ಣಮೂರ್ತಿರಾಯರು—ರಿಟ್ರೆಂಚ್‌ಮೆಂಟ್‌ಕಮಿಟಿಯವರು ಮಾಡಿದ ತೀರ್ಪು, ಅದರಮೇಲೆ ಸರ್ಕಾರದವರು ಮಾಡಿದ ಅಪ್ಪಣೆ—ಇವುಗಳ ವಿವರವು ತಿಳಿಯಬರಲಿಲ್ಲ. ಈಗ ಹೊಸ ಕಂದಾಯವನ್ನು ವಿಧಿಸಬೇಕಾದ ಅವಶ್ಯಕತೆಯು ಹೇಗೆ ಹುಟ್ಟಿತೆಂಬುದು ನಮಗೆ ತಿಳಿದಹೊರತು ಇದನ್ನು ವಿಧಿಸುವುದು ಸೂಕ್ತವಾಗಿ ತೋರಲಿಲ್ಲ. ಸ್ಕೂಲುಫೀಜುಗಳನ್ನು ಬೇಕಾದರೆ ಮತ್ತೆ ಆರಂಭಿಸಬಹುದು. ಓದುವವರೆಲ್ಲಾ ಕೊಡಲಿ; ಇತರರಿಗೆಲ್ಲಾ ವಿಧಿಸುವುದೇತಕ್ಕೆ? ಒಂದುಕಡೆ ಪ್ರತ್ಯಕ್ಷವಾಗಿ ಫೀಜನ್ನು ಮಾಫಿಮಾಡಿ, ಮತ್ತೊಂದುಕಡೆ ಪರೋಕ್ಷವಾಗಿ ಹೀಗೆ ಪ್ರಜೆಗಳಮೇಲೆ ಭಾರವನ್ನು ಹೇರುವುದು ಸರಿಯಲ್ಲ. ರೈತರ ಪ್ರತಿನಿಧಿಗಳಾಗಿ ನಾವು ಬಂದು ಇಂಥ ಹೊಸಹೊಸ ತೆರುಗೆಗಳಿಗೆ ಅವಕಾಶಕೊಡುವುದು ಧರ್ಮವಲ್ಲ. ಮಾರಿಕಣಿವೆ, ಕಾವೇರೀವಿದ್ಯುಚ್ಛಕ್ತಿ, ಚಿನ್ನದಗಣಿ, ಇತ್ಯಾದಿಗಳನ್ನೆಲ್ಲಾ ಪ್ರಜೆಗಳು ಕೊಟ್ಟ ಕಂದಾಯದ ಹಣದ ಬಂಡವಾಳದಿಂದ ಏರ್ಪಡಿಸಿದಿರಿ. ಅವುಗಳಿಂದ ಬರುವ ಲಾಭವನ್ನು ಪ್ರಜೆಗಳ ಹಿತಾರ್ಥವಾದ ಯಾವ ಕಾರ್ಯಕ್ಕೆ ಉಪಯೋಗಿಸಿದಿರಿ? ರೈಲ್ವೆಯ ಸೆಸ್ಸನ್ನು ಎತ್ತುತ್ತೀರಿ; ತುಮಕೂರು ಡಿಸ್ಟ್ರಿಕ್ಟಿನಲ್ಲಿ ಯಾವ ರೈಲ್ವೆಯನ್ನು ಹಾಕಿಸಿದ್ದೀರಿ?

ಮ|| ನಾರಾಯಣಶೆಟ್ಟರು—ಎಜುಕೇಷನಲ್ ಮೆಮೋರಾಂಡಂ ಜಾರಿಗೆ ದುಡ್ಡುಬೇಕು. ಗ್ರಾಮಾಂತರಗಳಲ್ಲಿ ವಿದ್ಯಾಪ್ರಚಾರವಿಲ್ಲ. ಡಿಸ್ಟ್ರಿಕ್ಟ್‌ತಾಲ್ಲೂಕು ಹೋಬಳಿ ಸ್ಥಳಗಳಲ್ಲಿ ಮಾತ್ರ ಸ್ಕೂಲುಗಳಿವೆ. ಜರ್ಮನರು ಮೊದಲು ಗ್ರಾಮಾಂತರಗಳಿಂದ ಅಭಿವೃದ್ಧಿಕಾರ್ಯಗಳನ್ನಾರಂಭಿಸಿದರು. ಹೊಸಹೊಸ ಸೆಸ್ಸುಗಳನ್ನುಹಾಕಿ ಅದರಿಂದ ಬಂದ ದುಡ್ಡನ್ನು ದೊಡ್ಡ ಪಟ್ಟಣಗಳಲ್ಲಿರುವವರ ವಿದ್ಯಾಭ್ಯಾಸಕ್ಕೆ ಉಪಯೋಗಿಸಿಬಿಟ್ಟರೆ ಫಲವಿಲ್ಲ. ಅವಶ್ಯಕವಾಗಿ ತೋರಿದರೆ ಈ ಸೆಸ್ಸನ್ನು ರೂಪಾಯಿಗೆ ೬ ಕಾಸಿನಂತೆ ಹಾಕಬೇಕು.

ಸರ್ಕಾರದ ಉತ್ತರ—ಎಷ್ಟು ವಿಧಿಸಬೇಕೆಂಬುದೇ ಮೊದಲಾದ ಅಧಿಕಾರವನ್ನು ನಿಮಗೇ ಕೊಟ್ಟಿದೆ. ಲೋಕಲ್ ಆಪ್ಷನ್ ನಿಮಗೇ ಇದೆ.

ಮ|| ಶ್ಯಾಮಯ್ಯಂಗಾರರು—ಬಲಾತ್ಕಾರ ವಿದ್ಯಾಭ್ಯಾಸದ ಏರ್ಪಾಟಿದ್ದರೂ ವ್ಯವಸಾಯಗಾರರ ಹುಡುಗರು ಸ್ಕೂಲಿಗೆ ಬರುವುದೇ ಇಲ್ಲ; ದನಕಾಯುವುದಕ್ಕೆ ಹೋಗುತ್ತಾರೆ. ವಿದ್ಯಾಭ್ಯಾಸದ ಸೆಸ್ಸನ್ನು ಹಾಕಬೇಕಾದರೆ ರೈತಾಪಿಜನರನ್ನೆಲ್ಲಾ ಕೇಳಿ ಹಾಕಿಸಬೇಕು. ಈ ಸೆಸ್ಸು ರೈತರಮೇಲೆ ಬೀಳಬಾರದು.

ಮ|| ವೆಂಕಟರಮಣಶಾಸ್ತ್ರಿಗಳು—ಬಲಾತ್ಕಾರದಿಂದ ಈ ಸೆಸ್ಸನ್ನು ಹಾಕಕೂಡದು. ಆಯಾ ಲೋಕಲ್‌ಬೋರ್ಡುಗಳ ಅನುಮತಿಪ್ರಕಾರ ಏರ್ಪಡಿಸಿಕೊಳ್ಳಬೇಕೆನ್ನುವುದಕ್ಕೆ ನಾನು ಒಪ್ಪುತ್ತೇನೆ. ಗ್ರಾಮಾಂತರಗಳ ಎ. ವಿ. ಸ್ಕೂಲುಗಳ ಸ್ಥಿತಿಯು ಬಹಳ ಅಸಮರ್ಪಕವಾಗಿದೆ. ಪಂಚಮರು ಸೇರಿ ಸ್ಕೂಲೆಲ್ಲಾ ಖಾಲಿಯಾಗಿವೆ. ಸರ್ಕೀಟುಬಂದು ಪರಾಮರಿಸಬೇಕು. ಸ್ಕೂಲುಗಳಸ್ಥಿತಿ ಅನುಕೂಲವಾಗಿದ್ದರೆ ಈ ಸೆಸ್ಸನ್ನು ವಿಧಿಸಬಹುದು. ಹಾಗಾಗುವವರೆಗೂ ವಿಧಿಸಲಾಗದು.

ಮ|| ನಾಗಲಿಂಗಯ್ಯನವರು—ಮುಖ್ಯವಾಗಿ ವಿದ್ಯಾಭ್ಯಾಸದ ಮೆಮೊರಾಂಡಂ ಜಾರಿಗೆಬಂದರೆ ನಾವು ಉದ್ಧಾರವಾಗುತ್ತೇವೆ. ಅದು ಜಾರಿಗೆ ಬರಲಿಕ್ಕಾಗಿ ಈ ಸೆಸ್ಸನ್ನು ವಿಧಿಸಬಹುದು.

ಮ|| ಕಾಂತರಾಜಪುರದ ನಂಜಪ್ಪನವರು—ದೊಡ್ಡದೊಡ್ಡ ಪಟ್ಟಣಗಳಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲವಿದೆ; ಗ್ರಾಮಾಂತರಗಳಲ್ಲಿಲ್ಲ. ಹಳ್ಳಿಗಾಡಿನ ಜನರ ದುಡ್ಡು ದಂಡ ಮೊದಲಾದ ಖರ್ಚಿಗೆ ಹೋಗುತ್ತದೆ. ಈ ಸೆಸ್ಸೇನೂ ಅಷ್ಟು ದೊಡ್ಡದಲ್ಲ. ಸದ್ಯದಲ್ಲಿ ಸೆಸ್ಸನ್ನುಹಾಕಿ ಹಳ್ಳಿಗಾಡಜನರಿಗೆ ವಿದ್ಯಾಭ್ಯಾಸಮಾಡಿಸಿ, ಅನಂತರ ವಜಾಮಾಡಬಹುದು.

ಮಿ|| ಸಯ್ಯದ್ ಅಬ್ದುಲ್‌ರಷೀದ್‌ರವರು—ಹಳ್ಳಿಗಾಡಿನ ರೈತರು ಈಗ ಬಡವರಾಗಿಲ್ಲ. ಧಾನ್ಯದ ಬೆಲೆ ಹೆಚ್ಚಾಗಿದೆ. ಕೋರ್ಟುಗಳಿಗೆ ಎಷ್ಟೋ ಖರ್ಚುಮಾಡುತ್ತಾರೆ. ಅಂಥವರು ಇದನ್ನು ಕೊಡುವುದಕ್ಕೆ ಹಿಂಜರಿಯುವುದಿಲ್ಲ. ೪೦೦ ರೂ. ನೊಳಗೆ ಉತ್ಪತ್ತಿಯುಳ್ಳವರಿಗೆ ವರಮಾನದತೆರುಗೆ ಬೀಳುವುದಿಲ್ಲ. ಅಂಥವರೆಲ್ಲಾ ಇದನ್ನು ಕೊಡುವಂತೆ ಮಾಡಬಹುದು. ಈ ಸೆಸ್ಸನ್ನು ವಜಾಮಾಡಿ ಸ್ಕೂಲುಫೀಜನ್ನು ಪೂರ್ವದಂತೆ ವಸೂಲ್ಮಾಡುವುದು ಧರ್ಮವಲ್ಲ. ಅನೇಕ ಹುಡುಗರು ಬಡವರಾಗಿರುತ್ತಾರೆ. ಅವರಮೇಲೆ ಧರ್ಮದೃಷ್ಟಿಯಿಡಬೇಕು. ಆದರೆ ಈ ಸೆಸ್ಸಿನಿಂದ ಬರುವ ಹಣವನ್ನೆಲ್ಲಾ ಹಳ್ಳಿಗಳ ಸ್ಕೂಲುಗಳ ಸ್ಥಾಪನೆಗೂ ಅಲ್ಲಿಯ ವಿದ್ಯಾಭಿವೃದ್ಧಿಗೂ ಉಪಯೋಗಿಸಬೇಕು. ಎಕ್ಸೈಜ್‌ಶಾಖೆಯಿಂದ ಬರುವ ಅಧರ್ಮವಾದ ಆದಾಯವನ್ನು ಪವಿತ್ರವಾದ ವಿದ್ಯಾಭ್ಯಾಸದಂಥ ಕೆಲಸದ ಖರ್ಚಿಗೆ ಉಪಯೋಗಿಸಬಾರದು. ಪ್ರಜೆಗಳೆಲ್ಲರೂ ಧರ್ಮದೃಷ್ಟಿಯಿಂದ ಈ ಸೆಸ್ಸನ್ನು ಕೊಟ್ಟು ಅದರ ಸಹಾಯದಿಂದ ಸಂಸ್ಥಾನದಲ್ಲಿ ವಿದ್ಯಾಪ್ರಸಾರವನ್ನು ಹೆಚ್ಚಿಸಬೇಕು.

ಮ|| ಇ. ಕೃಷ್ಣಪ್ಪನವರು—ಲೋಕಲ್‌ಬೋರ್ಡುಗಳಿಂದ ಬರುವ ಫಂಡಿನಜತೆಗೆ ಜನರಲ್‌ಫಂಡನ್ನು ಕೊಟ್ಟು ಬಾಲವಿದ್ಯಾಭ್ಯಾಸವನ್ನು ಸರ್ಕಾರದವರು ಮಾಡಿಸುವುದು ಯುಕ್ತ. ಈ ಸೆಸ್ಸನ್ನು ಮಾಫ್‌ಮಾಡಿಕೊಡಬೇಕು.

ಮ|| ಮುರಿಗೇಶಂಪಿಳ್ಳೆಯವರು—ಈ ಸೆಸ್ಸು ಗ್ರಾಮಾಂತರದವರ ವಿದ್ಯಾಭಿವೃದ್ಧಿಗೆ ಸಹಾಯಕವಾದುದು. ಇಲ್ಲಿಯ ದೊಡ್ಡಮನುಷ್ಯರುಗಳು ದೇವರಿಗೆ ಜಾತಿಯಿಲ್ಲ ಮನುಷ್ಯರಿಗೆ ಜಾತಿಯಿಲ್ಲ ಎಂದು ನಿನ್ನೆ ಮೊನ್ನೆ ಹೇಳಿದರು. ಈಗ ಪಂಚಮರು ಸ್ಕೂಲಿಗೆ ಬಂದದ್ದರಿಂದ ಅದು ಖಾಲಿಯಾಯಿತೆಂದು ಹೇಳುತ್ತಾರೆ. ಇದು ಅಪಮಾನಕರವಾಗಿದೆ. ಈ ಸೆಸ್ಸನ್ನು ವಿಧಿಸಿ ಜಾರಿಗೆ ತರುವುದು ಮುಖ್ಯವಾಗಿದೆ.

ಮ|| ಸಂಗನಬಸಪ್ಪನವರು—ಗ್ರಾಮಾಂತರಗಳಲ್ಲಿರುವ ಜನರಿಗೆ ಅವರವರ ಕಂದಾಯದ ಪಟ್ಟಿಗಳ ಮೇಲೆ ಏನುಬರೆದಿದೆಯೆಂಬುದೂ ಕೂಡ ತಿಳಿಯದು. ಗ್ರಾಮಾಂತರದ ಕುಟುಂಬಗಳೆಲ್ಲಾ ವಿದ್ಯಾವಂತರಾದರೆ ಎಷ್ಟೋ ಸುಖವಾಗುತ್ತದೆ. ನೀವು ಅಂಥವರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಿಸಲಿಕ್ಕಾಗಿ ಒಂದು ಸೆಸ್ಸನ್ನು ಹಾಕಿದರೆ ಅದೇನೂ ದೊಡ್ಡದಲ್ಲ. ಹಳ್ಳಿಯವರು ವಿದ್ಯಾವಿಹೀನತೆಯಿಂದ ಎಷ್ಟೋ ದುರ್ವ್ಯಯವನ್ನು ಮಾಡುತ್ತಾರೆ. ಇಬ್ಬರ ಜಗಳದಿಂದ ಮೂರನೆಯವರು ಲಾಭಪಡೆಯುತ್ತಿದ್ದಾರೆ. ಅಂಥ ನಷ್ಟ ಕಷ್ಟಗಳೆಲ್ಲಾ ವಿದ್ಯಾಭ್ಯಾಸವಿಲ್ಲದ್ದರಿಂದ ಆಗುತ್ತಿವೆ. ಗ್ರಾಮಾಂತರದವರು ವಿದ್ಯಾಲಾಭಕ್ಕಾಗಿ ಸ್ವಲ್ಪ ಕಂದಾಯ ಕೊಡಲು ಅಡ್ಡಿಯಿಲ್ಲ. ಸರ್ಕಾರದವರು ಬಲಾತ್ಕಾರವಾಗಿ ಅದನ್ನು ವಿಧಿಸಿ ವಸೂಲ್ಮಾಡಿದರೂ ಸಂತೋಷವೇ. ಯಾರ ಮಾತನ್ನೂ ಕೇಳಬೇಡಿ. ವಿದ್ಯಾಭಿವೃದ್ಧಿಗೆ ಏನುಬೇಕಾದರೂ ಮಾಡಿರಿ.

ಮ|| ಧ|| ಬಸಮಯ್ಯನವರು—ಉತ್ತಮಕಾರ್ಯಕ್ಕಾಗಿ ಇಂಥ ಸೆಸ್ಸನ್ನು ಹಾಕುವುದೇನೂ ಕೇಡಲ್ಲ; ಇದರಿಂದ ಯಾರೂ ಕೆಟ್ಟುಹೋಗುವುದಿಲ್ಲ. ಮುಖ್ಯವಾಗಿ ಕಾಫಿ ಕ್ಲಬ್ಬುಗಳನ್ನೂ ಹೋಟಲುಗಳನ್ನೂ ತಪ್ಪಿಸಿಬಿಟ್ಟರೆ ಎಲ್ಲರೂ ಪುಣ್ಯವಂತರಾಗಿ ಬದುಕಿಕೊಳ್ಳುತ್ತಾರೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ.

ಲಗ್ನದ ಕಾಣಿಕೆ.

೧. ತುಮಕೂರು ತಾ|| ಬೆಳ್ಳಾವಿ ಮ|| ರಾ|| ಜಿ. ಸಿ. ಸೋಮಣ್ಣನವರ ಮೂಲಕ ಮ|| ರಾ|| ಊರಡಗೆರೆ ರೇವಣ್ಣನವರ ಪುತ್ರಿ ಚಿ|| ಸೌ|| ಪುಟ್ಟರೇವಮ್ಮನಿಗೂ ತಿಪ್ಪಸಂದ್ರದಲ್ಲಿರುವ ಮ|| ರಾ|| ಪುಟ್ಟಣ್ಣನವರ ಪುತ್ರ ಚಿ|| ರಾ|| ಮಹದೇವಪ್ಪನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ೨ ರೂ. ಮ|| ರಾ|| ಸೊಂಡೆಕೊಪ್ಪದ ಸುಬ್ಬಣ್ಣನವರಪುತ್ರಿ ಚಿ|| ಸೌ|| ಮರಿಬಸಮ್ಮನಿಗೂ, ನೆಲಮಂಗಲದಲ್ಲಿರುವ ನೆಶ್ವದ ಅಂಗಡಿ ಮ|| ರಾ|| ಹೊನ್ನಪ್ಪನವರ ಕುಮಾರ ಚಿ|| ರಾ|| ಹೊನ್ನಗಂಗಪ್ಪನಿಗೂ ನಡೆದ ಲಗ್ನದಲ್ಲಿ ವರನಕಡೆಯಿಂದ ೧ ರೂ. ವಧುವಿನಕಡೆಯಿಂದ ೨ ರೂ. ಜುಮ್ಲಾ ೫ ರೂ.

೨. ಕುಣಿಗಲ್ ತಾ|| ಹುಲಿಯೂರುದುರ್ಗದ ಮಠದ ವೇ|| ಹುಚ್ಚಪ್ಪದೇವರ ಮೂಲಕ ಬಂಡಹಳ್ಳಿಯಲ್ಲಿರುವ ಹುಲಿಯೂರುದುರ್ಗದ ಮ|| ಗುರುಬಸಪ್ಪನವರ ಸಿದ್ಧಲಿಂಗಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ೨ ರೂ. ಮಂಡ್ಯ ತಾ|| ಬಿದರುಕೋಟೆ ಮ|| ರಾ|| ಪುಟ್ಟನಂಜಪ್ಪನವರಿಂದ ೩ ರೂ. ಜುಮ್ಲಾ ೫ ರೂ.

೩. ಚಿಕ್ಕಮಗಳೂರು ತಾ|| ತೊಗ್ರಿಹಂಕಲ್ ಮ|| ರಾ|| ಕುನ್ನೂರು ಜಿ. ಮುಪ್ಪಿನಾರಾಧ್ಯರವರ ಮೂಲಕ ಕಾಫಿಪ್ಲಾಂಟರ್ ಮ|| ರಾ|| ಟಿ. ಎಂ. ಪುಟ್ಟಯ್ಯನವರ ಸಹೋದರಿ ಲಗ್ನಕಾಲದಲ್ಲಿ ಸದರಿ ಪುಟ್ಟಯ್ಯನವರಿಂದಲೂ ಮತ್ತು ಲಗ್ನಕ್ಕೆಬಂದಿದ್ದ ಇತರ ಮಹನೀಯರಿಂದಲೂ ವಸೂಲಾದದ್ದು ೩ರೂ. ವೇ|| ಕಾಫಿಪ್ಲಾಂಟರ್ ಟಿ. ಎಂ. ಪುಟ್ಟಯ್ಯನವರ ಸಹೋದರಿ ಲಗ್ನದಲ್ಲಿ ೫ ರೂ. ಕಡೂರು ತಾ|| ಹೊಗ್ರೇಕಾನ್ ಮಠದ ವೇ|| ನಂಜುಂಡಯ್ಯನವರಿಂದ ೫ ರೂ. ಚಿಕ್ಕಮಗಳೂರು ತಾ|| ಮರ್ಲೆಗ್ರಾಮದ ಮ|| ರಾ|| ಚನ್ನಪ್ಪಸೆಟ್ಟರವರಿಂದ ಅವರ ತಮ್ಮಂದಿರ ಲಗ್ನದಲ್ಲಿ ೩ ರೂ. ಚಿಕ್ಕಮಗಳೂರು ತಾ|| ತೊಗ್ರಿಹಂಕಲ್ ಶ್ರೀ ಜಾಪೂರುಮಠದ ವೇ|| ಮುಪ್ಪಿನಾರಾಧ್ಯರವರಿಂದ (ಕುನ್ನೂರು) ೨ ರೂ. ಚಿಕ್ಕಮಗಳೂರು ತಾ|| ಶ್ರೀ ನಾರಕಂಠೆ ಮಠದ ವೇ|| ಕಂಠಪ್ಪಶಾಸ್ತ್ರಿಗಳವರಿಂದ ೧ ರೂ. ಚಿಕ್ಕಮಗಳೂರು ತಾ|| ಶ್ರೀ ನಾರಕಂಠೆಮಠದ ವೇ|| ಚಂದಯ್ಯನವರಿಂದ ೧ ರೂ. ಚಿಕ್ಕಮಗಳೂರು ತಾ|| ಮುತ್ತಿನಪುರದಮಠದ ವೇ|| ಪುಟ್ಟಸ್ವಾಮಯ್ಯನವರಿಂದ ೧ ರೂ. ಚಿಕ್ಕಮಗಳೂರು ತಾ|| ಮತಾವರದ ಮ|| ರಾ|| ಕಡ್ಡಪ್ಪನವರ ಮಲ್ಲಪ್ಪಶೆಟ್ಟರವರಿಂದ ೧ ರೂ. ಚಿಕ್ಕಮಗಳೂರು ತಾ|| ಹಿರೇಕಾನ್ ಮಠದ ಮೈನಟ್‌ದಾರ್ ವೇ|| ಮಲ್ಲಪ್ಪಯ್ಯನವರಿಂದ ೧ ರೂ. ಜುಮ್ಲಾ ೨೦ ರೂ.

೪. ಮಾಗಡಿ ವೇ|| ವೀರಪ್ಪಶಾಸ್ತ್ರಿಗಳವರ ಮೂಲಕ ಮಾಗಡಿಯಲ್ಲಿರುವ ನೆಜಗಾರುಗುಪ್ಪೆ ಮ|| ರಾ|| ಸಿದ್ಧಪ್ಪನವರ ಪುತ್ರಿ ಚಿ|| ಸೌ|| ಗಂಗಮ್ಮನಿಗೂ ವಡನಟ್ಟದ ಮ|| ರಾ|| ರುದ್ರಪ್ಪನವರಮಗ ಚಿ|| ರಾ|| ರುದ್ರಪ್ಪನವರಿಗೂ ನಡೆದ ಲಗ್ನದಲ್ಲಿ ವಧೂವರರಿಂದ ೩ ರೂ.

೫. ತುಮಕೂರು ಡಿ|| ಶಿರಾ ಹೋಳಿನ ಹಂಪಯ್ಯನವರ ಮಠದ ವೇ|| ಸಿದ್ಧಪ್ಪದೇವರ ಮೂಲಕ ಲಗ್ನದಫಂಡಿಗಾಗಿ ೧೦ ರೂ.

೬. ಕಡೂರು ಡಿ|| ಅಜ್ಜಂಪುರದ ಮುನ್ಸಿಪಲ್ ವೈಸ್‌ಪ್ರೆಸಿಡೆಂಟರು ಮ|| ರಾ|| ಶೆಟ್ಟರ ಸಿದ್ಧಪ್ಪನವರ ಮೂಲಕ ಹಿರೇಮಠದ ಅಜ್ಜಂಪುರದ ವೇ|| ಚನ್ನಬಸವಾರಾಧ್ಯಸ್ವಾಮಿಯವರ ಮಗಳಲಗ್ನದಲ್ಲಿ ವರನಕಡೆಯಿಂದ ೨ ರೂ. ವಧುವಿನಕಡೆಯಿಂದ ೨ ರೂ. ಜುಮ್ಲಾ ೪ ರೂ.

೭. ಕ್ಲೋಸ್‌ಪೇಟೆ ಸಬ್ ತಾ|| ಬಿ. ಸಿ. ರೇವಣ್ಣನವರ ಮೂಲಕ ಬಿಡವಿಹೋಬಳಿ ಬಾನಂದೂರು ಗ್ರಾಮದಲ್ಲಿರುವ ಮ|| ರಾ|| ಕವಾಡಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವರನಕಡೆಯಿಂದ ೨-೨-೦ ರೂ. ವಧುವಿನಕಡೆಯಿಂದ ೧ ರೂ. ಜುಮ್ಲಾ ೩-೨-೦ ರೂ.

೮. ಬೆಂಗಳೂರು ಸಿಟಿ ಮ|| ರಾ|| ಶ್ರೀಕಂಠಪ್ಪನವರ ವೀರಭದ್ರಪ್ಪನವರ ಮೂಲಕ ದೇವನಹಳ್ಳಿ ತಾ|| ವಡಿಗೇನಹಳ್ಳಿಯಲ್ಲಿರುವ ಷಾಪ್ ಕೀಪರ್ ಮ|| ರಾ|| ಎಸ್. ರುದ್ರಯ್ಯನವರ ಕುಮಾರ್ತೆಗೂ, ಸಿಕಂದರಾಬಾದ್ ಗೋಕಾಕ್ ಮಿಲ್ ಏಜನ್ಸಿಯವರಾದ ಹುಬ್ಬಳ್ಳಿ ಮ|| ರಾ|| ಗುರಪ್ಪನವರ ಮಕ್ಕಳು ಚಿ|| ರಾ|| ಲಿಂಗಪ್ಪ ಹೊಂಬಳಯವರಿಗೆ ಮೈಸೂರು ಸಿಟಿ ಚಾಮರಾಜಪುರದಲ್ಲಿರುವ ಆಸ್ಥಾನ ವಿದ್ವಾನ್ ವೇ|| ಬಿ. ಎಂ. ಸಿದ್ಧಲಿಂಗಶಾಸ್ತ್ರಿಗಳವರ ಮನೆಯಲ್ಲಿ ನಡೆದ ಲಗ್ನದಲ್ಲಿ ವರನಕಡೆಯಿಂದ ೧೧ ರೂ. ವಧುವಿನಕಡೆಯಿಂದ ೫ ರೂ. ಜುಮ್ಲಾ ೧೬ ರೂ.

೯. ಶಿವಮೊಗ್ಗ ಡಿ|| ಶಿಕಾರಿಪುರದ ತಾ|| ಬೆಳಂದೂರು ಹೋಬಳಿ ಸಾಲೂರು ಆರಾಧ್ಯಮಠದ ವೇ|| ರುದ್ರಾರಾಧ್ಯರವರಿಂದ ಸದರಿಯವರ ತಂದೆಯವರು ವೇ|| ವೀರಬಸವಯ್ಯನವರಿಗೆ ೮೦ ನೇ ವರ್ಷದ ವಾರ್ಷಿಕೋತ್ಸವದ ಜ್ಞಾಪಕಾರ್ಥವಾಗಿ ಫಂಡಿಗೋಸ್ಕರವಾಗಿ ಕಳುಹಿಸಿದ್ದು ೧೦ ರೂ. ಜುಮ್ಲಾ ೭೬-೨-೦ ರೂ.

ಬೆಂಗಳೂರು ಸಿಟಿ,
ತಾ|| 1-8-1921.

ಜಿ. ಪರಮಶಿವಯ್ಯ, ಬಿ.ಎ. ಎಲ್.ಎಲ್.ಬಿ.,
ಆನರರಿ ಸೆಕ್ರಟರಿ,
ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ.

ಪತ್ರವ್ಯವಹಾರ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

WEALTH OF MYSORE & MR. REDDY.

The article on Mr. Reddy which appears in the issue of the 16th of the Wealth of Mysore, betrays the pettiness of its author's mind. He is a lilliputan, who lacks the largeness of both mind and heart, in addition to the power of judgment which he lacks to the last degree. Besides being a lilliputan he is a man immersed in the hell vapour of passionate prejudice.

Both his prejudicial pettiness of mind and his presumptuous claim to judge Mr. Reddy, I assure him have been meted out the contemptuous and pitiful treatment that they merit, by the public. This wondertul critic makes dogmatic pronouncements without spporting the same by giving any reasonable facts and figures.

His is no criticism of Mr. Reddy and his ways and works, but simply is a diatribe, throughought conspicuous for want of fairness of mind, sobriety and critical and yet sensible faculty of judgment. He is in short a frog of the well. His envious prejudice at the success of Mr. Reddy in all the fields he entered is easily traceable throughout his writing.

Probably he is pained and angered not a little to see that Mr. Reddy's wide and fair rules and principles go hard against the selfish theories of the monopolizers. Let him see that Mr. Reddy has earned already respect and recognition in the world, inspite of him.

Dear Mr. Editor, my honest opinion is that any Editor will only demean himself and his paper by giving publication to such diatribes. Could it be that the two natures are a kin—that of the Editor of the Wealth of Mysore and its correspondant? Else why should that Editor lend his columns to such unworthy writings?

AN OBSERVER.

To
THE EDITOR, THE MYSORE STAR, MYSORE.

Sir,

In the issue of the "Truth" of the 3rd Nov. 1921, published in Bangalore "A Tax-Payer" writes as follows under the heading of "Rao Bahadur H. Chennaya" (Evidently referring to Rao Sahib H. Chennaya).

"Will you kindly tell me what are the claims of this gentleman for nomination to the several popular bodies in the State including the Bangalore City Municipal Council? Has he served the State in any capacity? Does he pay a large sum of money nay, any money at all as taxes? Has he any property in the State? In short has he any stake in the country? Are not his aims purely selfish getting decent berths for his sons?" Similar statements have also been made from time to time in some of the newspapers published in Mysore City. For the information of the "Tax-Payer" and others like him I request that you will be good enough to insert the following facts in your valuable columns.

I may say at the outset that Mr. Chennaya has as much stake in the country as any other citizen thereof. First of all he belongs to the Vokkaligara Community of Mysore where all his relatives are and though he entered the British Service, as Sir M. Visvesvaraya, Mr. Karapur Srinivasa Rao, Mr. S. Cadambi and certain other Mysoreans did, he has also served in the Mysore State for a period of 6 years in his capacity as Registrar of the Court of the Hon'ble British Resident of Mysore. Since his retirement as Sub-Judge of Coorg in the year 1916 he has not only come and settled down in Bangalore but has been rendering honorary service as a member of the various councils and public bodies in the State which is well known to your readers. In addition to this Mr. Chennaya has been connected with the Mysore Vokkaligara Sangha as one of the members of its Executive Council ever since its inception, 16 years ago, and is now the President of the General Council of the Sangha and Superintendent of the Vokkaligara Sangha Hostel in Bangalore. He was the first President of the Co-operative House-Building Society established in Mysore City in 1917. He has also been the President of the Mysore Prajamitra Mandali started in Bangalore four years ago for the uplift of the Backward Communities in Mysore. That he has been taking a deep interest for many years in the welfare of the people of Mysore in general and of the Vokkaligar Community in special will be clear from the following extract from the address presented to him by the Vokkaligara Sangha at its General Conference held at Hassan on the 4th January 1912 in connection with the title of Rao Sahib conferred on him by the British Government in December 1911. The address states—"Your genuine interest in the welfare of the Vokkaligara people, your deep solicitude for the success of the Vokkaligara Sangha and its activities, your genial disposition and sauvity of manners, and above all your perfect simplicity and noble demeanour, have made an abiding impression on us and have endeared us to you in indissoluble bonds of love and friendship."

As to the inquiry of the "Tax-Payer" whether Mr Cnennaya possesses any property in the State, I may state that he owns building sites in the Bangalore Municipality and lands in the Bangalore District paying revenue to Government.

As regards Mr. Chennaya's aims being "purely selfish"—getting decent berths for his sons," the statement is entirely false. Only one of his sons is in the Mysore Service in which he was entertained in 1913, long before Mr. Chennaya retired from service and took up public work in Mysore. The "Tax-Payer" must know that another son of his, is now practising as an Advocate of the Chief Court of Mysore. Let Mr. Chennaya's purpose here in Mysore not be misjudged from the point of view of those others who usually try to secure as a reward to their service decent berths in Government Service to their sons and sons-in-law in the State, whether the latter are qualified or not.

All this clearly indicates that the "Tax-Payer" has misread the spirit actuating Mr. Chennaya in his work for the people of Mysore. Being one of the masses and feeling deeply for their backwardness in all respects, he has taken up in conjunction with some of the public spirited men of Mysore the mission of improving their lot and securing them justice in his retiring years at much personal sacrifice. When such are the facts that statements as those of the "Tax-Payer" should be made betrays either colossal ignorance or undiluted prejudice.. Rao Sahib H. Chennaya is not one of those who recede into back ground afrer their retirement into a life of slothful ease and comfort, but is a believer, in the ideal that the justification for life is service to the end of one's very life.

"FAIRPLAY."

ಕಳ್ಳಹಣಕ್ಕೆ ದೊಡ್ಡಮುದ್ರೆ.

ಸ್ವಾಮಿ !

ಸಂಪದಭ್ಯುದಯ ಪತ್ರಿಕೆಯ ಫಾಲ್ಸ್ ಪ್ರೊಫೆಸರುಗಳು ಬುಡುಬುಡುಕೆಯವರ ಕಣಿಯಂತೆ ತುದಿ ಮೊದಲಿಲ್ಲದ ಕಂತೆಯನ್ನು ಬರೆಯುವ ಕೆಲಸದಲ್ಲಿ ಪ್ರವೀಣರಷ್ಟೆ? ಅವರು ಸತ್ಯವಾದಿ ದೇಶಾಭಿಮಾನಿ ಎಂದು ಮೊದಲಾದ ಹೆಸರನ್ನು ಕಟ್ಟಿಕೊಂಡಿರುವುದು ಕಳ್ಳಹಣಕ್ಕೆ ದೊಡ್ಡಮುದ್ರೆ ಎಂಬ ಗಾದೆಗೆ ಸಮನಾಗಿದೆ. ಈ ಕರಸ್ಪಾಂಡೆಂಟರುಗಳು - ನವಿನಾಪರವಾದೇನರಮತೇದುರ್ಜನೋಜನಃ | ಕಾಕಸ್ಸರ್ವರಸಾನ್ಭುಕ್ತ್ವಾ ವಿನಾಮೇಧ್ಯಂನತೃಪ್ಯತಿ || ದುರ್ಜನರು ಪರರ ಸುದ್ದಿಯನ್ನೆತ್ತಿ ಆಡಿದಲ್ಲದೆ ಸಂತೋಷಪಡುವುದಿಲ್ಲ; ಕಾಗೆಯು ಸಕಲಪದಾರ್ಥರುಚಿಯನ್ನು ಸವಿದರೂ ಒಂದಿಷ್ಟು ಅಮೇಧ್ಯಕ್ಕೆ ಕೊಕ್ಕನ್ನು ಹಾಕಿದಲ್ಲದೆ ತೃಪ್ತವಾಗುವುದಿಲ್ಲವೆಂದಿರುವ ನೀತಿವಚನದಂತೆ ಪರರ ಸುದ್ದಿಯನ್ನೆತ್ತಿ ನೀಚವಾಗಿ ನಿಂದಿಸಿದಲ್ಲದೆ ಇವರು ತೃಪ್ತಿಪಡುವುದಿಲ್ಲ. ಸಂಪದಭ್ಯುದಯ ಪತ್ರಿಕೆಯವರು ಇನ್ನು ಮಿ|| ರಡ್ಡಿಯವರ ವಿಷಯಕ್ಕೆ ನಾವು ಸ್ಥಳಕೊಡುವುದಿಲ್ಲವೆಂದು ಪ್ರಮಾಣಮಾಡಿ ಆಡಿದ್ದ ಮಾತು - ನಳಿಕಾಗತಮಪಿಕುಟಿಲಂ ನಭವತಿಸರಳಂಶುನಃಪುಚ್ಛಂ - ಎಂಬ ನ್ಯಾಯಕ್ಕೆ ಸರಿಯಾಗಿ ತಿರುಗಿಹೋಯಿತು. ದೀಪದಬೆಳಕು ಹೆಚ್ಚಿದರೆ ಕುರುಡರು ಬಾಯ್ಬಿಡುಕೊಳ್ಳುವಂತೆ ಮಿ|| ರಡ್ಡಿಯವರ ಪಾಂಡಿತ್ಯವೈಭವವೂ ಕೀರ್ತಿ ಪ್ರತಿಷ್ಠೆಗಳೂ ದೇಶದಲ್ಲಿ ಪ್ರಸರಿಸಿದಾಗಲೆಲ್ಲಾ ಈ ಪತ್ರಿಕೆಯು ಕರಸ್ಪಾಂಡೆಂಟರು ಬೊಬ್ಬೆಗೆ ಶುರುಮಾಡುತ್ತಾರೆ. ಇದನ್ನು ನೋಡಿದರೆ ಹುಚ್ಚುನಾಯಿಂದ ಕಚ್ಚಿಸಿಕೊಂಡವರಿಗೆ ಮುಂಗಾರುಮಳೆಯಲ್ಲಿ ಬರುವ ಅವಸ್ಥೆಯು ಜ್ಞಾಪಕಕ್ಕೆ ಬರುತ್ತದೆ. ಮಿ|| ರಡ್ಡಿಯವರು ಮೈಸೂರು ದೇಶದ ಸರ್ವೀಸನ್ನು ಬಿಟ್ಟುಹೋಗಿ ಎಷ್ಟೋ ದಿನಗಳಾದವು. ಅವರ ಸಾಮರ್ಥ್ಯವೈಭವವನ್ನು ಮದ್ರಾಸು ಗೌರ್ನರು ಕಂಡು ಸಂತೋಷಪಟ್ಟು ಈಸಲದ ಯೂನಿವರ್ಸಿಟಿ ಕಾನ್ವೊಕೇಷನ್ನಿನಲ್ಲಿ ಸ್ಪೀಚ್ ಮಾಡುವುದಕ್ಕೆ ಅವರನ್ನು ಕೋರಿದ್ದರು. ಆ ಕೆಲಸವನ್ನು ಮಿ|| ರಡ್ಡಿಯವರು ಸರ್ವೋತ್ತಮವಾಗಿ ನೆರವೇರಿಸಿದರು. ಅದರಲ್ಲಿ ವ್ಯಕ್ತವಾದ ಅಸಾಧಾರಣ ಪ್ರಜ್ಞಾವಿಶೇಷವನ್ನು ಕಂಡು ಸಭಿಕರೇ ಅಲ್ಲದೆ ದೇಶದ ಮೇಲಣ ವೃತ್ತಪತ್ರಿಕೆಗಳೆಲ್ಲಾ ಕೊಂಡಾಡುತ್ತಲಿವೆ. ಹೀಗಿರುವಾಗ ಸೂರ್ಯಾಸ್ತಮಯಾನಂತರ ಘೂತ್ಕರಿಸುವ ಪ್ರಾಣಿಗಳಂತೆ ಸಂಪದಭ್ಯುದಯದ ಎಡಬಲ ಭುಜಗಳಂತಿರುವ ಫಾಲ್ಸ್ ಪ್ರೊಫೆಸರುಗಳು ಈ ವಾರದ ೧-೨ ಸಂಚಿಕೆಗಳಿಗೆ ಮಿ|| ರಡ್ಡಿಯವರ ವಿಷಯವಾಗಿ ಒಂದೆರಡು ಕರಸ್ಪಾಂಡೆನ್ಸನ್ನು ಬರೆದು, ಅದರಲ್ಲಿ ಅವರ ಸ್ಪೀಚಿನ ನ್ಯೂನಾತಿರೇಕಗಳೆದ್ದರೆ ತೋರಿಸಲಾರದೆ ಫಾಲ್ಸ್ ಪುರಾಣವನ್ನು ಉರುಳಿಸಿಬಿಟ್ಟಿದ್ದಾರೆ. ಮೈಸೂರು ದೇಶದ ಸರ್ವೀಸಿನಲ್ಲಿದ್ದ ೧೩ ವರ್ಷಗಳ ಕಾಲದಲ್ಲಿ ಅವರು ನಿರ್ವಾಹಮಾಡಿದ ಯಾವೊಂದು ಸರ್ಕಾರಿ ಕಾರ್ಯವೂ ಸಮರ್ಪಕವಾಗಿರಲಿಲ್ಲವಂತೆ! ಅವರಿಗೆ ಲೋ|| ಸೆಕಂಡರಿ ತರಗತಿಗೆ ಪಾಠ ಹೇಳುವದಕ್ಕೂ ಬರದಂತೆ! ಆದರೂ ಅವರಿಗೆ ಬಡತಿಯಾಗುತಲೇ ಬಂದಿತಂತೆ! ಇದರಿಂದ ಅವರನ್ನು ಪ್ರಮೋಷನ್ ಮಾಡುತ್ತ ಬಂದ ಶ್ರೀಮನ್ ಮಹಾರಾಜರೂ ಅವರ ಸರ್ಕಾರದವರೂ ಸಹ ಕಣ್ಣಿಲ್ಲದೆ ಕೆಲಸಮಾಡಿದರೆಂದು ಹೇಳಿದಹಾಗಾಗಲಿಲ್ಲವೆ? ಇದರಿಂದ ರಾಜದ್ರೋಹಾಪರಾಧವು ಈ ಲೇಖಕರಿಗೆ ಉಂಟಾಗುವುದಿಲ್ಲವೆ? ಕಾಗುಣಿತವನ್ನು ಬರೆಯಲಿಕ್ಕೂ ನೆಟ್ಟಗೆ ಬರದ ಈ ಸಂಪದಭ್ಯುದಯ ಮರಿಗಳಂಥ ಸಾವಿರಾರು ಪ್ರಾಣಿಗಳು ಹತ್ತು ಜನ್ಮವೆತ್ತಿದರೆ ತಾನೇ ಮಿ|| ರಡ್ಡಿಯವರ ಪಾದಧೂಳಿಯ ಸಾಮರ್ಥ್ಯವನ್ನಾದರೂ ಹೋಲಬಲ್ಲವೆ? ನಾಯಿ ಬಗುಳಿದರೆ ದೇವಲೋಕ ಹಾಳೆ? ದುರ್ಜನರ ದೀರ್ಘದ್ವೇಷವು ಎಷ್ಟು ಹಾಲಾಹಲಕ್ಕಿಂತಲೂ ಕ್ರೂರವೆಂಬುದಕ್ಕೆ ಸಂಪದಭ್ಯುದಯದ ಕೂಟದವರ ಪ್ರವರ್ತನವೇ ಸಾಕ್ಷಿಯಾಗಿದೆ. ಇವರ ಇಂಥ ಜಘನ್ಯವಾದ ದೀರ್ಘದ್ವೇಷವು ಸಾತ್ವಿಕೋತ್ತಮರೆಂದು ಜಗದಾದಿಯಿಂದ ವಿಖ್ಯಾತರಾಗಿ ಬಂದಿರುವ ನಮ್ಮ ಬ್ರಾಹ್ಮಣರ ವರ್ಗಕ್ಕೇ ತಲೆಬಗ್ಗಿಸುವಂತೆ ಮಾಡುತ್ತಿರುವದನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ಸಂಪದಭ್ಯುದಯಕ್ಕೆ ಇಂಥ ಲೇಖಕರು ಸಿಕ್ಕಿರುವುದು ಅದರ ಪೂರ್ವಾರ್ಜಿತ ಕರ್ಮಫಲವೇ ಸರಿ.

ಒಬ್ಬ ಬ್ರಾಹ್ಮಣ.

ಚನ್ನಪಟ್ಟಣದ ಅಮಲ್ದಾರ್ ಮೆ|| ಸಿದ್ಧರಾಮಪ್ಪನವರು.

ಸ್ವಾಮಿ,

ಮೇಲ್ಕಂಡ ಅಮಲ್ದಾರರ ವಿಚಾರದಲ್ಲಿ ೧೪-೧೧-೨೧ನೆ ಸಂಪದಭ್ಯುದಯದ ಲೀಡರ್ ಮತ್ತು ಕರಸ್ಪಾಂಡೆನ್ಸ್ ಕಾಲಂಗಳಲ್ಲಿ ಬದನೇಕಾಯನ್ನು ಬ್ರಹ್ಮರಾಕ್ಷಸನನ್ನಾಗಿ ಮಾಡಿ ಮಿ|| ನಂಜುಂಡಯ್ಯನವರು ಬರೆದಿರುವ ಲೇಖನವನ್ನು ನೋಡಿದೆನು. ನಾನೇನೂ ಮಿ|| ಸಿದ್ಧರಾಮಪ್ಪನವರನ್ನು ಅರಿತವನೂ ಅಲ್ಲ; ಅವರ ಕಡೆಯವನೂ ಅಲ್ಲ. ಆದರೆ ಅವರ ಮೇಲಣ ಲೇಖನವು ಬರೀ ಉತ್ಪ್ರೇಕ್ಷೆಯ ಗಲಭೆಯಿಂದ ಕೂಡಿರುವುದರಿಂದ ಜವಾಬು ಬರೆಯಿರುತ್ತೇನೆ.

ಮಿ|| ನಂಜುಂಡಯ್ಯನೆಂಬವರು ಹೇಳುವ ಪ್ರಕಾರ ಅಮಲ್ದಾರರು ಕೇಳಿರುವ ಫಾರಂ ಬರೆದುಕೊಡಲು ಕಷ್ಟವೇನೂ ಇಲ್ಲ. ಇವೆಲ್ಲಾ ಗ್ರಾಮಲೆಕ್ಕಗಳಲ್ಲಿಯೇ ಇವೆ. ಅವರ ಹೆಡ್ಡಿಂಗುಗಳು ನ್ಯಾಯವಾಗಿಯೂ, ಬಾಕಿ ವಸೂಲಿಗೆ ತುಂಬಾ ಸಹಾಯಕವಾಗಿಯೂ, ಈಗ ರೈತರು ಪಡುವ ತೊಂದರೆಗಳನ್ನು ಸುಲಭವಾಗಿ ನಿವಾರಿಸತಕ್ಕವಾಗಿಯೂ ಇರುತ್ತವೆ. ಪ್ರತಿ ಖಾತೆಗೂ ಕಂದಾಯ ಕೊಡತಕ್ಕ ಹಿಸ್ಸೆದಾರರುಗಳು ಹಿಂದಿನಸಾಲು ಖಿರ್ದಿ ಹುಡುಕಿದರೆ ಪತ್ತೆಯಾಗುತ್ತದೆ. ಹಿಸ್ಸೆದಾರರು ಹಣವನ್ನು ಪಾವತಿಮಾಡಿದ ಹಾಗೆಲ್ಲಾ ಜಮಾ ಕೊಟ್ಟವರ ಹೆಸರನ್ನು ಬರೆಯಲೇಬೇಕಾಗಿದೆ. ಒಂದು ವರ್ಷದ ಖಿರ್ದಿಯನ್ನು ಖಾತೆಗೆ ಹೋಲಿಕೆಮಾಡಿ ಬಿಟ್ಟುಹಾಕಿಕೊಂಡರೆ ಸುಲಭಸಾಧ್ಯವಾಗುತ್ತದೆ. ಇದು ಹೊಸದಾಗಿ ಕಂಡುಹಿಡಿಯುವವರಿಗೆ ಮಾತ್ರ ಸ್ವಲ್ಪ ಶ್ರಮವಾಗುತ್ತದೆಯೇ ವಿನಾ ಶ್ಯಾನುಭೋಗರುಗಳಿಗೆ ಕ್ಷಣಮಾತ್ರದ ಕೆಲಸ. ಇವರು ಕ್ರಮವಾಗಿ ನಂಬರುವಾರು ಹಿಡುವಳಿದಾರರನ್ನು ಪಹಣಿಯಲ್ಲಿ ಬರೆಯಬೇಕು. ಹಾಗೆ ಬರೆದಿದ್ದರೆ ಕಷ್ಟವೇ ಇಲ್ಲ. ಹೀಗೆ ಹಿಸ್ಸೆಪಟ್ಟಿ ಇಲ್ಲದಿರುವುದರಿಂದಲೇ ಪಟೇಲರುಗಳಿಗೆ ವಸೂಲಿಯಲ್ಲಿ ದಾರಿತೋರದೆ ಮೇಲ್ಪಟ್ಟವರಿಂದ ಅನ್ನಿಸಿಕೊಳ್ಳುತ್ತಿದ್ದಾರೆ. ಶ್ಯಾನುಭೋಗರ ಹಿಸ್ಸೆಪಟ್ಟಿ ತಂತ್ರವಿಲ್ಲದಿದ್ದರೆ ಸಂಸ್ಥಾನದಲ್ಲಿ ಬಾಕಿ ನಿಲ್ಲುವುದೆಂದರೆ ಖಂಡಿತವಾಗಿಯೂ ಒಪ್ಪತಕ್ಕ ಮಾತೇ ಅಲ್ಲ, ಹಿಸ್ಸೆಪಟ್ಟಿ ಕೊಟ್ಟುಬಿಟ್ಟರೆ ರೈತರಿಂದ ತಮಗೆ ಕೈಬೆಚ್ಚಗಾಗುವುದು ತಪ್ಪಿಹೋಗುತ್ತೆಂಬುದೇ ಶ್ಯಾನುಭೋಗರ ಮನೋವ್ಯಥೆ.

ಹಿಸ್ಸೆಪಟ್ಟಿ ಕೊಡಲು ಅಸಾಧ್ಯವೆನ್ನುವವರು "ಮಾಮೂಲು" ಶಬ್ದವನ್ನು ಏಕೆ ತರಬೇಕು? ಮಾಮೂಲು ಎಂದರೇನು? ಬೇಕುಬೇಕಾದ್ದು ಮಾಡುವಾಗಲೆಲ್ಲಾ ಇವರಿಗೆ ಮಾಮೂಲಿನ ಯೋಚನೆಯೇ ಬರುವುದಿಲ್ಲ. ಸರ್ಕಾರಿ ಕೆಲಸಕ್ಕೆ ಮಾತ್ರ ಮಾಮೂಲು ಮಾತು. ಒಟ್ಟಿನಲ್ಲಿ ಹಿಸ್ಸೆಪಟ್ಟಿ ಕೊಟ್ಟುಬಿಟ್ಟರೆ ರೈತರನ್ನು ಕಿರುಕುಳಪಡಿಸಿ ತಮ್ಮ ಮನೆ ತುಂಬಿಕೊಳ್ಳಲು ಅವಕಾಶವಾಗುವುದಿಲ್ಲವೆನ್ನುವ ದುಃಖವು ಇವರಲ್ಲಿ ತುಂಬಿಹೋಗಿದೆ.

ಅಮಲ್ದಾರರು ಒಬ್ಬಿಬ್ಬರ ನೌಕರಿಯನ್ನು ತಪ್ಪಿಸಿ ಬ್ರಾಹ್ಮಣೇತರರನ್ನು ಸ್ಥಾಪಿಸಿದರೆಂತ ಬರೆಯುತ್ತಾರೆ. ಇದು ವಾಸ್ತವವಿರಬಹುದು! ತಪ್ಪಿಲ್ಲದೆ ತೊಲಗಿಸುವರೆ? ನಿಷ್ಕಾರಣವಾಗಿ ಹಾಗೆ ಮಾಡಿದ್ದರೆ ಈ ಸಂದರ್ಭದಲ್ಲಲ್ಲ—ತೊಲಗಿಸಿದಾಗಲೇ ಜಗತ್ಪ್ರಳಯವಾಗಿಬಿಡುತ್ತಿತ್ತು! ಬ್ರಾಹ್ಮಣೇತರರನ್ನು ಹುಲ್ಲುಕಡ್ಡಿಗಿಂತ ಕಡೆಯಾಗಿ ಕಂಡು ನಾಚಿಕೆಯಿಲ್ಲದ ಸುಳ್ಳುಕಾರಣಗಳಿಂದ ಸಸ್ಪೆಂಡು ಡಿಸ್ಮಿಸ್‌ಗಳಿಗೆ ಶಿಫಾರ್ಸು ಮಾಡಿ ನಿರಂಕುಶ ದರ್ಬಾರು ಮಾಡುತ್ತಿರುವ ನಂಜನಗೂಡು ಅಮಲ್ದಾರರನ್ನು ನೋಡಿದರೆ ಮಿ|| ನಂಜುಂಡಯ್ಯನವರೇನೆನ್ನುವರೊ?

ಶ್ಯಾ|| ರುಗಳನ್ನು ತಪ್ಪಿಸಿ ೨೫ ರೂಪಾಯಿನ ಸಂಬಳಕ್ಕೆ ಬ್ರಾಹ್ಮಣೇತರರನ್ನು ತಂದಿಡುವುದಾಗಿ ಅಮಲ್ದಾರರು ಹೇಳುತ್ತಿರುವುದಾಗಿ ಬರೆಯುತ್ತಾರೆ. ಇದು ಎಷ್ಟರಮಟ್ಟಿನ ನಿಜವೆಂಬುದನ್ನು ನಾನು ನಂಬಲಾರೆ. ಒಂದುವೇಳೆ ಅಧಿಕಾರಿಯ ಮಾತನ್ನು ಮೀರಿ ಶ್ಯಾ|| ರುಗಳೆಲ್ಲಾ ಒಟ್ಟಾಗಿ ದಾಂದಲೆ ನಡೆಸಲು ಹೊರಡುವುದಾದರೆ ಅಧಿಕಾರಿಯು "ದಮ್ಮಯ್ಯ" ಎನ್ನಬೇಕಾಗಿತ್ತೆ? ಅಂಥ ಸಂದರ್ಭಗಳಲ್ಲಿ ಹೇಡಿಗಳಾಗುವವರು ಬ್ರಾಹ್ಮಣೇತರರಲ್ಲ. ಅನೇಕ ವೇಳೆಗಳಲ್ಲಿ ಅಮಲ್ದಾರರ ಹುಕುಮಿಗೆ ವಿರೋಧವಾಗಿ ನಡೆಸಿದ ಶ್ಯಾನುಭೋಗನನ್ನು "ಜೋಡು" ಎತ್ತಿ ಓಡಿಸಿಕೊಂಡುಹೋದ ಬ್ರಾಹ್ಮಣ ಅಮಲ್ದಾರರೂ, ಬಾಕಿ ಹೇರಳವಾಗಿ ನಿಂತಿದ್ದ ಗ್ರಾಮದ ಶ್ಯಾನುಭೋಗರನ್ನು ಕುರಿತು "ನಿನ್ನ ಹೆಂಡತಿ ಮಾರಿ ತಂದುಕೊಡೆಂದು" ಹೇಳಿದ ಬ್ರಾಹ್ಮಣ ಅಮಲ್ದಾರರೂ ಈಗ ಇದ್ದಾರೆ. ಕೆಲವು ಸಂದರ್ಭಗಳಲ್ಲಿ ಬಹಳ ತಪ್ಪಿಗೆ ಸಿಕ್ಕಿಬಿದ್ದ ಶ್ಯಾನುಭೋಗನ ಮನೆ ಹೆಂಗಸರ ವಿಚಾರದಲ್ಲಿ ಪ್ರಸ್ತಾಪಮಾಡಿದ ಬ್ರಾಹ್ಮಣ ಅಮಲ್ದಾರರೂ ಈಗ ಜೀವಸಹಿತ ಇದ್ದಾರೆ. ಇವನ್ನೆಲ್ಲಾ ನಾನೇ ಪ್ರತ್ಯಕ್ಷವಾಗಿ ಬಲ್ಲೆನು. ಮಿ|| ಸಿದ್ಧರಾಮಪ್ಪನವರು ಬಹುಶಃ ಅಂಥ ಯಾವದೊಂದನ್ನಾದರೂ ಮಾಡಿಲ್ಲವೆಂತ ತೋರುತ್ತದೆ.

ವಸೂಲಿ ವಿಚಾರದಲ್ಲಿ ಅಮಲ್ದಾರರು ಜವಾಬ್ದಾರರಾಗಿರುತ್ತಾರೆ. ಅಮಲ್ದಾರರು ಕೇಳಿರುವ ಲೆಕ್ಕ ಹೊಸದೇನೂ ಅಲ್ಲ. ತಪ್ಪುಮಾಡಿದವರನ್ನು "ಪಾಪ! ಬ್ರಾಹ್ಮಣ!" ನೆಂಬ ಅಭಿಮಾನದಿಂದ ಬಿಟ್ಟುಬಿಡುವ ಯೋಚನೆ ಈ ಅಮಲ್ದಾರರಿಗೆ ಇರಬಹುದು; ಶಿಕ್ಷೆಯೂ ಮಾಡಬಹುದು. ಅನ್ಯಾಯವಾದರೆ ಅಪ್ಪೀಲು ಇದ್ದೇ ಇದೆ. ಬ್ರಾಹ್ಮಣ ನೌಕರರಿಗೆ ಇದೇನು ತಿಳಿಯದೆ? ಈ ಅಮಲ್ದಾರರು ಒಕ್ಕಲಿಗರ ಸಂಘಕ್ಕೆ ಬ್ರಾಹ್ಮಣರಿಂದ ಚಂದಾ ಕೇಳಿರಲಾರರು. ಬ್ರಾಹ್ಮಣೇತರರಿಂದ ವಸೂಲುಮಾಡಿದರೆ ಮಿ|| ನಂಜುಂಡಯ್ಯನವರಿಗೇಕೆ ಹೊಟ್ಟೆಕಿಚ್ಚು? "ಬ್ರಾಹ್ಮಣ ವಿದ್ಯಾಸಹಾಯಸಂಘಕ್ಕೆ ಬ್ರಾಹ್ಮಣ ಅಮಲ್ದಾರರು ಜಮಾಬಂದಿ ನೆಪದಲ್ಲಿ ಪಟೇಲರುಗಳಿಂದ ಚಂದಾ ಕೊಡಿಸುತ್ತಿರುವುದೂ, ಮಂಡ್ಯದ ಅಮಲ್ದಾರರು ವಿಶೇಷ ಪ್ರೋತ್ಸಾಹ ಕೊಡುತ್ತಿರುವರೆಂತ ಸಂಪದಭ್ಯುದಯದಲ್ಲಿ ಪ್ರಕಟವಾಗಿರುವುದೂ, ದಾಸರನ್ನು ಕಟ್ಟಿಕೊಂಡು ಹುಣಸೂರಿನವರು ಹಣ ವಸೂಲ್ಮಾಡಿರುವುದೂ ಇವುಗಳೆಲ್ಲಾ ನ್ಯಾಯವಾಗಿರಬಹುದು! ನಿಷ್ಕಾರಣವಾಗಿ ಈ ಅಮಲ್ದಾರರು ಯಾರನ್ನಾದರೂ ಬೈದಿದ್ದರೆ ಅವರು ಫಿರ್ಯಾದು ಮಾಡಲಿ. ಅವರ ಕಡೆ ವಕಾಲತ್ತು ವಹಿಸಿ ಪತ್ರಿಕೆಗೆ ಬರೆದ ಮಿ|| ನಂಜುಂಡಯ್ಯನವರ ಶ್ರಮಕ್ಕೆ ಸಂತೋಷಪಡಬೇಕು! ಹುಣಸೂರಿನಲ್ಲಿದ್ದು ಹಾಲಿ ಡಿಗ್ರೇಡಾಗಿರುವ ಬ್ರಾಹ್ಮಣ ಅಮಲ್ದಾರರು ಪಟೇಲರುಗಳನ್ನು "ಸೂಳೆಮಗನೆ-ಹುಚ್ಚುಮುಂಡೆ-ನಿನ್ನ ತಾಯಿ-ತಂಗಿ ವಗೈರೆ ಕೆಟ್ಟಮಾತುಗಳನ್ನಾಡಿ ಜವಾನರುಗಳಿಂದ ಪಟೇಲರ ರಟ್ಟೆಹಿಡಿಸಿ ತಿರುಗಿಸುತ್ತಿದ್ದ" ನೋಟವನ್ನು ಮಿ|| ನಂಜುಂಡಯ್ಯನವರು ನೋಡಿದ್ದರೆ ಏನನ್ನುತ್ತಿದ್ದರು? ಸರ್ಕಾರದ ಗೌರವಕ್ಕೆ ಜನಗಳು ತಗ್ಗಿರುವವರೇ. ಪರಂತು ಕೆಟ್ಟಮಾತು ಬಂದಾಗ ಬುದ್ಧಿ ಕಲಿಸುವುದೇನೂ ನಮಗೆ ಅಸಾಧ್ಯವಲ್ಲ.

ಈ ಸಂದರ್ಭದಲ್ಲೇ ಮಿ|| ನಂಜುಂಡಯ್ಯನವರು ಚಿಂತಾಮಣಿ ಸ|| ಡಿ|| ಸಾಹೇಬರ ಮಾತನ್ನು ಎತ್ತಿದ್ದಾರೆ. ಇದರಿಂದ ಬ್ರಾಹ್ಮಣೇತರಾಧಿಕಾರಿಗಳ ದಾಂಧಲೆಯನ್ನು ತೋರಿಸುವ ಅಭಿಪ್ರಾಯ ಇವರಿಗೆ ಇರಬಹುದು. ಇವರನ್ನೂ ಇವರ ಸಹೋದರರು ಪ್ರೊ|| ಇಕ್ || ಮಿ|| ಮಲ್ಲರಾಜೇ ಅರಸಿನವರನ್ನೂ ನಾನು ಬಲ್ಲೆ. ಇವರಂತಹ ನಿಸ್ಪೃಹರೂ, ಪರಸ್ವತ್ತನ್ನು ವಿಷದಂತೆ ಭಾವಿಸುವವರೂ, ಸತ್ಯವಾದಿಗಳೂ ಸಾತ್ವಿಕರೂ ಬಹುಶಃ ಬ್ರಾಹ್ಮಣಾಧಿಕಾರಿಗಳಲ್ಲಿ ಬಹಳಕಡಿಮೆ. ಇತರರಂತೆ ಬಟ್ಟೆ-ತಿಂಡಿ-ಊಟ-ವಿಹಾರಗಳನ್ನು ಅಪೇಕ್ಷಿಸುವವರಲ್ಲ. ಮನಸ್ಸಾಕ್ಷಿಗೆ ವಿರೋಧವಿಲ್ಲದೆ ಕೆಲಸಮಾಡತಕ್ಕವರು. ಇಂಥವರು ದುಡುಕಿದರೆಂದರೆ ಏನೋ ಪ್ರಬಲವಾದ ಕಾರಣವಿರಬಹುದು. ಕೋರ್ಟಿನಲ್ಲಿ ಕೇಸು ದಾಖಲ್ಮಾಡುವುದಾಗಿ ಮಿ|| ನಂಜುಂಡಯ್ಯನವರು ಹೇಳುವುದರಿಂದ ವಿವರವಾಗಿ ಪ್ರಸ್ತಾಪ ಮಾಡಲು ಯತ್ನವಿಲ್ಲ.

ಅರಸು ಮನೆತನದವರಿಗೆ ಈ ರೀತಿ ದ್ವೇಷಬಂದಿರುವುದು ಕಾಲಮಹಿಮೆ ವಗೈರೆ ಕಾರಣಗಳಿರಬಹುದೆಂತ ಮಿ|| ನಂಜುಂಡಯ್ಯನವರು ಹೇಳುತ್ತಾರೆ. ಒಪ್ಪಬಹುದು! ಗ್ರಾಮಣಿತ್ವವನ್ನು ಜನ್ಮಜನ್ಮಾಂತರಗಳಲ್ಲೂ ನಿಂದಿಸಿರುವ ಶಂಕರಾಚಾರ್ಯರು ತಮ್ಮ ಶಿಷ್ಯರು ಈ ರೀತಿ ಗುರುವಾಕ್ಯವನ್ನುಲ್ಲಂಘಿಸಿ, ಗುರುದ್ರೋಹಿಗಳಾಗಿರುವುದನ್ನು ನೋಡಿ ಪುನರವತಾರ ಮಾಡುವ ಕಾಲ ಬಂದಿದೆ. ರೈತರನ್ನು ಕೆಡಿಸಿ, ಕಿತ್ತಾಟಮಾಡಿ, ರಕ್ಕಗಳಿಂದ ಹೊಟ್ಟೆಹೊರಕೊಳ್ಳುವ ಇವರು ಬ್ರಾಹ್ಮಣೇತರರನ್ನು ನಿಂದಿಸುವುದು ಧರ್ಮವಲ್ಲ. ನಿಜವಾದ ಬ್ರಾಹ್ಮಣರನ್ನು ಉದ್ಧರಿಸಿ, ನಾಮಮಾತ್ರದ ಬ್ರಾಹ್ಮಣರನ್ನು ಮೂಲೋತ್ಪಾಟನೆ ಮಾಡುವ ಅವತಾರದ ನಿರೀಕ್ಷಣೆಯಲ್ಲಿದ್ದೇವೆ. ಖಂಡಿತವಾಗಿಯೂ ಕಾಲ ಸಮೀಪಿಸಿದೆ. ಇದು ಕಸಿಷ್ಠಂಬಸಿಗೆ.

ಕೊನೆಯಲ್ಲಿ ಮಿ|| ನಂಜುಂಡಯ್ಯನವರು ತಮ್ಮವರಿಗೆ ಮಾಡಿರುವ ಉಪದೇಶಕ್ಕೆ ತುಂಬಾ ಕೃತಜ್ಞನಾಗಿರುತ್ತೇನೆ. ದುಷ್ಟರೆನ್ನಿಸಿಕೊಳ್ಳುವುದು ಯೋಗ್ಯವಲ್ಲ. ಇವರ ಉಪದೇಶವು ದುಷ್ಟರೆನ್ನಿಸಿಕೊಂಡ ಮೇಲೆಯೇ ಪತ್ರಿಕೆಗಳಲ್ಲಿ ಬಂದದ್ದರಿಂದ ಫಲವಾಗದಿದ್ದರೂ ಬೇರೆ ತಾಲ್ಲೂಕಿನ ಶ್ಯಾ|| ರುಗಳಿಗಾದರೂ ವಿವೇಕಪ್ರದವಾಯಿತು. ಕೂಟಗಳಿಂದ ಇವರ ಹಕ್ಕುದಾರಿ ವಿಚಾರದಲ್ಲಿ ಸರ್ಕಾರದವರು ಕಣ್ಣುಬಿಡಲು ಅವಕಾಶವಾಯಿತು. ಹಳ್ಳಿಗಾಡಿನವರು ಎಚ್ಚತ್ತುಕೊಂಡರಂತೂ ಶ್ಯಾ|| ರುಗಳ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ಅವತಾರ ಸಮಯವಾದ್ದರಿಂದಲೇ ಕಾಲಮಹಿಮೆಯ ದೆಸೆಯಿಂದ ಕುರಿಗಳಂತೆ ಇದ್ದ ಬ್ರಾಹ್ಮಣೇತರರು ಹುಲಿಗಳಾಗಲು ಅವಕಾಶವಾಯಿತು! ನಿಜವಾದ ಬ್ರಾಹ್ಮಣರಿಂದಲೇ ಲೋಕೋದ್ಧಾರವಾಗುವುದು. ಅಲ್ಲಿಯವರೆಗೂ ಇದೇ ಗಲಭೆ.

ಮಾಸ್ತರುಗಳ ಗೋಳಾಟ.

ಮಹಾಶಯರೆ, ಮಾಗಡಿ ತಾ|| ಸೋಲೂರೆಂಬುದು ಒಂದು ದೊಡ್ಡ ಗ್ರಾಮವಾಗಿಯೂ ಒಂದು ಹೋಬಳಿಯಾಗಿಯೂ ಇದೆ. ಈ ಗ್ರಾಮದಲ್ಲಿ ಗೌ|| ಎ. ಇ. ಬಾಯ್ಸ್ ಸ್ಕೂಲಿನಲ್ಲಿ ೩ ಮಂದಿ ಮಾಸ್ತರುಗಳು ಇರುತ್ತಾರೆ. ಗೌ|| ಗ್ರಾಂಟ್ ಗರ್ಲ್ಸ್‌ಸ್ಕೂಲು, ಹಿಂದೂಸ್ಥಾನಿ ಬಾಯ್ಸ್ ಸ್ಕೂಲು, ಪಂಚಮಾ ಗ್ರಾ|| ಸ್ಕೂಲು ಸಹ ಇವೆ. ಮಾಗಡಿ ತಾಲ್ಲೋಕೆಂಬುದು ವಿದ್ಯಾಭ್ಯಾಸದ ಇಲಾಖಾ ಕ್ಲೋಸ್‌ಪೇಟೆ ರೇಂಜಿಗೆ ಸೇರಿದೆ. ಈ ರೇಂಜಿನಲ್ಲಿ ಸುಮಾರು ೫೦ ರ ವರೆಗೆ ಸ್ಕೂಲುಗಳಿರುವುದಲ್ಲದೆ ಗ್ರಾಂ|| ಸ್ಕೂಲುಗಳನ್ನು ನಾನು ಎಣಿಕೆಮಾಡಿಲ್ಲ. ಈ ರೇಂಜಿನ ಮಾಸ್ತರುಗಳಿಗೆ ಸಲ್ಲಬೇಕಾದ ತಲಬು ಮುಂದಿನ ತಿಂಗಳು ೧೦-೧೨ನೆ ತಾರೀಖಿನೊಳಗಾಗಿ ಸಲ್ಲಬೇಕು, ಅಥವಾ ಮಾಹೆಯ ಆಖೈರಿನೊಳಗಾಗಿ ತಲಪಬೇಕು. ಹಾಗೂ ಇಲ್ಲದೆ ೨ ತಿಂಗಳು ಪೂರೈಸಿದಾಗ್ಯೂ ತಲಬೇ ಬರಲಿಲ್ಲವೆಂದು ಗೋಳಾಡುತ್ತ ಪ್ರತಿಯೊಂದು ಆಜುಬಾಜೂ ಗ್ರಾಮದ ಗೌ|| ಸ್ಕೂಲ್ಮಾಸ್ತರುಗಳೂ ಸಹ ಬಂದು ಪೋಸ್ಟುಮಾಸ್ತರ ದರ್ಶನ ತೆಗೆದುಕೊಂಡು ಹೋಗುತ್ತಾರಲ್ಲದೆ ಕೆಲವು ಮಾಸ್ತರುಗಳು ನನ್ನಲ್ಲಿ ಮತ್ತು ಇತರ ಸಾಹುಕಾರರಲ್ಲಿ ಕಂತಿಗಾಗಿ ಮೊಬಲಗು ಪಡೆದು ಆಹಾರಸಾಮಗ್ರಿಗಳನ್ನು ತೆಗೆದುಕೊಂಡು ಜೀವನ ಮಾಡುತ್ತಾ ಹಲವು ಬಗೆಯಲ್ಲಿ ನಷ್ಟಹೊಂದುತ್ತಾ ಇರುವುದನ್ನು ಪ್ರತ್ಯಕ್ಷ ನೋಡುತ್ತಾ ಇರುತ್ತೇನೆ. ಇದಕ್ಕೆ ನಿದರ್ಶನವಾಗಿ ನಮ್ಮ ಅಣ್ಣನವರು ಸ್ಕೂಲ್ ಕಮಿಟಿಮೆಂಬರಾದ್ದರಿಂದ ಅವರಲ್ಲಿಗೆ ಬಂದು ೨ ತಿಂಗಳು ಪೂರೈಸಿದರೂ ಬರಲಿಲ್ಲವೆಂದು ಹೇಳುತ್ತಾ ಇರುತ್ತಾರೆ. ನಿದರ್ಶನವಾಗಿ ಸೆಪ್ಟಂಬರ್ ಮಾಹೆಯ ತಲಬು ನವಂಬರ್ ೨-೩ ರಲ್ಲಿಯೂ, ಆಗಸ್ಟ್ ತಿಂಗಳಿನ ಗ್ರ್ಯಾಂಟ್ ಮೊಬಲಗು ನವಂಬರ್ ೫-೬ನೆ ತಾರೀಖುಗಳಲ್ಲಿಯೂ ಬಂದಿತೆಂದು ಪೋಸ್ಟುಮಾಸ್ತರಿಂದ ತಿಳಿಯಬಂದಿದೆ. ಮಾಸ್ತರುಗಳು ಅಹವಾಲನ್ನು ಹೇಳಿಕೊಳ್ಳಲು ರೇಂಜಾಫೀಸು ೨೬-೩೦ ಮೈಲಿ ಫಾಸಲೆಯಾಗಿದೆ. ಈ ತಾಲ್ಲೂಕು ಒಂದಕ್ಕೆ ಈ ರೀತಿ ತಲಬು ಬಟವಾಡೆಯಾಗುತ್ತದೆ. ಅಥವಾ ಈ ರೇಂಜಿಗೆ ಸೇರಿದ ಇತರ ತಾಲ್ಲೂಕುಗಳೆಲ್ಲಕ್ಕೂ ಹೀಗೆಯೇ ಸಲ್ಲುವುದೋ, ಈ ತೊಂದರೆಗೆ ರೇಂಜಾಫೀಸೇ ಕಾರಣವೋ, ತಾಲ್ಲೂಕು ಆಫೀಸು ಕಾರಣವೋ ತಿಳಿಯದು. ಇಂಥಾ ತೊಂದರೆಗಳು ಮೇಲ್ಪಟ್ಟ ಆಫೀಸರುಗಳ ಗಮನಕ್ಕೆ ಬಾರದೆ ಇರುವುದರಿಂದ ಇಂಥ ಕಷ್ಟ ಒದಗಿರುತ್ತದೆ. ಮುಂದೆಯಾದರೂ ಹಿಂದಣಮಾಹೆಯ ತಲಬನ್ನು ಚಾಲ್ತಿ ಮಾಹೆ ೧೦-೧೨ನೆ ತಾರೀಖಿನೊಳಗಾಗಿ ತಲ್ಪುವಂತೆ ಇಲಾಖಾಅಧಿಕಾರಿಗಳ ಗಮನಕ್ಕೆ ಬಂದು ಸಾಹುಕಾರರ ಮನೆಗೆ ಪ್ರತ್ಯಹವೂ ಬಾಗಿಲುದರ್ಶನಕ್ಕೆ ಕಾದುಕೊಂಡು ಒಂದಕ್ಕೆರಡಾಗಿ ಸಾಲತೆರುವ ಬಡಮಾಸ್ತರುಗಳ ಗೋಳಾಟವು ತಪ್ಪೀತೆಂತ ಹಾರೈಸುವ,

ಲೋಕಹಿತೈಷಿ.

೧೯೨೧ ನೆಯ ಇಸವಿ ನವಂಬರ್ ತಾ|| ೨೦ರಿಂದ ೧೯೨೧ ನೆಯ ನವಂಬರ್ ತಾ|| ೨೬ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಕಾರ್ತೀಕಬಹುಳ ಪಂಚಮಿಯಿಂದ ಕಾರ್ತೀಕಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕಮಾಸ
20	ಭಾನು	ಪಂಚ	14-49	ಪುನ	9-21	5
21	(1) ಸೋಮ	ಷಷ್ಠಿ	9-17	ಪುಷ್ಯ	5-34	6
22	ಮಂಗಳ	ಸ-ಅ	3-27 54-9	ಆಶ್ಲೆ	1-33	7
23	ಬುಧ	ನವ	5-34	ಪುಬ್ಬ	53-6	8
24	ಗುರು	ದಶ	45-54	ಉತ್ತರ	49-13	9
25	(2) ಶುಕ್ರ	ಏಕಾ	40-52	ಹಸ್ತ	45-55	10
26	ಶನಿ	ದ್ವಾದ	36-24	ಚಿತ್ತ	43-12	11

(1) ಕಾರ್ತೀಕಸೋಮವಾರಂ. (2) ಸವತ್ಸ್ಯೈಕಾದಶಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪ ಮೈಸೂರ್ ಸ್ಟಾರ್ ಸೆ: ೧೯೨೧ ನೆಯ ಇಸವಿ ನವಂಬರ್ ತಾರೀಖು ೨೭ ನೆಯ ಭಾನುವಾರ. ಸಂಚಿಕೆ ೪೭

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾನುಗ್ರಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೋರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
45 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಸ್ತ್ರಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0-12-0	,,	50-0-0
5	0-8-0	.	100-0-0
6	0-12-0	,,	100-0-0
7	6-0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0-6-0	ಇಂದ	10-0-0
8	0-8-0	,,	100-0-0
9	0-12-0	,,	100-0-0
10	0-14-0	,,	100-0-0
11	3-8-0	,,	100-0-0
12	4-0-0	,,	100-0-0
13	4-8-0	,,	100-0-0
14	6-0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವದು.

ಕ್ರಮಾಕ್ಷ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ತುಳಸಿ	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನಪಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ರೆಂಡ್ಲ	,, 0-8-0	,, 1-0-0
ಅವಕ್ಯಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
39 ಕಂಪನಿ, ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೪—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 28

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಶಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೪—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹಳಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೨-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ನೋಟೀಸು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ.—

ಬೆಂಗಳೂರು ಸಿಟಿ ಮಾಮೂಲ್‌ಪೇಟೆಯಲ್ಲಿದ್ದು ಹಾಲಿ ಮೃತಪಟ್ಟಿರುವ ರಾವ್ ಬಹದ್ದೂರ್ ಗುಬ್ಬಿ ತೋಟದಪ್ಪನವರ ದತ್ತುಮಕ್ಕಳಾದ ಜಿ. ಟಿ. ರುದ್ರಪ್ಪನವರು ತಮ್ಮ ಬಾಬತು ಚರಸ್ಥಿರ ಆಸ್ತಿಗಳನ್ನು ಸ್ವತಃವಹಿಸಿ ನಡಿಸಲಿಕ್ಕೆ ಕಮ್ಮಿವಯಸ್ಸಿನವರಾಗಿ ಅನನುಭವಸ್ಥರಾಗಿರುವದರಿಂದ ಅವುಗಳನ್ನೆಲ್ಲಾ ನನ್ನ ಸ್ವಾಧೀನಕ್ಕೆ ತೆಗೆದುಕೊಂಡು ನಾನು ಅವುಗಳ ಟ್ರಸ್ಟಿಯಾಗಿನಿಂತು ಅವರ ಮತ್ತು ಅವರ ಕುಟುಂಬದವರ ಉಪಯೋಗಕ್ಕಾಗಿ ಕೆಲವು ಕಂಡೀಷನ್‌ಗಳು ಒಳಪಡಿಸಿ ತಾ|| 26-10-21 ರಲ್ಲಿ ನನ್ನಹೆಸರಿಗೆ ಟ್ರಸ್ಟ್‌ಡೀಡ್ ಬರೆಸಿ ಡಿಟೊ ಸ್ವತ್ತುಗಳ್ನಾವತ್ತು ನನ್ನ ಸ್ವಾಧೀನಪಡಿಸಿರುತ್ತಾರೆ. ಈ ಕಾರಣದಿಂದ ಡಿಟೊ ರುದ್ರಪ್ಪನವರ ಬಾಬತು ಎಲ್ಲಾ ಸ್ಥಿರಚರಸ್ವತ್ತುಗಳು ಡಿಟೊ ಟ್ರಸ್ಟ್‌ಡೀಡ್ ಅನುಸರಿಸಿ ನನ್ನ ಸ್ವಾಧೀನದಲ್ಲಿರುತ್ತಾಗಿ ಇವುಗಳನ್ನು ಡಿಟೊ ರುದ್ರಪ್ಪನವರು ದಾನಕ್ರಯ ಭೋಗ್ಯಾದಿ ಯಾವವಿಧವಾದ ಪರಾಧೀನ ಮಾಡಲೂ ಅವರಿಗೆ ಹಕ್ಕುಯಿರುವದಿಲ್ಲ. ಈ ಸ್ವತ್ತಿನ ಜವಾಬ್ದಾರಿಮೇಲೆ ಯಾರಾದರೂ ಸಾಲ ವಗೈರೆ ಕೊಟ್ಟಲ್ಲಿ ಆ ಸಾಲಗಳಿಗೆ ಡಿಟೊ ಸ್ವತ್ತುಗಳು ಈಡಾಗುವದಿಲ್ಲವಲ್ಲದೆ ಆ ಸಾಲವು ಅವರಿಗೆ ಸಲ್ಲದೆ ಕಳೆದುಕೊಳ್ಳಬೇಕಾಗುತ್ತೆಂತಲೂ ಈ ಮೂಲಕ ತಿಳಿಸಿರುತ್ತೆ.

ಟಿ. ಕೃಷ್ಣಮೂರ್ತಿ, ಅಡ್ವೊಕೇಟ್,
ಶಿದ್ದಿಕಟ್ಟೆ, ಬೆಂಗಳೂರು ಸಿಟಿ.

ಭಯಂಕರ ಮೃತ್ಯು.

ಮಲಬಾರಿನಲ್ಲಿ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಿದ್ದ ೧೦೦ ಮಂದಿ ಬಂದಿಗಳನ್ನು ಬಳ್ಳಾರಿ ಕಾರಾಗೃಹಕ್ಕೆ ಸಾಗಿಸಲಿಕ್ಕಾಗಿ ತಿರೂರಿನಲ್ಲಿ ಕಬ್ಬಿಣದ ವ್ಯಾಗನ್ ಬಂಡಿಯಲ್ಲಿ ಕುಳ್ಳಿರಿಸಿ, ಬಾಗಿಲನ್ನು ಮುಚ್ಚಿ ಬೀಗಹಾಕಿ ಸಾಗಿಸಿದರು. ಜತೆಯಲ್ಲಿ ಕಾವಲಿಗೆ ಕೆಲ ಪೊಲೀಸರೂ ಸಾರ್ಜಂಟ್ ಆಂಡ್ರೂಸ್‌ರವರೂ ಇದ್ದರು. ತಾ|| ೨೦ ರ ನಡುರಾತ್ರಿಗೆ ಆ ಬಂಡಿಯು ಕೊಯಮತ್ತೂರಿನಿಂದ ಈಚೆಗೆ ಇರುವ ಪೋತನೂರು ನಿಲ್ದಾಣಕ್ಕೆ ಬಂದು ನಿಂತಿತು. ಆಗ್ಗೆ ಒಬ್ಬ ಪೊಲೀಸನು ಕದದ ಸಂದಿಯಲ್ಲಿ ಇಣಿಕಿ ನೋಡಲು ಒಳಗೆ ಕೆಲವರು ಬೋರಲ್ಲಾಗಿಯೂ ತಾರುಮಾರಾಗಿಯೂ ಬಿದ್ದಿದ್ದಂತೆ ಕಂಡುಬಂದಿತು. ಕೂಡಲೇ ಅವನು ಮೇಲ್ಪಟ್ಟ ಉದ್ಯೋಗಿಗಳಿಗೆ ತಿಳಿಯಿಸಲು, ಅವರುಗಳು ಬಂದು ಬಾಗಿಲನ್ನು ಬಿಚ್ಚಿ ನೋಡುವಲ್ಲಿ ೫೬ ಮಂದಿಗಳು ಸತ್ತಿದ್ದರು. ಅವುಗಳನ್ನೆಲ್ಲಾ ತಿರೂರಿಗೆ ಸಾಗಿಸಿದರು. ಬದುಕಿದ್ದವರನ್ನು ಕೊಯಮತ್ತೂರು ಸ್ಟೇಷನ್ನಿಗೆ ಸಾಗಿಸಿದರು. ಅಲ್ಲಿ ಔಷಧೋಪಚಾರಗಳನ್ನು ಮಾಡಿಸುವುದರೊಳಗೆ ಮತ್ತೆ ೮ ಮಂದಿಗಳು ಸತ್ತರು. ಉಳಿದವರನ್ನೆಲ್ಲಾ ಅಲ್ಲಿಯ ಕಾರಾಗೃಹಕ್ಕೆ ಸೇರಿಸಿ ಉಪಚರಿಸಿದರು. ಈ ಸುದ್ದಿಯನ್ನು ಮದ್ರಾಸು ಸರ್ಕಾರದವರು ಕೇಳಿ, ತಮ್ಮ ಸಂತಾಪವನ್ನು ವ್ಯಕ್ತಪಡಿಸಿ, ಈ ದುಸ್ಸಂಘಟನವು ಹೇಗೆ ಉಂಟಾಯಿತೋ ಅದನ್ನು ಸಾಂಗವಾಗಿ ವಿಚಾರಿಸಲಿಕ್ಕೆ ಮಲಬಾರ್ ಸ್ಪೆಷಲ್ ಕಮೀಷನರ್ ಮಿ|| ನಾಪ್‌ರವರಿಗೆ ಅಪ್ಪಣೆಮಾಡಿರುತ್ತಾರೆ. ಹಿಂದೆ ಸಿರಾಜುದ್ದೌಲನ ದವಲತ್ತಿನಲ್ಲಿ ಬಂಗಾಳಾದೊಳಗೆ ನಡೆಯಿತೆಂದು ಹೇಳಲ್ಪಡುತ್ತಿರುವ ಕತ್ತಲೆಕೋಣೆಯ ಸಂಗತಿಯು ಈಗಣ ಪ್ರತ್ಯಕ್ಷವಾದ ಈ ದುರ್ಘಟನೆಯಿಂದ ಜ್ಞಾಪ್ತಿಗೆ ಬರುತ್ತಿದೆ. ಉಸಿರಾಡುವುದಕ್ಕೆ ಅವಕಾಶವಿಲ್ಲದಂಥ ಕಬ್ಬಿಣದ ವಾಗಿನ್ನುಗಳಲ್ಲಿ ಅಷ್ಟು ಜನರನ್ನು ತುಂಬಿ ಸಾಗಿಸುವುದಕ್ಕೆ ಯಾರು ಕಾರಣಭೂತರೋ ಅದನ್ನು ವಿಚಾರದಿಂದ ಗೊತ್ತುಮಾಡಿ ತಕ್ಕ ಶಿಕ್ಷೆಯನ್ನು ವಿಧಿಸುವಲ್ಲಿ ಸರ್ಕಾರದವರು ದಕ್ಷತೆಯನ್ನು ತೋರಿಸದಿದ್ದರೆ ಈಗಲೇ ಕ್ಷುಬ್ಧವಾಗಿರುವ ಪ್ರಜೆಗಳ ಮ

ನನ್ನು ಮತ್ತಷ್ಟು ಕೆರಳುವುದರಲ್ಲಿ ಸಂಶಯವಿಲ್ಲ. ಯದ್ಯಪಿ ಮಾಪ್ಳೆಗಳು ನಡೆಯಿಸಿದ ಘೋರತರ ದುಷ್ಕೃತ್ಯಗಳಿಗೆ ಸದ್ಯಃ ಫಲನಿದರ್ಶನವಾಗಿನೆಯೆಂದು ಇತರರು ಭಾವಿಸಲಿಕ್ಕೆ ಅವಕಾಶವಾಗಿದ್ದರೂ, ಅಜಾಗರೂಕತೆಯಿಂದ ಇಷ್ಟೊಂದು ಜನರ ಪ್ರಾಣಹಾನಿಗೆ ಅವಕಾಶಕೊಟ್ಟವರು ಶಿಕ್ಷೆಗೆ ಗುರಿಯಾಗಿಯೇ ತೀರಬೇಕಾದುದು ಧರ್ಮವಾಗಿದೆ. ಇದೇ ತೆರದ ಬಂಡಿಯಲ್ಲಿ ಹಿಂದೆ ಕೆಲವು ಸಲ ಮಲಬಾರ್ ಬಂದಿಗಳನ್ನು ಸಾಗಿಸಿರುವಂತೆಯೂ ಆಗ ಇಂಥ ಅನಾಹುತಗಳೇನೂ ಆಗಿರಲಿಲ್ಲವೆಂತಲೂ, ಆ ವಾಗಿನ್ನಿಗೆ ಗಾಳಿ ಬೆಳಕು ಬೀಳಲು ಅವಕಾಶವಿದ್ದಿತೆಂತಲೂ ಸುದ್ದಿಗಳು ಬಂದಿವೆ. ವಿಚಾರಾಂತ್ಯದಲ್ಲಿ ನಿಜಸ್ಥಿತಿಯು ಗೊತ್ತಾಗುವುದು. ಸರ್ಕಾರದವರು ವಿಚಾರಣೆಗಾಗಿ ಸರ್ಕಾರಿ ಉದ್ಯೋಗಿಗಳೂ ಅನುದ್ಯೋಗಿಗಳೂ ಸೇರಿದ ಸಂಘವೊಂದನ್ನು ಏರ್ಪಡಿಸಿದ್ದಾರೆ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ನವಂಬರ್ ತಾ|| ೨೭ ನೆಯ ಭಾನುವಾರ.

ಮೈಸೂರು ಸಂಸ್ಥಾನಕ್ಕೆ ಗೆದ್ದಲು ಹತ್ತಿದೆ.

ಮೈಸೂರು ಸಂಸ್ಥಾನದಲ್ಲಿ ಅಸಹಾಯವಾದಿಗಳ ಕೋಲಾಹಲವು ಹೆಚ್ಚುತ್ತಿರುವುದನ್ನು ನೋಡಿ ರಾಜಭಕ್ತಿ ಸಂಪನ್ನರೆಲ್ಲರೂ ಕಳವಳಗೊಳ್ಳುವಂತಾಗಿದೆ. ಈಗಣ ರಾಷ್ಟ್ರೀಯ ಸಭೆಯ ಸ್ಥಿತಿಗತಿಯನ್ನು ಪರಿಭಾವಿಸಿದರೆ ಅದರ ಶಾಖೋಪಶಾಖೆಗಳನ್ನು ನಮ್ಮಲ್ಲಿ ಸ್ಥಾಪಿಸಲು ಅವಶ್ಯಕತೆಯಿಲ್ಲವೆಂದೂ, ಅವಕ್ಕೆ ಅವಕಾಶವಾಗಬಾರದೆಂದೂ, ಉದಾಸೀನಮಾಡಿದರೆ ಅನರ್ಥಕ್ಕೆ ಆಸ್ಪದವಾಗುವುದೆಂದೂ ನಾವು ಎಷ್ಟೋ ಸಲ ಹೇಳುತ್ತಾ ಬಂದೆವು. ಪ್ರಭುತ್ವದವರಿಗೆ ಅದು ಮನದಟ್ಟಿದಂತೆ ಕಾಣುವುದಿಲ್ಲ. ಸ್ವತಃ ಅನುಭವಕ್ಕೆ ಬಂದಮೇಲೆ ಅವರು ಎಚ್ಚತ್ತುಕೊಳ್ಳುವವರಾಗಿದ್ದೀತು.

ಅಸಹಾಯವಾದಿಗಳ ಉಪನ್ಯಾಸಗಳಲ್ಲಿ ದೌರ್ಜನ್ಯಾಚರಣೆಯು ಕೂಡದೆಂದು ಬೋಧಿಸಲ್ಪಡುತ್ತಿದ್ದರೂ, ಆಂಗ್ಲಪ್ರಭುತ್ವದ ಮೇಲೆ ಹಗೆತನವನ್ನು ಹುಟ್ಟಿಸಲು ಅವರ ಭಾಷಣಗಳು ಸಾಧಕವಾಗಿರುತ್ತವೆ. ನಿಗ್ರಹಸಾಮರ್ಥ್ಯವಿಲ್ಲದ ಸಾಮಾನ್ಯ ಪ್ರಜೆಗಳಲ್ಲಿ ಆ ಉಪನ್ಯಾಸ ಪರಿಣಾಮವು ಒಂದು ತೆರದ ಹುಚ್ಚನ್ನು ಹುಟ್ಟಿಸಿ ಎಷ್ಟು ವಿಪರೀತಾನರ್ಥಗಳನ್ನು ಮಾಡಿಸುತ್ತಿರುವುದೆಂಬುದನ್ನು ಮಲಬಾರು ಹಾವಳಿ, ಮಲೆಗಾಂವದ ಅತ್ಯಾಚಾರ, ಈಗತಾನೇ ಬೊಂಬಾಯಿಯಲ್ಲಿ ನಡೆದ ಅನಾಹುತ-ಮೊದಲಾದುವುಗಳಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ. ಗಾಂಧಿಯವರ ಅಸಹಾಯಚಳವಳಿಯು ಬಲಿಯುತ್ತ ಬಂದಂತೆಲ್ಲ ಈ ಅತ್ಯಾಚಾರಗಳೂ ವೃದ್ಧಿಗೊಳ್ಳುತ್ತಾ ಬರಬಹುದೇ ಹೊರತು ಕಡಿಮೆಯಾಗುವ ಲಕ್ಷಣವಿಲ್ಲ. ಏಕೆಂದರೆ ಗಾಂಧಿಯವರೂ ಅವರ ಭಕ್ತರೂ ಸಹ ಈಗ ಸ್ವರಾಜ್ಯಸಾಧನೆಗಾಗಿ ರಕ್ತಪಾತಕ್ಕೂ ಹಿಂದೆಗೆಯಲಾಗದೆಂದು ಪ್ರಜೆಗಳಿಗೆ ಬೋಧಿಸುತ್ತಿದ್ದಾರೆ. ಇಂಥ ಸ್ಥಿತಿಯಲ್ಲಿ ಅಸಹಾಯವಾದಿಗಳ ಚಳವಳವನ್ನು ಸ್ವದೇಶ ಸಂಸ್ಥಾನದಲ್ಲಿ ಬೆಳೆಯಗೊಳಿಸುವುದು ಕ್ಷೇಮವೇ ಎಂಬುದನ್ನು ವಿವೇಕಿಗಳು ಪರ್ಯಾಲೋಚಿಸದೆ ಇರುವುದು ಧರ್ಮವಲ್ಲ.

ಹೈದರಾಬಾದ್ ನೈಜಾಮರವರು ತಮ್ಮ ಸಂಸ್ಥಾನದಲ್ಲಿ ಕಾಂಗ್ರೆಸ್ ಸಭೆ ಖಿಲಾಫತ್ ಸಭೆ ಮೊದಲಾದುವುಗಳೊಂದೂ ಸ್ಥಾಪಿಸಲ್ಪಡಕೂಡದೆಂದು ಮೊದಮೊದಲೇ ಕಟ್ಟಪ್ಪಣೆ ಮಾಡಿದುದಲ್ಲದೆ, ಅದನ್ನು ಮೀರಿ ನಡೆದ ಇಬ್ಬರನ್ನು ಗಡೀಪಾರು ಕೂಡ ಮಾಡಿಸಿಬಿಟ್ಟರು. ಅನೇಕ ಸಾಮಂತ ಸಂಸ್ಥಾನಗಳವರು ಹಾಗೆಯೇ ಮಾಡಿರುವರು. ಗಾಂಧಿಯವರ ಪ್ರವೇಶಕ್ಕು ಕೂಡ ಕೆಲ ಸಂಸ್ಥಾನಗಳವರು ಅವಕಾಶಕೊಟ್ಟಿಲ್ಲ. ಯುವಸಾರ್ವಭೌಮರು ತಮ್ಮ ಸಂಸ್ಥಾನಕ್ಕೆ ಆಗಮಿಸಿದಾಗ್ಗೆ ತುಂಟರಿಂದ ಏನು ಹಾವಳಿಯಾಗಿ ತಮಗೆ ಎಲ್ಲಿ ಕೆಟ್ಟಹೆಸರು ಬರುವುದೋ ಎಂಬ ಮುಂದಾಲೋಚನೆಯಿಂದ ಬರೋಡಾ ಮಹಾರಾಜರು ಕೆಲಮಂದಿ ಬಂಗಾಳಾ ಜನರನ್ನೂ ವಿದ್ಯಾರ್ಥಿಗಳನ್ನೂ ಕೆಲಕಾಲ ತಮ್ಮ ದೇಶವನ್ನು ಬಿಟ್ಟು ಹೊರಕ್ಕೆ ಹೋಗಿರಬೇಕೆಂದು ಏರ್ಪಾಟು ಮಾಡಿಸಿರುವರು. ತಿರುವಾಂಕೂರು ಮಹಾರಾಜರು ಕೂಡ ಅಸಹಾಯವಾದಿಗಳ ಕೀಟಲೆಗಳನ್ನು ಹಬ್ಬಗೊಡದಂತೆ ಮಾಡುವುದಕ್ಕೆ ತಕ್ಕ ಏರ್ಪಾಟನ್ನು ಜರುಗಿಸುತ್ತಿರುವರು. ಬಂಗಾಳಾ ಸರ್ಕಾರದವರು ತಮ್ಮ ಆಧಿಪತ್ಯದಲ್ಲಿರುವ ಸಹಾಯನಿರಾಕರಣಸ್ವಚ್ಛಂದ ಸೇವಕ ಸಂಘಗಳನ್ನೂ, ಮಹಮ್ಮದೀಯರ ಸ್ವಚ್ಛಂದ ಸೈನಿಕ ಸಂಘಗಳನ್ನೂ, ರಾಷ್ಟ್ರೀಯ ಸಭಾಸ್ವಚ್ಛಂದ ಸೇವಕ ಸಂಘಗಳನ್ನೂ, ಇದೇ ತೆರದ ಇತರ ಸಂಘಗಳನ್ನೂ ಸಹ ಅಕ್ರಮ ಸಂಘಗಳೆಂದೂ, ಪ್ರಭುತ್ವಪರಿಪಾಲನೆಗೂ ದೇಶಶಾಂತಿರಕ್ಷಣೆಗೂ ಆತಂಕವನ್ನುಂಟುಮಾಡುತ್ತಿರುವುವೆಂದೂ, ಅದುಕಾರಣ ಇವೆಲ್ಲಾ ಪ್ರಭುತ್ವಶಾಸನಕ್ಕೆ ವಿರುದ್ಧಗಳಾದ ಸಂಘಗಳೆಂದು ನಿರ್ಧರಿಸಿ ಪ್ರಕಟಿಸಿರುವರು. ಬೊಂಬಾಯಿಯಲ್ಲಿ ನಡೆದ ದುಶ್ಚರಿತಗಳನ್ನೂ ತುಂಟರ ಹಾವಳಿಯನ್ನಡಗಿಸಲಿಕ್ಕೆ ತಮ್ಮಿಂದಲೇ ಸಾಧ್ಯವಾಗದೆ ಹೋದುದನ್ನೂ ಮ|| ಗಾಂಧಿಯವರು ತಾವೇ ಪ್ರತ್ಯಕ್ಷವಾಗಿ ನೋಡಿ, ಇದುವರೆಗೆ ತಾವು ಮಾಡಿದ ಕೆಲಸವೂ ತಿಳಿದುಕೊಂಡಿದ್ದ ಸಂಗತಿಯೂ ತಪ್ಪಾದುದೂ ಭ್ರಾಂತಿಯುಕ್ತವಾದುದೂ ಎಂದು ಪಶ್ಚಾತ್ತಾಪಪಟ್ಟಿರುವರು. ಹೀಗೆಲ್ಲಾ ಇದ್ದರೂ ನಮ್ಮ ಮೈಸೂರು ಪ್ರಭುತ್ವದವರು ಅಸಹಾಯವಾದಿಗಳಾದ ಕಾಂಗ್ರೆಸ್ ಭಕ್ತರ ಸ್ವಚ್ಛಂದ ವಿಹಾರಕ್ಕೆ ನಿರಾತಂಕ ಮಾಡಿಟ್ಟಿರುವುದನ್ನು ನೋಡಿದರೆ ಸಖೇದಾಶ್ಚರ್ಯವಾಗುತ್ತದೆ.

ಮೈಸೂರುದೇಶದ ಅಧಿಕಾರಸ್ತಂಭವನ್ನು ಅಪ್ಪಿಕೊಂಡು ಏರುತ್ತಿದ್ದು ಆಯತಪ್ಪಿ ಬಿದ್ದು ಅತೃಪ್ತರಾಗಿರುವವರೊಬ್ಬರು ಈ ದೇಶದಲ್ಲಿ ಕಾಂಗ್ರೆಸ್ ಚಳವಳಿಗೆ ಪ್ರಭುಗಳಾಗಿದ್ದಾರೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಸಹಾಯನಿರಾಕರಣದ ಮೂಲಕ ಗದ್ದಲವನ್ನು ಹುಟ್ಟಿಸಬೇಕೆಂದು ಪ್ರೇರಿಸಿ ಭಗ್ನಮನೋರಥರಾಗಿ ಕುದಿಕುಳಿಗೊಳ್ಳುತ್ತಿರುವವರೊಬ್ಬರು ಮಂತ್ರಿಗಳಾಗಿದ್ದಾರೆ. ಇವರುಗಳು ಸೂತ್ರಧಾರರಾಗಿದ್ದುಕೊಂಡು ಅಸಹಾಯದ ಚಳವಳಿಯನ್ನು ಈ ದೇಶದಲ್ಲಿ ಹಬ್ಬಿಸಿ ಗದ್ದಲವನ್ನುಂಟುಮಾಡುತ್ತಲಿದ್ದಾರೆ. ಅರಿಯದ ಕೋಮಲಾಂತಃಕರಣದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆಂಗ್ಲದ್ವೇಷ ವಿಷಬೀಜವು ಬಿತ್ತಲ್ಪಡುತ್ತಿದೆ. ರಾಜಧಾನಿಯಲ್ಲಿ ತಿಲಕಪುಣ್ಯದಿನದ ವ್ಯಾಜದಿಂದ ಎಷ್ಟೋ ಗದ್ದಲವಾಯಿತು. ಯಾವ ಪ್ರತಿಬಂಧಕವೂ ಆಗದಿದ್ದುದರಿಂದ ಉಚ್ಛೃಂಖಲವರ್ತನಕ್ಕೆ ಪುಟಕೊಟ್ಟಂತಾಯಿತು. ಈಗ ಯುವಸಾರ್ವಭೌಮರು ಭರತಖಂಡಕ್ಕೆ ಬಂದಿಳಿದ ದಿವಸ ಬೆಂಗಳೂರಿನ ಕಾಲೇಜು ವಿದ್ಯಾರ್ಥಿಗಳೂ ಸರ್ಕಾರಿ ಹೈಸ್ಕೂಲು ವಿದ್ಯಾರ್ಥಿಗಳೂ ಸಹ ಹರತಾಳಕ್ಕೆ ಉಪಕ್ರಮಿಸಿ, ಇಷ್ಟವಿಲ್ಲದ ಇತರರನ್ನು ನಿರ್ಬಂಧದಿಂದಲೂ ಭಯ ತೋರಿಸುವುದರಿಂದಲೂ ತಮ್ಮ ಜತೆಗೆ ಸೇರಿಕೊಂಡು, ಶಾಲೆಗಳಿಗೆ ಹೋಗದೆ ನಿಂತುಬಿಟ್ಟು, ಇತರಶಾಲೆಗಳ ವಿದ್ಯಾರ್ಥಿಗಳಿಗೂ ಹಾಗೆಯೇ ಮಾಡುವಂತೆ ಮಾಡಿದರು. ಇದನ್ನು ಕಂಡು ಸರ್ಕಾರದವರು ಸ್ವಲ್ಪ ಕಣ್ಣುತೆರೆಯುವಂತಾಯಿತು. ಅಂದಿನಿಂದ ಕಾಲೇಜನ್ನೂ ಹೈಸ್ಕೂಲುಗಳನ್ನೂ ಮುಚ್ಚಿಬಿಡಲಿಕ್ಕೆ ವೈಸ್ ಚಾನ್ಸಲರೂ, ವಿದ್ಯಾಶಾಖಾ ಇನ್‌ಸ್ಪೆಕ್ಟರ್ ಜನರಲ್‌ರವರೂ ಅಪ್ಪಣೆಮಾಡಿದರು. ಒಂದುವಾರ ತುಂಬುವುದರೊಳಗಾಗಿ ಮರಳಿ ಶಾಲೆಗಳನ್ನೆಲ್ಲಾ ಯಥಾಪ್ರಕಾರ ತೆಗೆಯಲು ಅಪ್ಪಣೆಮಾಡಿದರು. ವಿದ್ಯಾರ್ಥಿಗಳು ಕ್ಷಮಾಪಣೆ ಕೇಳಿಕೊಂಡರಂತೆ. ಈ ಶಾಸ್ತ್ರದಿಂದ ಯಾವ ಭೀತಿಯನ್ನುಂಟುಮಾಡಿದಂತಾಯಿತು? ವಿದ್ಯಾರ್ಥಿಗಳು ಮಾಡಿದುದು ತಪ್ಪಾಗಿದ್ದರೆ ಇಷ್ಟೇ ಎಚ್ಚರಿಕೆಯು ಸಾಲದು. ಮೈಸೂರಿನಲ್ಲಿ ವಿದ್ಯಾರ್ಥಿಗಳ ಗದ್ದಲವಾದಾಗಣಿಂದಲೂ ಆಗಾಗ್ಗೆ ಎಚ್ಚರವನ್ನು ಕೊಡುತ್ತಲೇ ಇದ್ದರಂತೆ. ಆದರೂ ಹರತಾಳವು ತಪ್ಪಲಿಲ್ಲ.

ಮ|| ಗಾಂಧಿಯವರು ಆಂಗ್ಲಯುವರಾಜರ ಸನ್ಮಾನಸತ್ಕಾರಗಳಿಗೂ ಉತ್ಸವಾವಲೋಕನಕ್ಕೂ ಯಾರೂ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದೆಂದು ಸಾರಿರುವರು. ಅವರ ಮಾತಿಗೆ ಕಟ್ಟುಬಿದ್ದು ಬೆಂಗಳೂರು ವಿದ್ಯಾರ್ಥಿಗಳು ತಾ|| ೧೭ ರಲ್ಲಿ ಹರತಾಳವನ್ನಾಚರಿಸಿದ ಬಳಿಕ ನಾಳೆ ಜನವರಿ ತಿಂಗಳಲ್ಲಿ ಯುವಸಾರ್ವಭೌಮರು ನಮ್ಮ ದೇಶಕ್ಕೆ ಬಂದಾಗಲೂ ಅದೇರೀತಿಯ ಹರತಾಳವನ್ನು ಇನ್ನೂ ಬಲವತ್ತರವಾಗಿಯೇ ಆಚರಿಸಲಿಕ್ಕೆ ಹಿಂಜರಿಯಲಾರರು. ಈ ಬೆಂಗಳೂರು ವಿದ್ಯಾರ್ಥಿಗಳ ಹಜ್ಜೆಯನ್ನು ಮೈಸೂರು ವಿದ್ಯಾರ್ಥಿಗಳೂ ಅನುಸರಿಸಬಹುದು. ಆಗ್ಗೆ ನಮ್ಮ ಪ್ರಭುತ್ವದವರು ಏನುಮಾಡುವರು? ವಿದ್ಯಾರ್ಥಿಗಳ ಸಾಲನ್ನು ಕುಳ್ಳಿರಿಸಲಿಕ್ಕಾಗಿ ಸಯ್ಯಾಜಿರಾವ್ ಮಾರ್ಗದಲ್ಲಿ ಈಗಳಿಂದಲೂ ಹಾಕಿಸುತ್ತಿರುವ ಗ್ಯಾಲರಿಗಳಮೇಲೆ ಅಗ್ನಿಕುಂಡಗಳನ್ನಿಟ್ಟು ಅಲಂಕರಿಸಬೇಕಾದೀತೋ ಏನೋ! ವಿಚಾರಮಾಡಿ ನೋಡಿದರೆ ಭರತಖಂಡದ ಇತರ ಸಂಸ್ಥಾನಗಳಿಗಿಂತಲೂ ನಮ್ಮ ಸಂಸ್ಥಾನವು ಆಂಗ್ಲ ಸಾರ್ವಭೌಮರಲ್ಲಿ ವಿಶೇಷವಾದ ಕೃತಜ್ಞತಾವಿಧೇಯತೆಗಳನ್ನು ಹೊಂದಿರಬೇಕಾದುದಕ್ಕೆ [illegible] ಕಾರಣಗಳಿರುತ್ತವೆ. ಇದುವರೆಗೆ ಅಂಥ ಭಾವವನ್ನು ನಮ್ಮ ಸಂಸ್ಥಾನವು ಚೆನ್ನಾಗಿ ಕಾಪಾಡಿಕೊಂಡು ಸಾರ್ವಭೌಮ ಪ್ರಭುತ್ವದ ಅಭಿಮಾನ ಸನ್ಮಾನ ವಿಶ್ವಾಸಗಳಿಗೆ ವಿಶೇಷ ಪಾತ್ರವಾಗಿ ನಡೆದುಕೊಂಡುಬಂದಿದೆ. ಈಗ ಕೆಲವರ ದುರಭಿಸಂಧಿಗಳ ಮೂಲಕವಾಗಿ ನಮ್ಮ ಸಂಸ್ಥಾನವು ಅಂಥ ಪ್ರಾಚೀನ ಪ್ರತಿಷ್ಠಾ ಗೌರವಗಳನ್ನು ಕಳೆದುಕೊಳ್ಳುವುದನ್ನು ದೇಶೀಯರಾದ ಸಾತ್ವಿಕಪ್ರಜೆಗಳು ಎಂದಿಗೂ ಸೈರಿಸಲಾರರು. ನಮ್ಮ ದೇಶದ ಪ್ರಜೆಗಳಿಗೆ ಗಾಂಧಿಯವರ ಮಾತು ಹೆಚ್ಚೋ? ನಮ್ಮ ಮಹಾಪ್ರಭುಗಳು ಹೆಚ್ಚೋ? ನಮ್ಮ ಪ್ರಭುಗಳು ಯುವಸಾರ್ವಭೌಮರವರಿಗೆ ಆಹ್ವಾನವನ್ನು ಕೊಟ್ಟು ನಮ್ಮಲ್ಲಿಗೆ ಅತಿಥಿಗಳನ್ನಾಗಿ ಬರಮಾಡಿಕೊಂಡು ಸತ್ಕರಿಸಿ ಮರ್ಯಾದಿಸಬೇಕೆಂದು ಸನ್ನದ್ಧರಾಗಿರುವಾಗ, ನಮ್ಮ ದೇಶದ ಪ್ರಜಾಪ್ರತಿನಿಧಿಸಭೆಯೂ ನಿಯಮನಿರ್ಮಾಣಸಭೆಯೂ ಆ ಮಾನನೀಯಾತಿಥಿಗಳ ಸತ್ಕಾರ ಸಮಾರಂಭಗಳಲ್ಲಿ ತಮ್ಮ ಆನಂದಕುತೂಹಲಾದಿಗಳನ್ನು ವ್ಯಕ್ತಪಡಿಸಿ ಅನುಮೋದಿಸಿರುವಾಗ, ನಮ್ಮ ದೇಶದ ಅದೂರದರ್ಶಿಗಳಾದ ಕೆಲವು ವಿದ್ಯಾರ್ಥಿಗಳೂ ಕೆಲ ಪ್ರಜೆಗಳೂ ದುಷ್ಟವಾದ ಹರತಾಳ ಮೊದಲಾದುದನ್ನು ಆಚರಿಸುವುದೆಂದರೆ ಸಾಮಾನ್ಯಾಪರಾಧವೆ? ಇದಕ್ಕಿಂತ ಬೇರೆ ರಾಜದ್ರೋಹವುಂಟೆ? ಸ್ಕಾಲರ್ಷಿಪ್ಪು, ಫ್ರೀಷಿಪ್ಪು, ಹಾಫ್ ಸ್ಕಾಲರ್ಷಿಪ್ಪು ಮೊದಲಾದುವುಗಳ ಮೂಲಕ ನಮ್ಮ ಪ್ರಭುತ್ವದವರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಕಾಪಾಡುತ್ತಿರುವುದಕ್ಕೆ ಇದೇ ಪ್ರತಿಫಲವೆ? ಮನೆಯಜಮಾನನು ಸಂಮಾನ್ಯಾತಿಥಿಯನ್ನು ಕರೆದು ಸತ್ಕರಿಸಲಿಕ್ಕಿರುವಾಗ ಸೇವಕನು ನಗ್ನಾಂಗನಾಗಿ ಬಾಗಿಲಲ್ಲಿ ನಿಂತಿರಬಹುದೆ? ಅದರಿಂದ ಉಂಟಾಗುವ ಪರಿಣಾಮಫಲವು ಯಾರಿಗುಂಟಾಗುವುದು? ಇದನ್ನು ಮನೆಯಜಮಾನನು ಸೈರಿಸಿಕೊಂಡಿರಬಹುದೆ?

ಮೊನ್ನೆ ತಾನೇ ರಾಜಧಾನಿಯಲ್ಲಿ ಕಾಂಗ್ರೆಸ್ ಭಕ್ತರು ಉಪನ್ಯಾಸಗಳನ್ನು ಮಾಡಿಸಿ ವಿದೇಶವಸ್ತ್ರಗಳ ದಹನವನ್ನು ಮಾಡಿಸಿದ್ದಾರೆ. ದೇಶದ ನಾನಾಭಾಗಗಳಲ್ಲಿ ಆಂಗ್ಲ ದ್ವೇಷವನ್ನು ಇವರು ಹೆಚ್ಚಿಸುತ್ತಿದ್ದಾರೆ. ಇನ್ನೂ ಈ ಕ್ರಮವನ್ನು ಹೀಗೆಯೇ ಬೆಳೆಯಗೊಡುವುದು ಹಿತಪರಿಣಾಮಿಯಲ್ಲ. ಮೊನ್ನೆ ತಾನೇ ಬೆಂಗಳೂರಿನಲ್ಲಿ ದೊಡ್ಡ ಗದ್ದಲವು ನಡೆದ ವಾರ್ತೆಬಂದಿದೆ. ಇದುವರೆಗೆ ನಮ್ಮ ಪ್ರಭುತ್ವದವರು ಉದಾಸೀನಮಾಡುತ್ತಾ ಬಂದುದೇ ತಪ್ಪಾಗಿದೆ. ಕಾಂಗ್ರೆಸ್ ಶಾಖಾಸಂಘಗಳ ಸ್ಥಾಪನೆ ಹರತಾಳದ ವ್ಯಾಪನೆ ಮೊದಲಾದವುಗಳನ್ನು ನಿಲ್ಲಿಸುವ ಕಟ್ಟಪ್ಪಣೆಯನ್ನು ಈಗಳಾದರೂ ಮಾಡಲೇಬೇಕು. ಇಂಥ ಚಳವಳದಲ್ಲಿ ಸೇರುವ ವಿದ್ಯಾರ್ಥಿಗಳೇ ಮೊದಲಾದವರಿಗೆ ತಕ್ಕ ಭಯವುಂಟಾಗುವಂತೆ ಏರ್ಪಾಟಾವುದನ್ನಾದರೂ ಮಾಡಬೇಕು. ಒಂದನ್ನೂ ಮಾಡದೆ ಇದುವರೆಗಣಂತೆ ಉದಾಸೀನರಾಗಿ ಮುಂದೆಯೂ ಇದ್ದರೆ ಈಗ ಸಂಸ್ಥಾನಕ್ಕೆ ಹತ್ತಿರುವ ಅಸಹಾಯ ಚಳವಳವೆಂಬ ಗೆದ್ದಲು ಬುಡಮಟ್ಟ ಮೆಯ್ದುಬಿಡುವುದರಲ್ಲಿ ಅಭ್ಯಂತರವು ಕಾಣುವುದಿಲ್ಲ. ಅದುಕಾರಣ ಈಗಲೇ ಅದನ್ನು ಝಾಡಿಸುವುದು ಶ್ರೇಯಸ್ಕರ.

ONE WHO CRIES MOST GETS MOST.

Our contemporary the "Wealth of Mysore" and other papers which are in league with it did create such a "hue and cry" about the apprehended disappearance of facilities for Brahman students to prosecute their studies that it was considered that there was going to be no more students to read in the University classes. The fact has been otherwise. The college classes are as full of them mainly as ever and we are sincerely glad of that. But what are the facilities afforded to them? We publish below the Government answers in figures to question 7, (1) and (2) at the Legislative Council held on the 15th instant.

	Free ships	Half free ships	Scholar ships (general)	B.W. Scholar ships
Maharaja's College	...	138½	33	36
Central College	42	48	34	19
Engineering College	...	...	46	6
Maharani's College	...	...	16	...

	Brahmans.	Others.
Freeships	219	26½
Half Freeships	65	4
Scholarships General	117	12
Backward Scholarships	...	61
Total of candidates enjoying privileges	401	103½

Is this in any way bad? To 100 students of Brahmans—a minor class in possession of all the Government Offices of importance and influence in its hands and Wealthy—there are 25'87 of the students of the rest of the world including the labour class, agriculturists and every other shade of men engaged in manual work. If the High School and Entrance Class figures are taken, they will be much more to the advantage of this favoured class. Why? The gift is in their hands. Still why all the clamour? To bluff.

In the same way if statistics are published of appointments which have been made during the last four months, the same staggering amazement will greet the public. Why again? The patronage is in the hands of the class which makes all the dust. Bluff again!! What about efficiency? Bluff over again!!! The students' strikes and the Shaubhogues' strikes illustrate it. The privileges to the overflowing beget this disorder. Schools and colleges at considerable cost are maintained to manufacture these miscreants who are backed up in their mis-behaviour by so many many—God knows why. The undaunted preachings in the open air by the authors of these strikers are soul-poisoning. They are at large! Why? We are unable to answer this question. Is it that the tall talk the Mysore Wealth of old and the Mysore Chronicle of new have combined to make that has kept back the hands of Justice from interference? We are again unable to answer this question too. The Mysore Public is over powered with the cry of bluff reaching every corner of our Province for which as means so many Reading Rooms were opened during the last 7 or 8 years at the expense of the unsuspecting merchants and agriculturists. We propose to deal with the other aspects of the Bluff in our subsequent issues.

THE MALABAR TROUBLES.

The public are fully aware of the atrocities which are being committed in Malabar by the Moplah rebels. The whole of India bemoans for the loss of human life in that area. The Moplah, according to Lord Amthil who spoke on this subject in the House of Lords on the 25th Oct. 1921 is "A thoroughly honest fellow. But he happened to be a kind of wild fanatic. The ignorance and fanaticism of the Moplah made him a ready material for seditious propoganda." This is exactly what innocent Moplah is, but when fanaticism overtakes him, he is a mad dog and does not care for the consequences of his acts. He was trapped by the Non-Co-operators and he is lost beyond control. An army which is trained and is reputed for successful compaign in such wild countries has failed to bring the fanatic within control. Vindication of law and order in this area has become a difficult task. And what are the lessons which this serious situation has taught us?

We propose to deal with this aspect of the question. We have refrained till now to deal with it hoping that internally we had not much to do with it. But we see that the Non-Cooperators of British India do not let us enjoy our perfect happiness which we are enjoying under the benign rule of our Beloved Maharaja

The root cause of the Malabar trouble is traced to thepropoganda of the Non-Co-operators and they went there as the Moplah with his ignorance and fanaticism was the proper material to inflame. The influence was not rooted out at the early stage of its occurrence and the result has been serious loss of human life.

Anything which is repeatedly rung in into ears gradually gains strength and that is natural. This process of gaining the minds of people is easier and faster if the material exposed to that attack of ringing is inflammable. Such are ignorant and young minds. The Moplahs illustrate the former and the student population the latter. The Non-Co-operators' propoganda is directed to consume these two classes of materials. There is evidence of such destructive work every where.

This happy land of Mysore is exposed to this destructive influence on three sides of it, viz the Jolarpet gate, the Guntakal gate and the Harihar gate. In the first week of July of this year at the instance of a few disaffected people a band of Non-Co-operators came to us by the Jolarpet gate and did a lot of damaging work in the midst of ignorant people in the open air and in the midst of a select class of student population within closed doors. A correspondent of ours wrote to us a letter on this incident in Kanarese and that we published in the issue of ours of 31st July 1921. Ever since then there have been open air preachings by Non-Co-operators of various degrees of irresponsibility and we have been hearing of student strikes such as that in Mysore some days ago and that at Bangalore on the 17th instant. The Tamil speaking Non-Cooperators from the Jolarpet side were followed by Telugu Non-Cooperator from Berhampore through the Guntakal gate—another Murti—and began attacking the ignorant and young minds of Bangalore. It was an unbridled tongue and a most irresponsible talk. There has now come to Bangalore a Mr. Kar from the Harihar gate and is talking violentry on Non-Cooperation propoganda. Is it right that such persistant wrong-headed talk should be permitted unchecked? Who are the people that attend to hear these violent vapourings? They are all either outsiders who have no interest in Mysore or non-entities or disaffected few or ignorant. As regards outside people, they are many and mostly Tamil speaking people who trace their right to call themselves as downright Mysoreans, because one was born in a certain street of Mysore and because another has a big house to live in. But shall we ask where is his heart and for whom are his sympathies? Who are the student strikers? They are all wrong-headed sons of those wrong-headed persons who want everything for themselves, who created castes under the sanctity of Manu whose laws exempted them from punishments. Should the country, we ask, suffer on account of wrong-headedness of one class of people? These are hard facts. Because a class of people are super-intellectual, because a system has put them in high places of administrative machinery, because a selfish administration gave them power in the Press, because they talk and talk in the print, in streets and within closed halls and because of so many things, could the interests of the country be staked. We have peace and contentment and those in plenty. There is no good in mincing matters. They are in glaring light before us. The Murtis and Kars come and go at the instance of their comrades whom the wrong system of official work has brought to us. They have nothing to stake and we have everything to stake.

The Malabar trouble teaches us that the Non-Co-operator, should be kept out of our peaceful life. He chooses inflammable material. If he likes freedom of speech let him confine his saucy addresses to the Intelligencia and leave us alone. The "rot" which the Tamil Orators bring to us is nothing as it ends in talk but what Messrs. Kars from the Kannada country of Dharwar might bring in would be "formidable," as they try to dive deep into the hearts of the non-suspecting masses by their terse talk. We sound a note of warning before the tide through the Harihar gate increases.

ಹಲದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಕಟ್ಟಲ್ಪಡುವ ಶ್ರೀ ಕೃಷ್ಣರಾಜಮಿಲ್ಲಿನ ಶಂಕುಸ್ಥಾಪನ ಮಹೋತ್ಸವವು ಬರುವ ಡಿಸೆಂಬರ್ ತಾ|| ೧ರ ಬೆಳಗ್ಗೆ ಶ್ರೀಮನ್ಮಹಾರಾಜರ ಹಸ್ತದಿಂದ ನೆರವೇರಿಸಲ್ಪಡುವುದು.

ಕಳೆದ ತಾ|| ೧೭ ನೆಯ ದಿವಸ ಬೆಂಗಳೂರುಪಟ್ಟಣದಲ್ಲೂ ಕೂಡ ಪೇಟೆಗಳಲ್ಲಿ ಕೆಲವು ಅಸಹಾಯವಾದಿಗಳು ವರ್ತಕರ ಅಂಗಡಿಗಳನ್ನು ಬಲಾತ್ಕಾರದಿಂದ ಮುಚ್ಚಿಸಿದರೆಂದು ಸುದ್ದಿ ಕೇಳಿದೆವು.

ಶ್ರೀಮನ್ಮಹಾರಾಜರು ಬರುವ ಡಿಸೆಂಬರ್ ತಾ|| ೪ನೆ ಭಾನುವಾರ ಸ್ಪೆಷಲ್‌ಟ್ರೇನಿನ ಮೂಲಕ ಕಾಶಿಗೆ ಪ್ರಯಾಣಮಾಡುವರು. ಜತೆಯಲ್ಲಿ ಪ್ರೈವೇಟ್ ಮತ್ತು ಹುಜೂರು ಸೆಕ್ರೆಟರಿಗಳು ಏಡಿಕಾಂಗರು ಮೊದಲಾದ ಮಿತಪರಿವಾರವು ಹೊರಡುವುದೆಂದು ಕೇಳಿದೆವು. ಹಿಂದಿರುಗಿ ದಯಮಾಡಿಸಲಿಕ್ಕೆ ೨ ವಾರಗಳು ಹಿಡಿಯಬಹುದು.

ಕಳೆದ ತಾ|| ೧೭ರ ದಿವಸ ಬೆಂಗಳೂರಲ್ಲಿ ಸೆಂಟ್ರಲ್‌ಕಾಲೇಜು, ಹೈಸ್ಕೂಲು ಮೊದಲಾದ ಶಾಲೆಗಳ ವಿದ್ಯಾರ್ಥಿಗಳು ಶಾಲೆಗಳಿಗೆ ಬಾರದೆ ತಪ್ಪಿಸಿಕೊಂಡುದರಿಂದ ಮತ್ತೊಂದಪ್ಪಣೆಯಾಗುವವರೆಗೂ ಕಾಲೇಜು ಮತ್ತು ಎಲ್ಲಾ ಸ್ಕೂಲುಗಳೂ ಮುಚ್ಚಲ್ಪಟ್ಟಿರಬೇಕೆಂದು ನಮ್ಮ ವಿಶ್ವವಿದ್ಯಾಲಯದ ವೈಸ್ ಚಾನ್ಸಲರೂ ವಿದ್ಯಾಭ್ಯಾಸದ ಇ|| ಜನರಲ್‌ರವರೂ ಅಪ್ಪಣೆಮಾಡಿದ್ದು ಪುನಃ ತಾ|| ೨೪ರಲ್ಲಿ ಸ್ಕೂಲುಗಳನ್ನು ತೆರೆದು ಕ್ಷಮಾಪಣೆಯನ್ನು ಕೇಳಿಕೊಳ್ಳುವ ವಿದ್ಯಾರ್ಥಿಗಳು ಸೇರಿಸಿಕೊಳ್ಳಲ್ಪಡತಕ್ಕದೆಂದು ಮತ್ತೊಂದಪ್ಪಣೆಮಾಡಿದರು. ಅದರಂತೆ ವಿದ್ಯಾರ್ಥಿಗಳು ಹಿಂದೆಮಾಡಿದ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಕ್ಷಮಾಪಣೆ ಕೇಳಿಕೊಂಡಿರುವುದಾಗಿ ತಿಳಿಯಬಂದಿದೆ. ಈ ಅತ್ಯಾಚಾರಪ್ರವರ್ತನೆಗೆ ವೀರಶೈವ ವಿದ್ಯಾರ್ಥಿಗಳಾರಾದರೂ ಸೇರಿದ್ದರೆ ಅಂಥವರನ್ನು ನಮ್ಮ ವೀರಶೈವ ವಿದ್ಯಾವರ್ಧಕ ಫಂಡಿನವರು ಗೊತ್ತುಮಾಡಿ ಅವರಿಗೆ ಫಂಡಿನಿಂದ ಸಲ್ಲುವ ವೇತನವನ್ನು ನಿಲ್ಲಿಸಿ ಬುದ್ಧಿ ಕಲಿಸಬೇಕೆಂದು ಸೂಚಿಸುತ್ತೇವೆ.

ಯುವರಾಜಚಕ್ರವರ್ತಿಯವರು ಬೊಂಬಾಯಿಗೆ ದಯಮಾಡಿಸಿದ ದಿವಸ ಅಂದರೆ ತಾ|| ೧೭ರಲ್ಲಿ ಬೆಂಗಳೂರು ದಂಡಿನಲ್ಲಿ ಅಂಗಡಿಗಳನ್ನು ಮುಚ್ಚಿಸಲು ಪ್ರಯತ್ನಪಟ್ಟ ಕೆಲ ಮುಖಂಡರಲ್ಲಿ ೧೦ ಜನರನ್ನು ಪೋಲೀಸರು ಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದರು. ಇವರುಗಳ ವಿಚಾರಣೆಯು ಕಳೆದ ತಾ|| ೨೪ರಲ್ಲಿ ನಡೆದು ೧ ವರ್ಷದವರೆಗೆ ಒಳ್ಳೆಯ ನಡತೆಯಲ್ಲಿರುವ ಬಗೆಗೆ ಹೊಣೆಯನ್ನು ಕೊಡಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞಾಪಿಸಿದರು. ಆದರೆ ಅಪರಾಧಿಗಳಲ್ಲಿ ೬ ಜನರು ಕೊಡಲು ತಿರಸ್ಕರಿಸಿದುದರ ಮೇಲೆ ಅವರುಗಳನ್ನು ಕಮರ್ಷಿಯಲ್ ಸ್ಟ್ರೀಟಿನಲ್ಲಿರುವ ಪೋಲೀಸು ಠಾಣಕ್ಕೆ ಕರೆದುಕೊಂಡು ಹೋಗುವುದಕ್ಕಿಂತಲೂ ಕೋರ್ಟಿನ ಹೊರಗಡೆ ಗುಂಪುಕೂಡಿದ್ದ ೫-೬ ಸಾವಿರ ಜನರು ಕೋಲಾಹಲಮಾಡಿ ಅಪರಾಧಿಗಳನ್ನು ಬಿಡಿಸಿಕೊಳ್ಳಲು ಪ್ರಯತ್ನಪಟ್ಟು ಸಾಧ್ಯವಾಗಲಿಲ್ಲವಾಗಿ ಜತೆಯಲ್ಲೇ ಪೋಲೀಸು ಠಾಣದವರೆಗೂ ಹೋಗಿ ಅಲ್ಲಿ ಪೋಲೀಸು ಠಾಣಕ್ಕೆ ಕಲ್ಲುಗಳನ್ನು ಹೊಡೆಯಹತ್ತಿದರು. ಅಷ್ಟರಲ್ಲಿ ಕಲೆಕ್ಟರೂ ಮ್ಯಾಜಿಸ್ಟ್ರೇಟರೂ ಪೋಲೀಸು ಸೂಪರಿಂಟೆಂಡೆಂಟರೂ ಬಂದು ಜನರನ್ನು ಚದುರಿಸಲು ಪ್ರಯತ್ನಪಟ್ಟಾಗ್ಗೆ ಜನರು ಅವರುಗಳ ಮೇಲೆ ಬಿದ್ದು ತೊಂದರೆಪಡಿಸುವಷ್ಟರಲ್ಲಿ ಸೇನೆಯೂ ಸಾಯುಧರಾದ ಪೋಲೀಸರೂ ಬರಮಾಡಲ್ಪಟ್ಟರು. ಇಷ್ಟಾದರೂ ಗುಂಪು ಚದರದೆ ಪ್ರಬಲವಾಗುತ್ತ ಬರಲು ಸೇನೆಯವರು ಗುಂಡುಗಳನ್ನು ಹಾರಿಸಿದರು. ಇದರಿಂದ ಗುಂಪಿನಲ್ಲಿ ಕೆಲವರಿಗೆ ತಗಲಿ ಇಬ್ಬರು ಮೃತರಾದರು. ೫-೬ ಜನರಿಗೆ ಗಾಯವಾಯಿತು. ಅನಂತರ ಜನರು ಹೆದರಿ ಚದುರಿಹೋದರು.

ಶ್ರೀಮದಾಂಗ್ಲ ಯುವಸಾರ್ವಭೌಮರವರ ಸಂಚಾರ.

ಬೊಂಬಾಯಿಯಲ್ಲಿ ತಾ|| ೧೮ನೆ ಮಧ್ಯಾಹ್ನ ೧|| ಗಂಟೆಗೆ ಸರ್ಕಾರಿ ಮಂದಿರದಲ್ಲಿ ಯುವಸಾರ್ವಭೌಮರು ಸ್ವದೇಶೀಯ ಸಂಸ್ಥಾನಾಧಿಪತಿಗಳಿಗೆ ಸಂದರ್ಶನವನ್ನು ಕೊಟ್ಟು ಪ್ರತಿಯೊಬ್ಬರೊಡನೆಯೂ ಪ್ರತ್ಯೇಕವಾಗಿ ಸ್ವಲ್ಪಹೊತ್ತು ಸಂಭಾಷಿಸಿದರು. ರಾಜಕುಮಾರ ಕಲಾಶಾಲೆಯ ರಾಜಕುಮಾರರೆಲ್ಲರೂ ಇನ್ನು ಕೆಲ ಜಮೀನ್ದಾರರೂ ಹೋಗಿ ಸಂದರ್ಶನಸಂಭಾಷಣಗಳನ್ನು ಮಾಡಿಕೊಂಡು ಬಂದರು. ಅಲ್ಲಿಂದ ಯುವರಾಜರು ವೆಲ್ಲಿಂಗ್ಟನ್ ಕ್ಲಬ್ಬಿಗೆ ದಯಮಾಡಿಸಿ, ಅಲ್ಲಿ ೧ ಗಂಟೆ ಹೊತ್ತು ಇದ್ದು ಪೋಲೋ ಆಟವನ್ನು ನೋಡಿಕೊಂಡು, ತದನಂತರ ಬೊಂಬಾಯಿ ಕಾರ್ಪೊರೇಷನ್ ಸಭಿಕರು ಸರ್ ಫಿರೋಜ್‌ಷಾ ಮೇಥಾರವರ ಉದ್ಯಾನದಲ್ಲಿ ಏರ್ಪಡಿಸಿದ್ದ ಔತಣಕ್ಕೆ ದಯಮಾಡಿಸಿದ್ದು ಬಂದರು. ತದನಂತರ ಅದೇರಾತ್ರಿ ಬೊಂಬಾಯಿ ಗೌರ್ನರವರು ಯುವರಾಜರಿಗಾಗಿ ಒಂದು ದೊಡ್ಡ ಔತಣವನ್ನು ಮಾಡಿಸಿದರು. ಅದಕ್ಕೆ ೩೦೦೦ ಮಂದಿ ದೊಡ್ಡಮನುಷ್ಯರು ಕರೆಯಲ್ಪಟ್ಟಿದ್ದರು. ಅದನ್ನು ತೀರಿಸಿಕೊಂಡು ಆ ರಾತ್ರಿಯೇ ಯುವರಾಜರು ಪುನಾಪಟ್ಟಣಕ್ಕೆ ಹೊರಟು ೧೯ ನೆ ತಾ|| ಬೆಳಗ್ಗೆ ಅಲ್ಲಿಗೆ ಸೇರಿದರು. ನಿಲ್ದಾಣದಲ್ಲಿ ಬೊಂಬಾಯಿ ಗೌರ್ನರು ಸೇನಾಪತಿಗಳು ಮೊದಲಾದವರು ಕಾದಿದ್ದು ಇದಿರ್ಗೊಂಡರು. ಮರ್ಯಾದಾರ್ಥವಾದ ಗುಂಡುಗಳು ಹಾರಿಸಲ್ಪಟ್ಟುವು. ಪುರಜನರು ನಿಲ್ದಾಣದಿಂದ ಬಿಡದಿಯವರೆಗೂ ಮಾರ್ಗಗಳ ಉಭಯಪಾರ್ಶ್ವಗಳಲ್ಲೂ ತುಂಬಿದ್ದರು. ಯುವರಾಜರು ರಥಾರೂಢರಾದ ಕೂಡಲೇ ಹಿಂದುಮುಂದೆ ಸೋಲ್ಜರುಗಳೂ ದೇಶೀಯ ಸೈನಿಕರೂ ಅಶ್ವಾರೂಢರಾಗಿ ಹೊರಟರು. ದಾರಿಯಲ್ಲಿ ಹೋಗುತ್ತ ಕಳೆದ ಯುದ್ಧದಲ್ಲಿ ಪ್ರಾಣಾಹುತಿಕೊಟ್ಟ ಶೂರಭಟರ ಜ್ಞಾಪಕಾರ್ಥವಾಗಿ ಸ್ಥಾಪಿಸಲ್ಪಡುವ ಸ್ತಂಭಕ್ಕೆ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಿದರು. ಆಗ ಅವರು ಭಾಷಣ ಮಾಡಿದುದೇನೆಂದರೆ—"ಮಹನೀಯರೇ ಮಹಾರಾಷ್ಟ್ರ ವೀರಾಗ್ರಣಿಗಳೇ, ರಣರಂಗದಲ್ಲಿ ಸಾಮ್ರಾಜ್ಯ ರಕ್ಷಣೆಗಾಗಿ ಪ್ರಾಣಾಹುತಿಕೊಟ್ಟ ಭಾರತಸೈನಿಕರ ಸ್ಮರಣಾರ್ಥವಾಗಿ ಏರ್ಪಡುವ ಪ್ರತಿಷ್ಠಾಪನೆಗೆ ಶಂಕುಸ್ಥಾಪನೆಯನ್ನು ನೆರವೇರಿಸುವ ಭಾಗ್ಯವು ನನಗೆಲ್ಲಿಯೂ ದೊರೆದಿರಲಿಲ್ಲ. ಇದು ಸಂತೋಷಪ್ರದವು. ಇದು ಒಂದುಜಾತಿಯವರಿಗೆ ಮಾತ್ರವೇ ಸಂಬಂಧಪಟ್ಟುದಲ್ಲ. ಮಹಮ್ಮದೀಯರು ಹಿಂದುಗಳು ಮೊದಲಾದ ಎಲ್ಲ ತರದ ಯೋಧರುಗಳಿಗೂ ಸಂಬಂಧಿಸಿದುದು. ಬೊಂಬಾಯಿ ಆಧಿಪತ್ಯದ ಯೋಧಾಗ್ರೇಸರುಗಳಿಗೆ ನೆಲೆಮನೆಯಾದ ಈ ಪಶ್ಚಿಮಘಟ್ಟಗಳ ಪ್ರದೇಶವೇ ಯೋಧಾಗ್ರೇಸರರ ಸ್ಮಾರಕಸ್ಥಾಪನೆಗೆ ತಕ್ಕ ಸ್ಥಲವಾಗಿರುತ್ತದೆ. ಶಿವಾಜಿ ಮಹಾರಾಜರು ಪುನಾ ನಗರದಲ್ಲೇ ತಮ್ಮ ಬಾಲ್ಯಾವಸ್ಥೆಯನ್ನು ಕಳೆದು ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದುದೇ ಅಲ್ಲದೆ ಒಂದು ಪ್ರತ್ಯೇಕ ಜಾತಿಯನ್ನು ನಿರ್ಮಿಸಿದರು. ಇಲ್ಲಿ ಬೇಸಾಯಗಾರರಾಗಿದ್ದವರನ್ನೆಲ್ಲಾ ಸೈನಿಕರನ್ನಾಗಿ ಮಾಡಿದವನು ಆ ಮಹಾಪುರುಷನೇ. ಆ ಕಾಲದಲ್ಲಿ ಸೈನಿಕರು ಸಾಮಾನ್ಯವಾಗಿ ಸಂಚರಿಸುತ್ತಿದ್ದ ಪರ್ವತಪ್ರಾಂತಗಳು ಈಗ ನಮ್ಮ ಸುತ್ತಲೂ ಕಾಣಿಸುತ್ತಿವೆ. ಅವರ ಸಂತತಿಯವರೇ ಈಗ ರಣರಂಗದಲ್ಲಿ ಮಡಿದವರು. ಮತ್ತು ತಮ್ಮ ಪೂರ್ವಿಕರ ಗೌರವವನ್ನು ಕಾಪಾಡಿದರು. ಅವರ ಸ್ಮಾರಕಕ್ಕಾಗಿ ಇಲ್ಲಿ ಸ್ಥಾಪಿಸಲ್ಪಡುವ ಸ್ತಂಭವು ಇನ್ನು ಮುಂದೆ ಜನ್ಮಿಸುವ ಮಹಾರಾಷ್ಟ್ರರಿಗೆ ಪ್ರೋತ್ಸಾಹಕವಾಗಿಯೂ ಮಾರ್ಗದರ್ಶಕವಾಗಿಯೂ ಇರಲಿ" ಎಂದರು. ಬಳಿಕ ಮುಲ್ಲಾ ನದಿಯನ್ನು ದಾಟಿ ಪೇಷ್ವೆಯವರ ಪ್ರಾಚೀನಪಟ್ಟಣವಾದ ಪುನಾನಗರವನ್ನು ಪ್ರವೇಶಿಸಿದರು. ಪ್ರಜೆಗಳೆಲ್ಲಾ ಯುವರಾಜರ ದರ್ಶನದಿಂದ ಅತ್ಯಾನಂದಪಟ್ಟು ಕರತಾಡನಗಳನ್ನು ಮಾಡಿದರು. ಅಲ್ಲಿಯ ಪುರಪಾಲಕ ಸಂಘದವರು ಅರ್ಪಿಸಿದ ವಿಜ್ಞಾಪನಪತ್ರವನ್ನು ಸ್ವೀಕರಿಸಿ ಪ್ರತ್ಯುತ್ತರವನ್ನಿತ್ತು ವಂದಿಸಿದರು. ಅಲ್ಲಿಂದ ಬಾಂಬುರ್ಡಾ ಎಂಬ ಗ್ರಾಮಭಾಗಕ್ಕೆ ಹೋಗಿ ಶಿವಾಜಿಯ ಹೆಸರಿನಮೇಲೆ ಕಟ್ಟಲ್ಪಡುವ ಬಾಲಪಾಠಶಾಲೆಯ ಶಂಕುಸ್ಥಾಪನ ಮಹೋತ್ಸವವನ್ನು ಜರುಗಿಸಿದರು. ಕೊಲ್ಹಾಪುರದ ಮಹಾರಾಜರು ಒಂದು ವಿಜ್ಞಾಪನ ಪತ್ರವನ್ನು ಓದಿ ಮಹಾರಾಷ್ಟ್ರರ ರಾಜಭಕ್ತಿಯನ್ನು ನಿವೇದಿಸಿ, ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿದರು. ಯುವಸಾರ್ವಭೌಮರು ಸಮಯೋಚಿತ ಭಾಷಣವನ್ನು ಮಾಡಿ, ಶಂಕುಸ್ಥಾಪನವನ್ನು ನೆರವೇರಿಸಿದರು. ಬಳಿಕ ವೆಲ್ಲಿಂಗ್ಟನ್ ಸಮಾಜಭವನಕ್ಕೆ ದಯಮಾಡಿಸಿ, ಅಲ್ಲಿ ಕೂಡಿದ್ದ ಸೈನಿಕರೊಡನೆಯೂ ಸರ್ಕಾರದ ಉದ್ಯೋಗಿಗಳೊಡನೆಯೂ ಸಾವಧಾನ ಸಂತೋಷಗಳಿಂದ ಕುಶಲಪ್ರಶ್ನೆಗಳನ್ನು ಮಾಡಿ, ಅವರ ಸತ್ಕೃತಿಯನ್ನು ಕೈಕೊಂಡರು. ಅದೇ ದಿನ ಮರಳಿ ಬೊಂಬಾಯಿಗೆ ಹೊರಟರು. ವಿಕ್ಟೋರಿಯಾ ನಿಲ್ದಾಣದಲ್ಲಿ ಗೌರ್ನರೂ, ಪೋಲೀಸ್ ಕಮಿಷನರೂ, ಕಾರ್ಪೊರೇಷನ್ ಸಭಿಕರೂ ಕಾದಿದ್ದು ಸ್ವಾಗತಿಸಿದರು. ಪ್ರಭುತ್ವಮಂದಿರದವರೆಗೆ ದಾರಿಯ ೨ ಪಕ್ಕಗಳಲ್ಲೂ ಸೈನಿಕರು ನಿಂತು ಮರ್ಯಾದಿಸಿದರು.

ಮರುದಿನ ತಾ|| ೨೦ ರಲ್ಲಿ ಯುವರಾಜರಿಗೆ ಬೇರೆಬೇರೆ ಕಡೆಗಳಲ್ಲಿ ಸನ್ಮಾನಸಮಾರಂಭಗಳು ಜರುಗಿದುವು. ಮಧ್ಯಾಹ್ನ ೧|| ಗಂಟೆಗೆ ಪೂರ್ವಾತ್ಯ ಸಮಾಜದವರ ಪ್ರಾರ್ಥನೆಮೇರೆಗೆ ಹೋಗಿ ಫಲಾಹಾರವನ್ನು ಸ್ವೀಕರಿಸಿದರು. ೫|| ಗಂಟೆಯಲ್ಲಿ ನೌಕಾಲಯಕ್ಕೆ ದಯಮಾಡಿಸಿದ್ದರು. ೬ ಗಂಟೆಗೆ ನಾವಿಕರ ಸಮಾಜಕ್ಕೆ ದಯಮಾಡಿಸಿ ಟೀ ಪಾನವನ್ನು ಮಾಡಿಬಂದರು. ಬಳಿಕ ದೇವಾಲಯಕ್ಕೆ ಹೋಗಿ ಪ್ರಾರ್ಥನೆಯನ್ನು ಜರುಗಿಸಿದರು.

ತಾ|| ೨೧ರಲ್ಲಿ ಶಾಸನಸಭೆಯವರು ಪ್ರಭುತ್ವಮಂದಿರಕ್ಕೆ ಯುವರಾಜರನ್ನು ಮಧ್ಯಾಹ್ನ ೧೨ ಗಂಟೆಗೆ ಬರಮಾಡಿಕೊಂಡರು. ಗೌರ್ನರವರೂ ಅವರ ಸಂಗಡ ಬಂದಿದ್ದರು. ಸಭಾಪರವಾದ ವಿಜ್ಞಾಪನ ಪತ್ರವನ್ನು ಸಭಾಧ್ಯಕ್ಷರಾದ ಸರ್ ನಾರಾಯಣಚಂದ್ರಾವಾರ್ಕರ್‌ರವರು ಓದಿ ಒಂದು ಬೆಳ್ಳಿಪೆಟ್ಟಿಗೆಯಲ್ಲಿಟ್ಟು ಸಮರ್ಪಿಸಿದರು. ಆ ವಿಜ್ಞಾಪನ ಪತ್ರದಲ್ಲಿ ಯುವರಾಜರ ನಿಸರ್ಗವಾದ ಸದ್ಗುಣಗಳೂ, ಯುದ್ಧರಂಗದಲ್ಲಿ ಅವರು ಮಾಡಿದ ಸಾಹಸಕ್ರಿಯೆಗಳೂ, ದೇಶಾಟನ ಕಾಲದಲ್ಲಿ ತೋರಿಸಿದ ಪ್ರಜ್ಞಾವಿಶೇಷವೂ, ಸಾರ್ವಭೌಮರೂ ಯುವಸಾರ್ವಭೌಮರೂ ಸಾಮ್ರಾಜ್ಯಕ್ಷೇಮಾರ್ಥವಾಗಿ ನಡೆಯಿಸುತ್ತಿರುವ ನಿಷ್ಕಪಟವಾದ ಕೃಷಿಯೂ ವರ್ಣಿಸಲ್ಪಟ್ಟಿದ್ದುವು. ಅದಕ್ಕೆ ಪ್ರತ್ಯುತ್ತರವನ್ನು ಯುವರಾಜರು ಅಪ್ಪಣೆಕೊಡಿಸುವಾಗ್ಗೆ—ಪ್ರತಿವಂದನೆಯನ್ನು ತಿಳಿಯಿಸಿ, ಶಾಸನಸಭೆಗಳವರು ದೇಶಾಭಿವೃದ್ಧಿಗಾಗಿ ಮಾಡುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿ, ಸಭಿಕರು ತೋರಿಸಿದ ರಾಜಭಕ್ತಿಯನ್ನು ತಮ್ಮ ಪ್ರಿಯಜನಕರಿಗೆ ನಿವೇದಿಸುವುದಾಗಿ ಅಪ್ಪಣೆಕೊಡಿಸಿದರು. ಅನಂತರ ಪಾರ್ಸಿ ಸಂಘದವರ ಪ್ರಾರ್ಥನೆಯಮೇರೆಗೆ ಅವರ ಸಮಾಜಭವನಕ್ಕೆ ದಯಮಾಡಿಸಿ, ಸರ್ ಜೇಮ್ಸೆಟ್ಜಿ ಜೀಜೀಭಾಯಿಯವರು ಓದಿ ಸಮರ್ಪಿಸಿದ ವಿಜ್ಞಾಪನಪತ್ರವನ್ನು ಅಂಗೀಕರಿಸಿ, ಪಾರ್ಸಿಜನರು ಭರತಖಂಡದ ವಾಣಿಜ್ಯಸಂಪದಭಿವೃದ್ಧಿ ಪ್ರಯತ್ನದಲ್ಲಿ ಅಗ್ರೇ

WANTED.

For the Board High School Harapanahalli permanently a Kanarese Pandit on Rs. 30-1-40 with a temporary addition of Rs. 10 per mensem. Persons having previous teaching experience and academical training and qualifications will be preferred. A knowledge of English will be helpful.

Applications will be received by the President District Board, Bellary up to the 20th December 1921. None received thereafter will be considered.

Bellary Dt. Board's Office,
Dated 23rd Nov. 21.

(Sd.) N. A. Narasima Rao,
for President.

ಸರರಾಗಿರುವುದನ್ನೂ, ಧರ್ಮಕಾರ್ಯಗಳಲ್ಲಿ ಅವರ ಔದಾರ್ಯಾತಿಶಯವನ್ನೂ, ರಾಜಕಾರ್ಯದಲ್ಲೂ ಅವರಜನರಾದ ದಾದಾಭಾಯಿ ನೌರೋಜಿ, ಸರ್ ಫೆರೋಜ್‌ಷಾ ಮೇಥಾ ಮೊದಲಾದವರು ವಿಖ್ಯಾತರಾಗಿ ಸನ್ಮಾನನೀಯರಾಗಿದ್ದುದನ್ನೂ ಕುರಿತು ಶ್ಲಾಘ್ಯ ವಚನಗಳನ್ನಾಡಿ ವಂದಿಸಿದರು. ಅಲ್ಲಿಂದ ಯುವರಾಜರು ಬೀಳ್ಕೊಂಡು ಜಂಖಾನಾ ಕ್ಲಬ್ಬಿಗೆ ದಯಮಾಡಿಸಿ, ಅಲ್ಲಿ ಪಾರ್ಸಿಜನರಿಗೂ ಆಂಗ್ಲಜನರಿಗೂ ನಡೆಯುತ್ತಿದ್ದ ಕ್ರಿಕೆಟ್ ಆಟವನ್ನು ಸ್ವಲ್ಪಕಾಲ ನೋಡುತ್ತಿದ್ದು, ಅಲ್ಲಿಯವರೊಡನೆಲ್ಲಾ ಸರಸವಾಗಿ ಸಲ್ಲಾಪಿಸುತ್ತ ಟೀ ಪಾನವನ್ನುಮಾಡಿ, ತಾವೂ ಅವರೊಡನೆ ಸ್ವಲ್ಪಕಾಲ ಚೆಂಡಾಟವನ್ನಾಡಿದರು. ಅದನ್ನು ನೋಡಿ ಅಲ್ಲಿ ನೆರೆದಿದ್ದ ಪ್ರಜೆಗಳೆಲ್ಲಾ ಪಟ್ಟ ಸಂತೋಷಕ್ಕೆ ಮೇರೆಯಿರಲಿಲ್ಲ. ಅಲ್ಲಿಂದ ಯುವರಾಜರು ಸ್ಟೇಡಿಯಮ್ಮಿಗೆ ತೆರಳಿ ಅಲ್ಲಿ ಜರುಗುತ್ತಿದ್ದ ವಿನೋದಗಳನ್ನು ಪರಾಮರಿಸಿದರು.

ತಾ|| ೨೨ನೆ ಮಂಗಳವಾರ ಬೊಂಬಾಯಿ ವಿಶ್ವವಿದ್ಯಾಲಯದವರು ಕವಾಸ್ಜಿ ಜಹಂಗೀರ್ ವಿಶ್ವವಿದ್ಯಾಲಯ ಮಂದಿರಕ್ಕೆ ಯುವರಾಜರನ್ನು ಬರಮಾಡಿಕೊಂಡರು. ಬೊಂಬಾಯಿ ಗೌರ್ನರೂ ಬಂದಿದ್ದರು. ೫೦೦ ಮಂದಿ ವಿದ್ಯಾರ್ಥಿಗಳು ಬಂದಿದ್ದರು. ವೈಸ್‌ಛಾನ್ಸಲರಾದ ಸರ್ ಚಿಮನ್‌ಲಾಲ್‌ಸೆಟಲ್ವಾಡರವರು ವಿಜ್ಞಾಪನಪತ್ರವನ್ನೋದಿ ಸಮರ್ಪಿಸಿದರು. ಅದರಲ್ಲಿ ವಿಕ್ಟೋರಿಯಾ ಮಹಾರಾಜ್ಞಿಯವರ ಪ್ರಕಟನೆಯಿಂದ ಭರತಖಂಡಕ್ಕೆ ಉಂಟಾದ ಸುಖಫಲಗಳಲ್ಲಿ ಇಲ್ಲಿಯ ವಿಶ್ವವಿದ್ಯಾಲಯಗಳು ಅಮೌಲ್ಯವಾದುವುಗಳೆಂದೂ, ದೇಶದ ಉದ್ಧಾರಕ್ಕೆ ಅವೇ ಮೂಲಾಧಾರವೆಂದೂ, ಈಗಣ ರಾಜಕೀಯ ಸಂಸ್ಕರಣದಲ್ಲಿ ವಿದ್ಯಾಶಾಖೆಯು ಪ್ರಜಾಧೀನವಾಗಿ ಮಾಡಲ್ಪಟ್ಟಿರುವುದರಿಂದ ಪ್ರಜಾನುಮತಿಗೆ ಅನುಗುಣವಾಗಿ ವಿದ್ಯಾವ್ಯಾಪಸೆಯಾಗುವುದಕ್ಕೆ ವಿಶೇಷಾವಕಾಶವಾಗಿರುವುದೆಂದೂ, ಇದುವರೆಗಣ ವಿಶ್ವವಿದ್ಯಾಲಯ ಕಾರ್ಯಗಳಿಂದ ದೇಶದಲ್ಲಿ ಮಾನವಸೋದರತ್ವವುಂಟಾಗಿ, ಜಾತಿವೈಷಮ್ಯ ಮೊದಲಾದುವುಗಳು ಅಣಗಿರುವುವೆಂದೂ, ಯುವರಾಜರು ಆಂಗ್ಲದೇಶದ ಯುವಕರಿಗೆ ಮಾರ್ಗದರ್ಶಕರಾಗಿರುವಂತೆ ಭರತಖಂಡದ ಯುವಕರಿಗೂ ಮಾರ್ಗದರ್ಶಕರೆಂದೂ, ಅವರನ್ನು ಇಲ್ಲಿಯ ವಿದ್ಯಾರ್ಥಿಗಳೆಲ್ಲಾ ಸಹೋದರರಂತೆ ಭಾವಿಸುತ್ತಿರುವರೆಂದೂ, ಯುವರಾಜರು ಈ ದೇಶದಲ್ಲಿ ಸಂಚಾರಕಾಲದಲ್ಲಿ ಭಾರತಯುವಕರೊಡನೆ ನಿರಾತಂಕವಾಗಿ ಮಾತನಾಡಲು ಅಪೇಕ್ಷಿಸಿರುವುದನ್ನು ವಿದ್ಯಾರ್ಥಿಗಳೆಲ್ಲರೂ ಕೇಳಿ ಆನಂದಿಸಿರುವರೆಂದೂ ಮೊದಲಾಗಿ ಅಭಿಪ್ರಾಯವಿದ್ದಿತು. ಅದಕ್ಕೆ ಯುವರಾಜರು ಪ್ರತ್ಯುತ್ತರವನ್ನು ಕೊಡುವಾಗ್ಗೆ ವಿದ್ಯಾರ್ಥಿಗಳಾದ ಯುವಕರಲ್ಲಿ ತಮಗಿರುವ ಪ್ರೀತಿ ವಿಶ್ವಾಸಗಳನ್ನೂ, ವಿದ್ಯಾರ್ಥಿಗಳಲ್ಲಿರಬೇಕಾದ ನಡೆನುಡಿಗಳನ್ನೂ ಕುರಿತು ಬಹು ಗಂಭೀರವಾಗಿಯೂ ಸರಸವಾಗಿಯೂ ಇರುವ ಮಾತುಗಳನ್ನಾಡಿದರು. ಅದನ್ನು ಕೇಳಿ ಸಭಿಕರೂ ಮುಖ್ಯವಾಗಿ ವಿದ್ಯಾರ್ಥಿಗಳೂ ಹಿಗ್ಗಿಹೋದರು. ಆಗ ಯುವರಾಜರು ತಮ್ಮ ಪೀಠದಿಂದಿಳಿದು ವಿದ್ಯಾರ್ಥಿಗಳು ಕುಳಿತಿದ್ದ ಬಳಿಗೆ ನಡೆದುಹೋಗಲು ಅವರೆಲ್ಲರೂ ಆನಂದಾತಿಶಯದಿಂದ ಕರತಾಡನಗಳನ್ನು ಮಾಡಿ ಕೃತಜ್ಞತಾವಂದನೆಗಳನ್ನರ್ಪಿಸಿದರು. ತದನಂತರ ಯುವರಾಜರು ಆ ಮಂದಿರದ ಮುಂದೆ ನಿರ್ಮಿಸಿದ್ದ ಚಪ್ಪರದಲ್ಲಿ ಕೂಡಿದ್ದ ರೆಡ್‌ಕ್ರಾಸ್ ಸೈನಿಕರನ್ನೂ, ಬಾಲಬಾಲಿಕಾಸಮೂಹವನ್ನೂ, ಬೊಂಬಾಯಿ ಪೋಲೀಸರನ್ನೂ, ರಾಜಪುತ್ರ ಪಟಾಲಮ್ಮನ್ನೂ ಸಂದರ್ಶಿಸುವುದಕ್ಕೆ ದಯಮಾಡಿಸಿದರು. ಆ ರಾತ್ರಿ ಯುವರಾಜರು ಪ್ರಭುತ್ವಮಂದಿರದಲ್ಲಿ ಭೋಜನವನ್ನು [illegible] ೧೧ ಗಂಟೆಹೊತ್ತಿನಲ್ಲಿ ವಿಕ್ಟೋರಿಯಾ ಸಿಲ್ದಾಣಕ್ಕೆ ದಯಮಾಡಿಸಿ, ಹೊಗೆಬಂಡಿಯನ್ನೇರಿ ಬರೋಡಾಕ್ಕೆ ಪ್ರಯಾಣಮಾಡಿದರು. ಆ ರಾತ್ರಿ ಊರೊಳಗೆ ಮಾಡಿದ್ದ ಅಲಂಕಾರವು ಅಭೂತಪೂರ್ವವಾಗಿದ್ದಿತು. ಮ್ಯುನ್ಸಿಪಲ್ ಆಫೀಸು ರೈಲ್ವೆ ಸಿಲ್ದಾಣ ಮೊದಲಾದ ಪ್ರಮುಖಗಳಾದ ಕಟ್ಟಡಗಳ ಮೇಲೆಲ್ಲಾ ವಿದ್ಯುದ್ದೀಪಾವಳಿಗಳೂ, ಬೀದಿಗಳಲ್ಲೆಲ್ಲಾ ಚಿತ್ರವಿಚಿತ್ರವರ್ಣದ ದೀಪಾವಳಿಗಳೂ ಸಹ ರಾತ್ರಿಯನ್ನು ಹಗಲಂತೆ ಮಾಡಿದ್ದುವು. ಯುವರಾಜರು ೫-೬ ದಿನಗಳ ಕಾಲ ಆ ನಗರದಲ್ಲಿದ್ದುದರಿಂದ ಅವರ ನಡೆನುಡಿಗಳಿಂದಲೂ ಸೌಜನ್ಯಪ್ರಜಾಪ್ರೇಮಗಳಿಂದಲೂ ಪುರಜನರೆಲ್ಲಾ ಮುಗ್ಧರಾಗಿಹೋಗಿದ್ದರು. ಅಸಹಾಯವಾದಿಗಳ ಕಟ್ಟೊಂದನ್ನು ಲಕ್ಷಿಸದಂತಾದರು. ಸಕಲ ವರ್ಗಗಳ ಜನರೂ ಬೀದಿಗಳಲ್ಲಿ ಕಿಕ್ಕಿರಿದುನಿಂತು ಯುವರಾಜರ ದರ್ಶನವನ್ನು ಮಾಡಿ ಆನಂದಿಸಿದರು. ವಿಕ್ಟೋರಿಯಾ ಸಿಲ್ದಾಣವು ಭೂತಲಸ್ವರ್ಗದಂತೆ ಶೋಭಾಯಮಾನವಾಗಿದ್ದಿತು. ಗೌರ್ನರೇ ಮೊದಲಾದ ಉದ್ಯೋಗಿಗಳು ಸಿಲ್ದಾಣದಲ್ಲಿ ನಿಂತು ಸಾಗಗಳುಹಿಸಿದರು

ತಾ|| ೨೩ ರ ಬೆಳಗಿನ ೯ ಗಂಟೆಗೆ ಯುವಸಾರ್ವಭೌಮರು ಬರೋಡಾವನ್ನು ಸೇರಿದರು. ಸಿಲ್ದಾಣವು ಬಹು ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತು. ಗಾಯಕ್ವಾರ್ ಮಹಾರಾಜರೂ ಬ್ರಿಟಿಷ್ ರೆಸಿಡೆಂಟರೂ ಮಂತ್ರಿಗಳೂ ಮೊದಲಾದ ಮುಖ್ಯೋದ್ಯೋಗಿಗಳೂ ಕಾದಿದ್ದು ಸ್ವಾಗತಿಸಿದರು. ಗೌರವಾರ್ಥವಾದ ೩೧ ಗುಂಡುಗಳು ಹಾರಿಸಲ್ಪಟ್ಟುವು. ಯುವಸಾರ್ವಭೌಮರೊಡನೆ ಮಹಾರಾಜರು ರಥದಲ್ಲಿ ಕುಳಿತು ಅಲಂಕೃತವಾಗಿದ್ದ ರಾಜವೀಥಿಯಲ್ಲಿ ಉತ್ಸವಗೊಂಡು ಲಕ್ಷ್ಮೀವಿಲಾಸವೆಂಬ ಭವನವನ್ನು ಸೇರಿದರು. ದಾರಿಯಲ್ಲಿ ಸಾವಿರಾರು ಮಂದಿ ವಿದ್ಯಾರ್ಥಿಗಳು ಜಯಘೋಷವನ್ನು ಮಾಡಿ ವಂದಿಸಿದರು. ಪುರಜನರೆಲ್ಲಾ ಅಪಾರವಾಗಿ ಸೇರಿದ್ದು ದರ್ಶನಮಾಡಿ ಆನಂದಿಸಿದರು. ಮಧ್ಯಾಹ್ನ ಮಿಜಾಜ್‌ಪುರ್ಸಿ ಎಂಬ ಮರ್ಯಾದೆಗಳು ಪರಸ್ಪರ ನಡೆದುವು. ಆ ರಾತ್ರಿ ದೊಡ್ಡ ಔತಣವನ್ನು ಮಾಡಿಸಿದರು. ಆ ಸಮಯದಲ್ಲಿ ಯುವರಾಜರು ಸ್ವಾರಸ್ಯವಾದ ಭಾಷಣವನ್ನು ಕಳೆದ ನೂರು ವರ್ಷಗಳಿಂದಲೂ ಮುಖ್ಯವಾಗಿ ಸಿಪಾಯಿ ದಂಗೆಕಾಲದಲ್ಲಿಯೂ ಬರೋಡಾದ ಖಂಡೇರಾಯರು ಆಂಗ್ಲ ಸರ್ಕಾರಕ್ಕೆ ಮಾಡಿದ ಸಹಾಯವನ್ನೂ, ೧೮೦೫ನೆ ವರ್ಷದಲ್ಲಿ ಆಂಗ್ಲಸರ್ಕಾರಕ್ಕೂ ಬರೋಡಾ ಪ್ರಭುತ್ವಕ್ಕೂ ಸಂಧಿ ನಡೆದಾಗಣಿಂದಲೂ ಗಾಢಮೈತ್ರಿಯಿಂದ ಬರೋಡಾ ಸಂಸ್ಥಾನವು ವರ್ತಿಸುತ್ತಿರುವುದನ್ನೂ ಕುರಿತು ವಿವರಿಸಿ, ಗಾಯಕ್ವಾರ್ ಮಹಾರಾಜರು ತಮ್ಮ ಪ್ರಜೆಗಳ ಪರಿಪಾಲನದಲ್ಲಿ ತೋರಿಸುತ್ತಿರುವ ಆದರವನ್ನೂ ವಿಚಕ್ಷಣತೆಯನ್ನೂ ಕೊಂಡಾಡಿ, ಸಂಸ್ಥಾನದ ಈಗಣ ಅಭ್ಯುದಯವನ್ನು ಕುರಿತು ಸಂತೋಷವನ್ನು ವ್ಯಕ್ತಪಡಿಸಿದರು. ಮರುದಿನ ಮೋತೀಬಾಗ್ ಎಂಬ ಉದ್ಯಾನದಲ್ಲಿ ವಿನೋದದ ಔತಣವು ನಡೆದಿತು. ಅಲ್ಲಿ ಆನೆಯ ಸ್ವಾರಿ, ಸಂಗೀತ, ಆಟಪಾಟಗಳು ಮೊದಲಾದ ಕ್ರಮಗಳು ನಿರ್ಮಿಸಲ್ಪಟ್ಟಿದ್ದುವು. ಅದನ್ನು ಯುವರಾಜರು ನೋಡಿ ಬಹಳ ಸಂತೋಷಪಟ್ಟರು.

ಬೊಂಬಾಯಿ ಅತ್ಯಾಚಾರಗಳು.

ಆಂಗ್ಲಯುವಸಾರ್ವಭೌಮರು ಬೊಂಬಾಯಿಗೆ ಬಂದು ಇಳಿದು ಉತ್ಸವಗೊಂಡು ಹೋಗುವ ಸಮಯಕ್ಕೆ ಸರಿಯಾಗಿ ಮ|| ಗಾಂಧಿಯವರು ಬೊಂಬಾಯಿಗೆ ಬಂದು ಎಲ್ಫಿನ್‌ಸ್ಟನ್ ಯಂತ್ರಾಲಯದ ಬಳಿಯಣ ಬಯಲಿನಲ್ಲಿ ಹತ್ತಾರುಸಾವಿರ ಜನರ ಮುಂದೆ ಉಪನ್ಯಾಸ ಮಾಡಿದರು. ಆಗ್ಗೆ—ಸರ್ಕಾರದ ಆಜ್ಞಾ ತಿರಸ್ಕರಣವನ್ನು ನದಿಯಾ ತಾಲ್ಲೂಕಿನ ಬಾರ್ಡೋಲಿ ಎಂಬಲ್ಲಿ ಮೊಟ್ಟಮೊದಲು ತಾನು ಆರಂಭಿಸಲಿಕ್ಕಿರುವೆನೆಂದೂ, ಅಲ್ಲಿ ತುಪಾಕಿಯನ್ನು ಹಾರಿಸುವುದೇ ಮೊದಲಾದ ಕೆಲಸಗಳು ನಡೆದರೆ ಬೊಂಬಾಯಿಯಲ್ಲೇ ಆಗಲಿ ಉಳಿದ ಕಡೆಗಳಲ್ಲೇ ಆಗಲಿ ಯಾರೂ ದೌರ್ಜನ್ಯಕ್ಕೆ ಪ್ರವರ್ತಿಸಕೂಡದೆಂದೂ ಡಿಶಂಬರ್ ತಾ|| ೩೧ ರೊಳಗಾಗಿ ನಾವು ಅಲಿಸೋದರರೇ ಮೊದಲಾದವರನ್ನೆಲ್ಲಾ ಕಾರಾಗೃಹದಿಂದ ಬಿಡುಗಡೆ ಮಾಡಿಸಬೇಕೆಂದೂ, ಆ ಗಡುವಿನೊಳಗೆ ನಾವೆಲ್ಲಾ ಕಾರಾಗೃಹಕ್ಕೆ ಸೇರಿರಬೇಕು, ಇಲ್ಲವೆ ತುಪಾಕಿಗುಂಡಿಗೆ ಬಲಿಯಾಗಬೇಕು, ಅಥವಾ ಸ್ವರಾಜ್ಯವನ್ನು ಪಡೆದಿರಬೇಕು ಎಂದೂ, ಆದರೆ ಯುವರಾಜರವರು ಈ ದೇಶದಲ್ಲಿರುವಾಗ ಯಾವ ದೌರ್ಜನ್ಯವನ್ನೂ ಆಚರಿಸಕೂಡದು, ಅವರಿಗೆ ಯಾವ ಅಪಾಯವೂ ಆಗಕೂಡದು ಎಂದೂ ಮೊದಲಾಗಿ ಬೋಧಿಸಿ, ವಿದೇಶದ ಬಟ್ಟೆಗಳನ್ನು ಗುಡ್ಡೆಹಾಕಿಸಿ ತಾವೇ ಅದಕ್ಕೆ ಬೆಂಕಿಯಿಕ್ಕಿದರು. ಇದು ಮುಗಿಯುವುದರೊಳಗಾಗಿ ಮಿಲ್ಲು ಕೂಲಿಜನರೂ ಉಳಿದ ತುಂಟರುಗಳು ಸಹ ಗುಂಪುಗುಂಪಾಗಿ ಹೊರಟು, ಯುವರಾಜರ ಉತ್ಸವವನ್ನು ನೋಡಲಿಕ್ಕೆ ಹೋಗಿದ್ದು ಟ್ರಾಂಬಂಡಿಗಳ ಮೇಲೂ ಮೋಟಾರುಗಳ ಮೇಲೂ ಬರುತ್ತಿದ್ದ ಜನರ ಮೇಲೆ ಬಿದ್ದು, ಕಲ್ಲು ಇಟ್ಟಿಗೆಗಳಿಂದ ಹೊಡೆದು, ಯೂರೋಪಿಯನ್ನರನ್ನೂ ಯೂರೋಪಿಯನ್ ಉಡುಪುಗಳನ್ನು ಧರಿಸಿದ್ದವರನ್ನೂ ಹಿಡಿದೆಳೆದು ಬಂಡಿಯಿಂದ ಕೆಳಕ್ಕೆ ಕೆಡಹಿ, ನಾನಾತರದ ಹಿಂಸೆಪಡಿಸುತ್ತ, ಹರತಾಳವನ್ನು ಮಾಡದೆ ಉತ್ಸವಕ್ಕೆ ಹೋಗಿದ್ದ ಲಕ್ಷಾಂತರ ಜನರಮೇಲೆ ರೇಗುತ್ತ, ಅಂಗಡಿಗಳನ್ನು ಮುಚ್ಚದೆ ಬಾಗಿಲುಗಳನ್ನು ತೆಗೆದುಕೊಂಡಿದ್ದವರ ಅಂಗಡಿಗಳಿಗೆ ನುಗ್ಗಿ ಗಾಜಿನ ಸಾಮಾನುಗಳು ಮೊದಲಾದುವನ್ನೆಲ್ಲಾ ಒಡೆದು ಸೂರೆ ಮಾಡುತ್ತ, ಬೀದಿಬೀದಿಯ ಚೌಕಗಳಲ್ಲಿ ವಿದೇಶದ ಬಟ್ಟೆಗಳನ್ನೊಟ್ಟಿ ಸುಟ್ಟುಬಿಟ್ಟರು. ಸೈನಿಕರೂ ಪೋಲೀಸರೂ ಸಹ ಉತ್ಸವವಾಗತಕ್ಕ ಬೀದಿಗಳ ಕಡೆ ನಿಂತಿದ್ದುದರಿಂದ, ಅವರ ಕಾವಲಿಲ್ಲದಿದ್ದ ಗ್ರಾಂಟ್‌ರೋಡ್, ಪರೇಲ್, ಜೆ.ಜೆ. ಆಸ್ಪತ್ರೆ, ನಲ್‌ಬಜಾರ್‌ಗಳ ಕಡೆಯಲ್ಲಿ ಇವರುಗಳ ಹಾವಳಿಯು ಬಹಳ ಪ್ರಬಲವಾಯಿತು. ಮೋಟಾರು ಮತ್ತು ಟ್ರಾಂಕಾರ್ ಡ್ರೈವರುಗಳನ್ನು ಹಿಡಿದು ಕೊಲ್ಲುವುದಕ್ಕೆ ಯತ್ನಿಸಲು ಅವರುಗಳು ಬಂಡಿಗಳನ್ನು ಅಲ್ಲಲ್ಲೇ ಬಿಟ್ಟು ತಲೆತಪ್ಪಿಸಿಕೊಂಡು ಓಡಿದರು. ೫೫ ಮೋಟಾರುಗಳನ್ನೂ ೪ ಟ್ರಾಂಬಂಡಿಗಳನ್ನೂ ಗುಂಪಿನವರು ಸುಟ್ಟುಬಿಟ್ಟರು. ನಲ್‌ಬಜಾರಿನ ಒಂದು ಸಾರಾಯಂಗಡಿಗೆ ನುಗ್ಗಿ ಒಳಗಿದ್ದ ಸಾರಾಯಿಯನ್ನೆಲ್ಲಾ ಬೀದಿಗೆ ಸುರಿದುಬಿಟ್ಟರು. ಇನ್ನೊಂದು ಸಾರಾಯಿ ಅಂಗಡಿಗೆ ಬೆಂಕಿಯನ್ನೇ ಇಕ್ಕಿಬಿಟ್ಟರು. ಅದು ನಾಲ್ಕು ಅಂತಸ್ತಿನ ಮಾಡದಮನೆ; ಆದ್ಯಂತವಾಗಿ ಸುಟ್ಟುಹೋಯಿತು. ಬಾಯ್ಕುಲಾದ ಕಡೆಯಲ್ಲಿ ಪಾಶ್ಚಾತ್ಯರೂ ಕ್ರೈಸ್ತರೂ ಪಾರ್ಸಿಯವರೂ ಇವರ ಹಾವಳಿಯಿಂದ ಬಹಳ ಭಯಪಟ್ಟುಹೋದರು. ಈ ಸುದ್ದಿಯನ್ನು ಪೋಲೀಸರೂ ಸೈನಿಕರೂ ಕೇಳಿಬಂದರು. ಅವರ ಮೇಲೂ ಇವರು ಬಿದ್ದು ಹಾವಳಿಮಾಡಿದರು. ಗುಂಪಿನವರಿಗೂ ಇವರಿಗೂ ಬಡಿದಾಟವಾದುದರಲ್ಲಿ ಪೋಲೀಸರಲ್ಲಿ ೪ ಮಂದಿ ಸತ್ತರು. ಗುಂಪಿನವರಲ್ಲೂ ಮೂವರು ಸತ್ತರು. ಉಭಯಪಕ್ಷದಲ್ಲೂ ಅನೇಕರಿಗೆ ಗಾಯಗಳಾದುವು. ಗಾಂಧಿಯವರೇ ಮೊದಲಾದ ಕೆಲವು ಪ್ರಮುಖರು ಬಂದು ದೌರ್ಜನ್ಯವನ್ನಾಚರಿಸಕೂಡದೆಂದು ಗುಂಪಿನವರಿಗೆ ಎಷ್ಟು ಸಮಾಧಾನ ಹೇಳಿದರೂ ಅವರು ಕೇಳಲಿಲ್ಲ. ಗುಂಪಿನವರಲ್ಲಿ ಅನೇಕರನ್ನು ಪೋಲೀಸರು ಹಿಡಿದು ಸೆರೆಮನೆಗೆ ಸೇರಿಸಿದರು.

ಮರುದಿನ ತಾ|| ೧೮ ರಲ್ಲೂ ಮಧ್ಯಾಹ್ನದ ವೇಳೆಯಲ್ಲಿ ಪಾರ್ಸಿಜನರು ಹೆಚ್ಚಾಗಿ ವಾಸಮಾಡುವ ಚಾರ್ನಿರೋಡ್, ಫೇಟ್‌ವಾಡಿಗಳ ಕಡೆಗೆ ತುಂಟರ ಗುಂಪು ನುಗ್ಗಿತು. ಅವರಲ್ಲಿ ಹಿಂದೂಮಹಮ್ಮದೀಯರೆಲ್ಲಾ ಇದ್ದರು. ಅಲ್ಲಿದ್ದ ಹೆಂಗಸರು ಮಕ್ಕಳು ಗಂಡುಸರು ಮೊದಲಾದವರನ್ನೆಲ್ಲಾ ಹಿಡಿದು ಬಹಳ ತರದಲ್ಲಿ ಹಿಂಸೆಯನ್ನೂ ಮಾನಹಾನಿಯನ್ನೂ ಮಾಡಿದರು. ಸಾರಾಯಿ ಅಂಗಡಿಗಳನ್ನೆಲ್ಲಾ ಸುಟ್ಟುಬಿಟ್ಟರು. ಮನೆಕಿಟಕಿಗಳ ಗಾಜುಗಳನ್ನು ಒಡೆದರು. ಇದರಿಂದ ಪಾರ್ಸಿಜನರೆಲ್ಲಾ ಕ್ಷುಬ್ಧರಾಗಿ ದೊಣ್ಣೆಗಳನ್ನು ಹಿಡಿದುಕೊಂಡು ಗುಂಪುಗುಂಪಾಗಿ ಬಂದು ಕೈಗೆ ಸಿಕ್ಕಿದ ಗುಂಪಿನವರನ್ನೆಲ್ಲಾ ಬಡಿಯುತ್ತ ಹೊರಟರು. ಹೀಗೆ ಬಹಳ ಹೊತ್ತು ಬಡಿದಾಟವಾಯಿತು. ಕಾಂಗ್ರೆಸ್ ಖಿಲಾಫತ್ ನಾಯಕರೂ ಪೋಲೀಸರೂ ಬಂದು ಗುಂಪನ್ನು ಚದರಿಸಿದರು. ಬಾಯಕುಲಾ ಕ್ಲಬ್ ಮಂದಿರವನ್ನು ಸುಟ್ಟುಬಿಡಬೇಕೆಂದು ಗುಂಪಿನವರು ಯತ್ನಿಸಿದರು. ಸಾಗಲಿಲ್ಲ. ಬೀದಿಯಲ್ಲಿ ಸಿಕ್ಕಿದ ಆ ಕ್ಲಬ್ಬಿನ ಮೆಂಬರುಗಳನ್ನೆಲ್ಲಾ ತುಂಟಗುಂಪಿನವರು ಹೊಡೆದರು. ಬಾಯ್ಕುಲಾದಲ್ಲಿರುವ ವೆಸ್ಲಿಯನ್ ಮಿಷನ್ ದೇವಾಲಯಕ್ಕೆ ನಷ್ಟವನ್ನುಂಟುಮಾಡಿದರು. ಅದೇದಿನ ರಾತ್ರಿ ನಲ್‌ಬಜಾರಿನ ಒಳಿಯಲ್ಲಿದ್ದ ಪೋಲೀಸ್ ಚೌಕಿಯನ್ನು ಸುಟ್ಟುಬಿಟ್ಟರು. ಸೈನಿಕರು ಅಲ್ಲಿಗೆ ಹೋಗಲು ಅವರ ಮೇಲೆ ಕಲ್ಲುಗಳನ್ನು ಬೀರಿದರು. ಇವರು ತುಪಾಕಿಗುಂಡುಗಳನ್ನು ಪ್ರಯೋಗಿಸಿ ಕೆಲವರಿಗೆ ಗಾಯಗಾಣಿಸಿದರು. ಫರೇಲ್‌ರೋಡಿನ ಬಳಿಯಲ್ಲಿ ಹೆಚ್ಚಾದ ಗದ್ದಲ ನಡೆದಿತು. ಅಲ್ಲೂ ಸೈನಿಕರು ಗುಂಡುಗಳನ್ನು ಹಾರಿಸಿದರು. ಬಹುಜನರಿಗೆ ಗಾಯಗಳಾದುವು. ಇದರಂತೆಯೇ ಭಾಕೂದಾರ್ವಾರ್ ಪ್ರಿನ್ಸಸ್ ಬೀದಿ ಮೊದಲಾದ ಕಡೆಗಳಲ್ಲೂ ದೊಂಬಿಗಾರರು ಬಹಳ ಅನರ್ಥವನ್ನು ಮಾಡಿದರು. ಪಾರ್ಸಿಯವರೂ ಕ್ರೈಸ್ತರೂ ತಮ್ಮ ಹೆಂಗಸರು ಮಕ್ಕಳುಗಳಿಗೆ ಆದ ಭಂಗವನ್ನು ಸೈರಿಸಲಾರದೆ ಒಟ್ಟಾಗಿ ನಿಂತರು ಅವರು ಒಂದು ಪಕ್ಷದಲ್ಲೂ, ಹಿಂದೂಮಹಮ್ಮದೀಯರು ಒಂದು ಪಕ್ಷವಾಗಿಯೂ ನಿಂತು ಬಹಳಹೊತ್ತು ಕಾದಾಡಿದರು. ಗಾಂಧಿಟೋಪಿಯನ್ನೂ ಖದ್ದರು ಬಟ್ಟೆಗಳನ್ನೂ ಧರಿಸಿದವರನ್ನೆಲ್ಲಾ ಪಾರ್ಸಿಪಕ್ಷದವರು ಹೊಡೆಯುತ್ತಬಂದರು. ಅವರ ಜತೆಗೆ ಆಂಗ್ಲೋಇಂಡಿಯನ್ನರೂ ಸೇರಿದರು. ಈ ಬಡಿದಾಟದಲ್ಲಿ ೬ ಮಂದಿ ಸತ್ತರು. ೧೭-೧೮ ತಾರೀಖುಗಳೆರಡರಲ್ಲಿ ಏಟುತಿಂದು ಗಾಯಗೊಂಡ ೧೫೦ ಮಂದಿಗಳು ವೈದ್ಯಶಾಲೆಗೆ ಹಾಕಲ್ಪಟ್ಟರು. ಈ ಬಡಿದಾಟದಲ್ಲಿ ಸತ್ತವರೊಳಗೆ ಜಿ. ಐ. ಪಿ. ರೈಲ್ವೆಡ್ರೈವರ್ ಅಲ್ಫರ್ಡ್ ಎಲ್ಲಿಸ್ ಎಂಬುವವನೊಬ್ಬನು. ಗಾಂಧಿಟೋಪಿಯನ್ನು ಧರಿಸಿದ್ದ ಕಾರಣ ಏಟುತಿಂದವರಲ್ಲಿ ಡಾಕ್ಟರ್ ಸಠ್ಯ, ಅಜಿದ್‌ಸೊಬಾನಿ ಮೊದಲಾದವರು ಇದ್ದರು. ತಾ|| ೧೯ ರಲ್ಲೂ ಗುಂಪಿನವರ ಭಯದಿಂದ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿದ್ದುವು. ಗುಂಪಿನವರು ಸಾರಾಯಿ ಅಂಗಡಿಗಳ ಮೇಲೆ ನಡೆಯಿಸಿದ ಅತ್ಯಾಚಾರವು ಹೆಚ್ಚಾಗಿದ್ದಿತು. ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿದ್ದುವು. ಬೀದಿಬೀದಿಗಳಲ್ಲಿ ಎರಡು ಪಕ್ಷದವರಿಗೂ ಬಡಿದಾಟವಾಯಿತು. ಅದರಿಂದ ಒಬ್ಬ ಮಹಮ್ಮದೀಯನೂ ಇಬ್ಬರು ಹಿಂದುಗಳೂ ಸತ್ತರು. ಪಾರ್ಸಿಯವರು ತುಪಾಕಿಗಳನ್ನು ತಂದಿದ್ದು ಹಾರಿಸಿದರು. ಎರಡು ಪಾರ್ಸಿದೇವಾಲಯಗಳನ್ನು ಗುಂಪಿನವರು ಸುಟ್ಟುಬಿಟ್ಟರು. ಸೈನಿಕರು ಬಂದು ಗುಂಪನ್ನು ಚದರಿಸುವುದಕ್ಕೆ ತುಪಾಕಿಯನ್ನೇ ಪ್ರಯೋಗಿಸಬೇಕಾಯಿತು. ಅನೇಕ ವೀಥಿಗಳಲ್ಲಿ ಗದ್ದಲವು ನಡೆದಿತು. ಎಲ್ಲೆಲ್ಲೂ ತುಪಾಕಿಯ ಸದ್ದೇ ಕೇಳುವಂತಾಯಿತು. ಬರುಬರುತ್ತ ಈ ಗದ್ದಲವು ಜಾತಿದ್ವೇಷವಾಗಿ ಪರಿಣಮಿಸಿತು. ಒಬ್ಬ ಡಾಕ್ಟರು ಪಾರ್ಸಿಯವರ ಏಟನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಯೂರೋಪಿಯನ್ ಉಡುಪನ್ನು ಧರಿಸಿಕೊಂಡು ಜೆ. ಜೆ. ಆಸ್ಪತ್ರೆಗೆ ಹೋಗುತ್ತಿರಲು, ಹಿಂದೂಮಹಮ್ಮದೀಯರ ಗುಂಪು ಅವನನ್ನು ಹಿಂಸೆಪಡಿಸಿತು. ಆ ಡಾಕ್ಟರು ಮನೆಗೆ ಹೋಗುವಾಗ್ಗೆ ಹಿಂದೂಮಹಮ್ಮದೀಯರ ಕಾಟವನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಗಾಂಧಿ ಟೋಪಿಯನ್ನೂ ಖದ್ದರ್ ಬಟ್ಟೆಯನ್ನೂ ಧರಿಸಿಕೊಂಡು ಹೋಗುತ್ತಿರಲು, ಪಾರ್ಸಿ ಗುಂಪು ಆತನನ್ನು ಹಿಂಸೆಪಡಿಸಿತು. ಇಂಥ ವಿಚಿತ್ರಗಳೆಲ್ಲಾ ನಡೆದುವು. ಸೈನಿಕರನ್ನು ಎಲ್ಲ ಬೀದಿಗಳಲ್ಲೂ ಕಾವಲಿಗೆ ಇರಿಸಿದರು. ತಾ|| ೧೮-೧೯ರಲ್ಲಿ ಎಲ್ಲಾ ಯಂತ್ರಾಲಯಗಳೂ ಮುಚ್ಚಲ್ಪಟ್ಟಿದ್ದುವು. ಅಲ್ಲಿಯವರೆಗೆ ಒಟ್ಟು ೧೭ ಜನರು ಕೊಲ್ಲಲ್ಪಟ್ಟರೆಂದು ಪ್ರಕಟವಾಯಿತು. ಗುಂಪಿನವರಿಗೆ ಹಿತೋಪದೇಶಮಾಡಲಿಕ್ಕೆ ಗಾಂಧಿಯವರು ನೂರಾರು ಜನ ದೊಡ್ಡ ಮನುಷ್ಯರನ್ನು ಕಟ್ಟಿಕೊಂಡು ಹೋಗಲು, ಅವರ ತಲೆಯ ಮೇಲೆ ಏಟುಬಿದ್ದಿತೆಂದೂ ಸುದ್ದಿ ಹುಟ್ಟಿದ್ದಿತು. ಅದು ನಿರ್ಧರವಾಗಲಿಲ್ಲ. ತಾ|| ೧೮ ರ ರಾತ್ರಿ ಗಾಂಧಿಯವರು ವೃತ್ತಪತ್ರಿಕೆಗಳಿಗೆ ಒಂದು ಲೇಖನವನ್ನು ಬರೆದು—ಪ್ರಜೆಗಳಲ್ಲೇ ಇಂಥ ಪರಸ್ಪರ ವಿರೋಧಗಳು ಹುಟ್ಟಿ ಅತ್ಯಾಚಾರಗಳು ನಡೆದುದರಿಂದ ತಮಗುಂಟಾದ ಸಂಕಟವನ್ನು ತಿಳಿಯಪಡಿಸಿ, ಅಸಹಾಯವಾದಿಗಳಲ್ಲಿ ಇಂಥ ದೌರ್ಜನ್ಯವು ಪ್ರಬಲಿಸಿದ ಮೇಲೆ ತಮ್ಮ ಉದ್ದಿಷ್ಟಸಂಕಲ್ಪವು ಎಂದಿಗೂ ಸಿದ್ಧಿಸಲಾರದೆಂದೂ, ಸಾರ್ವಜನಿಕ ಆಜ್ಞೋಲ್ಲಂಘನದ ಆಸೆಯು ಮತ್ತೊಂದುಸಲ ವಿಫಲವಾಯಿತೆಂದೂ, ತಿಲಕ್‌ನಿಧಿಗೆ ಉದಾರವಾಗಿ ನಿನ್ನೆ ತಾನೇ ದ್ರವ್ಯಸಹಾಯ ಮಾಡಿದ ಪಾರ್ಸಿ ಜನರನ್ನು ಅಷ್ಟೊಂದು ಹಿಂಸೆಗೂ ಅಪಮಾನಕ್ಕೂ ಗುರಿಪಡಿಸಿದುದು ಮಹಾಪರಾಧವೆಂದೂ, ಆ ಪಾಪಪರಿಹಾರಕ್ಕಾಗಿ ಪ್ರತಿಯೊಬ್ಬ ಹಿಂದೂ ಮಹಮ್ಮದೀಯರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದೂ, ಅದಕ್ಕಾಗಿ ತಾನು ಉಪವಾಸವ್ರತವನ್ನು ಪರಿಗ್ರಹಿಸಿರುವೆನೆಂದೂ ಉಭಯಪಕ್ಷದವರೂ ರಾಜಿಯಾಗುವವರೆಗೂ ತಾನು ಈ ಉಪವಾಸದೀಕ್ಷೆಯನ್ನು ಬಿಡುವುದಿಲ್ಲವೆಂದೂ ಅದರಲ್ಲಿ ಕಾಣಿಸಿದ್ದರು. ಇದೇ ತೆರದ ಅಭಿಪ್ರಾಯದ ಇನ್ನೆರಡು ಪತ್ರಗಳನ್ನೂ ಬೇರೆಬೇರೆ ಭಾಷೆಯಲ್ಲಿ ಪ್ರತ್ಯೇಕವಾಗಿ ಮುದ್ರಿಸಿ ಲಕ್ಷಾಂತರ ಪ್ರತಿಗಳನ್ನು ಊರಲ್ಲೆಲ್ಲಾ ಹಂಚಿಸಿದರು. ತಾ|| ೨೦ ರಲ್ಲಿ ಬೆಳಗ್ಗೆ ಎಲ್ಲೋ ಸ್ವಲ್ಪ ಕಡೆ ಬಡಿದಾಟವಾಯಿತು.

ಸರೋಜನೀದೇವಿಯು ಹಿತೋಪದೇಶ ಮಾಡಲಿಕ್ಕೆ ಹೋಗಲು ಆಕೆಗೂ ಏಟು ಬಿದ್ದಿತು. ತಲೆತಪ್ಪಿಸಿಕೊಳ್ಳುವುದೇ ಪ್ರಯಾಸವಾಯಿತು. ಪ್ರಿನ್ಸೆಸ್ ವೀಥಿಯಲ್ಲಿ ಆದ ಗದ್ದಲವನ್ನು ಅಣಗಿಸಲಿಕ್ಕೆ ಪೋಲೀಸರು ಹಾರಿಸಿದ ತುಪಾಕಿಯಿಂದ ಒಬ್ಬನು ಸತ್ತನು. ಆದಿನ ಸಾಯಂಕಾಲದ ಹೊತ್ತಿಗೆ ಊರಿನಲ್ಲಿ ಶಾಂತಸ್ಥಿತಿಯುಂಟಾಯಿತು. ಗಾಂಧಿಯವರೇ ಮೊದಲಾದ ಅಸಹಾಯನಾಯಕರೂ ಸಹಾಯನಾಯಕರೂ ಸಹ ಪರಸ್ಪರ ಕಲೆತು ಪರ್ಯಾಲೋಚಿಸಿ ಶಾಂತಿಸ್ಥಾಪನೆಗಾಗಿ ಊರಿನಲ್ಲೆಲ್ಲಾ ತಿರುಗಿ ಬೋಧಿಸಿ ಶಮನಕ್ಕೆ ಸಾಹಸಪಟ್ಟರು. ತಾ|| ೨೧ರ ಸ್ಥಿತಿಯು ಸೌಮ್ಯವಾಯಿತು. ಮಿಲ್ಲುಗಳ ಬಾಗಿಲುಗಳೆಲ್ಲಾ ತೆರೆಯಲ್ಪಟ್ಟುವು. ಅಂಗಡಿಗಳನ್ನೆಲ್ಲಾ ತೆರೆದರು. ಈ ಅವಾಂತರಗಳಿಂದ ಶ್ರೀ|| ಪ್ರಿನ್ಸ್‌ಆಫ್‌ವೇಲ್ಸರ ಸತ್ಕಾರದ ಏರ್ಪಾಟುಗಳಲ್ಲಿ ಕೆಲವು ವ್ಯತ್ಯಾಸಮಾಡಬೇಕಾಯಿತು. ತಾ|| ೨೧ ರಲ್ಲೂ ಊರಿನಲ್ಲಿ ಸೈನಿಕರ ಕಾವಲು ಇಡಲ್ಪಟ್ಟಿದ್ದಿತು. ಆದಿನದವರೆಗೆ ಮಾಡಿದ ಲೆಕ್ಕದ ಪ್ರಕಾರ ಒಟ್ಟು ೫೬ ಜನರು ಕೊಲ್ಲಲ್ಪಟ್ಟಿದ್ದರು. ಅವರಲ್ಲಿ ಒಬ್ಬನು ಯೂರೋಪ್ಯನು; ಅಮೇರಿಕನ್ನನು ಒಬ್ಬನು; ಮಹಮ್ಮದೀಯರು ೧೪ ಮಂದಿ; ಹಿಂದೂಗಳು ೧೭ ಮಂದಿಗಳು; ಉಳಿದವರು ಇತರರು ಎಂದು ಗೊತ್ತಾಗಿದ್ದಿತು. ಬೊಂಬಾಯಿಯಲ್ಲಿ ಇಂಥ ಗದ್ದಲವು ನಡೆದಿರುವುದರಿಂದ ಸರ್ಕಾರದ ಆಜ್ಞೋಲ್ಲಂಘನೆಯ ನಿರ್ಧರದ ವಿಷಯವಾಗಿಯೂ ಬೊಂಬಾಯಿ ಪ್ರಜೆಗಳ ಪರಸ್ಪರ ಮಾತ್ಸರ್ಯ ಶಾಂತಿ ವಿಷಯವಾಗಿಯೂ ಪರ್ಯಾಲೋಚನೆ ಮಾಡಲಿಕ್ಕಾಗಿ ಸೂರತ್‌ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಂಘವನ್ನು ಕೂಡಿಸಬೇಕೆಂದು ಮ|| ಗಾಂಧಿಯವರೇ ಮೊದಲಾದವರು ನಿರ್ಧರಿಸಿರುವರು. ತಾ|| ೨೨ರಲ್ಲಿ ಗದ್ದಲವೆಲ್ಲಾ ಪೂರ್ಣವಾಗಿ ತಗ್ಗಿಹೋಯಿತು. ಆ ದಿನ ಗಾಂಧಿಯವರ ಮನೆಯಲ್ಲಿ ಎಲ್ಲ ವರ್ಗಸಂಘಗಳ ಪ್ರಮುಖರೂ ಸೇರಿದ್ದರು. ಸರ್ವರೂ ಮನಸ್ತಾಪಗಳನ್ನು ಬಿಟ್ಟು ಸಹೋದರಭಾವದಿಂದ ವರ್ತಿಸಬೇಕೆಂದು ನಿರ್ಣಯಮಾಡಿದರು. ಆ ಅರ್ಥಕ್ಕೆ ಅಲ್ಲಿಗೆ ಸೇರಿದ್ದ ಪಾರ್ಸಿ, ಹಿಂದೂ, ಮಹಮ್ಮದೀಯ, ಕ್ರೈಸ್ತನಾಯಕರೆಲ್ಲಾ ಉಪಾಹಾರಸ್ವೀಕಾರವನ್ನು ಮಾಡಿದರು. ಗಾಂಧಿಯವರೂ ಕೂಡ ಸಮಾಧಾನಗೊಂಡು, ೪ ದಿನದಿಂದ ನಡೆಯಿಸಿದ್ದ ಉಪವಾಸವ್ರತವನ್ನು ಅಲ್ಲಿಗೆ ಬಿಟ್ಟು ಭೋಜನಮಾಡಿದರು. ಯುವರಾಜರು ಪ್ರಯಾಣ ಮಾಡುವ ಕಾಲದಲ್ಲಿ ಅವರ ಆಗಮನದ ವೇಳೆಯಲ್ಲಿ ಉಂಟಾಗಿದ್ದ ಹರತಾಳದ ವಿಷವು ಮಾಯವಾಗಿ ಹೋಗಿದ್ದಿತು.

ಪತ್ರವ್ಯವಹಾರ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ರೈತರ ಉತ್ಸಾಹ ಮತ್ತು ಒಗ್ಗಟ್ಟು.

ಮೈಸೂರು ವೀರನಗೆರೆ ಬಂಗಲಿ ಸಂಕ್ರಿ ಉಕ್ಕಡದಿಂದ ಶ್ರೀರಂಗಪಟ್ಟಣದ ತಾಲ್ಲೂಕು ಚಂದಗಾಲ್ ಮೊದಲಾದ ೮-೧೦ ಗ್ರಾಮಗಳಿಗೆ ಹೋಗತಕ್ಕ ರಸ್ತೆಯಲ್ಲಿ ಈಗ್ಗೆ ಸುಮಾರು ೨೦೦-೮೦೦ ಮಂದಿ ರೈತರು ಒಟ್ಟಿಗೆ ಸೇರಿ ಬಹಳ ಉತ್ಸಾಹದಿಂದಲೂ ಕೆಲಸಮಾಡುವವರಿಗೆಹುಮ್ಮಸು ಹುಟ್ಟಲೆಂದೂ ಬಾಜಾಭಜಂತ್ರಿಯೊಡನೆ ರಸ್ತೆಯ ಮಟ್ಟಿಕಾಮಗಾರಿಯನ್ನು ನಡೆಸಿದರು. ಈ ರಸ್ತೆಯ ಮಟ್ಟಿಕಾಮಗಾರಿಯನ್ನು ರೈತರು ಪೂರೈಸಿಕೊಟ್ಟರೆ ದಯಾಳು ಸರ್ಕಾರದವರು ಈ ರಸ್ತೆಯನ್ನುಸರ್ಕಾರಕ್ಕೆ ಸೇರಿಸಿಕೊಂಡು ಜಲ್ಲಿಕಾಮಗಾರಿ ಮಾಡಿಸಿಕೊಡುತ್ತಾರೆಂತಲೂಮತ್ತು ಇದೇ ರೀತಿ ಪ್ರತಿವರ್ಷವೂ ನಡೆಸಿಕೊಂಡು ಬರುತ್ತಾರೆಂತಲೂ ಭರವಸೆಯನ್ನಿಟ್ಟುಕೊಂಡು ನಗೂನಹಳ್ಳಿ ಮೊದಲಾದ ಗ್ರಾಮಸ್ಥರು ಮಾಡುತ್ತಿರುವ ಈ ಒಗ್ಗಟ್ಟಿನ ಮತ್ತು ಪ್ರಜೋಪಕಾರಿಯಾದ ಕೆಲಸವನ್ನು ನೋಡಿದರೆ ತುಂಬಾ ಸಂತೋಷವಾಗುತ್ತದೆ. ಇದರಂತೆ ಎಲ್ಲರೂ ಐಕಮತ್ಯದಿಂದ ನಡೆಯುವುದು ಸಕಲರಿಗೂ ಒಳ್ಳೆಯದಲ್ಲವೆ? ರೈತರು ಇಷ್ಟರಮಟ್ಟಿನ ಒಗ್ಗಟ್ಟಿನಿಂದಲೂ ಉತ್ಸಾಹದಿಂದಲೂ ಮಾಡುವ ಕೆಲಸವನ್ನುಘನಸರ್ಕಾರದವರು ಖುದ್ದಾಗಿ ಪರಾಂಬರಿಸಿ ರೈತರ ಆಸೆಯನ್ನೂ ಕಷ್ಟವನ್ನೂ ಸಾರ್ಥಕಗೊಳಿಸುತ್ತಾರೆಂದು ನಂಬಿರುತ್ತೇನೆ.

ಪ್ರತ್ಯಕ್ಷದರ್ಶಿ.

ಗುಬ್ಬಿ ತಾಲ್ಲೂಕು ದಂಡಿನ ಶಿವರದ ಹೋಬಳಿ ಹುಲ್ಲೇಕೆರೆ ಗ್ರಾಮ.

ಈ ಗ್ರಾಮದ ಪ್ರಜೆಗಳ ದೌರ್ಭಾಗ್ಯದಿಂದ ಈಗ ಎರಡು ವರ್ಷಗಳಾರಭ್ಯ ಈ ಗ್ರಾಮದ ಸಾರಿಗೇ ಹಳ್ಳಿಕೆರೆಯು ತುಂಬದೆ ಪ್ರಜೆಗಳಿಗೆ ಉಂಟಾದ ಕಷ್ಟನಷ್ಟಗಳನ್ನು ಎಷ್ಟು ಹೇಳಿದರೂ ತೀರದು. ಅದೃಷ್ಟವಶಾತ್ ಈ ವರ್ಷ ನಡೆಸಿದ ಸ್ವಾತಿಯ ಮಳೆಯಲ್ಲಿ ಈಭಾರೀ ಕೆರೆಯು ಒಂದೇ ದಿವಸದಲ್ಲಿ ತುಂಬಿ ಕೋಡಿಬಿದ್ದು ಪ್ರಜೆಗಳ ಜೀವನೋಪಾಯಕ್ಕೆ ಸಹಾಯವನ್ನು ಉಂಟುಮಾಡಿತು. ಈ ಗ್ರಾಮದಲ್ಲಿ ಮೈಸೂರು ಸಿದ್ಧರಾಮೇಗೌಡರ ಮಕ್ಕಳು ಎಸ್. ಎನ್. ಗೌಡರವರು ಇಂಗ್ಲೀಷ್ ಭಾಷೆಯಲ್ಲಿ ಪರಿಶ್ರಮವುಳ್ಳವರಾದ್ದರಿಂದ ನಮ್ಮ ಇಂಡಿಯಾ ಮತ್ತು ಸಿಲೋನ್ ದೇಶದ ಮುಖ್ಯಭಾಗಗಳಲ್ಲೆಲ್ಲಾ ಸಂಚಾರಮಾಡಿಕೊಂಡು ದೇಶದ ನವನಾಗರಿಕತೆಯನ್ನು ತಿಳಿದು, ಈ ಗ್ರಾಮದ ಪ್ರಜೆಗಳ ಮೌಢ್ಯವನ್ನು ಹೋಗಲಾಡಿಸುವುದಕ್ಕಾಗಿ "ಜಮೀನುದಾರಿ ಫ್ರೀ ರೀಡಿಂಗ್‌ರೂಂ" ಎಂಬ ನಾಮಾಂಕಿತದಿಂದ ಒಂದು ವಾಚನಾಲಯವನ್ನು ತಾರೀಖು ೫-೧೧-೧೯೨೧ ರಲ್ಲಿ ಸ್ಥಾಪಿಸಿ, ತಾವು ನಾಲ್ಕು ಐದು ಪೇಪರುಗಳಿಗೆ ತಮ್ಮ ಉದಾರತ್ವದಿಂದ ಚಂದಾವೊಬಲಗ (subscription) ನ್ನು ಕೊಟ್ಟಿದ್ದಾರೆ. ಈ ಗ್ರಾಮದ ಬಾಯ್ಸ್ ಸ್ಕೂಲಿನಲ್ಲಿ ಇಬ್ಬರು ಟೀಚರು ಇದ್ದಾರೆ. ಬಾಲಕರ ಸಂಖ್ಯೆ ಹೆಚ್ಚಾಗಿದ್ದಾಗ್ಯೂ ಕೂಡ ಲೋವರ್‌ಸೆಕೆಂಡರಿ ಕ್ಲಾಸನ್ನೂ ಸಹ ಇಟ್ಟುಕೊಂಡು ಬಹಳ ಮುತುವರ್ಜಿಯಿಂದ ಕೆಲಸಮಾಡುತ್ತಾ ಇದ್ದಾರೆ. ಈ ಗ್ರಾಮದ ಸರ್ಕಾರಿ ಸ್ಕೂಲು ಕಟ್ಟಡಕ್ಕಾಗಿ ಗೌರ್ನಮೆಂಟಿನಿಂದ ೨೮೫೦ ರೂಪಾಯಿಗಳು ಮಂಜೂರಾಗಿದೆ. ಶೀಘ್ರದಲ್ಲಿಯೇ ಕಟ್ಟಡವು ತಯಾರಾಗುವುದೆಂದು ನಂಬಿದ್ದೇನೆ.

ವಿದ್ಯಾಭಿಮಾನಿ.

ಶರಣರ ಮರಣ.

ಹಾವೇರಿಯಲ್ಲಿ ಮ|| ರಾ|| ರಾ|| ಸಿದ್ದಪ್ಪ ಗುರುಶಾಂತಪ್ಪ ಮಾಗಾವಿ ಇವರು ಬಡತನದಲ್ಲಿ ಜನಿಸಿದಾಗ್ಯೂ ಈಗ ಇಪ್ಪತ್ತು ವರುಷಗಳಾರಭ್ಯ ಪ್ರಮಾಣಿಕತನದಿಂದ ವ್ಯಾಪಾರಮಾಡಿ ಲಕ್ಷಾಧೀಶರಾದರು. ಮತ್ತು ಇಂಥ ವೈಭವವು ಇದ್ದಾಗ್ಯೂ ಮದ ಮತ್ಸರಾದಿಗುಣಗಳಿಗೆ ವಶರಾಗದೆ ೨-೩ ವರ್ಷಗಳಹಿಂದೆ ಇಳಿವಯಸ್ಸಿಯಂಚಾದ ಕಾಲಕ್ಕೆ ಜಡ್ಡಿನಿಂದ ಗುಣವಾದ ಲಾಗಾಯ್ತು ಹೆಚ್ಚಾದ ತನ್ನ ವ್ಯಾಪಾರವನ್ನೆಲ್ಲ ತನ್ನ ತಮ್ಮಂದಿರಿಗೆ ಒಪ್ಪಿಸಿ ತಾವು ಪ್ರಸಿದ್ಧ ಶಿವಯೋಗಿವರೇಣ್ಯರಾದ ಅಥಣಿ ಶಿವಯೋಗಿಗಳ ದರ್ಶನವನ್ನು ತೆಗೆದುಕೊಂಡು, ಹೆಚ್ಚಾಗಿ ಅವರಸೇವೆಯಲ್ಲಿ ನಿಂತು, ಆ ಮಹನೀಯರ ಭಜನೆಯಲ್ಲಿ ವೇಳೆಯನ್ನು ಕಳೆಯುತ್ತಾ ದಾನಧರ್ಮ ಪರೋಪಕಾರದಲ್ಲಿಯೇ ನಿರತರಾಗಿದ್ದರು. ಅದೇ ಅಥಣಿ ಗಚ್ಚಿನಮಠದ ಶ್ರೀ ಸಿದ್ಧಲಿಂಗಸ್ವಾಮಿಗಳಿಂದ ಉಪದೇಶವನ್ನು ಪಡೆದಮೇಲೆ ವೈರಾಗ್ಯವು ಹೆಚ್ಚಾಗಿಬಂದು ವ್ಯವಹಾರವನ್ನು ಅತಿಶಯ ಕಡಿಮೆಮಾಡಿದ್ದರು. ಇವರು ಹಾವೇರಿಯಲ್ಲಿ ಸ್ಟೇಷನ್ ರಸ್ತೆಯಮೇಲೆ ಬಂಗ್ಲೆ, ಭಾವಿಗಳನ್ನು ಕಟ್ಟಿಸಿ, ಅಲ್ಲಿ ಶ್ರೀ ಶಿವಲಿಂಗ ಬಸವೇಶ್ವರ ಮೂರ್ತಿಗಳನ್ನು ಸ್ಥಾಪಿಸಿ, ಊರ ಸಹವಾಸವನ್ನೇ ಬಿಟ್ಟು, ಅಲ್ಲಿಯೇ ವಾಸಮಾಡಿ ಈಶಚಿಂತನೆಯಲ್ಲಿಯೇ ಕಾಲಕಳೆಯಬೇಕೆಂದು ಮಾಡಿದ್ದರು. ಅದರಂತೆ ಶ್ರೀ ಮೂರ್ತಿಯೂ ಮತ್ತು ಎಲ್ಲಾವ್ಯವಸ್ಥೆಯೂ ತಯಾರಾಗಿ ಇದೇ ಕಾರ್ತೀಕ ಶು|| ೩ ದಿವಸ ಸ್ಥಾಪಿಸುವ ಸಮಾರಂಭದ ಉದ್ದೇಶವಾಗಿ, ಉಪದೇಶ ಗುರುಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳವರನ್ನು ಮತ್ತು ಶ್ರೀ ವಿಜಾಪುರದ ರಂಭಾಲಿಂಗಸ್ವಾಮಿಗಳವರನ್ನೂ ಮತ್ತು ಇತರ ಸ್ವಾಮಿಗಳನ್ನೂ ಸಹ ಕರಸಿದ್ದರು. ಅನ್ನ ಸಾಮಗ್ರಿಯೂ ಕೂಡ ತಯಾರಾಗಿ ಸ್ವಾಮಿಗಳು ಬಂದ ದಿವಸವೇ ತಾವು ಮೂರ್ತಿಯನ್ನು ಸ್ಥಾಪಿಸುವ ದಿವಸವೇ ಈ ಲೋಕವನ್ನು ತ್ಯಜಿಸಬೇಕೆಂಬ ಸಂಕಲ್ಪವನ್ನು ಮೊದಲೇ ಮಾಡಿಕೊಂಡಿದ್ದರೋ ಏನೋ ಎನ್ನುವಂತೆ ಕೂಡಲೇ ಜ್ವರದಬಾಧೆಯಿಂದ ಮಲಗಿಕೊಂಡವರು ೮ ದಿವಸ ಶಿವಧ್ಯಾನದಲ್ಲೇ ಮಗ್ನರಾಗಿದ್ದು ಸದರಮಿತಿಗೆ ಸರಿಯಾಗಿ ಕಾರ್ತೀಕ ಶು|| ೨ ಮಂಗಳವಾರ ರಾತ್ರಿ ೧೨ ಘಂಟೆಗೆ ಶಿವಸಾಯುಜ್ಯವನ್ನು ಪಡೆದರು. ಎಲ್ಲ ಸಾಮಗ್ರಿಯೂ ತಯಾರು ಇದ್ದ ಮೂಲಕ ಊರಪ್ರಮುಖರೂ ಆಬಾಲವೃದ್ಧರೂ ಕಾರ್ತೀಕ ಶು|| ೩ ದಿವಸ ಅತ್ಯಂತ ವೈಭವದಿಂದಲೂ ಮತ್ತು ಹರಭಜನೆ ಗುರುಭಜನೆಯಿಂದಲೂ ಮತ್ತು ದಾನಧರ್ಮಗಳಿಂದಲೂ ಮೃತರ ಶರೀರವನ್ನು ಶ್ರೀ ಬಸವೇಶ್ವರ ಮೂರ್ತಿಯನ್ನು ಸ್ಥಾಪಿಸುವ ಸ್ಥಾನದಲ್ಲಿಯೇ ಸಮಾಧಿಯನ್ನು ಮಾಡಿಸಿದರು. ಸ್ಮಶಾನಯಾತ್ರೆಯು ಶ್ರೀ ದೇವರ ಯಾತ್ರೆಯೋಪಾದಿಯಲ್ಲಿ ಎಲ್ಲ ಧರ್ಮದವರಿಂದಲೂ ಕೂಡಿ ಕಾರ್ತೀಕ ಶು|| ೩ ಬುಧವಾರ ರಾತ್ರಿ ೧೨ ಘಂಟೆಗೆ ಸಮಾಪ್ತಿಯಾಯಿತು. ಇಂಥ ವೈಭವವು ಈ ಗ್ರಾಮದಲ್ಲಿ ಯಾರಿಗೂ ಲಭಿಸಿದ್ದಿಲ್ಲವು. ಅವರ ಸಂಕಲ್ಪದಂತೆ ಶ್ರೀ ಮೂರ್ತಿಗಳ ಸ್ಥಾಪನೆಯು ಅದೇ ದಿವಸವೇ ಬೆಳಗಿನವರೆಗೆ ನಡೆದು ಸರ್ವಕಾರ್ಯವೂ ಪೂರೈಸಲ್ಪಟ್ಟಿತು. ಶರಣರ ಗುಣ ಮರಣದಲ್ಲಿ ನೋಡು ಎಂಬ ವಾಕ್ಯದಂತೆ ಈ ಮಹನೀಯರ ಮರಣದಿಂದ ಇಲ್ಲಿಯ ಸರ್ವಜನರಿಗೂ ಆಶ್ಚರ್ಯವಾಯಿತು.

ಸ್ಥಳೀಕ.

ವೀರಶೈವ ವಿದ್ಯಾವರ್ಧಕ ಸಭೆ.

(ಹೂವಿನಹಡಗಲಿ ಬಳ್ಳಾರಿ.)

ಇತ್ತೀಚೆಗೆ ವೀರಶೈವ ಸಮಾಜವು ವಿದ್ಯಾವಿಹೀನತೆಯಿಂದ ಅನೇಕ ಕಷ್ಟಗಳಿಗೀಡಾಗಿರುವುದು. ಅನ್ಯಸಮಾಜಗಳು ವಿದ್ಯಾಪ್ರಾಬಲ್ಯದಿಂದ ಸುಖಸಂಪತ್ತಿನಲ್ಲಿರುವುವು. ನಮ್ಮವರಲ್ಲಿ ಜಾಗ್ರತೆಯಿಲ್ಲದೆ ನಾವೆಲ್ಲರೂ ಹಿಂದುಳಿದಿರುವೆವು. ಅದರಲ್ಲಿಯೂ ಬಳ್ಳಾರಿ ಪ್ರಾಂತದಲ್ಲಿ ಧರ್ಮಾಭಿವೃದ್ಧಿಯ ಚಲನವಲನವೇ ಇಲ್ಲವಾಗಿದೆ. ಈ ನಮ್ಮ ಪ್ರಾಂತದಲ್ಲಿ ಧರ್ಮಸ್ಫೂರ್ತಿಯನ್ನು ಹುಟ್ಟಿಸುವವರು ಕಡಿಮೆ. ಮೇಲಾಗಿ ಇತ್ತಕಡೆಗೆ ಶಿಕ್ಷಿತರು ಇಲ್ಲದ್ದರಿಂದ ಧರ್ಮಜಾಗ್ರತೆಗೆ ಮುಖವಿಟ್ಟು ಚೇತನವನ್ನು ಹೆಚ್ಚಿಸುವವರು ಇಲ್ಲವಾಗಿದೆ. ಈ ಶೋಚನೀಯ ಸ್ಥಿತಿಯನ್ನು ಕಂಡು ವೇ|| ಶಿವಮೂರ್ತಿಸ್ವಾಮಿ ಹಿರೇಮಠ ಬಿ. ಎ. ಕಾಗಿನೆಲ್ಲಿ ಇವರು ನಮ್ಮಲ್ಲಿಯ ಹೀನಸ್ಥಿತಿಯನ್ನು ಕಂಡು ವಿದ್ಯಾವಿಷಯಕವಾದ ಸಂಸ್ಥೆಯನ್ನೇರ್ಪಡಿಸಿ ಆ ಮೂಲಕ ಧಾರ್ಮಿಕ ಸಾಮಾಜಿಕ ಚಳವಳಿಯನ್ನು ಮಾಡಲು ನಮ್ಮೂರ ಪ್ರಮುಖರನ್ನು ಪ್ರೋತ್ಸಾಹಿಸಿದ ಪ್ರಕಾರ ಒಂದು ಸಭೆಯನ್ನು ಕೂಡಿಸುವುದು ನಿಶ್ಚಿತವಾಗಿ ೨೭-೧೦-೨೧ನೆ ಗುರುವಾರ ದಿವಸ ವೀರಶೈವ ವಿದ್ಯಾವರ್ಧಕ ಸಭೆಯು ಕೂಡಿತು. ಈ ಕಾರ್ಯಗೌರವವನ್ನೂ ಸಮಾಜಾಭಿವೃದ್ಧಿಯ ವಿಷಯವನ್ನೂ ಅರಿತು ಕೊಪ್ಪಳದ ಗವಿಮಠದ ಶ್ರೀಗಳವರು ಇದಕ್ಕಾಗಿ ಆಗಮಿಸಿದ್ದು ನಮ್ಮೆಲ್ಲರ ಭಾಗ್ಯವೇ ಸರಿ. ಸದರಿ ಸಭೆಗೆ ಪರಸ್ಥಳದಿಂದ ಕಲ್ಲೂರ ಪಟ್ಟಾಧ್ಯಕ್ಷರೂ ಕೊಟ್ಟೂರ ಜಾಗಟಗೇರಿ ವಿರಲಗಟ್ಟಿಮಠದ ಬಸವಲಿಂಗಪ್ಪನವರೂ, ಆನವೇರಿ ಫಕೀರಯ್ಯನವರೂ, ಚಿತ್ತವಾಡಿಗಿ ಸಾಹುಕಾರ ಹುಚ್ಚಪ್ಪನವರೂ, ಡಂಬಳದ ಬಂಗಾರಸೆಟ್ಟರೂ, ಕಾಗಿನೆಲ್ಲಿ ಹಿರೇಮಠದ ಶಿವಮೂರ್ತಿಸ್ವಾಮಿಯವರೂ ಬಂದಿದ್ದರು. ಊರಜನರೆಲ್ಲರೂ ನೆರೆದಿದ್ದರು. ಅಧ್ಯಕ್ಷಸ್ಥಾನವನ್ನು ಕೊಪ್ಪಳದ ಶ್ರೀಗಳವರು ವಹಿಸಿದ್ದರು. ಅಧ್ಯಕ್ಷರ ಪರವಾಗಿ ಡಂಬಳದ ಬಂಗಾರಸೆಟ್ಟರು ಪ್ರಸ್ತಾವಿಕ ಭಾಷಣವನ್ನು ಮಾಡಿದನಂತರ ವೇ|| ಶಿವಮೂರ್ತಿಸ್ವಾಮಿಯವರ ಸ್ವಾರಸ್ಯವಾದ ಭಾಷಣವಾಯಿತು. ಸದರಿಯವರು ನಮ್ಮವರ ಪೂರ್ವದ ಉಚ್ಚಸ್ಥಿತಿಯನ್ನೂ ಈಗಿನ ಸಮಾಜದ ಪರಿಸ್ಥಿತಿಯನ್ನೂ ಚೆನ್ನಾಗಿ ಚಿತ್ರಿಸಿ ನಮ್ಮ ಸಮಾಜವು ಮುಂದಕ್ಕೆ ಬರಬೇಕಾದರೆ ವಿದ್ಯಾಪ್ರಸಾರವು ಆವಶ್ಯಕವೆಂದೂ, ಆ ಬಗ್ಗೆ ನಮ್ಮ ಸಮಾಜದವರು ಸಮಾಜಸೇವೆ ಸ್ವಾರ್ಥತ್ಯಾಗ ಮೊದಲಾದ ಉಜ್ವಲಗುಣಗಳಿಂದ ಕಾರ್ಯಪ್ರವೃತ್ತರಾಗಬೇಕೆಂದೂ, ಒಳ್ಳೇ ಜೋರಿನಿಂದ ಹೇಳಿದ್ದಲ್ಲದೆ ನಮ್ಮ ಪ್ರಾಂತವಾದ ಕೊಡತಾಲ್ಲೂಕಿನಲ್ಲಿ ಮಾಡಿರುವಂತೆ ವಿದ್ಯಾವರ್ಧಕ ಫಂಡನ್ನೇರ್ಪಡಿಸಬೇಕೆಂಬದಾಗಿಯೂ, ಅಲ್ಲಿ ನಡೆಯಿಸಿರುವಂತೆ ಚಳವಳಿಯನ್ನು ಆರಂಭ ಮಾಡಬೇಕೆಂಬದಾಗಿಯೂ ಹೇಳಿದರು. ಅನಂತರ ಸಭೆಯಲ್ಲಿಯೇ ವೇ|| ಶಿವಮೂರ್ತಿಸ್ವಾಮಿಯವರ ಸೂಚನೆಯ ಪ್ರಕಾರ ಫಂಡು ಕೂಡಿಸುವ ಕೆಲಸವು ನಡೆಯಿತು. ಅದರ ವಿವರ—

ಕೊಪ್ಪಳದ ಗವಿಮಠದ ಶ್ರೀಗಳವರು ಒಂದು ಜಮೀನು (ವರ್ಷಕ್ಕೆ ೧೦೦ ರೂ. ಲಾವಣಿ ಬರುವಂಥಾದ್ದು). ಶ್ರೀಮಂತ ಜಾಗಟಗೇರಿ ಬಸವಲಿಂಗಪ್ಪನವರು ೧೦೦ ರೂ. ಗವಿಯಯ್ಯನವರು ಹಡಗಲಿ ೧೦೦ ರೂ. ಆನವೇರಿ ಮಠದ ಫಕೀರಯ್ಯನವರು ೧೦ ಎಕರೆ ಜಮೀನು, ಕರಿಯತ್ತಿನ ಶಾಂತಪ್ಪನವರು ೨೦೦ ರೂ. ಬಸವಲಿಂಗಪ್ಪನವರು ಹಡಗಲಿ ೨೦೦ ರೂ. ಮರುಗೋಡೆಪ್ಪ ಅಗಡಿ ೧೦೦ ರೂ. ಡಂಬಳದ ಬಂಗಾರಸೆಟ್ಟರು ೧೦೦ ರೂ. ರುದ್ರಪ್ಪ ಮುಂಡರಗಿ ೭೫ ರೂ. ಅಡವಿ ಬಸಪ್ಪಜೋಶಿ ೫೦ ರೂ. ಈ ಪ್ರಕಾರ ವರ್ಗಣಿಯಾದದ್ದಲ್ಲದೆ ಹಿರೇಮಠದ ಕೊಟ್ಟೂರಯ್ಯನವರು, ಸೊಪ್ಪಿನಚೆನ್ನಪ್ಪ, ಕಟ್ಲ ಬಸಪ್ಪ, ಬಸೆಟ್ಟಿ ಅಮರಪ್ಪ, ಕೋಟಿಲಿಂಗನಗೌಡರು, ವಾಲಿಸಿದ್ಧವೀರಪ್ಪ, ಕೋರಿಗುರುಶಾಂತಪ್ಪ, ಹಣ್ಣಿಶಿವರುದ್ರಪ್ಪ, ದುಂಡಿಗುರುಪಾದಪ್ಪ ಮೊದಲಾದವರು ಶಕ್ತ್ಯನುಸಾರ ವರ್ಗಣಿಹಾಕುವದಾಗಿ ವಚನಕೊಟ್ಟರು. ಈ ಕೂಡಿದ ನಿಧಿಯಿಂದ ಒಂದು ವೀರಶೈವ ವಿದ್ಯಾರ್ಥಿಫಂಡನ್ನು ಏರ್ಪಡಿಸಬೇಕೆಂದೂ, ಅದರಿಂದ ಒಂದು ಬೋರ್ಡಿಂಗನ್ನು ಸ್ಥಾಪಿಸಬೇಕೆಂದೂ, ಠರಾವಾಯಿತಲ್ಲದೆ ಇದೇ ಸಭೆಯಲ್ಲಿ ಹಡಗಲಿ ತಾಲ್ಲೂಕ ಸಭೆಯನ್ನು ನೆರೆಯಿಸಬೇಕೆಂದು ನಿರ್ಧಾರವಾಯಿತು. ಈ ಕಾರ್ಯವು ಸಂಪೂರ್ಣ ವ್ಯವಸ್ಥೆಗೆ ಮುಟ್ಟುವತನಕ ತಮ್ಮ ಕೃಪೆಯಿರುವುದಾಗಿ ಕೊಪ್ಪಳದ ಶ್ರೀಗಳವರು ಆಶೀರ್ವದಿಸಿದ್ದಕ್ಕಾಗಿಯೂ ಶಿವಮೂರ್ತಿ ಸ್ವಾಮಿಯವರು ಕಾಲಕಾಲಕ್ಕೆ ತಕ್ಕ ಸಹಾಯಕ್ಕಾಗಿ ಬರುವೆನೆಂದು ಅಭಯವಚನ ಕೊಟ್ಟದ್ದಕ್ಕಾಗಿಯೂ ನಾವು ಅವರನ್ನು ಅಭಿನಂದಿಸುತ್ತೇವೆ. ತುಸುದಿನಗಳಲ್ಲಿಯೇ ಹಡಗಲಿ ತಾಲ್ಲೂಕಿನ ವಿದ್ಯಾವರ್ಧಕ ಸಭೆಯು ಕೂಡುವುದದೆ. ಇದರಂತೆ ಇತರ ನಮ್ಮ ಬಳ್ಳಾರಿ ಜಿಲ್ಲೆಯೊಳಗಿನ ತಾಲ್ಲೂಕಿನವರೂ ಕಾರ್ಯ ಪ್ರಾರಂಭಿಸುವರೆಂದು ಆಶಿಸುತ್ತೇನೆ.

ಓರ್ವ ಪ್ರೇಕ್ಷಕ.

ಶಾನುಭೋಗಿಕೆ.

ಮ|| ತಿಮ್ಮರಸಯ್ಯನವರು ಶ್ಯಾನುಭೋಗರ 6 ನೆ ಕಾನ್ಫರೆನ್ಸಿನಲ್ಲಿ ಶ್ಯಾನುಭೋಗಿಕೆ ವಿಚಾರವನ್ನು ಕುರಿತು ಮಾತನಾಡಿರುವುದನ್ನು ಸಾಧ್ವೀ ಪತ್ರಿಕೆಯಲ್ಲಿ ನೋಡಿ ಬಹಳ ಆಶ್ಚರ್ಯವಾಯಿತು. ಶ್ಯಾನುಭೋಗಿಕೆ ಎಂದರೇನು? ಇದನ್ನು ನಡೆಸತಕ್ಕದ್ದು ಹೇಗೆ? ಇದು ಯಾವಾಗ ಜಾರಿಗೆ ಬಂದಿತು? ಎಂಬುದು ಯಾವುದರಿಂದಲೂ ಚೆನ್ನಾಗಿ ವ್ಯಕ್ತಪಡುವುದಿಲ್ಲ. ಬ್ರಾಹ್ಮಣನ ನಿಜವಾದ ಲಕ್ಷಣವನ್ನೂ ಇವನ ಜೀವನೋಪಾಯದ ಮಾರ್ಗವನ್ನೂ, ಬ್ರಾಹ್ಮಣಾಚರಣೆಯನ್ನೂ ಯಾವನು ತಿಳಿಯುವನೋ, ಆಗ ಅವನಿಗೆ ಈ ಶಾನುಭೋಗಿಕೆಯ ನಿಜವಾದ ಲಕ್ಷಣವು ವ್ಯಕ್ತಪಡುವುದು. ಲೋಕದ ಪ್ರತಿಯೊಬ್ಬ ಮನುಷ್ಯನೂ, ನಾನು ಮುಂದು ತಾನು ಮುಂದು ಎಂದು ಹೊಗಳಿಕೊಳ್ಳುತ್ತಿರುವುದೇ ಅವನವನ ಕರ್ತವ್ಯವಾಗಿರುವುದು. ಮ|| ತಿಮ್ಮರಸಪ್ಪನವರು ಶಾನುಭೋಗರನ್ನು ಸ್ಥಳದ ತಾಯಿಯೆಂದು ರೈತರು ಕರೆಯುವುದು ವಾಡಿಕೆಯಾಗಿದೆ ಎಂದು ಹೇಳಿರುವರು. ತಾಯಿಯು ತನ್ನ ಮಕ್ಕಳಲ್ಲಿ ಎಷ್ಟು ಪ್ರೀತಿವಿಶ್ವಾಸದಿಂದಿರುವಳೋ ಮತ್ತು ಮಕ್ಕಳು ತನ್ನ ತಾಯಿಯಲ್ಲಿ ಎಷ್ಟು ವಿಶ್ವಾಸವನ್ನು ತೋರಿಸುತ್ತಿರುವರೋ ಎಂಬುದನ್ನು ನಾವು ತಿಳಿದರೆ, ಶಾನುಭೋಗಿಕೆ ನಿಜಾರ್ಥವು ಆಗ ವ್ಯಕ್ತವಾಗುವುದು. ಶಾನುಭೋಗಿಕೆ ಮಾಡುವ ಈಗಿನವರ ಹೆಸರನ್ನು ಹೇಳಿದರೆ ರಾತ್ರಿಯೆಲ್ಲಾ ನಿದ್ರೆಬರುವುದು ಕಷ್ಟವಾಗಿ ಪರಿಣಮಿಸುವುದು. ಇವರಲ್ಲಿ ಅನೇಕರು ಬಕಪಕ್ಷಿಯಂತೆ ತಪಸ್ಸುಮಾಡುತ್ತಾ ಗ್ರಾಮಗ್ರಾಮಗಳನ್ನು ನುಂಗಿ ಪಟ್ಟಣಗಳನ್ನು ಎದುರುನೋಡುತ್ತಾ ರಾಜ್ಯವನ್ನೇ ಅಲ್ಲಕಲ್ಲೋಲ ಮಾಡುವ ಸ್ಥಿತಿಯಲ್ಲಿರುವರು. ಇವರ ಅರ್ಭಟೆಯು ರಾಮರಾವಣರ ಯುದ್ಧದಲ್ಲಿ ರಾವಣಾಸುರನ ಸೈನಿಕಾರ್ಭಟದಂತೆ ಭೀಕರತ್ವವನ್ನುಂಟುಮಾಡುತ್ತ ಎದೆಯನ್ನು ಬಿಚ್ಚಿಸುತ್ತಲಿರುವುದು. ಈಗ ಇವರ ಸಹಾಯಕ್ಕಾಗಿ ನಡೆಯುತ್ತಿರುವ ಕಾನ್ಫರೆನ್ಸಿನ ಉಗ್ರವಾದ ಬಾಣಗಳು ಮುಂದೆ ಯಾವ ಸ್ಥಿತಿಯನ್ನೈದುವವೋ ಎಂಬುದನ್ನು ರಾಮರಾವಣರ ಯುದ್ಧದ ಪರಿಣಾಮಸ್ಥಿತಿಯಿಂದ ಪ್ರಾಜ್ಞರು ಊಹಿಸಬಹುದು. ಹಳ್ಳ ದಿಣ್ಣೆಗಳು, ಬೆಟ್ಟಗುಡ್ಡಗಳು, ನದಿಯ ದಡಗಳು, ಸಾಲದಕ್ಕೆ ಗೋಮಾಳಗಳೂ ಶ್ಯಾನುಭೋಗರ ಪಾಲಾಗಿರುವುವು. ಒಂದು ಸೊಲಿಗೆ ತುಪ್ಪಕ್ಕೋಸ್ಕರ ಶಾಂತಿ ಸಮಾಧಾನದಿಂದಿರುವ ಗ್ರಾಮಾಂತರಗಳಲ್ಲಿ ಅಣ್ಣತಮ್ಮಂದಿರಲ್ಲಿ ವ್ಯಾಜ್ಯವನ್ನು ತಂದಿಟ್ಟು ಆಸ್ತಿಯನ್ನು ಅನ್ಯರ ಪಾಲುಮಾಡಿ, ತನ್ನ ಅಜ್ಜರು ತೃಪ್ತಿಯೇ ಒಂದು ಸೊಲಿಗೆ ತುಪ್ಪವೆಂದು ಭಾವಿಸುವ ಇವರನ್ನು ತಾಯಿಯ ಗುಣಾತಿಶಯಗಳಿಗೆ ಹೋಲಿಸುವುದು ಹೇಗೆ? ವೇದಮಂತ್ರ ಜಪತಪಗಳನ್ನು ತೊರೆದು ಮಾತೃಪಿತೃಶ್ರಾದ್ಧಕರ್ಮಗಳನ್ನು ಅನ್ಯರ ಕೈಯಲ್ಲಿಟ್ಟು, ಹ್ಯಾಟ್ ಬೂಟುಗಳನ್ನು ಧರಿಸಿ, ರೈತರ ತಕ್ಷಿಸಮೂಹದಲ್ಲಿ ಕರ್ನಲ್ಲಾಗಿ ಕಚೇರಿಗೆ ಹೋಗಿ, ಇವರನ್ನು ಬಾಗಿಲಿನಲ್ಲಿ ನಿಲ್ಲಿಸಿ, ತಾವು ಒಳಗಿನಿಂದ ಈಚೆಗೆ ಬರುತ್ತ, ಪಿತ್ತ ಊರ್ಧ್ವಮುಖವಾದಂತೆ ಮುಖವನ್ನು ಜೋಲುಹಾಕಿಕೊಂಡು, ದಪ್ತರವನ್ನು ಕೆಳಕ್ಕೆ ಕೆಡಹಿ—"ನಿನ್ನ ಇಷ್ಟ; ನಾನು ಮೊದಲು ಹೇಳಿದಮಾತು ನಿನಗೆ ಪಥ್ಯಕ್ಕೆ ಬರಲಿಲ್ಲ. ನೀವು ಕೆಟ್ಟುಹೋದಿರಿ. ಈಗಲಾದರೂ ನನ್ನ ಮಾತನ್ನು ಕೇಳಿ" ಎಂದು ಗದರಿಸಿ, ಅವರ ನಡುಕಟ್ಟುಗಳಲ್ಲಿಯೂ ರುಮಾಲೆಯ ಕೊನೆಗಳಲ್ಲಿಯೂ ದುಪಟಿ ಬಟ್ಟೆಗಳಲ್ಲಿಯೂ ಗಂಟು ಹಾಕಿಕೊಂಡು ಬಂದಿದ್ದ ಸುವರ್ಣಪುಷ್ಪಗಳನ್ನು ಕಸುಕೊಂಡು, ಒಳಕ್ಕೆ ಹೋಗಿ, ತಾರಾಡುತ್ತಾ, ಮುನಿಸಿಗುಮಾಸ್ತೆಯವರಿಗೆ ಕಟ್ಟಿಗೆ ಸಪ್ಲೈಮಾಡುತ್ತೇನೆಂದು ಮಾತುಕೊಟ್ಟು, ಸುವರ್ಣಪುಷ್ಪಗಳನ್ನು ತಾವು ನೈವೇದ್ಯಮಾಡಿಕೊಂಡು ಹೊರಕ್ಕೆ ಬಂದು,—"ನಾನು ಒಳಕ್ಕೆ ಹೋದದ್ದಕ್ಕೆ ಏನುಫಲ! ನಿಮ್ಮಿಂದ ಐವತ್ತು ರೂಪಾಯಿಗಳನ್ನು ನನ್ನ ಕೈಯಿಂದ ಕಳೆಕೊಂಡದ್ದಾಯಿತು, ಇಗೋ ನಿಮ್ಮ ಆರ್ಡರನ್ನು ಮಾಡಿಸಿದ್ದೇನೆ" ಎಂದು ಮಹಾಕೋಪದಿಂದ ದಪ್ತರವನ್ನು ಕೌಂಕುಳಲ್ಲಿ ಇರುಕಿಕೊಂಡು ಹೊರಡುವ ಈ ಶಾನುಭೋಗರನ್ನು ತಾಯಿಯೆಂದು ಕರೆಯುವುದು ಹೇಗೆ? ಚಿಟ್ಟಲಿಗಳು ತಮ್ಮ ಕಡೆಗೆ ಎಳೆದುಕೊಳ್ಳುವ ಮರಳಿನ ರಾಶಿಯಂತೆ ಇವರು ಧನರಾಶಿಯನ್ನು ಮಾಡಿ, ಅದನ್ನು ಹೂಣಲು ಪ್ರಯತ್ನಿಸ ಹೋಗಿ, "ಅನ್ಯಾಯೇನಾರ್ಜಿತಂ ದ್ರವ್ಯಂ ಅಸದ್ಭಾಳಂವಿನಶ್ಯತಿ" ಎಂಬ ಗ್ರಾಮ್ಯಗಾಥೆಯಂತೆ ಮೋಸಕ್ಕೆ ತಕ್ಕ ಫಲವನ್ನನುಭವಿಸಿ, ರೈತರ ಮನೆಯರಾಗೀ ಕಾಳಿಗೆ ಎದುರುನೋಡಬೇಕಾಗುವ ಇವರನ್ನು, ಖಜಾನೆಗಳನ್ನು ಗುದ್ದಲಿಸುವ ದೊಡ್ಡ ಹೆಗ್ಗಣಗಳೆಂದು ಯಾರುತಾನೇ ಕರೆಯದಿರುವರು? ಈ ಸ್ಥಳದ ತಾಯಿಯಲ್ಲಿರುವ ಕಪಟದಗಂಟನ್ನು ಬಿಚ್ಚಲು ಯಾರು ಸಮರ್ಥರೋ ತಿಳಿಯದು. ಈ ಗಂಟಿಗೆ ಪಾರ್ವತಿಯು ಅರ್ಜುನನಿಗೆ ಉಪದೇಶಮಾಡಿಕೊಟ್ಟ ಅಂಜನಾಸ್ತ್ರದ ಮಂತ್ರವು ಉಪದೇಶವಾದಂತೆ ತೋರುವುದು. ಶೇಕದಾರರೇ ಮೊದಲ್ಗೊಂಡು ದಿವಾನರವರೆಗೂ ಇರುವ ಆಫೀಸರೆಲ್ಲರೂ ಈ ಗಂಟಿನ ಪ್ರಭಾವವನ್ನು ಕಂಡರಿಯದಿರರೆಂಬುದನ್ನು ನಾನು ಕೈಯೆತ್ತಿ ಹೇಳುವೆನು. ಅಂಜನಾಸ್ತ್ರದ ಮಂತ್ರಗಾರನೇ ಅದರ ಮರ್ಮವನ್ನು ತಿಳಿದವನು. ಓ! ತಿಮ್ಮರಸಪ್ಪನವರೇ! ನೀವು ಹೇಳಿರತಕ್ಕದ್ದೇನೋ ನ್ಯಾಯ, ಕಾಲ, ದೇಶ, ವರ್ತಮಾನಗಳನ್ನು ಬಲ್ಲ ಇವರು ಇನ್ನು ತಮ್ಮ ಕೈಯನ್ನು ಎತ್ತಿ ಕೂಗಿಕೊಳ್ಳುವುದು ಧರ್ಮವಲ್ಲವು. ಹಗಲು ಕಂಡ ಬಾವಿಯಲ್ಲಿ ರಾತ್ರಿ ಯಾರುತಾನೇ ಬೀಳುವರು? ನಮ್ಮ ಮಹಾಪ್ರಭುಗಳವರು ಸೂರ್ಯಕಿರಣವು ಎಲ್ಲಾ ಸ್ಥಳವನ್ನೂ ಎಡೆಬಿಡದೆ ಆವರಿಸಿರುವಂತೆ ವಿದ್ಯೆಯ ಬಿತ್ತವನ್ನು ಬಿತ್ತಿ ಪ್ರಕಾಶವನ್ನುಂಟುಮಾಡಿರುವರು. ಆ ಬೆಳಕಿನಲ್ಲಿ ಜೀವನೋಪಾಯವನ್ನು ಹುಡುಕಿಕೊಂಡು ಜೀವಿಸಲಿಕ್ಕೆ ಯಾರೊಬ್ಬರಿಗೂ ಸರ್ವಸ್ವಾತಂತ್ರ್ಯವುಂಟು. ನಾನು ನೀನು ಎಂಬ ಭೇದಭಾವನೆಯು ಉಂಟಾದುದರಿಂದಲ್ಲವೇ ಬ್ರಾಹ್ಮಣ ಬ್ರಾಹ್ಮಣೇತರರೆಂಬ ಎರಡು ತ್ರಾಸುಗಳು ಸಜ್ಜನರ ಕೈಗೆ ಸಿಕ್ಕಿ ತೂಗಾಡುತ್ತಿರುವುದು? ಬ್ರಾಹ್ಮಣಾರ್ಥವನ್ನು ತಿಳಿದು ಸರ್ವಸಮದೃಷ್ಟಿಯುಳ್ಳವರಾಗಿ ಚೈತನ್ಯಹೀನರಾದವರನ್ನು ಮೇಲಕ್ಕೆತ್ತಿ ಉದ್ಧರಿಸಿ ಅನುಸರಿಸತಕ್ಕ ತಾಯಿಯ ನಿಜಾರ್ಥವನ್ನು ಸಾರ್ಥಕಗೊಳಿಸಿ ರಾಜ್ಯವೆಂಬ ರಥವು ಮುಂದೆ ಸಾಗುವುದಕ್ಕೆ ಪಾತವನ್ನು ಹಿಡಿವಳಿಯುವ ಅನೇಕರೊಳಗೆ ನಾನೊಬ್ಬನೆಂದು ಭಾವಿಸಿದ ಹೊರತು ಪೂಜ್ಯಭಾವವು ದೊರಕಲಾರದು.

ಪ್ರಚಂಡವಿಶ್ವಾಸ.

ಚೆನ್ನಪಟ್ಟಣದ ಗದ್ದಲ.

ಅಯ್ಯಾ ! ತಾ|| 18-11-1921 ರ ಸಾಧ್ವೀ ಪತ್ರಿಕೆಯನ್ನು ನಾನು ನೋಡಲಾಗಿ ಚೆನ್ನಪಟ್ಟಣದ ತಾಲ್ಲೂಕ್ ಅಮಲ್ದಾರರವರಾದ ಮ|| ಸಿದ್ಧರಾಮಪ್ಪನವರ ಮೇಲೆ ಬರೆದಿರುವ ದೋಷಾರೋಪಣೆಗಳು ಬಹಳ ಆಶ್ಚರ್ಯವನ್ನು ಉಂಟುಮಾಡುತ್ತಲಿವೆ. ಅಲ್ಲದೆ ಸಾಧ್ವೀಪತ್ರಿಕೆಯು ಯಾವಾಗಲೂ ಬ್ರಾಹ್ಮಣೇತರರನ್ನು ದೂರುತ್ತಿರುವುದೇ ಅದರ ಮುಖ್ಯ ಉದ್ದೇಶವೆಂಬುದಕ್ಕೆ ಇದು ಒಂದು ದೃಷ್ಟಾಂತವಾಗಿದೆ.

ಆಕ್ಟ್ರಾಯಿ ಮುತ್ಸದ್ದಿ ಸುಮಾರು ಐವತ್ತುವರ್ಷದ ನಂಜುಂಡಯ್ಯ ಎಂಬುವರು ಮೊದಲು ಒಂದಾರಂಗುಪ್ಪೆ ಎಂಬ ಗ್ರಾಮಕ್ಕೆ ಶಾನುಭೋಗರಾಗಿದ್ದು, ಈಗ್ಗೆ ಸುಮಾರು ಎರಡುವರ್ಷದಲ್ಲಿ ಈ ಚೆನ್ನಪಟ್ಟಣದ ಮ್ಯುನಿಸಿಪಾಲಿಟಿಗೆ ಹನ್ನೆರಡುರೂಪಾಯಿ ತಲಬಿನ ಬಿಲ್‌ಕಲೆಕ್ಟರು ಎಂಬ ಕೆಲಸಕ್ಕೆ ನೇಮಿಸಲ್ಪಟ್ಟಾಗಲೇ ಇವರಿಗೆ ಈ ಟರ್ಮ್ ಕೆಲಸವನ್ನು ಕೊಡಕೂಡದೆಂದೂ ಈ ಕೆಲಸಕ್ಕೆ ನಾವುಗಳು ಹಕ್ಕುದಾರರೆಂದೂ ಮೊದಲಾಗಿ ಈ ಟರ್ಮ್ ಶ್ಯಾನುಭೋಗರುಗಳು ಅರ್ಜಿಮೂಲಕ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿಕೊಂಡಿದ್ದರು. ಅನಂತರ ಸ್ವಲ್ಪದಿವಸದಲ್ಲಿಯೇ ಇವರನ್ನು ಇದೇ ತಲಬಿನ ಮೇಲೆ ಆಕ್ಟ್ರಾಯಿ ಮುತ್ಸದ್ದಿ ಕೆಲಸಕ್ಕೆ ನೇಮಕಮಾಡಿಕೊಂಡರು. ಇವರ ಕಾಲದಲ್ಲಿ ಟರ್ಮ್ ಮೊಹತರ್ಫಾ ಬಾಕಿಯು ಬಹಳವಾಗಿ ನಿಂತುಹೋಗಿದ್ದುದರಿಂದಲೂ ಆಕ್ಟ್ರಾಯಿ ಉತ್ಪತ್ತಿ ಬಹಳಮಟ್ಟಿಗೆ ಕಡಮೆಯಾಗಿದ್ದುದರಿಂದಲೂ ಮ್ಯುನಿಸಿಪಾಲಿಟಿ ಮೀಟಿಂಗಿನಲ್ಲಿ ಚರ್ಚೆನಡೆಯುತ್ತಾ ಇದ್ದದಿವಸ ಸದರಿ ಮೀಟಿಂಗಿಗೆ ಹಾಲಿ ನಂಜುಂಡಯ್ಯನವರೇ ಹಾಜರಾಗಿ ತಮಗೆ ಸಲ್ಲುತ್ತಿರುವ ತಲಬು ಈ ದುರ್ಭಿಕ್ಷಕಾಲದಲ್ಲಿ ಜೀವನಕ್ಕೆ ಸಾಲದೆಂದೂ, ಹೆಚ್ಚಾಗಿ ಸಂಬಳವು ದೊರೆಯುವಂತೆ ಮಾಡಿಕೊಟ್ಟಲ್ಲಿ ನಾನು ಹಗಲೂ ರಾತ್ರಿಯೂ ಶ್ರಮಪಟ್ಟು ಮೊಹತರ್ಫಾ ಬಾಕಿನಿಂತಿರುವ ವಿಚಾರದಲ್ಲಿ ಮಾಹೆಯಾನಾ ಒಂದುಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ವಸೂಲಿಮಾಡಿಕೊಡುವುದಾಗಿಯೂ ಆಕ್ಟ್ರಾಯಿ ಉತ್ಪತ್ತಿಯನ್ನು ಬಹಳಮಟ್ಟಿಗೂ ಅಭಿವೃದ್ಧಿಪಡಿಸಿಕೊಡುತ್ತೇನೆಂದೂ ಕೇಳಿಕೊಂಡದ್ದರ ಮೇಲೆ ಮೀಟಿಂಗಿನಲ್ಲಿ ಯೋಚಿಸಿ ಇವರು ಮಾಡಬಹುದೆಂಬ ನಂಬಿಕೆಯಮೇಲೆ ಆಗ್ಗೆ ಖಾಲಿಯಿದ್ದ ಮಾಹೆಯಾನಾ ಇಪ್ಪತ್ತುರೂಪಾಯಿ ಸಂಬಳದ ಆಕ್ಟ್ರಾಯಿ ಸೂಪರ್‌ವೈಜರ್ ಎಂಬ ಕೆಲಸವನ್ನು ಅಜಮಾಯಿಷಿ ತರೀಖ್ ಕೊಟ್ಟಿದ್ದರು. ಸುಮಾರು ಒಂದುವರ್ಷದ ವರೆಗೂ ಪರೀಕ್ಷಣೆಮಾಡಿ ನೋಡಿದಾಗ್ಯೂ, ಕೂಡ ಇವರು ಮಾಡಿದ ಮೊಹತರ್ಫಾ ಬಾಕಿ ವಸೂಲಿಯೂ ಆಕ್ಟ್ರಾಯಿ ಉತ್ಪತ್ತಿಯೂಸಹ ಸೇರಿ ಇವರ ಸಂಬಳಕ್ಕೆ ಸಾಲದೇಹೋಯಿತು. ಆಗ್ಗೆ ಅಮಲ್ದಾರರವರಾಗಿದ್ದ ಮ|| ಕೃಷ್ಣರಾಯರ ಕಾಲದಲ್ಲಿಯೇ ಮ್ಯುನಿಸಿಪಾಲಿಟಿ ಮೀಟಿಂಗಿನಲ್ಲಿ ಚರ್ಚಿಸಿ ಈ ನಂಜುಂಡಯ್ಯನವರು ಈ ಕೆಲಸಕ್ಕೆ ಸುತರಾಂ ಲಾಯಕ್ಕಲ್ಲವೆಂದೂ ಸರಿಯಾದ ಬೇರೆ ಇಸಂ ಚುನಾಯಿಸಿಕೊಂಡು ಕೂಡಲೇ ಇವರನ್ನು ಕೆಲಸದಿಂದ ವಜಾಮಾಡಬೇಕೆಂದೂ ಸದರಿ ಮೀಟಿಂಗಿನಲ್ಲಿಯೇ ತೀರ್ಮಾನಮಾಡಿದ್ದರು. ಆಗ್ಗೆ ಇದ್ದ ಅಮಲ್ದಾರರವರೇ ಈ ಕೆಲಸಕ್ಕೆ ಸರಿಯಾದ ಏರ್ಪಾಡುಮಾಡಿಕೊಳ್ಳಬಹುದಾಗಿದ್ದರೂ, ತಾವು ಕೂಡಲೇ ಪೆನ್ಷನ್ ಹೊಂದಿ ಹೋಗುವವರಾಗಿದ್ದುದರಿಂದ ಅಯ್ಯೋ! ಬಡಬ್ರಾಹ್ಮಣ! ಮುಂದೆ ಬರತಕ್ಕ ಅಮಲ್ದಾರರವರು ಈ ಕೆಲಸದ ವಿಷಯದಲ್ಲಿ ಅನುಕೂಲವಾದ ಏರ್ಪಾಡುಮಾಡಿಕೊಳ್ಳಲಿ ಎಂದು ಅಭಿಪ್ರಾಯಪಟ್ಟಿದ್ದಂತೆ ಕಂಡುಬರುತ್ತದೆ. ಮಿ|| ಸಿದ್ಧರಾಮಪ್ಪನವರು ಈ ತಾಲ್ಲೋಕು ಛಾರ್ಜ್ ವಹಿಸಿದ ತರುವಾಯ ಸದರಿ ನಂಜುಂಡಯ್ಯನವರ ಅಶ್ರದ್ಧೆಯ ಕೆಲಸವನ್ನು ಕಂಡುಹಿಡಿದು, ಹಿಂದೆ ಆಗಿದ್ದ ಮ್ಯುನಿಸಿಪಾಲಿಟಿ ಮೀಟಿಂಗಿನ ತೀರ್ಮಾನದಂತೆ ಸದರಿ ಕೆಲಸಕ್ಕೆ ಇಂಗ್ಲೀಷ್ ಸ್ಕೂಲ್‌ಫೈನಲ್‌ವರೆಗೆ ವಿದ್ಯಾಭ್ಯಾಸಂಗಮಾಡಿದ್ದ ಶಿವರಾಮಯ್ಯ ಎಂಬವರನ್ನು ನೇಮಿಸಿಕೊಂಡು, ನಂಜುಂಡಯ್ಯನವರನ್ನು ಮೊದಲಿದ್ದಂತೆ ಬಿಲ್‌ಕಲೆಕ್ಟರ್ ಕೆಲಸಕ್ಕೆ ಹೋಗಬೇಕೆಂದು ಅಪ್ಪಣೆಕೊಡಿಸಿದರು. ನಂಜುಂಡಯ್ಯನವರು ತಮ್ಮ ಖಾಯಂಕೆಲಸದ ಮೇಲೆ ಹಾಜರಾಗಿ ಸರ್ಕಾರಿ ಕೆಲಸವನ್ನು ಮಾಡದೆ, ರಜಾತಗೆದುಕೊಂಡು ಇರುತ್ತಾರೆಯೇ ಹೊರತು ಅವರನ್ನು ನೌಕರಿಯಿಂದ ತಗೆದುಹಾಕಿರುವುದಿಲ್ಲ. ಅಮಲ್ದಾರರವರು ಈರೀತಿ ಅರೇಂಜ್‌ಮೆಂಟು ಮಾಡಲು ಸಾವಕಾಶವಾಗಿದ್ದಪಕ್ಷದಲ್ಲಿ ಸರ್ಕಾರಕ್ಕೆ ತುಂಬಾ ನಷ್ಟವಾಗುತ್ತಿತ್ತು. ಈಸ್ಥಿತಿಯಲ್ಲಿದ್ದ ಈ ಮ್ಯುನಿಸಿಪಾಲಿಟಿ ಕೆಲಸಕ್ಕೆ ಶಿವರಾಮಯ್ಯನವರು ಬಂದು ಬಹಳ ಶ್ರದ್ಧೆಯಿಂದ ಹಗಲೂ ರಾತ್ರಿಯೂ ಈ ಟವನ್ನಿನಲ್ಲೆಲ್ಲಾ ಸುತ್ತಿ ಶ್ರಮಪಟ್ಟು ಮಾಡುತ್ತಿರುವ ಕೆಲಸದಿಂದ ಈ ಮ್ಯುನಿಸಿಪಾಲಿಟಿಯು ಈಗ ತಾನೇ ಚೇತರಿಸಿಕೊಳ್ಳುತ್ತಾ ಇರುವುದು ಇಲ್ಲಿನ ಜನರಿಗೆ ತಿಳಿದ ವಿಷಯವೇ ಆಗಿದೆ. ಸದರಿ ಶಿವರಾಮಯ್ಯನವರ ವಿದ್ಯೆಗೂ ಅವರು ಮಾಡುತ್ತಿರುವ ಸರ್ಕಾರಿಕೆಲಸದ ಮೆಹನತ್ತಿಗೂ ಅವರಿಗೆ ಈ ಕೆಲಸವನ್ನು ಕೊಟ್ಟಿರುವುದು ಅತಿಶಯವಲ್ಲ. ಈ ನಂಜುಂಡಯ್ಯನವರು ತಮಗೆ ಬರುತ್ತಿದ್ದ ಆದಾಯವು ತಪ್ಪಿಹೋಯಿತಲ್ಲಾ ಎಂದು ಇಲ್ಲಿನ ಶ್ಯಾನುಭೋಗರನ್ನೆಲ್ಲಾ ಎಬ್ಬಿಸಿ ಮುಖ್ಯಸ್ಥರಾಗಿರುವಂತೆ ಕಂಡುಬರುತ್ತದೆ.

ಲೋಕಲ್‌ಫಂಡು ಅಟೆಂಡರನ್ನ ರಿಡ್ಯೂಸ್‌ಮಾಡಿ ದೊಡ್ಡಯ್ಯ ಎಂಬುವರಿಗೆ ಆ ಕೆಲಸವನ್ನು ಕೊಟ್ಟಿರುತ್ತಾರೆಂದು ಬರೆದಿರುವುದು ಸುಳ್ಳು. ಲೋಕಲ್‌ಫಂಡು ಅಟೆಂಡರ್ ಕೆಲಸವು ಈ ತಾಲ್ಲೂಕಿಗೆ ಹೊಸದಾಗಿ ಸ್ಯಾಂಕ್ಷನ್ ಆಗಿ ಬಂದ 2-3 ವರ್ಷದಲಾಗಾಯ್ತು ಹಿಂದೆ ಇದ್ದ ಅಮಲ್ದಾರರುಗಳು ಆ ಸ್ಥಾನಕ್ಕೆ ಯಾವ ನೌಕರನನ್ನೂ ಖಾಯಂ ಆಗಿ ಮೊಕರರ್ ಮಾಡಿಕೊಂಡಿರಲಿಲ್ಲ. ಹಂಗಾಮಿಯಾಗಿ ಕೆಲವರನ್ನು ನೇಮಿಸಿಕೊಳ್ಳುವುದು, ಕೆಲವುದಿವಸದಮೇಲೆ ಅವರನ್ನು ತೆಗೆದುಹಾಕುವುದು, ಈರೀತಿಯಾಗಿ ನಡೆಸಿಕೊಂಡುಬಂದು, ಯಾವ ಪ್ಯಾಸೂಮಾಡದೆ ಇರುವ 7 ರೂಪಾಯಿ ತಲಬಿನ ಖಜಾನೆಗೊಲ್ಲರ್ ಕೆಲಸದಲ್ಲಿದ್ದ ಕೃಷ್ಣಯ್ಯಂಗಾರ್ ಎಂಬುವರನ್ನು ಹಂಗಾಮಿಯಾಗಿ ನೇಮಿಸಿಕೊಂಡಿದ್ದರು. ಇವರಿಗೆ ಕೆಲಸಮಾಡಲಿಕ್ಕೆ ಚೆನ್ನಾಗಿ ತಿಳುವಳಿಕೆ ಸಾಲದ್ದರಿಂದ ಸರ್ಕಾರಿಕೆಲಸವು ಕಾಲಕ್ಕೆ ಸರಿಯಾಗಿ ನಡೆಯದೆ ತುಂಬಾ ಅನನುಕೂಲವಾಗಿತ್ತು. ಇದನ್ನು ನಮ್ಮ ಅಮಲ್ದಾರರವರು ಯೋಚನೆಮಾಡಿ, ಸದರಿ ಕೃಷ್ಣಯ್ಯಂಗಾರರನ್ನು ಗೊಲ್ಲರ್ ಕೆಲಸಕ್ಕೆ ವಾಪಸ್‌ಕಳುಹಿಸಿ, ಇದೇ ತಾಲ್ಲೂಕುಕಚೇರಿಯಲ್ಲಿ 4-5 ವರ್ಷಗಳಿಂದ ಗುಮಾಸ್ತೆ ಕೆಲಸವನ್ನು ಬಹಳಚಟುವಟಿಕೆಯಾಗಿ ಮಾಡಿಕೊಂಡು ಮೊದಲಿದ್ದ ಅಮಲ್ದಾರರುಗಳಿಂದಲೂ ಮತ್ತು ದೊಡ್ಡ ಆಫೀಸರುಗಳಿಂದಲೂ ಒಳ್ಳೇಹೆಸರು ಪಡೆದಿದ್ದು ಮಾಹೆಯಾನಾ ಇಪ್ಪತ್ತುರೂಪಾಯಿ ಸಂಬಳ ತಗೆದುಕೊಳ್ಳುತ್ತಾ ಇದ್ದ—ಎಕನಾಮಿಕ್ ಇಲಾಖೆಯು ಅಬಾಲಿಷ್ ಆದ ಪ್ರಯುಕ್ತ ಕೆಲಸವು ತಪ್ಪಿಹೋಗಿ ತೊಂದರೆಪಡುತ್ತಾ ಇದ್ದ ಇಂಗ್ಲೀಷ್ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಫೇಲ್ ಆಗಿರುವ ರಂಗಸಾಮಯ್ಯಂಗಾರ್ ಎಂಬುವರನ್ನು ತಾವೇ ಕರಸಿ ಮೇಲ್ಕಂಡ ಅಟೆಂಡರ್ ಕೆಲಸಕ್ಕೆ ಮೊಕರರುಮಾಡಿ, ಸರ್ಕಾರಿ ಕೆಲಸವು ಕ್ರಮವಾಗಿ ನಡೆಯುವಂತೆ ಮಾಡಿದರು. **ಅಮಲ್ದಾರರವರ ಈ ಏರ್ಪಾಡು ತಪ್ಪೆ? ಬ್ರಾಹ್ಮಣರನ್ನು ನಿರ್ಮೂಲಮಾಡುವುದಕ್ಕೆ ಈ ತಾಲ್ಲೂಕಿಗೆ ದಯಮಾಡಿಸಿರುತ್ತಾರೆಂದು ಬರೆದಿರುವ ಬರವಣಿಗೆಯು ನಿಜವಾಗಿದ್ದ ಪಕ್ಷದಲ್ಲಿ ಬ್ರಾಹ್ಮಣರಾದ ರಂಗಸಾಮಯ್ಯಂಗಾರ್ಯರನ್ನು ತಾವೇ ಕರಿಸಿ ಪ್ರೋತ್ಸಾಹಕೊಟ್ಟು ನೌಕರಿಕೊಡುತ್ತಾ ಇದ್ದರೆ? ಈ ಕೆಲಸಕ್ಕೆ ಅರ್ಹರಾದ ಬ್ರಾಹ್ಮಣೇತರರು ಅನೇಕರಿದ್ದಾಗ್ಯೂ ಅವರಿಗೆ ಕೊಡದೆ ಬ್ರಾಹ್ಮಣರಿಗೇನೇ ಕೊಟ್ಟಿರುವ ಭಾಗದಲ್ಲಿ ಬ್ರಾಹ್ಮಣನೌಕರರನ್ನು ಕಿತ್ತುಹಾಕಿ ಆ ಸ್ಥಳಕ್ಕೆ ಬ್ರಾಹ್ಮಣೇತರರನ್ನು ತಂದಿಡುತ್ತಾರೆಂದು ಬರೆದಿರುವ ಬರವಣಿಗೆಯು ಸುಳ್ಳಲ್ಲವೆ ? ಇದು ಅಮಲ್ದಾರರಮೇಲೆ ದೋಷಾರೋಪಣೆ ಮಾಡುವುದಕ್ಕೋಸ್ಕರವಾಗಿ ಕಲ್ಪಿಸಿಕೊಂಡು ಆಕ್ರೋಶದಿಂದ ಬರೆದಿರುವ ಬರವಣಿಗೆಯೆಂದು ಎಲ್ಲರಿಗೂ ವ್ಯಕ್ತಪಡುವದಿಲ್ಲವೆ ?**

ಈ ಚೆನ್ನಪಟ್ಟದ ತಾಲ್ಲೂಕಿನಲ್ಲಿ ಆಗಾಗ್ಗೆ ಖೂನಿ, ದರೋಡೆ ಮೊದಲಾದ ದುಷ್ಕೃತ್ಯಗಳು ನಡೆಯುತ್ತಾ ಗ್ರಾಮಾಂತರಗಳಲ್ಲಿ ರೈತರು ಐಕಮತ್ಯವಿಲ್ಲದೆ ಪಾರ್ಟಿಗಳನ್ನು ಮಾಡಿಕೊಂಡು ಪಾಪಪುಣ್ಯಾದಿಗಳನ್ನು ಅರಿಯದೆ ಕ್ರಿಮಿನಲ್ ಮತ್ತು ಸಿವಲ್‌ಕೋರ್ಟುಗಳಲ್ಲಿ ವಿಶೇಷವಾಗಿ ವ್ಯಾಜ್ಯಗಳನ್ನು ನಡೆಸುತ್ತಾ, ಕಷ್ಟಪಟ್ಟು ಸಂಪಾದಿಸಿದ ದ್ರವ್ಯವನ್ನು ನಿಷ್ಕಾರಣವಾಗಿ ಕಳೆದುಕೊಂಡು ಅಲೆಯುತ್ತಾ ಇರುವುದು ಸರಿಯಷ್ಟೆ. ಮ|| ಸಿದ್ಧರಾಮಪ್ಪನವರು ಗ್ರಾಮಾಂತರಗಳಿಗೆ ಸವಾರಿ ದಯಮಾಡಿಸಿದಾಗ್ಗೆ ಅಲ್ಲಿಯ ರೈತರ ಅಸಮಂಜಸವಾದ ನಡೆವಳಿಕೆಗಳನ್ನು ನೋಡಿ, ನೀವು ಪರಸ್ಪರ ವಿರೋಧಸ್ಥರಾಗಿ ಕೆಟ್ಟ ಕೃತ್ಯಗಳಲ್ಲಿ ಪ್ರವೇಶಮಾಡುವುದು ನ್ಯಾಯವಲ್ಲವೆಂದೂ, ಈ ರೀತಿ ನಡೆಯುವುದಕ್ಕೆ ನೀವು ವಿದ್ಯಾವಿಹೀನರಾಗಿರುವುದೇ ಮುಖ್ಯಕಾರಣವೆಂದೂ, ವಿದ್ಯಾವಂತರಾಗಿ ಉತ್ತಮವಾದ ಗ್ರಂಥಗಳನ್ನು ಓದಿದ್ದಲ್ಲಿ ಪಾಪಪುಣ್ಯಾದಿಗಳು ತಿಳಿದು ನಿಮ್ಮ ಕೆಟ್ಟ ನಡೆವಳಿಕೆಗಳನ್ನೆಲ್ಲಾ ಬಿಟ್ಟು ಸನ್ಮಾರ್ಗದಲ್ಲಿ ನಡೆದುಕೊಂಡು ನೀವು ಕಷ್ಟಪಟ್ಟು ಸಂಪಾದಿಸಿದ ದ್ರವ್ಯವನ್ನು ದಾನಧರ್ಮಪರೋಪಕಾರಗಳಿಗೆ ವೆಚ್ಚಮಾಡಿಕೊಂಡು ಸುಖಪಡುತ್ತಾ ಇದ್ದಿರೆಂದೂ, ಈಗಿನ ನಿಮ್ಮ ನಡೆವಳಿಕೆಯು ಸರಿಯಾಗಿಲ್ಲದ ಪ್ರಯುಕ್ತ ನಿಮ್ಮ ಮಾರ್ಗವನ್ನೇ ನಿಮ್ಮ ಮಕ್ಕಳೂ ಕಲಿಯುತ್ತಾರೆಂದೂ, ಅವರನ್ನಾದರೂ ವಿದ್ಯಾವಂತರನ್ನಾಗಿ ಮಾಡಿ ವ್ಯವಸಾಯ ಕೈಗಾರಿಕೆ ಕೆಲಸಗಳನ್ನು ಉತ್ತಮತರದಲ್ಲಿ ಅಭಿವೃದ್ಧಿಪಡಿಸಿ ದೇಶಾಭಿವೃದ್ಧಿಗೆ ಅವಕಾಶವನ್ನು ಉಂಟುಮಾಡುವುದು ಯುಕ್ತವೆಂದೂ, ನಿಮ್ಮ ಮಕ್ಕಳ ವಿದ್ಯಾಭಿವೃದ್ಧಿಗೆ ನಿಮ್ಮ ಸ್ಥಳದಲ್ಲಿ ಅನುಕೂಲವಿಲ್ಲದ ಪಕ್ಷದಲ್ಲಿ ನಿಮ್ಮ ಮತಸ್ಥರು ಸ್ಥಾಪಿಸಿರುವ ಸಂಘಗಳಿಗೆ ನಿಮ್ಮ ಮಕ್ಕಳನ್ನು ಕಳುಹಿಸಿಕೊಟ್ಟು ಅನ್ಯಾಯವಾಗಿ ನೀವು ಖರ್ಚುಮಾಡುತ್ತಿರುವ ಹಣವನ್ನು ನಿಮ್ಮ ಮಕ್ಕಳ ವಿದ್ಯಾಭಿವೃದ್ಧಿಗೋಸ್ಕರ ಖರ್ಚುಮಾಡಿದರೆ ಮುಂದೆ ನಿಮಗೆ ಸಾರ್ಥಕವಾಗುವುದಿಲ್ಲವೇ ಎಂದೂ ಹೇಳಿದ ಬುದ್ಧಿವಾದವು ಒಕ್ಕಲಿಗರ ಸಂಘಕ್ಕೆ ಚಂದಾ ಎತ್ತಿದಂತೆ ಆಯಿತೆ? ಅಮಲ್ದಾರರುಗಳು ಗ್ರಾಮಾಂತರಕ್ಕೆಹೋಗಿ ರೈತರ ಕಷ್ಟಸುಖಗಳನ್ನು ವಿಚಾರಮಾಡಿ ಅವರು ಒಳ್ಳೇ ನಡತೆಯಲ್ಲಿ ಪ್ರವರ್ತಿಸುವಂತೆ ಬುದ್ಧಿವಾದಗಳನ್ನು ಹೇಳಿ ಉತ್ತಮಸ್ಥಿತಿಗೆ ತರುವುದು ಅಧಿಕಾರಿಗಳ ಕರ್ತವ್ಯವಲ್ಲವೆ ?

ತಾಲ್ಲೂಕುಕಚೇರಿಯಲ್ಲಿ ಕೆಲವು ದಿನಗಳಿಂದಲೂ ರಿಕಾರ್ಡುಗಳು ಜಾಗ್ರತೆ ಫೈಸಲ್ ಆಗದೆ ಅರಿಯರ್ಸ್ ನಿಂತುಹೋಗಿ ಗಲಾಟೆಗೆ ಅವಕಾಶವಾಗಿದೆ. ಅರಿಯರ್ಸ್ ನಿಲ್ಲಿಸಿಕೊಂಡಿರುವ ನೌಕರರಿಗೆ ಇನ್ನುಮುಂದೆ ಈ ರೀತಿ ನಿಲ್ಲಿಸಿಕೊಳ್ಳಬಾರದೆಂದೂ, ಶ್ರಮಪಟ್ಟು ನಿಮ್ಮ ನಿಮ್ಮ ಕೆಲಸಗಳನ್ನೆಲ್ಲಾ ಜಾಗ್ರತೆಯಾಗಿ ಪೂರೈಸಿಕೊಂಡು ಸರ್ಕಾರಿ ಕೆಲಸಕ್ಕೆ ಯಾವ ಅಡಚಣೆಯೂ ಉಂಟಾಗದಂತೆ ಮಾಡಿಕೊಂಡು ಬರಬೇಕೆಂದೂ ಅಪ್ಪಣೆಮಾಡಿದ್ದು ನೌಕರರಿಗೆ ಹಿಂಸೆಕೊಟ್ಟಂತಾಯಿತೆ? ತಾಲ್ಲೂಕು ಮಜಕೂರು ಜಮಾಬಂದಿ ನಡೆಯುವ ಸ್ಥಳಕ್ಕೆ ನಾನು ಹೋಗಿದ್ದೆನು. ಆ ದಿವಸ ೬-೭ಜನ ಶ್ಯಾನುಭೋಗರು ಮಾತ್ರ ಬಂದಿದ್ದರು. ಉಳಿದ ಶ್ಯಾನುಭೋಗರು ಯಾರು ಎಂಬುದೇ ಅಮಲ್ದಾರರಿಗೆ ಗೋಚರವಾಗಲಿಲ್ಲ. ಈ ಚನ್ನಪಟ್ಟಣದ ತಾಲ್ಲೂಕಿನಲ್ಲಿ ಕಂದಾಯದ ಬಾಕಿಯು ವಿಶೇಷವಾಗಿ ನಿಂತುಹೋಗಿರುವುದೆಂತಲೂ ಅದನ್ನು ಜಾಗ್ರತೆಯಿಂದ ಸುಲಭವಾಗಿ ವಸೂಲ್ಮಾಡಿಕೊಳ್ಳುವುದಕ್ಕೋಸ್ಕರ ಖಾತೆ ಖಿರದಿಯಲ್ಲಿರುವಂತೆ ಕುಳವಾರ್ ಬಾಕಿ ತಪ್ಸೀಲು ಪಟ್ಟಿಯನ್ನು ತಯಾರ್ಮಾಡಿಕೊಟ್ಟರೆ ಜಾಗ್ರತೆ ವಸೂಲ್ಮಾಡಬಹುದೆಂತಲೂ ಅಮಲ್ದಾರರು ಹೇಳಿ, ಬಾಕಿ ಪಟ್ಟಿ ತಯಾರ್ಮಾಡುವ ಕ್ರಮವನ್ನೂ ಸಹ ತೋರಿಸಿದರು. ಈ ಪಟ್ಟಿಯನ್ನು ಅನೇಕರು ನೋಡಲಾಗಿ "ಕಂದಾಯದ ಬಾಕಿ ವಸೂಲಾತಿಗೆ ಇದು ಸುಲಭವಾದ ಮಾರ್ಗವಾಗಿರುವುದು ಮಾತ್ರವೇ ಅಲ್ಲದೆ ಗ್ರಾಮಾಂತರಗಳಲ್ಲಿನ ಬಡ ರೈತರು ಯಾವವಿಧವಾದ ತಂಟೆತಕರಾರು ವ್ಯಾಜ್ಯಗಳಿಗೂ ಸಿಕ್ಕದೆ ನೆಮ್ಮದಿಯಾಗಿರುವುದಕ್ಕೆ ತುಂಬಾ ಅನುಕೂಲವಾಗಿದೆ. ಈ ಪಟ್ಟಿಯನ್ನು ಶ್ಯಾನುಭೋಗರು ಸುಲಭವಾಗಿ ತಯಾರ್ಮಾಡಬಹುದು. ಪಟೇಲ್ ಶ್ಯಾನುಭೋಗರು ಕಂದಾಯದ ಬಾಕಿ ವಸೂಲಿ ಕಾಲದಲ್ಲಿ ವಿಶೇಷ ಶ್ರಮಪಡಬೇಕಾದುದೂ ಇಲ್ಲ. ಈ ಪಟ್ಟಿಯಂತೆ ವಸೂಲಿಕ್ರಮವನ್ನು ನಡೆಸುವುದರಲ್ಲಿ ಸರ್ಕಾರಕ್ಕೂ ರೈತಾಪಿಜನಗಳಿಗೂ ತುಂಬಾ ಅನುಕೂಲವಾಗಿರುವುದು" ಎಂದು ಎಲ್ಲರೂ ಒಪ್ಪಿಕೊಂಡರು. ಶ್ಯಾನುಭೋಗರು ಮಾತ್ರ ಈ ಪಟ್ಟಿಯನ್ನು ನೋಡಿದ ಕೂಡಲೇ ಸತ್ಯದ ಮೇಲೆ ಮನಸ್ಸನ್ನು ನಿಲ್ಲಿಸದೆ, ರೈತರಿಂದ ಗೈರ್ ಮಾಮೂಲಾಗಿ ಸಂಪಾದಿಸಿಕೊಳ್ಳುತ್ತಿದ್ದುದರ ದುರಾಶೆಗೆ ಬಲಿಬಿದ್ದು, ತಮ್ಮ ನಡವಳಿಯು ಬಹಿರಂಗವಾಗುವುದಕ್ಕೆ ಅವಕಾಶವಾಯಿತಲ್ಲಾ ! ಎಂದೂ, ಹೇಗಾದರೂ ಮಾಡಿ ಇದನ್ನು ತಪ್ಪಿಸಬೇಕೆಂದೂ, ಎಲ್ಲರೂ ಒಟ್ಟಾಗಿ ಸೇರಿ, ಮಸಲತ್ ಮಾಡಿಕೊಂಡು, ಈ ಪಟ್ಟಿಯನ್ನು ತಯಾರ್ಮಾಡಲು ತಮ್ಮಿಂದ ಸಾಧ್ಯವಿಲ್ಲವೆಂದೂ, ಇದು ಮಾಮೂಲ್ ಇಲ್ಲವೆಂದೂ, ತಮ್ಮ ಅಭಿಪ್ರಾಯದಂತೆ ನಡೆಸದಿದ್ದರೆ ನಾವುಗಳೆಲ್ಲರೂ ಒಂದುವರ್ಷದ ರಜಾತಗೆದುಕೊಂಡು ಕೆಲಸವನ್ನು ಒಂದೇಸಲ ಬಿಟ್ಟರೆ ಸದರಿ ಕೆಲಸ ಮಾಡುವುದಕ್ಕೆ ಯಾರೂ ಸಿಕ್ಕದೇ ಇರುವಪ್ರಯುಕ್ತ ನಮ್ಮನ್ನೇ ಆಶ್ರಯಮಾಡುತ್ತಾರೆಂದೂ, ಆಗ್ಗೆ ನಮ್ಮ ಇಷ್ಟಾರ್ಥವು ನೆರವೇರುವುದೆಂದೂ, ಈ ಅಹಂಕಾರದಿಂದ ಸರ್ಕಾರದ ಹುಕುಮನ್ನು ಉಲ್ಲಂಘನೆಮಾಡಿ ರಜಾಕ್ಕೆ ರಿಪೋರ್ಟುಕೊಟ್ಟಂತೆ ತಿಳಿದುಬರುತ್ತದೆ. ಇವರುಗಳು ಸರ್ಕಾರದ ಹುಕುಮನ್ನು ಉಲ್ಲಂಘನೆ ಮಾಡಿದ ತಪ್ಪಿಗಾಗಿ ಇವರನ್ನು ಶಿಕ್ಷೆಮಾಡುವದಕ್ಕೆ ನಮ್ಮ ಅಮಲ್ದಾರರವರಿಗೇನೇ ಅಧಿಕಾರವಿದ್ದಾಗ್ಯೂ ಕೂಡ ಇವರ ನಡವಳಿಕೆಯ ವಿಷಯದಲ್ಲಿ ಮೇಲಕ್ಕೆ ಶಿಫಾರಸ್ ಬರೆದು ಇರುವುದನ್ನು ನೋಡಿದರೆ ಅಮಲ್ದಾರರವರು ತುಂಬಾ ದಯಾಳುಗಳೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಪ್ರಜೆಗಳಿಗೆ ಅನುಕೂಲ್ಯವನ್ನು ಕಲ್ಪಿಸಿಕೊಡುವುದು ಸರ್ಕಾರದವರ ಮುಖ್ಯೋದ್ದೇಶವಾಗಿರುವುದರಿಂದ ನಮ್ಮ ಅಮಲ್ದಾರರವರು ಗ್ರಾಮಾಂತರಗಳ ರೈತರ ಅನುಕೂಲಕ್ಕೋಸ್ಕರವಾಗಿ ಬಾಕಿಪಟ್ಟಿಯನ್ನು ಕೊಡಬೇಕೆಂದು ಕೇಳಿರುವುದು ತಪ್ಪೆ? ಕಂದಾಯವನ್ನು ಪಟೇಲನು ವಸೂಲ್ಮಾಡಬೇಕೆಂದೂ ಶ್ಯಾನುಭೋಗರು ಲೆಕ್ಕವಿಡಬೇಕೆಂದೂ ರೂಲ್ಸು ಇರುವಾಗ, ಇವರೇ ಸ್ವತಂತ್ರಿಸಿ ಕಂದಾಯವನ್ನು ವಸೂಲ್ಮಾಡುತ್ತಿರುವುದು ನ್ಯಾಯವೆ? ಗ್ರಾಮಾಂತರಗಳಲ್ಲಿ ಶ್ಯಾನುಭೋಗರು ರೈತರಿಗೆ ವ್ಯಾಜ್ಯಗಳನ್ನು ಕಲ್ಪಿಸಿಕೊಟ್ಟು, ಸದರಿ ವ್ಯಾಜ್ಯಗಳಲ್ಲಿ ತಾವು ಸೇರಿಕೊಂಡು, ದುಡ್ಡು ಸಂಪಾದನೆ ಮಾಡುತ್ತಿರುವುದೂ, ಕಂದಾಯದ ವಸೂಲಿಕಾಲದಲ್ಲಿ ರೈತರಿಂದ ತೆಗೆದುಕೊಂಡ ಹಣಕ್ಕೆ ಸರಿಯಾಗಿ ದಾಖಲೆಕೊಡದೆ ತಂಟೆಮಾಡುತ್ತಿರುವುದೂ, ಕಂದಾಯದಹಣ ತೆಗೆದುಕೊಂಡಮೇಲೆ ಅವರಿಗೆ ಕೊಡಬೇಕಾದ ಮಾಮೂಲ್ ಕೊಡಬೇಕೆಂದು ನಿರ್ಬಂಧಮಾಡುವುದೂ, ಮಸಿಕಾಣಿಕೆ ಕೊಡಬೇಕೆನ್ನುವುದೂ, ಖಾತೆಪಟ್ಟಿ ಮೊದಲಾದುವನ್ನು ಬದಲಾಯಿಸುವ ಕಾಲದಲ್ಲಿ ಲಂಚಕೇಳುವುದೂ, ಇವರು ಕೇಳಿದಂತೆ ರೈತರು ಲಂಚಗಳನ್ನು ಕೊಡದಿದ್ದರೆ ಬೇಹಕ್ಕುದಾರರಿಂದ ಅರ್ಜಿಹಾಕಿಸಿ ತೊಂದರೆಮಾಡುವುದೂ, ಇವೇ ಮೊದಲಾದ ನಾನಾಬಗೆಯ ಚತುರುಪಾಯದಿಂದ ದುಡ್ಡು ಕಸಿದು ತಿನ್ನುತ್ತಿರುವುದೂ ಎಲ್ಲರಿಗೂ ತಿಳಿದೇ ಇದೆ. ಈರೀತಿಯಾಗಿ ಸಂಪಾದನೆಮಾಡಿಕೊಳ್ಳುತ್ತಿದ್ದರೂ ಕೂಡ ತೃಪ್ತಿಹೊಂದದೆ ಹೊಟ್ಟೆಗೆ ಸಾಲದು ಇನ್ನೂ ಹೆಚ್ಚು ಮಾಡಿಕೊಡಿ ಎಂದು ಕೂಗಿಕೊಳ್ಳುತ್ತಿರುವುದು ಯಾರಿಗೆತಾನೇ ತಿಳಿಯದು?

ನಮ್ಮ ಅಮಲ್ದಾರರವರು ಕೇಳುವಂತೆ ಬಾಕಿ ಪಟ್ಟಿಯನ್ನು ಕೊಟ್ಟಲ್ಲಿ ಅವರ ಸಂಪಾದನೆ ನಿಂತುಹೋಗುವುದರಿಂದಲೂ, ರೈತರುಗಳಿಗೆ ಇವರು ಮಾಡುತ್ತಿದ್ದ ಮೋಸವು ಹೊರಬಿದ್ದು ಹೋಗುವುದರಿಂದಲೂ, ಸದರಿ ಪಟ್ಟಿಯನ್ನು ಕೊಡದೆ ತಕರಾರುಮಾಡುತ್ತಾರೆ. ತಾಲ್ಲೂಕು ಅಮಲ್ದಾರರು ಇಲ್ಲಿಯ ೬೦ ಸಾವಿರ ಪ್ರಜೆಗಳ ಅನುಕೂಲಕ್ಕೋಸ್ಕರ ಸರ್ಕಾರದಿಂದ ನೇಮಿಸಲ್ಪಟ್ಟಿದ್ದಾರೆಯೇ ಹೊರತು ೬೦ ಜನ ಶಾನುಭೋಗರಿಗೆ ಅನುಕೂಲ ಮಾಡುವದಕ್ಕೆ ಅಲ್ಲವಾದುದರಿಂದ ಅಮಲ್ದಾರರವರನ್ನು ಸುಮ್ಮನೆ ದೂರುವುದು ಯೋಗ್ಯವಲ್ಲ. ಈ ಶಾನುಭೋಗರ ಪೈಕಿ ಒಬ್ಬರು ಸರ್ಕಾರದ ಹಣವನ್ನು ತಿಂದುಹಾಕಿರುವುದರಿಂದ ಅವರನ್ನು ಶಿಕ್ಷೆಗೆ ಗುರಿಮಾಡಿರುವುದೇ ಶಾನುಭೋಗರ ನಂಬಿಕೆಗೆ ಉದಾಹರಣೆಯಾಗಿದೆ. ಮ|| ಸಿದ್ಧರಾಮಪ್ಪನವರು ಈ ಶಾನುಭೋಗರ ತಪ್ಪನ್ನು ಕಂಡುಹಿಡಿದಾಗ್ಯೂ ಕೂಡ ಕಾಣದವರಂತೆ ಅಯ್ಯೋ ಬಡಬ್ರಾಹ್ಮಣ ಎಂದು ಸುಮ್ಮನೆ ಇದ್ದರೆ ಇಂಥ ದೋಷಾರೋಪಣೆಯ ಬರವಣಿಗೆಗಳು ಬರುವುದಕ್ಕೆ ಅವಕಾಶವೇ ಆಗುತ್ತಿರಲಿಲ್ಲ. ದಧೀಚಿಮಹರ್ಷಿಯು ತನ್ನ ಶರೀರವನ್ನೇ ಕೊಯ್ದುಕೊಟ್ಟು ಪರರಿಗೆ ಉಪಕಾರವನ್ನು ಮಾಡಿರುವುದಾಗಿ ಬರೆದು ಬೋಧಿಸತಕ್ಕ ಜನರು, ನಿಸ್ಪೃಹರೂ ದೇಶಾಭಿಮಾನಿಗಳೂ ಆದಂಥ ಅಧಿಕಾರಿಗಳು ಅನ್ಯಾಯ ಅಧರ್ಮಗಳನ್ನು ನಿಲ್ಲಿಸಿ ಪ್ರಜೆಗಳಿಗೆ ಹಿತವನ್ನು ಮಾಡಿಕೊಡಲು ಪ್ರವರ್ತಿಸಿದ ಸಂದರ್ಭದಲ್ಲಿ, ತಮ್ಮವರು ಅನ್ಯಾಯಪ್ರವರ್ತಕರಾಗಿದ್ದರೂ ಅವರ ಅಧರ್ಮಾರ್ಜನೆಗೂ ಅಸುರಸಂಪತ್ತಿಗೂ ಈಷತ್ತಾಗಿ ಲೋಪಸಂಭವಿಸುವಂತಾದರೆ ಸತ್ವಂತರಾದ ಅಧಿಕಾರಿಗಳ ಮೇಲೂ ದೋಷಾರೋಪಣೆ ಮಾಡಲು ಹೇಸುವದಿಲ್ಲವೆಂದು ಗೊತ್ತಾಗುತ್ತದೆ. ಇದನ್ನು ನೋಡಿದರೆ ಇವರು ಬೋಧಿಸುವ ಶಾಸ್ತ್ರಪುರಾಣಗಳೆಲ್ಲಾ ಪರರ ವಂಚನೆಗಾಗಿಯೇ ಎಂದು ಭಾವಿಸಬೇಕಾಗಿ ಬರುತ್ತದೆ. "ಓದಿದಓದೆಲ್ಲ ಮೇದಕಬ್ಬ ಸಿಪ್ಪೆ, ಓದಿನಒಡಲ ತಿಳಿದರೆ ಸಿಪ್ಪೆ ಕಬ್ಬಾಗುವುದಯ್ಯ ಸರ್ವಜ್ಞ" ಎಂಬ ಸತ್ಪುರುಷರವಾಕ್ಯವು ಎಂದಿಗೆತಾನೇ ಸುಳ್ಳಾದೀತು? ಪತ್ರಿಕಾಕರ್ತರುಗಳು ಮ|| ಸಿದ್ಧರಾಮಪ್ಪನವರ ನಡೆವಳಿಕೆಯನ್ನು ತಿಳಿದುಕೊಳ್ಳಬೇಕಾಗಿದ್ದ ಪಕ್ಷದಲ್ಲಿ ಅವರು ಇದುವರೆಗೂ ಸಂಚಾರಮಾಡಿರತಕ್ಕ ಸ್ಥಳಗಳಲ್ಲಿ ಸರ್ಕಾರದವರ ಉದ್ದೇಶಕ್ಕೆ ಅನುಗುಣವಾಗಿ ಪ್ರಜೆಗಳಿಗೆ ಹಿತಚಿಂತಕರಾಗಿ ಸತ್ಯವನ್ನೂ ಧರ್ಮವನ್ನೂ ಬಿಡದೆ ಹೇಗೆ ಪ್ರವರ್ತಿಸುತ್ತಾ ಬಂದಿರುವರೆಂಬುದೂ, ಅದರಿಂದಲೇ ಸತ್ಯವೇ ಜಯವೆಂಬ ವಾಕ್ಯಕ್ಕೆ ಅನುಸಾರವಾಗಿ ದಿನೇ ದಿನೇ ಅವರು ದೊಡ್ಡದೊಡ್ಡ ಪದವಿಗೆ ಬರುತ್ತಿರುವುದೂ ಗೊತ್ತಾಗುವುದು. ಶಾನುಬೋಗರು ಬಾಕಿ ತಪ್ಸೀಲು ಪಟ್ಟಿಯನ್ನು ಪ್ರಜೆಗಳ ಅನುಕೂಲಕ್ಕಾಗಿ ಕೊಡಬೇಕಾದದ್ದು ನ್ಯಾಯವೆಂದೂ ಕಾಲವು ದಿನೇ ದಿನೇ ನಾಜೂಕಾಗಿ ಬರುತ್ತಿರುವುದರಿಂದ ನಿಮ್ಮ ಅನಾದಿಯಾದ ಮಾಮೂಲಿನಲ್ಲಿ ವಿಶೇಷ ಅಭಿಲಾಷೆಯುಳ್ಳವರಾಗಿರಬೇಡಿರೆಂದೂ ರೈತರಿಗೆ ಉಪಕಾರಮಾಡಿರಿ, ಇಲ್ಲದ ಪಕ್ಷಕ್ಕೆ ನಿಮ್ಮ ಅನೂಚಾನವಾದ ಹಕ್ಕು ಕಳೆದುಕೊಳ್ಳುತ್ತೀರಿಯೆಂದೂ ತಿಳುವಳಿಕೆಕೊಡುವುದು ಪತ್ರಿಕಾಕರ್ತರ ಧರ್ಮವಲ್ಲವೆ? ಸಾಧ್ವೀ ಪತ್ರಿಕೆಯಲ್ಲಿ "ಶಾನುಭೋಗರುಗಳು ಮಾತ್ರ ಸತ್ಯವನ್ನು ಬಿಡದೆ ಸತ್ಪ್ರಜೆಗಳೆನ್ನಿಸಿಕೊಳ್ಳಿರಿ" ಎಂಬದಾಗಿ ನಂಜುಂಡಯ್ಯನವರು ಬರೆಸಿರುತ್ತಾರೆ. "ಮಾತ್ರಸತ್ಯ" ಎಂದರೆ ಎಂಥಾ ಸತ್ಯವೋ ತಿಳಿಯದು. ತಾಲ್ಲೂಕಿಗೆ ದಣಿಗಳಾದ ಅಮಲ್ದಾರರವರ ನ್ಯಾಯವಾದ ಮಾತುಗಳನ್ನು ಕೇಳದೆ ಅಂಥವರ ಮೇಲೆಯೇ ಪ್ರಜಾಕಂಟಕರಾಗಿ ಇಷ್ಟು ಗಲಾಟೆ ಮಾಡುವಂಥ ಈ ಶ್ಯಾನುಬೋಗರುಗಳು ತಾವು ಹೇಳಿದಂತೆ ಮೂಢಸ್ವಭಾವವುಳ್ಳ ಬಡರೈತರು ಕೇಳದೆ ಹೋದರೆ ಗ್ರಾಮಾಂತರಗಳಲ್ಲಿ ಅವರುಗಳನ್ನು ಇವರು ಬದುಕಿಸಿಕೊಡುತ್ತಾರೆಯೆ? ಎಂಬ ವಿಷಯವನ್ನು ಘನಸರ್ಕಾರದವರು ಪರ್ಯಾಲೋಚಿಸಿ, ಇವರ ಅನ್ಯಾಯವಾದ ಉದ್ದೇಶವು ನೆರವೇರದಂತೆ ಮಾಡಿ, ಈಗಿನ ಶ್ಯಾನುಭಾವಿಕೆ ಪದ್ಧತಿಯನ್ನೇ ತಪ್ಪಿಸಿ, ಮದರಾಸ್ ಬೊಂಬಾಯಿ ಮುಂತಾದ ಪ್ರಾಂತ್ಯಗಳಲ್ಲಿ ನಡೆಸುತ್ತಾ ಇರುವಂತೆ ನಮ್ಮ ದೇಶದಲ್ಲಿಯೂ ಆಚರಣೆಗೆ ತಂದು ತಿಳುವಳಿಕೆಯಿಲ್ಲದ ಬಡರೈತರಾದ ನಮ್ಮನ್ನು ಕಾಪಾಡುತ್ತಾರೆಂದು ನಂಬಿರುತ್ತೇನೆ. ಬ್ರಾಹ್ಮಣೇತರರು ದೊಡ್ಡ ಅಧಿಕಾರಕ್ಕೆ ಬಂದ ಕೂಡಲೇ ಅವರುಗಳು ದೋಷಾರೋಪಣೆಗಳಿಗೆ ಗುರಿಯಾಗುತ್ತಿರುವುದು ಈಗ ಹೊಸಪದ್ಧತಿಯಲ್ಲ. ಭೋಜರಾಜನ ಸಭೆಯಲ್ಲಿದ್ದ ಕಾಳಿದಾಸ ಮಹಾಕವಿಯ ಕಾಲದಿಂದಲೂ ಬಂದದ್ದಾಗಿದೆ. ಬ್ರಾಹ್ಮಣೇತರರು ಈ ವಿಷಯವನ್ನು ನೂತನವೆಂದು ಭಾವಿಸತಕ್ಕದ್ದಲ್ಲ. ಸತ್ಯಸಂಧನಾದ ಹರಿಶ್ಚಂದ್ರ ಮಹಾರಾಜನನ್ನು ವಿಶ್ವಾಮಿತ್ರಮಹರ್ಷಿಯು ಭಂಗಪಡಿಸಬೇಕೆಂದು ಮಾಡಿದ ಚತುರುಪಾಯಗಳಿಂದ ಎಷ್ಟು ಕಷ್ಟಗಳು ಬಂದಾಗ್ಯೂ ಸಹಿಸಿಕೊಂಡು ಸತ್ಯವನ್ನು ಬಿಡದೆ ಇದ್ದುದರಿಂದ ಪರಮೇಶ್ವರನು ಹರಿಶ್ಚಂದ್ರಮಹಾರಾಜನನ್ನು ಕಾಪಾಡಲಿಲ್ಲವೆ? ಹಾಗೆಯೇ ನಮ್ಮಗಳ ಕಷ್ಟಸುಖಗಳನ್ನೆಲ್ಲಾ ಅರಿತು ಸರ್ವಕಾಲದಲ್ಲಿಯೂ ನಮ್ಮೆಲ್ಲರ ಹಿತಚಿಂತನೆಯನ್ನೇ ಬಯಸುತ್ತ ನಮ್ಮನ್ನು ಆಳುತ್ತಿರುವ ಶ್ರೀಮನ್ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ ಸರ್ವಶಕ್ತನಾದ ಭಗವಂತನು ಆಯುರಾರೋಗ್ಯವನ್ನು ಕೊಟ್ಟು ಸುಖವಾಗಿ ಕಾಪಾಡಲಿ ಎಂದು ಭಗವಂತನನ್ನು ಪ್ರಾರ್ಥಿಸೋಣ. ಈಗಿನ ಸ್ಥಿತಿಯಲ್ಲಿ ಬ್ರಾಹ್ಮಣೇತರಾಧಿಕಾರಿಗಳ ದುರ್ದಶೆಯು ಸೀಗೆಯೊಳಗಣ ಬಾಳೆಯಂತಾಗಿದೆ.

ತಾಲ್ಲೂಕು ನಿವಾಸಿಯಾದ ರೈತ.

೧೯೨೧ ನೆಯ ಇಸವಿ ನವಂಬರ್ ತಾ|| ೨೭ರಿಂದ ೧೯೨೧ ನೆಯ ಡಿಸಂಬರ್ ತಾ|| ೩ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಕಾರ್ತಿಕಬಹುಳ ತ್ರಯೋದಶಿಯಿಂದ ಮಾರ್ಗಶಿರಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
27	ಭಾನು	ತ್ರಯೋ	32-55	ಸ್ವಾತಿ	14-24	12
28	[1]ಸೋಮ	ಚತು	30-27	ವಿಶಾ	40-41	13
29	[2]ಮಂಗಳ	ಅಮಾ	29-0	ಅನೂ	40-55	14
30	ಬುಧ	ಪಾಡ್ಯ	28-52	ಜ್ಯೇಷ್ಠ	42-33	15
1	ಗುರು	ಬಿದಿಗೆ	30-6	ಮೂಲ	46-24	16
2	ಶುಕ್ರ	ತದಿಗೆ	32-34	ಪೂಷಾ	49-25	17
3	ಶನಿ	ಚೌತಿ	36-9	ಉಷಾ	54-35	18

(1) ಕಾರ್ತೀಕಸೋಮವಾರಂ. (2) ಸರ್ವತ್ರಾಮಾವಾಸ್ಯ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಚಿಹ್ನೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪; ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಡಿಸಂಬರ್ ತಾರೀಖು ೪ ನೆಯ ಭಾನುವಾರ. ಸಂಚಿಕೆ ೪೮

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರನೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

SREE SITHARAGHAVA VAIDYASALA

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
46 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಪದಾರ್ಥಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಸಾಮಾನುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಸಾಮಾನು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ.	ರೂ. ವರೆಗೆ.
4	0-12-0	,,	50-0-0
5	0-8-0	..	100-0-0
6	0-12-0	,,	100-0-0
7	6-0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0-6-0	ಇಂದ	10-0-0
8	0-8-0	,,	100-0-0
9	0-12-0	,,	100-0-0
10	0-14-0	,,	100-0-0
11	3-8-0	,,	100-0-0
12	4-0-0	,,	100-0-0
13	4-8-0	,,	100-0-0
14	6-0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅಪಕ್ಕಂಠ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪದ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
ಕಂಪನಿ, ಚೌಕಂಬಾ ಕಾಶೀ.
40

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಗಳನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ.ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೪—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾನ ಗ್ರಂಥ.

ಬಸವರಾಜವಿಜಯಂ.—ಬೆಲೆ ೧—೨—೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧—೧೦—೦.

ಚೆನ್ನಬಸವೇಶವಿಜಯಂ.—ಬೆಲೆ ೧—೬—೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ—ಶಿವನ ಪಂಚವಿಂಶತಿ ಲೀಲೆಗಳು—ಅನೇಕ ಶಿವಶರಣರ ಚರಿತ್ರೆಗಳು—ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧—೧೪—೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦—೧೪—೦. ವಿ.ಪಿ. ೧—೪—೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧—೦—೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ, ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದಗ್ರಂಥ. ವಿ.ಪಿ. ೧—೮—೦.

ಪಂಚಶ್ಲೋಕೀ.—ಬೆಲೆ ೧—೦—೦. ವಿ. ಪಿ. ೧—೮—೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

WANTED.

2

For the Board High School Harapanahalli permanently a Kanarese Pandit on Rs. 30-1-40 with a temporary addition of Rs. 10 per mensem. Persons having previous teaching experience and academical training and qualifications will be preferred. A knowledge of English will be helpful.

Applications will be received by the President District Board, Bellary up to the 20th December 1921. None received thereafter will be considered.

Bellary Dt. Board's Office,
Dated 23rd Nov. 21.

(Sd.) N. A. Narasima Rao,
for President.

ಶ್ರೀ ಯುವಸಾರ್ವಭೌಮರವರ ಸಂಚಾರ.

(ಬರೋಡಾ).

ನವಂಬರ್ ತಾ|| ೨೪ ರಲ್ಲಿ ಯುವಸಾರ್ವಭೌಮರು ಬರೋಡಾ ಸಂಸ್ಥಾನದೊಳಗೆ ಸುವುದೇಪುರವೆಂಬಲ್ಲಿಗೆ ಚಿರತೆಗಳನ್ನು ಬೇಟೆಯಾಡುವುದಕ್ಕೆ ಮೋಟಾರಿನಮೇಲೆ ಗಾಯಕ್ವಾರ್ ಮಹಾರಾಜರೊಡನೆಯೂ ರೆಸಿಡೆಂಟರೊಡನೆಯೂ ಹೋಗಿದ್ದು ಕೆಲ ಮೃಗಗಳನ್ನು ಬೇಟೆಯಾಡಿ ಬಂದರು.

(ಉದಯಪುರ).

ಆದೇದಿನ ರಾತ್ರಿ ಅಲ್ಲಿಂದ ಹೊರಟು ತಾ|| ೨೫ನೆ ಬೆಳಗಿನ ೧೧ ಗಂಟೆಗೆ ಉದಯಪುರ ಸಂಸ್ಥಾನವನ್ನು ಸೇರಿದರು. ಅಲ್ಲಿಯ ಪ್ರಭುಗಳಾದ ಮಹಾರಾಣಾರವರಿಗೆ ಸ್ವಲ್ಪ ಅಸ್ವಸ್ಥತೆಯುಂಟಾಗಿದ್ದುದರಿಂದ ಅವರ ಕುಮಾರ ಮಹಾರಾಜರೂ ಬ್ರಿಟಿಷ್ ಏಜಂಟರೂ ೧ನೆ ತರಗತಿಯ ಸರ್ದಾರರೂ ದೊಡ್ಡದೊಡ್ಡ ಉದ್ಯೋಗಿಗಳೂ ಸಿಲ್ವಾಣದಲ್ಲಿ ಯುವರಾಜರಿಗೆ ಸುಸ್ವಾಗತವನ್ನು ಮಾಡಿದರು. ಬಳಿಕ ಉತ್ಸವಪೂರ್ವಕವಾಗಿ ಪಟ್ಟಣವನ್ನು ಪ್ರವೇಶಿಸಿದರು. ಪ್ರಜೆಗಳು ಬಹಳವಾಗಿ ಸೇರಿದ್ದು ಯುವರಾಜಸಂದರ್ಶನದಿಂದ ಸಂತೋಷಪಟ್ಟರು. ಮಹಾರಾಣಾಯವರಿಗೆ ಅಸ್ವಸ್ಥತೆಯುಂಟಾಗಿದ್ದುದರಿಂದ ಆದಿನ ಜರುಗಬೇಕಾಗಿದ್ದ ಮಿಜಾಜ್‌ಪರ್ಸಿ ಎಂಬ ದರ್ಶನ ಪ್ರತಿದರ್ಶನ ಪದ್ಧತಿಯನ್ನು ಯುವರಾಜರು ನಿಲ್ಲಿಸಿಬಿಟ್ಟರು. ಆದರೆ ಪ್ರತ್ಯಪ್ರತ್ಯೇಕವಾಗಿ ಅವರ ಸಂದರ್ಶನಸಂಭಾಷಣಗಳು ಜರುಗಿದುವು. ಆ ರಾತ್ರಿ ಉದಯಪುರ ಪಟ್ಟಣವೆಲ್ಲಾ ದೀಪಾಲಂಕಾರದಿಂದ ಅತ್ಯಂತ ಮನೋಹರವಾಗಿದ್ದಿತು. ಮಗ್ಗುಲಸರೋವರದ ನಿರ್ಮಲಜಲದಲ್ಲಿ ಕೋಟ್ಯಂತರ ದೀಪಪ್ರಕಾಶವು ಪ್ರತಿಫಲಿಸಿದ್ದಿತು. ಆ ರಮಣೀಯತೆಯನ್ನು ಅವಲೋಕಿಸಲಿಕ್ಕಾಗಿ ಯುವರಾಜರು ಮೋಟಾರು ಬೋಟಿನಲ್ಲಿ ಕುಳಿತು ವಿಹರಿಸಿ ಬಳಿಕ ಅರಮನೆಗೆ ಚಿತ್ತೈಸಿದರು. ಅಲ್ಲಿ ಮಹಾರಾಣಾರವರು ಸ್ವತಃ ಯುವರಾಜರನ್ನು ಸ್ವಾಗತಿಸಿದರು. ಅಷ್ಟುಮಟ್ಟಿಗೆ ಅವರು ಆರೋಗ್ಯಗೊಂಡು ಬಂದುದಕ್ಕಾಗಿ ಯುವರಾಜರು ಸಂತೋಷವನ್ನು ತಿಳಿಯಿಸಿದರು. ಅರಮನೆಯಲ್ಲಿ ಉತ್ತಮವಾದ ಔತಣವಾಯಿತು. ಯುವಸಾರ್ವಭೌಮರ ಬಿಡಾರದಲ್ಲಿ ಔತಣವಾದಾಗ ಬ್ರಿಟಿಷ್ ಏಜಂಟ್ ಹಾಲಂಡ್‌ರವರು ಉದಯಪುರ ಮಹಾರಾಣಾರವರ ಪಕ್ಷವಾಗಿ ಸಾರ್ವಭೌಮರ ಆರೋಗ್ಯವನ್ನು ಕೋರಿದರು. ಅದಕ್ಕೆ ಪ್ರತ್ಯುತ್ತರವನ್ನು ಯುವರಾಜರು ಕೊಡುವಾಗ್ಗೆ—ಹಿಂದೆ ಜಾರ್ಜ್‌ಸಾರ್ವಭೌಮರಿಗೂ ಪ್ರಿನ್ಸ್ ಆಲ್ಬರ್ಟ್‌ವಿಕ್ಟರ್‌ರವರಿಗೂ ಡ್ಯೂಕ್‌ಆಫ್ ಕನ್ನಾಟ್‌ರವರಿಗೂ ಉದಯಪುರವು ಮಾಡಿದ್ದ ಆತಿಥ್ಯವೈಭವವನ್ನು ಕೇಳಿದ್ದೇನೆಂದು ಕೊಂಡಾಡಿ, ಈಗ ತಮಗೆ ಮಾಡಿದ ಸತ್ಕಾರಾತಿಶಯಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ರಜಪುತ್ರ ಸಂಸ್ಥಾನಗಳಲ್ಲಿ ಸುಪ್ರಸಿದ್ಧ ಮನೆತನವಾದ ಉದಯಪುರದ ರಾಜವಂಶದ ಶೀಲಪ್ರತಾಪಗಳನ್ನು ಕೊಂಡಾಡಿ, ಆಂಗ್ಲಪ್ರಭುತ್ವದವರೊಡನೆ ಕಳೆದ ೧ ಶತಮಾನದಿಂದಲೂ ಉದಯಪುರವು ಮೈತ್ರಿಯಿಂದ ನಡೆದುಕೊಂಡು ಬರುತ್ತಿದ್ದುದನ್ನೂ, ಹಿಂದಣ ಸಿಪಾಯಿ ದಂಗೆಕಾಲದಲ್ಲಿ ಉದಯಪುರದ ಪ್ರಭುಗಳು ಆಂಗ್ಲಜನರನ್ನು ಪ್ರಾಣಭೀತಿಯಿಂದ ಕಾಪಾಡಿದುದನ್ನೂ, ಕಳೆದ ಯುದ್ಧದಲ್ಲಿ ಮೇವಾರು ಸಂಸ್ಥಾನವು ಸಾಮ್ರಾಜ್ಯಕ್ಕೆ ಮಾಡಿದ ಸೇವೆಯನ್ನೂ ಮತ್ತು ೨೧ ಲಕ್ಷ ಧನಸಹಾಯಮಾಡಿದುದನ್ನೂ ಕುರಿತು ಶ್ಲಾಘಾವಚನಗಳನ್ನಾಡಿದರು. ಬಳಿಕ ಮಹಾರಾಣಾರವರು ಅಲ್ಲಿಗೆ ಬಂದು ಯುವರಾಜರ ಆರೋಗ್ಯವನ್ನು ಬಯಸಿ ಭಾಷಣಮಾಡಿದರು. ಅನಂತರ ಅವರೆಲ್ಲರೂ ಕೂಡಿ ಪ್ರಾಸಾದದ ಮೇಲಕ್ಕೇರಿ ಮದ್ದಿನ ನೋಟ ಮೊದಲಾದುವುಗಳನ್ನು ಪರಾಮರಿಸಿದರು. ಕಡೆಯಲ್ಲಿ ಮಹಾರಾಣಾರವರು ಯುವರಾಜರಿಗೆ ಅತ್ತರು ತಾಂಬೂಲ ಪುಷ್ಪ ಹಾರ ಗುಚ್ಛಾದಿಗಳನ್ನು ಸಮರ್ಪಿಸಿದರು. ತಾ|| ೨೭ ರಲ್ಲಿ ಭಾನುವಾರವಾಗಿದ್ದುದರಿಂದ ಕ್ರೈಸ್ತದೇವಾಲಯಕ್ಕೆ ಹೋಗಿ ದೇವತಾಪ್ರಾರ್ಥನೆಯನ್ನು ನೆರವೇರಿಸಿದರು. ಅದರ ಹೊರತು ಮತ್ತಾವ ಕಾರ್ಯಕ್ರಮವೂ ಆದಿನ ಇರಲಿಲ್ಲ. ಉದಯಪುರ ಸಂಸ್ಥಾನದಲ್ಲಿ ಹೊಸದಾಗಿ ಬಂದ ಮಾನನೀಯಾತಿಥಿಗಳಿಗೆಲ್ಲಾ ಸಮರ್ಪಿಸುವ ಮರ್ಯಾದೆಯಂತೆ ಅಲ್ಲಿಯ ಮಹಾರಾಜರು ಗೋಸಾಯಂಜಿಸ್ವಾಮಿ ದೇವಾಲಯದ ಪ್ರಸಾದವನ್ನು ಯುವರಾಜರ ಬಳಿಗೆ ಕಳುಹಿಸಿಕೊಟ್ಟರು. ಅದು ಹೊಸದಾಗಿ ಕಂಡರೂ ಯುವರಾಜರು ಸಂತೋಷದಿಂದ ಸ್ವೀಕರಿಸಿದರು.

(ಅಜಮೀರ್).

ತಾ|| ೨೭ನೆ ರಾತ್ರಿ ಉದಯಪುರದಿಂದ ಹೊರಟು ತಾ|| ೨೮ನೆ ಬೆಳಿಗ್ಗೆ ಅಜಮೀರನ್ನು ಸೇರಿದರು. ಕ್ರಮಪ್ರಕಾರ ಸಂಸ್ಥಾನದ ಸ್ವಾಗತವು ನಡೆದಿತು. ಜೋಧಪುರದ ಮಹಾರಾಜರೂ ಧೋಲ್ಪುರದ ಮಹಾರಾಜಾ ರಾಣಾರವರೂ ಅಲ್ಲಿಗೆ ಬಂದಿದ್ದು ಯುವಸಾರ್ವಭೌಮರ ಸಂದರ್ಶನಸಂಭಾಷಣಗಳನ್ನು ಮಾಡಿಕೊಂಡರು. ಊರೆಲ್ಲಾ ಅತ್ಯಂತ ಸುಂದರವಾಗಿ ಅಲಂಕರಿಸಲ್ಪಟ್ಟಿದ್ದಿತು. ಪ್ರಜೆಗಳು ವಿಶೇಷವಾಗಿ ಸೇರಿದ್ದರು. ಉತ್ಸವದ ಜತೆಯಲ್ಲೂ ವೀಧಿಗಳ ಎರಡು ಪಕ್ಕಗಳಲ್ಲೂ ಸೈನ್ಯಗಳ ಸಾಲು ನಿಲ್ಲಿಸಲ್ಪಟ್ಟಿದ್ದಿತು. ಬಳಿಕ ಬಾರಧಾರ್ ಶಿಲಾಮಂದಿರದಲ್ಲಿ ರಜಪುತ್ರಸ್ಥಾನದ ಸ್ವದೇಶಸಂಸ್ಥಾನಾಧಿಪತಿಗಳು ೧೨ ಮಂದಿಗಳೂ ಚಿತ್ರಾಲಿನ ಮೇಥರ್‌ರವರೂ ಅಲ್ಲಿ ಕಾದಿದ್ದು ಸ್ವಾಗತಿಸಿದರು. ಅವರೊಡನೆಲ್ಲಾ ಯುವರಾಜರು ಸಂಭಾಷಿಸಿ ಬಳಿಕ ಅಜ್ಮೀರ್ ಮ್ಯುನ್ಸಿಪಲ್ ಸಂಘದವರ ವಿಜ್ಞಾಪನಪತ್ರವನ್ನು ಸ್ವೀಕರಿಸಿ ಸಮುಚಿತವಾದ ಉತ್ತರವನ್ನಿತ್ತರು. ರಜಪುತ್ರಸಂಸ್ಥಾನದ ರಾಜಕುಮಾರರ ವಿದ್ಯಾಭ್ಯಾಸಕ್ಕೆಲ್ಲಾ ಪ್ರಮುಖ ಕಲಾಶಾಲೆಯಾಗಿರುವ ಮೇಯೋ ಕಲಾಶಾಲೆಗೆ ಯುವರಾಜರು ದಯಮಾಡಿಸಿದ್ದರು. ಆ ಸಮಯದಲ್ಲಿ ಅರ್ಪಿಸಲ್ಪಟ್ಟ ಸನ್ಮಾನಪತ್ರವನ್ನು ಸ್ವೀಕರಿಸಿ, ಆಂಗ್ಲದೇಶದಲ್ಲಿ ಈಟನ್ ಕಲಾಶಾಲೆ ಹೇಗೋ ಭರತಖಂಡಕ್ಕೆ ಈ ಮೇಯೋ ಕಲಾಶಾಲೆಯು ಹಾಗೆ ಪ್ರಸಿದ್ಧಿಗೊಂಡಿರುವುದೆಂದು ಅದನ್ನು ಕೊಂಡಾಡಿ, ಅಲ್ಲಿ ಅಭ್ಯಾಸಮಾಡಿದ ರಾಜಪುತ್ರರಲ್ಲಿ ಕೆಲವರನ್ನು ಇದಕ್ಕೆ ಮುಂಚೆಯೇ ಆಂಗ್ಲದೇಶದಲ್ಲಿ ನಾನು ಪರಿಚಯಗೊಂಡಿದ್ದೆನೆಂದೂ ವಿದ್ಯಾರ್ಥಿಗಳಾದ ನೀವೆಲ್ಲಾ ನಿಮ್ಮ ಸಂತತಿಯ ಕೀರ್ತಿಪ್ರತಿಷ್ಠೆಗಳನ್ನು ಈ ಕಲಾಶಾಲಾಧ್ಯಯನದ ಮೂಲಕ ಕಾಪಾಡಿಕೊಳ್ಳಬೇಕೆಂದೂ ಉಪದೇಶಿಸಿ, ಕಲಾಶಾಲಾ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಗಳನ್ನಿತ್ತು, ಬಳಿಕ ಅದೇ ಕಲಾಶಾಲೆಯ ಪಕ್ಕದ ಉದ್ಯಾನದಲ್ಲಿ ಏರ್ಪಡಿಸಿದ್ದ ಔತಣಕ್ಕೆ ದಯಮಾಡಿಸಿದರು. ಅಲ್ಲಿಗೆ ಅನೇಕ ಸಂಸ್ಥಾನಾಧಿಪತಿಗಳೂ ಸರದಾರರೂ ಸರ್ಕಾರಿ ಉದ್ಯೋಗಿಗಳೂ ಪುರಪ್ರಮುಖರೂ ಕರೆಯಲ್ಪಟ್ಟಿದ್ದರು. ಕಲಾಶಾಲಾ ವಿದ್ಯಾರ್ಥಿಗಳೆಲ್ಲಾ ಅಶ್ವಾರೂಢರಾಗಿ ಸೈನಿಕರಂತೆ ಕವಾಯತುಗಳನ್ನು ಮಾಡಿದರು. ಅತಿ ವೈಭವದಿಂದ ಫಲಾಹಾರಾದಿಗಳು ನಡೆಯಿಸಲ್ಪಟ್ಟುವು. ಅದೇ ರಾತ್ರಿ ರಸಿಡೆನ್ಸಿಯಲ್ಲಿ ದೊಡ್ಡ ಔತಣವಾಯಿತು. ಅದನ್ನು ಮುಗಿಸಿಕೊಂಡು ಆ ರಾತ್ರಿಯೇ ಜೋಧಪುರಕ್ಕೆ ಪ್ರಯಾಣಮಾಡಿದರು.

(ಜೋಧಪುರ).

ತಾ|| ೨೮ರ ರಾತ್ರಿ ಅಜ್ಮೀರಿನಿಂದ ಪ್ರಯಾಣಮಾಡಿ ೨೯ನೆ ಬೆಳಿಗ್ಗೆ ಯುವಸಾರ್ವಭೌಮರು ಜೋಧಪುರವನ್ನು ಸೇರಿದರು. ಅಲಂಕೃತವಾಗಿದ್ದ ನಿಲ್ದಾಣದಲ್ಲಿ ಅಲ್ಲಿಯ ಮಹಾರಾಜರೂ ಅವರ ಚಿಕ್ಕಪ್ಪಂದಿರೂ ರೀಜಂಟರೂ ಆದ ಸರ್ ಪ್ರತಾಪಸಿಂಗ್‌ರವರೂ ರಾಜಪುಟಾನಾ ಬ್ರಿಟಿಷ್ ಏಜಂಟರೂ ಸಂಸ್ಥಾನದ ಮುಖ್ಯೋದ್ಯೋಗಿಗಳೂ ಕೆಲವುಮಂದಿ ನಾಗರೀಮಣಿಯರೂ ಕಾದಿದ್ದು ಸ್ವಾಗತಿಸಿದರು. ರಾಜಕೀಯ ಮರ್ಯಾದೆಗಳೆಲ್ಲಾ ಸಾಂಗವಾಗಿ ಜರುಗಿದುವು. ಉತ್ಸವಗೊಂಡು ಪುರಪ್ರವೇಶಮಾಡುವಾಗ್ಗೆ ದಾರಿಯುದ್ದಕ್ಕೂ ಪ್ರಜೆಗಳು ಜಯಜಯಧ್ವನಿ ಮಾಡಿದರು. ಅದಿನ ರಾತ್ರಿ ನಡೆದ ಸಂಸ್ಥಾನದ ಔತಣದ ಸಮಯದಲ್ಲಿ ಯುವರಾಜರು ಅತಿಥ್ಯವೈಭವವನ್ನು ಕೊಂಡಾಡಿ, ಆಂಗ್ಲಪ್ರಭುತ್ವಕ್ಕೂ ಜೋಧಪುರ ಪ್ರಭುತ್ವದವರಿಗೂ ೧೮೧೮ನೆ ವರ್ಷದಲ್ಲಿ ಸಂಧಿಯಾದಾಗಣಿಂದ ಇದುವರೆಗೂ ಸ್ವದೇಶ ಪರದೇಶಗಳ ಅನೇಕ ಯುದ್ಧಗಳಲ್ಲಿ ಜೋಧಪುರದ ಸೈನಿಕರು ಸಾಮ್ರಾಜ್ಯಕ್ಕೆ ಸಹಾಯಕರಾಗಿ ನಿಂತು ಯುದ್ಧ ಮಾಡಿದುದನ್ನು ಕೊಂಡಾಡಿ, ಕಳೆದ ಯುದ್ಧದಲ್ಲಿ ಜೋಧಪುರದ ಪ್ರಭುಗಳಾದ ಸಮರಸಿಂಗ್‌ರವರು ಸ್ವತಃ ರಣರಂಗಕ್ಕೆ ತಮ್ಮ ಸೈನ್ಯದೊಡನೆ ದಯಮಾಡಿಸಿದ್ದುದನ್ನೂ ಫ್ರಾನ್ಸ್ ರಣರಂಗದಲ್ಲಿ ಪ್ರತ್ಯಕ್ಷವಾಗಿ ಅವರ ಪರಿಚಯವು ತಮಗಾಗಿದ್ದುದನ್ನೂ ಜೋಧಪುರದ ಸೇನಾಪತಿ ಮೇಜರ್ ಥಾಕೂರ್ ಸಿಂಗ್‌ರವರು ಆ ರಣರಂಗದಲ್ಲೇ ವೀರಶಯ್ಯೆಯಲ್ಲಿ ಒರಗಿದುದನ್ನೂ ಜೋಧಪುರದ ಸೇನಾಪ್ರತಾಪವನ್ನೂ ಪೂರ್ವ ಚರಿತ್ರಪ್ರಾಶಸ್ತ್ಯವನ್ನೂ ಕೊಂಡಾಡಿ, ತಮ್ಮ ಈಗಣ ಭರತಖಂಡಸಂಚಾರಕಾಲದಲ್ಲಿ ಜೋಧಪುರದ ಮಹಾರಾಜರು ತಮ್ಮ ಸಹಚರರಾಗಿ ಬರುತ್ತಿರುವುದರಿಂದ ತಮಗುಂಟಾಗಿರುವ ಆನಂದವನ್ನೂ, ಮಹಾರಾಜಾ ಸರ್ ಪ್ರತಾಪಸಿಂಗ್‌ರವರನ್ನು ಪ್ರತ್ಯಕ್ಷವಾಗಿ ಇಲ್ಲಿ ಮತ್ತೊಂದುಸಲ ಸಂದರ್ಶನಮಾಡಿದುದರಿಂದ ಉಂಟಾದ ಸಂತೋಷವನ್ನೂ ತಿಳಿಯಿಸಿ, ಅವರೀರ್ವರ ಶ್ರೇಯಸ್ಸನ್ನೂ ದೀರ್ಘಾಯುರಾರೋಗ್ಯಗಳನ್ನೂ ಸಂಸ್ಥಾನದ ಅಭಿವೃದ್ಧಿಯನ್ನೂ ಕೋರಿದರು. ಜೋಧಪುರದ ಮಹಾರಾಜರು ಅದಕ್ಕೆ ಪ್ರತ್ಯುತ್ತರವನ್ನು ಕೊಡುವಾಗ್ಗೆ ಯುವಸಾರ್ವಭೌಮರ ಚರಿತ್ರವೇ ತಮಗೆ ಮಾರ್ಗದರ್ಶಕವೆಂದು ಹೇಳಿ, ಅವರ ಆಯುರಾರೋಗ್ಯಗಳನ್ನು ಕೋರಿದರು. ಡಿಸಂಬರ್ ತಾ|| ೧ರ ರಾತ್ರಿ ಯುವಸಾರ್ವಭೌಮರು ಅಲ್ಲಿಂದ ಹೊರಟು ಬಿಕನೀರ್ ಸಂಸ್ಥಾನಕ್ಕೆ ತಾ|| ೨ರ ಬೆಳಿಗ್ಗೆ ಸೇರಿದರು. ನಿಲ್ದಾಣಕ್ಕೆ ಶ್ರೀಮನ್ಮಹಾರಾಜರು ದಯಮಾಡಿಸಿದ್ದು ಸ್ವಾಗತಿಸಿದರು. ಅಲ್ಲಿ ತಾ|| ೪ರ ವರೆಗೂ ನಿಲ್ಲುವರು.

ಮದ್ರಾಸು ಸರ್ಕಾರದಲ್ಲಿ ವಿದ್ಯಾಶಾಖಾಮಂತ್ರಿಗಳಾಗಿದ್ದು ಅಸ್ವಸ್ಥತೆಯಿಂದ ಕೆಲ ತಿಂಗಳ ಕೆಳಗೆ ಉದ್ಯೋಗವನ್ನು ಬಿಟ್ಟಿದ್ದ ದಿವಾನ್ ಬಹದ್ದೂರ್ ಸುಬ್ರಾಯಲು ರಡ್ಡಿಯವರು ಕಳೆದ ತಾ|| ೨೮ರಲ್ಲಿ ಸ್ವರ್ಗಸ್ಥರಾದರು.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಡಿಸೆಂಬರ್ ತಾ|| ೪ ನೆಯ ಭಾನುವಾರ.

ವೈಸ್ರಾಯರ ಘನತರವಾದ ಉಪನ್ಯಾಸ.

ಕಳೆದತಿಂಗಳ ಕೊನೆಯಲ್ಲಿ ಪಂಜಾಬು ವರ್ತಕಸಂಘದವರು ವೈಸ್ರಾಯರಿಗೆ ಒಂದು ಸನ್ಮಾನಪತ್ರವನ್ನು ಸಮರ್ಪಿಸಿ ಅದರೊಳಗೆ ತಮಗೆ ಸಂಬಂಧಪಟ್ಟ ಕೆಲವು ಕೊರತೆಗಳನ್ನು ನಿವಾರಿಸಿ ಅನುಕೂಲಪಡಿಸಿಕೊಡಬೇಕೆಂದು ಕೇಳಿಕೊಂಡಿದ್ದರು. ಅವಕ್ಕೆಲ್ಲಾ ಸಮುಚಿತವಾದ ಉತ್ತರವನ್ನು ವೈಸ್ರಾಯರು ಅಪ್ಪಣೆಕೊಡಿಸಿ, ಕಡೆಗೆ ಸದ್ಯದ ಭರತಖಂಡದ ರಾಜ್ಯಾಂಗಪರಿಸ್ಥಿತಿಯನ್ನು ಕುರಿತು ಕೆಲವು ಮಾತುಗಳನ್ನಾಡಿರುವರು. ಅವು ಪ್ರಕೃತಸಮಯದಲ್ಲಿ ದೇಶದ ಸಕಲಪ್ರಜೆಗಳಿಂದಲೂ ಗಮನಿಸಲರ್ಹವಾಗಿರುತ್ತವೆ. ಅದರ ಮುಖ್ಯಭಾಗವನ್ನು ಇಲ್ಲಿ ತಿಳಿಯಿಸುತ್ತೇವೆ.—

"ನೀವು ವ್ಯಾಪಾರಿಗಳು; ದೇಶವು ಶಾಂತಸ್ಥಿತಿಯಲ್ಲಿದ್ದುಕೊಂಡಿದ್ದರೆ ನಿಮ್ಮ ವ್ಯಾಪಾರವೂ ಸಾಗಿ ಅದರಿಂದ ದೇಶದ ಸಂಪತ್ತಿಯು ಬೆಳೆಯುವುದೆಂಬುದನ್ನು ತಿಳಿದಿರತಕ್ಕವರು. ಆದುಕಾರಣ ನಿಮ್ಮಲ್ಲಿ ಸ್ವಾರ್ಥವೇ ಅಲ್ಲದೆ ಉನ್ನತೋದ್ದೇಶವೂ ಇರುವುದು. ದೇಶದಲ್ಲಿ ಭೌತಿಕಾಭಿವೃದ್ಧಿಯೂ ಪ್ರಜಾಶಾಂತಿಯೂ ಸಂತೃಪ್ತಿಯೂ ಉಂಟಾಗಬೇಕಾದರೆ ಈಗಣ ಗದ್ದಲಗಳೇನೂ ಇಲ್ಲದೆ ಶಾಂತವಾಗಿರುವಂತೆ ಮಾಡಬೇಕು. ಶಾಂತಿಯಿಲ್ಲದಿದ್ದರೆ ವಿಶ್ವಾಸವುಂಟಾಗುವುದಿಲ್ಲ. ಪ್ರಜೆಗಳು ಶಾಂತರಾಗಿದ್ದಾರೆಂದು ನಂಬುಗೆ ಹುಟ್ಟದಲ್ಲದೆ ಅವರ ಅಭಿವೃದ್ಧಿಗೆ ಅವಕಾಶವೇ ಆಗುವುದಿಲ್ಲ. ಭರತಖಂಡ ಪ್ರಭುತ್ವದವರು ಶಾಂತರಾಗಿಯೂ ಶಾಸನಬದ್ಧರಾಗಿಯೂ ಇರತಕ್ಕ ಪ್ರಜೆಗಳನ್ನು ಯಾವ ಬಾಧೆಯೂ ತಟ್ಟದಂತೆ ರಕ್ಷಿಸುವರು ಎಂಬುದನ್ನು ನಾನು ಈಗ ದೃಢವಾಗಿ ಕೈಯೆತ್ತಿ ಸಾರುತ್ತೇನೆ. ಆದರೆ ಈಗ ದೇಶದ ಬಹುಮಂದಿ ಪ್ರಜೆಗಳು ಪ್ರಭುತ್ವಶಾಸನಗಳಲ್ಲಿ ಗೌರವವನ್ನಿಟ್ಟು ಶಾಸನಕ್ಕೆ ಬದ್ಧರಾಗಿರಬೇಕೆಂದು ಕೋರುವವರಾಗಿದ್ದಾರೆ. ಕೆಲಸ್ಥಲಗಳಲ್ಲಿ ಮಾತ್ರ ಈಗಣ ಸ್ಥಿತಿಯನ್ನು ಕುರಿತು ದುರಭಿಪ್ರಾಯಗಳಿವೆ. ಭೂಂತಪ್ರಭುತ್ವಕ್ಕಿರುವ ಶಕ್ತಿಯು ಅವರಿಗೆ ಗೊತ್ತುಂಟು. ಈ ದೇಶದ ಶಾಸನಬದ್ಧರಾದ ಪ್ರಜೆಗಳೆಲ್ಲರೂ ಆ ದುರಭಿಪ್ರಾಯದ ಜನರನ್ನು ಕಂಡು ರೋಸಿಕೊಂಡಿರುವರು. ನಾವು ಪ್ರಭುತ್ವದ ಬಲವನ್ನು ದುರ್ವಿನಿಯೋಗಪಡಿಸಿದೆವೆಂದು ಯಾರೂ ಹೇಳಲಾರರು. ಆದರೆ ನಮಗಿರುವ ಅಧಿಕಾರಶಕ್ತಿಯನ್ನು ನಾವು ಉಪಯೋಗಿಸದೆ ಇರುವುದಕ್ಕಾಗಿ ನಮ್ಮನ್ನು ಒಂದೊಂದುಸಲ ಪ್ರಜೆಗಳೇ ಆಕ್ಷೇಪಿಸುತ್ತಿದ್ದಾರೆ. ನಾವು ನಿಜವಾಗಿಯೂ ಕಠಿನವಾದ ಮತ್ತು ಆಗ್ರಹಾವೇಶವನ್ನು ಹುಟ್ಟಿಸುವ ಚರ್ಯೆಗಳನ್ನು ಅವಲಂಬಿಸುವುದಿಲ್ಲ. ಆದರೆ ಈ ಮಧ್ಯೆ ಜರುಗಿರುವ ಸಂಗತಿಗಳನ್ನು ನೋಡಿದರೆ ಪ್ರಭುತ್ವದವರು ತಮ್ಮ ಬಲವನ್ನೆಲ್ಲಾ ಉಪಯೋಗಿಸಿ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಬೇಕಾದುದು ಅವಶ್ಯಕವೆಂದು ಕಂಡುಬರುತ್ತದೆ. ಕೆಲಕಡೆ ನಡೆಯುತ್ತಿರುವ ಅತ್ಯಾಚಾರಗಳು ಎಲ್ಲರಿಗೂ ತಿಳಿದೇ ಇವೆ. ಬಲವಂತವನ್ನೂ ಭಯವನ್ನೂ ಉಂಟುಮಾಡಿ ಕೆಲಪ್ರಜೆಗಳು ದೌರ್ಜನ್ಯಕ್ಕೆ ತೊಡಗುತ್ತಿದ್ದಾರೆ. ಇದು ಶಾಸನವಿರುದ್ಧವಾದುದು. ಅದನ್ನು ಸಾಗಗೊಡದಂತೆ ತಡೆಯತಕ್ಕುದು ಪ್ರಭುತ್ವದವರ ಕರ್ತವ್ಯವು. ಅದಕ್ಕಾಗಿ ತಕ್ಕಚರ್ಯೆಯನ್ನು ಗ್ರಹಿಸಿ ಶಾಂತವಾಗಿರುವ ಪ್ರಜೆಗಳ ಸಂರಕ್ಷಣೆಯನ್ನು ಮಾಡಿ ದುಷ್ಟರನ್ನು ನಿಗ್ರಹಿಸಬೇಕಾಗಿದೆ. ಹಾಗೆ ಮಾಡುವುದರಿಂದ ಶಾಂತನಾಗಿರುವ ಪ್ರಜೆಯು ತನ್ನ ಕೆಲಸವನ್ನು ತಾನು ನೋಡಿಕೊಂಡು, ಪರರತಂಟೆಗೆ ತಾನು ಹೋಗದೆ, ತನ್ನೊಡನೆ ಏಕೀಭವಿಸದಿರುವವರಿಂದ ತನಗೆ ಯಾವ ಉಪದ್ರವವೂ ಸಂಭವಿಸದಂತೆ ಬಾಳಿಕೊಂಡಿರಬಲ್ಲನು. ನಮಗೆ ಎಷ್ಟುವಿರುದ್ಧವಾಗಿದ್ದರೂ ಧರ್ಮವಾಗಿ ಪ್ರವರ್ತಿಸುವ ರಾಜಕೀಯಪಕ್ಷದವರನ್ನು ಕಂಡರೆ ನಮಗೇನೂ ಸಿಟ್ಟಿಲ್ಲ. ಪ್ರಜೆಗಳ ಅಸಂತೃಪ್ತಿಯನ್ನು ನ್ಯಾಯವಾಗಿರುವ ಮಟ್ಟಿಗೂ ತೊಲಗಿಸುವೆನೆಂದು ನಾನು ಎಷ್ಟೋಸಲ ಹೇಳಿದ್ದರೂ, ಬಲವಂತಗೊಳಿಸಿ ಭಯಗೊಳಿಸಿ ಇತರರ ತಲೆಯಮೇಲೆ ತಮ್ಮ ಅಭಿಪ್ರಾಯಗಳನ್ನು ನ್ಯಾಯವಿರುದ್ಧವಾಗಿ ಹೇರುವ ಪಕ್ಷದವರ ಚರ್ಯೆಗಳನ್ನು ನಾವು ಸೈರಿಸಲಾರೆವು. ಮತ್ತು ಅದನ್ನು ಸಾಗಗೊಳಿಸಲಾರೆವು. ಹೀಗೆ ನಾನು ಈ ಸಂದರ್ಭದಲ್ಲಿ ಭರತಖಂಡಸರ್ಕಾರದ ಮನೋಭಾವವೇನೆಂಬುದನ್ನು ಬಿಚ್ಚಿ ಹೇಳಿರುತ್ತೇನೆ. ನೀವೂ ಕೂಡ ಸರ್ಕಾರದ ಚರ್ಯೆಗಳನ್ನು ಆಕ್ಷೇಪಿಸತಕ್ಕವರೇ. ಪ್ರತಿಯೊಬ್ಬರೂ ಅವರಿಷ್ಟಪ್ರಕಾರ ಧರ್ಮಮಾರ್ಗದಲ್ಲಿ ಪ್ರವರ್ತಿಸುತ್ತಿದ್ದರೆ ಅಂಥವರ ಗೋಜಿಗೆ ಸರ್ಕಾರದವರು ಹೋಗುವುದೇ ಇಲ್ಲ. ಧರ್ಮಕ್ಕೆ ವಿರುದ್ಧವಾಗಿ ನಡೆದರೆ ಅದನ್ನು ತಡೆಯಲಿಕ್ಕೆ ತಕ್ಕಚರ್ಯೆಯನ್ನು ಪರಿಗ್ರಹಿಸುವರು."

ಈ ಮೇಲೆಕಂಡ ವಾಕ್ಯಗಳು ವಯೋವೃದ್ಧ ಜ್ಞಾನವೃದ್ಧರಾದ ರೀಡಿಂಗ್ ಪ್ರಭುಗಳ ಶಾಂತಿ ಸತ್ಯ ನ್ಯಾಯ ಧರ್ಮಪರತೆಯ ಇಯತ್ತೆಯನ್ನು ಸಂಪೂರ್ಣವಾಗಿ ವ್ಯಕ್ತಪಡಿಸುತ್ತಲಿವೆ. ದುಡುಕುವ ತನವು ಅವರ ರಾಜ್ಯಭಾರನಿರ್ವಾಹಕ್ರಮದಲ್ಲಿ ಲೇಶವೂ ಇಲ್ಲನೆಂಬುದನ್ನು ಅವರ ನಡೆನುಡಿಗಳು ದೃಷ್ಟಾಂತಪಡಿಸಿರುತ್ತವೆ. ಪಾಶ್ಚಾತ್ಯದೇಶದ ಸ್ವಾತಂತ್ರ್ಯ ವಾತಾವರಣದಲ್ಲಿ ವಿಹರಿಸಿ ಎಷ್ಟೋ ಕಾಲವನ್ನು ಕಳೆದಿರುವ ಅವರು ಪ್ರಜೆಗಳ ನ್ಯಾಯಬದ್ಧವಾದ ಸ್ವಾತಂತ್ರ್ಯಕಾಂಕ್ಷೆಗೆ ಯಾವ ಮಾತ್ರವಾಗಿಯೂ ತಡೆಯನ್ನು ಕಲ್ಪಿಸತಕ್ಕವರಾಗಿಲ್ಲ. ಯಾರೊಬ್ಬರೂ ತಂತಮ್ಮ ಮನವೊಪ್ಪಿದಂತೆ ರಾಜಕೀಯ ವಿಷಯದಲ್ಲಿ ಅಭಿಪ್ರಾಯವುಳ್ಳವರಾಗಿರಲು ಸ್ವತಂತ್ರರಾಗಿರುತ್ತಾರೆ. ಆದರೆ ಆ ತಮ್ಮ ಅಭಿಪ್ರಾಯದಂತೆಯೇ ಇತರರೂ ನಡೆದುಕೊಳ್ಳಬೇಕೆಂದು ಭಯಬಲತ್ಕಾರಪಡಿಸುವುದು ಮಾತ್ರ ಶಾಸನವಿರುದ್ಧವಾದ ಕೆಲಸವಾಗಿರುತ್ತದೆ. ಅದನ್ನು ಮಾಡಕೂಡದೆಂಬುದೇ ಲಾರ್ಡ್ ರೀಡಿಂಗ್‌ರವರ ಆಶಯವು.

ಈಚೆಗೆ ದೇಶದ ಹಲವುಕಡೆ ಉಂಟಾಗಿರುವ ಗದ್ದಲಗಳಿಗೆಲ್ಲಾ ಬಹುಶಃ ಹರತಾಳ ಮೊದಲಾದುವುಗಳಿಗಾಗಿ ಅಸಹಾಯವಾದಿಗಳು ಇತರರಿಗೆ ದುರ್ಬೋಧನೆಮಾಡಿ ಇಲ್ಲವೆ ಬಲಾತ್ಕರಿಸಿ ಅಥವಾ ಭಯಪಡಿಸಿ ಮಾಡಿದ ಕಾರಣಗಳೇ ಮೂಲವಾಗಿರುತ್ತವೆ. ಹಾಗೆ ಪರರಿಗೆ ಮಾಡುತ್ತ ಬಂದುದರಿಂದಲೇ ನಿಗ್ರಹಸಾಮರ್ಥ್ಯವಿಲ್ಲದ ಸಾಮಾನ್ಯಜನರು ಕ್ರೋಧವೈರಾವೇಶದಿಂದ ಅತ್ಯಾಚಾರಗಳಿಗೆ ಬಿದ್ದು ಮಲಬಾರುದಂಗೆ ಮೊದಲಾದಂಥವುಗಳಿಗೆ ಕಾರಣರಾಗುತ್ತಿರುವರು. ಇಂಥ ಅತ್ಯಾಚಾರ ಪರಂಪರೆಗಳಿಂದ ದೇಶದಲ್ಲಿ ಶಾಂತ ಪ್ರಜೆಗಳಿಗೆ ಸುರಕ್ಷಿತತೆಯು ತಪ್ಪಿ, ಅವರುಗಳು ಮಾನ ಪ್ರಾಣ ಧನಗಳಿಗೆ ಎರವಾಗುತ್ತಿರುವರು. ಆದುಕಾರಣ ಅಂಥ ಸ್ಥಿತಿಯಲ್ಲಿ ದುಷ್ಟಶಿಕ್ಷಣವನ್ನೂ ಶಿಷ್ಟರಕ್ಷಣೆಯನ್ನೂ ಮಾಡದೆ ಪ್ರಭುತ್ವದವರು ತಟಸ್ಥರಾಗಿದ್ದರೆ ಅವರಿಗೆ ಕರ್ತವ್ಯಭ್ರಷ್ಟತೆಯ ದೋಷವು ತಟ್ಟುವುದು. ಲಾರ್ಡ್ ರೀಡಿಂಗ್‌ರವರು ನ್ಯಾಯಧುರಂಧರರೂ ಸತ್ಯಪ್ರಿಯರೂ ಆಗಿರುವುದರಿಂದಲೇ ಇಂಥ ವಿಪರೀತ ಸ್ಥಿತಿಯಲ್ಲೂ ಬಹುಕಾಲ ಸಾಮೋಪಾಯಗಳಿಂದ ಶಾಂತಿರಕ್ಷಣೆಯನ್ನು ಮಾಡಲಿಕ್ಕೆ ಸಾಹಸಪಟ್ಟು ನಿರೀಕ್ಷಿಸಿದರು. ಅದೆಲ್ಲಾ ವ್ಯರ್ಥವಾಯಿತು. ಅಸಹಾಯವಾದಿಗಳಲ್ಲಿ ಅಜ್ಞರಾದ ಸಾಮಾನ್ಯಜನರು ಸರ್ಕಾರದ ಸಹನೆಯನ್ನು ಅಸಮರ್ಥತೆಯೆಂದು ಭಾವಿಸಿಕೊಂಡೋ ಏನೋ ಪ್ರಭುತ್ವದಮೇಲೂ ಅತ್ಯಾಚಾರಗಳನ್ನು ನಡೆಯಿಸಲು ಹಿಂದೆಗೆಯದ ಸ್ಥಿತಿಗೆ ಬಂದರು. ಕಳೆದ ತಾ|| ೧೭ ರಲ್ಲಿ ಬೆಂಗಳೂರು ದಂಡಿನೊಳಗೆ ಖಿಲಾಪತ್ ಸಂಘದವರು ಇತರರನ್ನೆಲ್ಲಾ ಅಂಗಡಿ ಮುಚ್ಚಿಸಲಿಕ್ಕೆ ಬಲಾತ್ಕರಿಸಿದುದಲ್ಲದೆ, ಅದೇ ಸಂದರ್ಭದಲ್ಲಿ ಅಲ್ಲಿಯ ಕಲೆಕ್ಟರಾದ ಮಿ|| ಟಾಸ್ಕರ್‌ರವರ ಮೇಲೆ ವಿಪರೀತವಾಗಿ ಪಾದರಕ್ಷಾಪ್ರಯೋಗಗಳನ್ನೂ ಕಲ್ಲೆನೇಟುಗಳನ್ನೂ ಹಾಕಿದರು. ಒಬ್ಬನು ಹಣೆಮಟ್ಟದ ದೊಣ್ಣೆಯನ್ನು ಹಿಡಿದುಬಂದು ಅವರ ತಲೆಯೊಡಲಿಕ್ಕೆ ಎತ್ತಿದನಂತೆ. ಅಷ್ಟರಲ್ಲಿ ಬಳಿಯಲ್ಲಿದ್ದ ಸೈನಿಕನು ಬಂದು ಅವನ ಹೊಟ್ಟೆಯನ್ನು ಸನೀನಿಂದ ತಿವಿದಮಾತ್ರಕ್ಕೇ ಅವನ ಕರುಳು ಹೊರಕ್ಕೆ ಕಳಚಿಕೊಂಡಿತು. ಇನ್ನುಬೇರೆ ಸೈನಿಕರ ತುಪಾಕಿಯೇಟು ಅವನಿಗೆ ಬಿದ್ದುದರಿಂದ ಅವನು ಭೂಗತನಾದನು. ಅಷ್ಟುಬೇಗನೆ ಸೈನಿಕಸಹಾಯವೊದಗದಿದ್ದರೆ ಮಿ|| ಟಾಸ್ಕರ್‌ರವರೇ ಪರಲೋಕಯಾತ್ರೆಯನ್ನು ಮಾಡಿಬಿಡುತ್ತಿದ್ದರಂತೆ. ಇಂಥ ಸ್ಥಿತಿಯು ಒದಗಿರುವುದರಿಂದಲೇ ಪ್ರಭುತ್ವದವರು ಕಠಿನಶಾಸನಪ್ರಯೋಗವೇ ಮೊದಲಾದುದಕ್ಕೆ ತೊಡಗುವಂತಹ ಅವಶ್ಯಕತೆಯನ್ನು ಈ ಜನರೇ ತಂದಿಟ್ಟುಕೊಂಡರು. ಈಗ ದೇಶದಲ್ಲಿ ಒಂದೊಂದು ಕಡೆಯಿಂದ ಸಭಾನಿರ್ಬಂಧಾಜ್ಞೆ ಕಠಿನ ಶಾಸನಪ್ರಯೋಗ ಮೊದಲಾದುವುಗಳು ಏರ್ಪಡುತ್ತಲಿವೆ. ಕಾಂಗ್ರೆಸ್ ಖಿಲಾಪತ್ ಸ್ವಚ್ಛಂದ ಸೈನಿಕಸಂಘಗಳನ್ನೆಲ್ಲಾ ಶಾಸನವಿರುದ್ಧಗಳೆಂದು ನಿರೋಧಿಸುತ್ತಲಿದ್ದಾರೆ. ಅಸಹಾಯವಾದಿ ಪ್ರಮುಖರನ್ನಂತೂ ದಿನಬೆಳಗಾದರೆ ಹಿಡಿದು ಕಾರಾಗೃಹಗಳಿಗೆ ಸೇರಿಸುತ್ತಲೇ ಇದ್ದಾರೆ. ಇಂಥ ಭೀಕರ ಶೋಚನೀಯ ಸ್ಥಿತಿಯನ್ನು ಅಸಹಾಯವಾದಿಗಳು ದೇಶಕ್ಕೆ ತಂದಿಕ್ಕಿದ್ದಾರೆ. ಅಸಹಾಯವಾದಿಗಳೊಳಗೆ ವಿದ್ಯಾಧಿಕ ಜನರ ನಡೆಯಲ್ಲುಕೂಡ ಸೌಜನ್ಯವು ಮೃಗ್ಯವಾಗಿದೆ. ಮ|| ಗಾಂಧಿಯವರು ಬೋಧಿಸುವಂಥ ಸಾತ್ವಿಕತನವನ್ನು ನಡೆನುಡಿಗಳಲ್ಲಿ ತೋರಿಸುವವರು ಸಾವಿರಕ್ಕೊಬ್ಬರು ಸಿಕ್ಕುವುದೂ ದುರ್ಲಭವೇ ಆಗಿದೆ. ಮನಸ್ಸಿನಲ್ಲಿ ಗಾಂಧಿಯವರ ಸೌಜನ್ಯಭಾವಗಳನ್ನು ಹೊಂದಿರುವವರಂತೂ ಕೋಟಿಗೊಬ್ಬರೂ ಸಿಕ್ಕುವಂತಿಲ್ಲ. ಗಾಂಧಿಯವರ ಸ್ಥಿತಿಯಲ್ಲಿ ಅವರಿಗೆ ಹೋಲತಕ್ಕವರು ಅವರೊಬ್ಬರೇ ಸರಿ. ಮ|| ಗಾಂಧಿಯವರ ಪಕ್ಷದವರು ಪ್ರಭುತ್ವಪಕ್ಷವನ್ನು ನಿಂದಿಸುವಲ್ಲಿ ಉಪಯೋಗಿಸುತ್ತಲಿರುವ ವಚನಗಳನ್ನು ಕೇಳಿದರೆ ಎಂಥವನಿಗೂ ಉಗ್ರಾವೇಶವುಂಟಾಗದೆ ಹೋಗುವುದಿಲ್ಲ. ಆದರೂ ಈಗಣ ಪ್ರಭುತ್ವದವರು ತೋರಿಸುತ್ತಿರುವ ಶಾಂತಿಯಂಥ ಶಾಂತಿಯನ್ನು ತೋರಿಸಲು ಅವರು ಮಾತ್ರವೇ ಶಕ್ತರೆಂದು ಹೇಳುವಲ್ಲಿ ಅಭ್ಯಂತರವಿಲ್ಲ. ಯುವಸಾರ್ವಭೌಮರಲ್ಲಿ ನಮಗೆ ವ್ಯಕ್ತಿ ವಿಷಯಕ ದ್ವೇಷವಾವುದೂ ಇಲ್ಲವೆಂದೂ, ಅವರು ನಮ್ಮ ಸಹೋದರರಂತೆ ಪ್ರೀತಿಸಲ್ಪಡತಕ್ಕವರೆಂದೂ ಮ|| ಗಾಂಧಿಯವರು ಬೋಧಿಸುತ್ತಿದ್ದಾರೆ. ಆದರೆ ಅವರ ಪಕ್ಷದವರೆಂದು ಹೇಳಿಕೊಂಡು ವಿದ್ಯಾಧಿಕರೆನಿಸಿರುವ ಕೆಲಮಂದಿ ವೃತ್ತಪತ್ರಿಕಾ ಸಂಪಾದಕರುಗಳು, ಯುವಸಾರ್ವಭೌಮರನ್ನು ಬಹುವಚನದಿಂದ ಕರೆಯುವುದು ಕೂಡ ಅಪಮಾನವೋ ಅಥವಾ ಪಾಪವೋ ಎಂದು ತಿಳಿದುಕೊಂಡು, ಏಕವಚನಪ್ರಯೋಗಮಾಡುತ್ತ ತಮ್ಮ ಜಘನ್ಯತನವನ್ನು ಹೀಗೂ ತೋರಿಸಿಕೊಳ್ಳುತ್ತಿದ್ದಾರೆ. ಇನ್ನು ಸಾಮಾನ್ಯರ ಪಾಡೇನು?

ವೈಸ್ರಾಯರು ಆಡಿರುವ ಮಾತುಗಳನ್ನು ನೋಡಿದರೆ ದೇಶಶಾಂತಿ ಸ್ಥಾಪನೆಗಾಗಿಯೂ ನಿರುಪದ್ರವಪ್ರಜಾರಕ್ಷಣೆಗಾಗಿಯೂ ಅವರು ಕಠಿನ ಶಾಸನಪ್ರಯೋಗ ಮಾಡಲು ಈಗ ನಡುಕಟ್ಟಿ ನಿಂತಿದ್ದಾರೆಂದು ವ್ಯಕ್ತವಾಗುತ್ತದೆ. ಕಾಂಗ್ರೆಸ್ ಖಿಲಾಪತ್ ಸ್ವಚ್ಛಂದಸೇವಕ ಸಂಘಗಳನ್ನು ನಿರೋಧಿಸಿದ ಸರ್ಕಾರವು ಮುಂದೆ ರಾಷ್ಟ್ರೀಯಮಹಾಸಭೆಯ ವಿಷಯದಲ್ಲೂ ಕೈತೋರಿಸಲು ಪ್ರಯತ್ನಿಸದೆ ಇರಲಾರದು. ಏಕೆಂದರೆ—ನಾಳೆ ಕೂಡುವ ರಾಷ್ಟ್ರೀಯಸಭೆಯಲ್ಲಿ ಶಾಸನೋಲ್ಲಂಘನೆಯ ವಿಷಯದಲ್ಲಿ ವಿಶೇಷ ಚರ್ಚೆಗಳೂ ತೀರ್ಪುಗಳೂ ಆಗುವ ನಿರೀಕ್ಷಣೆಯಿದೆ. ಶಾಸನೋಲ್ಲಂಘನೆಗೆ ಪ್ರೋತ್ಸಾಹಕೊಡುವ ಸಭೆಯನ್ನು ಶಾಸನಬದ್ಧವಾದ ಸಭೆಯೆಂದು ಪ್ರಭುತ್ವದವರು ಎಣಿಸುವುದು ಅಸಂಭವ. ಪ್ರಭುತ್ವದ ಆಜ್ಞೆಯನ್ನು ಪ್ರಜೆಗಳು ಮೀರುವುದೆಂದರೆ—"ಆಜ್ಞಾಭಂಗೋನರೇಂದ್ರಾಣಾಮಶಸ್ತ್ರವಧಉಚ್ಯತೆ" ಎಂಬ ನೀತಿಯಂತೆ ರಾಜಾಜ್ಞೆಗೆ ಭಂಗತರುವುದು ಅವರನ್ನು ಆಯುಧವಿಲ್ಲದೆ ಇರಿಯುವಂಥ ಕೃತ್ಯಕ್ಕೆ ಸಮನಾಗುವುದು. ಅದನ್ನು ಪ್ರಭುತ್ವದವರು ಸೈರಿಸಿಕೊಂಡಿರುವುದೂ ಒಂದೇ; ಸಾಯುವುದೂ ಒಂದೇ ಎನಿಸುವುದು. ಆಗ್ಗೆ ಏನಾದೀತೆಂಬುದನ್ನು ಹೇಳುವುದು ಸುಲಭವಲ್ಲ. ರೇಗಿದ ಪ್ರಜೆಗಳ ಮತ್ತು ಸಶಕ್ತರಾದ ಅಧಿಕಾರಿಗಳ ಮಧ್ಯದ ಚಕಮಕಿಯು ಸಾಮಾನ್ಯಪರಿಣಾಮಿಯಾಗುವುದಿಲ್ಲ. ವಿಚಾರಮಾಡಮಾಡುತ್ತ ಹೋದರೆ ದೇಶಕ್ಕೆ ಎಷ್ಟೋ ಗಂಡಾಂತರಗಳು ಕಣ್ಣುಮುಂದೆ ಕಟ್ಟಿದಂತೆ ತೋರುತ್ತಿರುವುವು.

ಮ|| ಗಾಂಧಿಯವರು ಯುವಸಾರ್ವಭೌಮರ ಆಗಮನಕಾಲದಲ್ಲಿ ದೂರ ಸಿಡಿದುನಿಂತು ದೇಶೀಯರನ್ನೆಲ್ಲಾ ಹರತಾಳ ಮಾಡುವುದಕ್ಕೆ ಬೋಧಿಸಿ ರೇಗಿಸುವುದಕ್ಕಿಂತಲೂ, ಯುವಸಾರ್ವಭೌಮರಲ್ಲಿ ತಮ್ಮ ಕಷ್ಟಸುಖಗಳನ್ನೆಲ್ಲಾ ನಿವೇದಿಸಲಿಕ್ಕೆ ಭಾರತ ಸರ್ಕಾರದವರು ಅವಕಾಶವನ್ನು ಕಲ್ಪಿಸಿಕೊಡುವುದಾದರೆ ತಾವೆಲ್ಲರೂ ರಾಜಭಕ್ತಿಯಿಂದ ಸ್ವಾಗತಿಸುವೆವೆಂದೂ, ಇಲ್ಲವಾದರೆ ಹರತಾಳವನ್ನಾಚರಿಸಬೇಕಾಗುವುದೆಂದೂ ಮೊದಲೇ ಸೂಚಿಸಿಬಿಟ್ಟು, ಅದಕ್ಕೆ ಭಾರತಸರ್ಕಾರದವರು ಅವಕಾಶಮಾಡಿಕೊಡದಿದ್ದರೆ ಹರತಾಳಾದಿ ವಿರೋಧಭಾವಗಳನ್ನು ವ್ಯಕ್ತಪಡಿಸಬಹುದಾಗಿದ್ದಿತೆಂದು ಅನೇಕರು ಹೇಳುತ್ತಲಿದ್ದಾರೆ. ಈಗ ಆ ಕಾಲವೇನೋ ಮಿಂಚಿಹೋಯಿತು. ಹಿಂದೆ ಹರತಾಳಮಾಡಿ ಸಾಕಾಗಿ ಅದರಿಂದ ಫಲವೇನೂ ಇಲ್ಲವೆಂದು ಗಾಂಧಿಯವರೇ ಒಂದುಸಲ ತಮ್ಮ ಪತ್ರಿಕೆಯಲ್ಲಿ ಹೇಳಿದ್ದರು. ಈಗ ಮತ್ತೆ ಅದಕ್ಕೆ ಹುರಿದುಂಬಿಸಿದ್ದಾರೆ. ಈ ಹರತಾಳ ಮೊದಲಾದುವುಗಳ ಆಚರಣೆಯಿಂದ ವ್ಯಾಪಾರಗಾರರಿಗೆ ಒಂದೆರಡು ದಿನದ ಸಂಪಾದನೆಗೆ ಸೊನ್ನೆಯಾಗುವುದೇ ಹೊರತು ಸರ್ಕಾರಕ್ಕೆ ಯಾವನಷ್ಟವೂ ಆಗುವುದಿಲ್ಲ. ಕೊಂಡುತಿನ್ನುವ ಪ್ರಜೆಗಳಿಗೂ ಕಷ್ಟವಾಗುವುದು. ಹುಚ್ಚು ಹಿಡಿದು ತಲೆಗೆ ಮಣ್ಣನ್ನು ಹುಯ್ದುಕೊಳ್ಳುವವರು ಹುಯ್ದುಕೊಳ್ಳಲೆಂದು ಅವರಪಾಡಿಗೆ ಅದನ್ನು ಬಿಟ್ಟು ಇತರಪ್ರಜೆಗಳೆಲ್ಲಾ ತಟಸ್ಥರಾಗಿರುವುದು ಮೇಲು. ಹಿಂದೆ ನಾನಾತರದ ಉಪಟಲಗಳ ದೆಸೆಯಿಂದೆಲ್ಲಾ ಆಂಗ್ಲಪ್ರಭುತ್ವದವರು ಭರತಖಂಡವನ್ನು ಕಾಪಾಡಿದರೇ ಹೊರತು ಮತ್ತಾರಿಂದಲೂ ಈಗಣಷ್ಟು ಶಾಂತಿಸಮಾಧಾನಗಳನ್ನು ಭರತಖಂಡಕ್ಕೆ ಉಂಟುಮಾಡುವುದಾಗಲಿಲ್ಲ. ಮುಂದಾದರೂ ಅದೇ ಶಾಶ್ವತ. ಇದನ್ನು ದೀರ್ಘವಾಗಿ ಪರ್ಯಾಲೋಚಿಸಿ ಪ್ರಜೆಗಳೆಲ್ಲಾ ನಡೆದುಕೊಳ್ಳುವಂತೆ ಭಾರತ ಭೂಮಾತೆಯು ತಕ್ಕಬುದ್ಧಿಯನ್ನು ಅನುಗ್ರಹಿಸಲಿ.

ನಮ್ಮ ಸಂಸ್ಥಾನದಲ್ಲಿ ಕಾಂಗ್ರೆಸ್ ಖಿಲಾಪತ್ತುಗಳಿಗೆ ಸಂಬಂಧಪಟ್ಟಂತೆ ದ್ವೇಷಾಸೂಯಾಜನಕಗಳಾದ ಉಪನ್ಯಾಸ ಮಾಡಲಿಕ್ಕೆ ಹೊರಗಣಿಂದ ಈ ದೇಶಕ್ಕೆ ಬರುವವರನ್ನು ನಿಷೇಧಿಸಲಿಕ್ಕೂ, ಇಲ್ಲಿ ಅಂಥ ಕೂಟಗಳನ್ನಾರಾದರೂ ನಡೆಯಿಸಿದರೆ ಅವರನ್ನು ಗಡೀಪಾರು ಮಾಡಲಿಕ್ಕೂ ಸಾಧಕವಾದ ಅಪ್ಪಣೆಯು ಈಗತಾನೇ ನಮ್ಮ ಪ್ರಭುತ್ವದವರಿಂದ ಮಾಡಲ್ಪಟ್ಟಿರುವುದೆಂಬ ಸುದ್ದಿಯನ್ನು (ನಮ್ಮ ಇಂಗ್ಲೀಷ್ ಕಾಲಂ ಬರೆಯಲ್ಪಟ್ಟ ಮೇಲೆ) ಕೇಳುತ್ತೇವೆ. ಈ ಕಾರ್ಯವನ್ನು ೬ ತಿಂಗಳಿಗೆ ಮುಂಚೆಯೇ ಮಾಡಿದ್ದರೆ ಇನ್ನೂ ಚೆನ್ನಾಗಿದ್ದಿತು. ಈಗಲಾದರೂ ಪ್ರಭುತ್ವದವರು ಇತ್ತ ಕಣ್ತೆರೆದುದಕ್ಕಾಗಿ ಸಮಾಧಾನಪಡುತ್ತೇವೆ. ಮತ್ತು ಅಂಥ ಅಪ್ಪಣೆಯನ್ನು ಬಹಿರಂಗವಾಗಿ ಪ್ರಕಟಿಸಿ, ಸಕಲ ಪ್ರಜೆಗಳೂ ಎಚ್ಚತ್ತುಕೊಂಡಿರುವಂತೆ ಮಾಡುವುದರಲ್ಲಿ ಗುಣವುಂಟೆಂಬುದನ್ನು ಸೂಚಿಸಲು ಅಪೇಕ್ಷಿಸುತ್ತೇವೆ.

THE CONGRESS COMMITTEE.

Last week we chronicled on the work of the non-Co-operators in the State and referred to the advent of Mr. Muduvedkar in rapid succession of Messrs. Satyamurti and Ramamurti. At any other time what these people said or did would not have deserved any notice. H. R. H. the Prince of Wales' visit to Mysore is approaching and any rebellious talk in our midst cannot be countenanced. They raise funds and burn clothes of ours to satisfy their mad cravings. It brings about economic distress. There are discontented people, there are idle people and there are ignorant and superstitious people everywhere, and these become the pray to those people—not knowing the ends for which these means are employed.

We have been repeatedly emphasising that there is no occasion for the Congress activity in Mysore. Mr. S. S. Setlur has a lengthy explanation on the subject and we are at a loss to make out a case for Mysore. He gives the instance of Pudukota and other Indian States to illustrate the occasion for the Congress intereference. We do not find reason to discuss the merits of the specific instances quoted by Mr. Setlur as we are mainly concerned with our own affairs. According to him Mysore is the last place where the Congress advice is required. But the activity is of the intense kind here. Pudukota is safe from this erratic tour of Congress men. Hyderabad is free and Kollapur has none. Why trouble Mysore with these rapid movements of fever haste—Bangalore to Kolar, Tumkur and Mysore. "The Congress Committee in town." What is its constitution? Mr. Setlur at the head of it and he has come all the way from Benarese where he is supposed to have filled the Hindu Law chair of the Hindu University. He is an ex-judge of the Mysore Chief Court and was long a leading Hindu Law Advocate of the Bombay High Court. No doubt his reputation is very great. He is above all a Patriotic Mysorean and a member of a leading family in Mysore, which has done great service to the State in the past. Such a gentleman it grates on our ears to hear is leading this Congress tour in Mysore. At the same time Mr. K. Rangaiengar, probably of Tumkur, has a letter in the Hindu of 26-11-21 on "Responsible Government in Mysore" and that soon after this Congress body left Tumkur.

Something is said in these speeches of Messrs. Setlur and Muduvedkar which does not fit in with the conditions in Mysore. What they say is not, according to them, not wanted here and still they go on talking unlimitedly. There appears to be something behind all this which we do not want. They appear to create a feeling to serve their own ends. We fear we do not want them. We say that the people of Mysore do not want their propaganda. There is a very thin layer hiding their rapid perambulations from District to District. And who meet them and who hear them? Investigate. Bundle them out we must and that immediately. Between the young students on one side whose minds are poisoned and the ignorant on the the other whose minds are mesmerised, the country is in danger at a time when our hearts are leaping with joy to welcome the English Prince to whom our beloved Maharajah is attached as a loyal Friend.

Bundle out the poisoning trash before it is late. Unless it is said strong, we fear, the significance of the mischievous movement will not be understood. The love of our country is more to us than the sentiment of feeling for a strong expression. A strong hand must be set to work to bundle out these outsiders and the action must be sharp and decisive. We just now learn that our Government have taken proper steps in the matter.

ಶ್ರೀ ಕೃಷ್ಣರಾಜೇಂದ್ರ ಮಿಲ್ ಕಟ್ಟಡದ ಶಂಕುಸ್ಥಾಪನ ಮಹೋತ್ಸವವು.

ರಾಜಧಾನಿಯಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ೩ನೇ ಮೈಲಿ ಕಲ್ಲಿನ ಸಮೀಪದಲ್ಲಿ ಪೂರ್ವ ಮಿಟ್ಕಾಪೇಟರ ತೋಟವಾಗಿದ್ದ ಸ್ಥಳದಲ್ಲಿ ಕಟ್ಟಲ್ಪಡಲಿಕ್ಕಿರುವ ಈ ಮಿಲ್ಲಿನ ಕಟ್ಟಡದ ಶಂಕುಸ್ಥಾಪನೆಯು ಈ ಮಿಲ್ಲಿನ ಪೋಷಕರಾದ ಶ್ರೀಮನ್ಮಹಾರಾಜರ ಅಮೃತಹಸ್ತದಿಂದ ಮಾಡಲ್ಪಟ್ಟಿತು. ಈ ಸಮಾರಂಭಕ್ಕೆ ದಿವಾನರವರು, ಕಂಪೆನಿಯ ಚೇರ್ಮನ್ನರಾದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ.ಯವರು, ಕೈಗಾರಿಕೆ ಮತ್ತು ವ್ಯಾಪಾರಶಾಖೆಯ ಡೈರೆಕ್ಟರಾದ ಮಿ|| ಪಿ. ಜಿ. ಡಿಸೋಜಾಯವರು, ಮ|| ಮಂಡಿ ಹರಿಯಣ್ಣನವರು, ಮ|| ಸಜ್ಜನರಾಯರು, ಮ|| ಬಿ. ಕೆ. ಗರುಡಾಚಾರರು ಮೊದಲಾದ ಡೈರೆಕ್ಟರುಗಳು, ರಾಜಧಾನಿಯ ಡಿ|| ಕಮಿಷನರು, ಜಡ್ಜಿಗಳು ಮೊದಲಾದ ಸರ್ಕಾರಿ ಅಧಿಕಾರಿಗಳು, ಲಾಯರುಗಳು, ಮ್ಯುನ್ಸಿಪಲ್ ಕೌನ್ಸಿಲರುಗಳು, ವರ್ತಕರುಗಳು ಮೊದಲಾದ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಶ್ರೀಮನ್ಮಹಾರಾಜರ ಸ್ವಾರಿಯು ಏಡಿಕಾಂಗರಾದ ಮಿ|| ಪಾರವರೊಡನೆ ಮೋಟಾರುಬಂಡಿಯಲ್ಲಿ ೯| ಗಂಟೆಗೆ ಚಿತ್ತೈಸಿತು. ಕಟ್ಟಡದ ಸ್ಥಳವು ಧ್ವಜಪತಾಕೆಗಳಿಂದಲೂ ತಳಿರುತೋರಣಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದಿತು. ದಿ|| ಬ|| ಪುಟ್ಟಣ್ಣಶೆಟ್ಟರು ಮತ್ತು ಡೈರೆಕ್ಟರುಗಳು ಮಹಾಸ್ವಾಮಿಯವರನ್ನು ಇದಿರ್ಗೊಂಡು ಮರ್ಯಾದಿಸಿ ಅಲಂಕೃತವಾದ ಡೇರಾಕ್ಕೆ ಕರೆದುಕೊಂಡುಬಂದು ಉಚಿತಾಸನದಲ್ಲಿ ಕುಳ್ಳಿರಿಸಿದರು. ಚೇರ್ಮನ್ನರು ಡೈರೆಕ್ಟರುಗಳ ಮತ್ತು ಮಿಲ್ಲಿನ ಮುಖ್ಯಾಧಿಕಾರಿಗಳ ಪರಿಚಯವನ್ನು ಶ್ರೀಮನ್ಮಹಾರಾಜರವರಿಗೆ ಮಾಡಿಸಿದರು. ಆನಂತರ ಚೇರ್ಮನ್ನರು ಡೈರೆಕ್ಟರುಗಳ ಮತ್ತು ಷೇರುದಾರರುಗಳ ಪರವಾಗಿ ವಿಜ್ಞಾಪನಪತ್ರಿಕೆಯನ್ನು ಓದಿದ ಮೇಲೆ ಶ್ರೀಮಂತ ವರ್ಧಮಾನಯ್ಯನವರು ಪತ್ರಿಕೆಯನ್ನು ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಪುಷ್ಪಹಾರ ಗುಚ್ಛಗಳ ಸಮೇತ ಶ್ರೀಮನ್ ಮಹಾರಾಜರವರಿಗೆ ಅರ್ಪಿಸಿದರು. ಈ ಪೆಟ್ಟಿಗೆಯ ಮೇಲ್ಭಾಗದಲ್ಲಿ ಗಂಡಭೇರುಂಡವೂ, ಪಕ್ಕಗಳಲ್ಲಿ ಸರಸ್ವತಿ ಲಕ್ಷ್ಮಿ ಮತ್ತು ರಾಮ ಇವರುಗಳ ವಿಗ್ರಹಗಳೂ ಸುಂದರವಾಗಿ ಕೆತ್ತಲ್ಪಟ್ಟಿದ್ದುವು. ವಿಜ್ಞಾಪನೆಯ ಮುಖ್ಯಾಭಿಪ್ರಾಯವೇನೆಂದರೆ—

ಈ ದಿವಸ ಈ ಕಾರ್ಯಾಲದ ಕಟ್ಟಡದ ಅಸ್ತಿಭಾರದ ಶಿಲಾಪ್ರತಿಷ್ಠಾಪನೆಯನ್ನು ಮಾಡಲು ಸನ್ನಿಧಾನದ ಘನತರವಾದ ಅನುಗ್ರಹವನ್ನು ದಯಪಾಲಿಸಿದುದಕ್ಕಾಗಿ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಕಾರ್ಯನಿರ್ವಾಹಕ ಅಧಿಕಾರಿಗಳ ಮತ್ತು ಷೇರುದಾರರ ಪರವಾಗಿ ನಮ್ಮಗಳ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಸಂಸ್ಥಾನದಲ್ಲಿ ಒಂದು ಹತ್ತಿಯ ಕಾರ್ಯಾಲಯವನ್ನು ಸ್ಥಾಪಿಸುವ ವಿಚಾರವು ಬಹುದಿನಗಳಿಂದ ನಡೆಯುತ್ತಿದ್ದುದರ ಮೇಲೆ ಈ ಕಂಪೆನಿಯ ಸ್ಥಾಪನೆಗೆ ಕಾರಣಭೂತರಾದವರು ಬಹಳ ಪರ್ಯಾಲೋಚನೆಯಿಂದ ಅದನ್ನು ರಾಜಧಾನಿಯಲ್ಲಿ ಸ್ಥಾಪಿಸಲು ನಿರ್ಧರಿಸಿ, ಇದನ್ನು ಕಾರ್ಯಕಾರಿಯಾಗಿಮಾಡಲು ಒಂದು ಜಾಯಿಂಟ್ ಸ್ಟಾಕ್ ಕಂಪೆನಿಯನ್ನು ಏರ್ಪಡಿಸಿದರು. ಈ ಮಿಲ್ಲಿಗೆ ಮಹಾಸ್ವಾಮಿಯವರ ಹೆಸರನ್ನಿಡಲು ಕರುಣೆಯಿಂದ ಅನುಜ್ಞೆಯನ್ನಿತ್ತುದಲ್ಲದೆ, ಅರಮನೆಯಿಂದ ೫ ಲಕ್ಷ ರೂ.ಗಳ ಷೇರುಗಳನ್ನು ತೆಗೆದುಕೊಳ್ಳಲು ವಾಗ್ದಾನವಾಯಿತು. ನಮ್ಮ ಮುಂದಣ ಪ್ರಯತ್ನಗಳಲ್ಲಿ ಮಹಾಸ್ವಾಮಿ ಸರ್ಕಾರದವರು ತೋರಿಸಿದ ಸಾನುಭೂತಿಗಾಗಿ ನಾವು ವಂದಿಸುತ್ತೇವೆ. ಈ ಕಾರ್ಯಾಲಯವನ್ನು ನಡಿಸಲು ಮುಖ್ಯಸಾಧನವಾದ ವಿದ್ಯುಚ್ಛಕ್ತಿಯನ್ನು ಬೆಂಗಳೂರಿನವರಿಗೆ ಕೊಟ್ಟಿರುವ ರಿಯಾಯತಿ ದರದಲ್ಲಿ ನಮಗೂ ಕೊಡುತ್ತೇವೆಂದು ಸರ್ಕಾರದವರು ವಾಗ್ದಾನಮಾಡಿರುವರು, ಮತ್ತು ಈ ಕಾರ್ಯಾಲಯದ ಕಟ್ಟಡಕ್ಕಾಗಿ ಅನುಕೂಲವಾದ ಸ್ಥಳಗಳನ್ನು ಕೊಂಡುಕೊಳ್ಳುವಲ್ಲಿ ವಿಶೇಷವಾಗಿ ಸಾಹಾಯ್ಯಕರಿಸಿರುವರು. ಈ ಕೃಷ್ಣರಾಜೇಂದ್ರ ಮಿಲ್ಲು ೪೦ ಲಕ್ಷ ರೂ. ಬಂಡವಾಳದಿಂದ ೧೯೨೦ನೇ ಆಗಸ್ಟ್ ೧೯ ರಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿತು. ಮೈಸೂರಿನಲ್ಲಿ ಪ್ರಮುಖರಾದ ವರ್ತಕರಿಂದೊಡಗೂಡಿದ ಎಂ. ಎಲ್. ವರ್ಧಮಾನಯ್ಯ ಅಂಡ್ ಕಂಪೆನಿಯವರು ಮ್ಯಾನೇಜಿಂಗ್ ಏಜಂಟರುಗಳಾಗಿ ನೇಮಿಸಲ್ಪಟ್ಟಿರುವರು. ಷೇರು ದರಖಾಸ್ತು ಪ್ರಕಟವಾದ ಮೂವತ್ತು ದಿನಗಳೊಳಗಾಗಿ ಅಪೇಕ್ಷಿತವಾಗಿದ್ದುದಕ್ಕಿಂತಲೂ ಹೆಚ್ಚಾಗಿ ಷೇರುಗಳು ಕೂಡಿದುವು. ಇದರೊಳಗೆ ೧೦೦ಕ್ಕೆ ೮೦ ರಷ್ಟು ಮೈಸೂರು ಸೀಮೆಯವರಿಂದಲೇ ಬಂದುದಾಗಿರುತ್ತದೆ.

ಕೋಲಾರದ ಚಿನ್ನದ ಗಣಿಯಲ್ಲಿ ಪ್ರಖ್ಯಾತ ಕಂಟ್ರಾಕ್ಟರಾದ ಮಿ|| ರಾಮಲಿಂಗಂರವರಿಗೆ ಈ ಕಾರ್ಯಾಲಯದ ಕಟ್ಟಡದ ನಿರ್ಮಾಣಕಾರ್ಯವು ವಹಿಸಲ್ಪಟ್ಟಿರುವುದು. ಈಗಾಗಲೇ ಮುಖ್ಯವಾದ ಕೆಲಸಗಳು ಮುಗಿಸಲ್ಪಟ್ಟಿರುವವು. ಮರದ ಮತ್ತು ಇತರ ಬೇಕಾದ ಸಾಮಾನುಗಳು ಸಿದ್ಧಗೊಳಿಸಲ್ಪಟ್ಟಿರುವುದರಿಂದ ಪೂರ್ತಿಯಾಗಿ ಕಟ್ಟಡವು ಇನ್ನುಕೆಲವು ತಿಂಗಳಲ್ಲಿ ಸಿದ್ಧವಾಗಬಹುದೆಂದು ಡೈರೆಕ್ಟರುಗಳು ನಂಬುತ್ತಾರೆ. ಈ ಮಿಲ್ಲು ೨೫,೦೦೦ ಕದರುಗಳನ್ನೂ, ೬೦೦ ಲಾಳಿಗಳನ್ನೂ, ಕಾಲುಚೀಲ ಬನಿಯನುಗಳನ್ನು ಮಾಡುವ ಯಂತ್ರಗಳನ್ನೂ ಒಳಗೊಂಡಿರುವುದು. ಕಾಲುಚೀಲ ಬನಿಯನ್ನುಗಳನ್ನು ಕೂಡಲೇ ನೆಯ್ಯಲು ಏರ್ಪಡಿಸಿದೆ. ಕದರುಗಳು ಜೋಡಿಸಲ್ಪಟ್ಟ ಕೂಡಲೇ ದಾರ ನೂಲುವ ಕೆಲಸವು ಆರಂಭಿಸಲ್ಪಡುವುದು. ಕೆಲವು ಕಾಲಾನಂತರ ಬಟ್ಟೆಯ ನೆಯ್ಗೆ ಕೆಲಸವು ಉಪಕ್ರಮಿಸಲ್ಪಡುವುದು.

ನಮ್ಮ ಸಂಸ್ಥಾನದಲ್ಲಿ ನೇದ ಬಟ್ಟೆಗಳ ಮೇಲೆ ಹಾಕಿರುವ ಸುಂಕದ ಪದ್ಧತಿಯನ್ನು ಮುಂದಕ್ಕೆ ನಡೆಸಿಕೊಂಡುಬರುವ ವಿಚಾರವನ್ನು ಮಹಾಸ್ವಾಮಿಯವರ ಸರ್ಕಾರದವರು ಶೀಘ್ರದಲ್ಲಿ ಪರ್ಯಾಲೋಚಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ. ಈ ಕೈಗಾರಿಕೆಯಿಂದ ಸರ್ಕಾರಕ್ಕೆ ಆದಾಯದ ತೆರುಗೆಯು ಸಲ್ಲುತ್ತಿರುವುದರಿಂದ ಕೈಗಾರಿಕೆಯ ಅಭಿವೃದ್ಧಿಗೆ ಸರ್ಕಾರದವರು ಮಾಡಬೇಕೆಂದಿರುವ ಪ್ರೋತ್ಸಾಹಕ್ಕೆ ಹತ್ತಿಯ ಪದಾರ್ಥಗಳ ಮೇಲೆ ಈಗ ವಿಧಿಸಿರುವ ಸುಂಕವು ಒಂದಾತಂಕವಾಗಿ ಪರಿಣಮಿಸುವ ಪ್ರಯುಕ್ತ ಈ ಸುಂಕದ ವಿಚಾರವಾಗಿ ಸರ್ಕಾರದವರು ಪುನರಾಲೋಚನೆಮಾಡತಕ್ಕದ್ದಾಗಿರುವುದು."

ಇದಕ್ಕೆ ಮಹಾರಾಜರವರು ದಯಪಾಲಿಸಿದ ಉತ್ತರ:—

ಮ|| ಪುಟ್ಟಣ್ಣಶೆಟ್ಟರು ಈಗ ಓದಿದ ಅಡ್ರೆಸ್ಸನ್ನು ಬಹಳ ಆಸಕ್ತಿಯಿಂದ ಕೇಳಿದೆವು. ಸಂಸ್ಥಾನದ ಕೈಗಾರಿಕೆಯ ಅಭಿವೃದ್ಧಿವಿಚಾರದಲ್ಲಿ ನಮಗೆ ಸಂಪೂರ್ಣವಾದ ಅಭಿಮಾನವಿದೆ. ಈ ದಿವಸ ನಾವು ಶಂಕುಸ್ಥಾಪನೆ ಮಾಡಲಿಕ್ಕಿರುವ ಮಿಲ್ಲಿನ ಮೂಲಧನಕ್ಕೆ ಸ್ಥಳೀಯರಿಂದಲೇ ಚಂದಾ ವಿಶೇಷವಾಗಿ ಕೊಡಲ್ಪಟ್ಟಿರುವದೆಂದು ತಿಳಿಯಲು ಬಹಳ ಸಂತೋಷವಾಗುತ್ತದೆ. ನೆಯ್ದ ಬಟ್ಟೆಮೇಲಣ ಸುಂಕದ ವಿಚಾರದಲ್ಲಿ ನೀವು ಮಾಡಿಕೊಂಡಿರುವ ವಿಜ್ಞಾಪನೆಗೆ ಈಗ ಖಚಿತವಾದ ಉತ್ತರವನ್ನು ಕೊಡಲಾಗುವುದಿಲ್ಲವಾದರೂ, ನಮ್ಮ ಸರ್ಕಾರದವರಿಂದ ಪರ್ಯಾಲೋಚಿಸಲ್ಪಡುವುದು. ಮಿಲ್ಲಿನ ಕಟ್ಟಡವು ಬಹಳ ತ್ವರೆಯಿಂದ ನಡೆಯುತ್ತಿರುವುದೆಂದು ಕೇಳಲು ಸಂತೋಷವಾಗುತ್ತದೆ. ಕೂಲಿಕಾರರಿಗೆ ಅನುಕೂಲವೂ ಆರೋಗ್ಯಕರವೂ ಆದ ವಾಸಸ್ಥಳಗಳನ್ನು ಜನಸಾಂದ್ರತೆಗೂ ಅನಾರೋಗ್ಯಕ್ಕೂ ಅವಕಾಶವಾಗದಂತೆ ಕಲ್ಪಿಸಿಕೊಡುವುದು ಅತ್ಯಾವಶ್ಯಕವೆಂಬ ಅಂಶವನ್ನು ಡೈರೆಕ್ಟರುಗಳ ಗಮನಕ್ಕೆ ತರಲು ಇಚ್ಛಿಸುತ್ತೇವೆ.

ಈ ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಈ ಕಾರ್ಯಾಲಯವು ಇದೇ ಮೊದಲನೆಯದಾಗಿರುತ್ತದೆ, ಮತ್ತು ಇಂತಹ ಕಾರ್ಖಾನೆಗಳು ಹೆಚ್ಚಲು ಇದು ಮಾರ್ಗದರ್ಶಕವಾಗಿರುತ್ತದೆ. ಈ ಕಾರ್ಯಾಲಯವು ಭದ್ರತೆಯಿಂದಲೂ, ಶ್ರದ್ಧೆಯಿಂದಲೂ ನಡೆಸಲ್ಪಡುವದೆಂದೂ ಮತ್ತು ಇದು ಮುಂದೆ ವಿಶೇಷ ಅಭಿವೃದ್ಧಿಗೆ ಬರುವದೆಂದೂ ನಂಬುತ್ತೇವೆ. ಎಂಗು ಅಪ್ಪಣೆಕೊಡಿಸಿ ಶಂಕುಸ್ಥಾಪನೆಮಾಡಿ ಅಲ್ಲಿಂದ ಕಾಲುಚೀಲ ಬನಿಯನ್ನುಗಳ ನ್ನೇಯುವುದನ್ನು ಪರಾಮರ್ಶಿಸಿ ಸಂತೋಷವನ್ನು ವ್ಯಕ್ತಪಡಿಸಿ ಸರ್ವರಿಂದಲೂ ಬೀಳ್ಕೊಟ್ಟು ತೆರಳಿದರು.

ಒಳದೇಶದ ವೃತ್ತಾಂತಗಳು.

ಭರತಖಂಡದಲ್ಲಿರುವ ಸಕಲ ಬಾಲಚಮೂವಿಗೂ ಅನ್ವಯಿಸುವಂತೆ ಏರ್ಪಡಿಸುವ ಒಂದು ಬಹುಮಾನದ ರಜತಕಲಶಕ್ಕೆ ನಮ್ಮ ಶ್ರೀಮನ್ಮಹಾರಾಜರು ತಮ್ಮ ಹೆಸರನ್ನಿಡಲು ಅನುಮತಿಕೊಟ್ಟಿರುತ್ತಾರೆ.

ದಿವಾನ್ ಸರ್ ಕಾಂತರಾಜ ಅರಸಿನವರು ಕಳೆದ ತಾ|| ೨೯ರ ಸಾಯಂಕಾಲದಲ್ಲಿ ಸಂಸ್ಥಾನದ ಎಲ್ಲಾ ಶಾಖಾಮುಖ್ಯಾಧಿಕಾರಿಗಳನ್ನೂ ಬೆಂಗಳೂರಲ್ಲಿರುವ ತಮ್ಮ ಪ್ರಾಸಾದಕ್ಕೆ ಬರಮಾಡಿಕೊಂಡು ವನವಿಹಾರೋತ್ಸವದಿಂದ ಸತ್ಕರಿಸಿದರು. ಮತ್ತು ತಾ|| ೧ರಲ್ಲಿ ರಾಜಧಾನಿಯಲ್ಲಿ ನಡೆದ ಶ್ರೀ ಕೃಷ್ಣರಾಜೇಂದ್ರ ಮಿಲ್ ಕಟ್ಟಡದ ಶಂಕುಸ್ಥಾಪನ ಮಹೋತ್ಸವಕ್ಕೆ ದಯಮಾಡಿದ್ದು ಮರಳಿ ಬೆಂಗಳೂರಿಗೆ ಚಿತ್ತೈಸಿದರು.

ವೈಸ್ರಾಯರ ಕಾರ್ಯನಿರ್ವಾಹಕ ಸಭಾಸಭಾಸ್ತಾರರಾದ ಅ|| ಬಿ. ಎನ್. ಶರ್ಮರವರು ಕಳೆದ ತಾ|| ೩ರಲ್ಲಿ ದಿಲ್ಲಿಪಟ್ಟಣದಿಂದ ಹೊರಟು ಬೇರೆಬೇರೆ ಆಧಿಪತ್ಯಗಳಲ್ಲಿ ಜರುಗುತ್ತಿರುವ ನೀರಾವರಿಯ ಆಣೆಕಟ್ಟೆಗಳನ್ನು ಪರಿಶೀಲಿಸಿಕೊಂಡು ಹೋಗುವರು. ಈ ಸಂದರ್ಭದಲ್ಲಿ ಮದ್ರಾಸಿನಿಂದ ಬೆಂಗಳೂರಿಗೆ ಬಂದು ಅಲ್ಲಿಂದ ಡಿಸೆಂಬರ್ ತಾ|| ೧೮ರಲ್ಲಿ ರಾಜಧಾನಿಗೂ ಬಂದು ಕೃಷ್ಣರಾಜಸಾಗರದ ಆಣೆಕಟ್ಟನ್ನು ಪರೀಕ್ಷಿಸಿಕೊಂಡು ಹೋಗುವರು.

ಶ್ರೀಮನ್ಮಹಾರಾಜರವರು ಪ್ರೈವೇಟ್ ಸೆಕ್ರೆಟರಿ, ಹುಜೂರು ಸೆಕ್ರೆಟರಿ ಏಡಿಕಾಂಗ್‌ರವರು, ಗೋಪಾಲಕೃಷ್ಣ ಅರಸಿನವರು, ಗೋಪಾಲರಾಜ ಅರಸಿನವರು, ಗೋಪಾಲರಾಯರು ಇವರುಗಳೊಡನೆ ಬೆಂಗಳೂರಿನಿಂದ ಈ ದಿವಸ ಕಾಶಿಗೆ ಪ್ರಯಾಣಮಾಡಿ ತಾ|| ೧೨ರ ವರೆಗೂ ಪ್ರಯಾಗದಲ್ಲಿದ್ದು ತಾ|| ೧೩ರ ಬೆಳಗ್ಗೆ ಕಾಶಿಗೆ ಚಿತ್ತೈಸಿ ಅಲ್ಲಿ ಹಿಂದೂ ವಿಶ್ವವಿದ್ಯಾಲಯದ ಚಾನ್ಸಲರ ಪೀಠವನ್ನಲಂಕರಿಸಿ ಯುವಸಾರ್ವಭೌಮರಿಗೂ ಮತ್ತೆ ಕೆಲವರಿಗೂ ಎಲ್.ಎಲ್.ಡಿ. ಪ್ರಶಸ್ತಿಯನ್ನಿತ್ತು ತಾ|| ೧೫ ರಲ್ಲಿ ಅಲ್ಲಿಂದ ಹಿಂದಿರುಗಿ ರಾಜಧಾನಿಗೆ ಪ್ರಯಾಣಮಾಡುವವರಾಗಿರುವರು.

ನಮ್ಮ ಸಂಸ್ಥಾನದಲ್ಲಿ ಸೀನಿಯರ್ ಕೌನ್ಸಿಲರ ಪದವಿಯವರೆಗೆ ಅಧಿಕಾರನಿರ್ವಾಹವನ್ನು ಮಾಡಿ ವಿಶ್ರಾಂತಿಪಡೆದುಕೊಂಡಿದ್ದ ಮ|| ರಾಜಮಂತ್ರಪ್ರವೀಣ ಸಿ. ಶ್ರೀನಿವಾಸಯ್ಯಂಗಾರರು ಕೆಲಕಾಲದಿಂದ ಪಾರ್ಶ್ವವಾಯು ಪೀಡಿತರಾಗಿದ್ದು ಕಳೆದ ತಾ|| ೨೫ರಲ್ಲಿ ತಮ್ಮ ೭೧ನೆ ವಯಸ್ಸಿನಲ್ಲಿ ಬೆಂಗಳೂರಲ್ಲಿರುವ ತಮ್ಮ ಮನೆಯೊಳಗೆ ಸ್ವರ್ಗಸ್ಥರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರ ಕುಮಾರರಾದ ಮ|| ಬಿ. ಕುಪ್ಪುಸ್ವಾಮಯ್ಯಂಗಾರರು ಅ|| ಕಮೀಷನರಾಗಿದ್ದಾರೆ. ಗತಿಸಿದವರು ಕೆಲಕಾಲ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯವರಾಗಿದ್ದಕಾರಣ ಅವರ ಗೌರವಾರ್ಥವಾಗಿ ಸೆಕ್ರೆಟರಿಯೆಟ್ಟಿಗೆ ೧ ದಿನ ವಿಶ್ರಾಂತಿ ಕೊಡಲ್ಪಟ್ಟಿದ್ದಿತು.

ಪ್ರಸಿದ್ಧವಾದ ಮದ್ರಾಸ್ ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್ಡಿನ ಮ್ಯಾನೇಜಿಂಗ್ ಡೈರೆಕ್ಟರೂ, ಅಲ್ಲದೆ ವೀರಶೈವರಲ್ಲಿ ಪ್ರಮುಖರೂ, ವೀರಶೈವ ಸಮಾಜಾಭಿವೃದ್ಧಿ ಕಾರ್ಯಾಸಕ್ತರೂ ಆಗಿದ್ದ ಮ|| ಚನ್ನವೀರಪ್ಪ ಸೆಟ್ಟರು ಕಳೆದ ನವಂಬರ್ ತಾ|| ೨೬ನೆಯ ಶನಿವಾರದದಿವಸ ಅಕಾಲಮೃತ್ಯುವಶರಾದರೆಂದು ತಿಳುಹಲು ಬಹಳಖೇದವಾಗುತ್ತದೆ. ಇವರಿಗೆ ಒಬ್ಬ ಪತ್ನಿಯೂ ನಾಲ್ಕುಮಕ್ಕಳೂ ಇರುವರು. ಮದ್ರಾಸಿಗೆ ವಿದ್ಯಾಭ್ಯಾಸಕ್ಕಾಗಿ ಹೋಗುವ ವೀರಶೈವ ವಿದ್ಯಾರ್ಥಿಗಳಿಗೆ ಬಹಳ ಸಹಾಯಕರಾಗಿದ್ದರಲ್ಲದೆ ಪರಸ್ಥಳದ ಸ್ವಮತೀಯರಿಗೆ ವ್ಯಾಪಾರ ಮೊದಲಾದ ವಿಚಾರಗಳಲ್ಲಿಯೂ ಸಹಾಯಕರಾಗಿದ್ದರು. ಇವರು ಪ್ರತಿಯೊಂದು ವೀರಶೈವಮಹಾಸಭೆಗೆ ಬಂದು ತಮ್ಮ ಮತಾಭಿಮಾನವನ್ನು ವ್ಯಕ್ತಪಡಿಸುತ್ತಿದ್ದರು. ಇಂತಹ ಅಭಿಮಾನಶಾಲಿಗಳೂ ಸರಸಿಗಳೂ ಆದವರನ್ನು ಕಳೆದುಕೊಂಡುದಕ್ಕಾಗಿ ಅವರ ಮಿತ್ರಮಂಡಲಿಗೆಲ್ಲಾ ಬಹಳ ದುಃಖವುಂಟಾಗಿರುತ್ತದೆ. ಮೃತರ ಆತ್ಮಕ್ಕೆ ಶಾಂತಿಯೂ ವಿಯೋಗದುಃಖಕ್ಕೀಡಾದ ಅವರ ಪತ್ನೀಪುತ್ರರಿಗೂ, ಅಣ್ಣಂದಿರಾದ ರಿಟೈರ್ಡ್ ಅಸಿಸ್ಟೆಂಟ್ ಜೈಲರಾದ ಮ|| ನಾಗಯ್ಯಸೆಟ್ಟರಿಗೂ ಮನಸ್ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ಕಳೆದ ನವಂಬರ್ ತಾ|| ೨೮ರಲ್ಲಿ ನಡೆದ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ದೇವರಾಜಮಾರ್ಕೆಟ್ಟಿನ ಮೇಲ್ವಿಚಾರಣೆಯಲ್ಲಿರುವ ದರೋಗ, ಓವರ್ಸಿಯರ್ ಮತ್ತು ಜವಾನರುಗಳನ್ನು ಕೂಡಲೇ ಬದಲಾಯಿಸಿ ಬೇರೆಯವರನ್ನು ನಿಯಮಿಸಬೇಕೆಂದೂ, ಯುವ ಚಕ್ರವರ್ತಿಯವರು ರಾಜಧಾನಿಗೆ ಚಿತ್ತೈಸುವುದರಿಂದ ಆರೋಗ್ಯಶಾಖೆಯ ಓವರ್ಸಿಯರುಗಳಿಗೂ ಜವಾನರಿಗೂ ಹೊಸ ಉಡುಪುಗಳನ್ನು ಮಾಡಿಸಿಕೊಡಬೇಕೆಂದೂ, ಕಸಬಿನತೆರುಗೆಯನ್ನು ವಿಧಿಸುವ ವಿಚಾರವು ಹೊಸ ಮೆಂಬರುಗಳಿಗೆ ತಿಳಿದಿಲ್ಲವಾದುದರಿಂದ ಅವರುಗಳು ತತ್ಸಂಬಂಧವಾಗಿ ನಡೆದಿರುವ ವಿದ್ಯಮಾನಗಳನ್ನು ತಿಳಿದುಕೊಳ್ಳುವುದಕ್ಕಾಗಿ ಮುಂದಣ ಫೆಬ್ರವರಿ ತಿಂಗಳ ಮೀಟಿಂಗಿನಲ್ಲಿ ಇತ್ಯರ್ಥಮಾಡಬೇಕೆಂದೂ, ಯುವ ಚಕ್ರವರ್ತಿಗಳು ರಾಜಧಾನಿಗೆ ಚಿತ್ತೈಸಿದ ವೇಳೆಯಲ್ಲಿ ಬಡಬಗ್ಗರಿಗೆ ಅನ್ನವನ್ನೂ ಬಟ್ಟೆಗಳನ್ನೂ ವಿದ್ಯಾರ್ಥಿಗಳಿಗೆ ಮಿಠಾಯಿಯನ್ನೂ ಕೊಡಲು ೩೦೦೦ ರೂಪಾಯಿವರೆಗೆ ಖರ್ಚಾಗುವುದರಿಂದ ಸರ್ಕಾರದವರು ಕೊಡುವ ಸಹಾಯದ್ರವ್ಯವು ಸಾಲುವುದಿಲ್ಲವಾದುದರಿಂದ ಧರ್ಮಬುದ್ಧಿಯುಳ್ಳ ವರ್ತಕರು ಮೊದಲಾದ ದೊಡ್ಡಮನುಷ್ಯರುಗಳಿಂದ ಒಂದುಸಾವಿರ ರೂ. ಗೆ ಮೇಲ್ಪಟ್ಟು ಚಂದಾಹಣವನ್ನೆತ್ತಬೇಕೆಂದೂ ಮೊದಲಾಗಿ ನಿರ್ಧಾರಗಳು ಮಾಡಲ್ಪಟ್ಟುವು.

ಭರತಖಂಡದ ವೃತ್ತಾಂತಗಳು.

ದಿಲ್ಲಿ ಪ್ರಾಂತದಲ್ಲಿ ೬ ತಿಂಗಳವರೆಗೆ ಯಾವ ಸಭೆಗಳನ್ನೂ ಜರುಗಿಸಕೂಡದೆಂದೂ, ವಾಲಂಟಿಯರುಗಳ ಸಂಘಗಳೆಲ್ಲಾ ಅಕ್ರಮಸಂಘಗಳೆಂದೂ ಅಲ್ಲಿಯ ಕಮಿಷನರು ಪ್ರಕಟಿಸಿದ್ದಾರೆ.

ಜಗದ್ವಿಖ್ಯಾತವಾಗಿದ್ದ ನಲಂದಾ ವಿಶ್ವವಿದ್ಯಾಲಯವಿದ್ದ ಸ್ಥಳದಲ್ಲಿ ಭೂಮಿಯನ್ನು ಸರ್ಕಾರದವರು ಅಗೆಯಿಸುತ್ತಿದ್ದಾರೆ. ಅದರೊಳಗೆ ಒಂದು ಸನ್ಯಾಸಿಗಳ ಮಠವಿದ್ದುದು ಕಂಡುಬಂದಿದೆ. ಅದರೊಳಗೆ ಅಮೂಲ್ಯವಾದ ತಾಮ್ರ ಶಾಸನವೊಂದು ಸಿಕ್ಕಿದೆ.

ಆಗ್ರಾ ಅಯೋಧ್ಯಾ ಸಂಯುಕ್ತರಾಷ್ಟ್ರ ಅಸ್ಸಾಂ ಈ ಪ್ರಾಂತಗಳಲ್ಲಿ ಖಿಲಾಪತ್ತು ಕಾಂಗ್ರೆಸು ನ್ಯಾಷನಲ್ ವಾಲಂಟಿಯರ್ ಸಂಘಗಳೂ ಇದೇ ತೆರದ ಇತರ ಸಂಘಗಳೂ ಸಹ ಅಕ್ರಮಗಳೆಂದೂ ಶಾಸನವಿರುದ್ಧಸಂಘಗಳೆಂದೂ ಸರ್ಕಾರದವರು ಪ್ರಕಟಿಸಿದ್ದಾರೆ.

ಬೊಂಬಾಯಿಯಲ್ಲಿ ಹೊರಗಣ ಪರಿಸ್ಥಿತಿಗಳೆಲ್ಲಾ ಶಾಂತವಾಗಿ ತೋರುತ್ತಿದ್ದರೂ ಸಹಾಯವಾದಿ ಅಸಹಾಯವಾದಿಗಳ ಮತ್ತು ಹಿಂದೂ-ಮುಸಲ್ಮಾನ್, ಪಾರ್ಸಿ-ಕ್ರೈಸ್ತ ಜನವರ್ಗಗಳ ಮಧ್ಯದ ಆಂತರಂಗಿಕ ಮನಸ್ತಾಪಗಳೂ ಕ್ರೋಧ ಮತ್ಸರಗಳೂ ಇನ್ನೂ ಶಾಂತವಾಗಿಲ್ಲ.

ಸ್ಟೇಟ್‌ಸೆಕ್ರೆಟರಿಯವರ ಸಭೆಯಲ್ಲಿ ಸಭಿಕರಾಗಿದ್ದ ಸರ್ ಶಂಕರನ್ ನಾಯರ್‌ರವರು ಕೆಲವು ಅಂತರಂಗಿಕಕಾರಣಗಳಿಂದ ತಮ್ಮ ಪದವಿಗೆ ರಾಜೀನಾಮೆಯನ್ನು ಕೊಟ್ಟರು. ಅವರ ಸ್ಥಾನಕ್ಕೆ ದಾಥೀಭಿ ಮೇರ್ವಾಂಜಿ ದಲಾಲ್ ಸಿ. ಐ. ಇ. ಯವರು ನಿಯಮಿಸಲ್ಪಟ್ಟರು ಎಂದು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ಲಾರ್ಡ್‌ಸಿಂಹರವರ ದೇಹಾರೋಗ್ಯವು ಪುಷ್ಟಿಕರವಾಗಿಲ್ಲದಕಾರಣದಿಂದ ವೈದ್ಯರ ಸೂಚನೆಯಮೇಲೆ ಅವರು ತಮ್ಮ ಲೆ|| ಗೌರ್ನರ ಪದವಿಯಿಂದ ಕೆಲಕಾಲ ರಜಾಪಡೆದು ಕಲ್ಕತ್ತೆಗೆ ಹೋದರು. ಅವರ ದೇಹಸ್ಥಿತಿಯು ಸರಿಪಡದೆಹೋದಕಾರಣ ತಮ್ಮ ಪದವಿಗೇ ರಾಜೀನಾಮೆ ಕೊಟ್ಟರು. ಸರ್ಕಾರದವರು ಅದನ್ನಂಗೀಕರಿಸಿದರು.

ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರು ಈಗ ಮದರಾಸು ಆಧಿಪತ್ಯದ ಕೃಷ್ಣಾ ಗುಂಟೂರು ಜಿಲ್ಲೆಗಳಲ್ಲಿ ಸಂಚರಿಸುತ್ತ ಅಲ್ಲಲ್ಲಿಯ ಎಲ್ಲ ಪಕ್ಷಗಳ ಜನರೊಡನೆಯೂ ಕಲೆತು ದೇಶದ ಪರಿಸ್ಥಿತಿಯನ್ನು ಅರಿಯುತ್ತ ಹಿತಬೋಧೆಯನ್ನು ಮಾಡುತ್ತ, ಆ ಪ್ರಾಂತದ ಜನಗಳಿಂದೆಲ್ಲಾ ವಿಶೇಷವಾಗಿ ಸನ್ಮಾನ ಹೊಂದುತ್ತಿದ್ದಾರೆ.

ಮ|| ಗಾಂಧಿಯವರು ದ್ರವಿಡ ದೇಶದಲ್ಲಿ ಸಂಚರಿಸುತ್ತಿರುವಾಗ್ಗೆ ಪುದುಕೋಟೆಯ ಮ್ಯುನಿಸಿಪಾಲಿಟಿಯವರು ಅವರಿಗೆ ಒಂದು ಸನ್ಮಾನ ಪತ್ರವನ್ನು ಸಮರ್ಪಿಸಬೇಕೆಂದು ತೀರ್ಮಾನಿಸಿದ್ದರು. ಅದನ್ನು ಅಲ್ಲಿಯ ಸರ್ಕಾರದವರು ಕೂಡದೆಂದು ನಿಲ್ಲಿಸಿಬಿಟ್ಟಿದ್ದರು. ಅದರ ಮೇಲೂ ಆ ಮ್ಯುನಿಸಿಪಾಲಿಟಿಯ ಸಭಿಕರಾದ ೪ ಮಂದಿಗಳು ಗಾಂಧಿಯವರಿದ್ದ ಸ್ಥಳಕ್ಕೆ ಹೋಗಿ ಸನ್ಮಾನಿಸಿದುದಕ್ಕಾಗಿ ಆ ನಾಲ್ವರನ್ನೂ ಮ್ಯುನಿಸಿಪಲ್ ಮೆಂಬರುತನದಿಂದ ತೆಗೆದುಹಾಕಿಬಿಡಲು ಅಲ್ಲಿಯ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಮಲಬಾರಿನ ಸ್ಥಿತಿಯನ್ನು ಕಣ್ಣಾರ ನೋಡಿಬರುವುದಕ್ಕೆ ಅನಿಬೆಸೆಂಟಮ್ಮನವರು ಹೋಗಿದ್ದರು. ಅವರ ಆಗಮನ ಗೌರವಾರ್ಥವಾಗಿ ಪಾಲಘಾಟಿನಲ್ಲಿರುವ ಸ್ವಾಮಿನಾಥಯ್ಯರು ಅಲ್ಲಿರುವ ಅನಾಥಶರಣಾಲಯದಲ್ಲಿ ೫೦೦ ಮಂದಿಗಳಿಗೆ ಅನ್ನದಾನ ಮಾಡಿಸಿದರು. ಶರಣಾಲಯದಲ್ಲಿರುವ ಹೆಂಗುಸರು ಮಕ್ಕಳಿಗೆಲ್ಲಾ ಅನಿಬೆಸೆಂಟಮ್ಮನವರು ಸ್ವಂತದ ಹಣದಿಂದ ಅನ್ನ ಬಟ್ಟೆಗಳನ್ನು ಕೊಡಿಸಿದರು. ಮತ್ತು ಕೊಲ್ಲಂಗೋಡು ರಾಜರ ಅಧ್ಯಕ್ಷತೆಯಿಂದ ಸಭೆಗೂಡಿಸಿ, ಅಲ್ಲೊಂದು ನೂತನ ಸೈನ್ಯವನ್ನು ಏರ್ಪಡಿಸುವ ವಿಷಯವಾಗಿ ಪ್ರೋತ್ಸಾಹಕರವಾದ ಉಪನ್ಯಾಸಮಾಡಿದರು. ಅಲ್ಲಿಂದ ಕಲ್ಲಿಕೋಟೆಗೆ ಹೋಗಿದ್ದು ಬಂದರು.

ಈಗತಾನೇ ಒಂದು ಆಶ್ಚರ್ಯಕರವಾದ ಶಿಲಾಪಾತ್ರೆಯು ಸಿಕ್ಕಿರುತ್ತದೆ. ಇದನ್ನು ಮೊಗಲ್‌ಚಕ್ರವರ್ತಿ ಔರಂಗ್‌ಜೇಬನು ತನ್ನ ಸಂಚಾರಕಾಲದಲ್ಲಿ ಉಪಯೋಗಿಸುತ್ತಿದ್ದನಂತೆ. ಕುಡಿಯುವ ನೀರನ್ನು ತುಂಬಿದ ಒಂದು ಪಾತ್ರೆಯಲ್ಲಿ ಬಾಯಿಮುಳಗದಹಾಗೆ ಈ ಕಲ್ಲಿನ ಪಾತ್ರೆಯನ್ನಿಟ್ಟರೆ. ನೀರನ್ನು ಪರಿಶುದ್ಧಮಾಡಿ ಈ ಕಲ್ಲಿನಪಾತ್ರೆಯು ತನ್ನೊಳಕ್ಕೆ ತುಂಬಿಕೊಳ್ಳುವುದಂತೆ. ನೀರಿನಲ್ಲಿದ್ದ ಕಶ್ಮಲವೆಲ್ಲಾ ಹೊರಗೇ ನಿಂತುಬಿಡುವುದು. ಇದರ ನೀರನ್ನೇ ಔರಂಗಜೇಬನು ಕುಡಿಯುತ್ತಿದ್ದನಂತೆ. ಕಲ್ಲಿನಪಾತ್ರೆಯೊಳಕ್ಕೆ ನೀರು ತುಂಬಿಕೊಂಡಬಳಿಕ ಅದನ್ನು ಹೊರಕ್ಕೆ ತೆಗೆದು ನೋಡಿದರೆ ಅದರಮೇಲೆ ಜಲಶುದ್ಧೀಕರಣಪಾತ್ರೆ ಎಂಬುದಾಗಿ ಪರ್ಷಿಯನ್ ಭಾಷೆಯಲ್ಲಿ ಬರೆದಿರುವುದು. ಇದನ್ನು ಮೌಲ್ವಿ ಜಾಫರ್ ಹುಸೇನ್‌ರವರು ಸಂಪಾದಿಸಿ ದಿಲ್ಲಿಯ ವಸ್ತುಪ್ರದರ್ಶನಶಾಲೆಗೆ ಕೊಟ್ಟಿರುವರು. ಈಗಲೂ ಅದು ತನ್ನ ಕೆಲಸವನ್ನು ಪೂರ್ವದಂತೆಯೇ ಮಾಡುತ್ತಿರುವುದು.

ಸಂಯುಕ್ತ ಪ್ರಾಂತದ ಒಂದು ಗ್ರಾಮದಲ್ಲಿ ಸಂತೆ ನಡೆಯುತ್ತಿರುವಾಗ ಸೂರ್ಯನಾಥ್ ಎಂಬುವನೊಬ್ಬನು ತಾನೇ ಗಾಂಧಿಯೆಂದು ಹೇಳಿಕೊಳ್ಳುತ್ತಿರಲು, ಜನರೆಲ್ಲಾ ಅವನಿಗೆ ನಮಸ್ಕರಿಸಿದರು. ಆತನು ಎಲ್ಲ ಪದಾರ್ಥಗಳನ್ನೂ ಅಗ್ಗವಾಗಿ ಮಾರಬೇಕೆಂದು ಸರ್ವರಿಗೂ ಆಜ್ಞಾಪಿಸಿದನು. ಅದಕ್ಕೆ ಅಂಗಡಿಯವರು ಒಪ್ಪಲಿಲ್ಲ. ಅದರಮೇಲೆ ಅಂಗಡಿಗಳನ್ನೆಲ್ಲಾ ಮಾಡಿರೆಂದು ಅಪ್ಪಣೆಮಾಡಿದನು. ೩೦೦ ಮಂದಿಗಳು ಮಾಡಿಬಿಟ್ಟರು. ಈ ಸುದ್ದಿಯು ಪೋಲೀಸರಿಗೆ ತಿಳಿಯಲು ವರು ಆ ಸೂರ್ಯನಾಥನನ್ನೂ ಇನ್ನು ಕೆಲರನ್ನೂ ಹಿಡಿದು ಕೇ ಮಾಡಲಾಗಿ ಗೋರಕ್‌ಪೂರಿನ ಜಿಲ್ಲಾ ಜಡ್ಜರು ಅವರಿಗೆಲ್ಲಾ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು. ದಂಡಿತರೆಲ್ಲಾ ಲಹಾಬಾದ್ ಹೈಕೋರ್ಟಿಗೆ ಅಪ್ಪೀಲ್‌ಮಾಡಿಕೊಂಡರೂ ವಾಗಲಿಲ್ಲ.

ಕಳೆದ ತಿಂಗಳು ತಾ|| ೧೧ರಲ್ಲಿ ಚಂಗಲ್ಪಟ್ಟು ಪೂಂದವಲ್ಲಿ ಗ್ರಾಮದಲ್ಲಿ ಮಹಾಮಹೋಪಾಧ್ಯಾಯ ಪಂ ಎ. ಲಕ್ಷ್ಮಣಸೂರಿಯವರ ಅಧ್ಯಕ್ಷತೆಯಿಂದ ವೈಖಾನ ದಿವ್ಯಸಿದ್ಧಾಂತ ವಿವರ್ಧಿನೀ ಮಹಾಸಭೆಯು ನೆರೆದಿದ್ದಿತು. ಷ್ಣವರಲ್ಲಿ ಪಾಂಚರಾತ್ರ ವೈಖಾನಸವೆಂಬ ಎರಡು ಭೇದಗಳ ಟಷ್ಟೆ. ಅವರಲ್ಲಿ ವೈಖಾನಸರಿಗೆ ಹೊರಗೆ ತಪ್ತಶಂಖಚಕ್ರಾಂ ನಗಳುಂಟೆ? ಇಲ್ಲವೆ? ಎಂಬ ವಿಷಯದಲ್ಲಿ ಉಭಯಪಕ್ಷದ ವಾದಾನುವಾದಗಳು ೩ ದಿನಗಳ ಕಾಲ ಜರುಗಿದುದರ ಮೇ ಮಧ್ಯಸ್ಥಗಾರರಾದ ಸಭಾಧ್ಯಕ್ಷರು ೨ ಪಕ್ಷದ ಸಪ್ರಮಾ ವಾಗ್ವಾದಗಳನ್ನೂ ಆಕರ್ಣಿಸಿ, ವೈಖಾನಸರಿಗೆ ಬಾಹ್ಯತಪ್ತ ಕ್ರಾಂಕನವು ಶಾಸ್ತ್ರಪ್ರಕಾರ ನಿಂದ್ಯವೆಂದೂ, ಅದನ್ನು ಅನು ಆಚರಿಸಬೇಕಾದ ಅವಶ್ಯಕತೆಯಿಲ್ಲವೆಂದೂ ತೀರ್ಪು ಹೇಳಲು ಸಭಿಕರೆಲ್ಲರೂ ಏಕಕಂಠದಿಂದ ಅನುಮೋದಿಸಿದರು.

ಕಳೆದ ತಾ|| ೨೧ರಲ್ಲಿ ಲಾಹೋರಿನೊಳಗೆ ಜಮಯಿತುಲ್ ಲೇಮಾ ಎಂಬ ಮಹಮ್ಮದೀಯ ಸಭೆಯು ಕೂಡಿದ್ದಿತು. ಅ ಲ್ಲಿ ಅಂಗೋರಾದ ಕೇಮಲ್‌ಪಾಷಾರವರಿಗೆ ಮಹಮ್ಮದೀಯರೆ ರೂ ಸಹಾಯಮಾಡಬೇಕೆಂದೂ ವಚನಭ್ರಷ್ಟರಾದ ಆಂಗ್ ಪ್ರಭುತ್ವದವರಿಗೆ ಸಹಾಯಮಾಡಕೂಡದೆಂದೂ ಷಹಮಾ ಅಹಮ್ಮದ್ ಎಂಬುವರು ಉಪನ್ಯಾಸಮಾಡಿದುದಲ್ಲದೆ, ಖು ನಿನಲ್ಲಿ ಗೋವಧೆಯು ವಿಧಿಸಲ್ಪಟ್ಟಿರುವುದೆಂದೂ, ಅದನ್ನು ಮ ಮ್ಮದೀಯರಾರೂ ತ್ಯಜಿಸಕೂಡದೆಂದೂ, ಗೋಸಂರಕ್ಷಣೆಯ ನಿಮಿತ್ತದಿಂದಲೇ ನಾನು ಹಿಂದೂಮಹಮ್ಮದೀಯರ ಮೈತ್ರಿ ಯನ್ನು ಕಲ್ಪಿಸಿದೆನೆಂದು ಹಿಂದೂ ಸಭೆಯಲ್ಲಿ ಗಾಂಧಿಯವ ಭಾಷಣಮಾಡಿದರಾದಕಾರಣ ಅದೇ ನಿಜವಾದರೆ ಗಾಂಧಿಯ ವರು ನಂಬುಗೆಯ ದ್ರೋಹವನ್ನು ಮಾಡಿದರೆಂದೂ ಸಹ ಪನ್ಯಾಸಮಾಡಿದರು. ಬಳಿಕ ಸಭೆಯಲ್ಲಿ ಅಂಗೋರಾದ ಫಂ ಗೆ ಎಷ್ಟೋ ಸಹಸ್ರ ರೂಪಾಯಿಗಳನ್ನು ಸಭೆಯಲ್ಲೇ ಕೂ ಸಿದರು.

ಕಳೆದ ತಾ|| ೨೧ಕ್ಕೆ ಕಡೆಯಾದ ೧ ವಾರಕಾಲದೊಳ ಮಲಬಾರಿನಲ್ಲಿ ಮಾಪಿಳ್ಳೆಗಳು ಯುದ್ಧಮಾಡಿ ೨೪೯ ಮಂ ಹತರಾಗಿದ್ದಾರೆ. ಅವರ ಕಡೆಯ ೫೪ ಮಂದಿ ಸೈನಿಕರೂ ತುಪಾಕಿಗಳೂ ಸೆರೆಸಿಕ್ಕಿವೆ. ಈಚೆಗೆ ಸಾವಿರಾರು ಮಂದಿ ಮಾ ಪಿಳ್ಳೆಗಳು ಶರಣಾಗತರಾಗುತ್ತಿದ್ದಾರೆ. ಅಲ್ಲಲ್ಲಿ ಅವರು ಗ್ರಾ ಮಗಳನ್ನು ಸುಡುವುದೇ ಮೊದಲಾದ ಅತ್ಯಾಚಾರಗಳು ನ್ನೂ ನಡೆಯುತ್ತಲೇ ಇವೆ. ನಾಯರ್ ಹೆಂಗುಸರನ್ನು ಬಲಾ ತ್ಕರಿಸಿ ಮದುವೆಮಾಡಿಕೊಳ್ಳಲಿಕ್ಕೇ ಈಗ ಆರಂಭಿಸಿಬಿಟ್ಟಿದ್ದಾ " ಸರ್ಕಾರದವರು ೩ ತಿಂಗಳಿಂದ ಎಷ್ಟು ಸಾಹಸಮಾಡಿದರೂ ಮಾಪಿಳ್ಳೆಗಳನ್ನು ಶಾಂತಿಪಡಿಸಲಿಲ್ಲ. ಅಸಹಾಯವಾದಿಗಳಾ ತಮಗಾದರೂ ಅಲ್ಲಿಗೆ ಹೋಗಿ ಬೋಧಿಸಲು ಅವಕಾಶಕೊಟ್ಟ ಶಾಂತಿಪಡಿಸುತ್ತೇವೆಂದೂ, ಇದಕ್ಕೆ ನೀವುಗಳು ಸರ್ಕಾರಕ್ಕೆ ಸಲಹೆ ಕೊಟ್ಟು ಏರ್ಪಡಿಸಬೇಕೆಂದೂ ಮ|| ಗಾಂಧಿಯವ ದೇಶದ ಮಿತವಾದಿ ಪಕ್ಷದ ಜನರಿಗೆ ಒಂದು ಲೇಖನವನ್ನು ಪ್ರಕಟಿಸಿಕೊಂಡಿದ್ದಾರೆ.

ವಾಗಿನ್ನಿನಲ್ಲಿ ತುಂಬಿ ಸಾಗಿಸಲ್ಪಡುತ್ತಿದ್ದ ಮಾಪಿಳ್ಳೆಗಳ ಸತ್ತವರು ಹೋಗುತ್ತ ಉಳಿದಿದ್ದವರನ್ನು ಕೊಯಮತ್ತೂರಿ ಲ್ಲಿಟ್ಟು ಚಿಕಿತ್ಸೆಮಾಡಿಸುತ್ತಿರುವಲ್ಲಿ ಇನ್ನು ೬ ಮಂದಿಗಳು ಸತ್ತರು. ಒಟ್ಟು ೭೦ ಮಂದಿಗಳು ಸತ್ತಂತಾಯಿತು. ಇನ್ನು ಉಳಿದ ೩೦ ಮಂದಿಯನ್ನು ಕೊಯಮತ್ತೂರು ಸೆಂಟರಲ್ ಕಾ ರಾಗೃಹದಲ್ಲಿಟ್ಟಿದ್ದಾರೆ. ಈ ಮರಣಕಾರಣವನ್ನು ವಿಚಾರ ಮಾಡಲು ನಿಯಮಿತರಾಗಿದ್ದ ರೈಲ್ವೆ ಜಾಯಿಂಟ್ ವಿಚಾರ ಸಂಘದವರು ತಮ್ಮ ತೀರ್ಮಾನವನ್ನು ರೈಲ್ವೆ ಕಂಪೆನಿ ಏಜಂಟರಿ ಕಳುಹಿಸಿಕೊಟ್ಟಿದ್ದಾರೆ. ಸರ್ಕಾರದಿಂದ ನಿಯಮಿತರಾದ ಸ ಘದವರು ವಿಚಾರಣೆ ನಡೆಯಿಸುತ್ತಿದ್ದಾರೆ. ಈ ಮೃತಿ ವಿ ಯವು ಸೀಮೆಗೆ ತಿಳಿಯಲು ಪಾರ್ಲಿಮೆಂಟಿನಲ್ಲಿ ಕೆಲ ಸಭಿಕರ ಬಹಳ ರೋಷಾವೇಶವನ್ನು ವ್ಯಕ್ತಪಡಿಸಿದರು. ಇಂಥ ಘೋ ಮರಣಕ್ಕೆ ಕಾರಣಭೂತರಾದವರ ವಿಚಾರಣೆಯು ಇಂಗ್ಲೆಂ ನಲ್ಲಿ ಜರುಗಬೇಕೆಂದೂ, ಇಲ್ಲದಿದ್ದರೆ ಬಹಳ ಅಪಾಯವಾಗ ವುದೆಂದೂ ಉಪನ್ಯಾಸಮಾಡಿದರು. ಇನ್ನು ಕೆಲ ಸಭಿಕರ ಇಂಡ್ಯಾ ಪ್ರಭುತ್ವದ ಅಧಿಕಾರಿಗಳು ನಡೆಯಿಸುವ ವಿಚಾ ಣೆಯಲ್ಲಿ ನಂಬುಗೆಯಿರುವುದಿಲ್ಲವೆಂದು ವಾದಿಸಿದರು.

ವಿದೇಶ ವೃತ್ತಾಂತಗಳು.

ನಮ್ಮ ಸಾರ್ವಭೌಮರಿಗೆ ಒಬ್ಬರೇ ಹೆಣ್ಣುಮಗಳಿದ್ದಾ ಅವರನ್ನು ಅರಲ್‌ಹೇರ್‌ವುಡ್‌ರವರ ಕುಮಾರರು ವೈಕೌಂ ಲಾಸೆಲ್ಸ್‌ರವರಿಗೆ ಕೊಟ್ಟು ಬರುವ ಮಾರ್ಚಾರಂಭದಲ್ಲಿ ವಿವಾ ಮಾಡಲು ನಿಶ್ಚಿತವಾಗಿದೆ.

ತುರ್ಕಿಯ ಎನ್ವರ್‌ಪಾಷಾನು ಈಗ ಎಲ್ಲಿದ್ದಾನೆಂಬು ಗೊತ್ತಿಲ್ಲ. ಅಂಗೋರಾದ ಮುಸ್ತಫಾ ಕೇಮಲ್‌ಪಾಷಾ ಗೂ ಈತನಿಗೂ ಆಗುವುದಿಲ್ಲ. ರಷ್ಯಾದೇಶದವರಿಗೆ ಆತನ ಹೇಳಿ ಈತನನ್ನು ಅಲ್ಲಿಂದಲೂ ಹೊರಡಿಸಿಬಿಡಲಿಕ್ಕೆ ಪ್ರೇರಿಸಿರುವನಂತೆ. ಅದರ ಮೇಲೆ ರಷ್ಯನ್ನರಿಗೂ ಈತನನ್ನು ಕಂಡರೆ ಆಗದಂತೆ. ಅದುಕಾರಣ ಈತನು ಈಗ ಅಫ್ಘಾನಿಸ್ಥಾನಕ್ಕೆ ಬಂದು ಸೇರಬೇಕೆಂದು ಪ್ರಯತ್ನಿಸಿರುವನಂತೆ. ಅದೂ ಸಾಗಲಾರದು.

ಲಂಡನ್ ಪಟ್ಟಣದ ರೇವೆಯ ಸುಂಕದ ಕಟ್ಟೆಯವರು ಅಲ್ಲಿಳಿದ ಜನರ ಪದಾರ್ಥಗಳನ್ನೆಲ್ಲಾ ಶೋಧಿಸುತ್ತಿರುವಾಗ ಒಬ್ಬನು ಘಾಬರಿಯಾಗಿರುವುದನ್ನು ಪರಿಶೋಧಕರು ಕಂಡು, ಅವನು ತಂದಿದ್ದ ಸಾಮಗ್ರಿಗಳನ್ನೆಲ್ಲಾ ಶೋಧಿಸುವಾಗ್ಗೆ ಆತನ ಭೋಜನಸಾಮಗ್ರಿಗಳೊಳಗೆ ಕೆಲವು ಕೋಳಿ ಮೊಟ್ಟೆಗಳೂ ರೊಟ್ಟಿಗಳೂ ಬೆಣ್ಣೆಮುದ್ದೆಯೂ ಇದ್ದುವು. ಚೆನ್ನಾಗಿ ಹಿಸಿಕಿನೋಡಲಾಗಿ ನಾನರೊಟ್ಟಿಗಳಲ್ಲಿ ಭಂಗಾರದ ಗಟ್ಟಿಯೂ ಕೋಳಿ ಮೊಟ್ಟೆಗಳಲ್ಲಿ ರತ್ನಗಳೂ ತುಂಬಿದ್ದುದು ಹೊರಬಿದ್ದಿತು. ಇವುಗಳಿಗೆ ಸುಂಕಕೊಡದೆ ತಪ್ಪಿಸಲಿಕ್ಕಾಗಿ ಆತನು ಈ ಛದ್ಮವನ್ನು ಮಾಡಿದ್ದನು.

ಐರ್ಲೆಂಡ ವ್ಯವಹಾರವನ್ನು ಕುರಿತು ಸಿನ್‌ಫೀನಿಯನ್ನರಿಗೂ ಲಾಯಿಡ್‌ಜಾರ್ಜರಿಗೂ ರಾಯಭಾರವು ನಡೆದಿತು. ಇದನ್ನು ವಿಘ್ನಪಡಿಸುವುದಕ್ಕೆ ಕೆಲಮಂದಿ ಯೂನಿಯನಿಸ್ಟರು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾದುವು. ಈಗ ಮತ್ತೆ ಅಲ್ಸ್ಟರ್ ಮಂತ್ರಿಗಳು ವಿಘ್ನವನ್ನು ಕಲ್ಪಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಯೂನಿಯನಿಸ್ಟರ ಚರ್ಚೆಯು ಇವರಿಗೆ ಪ್ರೋತ್ಸಾಹವನ್ನುಂಟುಮಾಡಿರಬಹುದು. ಹಿಂದೆ ಹುಟ್ಟಿರುವ ಸ್ವರಾಜ್ಯಶಾಸನದ ಮೂಲಕ ತಮಗೆ ಬಂದಿರುವ ಹಕ್ಕಿನಲ್ಲಿ ಯಾವ ಮಾತ್ರವನ್ನು ಕಳೆದುಕೊಳ್ಳಲಿಕ್ಕೂ ಅಲ್‌ಸ್ಟರ್‌ಪ್ರಜೆಗಳು ಒಪ್ಪುವುದಿಲ್ಲವೆಂದು ಅಲ್‌ಸ್ಟರ್ ಮಂತ್ರಿಗಳು ಹೇಳುತ್ತಿದ್ದಾರಂತೆ. ಈಗಣ ರಾಯಭಾರಪ್ರಯತ್ನವು ಏನಾದರೂ ವಿಫಲವಾಗುವುದಾದರೆ ಲಾಯಿಡ್‌ಜಾರ್ಜರು ತಮ್ಮ ಮಂತ್ರಿಪದವಿಗೆ ರಾಜೀನಾಮೆಕೊಡುವುದೇ ನಿಜವೆಂದು ಕಾಣುತ್ತದೆ. ಆ ಮಾತನ್ನು ಪಾರ್ಲಿಮೆಂಟಿನಲ್ಲಿ ಅವರು ಆದಿಯೇ ತೋರಿಸಿದ್ದಾರೆ. ಮುಂದೆ ಹೇಗೆ ಜರುಗುವುದೋ ನೋಡಬೇಕು. ಆದರೆ ಈಗಣ ಸ್ಥಿತಿಗತಿಗಳನ್ನು ನೋಡಿದರೆ ಸಂಧಿ ಕುದುರುವ ಸೂಚನೆಗಳೇ ವಿಶೇಷವಾಗಿವೆ.

ಫ್ರಾನ್ಸಿಗೂ ಅಂಗೋರಾದಲ್ಲಿರುವ ತುರ್ಕಿಪ್ರಭುತ್ವಕ್ಕೂ ನಿನ್ನೆ ನಡೆದ ಒಡಂಬಡಿಕೆಯು ಆಂಗ್ಲದೇಶದಲ್ಲಿ ಬಹಳ ಚರ್ಚೆಗೆ ಅವಕಾಶವನ್ನುಂಟುಮಾಡಿದೆ. ಆ ಒಡಂಬಡಿಕೆಯಲ್ಲಿರುವ ನಿಬಂಧನೆಗಳು ಯಾವುವೋ ಗೊತ್ತಾಗಿಲ್ಲ. ಮುಖ್ಯವಾದ ತುರ್ಕಿ ಸಮಸ್ಯೆಗೆ ಇವು ಸಂಬಂಧಪಟ್ಟುವಲ್ಲವೆಂದೂ ಫ್ರಾನ್ಸಿಗೂ ತುರ್ಕಿಗೂ ಇರುವ ಸ್ವಂತ ಸಮಸ್ಯೆಗೆ ಮಾತ್ರ ಸಂಬಂಧಪಟ್ಟುದೆಂದೂ ಹೇಳಲ್ಪಡುತ್ತಿದೆ. ಇದನ್ನು ಆಂಗ್ಲ ದೇಶದವರು ಒಪ್ಪದೆ ಇದರಲ್ಲಿ ದುರಾಲೋಚನೆಯೇನೋ ಇರುವುದೆಂದು ಅವರು ಸಂಶಯಪಡುತ್ತಿದ್ದಾರೆ. ಅಂತಹದೇನೂ ಇಲ್ಲವೆಂದು ಫ್ರೆಂಚ್ ಟೈಮ್ಸ್ ಪತ್ರಿಕೆಯು ಹೇಳಿರುತ್ತದೆ. ಮಾರ್ಚಿ ತಿಂಗಳಲ್ಲಿ ಇವೆರಡು ದೇಶಗಳಿಗೂ ಒಂದು ಒಡಂಬಡಿಕೆ ನಡೆದಿರುತ್ತದೆ. ಅದರಲ್ಲಿ ಅವೆರಡು ದೇಶಗಳಿಗೂ ಇದ್ದ ಯುದ್ಧವು ನಿಂತುಹೋಗಲು ಏರ್ಪಾಡಾಯಿತು. ಈಸಲ ಜರುಗಿದ ಒಡಂಬಡಿಕೆಯಲ್ಲಿ ಪರಸ್ಪರ ಶತ್ರುತ್ವವು ತಪ್ಪಿಹೋಗಿ ಸ್ನೇಹವುಂಟಾದಂತೆ ಕಾಣಲ್ಪಟ್ಟಿದೆ. ಆಂಗ್ಲದೇಶಕ್ಕೆ ತಿಳಿಯಿಸದೆ ಫ್ರಾನ್ಸು ಈ ಒಡಂಬಡಿಕೆಯನ್ನು ಪ್ರತ್ಯೇಕವಾಗಿ ಮಾಡಿಕೊಂಡುದು ಸಭ್ಯತನವಲ್ಲವೆಂದು ಆಂಗ್ಲರು ಆಕ್ಷೇಪಿಸುತ್ತಿದ್ದಾರೆ. ಫ್ರಾನ್ಸು ಇದಕ್ಕೆ ಉತ್ತರವನ್ನು ಕೊಡುವುದರಲ್ಲಿ ಈ ಒಡಂಬಡಿಕೆಯು ಹೊಸದೇನೂ ಅಲ್ಲವೆಂದೂ, ಇದು ಇಂಗ್ಲೀಷರಿಗೆ ತಿಳಿಯದೆ ಇದ್ದುದೂ ಕೂಡ ಅಲ್ಲವೆಂದೂ, ಮಿತ್ರಮಂಡಲಿಯವರು ಅಂಗೋರಾ ತುರ್ಕಿ ಪ್ರತಿನಿಧಿಗಳನ್ನು ಲಂಡನ್ ಸಭೆಗೆ ಕರೆದಾಗಲೇ ಸೆವರಸ್ ಸಂಧಿಯು ಅಳಿದುಹೋಯಿತೆಂದೂ, ಸಿರಿಯಾಪ್ರಾಂತದಲ್ಲಿ ಯುದ್ಧಪ್ರಸಕ್ತಿಯು ಕೊನೆಮುಟ್ಟಿಹೋಗುವಂತೆ ಮಾಡುವುದಕ್ಕಾಗಿಯೇ ಈ ಒಡಂಬಡಿಕೆಯು ಮಾಡಲ್ಪಟ್ಟಿತೆಂದೂ, ಇದರಿಂದ ಆಂಗ್ಲದೇಶದಲ್ಲೂ ಶಾಂತಿಯುಂಟಾಗಲು ಅವಕಾಶವಾಗುವುದೆಂದೂ ಫ್ರೆಂಚ್ ಪ್ರಭುತ್ವದವರು ತಿಳಿಯಪಡಿಸಿದ್ದಾರೆ. ಈ ವಿವಾದವು ಕಡೆಗೆ ಹೇಗೆ ಪರಿಣಮಿಸುವುದೋ! ಫ್ರೆಂಚರ ಪ್ರವರ್ತನೆಯು ಎಷ್ಟುಮಟ್ಟಿಗೆ ನ್ಯಾಯವಾದುದೋ ಮುಂದೆ ನೋಡಬೇಕು.

ಅಮೇರಿಕಾದ ವಾಷಿಂಗ್ಟನ್ ಪಟ್ಟಣದಲ್ಲಿ ಗೊತ್ತಾಗಿದ್ದ ಮೇರೆಗೆ ಸಭಾಕಾರ್ಯಗಳು ಜರುಗಿದುವು. ಪ್ರೆಸಿಡೆಂಟ್ ಹಾರ್ಡಿಂಜ್‌ರವರು ಪ್ರಾರಂಭೋಪನ್ಯಾಸವನ್ನು ಮಾಡಿದರು. ಅದರಲ್ಲಿ ಪ್ರಪಂಚವೆಲ್ಲಾ ಯುದ್ಧದಿಂದ ಬೇಸತ್ತುಹೋಗಿರುವುದೆಂತಲೂ, ಅಮೇರಿಕೆಗೆ ನೂತನಭೂಮಿಯ ಆಸೆಯೇನೂ ಇಲ್ಲವೆಂತಲೂ, ಇರುವ ದೇಶವೇ ಸಾಕಾಗಿದೆಯೆಂತಲೂ ಮುಂದೆ ಪ್ರಪಂಚದಲ್ಲಿ ಯುದ್ಧಪ್ರಸಕ್ತಿಯೇ ಇಲ್ಲದೆ ಶಾಶ್ವತಶಾಂತಿಯು ನೆಲಸಿರುವುದಕ್ಕೆ ಉಪಾಯವನ್ನು ಸಭಿಕರೆಲ್ಲರೂ ಆಲೋಚಿಸಿ ನಿರ್ಧರಿಸಬೇಕೆಂತಲೂ, ಯುದ್ಧಕ್ಕಾಗಿ ಹಿಡಿಯುವ ವೆಚ್ಚದ ಆಧಿಕ್ಯವನ್ನು ಗಮನಿಸಿಯಾದರೂ ಯುದ್ಧವನ್ನು ನಡೆಯದಹಾಗೆ ಮಾಡಬೇಕೆಂತಲೂ ಅದಕ್ಕಾಗಿ ಯುದ್ಧದ ಹಡಗುಗಳನ್ನು ಹೊಸದಾಗಿ ಕಟ್ಟಿಸುವುದನ್ನು ನಿಲ್ಲಿಸಿಬಿಡುವುದೇ ಅಲ್ಲದೆ ಈಗ ಇರುವ ಹಳೆಯ ಹಡಗುಗಳಲ್ಲಿ ಕೆಲವನ್ನು ಕೂಡ ಎಲ್ಲ ದೇಶದವರೂ ಧ್ವಂಸಮಾಡಿಬಿಡಬೇಕೆಂತಲೂ ಸೂಚಿಸಿದರು. ಈ ಸಭೆಗೆ ೯ ರಾಷ್ಟ್ರಗಳ ಪ್ರತಿನಿಧಿಗಳು ಮಾತ್ರ ಸೇರಿದ್ದರು. ಇದರಲ್ಲಿ ಚರ್ಚೆಗಳೆಲ್ಲಾ ನಡೆದು ಒಂದು ಗಟ್ಟಕ್ಕೆ ಬಂದುನಿಂತರೆ ಇತರ ರಾಷ್ಟ್ರಗಳವರನ್ನೂ ಕರೆಯುವರಂತೆ. ಮುಖ್ಯವಾಗಿ ದೊಡ್ಡರಾಜ್ಯಗಳಾದ ರಷ್ಯಾ ಜರ್ಮನಿಗಳಿಗೇ ಆಹ್ವಾನವಿರಲಿಲ್ಲ. ಅದರಿಂದ ರಷ್ಯನರು ರೇಗಿದ್ದಾರೆ. ಈ ಸಭೆಯಲ್ಲಿ ಆದ ತೀರ್ಮಾನಗಳಿಗೆ ನಾವು ಬದ್ಧರಲ್ಲವೆಂದು ಗುರುಗುಟುತ್ತಿದ್ದಾರೆ. ಮತ್ತು ಸಭೆಯವರಿಗೆ ಒಂದು ತಂತ್ರೀವಾರ್ತೆಯನ್ನೂ ಕಳುಹಿಸಿದ್ದಾರೆ. ಅಲ್ಲದೆ ಪೂರ್ವದೇಶೀಯ ವಿಷಯಗಳನ್ನು ಕುರಿತು ಪರ್ಯಾಲೋಚಿಸುವುದಕ್ಕಾಗಿ ತಾವೇ ಒಂದು ಸಭೆಯನ್ನು ನೆರೆಯಿಸಬೇಕೆಂದು ನಿಶ್ಚೈಸಿ, ಅದಕ್ಕಾಗಿ ಚೀನಾ, ಇಂಡ್ಯಾ, ಕೋರಿಯಾ, ಜಪಾನ್ ದೇಶಗಳಿಗೆ ನಿಂನಿಮ್ಮ ಪ್ರತಿನಿಧಿಗಳನ್ನು ಸಭೆಗೆ ಕಳುಹಿಸಿಕೊಡಬೇಕೆಂದು ರಷ್ಯಾಪ್ರಭುತ್ವದವರು ಬರೆದುಕೊಂಡಿದ್ದಾರೆ. ಈ ಸಭೆಯನ್ನು ಇರ್ಕುಟ್ಸ್ಕ ಪಟ್ಟಣದಲ್ಲಿ ಜರುಗಿಸಬೇಕೆಂದಿದ್ದಾರೆ.

ಸಭೆಯಲ್ಲಿ ನಡೆದ ಮಾತುಕತೆಯ ಮೇಲೆ ಇಂಗ್ಲೀಷರು ಗ್ಲಾಸ್ಗೋ ನಗರದಲ್ಲಿ ನಿರ್ಮಿಸುತ್ತಿದ್ದ ೩ ದೊಡ್ಡಹಡಗುಗಳ ಕಟ್ಟೋಣವನ್ನು ನಿಲ್ಲಿಸಿಬಿಟ್ಟರು. ದೊಡ್ಡಯುದ್ಧದ ಹಡಗುಗಳು ನಾಲ್ಕನ್ನು ಕಟ್ಟುತ್ತಿದ್ದುದನ್ನೂ ನಿಲ್ಲಿಸಿಬಿಟ್ಟರು.

ಸಬ್‌ಮೇರೀನುಗಳು ಇಷ್ಟಿಷ್ಟೇ ಇರಬೇಕೆಂಬುದನ್ನು ನಿರ್ಣಯಿಸಬೇಕೆಂದು ಆಂಗ್ಲಪ್ರತಿನಿಧಿಗಳು ಹೇಳಿದುದಕ್ಕೆ ಅಮೇರಿಕನ್ನರು ಒಪ್ಪಲ್ಲ. ಆತ್ಮರಕ್ಷಣೆಗೆ ಸಬ್‌ಮೇರೀನುಗಳನ್ನು ಇಟ್ಟುಕೊಳ್ಳುವಲ್ಲಿ ಅಭ್ಯಂತರವೇನೂ ಇರಬಾರದೆಂದು ಅವರು ಹೇಳುತ್ತಾರೆ. ಅಮೇರಿಕಾದವರು ಸಬ್‌ಮೇರೀನುಗಳ ನಿರ್ಬಂಧಕ್ಕೆ ಒಪ್ಪಿಕೊಂಡರೆ ತಾವು ೧೦ ವರ್ಷಗಳವರೆಗೆ ಹಡಗು ಕಟ್ಟುವುದನ್ನು ನಿಲ್ಲಿಸಿಬಿಡುತ್ತೇವೆಂದು ಆಂಗ್ಲರು ಒಪ್ಪಿಕೊಳ್ಳುವರು. ಸಬ್‌ಮೇರೀನುಗಳು ಆತ್ಮರಕ್ಷಣೆಗಾಗಿ ಇರಬಹುದೆಂದು ಅವುಗಳು ಹೆಚ್ಚಲು ಅವಕಾಶ ಕೊಟ್ಟರೆ ಅವನ್ನು ಯುದ್ಧಕ್ಕೂ ಉಪಯೋಗಿಸಿಕೊಳ್ಳುವರು ಆಗ ಮಹಾನರ್ಥವಾಗುವುದೆಂದು ಇಂಗ್ಲೀಷರು ಕಳೆದ ಯುದ್ಧದ ಅನುಭವದ ಮೇಲೆ ಹೇಳುತ್ತಿದ್ದಾರೆ.

ವಾಯುವಿಮಾನಗಳ ಪರಿಮಿತಿಯನ್ನು ಗೊತ್ತುಮಾಡುವುದು ಕಷ್ಟವೆಂದು ಅಮೇರಿಕಾ ಮಂತ್ರಿಯವರಾದ ಹ್ಯೂರವರು ಹೇಳುತ್ತಾರೆ. ವಿಮಾನಗಳ ಹಾವಳಿಯಿಂದ ಯುದ್ಧಕಾಲದಲ್ಲಿ ಆಗುತ್ತಿದ್ದ ಅನರ್ಥವನ್ನು ತಿಳಿದಿರುವ ಅಮೇರಿಕಾದ ಶಾಸ್ತ್ರಜ್ಞರೇ ಹ್ಯೂರವರ ಅಭಿಪ್ರಾಯವನ್ನು ಒಪ್ಪಲಿಲ್ಲ.

ಭೂಸೈನ್ಯಗಳು ಇಷ್ಟಿಷ್ಟೇ ಇರಬೇಕೆಂಬುದನ್ನು ನಿರ್ಣಯಿಸಲಿಕ್ಕಾಗಿ ತಮ್ಮಲ್ಲೇ ೫ ರಾಷ್ಟ್ರಗಳ ಪ್ರತಿನಿಧಿಗಳನ್ನು ಉಪಸಂಘವನ್ನಾಗಿ ಏರ್ಪಡಿಸಿದ್ದಾರೆ. ಭೂಸೈನ್ಯವನ್ನು ತಗ್ಗಿಸುವ ವಿಷಯದಲ್ಲಿ ಫ್ರೆಂಚರಿಗೆ ಸಮಾಧಾನವಿಲ್ಲ. ಅವರಿಗೆ ಜರ್ಮನರ ದಿಗಿಲು ಇನ್ನೂ ತಪ್ಪಿಲ್ಲ. ಭೂಸೈನ್ಯವನ್ನು ತಗ್ಗಿಸದೆ ಹೋಗಿ ನೌಕಾದಳವನ್ನು ತಗ್ಗಿಸಿದ ಮಾತ್ರಕ್ಕೇ ಫಲವೇನೂ ಇಲ್ಲವೆಂದು ಇಂಗ್ಲೀಷರಭಿಪ್ರಾಯ.

ಈ ಸಭೆಯನ್ನು ಪ್ರತಿವರ್ಷವೂ ನಡೆಯಿಸಬೇಕೆಂದು ಪ್ರೆಸಿಡೆಂಟ್ ಹಾರ್ಡಿಂಜ್‌ರವರು ಸೂಚಿಸಿದುದಕ್ಕೆ ಸರ್ವರೂ ಒಪ್ಪಿದರು. ಜರ್ಮನರನ್ನು ಕರೆಯುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂದು ಫ್ರೆಂಚರನ್ನು ಕೇಳಲು, ಬಹಳ ಘೋರಕಾರ್ಯವನ್ನು ಮಾಡಿರುವವರು ಕೆಲಕಾಲದವರೆಗೆ ಪಶ್ಚಾತ್ತಾಪಪಡುವವರೆಗೂ ಈ ವಿಷಯವನ್ನು ಪ್ರಸ್ತಾಪಿಸಲಾಗದೆಂದು ಅವರು ಉತ್ತರಕೊಟ್ಟರು.

ಪತ್ರವ್ಯವಹಾರ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಚನ್ನಪಟ್ಟಣದ ಅಮಲ್ದಾರರು.

ನಿಮ್ಮ ೧೯೨೧ನೆ ನವಂಬರ್ ೨೭ನೆ ತಾರೀಖಿನ ಸ್ಟಾರಿನಲ್ಲಿ ನಮೂದಿಸಿರುವ ಚನ್ನಪಟ್ಟಣತಾಲ್ಲೂಕು ಅಮಲ್ದಾರ್‌ರವರಾದ ಮ|| ಸಿದ್ದರಾಮಪ್ಪನವರ ವಿಷಯವನ್ನು ಕುರಿತು ಒಬ್ಬ ರೈತನು ಸ್ಟಾರಿಗೆ ಜಾಹಿರಾತ್ ಬಗ್ಗೆ ಕೊಟ್ಟಿರುವುದನ್ನು ನೋಡಿ ನಾವುಗಳೆಲ್ಲರೂ ವಂದಿಸುವವರಾಗಿದ್ದೇವೆ. ಈ ಸಿದ್ದರಾಮಪ್ಪನವರು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿದ್ದಾಗ್ಯೆ ಇವರು ಮಾಡುತ್ತಿದ್ದ ಸತ್ಯವಾದ ಏರ್ಪಾಡು ಮತ್ತು ಭಾಷಣಗಳು ಕೆಲಸಗಳು ಸಹ ನಮ್ಮ ಮನಸ್ಸಿನಲ್ಲಿ ಯಾವಾಗ್ಯೂ ಸ್ಥಿರವಾಗಿವೆ. ಮ|| ಸಿದ್ದರಾಮಪ್ಪನವರಿಗೆ ದಿನೇ ದಿನೆ ಹೆಚ್ಚು ಪದವಿಯನ್ನು ಭಗವಂತನು ದಯಪಾಲಿಸಲೆಂದು ತ್ರಿಕಾಲದಲ್ಲಿಯೂ ಪ್ರಾರ್ಥಿಸುವವರಾಗಿದ್ದೇವೆ. ಆಯನೂರುವಾಸಿಗಳು.

ಸಂತೋಷದ ಸಭೆಯು.

ಧಾರವಾಡ ಜಿಲ್ಲಾ ಹಿರೇಕೆರೂರ ತಾಲ್ಲೂಕ ಪೈಕಿ ಸಿದ್ಧಗಿರಿಯ ಸಮೀಪದಲ್ಲಿರುವ ಪರ್ವತಾಗ್ರದ ಶ್ರೀ ಸಿದ್ಧೇಶ್ವರ ಕ್ಷೇತ್ರ ದರ್ಶನಾರ್ಥವಾಗಿ ತಾ|| ೫-೧೧-೧೯೨೧ನೆಯ ದಿವಸ ಹಳ್ಳೂರ ಹಿರೇಮಠದ ಬ್ರ|| ಶ್ರೀ|| ಸಿ. ಓಂಕಾರಶಾಸ್ತ್ರಿಗಳು ಮತ್ತು ಮದಗನಮಾಸೂರ ಆರಾಧ್ಯ ಮಠದ ಎಸ್. ಐ. ಮುರಿಗೇಶಶಾಸ್ತ್ರಿಗಳು ಬಂದಿದ್ದು ದೇವತಾದರ್ಶನಾನಂತರ ಅದೇ ದಿವಸ ಸಾಯಂಕಾಲ ೫ ಗಂಟೆಗೆ ಸದರಿ ಸಿದ್ಧಗಿರಿ ಗ್ರಾಮದಲ್ಲಿ ಕೇವಲ ಆಚಾರ ಗುರುಭಕ್ತಿಯುಕ್ತರೂ ಸಂಗೀತ ಕಲಾನಿಪುಣರೂ ಪಾಟೀಲರೂ ಆದ ಮ|| ರಾ|| ವೀರಪ್ಪಗೌಡರವರ ಗೃಹಕ್ಕೆ ಅವರ ಅಪೇಕ್ಷೆಯ ಮೇರೆಗೆ ಆಗಮಿಸಿ, ತಾ|| ೫ನೆ ದಿವಸ ಸದರಿ ಪಾಟೀಲರ ಅಪೇಕ್ಷೆಯಂತೆ ನಮ್ಮ ವೀರಶೈವ ವೃಂದಕ್ಕೆ ಜ್ಞಾನೋದಯವಾಗುವಂತೆ ಶಿವಕೀರ್ತನವನ್ನು ಮಾಡಿದರು ಬ್ರ|| ಶ್ರೀ ಸಿದ್ಧಾಂತಿ ಓಂಕಾರಶಾಸ್ತ್ರಿಗಳು ಅಷ್ಟಾವರಣ, ವಿದ್ಯೆ, ಐಕ್ಯ ಮತ್ತ ಮುಂತಾದ ವಿಷಯಗಳ ಮೇಲೆ ಸರಸ ಭಾಷಣಮಾಡಿದರು. ವೀರಪ್ಪಗೌಡರು ಸಂಗೀತಕಲೆಯಿಂದ ಆನಂದಗೊಳಿಸಿ ಸರ್ವರ ಮನಸ್ಸನ್ನೂ ಸದಾ ಭಕ್ತಿಯುಕ್ತವಾಗಿರುವಂತೆ ಮಾಡಿದರು. ನಿತ್ಯವೂ ಸಭೆಯ ಅಧ್ಯಕ್ಷಸ್ಥಾನವನ್ನು ಕಡೂರ ಮಠದ ಸಿದ್ಧಾಂತಿ ಹಾಲಪ್ಪನವರು ವಹಿಸುತ್ತಿದ್ದರು. ಈ ಕಾರ್ಯಕ್ಕೆ ನಿತ್ಯವೂ ಗ್ರಾಮದ ಜನರೆಲ್ಲಾ ಆಗಮಿಸುತ್ತಿದ್ದರು.

ಬೆಟ್ಟಗೇರಿ.

ಬೆಟ್ಟಗೇರಿ ವಾಸಸ್ಥರಾದ ನಾವು ನಮ್ಮ ಕಲ್ಲುಮಠದಲ್ಲಿ ರೇವಣಸಿದ್ಧೇಶ್ವರ ಪುರಾಣವನ್ನು ಪ್ರಾರಂಭಮಾಡಿಸಿದೆವು. ಪುರಾಣದ ಅರ್ಥಮಾಡಿ ಹೇಳತಕ್ಕಂಥ ಈ ಗ್ರಾಮದ ರಾಜಶೇಖರಯ್ಯ ಸಿದ್ಧಾಂತಶಾಸ್ತ್ರಿಗಳವರು ಈ ಪುರಾಣದಲ್ಲಿರತಕ್ಕಂಥ ವೀರಶೈವ ಧರ್ಮದ ಅಷ್ಟಾವರಣದ ಮಾಹಾತ್ಮ್ಯವನ್ನು ಚೆನ್ನಾಗಿ ಬೋಧಿಸಿ ಲಿಂಗಾಂಗ ಸಾಮರಸ್ಯವನ್ನು ಕುರಿತು ಎಲ್ಲರ ಮನಸ್ಸಿಗೂ ಆನಂದಕರವಾಗಿ ಬೋಧನಮಾಡಿದರು. ಈ ಪುರಾಣವನ್ನು ಓದತಕ್ಕಂಥವರಾದ ಚನ್ನಯ್ಯಾ ಕೊಪ್ಪದಮಠ ಇವರು ವ್ಯಾಖ್ಯಾನರೂಪದಿಂದ ಪ್ರತಿದಿವಸ ನಮ್ಮೆಲ್ಲರಿಗೆ ವೀರಶೈವ ಧರ್ಮದ ವಿಷಯಕ್ಕೆ ಯಾವತ್ತರಿಗೂ ತಿಳಿಯುವಂತೆ ಬೋಧಮಾಡಿದರು. ಈ ಪ್ರಕಾರವಾಗಿ ಈ ಪುರಾಣವು ೧|| ತಿಂಗಳವರೆಗೆ ಸಾಗಿದಬಳಿಕ ಪುರಾಣಸಮಾಪ್ತಿಕಾಲಕ್ಕೆ ಶ್ರೀ ಶಿವಯೋಗಮಂದಿರದ ನಿರಂಜನಮಹಾಂತಸ್ವಾಮಿಗಳು ವೀರಶೈವ ಧರ್ಮ, ಶಿವಯೋಗ, ಲಿಂಗ-ಇವುಗಳ ವಿಷಯವಾಗಿ ಉತ್ತಮೋತ್ತಮವಾಗಿ ವ್ಯಾಖ್ಯಾನಕೊಟ್ಟು ಆನಂದಾಮೃತವನ್ನು ಪಾನಮಾಡಿಸಿದರು. ಮತ್ತು ಇದೇ ಮೂರು ದಿವಸ ಶ್ರೀ ಶಿವಯೋಗಮಂದಿರದ ಸುಪ್ರಸಿದ್ಧ ವೀರಪ್ಪಯ ಶಾಸ್ತ್ರಿಗಳು ವೀರಶೈವರ ಲಿಂಗಾಂಗಸಾಮರಸ್ಯ ಭಕ್ತಿರಸ ಸತ್ಯವಚನ ಈ ಮೂರು ವಿಷಯದ ಮೇಲೆ ಕೀರ್ತನೆಯನ್ನು ಮಾಡಿ ಜನರ ಮನಸ್ಸಿನಲ್ಲಿ ಆನಂದಾಮೃತವನ್ನು ತುಂಬಿಸಿ ಪುರಾಣಸಮಾಪ್ತಿಯನ್ನು ಮಾಡಿಸಿದರು.

ಬಸಿಹೋಣಿ.

ಇದೇ ತಾ|| ೫-೧೧-೧೯೨೧ ಶನಿವಾರ ಮಧ್ಯಾಹ್ನದ ಮೂರುಗಂಟೆಗೆ ಇಲ್ಲಿಯ ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಭೆಯು ಸೇರಲು ಈ ಸಭೆಗೆ ಹೂಲಿ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ಮೆಂಬರರವರು ಆಗಮಿಸಿದ್ದಲ್ಲದೆ ಊರೊಳಗಿನ ಪ್ರಮುಖ ಜನರೂ ಬಂದಿದ್ದರು. ಮೊದಲು ಪಂಚಮಚಾರ್ಯರವರ ಜಯಘೋಷವಾದ ಮೇಲೆ ಸರ್ವಾನುಮತದಿಂದ ಇಲ್ಲಿಯ ಮ|| ರಾ|| ರಾಮಲಿಂಗಪ್ಪಾ ಚಂದರಗಿ ಇವರು ಅಧ್ಯಕ್ಷಸ್ಥಾನವನ್ನಲಂಕರಿಸಿದ ಮೇಲೆ ಶಿ. ಬಸವಲಿಂಗಯ್ಯನವರು ಗೊರವನಕೊಳ್ಳ ಇವರು ಒಕ್ಕಟ್ಟು ಈ ವಿಷಯದ ಮೇಲೆ ಭಾಷಣಮಾಡಿದರು. ಆ ಮೇಲೆ ಹೂಲಿ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ಮೆಂಬರ ರಾ|| ರಾ|| ಶಿವಮೂರ್ತೆಪ್ಪಾ ಗೋರಾಬಾಳ ಇವರು ಅಸಹಕಾರದಿಂದಾಗುವ ಅನರ್ಥ ಈ ವಿಷಯದ ಮೇಲೆ, ರಾ|| ರಾ|| ಬಸವಣ್ಣೆಪ್ಪ ಗೋರೋಬಾಳ ಇವರು (ಶಿಕ್ಷಣ) ದ ವಿಷಯದ ಮೇಲೆ ಸಾ|| ಸ|| ರಾಮದುರ್ಗದ ಶಿ|| ರಾ|| ರಾ|| ಮರುಳಸಿದ್ಧಯ್ಯ ಶಿರವಾಳಮಠ ಇವರು (ಅಸಹಕಾರದ ಖಂಡನ) ಈ ವಿಷಯ ಮೇಲೆ ಮಾತಾಡಿದ ನಂತರ ಕೆಳಗೆ ಬರೆದ ವಿಷಯಗಳು ಸರ್ವಾನುಮತದಿಂದ ಪಾಸಾಗಿರುತ್ತವೆ. (೧) ದೇಶದಲ್ಲಿ ಅಸಹಕಾರವೆಂದು ಅನರ್ಥಕಾರ್ಯಗಳನ್ನು ಮಾಡತಕ್ಕ ಜನರನ್ನು ಸರ್ಕಾರದವರು ತೀವ್ರಬಂದೋಬಸ್ತುಮಾಡುವದು. (೨) ತಮಗೆ ಬೇಕಾದ ಸವಲತಗಳನ್ನು ಸರ್ಕಾರದ ಅನುಮತಿ ಪ್ರಕಾರ ಕೌನ್ಸಿಲರ ಮುಖಾಂತರ ಪಡೆದುಕೊಳ್ಳಬೇಕೆಂದು ಈ ಸಭೆಯು ಠರಾಯಿಸುತ್ತದೆ. (೩) ಇದೇ ನವಂಬರ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬರತಕ್ಕ ಪ್ರಿನ್ಸ್‌ಆಫ್‌ವೇಲ್ಸ್‌ರವರಿಗೆ ತಮ್ಮ ತಮ್ಮ ರಾಜನಿಷ್ಠೆಯನ್ನು ವ್ಯಕ್ತಗೊಳಿಸಬೇಕೆಂದು ಈ ಸಭೆಯು ಇಚ್ಛಿಸುತ್ತದೆ. (೪) ಸರ್ಕಾರದವರು ಸಕ್ತಿಶಿಕ್ಷಣವನ್ನು ತೀವ್ರ ಅಮಲಿನಲ್ಲಿ ತರಬೇಕೆಂದು ಈ ಸಭೆಯು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತದೆ. ಈ ಪ್ರಕಾರ ಸಭೆಯ ಕೆಲಸವು ತೀರಿದ ಮೇಲೆ "ಪಂಚಮಚಾರ್ಯ ಮಹಾರಾಜಕೀಜಯ್" ಎಂಬ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ.

ಹುಬ್ಬಳ್ಳಿ ತಾಲ್ಲೂಕ ಪೈಕಿ ಇಂಗಳಹಳ್ಳಿಯಲ್ಲಿ ನೆರೆದ ಪ್ರಚಂಡ ಬ್ರಾಹ್ಮಣೇತರ ಸಭೆಯು.

ತಾರೀಖು ೧೦-೧೧-೧೯೨೧ನೆ ದಿವಸ ಇಲ್ಲಿಯ ಪ್ರಮುಖ ಸಭ್ಯಗೃಹಸ್ಥರಾದ ಮತ್ತು ಬ್ರಾಹ್ಮಣೇತರ ಸಮಾಜದ ಮುಂದಾಳುಗಳಾದ ಶ್ರೀಯುತ ವೀರಪ್ಪ, ಪರಪ್ಪ, ಹಳೇಮನಿ ಇವರ ಅಧ್ಯಕ್ಷತೆಯ ಕೆಳಗೆ ಒಂದು ಸಭೆಯು ಸೇರಿತ್ತು. ಸಭೆಗೆ ಸುತ್ತಲಿನ ಊರುಗಳ ಅನೇಕ ಸಭ್ಯಗೃಹಸ್ಥರು ಬಂದಿದ್ದರು. ಸಭೆಯಲ್ಲಿ ಧಾರವಾಡ ಟ್ರೇನಿಂಗ ಕಾಲೇಜಿನಿಂದ ಹೊರಗೆ ಹಾಕಲ್ಪಟ್ಟ ೫೫ ಜನ ವಿದ್ಯಾರ್ಥಿಗಳ ವಿಷಯವಾಗಿ ಹಲವರ ಭಾಷಣಗಳಾದವು. ನಂತರ ಕೆಳಗೆ ಬರೆದ ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು. (೧) ಧಾರವಾಡ ಟ್ರೇನಿಂಗ್ ಕಾಲೇಜಿನ ವಿಷಯವಾಗಿ ಎದ್ದ ಗದ್ದಲದ ಬಗ್ಗೆ, ಬ್ರಾಹ್ಮಣೇತರರ ಆಕ್ಷೇಪವಿದ್ದ ಪ್ರಿನ್ಸಿಪಾಲ ಮತ್ತು ಇನ್‌ಸ್ಪೆಕ್ಟರ ಇವರ ರಿಪೋರ್ಟಿನ ಮೇಲೆ ನಂಬಿಗೆ ಇಟ್ಟು ೫೫ ಜನ ವಿದ್ಯಾರ್ಥಿಗಳನ್ನು ಹೊರಗೆ ಹಾಕಿದ್ದನ್ನು ಕಾಯಂಮಾಡಿದ್ದೇವೆಂದು ಅವಸರದಿಂದ ಸರಕಾರದವರು ತೆಗೆದಂಥ ಪ್ರೆಸ್ಸ ನೋಟಿಸ್ನು ಈ ಸಭೆಯು ನಿಷೇಧಿಸುತ್ತದೆ. (೨) ಹೊರಗೆ ಹಾಕಲ್ಪಟ್ಟ ವಿದ್ಯಾರ್ಥಿಗಳೂ ಈ ಮೊದಲೇ ಪತ್ರವನ್ನು ಬರಕೊಂಡಿದ್ದಾರೆ. ಅವುಗಳ ಆಲೋಚನ ಮಾಡಿ ಪುನಃ ಸರಕಾರದವರು ತಪ್ಪನ್ನು ಕ್ಷಮಿಸಿ, ಸದರಿ ವಿದ್ಯಾರ್ಥಿಗಳ ಪರೀಕ್ಷೆಯನ್ನು ಇದೇ ಡಿಶಂಬರಿನಲ್ಲಿ ತೆಗೆದುಕೊಂಡು ಸರಕಾರದವರಲ್ಲಿರುವ ಬ್ರಾಹ್ಮಣೇತರರ ಸಂಬಿಗೆಯನ್ನು ಹೆಚ್ಚುಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. (೩) ಧಾರವಾಡ ಟ್ರೇ|| ಕಾ|| ಮಾಜಿ ಪ್ರಿನ್ಸಿಪಾಲರಾದ ಮಹಿಸಿಯವರ ಕಾಲದಲ್ಲಿ ಆದ ಬೋರ್ಡಿಂಗಿನ ಲೆಕ್ಕದ ತಪಾಸಣೆಯ ಬಗ್ಗೆ ತೀವ್ರ

ಅಡಿಟರರನ್ನು ನೇಮಿಸಿ ತೀವ್ರ ಲೆಕ್ಕ ತಪಾಸಮಾಡಿಸಿ, ವಿದ್ಯಾರ್ಥಿಗಳಲ್ಲಿಯ ಹಾಗೂ ಬ್ರಾಹ್ಮಣೇತರರ ಮನಸ್ಸಿನಲ್ಲಿಯ ಸಂಶಯನಿವೃತ್ತಿ ಮಾಡಿಸಬೇಕೆಂದು ಈ ಸಭೆಯು ಆಗ್ರಹಪೂರ್ವಕ ವಿನಂತಿ ಇದೆ. (೪) ಸದರಿಯ ಮೇಲಿನ ಮೂರು ಠರಾವುಗಳನ್ನು ನಾಮದಾರ ಗೌರ್ನರ್ ಸಾಹೇಬರವರ ಕಡೆಗೂ, ನಾಮದಾರ ಮಿನಿಸ್ಟರರ ಕಡೆಗೂ ಕಳುಹಿಸಬೇಕೆಂದು ಗೊತ್ತಾಯಿತು. ನಂತರ ಅಧ್ಯಕ್ಷರ ಆಭಾರಮನ್ನಿಸಿ ಸಭೆಯ ವಿಸರ್ಜನೆಯಾಯಿತು.

ಓರ್ವ ಬ್ರಾಹ್ಮಣೇತರ.

ಮೈಸೂರು ಮ್ಯುನಿಸಿಪಾಲಿಟಿ.

ಅಯ್ಯಾ, ಎಡಿಟರೆ,

ಈ ನಮ್ಮ ಮ್ಯುನಿಸಿಪಾಲಿಟಿಯ ಆಡಳಿತವನ್ನು ನೋಡಿದರೆ ಪೂರ್ವದ ನವಾಬರ ಆಡಳಿತವು ಜ್ಞಾಪಕಕ್ಕೆ ಬರುತ್ತದೆ. ಇದಕ್ಕೆ ಆನರರಿ ಪ್ರೆಸಿಡೆಂಟರು, ಆನರರಿ ವೈಸ್ ಪ್ರೆಸಿಡೆಂಟರು, ಚೀಫ್ ಆಫೀಸರು ಮತ್ತು ಹೆಲ್ತಾಫೀಸರು ಹೀಗೆ ೪ ಜನದೊಡ್ಡ ಆಫೀಸರುಗಳೂ, ಮ್ಯಾನೇಜರು ಕಲೆಕ್ಟರು ಮೊದಲಾಗಿ ಅಫಿಸಿಯಲ್‌ಗಳೂ ಇದ್ದಾರೆ. ಇವರಲ್ಲಿ ಪ್ರೆಸಿಡೆಂಟರಾದವರು ಬಿ. ಎ., ಬಿ. ಎಲ್. ಪ್ಯಾಸ್‌ಮಾಡಿ ಸರ್ಕಾರದಲ್ಲಿ ದೊಡ್ಡದೊಡ್ಡ ಉದ್ಯೋಗಮಾಡಿ ಪೊಲೀಸ್ ಇನ್ಸ್‌ಪೆಕ್ಟರ್‌ಜನರಲಾಗಿದ್ದು ಒಳ್ಳೆ ಸಮರ್ಥರೆಂದು ಹೆಸರನ್ನು ಪಡೆದಿದ್ದರೂ ವಯೋಧರ್ಮದಿಂದಲೋ ಮತ್ತಾವ ಕಾರಣದಿಂದಲೋ ಆಫೀಸಿಗೆ ವಾರಕ್ಕೆ ೩ದಿನ ಬಂದು ೧-೨ ಗಂಟೆಯಕಾಲ ಕುಳಿತಿದ್ದು ಮ್ಯುನಿಸಿಪಾಲಿಟಿಯ ಹಾಗೂ ಟ್ರಸ್ಟ್ ಬೋರ್ಡಿನ ಕಾಗದಗಳಿಗೆ ರುಜುಮಾಡಿ ದೊಡ್ಡಮನುಷ್ಯರುಗಳು ಬಂದಲ್ಲಿ ಅವರ ಕೂಡ ಮಾತನಾಡಿ ಹೊರಟು ಹೋಗುವರು. ವೈಸ್ ಪ್ರೆಸಿಡೆಂಟರು ವಿದ್ವಾಂಸರೂ ಸರ್ಕಾರಿಯ ಕೆಲಸಗಳನ್ನು ಬಹುಕಾಲ ಮಾಡಿದವರೂ ವೈಸ್ ಪ್ರೆಸಿಡೆಂಟ್ ಕೆಲಸದನುಭವವುಳ್ಳವರೂ ಚಟವಟಿಕೆಯಿಂದ ಕೆಲಸಮಾಡಲು ಆಸಕ್ತಿಯುಳ್ಳವರೂ ಆಗಿದ್ದರೂ ಕೆಲವು ಸಾಮಾನ್ಯ ಕಾಗದಗಳಿಗೆ ರುಜುಮಾಡುವುದರ ವಿನಾ ಯಾವ ಜವಾಬ್ದಾರಿಯ ಕೆಲಸವೂ ಆಫೀಸು ಮಾಡಲು ತಕ್ಕಸ್ಥಳವೂ ಕೊಡಲ್ಪಡದೆಯಿರುವುದರಿಂದ ಪ್ರತಿ ದಿನ ಸಾಯಂಕಾಲ ೪ ಗಂಟೆಗೆ ಬಂದು ಯಾವದೋ ಒಂದು ಮೂಲೆಯಲ್ಲಿ ಹರಿದುಹೋದ ಫರ್ದೆ ಮರೆಯಲ್ಲಿ ಕುಳಿತಿದ್ದು ಹೋಗುವರು. ಇನ್ನು ಚೀಫ್ ಆಫೀಸರೋ ಪ್ರೆಸಿಡೆಂಟರು ಬರುವ ದಿನ ಮಾತ್ರ ಕೊಂಚ ಮುಂಚಿತವಾಗಿ ಬರುವರು; ಬಾಕಿ ದಿನಗಳಲ್ಲಿ ಮನಸ್ಸು ಬಂದರೆ ೩-೪ ಗಂಟೆಯ ಮೇಲೆ ಬಂದು ಸ್ವಲ್ಪ ಹೊತ್ತಿದ್ದು ಹೋಗುವರು ಇಲ್ಲದಿದ್ದಲ್ಲಿ ಬರುವುದೇಯಿಲ್ಲ. ಇದರಿಂದ ಜನರು ತಮ್ಮ ತೊಂದರೆಗಳನ್ನು ಕಾಲಕಾಲಕ್ಕೆ ಹೇಳಿಕೊಳ್ಳಲು ಅವಕಾಶವೇ ಇಲ್ಲ. ಲೈಸೆನ್ಸಿಗಾಗಿ ಕೊಟ್ಟ ಅರ್ಜಿಗಳಂತೂ ತಿಂಗಳಗಟ್ಟಲೆಯಾದರೂ ಫೈಸಲಾಗದೆ ಜನರು ಮನೆಯನ್ನು ಕಟ್ಟಲು ಅಥವಾ ರಿಪೇರಿಮಾಡಲು ಯತ್ನವಿಲ್ಲದೆ ಬಹಳ ನಷ್ಟಕಷ್ಟಗಳನ್ನು ಅನುಭವಿಸುತ್ತಿರುವರು. ಈ ಅಧಿಕಾರಿಗಳ ಅನಾದರಣೆಯಿಂದ ಆಫೀಸಿನ ಕೆಲಸಗಾರರಂತೂ ಸರ್ವಸ್ವತಂತ್ರರಾಗಿ ಜನರು ಹಿಂದಣ ನವಾಬರ ಕಾಲವನ್ನು ಸ್ಮರಿಸಿಕೊಳ್ಳುವಂತೆ ಮಾಡಿರುವರು. ಸ್ವಲ್ಪ ದಿನಗಳ ಕೆಳಗೆ ಒಂದು ಟೋಲ್‌ಗೇಟಿನಲ್ಲಿ ಒಬ್ಬ ಗಾಡಿಯವನಿಗೂ ಟೋಲಿ ಜವಾನನಿಗೂ ಮಾತುಕತೆನಡೆದು ಜವಾನನು ಗಾಡಿಯವನನ್ನು ಕೆಳಕ್ಕೆ ಕೆಡಿವಿ ಮೂಳೆಮುರಿದನು. ಇದರಮೇಲೆ ಗಾಡಿಯವನು ಅಧಿಕಾರಿಗಳಿಗೆ ಹೇಳಿಕೊಂಡಾಗ್ಯೂ ಗಮನಕ್ಕೆ ತಂದುಕೊಳ್ಳಲಿಲ್ಲವೆಂದೂ, ಮತ್ತೆ ಕೆಲವು ೧೫-೨೦ ರೂಪಾಯಿ ಸಂಬಳದ ನೌಕರರು ಬೆಳಗಿನ ಜಾವದಲ್ಲಿ ಉಕ್ಕಡದಾಚೆ ಕಾದಿದ್ದು ಗೊಬ್ಬರವನ್ನು ತುಂಬಲು ಊರೊಳಕ್ಕೆ ಬರುತ್ತಿದ್ದ ಬಾರಿ ಬಂಡಿಗಳನ್ನು ಹಿಡಿದು ಕಾರಾಪುರಕ್ಕೆ ಸರ್ಕಾರಿ ಸಾಮಾನು ತುಂಬಲು ಬೇಕಾಗಿದೆಯೆಂದು ಹೆದರಿಸಿ ಗಾಡಿಯೊಂದಕ್ಕೆ ೧-೨ ರೂಪಾಯಿನಂತೆ ವಸೂಲ್ಮಾಡಿಕೊಂಡು ಬಿಟ್ಟುಬಿಟ್ಟರೆಂದೂ ಪ್ರಬಲವಾದ ಪುಕಾರಿದೆ. ಮ್ಯುನಿಸಿಪಲ್ ಕೌನ್ಸಿಲರುಗಳಾದರೂ ಈ ವಿಚಾರವನ್ನು ತಮ್ಮ ಮನಸ್ಸಿಗೆ ತಂದುಕೊಂಡು ಸಣ್ಣ ನೌಕರರು ನಡಿಸುತ್ತಿರುವ ದಾಂಧಲೆಯನ್ನು ತಪ್ಪಿಸಿ ಬಡಬಗ್ಗರಿಗೆ ಉಪಕಾರಮಾಡಿ ತಾವು ಓಟುಗಳನ್ನು ಸಂಪಾದಿಸುವಾಗ್ಗೆ ಜನರಿಗೆ ಕೊಟ್ಟ ಭರವಸೆಯ ಮಾತುಗಳನ್ನುಳಿಸಿಕೊಳ್ಳುವರೆಂದು ನಂಬುತ್ತೇನೆ. ಹಾಗಲ್ಲದೆ ಅಧಿಕಾರಿಗಳ ದರ್ಪಕ್ಕೋ ಅಥವಾ ದಾಕ್ಷಿಣ್ಯಕ್ಕೋ ಒಳಗಾಗಿ ತಟಸ್ಥರಾಗುವ ಪಕ್ಷದಲ್ಲಿ ಜನೋಪಕಾರಿಗಳೆನಿಸಿಕೊಳ್ಳುವುದಕ್ಕೆ ಬದಲು ಮರ್ಯಾದೆ ರಾಮಣ್ಣನವರು ಎಂಬ ಬಿರುದನ್ನು ಖಂಡಿತವಾಗಿ ಸಂಪಾದಿಸುವರು.

ಹಿಂಸೆಗೆ ಒಳಗಾಗಿರುವವನೊಬ್ಬನು.

ಅಸುಂಡಿ

ಧಾರವಾಡ ಜಿಲ್ಹಾ ರಾಣೆಬೆನ್ನೂರ ತಾಲ್ಲೂಕ ಪೈಕಿ ಅಸುಂಡೀ ಗ್ರಾಮದಲ್ಲಿ ಶ್ರೀಮನ್ಮಹಾ ದಕ್ಷಿಣಕಾಶೀ ಸಿಂಹಾಸನ ಚವುಡಯ್ಯದಾನಪುರ ಸಂಸ್ಥಾನದ ಪಟ್ಟದ ಪಂಡಿತ ವೇದತೀರ್ಥ ಧರ್ಮಭೂಷಣಾದಿ ಪದವೀಪ್ರತಿಷ್ಠಿತ ಇಂದೂರ ಸಂಸ್ಥಾನದ ಸಂಸ್ಕೃತ ಕಾಲೇಜದ ವೇದಭಾಷ್ಯ ಪ್ರೊಫೆಸರರಾದ ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರವರ ಉದಾರಾಶ್ರಯದಿಂದ ವೀರಶೈವ ಧರ್ಮೋನ್ನತಿಸಭೆಯು ನವಂಬರ್ ತಾ|| ೯-೧೦ರಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ರಾ|| ಬ|| ಶಾಂತವೀರ ಒಡೆಯರವರು ವಹಿಸಿದ್ದರು. ಈ ಸಭೆಗೆ ರಾ|| ಬ|| ಪಂಡಿತ ಸಾ|| ದಿ|| ದಿ|| ಕಲೆಕ್ಟರ್ ಧಾರವಾಡ ಇವರೂ ಮತ್ತು ತಾಲ್ಲೂಕ ಅಮಲ್ದಾರರವರೂ, ಮ|| ರಾ|| ಬಸವನಾಳ ಎಂ. ಎ. ಗಿಲಗಂಜಿ ಅರಟಾಳ ಹೈಸ್ಕೂಲ್ ಮಾಸ್ತರರೂ ರಾಣೆಬೆನ್ನೂರ ಕರಿಂಪುರ ಪ್ಯಾಟಿಶೆಟ್ಟರೂ ಗೌಡರೂ ಬ್ಯಾಡಗಿ ಸಾವುಕಾರ ಮೊದಲಾದ ಅನೇಕ ಸದ್ಗೃಹಸ್ಥರೂ ಹುಬ್ಬಳ್ಳಿ ಧಾರವಾಡ ರಾಣೆಬೆನ್ನೂರ ವರ್ದಾಡ ಲಾತೂರ ನಿಜಾಮ ಮೈಸೂರ ಸಂಸ್ಥಾನ ಮೊದಲಾದ ಅನೇಕ ಪ್ರಾಂತಗಳಿಂದ ಅನೇಕ ಮಹನೀಯರು ೫೦೦೦ ಮಂದಿವರೆಗೆ ಬಂದದ್ದರಿಂದ ಈ ಸಭೆಗೆ ವಿಶೇಷ ಶೋಭೆಯುಂಟಾಗಿದ್ದಿತು. ಪ್ರಕಟನಪತ್ರದಲ್ಲಿ ಪ್ರಸಿದ್ಧಪಡಿಸಿದ ವಿಷಯಗಳೆಲ್ಲಾ ಚರ್ಚಿಸಲ್ಪಟ್ಟು ಮುಖ್ಯವಿಷಯಗಳ ಮೇಲೆ ಠರಾವುಗಳು ಈ ಕೆಳಗೆ ಕಂಡಂತೆ ಸರ್ವಾನುಮತದಿಂದ ಪಾಸಾದುವು.

೧ನೇ ಠರಾವು—ಈ ಸಭೆಯು ಸಾರ್ವಭೌಮ ಸರ್ಕಾರಕ್ಕೆ ಏಕನಿಷ್ಠೆಯ ರಾಜಭಕ್ತಿಯನ್ನು ವ್ಯಕ್ತಪಡಿಸುತ್ತದೆ. ಮತ್ತು ಸದ್ಯಃ ಹಿಂದೂಸ್ಥಾನಕ್ಕೆ ದಯಮಾಡಿಸುವ ಯುವಸಾರ್ವಭೌಮರವರನ್ನು ಅತ್ಯಾದರದಿಂದ ಸ್ವಾಗತಮಾಡುತ್ತದೆ. ಯುವರಾಜರವರ ಆಗಮನಕ್ಕೆ ಅನಾನುಕೂಲತೆಯನ್ನುಂಟುಮಾಡಲು ಯತ್ನಿಸಿದ ಅಸಹಕಾರದ ಭಯಂಕರಪರಿಣಾಮವನ್ನು ಸ್ಪಷ್ಟವಾಗಿ ತುಚ್ಛೀಕರಿಸುತ್ತದೆ. ೨. ಗಂಡುಹೆಣ್ಣು ಮಕ್ಕಳಲ್ಲೆಲ್ಲಾ ವಿದ್ಯಾಪ್ರಸಾರವಾಗಲು ಸಕ್ತಿಶಿಕ್ಷಣವನ್ನು ಅತಿತೀವ್ರ ಅಮಲಿನಲ್ಲಿ ತರಬೇಕೆಂತಲೂ ಮತ್ತು ಅದಕ್ಕಾಗಿ ತಗಲುವ ಖರ್ಚನ್ನು ಹೆಚ್ಚಿನ ಹೊಸ ಶಂಗಿಯ ಮೂಲಕ ವಹಿಸಲು ಪ್ರಜೆಗಳೆಲ್ಲಾ ಸಿದ್ಧರಾಗಿದ್ದಾರೆಂತಲೂ ಈ ಸಭೆಯು ನಿರ್ಧರಿಸುತ್ತದೆ. ೩. ಧಾರವಾಡದ ಕನ್ನಡ ಟ್ರೇನಿಂಗ್ ಕಾಲೇಜದ ೫೪ ಲಿಂಗಾಯತ ವಿದ್ಯಾರ್ಥಿಗಳಿಗೆ ಹೋದತಿಂಗಳಲ್ಲಿ ಮಾಡಿರುವ ಕಠೋರ ಶಿಕ್ಷೆಯನ್ನು ಕುರಿತು ಅತ್ಯಂತವಾಗಿ ವಿಷಾದಿಸುತ್ತದೆ, ಮತ್ತು ಸಕ್ತಿಶಿಕ್ಷಣವನ್ನು ಆರಂಭ ಮಾಡಬೇಕಾಗಿರುವ ಈ ನಿಕಟಪ್ರಸಂಗದಲ್ಲಿ ಹಿಂದುಳಿದವರ ವಿದ್ಯಾಭಿವೃದ್ಧಿಗೆ ತಡೆಯನ್ನು ತಂದು ಇಡೀ ವರ್ಷವನ್ನು ಅವರಿಗೆ ವ್ಯರ್ಥ ಹೋಗಗೊಡದೆ ಅವರ ಕೇಸನ್ನು ಪೂರ್ಣವಿಚಾರಮಾಡಿ ಅವರಿಗಾಗಿಯೇ ಮತ್ತೊಂದುಸಲ ಪರೀಕ್ಷೆಗೆ ಅಪ್ಪಣೆಕೊಡುವಂತೆ ಮೆ|| ವಿದ್ಯಾಖಾತೆಯ ಮಂತ್ರಿಗಳವರಿಗೆ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. ೪. ರಾಣೆಬೆನ್ನೂರ ತಾಲ್ಲೂಕ ಪೈಕಿ ಗುಡ್ಡಗುಡ್ಡಾಪುರ ದೇವಸ್ಥಾನಕ್ಕೆ ಶೇಕಡ ೯೯ಕ್ಕಿಂತಲೂ ಹೆಚ್ಚಾಗಿ ಬ್ರಾಹ್ಮಣೇತರರೇ ಭಕ್ತರಿದ್ದು ದೇವಸ್ಥಾನದ ಸರ್ವವರಮಾನವೂ ಬ್ರಾಹ್ಮಣೇತರರಿಂದಲೇ ಬರುತ್ತಿದ್ದಾಗ್ಯೂ ಈ ದೇವಸ್ಥಾನವು ಟೆಂಪಲ್ ಕಮಿಟಿ (Temple Committee) ಗೆ ಸೇರಿದ್ದು ಬ್ರಾಹ್ಮಣೇತರರೇ ಪಂಚರಾಗಿರತಕ್ಕದ್ದು ವಿಹಿತವಾದಾಗ್ಯೂ ಸವ್ಯಕ್ಕೆ ಬ್ರಾಹ್ಮಣರೇ ಪಂಚರಿದ್ದು ಈ ಪಂಚರು ಸಾರ್ವಜನಿಕರ ವಿಶ್ವಾಸಕ್ಕೆ ಪಾತ್ರರಿಲ್ಲವಾದ ಕಾರಣ ಈ ಮೆಂಬರರ ಸಂಖ್ಯೆಯನ್ನು ಕನಿಷ್ಠ ಪಕ್ಷ ೯ ಜನರವರೆಗೆ ಹೆಚ್ಚುಮಾಡಬೇಕೆಂತಲೂ ಮತ್ತು ಎಲ್ಲಾ ಜಾತಿಯ ಭಕ್ತರಿಂದೊಡಗೂಡಿರುವ ಜಾತ್ರೆಯ ಸಮಯದಲ್ಲಿ ಸರ್ವಭಕ್ತರ ವಿಶ್ವಾಸಕ್ಕೆ ಪಾತ್ರರಿರುವಂಥ ಯೋಗ್ಯಜನರನ್ನು ವೇಳೆವೇಳೆಗೆ (periodically) ಆರಿಸಿಬರುವಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ಈ ಸಭೆಯು ಶಿಫಾರಸು ಮಾಡುತ್ತದೆ. ೫. ಅಸಹಕಾರವಾದಿಗಳ ವಿಘಾತವಿಚಾರಗಳನ್ನು ಹಬ್ಬಗೊಡದೆ ಅಶಿಕ್ಷಿತಜನರಿಗೆ ಯೋಗ್ಯದಾರಿ ತೋರಿಸುವ ಸುವಿಚಾರಪರ ಸಾರ್ವಜನಿಕ ಲೆಕ್ಚರರನ್ನೇರ್ಪಡಿಸಿ ಜನರನ್ನು ಎಚ್ಚರಿಸುವಂಥ ರಾಜನಿಷ್ಠ ಸಂಘಗಳನ್ನು ತೀವ್ರವಾಗಿ ಸ್ಥಾಪಿಸಬೇಕೆಂದು ಈ ಸಭೆಯು ನಿರ್ಧರಿಸುತ್ತದೆ. ರಾಜನಿಷ್ಠ ಸಂಘವನ್ನು ಸ್ಥಾಪಿಸಬೇಕೆಂಬುವ ಈ ನಿರ್ಧಾರಕ್ಕನುಸಾರವಾಗಿ ಅಸುಂಡೀ ಭಾಗಕ್ಕಾಗಿ ಅಸುಂಡೀ ಗ್ರಾಮದಲ್ಲಿ ಮೆ|| ಪಂಡಿತ ಸಾ|| ದಿ|| ದಿ|| ಕಲೆಕ್ಟರರವರ ಅಧ್ಯಕ್ಷತೆಯ ಕೆಳಗೆ ಸಂಘವು ಸ್ಥಾಪಿಸಲ್ಪಟ್ಟಿತು ಮತ್ತು ಮಿ|| ಪುಟ್ಟರಾಜ ಒಡೆಯರ ಮತ್ತು ಮಿ|| ಮಣ್ಣಬಸವನಗೌಡಾ (ಪಾಟೀಲ ಶಿಡೇನೂರ) ಇವರಿಗೆ ಈ ಮಾದರಿಯ ಸಂಘಗಳನ್ನು ಯೋಗ್ಯ ಕಂಡಲ್ಲಿ ಸ್ಥಾಪಿಸುವ ಅಧಿಕಾರವನ್ನು ಕೊಟ್ಟಿತು. ೬. ಈ ಎಲ್ಲಾ ಠರಾವುಗಳನ್ನು ಯೋಗ್ಯಅಧಿಕಾರಸ್ಥರುಗಳಿಗೆ ತಿಳಿಸಲು ಆ ಸಂಬಂಧ ವ್ಯವಸ್ಥಾ ಮಾಡಲು ಪ್ರಸಿಡೆಂಟರವರಿಗೆ ಅಧಿಕಾರ ಕೊಟ್ಟು ಸರ್ವಾನುಮತದಿಂದ ಈ ಠರಾವುಗಳು ಪಾಸಾದುವು.

ಸಭಿಕ.

ಗೆದ್ದಲು ಹತ್ತಿತು.

ಅಯ್ಯಾ !

ತಮ್ಮ ನವಂಬರ್ ೨೭ ನೇ ತಾರೀಖಿನ ಪತ್ರಿಕೆಯನ್ನು ನೋಡಿದೆನು. ತಾವು ಬರೆದಿರುವುದು ಅಕ್ಷರಶಃ ನಿಜವಾಗಿದೆ. ಮೈಸೂರುದೇಶಕ್ಕೆ ಗೆದ್ದಲು ಹಿಡಿದಿರುವುದು ಮಾತ್ರವೇ ಅಲ್ಲ, ಬ್ರಿಟಿಷ್ ಇಂಡಿಯಾದಿಂದ "ಸಹಾಯನಿರಾಕರಣ" (Non-co-operation) ಎಂಬ ಸಾಂಕ್ರಾಮಿಕ ರೋಗಗ್ರಸ್ತರಾದವರು ಮೈಸೂರು ದೇಶಕ್ಕೂ ಬಂದು ಆ ರೋಗವನ್ನು ಹರಡುತ್ತಲಿರುವರು. ಈಗಾಗಲೇ ಇಲ್ಲಿನ ಕೆಲವರು ಆ ಅಂಟುರೋಗಕ್ಕೆ ತುತ್ತಾಗಿರುವಂತೆ ಕಾಣಬರುವದು. ಅದರಲ್ಲಿಯೂ ದೃಢಕಾಯರಾದ ವಿದ್ಯಾರ್ಥಿವಂಗಡದವರಲ್ಲಿ ಹೆಚ್ಚು ಹಾವಳಿ ಮಾಡುತ್ತಲಿರುವುದು ಅಪಾಯಸೂಚನೆಯಾಗಿದೆ. ಈ ವಿಷಯದಲ್ಲಿ ನಮ್ಮ ಘನ ಸರ್ಕಾರದವರು ಸ್ವಲ್ಪವೂ ಕಾಲವಿಳಂಬ ಮಾಡದೆ ತಕ್ಕ ಚಿಕಿತ್ಸೆಯನ್ನು ಪ್ರಯೋಗ ಮಾಡದಿದ್ದರೆ ಇದರ ಪರಿಣಾಮದ ದುಷ್ಫಲವನ್ನು ಮಲಬಾರಿನ ಪ್ರಜೆಗಳಂತೆ ನಾವೂ ಅನುಭವಿಸಬೇಕಾಗುವುದು. ಮತ್ತು ನಮ್ಮ ದೇಶಕ್ಕೆ ಶ್ರೀಮತ್ ಆಂಗ್ಲಯುವರಾಜರವರ ಸ್ವಾರಿಯು ಚಿತ್ತೈಸುವ ಕಾಲಕ್ಕೆ ಈ ಸಾಂಕ್ರಾಮಿಕ ರೋಗವು ಘೋರವಾಗಿ ವ್ಯಾಪಿಸಿ ನಮ್ಮಗಳ ಅಕೃತ್ರಿಮವಾದ ರಾಜಭಕ್ತಿವಿಶ್ವಾಸಗಳನ್ನು ಸ್ವೇಚ್ಛೆಯಾಗಿ ಪ್ರದರ್ಶಿಸಲು ಅವಕಾಶವಿಲ್ಲದಂತಾಗಬಹುದು.

ಸ್ವರಾಜ್ಯಪ್ರಾಪ್ತಿರೂಪವಾದ ವರಪ್ರದಾನ ಮಾಡುತ್ತೇವೆಂದು ಬಂದಿರುವ ಈ "ಸಹಾಯನಿರಾಕರಣವಾದಿ"ಗಳು ತಮ್ಮ ಅಸಹಕಾರ ತತ್ವವನ್ನು ಮೈಸೂರಿನ ಪ್ರಜೆಗಳಿಗೆ ಬೋಧಿಸುವ ಉದ್ದೇಶವೇನೆಂಬುದನ್ನು ದೇಶಹಿತೈಷಿಗಳೆಲ್ಲರೂ ಯೋಚಿಸಬೇಕಾಗಿದೆ. ಇವರು ಹರಡಿರುವ ಸ್ವರಾಜ್ಯಪ್ರಾಪ್ತಿಸುಖವೆಂಬ ಮೋಹಜಾಲಕ್ಕೆ ಈಗಾಗಲೇ ಇಲ್ಲಿನ ಕೆಲವರು ಸಿಕ್ಕಿಬಿದ್ದಿರುವುದನ್ನು ನೋಡಿ ತಮ್ಮ ಕಾರ್ಯವು ನಿರ್ವಿಘ್ನವಾಗಿ ಕೈಗೂಡುವುದೆಂದು ಮನಸ್ಸಿಗೆ ಧೈರ್ಯಹುಟ್ಟಿರಬಹುದು. ಆದರೆ ನಮ್ಮ ಆಂಗ್ಲಚಕ್ರವರ್ತಿ ಸಾರ್ವಭೌಮರವರಲ್ಲಿಯೂ, ಶ್ರೀಮನ್ಮಹಾರಾಜರವರಲ್ಲಿಯೂ ಅಸದೃಶವಾದ ರಾಜಭಕ್ತಿಯನ್ನಿಟ್ಟಿರುವ ಪ್ರಜಾಕೋಟಿಯು ಇವರ ಮಾಯಾಜಾಲಕ್ಕೆ ಸಿಕ್ಕಿಬೀಳುವ ಸಂಭವವಿಲ್ಲ.

ನಮ್ಮ ಮೈಸೂರು ಸೀಮೆಯಲ್ಲಿ "ನ್ಯಾಷನಲ್ ಕಾಂಗ್ರೆಸ್ಸಿನ" ಉಪಶಾಖೆಗಳನ್ನು ಸ್ಥಾಪಿಸುವುದಕ್ಕೆ ಈ ಅಸಹಕಾರವಾದಿಗಳು ತೋರಿಸುತ್ತಲಿರುವ ಕಾರಣಗಳು ಸಮರ್ಪಕವಾಗಿಲ್ಲ. ಕೀರ್ತಿಶೇಷರಾಗಿರುವ ಶ್ರೀಯುತ ದಾದಾಬಾಯಿ ನೌರೋಜಿ, ಗೋಖಲೆ, ಮೆಹ್ತಾ ಇವರೇ ಮೊದಲಾದವರ ಕಾಲದಲ್ಲಿ "ಕಾಂಗ್ರೆಸ್" ಯಾವ ಉದ್ದೇಶದಿಂದಲೂ ಯಾವ ಕ್ರಮದಿಂದಲೂ ನಡೆಯಿಸಲ್ಪಡುತ್ತಿದ್ದಿತೋ ಈಗ ಅಸಹಕಾರಿಗಳ ಕೊಂಕಳಿಗೆ ಸಿಕ್ಕಿಬಿದ್ದು ನರಳುತ್ತಿರುವ ಆ "ಕಾಂಗ್ರೆಸ್ಸು" ಅದೇ ಉದ್ದೇಶದಿಂದಲೇ ನಡೆಯಿಸಲ್ಪಡುತ್ತದೆಯೆಂದು ಯಾರೂ ಹೇಳಲಾರರು. ಹೇಗೂ ಕಾಂಗ್ರೆಸ್ಸಿನ ಈಗಿನ ಕಾರ್ಯಕ್ರಮಗಳಂತೂ ಕಾಂಗ್ರೆಸ್ಸಿನ ಕೀರ್ತಿಗೆ ಕುಂದಕವನ್ನುಂಟುಮಾಡಿರುವದಲ್ಲದೆ ದೇಶದ ಕ್ಷೇಮವನ್ನೂ ನಾಶಮಾಡತಕ್ಕದ್ದಾಗಿರುವದು ನಿಸ್ಸಂದೇಹವಾಗಿದೆ.

ಸ್ವದೇಶಿವಸ್ತುಪ್ರಚಾರಣೆಯಾಗಲಿ, ಮದ್ಯಪಾನನಿಷೇಧ ಪ್ರಚಾರಣೆಯಾಗಲೀ, ಕೈಮಗ್ಗಗಳ ಪ್ರಚಾರಣವಾಗಲೀ, ಅಸ್ಪೃಶ್ಯತ್ವದ ಮೂಲಕ ಪಂಚಮರ ಸಾಂಘಿಕಸ್ಥಿತಿಯನ್ನು ಉತ್ತಮಪಡಿಸುವದಾಗಲೀ ಇವರ ಮುಖ್ಯೋದ್ದೇಶವಾಗಿದ್ದಲ್ಲಿ, ಇದಕ್ಕೆ ಕಾಂಗ್ರೆಸ್ಸಿನ ಉಪಶಾಖೆಗಳನ್ನು ಸ್ಥಾಪಿಸಿಕೊಳ್ಳಬೇಕಾದುದರ ಅವಶ್ಯಕತೆಯೇನೂ ಇಲ್ಲ. ಇದಕ್ಕಾಗಿ "ಸ್ವದೇಶಿಸಂಘ"ಗಳನ್ನೂ, "ಟೆಂಪರೆನ್ಸ್‌ಲೀಗ್"ಗಳನ್ನೂ, ಪೌರಸಾಮಾಜಿಕಸಂಘಗಳನ್ನೂ, "ಡಿಪ್ರೆಸ್ಡ್‌ಕ್ಲಾಸ್ ಎಲಿವೇಷನ್" ಸಂಘಗಳನ್ನೂ, "ಅಸ್ಪೃಶ್ಯತ್ವಪ್ರಚಾರಣ" (Anti-untouchability) ಸಂಘಗಳನ್ನೂ ಸ್ಥಾಪಿಸಿಕೊಳ್ಳಬಹುದಾಗಿದೆ. ಇಂತಹ ಸದುದ್ದೇಶಗಳನ್ನುಳ್ಳ ಸಂಘಗಳಿಗೆ ನಮ್ಮ ಶ್ರೀಮನ್ಮಹಾರಾಜರವರೂ, ಅವರ ಸರ್ಕಾರದವರೂ, ಶ್ರೀಮದ್ಯುವರಾಜರವರೂ ತಮ್ಮ ಅಮೋಘವಾದ ಸಹಾಯವನ್ನು ಕೊಡಲು ಸರ್ವದಾ ಸಿದ್ಧರಾಗಿಯೇ ಇರುವದೂ, ಹೆಚ್ಚುಹೆಚ್ಚು ಸಹಾಯಮಾಡುತ್ತಲಿರುವುದೂ ಎಲ್ಲರಿಗೂ ತಿಳಿದೇಇದೆ.

ಈಗಿನ ಕಾಂಗ್ರೆಸ್ಸಿನ ಉದ್ದೇಶಗಳಲ್ಲೆಲ್ಲಾ "ಸಹಾಯನಿರಾಕರಣ" ಮಾಡುವದರ ಮೂಲಕ ಇಂಡಿಯಾದಲ್ಲಿ ಬ್ರಿಟಿಷರ ರಾಜ್ಯಭಾರವು ಟೊಂಕಮುರಿದು ಬೀಳುವಂತೆ ಮಾಡಬೇಕೆಂಬ ಉದ್ದೇಶವೇ ಅತಿ ಮುಖ್ಯವಾದದ್ದು. ಈ ದುರುದ್ದೇಶದಿಂದಲೇ ಈ ಅಸಹಕಾರವಾದಿಗಳು ಇಲ್ಲಿಯೂ ಕೆಲಸಮಾಡುತ್ತಿರಬೇಕೇ ಹೊರತು ಮತ್ತಾವ ಉದ್ದೇಶವೂ ಕಾಣಬರುವುದಿಲ್ಲ. ತಿಲಕ ಸ್ವರಾಜ್ಯಫಂಡಿಗಾಗಿ ಇಲ್ಲಿಂದ ಹಣವನ್ನೆತ್ತಿಕೊಂಡು ಹೋಗಿ ಆ ಹಣವನ್ನು "ಸಹಾಯನಿರಾಕರಣ" ಕಾರ್ಯಕ್ಕೆ ವ್ಯಯಮಾಡುವುದು ಗುಟ್ಟೇನೂ ಅಲ್ಲ. ವಾಚಕರೇ ನಿಮ್ಮ ನೆರೆಮನೆಗಳವರು ಕೆಲವರು ಅತಿ ದರಿದ್ರರಾಗಿ ಈ ಚಳಿಗಾಲದಲ್ಲಿ ಬಟ್ಟೆಯಿಲ್ಲದೆ ಕಷ್ಟಪಡುತ್ತಿರುವಾಗ ನಿಮ್ಮ ಬಟ್ಟೆಗಳನ್ನು ನಿಮ್ಮ ಕಂಣೆದುರಿಗೇ ಬೆಂಕಿಹೊತ್ತಿಸಿ ಚಪ್ಪಾಳೆತಟ್ಟುವಂತೆ ಮಾಡುತ್ತಾರೆ. ಬ್ರಿಟಿಷರ ರಾಜ್ಯಭಾರವು ಇಂಡಿಯಾದಲ್ಲಿ ನಿರ್ಮೂಲವಾಗುವಂತೆ ಮಾಡಬೇಕೆಂಬ ಉದ್ದೇಶವುಳ್ಳವರೊಡನೆ ಸೇರಿ ಕುಣಿಯುವುದು ಈಹೊತ್ತೇನೋ ಬಲು ರುಚಿಯಾಗಿರಬಹುದು. ನಿನ್ನೆ ಮೊನ್ನೆವರೆಗೂ ಅನಾಮಧೇಯರಾಗಿದ್ದವರೂ ಕೂಡ ಪ್ರಸಿದ್ಧ ಪುರುಷರಾಗುವ ಸಂಭವವೊದಗಿದೆಯೆಂಬ ಭ್ರಾಂತಿಯಿಂದಲೂ, ದೇಶಸೇವಕ ಲೋಕಸೇವಕ ಎಂಬದಾಗಿ ಹೊಗಳಿಸಿಕೊಳ್ಳಬಹುದೆಂದೂ ಕೆಲವರು ತಿಳಿದುಕೊಂಡಿರುತ್ತಾರೆ. ಆದರೆ ಈ ದೇಶಸೇವಕರನ್ನೇ ಜನರೆಲ್ಲರೂ ದೇಶಕಂಟಕರೆಂದು ದೂಷಿಸುವ ಕಾಲವನ್ನು ನಾವೆಲ್ಲರೂ ನೋಡಬೇಕಾಗುವುದು. ಅಷ್ಟಾಗುವುದರೊಳಗೆ ನಮ್ಮ ಮನೆ, ಮಠ, ಪ್ರಾಣ, ಜಾತಿ, ಮಾನ, ಮೊದಲಾದುವನ್ನು ಕಳೆದುಕೊಂಡು ಮಲಬಾರಿನವರಂತೆ ನಾವೂ ಘೋರ ಸಂಕಟಕ್ಕೆ ಗುರಿಯಾಗಬೇಕಾಗುವದು.

ನಮ್ಮ ಗೌರ್ನಮೆಂಟಿನಲ್ಲಿ ಪ್ರಜೆಗಳಿಗೆ ಹೆಚ್ಚು ಜವಾಬ್ದಾರಿಕೆ ಸ್ಥಾನವೂ, ಹೆಚ್ಚು ಸ್ವಾತಂತ್ರ್ಯವೂ ಸಿಕ್ಕಬೇಕಾಗಿದ್ದಲ್ಲಿ ಅದಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿದಹಾಗೆಲ್ಲಾ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಹೆಚ್ಚು ಸ್ವಾತಂತ್ರ್ಯಕೊಡಲು ಸಿದ್ಧರಾಗಿರುವರು. ಇದಕ್ಕೆ ಬದಲಾಗಿ ಬ್ರಾಹ್ಮಣ—ಬ್ರಾಹ್ಮಣೇತರ ಎಂಬಿವೇ ಮೊದಲಾದ ಜಾತಿದ್ವೇಷವನ್ನು ತಂದುಹಾಕಿ, ಅಷ್ಟಕ್ಕೂ ತೃಪ್ತರಾಗದೆ ಭಾರತೀಯರಿಗೂ ಪಾಶ್ಚಿಮಾತ್ಯರಿಗೂ ದ್ವೇಷವನ್ನು ಹುಟ್ಟಿಸುವುದರಲ್ಲಿ ಉದ್ಯುಕ್ತರಾಗುವದು ನಮ್ಮ ಅಧೋಗತಿಗೆ ಕಾರಣವಾಗುವದು. ಅಲ್ಲದೆ ಕಾಂಗ್ರೆಸ್ಸಿನ ಶಾಖೆಗಳನ್ನು ಸ್ಥಾಪಿಸಿ ಸರ್ಕಾರದವರನ್ನು ಬೆದರಿಸುವುದಾಗಲಿ ಸಹಾಯನಿರಾಕರಣ ಸಿದ್ಧಾಂತವನ್ನು ಪ್ರಚಾರಮಾಡುವದಾಗಲಿ ನಮಗೆ ಕಾರ್ಯಕಾರಿಯಲ್ಲ. ಈ ಅಸಹಕಾರವಾದಿಗಳು ನಮ್ಮ ದೇಶದ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ, ಸಾಧ್ಯವಾಗುವದಾದರೆ ಪ್ರತಿ ತಾಲ್ಲೂಕಿನಲ್ಲೂ ತಮ್ಮ ವಿಷವೃಕ್ಷದ ಶಾಖೆಯನ್ನು ಸ್ಥಾಪಿಸುವ ಸಂಭವವುಂಟು. ಇದಕ್ಕೆ ಸಹಾಯಮಾಡತಕ್ಕವರು ಪ್ರತಿ ಸ್ಥಳದಲ್ಲಿಯೂ ವಿವೇಕಶೂನ್ಯರಾದವರು ಒಬ್ಬಿಬ್ಬರು ದೊರೆತರೂ ದೊರೆಯಬಹುದು. ಆದಕಾರಣ ದೇಶಹಿತೈಷಿಗಳಾದವರೆಲ್ಲರೂ ತಮ್ಮತಮ್ಮ ಅಲ್ಪಕಲಹಗಳನ್ನು ಮರೆತು ಏಕೀಭವಿಸಿ ಸರ್ಕಾರದವರಿಗೂ ಎಚ್ಚರಿಕೆಕೊಟ್ಟು ಸರ್ಕಾರಕ್ಕೆ ಬೆಂಬಲವಾಗಿ ನಿಂತು ಈ ಅಸಹಕಾರ ಸಿದ್ಧಾಂತವೆಂಬ ರಾಕ್ಷಸನ ಹಾವಳಿಯನ್ನು ತಡೆಯುವ ಪ್ರಯತ್ನಮಾಡದಿದ್ದಲ್ಲಿ ಮುಂದೆ ಇದನ್ನು ತಹಬಂದಿಗೆ ತರುವುದು ಸರ್ಕಾರದವರಿಗೂ ಕಷ್ಟಸಾಧ್ಯವಾಗುವದು. ಈ ವಿಷಯವನ್ನು ದೇಶಪ್ರಮುಖರೆಲ್ಲರೂ ಕಾಲವಿಳಂಬಮಾಡದೆ ಯೋಚನೆಮಾಡಬೇಕಾಗಿದೆ.

K. Venkatashiya.

೧೯೨೧ ನೆಯ ಇಸವಿ ಡಿಶಂಬರ್ ತಾ|| ೪ರಿಂದ ೧೯೨೧ ನೆಯ ಡಿಶಂಬರ್ ತಾ|| ೧೦ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಮಾರ್ಗಶಿರಶುದ್ಧ ಪಂಚಮಿಯಿಂದ ಮಾರ್ಗಶಿರಶುದ್ಧ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
4	[1]ಭಾನು	ಪಂಚ	40-42	ಶ್ರವ	60	19
5	[2]ಸೋಮ	ಷಷ್ಠಿ	45-53	ಶ್ರವ	0-54	20
6	ಮಂಗಳ	ಸಪ್ತ	51-28	ಧನಿ	7-21	21
7	ಬುಧ	ಅಷ್ಟ	56-53	ಶತ	13-53	22
8	[3]ಗುರು	ನವ	60	ಪೂಭಾ	20-8	23
9	ಶುಕ್ರ	ನವ	1-21	ಉಭಾ	25-39	24
10	ಶನಿ	ದಶ	5-8	ರೇವ	30-12	25

(1) ನಾಗರಪಂಚಮಿ. (2) ಚಂಪಾಷಷ್ಠಿ, ಸುಬ್ರಹ್ಮಣ್ಯಸ್ವಾಮಿರಥಃ. (3) ಮಾರ್ಗಶಿರ ಲಕ್ಷ್ಮೀವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾಶಾ ಪಶ್ಯಜ್ಜನನ್ಯಸ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಯೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಡಿಸೆಂಬರ್ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೪೯

SREE SITHARAGHAVA VAIDYASALA

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
47 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆಲಗಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
ಕಂಪನಿ, ಚೌಕಂಬಾ ಕಾಶೀ.
41

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸ	೦—೮—೦
ವೃಷಭಾಂಕ	೦—೯—೦

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

WANTED. 3

For the Board High School Harapanahalli permanently a Kanarese Pandit on Rs. 30-1-40 with a temporary addition of Rs. 10 per mensem. Persons having previous teaching experience and academical training and qualifications will be preferred. A knowledge of English will be helpful.

Applications will be received by the President District Board, Bellary up to the 20th December 1921. None received thereafter will be considered.

Bellary Dt. Board's Office, Dated 23rd Nov. 21. (Sd.) N. A. Narasima Rao,
for President.

ಆಂಗ್ಲ ಅಫ್ಘನ್ ಸಂಧಿನಿಬಂಧನೆಗಳ ವಿವರ.

(ಇಂಡ್ಯಾ ಸರ್ಕಾರದ ಪ್ರಕಟನೆ)

೧. ಒಬ್ಬರೊಬ್ಬರಿಗೆ ಅವರ ದೇಶಗಳಲ್ಲೂ ಹೊರಗೂ ಸಂಪೂರ್ಣ ಸ್ವಾತಂತ್ರ್ಯವಿರುವುದೆಂದು ಆಂಗ್ಲಪ್ರಭುತ್ವದವರೂ ಅಫ್ಘನ್ ಪ್ರಭುತ್ವದವರೂ ಗ್ರಹಿಸುತ್ತಾರೆ.

೨. ಎರಡು ರಾಜ್ಯಗಳ ಮಧ್ಯದ ಎಲ್ಲೆಕಟ್ಟನ್ನು ಕುರಿತು ೧೯೧೯ನೆ ವರ್ಷದ ಆಗಸ್ಟ ಸೆಪ್ಟಂಬರ್ ಮಾಸಗಳಲ್ಲಿ ಜರುಗಿದ ಏರ್ಪಾಟೇ ಅಂಗೀಕರಿಸಲ್ಪಟ್ಟಿದೆ. ಆಂಗ್ಲರ ಪರಿಪಾಲನೆಗೊಳಪಟ್ಟ ಪ್ರಜೆಗಳಿಗೆ ಕಾಬೂಲು ನದಿಯ ಮೇಲೆ ವ್ಯಾಪಾರ ಮಾಡಿಕೊಳ್ಳುವ ವಿಷಯದಲ್ಲಿ ಇದಕ್ಕೆ ಮುಂಚೆ ಇದ್ದ ಹಕ್ಕನ್ನು ಮುಂದೆಯೂ ತೊಲಗಿಸಕೂಡದು.

೩. ಇತರ ರಾಜ್ಯಗಳಿಗೆ ಸಮನಾಗಿ ಅಫ್ಘನ್ ಮಂತ್ರಿಯೊಬ್ಬರು ಲಂಡನ್ ಪಟ್ಟಣದಲ್ಲಿರಬೇಕು. ಅದರಂತೆಯೇ ಆಂಗ್ಲಮಂತ್ರಿಯೊಬ್ಬರು ಕಾಬೂಲು ಪಟ್ಟಣದಲ್ಲಿರಬಹುದು. ಆ ರಾಯಭಾರಿಗಳ ಜತೆಯಲ್ಲಿ ಸ್ವಲ್ಪಸ್ವಲ್ಪಸೈನ್ಯವೂ ಇರಬಹುದು.

೪. ಕಾಂದಹಾರ್, ಜಲಾಲಾಬಾದುಗಳಲ್ಲಿ ಭರತಖಂಡದ ಪ್ರಭುತ್ವದ ರಾಯಭಾರಿಗಳು ನಿರಾತಂಕವಾಗಿರಬಹುದು. ಅದರಂತೆಯೇ ಭರತಖಂಡ ಸರ್ಕಾರದ ಮುಖ್ಯಪಟ್ಟಣಗಳಲ್ಲಿ ಅಫ್ಘನ್ ಕೌನ್ಸಿಲ್ ಜನರಲ್ಲರು ಇರಬಹುದು. ಕರಾಚಿ, ಕಲಕತ್ತಾ, ಬೊಂಬಾಯಿ ಪಟ್ಟಣಗಳಲ್ಲಿ ಮೂವರು ಅಫ್ಘನ್ ರಾಯಭಾರಿಗಳಿರುವರು. ಭರತಖಂಡದಲ್ಲಲ್ಲದೆ ಇತರ ರಾಷ್ಟ್ರಗಳಲ್ಲಿ ಅಫ್ಘನ್ ರಾಯಭಾರಿಗಳನ್ನು ನಿಯಮಿಸಬೇಕಾಗಿ ಬಂದರೆ ಪ್ರತ್ಯೇಕವಾದ ಏರ್ಪಾಟುಗಳನ್ನು ಮಾಡಬೇಕಾಗಿ ಬರುವುದು.

೫. ಮೇಲೆಕಂಡ ಮಂತ್ರಿಗಳು ಕೌನ್ಸಲ್‌ಜನರಲ್ಲರು ರಾಯಭಾರಿಗಳು ಇವರಿಗೆಲ್ಲಾ ಯಾವ ಪ್ರಾಣಭಯವೂ ಉಂಟಾಗದಂತೆಯೂ, ಅವರನ್ನು ಉಚಿತರೀತಿಯಿಂದ ಮರ್ಯಾದಿಸಿಕೊಂಡಿರುವಂತೆಯೂ, ಮಾಡಿಕೊಂಡಿರಲು ಉಭಯಪಕ್ಷದವರೂ ಒಪ್ಪುತ್ತಾರೆ. ತಮ್ಮ ದೇಶಾಭಿವೃದ್ಧಿಗೋಸ್ಕರ ಅಫ್ಘಾನಿಸ್ತಾನವು ಅಭ್ಯಂತರವಿಲ್ಲದೆ ಮಿಷನ್ನುಗಳನ್ನೂ ಇಂಜನ್ನುಗಳನ್ನೂ ತಂತಿ ಟೆಲಿಫೋನ್ ಸಾಮಾನುಗಳನ್ನೂ ಆಂಗ್ಲದೇಶದಿಂದಲೇ ಆಗಲಿ ಇತರ ದೇಶಗಳಿಂದಲೇ ಆಗಲಿ ತರಿಸಿಕೊಂಡು ಭರತಖಂಡದ ರೇವೆಗಳ ದ್ವಾರಾ ಇಳಿಯಿಸಿ ಸಾಗಿಸಿಕೊಳ್ಳಬಹುದು.

೬. ಇದರಂತೆಯೇ ಅಫ್ಘನ್ ಪ್ರಭುತ್ವದವರ ಅನುಮತಿಯ ಮೇರೆ ಆಂಗ್ಲಪ್ರಭುತ್ವದವರು ಅಫ್ಘಾನಿಸ್ಥಾನದಿಂದ ಬೇಕಾದ ಸಾಮಗ್ರಿಗಳನ್ನು ತರಿಸಿಕೊಳ್ಳಬಹುದು. ಅಫ್ಘಾನಿಸ್ಥಾನದವರು ಆಂಗ್ಲರೊಡನೆ ಮಿತ್ರರಾಗಿರುವುದಕ್ಕೆ ಒಪ್ಪಿರುತ್ತಾರಾದಕಾರಣ ಅವರ ಇಷ್ಟಬಂದಂತೆ ಯುದ್ಧಸಾಮಗ್ರಿಗಳನ್ನು ತರಿಸಿಕೊಳ್ಳಬಹುದು.

೭. ಹೀಗೆ ತರಿಸಿಕೊಳ್ಳುವ ಯುದ್ಧಸಾಮಗ್ರಿಯ ಮೇಲೆ ಭರತಖಂಡದ ರೇವೆಗಳಲ್ಲಿ ಸುಂಕವು ವಿಧಿಸಲ್ಪಡುವುದಿಲ್ಲ. ಆದರೆ ಅಂಥ ಸಾಮಗ್ರಿಗಳು ಅಫ್ಘನ್ ಸರ್ಕಾರಕ್ಕೆ ಬೇಕಾದುವೆಂಬುದನ್ನು ಅವರು ಸುಂಕದಕಟ್ಟೆ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಬೇಕು. ಅಫ್ಘಾನಿಸ್ಥಾನದಿಂದ ಭರತಖಂಡಕ್ಕೆ ಸಾಗಿಸಿ ತರುವ ಸಾಮಾನುಗಳಮೇಲೆ ಸುಂಕವು ವಿಧಿಸಲ್ಪಡುವುದು.

೮. ಪೆಷಾವರು, ಕ್ವೆಟ್ಟಾ, ಕರಾಚಿ ಪಟ್ಟಣಗಳಲ್ಲಿ ಅಫ್ಘನ್ ವ್ಯಾಪಾರಕ್ಕಾಗಿ ಏಜನ್ಸಿಗಳನ್ನು ಇಟ್ಟುಕೊಳ್ಳಬಹುದು. ಆದರೆ ಅವರುಗಳು ಆಂಗ್ಲರಾಜ್ಯಾಧಿಕಾರಕ್ಕೆ ಒಳಪಟ್ಟಿರಬೇಕು.

೯. ಮೇಲೆಕಂಡ ೭ನೆಯ ನಿಬಂಧನೆಯ ಪ್ರಕಾರ ಯೂರೋಪು ಖಂಡದಿಂದ ಅಫ್ಘಾನಿಸ್ಥಾನಕ್ಕೆ ತರಿಸಿಕೊಳ್ಳುವ ಸಾಮಗ್ರಿಗಳ ಮೇಲೆ ಸುಂಕವನ್ನು ವಿಧಿಸುವ ವಿಷಯದಲ್ಲಿ ತಕ್ಕ ನಿಬಂಧನೆಗಳು ಏರ್ಪಡಿಸಲ್ಪಡುವುವು.

೧೦. ಅಂಚೆಯನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸಾಗಿಸಲು ತಕ್ಕ ಏರ್ಪಾಟು ಮಾಡಲ್ಪಡುವುದು.

೧೧. ಎಲ್ಲೆಕಟ್ಟುಗಳ ಯುದ್ಧವನ್ನು ಕುರಿತು ಸಂಗತಿಗಳನ್ನು ಒಂದು ಪ್ರಭುತ್ವದವರು ಮತ್ತೊಂದು ಪ್ರಭುತ್ವದವರಿಗೆ ತಿಳಿಯಿಸುತ್ತಲಿರಬೇಕು.

೧೨. ಪರಸ್ಪರ ವ್ಯಾಪಾರ ಸಂಬಂಧ ನಿಯಮಗಳನ್ನು ಏರ್ಪಡಿಸಲಿಕ್ಕೆ ಎರಡು ಪ್ರಭುತ್ವಗಳವರೂ ಕೆಲ ಪ್ರತಿನಿಧಿಗಳ

ನ್ನು ನಿಯಮಿಸಬೇಕು. ಈ ನಿಬಂಧನೆಗಳು ಏರ್ಪಡುವವರೆಗೂ ಈಗಿರುವ ಏರ್ಪಾಟುಗಳೇ ನಡೆಯುತ್ತಿರಬೇಕು.

೧೩. ಈ ಸಂಧಿಪತ್ರದ ೧-೨ನೆ ಅಂಶಗಳು ನಿಬಂಧನೆಗಳಿಗೆ ಸಮಾನವಾದುವುಗಳೆಂದೇ ಉಭಯಪಕ್ಷದವರೂ ಒಪ್ಪುತ್ತಾರೆ.

೧೪. ಈ ಸಂಧಿಪತ್ರಕ್ಕೆ ಉಭಯ ಪ್ರಭುತ್ವದವರೂ ಹಸ್ತಾಕ್ಷರವನ್ನು ಹಾಕಿದ ದಿನದಿಂದ ೩ ವರ್ಷಗಳ ವರೆಗೆ ಈ ನಿಬಂಧನೆಗಳೆಲ್ಲವೂ ವ್ಯವಹಾರದಲ್ಲಿರುವುವು.

ಈ ಮೇಲೆಕಂಡಂತೆ ಸಂಧಿಯನ್ನು ಅಫ್ಘನ್ ಪ್ರಭುತ್ವದವರೊಡನೆ ನೆರವೇರಿಸಿದುದಕ್ಕಾಗಿ ಜಾರ್ಜ್‌ಸಾರ್ವಭೌಮರು ಸರ್ ಹೆನ್ರಿ ಡಾಬ್ಸ್‌ರವರಿಗೆ ಕೆ.ಸಿ.ಎಸ್ ಐ. ಎಂಬ ಬಿರುದನ್ನು ಅನುಗ್ರಹಿಸಿದರು ಎಂದು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಡಿಸೆಂಬರ್ ತಾ|| ೧೧ ನೆಯ ಭಾನುವಾರ.

ಮಾಪಿಳ್ಳೆಯಜ್ಞದ ವಿಚಾರಣೆ.

ನೂರುಮಂದಿ ಮಾಪಿಳ್ಳೆಗಳನ್ನು ವಾಗಿನ್ನಿನಲ್ಲಿ ತುಂಬಿ ಕಳುಹಿಸಿ ೭೦ ಮಂದಿಯನ್ನು ಯಜ್ಞಮಾಡಿಸಿದ ಸಂಬಂಧದ ವಿಚಾರಣೆಯನ್ನು ಮಾಡಲಿಕ್ಕೆ ಮಲಬಾರ್ ಸ್ಪೆಷಲ್‌ಕಮಿಷನರ್ ಆ|| ನಾಪುರವರ ಅಧ್ಯಕ್ಷತೆಯಿಂದ ಸರ್ಕಾರದವರು ಏರ್ಪಡಿಸಿದ್ದ ಸಂಘದವರು ಎಂದರೆ ಮ|| ಗಳಾದ ಮಂಜೇರಿ ರಾಮಯ್ಯರು, ರಾ|| ಬ|| ಕೃಷ್ಣವರ್ಮರಾಜಾರವರು, ಖಾನ್‌ಸಾಹೇಬ್ ಕಲ್ಯಾಡಿ ಮಾಯಿದುಕ್ಟಿ ಸಾಹೇಬ್ ಬಹದೂರ್‌ರವರು ತಮ್ಮ ವಿಚಾರಣೆಯನ್ನೆಲ್ಲಾ ಕಳೆದ ತಾ|| ೧ಕ್ಕೆ ಮುಗಿಸಿದರು. ಈ ಸಂಘದವರು ಟ್ರಾಫಿಕ್ ಇನ್‌ಸ್ಪೆಕ್ಟರು ರೈಲ್ವೆಸ್ಟೇಷನ್‌ಮಾಸ್ಟರುಗಳೇ ಮೊದಲಾದ ಕೆಲವುದ್ಯೋಗಿಗಳ ಪೋಲೀಸುದ್ಯೋಗಿಗಳ ಮತ್ತು ಮರಣವಾದದಿನ ಆ ಬಂಡಿಯಲ್ಲೇ ಪ್ರಯಾಣಮಾಡುತ್ತಿದ್ದ ಇತರ ಪ್ರಯಾಣಿಕರ ಮತ್ತು ವಾಗಿನ್ನಿನಲ್ಲಿ ಮೃತರಾಗಿ ಹೋದವರ ಜತೆಯಲ್ಲಿದ್ದು ಬದುಕಿಕೊಂಡವರ ಮತ್ತು ಮೂರುಮಂದಿ ವೈದ್ಯರುಗಳ ವಾಜ್ಮೂಲಗಳನ್ನೆಲ್ಲಾ ತೆಗೆದುಕೊಂಡಿರುವರು. ಆ ವಾಜ್ಮೂಲದ ವಿವರಣೆಯನ್ನೆಲ್ಲಾ ಕೇಳಿದರೆ ಒಳಗಿದ್ದವರು ಎಷ್ಟು ಸಂಕಟಪಟ್ಟು ಸತ್ತಿರಬೇಕೆಂಬುದು ಗೊತ್ತಾಗಿ ಎಂಥವನಿಗೂ ಎದೆಯನ್ನು ಬಿರಿಯಿಸುವಂತಿರುವುದು. ರೈಲ್ವೆ ಟ್ರಾಫಿಕ್ ಇನ್‌ಸ್ಪೆಕ್ಟರಾದ ಮಿ|| ರೀವ್‌ರವರ ವಾಜ್ಮೂಲದಲ್ಲಿ ಈ ನೂರುಮಂದಿ ಮಾಪಿಳ್ಳೆಗಳನ್ನು ಸಾಗಿಸಿದ ವಾಗಿನ್ನು (೧೭೧೧ನೆ ನಂಬರುಳ್ಳದು) ಇದಕ್ಕೆ ಮುಂಚೆ ಯಾವಾಗಲೂ ಹೀಗೆ ಬಂದಿಗಳನ್ನು ತುಂಬಿ ಕಳುಹಿಸಲಿಕ್ಕೆ ಉಪಯೋಗಿಸಲ್ಪಟ್ಟಿರಲಿಲ್ಲವೆಂದೂ, ಮರಣವೆಲ್ಲಾ ಆದಬಳಿಕ ಈಚೆಗೆ ಆ ಬಂಡಿಯನ್ನೇರಿ ತಾನು ಪರೀಕ್ಷಿಸಿದಾಗ ಅದಕ್ಕೆ ಗಾಳಿಬರಲು ತಂತಿ ಹರಡಿದ ಸಣ್ಣ ೧ ಕಿಟಕಿ ಮಾತ್ರ ಇದ್ದರೂ ಅದು ಕೂಡ ಬಣ್ಣದಿಂದಲೂ ಧೂಳಿಯಿಂದಲೂ ತುಂಬಿ ಮುಚ್ಚಿಹೋಗಿದ್ದಿತೆಂತಲೂ ನೂರು ಜನರನ್ನು ಈ ಬಂಡಿಗೆ ಪೋಲೀಸರು ಹತ್ತಿಸಿ ಕದಗಳನ್ನೆಲ್ಲಾ ಮುಚ್ಚಿ ಹೊರಗೆ ಬದ್ರಪಡಿಸಿದುದನ್ನು ತಾನು ನೋಡಿದೆನೆಂತಲೂ ಹೇಳಿರುವರು.

ಈ ಬಂದಿಗಳನ್ನು ವಾಗಿನ್ನಿಗೆ ಹತ್ತಿಸಿದ ರಿಜರ್ವ್ ಪೋಲೀಸುದ್ಯೋಗಿಯಾದ ಸಾರ್ಜಂಟ್ ಆರ್. ಹೆಚ್. ಆಂಡ್ರ್ಯೂಸ್‌ರವರ ವಾಜ್ಮೂಲದಲ್ಲಿ ಈ ನೂರುಮಂದಿಯನ್ನು ಬಳ್ಳಾರಿಗೆ ಕಳುಹಿಸಬೇಕೆಂದು ತಿರೂರು ಸಬ್ ಮೇಜಸ್ಟ್ರೇಟರು ಮಾಡಿದ ಅಪ್ಪಣೆಯ ಮೇರೆಗೆ ತಾನು ರೈಲ್ವೆ ಟ್ರಾಫಿಕ್ ಇನ್‌ಸ್ಪೆಕ್ಟರೊಡನೆ ಮಾತನಾಡಿ ಈ ೧೭೧೧ನೆ ನಂ|| ವಾಗಿನ್ನಿನಲ್ಲಿ ತುಂಬಿದ್ದ ತಂತಿಯ ಸಾಮಾನುಗಳನ್ನು ಮಾಪಿಳ್ಳಾ ಬಂದಿಗಳಿಂದಲೇ ತೆಗೆಯಿಸಿ, ಆ ಬಂದಿಗಳಿಗೆಲ್ಲಾ ಹೊಟ್ಟೆತುಂಬಾ ಅನ್ನ ನೀರನ್ನು ಕೊಡಿಸಿ ಬಂಡಿಯನ್ನೇರಿಸಿದೆನೆಂತಲೂ, ಆ ಬಂಡಿಗೆ ಗಾಳಿ ಬೆಳಕು ಬರಲವಕಾಶವಿರುವುದೇ ಇಲ್ಲವೇ ಎಂಬುದನ್ನು ತಾನು ಪರೀಕ್ಷಿಸಲಿಲ್ಲವೆಂತಲೂ, ಮಾಲಪ್ಪುರಮ್ಮಿನಿಂದ ಈ ಬಂದಿಗಳೆಲ್ಲಾ ತಿರೂರಿಗೆ ಬಂದು ವಾಗಿನ್ನನ್ನು ಹತ್ತುವವರೆಗೂ ಆರೋಗ್ಯವಾಗಿಯೇ ಇದ್ದರೆಂತಲೂ, ತನ್ನ ಜತೆಯಲ್ಲಿದ್ದ ಒಬ್ಬ ಹೆಡ್ ಕಾನ್‌ಸ್ಟೆಬಲು ಮತ್ತು ಪೋಲೀಸಾಳುಗಳು ಸಹ ಆ ವಾಗಿನ್ನಿನ ಹಿಂಗಡೆಯಲ್ಲಿದ್ದ ಮೂರನೆ ತರಗತಿ ಬಂಡಿಯಲ್ಲಿ ಕುಳಿತು ಪ್ರಯಾಣಮಾಡಿದರೆಂತಲೂ, ತಾನು ಅದರ ಹಿಂಗಡೆಯಿದ್ದ ೨ನೆ ತರಗತಿಯ ಬಂಡಿಯಲ್ಲಿ ಕುಳಿತು ಪ್ರಯಾಣಮಾಡಿದೆನೆಂತಲೂ, ಬಂಡಿಯು ಮಾರ್ಗಮಧ್ಯದಲ್ಲಿ ಷೋರನೂರು ನಿಲ್ದಾಣದಲ್ಲಿ ನಿಂತಾಗ್ಗೆ ತಾನು ಇನ್ನಿಬ್ಬರು ಪೋಲೀಸರೊಡನೆ ಈ ಬಂದಿಗಳ ವಾಗಿನ್ನಿನ ಬಳಿಗೆ ಬಂದು ನಿಂತುಕೊಂಡಾಗ ಒಳಗಿದ್ದ ಬಂದಿಗಳು ಕುಡಿಯುವ ನೀರಿಗಾಗಿ ಅರಚಿಕೊಳ್ಳುತ್ತಿದ್ದರೆಂತಲೂ, ಆದರೆ ಇದಕ್ಕೆ ಮುಂಚೆ ೧೫ ಸಲ ಹೀಗೆಯೇ ಬಂದಿಗಳನ್ನು ಇಂಥ ಬಂಡಿಗಳಲ್ಲಿ ತುಂಬಿಕೊಂಡು ಹೋಗುವಾಗಲೂ ಇದೇ ರೀತಿಯಲ್ಲಿ ದಾಹದಿಂದ ಅವರುಗಳು ಕೂಗಿಕೊಳ್ಳುತ್ತಿದ್ದುದು ಪದ್ಧತಿಯಾಗಿದ್ದುದರಿಂದ ನಾನು ಇದೂ ಹಾಗೆಯೇ ಎಂದು ತಿಳಿದು ನಿಮಗೆಲ್ಲಾ ಪೋತನೂರಿನಲ್ಲಿ ನೀರನ್ನು ಕೊಡಿಸುತ್ತೇನೆಂದು ಹೇಳಿದೆನೆಂತಲೂ, ಕೆಲವು ಸಲ ನಾನು ತಿರೂರಿನಿಂದ ಬೆಂಗಳೂರಿನವರೆಗೆ ಹೀಗೆಯೇ ವಾಗಿನ್ನುಗಳಲ್ಲಿ ಬಂದಿಗಳನ್ನು ಸಾಗಿಸಿಕೊಂಡು ಹೋದಾಗ್ಗೆ ಮಧ್ಯಮಾರ್ಗದಲ್ಲೆಲ್ಲೂ ಅವರಿಗೆ ನೀರನ್ನು ಕುಡಿಯಿಸಿದುದು ಇಲ್ಲವೆಂತಲೂ, ಅದುಕಾರಣ ಪೋತನೂರಿನಲ್ಲಿ ಬಂದಿಗಳಿಗೆ ನೀರನ್ನು ಕೊಡಿಸಬೇಕಾದ ಅವಶ್ಯಕತೆಯು ತನಗೆ ತೋರಲಿಲ್ಲವೆಂತಲೂ, ಒಂದು ವೇಳೆ ಬಾಗಿಲನ್ನು ತೆರೆದುಬಿಟ್ಟರೆ ಅವರನ್ನೆಲ್ಲಾ ಜೋಪಾನಮಾಡುವುದಕ್ಕೆ ತಕ್ಕಷ್ಟು ಪೋಲೀಸು ಸಿಬ್ಬಂದಿಯು ತನ್ನಲ್ಲಿರಲಿಲ್ಲವಾದುದರಿಂದ ಬಾಗಿಲನ್ನು ತೆರೆಯಿಸಲಿಕ್ಕಾಗಲಿಲ್ಲವೆಂತಲೂ, ಇದೇ ತೆರದ ಬಂಡಿಯಲ್ಲಿ ಒಂದೊಂದು ಸಲ ತಾನು ೧೧೭-೧೨೦ ಮಂದಿಯವರೆಗೆ ತುಂಬಿ ಕಳುಹಿಸಿದ್ದೆನೆಂತಲೂ ಹೇಳಿದರು. ಈ ವಾಜ್ಮೂಲದಿಂದ ಈ ಪೋಲೀಸುದ್ಯೋಗಿಯು ಎಷ್ಟು ಮಾನುಷಸ್ವಭಾವಕ್ಕೆ ದೂರರಾದ ಕರುಣಾಶೀಲರೆಂಬುದು ವ್ಯಕ್ತವಾಗಿರುವುದು.

ಸಂಘದವರು ಆ ವಾಗಿನ್ನನ್ನು ಪರೀಕ್ಷಿಸಿದರು. ಅದು ಬಹಳ ದೊಡ್ಡದು; ಎಂ. ಎಸ್. ಎಂ. ರೈಲ್ವೆ ಕಂಪೆನಿಗೆ ಸೇರಿದುದು. ಅದರಲ್ಲಿ ಮೂರು ಭಾಗಗಳಿರುವುವು. ಪ್ರತಿ ಭಾಗಕ್ಕೂ ಮಧ್ಯದಲ್ಲಿ ಕಬ್ಬಿಣದ ಸಲಾಕಿ ಬಾಗಿಲುಗಳನ್ನು ಹಾಕಿ ಒಂದರಿಂದೊಂದು ಪ್ರತ್ಯೇಕವಾಗಿರುವಂತೆ ಮಾಡಲ್ಪಟ್ಟಿರುವುದು. ಬಂಡಿಯ ಬಾಗಿಲ ಮೇಲ್ಗಡೆ ತಂತಿಯ ಜಾಲರಿಯ ಚಿಕ್ಕ ಕಿಟಕಿಗಳಿರುವುವು. ಅವುಗಳ ಸಂದುಗಳು ಬಣ್ಣದಿಂದಲೂ ಧೂಳಿನಿಂದಲೂ ಮುಚ್ಚಿಹೋಗಿದ್ದುವು. ಬಂಡಿಯೊಳಗೆ ಕೆಲವರು ಕುಳಿತು ಬಾಗಿಲನ್ನು ಮುಚ್ಚಿ ೪೦ ಅಡಿಗಳ ದೂರ ಹೊರಗೆ ನಿಂತಿದ್ದವರು ಆಡುವ ಮಾತನ್ನು ಕೇಳಿದರು. ಒಳಗಿದ್ದವರ ಮಾತು ಹೊರಗಿದ್ದವರಿಗೂ ಕೇಳಿಸಿತು. ಆ ಬಂಡಿಯ ಪ್ರತಿಯೊಂದು ಭಾಗದಲ್ಲೂ ೪೦ ಮಂದಿಯಂತೆ ಆ ವಾಗಿನ್ನಿನಲ್ಲಿ ಒಟ್ಟು ೧೨೦ ಮಂದಿಯನ್ನು ಕುಳ್ಳಿರಿಸಬಹುದೆಂಬುದನ್ನು ಸಂಘದವರು ನಿಶ್ಚಯಿಸಿದರು.

ಪೋತನೂರು ನಿಲ್ದಾಣದಲ್ಲಿ ವಾಜ್ಮೂಲವನ್ನು ಕೊಟ್ಟ ಸರ್ಕಾರಿ ಸೈನ್ಯದ ದೊಡ್ಡವೈದ್ಯರಾದ ಕ್ಯಾಪ್ಟನ್ ಮತ್ತಾಯಿಯವರು—ಆ ವಾಗಿನ್ನಿನಲ್ಲಿ ಪರೀಕ್ಷಾರ್ಥವಾಗಿ ನಾನೂ ಇನ್ನು ಕೆಲರೂ ಸೇರಿ ಕುಳಿತು ಸ್ವಲ್ಪದೂರ ಪ್ರಯಾಣಮಾಡಿದೆವೆಂತಲೂ, ಯಾವ ಸ್ವಲ್ಪದೂರದ ಪ್ರಯಾಣಕ್ಕೂ ಕೂಡ ಈ ಬಂಡಿಯಲ್ಲಿ ೧೦೦ ಮಂದಿಗಳನ್ನು ಸೇರಿಸಿ ಕಳುಹಿಸಿಕೊಡಲು ತಕ್ಕುದಾಗಿಲ್ಲವೆಂತಲೂ, ಪರಿಶುಭ್ರವಾದ ಗಾಳಿಯು ಒಳಕ್ಕೆ ನುಗ್ಗಲು ಅವಕಾಶವಿಲ್ಲದ ಸಾಮಾನಿನ ಬಂಡಿಯಲ್ಲಿ ಇಷ್ಟು ದೊಡ್ಡ ಗುಂಪನ್ನು ತುಂಬಿ ಕದಗಳನ್ನು ಮುಚ್ಚಿ ಸಾಗಿಸಿದುದರಿಂದ ಒಳಗಿದ್ದವರು ವಿಷವಾಯುವನ್ನು ಸೇವಿಸಿ ಸತ್ತಿರುವರೆಂತಲೂ, ಸತ್ತ ಮಾಪಿಳ್ಳೆಗಳ ದೇಹದಮೇಲೆ ಗಾಯಗಳಾಗಿದ್ದುವೆಂತಲೂ, ಅವರ ಮುಖಗಳನ್ನು ಗುರ್ತುಹಿಡಿಯುವುದಕ್ಕೂ ಆಗದಷ್ಟು ಛಿನ್ನಭಿನ್ನವಾಗಿದ್ದುವೆಂದೂ ಪಯೊನಿಯರ್ ಪತ್ರಿಕೆಯಲ್ಲಿ ಬರೆದಿದ್ದ ವರ್ಣನೆಯು ಶುದ್ಧಸುಳ್ಳೆಂತಲೂ, ಹೇಳಿದುದಲ್ಲದೆ ಪೋತನೂರು ಸ್ಟೇಷನ್‌ಮಾಸ್ಟರು ತಂತಿಕೊಟ್ಟಕೂಡಲೇ ತಾನು ನಿಲ್ದಾಣಕ್ಕೆ ಬಂದು ವಾಗಿನ್ನಿನಿಂದ ಹೆಣಗಳನ್ನು ಇತರ ಬಂದಿಗಳನ್ನೂ ಇಳಿಯಿಸಿ ಮಾಡಿದ ಉಪಚಾರ ಮೊದಲಾದುವುಗಳ ಸ್ಥಿತಿಯನ್ನೆಲ್ಲಾ ವಿವರಿಸಿ ಹೇಳಿರುವರು.

ಇದಲ್ಲದೆ ಇನ್ನಿಬ್ಬರು ವೈದ್ಯೋತ್ತಮರು ಎಂದರೆ ಕೊಯಮತ್ತೂರುಜಿಲ್ಲಾ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾದ ಮೇಜರ್ ಫಾರೆಸ್ಟ್ ಎಂ. ಎಸ್. ರವರೂ, ರೈಲ್ವೆ ವೈದ್ಯಾಧಿಕಾರಿ ಡಾಕ್ಟರ್ ಒಕೋನರ್‌ರವರೂ ಸಹ ವಾಜ್ಮೂಲವನ್ನು ಕೊಟ್ಟಿದ್ದಾರೆ. ಇವರಲ್ಲಿ ಮೊದಲನೆಯವರು—ಈ ಮೃತರಾದವರು ವಿಷವಾಯುವನ್ನು ಸೇವಿಸಿದಕಾರಣದಿಂದ ಹೃದಯಚಲನೆಯು ನಿಂತುಹೋಗಿ ಸತ್ತಿರುವರೆಂದು ಹೇಳಿರುವರು. ಮತ್ತು ಪಯೊನಿಯರ್ ಪತ್ರಿಕೆಯಲ್ಲಿ ಬರೆದಿರುವ ವರ್ಣನೆಯು ಶುದ್ಧ ಅಬದ್ಧವೆಂದು ಇವರು ಹೇಳಿರುವರು. ಡಾ|| ಒಕೋನರು ಕೊಟ್ಟ ವಾಜ್ಮೂಲದಲ್ಲಿ—ಗಾಳಿಯು ಎತ್ತಣಿಂದಲೂ ಒಳಕ್ಕೆ ನುಗ್ಗಲು ಆಸ್ಪದವಿಲ್ಲದ ಬಂಡಿಯಲ್ಲಿ ಅನೇಕರನ್ನು ತುಂಬಿದುದರಿಂದ ಅವರು ಉಸುರಾಡಿಸಲಾರದೆ ಮೃತಪಟ್ಟರೆಂದೂ, ಆ ಬಂದಿಗಳೆಲ್ಲಾ ದೃಢಗಾತ್ರರೇ ಆಗಿದ್ದರೆಂದೂ, ಆ ಬಂಡಿಯಲ್ಲಿದ್ದ ತಂತಿಯಕಿಟಕಿಯನ್ನು ತೆರೆದುಬಿಟ್ಟಿದ್ದರೂ ಜನರನ್ನು ತುಂಬಿ ಕಳುಹಿಸಲಿಕ್ಕೆ ಆ ಬಂಡಿಯು ತಕ್ಕುದಲ್ಲವೆಂದೂ, ಆ ಬಂಡಿಯಲ್ಲಿ ನಾನೂ ಇನ್ನು ೭ ಮಂದಿಗಳೂ ಸೇರಿ ಕುಳಿತು ಬಾಗಿಲುಗಳನ್ನು ಮುಚ್ಚಿಸಿಬಿಟ್ಟು ೨ ಮೈಲಿಗಳ ದೂರ ಪ್ರಯಾಣ ಮಾಡುವುದರೊಳಗೆ ತಮಗೆ ಎಷ್ಟೋ ಕಷ್ಟವಾಗಿ ತೋರಿತೆಂದೂ ಹೇಳಿರುವರು. ಹೀಗೆ ಮೂವರು ಡಾಕ್ಟರುಗಳೂ ಒಂದೇತೆರದ ಅಭಿಪ್ರಾಯವನ್ನು ಕೊಟ್ಟಿರುವುದರಿಂದ ಗಾಳಿ ಬೆಳಕಿಗೆ ಅವಕಾಶವಿಲ್ಲದ ಬಂಡಿಯಲ್ಲಿ ಅವರನ್ನು ತುಂಬಿ ಪ್ರಯಾಣಮಾಡಿಸಿದುದರಿಂದಲೇ ಇಂಥ ಬಲಾತ್ಕಾರದ ಮರಣವುಂಟಾಯಿತೆಂಬುದು ಸಿದ್ಧವಾಗುವುದು.

ಇದರಮೇಲೆ ಸತ್ತವರು ಹೋಗುತ್ತ ಉಳಿದಿರುವ ಬಂದಿಗಳಲ್ಲಿ ಕೆಲರು ಕೊಟ್ಟ ವಾಜ್ಮೂಲಗಳನ್ನು ನೋಡುವಲ್ಲಿ ಎದೆಯು ಕರಗಿ ನೀರಾಗುವುದು. ಬಂಡಿಯು ಹೊರಟಬಳಿಕ ಮೊದಲ ನಿಲ್ದಾಣದಲ್ಲಿ ಅದು ನಿಂತಾಗಲೇ ಒಳಗಿದ್ದ ಬಂದಿಗಳಿಗೆ ದಾಹವೇರಿ ನೀರಿಗಾಗಿ ಅವರು ಅರಚಿಕೊಂಡರಂತೆ. ಯಾರೂ ಬಂದು ಕೇಳಲಿಲ್ಲ. ಬಳಿಕ ಷೋರನೂರು ನಿಲ್ದಾಣದಲ್ಲೂ ಹಾಗೆಯೇ ವಿಪರೀತವಾಗಿ ಅರಚಿಕೊಂಡರಂತೆ. ಅದರಮೇಲೆ ‘ ಪೋತನೂರಿನಲ್ಲಲ್ಲದೆ ನಿಮಗೆ ನೀರು ಸಿಕ್ಕದು; ಬಾಗಿಲನ್ನು ತೆಗೆಯುವುದಿಲ್ಲ’ವೆಂದು ಯಾರೋ ಹೊರಗಿದ್ದವರು ಉತ್ತರಕೊಟ್ಟುದನ್ನು ಒಳಗಿದ್ದವರು ಕೇಳಿ, ಬಾಗಿಲನ್ನು ತೆರೆಯದಿದ್ದರೆ ನಾವೆಲ್ಲಾ ಸತ್ತುಹೋಗುತ್ತೇವೆಂದು ಮತ್ತೆ ಬೊಬ್ಬೆಯಿಟ್ಟರಂತೆ. ಅಷ್ಟುಹೊತ್ತಿಗೆ ಒಬ್ಬೊಬ್ಬರಾಗಿ ಮೂರ್ಛೆಹೋಗುತ್ತಿದ್ದರಂತೆ. ಬಳಿಕ ಒಳಗಿದ್ದವರೆಲ್ಲಾ ಬೆವತು ಅವರ ದೇಹದಿಂದ ನೀರು ತೊಟ್ಟಿಕ್ಕುತ್ತಿರಲು, ಆ ನೀರನ್ನು ಬಟ್ಟೆಗೆಅದ್ದಿ ಅದನ್ನೇ ಹಿಂಡಿ ಕೆಲವರು ತಮ್ಮ ಬಾಯಿಗೆ ಬಿಟ್ಟುಕೊಳ್ಳುತ್ತಿದ್ದರಂತೆ! ಕೆಲವರು ಮೇಲ್ಗಡೆಯಿದ್ದ ತಂತಿ ಕಿಟಕಿಯನ್ನು ಕಿತ್ತುಹಾಕಿಬಿಡಬೇಕೆಂದು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗದೆಹೋಯಿತಂತೆ. ಬಂಡಿ ಹೊರಟು ಮೊದಲನೆ ನಿಲ್ದಾಣಕ್ಕೆ ಬರುವವರೆಗೂ ಎಲ್ಲರೂ ಕುಳಿತುಕೊಳ್ಳಲಿಕ್ಕಾಗದೆ ನಿಂತೇ ಬಂದರಂತೆ. ಬಳಿಕ ಒಬ್ಬರಮೇಲೊಬ್ಬರು ಬೀಳಲಿಕ್ಕೆ ಆರಂಭಿಸಿದರಂತೆ. ಪ್ರತಿಯೊಂದು ನಿಲ್ದಾಣದಲ್ಲೂ ನೀರಿಗಾಗಿ ಈ ಬಂದಿಗಳು ಅರಚಿಕೊಳ್ಳುತ್ತಿರಲು, ಒಂದು ನಿಲ್ದಾಣದಲ್ಲಿ ನೀವು ಹೀಗೆ ಅರಚಿಕೊಳ್ಳುತ್ತಿದ್ದರೆ ತುಪಾಕಿಯಿಂದ ಸುಟ್ಟುಬಿಡುತ್ತೇವೆಂದು ಹೊರಗಿದ್ದವರು ಯಾರೋ ಹೇಳಿದರಂತೆ. ಮತ್ತೊಂದು ನಿಲ್ದಾಣದಲ್ಲಿ ಕೆಲವರು ಆಗಲೇ ನೀರಿಲ್ಲದೆ ಸತ್ತರೆಂದು ಅರಚಿಕೊಳ್ಳಲು, ಸತ್ತವರು ಸಾಯಲಿ ಉಳಿದಿದ್ದವರನ್ನು ನಾವು ತೆಗೆದುಕೊಂಡುಹೋಗುತ್ತೇವೆಂದು ಹೆಡ್‌ಕಾನ್‌ಸ್ಟೆಬಲು ಹೊರಗಣಿಂದ ಉತ್ತರಕೊಟ್ಟನಂತೆ. ಒಳಗಿದ್ದ ಬಂದಿಯೊಬ್ಬನು ಸೆಕೆಯನ್ನು ಸೈರಿಸಲಾರದೆ ಕದದ ಅಡಿಯಲ್ಲಿರುವ ಸಂದಿನಲ್ಲಿ ಗಾಳಿಯೇನಾದರೂ ಬಂದೀತೋ ಏನೋ ಎಂದು ಆ ಭಾಗಕ್ಕೆ ಬಾಯನ್ನೊಡ್ಡಿ ಕುಳಿತುಕೊಂಡರೂ ಏನೂ ಫಲವಿಲ್ಲದೆ ಹೋದನಂತೆ. ಹೀಗೆಲ್ಲಾ ಬಂದಿಗಳು ಕೊಟ್ಟಿರುವ ವಾಜ್ಮೂಲದಿಂದ ಗಾಳಿ ನೀರಿಲ್ಲದೆ ಅವರು ಸಂಕಟಪಟ್ಟು ಸತ್ತ ವಿಷಯವೂ, ಅವರ ಮೊರೆಗೆ ಹೊರಗಿದ್ದ ಪೋಲೀಸರು ಸ್ವಲ್ಪವೂ ಗಮನಕೊಡದೆ ಹೋದುದೂ ಸ್ಪಷ್ಟವಾಗಿರುತ್ತದೆ. ಅಲ್ಲದೆ ಬಂದಿಗಳು ಹೇಳಿರುವ ಮಾತುಗಳು ನಿಜವೆಂಬ ಸಂಗತಿಯು ರೈಲ್ವೆ ಉದ್ಯೋಗಗಳಲ್ಲಿ ಒಬ್ಬಿಬ್ಬರೂ ಮತ್ತು ಕೆಲ ಪ್ರಯಾಣಿಕರೂ ಕೊಟ್ಟ ವಾಜ್ಮೂಲದಿಂದ ಸಿದ್ಧವಾಗುವುದು. ಉಲವಕೋಟೆಯ ಅಸಿಸ್ಟೆಂಟ್ ಸ್ಟೇಷನ್‌ಮಾಸ್ಟರು ಕೊಟ್ಟ ವಾಜ್ಮೂಲದಲ್ಲಿ—ಉಲವಕೋಟೆಯು ಇಂಜನ್ನಿಗೆ ನೀರನ್ನು ತುಂಬಿಕೊಳ್ಳುವ ನಿಲ್ದಾಣವೆಂತಲೂ, ಪೋಲೀಸ್ ಸಾರ್ಜೆಂಟು ಕೇಳಿದ್ದರೆ ನಾನು ಬೇಕಾದಷ್ಟು ನೀರನ್ನು ಒದಗಿಸಿಕೊಡುತ್ತಿದ್ದೆನೆಂತಲೂ, ಹೇಳಿರುವರು. ಷೋರನೂರು ಗೂಡ್ಸ್ ಸೂಪರ್ವೈಜರು ಕೊಟ್ಟಿರುವ ವಾಜ್ಮೂಲದಲ್ಲಿ-ವಾಗಿನ್ನಿನೊಳಗಿದ್ದ ಬಂದಿಗಳು ತಮ್ಮ ಬಾಯೆಲ್ಲಾ ಒಣಗಿಹೋಗಿರುವುದೆಂದೂ ನೀರುಬೇಕೆಂದೂ ಅರಚಿಕೊಳ್ಳುತ್ತಿದ್ದರೆಂತಲೂ, ನೀರುಬೇಕಿದ್ದರೆ ನಾನು ಕೊಡಿಸುತ್ತೇನೆಂದು ಪೋಲೀಸ್ ಕಾನ್‌ಸ್ಟೆಬಲ್ಲರೊಡನೆ ತಾನು ಹೇಳಿದೆನೆಂತಲೂ ಹೇಳಿರುವರು. ಖಾದರ್ ಮೋದೀನ್ ಎಂಬ ರೈಲ್ವೆ ಅಂಗಡಿಯವನೂ, ಗೋಪಾಲತಾಯಾರ್ನ್ ಎಂಬ ರೈಲ್ವೆ ಪ್ರಯಾಣಸ್ಥನೂ ಕೊಟ್ಟಿರುವ ವಾಜ್ಮೂಲಗಳಲ್ಲಿ ಆ ಬಂದಿಗಳು ನೀರಿಗಾಗಿ ಬಡಿದುಕೊಳ್ಳುತ್ತಲೂ ನಾನಾವಿಧವಾಗಿ ಬಯ್ದು ನೀರನ್ನು ಕೇಳುತ್ತಲೂ ಇದ್ದರೆಂದು ಹೇಳಿರುವರು.

ಇದರ ಮೇಲೆ ವಿಚಾರಕ ಸಂಘದ ಸಭಿಕರಾದ ಮಂಜೇರಿ ರಾಮಯ್ಯರೂ, ಕೃಷ್ಣವರ್ಮರಾಜರೂ ಕೂಡ ಮಾಪಿಳ್ಳಾಯಜ್ಞಮಂಟಪವೆನಿಸಿ ಪ್ರಸಿದ್ಧವಾದ ೧೭೧೧ನೆ ನಂ|| ವಾಗಿನ್ನನ್ನು ಪರೀಕ್ಷಿಸಿ ಬರುವುದಕ್ಕಾಗಿ ಆ|| ನಾಪುರವರ ಅನುಮತಿಯನ್ನು ಪಡೆದು ತಿರೂರಿಗೆ ಹೋದರು. ಅವರೊಡನೆ ಟಿ. ಸಿ. ಅನಂತರಾಮಯ್ಯರ್ ಬಿ ಎ. ಸಿ. ಇ. ಎಂಬ ಒಬ್ಬ ಇಂಜನೀಯರೂ ಹೋದರು. ತಿರೂರಿನಲ್ಲಿದ್ದ ಸೈನಿಕ ದಂಡಾಧಿಕಾರಿಗಳೂ ಇವರೂ ಸೇರಿ ೧೦೦ ಮಂದಿ ಜನರನ್ನು ನಿಲ್ದಾಣದಲ್ಲಿ ಕೂಡಿಸಿ, ಆ ೧೭೧೧ನೆ ನಂ|| ವಾಗಿನ್ನಿಗೆ ಜನರನ್ನು ಹತ್ತಿಸಿ ಪರೀಕ್ಷಿಸಲಿಕ್ಕೆ ಪ್ರಯತ್ನಿಸಿದರು. ಅಷ್ಟರಲ್ಲಿ ಟ್ರಾಫಿಕ್ ಇನ್‌ಸ್ಪೆಕ್ಟರ್ ರೀವ್‌ರವರು ಎಲ್ಲಿಂದಲೋ ಓಡುತ್ತ ಬಂದು, ಹಾಗೆ ಪರೀಕ್ಷಿಸಲಿಕ್ಕೆ ಅವಕಾಶವಾಗದೆಂದು ಹೇಳಿ ತಡೆದುಬಿಟ್ಟರು. ಮಲಬಾರ್ ಕಮಿಷನರ್ ಆ|| ನಾಪುರವರು ಒಪ್ಪಿ ಕಳುಹಿಸಿರುವರೆಂದು ವಿಚಾರಕ ಸಂಘದವರು ತಿಳಿಯಿಸಿದರೂ ರೀವ್‌ರವರು ಅವಕಾಶಕೊಡಲಿಲ್ಲ. ಅಷ್ಟೇ ಅಲ್ಲದೆ ಆ ವಾಗಿನ್ನನ್ನು ಮುಟ್ಟಿದವರನ್ನೆಲ್ಲಾ ಪ್ರಾಸಿಕ್ಯೂಟ್ ಮಾಡುತ್ತೇನೆಂದು ಬೆದರಿಸಿದರಂತೆ! ಮತ್ತು ಕೋಪೋದ್ರೇಕದಿಂದ ವಾಗ್ವಾದ ಮಾಡುತ್ತ ಆ ಕಮಿಷನರುಗಳಲ್ಲೊಬ್ಬರನ್ನು ಬೈದು ಅವಮಾನವನ್ನು ಪಡಿಸಿದರಂತೆ. ವಿಚಾರಕ ಸಂಘದವರು ಆ ಇನ್‌ಸ್ಪೆಕ್ಟರಿಂದ (ಈತನೇ ಈ ಸಂಘದವರ ಇದಿರಿಗೆ ಮೊದಲನೆ ಸಾಕ್ಷಿಯಾಗಿ ವಾಜ್ಮೂಲಕೊಟ್ಟಿದ್ದಾನೆ.) ಹೀಗೆ ಬಹುಮಾನಹೊಂದಿ ಹಿಂದಿರುಗುವಾಗ ಮದ್ರಾಸ್ ಗೌರ್ನರಿಗೂ ಆ|| ನಾಪುರವರಿಗೂ ನಡೆದ ಸಂಗತಿಯನ್ನೆಲ್ಲಾ ಕುರಿತು ತಂತ್ರೀವಾರ್ತೆ ಕೊಟ್ಟರಂತೆ.

ವಿಚಾರಕ ಸಂಘದವರು ತಮ್ಮ ತೀರ್ಮಾನವನ್ನು ಇಷ್ಟರಲ್ಲೇ ಸರ್ಕಾರಕ್ಕೆ ಕಳುಹಿಸಿಕೊಡುವವರಾಗಿದ್ದಾರೆ. ತೀರ್ಪು ಯಾವ ರೀತಿಯಲ್ಲಿರುವುದೋ ನೋಡಬೇಕು. ವಿಚಾರಣಕಾಲದಲ್ಲಿ ಹೊರಪಟ್ಟಿರುವ ಸಂಗತಿಗಳನ್ನೆಲ್ಲಾ ಕೇಳಿ ದೇಶೀಯರ ಮನಸ್ಸು ಅತ್ಯಂತವಾಗಿ ಉದ್ವೇಗಗೊಂಡಿರುವುದು. ತಪ್ಪುಮಾಡಿದವರೆಂದು ನಿರ್ಧಾರಗೊಂಡ ಅಪರಾಧಿಗಳಿಗೆ ತಕ್ಕ ಶಾಸನವಾದಲ್ಲದೆ ಪ್ರಜಾಮನಃಕ್ಷೋಭೆಯು ಶಾಂತವಾಗಲಾರದು. ನ್ಯಾಯಕ್ಕೂ ಧರ್ಮಕ್ಕೂ ಲೋಪಬರುವ ಸ್ಥಿತಿಯು ಲಾರ್ಡ್‌ರೀಡಿಂಗ್‌ರವರ ದರ್ಬಾರಿನಲ್ಲಿ ಜರುಗಲಾರದೆಂದು ನಿರೀಕ್ಷಿಸಬಹುದಾಗಿದೆ.

ನಿರ್ಬಂಧದ ಮೇಲೆ ನಿರ್ಬಂಧ.

ಭರತಖಂಡದ ಎಲ್ಲ ಪ್ರಾಂತಗಳಲ್ಲೂ ಪ್ರಭುತ್ವದವರು ಅಸಹಾಯವಾದಿ ಪ್ರಮುಖರ ಮೇಲೆ ನಿರ್ಬಂಧಾಸ್ತ್ರಗಳನ್ನು ತಡೆಬಿಡುವಿಲ್ಲದೆ ಪ್ರಯೋಗಿಸಲುಪಕ್ರಮಿಸಿದ್ದಾರೆ. ಪ್ರತಿದಿನದ ಪತ್ರಿಕೆಗಳಲ್ಲೂ ಈ ವಿಶೇಷವಾರ್ತೆಗಳೇ ತುಂಬಿ ಬರುತ್ತಿವೆ. ಪಂಜಾಬು ಕಾಂಗ್ರೆಸ್‌ಸಂಘಸಭಿಕರು ಲಾಹೋರಿನಲ್ಲಿರುವ ತಮ್ಮ ಕಾರ್ಯಾಲಯದಲ್ಲಿ ಯಾವುದೋ ಒಂದು ವಿಷಯವನ್ನು ಕುರಿತು ಚರ್ಚಿಸಲಿಕ್ಕಾಗಿ ಕಳೆದ ತಾ|| ೩ರಲ್ಲಿ ಕೂಡಿದ್ದಾಗ್ಗೆ ಪಂಜಾಬು ಅಸಹಾಯವಾದಿ ನಾಯಕರಾದ ಲಾಲಾಲಜಪತಿರಾಯರನ್ನೂ, ಅವರ ಜತೆಯ ಕೆ. ಸಂತಾನಂ, ಡಾಕ್ಟರ್ ಗೋಪೀಚಂದ್, ಮಲ್ಲಿಕ್‌ಲಲ್ಲೂಖಾನ್‌ರವರನ್ನು ಕೂಡ ಹಿಡಿದುಕೊಂಡು ಹೋದರು. ತಾ|| ೧೨ಕ್ಕೆ ಇವರುಗಳ ವಿಚಾರಣೆಗಿಟ್ಟಿದ್ದಾರೆ. ಅಸಹಾಯವಾದಿ ಪಕ್ಷಕ್ಕೆ ಸೇರಿದ ಎಸ್. ಇ. ಸ್ಟೋಕ್ ಎಂಬ ಯೂರೋಪ್ಯರು ಅಮೃತಸರದಿಂದ ಲಾಹೋರಿಗೆ ಹೋಗುತ್ತಿರುವಲ್ಲಿ ಮಧ್ಯಮಾರ್ಗದಲ್ಲಿ ಇವರನ್ನು ಹಿಡಿದು ಲಾಹೋರು ಜಿಲ್ಲಾ ಮೇಜಸ್ಟ್ರೇಟರಲ್ಲಿಗೆ ತೆಗೆದುಕೊಂಡು ಹೋದರು. ಇವರು ಟ್ರಿಬ್ಯೂನ್ ಪತ್ರಿಕೆಯಲ್ಲಿ ರಾಜದ್ರೋಹ ವ್ಯಾಪಕವಾದ ಲೇಖನವನ್ನು ಬರೆದಿದ್ದರಂತೆ. ಕ್ರಿ. ಪ್ರೊ. ೧೨೪ನೆ ಸೆಕ್ಷನ್ ಪ್ರಕಾರ ಸತ್ಪ್ರವರ್ತನೆಗಾಗಿ ೧೫ ಸಾವಿರ ರೂ. ಗಳ ಹೊಣೆಯನ್ನು ಕೊಡಬೇಕೆಂದು ದಂಡನಾಧಿಕಾರಿಯು ಇವರಿಗೆ ಆಜ್ಞೆಮಾಡಿದರು, ಅದಕ್ಕಿವರು ಒಪ್ಪಲಿಲ್ಲ. ವಿಚಾರಣೆಯು ನಡೆಯುತ್ತಿದೆ.

ಪಂಜಾಬಿನ ಸರ್ದಾರ್ ಬಹದೂರ್ ಸರ್ದಾರ್ ಮೆಹತಬ್ ಸಿಂಗ್‌ರವರಿಗೆ ೬ ತಿಂಗಳ ಕಠಿನ ಕಾರಾಗೃಹವಾಸ ಶಿಕ್ಷೆಯೂ ೧ ಸಾವಿರ ರೂ. ದಂಡವೂ ಸಹ ರಾಜದ್ರೋಹ ಸಭೆಯನ್ನು ಕೂಡಿಸಿದ ತಪ್ಪಿಗಾಗಿ ವಿಧಿಸಲ್ಪಟ್ಟುವು. ಇದೇ ತಪ್ಪಿತಕ್ಕಾಗಿ ಇನ್ನು ೯ ಮಂದಿ ಸಿಕ್ಕರಿಗೂ ಒಬ್ಬ ಹಿಂದುವಿಗೂ ಶಿಕ್ಷೆಗಳು ವಿಧಿಸಲ್ಪಟ್ಟುವು.

ಈ ತಿಂಗಳ ಕೊನೆಯಲ್ಲಿ ಅಹಮ್ಮದಾಬಾದಿನಲ್ಲಿ ಕೂಡಲಿಕ್ಕಿರುವ ದೇಶೀಯ ಮಹಾಸಭೆಯ ಅಧ್ಯಕ್ಷರಾಗಲಿಕ್ಕಿರುವ ಚಿತ್ತರಂಜನದಾಸರವರ ಏಕಪುತ್ರನಾದ ಚಿರರಂಜನದಾಸ್, ಪತ್ನಿ ಊರ್ಮಿಳಾದೇವಿ ಸಹೋದರಿ ಸುನೀತಿದೇವಿ ಮತ್ತು ಅವರ ಅಣ್ಣನ ಮಗಳು ಇವರೆಲ್ಲಾ ಇನ್ನು ೫೦ ಮಂದಿಗಳೊಡನೆ ಕಲ್ಕತ್ತಾ ಬೀದಿಗಳಲ್ಲಿ ಖದ್ದರ್ ವಸ್ತ್ರಗಳನ್ನು ಹಿಡಿದುಕೊಂಡು ಮಾರುವವರಂತೆ ಅಂಗಡಿಯವರ ಬಳಿಗೆ ಹೋಗಿ ತಾ|| ೨೪ಕ್ಕೆ ಆ ನಗರಕ್ಕೆ ಯುವಸಾರ್ವಭೌಮರು ಬಂದಾಗ್ಗೆ ಅಂಗಡಿಗಳನ್ನು ಮುಚ್ಚಬೇಕೆಂದು ಬೋಧಿಸುತ್ತಿದ್ದರೆಂದೂ, ರಾಜಮಾರ್ಗದಲ್ಲಿ ಜನಸಂಚಾರಕ್ಕೆ ಆತಂಕವನ್ನುಂಟುಮಾಡಿದರೆಂದೂ ತಪ್ಪನ್ನು ಹೊರಿಸಿ ಎಲ್ಲರನ್ನೂ ಹಿಡಿದುಕೊಂಡು ಹೋಗಿರುವರು.

ಅಲಹಾಬಾದಿನಲ್ಲಿರುವ ಪಂಡಿತ ಮೋತೀಲಾಲ್ ನೆಹ್ರೂರವರಿಗೆ ಯುವಸಾರ್ವಭೌಮರು ಈ ಊರಿಗೆ ಬಂದು ನಿಮ್ಮ ಮನೆಯ ಮುಂದೆ ಉತ್ಸವಗೊಂಡು ಹೋಗುವಾಗ್ಗೆ ನಿಮ್ಮ ಮನೆಯಾವರಣದಲ್ಲಿ ನಿಮ್ಮ ಮನೆಯವರ ಹೊರತು ಇನ್ನಾರನ್ನೂ ಸೇರಿಸಕೂಡದು, ಯಾರನ್ನಾದರೂ ಸೇರಿಸಿದರೆ ಅವರ ವಿಷಯದಲ್ಲಿ ನೀವು ಹೊಣೆಯಾಗಿರಬೇಕು’’ ಎಂದು ಜಿಲ್ಲಾ ಮೇಜಸ್ಟ್ರೇಟರು ಅಪ್ಪಣೆಮಾಡಿದ್ದರು. ಈಗ ಅದೇ ಪಂಡಿತ ಮೋತೀಲಾಲ ನೆಹ್ರೂರವರನ್ನೂ ಅವರ ಕುಮಾರ ಜವಹರಲಾಲ್ ನೆಹ್ರೂರವರನ್ನೂ, ಮತ್ತು ಅವರ ಕುಟುಂಬಕ್ಕೆ ಸೇರಿದ ಪಂಡಿತ ಶ್ಯಾಮಲಾಲ್‌ನೆಹ್ರೂ, ಮೋಹನ್‌ಲಾಲ್‌ನೆಹ್ರೂರವರನ್ನೂ, ಅಲಹಾಬಾದ್ ಮ್ಯುನಿಸಿಪಾಲಿಟಿ ಅಧ್ಯಕ್ಷರಾದ ಬಾಬುಪುರುಷೋತ್ತಮದಾಸರನ್ನೂ, ಇಂಡಿಪೆಂಡೆಂಟ್ ಪತ್ರಿಕಾಧಿಪತಿ ಜಾರ್ಜ್‌ಜೋಸಫ್‌ರವರನ್ನೂ, ಮೌಲಾನಾಕಮಾಲುದ್ದೀನ್, ಬಾಬುರವೀಂದ್ರನಾಥಬಾಸು, ತಿಲಕ್ ವಿದ್ಯಾಲಯದ ಮುಖ್ಯಾಧ್ಯಾಪಕ ಕೆ. ಡಿ. ಮಾಥರ್, ಮೊದಲಾದವರನ್ನು ಕೂಡ ಹಿಡಿದಿರುವರು.

ಕಲ್ಕತ್ತಾದಲ್ಲಿ ಅಸಹಾಯೋದ್ಯಮ ಪ್ರಮುಖರಾದ ಜಿತೇಂದ್ರ ಬಾನರ್ಜಿಯವರಿಗೆ ರಾಜದ್ರೋಹಾಪರಾಧದಿಂದ ೨ ವರ್ಷ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿತು.

ಈ ಶಿಕ್ಷಾ ನಿರ್ಬಂಧಗಳೇ ಅಲ್ಲದೆ ರಾಜದ್ರೋಹಸಭಾ ನಿರ್ಬಂಧದ ಆಜ್ಞೆಗಳು ವಿಶೇಷವಾಗಿ ಕೊಡಲ್ಪಡುತ್ತಲಿವೆ. ಈ ರೀತಿಯಿಂದ ಅಸಹಾಯೋದ್ಯಮದ ಶಾಖೋಪಶಾಖೆಗಳೆಲ್ಲಾ ಖಂಡಿಸಲ್ಪಡುತ್ತಲಿವೆ. ಈ ವೃಕ್ಷಕ್ಕೆಲ್ಲಾ ಬುಡವಾಗಿರುವ ರಾಷ್ಟ್ರೀಯಸಭೆಯ ಮತ್ತು ಮ|| ಗಾಂಧಿಯವರ ಸ್ಥಿತಿಯು ಹೇಗಾಗುವುದೋ ತಿಳಿಯಲಿಲ್ಲ. ಈ ವಿಪತ್ತಿನಿಂದ ದೇಶವನ್ನು ದೈವವೇ ಸಂರಕ್ಷಿಸಬೇಕು.

ವೈಸ್ರಾಯರು ಮತ್ತು ಮಹಮ್ಮದೀಯ ಪ್ರತಿನಿಧಿಗಳು.

ದಿಲ್ಲಿ ಪಟ್ಟಣದಲ್ಲಿರುವ ಮಹಮ್ಮದೀಯ ಸಂಘದ ಪ್ರತಿನಿಧಿಗಳಾದ ೨೩ ಮಂದಿಗಳು ಕಳೆದ ತಿಂಗಳು ತಾ|| ೩೦ ರಲ್ಲಿ ವೈಸ್ರಾಯರ ಬಳಿಗೆ ಹೋಗಿ ಒಂದು ವಿಜ್ಞಾಪನಪತ್ರವನ್ನೊಪ್ಪಿಸಿದರು. ಅದರಲ್ಲಿ ಮುಖ್ಯವಾಗಿ ಖಿಲಾಪತ್ತಿನ ವಿಷಯವೇ ನಿವೇದಿಸಲ್ಪಟ್ಟಿದ್ದಿತು. ಎಂದರೆ-ಕಾನ್‌ಸ್ಟಾಂಟಿನೋಪಲ್ ಪಟ್ಟಣದ ಮೇಲೆ ಅಂತರ್ಜಾತೀಯಾಧಿಕಾರವನ್ನು ಸ್ಥಾಪಿಸಿರುವ—ಸ್ಮರ್ನಾಥ್ರೇಸು ದೇಶಗಳನ್ನು ಗ್ರೀಕರಿಗೆ ಕೊಟ್ಟಿರುವ—ಮಹಮ್ಮದೀಯ ಪುಣ್ಯಕ್ಷೇತ್ರದ ಮೇಲೆ ಸುಲ್ತಾನರಿಗಿದ್ದ ಖಾಲೀಫ್ ಅಧಿಕಾರವನ್ನು ತಪ್ಪಿಸಿರುವ ಸಂಧಿನಿಯಮಗಳನ್ನು ಮಾರ್ಪುಗೊಳಿಸುವುದಕ್ಕಾಗಿ ಮತ್ತೊಂದುಸಲ ನೀವು ದೃಢವಾದ ಪ್ರಯತ್ನವನ್ನು ಮಾಡಬೇಕೆಂದು ಇವರುಗಳು ವೈಸ್ರಾಯರನ್ನು ಪ್ರಾರ್ಥಿಸಿದರು. ಇದಕ್ಕೆ ವೈಸ್ರಾಯರು ಉತ್ತರವನ್ನು ಕೊಟ್ಟುದರಲ್ಲಿ—‘‘ ನಿಮ್ಮ ಅಭಿಪ್ರಾಯವನ್ನೂ ನಿಮ್ಮ ಅಸಂತೃಪ್ತಿಯನ್ನೂ ನಿಮ್ಮ ಆಶಾಭಂಗವನ್ನೂ ನಿಮ್ಮ ಸಂತಾಪವನ್ನೂ ಸಹ ಸರ್ವದಾ ಬೇಸರಿಲ್ಲದಂತೆ ಆಂಗ್ಲಪ್ರಭುತ್ವದವರಿಗೆ ಶ್ರುತಪಡಿಸುವ ಬಾಧ್ಯತೆಯು ನನಗೂ ನನ್ನ ಪ್ರಭುತ್ವದವರಿಗೂ ಸಂಪೂರ್ಣವಾಗಿರುವುದೆಂದು ನಾನು ಬಲ್ಲೆನು. ನಾವು ಮಾಡುವ ಪ್ರಯತ್ನಗಳು ಎಷ್ಟುಮಟ್ಟಿಗೆ ಮನಃಪೂರ್ವಕವಾಗಿವೆಯೆಂಬುದು ನಿಮಗೆ ಗೊತ್ತೇ ಇದೆ. ಅದರಂತೆಯೇ ಫಲಪ್ರಾಪ್ತಿಗೊಳ್ಳದ ಆ ನಮ್ಮ ಪ್ರಯತ್ನಗಳು ಯಾವ ವಿಧದ ಸಂತೋಷವನ್ನೂ ಸಂತೃಪ್ತಿಯನ್ನೂ ನಿಮಗೆ ಉಂಟುಮಾಡಲಾರವೆಂಬುದನ್ನು ನೀವೇ ತಿಳಿದಿರುತ್ತೀರಿ. ನನಗೆ ಶಕ್ತಿಸಾಮರ್ಥ್ಯವಿದ್ದರೆ ನಿಮ್ಮ ಕಷ್ಟಗಳನ್ನೆಲ್ಲಾ ನಿರ್ಮೂಲಮಾಡಿಬಿಡುತ್ತಿದ್ದೆನು. ಆದರೆ ಈಗಣ ಸ್ಥಿತಿಯಲ್ಲಿ ನಮ್ಮ ಪ್ರಯತ್ನದ ಭಾವಿಪರಿಣಾಮವನ್ನು ಹೀಗೆಯೇ ಆಗವುದೆಂದು ನಾನು ಹೇಳಲಾರೆನು. ತುರ್ಕಿ ಸಂಧಿನಿಯಮಗಳ ಪರಿಷ್ಕಾರದಲ್ಲಿ ನನಗೇ ಆಗಲೀ ನನ್ನ ಪ್ರಭುತ್ವದವರಿಗೇ ಆಗಲೀ ವಿಶೇಷಾಧಿಕಾರವೇನೂ ಇಲ್ಲ. ಆದರೆ ನಿಮ್ಮ ಅಭಿಪ್ರಾಯಗಳನ್ನೂ ಉದ್ದೇಶಗಳನ್ನೂ ನಾನು ತಪ್ಪದೆ ಆಂಗ್ಲಪ್ರಭುತ್ವದವರಿಗೆ ಶ್ರುತಪಡಿಸುತ್ತಿರುತ್ತೇನೆ. ಸ್ಟೇಟ್ ಸೆಕ್ರಟರಿಯವರು ನಿಮ್ಮ ಅಭಿಪ್ರಾಯಗಳನ್ನು ಆಂಗ್ಲ ಮಂತ್ರಿಮಂಡಲದ ಮುಂದೆ ಬಲಪಡಿಸಿ ಇಡುವರು. ಮತ್ತು ಆಂಗ್ಲ ದೇಶವು ಕೂಡ ಸ್ವತಂತ್ರವಾಗಿ ತಾನೊಂದೇ ಈ ಸಮಸ್ಯೆಯನ್ನು ಪರಿಷ್ಕರಿಸಲಾರದು. ಅಂಥ ಸ್ವಾತಂತ್ರ್ಯವು ಆ ದೇಶಕ್ಕೊಂದಕ್ಕೇ ಇದ್ದುದಾದರೆ ಈ ಸಮಸ್ಯೆಯು ಎಷ್ಟೋಕಾಲಕ್ಕೆ ಮುಂಚೆಯೇ ಪರಿಷ್ಕಾರಗೊಂಡು ಹೋಗುತ್ತಿದ್ದಿತು. ತುರ್ಕಿ ಗ್ರೀಕರ ಸಂಧಿಯು ಬೇಗನೆ ಜರುಗಿಹೋಗಬೇಕೆಂದು ಆಂಗ್ಲ ಸಾಮ್ರಾಜ್ಯವು ಕೋರುತ್ತಿದೆ. ಈ ಯುದ್ಧದಲ್ಲಿ ಆಂಗ್ಲದೇಶವು ತಟಸ್ಥವಾಗಿದೆ. ಆ ವಿಷಯವಾಗಿ ದುಷ್ಟರು ಹುಟ್ಟಿಸುವ ಪೊಳ್ಳುಸುದ್ದಿಗಳನ್ನು ನೀವು ನಂಬಬಾರದು. ತುರ್ಕಿಯ ಸಂಧಿ ಸಂಸ್ಕಾರಣಕ್ಕಾಗಿಯೇ ಮತ್ತೊಂದು ಸಭೆಯು ಬೇಗನೆ ಆಗುವುದರಲ್ಲಿದೆ. ಅದರಲ್ಲಿ ತುರ್ಕಿ ಸಮಸ್ಯೆಯು ಸಮೀಚೀನವಾಗಿ ಪರಿಷ್ಕಾರಗೊಳ್ಳುವಂತೆ ಮಾಡಬೇಕೆಂದು ಆಂಗ್ಲ ದೇಶವು ಪ್ರಯತ್ನಪಡುತ್ತಿದೆ. ಅದರಿಂದ ಮಹಮ್ಮದೀಯರ ಮತಾಭಿಪ್ರಾಯಗಳನ್ನನುಸರಿಸಿಯೇ ಸಂಧಿಪರಿಷ್ಕಾರವಾಗಬಹುದು. ನಾನೂ ನನ್ನ ಪ್ರಭುತ್ವದವರೂ ಹೀಗೆಯೇ ಪರಿಷ್ಕಾರಮಾಡಿಕೊಡಬೇಕೆಂಬ ವಿಷಯದಲ್ಲಿ ಆಂಗ್ಲ ಪ್ರಭುತ್ವದವರಿಗೆ ಪದೇ ಪದೇ ಶ್ರುತಪಡಿಸುತ್ತಲೇ ಇರುತ್ತೇವೆ. ಸುಲ್ತಾನರಿಗೆ ಖಲೀಫಾಧಿಕಾರವು ಉಳಿದುಕೊಳ್ಳುವುದೇ ಮೊದಲಾದ ವಿಷಯದಲ್ಲಿ ನಿಮ್ಮಗಳಿಗೆ ಆಶಾಭಂಗವಾಗದಂತೆ ಸೆವರ್ಸ್ ಸಂಧಿ ನಿಯಮಗಳು ಮಾರ್ಪುಗೊಳಿಸಲ್ಪಡದೆ ಇರಲಾರವು. ಆದರೆ ನೀವು ಅಪೇಕ್ಷಿಸುವ ಸರ್ವಭಾಗಗಳೂ ಸಂಪೂರ್ಣವಾಗಿ ನೆರವೇರುವುವೆಂದು ನಾನು ಹೇಳಲಾರೆನಾದರೂ ಪೂರ್ಣವಾಗಿ ಆಶಾಭಂಗಗೊಳ್ಳುವಂಥ ಸ್ಥಿತಿಯೇನೂ ಉಂಟಾಗಲಾರದೆಂದು ನಾನು ಹೇಳಬಲ್ಲೆನು. ಭರತಖಂಡ ಸರ್ಕಾರದವರು ಪೂರ್ವದಿಂದಲೂ ಈ ಸಂಬಂಧವಾಗಿ ಮಾಡುತ್ತ ಬಂದ ಶಿಫಾರಸ್ಸುಗಳಿಂದ ಆಂಗ್ಲಪ್ರಭುತ್ವದ ದೃಷ್ಟಿಮಾರ್ಗವು ಮಾರ್ಪಡದೆ ಹೋಗಿಲ್ಲ. ಈ ಖಾಲಿಫತ್ ವಿಷಯವಾಗಿ ಈ ದೇಶದ ಕೆಲವು ಅತಿವಾದಿಗಳು ವಿಪ್ಲವಕರವಾದ ಆಂದೋಳನಗಳನ್ನು ಪ್ರಾರಂಭಿಸದೆ ಇದ್ದಪಕ್ಷದಲ್ಲಿ ಭಾರತ ಪ್ರಭುತ್ವದವರ ಶಿಫಾರಸ್ಸುಗಳು ಸಂಪೂರ್ಣವಾಗಿ ಅಂಗೀಕರಿಸಲ್ಪಡುತ್ತಿದ್ದುವು’’ ಎಂದು ಅಪ್ಪಣೆಕೊಡಿಸಿ ಕಳುಹಿಸಿಕೊಟ್ಟರು. ವೈಸ್ರಾಯರ ಈ ಉತ್ತರದಲ್ಲಿ ಕಂಡ ಕೆಲವು ವಾಕ್ಯಗಳನ್ನೂ ಯೂರೋಪು ಖಂಡದಿಂದ ತುರ್ಕಿ ಸಮಸ್ಯೆಯ ವಿಷಯವಾಗಿ ಬರುತ್ತಿರುವ ತಂತ್ರೀವಾರ್ತೆಗಳನ್ನೂ ನೋಡಿದರೆ ತುರ್ಕಿ ಸಂಧಿಯು ಇಷ್ಟರಲ್ಲೇ ಕೆಲಮಟ್ಟಿಗೆ ಬದಲಾಯಿಸಲ್ಪಡುವ ಸಂಭವವುಂಟೆಂಬುದು ನಿರ್ಧರವಾಗುತ್ತದೆ. ಹೇಗೇ ಆಗಲಿ ಆಂಗ್ಲಸಾಮ್ರಾಜ್ಯದಲ್ಲಿ ತುರುಷ್ಕಪ್ರಜಾಸಂಖ್ಯೆಯು ಇರುವಷ್ಟು ಇನ್ನಾವ ಸಾಮ್ರಾಜ್ಯದಲ್ಲೂ ಇರುವುದಿಲ್ಲ. ಮಹಮ್ಮದೀಯರ ತೃಪ್ತಿ ಸಮಾಧಾನಗಳು ಆಂಗ್ಲ ಸಾಮ್ರಾಜ್ಯದ ಕ್ಷೇಮಾಭ್ಯುದಯಗಳಿಗೆ ವಿಶೇಷಸಹಾಯಕಾರಿಗಳು. ಅದುಕಾರಣ ಇಂಥ ದೊಡ್ಡ ಸಮಾಜವನ್ನು ಅಸಮಾಧಾನಸ್ಥಿತಿಯಲ್ಲಿರಗೊಡುವುದಕ್ಕಿಂತಲೂ ಉದಾರಭಾವವನ್ನು ತೋರಿಸಿ ಅವರನ್ನು ತೃಪ್ತಿಪಡಿಸುವುದೇ ಉತ್ತಮ ರಾಜನೀತಿಯು. ಫ್ರಾನ್ಸ್ ಪ್ರಭುತ್ವವು ತನ್ನ ರಾಜನೀತಿಯಿಂದ ತುರುಷ್ಕ ಸಮಾಜದ ಪ್ರೀತಿಯನ್ನು ಸಂಪಾದಿಸಿಕೊಳ್ಳುತ್ತಿರುವಾಗ್ಗೆ ಆಂಗ್ಲಸಾಮ್ರಾಜ್ಯವು ಅದಕ್ಕಿಂತ ಹಿಂದೆಬಿದ್ದು ತುರ್ಕಿಯವರ ಅಪ್ರೀತಿಗೆ ಭಾಜನರಾಗುವುದು ಈ ಸಾಮ್ರಾಜ್ಯದ ಉದಾತ್ತ ರಾಜತಂತ್ರಗಳಿಗೆ ಅನುಗುಣವಾದುದಲ್ಲವೆಂದು ಹೇಳಬೇಕಾಗಿಲ್ಲ.

A STRONG ADVOCATE.

Mrs. Besant, the remarkable lady, who edits the " New India " of Madras is in season and out of season for the Brahmana and she is for caste when it serves the purpose of the Brahmana and she is not for it when it does not serve the purpose. That is her position. She is steadfastly for Brahmana. She is a great student of Hindu religion and as such she knows that caste as an essential part of the Hindu religion has played an important part in the past history. Without caste the Hindu religion vanishes. The Brahmana is a sacred person and he must be worshipped. To her any achievement by a Brahmana-such achievements are many—is a tiding fit to get on her tongue and to pass through her throat. She would say the event and conclude " He is a Brahmana." One must like an Advocate of her stamp. So far she likes caste also. When the question of Public Service is discussed, she relegates from her thought the seriousness of caste, because the God of her worship "The Brahmana" will be affected in his worldly matters.

Does she know that it is Brahmana who has created distinctions and differences? The temple in which his God is worshipped is unapproachable by others and that God cannot be worshipped by others. The street in which her Brahmana lives has no place for others. The well from which her God on earth draws water is not for others for the same purpose. He has his own eating houses to which others can go but not he to theirs. He is exclusively his own and he is not for others. Such a person is worshipped by Mrs. Anne Besant. The Brahmana intellect, is admirable, his adoptability is of a high order and he is superior in a thousand ways, but not to the exclusive extent of Mrs. Besant's adoration. Why should the efficiency of Madras Public Service or any other service suffer if distribution of work is made amongst all classes of people? We have no idea of making the subject distasteful but for Mrs. Besent's interests for the Brahmans. Has she at heart the Indian interest or the Brahmana interests? Her writings betray the latter. If so her Home Rule is a system of Oligarchy of her own heart rather than one which the Indian people would desire to have Such is this strong Advocate of Brahmana cult.

ರಾಜಧಾನಿಯ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು ಪ್ರಕಟಿಸಿರುವ ಸಚಿತ್ರವಾದ ಕ್ಯಾಲೆಂಡರನ್ನು ಸ್ವೀಕರಿಸಿರುತ್ತೇವೆ.

THE BANGALORE CITY MUNICIPAL PRESIDENT'S ELECTION.

A fiasco again. A bankruptcy of unanimity and good feeling. An absence of generosity and liberality and determined effort to instal Mr. B. K. Garudachar as President of the Municipality. The history of the first unanimous election was a ruse as it is clear from the clever manœvres of all possible kinds which are said to have been brought into operation now as means to gain the end of installing Mr. Garudachar again. The first attempt this time was a failure upon which unconstitutional methods of petitioning in favour of Mr. Garudachar were urged with the result, that a second election took place on the 7th inst. This unconstitutional line of action of a section of the members of the Councillors furnished the clue that all influences were at work actively to win the required number of votes. The opposition seems to have met this attitude by a number of them keeping away from the election meeting reducing the number present to less than the quorum required. This appears to have been the last legitimate resort, open to the opposition. What is now the further move of Mr. Garudachar's party? They seem to have determined to leave no stone unturned to secure the position for Mr. Garudachar. They meet and pass a resulution to reduce the number required to form the quorum and pending the change of the rule, they propose that Mr. Garudachar be at once nominated as President. Hence the rule should be changed to suit the present conditions which otherwise would not secure the Presidentship for Mr. Garudachar. The interests of the Municipality are no where. The individual interests are all that are cared for by this section of the members consisting of ten members of one class and ten of diverse classes. The opposition consits of none of the ten of the former class. This clearly speaks for itself. If in the face of this state of clamour of the one class rule, any other of the same class is nominated, the situation it is feared will be as bankrupt of good feeling as in the past. The opposition is fighting for a principle and not for individual interests. It does not mind whether it is this member or that member who is nominated as President, but it desires to break the class rule, otherwise it will be from log to shark.

Such is the way that a franchise is availed of. How far will self Government, "Swadeshism" then get on with this one class ridden society?

ಶ್ರೀ ಯುವಸಾರ್ವಭೌಮರ ಸಂಚಾರ.

(ಬಿಕನೀರು).

ಈ ಸಂಸ್ಥಾನಕ್ಕೆ ಯುವಸಾರ್ವಭೌಮರವರು ಡಿಶಂಬರ್ ತಾ|| ೨ನೆ ಬೆಳಗಿನ ೧೦ ಗಂಟೆಗೆ ದಯಮಾಡಿಸಿದರು. ಅಲ್ಲಿಯ ಮಹಾರಾಜರೂ ಕುಮಾರ ಮಹಾರಾಜರೂ ಸಂಸ್ಥಾನದ ಮುಖ್ಯಾಧಿಕಾರಿಗಳೂ ಸರ್ದಾರರುಗಳೂ ಘನತರವಾದ ಸ್ವಾಗತವನ್ನು ಮಾಡಿ ಮರ್ಯಾದಿಸಿದರು. ನಿಲ್ದಾಣದಿಂದ ಹಿಡಿದು ಬಿಡಾರದವರೆಗೆ ಬೀದಿಗಳೆಲ್ಲಾ ಶೃಂಗರಿಸಲ್ಪಟ್ಟಿದ್ದುವು. ಪ್ರಜೆಗಳೂ ವಿದ್ಯಾರ್ಥಿಗಳೂ ಕಿಕ್ಕಿರಿದು ನಿಂತಿದ್ದು ಉತ್ಸವಗೊಂಡು ಬಂದ ಯುವರಾಜರನ್ನು ಕಂಡು ಅತ್ಯಂತ ಹರ್ಷದಿಂದ ಜಯಧ್ವನಿಮಾಡಿದರು. ಮುತ್ತೈದೆಯರು ಚಪ್ಪರದ ಬಳಿಯಲ್ಲಿ ಆರತಿಯನ್ನು ಬೆಳಗಿದರು. ಲಾಲ್ಗರಾರಾಜಭವನದಲ್ಲಿ ಯುವರಾಜರಿಗೆ ಬಿಡದಿಯು ಏರ್ಪಡಿಸಲ್ಪಟ್ಟಿದ್ದಿತು. ಮಿಜಾಜ್ ಪರಸಿಯು ನಡೆದಿತು. ಮಹಾರಾಜರು ತಮ್ಮ ಒಡ್ಡೋಲಗಕ್ಕೆ ಯುವರಾಜರನ್ನು ಬರಮಾಡಿಕೊಂಡು ನಜರುಗಾಣಿಕೆಯನ್ನರ್ಪಿಸಿದರು. ಅಲ್ಲಿ ನೆರೆದಿದ್ದ ಸಾಮಂತರಾಜರೆಲ್ಲಾ ಗೌರವಿಸಿದರು. ಹಳೆಯ ಕೋಟೆಯೊಳಗಿರುವ ಗಂಗಾನಿವಾಸ ಎಂಬ ಅರಮನೆ

ಯಲ್ಲಿ ಅದೇದಿನ ಯುವರಾಜರಿಗೆ ಅರಸೌತಣವು ನಡೆದಿತು. ರಾಜಭವನವು ಬಹಳ ರಮಣೀಯವಾಗಿ ಅಲಂಕರಿಸಲ್ಪಟ್ಟಿದ್ದಿತು. ನೂರಾರುಮಂದಿ ಪ್ರಮುಖರು ಆ ಔತಣಕ್ಕೆ ಬಂದಿದ್ದರು. ಆಗ ಮಹಾರಾಜರು ಯುವಸಾರ್ವಭೌಮರನ್ನು ಕುರಿತು—"ನೀವು ನನ್ನ ಸಂಸ್ಥಾನಕ್ಕೆ ಅಭಿಮಾನವಿಟ್ಟು ದಯಮಾಡಿಸಿ ಗೌರವಿಸಿದುದಕ್ಕಾಗಿ ನಿಮಗೆ ಕೃತಜ್ಞನಾಗಿದ್ದೇನೆ. ಸುಪ್ರಸಿದ್ಧರಾದ ನಿಮ್ಮ ತಾಯ್ತಂದೆಗಳು ಈ ನಮ್ಮ ಸಂಸ್ಥಾನಕ್ಕೆ ೧೬ ವರ್ಷಗಳ ಕೆಳಗೆ ಆಗಮಿಸಿದ್ದರು. ಆಗ್ಗೂ ಈಗ್ಗೂ ಭರತಖಂಡವು ಬಹಳ ಮಾರ್ಪುಗೊಂಡಿದೆ. ಭರತಖಂಡದ ದೇಶೀಯ ಸಂಸ್ಥಾನಗಳವರ ವಂಶಪಾರಂಪರ್ಯವಾದ ರಾಜಭಕ್ತಿಯು ಜಗತ್ಪ್ರಸಿದ್ಧವಾಗಿದೆ. ಭರತಖಂಡದಲ್ಲಿ ಎಲ್ಲೋ ಸ್ವಲ್ಪ ಜನರು ದಾರಿತಪ್ಪಿ ನಡೆದರೂ ಸಾಧಾರಣವಾಗಿ ಪೂರ್ವದೇಶೀಯರಲ್ಲಿ ರಾಜಭಕ್ತಿಯೆಂಬುದು ವಿಶೇಷವಾಗಿರುವುದು. ನಿಮ್ಮಂಥ ರಾಜಪುತ್ರರ ಸಂದರ್ಶನಲಾಭವು ಆಗಾಗ್ಗೆ ಆಗುತ್ತಿದ್ದರೆ ಆ ರಾಜಭಕ್ತಿಯು ಮತ್ತಷ್ಟು ಅಭಿವೃದ್ಧಿಗೊಳ್ಳುವುದು. ಭರತಖಂಡದ ಹೃದಯವು ರಾಜಭಕ್ತಿ ಪೂರ್ಣವಾಗಿ ರಂಜಿಸುತ್ತಿದೆ. ರಾಜಸಂತತಿಯವರ ಆಗಮನವು ದೇಶಕ್ಕೆ ಎಷ್ಟೋ ಮೇಲನ್ನುಂಟುಮಾಡುವುದು. ನಾವು ಪರಸ್ಪರ ಪ್ರೇಮ ಸಂತೋಷ ಸ್ನೇಹ ಉತ್ಸಾಹ ಸದ್ಭಾವಗಳಿಂದ ಕೂಡಿರುವೆವು" ಎಂದು ಉಪನ್ಯಾಸಮಾಡಿದರು. ಅದಕ್ಕೆ ಪ್ರತ್ಯುತ್ತರವಾಗಿ ಯುವಸಾರ್ವಭೌಮರು—"ಮಹಾರಾಜರೇ, ನಿಮ್ಮ ಸರಸವಚನಗಳಿಗೂ ಆತಿಥ್ಯಕ್ಕೂ ನಾನು ಕೃತಜ್ಞನಾಗಿದ್ದೇನೆ. ನಿಮ್ಮ ರಾಜಭಕ್ತಿಯನ್ನು ಚಕ್ರವರ್ತಿಯವರಿಗೆ ಬಿನ್ನೈಸುತ್ತೇನೆ. ನಿಮ್ಮ ಸಂಸ್ಥಾನವು ರಾಜಭಕ್ತಿಯಲ್ಲೂ ಸಾಮ್ರಾಜ್ಯಸೇವೆಯಲ್ಲೂ ಅಗ್ರಸ್ಥಾನವನ್ನು ಹೊಂದಿ ಇತರ ಸಂಸ್ಥಾನಗಳಿಗೆಲ್ಲಾ ಪ್ರೋತ್ಸಾಹಕವಾಗಿದೆ. ನಿಮ್ಮ ಸಂಸ್ಥಾನದವರು ತಲೆತಲಾಂತರಗಳಿಂದಲೂ ಸಾಮ್ರಾಜ್ಯಪ್ರಭುತ್ವಕ್ಕೆ ಹಲವುತೆರನಾಗಿ ಸಹಾಯಮಾಡಿದ್ದಾರೆ. ನೀವು ಮಾಡುತ್ತಿರುವ ಸಹಾಯವು ಅಸಾಧಾರಣವಾದುದು. ನಿಮ್ಮ ರಾಜನೀತಿಜ್ಞತೆಯೂ ಪರಿಪಾಲನ ಕೌಶಲ್ಯವೂ ಪ್ರಶಂಸಾಪಾತ್ರಗಳು. ಸದ್ಯದ ವಿಷಮಸ್ಥಿತಿಯಲ್ಲಿ ನಿಮ್ಮಂಥವರ ಸಹಾಯವು ಅತ್ಯಂತ ಮುಖ್ಯವು. ನೀವು ಪ್ರಜಾಸೌಖ್ಯವನ್ನೂ ದೇಶಾಭಿವೃದ್ಧಿಯನ್ನೂ ಸರ್ವ ಪ್ರಕಾರದಿಂದಲೂ ಗಮನಿಸುತ್ತಲಿದ್ದೀರಿ. ರಾಜೇಂದ್ರಮಂಡಲಿಯಲ್ಲಿ ಸಂಸ್ಥಾನಾಧಿಪತಿಗಳ ಅಭಿವೃದ್ಧಿಗಾಗಿ ನೀವು ಬಹಳ ಕೆಲಸಮಾಡಿರುವಿರಿ. ನಿಮಗೂ ನನಗೂ ಕೂಡ ಸಾಮ್ರಾಜ್ಯಸ್ಥಿರತೆ ದೇಶಾಭಿವೃದ್ಧಿ ಮಾನವಕೋಟಿಯ ನಾಗರಕತಾಭಿವೃದ್ಧಿ—ಇವುಗಳೇ ಮುಖ್ಯಾಶಯಗಳಾಗಿರುತ್ತವೆ. ಈ ಕಾಲದಲ್ಲಿ ಯಾವ ಸಂಘವೇ ಆಗಲಿ ತಾನೇ ಒಂಟಿಯಾಗಿ ಅಭಿವೃದ್ಧಿಗೊಳ್ಳಲಾರದು ; ಕೂಡಿ ಕೆಲಸಮಾಡುವುದರಿಂದಲೇ ಇಷ್ಟಫಲವನ್ನು ಪಡೆಯಲು ಸಮರ್ಥವಾಗುವುದು." ಎಂದು ಅಪ್ಪಣೆಕೊಡಿಸಿ ಮಹಾರಾಜರ ಆಯುರಾರೋಗ್ಯಗಳನ್ನು ಕೋರಿದರು. ಅದೇದಿನ ಸಾಯಂಕಾಲ ೪|| ಗಂಟೆಗೆ ಯುವಸಾರ್ವಭೌಮರು ಬಿಕನೀರ್ ಸಂಸ್ಥಾನದ ಸುಪ್ರಸಿದ್ಧವಾದ ಒಂಟೆಯ ಸೈನ್ಯ ಮೊದಲಾದುವುಗಳನ್ನು ಪರಾಮರಿಸಿದರು. ಆಗ್ಗೆ ಮಹಾರಾಜರು ಸ್ವತಃ ಅಶ್ವಾರೂಢರಾಗಿ ತಮ್ಮ ಸೇನೆಗಳ ಕವಾಯತನ್ನು ಮಾಡಿಸಿ ತೋರಿಸಿದರು. ಅದನ್ನು ನೋಡುವುದಕ್ಕೆ ಅನೇಕ ಪ್ರಜೆಗಳು ಸೇರಿದ್ದರು. ತಾ|| ೬ರ ವರೆಗೂ ಯುವಸಾರ್ವಭೌಮರು ಅದೇ ಸಂಸ್ಥಾನದಲ್ಲಿದ್ದರು. ಪ್ರತಿದಿನವೂ ಬೇಟೆ ಮೊದಲಾದ ಹಲವು ಏರ್ಪಾಟುಗಳನ್ನು ಮಾಡಿದ್ದು ಯುವಸಾರ್ವಭೌಮರನ್ನು ಅತಿಶಯವಾಗಿ ಸಂತೋಷಪಡಿಸಿದರು. ತಾ|| ೬ನೆ ಮಧ್ಯಾಹ್ನ ಯುವಸಾರ್ವಭೌಮರು ಅಲ್ಲಿಂದ ಭರತಪುರಕ್ಕೆ ಪ್ರಯಾಣಮಾಡಿ ತಾ|| ೭ನೆ ಬುಧವಾರ ಬೆಳಗ್ಗೆ ಸೇರಿದರು. ನಿಲ್ದಾಣದಲ್ಲಿ ಮಹಾರಾಜರೂ ಬ್ರಿಟಿಷ್ ಪೊಲಿಟಿಕಲ್ ಏಜಂಟರೂ ಸಂಸ್ಥಾನದ ಮಂತ್ರಿಗಳೇ ಮೊದಲಾದಧಿಕಾರಿಗಳೂ ಸ್ವಾಗತಿಸಿದರು. ಸಕಲ ಮರ್ಯಾದೆಗಳೊಡನೆ ಪುರಪ್ರವೇಶಮಾಡಿದರು. ಅಲ್ಲಿನ ಪುರಾತನವಾದ ಡೀಗ್ ನಗರವನ್ನು ಅವಲೋಕಿಸಿಕೊಂಡು ಬಂದರು. ಸಾಯಂಕಾಲ ಸೈನಿಕರ ಸಾಹಸಪ್ರದರ್ಶನವು ನಡೆದಿತು. ರಾತ್ರಿ ಅರಸೌತಣವಾಯಿತು.

ಒಳದೇಶದ ವೃತ್ತಾಂತಗಳು.

ರಿಟೈರ್ಡ್ ಅ|| ಕಮಿಷನರಾಗಿದ್ದ ಮ|| ಹಂಗೇರಿ ಕೃಷ್ಣರಾಯರು ಕಳೆದ ತಾ|| ೫ ರಲ್ಲಿ ರಾಜಧಾನಿಯಲ್ಲಿರುವ ಅವರ ಮನೆಯಲ್ಲಿ ದೈವಾಧೀನರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಗೌರ್ನ್ಮೆಂಟ್ ಅಡ್ವೋಕೇಟರಾಗಿದ್ದ ಮ|| ಆರ್. ಎನ್. ಅಯ್ಯಂಗಾರ್ ಬ್ಯಾ|| ಅಟ್ಲಾ ಯವರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟು ತಮ್ಮ ಪೂರ್ವದ ಪ್ರಾಕ್ಟೀಸಿದ್ದ ಮದ್ರಾಸಿಗೆ ತೆರಳಿದರೆಂದು ಕೇಳುತ್ತೇವೆ. ಕಾರಣವೇನೊ ? ಇದಕ್ಕಿಂತ ದೊಡ್ಡಪದವಿಯು ಅಲ್ಲೇನಾದರೂ ದೊರೆಯುವುದೊ?

ಕಳೆದ ತಾ|| ೯ರಲ್ಲಿ ರಾಜಧಾನಿಯ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದ ಸಮೀಪದಲ್ಲಿ ಒಂದುಮರದ ಕೊಂಬೆಯು ವಿದ್ಯುಚ್ಛಕ್ತಿಯ ತಂತಿಗಳಮೇಲೆ ಬಿದ್ದು ಒಂದುತಂತಿಯು ಕಿತ್ತುಹೋಗಿ ನೆಲದಮೇಲೆ ಬಿದ್ದು ಸಮೀಪದಲ್ಲಿ ಕೆಲಸಮಾಡುತ್ತಿದ್ದ ೧೫-೧೬ ವರ್ಷ ವಯಸ್ಸಿನ ಹೆಂಗುಸಿನಕಾಲಿಗೆ ತಗುಲಿತು. ಆ ಕೂಡಲೆ ಹುಡುಗಿಯು ಸತ್ತುಹೋದಳಲ್ಲದೆ ತಂತಿಯು ಸುತ್ತುಕೊಂಡಿದ್ದ ಕಾಲು ಸುಟ್ಟು ಇದ್ದಲಿನಂತಾಯಿತಂತೆ.

ಸಂಸ್ಥಾನದ ವೈದ್ಯಶಾಖೆಯಲ್ಲಿ ೩೨ ವರ್ಷಕಾಲ ಉದ್ಯೋಗವನ್ನು ವಹಿಸಿ ಸಿವಿಲ್‌ಸರ್ಜನ್ ಪದವಿಯವರೆಗೂ ಏರಿದ್ದ ಡಾ|| ಆರ್. ಗೋವಿಂದರಾಜುಲು ಅಮ್ಮನವರು ಕಳೆದ ತಾ|| ೪ನೆ ಭಾನುವಾರ ಬೆಂಗಳೂರಿನಲ್ಲಿ ಕಾಲವಾದರೆಂಬುದನ್ನು ಕೇಳಿ ಅವರ ಭೂತದಯೆ ಪ್ರಾಮಾಣಿಕತನ ಚಿಕಿತ್ಸಾಶ್ರದ್ಧೆ ಮೊದಲಾದುವುಗಳ ಅನುಭವವುಳ್ಳ ಬಹುಜನರು ಸಂತಪಿಸುವರೆಂಬುದಕ್ಕೆ ಸಂಶಯವಿಲ್ಲ. ಇವರು ಕ್ರೈಸ್ತಮತಸ್ಥರಾಗಿದ್ದುದರಿಂದ ಮರುದಿನ ಶವವು ರಾಜಧಾನಿಯಲ್ಲಿ ಕ್ರೈಸ್ತಸಂಪ್ರದಾಯಪ್ರಕಾರ ಸಂಸ್ಕರಿಸಲ್ಪಟ್ಟಿತು.

ಮೈಸೂರು ತಿರುಮಕೂಡಲು ನರಸಿಪ್ಪುರದ ಮಾರ್ಗದಲ್ಲಿ ರಾತ್ರಿಕಾಲ ಪ್ರಯಾಣಿಕರ ಬಂಡಿಗಳು ವಿಶೇಷವಾಗಿ ತಿರುಗಾಡುವ ಪದ್ಧತಿಯುಂಟಷ್ಟೆ. ಹೀಗೆ ಹೋಗತಕ್ಕ ಬಂಡಿಗಳಿಗೆ ಕಳ್ಳರುಬಿದ್ದು ಮಲಗಿದ್ದವರ ಬಟ್ಟೆಬರೆ ಮೊದಲಾದ ಪದಾರ್ಥಗಳನ್ನು ಕಳವುಮಾಡಿಕೊಂಡುಹೋಗುವ ಪದ್ಧತಿಯು ಕೆಲಕಾಲದಿಂದ ನಿಂತಿದ್ದಿತು. ಈಗ ಮತ್ತೆ ಆರಂಭವಾಗಿದೆಯೆಂದು ಕೇಳುತ್ತೇವೆ. ಕಳೆದವಾರದಲ್ಲಿ ೨ ಸಲ ಇಂಥ ಕಳವುಗಳು ನಡೆದಿದೆಯೆಂದು ಕೇಳುತ್ತೇವೆ. ತಾಲ್ಲೂಕು ಪೊಲೀಸಿನವರು ಸರಿಯಾದ ಕಾವಲಿನ ಏರ್ಪಾಟುಮಾಡಿ ಪ್ರಯಾಣಸ್ಥರ ನಷ್ಟಕಷ್ಟಗಳನ್ನು ತಪ್ಪಿಸಬೇಕು.

ಬೆಂಗಳೂರು ಸಿಟಿ ಮ್ಯುನ್ಸಿಪಾಲಿಟಿಯ ಅ|| ಪ್ರೆಸಿಡೆಂಟರನ್ನು ಆರಿಸುವುದಕ್ಕೆ ಮತ್ತೊಂದುಸಲ ಅವಕಾಶವು ಕೊಡಲ್ಪಟ್ಟಿದ್ದಿತಷ್ಟೆ. ಈಸಲವೂ ಮ|| ಗರುಡಾಚಾರ್ಯರೂ, ಮ|| ಎಂ. ಸುಬ್ಬಯ್ಯ, ಬಿ.ಎ., ಯವರೂ ಸಹ ಪ್ರೆಸಿಡೆಂಟ್‌ಗಿರಿಗೂ, ಮ|| ಪಿ. ಎಂ. ಬಸಪ್ಪನವರೂ, ಮೆ|| ಅಬ್ದುಲ್ ರಹಿಮಾನ್ ರವರೂ, ವೈಸ್‌ಪ್ರೆಸಿಡೆಂಟ್‌ಗಿರಿಗೂ ಉಮೇದುವಾರರಾಗಿ ನಿಂತಿದ್ದರು. ಕಳೆದ ತಾ|| ೭ ರಲ್ಲಿ ಇದಕ್ಕಾಗಿ ಏರ್ಪಟ್ಟಿದ್ದ ಮೀಟಿಂಗು ಕೋರಂ ಇಲ್ಲದೆ ವ್ಯರ್ಥವಾಗಿ ಹೋಯಿತು. ಕೌನ್ಸಿಲರುಗಳಲ್ಲಿ ಸಮರ್ಪಕವಾಗಿ ತೋರುವ ಬೇರೊಬ್ಬರನ್ನು ಪ್ರೆಸಿಡೆಂಟ್ ಪದವಿಗೆ ಗೌರ್ನ್ಮೆಂಟಿನವರು ನಾಮಿನೇಟ್ ಮಾಡಿದಲ್ಲದೆ ಇದು ಕೊನೆಮುಟ್ಟುವ ಸಂಭವವಿರುವಂತೆ ತೋರುವುದಿಲ್ಲ.

ರಾಜಧಾನಿಯ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕಸಭೆಯರು ಕಳೆದ ತಾ|| ೩ರ ರಾತ್ರಿ ಟೌನ್ ಹಾಲಿನಲ್ಲಿ ಶಾಕುಂತಲ ನಾಟಕವನ್ನು ನೂತನವಾದ ಪರದೆಗಳಿಂದಲೂ ಉಡುಪುಗಳಿಂದಲೂ ಅಭಿನಯಿಸಿದರು. ದುಷ್ಯಂತನಪಾತ್ರವನ್ನು ವಹಿಸಿದ್ದ ಸಂಗೀತವಿದ್ವಾನ್ ಬಿ. ರಾಜಪ್ಪನವರು, ಶಕುಂತಲೆಯ ಪಾತ್ರವನ್ನು ವಹಿಸಿದ್ದ ಮ|| ಎನ್. ಸುಬ್ಬಣ್ಣನವರು ಮತ್ತು ವಿದೂಷಕನ ಪಾತ್ರವನ್ನು ವಹಿಸಿದ್ದ ಎಂ. ಕೃಷ್ಣಮೂರ್ತಿರಾಯರು ಅತ್ಯಂತ ಶ್ಲಾಘ್ಯವಾಗಿ ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ಮಿತಿಮೀರಿದ್ದುದರಿಂದ ಅನೇಕರು ಆಶಾಭಂಗರಾಗಿ ಹೊರಟುಹೋದುದರ ಮೇಲೆ ಬಹುಜನರಪೇಕ್ಷೆಯಂತೆ ನೆನ್ನೆ ದಿನ ಶಾಕುಂತಲ ನಾಟಕವು ಪುನಃ ಅಭಿನಯಿಸಲ್ಪಟ್ಟಿತು.

ಮೈಸೂರು ಮ್ಯುನ್ಸಿಪಾಲಿಟಿ ಮತ್ತು ಮಾರಕಟ್ಟುಗಳ ಸಂಬಂಧದಲ್ಲಿ ಒಬ್ಬ ವರ್ತಕರಿಂದ ಬರೆದುಬಂದಿರುವ ಪತ್ರವ್ಯವಹಾರವನ್ನು ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ. ಕೌನ್ಸಿಲಿನಲ್ಲಿ ತೀರ್ಮಾನವಾದುದನ್ನು ವ್ಯವಹಾರಕ್ಕೆ ತರಲಿಕ್ಕೇ ಮುನ್ಸಿಪಲ್ ಉದ್ಯೋಗಿಗಳನ್ನೇರ್ಪಡಿಸಿರುವಾಗ, ಅವರುಗಳು ಕೌನ್ಸಿಲ್ ತೀರ್ಮಾನವನ್ನು ತಿಂಗಳುಗಟ್ಟಲೆ ಬುಡಕ್ಕೆಹಾಕಿ ಕುಳಿತುಕೊಳ್ಳಲಿಕ್ಕೆ ಕಾರಣವೇನೋ ತಿಳಿಯಲಿಲ್ಲ. ಇದನ್ನು ನೋಡಿದರೆ ಈ ಸಂಬಂಧವಾಗಿರುವ ರಹಸ್ಯವನ್ನು ಕುರಿತು ನಮ್ಮ ಕಿವಿಗೆ ಪದೇಪದೇ ಬೀಳುತ್ತಿದ್ದ ವಾರ್ತೆಗಳನ್ನು ನಿಜವೆಂದು ಭಾವಿಸಬೇಕಾಗುತ್ತದೆ. ಸಾಮರ್ಥ್ಯವಂತರೆಂದು ಪ್ರಖ್ಯಾತರಾಗಿರುವ ನಮ್ಮ ದಿವಾನ್ ಬಹದ್ದೂರ್ ಪ್ರೆಸಿಡೆಂಟರ ದವಲತ್ತಿನಲ್ಲಿಯೂ ಪ್ರಜಾಕ್ಷೇಮೈಕ ಧುರಂಧರರೆಂದು ಹೇಳಿಕೊಂಡು ಮ್ಯು|| ಕೌನ್ಸಿಲರ್ ಪಟ್ಟವನ್ನು ಕಟ್ಟಿಸಿಕೊಂಡಿರುವ ಕೌನ್ಸಿಲರುಗಳ ಕಾರ್ಯಭಾರದಲ್ಲಿಯೂ ನಮ್ಮ ರಾಜಧಾನಿಯಂಥ ಪ್ರಮುಖ ಪಟ್ಟಣದ ಮ್ಯುನ್ಸಿಪಾಲಿಟಿಯೊಳಗೆ ಇಂಥ ನಿರಂಕುಶವಾದ ಅಬಂಧುರ ಸ್ಥಿತಿಯಿರುವುದು ಯಾರಿಗೂ ಭೂಷಣವಲ್ಲ.

ನಮ್ಮ ವಿಶ್ವವಿದ್ಯಾಲಯದ ಸೆನೇಟ್ ಮೀಟಿಂಗಿನಲ್ಲಿ ಲಾ ತರಗತಿಯನ್ನಿಡಬೇಕೆಂಬ ಸೂಚನೆಯು ಹಿಂದೊಂದು ಸಲ ಬಂದಿದ್ದು ನಿಂತುಹೋಗಿದ್ದುದಲ್ಲದೆ ಈಗತಾನೇ ನಡೆದ ಮತ್ತೊಂದು ಮೀಟಿಂಗಿನಲ್ಲೂ ಬಂದಿದ್ದಿತು. ಇದು ಏರ್ಪಡುವುದಾದರೆ ಬಹುಜನ ವಿದ್ಯಾರ್ಥಿಗಳು ಅದಕ್ಕೆ ಸೇರುವುದರಿಂದ ಫೀಜಿನ ರೂಪವಾಗಿ ವಿಶೇಷ ಲಾಭಸಂಪಾದನೆಯಾಗುವುದೆಂದು ಅದರ ಅಭಿಮಾನಿಗಳು ವಾದಿಸಿದರು. ಆದರೆ ಕಡೆಗೆ ಇದು ಅನವಶ್ಯಕವೆಂಬ ವಾದವೇ ಪ್ರಬಲವಾಗಿ ಸೂಚನೆಯು ಬಿದ್ದುಹೋದುದು ಯುಕ್ತವೇ ಆಯಿತು. ಬೆಂಗಳೂರಿನಲ್ಲಿ ಏರ್ಪಟ್ಟು ನಡೆಯುತ್ತಿರುವ ವೈದ್ಯ ಪಾಠಶಾಲೆಯ ಸ್ಥಿತಿಯನ್ನು ಪರ್ಯಾಲೋಚಿಸಿದರೆ ಲಾ ಕಾಲೇಜಿನ ಏರ್ಪಾಟು ನಿಂತುಹೋದುದೇ ಕ್ಷೇಮವೆಂದು ತೋರದಿರಲಾರದು. ಏಕೆಂದರೆ—ಕಳೆದ ವರ್ಷ ಬೆಂಗಳೂರು ವೈದ್ಯ ವಿದ್ಯಾಲಯದಲ್ಲಿ ೯೮ ಮಂದಿ ವಿದ್ಯಾರ್ಥಿಗಳು ಓದುತ್ತಿದ್ದುದರಲ್ಲಿ ೮ ಮಂದಿ ಮಾತ್ರವೇ ಫೀಜುಕೊಡುತ್ತಿದ್ದವರು. ಉಳಿದವರೆಲ್ಲಾ ಸ್ಕಾಲರ್ಷಿಪ್ ಪಡೆದು ಬಿಟ್ಟಿಯಾಗಿ ಓದುತ್ತಿದ್ದವರು. ಆ ಶಾಲೆಗೆ ಆ ವರ್ಷದಲ್ಲಿ ಆದ ವೆಚ್ಚವು ೩೯೩೧೦ ರೂ. ವರಮಾನವಾದರೂ ೧ ಸಾವಿರವಾಗಿದೆ.

ರಾಜಧಾನಿಯ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಚೇರ್‌ಮನ್‌ರವರು ಕೃಷ್ಣರಾಜ ಮತ್ತು ಕಿಲ್ಲೆಮೊಹಲ್ಲೆಗಳ ಕಡೆಯಲ್ಲಿ ಮನೆಗಳನ್ನು ಸುಭದ್ರಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ೫೦-೧೦೦ ಮಂದಿ ಪೊಲೀಸರನ್ನು ಬಿಟ್ಟು ಸೂರಿನ ಮೇಲೆ ಹತ್ತಿಸಿ ಬಹಳ ಹಿಂಸೆಪಡಿಸುತ್ತಿದ್ದಾರೆಂದೂ, ಮನೆಗಳ ಆಕ್ರಮಣಕ್ಕೆ ಹೀಗೆ ಇಷ್ಟು ಕ್ರೂರವಾಗಿ ಬಲಾತ್ಕಾರ ಮಾಡಿಸತಕ್ಕವರು ನಾಳೆ ಮನೆಗಳಿಗೆ ಬೆಂಕಿಯಿಕ್ಕಿಸಿ ಖಾಲಿಮಾಡಿಸುವುದಕ್ಕೂ ಹಿಂದೆಗೆಯಲಾರರೆಂದೂ, ನಮ್ಮ ಪಟ್ಟಣಕ್ಕೆ ಇಂಥ ದುರವಸ್ಥೆ ಪ್ರಾಪ್ತವಾಯಿತಲ್ಲಾ ಎಂದು ಎಷ್ಟೋ ಜನರು ಸಂಕಟಪಡುತ್ತಿದ್ದಾರೆಂದೂ ಒಬ್ಬ ಬಾತ್ಮಿದಾರರು ಬರೆದಿರುತ್ತಾರೆ. ಇದು ನಿಜವಾಗಿದ್ದಪಕ್ಷದಲ್ಲಿ ಪೊಲೀಸಿಗೂ ಇಂ|| ಟ್ರಸ್ಟ್‌ಬೋರ್ಡಿಗೂ ಸಂಬಂಧವೇನೋ ತೋರಲಿಲ್ಲ. ನಮ್ಮ ದಿವಾನ್ ಬಹದ್ದೂರ್ ಚೇರ್ಮನ್‌ರವರು ಪ್ರಜೆಗಳ ಪ್ರೀತಿ ತಮ್ಮ ಸತ್ಕೀರ್ತಿ ಜೀವಕಾರುಣ್ಯಗಳಕಡೆಗೆ ವಿಶೇಷ ಗಮನಕೊಟ್ಟಂತೆ ತೋರುವುದಿಲ್ಲ. ಮರ, ಮಣ್ಣು, ಸುಣ್ಣ, ಕೂಲಿ ಮೊದಲಾದುವುಗಳ ಬೆಲೆಯೆಲ್ಲಾ ಮಿತಿಮೀರಿ ಹೆಚ್ಚಿಕೊಂಡಿರುವ ಈ ಕಾಲದಲ್ಲಿ ಬಡಬಗ್ಗರಿಗೆಲ್ಲಾ ಮನೆಬಿಡಿಸಲು ಇಷ್ಟು ತೊಂದರೆಕೊಡುವುದು ವಿಹಿತವಲ್ಲ.

ಭರತಖಂಡದ ವೃತ್ತಾಂತಗಳು.

ಈಗಾಗಲೇ ಭರತಖಂಡ ಸರ್ಕಾರದವರು ಆಸ್ಟ್ರೇಲಿಯಾದಿಂದ ೬೦ ಸಾವಿರ ಟನ್ ಗೋದುವೆಯನ್ನು ಈ ದೇಶಕ್ಕೆ ತರಿಸಿದ್ದಾರೆ. ಇನ್ನು ೧ ತಿಂಗಳೊಳಗಾಗಿ ಇನ್ನು ೧ ಲಕ್ಷದ ೧೦ ಸಾವಿರ ಟನ್ ಗೋದುವೆಯು ಬರುವುದರಲ್ಲಿದೆ.

ಧಾರ್ವಾಡದ ಗದ್ದಲದಲ್ಲಿ ಶಿಕ್ಷಿತರಾದ ೨೩ ಮಂದಿಗಳು ಮಾಡಿಕೊಂಡಿದ್ದ ಪ್ರಾರ್ಥನೆಗೆ ಅವರುಗಳು ಅಪ್ಪೀಲನ್ನು ಮಾಡಿಕೊಳ್ಳಬಹುದೆಂದು ಹೈಕೋರ್ಟು ಅಪ್ಪಣೆ ದೊರೆಯಿತು. ಆದರೆ ಅವರುಗಳನ್ನು ಹೊಣೆಯ ಮೇಲೆ ಬಿಡಲಾಗುವುದಿಲ್ಲವೆಂದು ಅಪ್ಪಣೆ ಕೊಟ್ಟಿರುವರು.

ಬೊಂಬಾಯಿ ಪ್ರಭುತ್ವದವರು ಮದ್ಯಪಾನವನ್ನು ಮಿತಗೊಳಿಸಲಿಕ್ಕಾಗಿ ಕೆಲ ನವೀನ ನಿಬಂಧನೆಗಳನ್ನು ಮಾಡಿದ್ದಾರೆ. ಏನೆಂದರೆ—ಹೆಂಡವನ್ನು ಸಾರಾಯಿ ಅಂಗಡಿಗಳಲ್ಲಿ ಮಾತ್ರವೇ ಇಟ್ಟು ಮಾರಬೇಕು. ಗ್ರಾಮಾಂತರಗಳಲ್ಲಿ ಒಬ್ಬನಿಗೆ ೩ ಸೀಸೆಗಳ ವರೆಗೆ ಹೆಂಡವನ್ನು ಮಾರಬಹುದು. ಅದಕ್ಕೆ ಮೀರಿ ಕೊಡಕೂಡದು. ಮ್ಯುನಿಸಿಪಾಲಿಟಿಗಳಿರುವ ಪಟ್ಟಣಗಳಲ್ಲಿ ಒಬ್ಬನಿಗೆ ಒಂದು ಸೀಸೆಗಿಂತ ಹೆಚ್ಚಾಗಿ ಮಾರಕೂಡದು.

ಸರ್ಕಾರದ ಪೆನ್ಷನ್ ಉದ್ಯೋಗಿಗಳು ಮತ್ತು ಪಟೇಲ್ ಶ್ಯಾನುಭೋಗರು ಮುನ್ಷಿಗಳು ಮೊದಲಾದ ಉದ್ಯೋಗಸ್ಥರು ಅಸಹಕಾರ ಚಳವಳದಲ್ಲಿ ಸೇರಿದರೆ ಅವರಿಗೆ ಸರ್ಕಾರದವರು ಮಾಡುವುದೇನು ? ಎಂದು ಮದ್ರಾಸು ನಿಯಮನಿರ್ಮಾಣಸಭೆಯಲ್ಲಿ ಒಬ್ಬ ಸಭಿಕರು ಪ್ರಶ್ನೆಮಾಡಲು, ಅಂಥವರ ಪೆನ್ಷನ್ನುಗಳನ್ನು ತಪ್ಪಿಸಿಬಿಡುವ ಮತ್ತು ಉದ್ಯೋಗದಿಂದ ತೆಗೆದುಬಿಡುವ ಕೆಲಸವನ್ನು ಮಾಡುತ್ತೇವೆಂದು ಸರ್ಕಾರದ ಉತ್ತರವು ದೊರೆದಿರುವುದು.

ಕನ್ನಾನೂರು ಸೆಂಟ್ರಲ್ ಜೈಲಿನಲ್ಲಿಡಲ್ಪಟ್ಟಿದ್ದ ಮಾಪಿಳ್ಳೆಗಳು ಕಳೆದ ತಾ|| ೪ ರಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಓಡಿಹೋಗಬೇಕೆಂದು ಯತ್ನಿಸಿ ಕಿಟಕಿಕದಗಳನ್ನು ಮುರಿದರು. ಸಾಮಾನುಗಳ ಮನೆಗಳಿಗೆ ನುಗ್ಗಿ ಅವನ್ನೆಲ್ಲಾ ದೋಚಿಕೊಳ್ಳಬೇಕೆಂದು ಯತ್ನಿಸಿದರು. ಮತ್ತು ಕಾವಲಿನವರಮೇಲೆ ಬಿದ್ದು ಹೊಡೆಯುವುದಕ್ಕುಪಕ್ರಮಿಸಿದರು. ಆಗ ಜೈಲ್ ಸೂಪರಿಂಟೆಂಡೆಂಟರು ತುಪಾಕಿಗಳನ್ನು ಹಾರಿಸಲಿಕ್ಕೆ ಅಪ್ಪಣೆಮಾಡಲಾಗಿ ಅದರ ಏಟಿನಿಂದ ೯ ಮಂದಿ ಮಾಪಿಳ್ಳೆಗಳು ಸತ್ತರು. ೧೨ ಮಂದಿಗೆ ಗಾಯವಾಯಿತು. ಕೂಡಲೇ ರಿಜರ್ವ್ ಪೊಲೀಸರೂ ಸೈನಿಕರೂ ಕಾರಾಗೃಹಕ್ಕೆ ಹೋಗಿ ಎಲ್ಲವನ್ನೂ ಶಾಂತಿಪಡಿಸಿದರು.

ವೈಸ್ರಾಯರಿಗೆ ಕಲಕತ್ತಾದಲ್ಲಿ ಬರದ್ವಾನ್ ಮಹಾರಾಜರು ಒಂದು ಔತಣವನ್ನು ಮಾಡಿಸಿದರು. ಆಗ ವೈಸ್ರಾಯರು ಮಾಡಿದ ಭಾಷಣದೊಳಗೆ—ಯುವರಾಜರು ಕಲಕತ್ತಾಕ್ಕೆ ದಯಮಾಡಿಸಿದಾಗ್ಗೆ ಅಸಹಾಯವಾದಿಗಳು ಅವರ ಸ್ವಾಗತಕ್ಕೆ ಸೇರದಿದ್ದರೆ ಹಾಗಿರಲಿ; ಅವರ ಸ್ವಾಗತಸಮಾರಂಭಗಳಿಗೆ ಭಂಗಪಡಿಸುವ ಪ್ರಯತ್ನದಿಂದ ಅವರಿಗೆ ಯಾವಲಾಭವೂ ಆಗುವಂತಿಲ್ಲ. ಈ ದೇಶಕ್ಕೆ ಪಾರ್ಲಿಮೆಂಟಿನವರು ಸ್ವರಾಜ್ಯವನ್ನು ಅನುಗ್ರಹಿಸಬೇಕು, ಹಾಗಿಲ್ಲದಿದ್ದರೆ ಕತ್ತಿಹಿಡಿದು ಯುದ್ಧಮಾಡಿಯಾದರೂ ಇವರು ಸ್ವರಾಜ್ಯವನ್ನು ಸಂಪಾದಿಸಬೇಕು. ಹೀಗಿರುವ ಪರಿಸ್ಥಿತಿಯಲ್ಲಿ ಪ್ರಜೆಗಳು ಸ್ವರಾಜ್ಯವನ್ನು ಪಡೆಯಲು ಅರ್ಹರಾಗಿದ್ದಾರೆ ಎಂದು ಪ್ರಕಟಿಸುವುದಕ್ಕೆ ಇದು ಉತ್ತಮಸಮಯವಾಗಿದೆಯೆಂದು ನಾನು ತಿಳಿಯುತ್ತೇನೆ ಎಂದು ಹೇಳಿದರು.

ಈ ತಿಂಗಳಲ್ಲಿ ವಿಶಾಖಪಟ್ಟಣದೊಳಗೆ ಕೂಡಲಿಕ್ಕಿರುವ ೧೧ನೆ ವೈಶ್ಯಮಹಾಸಭೆಯವರು ಈ ಕೆಳಗೆ ಕಂಡ ವಿಷಯಗಳಲ್ಲಿ ನಿರ್ಧಾರಗಳನ್ನು ಮಾಡುವವರಾಗಿದ್ದಾರೆ. ವೈಶ್ಯರೆಲ್ಲಾ ವೇದೋಕ್ತಸಂಸ್ಕಾರಗಳನ್ನು ಮಾಡಿಸಿಕೊಳ್ಳುವುದು, ೧೨ ವರ್ಷ ತುಂಬುವುದರೊಳಗೆ ಗಂಡುಮಕ್ಕಳಿಗೆಲ್ಲಾ ಉಪನಯನ ಮಾಡುವುದು, ವೇದಾಧ್ಯಯನವನ್ನು ಮಾಡುವುದು, ರಜಸ್ವಲಾನಂತರ ವಿವಾಹವನ್ನಾಚರಿಸುವುದು, ರಜಸ್ವಲೆಯಾಗುವುದಕ್ಕೆ ಮುಂಚೆ ವಿಧವೆಯಾದ ಹೆಣ್ಣಿಗೆ ಪುನರ್ವಿವಾಹ ಮಾಡುವುದು, ಅಸ್ಪೃಶ್ಯತ್ವವನ್ನು ತೊಲಗಿಸುವುದು, ಕುಡಿಕತನವನ್ನು ನಿವರ್ತಿಸುವುದು, ಗೋರಕ್ಷಣ ಸಭೆಗಳನ್ನು ಸ್ಥಾಪಿಸುವುದು, ವರ್ತಕಸಂಘ ಸಹಕಾರದ ಬ್ಯಾಂಕು—ಇವುಗಳನ್ನು ಸ್ಥಾಪಿಸುವುದು, ರಾಟೆಗಳಿಂದ ನೂಲನ್ನು ನೆಯ್ಯುವುದು, ಬಾಲಿಕೆಯರಲ್ಲಿ ವಿದ್ಯಾಪ್ರಸಾರವನ್ನು ಹೆಚ್ಚಿಸುವುದು, ವಿವಾಹಾದಿ ಸಮಯಗಳಲ್ಲಿ ಸೂಳೆಯರ ಮೇಳಗಳನ್ನು ತಪ್ಪಿಸುವುದು, ವಿಶಾಖಪಟ್ಟಣದಲ್ಲಿ "ಆರ್ಯವೈಶ್ಯ" ಎಂಬ ಪತ್ರಿಕೆಯನ್ನು ಮರಳಿ ಹೊರಡಿಸುವುದು.

ಹಿಮಾಲಯದಿಂದ ಆಚೆಗೆ ಇರುವ ತಿಬೆಟ್‌ದೇಶಕ್ಕೆ ಹೋಗಿಬಂದಿರುವ ಫ್ರೆಡರಿಕ್ ಡಬ್ಲ್ಯು ಥಾಮಸ್‌ರವರು ಅಲ್ಲಿಯ ಕೆಲವು ವಿಷಯಗಳನ್ನು ತಿಳಿಯಿಸಿರುತ್ತಾರೆ. ಏನೆಂದರೆ—"ತಿಬೆಟ್ಟಿನಲ್ಲಿರುವ ಸ್ತ್ರೀಯರು ೧೦ ಮಂದಿ ಗಂಡಂದಿರನ್ನು ಬೇಕಾದರೂ ಮದುವೆಮಾಡಿಕೊಳ್ಳುವರು. ಒಂದು ಕುಟುಂಬದಲ್ಲಿ ಒಬ್ಬನನ್ನು ಮದುವೆಯಾದರೆ ಅವನ ಸಹೋದರರು ಎಷ್ಟುಮಂದಿಗಳಿದ್ದರೂ ಅಷ್ಟುಮಂದಿಯನ್ನೂ ಆಕೆಯು ವಿವಾಹವಾಗಿಯೇ ತೀರಬೇಕು. ಎಲ್ಲರನ್ನೂ ಒಂದೇಸಲವಾಗಲೀ ಅಥವಾ ಬೇರೆಬೇರೆ ಕಾಲದಲ್ಲಾಗಲೀ ಮದುವೆಯಾಗಬಹುದು. ಕೆಲವು ದೊಡ್ಡಕುಟುಂಬಗಳಲ್ಲಿ ಇದಕ್ಕಾಗಿಯೇ ಸಹೋದರರೆಲ್ಲರೂ ಒಂದೇ ಕಾಲದಲ್ಲಿ ಮನೆಯಲ್ಲಿರುವುದಿಲ್ಲ. ಒಬ್ಬನು ಮನೆಯಲ್ಲಿದ್ದರೆ ಇತರರೆಲ್ಲಾ ಹೊರಕ್ಕೆಲ್ಲಾದರೂ ಹೋಗಿರುವರು. ಗಂಡಹೆಂಡಿರು ಸೇರಿ ವ್ಯವಸಾಯವನ್ನು ಮಾಡುವರು. ಹೊಲಗೆಲಸವನ್ನು ಮಾಡುವಾಗ್ಗೆ ಗೋದುವೆಯಿಂದ ಬಟ್ಟಿಯಿಳಿಸಿದ ಮದ್ಯವನ್ನು ಅರ್ಧಗಂಟೆಗೊಂದುಸಲ ಕುಡಿಯುತ್ತಿರುವರು. ಅವರ ಭಾಷೆಯು ಮಧ್ಯಕಾಲದಲ್ಲಿದ್ದ ಭಾರತೀಯರ ಭಾಷೆಯಂತಿರುವುದು. ಮತಬೋಧಕರು ತಮ್ಮ ಸೈನ್ಯಗಳ ಹತ್ತಿರ ತುಪಾಕಿಗಳನ್ನು ಕೊಟ್ಟಿರುವರು. ಅವರ ಕತ್ತಿಗಳನ್ನು ಅವರೇ ನಿರ್ಮಿಸಿಕೊಳ್ಳುವರು" ಇತ್ಯಾದಿ. ಈ ವಿವರವು ಪಾಂಡವರ ಸಂಪ್ರದಾಯವನ್ನು ಜ್ಞಪ್ತಿಗೆ ತರುತ್ತದೆ. ಅವರು ಕಡೆಯಲ್ಲಿ ಮಹಾಪ್ರಸ್ಥಾನವನ್ನು ಮಾಡಿದುದು ಹಿಮಾಲಯದ ಕಡೆಗೇ ಎಂದು ನಿರ್ಧರಿಸಿರುತ್ತಾರೆ. ನಕುಲ ಸಹದೇವಾದಿಗಳೆಲ್ಲರೂ ಒಬ್ಬರಾಗುತ್ತಲೂ ಒಬ್ಬರು ಪರಂಧಾಮವನ್ನೈದಿದ ಬಳಿಕ ಧರ್ಮರಾಯನೊಬ್ಬನೇ ಈ ತಿಬೆಟ್ಟಿಗೇ ಹೋಗಿ ಸೇರಿದನೆಂದು ಆಧುನಿಕ ಪರಿಶೋಧಕರು ನಿಶ್ಚಯಿಸಿರುತ್ತಾರೆ.

ವೈಸ್ರಾಯಿ ಲಾರ್ಡ್ ರೀಡಿಂಗ್‌ರವರು ಪತ್ನೀಸಮೇತರಾಗಿ ಕಳೆದ ವಾರದಲ್ಲಿ ಕಲ್ಕತ್ತಾ ಪಟ್ಟಣಕ್ಕೆ ದಯಮಾಡಿಸಿದ ಸಂದರ್ಭದೊಳಗೆ ಅಲ್ಲಿಯ ಮ್ಯುನ್ಸಿಪಾಲಿಟಿಯವರು ಒಂದು ಸನ್ಮಾನಪತ್ರವನ್ನೊಪ್ಪಿಸಿದರು. ಅದರಲ್ಲಿ ಕಂಡಿದ್ದ ಸ್ಥಳಿಕ ವಿಷಯಗಳಿಗೆಲ್ಲಾ ಸಮಯೋಚಿತವಾದ ಉತ್ತರಗಳನ್ನು ವೈಸ್ರಾಯರು ಕೊಟ್ಟ ಬಳಿಕ, ರಾಜಕೀಯ ವಿಷಯವಾಗಿಯೂ ಕೆಲವು ವಾಕ್ಯಗಳನ್ನು ಆಡಿದರು. ಅದೇನೆಂದರೆ—"ಭವಿಷ್ಯತ್ ಸ್ಥಿತಿಯು ಸುಖಕರವಾಗಿರುವುದೆಂದು ನನಗೆ ಧೈರ್ಯವಿದೆ. ನಾನು ವೈಸ್ರಾಯಿ ಪದವಿಯನ್ನಂಗೀಕರಿಸುವಾಗ್ಗೆ ಈ ದೇಶದಲ್ಲಿ ಅಶಾಂತಿಯು ಅಧಿಕವಾಗಿದೆಯೆಂಬುದನ್ನು ತಿಳಿದೇಇದ್ದೆ. ಕಷ್ಟತರವಾಗಿರುವ ಈ ಅಧಿಕಾರನಿರ್ವಾಹದಲ್ಲಿ ನೀವು ನನ್ನಮೇಲೆ ಇಟ್ಟಿರುವ ಭರವಸೆಯು ನನ್ನ ಧೈರ್ಯೋತ್ಸಾಹವನ್ನು ಬಲಪಡಿಸುತ್ತಿದೆ. ಈಗಣ ರಾಜಕೀಯ ವಿಷಯವನ್ನು ಕುರಿತು ರೋನಾಲ್ಡ್‌ಶೇ ಪ್ರಭು (ಬಂಗಾಳಾ ಗೌರ್ನರು) ಶಾಸನಸಭೆಯಲ್ಲಿ ಕೆಲಮಾತುಗಳನ್ನಾಡಿದ್ದಾರೆ. ಅವರ ವಿಷಯದಲ್ಲಿ ನನಗೆ ಸಂಪೂರ್ಣವಾದ ನಂಬುಗೆಯಿದೆ. ನಾನೂ ನನ್ನ ಪ್ರಭುತ್ವದವರೂ ಅವರಿಗೆ ಎಲ್ಲವಿಧದಲ್ಲೂ ಸಹಾಯಮಾಡಿ ಸಾನುಭೂತಿಯನ್ನು ತೋರಿಸುವೆವು. ರಾಷ್ಟ್ರದಲ್ಲಿ ಶಾಸನಸಂಬಂಧವಾಗಿ ಗೌರವವನ್ನೂ ಶಾಂತಿಸ್ಥಾಪನೆಯನ್ನೂ ಮಾಡುವುದರಲ್ಲಿ ಲಾರ್ಡ್ ರೋನಾಲ್ಡ್‌ಶೆಯವರು ತಕ್ಕ ಚರ್ಯೆಯನ್ನು ಕೈಕೊಳ್ಳುವರೆಂದು ನಂಬುತ್ತೇನೆ. ಅವಶ್ಯಕವಾದರೆ ಶಾಂತಿಸ್ಥಾಪನೆಗಾಗಿ ಇಂಡ್ಯಾ ಸರ್ಕಾರದವರು ತಕ್ಕ ಚರ್ಯೆಯನ್ನವಲಂಬಿಸಿ ಸಕಲ ವಿಧದಿಂದಲೂ ನಿಮಗೆ ಸಹಾಯಮಾಡುವರೆಂದು ನಿಮಗೆ ವಾಗ್ದಾನ ಮಾಡುತ್ತೇನೆ. ರಾಜಕೀಯ ವಿಷಯಗಳಿಗೂ ವಾಣಿಜ್ಯಕ್ಕೂ ಮುಖ್ಯರಂಗವಾಗಿರುವ ಕಲ್ಕತ್ತಾದಂಥ ಮುಖ್ಯಪಟ್ಟಣಗಳಲ್ಲಿ ಒಂದಾನೊಂದು ರಾಜಕೀಯ ಪಕ್ಷಕ್ಕೆ ಸೇರಿದವರು ಇತರರನ್ನು ಭಯಪಡಿಸಿ ನಿರ್ಬಂಧಗೊಳಿಸಿ ತಮ್ಮಂತೆ ಅವರೂ ನಡೆದುಕೊಳ್ಳಬೇಕೆಂದು ಬಲಾತ್ಕರಿಸುವುದನ್ನು ನೋಡಿಕೊಂಡು ಸುಮ್ಮನಿರಲಾಗುವುದಿಲ್ಲ. ಈ ವಿಷಯದಲ್ಲಿ ನನಗಿರುವ ಅಭಿಪ್ರಾಯವನ್ನು ಹಲವುಸಲ ಪ್ರಕಟಿಸಿದ್ದೇನೆ. ಕಲ್ಕತ್ತಾ ಪ್ರಜೆಗಳು ಸರ್ಕಾರದವರಿಗೆ ಸಹಾಯರಾಗಿದ್ದುಕೊಂಡು ಅವರಿಗೆ ಎಲ್ಲ ವಿಧದಿಂದಲೂ ಸಹಕರಿಸುವರೆಂದು ನಂಬುತ್ತೇನೆ" ಹೀಗೆ ಆಡಿರುವ ವೈಸ್ರಾಯರ ಮಾತುಗಳನ್ನು ನೋಡಿದರೆ ಈಗಣ ಅಸಹಾಯವಾದಿಗಳ ಚೋದನೆಯಿಂದ ದೇಶದಲ್ಲಿ ಉಂಟಾಗುವ ದೌರ್ಜನ್ಯಭಯದಿಂದ ಪ್ರಜೆಗಳನ್ನು ರಕ್ಷಿಸುವ ವಿಷಯದಲ್ಲಿ ಅವರು ಕಠಿನವಾದ ದಂಡೋಪಾಯ ಪ್ರಯೋಗಕ್ಕೆ ಸಂಪೂರ್ಣವಾಗಿ ಸಿದ್ಧರಾಗಿರುವರೆಂಬುದು ಮತ್ತೂಮತ್ತೂ ವ್ಯಕ್ತವಾಗುತ್ತಲಿದೆ. ಪ್ರಜೆಗಳು ಎಚ್ಚತ್ತು ಅಸಹಾಯವಾದಿಗಳ ಜತೆಗೆ ಸೇರದೆ ದೇಶಶಾಂತಿಯ ಕಡೆಗೆ ಗಮನವಿಟ್ಟು ನಡೆದುಕೊಂಡರೆ ವಿಪತ್ತು ತಪ್ಪುವುದು.

ವಿದೇಶದ ವೃತ್ತಾಂತಗಳು

ಮೇರಿಯುವರಾಣಿಯವರ ಮದುವೆಯು ಬರುವ ವರ್ಷದ ಫೆಬ್ರವರಿ ತಿಂಗಳಲ್ಲಿ ನಡೆಯುವುದರಲ್ಲಿದೆ.

ಆಸ್ಟ್ರಿಯಾದಲ್ಲಿ ಕ್ಷಾಮಬಾಧೆ ಹೆಚ್ಚುತ್ತಿದೆ. ವಿಯನ್ನಾ ಪಟ್ಟಣದಲ್ಲಿ ಪಾರ್ಲಿಮೆಂಟ್ ಭವನದ ಹೊರಗೆ ಕೂಲಿಕಾರಜನರು ಗುಂಪುಕೂಡಿ ಬಹಳ ಹಾವಳಿ ಮಾಡಿದರು. ಅದರಿಂದ ಬಹು ನಷ್ಟಸಂಭವಿಸಿತು. ಅಂಗಡಿಗಳೆಲ್ಲಾ ಸೂರೆಮಾಡಲ್ಪಟ್ಟುವು. ಸರ್ಕಾರದವರು ೪೦೦ ಮಂದಿಗಳನ್ನು ಸೆರೆಹಿಡಿದು ಇಟ್ಟಿರುವರು.

ರಷ್ಯಾದ ಕ್ಷಾಮಬಾಧೆ ವಿಪರೀತವಾಗಿ, ಉಪಶಮನವಾಗುವುದೆಂದಿಗೋ ಎನ್ನಿಸಿಬಿಟ್ಟಿದೆ. ಪುರುಷಪ್ರಯತ್ನದಲ್ಲಿ ಅದರ ಶಾಂತಿಯಾಗುವ ಲಕ್ಷಣವೇ ತೋರುವುದಿಲ್ಲ. ಬೋಲ್ಷೆವಿಕ್ ಉಪದ್ರವವು ದೈವಸಂಕಲ್ಪಕ್ಕೆ ವಿರುದ್ಧವಾಗಿದ್ದುದರಿಂದ ಇಂಥ ವಿಪತ್ತು ಅಲ್ಲಿಗೆ ತಟ್ಟಿತೆಂದು ಪ್ರಪಂಚವೆಲ್ಲಾ ಭಾವಿಸುವಂತಾಗಿದೆ. ಮನುಷ್ಯರು ಇರುವೆಗಳಂತೆ ಸತ್ತು ಬರಗುತ್ತಿದ್ದಾರೆ. ಕುದುರೆ ದನಕರುಗಳ ಹುಟ್ಟೆಲ್ಲಾ ನಿರ್ನಾಮವಾಗಿ ಹೋಗುವುದೇ ಸಿದ್ಧವೆಂದು ಊಹಿಸುತ್ತಿದ್ದಾರೆ.

ಐರ್ಲಂಡ್ ದೇಶದವರ ಸ್ವರಾಜ್ಯಕಾಂಕ್ಷೆಯು ಸಫಲವಾಯಿತು. ಐರ್ಲಂಡಿನ ಸಿನ್‌ಫೀನಿಯನ್ ಪ್ರತಿನಿಧಿಗಳಿಗೂ ಆಂಗ್ಲ ಪ್ರತಿನಿಧಿಗಳಿಗೂ ಸಮಾಧಾನವು ಕುದುರಿತು. ಇಂಗ್ಲೆಂಡಿನ ಪಕ್ಷದಿಂದ ಲಾಯಿಡ್ ಜಾರ್ಜ್, ಲಾರ್ಡ್ ಬರ್ಕನ್‌ಹೇಡ್, ಚೇಂಬರ್ಲೇನ್ ವಿನ್‌ಸ್ಟನ್ ಚರ್ಚಿಲ್ ಮುಂತಾದವರೂ, ಐರ್ಲಂಡಿನ ಪಕ್ಷದಿಂದ ಗ್ರಿಫಿಕ್, ಬಾರ್ಟನ್, ಕಾಲಿನ್ಸ್ ಮೊದಲಾದವರೂ ಪ್ರತಿನಿಧಿಗಳಾಗಿ ಕಳೆದ ಸೋಮವಾರ ಲಂಡನ್ ಪಟ್ಟಣದಲ್ಲಿ ಒಡಂಬಡಿಕೆಯ ಪತ್ರದಮೇಲೆ ಹಸ್ತಾಕ್ಷರಗಳನ್ನು ಹಾಕಿದರು. ಇದನ್ನು ಇಂಗ್ಲೀಷ್ ಪಾರ್ಲಿಮೆಂಟಿನವರೂ ಸಿನ್‌ಫೀನಿಯನ್ ಪಾರ್ಲಿಮೆಂಟಿನವರೂ ತಪ್ಪದೆ ಅಂಗೀಕರಿಸುವರೆಂದು ನಂಬಬಹುದಾಗಿದೆ. ಈ ತಿಂಗಳು ತಾ|| ೧೪ರಲ್ಲಿ ಈ ನಿಬಂಧನೆಯನ್ನು ಒಪ್ಪಲಿಕ್ಕಾಗಿ ಪಾರ್ಲಿಮೆಂಟು ಕೂಡುವುದಾಗಿದೆ. ಅದನ್ನು ಜಾರ್ಜ್ ಸಾರ್ವಭೌಮರೇ ಪ್ರಾರಂಭಿಸುವವರಾಗಿದ್ದಾರೆ.

ಗ್ರೀಕರು ಆಸ್ಯಾ ಮೈನರನ್ನು ಬಿಟ್ಟುಬಿಡುತ್ತಲಿದ್ದಾರೆ. ತುರ್ಕಿಗೂ ಗ್ರೀಕಿಗೂ ಸಂಧಿಯಾಗುವುದಕ್ಕೆ ಮುಂಚೆ ಗ್ರೀಕರು ಆಸ್ಯಾಮೈನರನ್ನು ಬಿಟ್ಟುಹೋಗುವುದು ಅವಶ್ಯಕವೆಂದು ಫ್ರೆಂಚರು ಹೇಳಿದ್ದಾರೆ. ಫ್ರೆಂಚರು ತುರ್ಕಿಯವರೊಡನೆ ಸಂಧಿಮಾಡಿಕೊಂಡಕಾರಣ ಅವರು ಹಿಡಿದುಕೊಂಡಿದ್ದ ಸೈಲೀಷಿಯಾ ಭಾಗದಿಂದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡರು. ತುರ್ಕಿಯ ಸೈನ್ಯವು ಅದನ್ನೆಲ್ಲಾ ಆಕ್ರಮಿಸಿಕೊಂಡಿತು. ಅಷ್ಟರೊಳಗೆ ಅಲ್ಲಿದ್ದ ೨೦ ಸಾವಿರ ಕ್ರೈಸ್ತ ಜನಗಳು ದೇಶವನ್ನು ಬಿಟ್ಟು ಓಡಿಹೋದರು. ಐಯೋನಿಯಾದ್ವೀಪದ ಹತ್ತಿರ ಹೋಗುತ್ತಿದ್ದ ಇಟಲಿಯವರ ಒಂದು ಹಡಗನ್ನು ಗ್ರೀಕರ ಕ್ರೂಯಿಜರು (ಯುದ್ಧದ ಹಡಗು) ಹಿಡಿದುಕೊಂಡಿತು. ಅದರಲ್ಲಿ ೯ ವಿಮಾನಗಳೂ ೨೫ ಲಕ್ಷ ಫಿರಂಗಿ ತುಪಾಕಿ ಗುಂಡುಗಳೂ ಇದ್ದುವಂತೆ. ಇವನ್ನೆಲ್ಲಾ ಅಂಗೋರಾ ತುರ್ಕಿಯವರಿಗೋಸ್ಕರ ಸಾಗಿಸುತ್ತಿದ್ದರಂತೆ. ಆ ಸಾಮಾನುಗಳ ಜತೆಗೆ ಅದೇ ಹಡಗಿನಲ್ಲಿದ್ದ ತುರ್ಕಿಯ ಮೇಜರೊಬ್ಬನನ್ನೂ ಸೆರೆಹಿಡಿದರು ಮದ್ದುಗುಂಡು ಮೊದಲಾದ ಸಾಮಾನುಗಳನ್ನೆಲ್ಲಾ ಇಳುಹಿಸಿ ಗ್ರೀಕರು ಸಾಗಿಸಿಕೊಂಡುಹೋದರು.

ಜರ್ಮನಿಯನ್ನು ನಿರಾಯುಧವನ್ನಾಗಿ ಮಾಡುವ ವಿಷಯದಲ್ಲಿ ನಿಯಮಿತವಾಗಿದ್ದ ಸಂಘಕ್ಕೆ ಜನರಲ್ ನೆಲ್ಲೆಟ್‌ರವರು ಅಧ್ಯಕ್ಷರಾಗಿದ್ದರು. ಇವರು ಜರ್ಮನ್ ದೇಶದಲ್ಲೆಲ್ಲಾ ೧|| ವರ್ಷಕಾಲ ಸಂಚರಿಸಿ ಈಗತಾನೇ ಪ್ಯಾರಿಸಿಗೆ ಬಂದರು. ಅವರು ಅಲ್ಲಿಯ ಸ್ಥಿತಿಗತಿಯನ್ನು ಕುರಿತು ಹೇಳಿರುವುದೇನೆಂದರೆ—ಜರ್ಮನಿ ದೇಶದಲ್ಲಿ ಎಲ್ಲೆಲ್ಲಿ ಆಯುಧಗಳಿವೆಯೆಂದು ತೋರಿದ್ದಿತೋ ಅಲ್ಲಿಗೆಲ್ಲಾ ಹೋಗಿ ನಾವು ಪರಿಶೋಧಿಸಿದೆವು. ಈಗ ಜರ್ಮನಿಯು ಸಾಮಾನ್ಯವಾಗಿ ನಿರಾಯುಧವಾಗಿದೆಯೆಂತಲೇ ನಾನು ದೃಢವಾಗಿ ಹೇಳುತ್ತೇನೆ. ಆ ದೇಶದಲ್ಲಿ ದುರ್ಭೇದ್ಯಗಳಾಗಿದ್ದ ಕೋಟೆಗಳೆಲ್ಲಾ ಈಗ ಧ್ವಂಸಮಾಡಲ್ಪಟ್ಟಿವೆ. ಮಿತ್ರಮಂಡಲಿಗೆ ಅವರು ಇದುವರೆಗೆ ಈ ಕೆಳಗೆ ಕಂಡಂತೆ ಯುದ್ಧಸಾಮಗ್ರಿಗಳನ್ನು ಅರ್ಪಿಸಿಬಿಟ್ಟಿದ್ದಾರೆ ಇಲ್ಲವೆ ನಾಶಮಾಡಿಬಿಟ್ಟಿದ್ದಾರೆ. ವಿವರ—ಸೀಜ್ ಫಿರಂಗಿಗಳು ೪೦೦೦, ಸಾಧಾರಣ ಫಿರಂಗಿಗಳು ೩೨೮೦೦. ಮಿನೆನ್‌ವೆರ್ಫರ್‌ಗಳು ೧೧೦೦೦ ಮಿಷನ್ ಫಿರಂಗಿಗಳು ೮೪೦೦೦, ತುಪಾಕಿಗಳು ಮೊದಲಾದ ಸಣ್ಣ ಆಯುಧಗಳು ೪೨೦೦೦೦೦, ಫಿರಂಗಿಗುಂಡುಗಳು ೩೨೦೦೦೦೦೦, ಮದ್ದುಗುಂಡುಗಳನ್ನು ತುಂಬುವ ವಾಗಿನ್ನುಗಳು ೫೦೦೦೦, ಸೈನಿಕರನ್ನು ಸಾಗಿಸುವ ವಾಗಿನ್ನುಗಳು ೫೫೦೦೦, ಸೈನ್ಯದ ಅಡುಗೆಕೋಣೆಗಳು ೧೧೦೦೦, ಇದರಂತೆಯೇ ಇನ್ನೂ ಎಷ್ಟೋ ಉಪಕರಣಗಳು. ಇದೇ ಅಲ್ಲದೆ ಯುದ್ಧಮಾಡಲಿಕ್ಕೆ ಬೇಕಾದಷ್ಟು ಸೈನಿಕರು ಕೂಡ ಈಗ ಜರ್ಮನಿಯಲ್ಲಿಲ್ಲ. ದೇಶರಕ್ಷಣೆಗೆ ತಕ್ಕಷ್ಟುಮಾತ್ರ ಇದೆ ಎಂದು ಹೇಳಿರುತ್ತಾರೆ. ಇದನ್ನು ಕೇಳಿದಬಳಿಕ ಫ್ರೆಂಚರಿಗೆ ಜರ್ಮನರು ತಮ್ಮ ಮೇಲೆ ಹಗೆ ತೀರಿಸಿಕೊಳ್ಳಲಿಕ್ಕಿರುವರೆಂದು ಇದ್ದ ಭೀತಿಯೆಲ್ಲಾ ತೊಲಗಿಹೋಯಿತು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನು ತಿಳಿಸಬೇಕು.

ಚೀರನಹಳ್ಳಿ, ಗೌ|| ಎ. ಇ. ಸ್ಕೂಲ್.

ಕಳೆದ ತಾರೀಖು ೨೩-೧೦-೨೧ನೆ ಭಾನುವಾರದ ದಿವಸ ಈ ಸ್ಕೂಲ್ ಸ್ಟೂಡೆಂಟ್ಸ್ ಅಸೋಸಿಯೇಷನ್ (ಸಂಘವು) ಬುಕ್ಕಾಂಬುಧಿ ಸ್ಕೂಲ್ ಹೆ|| ಮಾ|| ಮ|| ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಸ್ಥಳ ಮತ್ತು ಪರಸ್ಥಳಗಳಿಂದ ಸುಮಾರು ನೂರಾರು ಜನಗಳು ಸಭೆಗೆ ಸೇರಿದ್ದರು. ಆಗ ಸ್ಕೂಲ್ ವಿದ್ಯಾರ್ಥಿಗಳಿಂದ "ಗಂಗಾಪರಿಣಯ" ವೆಂಬ ನಾಟಕವು ಮನೋಹರವಾಗಿ ಅಭಿನಯಿಸಲ್ಪಟ್ಟಿತು. ಅಲ್ಲದೆ ನೀತಿಯುಕ್ತವಾದ ಉಪನ್ಯಾಸಗಳೂ ಜರುಗಿದವು. ನಮ್ಮ ಹೆ|| ಮಾ|| ಮ|| ಯನ್. ಕರಿಬಸಪ್ಪನವರ ಕೋರಿಕೆಯಂತೆ ರೀಡಿಂಗ್‌ರೂಮನ್ನು ಸ್ಥಾಪಿಸಲು ಈ ಸಂಘದ ಪೋಷಕರಾದ ಕೆಲವು ಮಹನೀಯರು ಚಂದಾಕೊಡಿಸಲು ವಾಗ್ದಾನ ಮಾಡಿ ಕೆಲವು ವೃತ್ತಪತ್ರಿಕೆಗಳಿಗೆ ಬರೆಯಿಸಿದರು. ಈ ರೀತಿ ವಿದ್ಯಾರ್ಥಿಗಳಾದ ನಮಗೂ ಗ್ರಾಮವಾಸಿಗಳಾದ ಜನರಿಗೂ ತುಂಬಾ ಪ್ರಯೋಜನಕಾರಿಯಾದ ಈ ಕಾರ್ಯವನ್ನು ನಡೆಯಿಸಲು ಬದ್ಧಕಂಕಣರಾಗಿರುವ ನಮ್ಮ ಹೆ|| ಮಾ|| ರವರಿಗೂ ಸಂಘಪೋಷಕರಾಗಿರುವ ಪ್ರಮುಖರಿಗೂ ನಾವು ತುಂಬಾ ಕೃತಜ್ಞರಾಗಿ ವಂದಿಸುತ್ತೇವೆ.

ಡಿ. ಕೆಂಚಪ್ಪ ವಿದ್ಯಾರ್ಥಿ.

ಗದಗ.

ಇಲ್ಲಿ ತಾ|| ೧೭-೧೧-೨೧ ರ ದಿವಸ ಅಸಹಕಾರಿ ಜನರು ಜುಲುಮೆಯಿಂದ ಕೆಲವು ಅಂಗಡಿಗಳನ್ನು ಬಂದುಮಾಡಿಸಿದ್ದರು. ಆದರೆ ಮ|| ಮುಡಿಯಪ್ಪ ಬಳ್ಳಳ್ಳಿಯೆಂಬುವರು "ರಾಜನಿಷ್ಠೆಯನ್ನು" ತೋರಿಸುವದು ಪೂರ್ವದಿಂದ ಬಂದದ್ದರಿಂದ ನಾವು ಯಾವತ್ತರೂ ಈ "ಯುವರಾಜರ ಅಪೂರ್ವ ಆಗಮನದಲ್ಲಿ" ತಮ್ಮತಮ್ಮ ಅಂಗಡಿ ಮನೆಗಳನ್ನು ತಳಿರುತೋರಣಗಳಿಂದ ಅಲಂಕರಿಸುವದಲ್ಲದೆ ದೀಪೋತ್ಸವಮಾಡಬೇಕೆಂದು ವಿನಂತಿ ಮಾಡಿಕೊಂಡ ಹಸ್ತಪತ್ರವನ್ನು ಹಂಚಿದಕೂಡಲೇ ಸೂರ್ಯನನ್ನು ಕಂಡ ಕತ್ತಲು ತಾನೇ ಓಡುವಂತೆ ಯಾವತ್ತೂ ಅಂಗಡಿಗಳನ್ನು ತೆರೆದು ಆನಂದದಿಂದ ತಳಿರುತೋರಣಗಳನ್ನು ಅಂಗಡಿ ಬೀದಿಗಳಲ್ಲಿ ಕಟ್ಟಿ ಅಲಂಕರಿಸಿದರು. ಮತ್ತು ಸಂಜೆಯ ೭ ಗಂಟೆಗೆ ಸರಿಯಾಗಿ ಎಲ್ಲಾ ಅಂಗಡಿಗಳ ಮುಂದೆ ಮೇಲಿಸಹ ದೀಪೋತ್ಸವವನ್ನು ಮಾಡಿದರು. ಗ್ರೇನ್ ಮಾರ್ಕೆಟ್ಟನಲ್ಲಿ ಶ್ರೀ ಮಹಾಕಾಳೀದೇವಿಗೆ ಹಂದರವ ಹಾಕಿ ಬಾಳೇಕಂಬ ತಳಿರುಗಳಿಂದ ಅಲಂಕರಿಸಿ ಎಣಿಸಲಾರದಷ್ಟು ದೀಪೋತ್ಸವವನ್ನು ಮಾಡಿ ಅರಸರಿಗೆ ಜಯವಾಗಲೆಂದರು. ೮ ಗಂಟೆಗೆ ನಮ್ಮ ಅರಸರ ವ ಮೇರಿಯವರ ಪ್ರತಿಮೆಯನ್ನು ಶ್ರೀಗಳ ಬಗ್ಗಿಯೊಳಗೆ ಇಟ್ಟು ಬ್ಯಾಂಡು ಕಹಳೆ ಮೊದಲಾದ ವಾದ್ಯಗಳಿಂದಲೂ ಜಯಜಯಯೆಂಬುವ ಶಬ್ದದಿಂದಲೂ ಊರೆಲ್ಲಾ ೧೦ ಗಂಟೆಯವರೆಗೆ ಮೆರಿಸಿದರು. ನಂತರ ಯಾವತ್ತರೂ ನಮ್ಮ ಪಂಚಮ ಜಾರ್ಜರಿಗೆ ಜಯಗಳನ್ನು ಯಾವಾಗಲೂ ಕೊಡಲೆಂದು ದೇವರನ್ನು ಪ್ರಾರ್ಥಿಸಿ ತಮ್ಮತಮ್ಮ ಮನೆಗೆ ಹೋದರು.

ಪ್ರತ್ಯಕ್ಷದರ್ಶಿ.

ಮೆ|| ಕೆ. ಸಿದ್ಧರಾಮಪ್ಪ, ಬಿ. ಎ., ಯವರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟು.

ಇವರು ಈಗ ಚನ್ನಪಟ್ಟಣದ ಅಮಲ್ದಾರರಾಗಿರುವುದು ಆ ತಾಲ್ಲೂಕಿನ ಪ್ರಜೆಗಳ ಭಾಗ್ಯೋದಯವೆಂದು ಹೇಳಲು ನವಂಬರ್ ತಾ|| ೨೭ನೇ ತಮ್ಮ ಪತ್ರಿಕೆಯಲ್ಲಿ ಆ ತಾಲ್ಲೂಕಿನ ಒಬ್ಬ ರೈತನಿಂದ ಅವರ ಗುಣಕಥನ ಮಾಡಿರುವುದನ್ನು ಪುಷ್ಟೀಕರಿಸಿ ಈ ಡಿಶಂಬರ್ ೪ರಲ್ಲಿ ಆಯನೂರು ನಿವಾಸಿಗಳು ಪ್ರಚುರಪಡಿಸಿರುವುದೇ ದೃಷ್ಟಾಂತವಾಗಿದೆ. ಈ ಮಹನೀಯರು ಈ ಡಿಸ್ಟ್ರಿಕ್ಟಿನಲ್ಲಿ ಎಕನಾಮಿಕ್ ಸೂಪರಿಂಟೆಂಡೆಂಟರಾಗಿಯೂ, ನಂತರ ಡಿಸ್ಟ್ರಿಕ್ಟ್‌ಬೋರ್ಡು ಸೆಕ್ರೆಟರಿಯಾಗಿಯೂ ಇದ್ದುಕೊಂಡು ಅವರ ನಿಯಮಿತ ಕೆಲಸಗಳನ್ನು ನಿಸ್ಪೃಹತೆ ಮತ್ತು ನಿಷ್ಪಕ್ಷಪಾತತೆಯಿಂದ ಪ್ರಜಾನುರಾಗಿಗಳಾಗಿ ದಕ್ಷತೆಯಿಂದ ನಿರ್ವಹಿಸಿದ್ದಾರೆಂಬುದು ಈ ಡಿಸ್ಟ್ರಿಕ್ಟಿನಲ್ಲಿನ ಸ್ಟೂಡೆಂಟ್ಸ್‌ಹೋಂಗಳು, ಅವುಗಳ ದ್ರವ್ಯರಾಶಿಗಳು ಪ್ರದರ್ಶನೀಯವಾಗಿವೆ. ಮತ್ತು ಇವರನ್ನು ಈ ಡಿಸ್ಟ್ರಿಕ್ಟ್‌ಬೋರ್ಡಿನ ಸೆಕ್ರೆಟರಿಗಳಾಗಿ ಇನ್ನು ಕೆಲವುಕಾಲ ಇಟ್ಟುಕೊಡಬೇಕೆಂತಲೂ, ಇವರ ತಲಬನ್ನು ತಾವರ್ಧಭರಿಸುತ್ತೇವೆಂತಲೂ ಡಿಸ್ಟ್ರಿಕ್ಟುಬೋರ್ಡು ಮೆಂಬರುಗಳು ಏಕಾಭಿಪ್ರಾಯಪಟ್ಟು ತಮ್ಮನುಮೋದನ ಕೊಟ್ಟಿದ್ದರೂ, ಏನುಕಾರಣವೋ ಪ್ರೊಸೀಡಿಂಗ್ಸ್ ತಪ್ಪಾಗಿ ಬರೆದುಹೋದದ್ದರ ಮೇಲೆ ಇವರು ಸಕಲೇಶಪುರಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆಂಬುದು ಈಚೆಗೆ ಪ್ರಜೆಗಳಿಗೆ ಗೊತ್ತಾಗಿ ತಮ್ಮಗಳ ದೌರ್ಭಾಗ್ಯವೆಂದು ಈ ಡಿಸ್ಟ್ರಿಕ್ಟಿನ ಪ್ರಜೆಗಳು ವಿಷಾದಪಡುತ್ತಿದ್ದಾರೆ. ಮತ್ತು ಕಾಲವಶಾತ್ ಈ ಮಹನೀಯರು ಈ ಡಿಸ್ಟ್ರಿಕ್ಟಿಗೆ ಪುನಃ ವರ್ಗಾಯಿಸಲ್ಪಟ್ಟಾರೇ ಎಂದು ಹಂಬಲಿಸುತ್ತಿದ್ದಾರಲ್ಲದೆ ಈ ಮಹಾಶಯರಿಗೆ ದೇವರು ದೀರ್ಘಾಯುರಾರೋಗ್ಯಭಾಗ್ಯಗಳನ್ನೂ ಅವರ ಯೋಗ್ಯತೆಗೆ ತಕ್ಕ ಅಧಿಕಾರವನ್ನೂ ದಯಪಾಲಿಸಲಿ ಎಂದು ಪ್ರಾರ್ಥನೆಯಾಗಿದೆ.

ಪ್ರಜಾಸೇವಕ.

ಮೈಸೂರು ಮ್ಯುನ್ಸಿಪಾಲಿಟಿ, ಮತ್ತು ಮಾರ್ಕೆಟ್ಟು.

ಸ್ವಾಮಿ,

ಊರಿನ ಕಚರಾವನ್ನೆಲ್ಲಾ ಮುನ್ಸಿಪಾಲಿಟಿಗಳು ಪಾಕ್‌ಮಾಡಿಸುತ್ತವೆ. ಮುನ್ಸಿಪಾಲಿಟಿಯ ಕಚರಾವನ್ನು ಪಾಕ್‌ಮಾಡಿಸುವವರು ಯಾರು? ಅದಕ್ಕೆ ನ್ಯೂಸ್‌ಪೇಪರುಗಳೇ ಅರ್ಹವಾದವುಗಳೆಂದು ನನಗೆ ತೋರುತ್ತದೆ. ನಮ್ಮ ಸಿಟಿಯ ಮಾರಕಟ್ಟಿನ ಹಿಂಸೆಗಳನ್ನೂ ಅನರ್ಥವನ್ನೂ ಕುರಿತು ನಾವುಗಳು ಎಷ್ಟೋ ಅರ್ಜಿಗಳನ್ನು ಬರೆದುಕೊಂಡದ್ದಾಯಿತು. ನಮ್ಮ ಮ್ಯುನ್ಸಿಪಲ್ ಕೌನ್ಸಿಲರುಗಳಿಗೆ ಮೊಕ್ತಾ ಪ್ರಾರ್ಥಿಸಿಕೊಂಡದ್ದೂ ಆಯಿತು, ವರ್ಷಗಟ್ಟಲೆ ಹೀಗೆ ಪೇಚಾಡಿದ್ದಕ್ಕೆ ಮೀಟಿಂಗಿನಲ್ಲಿ ಚರ್ಚೆ ಆಗಿ, ಹಾಲಿ ಮಾರ್ಕೆಟ್ಟಿನಲ್ಲಿರುವ ಇಸಮ್ಮುಗಳನ್ನು ವರ್ಗಾಯಿಸಿ ಒಳ್ಳೆಯವರನ್ನು ತರಬೇಕೆಂದು ತೀರ್ಮಾನವಾಗಿರುವದಾಗಿ ವರ್ತಮಾನಕೇಳಿದ್ದಾಯಿತೇ ಹೊರತು ಇದುವರೆವಿಗೂ ಕಾರ್ಯವೇನೂ ಆದದ್ದಿಲ್ಲ. ಮ್ಯುನ್ಸಿಪಲ್ ಕೌನ್ಸಿಲರುಗಳು ನಮ್ಮ ಕಷ್ಟಸುಖಗಳಿಗೆ ತಗಲಾಗಿರುವರೆಂದು ನಂಬಿ ನಾವು ಅವರುಗಳಿಗೆ ಓಟುಕೊಟ್ಟು ನಮ್ಮ ಪ್ರತಿನಿಧಿಗಳನ್ನಾಗಿ ಕೌನ್ಸಿಲ್ಲಿಗೆ ಮೆಂಬರುಮಾಡಿಸಿದ್ದಕ್ಕೆ ಅವರುಗಳಿಂದ ನಮಗೆ ಆಗುವ ಹಿತವು ಹೀಗಿದೆ. ಶ್ರದ್ಧೆಯಿಂದ ಕೆಲಸಮಾಡಲಿಕ್ಕೆ ಅವರಿಗೆ ಮನಸ್ಸಿಲ್ಲವೋ ಅಥವಾ ಅವರ ಪುಂಸ್ತ್ವವೇ ಅಷ್ಟೋ ನಮಗೆ ತಿಳಿಯದು. ತಾವು ಕೌನ್ಸಿಲಿನಲ್ಲಿ ತೀರ್ಮಾನಮಾಡಿದಂತೆ ಜಾರಿಗೆ ತರಿಸಲು ಕೈಯಲ್ಲಾಗದಿದ್ದರೆ ಅಂಥ ಕೆಲಸದಲ್ಲಿ ಇವರು ಇರುವದಕ್ಕಿಂತಲೂ ರಾಜೀನಾಮೆಕೊಟ್ಟು ಕುಳಿತುಕೊಳ್ಳುವದು ಇವರಿಗೆ ಗೌರವವಲ್ಲವೆ ? ಈ ಸಾಮಾನ್ಯವಿಷಯದ ಪಾಡೇ ಹೀಗಾದಮೇಲೆ ಇನ್ನು ನಮ್ಮ ಟೌನ್ ನಿವಾಸಿಗಳಮೇಲೆಲ್ಲಾ ಹೊಸದಾಗಿ ಹಾಕಬೇಕೆಂದು ಯೋಚಿಸುತ್ತಿರುವ ಪ್ರೊಫೆಷನಲ್ ಟ್ಯಾಕ್ಸ್ (ಉದ್ಯೋಗಪತಿಕೆಗೆ) ಯನ್ನು ತಪ್ಪಿಸಿ ಪುರನಿವಾಸಿಗಳನ್ನು ಕಾಪಾಡುವ ಶಕ್ತಿಯು ಇವರಿಗಿದ್ದೀತೊ ? ನಮ್ಮ ಮ್ಯುನ್ಸಿಪಾಲಿಟಿಯೂ ಅದರಲ್ಲಿ ಆಗತಕ್ಕ ಖರ್ಚೂ ಪ್ರಜೆಗಳಹಿತಕ್ಕಾಗಿ ಇದ್ದಂತೆ ಭಾವಿಸುವದು ಕಷ್ಟವಾಗಿದೆ.

ಒಬ್ಬ ವರ್ತಕ.

ಧರ್ಮಸಾಗರ.

ನಮ್ಮ ಮೈಸೂರು ದೇಶದಲ್ಲಿಯೂ, ಇತರ ರಾಷ್ಟ್ರಗಳಲ್ಲಿಯೂ ಸಹ ಬ್ರಾಹ್ಮಣರು ಬ್ರಾಹ್ಮಣೇತರರು ಎಂಬ ಚಳವಳಿಯು ಹುಟ್ಟಿ ವೃದ್ಧಿಯನ್ನು ಹೊಂದುತ್ತಿರುವದು. ಹಿಂದುಳಿದ ನಮ್ಮ ಮಿತ್ರಮಂಡಲಿಯವರು ಈಗತಾನೇ ಕಣ್ದೆರೆದು ಮುಂದುವರಿಯುವದಕ್ಕೆ ಮನಸ್ಸನ್ನು ಓಡಿಸಿ ತಮ್ಮ ಸಮೂಹದ ಏಳ್ಗೆಗೆ ಬೇಕಾಗುವ ಕಾರ್ಯಗಳಿಗೆಲ್ಲಾ ಟೊಂಕಾ ಕಟ್ಟಿನಿಂತು ತನು, ಮನ, ಧನಗಳನ್ನು ಸಹ ಅರ್ಪಿಸಿ ಕಷ್ಟಪಟ್ಟು ಕೆಲಸ ಮಾಡುತ್ತಿರು

ವದನ್ನು ಮೈಸೂರ್ ಸ್ಟಾರ್ ಮುಂತಾದ ಪತ್ರಿಕೆಗಳನ್ನು ಓದಿ ತಿಳಿದುಕೊಂಡಿರಬಹುದು ಇಲ್ಲವೇ ಕೇಳಿರಬಹುದು. ಆದುದರಿಂದ ಬ್ರಾಹ್ಮಣೇತರರಾದ ನಾವುಗಳು ಆ ಮಹನೀಯರ ಮೇಲ್ಪಂಕ್ತಿಯನ್ನೇ ಅನುಸರಿಸಿ ಹಾಲಿ ಈ ನಮ್ಮ ಗ್ರಾಮದಲ್ಲಿ ಇದೇ ಡಿಶಂಬರ್ ಮಾಹೆ ಅಖೈರಿನೊಳಗೆ ಯೂನಿಯನ್ ಮೆಂಬರುಗಳು ಮತ್ತು ಚೇರ್ಮನ್ ಕೆಲಸದ ಚುನಾವಣೆಯು ನಡೆಯುವದಾಗಿದೆ. ಇದು ನಮ್ಮಗಳ ಪುರೋಭಿವೃದ್ಧಿಗೆ ಸುಸಮಯವಾಗಿದೆ. ಈ ಕಾಲವನ್ನು ನಾವು ಕಳೆದುಕೊಂಡರೆ ಎಣ್ಣೆ ಬಂದ ಕಾಲದಲ್ಲಿ ಕಣ್ಣುಮುಚ್ಚಿಕೊಂಡು ನಷ್ಟ ಹೊಂದಿದಂತಾಗುತ್ತದೆ. ನಮಗೂ ನಮ್ಮನ್ನು ಹೊಂದಿದವರಿಗೂ ಸುಖವುಂಟಾಗಬೇಕಾದರೆ ತಮ್ಮ ಸುಖವೇ ಲೋಕಸುಖವೆನ್ನುವದನ್ನು ಮರೆತು ಲೋಕಸುಖವೇ ತಮ್ಮ ಸುಖವೆಂದರಿತು ನಾವು ಕಷ್ಟಪಟ್ಟು ಸಂಪಾದಿಸಿದ ಧನವನ್ನು ಸದ್ವಿನಿಯೋಗಪಡಿಸುವ ರೀತಿಯನ್ನು ತಿಳಿಯಬೇಕಾದರೆ ಈ ಕಾರ್ಯದಲ್ಲಿ ನಾವುಗಳು ಮುಂದಾಳುಗಳಾಗಿ ನಿಂತು ಕೆಲಸಮಾಡಬೇಕು. ತಮಗೆ ಕೇವಲ ಹಿತಚಿಂತಕರೆಂದು ಬಹಿರಂಗದಲ್ಲಿ ನಟಿಸಿ ತಮ್ಮ ಕಾರ್ಯಸಾಧನೆಮಾಡಿಕೊಳ್ಳುವ ವಿಚಿತ್ರರ ಮಾಯಾಜಾಲಕ್ಕೆ ಸಿಲ್ಕಿ ಇದುವರೆಗೂ ಕಷ್ಟಪಟ್ಟದ್ದಾಯ್ತು. ಇದು ನಮ್ಮ ದುರ್ದೈವವೇ ಸರಿ. ಪರಿಕಿಸಿದ ಸರ್ಪದಂತೆ ಈಗ ಎಚ್ಚರದಿಂದ ತಾವು ಮುಂದುವರಿಯಬೇಕೆನ್ನುವ ಫಲವನ್ನು ಕೈಕೊಂಡು ಬ್ರಾಹ್ಮಣೇತರರಾದ ಸಮೂಹವೆಲ್ಲವೂ ಏಕಮತ್ಯದಿಂದ ತಮ್ಮಲ್ಲಿ ಪ್ರಜಾಹಿತಚಿಂತಕರಾಗಿ ಉಮೇದುವಾರಿಯಿಂದ ಮುಂದುವರಿದುನಿಂತು ಕೆಲಸಮಾಡುವ ನಮ್ಮ ಸ್ನೇಹಿತರಲ್ಲಿ ನಮ್ಮ ಗ್ರಾಮಕ್ಕೆ ಮೆಂಬರುಗಳು ಚೇರ್ಮನ್ನರುಗಳು ಇಂಥವರೇ ಆಗಬೇಕೆಂದು ನಿರ್ಧರಿಸಿ ನಾವುಗಳು ಅವರಹೆಸರಿಗೇನೇ ಓಟುಗಳನ್ನು ಕೊಟ್ಟು ಕೀರ್ತಿಗೆ ಭಾಗಿಗಳಾಗಬೇಕೆಂದು ಕರಜೋಡಿಸಿ ಬೇಡಿಕೊಳ್ಳುತ್ತೇನೆ.

ಓರ್ವ ಹಿತಚಿಂತಕ.

ಚನ್ನಪಟ್ಟಣ.

ಆಚೆ ವಾರದಲ್ಲಿ ಪ್ರಚುರವಾದ ಸಾಧ್ವೀ ಪತ್ರಿಕೆಯಲ್ಲಿ ಚನ್ನಪಟ್ಟಣದ ತಾಲ್ಲೂಕು ವರ್ತಮಾನವನ್ನು ಸರ್ಕಾರದ ಹಿತಾಭಿಮಾನಿ ಬರೆದು ಇರುವದನ್ನು ನೋಡಿ ತುಂಬಾ ವಿಷಾದಿಸಬೇಕಾಗಿದೆ. ಮ॥ ಅಮಲ್ದಾರ್ ಸಿದ್ಧರಾಮಪ್ಪನವರು ಈ ತಾಲ್ಲೂಕಿಗೆ ಬಂದ ಕೊಂಚ ದಿವಸದಲ್ಲೇ ಶ್ಯಾನುಭೋಗರು ಇವರ ದೃಷ್ಟಿಗೆ ಬಿದ್ದು ಇರುವದು ನಿಜ. ಬಡರೈತರಲ್ಲಿ ದಯವುಳ್ಳ ಯಾವ ಅಧಿಕಾರಿಗಳ ದೃಷ್ಟಿಗೆ ತಾನೇ ರೈತರನ್ನು ವಂಚಿಸಿ ಕಿರುಕುಳಪಡಿಸುತ್ತಿರುವ ಶ್ಯಾನುಭೋಗರು ಬೀಳರು ಮತ್ತು ಅವರ ಕೋಪಕ್ಕೆ ಪಾತ್ರರಾಗರು ? ದುಷ್ಟನಿಗ್ರಹ ಶಿಷ್ಟಪರಿಪಾಲನೆಯು ಸತ್ಯಶೀಲರಾದ ಅಧಿಕಾರಿಗಳ ಕರ್ತವ್ಯವಲ್ಲವೇ ? ಶ್ಯಾನುಭೋಗರು ಇನ್ನುಮುಂದೆ ರೈತರನ್ನು ವಂಚಿಸುವದಕ್ಕೆ ಅವಕಾಶವಾಗದೆ ಇರುವಂತೆ ಮತ್ತು ಸಲೀಸಾಗಿ ಕಂದಾಯ ವಸೂಲಿಗೆ ಅನುಕೂಲವಾಗುವಂತೆ ಲೆಖ್ಖಗಳನ್ನು ಇವರಿಂದ ಕೇಳಿದ್ದೇ ತಪ್ಪೇ ? ಇದನ್ನು ಕೊಡದೆ ಪತ್ರಿಕೆಗಳಲ್ಲಿ ಸುಳ್ಳುಬರವಣಿಗೆ ಪ್ರಕಟಿಸುತ್ತಿರುವದರಿಂದಲೇ ಇವರು ಇದುವರೆಗೂ ತಿಳುವಳಿಕೆಯಿಲ್ಲದ ರೈತರನ್ನು ವಂಚಿಸುತ್ತಿದ್ದದ್ದು ತಾನೇ ವ್ಯಕ್ತಪಟ್ಟಂತಾಗಲಿಲ್ಲವೇ? ಈ ಅಮಲ್ದಾರರು ಗ್ರಾಮಗಳಿಗೆ ಹೋಗುತ್ತಿರುವದೂ ನಿಜ, ರೈತರಿಗೆ ಸರ್ಕಾರಿ ರೂಲ್ ಅನುಸರಿಸಿ ಪಟೇಲರಲ್ಲಿಯೇ ಕಂದಾಯಕೊಡಬೇಕು ರಸೀತಿ ಪಡೆಯದೆ ಯಾವ ಹಣವನ್ನೂ ಕೊಡಕೂಡದು ಎಂದು ಹೇಳುತ್ತಿರುವದೂ ನಿಜ. ಈ ಬೋಧೆಯು ಶ್ಯಾನುಭೋಗರಿಗೆ ಶೂಲಪ್ರಾಯವಾಗಿದೆ. ಬೋಧೆಯು ರೈತರಿಗೂ ಶ್ಯಾನುಭೋಗರಿಗೂ ಇದುವರೆಗೂ ಇದ್ದ ಪ್ರೀತಿ ಮತ್ತು ನಂಬಿಕೆಯನ್ನು ನಿಜವಾಗಿಯೂ ಸಾಧ್ವಿಯಲ್ಲಿ ಬರೆದು ಇರುವಂತೆ ಹಾಳುಮಾಡಿದ್ದರೆ ಶ್ಯಾನುಭೋಗರು ರೈತರನ್ನು ಇದುವರೆಗೂ ವಂಚಿಸುತ್ತಿದ್ದದ್ದು ನಿಜವೆಂದಾಗಲಿಲ್ಲವೇ? ಶ್ಯಾನುಭೋಗರು ಈ ಅಮಲ್ದಾರರನ್ನು ಎಷ್ಟರಮಟ್ಟಿಗೆ ದ್ವೇಷಿಸುತ್ತಲೂ ಮತ್ತು ದೂಷಿಸುತ್ತಲೂ ಇರುವರೋ ಅದರ ಶತಪಾಲಷ್ಟು ರೈತರೂ ಮತ್ತು ಪಟೇಲರೂ ಇವರನ್ನು ಪ್ರೀತಿಸುತ್ತಲೂ ಮತ್ತು ಗೌರವಿಸುತ್ತಲೂ ಇರುತ್ತಾರೆ. ಇಂಥ ನಿಷ್ಪಕ್ಷಪಾತರಾದ ಮತ್ತು ಬಡವರ ಆಧಾರಿಯಾದ ಮತ್ತೆ ಸರ್ಕಾರದ ಕೆಲಸದಲ್ಲಿಯೇ ನಿರತರಾದ ಅಮಲ್ದಾರರು ಈ ತಾಲ್ಲೂಕಿಗೆ ಹಿಂದೆ ಯಾವಾಗ್ಯೂ ಬರಲಿಲ್ಲವೆಂದು ಹಳ್ಳಿಹಳ್ಳಿಯಲ್ಲೂ ಕೊಂಡಾಡಲ್ಪಡುತ್ತಿದ್ದಾರೆ. ಇವರು ಬಂದಲಾಗಾಯಿತು ತಾಲ್ಲೂಕಿನ ನೌಕರರ ಮತ್ತು ಶ್ಯಾನುಭೋಗರ ಬಾಯಿಗಳಿಗೆ ಬೀಗಹಾಕಿದಂತೆ ಆಗಿದೆ. ಆದರೆ ರೈತರ ಗೋಳು ಕೇಳಿ ಅವರಿಗೆ ಬೇಕಾದ ಸಹಾಯವನ್ನು ಶೀಘ್ರದಲ್ಲಿಯೇ ಒದಗಿಸುವ ಧಣಿ ಬಂದಿದ್ದಾರೆಂದು ಜನರು ಆನಂದಪಡುತ್ತಿದ್ದಾರೆ.

ಮ್ಯುನಿಸಿಪಲ್ ಕೌನ್ಸಿಲರ್.

ಇದೇ ಅಸಹಕಾರಿಗಳ ವರ್ತನೆಯೇ ?

ವಾಚಕರೇ ಅಥಣಿಯು ಪರಿಚಯವು ನಿಮಗಿದ್ದರಬಹುದು. ಇದು ಬೆಳಗಾವ ಜಿಲ್ಲೆಯ ಮುಖ್ಯ ತಾಲ್ಲೂಕಾಗಿರುತ್ತದೆ, ಮತ್ತು ಇದು ಮಹಾಯೋಗೀಶ್ವರರ ವಾಸಸ್ಥಾನವಿರುತ್ತದೆ. ಇಲ್ಲಿ ಕಳೆದ ತಾ॥ ೩೦-೧೦-೨೧ ರವಿವಾರ ದಿವಸ ಪದ್ಧತಿಯಂತೆ ಅಂಗಡಿಕಾರರು ಶ್ರೀ ಲಕ್ಷ್ಮೀ ಮತ್ತು ಶ್ರೀ ಸರಸ್ವತಿ ಈ ಉಭಯದೇವತೆಗಳ ಪೂಜೆಗಾಗಿ ತಂತಮ್ಮ ಅಂಗಡಿಗಳಲ್ಲಿ ನಾನಾಚಿತ್ರಗಳ ಜತೆಗೆ ವ್ಯಾಸನಕೋಳಿನ ಚಿತ್ರವನ್ನು ಟಪ್ಪಾದಿಂದ ಬರೆಯಿಸಿದ್ದರು. ಅದೇದಿವಸ ಸಂಜೆಯ ೬ ಗಂಟೆಗೆ ಪೇಟೆಯೊಳಗಿನ ಅಂಗಡಿಗಳನ್ನೆಲ್ಲಾ ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕರಿಸಿದ್ದರು. ಮತ್ತು ಪ್ರತಿಯೊಂದಂಗಡಿಯಲ್ಲಿ ಸಾಲುಸಾಲಾಗಿ ದೀಪಾವಳಿಯಿಂದ ಅದು ಭೂದೇವಿಯು ಕೊರಳಿನಲ್ಲಿ ನಕ್ಷತ್ರಮಾಲೆಯನ್ನು ಧರಿಸಿದ್ದಾಳೋ ಏನೋ ಎಂಬಂತೆ ಕಂಗೊಳಿಸುತ್ತಿತ್ತು. ಅದು ನೋಡುವವರಿಗೆ ಪ್ರೇಕ್ಷಣೀಯವಾಗಿತ್ತು. ಅಂಗಡಿಕಾರರೆಲ್ಲರೂ ಪೂಜಾಸಾಮಗ್ರಿಗಳನ್ನು ಒದಗಿಸಿಕೊಳ್ಳುತ್ತಲಿದ್ದರು. ಎಷ್ಟೋಜನರು ಪೂಜೆಯಲ್ಲಿ ನಿರತರಾಗಿದ್ದರು. ಆ ಕಾಲಕ್ಕೆ ಊರ ಮಾಮಲೇದಾರರಾದ ಮಿ॥ ಟಿ. ಎಸ್. ಕುಲಕರ್ಣಿ ಮತ್ತು ಫೌಜದಾರ ಮತ್ತು ಅವರಸಂಗಡಲೇ ಹಿಂದಿನಿಂದ ಗಾಂಧಿಕುಲಾಬಿಗಳನ್ನು ಹಾಕಿಕೊಂಡ ಅನೇಕ ಬ್ರಾಹ್ಮಣರು ಸಾಲುಸಾಲಾಗಿ ಪೇಟೆಯೊಳಗಿಂದ "ಗಾಂಧೀಕೀ ಜಯ್" ಎಂದು ಒದರುತ್ತ ನಡೆದಿದ್ದರು. ಮತ್ತು ಆ ಬ್ರಾಹ್ಮಣರೆಲ್ಲರೂ ಕೈಯಲ್ಲಿ ಕಟ್ಟಿಗೆಯನ್ನು ಹಿಡಿದುಕೊಂಡು ಪ್ರತಿಯೊಂದು ಅಂಗಡಿಯಲ್ಲಿ ಹಣಕಿಹಾಕುತ್ತ ಮುಂದೆ ಹೋಗುವಷ್ಟರಲ್ಲಿ ಒಬ್ಬನ ಅಂಗಡಿಯನ್ನು ಪ್ರವೇಶಮಾಡಿದರು. ಈ ಗದ್ದಲವನ್ನು ನೋಡಿ ಅಂಗಡಿಕಾರರು ತರತರದ ಕಲ್ಪನೆಗಳನ್ನು ಮಾಡಹತ್ತಿದರು. ವ್ಯಾಸನಕೋಳಿನ ಚಿತ್ರವನ್ನು ನೋಡಿ ಅವರತಲೆ ತಿರುಗಿದ್ದೋ ಏನೋ? ಮುಂದೆ ಮಿ॥ ಕುಲಕರ್ಣಿಯವರು ಆ ಅಂಗಡಿಯವನನ್ನುದ್ದೇಶಿಸಿ ಆ ಚಿತ್ರವನ್ನು ಅಳಿಸಲಿಕ್ಕೆ ಹೇಳಿದರು. ಅದನ್ನು ಆ ಅಂಗಡಿಕಾರನು ನಿರಾಕರಿಸಿದನು. ಇದೇಪ್ರಕಾರ ಕೆಲವು ಅಂಗಡಿಗಳಲ್ಲಿಹೋಗಿ ಕೇಳಿದಾಗ ಅವರು ಆ ಚಿತ್ರವನ್ನು ಅಳಿಸುವುದಿಲ್ಲೆಂದರು. ಅನಂತರ ಆ ಬ್ರಾಹ್ಮಣಸಮುದಾಯವು ಸೇನಾಪತಿಯೊಡನೆ ಆ ಚಿತ್ರವನ್ನು ಒರಸೇ ಹೋಗುತ್ತೇವೆಂದು ಹಟಹಿಡಿದು ಕುಳಿತುಕೊಂಡರು. ಅಂದಮೇಲೆ ಆ ಸೇನಾಪತಿಗಳಾದ ಸರಕಾರಿ ಅಮಲ್ದಾರರು ಬ್ರಾಹ್ಮಣರೆಂದು ಬೇರೆ ಹೇಳಬೇಕಾಗಿಲ್ಲ. ಈತರದ ವರ್ತನೆಗೆ ಆ ಅಂಗಡಿಕಾರರು ಸ್ವಲ್ಪಾದರೂ ದ್ವೇಷಭಾವವನ್ನು ತಾಳದೆ ಶಾಂತರೀತಿಯಿಂದ ನಡೆದರು. ಇದೇ ಸಮಯಕ್ಕೆ ಪೋಲೀಸ ಪಾರ್ಟಿಯು ತರಲ್ಪಟ್ಟಿತ್ತು. ಅಂಗಡಿಕಾರರೆಲ್ಲರೂ ಪೂಜೆಯನ್ನು ಮುಗಿಸಿ ಮನೆಗೆ ಹೋಗುವುದರಲ್ಲಿರಲು ಕೂಡಿದ ಬ್ರಾಹ್ಮಣರು ಸೇನಾಪತಿಗಳೊಡನೆ ಆ ಚಿತ್ರವನ್ನು ಸಗಣಿಯಿಂದ ಸಾರಿಸಿದರು. ಯಾವ ವ್ಯಾಸನಹಸ್ತವು ಸರ್ವರಿಂದಲೂ ಪೂಜಿಸಲ್ಪಟ್ಟದ್ದೋ ಅಂಥಾದ್ದನ್ನು ಈ ಜನರು ಸಗಣಿಯಿಂದ ಸಾರಿಸಿದರು. ಮಹತ್ಪಾಪ ! ಅಮಲ್ದಾರರೆ ಜಾತಿ ಮತ್ಸರದಿಂದ ಆ ಚಿತ್ರವನ್ನು ಒರಸಿ ಪಡೆಕೊಳ್ಳುವದಾದರೂ ಏನಿತ್ತು ? ಬೇಲಿಯೇ ಎದ್ದು ಹೊಲವನ್ನು ಮೆಯ್ಯಲಾರಂಭಿಸಿದಂತೆ ಶಾಂತತಾದೇವಿಯನ್ನು ರಕ್ಷಣಮಾಡುವಂಥ ಅಮಲ್ದಾರರೇ ಕುಳಿತು ಸ್ವಜಾತಿಬಾಂಧವರನ್ನೊಡಗೊಂಡು ಶಾಂತತಾಭಂಗಮಾಡಲೆಣಿಸಿದ್ದು ಬ್ರಾಹ್ಮಣ ಅಮಲ್ದಾರರಿಗೆ ಉಚಿತವೆ ? ಹೋದವರ್ಷ ಇದೇ ಪೂಜೆಯ ಸಮಾರಂಭಕ್ಕೆ ಇಲ್ಲಿಗೆ ಬಂದಿದ್ದ ಮೆ॥ ಕಲೆಕ್ಟರರಾದ ಮಿ॥ ಮ್ಯಾಗ್ರಿಗಾರ ಇವರು ಮಿ॥ ಮುರಗೆಪ್ಪಣ್ಣಾ ಗೋಟಬಂಡಿಯವರ ಅಂಗಡಿಯಲ್ಲಿ ಪಾನಸುಪಾರಿಮಾಡಿಸಿದಾಗ್ಗೆ ಮಿ॥ ಕಲೆಕ್ಟರ್‌ಸಾಹೇಬರವರು ಇದೇ ವ್ಯಾಸನಕೋಳಿನ ಚಿತ್ರವನ್ನು ಕಣ್ಣಾರೆ ಕಂಡಿದ್ದಾರೆ. ಅದಂತಿರಲಿ. ಆದರೆ ನಾವು ಅಸಹಕಾರಿಗಳು ಶಾಂತರೀತಿಯಿಂದ ನಡೆಯತಕ್ಕವರು ಗಾಂಧಿ ಶಿಷ್ಯರೆಂದು ಹೇಳಿಕೊಳ್ಳುವ ಜನರು ಕೈಯಲ್ಲಿ ಕಟ್ಟಿಗೆಯನ್ನು ಹಿಡಿದುಕೊಂಡು ದಂಗೆಯನ್ನು ಮಾಡಲೆಸಗಿದರೆ ಇದು ಅಸಹಕಾರದ ಲಕ್ಷಣವೋ ? ಶಾಂತರೀತಿಯವರ್ತನೆವೋ ? ಇವರು ಅಸಹಕಾರಿಗಳಾದ ಮೇಲೆ ಸರಕಾರಿ ಅಮಲ್ದಾರರ ಸಹಾಯವನ್ನೇಕೆ ಪಡೆಯಬೇಕು ? ವಾಹವ್ವಾ ಇದೇ ನಿಮ್ಮ ಅಸಹಕಾರವೋ ? ಅಥವಾ ಇದೇ ನಿಮ್ಮ ಏಕೀಕರಣದ ಪ್ರಯತ್ನವೋ ? ಬ್ರಾಹ್ಮಣ ಲಿಂಗಾಯತರ ನಡುವಿನ ತಂಟೆಯನ್ನು ಬೆಳಸಿ ಮತ್ತು ಅವರ ಮನಸ್ಸನ್ನು ಕಲುಷಿತಮಾಡಿ ಸ್ವರಾಜ್ಯವನ್ನು (ಕನಸಿನಲ್ಲಿ) ಪಡೆಯಬೇಕೆಂಬ ಹವಣಿಕೆಯೋ ? ಅಥವಾ ಹಿಂದುಳಿದ ಜನರನ್ನು ಅಜ್ಞದಶೆಯಲ್ಲಿ ಒಗೆಯಲು ಪ್ರಯತ್ನಮಾಡಿದಾಗ ಅದು ನಿಷ್ಫಲವಾಗದಿದ್ದದಕ್ಕೆ ಹೊಟ್ಟೆಕಿಚ್ಚೋ? ಇನ್ನು ಓರ್ವಸುದ್ದಿಗಾರನಿಂದ ಈ ಸಂಗತಿಯನ್ನು ತಿಳಿದ ಕರ್ನಾಟಕ ವೈಭವಕಾರರು ಲಿಂಗಾಯಿತರಿಗೆ ಮೂರ್ಖರೆಂದೂ ಗೂಬೆಯೆಂದೂ ಅಡಿ ತಮ್ಮ ಬಾಯ್ತೀಂಟಿಯನ್ನು ತೀರಿಸಿಕೊಂಡಿದ್ದಾರೆ. ಲಿಂಗಾಯತರು ಮೂರ್ಖರಿರಬಹುದು. ಯಾಕಂದರೆ ಅವರಿಗೆ ಶಿಕ್ಷಣ ಸಂಸ್ಕಾರವೇ ಆಗಿಲ್ಲ. ಆದ್ದರಿಂದ ಇಂಥ ಮೂರ್ಖರ ಕೂಡ ಜಾಣರಾದವರು ಗುದ್ದಾಡುವದೆಂದರೆ ಶತಮೂರ್ಖರ ಲಕ್ಷಣವೇ ಸರಿ. ಇನ್ನೂ ಎಷ್ಟೋ ಆಕ್ಷೇಪಗಳನ್ನು ತೆಗೆದಿದ್ದಾರೆ ಅವನ್ನೆಲ್ಲ ಇಲ್ಲಿ ತೆಗೆಯುತ್ತ ಕುಳಿತರೆ ಬಹಳ ವಿಸ್ತಾರವಾಗುತ್ತದೆ. ಇಷ್ಟಕ್ಕೆ ಸ್ಟಾರ ಪತ್ರಿಕಾಕರ್ತರು ಸ್ಥಳಕೊಟ್ಟಾರೆಂದು ನಂಬಿದ್ದೇನೆ.

ಓರ್ವ ಪ್ರತ್ಯಕ್ಷದರ್ಶಿ.

ಕನ್ನಡ ಪಂಡಿತಪರೀಕ್ಷೆ.

ನಮ್ಮ ಕರ್ನಾಟಕರಾಷ್ಟ್ರಭಾಷೆಯಾದ ಕನ್ನಡವು ೩-೪ ಶತಮಾನಗಳಿಂದಲೂ ಚಾಲುಕ್ಯ, ಬಲ್ಲಾಳ, ವಿಜಯನಗರ, ಮೈಸೂರು, ಅರಸುಗಳ ಪ್ರೋತ್ಸಾಹದಿಂದ ಸಂಸ್ಕೃತಕ್ಕೆ ಸಮನಾಗಿ ಗ್ರಂಥಸ್ಥವಾಗಿಯೂ, ಅನ್ಯಭಾಷೆಗಳಂತೆ ವ್ಯಾವಹಾರಿಕವಾಗಿಯೂ ಇರುವುದಷ್ಟೆ. ಪ್ರಭುವರ್ಗದಿಂದ ಪೋಷಣೆಯನ್ನುಪಡೆದ ಭಾಷೆಗಳಲ್ಲಿ ಕನ್ನಡವೂ ಗಣ್ಯತೆಯನ್ನು ಪಡೆದಿರುವುದು. ಆದುದರಿಂದಲೇ ಈ ಭಾಷೆಯಲ್ಲಿ ಶೈವ, ಜೈನ, ಬ್ರಾಹ್ಮಣ, ಕವಿಗಳು ಮತಗ್ರಂಥಗಳನ್ನೂ, ಮಹಾಕಾವ್ಯಾದಿಗಳನ್ನೂ ಬರೆದು ಭಾಷೆಯ ಗೌರವವನ್ನು ಹೆಚ್ಚಿಸಿರುವರು. ಪ್ರಭುಪೋಷಣೆಯು ಈ ಭಾಷೆಗೆ ಇಲ್ಲದಿದ್ದಲ್ಲಿ ಅನ್ಯಭಾಷೆಗಳ ತುಳಿತದಿಂದ ಇದೆಲ್ಲಿಯೋ ಮಾಯವಾಗುತ್ತಿತ್ತು. ಸದ್ಯಃಸ್ಥಿತಿಯಲ್ಲಿ ನಮ್ಮ ಕರ್ನಾಟಭಾಷೆಗೆ ಆಶ್ರಯದಾತರೆಂದರೆ ನಮ್ಮ ಮೈಸೂರು ಸಿಂಹಾಸನಾಧೀಶ್ವರರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದೂರ್ ಜಿ.ಸಿ.ಎಸ್.ಐ. ರವರು. ಇವರು ತಮ್ಮತಂದೆ ಮತ್ತು ತಾತಂದಿರ ಮೇಲ್ಪಂಕ್ತಿಯನ್ನು ಮೀರದೆ ಎಂದಿನಂತೆಯೇ ಕರ್ನಾಟಕಾವ್ಯಗಳನ್ನೂ, ಕವಿಗಳನ್ನೂ, ಕಾಲೋಚಿತವಾಗಿ ಪೋಷಿಸುತ್ತಿರುವರು. ಇವರ ರಾಜ್ಯಭಾರದಲ್ಲಿ "ಕರ್ನಾಟಕಸಾಹಿತ್ಯಪರಿಷತ್ತು" ಏರ್ಪಟ್ಟಿತು. ವಿಶ್ವವಿದ್ಯಾನಿಲಯದಲ್ಲೂ ಕನ್ನಡಭಾಷೆಗೆ ಗೌರವಸ್ಥಾನವು ಸಿಕ್ಕಿರುವುದು. ದೇಶಭಾಷೆಯಲ್ಲಿ ಪತ್ರಿಕೆಗಳು ಹೇರಳವಾಗಿರುವುವು. ಕೀರ್ತಿಶೇಷರಾದ ಚಾಮರಾಜೇಂದ್ರ ಒಡೆಯರ್ ಬಹದೂರ್ ಜಿ.ಸಿ.ಎಸ್.ಐ. ರವರು ತಮ್ಮ ಆಳ್ವಿಕೆಯಲ್ಲಿ ವಿದ್ಯೆಯನ್ನು ಸರ್ವತೋಮುಖವಾಗಿ ಹರಡಲು ನಮ್ಮ ರಾಜಧಾನಿಯಲ್ಲಿ ಆಂಗ್ಲ ಸಂಸ್ಕೃತ ಮಹಾಪಾಠಶಾಲೆಗಳನ್ನು ಸ್ಥಾಪಿಸಿದಂತೆಯೇ "ಭಾಷೋಜ್ಜೀವಿನೀ" ಎಂಬ ಹೆಸರಿನಿಂದ ಕರ್ನಾಟಕಮಹಾಪಾಠಶಾಲೆಯೊಂದನ್ನು ಸ್ಥಾಪಿಸಿ ಕನ್ನಡ ಪಂಡಿತಪರೀಕ್ಷೆಯನ್ನು ಮೈಸೂರುದೇಶದಲ್ಲಿ ಸರ್ಕಾರಿಯಾಗಿ ಏರ್ಪಡಿಸಿದರು. ಆ ಪಾಠಶಾಲೆಯನ್ನೇ ಈಗ ಪ್ರಭುವರ್ಗದವರು ಟ್ರೈನಿಂಗ್‌ಕಾಲೇಜ್ ಎಂಬ ಹೆಸರಿನಿಂದ ಕರೆಯುವರು. ಈಗಲೂ ಈ ಪಾಠಶಾಲೆಯಲ್ಲಿ ಕನ್ನಡ ಪಂಡಿತ ತರಗತಿಯಿರುವುದು. ಕನ್ನಡಭಾಷೆಯ ಜತೆಗೆ ಸಂಸ್ಕೃತವು ಹಿಂದಿನಿಂದಲೂ ಈ ಪರೀಕ್ಷೆಗೆ ಸಂಬಂಧಿಸಿರುವುದು. ೩-೪ ವರ್ಷಗಳಿಂದೀಚೆಗೆ ಆಂಗ್ಲಭಾಷೆಯೂ, ಈ ಪರೀಕ್ಷೆಯ ಬೆನ್ನನ್ನು ಹತ್ತಿ ಕನ್ನಡವನ್ನು ಕೊರಗಿಸುತ್ತಿರುವುದು. ಕನ್ನಡಪಂಡಿತರು ಕಾಲೇಜ್, ಹೈಸ್ಕೂಲ್ ಮುಂತಾದೆಡೆಗಳಲ್ಲಿಯೂ, ರಾಜಾಸ್ಥಾನದಲ್ಲಿಯೂ, ಪ್ರಾಚ್ಯಕೋಶಾಲಯ, ಶಾಸನಾನ್ವೇಷಣ ಶಾಖೆಗಳಲ್ಲಿಯೂ, ಸೇರಿ ಜೀವನಮಾಡುತ್ತಿರುವರು. ಸ್ವತಂತ್ರವಾಗಿ ಭಾಷಾಸೇವೆಯಲ್ಲಿ ನಿಂತಿರುವರೆಂದರೆ ನಾಲ್ಕಾರುಮಂದಿ ಎಂದರೆ ಯಾವಕನ್ನಡಿಗನು ತಾನೇ ತಲೆಬಾಗಿಸಲಾರನು ?

ಪಂಡಿತಪರೀಕ್ಷೆಗೆ ಬರುವರೆಂದರೆ ಭಾಷಾಭಿಮಾನಿಗಳಾದ ಶೈವ, ಜೈನ, ಬ್ರಾಹ್ಮಣ ವಿದ್ಯಾರ್ಥಿಗಳು. ಇವರಲ್ಲಿಯೂ ಉಪಪನ್ನರೆಲ್ಲರೂ ಆಂಗ್ಲವಿದ್ಯಾಭ್ಯಾಸದ ಬಯಕೆಯುಳ್ಳವರು. ಉಪಪತ್ತಿಯಿಲ್ಲದವರೇ ಈ ಪರೀಕ್ಷೆಗೆ ಓದಲು ಬರುವರು. ಉಪಪನ್ನರಾಗಿಯೂ, ಭಾಷಾಭಿಮಾನಿಗಳಾಗಿಯೂ ಬರುವವರು ಕೇವಲವಿರಳ. ಸರ್ಕಾರದ ಪಾಠಶಾಲೆಗಳಲ್ಲಿ ಪಾಠಕರಾಗಿರುವ ೪ ಮಂದಿಗೆ ಸರ್ಕಾರದವರು ವೇತನಗಳನ್ನು ಕೊಟ್ಟು ಪಂಡಿತತರಗತಿಯಲ್ಲಿ ಓದಲು ಕರೆಸಿಕೊಳ್ಳುವರು. ಈ ನಾಲ್ಕುಮಂದಿಗಳ ಜತೆಗೆ ಸರ್ಕಾರದ ಅಧಿಕಾರಿಗಳಿಗೆ ದಯೆಬಂದರೆ ಸರಿಯಾದ ಯೋಗ್ಯತೆಯನ್ನುಪಡೆದ ೨-೩ ಮಂದಿಗಳನ್ನು ಮಾತ್ರ ಸೇರಿಸಿಕೊಳ್ಳುವರು. ಇವರು ಸರ್ಕಾರದ ವೇತನವನ್ನು ಪಡೆಯುವ ವಿದ್ಯಾರ್ಥಿಗಳಿಗಿಂತ ಬುದ್ಧಿವಂತರಾದರೂ ಪ್ರೋತ್ಸಾಹವು ಮಾತ್ರ ಯಾವಭಾಗದಲ್ಲಿಯೂ ಇಲ್ಲ. ಪಂಡಿತತರಗತಿಯು ಹುಟ್ಟಿದಕಾಲದಿಂದಲೂ ಖಾಸಗಿ ವಿದ್ಯಾರ್ಥಿಗಳಿಗೆ ಯಾವತೆರನಾದ ವ್ಯಾಸಂಗದ ವೆಚ್ಚವೂ ಇರಲಿಲ್ಲ. ಅವರವರ ಹೊಟ್ಟೆಬಟ್ಟೆಗಳಿಗೆ ತಗಲುವ ವೆಚ್ಚವನ್ನು ಮಾತ್ರ ಅವರವರು ನೋಡಿಕೊಳ್ಳುತ್ತಿದ್ದರು. ಲೈಬ್ರೆರಿ ಮತ್ತು ವ್ಯಾಯಾಮದ ಫೀಜನ್ನು ಮಾತ್ರ ಸರ್ಕಾರಕ್ಕೆ ಕೊಡುತ್ತಿದ್ದರು. ಈಗ ಇವರಜೊತೆಗೆ ಪ್ರತಿಯೊಬ್ಬ ಖಾಸಗೀ ವಿದ್ಯಾರ್ಥಿಯೂ ತಿಂಗಳೊಂದಕ್ಕೆ ೫ ರೂ. ಫೀಯನ್ನು ತೆರಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುವರು. ಇದು ಪ್ರತಿಯೊಬ್ಬ ಖಾಸಗೀ ವಿದ್ಯಾರ್ಥಿಗೂ ತೆರಲಾರದ ಭಾರವಾಗಿ ಪರಿಣಮಿಸಿರುವುದು. ಮುಂಬಯಿ ಕರ್ನಾಟಕದಿಂದ ಈ ಪರೀಕ್ಷೆಗೆ ಓದಲು ಬ್ರಾಹ್ಮಣ ಮತ್ತು ವೀರಶೈವವರ್ಗದ ವಿದ್ಯಾರ್ಥಿಗಳು ಬರುವರು. ಅವರಿಗೆ ಅಲ್ಲಿನ ಸರ್ಕಾರದಿಂದ ವೇತನವು ಬರುವುದಿಲ್ಲ. ಶ್ರೀಮಂತರು ಆ ವಿದ್ಯಾರ್ಥಿಗಳಿಗೆ ನೂರಾರುರೂಪಾಯಿ ಸಹಾಯಮಾಡುವರು. ಇವರು ಭಾಷಾಭಿಮಾನದಿಂದ ಇಷ್ಟನ್ನಾದರೂ ಮಾಡುತ್ತಿರುವರೇ ಹೊರತು ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ಇದು ಪೂರ್ಣಸಹಾಯವಾಗಲಾರದು. ಭಾಷಾಭಿಮಾನವನ್ನು ಕಟ್ಟಿಕೊಳ್ಳುವವರು ಬಹುಪ್ರಸ್ತರೇ ಆಗಬೇಕಾಗುವುದು. ನಮ್ಮ ದೇಶದವರಲ್ಲಿ ಖಾಸಗಿ ವಿದ್ಯಾರ್ಥಿಗಳೇ ಅಪರೂಪ. ಹೀಗಿರುವಾಗ ಫೀಯನ್ನು ಹಾಕಿದಬಳಿಕ ಹೋಗುವರೇ ಇಲ್ಲ. ಅಂತೂ ಇಂತೂ, ಸರ್ಕಾರದ ಅಪ್ಪಣೆಯು ಪಾಲ್ಗಡಲಿನಲ್ಲಿ ಹುಟ್ಟಿದ ನಂಜಿನಂತೆ ಪರಿಣಮಿಸಿ ಇಡೀ ಕರ್ನಾಟಕವನ್ನೇ ಭಾಷಾಭಿಮಾನವಿಲ್ಲದ ರಾಷ್ಟ್ರವೆಂಬದಾಗಿ ತೋರಿಸಿಕೊಂಡದ್ದು ಕನ್ನಡಿಗರ ದುರ್ದೈವವೆಂದೇ ತಿಳಿಯಬೇಕಾಗಿದೆ. ಕನ್ನಡನಾಡಿನ ಪತ್ರಕರ್ತರೇ! ಪ್ರಜಾಪ್ರತಿನಿಧಿಗಳೇ! ಕರ್ನಾಟಕಸಾಹಿತ್ಯಪರಿಷತ್ತೇ! ವಿದ್ಯಾವರ್ಧಕಸಂಘವೇ! ನೀವೆಲ್ಲರೂ ಒಂಟಿಯಾಗಿಯಾಗಲಿ ಒಟ್ಟಿನಲ್ಲಾಗಲಿ ಈಗಿನ ಸರ್ಕಾರದ ಅಪ್ಪಣೆಯು ರದ್ದಾಗಿ ಎಂದಿನಂತೆ ಕನ್ನಡಪಂಡಿತರು ಹೆಚ್ಚುತ್ತಾ ನಮ್ಮ ದೇಶಭಾಷೆಯು ಹೀನದಶೆಗೆ ಬಾರದಂತೆ ಅವರು ನೋಡಿಕೊಂಡಿರುವಂತೆ ಮಾಡುವಭಾರವು ತಮ್ಮೆಲ್ಲರ ಮತ್ತು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೆಂದು ವಿಜ್ಞಾಪಿಸುತ್ತೇನೆ.

ಪಂಡಿತ ಎಸ್. ಕೃಷ್ಣಸ್ವಾಮಿಶಾಸ್ತ್ರೀ.

ಶ್ರೀ ಮಲ್ಲಿಕಾರ್ಜುನಸ್ವಾಮಿ ಜಾತ್ರೆ.

ತಾ॥ ೬-೧-೨೨ರ ಲಾಗಾಯತು ತಾ॥ ೧೪-೨-೨೨ರ ವರೆಗೆ ಫ್ರೆಂಚ್‌ರಾಕ್ಸ್ ಸಬ್‌ತಾಲ್ಲೂಕು ಹಿರೋಡೆಬೆಟ್ಟದಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿಯವರ ಜಾತ್ರೆಯು ನಡೆಯುವುದರಿಂದ ಆ ಕಾಲದಲ್ಲಿ ಈ ಕೆಳಗೆ ವಿವರಿಸಿರುವ ಉತ್ಸವಗಳೂ ದನಗಳ ಪ್ರದರ್ಶನವೂ ಧಾರ್ಮಿಕೋಪನ್ಯಾಸಗಳೂ ಸಹ ಬಹಳ ವಿಜೃಂಭಣೆಯಿಂದ ನಡೆಯುತ್ತಾದ್ದರಿಂದ ಭಗವದ್ಭಕ್ತರುಗಳು ವ್ಯಾಪಾರಸ್ಥರು ಮತ್ತು ನಾಟಕ ಸರ್ಕಸ್ಸು ಮುಂತಾದ ಕಂಪನಿಯವರು ಇದರಿಂದ ಆಗುವ ಪ್ರಯೋಜನ ಹೊಂದಬೇಕಾಗಿ ಈ ಮೂಲಕ ಕೃಪಡಿಸಿರುತ್ತೇವೆ.

ಉತ್ಸವಗಳ ವಿವರ—(೧) ಅಂಕುರಾರ್ಪಣ, (೨) ಧ್ವಜಾರೋಹಣ, (೩) ಕಲ್ಯಾಣೋತ್ಸವ, (೪) ಗಿರಿಪ್ರದಕ್ಷಿಣೆ, (೫) ಪುಷ್ಪಪಾಲಕಿ ಉತ್ಸವ (೬) ಅಂಧಕಾಸುರಸಂಹಾರ, (೭) ರಥೋತ್ಸವ, (೮) ತೆಪ್ಪೋತ್ಸವ, (೯) ತೀರ್ಥಸ್ನಾನ. ಜಲ ಮತ್ತು ಸ್ಥಳವಸತಿ ಚೆನ್ನಾಗಿದೆ.

ಕಾರ್ಯದರ್ಶಿ, ಸ್ವಾಮಿ ಶಂಕರಾನಂದ ಭಾರತಿ.

ವೀರಶೈವ ಸಾಧುಮಂಡಲಿಯಲ್ಲಿ ವಿಜ್ಞಾಪನೆಗಳು.

ಮಹನೀಯರೆ, ತಾ॥ ೧೭-೧೧-೨೧ನೇ ವೃತ್ತಾಂತಪತ್ರಿಕೆಯ ೬ನೇ ಪುಟದಲ್ಲಿ "ವೀರಶೈವ ಸಾಧುಮಂಡಲಿ" ಎಂಬ ಹೆಸರಿನಿಂದ ಪ್ರಚಾರಗೊಳಿಸಿರುವ ವಾರ್ತೆಯನ್ನು ನೋಡಿ ತುಂಬಾ ಸಂತೋಷಪಡುತ್ತೇವೆ. ಇದುವರೆಗೂ ಮೌನದಲ್ಲಿದ್ದ ಈ ಸಾಧುಮಂಡಲಿಯವರು ಈಗತಾನೇ ಕ್ರಮೇಣ ಏಳಿಗೆಗೆ ಬರುವಂತೆ ಪ್ರೋತ್ಸಾಹಿಸಿ ಮ॥ ರಾ॥ ಹು॥ ಪ॥ ನಂಜೇಗೌಡರು ವಗೈರೇರು ಒಂದನೇ ಉಪಸಂಘವನ್ನು ಸೊಕ್ಕೆಯಲ್ಲಿ ನಡೆಸುವುದಾಗಿ ನೆಲೆಗೊಳಿಸಿರುವುದು ಸ್ತೋತ್ರಾರ್ಹವಾಗಿದೆ. ಸಕಾಲಕ್ಕೆ ಸರಿಯಾಗಿ ಮೇಲ್ಕಂಡ ಮಂಡಲಿಯ ಗಣ್ಯರಾದಿಯಾಗಿ ದಯಮಾಡಿಸಿ ತನ್ಮೂಲಕ ಮೇಲ್ಕಂಡ ಸಂಘವನ್ನು ಸ್ಥಿರಗೊಳಿಸಿ ಪ್ರೋತ್ಸಾಹಕರ ಕಾರವನ್ನು ಸಾರ್ಥಕಗೊಳಿಸಿ ಇಂಥ ಸಂಘಗಳು ನಮ್ಮವರಲ್ಲಿ ಶಾಖೋಪಶಾಖೆಗಳಾಗಿ ಪರಿಣಮಿಸಿ ಚಿರಕಾಲಾಭಿವೃದ್ಧಿಯಂ ಕೈಗೊಳ್ಳಲು ಪ್ರೇರಿಸುವಂತೆ ದೇವರು ಅನುಗ್ರಹಿಸಲೆಂದು ಅನವರತ ಶಿವನನ್ನು ಸ್ತುತಿಸುತ್ತಿರುವ ಸ್ವಮತಾಭಿಮಾನಿಗಳು.

ವೀರಶೈವ ದಂಡಾವತಿ ಜಾತಿಬಾಂಧವರಿಗೆ.

ಬಂಧುಗಳೆ, ಈಗಿನ ಕಾಲದಲ್ಲಿ ನಮ್ಮ ದಯಾಳು ಬ್ರಿಟಿಷ್ ಸರಕಾರದವರು ಯಾವತ್ತೂ ವರ್ಣದವರಿಗೆ ಧಾರ್ಮಿಕ, ಸಾಮಾಜಿಕ, ನೈತಿಕ ವಿದ್ಯೆಗಳನ್ನು ಕಲಿಯಲಿಕ್ಕೆ ಅನೇಕ ಸವಲತ್ತುಗಳನ್ನು ಉಂಟುಮಾಡಿಕೊಟ್ಟಿರುತ್ತಾರೆ. ಇಂಥಾಸಮಯದಲ್ಲಿ ಸರ್ವಜನಾಂಗಗಳಲ್ಲಿಯೂ ಸುಧಾರಣೆಯು ಭರದಿಂದ ನಡೆದಿರುತ್ತದೆ. ಹೀಗಿದ್ದು ನೀವುಮಾತ್ರ ಇನ್ನೂ ಅಜ್ಞಾನಾವಸ್ಥೆಯಲ್ಲಿರುವದು ಯುಕ್ತವಾಗುವದೇ ? ಈ ಹೊತ್ತಿಗೆ ನಿಮ್ಮಲ್ಲಿ ಒಬ್ಬನಾದರೂ ಎಂ.ಎ.ಬಿ.ಎ.ಎಲ್.ಎಲ್.ಬಿ. ಪದವೀಧರರು ಇಲ್ಲವೇಯಿಲ್ಲ. ಅಷ್ಟೇಕೆ ? ೩ ನೇ ವರ್ಷದ ಕನ್ನಡ ಮಾಸ್ತರನು ಕೂಡ ಇರುವದಿಲ್ಲ. ಅದೂ ಇರಲಿ. ಕನಿಷ್ಠಪಕ್ಷಕ್ಕೆ ಕನ್ನಡ ಮುಲ್ಕೀಪರೀಕ್ಷೆಯಲ್ಲಿ ಪಾಸಾದವರು ಸಹ ಸಿಗಬಾರದೇ? ವಾಹವ್ವಾ ಸಮಾಜವೆ, ಈ ತರದ ಗಾಢನಿದ್ರೆಯಲ್ಲಿರುವ ನೀವೇ ಧನ್ಯರು. ಮಹಾಶಯರೆ, ಇನ್ನುಮುಂದೆ (ಕಾಲೋಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ) ಎಂಬ ಕೈಲಾಗದ ವಾಕ್ಯಮಂ ಬಿಟ್ಟುಕೊಟ್ಟು ವಿದ್ಯಾಭಿವೃದ್ಧಿಯನ್ನು ಮಾಡಿಕೊಳ್ಳಿರಿ. ಸರ್ವಜನಾಂಗಗಳೂ ನಿಮ್ಮ ಸ್ಥಿತಿಯನ್ನು ಕಂಡು ಕೈತಟ್ಟಿ ನಗುವರು. ಇದನ್ನು ತಿಳಿದು ನಾಚಿ ಪ್ರಯತ್ನಶೀಲರಾಗಿರಿ. ವಿದ್ಯಾಭಿವೃದ್ಧಿಗೋಸ್ಕರ ಆಲಸ್ಯವನ್ನು ಬಿಟ್ಟು ನಿಮ್ಮ ಸಮಾಜ ಜಾಗ್ರತೆ ಮಾಡಿಕೊಳ್ಳಿರಿ. ಇಲ್ಲವಾದರೆ ನಿರಕ್ಷರಕುಕ್ಷಿಗಳಾದ ನಿಮಗೂ, ಪಶುಗಳಿಗೂ, ವ್ಯತ್ಯಾಸವಿಲ್ಲವೆಂಬುದಕ್ಕೆ ಸಂದೇಹವೇ ಇಲ್ಲ. ಆದ್ದರಿಂದ ತನು, ಮನ, ಧನಗಳಿಂದ ವಿದ್ಯಾಭಿವೃದ್ಧಿಗೋಸ್ಕರ ಹಗಲಿರುಳೂ ದುಡಿದು ಸ್ವಾರ್ಥತ್ಯಾಗಿಗಳಾಗಿ ನಿಮ್ಮ ಸಮಾಜಸುಧಾರಣೆಯನ್ನು ಮಾಡಿರೆಂದು ಇಚ್ಛಿಸುವ

ಹಿತಚಿಂತಕ.

೧೯೨೧ ನೆಯ ಇಸವಿ ಡಿಶಂಬರ್ ತಾ॥ ೧೧ರಿಂದ ೧೯೨೧ ನೆಯ ಡಿಶಂಬರ್ ತಾ॥ ೧೭ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಮಾರ್ಗಶಿರಶುದ್ಧ ಏಕಾದಶಿಯಿಂದ ಮಾರ್ಗಶಿರಬಹುಳ ತದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃ.ಧ ಮಾಸ
11	[1]ಭಾನು	ಏಕಾ	7-40	ಅಶ್ವಿ	33-37	26
12	ಸೋಮ	ದ್ವಾದ	8-56	ಭರ	35-45	27
13	[2]ಮಂಗಳ	ತ್ರಯೋ	8-55	ಕೃತ್ತಿ	36-38	28
14	ಬುಧ	ಚತು	7-40	ರೋಹಿ	7-40	29
15	ಗುರು	ಪೌರ್ಣ	5-11	ಮೃಗ	34-56	1
16	ಶುಕ್ರ	ಪಾ-ಉ	1-43 56-14	ಆರ್ದ್ರಾ	32-33	2
17	ಶನಿ	ತದಿ	52-47	ಪುನ	29-29	3

(1) ಸರ್ವತ್ರೈಕಾದಶಿ. (2) ಶಿವದೀಪ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಚಕ್ರಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ ಮೈಸೂರ್ ಸ್ಟಾರ್ ಸನ್ ೧೯೨೧ ನೆಯ ಇಸವಿ ಡಿಸೆಂಬರ್ ತಾರೀಖು ೧೮ ನೆಯ ಭಾನುವಾರ. ಸಂಚಿಕೆ ೫೦

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಬಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
48 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0

ಬಿಡಿಮಣಿಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವವು.

[illegible]	ರೂ. ಇಂದ		ರೂ ವರೆಗೆ
ಉದ್ದಿನ	,, 15-0-0	,,	40-0-0
ಮಣಸು	,, 7-8-0	,,	15-0-0
ಕಡಲೆ	,, 2-8-0	,,	7-0-0
ನೆಲಗಡಲೆ	,, 1-8-0	,,	3-0-0
ಕಮಲಾಕ್ಷಿ	,, 1-0-0	,,	2-0-0
ದೊಡ್ಡ ,,	,, 0-8-0	,,	1-0-0
ಅಡಕ್ಕೆಂತ	,, 0-6-0	,,	0-8-0
ಸ್ಫಟಿಕ108ಕ್ಕೆ	4-8-0	,,	30-0-0
ಶ್ರೀಚಕ್ರ1ಕ್ಕೆ	8-0-0	,,	100-0-0
ಲಿಂಗ 1ಕ್ಕೆ	1-0-0	,,	100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
42 ಕಂಪನಿ. ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಚಂದ್ರಿಕೆ	೦—೯—೦

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಶ್ರೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ॥ ವಿದ್ವಾನ್ ಎಮ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪ್ರಸಿದ್ಧಪತ್ರಿಕೆ.

ಹಾಸನ ಡಿಸ್ಟ್ರಿಕ್ಟು ಪೋಲೀಸು ಆಫೀಸು ಕಾಂಪೌಂಡಿನಲ್ಲಿ ಮಾಮೂಲ್ ಮೇರೆ ಸನ್ 1922ನೇ ಇಸವಿ ಜನವರಿ ಮಾಹೆ ತಾರೀಖು 2,3 ಮತ್ತು 4ನೇ ಸೋಮವಾರ, ಮಂಗಳವಾರ, ಬುಧವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತೆಂಬ ಭಾಗ ಈ ಮೂಲ್ಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಬಾಕಿ ವಿಷಯಗಳಿಗೆ 17-11-1921ರ ಮರ್ಕುಂ ಮೈಸೂರು ಗೆಜೆಟ್ I A. ಭಾಗದ 382,383ನೇ ಪುಟಗಳಲ್ಲಿ ಛಾಯಿಪಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

MOHAMUD RAZA,
9-12-21. Vice President,
Town Muncipality, Hassan.

ನೋಟೀಸು.

ಅರಸೀಕೆರೆ ತಾಲ್ಲೂಕು ಕಣಕಟ್ಟೆ ಹೋಬಳಿ ಹರಳಕಟ್ಟೆ ಗ್ರಾಮದ ತೋಗೆ ಸಿದ್ದಣ್ಣನ ಮಗ ಮರುಳಸಿದ್ದಪ್ಪನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—

ನನ್ನ ತಂದೆ ತೋಗೆ ಸಿದ್ದಣ್ಣನು 1914 ನೇ ಸಾಲಿನಲ್ಲಿ ನಮ್ಮ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತನಾದ ಆಸ್ತಿಗಳನ್ನು ನನ್ನ ಸ್ವಾಧೀನಕ್ಕೆ ಬಿಟ್ಟು ತನ್ನ ಮತ್ತು ತನ್ನ ಹೆಂಡತಿಯ ಜೀವನಾಂಶಕ್ಕಾಗಿ ಕೆಲವು ಆಸ್ತಿ ಉಳಿಸಿಕೊಂಡು ತಾನು ಜೀವಂತನಾಗಿರುವತನಕ ಯಾರಿಗೂ ಯಾವವಿಧವಾದ ಪರಭಾರೆಮಾಡುವುದಿಲ್ಲವೆಂದು ಒಪ್ಪಿ ಕಾಗದ ಬರೆಕೊಟ್ಟು ರಿಜಿಸ್ಟರು ಮಾಡಿಸಿಕೊಟ್ಟಿರುತ್ತಾನೆ. ಈಗ ತಾನು ಜೀವನಾಂಶಕ್ಕೆ ಉಳಿಸಿಕೊಂಡಿರುವ ಸ್ವತ್ತುಗಳನ್ನು ಯಾರೋ ದುಷ್ಟರ ಪ್ರೇರಣೆಯಿಂದ ಯಾವರೀತಿಯೋ ಪರಭಾರೆಮಾಡುತ್ತಾನೆಂದು ವದಂತಿ ಕೇಳುತ್ತೇನೆ. ಈತನಿಂದ ಯಾರೂ ಯಾವವಿಧದಲ್ಲಿಯೂ ನಮ್ಮ ಆಸ್ತಿಗಳನ್ನು ಬರಸಿಕೊಳ್ಳತಕ್ಕದ್ದಲ್ಲ, ಹಾಗೆ ಬರೆಸಿಕೊಂಡಲ್ಲಿ ಅದು ಊರ್ಜಿತವಾಗಲಾರದು. ಮತ್ತು ನನ್ನ ವಿಶಿಷ್ಟ ಕಷ್ಟನಷ್ಟಗಳಿಗೆ ಪಾತ್ರರಾಗುತ್ತೀರಾದ ಸಂಗತಿ ಈ ಮೂಲ್ಕ ತಿಳಿಯಪಡಿಸಿರುತ್ತೇನೆ.

ತಾ॥ 14-12-1921. ಮರುಳಸಿದ್ದಪ್ಪ,
ಹರಳಕಟ್ಟೆ, ಅರಸೀಕೆರೆ ತಾಲ್ಲೂಕು.

ಶ್ರೀ ಯುವಸಾರ್ವಭೌಮರ ಸಂಚಾರ.

(ಭರತಪುರ)

ಯುವಸಾರ್ವಭೌಮರು ಭರತಪುರ ಸಂಸ್ಥಾನದಲ್ಲಿ ತಾ॥ ೮ನೆ ದಿನ ಏರ್ಪಡಿಸಿದ್ದ ಪೋಲೋ ಎಂಬ ಚಂಡಾಟದಲ್ಲಿ ತಾವೂ ಬೆರೆದು ಆಡಿ ಆನಂದಿಸಿದರು. ತದನಂತರ ಸಂಸ್ಥಾನದ ಸರ್ವಸೈನ್ಯದ ಕವಾಯತ್ತಾದುದನ್ನು ಪರಾಮರಿಸಿದರು. ಆ ರಾತ್ರಿಯೂ ದಿವ್ಯವಾದ ಔತನವಾಯಿತು. ತಾ॥ ೯ರಲ್ಲಿ ಅಲ್ಲಿಂದ ಲಕ್ನೋಪಟ್ಟಣಕ್ಕೆ ದಯಮಾಡಿಸಿದರು.

(ಲಕ್ನೋ)

ಲಕ್ಷಾಂತರ ಜನರು ನಿಲ್ದಾಣದಿಂದ ಹಿಡಿದು ರಾಜವೀಧಿಗಳಲ್ಲೆಲ್ಲಾ ತುಂಬಿ ನಿಂತಿದ್ದು ದರ್ಶನಮಾಡಿ ಆನಂದಪಟ್ಟರು. ಸಂಯುಕ್ತರಾಷ್ಟ್ರಗಳ ಶಾಸನಸಭಾ ಸಭಿಕರುಗಳು ಒಪ್ಪಿಸಿದ ವಿಜ್ಞಾಪನ ಪತ್ರವನ್ನೂ ಮ್ಯುನಿಸಿಪಾಲಿಟಿಯವರ ವಿಜ್ಞಾಪನ ಪತ್ರವನ್ನೂ ಯುವರಾಜರು ಸ್ವೀಕರಿಸಿ, ರಾಮಚಂದ್ರನ ಸಹೋದರನಾದ ಲಕ್ಷ್ಮಣನು ಈ ಪಟ್ಟಣವನ್ನು ಸ್ಥಾಪಿಸಿದನೆಂದಿರುವ ಪ್ರಸಿದ್ಧಿಯನ್ನು ಉದಹರಿಸಿ, ಮೊಗಲಾಯರ ಕಾಲದವರೆಗೂ ಈ ಪಟ್ಟಣವು ಪ್ರಧಾನ ನಗರವಾಗಿ ಪಡೆದುಕೊಂಡಿದ್ದ ಪ್ರಾಶಸ್ತ್ಯವನ್ನು ವರ್ಣಿಸಿ, ಅವರ ರಾಜಭಕ್ತಿಯನ್ನು ಶ್ಲಾಘಿಸಿ, ಪ್ರತ್ಯುತ್ತರವನ್ನಿತ್ತರು. ಆ ಪಟ್ಟಣದ ವಿಶ್ವವಿದ್ಯಾಲಯದವರ ಸನ್ಮಾನಪತ್ರವನ್ನು ಸ್ವೀಕರಿಸಿ ವಿದ್ಯಾರ್ಥಿಗಳು ನಡೆಯಿಸಿದ ಪಂದ್ಯಗಳನ್ನು ಪರಾಮರಿಸಿ, ಅವರಲ್ಲಿ ಗೆದ್ದವರಿಗೆ ತಮ್ಮ ಹಸ್ತದಿಂದಲೇ ಬಹುಮಾನಗಳನ್ನಿತ್ತು ಕರಸ್ಪಂದನದ ಮೂಲಕ ಪ್ರೀತಿವಿಶ್ವಾಸಗಳನ್ನು ಪ್ರದರ್ಶಿಸಿ ಆನಂದಪಟ್ಟರು. ಸೈನ್ಯದಲ್ಲಿ ಕೆಲಸಮಾಡಿ ಪೆನ್ಷನ್ ಹೊಂದಿರುವ ಉದ್ಯೋಗಿಗಳೊಡನೆ ಸರಸ ಸಂಭಾಷಣೆಗಳನ್ನು ನಡೆಯಿಸಿದರು. ತಮ್ಮ ಆಗಮನ ಗೌರವಾರ್ಥವಾಗಿ ಆ ಪಟ್ಟಣದಲ್ಲಿ ಬಡಬಗ್ಗರಿಗೆ ಅನ್ನದಾನ ಮಾಡಿಸಿದ್ದುದನ್ನು ಯುವಸಾರ್ವಭೌಮರು ಕಣ್ಣಾರನೋಡಿ ಸಂತೋಷಿಸಿದರು. ಅಲ್ಲಿಯ ಒಂದು ಸೈನ್ಯಕ್ಕೆ ಬಹುಮಾನವನ್ನಿತ್ತರು. ಈ ಸೈನ್ಯವು ಯೂರೋಪು ರಣರಂಗಕ್ಕೆ ಹೋಗಿ ಮಹಾಶೌರ್ಯವನ್ನು ಪ್ರದರ್ಶಿಸಿದ್ದುದು. ಅಲ್ಲಿಯ ತಾಲ್ಲೂಕುದಾರರಾದ ಭೂಸ್ವಾಮಿಗಳು ಸಮರ್ಪಿಸಿದ ಸನ್ಮಾನಪತ್ರವನ್ನು ಸ್ವೀಕರಿಸಿದರು. ಆ ಪತ್ರಿಕೆಯಲ್ಲಿ ಆಂಗ್ಲಸಾಮ್ರಾಜ್ಯಾಶ್ರಯವೇ ಭರತಖಂಡದ ಕ್ಷೇಮಕ್ಕೆ ಸಾಧಕವೆಂದು ಹೇಳಲ್ಪಟ್ಟಿದ್ದಿತು. ಅದಕ್ಕೆ ಯುವರಾಜರು ಕೊಟ್ಟ ಪ್ರತ್ಯುತ್ತರದಲ್ಲಿ ತಾಲ್ಲೂಕುದಾರರ ವಂಶಪರಂಪರಾಗತವಾದ ರಾಜಭಕ್ತಿಯನ್ನು ಕೊಂಡಾಡಿದರು. ಮತ್ತು ಅವರು ಮಾಡಿಸಿದ ಔತಣವನ್ನು ಸ್ವೀಕರಿಸಿದರು. ತಾ॥ ೧೦ ರಲ್ಲಿ ಜಹಾಂಗೀರಾಬಾದ್ ರಾಜರು ತಮ್ಮರಮನೆಗೆ ಯುವರಾಜರನ್ನು ಬರಮಾಡಿಕೊಂಡು ಸನ್ಮಾನಿಸಿ ಔತಣ ಮಾಡಿದರು. ಮತ್ತು ಯುವರಾಜರ ಗೌರವಾರ್ಥವಾಗಿ ೨೬೦೦ ಮಂದಿ ಪೆನ್ಷನ್ ಉದ್ಯೋಗಿಗಳಿಗೆ ಫಲಾಹಾರವನ್ನು ಮಾಡಿಸಿದರು.

ಅಲಹಾಬಾದ್ (ಪ್ರಯಾಗ.)

ತಾ|| ೧೧ರ ರಾತ್ರಿ ಲಕ್ನೋಪಟ್ಟಣವನ್ನು ಬಿಟ್ಟು ೧೨ನೆ ಮಧ್ಯಾಹ್ನ ಅಲಹಾಬಾದನ್ನು ಸೇರಿದರು. ನಿಲ್ದಾಣದಲ್ಲಿ ಗೌರ್ನರೂ ಅಧಿಕಾರಿಗಳೂ ಇತರ ಪ್ರಮುಖರೂ ಕಾದಿದ್ದು ಸ್ವಾಗತಿಸಿದರು. ರಾಜವೀಧಿಗಳಲ್ಲಿ ಉತ್ಸವಗೊಂಡು ವಿಹಾರಕ್ಕೆ ತೆರಳಿದರು. ಅಸಹಾಯವಾದಿಗಳ ಪ್ರಯತ್ನದಿಂದ ಊರಿನಲ್ಲಿ ಹರತಾಳವು ಪ್ರಬಲವಾಗಿದ್ದಿತು. ಊರಿನಲ್ಲಿ ಶೋಭೆಯೇ ಇರಲಿಲ್ಲ. ಗೊತ್ತಾಗಿದ್ದ ಕಾರ್ಯಕ್ರಮಗಳೆಲ್ಲಾ ನಾಮಮಾತ್ರಕ್ಕೆ ಜರುಗಿದುವು. ವಿಶ್ವವಿದ್ಯಾಲಯದವರೂ ಮ್ಯುನಿಸಿಪಾಲಿಟಿಯವರೂ ಒಂದೊಂದು ವಿಜ್ಞಾಪನಪತ್ರಗಳನ್ನು ಸಮರ್ಪಿಸಿದರು. ಅಲ್ಲಿಯೂ ಪೋಲೋಸಂದ್ಯಕ್ಕೆ ದಯಮಾಡಿಸಿದ್ದರು.

(ಕಾಶೀ.)

ತಾ|| ೧೨ರ ರಾತ್ರಿ ಅಲಹಾಬಾದಿನಿಂದ ಹೊರಟು ೧೩ನೆ ಬೆಳಗಿನ ೮ ಗಂಟೆಗೆ ಕಾಶೀ ಪಟ್ಟಣವನ್ನು ಸೇರಿದರು. ಅಲ್ಲಿಯ ಕಂಟೋನ್ಮೆಂಟ್ ನಿಲ್ದಾಣದಲ್ಲಿ ಕಾಶೀ ಮಹಾರಾಜರೂ ಅವರ ಕುಮಾರರೂ ಸೈನಿಕಾಧಿಕಾರಿಗಳೂ ರೀಜಂಟರೂ ಕಲೆಕ್ಟರೂ ದೇಶೀಯ ಪ್ರಮುಖರೂ ಸಹ ಕಾದಿದ್ದು ಸ್ವಾಗತ ಮಾಡಿದರು. ಗೊತ್ತಾಗಿದ್ದ ಕಾಲಕ್ಕೆ ಸರಿಯಾಗಿ ಯುವಸಾರ್ವಭೌಮರು ಅಲ್ಲಿಯ ಹಿಂದೂ ವಿಶ್ವವಿದ್ಯಾಲಯದ ಬಳಿಗೆ ದಯಮಾಡಿಸಿದರು. ಮಹಾಸಭೆಯು ಕೂಡಿದ್ದಿತು. ಅಲ್ಲಿಗೆ ಕಾಶೀ ಅಲ್ವಾರ್ ಮಹಾರಾಜರುಗಳೂ ಬಂದಿದ್ದರು. ತಮಗಾಗಿ ಏರ್ಪಡಿಸಿದ್ದ ಸುವರ್ಣಪೀಠವನ್ನು ಯುವರಾಜರು ಅಲಂಕರಿಸಿದರು. ಮೊಟ್ಟಮೊದಲು ಪಂಡಿತ ಮದನಮೋಹನ ಮಾಳವ್ಯರವರು ಸಂಸ್ಕೃತದಲ್ಲಿ ದೇವತಾಪ್ರಾರ್ಥನೆಯನ್ನು ಮಾಡಿದರು. ವಿಶ್ವವಿದ್ಯಾಲಯದ ಅಧ್ಯಕ್ಷರಾದ ಮೈಸೂರು ಶ್ರೀಮನ್ಮಹಾರಾಜರು ಯುವರಾಜರ ಸ್ವಾಗತಪೂರ್ವಕವಾಗಿ ಒಂದು ಉಪನ್ಯಾಸವನ್ನು ಮಾಡಿದರು. ಅದರಲ್ಲಿ ಕಾಶೀಪಟ್ಟಣವು ಪೂರ್ವದಿಂದಲೂ ವಿದ್ಯಾವಿಷಯದಲ್ಲಿ ಪಡೆದುಬಂದಿರುವ ಪ್ರಾಶಸ್ತ್ಯವನ್ನೂ ಈಗಲೂ ಹಿಂದೂ ವಿಶ್ವವಿದ್ಯಾಲಯ ಸ್ಥಾಪನೆಯಿಂದ ಆ ಪೂರ್ವವೈಭವವು ಕಾಪಾಡಲ್ಪಟ್ಟಿರುವುದನ್ನೂ, ಈ ವಿಶ್ವವಿದ್ಯಾಲಯದಲ್ಲಿ ಪಾಶ್ಚಾತ್ಯ ಪೌರ್ವಾತ್ಯ ವಿದ್ಯಾ ಶಿಕ್ಷಣವು ಕೊಡಲ್ಪಡುತ್ತಿರುವುದೇ ಮೊದಲಾದ ಸಂಗತಿಗಳನ್ನೂ ವಿವರಿಸಿ, ಈ ವಿದ್ಯಾಲಯದವರು ಕೊಡತಕ್ಕ ಬಿರುದುಗಳಲ್ಲೆಲ್ಲಾ ದೊಡ್ಡದಾದ ಬಿರುದನ್ನು ನಮ್ಮ ಭವಿಷ್ಯಚ್ಚಕ್ರವರ್ತಿಯಾದ ತಮಗೆ ಪವಿತ್ರವಾದ ಈ ಪ್ರಸಿದ್ಧ ಕಾಶೀಕ್ಷೇತ್ರದಲ್ಲಿ ಸಮರ್ಪಿಸಲಿಕ್ಕೆ ನನಗೆ ಬಹಳ ಸಂತೋಷವಾಗಿದೆಯೆಂದು ಹೇಳಿ, ವಿಶ್ವವಿದ್ಯಾಲಯದ ನೂತನ ಭವನವನ್ನು ತಮ್ಮ ಹಸ್ತದಿಂದ ತೆರೆಯಬೇಕೆಂದು ಯುವಸಾರ್ವಭೌಮರನ್ನು ಪ್ರಾರ್ಥಿಸಿದರು. ಕೂಡಲೇ ಯುವರಾಜರು ಮುಚ್ಚಿದ್ದ ಕದಗಳನ್ನು ತೆರೆದರು. ಆಗ ನಮ್ಮ ಶ್ರೀಮನ್ಮಹಾರಾಜರು ತಮ್ಮ ಹಸ್ತದಿಂದ ಯುವಸಾರ್ವಭೌಮರಿಗೆ "ಡಾಕ್ಟರ್ ಆಫ್ ಲೆಟರ್ಸ್" ಎಂಬ ಘನತರವಾದ ಬಿರುದಾಂಕನವನ್ನು ಪ್ರದಾನಮಾಡಿದರು. ವಿಶ್ವವಿದ್ಯಾಲಯದವರು ತಮಗೆ ಮಾಡಿದ ಗೌರವಕ್ಕಾಗಿ ಯುವರಾಜರವರು ವಂದನೆಯನ್ನರ್ಪಿಸಿ, ವಿಶ್ವವಿದ್ಯಾಲಯಗಳು ಕೊಡುವ ಪಟ್ಟಗಳಿಗೆ ಗೌರವವೇನೋ ಉಂಟಾದರೂ ಅದಕ್ಕೆ ಪಾತ್ರರಾದವರ ಸಾಮರ್ಥ್ಯವನ್ನಾಗಲೀ ಪಾಂಡಿತ್ಯವನ್ನಾಗಲೀ ಅವು ನಿರ್ಣಯಿಸುವುವೆಂದು ತಿಳಿಯಲಿಕ್ಕೆ ಅವಕಾಶವಿಲ್ಲವೆಂದು ಹೇಳಿ ವಂದಿಸಿದರು. ಅಲ್ಲಿಗೆ ಸಭಾಕಾರ್ಯಗಳು ಮುಗಿದುವು. ಬಳಿಕ ದಿವ್ಯಜ್ಞಾನಸಮಾಜದ ಬಾಲಭಟರನ್ನು ಯುವರಾಜರು ಸಂದರ್ಶಿಸಿದರು. ಅಲ್ಲೇ ಇದ್ದ ಅನಿಬೆಸಂಟಮ್ಮನವರನ್ನು ಪಂಡಿತ ಮದನಮೋಹನ ಮಾಳವ್ಯರವರು ಯುವರಾಜರಿಗೆ ಪರಿಚಯ ಮಾಡಿಸಲು, ಅವರೊಡನೆ ಕರಸ್ಪರ್ಶಮಾಡಿ ಸಂಭಾಷಿಸಿದರು. ಆದಿನ ಕಾಶೀಪಟ್ಟಣದಲ್ಲಿ ಹಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದು ಹರಿತಾಳವು ಆಚರಿಸಲ್ಪಟ್ಟಿತು. ಆದರೂ ಬಹುಜನಸ್ತೋಮವು ಉತ್ಸವದಲ್ಲಿ ಸೇರಿದ್ದಿತು. ಆ ರಾತ್ರಿ ಯುವರಾಜರು ಹೊಗೆಬಂಡಿಯನ್ನೇರಿ ನೇಪಾಳದಕಡೆಗೆ ಪ್ರಯಾಣಮಾಡಿದರು.

(ನೇಪಾಳ.)

೧೪ನೆ ತಾ|| ಬೆಳಗಿನ ೯||| ಗಂಟೆಗೆ ಬಿನ್ನತೋರಿ ಎಂಬ ಪಟ್ಟಣವನ್ನು ಸೇರಿ ಆ ಸಂಸ್ಥಾನದ ಮುಖ್ಯಮಂತ್ರಿ ಮೊದಲಾದವರಿಂದ ಇದಿರ್ಗೊಳ್ಳಲ್ಪಟ್ಟರು. ಅದೇದಿನ ಬೇಟೆಗೆ ಹೋಗಿ ಒಂದು ದೊಡ್ಡ ಹುಲಿಯನ್ನು ಹೊಡೆದು ಕೊಂದರು.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಡಿಸೆಂಬರ್ ತಾ|| ೧೮ ನೆಯ ಭಾನುವಾರ.

ಸಂಸ್ಥಾನದ ಆರ್ಥಿಕಸ್ಥಿತಿ.

ಬರಬರುತ್ತ ನಮ್ಮ ಸಂಸ್ಥಾನದ ಆರ್ಥಿಕಸ್ಥಿತಿಯು ಶೋಚನೀಯಾವಸ್ಥೆಗೆ ಬರುತ್ತಿದೆಯೆಂಬುದನ್ನು ಕೇಳುವುದಕ್ಕೆ ಬಹಳ ವಿಷಾದವಾಗುತ್ತದೆ. ಈಗ್ಗೆ ೩೦ ವರ್ಷಗಳಲ್ಲಿ ಸಂಸ್ಥಾನದ ವರಮಾನವು ೧ ಕೋಟಿಯೂ ಚಿಲ್ಲರೆಯಿದ್ದುದು ಈಗ ಮೂರು ಕೋಟಿಯೂ ಚಿಲ್ಲರೆಯಾಗಿದೆ. ಹಾಗಾದರೂ ಧನದ ದಾರಿದ್ರ್ಯವು ಈಗಿದ್ದಷ್ಟುಮಟ್ಟಿಗೆ ಹಿಂದೆ ಯಾವಾಗಲೂ ಇರಲಿಲ್ಲ. ಸರ್ ವಿಶ್ವೇಶ್ವರಯ್ಯನವರ ಕಾಲಕ್ಕೆ ಹಿಂದೆ ಬೊಕ್ಕಸದಲ್ಲಿ ಲಕ್ಷ್ಮಿಯು ತಾಂಡವವಾಡುತ್ತಿದ್ದಳು. ಅವರ ಉದಾರಹಸ್ತಪ್ರಭಾವದಿಂದ ದೇಶವು ಸಾಲವನ್ನು ಮಾಡದಿದ್ದರೆ ಬದುಕಲಾರದ ಸ್ಥಿತಿಗೆ ಬಂದಿತು. ಈಗ ಸಂಸ್ಥಾನಕ್ಕೆ ಮೂರುವರೆಕೋಟಿ ರೂಪಾಯಿಗಳ ಸಾಲವಾಗಿದೆ. ಇದರ ಬಡ್ಡಿಯನ್ನೇ ವರ್ಷಕ್ಕೆ ಕಾಲುಕೋಟಿ ರೂ. ಗಳಷ್ಟನ್ನು ತೆರಬೇಕಾಗಿದೆ. ನದಿಯ ಸೇತುವನ್ನು ಕಟ್ಟಿಸಿಕೊಡುವಂಥ ಅತ್ಯವಶ್ಯಕವಾದ ಪ್ರಜಾಹಿತದ ಕಾರ್ಯವನ್ನು ಮಾಡಿಸಿಕೊಡಬೇಕೆಂದು ಮೂವತ್ತು ವರ್ಷಗಳಿಂದ ಪ್ರಾರ್ಥಿಸುತ್ತ ಬಂದಿದ್ದರೂ ಅಂಥ ಕಾರ್ಯಕ್ಕೆ ೧-೨ ಲಕ್ಷವನ್ನು ಒದಗಿಸಿಕೊಡುವುದನ್ನೂ ಉದಾಸೀನಮಾಡಿ, ವರ್ಷಕ್ಕೆ ಒಂದೆರಡು ಸಲ ೮-೧೦ ಮಂದಿಗಳು ಬಂದಿಳಿಯುವಂಥ ಅತಿಥಿಮಂದಿರ "ಗೆಸ್ಟ್‌ಕ್ವಾರ್ಟರು"ಗಳನ್ನು ಕಟ್ಟಿಸಲಿಕ್ಕೆ ಲಕ್ಷಾಂತರ ರೂ. ಗಳನ್ನು ಸರ್ ವಿಶ್ವೇಶ್ವರಯ್ಯನವರು ನೀರನ್ನು ಎರಚಿದಂತೆ ವೆಚ್ಚಮಾಡಿ ಮುಗಿಸಿಬಿಟ್ಟುದನ್ನು ನೆನೆದರೆ ಸಂಕಟವಾಗುತ್ತದೆ. ತಕ್ಕ ವಿಮರ್ಶೆಯಿಲ್ಲದ ಕೋಟ್ಯಂತರ ರೂ. ಗಳ ವೆಚ್ಚದ ಪ್ರತಿಷ್ಠಾಪನೆಗಳಿಗೆ ಆರಂಭಿಸಿಬಿಟ್ಟರು. ಅವರು ೧ ವೆಚ್ಚವಾಗುವುದೆಂದು ಊಹಿಸಿ ಆರಂಭಿಸಿದ ಕಾರ್ಯಗಳೆಲ್ಲಾ ೪-೬ ರಷ್ಟನ್ನು ಸೆಳೆದುಕೊಳ್ಳುತ್ತಿವೆ. ಆದರೂ ಅವುಗಳಿಂದ ಫಲಪ್ರಾಪ್ತಿಯಾಗುವುವೆಂಬ ಬರವಸೆಯು ಕಾಣುವುದಿಲ್ಲ. ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ "ತರಿಬಾಗಾಯಿತು" ವ್ಯವಸಾಯಮಾಡಲನುಕೂಲವಾಗಿ ೩೦ ಸಹಸ್ರ ಕೆರೆಗಳಿರುವುವು. ಅವುಗಳಲ್ಲಿ ಅರ್ಧಭಾಗದ ಕೆರೆಗಳು ಜೀರ್ಣೋದ್ಧಾರವನ್ನು ಕಾಣದೆ ಮುಚ್ಚಿ ಕೆಟ್ಟುಹೋಗಿವೆ. ಅವುಗಳನ್ನು ಪೂರ್ವಸ್ಥಿತಿಗೆ ತಂದುಕೊಡಬೇಕೆಂದು ತಾಲ್ಲೂಕುಗಳ ಪ್ರಜೆಗಳು ಅಖಂಡವಾಗಿ ಮೊರೆಯಿಡುತ್ತಿದ್ದರೂ ತಕ್ಕ ಶ್ರದ್ಧಾಕುತೂಹಲಗಳಿಂದ ಅದನ್ನು ನೆರವೇರಿಸಿಕೊಡದೆ ಕೃಷ್ಣರಾಜಸಾಗರದಂಥ ಮಹಾಕಾರ್ಯಕ್ಕೆ ಆರಂಭಿಸಿಬಿಟ್ಟರು. ಸಂಸ್ಥಾನದ ಜಲಾಶಯಗಳ ಜೀರ್ಣೋದ್ಧಾರವನ್ನು ಉಪೇಕ್ಷಿಸಿದುದರಿಂದ ವರ್ಷೇವರ್ಷೇ ತರೀವ್ಯವಸಾಯದ ವಿಸ್ತೀರ್ಣವು ಕ್ಷೀಣಿಸಿಹೋಗುತ್ತಿದೆ. ೧೯೨೦-೨೧ನೆ ವರ್ಷದಲ್ಲಿ ಆದ ಬೆಳಸಿನ ಸರ್ಕಾರಿ ವರದಿಯನ್ನು ನೋಡುವಲ್ಲಿ ೧೯೧೯-೨೦ ರಲ್ಲಿ ೭,೭೨,೭೫೩ ಎಕರೆಯಲ್ಲಿ ಬತ್ತದ ಬೆಳಸನ್ನಿಟ್ಟಿದ್ದುದಕ್ಕೆ ೧೯೨೧-೨೨ನೆ ವರ್ಷದಲ್ಲಿ ೬,೮೦,೩೮೫ ಎಕರೆಗಳಲ್ಲಿ ಮಾತ್ರ ಬತ್ತದ ಪೈರನ್ನಿಟ್ಟಿದ್ದರು. ಎಂದರೆ ೧೦೦ಕ್ಕೆ ೧೧·೫೫ರಷ್ಟು ಕಡಿಮೆಯಾಯಿತು. ಉತ್ಪತ್ತಿಯು ಕೂಡ ೨,೧೪,೧೨೫ ಟನ್ನುಗಳಿಂದ ೧,೭೫,೩೩೩ ಟನ್ನುಗಳಿಗೆ ಇಳಿದುಹೋಯಿತು. ಕೃಷ್ಣರಾಜಸಾಗರದಿಂದ ದೇಶದ ಒಂದು ಮೂಲೆಯಲ್ಲಿ ತರಿಯ ಭೂಮಿಯನ್ನು ಹೆಚ್ಚಿಸುವ ಪ್ರಯೋಜನಕ್ಕಾಗಿ ದೇಶದ ಎಲ್ಲ ಭಾಗಗಳ ಜಲವಸತಿಯನ್ನು ಉಪೇಕ್ಷಿಸುವುದು ಯಾವಧರ್ಮ? ಇದುವರೆಗೆ ಕೃಷ್ಣರಾಜಸಾಗರದ ಅಣೆಕಟ್ಟೆ ಕೆಲಸವು ೧ ಕೋಟಿಯೂ ೬೦ ಲಕ್ಷ ರೂ. ಗಳ ಮೇಲೆ ನುಂಗಿ ನಿಂತಿದೆ. ೧ನೆ ಭಾಗದ ಕೆಲಸವೆಲ್ಲಾ ಮುಗಿದು ೨ನೆ ಭಾಗದ ಎಂದರೆ ೧೨೫ ಅಡಿ ಯೆತ್ತರಕ್ಕೆ ಕಟ್ಟೆಯನ್ನು ಕಟ್ಟುವ ಕೆಲಸದಲ್ಲೂ ಎಷ್ಟೋಭಾಗ ನಡೆದುಹೋಗಿದೆ. ಆದರೆ ಇನ್ನು ಮುಂದೆ ಅದರ ಕೆಲಸವನ್ನು ಪೂರೈಸೋಣವೆ? ಬೇಡವೆ? ಎಂಬುದನ್ನೂ ಅದರ ಫಲಾಫಲಗಳನ್ನೂ ನಿರ್ಣೈಸಿ ಹೇಳುವುದಕ್ಕೆ ಒಂದು ಸಂಘವನ್ನು ನಮ್ಮ ಪ್ರಭುತ್ವದವರು ಈಗ ಏರ್ಪಡಿಸಿದ್ದಾರೆ. ಏನು ಪ್ರಯೋಜನ? ಆ ಕಾರ್ಯವನ್ನು ಕೈಕೊಳ್ಳುವುದಕ್ಕೆ ಮುಂಚೆಯೇ ಈ ಕೆಲಸವನ್ನು ನಡೆಯಿಸಬೇಕಾಗಿದ್ದಿತಲ್ಲವೆ? ೧೨೫ ಅಡಿಗಳ ಎತ್ತರದವರೆಗೆ ಕಟ್ಟೆಯನ್ನು ಕಟ್ಟಿ ಬಳಿಕ ಉತ್ತರ ದಕ್ಷಿಣದ ಎತ್ತರದ ಮಟ್ಟದ ನಾಲೆಗಳನ್ನು ತೆಗೆಯಿಸುವುದೇ ಮೊದಲಾದ ಕೆಲಸಗಳನ್ನೆಲ್ಲಾ ಪೂರ್ತಿಗೊಳಿಸಬೇಕಾದರೆ ಇನ್ನೂ ಒಂದೋ ಅಥವಾ ಎರಡು ಕೋಟಿಯೋ ಸಮರ್ಪಿತವಾಗಲೇಬೇಕಾಗುವುದು. ಇಷ್ಟು ದೊಡ್ಡ ಮೊತ್ತವನ್ನು ಎಲ್ಲಿಂದ ತರಬೇಕು? ಸಾಲವನ್ನೇಮಾಡಬೇಕು. ನೂರಕ್ಕೆ ೬ ರಂತೆ ಬಡ್ಡಿಯನ್ನು ನಾವು ತೆತ್ತು ಹಣವನ್ನು ಒದಗಿಸುವುದಾದರೆ, ಈ ಪ್ರತಿಷ್ಠಾಪನೆಯಿಂದ ಅದಕ್ಕಿಂತ ಮಿಗಿಲಿದ ಲಾಭವು ನಮಗೆ ಬರುವುದುಂಟೆ? ಅಲ್ಲದೆ ಈ ಕೆಲಸವೆಲ್ಲಾ ಮುಗಿಯಬೇಕಾದರೆ ಇನ್ನೂ ೮-೧೦ ವರ್ಷಗಳು ಹಿಡಿಯಬಹುದು. ಅಲ್ಲಿಯವರೆಗೆ ಯಾವ ಲಾಭವೂ ಅದಕ್ಕೆ ಗಿಟ್ಟುವಂತೆ ಕಾಣಲಿಲ್ಲ. ಅದುವರೆಗೂ ಮೂಲಧನಕ್ಕೆ ಬಡ್ಡಿಯನ್ನು ಕೈಯಿಂದ ತೆರಬೇಕಾಗುವುದು. ತದನಂತರವಾದರೂ ನೂರಕ್ಕೆ ೩-೪ ರಂತೆ ಲಾಭವು ಬಂದೀತೋ ಇಲ್ಲವೋ ಹೀಗಿರುವಾಗ ಈಗ ಮುಗಿದುಹೋಗಿರುವ ೮೦ ಅಡಿ ಮಟ್ಟದ ಕೆಲಸಕ್ಕೇ ಮುಕ್ತಾಯಮಾಡಿದರೆ ಅದರಿಂದ ಶಿವನಸಮುದ್ರದ ವಿದ್ಯುಚ್ಛಕ್ತಿ ಸಮುತ್ಪಾದನೆಗೆ ನೀರಿನ ಕೊರತೆಯೆಲ್ಲಾ ತಪ್ಪಿರುವ ಕಾರಣ ಆ ಮಟ್ಟದ ಕೆಲಸವು ಲಾಭಪ್ರದವೆಂದೇ ನಿರ್ಣಯಿಸಿ ಸಮಾಧಾನಪಡಬಹುದು. ಮುಂದಣ ಕಾರ್ಯಕ್ಕೆ ಮತ್ತೂ ತೊಡಗುವುದು ಹಿತಪರಿಣಾಮಿಯೆಂದು ತೋರುವುದಿಲ್ಲ. ಮುಂದೆ ಕೆಲಸವನ್ನು ಕೈಬಿಟ್ಟರೆ ೨ನೆ ಭಾಗದ ಕೆಲಸಕ್ಕಾಗಿ ಇದುವರೆಗೆ ಮಾಡಿರುವ ೩೦ ಲಕ್ಷ ರೂ. ಗಳು ವ್ಯರ್ಥವಾಗುವುವೆಂದು ಯೋಚಿಸಿದರೆ, ಈ ನಷ್ಟವನ್ನು ಸುಧಾರಿಸಿಕೊಳ್ಳಲಿಕ್ಕಾಗಿ ಅದರ ಜತೆಗೆ ಕೋಟ್ಯಂತರವನ್ನು ಮತ್ತೆ ಕೂಡಿಸುವುದು, ತಪ್ಪಿ ಹೋದುದಕ್ಕೆ ತಂಬಿಗೆಯನ್ನು ದಕ್ಷಿಣೆಕೊಟ್ಟು ಕಣೆಯನ್ನು ಕೇಳಿದರೆಂಬ ಗಾಥೆಗೆ ಸರಿಹೋದೀತು. ಈ ವಿಷಯದಲ್ಲಿ ವಿಚಾರಕ ಸಂಘದವರು ಯಾವ ಅಭಿಪ್ರಾಯವನ್ನು ಕೊಟ್ಟಿದ್ದಾರೋ ತಿಳಿಯಲಿಲ್ಲ. ಇಂಥ ದೊಡ್ಡ ವೆಚ್ಚದ ಕೆಲಸಗಳನ್ನು ಹಿಡಿಯುವುದರಲ್ಲಾದರೂ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳದೆ ಪ್ರಭುತ್ವದವರು ಕೆಲಸ ಮಾಡುವುದರಿಂದ ಎಷ್ಟು ಅನಿರ್ವಚನೀಯವಾದ ದುಷ್ಪರಿಣಾಮವುಂಟಾಗಬಹುದೆಂಬುದನ್ನು ಇದರ ಉದಾಹರಣೆಯಿಂದ ಚೆನ್ನಾಗಿ ತಿಳಿಯಬಹುದಾಗಿದೆ.

ಇನ್ನು ಭದ್ರಾವತಿಯ ಕಬ್ಬಿಣದ ಯಂತ್ರಾಗಾರ ಪ್ರತಿಷ್ಠಾಪನೆಯೊಂದು ಕೋಟಿರೂಪಾಯಿಗಳನ್ನು ಭಕ್ಷಿಸಿ ಮುಂದಕ್ಕೆ ಇನ್ನೂ ಬಾಯಿತೆರೆದು ನಿಂತಿರುವುದನ್ನು ನೋಡಿದರೆ ಎದೆಯು ಬಿರಿಯುತ್ತಿದೆ. ಅದರ ಪರ್ಯವಸಾನವು ಭಗವಂತನಿಗೇ ಗೊತ್ತು. ಈ ಮಹಾರಾಕ್ಷಸೋಪಮ ಕಾರ್ಯಗಳ ಹಂಬಲವನ್ನು ನಮ್ಮ ಸಂಸ್ಥಾನಕ್ಕೆ ಕಟ್ಟಿಕೊಳ್ಳದಿದ್ದರೆ ನಮಗೆ ಎಂದೆಂದಿಗೂ ದುಡ್ಡಿನ ತಾಪತ್ರಯವೇ ಬರುವ ಸಂಭವವಿರಲಿಲ್ಲ. ಈ ಅಗಾಧಕಾರ್ಯಗಳನ್ನು ಕಟ್ಟಿಕೊಂಡಿರುವುದರಿಂದ ಸಂಸ್ಥಾನದಲ್ಲಿ ಅತ್ಯಾವಶ್ಯಕಗಳಾದ ವಿದ್ಯಾವ್ಯಾಪನೆ, ಆರೋಗ್ಯಸಾಧನೆ, ಜಲವಸತಿಕಲ್ಪನೆ, ಮೊದಲಾದ ಕಾರ್ಯಗಳಿಗೆಲ್ಲಾ ಹಣವೇ ಸಿಕ್ಕದೆ ಹೋಗಿದೆ. ಪ್ರಜಾಪ್ರತಿನಿಧಿಸಭೆಯಲ್ಲಿ ಸಭಿಕರುಗಳಿಂದ ಮಾಡಲ್ಪಡುವ ಅರಿಕೆಗಳಲ್ಲಿ ಮುಕ್ಕಾಲುಭಾಗಕ್ಕೆಲ್ಲಾ ಧನಾಭಾವದ ಕಾರಣವೇ ತೋರಿಸಲ್ಪಟ್ಟು ತಡೆಯಲ್ಪಡುತ್ತಿದೆ. ಈಗ್ಗ ಎಂದರೆ ಈವರ್ಷದ ವೆಚ್ಚಕ್ಕೆ ೨೦-೩೦ ಲಕ್ಷಕ್ಕೆ ಮೇಲ್ಪಟ್ಟು ಸಾಲದೆಹೋಗುವ ಸ್ಥಿತಿಯು ಒದಗಿದೆಯೆಂದು ಕೇಳುತ್ತೇವೆ. ನಮ್ಮ ದಿವಾನರವರಿಗೆ ಇತರ ಕಾರ್ಯಗಳೆಲ್ಲಕ್ಕಿಂತಲೂ ಸಂಸ್ಥಾನದ ಈ ಹಣದ ತಾಪತ್ರಯವನ್ನು ನೀಗಿಸುವುದೇ ಮಹಾಯೋಚನೆಯಾಗಿ ಕುಳಿತಿದೆಯೆಂಬುದರಲ್ಲಿ ಸಂಶಯವಿಲ್ಲ. ಮಹಾಸಾಹಸದಿಂದ ಇದುವರೆಗೆ ರಿಟ್ರೆಂಚ್‌ಮೆಂಟ್ ಸಂಘದ ಮೂಲಕ ಎಷ್ಟೋಬಗೆಯಿಂದ ವಿಮರ್ಶೆಮಾಡಿಸಿ, ತಾವೂ ಮಾಡಿ, ಕೆಲಮಟ್ಟಿಗೆ ಅನವಶ್ಯಕ ವ್ಯಯಭಾಗಗಳನ್ನು ತೆಗೆದುಹಾಕಿಸಿದರು. ಆದರೆ ಈಗಣ ಧನವ್ಯಯಭಾರವನ್ನು ಸಹಿಸಿಕೊಳ್ಳುವ ಸ್ಥಿತಿಯು ಇನ್ನೂ ಒದಗಿಲ್ಲ. ಈ ಸಾಧಾರಣವಾದ ರಿಟ್ರೆಂಚ್‌ಮೆಂಟಿನಿಂದ ಆರ್ಥಿಕತಾಪವು ನೀಗುವುದೆಂದು ಹೇಳಲಾಗುವುದಿಲ್ಲ. ಈಗಣ ತಾಪತ್ರಯದ ಸ್ಥಿತಿಯಲ್ಲಿ ಇನ್ನಾವುದಾದರೂ ದೈವಿಕವಿಪತ್ತು (ಕ್ಷಾಮಾದಿಗಳು) ಸಂಭವಿಸಿದರೆ (ಅಂಥ ಸ್ಥಿತಿಯನ್ನು ಜಗದೀಶ್ವರನು ಉಂಟುಮಾಡದಿರಲಿ) ಗತಿಯೇನೆಂಬುದನ್ನು ದೀರ್ಘದರ್ಶಿಗಳು ವಿಚಾರಮಾಡುತ್ತಿದ್ದಾರೆ. ಇದರ ಮೇಲೆ ಈಗ ಹೊತ್ತಿರುವ ಸಾಲವನ್ನು ತೀರಿಸುವುದೆಂದಿಗೆ? ಮುಂದೆ ಮಾಡಬೇಕಾದ ಸಾಲಕ್ಕೆ ಅವಧಿಯೆಲ್ಲಿಗೆ? ಎಂದು ಯೋಚನಾತರಂಗಗಳು ಒಂದರಹಿಂದೊಂದು ಮೂಡುತ್ತಿರುವುವು. ಈಗ ನಮ್ಮ ಸಂಸ್ಥಾನಕ್ಕೆ ಒದಗಿರುವಂಥ-ಆಯಕ್ಕಿಂತ ಅತ್ಯಂತಧಿಕವಾದ ವ್ಯಯಭಾರವನ್ನು ಹೊತ್ತು ಅನುಭವಿಸುತ್ತಿರುವ-ಹಣದಮುಗ್ಗಟ್ಟು ಸಾಮಾನ್ಯನಾದ ಯಾವನಾದರೊಬ್ಬ ಕುಟುಂಬಿಗೆ ಉಂಟಾಗಿದ್ದರೆ ಅವನಿಗೆ ಅನ್ನ ನೀರು ನಿದ್ರೆಗಳೊಂದೂ ಸೇರಲಾರವು. ಅಲ್ಲದೆ ನಮ್ಮ ಈಗಣ ವರಮಾನವು ಮುಂದೆಯೂ ಹೀಗೆಯೇ ಇರುವುದೆಂದು ನಂಬಲಾಗುವುದಿಲ್ಲ. ಎಷ್ಟೋಭಾಗ ತಗ್ಗಿ ಹೋದರೂ ಹೋಗಬಹುದು.

ನಮ್ಮ ಪ್ರಭುಗಳೂ ಅವರ ಸರ್ಕಾರದವರೂ ಈಗ ದೀರ್ಘವಾಗಿ ಪರ್ಯಾಲೋಚಿಸದೆ ಉದಾಸೀನಮಾಡತಕ್ಕುದಲ್ಲ. ಈಗಣ ಆರ್ಥಿಕ ದಾರಿದ್ರ್ಯವು ನಿವಾರಣೆಯಾಗಬೇಕಾದರೆ ಆದಾಯವನ್ನು ಹೆಚ್ಚಿಸುವುದು ಒಂದುಮಾರ್ಗ, ವ್ಯಯವನ್ನು ತಗ್ಗಿಸುವುದು ಒಂದುಮಾರ್ಗ. ಮೊದಲನೆ ಮಾರ್ಗವು ನಮಗೆ ಸಾಧ್ಯವಲ್ಲ. ಏಕೆಂದರೆ ಪ್ರಜೆಗಳಮೇಲೆ ಈಗ ಹೇರಿರುವ ಕಂದಾಯಗಳೇ ದುಸ್ಸಹವಾಗಿವೆ. ಇನ್ನು ಉಳಿದಿರುವುದು ೨ನೆಯ ಮಾರ್ಗವೇ ಸರಿ. ಅದನ್ನು ಬಲವಾಗಿ ಹಿಡಿಯಬೇಕು. ನಮ್ಮ ಸಂಸ್ಥಾನದಲ್ಲಿ ದೊಡ್ಡದೊಡ್ಡ ಉದ್ಯೋಗಿಗಳ ಸಂಬಳದ ಇಯತ್ತೆಯನ್ನು ಮೊದಲು ಕಡಿಮೆ ಮಾಡಿಸಬೇಕು. ಸಂಚಾರದ ಬತ್ಯ ಮೊದಲಾದುವುಗಳರೂಪವಾಗಿ ದೊಡ್ಡದೊಡ್ಡ ಉದ್ಯೋಗಿಗಳಿಗೆ ಸಂಬಳಕ್ಕಿಂತಲೂ ಹೆಚ್ಚಾಗಿ ಸೂರೆಯಾಗಿ ಹೋಗುತ್ತಿರುವ ದುಡ್ಡಿನ ಪ್ರವಾಹವನ್ನು ಖಂಡಿತವಾಗಿಯೂ ತಪ್ಪಿಸಬೇಕು. ನೆರೆಯ ಮದ್ರಾಸು ಸರ್ಕಾರದಲ್ಲಿ ಅಲ್ಲಿಯ ನಿಯಮನಿರ್ಮಾಣ ಸಭಿಕರು ಇದೇ ಸಂಬಂಧವಾದ ಒಂದು ತೀರ್ಮಾನವನ್ನು ಬಹುಮತದಿಂದ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ೫೦೦ ರೂ. ಗೆ ಮೇಲ್ಪಟ್ಟ ಸಂಬಳಗಾರರ ವೇತನಗಳನ್ನೆಲ್ಲಾ ೩ನೆ ಒಂದುಭಾಗದಷ್ಟು ಕಡಿಮೆಮಾಡಿ ಸಲ್ಲಿಸುವಂತೆ ಮಾಡಬೇಕೆಂದು ಅವರು ನಿಶ್ಚಯಿಸಿದ್ದಾರೆ. ಈ ತೀರ್ಮಾನವನ್ನು ಆ ಸಭೆಯಲ್ಲಿ ಉಪಪಾದಿಸಿದ ಮ|| ವೆಂಕಟರಮಣಯ್ಯಂಗಾರರು ನಮ್ಮ ಭರತಖಂಡದಲ್ಲಿ ಅಧಿಕಾರಿಗಳಿಗೆ ಸಲ್ಲಿಸುತ್ತಿರುವ ಸಂಬಳಗಳು ಬಹಳ ವಿಪರೀತವಾಗಿವೆ. ಜಪಾನ್, ಇಂಗ್ಲೆಂಡು ಮೊದಲಾದ ದೇಶಗಳಲ್ಲಿಯೂ ಕೂಡ ಇದೇತೆರದ ಕೆಲಸವನ್ನು ಮಾಡುತ್ತಿರುವ ಅಧಿಕಾರಿಗಳಿಗೆ ಇಲ್ಲಿಗಿಂತ ಕಡಿಮೆಯ ಸಂಬಳಗಳು ಸಲ್ಲುತ್ತಿವೆಯೆಂಬುದನ್ನು ಸಂಖ್ಯಾನಿದರ್ಶನ ಪೂರ್ವಕವಾಗಿ ಮಾಡಿದ ವಾದಗಳೂ ಅಲೋಯನ್ಸುಗಳು ನಮ್ಮಲ್ಲಿ ದಿನದಿನಕ್ಕೆ ಹೆಚ್ಚುತ್ತಿವೆಯೆಂದು ಆಡಿದ ಮಾತುಗಳೂ ಕೂಡ ನಮ್ಮ ಸಂಸ್ಥಾನಕ್ಕೂ ಅನ್ವಯಿಸತಕ್ಕುವಾಗಿವೆ. ಅಂಥ ನಿಶ್ಚಯವನ್ನು ನಮ್ಮ ಸಂಸ್ಥಾನದಲ್ಲೂ ಮಾಡಿಸುವುದಕ್ಕೆ ಮುಖ್ಯವಾಗಿ ಆಗರ್ಭ ಶ್ರೀಮಂತರೂ, ಧನಾಪೇಕ್ಷೆಗಾಗಿಯೇ ಮಂತ್ರಿಪದವಿಯನ್ನು ನಿರ್ವಾಹಮಾಡಬೇಕೆಂಬ ಅವಶ್ಯಕತೆಯಿಲ್ಲದವರೂ ಆದ ನಮ್ಮ ಸರ್ ಕಾಂತರಾಜ ಅರಸಿನವರು ಸ್ವತಃ ಮೇಲುಪಂಕ್ತಿಯನ್ನು ಹಾಕಿಕೊಟ್ಟು, ಚಿರಸ್ಮರಣೀಯವಾದ ಉಪಕೃತಿಯನ್ನು ಸಂಸ್ಥಾನಕ್ಕೆ ಮಾಡಿ, ಪ್ರಜೆಗಳಿಂದಲೂ ಮಹಾಪ್ರಭುಗಳಿಂದಲೂ ಸನ್ಮಾನಿತರಾಗುವುದಕ್ಕೆ ಇದಕ್ಕಿಂತಲೂ ಉತ್ತಮವಾದ ಸಂಧಿಯು ಅವರಿಗೆ ದೊರೆಯಲಾರದು. ಹಾಗಲ್ಲದೆ ಹೋದರೆ ಸಂಸ್ಥಾನದ ರಿಟ್ರೆಂಚ್‌ಮೆಂಟನ್ನು ಅನೌದ್ಯೋಗಿಕರಾದ ಕೆಲ ದೊಡ್ಡಮನುಷ್ಯರುಗಳ ಸಂಘವೊಂದರ ಮೂಲಕ ನೆರವೇರಿಸಲು ತಕ್ಕ ಏರ್ಪಾಟನ್ನು ಬೇಗನೆಮಾಡಿಸಿ ಅವರ ಸೂಚನೆಯಂತೆಯಾದರೂ ಸಂಸ್ಥಾನದ ಆರ್ಥಿಕಶೋಚನೀಯ ಸ್ಥಿತಿಯನ್ನು ಪರಿಹರಿಸುವಂತೆ ಮಾಡಲು ಶ್ರೀಮನ್ಮಹಾರಾಜರು ತ್ವರೆಪಡದೆ ಇರಲಾರರೆಂದು ನಂಬುತ್ತೇವೆ.

RULES FOR REGULATING APPOINTMENTS.

The Government of Mysore have issued orders for regulating appointments and promotions in State Service and for filling up of vacancies in the ministerial ranks of Superior Service and they ought to be given as wide a publicity as possible. These rules seem to be very fair regard being had to the efficiency of the Several Services in the State. The following points in the rules are for special attention to officers of State who have the dispensation of patronage in their hands who are mostly of one class people and next who are Tamilialised. It is emphasised that no person who is not a native of Mysore by birth shall be entertained and failing this the dangerous domicile comes in. It would have been better for the Government to have insisted on its sanction for the entertainment of the pretentious "domiciles" as we consider that it is a dangerous alternative in so far that the Head Quarter Offices will have sufficient protection to inundate the offices with these "kiths" and "kins" whose fondness lies not in the language of the country but in that soft and swift moving tongue—elegant Tamil. A minute examination of the conditions which now prevail in most of the Head Quarter Offices—perhaps the Revenue Survey Office not excepted—will show that the language of the official land in Mysore is Tamil. We do not believe that the gloomy aspect is in any way exaggerated. Fact is fact howsoever grim it is. The next condition in these rules demand the knowledge of reading and writing Kannada with facility. The domiciles have to overcome this obstacle, but once they get registered as domiciles, there will perhaps be no reason to examine this condition. They will pass for knowing this despised Kannada of the land. We have dwelt at some length on these points as in the past in the State Service no attention seems to have been paid to these essential aspects of real qualification. Under the head promotion stress is laid on "capacity and character." We would have the places exchanged—"character and capacity," the former being a rarer commodity and a much neglected qualification as the reverse of it is much in evidence from the downmost service of Shanbhogue to the upper services as a natural contagion.

The next order of Government deals with the manner of filling up of vacancies in the ministerial ranks of Superior Service for which it is divided into four parts viz. (i) appointments upto Rs. 20, (ii) Rs. 30, (iii) Rs. 40, and (iv) exceeding Rs. 40. The qualifications of examination prescribed are, Lower Secondary, S.S.L.C., First Year B.A., and any University degree examinations respectively. These rules further make reference to the entertainment of the members of the Backward Communities under direct recruitment to the several classes of appointments and fix a proportion of two out of three vacancies in the first 3 classes to be filled up by direct recruitment and the 3rd appointment by promotion from the lower classes. Ofcourse the last class of Rs. 20 is by direct recruitment. These rules—provided retrenchment does not operate in the case of any vacancy—afford fair chances for members of the Backward Communities to be largely entertained. But there is one great fear in that the disposal of the vacancies are unfortunately in not altogether sympathetic hands. It deserves very careful examination and scrutiny. No doubt there is the Central Recruitment Board and a very generous and Patriotic Government to watch over the working of these rules. But none of these safe-guards will avail until there is a Secretary attached to this Board to carefully watch the progress of this scheme. A Mysorean by birth and by sympathy should be the Secretary of this Board and until it is placed in such safe hands, we fear these orders will be dead letters. We strongly urge on the attention of our benevolent Government the absolute necessity for such a secretary in displacement of the present one and trust that the suggestion will be viewed in that light of sincerity which has prompted us to make this uncomfortable proposal.

The commnul representation in all classes of appointments-high or low-is the only stable feature of future Services. The whirl of events which we see now in every part of India do firmly demonstrate that one class poredominance in any service is a mencace to that service in the mischievous form of "strike." That is the future danger if these benevolent rules are not strictly carried out in a loyal manner. Even in a department like the Educational and in a Presideney like Bombay where this communal representation could be least felt, the necessity is pressed as the weighty expressions of the Education Minister Hon: R. P. Paranjpe to Bombay Government made to the Deccan Sabha indicate. He says "communal representations (for appointments in the Education Department) are often brought forward and they have to be given weight to a certain extent." The situation is clearer as regards Mysore. Such representations here have to be given fullest weight to the fullest extent.

ನಿರ್ಬಂಧದ ಮೇಲೆ ನಿರ್ಬಂಧ.

ಅಸಹಾಯವಾದಿ ಪ್ರಮುಖರ ನಿರ್ಬಂಧಗಳೂ ದಂಡನೆಗಳೂ ದೇಶದಲ್ಲಿ ನಡೆಯುತ್ತಲೇ ಇವೆ. ಕಳೆದವಾರ ಸಂಯುಕ್ತಪ್ರಾಂತಕ್ಕೆ ಸೇರಿದ ಅಲಹಾಬಾದಿನ ಪಂಡಿತ ಮೋತೀಲಾಲ ನೆಹ್ರೂರವರನ್ನು ಅಲ್ಲಿಯ ಜಿಲ್ಲಾ ಮೇಜಿಸ್ಟ್ರೇಟರು ವಿಚಾರಣೆ ಮಾಡಿದರು. ನೆಹ್ರೂರವರು-"ಇದು ನ್ಯಾಯಸ್ಥಾನವಲ್ಲ; ನನ್ನ ಶತ್ರುಗಳಾದ ನಿರಂಕುಶಾಧಿಕಾರಿಗಳ ಪ್ರತಿನಿಧಿಯು ನನ್ನನ್ನು ವಿಚಾರಮಾಡುತ್ತಿರುವುದರಿಂದ ನಾನು ಯಾವ ಉತ್ತರವನ್ನೂ ಕೊಡುವುದಿಲ್ಲ" ಎಂದು ಹೇಳಿದರು. ಅದರಂತೆಯೇ ಅವರ ಜತೆಯಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಪುರುಷೋತ್ತಮದಾಸ್ ತಾಂಡನ್, ಆರ್. ಎನ್. ಬಾಸು, ಪಂಡಿತ ಶ್ಯಾಮಲಾಲ್‌ನೆಹ್ರೂ, ಪಂಡಿತ ಮೋಹನಲಾಲ್ ನೆಹ್ರೂರವರು ಕೂಡ ಉತ್ತರ ಕೊಡುವುದಕ್ಕೆ ನಿರಾಕರಿಸಿದರು ಇವರೆಲ್ಲರ ಮೇಲೂ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಶಾಸನದ ೧೭ನೆ ಸೆಕ್ಷನ್ ಪ್ರಕಾರ ದೋಷವು ಆಪಾದಿತವಾಗಿದ್ದಿತು. ಎಂದರೆ ಪ್ರಭುತ್ವದಿಂದ ನಿಷೇಧಿಸಲ್ಪಟ್ಟಿರುವ ಸ್ವಚ್ಛಂದಸೇವಕ ಸಂಘದಲ್ಲಿ ಸಂಬಂಧವಿಟ್ಟುಕೊಂಡಿದ್ದರೆಂಬ ತಪ್ಪಿಗೆ ಗುರಿಯಾಗಿದ್ದರು. ಕಡೆಗೆ ಪಂಡಿತ ಮೋತೀಲಾಲನೆಹ್ರೂರವರಿಗೆ ೫೦೦ ರೂ. ಅರ್ಥದಂಡವೂ, ೬ ತಿಂಗಳ ಸಾಮಾನ್ಯ ಕಾರಾಗೃಹವಾಸಶಿಕ್ಷೆಯೂ, ಬಾಬುಪುರುಷೋತ್ತಮದಾಸ್ ತಾಂಡನ್‌ರವರಿಗೆ ೨೫೦ ರೂ. ಅರ್ಥದಂಡವೂ, ೧|| ವರ್ಷ ಸಾಧಾರಣ ಕಾರಾಗೃಹವಾಸ ಶಿಕ್ಷೆಯೂ, ಕಮಾಲುದ್ದೀನ್ ಜಾಫ್ರೆ, ಆರ್. ಎಸ್. ಬಾಸುರವರುಗಳಿಗೆ ೧೦೦ ರೂ. ಅರ್ಥದಂಡವೂ ೬ ತಿಂಗಳ ಸಾಮಾನ್ಯ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟು ಎಲ್ಲರೂ ಬೇರೆಬೇರೆ ಕಡೆಯ ಕಾರಾಗೃಹಗಳಿಗೆ ಸಾಗಿಸಲ್ಪಟ್ಟರು. ತಾ|| ೯ರಲ್ಲಿ ಕಲ್ಕತ್ತಾ ಪೊಲೀಸರು ಅನೇಕರ ಮನೆಗಳನ್ನು ಪರಿಶೋಧಿಸಿ ಹಲವು ಕಾಗದಪತ್ರಗಳನ್ನೂ ಪುಸ್ತಕಗಳನ್ನೂ ವಶಪಡಿಸಿಕೊಂಡರು. ಅಲ್ಲಿಯ ಖಿಲಾಫತ್ ಸಂಘದ ಕಾರ್ಯದರ್ಶಿಯನ್ನೂ ಇನ್ನು ೧೧ ಮಂದಿ ಸಭಿಕರನ್ನೂ ಸೆರೆಹಿಡಿದರು. ಚಿತ್ಪೂರ್ ರೋಡಿನಲ್ಲಿ ಒಬ್ಬ ಮಹಮ್ಮದೀಯನ ಮನೆಯನ್ನು ಶೋಧಿಸಿದಾಗ್ಗೆ ಕೈದೊಣ್ಣೆಗಳೊಳಗೂ ಕೊಡೆಗಳ ಹಿಡಿಯಲ್ಲೂ ಸಣ್ಣ ಕತ್ತಿಗಳನ್ನೂ ಚಾಕುಗಳನ್ನೂ ಅಡಗಿಸಿ ಮೇಲ್ಗಡೆ ಏನೂ ಕಾಣದಂತೆ ಮಾಡಿದ್ದ ಆಯುಧಗಳು ೨೦೦ ಸಿಕ್ಕಿದುವು. ಅವನ್ನೆಲ್ಲಾ ಪೊಲೀಸರು ಸ್ವಾಧೀನಪಡಿಸಿಕೊಂಡರು.

ಈ ವರ್ಷದ ರಾಷ್ಟ್ರೀಯ ಮಹಾಸಭೆಗೆ ಅಧ್ಯಕ್ಷರಾಗಲಿಕ್ಕಿದ್ದ ಬಾಬು ಚಿತ್ತರಂಜನದಾಸ್‌ರವರನ್ನೂ ಕಾಂಗ್ರೆಸ್ ಸಂಘದ ಕಾರ್ಯದರ್ಶಿಯಾದ ಬಿ. ಎನ್. ಬಾಸ್ಮಲ್‌ರವರನ್ನೂ ಕಲಕತ್ತಾದಲ್ಲಿ ಕಳೆದ ತಾ|| ೧೦ ರಲ್ಲಿ ಮೇಲೆಕಂಡ ೧೭ನೆ ಸೆಕ್ಷನ್ನಿನ ಅಪರಾಧಕ್ಕಾಗಿಯೇ ಹಿಡಿದರು. ಮತ್ತು ಅದೇ ದಿನ ಕಲಕತ್ತಾದಲ್ಲಿ ಒಂದು ದಿನಪತ್ರಿಕೆಯ ಸಂಪಾದಕರೂ ಅಸಹಾಯವಾದಿ ನಾಯಕರೂ ಆಗಿದ್ದ ಮೌಲಾನಾ ಅಕ್ರಂಖಾನ್ ರವರನ್ನು ೧೨೪ ಎ. ೧೫೩ ಎ. ಇಂ| ಪೆ| ಕೋ| ಸೆಕ್ಷನ್ ಅಪರಾಧಕ್ಕಾಗಿಯೂ, ವಿಪಿನಚಂದ್ರಪಾಲರ ಕುಮಾರರನ್ನೂ ಬಂಗಾಳಾಖಿಲಾಫತ್ ಸಂಘಾಧ್ಯಕ್ಷರಾದ ಮೌಲಾನಾ ಅಬ್ದುಲ್‌ಕಲಂ ಅಜದ್‌ರವರನ್ನೂ ಸಹ ಹಿಡಿದರು. ತಾ|| ೧೦ ರಲ್ಲಿ ಮ|| ಗಾಂಧಿಯವರ ಹಿರೀಮಗನಾದ ಹೀರಾಲಾಲ್‌ಗಾಂಧಿಯವರನ್ನೂ ಒಬ್ಬ ವಕೀಲರನ್ನೂ ಸಹ ಕಲಕತ್ತಾ ಬಾರಾಬಜಾರಿನಲ್ಲಿ ಒಂದು ಸ್ವಚ್ಛಂದಸೈನಿಕಸ್ತೋಮಕ್ಕೆ ನಾಯಕರಾಗಿ ಬರುತ್ತಿರಲು ಅವರೆಲ್ಲರನ್ನೂ ಹಿಡಿದರು.

ತಾ|| ೧೦ ರಲ್ಲಿ ಕಲಕತ್ತಾದ ಅನೇಕ ಬೀದಿಗಳಲ್ಲಿ ಫಿರಂಗಿಗಳನ್ನಿಟ್ಟು ಅಶ್ವಸೈನ್ಯಗಳನ್ನು ನಿಲ್ಲಿಸಿದ್ದರು. ಕಾಂಗ್ರೆಸ್ಸಿಗೂ ಖಿಲಾಫತ್ತಿಗೂ ಸೇರಿದ ಹಲವರ ಮನೆಗಳನ್ನೂ ಕಾರ್ಯಾಲಯಗಳನ್ನೂ ಪೊಲೀಸರು ಶೋಧಿಸಿದರು. ಸ್ವತಂತ್ರ ಎಂಬ ಹಿಂದೀ ದಿನಪತ್ರಿಕೆಯ ಸಂಪಾದಕರಾದ ಅಂಬಿಕಾಪ್ರಸಾದ ವಾಜಪೇಯ ಎಂಬುವರನ್ನೂ ಇನ್ನುಕೆಲರನ್ನೂ ಎಂದರೆ ಒಟ್ಟು ೧೦೦ ಮಂದಿಗಳನ್ನು ಹಿಡಿದರು. ಆ ತಾರೀಖುವರೆಗೆ ಕಲಕತ್ತಾದಲ್ಲಿ ೫೦೦ ಮಂದಿಗಳು ಸೆರೆಹಿಡಿಯಲ್ಪಟ್ಟರು. ತಾ|| ೮ರಲ್ಲಿ ಹಿಡಿದಿದ್ದ ಊರ್ಮಿಳಾದೇವಿ ಮೊದಲಾದ ಮೂರುಮಂದಿ ಹೆಂಗುಸರನ್ನು ಪೊಲೀಸರು ಹೊಣೆಕೇಳಲು, ಅವರು ಕೊಡಲಿಲ್ಲ. ಅದರ ಮೇಲೆ ಕಾರಾಗೃಹಕ್ಕೆ ಸಾಗಿಸಿದರು. ಆದರೆ ಸರ್ಕಾರದವರು ಆ ರಾತ್ರಿಯೇ ಅವರುಗಳನ್ನು ಬಿಡಿಸಿಬಿಟ್ಟರು. ತಾ|| ೧೧ರಲ್ಲಿ ೬೨ ಮಂದಿ ತಾ|| ೧೨ರಲ್ಲಿ ೫೦ ಮಂದಿ ಸ್ವಚ್ಛಂದ ಸೈನಿಕರನ್ನು ಹಿಡಿದರು. ತಾ|| ೧೨ರಲ್ಲಿ ಕಲಕತ್ತಾ ಪಟ್ಟಣವು ಶಾಂತವಾಗಿದ್ದುದರಿಂದ ಬೀದಿಗಳಲ್ಲಿದ್ದ ಸೈನ್ಯವನ್ನು ತೆಗೆದುಬಿಟ್ಟರು. ಚಿತ್ತರಂಜನದಾಸರನ್ನು ಎಸ್. ಎನ್. ಹಸನೂಲ್‌ರನ್ನು ಮ|| ಅಜದ್‌ರವರನ್ನೂ ಇನ್ನೂ ೪ ಮಂದಿಗಳನ್ನೂ ಕಾರಾಗೃಹದಲ್ಲಿ ವಿಚಾರಣೆಮಾಡಿ ಮುಂದಣ ವಿಚಾರಣೆಗಾಗಿ ತಾ|| ೨೩ಕ್ಕೆ ಇಟ್ಟಿರುವರು. ತಾ|| ೧೩ ರಲ್ಲಿ ೫೬ ಮಂದಿ ಸ್ವಚ್ಛಂದಸೇವಕರನ್ನು ಹಿಡಿದರು. ಸರೋಜನೀದೇವಿಯ ಸಹೋದರಿ ರಾಜನ್ ಸತಿಯನ್ನು ಹಿಡಿದಿದ್ದು ಬಿಟ್ಟುಬಿಟ್ಟರು. ಚಿತ್ತರಂಜನದಾಸರ ಕುಮಾರ ಚಿರರಂಜನದಾಸರ ವಿಚಾರಣೆಯು ತಾ|| ೯ ರಲ್ಲಿ ನಡೆದು ೧೦೦ ರೂ. ಅರ್ಥದಂಡವೂ ೬ ತಿಂಗಳ ಕಠಿನ ಕಾರಾಗೃಹವಾಸಶಿಕ್ಷೆಯೂ ಅವರಿಗೆ ವಿಧಿಸಲ್ಪಟ್ಟಿತು. ಅದೊಂದು ದಿನವೇ ೮೮ ಮಂದಿ ಕಾಂಗ್ರೆಸ್ ಸ್ವಚ್ಛಂದ ಸೇವಕರಿಗೆ ಶಿಕ್ಷೆ ವಿಧಿಸಲ್ಪಟ್ಟಿತು.

ಪಂಜಾಬು ಪ್ರಮುಖರಾದ ಲಾಲಾಲಜಪತರಾಯಿ ಸಂತಾನಂರವರೇ ಮೊದಲಾದವರ ವಿಚಾರಣೆಯು ಸ್ವಲ್ಪದೂರ ನಡೆದಿದೆ. "ನಾನು ಈ ಸರ್ಕಾರದ ಕೋರ್ಟುಗಳ ಅಧಿಕಾರವನ್ನು ಲೆಕ್ಕಿಸುವುದಿಲ್ಲ. ಜಿಲ್ಲಾ ಮೇಜಿಸ್ಟ್ರೇಟರು ನಮ್ಮ ಮೇಲೆ ಮಾಡಿದ ಅಪ್ಪಣೆಯು ನ್ಯಾಯವಾದುದಲ್ಲ. ನಾವು ಕೂಡಿಸಿದ್ದುದು ಬಹಿರಂಗಸಭೆಯಲ್ಲ"ಎಂದು ಮೊದಲಾಗಿ ಲಜಪತಿರಾಯಿರವರು ವಾದಿಸಿದರು. ಸಂತಾನಂ ಮೊದಲಾದವರು ಕೂಡ ತಾವು ಅಸಹಾಯವಾದಿಗಳಾದುದರಿಂದ ಈ ನ್ಯಾಯಸ್ಥಾನವನ್ನು ಲಕ್ಷಿಸುವುದಿಲ್ಲವೆಂದು ಹೇಳಿದರು. ಕಳೆದ ತಾ|| ೧೬ಕ್ಕೆ ಮರಳಿ ವಿಚಾರಣೆಗಿಡಲ್ಪಟ್ಟಿದ್ದಿತು. ತೀರ್ಪು ಇನ್ನೂ ಆಗಿಲ್ಲ. ಅಲಹಾಬಾದಿನ ಇಂಡಿಪೆಂಡೆಂಟ್ ಪತ್ರಿಕಾಸಂಪಾದಕರಾದ ಜಾರ್ಜ್ ಜೋಸೆಫ್‌ರವರಿಗೆ ೨೦೦೦ ರೂ. ಅರ್ಥದಂಡವೂ ೧|| ವರ್ಷ ಸಾಧಾರಣ ಕಾರಾಗೃಹವಾಸಶಿಕ್ಷೆಯೂ ಅರ್ಥದಂಡವನ್ನು ಕೊಡದಿದ್ದರೆ ಮತ್ತೆ ೩ ತಿಂಗಳ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟುವು. ಮತ್ತು ಪಂಡಿತ ಗೌರೀಶಂಕರಮಿತ್ರ, ಕೆ. ಬಿ. ಮಿತ್ರ ಇವರಿಬ್ಬರಿಗೆ ೬ ತಿಂಗಳ ಸಾಮಾನ್ಯ ಕಾರಾಗೃಹವಾಸಶಿಕ್ಷೆಯೂ ೧೦೦ ರೂ. ಅರ್ಥದಂಡವೂ, ಇದರಂತೆಯೇ ಅಲಹಾಬಾದ್ ಜಿಲ್ಲೆಯಲ್ಲಿ ಇನ್ನೂ ಅನೇಕರಿಗೆ ಸ್ವಚ್ಛಂದ ಸೈನ್ಯದಲ್ಲಿ ಸೇರಿದ್ದುದಕ್ಕೂ ಸಭೆಗಳನ್ನು ಜರುಗಿಸಿದುದಕ್ಕೂ ಸಹ ಶಿಕ್ಷೆಗಳು ವಿಧಿಸಲ್ಪಟ್ಟುವು. ತನ್ನ ಸಹೋದರನನ್ನು ಹಿಡಿದುಕೊಂಡ ಕಾರಣದಿಂದ ಸರ್ಕಾರಿ ಉದ್ಯೋಗಸಂಬಂಧವನ್ನು ತ್ಯಜಿಸಿಬಿಟ್ಟ ಶರ್ವಾನಿಯವರು ಅಲಹಾಬಾದ್ ಸ್ವಚ್ಛಂದಸೇವಕರ ವಿಜ್ಞಾಪನಪತ್ರಕ್ಕೆ ರುಜುಹಾಕಿದ್ದುದರಿಂದ ಹಿಡಿಯಲ್ಪಟ್ಟರು. ೧|| ವರ್ಷ ಕಾರಾಗೃಹವಾಸ ಶಿಕ್ಷೆಯಾಯಿತು.

ಕಲಕತ್ತಾದಲ್ಲಿ ತಾ|| ೮ರಲ್ಲಿ ಹಿಡಿಯಲ್ಪಟ್ಟಿದ್ದ ೧೪೫ ಮಂದಿಗಳ ವಿಚಾರಣೆಯನ್ನು ಅಲಿಪೂರ್ ಕಾರಾಗೃಹದಲ್ಲೇ ನಡೆಯಿಸಿ, ಕ್ಷಮಾಪಣೆ ಬೇಡಿದ ಒಬ್ಬನನ್ನು ಬಿಟ್ಟು ೮ ಮಂದಿಗೆ ತಲೆಗೆ ೨೫ ರೂ. ನಂತೆ ಅರ್ಥದಂಡ ವಿಧಿಸಿ, ಉಳಿದವರಿಗೆಲ್ಲಾ ೬ ತಿಂಗಳ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ಲಾಹೋರಿನಲ್ಲಿ ರಾಜದ್ರೋಹಸಭಾ ಶಾಸನವನ್ನು ಮೀರಿ ನಡೆದುದಕ್ಕಾಗಿ ಕೇಸರೀ ಪತ್ರಿಕಾಸಂಪಾದಕರಾದ ಲಾಲಾಶ್ಯಾಮಲಾಲರನ್ನೂ ಇನ್ನೂ ೬ ಮಂದಿ ಅಕಾಲಿಸಿಕ್ಕರನ್ನೂ ಹಿಡಿದರು. ಸಿಯಾಲ್ಕೋಟೆಯಲ್ಲಿ ೧೩ ಮಂದಿಯನ್ನೂ ಅಲ್ಲಿಯ ಕಾಂಗ್ರೆಸ್ ಸಂಘಕಾರ್ಯದರ್ಶಿಯಾದ ಅಬ್ದುಲ್‌ಹಕೀಂರನ್ನೂ ಹಿಡಿದರು.

ದಿಲ್ಲಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಂಘದ ಉಪಕಾರ್ಯದರ್ಶಿಯಾದ ಸುರಾಜ್‌ಬಾನ್‌ರವರನ್ನು ೧೨೪ ಎ. ಸೆಕ್ಷನ್ನಿನ ಪ್ರಕಾರ ಹಿಡಿದರು. ಮತ್ತು ೫೩ ಮಂದಿ ಸ್ವಚ್ಛಂದ ಸೈನಿಕರನ್ನೂ ಅಸಹಾಯವಾದಿ ಪ್ರಮುಖರಾದ ಬ್ಯಾರಿಸ್ಟರ್ ಅಸಫ್ ಆಲಿ ಎಂಬುವರನ್ನೂ ಸ್ವಚ್ಛಂದ ಸೇವಕರ ಉಡುಪನ್ನು ಧರಿಸಿ ಬೀದಿಯಲ್ಲಿ ತಿರುಗುತ್ತ ಆ ಸೇನೆಯಲ್ಲಿ ಸೇರಿದ್ದ ತಪ್ಪಿತಕ್ಕಾಗಿ ಹಿಡಿದರು. ಇವರು—ನಾವೆಲ್ಲಾ ಜಾತೀಯ ಸ್ವಚ್ಛಂದಸೇವಕ ಸಂಘಕ್ಕೆ ಸೇರಿದ ದೇಶಸೇವಾವ್ರತಪರಾಯಣರೆಂದೂ ನಾವೆಲ್ಲಾ ಜುಮ್ಮಾಮಸೀದಿಯಲ್ಲಿರುತ್ತೇವೆಂದೂ ಬೇಕಿದ್ದರೆ ನಮ್ಮನ್ನು ಹಿಡಿದುಕೊಳ್ಳಬಹುದೆಂದೂ ಒಂದು ಪತ್ರವನ್ನು ದಿಲ್ಲಿ ಡೆಪ್ಯುಟಿ ಕಮೀಷನರಿಗೆ ಬರೆದು, ಅದರ ಜತೆಯಲ್ಲಿ ಸ್ವಚ್ಛಂದ ಸೇವಾಸಂಘದ ನಿಯಮ ಪತ್ರಿಕೆಯೊಂದನ್ನು ಕಳುಹಿಸಿಕೊಟ್ಟಿದ್ದರು. ಅಲ್ಲಿದ್ದವರನ್ನೆಲ್ಲಾ ಪೊಲೀಸರು ಹಿಡಿದರು. ಅವರ ವಿಚಾರಣೆಯೆಲ್ಲಾ ತಾ|| ೧೩ರಲ್ಲಿ ನಡೆದು ಅಸಫಾಲಿಯವರಿಗೆ ೧೮ ತಿಂಗಳ ಸಾಮಾನ್ಯಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು. ಇನ್ನು ಕೆಲವರಿಗೆ ೬ ತಿಂಗಳ ಶಿಕ್ಷೆಯಾಯಿತು. ಮತ್ತೆ ಕೆಲವರ ವಿಚಾರಣೆಯು ನಡೆಯುತ್ತಿದೆ. ಅಬ್ದುಲ್‌ರಹಿಮಾನ್, ಟೌಕಿ, ಹಕ್ಸಾರ್, ದೇಶ ಬಂಧು, ನಾನಕ್‌ಸಿಂಗ್-ಇವರುಗಳನ್ನು ಹಿಡಿದರು. ವಾರಂಟುಗಳು ತಮ್ಮ ಮೇಲೆ ಹುಟ್ಟಿದೆಯೆಂದು ಸುದ್ದಿತಿಳಿದ ಕೂಡಲೇ ಇವರೇ ಹೋಗಿ ದಂಡಾಧಿಕಾರಿಯ ವಶವಾದರು.

ಪಂಜಾಬು ರಾಷ್ಟ್ರೀಯ ಕಾಂಗ್ರೆಸ್ ಸಭೆಗೆ ಆಕ್ಟಿಂಗ್ ಅಧ್ಯಕ್ಷರಾಗಿದ್ದ ಆಗಾ ಮಹಮ್ಮದ್‌ಘಸ್ದರ್‌ರವರನ್ನೂ ಇನ್ನು ಕೆಲರನ್ನೂ ಸಿಯಾಲ್ಕೋಟೆಯಲ್ಲಿ ಹಿಡಿದರು. ಅಲಹಾಬಾದಿನಲ್ಲಿ ಯುವಸಾರ್ವಭೌಮರ ಸ್ವಾಗತವನ್ನು ಬಹಿಷ್ಕರಿಸಬೇಕೆಂಬ ಪತ್ರಿಕೆಗಳನ್ನು ಗೋಡೆಗಳಿಗೆ ಅಂಟಿಸುತ್ತಿದ್ದರೆಂಬ ತಪ್ಪಿತಕ್ಕಾಗಿ ೮೦ ಮಂದಿಗೆ ಮೇಲ್ಪಟ್ಟ ಸ್ವಚ್ಛಂದ ಸೈನಿಕರನ್ನು ಹಿಡಿದರು. ಇಂಡಿಪೆಂಡೆಂಟ್ ಪತ್ರಿಕೆಗೆ ಈಚೆಗೆ ಹೊಸದಾಗಿ ಸಂಪಾದಕರಾಗಿದ್ದ ಬನಿರ್ಯಾಕವಾಸ್ಜಿ ಎಂಬುವರನ್ನು ಹಿಡಿದರು.

ಬಂಗಾಳಾದ ಮಿರ್ಜಾಪೂರು ಜಿಲ್ಲಾ ಕಾಂಗ್ರೆಸ್ ಸಂಘಾಧ್ಯಕ್ಷರಾದ ಯು. ಎನ್. ಬಾನರ್ಜಿಯವರನ್ನೂ ಇನ್ನು ೬ ಮಂದಿಯನ್ನೂ ಮಿರ್ಜಾಪೂರಿನಲ್ಲಿ ಹಿಡಿದರು.

ಕಲಕತ್ತಾದಲ್ಲಿ ಬಹುಮಂದಿ ಸ್ವಚ್ಛಂದ ಸೇವಕರನ್ನು ಹಿಡಿದು ಶಿಕ್ಷಿಸುತ್ತಿರುವುದರಿಂದ ಕಾರಾಗೃಹದಲ್ಲಿ ಸ್ಥಲವು ಸಾಲದೆ ಆಲಿಪೂರಿನಲ್ಲಿರುವ ಒಂದು ಸರ್ಕಾರಿ ಯಂತ್ರಾಲಯವನ್ನು ಕಾರಾಗೃಹವನ್ನಾಗಿ ಮಾಡಿದ್ದಾರೆ. ಅದರಲ್ಲಿ ೧೦೦೦ ಮಂದಿ ಬಂದಿಗಳನ್ನು ಇಡುವಷ್ಟು ಸ್ಥಲವಿದೆ.

ಇತ್ತ ಮದ್ರಾಸು ಆಧಿಪತ್ಯದಲ್ಲಿ ಇನ್ನು ಮುಂದೆ ಇದೇ ತೆರದ ನಿರ್ಬಂಧಗಳು ಹೆಚ್ಚಾಗಿ ನಡೆಯುವ ಲಕ್ಷಣಗಳು ತೋರುತ್ತಿವೆ. ಕೋಕನಾಡದಲ್ಲಿ ಕಾಂಗ್ರೆಸ್ ಸಂಘದವರು ತಮ್ಮ ಕಾರ್ಯಾಲಯದ ಮೇಲೆ ಸ್ವರಾಜ್ಯಪತಾಕೆಯನ್ನು ಸ್ಥಾಪಿಸಿಕೊಂಡಿದ್ದರು. ಸ್ಥಲೀಯಾಧಿಕಾರಿಗಳು ಸೈನಿಕರನ್ನು ಕೂಡಿಕೊಂಡು ಹೋಗಿ ಅದನ್ನು ತೆಗೆಯಲಿಕ್ಕೆ ಆಜ್ಞಾಪಿಸಿದರೂ

ಶ್ರೀ ಚಾಮುಂಡೇಶ್ವರಿ ನಾಟಕಸಭೆಯವರು ಕಳೆದ ತಾ|| ೧೧ರಲ್ಲಿ ಶಾಕುಂತಲ ನಾಟಕವನ್ನು ಬಹಳ ಶ್ಲಾಘ್ಯವಾಗಿ ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ಹೆಚ್ಚಾಗಿದ್ದಿತು. ನೆನ್ನೆಯದಿನ ವಿರಾಟಪರ್ವವನ್ನು ಅಭಿನಯಿಸುವವರಾಗಿದ್ದರು.

ತೆಗೆಯದೆ ಹೋದುದರಮೇಲೆ ಪೋಲೀಸರಿಂದ ತೆಗೆಯಿಸಿಬಿಟ್ಟರು. ಕಾಂಗ್ರೆಸ್ ಭಕ್ತರು ಮತ್ತೆ ಇನ್ನೊಂದು ಧ್ವಜವನ್ನು ಸ್ಥಾಪಿಸಿದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಬುಲುಸುಸಾಂಬಮೂರ್ತಿಯವರನ್ನೂ ತಾಲ್ಲೂಕು ಕಾಂಗ್ರೆಸ್ ಕಾರ್ಯದರ್ಶಿ ಮೊದಲಾದ ಇನ್ನು ಕೆಲವರನ್ನೂ ಹಿಡಿದು ಹೊಣೆಕೊಡದೆ ಹೋದುದರ ಮೇಲೆವಿಚಾರಣೆಗೆ ಗುರಿಪಡಿಸಿದ್ದಾರೆ. ಅನಂತಪುರ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾದ ಪೀರನಾರ್ಯಕವಿಗೂ ಸ್ವಚ್ಛಂದ ಸೇವಕರಾದ ಇನ್ನು ೪-೬ ಜನಕ್ಕೂ ೪ ತಿಂಗಳ ಪ್ರಕಾರ ಕಠಿನ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಮದ್ರಾಸು ಸರ್ಕಾರದವರು ತಮ್ಮ ಪ್ರಾಂತದಲ್ಲಿ ೧೯೦೮ನೆ ವರ್ಷದ ಕ್ರಿಮಿನಲ್ ಲಾ ಸಂವರಣವಿಧಿಯ ೨ನೆ ಭಾಗವನ್ನು ಎಂದರೆ ಪ್ರಭುತ್ವನಿಷಿದ್ಧಗಳಾದ ಅಕ್ರಮ ಸಂಘಗಳ ಸಂಬಂಧವನ್ನಿಟ್ಟುಕೊಂಡವರನ್ನು ಶಿಕ್ಷಿಸುವ ಶಾಸನವನ್ನು ವ್ಯವಹಾರಕ್ಕೆ ತರುತ್ತೇವೆಂದು ಪ್ರಕಟಿಸಿದ್ದಾರೆ. ಇದೇ ತೆರದ ಶಾಸನವ್ಯಾಪನೆಯನ್ನು ಬೀಹಾರ್ ಒರಿಸ್ಸಾ ಪ್ರಾಂತದ ಸರ್ಕಾರದವರೂ ವ್ಯವಹಾರಕ್ಕೆ ತಂದಿದ್ದಾರೆ.

ತಾ|| ೧೮ರಲ್ಲಿ ಕಲ್ಕತ್ತಾದೊಳಗೆ ೭೦ಮಂದಿ ಸ್ವಚ್ಛಂದ ಸೇವಕರನ್ನು ಹಿಡಿದರು. ಮ|| ಗಾಂಧಿಯವರ ಮಗನಿಗೂ ವಿಪಿನಚಂದ್ರಪಾಲರ ಮಗನಿಗೂ ಆರಾರು ತಿಂಗಳ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿತು. ಸರ್ ಪಿ. ಸಿ. ರೇ ಮೊದಲಾದ ೭ ಮಂದಿ ಮಿತವಾದಿ ದೊಡ್ಡಮನುಷ್ಯರುಗಳು—ಯುವರಾಜರು ಬಂದಿರುವ ಈಗಣ ಸಮಯದಲ್ಲಿ ಸರ್ಕಾರದವರು ಅವಲಂಬಿಸಿರುವ ತೀವ್ರನಿರ್ಬಂಧ ಪದ್ಧತಿಯನ್ನು ಆಕ್ಷೇಪಿಸಿ, ಇದು ಹಾನಿಕರವೆಂದೂ ಶಾಂತಿಮಾರ್ಗದಿಂದ ಆಂದೋಳನವನ್ನಡಗಿಸಬೇಕೆಂದೂ ತಿಳಿಯಿಸಿದ್ದಾರೆ.

ಕಾಂಗ್ರೆಸ್ ಕಾರ್ಯದರ್ಶಿ ಸಿ. ರಾಜಗೋಪಾಲಾಚಾರ್ಯರನ್ನೂ, ಅಮೃತಬಜಾರ್ ಪತ್ರಿಕೆಯ ಮುದ್ರಾಪಕರಾದ ತ್ವರಿತಕಾಂತಿವಿಶ್ವಾಸರವರನ್ನೂ ಸೆರೆಹಿಡಿದಿದ್ದಾರೆ.

ಒಳದೇಶದ ವೃತ್ತಾಂತಗಳು.

ಚಾಣಕ್ಯನ ಅರ್ಥಶಾಸ್ತ್ರ ವಿಷಯವಾಗಿ ಮಾಡಿದ ಕೃಷಿಗಾಗಿ ಮೆಚ್ಚಿ ನಮ್ಮ ಮ|| ಶ್ಯಾಮಾಶಾಸ್ತ್ರಿಗಳಿಗೆ ರಾಯಲ್ ಏಷ್ಯಾಟಿಕ್‌ಸೊಸೈಟಿಯ ಬೊಂಬಾಯಿ ಶಾಖೆಯವರು ಕಾಂಬೆಲ್ ಮೆಮೋರಿಯಲ್ ಪದಕವನ್ನು ಬಹುಮಾನಿಸಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಕೊಡಲ್ಪಟ್ಟಿದ್ದ ಪ್ರೆಸಿಡೆಂಟ್ ಎಲೆಕ್ಷನ್ ಅಧಿಕಾರವು ಪುನಃ ಬೆಂಗಳೂರು ಮ್ಯುನ್ಸಿಪಲ್ ಕೌನ್ಸಿಲಿನಲ್ಲಿ ಸಾರ್ಥಕವಾಗದೆ ಹೋದುದರಿಂದ ಪ್ರಭುತ್ವದವರು ಅಲ್ಲಿಗೆ ಒಬ್ಬ ಸರ್ಕಾರಿ ಉದ್ಯೋಗಿಗಳನ್ನೇ ಪ್ರೆಸಿಡೆಂಟಾಗಿ ನಾಮಿನೇಟ್ ಮಾಡುವವರಾಗಿದ್ದಾರೆಂದು ಸುದ್ದಿಯಿದೆ.

ವ್ಯವಸಾಯಶಾಖೆಯ ಕೆಲಸದಲ್ಲಿದ್ದ ಮ|| ಎ. ಸುಬ್ರಾಯಅಯ್ಯರು ಕಳೆದ ತಾ||೧೧ ರಲ್ಲಿ ಬೆಂಗಳೂರು ಕೆಂಪಾಂಬುಧಿ ಕೆರೆಗೆ ಸ್ನಾನಕ್ಕೆ ಹೋಗಿ ಈಜುತ್ತಿದ್ದು ಆಯತಪ್ಪಿ ಮುಳುಗಿ ವಿಧಿವಶರಾದರೆಂದು ಕೇಳಿ, ಚಿಕ್ಕವಯಸ್ಸಿನಲ್ಲೇ ಇಂಥ ದುರ್ಮರಣಕ್ಕೆ ಅವರು ಗುರಿಯಾದುದಕ್ಕಾಗಿ ವಿಷಾದಿಸುತ್ತೇವೆ.

ಸಿಕ್ಕಿದ್ದ ಅವಕಾಶವನ್ನು ಮ|| ಆರ್. ಎನ್. ಅಯ್ಯಂಗಾರರು ಕಳೆದುಕೊಂಡುದರಿಂದ ಗೌ|| ಅಡ್ವೋಕೇಟ್ ಕೆಲಸಕ್ಕೆ ಮ|| ಶಂಕರನಾರಾಯಣರಾವ್ ಎಂ. ಎ., ಬಿ. ಎಲ್. ರವರು ನಿಯಮಿಸಲ್ಪಟ್ಟರು. ಹಿಂದೆ ಒಂದೆರಡು ಸಲ ಆ ಕೆಲಸವನ್ನು ಸಮರ್ಪಕವಾಗಿ ನೆರವೇರಿಸಿದ್ದ ಇವರು ಆ ಸ್ಥಲಕ್ಕೆ ತಕ್ಕವರಾಗಿದ್ದಾರೆ.

ರೈಲ್ವೆ ಏಜಂಟರಾದ ಮಿ|| ಡಾಸಿಯವರ ಅಧಿಕಾರದ ಅವಧಿಯು ಮುಗಿಯುತ್ತಾ ಬಂದಿದೆ. ಮತ್ತೆ ಅವರನ್ನು ಹೆಚ್ಚು ಕಾಲ ಇಟ್ಟುಕೊಳ್ಳುವುದಕ್ಕಿಂತಲೂ ಸಂಸ್ಥಾನಕ್ಕೆ ನಷ್ಟವನ್ನೇ ಉಂಟುಮಾಡುತ್ತಲಿರುವ ರೈಲ್ವೆಶಾಖೆಯನ್ನು ಮೊದಲಿನಂತೆ ಎಂ. ಎಸ್. ಎಂ. ರೈಲ್ವೆ ಕಂಪನಿಯವರಿಗೇ ವಹಿಸಿಕೊಟ್ಟರೆ ಕ್ಷೇಮವಾದೀತು.

ಅರಸೀಕೆರೆಯ ಸಾಹುಕಾರ್ ಮ|| ಮರುಳಸಿದ್ದಪ್ಪನವರೂ ಅವರ ಕುಟುಂಬದವರೂ ರೇವಣಸಿದ್ಧೇಶ್ವರನ ಬೆಟ್ಟಕ್ಕೆ ಬಂದಿದ್ದು ಮರಳಿ ಹೋಗುವಾಗ್ಗೆ ಬೆಂಗಳೂರು ತೋಟದಪ್ಪನವರ ಸತ್ರದಲ್ಲಿ ಇಳಿದಿದ್ದಾಗ್ಗೆ ಅಜಾಗರೂಕತೆಯಿಂದ ಅವರ ೨ ಸೇರುತೂಕದ ಭಂಗಾರದ ಡಾಬು ಕಳವಾಗಿ ಹೋಯಿತು. ಇದು ಪೋಲೀಸಿಗೆ ವರದಿಯಾಗಿ ಪತ್ತೆ ತರದೂದಿನಲ್ಲಿದೆಯೆಂದು ಕೇಳುತ್ತೇವೆ.

ಫ್ರೆಂಚ್‌ರಾಕ್ಸ್ ಡೆ|| ಅಮಲ್ದಾರರಾದ ಮ|| ಸುಬ್ರಾಯರು ಮೇಲುಗೋಟೆಯಲ್ಲಿ ಬಹುದಿನದ ಹೋರಾಟದ ಒಂದು ಮೆರೆವಣಿಗೆ ಕೆಲಸವನ್ನು ಸ್ವತಃ ಪೋಲೀಸ್ ಸಿಬ್ಬಂದಿಯೊಡನೆ ನಿಂತು ನಡೆಯಿಸಲಿಕ್ಕಾಗಿ ಮೇಲ್ಪಟ್ಟ ಅಧಿಕಾರಿಗಳ ಅಪ್ಪಣೆ ಮೇರೆಗೆ ಮೇಲುಕೋಟೆಗೆ ತಾ|| ೮ರಲ್ಲಿ ಹೋಗಿದ್ದರು. ಉತ್ಸವವಾಗಬೇಕಾಗಿದ್ದ ಮಾರನೆ ದಿನದ ಬೆಳಗ್ಗೆ ಅವರು ಏನಾದರೋ ಯಾರಿಗೂ ಗೊತ್ತಿಲ್ಲದಂತಾಯಿತು. ಡಿ|| ಕಮೀಷನರು ಮೊದಲಾದಧಿಕಾರಿಗಳಿಗೆಲ್ಲಾ ತಂತ್ರೀವಾರ್ತೆ ಕೊಡಲ್ಪಟ್ಟಿದ್ದಿತು. ಸಬ್ ಡಿವಿಜನ್ ಆಫೀಸರು ಪೋಲೀಸ್ ಸೂಪರಿಂಟೆಂಡೆಂಟರು ಮೊದಲಾದವರು ಹೋಗಿ ತಡಕಾಡಿದರು. ೨ನೆ ದಿನ ಅವರ ಶವವು ಅಲ್ಲಿಯ ಕಲ್ಯಾಣಿಯಲ್ಲಿ ತೇಲುತ್ತಿದ್ದುದು ಗೊತ್ತಾಯಿತು. ಯಾವ ಕಾರಣದಿಂದ ಅವರಿಗೆ ಇಂಥ ದುರ್ಮರಣ ಸಂಭವಿಸಿತೆಂಬುದನ್ನು ಪತ್ತೆಮಾಡುವುದರಲ್ಲಿ ಪೋಲೀಸ್‌ಶಾಖೆಯವರು ಸಾಮರ್ಥ್ಯವನ್ನು ತೋರಿಸಲಿ.

ಭರತಖಂಡದ ವೃತ್ತಾಂತಗಳು.

ತಾ|| ೧೧ ರಲ್ಲಿ ಸೀಮೆಯಿಂದ ಬೊಂಬಾಯಿಗೆ ಬಂದು ನಿಂತ ಪ್ಲಾಸಿ ಎಂಬ ಅಂಚೆಹಡಗಿನಲ್ಲಿ ಸರ್ ಶಂಕರನ್ ನಾಯರ್ ರವರೂ, ಜೆ. ಎನ್. ಗುಪ್ತರವರೂ ಬಂದರು.

ನ್ಯಾಯಶಾಖೆಯನ್ನೂ ಕಾರ್ಯನಿರ್ವಾಹಕಶಾಖೆಯನ್ನೂ ಬೇರ್ಪಡಿಸಬೇಕೆಂದು ಭರತಖಂಡದ ಶಾಸನಸಭೆಯವರು ಮಾಡಿ ಕಳುಹಿಸಿದ್ದ ತೀರ್ಪನ್ನು ವೈಸ್ರಾಯರು ತಿರಸ್ಕರಿಸಿಬಿಟ್ಟರು.

ಭರತಖಂಡ ಸರ್ಕಾರದವರು ೫|| ಬಡ್ಡಿಯಮೇರೆಗೆ ೧೦ ವರ್ಷ ವಾಯಿದೆಯಲ್ಲಿ ಹಿಂದಿರುಗಿಸುವ ನಿಬಂಧನೆಯಮೇಲೆ ೧ ಕೋಟಿ ಪೌನುಗಳ ಸಾಲವನ್ನು ಈ ದೇಶದಲ್ಲೂ ಇಂಗ್ಲೆಂಡಿನಲ್ಲೂ ತೆಗೆಯುತ್ತಿದ್ದಾರೆ.

ಕಲಕತ್ತಾದಲ್ಲಿ ಸ್ಥಾಪಿಸಲ್ಪಡುವ ವಿಕ್ಟೋರಿಯಾ ಸ್ಮಾರಕಸ್ಥಾಪನೆಯ ಫಂಡಿಗೆ ನೈಜಾಮರು ೧ ಲಕ್ಷ. ಇಂದೂರು ಮಹಾರಾಜರು ೧ ಲಕ್ಷ. ಬರೋಡಾ ಮಹಾರಾಜರು || ಲಕ್ಷ ರೂ. ಗಳನ್ನು ಕಳುಹಿಸಿಕೊಟ್ಟಿದ್ದಾರೆ.

ತಂತಿಯಿಲ್ಲದೆ ವಾರ್ತೆಯನ್ನು ಕಳುಹಿಸುವ ಯಂತ್ರಸಾಧನವನ್ನು ಈ ದೇಶಕ್ಕೆ ಪರದೇಶಗಳಿಂದ ತಂತಿಯ ಅಂಚೆಯ ಶಾಖಾಧಿಕಾರಿಗಳ ಅನುಮತಿ ಪಡೆಯದೆ ಯಾರೂ ತರಿಸಿಕೊಳ್ಳಕೂಡದೆಂದು ಇಂಡ್ಯಾ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ವರ್ಧ್ವಾನ್ ಸಂಸ್ಥಾನದವರು ತಮ್ಮ ದೇಶದಲ್ಲಿ ಹತ್ತಿಯಿಂದ ಖಾದಿ ನೂಲನ್ನು ಮಾಡಿದವರಿಗೆ ಒಂದು ಸುಂಕ, ನೂಲಿನಿಂದ ಖಾದಿ ಬಟ್ಟೆನೆಯ್ದುದಕ್ಕೆ ೧ ಸುಂಕ, ಆ ಖಾದಿಯನ್ನು ಮಾರುವುದಕ್ಕೆ ಒಂದು ಸುಂಕ, ಹೀಗೆ ೩ ತೆರದ ಸುಂಕಗಳನ್ನು ವಿಧಿಸಿರುವರಂತೆ.

ಭೂಗಂದಾಯವನ್ನು ೩೦ ವರ್ಷಕ್ಕೊಂದುಸಲ ಬದಲಾಯಿಸದೆ ಯಾವಾಗ್ಗೂ ಶಾಶ್ವತವಾಗಿರುವಂತೆ ಕಂದಾಯ ದೇರ್ಪಾಟನ್ನು ಮಾಡಬೇಕೆಂಬ ತೀರ್ಮಾನವು ಮದ್ರಾಸು ಶಾಸನಸಭೆಯಲ್ಲಿ ಬಹುಮತದಿಂದ ಉತ್ತೀರ್ಣವಾಯಿತು. ಸರ್ಕಾರದವರು ಏನುಮಾಡುವರೋ ನೋಡಬೇಕು.

ಇದೇ ಡಿಸೆಂಬರ್ ತಾ|| ೨೮-೨೯ರಲ್ಲಿ ಕರ್ನೂಲುಪಟ್ಟಣದೊಳಗೆ ರಡ್ಡಿ ಜನರ ವಾರ್ಷಿಕ ಸಭೆಯು ವನಸ್ಪತ್ರರಾಜರ ಅಧ್ಯಕ್ಷತೆಯಿಂದ ನಡೆಯುವುದು. ಇದಕ್ಕೆ ಮದ್ರಾಸು ಆಧಿಪತ್ಯದ ಎಲ್ಲಕಡೆಯಿಂದಲೂ ಮೈಸೂರು, ಹೈದರಾಬಾದು ದಕ್ಷಿಣ ಮಹಾರಾಷ್ಟ್ರ—ಈ ಭಾಗಗಳಿಂದಲೂ ರಡ್ಡಿಮಹಾಜನರು ಸೇರುವರು.

ಹತ್ತಿ ಬಿತ್ತವನ್ನು ಕಾಫಿ ಬಿತ್ತದಂತೆಯೇ ಸುವಾಸನೆ ಹುಟ್ಟುವವರೆಗೆ ಹುರಿದು ಪುಡಿಮಾಡಿ ಕಾಫಿಯಂತೆ ಕಷಾಯ ಕಾಯಿಸಿ ಹಾಲು ಸಕ್ಕರೆಗಳನ್ನು ಮಿಶ್ರಮಾಡಿ ಕುಡಿದರೆ ವೀರ್ಯವೃದ್ಧಿಯೂ ದೇಹಾರೋಗ್ಯವೂ ಉಂಟಾಗುವುವೆಂದೂ, ಮಿತಿಮೀರಿ ಕುಡಿದರೆ ವಾತವು ಹೆಚ್ಚುವುದೆಂದೂ ಒಬ್ಬ ಅನುಭವಸ್ಥರು ತಿಳಿಯಿಸುತ್ತಾರೆ.

ಎಸ್. ಐ. ಆರ್. ರೈಲ್ವೆಯ ಒಬ್ಬ ಗಾರ್ಡು ಒಂದು ಹೊಗೆಬಂಡಿಗೆ ಪರಿಮಿತಿಗಿಂತ ಹೆಚ್ಚು ಜನರನ್ನು ತುಂಬಿದುದರಿಂದ ಪ್ರಯಾಣಿಕರಲ್ಲೊಬ್ಬನು ಕೇಸುಮಾಡಲಾಗಿ, ವಿಚಾರಣೆ ಕಾಲದಲ್ಲಿ ಗಾರ್ಡು ಆ ಟ್ರೇನಿನಲ್ಲಿ ಇರಬೇಕಾದ ಜನಕ್ಕಿಂತಲೂ ಕಡಿಮೆ ಜನರಿದ್ದರೆಂದು ವಾದಿಸಿದರೂ, ಆದ್ಯಂತ ಟ್ರೇನಿನ ಲೆಕ್ಕವನ್ನು ಗ್ರಹಿಸಲಾಗದೆಂದೂ, ಆಯಾ ಬಂಡಿಯಲ್ಲಿರಬೇಕಾದ ಸಂಖ್ಯೆಯನ್ನು ಗಮನಿಸಬೇಕೆಂದೂ ದಂಡಾಧಿಕಾರಿಯು ಹೇಳಿ ಗಾರ್ಡಿಗೆ ೧ ರೂ. ಅರ್ಥದಂಡವನ್ನು ವಿಧಿಸಿದರು.

ಶ್ರೀಮನ್ ಯುವಸಾರ್ವಭೌಮರವರು ಹೈದರಾಬಾದು ಪಟ್ಟಣಕ್ಕೆ ದಯಮಾಡಿಸಿದಾಗ್ಗೆ ಅವರನ್ನು ಸತ್ಕರಿಸುವ ಏರ್ಪಾಟುಗಳ ಸಂದರ್ಭದಲ್ಲಿ ನೈಜಾಂರವರು ಅಲ್ಲಿ ಅದ್ಭುತಗಳಾದ ೩ ಕಮಾನುಗಳನ್ನು ಕಟ್ಟಿಸುತ್ತಿರುವರು. ೧ ಆ ದೇಶದ ಎಲ್ಲತರದ ಖನೀಜವಸ್ತುಗಳಿಂದಲೂ, ಮತ್ತೊಂದು ಆ ದೇಶದಲ್ಲಿ ಬೆಳೆಯುವ ಧಾನ್ಯವಸ್ತುಗಳಿಂದಲೂ, ಮತ್ತೊಂದು ಆ ದೇಶದಲ್ಲಿರುವ ನಾನಾತರ ಕೈಗಾರಿಕೆಗಳ ಕೌಶಲವನ್ನು ತೋರಿಸುವ ಅಮೌಲ್ಯವಾದ ವಸ್ತುಗಳಿಂದಲೂ ಕಟ್ಟಲ್ಪಡುತ್ತಿರುವುವು.

ಕಳೆದ ೧ ಪಕ್ಷದಲ್ಲಿ ೫೦೦೦ ಮಂದಿ ಮಾಪಿಳ್ಳೆಗಳು ಶರಣಾಗತರಾಗಿದ್ದಾರೆ. ಆದರೂ ಕೆಲವುಕಡೆ ಅವರ ಹಾವಳಿಯು ವಿಪರೀತವಾಗಿದೆ. ಕಳೆದವಾರ ಪಂದಲೂರು ಎಂಬ (ಇದು ನೆಲ್ಯಾಳಂ ಅರಮನೆಗೆ ೩ ಮೈಲಿಗಳ ದೂರದಲ್ಲಿದೆ) ಗ್ರಾಮಕ್ಕೆ ನುಗ್ಗಿ ಸೂರೆಮಾಡಿದರು. ಆಗ ನಡೆದ ಕದನದಲ್ಲಿ ಮೂವರು ಪೋಲೀಸರೂ ಒಬ್ಬ ಇನ್‌ಸ್ಪೆಕ್ಟರೂ ಸತ್ತರು. ಪೋಲೀಸ್ ಸೂಪರಿಂಟೆಂಡೆಂಟರು ಏನಾದರೋ ಗೊತ್ತಾಗಲಿಲ್ಲ. ಈ ಸುದ್ದಿಯನ್ನು ಕೇಳಿ ನೀಲಗಿರಿ ಜಿಲ್ಲಾಮ್ಯಾಜಿಸ್ಟ್ರೇಟರು ಅಲ್ಲಿಗೆ ಹೋಗಿರುವರು.

ಈಗ ಭರತಖಂಡದಲ್ಲಿ ಸರ್ಕಾರದವರು ನಡೆಯಿಸುತ್ತಿರುವ ಕಠಿನ ನಿರ್ಬಂಧಗಳನ್ನು ನೋಡಿ ಸಾಮ್ರಾಜ್ಯಶಾಸನಸಭೆಯ ಸಭಿಕರಾದ ಮಜುಂದಾರ್, ರಂಗಾಚಾರ್ಲು, ಈಶ್ವರಚರಣ್, ನಿಯೋಗಿ—ಈ ನಾಲ್ವರು ಒಂದು ಪ್ರಕಟನವನ್ನು ಮಾಡಿ, ಇಂಥ ನಿರ್ಬಂಧಗಳಿಂದ ತಾತ್ಕಾಲಕ್ಕೆ ದೇಶದಲ್ಲಿ ಶಾಂತಿ ತೋರಿದರೂ ಕಡೆಗೆ ದೊಡ್ಡ ಅಶಾಂತಿಹುಟ್ಟುವುದೆಂದೂ, ಅದುಕಾರಣ ಎಲ್ಲ ಪಕ್ಷದ ದೇಶೀಯ ನಾಯಕರನ್ನೂ ಒಂದುಕಡೆ ಕೂಡಿಸಿ ಅವರೊಡನೆ ದೇಶಶಾಂತಿಯ ಉಪಾಯವೇನೆಂಬುದನ್ನು ಪ್ರಭುತ್ವದವರು ಪರ್ಯಾಲೋಚಿಸಬೇಕೆಂದು ತಿಳಿಯಿಸಿದ್ದಾರೆ.

ತಾ|| ೪ರಲ್ಲಿ ಕಾಶೀ ಪಟ್ಟಣದಲ್ಲಿ ಹಿಂದೂ ವಿಶ್ವವಿದ್ಯಾಲಯದ ಸಾಂವತ್ಸರಿಕ ಪಟ್ಟಪ್ರದಾನ ಸಭೆಯು ಕೂಡಿದ್ದಿತು. ಮೈಸೂರು ಮಹಾರಾಜರವರು ಅಗ್ರಾಸನವನ್ನಲಂಕರಿಸಿ ಪಟ್ಟಾಂಚಿತರಾದ ವಿದ್ಯಾರ್ಥಿಗಳನ್ನೆಲ್ಲಾ ಅಭಿನಂದಿಸಿ ಉಪನ್ಯಾಸ ಮಾಡಿದರು. ಆನಿಬೆಸಂಟಮ್ಮನವರಿಗೆ "ಡಾಕ್ಟರ್ ಆಫ್ ಲೆಟರ್ಸ್" ಎಂಬ ಬಿರುದನ್ನು ಕೊಟ್ಟರು. ಬಳಿಕ ಅಲ್ವಾರ್ ಮಹಾರಾಜರೂ ವೈಸ್‌ಚಾನ್ಸಲರಾದ ಮಾಳವ್ಯರವರೂ ಉಪನ್ಯಾಸ ಮಾಡಿದರು. ಕಲ್ಕತ್ತಾದ ಬಿ. ಚಾಟರ್ಜಿ ಎಂಬುವರು ೧| ಲಕ್ಷ ರೂ. ಗಳನ್ನು ಆ ವಿಶ್ವವಿದ್ಯಾಲಯಕ್ಕಾಗಿ ದಾನಮಾಡಿದರು.

ರಾಜಕೀಯಪಕ್ಷಗಳಲ್ಲಿ ಮಿತವಾದಿ ಉಗ್ರವಾದಿಗಳೆಂಬೆರಡೇ ಅಲ್ಲದೆ ಉಗ್ರವಾದಿಗಳಾದ ಅಸಹಾಯಪಕ್ಷದವರಲ್ಲೂ ಭಿನ್ನಮತದವರಿದ್ದಾರೆ. ಅಂಥವರ ಸಭೆಯು ಠಾಣಾಜಿಲ್ಲೆಯ ಅಕೋಲಾದಲ್ಲಿ ಜಯಕರ್‌ರವರ ಅಧ್ಯಕ್ಷತೆಯಿಂದ ಕೂಡಿದ್ದಿತು. ಈ ಪಕ್ಷದವರ ಅಭಿಪ್ರಾಯವೇನೆಂದರೆ—ಸ್ವರಾಜ್ಯಪ್ರಾಪ್ತಿಗೆ ಗಡುಬನ್ನೇರ್ಪಡಿಸಿಕೊಳ್ಳಕೂಡದು. ಶಾಸನಸಭೆಗಳನ್ನು ತಿರಸ್ಕರಿಸಕೂಡದು. ಅವುಗಳಿಗೆ ಸಭಿಕರಾಗಿ ನಿಂತು ಸರ್ಕಾರವನ್ನು ತಮ್ಮ ಅಭಿಪ್ರಾಯಕ್ಕೆ ತಿರುಗುವಂತೆ ಮಾಡಿಕೊಳ್ಳಬೇಕು. ಆದರೆ ಅವುಗಳಲ್ಲಿ ಮಂತ್ರಿತ್ವವನ್ನು ವಹಿಸಬಾರದು. ವಿದ್ಯಾರ್ಥಿಗಳು ಸರ್ಕಾರಿ ಪಾಠಶಾಲೆಗಳ ವಕೀಲರು ಕೋರ್ಟುಗಳ ಪರಿತ್ಯಾಗವನ್ನು ಮಾಡಕೂಡದು. ವಿದೇಶವಸ್ತ್ರ ಬಹಿಷ್ಕಾರವು ಕೂಡದು. ಎಂಬುದಾಗಿ.

ಅಮೇರಿಕಾಕ್ಕೆ ಹೋಗಿರುವ ಆ|| ಶ್ರೀನಿವಾಸಶಾಸ್ತ್ರಿಯವರು ಲಂಡನ್ ಟೈಮ್ಸ್‌ಪತ್ರಿಕೆಗೆ ಬರೆದಿರುವ ಒಂದು ಲೇಖನದಲ್ಲಿ ಮ|| ಗಾಂಧಿಯವರ ವಿಷಯವಾಗಿ ಹೀಗೆ ಬರೆದಿರುತ್ತಾರೆ—"ಬೆಳಸು ಹಣ್ಣಿಗೆ ಬಂದು ಕುಯ್ಲಿಗೆ ಸಿದ್ಧವಾಗುತ್ತಿರುವ ಸಮಯದಲ್ಲಿ ಪಾಶ್ಚಾತ್ಯನಾಗರಿಕತೆಗೆ ನಾನು ಶತ್ರುವೆಂದು ಪ್ರಕಟಿಸಿಕೊಂಡು ಕೆಲವು ವಾರಗಳೊಳಗಾಗಿ ಪ್ರಜೆಗಳಿಗೆ ತನ್ನ ಸ್ವಂತದ ಸ್ವರಾಜ್ಯವನ್ನು ಕೊಡಿಸುವೆನೆಂದು ವಾಗ್ದಾನಮಾಡುತ್ತಿರುವ ಈ ಸನ್ಯಾಸಿ ಯಾರು? ಈ ನೂತನಸ್ವರಾಜ್ಯವು ಎಂತಹುದು? ಅದರ ಸ್ವರೂಪವು ಆತನಿಗಾದರೂ ತಿಳಿಯುವುದೇ? ಭರತಖಂಡವು ಈ ವಿಲಕ್ಷಣಸನ್ಯಾಸಿಯನ್ನು ಅನುಸರಿಸುವುದೆ? ಅಥವಾ ತನ್ನನ್ನು ಗಮ್ಯಸ್ಥಾನಕ್ಕೆ ಕೆಲವಡಿಗಳವರೆಗೆ ಸಾಗಿಸಿಕೊಂಡು ಹೋಗಿರುವ ಶಾಂತಿಪೂರ್ಣವಾದ ಅಭಿವೃದ್ಧಿಮಾರ್ಗವನ್ನು ಅನುಸರಿಸುವುದೆ?

ರಾಜಕೀಯಾಪರಾಧದಿಂದ ಈಗ ಅನೇಕರು ಕಾರಾಗೃಹಶಿಕ್ಷೆಗೆ ಗುರಿಮಾಡಲ್ಪಡುತ್ತಿದ್ದಾರಷ್ಟೆ. ಇವರುಗಳಿಗೆ ಪ್ರತ್ಯೇಕವಾದ ಸೌಕರ್ಯಗಳೇನನ್ನೂ ಕಾರಾಗೃಹದಲ್ಲಿ ಕಲ್ಪಿಸಿಕೊಡದೆ ಸಾಮಾನ್ಯ ಶಿಕ್ಷಿತರನ್ನಂತೆಯೇ ಕಾಣುತ್ತಿದ್ದಾರೆ. ಇದನ್ನು ಕಂಡು ದೇಶೀಯರಲ್ಲಿ ಅನೇಕರು ಅಸಮಾಧಾನಪಡುತ್ತಿದ್ದಾರೆ. ಆದರೆ ಈಗ ಅಸಹಾಯವಾದಿಗಳು ಕಾರಾಗೃಹವನ್ನು ಕೃಷ್ಣನ ಜನ್ಮಸ್ಥಲವಾದ ಪವಿತ್ರಮಂದಿರವೆಂದು ನುಡಿಯುತ್ತ, ಕಾರಾಗೃಹವಾಸವೆಂದರೆ ಸಂತೋಷದಿಂದ ಅಂಗೀಕರಿಸಲು ಸಿದ್ಧರಾಗಿರುವಾಗ, ಇಂಥವರುಗಳ ಪಟಾಲಮ್ಮಿಗೆಲ್ಲಾ ಅಲ್ಲಿ ಅತ್ತೆಮನೆಯಂತೆ ಭೋಜನಾದಿಸೌಕರ್ಯಗಳನ್ನು ಒದಗಿಸುವುದಕ್ಕೂ ಏರ್ಪಡಿಸಿದರೆ, ಮತ್ತಷ್ಟು ಕಾರಾಗೃಹಶಿಕ್ಷೆಯ ಭೀತಿಯೇ ತಪ್ಪಿಹೋಗಿ ಅಪರಾಧಗಳು ಹೆಚ್ಚಬಹುದಲ್ಲದೆ ಇಂಥ ಪಟಾಲಮ್ಮಿನ ಪೋಷಣೆಗೇ ಒಡ್ಜೆಟ್ಟಿನಲ್ಲಿ ಮತ್ತಷ್ಟು ಅಲಾಟ್‌ಮೆಂಟನ್ನು ಹೆಚ್ಚುಮಾಡಬೇಕಾದೀತೆಂದು ಗೌರ್ನಮೆಂಟಿನವರು ಭಾವಿಸಿರುವಂತಿದೆಯೆಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

ಯುವಸಾರ್ವಭೌಮರ ಆಗಮನಗೌರವಾರ್ಥವಾಗಿ ಬೊಂಬಾಯಿಯಲ್ಲಿ ಏರ್ಪಡಿಸಲ್ಪಟ್ಟಿದ್ದ ವಿಚಿತ್ರ ವಿಷಯಗಳೊಳಗೆ ಪೂರ್ವದೇಶಗಳ ನಾನಾತರದ ದೀರ್ಘಕಾಲದ ಅಂಚೆಯ ಸ್ಟಾಂಪುಗಳನ್ನು ಸಂಗ್ರಹಿಸಿ ಮಾಡಿದ್ದ ಪ್ರದರ್ಶನವು ಮೊದಲನೆಯದಾಗಿದ್ದಿತು. ಅನೇಕರು ಅವನ್ನು ಪ್ರದರ್ಶನಕ್ಕಿಟ್ಟಿದ್ದರು. ೫೦ ಅಡಿಗಳ ಅಗಲಕ್ಕೆ ಭೂಪಟದಂತೆ ಅಂಟಿಸಿದ್ದ ನಾನಾ ವರ್ಣದ ಚಿತ್ರವಿಚಿತ್ರವಾದ ಸ್ಟಾಂಪುಗಳು ೧೮೫೪ನೆ ವರ್ಷದಿಂದಲೂ ವ್ಯವಹಾರಕ್ಕೆ ಬಂದಿದ್ದ ನಾನಾದೇಶದ ನಾನಾತರದ ಸ್ಟಾಂಪುಗಳಾಗಿ ರಮಣೀಯವಾಗಿದ್ದುವು. ಅದನ್ನು ಎಲ್ಲರೂ ಮೆಚ್ಚಿದರು. ಅದನ್ನು ಕೆ.ಡಿ. ಕೂಪರ್ ಎಂಬವರು ಶೇಖರಿಸಿದ್ದರು. ಅವರಿಗೆ ಸರ್ ಫಜುಲ್‌ಭಾಯಿ ಕರೀಂಭಾಯಿರವರು ಏರ್ಪಡಿಸಿದ್ದ ಭಂಗಾರದ ಪದಕವು ಕೊಡಲ್ಪಟ್ಟಿತು. ಇನ್ನೊಬ್ಬರು ೩೦ ವರ್ಷಕಾಲದ ಸ್ಟಾಂಪುಗಳನ್ನೆಲ್ಲಾ ಹಾಗೆಯೇ ಶೇಖರಿಸಿದ್ದರು. ಅದಕ್ಕೆ ಎ. ಡಿ. ಪದ್ಮಾಜಿಯವರ ಭಂಗಾರದ ಪದಕವು ದೊರೆದಿತು. ಇನ್ನೂ ೩-೪ನೆ ತರಗತಿಯ ಬಹುಮಾನಗಳು ಮೂವರಿಗೆ ದೊರೆದುವು.

ವಿದೇಶದ ವೃತ್ತಾಂತಗಳು.

ಇಂಗ್ಲೆಂಡಿಗೂ ಐರ್ಲಂಡಿಗೂ ಸಂಧಿ ಕುದುರಿದುದರಿಂದ ಸೆರೆಹಿಡಿದಿಟ್ಟಿದ್ದ ಐರಿಷ್ ಬಂದಿಗಳನ್ನೆಲ್ಲಾ ಬಿಟ್ಟುಬಿಡಲಿಕ್ಕೆ ಜಾರ್ಜ್‌ಸಾರ್ವಭೌಮರು ಅಪ್ಪಣೆಮಾಡಿದ್ದಾರೆ.

ಅಮೇರಿಕಾದ ಅಧ್ಯಕ್ಷರು ರಷ್ಯಾದ ಕ್ಷಾಮನಿವಾರಣೆಗಾಗಿ ೧ ಕೋಟಿಯೂ ೧೦ ಲಕ್ಷ ಬುಷಲ್ ಧಾನ್ಯವನ್ನು ತಮ್ಮ ದೇಶದಿಂದ ಸಹಾಯಮಾಡಲು ಅಪ್ಪಣೆಮಾಡಿದ್ದಾರೆ.

ಈಗ ಉಂಟಾಗಿರುವ ಐರ್ಲಂಡ್ ಸಂಧಿನಿಬಂಧನೆಗಳಿಗೆ ಒಪ್ಪದಿರುವವರು ಐರ್ಲಂಡಿನಲ್ಲಿ ಇನ್ನೂ ಅನೇಕರಿದ್ದಾರೆ. ಆದರೆ ಒಪ್ಪದಿರುವವರ ಸಂಖ್ಯೆಗಿಂತಲೂ ಒಪ್ಪುವವರ ಸಂಖ್ಯೆಯೇ ಮಿಗಿಲಾಗಿದೆ.

ಆಸ್ಟ್ರೇಲಿಯಾ ದೇಶದಲ್ಲಿ ಜನಸಂಖ್ಯೆಯು ಬಹು ಹೆಚ್ಚುತ್ತಿರುವುದರಿಂದ ಮನೆಗಳ ಬೆಲೆಯೂ ಬಾಡಿಗೆಯೂ ವಿಶೇಷವಾಗಿ, ಹಲವು ಜನರು ಸ್ವಂತದ ಮನೆಗಳನ್ನು ಊರಿನಲ್ಲಿ ಸಂಪಾದಿಸಿಕೊಳ್ಳಲು ಶಕ್ತಿಯಿಲ್ಲದೆ ಮರಗಳ ಕೊಂಬೆಗಳಮೇಲೆ ಅಟ್ಟಣೆಗಳಂತೆ ಮನೆಗಳನ್ನು ಕಟ್ಟಿಕೊಂಡೂ ಮರಗಳ ಪೊಟ್ಟರೆಯಲ್ಲಿ ವಾಸಮಾಡಿಕೊಂಡೂ ಜೀವಿಸುತ್ತಿರುವರು.

ಅಂಗಾರಕಗ್ರಹವು ೧೯೨೪ ನೆ ವರ್ಷದಲ್ಲಿ ಭೂಮಂಡಲಕ್ಕೆ ಬಹಳ ಸಮೀಪಕ್ಕೆ ಬರುವುದಂತೆ. ಆ ಕಾಲದಲ್ಲಿ ಅಂಗಾರಕಗ್ರಹದೊಳಗಣ ವಿದ್ಯಮಾನಗಳನ್ನು ಕಂಡುಕೊಳ್ಳುವುದಕ್ಕಾಗಿ ಹಾರ್ವರ್ಡ್ ವಿಶ್ವವಿದ್ಯಾಲಯದ ಜ್ಯೋತಿಶಾಸ್ತ್ರಶಾಖಾಧ್ಯಕ್ಷರಾದ ಪ್ರೊ|| ಟಾಡ್‌ರವರು ಪ್ರಯತ್ನಿಸಿ ಒಂದು ದೊಡ್ಡ ದುರ್ಬೀನನ್ನು ನಿರ್ಮಿಸುತ್ತಲಿರುವರು. ಈ ದುರ್ಬೀನಿನಿಂದ ಅಂಗಾರಕಗ್ರಹವನ್ನು ನೋಡಿದರೆ ಅದು ೨ ಮೈಲಿಯ ದೂರದಲ್ಲಿರುವಂತೆ ಕಾಣಬರುವುದಂತೆ.

ಐರ್ಲಂಡಿಗೆ ಸ್ವಾತಂತ್ರ್ಯಪ್ರದಾನ ಮಾಡುವ ಬಿಲ್ಲನ್ನು ಅನುಮೋದಿಸಲಿಕ್ಕಿರುವ ಪಾರ್ಲಿಮೆಂಟ್ ಸಭೆಯು ಇಷ್ಟರಲ್ಲೇ ಕೂಡುವುದಕ್ಕಿದೆಯಷ್ಟೆ. ಅದನ್ನು ತೆರೆಯುವುದಕ್ಕಾಗಿ ಜಾರ್ಜ್‌ಸಾರ್ವಭೌಮರು ಪ್ರಾಚೀನವೈಭವದಿಂದ ಉತ್ಸವಗೊಂಡು ಹೋಗುವವರಾಗಿದ್ದಾರೆ. ೮ ಕುದುರೆಗಳನ್ನು ಹೂಡಿದ ಪುರಾತನ ಪರಂಪರಾಗತ ರಾಜರಥದಲ್ಲಿ ಪತ್ನೀಸಮೇತರಾಗಿ ಕುಳಿತು ತೆರಳುವ ಅವರ ಮಹೋತ್ಸವವನ್ನು ನೋಡಲಿಕ್ಕೆ ಈಗಣಿಂದ ಪ್ರಜೆಗಳು ಮಹಾ ಕುತೂಹಲಗೊಂಡಿದ್ದಾರೆ.

ಇಂಗ್ಲಂಡ್‌ದೇಶದ ಅಲ್ವರ್‌ಸಾಟ್ ಎಂಬ ಪಟ್ಟಣದಲ್ಲಿ ೧೦೩ ವರ್ಷದ ಒಬ್ಬ ಮುದುಕನಿದ್ದಾನೆ. ಅವನು ಈಗಲೂ ಪರರ ಸಹಾಯವಿಲ್ಲದೆ ಎಲ್ಲಿಗಾದರೂ ನಡೆದಾಡುತ್ತಿದ್ದಾನೆ. ಹಲ್ಲುಗಳು ದೃಢವಾಗಿವೆ, ಕಣ್ಣು ಕಾಣಿಸುತ್ತಿದೆ, ಕಿವಿ ಕೇಳಿಸುತ್ತಿದೆ. ತನ್ನ ಕ್ಷೌರವನ್ನು ತಾನೇ ಮಾಡಿಕೊಳ್ಳುತ್ತಾನೆ. ಇವನಹೆಸರು ಐಸಕ್‌ಲಾಂಬರ್ಟ್ ಎಂಬುದಾಗಿ. ಇವನ ಚಿಕ್ಕಂದಿನಲ್ಲಿ ಇವನ ಊರು ಸಣ್ಣ ಗುಡಿಸಲುಗಳುಳ್ಳ ಒಂದು ಪಣ್ಣವಾಗಿದ್ದಿತಂತೆ. ಅದನ್ನು ಈಗಣಷ್ಟು ವಿಶಾಲಸ್ಥಿತಿಗೆ ತರಲಿಕ್ಕೆ ಈತನು ಪಟ್ಟ ಸಾಹಸವು ವರ್ಣಿಸಲಸದಳವು. ಈತನು ತನ್ನ ಕಣ್ಣಿಂದಲೇ ಎಷ್ಟೋ ಯುದ್ಧಗಳನ್ನು ನೋಡಿರುವನು.

೬-೭ ನೂರು ವರ್ಷಗಳಿಂದಲೂ ಸಾಧ್ಯವಾಗದೆಹೋಗಿದ್ದ ಐರ್ಲಂಡ್ ಸ್ವಾತಂತ್ರ್ಯಪ್ರದಾನ ಸಮಸ್ಯೆಯನ್ನು ಈಗ ಕೊನೆಮುಟ್ಟಿಸಿದ ಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರನ್ನು ಅಭಿನಂದಿಸುವ ತಂತ್ರೀವಾರ್ತೆಗಳೂ ಪತ್ರಗಳೂ ಸಹ ಕುಸುಮವೃಷ್ಟಿಯಂತೆ ಪ್ರಪಂಚದ ಎಲ್ಲ ದಿಕ್ಕುಗಳಿಂದಲೂ ಅವರಮನೆಗೆ ಸುರಿಯುತ್ತಿರುವುವಂತೆ. ಪ್ರಪಂಚದ ವೃತ್ತಪತ್ರಿಕೆಗಳೆಲ್ಲಾ ಕೊಂಡಾಡುತ್ತಲಿವೆ. ಯುದ್ಧಸಮಯದಲ್ಲಿ ಮಿ|| ಲಾಯಿಡ್ ಜಾರ್ಜ್‌ರವರು ತೋರಿಸಿದ ಧೈರ್ಯ ಸ್ಥೈರ್ಯ ಕೌಶಲ್ಯಗಳಿಗಿಂತಲೂ ಈ ಸಮದಲ್ಲಿ ಅವರು ತೋರಿಸಿದ ಕೌಶಲ್ಯಕ್ಕೆ ವಿಶೇಷ ಶ್ಲಾಘನೆಯುಂಟಾಗಿರುವುದು ಅರಿದಲ್ಲ. ಆ ಒಡಂಬಡಿಕೆಯ ಪತ್ರಕ್ಕೆ ೨ ಪಕ್ಷದವರ ರುಜುಗಳೂ ಆದ ದಿವಸ ಮಿ|| ಲಾಯಿಡ್‌ಜಾರ್ಜ್‌ರವರು "ನನ್ನ ಜೀವಿತಕಾಲದಲ್ಲೆಲ್ಲಾ ಇದೇ ಸುದಿವಸ; ಎಷ್ಟೋ ಶತಮಾನಗಳಿಂದಲೂ ಪರಿಷ್ಕಾರಗೊಳ್ಳದೆ ನರಳುತ್ತಿದ್ದ ಸಮಸ್ಯೆಯು ಇಂದು ಪರಿಷ್ಕಾರವಾಯಿತು" ಎಂದು ನುಡಿದು ಕುಳಿತರಂತೆ.

ವಾಷಿಂಗ್ಟನ್ ಪಟ್ಟಣದಲ್ಲಿ ಕೂಡಿದ್ದ ಮಹಾಸಭೆಯೊಳಗೆ ಒಂದು ಅತಿಮುಖ್ಯವಾದ ವಿಷಯವು ಜರುಗಿದೆ. ಆಂಗ್ಲದೇಶ, ಅಮೇರಿಕಾ ಸಂಯುಕ್ತರಾಷ್ಟ್ರ, ಫ್ರಾನ್ಸು, ಜಪಾನ್, ಈ ನಾಲ್ಕು ಮುಖ್ಯದೇಶಗಳವರೂ ಹತ್ತುವರ್ಷಗಳ ತನಕ ನಡೆಯತಕ್ಕ ಒಂದು ಒಡಂಬಡಿಕೆಯನ್ನು ಮಾಡಲು ಒಪ್ಪಿರುತ್ತಾರೆ. ಅದರ ನಿಯಮಗಳೂಕೂಡ ಪ್ರಸಿದ್ಧವಾಗಿವೆ. ಏನೆಂದರೆ—ಈ ಮೇಲೆಕಂಡ ನಾಲ್ಕು ದೇಶಗಳವರೂ ಶಾಂತಮಹಾಸಮುದ್ರಪ್ರಾಂತದಲ್ಲಿರುವ ಅವರವರ ದ್ವೀಪಗಳಲ್ಲಿಯೂ ಅವರವರ ಅಧಿನಿವೇಶರಾಜ್ಯಗಳಲ್ಲಿಯೂ ಈಗ ಅವರವರಿಗಿರತಕ್ಕ ಸ್ವಾಮ್ಯಗಳನ್ನು ಗಮನಿಸಿ ರಕ್ಷಿಸಬೇಕು. ಅದರಲ್ಲಿ ಒಬ್ಬರೊಬ್ಬರಿಗೆ ಏನಾದರೂ ವಿವಾದವು ಸಂಭವಿಸಿದರೆ ಈ ನಾಲ್ಕುದೇಶಗಳ ಪ್ರತಿನಿಧಿಗಳೂ ಸೇರಿ ವಿಚಾರಣೆಮಾಡಿ ಪರಿಷ್ಕರಿಸಿಕೊಳ್ಳಬೇಕು. ಈ ನಾಲ್ಕುದೇಶಗಳಲ್ಲಿ ಒಬ್ಬರಮೇಲೊಬ್ಬರು ಯುದ್ಧಕ್ಕೆ ಹೋಗಕೂಡದು. ಈ ನಾಲ್ಕರಲ್ಲಿ ಯಾವುದಾದರೊಂದು ದೇಶದ ಅಭಿವೃದ್ಧಿಗೆ ಭಂಗಕರವಾದ ಸಂಗತಿಯು ಸಂಭವಿಸಿದರೆ ಆ ದೇಶದವರು ಉಳಿದ ದೇಶಗಳವರೊಡನೆ ಆಲೋಚಿಸದೆ ಯಾವ ಚರ್ಯೆಯನ್ನೂ ಸ್ವತಃ ಜರುಗಿಸಕೂಡದು. ಈ ಸಂಧಿಯು ಜರುಗಿದಕೂಡಲೇ ಇದಕ್ಕೆ ಮುಂಚೆ ಎಂದರೆ ಕಳೆದ ಜೂಲೈ ತಿಂಗಳಲ್ಲಿ ಇಂಗ್ಲೀಷರಿಗೂ ಜವಾನರಿಗೂ ನಡೆದಿರುವ ಸಂಧಿಯು ರದ್ದಾಗಬೇಕು. ಈ ನಾಲ್ಕು ದೇಶಗಳಲ್ಲಿ ಯಾವೊಂದು ದೇಶದವರಾದರೂ ಈ ಒಡಂಬಡಿಕೆಯಿಂದ ಜಾರಿಹೋಗಬೇಕೆಂದಿದ್ದರೆ, ೧ ವರ್ಷಕ್ಕೆ ಮುಂಚೆ ಉಳಿದ ಮೂರು ಪ್ರಭುತ್ವಗಳಿಗೂ ತಿಳಿವಳಿಕೆ ಕೊಡಬೇಕು. ಈ ಒಡಂಬಡಿಕೆಯನ್ನು ಮಾಡಿಕೊಳ್ಳುವಲ್ಲಿ ನಾಲ್ಕು ದೇಶಗಳವರೂ ಸಂತೋಷದಿಂದ ಒಪ್ಪಿರುತ್ತಾರೆ. ಅಲ್ಲದೆ ಇದಕ್ಕೆ ಸೇರದಿರುವ ಹಾಲೆಂಡ್ ಇಟಲಿ ಮೊದಲಾದ ದೇಶಗಳ ಪ್ರಭುತ್ವಗಳವರೂ ಅನುಮೋದಿಸಿರುತ್ತಾರೆ. ಈ ದೊಡ್ಡರಾಜ್ಯಗಳ ಮಧ್ಯದಲ್ಲಿ ಇಂಥ ಒಡಂಬಡಿಕೆಯಾಗುವುದರಿಂದ ಪ್ರಪಂಚದ ಶಾಂತಿರಕ್ಷಣೆಗೆ ತುಂಬಾ ಸಹಾಯವಾಗುವುದರಲ್ಲಿ ಅಭ್ಯಂತರವಿಲ್ಲ. ರಷ್ಯಾ ಜರ್ಮನಿ ದೇಶಗಳು ಸದ್ಯಃ ನಿರ್ಜೀವಾವಸ್ಥೆಯಲ್ಲಿರುವುದರಿಂದ ಅವು ಈ ಮಧ್ಯೆ ಸೇರಲೂ ಇಲ್ಲ, ಸೇರದೆ ಇದ್ದರೂ ಅವುಗಳಿಂದ ಆಗುವುದೂ ಏನೂ ಇಲ್ಲ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನು ತಿಳಿಸಲೇಬೇಕು.

ಬೈಲಹೊಂಗಲ.

ಗಣಿಗೆಪ್ಪಾ ಮರೇದಾರ ಸಾ|| ಬೈಲಹೊಂಗಲ ಇವರು ಅಸ್ವಸ್ಥರಾಗಿದ್ದಾಗ್ಗೆ ತನ್ನ ಆಸ್ತಿಯಲ್ಲಿ ೨೦೦ ರೂಪಾಯಿಗಳನ್ನು ಇಲ್ಲಿಯ ಇಂಗ್ಲೀಷ ಶಾಲೆಯ ಫಂಡಿಗೆ ಕೊಡಬೇಕೆಂದು ತನ್ನ ಇಚ್ಛಾ ಪತ್ರ ಬರೆದಿರುವರು. ಇವರು ಬಹಳ ಬಡವರಿದ್ದರು. ಆದರೂ ಇಷ್ಟು ಧನವನ್ನು ಫಂಡಿಗೆ ಕೊಟ್ಟದ್ದು ಬಹು ಸ್ತುತ್ಯವಾದದ್ದು. ಸೆಕ್ರೆಟರಿ ತರುಣಸಂಘ.

ನರಗುಂದ.

ತಾರೀಖು ೨೧-೧೧-೨೧ನೆ ದಿವಸ ಸಂಜೆ ೬ ಗಂಟೆಗೆ ಬಾಜಾರದಲ್ಲಿ ಸಭೆಕೂಡಿತ್ತು. ಶಿ|| ರಾ|| ಸಿದ್ಧಪ್ಪಯ್ಯನವರು ವಸ್ತ್ರದ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮ|| ರಾ|| ರಾ|| ಮಂಜಪ್ಪ ಹರಡೇಕರ ಸಾ|| ದಾವಣಗೇರಿ ಇವರು ಶಿಕ್ಷಣ ವಿಷಯದ ಮೇಲೆ ೮ ಗಂಟೆಯವರೆಗೂ ಉಪನ್ಯಾಸಮಾಡಿದರು. ಇವರ ಉಪನ್ಯಾಸದಿಂದ ಜನರು ಬಹಳ ಆನಂದಭರಿತರಾದರು. ಈ ಸಭೆಗೆ ೨೦೦-೩೦೦ ಜನರು ಕೂಡಿದ್ದರು. ಮತ್ತು ಮ್ಯುನ್ಸಿಪಾಲಿಟಿ ಪ್ರೆಸಿಡೆಂಟ್ ರಾ|| ಗುರುಪಾದಪ್ಪಣ್ಣಾ ಹಿಟಿ ರಾ|| ಚನ್ನಪ್ಪಣ್ಣಾ ಚನ್ನಿ ಮೊದಲಾದ ಯಾವತ್ತೂ ಸಭ್ಯಗೃಹಸ್ಥರು ಬಂದಿದ್ದರು. ನಂತರ ಈ ವಿಷಯದ ಮೇಲೆ ಅಧ್ಯಕ್ಷರು ಭಾಷಣಮಾಡಿದರು. ಬಸಪ್ಪ.

ಹುನಗುಂದ.

ತಾ|| ೪-೧೧-೨೧ನೆ ದಿವಸ ನಮ್ಮ ಊರಲ್ಲಿ ಶ್ರೀಮಂತ ಬಾಲಪ್ಪಣ್ಣಾ ನಾಗರಾಳ ಇವ ಅಂಗಡಿಯಲ್ಲಿ ಶ್ರೀಯುತ ಎಚ್. ಜಿ. ದಾದ್ಮಿ ಇವರ ಅಧ್ಯಕ್ಷತೆಯ ಕೆಳಗೆ ತರುಣಸಂಘದ ವಾರ್ಷಿಕ ಸಮ್ಮೇಲನವು ಕೂಡಿಸಲ್ಪಟ್ಟಿತ್ತು. ಸಭೆಯಲ್ಲಿ ಸಂಘಶಕ್ತಿ, ಸತ್ಶಿಕ್ಷಣದ ಆವಶ್ಯಕತೆಮುಂತಾದ ವಿಷಯಗಳ ಮೇಲೆ ಪ್ರಖ್ಯಾತವ್ಯಾಖ್ಯಾತರಾದ ಮಿ|| ಶಂಭಿವ ಶಿಣಗಿ ಮತ್ತು ಬೂತಿ ಈ ತ್ರಿವರ್ಗದವರು ಭಾಷಣಮಾಡಿದರು. ಸದರಿ ಸಭೆಯಲ್ಲಿ ಸತ್ಶಿಕ್ಷಣವನ್ನು ತೀವ್ರ ಅಮಲಿನಲ್ಲಿ ತರಲಿಕ್ಕೆ ನಮ್ಮ ಸರಕಾರದವರಿಗೆ ವಿನಂತಿಮಾಡಿಕೊಳ್ಳುವದು ಇತ್ಯಾದಿ ನಾಲ್ಕು ಠರಾವುಗಳು ಬಹುಜನರ ಅನುಮತಿಯಿಂದ ಪಾಸುಮಾಡಲ್ಪಟ್ಟವು. ಕಡೆಗೆ ಶ್ರೀ ಬಸವೇಶ್ವರ ಮಹಾರಾಜಕೀ ಜಯ್, ಶ್ರೀ ಸಂಗಮೇಶ್ವರ ಮಹಾರಾಜಕೀಜಯ್ ಇತ್ಯಾದಿ ಜಯಘೋಷಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವ ಬಾತ್ಮೀದಾರ.

ಕಾನಕಾನಹಳ್ಳಿ.

ಪ್ಲೇಗ್, ಕಾಲರಾ, ಇನ್‌ಫ್ಲೂಯಂಜಾವ್ಯಾಧಿಗಳಿಂದ ಅನೇಕರು ತೊಂದರೆಪಡುತ್ತಿರುವಿಕೆಯೂ ಸಕಾಲದಲ್ಲಿ ಸರಿಯಾದ ಔಷಧಗಳು ಒದಗದೆ ಇರುವದೂ ಒಂದು ವೇಳೆ ದೊರೆತರೂ ವಿಚಕ್ಷಣೆಯಿಂದ ಔಷಧೋಪಚಾರ ನಡೆಸದೆ ಇರುವುದರಿಂದಲೂ ಅನೇಕ ಜನರು ಗ್ರಾಮಾಂತರಗಳಲ್ಲಿ ಪಡುತ್ತಿರುವ ತೊಂದರೆ ಎಲ್ಲರಿಗೂ ಗೊತ್ತೇ ಇದೆಯಷ್ಟೆ. ಈ ಖಾಯಿಲೆಗಳಿಗೆ ವಂಶಪಾರಂಪರ್ಯವಾಗಿ ಬಂದ ವೈದ್ಯ ಮನೆತನಕ್ಕೆ ಸೇರಿದ ಮೂವತ್ತೊಂದು ವರ್ಷ ವೈದ್ಯಚಿಕಿತ್ಸೆ ಅನುಭವವುಳ್ಳ ಪ್ರಸಿದ್ಧಪಂಡಿತರಾದ ಮ|| ಎಂ. ಎಸ್. ವೆಂಕಟಿತಾಮಯ್ಯ ಎಂಬುವರು ಉಚಿತವಾಗಿ ಔಷಧಿಯನ್ನು ಕೊಟ್ಟು ಪ್ರತ್ಯುಪಕಾರ ಮಾಡಲಿಚ್ಛೆಯುಳ್ಳವರಾಗಿದ್ದಾರೆ. ಎರಡಾಣೆ ಅರುವೈ ಮಾತ್ರ ಇವರದಿ ನಮೂದಿರುವ ವಿಳಾಸಕ್ಕೆ ಕಳುಹಿಸಿದರೆ, ಔಷಧವನ್ನು ಉಚಿತವಾಗಿ ಕಳುಹಿಸುವರು. ಇವರು ಇಂಗ್ಲೀಷ್ ನೇಟಿವ್ ಯುನಾನಿ, ರಾಜವೈದ್ಯ ಅನುಭವವುಳ್ಳವರು, ಇವರ ವಿಚಾರ ಮತ್ತು ಇವರಿಂದ ತಯಾರಾದ ಔಷಧವಿಚಾರವೆಲ್ಲವೂ ಮೈಸೂರು ಸ್ಟಾರು ಪತ್ರಿಕೆಯಲ್ಲಿ ೧೯೧೮ನೆ ಜುಲೈ ಮಾಹೆ ೧೬ ನೆ ತಾರೀಕಿನಲ್ಲಿಯೂ ವೃತ್ತಾಂತಪತ್ರಿಕೆಯಲ್ಲಿ ೧೯೧೩ನೆ ಜನವರಿ ೫ರಲ್ಲೂ ಟೈಂಸ್‌ಆಫ್‌ಇಂಡಿಯಾದಲ್ಲಿಯೂ ಪ್ರಕಟಿಸಲ್ಪಟ್ಟು ಇದೆ. ಇತರ ಯಾವ ವಿಧವಾದ ಖಾಯಿಲೆಗಳಿಗೂ ಇದರಡಿ ನಮೂದಿಸಿರುವ ವಿಳಾಸಕ್ಕೆ ಬರೆದು ಅನುಕೂಲಪಡೆಯಬಹುದು. ಇವರ ಔಷಧಗಳು ಬಹುಜನ ಪರಿಗ್ರಾಹ್ಯವಾಗಿ ಪ್ರಜಾಕೋಟಿಗೆ ನೆಮ್ಮದಿಯುಂಟಾಗಲೆಂದು ಬಯಸಿ ವಿಜ್ಞಾಪಿಸಿದ್ದೇನೆ, ಜಿ. ಗಣೇಶನ್.

ತಾಲ್ಲೂಕು ಜಮಾಬಂದಿಯ ಅವ್ಯವಸ್ಥೆ.

ಕಡೂರು ತಾಲ್ಲೂಕು ಹಿರೆನಲ್ಲೂರು ಹೋಬಳಿ ಕಾರ್ತೀಕು ಜಮಾಬಂದಿಯನ್ನು ಈ ತಿಂಗಳು ತಾರೀಖು ೫ ರಲ್ಲಿ ನಡೆಸುವುದಾಗಿ ತಾಲ್ಲೂಕು ಅಮಲ್‌ದಾರ್‌ರವರು ಹೋಬಳಿ ಸೇಕದಾರರ ಮೂಲಕ ತಾಕೀತುಕೊಟ್ಟು ಅಂತರಗಟ್ಟೆಯೆಂಬ ಗ್ರಾಮದಲ್ಲಿ ಜಮಾಬಂದಿ ನಡೆಸುವುದಾಗಿ ಮೊದಲೇ ತಿಳಿಸಿದ್ದರವೇರೆಗೆ ಎಲ್ಲಾ ಗ್ರಾಮಗಳ ಪಟೇಲರು, ಶಾನುಭೋಗರು ರೈತರು ಸಹ ಹತ್ತೂ ಹನ್ನೆರಡುಮೈಲು ಫಾಸಲೆಯಿಂದ ತಾ|| ೫ ಮತ್ತು ೬-೭ ರಲ್ಲೂ ಸಹ ಬಂದು ಕಾದಿದ್ದುದಾಯ್ತು. ತಾಕೀತುಕೊಟ್ಟ ಪ್ರಕಾರ ಅಮಲ್‌ದಾರ್‌ರವರ ಸ್ವಾರಿಯು ಬರಲೇಇಲ್ಲ. ತಾರೀಖು 7ರ ಸಾಯಂಕಾಲ ಈ ಜಮಾಬಂದಿಯು ಮುಂದೆ ಯಾವುದಾದರೂ ಒಂದು ದಿವಸ ನಡೆಸುವುದಾಗಿ ಬೇರೆ ಅಪ್ಪಣೆಯಾದಂತೆ ತಿಳಿಯಬಂತು. ಅಂತರಗಟ್ಟೆ ಗ್ರಾಮವಾದರೋ ಕೇವಲ ಚಿಕ್ಕಗ್ರಾಮ. ಇಲ್ಲಿ ಬೇಡರು ಪುಂಜಾರ್ರು ಈ ಜನಗಳೇ ವಾಸವಾಗಿರುತ್ತಾರೆ. ಜಮಾಬಂದಿಗೆ ಬಂದ ಪಟೇಲ್ ಮತ್ತು ರೈತರುಗಳಿಗೆ ಊಟಉಪಚಾರ ವಗ್ಯೆರೆ ಕೆಲಸಗಳಿಗೆ ಉಂಟಾದ ತೊಂದರೆಯು ಹೇಳತೀರದಾಗಿತ್ತು. ಈ ಸಮಯವು ಶ್ಯಾನುಭೋಗರುಗಳಿಗೆ ಪಹಣಿ ವಗ್ಯೆರೆ ಲೆಕ್ಕ ಬರೆಯಲಿಕ್ಕೆ ಮಾತ್ರ ಎಲ್ಲಾ ಜನರನ್ನೂ ಇಲ್ಲಿಗೆ ಸೇರಿಸಿಕೊಟ್ಟದ್ದಾಗಿತ್ತು. ಶ್ಯಾನುಭೋಗರು ಮತ್ತು ಮುನ್ಷಿಯರುಗಳಿಗೆ ಮಾತ್ರ ಪಟೇಲರುಗಳಿಂದ ಹಾಲು ಮೊಸರು ವಗ್ಯೆರೆ ಸಾಮಾನು ದೊರೆಯಿತು. ಆನಂದಮಯವಾಗಿತ್ತು. ಜಮಾಬಂದಿಗಾಗಿ ಬಂದ ಜನಗಳ ಕಷ್ಟಸುಖವನ್ನು ಕೇಳುವವರೇ ದಿಕ್ಕಿಲ್ಲವಾಗಿತ್ತು. ಈ ರೀತಿಯಾಗಿ ಬ್ರಾಹ್ಮಣೇತರ ಅಧಿಕಾರಿಗಳೇನಾದರೂ ವರ್ತಿಸಿದ್ದಲ್ಲಿ ಈ ಫಿರ್ಯಾದು ಮತ್ತು ಶ್ಯಾನುಭೋಗರ ಕೋಪವು ಎಲ್ಲಾಕಡೆಗೆ ವ್ಯಾಪಿಸುತ್ತಲಿತ್ತು. ಸ್ವಜಾತಿ ಅಧಿಕಾರಿಗಳಾದುದರಿಂದ ಇದರ ಗದ್ದಲವೇ ಇಲ್ಲ; ಚೆನ್ನಪಟ್ಟಣದ ಅಮಲ್ದಾರರು ಸರಿಯಾದ ಕ್ರಮ ಕೇಳಿದ್ದು ಮಾತ್ರ ಆ ತಾಲ್ಲೂಕಿನ ಶ್ಯಾನುಭೋಗರಿಗೆ ದೊಡ್ಡತಪ್ಪಾಗಿ ಕಂಡಿತು. ಇದೊಂದು ಕಲಿಗಾಲದ ವಿಚಿತ್ರ. ಒಬ್ಬ ರೈತ.

ನಂಜನಗೂಡು ವೃತ್ತಾಂತ.

ಈಚೆಗೆ ಮಳೆ ಆಗಿ ಫಸಲು ಚೆನ್ನಾಗಿಯೇ ಇದೆ. ಬೆಳೆ ಹೆಚ್ಚು. ಈ ತಾಲ್ಲೂಕಿನ ಅಮಲ್ದಾರರ ಹಾವಳಿಯಂತು ತುಂಬಾ ಆಗಿರುತ್ತದೆ. ರೈತಾಬಿಜನಗಳ ಗೋಳು ಹೇಳತೀರದು. ಮೊನ್ನೆ ಸಬ್‌ಡಿವಿಜನ್ ಆಫೀಸರಿಗೂ ದೇವಸ್ಥಾನದ ಹವಾಲ್ದಾರರಿಗೂ ನಡೆದ ವ್ಯಾಜ್ಯದಲ್ಲಿ ಹವಾಲ್ದಾರರು ತಮ್ಮ ಕಮ್ಯಾಂಡೆಂಟರಿಗೆ ಫಿರ್ಯಾದ್‌ಮಾಡಿರುವುದಾಗಿ ವರ್ತಮಾನ ಕೇಳುತ್ತೇನೆ. ಪರ್ಯವಸಾನವನ್ನು ನೋಡಬೇಕು. ಇಲ್ಲಿನ ದೊಡ್ಡ ರೈಲ್ವೆ ಸ್ಟೇಷನ್ನಿನ ಮಾಸ್ಟರ ಕಾರುಬಾರು ಕೇಳುವವರೇ ಇಲ್ಲ. ವಾಗೀನುಗಳಿಗೆ ಸಾಮಾನುಗಳು ಏನೂ ಇಲ್ಲದೆ ಖಾಲಿಯಿದ್ದಾಗ್ಯೆ ಯಾರಿಗಾದರೂ ವಾಗೀನುಬೇಕಾದರೆ ಆ ವಾಗೀನುಗಳೆಲ್ಲಾ ವಿಲೆ ಆಗಿವೆಯೆಂದೂ ಖಾಲಿ ಯಾವುದೂ ಇಲ್ಲವೆಂದೂ ಹೇಳುತ್ತಾ ದುರಾಶಾಪರರಾಗಿರುವಕಾರಣ ಮನೆಹತ್ತಿರ ಗುಲಾಮರಂತೆ ವರ್ತಕರುನಿಂತಿರಬೇಕಾಗಿದೆ ಬ್ರಾಹ್ಮಣರಿಗೇ ಒಂದುವಿಧ ಬ್ರಾಹ್ಮಣೇತರರಿಗೇ ಒಂದು ವಿಧ. ವ್ಯಾಪಾರಸ್ಥರೆಲ್ಲರೂ ಸುಮಾರಾಗಿ ಬ್ರಾಹ್ಮಣೇತರರೇ ಆಗಿರುವುದರಿಂದ ಅವರ ಕಷ್ಟ ಹೇಳತೀರದ್ದಾಗಿದೆ. ರೈಲಿನವರೂ ಹೀಗೆ ಇರಬಹುದೇ? ಕೇಳುವವರೇ ಇಲ್ಲವಾಗಿದೆ. ಮೊನ್ನೆ ಇಲ್ಲಿ ಒಂದು ಖೂನಿ ನಡೆಯಿತು. ವಿಚಾರಣೆ ಆಗುತ್ತಾಯಿದೆ. ಈ ತಾಲ್ಲೂಕಿನಲ್ಲಿ ಆಗಾಗ್ಗೆ ಖೂನಿಗಳು ಆಗುತ್ತಲೇ ಇವೆ. ಪ್ಲೇಗು ಗಲಾಟೆ ಇನ್ನೂ ನಿಂತಿಲ್ಲ. ಒಂದೆರಡು ಮರಣಗಳಾಗುತ್ತಿವೆ. ಗ್ರಾಮಸಾಕೀಜ್ ಚೆನ್ನಾಗಿಲ್ಲ. ಮೊನ್ನೆ ರಥೋತ್ಸವಕ್ಕೆ ಪರಸ್ಥಳದಿಂದ ಜನರು ಜಾಸ್ತಿ ಬರಲಿಲ್ಲ. ಇಲ್ಲಿ ಪ್ಲೇಗು ಇದೆ ಎಂಬ ಭಯವೇ ಕಾರಣ. ಚಿಕ್ಕ ರೈಲ್ವೆಸ್ಟೇಷನ್ನಿನ ಹತ್ತಿರ ನೀರುನಿಂತು ಹವಾ ಕೆಡುತ್ತಲಿದೆ. ಇದನ್ನು ಸರಿಪಡಿಸುತ್ತಾರೆಂತ ಕೋರಿಕೆ.

ನಂಜನಗೂಡು ನಿವಾಸಿ.

ಕಡೂರು ತಾಲ್ಲೂಕ್ ಗ್ರ್ಯಾಂಟ್ ಸ್ಕೂಲು ಉಪಾಧ್ಯಾಯರುಗಳ ಪ್ರಥಮಸಭೆ (ಕಡೂರಳ್ಳಿ).

ಕಳೆದ ಆಕ್ಟೋಬರ್ ತಾ|| ೬-೧೦-೨೧ರ ಮೈಸೂರು ವೃತ್ತಾಂತಪತ್ರಿಕೆಯಲ್ಲೂ, ತಾ|| ೯-೧೦-೨೧ರ ಮೈಸೂರು ಸ್ಟಾರ್ ಪತ್ರಿಕೆಯಲ್ಲೂ ಪ್ರಕಟಿಸಲ್ಪಟ್ಟು ಮತ್ತು ನವಂಬರ್ ತಾ|| ೩-೧೧-೨೧ರ ವೃತ್ತಾಂತಪತ್ರಿಕೆಯಲ್ಲೂ ತಾ|| ೧೩-೧೧-೨೧ರ ಸ್ಟಾರ್‌ಪತ್ರಿಕೆಯಲ್ಲೂ ಛೇಂಜ್ ಮಾಡಲ್ಪಟ್ಟು, ದೇಶಾಭಿಮಾನಿಗಳವರ ಮತ್ತು ನಮ್ಮ ದಯಾಳುಗಳಾಗಿರುವ ಸರ್ಕಾರದವರ ಅವಗಾಹನೆಗೆ ತರಲ್ಪಟ್ಟ ವಿದ್ಯಾಪುರೋಭಿವೃದ್ಧಿಸ್ಥಿತಿಯು ಗ್ರಾಮ್ಯಬಾಲಕ ಬಾಲಕಿಯರುಗಳಲ್ಲಿ ನೆಲೆಗೊಳ್ಳಲು ಅನುಕೂಲಿಸಲ್ಪಡುವ ವಿಷಯದಲ್ಲಿ ಕಳೆದ ನವಂಬರ್ ತಾ|| ೨೭ನೇ ಭಾನುವಾರ ನಮ್ಮ ದಯಾಳು ಸರ್ಕಾರದವರ ಮತ್ತು ದೇಶಾಭಿಮಾನಿಗಳಾಗಿರುವ ಮಹನೀಯರುಗಳ ಸೇರುವಿಕೆಯ ಮೇಲ್ಕಂಡ ಸಮ್ಮೇಳನದಲ್ಲಿ ಕಡೂರು ತಾಲ್ಲೂಕು ಅಮಲ್ದಾರ್ ಮಿ|| ಕೆ. ಲಿಂಗೋಪಂತ್ ಬಾದಾಮಿ ಬಿ. ಎ., ರವರು ಸಂಘದ ಪ್ರೆಸಿಡೆಂಟ್ ಪದವಿಯನ್ನಲಂಕರಿಸಿ ಗ್ರ್ಯಾಂಟ್ ಸ್ಕೂಲು ಉಪಾಧ್ಯಾಯರುಗಳಿಂದಲೂ ಮತ್ತು ವಿದ್ಯಾರ್ಥಿಗಳಿಂದಲೂ ಸಹ ಒಪ್ಪಿಸಲ್ಪಟ್ಟ ಸಂಘದ ಉದ್ದಿಶ ಉಪನ್ಯಾಸಪ್ರವಚನೀಯಗಳಿಗೆ ಸಾಕಾದಷ್ಟು ಸಾನುಕೂಲ್ಯಗಳು ಒದಗಿ ಈ ಮೇಲ್ಕಂಡ ಪ್ರಾಥಮಿಕ ಸಂಘದ ಮೇಲ್ಪಂಗ್ತಿಯು ದೇಶದ ಎಲ್ಲಾ ಪಾಠಶಾಲೆಗಳಲ್ಲಿಯೂ ಉತ್ತರೋತ್ತರ ಪ್ರವರ್ತಿಸಲೆಂಬ ತಮ್ಮ ಉದಾರಸ್ವಾಗತಭಾಷಣವು ಮಂಡಲಿಯ ಶಿರೋಭೂಷಣವಾಗಿತ್ತು. ಈ ವಿಷಯದಲ್ಲಿ ಇಲಾಖಾ ಆಫೀಸರುಗಳಲ್ಲಿ ಕೆಲವರು ಸಂಘದ ಏರ್ಪಾಡಿಗೆ ವಿರೋಧವಾದ ನಡವಳಿಕೆ ನಡಿಸುವುದರ ಮೂಲಕ ಕೆಲವಂದಿ ಉಪಾಧ್ಯಾಯರುಗಳು ಮಂಡಲಿಗೆ ಸೇರಲು ಅನಾನುಕೂಲವುಂಟುಮಾಡಲ್ಪಟ್ಟ ಅಂಶ ಸಮ್ಮೇಳನದಲ್ಲಿ ಹೊರಪಟ್ಟು ಮುಂದೆ ಇಂಥ ವಿಚಾರಗಳಿಗೆ ಅವಕಾಶವಿಲ್ಲದ ರೀತಿ ಪ್ರೆಸಿಡೆಂಟರವರು ತಮ್ಮ ಸ್ವಾಗತಭಾಷಣಗಳೊಂದಿಗೆ ಇಲಾಖಾ ಮೊಹ್ತೇಸರ್‌ರವರ ಅವಗಾಹನೆಗೆ ತರಬೇಕೆಂಬ ಅಂಶ ಸರ್ವಸಮ್ಮತಿಯಿಂದ ಪ್ರೆಸಿಡೆಂಟರವರಲ್ಲಿ ಕೃತಪಡಿಸಲ್ಪಟ್ಟಿತು. ಮಂಡಲಿಯವರ ಅಭಿಮತವು ಪ್ರೆಸಿಡೆಂಟರವರ ಅವಗಾಹನೆಗೆ ತರಲ್ಪಟ್ಟು ಸಂಘದ ಉತ್ತೇಜನ ಭಾಷಣಕ್ರಮವು ಜರುಗಿ ಇಷ್ಟದೇವತಾಪ್ರಾರ್ಥನೆ, ಶ್ರೀಮನ್ಮಹಾರಾಜರವರ ಮತ್ತು ಯುವರಾಜರವರ ಶ್ರೇಯಃಪ್ರಾರ್ಥನೆಯು ನಡೆಸಲ್ಪಟ್ಟು ಸಭೆಯವರಿಂದ ಪ್ರೆಸಿಡೆಂಟರವರಿಗೆ ಹಾರತುರಾಯಿಗಳು ಒಪ್ಪಿಸಲ್ಪಟ್ಟು ಸಭೆಯವರಿಗೂ ಗಂಧಪುಷ್ಪತಾಂಬೂಲಾದಿ ಮರ್ಯಾದೆಗಳು ನಡೆಸಲ್ಪಟ್ಟು ಸಭೆಯು ಪ್ರೆಸಿಡೆಂಟರವರ ಅನುಮತಿಯಂತೆ ನಮ್ಮ ಶ್ರೀಮನ್ ಯುವಚಕ್ರವರ್ತಿ ಸಾರ್ವಭೌಮರವರಲ್ಲಿಗೆ ಟೆಲಿಗ್ರಾಂ ಮೂಲಕ ಸ್ವಾಗತರಾಜಭಕ್ತಿಯು ಒಪ್ಪಿಸಲ್ಪಡಬೇಕೆಂಬ ಸದುದ್ದೇಶದೊಂದಿಗೆ ಕರತಾಡನವಂಗೈದು ಸಭೆಯು ಬರಖಾಸ್ತು ಮಾಡಲ್ಪಟ್ಟಿತು. ಓರ್ವ ಪ್ರೇಕ್ಷಕ.

ಶಿಡ್ಲಘಟ್ಟದ ಮ್ಯುನ್ಸಿಪಲ್ ವೈಸ್‌ಪ್ರೆಸಿಡೆಂಟರ ಚುನಾವಣೆ.

ಈ ಚುನಾವಣೆಯು ನವಂಬರ್ ೩ನೆಯ ತಾರೀಖು ಬುಧವಾರ ಮಧ್ಯಾಹ್ನ ೨ ಘಂಟೆಗೆ ತಾಲ್ಲೂಕ್ ಆಫೀಸಿನಲ್ಲಿ ನಡೆಯಿತು. ಪ್ರೆಸಿಡೆಂಟರಾದ ಅಮಲ್ದಾರ್ ಮ|| ಟಿ. ಕೆ. ಲಕ್ಷ್ಮಣ ಅಯ್ಯರ್‌ರವರು ಅಗ್ರಾಸನವನ್ನು ವಹಿಸಿದ್ದರು. ಒಟ್ಟು ೧೩ ಮಂದಿ ಕೌನ್ಸಿಲರುಗಳಪೈಕಿ ೧೧ ಮಂದಿ ಹಾಜರಾಗಿದ್ದರು. ಸರ್ವಾನುಮತಿಯಿಂದ ಒಬ್ಬರೇ ಉಮೇದುವಾರರಾಗಿದ್ದ ಮ|| ಎಸ್. ಹಂಪಯ್ಯನವರು ವೈಸ್‌ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು. ಈ ವಿಚಾರವನ್ನು ಅಧ್ಯಕ್ಷರು ತತ್‌ಕ್ಷಣವೇ ಸಭೆಯಲ್ಲಿ ಪ್ರಕಟಮಾಡಿದರು. ನಂತರ ಕೌನ್ಸಿಲರುಗಳೆಲ್ಲರೂ ತಮ್ಮ ಸಂತೋಷವನ್ನು ಸೂಚಿಸಿದರು. ಇದಕ್ಕೆ ಮ|| ಎಸ್. ಹಂಪಯ್ಯನವರು ಸಭಿಕರಿಗೆ ಕೃತಜ್ಞತೆಯನ್ನು ತೋರ್ಪಡಿಸಿ ತಮಗೆ ಈಗಲೇ ಸಂತೋಷವಿಲ್ಲವೆಂತಲೂ ಕೆಲವು ಕಾಲ ಕೆಲಸಮಾಡಿದ ನಂತರ ಜನಮೆಚ್ಚುಗೆಗೂ ಸರ್ಕಾರ ಕಾರ್ಯದಕ್ಷತೆಗೂ ಪಾತ್ರನಾದರೆ ಅನಂತರ ಸಂತೋಷಪಡಬೇಕಾಗಿರುವುದೆಂತಲೂ ತಿಳಿಸಿದ ಮೇಲೆ ಸಭೆ ಮುಗಿಯಿತು. ಅಷ್ಟರಲ್ಲೇ ಸಿಡ್ಲಘಟ್ಟದ ಪ್ರಜಾಮಿತ್ರಮಂಡಲಿಯ ಸೆಕ್ರಟರಿಯವರಾದ ಮ|| ಎಸ್. ಗೋಪಾಲಸ್ವಾಮಿ ನಾಯುಡುಯವರು ಸಂಘದ ಪರವಾಗಿ ಏರ್ಪಾಡಾಗಿರುವ ಸನ್ಮಾನಸಭೆಗೆ ಸರ್ವರೂ ದಯಮಾಡಬೇಕೆಂದು ಪ್ರಾರ್ಥಿಸಿದಮೇರೆಗೆ ಪ್ರೆಸಿಡೆಂಟರಾದಿಯಾಗಿ ಎಲ್ಲಾ ಕೌನ್ಸಿಲರುಗಳೂ ಆಫೀಸ್‌ಬಳಿ ನಿರೀಕ್ಷಿಸಿಕೊಂಡಿದ್ದ ನೂರಾರುಮಂದಿ ಪ್ರಜಾಸಮೂಹದೊಡನೆ ಮಂಗಳವಾದ್ಯಗಳ ಸಮೇತ ಸಂಘದ ಕಟ್ಟಡಕ್ಕೆ ದಯಮಾಡಿಸಿ ಉಚಿತಾಸನಗಳನ್ನಲಂಕರಿಸಿದರು. ಅಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳಾದ ಮ|| ಎಸ್. ಗೋಪಾಲಸ್ವಾಮಿ ನಾಯುಡುಯವರು ಮ|| ಟಿ. ಅಂಜನೇಯಪ್ಪನವರು ಮ|| ಸಾ|| ರೆಡ್ಡಿಯಪ್ಪನವರು ಮಿ|| ಸಯ್ಯದ್ ಹುಸೇನ್ ಸಾಹೇಬರು ಸಹ ಈ ಸಂಘದ ಸ್ಥಾಪಕರಾದ ಮ|| ಎಸ್. ಹಂಪಯ್ಯನವರಿಗೆ ವೈಸ್‌ಪ್ರೆಸಿಡೆಂಟ್ ಪದವಿಯು ಲಭ್ಯವಾದುದಕ್ಕಾಗಿ ಸಂಘದವರಿಗೆ ಉಂಟಾದ ಸಂತೋಷವನ್ನು ವ್ಯಕ್ತಪಡಿಸಿ ಬಹಳ ವಿನಯದಿಂ

ದಲೂ ಅವರು ಪ್ರಜಾಹಿತಚಿಂತಕರಾಗಿ ದೇಶಸೇವೆ ಮಾಡುತ್ತಿರುವ ವಿಚಾರವನ್ನು ವಿಸ್ತರಿಸಿ ಉಪನ್ಯಾಸಮಾಡಿದರು. ಮ್ಯುನಿಸಿಪಲ್ ಪ್ರೆಸಿಡೆಂಟರವರು ಈ ಸಂಘದವರ ಕಾರ್ಯಕ್ರಮಗಳು ತೃಪ್ತಿಕರವಾಗಿರುತ್ತವೆಂತಲೂ ಮ|| ಎಸ್. ಹಂಪಯ್ಯನವರು ಜನಸಾಮಾನ್ಯರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ ತಕ್ಕಷ್ಟು ತಿಳುವಳಿಕಸ್ತರಾಗಿರುವದರಿಂದ ವೈಸ್‌ಪ್ರೆಸಿಡೆಂಟ್ ಪದವಿಗೆ ತುಂಬಾ ಅರ್ಹತೆಯುಳ್ಳವರೆಂದು ತಾವು ಅನುಭವಪೂರ್ವಕ ಹೇಳುತ್ತೇವೆಂತಲೂ ಅಪ್ಪಣೆಕೊಡಿಸಿದ ನಂತರ ಮ|| ಎಸ್. ಹಂಪಯ್ಯನವರು ಜನಸಮೂಹದ ಕರತಾಡನಗಳ ಮಧ್ಯೆ ಎದ್ದುನಿಂತು ಈಗ ಮಾತನಾಡಿರುವ ಮಹನೀಯರು ಹೇಳುವಷ್ಟು ತಾವು ಗುಣಾಢ್ಯರೆಂದು ತಿಳಿದುಕೊಂಡಿರಲಿಲ್ಲವೆಂತಲೂ ಹಾಗೆ ಸುಗುಣವಿಶೇಷಗಳಿದ್ದಲ್ಲಿ ಇವೆಲ್ಲವೂ ೧೯೦೫ ನೆ ಇಸ್ವಿಯಲಾಗಾಯಿತು ತಾವು ನಡಿಸಿಕೊಂಡು ಬಂದಿರುವ ಫ್ರೀ ರೀಡಿಂಗ್‌ರೂಂ ಸಂಘದ ಮತ್ತು ಈಗ ಒಂದುವರುಷದ ಹಿಂದೆ ಏರ್ಪಟ್ಟ ಪ್ರಜಾಮಿತ್ರ ಮಂಡಲಿ ಸಭಿಕರ ಮತ್ತು ೨೨ ವರ್ಷಗಳಲಾಗಾಯಿತು ಮೈಸೂರ್ ಸ್ಟಾರ್ ಪತ್ರಿಕೆಯನ್ನು ತರಿಸುತ್ತಿರುವುದರಿಂದ ಸಹ ಉಂಟಾದ ಬುದ್ಧಿವಾದಪ್ರಭಾವವೆಂದು ತಾವು ತಿಳಿದುಕೊಂಡಿರುತ್ತೇವೆಂತಲೂ ಹೊಸ ಮೆಂಬರುಗಳ ಸಹಾಯದಿಂದ ಈ ಮ್ಯುನಿಸಿಪಾಲಿಟಿಯ ಕಾರ್ಯಕ್ರಮಗಳು ತೃಪ್ತಿಕರವಾಗಿ ನಡೆಯುವಂತೆ ದೇವರು ಅನುಗ್ರಹಿಸಲೆಂದು ಸ್ವಾರಸ್ಯವಾಗಿ ಉಪನ್ಯಾಸಮಾಡಿದ ನಂತರ ಶ್ರೀಮನ್ಮಹಾರಾಜ ಸಹೋದರರ ಮತ್ತು ಶ್ರೀಮಾನ್ ದಿವಾನ್ ಸಾಹೇಬರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು ಸರ್ವರಿಗೂ ಗಂಧಪುಷ್ಪ ತಾಂಬೂಲಗಳ ವಿನಿಯೋಗಾನಂತರ ಸಭೆಯು ಬರಖಾಸ್ತು ಮಾಡಲಾಯಿತು.

ಒಬ್ಬ ಮ್ಯು|| ಕೌನ್ಸಿಲರು.

ಅಸಹಕಾರಿಗಳ ಅಸದ್ವರ್ತನ, ಗದಗ.

ರಾಜಹಂಸದ ತಾರೀಖು ೧೬ನೆ ಪತ್ರದಲ್ಲಿ ಅದರ ರಿಪೋರ್ಟರನೋರ್ವನು “ಸಹಕಾರಿಜನರಸ್ವತ್ವವರ್ತನ” ಎಂಬ ಶಿರೋಲೇಖದ ಕೆಳಗೆ ಸಹಕಾರಿಗಳಬಗ್ಗೆ, ಅದರಲ್ಲಿ ಲಿಂಗಾಯತರಬಗ್ಗೆ ವಿಶೇಷವಾಗಿ ಜನರಲ್ಲಿ ತಪ್ಪು ತಿಳುವಳಿಕೆಯನ್ನು ಹರಡುವ ಸ್ವತ್ವಕಾರ್ಯಕ್ಕೆ ಕೈಹಾಕಿದ್ದಾನೆ. ಈಸಾರೆ (ಗದಗ) ಮ್ಯುನಿಸಿಪಾಲಿಟಿ ಚುನಾವಣೆಯ ಕಾಲದಲ್ಲಿ ಬ್ರಾಹ್ಮಣರು ನಡೆಸಿದ ಚಾಣಕ್ಯತಂತ್ರವು ಸಾಗದೆ ಅವರ ಕಪಟನಾಟಕವು ಮಾತ್ರ ಎಲ್ಲರಿಗೆ ಗೊತ್ತಾದುದರಿಂದ ತಮ್ಮ ಜನರಮೇಲಿನ ವಿಶ್ವಾಸವೆಲ್ಲ ಹಾರಿಹೋಗುವುದೋ ಎಂಬ ಭೀತಿಯಿಂದ ತಮ್ಮವರ ಹುಳುಕನ್ನು ಮುಚ್ಚುವದರಸಲುವಾಗಿಯೇ ಈ ಸುದ್ದಿಗಾರನು ಈ ಲೇಖನವನ್ನು ಬಹು ಪ್ರಯಾಸಪಟ್ಟು ತಯಾರಿಸಿರಬೇಕಾಗಿ ಕಾಣುತ್ತದೆ. ಹಿಂದಕ್ಕೆ ಈ ಊರಲ್ಲಿ (ಗದಗಿನಲ್ಲಿ) ಎಷ್ಟೋ ಎಲೆಕ್ಷನ್ನುಗಳಾದವು. ಎಷ್ಟೋ ಜನರು ಅಧ್ಯಕ್ಷರಾಗಿಹೋದರು. ಒಮ್ಮೆಯಾದರೂ ಇಷ್ಟು ಗೊಂದಲವೆದ್ದಿದ್ದಿಲ್ಲ. ಆದರೆ ಈಸಾರೆಯೇ ಯಾಕೆ ಇಷ್ಟು ಗಡಿಬಿಡಿಯು? ಈಸಾರೆ ಲಿಂಗಾಯತರು ಮ್ಯುನಿಸಿಪಾಲಿಟಿಯ ಅಧ್ಯಕ್ಷಪದದ ಬಗ್ಗೆ ಉಮೇದುವಾರರಾಗಿ ನಿಂತದ್ದರಿಂದಲ್ಲವೆ? ಅಹುದು. ಸ್ವಾರ್ಥಬಲುವಾಗಿ ಅಸಹಕಾರದ ಗವಸಣಿಗೆಯನ್ನು ಹಾಕಿಕೊಂಡ ಬ್ರಾಹ್ಮಣರಿಗೆ ಇದು ಸಹನವಾಗದೆ ಅವರು ಈಪ್ರಕಾರ ಹೂಲಿಯನ್ನೆಬ್ಬಿಸಿದರೆಂಬುದರಲ್ಲಿ ಸಂದೇಹವೇನು? ಒಬ್ಬ ಲಿಂಗಾಯತ, ಒಬ್ಬ ಬ್ರಾಹ್ಮಣ ಈ ಸಹಕಾರಿಗಳಲ್ಲಿಯೇ ಅಧ್ಯಕ್ಷಪದದ ಬಗ್ಗೆ ಸ್ಪರ್ಧೆನಡೆದಿತ್ತೆಂದು ಬರೆದಿರುವರು. ನಿಜವಾಗಿ ಹಾಗಿದ್ದಪಕ್ಷದಲ್ಲಿ ಲೋಕನಿಯುಕ್ತ ಲಿಂಗಾಯತ ಸಹಕಾರಿಗೆ ಸಹಾಯಮಾಡದ ಅಸಹಕಾರಿಗಳು ಎನ್ನುವಂತೆ ಸೈತಾನಿ ಸರಕಾರದಿಂದ ನಾಮಿನೇಟೆಡ್ ಆದ ಬ್ರಾಹ್ಮಣ ಸಹಕಾರಿಗೆ ಈ ಅಸಹಕಾರಿಗಳು ಸಹಾಯಮಾಡಲು ಹೇಗೆ ಸಿದ್ಧರಾದರು? ಅವರು ಬ್ರಾಹ್ಮಣರಿರುವರೆಂದು ಹೊರಗೆ ಸಹಕಾರಿಗಳಿದ್ದರೂ ಒಳಗೆ ಅಸಹಕಾರಕ್ಕೆ ಸಹಾಯಮಾಡುವರೆಂದಲ್ಲವೆ? ಅವರು ಅಧ್ಯಕ್ಷರಾಗಿ ಆರಿಸಿಬಂದಲ್ಲಿ ತಮ್ಮ ಇಚ್ಛೆಯಂತೆ ಪಂಚರಹೊಂಡದ ಮೈದಾನಕ್ಕೆ ತಿಲಕಮೈದಾನವೆಂದು ಹೆಸರಿಡಲಿಕ್ಕೂ, ಈಗ ಮ್ಯುನ್ಸಿಪಾಲಿಟಿಗಳಲ್ಲಿರುವ ಛಾಯಾಪಟಗಳಲ್ಲಿ ತಮಗೆ ಬೇಡಾದವುಗಳನ್ನು ಸ್ಥಳಾಂತರಮಾಡಲಿಕ್ಕೂ, ಲಿಂಗಾಯತರನ್ನು ಹತ್ತಿಕ್ಕಿ ತಮ್ಮ ಮನಬಂದಂತೆ ಕಾರ್ಯಸಾಗಿಸಲಿಕ್ಕೂ ಅನುಕೂಲವಾಗುವುದೆಂಬ ಆಶೆಯಿಂದಲ್ಲವೇ ಅವರಿಗೆ ಸಹಾಯಮಾಡಲಿಕ್ಕೆ ಸಿದ್ಧರಾದದ್ದು? ಹಾಗಿಲ್ಲದಪಕ್ಷದಲ್ಲಿ ಸರಕಾರದಿಂದ ನಾಮಿನೇಟೆಡ್ ಆದ ಸಹಕಾರಿಗೆ ಸಹಾಯಮಾಡಲು ನಿಮ್ಮ ಅಸಹಕಾರವಾದರೂ ಹೇಗೆ ಸಮ್ಮತಿಸಿತು? ಇದರಿಂದ ಇವರು ನಿಜವಾದ ಅಸಹಕಾರಿಗಳಿರದೆ ವೇಷಧಾರಿ ಅಸಹಕಾರಿಗಳಿರುವರೆಂದು ಜನರು ಊಹಿಸಿದ್ದರಲ್ಲಿ ತಪ್ಪೇನು? ತಮ್ಮ ಜಾತಿಯ ಜನರಿಗೆ ಅಧಿಕಾರದ ಜಾಗೆಗಳು ಸಿಗುವವೆಂದು ಕಂಡಲ್ಲಿ ತತ್ವವನ್ನು ಬದಿಗೊತ್ತಿ, ಎಂಥ ಕೆಲಸಗಳನ್ನಾದರೂ ಮಾಡಲಿಕ್ಕೆ ಸಿದ್ಧರಾಗುವರೆಂಬುದು ಇವರ ಈ ಕೃತಿಯಿಂದ ಎಲ್ಲರಿಗೂ ಒಡೆದು ಕಾಣುವಂತಿದೆ. ಹೀಗೆ ಎಷ್ಟೇ ತಿಪ್ಪರಲಾಗಾಸಿಗೆದರೂ, ಎಷ್ಟೇ ಭೇದೋಪಾಯಗಳನ್ನೊಡ್ಡಿದರೂ, ಕಡೆಗೆ ತತ್ವಭ್ರಷ್ಟರಾದರೂ, ಬ್ರಾಹ್ಮಣಸಹಕಾರಿಗೆ ಯಶ ದೊರೆಯದೆ ಲಿಂಗಾಯತಸಹಕಾರಿಗೇ ಜಯವಾಗಿ ತಮ್ಮವರ ಕೃಷ್ಣಕಾರಸ್ಥಾನಗಳೆಲ್ಲಾ ಜನರ ನಜರಿಗೆ ಬಿದ್ದುದರಿಂದ, ಅವುಗಳನ್ನು ಮರೆಮಾಡುವುದರ ಉದ್ದೇಶವಾಗಿ ಪೇಂಟರ ಸಾಹೇಬರು ಬುದ್ಧ ಈ ಊರ (ಗದಗಿನ) ಕ್ಯಾಂಪು ಇಟ್ಟು, ನಾಮಿನೇಟೆಡ್ ಮೆಂಬರ್ ಜನರನ್ನು ಕರಿಸಿ ಬ್ರಾಹ್ಮಣಸಹಕಾರಿಗೆ ಮತಕೊಡದೆ ಲಿಂಗಾಯತಸಹಕಾರಿಗೇ ಮತಕೊಡಿರೆಂದು ಹೇಳಿದರೆಂದೂ, ಸಹಕಾರಿಗಳು ತೆಗೆದ ಉತ್ಸವದಲ್ಲಿ ಗಾಂಧಿಟೊಪ್ಪಿಗೆ ಸುಡುವುದು ಗಾಂಧಿಮಹಾರಾಜರ ಅಪಜಯ ಎಂದು ಕೂಗುವುದೂ, ಜನರಿಗೆ ಪೀಡಿಸುವುದೂ ಮಾಡಿದರೆಂದು ಈ ಸುದ್ದಿಗಾರನು ಉಲ್ಲೇಖಿಸಿದ್ದಾನೆ. ಬ್ರಾಹ್ಮಣ ಸಹಕಾರಿಯನ್ನು ಚುನಾಯಿಸಿದವರಾರು? ಸರಕಾರದವರಲ್ಲೇ ಸರಕಾರಿ ಕಾಮದಾರನು (ಸರಕಾರನಿಯುಕ್ತ) ತನ್ನಪಕ್ಷದ ಮೆಂಬರನಿಗೆ ಮ್ಯುನಿಸಿಪಾಲಿಟಿಯ ಅಧ್ಯಕ್ಷಪದವಿಯು ಸಿಗುವುದೆಂದಲ್ಲಿ ಏಕೆ ಬೇಡವೆಂದಾನು? ಇನ್ನು ಅವರು ಬ್ರಾಹ್ಮಣರಿದ್ದದ್ದು ತಪ್ಪಂತೆ! ಹೀಗೆ ಅವರಿಗೆ ಬ್ರಾಹ್ಮಣರು ಸೇರದಿದ್ದಲ್ಲಿ ನಾಮಿನೇಷನ್ನಿನಲ್ಲಿ ಬ್ರಾಹ್ಮಣರನ್ನು ತಂದುದಾದರೂ ಹೇಗೆ? ಪೇಂಟರಸಾಹೇಬರ ಪ್ರತ್ಯುಪಕಾರಕ್ಕಾಗಿ ರಾಜನಿಷ್ಠ ಸಭೆಯನ್ನು ಸ್ಥಾಪಿಸುವ ಕುರಿತು ಸಭೆ ಕರೆದಿದ್ದರಂತೆ! ವಾಹವ್ವಾ!! ಎಷ್ಟೋ ಕಡೆಯಲ್ಲಿ ಇಂಥ ಸಂಘಗಳೂ, ಸಭೆಗಳೂ ಆಗಿರುವವು, ಆಗುತ್ತಿರುವವು. ಅಲ್ಲಿ ಯಾವಯಾವ ಚುನಾವಣೆಗಳು ನಡೆದಿರುವವು? ಅಸಹಕಾರಿಗಳೇ! ನೀವು ಸಂಘಗಳನ್ನು ಸ್ಥಾಪಿಸುವುದಾಗಲಿ, ಸಭೆಗಳನ್ನು ಮಾಡುವುದಾಗಲಿ, ಮಹಾತ್ಮಾಗಾಂಧಿಯವರ ಅಥವಾ ಮತ್ತೆ ಯಾರೊಬ್ಬರ ಮೇಲಿನ ಉಪಕಾರಕ್ಕಾಗಿಯೇ ಮಾಡುವಂತೆ ಕಾಣುತ್ತದೆ. ಎಲ್ಲಿ ಸಭೆಗಳಾದರೂ ಅವು ಒಬ್ಬರ ಮೇಲಿನ ಉಪಕಾರಕ್ಕೇ ಎಂಬ ಹೊಸಸಿದ್ಧಾಂತವನ್ನು ಹುಡುಕಿ ತೆಗೆದ ಈ ನಮ್ಮ ಸುದ್ದಿಗಾರನಿಗೆ ಏನು ಭಕ್ಷೀಸು ಕೊಡತಕ್ಕದ್ದೋ ನೀವೇ ಕೊಡಿರಿ. ಮಹಾತ್ಮಾಗಾಂಧಿಯವರು ದೇವಾಂಶರಿದ್ದರೂ, ಅವರ ಅಹಿಂಸೆಯ ಅಸಹಕಾರದಿಂದಲೇ, ಅಹಿಂಸಾತತ್ವದಂತೆ ನಡೆಯುವರಾರು? ಮತ್ತು ಅರಾಜಕರಾರು? ಎಂಬುದನ್ನು ಕಂಡುಹಿಡಿಯಲಿಕ್ಕೆ ಬರುವಂತಿದೆ ಎಂದು ಹೇಳಿದ್ದನ್ನು ಈ ಸುದ್ದಿಗಾರನು ಮಹಾತ್ಮಾಗಾಂಧಿಯವರು ನಿಜವಾದ ಅಸಹಕಾರಿಗಳಿರದೆ ಬ್ರಾಹ್ಮಣರೆಂಬ ರಾಕ್ಷಸರನ್ನು ಸರಕಾರದವರ ಕೈಯಿಂದ ನಾಶಪಡಿಸುವ ಉದ್ದೇಶವಾಗಿ ಬ್ರಾಹ್ಮಣರಿಗೆ ಅಸಹಕಾರಮಾಡಲಿಕ್ಕೆ ಹಚ್ಚಿರುತ್ತಾರೆಂದು ಬರೆದು ಹಾವಿನಬಾಯಲ್ಲಿ ಹಾಲು ವಿಷವಾಗುವಂತೆ ಸಜ್ಜನರ ವಾಕ್ಯಗಳು ದುರ್ಜನರ ಬಾಯಲ್ಲಿ ಹೇಗೆ ರೂಪಾಂತರ ಹೊಂದುವವೆಂಬುದನ್ನು ಎಲ್ಲರಿಗೂ ತೋರಿಸಿಕೊಟ್ಟಿದ್ದಾನೆ. ಮುಯ್ಯಿಗೆ ಮುಯ್ಯಿ ಎಂಬ ಗಾದೆಯಂತೆ ನೀವು ಮಾಡಿದಂತೆ ಸಹಕಾರಿಗಳ ಉತ್ಸವವಾದರೂ ಆಯಿತು. ಆಗ್ಗೆ ನೀವೆಲ್ಲಿ ಮಲಗಿದ್ದಿರಿ? ಸಹಕಾರಿಗಳು ಶಾಂತತಾಭಂಗಮಾಡಲಿಕ್ಕೆ ಪ್ರಯತ್ನಿಸಿದರಂತೆ! ಅಹುದಹುದು. ಅಸಹಕಾರಿಗಳೇ ನೀವು ಎಷ್ಟು ಶಾಂತತಾಪ್ರಿಯರು, ಮತ್ತು ಸಭೆ ಉತ್ಸವಗಳಲ್ಲಿ ಎಷ್ಟು ಶಾಂತತೆಯನ್ನು ಕಾಯುವಿರಿ ಎಂಬುದು ರಾಜರಿಗೂ ಪ್ರಜೆಗಳಿಗೂ ಕೂಡ ಗೊತ್ತಾಗಿಹೋಗಿದೆ. ಮೈಸೂರಿನ ನರಸಿಂಗರಾವ ಸರೋದೆ ಇವರಿಗೆ ಅಸಹಕಾರಿಗಳು ಕೂಡಿಸಿದ ಸಭೆಯಲ್ಲಿ ಮಾತಾಡಗೊಡದೆ ಗದ್ದಲವೆಬ್ಬಿಸಿ ಸಭೆಮುಗಿದದ್ದೂ, ಮರುದಿನ ಸಹಕಾರಿಗಳು ಸಭೆಕರೆದು ಅವರ ಭಾಷಣಮಾಡಿಸಿದ್ದೂ ಈ ಸುದ್ದಿಗಾರನಿಗೆ ಗೊತ್ತಿಲ್ಲವೊ? ಅಸಹಕಾರಿಗಳ ಪುರಾಣದಲ್ಲಿ ಹಿಂಸೆಗೆ ಅಹಿಂಸೆಯೆಂದೂ ದೇಶದ್ರೋಹಿಗಳಿಗೆ ದೇಶಭಕ್ತರೆಂದೂ ಸಿದ್ಧಾಂತವಿರಬಹುದು.

ನಿಜವಾದಿ.

ಹುಬ್ಬಳ್ಳಿ ತಾಲ್ಲೂಕು ಇಂಗಳಹಳ್ಳಿ.

ಈ ಊರಲ್ಲಿದ್ದ ಶಿವಶರಣ ಶ್ರೀ ಶಾಂತಪ್ಪಾರ್ಯ ಮಹಾಸ್ವಾಮಿಗಳವರು ಅವತಾರ ಸಮಾಪ್ತಿಮಾಡಿದ ಮಾರ್ಗಶೀರ್ಷ ಶುದ್ಧ ಬಿದಿಗೆಯ ಪುಣ್ಯತಿಥಿಯದಿವಸ ಇಲ್ಲಿಯ ಯಾವತ್ತೂ ಜಾತಿಯ ಭಕ್ತಮಂಡಳಿಯು ಆನಂದದಿಂದ ಪೂಜನ, ಭಜನ, ಅನ್ನಸಂತರ್ಪಣೆ ಮೊದಲಾದ ಸತ್ಕಾರ್ಯಗಳನ್ನು ಒಳ್ಳೇ ಸಂತೋಷದಿಂದ ಮಾಡಿದರು. ಅದೇ ದಿವಸ ರಾತ್ರಿ ನಲವಡಿಯ ಶ್ರೀಕಂಠಶಾಸ್ತ್ರಿಗಳವರು ತಮ್ಮ ಅಸ್ಖಲಿತವಾಣಿಯಿಂದ “ಸಾಧುಸಮಾಗಮ” ಎಂಬ ವಿಷಯವನ್ನು ಕುರಿತು ಜನರಿಗೆ ಒಳ್ಳೇ ಬೋಧವಾಗುವಂತೆ ಕೀರ್ತನ ರೂಪದಿಂದ ಹೇಳಿ, ಎಲ್ಲ ಭಕ್ತಮಂಡಳಿಯನ್ನು ಆನಂದಪಡಿಸಿದರು.

ಶಿವಶರಣರ ಭಕ್ತ.

ಶೋಚನೀಯವಾದ ಮೃತ್ಯು.

ನಿಜಾಂ ಇಲಾಖಾ ರಾಯಚೂರು ಜಿಲ್ಲಾ ಪೈಕಿ ಜೇನೂರು ಶ್ರೀಮಂತ ದೇಶಾಯಿ ರಾಜಾಚನ್ನಬಸವರಾವ್ ಇವರ ಧರ್ಮಪತ್ನಿಯವರಾದ ಕುಂ||ಸೌ|| ಕೀರ್ತಮ್ಮನವರು ಇದೇ ಮಾರ್ಗಶಿರ ಶು|| ೧ ಬುಧವಾರದಲ್ಲಿ ಉತ್ತರ ಲೋಕವನ್ನೈದಿದರೆಂದರುಹಲು ಪರಮದುಃಖವಾಗುತ್ತದೆ. ಇವರು ತಮ್ಮ ಸಹೋದರಿಯರಾದ ಪೊತ್ನಾಳ ದೇಶಾಯಿನೀ ಹಂಪಮ್ಮನವರು ಮೃತಪಟ್ಟ ನಂತರ ಅವರ ಸ್ಮಾರಕದ ಮೇಲೆ ಬಾಲಿಕಾಧರ್ಮಪಾಠಶಾಲೆಯನ್ನು ನಡಿಸುತ್ತಿದ್ದರು. ಹಾಗು ಆಚಾರ ವಿಚಾರಗಳಲ್ಲಿಯೂ ಗುರುಲಿಂಗಜಂಗಮರಲ್ಲಿಯೂ ಪರಮವಿಶ್ವಾಸಬುದ್ಧಿಯುಳ್ಳವರಾಗಿದ್ದರು. ಅವಸಾನಕಾಲದಲ್ಲಿ ಶರೀರಾರೋಗ್ಯವಂ ಬಯಸದೆ ಪೂಜ್ಯಪಾದರಾದ ಇಂಗಳಗಿಮಠದ ಚರವರ ಅಜ್ಜಪ್ಪಸ್ವಾಮಿಗಳಿಂದ ಭವರೋಗ ನಿವೃತ್ತಿಯ ಔಷಧವನ್ನೇ ಕೇಳಿಕೊಂಡು ಸ್ವಹಸ್ತದಿಂದ ದಾನಧರ್ಮಾದಿಗಳನ್ನು ಮಾಡಿದರು. ಇವರ ಮೃತಿಯಿಂದುಂಟಾದ ದುಃಖವು ಇವರ ಪತಿಯವರಿಗೂ ಜನನೀ ಜನಕರಿಗೂ ಬಂಧುವರ್ಗಕ್ಕೂ ಅಪಾರವಾಗಿದೆ. ಇವರ ದುಃಖಕ್ಕೂ ಮೃತಪಟ್ಟವರ ಶರೀರಕ್ಕೂ ಜಗದೀಶನು ಶಾಂತಿಯನ್ನೀಯಲೆಂದು ಕೋರುತ್ತೇನೆ. ಓರ್ವ ದುಃಖಿ.

ವೀರಶೈವ ಸೇವಾಸಮಾಜ, ತುಮಕೂರು.

ತುಮಕೂರು ಹೊರಪೇಟೆ, ಮತ್ತು ಅರಳೆಪೇಟೆಯಲ್ಲಿರುವ ವೀರಶೈವಮಹಾಜನಗಳು ಈ ಚೈತ್ರಶುದ್ಧ ಪ್ರತಿಪದೆಯಾರಭ್ಯ ಅರಳೆಪೇಟೆ ಶ್ರೀ ವೃಷಭೇಂದ್ರವಿಜಯ ಮಹಾಪುರಾಣವನ್ನು ಅತ್ಯಂತ ಭಕ್ತಿಯಿಂದ ಜವಳಿ ಅಂಗಡಿ ಶಿವಕಥಾ ಡಿ. ವೀರಣ್ಣನವರಿಂದ ಸಾಂಗವಾಗಿ ಓದಿಸಿ ಕೇಳುತ್ತಿದ್ದರು. ಅನುಭವಶಾಲಿಗಳಾದ ಮ|| ಯಸ್. ಯಲ್. ನಂಜುಂಡಪ್ಪನವರು ಕಥಾವ್ಯಾಖ್ಯಾನವನ್ನು ಸರಸವಾಗಿ ಮಾಡುತ್ತಾ ಸರ್ವರನ್ನೂ ಭಕ್ತಿಪರವಶರನ್ನಾಗಿ ಮಾಡುತ್ತಿದ್ದರು. ಪುರಾಣಶ್ರವಣದ ಕಾಲದಲ್ಲಿ ಪ್ರತಿ ಸೋಮವಾರವೂ ಶ್ರೀ ಮುರುಘಮಠದಲ್ಲಿ ಜಂಗಮದಾಸೋಹವು ನಡೆಯುತ್ತಿತ್ತು. ಈ ರೀತಿ ಮಹಾಪುರಾಣವು ೬ ತಿಂಗಳ ಕಾಲ ಅವಿಚ್ಛಿನ್ನವಾಗಿ ನಡೆದು ಸಾಂಗವಾಗಲು ಕಡೆಯದಿನ ಶ್ರೀ ನಂದೀಶ್ವರಸ್ವಾಮಿಯವರ ಮತ್ತು ಪುರಾಣದ ಉತ್ಸವವು ಪಟ್ಟಣದಲ್ಲಿ ರಮ್ಯವಾಗಿ ಅಲಂಕೃತವಾಗಿದ್ದ ನಾನಾಬೀದಿಗಳಲ್ಲಿ ಬಹು ಮಂಗಳಕರವಾಗಿಯೂ ವೈಭವದಿಂದಲೂ ಭಕ್ತಿಪೂರಿತವಾಗಿಯೂ ಶಿವಭಜನಾ ಸೇವೆಯಿಂದಲೂ ನೆರವೇರಿಸಲ್ಪಟ್ಟು ಸಾಯಂಕಾಲದವರೆಗೂ ಸಹಸ್ರಾರು ಭಕ್ತಮಾಹೇಶ್ವರರಿಗೆ ದಿವ್ಯಸಂತರ್ಪಣೆಯು ನಡೆಸಲ್ಪಟ್ಟಿತು. ಮಹಾಮಂಗಳಾಚರಣೆಯು ಮರುದಿನ ರಾತ್ರಿ ಅತ್ಯಂತ ಶೋಭಾಯಮಾನವಾಗಿ ನೆರವೇರಿತು. ಆ ಕಾಲದಲ್ಲಿ ಅಂಶುಮತೀಕಲ್ಯಾಣವೆಂಬ ಶಿವಕತೆಯನ್ನು ನವರಸಯುಕ್ತವಾಗಿಯೂ ಸುಶ್ರಾವ್ಯವಾಗಿಯೂ ಅಷ್ಟಾವರಣ ವಿಚಾರಪೂರ್ವಕವಾಗಿಯೂ ನೆರವೇರಿಸಿ ನೆರೆದಿದ್ದ ಸಭಾಜನರನ್ನೆಲ್ಲ ಸಂತೋಷಪಡಿಸಿದ ಗುಬ್ಬಿ ಶಿವಕಥಾ ವೇ|| ಶ್ರೀ|| ಶಿವರುದ್ರಶಾಸ್ತ್ರಿಗಳವರಿಗೆ ವೀರಶೈವ ಸೇವಾಸಮಾಜದವರು ಪ್ರೀತಿಪೂರ್ವಕವಾಗಿ ಭಂಗಾರದ ಪದಕವನ್ನು ನಮ್ಮ ಸಮಾಜದ ದಿನಮಣಿಯಂತಿರುವ ಅಡ್ವೋಕೇಟ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾದ ಮ|| ಜಿ. ಪರಮಶಿವಯ್ಯನವರ ದಿವ್ಯಹಸ್ತಗಳಿಂದ ಕೊಡಿಸಿದ್ದಲ್ಲದೆ ಮೇಲ್ಕಂಡ ಪುರಾಣಿಕರಿಬ್ಬರಿಗೂ ವಂದನಾಪೂರ್ವಕವಾದ ಕಲಾಪತ್ತು ಶಹಲ್‌ಗಳನ್ನು ಸಹ ಕೊಡಿಸಿದರು. ಧಾರ್ಮಿಕವಾದ ಸಮಯೋಚಿತ ಭಾಷಣಗಳೂ ಮಹಾಮಂಗಳಾರತಿಯೂ ಶ್ರೀ ದೇವತಾಪ್ರಸಾದ ವಿನಿಯೋಗವೂ ಆದನಂತರ ಜಯಘೋಷದಿಂದ ಸಭೆಯು ವಿರಮಿಸಲ್ಪಟ್ಟಿತು.

ಪ್ರೇಕ್ಷಕ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಲಗ್ನದ ಫಂಡು.

ಮ|| ಗಳಾದ

(1) ಕೊರಟಗೆರೆ ಸಬ್‌ತಾ|| ತೀತದ ಯಜಮಾನ್ ಭದ್ರಪ್ಪನವರ ಮೂಲಕ—ಕೋಡಿಮಲ್ಲೇಗೌಡರ ಲಗ್ನದಲ್ಲಿ 5-0-0. ಚಿಕ್ಕವೀರಶೆಟ್ಟರ ಪುತ್ರಿ ವೀರಮ್ಮನ ಲಗ್ನದಲ್ಲಿ 1-0-0. ಉದ್ದಂಡಪ್ಪನವರ ಮಗ ವೀರಭದ್ರಯ್ಯನ ಲಗ್ನದಲ್ಲಿ 1-0-0. ವೀರಭದ್ರಯ್ಯನವರ ಅತ್ತೆಯವರು ಶ್ರೀಮತಿ ಪುಟ್ಟಮ್ಮನವರ ಪುತ್ರಿ ಚನ್ನಮ್ಮನ ಲಗ್ನದಲ್ಲಿ 1-0-0.

(2) ಬೆಂಗಳೂರು ತಾ|| ಕಾಕೋಳು ಕೆ. ವೀರಣ್ಣನವರ ಮೂಲಕ—ಶಿಡ್ಲಘಟ್ಟ ತಾ|| ಸಾದಲಿಯಲ್ಲಿ ನಡೆದ ರಾಚಾರ್ಕಂಟಿ ಕಂಟ್ರ್ಯಾಕ್ಟರ್ ಚನ್ನಬಸಪ್ಪನವರ ಮಕ್ಕಳಿಗೂ, ಅಡಿಕೆಅಂಗಡಿ ಶ್ರೀಕಂಠಪ್ಪನವರ ತಂಗಿಗೂ ನಡೆದ ಲಗ್ನದಲ್ಲಿ ವರನ ಕಡೆಯಿಂದ 10-0-0, ವಧುವಿನ ಕಡೆಯಿಂದ 5-0-0. ಮೇಲ್ಕಂಡ ಶ್ರೀಕಂಠಪ್ಪನವರ ತಮ್ಮನಿಗೂ ಮತ್ತು ಗಂಟಿಗಾನಹಳ್ಳಿ ಗಂಗಾಧರಪ್ಪನವರ ಪುತ್ರಿಗೂ ನಡೆದ ಲಗ್ನದಲ್ಲಿ ವರನ ಕಡೆಯಿಂದ 2-0-0 ವಧುವಿನ ಕಡೆಯಿಂದ 2-0-0.

(3) ತುಮಕೂರು ವಿದ್ಯಾರ್ಥಿ ಟಿ. ಗುರುನಂಜಯ್ಯನವರ ಮೂಲಕ—ನೆಲಮಂಗಲದ ತಾ|| ಗಬ್ಬೂರು ನಂಜುಂಡಯ್ಯನವರ ಮಗನಿಗೆ ಸಾಗ್ಗೆರೆ ಕೋಡಿಮಲ್ಲಯ್ಯನವರ ಪುತ್ರಿಯನ್ನು ತಂದು ಗಬ್ಬೂರಲ್ಲಿ ನಡೆದ ಲಗ್ನದಲ್ಲಿ ವರನ ಕಡೆಯಿಂದ 5-0-0, ವಧುವಿನ ಕಡೆಯಿಂದ 3-0-0.

(4) ವೈಟ್‌ಫೀಲ್ಡ್ ರೋಡಿಗೆ ಸೇರಿದ ಗುಂಜೂರು ಗ್ರಾಮದ ದೊಡ್ಡಬಸಪ್ಪನವರು (ವರನ ಕಡೆಯವರು) ನೆಲಮಂಗಲದ ಮಲ್ಲಪ್ಪನವರು (ವಧುವಿನ ಕಡೆಯವರು) ಇವರ ಮನೆಯಲ್ಲಿ ನಡೆದ ಲಗ್ನದಲ್ಲಿ 4-0-0.

(5) ಹಾಸನದ ಡಿ|| ಎಸಳೂರು ಪೇಟೆಶೆಟ್ಟರು ಪಟ್ಟಣಶೆಟ್ಟರು ನಂಜುಂಡಪ್ಪನವರ ಮೂಲಕ—ಬೆಡರಿನ ದಿಗಂಬರಯ್ಯನವರ ಮಗನಿಗೂ ಹದಾಲ್ ಸಿದ್ಧನಂಜಪ್ಪನವರ ಪುತ್ರಿಗೂ ನಡೆದ ಲಗ್ನದಲ್ಲಿ 2-0-0. ಹದಾಲ್ ಸಿದ್ಧನಂಜಯ್ಯನವರ ಮಗನಿಗೂ ಬೆಡರಿನ ಶಿದ್ಧಲಿಂಗಯ್ಯನವರ ಪುತ್ರಿಗೂ ನಡೆದ ಲಗ್ನದಲ್ಲಿ 2-0-0. ಸೋಮವಾರಪೇಟೆ ಅಬ್ಬಿಮಠದ ಸೋಮಯ್ಯನವರ ಪುತ್ರನಿಗೂ ಹಂಚಿನಮಠದ ನಂಜಯ್ಯನವರ ಪುತ್ರಿಗೂ ನಡೆದ ಲಗ್ನದಲ್ಲಿ 2-0-0. ಕೊಡ್ಲಿಪೇಟೆ ಮಸಳೆ ರುದ್ರಪ್ಪನವರ ಮಗನಿಗೂ ಎಸಳೂರುಪೇಟೆ ಅಜ್ಜಶೆಟ್ಟಿ ನಂಜಲಗೋಡಪ್ಪನವರ ಪುತ್ರಿಗೂ ನಡೆದ ಲಗ್ನದಲ್ಲಿ 2-0-0. ಕೊಡ್ಲಿಪೇಟೆ ಚಿಸಿವಾರದ ಚನ್ನಬಸಪ್ಪನವರ ಮಗನಿಗೂ ಎಸಳೂರುಪೇಟೆ ಕೊಟ್ಟೂರಯ್ಯನವರ ಗುರುವಯ್ಯನವರ ಪುತ್ರಿಗೂ ನಡೆದ ಲಗ್ನದಲ್ಲಿ 2-0-0.

(6) ಕುಣಿಗಲ್ ತಾ|| ಎಡೆಯೂರು ಹೋಬಳಿ ಶೇಕದಾರ್ ಜಿ. ವೈ. ಅಣ್ಣಪ್ಪನವರ ಮೂಲಕ—ಎಡೆಯೂರು ಕೋಟಿಶೆಟ್ಟರ ಪುತ್ರಿಗೂ ಮಂಡ್ಯ ತಾ|| ಬಸರಾಳು ಶಿದ್ಧಬಸವಶೆಟ್ಟರ ಪುತ್ರನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 5-0-0.

(7) ಮಾಗಡಿ ತಾ|| ತಾವರೆಕೆರೆ ಚಿಲ್ಲರೆಅಂಗಡಿ ಆದೆಪ್ಪನವರ ಮೂಲಕ—ಬೈಂಡಹಳ್ಳಿ ಚಿಕ್ಕರುದ್ರಪ್ಪನವರ ತಂಗಿಯ ಲಗ್ನದಲ್ಲಿ 2-0-0.

(8) ಮಾಗಡಿ ತಾ|| ಸೋಲೂರುಶೆಟ್ಟರ ವೀರಶೆಟ್ಟರ ಮೂಲಕ—ಚಲುವೆಮಠದಲ್ಲಿ ನಡೆದ ಕಂಬಾಳುಮಠದ ವೇ|| ಲಿಂಗದೇವರ ಲಗ್ನದಲ್ಲಿ ವರನ ಕಡೆಯಿಂದ 3 ರೂ. ವಧುವಿನ ಕಡೆಯಿಂದ 2 ರೂ.

9. ದೊಡ್ಡಬಳ್ಳಾಪುರದ ವಿದ್ಯಾರ್ಥಿ ಕೆ. ಮಾದಪ್ಪನವರ ಮೂಲಕ—ಗಂಗಪ್ಪನವರ ಕುಮಾರನಿಗೂ ಹಣಬೆ ಚಿಕ್ಕಪ್ಪನವರ ಪುತ್ರಿಗೂ ನಡೆದ ಲಗ್ನದಲ್ಲಿ 3-0-0.

(10) ಚಾಮರಾಜನಗರ ತಾ|| ಆಲೂರು ಅಪ್ಪೆಗೌಡರ ಪುಟ್ಟಬಸಪ್ಪನವರ ಮೂಲಕ—ಆಲೂರು ಕಾಶಿಪತಿ ಪುಟ್ಟಣ್ಣನವರ ಮಕ್ಕಳು ಚನ್ನಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ 3-0-0.

(11) ಬೆಂಗಳೂರು ಸಿಟಿ ಆರ್. ಪಾಪಣ್ಣನವರ ಮಕ್ಕಳು ವಿ. ವೀರಭದ್ರಪ್ಪನವರಮೂಲಕ ಮಂಡ್ಯದಲ್ಲಿರುವ ಹೊನ್ನಪ್ಪನವರಕುಮಾರ ಹುಚ್ಚಪ್ಪನವರ ಪುತ್ರಿ ಹೊನ್ನಮ್ಮನಿಗೂ ಎಡತೊರೆ ಜವಳಿಅಂಗಡಿ ವೀರಣ್ಣನವರ ಕುಮಾರ ಶಿವಪ್ಪನಿಗೂ ನಡೆದಲಗ್ನದಲ್ಲಿ 4-0-0.

(12) ಮೈಸೂರು ವೇ|| ಎಮ್. ಆರ್. ಕರಿಬಸವಶಾಸ್ತ್ರಿಗಳವರ ಮೂಲಕ—ಮೈಸೂರಲ್ಲಿರುವ ಚನ್ನಪಟ್ಟಣದ ವಿ. ಆರ್. ಬಸವರಾಜಯ್ಯನವರ ಅಣ್ಣಂದಿರು ಬಸವರಾಜಪ್ಪನವರ ಕುಮಾರನಿಗೂ ದೇಂಕಣಿಕೋಟೆ ನಂಜಪ್ಪನವರ ಕುಮಾರಿ ನಂಜಮ್ಮಣ್ಣಿಗೂ ನಡೆದಲಗ್ನದಲ್ಲಿ 5-0-0.

(13) ದೇಂಕಣಿಕೋಟೆ ನೀಲಕಂಠಪ್ಪನವರಮೂಲಕ—ನೋಟಕಾರ ನಂಜಪ್ಪನವರಮನೆ ನಿಷೇಕಪ್ರಸ್ತದಲ್ಲಿ 2-0-0. ನೋಟಕಾರ ಮುದ್ದಪ್ಪನವರಮನೆ ನಿಷೇಕಪ್ರಸ್ತದಲ್ಲಿ 1-0-0. ಟಿಂ. ನಂಜಪ್ಪನವರ ಕುಮಾರ್ತಿ ಪ್ರಸ್ತದಬಾಬ್ತು ಕನ್ಯಾವರರಕಡೆಯಿಂದ 5-0-0. ನೀಲಕಂಠಪ್ಪನವರ ತಾಯಿಯವರ ಆರಾಧನೆ ಕಾಲದಲ್ಲಿ 5-0-0. ಟಿಂ. ನಂಜಪ್ಪನವರಮಗನ ಲಗ್ನದಬಾಬ್ತು ಕನ್ಯಾವರರಕಡೆಯಿಂದ 5-0-0. ನಸ್ಕದ ಶ್ರೀಕಂಠಪ್ಪನವರ ಮಗಳ ಲಗ್ನದಬಾಬ್ತು ಕನ್ಯಾಕಡೆಯಿಂದ 2-0-0. ಮಾರಂಡಹಳ್ಳಿ ಮುದ್ದಪ್ಪನವರಮಗಳ ಲಗ್ನದಬಾಬ್ತು ಹೆಣ್ಣಿನಕಡೆಯಿಂದ 2-0-0. ಟಿಂ. ಶಂಕರಪ್ಪನವರ ಕುಮಾರ್ತಿ ನಿಷೇಕಪ್ರಸ್ತದಬಾಬ್ತು 1-0-0. ಗಂಧದಕಡ್ಡಿ ವೀರಪ್ಪನವರ ಲಗ್ನದಬಾಬ್ತು 3-0-0.

(14) ಬೆಂಗಳೂರು, ಹಲಸೂರಿನಲ್ಲಿರುವ ಯು. ಎಸ್. ಕಾಳಪ್ಪನವರಿಂದ—ಅಲಸೂರು ಬಿ. ಎಸ್. ರುದ್ರಪ್ಪನವರಮನೆ ಲಗ್ನದಲ್ಲಿ 5-0-0. ಅಲಸೂರು ದೇವಪ್ಪನವರಮನೆ ಲಗ್ನದಲ್ಲಿ 5-0-0. ಬೆಂಗಳೂರು ಅಕ್ಕಿಪೇಟೆ ಕುಣಿಗಲ್ ಲಿಂಗಪ್ಪನವರಮನೆ ಲಗ್ನದಲ್ಲಿ 5-0-0.

(15) ಮಂಡ್ಯ ತಾ|| ಮದ್ದೂರು ಕೆ. ಚನ್ನಮಲ್ಲಪ್ಪನವರಮೂಲಕ—ಮದ್ದೂರು ಕೊತ್ತತ್ತಿಯಜಮಾನ್ ದೊಡ್ಡಬಸಪ್ಪನವರಮನೆಯಲ್ಲಿ ನಡೆದ ಲಗ್ನದಲ್ಲಿ 2-2-0. ದೇಶದಶೆಟ್ಟರು ಮ|| ರಾ|| ಸುಬ್ಬಣ್ಣನವರ ಮನೆಯಲ್ಲಿ ನಡೆದಲಗ್ನದಲ್ಲಿ 2-2-0.

(16) ಚಾಮರಾಜನಗರ ತಾ|| ಆಲೂರು ಅಪ್ಪೆಗೌಡರ ಪುಟ್ಟಬಸಪ್ಪನವರಮೂಲಕ—ಚನ್ನಬಸಪ್ಪನವರ ಮನೆಯಲ್ಲಿ ನಡೆದಲಗ್ನದಲ್ಲಿ 1-0-0. ಮುದ್ದುಬಸಪ್ಪನವರ ಮನೆಯಲ್ಲಿ ನಡೆದಲಗ್ನದಲ್ಲಿ 1-0-0. ಕಾಶಪ್ಪನವರ ಮನೆಯ ಲಗ್ನದಲ್ಲಿ 2-0-0.

(17) ಕುಣಿಗಲ್ ತಾ|| ಹುಲಿಯೂರುದುರ್ಗದ ಪಟೇಲ್ ಸಿದ್ಧಬಸವಯ್ಯನವರ ಮೂಲಕ—ಹಳೆವೂರಲ್ಲಿರುವ ಬಳೆ ಕಪನಶೆಟ್ಟರವರ ಮನೆಯಲ್ಲಿ ನಡೆದಲಗ್ನದಲ್ಲಿ 5-0-0. ಜುಮ್ಲಾ 130-4-0.

ಜಿ. ಪರಮಶಿವಯ, ಬಿ.ಎ., ಎಲ್.ಎಲ್.ಬಿ.,
ಆನರರಿ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ.

ಬೆಂಗಳೂರುಸಿಟಿ,
ತಾ|| 6-7-1921.

೧೯೨೧ ನೆಯ ಇಸವಿ ಡಿಶಂಬರ್ ತಾ|| ೧೮ರಿಂದ ೧೯೨೧ ನೆಯ ಡಿಶಂಬರ್ ತಾ|| ೨೪ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೩ನೆಯ ದುರ್ಮತಿನಾಮ ಸಂವತ್ಸರದ ಮಾರ್ಗಶಿರಬಹುಳ ಚೌತಿಯಿಂದ ಮಾರ್ಗಶಿರಬಹುಳ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ರ್ರಾಶಿ
18	ಭಾನು	ಚೌತಿ	47-17	ಪುಷ್ಯ	25-43	4
19	ಸೋಮ	ಪಂಚ	41-9	ಆಶ್ಲೆ	21-42	5
20	ಮಂಗಳ	ಷಷ್ಠಿ	35-9	ಮಖಾ	17-28	6
21	ಬುಧ	ಸಪ್ತ	29-18	ಪುಬ್ಬ	13-21	7
22	ಗುರು	ಅಷ್ಟ	23-49	ಉತ್ತ	9-27	8
23	ಶುಕ್ರ	ನವ	18-49	ಹಸ್ತ	6-1	9
24	ಶನಿ	ದಶ	14-32	ಚಿತ್ತ	3-14	10

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೮ ಮೈಸೂರ್ ಸ್ಟಾರ್ ಸರ್ ೧೯೨೧ ನೆಯ ಇಸವಿ ಡಿಸೆಂಬರ್ ತಾರೀಖು ೨೫ ನೆಯ ಭಾನುವಾರ. ಸಂಚಿಕೆ ೫೦

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

49

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳ, ಕಸ್ತೂರಿ, ರೇಷ್ಮೆವಡಿಗಳು ಮೊದಲಾದ ಮಾಲುಗಳನ್ನು ಕೋರುವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬೆಲೆಯನ್ನು ಕಳುಹಿಸಲಾಗುವುದು.

32 ಮಣಿಗಳ ಕಂಠಿ 1ಕ್ಕೆ			
ಮುಖ	ರೂ.	ಇಂದ	ರೂ. ವರೆಗೆ
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಜಪಮಾಲ	ರೂ. ಇಂದ	ರೂ. ವರೆಗೆ
ಉದ್ರಿನ	,, 15-0-0	,, 40-0-0
ಮಣಿಯ	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, 0-8-0	,, 1-0-0
ಅವಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ತ್ರಿಜಟ 1ಕ್ಕೆ	8-0-0	,, 100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ 1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ 80-0-0 ಬಿ 50-0-0 ಸಿ 40-0-0 ಡಿ. 25-0-0 ಬೆಲೆ ವಿಷಯಕ್ಕೆ ಪತ್ರ ಬರೆದು ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷಿ
ಕಂಪನಿ. ಚೌಕಂಬಾ ಕಾಶೀ

43

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ಪ್ರತಿವಂಚಕ	೦—೯—೦

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಶ್ರೌತಮಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮಹಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ—ಶಿವನ ಪಂಚವಿಂಶತಿ ಲೀಲೆಗಳು—ಅನೇಕ ಶಿವಶರಣರ ಚರಿತ್ರೆಗಳು—ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರ್ಣಿಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಮ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪ್ರಸಿದ್ಧಪತ್ರಿಕೆ.

2

ಹಾಸನ ಡಿಸ್ಟ್ರಿಕ್ಟು ಪೋಲೀಸು ಆಫೀಸು ಕಾಂಪೌಂಡಿನಲ್ಲಿ ಮಾಮೂಲ್ ಮೇರೆ ಸರ್ 1922ನೇ ಇಸವಿ ಜನವರಿ ಮಾಹೆ ತಾರೀಖು 2,3. ಮತ್ತು 4ನೇ ಸೋಮವಾರ, ಮಂಗಳವಾರ, ಬುಧುವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತೆಂಬ ಭಾಗ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಬಾಕಿ ವಿಷಯಗಳಿಗೆ 17-11-1921ರ ಮರ್ಕ್ಯುಂ ಮೈಸೂರು ಗೆಜೆಟ್ I A. ಭಾಗದ 382, 383ನೇ ಪುಟಗಳಲ್ಲಿ ಪ್ರಾಯಿಪಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

MOHAMUD RAZA,
Vice President,
Town Muncipality, Hassan.

9-12-21.

ನೋಟೀಸು.

2

ಅರಸೀಕೆರೆ ತಾಲ್ಲೂಕು ಕಣಕಟ್ಟೆ ಹೋಬಳಿ ಹರಳಕಟ್ಟ ಗ್ರಾಮದ ತೋಗೆ ಸಿದ್ದಣ್ಣನ ಮಗ ಮರುಳಸಿದ್ದಪ್ಪನು ಇದರಿಂದ ಸನುಸ್ಮರಿಗೂ ತಿಳಿಯಪಡಿಸುವದೇನೆಂದರೆ—

ನನ್ನ ತಂದೆ ತೋಗೆ ಸಿದ್ದಣ್ಣನು 1914 ನೇ ಸಾಲಿನಲ್ಲಿ ನಮ್ಮ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತವಾದ ಆಸ್ತಿಗಳನ್ನು ನನ್ನ ಸ್ವಾಧೀನಕ್ಕೆ ಬಿಟ್ಟು ತನ್ನ ಮತ್ತು ತನ್ನ ಹೆಂಡತಿಯ ಜೀವನಾಂಶಕ್ಕಾಗಿ ಕೆಲವು ಆಸ್ತಿ ಉಳಿಸಿಕೊಂಡು ತಾನು ಜೀವವಂತನಾಗಿರುವತನಕ ಯಾರಿಗೂ ಯಾವವಿಧವಾದ ಪರಭಾರೆಮಾಡುವುದಿಲ್ಲವೆಂದು ಒಪ್ಪಿ ಕಾಗದ ಬರಕೊಟ್ಟು ರಿಜಿಸ್ಟರು ಮಾಡಿಸಿಕೊಟ್ಟಿರುತ್ತಾನೆ. ಈಗ ತಾನು ಜೀವನಾಂಶಕ್ಕೆ ಉಳಿಸಿಕೊಂಡಿರುವ ಸ್ವತ್ತುಗಳನ್ನು ಯಾರೋ ದುಷ್ಟರ ಪ್ರೇರಣೆಯಿಂದ ಯಾವರೀತಿಯೋ ಪರಭಾರೆಮಾಡುತ್ತಾನೆಂದು ವದಂತಿಕೇಳುತ್ತೇನೆ. ಈತನಿಂದ ಯಾರೂ ಯಾವವಿಧದಲ್ಲಿಯೂ ನಮ್ಮ ಆಸ್ತಿಗಳನ್ನು ಬರಸಿಕೊಳ್ಳತಕ್ಕದ್ದಲ್ಲ, ಹಾಗೆ ಬರೆಸಿಕೊಂಡಲ್ಲಿ ಅದು ಊರ್ಜಿತವಾಗಲಾರದು. ಮತ್ತು ನನ್ನ ವಿಶಿಷ್ಟ ಕಷ್ಟನಷ್ಟಗಳಿಗೆ ಪಾತ್ರರಾಗುತ್ತೀರಾದ ಸಂಗತಿ ಈ ಮೂಲ್ಕ ತಿಳಿಯಪಡಿಸಿರುತ್ತೇನೆ.

ತಾ|| 14-12-1921. ಮರುಳಸಿದ್ದಪ್ಪ,
ಹರಳಕಟ್ಟ, ಅರಸೀಕೆರೆ ತಾಲ್ಲೂಕು.

ವರ್ತಮಾನಸಂಗ್ರಹ.

ಮ್ಯುನ್ಸಿಪಾಲಿಟಿಯ ಕೌನ್ಸಿಲರುಗಳಾದವರೆಲ್ಲರೂ ರಾಜನಿಷ್ಠೆಯುಳ್ಳವರಾಗಿರುತ್ತೇವೆಂಬ ಪ್ರಮಾಣವನ್ನು ಮಾಡಿ ಆ ಪದವಿಯನ್ನಂಗೀಕರಿಸಬೇಕೆಂಬರ್ಥದ ನೂತನಶಾಸನವು ಮದ್ರಾಸು ನಿಯಮನಿರ್ಮಾಣ ಸಭೆಯಲ್ಲಿ ಮಾಡಲ್ಪಟ್ಟಿದೆ.

ಅಹಮ್ಮದಾಬಾದಿನಲ್ಲಿ ರಾಷ್ಟ್ರೀಯ ಸಭೆಯನ್ನೂ ಮಹಮ್ಮದೀಯ ಸಭೆಯನ್ನೂ ಕೂಡಿಸುವುದಕ್ಕೆ ಸಕಲ ಸನ್ನಾಹಗಳೂ ನಡೆದಿವೆ. ರಾಷ್ಟ್ರೀಯ ಸಭಾಮಂಟಪವು ಖಾದಿಬಟ್ಟೆಯ ದೊಡ್ಡ ಗುಡಾರದಲ್ಲಿ ೧೫ ಸಹಸ್ರ ಜನರು ಕುಳ್ಳಿರಲಿಕ್ಕೆ ಅನುಕೂಲವಾಗಿ ರಚಿಸಲ್ಪಟ್ಟಿದೆ. ಅಧ್ಯಕ್ಷರ ಹೊರತು ಉಳಿದವರೆಲ್ಲಾ ಜಮಖಾನೆಯಮೇಲೆ ಕುಳಿತುಕೊಳ್ಳಬೇಕು. ಅಧ್ಯಕ್ಷಪೀಠವನ್ನು ಹಕೀಂ ಅಜ್ಮಲ್‌ಖಾನರು ಅಲಂಕರಿಸಬಹುದು.

ಬಂಗಾಳಾ ಗೌರ್ನರಾದ ಲಾರ್ಡ್ ರೋನಾಲ್ಡ್‌ಸೆ ಯವರು ಕಳೆದ ತಾ|| ೧೯ರಲ್ಲಿ ಶಾಸನಸಭೆಯೊಳಗೆ ಒಂದು ಉಪನ್ಯಾಸಮಾಡುವಾಗ “ಈಗಣ ರಾಜಕೀಯ ಪರಿಸ್ಥಿತಿಯಲ್ಲಿ ಇಷ್ಟರೊಳಗೇ ತಾತ್ಕಾಲಿಕ ಸಂಧಿಯು ಕುದುರಬಹುದು. ಅಸಹಾಯವಾದಿಗಳು ಕೂಡ ಸಂಧಿಸಭೆಯ ವಿಷಯದಲ್ಲಿ ಉತ್ಸಾಹಗೊಂಡು, ತಮ್ಮ ಉದ್ಯಮವನ್ನು ಸ್ವಲ್ಪಕಾಲ ನಿಲ್ಲಿಸಿಬಿಟ್ಟರೆ ಅವರಂತೆಯೇ ಪ್ರಭುತ್ವದವರಾದರೂ ನಿರ್ಬಂಧ ವಿಧಾನಗಳನ್ನು ನಿಲ್ಲಿಸಲು ಸಿದ್ಧರಾಗಿರುವರು. ಬಹಿಷ್ಕಾರ, ಅಂಗಡಿಗಳನ್ನು ಮುಚ್ಚುವ ಹರಿತಾಳ ಇತ್ಯಾದಿಗಳನ್ನು ಪ್ರಜೆಗಳು ನಿಲ್ಲಿಸಿ, ಯುವರಾಜರಿಗೆ ಸ್ವಾಗತವನ್ನು ಮಾಡಲು ಎಲ್ಲರಿಗೂ ಅನುಮತಿಯನ್ನು ಕೊಟ್ಟರೆ, ಪ್ರಭುತ್ವದವರು ಈಗ ಅವಲಂಬಿಸಿರುವ ತಮ್ಮ ವಿಧಾನವನ್ನು ಮಾರ್ಪಡಿಸುವುದಕ್ಕೂ ನಾನು ಶಿಫಾರಸ್ ಮಾಡುವೆನು ಎಂದು ಹೇಳಿದರು.

ಜಾರ್ಜ್ ಸಾರ್ವಭೌಮರು ಪತ್ನೀಪುತ್ರ ಸಮೇತರಾಗಿ ಉತ್ಸವಗೊಂಡು ಹೋಗಿ ಪಾರ್ಲಿಮೆಂಟಿನ ವಿಶೇಷಾಧಿವೇಶವನ್ನು ತೆರೆದು ಐರ್ಲ್ಯಾಂಡಿನೊಡನೆ ನಡೆದಿರುವ ಸಂಧಿಯು ಐರ್ಲ್ಯಾಂಡಿನ ಕ್ಷೇಮಕ್ಕೆ ಮಾತ್ರವೇ ಸಾಧಕವಾಗಿರದೆ ಪ್ರಪಂಚದ ನಾನಾ ಭಾಗಗಳಲ್ಲಿರುವ ಐರಿಷ್, ಇಂಗ್ಲೀಷ್ ಜಾತಿಗಳವರೆಲ್ಲರ ಕ್ಷೇಮಕ್ಕೂ ಸಾಧಕವಾದುದರಿಂದ ಇದು ನೆರವೇರಿದುದು ಆನಂದಕರವಾಗಿದೆ. ಎಷ್ಟೋ ಶತಮಾನಗಳಿಂದ ಚರ್ಚಿತವಾಗುತ್ತಿದ್ದ ಈ ವಿಷಯವು ಈಗ ಕೊನೆಗಾಣುವುದಾಗಿದೆ. ಇದನ್ನು ನೀವೆಲ್ಲರೂ ಅನುಮತಿಸುವಿರೆಂದು ನಂಬುತ್ತೇನೆ ಎಂದು ಭಾಷಣಮಾಡಿದರು. ಬಳಿಕ ಪಾರ್ಲಿಮೆಂಟ್ ಸಭಿಕರು ಚರ್ಚೆಗೆ ಆರಂಭಿಸಿದರು. ಪ್ರಜಾಸಭೆ ಲಾರ್ಡ್ ಸಭೆಗಳೆರಡರಲ್ಲೂ ಅನುಮೋದಕರೇ ಹೆಚ್ಚು. ಅತ್ತ ಐರ್ಲ್ಯಾಂಡಿನಲ್ಲಿ ಡೆಯಿಲಿಐರಾನ್ ಸಭೆಯಲ್ಲೂ ಚರ್ಚೆನಡೆಯುತ್ತಿದೆ. ಎರಡು ಸಭೆಗಳಲ್ಲೂ ಒಡಂಬಡಿಕೆಯನ್ನು ಒಪ್ಪದವರೂ ಒಪ್ಪುವವರೂ ಅನೇಕರಿದ್ದಾರೆ.

ಕಠಿಣವಾದ ವಾದೋಪವಾದಗಳು ನಡೆದಿವೆ. ಪರ್ಯವಸಾನವು ಇಷ್ಟರಲ್ಲೇ ಗೊತ್ತಾಗುವುದು.

ಶ್ರೀಮತ್ ಯುವಸಾರ್ವಭೌಮರು ನೇಪಾಳ ಸಂಸ್ಥಾನದಲ್ಲಿರುವಾಗ ೪ ದಿನಗಳ ಕಾಲದೊಳಗೆ ೧೧ ದೊಡ್ಡ ಹುಲಿಗಳನ್ನೂ ೩ ಘೇಂಡಾಮೃಗಗಳನ್ನೂ ಬೇಟೆಯಾಡಿದರು. ಅವರು ೮ ದಿನಗಳಕಾಲ ಸಂಸ್ಥಾನದ ಆತಿಥ್ಯದಿಂದ ವಿಶೇಷವಾಗಿ ಸಂತೋಷಿಸಿದರು. ಅವರು ಅಲ್ಲಿಂದ ಹೊರಡುವುದಕ್ಕೆ ಮುಂಚೆ ಆ ದೇಶದ ಪದ್ಧತಿಯಪ್ರಕಾರ ಅಲ್ಲಿಯ ಮಹಾರಾಜರು ಅಮೌಲ್ಯಗಳಾದ ಕೆಲವು ಪ್ರಾಣಿಗಳನ್ನು ಬಹುಮಾನಿಸಿದರು. ಅವುಗಳಲ್ಲಿ ಆನೆಮರಿ, ಹುಲಿಮರಿಗಳು, ಚಿರತೆಗಳು, ಘೇಂಡಾಮೃಗಗಳು, ಬಿಳಿಯಕರಡಿಗಳು, ಪುನುಗುಬೆಂಕೆಗಳು, ಟಿಬೇಟಿನ ಬೇಟೆನಾಯಿಗಳು, ಆ ದೇಶದ ವಿವಿಧವರ್ಣದ ಪಕ್ಷಿಗಳು, ಅತ್ಯುತ್ಕೃಷ್ಟವಾದ ಆ ದೇಶದ ಉಣ್ಣೆಯ ಕೋಟುಗಳು ಇತ್ಯಾದಿ. ಇವನ್ನೆಲ್ಲಾ ಯುವರಾಜರು ನೋಡಿ ಬಹಳ ಸಂತೋಷಪಟ್ಟು ಲಂಡನ್ ಪಟ್ಟಣದ ಪ್ರಾಣಿಶಾಲೆಗೆ ಇವನ್ನು ಕಳುಹಿಸಿಕೊಡುವೆನೆಂದು ತಿಳಿಯಿಸಿ ತಮ್ಮ ಕೃತಜ್ಞತಾವಂದನೆಯನ್ನು ಹೇಳಿದರು. ತಾ|| ೨೧ರಲ್ಲಿ ಅಲ್ಲಿಂದ ಹೊರಟು ಪಾಟ್ನಾಕ್ಕೆ ದಯಮಾಡಿಸಿದರು.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಡಿಸೆಂಬರ್ ತಾ|| ೨೫ ನೆಯ ಭಾನುವಾರ.

ಬೆಂಗಳೂರು ಡಿಸ್ಟ್ರಿಕ್ಟ್, ಡಿ|| ಕಮೀಷನರು ಮತ್ತು ಚನ್ನಪಟ್ಟಣದ ತಾಲ್ಲೂಕು.

ಚನ್ನಪಟ್ಟಣದಿಂದ ಬರೆದುಬಂದಿರುವ ಒಂದು ಲೇಖನವನ್ನು ಈ ಪತ್ರಿಕೆಯ ಬೇರೆಕಡೆಯಲ್ಲಿ ನಾವು ಮುದ್ರಿಸಿರುತ್ತೇವೆ. ಗಣ್ಯರಾದ ಒಬ್ಬ ದೊಡ್ಡಮನುಷ್ಯರಿಂದ ಅದು ಬರೆದು ಬಂದಿರುವ ಕಾರಣ ಅದು ಯಥಾರ್ಥಸ್ಥಿತಿಯನ್ನೇ ಹೇಳತಕ್ಕುದಾಗಿದೆಯೆಂದು ನಾವು ನಂಬುತ್ತೇವೆ. ಮ|| ರಾಮಸ್ವಾಮಯ್ಯನವರು ಡಿ|| ಕಮೀಷನರಾಗಿ ಬಂದು ಸ್ವಲ್ಪಕಾಲವೇ ಆಗಿದೆ. ಆರಂಭಕಾಲದಲ್ಲೇ ಅವರು ದೇಶದ ಮುಖ್ಯ ಪ್ರಜಾಕೋಟಿಯಾದ ರೈತರ ವಿಷಯದಲ್ಲಿ ತೋರಿಸಿರುವ ಅಲಕ್ಷ್ಯಭಾವವನ್ನೂ ಅನಾದರಣೆಯನ್ನೂ ಕೇಳಿ ನಾವು ಆಶ್ಚರ್ಯಪಡುತ್ತೇವೆ. ಪ್ರಭುವೇ ಪ್ರಜಾಸೇವೆಗಾಗಿರುವಾಗ ಪ್ರಭುತ್ವಪ್ರತಿನಿಧಿಗಳು ಪ್ರಜೆಗಳನ್ನು ತೃಣದಂತೆ ಕಾಣುವುದು ಈಗಣ ನಾಗರಕಕಾಲದ ವಿದ್ಯಾವಂತರ ಲಕ್ಷಣಕ್ಕೆ ಕಳಂಕದಾಯಕವೇ ಸರಿ. ಅಧಿಕಾರಿಗಳು ಪ್ರಜಾಸಾಮಾನ್ಯದ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಸರ್ ಎಂ. ವಿಶ್ವೇಶ್ವರಯ್ಯನವರು ಸ್ವಂತದ ಆಚರಣೆಯಿಂದ ಮಾರ್ಗದರ್ಶನ ಮಾಡಿಕೊಟ್ಟಿದ್ದರು. ರೈತರು ಅವಿದ್ಯಾವಂತರಾಗಿರುವ ಕಾರಣ ಅವರನ್ನು ತುಚ್ಛೀಕರಿಸುವ ಮಾತ್ರದಿಂದ ಅಧಿಕಾರಿಗಳ ಗೌರವವು ಹೆಚ್ಚುವುದಕ್ಕೆ ಪ್ರತಿಯಾಗಿ ಅವರ ಸೌಜನ್ಯದ ತೂಕವೇ ಕಡಿಮೆಯಾಗುವುದೆಂಬುದನ್ನು ಅವರು ಮರೆಯಬಾರದು. ಮೂಕಪ್ರಾಣಿಯಾದ ಪಶುವನ್ನು ನಿರ್ಘೃಣವಾಗಿ ಹೊಡೆದು ಬಡಿಯುವ ಕಟುಕನನ್ನು ಲೋಕವು ನಿಂದಿಸುವುದಲ್ಲದೆ ಪಶುವನ್ನು ಯಾರೂ ನಿಂದಿಸಲಾರರಲ್ಲವೆ ?

ಚನ್ನಪಟ್ಟಣದ ತಾಲ್ಲೂಕು ಅಮಲ್ದಾರರವರು ಕುಳವಾರು ಪಿಸ್ಸೆಪಟ್ಟಿ ಲೆಕ್ಕವನ್ನು ಎತ್ತಿಕೊಡಬೇಕೆಂದು ಶ್ಯಾನುಭೋಗರುಗಳಿಗೆ ಅಪ್ಪಣೆ ಮಾಡಿದುದು ಸ್ವಾರ್ಥಕ್ಕೇನೂ ಅಲ್ಲ. ಅದು ಪ್ರಜಾಸೌಕರ್ಯಕ್ಕೂ ಪ್ರಜಾಹಿತಕ್ಕೂ ಸಾಧಕವಾದ ಮಾತಾಗಿದೆ. ಅದನ್ನು ಕೊಡಬೇಕಾದುದಿಲ್ಲವೆಂದು ರೆ|| ಕಮೀಷನರು ಏತಕ್ಕೆ ಯಾವಾಗ ಅಪ್ಪಣೆ ಮಾಡಿದರೋ ತಿಳಿಯಲಿಲ್ಲ. ಹಾಗೆ ಅಪ್ಪಣೆ ಮಾಡಿದ್ದರೆ ತಾಲ್ಲೂಕು ಅಧಿಕಾರಿಗಳಿಗೂ ಹಿಂದೆ ಇದೇ ಡಿಸ್ಟ್ರಿಕ್ಟಿನ ಅಧಿಕಾರಿಗಳಾಗಿದ್ದ ಮಿ|| ಟಾಜ್‌ಪಿರಾಜ್ ಸಾಹೇಬರವರಿಗೂ ತಿಳಿದಿರಲೇಬೇಕಲ್ಲವೆ? ತಿಳಿದಿದ್ದರೆ ಈ ಲೆಕ್ಕವನ್ನು ತಾ|| ಅಧಿಕಾರಿಯು ಏತಕ್ಕೆ ಕೇಳುತ್ತಿದ್ದರು ? ಸರ್ಕಾರದ ರೂಲ್ಸು ಇಲ್ಲದಿದ್ದರೂ ಶಾನುಭೋಗರು ಕಂದಾಯದವಸೂಲಿ ಮಾಡುತ್ತಿರುವ ಪದ್ಧತಿಯನ್ನು ಮಾತ್ರ ಅಧಿಕಾರಿಗಳು ಒಪ್ಪಿಕೊಳ್ಳಬಹುದು; ನ್ಯಾಯವಾಗಿಯೂ ಸರ್ಕಾರಕ್ಕೂ ಪ್ರಜೆಗಳಿಗೂ ಅವಶ್ಯಕವಾಗಿಯೂ ಶಾನುಭೋಗರ ಕರ್ತವ್ಯಕ್ಕೆ ಸಂಬಂಧಪಟ್ಟುದಾಗಿಯೂ ಇರುವ ಕುಳವಾರುಪಟ್ಟಿ ಲೆಕ್ಕಬರೆಯುವುದನ್ನು ಮಾತ್ರ ನಿಷೇಧಿಸುವುದಕ್ಕೆ ಕಾರಣವೇನು? ಸರ್ಕಾರಕ್ಕೂ ರೈತರಿಗೂ ತೊಂದರೆಯಾದರೂ ಸರಿ; ಶಾನುಭೋಗರಿಗೆ ಮಾತ್ರ ತೊಂದರೆಯಾಗಕೂಡದೆಂದು ಸಂಕಲ್ಪಿಸಿಕೊಂಡಿರುವವರು ಹೀಗೆ ಅಭಿಪ್ರಾಯ ಕೊಡಬಹುದೇ ಹೊರತು ದೇಶಹಿತವನ್ನು ಕೋರುವವರು ಹೀಗೆ ಅಭಿಪ್ರಾಯವನ್ನೆಂದಿಗೂ ಕೊಡಲಾರರು.

ಈಗಣ ಕಾಲದಲ್ಲಿ ಎಷ್ಟೋ ಮಂದಿ ಸಿವಿಲ್ ಕ್ರಿಮಿನಲ್ ಅಧಿಕಾರಿಗಳು ಪದ್ಧತಿಯೆಂಬುದಕ್ಕೆ ಮಸಿಹಚ್ಚಿ ಸರ್ವಸಮುದ್ಧತಿಯನ್ನಭಿನಯಿಸಿ ತೀರ್ಮಾನಗಳನ್ನು ಮಾಡುತ್ತಿರುವುದನ್ನು ಎಲ್ಲರೂ ಬಲ್ಲರು. ಹೀಗಿರುವಾಗ ಮ|| ರಾಮಸ್ವಾಮಯ್ಯನವರು ಶ್ಯಾನುಭೋಗರು ಕಂದಾಯವನ್ನೆತ್ತುವ ಪದ್ಧತಿಯನ್ನು ಪರಿಪೋಷಣೆ ಮಾಡಿ, ರೈತರ ಹಿತವನ್ನು ಧಿಕ್ಕರಿಸಿರುವುದು ಎಂದಿಗೂ ಒಪ್ಪತಕ್ಕ ಮಾತಲ್ಲ. ಇದು ಗೌರ್ನಮೆಂಟಿನವರ ಪರ್ಯಾಲೋಚನೆಗೆ ಅರ್ಹವಾದ ವಿಷಯವಾಗಿರುತ್ತದೆ. ಏಕೆಂದರೆ ಪಿಸ್ಸೆಪಟ್ಟಿಯಿಲ್ಲದುದರಿಂದ ಸಂಭವಿಸುವ ತೊಂದರೆಯು ಚನ್ನಪಟ್ಟಣದ ತಾಲ್ಲೂಕೊಂದರಲ್ಲೇ ಅಲ್ಲ; ಸಂಸ್ಥಾನದ ರೈತರೆಲ್ಲಾ ಇದರಿಂದ ನಾನಾತರದ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾರೆ. ಸರ್ಕಾರದ ವಸೂಲಿ ಕೆಲಸಕ್ಕೂ ಇದರ ಅಭಾವದಿಂದ ಎಷ್ಟೋ ತೊಂದರೆಗಳಾಗುತ್ತಿವೆ. ಈಗ ಇದು ಮೇಲ್ಪಟ್ಟ ಅಧಿಕಾರಿಗಳಿಂದ ನ್ಯಾಯಸಂಮತವಾಗಿ ಬಗೆ ಹರಿಯದಿದ್ದರೆ, ಸಾರ್ವತ್ರಿಕ ವಿಷಯವಾಗಿ ಪ್ರಜಾಪ್ರತಿನಿಧಿ ಸಭೆಯ ಚರ್ಚೆಗಾದರೂ ಬಂದು ವ್ಯವಸ್ಥೆಗೊಳ್ಳಬೇಕಾದುದೇ ಆಗಿರುತ್ತದೆ. ಏಕೆಂದರೆ—ಶ್ಯಾನುಭೋಗರು ಕಂದಾಯ ವಸೂಲಿ ಮಾಡುವುದರಿಂದ ಎಷ್ಟು ಕೇಡಾಗಬಹುದೋ ಅದಕ್ಕೆ ನಾಲ್ಕುಪಾಲು ನಷ್ಟಕಷ್ಟಗಳು ಈ ಕುಳವಾರು ಪಿಸ್ಸೆಪಟ್ಟಿ ಲೆಕ್ಕಗಳನ್ನಿಡದಿರುವುದರಿಂದ ಆಗುತ್ತಿವೆ. ಅದುಕಾರಣ ಶಾನುಭೋಗರು ಕಂದಾಯ ವಸೂಲಿ ಮಾಡುವುದನ್ನು ನಿಲ್ಲಿಸುವುದಕ್ಕೆ ಅಷ್ಟು ತಾಪತ್ರಯ ಪಡಬೇಕಾದುದಿಲ್ಲ; ಈ ಪಿಸ್ಸೆಪಟ್ಟಿಯನ್ನು ಎತ್ತಿಸಬೇಕಾದುದು ಅತ್ಯವಶ್ಯಕವಾಗಿರುತ್ತದೆ. ರೈತರ ಹಿತಕ್ಕಿಂತಲೂ ಸ್ವಜಾತಿಯ ಶಾನುಭೋಗರ ಮೇಲಣ ಅಭಿಮಾನವೇ ನಮ್ಮ ಹೊಸ ಡಿ|| ಕಮೀಷನರಿಗೆ ಹೆಚ್ಚಾಯಿತೆಂದು ಆ ತಾಲ್ಲೂಕು ಪ್ರಜೆಗಳು ಬಹಳ ಬೇಸರಪಟ್ಟು ಆಡಿಕೊಳ್ಳುತ್ತಿರುವರೆಂದು ಇದೇತಾನೇ ನಮಗೆ ಬಂದಿರುವ ಪತ್ರದಿಂದ ತಿಳಿಯುತ್ತೇವೆ. ಅದನ್ನು ಹಾಗಿಲ್ಲವೆಂದು ಹೇಳಿ ಸಾಧಿಸುವುದಕ್ಕೆ ನಮಗೆ ಆಧಾರವಿಲ್ಲ. ಇನ್ನೂ ವರ್ಧಿಷ್ಣುಗಳಾಗಿರುವ ಮ|| ರಾಮಸ್ವಾಮಯ್ಯನವರು ರೈತರಲ್ಲಿ ಈ ರೂಪವಾದ ಭಾವವು ರೂಢಮೂಲವಾಗುವುದಕ್ಕೆ ಮುಂದಾದರೂ ಅವಕಾಶ ಕೊಡದಿರಲೆಂದು ಕೋರುತ್ತೇವೆ.

ಪ್ರಕೃತ ರಾಜಕೀಯಸ್ಥಿತಿ.

ಭರತಖಂಡದ ರಾಜಕೀಯ ಸ್ಥಿತಿಯು ಈಗ ಎಷ್ಟು ವಿಷಮವಾಗಿರುವುದೆಂಬುದನ್ನು ಪ್ರತಿ ವಾರವಲ್ಲೂ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ವರ್ತಮಾನಗಳಿಂದ ವಾಚಕರು ತಿಳಿದೇ ಇದ್ದಾರೆ. ಲಾರ್ಡ್ ರೀಡಿಂಗ್‌ರವರು ವೈಸ್‌ರಾಯರಾಗಿ ಬಂದಬಳಿಕ ರಾಜಕೀಯ ವೈಷಮ್ಯವು ತಪ್ಪಿ ಶಾಂತಿಯು ರೂಢಮೂಲವಾಗುವುದೆಂದು ಅನೇಕರು ನಿರೀಕ್ಷಿಸಿಕೊಂಡಿದ್ದರು. ಜ್ಞಾನವಯೋವೃದ್ಧರಾದ ರೀಡಿಂಗ್‌ಪ್ರಭುಗಳು ಸತ್ಯ ನ್ಯಾಯಗಳನ್ನೇ ಅವಲಂಬಿಸಿ ಭರತಖಂಡಕ್ಕೆ ಹಿತವನ್ನುಂಟುಮಾಡಬೇಕೆಂಬುದನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡು ಈ ದೇಶಕ್ಕೆ ಬಂದು ಅಧಿಕಾರಕ್ಕೆ ಆರಂಭಿಸಿದರು. ಕೂಡಲೇ ದೇಶದ ರಾಜಕೀಯ ಪಕ್ಷಗಳಲ್ಲಿ ಪ್ರಮುಖರಾದವರನ್ನು ಕರೆಯಿಸಿಕೊಂಡು ಅವರಭಿಪ್ರಾಯಗಳನ್ನೆಲ್ಲಾ ತಿಳಿದುಕೊಂಡರು. ಭರತಖಂಡಕ್ಕೆ ಹಿತವೂ ಇಷ್ಟವೂ ಆದ ಸ್ವಪರಿಪಾಲನವನ್ನು ಕೈಗೂಡಿಸುವಲ್ಲಿ ಶಾಂತವಾದ ಪ್ರಯತ್ನಗಳನ್ನು ಯಾವ ಪ್ರಜೆಯು ನಡೆಯಿಸಿದರೂ ಅದನ್ನು ಅವರು ಅಭಿನಂದಿಸುವವರಾಗಿಯೇ ಇರುವರು. ಮತ್ತೂ ಸುಸಾಧ್ಯವಾದ ಅಂಥ ಪ್ರಯತ್ನಗಳಿಗೆ ತಾವು ಬೆಂಬಲರಾಗಿ ಇರುವುದಕ್ಕೂ ಬದ್ಧಾದರರಾಗಿರುವರು. ಆದರೆ ಒಂದೇ ವರ್ಷದಲ್ಲೇ ಸ್ವರಾಜ್ಯವನ್ನು ಕೈಗೂಡಿಸಿಕೊಳ್ಳುವೆವೆಂದು ಆತುರಪಡುತ್ತಲಿರುವ ಅಸಹಾಯವಾದಿಗಳಿಗೆ ಮಾತ್ರ ರೀಡಿಂಗ್‌ಪ್ರಭುಗಳ ಶಾಂತಪ್ರಯತ್ನವೂ ಸೌಮ್ಯಮಾರ್ಗಗಮನವೂ ಸೊಬಗಿಲ್ಲ. ಪ್ರಭುತ್ವದ ಹಸ್ತಪಾದಚಲನಗಳನ್ನೇ ಬಂಧನಮಾಡಿಬಿಡಬೇಕೆಂದು ಉದ್ದೇಶಪಟ್ಟಿರುವ ಆ ಪಕ್ಷದವರು ತಮ್ಮ ಪ್ರಯತ್ನದ ಕಾಠಿನ್ಯವನ್ನು ಬಲಪಡಿಸುತ್ತಲೇ ಬಂದರು. ಪ್ರಜೆಗಳು ತೆರುವ ಕಂದಾಯವನ್ನು ನಿಲ್ಲಿಸಿಬಿಡುವ, ಮತ್ತು ಸರ್ಕಾರದ ಶಾಸನವನ್ನು ಮೀರುವ ಕೆಲಸಕ್ಕೆ ದೇಶ ಪ್ರಜೆಗಳನ್ನು ಹುರಿದುಂಬಿಸುವುದಕ್ಕೆ ಸಿದ್ಧರಾದರು. ಅಧಿಕಾರಿಮಂಡಲಕ್ಕೆ ಸೇರದಿರುವ ಶ್ರೀಮತ್ ಪ್ರಿನ್ಸ್‌ಆಫ್‌ವೇಲ್ಸ್‌ರವರು ಈ ದೇಶದ ಸಂದರ್ಶನಕ್ಕಾಗಿ ಆಗಮಿಸಿದ ವೇಳೆಯಲ್ಲಿ ಬೇಕೆನ್ನುತ್ತಲೇ ಹರತಾಳಗಳೇ ಮೊದಲಾದ ಗದ್ದಲಗಳನ್ನು ಹುಟ್ಟಿಸಲು ಆಗಾಧ ಪ್ರಯತ್ನಗಳನ್ನು ಮಾಡಿದರು. ಅದೇ ಸಂದರ್ಭದಿಂದಲೇ ಬೊಂಬಾಯಿಯಲ್ಲಿ ಗದ್ದಲಗಳೂ ಅತ್ಯಾಚಾರಗಳೂ ಕೂಡ ನಡೆದುಹೋದುವು. ಈ ವಿಷಮಸ್ಥಿತಿಯನ್ನು ವಿಮರ್ಶಿಸುತ್ತ ಬಂದುದರಿಂದ ಪ್ರಭುತ್ವದವರು ಶಾಂತಿರಕ್ಷಣೆಗಾಗಿ ಅವಲಂಬಿಸಿದ್ದ ಸೌಮ್ಯವರ್ತನವೆಲ್ಲಾ ನಿಷ್ಪ್ರಯೋಜಕವಾಗಿ, ದೇಶ ಶಾಂತಿರಕ್ಷಣೆಗೆ ದಂಡೋಪಾಯವನ್ನೇ ಅವರು ವಿಧಿಯಿಲ್ಲದೆ ಅವಲಂಬಿಸಬೇಕಾಯಿತು.

ಕಠಿನಶಾಸನದ ಕತ್ತಿಗಳು ಅವಿಶ್ರಾಂತವಾಗಿ ಬೀಸಲ್ಪಡುತ್ತಿರುವುವು. ಇದರ ಹತಿಯಿಂದ ಪ್ರತಿದಿನವೂ ನೂರಾರು ಜನರು ಕಾರಾಗೃಹಪ್ರವೇಶಮಾಡುತ್ತಿರುವರು. ಬಂಗಾಳಾ ಪ್ರಾಂತವೊಂದರಲ್ಲೇ ೧,೪೦೦ ಮಂದಿಗಳವರೆಗೆ ಕಾರಾಗೃಹವಾಸವನ್ನು ಮಾಡುತ್ತಿರುವರು. ಉಳಿದ ಆಧಿಪತ್ಯಗಳಲ್ಲೂ ಪ್ರತಿದಿನವೂ ಖಿಲಾಫತ್ ಕಾಂಗ್ರೆಸ್ ಸ್ವಚ್ಛಂದಸೇವಕರನ್ನೂ ಹರತಾಳದ ಪ್ರೇರೇಪಕರನ್ನೂ ಹಿಡಿದು ವಿಚಾರಣೆಗೆ ಒಳಪಡಿಸುತ್ತಿರುವರು. ಆ ವಿವರವನ್ನೆಲ್ಲಾ ವಾರಪತ್ರಿಕೆಗಳಲ್ಲಿ ಬರೆಯುವುದಕ್ಕೆ ಸಾಧ್ಯವಿಲ್ಲದಿದ್ದಷ್ಟು ಸುದ್ದಿಗಳು ಪ್ರತಿದಿನವೂ ಬರುತ್ತಿರುವುವು. ಮ|| ಗಾಂಧಿಯವರ ಹೊರತಾಗಿ ಉಗ್ರವಾದಿಪಕ್ಷದ ಪ್ರಮುಖರೆಲ್ಲಾ ಕಾರಾಗೃಹದಲ್ಲಿರುವರು, ಅಥವಾ ಪ್ರವೇಶೋನ್ಮುಖರಾಗಿರುವರು. ಮುಂದಾಳಾಗಿ ಬಂದವರನ್ನು ಹಿಡಿದು ಕೂಡಿಬಿಟ್ಟರೆ ಚಳವಳವು ಶಾಂತವಾಗುವುದೆಂದು ಪ್ರಭುತ್ವದವರು ಭಾವಿಸಿರುವರು. ಅದರಹೊರತು ಉಪಾಯಾಂತರವು ಅವರ ಕಣ್ಣಿಗೆ ಗೋಚರಿಸದು. ದೇಶ ಶಾಂತಿರಕ್ಷಣೆಯ ಭಾರವು ಅವರ ತಲೆಯಮೇಲೆ ಹೊತ್ತಿರುವುದು. ದಂಡೋಪಾಯವನ್ನು ಕೈಕೊಂಡು ನಿಗ್ರಹಿಸದೆ ಇದುವರೆಗೆ ಸೌಮ್ಯವಾಗಿದ್ದುದಕ್ಕಾಗಿ ಲಾರ್ಡ್‌ರೀಡಿಂಗ್‌ರವರ ಪ್ರಭುತ್ವದೋರಣೆಯನ್ನು ಕುರಿತು ಈ ದೇಶದಲ್ಲೂ ವಿಲಾಯತಿಯಲ್ಲೂ ಆಂಗ್ಲಜನರು ಬೇಕಾದಷ್ಟು ಹೀನಯಿಸಿದರು. ಅದರಮೇಲೆ ನಿರ್ವಾಹವಿಲ್ಲದೆ ರೀಡಿಂಗ್‌ಪ್ರಭುಗಳು ಈ ಕಠಿನಮಾರ್ಗಕ್ಕೆ ಹೆಜ್ಜೆಯಿಟ್ಟಿರುವರು. ಆದರೇನು ? ಪ್ರಭುತ್ವದವರ ಉದ್ದೇಶವು ಇದರಿಂದ ನೆರವೇರುವ ಲಕ್ಷಣವು ತೋರುವುದಿಲ್ಲ. ಒಬ್ಬರನ್ನು ಹಿಡಿದರೆ ಅವರ ಸ್ಥಾನಕ್ಕೆ ಹತ್ತುಮಂದಿಗಳು ಸಿದ್ಧರಾಗುತ್ತಲೂ, ಬೇಡವೆಂದು ಹೇಳಿದ ಕೆಲಸವನ್ನು ಮನಃಪೂರ್ವಕವಾಗಿ ಮಾಡುವುದಕ್ಕೂ ಅತ್ತೆಮನೆಗೆ ಹೋಗುವಂತೆ ಕಾರಾಗೃಹವನ್ನು ಹುಗುವುದಕ್ಕೂ ಸಿದ್ಧರಾಗುತ್ತಿರುವರು. ದೇಶಪ್ರಮುಖರೆಲ್ಲಾ ನಿರ್ಬಂಧಕ್ಕೊಳಗಾಗಿ ಹೋಗುತ್ತಿರುವುದನ್ನು ನೋಡಿ ಅಸಹಾಯ ಪ್ರಯತ್ನದಲ್ಲಿ ಇದುವರೆಗೆ ವಿಮುಖರಾಗಿದ್ದ ಜನರು ಕೂಡ ಅವರಲ್ಲಿ ಸಾನುಭೂತಿಯನ್ನು ತೋರಿಸಲಿಕ್ಕೆ ಉಪಕ್ರಮಿಸಿ ಸರ್ಕಾರದ ಪ್ರವರ್ತನವನ್ನು ಖಂಡಿಸುತ್ತಲಿರುವರು. ಈ ಬಲಾತ್ಕಾರಕ್ರಮದಿಂದ ಸದ್ಯಃಶ್ಶಾಂತಿಯುಕೂಡ ಲಭಿಸುವಹಾಗೆ ತೋರಲಿಲ್ಲ. ನಿರ್ಬಂಧಿತರಾದವರ ಮತ್ತು ಅವರಲ್ಲಿ ಸಾನುಭೂತಿಯುಳ್ಳ ಜನರ ಮನಸ್ಸೆಲ್ಲಾ ಪ್ರಭುತ್ವ ವಿಷಯದಲ್ಲಿ ಮತ್ತಷ್ಟು ತೀಕ್ಷ್ಣವಾಗಿಯೇ ಹೋಗುತ್ತಿರುವುದು. ಶ್ವಾಸೋಚ್ಛ್ವಾಸಗಳನ್ನೆಲ್ಲಾ ಬಂಧಿಸಿಬಿಟ್ಟರೆ ಅಂಗದಲ್ಲಿ ಯಾವುದಾದರೊಂದು ಭಾಗದಲ್ಲಿ ಸ್ಫೋಟವಾಗಿ ಹೋಗುವಂತೆ ಈ ಮಹಾ ನಿರ್ಬಂಧವು ದೇಶದಲ್ಲಿ ಯಾವಾಗ ಮಹಾ ಸ್ಫೋಟವನ್ನುಂಟುಮಾಡುವುದೋ ಎಂದು ಯೋಚಿಸಬೇಕಾಗಿ ಬಂದಿರುವುದು. ಸದ್ಯದ ಪರಿತಾಪಕರ ಸ್ಥಿತಿಯಿಂದ ದೇಶವನ್ನು ಕಾಪಾಡುವುದು ಪ್ರಭುತ್ವದವರಿಗೇ ಅಲ್ಲದೆ ದೇಶದ ಎಲ್ಲ ಪಕ್ಷದ ಪ್ರಜೆಗಳಿಗೂ ಅವಶ್ಯಕರ್ತವ್ಯವಾಗಿರುವುದು. ಅದುಕಾರಣವೇ ಅಸಹಾಯವಾದಿಗಳಿಂದ ದೂರಸ್ಥರಾಗಿದ್ದ ಸರ್ ಪ್ರಫುಲ್ಲಚಂದ್ರ ರೇ, ಮದನಮೋಹನಮಾಳವ್ಯ, ಅನಿಬೆಸೆಂಟಮ್ಮ, ಜಿನ್ನಾ ಮೊದಲಾದನೇಕರು ಈಗಣ ಸರ್ಕಾರದ ಧೋರಣೆಯನ್ನು ಕಂಡು ಜುಗುಪ್ಸೆಪಟ್ಟು, ಶಾಂತಿಸಾಧನೆಗಾಗಿ ಒಂದು ಉಪಾಯವನ್ನು ಸೂಚಿಸಿದ್ದಾರೆ. ಎಲ್ಲ ರಾಜಕೀಯ ಪಕ್ಷದ ಕೆಲಕೆಲ ಪ್ರಮುಖರನ್ನು ಒಂದುಕಡೆ ಕೂಡಿಸಿ ವೈಸ್ರಾಯರು ಅವರೊಡನೆ ಚರ್ಚಿಸಿ ಮುಂದಣ ಕ್ರಮವನ್ನು ನಿರ್ಧರಿಸಬೇಕೆಂದು ಇವರುಗಳೆಲ್ಲಾ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕಾಗಿ ಪಂಡಿತ ಮದನಮೋಹನಮಾಳವ್ಯನವರು ೧೦-೧೨ ದಿನಗಳಿಂದಲೂ ಸಾಧ್ಯಸ್ಥಿಗೆಗಾಗಿ ಪೇಚಾಡಿದರು. ಕಾರಾಗೃಹಕ್ಕೆ ಹೋಗಿ ೨ ಸಲ ಸಿ. ಆರ್. ದಾಸರನ್ನು ಕಂಡು ಮಾತನಾಡಿ ಬಂದರು. ಗಾಂಧಿಯವರೊಡನೆ ತಂತಿಯಮೂಲಕ ಸಂಭಾಷಣೆಮಾಡಿ ತಿಳಿದರು. ಪದೇಪದೇ ವೈಸ್‌ರಾಯರೊಡನೆ ಪ್ರಸ್ತಾಪಿಸಿದರು. ತಾ|| ೨೩ ರಲ್ಲಿ ಮಾಳವ್ಯರವರೂ ಜಿಮುನದಾಸ್ ದ್ವಾರಕದಾಸರೂ ಗಾಂಧಿಯವರನ್ನು ಬೊಂಬಾಯಿಯಲ್ಲಿ ಕಂಡು ಮಾತನಾಡಲು ಏರ್ಪಡಿಸಿಕೊಂಡಿದ್ದರು. ಸಿ. ಆರ್. ದಾಸರೂ ಗಾಂಧಿಯವರೂ ತಂತ್ರಿವಾರ್ತೆಗಳ ಮೂಲಕವೇ ಸಂಭಾಷಿಸಿಕೊಂಡಿರುವರು. ಕಳೆದ ತಾ|| ೨೧ರ ಬೆಳಗ್ಗೆ ಪಂಡಿತ ಮದನಮೋಹನಮಾಳವ್ಯ ಅನಿಬೆಸಂಟಮ್ಮ ಸರ್ ಎಂ. ವಿಶ್ವೇಶ್ವರಯ್ಯನವರೇ ಮೊದಲಾದ ೧೭ಮಂದಿಗಳು ವೈಸ್‌ರಾಯರ ಸಂದರ್ಶನಕ್ಕೆ ಹೋಗಿದ್ದು ಈಗ ನಿರ್ಬಂಧಿಸಲ್ಪಟ್ಟಿರುವವರನ್ನೂ ಶಿಕ್ಷಿತರಾಗಿರುವವರನ್ನೂ ಬಿಡಿಸಿ, ನಿರ್ಬಂಧಾಜ್ಞೆಗಳನ್ನೂ ಉಪಸಂಹರಿಸಿ, ಎಲ್ಲ ಪಕ್ಷದವರನ್ನೂ ಬರಮಾಡಿಕೊಂಡು ಒಂದು ಸಭೆಗೂಡಿಸಿ, ಮುಂದಣ ಕಾರ್ಯಕ್ರಮವನ್ನು ನಿರ್ಧರಿಸುವಂತೆ ಮಾಡಬೇಕೆಂದು ಬಿನ್ನಯಿಸಿಕೊಂಡರು. ಮುಂದಾಗಿ ನಿರ್ಬಂಧಾಜ್ಞೆಗಳನನ್ನೆಲ್ಲಾ ನಿಲ್ಲಿಸಿ ಶಿಕ್ಷಿತರನ್ನೆಲ್ಲಾ ಬಿಡಿಸಿ ಸಭೆಗೂಡಿಸುವ ವಿಷಯಕ್ಕೆ ವೈಸ್‌ರಾಯರು ಒಪ್ಪಲಿಲ್ಲ. ಆದರೆ ಅಂಥ ಸಭೆಕೂಡಿಸುವುದಕ್ಕೇನೋ ಒಪ್ಪುವೆವೆಂದೂ, ಮನಃಪೂರ್ವಕವಾಗಿಯೂ ಬಹಿರಂಗವಾಗಿಯೂ ಪ್ರಜೆಗಳು ಶಾಸನೋಲ್ಲಂಘನೆಮಾಡುತ್ತಿರುವಾಗ, ಅದನ್ನು ಮೊದಲು ನಿಲ್ಲಿಸುವುದಕ್ಕೆ ರಾಯಭಾರಿಗಳು ಯಾವ ಭರವಸೆಯನ್ನೂ ಕೊಡದಿರುವಾಗ ತಾವಾಗಿ ಶಿಕ್ಷಿತರನ್ನೆಲ್ಲಾ ಬಿಡಿಸುವ ಕೆಲಸವನ್ನು ಮಾಡಿಸಿ ಸಭೆಗೂಡಿಸುವುದು ಅಸಾಧ್ಯವೆಂದು ಹೇಳಿಬಿಟ್ಟರು. ಅದರಮೇಲೆ ಹೋಗಿದ್ದ ರಾಯಭಾರಿಗಳೆಲ್ಲಾ ಯಥಾಮಾರ್ಗವಾಗಿ ಹಿಂದಿರುಗಿಬಂದರು. ಇಂಥ ಸಮಾವೇಶಮಾಡಿಸುವುದಕ್ಕೆ ಮಿತವಾದಿಗಳಿಗೂ ಪ್ರಭುತ್ವದವರಿಗೂ ಅಪೇಕ್ಷೆಯಿದ್ದರೂ, ಅಸಹಾಯವಾದಿಗಳಿಗೆ ಇಷ್ಟವಿಲ್ಲ. ಮಾಳವ್ಯ ಮೊದಲಾದವರು ಬರೀ ಭ್ರಮೆಯಿಂದ ಓಡಾಡಿದರು. ಒಂದುವೇಳೆ ಸಮಾವೇಶವು ನಡೆದಿದ್ದರೂ ಅದರಿಂದ ಸಂಪೂರ್ಣ ಫಲವಾಗುತ್ತಿದ್ದಿತೆಂದು ಹೇಳಲಾಗುವುದಿಲ್ಲ. ಏಕೆಂದರೆ-ಅಸಹಾಯವಾದಿಗಳಿಗೆ ತತ್‌ಕ್ಷಣ ಸ್ವರಾಜ್ಯವು ಕೈಗೆ ಸಿಕ್ಕದಲ್ಲದೆ ಅವರು ಶಾಂತರಾಗುವ ಹಾಗಿಲ್ಲ. ಅದನ್ನು ಕೊಡುವುದು ಭಾರತಪ್ರಭುತ್ವದವರ ಅಧೀನದಲ್ಲಿಲ್ಲ. ಪಾರ್ಲಿಮೆಂಟೇ ಅದಕ್ಕೆ ಅಧಿಕಾರಿಯು ಶ್ರೀಮತ್ ಯುವರಾಜರು ಈ ದೇಶಕ್ಕೆ ದಯಮಾಡಿಸಿರುವಾಗ ಬೇಕೆನ್ನುತ್ತಲೇ ಅವರಿಗೆ ಅಪಮಾನಪಡಿಸಬೇಕೆಂದು ಹರತಾಳಕ್ಕೆ ಆರಂಭಿಸಿರುವ ಅಸಹಾಯವಾದಿಗಳಿಗೆ ದೇಶಶಾಂತಿ ಬೇಕಾಗಿಲ್ಲ. ಅವರ ಯತ್ನಗಳಿಂದ ದೇಶಕ್ಕೆ ಸ್ವರಾಜ್ಯವೂ ಶಾಂತಿಯೂ ದೂರಗತವಾಗುವ ಲಕ್ಷಣವೇ ಒಲಪಡುತ್ತಿವೆ ಮ|| ಗಾಂಧಿಯವರ ಪಕ್ಷದ ಅಸಹಾಯವಾದಿಗಳೆಲ್ಲಾ ಹರತಾಳ ಶಾಸನೋಲ್ಲಂಘನ ಮೊದಲಾದ ಕಾರ್ಯಗಳನ್ನು ಇನ್ನೂ ಬಲಪಡಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಯುವರಾಜರು ಕಲ್ಕತ್ತಾಕ್ಕೆ ದಯಮಾಡಿಸುವ ೨೪ನೆ ತಾರೀಖಿನ ದಿನ ಆ ಪಟ್ಟಣದಲ್ಲಿ ಸಂಪೂರ್ಣವಾದ ಹರತಾಳವನ್ನು ಎಲ್ಲರೂ ಆಚರಿಸಿ, ದೇಶೀಯರೆಲ್ಲರೂ ಕಾರಾಗೃಹವನ್ನು ತುಂಬಿಕೊಳ್ಳಬೇಕೆಂದು ಗಾಂಧಿಯವರು ಅಪ್ಪಣೆಮಾಡುತ್ತಿದ್ದಾರೆ. ಅಸಹಾಯವಾದಿಪಕ್ಷ ಪ್ರಭುತ್ವಪಕ್ಷಗಳ ಮಧ್ಯದಲ್ಲಿ ಹೀಗೆ ಸಂಘರ್ಷಣವು ದಿನದಿನಕ್ಕೆ ಬಹುತೀಕ್ಷ್ಣವಾಗುತ್ತಿದೆ. ಪರ್ಯವಸಾನವು ಜಗದೀಶ್ವರನಿಗೇಗೊತ್ತು.

THE BANGALORE CITY MUNICIPALITY.

At long last the President of the Municipality has been appointed by Government and the selection has fallen on Mr. Sirsi Ananda Rao, Deputy Commissioner of Tumkur, who is known for his integrity and independence. Amongst the officers of Government the choice could not have fallen on a better person. But after all it is a retrograde policy open to objection by the public who are unaware of the real conditions of the Municipal affairs. Government who are fully aware of the wretchedness of its work brought on by successive neglect of the last two administrations which carried more honor and gloss than hard work and intimate knowledge of the civic responsibilities, have done the best that could possibly have been done in the interests of the Municipal administration. All that we can say is that we hope that this would only be a temporary measure and that the franchise will again be availed of.

We would, however, like to say a word on the circumstances which forced the hands of Government to take this step, notwithstanding that enough and more has already been said and written about the fiasco of President's election to the Bangalore City Municipality. We do not want to discuss the relevant or irrelavant matters referred to in the volume of correspondence which appeared in the Bangulore Daily Post and the Mysore Sampadabhyudaya. We would like to refer to one or two points of general interest and be done with the subject. This incident has clearly pointed out what powerful connections in interests could do. Round Mr. Garudachar were fastened up so many individual interests of Brahmans wholly completely and sacredly, and of Mussalmans, Vakkaligars, Lingayets, Visvays, Christians etc., to an extent only partially, incompletely and wordly and of others ignorantly that he was the hero of the 19 members of the Council. But it would be interesting to know how they came to rally round him so heroically. Leave the ten Brahmans who are solidly for nothing but Brahman oligarchy, for nothing but pure blood, for nothing but words to celebrate their good intentions-action being in another direction-and others are individualy split up. Each case is by itself standing on its own history, and is perhaps interesting to examine. But it is not our business.

We would only point out that such attitude in the Municipal affairs is now-a-days not confined to Bangalore city. The Municipalities elsewhere have become really boisterous, and that shows the awakening of the day. For instance look at that passage at arms between the chairman of the Madura Municipality Mr Tulasiram and Mr. R S. Naidoo Bar-at-law on the 12th instant. That pitch has not yet reached in our Councils. The attitude of the 8 members was to avoid such scenes in future Council meetings. Was this not wisdom? Beyond all doubt.

The Sampadabhyudva of Mysore—a purely Brahman organ—has been defending naturaly an oligarchy which it would wish to have. The communicated article in its issue of the 17th instant in criticising the conduct of the absentee members recommends to Government "to ask these absentees to resign their places in order that more efficient and self sacrificing members may, with better results, find their seats on the Council." What are the better results alluded to? To say "Ditto" to what the late Hon. President would say. To worship him. To flatter him. To vote for him. To go on deputation on his behalf in the face of the Regulation on the point. What is more efficient and self sacrificing work? Do relations of a President do it? Do Brahman oligarchy do it? Do persons who are otherwise interested in the President do it? No. Well! The minority did what was best and what was legitimate. It acted according to its conviction. We would like here to quote the words of Mr. Ramachandra Rao in the Madras Legislative Council on the 16th instant in connection with the passing of a bill to amend the District Municipalities Act and the Madras Local Boards Act to make it obligatory on the members of those Bodies to take the oath of allegiance to the Crown. He said "Let me assure my friends opposite if suitable facilities and opportunities are not given to us, the only thing open to minorities in Parliaments such as this, is to use every opportunity which they have under the *rules* to criticise, to block up, to obstruct and to bring every possible pressure upon the Government to adopt more reasonable methods." This is just what the opposition in minority in the Bangalore City Municipal Council has done. Its action was not unauthorised by Regulation. It was legitimate and it declared by absence what its attitude towards the proceedings was. It was the last and the only possible method which it could have adopted to defeat the object of a clique and to thus bring to the notice of Government the real state of affairs in the Municipality and thereby to bring pressure upon the Government to adopt a reasonable course in appointing a President who would in the interests of the Municipal administration be desirable. The appointment of Mr. Ananda Rao Sirsi is such.

Here is a lesson for the voters to note and note it in the exercise of this right in future. They must look to persons who have the great and general interests of the public and not of one class whose desire for power has become intolerable. It is in the air that the ex-President is contemplating to resign his seat in the Council and that he is in that view backed up by persons whose influence is considerable. We deprecate any action of this kind. It would take the form of a "strike" and that a gentleman of the stamp of Mr. Garudachar would not take.

OUR SAINTLY MAHARAJAH.

Here are the prophetic words of our Patriot Maharaja—which His Highness as the Royal Chancellor of the Benarese University expressed and they are soul purifying, inspiring and stirring.

"A Hindu University must prove itself equal to one more crucial test. The foundations of the old order, like the very foundations of the deep, are being broken up today, all over the world. Revolutionary doctrines, economic, social, political, educational are being spread everywhere under a hundred different guises and names and under a hundred banners. Everywhere there is spreading an under current of revolt against order, progress and reform. The old hope and faith, the old wisdom and charity are being forsaken and forsworn. This is the great agony to-day, the agony of the world." Comment on these words of a sage Maharaja—holy in words, holy in action and holy in life—are superfluous. They are full in meaning, full in advice, full in earnestness, full in sympathy and full in all that is sacred for man in this life and at this time of transition.

And the magnificent peroration. "Our Hindu University cannot serve ve unless she contributes to the re-construction of life and social order in the India of to-day, she must quicken what is inert, illumine what is dark, rejuvenate what is old and withered. And even as the Eternal city, in which she has her home, is to the pious Hindu the meeting place of the Earth and Heaven, so must the University of Benarese stand as the bridge between Past and Present, between Old and New and with the Holy River at her side, link the India of the Vedic times with the India of the morrow that is to be."

Could any words carry more truth and could they have been spoken out from the bottom of a more sincere heart and with greater earnestness in the welfare of India? These words of the Saint Maharaja must go from mouth to mouth throughout India, from day to day to posterity and into all languages and dialects of India.

And we are the happiest people in India to call this Saint Maharaja our own Beloved Maharajah.

THE VEERASIVA ACTIVITIES AT BANGALORE.

In another place are published the proceedings in Canarese of the Young Men's Veerasiva Association which is started at Bangalore its objects being to cosolidate the work of similar associations in the State and to start associations on the same lines at important Veerasiva centres which have none at present. The young men of to-day are the workers of the country to-morrow. Unless the vision is set right from now, it will not be easy to regulate the proper angle tomorrow. We are to-day paying penalty for having neglected in the past to organise such associations all over the country. The young minds are terribly disturbed by the non-Co-operators from outside the State and a consolidating Institution of this kind to steady down the minds of the young people is greatly wanted. We hope that every Veerasiva of vigorous mind will be its member and will work to rally round this association every young man. We have no doubt that before long thousands of names will be on the register of membership. Every student of the High School and College classes should enroll himself as its member which alone would be responsible for a thousand membership to which the Middle School classes in the Province could contribute six thousand members. We should invite the attention of every Veerasiva reader of this paper to become a member of this Institution and to draw the attention of every other Veerasiva gentleman or student whom he knows to similarly become a member. The strength of the members will indicate the strength of the cause for which this Association is started.

Another Institution has at the same time been started and this is a "Sivayoga Mandira" for the development of the spiritual mind of the young Veerasiva Sanyasins. This is another neglected subject to which now serious attention is invited. It need hardly be said that the Veerasiva religion which has discarded the "Karma" portion of the vedic religion and retains as essential the "Gnana" portion should afford to neglect a training without which it cannot justify its existence. A Sivayogamandiram will train select class of youngmen to devote their lives to the development of the spiritual essence of the religion. No two opinions there can be in respect of this matter.

The Young Men's Veerasiva Associations all over the State and a Sivayogamandira for the state at a place like Bangalore should necessarily bring to light the great virtues of the Veerasiva religion which is to Hinduism what Puritanism was to Christianity. We wish that all success may attend these two Institutions.

ಒಳದೇಶದ ವೃತ್ತಾಂತಗಳು.

ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಕಲ್ಕತ್ತಾ ವಿದ್ಯಾಪೀಠದವರು ಡಾಕ್ಟರ್ ಆಫ್ ಸೈನ್ಸ್ ಎಂಬ ಬಿರುದನ್ನು ಕೊಟ್ಟರು.

ತಾ|| ೨೬-೨೭-೨೮ ರಲ್ಲಿ ಬೆಂಗಳೂರು ವಾಣೀವಿಲಾಸ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಸಂಬಂಧವಾದ ಪ್ರದರ್ಶನವು ನಡೆಯುವುದು.

ಮಲಬಾರಿನ ಮಾಪಿಳ್ಳೆಗಳು ಮೈಸೂರುದೇಶದ ಗುಂಡ್ಲುಪೇಟೆ ತಾಲ್ಲೂಕಿಗೆ ಪ್ರವೇಶಮಾಡಿದ್ದಾರೆಂದು ಸುದ್ದಿಯಿದೆ. ನಮ್ಮ ಪ್ರಭುತ್ವದವರು ತಕ್ಕ ಬಂದೋಬಸ್ತನ್ನು ಮಾಡದೆ ತಪ್ಪಲಾರರು.

ಶ್ರೀಮನ್ಮಹಾರಾಜರು ಕಾಶಿಯ ಕೆಲಸವನ್ನು ಮುಗಿಸಿಕೊಂಡು ಕಲ್ಕತ್ತಾಕ್ಕೆ ದಯಮಾಡಿಸಿ ೨ ದಿನಗಳಿದ್ದು ಮೊನ್ನೆ ಬೆಂಗಳೂರಿಗೆ ದಯಮಾಡಿಸಿದರು; ನಿನ್ನೆ ರಾಜಧಾನಿಗೆ ಚಿತ್ತೈಸುವವರಾಗಿದ್ದರು.

೧ನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜೀಯವರು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ದಯಮಾಡಿಸಿ, ಅಲ್ಲಿಯ ಭದ್ರಾವತಿಯ ಕಬ್ಬಿಣದ ಯಂತ್ರಾಲಯಕ್ಕೆ ಸಂಬಂಧಪಟ್ಟ ಕಾರ್ಯಗಳನ್ನೆಲ್ಲಾ ಪರಾಮರಿಸಿಕೊಂಡು ಬೆಂಗಳೂರಿಗೆ ಬಂದರು.

ರಾಜಧಾನಿಯ ನಿಲ್ದಾಣದಲ್ಲಿ ಏರ್ಪಡಿಸಿದ್ದ ಪ್ಲಾಟ್‌ಫಾರಂ ಟಿಕೆಟ್ ನಿರ್ಬಂಧವನ್ನು ಶಿವಮೊಗ್ಗಾ, ಭದ್ರಾವತಿ, ತರೀಕೆರೆ, ಚನ್ನಪಟ್ಟಣ, ಮದ್ದೂರು ನಿಲ್ದಾಣಗಳಿಗೂ ಮುಂದಣ ಜನವರಿಯಿಂದ ಅನ್ವಯಿಸುವಂತೆ ಸರ್ಕಾರದಪ್ಪಣೆಯಾಗಿದೆ.

ಶ್ರೀಮತ್ ಪ್ರಿನ್ಸ್ ಆಫ್ ವೇಲ್ಸರವರ ಆಗಮನಕಾಲಕ್ಕಾಗಿ ಏರ್ಪಡಿಸಿರುವ ಖೆಡ್ಡಾಕ್ಕೆ ಈಗಾಗಲೇ ೩೨ ಕಾಡಾನೆಗಳು ಬಿದ್ದಿವೆಯೆಂದು ಕೇಳುತ್ತೇವೆ. ಅವರು ದಯಮಾಡಿಸುವವರೆಗೂ ಅವನ್ನು ಅಲ್ಲೇ ಕೂಡಿಟ್ಟಿದ್ದು, ಅವರ ಪ್ರತ್ಯಕ್ಷದಲ್ಲಿ ಕಟ್ಟಿಹಾಕಿ ಸ್ವಾಧೀನಪಡಿಸಿಕೊಳ್ಳುವ ಕಾರ್ಯವು ಜರಗುವುದು.

೧ನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜೀಯವರು ಈ ದೇಶದ ಅಧಿಕಾರದವಧಿಯು ಮುಗಿದಕೂಡಲೇ ತಮ್ಮ ಬ್ರಿಟಿಷ್ ಇಂಡ್ಯಾ ಸರ್ವೀಸಿಗೆ ಹೋಗುವವರಾಗಿದ್ದಾರೆಂದು ಸುದ್ದಿಯಿದೆ ಇಂಥ ಶಕ್ತರನ್ನು ಕಳೆದುಕೊಂಡರೆ ನಮ್ಮ ಸಂಸ್ಥಾನದ ತೂಗಡಿಸುತ್ತಿರುವ ಮತ್ತು ದರ್ಪಹೀನವಾಗಿರುವ ಕಾರ್ಯಗಳು ಇನ್ನೂ ಚೆನ್ನಾಗಿ ಮಲಗಿ ನಿದ್ದೆಹೋಗಬಹುದು.

ಬರುವ ಜನವರಿಯಿಂದ ನಮ್ಮ ದೇಶದ ಹೊಗೆಬಂಡಿಯ ಮೇಲೆ ಸಾಗಿಸಲ್ಪಡುವ ಪದಾರ್ಥಗಳಮೇಲೆ ಎಂದರೆ ಸವಿದೆ, ಆಹಾರಧಾನ್ಯಗಳ ಹೊರತು ಉಳಿದ ವಸ್ತುಗಳಮೇಲೆಲ್ಲಾ ಈಗ ತೆಗೆದುಕೊಳ್ಳಲ್ಪಡುತ್ತಿರುವ ಬಾಡಿಗೆಯಮೇಲೆ ರೂಪಾಯಿಗೆ ೨|| ಆಣೆಯಂತೆ ಹೆಚ್ಚುಗೆ ಬಾಡಿಗೆಯು ವಿಧಿಸಲ್ಪಡುವುದು. ಎಂ. ಎಸ್. ಎಂ. ರೈಲ್ವೆಕಂಪನಿಯವರೂ ಹೀಗೆಯೇ ಹೆಚ್ಚುಮಾಡಿದ್ದಾರೆ.

ರಾಜಧಾನಿಯ ಪ್ರಸಿದ್ಧ ಜವಾಹಿರಿ ವರ್ತಕರಾದ ಮ|| ಕಾವೇರಿಪಟ್ಟಣಂ ಸುಬ್ರಾಯಸೆಟ್ಟರ ಮಗ ಮ|| ಕೆ. ಎಸ್. ರಾಮಯ್ಯಸೆಟ್ಟರು ಕಳೆದ ತಾ|| ೨೧ ರಲ್ಲಿ ನೂತನವಾಗಿ ಜವಳಿಯಂಗಡಿಯನ್ನಿಟ್ಟು ಅಧಿಕಾರಿಗಳನ್ನೂ, ಮ್ಯು|| ಕೌನ್ಸಿಲರುಗಳನ್ನೂ ಆಹ್ವಾನಿಸಿ ಗಂಧಪುಷ್ಪ ತಾಂಬೂಲ ವಿನಿಯೋಗದಿಂದ ಸತ್ಕರಿಸಿದರು. ಮ|| ಸೆಟ್ಟರ ನೂತನ ವ್ಯಾಪಾರವು ಅಭಿವೃದ್ಧಿಯಾಗಲೆಂದು ಕೋರುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನಿಂದ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಮೆಂಬರನ್ನು ಆರಿಸಿ ಕಳುಹಿಸುವುದಕ್ಕಾಗಿ ಕಳೆದ ತಾ|| ೨೩ ರಲ್ಲಿ ಕೌನ್ಸಿಲ್ ಮೀಟಿಂಗು ನಡೆದು ಉಮೇದುವಾರರಾಗಿ ನಿಂತಿದ್ದ ಮ|| ಎ. ಪಿ. ಬಾವಾಜಿಯವರಿಗೆ ೧೩ ಓಟುಗಳೂ ಮ|| ಪಿ. ಎಸ್. ಅನಂತರಾಯರಿಗೆ ೮ ಓಟುಗಳೂ ಬಂದುದರಿಂದ ಮ|| ಬಾವಾಜಿಯವರು ಡಿ|| ಬೋರ್ಡುಮೆಂಬರಾಗಿ ಹೋಗಲು ಗೊತ್ತುಮಾಡಲ್ಪಟ್ಟರು.

ಬೆಂಗಳೂರು ಮ್ಯುನ್ಸಿಪಾಲಿಟಿಗೆ ಇದುವರೆಗೆ ತುಮಕೂರು ಡಿಸ್ಟ್ರಿಕ್ಟ್ ಡಿ|| ಕಮೀಷನರಾಗಿದ್ದ ಮ|| ಸಿರ್ಸಿ ಆನಂದರಾವ್ ಬಿ.ಎ., ಎಲ್‌ಎಲ್.ಬಿ., ಯವರು ಪ್ರೆಸಿಡೆಂಟರಾಗಿ ಸರ್ಕಾರದವರಿಂದ ನಿಯಮಿಸಲ್ಪಟ್ಟರು. ತಕ್ಕವರನ್ನೇ ಸರ್ಕಾರದವರು ಆರಿಸಿದರು. ಇವರು ೧ ವರ್ಷಕಾಲದ ವರೆಗೆ ನಿಯಮಿತರಾಗಿರುವರು. ಅನಂತರ ಮತ್ತೆ ಎಲಕ್ಷನ್ನಿಗೆ ಅವಕಾಶಕೊಡಬಹುದು. ಸರ್ಕಾರದ ಉದ್ಯೋಗಿಗಳು ಪ್ರೆಸಿಡೆಂಟರಾದುದರಿಂದ ಚೀಫ್ ಆಫೀಸರ ಸ್ಥಾನವನ್ನು ತೆಗೆದುಬಿಟ್ಟು, ವೈಸ್‌ಪ್ರೆಸಿಡೆಂಟರ ಎಲಕ್ಷನ್ನಿಗೆ ಮತ್ತೆ ಅವಕಾಶವನ್ನು ಸರ್ಕಾರದವರು ಕೊಟ್ಟಿದ್ದಾರೆ, ಮತ್ತು ಅಲ್ಲಿಯ ಕೌನ್ಸಿಲರುಗಳ ಸಂಖ್ಯೆಯನ್ನು ೨೮ ರಿಂದ ೩೦ಕ್ಕೆ ಹೆಚ್ಚಿಸಿದರು.

ಕಠಿಣವಾದ ವಾದೋಪವಾದಗಳು ನಡೆದಿವೆ. ಪರ್ಯವಸಾನವು ಇಷ್ಟರಲ್ಲೇ ಗೊತ್ತಾಗುವುದು.

ಶ್ರೀಮತ್ ಯುವಸಾರ್ವಭೌಮರು ನೇಪಾಳ ಸಂಸ್ಥಾನದಲ್ಲಿರುವಾಗ ೪ ದಿನಗಳ ಕಾಲದೊಳಗೆ ೧೧ ದೊಡ್ಡ ಹುಲಿಗಳನ್ನೂ ೨ ಘೇಂಡಾಮೃಗಗಳನ್ನೂ ಬೇಂಟೆಯಾಡಿದರು. ಅವರು ೮ ದಿನಗಳಕಾಲ ಸಂಸ್ಥಾನದ ಆತಿಥ್ಯದಿಂದ ವಿಶೇಷವಾಗಿ ಸಂತೋಷಿಸಿದರು. ಅವರು ಅಲ್ಲಿಂದ ಹೊರಡುವುದಕ್ಕೆ ಮುಂಚೆ ಆ ದೇಶದ ಪದ್ಧತಿಯಪ್ರಕಾರ ಅಲ್ಲಿಯ ಮಹಾರಾಜರು ಅಮೌಲ್ಯಗಳಾದ ಕೆಲವು ಪ್ರಾಣಿಗಳನ್ನು ಬಹುಮಾನಿಸಿದರು. ಅವುಗಳಲ್ಲಿ ಆನೆಮರಿ, ಹುಲಿಮರಿಗಳು, ಚಿರತೆಗಳು, ಘೇಂಡಾಮೃಗಗಳು, ಬಿಳಿಯಕರಡಿಗಳು, ಪುನುಗುಬೆಂಕೆಗಳು, ಟಿಬೇಟಿನ ಬೇಟೆನಾಯಿಗಳು, ಆ ದೇಶದ ವಿವಿಧವರ್ಣದ ಪಕ್ಷಿಗಳು, ಅತ್ಯುತ್ಕೃಷ್ಟವಾದ ಆ ದೇಶದ ಉಣ್ಣೆಯ ಕೋಟುಗಳು ಇತ್ಯಾದಿ. ಇವನ್ನೆಲ್ಲಾ ಯುವರಾಜರು ನೋಡಿ ಬಹಳ ಸಂತೋಷಪಟ್ಟು ಲಂಡನ್ ಪಟ್ಟಣದ ಪ್ರಾಣಿಶಾಲೆಗೆ ಇವನ್ನು ಕಳುಹಿಸಿಕೊಡುವೆನೆಂದು ತಿಳಿಯಿಸಿ ತಮ್ಮ ಕೃತಜ್ಞತಾವಂದನೆಯನ್ನು ಸಲ್ಲಿಸಿದರು. ತಾ|| ೨೧ರಲ್ಲಿ ಅಲ್ಲಿಂದ ಹೊರಟು ಪಾಟ್ನಾಕ್ಕೆ ದಯಮಾಡಿಸಿದರು.

ಮೈಸೂರು ಸ್ಟಾರ್

೧೯೨೧ ನೆ ಇಸವಿಯ ಡಿಸೆಂಬರ್ ತಾ|| ೨೪ ನೆಯ ಭಾನುವಾರ.

ಬೆಂಗಳೂರು ಡಿಸ್ಟ್ರಿಕ್ಟ್, ಡಿ|| ಕಮಿಷನರು ಮತ್ತು ಚನ್ನಪಟ್ಟಣದ ತಾಲ್ಲೂಕು.

ಚನ್ನಪಟ್ಟಣದಿಂದ ಬರೆದುಬಂದಿರುವ ಒಂದು ಲೇಖನವನ್ನು ಈ ಪತ್ರಿಕೆಯ ಬೇರೆಕಡೆಯಲ್ಲಿ ನಾವು ಮುದ್ರಿಸಿರುತ್ತೇವೆ. ಗಣ್ಯರಾದ ಒಬ್ಬ ದೊಡ್ಡಮನುಷ್ಯರಿಂದ ಅದು ಬರೆದು ಬಂದಿರುವ ಕಾರಣ ಅದು ಯಥಾರ್ಥಸ್ಥಿತಿಯನ್ನೇ ಹೇಳತಕ್ಕುದಾಗಿದೆಯೆಂದು ನಾವು ನಂಬುತ್ತೇವೆ. ಮ|| ರಾಮಸ್ವಾಮಯ್ಯನವರು ಡಿ|| ಕಮಿಷನರಾಗಿ ಬಂದು ಸ್ವಲ್ಪಕಾಲವೇ ಆಗಿದೆ. ಆರಂಭಕಾಲದಲ್ಲೇ ಅವರು ದೇಶದ ಮುಖ್ಯ ಪ್ರಜಾಕೋಟಿಯಾದ ರೈತರ ವಿಷಯದಲ್ಲಿ ತೋರಿಸಿರುವ ಅಲಕ್ಷ್ಯಭಾವವನ್ನೂ ಅನಾದರಣೆಯನ್ನೂ ಕೇಳಿ ನಾವು ಆಶ್ಚರ್ಯಪಡುತ್ತೇವೆ. ಪ್ರಭುವೇ ಪ್ರಜಾಸೇವೆಗಾಗಿರುವಾಗ ಪ್ರಭುತ್ವಪ್ರತಿನಿಧಿಗಳು ಪ್ರಜೆಗಳನ್ನು ತೃಣದಂತೆ ಕಾಣುವುದು ಈಗಣ ನಾಗರಕಕಾಲದ ವಿದ್ಯಾವಂತರ ಲಕ್ಷಣಕ್ಕೆ ಕಳಂಕದಾಯಕವೇ ಸರಿ. ಅಧಿಕಾರಿಗಳು ಪ್ರಜಾಸಾಮಾನ್ಯದ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಸರ್ ಎಂ. ವಿಶ್ವೇಶ್ವರಯ್ಯನವರು ಸ್ವಂತದ ಆಚರಣೆಯಿಂದ ಮಾರ್ಗದರ್ಶನ ಮಾಡಿಕೊಟ್ಟಿದ್ದರು. ರೈತರು ಅವಿದ್ಯಾವಂತರಾಗಿರುವ ಕಾರಣ ಅವರನ್ನು ತುಚ್ಛೀಕರಿಸುವ ಮಾತ್ರದಿಂದ ಅಧಿಕಾರಿಗಳ ಗೌರವವು ಹೆಚ್ಚುವುದಕ್ಕೆ ಪ್ರತಿಯಾಗಿ ಅವರ ಸೌಜನ್ಯದ ತೂಕವೇ ಕಡಿಮೆಯಾಗುವುದೆಂಬುದನ್ನು ಅವರು ಮರೆಯಬಾರದು. ಮೂಕಪ್ರಾಣಿಯಾದ ಪಶುವನ್ನು ನಿರ್ಘೃಣವಾಗಿ ಹೊಡೆದು ಬಡಿಯುವ ಕಟುಕನನ್ನು ಲೋಕವು ನಿಂದಿಸುವುದಲ್ಲದೆ ಪಶುವನ್ನು ಯಾರೂ ನಿಂದಿಸಲಾರರಲ್ಲವೆ ?

ಚನ್ನಪಟ್ಟಣದ ತಾಲ್ಲೂಕು ಅಮಲ್ದಾರರವರು ಕುಳವಾರು ಪಿಸ್ತೆಪಟ್ಟಿ ಲೆಕ್ಕವನ್ನು ಎತ್ತಿಕೊಡಬೇಕೆಂದು ಶ್ಯಾನುಭೋಗರುಗಳಿಗೆ ಅಪ್ಪಣೆ ಮಾಡಿದುದು ಸ್ವಾರ್ಥಕ್ಕೇನೂ ಅಲ್ಲ. ಅದು ಪ್ರಜಾಸೌಕರ್ಯಕ್ಕೂ ಪ್ರಜಾಹಿತಕ್ಕೂ ಸಾಧಕವಾದ ಮಾತಾಗಿದೆ. ಅದನ್ನು ಕೊಡಬೇಕಾದುದಿಲ್ಲವೆಂದು ಡಿ|| ಕಮಿಷನರು ಏತಕ್ಕೆ ಯಾವಾಗ ಅಪ್ಪಣೆ ಮಾಡಿದರೋ ತಿಳಿಯಲಿಲ್ಲ. ಹಾಗೆ ಅಪ್ಪಣೆ ಮಾಡಿದ್ದರೆ ತಾಲ್ಲೂಕು ಅಧಿಕಾರಿಗಳಿಗೂ ಹಿಂದೆ ಇದೇ ಡಿಸ್ಟ್ರಿಕ್ಟಿನ ಅಧಿಕಾರಿಗಳಾಗಿದ್ದ ಮಿ|| ಟಾಚ್‌ಪಿರಾರ್ ಸಾಹೇಬರವರಿಗೂ ತಿಳಿದಿರಲೇಬೇಕಲ್ಲವೆ? ತಿಳಿದಿದ್ದರೆ ಈ ಲೆಕ್ಕವನ್ನು ತಾ|| ಅಧಿಕಾರಿಯು ಏತಕ್ಕೆ ಕೇಳುತ್ತಿದ್ದರು? ಸರ್ಕಾರದ ರೂಲ್ಸು ಇಲ್ಲದಿದ್ದರೂ ಶಾನುಬಾಗರು ಕಂದಾಯದವಸೂಲಿ ಮಾಡುತ್ತಿರುವ ಪದ್ಧತಿಯನ್ನು ಮಾತ್ರ ಅಧಿಕಾರಿಗಳು ಒಪ್ಪಿಕೊಳ್ಳಬಹುದು; ನ್ಯಾಯವಾಗಿಯೂ ಸರ್ಕಾರಕ್ಕೂ ಪ್ರಜೆಗಳಿಗೂ ಅವಶ್ಯಕವಾಗಿಯೂ ಶಾನುಭಾಗರ ಕರ್ತವ್ಯಕ್ಕೆ ಸಂಬಂಧಪಟ್ಟುದಾಗಿಯೂ ಇರುವ ಕುಳವಾರು ಪಟ್ಟಿ ಲೆಕ್ಕಬರೆಯುವುದನ್ನು ಮಾತ್ರ ನಿಷೇಧಿಸುವುದಕ್ಕೆ ಕಾರಣವೇನು? ಸರ್ಕಾರಕ್ಕೂ ರೈತರಿಗೂ ತೊಂದರೆಯಾದರೂ ಸರಿ; ಶಾನುಬಾಗರಿಗೆ ಮಾತ್ರ ತೊಂದರೆಯಾಗಕೂಡದೆಂದು ಸಂಕಲ್ಪಿಸಿಕೊಂಡಿರುವವರು ಹೀಗೆ ಅಪ್ಪಣೆಯ ಕೊಡಬಹುದೇ ಹೊರತು ದೇಶಹಿತವನ್ನು ಕೋರುವವರು ಹೀಗೆ ಅಪ್ಪಣೆಯನ್ನೆಂದಿಗೂ ಕೊಡಲಾರರು.

ಈಗಣ ಕಾಲದಲ್ಲಿ ಎಷ್ಟೋ ಮಂದಿ ಸಿವಿಲ್ ಕ್ರಿಮಿನಲ್ ಅಧಿಕಾರಿಗಳು ಪದ್ಧತಿಯೆಂಬುದಕ್ಕೆ ಮಸಿಹಚ್ಚಿ ಸರ್ವಸಮುದ್ಧತಿಯನ್ನನುಸರಿಸಿ ತೀರ್ಮಾನಗಳನ್ನು ಮಾಡುತ್ತಿರುವುದನ್ನು ಎಲ್ಲರೂ ಬಲ್ಲರು. ಹೀಗಿರುವಾಗ ಮ|| ರಾಮಸ್ವಾಮಯ್ಯನವರು ಶ್ಯಾನುಬೋಗರು ಕಂದಾಯವನ್ನೆತ್ತುವ ಪದ್ಧತಿಯನ್ನು ಪರಿಪೋಷಣೆ ಮಾಡಿ, ರೈತರ ಹಿತವನ್ನು ಧಿಕ್ಕರಿಸಿರುವುದು ಎಂದಿಗೂ ಒಪ್ಪತಕ್ಕಮಾತಲ್ಲ. ಇದು ಗೌರ್ನಮೆಂಟಿನವರ ಪರ್ಯಾಲೋಚನೆಗೆ ಅರ್ಹವಾದ ವಿಷಯವಾಗಿರುತ್ತದೆ. ಏಕೆಂದರೆ ಪಿಸ್ತೆಪಟ್ಟಿಯಿಲ್ಲದುದರಿಂದ ಸಂಭವಿಸುವ ತೊಂದರೆಯು ಚನ್ನಪಟ್ಟಣದ ತಾಲ್ಲೂಕೊಂದರಲ್ಲೇ ಅಲ್ಲ; ಸಂಸ್ಥಾನದ ರೈತರೆಲ್ಲಾ ಇದರಿಂದ ನಾನಾತರದ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾರೆ. ಸರ್ಕಾರದ ವಸೂಲಿ ಕೆಲಸಕ್ಕೂ ಇದರ ಅಭಾವದಿಂದ ಎಷ್ಟೋ ತೊಂದರೆಗಳಾಗುತ್ತಿವೆ. ಈಗ ಇದು ಮೇಲ್ಪಟ್ಟ ಅಧಿಕಾರಿಗಳಿಂದ ನ್ಯಾಯಸಂಮತವಾಗಿ ಬಗೆ ಹರಿಯದಿದ್ದರೆ, ಸಾರ್ವತ್ರಿಕ ವಿಷಯವಾಗಿ ಪ್ರಜಾಪ್ರತಿನಿಧಿ ಸಭೆಯ ಚರ್ಚೆಗಾದರೂ ಬಂದು ವ್ಯವಸ್ಥೆಗೊಳ್ಳಬೇಕಾದುದೇ ಆಗಿರುತ್ತದೆ. ಏಕೆಂದರೆ—ಶ್ಯಾನುಬೋಗರು ಕಂದಾಯ ವಸೂಲಿ ಮಾಡುವುದರಿಂದ ಎಷ್ಟು ಕೇಡಾಗಬಹುದೋ ಅದಕ್ಕೆ ನಾಲ್ಕುಪಾಲು ನಷ್ಟಕಷ್ಟಗಳು ಈ ಕುಳವಾರು ಪಿಸ್ತೆಪಟ್ಟಿ ಲೆಕ್ಕಗಳನ್ನಿಡದಿರುವುದರಿಂದ ಆಗುತ್ತಿವೆ. ಅದುಕಾರಣ ಶಾನುಬೋಗರು ಕಂದಾಯ ವಸೂಲಿ ಮಾಡುವುದನ್ನು ನಿಲ್ಲಿಸುವುದಕ್ಕೆ ಅಷ್ಟು ತಾಪತ್ರಯ ಪಡಬೇಕಾದುದಿಲ್ಲ; ಈ ಪಿಸ್ತೆಪಟ್ಟಿಯನ್ನು ಎತ್ತಿಸಬೇಕಾದುದು ಅತ್ಯಾವಶ್ಯಕವಾಗಿರುತ್ತದೆ. ರೈತರ ಹಿತಕ್ಕಿಂತಲೂ ಸ್ವಜಾತಿಯ ಶಾನುಬೋಗರ ಮೇಲಣ ಅಭಿಮಾನವೇ ನಮ್ಮ ಹೊಸ ಡಿ|| ಕಮಿಷನರಿಗೆ ಹೆಚ್ಚಾಯಿತೆಂದು ಆ ತಾಲ್ಲೂಕು ಪ್ರಜೆಗಳು ಬಹಳ ಬೇಸರಪಟ್ಟು ಆಡಿಕೊಳ್ಳುತ್ತಿರುವರೆಂದು ಇದೇತಾನೇ ನಮಗೆ ಬಂದಿರುವ ಪತ್ರದಿಂದ ತಿಳಿಯುತ್ತೇವೆ. ಅದನ್ನು ಹಾಗಿಲ್ಲವೆಂದು ಹೇಳಿ ಸಾಧಿಸುವುದಕ್ಕೆ ನಮಗೆ ಆಧಾರವಿಲ್ಲ. ಇನ್ನೂ ವರ್ಧಿಷ್ಣುಗಳಾಗಿರುವ ಮ|| ರಾಮಸ್ವಾಮಯ್ಯನವರು ರೈತರಲ್ಲಿ ಈ ರೂಪವಾದ ಭಾವವು ರೂಢಮೂಲವಾಗುವುದಕ್ಕೆ ಮುಂದಾದರೂ ಅವಕಾಶ ಕೊಡದಿರಲೆಂದು ಕೋರುತ್ತೇವೆ.

ಪ್ರಕೃತ ರಾಜಕೀಯಸ್ಥಿತಿ.

ಭರತಖಂಡದ ರಾಜಕೀಯ ಸ್ಥಿತಿಯು ಈಗ ಎಷ್ಟು ವಿಷಮವಾಗಿರುವುದೆಂಬುದನ್ನು ಪ್ರತಿ ವಾರದಲ್ಲೂ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ವರ್ತಮಾನಗಳಿಂದ ವಾಚಕರು ತಿಳಿದೇ ಇದ್ದಾರೆ. ಲಾರ್ಡ್ ರೀಡಿಂಗ್‌ರವರು ವೈಸ್‌ರಾಯರಾಗಿ ಬಂದಬಳಿಕ ರಾಜಕೀಯ ವೈಷಮ್ಯವು ತಪ್ಪಿ ಶಾಂತಿಯು ರೂಢಮೂಲವಾಗುವುದೆಂದು ಅನೇಕರು ನಿರೀಕ್ಷಿಸಿಕೊಂಡಿದ್ದರು. ಜ್ಞಾನವಯೋವೃದ್ಧರಾದ ರೀಡಿಂಗ್‌ಪ್ರಭುಗಳು ಸತ್ಯ ನ್ಯಾಯಗಳನ್ನೇ ಅವಲಂಬಿಸಿ ಭರತಖಂಡಕ್ಕೆ ಹಿತವನ್ನುಂಟುಮಾಡಬೇಕೆಂಬುದನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡು ಈ ದೇಶಕ್ಕೆ ಬಂದು ಅಧಿಕಾರಕ್ಕೆ ಆರಂಭಿಸಿದರು. ಕೂಡಲೇ ದೇಶದ ರಾಜಕೀಯ ಪಕ್ಷಗಳಲ್ಲಿ ಪ್ರಮುಖರಾದವರನ್ನು ಕರೆಯಿಸಿಕೊಂಡು ಅವರಭಿಪ್ರಾಯಗಳನ್ನೆಲ್ಲಾ ತಿಳಿದುಕೊಂಡರು. ಭರತಖಂಡಕ್ಕೆ ಹಿತವೂ ಇಷ್ಟವೂ ಆದ ಸ್ವಪರಿಪಾಲನವನ್ನು ಕೈಗೂಡಿಸುವಲ್ಲಿ ಶಾಂತವಾದ ಪ್ರಯತ್ನಗಳನ್ನು ಯಾವ ಪ್ರಜೆಯು ನಡೆಯಿಸಿದರೂ ಅದನ್ನು ಅವರು ಅಭಿನಂದಿಸುವವರಾಗಿಯೇ ಇರುವರು. ಮತ್ತೂ ಸುಸಾಧ್ಯವಾದ ಅಂಥ ಪ್ರಯತ್ನಗಳಿಗೆ ತಾವು ಬೆಂಬಲರಾಗಿ ಇರುವುದಕ್ಕೂ ಬದ್ಧಾದರರಾಗಿರುವರು. ಆದರೆ ಒಂದೇ ವರ್ಷದಲ್ಲೇ ಸ್ವರಾಜ್ಯವನ್ನು ಕೈಗೂಡಿಸಿಕೊಳ್ಳುವೆವೆಂದು ಆತುರಪಡುತ್ತಲಿರುವ ಅಸಹಾಯವಾದಿಗಳಿಗೆ ಮಾತ್ರ ರೀಡಿಂಗ್‌ಪ್ರಭುಗಳ ಶಾಂತಪ್ರಯತ್ನವೂ ಸೌಮ್ಯಮಾರ್ಗಗಮನವೂ ಸರಿಬೀಳಲಿಲ್ಲ. ಪ್ರಭುತ್ವದ ಹಸ್ತ ಪಾದ ಚಲನಗಳನ್ನೇ ಬಂಧನಮಾಡಿಬಿಡಬೇಕೆಂದು ಉದ್ದೇಶಪಟ್ಟಿರುವ ಆ ಪಕ್ಷದವರು ತಮ್ಮ ಪ್ರಯತ್ನದ ಕಾಠಿನ್ಯವನ್ನು ಬಲಪಡಿಸುತ್ತಲೇ ಬಂದರು. ಪ್ರಜೆಗಳು ತೆರುವ ಕಂದಾಯವನ್ನು ನಿಲ್ಲಿಸಿಬಿಡುವ, ಮತ್ತು ಸರ್ಕಾರದ ಶಾಸನವನ್ನು ಮೀರುವ ಕೆಲಸಕ್ಕೆ ದೇಶ ಪ್ರಜೆಗಳನ್ನು ಹುರಿದುಂಬಿಸುವುದಕ್ಕೆ ಸಿದ್ಧರಾದರು. ಅಧಿಕಾರಿಮಂಡಲಕ್ಕೆ ಸೇರದಿರುವ ಶ್ರೀಮತ್ ಪ್ರಿನ್ಸ್‌ಆಫ್‌ವೇಲ್ಸ್‌ರವರು ಈ ದೇಶದ ಸಂದರ್ಶನಕ್ಕಾಗಿ ಆಗಮಿಸಿದ ವೇಳೆಯಲ್ಲಿ ಬೇಕೆನ್ನುತ್ತಲೇ ಹರತಾಳಗಳೇ ಮೊದಲಾದ ಗದ್ದಲಗಳನ್ನು ಹುಟ್ಟಿಸಲು ಅಗಾಧ ಪ್ರಯತ್ನಗಳನ್ನು ಮಾಡಿದರು. ಅದೇ ಸಂದರ್ಭದಿಂದಲೇ ಬೊಂಬಾಯಿಯಲ್ಲಿ ಗದ್ದಲಗಳೂ ಅತ್ಯಾಚಾರಗಳೂ ಕೂಡ ನಡೆದುಹೋದುವು. ಈ ವಿಷಮಸ್ಥಿತಿಯನ್ನು ಮಿತಿಮೀರಿಸುತ್ತ ಬಂದುದರಿಂದ ಪ್ರಭುತ್ವದವರು ಶಾಂತಿರಕ್ಷಣೆಗಾಗಿ ಅವಲಂಬಿಸಿದ್ದ ಸೌಮ್ಯವರ್ತನವೆಲ್ಲಾ ನಿಷ್ಪ್ರಯೋಜಕವಾಗಿ, ದೇಶ ಶಾಂತಿರಕ್ಷಣೆಗೆ ದಂಡೋಪಾಯವನ್ನೇ ಅವರು ವಿಧಿಯಿಲ್ಲದೆ ಅವಲಂಬಿಸಬೇಕಾಯಿತು.

ಕಠಿನಶಾಸನದ ಕತ್ತಿಗಳು ಅವಿಶ್ರಾಂತವಾಗಿ ಬೀಸಲ್ಪಡುತ್ತಿರುವುವು. ಇದರ ಹತಿಯಿಂದ ಪ್ರತಿದಿನವೂ ನೂರಾರು ಜನರು ಕಾರಾಗೃಹಪ್ರವೇಶಮಾಡುತ್ತಿರುವರು. ಬಂಗಾಳಾ ಪ್ರಾಂತವೊಂದರಲ್ಲೇ ೧,೪೦೦ ಮಂದಿಗಳವರೆಗೆ ಕಾರಾಗೃಹವಾಸವನ್ನು ಮಾಡುತ್ತಿರುವರು. ಉಳಿದ ಅಧಿಪತ್ಯಗಳಲ್ಲೂ ಪ್ರತಿದಿನವೂ ಖಿಲಾಫತ್ ಕಾಂಗ್ರೆಸ್ ಸ್ವಚ್ಛಂದಸೇವಕರನ್ನೂ ಹರತಾಳದ ಪ್ರೇರೇಪಕರನ್ನೂ ಹಿಡಿದು ವಿಚಾರಣೆಗೆ ಒಳಪಡಿಸುತ್ತಿರುವರು. ಆ ವಿವರವನ್ನೆಲ್ಲಾ ವಾರಪತ್ರಿಕೆಗಳಲ್ಲಿ ಬರೆಯುವುದಕ್ಕೆ ಸಾಧ್ಯವಿಲ್ಲದಿದ್ದಷ್ಟು ಸುದ್ದಿಗಳು ಪ್ರತಿದಿನವೂ ಬರುತ್ತಿರುವುವು. ಮ|| ಗಾಂಧಿಯವರ ಹೊರತಾಗಿ ಉಗ್ರವಾದಿಪಕ್ಷದ ಪ್ರಮುಖರೆಲ್ಲಾ ಕಾರಾಗೃಹದಲ್ಲಿರುವರು, ಅಥವಾ ಪ್ರವೇಶೋನ್ಮುಖರಾಗಿರುವರು. ಮುಂದಾಳಾಗಿ ಬಂದವರನ್ನು ಹಿಡಿದು ಕೂಡಿಬಿಟ್ಟರೆ ಚಳವಳವು ಶಾಂತವಾಗುವುದೆಂದು ಪ್ರಭುತ್ವದವರು ಭಾವಿಸಿರುವರು. ಅದರಹೊರತು ಉಪಾಯಾಂತರವು ಅವರ ಕಣ್ಣಿಗೆ ಗೋಚರಿಸದು. ದೇಶ ಶಾಂತಿರಕ್ಷಣೆಯ ಭಾರವು ಅವರ ತಲೆಯಮೇಲೆ ಹೊತ್ತಿರುವುದು. ದಂಡೋಪಾಯವನ್ನು ಕೈಕೊಂಡು ನಿಗ್ರಹಿಸದೆ ಇದುವರೆಗೆ ಸೌಮ್ಯವಾಗಿದ್ದುದಕ್ಕಾಗಿ ಲಾರ್ಡ್‌ರೀಡಿಂಗ್‌ರವರ ಪ್ರಭುತ್ವದೋರಣೆಯನ್ನು ಕುರಿತು ಈ ದೇಶದಲ್ಲೂ ವಿಲಾಯತಿಯಲ್ಲೂ ಆಂಗ್ಲಜನರು ಬೇಕಾದಷ್ಟು ಹೀನಯಿಸಿದರು. ಅದರಮೇಲೆ ನಿರ್ವಾಹವಿಲ್ಲದೆ ರೀಡಿಂಗ್‌ಪ್ರಭುಗಳು ಈ ಕಠಿನಮಾರ್ಗಕ್ಕೆ ಹಜ್ಜೆಯಿಟ್ಟಿರುವರು. ಆದರೇನು ? ಪ್ರಭುತ್ವದವರ ಉದ್ದೇಶವು ಇದರಿಂದ ನೆರವೇರುವ ಲಕ್ಷಣವು ತೋರುವುದಿಲ್ಲ. ಒಬ್ಬರನ್ನು ಹಿಡಿದರೆ ಅವರ ಸ್ಥಾನಕ್ಕೆ ಹತ್ತುಮಂದಿಗಳು ಸಿದ್ಧರಾಗುತ್ತಲೂ, ಬೇಡವೆಂದು ಹೇಳಿದ ಕೆಲಸವನ್ನು ಮನಃಪೂರ್ವಕವಾಗಿ ಮಾಡುವುದಕ್ಕೂ ಅತ್ತೆಮನೆಗೆ ಹೋಗುವಂತೆ ಕಾರಾಗೃಹವನ್ನು ಹುಗುವುದಕ್ಕೂ ಸಿದ್ಧರಾಗುತ್ತಿರುವರು. ದೇಶಪ್ರಮುಖರೆಲ್ಲಾ ನಿರ್ಬಂಧಕ್ಕೊಳಗಾಗಿ ಹೋಗುತ್ತಿರುವುದನ್ನು ನೋಡಿ ಅಸಹಾಯ ಪ್ರಯತ್ನದಲ್ಲಿ ಇದುವರೆಗೆ ವಿಮುಖರಾಗಿದ್ದ ಜನರು ಕೂಡ ಅವರಲ್ಲಿ ಸಾನುಭೂತಿಯನ್ನು ತೋರಿಸಲಿಕ್ಕೆ ಉಪಕ್ರಮಿಸಿ ಸರ್ಕಾರದ ಪ್ರವರ್ತನವನ್ನು ಖಂಡಿಸುತ್ತಲಿರುವರು. ಈ ಬಲಾತ್ಕಾರಕ್ರಮದಿಂದ ಸದ್ಯಃಶಾಂತಿಯುಕೂಡ ಲಭಿಸುವಹಾಗೆ ತೋರಲಿಲ್ಲ. ನಿರ್ಬಂಧಿತರಾದವರ ಮತ್ತು ಅವರಲ್ಲಿ ಸಾನುಭೂತಿಯುಳ್ಳ ಜನರ ಮನಸ್ಸೆಲ್ಲಾ ಪ್ರಭುತ್ವ ವಿಷಯದಲ್ಲಿ ಮತ್ತಷ್ಟು ತೀಕ್ಷ್ಣವಾಗಿಯೇ ಹೋಗುತ್ತಿರುವುದು. ಶ್ವಾಸೋಚ್ಛ್ವಾಸಗಳನ್ನೆಲ್ಲಾ ಬಂಧಿಸಿಬಿಟ್ಟರೆ ಅಂಗದಲ್ಲಿ ಯಾವುದಾದರೊಂದು ಭಾಗದಲ್ಲಿ ಸ್ಫೋಟವಾಗಿ ಹೋಗುವಂತೆ ಈ ಮಹಾ ನಿರ್ಬಂಧವು ದೇಶದಲ್ಲಿ ಯಾವಾಗ ಮಹಾ ಸ್ಫೋಟನನ್ನುಂಟುಮಾಡುವುದೋ ಎಂದು ಯೋಚಿಸಬೇಕಾಗಿ ಬಂದಿರುವುದು. ಸದ್ಯದ ಪರಿತಾಪಕರ ಸ್ಥಿತಿಯಿಂದ ದೇಶವನ್ನು ಕಾಪಾಡುವುದು ಪ್ರಭುತ್ವದವರಿಗೇ ಅಲ್ಲದೆ ದೇಶದ ಎಲ್ಲ ಪಕ್ಷದ ಪ್ರಜೆಗಳಿಗೂ ಅವಶ್ಯಕರ್ತವ್ಯವಾಗಿರುವುದು. ಅದುಕಾರಣವೇ ಅಸಹಾಯವಾದಿಗಳಿಂದ ದೂರಸ್ಥರಾಗಿದ್ದ ಸರ್ ಪ್ರಫುಲ್ಲಚಂದ್ರ ರೇ, ಮದನಮೋಹನಮಾಳವ್ಯ, ಆನಿಬೆಸೆಂಟಮ್ಮ, ಜಿನ್ನಾ ಮೊದಲಾದನೇಕರು ಈಗಣ ಸರ್ಕಾರದ ಧೋರಣೆಯನ್ನು ಕಂಡು ಜುಗುಪ್ಸೆಪಟ್ಟು, ಶಾಂತಿಸಾಧನೆಗಾಗಿ ಒಂದು ಉಪಾಯವನ್ನು ಸೂಚಿಸಿದ್ದಾರೆ. ಎಲ್ಲ ರಾಜಕೀಯ ಪಕ್ಷದ ಕೆಲಕೆಲ ಪ್ರಮುಖರನ್ನು ಒಂದುಕಡೆ ಕೂಡಿಸಿ ವೈಸ್ರಾಯರು ಅವರೊಡನೆ ಚರ್ಚಿಸಿ ಮುಂದಣ ಕ್ರಮವನ್ನು ನಿರ್ಧರಿಸಬೇಕೆಂದು ಇವರುಗಳೆಲ್ಲಾ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕಾಗಿ ಪಂಡಿತ ಮದನಮೋಹನಮಾಳವ್ಯನವರು ೧೦-೧೨ ದಿನಗಳಿಂದಲೂ ಸಾಧ್ಯಸ್ಥಿಗೆಗಾಗಿ ಹೆಣಗಾಡಿದರು. ಕಾರಾಗೃಹಕ್ಕೆ ಹೋಗಿ ೨ ಸಲ ಸಿ. ಆರ್. ದಾಸರನ್ನು ಕಂಡು ಮಾತನಾಡಿ ಬಂದರು. ಗಾಂಧಿಯವರೊಡನೆ ತಂತಿಯಮೂಲಕ ಸಂಭಾಷಣೆಮಾಡಿ ತಿಳಿದರು. ಪದೇಪದೇ ವೈಸ್‌ರಾಯರೊಡನೆ ಪ್ರಸ್ತಾಪಿಸಿದರು. ತಾ|| ೨೪ ರಲ್ಲಿ ಮಾಳವ್ಯರವರೂ ಜಮುನದಾಸ್ ದ್ವಾರಕದಾಸರೂ ಗಾಂಧಿಯವರನ್ನು ಬೊಂಬಾಯಿಯಲ್ಲಿ ಕಂಡು ಮಾತನಾಡಲು ಏರ್ಪಡಿಸಿಕೊಂಡಿದ್ದರು. ಸಿ. ಆರ್. ದಾಸರೂ ಗಾಂಧಿಯವರೂ ತಂತ್ರಿವಾರ್ತೆಗಳ ಮೂಲಕವೇ ಸಂಭಾಷಿಸಿಕೊಂಡಿರುವರು. ಕಳೆದ ತಾ|| ೨೧ರ ಬೆಳಿಗ್ಗೆ ಪಂಡಿತ ಮದನಮೋಹನಮಾಳವ್ಯ ಆನಿಬೆಸಂಟಮ್ಮ ಸರ್ ಎಂ. ವಿಶ್ವೇಶ್ವರಯ್ಯನವರೇ ಮೊದಲಾದ ೧೭ಮಂದಿಗಳು ವೈಸ್‌ರಾಯರ ಸಂದರ್ಶನಕ್ಕೆ ಹೋಗಿದ್ದು ಈಗ ನಿರ್ಬಂದಿಸಲ್ಪಟ್ಟಿರುವವರನ್ನೂ ಶಿಕ್ಷಿತರಾಗಿರುವವರನ್ನೂ ಬಿಡಿಸಿ, ನಿರ್ಬಂಧಾಜ್ಞೆಗಳನ್ನೂ ಉಪಸಂಹರಿಸಿ, ಎಲ್ಲ ಪಕ್ಷದವರನ್ನೂ ಬರಮಾಡಿಕೊಂಡು ಒಂದು ಸಭೆಗೂಡಿಸಿ, ಮುಂದಣ ಕಾರ್ಯಕ್ರಮವನ್ನು ನಿರ್ಧರಿಸುವಂತೆ ಮಾಡಬೇಕೆಂದು ಬಿನ್ನಯಿಸಿಕೊಂಡರು. ಮುಂದಾಗಿ ನಿರ್ಬಂಧಾಜ್ಞೆಗಳನನ್ನೆಲ್ಲಾ ನಿಲ್ಲಿಸಿ ಶಿಕ್ಷಿತರನ್ನೆಲ್ಲಾ ಬಿಡಿಸಿ ಸಭೆಗೂಡಿಸುವ ವಿಷಯಕ್ಕೆ ವೈಸ್‌ರಾಯರು ಒಪ್ಪಲಿಲ್ಲ. ಆದರೆ ಅಂಥ ಸಭೆಕೂಡಿಸುವುದಕ್ಕೇನೋ ಒಪ್ಪುವೆವೆಂದೂ, ಮನಃಪೂರ್ವಕವಾಗಿಯೂ ಬಹಿರಂಗವಾಗಿಯೂ ಪ್ರಜೆಗಳು ಶಾಸನೋಲ್ಲಂಘನೆಮಾಡುತ್ತಿರುವಾಗ, ಅದನ್ನು ಮೊದಲು ನಿಲ್ಲಿಸುವುದಕ್ಕೆ ರಾಯಭಾರಿಗಳು ಯಾವ ಬರವಸೆಯನ್ನೂ ಕೊಡದಿರುವಾಗ ತಾವಾಗಿ ಶಿಕ್ಷಿತರನ್ನೆಲ್ಲಾ ಬಿಡಿಸುವ ಕೆಲಸವನ್ನು ಮಾಡಿಸಿ ಸಭೆಗೂಡಿಸುವುದು ಅಸಾಧ್ಯವೆಂದು ಹೇಳಿಬಿಟ್ಟರು. ಆದರಮೇಲೆ ಹೋಗಿದ್ದ ರಾಯಭಾರಿಗಳೆಲ್ಲಾ ಯಥಾಮಾರ್ಗವಾಗಿ ಹಿಂದಿರುಗಿಬಂದರು. ಇಂಥ ಸಮಾವೇಶಮಾಡಿಸುವುದಕ್ಕೆ ಮಿತವಾದಿಗಳಿಗೂ ಪ್ರಭುತ್ವದವರಿಗೂ ಅಪೇಕ್ಷೆಯಿದ್ದರೂ, ಅಸಹಾಯವಾದಿಗಳಿಗೆ ಇಷ್ಟವಿಲ್ಲ. ಮಾಳವ್ಯ ಮೊದಲಾದವರು ಬರೀ ಭ್ರಮೆಯಿಂದ ಓಡಾಡಿದರು. ಒಂದುವೇಳೆ ಸಮಾವೇಶವು ನಡೆದಿದ್ದರೂ ಅದರಿಂದ ಸಂಪೂರ್ಣ ಫಲವಾಗುತ್ತಿದ್ದಿತೆಂದು ಹೇಳಲಾಗುವುದಿಲ್ಲ. ಏಕೆಂದರೆ-ಅಸಹಾಯವಾದಿಗಳಿಗೆ ತತ್‌ಕ್ಷಣ ಸ್ವರಾಜ್ಯವು ಕೈಗೆ ಸಿಕ್ಕದಲ್ಲದೆ ಅವರು ಶಾಂತರಾಗುವ ಹಾಗಿಲ್ಲ. ಅದನ್ನು ಕೊಡುವುದು ಭಾರತಪ್ರಭುತ್ವದವರ ಅಧೀನದಲ್ಲಿಲ್ಲ. ಪಾರ್ಲಿಮೆಂಟೇ ಅದಕ್ಕೆ ಅಧಿಕಾರಿಯು ಶ್ರೀಮತ್ ಯುವರಾಜರು ಈ ದೇಶಕ್ಕೆ ದಯಮಾಡಿಸಿರುವಾಗ ಬೇಕೆನ್ನುತ್ತಲೇ ಅವರಿಗೆ ಅಪಮಾನಪಡಿಸಬೇಕೆಂದು ಹರತಾಳಕ್ಕೆ ಆರಂಭಿಸಿರುವ ಅಸಹಾಯವಾದಿಗಳಿಗೆ ದೇಶಶಾಂತಿ ಬೇಕಾಗಿಲ್ಲ. ಅವರ ಯತ್ನಗಳಿಂದ ದೇಶಕ್ಕೆ ಸ್ವರಾಜ್ಯವೂ ಶಾಂತಿಯೂ ದೂರಗತವಾಗುವ ಲಕ್ಷಣವೇ ಬಲಪಡುತ್ತಿವೆ ಮ|| ಗಾಂಧಿಯವರ ಪಕ್ಷದ ಅಸಹಾಯವಾದಿಗಳೆಲ್ಲಾ ಹರತಾಳ ಶಾಸನೋಲ್ಲಂಘನ ಮೊದಲಾದ ಕಾರ್ಯಗಳನ್ನು ಇನ್ನೂ ಬಲಪಡಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಯುವರಾಜರು ಕಲ್ಕತ್ತಾಕ್ಕೆ ದಯಮಾಡಿಸುವ ೨೪ನೆ ತಾರೀಖಿನ ದಿನ ಆ ಪಟ್ಟಣದಲ್ಲಿ ಸಂಪೂರ್ಣವಾದ ಹರತಾಳವನ್ನು ಎಲ್ಲರೂ ಆಚರಿಸಿ, ದೇಶೀಯರೆಲ್ಲರೂ ಕಾರಾಗೃಹವನ್ನು ತುಂಬಿಕೊಳ್ಳಬೇಕೆಂದು ಗಾಂಧಿಯವರು ಅಪ್ಪಣೆಮಾಡುತ್ತಿದ್ದಾರೆ. ಅಸಹಾಯವಾದಿಪಕ್ಷ ಪ್ರಭುತ್ವಪಕ್ಷಗಳ ಮಧ್ಯದಲ್ಲಿ ಹೀಗೆ ಸಂಘರ್ಷಣವು ದಿನದಿನಕ್ಕೆ ಬಹುತೀಕ್ಷ್ಣವಾಗುತ್ತಿದೆ. ಪರ್ಯವಸಾನವು ಜಗದೀಶ್ವರನಿಗೇಗೊತ್ತು.

THE BANGALORE CITY MUNICIPALITY.

At long last the President of the Municipality has been appointed by Government and the selection has fallen on Mr. Sirsi Ananda Rao, Deputy Commissioner of Tumkur, who is known for his integrity and independence. Amongst the officers of Government the choice could not have fallen on a better person. But after all it is a retrograde policy open to objection by the public who are unaware of the real conditions of the Municipal affairs. Government who are fully aware of the wretchedness of its work brought on by successive neglect of the last two administrations which carried more honor and gloss than hard work and intimate knowledge of the civic responsibilities, have done the best that could possibly have been done in the interests of the Municipal administration. All that we can say is that we hope that this would only be a temporary measure and that the franchise will again be availed of.

We would, however, like to say a word on the circumstances which forced the hands of Government to take this step, notwithstanding that enough and more has already been said and written about the fiasco of President's election to the Bangalore City Municipality. We do not want to discuss the relevant or irrelavant matters referred to in the volume of correspondence which appeared in the Bangulore Daily Post and the Mysore Sampadabhyudaya. We would like to refer to one or two points of general interest and be done with the subject. This incident has clearly pointed out what powerful connections in interests could do. Round Mr. Garudachar were fastened up so many individual interests of Brahmans wholly compleetely and sacredly, and of Mussalmans, Vakkaligars, Lingayets, Visvays, Christians etc., to an extent only partially, incompletely and wordily and of others ignorantly that he was the hero of the 19 members of the Council. But it would be interesting to know how they came to rally round him so heroically. Leave the ten Brahmans who are solidly for nothing but Brahman oligarchy, for nothing but pure blood, for nothing but words to celebrate their good intentions-action being in another direction-and others are individualy split up. Each case is by itself standing on its own history, and is perhaps interesting to examine. But it is not our business.

We would only point out that such attitude in the Municipal affairs is now-a-days not confined to Bangalore city. The Municipalities elsewhere have become realy boisterous, and that shows the awakening of the day. For instance look at that passage at arms between the chairman of the Madura Municipality Mr. Tulasiram and Mr. R S. Naidoo Bat-at-law on the 12th instant. That pitch has not yet reached in our Councils. The attitude of the 8 members was to avoid such scenes in future Concil meetings. Was this not wisdom? Beyond all doubt.

The Sampadabhyudya of Mysore-a purely Brahman organ-has been defending naturaly an oligarchy which it would wish to have. The communicated article in its issue of the 17th instant in criticising the conduct of the absentee members recommends to Government "to ask these absentees to resign their places in order that more efficient and self sacrificing members may, with better results, find their seats on the Council." What are the better results alluded to ? To say "Ditto" to what the late Hon. President would say. To worship him. To flatter him. To vote for him. To go on deputation on his behalf in the face of the Regulation on the point. What is more efficient and self sacrificing work? Do relations of a President do it? Do Brahman oligarchy do it? Do persons who are otherwise interested in the President do it? No. Well! The minority did what was best and what was legitimate. It acted according to its conviction. We would like here to quote the words of Mr. Ramachandra Rao in the Madras Legislative Council on the 16th instant in connection with the passing of a bill to amend the District Municipalities Act and the Madras Local Board-Act to make it obligatory on the members of those Bodies to take the oath of allegiance to the Crown. He said "Let me assure my friends opposite if suitable facilities and opportunities are not given to us, the only thing open to minorities in Parliaments such as this, is to use every opportunity which they have under the *rules* to criticise, to block up, to obstruct and to bring every possible pressure upon the Government to adopt more reasonable methods." This is just what the opposition in minority in the Bangalore City Municipal Council has done. Its action was not unauthorised by Regulation. It was legitimate and it declared by absence what its attitude towards the proceedings was. It was the last and the only possible method which it could have adopted to defeat the object of a clique and to thus bring to the notice of Government the real state of affairs in the Municipality and thereby to bring pressure upon the Government to adopt a reasonable course in appointing a President who would in the interests of the Municipal administration be desirable. The appointment of Mr. Ananda Rao Sirsi is such.

Here is a lesson for the voters to note and note it in the exercise of this right in future. They must look to persons who have the great and general interests of the public and not of one class whose desire for power has become intolerable. It is in the air that the ex-President is contemplating to resign his seat in the Council and that he is in that view backed up by persons whose influence is considerable. We deprecate any action of this kind. It would take the form of a "strike" and that a gentleman of the stamp of Mr. Garudachar would not take.

OUR SAINTLY MAHARAJAH.

Here are the prophetic words of our Patriot Maharaja—which His Highness as the Royal Chancellor of the Benarese University expressed and they are soul purifying, inspiring and stirring.

"A Hindu University must prove itself equal to one more crucial test. The foundations of the old order, like the very foundations of the deep, are being broken up today, all over the world. Revolutionary doctrines, economic, social, political, educational are being spread everywhere under a hundred different guises and names and under a hundred banners. Everywhere there is spreading an under current of revolt against order, progress and reform. The old hope and faith, the old wisdom and charity are being forsaken and forsworn. This is the great agony to-day, the agony of the world." Comment on these words of a sage Maharaja—holy in words, holy in action and holy in life—are superfluous. They are full in meaning, full in advice, full in earnestness, full in sympathy and full in all that is sacred for man in this life and at this time of transition.

And the magnificent peroration. "Our Hindu University cannot serve unless she contributes to the re-construction of life and social order in the India of to-day, she must quicken what is inert, illumine what is dark, rejuvenate what is old and withered. And even as the Eternal city, in which she has her home, is to the pious Hindu the meeting place of the Earth and Heaven, so must the University of Benarese stand as the bridge between Past and Present, between Old and New and with the Holy River at her side, link the India of the Vedic times with the India of the morrow that is to be."

Could any words carry more truth and could they have been spoken out from the bottom of a more sincere heart and with greater earnestness in the welfare of India? These words of the Saint Maharaja must go from mouth to mouth throughout India, from day to day to posterity and into all languages and dialects of India.

And we are the happiest people in India to call this Saint Maharaja our own Beloved Maharajah.

THE VEERASIVA ACTIVITIES AT BANGALORE.

In another place are published the proceedings in Canarese of the Young Men's Veerasiva Association which is started at Bangalore its objects being to consolidate the work of similar assosiations in the State and to start associations on the same lines at important Veerasiva centres which have none at present. The young men of to-day are the workers of the country to-morrow. Unless the vision is set right from now, it will not be easy to regulate the proper angle tomorrow. We are to-day paying penalty for having neglected in the past to organise such associations all over the country. The young minds are terribly disturbed by the non-Co-operators from outside the State and a consolidating Institution of this kind to steady down the minds of the young people is greatly wanted. We hope that every Veerasiva of vigorous mind will be its member and will work to rally round this association every young man. We have no doubt that before long thousands of names will be on the register of membership. Every student of the High School and College classes should enroll himself as its member which alone would be responsible for a thousand membership to which the Middle School classes in the Province could contribute six thousand members. We should invite the attention of every Veerasiva reader of this paper to become a member of this Institution and to draw the attention of every other Veerasiva gentleman or student whom he knows to similarly become a member. The strength of the members will indicate the strength of the cause for which this Association is started.

Another Institution has at the same time been started and this is a "Sivayoga Mandira" for the development of the spiritual mind of the young Veerasiva Sanyasins. This is another neglected subject to which now serious attention is invited. It need hardly be said that the Veerasiva religion which has discarded the "Karma" portion of the vedic religion and retains as essential the "Gnana" portion should afford to neglect a training without which it cannot justify its existence. A Sivayogamandiram will train select class of youngmen to devote their lives to the development of the spiritual essence of the religion. No two opinions there can be in respect of this matter.

The Young Men's Veerasiva Associations all over the State and a Sivayogamandira for the state at a place like Bangalore should necessarily bring to light the great virtues of the Veerasiva religion which is to Hinduism what Puritanism was to Christianity. We wish that all success may attend these two Institutions.

ಒಳದೇಶದ ವೃತ್ತಾಂತಗಳು.

ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಕಲ್ಕತ್ತಾ ವಿದ್ಯಾಪೀಠದವರು ಡಾಕ್ಟರ್ ಆಫ್ ಸೈನ್ಸ್ ಎಂಬ ಬಿರುದನ್ನು ಕೊಟ್ಟರು.

ತಾ|| ೨೬-೨೭-೨೮ ರಲ್ಲಿ ಬೆಂಗಳೂರು ವಾಣೀವಿಲಾಸ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಸಂಬಂಧವಾದ ಪ್ರದರ್ಶನವು ನಡೆಯುವುದು.

ಮಲಬಾರಿನ ಮಾಪಿಳ್ಳೆಗಳು ಮೈಸೂರುದೇಶದ ಗುಂಡ್ಲುಪೇಟೆ ತಾಲ್ಲೂಕಿಗೆ ಪ್ರವೇಶಮಾಡಿದ್ದಾರೆಂದು ಸುದ್ದಿಯಿದೆ. ನಮ್ಮ ಪ್ರಭುತ್ವದವರು ತಕ್ಕ ಬಂದೋಬಸ್ತನ್ನು ಮಾಡದೆ ತಪ್ಪಲಾರರು.

ಶ್ರೀಮನ್ಮಹಾರಾಜರು ಕಾಶಿಯ ಕೆಲಸವನ್ನು ಮುಗಿಸಿಕೊಂಡು ಕಲ್ಕತ್ತಾಕ್ಕೆ ದಯಮಾಡಿಸಿ ೨ ದಿನಗಳಿದ್ದು ಮೊನ್ನೆ ಬೆಂಗಳೂರಿಗೆ ದಯಮಾಡಿಸಿದರು; ನಿನ್ನೆ ರಾಜಧಾನಿಗೆ ಚಿತ್ತೈಸುವವರಾಗಿದ್ದರು.

೧ನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜಿಯವರು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ದಯಮಾಡಿಸಿ, ಅಲ್ಲಿಯ ಭದ್ರಾವತಿಯ ಕಬ್ಬಿಣದ ಯಂತ್ರಾಲಯಕ್ಕೆ ಸಂಬಂಧಪಟ್ಟ ಕಾರ್ಯಗಳನ್ನೆಲ್ಲಾ ಪರಾಮರಿಸಿಕೊಂಡು ಬೆಂಗಳೂರಿಗೆ ಬಂದರು.

ರಾಜಧಾನಿಯ ನಿಲ್ದಾಣದಲ್ಲಿ ಏರ್ಪಡಿಸಿದ್ದ ಪ್ಲಾಟ್‌ಫಾರಂ ಟಿಕೆಟ್ ನಿರ್ಬಂಧವನ್ನು ಶಿವಮೊಗ್ಗಾ, ಭದ್ರಾವತಿ, ತರೀಕೆರೆ, ಚೆನ್ನಪಟ್ಟಣ, ಮದ್ದೂರು ನಿಲ್ದಾಣಗಳಿಗೂ ಮುಂದಣ ಜನವರಿಯಿಂದ ಅನ್ವಯಿಸುವಂತೆ ಸರ್ಕಾರದಪ್ಪಣೆಯಾಗಿದೆ.

ಶ್ರೀಮತ್ ಪ್ರಿನ್ಸ್ ಆಫ್ ವೇಲ್ಸರವರ ಆಗಮನಕಾಲಕ್ಕಾಗಿ ಏರ್ಪಡಿಸಿರುವ ಕೆಡ್ಡಾಕ್ಕೆ ಈಗಾಗಲೇ ೩೨ ಕಾಡಾನೆಗಳು ಬಿದ್ದಿವೆಯೆಂದು ಕೇಳುತ್ತೇವೆ. ಅವರು ದಯಮಾಡಿಸುವವರೆಗೂ ಅವನ್ನು ಅಲ್ಲೇ ಕೂಡಿಟ್ಟಿದ್ದು, ಅವರ ಪ್ರತ್ಯಕ್ಷದಲ್ಲಿ ಕಟ್ಟಿಹಾಕಿ ಸ್ವಾಧೀನಪಡಿಸಿಕೊಳ್ಳುವ ಕಾರ್ಯವು ಜರಗುವುದು.

೧ನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜಿಯವರು ಈ ದೇಶದ ಅಧಿಕಾರದವಧಿಯು ಮುಗಿದಕೂಡಲೇ ತಮ್ಮ ಬ್ರಿಟಿಷ್ ಇಂಡ್ಯಾ ಸರ್ವೀಸಿಗೆ ಹೋಗುವವರಾಗಿದ್ದಾರೆಂದು ಸುದ್ದಿಯಿದೆ. ಇಂಥ ಶಕ್ತರನ್ನು ಕಳೆದುಕೊಂಡರೆ ನಮ್ಮ ಸಂಸ್ಥಾನದ ತೂಗಡಿಸುತ್ತಿರುವ ಮತ್ತು ದರ್ಪಹೀನವಾಗಿರುವ ಕಾರ್ಯಗಳು ಇನ್ನೂ ಚೆನ್ನಾಗಿ ಮಲಗಿ ನಿದ್ರೆಹೋಗಬಹುದು.

ಬರುವ ಜನವರಿಯಿಂದ ನಮ್ಮ ದೇಶದ ಹೊಗೆಬಂಡಿಯ ಮೇಲೆ ಸಾಗಿಸಲ್ಪಡುವ ಪದಾರ್ಥಗಳಮೇಲೆ ಎಂದರೆ ಸವಿದೆ, ಆಹಾರಧಾನ್ಯಗಳ ಹೊರತು ಉಳಿದ ವಸ್ತುಗಳಮೇಲೆಲ್ಲಾ ಈಗ ತೆಗೆದುಕೊಳ್ಳಲ್ಪಡುತ್ತಿರುವ ಬಾಡಿಗೆಯಮೇಲೆ ರೂಪಾಯಿಗೆ ೨|| ಆಣೆಯಂತೆ ಹೆಚ್ಚಾಗಿ ಬಾಡಿಗೆಯು ವಿಧಿಸಲ್ಪಡುವುದು. ಎಂ. ಎಸ್. ಎಂ. ರೈಲ್ವೆಕಂಪನಿಯವರೂ ಹೀಗೆಯೇ ಹೆಚ್ಚುಮಾಡಿದ್ದಾರೆ.

ರಾಜಧಾನಿಯ ಪ್ರಸಿದ್ಧ ಜವಾಹಿರಿ ವರ್ತಕರಾದ ಮ|| ಕಾವೇರಿಪಟ್ಟಣಂ ಸುಬ್ರಾಯಸೆಟ್ಟರ ಮಗ ಮ|| ಕೆ. ಎಸ್. ರಾಮಯ್ಯಸೆಟ್ಟರು ಕಳೆದ ತಾ|| ೨೧ ರಲ್ಲಿ ನೂತನವಾಗಿ ಜವಳಿಯಂಗಡಿಯನ್ನಿಟ್ಟು ಅಧಿಕಾರಿಗಳನ್ನೂ, ಮ್ಯು|| ಕೌನ್ಸಿಲರುಗಳನ್ನೂ ಆಹ್ವಾನಿಸಿ ಗಂಧಪುಷ್ಪ ತಾಂಬೂಲ ವಿನಿಯೋಗದಿಂದ ಸತ್ಕರಿಸಿದರು. ಮ|| ಸೆಟ್ಟರ ನೂತನ ವ್ಯಾಪಾರವು ಅಭಿವೃದ್ಧಿಯಾಗಲೆಂದು ಕೋರುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನಿಂದ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಮೆಂಬರನ್ನು ಆರಿಸಿ ಕಳುಹಿಸುವುದಕ್ಕಾಗಿ ಕಳೆದ ತಾ|| ೨೪ ರಲ್ಲಿ ಕೌನ್ಸಿಲ್ ಮೀಟಿಂಗು ನಡೆದು ಉಮೇದುವಾರರಾಗಿ ನಿಂತಿದ್ದ ಮ|| ಎ. ಪಿ. ಬಾವಾಜಿಯವರಿಗೆ ೧೪ ಓಟುಗಳೂ ಮ|| ಪಿ. ಎಸ್. ಅನಂತರಾಯರಿಗೆ ೮ ಓಟುಗಳೂ ಬಂದುದರಿಂದ ಮ|| ಬಾವಾಜಿಯವರು ಡಿ|| ಬೋರ್ಡುಮೆಂಬರಾಗಿ ಹೋಗಲು ಗೊತ್ತುಮಾಡಲ್ಪಟ್ಟರು.

ಬೆಂಗಳೂರು ಮ್ಯುನ್ಸಿಪಾಲಿಟಿಗೆ ಇದುವರೆಗೆ ತುಮಕೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಾಗಿದ್ದ ಮ|| ಸಿರ್ಸಿ ಆನಂದರಾವ್ ಬಿ.ಎ., ಎಲ್.ಎಲ್.ಬಿ., ಯವರು ಪ್ರೆಸಿಡೆಂಟರಾಗಿ ಸರ್ಕಾರದವರಿಂದ ನಿಯಮಿಸಲ್ಪಟ್ಟರು. ತಕ್ಕವರನ್ನೇ ಸರ್ಕಾರದವರು ಆರಿಸಿದರು. ಇವರು ೧ ವರ್ಷಕಾಲದ ವರೆಗೆ ನಿಯಮಿತರಾಗಿರುವರು. ಅನಂತರ ಮತ್ತೆ ಎಲಕ್ಷನ್ನಿಗೆ ಅವಕಾಶಕೊಡಬಹುದು. ಸರ್ಕಾರದ ಉದ್ಯೋಗಿಗಳು ಪ್ರೆಸಿಡೆಂಟರಾದುದರಿಂದ ಚೀಫ್ ಆಫೀಸರ ಸ್ಥಾನವನ್ನು ತೆಗೆದುಬಿಟ್ಟು ವೈಸ್‌ಪ್ರೆಸಿಡೆಂಟರ ಎಲಕ್ಷನ್ನಿಗೆ ಮತ್ತೆ ಅವಕಾಶವನ್ನು ಸರ್ಕಾರದವರು ಕೊಟ್ಟಿದ್ದಾರೆ, ಮತ್ತು ಅಲ್ಲಿಯ ಕೌನ್ಸಿಲರುಗಳ ಸಂಖ್ಯೆಯನ್ನು ೨೮ ರಿಂದ ೩೦ಕ್ಕೆ ಹೆಚ್ಚಿಸಿದರು.

ರಾಜಧಾನಿಯ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕಸಭಾ ಲಿಮಿಟೆಡ್‌ರವರು ಕಳೆದ ಶನಿವಾರ ರಾಜಧಾನಿಯ ಟರ್ಫ಼ಹಾಲಿನಲ್ಲಿ ವಿರಾಟಪರ್ವವೆಂಬ ಮಹಾಭಾರತದಲ್ಲುಕ್ತವಾಗಿರುವ ಪಾಂಡವರ ಅಜ್ಞಾತವಾಸದ ಕಥಾಭಾಗವನ್ನು ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ಹೆಚ್ಚಾಗಿದ್ದಿತು. ಸಭೆಯವರು ಸೋಫಾ ಕುರ್ಚಿ ಬೆಂಚು ಮೊದಲಾದ ಆಸನಗಳನ್ನು ಸ್ವಂತವಾಗಿ ಏರ್ಪಡಿಸಿಕೊಂಡಿರುವುದರಿಂದ ಆ ರಾತ್ರಿಯ ಸ್ಥಳಾನುಕೂಲತೆಯೂ ಇತರ ಏರ್ಪಾಟುಗಳೂ ಬಹಳ ತೃಪ್ತಿಕರವಾಗಿದ್ದುವು. ಪ್ರತಿಯೊಂದು ಪಾತ್ರದವರೂ ಉತ್ತಮವಾಗಿ ಅಭಿನಯಿಸಿದರಲ್ಲದೆ ದ್ರೌಪದಿಯ ಪಾತ್ರವನ್ನು ವಹಿಸಿದ್ದ ಮ|| ಎನ್. ಸುಬ್ಬಣ್ಣನವರು ವ್ಯಾಮೋಹಿತನಾದ ಕೀಚಕನ ಅಭಿಲಾಷೆಯನ್ನು ತಿರಸ್ಕರಿಸುವ ಕಾಲದಲ್ಲೂ ಬಲಾತ್ಕರಿಸಿ ಹಿಡಿದುಕೊಳ್ಳಲು ಬೆನ್ನಟ್ಟಿ ಬರುವಾಗ ದ್ರೌಪದಿಯು ವಿರಾಟನಸಭೆಗೋಡಿಬಂದು ನೆಲದಮೇಲೆ ಅಂಗಲಾಚಿಬಿದ್ದುದೂ ನೋಟಕರ ಮನಸ್ಸನ್ನು ಕರಗಿಸಿ ಭ್ರಮಿತರನ್ನಾಗಿ ಮಾಡತಕ್ಕುದಾಗಿದ್ದಿತು. ಇವರ ಸ್ವಭಾವವಾದ ರೂಪಲಾವಣ್ಯವು ಇವರ ಪರಿಚಿತರಿಗೂ ಕೂಡ ಸ್ತ್ರೀ ಪಾತ್ರವನ್ನು ವಹಿಸಿದ ವೇಳೆಯಲ್ಲಿ ಪುರುಷನೆಂದು ಗುರ್ತಿಸುವುದು ಸಾಧ್ಯವಲ್ಲವು. ಮತ್ತು ಕಾಲಕ್ಕೂ ಪಾತ್ರಕ್ಕೂ ತಕ್ಕಾಭಿನಯವನ್ನು ಇವರಂತೆ ಮಾಡುವವರು ಬಹಳ ವಿರಳ. ದೊಡ್ಡ ಶ್ರೀಮಂತರು, ವಿದ್ಯಾವಂತರು ಕಲಾಭಿರುಚಿಯುಳ್ಳವರು ಆದವರುಗಳಿಂದ ಷೇರುಗಳನ್ನು ಕೊಟ್ಟು ಲಿಮಿಟೆಡ್ ಕಂಪೆನಿಮಾಡಿ ಡೈರೆಕ್ಟರುಗಳಾಗಿ ನಿಂತು ಈ ಸಭೆಯನ್ನು ನಡಿಸುತ್ತಿರುವುದರಿಂದ ಇದು ಚ್ಯುತಿಯಿಲ್ಲದೆ ಅದ್ವಿತೀಯವಾಗಿ ನಡೆಯುತ್ತೆಂಬುದರಲ್ಲಿ ಸಂದೇಹವಿಲ್ಲವು. ಇನ್ನೂ ೧-೨ ವಾರಗಳವರೆಗೆ ಟರ್ಫ಼ಹಾಲ್ ಬಿಡುವಾಗಿರುವುದಿಲ್ಲವಾದುದರಿಂದ ಈ ಸಭೆಯವರು ನಾಟಕವನ್ನಾಡಲು ಎತ್ನವಿಲ್ಲವಾಗಿದೆ.

ಸುವರ್ಣಕಲ್ಪನೆ.

ಮೂಲಲೋಹಗಳಲ್ಲಿ ಒಂದಾದ ಸುವರ್ಣವು ಭೂಗರ್ಭದಲ್ಲಿ ಸಿಕ್ಕುವುದು ಬಹಳ ಕಡಿಮೆಯಾಗಿರುವುದರಿಂದಲೂ, ಅದರ ಕಾಂತಿಯು ಇತರ ಲೋಹಗಳಿಗಿಂತ ಉತ್ಕೃಷ್ಟವಾಗಿರುವುದರಿಂದಲೂ ಅದರ ಬೆಲೆಯು ಹೆಚ್ಚಿಕೊಂಡು, ನಾಣ್ಯಾದಿಗಳಿಗೂ ಆಭರಣಗಳಿಗೂ ಆ ಲೋಹವು ಉಪಯೋಗಿಸಲ್ಪಡುತ್ತಿರುವುದುಂಟಷ್ಟೆ. ಇದನ್ನು ರಸಬಂಧನದಿಂದಲೂ ತಾಮ್ರಶುದ್ಧಿಯಿಂದಲೂ ನಿರ್ಮಿಸಬಹುದೆಂಬ ಭ್ರಮೆಯಿಂದ ನಮ್ಮ ಭಾರತೀಯರನೇಕರು ವಾದ ಮಾಡಿಮಾಡಿ ಬೇಸತ್ತುಹೋಗಿರುವರು. ಆದರೆ ಜರ್ಮನಿಯ ರಸಾಯನ ಶಾಸ್ತ್ರಜ್ಞನಾದ ಒಬ್ಬಗೆಯನು ಭಂಗಾರವನ್ನು ಇತರ ಸಾಮಾನ್ಯ ಲೋಹಗಳಿಂದ ನಿರ್ಮಿಸುವ ವಿಧಾನವನ್ನು ಕಂಡುಹಿಡಿದು ಕೃತಾರ್ಥನಾಗಿದ್ದಾನಂತೆ. ಈತನು ಪ್ರತ್ಯಕ್ಷವಾಗಿ ಮಾಡಿ ತೋರಿಸಿದುದನ್ನು ಪ್ರೊಫೆಸರ್ ಇರ್ವಿಂಗ್ ಫಿಷರ್ ಎಂಬುವರು ಕಣ್ಣಾರ ಕಂಡು ಅದನ್ನು ಲಂಡನ್ ಪಟ್ಟಣದಲ್ಲಿ ವಿವರಿಸಿ ಹೇಳಿದ್ದಾರೆ.

ಈ ಜರ್ಮನ್ ರಸಾಯನ ಶಾಸ್ತ್ರಜ್ಞನು ಒಬ್ಬ ಫ್ರೆಂಚ್ ಶಾಸ್ತ್ರಜ್ಞನ ಶಿಷ್ಯನಂತೆ. ಇವನಿಗೆ ಇತರ ವಸ್ತುಗಳನ್ನು ನಿರ್ಮಿಸುವಂತೆಯೇ ಭಂಗಾರವನ್ನೂ ನಿರ್ಮಿಸಬಹುದೆಂಬ ನಂಬುಗೆಯು ಪೂರ್ಣವಾಗಿದ್ದಿತಂತೆ. ಇದರ ಸಿದ್ಧಿಗಾಗಿ ಈತನು ೧೪ ವರ್ಷ ಕೆಲಸಮಾಡಿ ತನ್ನ ಸರ್ವಸ್ವವನ್ನೂ ಕಳೆದುಕೊಂಡು, ಕಡೆಗೆ ಪಾದರಸದಿಂದ ಭಂಗಾರವನ್ನು ನಿರ್ಮಿಸುವ ವಿಧಾನದಲ್ಲಿ ಜಯಶೀಲನಾದನು. ಈತನ ಹೆಸರು ಬಾಂಡು ಎಂಬುದಾಗಿ. ಈತನು ತನ್ನ ಗುರುವಾದ ಫ್ರೆಂಚ್ ಶಾಸ್ತ್ರಜ್ಞನೊಡನೆ ಕೂಡಿ ಕೆಲಸಮಾಡಿ ಇನ್ನು ೩ ವಾರಗಳೊಳಗಾಗಿ ಬೆಸ್ಲಾಟರ್ ಪಟ್ಟಣದಲ್ಲಿ ಬೇಕಾದಷ್ಟು ಭಂಗಾರವನ್ನು ನಿರ್ಮಿಸಿಕೊಡುವುದಾಗಿ ಹೇಳುತ್ತಿರುವನಂತೆ. ನಿನ್ನೆಯ ದಿನ ಈತನು ಸ್ವತಃ ನಿರ್ಮಿಸಿದ ಭಂಗಾರವನ್ನು ಲಂಡನ್ ಡೇಲಿ ಎಕ್ಸ್‌ಪ್ರೆಸ್ ಪತ್ರಿಕಾಪ್ರತಿನಿಧಿಗೆ ತೋರಿಸಿದನೆಂದು ಆ ಪತ್ರಿಕೆಯು ಹೇಳಿಕೊಂಡಿರುತ್ತದೆ. ರಸದಿಂದ ಭಂಗಾರವನ್ನು ನಿರ್ಮಿಸುವ ಈ ವಿಧಾನದಲ್ಲಿ ರೇಡಿಯಂ ಎಂಬ ಅತ್ಯಮೌಲ್ಯವಾದ ಲೋಹವು ಕೂಡ ಸ್ವಲ್ಪ ದೊರೆಯುವುದೆಂಬುದು ಮತ್ತಷ್ಟು ಅದ್ಭುತವಾಗಿದೆ. ಈ ಸುದ್ದಿಯನ್ನು ಕೇಳಿ ಒಬ್ಬ ಆರ್ಥಿಕ ಶಾಸ್ತ್ರಜ್ಞನು ಹೀಗೆ ನುಡಿದನಂತೆ—ಪ್ರಪಂಚದಲ್ಲೆಲ್ಲಾ ಈಗ ಭಂಗಾರದ ನಾಣ್ಯವು ಬಳಕೆಯಲ್ಲಿರುವುದು. ಇನ್ನು ವಿಪರೀತವಾಗಿ ಭಂಗಾರವನ್ನು ನಿರ್ಮಿಸುವುದಾದರೆ ಆರ್ಥಿಕಸ್ಥಿತಿಯೆಲ್ಲಾ ತಾರುಮಾರಾಗುವುದು. ಪ್ರಪಂಚದ ಚಿನ್ನದಲ್ಲಿ ಹೆಚ್ಚು ಭಾಗವು ಅಮೇರಿಕಾದಲ್ಲೇ ಇರುವುದು. ಅದೆಲ್ಲಾ ವ್ಯರ್ಥವಾಗುವುದು. ಆಭರಣಗಳ ಬೆಲೆಯು ಇಳಿದುಹೋಗುವುದು. ಭಂಗಾರವು ಕೂಡ ಕಬ್ಬಿಣ, ಸೀಸ, ತಾಮ್ರ ಮೊದಲಾದುವುಗಳಂತೆ ಸಾಮಾನ್ಯ ಲೋಹವಾಗುವುದು. ಆಗ್ಗೆ ಪ್ಲಾಟಿನಂ ಮೊದಲಾದ ಇನ್ನಾವ ದುರ್ಲಭ ಲೋಹವನ್ನಾಗಲಿ ನಾಣ್ಯಗಳಿಗೆ ಉಪಯೋಗಿಸಿಕೊಳ್ಳಬೇಕಾಗುವುದು.

ಈ ಜರ್ಮನ್ ಬಾಂಡು ಪಂಡಿತನು ಒಂದು ತೆರದ ಅತ್ಯಂತ ದೃಢವಾದ ಮೂಸೆಗೆ ಪಾದರಸವನ್ನು ತುಂಬಿ ಅದಕ್ಕೆ ಒಂದು ಭಾಗದಲ್ಲಿ ಮಾಡಿರುವ ರಂಧ್ರದಿಂದ ರಸದೊಳಗಿರುವ ವಿದ್ಯುತ್ತನ್ನು ಹೊರಕ್ಕೆ ಹೋಗುವಂತೆ ಒಂದು ತೆರದ ಪ್ರಯೋಗವನ್ನು ಮಾಡುವನಂತೆ. ವಿದ್ಯುಚ್ಛಕ್ತಿ ಪ್ರಯೋಗದಿಂದಲೇ ಈ ಕಾರ್ಯವು ನಡೆಯುವುದು. ಅದರೊಳಗಿರುವ ರಸವನ್ನು ನಿಮಿಷಕ್ಕೆ ೩ ಅಥವಾ ೪ ಸಾವಿರ ವೇಳೆ ಬಡಿಯುವಂಥ ಯಾಂತ್ರಿಕ ರಚನೆಯಿರುವುದು. ಆ ಬಡಿತದಿಂದ ಸ್ವಲ್ಪ ಕಾಲದೊಳಗೇ ಪಾದರಸದ ಪರಿಮಾಣವು ತಗ್ಗಿ ಒಂದು ತೆರದ ಬೂದಿಬಣ್ಣದ ಪುಡಿಯು ನಿಲ್ಲುವುದಂತೆ. ಅದೇ ಕಡೆಗೆ ಭಂಗಾರವಾಗಿ ಪರಿಣಮಿಸುವುದು. ಆ ಪುಡಿಗೆ ೧೯೬೨ ಡಿಗ್ರಿಗಳ ಉಷ್ಣದವರೆಗೆ ಸೇಕ ಕೊಟ್ಟರೆ ಕರಗಿಹೋಗುವುದು. ಇದನ್ನು ರಾಜದ್ರಾವಕ (ಅಕ್ವಾರೇಜಿಯಾ) ದ ಹೊರತು ಇನ್ನಾವ ದ್ರಾವಕಕ್ಕೆ ಹಾಕಿದರೂ ಭಂಗಾರದ ರೀತಿಯಲ್ಲಿಯೇ ಇರುವುದು.

ಈಗ ೧೦೦ ಪೌನು ಪಾದರಸಕ್ಕೆ ೧೬೦ ರೂ.ಗಳ ಬೆಲೆಯಿರಬಹುದು. ಇಂಥ ರಸವನ್ನು ಮೇಲೆಕಂಡ ಪಂಡಿತನ ರಚನೆಯಿಂದ ಭಂಗಾರವನ್ನು ಮಾಡಿದರೆ ೧೦೦ ಪೌನು ರಸದಲ್ಲಿ ೯೦ ಪೌನು ಭಂಗಾರವು ಹುಟ್ಟುವುದಂತೆ. ಆಗ ೧ ಪೌನು ಭಂಗಾರಕ್ಕೆ ೫೦ ರೂ.ನೊಳಗೇ ಬೆಲೆ ಬೀಳುವುದು. ಎಂದರೆ ಸ್ವಲ್ಪ ಹೆಚ್ಚುಕಡಿಮೆ ೧ತೊಲೆ ಭಂಗಾರಕ್ಕೆ ೧ರೂಪಾಯಿ ಚಿಲ್ಲರೆಬೆಲೆ ಬೀಳುವಂತಾಯಿತು. ಆಗ ಚಿನ್ನದ ಯೋಗ್ಯತೆಯೂ ಪ್ರಪಂಚದ ಸ್ಥಿತಿಯೂ ಹೇಗೆ ತಲೆಕೆಳಕಾಗಬಹುದೆಂಬುದನ್ನು ವಾಚಕರೇ ಯೋಚಿಸಿಕೊಳ್ಳಬೇಕು.

ಹಿಂದೊಂದು ಸಲ ಭರತಖಂಡ ಸರ್ಕಾರದವರು ಸವರನ್ ಬೆಲೆಯು ೧೦ ರೂ.ಗೆ ಇಳಿಯಿಸಲ್ಪಡುವುದೆಂದು ಸಾರಿದಾಗ ಪ್ರಜೆಗಳಲ್ಲನೇಕರು ತಮ್ಮಲ್ಲಿದ್ದ ಸವರನ್ನುಗಳನ್ನೆಲ್ಲಾ ಅವಸರವಸರವಾಗಿ ಮಾರಿಕೊಂಡುಬಿಟ್ಟರು. ಈಗಣ ಈ ಭಂಗಾರ ರಚನೆಯೂ ಅದರ ೨ನೆ ಪರ್ಯಾಯವೋ ಹೇಗೋ ನೋಡಬೇಕು.

ಸರ್ಕಾರದ ಉದ್ಯೋಗಗಳು.

೧೯೩೧ ನೆಯ ನವಂಬರು ೨೮ನೆಯ ಮರ್ಕುಂ ಇ. ಎ. ೨೦೯೩—೧೭೨ ಇ. ಎ. ೧೪-೨೧-೭ ನೆಯ ನವಂಬರ್ ಹುಕುಂ.

ಸಂಸ್ಥಾನದಲ್ಲಿ ಸುಪೀರಿಯರ್ ಸರ್ವಿಸ್ಸಿಗೆ ಸೇರಿದ ಲಿಖಾವಟ್ ಬಾಬಿನ ಖಾಲಿ ನೌಕರಿಗಳನ್ನು ಭರ್ತಿಮಾಡುವುದನ್ನು ಕ್ರಮಪಡಿಸುವ ಭಾಗದಲ್ಲಿ ಹೆಚ್ಚು ತಿಳವಳಿಕೆಗಳನ್ನು ಕೊಡತಕ್ಕಬಗ್ಗೆ ಸಾದರಾದ ಹುಕುಂ:—

ಕೆಳಗೆಕಂಡ ಕಾಗದಪತ್ರಗಳನ್ನು ಓದಲಾಯಿತು :—

ಸರ್ಕಾರಿ ನೌಕರಿಗಳ ವಿಷಯದಲ್ಲಿ ಮೊಕರರಾತಿಗಳ ಮತ್ತು ಬಡ್ತಿಗಳ ಸಂಬಂಧವಾಗಿ ಸಾಮಾನ್ಯ ತಿಳವಳಿಕೆಗಳನ್ನು ಸಾದರ್‍ಮಾಡಿದ ೧೯೩೧ ನೆಯ ನವಂಬರ್ ೨೮ ನೆಯ ಮರ್ಕುಂ ಇ. ಎ. ೨೦೧೩-೯೨—ಇ. ಎ. ೧೪-೨೧ ೭ನೆಯ ನಂಬರಿನ ಸರ್ಕಾರಿ ಹುಕುಮಿನ ೨ ನೆಯ ಪ್ಯಾರಾ.

ಹುಕುಂ ನಂ. ಇ. ೧. ೨೦೯೩-೧೭೨—ಇ. ಎ. ೧೪-೨೧-೭.

ತಾ|| ೨೮ ನೆಯ ನವಂಬರು ೧೯೩೧.

ಸುಪೀರಿಯರ್ ಸರ್ವಿಸ್ಸಿಗೆ ಸೇರಿದ ಲಿಖಾವಟ್ ವರ್ಗದ ಸಿಬ್ಬಂದಿಗಳಲ್ಲಿ ಖಾಲಿಬೀಳುವ ನೌಕರಿಗಳನ್ನು ಭರ್ತಿಮಾಡುವುದನ್ನು ಕ್ರಮಪಡಿಸುವಬಗ್ಗೆ ಸರ್ಕಾರದವರು ಕೆಳಗೆಕಂಡ ಹೆಚ್ಚು ತಿಳವಳಿಕೆಗಳನ್ನು ಸಾದರ್‍ಮಾಡಿರುತ್ತಾರೆ.

೨. ಈ ಹುಕುಮಿನ ಉದ್ದೇಶಗಳಿಗೆ ಲಿಖಾವಟ್ ವರ್ಗದ ನೌಕರಿಗಳೆಲ್ಲವೂ ನಾಲ್ಕು ತರಗತಿಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ.—

(೧) ತಲಬು ೨೦ ರೂಪಾಯಿಗೆ ಮೀರದಿರುವ ನೌಕರಿಗಳು.

(೨) ೨೦ ರೂಪಾಯಿಗೆ ಮೇಲ್ಪಟ್ಟು, ಆದರೆ ೩೦ ರೂಪಾಯಿಗೆ ಮೀರದ ತಲಬುಳ್ಳ ನೌಕರಿಗಳು.

(೩) ೩೦ ರೂಪಾಯಿಗೆ ಮೇಲ್ಪಟ್ಟು, ಆದರೆ ೪೦ ರೂಪಾಯಿಗೆ ಮೀರದ ತಲಬುಳ್ಳ ನೌಕರಿಗಳು.

(೪) ೪೦ ರೂಪಾಯಿಗೆ ಮೇಲ್ಪಟ್ಟ ತಲಬುಳ್ಳ ನೌಕರಿಗಳು.

೩. (a) ೧ ನೆಯ ತರಗತಿಯ ಖಾಲಿ ನೌಕರಿಗಳಿಗೆಲ್ಲಾ ಸೀದಾ ಹೊಸಬರನ್ನು ನೇಮಿಸತಕ್ಕದ್ದು.

(b) ಇತರ ಪ್ರತಿಯೊಂದು ತರಗತಿಯಲ್ಲಿಯೂ ಖಾಲಿಬೀಳುವ ಪ್ರತಿ ಮೂರು ನೌಕರಿಗಳ ಪೈಕಿ ಮೊದಲೆರಡಕ್ಕೆ ಸೀದಾ ಹೊಸಬರನ್ನು ನೇಮಿಸತಕ್ಕದ್ದು ಮತ್ತು ಮೂರನೆಯದಕ್ಕೆ ಕ್ರಮವಾಗಿ ೧, ೨ ಅಥವಾ ೩ನೆ ತರಗತಿಯವರ ಪೈಕಿ ಸರಿಯಾಗಿ ಯೋಗ್ಯತೆಯುಳ್ಳವರನ್ನು ನೇಮಿಸತಕ್ಕದ್ದು.

ಆಗಾಗ್ಗೆ ವೃದ್ಧಿಹೊಂದುವ ತಲಬುಳ್ಳ ನೌಕರಿಗಳನ್ನು, ನೇಮಕವಾಗುವವರಿಗೆ ಕೊಡಲ್ಪಡುವ ತಲಬು ಯಾವ ತರಗತಿಗೆ ಸೇರುವುದೋ ಆ ತರಗತಿಗೆ ಸೇರಿದವುಗಳಂತೆ ಭಾವಿಸತಕ್ಕದ್ದು. ಸಾಮಾನ್ಯವಾಗಿ ಹೊಸಬರನ್ನು ಆಯಾ ತರಗತಿಯ ಕನಿಷ್ಠಾಂಶದ ತಲಬಿನಮೇಲೆಯೇ ನೇಮಕಮಾಡಲಾಗುವುದು. ಹೆಚ್ಚು ತಲಬಿನ ನೌಕರಿಗಳು ಖಾಲಿಬಿದ್ದಲ್ಲಿ, ಅದೇ ತರಗತಿಯಲ್ಲಿ ಕಮ್ಮಿ ತಲಬು ಪಡೆಯುತ್ತಿರುವವರನ್ನು ಕ್ರಮವಾಗಿ ಬಡ್ತಿಮಾಡಿ, ಆ ತರಗತಿಯಲ್ಲಿ ಕನಿಷ್ಠಾಂಶದ ಸಂಬಳದವನ ಸ್ಥಳಕ್ಕೆ ಹೊಸಬನನ್ನು ನೇಮಿಸತಕ್ಕದ್ದು. ಆದರೆ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನವರು ತಮ್ಮ ಪಟ್ಟಿಯಲ್ಲಿ ಯಾರನ್ನಾದರೂ ಒಂದು ತರಗತಿಯ ಕನಿಷ್ಠಾಂಶದ ಸಂಬಳಕ್ಕಿಂತಲೂ ಅಧಿಕವಾದ ಸಂಬಳಕ್ಕೆ ಲಾಯಖಾಗಿರುವರೆಂದು ತೋರಿಸಿರುವ ಸಂದರ್ಭಗಳಲ್ಲಿ ಅಂಥವರನ್ನು ಅಂಥ ಹೆಚ್ಚು ಸಂಬಳಕ್ಕೆ ನೇಮಿಸಬಹುದು. ಉದಾಹರಣೆಗಾಗಿ, ಒಬ್ಬ ಆರ್ಟ್ಸ್ ಮತ್ತು ಲಾ ಗ್ರಾಜ್ಯುಯೇಟು ೬೦ ರೂಪಾಯಿ ತಲಬಿಗೆ ಲಾಯಖಾಗಿರುವಂತೆ ಬೋರ್ಡಿನವರ ಪಟ್ಟಿಗಳಲ್ಲಿ ತೋರಿಸಲ್ಪಟ್ಟಿರುತ್ತಾನೆ; ಈ ಹುಕುಮಿನ ೨, ೩ ಮತ್ತು ೪ ನೆಯ ಪ್ಯಾರಾಗಳಲ್ಲಿ ಕಂಡಿರುವ ನಿಯಮಗಳನ್ನು ಲಕ್ಷ್ಯೆದಲ್ಲಡದೆ ಒಬ್ಬ ಆಫೀಸರು ಅಂಥವನನ್ನು ಸೀದಾ ೬೦ ರೂಪಾಯಿಯ ತಲಬಿನ ಮೇಲೆ ನೇಮಕಮಾಡಲು ಆಕ್ಷೇಪಣೆಯೇನೂ ಇರುವುದಿಲ್ಲ. ಅಲ್ಲದೆ ಈ ಹುಕುಮಿನ ೮ನೆಯ ಪ್ಯಾರಾವಿನಮೇರೆಗೆ ಮೇಲ್ಪಟ್ಟ ತರಗತಿಯ ನೌಕರಿಗಳಿಗಿರತಕ್ಕ ಯೋಗ್ಯತೆಯುಳ್ಳವರಾಗಿದ್ದು ಕಮ್ಮಿ ತರಗತಿಯ ನೌಕರಿಯನ್ನು ತೆಗೆದುಕೊಳ್ಳಲು ಒಪ್ಪಿದಲ್ಲಿ ಅಂಥ ಕಮ್ಮಿ ತರಗತಿಯ ಕನಿಷ್ಠಾಂಶಕ್ಕೆ ಹೆಚ್ಚಿದ ಸಂಬಳದಮೇಲೆ ಅವರನ್ನು ಮೊಕರರ್‍ಮಾಡಬಹುದು.

೪. ಸೀದಾ ನಾನಾ ತರಗತಿಗಳಿಗೆ ಸೇರಿಸಿಕೊಳ್ಳಲು ಅವಶ್ಯಕವಾದ ವಿದ್ಯಾ ಸಂಬಂಧವಾದ ಯೋಗ್ಯತೆಗಳನ್ನು ಈ ಕೆಳಗೆ ನಮೂದಿಸಿದೆ :—

ಒಂದನೆಯ ತರಗತಿಗೆ—ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು ಅಥವಾ ಒಂದು ಅಂಗೀಕೃತವಾದ ಕನ್ನಡ ಯಾ ಇಂಗ್ಲೀಷ್ ಹೈಸ್ಕೂಲಿನ ಐದನೆಯ ತರಗತಿಯಲ್ಲಿ ಓದಿದ್ದಾಗಿ ಸರ್ಟಿಫಿಕೇಟನ್ನು ಪಡೆದಿರತಕ್ಕದ್ದು.

ಟಿಪ್ಪಣಿ—ಕೇವಲ ವಿಶೇಷ ಸಂದರ್ಭಗಳಲ್ಲಿ ಬೋರ್ಡಿನವರು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗದಿರುವವರನ್ನೂ, ಈ ತರಗತಿಗೆ ಮೊಕರರ್‍ಮಾಡಲು ಅಪ್ಪಣೆಯನ್ನು ಸಹ ಕೊಡಬಹುದು.

ಎರಡನೆಯ ತರಗತಿಗೆ—ಪರಿಪೂರ್ಣವಾದ ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟು.

ಟಿಪ್ಪಣಿ—ಮೈಸೂರು ಯೂನಿವರ್ಸಿಟಿಯ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನೂ ಪರಿಪೂರ್ಣವಾದ ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟನ್ನು ಪಡೆದಿರುವವರಂತೆಯೇ ಭಾವಿಸಲಾಗುವುದು.

ಮೂರನೆಯ ತರಗತಿಗೆ—ಮೈಸೂರು ಯೂನಿವರ್ಸಿಟಿಯ ಮೊದಲನೆಯವರ್ಷದ ಬಿ. ಎ. ಪರೀಕ್ಷೆಯಲ್ಲಿ ಅಥವಾ ಒಂದು ಅಂಗೀಕೃತ ಯೂನಿವರ್ಸಿಟಿಯ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದು.

ನಾಲ್ಕನೆಯ ತರಗತಿಗೆ—ಮೈಸೂರು ಯೂನಿವರ್ಸಿಟಿಯ ಅಥವಾ ಇತರ ಅಂಗೀಕೃತ ಯೂನಿವರ್ಸಿಟಿಯ ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದು.

೫. ನೇರವಾಗಿ ಹೊಸಬರನ್ನು ನೇಮಿಸಬೇಕಾಗಿರುವ ನೌಕರಿಗಳ ದಾಮಾಷಾಯಿಯನ್ನು ಲೆಕ್ಕಿಸುವುದರಲ್ಲಿ ಮೊಕರೂರಾತಿಯನ್ನು ಮಂಜೂರ್‍ಮಾಡುವ ಅಧಿಕಾರಿಯ ಯಖ್ತ್ಯಾರಿಯಲ್ಲಿರುವ ನೌಕರಿಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳತಕ್ಕದ್ದು. ಉದಾಹರಣೆಗಾಗಿ, ರೆವಿನ್ಯೂ ಇಲಾಖೆಯಲ್ಲಿ (ಡಿಸ್ಟ್ರಿಕ್ಟ್ ಯಾ ಸಬ್‌ಡಿವಿಜನ್ ಆಫೀಸಿನಲ್ಲಿಯೇ ಆಗಲಿ ತಾಲ್ಲೂಕು ಆಫೀಸಿನಲ್ಲಿಯೇ ಆಗಲಿ) ೨೫ ರಿಂದ ೫೦ ರೂಪಾಯಿಯೊಳಗಿರುವ ನೌಕರಿಗಳೆಲ್ಲಾ ಒಂದೇ ದರ್ಜೆಗೆ ಸೇರಿದ ನೌಕರಿಗಳೆಂದು ಭಾವಿಸತಕ್ಕದ್ದು ; ಏಕೆಂದರೆ ಅವುಗಳೆಲ್ಲವೂ ಡೆಪ್ಯುಟಿಕಮಿಷನರವರಿಗೆ ವಹಿಸಲ್ಪಟ್ಟಿರುವ ಅಧಿಕಾರಕ್ಕೊಳಪಟ್ಟಿರುವುವು.

೬. ಮೇಲ್ಕಂಡ ನಿಬಂಧನೆಗಳು, ಯಾವುದಾದರೂ ನಿರ್ದಿಷ್ಟವಾದ ನೌಕರಿಗಳಿಗೆ ಅವಶ್ಯಕವಾದ ಯೋಗ್ಯತೆಗಳೆಂದು ಗೊತ್ತುಮಾಡಿ ಸರ್ಕಾರದವರು ಆಗಿಂದಾಗ್ಗೆ ಸಾದರ್‍ಮಾಡಬಹುದಾದ ಹುಕುಮುಗಳಿಗೆ ಒಳಪಟ್ಟಿರತಕ್ಕದ್ದು.

೭. ಮೇಲ್ಕಂಡ ೪ ನೆ ನಿಬಂಧನೆಯಲ್ಲಿ ಗೊತ್ತುಮಾಡಿರುವ ಕನಿಷ್ಠಾಂಶದ ವಿದ್ಯಾಸಂಬಂಧವಾದ ಯೋಗ್ಯತೆಗಳೂ ಮತ್ತು ೧೯೩೧ ನೆಯ ಮೇ ೧೬ ನೆಯ ಮರ್ಕುಂ ೧೮೨೭-೮೦—ಇ. ಎ. ಜಿ. ೩೦೮ ನೆಯ ನಂಬರು ಸರ್ಕಾರಿ ಹುಕುಮಿನ ೭ ನೆಯ ಪ್ಯಾರಾವನ್ನು ಅನುಸರಿಸಿ ಹಿಂದುಳಿದ ಪಂಗಡಗಳ ಜನರಿಗೆ ಹಂಗಾಮಿಯಾಗಿ ತೋರಿಸಬೇಕಾಗಿರುವ ಪ್ರಾಶಸ್ತ್ಯವೂ ಸಹ ನೌಕರಿಗೆ ಹೊಸದಾಗಿ ಸೇರಿಸಿಕೊಳ್ಳುವ ವಿಷಯಗಳಿಗೆ ಮಾತ್ರ ಅನ್ವಯಿಸುವುವು. ಕೆಳ ತರಗತಿಗಳವರನ್ನು ಮೇಲಿನ ತರಗತಿಗಳಿಗೆ ಬಡ್ತಿಮಾಡುವ ಸಂದರ್ಭಗಳಲ್ಲಿ ಸಮರ್ಥತೆ ಮತ್ತು ನಡತೆಯಿಂದೊಡಗೂಡಿದ ಸರ್ವಿಸ್ಸಿನ ಕಾಲಕ್ಕೆ ಲಕ್ಷ್ಯವನ್ನು ಕೊಡತಕ್ಕದ್ದೇ ಹೊರತು, ನೌಕರರ ಸಾಮಾನ್ಯ ವಿದ್ಯಾಸಂಬಂಧವಾದ ಯೋಗ್ಯತೆಗಳನ್ನಾಗಲಿ ಅವರ ಪಂಗಡವನ್ನಾಗಲಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

ಕೆ. ಮಾರ್ಥ,
ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನು ತಿಳಿಸಲೇಬೇಕು.

ಚನ್ನಪಟ್ಟಣ.

ಇದೇ ತಿಂಗಳು ಏಳನೇ ತಾರೀಖಿನ ದಿವಸ ಈ ಊರಿಗೆ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸುವರೆಂದು ಅವರಲ್ಲಿ ತಮ್ಮ ಅಹವಾಲ್‌ಗಳನ್ನು ಹೇಳಿಕೊಳ್ಳುವುದಕ್ಕಾಗಿ ಪಟೇಲರು ರೈತರು ಶಾನುಭೋಗರುಗಳು ಸುಮಾರು ಎರಡುಸಾವಿರಜನ ಇಲ್ಲಿನ ಟ್ರಾವಲರ್ಸ್ ಬಂಗಲೆಯಬಳಿ ಪ್ರಾತಃಕಾಲ ಹತ್ತುಗಂಟೆಗೆ ಬಂದು ಸಾಹೇಬರವರ ನಿರೀಕ್ಷೆಯಲ್ಲಿದ್ದರು. ಹನ್ನೊಂದುವರೆಗಂಟೆ ಸಮಯದಲ್ಲಿ ಸಾಹೇಬರು ಬಂಗಲೆಗೆ ದಯಮಾಡಿಸಿದರು. ದರ್ಶನಾಕಾಂಕ್ಷಿಗಳಾಗಿ ಬಂದಿದ್ದ ಜನಗಳೆಲ್ಲರೂ ಹೊರಗಡೆಯೇ ಕಾದುಕೊಂಡಿದ್ದರು. ಮಧ್ಯಾಹ್ನ ಒಂದೂವರೆ ಎರಡು ಗಂಟೆ ಸಮಯದಲ್ಲಿ ಸಬ್ ಡಿವಿಜನ್ ಸಾಹೇಬರವರು ದಯಮಾಡಿಸಿದರು. ಹೊರಗಡೆ ಕುಳಿತಿದ್ದ ಜನಗಳನ್ನು ನೋಡಿದೊಡನೆಯೇ ಇವರ ಮುಖವು ಕೆಂಪೇರಿತು. ಕೆಂಪೇರಿದುದಕ್ಕೆ ಕಾರಣವು ಇವರಿಗುಂಟಾದ ನಿಷ್ಕಾರಣವಾದ ಕೋಪವೆಂದೆನ್ನಬಹುದು ಸ್ವಲ್ಪದರಲ್ಲಿಯೇ ವ್ಯಕ್ತಪಟ್ಟಿತು. ಇವರು ಅಲ್ಲಿ ಕುಳಿತಿದ್ದ ಜನರನ್ನು ನೋಡಿ ಏನಿರಯ್ಯ ನೀವೆಲ್ಲಾ ಇಲ್ಲೀಕೆ ಬಂದಿರುವಿರಿ? ನಿಮ್ಮನ್ನು ಯಾರು ಕರೆಸಿದವರು? ಹೀಗೆಬಂದು ಕುಳಿತುಕೊಳ್ಳುವುದಕ್ಕೆ ನಿಮಗೇನು ಹುಚ್ಚು ಹಿಡಿದಿದೆಯೋ? ಹೊರಟು ಹೋಗಿರಿ, ಎಂದು ಹೇಳಿ ಹತ್ತಿರದ್ದ ಶೇಕದಾರರನ್ನು ಪೊಲೀಸಿನವರನ್ನು ಕರೆದು ಇವರನ್ನು ಇಲ್ಲಿಂದ ಕಳುಹಿಸಿಬಿಡಿ ಎಂಬದಾಗಿ ಹೇಳಿದರು. ಪಾಪ! ಇವರ ಕೋಪಾಟೋಪವನ್ನು ರೈತರು ತಡೆಯಬಲ್ಲರೆ? ಎಲ್ಲರೂ ಭಯಗ್ರಸ್ತರಾದುದರಿಂದ ಒಬ್ಬರಾದರೂ ಮಾತಾಡಲು ಮುಂದುವರಿಯಲಿಲ್ಲ. ಏನೋ ಎದೆಗೈಯಲ್ಲಿ ಎದೆಯನ್ನು ಹಿಡಿದುಕೊಂಡು ಸ್ವಲ್ಪ ಧೈರ್ಯವನ್ನು ತಂದುಕೊಂಡು ಒಬ್ಬಿಬ್ಬ ದೊಡ್ಡಮನುಷ್ಯರು ಮುಂದೆ ಬಂದು “ಸ್ವಾಮೀ, ನಾವು ಡೆಪ್ಯುಟಿಕಮೀಷನರ್ ಸಾಹೇಬರವರಲ್ಲಿ ನಮ್ಮ ಅಹವಾಲುಗಳನ್ನು ಹೇಳಲೋಸುಗ ಬಂದಿದ್ದೇವೆ. ನಾವು ಅವರಲ್ಲಿ ಹೇಳಿಕೊಳ್ಳದೆ ಮತ್ತಾರಲ್ಲಿ ಹೇಳಿಕೊಳ್ಳಬೇಕು, ತಾವು ಈರೀತಿ ವೃಥಾ ನಮ್ಮಮೇಲೆ ಕೋಪಮಾಡಿಕೊಂಡರೆ ನಾವು ಏನುತಾನೇ ಮಾಡುವುದಕ್ಕಾಗುತ್ತು?” ಎಂದು ಹೇಳಲು ಸಾಹೇಬರು ಮುಖಗಂಟು ಹಾಕಿಕೊಂಡು ಬಂಗಲೆಯೊಳಗೆ ಹೊರಟು ಹೋದರು. ಈ ವಿಧವಾದ ಕೋಪಕ್ಕೆ ಕಾರಣವನ್ನು ಸಾಹೇಬರವರೇ ಹೇಳಿದರೆ ಚೆನ್ನಾಗಿರುತ್ತಲ್ಲದೆ ನಾನು ಊಹಿಸುವುದಾದರೆ ನನ್ನ ಊಹೆಯು ತಪ್ಪಾಗಬಹುದೆಂಬ ಶಂಕೆಯಿಂದ ವಾಚಕರ ಊಹೆಗೆ ಬಿಟ್ಟಿರುತ್ತೇನೆ.

ಮಧ್ಯಾಹ್ನ ಸುಮಾರು ಮೂರುವರೆಗಂಟೆ ಸಮಯದಲ್ಲಿ ಹೊರಗೆ ಕುಳಿತಿದ್ದ ಜನರೆಲ್ಲರೂ ಒಳಗೆ ಬರುವಂತೆ ಡೆಪ್ಯುಟಿಕಮಿಷನರ್ ಸಾಹೇಬರವರ ಅಪ್ಪಣೆಯಾಯಿತು. ಈ ಸಮಯವನ್ನೇ ನಿರೀಕ್ಷಿಸುತ್ತಿದ್ದ ಜನರಲ್ಲಿ ಪಟೇಲರೂ, ರೈತರೂ ಒಳಗೆಹೋದರು. ಆದರೆ ಶಾನುಭೋಗರುಗಳು ಮಾತ್ರ ಪಟೇಲರುಗಳು ಮತ್ತು ರೈತರುಗಳು ತಮ್ಮ ವಿಷಯವಾಗಿ ಏನು ಹೇಳುವರೋ ಎಂಬ ಭಯದಿಂದ ಒಳಕ್ಕೆ ಬರಲಿಲ್ಲ. ಆದರೆ ಡೆಪ್ಯುಟಿಕಮೀಷನರ್ ಸಾಹೇಬರವರು ಮೂರು ನಾಲ್ಕು ಬಾರಿ ಇವರ ಬಳಿಗೆ ಜವಾನರನ್ನು ಕಳುಹಿಸಿ ಕಡೆಗೆ ಇವರನ್ನೂ ಒಳಕ್ಕೆ ಬರಮಾಡಿಕೊಂಡರು. ಎಲ್ಲರೂ ಒಳಕ್ಕೆ ಬರುತ್ತಲೇ ಸಾಹೇಬರು “ನೀವೆಲ್ಲಾ ಏತಕ್ಕೆ ಬಂದಿರಿ! ನಿಮ್ಮನ್ನು ಯಾರು ಕರೆಸಿದವರು” ಎಂದು ಕೇಳಿದರು. ಮೊದಲೇ ಸಬ್‌ಡಿವಿಜನ್ ಸಾಹೇಬರವರ ಮಾತುಗಳಿಂದ ಭಯಕಂಪಿತರಾಗಿದ್ದ ಇವರಸ್ಥಿತಿಯು ಈಗ ಹೇಗಿತ್ತೆಂಬುದನ್ನು ಬರೆಯಬೇಕೇ? ಹೇಗೂ ಮನೆಯಲ್ಲಿ ನೆನೆಸುವೇನೋ ಆಯಿತು; ಇನ್ನು ಬಳಿ ಗಾಳಿ ಎಂದರೆ ಏನಾಗುವುದೆಂದು ಮನಸ್ಸಿನಲ್ಲಿ ಸ್ವಲ್ಪ ಧೈರ್ಯತಂದುಕೊಂಡು ತಮ್ಮ ಅಹವಾಲುಗಳನ್ನು ಅರಿಕೆ ಮಾಡಿಕೊಳ್ಳಲು ಪ್ರಾರಂಭಿಸಿದರು. ಕೆಲವರು ಶಾನುಭೋಗರುಗಳು ಕೊಟ್ಟಿದ್ದ ಸುಳ್ಳು ರಶೀತಿಗಳನ್ನು, ತಪ್ಪಾಗಿ ಬರೆದು ಕೊಟ್ಟಿದ್ದ ಪಟ್ಟಿಗಳನ್ನು ತೋರಿಸುತ್ತಾ “ಸ್ವಾಮಿ, ಈ ರಸೀತಿ ತಪ್ಪುಲೆಕ್ಕಗಳನ್ನು ಕೊಟ್ಟು ನಮ್ಮನ್ನು ಬಹಳವಾಗಿ ವಂಚಿಸುತ್ತಿದ್ದಾರಲ್ಲದೆ ಲಂಚವನ್ನು ಕೊಟ್ಟರೂ ಪಟ್ಟೀಬದಲಾಯಿಸಿಕೊಡುವುದಿಲ್ಲ. ನಾವು ಅವರ ಮನೆಯಲ್ಲಿ ಜೀತದ ಆಳುಗಳಂತೆ ಕೆಲಸಮಾಡಿದರೂ ನಮ್ಮ ಕೆಲಸವನ್ನು ಮಾಡಿಕೊಡದೆ ಈಗ ಆಗ ಎಂದು ಶಾನುಭೋಗರುಗಳು ಬಹಳ ತೊಂದರೆ ಪಡಿಸುತ್ತಿದ್ದಾರೆಂತಲೂ,” ಇನ್ನು ಕೆಲವರು ತಮ್ಮ ಜಮೀನಿನ ವಿಷಯಗಳನ್ನೂ, ಮತ್ತೆ ಕೆಲವರು, ಕೆರೇ ಕಾಮಗಾರಿಗಳನ್ನು ಮಾಡಿಸಿ ಕೊಡಬೇಕೆಂದೂ ಕೇಳಿಕೊಳ್ಳುತ್ತಿದ್ದರು. ಇವರಲ್ಲಿ ಒಬ್ಬ ಮಹಮ್ಮದೀಯನು ತನ್ನಿಂದ ಕಂದಾಯತೆಗೆದುಕೊಳ್ಳುತ್ತಿರುವ ಒಂದು ಜಮೀನನ್ನು ಎಲ್ಲಿದೆಯೆಂದು ಎಷ್ಟುಬಾರಿ ಕೇಳಿಕೊಂಡರೂ ತೋರಿಸದುದ್ದಕ್ಕಾಗಿ ಶ್ಯಾನುಭೋಗರಿಗೆ ರುಷುಂವನ್ನೂ ಕೊಟ್ಟರೂ ಕಡೆಗೆ ಜಮೀನನ್ನು ತೋರಿಸಲಿಲ್ಲವೆಂದು ಅಲ್ಲಿಯೇ ಇದ್ದ ಶ್ಯಾನುಭೋಗರನ್ನು ಸಾಹೇಬರವರಿಗೆ ತೋರಿಸಿದನು. ಸಾಹೇಬರು ಶಾನುಭೋಗನನ್ನು ಕರೆದು ಆ ಜಮೀನನ್ನು ತೋರಿಸಿಬಿಡುವಂತೆ ಅಪ್ಪಣೆಮಾಡಿ ಜನಗಳನ್ನು ಕುರಿತು “ನೀವು ಕೇಳುತ್ತಿರುವ ಅಮಲ್ದಾರ್ ಮ|| ರಾ|| ಸಿದ್ದರಾಮಪ್ಪನವರೂ, ಹಿಂದಿನ ಡೆಪ್ಯುಟಿಕಮಿಷನರ್ ಸಾಹೇಬರವರೂ ಕೊಡಬೇಕೆಂದು ಹೇಳಿರುವ ಕುಳುವಾರಪಟ್ಟಿಯನ್ನು ಶಾನುಭೋಗರು ಕೊಡುವುದಕ್ಕೆ ಗೌರ್ನ್ಮೆಂಟ್ ರೂಲ್ಸಿಲ್ಲ. ಆ ಲೆಕ್ಕವನ್ನು ಕೊಡಬೇಕಾದುದಿಲ್ಲವೆಂದು ರೆವಿನ್ಯೂ ಕಮಿಷನರ್ ಸಾಹೇಬರು ಅಪ್ಪಣೆ ಕೊಟ್ಟಿರುತ್ತಾರೆ.” ಎಂದು ಹೇಳಲು, ಒಬ್ಬ ಪಟೇಲರು “ಸ್ವಾಮಿ ಶ್ಯಾನುಭೋಗರು ಕಂದಾಯ ವಸೂಲಿಮಾಡಬಹುದೆಂದು ರೂಲ್ಸಿನಲ್ಲಿದೆಯೋ?” ಎಂಬದಾಗಿ ಕೇಳಿದ್ದಕ್ಕೆ ಸಾಹೇಬರವರು-ಅವರು ಕಂದಾಯವನ್ನು ವಸೂಲಿಮಾಡಬಾರದು; ಆದರೆ ಮೊದಲಿಂದಲೂ ರೂಢಿಗೆ ಬಂದಿದೆ, ಏನುಮಾಡತಕ್ಕದ್ದು? ಎಂದು ಸಮಾಧಾನ ಹೇಳಿದರೇ ಹೊರತು ಶಾನುಭೋಗರುಗಳಿಗೆ ಕಂದಾಯವನ್ನು ವಸೂಲಿಮಾಡಕೂಡದೆಂದು ಕಂಠೋಕ್ತವಾಗಿ ಹೇಳಲಿಲ್ಲ. ಪ್ರತಿಸಲವೆಲ್ಲರೂ ಒಂದೇ. ಇವರ ಏಳಿಗೆಗಾಗಿಯೇ ಕೆಲಸಮಾಡಬೇಕಾದ ಡೆಪ್ಯುಟಿಕಮಿಷನರ್ ಸಾಹೇಬರವರ ಸರ್ವಸಮನ್ವಯವು ಎಷ್ಟರಮಟ್ಟಿಗಿದೆ ಎಂಬುದನ್ನು ವಾಚಕರೇ ಪರ್ಯಾಲೋಚಿಸಬೇಕಾಗಿದೆ.

ಮುಂದೆ ಜನರು ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. ನಿಮ್ಮ ಅಹವಾಲನ್ನು ನಾವು ಈಗ ಕೇಳುವುದಕ್ಕೆ ಬಿಡುವಿಲ್ಲ ಹೊರಟುಹೋಗಿರೆಂದು ಕಠಿಣವಾಗಿ ಹೇಳಿಬಿಟ್ಟರಲ್ಲದೆ, ಶೇಕದಾರರನ್ನೂ ಪೊಲೀಸಿನವರನ್ನೂ ಕರೆದು “ಇವರನ್ನು ಹೊರಕ್ಕೆ ಕಳುಹಿಸಿಬಿಡಿರೆಂದು” ಹೇಳಿದರು. ಪೋಲೀಸಿನವರಿಂದಲೂ ಶೇಕದಾರರಿಂದಲೂ ಕತ್ತಿನಮೇಲೆ ಹಿಡಿದು ತಳ್ಳಲ್ಪಟ್ಟ ರೈತರು ಮತ್ತು ಪಟೇಲರುಗಳು ಅವಮಾನಿತರಾಗಿ ತಾವು ತಂದಿದ್ದ ಅರ್ಜಿಗಳನ್ನು ಕೂಡ ಕೊಡಲು ಅವಕಾಶವಿಲ್ಲದೆ ಪೋಸ್ಟ್ ಮಾಡಿ ಹೊರಟುಹೋದರು. ಈ ವಿಧವಾದ ಅವಮಾನವು ಶಾನುಭೋಗರುಗಳಿಗಾಗಿದ್ದರೆ ಫಲಿತಾಂಶವೇನಾಗುತ್ತಿತ್ತೆಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕಾಗಿದೆ.

ರೈತರೆಲ್ಲರೂ ಹೊರಟುಹೋದಮೇಲೆ ಡೆಪ್ಯುಟಿಕಮಿಷನರ್ ಸಾಹೇಬರು ಶ್ಯಾನುಭೋಗರುಗಳನ್ನು ಒಳಕ್ಕೆ ಕರೆಯಿಸಿಕೊಂಡು ಏನೋ ಮಾತನಾಡಿದರು. ವಿಷಯವೇನೆಂಬುದು ಗೊತ್ತಾಗಲಿಲ್ಲ. ಶ್ಯಾನುಭೋಗರುಗಳಿಗೇನೋ ರೈತರಮುಂದೆ ಅಹವಾಲನ್ನು ಹೇಳಿಕೊಳ್ಳಲು ಧೈರ್ಯವೇ ಇರಲಿಲ್ಲ. ಹಿಂದುಗಡೆ ಏನು ಹೇಳಿಕೊಂಡಿರುವರೋ ತಿಳಿಯದು. ಅಧಿಕಾರಿಗಳು ಓದಿ ಪಾಸುಮಾಡುವ ವರೆಗೆ “ಸರ್ಕಾರಿಕೆಲಸಮಾಡುವವರೆಲ್ಲರೂ ಪ್ರಜೆಗಳ ಉನ್ನತಿಗಾಗಿಯೇ ಕೆಲಸಮಾಡಬೇಕು. ರೈತರು ಉತ್ತಮಸ್ಥಿತಿಗೆ ಬಂದರೆ ದೇಶವೇ ಅಭಿವೃದ್ಧಿಸ್ಥಿತಿಗೆ ಬರುತ್ತದೆ. ಗೌರ್ನ್ಮೆಂಟವರ ಕೃತ್ಯವು ಪ್ರಜೆಗಳನೆಮ್ಮದಿಗಾಗಿ. ಗೌರ್ನ್ಮೆಂಟು ಪ್ರಜೆಗಳದು” ಎಂದು ಹೇಳುತ್ತಿರುತ್ತಾರೆ. ಆದರೆ ಯಾವುದಾದರೂ ಒಂದು ಸರ್ಕಾರಿ ಉದ್ಯೋಗವು ದೊರಕಿದರೆ ಸಾಕು; ಅವರ ಯೋಚನೆಗಳೆಲ್ಲಾ ಮರೆತು ಹೋಗಿ, ಪ್ರಜೆಗಳ ಮೇಲೆ ತಮ್ಮ ದರ್ಪವನ್ನು ತೋರಿಸುತ್ತಾ ಅವರು ಏನೂತಿಳಿಯದವರು, ಮೂರ್ಖರು, ನಾವು ಏನು ಬೇಕಾದರೂ ಮಾಡಬಹುದೆಂದು ಕೆಲಸಮಾಡಲು ಪ್ರಾರಂಭಮಾಡುತ್ತಾರೆ. ಹೀಗಾಗುವುದಕ್ಕೆ ದುರದೃಷ್ಟವೇ ಕಾರಣವೋ! ಅಥವಾ ಅಧಿಕಾರಿಗಳು ಕಲಿತಿರುವ ವಿದ್ಯಾಮಹಿಮೆಯೋ ತಿಳಿಯದು. ನಮ್ಮ ಡೆಪ್ಯುಟಿಕಮಿಷನರ್ ಸಾಹೇಬರವರು ನಿಜವಾಗಿಯೂ ತಾವು ಪ್ರಜಾಹಿತಕ್ಕಾಗಿ ಕೆಲಸಮಾಡಬೇಕೆಂದು ತಿಳಿದುಕೊಂಡಿದ್ದರೆ, ಈ ರೀತಿ ಪ್ರಜೆಗಳಿಗೆ ಅವಮಾನಮಾಡಿ ರೆವಿನ್ಯೂ ವಿಚಾರದಲ್ಲಿ ಹೆಚ್ಚು ಪರಿಶ್ರಮವುಳ್ಳವರೂ ಅನುಭವಸ್ಥರೂ ಆಗಿರುವುದರಿಂದ ಈ ಶ್ಯಾನುಭೋಗರುಗಳ ಸರಿಯಾದ ಲೆಕ್ಕನ್ನಿಡದೆ ಇರುವುದರವೆಸೆಯಿಂದ ತಮ್ಮ ತಮ್ಮಲ್ಲಿ ಉಂಟಾಗುವ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಸರಿಯಾದ ಲೆಕ್ಕವನ್ನಿಡುವಂತೆ ಮಾಡಿ ಇವನ್ನೆಲ್ಲಾ ತಪ್ಪಿಸಿ ಪ್ರಜಾನೆಮ್ಮದಿಯನ್ನುಂಟುಮಾಡುವರೆಂಬ ಪ್ರಜೆಗಳ ಆಸೆಯನ್ನು ನೆರವೇರಿಸುತ್ತಿದ್ದರೆ ಎಂದಿಗೂ ಇಲ್ಲ. ಮೇಲಿನ ಅಧಿಕಾರಿಗಳಾದರೂ ಈ ವಿಚಾರದಲ್ಲಿ ಚೆನ್ನಾಗಿ ಯೋಚಿಸಿ ಈಗ ರೈತರು ಕೇಳಿಕೊಳ್ಳುತ್ತಿರುವಂತೆ ಲೆಕ್ಕವನ್ನು ಕೊಡಿಸಿ ಪ್ರಜಾಸೌಖ್ಯವನ್ನುಂಟುಮಾಡಬೇಕಲ್ಲದೆ ಅಸಡ್ಡೆ ಮಾಡಿ ರೈತರು ಹೆಚ್ಚು ತೊಂದರೆಗೆ ಗುರಿಯಾಗುವಂತೆ ಮಾಡುವುದೊಳ್ಳೆಯದಲ್ಲ.

ಒಬ್ಬ ಗೌಡ.

ಮೈಸೂರು ಶಂಕರವಿಲಾಸ ಪಾಠಶಾಲೆ.

ಸ್ವಾಮಿ,

ಈ ಪಾಠಶಾಲೆಯ ಕಟ್ಟಡವು ಈಗ ಕಟ್ಟುತ್ತಿರುವ ಮ್ಯುನಿಸಿಪಲ್ ಆಫೀಸ್ ಕಟ್ಟಡದ ಕಾಂಪೌಂಡಿನೊಳಕ್ಕೆ ಸೇರಿಹೋಗುವುದರಿಂದ ಇದನ್ನು ಟ್ರಸ್ಟ್‌ಬೋರ್ಡಿನವರು ಅಕ್ವೈರ್‌ಮಾಡಿಕೊಂಡಿದ್ದಾರೆ. ಈ ಕಟ್ಟಡವನ್ನು ಗೌಡರ ಮ|| ಅತ್ತಿಗೋಡು ಬಸವಪ್ಪನವರು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿದ್ದರು. ಅದರ ಜಾಗವು ಹೊಸಮಠಕ್ಕೆ ಸೇರಿದ್ದು. ಪಾಠಶಾಲೆಯು ನಡೆಯದೆ ನಿಂತುಹೋಗುವುದಾದರೆ ಅಂಥ ಕಾಲಕ್ಕೆ ಕಟ್ಟಡವೂ ಮಠಕ್ಕೆ ಸೇರಿಹೋಗಬೇಕೆಂಬ ಅಭಿಪ್ರಾಯವಿಟ್ಟು ಸದರಿ ಬಸವಪ್ಪನವರು ಇದನ್ನು ಕಟ್ಟಿಸಿಕೊಟ್ಟಿದ್ದರು. ಈಗ ಸದರಿ ಕಟ್ಟಡಕ್ಕೂ ನಿವೇಶನಕ್ಕೂ ಸಹ ೪ ಸಾವಿರ ರೂ. ಗಳ ಕಾಂಪೆನ್‌ಸೇಷನ್ ಬರುತ್ತದೆ. ಪಾಠಶಾಲೆಯು ನಿಂತಿಲ್ಲ. ನಡೆಯುತ್ತಲೇ ಇದೆ. ಈ ಸ್ಥಳವು ಹೋದರೂ ಬೇರೆ ಸ್ಥಳದಲ್ಲಿ ಅದು ನಡೆಯಬೇಕು; ನಡೆಯುತ್ತದೆ. ಹೊಸಕಟ್ಟಡವನ್ನು ಕಟ್ಟಿಸುವುದಕ್ಕೆ ಸ್ವತಃ ವಿದ್ಯಾವಂತರಾಗಿರುವ ಶ್ರೀ ಹೊಸಮಠದ ಚರಮೂರ್ತಿಗಳಿಗೆ ಅಭಿಮಾನ ಉತ್ಸಾಹಗಳು ಸಂಪೂರ್ಣವಾಗಿದ್ದೇ ಇವೆ. ತಮ್ಮ ತಂದೆಯವರು ಮಾಡಿದ ಧರ್ಮಕ್ಕೆ ಲೋಪಬರದಂತೆ ಮತ್ತೊಂದು ಹೊಸಕಟ್ಟಡವನ್ನು ಅದೇ ಕಾಂಪೆನ್‌ಸೇಷನ್ ಮೊಬಲಗಿನಿಂದ ಕಟ್ಟಿಸಿಕೊಡಬೇಕೆಂಬ ಕುತೂಹಲವು ಮ|| ಅತ್ತಿಗೋಡು ಬಸವಪ್ಪನವರ ಕುಮಾರರಿಗೂ ಇದೆ. ಆದರೆ ಇಬ್ಬರಲ್ಲಿ ಯಾರೊಬ್ಬರ ಸ್ವಾಧೀನಕ್ಕೆ ಹಣವು ಬಂದರೂ ದುರುಪಯೋಗವಾದೀತೆಂಬ ಭಯವೇನೂ ಇಲ್ಲವಾದರೂ ಕೆಲಸವು ಬೇಗನೆ ನಡೆಯದೆ ಸಾವಕಾಶವಾದೀತೆಂಬ ಯೋಚನೆಯೇನೋ ಉಭಯತ್ರ ಇರಬಹುದು. ಈ ಕಾರಣದಿಂದ ಇವರಿಬ್ಬರ ಸ್ಪರ್ಧೆಯಲ್ಲಿ ಟ್ರಸ್ಟ್‌ಬೋರ್ಡಿನವರು ಕಾಂಪೆನ್‌ಸೇಷನ್ ಮೊಬಲಗನ್ನು ಸಿವಿಲ್‌ಕೋರ್ಟಿಗೆ ಕಟ್ಟಿಬಿಡುವುದು ಸಹಜವಾಗಿದೆ. ಈ ಮೇಲಾಟದಲ್ಲಿ ಕಾಲಯಾಪನೆಮಾಡುವುದಕ್ಕಿಂತಲೂ ಅನುಕೂಲವಾದ ಕೆಲಸವೊಂದನ್ನು ಮಾಡುವುದು ಚೆನ್ನಾಗಿದೆ. ಇಬ್ಬರಿಗೂ ಹೊ ಕಟ್ಟಡವನ್ನು ಬೇಗ ಕಟ್ಟಿಸಬೇಕೆಂಬ ಸದುದ್ದೇಶವೂ ಕುತೂಹಲವೂ ವಿಶೇಷವಾಗಿರುವಾಗ, ಮತ್ತು ಸ್ವಾರ್ಥಚಿಂತೆಯೇನೂ ಇಲ್ಲದಿರುವಾಗ, ಎರಡುಪಕ್ಷದವರೂ ಒಪ್ಪುವಂಥ ೪-೫ ಮಂದಿ ದೊಡ್ಡಮನುಷ್ಯರುಳ್ಳ ಒಂದು ಕಮಿಟಿಗೆ ಈ ಕೆಲಸವನ್ನು ವಹಿಸಿ, ಅವರ ವಶಕ್ಕೆ ಕಾಂಪೆನ್‌ಸೇಷನ್ ಮೊಬಲಗನ್ನು ಕೊಡುವುದಕ್ಕೆ ಇಬ್ಬರೂ ಒಪ್ಪಿಗೆಯನ್ನು ಕೊಟ್ಟುಬಿಟ್ಟು, ತಾವುಗಳು ಮೇಲುಸ್ತುವಾರಿಯನ್ನಿಟ್ಟುಕೊಂಡು ಬಿಟ್ಟರೆ ಕೆಲಸವು ೪-೬ ತಿಂಗಳೊಳಗಾಗಿ ಪೂರೈಸಿಹೋಗುವುದರಲ್ಲಿ ಅಭ್ಯಂತರವಿಲ್ಲ. ಗತಿಸಿದವರ ಧರ್ಮಸಂಕಲ್ಪವನ್ನು ಉದ್ಧರಿಸಿದಂತೆಯೂ ಆಗುತ್ತದೆ. ನಿರಾತಂಕವಾಗಿ ವಿದ್ಯಾಭ್ಯಾಸಕ್ಕೆ ಸೌಕರ್ಯವನ್ನುಂಟುಮಾಡಿಕೊಟ್ಟಂತೆಯೂ ಆಗುತ್ತದೆ. ಉಭಯಪಕ್ಷದವರೂ ದೊಡ್ಡ ಮನಸ್ಸುಮಾಡಿ ಇದರಂತೆ ಏರ್ಪಡಿಸುವವರಾಗಬೇಕೆಂದು ಕೋರುತ್ತೇನೆ.

ಟೌನ್ ನಿವಾಸಿ.

ಬೆಂಗಳೂರು ಮಂಡಿ ವರ್ತಕರ ಸಂಘ.

ಕಳೆದ ೧೪ನೆ ತಾರೀಖು ಸಾಯಂಕಾಲ ೪ ಗಂಟೆಗೆ ಈ ಸಂಘದ ಪ್ರಥಮ ವರ್ಷೋತ್ಸವವು ವ್ಯಾಪಾರದ ಇಲಾಖೆಯ ಕಟ್ಟಡದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಹಳೆಯ ಮತ್ತು ಹೊಸಪೇಟೆಯ ವರ್ತಕರುಗಳಲ್ಲಿ ಬಹುಮಂದಿ ಬಂದಿದ್ದರು. ಸಂಘದ ಕಾರ್ಯದರ್ಶಿ ಮ|| ರಾ|| ಯಸ್. ಕೆ. ನರಸಿಂಹಯ್ಯನವರು ಕಳೆದ ವರ್ಷದ ರಿಪೋರ್ಟನ್ನು ಓದಿ ಸಂಘದ ಹಣ ರೂ. ೬೮೧೫-೯-೦ ಗಳ ಲೆಕ್ಕವನ್ನು ಒಪ್ಪಿಸಿದರು. ನಂತರ ಮುಂದಿನ ವರ್ಷಕ್ಕೆ ಸಂಘದ ಅಧಿಕಾರಿಗಳು ಚುನಾಯಿಸಲ್ಪಟ್ಟರು. ಮ|| ಮಂಡಿ ಹನುಮಣ್ಣನವರು ಪುನಃ ಅಧ್ಯಕ್ಷರಾಗಿರಲು ಎಲ್ಲರೂ ಒಪ್ಪಿದರು. ಮ|| ರಾ|| ರಾಚಪ್ಪ ನೂರ್ ಮಹಮ್ಮದ್ ಉಸ್ಮಾನ್ ಮತ್ತು ತಿಮ್ಮಯ್ಯನವರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಮ|| ರಾ|| ಯಸ್. ಕೆ. ನರಸಿಂಹಯ್ಯನವರೂ ಅಬ್ದುಲ್‌ಲತೀಫರೂ ಕಾರ್ಯದರ್ಶಿಗಳಾಗಿಯೂ ಮ|| ರಾ|| ರಾಮಚಂದ್ರರಾವ್ ಸಿಂಧ್ಯರವರು ಖಜಾಂಚಿಯಾಗಿಯೂ ನಿಯಮಿಸಲ್ಪಟ್ಟರು. ನಂತರ ಮ|| ರಾ|| ರಾಮಚಂದ್ರರಾವ್ ಸಿಂಧ್ಯರವರು ವ್ಯಾಪಾರದ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಮ|| ರಾ|| ಕೆ. ಹೆಚ್. ರಾಮಯ್ಯ ಬಿ. ಎ. ಬಾರ್ ಅಟ್‌ಲಾ ಅವರನ್ನು ಈ ಸಭೆಯನ್ನು ಸ್ಥಾಪಿಸಿ ವರ್ತಕರಿಗೆಲ್ಲಾ ಏಕಮತ್ಯದ ವಿಚಾರವನ್ನು ತಿಳಿಯಪಡಿಸಿ ಶ್ರಮಪಟ್ಟದ್ದಕ್ಕಾಗಿ ವಂದಿಸಿದರು. ಮ|| ರಾ|| ರಾಮಯ್ಯನವರು ತಾವು ಅವರಿಗಾಗಿ ಮಾಡಿದ್ದು ತಮ್ಮ ಅಧಿಕಾರಕ್ಕೆ ಸಂಬಂಧಪಟ್ಟ ಕರ್ತವ್ಯವೇ ಹೊರತು ವಿಶೇಷವೇನೂ ಅಲ್ಲವೆಂದೂ, ಸರ್ಕಾರದವರು ಕೈಗಾರಿಗೆ ಮತ್ತು ವ್ಯಾಪಾರದ ಅಭಿವೃದ್ಧಿ ವಿಚಾರಗಳಲ್ಲಿ ಬಹಳ ಬದ್ಧಾದರರಾದುದರಿಂದ ಈ ಸಂಘವು ಮುಂದಕ್ಕೆ ಉನ್ನತಸ್ಥಿತಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದೂ ಸೂಚಿಸಿದರು. ಸಂಘದ ಅಧ್ಯಕ್ಷರಾದ ಮ|| ರಾ|| ಹನುಮಣ್ಣನವರು ಸಭೆಯವರಿಗೆಲ್ಲರಿಗೂ ಬಹಳ ಉತ್ತಮವಾದ ಫಲಾಹಾರವನ್ನು ಮಾಡಿಸಿದ್ದರು. ಕಡೆಯಲ್ಲಿ ಅವರು ಸ್ವಲ್ಪ ಮಾತನಾಡಿದನಂತರ ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ಶುಭವನ್ನು ಕೋರಿ ಸಭೆಯು ಬರಖಾಸ್ತಾಯಿತು.

ವರ್ತಕ.

ರಾಜನಿಷ್ಠಾ ಸಭೆ.

ಧಾರವಾಡ ಜಿಲ್ಲಾ ಕರ್ಜಗಿ ತಾಲ್ಲೂಕು ಪೈಕಿ ಗುತ್ತಲಗ್ರಾಮದಲ್ಲಿ ತಾ|| ೪-೧೨-೩೧ನೆ ಆದಿತ್ಯವಾರ ದಿವಸ ಧಾರ್ಮಿಕ ಸಭೆಯು ಕೂಡಿತ್ತು, ಈ ಸಭೆಗೆ ಶ್ರೀಮನ್ಮಹಾದಕ್ಷಿಣ ಕಾಶೀ ಸಿಂಹಾಸನ ಚವುಡಯ್ಯ ದಾನಪುರ ಸಂಸ್ಥಾನದ ಪಟ್ಟದಸ್ವಾಮಿ ಶ್ರೀ ನಿರೂಪಾಕ್ಷ ಒಡೆಯರವರು ದಯಮಾಡಿಸಿದ್ದರು. ಮತ್ತು ಮೆ|| ನಾಯಕ ಸಾ|| ಬ್ಯಾರಿಸ್ಟರ ಡಿ. ಡಿ. ಕಲೆಕ್ಟರವರೂ ಮೆ|| ಶಾಂತವೀರ ಒಡೆಯರವರು ಆ ಡಿ. ಡಿ. ಕಲೆಕ್ಟರವರು, ಮೆ|| ಶಿರಸಿಳ ಸಾ|| ಮಾಮಲೇದಾರರೂ ಇನ್ನು ಅನೇಕ ದೊಡ್ಡಮನುಷ್ಯರುಗಳೂ ೪-೪ ಸಾವಿರದವರೆಗೆ ಕೂಡಿದ್ದರು. ಈ ಸಭೆಯನ್ನು ಗುತ್ತಲಗ್ರಾಮದ ಯಾವತ್ತೂ ಮೆಂಬರ ಜನರು ಎರಡೇ ದಿವಸದವಧಿಯಲ್ಲಿ ಒಳ್ಳೇ ಉತ್ಸಾಹತೆಯಿಂದ ಊರನ್ನೆಲ್ಲಾ ತಳಿರುತೋರಣಗಳಿಂದಲಂಕರಿಸಿ ಸಭಾಮಂಟಪವನ್ನು ಚನ್ನಾಗಿ ನಿರ್ಮಿಸಿ ವಾದಗಳೊಡನೆ ಸಭಾಸದರನ್ನೆಲ್ಲಾ ಒಳ್ಳೇ ಆಸಕ್ತಿಯಿಂದಲೂ ಅತ್ಯುಹಾಸದಿಂದಲೂ ಸಕಲರನ್ನೂ ಇದಿರ್ಗೊಂಡು ಸಭಾಮಂಟಪಕ್ಕೆ ಬರಮಾಡಿಕೊಂಡರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಮೆ|| ಪಂಡಿತ ಸಾ|| ಎಂ. ಎ. ಎಲ್. ಎಲ್. ಬಿ. ಡಿ. ಡಿ. ಕಲೆಕ್ಟರ ದಕ್ಷಿಣಭಾಗ ಧಾರವಾಡ ಇವರು ವಹಿಸಿದ್ದರು. ಈ ಸಭೆಯ ಸ್ವಾಗತ ಸಂಘಾಧ್ಯಕ್ಷರಾದ ಮ|| ರಾ|| ಕಬ್ಬಿಗ ಹಳ್ಳಿಮಠದ ಸೋಮಯ್ಯನವರು ಒಳ್ಳೇ ವ್ಯವಸ್ಥೆಯನ್ನಿಟ್ಟದ್ದು ಮೊದಲೇ ಗೊತ್ತಾದ ಮೇರೆಗೆ ಸಭೆಯು ಯಾವತ್ತು ಕಾರ್ಯಕ್ರಮಗಳು ಸುಲಲಿತವಾಗಿ ನಡೆದುವು. ಮೊದಲೇ ಗೊತ್ತಾಗಿದ್ದ ಜನರ ಭಾಷಣಗಳಾಗಿ ಮ|| ಶಾಂತ ಒಡೆಯರವರು ವಾಡಿಕೆಯ ವಾಕ್ಪಟುತ್ವದಿಂದ ರಾಜನಿಷ್ಠಾ ಯುವರಾಜರವರ ಸ್ವಾಗತ ಅಸಹಕಾರ ನಿಷೇಧ, ಸಕ್ತಿಶಿಕ್ಷಣದವಶ್ಯಕತೆ ಮೊದಲಾದ ವಿಷಯಗಳನ್ನೆಲ್ಲಾ ಸರ್ವರಿಗೂ ತಿಳಿಯುವಂತೆ ಒಳ್ಳೇ ಮಾರ್ಮಿಕ ರೀತಿಯಿಂದ ಸುಶ್ರಾವ್ಯವಾಗಿ ಜನರಿಗೆ ತಿಳಿಯಹೇಳಿದರು. ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರವರು ಮಾನವೀಧರ್ಮ ವ ರಾಜನಿಷ್ಠಾ ಇವುಗಳ ಮೇಲೆ ಶಾಸ್ತ್ರೋಕ್ತವಾಗಿ ಉಪನ್ಯಾಸಮಾಡಿ ಜನರಲ್ಲಿದ್ದ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸಿದರು. ಅನಂತರ ಪ್ರೆಸಿಡೆಂಟ್ ಸಾ|| ರವರು ಈ ಕರ್ನಾಟಕದಲ್ಲಿ ಒಡೆಯರ ಸಹೋದರರ ಪ್ರಸಿದ್ಧವಾಕ್ಪಟುತ್ವವನ್ನು ಶ್ಲಾಘಿಸಿ ಸೂಚನೆಯ ಮೇರೆಗೆ ಈ ಊರಲ್ಲಿಯೂ ಒಂದು ರಾಜನಿಷ್ಠಾ ಸಭೆಯನ್ನು ಸ್ಥಾಪಿಸಿದ ಬಳಿಕ ಪುರಪ್ರಮುಖರನೇಕರು ಸದರಿ ಸಂಸ್ಥೆಯ ಮೆಂಬರರಾದರು. ಇಷ್ಟಾದನಂತರ ಮಿ|| ಪುಟ್ಟರಾಜ ಒಡೆಯರವರು ರಾಜನಿಷ್ಠಾ ಯುವರಾಜರವರ ಸ್ವಾಗತ ಸಕ್ತಿಶಿಕ್ಷಣದವಶ್ಯಕತೆ, ಮತ್ತು ಇವಕ್ಕೆ ಹೊಂದಬೇಕಾದ ಅನೇಕ ಹೆಚ್ಚಿನ ತೆರಗೆ ಜನರ ಒಪ್ಪಿಗೆ ಈ ಠರಾವುಗಳು ಪಾಸಾಗಬೇಕೆಂದು ತಂದ ಸೂಚನೆಯ ಮೇರೆಗೆ ಸರ್ವರೂ ಒಪ್ಪಿ ಸರ್ವಾನುಮತದಿಂದ ಈ ಠರಾವುಗಳು ಪಾಸಾದವು. ನಂತರ ಹಾರ ತುರಾಯಿಗಳನ್ನು ವಿನಿಯೋಗಿಸಿದಬಳಿಕ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ಕದಡಿ-ರಾಜನಿಷ್ಠ ಪ್ರಜಾಸಂಘ.

ತಾ|| ೭-೧೨-೩೧ನೆ ದಿವಸ ಶ್ರೀ ರಾಮಲಿಂಗದೇವರ ಗುಡಿಯ ಮುಂದಿನ ಚಪ್ಪರದಲ್ಲಿ ಇಲ್ಲಿಯ ರಾಜನಿಷ್ಠ ಪ್ರಜಾಸಂಘದ ಕೆಲಸವನ್ನು ವಹಿಸುವದಕ್ಕೆ ಒಂದು ಕಮಿಟಿಯನ್ನು ಗೊತ್ತುಪಡಿಸುವ ಸಲುವಾಗಿ ಮ|| ರಾ|| ಕುರಗೋಡಗೌಡ ಪಾಟೀಲ ಸಾ|| ಹೊನ್ನಾಪುರ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ಕೂಡಿತ್ತು ಸುಮಾರು ೩೫೦ ಜನರು ಹಾಜರಿದ್ದರು. ಸಭೆಗೆ ಗದಗಿನಿಂದ ಬಂದ ಮ|| ರಾ|| ಕಂಬಳಯ್ಯ ಹಿಟ್ಟಿನಮಠದ ಮ|| ಶಿವಪ್ಪ ವೀಣೇಕರ ಮ|| ಗುರುಪಾದಪ್ಪ ಕಲ್ಯಾಣಶೆಟ್ಟಿ ಮ|| ಮುದಿಯಪ್ಪ ಬಳ್ಳೊಳ್ಳಿಹಾಗೂ ಮ|| ಭರಮಗೌಡಾ ಪಾಟೀಲ ಕದಡಿ ಇವರೆಲ್ಲರ ಭಾಷಣಗಳು ಸಾಮಾಜಿಕ ಧಾರ್ಮಿಕ ಅಸಹಕಾರದಿಂದಾಗುವ ಅನಿಷ್ಟ ಮೊದಲಾದ ವಿಷಯಗಳ ಮೇಲೆ ಒಳ್ಳೇ ಬೋಧಪ್ರದವಾಗಿ ಹೇಳಲ್ಪಟ್ಟವು. ನಂತರ ಒಂದು ಕಮಿಟಿಯನ್ನು ಗೊತ್ತುಪಡಿಸಿ ಪಂಚಮಜಾರ್ಜರ ಮತ್ತು ಶಿರಸಂಗಿ ದೇಶಾಯರ ಜಯಘೋಷದೊಡನೆ ಸಭೆಯು ವಿಸರ್ಜಿತವಾಯಿತು.

ಬಿ. ಪೋಲೀಸ ಪಾಟೀಲ.

ಧಾರ್ಮಿಕ ಸಭೆ.

ತಾ|| ೧೭-೧೨-೩೧ನೆ ದಿವಸ ಶ್ರೀ ಮನ್ಮಹಾದಕ್ಷಿಣ ಕಾಶೀಸಿಂಹಾಸನ ಚವುಡಯ್ಯ ದಾನಪುರ ಸಂಸ್ಥಾನದ ಪಟ್ಟದ ಮಹಾಸ್ವಾಮಿಗಳ ಉದಾರಾಶ್ರಯದಿಂದ ಸದರಿ ಚೌಡಯ್ಯ ದಾನಪುರದಲ್ಲಿ ಧಾರ್ಮಿಕ ಸಭೆಯು ಕೂಡಿತ್ತು. ಈ ಸಭೆಗೆ ಮೆ|| ಡಿಸ್ಟ್ರಿಕ್ಟ್ ಡಿ. ಕಲೆಕ್ಟರರಾದ ಮೆ|| ಪಂಡಿತ ಸಾ|| ಧಾರವಾಡ ಇವರು ಅಧ್ಯಕ್ಷರಾಗಿದ್ದರು. ಈ ಸಭೆಗೆ ತಾಲ್ಲೂಕು ಅಮಲ್ದಾರರೂ ಇತರ ಅನೇಕ ದೊಡ್ಡಮನುಷ್ಯರೂ ಬಹುಜನರು ಕೂಡಿದ್ದುದರಿಂದ ಸಭೆಯು ಒಳ್ಳೇ ಶೋಭಾಯಮಾನವಾಗಿದ್ದಿತು. ಈ ಸಭೆಯ ಸ್ವಾಗತಸಂಘದ ಅಧ್ಯಕ್ಷರಾಗಿದ್ದ ಮಿ|| ಪುಟ್ಟರಾಜ ಒಡೆಯರವರೂ ಇಲ್ಲಿಯ ಇತರ ಗೃಹಸ್ಥರೂ ಒಳ್ಳೇ ಏರ್ಪಾಟನ್ನು ಮಾಡಿದ್ದರು. ಈ ಸಭೆಯಲ್ಲಿ ರಾಜನಿಷ್ಠಾ ಶ್ರೀಮನ್ ಯುವರಾಜರವರು ಹಿಂದೂಸ್ಥಾನಕ್ಕೆ ಬಂದದ್ದಕ್ಕೆ ಸಂತೋಷ ಪ್ರದರ್ಶನ ಮತ್ತು ಅವರ ಪ್ರವಾಸವು ಸುಖಕರವಾಗುವ ಬಗ್ಗೆ ಮತ್ತು ಸಕ್ತಿಶಿಕ್ಷಣದ ಅವಶ್ಯಕತೆ ಮುಂತಾದ ವಿಷಯಗಳ ಬಗ್ಗೆ ಮೆ|| ಶಾಂತಒಡೆಯರವರು ಡಿ. ಡಿ. ಕಲೆಕ್ಟರವರು ಬಹಳ ಮನೋಹರವಾಗಿ ಜನರ ಮನಸ್ಸಿಗೆ ತಟ್ಟುವಂತೆ ಮಾತಾಡಿದರು. ಇವರಂತೆ ಅನೇಕ ಮಂದಿ ಭಾಷಣಗಳನ್ನು ಇದೇ ವಿಷಯದ ಬಗ್ಗೆ ಬಹಳ ಚನ್ನಾಗಿ ಮಾಡಿದಬಳಿಕ ಮೇಲ್ಕಂಡ ಠರಾವುಗಳು ಸರ್ವಾನುಮತದಿಂದ ಪಾಸಾದವು. ಇದೇ ಸ್ಥಳದಲ್ಲಿ ೧೯೧೮ನೆ ಇದೇ ನವಂಬರ ತಿಂಗಳಲ್ಲಿ ರಿಕ್ರೂಟ್ ಕೂಡಿಸಲು ಸಭೆಮಾಡಿದ ದಿವಸವೇ ವಿಲಾಯತಿಯಲ್ಲಿ ಭಯಂಕರ ಯುದ್ಧದ ಪರಿಸಮಾಪ್ತಿಯಾಯಿತೋ ಅಂಥ ಪವಿತ್ರಸ್ಥಾನದಲ್ಲಿ ಈಗಲೂ ಸಭೆಕೂಡಿದ್ದರಿಂದ ಈ ಅಸಹಕಾರದ ಭಯಂಕರ ಚಳವಳಿಯೂ ಪರಿಸಮಾಪ್ತಿಯಾಗಿ ದೇಶದಲ್ಲೆಲ್ಲಾ ಶಾಂತಿಯುಂಟಾಗಲೆಂದು ಸರ್ವರೂ ಜಯಘೋಷಮಾಡಿದನಂತರ ಸಭೆಯ ವಿಸರ್ಜನೆಯಾಯಿತು.

ಪ್ರೇಕ್ಷಕ.

ರಾಯಚೂರು ಜಿಲ್ಲೆಯ ಸುದ್ದಿವು.

ಇದೇ ನೈಜಾಮ ಪ್ರಾಂತದಲ್ಲಿ ಹೆಸರೊಂದಿದ ಸದರಿ ಪಟ್ಟಣದ ವೀರಶೈವ ಮಂಡಲಿಯನ್ನು ಯೇನಕೇನಪ್ರಕಾರದಿಂದ ಸುಧಾರಿಸಬೇಕೆಂದು ಎಷ್ಟು ಪ್ರಯತ್ನಿಸಿದರೂ ಬಯಕೆಯು ಪೂರ್ತಿಯಾಗದೆ ವಿಫಲವಾಗುತ್ತ ಬಂದದ್ದು, ಗತಿಸಿದ ಇದೇ ದುರ್ಮತಿ ಸಂ|| ವೈಶಾಖ ಶು|| ೨ ಸೋಮವಾರದಲ್ಲಿ ಶ್ರೀ ಬಸವೇಶ್ವರಜಯಂತ್ಯುತ್ಸವವು ವಿಜೃಂಭಣೆಯಿಂದ ಜರುಗಿತಲ್ಲದೆ ಆ ದಿನ ಸಾಯಂಕಾಲ ೯ ಗಂಟೆಗೆ ಸೋಮವಾರಪೇಟೆ ಹಿರೇಮಠದಲ್ಲಿ ಯಾವತ್ತು ವಿರಕ್ತರು ಸದರಿ ಮಠಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಆಕಸ್ಮಿಕವಾಗಿ ಆಗಮಿಸಿದ ವೇ|| ಚನ್ನಬಸವಶಾಸ್ತ್ರಿಗಳು ಮಠಿಚಿಡ ಇವರು ತಮ್ಮ ಅಸ್ಖಲಿತವಾದ ಸರಸವಾಣಿಯಿಂದ ಶ್ರೀ ಜಯಂತಿಯ ಉದ್ದೇಶವನ್ನೂ ಮುಖ್ಯ ಮಾಡಿದ ಬಸವೇಶನುಪಕಾರವನ್ನೂ ಹೇಳಿದುದಲ್ಲದೆ, ಇದರಂತೆಯೇ ಇನ್ನುಮೇಲಾದರೂ ಶ್ರೀ ಜಯಂತ್ಯಿಯ ಸ್ಮಾರಕವಾಗಿ ಒಂದು ಪಾಕ್ಷಿಕಪರಿಷತ್ತು ಅಂದರೆ ಪ್ರತಿಯೊಂದು ಪಕ್ಷಕ್ಕೂ ಇದೇ ರೀತಿ ಎಲ್ಲರೂ ನೆರೆಯಬೇಕೆಂತಲೂ ಮಹತತ್ವವನ್ನು ತಿಳಿದುಕೊಳ್ಳಬೇಕೆಂತಲೂ ಏರ್ಪಡಿಸಿದರು. ಆ ಮೇಲೆ ಇಲ್ಲಿನ ಸದ್ಭಕ್ತರ ಕೋರಿಕೆಯಂತೆ ಸದರಿ ಶಾಸ್ತ್ರಿಗಳು ಪರಿಷತ್ತಿನ ಮುಖ್ಯ ಚಾಲಕರಾಗುವುದಕ್ಕೆ ಒಪ್ಪಿಕೊಂಡು ಇದುವರೆಗೂ ಆ ಕಾರ್ಯವನ್ನು ಯಥಾರೀತಿ ನಡೆಯಿಸುತ್ತಿರುವರು. ಅಲ್ಲದೆ ಸದರಿ ಪರಿಷತ್ತಿನಲ್ಲಿ ತಾಲೀಮ್ಯಾಪಕವರ್ಗವೂ ಸಂಗೀತಮಂಡಲಿಯೂ ವಿದ್ಯಾರ್ಥಿಗಳೂ **ಇತರ ಭಕ್ತ ಸಮುದಾಯವೂ ಯಥಾಯೋಗ್ಯ ಉಪನ್ಯಾಸಗಳನ್ನು ಮತತತ್ವರೀತ್ಯಾ ಹೇಳುತ್ತಿರುವರು. ಕಳೆದ ಪಕ್ಷದಲ್ಲಿ (ಅಂದರೆ) ಕಾರ್ತಿಕ ಬಹುಳ ೧ ಮತ್ತು ೨ ಗೆಯಲ್ಲಿ ಯಥಾಪ್ರಕಾರ ಜನ ಸಮೂಹವು ಸಭಾಮಂಟಪದಲ್ಲಿ ಕಿಕ್ಕಿರಿದಿದ್ದಿತು. ಕೂಡಲೇ ಗವಾಯಿಗಳ ಶಿವಕಥೆಯಾದ**

ರಾಜಧಾನಿಯ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕಸಭಾ ಲಿಮಿಟೆಡ್‌ರವರು ಕಳೆದ ಶನಿವಾರ ರಾಜಧಾನಿಯ ಟವ್ನ್‌ಹಾಲಿನಲ್ಲಿ ವಿರಾಟಪರ್ವವೆಂಬ ಮಹಾಭಾರತದಲ್ಲುಕ್ತವಾಗಿರುವ ಪಾಂಡವರ ಅಜ್ಞಾತವಾಸದ ಕಥಾಭಾಗವನ್ನು ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ಹೆಚ್ಚಾಗಿದ್ದಿತು. ಸಭೆಯವರು ಸೋಫಾ ಕುರ್ಚಿ ಬೆಂಚು ಮೊದಲಾದ ಆಸನಗಳನ್ನು ಸ್ವಂತವಾಗಿ ಏರ್ಪಡಿಸಿಕೊಂಡಿರುವುದರಿಂದ ಆ ರಾತ್ರಿಯ ಸ್ಥಳಾನುಕೂಲತೆಯೂ ಇತರ ಏರ್ಪಾಟುಗಳೂ ಬಹಳ ತೃಪ್ತಿಕರವಾಗಿದ್ದುವು. ಪ್ರತಿಯೊಂದು ಪಾತ್ರದವರೂ ಉತ್ತಮವಾಗಿ ಅಭಿನಯಿಸಿದರಲ್ಲದೆ ದ್ರೌಪದಿಯ ಪಾತ್ರವನ್ನು ವಹಿಸಿದ್ದ ಮ|| ಎಲ್. ಸುಬ್ಬಣ್ಣನವರು ವ್ಯಾಮೋಹಿತನಾದ ಕೀಚಕನ ಅಭಿಲಾಷೆಯನ್ನು ತಿರಸ್ಕರಿಸುವ ಕಾಲದಲ್ಲೂ ಬಲಾತ್ಕರಿಸಿ ಹಿಡಿದುಕೊಳ್ಳಲು ಬೆನ್ನಹತ್ತಿ ಬರುವಾಗ ದ್ರೌಪದಿಯು ವಿರಾಟನಸಭೆಗೋಡಿಬಂದು ನೆಲದಮೇಲೆ ಅಂಗಲಾಚಿಬಿದ್ದುದೂ ನೋಟಕರ ಮನಸ್ಸನ್ನು ಕರಗಿಸಿ ಭ್ರಮಿತರನ್ನಾಗಿ ಮಾಡತಕ್ಕುದಾಗಿದ್ದಿತು. ಇವರ ಸ್ವಭಾವವಾದ ರೂಪಲಾವಣ್ಯವು ಇವರ ಪರಿಚಿತರಿಗೂ ಕೂಡ ಸ್ತ್ರೀ ಪಾತ್ರವನ್ನು ವಹಿಸಿದ ವೇಳೆಯಲ್ಲಿ ಪುರುಷನೆಂದು ಗುರ್ತಿಸುವುದು ಸಾಧ್ಯವಲ್ಲವು. ಮತ್ತು ಕಾಲಕ್ಕೂ ಪಾತ್ರಕ್ಕೂ ತಕ್ಕಭಿನಯವನ್ನು ಇವರಂತೆ ಮಾಡುವವರು ಬಹಳ ವಿರಳ. ದೊಡ್ಡ ಶ್ರೀಮಂತರು, ವಿದ್ಯಾವಂತರು ಕಲಾಭಿರುಚಿಯುಳ್ಳವರು ಆದವರುಗಳಿಂದ ಷೇರುಗಳನ್ನು ಕೊಟ್ಟು ಲಿಮಿಟೆಡ್ ಕಂಪೆನಿಮಾಡಿ ಡೈರೆಕ್ಟರುಗಳಾಗಿ ನಿಂತು ಈ ಸಭೆಯನ್ನು ನಡಿಸುತ್ತಿರುವುದರಿಂದ ಇದು ಚ್ಯುತಿಯಿಲ್ಲದೆ ಅದ್ವಿತೀಯವಾಗಿ ನಡೆಯುತ್ತೆಂಬುದರಲ್ಲಿ ಸಂದೇಹವಿಲ್ಲವು. ಇನ್ನೂ ೧-೨ ವಾರಗಳವರೆಗೆ ಟವ್ನ್‌ಹಾಲ್ ಬಿಡುವಾಗಿರುವುದಿಲ್ಲವಾದುದರಿಂದ ಈ ಸಭೆಯವರು ನಾಟಕವನ್ನಾಡಲು ಎತ್ನವಿಲ್ಲವಾಗಿದೆ.

ಸುವರ್ಣಕಲ್ಪನೆ.

ಮೂಲಲೋಹಗಳಲ್ಲಿ ಒಂದಾದ ಸುವರ್ಣವು ಭೂಗರ್ಭದಲ್ಲಿ ಸಿಕ್ಕುವುದು ಬಹಳ ಕಡಿಮೆಯಾಗಿರುವುದರಿಂದಲೂ, ಅದರ ಕಾಂತಿಯು ಇತರ ಲೋಹಗಳಿಗಿಂತ ಉತ್ಕೃಷ್ಟವಾಗಿರುವುದರಿಂದಲೂ ಅದರ ಬೆಲೆಯು ಹೆಚ್ಚಿಕೊಂಡು, ನಾಣ್ಯಾದಿಗಳಿಗೂ ಆಭರಣಗಳಿಗೂ ಆ ಲೋಹವು ಉಪಯೋಗಿಸಲ್ಪಡುತ್ತಿರುವುದುಂಟಷ್ಟೆ. ಇದನ್ನು ರಸಬಂಧನದಿಂದಲೂ ತಾಮ್ರಶುದ್ಧಿಯಿಂದಲೂ ನಿರ್ಮಿಸಬಹುದೆಂಬ ಭ್ರಮೆಯಿಂದ ನಮ್ಮ ಭಾರತೀಯರಲ್ಲನೇಕರು ವಾದ ಮಾಡಿಮಾಡಿ ಬೇಸತ್ತುಹೋಗಿರುವರು. ಆದರೆ ಜರ್ಮನಿಯ ರಸಾಯನ ಶಾಸ್ತ್ರಜ್ಞನಾದ ಒಬ್ಬಗೆಣೆಯನು ಭಂಗಾರವನ್ನು ಇತರ ಸಾಮಾನ್ಯ ಲೋಹಗಳಿಂದ ನಿರ್ಮಿಸುವ ವಿಧಾನವನ್ನು ಕಂಡುಹಿಡಿದು ಕೃತಾರ್ಥನಾಗಿದ್ದಾನಂತೆ. ಈತನು ಪ್ರತ್ಯಕ್ಷವಾಗಿ ಮಾಡಿ ತೋರಿಸಿದುದನ್ನು ಪ್ರೊಫೆಸರ್ ಇರ್ವಿಂಗ್ ಫಿಷರ್ ಎಂಬುವರು ಕಣ್ಣಾರ ಕಂಡು ಅದನ್ನು ಲಂಡನ್ ಪಟ್ಟಣದಲ್ಲಿ ವಿವರಿಸಿ ಹೇಳಿದ್ದಾರೆ.

ಈ ಜರ್ಮನ್ ರಸಾಯನ ಶಾಸ್ತ್ರಜ್ಞನು ಒಬ್ಬ ಫ್ರೆಂಚ್ ಶಾಸ್ತ್ರಜ್ಞನ ಶಿಷ್ಯನಂತೆ. ಇವನಿಗೆ ಇತರ ವಸ್ತುಗಳನ್ನು ನಿರ್ಮಿಸುವಂತೆಯೇ ಭಂಗಾರವನ್ನೂ ನಿರ್ಮಿಸಬಹುದೆಂಬ ನಂಬುಗೆಯು ಪೂರ್ಣವಾಗಿದ್ದಿತಂತೆ. ಇದರ ಸಿದ್ಧಿಗಾಗಿ ಈತನು ೧೪ ವರ್ಷ ಕೆಲಸಮಾಡಿ ತನ್ನ ಸರ್ವಸ್ವವನ್ನೂ ಕಳೆದುಕೊಂಡು, ಕಡೆಗೆ ಪಾದರಸದಿಂದ ಭಂಗಾರವನ್ನು ನಿರ್ಮಿಸುವ ವಿಧಾನದಲ್ಲಿ ಜಯಶೀಲನಾದನು. ಈತನ ಹೆಸರು ಬಾಂಡು ಎಂಬುದಾಗಿ. ಈತನು ತನ್ನ ಗುರುವಾದ ಫ್ರೆಂಚ್ ಶಾಸ್ತ್ರಜ್ಞನೊಡನೆ ಕೂಡಿ ಕೆಲಸಮಾಡಿ ಇನ್ನು ೩ ವಾರಗಳೊಳಗಾಗಿ ಬೆಸ್ವಾಟರ್ ಪಟ್ಟಣದಲ್ಲಿ ಬೇಕಾದಷ್ಟು ಭಂಗಾರವನ್ನು ನಿರ್ಮಿಸಿಕೊಡುವುದಾಗಿ ಹೇಳುತ್ತಿರುವನಂತೆ. ನಿನ್ನೆಯ ದಿನ ಈತನು ಸ್ವತಃ ನಿರ್ಮಿಸಿದ ಭಂಗಾರವನ್ನು ಲಂಡನ್ ಡೇಲಿ ಎಕ್ಸ್‌ಪ್ರೆಸ್ ಪತ್ರಿಕಾಪ್ರತಿನಿಧಿಗೆ ತೋರಿಸಿದನೆಂದು ಆ ಪತ್ರಿಕೆಯು ಹೇಳಿಕೊಂಡಿರುತ್ತದೆ. ರಸದಿಂದ ಭಂಗಾರವನ್ನು ನಿರ್ಮಿಸುವ ಈ ವಿಧಾನದಲ್ಲಿ ರೇಡಿಯಂ ಎಂಬ ಅತ್ಯಮೌಲ್ಯವಾದ ಲೋಹವು ಕೂಡ ಸ್ವಲ್ಪ ದೊರೆಯುವುದೆಂಬುದು ಮತ್ತಷ್ಟು ಅದ್ಭುತವಾಗಿದೆ. ಈ ಸುದ್ದಿಯನ್ನು ಕೇಳಿ ಒಬ್ಬ ಆರ್ಥಿಕ ಶಾಸ್ತ್ರಜ್ಞನು ಹೀಗೆ ನುಡಿದನಂತೆ—ಪ್ರಪಂಚದಲ್ಲೆಲ್ಲಾ ಈಗ ಭಂಗಾರದ ನಾಣ್ಯವು ಬಳಕೆಯಲ್ಲಿರುವುದು. ಇನ್ನು ವಿಪರೀತವಾಗಿ ಭಂಗಾರವನ್ನು ನಿರ್ಮಿಸುವುದಾದರೆ ಆರ್ಥಿಕಸ್ಥಿತಿಯೆಲ್ಲಾ ತಾರುಮಾರಾಗುವುದು. ಪ್ರಪಂಚದ ಚಿನ್ನದಲ್ಲಿ ಹೆಚ್ಚು ಭಾಗವು ಅಮೇರಿಕಾದಲ್ಲೇ ಇರುವುದು. ಅದೆಲ್ಲಾ ವ್ಯರ್ಥವಾಗುವುದು. ಆಭರಣಗಳ ಬೆಲೆಯು ಇಳಿದುಹೋಗುವುದು. ಭಂಗಾರವು ಕೂಡ ಕಬ್ಬಿಣ, ಸೀಸ, ತಾಮ್ರ ಮೊದಲಾದುವುಗಳಂತೆ ಸಾಮಾನ್ಯ ಲೋಹವಾಗುವುದು. ಆಗ್ಗೆ ಪ್ಲಾಟಿನಂ ಮೊದಲಾದ ಇನ್ನಾವ ದುರ್ಲಭ ಲೋಹವನ್ನಾಗಲಿ ನಾಣ್ಯಗಳಿಗೆ ಉಪಯೋಗಿಸಿಕೊಳ್ಳಬೇಕಾಗುವುದು.

ಈ ಜರ್ಮನ್ ಬಾಂಡು ಪಂಡಿತನು ಒಂದು ತೆರದ ಅತ್ಯಂತ ದೃಢವಾದ ಮೂಸೆಗೆ ಪಾದರಸವನ್ನು ತುಂಬಿ ಅದಕ್ಕೆ ಒಂದು ಭಾಗದಲ್ಲಿ ಮಾಡಿರುವ ರಂಧ್ರದಿಂದ ರಸದೊಳಗಿರುವ ವಿದ್ಯುತ್ತನ್ನು ಹೊರಕ್ಕೆ ಹೋಗುವಂತೆ ಒಂದು ತೆರದ ಪ್ರಯೋಗವನ್ನು ಮಾಡುವನಂತೆ. ವಿದ್ಯುಚ್ಛಕ್ತಿ ಪ್ರಯೋಗದಿಂದಲೇ ಈ ಕಾರ್ಯವು ನಡೆಯುವುದು. ಅದರೊಳಗಿರುವ ರಸವನ್ನು ನಿಮಿಷಕ್ಕೆ ೩ ಅಥವಾ ೪ ಸಾವಿರ ವೇಳೆ ಬಡಿಯುವಂಥ ಯಾಂತ್ರಿಕ ರಚನೆಯಿರುವುದು. ಆ ಬಡಿತದಿಂದ ಸ್ವಲ್ಪ ಕಾಲದೊಳಗೇ ಪಾದರಸದ ಪರಿಮಾಣವು ತಗ್ಗಿ ಒಂದು ತೆರದ ಬೂದಿಬಣ್ಣದ ಪುಡಿಯು ನಿಲ್ಲುವುದಂತೆ. ಅದೇ ಕಡೆಗೆ ಭಂಗಾರವಾಗಿ ಪರಿಣಮಿಸುವುದು. ಆ ಪುಡಿಗೆ ೧೯೬೨ ಡಿಗ್ರಿಗಳ ಉಷ್ಣದವರೆಗೆ ಸೇಕ ಕೊಟ್ಟರೆ ಕರಗಿಹೋಗುವುದು. ಇದನ್ನು ರಾಜದ್ರಾವಕ (ಅಕ್ವಾರೇಜಿಯಾ) ದ ಹೊರತು ಇನ್ನಾವ ದ್ರಾವಕಕ್ಕೆ ಹಾಕಿದರೂ ಭಂಗಾರದ ರೀತಿಯಲ್ಲಿಯೇ ಇರುವುದು.

ಈಗ ೧೦೦ ಪೌನು ಪಾದರಸಕ್ಕೆ ೧೬೦ ರೂ.ಗಳ ಬೆಲೆಯಿರಬಹುದು. ಇಂಥ ರಸವನ್ನು ಮೇಲೆಕಂಡ ಪಂಡಿತನ ರಚನೆಯಿಂದ ಭಂಗಾರವನ್ನು ಮಾಡಿದರೆ ೧೦೦ ಪೌನು ರಸದಲ್ಲಿ ೯೦ ಪೌನು ಭಂಗಾರವು ಹುಟ್ಟುವುದಂತೆ. ಆಗ ೧ ಪೌನು ಭಂಗಾರಕ್ಕೆ ೫೦ ರೂ.ನೊಳಗೇ ಬೆಲೆ ಬೀಳುವುದು. ಎಂದರೆ ಸ್ವಲ್ಪ ಹೆಚ್ಚುಕಡಿಮೆ ೧ತೊಲೆ ಭಂಗಾರಕ್ಕೆ ೧ರೂಪಾಯಿ ಚಿಲ್ಲರೆಬೆಲೆ ಬೀಳುವಂತಾಯಿತು. ಆಗ ಚಿನ್ನದ ಯೋಗ್ಯತೆಯೂ ಪ್ರಪಂಚದ ಸ್ಥಿತಿಯೂ ಹೇಗೆ ತಲೆಕೆಳಕಾಗಬಹುದೆಂಬುದನ್ನು ವಾಚಕರೇ ಯೋಚಿಸಿಕೊಳ್ಳಬೇಕು.

ಹಿಂದೊಂದು ಸಲ ಭರತಖಂಡ ಸರ್ಕಾರದವರು ಸವರನ್ ಬೆಲೆಯು ೧೦ ರೂ.ಗೆ ಇಳಿಯಿಸಲ್ಪಡುವುದೆಂದು ಸಾರಿದಾಗ ಪ್ರಜೆಗಳಲ್ಲನೇಕರು ತಮ್ಮಲ್ಲಿದ್ದ ಸವರನ್ನುಗಳನ್ನೆಲ್ಲಾ ಅವಸರವಸರವಾಗಿ ಮಾರಿಕೊಂಡುಬಿಟ್ಟರು. ಈಗಣ ಈ ಭಂಗಾರ ರಚನೆಯೂ ಅದರ ೨ನೆ ಪರ್ಯಾಯವೋ ಹೇಗೋ ನೋಡಬೇಕು.

ಸರ್ಕಾರದ ಉದ್ಯೋಗಗಳು.

೧೯೨೧ ನೆಯ ನವಂಬರು ೨೮ನೆಯ ಮರ್ಕುಂ ಇ. ಎ. ೨೦೯೩—೧೬೨ ಇ. ಎ. ೧೪-೨೧-೬ ನೆಯ ನವಂಬರ್ ಹುಕುಂ.

ಸಂಸ್ಥಾನದಲ್ಲಿ ಸುಪೀರಿಯರ್ ಸರ್ವಿಸ್ಸಿಗೆ ಸೇರಿದ ಲಿಖಾವಟ್ ಬಾಬಿನ ಖಾಲಿ ನೌಕರಿಗಳನ್ನು ಭರ್ತಿಮಾಡುವುದನ್ನು ಕ್ರಮಪಡಿಸುವ ಭಾಗದಲ್ಲಿ ಹೆಚ್ಚು ತಿಳಿವಳಿಕೆಗಳನ್ನು ಕೊಡತಕ್ಕಬಗ್ಗೆ ಸಾದರಾದ ಹುಕುಂ:—

ಕೆಳಗೆಕಂಡ ಕಾಗದಪತ್ರಗಳನ್ನು ಓದಲಾಯಿತು :—

ಸರ್ಕಾರಿ ನೌಕರಿಗಳ ವಿಷಯದಲ್ಲಿ ಮೊಕರರಾತಿಗಳ ಮತ್ತು ಬಡ್ತಿಗಳ ಸಂಬಂಧವಾಗಿ ಸಾಮಾನ್ಯ ತಿಳಿವಳಿಕೆಗಳನ್ನು ಸಾದರ್ಮಾಡಿದ ೧೯೨೧ ನೆಯ ನವಂಬರ್ ೨೮ ನೆಯ ಮರ್ಕುಂ ಇ. ಎ. ೨೦೧೩-೯೨—ಇ. ಎ. ೧೪-೨೧ ೬ನೆಯ ನಂಬರಿನ ಸರ್ಕಾರಿ ಹುಕುಮಿನ ೨ ನೆಯ ಪ್ಯಾರಾ.

ಹುಕುಂ ನಂ. ಇ. ೧. ೨೦೯೩-೧೬೨—ಇ. ಎ. ೧೪-೨೧-೬.

ತಾ|| ೨೮ ನೆಯ ನವಂಬರು ೧೯೨೧.

ಸುಪೀರಿಯರ್ ಸರ್ವಿಸ್ಸಿಗೆ ಸೇರಿದ ಲಿಖಾವಟ್ ವರ್ಗದ ಸಿಬ್ಬಂದಿಗಳಲ್ಲಿ ಖಾಲಿಬೀಳುವ ನೌಕರಿಗಳನ್ನು ಭರ್ತಿಮಾಡುವುದನ್ನು ಕ್ರಮಪಡಿಸುವಬಗ್ಗೆ ಸರ್ಕಾರದವರು ಕೆಳಗೆಕಂಡ ಹೆಚ್ಚು ತಿಳಿವಳಿಕೆಗಳನ್ನು ಸಾದರ್ಮಾಡಿರುತ್ತಾರೆ.

೨. ಈ ಹುಕುಮಿನ ಉದ್ದೇಶಗಳಿಗೆ ಲಿಖಾವಟ್ ವರ್ಗದ ನೌಕರಿಗಳೆಲ್ಲವೂ ನಾಲ್ಕು ತರಗತಿಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ.—

(೧) ತಲಬು ೨೦ ರೂಪಾಯಿಗೆ ಮೀರದಿರುವ ನೌಕರಿಗಳು.

(೨) ೨೦ ರೂಪಾಯಿಗೆ ಮೇಲ್ಪಟ್ಟು, ಆದರೆ ೩೦ ರೂಪಾಯಿಗೆ ಮೀರದ ತಲಬುಳ್ಳ ನೌಕರಿಗಳು.

(೩) ೩೦ ರೂಪಾಯಿಗೆ ಮೇಲ್ಪಟ್ಟು, ಆದರೆ ೪೦ ರೂಪಾಯಿಗೆ ಮೀರದ ತಲಬುಳ್ಳ ನೌಕರಿಗಳು.

(೪) ೪೦ ರೂಪಾಯಿಗೆ ಮೇಲ್ಪಟ್ಟ ತಲಬುಳ್ಳ ನೌಕರಿಗಳು.

೩. (i) ೧ ನೆಯ ತರಗತಿಯ ಖಾಲಿ ನೌಕರಿಗಳಿಗೆಲ್ಲಾ ಸೀದಾ ಹೊಸಬರನ್ನು ನೇಮಿಸತಕ್ಕದ್ದು.

(ii) ಇತರ ಪ್ರತಿಯೊಂದು ತರಗತಿಯಲ್ಲಿಯೂ ಖಾಲಿಬೀಳುವ ಪ್ರತಿ ಮೂರು ನೌಕರಿಗಳ ಪೈಕಿ ಮೊದಲೆರಡಕ್ಕೆ ಸೀದಾ ಹೊಸಬರನ್ನು ನೇಮಿಸತಕ್ಕದ್ದು ಮತ್ತು ಮೂರನೆಯದಕ್ಕೆ ಕ್ರಮವಾಗಿ ೧, ೨ ಅಥವಾ ೩ನೆ ತರಗತಿಯವರ ಪೈಕಿ ಸರಿಯಾಗಿ ಯೋಗ್ಯತೆಯುಳ್ಳವರನ್ನು ನೇಮಿಸತಕ್ಕದ್ದು.

ಆಗಾಗ್ಗೆ ವೃದ್ಧಿಹೊಂದುವ ತಲಬುಳ್ಳ ನೌಕರಿಗಳನ್ನು, ನೇಮಕವಾಗುವವರಿಗೆ ಕೊಡಲ್ಪಡುವ ತಲಬು ಯಾವ ತರಗತಿಗೆ ಸೇರುವುದೋ ಆ ತರಗತಿಗೆ ಸೇರಿದವುಗಳಂತೆ ಭಾವಿಸತಕ್ಕದ್ದು. ಸಾಮಾನ್ಯವಾಗಿ ಹೊಸಬರನ್ನು ಆಯಾ ತರಗತಿಯ ಕನಿಷ್ಠಾಂಶದ ತಲಬಿನಮೇಲೆಯೇ ನೇಮಕಮಾಡಲಾಗುವುದು. ಹೆಚ್ಚು ತಲಬಿನ ನೌಕರಿಗಳು ಖಾಲಿಬಿದ್ದಲ್ಲಿ, ಅದೇ ತರಗತಿಯಲ್ಲಿ ಕಮ್ಮಿ ತಲಬು ಪಡೆಯುತ್ತಿರುವವರನ್ನು ಕ್ರಮವಾಗಿ ಬಡ್ತಿಮಾಡಿ, ಆ ತರಗತಿಯಲ್ಲಿ ಕನಿಷ್ಠಾಂಶದ ಸಂಬಳದವನ ಸ್ಥಳಕ್ಕೆ ಹೊಸಬನನ್ನು ನೇಮಿಸತಕ್ಕದ್ದು. ಆದರೆ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನವರು ತಮ್ಮ ಪಟ್ಟಿಯಲ್ಲಿ ಯಾರನ್ನಾದರೂ ಒಂದು ತರಗತಿಯ ಕನಿಷ್ಠಾಂಶದ ಸಂಬಳಕ್ಕಿಂತಲೂ ಅಧಿಕವಾದ ಸಂಬಳಕ್ಕೆ ಲಾಯಖಾಗಿರುವರೆಂದು ತೋರಿಸಿರುವ ಸಂದರ್ಭಗಳಲ್ಲಿ ಅಂಥವರನ್ನು ಅಂಥ ಹೆಚ್ಚು ಸಂಬಳಕ್ಕೆ ನೇಮಿಸಬಹುದು. ಉದಾಹರಣೆಗಾಗಿ, ಒಬ್ಬ ಆರ್ಟ್ಸು ಮತ್ತು ಲಾ ಗ್ರಾಡ್ಯುಯೇಟು ೬೦ ರೂಪಾಯಿ ತಲಬಿಗೆ ಲಾಯಖಾಗಿರುವಂತೆ ಬೋರ್ಡಿನವರ ಪಟ್ಟಿಗಳಲ್ಲಿ ತೋರಿಸಲ್ಪಟ್ಟಿರುತ್ತಾನೆ; ಈ ಹುಕುಮಿನ ೨, ೩ ಮತ್ತು ೪ ನೆಯ ಪ್ಯಾರಾಗಳಲ್ಲಿ ಕಂಡಿರುವ ನಿಯಮಗಳನ್ನು ಲಕ್ಷ್ಯದಲ್ಲಿಡದೆ ಒಬ್ಬ ಆಫೀಸರು ಅಂಥವನನ್ನು ಸೀದಾ ೬೦ ರೂಪಾಯಿಯ ತಲಬಿನ ಮೇಲೆ ನೇಮಕಮಾಡಲು ಆಕ್ಷೇಪಣೆಯೇನೂ ಇರುವುದಿಲ್ಲ. ಅಲ್ಲದೆ ಈ ಹುಕುಮಿನ ೪ನೆಯ ಪ್ಯಾರಾವಿನಮೇರೆಗೆ ಮೇಲ್ಪಟ್ಟ ತರಗತಿಯ ನೌಕರಿಗಳಿಗಿರತಕ್ಕ ಯೋಗ್ಯತೆಯುಳ್ಳವರಾಗಿದ್ದು ಕಮ್ಮಿ ತರಗತಿಯ ನೌಕರಿಯನ್ನು ತೆಗೆದುಕೊಳ್ಳಲು ಒಪ್ಪಿದಲ್ಲಿ ಅಂಥ ಕಮ್ಮಿ ತರಗತಿಯ ಕನಿಷ್ಠಾಂಶಕ್ಕೆ ಹೆಚ್ಚಿದ ಸಂಬಳದಮೇಲೆ ಅವರನ್ನು ಮೊಕರರ್ಮಾಡಬಹುದು.

೪. ಸೀದಾ ನಾನಾ ತರಗತಿಗಳಿಗೆ ಸೇರಿಸಿಕೊಳ್ಳಲು ಅವಶ್ಯಕವಾದ ವಿದ್ಯಾ ಸಂಬಂಧವಾದ ಯೋಗ್ಯತೆಗಳನ್ನು ಈ ಕೆಳಗೆ ನಮೂದಿಸಿದೆ :—

ಒಂದನೆಯ ತರಗತಿಗೆ—ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು ಅಥವಾ ಒಂದು ಅಂಗೀಕೃತವಾದ ಕನ್ನಡ ಯಾ ಇಂಗ್ಲೀಷ್ ಹೈಸ್ಕೂಲಿನ ಐದನೆಯ ತರಗತಿಯಲ್ಲಿ ಓದಿದ್ದಾಗಿ ಸರ್ಟಿಫಿಕೇಟನ್ನು ಪಡೆದಿರತಕ್ಕದ್ದು.

ಟಿಪ್ಪಣಿ —ಕೇವಲ ವಿಶೇಷ ಸಂದರ್ಭಗಳಲ್ಲಿ ಬೋರ್ಡಿನವರು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗದಿರುವವರನ್ನೂ, ಈ ತರಗತಿಗೆ ಮೊಕರರ್ಮಾಡಲು ಅಪ್ಪಣೆಯನ್ನು ಸಹ ಕೊಡಬಹುದು.

ಎರಡನೆಯ ತರಗತಿಗೆ—ಪರಿಪೂರ್ಣವಾದ ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟು.

ಟಿಪ್ಪಣಿ—ಮೈಸೂರು ಯೂನಿವರ್ಸಿಟಿಯ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನೂ ಪರಿಪೂರ್ಣವಾದ ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟನ್ನು ಪಡೆದಿರುವವರಂತೆಯೇ ಭಾವಿಸಲಾಗುವುದು.

ಮೂರನೆಯ ತರಗತಿಗೆ—ಮೈಸೂರು ಯೂನಿವರ್ಸಿಟಿಯ ಮೊದಲನೆಯವರ್ಷದ ಬಿ. ಎ. ಪರೀಕ್ಷೆಯಲ್ಲಿ ಅಥವಾ ಒಂದು ಅಂಗೀಕೃತ ಯೂನಿವರ್ಸಿಟಿಯ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದು.

ನಾಲ್ಕನೆಯ ತರಗತಿಗೆ—ಮೈಸೂರು ಯೂನಿವರ್ಸಿಟಿಯ ಅಥವಾ ಇತರ ಅಂಗೀಕೃತ ಯೂನಿವರ್ಸಿಟಿಯ ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದು.

೫. ನೇರವಾಗಿ ಹೊಸಬರನ್ನು ನೇಮಿಸಬೇಕಾಗಿರುವ ನೌಕರಿಗಳ ದಾಮಾಷಾಯಿಯನ್ನು ಲೆಕ್ಕಿಸುವುದರಲ್ಲಿ ಮೊಕರರಾತಿಯನ್ನು ಮಂಜೂರ್ಮಾಡುವ ಅಧಿಕಾರಿಯ ಯಿಕ್ತ್ಯಾರಿಯಲ್ಲಿರುವ ನೌಕರಿಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳತಕ್ಕದ್ದು. ಉದಾಹರಣೆಗಾಗಿ, ರೆವಿನ್ಯೂ ಇಲಾಖೆಯಲ್ಲಿ (ಡಿಸ್ಟ್ರಿಕ್ಟು ಯಾ ಸಬ್‌ಡಿವಿಜನ್ ಆಫೀಸಿನಲ್ಲಿಯೇ ಆಗಲಿ ತಾಲ್ಲೂಕು ಆಫೀಸಿನಲ್ಲಿಯೇ ಆಗಲಿ) ೨೫ ರಿಂದ ೫೦ ರೂಪಾಯಿಯೊಳಗಿರುವ ನೌಕರಿಗಳೆಲ್ಲಾ ಒಂದೇ ದರ್ಜೆಗೆ ಸೇರಿದ ನೌಕರಿಗಳೆಂದು ಭಾವಿಸತಕ್ಕದ್ದು ; ಏಕೆಂದರೆ ಅವುಗಳೆಲ್ಲವೂ ಡೆಪ್ಯುಟಿಕಮಿಷನರವರಿಗೆ ವಹಿಸಲ್ಪಟ್ಟಿರುವ ಅಧಿಕಾರಕ್ಕೊಳಪಟ್ಟಿರುವುವು.

೬. ಮೇಲ್ಕಂಡ ನಿಬಂಧನೆಗಳು, ಯಾವುದಾದರೂ ನಿರ್ದಿಷ್ಟವಾದ ನೌಕರಿಗಳಿಗೆ ಅವಶ್ಯಕವಾದ ಯೋಗ್ಯತೆಗಳೆಂದು ಗೊತ್ತುಮಾಡಿ ಸರ್ಕಾರದವರು ಆಗಿಂದಾಗ್ಗೆ ಸಾದರ್ಮಾಡಬಹುದಾದ ಹುಕುಮುಗಳಿಗೆ ಒಳಪಟ್ಟಿರತಕ್ಕದ್ದು.

೭. ಮೇಲ್ಕಂಡ ೪ ನೆ ನಿಬಂಧನೆಯಲ್ಲಿ ಗೊತ್ತುಮಾಡಿರುವ ಕನಿಷ್ಠಾಂಶದ ವಿದ್ಯಾಸಂಬಂಧವಾದ ಯೋಗ್ಯತೆಗಳೂ ಮತ್ತು ೧೯೨೧ ನೆಯ ಮೇ ೧೬ ನೆಯ ಮರ್ಕುಂ ೧೮೨೬-೮೦—ಇ. ಎ. ಜಿ. ೩೦೮ ನೆಯ ನಂಬರು ಸರ್ಕಾರಿ ಹುಕುಮಿನ ೬ ನೆಯ ಪ್ಯಾರಾವನ್ನು ಅನುಸರಿಸಿ ಹಿಂದುಳಿದ ಪಂಗಡಗಳ ಜನರಿಗೆ ಹಂಗಾಮಿಯಾಗಿ ತೋರಿಸಬೇಕಾಗಿರುವ ಪ್ರಾಶಸ್ತ್ಯವೂ ಸಹ ನೌಕರಿಗೆ ಹೊಸದಾಗಿ ಸೇರಿಸಿಕೊಳ್ಳುವ ವಿಷಯಗಳಿಗೆ ಮಾತ್ರ ಅನ್ವಯಿಸುವುವು. ಕೆಳ ತರಗತಿಗಳವರನ್ನು ಮೇಲಿನ ತರಗತಿಗಳಿಗೆ ಬಡ್ತಿಮಾಡುವ ಸಂದರ್ಭಗಳಲ್ಲಿ ಸಮರ್ಥತೆ ಮತ್ತು ನಡತೆಯಿಂದೊಡಗೂಡಿದ ಸರ್ವಿಸ್ಸಿನ ಕಾಲಕ್ಕೆ ಲಕ್ಷ್ಯವನ್ನು ಕೊಡತಕ್ಕದ್ದೇ ಹೊರತು, ನೌಕರರ ಸಾಮಾನ್ಯ ವಿದ್ಯಾಸಂಬಂಧವಾದ ಯೋಗ್ಯತೆಗಳನ್ನಾಗಲಿ ಅವರ ಪಂಗಡವನ್ನಾಗಲಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

ಕೆ. ಮಾರ್ಥನ್,
ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನು ತಿಳಿಸಬೇಕು.

ಚನ್ನಪಟ್ಟಣ.

ಇದೇ ತಿಂಗಳು ಏಳನೇ ತಾರೀಖಿನ ದಿವಸ ಈ ಊರಿಗೆ ಡೆಪ್ಯುಟಿ ಕಮಿಷನ್ ಸಾಹೇಬರವರು ದಯಮಾಡಿಸುವರೆಂದು ಅವರಲ್ಲಿ ತಮ್ಮ ಅಹವಾಲ್‌ಗಳನ್ನು ಹೇಳಿಕೊಳ್ಳುವುದಕ್ಕಾಗಿ ಪಟೇಲರು ರೈತರು ಶಾನುಭೋಗರುಗಳು ಸುಮಾರು ಎರಡುಸಾವಿರಜನ ಇಲ್ಲಿನ ಟ್ರಾವಲರ್ಸ್ ಬಂಗಲೆಯಬಳಿ ಪ್ರಾತಃಕಾಲ ಹತ್ತುಗಂಟೆಗೆ ಬಂದು ಸಾಹೇಬರವರ ನಿರೀಕ್ಷಣೆಯಲ್ಲಿದ್ದರು. ಹನ್ನೊಂದುವರೆಗಂಟೆ ಸಮಯದಲ್ಲಿ ಸಾಹೇಬರು ಬಂಗಲೆಗೆ ದಯಮಾಡಿಸಿದರು. ದರ್ಶನಾಕಾಂಕ್ಷಿಗಳಾಗಿ ಬಂದಿದ್ದ ಜನಗಳೆಲ್ಲರೂ ಹೊರಗಡೆಯೇ ಕಾದುಕೊಂಡಿದ್ದರು. ಮಧ್ಯಾಹ್ನ ಒಂದೂವರೆ ಎರಡು ಗಂಟೆ ಸಮಯದಲ್ಲಿ ಸಬ್ ಡಿವಿಜನ್ ಸಾಹೇಬರವರು ದಯಮಾಡಿಸಿದರು. ಹೊರಗಡೆ ಕುಳಿತಿದ್ದ ಜನಗಳನ್ನು ನೋಡಿದೊಡನೆಯೇ ಇವರ ಮುಖವು ಕೆಂಪೇರಿತು. ಕೆಂಪೇರಿದುದಕ್ಕೆ ಕಾರಣವು ಇವರಿಗುಂಟಾದ ನಿಷ್ಕಾರಣವಾದ ಕೋಪವೆಂಬುದು ಸ್ವಲ್ಪದರಲ್ಲಿಯೇ ವ್ಯಕ್ತಪಟ್ಟಿತು. ಇವರು ಅಲ್ಲಿ ಕುಳಿತಿದ್ದ ಜನರನ್ನು ನೋಡಿ ಏನಿರಯ್ಯ ನೀವೆಲ್ಲಾ ಇಲ್ಲೇಕೆ ಬಂದಿರುವಿರಿ? ನಿಮ್ಮನ್ನು ಯಾರು ಕರಸಿದವರು? ಹೀಗೆಬಂದು ಕುಳಿತುಕೊಳ್ಳುವುದಕ್ಕೆ ನಿಮಗೇನು ಹುಚ್ಚುಹಿಡಿದಿದೆಯೋ? ಹೊರಟು ಹೋಗಿರಿ, ಎಂದು ಹೇಳಿ ಹತ್ತಿರದ್ದ ಶೇಕದಾರರನ್ನೂ ಪೋಲೀಸಿನವರನ್ನೂ ಕರೆದು ಇವರನ್ನು ಇಲ್ಲಿಂದ ಕಳುಹಿಸಿಬಿಡಿ ಎಂಬದಾಗಿ ಹೇಳಿದರು. ಪಾಪ! ಇವರ ಕೋಪಾಟೋಪವನ್ನು ರೈತರು ತಡೆಯಬಲ್ಲರೇ? ಎಲ್ಲರೂ ಭಯಗ್ರಸ್ತರಾದುದರಿಂದ ಒಬ್ಬರಾದರೂ ಮಾತಾಡಲು ಮುಂದುವರಿಯಲಿಲ್ಲ. ಏನೋ ಎಡಗೈಯಲ್ಲಿ ಎದೆಯನ್ನು ಹಿಡಿದುಕೊಂಡು ಸ್ವಲ್ಪ ಧೈರ್ಯವನ್ನು ತಂದುಕೊಂಡು ಒಬ್ಬಿಬ್ಬ ದೊಡ್ಡಮನುಷ್ಯರು ಮುಂದೆ ಬಂದು "ಸ್ವಾಮಿ, ನಾವು ಡೆಪ್ಯುಟಿಕಮಿಷನರ್ ಸಾಹೇಬರವರಲ್ಲಿ ನಮ್ಮ ಅಹವಾಲುಗಳನ್ನು ಹೇಳಲೋಸುಗ ಬಂದಿದ್ದೇವೆ. ನಾವು ಅವರಲ್ಲಿ ಹೇಳಿಕೊಳ್ಳದೆ ಮತ್ತಾರಲ್ಲಿ ಹೇಳಿಕೊಳ್ಳಬೇಕು. ತಾವು ಈರೀತಿ ವೃಥಾ ನಮ್ಮಮೇಲೆ ಕೋಪಮಾಡಿಕೊಂಡರೆ ನಾವು ಏನುತಾನೇ ಮಾಡುವುದಕ್ಕಾಯಿತು?" ಎಂದು ಹೇಳಲು ಸಾಹೇಬರು ಮುಖಗಂಟುಹಾಕಿಕೊಂಡು ಬಂಗಲೆಯೊಳಗೆ ಹೊರಟುಹೋದರು. ಈ ವಿಧವಾದ ಕೋಪಕ್ಕೆ ಕಾರಣವನ್ನು ಸಾಹೇಬರವರೇ ಹೇಳಿದರೆ ಚೆನ್ನಾಗಿರುತ್ತಲ್ಲದೆ ನಾನು ಊಹಿಸುವುದಾದರೆ ನನ್ನ ಊಹೆಯು ತಪ್ಪಾಗಬಹುದೆಂಬ ಶಂಕೆಯಿಂದ ವಾಚಕರ ಊಹೆಗೆ ಬಿಟ್ಟಿರುತ್ತೇನೆ.

ಮಧ್ಯಾಹ್ನ ಸುಮಾರು ಮೂರುವರೆಗಂಟೆ ಸಮಯದಲ್ಲಿ ಹೊರಗೆ ಕುಳಿತಿದ್ದ ಜನರೆಲ್ಲರೂ ಒಳಗೆ ಬರುವಂತೆ ಡೆಪ್ಯುಟಿಕಮಿಷನರ್ ಸಾಹೇಬರವರ ಅಪ್ಪಣೆಯಾಯಿತು. ಈ ಸಮಯವನ್ನೇ ನಿರೀಕ್ಷಿಸುತ್ತಿದ್ದ ಜನರಲ್ಲಿ ಪಟೇಲರೂ, ರೈತರೂ ಒಳಗೆಹೋದರು. ಆದರೆ ಶಾನುಭೋಗರುಗಳು ಮಾತ್ರ ಪಟೇಲರುಗಳು ಮತ್ತು ರೈತರುಗಳು ತಮ್ಮ ವಿಷಯವಾಗಿ ಏನು ಹೇಳುವರೋ ಎಂಬ ಭಯದಿಂದ ಒಳಕ್ಕೆ ಬರಲಿಲ್ಲ. ಆದರೆ ಡೆಪ್ಯುಟಿಕಮಿಷನರ್ ಸಾಹೇಬರವರು ಮೂರು ನಾಲ್ಕು ಬಾರಿ ಇವರ ಬಳಿಗೆ ಜವಾನರನ್ನು ಕಳುಹಿಸಿ ಕಡೆಗೆ ಇವರನ್ನೂ ಒಳಕ್ಕೆ ಬರಮಾಡಿಕೊಂಡರು. ಎಲ್ಲರೂ ಒಳಕ್ಕೆ ಬರುತ್ತಲೇ ಸಾಹೇಬರು "ನೀವೆಲ್ಲಾ ಏತಕ್ಕೆ ಬಂದಿರಿ! ನಿಮ್ಮನ್ನು ಯಾರು ಕರಸಿದವರು" ಎಂದು ಕೇಳಿದರು. ಮೊದಲೇ ಸಬ್‌ಡಿವಿಜನ್ ಸಾಹೇಬರವರ ಮಾತುಗಳಿಂದ ಭಯಕಂಪಿತರಾಗಿದ್ದ ಇವರಸ್ಥಿತಿಯು ಈಗ ಹೇಗಿತ್ತೆಂಬುದನ್ನು ಬರೆಯಬೇಕೇ? ಹೇಗೂ ಮಳೆಯಲ್ಲಿ ನೆನೆದುದೇನೋ ಆಯಿತು; ಇನ್ನು ಚಳಿ ಗಾಳಿ ಎಂದರೆ ಏನಾಗುವುದೆಂದು ಮನಸ್ಸಿನಲ್ಲಿ ಸ್ವಲ್ಪ ಧೈರ್ಯತಂದುಕೊಂಡು ತಮ್ಮ ಅಹವಾಲುಗಳನ್ನು ಅರಿಕೆ ಮಾಡಿಕೊಳ್ಳಲು ಪ್ರಾರಂಭಿಸಿದರು. ಕೆಲವರು ಶಾನುಭೋಗರುಗಳು ಕೊಟ್ಟಿದ್ದ ಸುಳ್ಳು ರಶೀತಿಗಳನ್ನೂ, ತಪ್ಪಾಗಿ ಬರೆದು ಕೊಟ್ಟಿದ್ದ ಪಟ್ಟಿಗಳನ್ನೂ ತೋರಿಸುತ್ತಾ "ಸ್ವಾಮಿ, ಈ ರಶೀತಿ ತಪ್ಪುಲೆಕ್ಕಗಳನ್ನು ಕೊಟ್ಟು ನಮ್ಮನ್ನು ಬಹಳವಾಗಿ ವಂಚಿಸುತ್ತಿದ್ದಾರಲ್ಲದೆ ಲಂಚವನ್ನು ಕೊಟ್ಟರೂ ಪಟ್ಟೀಬದಲಾಯಿಸಿಕೊಡುವುದಿಲ್ಲ. ನಾವು ಅವರ ಮನೆಯಲ್ಲಿ ಜೀತದ ಆಳುಗಳಂತೆ ಕೆಲಸಮಾಡಿದರೂ ನಮ್ಮ ಕೆಲಸವನ್ನು ಮಾಡಿಕೊಡದೆ ಈಗ ಆಗ ಎಂದು ಶಾನುಭೋಗರುಗಳು ಬಹಳ ತೊಂದರೆ ಪಡಿಸುತ್ತಿದ್ದಾರೆಂತಲೂ," ಇನ್ನು ಕೆಲವರು ತಮ್ಮ ಜಮೀನಿನ ವಿಷಯಗಳನ್ನೂ, ಮತ್ತೆ ಕೆಲವರು, ಕೆರೆ ಕಾಮಗಾರಿಗಳನ್ನು ಮಾಡಿಸಿ ಕೊಡಬೇಕೆಂದೂ ಕೇಳಿಕೊಳ್ಳುತ್ತಿದ್ದರು. ಇವರಲ್ಲಿ ಒಬ್ಬ ಮಹಮ್ಮದೀಯನು ತನ್ನಿಂದ ಕಂದಾಯ ತೆಗೆದುಕೊಳ್ಳುತ್ತಿರುವ ಒಂದು ಜಮೀನನ್ನು ಎಲ್ಲಿದೆಯೆಂದು ಎಷ್ಟುಬಾರಿ ಕೇಳಿಕೊಂಡರೂ ತೋರಿಸದುದ್ದಕ್ಕಾಗಿ ಶ್ಯಾನುಭೋಗರಿಗೆ ರುಶುವತ್ತನ್ನು ಕೊಟ್ಟರೂ ಕಡೆಗೆ ಜಮೀನನ್ನು ತೋರಿಸಲಿಲ್ಲವೆಂದು ಅಲ್ಲಿಯೇ ಇದ್ದ ಶ್ಯಾನುಭೋಗರನ್ನು ಸಾಹೇಬರವರಿಗೆ ತೋರಿಸಿದನು. ಸಾಹೇಬರು ಶಾನುಭೋಗನನ್ನು ಕರೆದು ಆ ಜಮೀನನ್ನು ತೋರಿಸಿಬಿಡುವಂತೆ ಅಪ್ಪಣೆಮಾಡಿ ಜನಗಳನ್ನು ಕುರಿತು "ನೀವು ಕೇಳುತ್ತಿರುವ ಅಮಲ್ದಾರ್ ಮ|| ರಾ|| ಸಿದ್ದರಾಮಪ್ಪನವರೂ, ಹಿಂದಿನ ಡೆಪ್ಯುಟಿಕಮಿಷನರ್ ಸಾಹೇಬರವರೂ ಕೊಡಬೇಕೆಂದು ಹೇಳಿರುವ ಕುಳುವಾರಪಟ್ಟಿಯನ್ನು ಶಾನುಭೋಗರು ಕೊಡುವುದಕ್ಕೆ ಗೌರ್ನಮೆಂಟ್ ರೂಲ್ಸಿಲ್ಲ. ಆ ಲೆಕ್ಕವನ್ನು ಕೊಡಬೇಕಾದುದಿಲ್ಲವೆಂದು ರೆವಿನ್ಯೂ ಕಮಿಷನರ್ ಸಾಹೇಬರು ಅಪ್ಪಣೆ ಕೊಟ್ಟಿರುತ್ತಾರೆ." ಎಂದು ಹೇಳಲು, ಒಬ್ಬ ಪಟೇಲರು "ಸ್ವಾಮಿ ಶ್ಯಾನುಭೋಗರು ಕಂದಾಯ ವಸೂಲಿಮಾಡಬಹುದೆಂದು ರೂಲ್ಸಿನಲ್ಲಿದೆಯೋ?" ಎಂಬದಾಗಿ ಕೇಳಿದ್ದಕ್ಕೆ ಸಾಹೇಬರವರು-ಅವರು ಕಂದಾಯವನ್ನು ವಸೂಲಿಮಾಡಬಾರದು; ಆದರೆ ಮೊದಲಿಂದಲೂ ರೂಢಿಗೆ ಬಂದಿದೆ, ಏನುಮಾಡತಕ್ಕದ್ದು ? ಎಂದು ಸಮಾಧಾನ ಹೇಳಿದರೇ ಹೊರತು ಶಾನುಭೋಗರುಗಳಿಗೆ ಕಂದಾಯವನ್ನು ವಸೂಲಿಮಾಡಕೂಡದೆಂದು ಕಂಠೋಕ್ತವಾಗಿ ಹೇಳಲಿಲ್ಲ. ಪ್ರಶ್ನೆಗಳೆಲ್ಲರೂ ಒಂದೇ. ಅವರ ಏಳಿಗೆಗಾಗಿಯೇ ಕೆಲಸಮಾಡಬೇಕಾದ ಡೆಪ್ಯುಟಿಕಮಿಷನರ್ ಸಾಹೇಬರವರ ಸರ್ವಸಮದೃಷ್ಟಿಯು ಎಷ್ಟರಮಟ್ಟಿಗಿದೆ ಎಂಬುದನ್ನು ವಾಚಕರೇ ಪರ್ಯಾಲೋಚಿಸಬೇಕಾಗಿದೆ.

ಮುಂದೆ ಜನರು ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. ನಿಮ್ಮ ಅಹವಾಲನ್ನು ನಾವು ಈಗ ಕೇಳುವುದಕ್ಕೆ ಬಂದಿಲ್ಲ ಹೊರಟುಹೋಗಿರೆಂದು ಕಠಿಣವಾಗಿ ಹೇಳಿಬಿಟ್ಟರಲ್ಲದೆ, ಶೇಕದಾರರನ್ನೂ ಪೋಲೀಸಿನವರನ್ನೂ ಕರೆದು "ಇವರನ್ನು ಹೊರಕ್ಕೆ ಕಳುಹಿಸಿಬಿಡಿರೆಂದು" ಹೇಳಿದರು. ಪೋಲೀಸಿನವರಿಂದಲೂ ಶೇಕದಾರರಿಂದಲೂ ಕತ್ತಿನಮೇಲೆ ಹಿಡಿದು ತಳ್ಳಲ್ಪಟ್ಟ ರೈತರು ಮತ್ತು ಪಟೇಲರುಗಳು ಅವಮಾನಿತರಾಗಿ ತಾವು ತಂದಿದ್ದ ಅರ್ಜಿಗಳನ್ನು ಕೂಡ ಕೊಡಲು ಅವಕಾಶವಿಲ್ಲದೆ ಪೋಸ್ಟ್ ಮಾಡಿ ಹೊರಟುಹೋದರು. ಈ ವಿಧವಾದ ಅವಮಾನವು ಶಾನುಭೋಗರುಗಳಿಗಾಗಿದ್ದರೆ ಫಲಿತಾಂಶವೇನಾಗುತ್ತಿತ್ತೆಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕಾಗಿದೆ.

ರೈತರೆಲ್ಲರೂ ಹೊರಟುಹೋದಮೇಲೆ ಡೆಪ್ಯುಟಿಕಮಿಷನರ್ ಸಾಹೇಬರು ಶ್ಯಾನುಭೋಗರುಗಳನ್ನು ಒಳಕ್ಕೆ ಕರೆಯಿಸಿಕೊಂಡು ಏನೋ ಮಾತನಾಡಿದರು. ವಿಷಯವೇನೆಂಬುದು ಗೊತ್ತಾಗಲಿಲ್ಲ. ಶ್ಯಾನುಭೋಗರುಗಳಿಗೇನೋ ರೈತರಮುಂದೆ ಅಹವಾಲನ್ನು ಹೇಳಿಕೊಳ್ಳಲು ಧೈರ್ಯವೇ ಇರಲಿಲ್ಲ. ಹಿಂದುಗಡೆ ಏನು ಹೇಳಿಕೊಂಡಿರುವರೋ ತಿಳಿಯದು. ಅನೇಕರು [illegible] ಮಾಡುತ್ತ "ಸರ್ಕಾರಿ ಕೆಲಸಮಾಡುವವರೆಲ್ಲರೂ ಪ್ರಜೆಗಳ ಉನ್ನತಿಗಾಗಿಯೇ ಕೆಲಸಮಾಡಬೇಕು. ರೈತರು ಉತ್ತಮಸ್ಥಿತಿಗೆ ಬಂದರೆ ದೇಶವೇ ಅಭ್ಯುನ್ನತಿಗೆ ಬರುತ್ತದೆ. ಗೌರ್ನಮೆಂಟಿರತಕ್ಕದ್ದು ಪ್ರಜೆಗಳ ನೆಮ್ಮದಿಗಾಗಿ. ಗೌರ್ನಮೆಂಟು ಪ್ರಜೆಗಳದು" ಎಂದು ಹೇಳುತ್ತಿರುತ್ತಾರೆ. ಆದರೆ ಯಾವುದಾದರೂ ಒಂದು ಸರ್ಕಾರಿ ಉದ್ಯೋಗವು ದೊರಕಿದರೆ ಸಾಕು; ಅವರ ಯೋಚನೆಗಳೆಲ್ಲಾ ಮರೆತು ಹೋಗಿ, ಪ್ರಜೆಗಳ ಮೇಲೆ ತಮ್ಮ ದರ್ಪವನ್ನು ತೋರಿಸುತ್ತಾ ಅವರು ಏನೂತಿಳಿಯದವರು, ಮೂರ್ಖರು, ತಾವು ಏನು ಬೇಕಾದರೂ ಮಾಡಬಹುದೆಂದು ಕೆಲಸಮಾಡಲು ಪ್ರಾರಂಭಮಾಡುತ್ತಾರೆ. ಹೀಗಾಗುವುದಕ್ಕೆ ದುರದೃಷ್ಟವೇ ಕಾರಣವೋ! ಅಥವಾ ಅಧಿಕಾರಿಗಳು ಕಲಿತಿರುವ ವಿದ್ಯಾಮಹಿಮೆಯೋ ತಿಳಿಯದು. ನಮ್ಮ ಡೆಪ್ಯುಟಿಕಮಿಷನರ್ ಸಾಹೇಬರವರು ನಿಜವಾಗಿಯೂ ತಾವು ಪ್ರಜಾಹಿತಕ್ಕಾಗಿ ಕೆಲಸಮಾಡಬೇಕೆಂದು ತಿಳಿದುಕೊಂಡಿದ್ದರೆ, ಈ ರೀತಿ ಪ್ರಜೆಗಳಿಗೆ ಅವಮಾನಮಾಡಿ ರೆವಿನ್ಯೂ ವಿಚಾರದಲ್ಲಿ ಹೆಚ್ಚು ಪರಿಶ್ರಮವುಳ್ಳವರೂ ಅನುಭವಸ್ಥರೂ ಆಗಿರುವುದರಿಂದ ಈ ಶ್ಯಾನುಭೋಗರುಗಳ ಸರಿಯಾದ ಲೆಕ್ಕವನ್ನಿಡದೆ ಇರುವುದರವಸೆಯಿಂದ ತಮ್ಮ ತಮ್ಮಲ್ಲಿ ಉಂಟಾಗಿರುವ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಸರಿಯಾದ ಲೆಕ್ಕವನ್ನಿಡುವಂತೆ ಮಾಡಿ ಇವನ್ನೆಲ್ಲಾ ತಪ್ಪಿಸಿ ಪ್ರಜಾಸೌಖ್ಯವನ್ನುಂಟುಮಾಡುವರೆಂಬ ಪ್ರಜೆಗಳ ಆಸೆಯನ್ನು ನಿರಾಸೆಮಾಡುತ್ತಿದ್ದರೇ ಎಂದಿಗೂ ಇಲ್ಲ. ಮೇಲಿನ ಅಧಿಕಾರಿಗಳಾದರೂ ಈ ವಿಚಾರದಲ್ಲಿ ಚೆನ್ನಾಗಿ ಯೋಚಿಸಿ ಈಗ ರೈತರು ಕೇಳಿಕೊಳ್ಳುತ್ತಿರುವಂತೆ ಲೆಕ್ಕವನ್ನು ಕೊಡಿಸಿ ಪ್ರಜಾಸೌಖ್ಯವನ್ನುಂಟುಮಾಡಬೇಕಲ್ಲದೆ ಅಸಡ್ಡೆ ಮಾಡಿ ರೈತರು ಹೆಚ್ಚು ತೊಂದರೆಗೆ ಗುರಿಯಾಗುವಂತೆ ಮಾಡುವುದೊಳ್ಳೆಯದಲ್ಲ.

ಒಬ್ಬ ಗೌಡ.

ಮೈಸೂರು ಶಂಕರವಿಲಾಸ ಪಾಠಶಾಲೆ.

ಸ್ವಾಮಿ,

ಈ ಪಾಠಶಾಲೆಯ ಕಟ್ಟಡವು ಈಗ ಕಟ್ಟುತ್ತಿರುವ ಮ್ಯುನಿಸಿಪಲ್ ಆಫೀಸ್ ಕಟ್ಟಡದ ಕಾಂಪೌಂಡಿನೊಳಕ್ಕೆ ಸೇರಿಹೋಗುವುದರಿಂದ ಇದನ್ನು ಟ್ರಸ್ಟ್‌ಬೋರ್ಡಿನವರು ಅಕ್ವೈರ್‌ಮಾಡಿಕೊಂಡಿದ್ದಾರೆ. ಈ ಕಟ್ಟಡವನ್ನು ಗತಿಸಿದ ಮ|| ಅತ್ತಿಗೋಡು ಬಸವಪ್ಪನವರು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿದ್ದರು. ಅದರ ಜಾಗವು ಹೊಸಮಠಕ್ಕೆ ಸೇರಿದ್ದು. ಪಾಠಶಾಲೆಯು ನಡೆಯದೆ ನಿಂತುಹೋಗುವುದಾದರೆ ಅಂಥ ಕಾಲಕ್ಕೆ ಕಟ್ಟಡವೂ ಮಠಕ್ಕೆ ಸೇರಿಹೋಗಲೆಂಬ ಅಭಿಪ್ರಾಯವಿಟ್ಟು ಸದರಿ ಬಸವಪ್ಪನವರು ಇದನ್ನು ಕಟ್ಟಿಸಿಕೊಟ್ಟಿದ್ದರು. ಈಗ ಸದರಿ ಕಟ್ಟಡಕ್ಕೂ ನಿವೇಶನಕ್ಕೂ ಸಹ ೪ ಸಾವಿರ ರೂ. ಗಳ ಕಾಂಪೆನ್ಸೇಷನ್ ಬರುತ್ತದೆ. ಪಾಠಶಾಲೆಯು ನಿಂತಿಲ್ಲ. ನಡೆಯುತ್ತಲೇ ಇದೆ. ಈ ಸ್ಥಳವು ಹೋದರೂ ಬೇರೆ ಸ್ಥಳದಲ್ಲಿ ಅದು ನಡೆಯಲೇಬೇಕು; ನಡೆಯುತ್ತದೆ. ಹೊಸಕಟ್ಟಡವನ್ನು ಕಟ್ಟಿಸುವುದಕ್ಕೆ ಸ್ವತಃ ವಿದ್ಯಾವಂತರಾಗಿರುವ ಶ್ರೀ ಹೊಸಮಠದ ಚಂಮುತ್ತಿಗಳಿಗೆ ಅಭಿಮಾನ ಕುತೂಹಲಗಳು ಸಂಪೂರ್ಣವಾಗಿದ್ದೇ ಇವೆ. ತಮ್ಮ ತಂದೆಯವರು ಮಾಡಿದ ಧರ್ಮಕ್ಕೆ ಲೋಪಬರದಂತೆ ಮತ್ತೊಂದು ಹೊಸಕಟ್ಟಡವನ್ನು ಅದೇ ಕಾಂಪೆನ್ಸೇಷನ್ ಮೊಬಲಗಿನಿಂದ ಕಟ್ಟಿಸಿಕೊಡಬೇಕೆಂಬ ಕುತೂಹಲವು ಮ|| ಅತ್ತಿಗೋಡು ಬಸವಪ್ಪನವರ ಕುಮಾರರಿಗೂ ಇದೆ. ಆದರೆ ಇಬ್ಬರಲ್ಲಿ ಯಾರೊಬ್ಬರ ಸ್ವಾಧೀನಕ್ಕೆ ಹಣವು ಬಂದರೂ ದುರುಪಯೋಗವಾದೀತೆಂಬ ಭಯವೇನೂ ಇಲ್ಲವಾದರೂ ಕೆಲಸವು ಬೇಗನೆ ನಡೆಯದೆ ಸಾವಕಾಶವಾದೀತೆಂಬ ಯೋಚನೆಯೇನೋ ಉಭಯತ್ರ ಇರಬಹುದು. ಈ ಕಾರಣದಿಂದ ಇವರಿಬ್ಬರ ಸ್ಪರ್ಧೆಯಲ್ಲಿ ಟ್ರಸ್ಟ್‌ಬೋರ್ಡಿನವರು ಕಾಂಪೆನ್ಸೇಷನ್ ಮೊಬಲಗನ್ನು ಸಿವಿಲ್‌ಕೋರ್ಟಿಗೆ ಕಟ್ಟಿಬಿಡುವುದು ಸಹಜವಾಗಿದೆ. ಈ ಮೇಲಾಟದಲ್ಲಿ ಕಾಲಯಾಪನೆಮಾಡುವುದಕ್ಕಿಂತಲೂ ಅನುಕೂಲವಾದ ಕೆಲಸವೊಂದನ್ನು ಮಾಡುವುದು ಚೆನ್ನಾಗಿದೆ. ಇಬ್ಬರಿಗೂ ಹೊಸ ಕಟ್ಟಡವನ್ನು ಬೇಗ ಕಟ್ಟಿಸಬೇಕೆಂಬ ಸದುದ್ದೇಶವೂ ಕುತೂಹಲವೂ ವಿಶೇಷವಾಗಿರುವಾಗ, ಮತ್ತು ಸ್ವಾರ್ಥಚಿಂತೆಯೇನೂ ಇಲ್ಲದಿರುವಾಗ, ಎರಡುಪಕ್ಷದವರೂ ಒಪ್ಪುವಂಥ ೪-೫ ಮಂದಿ ದೊಡ್ಡಮನುಷ್ಯರುಳ್ಳ ಒಂದು ಕಮಿಟಿಗೆ ಈ ಕೆಲಸವನ್ನು ವಹಿಸಿ, ಅವರ ವಶಕ್ಕೆ ಕಾಂಪೆನ್ಸೇಷನ್ ಮೊಬಲಗನ್ನು ಕೊಡುವುದಕ್ಕೆ ಇಬ್ಬರೂ ಒಪ್ಪಿಗೆಯನ್ನು ಕೊಟ್ಟುಬಿಟ್ಟು, ತಾವುಗಳು ಮೇಲುಸ್ತುವಾರಿಯನ್ನಿಟ್ಟುಕೊಂಡು ಬಿಟ್ಟರೆ ಕೆಲಸವು ೪-೬ ತಿಂಗಳೊಳಗಾಗಿ ಪೂರೈಸಿಹೋಗುವುದರಲ್ಲಿ ಅಭ್ಯಂತರವಿಲ್ಲ. ಗತಿಸಿದವರ ಧರ್ಮಸಂಕಲ್ಪವನ್ನು ಉದ್ಧರಿಸಿದಂತೆಯೂ ಆಗುತ್ತದೆ. ನಿರಾತಂಕವಾಗಿ ವಿದ್ಯಾಭ್ಯಾಸಕ್ಕೆ ಸೌಕರ್ಯವನ್ನುಂಟುಮಾಡಿಕೊಟ್ಟಂತೆಯೂ ಆಗುತ್ತದೆ. ಉಭಯಪಕ್ಷದವರೂ ದೊಡ್ಡ ಮನಸ್ಸುಮಾಡಿ ಇದರಂತೆ ಏರ್ಪಡಿಸುವವರಾಗಲೆಂದು ಕೋರುತ್ತೇನೆ.

ಟವ್ನ್‌ವಾಸಿ.

ಬೆಂಗಳೂರು ಮಂಡಿ ವರ್ತಕರ ಸಂಘ.

ಕಳೆದ ೧೮ನೆ ತಾರೀಖು ಸಾಯಂಕಾಲ ೪ ಗಂಟೆಗೆ ಈ ಸಂಘದ ಪ್ರಥಮ ವರ್ಷೋತ್ಸವವು ವ್ಯಾಪಾರದ ಇಲಾಖೆಯ ಕಟ್ಟಡದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಹಳೆಯ ಮತ್ತು ಹೊಸತರಗು ಪೇಟೆಯ ವರ್ತಕರುಗಳಲ್ಲಿ ಬಹುಮಂದಿ ಬಂದಿದ್ದರು. ಸಂಘದ ಕಾರ್ಯದರ್ಶಿ ಮ|| ರಾ|| ಯಸ್. ಕೆ. ನರಸಿಂಹಯ್ಯನವರು ಕಳೆದ ವರ್ಷದ ರಿಪೋರ್ಟನ್ನು ಓದಿ ಸಂಘದ ಹಣ ರೂ. ೬೮೧೫-೯-೦ ಗಳ ಲೆಕ್ಕವನ್ನು ಒಪ್ಪಿಸಿದರು. ನಂತರ ಮುಂದಿನ ವರ್ಷಕ್ಕೆ ಸಂಘದ ಅಧಿಕಾರಿಗಳು ಚುನಾಯಿಸಲ್ಪಟ್ಟರು. ಮ|| ಮಂಡಿ ಹನುಮಣ್ಣನವರು ಪುನಃ ಅಧ್ಯಕ್ಷರಾಗಿರಲು ಎಲ್ಲರೂ ಒಪ್ಪಿದರು. ಮ|| ರಾ|| ರಾಚಪ್ಪ ನೂರ್ ಮಹಮ್ಮದ್ ಉಸ್ಮಾನ್ ಮತ್ತು ತಿಮ್ಮಯ್ಯನವರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಮ|| ರಾ|| ಯಸ್. ಕೆ. ನರಸಿಂಹಯ್ಯನವರೂ ಅಬ್ದುಲ್‌ಲತೀಫರೂ ಕಾರ್ಯದರ್ಶಿಗಳಾಗಿಯೂ ಮ|| ರಾ|| ರಾಮಚಂದ್ರರಾವ್ ಸಿಂಧ್ಯರವರು ಖಜಾಂಚಿಯಾಗಿಯೂ ನಿಯಮಿಸಲ್ಪಟ್ಟರು. ನಂತರ ಮ|| ರಾ|| ರಾಮಚಂದ್ರರಾವ್ ಸಿಂಧ್ಯರವರು ವ್ಯಾಪಾರದ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಮ|| ರಾ|| ಕೆ. ಹೆಚ್. ರಾಮಯ್ಯ ಬಿ. ಎ. ಬಾರ್ ಅಟ್‌ಲಾ ಅವರನ್ನು ಈ ಸಭೆಯನ್ನು ಸ್ಥಾಪಿಸಿ ವರ್ತಕರಿಗೆಲ್ಲಾ ಐಕಮತ್ಯದ ವಿಚಾರವನ್ನು ತಿಳಿಯಪಡಿಸಿ ಶ್ರಮಪಟ್ಟದ್ದಕ್ಕಾಗಿ ವಂದಿಸಿದರು. ಮ|| ರಾ|| ರಾಮಯ್ಯನವರು ತಾವು ಅವರಿಗಾಗಿ ಮಾಡಿದ್ದು ತಮ್ಮ ಅಧಿಕಾರಕ್ಕೆ ಸಂಬಂಧಪಟ್ಟ ಕರ್ತವ್ಯವೇ ಹೊರತು ವಿಶೇಷವೇನೂ ಅಲ್ಲವೆಂದೂ, ಸರ್ಕಾರದವರು ಕೈಗಾರಿಕೆ ಮತ್ತು ವ್ಯಾಪಾರದ ಅಭಿವೃದ್ಧಿ ವಿಚಾರಗಳಲ್ಲಿ ಬಹಳ ಬದ್ಧಾದರರಾದುದರಿಂದ ಈ ಸಂಘವು ಮುಂದಕ್ಕೆ ಉನ್ನತಸ್ಥಿತಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದೂ ಸೂಚಿಸಿದರು. ಸಂಘದ ಅಧ್ಯಕ್ಷರಾದ ಮ|| ರಾ|| ಹನುಮಣ್ಣನವರು ಸಭೆಯವರಿಗೆಲ್ಲರಿಗೂ ಬಹಳ ಉತ್ತಮವಾದ ಫಲಾಹಾರವನ್ನು ಮಾಡಿಸಿದ್ದರು. ಕಡೆಯಲ್ಲಿ ಅವರು ಸ್ವಲ್ಪ ಮಾತನಾಡಿದನಂತರ ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ಶುಭವನ್ನು ಕೋರಿ ಸಭೆಯು ಬರಖಾಸ್ತಾಯಿತು.

ವರ್ತಕ.

ರಾಜನಿಷ್ಠಾ ಸಭೆ.

ಧಾರವಾಡ ಜಿಲ್ಲಾ ಕರ್ಜಗಿ ತಾಲ್ಲೂಕು ಪೈಕಿ ಗುತ್ತಲಗ್ರಾಮದಲ್ಲಿ ತಾ|| ೪-೧೨-೨೧ನೆ ಆದಿತ್ಯವಾರ ದಿವಸ ಧಾರ್ಮಿಕ ಸಭೆಯು ಕೂಡಿತ್ತು, ಈ ಸಭೆಗೆ ಶ್ರೀಮನ್ಮಹಾದಕ್ಷಿಣ ಕಾಶೀ ಸಿಂಹಾಸನ ಚವುಡಯ್ಯ ದಾನಪುರ ಸಂಸ್ಥಾನದ ಪಟ್ಟದಸ್ವಾಮಿ ಶ್ರೀ ನಿರೂಪಾಕ್ಷ ಒಡೆಯರವರು ದಯಮಾಡಿಸಿದ್ದರು. ಮತ್ತು ಮೆ|| ನಾಯಕ ಸಾ|| ಬ್ಯಾರಿಸ್ಟರ ಡಿ. ಡಿ. ಕಲೆಕ್ಟರವರೂ ಮೆ|| ಶಾಂತವೀರ ಒಡೆಯರವರು ಆ ಡಿ. ಡಿ. ಕಲೆಕ್ಟರವರು, ಮೆ|| ಶಿರಿಸ ಸಾ|| ಮಾಮಲೇದಾರರೂ ಇನ್ನು ಅನೇಕ ದೊಡ್ಡ ಮನುಷ್ಯರುಗಳೂ ೩-೪ ಸಾವಿರದವರೆಗೆ ಕೂಡಿದ್ದರು. ಈ ಸಭೆಯನ್ನು ಗುತ್ತಲಗ್ರಾಮದ ಯಾವತ್ತೂ ಮೆಂಬರ ಜನರು ಎರಡೇ ದಿವಸದವಧಿಯಲ್ಲಿ ಒಳ್ಳೇ ಉತ್ಸಾಹತೆಯಿಂದ ಊರನ್ನೆಲ್ಲಾ ತಳಿರುತೋರಣಗಳಿಂದಲಂಕರಿಸಿ ಸಭಾಮಂಟಪವನ್ನು ಚನ್ನಾಗಿ ನಿರ್ಮಿಸಿ ವಾದ್ಯಗಳೊಡನೆ ಸಭಾಸದರನ್ನೆಲ್ಲಾ ಒಳ್ಳೇ ಆಸಕ್ತಿಯಿಂದಲೂ ಉತ್ಸಾಹದಿಂದಲೂ ಸಕಲರನ್ನೂ ಇದಿರುಗೊಂಡು ಸಭಾಮಂಟಪಕ್ಕೆ ಬರಮಾಡಿಕೊಂಡರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಮೆ|| ಪಂಡಿತ ಸಾ|| ಎಂ. ಎ. ಎಲ್. ಎಲ್. ಬಿ. ಡಿ. ಡಿ. ಕಲೆಕ್ಟರ ದಕ್ಷಿಣಭಾಗ ಧಾರವಾಡ ಇವರು ವಹಿಸಿದ್ದರು. ಈ ಸಭೆಯ ಸ್ವಾಗತ ಸಂಘಾಧ್ಯಕ್ಷರಾದ ಮ|| ರಾ|| ಕಟ್ಟಿಗೆಹಳ್ಳಿಮಠದ ಸೋಮಯ್ಯನವರು ಒಳ್ಳೇ ವ್ಯವಸ್ಥೆಯನ್ನಿಟ್ಟಿದ್ದು ಮೊದಲೇ ಗೊತ್ತಾದ ಮೇರೆಗೆ ಸಭೆಯ ಯಾವತ್ತು ಕಾರ್ಯಕ್ರಮಗಳು ಸುಲಲಿತವಾಗಿ ನಡೆದುವು. ಮೊದಲೇ ಗೊತ್ತಾಗಿದ್ದ ಜನರ ಭಾಷಣಗಳಾಗಿ ಮ|| ಶಾಂತ ಒಡೆಯರವರು ವಾಡಿಕೆಯ ವಾಕ್ಪಟುತ್ವದಿಂದ ರಾಜನಿಷ್ಠಾ ಯುವರಾಜರವರ ಸ್ವಾಗತ ಅಸಹಕಾರ ನಿಷೇಧ, ಸಕ್ತಿಶಿಕ್ಷಣದವಶ್ಯಕತೆ ಮೊದಲಾದ ವಿಷಯಗಳನ್ನೆಲ್ಲಾ ಸರ್ವರಿಗೂ ತಿಳಿಯುವಂತೆ ಒಳ್ಳೇ ಮಾರ್ಮಿಕ ರೀತಿಯಿಂದ ಸುಶ್ರಾವ್ಯವಾಗಿ ಜನರಿಗೆ ತಿಳಿಯಹೇಳಿದರು. ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರವರು ಮಾನವೀಧರ್ಮ ವ ರಾಜನಿಷ್ಠಾ ಇವುಗಳ ಮೇಲೆ ಶಾಸ್ತ್ರೋಕ್ತವಾಗಿ ಉಪನ್ಯಾಸಮಾಡಿ ಜನರಲ್ಲಿದ್ದ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸಿದರು. ಅನಂತರ ಪ್ರೆಸಿಡೆಂಟ್ ಸಾ|| ರವರು ಈ ಕರ್ನಾಟಕದಲ್ಲಿ ಒಡೆಯರ ಸಹೋದರರ ಪ್ರಸಿದ್ಧವಾಕ್‌ಪಟುತ್ವವನ್ನು ಶ್ಲಾಘಿಸಿ ಸೂಚನೆಯ ಮೇರೆಗೆ ಈ ಊರಲ್ಲಿಯೂ ಒಂದು ರಾಜನಿಷ್ಠಾ ಸಭೆಯನ್ನು ಸ್ಥಾಪಿಸಿದ ಬಳಿಕ ಪುರಪ್ರಮುಖರನೇಕರು ಸದರಿ ಸಂಸ್ಥೆಯ ಮೆಂಬರರಾದರು. ಇಷ್ಟಾದನಂತರ ಮಿ|| ಪುಟ್ಟರಾಜ ಒಡೆಯರವರು ರಾಜನಿಷ್ಠಾ ಯುವರಾಜರವರ ಸ್ವಾಗತ ಸಕ್ತಿಶಿಕ್ಷಣದವಶ್ಯಕತೆ, ಮತ್ತು ಇವಕ್ಕೆ ಹೊಂದಬೇಕಾದ ಅವಶ ಹೆಚ್ಚಿನ ತೆರುಗೆ ಜನರ ಒಪ್ಪಿಗೆ ಈ ಠರಾವುಗಳು ಪಾಸಾಗಬೇಕೆಂದು ತಂದ ಸೂಚನೆಯ ಮೇರೆಗೆ ಸರ್ವರೂ ಒಪ್ಪಿ ಸರ್ವಾನುಮತದಿಂದ ಈ ಠರಾವುಗಳು ಪಾಸಾದವು. ನಂತರ ಹಾರ ತುರಾಯಿಗಳನ್ನು ವಿನಿಯೋಗಿಸಿದಬಳಿಕ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ಕದಡಿ-ರಾಜನಿಷ್ಠ ಪ್ರಜಾಸಂಘ.

ತಾ|| ೭-೧೨-೨೧ನೆ ದಿವಸ ಶ್ರೀ ರಾಮಲಿಂಗದೇವರ ಗುಡಿಯ ಮುಂದಿನ ಪಟಾಂಗಣದಲ್ಲಿ ಇಲ್ಲಿಯ ರಾಜನಿಷ್ಠ ಪ್ರಜಾಸಂಘದ ಕೆಲಸವನ್ನು ವಹಿಸುವದಕ್ಕೆ ಒಂದು ಕಮಿಟಿಯನ್ನು ಗೊತ್ತುಪಡಿಸುವ ಸಲುವಾಗಿ ಮ|| ರಾ|| ಕುರಗೋಡಗೌಡ ಪಾಟೀಲ ಸಾ|| ಹೊನ್ನಾಪೂರ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ಕೂಡಿತ್ತು. ಸುಮಾರು ೨೫೦ ಜನರು ಹಾಜರಿದ್ದರು. ಸಭೆಗೆ ಗದಗಿನಿಂದ ಬಂದ ಮ|| ರಾ|| ಕಂಬಸಯ್ಯ ಹಿಟ್ಟಿನಮಠದ ಮ|| ಶಿವಪ್ಪ ವೀಣೇಕರ ಮ|| ಗುರುಪಾದಪ್ಪ ಕಲ್ಯಾಣಶೆಟ್ಟಿ ಮ|| ಮುದಿಯಪ್ಪ ಬಳ್ಳೊಳ್ಳಿ ಹಾಗೂ ಮ|| ಭರಮಗೌಡಾ ಪಾಟೀಲ ಕದಡಿ ಇವರೆಲ್ಲರ ಭಾಷಣಗಳು ಸಾಮಾಜಿಕ ಧಾರ್ಮಿಕ ಅಸಹಕಾರದಿಂದಾಗುವ ಅನಿಷ್ಟ ಮೊದಲಾದ ವಿಷಯಗಳ ಮೇಲೆ ಒಳ್ಳೇ ಬೋಧಪ್ರದವಾಗಿ ಹೇಳಲ್ಪಟ್ಟವು ನಂತರ ಒಂದು ಕಮಿಟಿಯನ್ನು ಗೊತ್ತುಪಡಿಸಿ ಪಂಚಮಹಾಜನರ ಮತ್ತು ಶಿರಸಂಗಿ ದೇಸಾಯರ ಜಯಘೋಷದೊಡನೆ ಸಭೆಯು ವಿಸರ್ಜಿತವಾಯಿತು.

ಬಿ. ಪೋಲೀಸ ಪಾಟೀಲ.

ಧಾರ್ಮಿಕ ಸಭೆ.

ತಾ|| ೧೬-೧೨-೨೧ನೆ ದಿವಸ ಶ್ರೀ ಮನ್ಮಹಾದಕ್ಷಿಣ ಕಾಶೀಸಿಂಹಾಸನ ಚವುಡಯ್ಯ ದಾನಪುರ ಸಂಸ್ಥಾನದ ಪಟ್ಟದ ಮಹಾಸ್ವಾಮಿಗಳ ಉದಾರಾಶ್ರಯದಿಂದ ಸದರಿ ಚೌಡಯ್ಯ ದಾನಪುರದಲ್ಲಿ ಧಾರ್ಮಿಕ ಸಭೆಯು ಕೂಡಿತ್ತು. ಈ ಸಭೆಗೆ ಮೆ|| ಡಿಸ್ಟ್ರಿಕ್ಟ್ ಡಿ. ಕಲೆಕ್ಟರರಾದ ಮೆ|| ಪಂಡಿತ ಸಾ|| ಧಾರವಾಡ ಇವರು ಅಧ್ಯಕ್ಷರಾಗಿದ್ದರು. ಈ ಸಭೆಗೆ ತಾಲ್ಲೂಕು ಅಮಲ್ದಾರರೂ ಇತರ ಅನೇಕ ದೊಡ್ಡಮನುಷ್ಯರೂ ಬಹುಜನರು ಕೂಡಿದ್ದುದರಿಂದ ಸಭೆಯು ಒಳ್ಳೇ ಶೋಭಾಯಮಾನವಾಗಿದ್ದಿತು. ಈ ಸಭೆಯ ಸ್ವಾಗತಸಂಘದ ಅಧ್ಯಕ್ಷರಾಗಿದ್ದ ಮಿ|| ಪುಟ್ಟರಾಜ ಒಡೆಯರವರೂ ಇಲ್ಲಿಯ ಇತರ ಗೃಹಸ್ಥರೂ ಒಳ್ಳೇ ಏರ್ಪಾಟನ್ನು ಮಾಡಿದ್ದರು. ಈ ಸಭೆಯಲ್ಲಿ ರಾಜನಿಷ್ಠಾ ಶ್ರೀಮಾನ್ ಯುವರಾಜರವರು ಹಿಂದೂಸ್ಥಾನಕ್ಕೆ ಬಂದದ್ದಕ್ಕೆ ಸಂತೋಷ ಪ್ರದರ್ಶನ ಮತ್ತು ಅವರ ಪ್ರವಾಸವು ಸುಖಕರವಾಗುವ ಬಗ್ಗೆ ಮತ್ತು ಸಕ್ತಿಶಿಕ್ಷಣದ ಅವಶ್ಯಕತೆ ಮುಂತಾದ ವಿಷಯಗಳ ಬಗ್ಗೆ ಮೆ|| ಶಾಂತಒಡೆಯರವರು ಡಿ. ಡಿ. ಕಲೆಕ್ಟರವರು ಬಹಳ ಮನೋಹರವಾಗಿ ಜನರ ಮನಸ್ಸಿಗೆ ತಟ್ಟುವಂತೆ ಮಾತಾಡಿದರು. ಇವರಂತೆ ಅನೇಕ ಮಂದಿ ಭಾಷಣಗಳನ್ನು ಇದೇ ವಿಷಯದ ಬಗ್ಗೆ ಬಹಳ ಚನ್ನಾಗಿ ಮಾಡಿದಬಳಿಕ ಮೇಲ್ಕಂಡ ಠರಾವುಗಳು ಸರ್ವಾನುಮತದಿಂದ ಪಾಸಾದವು. ಇದೇ ಸ್ಥಳದಲ್ಲಿ ೧೯೧೮ನೆ ಇದೇ ನವಂಬರ ತಿಂಗಳಲ್ಲಿ ರಿಕ್ರೂಟ್ ಕೂಡಿಸಲು ಸಭೆಮಾಡಿದ ದಿವಸವೇ ವಿಲಾಯತಿಯಲ್ಲಿ ಭಯಂಕರ ಯುದ್ಧದ ಪರಿಸಮಾಪ್ತಿಯಾಯಿತೋ ಅಂಥ ಪವಿತ್ರಸ್ಥಾನದಲ್ಲಿ ಈಗಲೂ ಸಭೆಕೂಡಿದ್ದರಿಂದ ಈ ಅಸಹಕಾರದ ಭಯಂಕರ ಚಳವಳಿಯೂ ಪರಿಸಮಾಪ್ತಿಯಾಗಿ ದೇಶದಲ್ಲೆಲ್ಲಾ ಶಾಂತಿಯುಂಟಾಗಲೆಂದು ಸರ್ವರೂ ಜಯಘೋಷಮಾಡಿದನಂತರ ಸಭೆಯ ವಿಸರ್ಜನೆಯಾಯಿತು.

ಪ್ರೇಕ್ಷಕ.

ರಾಯಚೂರು ಜಿಲ್ಲೆಯ ಸುದ್ದೈವವು.

ಇದೇ ನೈಜಾಮ ಪ್ರಾಂತದಲ್ಲಿ ಹೆಸರೊಂದಿದ ಸದರಿ ಪಟ್ಟಣದ ವೀರಶೈವ ಮಂಡಳಿಯನ್ನು ಯೇನಕೇನಪ್ರಕಾರದಿಂದ ಸುಧಾರಿಸಬೇಕೆಂದು ಎಷ್ಟು ಪ್ರಯತ್ನಿಸಿದರೂ ಬಯಕೆಯು ಪೂರ್ತಿಯಾಗದೆ ವಿಫಲವಾಗುತ್ತ ಬಂದಿದ್ದು, ಗತಿಸಿದ ಇದೇ ದುರ್ಮತಿ ಸಂ|| ವೈಶಾಖ ಶು|| ೨ ಸೋಮವಾರದಲ್ಲಿ ಶ್ರೀ ಬಸವೇಶ್ವರಜಯಂತ್ಯುತ್ಸವವು ವಿಜೃಂಭಣೆಯಿಂದ ಜರುಗಿತಲ್ಲದೆ ಆ ದಿನ ಸಾಯಂಕಾಲ ೯ ಗಂಟೆಗೆ ಸೋಮವಾರಪೇಟೆ ಹಿರೇಮಠದಲ್ಲಿ ಯಾವತ್ತು ವಿರಕ್ತರು ಸದರಿ ಮಠಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಆಕಸ್ಮಿಕವಾಗಿ ಆಗಮಿಸಿದ ವೇ|| ಚನ್ನಬಸವಶಾಸ್ತ್ರಿಗಳು ಮರಿಚೆಡ ಇವರು ತಮ್ಮ ಅಸ್ಖಲಿತವಾದ ಸರಸವಾಣಿಯಿಂದ ಶ್ರೀ ಜಯಂತಿಯ ಉದ್ದೇಶವನ್ನೂ ಮುಖ್ಯ ಮಾಡಿದ ಬಸವೇಶನುಪಕಾರವನ್ನೂ ಹೇಳಿದುದಲ್ಲದೆ, ಇದರಂತೆಯೇ ಇನ್ನುಮೇಲಾದರೂ ಶ್ರೀ ಜಯಂತಿಯ ಸ್ಮಾರಕವಾಗಿ ಒಂದು ಪಾಕ್ಷಿಕಪರಿಷತ್ತು ಅಂದರೆ ಪ್ರತಿಯೊಂದು ಪಕ್ಷಕ್ಕೂ ಇದೇ ರೀತಿ ಎಲ್ಲರೂ ನೆರೆಯಬೇಕೆಂತಲೂ ಮತತತ್ವವನ್ನು ತಿಳಿದುಕೊಳ್ಳಬೇಕೆಂತಲೂ ಬಿನ್ನಡಿಸಿದರು. ಆ ಮೇಲೆ ಇಲ್ಲಿನ ಸದ್ಭಕ್ತರ ಕೋರಿಕೆಯಂತೆ ಸದರಿ ಶಾಸ್ತ್ರಿಗಳು ಪರಿಷತ್ತಿನ ಮುಖ್ಯ ಚಾಲಕರಾಗುವುದಕ್ಕೆ ಒಪ್ಪಿಕೊಂಡು ಇದುವರೆಗೂ ಆ ಕಾರ್ಯವನ್ನು ಯಥಾರೀತಿ ನಡೆಯಿಸುತ್ತಿರುವರು. ಅಲ್ಲದೆ ಸದರಿ ಪರಿಷತ್ತಿನಲ್ಲಿ ಶಾಲಾಧ್ಯಾಪಕವರ್ಗವೂ ಸಂಗೀತಮಂಡಳಿಯೂ ವಿದ್ಯಾರ್ಥಿಗಳೂ ಇತರ ಭಕ್ತ ಸಮುದಾಯವೂ ಯಥಾಯೋಗ್ಯ ಉಪನ್ಯಾಸಗಳನ್ನು ಮತತತ್ವರೀತ್ಯಾ ಹೇಳುತ್ತಿರುವರು. ಕಳೆದ ಪಕ್ಷದಲ್ಲಿ (ಅಂದರೆ) ಕಾರ್ತೀಕ ಬಹುಳ ೧ ಮತ್ತು ೨ ಗೆಯಲ್ಲಿ ಯಥಾಪ್ರಕಾರ ಜನ ಸಮೂಹವು ಸಭಾಮಂಟಪದಲ್ಲಿ ಕಿಕ್ಕಿರಿದಿತ್ತು. ಕೂಡಲೇ ಗವಾಯಿಗಳ ಶಿವಕಥೆಯಾದ

ಮೇಲೆ ಕೆಲವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವಿಷಯವಾಗಿಯೂ ಐಕಮತ್ಯ ವಿಷಯವಾಗಿಯೂ ಮತ್ತು ಲಿಂಗಾರ್ಚನಾ ಬಗ್ಗೆ ಸಪ್ರಮಾಣವಾಗಿ ಭಾಷಣ ಮಾಡಿದನಂತರ ಸದರಿ ಪಟ್ಟಣದ ಗದ್ವಾಲ ಸೂಗಪ್ಪನವರ ಪುತ್ರ ವಿರುಪಣನೆಂಬ ರಾಜಕೀಯ ವಿದ್ಯಾರ್ಥಿಯಾದ ಬಾಲಕನು ತನ್ನ ರಸವತ್ತಾದ ವಾಣಿಯೆಂಬ ಅಮೃತವೃಷ್ಟಿಯನ್ನು ೧ ಗಂಟೆಯವರೆಗೂ ಅವಿಚ್ಛಿನ್ನಧಾರಾರೂಪವಾಗಿ ಶ್ರೋತೃಗಳು ಆನಂದಪಡುವಂತೆ ಭಕ್ತಿಜ್ಞಾನ ಇತ್ಯಾದಿ ವಿಷಯಗಳಲ್ಲಿ ವ್ಯಾಖ್ಯಾನಕೊಟ್ಟನು. ಸಭಿಕರೆಲ್ಲರೂ ಆ ಬಾಲಕನ ಧೈರ್ಯ ವಾಚಾಧುರ್ಯ ಮೊದಲಾದವುಗಳಿಗೆ ಸಂತುಷ್ಟರಾಗಿ ಅಧ್ಯಕ್ಷರ ಅಪ್ಪಣೆಯಂತೆ ಶ್ರೀಮಂತ ಕೂರಾಮಲ್ಲಯ್ಯನವರು ಆ ಚಿರಂಜೀವಿಯ ಕೊರಳಲ್ಲಿ ಪುಷ್ಪಮಾಲೆಯನ್ನು ಅಲಂಕರಿಸಿದರು. ಆಗ ನೆರೆದ ಸಭಾಸದರು ಇದ್ದರೆ ಇಂತಹ ಸುಪುತ್ರನಿರಬೇಕೆಂದು ಕೊಂಡಾಡಹತ್ತಿದರು. ನಂತರ ಸದರಿ ಚಾಲಕರು ಎದ್ದು ಆ ಹುಡಗನ ಸೌಜನ್ಯಸರಳತನವನ್ನು ವ್ಯಕ್ತಗೊಳಿಸಿ ಕೊನೆಗೆ ಆ ದಿನದ ಪರಿಷತ್ತಿನ ಕಾರ್ಯವನ್ನು ಉಪಸಂಹರಿಸಿದರು.

ವೆಂಕಟರಾವ ಜೇಗರಕಲ್ ಪಾಟೀಲ.

ವೀರಶೈವ ಸಾಧುಮಂಡಳಿ ನಾಲ್ಕನೆ ಮಹಾಸಭಾ.

ತಾರೀಖು ೧೨-೧೨-೧೯೩೦ನೆ ಸೋಮವಾರ ೧೩ನೆ ಮಂಗಳವಾರ ಸಹ ಮೇಲ್ಕಂಡ ಸಭೆಯು ಸೊಕ್ಕೆಗ್ರಾಮದ ರಂಗನಾಥಸ್ವಾಮಿ ದೇವಾಲಯದ ಕಾಂಪೌಂಡಿನಲ್ಲಿ ತಯಾರಿಸಿದ್ದ ಮನೋಹರವಾದ ಹಂದರದಲ್ಲಿ ಶ್ರೀಮದುಜ್ಜಯಿನಿ ಶ್ರೀ|| ಶಿವನಂಜುಂಡ ದೇಶಿಕೇಂದ್ರ ಸ್ವಾಮಿಗಳವರ ಸನ್ನಿಧಿಯಲ್ಲಿಯೂ, ಶ್ರೀಮನ್ಮಹಾರಾಜರವರ ಭಾವಚಿತ್ರಾಲಂಕಾರ ಸಮಕ್ಷಮದಲ್ಲಿಯೂ ಮ|| ರಾ|| ಆ|| ಗದ್ದಬಸಪ್ಪನವರ ಅಧ್ಯಕ್ಷತೆಯಿಂದ ತರೀಕೆರೆ ಮತ್ತು ಕಡೂರು ತಾಲ್ಲೂಕುಗಳ ಗಣ್ಯಪ್ರಜೆಗಳ ಮತ್ತು ಪರಸ್ಥಳದ ಮಹನೀಯರುಗಳಿಂದ ಅಲಂಕೃತವಾಗಿ ತಾ|| ೧೨ರ ಮಧ್ಯಾಹ್ನ ೪ ಗಂಟೆಗೆ ಸಭೆಯು ಪ್ರಾರಂಭವಾಗಿ, ವಿದ್ಯಾಭ್ಯಾಸದ ವಿಚಾರವಾಗಿ ಕು|| ಮಾ|| ಕೆ. ಚನ್ನಪ್ಪನವರಿಂದಲೂ, ಅ|| ಮಾ|| ರುದ್ರಪ್ಪನವರಿಂದಲೂ ಟಿ|| ಗು|| ರುದ್ರಯ್ಯನವರಿಂದಲೂ, ಅ||ಪ|| ವೀರಪ್ಪಯ್ಯನ ಮೊದಲಾದವರಿಂದಲೂ, ಐಕಮತ್ಯ ವಿಚಾರವಾಗಿ ಮ|| ರಾ|| ಬೀ|| ದೊ|| ವೀರಭದ್ರಪ್ಪನವರಿಂದಲೂ, ಅ||ಪ|| ವೀರಪ್ಪಯ್ಯನವರೇ ಮೊದಲಾದವರಿಂದಲೂ, ಮತವಿಚಾರವಾಗಿ ಕೊಂಚ ವಿಚಾರಮಾತ್ರ ಟಿ|| ಗು|| ರುದ್ರಯ್ಯನವರಿಂದಲೂ ಉಪನ್ಯಾಸಿಸಲ್ಪಟ್ಟ ಭಾಷಣಗಳು ಅಧ್ಯಕ್ಷರ ಪುನರ್ವಿಮರ್ಶೆಯಿಂದ ಸಭಿಕರಿಗೆ ಆನಂದವನ್ನುಂಟುಮಾಡಿದುವೆಂಬಲ್ಲಿಗೆ ರಾತ್ರಿ ೧೨ ಗಂಟೆಯಾಗಲು ಸಭೆಯು ಬರ್ಖಾಸ್ತಾಯಿತು. ಮರುದಿನ ಬೆಳಿಗ್ಗೆ ೧೦ ಗಂಟೆಗೆ ಸದರಿಯವರ ಅಧ್ಯಕ್ಷತೆಯಿಂದ ಗಣ್ಯಪ್ರಜೆಗಳ ಕೂಟದಿಂದ ಸಭೆಯು ಪ್ರಾರಂಭಿಸಲ್ಪಟ್ಟು ಕೆಳಗಿನ ರೆಜಲ್ಯೂಷನ್‌ಗಳನ್ನು ಮಾಡಿ ಪ್ರೊಸಿಡಿಂಗ್ಸ್ ತಯಾರಿಸಿ ಸಾಯಂಕಾಲ ೫ ಗಂಟೆಗೆ ಸಭೆಯು ಮುಕ್ತಾಯವಾಯಿತು. ವಿದ್ಯಾರ್ಥಿನಿಲಯವೊಂದನ್ನು ತರೀಕೆರೆ ಗ್ರಾಮದಲ್ಲಿಯೂ, ಸಂಸ್ಕೃತ ಪಾಠಶಾಲೆಯನ್ನು ಬೀರೂರಲ್ಲಿಯೂ, ಏರ್ಪಡಿಸಲು ಆಯಾ ತಾಲ್ಲೂಕು ಪುರಪ್ರಮುಖರಿಂದ ಚಂದಾಮೊಬಲಗು ನಿರ್ಣಯಿಸಿ ಸುಮಾರು ೨೦ ಸಾವಿರ ರೂ. ಗಳ ವರೆಗೆ ಒದಗಿಸಲು ೨ ಕಮಿಟಿಗಳು ಏರ್ಪಟ್ಟವು. ೨. ಪರಸ್ಪರ ವಿರೋಧದಿಂದ ಕೋರ್ಟು ವಗೈರೆಗೆ ನಾವು ಹತ್ತುವುದಕ್ಕೆ ಪ್ರತಿಯಾಗಿ ಪಂಚಾಯತಿ ಮುಖೇನ ಫೈಸಲ್ಮಾಡಿ ಸದರಿ ನಷ್ಟದ ದ್ರವ್ಯವನ್ನು ವಿದ್ಯಾಭ್ಯಾಸಕ್ಕೆ ಉಪಯೋಗಿಸತಕ್ಕದ್ದು. ೩. ಮೇಲ್ಕಂಡ ಸಂಘದಲ್ಲಿ ಬೇರ್ಪಟ್ಟಿದ್ದವರು ಒಗ್ಗಟ್ಟಾಗಲು ಮುಂದೆ ಕಮಿಟಿ ಸೇರಿಸಿ ತೀರ್ಮಾನಿಸಿಕೊಳ್ಳಲು ಅನುಮೋದಿಸಲ್ಪಟ್ಟಿತಲ್ಲದೆ, ಉತ್ಸವ ವಿಚಾರಗಳಲ್ಲಿ ಪರಸ್ಪರ ಕಲಹಗಳು ವಿಷಾದಕರವಾದುವುಗಳೆಂದೂ ಅನುಮೋದಿಸಲ್ಪಟ್ಟಿತು. ಇದೇ ಮುಂತಾಗಿ ೯ ರೆಜಲ್ಯೂಷನ್‌ಗಳು ಠರಾವಾದುವು. ಮೇಲ್ಕಂಡ ಸಂಘವನ್ನು ಸಕ್ರಮಿಸಿ ಮುಕ್ತಾಯಗೊಳಿಸುವವರೆಗೂ ಅತಿಥಿ ಸತ್ಕಾರಾದರಣೆಗಳಲ್ಲಿಯೇ ನಿರತರಾಗಿದ್ದ ಸೊಕ್ಕೆಗ್ರಾಮದ ಸರ್ವರೂ ಕಷ್ಟನಷ್ಟಗಳನ್ನು ಎಣಿಸದೆ ಆದರಿಸಿದ್ದೂ, ಹುಣಿಸೆಘಟ್ಟ ಅನುವನಹಳ್ಳಿ ಮುಂತಾದ ಪುರಪ್ರಮುಖರ ಆದರಣಾದಿ ಕಾರ್ಯಗಳೂ ಸ್ತೋತ್ರಾರ್ಹವಾದುವುಗಳಲ್ಲದೆ ತದ್ವತ್ ಮುಂದೆಯೂ ಸಂಘೋಪಸಂಘಗಳು ನಡೆದು ತನ್ಮುಖೇನ ದೇಶಸೇವಾನಿರತರಾಗಲು ದೈವಾನುಗ್ರಹವುಂಟಾಗಲೆಂದು ಹಾರೈಸುವ

ಪ್ರತ್ಯಕ್ಷದರ್ಶಿ.

ವೀರಶೈವತರುಣರ ಸಂಘ, ಬೆಂಗಳೂರು.

೧೯೩೦ನೆ ಇಸವಿ ಸೆಪ್ಟಂಬರ್ ೧೪ನೆ ತಾರೀಖು ಭಾನುವಾರ "ವೀರಶೈವ ತರುಣರ ಸಂಘ" ಸ್ಥಾಪನೆಗೋಸ್ಕರ ಗತಿಸಿದ ಸಾಹುಕಾರ್ ವೀರಭದ್ರಪ್ಪನವರ ಧರ್ಮ ಸಂಸ್ಕೃತ ಪಾಠಶಾಲೆಯಲ್ಲಿ ಬೆಂಗಳೂರು ವೀರಶೈವ ಮಹಾಜನರೂ ವೀರಶೈವ ತರುಣರುಗಳೂ ಸುಮಾರು ೪೦೦ ಮಂದಿಗಳು ಸೇರಿದ್ದರು. ಆ ದಿವಸದ ಕಾರ್ಯಗಳನ್ನ ನಡೆಸಲು ಸರ್ವರ ಅಭಿಮತದಂತೆ ಮ|| ಜಿ. ಪರಮಶಿವಯ್ಯ ಬಿ. ಎ., ಎಲ್‌ಎಲ್.ಬಿ. ಯವರು ಅಧ್ಯಕ್ಷತೆಯನ್ನು ವಹಿಸಿದರು. ಮ|| ಜಿ. ಶಾಂತವೀರಪ್ಪ ಬಿ.ಎ. ಯವರು ಅನೇಕ ಉತ್ತಮೋತ್ತಮವಾದ ತತ್ವಾರ್ಥಗಳನ್ನೊಳಗೊಂಡಿರತಕ್ಕ ವೇದಶಾಸ್ತ್ರಾಗಮಗಳಿಂದ ಸಿದ್ಧವಾಗಿರತಕ್ಕ ವೀರಶೈವಮತವು ಆದಿಪಂಚಾಚಾರ್ಯರಿಂದಲೂ ಶ್ರೀ ಬಸವೇಶ್ವರನೇ ಮೊದಲಾದ ಮತಸುಧಾರಕರಿಂದಲೂ ಬಹುಮಟ್ಟಿಗೆ ಅಭಿವೃದ್ಧಿಗೆ ತರಲ್ಪಟ್ಟಿದ್ದು ಐಕಮತ್ಯ, ಸಾಹಸ, ಸಾಮರ್ಥ್ಯ, ಉತ್ಸಾಹ, ಸ್ವಾಧೀನತೆ ಮುಂತಾದ ಸಮುದಾಯೋನ್ನತಿಗೆ ಅವಶ್ಯಕವಾದ ಒಳ್ಳೆಯಗುಣಗಳ ಗ್ರಹಣಕ್ಕೆ ಅನುಕೂಲಸ್ಥಳಗಳಾದ ಸಂಘಗಳ ನೂನತೆಯಿಂದ ಹೇಗೆ ದಿನೇ ದಿನೇ ಕ್ಷೀಣದಶೆಯನ್ನು ಹೊಂದುತ್ತಿರುವುದೆಂಬುದನ್ನು ವಿಶದವಾಗಿ ತಿಳಿಯಪಡಿಸಿದುದಲ್ಲದೆ ತಾತ್ಕಾಲಿಕ ಸಮಾಜಗಳಲ್ಲಿ ನಮ್ಮವರು ಮುಂದುವರಿಯಲು ಆಚರಣೆಯಲ್ಲಿ ತರಬೇಕಾದ ಕೆಲವು ವಿಷಯಗಳನ್ನು ಚೆನ್ನಾಗಿ ವಿವರಿಸಿ ಅನಂತರ ಅವುಗಳನ್ನನುಸರಿಸಲು ಈ ವಿಧವಾದ ಸಂಘವೊಂದು ಅತ್ಯಂತಾವಶ್ಯಕವೆಂಬುದನ್ನು ಸಕಾರಣಗಳಿಂದ ಸಭಿಕರಿಗೆ ಸೂಚಿಸಿದರು. ಮ|| ಗಳಾದ ಜಿ. ರುದ್ರಪ್ಪ ಬಾರ್-ಅಟ್-ಲಾ ಯವರು, ಹೆಚ್. ಕೆ. ಮಲ್ಲಪ್ಪನವರು, ಪಿ. ಎಂ. ಬಸಪ್ಪನವರು, ಹರ್ಡೇಕರ್‌ರವರು ಇದೇ ವಿಚಾರವನ್ನು ಬೇರೆಬೇರೆ ಉದಾಹರಣೆಗಳಿಂದ ಸಭಿಕರಿಗೆ ತಿಳಿಯಪಡಿಸಿದರು. ಸಭಿಕರ ಪೂರ್ಣಸಮ್ಮತಿಯಿಂದ "ವೀರಶೈವ ತರುಣರಸಂಘವು" ಸ್ಥಾಪಿಸಲ್ಪಟ್ಟು ಈ ಕೆಳಗೆ ನಮೂದಿಸಿರುವಂತೆ ಅಧ್ಯಕ್ಷರು, ಉಪಾಧ್ಯಕ್ಷರುಗಳು, ಕಾರ್ಯದರ್ಶಿಗಳು, ಮತ್ತು ಕಾರ್ಯನಿರ್ವಾಹಕ ಮಂಡಲಿಯು ಆರಿಸಲ್ಪಟ್ಟಿತು. ಅಧ್ಯಕ್ಷರು—ಮ|| ರಾ|| ಪಿ. ಎಂ. ಬಸಪ್ಪನವರು, ಉಪಾಧ್ಯಕ್ಷರುಗಳು—ಟಿ. ನಂಜಪ್ಪನವರು, ಟಿ. ರಾಚಪ್ಪನವರು, ಕಾರ್ಯದರ್ಶಿಗಳು—ಕೆ. ತಮ್ಮಯ್ಯನವರು, ಹೆಚ್. ಕೆ. ಮಲ್ಲಪ್ಪನವರು; ಕಾರ್ಯನಿರ್ವಾಹಕ ಮಂಡಲಿಯ ಮೆಂಬರುಗಳು—ಮ|| ರಾ|| ಗಳಾದ ಜಿ. ರುದ್ರಪ್ಪನವರು ಎಂ.ಎ., ಬಾರ್-ಅಟ್-ಲಾ, ಜಿ. ಪರಮಶಿವಯ್ಯನವರು ಬಿ. ಎ., ಎಲ್.ಎಲ್.ಬಿ., ಕಂಬಿ ಶಿವಪ್ಪನವರು, ಎಂ. ಜಿ. ನಾಗಪ್ಪನವರು, ಕಾಳಪ್ಪನವರು, ಕೆಂಚಪ್ಪನವರು, ಜಿ. ಶಾಂತವೀರಪ್ಪನವರು, ಬಿ.ಎ., ಸೂಲಿಕುಂಟೆ ವೀರಭದ್ರಪ್ಪನವರು.

೧೯೩೦ನೆ ಇಸವಿ ಅಕ್ಟೋಬರ್ ತಾರೀಖು ೫ನೆ ಬುಧವಾರ ಮ|| ಜಿ. ಶಾಂತವೀರಪ್ಪ ಬಿ.ಎ., ಯವರ ಅಧ್ಯಕ್ಷತೆಯಲ್ಲಿ ಈ ಸಂಘದ ಪರವಾಗಿ ನೆರೆದಿದ್ದ ಸಭೆಯಲ್ಲಿ ಧಾರವಾಡದ ವೀರಶೈವ ತರುಣರ ಸಂಘದ ಕಡೆಯಿಂದ ಬೆಂಗಳೂರಿಗೆ ಬಂದಿದ್ದ ಮ|| ರಾ|| ಎಂ. ಎಸ್. ಕೇಸರಿ ಬಿ.ಎ., ಯವರು ಭಾಷಣಮಾಡಿದರು. ಅವರ ಭಾಷಣದಲ್ಲಿ ಧಾರವಾಡದ ವೀರಶೈವ ತರುಣರ ಸಂಘಸ್ಥಾಪನೆಗೆ ಮೈಸೂರು ವೀರಶೈವ ಮಹಾಜನರೇ ಮುಂದಾಳುಗಳೆಂತಲೂ, ಸಂಘಸ್ಥಾಪನಾನಂತರ ಅದರಿಂದ ನಡೆಯಬೇಕಾದ ಕೆಲಸಗಳು ತುಂಬಾ ತೃಪ್ತಿಕರವಾಗಿ ನಡೆಸಲ್ಪಡುತ್ತಲಿರುವುವೆಂದೂ, ಅದು ಮಾಡಿರತಕ್ಕ ಕಾರ್ಯಗಳಲ್ಲಿ ಬಾಲವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲತೆಗಳನ್ನ ಒದಗಿಸಿಕೊಟ್ಟಿರುವುದು ಒಂದಾಗಿಯೂ, ನಾನು ತಾನೆಂದು ಮುಂದುವರಿಯಲು ಪ್ರಯತ್ನಪಡುತ್ತಲಿರುವ ಇತರ ಸಮಾಜಗಳನ್ನು ಮೀರಿ ಮೊದಲನೇ ಸ್ಥಾನವನ್ನು ಪಡೆಯಲು ಯತ್ನಿಸಲೋಸುಗ ಸರಿಯಾದ ತಿಳವಳಿಕೆಯನ್ನು ಕೊಡತಕ್ಕದಾಗಿಯೂ ಇರುತ್ತೆಂದು ಬಹಳ ಸ್ವಾರಸ್ಯವಾಗಿ ಇಂಗ್ಲೀಷಿನಲ್ಲಿ ಹೇಳಿದರು. ಕೊನೆಯಲ್ಲಿ ಬೆಂಗಳೂರು "ವೀರಶೈವ ತರುಣರಸಂಘದ" ಉದ್ದೇಶಗಳನ್ನೂ, ಅದು ಮಾಡಿರತಕ್ಕ ಕಾರ್ಯಗಳನ್ನೂ ತಿಳಿಯಲಪೇಕ್ಷಿಸಿದರು. ಇದೇ ವಿಚಾರವನ್ನು ಇಂಗ್ಲೀಷು ಬಾರದೆ ಇರತಕ್ಕವರ ತಿಳುವಳಿಕೆಗೋಸ್ಕರ ಮ|| ಜಿ. ಪರಮಶಿವಯ್ಯನವರು ಕನ್ನಡಿಸಿ ಹೇಳಿದರು. ಮ|| ರಾ|| ಸಿ. ವೀರಪ್ಪನವರು ಈ ಸಂಘವನ್ನು ಸ್ಥಾಪಿಸಲು ಮಾಡಿದ ಮುಖ್ಯಪ್ರಯತ್ನಗಳನ್ನು ತಿಳಿಸಿದುದಲ್ಲದೆ ಸಂಘಗಳೆರಡರ ಉದ್ದೇಶವೂ ಒಟ್ಟಿನಲ್ಲಿ ಒಂದೇಯಾಗಿರುತ್ತದೆಂದು ಅಭಿಪ್ರಾಯಪಟ್ಟರು. ಸಂಘಗಳೆರಡೂ ಅನ್ಯೋನ್ಯತೆಯಿಂದ ಕೆಲಸಮಾಡುವ ವಿಚಾರದಲ್ಲಿ ಯಾವವಿಧವಾದ ಭಿನ್ನಾಭಿಪ್ರಾಯಗಳೂ ನಮ್ಮಲ್ಲಿಲ್ಲವೆಂದೂ, ಆದರೆ ಗತಿಸಿದ ಶ್ರೀಯುತ ಶಿರಸಂಗಿ ದೇಸಾಯರವರು ತಮ್ಮ ಧರ್ಮಫಂಡಿನ ಹಕ್ಕನ್ನು ಇಂಡಿಯಾದೇಶದ ಸಾರ್ವತ್ರಿಕ ಲಿಂಗಾಯಿತ ವಿದ್ಯಾರ್ಥಿಗಳಿಗೂ ಕೊಟ್ಟಿದ್ದಾಗ್ಯೂ ನಮ್ಮ ಮೈಸೂರು ವಿದ್ಯಾರ್ಥಿಗಳಿಗೆ ಆ ಫಂಡಿನ ಟ್ರಸ್ಟಿಗಳು ಯಾವವಿಧವಾದ ಉಪಯೋಗಕ್ಕೂ ಬಾಧಕ ಇಲ್ಲವೆಂದು ಹೇಳಲು ಕಾರಣವೇನೆಂಬುದನ್ನು ತಿಳಿಯಲು ಮ|| ರಾ|| ಜಿ. ಪರಮಶಿವಯ್ಯನವರು ಕುತೂಹಲಪಟ್ಟರು. ಮ|| ರಾ|| ಕೇಸರಿಯವರು ಅದೇ ವಿಚಾರವನ್ನು ಅವರ ಸಂಘದಲ್ಲಿ ಅನೇಕವೇಳೆ ಚರ್ಚಿಸಿಯೂ, ಚರ್ಚಿಸುತ್ತಲೂ ಇರುವುದಲ್ಲದೆ ಜಾಗ್ರತೆಯಾಗಿಯೇ ಎಲ್ಲವೂ ಸರಿಹೋಗುವ ಭರವಸೆಯನ್ನು ಸೂಚಿಸಿ ಎಲ್ಲರಿಗೂ ಆನಂದವಾಗುವಂತೆ ಕನ್ನಡದಲ್ಲಿ ಹೇಳಿದರು.

ಮ||ರಾ|| ಅಧ್ಯಕ್ಷರು ಶಾಂತವೀರಪ್ಪನವರು ಬಿ.ಎ.,—ಧಾರವಾಡದ ವೀರಶೈವ ತರುಣರಸಂಘದಿಂದ ಮತೋದ್ಧಾರಣೆಗೋಸುಗ ಮಾಡಲ್ಪಟ್ಟ ಕೆಲಸಗಳನ್ನು ಮತ್ತು ಮ|| ರಾ|| ವೀರಪ್ಪನವರು ನಮ್ಮ ಜನಾಂಗದೇಳಿಗೆಗೋಸ್ಕರ ಮಾಡುತ್ತಿರುವ ಕೆಲಸಗಳಲ್ಲಿ ಸುಮಾರು 20-25 ಬಾಲಕರಿಗೆ ಸ್ವಂತವೆಚ್ಚಗಳಿಂದ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ನಡಸುತ್ತಿರುವುದು ತುಂಬಾ ಶ್ಲಾಘ್ಯವಾಗಿಯೂ, ಉದಾಹರಣೆಯಾಗಿಯೂ ಅನುಸರಿಸತಕ್ಕದಾಗಿರುತ್ತೆಂದು ಹೇಳಿದುದಲ್ಲದೆ, ಈ ದಿವಸದವರೆಗೆ ಸಂಘವು ಮಾಡಿದ ಕೆಲಸಗಳನ್ನು ಸಭಿಕರ ತಿಳುವಳಿಕೆಗೋಸ್ಕರವಾಗಿ ಹೇಳಿದರು. ಈ ಸಂಘದ ಕಾರ್ಯವು ಸುಲಲಿತವಾಗಿ ನಡೆಯಲು ಪ್ರತಿಯೊಬ್ಬ ವೀರಶೈವರು ತಮ್ಮ ಕೈಲಾದಷ್ಟು ಸಹಾಯಮಾಡಬೇಕೆಂದು ಸೂಚಿಸಿದರು. ಸಂಘದ ಅಧ್ಯಕ್ಷರಾದ ಮ|| ರಾ|| ಯಂ. ಬಸಪ್ಪನವರು, ಮತಸುಧಾರಣೆಯ ವಿಚಾರವನ್ನೆಲ್ಲಾ ಇಲ್ಲಿಯ ವೀರಶೈವರಿಗೆ ತಿಳುಹಲು ಧಾರವಾಡದಿಂದ ಬಂದು ಬಹಳ ಚನ್ನಾಗಿ ಭಾಷಣಮಾಡಿದ ಮ|| ರಾ|| ಕೇಸರಿಯವರನ್ನು ಸಂಘದ ಪರವಾಗಿ ವಂದಿಸಿದರು. ಈ ದಿವಸದ ಕಾರ್ಯಭಾಗಗಳನ್ನ ತೃಪ್ತಿಕರವಾಗಿ ನಡಸಿದ ಅಧ್ಯಕ್ಷರಿಗೆ ಈ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸಿದ ಬಳಿಕ ಸಭೆಯು ವಿಸರ್ಜಿತವಾಯಿತು.

ಕೆ. ತಮ್ಮಯ್ಯ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನ ಮಹೋತ್ಸವವು, ತುಮಕೂರು.

ಹೋದವರ್ಷ ಶ್ರೀ ಜಗದ್ಗುರು ಮಹಾಸ್ವಾಮಿಯು ತುಮಕೂರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟಿಸಲು ಅವಶ್ಯವಾದ ಧನರಾಶಿಯನ್ನು ಸಂಗ್ರಹಿಸುವುದಕ್ಕಾಗಿ ತುಮಕೂರು, ಕೊರಟಗೆರೆ, ಮಧುಗಿರಿ ತಾಲ್ಲೂಕುಗಳಲ್ಲಿ ಪಾದವಿನ್ಯಾಸವಂ ಮಾಡಿ ಧನವಂ ಸಂಚಯಿಸಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಉತ್ತಮವಾದ ಈ ಭವನಕ್ಕೆ ಅತ್ಯಂತ ಅನುಕೂಲವಾಗಿಯೂ ಆರೋಗ್ಯಕರವಾಗಿಯೂ ಇರುವ ಸ್ಥಳವನ್ನು ಕೊಡಿಸಿಕೊಡಬೇಕೆಂದು ಮಹಾ ಶ್ರೀಯವರು ಅಭಿಲಾಷೆಪಟ್ಟಿದ್ದಂತೆ ವಿದ್ಯಾಭಿಮಾನಿಗಳಾದ ಘನಸರ್ಕಾರದವರು ಇದಕ್ಕಾಗಿ ತುಮಕೂರು ರೈಲ್ವೆಸ್ಟೇಷನ್ನಿನಿಂದ ಟವರ್‌ಹಾಲ್ ಬಳಿ ಪುರಪ್ರವೇಶವಾಗತಕ್ಕ ಮಾರ್ಗದ ಬಲಭಾಗದಲ್ಲಿ ಇರುವ ಮೈದಾನದಲ್ಲಿ ೨| ಎಕರೆ ನಿವೇಶನವನ್ನು ಮಿತವಾದ ಬೆಲೆಗೆ (೪೫೦) ಕೊಟ್ಟು ಭೂಮಿಯನ್ನು ೫-೧೧-೩೦ ರಲ್ಲಿ ಶ್ರೀಮಠದ ಏಜಂಟರ ಸುಪರ್ದಿಗೆ ವಹಿಸಿದರು. ಈ ವಿಚಾರದಲ್ಲಿ ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಸಾಹೇಬರವರಾದ ಶ್ರೀಯುತ ಆನಂದರಾವ್ ಸಿರ್ಸಿ, ಬಿ. ಎ. ಎಲ್‌ಎಲ್. ಬಿ. ಯವರು ಕೊಂಚವೂ ಬೇಸರವಿಲ್ಲದೆ ಬಹಳಮಟ್ಟಿಗೆ ಸಹಾಯಮಾಡಿ ಕೀರ್ತಿಶಾಲಿಗಳಾಗಿ ವೀರಶೈವ ಜನಾಂಗದಲ್ಲಿ ಚಿರಸ್ಮರಣೀಯರಾದುದಕ್ಕಾಗಿ ನಮ್ಮ ಸಮಾಜದವರೆಲ್ಲಾ ಇವರಿಗೂ ಮತ್ತು ಉದಾರಾಶ್ರಯವನ್ನಿತ್ತ ಪ್ರಜಾವತ್ಸಲರಾದ ಸರ್ಕಾರದವರಿಗೂ ತುಂಬಾ ಕೃತಜ್ಞರಾಗಿರುತ್ತಾರೆ. ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಈ ಭವನದ ಕಾರ್ಯವನ್ನು ಆದಷ್ಟುಜಾಗ್ರತೆ ಪೂರೈಸಿ ನಮ್ಮ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಬೇಕೆಂಬ ಅಂತಃಕರಣವುಳ್ಳವರಾಗಿರುವುದರಿಂದ ಅದಕ್ಕಾಗಿ ಈ ಮಂದಿರದ ಹಸ್ತಿಭಾರ ಶಿಲಾಪ್ರತಿಷ್ಠಾಪನೆಯನ್ನು ೧೨-೧೧-೧೯೩೦ ನೆ ಸ್ಥಿರವಾರ ದಿವ ೧೨ ಗಂಟಗೆ ಮೇಲ್ಕಂಡ ಶ್ರೀಯುತ ಆನಂದರಾವ್ ಸಿರ್ಸಿ, ಬಿ.ಎ., ಎಲ್‌ಎಲ್. ಬಿ. ಯವರ ಅಮೃತಹಸ್ತದಿಂದ ನೆರವೇರಿಸಬೇಕೆಂದು ಇಲ್ಲಿನ ವೀರಶೈವ ಸಮಾಜದವರಿಗೆ ಅಪ್ಪಣೆಯನ್ನು ದಯಪಾಲಿಸಿದಂತೆಯೇ ಇವರು ಇದಕ್ಕಾಗಿ ಪರಸ್ಥಳದ ಹಲವು ವೀರಶೈವ ಪ್ರಮುಖ ಮಹಾಜನಗಳಿಗೂ ಮತ್ತು ಸ್ಥಳದ ಅನೇಕಸ್ವಮತದ ಪರಮತದ ಮಹಾಶಯರಿಗೂ ಸಹಸ್ರಾರು ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು. ಆ ದಿನ ಈ ಭವನದ ಮೈದಾನವೆಲ್ಲಾ ರಂಭಾಸ್ತಂಭಗಳಿಂದಲೂ ಅಂದವಾದ ಹಸರು ಚಪ್ಪರಗಳಿಂದಲೂ ಪಟಗೃಹಗಳಿಂದಲೂ ಧ್ವಜಪತಾಕೆಗಳಿಂದಲೂ ತಳಿರು ತೋರಣಗಳಿಂದಲೂ ರಂಜಿತವಾಗಿ ಶ್ರೀಯವರ ವಿಹಾರೋದ್ಯಾನವೋ ಎಂಬಂತೆ ಮನೋಹರವಾಗಿ ಶೋಭಾಯಮಾನವಾಗಿದ್ದಿತು.

ಈಗ ತುಮಕೂರಿನಲ್ಲಿ ಪ್ಲೇಗಿನ ಉಪಟಲವಿದ್ದಾಗ್ಯೂ ಈ ಮಹೋತ್ಸವದ ನಿಮಿತ್ತ ಶ್ರೀ ಸಿದ್ಧಗಂಗಾ ಸುಕ್ಷೇತ್ರದ ಶ್ರೀ ಉದ್ದಾನಮಹಾಸ್ವಾಮಿಗಳವರು ಮತ್ತು ಶಿವಗಂಗೆ, ಬೆಂಗಳೂರು, ಗುಬ್ಬಿ, ತಿಪಟೂರು, ಬೆಳ್ಳಾವೆ ಮೊದಲಾದಸ್ಥಳಗಳ ವೀರಶೈವ ಮಹಾಜನಗಳು, ಸ್ಥಳದ ಸ್ವಮತ ಪರಮತದ ಮಹಾಶಯರು, ಸ್ಥಳೀಯಾಧಿಕಾರಿಗಳು ಅನೇಕ ಲಾಯರುಗಳು ಸಮಾಜದ ವಿದ್ಯಾರ್ಥಿಗಳು ವರ್ತಕ ಮಹಾಜನಗಳು ಸಭೆಯನ್ನು ಅಲಂಕರಿಸಿದ್ದರು. ತಿಪಟೂರು ವೀರಶೈವಾಶ್ರಮದ ಶ್ರೀ ವಿರೂಪಾಕ್ಷ ಶಾಸ್ತ್ರಿಗಳು ಆ ಕಾಲಕ್ಕೆ ನಡೆಯಬೇಕಾಗಿದ್ದ ವಿಧ್ಯುಕ್ತಕರ್ಮಗಳನ್ನೆಲ್ಲಾ ಸಾಂಗವಾಗಿ ನೆರವೇರಿಸಿದರು. ಡೆಪ್ಯುಟಿಕಮಿಷನರ್ ಸಾಹೇಬರವರು ೧೧|| ಗಂಟೆಗೆ ದಯಮಾಡಲು ಕಾರ್ಯದರ್ಶಿಗಳಾಗಿದ್ದ ವೀರಶೈವ ಪ್ರಮುಖರು ವಾದ್ಯವಿಭವದಿಂದ ಇದಿರ್ಗೊಂಡು ಸಭಾಮಂದಿರಕ್ಕೆ ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿದರು. ಇವರ ಎಡಗಡೆಗೆ ಶ್ರೀ ಉದ್ದಾನಸ್ವಾಮಿಗಳವರೂ ಅವರ ಹಿಂಭಾಗದಲ್ಲಿ ವೈದಿಕರೂ ಕುಳಿತಿದ್ದರು. ಸಭಾಕಾರ್ಯಕ್ಕೆ ಮೊದಲು ಶಾಸ್ತ್ರಿಗಳವರಿಂದ ಸ್ವಸ್ತಿವಾಚನವಾದನಂತರ ಶ್ರೀ ಜಗದ್ಗುರು ಮಹಾಸಂಸ್ಥಾನದಿಂದ ಕಳುಹಿಸಲ್ಪಟ್ಟಿದ್ದ ನಿರೂಪವನ್ನು ಎಂದರೆ ಈ ಊರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟಿಸಬೇಕಾದ ಆವಶ್ಯಕತೆಯನ್ನೂ ಇದಕ್ಕಾಗಿ ನಡೆದಿರುವ ಕಾರ್ಯಕ್ರಮವನ್ನೂ ವಿವರಿಸುವ ನಿರೂಪವನ್ನು ಶ್ರೀರಂಗಪಟ್ಟಣದ ಶ್ರೀಯುತ ಸಿದ್ಧಲಿಂಗದೇವರು ಓದಿಹೇಳಿ ಇದರ ಶಂಕುಸ್ಥಾಪನೆಯನ್ನು ಅಧ್ಯಕ್ಷರು ನೆರವೇರಿಸಿ ವೀರಶೈವ ಸಮಾಜದವರಿಗೆ ಆನಂದವನ್ನುಂಟುಮಾಡಬೇಕೆಂದು ಕೋರಿದರು. ಇದನ್ನು ಹೆ|| ಮಾಸ್ಟರು ಮ|| ರಾ|| ಗುರುಚನ್ನಬಸವಯ್ಯನವರು ಪುಷ್ಟೀಕರಿಸಿದರು. ನಂತರ ಅಧ್ಯಕ್ಷರಾದ ಡಿ|| ಕ|| ಸಾ|| ರವರು ಸಮಯೋಚಿತವಾದ ಪ್ರತ್ಯುತ್ತರವನ್ನು ಇತ್ತು ಶ್ರೀ ಜಗದ್ಗುರುಗಳವರ ಪ್ರಭಾವವನ್ನು ಕೊಂಡಾಡಿ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು, ಮಹಾಜನರು ಜಯಘೋಷವನ್ನು ಮಾಡುತ್ತಿರಲು, ಈ ಕಟ್ಟಡವು ಚಿರಸ್ಥಾಯಿಯಾಗಿರಬೇಕೆಂದು ಪ್ರಾರ್ಥಿಸುತ್ತಾ ಹಸ್ತಿಭಾರ ಶಿಲೆಯನ್ನು ಶುಭಮುಹೂರ್ತದಲ್ಲಿ ತಮ್ಮ ಅಮೃತಹಸ್ತದಿಂದ ಪ್ರತಿಷ್ಠಾಪನೆಮಾಡಿ ಅಗ್ರಾಸನವನ್ನು ಅಲಂಕರಿಸುವ ವೇಳೆಗೆ ಸರಿಯಾಗಿ ಉಪಮಂತ್ರಿವರ್ಯರಾಗಿದ್ದು ಇಡೀಸಮಾಜಕ್ಕೆ ಆದರ್ಶಪ್ರಾಯರಾಗಿರುವ ದಿವಾನ್ ಬಹದ್ದೂರು ರಾಜಸಭಾಭೂಷಣ ಶ್ರೀಯುತ ಕೆ. ಪಿ. ಪುಟ್ಟಣ್ಣಸೆಟ್ಟಿ ಸಿ.ಐ.ಇ. ಯವರಿಂದ ಸೂಚಿಸಲ್ಪಟ್ಟ ಅಭಿನಂದನವು ತಂತಿಯಮೂಲಕ ಬಂದು ತಲ್ಪಿತು. ಅದನ್ನು ಅಧ್ಯಕ್ಷರು ಓದಿಹೇಳಿದರು. ಶ್ರೀ ಜಗದ್ಗುರುಗಳವರ ಆಶೀರ್ವಾದ ಪತ್ರವೂಸಹ ತಂತಿಯಮೂಲಕ ತಿಳಿಸಲ್ಪಟ್ಟಿತು. ಅದರಂತೆಯೇ ಸಮಾಜ ಸಬ್‌ಜಡ್ಜರಾದ ಮಿ. ಸಿ. ಮಹಾದೇವಯ್ಯನವರೇ ಮೊದಲಾದ ಸಮಾಜಶ್ರೇಷ್ಠರಿಂದ ಅಭಿನಂದನಪತ್ರಿಕೆಗಳು ಬಂದಿದ್ದವು. ಇದನ್ನೆಲ್ಲಾ ಕೇಳಿ ಸಭಾಸದರು ಸಂತೋಷಪಡುವಾಗ್ಗೆ ಬೆಂಚ್ ಮ್ಯಾಜಿಸ್ಟ್ರೇಟ್ ಮಿ. ಸುಬ್ಬರಾಯರು ವೀರಶೈವ ಜನಾಂಗದವರಲ್ಲಿ ತಮ್ಮಗಳಿಗೆ ಇರುವ ಸ್ನೇಹವನ್ನು ತಿಳಿಸಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ತಪೋವೈಭವವನ್ನು ಕೊಂಡಾಡಿ ಇದರಂತೆಯೇ ಸಕಲ ಸದ್ಬ್ರಾಹ್ಮಣರೂ ತಮ್ಮ ಧರ್ಮದಲ್ಲಿ ನಿರತರಾಗಿದ್ದುಕೊಂಡು ಇತರರನ್ನೂ ಸಹೋದರಭಾವದಿಂದ ಪ್ರೀತಿಸಬೇಕೆಂದು ತಿಳಿಸಿದರು. ಅಷ್ಟರಲ್ಲಿ ಸಭಾಸದರಿಗೆ ಪುಷ್ಪಹಾರ ಗಂಧ ವಿನಿಯೋಗವಾಗುತ್ತಿರಲು ಸಭಾಧ್ಯಕ್ಷರಿಗೂ ಸಭಿಕರಿಗೂ ಮತ್ತು ಅಭಿನಂದನ ಪತ್ರಗಳನ್ನು ಕಳುಹಿಸಿದ್ದ ಸಮಾಜಬಾಂಧವರಿಗೂ ಈ ಊರಿನ ಸಕಲ ವೀರಶೈವರ ಪರವಾದ ಕೃತಜ್ಞತಾವಂದನೆಗಳನ್ನು ಪ್ಲೀಡರ್ ಮ|| ಜಿ. ಕೆ. ಗುರುಸಂಗಾರ್ಯರು ತಿಳಿಸಿದರು. ಕಡೆಯಲ್ಲಿ ವೀರಶೈವ ಬಾಲಕಿಯರು ಮಂಗಳವನ್ನು ಇಂಪಾಗಿ ಹಾಡುತ್ತಿರಲು ಶ್ರೀ ಜಗದ್ಗುರು ಮಹಾಸ್ವಾಮಿಯವರ ಪಾದಸ್ಮರಣೆಯಿಂದಲೂ ಶ್ರೀಮನ್ಮಹಾರಾಜ ಪ್ರಭುಸಹೋದರರ ಅಮಾತ್ಯವರರ ಮತ್ತು ರಾಜಮನೆತನದವರ ಶ್ರೇಯಃಪ್ರಾರ್ಥನೆಯಿಂದಲೂ ಸಭಾ ವಿರಮಿಸಲ್ಪಟ್ಟಿತು. ಹೀಗೆ ಶಂಕುಸ್ಥಾಪನಾ ಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿದ್ದಲ್ಲದೆ ಕಟ್ಟಡವನ್ನು ಜಾಗ್ರತೆ ಪೂರೈಸಿ ವಿದ್ಯಾರ್ಥಿಗಳಿಗೆ ಇರುವ ತೊಂದರೆಯನ್ನು ನಿವಾರಿಸಬೇಕೆಂದು ಶ್ರೀ ಜಗದ್ಗುರು ಮಹಾಸ್ವಾಮಿಯವರು ಕೃಪಾತಿಶಯವುಳ್ಳವರಾಗಿರುವುದಲ್ಲದೆ ಇಲ್ಲಿನ ಕೆಲವು ವೀರಶೈವ ಮಹಾಜನರೂ ಕುತೂಹಲವುಳ್ಳವರಾಗಿದ್ದಾರೆ. ಕಟ್ಟಡದ ಪ್ಲಾನು ಎಸ್ಟಿಮೇಟ್ ತಯಾರಾಗಿರುವುದಲ್ಲದೆ ಇಷ್ಟರಲ್ಲೇ ಕಟ್ಟಡದ ಕೆಲಸವು ಪ್ರಾರಂಭಿಸಲ್ಪಡುತ್ತದೆ. ಇದಕ್ಕಾಗಿಯೂ ಮುಂದೆ ಅನಾಥ ವಿದ್ಯಾರ್ಥಿಗಳಿಗೆ ಅವಶ್ಯವಾದ ಭೋಜನದ ಏರ್ಪಾಟಿಗೂ ಬಹಳ ಧನಸಹಾಯ ಬೇಕಾಗಿದೆ. ಈ ನಿಲಯದಲ್ಲಿ ಒಂದೊಂದು ಕೊಟ್ಟಡಿಯನ್ನು ಉದಾರಾಶ್ರಯವಿತ್ತು ಸ್ವಂತವೆಚ್ಚದಿಂದ ಕಟ್ಟಿಸಿಕೊಡುವ ಸಮಾಜಬಾಂಧವರ ಹೆಸರು ಶಾಶ್ವತವಾಗಿರುವಂತೆ ನಿಲಯದಲ್ಲಿ ಅವರ ಹೆಸರನ್ನು ಬರೆಸುವುದಲ್ಲದೆ ಅವರ ಭಾವಚಿತ್ರವನ್ನು ಸಹ ಇಟ್ಟು ಸನ್ಮಾನಿಸುವುದಾಗುತ್ತದೆ. ಅಲ್ಲದೆ ಇದರ ಧನರಾಶಿಗೆ ಒಂದುಸಹಸ್ರ ರೂಪಾಯಿಗಳಿಗೆ ಮೇಲ್ಪಟ್ಟು ಸಹಾಯಮಾಡುವ ಮಹನೀಯರ ಭಾವಚಿತ್ರಪಟವನ್ನು ಸಹ ಈ ನಿಲಯದಲ್ಲಿ ಚಿರಸ್ಮರಣೀಯವಾಗಿರುವಂತೆ ಕಟ್ಟುವುದಾಗುತ್ತದೆ. ಪರೋಪಕಾರ ನಿರತರಾದ ಪ್ರಿಯಬಾಂಧವರೆ! ಈ ಮಹಾಕಾರ್ಯವನ್ನು ವಿದ್ಯಾಭಿಮಾನಿಗಳೂ ಧರ್ಮಾಭಿಮಾನಿಗಳೂ ದಾನಶೂರರೂ ಸಮಾಜಹಿತಚಿಂತಕರೂ ಆದ ತಾವು ದಯವಿಟ್ಟು ಗಮನಿಸಿ, ಈ ಭವನದ ಧನರಾಶಿಗೆ ಶಕ್ತಿಮೀರಿ ಸಹಾಯಮಾಡಿ ಶ್ರೀಗುರುಕೃಪೆಗೂ ಪರಶಿವಪ್ರೀತಿಗೂ ಸಮಾಜದ ವಂದನೆಗೂ ಸಹ ಪಾತ್ರರಾಗಲು ಸಮಾಜದ ಪರವಾಗಿ ಬೇಡುತ್ತೇನೆ.

ಮಹಾಶಯರೆ ಇದಕ್ಕೆ ಧನಸಹಾಯಮಾಡುವ ಮಹನೀಯರು ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ದಿವ್ಯಸನ್ನಿಧಿಗೆ ತಮ್ಮ ಮೊಬಲಗನ್ನು ಕಳುಹಿಸಿಕೊಟ್ಟು ಧನ್ಯರಾಗಲು ಸವಿನಯಪ್ರಾರ್ಥನೆ.

ಸುಜನಸೇವಕ.

೧೯೩೦ ನೆಯ ಇಸವಿ ಡಿಶಂಬರ್ ತಾ|| ೨೫ ರಿಂದ ೧೯೩೦ ನೆಯ ಡಿಶಂಬರು ತಾ|| ೩೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೨ ನೆಯ ದುರ್ಮತಿನಾಮಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿಯಿಂದ ಪುಷ್ಯ ಶುದ್ಧ ಬಿದಿಗೆ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
25	[1]ಭಾನು	ಏಕಾ	11-7	ಸ್ವಾತಿ	1-15	11
26	[2]ಸೋಮ	ದ್ವಾದ	8-45	ವಿಶಾ	0-16	12
27	ಮಂಗಳ	ತ್ರಯೋ	7-32	ಅನೂ	0-22	13
28	[3]ಬುಧ	ಚತು	7-33	ಜ್ಯೇಷ್ಠ	0-40	14
29	[4]ಗುರು	ಅಮಾ	8-52	ಮೂಲ	4-1	15
30	[5]ಶುಕ್ರ	ಪಾಡ್ಯ	11-26	ಪೂಷಾ	8-2	16
31	ಶನಿ	ಬಿದಿ	15-9	ಉಷಾ	12-55	17

(1) ಸರ್ವತ್ರೈಕಾದಶಿ. (2) ಪ್ರದೋಷಃ. (3) ಸರ್ವತ್ರಾಮಾವಾಸ್ಯಾ. (4) ಮಾರ್ಗಶಿರ ಲಕ್ಷ್ಮೀವ್ರತಂ, ಎಳ್ಳಮಾವಾಸ್ಯೆ ಪ್ರಯುಕ್ತ ತೀರ್ಥಹಳ್ಳಿಯಲ್ಲಿ ತುಂಗಾನದೀಸ್ನಾನ. (5) ತೀರ್ಥಹಳ್ಳಿಯಲ್ಲಿ ರಾಮೇಶ್ವರ ಸ್ವಾಮಿರಥಃ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕೌರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೇಲೆ ಕೆಲವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವಿಷಯವಾಗಿಯೂ ಐಕಮತ್ಯ ವಿಷಯವಾಗಿಯೂ ಮತ್ತು ಲಿಂಗಾರ್ಚನಾ ಬಗ್ಗೆ ಸಪ್ರಮಾಣವಾಗಿ ಭಾಷಣ ಮಾಡಿದನಂತರ ಸದರಿ ಪಟ್ಟಣದ ಗದ್ವಾಲ ಸೂಗಪ್ಪನವರ ಪುತ್ರ ವಿರುಪಣನೆಂಬ ರಾಜಕೀಯ ವಿದ್ಯಾರ್ಥಿಯಾದ ಬಾಲಕನು ತನ್ನ ರಸವತ್ತಾದ ವಾಣಿಯೆಂಬ ಅಮೃತವೃಷ್ಟಿಯನ್ನು ೧ ಗಂಟೆಯವರೆಗೂ ಅವಿಚ್ಛಿನ್ನಧಾರಾರೂಪವಾಗಿ ಶ್ರೋತೃಗಳು ಆನಂದಪಡುವಂತೆ ಭಕ್ತಿಜ್ಞಾನ ಇತ್ಯಾದಿ ವಿಷಯಗಳಲ್ಲಿ ವ್ಯಾಖ್ಯಾನಕೊಟ್ಟನು. ಸಭಿಕರೆಲ್ಲರೂ ಆ ಬಾಲಕನ ಧೈರ್ಯ ವಾಙ್ಮಾಧುರ್ಯ ಮೊದಲಾದವುಗಳಿಗೆ ಸಂತುಷ್ಟರಾಗಿ ಅಧ್ಯಕ್ಷರ ಅಪ್ಪಣೆಯಂತೆ ಶ್ರೀಮಂತ ಕೂರಾಮಲ್ಲಯ್ಯನವರು ಆ ಚಿರಂಜೀವಿಯ ಕೊರಳಲ್ಲಿ ಪುಷ್ಪಮಾಲೆಯನ್ನು ಅಲಂಕರಿಸಿದರು. ಆಗ ನೆರೆದ ಸಭಾಸದರು ಇದ್ದರೆ ಇಂತಹ ಸುಪುತ್ರನಿರಬೇಕೆಂದು ಕೊಂಡಾಡಹತ್ತಿದರು. ನಂತರ ಸದರಿ ಚಾಲಕರು ಎದ್ದು ಆ ಹುಡಗನ ಸೌಜನ್ಯಸರಳತನವನ್ನು ವ್ಯಕ್ತಗೊಳಿಸಿ ಕೊನೆಗೆ ಆ ದಿನದ ಪರಿಷತ್ತಿನ ಕಾರ್ಯವನ್ನು ಉಪಸಂಹರಿಸಿದರು.

ವೆಂಕಟರಾವ ಜೇಗರಕಲ್ ಪಾಟೀಲ.

ವೀರಶೈವ ಸಾಧುಮಂಡಳಿ ನಾಲ್ಕನೆ ಮಹಾಸಭಾ.

ತಾರೀಖು ೧೨-೧೨-೧೯೨೧ನೆ ಸೋಮವಾರ ೧೩ನೆ ಮಂಗಳವಾರ ಸಹ ಮೇಲ್ಕಂಡ ಸಭೆಯು ಸೊಕ್ಕೆಗ್ರಾಮದ ರಂಗನಾಥಸ್ವಾಮಿ ದೇವಾಲಯದ ಕಾಂಪೌಂಡಿನಲ್ಲಿ ತಯಾರಿಸಿದ್ದ ಮನೋಹರವಾದ ಚಪ್ಪರದಲ್ಲಿ ಶ್ರೀಮದುಜ್ಜಯನಿ ಶ್ರೀ|| ಶಿವನಂಜುಂಡ ದೇಶಿಕೇಂದ್ರ ಸ್ವಾಮಿಗಳವರ ಸನ್ನಿಧಿಯಲ್ಲಿಯೂ, ಶ್ರೀಮನ್ಮಹಾರಾಜರವರ ಭಾವಚಿತ್ರಾಲಂಕಾರ ಸಮಕ್ಷಮದಲ್ಲಿಯೂ ಮ|| ರಾ|| ಆ|| ಗದ್ದಿಬಸಪ್ಪನವರ ಅಧ್ಯಕ್ಷತೆಯಿಂದ ತರೀಕೆರೆ ಮತ್ತು ಕಡೂರು ತಾಲ್ಲೂಕುಗಳ ಗಣ್ಯಪ್ರಜೆಗಳ ಮತ್ತು ಪರಸ್ಥಳದ ಮಹನೀಯರುಗಳಿಂದ ಅಲಂಕೃತವಾಗಿ ತಾ|| ೧೨ರ ಮಧ್ಯಾಹ್ನ ೪ ಗಂಟೆಗೆ ಸಭೆಯು ಪ್ರಾರಂಭವಾಗಿ, ವಿದ್ಯಾಭ್ಯಾಸದ ವಿಚಾರವಾಗಿ ಕು|| ಮಾ|| ಕೆ. ಚನ್ನಪ್ಪನವರಿಂದಲೂ, ಅ|| ಮಾ|| ರುದ್ರಪ್ಪನವರಿಂದಲೂ ಚ|| ಗು|| ರುದ್ರಯ್ಯನವರಿಂದಲೂ, ಆ||ಪ|| ವೀರಪ್ಪಯ್ಯನ ಮೊದಲಾದವರಿಂದಲೂ, ಐಕಮತ್ಯ ವಿಚಾರವಾಗಿ ಮ|| ರಾ|| ಬೀ|| ದೊ|| ವೀರಭದ್ರಪ್ಪನವರಿಂದಲೂ, ಆ|| ಪ|| ವೀರಪ್ಪಯ್ಯನವರೇ ಮೊದಲಾದವರಿಂದಲೂ, ಮತವಿಚಾರವಾಗಿ ಕೊಂಚ ವಿಚಾರಮಾತ್ರ ಚ|| ಗು|| ರುದ್ರಯ್ಯನವರಿಂದಲೂ ಉಪನ್ಯಾಸಿಸಲ್ಪಟ್ಟ ಭಾಷಣಗಳು ಅಧ್ಯಕ್ಷರ ಪುನರ್ವಿಮರ್ಶೆಯಿಂದ ಸಭಿಕರಿಗೆ ಆನಂದವನ್ನುಂಟುಮಾಡಿದುವೆಂಬಲ್ಲಿಗೆ ರಾತ್ರಿ ೧೨ ಗಂಟೆಯಾಗಲು ಸಭೆಯು ಭರ್ಕಾಸ್ತಾಯಿತು. ಮರುದಿನ ಬೆಳಿಗ್ಗೆ ೧೦ ಗಂಟೆಗೆ ಸದರಿಯವರ ಅಧ್ಯಕ್ಷತೆಯಿಂದ ಗಣ್ಯಪ್ರಜೆಗಳ ಕೂಟದಿಂದ ಸಭೆಯು ಪ್ರಾರಂಭಿಸಲ್ಪಟ್ಟು ಕೆಳಗಿನ ರೆಜಲ್ಯೂಷನ್ಗಳನ್ನು ಮಾಡಿ ಪ್ರೊಸಿಡಿಂಗ್ಸ್ ತಯಾರಿಸಿ ಸಾಯಂಕಾಲ ೫ ಗಂಟೆಗೆ ಸಭೆಯು ಮುಕ್ತಾಯವಾಯಿತು. ವಿದ್ಯಾರ್ಥಿನಿಲಯವೊಂದನ್ನು ತರೀಕೆರೆ ಗ್ರಾಮದಲ್ಲಿಯೂ, ಸಂಸ್ಕೃತ ಪಾಠಶಾಲೆಯನ್ನು ಬೀರೂರಲ್ಲಿಯೂ, ಏರ್ಪಡಿಸಲು ಆಯಾ ತಾಲ್ಲೂಕು ಪುರಪ್ರಮುಖರಿಂದ ಚಂದಾಮೊಬಲಗು ನಿರ್ಣಯಿಸಿ ಸುಮಾರು ೨೦ ಸಾವಿರ ರೂ. ಗಳ ವರೆಗೆ ಒದಗಿಸಲು ೨ ಕಮಿಟಿಗಳು ಏರ್ಪಟ್ಟವು. ೨. ಪರಸ್ಪರ ವಿರೋಧದಿಂದ ಕೋರ್ಟು ವಗೈರೆಗೆ ನಾವು ಹತ್ತುವುದಕ್ಕೆ ಪ್ರತಿಯಾಗಿ ಪಂಚಾಯತಿ ಮುಖೇನ ಫೈಸಲ್ಮಾಡಿ ಸದರಿ ನಷ್ಟದ ದ್ರವ್ಯವನ್ನು ವಿದ್ಯಾಭ್ಯಾಸಕ್ಕೆ ಉಪಯೋಗಿಸತಕ್ಕದ್ದು. ೩. ಮೇಲ್ಕಂಡ ಸಂಘದಲ್ಲಿ ಬೇರ್ಪಟ್ಟಿದ್ದವರು ಒಗ್ಗಟ್ಟಾಗಲು ಮುಂದೆ ಕಮಿಟಿ ಸೇರಿಸಿ ತೀರ್ಮಾನಿಸಿಕೊಳ್ಳಲು ಅನುಮೋದಿಸಲ್ಪಟ್ಟಿತಲ್ಲದೆ, ಉತ್ಸವ ವಿಚಾರಗಳಲ್ಲಿ ಪರಸ್ಪರ ಕಲಹಗಳು ವಿಷಾದಕರವಾದುವುಗಳೆಂದೂ ಅನುಮೋದಿಸಲ್ಪಟ್ಟಿತು. ಇದೇ ಮುಂತಾಗಿ ೯ ರೆಜಲ್ಯೂಷನ್ಗಳು ಠರಾವಾದುವು. ಮೇಲ್ಕಂಡ ಸಂಘವನ್ನು ಪಕ್ರಮಿಸಿ ಮುಕ್ತಾಯಗೊಳಿಸುವವರೆಗೂ ಅತಿಥಿ ಸತ್ಕಾರಾದರಣೆಗಳಲ್ಲಿಯೇ ನಿರತರಾಗಿದ್ದ ಸೊಕ್ಕೆಗ್ರಾಮದ ಸರ್ವರೂ ಕಷ್ಟನಷ್ಟಗಳನ್ನು ಎಣಿಸದೆ ಆದರಿಸಿದ್ದೂ, ಹುಣಸೆಘಟ್ಟ ಅನುವನಹಳ್ಳಿ ಮುಂತಾದ ಪುರಪ್ರಮುಖರ ಆದರಣಾದಿ ಕಾರ್ಯಗಳೂ ಸ್ತೋತ್ರಾರ್ಹವಾದುವುಗಳಲ್ಲದೆ ತದ್ವತ್ ಮುಂದೆಯೂ ಸಂಘೋಪಸಂಘಗಳು ನಡೆದು ತಮ್ಮ ಹೀನ ದೇಶಸೇವಾನಿರತರಾಗಲು ದೈವಾನುಗ್ರಹವುಂಟಾಗಲೆಂದು ಹಾರೈಸುವ

ಪ್ರತ್ಯಕ್ಷದರ್ಶಿ.

ವೀರಶೈವತರುಣರ ಸಂಘ, ಬೆಂಗಳೂರು.

೧೯೨೧ನೆ ಇಸವಿ ಸೆಪ್ಟಂಬರ್ ೧೮ನೆ ತಾರೀಖು ಭಾನುವಾರ "ವೀರಶೈವ ತರುಣರ ಸಂಘ" ಸ್ಥಾಪನೆಗೋಸ್ಕರ ಗತಿಸಿದ ಸಾಹುಕಾರ್ ವೀರಭದ್ರಪ್ಪನವರ ಧರ್ಮ ಸಂಸ್ಕೃತ ಪಾಠಶಾಲೆಯಲ್ಲಿ ಬೆಂಗಳೂರು ವೀರಶೈವ ಮಹಾಜನರೂ ವೀರಶೈವ ತರುಣರುಗಳೂ ಸುಮಾರು ೪೦೦ ಮಂದಿಗಳು ಸೇರಿದ್ದರು. ಅ ದಿವಸದ ಕಾರ್ಯಗಳನ್ನ ನಡೆಸಲು ಸರ್ವರ ಅಭಿಮತದಂತೆ ಮ|| ಜಿ. ಪರಮಶಿವಯ್ಯ ಬಿ. ಎ., ಎಲ್ ಎಲ್. ಬಿ. ಯವರು ಅಧ್ಯಕ್ಷತೆಯನ್ನು ವಹಿಸಿದರು. ಮ|| ಜಿ. ಶಾಂತವೀರಪ್ಪ ಬಿ.ಎ. ಯವರು ಅನೇಕ ಉತ್ತಮೋತ್ತಮವಾದ ತತ್ವಾರ್ಥಗಳನ್ನೊಳಗೊಂಡಿರತಕ್ಕ ವೇದಶಾಸ್ತ್ರಾಗಮಗಳಿಂದ ಸಿದ್ಧವಾಗಿರತಕ್ಕ ವೀರಶೈವಮತವು ಆದಿಪಂಚಾಚಾರ್ಯರಿಂದಲೂ ಶ್ರೀ ಬಸವೇಶ್ವರನೇ ಮೊದಲಾದ ಮತಸುಧಾರಕರಿಂದಲೂ ಬಹುಮಟ್ಟಿಗೆ ಅಭಿವೃದ್ಧಿಗೆ ತರಲ್ಪಟ್ಟಿದ್ದು ಐಕಮತ್ಯ, ಸಾಹಸ, ಸಾಮರ್ಥ್ಯ, ಉತ್ಸಾಹ, ಸ್ವಾಧೀನತೆ ಮುಂತಾದ ಸಮುದಾಯೋನ್ನತಿಗೆ ಅವಶ್ಯಕವಾದ ಒಳ್ಳೆಯಗುಣಗಳ ಗ್ರಹಣಕ್ಕೆ ಅನುಕೂಲಸ್ಥಳಗಳಾದ ಸಂಘಗಳ ನ್ಯೂನತೆಯಿಂದ ಹೇಗೆ ದಿನೇ ದಿನೇ ಕ್ಷೀಣದಶೆಯನ್ನು ಹೊಂದುತ್ತಿರುವುದೆಂಬುದನ್ನು ವಿಶದವಾಗಿ ತಿಳಿಯಪಡಿಸಿದುದಲ್ಲದೆ ತಾತ್ಕಾಲಿಕ ಸಮಾಜಗಳಲ್ಲಿ ನಮ್ಮವರು ಮುಂದುವರಿಯಲು ಆಚರಣೆಯಲ್ಲಿ ತರಬೇಕಾದ ಕೆಲವು ವಿಷಯಗಳನ್ನು ಚೆನ್ನಾಗಿ ವಿವರಿಸಿ ಅನಂತರ ಅವುಗಳನ್ನನುಸರಿಸಲು ಈ ವಿಧವಾದ ಸಂಘವೊಂದು ಅತ್ಯಂತಾವಶ್ಯಕವೆಂಬುದನ್ನು ಸಕಾರಣಗಳಿಂದ ಸಭಿಕರಿಗೆ ಸೂಚಿಸಿದರು. ಮ|| ಗಳಾದ ಜಿ. ರುದ್ರಪ್ಪ ಬಾರ್-ಅಟ್-ಲಾ ಯವರು, ಹೆಚ್. ಕೆ. ಮಲ್ಲಪ್ಪನವರು, ಪಿ. ಎಂ. ಬಸಪ್ಪನವರು, ಹರ್ಡೇಕರ್‌ರವರು ಇದೇ ವಿಚಾರವನ್ನು ಬೇರೆಬೇರೆ ಉದಾಹರಣೆಗಳಿಂದ ಸಭಿಕರಿಗೆ ತಿಳಿಯಪಡಿಸಿದರು. ಸಭಿಕರ ಪೂರ್ಣಸಮ್ಮತಿಯಿಂದ "ವೀರಶೈವ ತರುಣರಸಂಘವು" ಸ್ಥಾಪಿಸಲ್ಪಟ್ಟು ಈ ಕೆಳಗೆ ನಮೂದಿಸಿರುವಂತೆ ಅಧ್ಯಕ್ಷರು, ಉಪಾಧ್ಯಕ್ಷರುಗಳು, ಕಾರ್ಯದರ್ಶಿಗಳು, ಮತ್ತು ಕಾರ್ಯನಿರ್ವಾಹಕ ಮಂಡಲಿಯು ಆರಿಸಲ್ಪಟ್ಟಿತು. ಅಧ್ಯಕ್ಷರು—ಮ|| ರಾ|| ಪಿ. ಎಂ. ಬಸಪ್ಪನವರು, ಉಪಾಧ್ಯಕ್ಷರುಗಳು—ಟಿ. ನಂಜಪ್ಪನವರು, ಟಿ. ರಾಚಪ್ಪನವರು, ಕಾರ್ಯದರ್ಶಿಗಳು—ಕೆ. ತಮ್ಮಯ್ಯನವರು, ಹೆಚ್. ಕೆ. ಮಲ್ಲಪ್ಪನವರು; ಕಾರ್ಯನಿರ್ವಾಹಕ ಮಂಡಲಿಯ ಮೆಂಬರುಗಳು—ಮ|| ರಾ|| ಗಳಾದ ಜಿ. ರುದ್ರಪ್ಪನವರು ಎಂ.ಎ., ಬಾರ್-ಅಟ್-ಲಾ, ಜಿ. ಪರಮಶಿವಯ್ಯನವರು ಬಿ. ಎ., ಎಲ್ ಎಲ್.ಬಿ., ಕಂಬಿ ಶಿವಪ್ಪನವರು, ಎಂ. ಜಿ. ನಾಗಪ್ಪನವರು, ಕಾಳಪ್ಪನವರು, ಕೆಂಚಪ್ಪನವರು, ಜಿ. ಶಾಂತವೀರಪ್ಪನವರು, ಬಿ.ಎ., ಸೊಲುಕುಂಟೆ ವೀರಭದ್ರಪ್ಪನವರು.

೧೯೨೧ನೆ ಇಸವಿ ಅಕ್ಟೋಬರ್ ತಾರೀಖು ೫ನೆ ಬುಧವಾರ ಮ|| ಜಿ. ಶಾಂತವೀರಪ್ಪ ಬಿ.ಎ., ಯವರ ಅಧ್ಯಕ್ಷತೆಯಲ್ಲಿ ಈ ಸಂಘದ ಪರವಾಗಿ ನೆರೆದಿದ್ದ ಸಭೆಯಲ್ಲಿ ಧಾರವಾಡದ ವೀರಶೈವ ತರುಣರ ಸಂಘದ ಕಡೆಯಿಂದ ಬೆಂಗಳೂರಿಗೆ ಬಂದಿದ್ದ ಮ|| ರಾ|| ಎಂ. ಎಸ್. ಕೇಸರಿ ಬಿ.ಎ., ಯವರು ಭಾಷಣಮಾಡಿದರು. ಅವರ ಭಾಷಣದಲ್ಲಿ ಧಾರವಾಡದ ವೀರಶೈವ ತರುಣರ ಸಂಘಸ್ಥಾಪನೆಗೆ ಮೈಸೂರು ವೀರಶೈವ ಮಹಾಜನರೇ ಮುಂದಾಳುಗಳೆಂತಲೂ, ಸಂಘಸ್ಥಾಪನಾನಂತರ ಅದರಿಂದ ನಡೆಯಬೇಕಾದ ಕೆಲಸಗಳು ತುಂಬಾ ತೃಪ್ತಿಕರವಾಗಿ ನಡೆಸಲ್ಪಡುತ್ತಲಿರುವುವೆಂದೂ, ಅದು ಮಾಡಿರತಕ್ಕ ಕಾರ್ಯಗಳಲ್ಲಿ ಬಾಲವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲತೆಗಳನ್ನ ಒದಗಿಸಿಕೊಟ್ಟಿರುವುದು ಒಂದಾಗಿಯೂ, ನಾನು ತಾನೆಂದು ಮುಂದುವರಿಯಲು ಪ್ರಯತ್ನಪಡುತ್ತಲಿರುವ ಇತರ ಸಮಾಜಗಳನ್ನು ಮೀರಿ ಮೊದಲನೇ ಸ್ಥಾನವನ್ನು ಪಡೆಯಲು ಯತ್ನಿಸಲೋಸುಗ ಸರಿಯಾದ ತಿಳಿವಳಿಕೆಯನ್ನು ಕೊಡತಕ್ಕುದಾಗಿಯೂ ಇರುತ್ತೆಂದು ಬಹಳ ಸ್ವಾರಸ್ಯವಾಗಿ ಇಂಗ್ಲೀಷಿನಲ್ಲಿ ಹೇಳಿದರು. ಕೊನೆಯಲ್ಲಿ ಬೆಂಗಳೂರು "ವೀರಶೈವ ತರುಣರಸಂಘದ" ಉದ್ದೇಶಗಳನ್ನೂ, ಅದು ಮಾಡಿರತಕ್ಕ ಕಾರ್ಯಗಳನ್ನೂ ತಿಳಿಯಲಪೇಕ್ಷಿಸಿದರು. ಇದೇ ವಿಚಾರವನ್ನು ಇಂಗ್ಲೀಷು ಬಾರದೆ ಇರತಕ್ಕವರ ತಿಳುವಳಿಕೆಗೋಸ್ಕರ ಮ|| ಜಿ. ಪರಮಶಿವಯ್ಯನವರು ಕನ್ನಡಿಸಿ ಹೇಳಿದರು. ಮ|| ರಾ|| ಸಿ. ವೀರಪ್ಪನವರು ಈ ಸಂಘವನ್ನು ಸ್ಥಾಪಿಸಲು ಮಾಡಿದ ಮುಖ್ಯಪ್ರಯತ್ನಗಳನ್ನು ತಿಳಿಸಿದುದಲ್ಲದೆ ಸಂಘಗಳೆರಡರ ಉದ್ದೇಶವೂ ಒಟ್ಟನಲ್ಲಿ ಒಂದೇಯಾಗಿರುತ್ತದೆಂದು ಅಭಿಪ್ರಾಯಪಟ್ಟರು. ಸಂಘಗಳೆರಡೂ ಅನ್ಯೋನ್ಯತೆಯಿಂದ ಕೆಲಸಮಾಡುವ ವಿಚಾರದಲ್ಲಿ ಯಾವವಿಧವಾದ ಭಿನ್ನಾಭಿಪ್ರಾಯಗಳೂ ನಮ್ಮಲ್ಲಿಲ್ಲವೆಂದೂ, ಆದರೆ ಗತಿಸಿದ ಶ್ರೀಯುತ ಸಿರಸಂಗಿ ದೇಶಾಯರವರು ತಮ್ಮ ಧರ್ಮಫಂಡಿನ ಹಕ್ಕನ್ನು ಇಂಡಿಯಾದೇಶದ ಸಾರ್ವತ್ರಿಕ ಲಿಂಗಾಯಿತ ವಿದ್ಯಾರ್ಥಿಗಳಿಗೂ ಕೊಟ್ಟಿದ್ದಾಗ್ಯೂ ನಮ್ಮ ಮೈಸೂರು ವಿದ್ಯಾರ್ಥಿಗಳಿಗೆ ಆ ಫಂಡಿನ ಟ್ರಸ್ಟಿಗಳು ಯಾವವಿಧವಾದ ಉಪಯೋಗಕ್ಕೂ ಬಾಧಕ ಇಲ್ಲವೆಂದು ಹೇಳಲು ಕಾರಣವೇನೆಂಬುದನ್ನು ತಿಳಿಯಲು ಮ|| ರಾ|| ಜಿ. ಪರಮಶಿವಯ್ಯನವರು ಕುತೂಹಲಪಟ್ಟರು. ಮ|| ರಾ|| ಕೇಸರಿಯವರು ಅದೇ ವಿಚಾರವನ್ನು ಅವರ ಸಂಘದಲ್ಲಿ ಅನೇಕವೇಳೆ ಚರ್ಚಿಸಿಯೂ, ಚರ್ಚಿಸುತ್ತಲೂ ಇರುವುದಲ್ಲದೆ ಜಾಗ್ರತೆಯಾಗಿಯೇ ಎಲ್ಲವೂ ಸರಿಹೋಗುವ ಭರವಸೆಯನ್ನು ಸೂಚಿಸಿ ಎಲ್ಲರಿಗೂ ಆನಂದವಾಗುವಂತೆ ಕನ್ನಡದಲ್ಲಿ ಹೇಳಿದರು.

ಮ||ರಾ|| ಅಧ್ಯಕ್ಷರು ಶಾಂತವೀರಪನವರು ಬಿ.ಎ.,—ಧಾರವಾಡದ ವೀರಶೈವ ತರುಣರಸಂಘದಿಂದ ಮತೋದ್ಧಾರಣೆಗೋಸುಗ ಮಾಡಲ್ಪಟ್ಟ ಕೆಲಸಗಳನ್ನು ಮತ್ತು ಮ|| ರಾ|| ವೀರಪ್ಪನವರು ನಮ್ಮ ಜನಾಂಗದೇಳಿಗೆಗೋಸ್ಕರ ಮಾಡುತ್ತಿರುವ ಕೆಲಸಗಳಲ್ಲಿ ಸುಮಾರು 20-25 ಬಾಲಕರಿಗೆ ಸಂಬಳವೆಚ್ಚಗಳಿಂದ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ನಡಸುತ್ತಿರುವುದು ತುಂಬಾ ಶ್ಲಾಘ್ಯವಾಗಿಯೂ, ಉದಾಹರಣೆಯಾಗಿಯೂ ಅನುಸರಿಸತಕ್ಕದಾಗಿರುತ್ತೆಂದು ಹೇಳಿದುದಲ್ಲದೆ, ಈ ದಿವಸದವರೆಗೆ ಸಂಘವು ಮಾಡಿದ ಕೆಲಸಗಳನ್ನು ಸಭಿಕರ ತಿಳುವಳಿಕೆಗೋಸ್ಕರವಾಗಿ ಹೇಳಿದರು. ಈ ಸಂಘದ ಕಾರ್ಯವು ಸುಲಲಿತವಾಗಿ ನಡೆಯಲು ಪ್ರತಿಯೊಬ್ಬ ವೀರಶೈವರು ತಮ್ಮ ಕೈಲಾದಷ್ಟು ಸಹಾಯಮಾಡಬೇಕೆಂದು ಸೂಚಿಸಿದರು. ಸಂಘದ ಅಧ್ಯಕ್ಷರಾದ ಮ|| ರಾ|| ಯಂ. ಬಸಪ್ಪನವರು, ಮತಸುಧಾರಣೆಯ ವಿಚಾರವನ್ನೆಲ್ಲಾ ಇಲ್ಲಿಯ ವೀರಶೈವರಿಗೆ ತಿಳುಹಲು ಧಾರವಾಡದಿಂದ ಬಂದು ಬಹಳ ಚನ್ನಾಗಿ ಭಾಷಣಮಾಡಿದ ಮ|| ರಾ|| ಕೇಸರಿಯವರನ್ನು ಸಂಘದ ಪರವಾಗಿ ವಂದಿಸಿದರು. ಈ ದಿವಸದ ಕಾರ್ಯಭಾಗಗಳನ್ನ ತೃಪ್ತಿಕರವಾಗಿ ನಡಸಿದ ಅಧ್ಯಕ್ಷರಿಗೆ ಈ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸಿದ ಬಳಿಕ ಸಭೆಯು ವಿಸರ್ಜಿತವಾಯಿತು.

ಕೆ. ತಮ್ಮಯ್ಯ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನ ಮಹೋತ್ಸವವು, ತುಮಕೂರು.

ಹೋದವರ್ಷ ಶ್ರೀ ಜಗದ್ಗುರು ಮಹಾಸ್ವಾಮಿಯು ತುಮಕೂರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟಿಸಲು ಅವಶ್ಯವಾದ ಧನರಾಶಿಯನ್ನು ಸಂಗ್ರಹಿಸುವುದಕ್ಕಾಗಿ ತುಮಕೂರು, ಕೊರಟಗೆರೆ, ಮಧುಗಿರಿ ತಾಲ್ಲೂಕುಗಳಲ್ಲಿ ಪಾದವಿನ್ಯಾಸವಂ ಮಾಡಿ ಧನವಂ ಸಂಚಯಿಸಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಉತ್ತಮವಾದ ಈ ಭವನಕ್ಕೆ ಅತ್ಯಂತ ಅನುಕೂಲವಾಗಿಯೂ ಆರೋಗ್ಯಕರವಾಗಿಯೂ ಇರುವ ಸ್ಥಳವನ್ನು ಕೊಡಿಸಿಕೊಡಬೇಕೆಂದು ಮಹಾ ಶ್ರೀಯವರು ಅಭಿಲಾಷೆಪಟ್ಟಿದ್ದಂತೆ ವಿದ್ಯಾಭಿಮಾನಿಗಳಾದ ಘನಸರ್ಕಾರದವರು ಇದಕ್ಕಾಗಿ ತುಮಕೂರು ರೈಲ್ವೆಸ್ಟೇಷನ್ನಿನಿಂದ ಟವರ್ಣಹಾಲ್ ಬಳಿ ಪುರಪ್ರವೇಶವಾಗತಕ್ಕ ಮಾರ್ಗದ ಬಲಭಾಗದಲ್ಲಿ ಇರುವ ಮೈದಾನದಲ್ಲಿ ೨| ಎಕರೆ ನಿವೇಶನವನ್ನು ಮಿತವಾದ ಬೆಲೆಗೆ (೪೫೦) ಕೊಟ್ಟು ಭೂಮಿಯನ್ನು ೫-೧೧-೨೧ ರಲ್ಲಿ ಶ್ರೀಮಠದ ಏಜಂಟರ ಸುಫರ್ದಿಗೆ ವಹಿಸಿದರು. ಈ ವಿಚಾರದಲ್ಲಿ ನಮ್ಮ ಡಿಸ್ಟ್ರಿಕ್ಟ್ ಡೆಪುಟಿಕಮಿಷನರ್ ಸಾಹೇಬರವರಾದ ಶ್ರೀಯುತ ಆನಂದರಾವ್ ಸಿರ್ಸಿ, ಬಿ. ಎ. ಎಲ್‌ಎಲ್. ಬಿ. ಯವರು ಕೊಂಚವೂ ಬೇಸರವಿಲ್ಲದೆ ಬಹಳಮಟ್ಟಿಗೆ ಸಹಾಯಮಾಡಿ ಕೀರ್ತಿಶಾಲಿಗಳಾಗಿ ವೀರಶೈವ ಜನಾಂಗದಲ್ಲಿ ಚಿರಸ್ಮರಣೀಯರಾದುದಕ್ಕಾಗಿ ನಮ್ಮ ಸಮಾಜದವರೆಲ್ಲಾ ಇವರಿಗೂ ಮತ್ತು ಉದಾರಾಶ್ರಯವನ್ನಿತ್ತ ಪ್ರಜಾವತ್ಸಲರಾದ ಸರ್ಕಾರದವರಿಗೂ ತುಂಬಾ ಕೃತಜ್ಞರಾಗಿರುತ್ತಾರೆ. ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಈ ಭವನದ ಕಾರ್ಯವನ್ನು ಆದಷ್ಟು ಜಾಗ್ರತ ಪೂರೈಸಿ ನಮ್ಮ ವಿದ್ಯಾರ್ಥಿಗಳಿಗೆ ಅನುಕೂಲಮಾಡಬೇಕೆಂಬ ಅಂತಃಕರಣವುಳ್ಳವರಾಗಿರುವುದರಿಂದ ಅದಕ್ಕಾಗಿ ಈ ಮಂದಿರದ ಹಸ್ತಿಭಾರ ಶಿಲಾಪ್ರತಿಷ್ಠಾಪನೆಯನ್ನು ೧೨-೧೧-೧೯೨೧ ನೆ ಸ್ಥಿರವಾರ ದಿವಿ ೧೨ ಗಂಟೆಗೆ ಮೇಲ್ಕಂಡ ಶ್ರೀಯುತ ಆನಂದರಾವ್ ಸಿರ್ಸಿ, ಬಿ.ಎ., ಎಲ್‌ಎಲ್. ಬಿ. ಯವರ ಅಮೃತಹಸ್ತದಿಂದ ನೆರವೇರಿಸಬೇಕೆಂದು ಇಲ್ಲಿನ ವೀರಶೈವ ಸಮಾಜದವರಿಗೆ ಅಪ್ಪಣೆಯನ್ನು ದಯಪಾಲಿಸಿದಂತೆಯೇ ಇವರು ಇದಕ್ಕಾಗಿ ಪರಸ್ಥಳದ ಹಲವು ವೀರಶೈವ ಪ್ರಮುಖ ಮಹಾಜನಗಳಿಗೂ ಮತ್ತು ಸ್ಥಳದ ಅನೇಕಸ್ವಮತದ ಪರಮತದ ಮಹಾಶಯರಿಗೂ ಸಹಸ್ರಾರು ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು. ಆ ದಿನ ಈ ಭವನದ ಮೈದಾನವೆಲ್ಲಾ ರಂಭಾಸ್ತಂಭಗಳಿಂದಲೂ ಅಂದವಾದ ಹಸರು ಚಪ್ಪರಗಳಿಂದಲೂ ಪಟಗೃಹಗಳಿಂದಲೂ ಧ್ವಜಪತಾಕೆಗಳಿಂದಲೂ ತಳಿರು ತೋರಣಗಳಿಂದಲೂ ರಂಜಿತವಾಗಿ ಶ್ರೀಯವರ ವಿಹಾರೋದ್ಯಾನವೋ ಎಂಬಂತೆ ಮನೋಹರವಾಗಿ ಶೋಭಾಯಮಾನವಾಗಿದ್ದಿತು.

ಈಗ ತುಮಕೂರಿನಲ್ಲಿ ಪ್ಲೇಗಿನ ಉಪಟಲವಿದ್ದಾಗ್ಯೂ ಈ ಮಹೋತ್ಸವದ ನಿಮಿತ್ತ ಶ್ರೀ ಸಿದ್ಧಗಂಗಾ ಸುಕ್ಷೇತ್ರದ ಶ್ರೀ ಉದ್ಧಾನಮಹಾಸ್ವಾಮಿಗಳವರು ಮತ್ತು ಶಿವಗಂಗೆ, ಬೆಂಗಳೂರು, ಗುಬ್ಬಿ, ತಿಪಟೂರು, ಬೆಳ್ಳಾವೆ ಮೊದಲಾದಸ್ಥಳಗಳ ವೀರಶೈವ ಮಹಾಜನಗಳು, ಸ್ಥಳದ ಸ್ವಮತ ಪರಮತದ ಮಹಾಶಯರು, ಸ್ಥಳೀಯಾಧಿಕಾರಿಗಳು ಅನೇಕ ಲಾಯರುಗಳು ಸಮಾಜದ ವಿದ್ಯಾರ್ಥಿಗಳು ವರ್ತಕ ಮಹಾಜನಗಳು ಸಭೆಯನ್ನು ಅಲಂಕರಿಸಿದ್ದರು. ತಿಪಟೂರು ವೀರಶೈವಾಶ್ರಮದ ಶ್ರೀ ವಿರೂಪಾಕ್ಷ ಶಾಸ್ತ್ರಿಗಳು ಆ ಕಾಲಕ್ಕೆ ನಡೆಯಬೇಕಾಗಿದ್ದ ವಿಧ್ಯುಕ್ತಕರ್ಮಗಳನ್ನೆಲ್ಲಾ ಸಾಂಗವಾಗಿ ನೆರವೇರಿಸಿದರು. ಡೆಪ್ಯುಟಿಕಮಿಷನರ್ ಸಾಹೇಬರವರು ೧೧|| ಗಂಟೆಗೆ ದಯಮಾಡಲು ಕಾರ್ಯದರ್ಶಿಗಳಾಗಿದ್ದ ವೀರಶೈವ ಪ್ರಮುಖರು ವಾದ್ಯವಿಭವದಿಂದ ಇದಿರ್ಗೊಂಡು ಸಭಾಮಂದಿರಕ್ಕೆ ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿದರು. ಇವರ ಎಡಗಡೆಗೆ ಶ್ರೀ ಉದ್ಧಾನಸ್ವಾಮಿಗಳವರೂ ಅವರ ಹಿಂಭಾಗದಲ್ಲಿ ವೈದಿಕರೂ ಕುಳಿತಿದ್ದರು. ಸಭಾಕಾರ್ಯಕ್ಕೆ ಮೊದಲು ಶಾಸ್ತ್ರಿಗಳವರಿಂದ ಸ್ವಸ್ತಿವಾಚನವಾದನಂತರ ಶ್ರೀ ಜಗದ್ಗುರು ಮಹಾಸಂಸ್ಥಾನದಿಂದ ಕಳುಹಿಸಲ್ಪಟ್ಟಿದ್ದ ನಿರೂಪವನ್ನು ಎಂದರೆ ಈ ಊರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟಿಸಬೇಕಾದ ಅವಶ್ಯಕತೆಯನ್ನೂ ಇದಕ್ಕಾಗಿ ನಡೆದಿರುವ ಕಾರ್ಯಕ್ರಮವನ್ನೂ ವಿವರಿಸುವ ನಿರೂಪವನ್ನು ಶ್ರೀರಂಗಪಟ್ಟಣದ ಶ್ರೀಯುತ ಸಿದ್ಧಲಿಂಗದೇವರು ಓದಿಹೇಳಿ ಇದರ ಶಂಕುಸ್ಥಾಪನೆಯನ್ನು ಅಧ್ಯಕ್ಷರು ನೆರವೇರಿಸಿ ವೀರಶೈವ ಸಮಾಜದವರಿಗೆ ಆನಂದವನ್ನುಂಟುಮಾಡಬೇಕೆಂದು ಕೋರಿದರು. ಇದನ್ನು ಹೆ|| ಮಾಸ್ಟರು ಮ|| ರಾ|| ಗುರುಚನ್ನಬಸವಯ್ಯನವರು ಪುಷ್ಟೀಕರಿಸಿದರು. ನಂತರ ಅಧ್ಯಕ್ಷರಾದ ಡಿ|| ಕ|| ಸಾ|| ರವರು ಸಮಯೋಚಿತವಾದ ಪ್ರತ್ಯುತ್ತರವನ್ನು ಇತ್ತು ಶ್ರೀ ಜಗದ್ಗುರುಗಳವರ ಪ್ರಭಾವವನ್ನು ಕೊಂಡಾಡಿ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು, ಮಹಾಜನರು ಜಯಘೋಷವನ್ನು ಮಾಡುತ್ತಿರಲು, ಈ ಕಟ್ಟಡವು ಚಿರಸ್ಥಾಯಿಯಾಗಿರಬೇಕೆಂದು ಪ್ರಾರ್ಥಿಸುತ್ತಾ ಹಸ್ತಿಭಾರ ಶಿಲೆಯನ್ನು ಶುಭಮುಹೂರ್ತದಲ್ಲಿ ತಮ್ಮ ಅಮೃತಹಸ್ತದಿಂದ ಪ್ರತಿಷ್ಠಾಪನೆ ಮಾಡಿ ಅಗ್ರಾಸನವನ್ನು ಅಲಂಕರಿಸುವ ವೇಳೆಗೆ ಸರಿಯಾಗಿ ಉಪಮಂತ್ರಿವರ್ಯರಾಗಿದ್ದು ಇಡೀಸಮಾಜಕ್ಕೆ ಆದರ್ಶಪ್ರಾಯರಾಗಿರುವ ದಿವಾನ್ ಬಹದ್ದೂರು ರಾಜಸಭಾಭೂಷಣ ಶ್ರೀಯುತ ಕೆ. ಪಿ. ಪುಟ್ಟಣ್ಣಸೆಟ್ಟಿ ಸಿ.ಐ.ಇ. ಯವರಿಂದ ಸೂಚಿಸಲ್ಪಟ್ಟ ಅಭಿನಂದನವು ತಂತಿಯಮೂಲಕ ಬಂದು ತಲ್ಪಿತು. ಅದನ್ನು ಅಧ್ಯಕ್ಷರು ಓದಿಹೇಳಿದರು. ಶ್ರೀ ಜಗದ್ಗುರುಗಳವರ ಆಶೀರ್ವಾದ ಪತ್ರವೂ ಸಹ ತಂತಿಯಮೂಲಕ ತಿಳಿಸಲ್ಪಟ್ಟಿತು. ಅದರಂತೆಯೇ ಸಬ್‌ಜಡ್ಜರಾದ ಮಿ. ಪಿ. ಮಹಾದೇವಯ್ಯನವರೇ ಮೊದಲಾದ ಸಮಾಜ ಶ್ರೇಷ್ಠರಿಂದ ಅಭಿನಂದನಪತ್ರಿಕೆಗಳು ಬಂದಿದ್ದವು. ಇದನ್ನೆಲ್ಲಾ ಕೇಳಿ ಸಭಾಸದರು ಸಂತೋಷಪಡುವಾಗ್ಗೆ ಬೆಂಚ್ ಮ್ಯಾಜಿಸ್ಟ್ರೇಟ್ ಮಿ. ಸುಬ್ಬರಾಯರು ವೀರಶೈವ ಜನಾಂಗದವರಲ್ಲಿ ತಮ್ಮಗಳಿಗೆ ಇರುವ ಸ್ನೇಹವನ್ನು ತಿಳಿಸಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ತಪೋವೈಭವವನ್ನು ಕೊಂಡಾಡಿ ಇದರಂತೆಯೇ ಸಕಲ ಸದ್ಬ್ರಾಹ್ಮಣರೂ ತಮ್ಮ ಧರ್ಮದಲ್ಲಿ ನಿರತರಾಗಿದ್ದುಕೊಂಡು ಇತರರನ್ನೂ ಸಹೋದರಭಾವದಿಂದ ಪ್ರೀತಿಸಬೇಕೆಂದು ತಿಳಿಸಿದರು. ಅಷ್ಟರಲ್ಲಿ ಸಭಾಸದರಿಗೆ ಪುಷ್ಪಹಾರ ಗಂಧ ವಿನಿಯೋಗವಾಗುತ್ತಿರಲು ಸಭಾಧ್ಯಕ್ಷರಿಗೂ ಸಭಿಕರಿಗೂ ಮತ್ತು ಅಭಿನಂದನ ಪತ್ರಗಳನ್ನು ಕಳುಹಿಸಿದ್ದ ಸಮಾಜಬಾಂಧವರಿಗೂ ಈ ಊರಿನ ಸಕಲ ವೀರಶೈವರ ಪರವಾದ ಕೃತಜ್ಞತಾವಂದನೆಗಳನ್ನು ಪ್ಲೀಡರ್ ಮ|| ಜಿ. ಕೆ. ಗುರುಸಂಗಾರ್ಯರು ತಿಳಿಸಿದರು. ಕಡೆಯಲ್ಲಿ ವೀರಶೈವ ಬಾಲಕಿಯರು ಮಂಗಳವನ್ನು ಇಂಪಾಗಿ ಹಾಡುತ್ತಿರಲು ಶ್ರೀ ಜಗದ್ಗುರು ಮಹಾಸ್ವಾಮಿಯವರ ಪಾದಸ್ಮರಣೆಯಿಂದಲೂ ಶ್ರೀಮನ್ಮಹಾರಾಜ ಪ್ರಭುಸಹೋದರರ ಅಮಾತ್ಯವರ್ಯರ ಮತ್ತು ರಾಜಮನೆತನದವರ ಶ್ರೇಯಃಪ್ರಾರ್ಥನೆಯಿಂದಲೂ ಸಭಾ ವಿರಮಿಸಲ್ಪಟ್ಟಿತು. ಹೀಗೆ ಶಂಕುಸ್ಥಾಪನಾ ಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟುದಲ್ಲದೆ ಕಟ್ಟಡವನ್ನು ಜಾಗ್ರತೆ ಪೂರೈಸಿ ವಿದ್ಯಾರ್ಥಿಗಳಿಗೆ ಇರುವ ತೊಂದರೆಯನ್ನು ನಿವಾರಿಸಬೇಕೆಂದು ಶ್ರೀ ಜಗದ್ಗುರು ಮಹಾಸ್ವಾಮಿಯವರು ಕೃಪಾತಿಶಯವುಳ್ಳವರಾಗಿರುವುದಲ್ಲದೆ ಇಲ್ಲಿನ ಕೆಲವು ವೀರಶೈವ ಮಹಾಜನರೂ ಕುತೂಹಲವುಳ್ಳವರಾಗಿದ್ದಾರೆ. ಕಟ್ಟಡದ ಪ್ಲಾನು ಎಸ್ಟಿಮೇಟ್ ತಯಾರಾಗಿರುವುದಲ್ಲದೆ ಇಷ್ಟರಲ್ಲೇ ಕಟ್ಟಡದ ಕೆಲಸವು ಪ್ರಾರಂಭಿಸಲ್ಪಡುತ್ತದೆ. ಇದಕ್ಕಾಗಿಯೂ ಮುಂದೆ ಅನಾಥ ವಿದ್ಯಾರ್ಥಿಗಳಿಗೆ ಅವಶ್ಯವಾದ ಭೋಜನದ ಏರ್ಪಾಟಿಗೂ ಬಹಳ ಧನಸಹಾಯ ಬೇಕಾಗಿದೆ. ಈ ನಿಲಯದಲ್ಲಿ ಒಂದೊಂದು ಕೊಟ್ಟಡಿಯನ್ನು ಉದಾರಾಶ್ರಯವಿತ್ತು ಸ್ವಂತವೆಚ್ಚದಿಂದ ಕಟ್ಟಿಸಿಕೊಡುವ ಸಮಾಜಬಾಂಧವರ ಹೆಸರು ಶಾಶ್ವತವಾಗಿರುವಂತೆ ನಿಲಯದಲ್ಲಿ ಅವರ ಹೆಸರನ್ನು ಬರೆಸುವುದಲ್ಲದೆ ಅವರ ಭಾವಚಿತ್ರವನ್ನು ಸಹ ಇಟ್ಟು ಸನ್ಮಾನಿಸುವುದಾಗುತ್ತದೆ. ಅಲ್ಲದೆ ಇದರ ಧನರಾಶಿಗೆ ಒಂದುಸಹಸ್ರ ರೂಪಾಯಿಗಳಿಗೆ ಮೇಲ್ಪಟ್ಟು ಸಹಾಯ ಮಾಡುವ ಮಹನೀಯರ ಭಾವಚಿತ್ರಪಟವನ್ನು ಸಹ ಈ ನಿಲಯದಲ್ಲಿ ಚಿರಸ್ಮರಣೀಯವಾಗಿರುವಂತೆ ಕಟ್ಟುವುದಾಗುತ್ತದೆ. ಪರೋಪಕಾರ ನಿರತರಾದ ಪ್ರಿಯಬಾಂಧವರೆ! ಈ ಮಹಾಕಾರ್ಯವನ್ನು ವಿದ್ಯಾಭಿಮಾನಿಗಳೂ ಧರ್ಮಾಭಿಮಾನಿಗಳೂ ದಾನಶೂರರೂ ಸಮಾಜಹಿತಚಿಂತಕರೂ ಆದ ತಾವು ದಯವಿಟ್ಟು ಗಮನಿಸಿ, ಈ ಭವನದ ಧನರಾಶಿಗೆ ಶಕ್ತಿಮೀರಿ ಸಹಾಯಮಾಡಿ ಶ್ರೀಗುರುಕೃಪೆಗೂ ಪರಶಿವಪ್ರೀತಿಗೂ ಸಮಾಜದ ವಂದನೆಗೂ ಸಹ ಪಾತ್ರರಾಗಲು ಸಮಾಜದ ಪರವಾಗಿ ಬೇಡುತ್ತೇನೆ.

ಮಹಾಶಯರೆ ಇದಕ್ಕೆ ಧನಸಹಾಯಮಾಡುವ ಮಹನೀಯರು ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ದಿವ್ಯಸನ್ನಿಧಿಗೆ ತಮ್ಮ ಮೊಬಲಗನ್ನು ಕಳುಹಿಸಿಕೊಟ್ಟು ಧನ್ಯರಾಗಲು ಸವಿನಯಪ್ರಾರ್ಥನೆ.

ಸುಜನಸೇವಕ.

೧೯೨೧ ನೆಯ ಇಸವಿ ಡಿಸೆಂಬರ್ ತಾ|| ೨೫ ರಿಂದ ೧೯೨೧ ನೆಯ ಡಿಸೆಂಬರು ತಾ|| ೩೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿಯಿಂದ ಪುಷ್ಯ ಶುದ್ಧ ಬಿದಿಗೆ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
25	[1] ಭಾನು	ಏಕಾ	11-7	ಸ್ವಾತಿ	1-15	11
26	[2] ಸೋಮ	ದ್ವಾದ	8-45	ವಿಶಾ	0-16	12
27	ಮಂಗಳ	ತ್ರಯೋ	7-32	ಅನೂ	0-22	13
28	[3] ಬುಧ	ಚತು	7-33	ಜೇಷ್ಠ	0-40	14
29	[4] ಗುರು	ಅಮಾ	8-52	ಮೂಲ	4-1	15
30	[5] ಶುಕ್ರ	ಪಾಡ್ಯ	11-26	ಪೂಷಾ	8-2	16
31	ಶನಿ	ಬಿದಿ	15-9	ಉಷಾ	12-55	17

(1) ಸರ್ವತ್ರೈಕಾದಶಿ. (2) ಪ್ರದೋಷಃ. (3) ಸರ್ವತ್ರಾಮಾವಾಸ್ಯಾ. (4) ಮಾರ್ಗಶಿರ ಲಕ್ಷ್ಮೀವ್ರತಂ, ಎಳ್ಳಮಾವಾಸ್ಯೆ ಪ್ರಯುಕ್ತ ತೀರ್ಥಹಳ್ಳಿಯಲ್ಲಿ ತುಂಗಾನದೀಸ್ನಾನ. (5) ತೀರ್ಥಹಳ್ಳಿಯಲ್ಲಿ ರಾಮೇಶ್ವರ ಸ್ವಾಮಿರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.





REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ | ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಜನವರಿ ತಾರೀಖು ೧ ನೆಯ ಭಾನುವಾರ | ಸಂಚಿಕೆ ೧

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
50 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆವಸ್ತ್ರಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	.	100-0-0
6	0-12-0	,,	100-0-0
7	6- 0-0	,,	100-0-0
	ಬಿಡಿಮಣಿಗಳು 1ಕ್ಕೆ ಕ್ರಯ		
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 60-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ: —ಎಸ್. ಯು. ನೇಪಾಳ ರುದ್ರಾಕ್ಷಿ
44 ಕಂಪನಿ, ಚೌಕಂಬಾ ಕಾಶೀ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ಮೃತಪಂಚಕ	೦—೯—೦

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕೃತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪ್ರಸಿದ್ಧಪತ್ರಿಕೆ.

3

ಹಾಸನ ಡಿಸ್ಟ್ರಿಕ್ಟು ಪೋಲೀಸು ಆಫೀಸು ಕಾಂಪೌಂಡಿನಲ್ಲಿ ಮಾಮೂಲ್ ಮೇರೆ ಸನ್ 1922ನೇ ಇಸವಿ ಜನವರಿ ಮಾಹೆ ತಾರೀಖು 2,3 ಮತ್ತು 4ನೇ ಸೋಮವಾರ, ಮಂಗಳವಾರ, ಬುಧುವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತೆಂಬ ಭಾಗ ಈ ಮೂಲ್ಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಬಾಕಿ ವಿಷಯಗಳಿಗೆ 17-11-1921ರ ಮರ್ಕ್ಯಂ ಮೈಸೂರು ಗೆಜೆಟ್ I A. ಭಾಗದ 382, 383ನೇ ಪುಟಗಳಲ್ಲಿ ಛಾಯಿಪಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

9-12-21.

MOHAMUD RAZA,
Vice President,
Town Muncipality, Hassan.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗುಬ್ಬಿ ಟೈಲ್‌ವರ್ಕ್ಸ್ ಲಿಮಿಟೆಡ್.

ತಾ|| 4-12-21 ರಲ್ಲಿ ನಡೆದ ಈ ಕಂಪನಿಯ ಯಕ್ಸ್‌ಟ್ರಾರ್ಡಿನರಿ ಜನರಲ್ ಮೀಟಿಂಗಿನಲ್ಲಿ ಈ ಕಂಪನಿಯನ್ನು ವಾಲಂಟರಿ ವೈಂಡಪ್ ಆಗತಕ್ಕದೆಂತಲೂ, ನಾವುಗಳು ಲಿಕ್ವಿಡೇಟರುಗಳಾಗಿರತಕ್ಕದೆಂತಲೂ ಆದರೆಜಲೂ ಷನ್ ತಾ|| 18-12-21 ರಲ್ಲಿ ನಡೆದ ಜನರಲ್ ಮೀಟಿಂಗಿನಲ್ಲಿ ಕನ್‌ಫರಂ (conform) ಆಗಿರುತ್ತದೆಯಾದ್ದರಿಂದ ಮೈಸೂರು ಕಂಪನಿ ರೆಗ್ಯುಲೇಷನ್ 209ನೆ ಸೆಕ್ಷನ್ (Section) 1ನೆ ಕ್ಲಾಸ್ (class) ಪ್ರಕಾರ ನಡೆಯಬೇಕಾದ ಕ್ರೆಡಿಟರುಗಳ ಮೀಟಿಂಗು ತಾ|| 15-1-22ನೆ ಭಾನುವಾರ ದಿವಿ 3 ಘಂಟೆಗೆ ಸರಿಯಾಗಿ ಕಂಪನಿ ರಿಜಿಸ್ಟರ್ಡ್ ಆಫೀಸಿನಲ್ಲಿ ನಡೆಯುತ್ತದೆಯಾಗಿ ಎಲ್ಲಾ ಕ್ರೆಡಿಟರುಗಳು ಮೀಟಿಂಗಿಗೆ ದಯಮಾಡಿಸಬೇಕಾಗಿ ಕೋರಿಧೆ.

G. Adavappa,
G. S. Gangappa,
Liquidaltors.

ಶ್ರೀಮದ್ಯುವಸಾರ್ವಭೌಮರ ದೇಶಸಂಚಾರ.

(ಪಾಟ್ನಾ.)

ಪಾಟಲೀಪುರವೆಂದು ಪುರಾತನಪ್ರಸಿದ್ಧವಾದ ಪಾಟ್ನಾ ನಗರಕ್ಕೆ ಯುವಸಾರ್ವಭೌಮರು ತಾ|| ೨೨ನೆ ಬೆಳಗ್ಗೆ ದಯಮಾಡಿಸಿದರು. ಪದ್ಧತಿಯಂತೆ ಮರ್ಯಾದೆಗಳೆಲ್ಲಾ ಸಿಲ್ದಾಣದಲ್ಲಿ ನಡೆದುವು. ಬೀಹಾರು ದೇಶೀಯಪ್ರಜೆಗಳ ಪಕ್ಷದಿಂದ ಒಂದು ಸ್ವಾಗತಸನ್ಮಾನ ಪತ್ರವು ಸಮರ್ಪಿಸಲ್ಪಟ್ಟಿತು. ಅದನ್ನು ಅ|| ಸಚ್ಚಿದಾನಂದ ಸಿಂಹರವರು ಓದಿದರು. ಅದಕ್ಕೆ ಯುವರಾಜರು ಪ್ರತ್ಯುತ್ತರವನ್ನೀಯುವಾಗ್ಗೆ-ಅವರ ಸ್ವಾಗತ ಸಮರ್ಪಣೆಗಾಗಿ ವಂದಿಸಿ, ನಿಮ್ಮ ಆಧಿಪತ್ಯವು ನೂತನವಾಗಿ ಏರ್ಪಡಿಸಲ್ಪಟ್ಟಿದ್ದರೂ, ನಿಮ್ಮ ಪ್ರಾಂತದ ಚರಿತ್ರವು ಅತ್ಯಂತ ಪುರಾತನವಾದುದು. ಇದನ್ನು ಈಗ ಮೊಟ್ಟಮೊದಲನೆಯ ಭಾರತೀಯ ಗೌರ್ನರಾಗಿ ಪರಿಪಾಲಿಸಿದ ಲಾರ್ಡ್ ಸಿಂಹರವರು ಅಸಾಧಾರಣ ಪ್ರಜ್ಞಾಶಾಲಿಗಳು. ಅಂಥವರು ಅತ್ಯಲ್ಪಕಾಲದಲ್ಲೇ ದೇಹಾನಾರೋಗ್ಯದಿಂದ ಆ ಪದವಿಯನ್ನು ಪರಿತ್ಯಾಗ ಮಾಡಿದುದಕ್ಕಾಗಿ ಚಿಂತಿಸುತ್ತೇನೆಂದು ಅಪ್ಪಣೆಕೊಡಿಸಿದರು. ತಾ|| ೨೩ ರಲ್ಲಿ ಪೋಲೀಸರ ಡ್ರಿಲ್ಲನ್ನು ಪರಾಮರಿಸಿ, ಸೂಪರಿಂಟೆಂಡೆಂಟರಾದ ಆರ್. ಜೆ. ಅಪ್ಪಿರವರಿಗೆ ಸಾರ್ವಭೌಮರ ಚಿಹ್ನದ ಪೋಲೀಸ್ ಪತಾಕೆಯನ್ನು ಬಹುಮಾನವಾಗಿ ಕೊಟ್ಟರು. ಅಲ್ಲೇ ನೆರೆದಿದ್ದ ಪೆನ್ಷನ್ಡ್ ಸೈನಿಕೋದ್ಯೋಗಿಗಳೊಡನೆಯೂ ಬಾಲಚಮೂವಿನೊಡನೆಯೂ ಸಂಭಾಷಣೆಗಳನ್ನು ನಡೆಯಿಸಿದರು. ಪಟ್ಟಣದಲ್ಲಿ ಕೆಲವರು ಹರಿತಾಳಗಳನ್ನಾಚರಿಸಿದರೂ ಬೀದಿಗಳಲ್ಲಿ ಅವರು ಹೋಗಿಬರುವಾಗ ಪ್ರಜೆಗಳೆಲ್ಲಾ ಕಿಕ್ಕಿರಿದುನಿಂತಿದ್ದು ಸಂತೋಷಧ್ವಾನವನ್ನು ಮಾಡುತ್ತಿದ್ದರು. ಒರಿಸ್ಸಾ, ಕಾರಸ್ವಾನ್, ಹಿಂದೋಲು, ಓಲ್ಕಾರು ಮೊದಲಾದ ೧೦ ಸಂಸ್ಥಾನಗಳ ಪ್ರಭುಗಳು ಯುವರಾಜರನ್ನು ಅವರ ಬಿಡಾರದಲ್ಲೇ ಸಂದರ್ಶನಮಾಡಿ ಸಂಭಾಷಿಸಿಕೊಂಡುಬಂದರು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦]   [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪   ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜನವರಿ ತಾರೀಖು ೧ ನೆಯ ಭಾನುವಾರ   ಸಂಚಿಕೆ ೧

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ !   ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
50 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ.	ರೂ. ವರೆಗೆ.
4	0.12-0	,	50-0.0
5	0- 8.0	.	100-0.0
6	0-12-0	,,	100-0.0
7	6- 0.0	,,	100-0-0
	ಬಿಡಿಮಣಿಗಳು 1ಕ್ಕೆ ಕ್ರಯ		
3	0- 6-0	ಇಂದ	10-0-0
8	0- 8.0	,,	100-0-0
9	0-12-0	,,	100-0.0
10	0-14-0	,,	100-0.0
11	3- 8.0	,,	100-0-0
12	4- 0.0	,,	100-0-0
13	4- 8.0	,,	100-0-0
14	6. 0.0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ರೀಶಂಕರ1ಕ್ಕೆ 4 ರೂ. ಮುಂದ 30 ರೂ. ಕಸ್ತೂರಿ ಎ. 80-0-0 ಬಿ. 0-0-0 ಸಿ. 40-0-0 ಡಿ. 25-0-0 ಬೆರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ: —ಎಸ್. ಯು. ನೇಪಾಳ ರುದ್ರಾಕ್ಷ
44 ಕಂಪನಿ, ಚೌಕಂಬಾ ಕಾಶೀ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೪—೦
ಚಾರುಶೀಲೆಚರಿತ್ರೆ	೦—೧೦—೦
ಚದಾಶಿ	೦— ೮—೦
ಪ್ರೇತಪಂಚಕ	೦— ೯—೦

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪ್ರಸಿದ್ಧಪತ್ರಿಕೆ.

3

ಹಾಸನ ಡಿಸ್ಟ್ರಿಕ್ಟು ಪೋಲೀಸು ಆಫೀಸು ಕಾಂಪೌಂಡಿನಲ್ಲಿ ಮಾಮೂಲ್ ಮೇರೆ ಸನ್ 1922ನೇ ಇಸವಿ ಜನವರಿ ಮಾಹೆ ತಾರೀಖು 2,3 ಮತ್ತು 4ನೇ ಸೋಮವಾರ, ಮಂಗಳವಾರ, ಬುಧುವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತೆಂಬ ಭಾಗ ಈ ಮೂಲ್ಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಬಾಕಿ ವಿಷಯಗಳಿಗೆ 17-11-1921ರ ಮರ್ಕ್ಯಂ ಮೈಸೂರು ಗೆಜೆಟ್ I A. ಭಾಗದ 382, 383ನೇ ಪುಟಗಳಲ್ಲಿ ಛಾಯಿಪಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

MOHAMUD RAZA,
9-12-21. Vice President,
Town Muncipality, Hassan.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗುಬ್ಬಿ ಟೈಲ್‌ವರ್ಕ್ಸ್ ಲಿಮಿಟೆಡ್.

ತಾ|| 4-12-21 ರಲ್ಲಿ ನಡೆದ ಈ ಕಂಪನಿಯ ಯಕ್ಸ್ಟ್ರಾರ್ಡಿನರಿ ಜನರಲ್ ಮೀಟಿಂಗಿನಲ್ಲಿ ಈ ಕಂಪನಿಯನ್ನು ವಾಲಂಟರಿ ವೈಂಡಪ್ ಆಗತಕ್ಕದೆಂತಲೂ, ನಾವುಗಳು ಲಿಕ್ವಿಡೇಟರುಗಳಾಗಿರತಕ್ಕದೆಂತಲೂ ಆದರೆಜಲೂಷನ್ ತಾ|| 18-12-21 ರಲ್ಲಿ ನಡೆದ ಜನರಲ್ ಮೀಟಿಂಗಿನಲ್ಲಿ ಕನ್‌ಫರಂ (conform) ಆಗಿರುತ್ತದೆಯಾದ್ದರಿಂದ ಮೈಸೂರು ಕಂಪನಿ ರೆಗ್ಯುಲೇಷನ್ 209ನೆ ಸೆಕ್ಷನ್ (Section) 1ನೆ ಕ್ಲಾಸ್ (class) ಪ್ರಕಾರ ನಡೆಯಬೇಕಾದ ಕ್ರೆಡಿಟರುಗಳ ಮೀಟಿಂಗು ತಾ|| 15-1-22ನೆ ಭಾನುವಾರ ದಿವ 3 ಘಂಟೆಗೆ ಸರಿಯಾಗಿ ಕಂಪನಿ ರಿಜಿಸ್ಟರ್ಡ್ ಆಫೀಸಿನಲ್ಲಿ ನಡೆಯುತ್ತದೆಯಾಗಿ ಎಲ್ಲಾ ಕ್ರೆಡಿಟರುಗಳು ಮೀಟಿಂಗಿಗೆ ದಯಮಾಡಿಸಬೇಕಾಗಿ ಕೋರಿದೆ.

G. Adavappa,
G. S. Gangappa,
Liquidaltors.

ಶ್ರೀಮದ್ಯುವಸಾರ್ವಭೌಮರ ದೇಶಸಂಚಾರ.

(ಪಾಟ್ನಾ.)

ಪಾಟಲೀಪುರವೆಂದು ಪುರಾತನಪ್ರಸಿದ್ಧವಾದ ಪಾಟ್ನಾನಗರಕ್ಕೆ ಯುವಸಾರ್ವಭೌಮರು ತಾ|| ೨೨ನೆ ಬೆಳಗ್ಗೆ ದಯಮಾಡಿಸಿದರು. ಪದ್ಧತಿಯಂತೆ ಮರ್ಯಾದೆಗಳೆಲ್ಲಾ ಸಿಲ್ದಾಣದಲ್ಲಿ ನಡೆದುವು. ಬೀಹಾರು ದೇಶೀಯಪ್ರಜೆಗಳ ಪಕ್ಷದಿಂದ ಒಂದು ಸ್ವಾಗತಸನ್ಮಾನ ಪತ್ರವು ಸಮರ್ಪಿಸಲ್ಪಟ್ಟಿತು. ಅದನ್ನು ಆ|| ಸಚ್ಚಿದಾನಂದ ಸಿಂಹರವರು ಓದಿದರು. ಅದಕ್ಕೆ ಯುವರಾಜರು ಪ್ರತ್ಯುತ್ತರವನ್ನೀಯುವಾಗ್ಗೆ-ಅವರ ಸ್ವಾಗತ ಸಮರ್ಪಣೆಗಾಗಿ ವಂದಿಸಿ, ನಿಮ್ಮ ಆಧಿಪತ್ಯವು ನೂತನವಾಗಿ ಏರ್ಪಡಿಸಲ್ಪಟ್ಟಿದ್ದರೂ, ನಿಮ್ಮ ಪ್ರಾಂತದ ಚರಿತ್ರವು ಅತ್ಯಂತ ಪುರಾತನವಾದುದು. ಇದನ್ನು ಈಗ ಮೊಟ್ಟಮೊದಲನೆಯ ಭಾರತೀಯ ಗೌರ್ನರಾಗಿ ಪರಿಪಾಲಿಸಿದ ಲಾರ್ಡ್ ಸಿಂಹರವರು ಅಸಾಧಾರಣ ಪ್ರಜ್ಞಾಶಾಲಿಗಳು. ಅಂಥವರು ಅತ್ಯಲ್ಪಕಾಲದಲ್ಲೇ ದೇಹಾನಾರೋಗ್ಯದಿಂದ ಆ ಪದವಿಯನ್ನು ಪರಿತ್ಯಾಗಮಾಡಿದುದಕ್ಕಾಗಿ ಚಿಂತಿಸುತ್ತೇನೆಂದು ಅಪ್ಪಣೆಕೊಡಿಸಿದರು. ತಾ|| ೨೩ ರಲ್ಲಿ ಪೋಲೀಸರ ಡ್ರಿಲ್ಲನ್ನು ಪರಾಮರಿಸಿ, ಸೂಪರಿಂಟೆಂಡೆಂಟರಾದ ಆರ್. ಜೆ. ಅಷ್ಬರವರಿಗೆ ಸಾರ್ವಭೌಮರ ಚಿನ್ನದ ಪೋಲೀಸ್‌ಪತಾಕೆಯನ್ನು ಬಹುಮಾನವಾಗಿ ಕೊಟ್ಟರು. ಅಲ್ಲೇ ನೆರೆದಿದ್ದ ಪೆನ್ಷನ್ಡ್ ಸೈನಿಕೋದ್ಯೋಗಿಗಳೊಡನೆಯೂ ಬಾಲಚಮೂವಿನೊಡನೆಯೂ ಸಂಭಾಷಣೆಗಳನ್ನು ನಡೆಯಿಸಿದರು. ಪಟ್ಟಣದಲ್ಲಿ ಕೆಲವರು ಹರಿತಾಳಗಳನ್ನಾಚರಿಸಿದರೂ ಬೀದಿಗಳಲ್ಲಿ ಅವರು ಹೋಗಿಬರುವಾಗ ಪ್ರಜೆಗಳೆಲ್ಲಾ ಕಿಕ್ಕಿರಿದುನಿಂತಿದ್ದು ಸಂತೋಷಧ್ವಾನವನ್ನು ಮಾಡುತ್ತಿದ್ದರು. ಒರಿಸ್ಸಾ, ಕಾರಸ್ವಾನ್, ಹಿಂದೋಲು, ಓಲ್ಕಾರು ಮೊದಲಾದ ೧೦ ಸಂಸ್ಥಾನಗಳ ಪ್ರಭುಗಳು ಯುವರಾಜರನ್ನು ಅವರ ಬಿಡಾರದಲ್ಲೇ ಸಂದರ್ಶನಮಾಡಿ ಸಂಭಾಷಿಸಿಕೊಂಡುಬಂದರು.

ಯುವರಾಜರು ಹಿಂದೆ ಭರತಪುರಸಂಸ್ಥಾನಕ್ಕೆ ಹೋಗುವ ಮುಂದಿನದಿನವೇ ಅಲ್ಲಿಯ ಪ್ರಭುಗಳಿಗೆ ೨ನೆ ಪುತ್ರೋತ್ಸವವಾದ ವಾರ್ತೆಯನ್ನು ಯುವರಾಜರು ಕೇಳಿ ಅಭಿನಂದನವನ್ನು ತಂತಿಯಮೂಲಕ ತಿಳಿಯಿಸಿದರು. ಆ ಮಗುವಿಗೆ "ಎಡ್ವರ್ಡ್ ಮಾನಸಿಂಗ್" ಎಂಬದಾಗಿ ಭರತಪುರಮಹಾರಾಜರು ನಾಮಕರಣ ಮಾಡಿದರು. ಆ ಮಗುವಿನ ಶಿರೋಭೂಷಣದಲ್ಲಿಡುವುದಕ್ಕೆ ಅರ್ಹವಾದ ಒಂದು ಆಭರಣದಲ್ಲಿ ತಮ್ಮ ರುಜುವಿರುವಂತೆ ಮಾಡಿ ಅದನ್ನು ಯುವಸಾರ್ವಭೌಮರು ಕಳುಹಿಸಿಕೊಟ್ಟರು.

ಕಲಕತ್ತಾ

ಈ ಪಟ್ಟಣದ ಅಲಂಕಾರವೂ ಸೈನಿಕರ ಪೊಲೀಸರ ಎಚ್ಚರಿಕೆಗಳೂ ಅಭೂತಪೂರ್ವವಾಗಿದ್ದುವು. ಅಸಹಾಯವಾದಿಗಳು ತಮ್ಮ ಸ್ವಚ್ಛಂದಸೇವಕರ ಮೂಲಕ ಹರತಾಳದ ಆಚರಣೆಯನ್ನು ಬಹುಬಲವತ್ತರವಾಗಿ ಮಾಡಿಸಿದ್ದರು. ಹಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ಯುವರಾಜರು ತಾ|| ೨೪ನೆ ಬೆಳಗ್ಗೆ ಹೌರಾನಿಲ್ದಾಣದಲ್ಲಿ ಬಂಗಾಳಾ ಗೌರ್ನರೇ ಮೊದಲಾದ ಮುಖ್ಯೋದ್ಯೋಗಿಗಳೂ ಪುರಪ್ರಮುಖರುಗಳೂ ನಿಂತಿದ್ದು ಇದಿರ್ಗೊಂಡು ಸ್ವಾಗತಿಸಿದರು. ಸೈನಿಕಮರ್ಯಾದೆಗಳೆಲ್ಲಾ ನಡೆದುವು. ಕೋಟೆಕೊತ್ತಲಗಳಿಂದ ಮರ್ಯಾದೆಯ ಗುಂಡುಗಳು ಹಾರಿಸಲ್ಪಟ್ಟುವು. ರಥಾರೂಢರಾಗಿ ಯುವರಾಜರು ಹಿಂದೆ ಮುಂದೆ ಅಶ್ವಸೈನ್ಯವು ನಡೆಯುತ್ತಿರಲು ಉತ್ಸವಗೊಂಡು ಸರ್ಕಾರದ ಭವನದಕಡೆಗೆ ತೆರಳಿದರು. ಡಾಲ್‌ಹೌಸಿ ಸ್ಕ್ವೇರಿನಲ್ಲಿ ಹಾಕಿದ್ದ ದೊಡ್ಡ ಚಪ್ಪರದಲ್ಲಿ ಏರ್ಪಡಿಸಿದ್ದ ಉನ್ನತಾಸನದ ಮೇಲೆ ಯುವರಾಜರನ್ನು ಕುಳ್ಳಿರಿಸಿದರು. ಕಲ್ಕತ್ತಾ ಕಾರ್ಪೊರೇಷನ್ ಅಧ್ಯಕ್ಷರು ಸ್ವಾಗತಪತ್ರವನ್ನೋದಿ ಸಮರ್ಪಿಸಿದರು. ಅದಕ್ಕೆ ಪ್ರತ್ಯುತ್ತರವನ್ನು ಯುವರಾಜರು ಕೊಡುವಾಗ್ಗೆ ಕಲಕತ್ತಾಪಟ್ಟಣದ ಸೌಭಾಗ್ಯ ಸೌಂದರ್ಯ ಪ್ರಾಶಸ್ತ್ಯಗಳನ್ನು ಕೊಂಡಾಡಿ, ಆಂಗ್ಲಸಾಮ್ರಾಜ್ಯದ ಪಟ್ಟಣಗಳೊಳಗೆಲ್ಲಾ ಲಂಡನನ್ನು ಬಿಟ್ಟರೆ ೨ನೆಯದೇ ಕಲ್ಕತ್ತೆಯೆಂದು ಹೇಳಿ, ಪುರವು ಇನ್ನೂ ಸರ್ವತೋಮುಖವಾಗಿ ಅಭಿವೃದ್ಧಿಗೊಳ್ಳಲೆಂದು ಕೋರಿದರು. ಬಿಡಾರದ ಬಳಿಯಲ್ಲಿ ಬಂಗಾಳಾ ಗೌರ್ನರ್ ದಂಪತಿಗಳು ಇದಿರ್ಗೊಂಡರು. ಆಗಲೂ ಗುಂಡುಗಳು ಹಾರಿಸಲ್ಪಟ್ಟುವು. ಉತ್ಸವಗೊಂಡುಹೋದ ಬೀದಿಗಳ ೨ ಪಕ್ಕಗಳಲ್ಲೂ ಲಕ್ಷಾಂತರಪ್ರಜೆಗಳು ನಿಂತಿದ್ದು ಯುವರಾಜರ ಹಸನ್ಮುಖವನ್ನು ನೋಡಿ ಆನಂದಿಸಿ ಜಯಧ್ವನಿಮಾಡಿದರು. ಆದಿನ ಸಾಯಂಕಾಲ ಯುವರಾಜರು ಕಲಕತ್ತಾದ ಕುದುರೆಜೂಜನ್ನು ನೋಡಲಿಕ್ಕೆ ದಯಮಾಡಿಸಿದ್ದರು. ಮರುದಿನ ಭಾನುವಾರವಾದುದರಿಂದ ಬೆಳಗ್ಗೆ ಕ್ರೈಸ್ತದೇವಾಲಯಕ್ಕೆ ಹೋಗಿ ಪ್ರಾರ್ಥನೆಯನ್ನು ಜರುಗಿಸಿದರು. ಆಗ್ಗೆ ಅಲ್ಲಿಯ ಬಿಷಪ್ಪರು ದೈವಪ್ರಾರ್ಥನಾ ಸಂದರ್ಭವನ್ನನುಸರಿಸಿ ಮಾಡಿದ ಉಪದೇಶದಲ್ಲಿ ಸಕಲಸದ್ಗುಣಗಳೊಳಗೂ ಧರ್ಮಗಳೊಳಗೂ ಪ್ರೇಮವೇ ಪ್ರಧಾನವಾದುದಲ್ಲದೆ ನ್ಯಾಯವು ಪ್ರಧಾನವಾದುದಲ್ಲವೆಂಬ ವಿಷಯವನ್ನು ಕುರಿತು ಸತ್ಯವೇದದ ಆಧಾರಗಳಿಂದಲೂ ದೃಷ್ಟಾಂತಗಳಿಂದಲೂ ಮನೋಹರವಾಗಿ ಬೋಧಿಸಿದರು.

ತಾ|| ೨೭ ರಲ್ಲಿ ಕಲ್ಕತ್ತಾವಿನ ವಿದ್ಯಾಲಯದವರು ಪ್ರಭುತ್ವಭವನದಲ್ಲೇ ಕಾನ್ವೊಕೇಷನ್ ಸಭೆಗೂಡಿಸಿ ಯುವಸಾರ್ವಭೌಮರಿಗೆ ಎಲ್.ಎಲ್.ಡಿ. ಪ್ರಶಸ್ತಿಯನ್ನಿತ್ತರು. ಆಗ ವೈಸ್‌ಚಾನ್ಸಲರು ಮಾಡಿದ ಭಾಷಣದಲ್ಲಿ ಗ್ರೇಟ್‌ಬ್ರಿಟನ್ನಿಗೂ ಭರತಖಂಡಕ್ಕೂ ಅನ್ಯೋನ್ಯಮೈತ್ರಿಯು ಶಾಶ್ವತವಾಗಿರುವುದು ಅತ್ಯವಶ್ಯಕವೆಂದು ಪ್ರತಿಪಾದಿಸಿದರು. ಅದಕ್ಕೆ ಯುವರಾಜರು ಪ್ರತ್ಯುತ್ತರವನ್ನು ಕೊಡುವಾಗ್ಗೆ-ಆ ಪ್ರಶಸ್ತಿಯನ್ನು ವಿಶ್ವವಿದ್ಯಾಲಯದವರು ತಮಗಿತ್ತುದಕ್ಕಾಗಿ ವಂದನೆಯನ್ನು ತಿಳಿಯಿಸಿ, ಇದೇ ತೆರದ ಗೌರವವೇ ೧೯೦೬ನೆ ವರ್ಷದಲ್ಲಿ ನಮ್ಮ ತಂದೆಯವರಿಗೂ ಇಲ್ಲಿ ಜರುಗಿರುವುದೆಂದೂ, ಆ ಗೌರವವನ್ನು ಅವರು ಇನ್ನೂ ಮರೆತಿಲ್ಲವೆಂದೂ, ಈ ವಿಶ್ವವಿದ್ಯಾಲಯವು ಈ ದೇಶಕ್ಕೆಲ್ಲಾ ಮುಖ್ಯವಾಗಿದೆಯೆಂದೂ, ಇದರ ಅಭಿವೃದ್ಧಿಯನ್ನೇ ನಾನು ಸದಾ ಕೋರುತ್ತಿರುವೆನೆಂದೂ, ಈಗ ಕೊಟ್ಟ ಪ್ರಶಸ್ತಿಯಿಂದ ನನಗೂ ಈ ವಿದ್ಯಾಪೀಠಕ್ಕೂ ನಿಜವಾದ ಸಖ್ಯತ್ವವು ಶಾಶ್ವತವಾಗಿರುವುದೆಂದೂ ಹೇಳಿದರು.

ಕಲಕತ್ತಾಪಟ್ಟಣದ ದೊಡ್ಡ ಬಯಲಿನಲ್ಲಿ ಪ್ರಜೆಗಳು ಏರ್ಪಡಿಸಿದ್ದ ಸತ್ಕಾರ ಸಮಾರಂಭಕ್ಕೆ ಯುವರಾಜರು ಸೈನಿಕ ಮರ್ಯಾದಾ ಸಮೇತರಾಗಿ ಉತ್ಸವಗೊಂಡು ಹೋಗಿದ್ದರು. ಅಲ್ಲಿ ಗೌರ್ನರ್ ರೋನಾಲ್ಡ್‌ಷೇ ಪ್ರಭುಗಳೂ ಅವರ ಪತ್ನಿಯೂ ಕುಚ್‌ಬಿಹಾರ್ ಮಹಾರಾಜರೇ ಮೊದಲಾದ ಸತ್ಕಾರಕ ಸಂಘದ ಸಭಿಕರೂ ಕಾದಿದ್ದು ಸ್ವಾಗತಿಸಿದರು. ಯುವರಾಜರು ಗೊತ್ತಾಗಿದ್ದ ಉನ್ನತಾಸನವನ್ನಲಂಕರಿಸಿದ ಬಳಿಕ ಪಂಡಿತರೂ ಮೌಲ್ವಿಗಳೂ ತಂತಮ್ಮ ಕವನಗಳಿಂದ ಯುವರಾಜರನ್ನು ಸ್ತುತಿಸಿ ವಂದಿಸಿದರು. ಸಂಗೀತಗಳೂ ನರ್ತನಗಳೂ ವೈಭವದಿಂದ ನಡೆದುವು. ಅದನ್ನೆಲ್ಲಾ ನೋಡಿ ಯುವರಾಜರು ಬಹಳ ಸಂತೋಷಿಸಿದರು. ಅದನ್ನೆಲ್ಲಾ ಮುಗಿಸಿಕೊಂಡು ಮರಳಿ ತೆರಳುವಾಗ ಪ್ರಜೆಗಳು ಅನಂತಾನಂತವಾಗಿ ದಾರಿಯುದ್ದಕ್ಕೂ ಕೂಡಿ ದರ್ಶನಮಾಡಿ ಚಪ್ಪಾಳೆಹೊಡೆಯುತ್ತ ಆನಂದಿಸಿದರು. ರಾತ್ರಿ ಬಾಣಗಾರಿಕೆಯು ಬಹು ಮನೋಹರವಾಗಿ ನಡೆದಿತು. ಪೇಟೆಗಳಲ್ಲಿ ದೀಪೋತ್ಸವವು ಜರುಗಿತು.

ತಾ|| ೨೮ ರಲ್ಲಿ ಯುವಸಾರ್ವಭೌಮರು ವಿಕ್ಟೋರಿಯಾ ಸ್ಮಾರಕಭವನದ ಪ್ರವೇಶೋತ್ಸವವನ್ನು ಜರುಗಿಸಿದರು. ಅಲ್ಲಿಗೆ ಹೋಗುವ ದಾರಿಯುದ್ದಕ್ಕೂ ಪುರಜನರು ಸ್ವಾಗತಮಾಡುತ್ತ ಸಂತೋಷಿಸಿದರು. ಈ ಭವನದ ಶಂಕುಸ್ಥಾಪನವನ್ನು ಈಗ್ಗೆ ೧೬ ವರ್ಷಗಳ ಕೆಳಗೆ ಜಾರ್ಜ್‌ಸಾರ್ವಭೌಮರು ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಮಾಡಿದ್ದರೆಂದೂ ಈ ಸ್ಥಾಪನೆಗಾಗಿ ಧನಸಹಾಯವನ್ನು ಭರತಖಂಡದ ಪ್ರಭುಗಳೂ ಪ್ರಜೆಗಳೂ ಸಹ ಮಾಡಿರುವರೆಂದೂ, ಅದರ ಸಾದ್ಯಂತವೃತ್ತಾಂತವನ್ನು ಬಂಗಾಳಾ ಗೌರ್ನರವರು ಹೇಳಿ ಪ್ರವೇಶೋತ್ಸವವನ್ನು ಜರುಗಿಸಬೇಕೆಂದು ಕೋರಿದರು. ಅದಕ್ಕೆ ಪ್ರತ್ಯುತ್ತರವನ್ನು ಕೊಡುವಾಗ್ಗೆ—ಯಾವ ಜಗತ್ಪ್ರಸಿದ್ಧ ವಿಕ್ಟೋರಿಯಾ ಮಹಾರಾಜ್ಞಿಯವರು ಭರತಖಂಡಕ್ಕೆ ತಾವು ಅನುಗ್ರಹಿಸಿದ ಸಂದೇಶದಲ್ಲಿ "ಅವರ ಐಶ್ವರ್ಯವೇ ನನ್ನ ಐಶ್ವರ್ಯವು, ಅವರ ತೃಪ್ತಿಯೇ ನಮಗೆ ಕ್ಷೇಮದಾಯಕವು, ಅವರ ಕೃತಜ್ಞತೆಯೇ ನಮಗೆ ದೊಡ್ಡ ಬಹುಮಾನವು" ಎಂದು ಭಾರತೀಯರನ್ನು ಕುರಿತು ಹೇಳಿ ತಮ್ಮ ಸಾನುಭೂತಿಯನ್ನು ತೋರಿಸಿದ್ದರೋ, ಅಂಥವರ ಜ್ಞಾಪಕಾರ್ಥವಾಗಿ ಭಾರತೀಯರು ಇದನ್ನು ಸ್ಥಾಪಿಸಿದುದು ಅವರ ಕೃತಜ್ಞತಾಧರ್ಮಕ್ಕೆ ಒಪ್ಪತಕ್ಕುದಾಗಿದೆ. ಭಾರತೀಯರು ಯುದ್ಧದ ಒಳ್ಳೆ ಕಷ್ಟಸಮಯದಲ್ಲಿ ದೊಡ್ಡ ಸಹಾಯಮಾಡಿ ಅದ್ವಿತೀಯವಾದ ತಮ್ಮ ರಾಜಭಕ್ತಿಯನ್ನು ತೋರಿಸಿರುವರು. ಪ್ರಜಾಶಯವನ್ನು ಸಂತೃಪ್ತಿಪಡಿಸುವುದಕ್ಕಾಗಿಯೇ ಪ್ರಭುತ್ವದವರು ರಾಜಕೀಯ ಸಂಸ್ಕರಣಗಳನ್ನೇರ್ಪಡಿಸಿರುವರು. ಸಾಮ್ರಾಜ್ಯಾಂತರ್ಗತವಾದ ಬಾಧ್ಯತಾಯುತ ಪರಿಪಾಲನವನ್ನು ಪಡೆಯುವುದಕ್ಕೇ ಇಲ್ಲಿಯ ಶಾಸನಸಭೆಗಳು ಕೆಲಸಮಾಡುತ್ತಿವೆ" ಎಂದು ಹೇಳಿ, ರತ್ನಖಚಿತವಾದ ಬೀಗದಕೈಯಿಂದ ಬೀಗವನ್ನು ತೆರೆದು ಬಾಗಿಲನ್ನು ಬಿಚ್ಚಿದರು. ೧೦೧ ಗುಂಡುಗಳು ಹಾರಿಸಲ್ಪಟ್ಟುವು. ಹೀಗೆ ಕಲಕತ್ತಾದಲ್ಲಿ ಯುವರಾಜರ ಸತ್ಕಾರದ ಸಕಲ ಕಾರ್ಯಗಳೂ ಗೊತ್ತುಮಾಡಿಕೊಂಡಿದ್ದ ಮೇರೆಗೇನೆಯೇ ನ್ಯೂನಾತಿರೇಕವಿಲ್ಲದೆ ನಡೆದುವು. ಯಾವ ಗದ್ದಲವೂ ಜರುಗಲಿಲ್ಲ.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೧ ನೆಯ ಭಾನುವಾರ.

ಅಧಿಕಾರಿಗಳ ವೇತನಗಳು.

ನಮ್ಮ ಸಂಸ್ಥಾನದಲ್ಲಿ ೫೦೦ ರೂ. ಗಳಿಗೆ ಮೇಲ್ಪಟ್ಟ ಸಂಬಳದ ಉದ್ಯೋಗಿಗಳ ವೇತನದಲ್ಲಿ ೧೦೦ಕ್ಕೆ ೨೦ ರಷ್ಟನ್ನು ಕಡಮೆ ಹಾಕಲು ಈಗತಾನೇ ನಮ್ಮ ಪ್ರಭುತ್ವದವರು ಏರ್ಪಡಿಸಿರುವರೆಂದು ಕೇಳಿದೆವು. ಈಗಣ ಆರ್ಥಿಕ ದುಸ್ಥಿತಿಯಲ್ಲಿ ವೆಚ್ಚದ ಭಾರವನ್ನು ಕಡಮೆ ಹಾಕಬಹುದಾದ ಅವಕಾಶಗಳೇನೇನುಂಟೋ ಅವುಗಳಲ್ಲಿ ಈ ಭಾಗವೂ ಒಂದು ಮುಖ್ಯವಾದುದು. ಈ ವಿಧವಾದ ಸೂಚನೆಯು ಪ್ರಭುತ್ವದವರಿಗೆ ಅನೇಕರಿಂದ ಹಲವುಸಲ ಕೊಡಲ್ಪಟ್ಟಿದ್ದಿತು. ಈಗಲಾದರೂ ಇತ್ತಕಡೆ ಗಮನವುಂಟಾದುದಕ್ಕಾಗಿ ಸಂತೋಷಿಸುತ್ತೇವೆ. ಆದರೆ ಮೇಲೆಕಂಡ ಪರಿಮಾಣವು ಸಾಲದೆಂದೇ ಹೇಳಬೇಕಾಗುವುದು. ನೆರೆಯಮದ್ರಾಸು ಪ್ರಭುತ್ವದಲ್ಲಿ ಅಲ್ಲಿಯ ಶಾಸನಸಭೆಯವರು ೫೦೦ಕ್ಕೆ ಮೇಲ್ಪಟ್ಟ ಸಂಬಳಗಳಲ್ಲೆಲ್ಲಾ ⅛ ಭಾಗವನ್ನು ಕಡಿಮೆ ಹಾಕಬೇಕೆಂದು ಸರ್ಕಾರಕ್ಕೆ ತೀರ್ಮಾನವನ್ನು ಕಳುಹಿಸಿಕೊಟ್ಟಿದ್ದಾರೆ. ಅವರು ಅದರ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾರೋ ಇನ್ನೂ ಗೊತ್ತಾಗಿಲ್ಲ. ಅಲ್ಲಿರುವುದು ವಿದೇಶೀಯ ಪ್ರಭುತ್ವ. ಪರದೇಶದಿಂದ ಈ ದೇಶದ ಉದ್ಯೋಗಗಳಿಗೆ ಬರತಕ್ಕವರಿಗೆ ಸಂಬಳದಮೇಲಣ ಅಪೇಕ್ಷೆಯೇ ಹೆಚ್ಚಾಗಿರುವುದು ಸಹಜವಾಗಿದೆ. ಅಂಥ ಸರ್ಕಾರದಲ್ಲೂ ೧೦೦ ಕ್ಕೆ ⅛ ಭಾಗವನ್ನು ಕಡಮೆ ಮಾಡಬೇಕೆಂದು ತೀರ್ಮಾನಿಸಿರುವಾಗ, ನಮ್ಮ ಸ್ವದೇಶದ ಪ್ರಭುತ್ವದಲ್ಲಿ-ಸ್ವದೇಶೀಯರೇ ವಿಶೇಷವಾಗಿ ಅಧಿಕಾರಾರೂಢರಾಗಿರುವಲ್ಲಿ-೧೦೦ ಕ್ಕೆ ⅒ ಭಾಗಮಾತ್ರ ಕಡಮೆ ಹಾಕಬೇಕೆಂಬುದು ಸಾಧುವಾಗಿಲ್ಲ. ಇದಲ್ಲದೆ ಮದ್ರಾಸಿನ ಉದ್ಯೋಗಿಗಳಿಗೆ ಇರುವಷ್ಟು ಕಾರ್ಯಭಾರದ ಕಾಠಿನ್ಯವೂ ದುರ್ಭರತೆಯೂ ನಮ್ಮ ದೇಶದ ಉದ್ಯೋಗಿಗಳಿಗೆ ಇರುವುದಿಲ್ಲ. ಅಲ್ಲಿಯ ಒಂದೊಂದು ಜಿಲ್ಲೆಯ ವೈಶಾಲ್ಯವು ನಮ್ಮದೇಶದ ಅರ್ಧಭಾಗದಷ್ಟಾಗುವುದು. ಅಲ್ಲಿ ಒಬ್ಬೊಬ್ಬರು ನಿರ್ವಹಿಸುತ್ತಿರುವ ಕೆಲಸವನ್ನು ಇಲ್ಲಿ ಮೂವರು ನಾಲ್ವರು ನಿರ್ವಹಿಸುತ್ತಿರುವರು. ಹೀಗಿರುವುದರಿಂದ ನಮ್ಮ ದೇಶದಲ್ಲಿ ಸಂಬಳಗಳನ್ನು ಇಳುಹಿಸುವುದಾದರೆ ೧೦೦ ಕ್ಕೆ ಅರ್ಧದಷ್ಟನ್ನಾದರೂ ಕಡಮೆ ಹಾಕಬೇಕು. ಹೀಗೆ ಮಾಡಿದರೇನೆಯೇ ಈ ಯೇರ್ಪಾಟಿನಿಂದ ತಕ್ಕಷ್ಟು ಫಲವಾದೀತೇ ಹೊರತು ಇಲ್ಲದಿದ್ದರೆ ಬಯಿಶಾಸ್ತ್ರಮಾತ್ರವಾಗಿ ಫಲವು ಸಾಮಾನ್ಯವಾಗುವುದು.

ಈ ಸಂದರ್ಭದಲ್ಲಿ ಪ್ರಭುತ್ವದವರು ಮತ್ತೊಂದು ವಿಷಯವನ್ನು ಅವಶ್ಯವಾಗಿ ಪರ್ಯಾಲೋಚಿಸಬೇಕು. ಸಂಸ್ಥಾನಕ್ಕೆ ಮಿತಿಮೀರಿದ ವೆಚ್ಚವು ಅಲೋಯನ್ಸುಗಳ ರೂಪವಾಗಿರುವುದು. ಅದನ್ನು ಮೊದಲು ಸಂಕೋಚಗೊಳಿಸಬೇಕು. ಅನೇಕೋದ್ಯೋಗಿಗಳಿಗೆ ಬತ್ಯವು ಸಂಬಳಕ್ಕಿಂತಲೂ ಹೆಚ್ಚಾಗಿಯೇ ಸಲ್ಲುತ್ತಿರುವುದು. ಸಂಚಾರಕಾಲದಲ್ಲಿ "ಡಬ್ಬಲ್ ಫಸ್ಟ್ ಕ್ಲಾಸ್ ಟಿಕೆಟ್ ಛಾರ್ಜುಗಳು." ಕೊಡಲ್ಪಡುತ್ತಿರುವುದನ್ನು ತಪ್ಪಿಸಿ ಒಂದನ್ನೇ ಏರ್ಪಡಿಸಬೇಕು. ಮತ್ತು ಮೋಟಾರುಗಳು ಮೊದಲಾದ ವಾಹನಗಳ ಮೂಲಕ ಸಂಚರಿಸುವ ೨೫೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗಿಗಳಿಗೆಲ್ಲಾ ಆಹಾರಾರ್ಥವಾಗಿ ಬೇರೆ ಬತ್ಯವನ್ನು ಕೊಡದೆ ಪೆಟ್ರೋಲ್ ವೆಚ್ಚ ಮೊದಲಾದುವುಗಳಿಗೆ ತಕ್ಕಷ್ಟನ್ನು ಏರ್ಪಡಿಸಿ ಈಗಣ ದುಂದುವೆಚ್ಚವನ್ನೆಲ್ಲಾ ತಪ್ಪಿಸಿಬಿಡಬೇಕು. ಅವರವರಿಗೆ ಸಲ್ಲುವ ಸಂಬಳದಿಂದಲೇ ಅವರು ಸ್ಥಲದಲ್ಲಿದ್ದರೂ ಪರಸ್ಥಲದಲ್ಲಿದ್ದರೂ ಆಹಾರಾದಿಗಳ ವೆಚ್ಚಕ್ಕೆ ಉಪಯೋಗಿಸಲೇಬಹುದಷ್ಟೆ.

ಇದಲ್ಲದೆ ಇನ್ನೊಂದು ಯೋಚನೆಯು ಪ್ರಕೃತ ಸಂದರ್ಭದಲ್ಲಿ ತೋರುವುದು. ಉಚಿತವಾಗಿ ಕಂಡರೆ ಸಂಸ್ಥಾನದ ವಿಶೇಷಾಭಿಮಾನಿಗಳಾದ ನಮ್ಮ ದಿವಾನರು ಅದನ್ನು ಬಳಕೆಗೆ ತರಬೇಕೆಂದುಸೂಚಿಸುವೆವು. ಏನೆಂದರೆ-ನಮ್ಮ ಸಂಸ್ಥಾನದಉದ್ಯೋಗಿಗಳಲ್ಲಿ ಎಲ್ಲೋ ಕೆಲವರಹೊರತು ಉಳಿದವರೆಲ್ಲಾ ಮೈಸೂರು ದೇಶೀಯರೇ ಆಗಿದ್ದಾರಷ್ಟೆ. ಇದುವರೆಗೂ ಅವರೆಲ್ಲರೂ ಸಮೃದ್ಧವಾಗಿ ಸಂಬಳಗಳನ್ನು ಪಡೆದುಕೊಂಡು ಪುಷ್ಟರಾಗುತ್ತಲೇ ಬಂದಿರುವರು. ತಮ್ಮನ್ನು ಪೋಷಿಸಿದ ಸರ್ಕಾರಕ್ಕೆ ಈಗ ಹಣದ ಮುಗ್ಗಟ್ಟು ಬಂದಿರುವುದರಿಂದ ತಾವು ಅದನ್ನು ಈಗ ಪರಿಪೋಷಿಸಬೇಕು. ಮೈಸೂರು ದೇಶವು ಮೈಸೂರಿಗೇ ಇರುವುದೆಂಬ ಸಿದ್ಧಾಂತದ ಮೂಲಕ ಪಡೆದ ಉಪಕಾರಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಸಕಾಲವಾಗಿರುವುದರಿಂದ ೫೦೦ ರೂ. ಗಳಿಗೆ ಮೇಲ್ಪಟ್ಟ ಸ್ವದೇಶೀಯೋದ್ಯೋಗಿಗಳಲ್ಲಿ ಕೆಲಕಾಲದ ಮಟ್ಟಿಗೆ (ಒಂದೆರಡುವರ್ಷ) ತಂತಮ್ಮ ಉದ್ಯೋಗಗಳನ್ನು ಗೌರವಾರ್ಥವಾಗಿ ಮಾಡಲು ಒಪ್ಪುಗೆಯನ್ನು ಕೊಡುವುದಕ್ಕೆ ಸಿದ್ಧರಾಗಲಿ, ಯಾರಾರಲ್ಲಿ ಅಂಥ ನಿಜದೇಶಾಭಿಮಾನವಿರುವುದೆಂಬುದು ಗೊತ್ತಾಗಲಿ. ಆ ವಿಷಯಕ್ಕೆ ಪ್ರಭುತ್ವದವರು ಒಂದು ಪ್ರಕಟನವನ್ನು ಮಾಡಲಿ. ಇದು ಯಾರೂ ನಿರ್ಬಂಧಿಸಿ ಮಾಡತಕ್ಕ ಕೆಲಸವಲ್ಲ. ಸ್ವದೇಶಾಭಿಮಾನವನ್ನು ತೋರಿಸುವುದಕ್ಕಾಗಿ ಸ್ವಾರ್ಥತ್ಯಾಗಪೂರ್ವಕವಾಗಿ ಅವರವರೇ ನಡೆಯಿಸತಕ್ಕ ಕೆಲಸವಾಗಿರುತ್ತದೆ.

"IN BROAD DAY LIGHT."

The world's condition is undergoing a thorough revision and its history is being re-edited. The events are so fast moving that a thinking mind has not time to pause and consider as to what end those events are moving. The events of the whole world are an open book–thanks to the inventions of the Western Scientists and to the modern News Agencies–and it is impossible to remain unmoved and unaffected by the tremendous effects of these events. The modern education and the modern civilization are the two factors from which the modern alarming condition all over the world has resulted. The West and the East have come to meet and in the realization of the strong effects of that meeting lies the trouble of the situation. The two sides are antagonistic in their traditions and trainings, and the difficulty lies in the reconciliation of these two conditions. The danger lies in extremism and moderation has been unable to control either. This is what we see clearly before us; and in the consideration of this great problem of the day, empires, countries, nations, communities and individuals are concerned and we propose to deal only with the last two aspects of the problem, because one must begin from the beginning.

There is a class of persons who begin to think from the world's point of view and others from an individual point of view. No community or nation exists without individuals. Thus before one says that he first considers that he is a fit member of the problems of the world, he must have proved fit as an individual and as a fit member of a community. By having begun from the wrong end, troubles have increased amongst us and that we see in the "Non-co-operation" agitation. Individuals, sects and communities which had not the preparation and fitness for it are drawn into it and there is the danger ahead of the country. The people suffer.

The history of India has on this account been a long and continuous tale of suffering as individuals and communities have been denied the necessary training. When events move at lightning speed, the whole framework of a nation breaks into atoms when its component parts are not all equally strong and well built. And this is what we see in the Broad Day Light of Today. The country has been at Peace under a Law which has settled down to perfect order and the great mass of people have come to love such a state of peace. This peaceful condition has been disturbed by a handful of powerful thinkers in whose imagination the world of India has come to an end. They have set in motion an agitation in which the people have come mixed up unconsciously and they (people) are the loose and weak components of the whole. The people get distroyed and the handful who set the agitation in motion also get perished. If ninety nine out of a hundred spokes in a wheel are loose and not properly set in the wheel and one is perfect in all respects and with two such wheels in a carriage and with powerful energy to draw it, and if this body whole is in rapid motion what will

be the result? The ninety nine weak spokes are first broken and the hundreadth then goes to perish. This is today's Non-co-operation in India.

Elsewhere in the West the conditions are different. Every part is strong and when consalidation or centralization reaches its zinith and when disintergration or decentralization begins, the parts separate and begin to live independently. It is not so with us. It has unfortunately been otherwise. The people are ignorant and a handful are all-in-all. The latter create trouble and in the danger ensuing, the former first perish and the latter in the end, if in the meantime their manœuvres for selfish ends do not change. This is Non-co-operation.

Coming nearer at home, we should like to point out that here in Mysore we are the most contented and happily ruled people. But we see in the Broad Day Light of events all over the world the weak parts suffer because the strong parts are few. The spirit of agitation overtakes the few and in the motion which they start, the people at large suffer. They are left ignorant and follow blindly any lead. No knowledge of education, society, politics, agriculture, trade, banking is in their strength. This is the miserable state in this Broad Day Light of Today. We speak from the longest corner of our country and it is our fear that few hear what we say. The danger is ahead of us. The larger mass of the people should as a matter of course get entangled in the world's motion and it is our duty to get strong either to resist and repel the agitation or to get into motin along with the handful and save ourselves and save them from destruction.

Have the people opened their eyes and seen who are getting more and more dangerously powerful? Education, industry, commerce and banking are becoming monopoly of one class of people. Because the people have stubbornly closed their eyes against the Broad Day Light of events before us and what is the result? We are shaken. Just an awakening is in the horizon. Let us approach the Light and the Knowledge. We must for that end in view combine amongst ourselves and that is beginning from the beginning. What is the use of our calling All India men before we do not know where we are born and who our parents are? Get strong first and then join the larger body. The interests at home must first be safe-guarded. And these interests are with us if we are combined. With each community becoming strong by itself, the country gets strong and this we are able to see in the events of the Day. Get strong in business, get strong in the management of self-Government affairs, get strong in the bodies of which you become a member by election. Be strong in the Municipalities, in the Taluk and District Boards, in the Trade Unions, in Banking concerns and lastly and most certainly in the Representative Assembly. In this last body of persons, we will be able to serve the interests of our country more loyally than in any others. It must be the ambition of the larger communities in the country to capture as many seats in this Assembly as the importance of their members deserves to possess. The Vakkaliga, the Panchama, the Mussalman and the Lingayet commnnities occupy the highest places and they will be failing in their duty to their country and in their loyalty to our Beloved Maharajah by not aspiring to obtain these posts of duty. In the Broad Day Light of To-day we see the posts of responsibility and duty before us and if we leave them to those who have no right to be there, there is danger for us who have forsaken those posts and left them to those who will set the destructive ball in motion. Decentralization and division of responsibilities are the safety-valves. Equalization of power and minimization of evil-bearing destructive agencies are occupying the attention of the greatest powers and why should we not in our little home strive to do the same and that we do by disarming that body of persons of that power which they have used for their own aggrandizement and are drawing us to the whirlpool of destruction which is Non-co-operation with a power which has brought Order and Peace to India.

೩೬ನೆ ರಾಷ್ಟ್ರೀಯ ಮಹಾಸಭೆ.

ಗುಜರಾತಿನ ಮುಖ್ಯಪಟ್ಟಣವಾಗಿರುವ ಅಹಮ್ಮದಾಬಾದು ನಗರದಲ್ಲಿ ಈ ಸಭೆಯು ಕಳೆದವಾರ ನೆರೆದಿದ್ದಿತು. ಹಿಂದಣ ಸಭೆಗಳೆಲ್ಲಕ್ಕಿಂತಲೂ ಈ ಸಭೆಯ ರಚನೆಯು ಅತ್ಯಂತ ವಿಲಕ್ಷಣವಾಗಿದ್ದಿತು. ಆ ಪಟ್ಟಣದ ಬಲಭಾಗದಲ್ಲಿ ಸಬರ್ಮತಿ ಎಂಬ ನದಿಯು ಹರಿಯುತ್ತಿರುವುದು. ಅದರ ದಡದ ಮೇಲೆ ಸಭಾಮಂಟಪವನ್ನು ರಚಿಸಿದ್ದರು. ಹೊರಗಣಿಂದ ಬಂದ ಸಭಿಕರ ವಾಸಕ್ಕಾಗಿ ಮುಸ್ಲಿಂನಗರ ಖಾದೀನಗರವೆಂಬಿವುಗಳನ್ನು ಹೊಸದಾಗಿ ಕಟ್ಟಿದ್ದರು. ಮೊದಲನೆಯದೆಲ್ಲಾ ಮಹಮ್ಮದೀಯರಿಗೋಸ್ಕರ ಎಲ್ಲವೂ ಗೋಣಿಯ ತಾಟುಗಳಿಂದಲೇ ರಚಿಸಲ್ಪಟ್ಟಿದ್ದುವು. ೨ನೆ ಖಾದೀನಗರವು ಹಿಂದೂಗಳಿಗೋಸ್ಕರ ಬರಿಯ ಖಾದಿಬಟ್ಟೆಯಿಂದಲೇ ಕಟ್ಟಲ್ಪಟ್ಟಿದ್ದಿತು. ಗೋಡೆ ಮೇಲಣ ಹೊದಿಕೆ ಮೊದಲಾದುವುಗಳೆಲ್ಲಾ ಬಟ್ಟೆಗಳಿಂದಲೇ ಮಾಡಲ್ಪಟ್ಟಿದ್ದುದರಿಂದ ಇದಕ್ಕೆ ಖಾದೀನಗರವೆಂದು ಇಟ್ಟಿದ್ದ ಹೆಸರು ಅನ್ವರ್ಥವಾಗಿದ್ದಿತು. ಒಂದೊಂದು ಮನೆಗೂ ೫೦೦ ಗಜ ಖಾದಿಬಟ್ಟೆಗಳಂತೆ ಹಿಡಿದಿರುವುದೆಂದು ಲೆಕ್ಕಹಾಕಿದರೂ ೧೦ ಸಾವಿರ ಮನೆಗಳಿಗೂ ೫೦ ಲಕ್ಷ ಗಜ ಬಟ್ಟೆಯು ಒದಗಿಸಲ್ಪಟ್ಟಿರಬೇಕೆಂದು ಸಿದ್ಧವಾಗುತ್ತದೆ. ನೋಡುವುದಕ್ಕೆ ಈ ನೂತನ ನಗರವು ರಮ್ಯವಾಗಿದ್ದರೂ ಚಳಿಗೂ ಬಿಸಿಲಿಗೂ ತಡೆಯದೆ ಇದ್ದ ಕಾರಣ ಅಲ್ಲಿ ವಾಸಿಸುವವರಿಗೆ ಅಷ್ಟೇನೂ ಹಿತಕರವಾಗಿರಲಿಲ್ಲ. ಮಹಾಸಭಾಮಂಟಪವೂ ಕೂಡ ಖಾದಿಯಮಯವೇ. ಅಲ್ಲಿ ಹಾಸಿದ್ದುದೂ ಮೇಲೆ ಹೊದ್ದಿಸಿದ್ದುದೂ ಖಾದಿಬಟ್ಟೆಯೇ. ಸಭಿಕರೂ ಸಭಾಧ್ಯಕ್ಷರೂ ಸಹ ಪದ್ಮಾಸನಗಳಿಂದ ಖಾದಿ ಬಟ್ಟೆಯ ಮೇಲೆಯೇ ಕುಳಿತುಕೊಳ್ಳುವ ಏರ್ಪಾಟಾಗಿದ್ದಿತು. ಸಭೆಗೆ ಹೋಗಿದ್ದವರಲ್ಲಿ ಮುಕ್ಕಾಲುಮೂರುವೀಸ ಪಾಲು ಜನರೆಲ್ಲರೂ ಖಾದಿಬಟ್ಟೆಯ ಕುಬಸ ಟೊಪ್ಪಿಗೆಗಳನ್ನು ಧರಿಸಿದವರೇ ಆಗಿದ್ದರು. ಮಹಾಸಭಾಮಂಟಪದ ಮಹಾದ್ವಾರದ ಮೇಲೆ ದೊಡ್ಡದೊಂದು ರಾಟೆಯು ಇಡಲ್ಪಟ್ಟಿದ್ದಿತು.

ತಾ|| ೨೬ ರಿಂದಲೂ ಮಹಾಸಭಾಸ್ಥಾಯಿಸಂಘದವರು ಸಭೆಯಲ್ಲಿ ಮಾಡಬೇಕಾದ ನಿರ್ಧಾರಗಳನ್ನು ಕುರಿತು ವಿಶೇಷವಾಗಿ ಚರ್ಚಿಸಿ ಸಿದ್ಧಮಾಡಿಕೊಂಡರು. ತಾ|| ೨೭ ನೆ ಮಧ್ಯಾಹ್ನದಿಂದ ಮಹಾಸಭೆಗೆ ಆರಂಭವಾಯಿತು. ಸಭಾಧ್ಯಕ್ಷತೆಗೆ ಆರಿಸಲ್ಪಟ್ಟಿದ್ದ ಚಿತ್ತರಂಜನದಾಸ್‌ರವರು ಕಾರಾಗೃಹದಲ್ಲಿಡಲ್ಪಟ್ಟಿರುವುದರಿಂದ ಖಿಲಾಫತ್ ಸಭಾಧ್ಯಕ್ಷರಾಗಿದ್ದ ಹಕೀಂಅಜ್ಮಲ್‌ಖಾನರೇ ಈ ಮಹಾಸಭೆಗೂ ಆಕ್ಟಿಂಗ್ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಸಭೆಯಲ್ಲಿ ೪೦೦೦ ಮಂದಿ ಪ್ರತಿನಿಧಿಗಳೂ ೩೦೦೦ ಮಂದಿ ಸನ್ಮಾನಸಂಘ ಸಭಿಕರೂ ೫೦೦೦ ಮಂದಿ ಪ್ರೇಕ್ಷಕರೂ ನೆರೆದಿದ್ದರು. ಬಹುಮಂದಿ ಕಾಂಗ್ರೆಸ್ ನಾಯಕರು ಸ್ವರಾಜ್ಯಾಶ್ರಮ (ಕಾರಾಗೃಹ) ದಲ್ಲಿರುವುದರಿಂದ ಮ|| ಗಳಾದ ಗಾಂಧಿ, ಪಂಡಿತಮದನಮೋಹನಮಾಳವ್ಯ, ವಿ. ಜೆ. ಪಟೇಲ್, ಸಿ. ವಿಜಯರಾಘವಾಚಾರಿ, ಎಸ್. ಶ್ರೀನಿವಾಸಯ್ಯಂಗಾರ್, ಡಾ|| ಅನ್ಸಾರಿ, ಪಂಡಿತ ರಾಮಭುಜದತ್ತಚೌಧುರಿ, ಎಸ್. ಕಸ್ತೂರಿರಂಗಯ್ಯಂಗಾರ್, ಸತ್ಯಮೂರ್ತಿ ಮೊದಲಾದ ಕೆಲವರು ಮಾತ್ರ ಪ್ರಮುಖರಾಗಿ ಕಾಣುತ್ತಿದ್ದರು. ಅಲಿಸೋದರರ ತಾಯಿ, ಮಹಮ್ಮದಾಲಿಯವರ ಪತ್ನಿ, ನೆಹರೂಪತ್ನಿ, ಗಾಂಧಿಪತ್ನಿ, ಸರಳಾದೇವಿಚೌಧುರಾಣಿ, ಸರೋಜನೀದೇವಿ ಮೊದಲಾದ ಕೆಲವು ನಾರೀಮಣಿಯರೂ ಬಂದಿದ್ದರು. ಜಾತೀಯ ಗೀತಾಲಾಪನೆಯೊಡನೆ ಸಭಾಕಾರ್ಯವು ಆರಂಭಿಸಲ್ಪಟ್ಟಿತು. ಸನ್ಮಾನಸಂಘಾಧ್ಯಕ್ಷರಾದ ವಿ. ಜೆ. ಪಟೇಲ್ ರವರು ತಮ್ಮ ಭಾಷಣವನ್ನು ಮಾಡಿದರು. ಅದರ ಮುಖ್ಯಾಶಯವು ಹೀಗಿದ್ದಿತು—ನಾವೆಲ್ಲರೂ ಅತ್ಯಂತವಾಗಿ ಆದರಿಸುತ್ತಿದ್ದ ದೇಶಭಕ್ತರನೇಕರು ನಮ್ಮನ್ನಗಲಿ ಕೃಷ್ಣಜನ್ಮಸ್ಥಾನಕ್ಕೆ ಸೇರಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವುದಕ್ಕಾಗಿ ನಮಗೆ ದುಃಖವೇನೂ ಇಲ್ಲದೆ ಸಂತೋಷದಿಂದ ಉಬ್ಬರುತ್ತೇವೆ. ಏಕೆಂದರೆ ಸ್ವರಾಜ್ಯಸ್ಥಾಪನಾರ್ಹತೆಯು ನಮಗಿದೆಯೇ ಇಲ್ಲವೆ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಭಗವಂತನೇ ಈ ಪರೀಕ್ಷೆಗಳನ್ನೇರ್ಪಡಿಸಿದ್ದಾನೆ.

ಬಿರುದುಗಳನ್ನು ತ್ಯಜಿಸುವುದು, ವಕೀಲರು ಕೋರ್ಟುಗಳನ್ನು ಬಿಡುವುದು, ಈ ಕಾರ್ಯಗಳು ಅಷ್ಟೇನೂ ಜಯಶೀಲವಾಗಿ ನಡೆಯದಿದ್ದುದು ಸಂತಾಪಕರವು. ಆದರೆ ಶಾಸನಸಭಾಬಹಿಷ್ಕಾರವು ಮಾತ್ರ ಜಯಪ್ರದವಾಗಿ ನೆರವೇರಿತು. ಜಾತೀಯ ಪಾಠಶಾಲೆಗಳು ಅಭಿವೃದ್ಧಿಗೊಳ್ಳುತ್ತಿವೆ. ಈ ಶಾಲೆಗಳಲ್ಲಿ ಒಟ್ಟು ೩೧೦೦೦ ಮಂದಿಗಳು ಅಭ್ಯಾಸ ಮಾಡುತ್ತಿದ್ದಾರೆ. ಈ ಪಾಠಶಾಲೆಗಳಲ್ಲಿ ಅನೇಕವು ಪ್ರಭುತ್ವಸಂಬಂಧವನ್ನು ಕಳೆದುಕೊಂಡರೂ ನಾಶವಾಗದೆ ತಲೆಯೆತ್ತುತ್ತಿವೆ. ೨ ವರ್ಷಗಳಕೆಳಗೆ ನಮ್ಮ ದೇಶದಲ್ಲೆಲ್ಲಾ ಒಂದುರಾಟೆಯೂ ಇರಲಿಲ್ಲ. ಈಗ ನಮ್ಮ ರಾಷ್ಟ್ರದಲ್ಲಿ ೧೦,೦೦೦ ರಾಟೆಗಳು ಅಹರ್ನಿಶಿಯೂ ಕೆಲಸಮಾಡುತ್ತಿವೆ. ಈ ರಾಟೆಗಳು ತಿರುಗುವುದಕ್ಕೆ ಆರಂಭವಾದಾಗಣಿಂದ ೧ ಲಕ್ಷ ಪೌಂಡು ಖದ್ದರ್‌ಬಟ್ಟೆಯು ನೆಯ್ಯಲ್ಪಟ್ಟಿದೆ. ಸ್ವದೇಶೋದ್ಯಮಕ್ಕಾಗಿ ನಾವು ೫ ಲಕ್ಷ ರೂ. ಗಳನ್ನು ವ್ಯಯಮಾಡಿದ್ದೇವೆ. ಈ ನಮ್ಮ ಪ್ರಯತ್ನದ ಫಲವಾಗಿಯೇ ಖಾದಿನಗರವನ್ನೆಲ್ಲಾ ಆ ಬಟ್ಟೆಯಿಂದಲೇ ರಚಿಸಿದ್ದೇವೆ. ಮದ್ಯಪಾನನಿರೋಧಕ್ಕೂ, ಅಸ್ಪೃಶ್ಯತಾನಿವಾರಣೆಗೂ ನಾವು ಮಾಡಿದ ಪ್ರಯತ್ನಗಳು ಜಯಪ್ರದವಾಗಿ ಸಾಗುತ್ತಿವೆ. ಪತಿತರಾಗಿದ್ದ ಜನರು ಈಗ ಎಲ್ಲ ಸಭೆಗಳಿಗೂ ನಿರಾತಂಕವಾಗಿ ಬರುತ್ತಿದ್ದಾರೆ. ನಿಬಂಧನೆಯಪ್ರಕಾರ ಆ ನಿಮ್ನಜನರು ಜಾತೀಯಪಾಠಶಾಲೆಗಳಿಗೆ ಮುಂದೆ ಪ್ರವೇಶಗೊಳಿಸಲ್ಪಡುವರು. ನೀವು ನಮಗಿಂತ ಕನಿಷ್ಠರಲ್ಲ ನಮಗೆ ನೀವು ಸಮಾನರು ಎಂದು ಹೇಳಿ ಅವರುಗಳನ್ನು ಈ ಪಾಠಶಾಲೆಗಳಿಗೆ ಸೇರಿಸುವ ಪ್ರಯತ್ನವು ಇನ್ನೂ ಜರುಗಿಲ್ಲ. ಇವರಿಗಾಗಿಯೇ ಪ್ರತ್ಯೇಕ ಪಾಠಶಾಲೆಗಳನ್ನು ಕೆಲಕಾಲದವರೆಗೆ ಏರ್ಪಡಿಸಬೇಕೆಂಬುದು ನಮ್ಮ ಉದ್ದೇಶವಲ್ಲ.

ದೇಶಬಂಧುಚಿತ್ತರಂಜನದಾಸರ ದೇಹವು ನಮ್ಮ ಬಳಿಯಲ್ಲಿಲ್ಲದಿದ್ದರೂ ಅವರ ದೇಶಭಕ್ತಿ ಸ್ವಾರ್ಥತ್ಯಾಗಪೂರಿತವಾದ ಆತ್ಮವು ನಮ್ಮ ಬಳಿಯಲ್ಲೇ ಇರುವುದು. ಅವರು ಉತ್ತೇಜಕವಾದ ತಮ್ಮ ಭಾಷಣವನ್ನು ಇಲ್ಲಿಗೆ ಬರೆದು ಕಳುಹಿಸಿಕೊಟ್ಟಿದ್ದಾರೆ. ಸದ್ಯಃ ಈ ಸಭಾಕಾರ್ಯನಿರ್ವಾಹಕ್ಕಾಗಿ ದೇಶೀಯ ನಾಯಕರಲ್ಲಿ ಅಗ್ರಗಣ್ಯರೂ ಹಿಂದೂ ಮುಸಲ್ಮಾನರ ಸಂಪೂರ್ಣವಿಶ್ವಾಸಕ್ಕೆ ಪಾತ್ರರೂ ಆದ ಹಕೀಂ ಅಜ್ಮಲ್‌ಖಾನರನ್ನೇ ಇದರ ಅಧ್ಯಕ್ಷರನ್ನಾಗಿ ಅಂಗೀಕರಿಸಲಿಕ್ಕೆ ಕಾಂಗ್ರೆಸ್ ಸಂಘದವರು ಒಪ್ಪಿರುವುದರಿಂದ ಅವರನ್ನೇ ನಾವು ಅಧ್ಯಕ್ಷರನ್ನಾಗಿ ಅಂಗೀಕರಿಸಬೇಕಾಗಿದೆ ಎಂದು ಭಾಷಣಮಾಡಿದ ಬಳಿಕ ಹಕೀಂ ಅಜ್ಮಲ್‌ಖಾನರು ಸಭಿಕರ ಮಹಾಕರತಾಡನವಾಗುತ್ತಿರುವಾಗ ಅಧ್ಯಕ್ಷಸ್ಥಾನವನ್ನಲಂಕರಿಸಿ ತಮ್ಮ ಭಾಷಣವನ್ನು ಉರ್ದುಭಾಷೆಯಲ್ಲಿ ಮಾಡಿದರು. ಅದನ್ನು ಒಬ್ಬ ಯುವಕನು ಆಂಗ್ಲಭಾಷೆಯಲ್ಲಿ ಸಭಿಕರಿಗೆಲ್ಲಾ ಪರಿವರ್ತಿಸಿ ಹೇಳಿದನು. ಆ ಭಾಷಣದಲ್ಲಿ ಪ್ರಭುತ್ವದವರು ಈಗ ಅವಲಂಬಿಸಿರುವ ನಿರ್ಬಂಧವಿಧಾನವು ಪ್ರಜೆಗಳಲ್ಲಿ ಉತ್ಸಾಹವನ್ನು ದ್ವಿಗುಣಗೊಳಿಸಲು ಸಾಧಕವಾಗಿರುವುದರಿಂದ ಅದನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆಂತಲೂ, ಈಗ ಈಜಿಪ್ಟೂ ಕೂಡ ಸಹಾಯನಿರಾಕರಣವನ್ನವಲಂಬಿಸಿರುವುದು ಅದರ ಭವಿಷ್ಯದಭ್ಯುದಯಕ್ಕೆ ಶುಭಸೂಚನೆಯೆಂತಲೂ, ಭರತಖಂಡವು ಈಗ ಅಭೂತಪೂರ್ವವಾದ ಬಾಧೆಗಳನ್ನನುಭವಿಸುತ್ತಿರುವುದಾದರೂ ಅದರ ಫಲವಾಗಿ ನೂತನಭಾರತವು ಉದ್ಭವಿಸುವುದೆಂತಲೂ, ಅಂಥ ನೂತನ ಭರತಖಂಡವು ಪ್ರಪಂಚದಲ್ಲೆಲ್ಲಾ ತನಗೆ ಉಚಿತವಾದ ಸ್ಥಾನವನ್ನು ಆಕ್ರಮಿಸಿ ತನ್ನ ಪ್ರಾಚೀನೌನ್ನತ್ಯವನ್ನು ಪಡೆದುಕೊಳ್ಳುವುದೆಂತಲೂ ಅಭಿಪ್ರಾಯವಿದ್ದಿತು.

ಬಳಿಕ ಸರೋಜಿನೀ ದೇವಿಯವರು ಚಿತ್ತರಂಜನದಾಸರೂ ಅವರ ಪತ್ನಿಯೂ ಬರೆದುಕಳುಹಿಸಿಕೊಟ್ಟಿದ್ದ ಪತ್ರಿಕೆಗಳನ್ನೋದಿದರು. ಅಲ್ಲಿಗೆ ಮೊದಲದಿನದ ಸಭಾಕಾರ್ಯಗಳು ಮುಗಿದು, ಮರುದಿನ ಮಧ್ಯಾಹ್ನ ೧|| ಗಂಟೆಗೆ ಮತ್ತೆ ಸಭಾಕಾರ್ಯಗಳು ಆರಂಭಿಸಲ್ಪಟ್ಟು ಸಾಯಂಕಾಲಕ್ಕೆ ಸಭೆಯು ಪರಿಸಮಾಪ್ತವಾಯಿತು.

ಸ್ಥಾಯಿ ಸಂಘದವರೂ ವಿಷಯನಿರ್ಧಾರಕ ಸಭೆಯವರೂ ವಿಪುಲವಾಗಿ ಚರ್ಚಿಸಿ ನಿರ್ಧರಿಸಿದ ತೀರ್ಮಾನಗಳನ್ನು ಕುರಿತು ಸಭೆಯಲ್ಲಿ ಗಾಂಧಿಯವರೇ ಮೊದಲಾದನೇಕರು ಸೂಚನೆಗಳನ್ನೂ ಪರಿಪುಷ್ಟಿಯನ್ನೂ ಅನುಮೋದನೆಯನ್ನೂ ಮಾಡಿ ಭಾಷಿಸಿದರು. ಆ ತೀರ್ಮಾನಗಳೊಳಗೆಲ್ಲಾ ಸ್ವರಾಜ್ಯಪ್ರಕಟನೆಯ ಮಾತೇನೂ ಕಾಣಲಿಲ್ಲ. ಡಿಸೆಂಬರ್ ೩೧ ರೊಳಗಾಗಿ ಸ್ವರಾಜ್ಯಪ್ರಾಪ್ತಿಯಾಗುವುದೆಂದು ಇದುವರೆಗೂ ಅಸಹಾಯವಾದಿಗಳು ಉದ್ಘೋಷಿಸುತ್ತ ಬಂದಿದ್ದ ಆಡಂಬರವನ್ನು ಇನ್ನು ಮುಂದೆ ಯಾವ ರೂಪಕ್ಕೆ ತಿರುಗಿಸಿ ಸಮಾಧಾನ ಹೇಳುವರೋ ಕಾಣಲಿಲ್ಲ. ಆದರೆ ದೌರ್ಜನ್ಯವಿರಹಿತ ಸಹಾಯನಿರಾಕರಣವನ್ನೇ ಇನ್ನೂ ಗಾಢತರವಾಗಿ ದೇಶೀಯರೆಲ್ಲರೂ ಆಚರಿಸಿ ಸ್ವರಾಜ್ಯವನ್ನು ಪಡೆದುಕೊಳ್ಳಬೇಕೆಂಬುದೇ ಗಾಂಧಿಯವರು ಉಪಪಾದಿಸಿದ ತೀರ್ಮಾನದ ಮುಖ್ಯಾಭಿಪ್ರಾಯವಾಗಿದ್ದಿತು. ಆ ಸ್ವರಾಜ್ಯಪ್ರಾಪ್ತಿಯ ಅವಧಿಯು ಕೂಡ ಅದರಲ್ಲೇನೂ ತಿಳಿಯಿಸಲ್ಪಟ್ಟಿಲ್ಲ. ಸ್ವರಾಜ್ಯಪ್ರಾಪ್ತಿಗೆ ದೌರ್ಜನ್ಯರಾಹಿತ್ಯ ಮೂಲಕವಾದ ಉಪಾಯಗಳು ಸಾಧಕವಾಗದೆ ಹೋದರೆ ದೌರ್ಜನ್ಯವನ್ನವಲಂಬಿಸುವುದಕ್ಕೂ ಅವಕಾಶವಿರಬೇಕೆಂದೂ, ತೀರ್ಮಾನದಲ್ಲಿ "ದೌರ್ಜನ್ಯರಹಿತವಾದ ಸಹಾಯನಿರಾಕರಣವನ್ನವಲಂಬಿಸಿ" ಎಂದು ಕಾಣಿಸಿರುವ ಮಾತುಗಳನ್ನು ತೆಗೆದುಬಿಡಬೇಕೆಂದೂ, ಮಹಮ್ಮದೀಯ ಸಭಾಧ್ಯಕ್ಷರಾದ ಮೋಹನಿಯವರು ಬಹಳ ಪಟ್ಟುಹಿಡಿದು ಸ್ವಾಮಿಸಂಘಸಭೆಯಲ್ಲಿ ವಾದಿಸಿದ್ದರು. ಮಹಾಸಭೆಯಲ್ಲಿಯೂ ಇದರಪ್ರಸ್ತಾಪವು ಬಂದಿತು. ಅದರ ಸಂಬಂಧವಾಗಿ ಮಹಮ್ಮದೀಯರಲ್ಲೇ ಭಿನ್ನಾಭಿಪ್ರಾಯವು ವ್ಯಕ್ತವಾಯಿತು. ಕಡೆಗೆ ಸಭಿಕರ ಓಟುಗಳನ್ನು ತೆಗೆದುಕೊಳ್ಳಬೇಕಾಯಿತು. ಪ್ರೇಕ್ಷಕರನ್ನೆಲ್ಲಾ ಹೊರಕ್ಕೆ ಕಳುಹಿಸಿ ಪ್ರತಿನಿಧಿಗಳ ಓಟುಗಳನ್ನು ತೆಗೆದುಕೊಳ್ಳಲಾಗಿ ಮೋಹನಿಯವರ ಮಾತಿಗೆ ೫೨ ಮಂದಿಗಳು ಮಾತ್ರ ಒಪ್ಪಿದರು. ಆದರಿಂದ ಅವರ ಸವರಣೆಯು ಬಿದ್ದುಹೋಯಿತು. ದೌರ್ಜನ್ಯರಹಿತ ಸಹಾಯನಿರಾಕರಣೆಯನ್ನೇ ಅವಲಂಬಿಸಬೇಕೆಂದು ತೀರ್ಮಾನವಾಯಿತು. ಮತ್ತು ಮೋಹನಿಯವರು ಆಂಗ್ಲಸಾಮ್ರಾಜ್ಯ ಸಂಬಂಧವಿಲ್ಲದ ಸ್ವರಾಜ್ಯಪ್ರಾಪ್ತಿಯಾಗಬೇಕೆಂದು ಮತ್ತೊಂದುಸವರಣೆಯನ್ನು ಸೂಚಿಸಿದ್ದರು. ಅದನ್ನು ಪೋಷಿಸಿ ಇನ್ನೂ ೧೦-೧೨ ಮಂದಿಗಳು ಮಹಾಸಭೆಯಲ್ಲಿ ಉಪನ್ಯಾಸಮಾಡಿದರು. ಬಳಿಕ ಅದನ್ನು ಖಂಡಿಸಿ ಆಂಗ್ಲ ಸಾಮ್ರಾಜ್ಯಾಧೀನವಾದ ಸ್ವರಾಜ್ಯವೇ ನಮಗೆ ಪ್ರಾಪ್ಯವೆಂಬ ವಿಷಯಕ್ಕೆ ಅನೇಕರು ಉಪನ್ಯಾಸಮಾಡಿದರು. ಮತ್ತು ಭರತಖಂಡಕ್ಕೆ ಸ್ವರಾಜ್ಯವು ಲಭಿಸಲಿ ಆದಾದಬಳಿಕ ಮುಂದಣ ಸ್ವರೂಪವನ್ನು ನಿಶ್ಚಯಿಸಿಕೊಳ್ಳಬಹುದೆಂದು ಇನ್ನು ಕೆಲರು ಉಪನ್ಯಾಸಮಾಡಿದರು. ಆ ಸಮಯದಲ್ಲಿ ಮ|| ಗಾಂಧಿಯವರು ಹೀಗೆ ಉಪನ್ಯಾಸಮಾಡಿದರು—"ಆಂಗ್ಲ ಪ್ರಭುತ್ವದವರು ಪಂಜಾಬಿನ ಮತ್ತು ಖಿಲಾಫತ್ತಿನ ಅಕ್ರಮಗಳನ್ನು ಸರಿಪಡಿಸುವರೆಂಬ ಆಸೆಯು ೧೫ ತಿಂಗಳುಗಳ ಕೆಳಗೆ ನನಗೆ ಇದ್ದುದಕ್ಕಿಂತಲೂ ಈಗ ಅಧಿಕವಾಗಿದೆ. ನಮ್ಮ ಸ್ವರಾಜ್ಯವು ಆಂಗ್ಲಸಾಮ್ರಾಜ್ಯಾಧೀನವಾಗಿರಬೇಕೆಂದು ಕೋರುವವರಿಗೂ ಹಾಗಿರಕೂಡದೆಂದು ಕೋರುವವರಿಗೂ ಕೂಡ ರಾಷ್ಟ್ರೀಯ ಮಹಾಸಭೆಯಲ್ಲಿ ಅವಕಾಶವಿರುವುದು. ಆದರೆ ಆ ಸ್ವರಾಜ್ಯಪ್ರಾಪ್ತಿಗೆ ದೌರ್ಜನ್ಯವು ಸಾಧನವಾಗಿರಬೇಕೆಂದು ವಾದಿಸುವ

ಯುವರಾಜರು ಹಿಂದೆ ಭರತಪುರಸಂಸ್ಥಾನಕ್ಕೆ ಹೋಗುವ ಮುಂದಿನದಿನವೇ ಅಲ್ಲಿಯ ಪ್ರಭುಗಳಿಗೆ ೩ನೆ ಪುತ್ರೋತ್ಸವವಾದ ವಾರ್ತೆಯನ್ನು ಯುವರಾಜರು ಕೇಳಿ ಅಭಿನಂದನವನ್ನು ತಂತಿಯಮೂಲಕ ತಿಳಿಯಿಸಿದರು. ಆ ಮಗುವಿಗೆ ''ಎಡ್ವರ್ಡ್ ಮಾನಸಿಂಗ್'' ಎಂಬದಾಗಿ ಭರತಪುರಮಹಾರಾಜರು ನಾಮಕರಣ ಮಾಡಿದರು. ಆ ಮಗುವಿನ ಶಿರೋಭೂಷಣದಲ್ಲಿಡುವುದಕ್ಕೆ ಅರ್ಹವಾದ ಒಂದು ಆಭರಣದಲ್ಲಿ ತಮ್ಮ ರುಜುವಿರುವಂತೆ ಮಾಡಿ ಅದನ್ನು ಯುವಸಾರ್ವಭೌಮರು ಕಳುಹಿಸಿಕೊಟ್ಟರು.

ಕಲಕತ್ತಾ.

ಈ ಪಟ್ಟಣದ ಅಲಂಕಾರವೂ ಸೈನಿಕರ ಪೋಲೀಸರ ಎಚ್ಚರಿಕೆಗಳೂ ಅಭೂತಪೂರ್ವವಾಗಿದ್ದುವು. ಅಸಹಾಯವಾದಿಗಳು ತಮ್ಮ ಸ್ವಚ್ಛಂದಸೇವಕರ ಮೂಲಕ ಹರಿತಾಳದ ಆಚರಣೆಯನ್ನು ಬಹುಬಲವತ್ತರವಾಗಿ ಮಾಡಿಸಿದ್ದರು. ಹಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ಯುವರಾಜರು ತಾ|| ೨೪ನೆ ಬೆಳಗ್ಗೆ ಹೌರಾಸಿಲ್ದಾಣದಲ್ಲಿ ಬಂಗಾಳಾ ಗೌರ್ನರೇ ಮೊದಲಾದ ಮುಖ್ಯೋದ್ಯೋಗಿಗಳೂ ಪುರಪ್ರಮುಖರುಗಳೂ ನಿಂತಿದ್ದು ಇದಿರ್ಗೊಂಡು ಸ್ವಾಗತಿಸಿದರು. ಸೈನಿಕಮರ್ಯಾದೆಗಳೆಲ್ಲಾ ನಡೆದುವು. ಕೋಟೆಕೊತ್ತಲಗಳಿಂದ ಮರ್ಯಾದೆಯ ಗುಂಡುಗಳು ಹಾರಿಸಲ್ಪಟ್ಟುವು. ರಥಾರೂಢರಾಗಿ ಯುವರಾಜರು ಹಿಂದೆ ಮುಂದೆ ಅಶ್ವಸೈನ್ಯವು ನಡೆಯುತ್ತಿರಲು ಉತ್ಸವಗೊಂಡು ಸರ್ಕಾರದ ಭವನದಕಡೆಗೆ ತೆರಳಿದರು. ಡಾಲ್‌ಹೌಸಿ ಸ್ಕ್ವೈರಿನಲ್ಲಿ ಹಾಕಿದ್ದ ದೊಡ್ಡ ಚಪ್ಪರದಲ್ಲಿ ಏರ್ಪಡಿಸಿದ್ದ ಉನ್ನತಾಸನದ ಮೇಲೆ ಯುವರಾಜರನ್ನು ಕುಳ್ಳಿರಿಸಿದರು. ಕಲ್ಕತ್ತಾ ಕಾರ್ಪೊರೇಷನ್ ಅಧ್ಯಕ್ಷರು ಸ್ವಾಗತಪತ್ರವನ್ನೋದಿ ಸಮರ್ಪಿಸಿದರು. ಅದಕ್ಕೆ ಪ್ರತ್ಯುತ್ತರವನ್ನು ಯುವರಾಜರು ಕೊಡುವಾಗ್ಗೆ ಕಲಕತ್ತಾಪಟ್ಟಣದ ಸೌಭಾಗ್ಯ ಸೌಂದರ್ಯ ಪ್ರಾಶಸ್ತ್ಯಗಳನ್ನು ಕೊಂಡಾಡಿ, ಆಂಗ್ಲಸಾಮ್ರಾಜ್ಯದ ಪಟ್ಟಣಗಳೊಳಗೆಲ್ಲಾ ಲಂಡನನ್ನು ಬಿಟ್ಟರೆ ೨ನೆಯದೇ ಕಲ್ಕತ್ತೆಯೆಂದು ಹೇಳಿ, ಪುರವು ಇನ್ನೂ ಸರ್ವತೋಮುಖವಾಗಿ ಅಭಿವೃದ್ಧಿಗೊಳ್ಳಲೆಂದು ಕೋರಿದರು. ಬಿಡಾರದ ಬಳಿಯಲ್ಲಿ ಬಂಗಾಳಾ ಗೌರ್ನರ್ ದಂಪತಿಗಳು ಇದಿರ್ಗೊಂಡರು. ಆಗಲೂ ಗುಂಡುಗಳು ಹಾರಿಸಲ್ಪಟ್ಟುವು. ಉತ್ಸವಗೊಂಡುಹೋದ ಬೀದಿಗಳ ೨ ಪಕ್ಕಗಳಲ್ಲೂ ಲಕ್ಷಾಂತರಪ್ರಜೆಗಳು ನಿಂತಿದ್ದು ಯುವರಾಜರ ಹಸನ್ಮುಖವನ್ನು ನೋಡಿ ಆನಂದಿಸಿ ಜಯಧ್ವನಿಮಾಡಿದರು. ಆದಿನ ಸಾಯಂಕಾಲ ಯುವರಾಜರು ಕಲಕತ್ತಾದ ಕುದುರೆಜೂಜನ್ನು ನೋಡಲಿಕ್ಕೆ ದಯಮಾಡಿಸಿದ್ದರು. ಮರುದಿನ ಭಾನುವಾರವಾದುದರಿಂದ ಬೆಳಗ್ಗೆ ಕ್ರೈಸ್ತದೇವಾಲಯಕ್ಕೆ ಹೋಗಿ ಪ್ರಾರ್ಥನೆಯನ್ನು ಜರುಗಿಸಿದರು. ಆಗ್ಗೆ ಅಲ್ಲಿಯ ಬಿಷಪ್ಪರು ದೈವಪ್ರಾರ್ಥನಾ ಸಂದರ್ಭವನ್ನನುಸರಿಸಿ ಮಾಡಿದ ಉಪದೇಶದಲ್ಲಿ ಸಕಲಸದ್ಗುಣಗಳೊಳಗೂ ಧರ್ಮಗಳೊಳಗೂ ಪ್ರೇಮವೇ ಪ್ರಧಾನವಾದುದಲ್ಲದೆ ನ್ಯಾಯವು ಪ್ರಧಾನವಾದುದಲ್ಲವೆಂಬ ವಿಷಯವನ್ನು ಕುರಿತು ಸತ್ಯವೇದದ ಆಧಾರಗಳಿಂದಲೂ ದೃಷ್ಟಾಂತಗಳಿಂದಲೂ ಮನೋಹರವಾಗಿ ಬೋಧಿಸಿದರು.

ತಾ|| ೨೭ರಲ್ಲಿ ಕಲ್ಕತ್ತಾವಿನ ವಿದ್ಯಾಲಯದವರು ಪ್ರಭುತ್ವಭವನದಲ್ಲೇ ಕಾನ್ವೊಕೇಷನ್ ಸಭೆಗೂಡಿಸಿ ಯುವಸಾರ್ವಭೌಮರಿಗೆ ಎಲ್.ಎಲ್.ಡಿ. ಪ್ರಶಸ್ತಿಯನ್ನಿತ್ತರು. ಆಗ ವೈಸ್‌ಚಾನ್ಸಲರು ಮಾಡಿದ ಭಾಷಣದಲ್ಲಿ ಗ್ರೇಟ್‌ಬ್ರಿಟನ್ನಿಗೂ ಭರತಖಂಡಕ್ಕೂ ಅನ್ಯೋನ್ಯಮೈತ್ರಿಯು ಶಾಶ್ವತವಾಗಿರುವುದು ಅತ್ಯವಶ್ಯಕವೆಂದು ಪ್ರತಿಪಾದಿಸಿದರು. ಅದಕ್ಕೆ ಯುವರಾಜರು ಪ್ರತ್ಯುತ್ತರವನ್ನು ಕೊಡುವಾಗ್ಗೆ-ಆ ಪ್ರಶಸ್ತಿಯನ್ನು ವಿಶ್ವವಿದ್ಯಾಲಯದವರು ತಮಗಿತ್ತುದಕ್ಕಾಗಿ ವಂದನೆಯನ್ನು ತಿಳಿಯಿಸಿ, ಇದೇ ತೆರದ ಗೌರವವೇ ೧೯೦೬ನೆ ವರ್ಷದಲ್ಲಿ ನಮ್ಮ ತಂದೆಯವರಿಗೂ ಇಲ್ಲಿ ಜರುಗಿರುವುದೆಂದೂ, ಆ ಗೌರವವನ್ನು ಅವರು ಇನ್ನೂ ಮರೆತಿಲ್ಲವೆಂದೂ, ಈ ವಿಶ್ವವಿದ್ಯಾಲಯವು ಈ ದೇಶಕ್ಕೆಲ್ಲಾ ಮುಖ್ಯವಾಗಿದೆಯೆಂದೂ, ಇದರ ಅಭಿವೃದ್ಧಿಯನ್ನೇ ನಾನು ಸದಾ ಕೋರುತ್ತಿರುವೆನೆಂದೂ, ಈಗ ಕೊಟ್ಟ ಪ್ರಶಸ್ತಿಯಿಂದ ನನಗೂ ಈ ವಿದ್ಯಾಪೀಠಕ್ಕೂ ನಿಜವಾದ ಸಖ್ಯತ್ವವು ಶಾಶ್ವತವಾಗಿರುವುದೆಂದೂ ಹೇಳಿದರು.

ಕಲಕತ್ತಾಪಟ್ಟಣದ ದೊಡ್ಡ ಬಯಲಿನಲ್ಲಿ ಪ್ರಜೆಗಳು ಏರ್ಪಡಿಸಿದ್ದ ಸತ್ಕಾರ ಸಮಾರಂಭಕ್ಕೆ ಯುವರಾಜರು ಸೈನಿಕಮರ್ಯಾದಾ ಸಮೇತರಾಗಿ ಉತ್ಸವಗೊಂಡು ಹೋಗಿದ್ದರು. ಅಲ್ಲಿ ಗೌರ್ನರ್ ರೋನಾಲ್ಡ್‌ಷೇ ಪ್ರಭುಗಳೂ ಅವರ ಪತ್ನಿಯೂ ಕುಚ್‌ಬಿಹಾರ್ ಮಹಾರಾಜರೇ ಮೊದಲಾದ ಸತ್ಕಾರಕ ಸಂಘದ ಸಭಿಕರೂ ಕಾದಿದ್ದು ಸ್ವಾಗತಿಸಿದರು. ಯುವರಾಜರು ಗೊತ್ತಾಗಿದ್ದ ಉನ್ನತಾಸನವನ್ನಲಂಕರಿಸಿದ ಬಳಿಕ ಪಂಡಿತರೂ ಮೌಲ್ವಿಗಳೂ ತಂತಮ್ಮ ಕವನಗಳಿಂದ ಯುವರಾಜರನ್ನು ಸ್ತುತಿಸಿ ವಂದಿಸಿದರು. ಸಂಗೀತಗಳೂ ನರ್ತನಗಳೂ ವೈಭವದಿಂದ ನಡೆದುವು. ಅದನ್ನೆಲ್ಲಾ ನೋಡಿ ಯುವರಾಜರು ಬಹಳ ಸಂತೋಷಿಸಿದರು. ಅದನ್ನೆಲ್ಲಾ ಮುಗಿಸಿಕೊಂಡು ಮರಳಿ ತೆರಳುವಾಗ ಪ್ರಜೆಗಳು ಅನಂತಾನಂತವಾಗಿ ದಾರಿಯುದ್ದಕ್ಕೂ ಕೂಡಿ ದರ್ಶನಮಾಡಿ ತಪ್ಪಾಳೆಹೊಡೆಯುತ್ತ ಆನಂದಿಸಿದರು. ರಾತ್ರಿ ಬಾಣಗಾರಿಕೆಯು ಬಹು ಮನೋಹರವಾಗಿ ನಡೆದಿತು. ಪೇಟೆಗಳಲ್ಲಿ ದೀಪೋತ್ಸವವು ಜರುಗಿತು.

ತಾ|| ೨೮ರಲ್ಲಿ ಯುವಸಾರ್ವಭೌಮರು ವಿಕ್ಟೋರಿಯಾ ಸ್ಮಾರಕಭವನದ ಪ್ರವೇಶೋತ್ಸವವನ್ನು ಜರುಗಿಸಿದರು. ಅಲ್ಲಿಗೆ ಹೋಗುವ ದಾರಿಯುದ್ದಕ್ಕೂ ಪುರಜನರು ಸ್ವಾಗತಮಾಡುತ್ತ ಸಂತೋಷಿಸಿದರು. ಈ ಭವನದ ಶಂಕುಸ್ಥಾಪನವನ್ನು ಈಗ್ಗೆ ೧೬ ವರ್ಷಗಳ ಕೆಳಗೆ ಜಾರ್ಜ್‌ಸಾರ್ವಭೌಮರು ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಮಾಡಿದ್ದರೆಂದೂ ಈ ಸ್ಥಾಪನೆಗಾಗಿ ಧನಸಹಾಯವನ್ನು ಭರತಖಂಡದ ಪ್ರಭುಗಳೂ ಪ್ರಜೆಗಳೂ ಸಹ ಮಾಡಿರುವರೆಂದೂ, ಅದರ ಸಾದ್ಯಂತವೃತ್ತಾಂತವನ್ನು ಬಂಗಾಳಾ ಗೌರ್ನರವರು ಹೇಳಿ ಪ್ರವೇಶೋತ್ಸವವನ್ನು ಜರುಗಿಸಬೇಕೆಂದು ಕೋರಿದರು. ಅದಕ್ಕೆ ಪ್ರತ್ಯುತ್ತರವನ್ನು ಕೊಡುವಾಗ್ಗೆ—ಯಾವ ಜಗತ್ಪ್ರಸಿದ್ಧ ವಿಕ್ಟೋರಿಯಾ ಮಹಾರಾಜ್ಞಿಯವರು ಭರತಖಂಡಕ್ಕೆ ತಾವು ಅನುಗ್ರಹಿಸಿದ ಸಂದೇಶದಲ್ಲಿ ''ಅವರ ಐಶ್ವರ್ಯವೇ ನನ್ನ ಐಶ್ವರ್ಯವು, ಅವರ ತೃಪ್ತಿಯೇ ನಮಗೆ ಕ್ಷೇಮದಾಯಕವು, ಅವರ ಕೃತಜ್ಞತೆಯೇ ನಮಗೆ ದೊಡ್ಡ ಬಹುಮಾನವು'' ಎಂದು ಭಾರತೀಯರನ್ನು ಕುರಿತು ಹೇಳಿ ತಮ್ಮ ಸಾನುಭೂತಿಯನ್ನು ತೋರಿಸಿದ್ದರೋ, ಅಂಥವರ ಜ್ಞಾಪಕಾರ್ಥವಾಗಿ ಭಾರತೀಯರು ಇದನ್ನು ಸ್ಥಾಪಿಸಿದುದು ಅವರ ಕೃತಜ್ಞತಾಧರ್ಮಕ್ಕೆ ಒಪ್ಪತಕ್ಕುದಾಗಿದೆ. ಭಾರತೀಯರು ಯುದ್ಧದ ಬಳ್ಳಿ ಕಷ್ಟಸಮಯದಲ್ಲಿ ದೊಡ್ಡ ಸಹಾಯಮಾಡಿ ಅದ್ವಿತೀಯವಾದ ತಮ್ಮ ರಾಜಭಕ್ತಿಯನ್ನು ತೋರಿಸಿರುವರು. ಪ್ರಜಾಶಯವನ್ನು ಸಂತೃಪ್ತಿಪಡಿಸುವುದಕ್ಕಾಗಿಯೇ ಪ್ರಭುತ್ವದವರು ರಾಜಕೀಯ ಸಂಸ್ಕರಣಗಳನ್ನೇರ್ಪಡಿಸಿರುವರು. ಸಾಮ್ರಾಜ್ಯಾಂತರ್ಗತವಾದ ಬಾಧ್ಯತಾಯುತ ಪರಿಪಾಲನವನ್ನು ಪಡೆಯುವುದಕ್ಕೇ ಇಲ್ಲಿಯ ಶಾಸನಸಭೆಗಳು ಕೆಲಸಮಾಡುತ್ತಿವೆ'' ಎಂದು ಹೇಳಿ, ರತ್ನಖಚಿತವಾದ ಬೀಗದಕೈಯಿಂದ ಬೀಗವನ್ನು ತೆರೆದು ಬಾಗಿಲನ್ನು ಬಿಚ್ಚಿದರು. ೧೦೧ ಗುಂಡುಗಳು ಹಾರಿಸಲ್ಪಟ್ಟುವು. ಹೀಗೆ ಕಲಕತ್ತಾದಲ್ಲಿ ಯುವರಾಜರ ಸತ್ಕಾರದ ಸಕಲ ಕಾರ್ಯಗಳೂ ಗೊತ್ತುಮಾಡಿಕೊಂಡಿದ್ದ ಮೇರೆಗೇನೆಯೇ ನ್ಯೂನಾತಿರೇಕವಿಲ್ಲದೆ ನಡೆದುವು. ಯಾವ ಗದ್ದಲವೂ ಜರುಗಲಿಲ್ಲ.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೧ ನೆಯ ಭಾನುವಾರ.

ಅಧಿಕಾರಿಗಳ ವೇತನಗಳು.

ನಮ್ಮ ಸಂಸ್ಥಾನದಲ್ಲಿ ೫೦೦ ರೂ. ಗಳಿಗೆ ಮೇಲ್ಪಟ್ಟ ಸಂಬಳದ ಉದ್ಯೋಗಿಗಳ ವೇತನದಲ್ಲಿ ೧೦೦ಕ್ಕೆ ೨೦ ರಷ್ಟನ್ನು ಕಡಮೆ ಹಾಕಲು ಈಗತಾನೇ ನಮ್ಮ ಪ್ರಭುತ್ವದವರು ಏರ್ಪಡಿಸಿರುವರೆಂದು ಕೇಳಿದೆವು. ಈಗಣ ಆರ್ಥಿಕ ದುಸ್ಥಿತಿಯಲ್ಲಿ ವೆಚ್ಚದ ಭಾರವನ್ನು ಕಡಮೆ ಹಾಕಬಹುದಾದ ಅವಕಾಶಗಳೇನೇನುಂಟೋ ಅವುಗಳಲ್ಲಿ ಈ ಭಾಗವೂ ಒಂದು ಮುಖ್ಯವಾದುದು. ಈ ವಿಧವಾದ ಸೂಚನೆಯು ಪ್ರಭುತ್ವದವರಿಗೆ ಅನೇಕರಿಂದ ಹಲವುಸಲ ಕೊಡಲ್ಪಟ್ಟಿದ್ದಿತು. ಈಗಲಾದರೂ ಇತ್ತ ಕಡೆ ಗಮನವುಂಟಾದುದಕ್ಕಾಗಿ ಸಂತೋಷಿಸುತ್ತೇವೆ. ಆದರೆ ಮೇಲೆಕಂಡ ಪರಿಮಾಣವು ಸಾಲದೆಂದೇ ಹೇಳಬೇಕಾಗುವುದು. ನೆರೆಯಮದ್ರಾಸು ಪ್ರಭುತ್ವದಲ್ಲಿ ಅಲ್ಲಿಯ ಶಾಸನಸಭೆಯವರು ೫೦೦ಕ್ಕೆ ಮೇಲ್ಪಟ್ಟ ಸಂಬಳಗಳಲ್ಲೆಲ್ಲಾ ¼ ಭಾಗವನ್ನು ಕಡಿಮೆ ಹಾಕಬೇಕೆಂದು ಸರ್ಕಾರಕ್ಕೆ ತೀರ್ಮಾನವನ್ನು ಕಳುಹಿಸಿಕೊಟ್ಟಿದ್ದಾರೆ. ಅವರು ಅದರ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾರೋ ಇನ್ನೂ ಗೊತ್ತಾಗಿಲ್ಲ. ಅಲ್ಲಿರುವುದು ವಿದೇಶೀಯ ಪ್ರಭುತ್ವ. ಪರದೇಶದಿಂದ ಈ ದೇಶದ ಉದ್ಯೋಗಗಳಿಗೆ ಬರತಕ್ಕವರಿಗೆ ಸಂಬಳದಮೇಲಣ ಅಪೇಕ್ಷೆಯೇ ಹೆಚ್ಚಾಗಿರುವುದು ಸಹಜವಾಗಿದೆ. ಅಂಥ ಸರ್ಕಾರದಲ್ಲೂ ೧೦೦ಕ್ಕೆ ¼ ಭಾಗವನ್ನು ಕಡಮೆ ಮಾಡಬೇಕೆಂದು ತೀರ್ಮಾನಿಸಿರುವಾಗ, ನಮ್ಮ ಸ್ವದೇಶದ ಪ್ರಭುತ್ವದಲ್ಲಿ-ಸ್ವದೇಶೀಯರೇ ವಿಶೇಷವಾಗಿ ಅಧಿಕಾರಾರೂಢರಾಗಿರುವಲ್ಲಿ-೧೦೦ಕ್ಕೆ ⅕ ಭಾಗಮಾತ್ರ ಕಡಮೆ ಹಾಕಬೇಕೆಂಬುದು ಸಾಧುವಾಗಿಲ್ಲ. ಇದಲ್ಲದೆ ಮದ್ರಾಸಿನ ಉದ್ಯೋಗಿಗಳಿಗೆ ಇರುವಷ್ಟು ಕಾರ್ಯಭಾರದ ಕಾಠಿನ್ಯವೂ ದುರ್ಭರತೆಯೂ ನಮ್ಮ ದೇಶದ ಉದ್ಯೋಗಿಗಳಿಗೆ ಇರುವುದಿಲ್ಲ. ಅಲ್ಲಿಯ ಒಂದೊಂದು ಜಿಲ್ಲೆಯ ವೈಶಾಲ್ಯವು ನಮ್ಮ ದೇಶದ ಅರ್ಧಭಾಗದಷ್ಟಾಗುವುದು. ಅಲ್ಲಿ ಒಬ್ಬೊಬ್ಬರು ನಿರ್ವಹಿಸುತ್ತಿರುವ ಕೆಲಸವನ್ನು ಇಲ್ಲಿ ಮೂವರು ನಾಲ್ವರು ನಿರ್ವಹಿಸುತ್ತಿರುವರು. ಹೀಗಿರುವುದರಿಂದ ನಮ್ಮ ದೇಶದಲ್ಲಿ ಸಂಬಳಗಳನ್ನು ಇಳುಹಿಸುವುದಾದರೆ ೧೦೦ಕ್ಕೆ ಅರ್ಧದಷ್ಟನ್ನಾದರೂ ಕಡಮೆ ಹಾಕಬೇಕು. ಹೀಗೆ ಮಾಡಿದರೇನೆಯೇ ಈ ಏರ್ಪಾಟಿನಿಂದ ತಕ್ಕಷ್ಟು ಫಲವಾದೀತೇ ಹೊರತು ಇಲ್ಲದಿದ್ದರೆ ಬಯಶಾಸ್ತ್ರ ಮಾತ್ರವಾಗಿ ಫಲವು ಸಾಮಾನ್ಯವಾಗುವುದು.

ಈ ಸಂದರ್ಭದಲ್ಲಿ ಪ್ರಭುತ್ವದವರು ಮತ್ತೊಂದು ವಿಷಯವನ್ನು ಅವಶ್ಯವಾಗಿ ಪರ್ಯಾಲೋಚಿಸಬೇಕು. ಸಂಸ್ಥಾನಕ್ಕೆ ಮಿತಿಮೀರಿದ ವೆಚ್ಚವು ಅಲೋಯನ್ಸುಗಳ ರೂಪವಾಗಿರುವುದು. ಅದನ್ನು ಮೊದಲು ಸಂಕೋಚಗೊಳಿಸಬೇಕು. ಅನೇಕೋದ್ಯೋಗಿಗಳಿಗೆ ಬತ್ಯವು ಸಂಬಳಕ್ಕಿಂತಲೂ ಹೆಚ್ಚಾಗಿಯೇ ಸಲ್ಲುತ್ತಿರುವುದು. ಸಂಚಾರಕಾಲದಲ್ಲಿ ''ಡಬ್ಬಲ್ ಫಸ್ಟ್ ಕ್ಲಾಸ್ ಟಿಕೆಟ್ ಛಾರ್ಜುಗಳು.'' ಕೊಡಲ್ಪಡುತ್ತಿರುವುದನ್ನು ತಪ್ಪಿಸಿ ಒಂದನ್ನೇ ಏರ್ಪಡಿಸಬೇಕು. ಮತ್ತು ಮೋಟಾರುಗಳು ಮೊದಲಾದ ವಾಹನಗಳ ಮೂಲಕ ಸಂಚರಿಸುವ ೨೫೦ ರೂ. ಗೆ ಮೇಲ್ಪಟ್ಟ ಸಂಬಳದ ಉದ್ಯೋಗಿಗಳಿಗೆಲ್ಲಾ ಆಹಾರಾರ್ಥವಾಗಿ ಬೇರೆ ಬತ್ಯವನ್ನು ಕೊಡದೆ ಪೆಟ್ರೋಲ್ ವೆಚ್ಚ ಮೊದಲಾದುವುಗಳಿಗೆ ತಕ್ಕಷ್ಟನ್ನು ಏರ್ಪಡಿಸಿ ಈಗಣ ದುಂದುವೆಚ್ಚವನ್ನೆಲ್ಲಾ ತಪ್ಪಿಸಿಬಿಡಬೇಕು. ಅವರವರಿಗೆ ಸಲ್ಲುವ ಸಂಬಳದಿಂದಲೇ ಅವರು ಸ್ಥಲದಲ್ಲಿದ್ದರೂ ಪರಸ್ಥಲದಲ್ಲಿದ್ದರೂ ಆಹಾರಾದಿಗಳ ವೆಚ್ಚಕ್ಕೆ ಉಪಯೋಗಿಸಲೇಬಹುದಷ್ಟೆ.

ಇದಲ್ಲದೆ ಇನ್ನೊಂದು ಯೋಚನೆಯು ಪ್ರಕೃತ ಸಂದರ್ಭದಲ್ಲಿ ತೋರುವುದು. ಉಚಿತವಾಗಿ ಕಂಡರೆ ಸಂಸ್ಥಾನದ ವಿಶೇಷಾಭಿಮಾನಿಗಳಾದ ನಮ್ಮ ದಿವಾನರು ಅದನ್ನು ಬಳಕೆಗೆ ತರಬೇಕೆಂದುಸೂಚಿಸುವೆವು. ಏನೆಂದರೆ-ನಮ್ಮ ಸಂಸ್ಥಾನದ ಉದ್ಯೋಗಿಗಳಲ್ಲಿ ಎಲ್ಲೋ ಕೆಲವರಹೊರತು ಉಳಿದವರೆಲ್ಲಾ ಮೈಸೂರು ದೇಶೀಯರೇ ಆಗಿದ್ದಾರಷ್ಟೆ. ಇದುವರೆಗೂ ಅವರೆಲ್ಲರೂ ಸಮೃದ್ಧವಾಗಿ ಸಂಬಳಗಳನ್ನು ಪಡೆದುಕೊಂಡು ಪುಷ್ಟರಾಗುತ್ತಲೇ ಬಂದಿರುವರು. ತಮ್ಮನ್ನು ಪೋಷಿಸಿದ ಸರ್ಕಾರಕ್ಕೆ ಈಗ ಹಣದ ಮುಗ್ಗಟ್ಟು ಬಂದಿರುವುದರಿಂದ ತಾವು ಅದನ್ನು ಈಗ ಪರಿಪೋಷಿಸಬೇಕು. ಮೈಸೂರು ದೇಶವು ಮೈಸೂರಿಗೇ ಇರುವುದೆಂಬ ಸಿದ್ಧಾಂತದ ಮೂಲಕ ಪಡೆದ ಉಪಕಾರಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಸಕಾಲವಾಗಿರುವುದರಿಂದ ೫೦೦ ರೂ. ಗಳಿಗೆ ಮೇಲ್ಪಟ್ಟ ಸ್ವದೇಶೀಯೋದ್ಯೋಗಿಗಳಲ್ಲಿ ಕೆಲಕಾಲದ ಮಟ್ಟಿಗೆ (ಒಂದೆರಡುವರ್ಷ) ತಂತಮ್ಮ ಉದ್ಯೋಗಗಳನ್ನು ಗೌರವಾರ್ಥವಾಗಿ ಮಾಡಲು ಒಪ್ಪಿಗೆಯನ್ನು ಕೊಡುವುದಕ್ಕೆ ಸಿದ್ಧರಾಗಲಿ, ಯಾರಾರಲ್ಲಿ ಅಂಥ ನಿಜದೇಶಾಭಿಮಾನವಿರುವುದೆಂಬುದು ಗೊತ್ತಾಗಲಿ. ಆ ವಿಷಯಕ್ಕೆ ಪ್ರಭುತ್ವದವರು ಒಂದು ಪ್ರಕಟನವನ್ನು ಮಾಡಲಿ. ಇದು ಯಾರೂ ನಿರ್ಬಂಧಿಸಿ ಮಾಡತಕ್ಕ ಕೆಲಸವಲ್ಲ. ಸ್ವದೇಶಾಭಿಮಾನವನ್ನು ತೋರಿಸುವುದಕ್ಕಾಗಿ ಸ್ವಾರ್ಥತ್ಯಾಗಪೂರ್ವಕವಾಗಿ ಅವರವರೇ ನಡೆಯಿಸತಕ್ಕ ಕೆಲಸವಾಗಿರುತ್ತದೆ.

"IN BROAD DAY LIGHT."

The world's condition is undergoing a thorough revision and its history is being re-edited. The events are so fast moving that a thinking mind has not time to pause and consider as to what end those events are moving. The events of the whole world are an open book–thanks to the inventions of the Western Scientists and to the modern News Agencies–and it is impossible to remain unmoved and unaffected by the tremendous effects of these events. The modern education and the modern civilization are the two factors from which the modern alarming condition all over the world has resulted. The West and the East have come to meet and in the realization of the strong effects of that meeting lies the trouble of the situation. The two sides are antagonistic in their traditions and trainings, and the difficulty lies in the reconciliation of these two conditions. The danger lies in extremism and moderation has been unable to control either. This is what we see clearly before us; and in the consideration of this great problem of the day, empires, countries, nations, communities and individuals are concerned and we propose to deal only with the last two aspects of the problem, because one must begin from the beginning.

There is a class of persons who begin to think from the world's point of view and others from an individual point of view. No community or nation exists without individuals. Thus before one says that he first considers that he is a fit member of the problems of the world, he must have proved fit as an individual and as a fit member of a community. By having begun from the wrong end, troubles have increased amongst us and that we see in the "Non-co-operation" agitation. Individuals, sects and communities which had not the preparation and fitness for it are drawn into it and there is the danger ahead of the country. The people suffer.

The history of India has on this account been a long and continuous tale of suffering as individuals and communities have been denied the necessary training. When events move at lightning speed, the whole framework of a nation breaks into atoms when its component parts are not all equally strong and well built. And this is what we see in the Broad Day Light of Today. The country has been at Peace under a Law which has settled down to perfect order and the great mass of people have come to love such a state of peace. This peaceful condition has been disturbed by a handful of powerful thinkers in whose imagination the world of India has come to an end. They have set in motion an agitation in which the people have come mixed up unconsciously and they (people) are the loose and weak components of the whole. The people get distroyed and the handful who set the agitation in motion also get perished. If ninety nine out of a hundred spokes in a wheel are loose and not properly set in the wheel and one is perfect in all respects and with two such wheels in a carriage and with powerful energy to draw it, and if this body whole is in rapid motion what will be the result? The ninety nine weak spokes are first broken and the hundreadth then goes to perish. This is today's Non-co-operation in India.

Elsewhere in the West the conditions are different. Every part is strong and when consalidation or centralization reaches its zinith and when disintergration or decentralization begins, the parts separate and begin to live independently. It is not so with us. It has unfortunately been otherwise. The people are ignorant and a handful are all-in-all. The latter create trouble and in the danger ensuing, the former first perish and the latter in the end, if in the meantime their manœuvres for selfish ends do not change. This is Non-co-operation.

Coming nearer at home, we should like to point out that here in Mysore we are the most contented and happily ruled people. But we see in the Broad Day Light of events all over the world the weak parts suffer because the strong parts are few. The spirit of agitation overtakes the few and in the motion which they start, the people at large suffer. They are left ignorant and follow blindly any lead. No knowledge of education, society, politics, agriculture, trade, banking is in their strength. This is the miserable state in this Broad Day Light of Today. We speak from the longest corner of our country and it is our fear that few hear what we say. The danger is ahead of us. The larger mass of the people should as a matter of course get entangled in the world's motion and it is our duty to get strong either to resist and repel the agitation or to get into motin along with the handful and save ourselves and save them from destruction.

Have the people opened their eyes and seen who are getting more and more dangerously powerful? Education, industry, commerce and banking are becoming monopoly of one class of people. Because the people have stubbornly closed their eyes against the Broad Day Light of events before us and what is the result? We are shaken. Just an awakening is in the horizon. Let us approach the Light and the Knowledge. We must for that end in view combine amongst ourselves and that is beginning from the beginning. What is the use of our calling All India men before we do not know where we are born and who our parents are? Get strong first and then join the larger body. The interests at home must first be safe-guarded. And these interests are with us if we are combined. With each community becoming strong by itself, the country gets strong and this we are able to see in the events of the Day. Get strong in business, get strong in the management of self-Government affairs, get strong in the bodies of which you become a member by election. Be strong in the Municipalities, in the Taluk and District Boards, in the Trade Unions, in Banking concerns and lastly and most certainly in the Representative Assembly. In this last body of persons, we will be able to serve the interests of our country more loyally than in any others. It must be the ambition of the larger communities in the country to capture as many seats in this Assembly as the importance of their members deserves to possess. The Vakkaliga, the Panchama, the Mussalman and the Lingayet communities occupy the highest places and they will be failing in their duty to their country and in their loyalty to our Beloved Maharajah by not aspiring to obtain these posts of duty. In the Broad Day Light of To-day we see the posts of responsibility and duty before us and if we leave them to those who have no right to be there, there is danger for us who have forsaken those posts and left them to those who will set the destructive ball in motion. Decentralization and division of responsibilities are the safety-valves. Equalization of power and minimization of evil-bearing destructive agencies are occupying the attention of the greatest powers and why should we not in our little home strive to do the same and that we do by disarming that body of persons of that power which they have used for their own aggrandizement and are drawing us to the whirlpool of destruction which is Non-co-operation with a power which has brought Order and Peace to India.

೩೬ನೆ ರಾಷ್ಟ್ರೀಯ ಮಹಾಸಭೆ.

ಗುಜರಾತಿನ ಮುಖ್ಯಪಟ್ಟಣವಾಗಿರುವ ಅಹಮ್ಮದಾಬಾದು ನಗರದಲ್ಲಿ ಈ ಸಭೆಯು ಕಳೆದವಾರ ನೆರೆದಿದ್ದಿತು. ಹಿಂದಣ ಸಭೆಗಳೆಲ್ಲಕ್ಕಿಂತಲೂ ಈ ಸಭೆಯ ರಚನೆಯು ಅತ್ಯಂತ ವಿಲಕ್ಷಣವಾಗಿದ್ದಿತು. ಆ ಪಟ್ಟಣದ ಬಲಭಾಗದಲ್ಲಿ ಸಬರ್ಮತಿ ಎಂಬ ನದಿಯು ಹರಿಯುತ್ತಿರುವುದು. ಅದರ ದಡದ ಮೇಲೆ ಸಭಾಮಂಟಪವನ್ನು ರಚಿಸಿದ್ದರು. ಹೊರಗಣಿಂದ ಬಂದ ಸಭಿಕರ ವಾಸಕ್ಕಾಗಿ ಮುಸ್ಲಿಂನಗರ ಖಾದೀನಗರವೆಂಬಿವುಗಳನ್ನು ಹೊಸದಾಗಿ ಕಟ್ಟಿದ್ದರು. ಮೊದಲನೆಯದೆಲ್ಲಾ ಮಹಮ್ಮದೀಯರಿಗೋಸ್ಕರ ಎಲ್ಲವೂ ಗೋಣಿಯ ತಾಟುಗಳಿಂದಲೇ ರಚಿಸಲ್ಪಟ್ಟಿದ್ದುವು. ೨ನೆ ಖಾದೀನಗರವು ಹಿಂದೂಗಳಿಗೋಸ್ಕರ ಬರಿಯ ಖಾದಿಬಟ್ಟೆಯಿಂದಲೇ ಕಟ್ಟಲ್ಪಟ್ಟಿದ್ದಿತು. ಗೋಡೆ ಮೇಲಣ ಹೊದಿಕೆ ಮೊದಲಾದುವುಗಳೆಲ್ಲಾ ಬಟ್ಟೆಗಳಿಂದಲೇ ಮಾಡಲ್ಪಟ್ಟಿದ್ದುದರಿಂದ ಇದಕ್ಕೆ ಖಾದೀನಗರವೆಂದು ಇಟ್ಟಿದ್ದ ಹೆಸರು ಅನ್ವರ್ಥವಾಗಿದ್ದಿತು. ಒಂದೊಂದು ಮನೆಗೂ ೫೦೦ ಗಜ ಖಾದಿಬಟ್ಟೆಗಳಂತೆ ಹಿಡಿದಿರುವುದೆಂದು ಲೆಕ್ಕಹಾಕಿದರೂ ೧೦ ಸಾವಿರ ಮನೆಗಳಿಗೂ ೫೦ ಲಕ್ಷ ಗಜ ಬಟ್ಟೆಯು ಒದಗಿಸಲ್ಪಟ್ಟಿರಬೇಕೆಂದು ಸಿದ್ಧವಾಗುತ್ತದೆ. ನೋಡುವುದಕ್ಕೆ ಈ ನೂತನ ನಗರವು ರಮ್ಯವಾಗಿದ್ದರೂ ಚಳಿಗೂ ಬಿಸಿಲಿಗೂ ತಡೆಯದೆ ಇದ್ದ ಕಾರಣ ಅಲ್ಲಿ ವಾಸಿಸುವವರಿಗೆ ಅಷ್ಟೇನೂ ಹಿತಕರವಾಗಿರಲಿಲ್ಲ. ಮಹಾಸಭಾಮಂಟಪವೂ ಕೂಡ ಖಾದಿಯಮಯವೇ. ಅಲ್ಲಿ ಹಾಸಿದ್ದುದೂ ಮೇಲೆ ಹೊದ್ದಿಸಿದ್ದುದೂ ಖಾದಿಬಟ್ಟೆಯೇ. ಸಭಿಕರೂ ಸಭಾಧ್ಯಕ್ಷರೂ ಸಹ ಪದ್ಮಾಸನಗಳಿಂದ ಖಾದಿ ಬಟ್ಟೆಯ ಮೇಲೆಯೇ ಕುಳಿತುಕೊಳ್ಳುವ ಏರ್ಪಾಟಾಗಿದ್ದಿತು. ಸಭೆಗೆ ಹೋಗಿದ್ದವರಲ್ಲಿ ಮುಕ್ಕಾಲುಮೂರುವೀಸ ಪಾಲು ಜನರೆಲ್ಲರೂ ಖಾದಿಬಟ್ಟೆಯ ಕುಬಸ ಟೊಪ್ಪಿಗೆಗಳನ್ನು ಧರಿಸಿದವರೇ ಆಗಿದ್ದರು. ಮಹಾಸಭಾಮಂಟಪದ ಮಹಾದ್ವಾರದ ಮೇಲೆ ದೊಡ್ಡದೊಂದು ರಾಟಿಯು ಇಡಲ್ಪಟ್ಟಿದ್ದಿತು.

ತಾ|| ೨೩ ರಿಂದಲೂ ಮಹಾಸಭಾಸ್ಥಾಯಿಸಂಘದವರು ಸಭೆಯಲ್ಲಿ ಮಾಡಬೇಕಾದ ನಿರ್ಧಾರಗಳನ್ನು ಕುರಿತು ವಿಶೇಷವಾಗಿ ಚರ್ಚಿಸಿ ಸಿದ್ಧಮಾಡಿಕೊಂಡರು. ತಾ|| ೨೭ನೆ ಮಧ್ಯಾಹ್ನದಿಂದ ಮಹಾಸಭೆಗೆ ಆರಂಭವಾಯಿತು. ಸಭಾಧ್ಯಕ್ಷತೆಗೆ ಆರಿಸಲ್ಪಟ್ಟಿದ್ದ ಚಿತ್ತರಂಜನದಾಸ್‌ರವರು ಕಾರಾಗೃಹದಲ್ಲಿಡಲ್ಪಟ್ಟಿರುವುದರಿಂದ ಖಿಲಾಫತ್ ಸಭಾಧ್ಯಕ್ಷರಾಗಿದ್ದ ಹಕೀಂಅಜ್ಮಲ್‌ಖಾನರೇ ಈ ಮಹಾಸಭೆಗೂ ಆಕ್ಟಿಂಗ್ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಸಭೆಯಲ್ಲಿ ೪೦೦೦ ಮಂದಿ ಪ್ರತಿನಿಧಿಗಳೂ ೩೦೦೦ ಮಂದಿ ಸನ್ಮಾನಸಂಘ ಸಭಿಕರೂ ೫೦೦೦ ಮಂದಿ ಪ್ರೇಕ್ಷಕರೂ ನೆರೆದಿದ್ದರು. ಬಹುಮಂದಿ ಕಾಂಗ್ರೆಸ್ ನಾಯಕರು ಸ್ವರಾಜ್ಯಾಶ್ರಮ (ಕಾರಾಗೃಹ) ದಲ್ಲಿರುವುದರಿಂದ ಮ|| ಗಳಾದ ಗಾಂಧಿ, ಪಂಡಿತಮದನಮೋಹನಮಾಳವ್ಯ, ವಿ. ಜೆ. ಪಟೇಲ್, ಸಿ. ವಿಜಯರಾಘವಾಚಾರಿ, ಎಸ್. ಶ್ರೀನಿವಾಸಯ್ಯಂಗಾರ್, ಡಾ|| ಅನ್ಸಾರಿ, ಪಂಡಿತ ರಾಮಭುಜದತ್ತಚೌಧುರಿ, ಎಸ್. ಕಸ್ತೂರಿರಂಗಯ್ಯಂಗಾರ್, ಸತ್ಯಮೂರ್ತಿ ಮೊದಲಾದ ಕೆಲವರು ಮಾತ್ರ ಪ್ರಮುಖರಾಗಿ ಕಾಣುತ್ತಿದ್ದರು. ಆಲಿಸೋದರರ ತಾಯಿ, ಮಹಮ್ಮದಾಲಿಯವರ ಪತ್ನಿ, ನೆಹ್ರೂಪತ್ನಿ, ಗಾಂಧಿಪತ್ನಿ, ಸರಳಾದೇವಿಚೌಧುರಾಣಿ, ಸರೋಜಿನೀದೇವಿ ಮೊದಲಾದ ಕೆಲವು ನಾರೀಮಣಿಯರೂ ಬಂದಿದ್ದರು. ಜಾತೀಯ ಗೀತಾಲಾಪನೆಯೊಡನೆ ಸಭಾಕಾರ್ಯವು ಆರಂಭಿಸಲ್ಪಟ್ಟಿತು. ಸನ್ಮಾನಸಂಘಾಧ್ಯಕ್ಷರಾದ ವಿ. ಜೆ. ಪಟೇಲ್‌ರವರು ತಮ್ಮ ಭಾಷಣವನ್ನು ಮಾಡಿದರು. ಅದರ ಮುಖ್ಯಾಶಯವು ಹೀಗಿದ್ದಿತು—ನಾವೆಲ್ಲರೂ ಅತ್ಯಂತವಾಗಿ ಆದರಿಸುತ್ತಿದ್ದ ದೇಶಭಕ್ತರನೇಕರು ನಮ್ಮನ್ನಗಲಿ ಕೃಷ್ಣಜನ್ಮಸ್ಥಾನಕ್ಕೆ ಸೇರಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವುದಕ್ಕಾಗಿ ನಮಗೆ ದುಃಖವೇನೂ ಇಲ್ಲದೆ ಸಂತೋಷದಿಂದ ಉಬ್ಬಿರುತ್ತೇವೆ. ಏಕೆಂದರೆ ಸ್ವರಾಜ್ಯಸ್ಥಾಪನಾರ್ಹತೆಯು ನಮಗಿದೆಯೇ ಇಲ್ಲವೆ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಭಗವಂತನೇ ಈ ಪರೀಕ್ಷೆಗಳನ್ನೇರ್ಪಡಿಸಿದ್ದಾನೆ.

ಬಿರುದುಗಳನ್ನು ತ್ಯಜಿಸುವುದು, ವಕೀಲರು ಕೋರ್ಟುಗಳನ್ನು ಬಿಡುವುದು, ಈ ಕಾರ್ಯಗಳು ಅಷ್ಟೇನೂ ಜಯಶೀಲವಾಗಿ ನಡೆಯದಿದ್ದುದು ಸಂತಾಪಕರವು. ಆದರೆ ಶಾಸನಸಭಾಬಹಿಷ್ಕಾರವು ಮಾತ್ರ ಜಯಪ್ರದವಾಗಿ ನೆರವೇರಿತು. ಜಾತೀಯ ಪಾಠಶಾಲೆಗಳು ಅಭಿವೃದ್ಧಿಗೊಳ್ಳುತ್ತಿವೆ. ಈ ಶಾಲೆಗಳಲ್ಲಿ ಒಟ್ಟು ೩೧೦೦೦ ಮಂದಿಗಳು ಅಭ್ಯಾಸ ಮಾಡುತ್ತಿದ್ದಾರೆ. ಈ ಪಾಠಶಾಲೆಗಳಲ್ಲಿ ಅನೇಕವು ಪ್ರಭುತ್ವಸಂಬಂಧವನ್ನು ಕಳೆದುಕೊಂಡರೂ ನಾಶವಾಗದೆ ತಲೆಯೆತ್ತುತ್ತಿವೆ. ೨ ವರ್ಷಗಳಕೆಳಗೆ ನಮ್ಮ ದೇಶದಲ್ಲೆಲ್ಲಾ ಒಂದುರಾಟಿಯೂ ಇರಲಿಲ್ಲ. ಈಗ ನಮ್ಮ ರಾಷ್ಟ್ರದಲ್ಲಿ ೧೦,೦೦೦ ರಾಟೆಗಳು ಅಹರ್ನಿಶಿಯೂ ಕೆಲಸಮಾಡುತ್ತಿವೆ. ಈ ರಾಟೆಗಳು ತಿರುಗುವುದಕ್ಕೆ ಆರಂಭವಾದಾಗಣಿಂದ ೧ ಲಕ್ಷ ಪೌಂಡು ಖದ್ದರ್‌ಬಟ್ಟೆಯು ನೆಯ್ಯಲ್ಪಟ್ಟಿದೆ. ಸ್ವದೇಶೋದ್ಯಮಕ್ಕಾಗಿ ನಾವು ೫ ಲಕ್ಷ ರೂ. ಗಳನ್ನು ವ್ಯಯಮಾಡಿದ್ದೇವೆ. ಈ ನಮ್ಮ ಪ್ರಯತ್ನದ ಫಲವಾಗಿಯೇ ಖಾದಿನಗರವನ್ನೆಲ್ಲಾ ಆ ಬಟ್ಟೆಯಿಂದಲೇ ರಚಿಸಿದ್ದೇವೆ. ಮದ್ಯಪಾನನಿರೋಧಕ್ಕೂ, ಅಸ್ಪೃಶ್ಯತಾನಿವಾರಣೆಗೂ ನಾವು ಮಾಡಿದ ಪ್ರಯತ್ನಗಳು ಜಯಪ್ರದವಾಗಿ ಸಾಗುತ್ತಿವೆ. ಪತಿತರಾಗಿದ್ದ ಜನರು ಈಗ ಎಲ್ಲ ಸಭೆಗಳಿಗೂ ನಿರಾತಂಕವಾಗಿ ಬರುತ್ತಿದ್ದಾರೆ. ನಿಬಂಧನೆಯಪ್ರಕಾರ ಆ ನಿಮ್ನಜನರು ಜಾತೀಯಪಾಠಶಾಲೆಗಳಿಗೆ ಮುಂದೆ ಪ್ರವೇಶಗೊಳಿಸಲ್ಪಡುವರು. ನೀವು ನಮಗಿಂತ ಕನಿಷ್ಠರಲ್ಲ ನಮಗೆ ನೀವು ಸಮಾನರು ಎಂದು ಹೇಳಿ ಅವರುಗಳನ್ನು ಈ ಪಾಠಶಾಲೆಗಳಿಗೆ ಸೇರಿಸುವ ಪ್ರಯತ್ನವು ಇನ್ನೂ ಜರುಗಿಲ್ಲ. ಇವರಿಗಾಗಿಯೇ ಪ್ರತ್ಯೇಕ ಪಾಠಶಾಲೆಗಳನ್ನು ಕೆಲಕಾಲದವರೆಗೆ ಏರ್ಪಡಿಸಬೇಕೆಂಬುದು ನಮ್ಮ ಉದ್ದೇಶವಲ್ಲ.

ದೇಶಬಂಧುಚಿತ್ತರಂಜನದಾಸರ ದೇಹವು ನಮ್ಮ ಬಳಿಯಲ್ಲಿಲ್ಲದಿದ್ದರೂ ಅವರ ದೇಶಭಕ್ತಿ ಸ್ವಾರ್ಥತ್ಯಾಗಪೂರಿತವಾದ ಆತ್ಮವು ನಮ್ಮ ಬಳಿಯಲ್ಲೇ ಇರುವುದು. ಅವರು ಉತ್ತೇಜಕವಾದ ತಮ್ಮ ಭಾಷಣವನ್ನು ಇಲ್ಲಿಗೆ ಬರೆದು ಕಳುಹಿಸಿಕೊಟ್ಟಿದ್ದಾರೆ. ಸದ್ಯಃ ಈ ಸಭಾಕಾರ್ಯನಿರ್ವಾಹಕ್ಕಾಗಿ ದೇಶೀಯ ನಾಯಕರಲ್ಲಿ ಅಗ್ರಗಣ್ಯರೂ ಹಿಂದೂ ಮುಸಲ್ಮಾನರ ಸಂಪೂರ್ಣ ವಿಶ್ವಾಸಕ್ಕೆ ಪಾತ್ರರೂ ಆದ ಹಕೀಂ ಅಜ್ಮಲ್‌ಖಾನರನ್ನೇ ಇದರ ಅಧ್ಯಕ್ಷರನ್ನಾಗಿ ಅಂಗೀಕರಿಸಲಿಕ್ಕೆ ಕಾಂಗ್ರೆಸ್ ಸಂಘದವರು ಒಪ್ಪಿರುವುದರಿಂದ ಅವರನ್ನೇ ನಾವು ಅಧ್ಯಕ್ಷರನ್ನಾಗಿ ಅಂಗೀಕರಿಸಬೇಕಾಗಿದೆ ಎಂದು ಭಾಷಣಮಾಡಿದ ಬಳಿಕ ಹಕೀಂ ಅಜ್ಮಲ್‌ಖಾನರು ಸಭಿಕರ ಮಹಾಕರತಾಡನವಾಗುತ್ತಿರುವಾಗ ಅಧ್ಯಕ್ಷಸ್ಥಾನವನ್ನಲಂಕರಿಸಿ ತಮ್ಮ ಭಾಷಣವನ್ನು ಉರ್ದುಭಾಷೆಯಲ್ಲಿ ಮಾಡಿದರು. ಅದನ್ನು ಒಬ್ಬ ಯುವಕನು ಆಂಗ್ಲಭಾಷೆಯಲ್ಲಿ ಸಭಿಕರಿಗೆಲ್ಲಾ ಪರಿವರ್ತಿಸಿ ಹೇಳಿದನು. ಆ ಭಾಷಣದಲ್ಲಿ ಪ್ರಭುತ್ವದವರು ಈಗ ಅವಲಂಬಿಸಿರುವ ನಿರ್ಬಂಧವಿಧಾನವು ಪ್ರಜೆಗಳಲ್ಲಿ ಉತ್ಸಾಹವನ್ನು ದ್ವಿಗುಣಗೊಳಿಸಲು ಸಾಧಕವಾಗಿರುವುದರಿಂದ ಅದನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆಂತಲೂ, ಈಗ ಈಜಿಪ್ಟೂ ಕೂಡ ಸಹಾಯನಿರಾಕರಣವನ್ನವಲಂಬಿಸಿರುವುದು ಅದರ ಭವಿಷ್ಯದಭ್ಯುದಯಕ್ಕೆ ಶುಭಸೂಚನೆಯೆಂತಲೂ, ಭರತಖಂಡವು ಈಗ ಅಭೂತಪೂರ್ವವಾದ ಬಾಧೆಗಳನ್ನನುಭವಿಸುತ್ತಿರುವುದಾದರೂ ಅದರ ಫಲವಾಗಿ ನೂತನಭಾರತವು ಉದ್ಭವಿಸುವುದೆಂತಲೂ, ಅಂಥ ನೂತನ ಭರತಖಂಡವು ಪ್ರಪಂಚದಲ್ಲೆಲ್ಲಾ ತನಗೆ ಉಚಿತವಾದ ಸ್ಥಾನವನ್ನು ಆಕ್ರಮಿಸಿ ತನ್ನ ಪ್ರಾಚೀನೌನ್ನತ್ಯವನ್ನು ಪಡೆದುಕೊಳ್ಳುವುದೆಂತಲೂ ಅಭಿಪ್ರಾಯವಿದ್ದಿತು.

ಬಳಿಕ ಸರೋಜಿನೀ ದೇವಿಯವರು ಚಿತ್ತರಂಜನದಾಸರೂ ಅವರ ಪತ್ನಿಯೂ ಬರೆದುಕಳುಹಿಸಿಕೊಟ್ಟಿದ್ದ ಪತ್ರಿಕೆಗಳನ್ನೋದಿದರು. ಅಲ್ಲಿಗೆ ಮೊದಲದಿನದ ಸಭಾಕಾರ್ಯಗಳು ಮುಗಿದು, ಮರುದಿನ ಮಧ್ಯಾಹ್ನ ೧|| ಗಂಟೆಗೆ ಮತ್ತೆ ಸಭಾಕಾರ್ಯಗಳು ಆರಂಭಿಸಲ್ಪಟ್ಟು ಸಾಯಂಕಾಲಕ್ಕೆ ಸಭೆಯು ಪರಿಸಮಾಪ್ತವಾಯಿತು.

ಸ್ಥಾಯಿ ಸಂಘದವರೂ ವಿಷಯನಿರ್ಧಾರಕ ಸಭೆಯವರೂ ವಿಪುಲವಾಗಿ ಚರ್ಚಿಸಿ ನಿರ್ಧರಿಸಿದ ತೀರ್ಮಾನಗಳನ್ನು ಕುರಿತು ಸಭೆಯಲ್ಲಿ ಗಾಂಧಿಯವರೇ ಮೊದಲಾದನೇಕರು ಸೂಚನೆಗಳನ್ನೂ ಪರಿಪುಷ್ಟಿಯನ್ನೂ ಅನುಮೋದನೆಯನ್ನೂ ಮಾಡಿ ಭಾಷಿಸಿದರು. ಆ ತೀರ್ಮಾನಗಳೊಳಗೆಲ್ಲಾ ಸ್ವರಾಜ್ಯಪ್ರಕಟನೆಯ ಮಾತೇನೂ ಕಾಣಲಿಲ್ಲ. ಡಿಸಂಬರ್ ೩೧ ರೊಳಗಾಗಿ ಸ್ವರಾಜ್ಯಪ್ರಾಪ್ತಿಯಾಗುವುದೆಂದು ಇದುವರೆಗೂ ಅಸಹಾಯವಾದಿಗಳು ಉದ್ಘೋಷಿಸುತ್ತ ಬಂದಿದ್ದ ಆಡಂಬರವನ್ನು ಇನ್ನು ಮುಂದೆ ಯಾವ ರೂಪಕ್ಕೆ ತಿರುಗಿಸಿ ಸಮಾಧಾನ ಹೇಳುವರೋ ಕಾಣಲಿಲ್ಲ. ಆದರೆ ದೌರ್ಜನ್ಯವಿರಹಿತ ಸಹಾಯನಿರಾಕರಣವನ್ನೇ ಇನ್ನೂ ಗಾಢತರವಾಗಿ ದೇಶೀಯರೆಲ್ಲರೂ ಆಚರಿಸಿ ಸ್ವರಾಜ್ಯವನ್ನು ಪಡೆದುಕೊಳ್ಳಬೇಕೆಂಬುದೇ ಗಾಂಧಿಯವರು ಉಪಪಾದಿಸಿದ ತೀರ್ಮಾನದ ಮುಖ್ಯಾಭಿಪ್ರಾಯವಾಗಿದ್ದಿತು. ಆ ಸ್ವರಾಜ್ಯಪ್ರಾಪ್ತಿಯ ಅವಧಿಯು ಕೂಡ ಅದರಲ್ಲೇನೂ ತಿಳಿಯಿಸಲ್ಪಟ್ಟಿಲ್ಲ. ಸ್ವರಾಜ್ಯಪ್ರಾಪ್ತಿಗೆ ದೌರ್ಜನ್ಯರಾಹಿತ್ಯಮೂಲಕವಾದ ಉಪಾಯಗಳು ಸಾಧಕವಾಗದೆ ಹೋದರೆ ದೌರ್ಜನ್ಯವನ್ನವಲಂಬಿಸುವುದಕ್ಕೂ ಅವಕಾಶವಿರಬೇಕೆಂದೂ, ತೀರ್ಮಾನದಲ್ಲಿ ''ದೌರ್ಜನ್ಯರಹಿತವಾದ ಸಹಾಯನಿರಾಕರಣವನ್ನವಲಂಬಿಸಿ'' ಎಂದು ಕಾಣಿಸಿರುವ ಮಾತುಗಳನ್ನು ತೆಗೆದುಬಿಡಬೇಕೆಂದೂ, ಮಹಮ್ಮದೀಯ ಸಭಾಧ್ಯಕ್ಷರಾದ ಮೋಹನಿಯವರು ಬಹಳ ಪಟ್ಟುಹಿಡಿದು ಸ್ವಾಮಿಸಂಘಸಭೆಯಲ್ಲಿ ವಾದಿಸಿದ್ದರು. ಮಹಾಸಭೆಯಲ್ಲಿಯೂ ಇದರಪ್ರಸ್ತಾಪವು ಬಂದಿತು. ಆದರ ಸಂಬಂಧವಾಗಿ ಮಹಮ್ಮದೀಯರಲ್ಲೇ ಭಿನ್ನಾಭಿಪ್ರಾಯವು ವ್ಯಕ್ತವಾಯಿತು. ಕಡೆಗೆ ಸಭಿಕರ ಓಟುಗಳನ್ನು ತೆಗೆದುಕೊಳ್ಳಬೇಕಾಯಿತು. ಪ್ರೇಕ್ಷಕರನ್ನೆಲ್ಲಾ ಹೊರಕ್ಕೆ ಕಳುಹಿಸಿ ಪ್ರತಿನಿಧಿಗಳ ಓಟುಗಳನ್ನು ತೆಗೆದುಕೊಳ್ಳಲಾಗಿ, ಮೋಹನಿಯವರ ಮಾತಿಗೆ ೫೨ ಮಂದಿಗಳು ಮಾತ್ರ ಒಪ್ಪಿದರು. ಆದರಿಂದ ಅವರ ಸವರಣೆಯು ಬಿದ್ದುಹೋಯಿತು. ದೌರ್ಜನ್ಯರಹಿತ ಸಹಾಯನಿರಾಕರಣೆಯನ್ನೇ ಅವಲಂಬಿಸಬೇಕೆಂದು ತೀರ್ಮಾನವಾಯಿತು. ಮತ್ತು ಮೋಹನಿಯವರು ಆಂಗ್ಲಸಾಮ್ರಾಜ್ಯ ಸಂಬಂಧವಿಲ್ಲದ ಸ್ವರಾಜ್ಯಪ್ರಾಪ್ತಿಯಾಗಬೇಕೆಂದು ಮತ್ತೊಂದುಸವರಣೆಯನ್ನು ಸೂಚಿಸಿದ್ದರು. ಅದನ್ನು ಪೋಷಿಸಿ ಇನ್ನೂ ೧೦-೧೨ ಮಂದಿಗಳು ಮಹಾಸಭೆಯಲ್ಲಿ ಉಪನ್ಯಾಸಮಾಡಿದರು. ಬಳಿಕ ಅದನ್ನು ಖಂಡಿಸಿ ಆಂಗ್ಲ ಸಾಮ್ರಾಜ್ಯಾಧೀನವಾದ ಸ್ವರಾಜ್ಯವೇ ನಮಗೆ ಪ್ರಾಪ್ಯವೆಂಬ ವಿಷಯಕ್ಕೆ ಅನೇಕರು ಉಪನ್ಯಾಸಮಾಡಿದರು. ಮತ್ತು ಭರತಖಂಡಕ್ಕೆ ಸ್ವರಾಜ್ಯವು ಲಭಿಸಲಿ ಆದಾದಬಳಿಕ ಮುಂದಣ ಸ್ವರೂಪವನ್ನು ನಿಶ್ಚಯಿಸಿಕೊಳ್ಳಬಹುದೆಂದು ಇನ್ನು ಕೆಲರು ಉಪನ್ಯಾಸಮಾಡಿದರು. ಆ ಸಮಯದಲ್ಲಿ ಮ|| ಗಾಂಧಿಯವರು ಹೀಗೆ ಉಪನ್ಯಾಸಮಾಡಿದರು—''ಆಂಗ್ಲ ಪ್ರಭುತ್ವದವರು ಪಂಜಾಬಿನ ಮತ್ತು ಖಿಲಾಪತ್ತಿನ ಅಕ್ರಮಗಳನ್ನು ಸರಿಪಡಿಸುವರೆಂಬ ಆಸೆಯು ೧೫ ತಿಂಗಳುಗಳ ಕೆಳಗೆ ನನಗೆ ಇದ್ದುದಕ್ಕಿಂತಲೂ ಈಗ ಅಧಿಕವಾಗಿದೆ. ನಮ್ಮ ಸ್ವರಾಜ್ಯವು ಆಂಗ್ಲಸಾಮ್ರಾಜ್ಯಾಧೀನವಾಗಿರಬೇಕೆಂದು ಕೋರುವವರಿಗೂ ಹಾಗಿರಕೂಡದೆಂದು ಕೋರುವವರಿಗೂ ಕೂಡ ರಾಷ್ಟ್ರೀಯ ಮಹಾಸಭೆಯಲ್ಲಿ ಅವಕಾಶವಿರುವುದು. ಆದರೆ ಆ ಸ್ವರಾಜ್ಯಪ್ರಾಪ್ತಿಗೆ ದೌರ್ಜನ್ಯವು ಸಾಧನವಾಗಿರಬೇಕೆಂದು ವಾದಿಸುವ

ವರಿಗೆ ಮಾತ್ರ ಸುತರಾಂ ಅವಕಾಶವಿಲ್ಲ. ಏಕೆಂದರೆ—ಯಾರೊಬ್ಬರು ಕಾಂಗ್ರೆಸ್ಸಿಗೆ ಸೇರಿದರೂ ಕೂಡಲೇ ದೌರ್ಜನ್ಯರಾಹಿತ್ಯವನ್ನು ಕುರಿತು ಮುಂದಾಗಿ ಪ್ರಮಾಣಮಾಡಬೇಕಾದುದು ಮುಖ್ಯ ವಿಧಿಯಾಗಿದೆ. ಭರತಖಂಡಕ್ಕೆ ಸ್ವರಾಜ್ಯಪ್ರಾಪ್ತಿಯಾದರೆ ಆಂಗ್ಲಸಾಮ್ರಾಜ್ಯವು ವಿಚ್ಛಿನ್ನವಾಗುವುದು. ಆಗ ಇದರ ಸ್ವಾತಂತ್ರ್ಯ ಸ್ವರೂಪವು ನಿರ್ಧಾರಿತವಾಗುವುದು. ಈಗ ಮಿತವಾದಿಗಳೇ ಮೊದಲಾದವರು ನಮ್ಮ ಮೇಲೆ ಸಾನುಭೂತಿಯನ್ನು ತೋರಿಸುತ್ತಿದ್ದಾರೆ. ಹೀಗಿರುವಲ್ಲಿ ಅವರ ಸಾನುಭೂತಿಗೆ ಸ್ವಲ್ಪವೂ ಅವಕಾಶಕೊಡದಂತೆ ಮಾಡುವ ನೂತನ ಸಾಧನವನ್ನವಲಂಬಿಸುವುದಕ್ಕೆ ತೊಡಗಿ ಅವರ ಮೈತ್ರಿಯನ್ನು ನೀವುಗಳು ಕಳೆದುಕೊಳ್ಳಬೇಡಿರಿ ಎಂದು ಹೇಳಿ ಮೋಹನೀಯವರ ಸವರಣೆಯ ದೋಷಗಳನ್ನು ಎತ್ತಿ ತೋರಿಸಿದರು.

ಮತ್ತು ಸಭೆಯಲ್ಲಿ ನಡೆದ ಉಳಿದ ತೀರ್ಮಾನಗಳಲ್ಲಿ ಮುಖ್ಯವಾದುವುಗಳಾವುವೆಂದರೆ—ಸ್ವಚ್ಛಂದಸೇವಕ ಸಂಘಗಳನ್ನು ನಿರ್ಮೂಲಪಡಿಸಿದರೆ ನಮ್ಮ ಚಳವಳಿಯ ಬಲವು ಮುರಿದುಹೋಗುವುದೆಂದು ಪ್ರಭುತ್ವದವರು ಯೋಚಿಸಿ ಅವುಗಳನ್ನೆಲ್ಲಾ ಶಾಸನವಿರುದ್ಧಗಳೆಂದು ಪ್ರಕಟಿಸಿರುವುದಲ್ಲದೆ, ನಮ್ಮ ಸಭೆಗಳನ್ನು ಪ್ರತಿಬಂಧಿಸುತ್ತಿರುವುದರಿಂದ, ದೇಶೀಯರೆಲ್ಲರೂ ಬೊಂಬಾಯಿ ಸಭೆಯಲ್ಲಿ ವರ್ಕಿಂಗ್‌ಕಮಿಟಿಯವರು ನಿರ್ಧಾರಮಾಡಿರುವಂತೆ ಸ್ವಚ್ಛಂದಸೇವಕರ ಸಂಘಗಳನ್ನು ಎಲ್ಲೆಲ್ಲೂ ಸ್ಥಾಪಿಸಿ ೧೮ ವಯಸ್ಸಿಗೆ ಮೇಲ್ಪಟ್ಟವರೆಲ್ಲರೂ ಅವುಗಳ ಸಭಿಕರಾಗಿ ಸೇರಬೇಕು. ಆಡಂಬರವಿಲ್ಲದೆ ಕೆಲಸಮಾಡುತ್ತ ಸರ್ಕಾರದವರು ಹಿಡಿದರೂ ಕಾರಾಗೃಹಕ್ಕೆ ಹೋಗುವುದಕ್ಕೂ ಪ್ರಾಣವನ್ನಾದರೂ ಕೊಡುವುದಕ್ಕೂ ಸಿದ್ಧರಾಗಬೇಕು. ಕೆಲಕಾಲದ ಮಟ್ಟಿಗಾದರೂ ಶಾಲಾವಿದ್ಯಾರ್ಥಿಗಳೂ ಉಪಾಧ್ಯಾಯರೂ ಸಹ ತಮ್ಮ ಕೆಲಸವನ್ನು ಬಿಟ್ಟು ಈ ಸಂಘಗಳಿಗೆ ಸೇರಿ ಕೆಲಸಮಾಡಬೇಕು. ಬಹಿರಂಗಸಭೆಗಳನ್ನು ಕೂಡಿಸಲಾಗದೆಂದು ಸರ್ಕಾರದವರು ನಿರೋಧಿಸಿದರೂ ಯಾವುದಾದರೂ ಮನೆಗಳಲ್ಲಿ ಸಭೆಗೂಡಿಸಿ, ಟಿಕೇಟುಗಳನ್ನಿಟ್ಟು, ಅವುಗಳನ್ನು ಪಡೆದವರನ್ನೇ ಒಳಕ್ಕೆ ಬಿಡುವಂತೆ ಮಾಡಿಕೊಂಡು ಆ ಸಭೆಯಲ್ಲಿ ನಡೆಯಿಸುವ ಉಪನ್ಯಾಸಗಳನ್ನು ಬರೆದುತಂದು ಓದಬೇಕು, ದೌರ್ಜನ್ಯವನ್ನೂ ಆಗ್ರಹವನ್ನೂ ಪ್ರಜೆಗಳಲ್ಲಿ ಹುರಿದುಂಬಿಸುವಂಥ ಮಾತುಗಳನ್ನು ಎಲ್ಲೂ ಆಡಕೂಡದು ಎಂದೂ ಮತ್ತೊಂದು ತೀರ್ಮಾನವನ್ನು ಮಾಡಿರುವರು.

ದೇಶೀಯರ ಪೌರುಷವನ್ನು ಧ್ವಂಸಗೊಳಿಸುವುದಕ್ಕಾಗಿ ಪ್ರಭುತ್ವದವರು ನಿರಾತಂಕವಾಗಿ ಅಧಿಕಾರಪ್ರಯೋಗಮಾಡುತ್ತಿರುವುದಕ್ಕೆ ತಡೆಗಟ್ಟುವುದರಲ್ಲಿ ಇತರ ಸಾಧನಗಳೆಲ್ಲಾ ವ್ಯರ್ಥವಾದ ಸಂದರ್ಭದಲ್ಲಿ ಕೈಯಲ್ಲಿ ಕತ್ತಿಹಿಡಿದು ವಿಪ್ಲವವನ್ನು ಮಾಡುವುದಕ್ಕೆ ಪ್ರತಿಯಾಗಿ, ನಾಗರಿಕತೆಯುಳ್ಳ ಪ್ರಜೆಗಳೇ ಆಗಲಿ ಸಂಘಗಳೇ ಆಗಲಿ ಆಜ್ಞೋಲ್ಲಂಘನೆಯನ್ನು ಮಾಡುವುದೇ ಉತ್ತಮಮಾರ್ಗವೆಂಬುದು ಸಭೆಯ ಅಭಿಪ್ರಾಯವಾಗಿರುತ್ತದೆ. ಆದರೆ ಶಾಂತಿಯುಕ್ತವಾಗಿರುವ ಈಗಣ ಪ್ರಯತ್ನದಲ್ಲಿ ನಂಬುಗೆಯುಳ್ಳವರೆಲ್ಲರೂ ಈಗಣ ನಿರಂಕುಶ ಪ್ರಭುತ್ವವನ್ನು ತೊಲಗಿಸುವುದಕ್ಕಾಗಿ ಯಾವದ್ಭಾರತ ಕಾಂಗ್ರೆಸ್ ಸ್ಥಾಯಿಸಂಘದವರು ಕಳೆದ ತಿಂಗಳಲ್ಲಿ ತೀರ್ಮಾನಿಸಿರುವ ಪ್ರಕಾರ ಪ್ರಜೆಗಳೆಲ್ಲರೂ ದೌರ್ಜನ್ಯರಾಹಿತ್ಯ ರಹಸ್ಯ ಸಿದ್ಧಾಂತವನ್ನು ಚೆನ್ನಾಗಿ ಗ್ರಹಿಸಿದಬಳಿಕವೇ ದೇಶದ ಎಲ್ಲ ಕಡೆಯಲ್ಲೂ ಶಾಸನೋಲ್ಲಂಘನೆಯನ್ನು ಮಾಡಬಹುದೆಂಬುದು ಮತ್ತೊಂದು ತೀರ್ಮಾನವಾಗಿರುತ್ತದೆ. ಇದರಿಂದ ಶಾಸನೋಲ್ಲಂಘನೆ ಮಾಡುವುದಕ್ಕೂ, ಸರ್ಕಾರದ ಅಪ್ಪಣೆಗಳಿಗೆ ವಿರುದ್ಧವಾಗಿ ಸ್ವಚ್ಛಂದಸೇವಕ ಸಂಘಗಳನ್ನು ಬಲಪಡಿಸಲಿಕ್ಕೂ ಕಾಂಗ್ರೆಸ್ಸಿನವರು ಬದ್ಧದೀಕ್ಷೆಯನ್ನು ವ್ಯಕ್ತಪಡಿಸಿದಂತಾಯಿತು. ಅತ್ತ ಪ್ರಭುತ್ವದವರಾದರೂ ಅಧಿಕಾರಬಲದಿಂದಲೇ ವಿಜೃಂಭಣವನ್ನು ಅಣಗಿಸುವುದಕ್ಕೆ ಮತ್ತಷ್ಟು ಅಧಿಕಪ್ರಯತ್ನಗಳನ್ನು ಮಾಡಲು ಸಿದ್ಧರಾಗಿರುವರೆಂದು ವೈಸ್ರಾಯರ ಭಾಷಣದಿಂದ ವ್ಯಕ್ತವಾಗಿರುವುದು. ಈ ಪರಿಸ್ಥಿತಿಯಲ್ಲಿ ದೌರ್ಜನ್ಯರಾಹಿತವೂ ಶಾಂತಿಯೂ ದೇಶದೊಳಗೆ ಎಷ್ಟುಕಾಲ ನೆಲಸಿದ್ದೀತು ? ಯಾವುದಾದರೊಂದು ಪಕ್ಷವು ತಗ್ಗಿದಲ್ಲದೆ ಸೌಜನ್ಯಶಾಂತಿಗಳು ವಿಕಸಿಸುವುದು ಅಸಂಭವವೇಸರಿ.

ಯಾವದ್ಭಾರತ ಖಿಲಾಪತ್ ಮಹಾಸಭಾ.

ಕಳೆದವಾರ ಅಹಮ್ಮದಾಬಾದಿನಲ್ಲಿ ನೆರೆದ ಮಹಾಸಭೆಗಳೊಳಗೆ ರಾಷ್ಟ್ರೀಯ ಮಹಾಸಭೆ ಮತ್ತು ಮಹಮ್ಮದೀಯ ಮಹಾಸಭೆ ಖಿಲಾಪತ್ ಮಹಾಸಭೆಗಳ ನಡವಳಿಕೆಗಳೇ ಪ್ರಕೃತಕ್ಕೆ ಎಲ್ಲರಿಂದಲೂ ನಿರೀಕ್ಷಣೀಯಗಳಾಗಿದ್ದುವು. ಮಹಮ್ಮದೀಯ ಮಹಾಸಭೆಗಾಗಿ ಏರ್ಪಡಿಸಿದ್ದ ಮಂಟಪದಲ್ಲೇ ಖಿಲಾಪತ್ ಮಹಾಸಭೆಯು ಹಕೀಂಅಜ್ಮಲ್ ಖಾನ್‌ರವರ ಅಧ್ಯಕ್ಷತೆಯಿಂದ ಕಳೆದ ತಾ|| ೨೬ ರಲ್ಲಿ ಕೂಡಿದ್ದಿತು. ಸತ್ಕಾರಸಂಘಾಧ್ಯಕ್ಷರಾಗಿದ್ದ ಸಯ್ಯದ್ ಅಹಮ್ಮದ್‌ಆಲಿಯವರು ಮಾಡಿದ ಭಾಷಣದಲ್ಲಿ—ಅಹಮ್ಮದಾಬಾದ್ ಪಟ್ಟಣವು ಪೂರ್ವದ ಮಹಮ್ಮದೀಯ ಪ್ರಭುಗಳ ಆಳಿಕೆಯಲ್ಲಿ ಅನಂತೈಶ್ವರ್ಯವನ್ನು ಪಡೆದುಕೊಂಡಿದ್ದಿತೆಂದೂ, ಇಂಗ್ಲೀಷರ ಆಳಿಕೆ ಬಂದಮೇಲೆ ಅದೆಲ್ಲಾ ಹಾಳಾಯಿತೆಂದೂ ಈಗಣ ರಾಜಕೀಯ ಚಳವಳಿಯನ್ನು ನಾವುಗಳು ಅವಿಚ್ಛಿನ್ನವಾಗಿ ನಡೆಯಿಸಿದರೆ ನಮ್ಮ ದುರ್ದಶೆಯೆಲ್ಲಾ ತೊಲಗಿಹೋಗುವುದೆಂದೂ, ಮಹಮ್ಮದೀಯ ಮತಾಧಿಕಾರಿಗಳು ಪ್ರಕಟಿಸಿದ ಆಜ್ಞಾಪತ್ರಗಳನ್ನು ಸರ್ಕಾರದವರು ಬಹಿಷ್ಕರಿಸಿರುವಾಗ ಮಹಮ್ಮದೀಯರುಗಳು ಸೈರಿಸಿಕೊಂಡಿರುವುದು ಉಚಿತವಲ್ಲವೆಂದೂ ಅಭಿಪ್ರಾಯವಿದ್ದಿತು.

ಸಭಾಧ್ಯಕ್ಷರ ಭಾಷಣವು ಆವೇಶಪೂರಿತವಾಗಿಯೂ ಗಂಭೀರವಾಗಿಯೂ ಇದ್ದಿತು. ಅದರಲ್ಲಿ ಭರತಖಂಡದ ಪ್ರಾಚೀನ ವೈಭವವನ್ನೂ ಮಹಮ್ಮದೀಯ ರಾಷ್ಟ್ರಗಳ ಪ್ರಾಚೀನಾಧುನಿಕ ಸ್ಥಿತಿಗಳನ್ನೂ ವರ್ಣಿಸಿ, ಈ ಮಧ್ಯೆ ತುರ್ಕಿ ಸಾಮ್ರಾಜ್ಯವನ್ನೇ ಶತ್ರುಗಳು ನುಂಗಿಬಿಡುವರೆಂಬ ಸ್ಥಿತಿಯುಂಟಾಗಿದ್ದು ಈಗ ಆ ಸ್ಥಿತಿಯೆಲ್ಲಾ ತಲೆಕೆಳಗಾಯಿತೆಂದೂ, ಈಗ ಮಹಮ್ಮದೀಯ ರಾಷ್ಟ್ರಗಳೆಲ್ಲಾ ಬಲಾಢ್ಯವಾಗಿರುವುವೆಂದೂ, ಆಸ್ಯಾಖಂಡದ ಮಧ್ಯಪ್ರದೇಶದಲ್ಲಿ ಸ್ವತಂತ್ರ ಮಹಮ್ಮದೀಯ ರಾಷ್ಟ್ರಗಳು ಈಗ ತಲೆಯೆತ್ತಿಕೊಂಡು ಮುಂದಣ ಮಹಮ್ಮದೀಯ ಮತದ ಮಹೋನ್ನತದಶೆಯನ್ನು ಸೂಚಿಸುತ್ತಿರುವುವೆಂದೂ, ಕಾಕಸಸ್, ಪರ್ಷಿಯಾ, ಅಫ್ಘಾನಿಸ್ಥಾನ, ಅಂಗೋರಾ ಮೊದಲಾದ ಪ್ರಭುತ್ವಗಳು ಮಹಮ್ಮದೀಯ ಮತಕ್ಕೆ ನೂತನ ಪ್ರೋತ್ಸಾಹವನ್ನು ಕಲ್ಪಿಸುತ್ತಿರುವುವೆಂದೂ, ಆಂಗ್ಲರು ಗ್ರೀಕರಿಗೆ ಎಷ್ಟು ಸಹಾಯ ಮಾಡಿದರೂ ಕೇಮಲಿಸ್ಟ್ ಸೈನಿಕರು ಗ್ರೀಕರನ್ನು ಸೋಲಿಸಿದರೆಂದೂ, ಇಂಗ್ಲೀಷರಿಗೂ ಅಫ್ಘನ್ನರಿಗೂ ಸಂಧಿಯಾದುದರಿಂದ ಈಗ ಅಫ್ಘಾನಿಸ್ಥಾನವು ಸ್ವತಂತ್ರವಾಯಿತೆಂದೂ, ಇದರಿಂದ ಆಂಗ್ಲಸಾಮ್ರಾಜ್ಯವಾದಿಗಳ ದುರುದ್ದೇಶಗಳೊಂದೂ ಕೆಂದದಂತೆ ಮಾಡಿಕೊಂಡ ಆಫ್ಘಾನಿಸ್ಥಾನ ಅಮೀರರನ್ನೂ ಅವರ ಮಂತ್ರಿಗಳನ್ನೂ ಅಭಿನಂದಿಸುತ್ತೇವೆಂದೂ, ಈಗ ಆಂಗ್ಲರ ರಾಜನೀತಿಜ್ಞತೆಯೆಲ್ಲಾ ವ್ಯರ್ಥವಾಯಿತೆಂದೂ, ಅದರಿಂದಲೇ ಫ್ರೆಂಚರು ಅಂಗೋರಾ ತುರ್ಕಿಪ್ರಭುತ್ವದವರೊಡನೆ ಪ್ರತ್ಯೇಕ ಸಂಧಿ ಮಾಡಿಕೊಂಡರೆಂದೂ ಇಟಲಿಯವರು ಕೂಡ ಹಾಗೆ ಮಾಡಿಕೊಂಡಾರೆಂದು ಭಯಪಟ್ಟು ಅದನ್ನು ಮಾಡಗೊಡಿಸದಂತೆ ಇಂಗ್ಲೀಷರು ಸಕಲಪ್ರಯತ್ನಗಳಿಂದಲೂ ತಡೆಯುತ್ತಿರುವರೆಂದೂ, ಆದರೂ ಇಟಲಿಯವರೂ ಕೂಡ ಪ್ರತ್ಯೇಕ ಸಂಧಿಯನ್ನು ಮಾಡಿಯೇ ತೀರಿಸುವರೆಂದು ನಾನು ನಂಬುತ್ತೇನೆಂದೂ, ಪೂರ್ವದೇಶ ಮಧ್ಯದೇಶಗಳ ಬಿಕ್ಕಟ್ಟಿನ ಸಮಸ್ಯೆಗಳೆಲ್ಲಾ ಅನುಕೂಲವಾಗಿ ಪರಿಷ್ಕಾರವಾಗದಂತೆ ತಡೆಮಾಡುತ್ತಿರುವವರು ಇಂಗ್ಲೀಷರೊಬ್ಬರೇಯೆಂದೂ ಮೊದಲಾಗಿ ಆಂಗ್ಲರ ಮೇಲೆ ತಮಗಿರುವ ಆಗ್ರಹವನ್ನೆಲ್ಲಾ ಎತ್ತಿ ಆಡಿದಬಳಿಕ, ಈ ದೇಶದ ತಮ್ಮ ಅನುಚರರನ್ನು ಕುರಿತು ಕೆಲವು ಉಪದೇಶಗಳನ್ನು ಮಾಡಿದರು. ಏನೆಂದರೆ—ಮೇಲೆ ಹೇಳಿದಂತೆ ಮಹಮ್ಮದೀಯ ರಾಷ್ಟ್ರಗಳೆಲ್ಲಾ ಮತ್ತೆ ಬಲಾಢ್ಯಗಳಾಗುತ್ತಿದ್ದರೂ, ಅವರ ಖಿಲಾಪತ್ ಸಮಸ್ಯೆಯನ್ನು ಇನ್ನೂ ನ್ಯಾಯವಾಗಿ ಪರಿಷ್ಕರಿಸಲಿಲ್ಲ. ಅದನ್ನು ನ್ಯಾಯವಾಗಿ ಪರಿಷ್ಕರಿಸುವವರೆಗೂ ಭರತಖಂಡದ ಮಹಮ್ಮದೀಯರು ತಮ್ಮ ಸಂಘರ್ಷಣೆಯನ್ನು ಸ್ವಲ್ಪವೂ ಸಡಿಲ ಮಾಡಕೂಡದು. ಭಾರತೀಯರಿಗೆ ವಿಜಯವುಂಟಾಗಬೇಕಾದರೆ ಈಗಣ ರಾಜಕೀಯಾಂದೋಳನವನ್ನು ಇನ್ನಷ್ಟು ದ್ವಿಗುಣೀಕೃತಗೊಳಿಸುವುದು ಅತ್ಯವಶ್ಯಕವು. ಭಾರತಪ್ರಭುತ್ವದವರ ಕಾರಾಗೃಹಗಳಲ್ಲಿ ಇನ್ನು ತಾವಿಲ್ಲದಿರುವುದರಿಂದ ಮುಂದೆ ನಿರ್ಬಂಧವಿಧಾನವನ್ನು ಸಾಗಿಸುವುದು ಅಸಾಧ್ಯವೆಂದು ಅವರಿಗೆ ಈಗಾಗಲೇ ಗೊತ್ತಾಗಿಹೋಗಿರುವುದು. ಸ್ವಯಂಕೃತಾಪರಾಧಕ್ಕಾಗಿ ಆತ್ಮಸ್ತುತಿ ಮಾಡಿಕೊಳ್ಳದೆ ಅವರಿಗೆ ಗತ್ಯಂತರವಿಲ್ಲ. ನಿಷ್ಫಲವಾಗಿ ಅವರು ಇನ್ನೆಷ್ಟು ಬೆದರಿಕೆಯನ್ನು ಹಾಕಿದರೂ ನಾವು ಒಂದಂಗುಲವನ್ನೂ ಹಿಂದಕ್ಕೆ ಜಗ್ಗೆವು. ಪ್ರತಿಯೊಬ್ಬ ಭಾರತೀಯನೂ ಕಾರಾಗೃಹಕ್ಕೆ ಹೋಗಲು ಸಂಸಿದ್ಧನಾಗಿರುವನೆಂದು ಸ್ಪಷ್ಟವಾದಾಗಲೇ ದೇಶೀಯ ನಾಯಕರ ಸಮಾವೇಶವು ಫಲಪ್ರದವಾಗುವುದು. ನಮ್ಮ ಅಭಿಪ್ರಾಯದೊಡನೆ ಏಕೀಭವಿಸದಿರುವ ನಮ್ಮ ದೇಶೀಯರಲ್ಲಿ ನಾವು ಸಹನೆಯನ್ನು ತೋರಿಸಬೇಕು. ಮಿತವಾದಿಗಳಿಗೆ ಭಿನ್ನಾಭಿಪ್ರಾಯವಿದ್ದರೂ ಅವರು ನಿಷ್ಕಳಂಕದೇಶಭಕ್ತಿಯಲ್ಲಿ ನಮ್ಮೆಲ್ಲಾರಿಗೂ ಕಡಮೆಯಾದವರಲ್ಲ. ಸೈನಿಕರೂ ಪೊಲೀಸರೂ ತಂತಮ್ಮ ಉದ್ಯೋಗಗಳನ್ನು ಬಿಟ್ಟು ಬರುವುದು ನಮಗೆ ತೃಪ್ತಿಕರವಾಗಿದ್ದರೂ ಅವರ ದೌರ್ಬಲ್ಯವನ್ನೂ ಮತ್ತೂ ಅಸಹಾಯಸ್ಥಿತಿಯನ್ನೂ ನೋಡಿ ನಾವು ಸೈರಿಸಿಕೊಳ್ಳಬೇಕಾಗಿದೆ. ಮಾಪಿಳ್ಳೆಗಳ ವಿಪ್ಲವದಿಂದ ಕಷ್ಟನಷ್ಟಪಟ್ಟ ಹಿಂದೂಮಹಮ್ಮದೀಯ ಪ್ರಜೆಗಳ ವಿಷಯದಲ್ಲಿ ನಾವು ಸಾನುಭೂತಿಯನ್ನು ತೋರಿಸಬೇಕು. ರೈಲಿನಲ್ಲಿ ಮಾಪಿಳ್ಳೆಗಳ ಮೃತಿಯುಂಟಾಗಲು ಪ್ರಭುತ್ವದವರು ಅವಕಾಶ ಕೊಟ್ಟುದು ಶೋಚನೀಯವು. ಆ ಪ್ರಾಂತಕ್ಕೆ ಅಸಹಾಯವಾದಿ ಪ್ರಮುಖರನ್ನು ಹೋಗಗೊಡಿಸಿದ್ದರೆ ಆ ತೊಂದರೆಗಳೊಂದೂ ಸಂಭವಿಸುತ್ತಿರಲಿಲ್ಲ. ಅಂಗೋರಾದ ಫಂಡಿಗೆ ನೀವುಗಳೆಲ್ಲಾ ಧನಸಹಾಯ ಮಾಡಬೇಕು. ನಮ್ಮ ಉದ್ಯಮವು ದೌರ್ಜನ್ಯರಹಿತವಾಗಿರಬೇಕೆಂಬ ಮುಖ್ಯವಿಷಯವನ್ನು ಯಾರೊಬ್ಬರೂ ಮರೆಯಕೂಡದು. ಧೈರ್ಯದಿಂದಲೂ ಉತ್ಸಾಹದಿಂದಲೂ ನಮ್ಮ ಆಂದೋಳನವನ್ನು ಸಾಗಿಸಬೇಕು. ಬಂದ ಕಷ್ಟನಷ್ಟಗಳಿಗೆಲ್ಲಾ ಎದೆಗೊಟ್ಟು ಸಹಿಸಿದರೇನೆಯೇ ನಮ್ಮ ಪರಾಧೀನತೆಯು ತೊಲಗಿ ಸ್ವಾತಂತ್ರ್ಯವುಂಟಾಗುವುದು'' ಎಂದು ಹೇಳಿದರು.

ಅಂಗೋರಾ ನಿಧಿಗೆ ಚಂದಾಹಣವನ್ನು ಸಹಾಯಮಾಡಬೇಕೆಂದು ಮಹಮ್ಮದಾಲಿ ಸೋದರರ ತಾಯಿಯವರು ಉಪನ್ಯಾಸ ಮಾಡಿ ಸಭಿಕರನ್ನು ಪ್ರಾರ್ಥಿಸಲು ಆಗಲೇ ಎಷ್ಟೋ ಸಹಸ್ರ ರೂ. ಗಳು ಕೊಡಲ್ಪಟ್ಟುವು. ಆ ದಿನದ ಸಭೆಗೆ ಮ|| ಗಾಂಧಿಯವರು ಬಂದಿರಲಿಲ್ಲ. ಅದು ಅವರ ಉಪವಾಸವ್ರತ ದಿವಸವಂತೆ. ಉಳಿದ ಅಸಹಾಯವಾದಿ ಪ್ರಮುಖರಾದ ಹಿಂದೂಮಹಮ್ಮದೀಯರೆಲ್ಲಾ ಸೇರಿದ್ದರು. ಆಲಿಸೋದರರ ಕುಟುಂಬದ ನೆಹ್ರೂ ಕುಟುಂಬದ ಹೆಂಗುಸರು, ಸರೋಜಿನೀದೇವಿ ಸರಳಾದೇವಿಯವರು ಮೋಹಿನೀಪತ್ನಿಯವರು ಇವರೇ ಮೊದಲಾದ ಕೆಲ ನಾರೀಮಣಿಯರೂ ಸೇರಿದ್ದರು. ೨೭ನೆ ತಾರೀಖು ರಾತ್ರಿ ೧೧ ಗಂಟೆಯವರೆಗೂ ಸಭೆಗೂಡಿದ್ದಿತು. ತಾ|| ೨೮ರ ರಾತ್ರಿಯೂ ನೆರವೇರಿತು. ಈ ಸಭೆಯಲ್ಲಿ ಆದ ತೀರ್ಮಾನಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಮತ್ತು ಪ್ರಭುತ್ವಾಜ್ಞೋಲ್ಲಂಘನದ ತೀರ್ಮಾನಗಳು ಮುಖ್ಯವಾದುವುಗಳು. ೧೮ ವರ್ಷ ವಯಸ್ಸಿಗೆ ಮೇಲ್ಪಟ್ಟ ವಯಸ್ಸಿನ ಮಹಮ್ಮದೀಯರೆಲ್ಲಾ ಕಾರಾಗೃಹವಾಸಕ್ಕೂ ಕಡೆಗೆ ಪ್ರಾಣವನ್ನರ್ಪಿಸುವುದಕ್ಕೂ ಹಿಂದೆಗೆಯದೆ ಸ್ವಚ್ಛಂದಸೇವಕ ಸಂಘಗಳಿಗೆ ಸೇರಬೇಕೆಂದೂ, ಬಹಿರಂಗ ಸಭೆಗಳನ್ನು ಜರುಗಿಸಲಾಗದೆಂದು ಅಧಿಕಾರಿಗಳು ಅಪ್ಪಣೆಮಾಡಿದರೆ ಅಂಥ ಅಪ್ಪಣೆಯನ್ನು ಉಲ್ಲಂಘಿಸಿ ಪ್ರಜೆಗಳು ಸಭೆಯನ್ನು ಕೂಡಿಸಬೇಕೆಂದೂ, ಆದರೆ ಅಂಥ ಸಂದರ್ಭಗಳಲ್ಲಿ ದೌರ್ಜನ್ಯವನ್ನು ಪ್ರಜೆಗಳು ಸ್ವಲ್ಪವೂ ತೋರಿಸುವುದಿಲ್ಲವೆಂಬ ಗಟ್ಟಿಯಾದ ನಂಬುಗೆಯು ಹುಟ್ಟಿದ್ದರೇನೆಯೇ ಅಂಥ ಪ್ರಭುತ್ವಾಜ್ಞೆಯನ್ನು ಉಲ್ಲಂಘಿಸಿ ಬಹಿರಂಗ ಸಭೆಗಳನ್ನು ಕೂಡಿಸಬೇಕೆಂದೂ ಮಹಮ್ಮದೀಯರೆಲ್ಲರನ್ನೂ ಈ ಖಿಲಾಪತ 'ಮಹಾಸಭೆಯು ಕೋರುತ್ತದೆ'ಎಂಬುದು ಒಂದು ತೀರ್ಮಾನದ ಅಭಿಪ್ರಾಯವು. ಸ್ವಾತಂತ್ರ್ಯದ ತೀರ್ಮಾನವು ೨೭ನೆ ತಾ|| ಮಧ್ಯಾಹ್ನ ಕೂಡಿದ್ದ ವಿಷಯ ನಿರ್ಧಾರಕ ಸಭೆಯಲ್ಲಿ ಬಹುಕಾಲ ಚರ್ಚಿಸಲ್ಪಟ್ಟಿತು. ಅಲ್ಲಿ ಅದನ್ನು ಹಜರತ್ ಮೋಹನಿಯವರು ಉಪಪಾದಿಸಿದರು. ಆ ತೀರ್ಮಾನದ ಮುಖ್ಯಾಶಯವೇನೆಂದರೆ—ಮಹಮ್ಮದೀಯ ಪ್ರಪಂಚದ ಮೇಲೆ ಇತರರ ಪ್ರಾಬಲ್ಯವು ತಗ್ಗುವಂತೆ ಮಾಡಲಿಕ್ಕೆ ಆಂಗ್ಲಸಾಮ್ರಾಜ್ಯಾಭಿಮಾನಿಗಳು ಎಂದಿಗೂ ಒಪ್ಪುವುದಿಲ್ಲ. ಆದರಿಂದ ಖಿಲಾಪತು ದೃಢವಾಗುವುದಿಲ್ಲ. ಖಿಲಾಪತು ಶಾಶ್ವತವಾಗಬೇಕಾದರೂ ಭರತಖಂಡಕ್ಕೆ ಮಹದೈಶ್ವರ್ಯವು ಬರಬೇಕಾದರೂ ಆಂಗ್ಲಸಾಮ್ರಾಜ್ಯಾತಿಶಯತ್ವವು ನಿರ್ಮೂಲವಾಗಬೇಕು. ಭರತಖಂಡದಲ್ಲಿರುವ ಮಹಮ್ಮದೀಯರೂ ಇತರರೂ ಸೇರಿ ಕೆಲಸಮಾಡಿ ಭರತಖಂಡಕ್ಕೆ ಸಂಪೂರ್ಣಸ್ವಾತಂತ್ರ್ಯವನ್ನುಂಟುಮಾಡಿಕೊಳ್ಳುವುದೊಂದೇ ಅದಕ್ಕೆ ಉತ್ತಮಸಾಧನವು. ಸ್ವರಾಜ್ಯವೆಂದರೆ ಸಂಪೂರ್ಣಸ್ವಾತಂತ್ರ್ಯವೆಂದೇ ಖಿಲಾಪತ್ ಸಭೆಯ ಅಭಿಪ್ರಾಯವು. ಭರತಖಂಡದ ಇತರ ಮತಗಳವರೆಲ್ಲರೂ ಅದೇ ಭಾವವನ್ನೇ ಹೊಂದಿ ಕೆಲಸಮಾಡಬೇಕು'' ಈ ಪ್ರಕಾರವಾದ ತೀರ್ಮಾನವನ್ನು ತಾ|| ೨೭ರಲ್ಲಿ ಕೂಡಿದ್ದ ವಿಷಯ ನಿರ್ಧಾರಕ ಸಭೆಯವರು ಅನುಮೋದಿಸಿದರು. ತಾ|| ೨೮ರಲ್ಲಿ ಕೂಡಿದ್ದ ಖಿಲಾಪತ್ ಮಹಾಸಭೆಯ ಚರ್ಚೆಗೆ ಇಟ್ಟಿದ್ದರು. ಆದರೆ ಆ ಸಭೆಯಲ್ಲಿ ಇದನ್ನು ಪ್ರತಿಪಾದಿಸುವುದಕ್ಕೆ ಮೋಹನಿಯವರು ಪ್ರಯತ್ನಿಸಿದಾಗ-ಖಿಲಾಪತ್ ಸಭೆಯ ಕ್ರೀಡನ್ನು ಈ ತೀರ್ಮಾನದಿಂದ ಬದಲಾಯಿಸಿದಂತೆ ಆಗುವುದೆಂದೂ, ಹಾಗೆ ಬದಲಾಯಿಸಬೇಕಾದರೆ ವಿಷಯ ನಿರ್ಧಾರಕ ಸಭೆಯಲ್ಲಿ ⅔ ಭಾಗ ಸಭಿಕರ ಅನುಮತಿಯಾಗಬೇಕೆಂದೂ, ಅದಿಲ್ಲದಿರುವುದರಿಂದ ಇದನ್ನು ಸಭೆಗೆ ಇಡುವುದಕ್ಕೆ ಅವಕಾಶವಿಲ್ಲವೆಂದೂ ಒಬ್ಬ ಸಭಿಕರು ಆಕ್ಷೇಪಿಸಿದುದನ್ನು ಸಭಾಧ್ಯಕ್ಷರು ಒಪ್ಪಿ, ಆ ತೀರ್ಮಾನವನ್ನು ಉಪಪಾದಿಸದಂತೆ ನಿಲ್ಲಿಸಿಬಿಟ್ಟರು. ಈ ಮೋಹಿನಿಯ ಚಾಲವು ಅಪಾಯಕರವೆಂಬುದನ್ನು ಸಭೆಯಲ್ಲಿ ಬಹುಜನರು ಅರಿತು ಅನುಮತಿಸದೆ ಹೋದುದು ಪುಣ್ಯ. ಆಂಗ್ಲಪ್ರಭುತ್ವವು ಈ ದೇಶದಿಂದ ಕಾಲ್ದೆಗೆದರೆ ಮುಂದೆ ಇದರವಸ್ಥೆಯನ್ನೇನು ಮಾಡಬೇಕೆಂಬುದು ಈ ಮೋಹಿನೀಪಕ್ಷದವರ ಉದ್ದೇಶವೂ ತಿಳಿಯಲಿಲ್ಲ. ಮಹಮ್ಮದೀಯ ಪ್ರಭುತ್ವವೇ ಕಾಲಾನುಕಾಲದಲ್ಲಿ ಭರತಖಂಡದಲ್ಲಿ ರೂಢಮೂಲವಾಗಬೇಕೆಂಬ ಸಂಕಲ್ಪದಿಂದ ಮೋಹಿನೀಪಕ್ಷದವರು ಇಂಥ ಸಂಪೂರ್ಣಸ್ವಾತಂತ್ರ್ಯಕ್ಕೆ ಬಾಯ್ದೆರೆದುಕೊಂಡರಾಗಿದ್ದೀತು. ಆದರೆ ಇದನ್ನು ಸಭಿಕರೇ ಒಪ್ಪದೆ ಹೋದುದು ಯೋಗ್ಯವೇ ಆಯಿತು. ಇದೇ ಮೋಹನಿಯವರೇ ಮೊದಲಾದ ೫೨ ಮಂದಿಗಳು ರಾಷ್ಟ್ರೀಯ ಮಹಾಸಭೆಯಲ್ಲೂ ಕೂಡ ಆಂಗ್ಲ ಸಂಬಂಧವೇ ಇಲ್ಲದ ಸಂಪೂರ್ಣ ಸ್ವರಾಜ್ಯವೇ ಈ ಮಹಾಸಭೆಯ ಆದರ್ಶವೆಂದು ನಿರ್ಧರಿಸಬೇಕೆಂಬುದಾಗಿಯೂ ಆದಕ್ಕೆ ತಕ್ಕಂತೆ ಕಾಂಗ್ರೆಸ್ ಸಂಪ್ರದಾಯವನ್ನು ಮಾರ್ಪಡಿಸಬೇಕೆಂಬುದಾಗಿಯೂ ಪಟ್ಟುಹಿಡಿದು ವಾದಿಸಿದರು. ಆದರೆ ಗಾಂಧಿಯವರೇ ಮೊದಲಾದನೇಕರು ಅದಕ್ಕೆ ಪ್ರತಿಭಟಿಸಿ ನಿಲ್ಲಿಸಿಬಿಟ್ಟರು. ಹೀಗೆ ಸಂಪೂರ್ಣ ಸ್ವಾತಂತ್ರ್ಯದ ತೀರ್ಮಾನವು ನಿರಸ್ತವಾಗಿ ಹೋಯಿತು. ಅಂಗೋರಾ ಪ್ರಭುತ್ವದವರು ಜಯಿಸಿದುದನ್ನು ಕುರಿತು ಅಭಿನಂದನ, ತುರ್ಕಿ ಸುಲ್ತಾನರಲ್ಲಿ ಭಕ್ತಿಪ್ರದರ್ಶನ, ಮೊದಲಾದ ಇನ್ನು ಕೆಲ ತೀರ್ಮಾನಗಳನ್ನು ಮಾಡಿ ಖಿಲಾಪತ್ ಸಭೆಯು ಮುಕ್ತಾಯವಾಯಿತು.

ಒಳದೇಶದ ವೃತ್ತಾಂತಗಳು.

ಸೀನಿಯರ್ ಅ|| ಕಮಿಷನರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾವ್‌ರವರು ತುಮಕೂರು ಡಿ|| ಆಕ್ಟಿಂಗ್ ೩ನೆ ತರಗತಿ ಡಿ|| ಕಮಿಷನರಾಗಿ ನಿಯಮಿಸಲ್ಪಟ್ಟಿದ್ದಾರೆ.

ನಾಳೆಯದಿವಸ ನಂದಿಯಲ್ಲಿ ಯಾವದ್ಭಾರತ ಬಾಲಚಮೂವಿನ ಕಡೆಯ ಪಂದ್ಯಗಳು ಜರುಗುವುವು. ಶ್ರೀಮದ್ಯುವರಾಜರವರು ಅಗ್ರಾಸನವನ್ನು ವಹಿಸಿ ಜಯಶಾಲಿಗಳಾದವರಿಗೆ ಬಹುಮಾನವನ್ನು ದಯಪಾಲಿಸುವರು.

ಕಳೆದ ತಾ|| ೨೬ ರಲ್ಲಿ ಬೆಂಗಳೂರಿನ ಕೋಟೆಯ ಎ.ವಿ. ಶಾಲಾಭವನದಲ್ಲಿ ಭರತಖಂಡದ ಅ|| ಸರ್ಜನ್ನರುಗಳ ೧೧ನೆಯ ವಾರ್ಷಿಕಸಭೆಯು ಸೀನಿಯರ್‌ಸರ್ಜನ್ ಡಾ|| ಮೈಲ್ವಾಗನಂಯವರ ಅಧ್ಯಕ್ಷತೆಯಿಂದ ನೆರವೇರಿತು.

ಸಬ್‌ರಿಜಿಸ್ಟ್ರಾರ್ ಆಫೀಸುಗಳಲ್ಲಿ ಪತ್ರಗಳನ್ನು ರಿಜಿಸ್ಟರ್‌ಮಾಡಿಸತಕ್ಕವರು ಕೊಡಬೇಕಾದ ಫೀಜನ್ನು ಸ್ಟಾಂಪುರೂಪವಾಗಿಯಾಗಲೀ ಅಥವಾ ದ್ರವ್ಯರೂಪವಾಗಿಯಾಗಲೀ ಸಲ್ಲಿಸಬಹುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಇಷ್ಟುಮಾತ್ರದಿಂದಲೇ ಲಂಚದಹಾವಳಿಗೆ ತಡೆಯಾಗುವುದೆಂದು ಹೇಳಲಾಗುವುದಿಲ್ಲ.

ಕೃಷ್ಣರಾಜಸಾಗರದ ಅಣೆಕಟ್ಟೆಯ ವಿಚಾರಕ್ಕಾಗಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ ಕೂಡಿದ್ದ ಸಂಘದವರು ತಮ್ಮ ವಿಚಾರಣೆಯನ್ನೆಲ್ಲಾ ಮುಗಿಯಿಸಿದರು. ಇನ್ನು ೧-೨ ವಾರಗಳೊಳಗೇ ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಡುವವರಾಗಿದ್ದಾರಂತೆ. ಅದನ್ನು ಪ್ರಜೆಗಳ ತಿಳಿವಳಿಕೆಗಾಗಿ ಪ್ರಭುತ್ವದವರು ಪ್ರಕಟಿಸುವುದು ಆವಶ್ಯಕ. ಮತ್ತು ಭದ್ರಾವತಿಯ ಕಬ್ಬಿಣದ ಯಂತ್ರಾಲಯ ವಿಷಯವಾಗಿಯೂ ಹೀಗೆಯೇ ವಿಚಾರಣೆನಡೆಯಿಸುವುದು ಅತ್ಯವಶ್ಯಕವೆಂದು ತೋರುತ್ತದೆ.

ಮಾಯಿಕೊಂಡ ನಿಲ್ದಾಣದಲ್ಲಿ ಪುನಾ ಮೇಲ್‌ಟ್ರೇನು ನಿಲ್ಲುತ್ತಿದ್ದುದನ್ನು ಈಚೆಗೆ ತಪ್ಪಿಸಿಬಿಟ್ಟಿದ್ದಾರೆ. ತುಂಬಾ ವ್ಯಾಪಾರವು ಇಲ್ಲಿಗೂ ದಾವಣಗೆರೆಗೂ ನಡೆಯುತ್ತಿರುವುದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆಯೆಂದೂ, ಹಗಲಹೊತ್ತು ಯಾವ ಟ್ರೇನೂಕೂಡ ಅಲ್ಲಿಗೆ ಬರುವುದಿಲ್ಲವೆಂದೂ, ಒಬ್ಬ ಬಾತ್ಮೀದಾರರು ಬರೆದಿದ್ದಾರೆ. ಸರ್ಕಾರದವರೂ ಮತ್ತು ಎಮ್. ಎಸ್. ಎಮ್. ಆರ್. ಕಂಪನಿಯವರೂ ಪ್ರಜೆಗಳ ತೊಂದರೆಯನ್ನು ನಿವಾರಿಸಿಕೊಡಬೇಕು. ಸ್ಥಳಿಕರುಕೂಡ ಈ ವಿಷಯವಾಗಿ ಸರ್ಕಾರಕ್ಕೂ ರೈಲ್ವೆಕಂಪನಿಗೂ ಅರ್ಜಿಗಳನ್ನು ಬರೆದುಕೊಳ್ಳುವುದು ಆವಶ್ಯಕ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಕ.

ಸಂಕ್ಷೇಪವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನು ತಿಳಿಸಲೇಬೇಕು.

ನಂಜನಗೂಡು.

ಇಲ್ಲಿ ಪ್ಲೇಗಿನ ಗಲಾಟೆಯು ಕಡಿಮೆಯಾಗುತ್ತಿದೆ. ಇದು ತಾಲ್ಲೂಕಾದರೂ ೩ ಕೋರ್ಟುಗಳಿರುತ್ತವೆ. ಕೆಲವು ಅಧಿಕಾರಸ್ಥರು ವಾಸವಾಗಿರುತ್ತಾರೆ. ಆಗಾಗ್ಗೆ ಪರಸ್ಥಳದವರು ಯಾತ್ರಾರ್ಥವಾಗಿ ಬರುವದುಂಟು. ಆದರೆ ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಸರಿಯಾದ ಏರ್ಪಾಡುಗಳಿಲ್ಲದೆ ಪೇಟೆಯ ಎರಡು ಭಾಗದ ಮೋರಿಗಳೂ ಸರಿಯಾಗಿಲ್ಲದೆ ಯಾವಾಗಲೂ ದುರ್ವಾಸನೆಯಿಂದ ತುಂಬಿ ಜನಗಳಿಗೆ ಅನಾರೋಗ್ಯಕ್ಕೂ ಮತ್ತು ರೋಗಕ್ಕೂ ಕಾರಣವಾಗಿದೆ. ಇದುವರೆಗೆ ಸರ್ಕಾರದ ಹೆಲ್ತ್ ಇಲಾಖೆಯವರು ಗಮನಿಸದೆ ಇರುವದು ಬಹಳ ಆಶ್ಚರ್ಯ. ಇಲ್ಲಿಯ ವರ್ತಕರು ತಮ್ಮ ತಮ್ಮಲ್ಲಿ ಕಲಹಗಳನ್ನುಂಟುಮಾಡಿಕೊಂಡು ಕೋರ್ಟು ಕಚೇರಿಗಳಿಗೆ ತಿರುಗುವದೇ ಅವರ ಕೆಲಸವಾಗಿದೆ. ಬೆಂಗಳೂರಿನವರದು ಒಂದು ಮೋಟಾರು ಕಂಪನಿಯೂ ಈ ಊರಿನವರದು ಒಂದು ಮೋಟಾರು ಕಂಪನಿಯೂ ಉಂಟು. ಒಬ್ಬರೊಬ್ಬರಿಗೆ ಆಗಾಗ್ಗೆ ಸ್ಪರ್ಧೆಗಳು ನಡೆಯುತ್ತಲೇ ಇವೆ. ಇಲ್ಲಿನವರ ಮೋಟಾರು ಕೆಲವು ದಿವಸಗಳ ಕೆಳಗೆ ಚಾಮರಾಜನಗರದಿಂದ ಬರುವಾಗ್ಗೆ ಮುರಿದು ೭-೮ ಜನಗಳಿಗೆ ಬಹಳ ಘಾಯವಾಗಿ ಈ ಪೈಕಿ ೩ ಜನರು ಬದುಕುವದೇ ಕಷ್ಟವಾಗಿದೆ. ಇಲ್ಲಿ ಎರಡು ಸೀಮೆಯೆಣ್ಣೆ ಕಂಪನಿಗಳಿದ್ದರೂ ಸರಿಯಾಗಿ ಎಣ್ಣೆ ಒದಗಿಸಿಕೊಡುವದೇ ಇಲ್ಲ. ಇದಕ್ಕೆಲ್ಲಾ ಕಾರಣವೇನೆಂದರೆ ಸರಿಯಾಗಿ ವಾಗಿನ್ನುಗಳು ಸಪ್ಲೈಯಾಗುವುದಿಲ್ಲ. ದೇವಸ್ಥಾನದ ಹಾವಳಿಯೂ ವಿಪರೀತವಾಗಿದೆ. ಇದಕ್ಕೆಲ್ಲಾ ಕಾರಣಭೂತರು ಇಲ್ಲಿಯ ಅಮಲ್ದಾರರೂ, ಸಬ್‌ಡಿವಿಜನ್ ಆಫೀಸರೂ ಪೇಷ್ಕಾರರೇ ಆಗಿದ್ದಾರೆ. ಇವರುಗಳನ್ನು ವರ್ಗಾಯಿಸಿದ್ದರೆ ಪ್ರಜೆಗಳಿಗೆ ಸುಖವು ಖಂಡಿತವಾಗಿಯೂ ಇಲ್ಲ. ಇಲ್ಲಿ ದೊಡ್ಡ ರೈಲ್ವೆಸ್ಟೇಷನ್ನಿನಲ್ಲಿ ಇರುವ ಮ್ಯಾನೇಜರೇ ಅಲ್ಲಿಗೆ ಪಾಳೇಗಾರರೆಂದು ಹೇಳಬಹುದು. ಹಿಂದೆ ಇದ್ದ ಅನೇಕ ಸ್ಟೇಷನ್ ಮಾಸ್ಟರುಗಳು ಎಷ್ಟೋ ಗುಣಶಾಲಿಗಳಾಗಿಯೂ ಪರೋಪಕಾರಿಗಳಾಗಿಯೂ ಇದ್ದರು. ವಾಗಿನ್ನುಗಳಿಗಾಗಿ ತಿಂಗಳವರೆಗೂ ಸುತ್ತಿಸುತ್ತಿ ನಾಳೆಬಾ ನಾಡಿದ್ದುಬಾ ಎಂದು ಹೇಳುತ್ತಿರುತ್ತಾರೆ. ಯಾವಾಗಲೂ ಪೇಪರನ್ನು ಕೈಯಲ್ಲಿ ಹಿಡಿದುಕೊಂಡು ಸ್ವರಾಜ್ಯದ ವಿಷಯವಾಗಿಯೂ ಮಾಪಿಳ್ಳೆಗಳ ವಿಷಯವಾಗಿಯೂ ಉಪನ್ಯಾಸ ಮಾಡುತ್ತ ಇರುತ್ತಾರೆ. ಎಷ್ಟು ಉಪನ್ಯಾಸಮಾಡುತ್ತಲಿದ್ದರೂ ತಾವು ಮಾತ್ರ ಸ್ವದೇಶದ ವರ್ತಕರನ್ನು ತೊಂದರೆ ಪಡಿಸುವದನ್ನು ಬಿಡುವದಿಲ್ಲ. ಇದಕ್ಕಾಗಿ ಎಷ್ಟು ಬರೆದರೂ ಸಾಲದು. ಈ ಊರಿನ ಕಥೆಯನ್ನು ೩ ಭಾಗವಾಗಿ ದೊಡ್ಡ ಗ್ರಂಥವನ್ನು ವಿಶದವಾಗಿ ಬರೆದರೆ ಪತ್ರಿಕಾಕರ್ತರು ಸ್ಥಳವನ್ನು ಕೊಡುವರೋ ಇಲ್ಲವೋ ಎಂಬ ಅನುಮಾನದಿಂದ ಸದ್ಯ ಇಷ್ಟಕ್ಕೇ ಪೂರ್ತಿಮಾಡಿದ್ದೇನೆ.

ಪುರವಾಸಿ.

ನೋಡಿರಿ ಇವರು ಎಂಥ ರಾಷ್ಟ್ರಭಕ್ತರು ?

(ಲೇಖಕ—ಎಮ್. ಎಮ್. ಮಾಳಿ, ಅಥಣಿ.)

ವೀರಶೈವ ಸಮಾಜದ ಸಾಂಪ್ರತದ ಅವನತಾವಸ್ಥೆಯು ದೂರಾಗಿ ಪ್ರತಿಷ್ಠಾಪ್ರಾಪ್ತಿಯ ಕೋರಿಕೆಯಿಂದಲೂ ರಾಷ್ಟ್ರದ ಅಸ್ತಿತ್ವದಲ್ಲಿ ಸ್ಥಿರವಾದ ಯೋಗ್ಯಸ್ಥಳವು ದೊರೆಯಬೇಕೆಂಬ ಆಶೆಯಿಂದಲೂ ಅಲ್ಲಲ್ಲಿಗೆ ದೇಶಕಾಲಪರಿಸ್ಥಿತಿಗನುಸಾರವಾಗಿ ಶಿಕ್ಷಣಸಂಬಂಧದ ಯಾವಯಾವ ಸಾಧನಗಳು ಬೇಕೋ ಆಯಾ ಅತುಪಯುಕ್ತವಾದ ಮತ್ತು ಅವಶ್ಯವಾದ ಲೈಬ್ರರಿ ಡಿಬೇಟಿಂಗ್‌ಸೊಸೈಟಿ ಮತ್ತು ಫುಟ್‌ಬಾಲ್‌ಟೀಮ್ಸ್ ಮುಂತಾದುವುಗಳು ಸ್ಥಾಪಿತವಾಗಿವೆ. ಮತ್ತು ಆಗಹತ್ತಿರುತ್ತವೆ. ಇದೇಮೇರೆಗೆ ಇಲ್ಲಿ ಅಂದರೆ ಅಥಣಿಯಲ್ಲಿ ಕೆಲವು ವಿದ್ಯಾರ್ಥಿಗಳು ತಿಂಗಳಿಗೆ ಇಂತಿಂತವರು ಇಷ್ಟಿಷ್ಟು ವರ್ಗಣಿ ಕೊಡಬೇಕೆಂಬ ಕರಾರಿನಿಂದ ಕೆಲವು ದಿವಸಗಳ ಹಿಂದೆ ಡಿಬೇಟಿಂಗ್ ಸೊಸೈಟಿ ಅಂದರೆ (ಚರ್ಚಿಸತಕ್ಕ ಸಂಘ) ವೆಂಬುದು ಸ್ಥಾಪನಮಾಡಲ್ಪಟ್ಟಿರುತ್ತದೆ. ಈವರೆಗೆ ಸುರಕ್ಷಿತವಾಗಿ ಸಾಗುತ್ತಾ ಬಂದು ಇತ್ತಿತ್ತಲಾಗಿ ಅನಾವೃಷ್ಟಿಯ ಮೂಲಕ ಹಣದ ತೊಂದರೆಯಾಗಹತ್ತಿದ್ದರಿಂದ ವಾರಕ್ಕೆ ಒಂದಾವರ್ತಿ ಮುಷ್ಟಿಫಂಡನ್ನೆತ್ತಲು ಪ್ರಾರಂಭಮಾಡಿದೆವು. ಆದರೆ ಈ ಮೊದಲೇ ನಾವು ರಾಷ್ಟ್ರಭಕ್ತರೆಂದು ಹೊಗಳಿಕೊಳ್ಳುವ ಸ್ವಾದವಿಲ್ಲದ ಬ್ರಾಹ್ಮಣಬಂಧುಗಳು ಉಚಿತ ವಾಚನಾಲಯವೆಂದು ಒಂದು ಲೈಬ್ರರಿಯನ್ನು ಸ್ಥಾಪಿಸಿ ಬ್ರಾಹ್ಮಣೇತರರು ನೀಡಿದ ಮುಷ್ಟಿಫಂಡಿನಿಂದಲೇ ಈವರೆಗೆ ನಡಿಸುತ್ತಬಂದು ಮತ್ತು ಬಹು ಬ್ರಾಹ್ಮಣೇತರರನ್ನು ಬಣ್ಣದ ಮಾತುಗಳಿಂದ ವರ್ಗಣಿದಾರರನ್ನಾಗಿ ಮಾಡಿಸುತ್ತ ಬಂದು ಹಿರಿಹಿರಿಯರಿಂದ ಅಂಟಿಕೊಂಡು ಬಂದ ಈ ಕಪಟನೃತ್ತಿಯ—ಬಹಿರಂಗದಲ್ಲಿ ಬ್ರಾಹ್ಮಣರಂತೆ ನಟಿಸುವ—ಈ ಜನರು ಮುಷ್ಟೀಫಂಡನ್ನು ಬೇಡಹೋದರೆ ಮೊದಲೇ ಪ್ರಶ್ನಾರ್ಥಕವು. "ನೀವು ಯಾರು ? ನೀವು ಈ ಫಂಡನ್ನು ಯಾತಕ್ಕೆ ವೆಚ್ಚಮಾಡತಕ್ಕವರು ? ಒಂದುವೇಳೆ ನೀವು ಲಿಂಗಾಯತರಾಗಿದ್ದರೆ, ನಾವು ಇತರ ಜನರಿಗೆ ನೀಡುವುದು ನಮ್ಮ ಧರ್ಮದ ವಿರುದ್ಧವಾಗಿರುವದು." (ಮತ್ತೊಬ್ಬರು)—"ನೀವು ಲಿಂಗಾಯತರೋ ಅಥವಾಬ್ರಾಹ್ಮಣರೋ ? ನಾವು ಲಿಂಗಾಯತರೆಂದಕೂಡಲೇ show me the rules of your Debating Society ಅಂದರೆಹಿಂದಿನಿಂದ ನೀಡುವೆನು ಅಂದರು. (ಇನ್ನೊಬ್ಬರು) ಒಬ್ಬ ಬ್ರಾಹ್ಮಣೇತರರು ಮೊನ್ನೆ L.C.P.S. ಪರೀಕ್ಷೆಯ ನಿಕಾಲೆಯನ್ನು ನೋಡುವ ಉದ್ದೇಶದಿಂದ ಉಚಿತ ವಾಚನಾಲಯದ ಮುಖಂಡರಾದ ದತ್ತಾತ್ರಯ ಇವರನ್ನು ಕ್ರಾನಿಕಲ್ ಪತ್ರವನ್ನು ಕೇಳಿದಕೂಡಲೇ ಬಡಿದಾಡಲಿಕ್ಕೆ ಬಂದರು. ನೋಡಿರಿ ಈ ದತ್ತಾತ್ರಯರು ತಮ್ಮ ಹೆಸರಿನಂತೆ ಇವರ ನೀಚತ್ವಗಳಾದರೂ ತ್ರಯವಾಗಿರುವವು. ನೋಡಿರಿ. ಪ್ರಕಟಿಸುವುದು ಉಚಿತ ವಾಚನಾಲಯವೆಂದು, ಯಾರಾದರೂ ಬ್ರಾಹ್ಮಣೇತರರು ಹೋದರೆ ಒಂದು ಪತ್ರವನ್ನಾದರೂ ಕೊಡದೇ ಇರುವದು, ಮತ್ತು ಮೇಲೆ ರಾಷ್ಟ್ರಭಕ್ತರೆಂದು ಹೆಸರಿಟ್ಟುಕೊಳ್ಳುವದು. ಎಲೈ ಬ್ರಾಹ್ಮಣಬಂಧುಗಳೇ ಇದೆಯೋ ನಿಮ್ಮ ರಾಷ್ಟ್ರಭಕ್ತಿಯು ? ಇದೆಯೋ ನಿಮ್ಮ ಹಿಂದುಳಿದವರ ಹಿತಚಿಂತನವು ? ಇದೆಯೋ ಸಮತೋಲನದಿಂದ ನಡೆದು ಐಕ್ಯ ಬೆಳಸಿ ಸ್ವರಾಜ್ಯಪ್ರಾಪ್ತಿಗಾಗಿ ಹೆಣಗಾಡುವದು ? ಯಾವನು ತನ್ನ ಗಲ್ಲಿಯ ಇಲ್ಲವೆ ಗ್ರಾಮದ ಹಿತಚಿಂತನವನ್ನು ಮಾಡುವುದಿಲ್ಲವೋ ಅಂಥ ಅಧಮನು ರಾಷ್ಟ್ರಚಿಂತನ ಮಾಡಿ ರಾಷ್ಟ್ರಭಕ್ತನೆನಿಸುವುದಾದರೂ ಹೇಗೆ ? ಸ್ವರಾಜ್ಯಪ್ರಾಪ್ತಿಯನ್ನಾದರೂ ಹೇಗೆಮಾಡುವನು ? ಎಲೈ ಬ್ರಾಹ್ಮಣಬಂಧುಗಳೇ ಸ್ವರಾಜ್ಯವೆಂದರೆ ಪೇಟೆಯಲ್ಲಿ ಮಾರಬಂದಿರುವ ಮಾವಿನಹಣ್ಣಲ್ಲ, ಅಥವಾ ಯಾರಾದರೂ ದಕ್ಷಿಣೆಕೊಟ್ಟಹಾಗೆ ದಾನಕೊಟ್ಟರೆ ಬರುವಹಾಗಿಲ್ಲ. ಇಲ್ಲವೆ ಫಲ ಪಂಚಪಾತ್ರೆಗಳನ್ನು ಬಾರಿಸಿಯಾದರೂ ಪ್ರಾಪ್ತವಾಗುವಹಾಗಿಲ್ಲ. ಸ್ವರಾಜ್ಯವೆಂದರೆ ಸಹಜವಾಗಿ ದೊರಕುವ ವಸ್ತುವಲ್ಲ. ರಣಧೀರರ ರಕ್ತದಿಂದ ರಣಾಂಗಣವು ಹಚಿಯಾದರೇನೇ ಸ್ವರಾಜ್ಯದ ಮೊಳಕೆಯು ಒಡೆಯುವುದೆಂದು ತಿಳಿಯುವುದೆಂದು ತಿಳಿಯಿರಿ. ಇಲ್ಲವೆ ಸಾಮ್ರಾಜ್ಯಾಧಿಕಾರಿಗಳಿಗೆ ಸ್ವಾತಂತ್ರ್ಯದ ವಿಷಯವಾಗಿ ತಮ್ಮ ಲಾಯಖಿಯನ್ನು ತೋರಿಸಬೇಕಾಗಿರುವುದು. ಈ ಮೇಲಿನ ಎರಡು ಕಾರಣಗಳಿಂದ ಒಂದುವೇಳೆ ಸ್ವರಾಜ್ಯವು ಪ್ರಾಪ್ತವಾದರೆ ಇದನ್ನು ಸುಸೂತ್ರವನ್ನು ನಡಿಸುವದು ಸಾಮಾನ್ಯವಾದ ಮಾತಲ್ಲ. ಮೂಲಕಾರಣಗಳಾದ ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಇವುಗಳ ಸುಧಾರಣೆಯು ಸಾಂಪ್ರತದಲ್ಲಿ ಅವಶ್ಯವಾಗಿ ಬೇಕಾಗಿರುವದು. ಮೂಲ ಸ್ವರಾಜ್ಯಸಾಧನಗಳಾದ ಇವುಗಳನ್ನು ಬದಿಗೊತ್ತಿಟ್ಟು ಕ್ಷುಲ್ಲಕಸಂಗತಿಗಳ ಬಗ್ಗೆ ವೈರಭಾವವನ್ನು ತಾಳುವದು ನಿಮ್ಮಂಥವರಿಗೆ ಉಚಿತವಲ್ಲ. ಸ್ವರಾಜ್ಯಶಾಟಿಯನ್ನು ಹೊತ್ತ ಬ್ರಾಹ್ಮಣಬಂಧುಗಳೇ ! ಈ ದುರ್ಭಾವವನ್ನು ಬಿಟ್ಟು ನಿಮ್ಮ ಅಜ್ಞಾನಾಂಧಕಾರದಲ್ಲಿ ಮುಳುಗಿದ ನಿಮ್ಮ ಬಂಧುಗಳನ್ನು ಸುಜ್ಞಾನಪ್ರಕಾಶದಲ್ಲಿ ತರಲೇಬೇಕೆಂದು ಆಶಿಸುವೆನು.

ಬೀರೂರು.

ಈ ಊರಿನ ಎ. ವಿ. ಸ್ಕೂಲಿನಲ್ಲಿ ದರ್ಬಾರ್‌ಡೆ ಮಹೋತ್ಸವವು ಕಳೆದ ತಾ|| ೧೨-೧೨-೨೧ ರಲ್ಲಿ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಸ್ಕೂಲು ಮಂದಿರವು ಸುಂದರವಾಗಿ ಅಲಂಕರಿಸಲ್ಪಟ್ಟು ಸಾರ್ವಭೌಮರ ಮತ್ತು ಶ್ರೀಮನ್ಮಹಾರಾಜರವರ ಭಾವಚಿತ್ರಗಳು ಉಚಿತಾಸನಗಳ ಮೇಲಿಟ್ಟು ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟಿದ್ದುವು. ಎ. ವಿ. ಸ್ಕೂಲು ಮತ್ತು ಪ್ರೈಮರಿಸ್ಕೂಲು ಬಾಲಕರುಗಳೂ, ಉಪಾಧ್ಯಾಯರುಗಳೂ ಸರ್ಕಾರಿಯಧಿಕಾರಿಗಳೂ, ಮು|| ವೈಸ್‌ಪ್ರೆಸಿಡೆಂಟರೂ, ಕೌನ್ಸಿಲರುಗಳೂ, ಇತರ ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. ನಂಜನಗೂಡು ಮು|| ವೈಸ್‌ಪ್ರೆಸಿಡೆಂಟ್ ಮ|| ರಾಮರಾಯರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಕರ್ತವ್ಯದಮೇಲೆ ವಿದ್ಯಾರ್ಥಿ ಆರ್. ಚನ್ನಬಸಪ್ಪನೂ, ಬ್ರಿಟಿಷ್ ಪ್ರಭುತ್ವದಿಂದ ಇಂಡ್ಯಾದೇಶಕ್ಕುಂಟಾಗಿರುವ ಮಹೋಪಕಾರಗಳನ್ನು ಕುರಿತು ಕನ್ನಡ ಪಂಡಿತರಾದ ಮ|| ಲಕ್ಷ್ಮೀನರಸಿಂಹಶಾಸ್ತ್ರಿಗಳಿಂದಲೂ ಸ್ವಾರಸ್ಯವಾಗಿ ಉಪನ್ಯಾಸಗಳು ಮಾಡಲ್ಪಟ್ಟನಂತರ ಗಾನವಾಗಿ ಎ. ವಿ. ಸ್ಕೂಲು ಹೆಡ್ಮಾಸ್ಟರು ಈ ಸಭಾ ಉದ್ದೇಶವನ್ನೂ ಅದರ ಪ್ರಯೋಜನವನ್ನೂ ತಿಳಿಸಿದುದಲ್ಲದೆ ಈ ಉತ್ಸವವನ್ನು ನಡೆಸಲು ಧನಸಹಾಯಮಾಡಿದ ಮ|| ಶಿವಕಥಾಭೂಷಣ ನಂಜುಂಡಾರಾಧ್ಯರ ಗುಣಕಥನವನ್ನು ಮಾಡಿದರು ಮತ್ತು ಈ ಉತ್ಸವವು ನಿರ್ವಿಘ್ನವಾಗಿ ನಡೆಯಲು ಶ್ರಮಪಟ್ಟು ಕೆಲಸಮಾಡಿದ ಸಹೋಪಾಧ್ಯಾಯರುಗಳಿಗೆ ತಮ್ಮ ವಂದನೆಯನ್ನರ್ಪಿಸಿದರು. ತರುವಾಯ ಸಮಸ್ತರಿಗೂ ಗಂಧ ಪುಷ್ಪ ಹಾರ ವಿನಿಯೋಗವಾಗಿ ಜಯಘೋಷದೊಡನೆ ಸಭೆ ವಿಸರ್ಜಿತವಾಯಿತು

ಓರ್ವ ಉತ್ಸವಭಾಗಿ.

ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರ ಸ್ಮಾರಕಫಂಡು,
ಚಿತ್ರದುರ್ಗ.

ಈ ಮಹಾಶಯರು ಈ ಡಿಸ್ಟ್ರಿಕ್ಟಿನಲ್ಲಿ ಎಕನಾಮಿಕ್ ಸೂಪರಿಂಟೆಂಡೆಂಟರಾಗಿಯೂ, ಡಿಸ್ಟ್ರಿಕ್ಟ್‌ಬೋರ್ಡು ಸೆಕ್ರೆಟರಿಗಳಾಗಿಯೂ ಇದ್ದು ಕಳೆದ ಎಪ್ರೇಲ್ ತಿಂಗಳಲ್ಲಿ ಮಂಜರಾಬಾದ್ ತಾಲ್ಲೂಕಿಗೆ ಅಮಲ್‌ದಾರ್ರಾಗಿ ವರ್ಗಪಟ್ಟು ಹೋದರು. ಇವರನ್ನು ಇಲ್ಲಿಂದ ವರ್ಗಮಾಡಿದ್ದು ಈ ಡಿಸ್ಟ್ರಿಕ್ಟು ಪ್ರಜೆಗಳ ದುರದೃಷ್ಟವೇಸರಿ. ಇವರು ಈ ಡಿಸ್ಟ್ರಿಕ್ಟಿನಲ್ಲಿ ಪ್ರಜಾರಂಜಕರಾಗಿದ್ದುಕೊಂಡು ಜನೋಪಯೋಗವಾದ ಕೆಲಸಗಳಲ್ಲಿ ಆಸಕ್ತತೆಯಿಂದ ಇದ್ದು ಪಬ್ಲಿಕ್ ಸರ್ವೆಂಟ್ ಎಂಬಶಬ್ದಕ್ಕೆ ಅನ್ವರ್ಥನಾಮಧಾರಿಗಳಾಗಿದ್ದರು. ಇವರು ಇಲ್ಲಿಂದ ಹೊರಡುವಾಗ್ಗೆ ಎಲ್ಲಾ ಕೋಮಿನವರೂ ಇವರ ವಿಷಯದಲ್ಲಿ ತಮ್ಮಗಳ ಕೃತಜ್ಞತೆಯನ್ನು ತೋರ್ಪಡಿಸುವುದು ಕರ್ತವ್ಯವೆಂದು ಭಾವಿಸಿ ಇವರಿಗೆ ಒಂದು ಟೀ ಪಾರ್ಟಿಯನ್ನು ಕೊಡಬೇಕೆಂದು ಪ್ರಯತ್ನಗಳನ್ನು ಮಾಡಿದರು. ಈ ಸಂದರ್ಭದಲ್ಲಿ ಈ ಡಿಸ್ಟ್ರಿಕ್ಟು ಹೈಸ್ಕೂಲ್ ಹೆಡ್ಮಾಸ್ಟರಾದ ಮ|| ಕೆ. ಸಂಜೀವಶೆಟ್ಟರು ಬಿ. ಎ. ಯವರು ಟೀ ಪಾರ್ಟಿಗಾಗಿ ಶೇಖರಿಸಬಹುದಾದ ದ್ರವ್ಯವನ್ನು ವೃಥಾ ತಿಂಡಿತೀರ್ಥಗಳಿಗೆ ಖರ್ಚುಮಾಡುವುದಕ್ಕೆ ಬದಲು ಮ|| ಕೆ. ಸಿದ್ಧರಾಮಪ್ಪನವರ ಹೆಸರನ್ನು ಈ ಡಿಸ್ಟ್ರಿಕ್ಟಿನ ಜನರು ಮರೆಯದೇ ಇರುವಂತೆಯೂ, ಮತ್ತು ಸದರಿ ದ್ರವ್ಯವು ವಿದ್ಯಾಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸುವುದು ಯುಕ್ತವೆಂದೂ ಸೂಚಿಸಿದರು. ಸರ್ವರೂ ಇದನ್ನನುಮೋದಿಸಿ ಎಂಟರ್‌ಟೈನ್‌ಮೆಂಟಿಗೆ ಫಲಪುಷ್ಪತಾಂಬೂಲಾದಿಗಳ ಖರ್ಚು ಜಾತಾ ಉಳಿಯಬಹುದಾದ ಮೊಬಲಗನ್ನು ಮ|| ಕೆ. ಸಿದ್ಧರಾಮಪ್ಪನವರ ಪ್ರೈಜ್ ಫಂಡೆಂದು ಕರೆಯಬೇಕೆಂತಲೂ, ಅದರಿಂದ ಬರತಕ್ಕ ಬಡ್ಡಿಯಲ್ಲಿ ಸಾಲಿಯಾನಾ ಒಂದು ಪ್ರೈಜನ್ನು ಚಿತ್ರದುರ್ಗದ ಹೈಸ್ಕೂಲಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದ ಹಿಂದುಳಿದ ಜನಾಂಗಗಳ ವಿದ್ಯಾರ್ಥಿಗಳಪೈಕಿ ಮೊದಲನೇ ರ್‍ಯಾಂಕ್ ಪಡೆದವರಿಗೆ ಕೊಡಬೇಕೆಂತಲೂ ತೀರ್ಮಾನಿಸಿ ರಿಸೆಪ್ಷನ್ ಕಮಿಟಿಮೆಂಬರುಗಳಿಗೆ ತಿಳುಹಿಸಿದರು. ಇದಕ್ಕಾಗಿ ತಹಲ್‌ವರೆಗೂ ಚಂದಾ ಕೊಟ್ಟವರ ಹೆಸರುಗಳನ್ನು ಕೆಳಗೆ ನಮೂದಿಸಿದೆ.

ಮೇಲ್ಕಂಡಂತೆ ತಾ 16-4-21ರಲ್ಲಿ ಇಲ್ಲಿನ ಶ್ರೀ ಚಾಮರಾಜೇಂದ್ರ ಮೆಮೋರಿಯಲ್ ಹಾಲಿನಲ್ಲಿ ಈ ಟವನ್‌ನಿವಾಸಿಗಳು ಸಭೆಸೇರಿ ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರನ್ನು ಆದರದಿಂದ ಸಭೆಗೆ ಬರಮಾಡಿಕೊಂಡು ಅವರಿಗೆ ತಮ್ಮ ಕೃತಜ್ಞತಾವಂದನೆಗಳನ್ನರ್ಪಿಸಿ, ಅವರ ಹೆಸರಿನಲ್ಲಿ ಪ್ರೈಜ್ ಫಂಡು ಏರ್ಪಡಿಸಿರುವುದನ್ನು ತಿಳುಹಿಸಿ ಅವರನುಜ್ಞೆ ಪಡೆದು ಅವರಿಗೂ, ಸಭಿಕರಿಗೂ ಫಲಪುಷ್ಪತಾಂಬೂಲಾದಿಗಳನ್ನು ಅರ್ಪಿಸಿದರು.

ಚಂದಾಕೊಟ್ಟವರ ಹೆಸರುಗಳು.—ಚಿತ್ರದುರ್ಗದ ಶ್ರೀಮದ್ ವೀರಶೈವ ಮಹಾಜನಗಳು ರೂ. 50-0-0, ಮ||ಗಳಾದ.—ಜಿನ್ನಿಂಗ್ ಫ್ಯಾಕ್ಟರಿ ದಾವಣಗೆರೆ ಹಾಲಪ್ಪನವರು 25-0-0, ಅಡ್ವೋಕೇಟ್ ಯಂ. ಅನಂತಯಶೆಟ್ಟರು 5-0-0, ಕೆ. ಸಂಜೀವಶೆಟ್ಟಿ ಬಿ. ಎ. ಯವರು 2-0-0, ಡಾ. ಕೆ. ನಾರಾಯಣಶೆಟ್ಟರು 2-0-0, ಆರವೇಟಿ ಕೃಷ್ಣಪ್ಪನವರು 2-0-0, ಜವಳಿ ಅಂಗಡಿ ದೊಡ್ಡಯಲ್ಲಪ್ಪನವರು 2-0-0, ಫುನಂಮ್‌ಚಂದರವರು 2-0-0, ಲಾಡರ ಈಶ್ವರಪ್ಪನವರು 2-0-0, ಒಡೇರ ಸಿದ್ಧಪ್ಪಯ್ಯನವರು ಬಿಳಿಚೋಡ 2-0-0, ಗೌಡ ತುರವಪ್ಪನವರು 1-0-0, ಯಜಮಾನ ಜಡಿಯಪ್ಪನವರು 1-0-0, ಗೌಡ ಲಿಂಗಪ್ಪನವರು 1-0-0, ದೇವಾಂಗದ ತಿಮ್ಮಪ್ಪನವರು 1-0-0, ದೇವಾಂಗದ ವರಕೇರಪ್ಪನವರು 1-0-0, ಜವಳಿ ಅಂಗಡಿ ಯಂ. ಮುತ್ಯಾಲ ರೆಡ್ಡಿಯವರು 1-0-0, ಕೆ. ವೀರಭದ್ರಾಚಾರ್ಯರು 1-0-0, ಅಬ್ದುಲ್ ರಜಾಕ್ ಸಾಹೇಬರು 1-0-0, ಪಟೇಲ್ ಶಂಕರಪ್ಪನವರು 1-0-0, ಕಾಶಿ ಕೇಶವಶೆಟ್ಟರು 1-0-0, ಕಾಶಿ. ಸೀನಪ್ಪನವರು 1-0-0, ಜವಳಿ ಅಂಗಡಿ ಮೈಲಾರಪ್ಪ ಖಂಡೋಜಪ್ಪನವರು 1-0-0, ಪಲ್ಲಕ್ಕಪ್ಪ ಯಲ್ಲಪ್ಪನವರು 1-0-0, ಷರಾಪ್ ಗಿರಿಶೆಟ್ಟರು 1-0-0, ಕೊಂಡ್ಲಹಳ್ಳಿ ಬುಸರೆಡ್ಡಿ ನಾಗಪ್ಪನವರು 1-0-0, ಚಿಕ್ಕಪ್ಪನಹಳ್ಳಿ ಸಾರಂಗಮಠದ ವೀರಭದ್ರಯ್ಯನವರು 1-0-0, ಕೆ. ಚಂಗಯ್ಯಶೆಟ್ಟರು 1-0-0, ಯಸ್. ಯಲ್. ಅಪ್ಪಯ್ಯ ಶೆಟ್ಟರು 1-0-0, ಷರಾಫ್ ಲಿಂಗಶೆಟ್ಟರು 1-0-0, ಕೊಂಡಪ್ಪನವರು 0-8-0, ವೆಂಕಟಗಿರಿರಾಯರು 0-8-0, ಜುಮ್ಲಾ 115-0-0.

ಈ ಮೊಬಲಿಗನಲ್ಲಿ 16-4-21ರಲ್ಲಿ ಮ. ಕೆ. ಸಿದ್ಧರಾಮಪ್ಪನವರ ಮತ್ತು ಸಭಾ ಜನಗಳ ತಾಂಬೂಲದ ಖರ್ಚಿಗಾಗಿ 8-0-0 ಎಂಟು ರೂಪಾಯಿ ಜಾತಾ ಬಾಕಿ ಒಂದುನೂರೇಳು ರೂ. ಗಳು ಚಿತ್ರದುರ್ಗದ ಹೈಸ್ಕೂಲ್ ಹೆಡ್ಮಾಸ್ಟರವರಲ್ಲಿ ಡಿಪಾಜಿಟ್ ಇಡಲ್ಪಟ್ಟಿದೆ. ಈ ಫಂಡಿಗಾಗಿ ವಾಗ್ದಾನಮಾಡಿರುವ ಮತ್ತು ಸಹಾಯಮಾಡಬೇಕೆಂದಿರುವ ಮಹಾಶಯರು ದಯವಿಟ್ಟು ತಮ್ಮ ಚಂದಾದ್ರವ್ಯವನ್ನು ಚಿತ್ರದುರ್ಗದ ಹೈಸ್ಕೂಲ್ ಹೆಡ್‌ಮಾಸ್ಟರಲ್ಲಿಗೆ ಪಾವತಿ ಮಾಡಬೇಕಾಗಿ ಕೋರಲ್ಪಟ್ಟಿದೆ.

ಯಸ್. ಪಿ. ಹನುಮಂತರಾಜು, ಸೆಕ್ರೆಟರಿ,
ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರ ಸ್ಮಾರಕ ಫಂಡ್.

ತಿಪಟೂರು ತಾಲ್ಲೂಕ್ ಗುರುಗದಹಳ್ಳಿ ರೀಡಿಂಗ್‌ರೂಂ.

ಕಳೆದ ೧೯೨೧ನೆ ಡಿಸೆಂಬರ್ ತಾ ೧೨ರಲ್ಲಿ ದರ್ಬಾರ್‌ಡೇ ಮಹೋತ್ಸವದ ಜ್ಞಾಪಕಾರ್ಥವಾಗಿ ಗ|| ಕನ್ನಡಸ್ಕೂಲ್ ಮಾ|| ಮ|| ಎನ್. ಲಿಂಗಣ್ಣಯ್ಯನವರ ಪ್ರೋತ್ಸಾಹದಿಂದಲೂ ಗ್ರಾಮಸ್ಥರ ದ್ರವ್ಯಸಹಾಯದಿಂದಲೂ ಸ್ಥಾಪಿಸಲ್ಪಟ್ಟ ರೀಡಿಂಗ್‌ರೂಮಿಗೆ ತರಿಸುತ್ತಿದ್ದ ಪತ್ರಿಕೆಗಳ ಚಂದಾವಾಯಿದೆಯು ಗತಿಸುತ್ತಾ ಬಂದುದರಿಂದ ತಾ|| ೧೮-೧೨-೨೧ ನೇ ಭಾನುವಾರ ಮೇಲ್ಕಂಡ ಸ್ಕೂಲಿನಲ್ಲಿ ಮೀಟಿಂಗುನಡೆದು ಹಿಂದೆ ರೀಡಿಂಗ್‌ರೂಮಿಗೆ ಬರುತ್ತಿದ್ದ ವೃತ್ತಪತ್ರಿಕೆಗಳ ಜೊತೆಗೆ ಮೈಸೂರ್‌ಗೆಜೆಟ್ ಮೊದಲಾದ ನಾಲ್ಕು ಪತ್ರಿಕೆಗಳನ್ನ ತರಿಸಬೇಕೆಂತಲೂ, ಹಿಂದಿನವರ್ಷದಂತೆ ಈ ಸಾರಿಯೂ ಸ್ಕೂಲ್ ಮಾ|| ಮ|| ಎನ್. ಲಿಂಗಣ್ಣಯ್ಯನವರೇ ಸೆಕ್ರೆಟರಿಗಳಾಗಿರತಕ್ಕದ್ದೆಂತಲೂ ತೀರ್ಮಾನವಾಯ್ತು.

ಸ್ಥಳವಾಸಿ.

ಶ್ರೀ ಚಾಮರಾಜೇಂದ್ರ ಒಡೆಯರವರ ಆಬ್ದಿಕವಂತೆ.

ನಾನು ಎಂದಿನಂತೆ ತಿರುಪವನ್ನೆತ್ತುತ್ತ ಇದೇ ಮಾಹೆ ೨೮ನೆ ತಾರೀಖು ಬುಧವಾರ ಸುಮಾರು ೧೧ ಗಂಟೆಗೆ ಚಾಮರಾಜಪೇಟೆಗೆ ಬರಲು ಬ್ರಾಹ್ಮಣರ ಮನೆಗಳಲ್ಲಿ ಒಂದು ಪ್ರಾಣಿಯನ್ನಾದರೂ ನೋಡಲಿಲ್ಲ. ಹನ್ನೆರಡು ಗಂಟೆಯವರೆಗೂ ಸುತ್ತಿಸುತ್ತಿ ಸಾಕಾಗಿ ಕೊನೆಗೆ ಒಬ್ಬ ಬ್ರಾಹ್ಮಣೇತರರಮನೆ ಬಾಗಿಲಿಗೆ ಬರಲು ಅವರು ಸ್ವಲ್ಪ ಅನ್ನವನ್ನು ಕೊಟ್ಟರು. ಅದನ್ನು ತಿಂದು ಸ್ವಲ್ಪ ಹೊತ್ತಿನನಂತರ ಆ ಮನೆಯವರನ್ನು "ಬ್ರಾಹ್ಮಣರು ಬಡವರು ದೊಡ್ಡ ದೊಡ್ಡ ಅಧಿಕಾರಿಗಳ ಮನೆಯವರೂ ಸಹ ಮನೆ ಬೀಗಗಳನ್ನು ಹಾಕಿಕೊಂಡಿರುತ್ತಾರೆ ಕಾರಣವೇನು ಅಮ್ಮ ?" ಎಂದು ನಾನು ಕೇಳಲು ಅವರು "ಈ ದಿನ ಶ್ರೀ ಚಾಮರಾಜೇಂದ್ರ ಒಡೆಯರ ಎಡಕಟ್ಟಳೆ ಮತ್ತು ಅದಕ್ಕಾಗಿ ೩೦ ಪಲ್ಲ ಅಕ್ಕಿ ಖಾಸಾಪಾಕಶಾಲೆಯಿಂದ ತಯಾರಿಸಿದ ಲಾಡು ಮೊದಲಾದ ಭಕ್ಷ್ಯಗಳನ್ನು ಊಟಮಾಡಲು ಹೋಗಿರುತ್ತಾರಯ್ಯ" ಎಂದರು. "ತಮ್ಮ ಮನೆಯವರು ಏತಕ್ಕೆ ಹೋಗಲಿಲ್ಲ ?" ಎಂದು ಕೇಳಲು, ಅದು ಬ್ರಾಹ್ಮಣರಿಗೆ ಮಾತ್ರವಂತೆ, ಅವರು ಎಷ್ಟೇ ದೊಡ್ಡ ಅಧಿಕಾರಿಗಳಾಗಲಿ, ಎಷ್ಟೇ ಐಶ್ವರ್ಯವಂತರಾಗಲಿ, ಅದು ಅವರಿಗೆ ವಂಶಪಾರಂಪರ್ಯವಾಗಿ ಬಂದ ಹಕ್ಕುದಾರಿಯಂತೆ. ಇದೂ ಅಲ್ಲದೆ ಅವರಿಗೆ ಊಟವಾದನಂತರ ಪ್ರತಿಯೊಬ್ಬರಿಗೂ ಒಂದೊಂದು ರೂಪಾಯಿ ದಕ್ಷಿಣೆಯಂತೆ !" ಎಂದು ಅವರು ಹೇಳಿದರು. "ಹಾಗಲ್ಲ ತಾಯಿ, ನಾನು ೧೯೦೭ನೆ ಇಸವಿಯಲ್ಲಿ ಮದ್ರಾಸಿನಲ್ಲಿದ್ದಾಗ್ಗೆ, ಅಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರ ಆಬ್ದಿಕವನ್ನು ಮಾಡಿದರು. ನನ್ನಂಥ ಕುಂಟರು, ಕುರುಡರು ಇವರೇ ಮೊದಲಾದ ಅಂಗವಿಹೀನರಿಗೂ ಇತರ ತಿರುಪೆಯವರಿಗೂ ಮೃಷ್ಟಾನ್ನಭೋಜನವನ್ನು ಮಾಡಿಸಿದರು. ಈಗಲೂ ಸಹ ನಮ್ಮಂಥ ಅನಾಥರಿಗೆ ತಿಂಡಿಯನ್ನು ಹಾಕಲು ಏರ್ಪಾಟುಮಾಡಿರಬಹುದು. ಆ ಸ್ಥಳಯಾವುದು ?" ಎಂದು ನಾನು ಕೇಳಲು, ಶಂಕರಮಠದಲ್ಲಿ ಏರ್ಪಾಟುಮಾಡಿರುತ್ತಾರೆಂದು ಅವರು ಹೇಳಿದರು. ನಾನು ಅಲ್ಲಿಗೆ ಹೋಗಿ ನೋಡುವಲ್ಲಿ ಅನೇಕ ಬ್ರಾಹ್ಮಣರು ಮೋಟಾರುಗಳಲ್ಲಿಯೂ ಕುದುರೆಗಾಡಿಗಳಲ್ಲಿಯೂ ಬಂದು ಒಳಗೆ ಹೋಗುತ್ತಿದ್ದರು. ನನ್ನಂಥ ತಿರುಪೆಯವರನೇಕರು ಬೆಳಗಿನಿಂದಲೂ ನಾಯಿಗಳಂತೆ ಕಾದುಕೊಂಡು ಅಲ್ಲಿ ಬಿದ್ದಿದ್ದರು. ಆದರೇನು ! ಅದೆಲ್ಲವೂ ಬ್ರಾಹ್ಮಣರಿಗೆ ಮಾತ್ರವಂತೆ ! ಬೆಂಗಳೂರಿನ ಮತ್ತು ಪರಸ್ಥಳದ ಶ್ರೀಮತಸ್ಥ ಬ್ರಾಹ್ಮಣರಿಗೆ ಮಾತ್ರ ಶಂಕರಮಠದಲ್ಲೂ ತುಳಸೀತೋಟದಲ್ಲೂ ಮತ್ತು ಪೂರ್ಣಯ್ಯನವರ ಛತ್ರದಲ್ಲೂ ಬೇಕಾದ ಏರ್ಪಾಟುಗಳಂತೆ ! ಸುಮಾರು ೧೫ ಸಹಸ್ರ ರೂಪಾಯಿಗಳು ಖರ್ಚಾಗಿರುವುದಂತೆ ! ತಿರುಪೆಯವರಾದ ನಾವುಗಳು ಕಾದುಕಾದು ಸಾಕಾಗಿ ಒಣಮೋರೆಗಳನ್ನು ಹಾಕಿಕೊಂಡು ನಿರಾಶರಾಗಿ ವಾಪಸ್ಸು ಬಂದೆವು.

ಒಬ್ಬ ಕುಂಟ.

ಮಗೆ ಮಾತ್ರ ಸುತರಾಂ ಅವಕಾಶವಿಲ್ಲ. ಏಕೆಂದರೆ—ಯಾರೊಬ್ಬರು ಕಾಂಗ್ರೆಸ್ಸಿಗೆ ಸೇರಿದರೂ ಕೂಡಲೇ ದೌರ್ಜನ್ಯರಾಹಿತ್ಯವನ್ನು ಕುರಿತು ಮುಂದಾಗಿ ಪ್ರಮಾಣಮಾಡಬೇಕಾದುದು ಮುಖ್ಯ ವಿಧಿಯಾಗಿದೆ. ಭರತಖಂಡಕ್ಕೆ ಸ್ವರಾಜ್ಯಪ್ರಾಪ್ತಿಯಾದರೆ ಆಂಗ್ಲಸಾಮ್ರಾಜ್ಯವು ವಿಚ್ಛಿನ್ನವಾಗುವುದು. ಆಗ ಇದರ ಸ್ವಾತಂತ್ರ್ಯ ಸ್ವರೂಪವು ನಿರ್ಧಾರಿತವಾಗುವುದು. ಈಗ ಮಿತವಾದಿಗಳೇ ಮೊದಲಾದವರು ನಮ್ಮ ಮೇಲೆ ಸಾನುಭೂತಿಯನ್ನು ತೋರಿಸುತ್ತಿದ್ದಾರೆ. ಹೀಗಿರುವಲ್ಲಿ ಅವರ ಸಾನುಭೂತಿಗೆ ಸ್ವಲ್ಪವೂ ಅವಕಾಶಕೊಡದಂತೆ ಮಾಡುವ ನೂತನ ಸಾಧನವನ್ನವಲಂಬಿಸುವುದಕ್ಕೆ ತೊಡಗಿ ಅವರ ಮೈತ್ರಿಯನ್ನು ನೀವುಗಳು ಕಳೆದುಕೊಳ್ಳಬೇಡಿರಿ ಎಂದು ಹೇಳಿ ಮೋಹನೀಯವರ ಸವರಣೆಯ ದೋಷಗಳನ್ನು ಎತ್ತಿ ತೋರಿಸಿದರು.

ಮತ್ತು ಸಭೆಯಲ್ಲಿ ನಡೆದ ಉಳಿದ ತೀರ್ಮಾನಗಳಲ್ಲಿ ಮುಖ್ಯವಾದುವುಗಳಾವುವೆಂದರೆ—ಸ್ವಚ್ಛಂದಸೇವಕ ಸಂಘಗಳನ್ನು ನಿರ್ಮೂಲಪಡಿಸಿದರೆ ನಮ್ಮ ಚಳವಳಿಯ ಬಲವು ಮುರಿದುಹೋಗುವುದೆಂದು ಪ್ರಭುತ್ವದವರು ಯೋಚಿಸಿ ಅವುಗಳನ್ನೆಲ್ಲಾ ಶಾಸನವಿರುದ್ಧಗಳೆಂದು ಪ್ರಕಟಿಸಿರುವುದಲ್ಲದೆ, ನಮ್ಮ ಸಭೆಗಳನ್ನು ಪ್ರತಿಬಂಧಿಸುತ್ತಿರುವುದರಿಂದ, ದೇಶೀಯರೆಲ್ಲರೂ ಬೊಂಬಾಯಿ ಸಭೆಯಲ್ಲಿ ವರ್ಕಿಂಗ್‌ಕಮಿಟಿಯವರು ನಿರ್ಧಾರಮಾಡಿರುವಂತೆ ಸ್ವಚ್ಛಂದಸೇವಕರ ಸಂಘಗಳನ್ನು ಎಲ್ಲೆಲ್ಲೂ ಸ್ಥಾಪಿಸಿ ೧೮ ವಯಸ್ಸಿಗೆ ಮೇಲ್ಪಟ್ಟವರೆಲ್ಲರೂ ಅವುಗಳ ಸಭಿಕರಾಗಿ ಸೇರಬೇಕು. ಆಡಂಬರವಿಲ್ಲದೆ ಕೆಲಸಮಾಡುತ್ತ ಸರ್ಕಾರದವರು ಹಿಡಿದರೂ ಕಾರಾಗೃಹಕ್ಕೆ ಹೋಗುವುದಕ್ಕೂ ಪ್ರಾಣವನ್ನಾದರೂ ಕೊಡುವುದಕ್ಕೂ ಸಿದ್ಧರಾಗಬೇಕು. ಕೆಲಕಾಲದ ಮಟ್ಟಿಗಾದರೂ ಶಾಲಾವಿದ್ಯಾರ್ಥಿಗಳೂ ಉಪಾಧ್ಯಾಯರೂ ಸಹ ತಮ್ಮ ಕೆಲಸವನ್ನು ಬಿಟ್ಟು ಈ ಸಂಘಗಳಿಗೆ ಸೇರಿ ಕೆಲಸ ಮಾಡಬೇಕು. ಬಹಿರಂಗಸಭೆಗಳನ್ನು ಕೂಡಿಸಲಾಗದೆಂದು ಸರ್ಕಾರದವರು ನಿರೋಧಿಸಿದರೂ ಯಾವುದಾದರೂ ಮನೆಗಳಲ್ಲಿ ಸಭೆಗೂಡಿಸಿ, ಟಿಕೇಟುಗಳನ್ನಿಟ್ಟು, ಅವುಗಳನ್ನು ಪಡೆದವರನ್ನೇ ಒಳಕ್ಕೆ ಬಿಡುವಂತೆ ಮಾಡಿಕೊಂಡು ಆ ಸಭೆಯಲ್ಲಿ ನಡೆಯಿಸುವ ಉಪನ್ಯಾಸಗಳನ್ನು ಬರೆದುತಂದು ಓದಬೇಕು, ದೌರ್ಜನ್ಯವನ್ನೂ ಆಗ್ರಹವನ್ನೂ ಪ್ರಜೆಗಳಲ್ಲಿ ಹುರಿದುಂಬಿಸುವಂಥ ಮಾತುಗಳನ್ನು ಎಲ್ಲೂ ಆಡಕೂಡದು ಎಂದೂ ಮತ್ತೊಂದು ತೀರ್ಮಾನವನ್ನು ಮಾಡಿರುವರು.

ದೇಶೀಯರ ಪೌರುಷವನ್ನು ಧ್ವಂಸಗೊಳಿಸುವುದಕ್ಕಾಗಿ ಪ್ರಭುತ್ವದವರು ನಿರಾತಂಕವಾಗಿ ಅಧಿಕಾರಪ್ರಯೋಗಮಾಡುತ್ತಿರುವುದಕ್ಕೆ ತಡೆಗಟ್ಟುವುದರಲ್ಲಿ ಇತರ ಸಾಧನಗಳೆಲ್ಲಾ ವ್ಯರ್ಥವಾದ ಸಂದರ್ಭದಲ್ಲಿ ಕೈಯಲ್ಲಿ ಕತ್ತಿಹಿಡಿದು ವಿಪ್ಲವವನ್ನು ಮಾಡುವುದಕ್ಕೆ ಪ್ರತಿಯಾಗಿ, ನಾಗರಿಕತೆಯುಳ್ಳ ಪ್ರಜೆಗಳೇ ಆಗಲಿ ಸಂಘಗಳೇ ಆಗಲಿ ಆಜ್ಞೋಲ್ಲಂಘನೆಯನ್ನು ಮಾಡುವುದೇ ಉತ್ತಮಮಾರ್ಗವೆಂಬುದು ಸಭೆಯ ಅಭಿಪ್ರಾಯವಾಗಿರುತ್ತದೆ. ಆದರೆ ಶಾಂತಿಯುಕ್ತವಾಗಿರುವ ಈಗಣ ಪ್ರಯತ್ನದಲ್ಲಿ ನಂಬುಗೆಯುಳ್ಳವರೆಲ್ಲರೂ ಈಗಣ ನಿರಂಕುಶ ಪ್ರಭುತ್ವವನ್ನು ತೊಲಗಿಸುವುದಕ್ಕಾಗಿ ಯಾವದ್ಭಾರತ ಕಾಂಗ್ರೆಸ್ ಸ್ಥಾಯಿಸಂಘದವರು ಕಳೆದ ತಿಂಗಳಲ್ಲಿ ತೀರ್ಮಾನಿಸಿರುವ ಪ್ರಕಾರ ಪ್ರಜೆಗಳೆಲ್ಲರೂ ದೌರ್ಜನ್ಯರಾಹಿತ್ಯ ರಹಸ್ಯ ಸಿದ್ಧಾಂತವನ್ನು ಚೆನ್ನಾಗಿ ಗ್ರಹಿಸಿದಬಳಿಕವೇ ದೇಶದ ಎಲ್ಲ ಕಡೆಯಲ್ಲೂ ಶಾಸನೋಲ್ಲಂಘನೆಯನ್ನು ಮಾಡಬಹುದೆಂಬುದು ಮತ್ತೊಂದು ತೀರ್ಮಾನವಾಗಿರುತ್ತದೆ. ಇದರಿಂದ ಶಾಸನೋಲ್ಲಂಘನೆ ಮಾಡುವುದಕ್ಕೂ, ಸರ್ಕಾರದ ಅಪ್ಪಣೆಗಳಿಗೆ ವಿರುದ್ಧವಾಗಿ ಸ್ವಚ್ಛಂದಸೇವಕ ಸಂಘಗಳನ್ನು ಬಲಪಡಿಸಲಿಕ್ಕೂ ಕಾಂಗ್ರೆಸ್ಸಿನವರು ಬದ್ಧದೀಕ್ಷೆಯನ್ನು ವ್ಯಕ್ತಪಡಿಸಿದಂತಾಯಿತು. ಅತ್ತ ಪ್ರಭುತ್ವದವರಾದರೂ ಅಧಿಕಾರಬಲದಿಂದಲೇ ವಿಜೃಂಭಣವನ್ನು ಅಣಗಿಸುವುದಕ್ಕೆ ಮತ್ತಷ್ಟು ಅಧಿಕಪ್ರಯತ್ನಗಳನ್ನು ಮಾಡಲು ಸಿದ್ಧರಾಗಿರುವರೆಂದು ವೈಸ್ರಾಯರ ಭಾಷಣದಿಂದ ವ್ಯಕ್ತವಾಗಿರುವುದು. ಈ ಪರಿಸ್ಥಿತಿಯಲ್ಲಿ ದೌರ್ಜನ್ಯರಾಹಿತ್ಯವೂ ಶಾಂತಿಯೂ ದೇಶದೊಳಗೆ ಎಷ್ಟುಕಾಲ ನೆಲಸಿದ್ದೀತು? ಯಾವುದಾದರೊಂದು ಪಕ್ಷವು ತಗ್ಗಿದಲ್ಲದೆ ಸೌಜನ್ಯಶಾಂತಿಗಳು ವಿಕಸಿಸುವುದು ಅಸಂಭವವೇಸರಿ.

ಯಾವದ್ಭಾರತ ಖಿಲಾಫತ್ ಮಹಾಸಭಾ.

ಕಳೆದವಾರ ಅಹಮ್ಮದಾಬಾದಿನಲ್ಲಿ ನೆರೆದ ಮಹಾಸಭೆಗಳೊಳಗೆ ರಾಷ್ಟ್ರೀಯ ಮಹಾಸಭೆ ಮತ್ತು ಮಹಮ್ಮದೀಯ ಮಹಾಸಭೆ ಖಿಲಾಫತ್ ಮಹಾಸಭೆಗಳ ನಡವಳಿಕೆಗಳೇ ಪ್ರಕೃತಕ್ಕೆ ಎಲ್ಲರಿಂದಲೂ ನಿರೀಕ್ಷಣೀಯಗಳಾಗಿದ್ದುವು. ಮಹಮ್ಮದೀಯ ಮಹಾಸಭೆಗಾಗಿ ಏರ್ಪಡಿಸಿದ್ದ ಮಂಟಪದಲ್ಲೇ ಖಿಲಾಪತ್ ಮಹಾಸಭೆಯು ಹಕೀಂಅಜ್ಮಲ್‌ಖಾನರವರ ಅಧ್ಯಕ್ಷತೆಯಿಂದ ಕಳೆದ ತಾ|| ೨೬ರಲ್ಲಿ ಕೂಡಿದ್ದಿತು. ಸತ್ಕಾರಸಂಘಾಧ್ಯಕ್ಷರಾಗಿದ್ದ ಸಯ್ಯದ್ ಅಹಮ್ಮದ್‌ಆಲಿಯವರು ಮಾಡಿದ ಭಾಷಣದಲ್ಲಿ—ಅಹಮ್ಮದಾಬಾದ್ ಪಟ್ಟಣವು ಪೂರ್ವದ ಮಹಮ್ಮದೀಯ ಪ್ರಭುಗಳ ಆಳಿಕೆಯಲ್ಲಿ ಅನಂತೈಶ್ವರ್ಯವನ್ನು ಪಡೆದುಕೊಂಡಿದ್ದಿತೆಂದೂ, ಇಂಗ್ಲೀಷರ ಆಳಿಕೆ ಬಂದಮೇಲೆ ಅದೆಲ್ಲಾ ಹಾಳಾಯಿತೆಂದೂ ಈಗಣ ರಾಜಕೀಯ ಚಳವಳಿಯನ್ನು ನಾವುಗಳು ಅವಿಚ್ಛಿನ್ನವಾಗಿ ನಡೆಯಿಸಿದರೆ ನಮ್ಮ ದುರ್ದಶೆಯೆಲ್ಲಾ ತೊಲಗಿಹೋಗುವುದೆಂದೂ, ಮಹಮ್ಮದೀಯ ಮತಾಧಿಕಾರಿಗಳು ಪ್ರಕಟಿಸಿದ ಆಜ್ಞಾಪತ್ರಗಳನ್ನು ಸರ್ಕಾರದವರು ಬಹಿಷ್ಕರಿಸಿರುವಾಗ ಮಹಮ್ಮದೀಯರುಗಳು ಸೈರಿಸಿಕೊಂಡಿರುವುದು ಉಚಿತವಲ್ಲವೆಂದೂ ಅಭಿಪ್ರಾಯವಿದ್ದಿತು.

ಸಭಾಧ್ಯಕ್ಷರ ಭಾಷಣವು ಆವೇಶಪೂರಿತವಾಗಿಯೂ ಗಂಭೀರವಾಗಿಯೂ ಇದ್ದಿತು. ಅದರಲ್ಲಿ ಭರತಖಂಡದ ಪ್ರಾಚೀನ ವೈಭವವನ್ನೂ ಮಹಮ್ಮದೀಯ ರಾಷ್ಟ್ರಗಳ ಪ್ರಾಚೀನಾಧುನಿಕ ಸ್ಥಿತಿಗಳನ್ನೂ ವರ್ಣಿಸಿ, ಈ ಮಧ್ಯೆ ತುರ್ಕಿ ಸಾಮ್ರಾಜ್ಯವನ್ನೇ ಶತ್ರುಗಳು ನುಂಗಿಬಿಡುವರೆಂಬ ಸ್ಥಿತಿಯುಂಟಾಗಿದ್ದು ಈಗ ಆ ಸ್ಥಿತಿಯೆಲ್ಲಾ ತಲೆಕೆಳಗಾಯಿತೆಂದೂ, ಈಗ ಮಹಮ್ಮದೀಯ ರಾಷ್ಟ್ರಗಳೆಲ್ಲಾ ಬಲಾಢ್ಯವಾಗಿರುವುವೆಂದೂ, ಆಸ್ಯಾಖಂಡದ ಮಧ್ಯಪ್ರದೇಶದಲ್ಲಿ ಸ್ವತಂತ್ರ ಮಹಮ್ಮದೀಯ ರಾಷ್ಟ್ರಗಳು ಈಗ ತಲೆಯೆತ್ತಿಕೊಂಡು ಮುಂದಣ ಮಹಮ್ಮದೀಯ ಮತದ ಮಹೋನ್ನತದಶೆಯನ್ನು ಸೂಚಿಸುತ್ತಿರುವುವೆಂದೂ, ಕಾಕಸಸ್, ಪರ್ಷಿಯಾ, ಅಫ್ಘಾನಿಸ್ಥಾನ, ಅಂಗೋರಾ ಮೊದಲಾದ ಪ್ರಭುತ್ವಗಳು ಮಹಮ್ಮದೀಯ ಮತಕ್ಕೆ ನೂತನ ಪ್ರೋತ್ಸಾಹವನ್ನು ಕಲ್ಪಿಸುತ್ತಿರುವುವೆಂದೂ, ಆಂಗ್ಲರು ಗ್ರೀಕರಿಗೆ ಎಷ್ಟು ಸಹಾಯ ಮಾಡಿದರೂ ಕೇಮಲಿಸ್ಟ್ ಸೈನಿಕರು ಗ್ರೀಕರನ್ನು ಸೋಲಿಸಿದರೆಂದೂ, ಇಂಗ್ಲೀಷರಿಗೂ ಆಫ್ಘನ್ನರಿಗೂ ಸಂಧಿಯಾದುದರಿಂದ ಈಗ ಆಫ್ಘಾನಿಸ್ಥಾನವು ಸ್ವತಂತ್ರವಾಯಿತೆಂದೂ, ಇದರಿಂದ ಆಂಗ್ಲಸಾಮ್ರಾಜ್ಯವಾದಿಗಳ ದುರುದ್ದೇಶಗಳೊಂದೂ ಕೇಂದದಂತೆ ಮಾಡಿಕೊಂಡ ಆಫ್ಘಾನಿಸ್ಥಾನ ಅಮೀರರನ್ನೂ ಅವರ ಮಂತ್ರಿಗಳನ್ನೂ ಅಭಿನಂದಿಸುತ್ತೇವೆಂದೂ, ಈಗ ಆಂಗ್ಲರ ರಾಜನೀತಿಜ್ಞತೆಯೆಲ್ಲಾ ವ್ಯರ್ಥವಾಯಿತೆಂದೂ, ಅದರಿಂದಲೇ ಫ್ರೆಂಚರು ಅಂಗೋರಾ ತುರ್ಕಿಪ್ರಭುತ್ವದವರೊಡನೆ ಪ್ರತ್ಯೇಕ ಸಂಧಿ ಮಾಡಿಕೊಂಡರೆಂದೂ ಇಟಲಿಯವರು ಕೂಡ ಹಾಗೆ ಮಾಡಿಕೊಂಡಾರೆಂದು ಭಯಪಟ್ಟು ಅದನ್ನು ಮಾಡಗೊಡಿಸದಂತೆ ಇಂಗ್ಲೀಷರು ಸಕಲಪ್ರಯತ್ನಗಳಿಂದಲೂ ತಡೆಯುತ್ತಿರುವರೆಂದೂ, ಆದರೂ ಇಟಲಿಯವರೂ ಕೂಡ ಪ್ರತ್ಯೇಕ ಸಂಧಿಯನ್ನು ಮಾಡಿಯೇ ತೀರಿಸುವರೆಂದು ನಾನು ನಂಬುತ್ತೇನೆಂದೂ, ಪೂರ್ವದೇಶ ಮಧ್ಯದೇಶಗಳ ಬಿಕ್ಕಟ್ಟಿನ ಸಮಸ್ಯೆಗಳೆಲ್ಲಾ ಅನುಕೂಲವಾಗಿ ಪರಿಷ್ಕಾರವಾಗದಂತೆ ತಡೆಮಾಡುತ್ತಿರುವವರು ಇಂಗ್ಲೀಷರೊಬ್ಬರೇಯೆಂದೂ ಮೊದಲಾಗಿ ಆಂಗ್ಲರ ಮೇಲೆ ತಮಗಿರುವ ಆಗ್ರಹವನ್ನೆಲ್ಲಾ ಎತ್ತಿ ಆಡಿದಬಳಿಕ, ಈ ದೇಶದ ತಮ್ಮ ಅನುಚರರನ್ನು ಕುರಿತು ಕೆಲವು ಉಪದೇಶಗಳನ್ನು ಮಾಡಿದರು. ಏನೆಂದರೆ—ಮೇಲೆ ಹೇಳಿದಂತೆ ಮಹಮ್ಮದೀಯ ರಾಷ್ಟ್ರಗಳೆಲ್ಲಾ ಮತ್ತೆ ಬಲಾಢ್ಯಗಳಾಗುತ್ತಿದ್ದರೂ, ಅವರ ಖಿಲಾಪತ್ ಸಮಸ್ಯೆಯನ್ನು ಇನ್ನೂ ನ್ಯಾಯವಾಗಿ ಪರಿಷ್ಕರಿಸಲಿಲ್ಲ. ಅದನ್ನು ನ್ಯಾಯವಾಗಿ ಪರಿಷ್ಕರಿಸುವವರೆಗೂ ಭರತಖಂಡದ ಮಹಮ್ಮದೀಯರು ತಮ್ಮ ಸಂಘರ್ಷಣೆಯನ್ನು ಸ್ವಲ್ಪವೂ ಸಡಿಲ ಮಾಡಕೂಡದು. ಭಾರತೀಯರಿಗೆ ವಿಜಯವುಂಟಾಗಬೇಕಾದರೆ ಈಗಣ ರಾಜಕೀಯಾಂದೋಳನವನ್ನು ಇನ್ನಷ್ಟು ದ್ವಿಗುಣೀಕೃತಗೊಳಿಸುವುದು ಅತ್ಯವಶ್ಯಕವು. ಭಾರತಪ್ರಭುತ್ವದವರ ಕಾರಾಗೃಹಗಳಲ್ಲಿ ಇನ್ನು ತಾವಿಲ್ಲದಿರುವುದರಿಂದ ಮುಂದೆ ನಿರ್ಬಂಧವಿಧಾನವನ್ನು ಸಾಗಿಸುವುದು ಅಸಾಧ್ಯವೆಂದು ಅವರಿಗೆ ಈಗಾಗಲೇ ಗೊತ್ತಾಗಿಹೋಗಿರುವುದು. ಸ್ವಯಂಕೃತಾಪರಾಧಕ್ಕಾಗಿ ಆತ್ಮಸ್ತುತಿ ಮಾಡಿಕೊಳ್ಳದೆ ಅವರಿಗೆ ಗತ್ಯಂತರವಿಲ್ಲ. ನಿಷ್ಫಲವಾಗಿ ಅವರು ಇನ್ನೆಷ್ಟು ಬೆದರಿಕೆಯನ್ನು ಹಾಕಿದರೂ ನಾವು ಒಂದಂಗುಲವನ್ನೂ ಹಿಂದಕ್ಕೆ ಜಗ್ಗೆವು. ಪ್ರತಿಯೊಬ್ಬ ಭಾರತೀಯನೂ ಕಾರಾಗೃಹಕ್ಕೆ ಹೋಗಲು ಸಂಸಿದ್ಧನಾಗಿರುವನೆಂದು ಸ್ಪಷ್ಟವಾದಾಗಲೇ ದೇಶೀಯ ನಾಯಕರ ಸಮಾವೇಶವು ಫಲಪ್ರದವಾಗುವುದು. ನಮ್ಮ ಅಭಿಪ್ರಾಯದೊಡನೆ ಏಕೀಭವಿಸದಿರುವ ನಮ್ಮ ದೇಶೀಯರಲ್ಲಿ ನಾವು ಸಹನೆಯನ್ನು ತೋರಿಸಬೇಕು. ಮಿತವಾದಿಗಳಿಗೆ ಭಿನ್ನಾಭಿಪ್ರಾಯವಿದ್ದರೂ ಅವರು ನಿಷ್ಕಳಂಕದೇಶಭಕ್ತಿಯಲ್ಲಿ ನಮ್ಮೆಲ್ಲಾರಿಗೂ ಕಡಮೆಯಾದವರಲ್ಲ. ಸೈನಿಕರೂ ಪೋಲೀಸರೂ ತಂತಮ್ಮ ಉದ್ಯೋಗಗಳನ್ನು ಬಿಟ್ಟು ಬರುವುದು ನಮಗೆ ತೃಪ್ತಿಕರವಾಗಿದ್ದರೂ ಅವರ ದೌರ್ಬಲ್ಯವನ್ನೂ ಮತ್ತೂ ಅಸಹಾಯಸ್ಥಿತಿಯನ್ನೂ ನೋಡಿ ನಾವು ಸೈರಿಸಿಕೊಳ್ಳಬೇಕಾಗಿದೆ. ಮಾಪಿಳ್ಳೆಗಳ ವಿಪ್ಲವದಿಂದ ಕಷ್ಟನಷ್ಟಪಟ್ಟ ಹಿಂದೂಮಹಮ್ಮದೀಯ ಪ್ರಜೆಗಳ ವಿಷಯದಲ್ಲಿ ನಾವು ಸಾನುಭೂತಿಯನ್ನು ತೋರಿಸಬೇಕು. ರೈಲಿನಲ್ಲಿ ಮಾಪಿಳ್ಳೆಗಳ ಮೃತಿಯುಂಟಾಗಲು ಪ್ರಭುತ್ವದವರು ಅವಕಾಶ ಕೊಟ್ಟುದು ಶೋಚನೀಯವು. ಆ ಪ್ರಾಂತಕ್ಕೆ ಅಸಹಾಯವಾದಿ ಪ್ರಮುಖರನ್ನು ಹೋಗಗೊಡಿಸಿದ್ದರೆ ಆ ತೊಂದರೆಗಳೊಂದೂ ಸಂಭವಿಸುತ್ತಿರಲಿಲ್ಲ. ಅಂಗೋರಾದ ಫಂಡಿಗೆ ನೀವುಗಳೆಲ್ಲಾ ಧನಸಹಾಯ ಮಾಡಬೇಕು. ನಮ್ಮ ಉದ್ಯಮವು ದೌರ್ಜನ್ಯರಹಿತವಾಗಿರಬೇಕೆಂಬ ಮುಖ್ಯವಿಷಯವನ್ನು ಯಾರೊಬ್ಬರೂ ಮರೆಯಕೂಡದು. ಧೈರ್ಯದಿಂದಲೂ ಉತ್ಸಾಹದಿಂದಲೂ ನಮ್ಮ ಆಂದೋಳನವನ್ನು ಸಾಗಿಸಬೇಕು. ಬಂದ ಕಷ್ಟನಷ್ಟಗಳಿಗೆಲ್ಲಾ ಎದೆಗೊಟ್ಟು ಸಹಿಸಿದರೇನೆಯೇ ನಮ್ಮ ಪರಾಧೀನತೆಯು ತೊಲಗಿ ಸ್ವಾತಂತ್ರ್ಯವುಂಟಾಗುವುದು'' ಎಂದು ಹೇಳಿದರು.

ಅಂಗೋರಾ ನಿಧಿಗೆ ಚಂದಾಹಣವನ್ನು ಸಹಾಯಮಾಡಬೇಕೆಂದು ಮಹಮ್ಮದಾಲಿ ಸೋದರರ ತಾಯಿಯವರು ಉಪನ್ಯಾಸ ಮಾಡಿ ಸಭಿಕರನ್ನು ಪ್ರಾರ್ಥಿಸಲು ಆಗಲೇ ಎಷ್ಟೋ ಸಹಸ್ರ ರೂ. ಗಳು ಕೊಡಲ್ಪಟ್ಟುವು. ಆ ದಿನದ ಸಭೆಗೆ ಮ|| ಗಾಂಧಿಯವರು ಬಂದಿರಲಿಲ್ಲ. ಅದು ಅವರ ಉಪವಾಸವ್ರತ ದಿವಸವಂತೆ. ಉಳಿದ ಅಸಹಾಯವಾದಿ ಪ್ರಮುಖರಾದ ಹಿಂದೂಮಹಮ್ಮದೀಯರೆಲ್ಲಾ ಸೇರಿದ್ದರು. ಆಲಿಸೋದರರ ಕುಟುಂಬದ ನೆಹ್ರೂ ಕುಟುಂಬದ ಹೆಂಗುಸರು, ಸರೋಜಿನೀದೇವಿ ಸರಳಾದೇವಿಯವರು ಮೋಹಿನೀಪತ್ನಿಯವರು ಇವರೇ ಮೊದಲಾದ ಕೆಲ ನಾರೀಮಣಿಯರೂ ಸೇರಿದ್ದರು. ೨೬ನೆ ತಾರೀಖು ರಾತ್ರಿ ೧೧ ಗಂಟೆಯವರೆಗೂ ಸಭೆಗೂಡಿದ್ದಿತು. ತಾ|| ೨೭ರ ರಾತ್ರಿಯೂ ನೆರವೇರಿತು. ಈ ಸಭೆಯಲ್ಲಿ ಆದ ತೀರ್ಮಾನಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಮತ್ತು ಪ್ರಭುತ್ವಾಜ್ಞೋಲ್ಲಂಘನದ ತೀರ್ಮಾನಗಳು ಮುಖ್ಯವಾದುವುಗಳು. ೧೮ ವರ್ಷ ವಯಸ್ಸಿಗೆ ಮೇಲ್ಪಟ್ಟ ವಯಸ್ಸಿನ ಮಹಮ್ಮದೀಯರೆಲ್ಲಾ ಕಾರಾಗೃಹವಾಸಕ್ಕೂ ಕಡೆಗೆ ಪ್ರಾಣವನ್ನರ್ಪಿಸುವುದಕ್ಕೂ ಹಿಂದೆಗೆಯದೆ ಸ್ವಚ್ಛಂದಸೇವಕ ಸಂಘಗಳಿಗೆ ಸೇರಬೇಕೆಂದೂ, ಬಹಿರಂಗ ಸಭೆಗಳನ್ನು ಜರುಗಿಸಲಾಗದೆಂದು ಅಧಿಕಾರಿಗಳು ಅಪ್ಪಣೆಮಾಡಿದರೆ ಅಂಥ ಅಪ್ಪಣೆಯನ್ನು ಉಲ್ಲಂಘಿಸಿ ಪ್ರಜೆಗಳು ಸಭೆಯನ್ನು ಕೂಡಿಸಬೇಕೆಂದೂ, ಆದರೆ ಅಂಥ ಸಂದರ್ಭಗಳಲ್ಲಿ ದೌರ್ಜನ್ಯವನ್ನು ಪ್ರಜೆಗಳು ಸ್ವಲ್ಪವೂ ತೋರಿಸುವುದಿಲ್ಲವೆಂಬ ಗಟ್ಟಿಯಾದ ನಂಬುಗೆಯು ಹುಟ್ಟಿದ್ದರೇನೆಯೇ ಅಂಥ ಪ್ರಭುತ್ವಾಜ್ಞೆಯನ್ನು ಉಲ್ಲಂಘಿಸಿ ಬಹಿರಂಗ ಸಭೆಗಳನ್ನು ಕೂಡಿಸಬೇಕೆಂದೂ ಮಹಮ್ಮದೀಯರೆಲ್ಲರನ್ನೂ ಈ ಖಿಲಾಪತ 'ಮಹಾಸಭೆಯು ಕೋರುತ್ತದೆ' ಎಂಬುದು ಒಂದು ತೀರ್ಮಾನದ ಅಭಿಪ್ರಾಯವು. ಸ್ವಾತಂತ್ರ್ಯದ ತೀರ್ಮಾನವು ೨೬ನೆ ತಾ|| ಮಧ್ಯಾಹ್ನ ಕೂಡಿದ್ದ ವಿಷಯ ನಿರ್ಧಾರಕ ಸಭೆಯಲ್ಲಿ ಬಹುಕಾಲ ಚರ್ಚಿಸಲ್ಪಟ್ಟಿತು. ಅಲ್ಲಿ ಅದನ್ನು ಹಜರತ್ ಮೋಹನಿಯವರು ಉಪಪಾದಿಸಿದರು. ಆ ತೀರ್ಮಾನದ ಮುಖ್ಯಾಶಯವೇನೆಂದರೆ—ಮಹಮ್ಮದೀಯ ಪ್ರಪಂಚದ ಮೇಲೆ ಇತರರ ಪ್ರಾಬಲ್ಯವು ತಗ್ಗುವಂತೆ ಮಾಡಲಿಕ್ಕೆ ಆಂಗ್ಲಸಾಮ್ರಾಜ್ಯಾಭಿಮಾನಿಗಳು ಎಂದಿಗೂ ಒಪ್ಪುವುದಿಲ್ಲ. ಅದರಿಂದ ಖಿಲಾಪತು ದೃಢವಾಗುವುದಿಲ್ಲ. ಖಿಲಾಪತು ಶಾಶ್ವತವಾಗಬೇಕಾದರೂ ಭರತಖಂಡಕ್ಕೆ ಮಹದೈಶ್ವರ್ಯವು ಬರಬೇಕಾದರೂ ಆಂಗ್ಲಸಾಮ್ರಾಜ್ಯಾತಿಶಯತ್ವವು ನಿರ್ಮೂಲವಾಗಬೇಕು. ಭರತಖಂಡದಲ್ಲಿರುವ ಮಹಮ್ಮದೀಯರೂ ಇತರರೂ ಸೇರಿ ಕೆಲಸಮಾಡಿ ಭರತಖಂಡಕ್ಕೆ ಸಂಪೂರ್ಣಸ್ವಾತಂತ್ರ್ಯವನ್ನುಂಟುಮಾಡಿಕೊಳ್ಳುವುದೊಂದೇ ಅದಕ್ಕೆ ಉತ್ತಮಸಾಧನವು. ಸ್ವರಾಜ್ಯವೆಂದರೆ ಸಂಪೂರ್ಣಸ್ವಾತಂತ್ರ್ಯವೆಂದೇ ಖಿಲಾಪತ್ ಸಭೆಯ ಅಭಿಪ್ರಾಯವು. ಭರತಖಂಡದ ಇತರ ಮತಗಳವರೆಲ್ಲರೂ ಅದೇ ಭಾವವನ್ನೇ ಹೊಂದಿ ಕೆಲಸಮಾಡಬೇಕು'' ಈ ಪ್ರಕಾರವಾದ ತೀರ್ಮಾನವನ್ನು ತಾ|| ೨೭ರಲ್ಲಿ ಕೂಡಿದ್ದ ವಿಷಯ ನಿರ್ಧಾರಕ ಸಭೆಯವರು ಅನುಮೋದಿಸಿದರು. ತಾ|| ೨೮ರಲ್ಲಿ ಕೂಡಿದ್ದ ಖಿಲಾಪತ್ ಮಹಾಸಭೆಯ ಚರ್ಚೆಗೆ ಇಟ್ಟಿದ್ದರು. ಆದರೆ ಆ ಸಭೆಯಲ್ಲಿ ಇದನ್ನು ಪ್ರತಿಪಾದಿಸುವುದಕ್ಕೆ ಮೋಹನಿಯವರು ಪ್ರಯತ್ನಿಸಿದಾಗ-ಖಿಲಾಪತ್ ಸಭೆಯ ಕ್ರೀಡನ್ನು ಈ ತೀರ್ಮಾನದಿಂದ ಬದಲಾಯಿಸಿದಂತೆ ಆಗುವುದೆಂದೂ, ಹಾಗೆ ಬದಲಾಯಿಸಬೇಕಾದರೆ ವಿಷಯ ನಿರ್ಧಾರಕ ಸಭೆಯಲ್ಲಿ ¾ ಭಾಗ ಸಭಿಕರ ಅನುಮತಿಯಾಗಬೇಕೆಂದೂ, ಅದಿಲ್ಲದಿರುವುದರಿಂದ ಇದನ್ನು ಸಭೆಗೆ ಇಡುವುದಕ್ಕೆ ಅವಕಾಶವಿಲ್ಲವೆಂದೂ ಒಬ್ಬ ಸಭಿಕರು ಆಕ್ಷೇಪಿಸಿದುದನ್ನು ಸಭಾಧ್ಯಕ್ಷರು ಒಪ್ಪಿ, ಆ ತೀರ್ಮಾನವನ್ನು ಉಪಪಾದಿಸದಂತೆ ನಿಲ್ಲಿಸಿಬಿಟ್ಟರು. ಈ ಮೋಹಿನಿಯ ಜಾಲವು ಅಪಾಯಕರವೆಂಬುದನ್ನು ಸಭೆಯಲ್ಲಿ ಬಹುಜನರು ಅರಿತು ಅನುಮತಿಸದೆ ಹೋದುದು ಪುಣ್ಯ. ಆಂಗ್ಲಪ್ರಭುತ್ವವು ಈ ದೇಶದಿಂದ ಕಾಲ್ದೆಗೆದರೆ ಮುಂದೆ ಇದರವಸ್ಥೆಯನ್ನೇನು ಮಾಡಬೇಕೆಂಬುದು ಈ ಮೋಹಿನೀಪಕ್ಷದವರ ಉದ್ದೇಶವೂ ತಿಳಿಯಲಿಲ್ಲ. ಮಹಮ್ಮದೀಯ ಪ್ರಭುತ್ವವೇ ಕಾಲಾನುಕಾಲದಲ್ಲಿ ಭರತಖಂಡದಲ್ಲಿ ರೂಢಮೂಲವಾಗಬೇಕೆಂಬ ಸಂಕಲ್ಪದಿಂದ ಮೋಹಿನೀಪಕ್ಷದವರು ಇಂಥ ಸಂಪೂರ್ಣಸ್ವಾತಂತ್ರ್ಯಕ್ಕೆ ಬಾಯ್ದೆರೆದುಕೊಂಡರಾಗಿದ್ದೀತು. ಆದರೆ ಇದನ್ನು ಸಭಿಕರೇ ಒಪ್ಪದೆ ಹೋದುದು ಯೋಗ್ಯವೇ ಆಯಿತು. ಇದೇ ಮೋಹನಿಯವರೇ ಮೊದಲಾದ ೫೦ ಮಂದಿಗಳು ರಾಷ್ಟ್ರೀಯ ಮಹಾಸಭೆಯಲ್ಲೂ ಕೂಡ ಆಂಗ್ಲ ಸಂಬಂಧವೇ ಇಲ್ಲದ ಸಂಪೂರ್ಣ ಸ್ವರಾಜ್ಯವೇ ಈ ಮಹಾಸಭೆಯ ಆದರ್ಶವೆಂದು ನಿರ್ಧರಿಸಬೇಕೆಂಬುದಾಗಿಯೂ ಅದಕ್ಕೆ ತಕ್ಕಂತೆ ಕಾಂಗ್ರೆಸ್ ಸಂಪ್ರದಾಯವನ್ನು ಮಾರ್ಪಡಿಸಬೇಕೆಂಬುದಾಗಿಯೂ ಪಟ್ಟುಹಿಡಿದು ವಾದಿಸಿದರು. ಆದರೆ ಗಾಂಧಿಯವರೇ ಮೊದಲಾದನೇಕರು ಅದಕ್ಕೆ ಪ್ರತಿಭಟಿಸಿ ನಿಲ್ಲಿಸಿಬಿಟ್ಟರು. ಹೀಗೆ ಸಂಪೂರ್ಣ ಸ್ವಾತಂತ್ರ್ಯದ ತೀರ್ಮಾನವು ನಿರಸ್ತವಾಗಿ ಹೋಯಿತು. ಅಂಗೋರಾ ಪ್ರಭುತ್ವದವರು ಜಯಿಸಿದುದನ್ನು ಕುರಿತು ಅಭಿನಂದನ, ತುರ್ಕಿ ಸುಲ್ತಾನರಲ್ಲಿ ಭಕ್ತಿಪ್ರದರ್ಶನ, ಮೊದಲಾದ ಇನ್ನು ಕೆಲ ತೀರ್ಮಾನಗಳನ್ನು ಮಾಡಿ ಖಿಲಾಪತ್ ಸಭೆಯು ಮುಕ್ತಾಯವಾಯಿತು.

ಒಳದೇಶದ ವೃತ್ತಾಂತಗಳು.

ಸೀನಿಯರ್ ಅ|| ಕಮಿಷನರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾವ್‌ರವರು ತುಮಕೂರು ಡಿ|| ಆಕ್ಟಿಂಗ್ ೧ನೆ ತರಗತಿ ಡಿ|| ಕಮಿಷನರಾಗಿ ನಿಯಮಿಸಲ್ಪಟ್ಟಿದ್ದಾರೆ.

ನಾಳೆಯದಿವಸ ನಂದಿಯಲ್ಲಿ ಯಾವದ್ಭಾರತ ಬಾಲಚಮೂವಿನ ಕಡೆಯ ಪಂದ್ಯಗಳು ಜರುಗುವುವು. ಶ್ರೀಮದ್ಯುವರಾಜರವರು ಅಗ್ರಾಸನವನ್ನು ವಹಿಸಿ ಜಯಶಾಲಿಗಳಾದವರಿಗೆ ಬಹುಮಾನವನ್ನು ದಯಪಾಲಿಸುವರು.

ಕಳೆದ ತಾ|| ೨೭ ರಲ್ಲಿ ಬೆಂಗಳೂರಿನ ಕೋಟೆಯ ಎ.ವಿ. ಶಾಲಾಭವನದಲ್ಲಿ ಭರತಖಂಡದ ಅ|| ಸರ್ಜನ್ನರುಗಳ ೧೧ನೆಯ ವಾರ್ಷಿಕಸಭೆಯು ಸೀನಿಯರ್‌ಸರ್ಜನ್ ಡಾ|| ಮೈಲ್ವಾಗನಂಯವರ ಅಧ್ಯಕ್ಷತೆಯಿಂದ ನೆರವೇರಿತು.

ಸಬ್‌ರಿಜಿಸ್ಟ್ರಾರ್ ಆಫೀಸುಗಳಲ್ಲಿ ಪತ್ರಗಳನ್ನು ರಿಜಿಸ್ಟರ್‌ಮಾಡಿಸತಕ್ಕವರು ಕೊಡಬೇಕಾದ ಫೀಜನ್ನು ಸ್ಟಾಂಪುರೂಪವಾಗಿಯಾಗಲೀ ಅಥವಾ ದ್ರವ್ಯರೂಪವಾಗಿಯಾಗಲೀ ಸಲ್ಲಿಸಬಹುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಇಷ್ಟುಮಾತ್ರದಿಂದಲೇ ಲಂಚದಹಾವಳಿಗೆ ತಡೆಯಾಗುವುದೆಂದು ಹೇಳಲಾಗುವುದಿಲ್ಲ.

ಕೃಷ್ಣರಾಜಸಾಗರದ ಅಣೆಕಟ್ಟೆಯ ವಿಚಾರಕ್ಕಾಗಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ ಕೂಡಿದ್ದ ಸಂಘದವರು ತಮ್ಮ ವಿಚಾರಣೆಯನ್ನೆಲ್ಲಾ ಮುಗಿಯಿಸಿದರು. ಇನ್ನು ೧-೨ ವಾರಗಳೊಳಗೇ ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಡುವವರಾಗಿದ್ದಾರಂತೆ. ಅದನ್ನು ಪ್ರಜೆಗಳ ತಿಳಿವಳಿಕೆಗಾಗಿ ಪ್ರಭುತ್ವದವರು ಪ್ರಕಟಿಸುವುದು ಅವಶ್ಯಕ. ಮತ್ತು ಭದ್ರಾವತಿಯ ಕಬ್ಬಿಣದ ಯಂತ್ರಾಲಯ ವಿಷಯವಾಗಿಯೂ ಹೀಗೆಯೇ ವಿಚಾರಣೆನಡೆಯಿಸುವುದು ಅತ್ಯವಶ್ಯಕವೆಂದು ತೋರುತ್ತದೆ.

ಮಾಯಿಕೊಂಡ ನಿಲ್ದಾಣದಲ್ಲಿ ಪುನಾ ಮೇಲ್‌ಟ್ರೇನು ನಿಲ್ಲುತ್ತಿದ್ದುದನ್ನು ಈಚೆಗೆ ತಪ್ಪಿಸಿಬಿಟ್ಟಿದ್ದಾರೆ. ತುಂಬಾ ವ್ಯಾಪಾರವು ಇಲ್ಲಿಗೂ ದಾವಣಗೆರೆಗೂ ನಡೆಯುತ್ತಿರುವುದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆಯೆಂದೂ, ಹಗಲಹೊತ್ತು ಯಾವ ಟ್ರೇನೂಕೂಡ ಅಲ್ಲಿಗೆ ಬರುವುದಿಲ್ಲವೆಂದೂ, ಒಬ್ಬ ಬಾತ್ಮೀದಾರರು ಬರೆದಿದ್ದಾರೆ. ಸರ್ಕಾರದವರೂ ಮತ್ತು ಎಮ್. ಎಸ್. ಎಮ್. ಆರ್. ಕಂಪನಿಯವರೂ ಪ್ರಜೆಗಳ ತೊಂದರೆಯನ್ನು ನಿವಾರಿಸಿಕೊಡಬೇಕು. ಸ್ಥಳಿಕರುಕೂಡ ಈ ವಿಷಯವಾಗಿ ಸರ್ಕಾರಕ್ಕೂ ರೈಲ್ವೆಕಂಪನಿಗೂ ಅರ್ಜಿಗಳನ್ನು ಬರೆದುಕೊಳ್ಳುವುದು ಅವಶ್ಯಕ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಕ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನು ತಿಳಿಸಲೇಬೇಕು.

ನಂಜನಗೂಡು.

ಇಲ್ಲಿ ಪ್ಲೇಗಿನ ಗಲಾಟೆಯು ಕಡಿಮೆಯಾಗುತ್ತಿದೆ. ಇದು ತಾಲ್ಲೂಕಾದರೂ ೩ ಕೋರ್ಟುಗಳಿರುತ್ತವೆ. ಕೆಲವು ಅಧಿಕಾರಸ್ಥರು ವಾಸವಾಗಿರುತ್ತಾರೆ. ಆಗಾಗ್ಗೆ ಪರಸ್ಥಳದವರು ಯಾತ್ರಾರ್ಥವಾಗಿ ಬರುವದುಂಟು. ಆದರೆ ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಸರಿಯಾದ ಏರ್ಪಾಡುಗಳಿಲ್ಲದೆ ಪೇಟೆಯ ಎರಡು ಭಾಗದ ಮೊಹರಿಗಳೂ ಸರಿಯಾಗಿಲ್ಲದೆ ಯಾವಾಗಲೂ ದುರ್ವಾಸನೆಯಿಂದ ತುಂಬಿ ಜನಗಳಿಗೆ ಅನಾರೋಗ್ಯಕ್ಕೂ ಮತ್ತು ರೋಗಕ್ಕೂ ಕಾರಣವಾಗಿದೆ. ಇದುವರೆಗೆ ಸರ್ಕಾರದ ಹೆಲ್ತ್ ಇಲಾಖೆಯವರು ಗಮನಿಸದೆ ಇರುವದು ಬಹಳ ಆಶ್ಚರ್ಯ. ಇಲ್ಲಿಯ ವರ್ತಕರು ತಮ್ಮ ತಮ್ಮಲ್ಲಿ ಕಲಹಗಳನ್ನುಂಟುಮಾಡಿಕೊಂಡು ಕೋರ್ಟು ಕಚೇರಿಗಳಿಗೆ ತಿರುಗುವದೇ ಅವರ ಕೆಲಸವಾಗಿದೆ. ಬೆಂಗಳೂರಿನವರದು ಒಂದು ಮೋಟಾರು ಕಂಪನಿಯೂ ಈ ಊರಿನವರದು ಒಂದು ಮೋಟಾರು ಕಂಪನಿಯೂ ಉಂಟು. ಒಬ್ಬರೊಬ್ಬರಿಗೆ ಆಗಾಗ್ಗೆ ಸ್ಪರ್ಧೆಗಳು ನಡೆಯುತ್ತಲೇ ಇವೆ. ಇಲ್ಲಿನವರ ಮೋಟಾರು ಕೆಲವು ದಿವಸಗಳ ಕೆಳಗೆ ಚಾಮರಾಜನಗರದಿಂದ ಬರುವಾಗ್ಗೆ ಮುರಿದು ೬-೮ ಜನಗಳಿಗೆ ಬಹಳ ಘಾಯವಾಗಿ ಈ ಪೈಕಿ ೩ ಜನರು ಬದುಕುವದೇ ಕಷ್ಟವಾಗಿದೆ. ಇಲ್ಲಿ ಎರಡು ಸೀಮೆಯೆಣ್ಣೆ ಕಂಪನಿಗಳಿದ್ದರೂ ಸರಿಯಾಗಿ ಎಣ್ಣೆ ಒದಗಿಸಿಕೊಡುವದೇ ಇಲ್ಲ. ಇದಕ್ಕೆಲ್ಲಾ ಕಾರಣವೇನೆಂದರೆ ಸರಿಯಾಗಿ ವಾಗಿನ್ನುಗಳು ಸಪ್ಲೈಯಾಗುವುದಿಲ್ಲ. ದೇವಸ್ಥಾನದ ಹಾವಳಿಯೂ ವಿಪರೀತವಾಗಿದೆ. ಇದಕ್ಕೆಲ್ಲಾ ಕಾರಣಭೂತರು ಇಲ್ಲಿಯ ಅಮಲ್ದಾರರೂ, ಸಬ್‌ಡಿವಿಜನ್ ಆಫೀಸರೂ ಪೇಷ್ಕಾರರೇ ಆಗಿದ್ದಾರೆ. ಇವರುಗಳನ್ನು ವರ್ಗಾಯಿಸದಿದ್ದರೆ ಪ್ರಜೆಗಳಿಗೆ ಸುಖವು ಖಂಡಿತವಾಗಿಯೂ ಇಲ್ಲ. ಇಲ್ಲಿ ದೊಡ್ಡ ರೈಲ್ವೆಸ್ಟೇಷನ್ನಿನಲ್ಲಿ ಇರುವ ಮ್ಯಾಸ್ಟರೇ ಅಲ್ಲಿಗೆ ಪಾಳೇಗಾರರೆಂದು ಹೇಳಬಹುದು. ಹಿಂದೆ ಇದ್ದ ಅನೇಕ ಸ್ಟೇಷನ್ ಮಾಸ್ಟರುಗಳು ಎಷ್ಟೋ ಗುಣಶಾಲಿಗಳಾಗಿಯೂ ಪರೋಪಕಾರಿಗಳಾಗಿಯೂ ಇದ್ದರು. ವಾಗಿನ್ನುಗಳಿಗಾಗಿ ತಿಂಗಳವರೆಗೂ ಸುತ್ತಿಸುತ್ತ ನಾಳೆಬಾ ನಾಡಿದ್ದುಬಾ ಎಂದು ಹೇಳುತ್ತಿರುತ್ತಾರೆ. ಯಾವಾಗಲೂ ಪೇಪರನ್ನು ಕೈಯಲ್ಲಿ ಹಿಡಿದುಕೊಂಡು ಸ್ವರಾಜ್ಯದ ವಿಷಯವಾಗಿಯೂ ಮಾಪಿಳ್ಳೆಗಳ ವಿಷಯವಾಗಿಯೂ ಉಪನ್ಯಾಸ ಮಾಡುತ್ತ ಇರುತ್ತಾರೆ. ಎಷ್ಟು ಉಪನ್ಯಾಸಮಾಡುತ್ತಲಿದ್ದರೂ ತಾವು ಮಾತ್ರ ಸ್ವದೇಶದ ವರ್ತಕರನ್ನು ತೊಂದರೆ ಪಡಿಸುವದನ್ನು ಬಿಡುವದಿಲ್ಲ. ಇದಕ್ಕಾಗಿ ಎಷ್ಟು ಬರೆದರೂ ಸಾಲದು. ಈ ಊರಿನ ಕಥೆಯನ್ನು ೫ ಭಾಗವಾಗಿ ದೊಡ್ಡ ಗ್ರಂಥವನ್ನು ವಿಶದವಾಗಿ ಬರೆದರೆ ಪತ್ರಿಕಾಕರ್ತರು ಸ್ಥಳವನ್ನು ಕೊಡುವರೋ ಇಲ್ಲವೋ ಎಂಬ ಅನುಮಾನದಿಂದ ಸದ್ಯ ಇಷ್ಟಕ್ಕೇ ಪೂರ್ತಿಮಾಡಿದ್ದೇನೆ.

ಪುರವಾಸಿ.

ನೋಡಿರಿ ಇವರು ಎಂಥ ರಾಷ್ಟ್ರಭಕ್ತರು ?

(ಲೇಖಕ—ಎಮ್. ಎಮ್. ಮಾಳಿ, ಅಥಣಿ.)

ವೀರಶೈವ ಸಮಾಜದ ಸಾಂಪ್ರತದ ಅವನತಾವಸ್ಥೆಯು ದೂರಾಗಿ ಪ್ರತಿಷ್ಠಾಪ್ರಾಪ್ತಿಯ ಕೋರಿಕೆಯಿಂದಲೂ ರಾಷ್ಟ್ರದ ಅಸ್ತಿತ್ವದಲ್ಲಿ ಸ್ಥಿರವಾದ ಯೋಗ್ಯಸ್ಥಳವು ದೊರೆಯಬೇಕೆಂಬ ಆಶೆಯಿಂದಲೂ ಅಲ್ಲಲ್ಲಿಗೆ ದೇಶಕಾಲ ಪರಿಸ್ಥಿತಿಗನುಸಾರವಾಗಿ ಶಿಕ್ಷಣಸಂಬಂಧದ ಯಾವಯಾವ ಸಾಧನಗಳು ಬೇಕೋ ಆಯಾ ಅತು ಪಯುಕ್ತವಾದ ಮತ್ತು ಅವಶ್ಯವಾದ ಲೈಬ್ರೆರಿ ಡಿಬೇಟಿಂಗ್‌ಸೊಸೈಟಿ ಮತ್ತು ಫುಟ್‌ಬಾಲ್‌ಟೀಮ್ ಮುಂತಾದುವುಗಳು ಸ್ಥಾಪಿತವಾಗಿವೆ. ಮತ್ತು ಆಗಹತ್ತಿರುತ್ತವೆ. ಇದೇಮೇರೆಗೆ ಇಲ್ಲಿ ಅಂದರೆ ಅಥಣಿಯಲ್ಲಿ ಕೆಲವು ವಿದ್ಯಾರ್ಥಿಗಳು ತಿಂಗಳಿಗೆ ಇಂತಿಂಥವರು ಇಷ್ಟಿಷ್ಟು ವರ್ಗಣಿ ಕೊಡಬೇಕೆಂಬ ಕರಾರಿನಿಂದ ಕೆಲವು ದಿವಸಗಳ ಹಿಂದೆ ಡಿಬೇಟಿಂಗ್ ಸೊಸೈಟಿ ಅಂದರೆ (ಚರ್ಚಿಸತಕ್ಕ ಸಂಘ) ವೆಂಬುದು ಸ್ಥಾಪನಮಾಡಲ್ಪಟ್ಟಿತ್ತದೆ. ಈವರೆಗೆ ಸುರಕ್ಷಿತವಾಗಿ ಸಾಗುತ್ತಾಬಂದು ಇತ್ತಿತ್ತಲಾಗಿ ಅನಾವೃಷ್ಟಿಯ ಮೂಲಕ ಹಣದ ತೊಂದರೆಯಾಗಹತ್ತಿದ್ದರಿಂದ ವಾರಕ್ಕೆ ಒಂದಾವರ್ತಿ ಮುಷ್ಟಿಫಂಡನ್ನೆತ್ತಲು ಪ್ರಾರಂಭಮಾಡಿದೆವು. ಆದರೆ ಈ ಮೊದಲೇ ನಾವು ರಾಷ್ಟ್ರಭಕ್ತರೆಂದು ಹೊಗಳಿಕೊಳ್ಳುವ ಸ್ವಾದವಿಲ್ಲದ ಬ್ರಾಹ್ಮಣಬಂಧುಗಳು ಉಚಿತ ವಾಚನಾಲಯವೆಂದು ಒಂದು ಲೈಬ್ರರಿಯನ್ನು ಸ್ಥಾಪಿಸಿ ಬ್ರಾಹ್ಮಣೇತರರು ನೀಡಿದ ಮುಷ್ಟಿಫಂಡಿನಿಂದಲೇ ಈವರೆಗೆ ನಡಿಸುತ್ತಬಂದು ಮತ್ತು ಬಹು ಬ್ರಾಹ್ಮಣೇತರರನ್ನು ಬಣ್ಣದ ಮಾತುಗಳಿಂದ ವರ್ಗಣಿದಾರರನ್ನಾಗಿ ಮಾಡಿಸುತ್ತ ಬಂದು ಹಿರಿಹಿರಿಯರಿಂದ ಅಂಟಿಕೊಂಡುಬಂದ ಈ ಕಪಟನೃತ್ಯ—ಬಹಿರಂಗದಲ್ಲಿ ಬ್ರಾಹ್ಮಣರಂತೆ ನಟಿಸುವ—ಈ ಜನರು ಮುಷ್ಟೀಫಂಡನ್ನು ಬೇಡಹೋದರೆ ಮೊದಲೇ ಪ್ರಶ್ನಾರ್ಥಕವು. "ನೀವು ಯಾರು? ನೀವು ಈ ಫಂಡನ್ನು ಯಾತಕ್ಕೆ ವೆಚ್ಚಮಾಡತಕ್ಕವರು? ಒಂದುವೇಳೆ ನೀವು ಲಿಂಗಾಯತರಾಗಿದ್ದರೆ, ನಾವು ಇತರ ಜನರಿಗೆ ನೀಡುವುದು ನಮ್ಮ ಧರ್ಮದ ವಿರುದ್ಧವಾಗಿರುವದು." (ಮತ್ತೊಬ್ಬರು)—"ನೀವು ಲಿಂಗಾಯತರೋ ಅಥವಾಬ್ರಾಹ್ಮಣರೋ? ನಾವು ಲಿಂಗಾಯತರೆಂದಕೂಡಲೇ show me the rules of your Debating Society ಅಂದರೆಹಿಂದಿನಿಂದ ನೀಡುವೆನು ಅಂದರು. (ಇನ್ನೊಬ್ಬರು) ಒಬ್ಬ ಬ್ರಾಹ್ಮಣೇತರರು ಮೊನ್ನೆ L.C.P.S. ಪರೀಕ್ಷೆಯ ನಿಕಾಲೆಯನ್ನು ನೋಡುವ ಉದ್ದೇಶದಿಂದ ಉಚಿತ ವಾಚನಾಲಯದ ಮುಖಂಡರಾದ ದತ್ತಾತ್ರಯ ಇವರನ್ನು ಕ್ರಾನಿಕಲ್ ಪತ್ರವನ್ನು ಕೇಳಿದಕೂಡಲೇ ಬಡಿದಾಡಲಿಕ್ಕೆ ಬಂದರು. ನೋಡಿರಿ ಈ ದತ್ತಾತ್ರಯರು ತಮ್ಮ ಹೆಸರಿನಂತೆ ಇವರ ನೀಚತ್ವಗಳಾದರೂ ತ್ರಯವಾಗಿರುವವು. ನೋಡಿರಿ. ಪ್ರಕಟಿಸುವುದು ಉಚಿತ ವಾಚನಾಲಯವೆಂದು, ಯಾರಾದರೂ ಬ್ರಾಹ್ಮಣೇತರರು ಹೋದರೆ ಒಂದು ಪತ್ರವನ್ನಾದರೂ ಕೊಡದೇ ಇರುವದು, ಮತ್ತು ಮೇಲೆ ರಾಷ್ಟ್ರಭಕ್ತರೆಂದು ಹೆಸರಿಟ್ಟುಕೊಳ್ಳುವದು. ಎಲೈ ಬ್ರಾಹ್ಮಣಬಂಧುಗಳೇ ಇದೆಯೋ ನಿಮ್ಮ ರಾಷ್ಟ್ರಭಕ್ತಿಯು? ಇದೆಯೋ ನಿಮ್ಮ ಹಿಂದುಳಿದವರ ಹಿತಚಿಂತನವು? ಇದೆಯೋ ಸಮತೋಲನದಿಂದ ನಡೆದು ಐಕ್ಯ ಬೆಳಸಿ ಸ್ವರಾಜ್ಯಪ್ರಾಪ್ತಿಗಾಗಿ ಹೆಣಗಾಡುವದು? ಯಾವನು ತನ್ನ ಗಲ್ಲಿಯ ಇಲ್ಲವೆ ಗ್ರಾಮದ ಹಿತಚಿಂತನವನ್ನು ಮಾಡುವುದಿಲ್ಲವೋ ಅಂಥ ಅಧಮನು ರಾಷ್ಟ್ರಚಿಂತನ ಮಾಡಿ ರಾಷ್ಟ್ರಭಕ್ತನೆನಿಸುವುದಾದರೂ ಹೇಗೆ? ಸ್ವರಾಜ್ಯಪ್ರಾಪ್ತಿಯನ್ನಾದರೂ ಹೇಗೆಮಾಡುವನು? ಎಲೈ ಬ್ರಾಹ್ಮಣಬಂಧುಗಳೇ ಸ್ವರಾಜ್ಯವೆಂದರೆ ಪೇಟೆಯಲ್ಲಿ ಮಾರಬಂದಿರುವ ಮಾವಿನಹಣ್ಣಲ್ಲ, ಅಥವಾ ಯಾರಾದರೂ ದಕ್ಷಿಣೆಕೊಟ್ಟಹಾಗೆ ದಾನಕೊಟ್ಟರೆ ಬರುವಹಾಗಿಲ್ಲ. ಇಲ್ಲವೆ ಫಲ ಪಂಚಪಾತ್ರೆಗಳನ್ನು ಬಾರಿಸಿಯಾದರೂ ಪ್ರಾಪ್ತವಾಗುವಹಾಗಿಲ್ಲ. ಸ್ವರಾಜ್ಯವೆಂದರೆ ಸಹಜವಾಗಿ ದೊರಕುವ ವಸ್ತುವಲ್ಲ. ರಣವೀರರ ರಕ್ತದಿಂದ ರಣಾಂಗಣವು ಹಬೆಯಾದರೇನೇ ಸ್ವರಾಜ್ಯದ ಮೊಳಕೆಯು ಒಡೆಯುವುದೆಂದು ತಿಳಿಯುವುದೆಂದು ತಿಳಿಯಿರಿ. ಇಲ್ಲವೆ ಸಾಮ್ರಾಜ್ಯಾಧಿಕಾರಿಗಳಿಗೆ ಸ್ವಾತಂತ್ರ್ಯದ ವಿಷಯವಾಗಿ ತಮ್ಮ ಲಾಯಖಿಯನ್ನು ತೋರಿಸಬೇಕಾಗಿರುವುದು. ಈ ಮೇಲಿನ ಎರಡು ಕಾರಣಗಳಿಂದ ಒಂದುವೇಳೆ ಸ್ವರಾಜ್ಯವು ಪ್ರಾಪ್ತವಾದರೆ ಇದನ್ನು ಸುಸೂತ್ರವನ್ನು ನಡಿಸುವದು ಸಾಮಾನ್ಯವಾದ ಮಾತಲ್ಲ. ಮೂಲಕಾರಣಗಳಾದ ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಇವುಗಳ ಸುಧಾರಣೆಯು ಸಾಂಪ್ರತದಲ್ಲಿ ಅವಶ್ಯವಾಗಿ ಬೇಕಾಗಿರುವದು. ಮೂಲ ಸ್ವರಾಜ್ಯಸಾಧನಗಳಾದ ಇವುಗಳನ್ನು ಬದಿಗೊತ್ತಿಟ್ಟು ಕ್ಷುಲ್ಲಕಸಂಗತಿಗಳ ಬಗ್ಗೆ ವೈರಭಾವವನ್ನು ತಾಳುವದು ನಿಮ್ಮಂಥವರಿಗೆ ಉಚಿತವಲ್ಲ. ಸ್ವರಾಜ್ಯಶಾಟಿಯನ್ನು ಹೊತ್ತ ಬ್ರಾಹ್ಮಣಬಂಧುಗಳೇ! ಈ ದುರ್ಭಾವವನ್ನು ಬಿಟ್ಟು ನಿಮ್ಮ ಅಜ್ಞಾನಾಂಧಕಾರದಲ್ಲಿ ಮುಳುಗಿದ ನಿಮ್ಮ ಬಂಧುಗಳನ್ನು ಸುಜ್ಞಾನಪ್ರಕಾಶದಲ್ಲಿ ತರಲೇಬೇಕೆಂದು ಆಶಿಸುವೆನು.

ಬೀರೂರು.

ಈ ಊರಿನ ಎ. ವಿ. ಸ್ಕೂಲಿನಲ್ಲಿ ದರ್ಬಾರ್‌ಡೆ ಮಹೋತ್ಸವವು ಕಳೆದ ತಾ|| ೧೨-೧೨-೨೧ ರಲ್ಲಿ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಸ್ಕೂಲು ಮಂದಿರವು ಸುಂದರವಾಗಿ ಅಲಂಕರಿಸಲ್ಪಟ್ಟು ಸಾರ್ವಭೌಮರ ಮತ್ತು ಶ್ರೀಮನ್ಮಹಾರಾಜರವರ ಭಾವಚಿತ್ರಗಳು ಉಚಿತಾಸನಗಳ ಮೇಲಿಟ್ಟು ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟಿದ್ದವು. ಎ. ವಿ. ಸ್ಕೂಲು ಮತ್ತು ಪ್ರೈಮರಿಸ್ಕೂಲು ಬಾಲಕರುಗಳೂ, ಉಪಾಧ್ಯಾಯರುಗಳೂ ಸರ್ಕಾರಿಯಧಿಕಾರಿಗಳೂ, ಮು|| ವೈಸ್‌ಪ್ರೆಸಿಡೆಂಟರೂ, ಕೌನ್ಸಿಲರುಗಳೂ, ಇತರ ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. ನಂಜನಗೂಡು ಮು|| ವೈಸ್‌ಪ್ರೆಸಿಡೆಂಟ್ ಮ|| ರಾಮರಾಯರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಕರ್ತವ್ಯದಮೇಲೆ ವಿದ್ಯಾರ್ಥಿ ಆರ್. ಚನ್ನಬಸಪ್ಪನೂ, ಬ್ರಿಟಿಷ್ ಪ್ರಭುತ್ವದಿಂದ ಇಂಡ್ಯಾದೇಶಕ್ಕುಂಟಾಗಿರುವ ಮಹೋಪಕಾರಗಳನ್ನು ಕುರಿತು ಕನ್ನಡ ಪಂಡಿತರಾದ ಮ|| ಲಕ್ಷ್ಮೀನರಸಿಂಹಶಾಸ್ತ್ರಿಗಳಿಂದಲೂ ಸ್ವಾರಸ್ಯವಾಗಿ ಉಪನ್ಯಾಸಗಳು ಮಾಡಲ್ಪಟ್ಟನಂತರ ಗಾನವಾಗಿ ಎ. ವಿ. ಸ್ಕೂಲು ಹೆಡ್ಮಾಸ್ಟರು ಈ ಸಭಾ ಉದ್ದೇಶವನ್ನೂ ಅದರ ಪ್ರಯೋಜನವನ್ನೂ ತಿಳಿಸಿದುದಲ್ಲದೆ ಈ ಉತ್ಸವವನ್ನು ನಡೆಸಲು ಧನಸಹಾಯಮಾಡಿದ ಮ|| ಶಿವಕಥಾಭೂಷಣ ನಂಜುಂಡಾರಾಧ್ಯರ ಗುಣಕಥನವನ್ನು ಮಾಡಿದರು ಮತ್ತು ಈ ಉತ್ಸವವು ನಿರ್ವಿಘ್ನವಾಗಿ ನಡೆಯಲು ಶ್ರಮಪಟ್ಟು ಕೆಲಸಮಾಡಿದ ಸಹಾಯೋಪಾಧ್ಯಾಯರುಗಳಿಗೆ ತಮ್ಮ ವಂದನೆಯನ್ನರ್ಪಿಸಿದರು. ತರುವಾಯ ಸಮಸ್ತರಿಗೂ ಗಂಧ ಪುಷ್ಪ ಹಾರ ವಿನಿಯೋಗವಾಗಿ ಜಯಘೋಷದೊಡನೆ ಸಭೆ ವಿಸರ್ಜಿತವಾಯಿತು

ಓರ್ವ ಉತ್ಸವಭಾಗಿ.

ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರ ಸ್ಮಾರಕಫಂಡು, ಚಿತ್ರದುರ್ಗ.

ಈ ಮಹಾಶಯರು ಈ ಡಿಸ್ಟ್ರಿಕ್ಟಿನಲ್ಲಿ ಎಕನಾಮಿಕ್ ಸೂಪರಿಂಟೆಂಡೆಂಟರಾಗಿಯೂ, ಡಿಸ್ಟ್ರಿಕ್ಟ್‌ಬೋರ್ಡು ಸೆಕ್ರೆಟರಿಗಳಾಗಿಯೂ ಇದ್ದು ಕಳೆದ ಎಪ್ರೇಲ್ ತಿಂಗಳಲ್ಲಿ ಮಂಜರಾಬಾದ್ ತಾಲ್ಲೂಕಿಗೆ ಅಮಲ್‌ದಾರ್ರಾಗಿ ವರ್ಗಪಟ್ಟು ಹೋದರು. ಇವರನ್ನು ಇಲ್ಲಿಂದ ವರ್ಗಮಾಡಿದ್ದು ಈ ಡಿಸ್ಟ್ರಿಕ್ಟು ಪ್ರಜೆಗಳ ದುರದೃಷ್ಟವೇಸರಿ. ಇವರು ಈ ಡಿಸ್ಟ್ರಿಕ್ಟಿನಲ್ಲಿ ಪ್ರಜಾರಂಜಕರಾಗಿದ್ದುಕೊಂಡು ಜನೋಪಯೋಗವಾದ ಕೆಲಸಗಳಲ್ಲಿ ಆಸಕ್ತತೆಯಿಂದ ಇದ್ದು ಪಬ್ಲಿಕ್ ಸರ್ವೆಂಟ್ ಎಂಬಶಬ್ದಕ್ಕೆ ಅನ್ವರ್ಥನಾಮಧಾರಿಗಳಾಗಿದ್ದರು. ಇವರು ಇಲ್ಲಿಂದ ಹೊರಡುವಾಗ್ಗೆ ಎಲ್ಲಾ ಕೋಮಿನವರೂ ಇವರ ವಿಷಯದಲ್ಲಿ ತಮ್ಮಗಳ ಕೃತಜ್ಞತೆಯನ್ನು ತೋರ್ಪಡಿಸುವುದು ಕರ್ತವ್ಯವೆಂದು ಭಾವಿಸಿ ಇವರಿಗೆ ಒಂದು ಟೀ ಪಾರ್ಟಿಯನ್ನು ಕೊಡಬೇಕೆಂದು ಪ್ರಯತ್ನಗಳನ್ನು ಮಾಡಿದರು. ಈ ಸಂದರ್ಭದಲ್ಲಿ ಈ ಡಿಸ್ಟ್ರಿಕ್ಟು ಹೈಸ್ಕೂಲ್ ಹೆಡ್ಮಾಸ್ಟರಾದ ಮ|| ಕೆ. ಸಂಜೀವಶೆಟ್ಟರು ಬಿ. ಎ. ಯವರು ಟೀ ಪಾರ್ಟಿಗಾಗಿ ಶೇಖರಿಸಬಹುದಾದ ದ್ರವ್ಯವನ್ನು ವೃಥಾ ತಿಂಡಿತೀರ್ಥಗಳಿಗೆ ಖರ್ಚುಮಾಡುವುದಕ್ಕೆ ಬದಲು ಮ|| ಕೆ. ಸಿದ್ಧರಾಮಪ್ಪನವರ ಹೆಸರನ್ನು ಈ ಡಿಸ್ಟ್ರಿಕ್ಟಿನ ಜನರು ಮರೆಯದೇ ಇರುವಂತೆಯೂ, ಮತ್ತು ಸದರಿ ದ್ರವವು ವಿದ್ಯಾಭಿವೃದ್ಧಿಕಾರ್ಯಕ್ಕೆ ಉಪಯೋಗಿಸುವುದು ಯುಕ್ತವೆಂದೂ ಸೂಚಿಸಿದರು. ಸರ್ವರೂ ಇದನ್ನನುಮೋದಿಸಿ ಎಂಟರ್‌ಟೈನ್‌ಮೆಂಟಿಗೆ ಫಲಪುಷ್ಪತಾಂಬೂಲಾದಿಗಳ ಖರ್ಚುಜಾತಾ ಉಳಿಯಬಹುದಾದ ಮೊಬಲಗನ್ನು ಮ|| ಕೆ. ಸಿದ್ಧರಾಮಪ್ಪನವರ ಪ್ರೈಜ್ ಫಂಡೆಂದು ಕರೆಯಬೇಕೆಂತಲೂ, ಅದರಿಂದ ಬರತಕ್ಕ ಬಡ್ಡಿಯಲ್ಲಿ ಸಾಲಿಯಾನಾ ಒಂದು ಪ್ರೈಜನ್ನು ಚಿತ್ರದುರ್ಗದ ಹೈಸ್ಕೂಲಿನಲ್ಲಿ ಎಸ್, ಎಸ್, ಎಲ್, ಸಿ, ಪರೀಕ್ಷೆಯಲ್ಲಿ ತೇರ್ಗಡೆಯಾದ ಹಿಂದುಳಿದ ಜನಾಂಗಗಳ ವಿದ್ಯಾರ್ಥಿಗಳಪೈಕಿ ಮೊದಲನೇ ರ್ಯಾಂಕ್ ಪಡೆದವರಿಗೆ ಕೊಡಬೇಕೆಂತಲೂ ತೀರ್ಮಾನಿಸಿ ರಿಸೆಪ್ಷನ್ ಕಮಿಟಿಮೆಂಬರುಗಳಿಗೆ ತಿಳುಹಿಸಿದರು. ಇದಕ್ಕಾಗಿ ಈಹಲ್‌ವರೆಗೂ ಚಂದಾ ಕೊಟ್ಟವರ ಹೆಸರುಗಳನ್ನು ಕೆಳಗೆ ನಮೂದಿಸಿದೆ.

ಮೇಲ್ಕಂಡಂತೆ ತಾ 16-4-21ರಲ್ಲಿ ಇಲ್ಲಿನ ಶ್ರೀ ಮಜ್ಜಾಮರಾಜೇಂದ್ರ ಮೆಮೋರಿಯಲ್ ಹಾಲಿನಲ್ಲಿ ಈ ಟವನ್‌ನಿವಾಸಿಗಳು ಸಭೆಸೇರಿ ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರನ್ನು ಆದರದಿಂದ ಸಭೆಗೆ ಬರಮಾಡಿಕೊಂಡು ಅವರಿಗೆ ತಮ್ಮ ಕೃತಜ್ಞತಾವಂದನೆಗಳನ್ನರ್ಪಿಸಿ, ಅವರ ಹೆಸರಿನಲ್ಲಿ ಪ್ರೈಜ್ ಫಂಡು ಏರ್ಪಡಿಸಿರುವುದನ್ನು ತಿಳುಹಿಸಿ ಅವರನುಜ್ಞೆ ಪಡೆದು ಅವರಿಗೂ, ಸಭಿಕರಿಗೂ ಫಲಪುಷ್ಪ ತಾಂಬೂಲಾದಿಗಳನ್ನು ಅರ್ಪಿಸಿದರು.

ಚಂದಾಕೊಟ್ಟವರ ಹೆಸರುಗಳು.—ಚಿತ್ರದುರ್ಗದ ಶ್ರೀಮದ್ ವೀರಶೈವ ಮಹಾಜನಗಳು ರೂ. 50-0-0, ಮ||ಗಳಾದ.—ಜಿನ್ನಿಂಗ್ ಫ್ಯಾಕ್ಟರಿ ದಾವಣಗೆರೆ ಹಾಲಪ್ಪನವರು 25-0-0, ಅಡ್ವೊಕೇಟ್ ಯಂ. ಅನಂತಯಶೆಟ್ಟರು 5-0-0, ಕೆ. ಸಂಜೀವಶೆಟ್ಟಿ ಬಿ. ಎ. ಯವರು 2-0-0, ಡಾ. ಕೆ. ನಾರಾಯಣಶೆಟ್ಟರು 2-0-0, ಆರವೇಟಿ ಕೃಷ್ಣಪ್ಪನವರು 2-0-0, ಜವಳಿ ಅಂಗಡಿ ದೊಡ್ಡಯಲ್ಲಪ್ಪನವರು 2-0-0, ಪುನಂಮ್‌ಚಂದರವರು 2-0-0, ಲಾಡರ ಈಶ್ವರಪ್ಪನವರು 2-0-0, ಒಡೇರ ಸಿದ್ದಪ್ಪಯ್ಯನವರು ಬಿಳಿಚೋಡ 2-0-0, ಗೌಡ ತುರವಪ್ಪನವರು 1-0-0, ಯಜಮಾನ ಜಡಿಯಪ್ಪನವರು 1-0-0, ಗೌಡ ಲಿಂಗಪ್ಪನವರು 1-0-0, ದೇವಾಂಗದ ತಿಮ್ಮಪ್ಪನವರು 1-0-0, ದೇವಾಂಗದ ವರಕೇರಪ್ಪನವರು 1-0-0, ಜವಳಿ ಅಂಗಡಿ ಯಂ. ಮುತ್ಯಾಲ ರೆಡ್ಡಿಯವರು 1-0-0, ಕೆ. ವೀರಭದ್ರಾಚಾರ್ಯರು 1-0-0, ಅಬ್ದುಲ್ ರಜಾಕ್ ಸಾಹೇಬರು 1-0-0, ಪಟೇಲ್ ಶಂಕರಪ್ಪನವರು 1-0-0, ಕಾಶಿ ಕೇಶವಶೆಟ್ಟರು 1-0-0, ಕಾಶಿ. ಸೀನಪ್ಪನವರು 1-0-0, ಜವಳಿ ಅಂಗಡಿ ಮೈಲಾರಪ್ಪ ಖಂಡೋಜಪ್ಪನವರು 1-0-0, ಪಲ್ಲಕ್ಕಪ್ಪ ಯಲ್ಲಪ್ಪನವರು 1-0-0, ಷರಾಫ್ ಗಿರಿಶೆಟ್ಟರು 1-0-0, ಕೊಂಡ್ಲಹಳ್ಳಿ ಬುಸರೆಡ್ಡಿನಾಗಪ್ಪನವರು 1-0-0, ಚಿಕ್ಕಪ್ಪನಹಳ್ಳಿ ಸಾರಂಗಮಠದ ವೀರಭದ್ರಯ್ಯನವರು 1-0-0, ಕೆ. ಚಂಗಯ್ಯ ಶೆಟ್ಟರು 1-0-0, ಯಸ್. ಯಲ್. ಅಪ್ಪಯ್ಯ ಶೆಟ್ಟರು 1-0-0, ಷರಾಫ್ ಲಿಂಗಶೆಟ್ಟರು 1-0-0, ಕೊಂಡಪ್ಪನವರು 0-8-0, ವೆಂಕಟಗಿರಿರಾಯರು 0-8-0, ಜುಮ್ಲಾ 115-0-0.

ಈ ಮೊಬಲಗಿನಲ್ಲಿ 16-4-21ರಲ್ಲಿ ಮ.ಕೆ. ಸಿದ್ಧರಾಮಪ್ಪನವರ ಮತ್ತು ಸಭಾ ಜನಗಳ ತಾಂಬೂಲದ ಖರ್ಚಿಗಾಗಿ 8-0-0 ಎಂಟು ರೂಪಾಯಿ ಜಾತಾ ಬಾಕಿ ಒಂದುನೂರೇಳು ರೂ. ಗಳು ಚಿತ್ರದುರ್ಗದ ಹೈಸ್ಕೂಲ್ ಹೆಡ್ಮಾಸ್ಟರವರಲ್ಲಿ ಡಿಪಾಜಿಟ್ ಇಡಲ್ಪಟ್ಟಿದೆ. ಈ ಫಂಡಿಗಾಗಿ ವಾಗ್ದಾನ ಮಾಡಿರುವ ಮತ್ತು ಸಹಾಯಮಾಡಬೇಕೆಂದಿರುವ ಮಹಾಶಯರು ದಯವಿಟ್ಟು ತಮ್ಮ ಚಂದಾದ್ರವ್ಯವನ್ನು ಚಿತ್ರದುರ್ಗದ ಹೈಸ್ಕೂಲ್ ಹೆಡ್‌ಮಾಸ್ಟರಲ್ಲಿಗೆ ಪಾವತಿ ಮಾಡಬೇಕಾಗಿ ಕೋರಲ್ಪಟ್ಟಿದೆ.

ಯಸ್. ಪಿ. ಹನುಮಂತರಾಜು, ಸೆಕ್ರೆಟರಿ,
ಮ|| ಕೆ. ಸಿದ್ಧರಾಮಪ್ಪ ಬಿ. ಎ. ಯವರ ಸ್ಮಾರಕ ಫಂಡ್.

ತಿಪಟೂರು ತಾಲ್ಲೂಕ್ ಗುರುಗದಹಳ್ಳಿ ರೀಡಿಂಗ್‌ರೂಂ.

ಕಳೆದ ೧೯೨೧ನೆ ಡಿಶಂಬರ್ ತಾ ೧೨ರಲ್ಲಿ ದರ್ಬಾರ್ಡೇ ಮಹೋತ್ಸವದ ಜ್ಞಾಪಕಾರ್ಥವಾಗಿ ಗ|| ಕನ್ನಡಸ್ಕೂಲ್ ಮಾ|| ಮ|| ಎನ್. ಲಿಂಗಣ್ಣಯ್ಯನವರ ಪ್ರೋತ್ಸಾಹದಿಂದಲೂ ಗ್ರಾಮಸ್ಥರ ದ್ರವ್ಯಸಹಾಯದಿಂದಲೂ ಸ್ಥಾಪಿಸಲ್ಪಟ್ಟ ರೀಡಿಂಗ್‌ರೂಮಿಗೆ ತರಿಸುತ್ತಿದ್ದ ಪತ್ರಿಕೆಗಳ ಚಂದಾವಾಯಿದೆಯು ಗತಿಸುತ್ತಾಬಂದುದರಿಂದ ತಾ|| ೧೮-೧೨-೨೧ ನೇ ಭಾನುವಾರ ಮೇಲ್ಕಂಡ ಸ್ಕೂಲಿನಲ್ಲಿ ಮೀಟಿಂಗುನಡೆದು ಹಿಂದೆ ರೀಡಿಂಗ್‌ರೂಮಿಗೆ ಬರುತ್ತಿದ್ದ ವೃತ್ತಪತ್ರಿಕೆಗಳ ಜೊತೆಗೆ ಮೈಸೂರ್‌ಗೆಜೆಟ್ ಮೊದಲಾದ ನಾಲ್ಕು ಪತ್ರಿಕೆಗಳನ್ನ ತರಿಸಬೇಕೆಂತಲೂ, ಹಿಂದಿನವರ್ಷದಂತೆ ಈ ಸಾರಿಯೂ ಸ್ಕೂಲ್ ಮಾ|| ಮ|| ಎನ್ ಲಿಂಗಣ್ಣಯ್ಯನವರೇ ಸೆಕ್ರೆಟರಿಗಳಾಗಿರತಕ್ಕದ್ದೆಂತಲೂ ತೀರ್ಮಾನವಾಯ್ತು.

ಸ್ಥಳವಾಸಿ.

ಶ್ರೀ ಚಾಮರಾಜೇಂದ್ರ ಒಡೆಯರವರ ಆಬ್ದಿಕವಂತೆ.

ನಾನು ಎಂದಿನಂತೆ ತಿರುಪವನ್ನೆತ್ತುತ್ತ ಇದೇ ಮಾಹೆ ೨೮ನೆ ತಾರೀಖು ಬುಧವಾರ ಸುಮಾರು ೧೧ ಗಂಟೆಗೆ ಚಾಮರಾಜಪೇಟೆಗೆ ಬರಲು ಬ್ರಾಹ್ಮಣರ ಮನೆಗಳಲ್ಲಿ ಒಂದು ಪ್ರಾಣಿಯನ್ನಾದರೂ ನೋಡಲಿಲ್ಲ. ಹನ್ನೆರಡು ಗಂಟೆಯವರೆಗೂ ಸುತ್ತಿಸುತ್ತಿ ಸಾಕಾಗಿ ಕೊನೆಗೆ ಒಬ್ಬ ಬ್ರಾಹ್ಮಣೇತರರಮನೆ ಬಾಗಿಲಿಗೆ ಬರಲು ಅವರು ಸ್ವಲ್ಪ ಅನ್ನವನ್ನು ಕೊಟ್ಟರು. ಅದನ್ನು ತಿಂದು ಸ್ವಲ್ಪಹೊತ್ತಿನನಂತರ ಆ ಮನೆಯವರನ್ನು "ಬ್ರಾಹ್ಮಣರು ಬಡವರು ದೊಡ್ಡದೊಡ್ಡ ಅಧಿಕಾರಿಗಳ ಮನೆಯವರೂ ಸಹ ಮನೆ ಬೀಗಗಳನ್ನು ಹಾಕಿಕೊಂಡಿರುತ್ತಾರೆ ಕಾರಣವೇನು ಅಮ್ಮ?" ಎಂದು ನಾನು ಕೇಳಲು ಅವರು "ಈ ದಿನ ಶ್ರೀ ಚಾಮರಾಜೇಂದ್ರ ಒಡೆಯರ ಎಡಕಟ್ಟಳೆ ಮತ್ತು ಅದಕ್ಕಾಗಿ ೩೦ ಪಲ್ಲ ಅಕ್ಕಿ ಖಾಸಾಲವಾಜಮೆಯಿಂದ ತಯಾರಿಸಿದ ಲಾಡು ಮೊದಲಾದ ಭಕ್ಷ್ಯಗಳನ್ನು ಊಟಮಾಡಲು ಹೋಗಿರುತ್ತಾರಯ್ಯ" ಎಂದರು. "ತಮ್ಮ ಮನೆಯವರು ಏತಕ್ಕೆ ಹೋಗಲಿಲ್ಲ?" ಎಂದು ಕೇಳಲು, ಅದು ಬ್ರಾಹ್ಮಣರಿಗೆ ಮಾತ್ರವಂತೆ, ಅವರು ಎಷ್ಟೇ ದೊಡ್ಡ ಅಧಿಕಾರಿಗಳಾಗಲಿ, ಎಷ್ಟೇ ಐಶ್ವರ ವಂತರಾಗಲಿ, ಅದು ಅವರಿಗೆ ವಂಶಪಾರಂಪರ್ಯವಾಗಿ ಬಂದ ಹಕ್ಕುದಾರಿಯಂತೆ. ಇದೂ ಅಲ್ಲದೆ ಅವರಿಗೆ ಊಟವಾದನಂತರ ಪ್ರತಿಯೊಬ್ಬರಿಗೂ ಒಂದೊಂದು ರೂಪಾಯಿ ದಕ್ಷಿಣೆಯಂತೆ!" ಎಂದು ಅವರು ಹೇಳಿದರು. "ಹಾಗಲ್ಲಾ ತಾಯಿ, ನಾನು ೧೯೦೭ನೆ ಇಸವಿಯಲ್ಲಿ ಮದ್ರಾಸಿನಲ್ಲಿದ್ದಾಗ್ಗೆ, ಅಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರ ಆಬ್ದಿಕವನ್ನು ಮಾಡಿದರು. ನನ್ನಂಥ ಕುಂಟರು, ಕುರುಡರು ಇವರೇ ಮೊದಲಾದ ಅಂಗವಿಹೀನರಿಗೂ ಇತರ ತಿರುಪೆಯವರಿಗೂ ಮೃಷ್ಟಾನ್ನಭೋಜನವನ್ನು ಮಾಡಿಸಿದರು. ಈಗಲೂ ಸಹ ನಮ್ಮಂಥ ಅನಾಥರಿಗೆ ತಿಂಡಿಯನ್ನು ಹಾಕಲು ಏರ್ಪಾಟುಮಾಡಿರಬಹುದು. ಆ ಸ್ಥಳಯಾವುದು? ಎಂದು ನಾನು ಕೇಳಲು, ಶಂಕರಮಠದಲ್ಲಿ ಏರ್ಪಾಟುಮಾಡಿರುತ್ತಾರೆಂದು ಅವರು ಹೇಳಿದರು. ನಾನು ಅಲ್ಲಿಗೆ ಹೋಗಿ ನೋಡುವಲ್ಲಿ ಅನೇಕ ಬ್ರಾಹ್ಮಣರು ಮೋಟಾರುಗಳಲ್ಲಿಯೂ ಕುದುರೆಗಾಡಿಗಳಲ್ಲಿಯೂ ಬಂದು ಒಳಗೆ ಹೋಗುತ್ತಿದ್ದರು. ನನ್ನಂಥ ತಿರುಪೆಯವರನೇಕರು ಬೆಳಗಿನಿಂದಲೂ ನಾಯಿಗಳಂತೆ ಕಾದುಕೊಂಡು ಅಲ್ಲಿ ಬಿದ್ದಿದ್ದರು. ಆದರೇನು! ಅದೆಲ್ಲವೂ ಬ್ರಾಹ್ಮಣರಿಗೆ ಮಾತ್ರವಂತೆ! ಬೆಂಗಳೂರಿನ ಮತ್ತು ಪರಸ್ಥಳದ ತ್ರಿಮತಸ್ಥ ಬ್ರಾಹ್ಮಣರಿಗೆ ಮಾತ್ರ ಶಂಕರಮಠದಲ್ಲೂ ತುಳಸೀತೋಟದಲ್ಲೂ ಮತ್ತು ಪೂರ್ಣಯ್ಯನವರ ಸತ್ರದಲ್ಲೂ ಬೇಕಾದ ಏರ್ಪಾಟುಗಳಂತೆ! ಸುಮಾರು ೧೫ ಸಹಸ್ರ ರೂಪಾಯಿಗಳು ಖರ್ಚಾಗಿರುವುದಂತೆ! ತಿರುಪೆಯವರಾದ ನಾವುಗಳು ಕಾದುಕಾದು ಸಾಕಾಗಿ ಒಣಮೋರೆಗಳನ್ನು ಹಾಕಿಕೊಂಡು ನಿರಾಶರಾಗಿ ವಾಪಸ್ಸುಬಂದೆವು.

ಒಬ್ಬ ಕುಂಟ.

ಬಬಲೇಶ್ವರದ ವೀರಶೈವ ತರುಣಸಂಘ.

ತಾರೀಖು ೨೧-೧೨-೨೧ನೆ ದಿವಸ ವಾರ್ಷಿಕಸಭೆಯ ಉತ್ಸವದ ಬಗ್ಗೆ ಆಲೋಚನಾ ಕಮಿಟಿಯು ಕೂಡಿಸಲ್ಪಟ್ಟಿತು. ಆ ಕಮಿಟಿಯಲ್ಲಿ ಕೆಳಗೆ ಬರೆದಪ್ರಕಾರ ತಾ|| ೧೩-೧-೧೯೨೨ನೇ ದಿವಸ ಅಂದರೆ ಶ್ರೀ ಮಕರಸಂಕ್ರಮಣದ ದಿವಸದಲ್ಲಿ ವಾರ್ಷಿಕಸಭೆಯು ನಿರ್ಧರಿಸಲ್ಪಟ್ಟಿತು. ಅದರ ಕಾರ್ಯಕ್ರಮದ ಬಗ್ಗೆ ಠರಾವುಗಳು ಕೆಳಗೆ ಬರೆದಂತೆ ಪಾಸಾದುವು— ಠರಾವುಗಳು. ೧. ರಾಜನಿಷ್ಠಾ. ೨. ಅಸಹಕಾರಿಗಳ ದುರಾಚಾರನಿಷೇಧ. ೩. ವೀರಶೈವಧರ್ಮದ ಉನ್ನತಾವಸ್ಥೆಯ ಉಪಾಯ. ೪. ಸಮಾಜಗಳಲ್ಲಿ ಸಂಘಗಳ ಅವಶ್ಯಕತೆಯು. ೫. ನಮ್ಮ ಸಂಘದ ಅಧ್ಯಕ್ಷ ಮತ್ತು ಸೆಕ್ರೆಟರಿಗಳ ಚುನಾವಣೆ. ೬. ವಾರ್ಷಿಕ ರಿಪೋರ್ಟು ಓದಿ ಹೇಳುವದು. ಅದೇ ರಾತ್ರಿ ೯ ಘಂಟೆಗೆ ಸರಿಯಾಗಿ ಸಂಘದವರಿಂದಲೇ ಮನೋವಿಜಯ ನಾಟಕವು ಮಾಡಿ ತೋರಿಸಲ್ಪಡುತ್ತದೆ. ಮೇಲಿನ ವಿಷಯಗಳ ಬಗ್ಗೆ ಯಾರಾದರೂ ಭಾಷಣಮಾಡುವವರಿದ್ದರೆ ಅವಶ್ಯವಾಗಿ ಬರಬೇಕೆಂದು ಈ ಸಂಘದ ವಿನಂತಿ ಅದೆ. ಸರ್ವರೂ ಅತ್ಯವಶ್ಯವಾಗಿ ಸಭೆಗೆ ಬರಬೇಕೆಂದು ಆಶಿಸುವ ತಮ್ಮ

ಸೆಕ್ರೆಟರಿ,
ವೀ. ತ. ಸ. ಬಬಲೇಶ್ವರ.

ಎತ್ತನೋಡಿದೊತ್ತ ಗುದ್ದಾಟವೇ ಗುದ್ದಾಟ.

ಭೋ ಸದಸದ್ವಿವೇಕಶಾಲಿಗಳಾದ ಮಹಾಶಯರೇ, ಈ ೨೦ನೆ ಶತಮಾನದ ಕಾಲವೈಚಿತ್ರ್ಯವನ್ನು ಪೂರ್ಣ ಪರ್ಯಾಲೋಚಿಸಿದಲ್ಲಿ ರಾಜಪ್ರಜರಲ್ಲಿಯೂ, ಗುರುಶಿಷ್ಯರಲ್ಲಿಯೂ, ಸತಿಪತಿಗಳಲ್ಲಿಯೂ, ಗುದ್ದಾಟವೇಗುದ್ದಾಟ. ಈ ರೀತಿ ಪರಸ್ಪರ ಪ್ರೇಮಾಸ್ಪದಗಳು ತಪ್ಪಿಹೋದರೆ ಯಾವುದಾದರೊಂದು ದೇಶವಾಗಲಿ, ಮನೆತನವಾಗಲಿ ಅಥವಾ ಸಮಾಜವಾಗಲಿ ಎಂದಿಗಾದರೂ ಉನ್ನತಸ್ಥಿತಿಗೆ ಬರಬಹುದೇನು? ಇಲ್ಲ. ಅಂದಮೇಲೆ ಯಾವಯಾವ ಜನರು ಯಾವಯಾವ ತತ್ವವನ್ನವಲಂಬಿಸಿ ಬಡಿದಾಡುತ್ತಿರುವರೋ ದೇವರೇಬಲ್ಲ. ಇದರಲ್ಲಿ ಇನ್ನು ಸೂಕ್ಷ್ಮರೀತಿ ವಿಚಾರಮಾಡಿದಲ್ಲಿ, ನಮ್ಮ ವೀರಶೈವಸಮಾಜದ ದುಸ್ಥಿತಿಯನ್ನು ವರ್ಣಿಸಲು ಸದ್ಯಕ್ಕೆ ಆದಿಶೇಷನಿಗೂ ಅಸದಳವಾಗಿದೆ. ಈ ಸಮಾಜವು ಅವಿದ್ಯೆಯ ಪ್ರಭಾವದಿಂದ ಬಹಳ ಹಿಂದುಳಿದಿರುವದೆಂದು ಭಾವಿಸಿ, ಕೈ|| ವಾ|| ರಾ|| ಬಾ|| ಗಿಲಗಂಜಿಸಾಹೇಬರು, ವಾರದ ಅಪ್ಪಾಸಾಹೇಬರು, ಹಾಗೂ ಅರಟಾಳಸಾಹೇಬರು, ಅವಿಶ್ರಾಂತ ಶ್ರಮಪಟ್ಟು ವಿದ್ಯಾರ್ಥಿಗಳಿಗೆ ಯೋಗ್ಯ ಅನುಕೂಲತೆಗಳನ್ನು ಒದಗಿಸಿಕೊಟ್ಟರು. ಇಷ್ಟೇ ಅಲ್ಲ. ಜಗದ್ವಿಖ್ಯಾತರಾದ ಶ್ರೀಮಂತ ಶಿರಸಂಗಿ ಸರ್ ದೇಶಾಯರು ತಮ್ಮ ಸರ್ವಸ್ವವನ್ನೇ ವಿದ್ಯಾದಾನಕ್ಕಾಗಿ ಸಮರ್ಪಿಸಿ ಶಿವಲೋಕವನ್ನೈದಿದರು. ಈ ಮಹಾತ್ಮರು ಒದಗಿಸಿಕೊಟ್ಟಿರುವ ಅನುಕೂಲತೆಗಳಿಂದ ಈಗ ಎಷ್ಟೋಜನರು ಧಾರ್ಮಿಕ, ರಾಜಕೀಯ, ವಿದ್ಯೆಯಲ್ಲಿ ಮುಂದವರಿದಿರುವರು. ಇದನ್ನೆಲ್ಲಾ ವಿಚಾರಮಾಡುತ್ತ ಇನ್ನು ನಮ್ಮ ಸಮಾಜವು ಅಭಿವೃದ್ಧಿಸ್ಥಿತಿಯನ್ನು ಹೊಂದಬಹುದೆಂದು ಆನಂದಪಡುವ ಸಮಯದಲ್ಲಿ ಗುರುಸ್ಥಲದವರೆಂತಲೂ, ವಿರಕ್ತರೆಂತಲೂ, ಎರಡುಪಂಗಡಗಳು ಹುಟ್ಟಿ ದ್ವೇಷಾಸೂಯೆಗಳು ದಿನದಿನಕ್ಕೆ ವಿಪುಲವಾಗಿ ನಡಿಯ ಹತ್ತಿರುವವು. ಈ ಕಲಹವನ್ನು ಆರಂಭದಲ್ಲಿಯೇ ನಾಮಾವಶೇಷಮಾಡದರೆ ಈ ರೀತಿ ಲಾಭವಕ್ಕೆ ಅಸ್ಪದವೇ ಉಳಿಯುತ್ತಿರಲಿಲ್ಲ. ಬೀರೂರ ಮಹಾಸಭೆಯಿಂದಂತು ಈ ಗೊಂದಲವು ಅಬ್ಬರದಿಂದ ಸಾಗಹತ್ತಿರುವದು. ಈ ಮಹಾಸಭೆಯಲ್ಲಿ ನಮ್ಮ ಸಮಾಜದ ಮುಖಂಡರೇ ಕೂಡಿದ್ದು ಯಾವದಾದರೊಂದು ವಿಧವಾಗಿ ಉಭಯಪಂಗಡದವರೂ ಏಕಮತದಿಂದ ವರ್ತಿಸುವಂಥ ಮಹಾಕಾರ್ಯವನ್ನು ಮಾಡಿದ್ದಲೆ, ಎಷ್ಟೋ ಭೂಷಣಾಸ್ಪದವಾಗುತ್ತಿತ್ತು. ಮಹಾಸಭೆಯವರು ಇತ್ತ ಕಡೆಗೆ ಗಮನಕೊಡದೆ ಇದ್ದುದಕ್ಕಾಗಿ ಸದ್ಯಕ್ಕೆ ಬಹಳ ಚಿಂತಿಸುತ್ತಾ ಕೂತುಕೊಳ್ಳಬೇಕಾಯಿತು. ಇದರಲ್ಲಿ ಗುರುಸ್ಥಲದ ಪಕ್ಷದವರು ವಿರಕ್ತರನ್ನೂ, ವಿರಕ್ತಪಕ್ಷದವರು ಗುರುಸ್ಥಲದವರನ್ನೂ ದೂಷಿಸುತ್ತಿರುವುದು ನಮ್ಮ ಸಮಾಜದ ದುರ್ದೈವವೋ, ಅವಿದ್ಯೆಯ ಪ್ರಭಾವವೋ, ಕಲಿರಾಜನ ಪ್ರತಾಪವೋ ಯಾರಿಗೂ ತಿಳಿಯದ ವಿಷಯವಾಗಿದೆ. ಇಷ್ಟಾದರೂ ನಮ್ಮ ಸಮಾಜದ ಮಹಾಮಹಾ ಮುಖಂಡರು ಇತ್ತಕಡೆಗೆ ಲಕ್ಷ್ಯಕೊಡದೆ ಮೌನವ್ರತವನ್ನು ಧಾರಣಮಾಡಿರುವರಲ್ಲಾ! ಅಯ್ಯೋ ಇಂಥ ದುರ್ದೆಶೆಯು ನಮ್ಮ ಸಮಾಜಕ್ಕೆ ಪ್ರಾಪ್ತವಾಗಬೇಕಾಯಿತೇ? ನಮ್ಮನಮ್ಮ ದ್ವೇಷವೇ ಪರರಿಗೆ ತೋಷವಾಗುವುದು. ಸಮಾಜಬಾಂಧವರೇ ಇನ್ನಾದರೂ ಇತ್ತಕಡೆಗೆ ಲಕ್ಷ್ಯಕೊಡಿರಿ; ಇವರಿರ್ವರ ಕಲಹವನ್ನು ಶಾಂತಗೊಳಿಸಿರಿ; ನಮ್ಮ ಧರ್ಮದ ಯಥಾರ್ಥ ತತ್ವವನ್ನು ಬಯಲಿಗಿಡಿರಿ. ಇದು ವ್ಯಥಾ ಕಾಲಹರಣಮಾಡುತ್ತ ಕೂತುಕೊಳ್ಳುವ ಸಮಯವಲ್ಲ. ಸುಮ್ಮನೆ ತೋಜುನೋಡುತ್ತ ಕೂಡ್ರುವದರಿಂದ ಇದುವರೆಗೂ ಸಮಾಜೋದ್ಧಾರವನ್ನು ಮಾಡುವ ಸದ್ಬುದ್ಧಿಯಿಂದ ಅವಿಶ್ರಾಂತ ಶ್ರಮಪಟ್ಟ ಮುಂದಾಳುಗಳ ಕೋರಿಕೆಯು ಎಂದಿಗೂ ನೆರವೇರಲಾರದು. ಕಾರಣ ಯಾವತ್ತೂ ಸಮಾಜಬಾಂಧವರಿಗೆ ನಾನು ವಿಜ್ಞಾಪಿಸಿಕೊಳ್ಳುವದೇನಂದರೆ—ನನ್ನ ಅಲ್ಪಮತಿಗೆ ತಿಳಿದಮಟ್ಟಿಗೆ ಮೇಲೆ ಉದಾಹರಿಸಿರುವ ಯಾವತ್ತು ವಿಷಯವನ್ನು ಪೂರ್ಣ ಪರ್ಯಾಲೋಚಿಸಿ ಇನ್ನುಮೇಲಾದರೂ ಸಮಾಜೋದ್ಧಾರಕರಾಗುವ ನಿರಾತಂಕವಾಗಿ ನಡೆಯುವಂತೆ ಮಾಡಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸುವ ಸದ್ಬುದ್ಧಿಯನ್ನು ಜಗದೀಶನು ಕೊಡಲೆಂದು ಪ್ರಾರ್ಥಿಸಿ ಈ ಚಿಕ್ಕಲೇಖಕ್ಕೆ ವಿರಾಮಕೊಡುವೆನು.

ಸೆಕ್ರೆಟರಿ.
ಶ್ರೀ ವಿರೂಪಾಕ್ಷೇಶ್ವರ ವಾಚನಾಲಯ.

ವೀರಶೈವಸಾದರ ಉಪಸಭೆ.

ಬೀರೂರು ಮತ್ತು ತರೀಕೆರೆ ಪ್ರಾಂತಗಳ ನಿವಾಸಿಗಳಾದ ವೀರಶೈವಸಾದರು ತಾ|| ೧೨-೧೧-೨೧ ರಲ್ಲಿ ತರೀಕೆರೆ ತಾಲ್ಲೂಕು ಸೊಕ್ಕೆಯೆಂಬ ಗ್ರಾಮದಲ್ಲಿ ಮೈಸೂರ್ ಲೆಜಿಸ್ಲೆಟಿವ್‌ಕೌನ್ಸಿಲ್ ಮೆಂಬರಾದ ಮ|| ರಾ|| ಹನಸವಾಡಿ ಜಿ. ಬಸವಪ್ಪನವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ತಮ್ಮ ಜನಾಂಗದಲ್ಲಿ ವಿದ್ಯೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಕೈಗೊಳ್ಳಬೇಕಾದ ಏರ್ಪಾಡುಗಳನ್ನು ಕುರಿತು ಪರ್ಯಾಲೋಚಿಸಿದರು. ಅವುಗಳಲ್ಲಿ ಮುಖ್ಯವಾಗಿ ಅವಿದ್ಯಾದೋಷವನ್ನು ನಿವಾರಣೆಮಾಡುವುದು ಮೊದಲನೆಯ ಕೆಲಸವೆಂದು ನಿರ್ಧರಿಸಿ ಅದಕ್ಕಾಗಿ ತರೀಕೆರೆಯಲ್ಲಿ ಇಂಗ್ಲೀಷನ್ನು ಓದುವ ವೀರಶೈವವಿದ್ಯಾರ್ಥಿಗಳಿಗೆ ಅನುಕೂಲವಾದ ಸ್ಟೂಡೆಂಟ್ಸ್‌ಹೋಮು ಅಂದರೆ ವಿದ್ಯಾರ್ಥಿನಿಲಯವೊಂದನ್ನೂ, ಬೀರೂರಲ್ಲಿ ವೀರಶೈವ ಧರ್ಮಗ್ರಂಥಗಳನ್ನು ಅಭ್ಯಾಸಮಾಡುವುದಕ್ಕೆ ತಕ್ಕುದೊಂದು ಸಂಸ್ಕೃತಪಾಠಶಾಲೆಯನ್ನೂ ನಿರ್ಮಿಸಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯಿತು. ವಿದ್ಯಾರ್ಥಿನಿಲಯಕ್ಕಾಗಿ ಹತ್ತುಸಾವಿರ ರೂಪಾಯಿ ಚಂದಾಹಣವನ್ನು ಕೊಡಿಸಿಕೊಡುವುದಾಗಿ ಮ|| ರಾ|| ಸೊಕ್ಕೆ ಪಟೇಲರು ನಾಗಪ್ಪನವರೂ, ಹುಣಸಘಟ್ಟ ಸಾಹುಕಾರರು ಮಲ್ಲಪ್ಪನವರೂ, ಸದರಿಗ್ರಾಮದ ಪಟೇಲ್ ನಂಜುಂಡಪ್ಪನವರೂ, ನೇಗಳಮನೆ ವೀರಭದ್ರಪ್ಪನವರೂ, ಕೂಡ್ಲೂರು ಮುಂಡ್ರೆಮಲ್ಲಪ್ಪನವರೂ, ಮೊದಲಾದ ದೊಡ್ಡಮನುಷ್ಯರು ಒಪ್ಪಿದ್ದಲ್ಲದೆ ಸ್ವಹಸ್ತದಿಂದ ಸಭೆಯಲ್ಲಿಯೇ ಎರಡುಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಚಂದಾಪಟ್ಟಿಯನ್ನು ಹಾಕಿದರು. ಇದರಂತೆ ಬೀರೂರು ಸಂಸ್ಕೃತಪಾಠಶಾಲೆಗೆ ಮ|| ರಾ|| ದೊಡ್ಡಮನೆ ವೀರಭದ್ರಪ್ಪನವರೂ, ಹೊಗರೆಹಳ್ಳಿ ಪಟೇಲ್ ಮಲ್ಲಪ್ಪನವರೂ, ಕೋಡಿಹಳ್ಳಿ ಮಲ್ಲಪ್ಪನವರೂ, ನಾರ್ಗದ ಗುರುನಂಜಪ್ಪನವರೂ, ಮೊದಲಾದ ದೊಡ್ಡಮನುಷ್ಯರು ಎರಡುಸಾವಿರ ರೂಪಾಯಿವರೆಗೆ ತಮ್ಮ ಕೈಯಿಂದ ಚಂದಾಹಾಕಿ ಅದನ್ನು ಒಟ್ಟು ಹತ್ತುಸಾವಿರ ರೂಪಾಯಿಗಳವರೆಗೆ ಹೆಚ್ಚಿಸಿಕೊಡುವುದಾಗಿ ವಾಗ್ದಾನಮಾಡಿದರು. ಚಂದಾಹಣವನ್ನು ಉತ್ಸಾಹದಿಂದಲೂ ವಿಶೇಷ ಸಾವಕಾಶವಿಲ್ಲದೆಯೂ ಜನರು ಕೊಡುತ್ತಿರುವುದಾಗಿ ತಿಳಿಯಬಂದಿದೆ.

ಪ್ರತ್ಯಕ್ಷದರ್ಶಿ.

ಕೀರ್ತಿಶೇಷರಾದ ಕೈ|| ವಾ|| ಕೀರ್ತ್ಯಮ್ಮನವರು.

ನಿಜಾಂ ಇಲಾಖಾ ಜಿಲ್ಲಾ ರಾಯಚೂರು ಪೈಕಿ ಜನೂರು ದೇಶಾಯಿ ಶ್ರೀಮಂತ ರಾಜಾ ಚನ್ನಬಸವಪ್ಪ ಇವರ ಸಹ ಧರ್ಮಿಣಿಯವರಾದ ಸಾಧ್ವೀಮಣಿ ಕುಂ|| ಸೌ|| ರಾಣಿ ಕೀರ್ತ್ಯಮ್ಮನವರು ಕಳೆದ ಮಾರ್ಗಶಿರ ಶು|| ೧ ಬುಧವಾರದಲ್ಲಿ ಶಿವೈಕ್ಯರಾದರೆಂದರುಹಲು ವಿಷಾದವಾಗುತ್ತದೆ. ಇವರು ವಚನಶಾಸ್ತ್ರದಲ್ಲಿ ಕೋವಿದರಾಗಿದ್ದರಲ್ಲದೆ ಆಚಾರದಲ್ಲಿ ಪರಮವಿಶ್ವಾಸ ಬುದ್ಧಿಯುಳ್ಳವರಾಗಿದ್ದರು. ಮತ್ತು ಪತಿಸೇವಾತತ್ಪರರೂ ದಯಾನಿಧಿಗಳೂ ಪರೋಪಕಾರಿಣಿಯರೂ ಶಿವಪೂಜಾಸಕ್ತರೂ ಆಗಿದ್ದರು. ಮುಖ್ಯವಾಗಿ ಸದ್ಗುಣದ ಖಣಿಯಾಗಿದ್ದರೆಂದರೆ ಅತಿಶಯೋಕ್ತಿಯಲ್ಲ. ಈ ಕ್ಷಾಮಕಾಲದಲ್ಲಿ ಕ್ಷುತ್ಪೀಡಿತರಾದ ಜನರ ಸಂಕಟವನ್ನು ಕೇಳಿದ ಕೂಡಲೇ ಅವರನ್ನು ತೃಪ್ತಿಪಡಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದರು. "ಶ್ಲೋ|| ದುರ್ಭಿಕ್ಷೇ ಚಾನ್ನದಾತಾರಂ ದಾನಶೌಂಡಂಪ್ರಚಕ್ಷತೇ" ಎಂಬ ಆರ್ಯೋಕ್ತಿಯು ಇವರಲ್ಲಿ ಸಾರ್ಥವಾಗಿದ್ದಿತು. ಇವರು ವ್ಯಾಧಿಗ್ರಸ್ತರಾದ ಕೂಡಲೇ ಪೂಜ್ಯರಾದ ಇಂಗಳಗಿ ಮ|| ಚರಪಟ್ಟಾಧ್ಯಕ್ಷ ಅಜ್ಜಯ್ಯಸ್ವಾಮಿಗಳನ್ನು ಬರಮಾಡಿಕೊಂಡು ನಶ್ವರವಾದ ಶರೀರದ ಆರೋಗ್ಯವಂ ಬಯಸದೆ ಭವರೋಗದ ನಿವೃತ್ತ್ಯುಪಾಯವಂ ಪಡೆದುಕೊಂಡು ಪರಲೋಕಯಾತ್ರಾಸಹಾಯಕ್ಕೋಸುಗ ಬ್ರ|| ಶ್ರೀ|| ಸಿ. ರಾಮತನಾಳ ವೇ|| ವೀರಯ್ಯನವರಿಗೆ ಸಸ್ಯಸಹಿತವಾದ ೭೦೦ ರೂ. ಬೆಲೆಬಾಳತಕ್ಕ ಎಕರೆ ೨೬ ಗುಂಟೆ ೨೯ ಆಕಾರವುಳ್ಳ ಭೂಮಿಯನ್ನು ದಾನವನ್ನಿತ್ತು ಕೆಲವರಿಗೆ ಗೋದಾನ ಅಶ್ವದಾನ ಸ್ವರ್ಣದಾನ ರಜತದಾನ ಮುಂತಾದ ದಾನಗಳನ್ನು ಮಾಡಿ ಗಣತಿಂಥಿಗೆ ಪ್ರತಿಯೊಬ್ಬರಿಗೂ ೧೦ರೂಪಾಯಿಯಂತೆ ದಕ್ಷಿಣೆಯನ್ನು ಕೊಡಲು, ಮಾಹೇಶ್ವರೆಂದವು ಗಣಹಸ್ತ ರುದ್ರಾಧ್ಯಯನಗಳಂ ಪಠಣಮಾಡುತ್ತಿರಲು, ಶಿವನಾಮಘೋಷದೊಡನೆ ಶಿವಮಂತ್ರ ಪಠಣಪೂರ್ವಕ ಭೌತಿಕ ದೇಹವಂಬಿಟ್ಟರು. ಅನಂತರ ವಿಧ್ಯುಕ್ತಪ್ರಕಾರ ಸಮಾಧಿಸಂಸ್ಕಾರವಾದನಂತರ ಗಣಸಮೂಹಕ್ಕೆ ದ್ರವ್ಯವಸ್ತ್ರ ಮುಂತಾದ ಭೂರಿದಕ್ಷಿಣೆಯು ಕೊಡಲ್ಪಟ್ಟಿತು. ಇವರು ಶಿವೈಕ್ಯರಾದ ಬಗ್ಗೆ ಇದೇ ಮಾರ್ಗಶಿರ ಶು|| ಗುರುವಾರದಲ್ಲಿ ಇವರ ಪತಿಯವರು ಗಣಾರಾಧನೆಯನ್ನೆಸಗಿ ತಮ್ಮ ಧರ್ಮಪತ್ನಿಯವರ ಹೇಳಿಕೆ ಮೇರೆಗೆ ಇಂಗಳಗಿ ಶ್ರೀಗಳವರ ಶಿವಾರ್ಚನೆಗೋಸುಗ ೩ ತೊಲೆಯ ಸ್ವರ್ಣದ ಘನಸಾರದ ತಟ್ಟೆಯುಂಗ್ಯೆಸಿ ಧರ್ಮಪತ್ನಿಯ ನಾಮವಂ ಬರೆಯಿಸಿ ಪಾದಕ್ಕೆ ಒಪ್ಪಿಸಿದ್ದಲ್ಲದೆ ಅವರು ಧರಿಸತಕ್ಕ ೧೨ ತೊಲೆ ಭಂಗಾರದ ಇಷ್ಟಲಿಂಗದ ಕರಡಿಗೆಯನ್ನು ಕುಲಗುರುಗಳಾದ ಶಿರವಾರ ಮಠದ ಸಿದ್ಧಲಿಂಗಯ್ಯನವರಿಗೆ ಅರ್ಪಿಸಿದರು. ಅದೇ ದಿವಸ ಸಾಯಂಕಾಲದಲ್ಲಿ ಸಭೆಯನ್ನೇರ್ಪಡಿಸಿ ಸರ್ವರೂ ಕೂಡಿದನಂತರ ವೇ|| ಮಸ್ಕಿ ಬಸವಶಾಸ್ತ್ರಿಗಳು ಇವರ ಆಚಾರವಿಚಾರ ಪಾತಿವ್ರತ್ಯ ಮುಂತಾದ ಸದ್ಗುಣಗಳ ವಿಷಯವಾಗಿ ಭಾಷಣಮಾಡಿದ ಬಳಿಕ ಇಂಗಳಗಿ ಶ್ರೀಗಳು ಇವರ ಜನಕರಾದ ನಾಯಕಲ್ಲು ಪೋ|| ಪಾ|| ಸಂಗಾರಡ್ಡಿ ಇವರು ಮುಂದೆ ಕೀರ್ತಿಶೇಷರಾಗುವರೆಂಬ ಭವಿಷ್ಯತ್ತನ್ನು ತಿಳಿದು ನಾಮಕರಣವಂ ಮಾಡಿದರೋ ಆ ತಮ್ಮ ನಾಮವನ್ನು ಸಾರ್ಥಕಪಡಿಸದೆ ತಪ್ಪಬಾರದೆಂಬ ಹೇತುವಿನಿಂದ ಕೀರ್ತಿಯನ್ನು ಪಡೆದರೋ ಎಂದು ಸ್ವಾರಸ್ಯವಾಕ್ಯವನ್ನು ಹೇಳಿ ಇವರ ಪತಿಯವರಿಗೂ ಜನನೀಜನಕರಿಗೂ ಪ್ರಾಪ್ತವಾಗಿರುವ ದುಃಖವನ್ನು ವಿವರಿಸುವ ಸಮಯದಲ್ಲಿ ಶ್ರೋತೃಗಳು ಕಣ್ಣೀರನ್ನು ಸುರಿಸುತ್ತಿದ್ದರು. ನಂತರ ಆನಂಬಲ್ಲಿ ಸಂ|| ವಿ|| ಶಿ|| ಮೂ|| ಶಾಂತಮೂರ್ತ್ಯಪ್ಪನವರು ಶ್ರೋತೃಗಳಿಗೆ ಕರ್ಣಾನಂದವಾಗುವಂತೆ ಶಿವಕೀರ್ತನಮಾಡಿದ ಬಳಿಕ ದೇಶಾಯಿಗಳು ಪತ್ನಿಯವರ ಆರಾಧನ ಬಗ್ಗೆ ಲೋಕಮಾನ್ಯವಾದ ಮೈಸೂರು ಸ್ಟಾರ ಪತ್ರಿಕೆಗಾಗಿ ೫ ರೂ. ಮನಿಯಾರ್ಡರ್‌ಮಾಡುವಂತೆ ಶ್ರೀಗಳವರಿಗೆ ಒಪ್ಪಿಸಿದರು. ಬಳಿಕ ಜಗದೀಶನು ಪತಿಪಿತೃಮಾತೃಗಳಿಗುಂಟಾದ ದುಃಖಕ್ಕೂ ಗತಿಸಿದವರ ಆತ್ಮಕ್ಕೂ ಶಾಂತಿಯನ್ನೀಯಲೆಂದು ಸರ್ವರೂ ಕೋರಿದ ಬಳಿಕ ಸಭೆಯ ವಿಸರ್ಜನವಾಯಿತು.

ಪ್ರತ್ಯಕ್ಷದರ್ಶಿ.

[ಈ ರೂಪಾಯಿಯನ್ನು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಪ. ಪ್ರ.]

ಶ್ರೀ ಜಗದ್ಗುರು ತೋಂಟದಾರ್ಯ ಸೊಸೈಟಿ, ನೆಗಳೂರು.

ಕರ್ಜಗಿ ತಾಲ್ಲೂಕು ನೆಗಳೂರು ದೊಡ್ಡಗ್ರಾಮವು. ಇಲ್ಲಿಗೆ ಶ್ರೀ ಜಗದ್ಗುರು ತೋಂಟದಾರ್ಯ ಸ್ವಾಮಿಗಳವರ ಸನ್ನಿಧಿ ಚರಮೂರ್ತಿಗಳಾದ ಶ್ರೀ ರೇವಣಸಿದ್ಧೇಶಸ್ವಾಮಿಗಳವರು ದಯಮಾಡಿಸಿ ಈ ಭಾಗದಲ್ಲಿ ಒಂದು ಇಂಗ್ಲೀಷಸ್ಕೂಲಿರುವುದು ಅವಶ್ಯಕವೆಂದೂ, ಕೋ|| ಕ್ರೆ|| ಸೊಸೈಟಿಯನ್ನು ಸ್ಥಾಪಿಸಿ, ಅದರಲ್ಲಿ ಊರವರು ೫೦೦೦ ರೂಪಾಯಿ ಡಿಪಾಜಿಟ್ ಇಡತಕ್ಕದ್ದು, ತಾವು ಸ್ವತಃ ೫೦೦೦ ರೂಪಾಯಿ ಸ್ಕೂಲ್‌ಫಂಡಿನ ಹೆಸರಿನಿಂದ ಇಡತಕ್ಕದ್ದು, ಅಂತು ೧೦೦೦೦ ರೂಪಾಯಿಗಳ ಬಡ್ಡಿಯಿಂದ ಈ ಇಂಗ್ಲೀಷ್ ಸ್ಕೂಲು ನಡೆಯತಕ್ಕದ್ದು ಎಂದು ವಾಗ್ದಾನಮಾಡಿ, ಈ ಗ್ರಾಮದಲ್ಲಿಯ ಜನರಿಗೆ ಉಪದೇಶಿಸಿ ಇದೇ ತಾರೀಖು ೧೬-೧೦-೨೧ನೆ ಆದಿತ್ಯವಾರ ದಿವಸ ಸೊಸೈಟಿಯ ಫಸ್ಟ್ ಜನರಲ್ ಮೀಟಿಂಗ್ ಇಟ್ಟು, ಮಾಮಲೇದಾರ ಸಾಹೇಬ ಹಾವೇರಿ ಯವರ ಅಧ್ಯಕ್ಷತೆಯ ಕೆಳಗೆ ಮುಂಜಾನೆ ೧೧ ಘಂಟೆಗೆ ಕನ್ನಡ ಸ್ಕೂಲಿನಲ್ಲಿ ಶೃಂಗರಿಸಲ್ಪಟ್ಟ ಭವ್ಯವಾದ ಜನರಲ್‌ಹಾಲಿನಲ್ಲಿ ಸಭೆಗೂಡಿ ಒಳ್ಳೇ ವಿಜೃಂಭಣೆಯಿಂದ ಸೊಸೈಟಿಯ ಕಾರ್ಯವು ಸಾಂಗವಾಯಿತು. ಈ ಸಭೆಗೆ ಮ|| ರಾ|| ಪೊಲೀಸ್ ಇನ್ಸ್‌ಪೆಕ್ಟರ್ ಸಾ|| ದಕ್ಷಿಣಭಾಗದ ಆಡಿಟರ ಸಾಹೇಬ ಇನ್ಸ್‌ಪೆಕ್ಟರ್ ಕೋ|| ಕ್ರೆ|| ಸೊಸೈಟಿ ಮುಂತಾದ ಸರ್ಕಾರಿ ಅಧಿಕಾರಿಗಳೂ, ಮ|| ಬಸಪ್ಪ ಅಣ್ಣ ಕೊರಡೂರ, ಆನರರಿ ಆರ್ಗನೈಜರ ಮ|| ನಿಡಗುಂದಿ, ಇನ್ಸ್‌ಪೆಕ್ಟರ್ ಶ್ರೀಮಂತ ಮುರಿಗೆಪ್ಪಣ್ಣಾ ಕಾಟೇನಹಳ್ಳಿ, ಮ|| ವೀರನಗೌಡ ಸಂಗೂರ, ಮೊದಲಾದ ೫೦೦-೬೦೦ ಜನರು ಸಭೆಗೆ ಆಗಮಿಸಿದ್ದರು. ಶ್ರೀಗಳವರು ಉನ್ನತಾಸನದಲ್ಲಿ ಮುಹೂರ್ತಮಾಡಿದ್ದರು. ಪ್ರಥಮ ಸ್ವಾಗತಪದ್ಯವು ವಿದ್ಯಾರ್ಥಿಗಳಿಂದ ಹಾಡಲ್ಪಟ್ಟು ಸಭೆಯ ಕೆಲಸವು ಪ್ರಾರಂಭವಾಗಿ ಮುಂಜೂರಾಗಿ ಬಂದ ಸೊಸೈಟಿ ನೇಮುಗಳನ್ನು ಸ್ವೀಕರಿಸಿದ ನಂತರ ಮಿ|| ಮರಡೂರ ಮಾಸ್ತರ, ಮ|| ಆಡಿಟರ್ ಸಾಹೇಬರವರು ಸೊಸೈಟಿಯ ಬಗ್ಗೆ ಸರಸವಾಗಿ ಭಾಷಣಮಾಡಿದ ನಂತರ ಅಧ್ಯಕ್ಷರು ಸೊಸೈಟಿಯಲ್ಲಿ ಆಗುವ ಫಾಯದೆ ಮತ್ತು ವ್ಯವಸ್ಥಾರೀತಿಯಿಂದ ನಡೆಸತಕ್ಕಕ್ರಮವು ಇವುಗಳಮೇಲೆ ಚೆನ್ನಾಗಿ ಭಾಷಣಮಾಡಿದರು. ತರುವಾಯ ಚನ್ನವೀರಗೌಡರು ನೆಗಳೂರುಗ್ರಾಮದ ವತಿಯಿಂದ ಶ್ರೀಗಳವರ, ಅಧ್ಯಕ್ಷರ ಮತ್ತು ಯಾವತ್ತೂ ಸಭ್ಯಗೃಹಸ್ಥರ ಆಭಾರಮನ್ನಿಸಿ ಶ್ರೀಗಳವರಿಗೂ ಪಂಚಮುಖಾರ್ಚು ಬಾದಶಹರ ಫೋಟೋವಿಗೂ ಹಾರಹಾಕಿದ ನಂತರ ಅಧ್ಯಕ್ಷರಿಗೆ ಮತ್ತು ಸಭ್ಯಗೃಹಸ್ಥರಿಗೆ ಹಾರತುರಾಯಿ ಸುಗಂಧ ತಾಂಬೂಲ ಸಮರ್ಪಣೆಮಾಡಿದರು. ನಂತರ ರಾಷ್ಟ್ರಗೀತವನ್ನು ಹಾಡಿ ಸಭೆಯ ವಿಸರ್ಜನೆಯಾಯಿತು. ಮಧ್ಯಾಹ್ನ ೪ ಘಂಟೆಗೆ ಶ್ರೀ ಪರ್ವತದೇವರಗುಡಿಯ ಮುಂದಿನ ಪಟಾಂಗಣದಲ್ಲಿ ಹಾಕಿದ್ದ ಭವ್ಯಮಂಟಪದಲ್ಲಿ ಶ್ರೀಗಳವರು ಮುಂಜಾನೆ ನೆರೆದ ಯಾವತ್ತೂ ಸಭ್ಯಗೃಹಸ್ಥರೂ ಸರಕಾರೀ ಅಧಿಕಾರಸ್ಥರೂ ಸಭೆಗೊಂಡಿದ್ದರು. ಪುನಃ ಸ್ವಾಗತಪದ್ಯವು ಅನ್ನಲ್ಪಟ್ಟು ಮಿ|| [illegible] ಮಾಮಲೇದಾರ ಸಾಹೇಬರೇ ಅಧ್ಯಕ್ಷಸ್ಥಾನವನ್ನು ವಹಿಸಿದರು. ನಂತರ ಇಂಗ್ಲೀಷ್ ಶಾಲಾಪ್ರಾರಂಭ ಸಮಾರಂಭ ಕಾರ್ಯವು ಜರುಗಿತು. ಇಂಗ್ಲೀಷ್ ಶಾಲೆಯ ಮಹತ್ವ ಅದರಿಂದಾಗುವ ಲಾಭ ಇವುಗಳಮೇಲೆ ಮಿ|| ಚನ್ನವೀರಗೌಡರು, ಮಿ|| ಮರಡೂರ ಮಾಸ್ತರ, ಮಿ|| ಹಾವನೂರ ಶಾಲಾಮಾಸ್ತರ ಪಾಟೀಲ ವಗೈರೇರ ಉತ್ತಮಭಾಷಣಗಳಾದ ನಂತರ ಅಧ್ಯಕ್ಷರು ವಿದ್ಯೆಯನ್ನು ಕುರಿತು ಚೆನ್ನಾಗಿ ಭಾಷಣಮಾಡಿದಮೇಲೆ ಮಿ|| ಚನ್ನವೀರಗೌಡರು ನೆಗಳೂರಗ್ರಾಮದ ವತಿಯಿಂದ ಸರ್ವಸಭಿಕರ ಆಭಾರವನ್ನು ಮನ್ನಿಸಿ ಹಾರ ತುರಾಯಿ ಸುಗಂಧ ತಾಂಬೂಲ ಸಮರ್ಪಣೆಯಾಯಿತು.

ಓರ್ವ ಪ್ರೇಕ್ಷಕ.

೧೯೨೧-೨೨ನೇ ಸಾಲಿನಲ್ಲಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದಿಂದ ಈ ಕೆಳಗೆ ನಮೂದಿಸಿರುವಂತೆ ವೇತನಗಳನ್ನು ಸ್ಯಾಂಕ್ಷನ್‌ಮಾಡಿದೆ.

ಡಿ. ಹೆಚ್. ಚಂದ್ರಶೇಖರಯ್ಯ ದಾವಣಗೆರೆ ಎಲ್.ಎಲ್.ಬಿ. ಕ್ಲಾಸ್ ೧೦ ರೂ, ಜಿ. ಶಂಕರಶೆಟ್ಟಿ ಗುಬ್ಬಿ ಎಲ್.ಎಲ್.ಬಿ. ಕ್ಲಾಸ್ ೧೦ ರೂ, ಟಿ. ಯಣ್. ಮಲ್ಲಪ್ಪ ಬೆಂಗಳೂರು ಎಲ್.ಎಲ್.ಬಿ. ಕ್ಲಾಸ್ ೧೦ ರೂ, ಬಿ. ಬಸಪ್ಪ ಬಿಸನಹಳ್ಳಿ ಎಲ್.ಎಲ್.ಬಿ. ಕ್ಲಾಸ್ ೧೦ ರೂ, ಯಂ. ಯಸ್. ಸಿದ್ಧಲಿಂಗಯ್ಯ ಸಕಲೇಶಪುರ ಎಂಟ್ರೆನ್ಸ್‌ಕ್ಲಾಸ್ ೫ ರೂ, ಟಿ. ಹುಚ್ಚೀರಯ್ಯ ತುಮಕೂರು ಎಂಟ್ರೆನ್ಸ್‌ಕ್ಲಾಸ್ ೫ ರೂ. ಯಂ. ಸಿ. ಮಲ್ಲಿಕಾರ್ಜುನಯ್ಯ ಮೈಸೂರು ಎಂಟ್ರೆನ್ಸ್‌ಕ್ಲಾಸ್ ೫ ರೂ, ಟಿ. ಯಂ. ಮಹದೇವಯ್ಯ ತಮ್ಮಡಹಳ್ಳಿ ಎಂಟ್ರೆನ್ಸ್‌ಕ್ಲಾಸ್ ೫ ರೂ, ಹೆಚ್. ಬಿ. ಶಿವರುದ್ರಯ್ಯ ಹುರುಳಿಗೆರೆ ಎಂಟ್ರೆನ್ಸ್‌ಕ್ಲಾಸ್ ೫ ರೂ, ಜಿ. ಶಾಂತವೀರಯ್ಯ ಮುಗಳಕೊಪ್ಪ ಎಂಟ್ರೆನ್ಸ್‌ಕ್ಲಾಸ್ ೫ ರೂ, ಆರ್. ಬಸವಪ್ಪಾಜಿ ಸೋಲೂರು ಎಂಟ್ರೆನ್ಸ್‌ಕ್ಲಾಸ್ ೫ ರೂ. ವೈ. ರುದ್ರಯ್ಯ ಶೀರಾ ಎಂಟ್ರೆನ್ಸ್‌ಕ್ಲಾಸ್ ೫ ರೂ, ಸಿ. ಸಿದ್ಧವೀರಯ್ಯ ಚಿಕ್ಕನಾಯಕನಹಳ್ಳಿ ಎಂಟ್ರೆನ್ಸ್‌ಕ್ಲಾಸ್ ೫ ರೂ, ಪಿ. ಯಣ್. ಸುಬ್ರಾಯಪ್ಪ ಪಿರಿಯಾಪಟ್ಟಣ ಎಂಟ್ರೆನ್ಸ್‌ಕ್ಲಾಸ್ ೫ ರೂ, ಪಿ. ಮುರುಡಪ್ಪ ಶಿವಮೊಗ್ಗ ಎಂಟ್ರೆನ್ಸ್‌ಕ್ಲಾಸ್ ೫ ರೂ, ಯಂ. ಯಣ್. ಮಾದಪ್ಪ ಮೈಸೂರು ಎಂಟ್ರೆನ್ಸ್‌ಕ್ಲಾಸ್ ೫ ರೂ, ಟಿ. ಎಲ್. ಸಿದ್ಧಪ್ಪ ತರೀಕೆರೆ VI ಫಾರಮ್ ೩ ರೂ, ಯಸ್. ಕೆ. ಪರಮಶಿವಯ್ಯ ಶೀರಾ VI ಫಾರಮ್ ೩ ರೂ, ಜಿ. ಗುರುಸಿದ್ದಪ್ಪ ಚಂಗಾವಿ VI ಫಾರಮ್ ೩ ರೂ, ಯಂ. ಬಿ. ಸಿದ್ಧರಾಮಯ್ಯ ಮೈಸೂರು VI ಫಾರಮ್ ೩ ರೂ, ಬಿ. ಸಿ. ನಾಗಪ್ಪ ಹಿರಿಯೂರು ಎಳಂದೂರು ತಾ|| VI ಫಾರಮ್ ೩ ರೂ, ಯಣ್. ಮುರುಳಪ್ಪ ಚನ್ನಗಿರಿ VI ಫಾರಮ್ ೩ ರೂ, ಜಿ. ವಿ. ನಾಗಭೂಷಣಂ ವಡಿಗೇನಹಳ್ಳಿ VI ಫಾರಮ್ ೩ ರೂ, ಯಲ್. ಸಿದ್ಧಪ್ಪ ಲಿಂಗದಹಳ್ಳಿ VI ಫಾರಮ್ ೩ ರೂ, ಯಂ. ಡಿ. ದೇವಣ್ಣ ಮೈಸೂರು VI ಫಾರಮ್ ೩ ರೂ, ಜಿ. ರೇವಣ್ಣ ಗುಬ್ಬಿ VI ಫಾರಮ್ ೩ ರೂ, ಜಿ. ಯಸ್. ಚನ್ನಬಸವಪ್ಪ ಗುಬ್ಬಿ VI ಫಾರಮ್ ೩ ರೂ, ಯಂ. ಮಲ್ಲಪ್ಪ ಚಿಕ್ಕಬೂವಳ್ಳಿ V ಫಾರಮ್ ೨ ರೂ, ಹೆಚ್. ಪಿ. ಮೃತ್ಯುಂಜಯ ಬೆಂಗಳೂರು V ಫಾರಮ್ ೨ ರೂ, ಜಿ. ಚನ್ನಪ್ಪ ಗುಬ್ಬಿ V ಫಾರಮ್ ೨ ರೂ, ಟಿ. ಯನ್. ಸಿದ್ಧಗಂಗಪ್ಪ ತ್ಯಾಮಗೊಂಡ್ಲು V ಫಾರಮ್ ೨ ರೂ, ಯಂ. ಬಸವರಾಜಯ್ಯ ಮೈಸೂರು V ಫಾರಮ್ ಹೆಚ್. ನಂದೀಶಯ್ಯ ಹುಲಿಯೂರುದುರ್ಗ IV ಫಾರಮ್ ೨ ರೂ, ಎ. ರುದ್ರಯ್ಯ ತರೀಕೆರೆ IV ಫಾರಮ್ ೨ ರೂ, ಬಿ. ರಾಜಶೇಖರ ಬೆಂಗಳೂರು IV ಫಾರಮ್ ೨ ರೂ, ಯಸ್. ಚನ್ನಬಸಪ್ಪ ಯಲ್ಲಂಬಲಸಿ ಕಡೂರು ಪೋಸ್ಟ್ IV ಫಾರಮ್ ೨ ರೂ, ಯಂ. ಜಿ. ಸೋಮಶೇಖರಪ್ಪ ಜೋಗಿ ಹೊನ್ನಾಳಿ ತಾ|| IV ಫಾರಮ್ ೨ ರೂ, ಯಸ್. ರೇವಯ್ಯ ಬೆಂಗಳೂರು IV ಫಾರಮ್ ೨ ರೂ, ಯನ್. ಪ್ರಸನ್ನಯ್ಯ ಡೆಂಕಣಿಕೋಟೆ IV ಫಾರಮ್ ೨ ರೂ, ಯಣ್. ವೀರಪ್ಪ ಡೆಂಕಣಿಕೋಟೆ IV ಫಾರಮ್ ೨ ರೂ, ಹೆಚ್. ಸಿ. ವೀರಶೆಟ್ಟಿ ಹೊಣಸಿಗೆರೆ IV ಫಾರಮ್ ೨ ರೂ, ಹೆಚ್. ಸಿದ್ಧಗಂಗಪ್ಪ ಹುಲ್ಲುಕುಂಟೆ IV ಫಾರಮ್ ೨ ರೂ, ಜಿ. ಬಸವರಾಜಯ್ಯ ಸಂತೆಬಾಚಹಳ್ಳಿ IV ಫಾರಮ್ ೨ ರೂ, ಯಂ. ವೀರಪ್ಪ ಬೆಂಗಳೂರು ಟ್ರೈನಿಂಗ್‌ಕ್ಲಾಸ್ ೧೦ ರೂ, ಯಂ. ಸಿ. ನಂಜಪ್ಪ ಚಿಕ್ಕಮಗಳೂರು ಟ್ರೈನಿಂಗ್‌ಕ್ಲಾಸ್ ೫ ರೂ, ಬಿ. ಶಿವಪ್ಪ ಬೆಂಗಳೂರು ಟ್ರೈನಿಂಗ್‌ಕ್ಲಾಸ್ ೧೦ ರೂ, ಎ. ಆರ್. ಸಿದ್ಧಬಸವಯ್ಯ ಅರಸೀಕೆರೆ ಟ್ರೈನಿಂಗ್ ಕ್ಲಾಸ್ ೮ ರೂ, ಯಂ. ಸಿದ್ಧಲಿಂಗಯ್ಯ ಮೈಸೂರು ಸಂಸ್ಕೃತಪಾಠಶಾಲೆ ೫ ರೂ, ವೀರಭದ್ರಯ್ಯ ಕೋಲಾರು ಸಂಸ್ಕೃತಪಾಠಶಾಲಾ ೩ ರೂ, ಸೋಮಶೇಖರದೇವರು ಮೈಸೂರು ಸಂಸ್ಕೃತಪಾಠಶಾಲಾ ೫ ರೂ.

ಬಿ. ಎ. ತರಗತಿ ವಿದ್ಯಾರ್ಥಿಗಳ ಪಟ್ಟಿಯು ಮುಂದೆ ಪ್ರಕಟಿಸಲ್ಪಡುತ್ತದೆ.

ಜಿ. ಪರಮಶಿವಯ್ಯ, ಆ|| ಸೆಕ್ರೆಟರಿ.

೧೯೨೨ ನೆಯ ಇಸವಿ ಜನವರಿ ತಾ|| ೧ ರಿಂದ ೧೯೨೨ ನೆಯ ಜನವರಿ ತಾ|| ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮಸಂವತ್ಸರದ ಪುಷ್ಯಶುದ್ಧ ತದಿಗೆಯಿಂದ ಪುಷ ಶುದ್ಧ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ರಾಶಿ
1	ಭಾನು	ತದಿ	19-47	ಶ್ರವ	18-43	18
2	ಸೋಮ	ಚೌತಿ	25-7	ಧನಿ	25-6	19
3	ಮಂಗಳ	ಪಂಚ	30-36	ಶತ	31-39	20
4	[1]ಬುಧ	ಷಷ್ಠಿ	35-49	ಪೂಭಾ	38-8	21
5	[2]ಗುರು	ಸಪ್ತ	40-30	ಉಭಾ	43-54	22
6	ಶುಕ್ರ	ಅಷ್ಟ	44-14	ರೇವ	48-47	23
7	ಶನಿ	ನವ	46-45	ಅಶ್ವಿ	52-30	24

(1) ತುಲಾಷಷ್ಠಿ, ಕೊಠಾರೋತ್ಸವಾರಂಭಃ. (2) ಮಾರ್ಗಶಿರಲಕ್ಷ್ಮೀವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]   [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪)   ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜನವರಿ ತಾರೀಖು ೮ ನೆಯ ಭಾನುವಾರ.   ಸಂಚಿಕೆ ೨

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ !   ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೇ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೆಯಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯೆಂಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
51 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆವಡಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0.12.0	,	50-0-0
5	0. 8.0	..	100-0-0
6	0-12-0	,,	100-0-0
7	6. 0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6.0	ಇಂದ	10-0-0
8	0- 8.0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6. 0 0	,,	100-0-0

180 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5-6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅಡಕೆಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
45 ಕಂಪನಿ, ಚೌಕಂಬಾ ಕಾಶೀ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—
೦ದಾಸಿ	೦—. ೮—೦
ತಪಂಚಕ	೦— ೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ   ಮನೋದ್ಭವಗುಳಿಗೆ.   ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.   29

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೨-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
೨ ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ತುರ್ಕಿ ಸಮಸ್ಯೆ.

ನ್ಯಾಯವನ್ನನುಸರಿಸಿ ತುರ್ಕಿ ಸಂಧಿ ನಿಯಮವನ್ನು ಮಾರ್ಪಡಿಸುವಂತೆ ಮಾಡಿಸಬೇಕೆಂದು ಕೇಳಿಕೊಳ್ಳುವುದಕ್ಕಾಗಿ ಬಂಗಾಳಾದ ಮಹಮ್ಮದೀಯ ಪ್ರತಿನಿಧಿಗಳು ಕಳೆದ ತಾ|| ೨೦ರಲ್ಲಿ ಕಲ್ಕತ್ತಾದಲ್ಲಿದ್ದ ವೈಸ್ರಾಯರ ಬಳಿಗೆ ಹೋಗಿದ್ದರು. ಅವರ ವಿಜ್ಞಾಪನೆಗೆ ವೈಸ್ರಾಯರು ಹೀಗೆ ಪ್ರತ್ಯುತ್ತರಕೊಟ್ಟರು—'ಮಹಮ್ಮದೀಯರ ತೀವ್ರವಾದ ಅಭಿಪ್ರಾಯಗಳು ನನಗೆ ಗೊತ್ತುಂಟು. ಅವರಲ್ಲಿ ನನಗೆ ವಿಶೇಷ ಸಾನುಭೂತಿಯುಂಟು. ನಾನು ಈ ದೇಶಕ್ಕೆ ಬಂದಾಗಣಿಂದಲೂ ಮಹಮ್ಮದೀಯರ ಮನಸ್ತೃಪ್ತಿಯನ್ನುಂಟುಮಾಡಲಿಕ್ಕೆ ಯತ್ನಿಸುತ್ತಿದ್ದೇನೆ. ಭರತಖಂಡದ ಮಹಮ್ಮದೀಯಾಭಿಪ್ರಾಯವನ್ನು ಕುರಿತು ಆಂಗ್ಲಪ್ರಭುತ್ವದವರಿಗೆ ಯಾವ ಸಂಶಯವೂ ಇಲ್ಲ. ಮಹಮ್ಮದೀಯರ ನಿಜಾಭಿಪ್ರಾಯ ಪ್ರಾಬಲ್ಯವನ್ನು ಕುರಿತು ಆಂಗ್ಲಪ್ರಭುತ್ವದವರಿಗೆ ತಿಳಿವಳಿಕೆ ಕೊಡುವಲ್ಲಿ ಭಾರತ ಪ್ರಭುತ್ವದವರು ಯಾವಾಗಲೂ ನಿರ್ಲಕ್ಷ್ಯಮಾಡುವುದಿಲ್ಲ. ಭರತಖಂಡ ಸರ್ಕಾರದ ಶಿಫಾರಸು ವ್ಯರ್ಥವಾಗಿ ಹೋಗುವುದಿಲ್ಲವೆಂದು ಮಹಮ್ಮದೀಯರು ತಿಳಿಯಬೇಕು. ಭಾರತಪ್ರಭುತ್ವದವರ ಸೂಚನೆಯು ಅಂಗೀಕರಿಸಲ್ಪಡುತ್ತಿದೆ. ಇಷ್ಟರೊಳಗೇ ತುರ್ಕಿ ಸಮಸ್ಯೆಯು ಸಂತೃಪ್ತಿಕರವಾಗಿ ಪರಿಷ್ಕಾರವಾಗಬಹುದೆಂದು ಸ್ಟೇಟ್ ಸೆಕ್ರೆಟರಿಯವರು ನನಗೆ ಕೆಲ ದಿನಗಳ ಹಿಂದೆ ತಿಳಿಯಪಡಿಸಿರುವರು. ಪರಿಸ್ಥಿತಿಯು ಹೀಗಿದೆ. ಸಂಧಿಯು ಬೇಗನೆ ಕುದುರುವುದೆಂದು ನನಗೆ ತೋರುತ್ತದೆ. ಪ್ರತಿಫಲವು ಸ್ಪಷ್ಟವಾಗಿ ಕಾಣದೆ ಹೋಗಬಹುದು. ಆದರೆ ಮಹಮ್ಮದೀಯರ ಅಭಿಪ್ರಾಯಗಳು ವ್ಯರ್ಥವಾಗಲಾರವು. ಆದರೆ ಅವರು ಕೋರಿದುದೆಲ್ಲಾ ಜರುಗದೆ ಹೋಗಬಹುದು. ೧೯೨೦ನೆ ವರ್ಷದಲ್ಲಿ ಮಾಡಲ್ಪಟ್ಟಿರುವ ಸಂಧಿ ನಿಬಂಧನೆಯು ಮಾರ್ಪಟ್ಟು ಹೋಗುವುದು. ಮಹಮ್ಮದೀಯರ ಅಪೇಕ್ಷೆಯಲ್ಲಿ ಬಹು ಭಾಗವು ಈಗ ನೆರವೇರಿಸಲ್ಪಡುವುದೆಂದು ನಂಬಬಹುದು. ಆಂಗ್ಲ ಪ್ರಭುತ್ವವು ಇಸ್ಲಾಂ ಮತಕ್ಕೆ ಬಲವದ್ವಿರೋಧಿಯೆಂದು ತಿಳಿದುಕೊಳ್ಳುವುದು ದೊಡ್ಡ ತಪ್ಪು' ಎಂದು ಅಪ್ಪಣೆ ಕೊಡಿಸಿರುವರು. ಸೀಮೆಯಿಂದ ತುರ್ಕಿ ಸಂಬಂಧವಾಗಿ ಬರುತ್ತಿರುವ ತಂತ್ರೀವಾರ್ತೆಗಳೂ ವೈಸ್‌ರಾಯರ ಈ ಮಾತುಗಳೂ ಕೂಡ ತುರ್ಕಿ ಸಮಸ್ಯಾಪರಿಷ್ಕಾರಕ್ಕೆ ಶುಭಸೂಚನೆಯಾಗಿ ತೋರುತ್ತಿರುವವು. ಸದ್ಯಃ ತುರ್ಕಿ ವಿಷಯವು ನೆಟ್ಟಗಾದರೆ ಆಂಗ್ಲಸಾಮ್ರಾಜ್ಯದ ಗಡಿಬಿಡಿಯಲ್ಲಿ ಅರ್ಧಭಾಗವು ಶಾಂತವಾಗುವುದು.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೮ ನೆಯ ಭಾನುವಾರ.

ಸ್ವರಾಜ್ಯಪ್ರಾಪ್ತಿ.

ಕಳೆದ ಡಿಶಂಬರ್ ತಿಂಗಳ ಕೊನೆಯೊಳಗಾಗಿ ಭರತಖಂಡಕ್ಕೆ ಸ್ವರಾಜ್ಯವು ಪ್ರಾಪ್ತವಾಗುವುದೆಂದು ಮ|| ಗಾಂಧಿಯವರು ಹೇಳುತ್ತಾಬಂದರು. ಅವರ ಅನುಯಾಯಿಗಳೆಲ್ಲಾ ಅದನ್ನೇ ನಂಬಿ ಹಾಗೆಯೇ ಪ್ರತಿಪಾದಿಸುತ್ತಿದ್ದರು. ಎಲ್ಲೋ ಕೆಲವರು ಮಾತ್ರ ಅದನ್ನು ನಂಬದೆ ಇದ್ದರು. ಅನೇಕ ವರ್ತಕರಿಗೆ ಗಾಂಧಿಯವರು ವಿದೇಶವಸ್ತ್ರ ಬಹಿಷ್ಕಾರವನ್ನು ಹಾಕಬೇಕೆಂದು ಉಪದೇಶಿಸಿದಾಗ್ಗೆ, ಡಿಶಂಬರ್ ತಿಂಗಳು ಕಳೆದನಂತರ ಹಾಗೆ ಮಾಡುತ್ತೇವೆಂದು ಕೆಲಕೆಲವರು ಹೇಳುತ್ತಬಂದರು. ಡಿಶಂಬರ್ ತಿಂಗಳ ಕೊನೆಯೊಳಗೆ ಸ್ವರಾಜ್ಯಪ್ರಾಪ್ತಿಯಾದರೆ ಹಾಗೆ ಮಾಡೋಣವೆಂದು ಅವರು ನಿಶ್ಚಯಿಸಿದ್ದಂತೆ ತೋರುತ್ತದೆ. ಕಾರಾಗೃಹಗಳಿಗೆ ಹೋದವರನ್ನು ಕುರಿತು ಇನ್ನು ೧-೨ ತಿಂಗಳೊಳಗೆ ನಮಗೆ ಸ್ವರಾಜ್ಯಪ್ರಾಪ್ತವಾಗಿ ನಿಮ್ಮನ್ನೆಲ್ಲಾ ಬಿಡಿಸಿಕೊಳ್ಳುತ್ತೇವೆಂದು ಆಶ್ವಾಸನ ಕೊಡುತ್ತಿದ್ದರು. ಆದರೆ ೧೯೨೧ನೆ ವರ್ಷದ ಡಿಶಂಬರ್ ತಿಂಗಳು ಮುಗಿಯಿತು. ೧೯೨೨ನೆ ವರ್ಷವು ನಡೆಯುತ್ತಿದೆ. ಪಟ್ಟಣಗಳಲ್ಲೂ ಗ್ರಾಮಾಂತರಗಳಲ್ಲೂ ಸ್ವರಾಜವನ್ನು ಒಂದು ಮಾರುದೂರದಲ್ಲಿದೆಯೆಂದು ಅರಿಯದ ಪ್ರಜೆಗಳಿಗೆ ಬೋಧಿಸುತ್ತ ಬಂದಿದ್ದ ಮುಖಂಡರು ಈಗ ಆ ಜನರಿಗೆಲ್ಲಾ ಯಾವ ಉತ್ತರವನ್ನು ಹೇಳಬೇಕೆಂಬುದನ್ನು ಕಾಣದೆ ಕಕಮಕ ಹಿಡಿದವರಾಗಿದ್ದಾರೆ. ಹೀಗಾಗುವುದು ಸಹಜವೆಂಬುದನ್ನು ತಿಳಿದುಕೊಂಡು ಮ|| ಗಾಂಧಿಯವರು ಅಹಮ್ಮದಾಬಾದ್ ರಾಷ್ಟ್ರೀಯ ಮಹಾಸಭೆಯು ಮುಗಿದ ಮರುದಿನ ಪ್ರತಿನಿಧಿಗಳೊಡನೆ ಮಾತನಾಡುವಾಗ್ಗೆ ಈ ಸಂಬಂಧವಾಗಿ ಕೆಲ ಮಾತುಗಳನ್ನಾಡಿದರೆಂದು ಮದ್ರಾಸ್ ಮೇಲ್ ಪತ್ರಿಕಾವಿಲೇಖಕರು ಪ್ರತ್ಯಕ್ಷನಾಗಿದ್ದು ಅದರ ವಿವರವನ್ನು ಮೇಲ್ ಪತ್ರಿಕೆಗೆ ಬರೆದು ಕಳುಹಿಸಿದ್ದಾರೆ. ಹೇಗೆಂದರೆ—ಗಾಂಧಿಯವರು ಪ್ರತಿನಿಧಿಗಳನ್ನು ಕುರಿತು–"ಸ್ವರಾಜ್ಯವೆಲ್ಲಿ? ಇನ್ನೂ ಬರಲಿಲ್ಲವೆ? ಎಂದು ಪ್ರಜೆಗಳು ನಿಮ್ಮನ್ನು ಕೇಳಿದರೆ ಸ್ವರಾಜ್ಯವನ್ನು ತಂದುಕೊಡುವುದಕ್ಕಾಗಿಯೇ ಅಹಮ್ಮದಾಬಾದಿಗೆ ನಾವು ಹೋಗಿರಲಿಲ್ಲವೆಂದು ಅವರಿಗೆ ಹೇಳಿರಿ. ಅವರಿಗೆ ಸ್ವರಾಜ್ಯವು ಬಂದಿದಿಯೊ? ಎಂದು ನೀವೇ ಅವರನ್ನು ಕೇಳಿರಿ. ಬರಲಿಲ್ಲವೆಂದು ಅವರು ಹೇಳಿದರೆ ನಿಮ್ಮಲ್ಲಿ ಇನ್ನೂ ಅಸ್ಪೃಶ್ಯರಿದ್ದಾರೆಯೆ? ನೀವು ಇನ್ನೂ ಖಾದಿಬಟ್ಟೆಯ ಹೊರತು ವಿದೇಶದ ಬಟ್ಟೆಗಳನ್ನು ಧರಿಸುತ್ತಿದ್ದೀರಾ? ನಿಮ್ಮಲ್ಲಿ ಇನ್ನೂ ಕುಡಿಕರು ಇದ್ದಾರೆಯೆ? ಎಂದು ಪ್ರಶ್ನೆಮಾಡಿರಿ. ಆಹುದೆಂದು ಅವರಿಂದ ಉತ್ತರಬಂದರೆ ಈ ಮೂರು ಅನರ್ಥಗಳನ್ನು ನೀವು ತೊಲಗಿಸಲಿಲ್ಲವಾದಕಾರಣ ನೀವು ಸ್ವರಾಜ್ಯಕ್ಕೆ ಅಯೋಗ್ಯರೆಂದು ಅವರೊಡನೆ ಸ್ಪಷ್ಟವಾಗಿ ಹೇಳಿರಿ" ಎಂದು ಉಪದೇಶಿಸಿ ಈ ರೀತಿಯಾದ ದಾರಿಯನ್ನು ಅವರಿಗೆ ತೋರಿಸಿಕೊಟ್ಟರಂತೆ.

ಹೀಗಾದಬಳಿಕ-ಸ್ವರಾಜ್ಯಪ್ರಾಪ್ತಿಯ ಅವಧಿಯ ಪ್ರಸ್ತಾಪವು ಇಲ್ಲಿಗೆ ಕೊನೆಮುಟ್ಟಿತೆಂದು ಹೇಳಬಹುದು. ಅಕೋಲಾ ಸಭೆಯವರು ಸ್ವಲ್ಪ ದೂರಾಲೋಚನೆಯುಳ್ಳವರಾಗಿದ್ದುದರಿಂದಲೇ ಸ್ವರಾಜ್ಯಪ್ರಾಪ್ತಿಯ ಗಡುಬನ್ನಿಟ್ಟುಕೊಳ್ಳಕೂಡದೆಂಬ ನಿರ್ಧಾರವನ್ನು ಮಾಡಿದುದು ಜಾಣತನವನ್ನೇ ತೋರಿಸಿದಂತಾಯಿತು ವರ್ಷದೊಳಗಾಗಿ ಸ್ವರಾಜ್ಯವನ್ನು ಪಡೆದು ಸ್ವಚ್ಛಂದವಾಗಿ ಬಾಳುತ್ತೇವೆಂದು ಬಾಯಿನೀರು ಕುಡಿಯುತ್ತ ಒಂದೊಂದು ತಿಂಗಳನ್ನು ಎಣಿಸಿಕೊಂಡು ಕಳೆದ ಅನುಚಾರರಿಗೆಲ್ಲಾ ನಿರಾಶೆಯಾಯಿತು. ಮ|| ಗಾಂಧಿಯವರೂ ಹಾಗೆ ಸ್ವರಾಜ್ಯಪ್ರಾಪ್ತಿಗೆ ೧ ವರ್ಷದ ಗಡುಬನ್ನು ಕೇಳಬೇಕಾಗಿದ್ದರೆ ದೂರಾಲೋಚನೆ ಮಾಡದೆ ಇಲ್ಲ. ಅಂಥ ಆಶೆಯನ್ನು ಹುಟ್ಟಿಸದಿದ್ದರೆ ೧ ಕೋಟಿ ರೂ. ಗಳು ತಿಲಕಫಂಡಿಗೆ ಕೂಡುವುದೂ, ರಾಷ್ಟ್ರೀಯ ಸಭಾಸಂಘಗಳಿಗೆ ಗ್ರಾಮಾಂತರದ ಜನರೆಲ್ಲಾ ಸಭಿಕರಾಗಿ ಸೇರುವುದೂ ಸಾಧ್ಯವಾಗುತ್ತಿರಲಿಲ್ಲ. ಆದರೆ ಇನ್ನು ಮುಂದಣಸ್ಥಿತಿಯು ಬದಲಾಯಿಸಿಹೋಗುವುದು ನಿಜ. ಏಕೆಂದರೆ ಮ|| ಗಾಂಧಿಯವರ ಮಾತಿನ ಬಲಸೆಯ ತೂಕವು ಕಡಿಮೆಯಾಯಿತು. ಚಂಡಾಲಾದಿಗಳನ್ನೆಲ್ಲಾ ನಿರಾತಂಕವಾಗಿ ಪ್ರಜೆಗಳೆಲ್ಲರೂ ಯಾವಾಗ ಬಳಕೆಗೆ ತೆಗೆದುಕೊಳ್ಳುವರೋ, ದೇಶದಲ್ಲೆಲ್ಲಾ ಕುಡಿಕತನವು ಎಂದಿಗೆ ನಿಶ್ಶೇಷವಾಗಿ ಹೋಗುವುದೋ, ಜನರೆಲ್ಲಾ ವಿದೇಶದ ಬಟ್ಟೆಗಳನ್ನು ತೊರೆದು ಸ್ವದೇಶದ ಬಟ್ಟೆಗಳನ್ನೇ ಎಂದಿಗೆ ತೊಟ್ಟುಕೊಳ್ಳುವರೋ ಆಗ್ಗೆ ಸ್ವರಾಜ್ಯವು ಭರತಖಂಡಕ್ಕೆ ಲಭಿಸುವುದೆಂದು ಗಾಂಧಿಯವರು ಈಗ ಹೇಳುತ್ತಲಿದ್ದಾರೆ. ಎಂದಬಳಿಕ ಇದರ ಉತ್ತರವಾದಿತ್ವವು ಅವರ ಮೇಲಿಲ್ಲ. ಇದನ್ನು ಕೇಳುವಾಗ್ಗೆ ಸ್ವಲ್ಪಕಾಲದ ಕೆಳಗೆ ಗತಿಸಿಹೋದ ವಾಗ್ಮಿಯಾದ ಒಬ್ಬ ವಿಕಟಪುರುಷನ ಮಾತುಗಳು ಜ್ಞಾಪ್ತಿಗೆ ಬರುತ್ತವೆ. ಏಕೆಂದರೆ—ಅವನು ಸರಸಕ್ಕಾಗಿ ಹೀಗೆ ಹೇಳುತ್ತಿದ್ದನು. "ನನ್ನಲ್ಲಿ ಮೃತಸಂಜೀವನದ ಮದ್ದನ್ನು ರಚಿಸುವ ಶಕ್ತಿಯುಂಟು. ಅದಕ್ಕೆ ಒಂದೆರಡು ಸಾಮಗ್ರಿಗಳು ಮಾತ್ರ ಬೇಕು. ಯಾವುವೆಂದರೆ- ಹಾವಿನ ಉಸುರು ೧ ತೊಲೆ, ಸೊಳ್ಳೆಯ ಮೂತ್ರ ೩ ತೊಲೆ, ಇರುವೆಯಗಿಟ್ಟು ೧ ತೊಲೆ, ಇಷ್ಟಾದರೆ ಸಾಕು" ಎಂದು ಹೇಳುತ್ತಿದ್ದನು. ಈ ಮೂರು ವಸ್ತುಗಳನ್ನು ಒದಗಿಸಿಕೊಟ್ಟು ಮೃತರನ್ನು ಉಳಿಯಿಸಿಕೊಳ್ಳುವ ಔಷಧವನ್ನು ಮಾಡಿಸಿಕೊಳ್ಳುವಂತೆಯೇ ಮ|| ಗಾಂಧಿಯವರ ಮಾರ್ಗದಿಂದ ಸ್ವರಾಜ್ಯವನ್ನು ಸಾಧಿಸುವುದೂ ಸುಲಭವಾಗಿಯೇ ಇದೆ. ಆ ಸಾಧನಗಳೆಲ್ಲಾ ಕೈಕೂಡಿ ಸ್ವರಾಜ್ಯವು ಬರುವುದಕ್ಕೆ ಮುಂಚಿತವಾಗಿಯೇ ಸಾಮ್ರಾಜ್ಯಪ್ರಭುತ್ವದವರು ವಾಗ್ದಾನಮಾಡಿರುವಂತೆ ಭರತಖಂಡಕ್ಕೆ ಸ್ವಪರಿಪಾಲನವನ್ನು ತಂದುಕೊಳ್ಳುವುದೇ ಸುಲಭವೂ ಶೀಘ್ರಸಾಧ್ಯವೂ ಸುಖಕರವೂ ಆಗಿರುವುದೆಂಬುದನ್ನು ಇನ್ನಾದರು ಪ್ರಜೆಗಳು ತಿಳಿದು ಅಸಹಕಾರ ಮಾರ್ಗನಿಷ್ಠುರತೆಯನ್ನು ದೂರೀಕರಿಸಿ ಸಹಕಾರಭಾವದಿಂದ ಸಾಗುವುದೇ ಶ್ರೇಯಸ್ಕರವು.

ADMINISTRATION REPORT.

The report on the administration of Mysore for the year 1920-21 which we received with thanks, is an interesting document of the working of the several departments during the year disclosing a steady progress of continued policy and activities amongst which the following are some items deserving of notice. The foremost is the order of Government enunciating its policy on the question of the adequate and just representation of Backward Communities in the Public Service and the formation of a Central Recruitment Board in this connection. On this important subject we have already expressed our views and we hope that the good intentions of Government will be loyally carried out by its agents. The calm and useful future of this service depends entirly on the faithful operation of this Great Order of Government with which the name of Sirdar Rajasevadhurina Sir M. Kantharaj Urs, B.A., C.S.I., K.C.I.E., will ever be associated with grateful memories by the loyal subjects of His Highness the Maharajah.

Land Revenue is one of the most important sources of receipts and its collection ought to receive careful attention of those who are entrusted with this function. The arrears ought to get less and less year after year. This year's report shows a reverse condition. The collections were Rs. 9, 64, 102 less than they were in the previous year, the total arrears at the end of the year being Rs. 14, 51, 336. The persons primarily responsible for this are the Patels and Shanbhogues. Things are undergoing considerable change in all directions all over the world. But these are the same that they were thousands of years ago whatever the nature of the administration was. The present is the most enlightened administration compared with those of several ages. The Shanbhogue is described in even Puranic books and his service to-day is Puranic. He is the same old chap that he was with this difference from the old that his brothers, sons and a vast army of relations have come to occupy offices through which his work is controlled. His weakness and his what are now better protected and he is now a person verging on revolt if his vagaries are about to be interfered with. Heavy arrears are perhaps traceable to his disregard to his duty. This is no place to speak of reconstruction as regards this service. We would say that it is high time that full-time service Shanbhogues with pension under the rules are introduced. This system would be less costly and the legion will be reduced to a countable number. A perfect check could be exercised over their work. We propose to say more of this subject sometime later on. Under Criminal Courts it is seen that the average duration of cases in the Courts of Regular Magistrates was 77'56 days during 1920-21 against 42'83 in 1919-20. This is really deplorable and all the more so that Bangalore District in which the Judicial is separated from the Executive has contributed to this high average. There appears to be something wrong some where—insufficient number of Courts or inefficient Magistrates?

The chapter on "Manufacture, arts and industries" is worth the perusal. The hollowness of those active 6 years preceding 1918 and extravagance of the same period are in evidence. We quote below what is reported under "Sugar-Cane Mills."

"Of the three Sugar-Cane installations at Chennarayapatna, Agaram and Chiksagare, under departmental control, that at Chiksagare was ordered to be closed not being likely to be successful. The other two plants were not worked during the year." Comment is superfluous. All the same the Superintendents of Industries were up and down these places making huge Travelling allowances !!!

Soap, metal and weaving factories have boomed large in print. What each has cost Government in the shape of establishment, supervision, material etc., is not given. With those figures alongside, these factories are White Elephants at least as far as the poor Government is considered. They are paying perhaps some others! The Kambli factories at Hunsur and Chiknayakanhalli? Ho! They have made some persons warm enough perhaps—again not Government. Who investigates? The Sandal Oil Factory is another which furnished unexpected disappointment. The Industrial Mysore has profitted a few luckies!

The administration of the department of Education contains the most redeeming features of the year that it received attention in the matter of the Education of the Backward and Depressed classes. The number of schools for them was 739. There were 17,150 Panchama pupils under instruction. 885 scholarships varying from Rs. 2/- to Rs. 10/- were granted. A total sum of Rs. 84,383 was expended on Hostels. A more liberal expenditure on Hostels is called for. Information under Sanskrit and Ayurvedic Colleges is meagre. What was the total expenditure under this and who were all the classes of people who received benefit from them?

We are glad to note that wisdom, forethought and liberalism were the distinct features of the administration of the year 1920-21.

ಒಳದೇಶದ ವೃತ್ತಾಂತಗಳು.

ಮಾತೃಶ್ರೀ ವಾಣಿವಿಲಾಸ ಸನ್ನಿಧಾನ ಸಿ. ಐ. ಯವರ ಸ್ವಾರಿಯು ಮದ್ರಾಸಿಗೆ ಚಿತ್ತೈಸಿರುವುದು ಮತ್ತು ಇಷ್ಟರಲ್ಲೇ ರಾಜಧಾನಿಗೆ ದಯಮಾಡಿಸುವುದಾಗಿದೆ.

ಮೂರನೆಯ ಕೌನ್ಸಿಲರಾದ ಮ|| ಮಿರ್ ಹಂಜಾಹುಸೇನ್ ಬಿ. ಎ., ಬಿ. ಎಲ್., ರವರು ಕ್ರಿಸ್ತಮಸ್ ರಜಾದಲ್ಲಿ ಹೈದರಾಬಾದಿಗೆ ಹೋಗಿದ್ದವರು ಕಳೆದ ತಾ|| ೩ ರಲ್ಲಿ ಬೆಂಗಳೂರಿಗೆ ಹಿಂದಿರುಗಿ ದಯಮಾಡಿದರು.

ರಾಜಧಾನಿಯ ಮ|| ಗಳಾದ ಎಸ್. ಜಿ. ಎಂ. ಪೌರ್ಣಲ್ ಅಂಡ್ ಕಂಪೆನಿ ಬಟ್ಟೆವ್ಯಾಪಾರಿಗಳೂ, ಎಂ. ಎ. ಕೆ. ಬ್ರದರ್ಸ್ ಕಾಗದವ್ಯಾಪಾರಿಗಳು ಇವರುಗಳು ತಯಾರಿಸಿರುವ ಸಚಿತ್ರ ಕ್ಯಾಲಂಡರುಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಪ್ರಿನ್ಸ್‌ಆಫ್‌ವೇಲ್ಸರವರು ನಮ್ಮ ಸಂಸ್ಥಾನಕ್ಕೆ ದಯಮಾಡಿಸುವುದರಿಂದ ಈ ತಾ|| ೧೮ ಮತ್ತು ೧೯ರಲ್ಲಿ ಸಂಸ್ಥಾನದ ಎಲ್ಲ ಕೋರ್ಟುಕಚೇರಿಗಳಿಗೂ, ಸ್ಕೂಲುಗಳಿಗೂ ರಾಜಧಾನಿಗೆ ಮಾತ್ರ ತಾ|| ೧೮ ರಿಂದ ೨೧ರ ವರೆಗೂ ರಜವು ಕೊಡಲ್ಪಟ್ಟಿರುವುದು.

ಕನಿಷ್ಠಪಕ್ಷ ಮೈಸೂರು ಯೂನಿವರ್ಸಿಟಿಯ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವವರ ವಿನಾ ಮತ್ತಾರೂ ಸಬ್ ರಿಜಿಸ್ಟ್ರಾರಾಗಿ ಆಗಲಿ ಅಥವಾ ಪ್ರಬೇಷನರಿ ಸಬ್ ರಿಜಿಸ್ಟ್ರಾರಾಗಿ ಆಗಲಿ ನೇಮಿಸಲ್ಪಡಕೂಡದೆಂದು ಸರ್ಕಾರದವರು ಸೆನ್ಟ್ರಲ್ ರಿಕ್ರೂಟ್‌ಮೆನ್ಟ್ ಬೋರ್ಡಿನವರ ಸೂಚನೆಯಂತೆ ಅಪ್ಪಣೆ ಮಾಡಿರುತ್ತಾರೆ.

ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿದರು. ಮತ್ತು ಪ್ರಿನ್ಸ್ ಆಫ್‌ವೇಲ್ಸರವರು ರಾಜಧಾನಿಗೆ ಚಿತ್ತೈಸುವಕಾಲವು ಸಮೀಪಿಸಿದುದರಿಂದ ಬಹಳ ಸಡಗರದಿಂದ ನಡಿಯುತ್ತಿರುವ ಪುರಾಲಂಕಾರ ಅತಿಥಿಗಳ ಬಿಡಾರವಾದ ಗೌರ್ನಮೆಂಟ್ ಹೌಸಿನ ಅಲಂಕಾರಾದಿಗಳನ್ನು ಸ್ವತಃ ಪರಾಮರ್ಶಿಸುತ್ತಿರುವರು

ಮುಂದಣ ದಸರಾ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ಆಶ್ವೀಜ ಶುದ್ಧ ೧೨ರಲ್ಲಿ ಅಂದರೆ ೧೯೨೨ನೆಯ ಅಕ್ಟೋಬರ್ ತಾ|| ೨ರಲ್ಲಿ ಆರಂಭವಾಗುವುದು. ಪ್ರಜಾಪ್ರತಿನಿಧಿಗಳ ಕಾಲಾವಧಿಯು ೩ ವರ್ಷವೆಂದು ಗೊತ್ತಾಗಿರುವ ಮೇರೆಗೆ ಈ ವರ್ಷ ಮಾರ್ಚಿ-ಏಪ್ರಿಲ್ ತಿಂಗಳಿಂದ ಹೊಸ ಮೆಂಬರುಗಳ ಚುನಾವಣೆಯು ನಡಿಯಬೇಕಾಗಿರುವುದು. ಓಟನ್ನು ಕೊಡಲು ಅರ್ಹರಾದಂತಹ ಜನರು ತಮ್ಮದೊಂದು ಓಟು ಬಹಳ ಬೆಲೆಬಾಳತಕ್ಕುದೆಂಬುದನ್ನು ಮರಿಯದೆ ತಮ್ಮ ಶ್ರೇಯೋಭಿಲಾಷಿಗಳಾದವರಿಗೆ ಮಾತ್ರ ಕೊಡಬೇಕಲ್ಲದೆ ಸ್ವಕಾರ್ಯ ಸಾಧನೆಗಾಗಿ ಮರಳುಮಾತನ್ನಾಡಿ ನಿಮ್ಮ ಹಿತಕಾಂಕ್ಷಿಗಳಂತೆ ನಟಿಸಿ ಮೆಂಬರಾದ ಮೇಲೆ ನಿಮ್ಮ ಪುರೋಭಿವೃದ್ಧಿದಾಯಕವಾದ ಏರ್ಪಾಟುಗಳನ್ನು ಸರ್ಕಾರದವರು ಮಾಡಿಕೊಡಲು ಎತ್ನಿಸಿದಾಗ್ಗೆ ಮಾತ್ರ ಪ್ರತಿಭಟಿಸಿ ನಿಂತು ನಿಮಗೆ ಪ್ರತಿಕೂಲವನ್ನು ಮಾಡುವಂತಹ ಹಿತಶತ್ರುಗಳಿಗೆ ಮಾತ್ರ ನಿಮ್ಮ ಓಟನ್ನು ಕೊಟ್ಟು ನಿಮ್ಮ ಕಾಲಿನಮೇಲೆ ನೀವೇ ಕಲ್ಲನ್ನು ಹಾಕಿಕೊಳ್ಳಬೇಡಿ. ಇದಕ್ಕೆ ಮಿಲ್ಲರ್‌ಕಮಿಟಿ ರಿಪೋರ್ಟು, ವಿದ್ಯಾಭ್ಯಾಸದ ಮೆಮೊರಾಂಡಂ ಇವುಗಳು ಅನುಷ್ಠಾನಕ್ಕೆ ಬರದಂತೆ ಮಾಡಲು ಅವರು ಪಟ್ಟ ಸಾಹಸಗಳೇ ನಿದರ್ಶನವಾಗಿವೆ. ಆದರೆ ನಿಮ್ಮ ಸುದೈವದಿಂದ ಹಿತಶತ್ರುಗಳ ಆ ಪ್ರಯತ್ನವೇನೂ ಸಾಗಲಿಲ್ಲ.

ನಮ್ಮ ಮೈಸೂರು ರೈಲ್ವೆಯವರು ರಾಜಧಾನಿಯಿಂದ ಬೆಂಗಳೂರಿಗೂ, ಅಲ್ಲಿಂದ ಇಲ್ಲಿಗೂ ಕಳೆದ ೧ ತಿಂಗಳಿಂದಲೂ ಪಾರ್ಸಲ್ ವಿನಾ ಸಾಮಾನುಗಳನ್ನು ಗೂಡ್ಸ್‌ಬಂಡಿಗಳ ಮೂಲಕ ಸಾಗಿಸುತ್ತಿಲ್ಲವೆಂತಲೂ, ಇದರಿಂದ ಹೊರಗಡೆಗೆ ದಿನಸಿಗಳು ಸಾಗಲು ಅವಕಾಶವಿಲ್ಲದೆ ಬಹಳ ನಷ್ಟಕಷ್ಟಗಳಿಗೆ ಗುರಿಯಾಗಿರುವ ವರ್ತಕರುಗಳು ರೈಲ್ವೆ ಏಜಂಟ್ ಮೊದಲಾದ ಅಧಿಕಾರಿಗಳಿಗೆ ಎಷ್ಟು ಮೊರೆಯಿಟ್ಟುಕೊಂಡಾಗ್ಯೂ ಯಾರೂ ಗಮನಕ್ಕೆ ತಂದುಕೊಂಡು ಇಂತಹ ಕಾರಣದಿಂದ ಗೂಡ್ಸು ಸಾಗುತ್ತಿಲ್ಲ, ಇಂತಹ ಕಾಲದಿಂದ ಸಾಗಿಸಲ್ಪಡುವುದು ಎಂದು ಮೊದಲಾಗಿ ಉಪಚಾರೋಕ್ತಿಗಳನ್ನು ಸಹ ಆಡುವಷ್ಟು ಅಭಿಮಾನವುಳ್ಳವರಾಗಿಲ್ಲವೆಂತಲೂ ಈ ರೈಲ್ವೆ ಇಲಾಖೆಯಲ್ಲಿ ಇತ್ತೀಚಿಗೆ ನಡೆಯುತ್ತಿರುವ ಅಕೃತ್ಯಗಳನ್ನು ಪ್ರಜಾನುರಾಗಿಗಳಾದ ದಿವಾನರು ತಮ್ಮ ಗಮನಕ್ಕೆ ತಂದುಕೊಂಡು ತಕ್ಕ ನಿವಾರಣೋಪಾಯವನ್ನು ಕಲ್ಪಿಸಿಕೊಡದಿದ್ದಲ್ಲಿ ಪ್ರಜೆಗಳು ತತ್ರಾಪಿ ವರ್ತಕರು ಅನೇಕ ನಷ್ಟಕಷ್ಟಕ್ಕೊಳಗಾಗಬೇಕಾಗುತ್ತದೆಂತಲೂ ಒಬ್ಬ ಪ್ರಮುಖ ವರ್ತಕರು ಬರೆದಿರುತ್ತಾರೆ. ಈ ರೈಲ್ವೆಯ ಆಡಳಿತವು ಎಂ. ಅಂಡ್ ಎಸ್. ಎಂ., ಕಂಪೆನಿಯವರಿಂದ ನಮ್ಮ ಸರ್ಕಾರಕ್ಕೆ ವಹಿಸಿಕೊಳ್ಳಲ್ಪಟ್ಟಮೇಲೆ ಪ್ರಯಾಣಿಕರಿಗೂ ಸಾಮಾನುಗಳನ್ನು ಕಳುಹಿಸಿ ತರಿಸಿಕೊಳ್ಳುವ ವರ್ತಕರುಗಳಿಗೂ ನಾನಾವಿಧವಾದ ತೊಂದರೆಯುಂಟಾಗಿರುವುದೆಂದು ನಮ್ಮಲ್ಲಿಗೆ ಪದೇಪದೇ ದೂರು ಬರುತ್ತಲಿದೆಯಾದುದರಿಂದ ಸರ್ಕಾರದವರು ಕಟ್ಟುನಿಟ್ಟಾದ ವಿಚಾರಣೆಯಿಂದ ದೂರಿಗೆ ಆಸ್ಪದವಾದ ಅಕ್ರಮಗಳನ್ನು ಕಂಡುಹಿಡಿದು ಸರಿಪಡಿಸುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಲಾಹೋರು ಕಾರಾಗೃಹದಲ್ಲಿ ಲಜಪತಿರಾಯಿ ಮೊದಲಾದವರ ವಿಚಾರಣೆಯು ನಡೆದು ಅವರೆಲ್ಲರ ಮೇಲೂ ಛಾರ್ಜು ಮಾಡಲ್ಪಟ್ಟಿತು.

ಬಂಗಾಳದಲ್ಲಿ ಶಿಕ್ಷಿತರಾದವರನ್ನು ಕೂಡುವುದಕ್ಕೆ ಕಾರಾಗೃಹದಲ್ಲಿ ಸ್ಥಲವು ಸಾಲದಿರುವುದರಿಂದ ದೋಣಿಗಳಲ್ಲೂ ರೇವೆಗಳಲ್ಲೂ ತುಂಬುತ್ತಿದ್ದಾರೆ.

ಅಲಹಾಬಾದಿನಲ್ಲಿ ಮಿತವಾದಿಗಳ ದೇಶೀಯ ಮಹಾಸಭೆಯು ದಿ|| ಬ|| ಎಲ್. ಗೋವಿಂದ ರಾಘವಯ್ಯರ್‌ರವರ ಅಧ್ಯಕ್ಷತೆಯಿಂದ ತಾ|| ೨೭ರಲ್ಲಿ ನೆರವೇರಿತು.

ಮುಂದಣ ೯-೧೦-೧೧ನೆ ತಾರೀಖುಗಳಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಮಿತ್ರಮಂಡಳಿಯವರ ಸಮಾವೇಶವು ಜರಗುತ್ತದೆ. ಅಲ್ಲಿ ಚರ್ಚಿಸಲ್ಪಡುವ ಅನೇಕ ಮುಖ್ಯ ವಿಷಯಗಳೊಳಗೆ ತುರ್ಕಿಸಂಧಿಯ ಪುನಃಪರಿಷ್ಕಾರವೂ ಸೇರಿರುತ್ತದೆ.

ಯುವಸಾರ್ವಭೌಮರು ಮದ್ರಾಸಿಗೆ ಬಂದಿರುವಾಗ್ಗೆ ತಿರುವಾಂಕೂರು ಕೊಚ್ಚಿ ಮಹಾರಾಜರುಗಳೂ ಮತ್ತು ಆ ಆಧಿಪತ್ಯದ ಜಮೀನ್ದಾರರುಗಳೂ ಇತರ ಚಿಕ್ಕ ದೊಡ್ಡ ರಾಜರುಗಳೂ ಅವರ ಸಂದರ್ಶನವನ್ನು ಮದ್ರಾಸಿನಲ್ಲೇ ಮಾಡುವರು.

ಲಾಹೋರು ಕಾರಾಗೃಹದಲ್ಲಿ ಆಹಾರವು ಅನುಕೂಲವಾಗಿಲ್ಲದುದರಿಂದ ಲಾಲಾ ಲಜಪತಿರಾಯರೂ ಅವರ ಜತೆಯ ಬಂದಿಗಳಲ್ಲಿ ೭೯ ಜನವೂ ಸಹ ತಾ|| ೨೪ ರಿಂದ ಆಹಾರವನ್ನೇ ತ್ಯಜಿಸಿಬಿಟ್ಟಿದ್ದಾರಂತೆ. ಅಮೃತಸರ ಕಾರಾಗೃಹದಲ್ಲೂ ಹೀಗೇ ಆಗಿದೆ.

ಅಲಹಾಬಾದಿನ ಭೂಸ್ವಾಮಿಗಳೆಲ್ಲಾ ಒಂದಾಗಿ ಒಂದು ಪ್ರಕಟನೆಯನ್ನು ಮಾಡಿದ್ದಾರೆ. ಅದರಲ್ಲಿ ರಷ್ಯಾದೇಶದ ಸ್ಥಿತಿಯನ್ನು ನೆನೆಸಿಕೊಳ್ಳಿರಿ. ಪ್ರಭುತ್ವಕ್ಕೆ ಸಹಾಯಮಾಡದೆ ಹೋದರೆ ದೇಶದಲ್ಲಿ ವಿಪ್ಲವವು ತಲೆಯೆತ್ತಿ ಎಲ್ಲರ ಮಾನಪ್ರಾಣಗಳಿಗೂ ಆಸ್ತಿಗಳಿಗೂ ಭಂಗಬರುವುದು ಎಂದು ತಿಳಿಯಿಸಿದ್ದಾರೆ.

ಯುವಸಾರ್ವಭೌಮರು ಮದ್ರಾಸಿಗೆ ದಯಮಾಡಿಸಿದಾಗ್ಗೆ ಹರಿತಾಳಾದಿಗಳ ಮೂಲಕ ಬಹಿಷ್ಕಾರವನ್ನು ಆಚರಿಸಬೇಕೆಂಬ ತೀರ್ಮಾನವನ್ನು ಅಹಮ್ಮದಾಬಾದಿಗೆ ಹೋಗಿದ್ದ ಆಂಧ್ರದ್ರಾವಿಡ ಕರ್ನಾಟಕ ಕೇರಳರಾಜ್ಯಗಳ ಪ್ರತಿನಿಧಿಗಳು ಎಸ್. ಕಸ್ತೂರಿ ರಂಗಯ್ಯಂಗಾರರ ಅಧ್ಯಕ್ಷತೆಯಿಂದ ಅಲ್ಲೇ ಸಭೆಗೂಡಿದ್ದು ನಿರ್ಧರಿಸಿರುವರಂತೆ.

ಯುದ್ಧಕಾಲಕ್ಕೆ ಮುಂಚೆ ಫಿರಂಗಿಗಳನ್ನೂ ಮದ್ದುಗುಂಡುಗಳನ್ನೂ ನಿರ್ಮಿಸಿ ಪ್ರಪಂಚಕ್ಕೆಲ್ಲಾ ಒದಗಿಸುತ್ತಿದ್ದ ಕ್ರುಪ್ ಕರ್ಮಾಗಾರದಲ್ಲಿ ಈಗ ಉಳಿದಿದ್ದ ಲೋಹದಿಂದೆಲ್ಲಾ ಕತ್ತರಿ ಚೂರಿ ಮೊದಲಾದ ಉಪಯೋಗ್ಯ ವಸ್ತುಗಳನ್ನು ವಿಪರೀತವಾಗಿ ನಿರ್ಮಿಸುತ್ತಿದ್ದಾರೆ. ಇದರಿಂದ ಕಳೆದವರ್ಷ ೭೯೦೦೦೦೦೦ ಮಾರ್ಕುಗಳೂ ಈ ವರ್ಷದಲ್ಲಿ ೯೮೦೦೦೦೦೦ ಮಾರ್ಕುಗಳೂ ಲಾಭಬಂದಿವೆ.

ಅಲಹಾಬಾದಿನಲ್ಲಿ ಕಾಂಗ್ರೆಸ್ ಖಿಲಾಫತ್ ಸ್ವಚ್ಛಂದ ಸೇವಕರು ತಮದೂ ಸ್ವರಾಜ್ಯವೆಂದು ಹೇಳಿಕೊಂಡು, ಸ್ವರಾಜ್ಯ ಪೋಲೀಸ್ ದಳವನ್ನೇರ್ಪಡಿಸಿಕೊಂಡು, ಅದಕ್ಕೆ ತಕ್ಕ ಇನ್ಸ್‌ಪೆಕ್ಟರು ಪೋಲೀಸಾಳುಗಳು ಮೊದಲಾದವರನ್ನೆಲ್ಲಾ ಕಲ್ಪಿಸಿಕೊಂಡು ಆಯಾ ಬೀದಿಗಳ ಚೌಕಗಳಲ್ಲೆಲ್ಲಾ ಅವರನ್ನೇ ಕಾವಲಿಗಿರಿಸಿ ತಮ್ಮ ಪೋಲೀಸ್‌ಠಾಣದ ಮುಂದೆ ಕವಾತ್‌ಮಾಡಿಸುತ್ತಿದ್ದರು. ಅವರನ್ನೆಲ್ಲಾ ಸರ್ಕಾರಿ ಪೋಲೀಸರು ಹಿಡಿದರು.

ಅಜಮೀರ್ ಪಟ್ಟಣದಲ್ಲಿ ಪೊಲೀಸರು ಸ್ವಚ್ಛಂದ ಸೇವಕರನ್ನು ಹಿಡಿಯುತ್ತಿದ್ದುದನ್ನು ಅಲ್ಲಿಯ ಘೋಷಾ ಸ್ತ್ರೀಯರುಗಳು ಕಂಡು ತಮ್ಮ ಬುರುಕಿಯನ್ನು ತೆಗೆದೊಗೆದು ತಾವುಗಳೇ ಸ್ವಚ್ಛಂದ ಸೇವಕಾಸಂಘಕ್ಕೆ ಸೇರಿ ಬೀದಿಗಳಲ್ಲಿ ತಿರುಗುತ್ತ ಭಜನೆಮಾಡಿಕೊಂಡು ಜಾತೀಯ ಗೀತಗಳನ್ನು ಹಾಡುತ್ತ ಪ್ರಜೆಗಳೆಲ್ಲಾ ಸ್ವಚ್ಛಂದ ಸೇವಕರಾಗಿ ಸೇರಬೇಕೆಂದು ಉಪದೇಶಿಸುತ್ತ ಮದ್ಯಪಾನ ನಿರೋಧವನ್ನು ಮಾಡುತ್ತ ದೇಶಸೇವೆಯನ್ನು ಮಾಡಲುಪಕ್ರಮಿಸಿದ್ದಾರೆ.

ಜರ್ಮನ್ ಶಾಸ್ತ್ರಜ್ಞನು ನೂತನವಾಗಿ ಭಂಗಾರವನ್ನು ನಿರ್ಮಿಸಿದರೂ ಅದು ಸುಲಭಸಾಧ್ಯವಲ್ಲವೆಂದೂ ಮೂಲಭಂಗಾರದೊಡನೆ ಅದು ಪೋಟಿಮಾಡಲಾರದೆಂದೂ ಇಂಗ್ಲಂಡ್ ಬ್ಯಾಂಕಿನವರು ಹೇಳುತ್ತಾರಂತೆ. ಆದರೆ ಜರ್ಮನರು ಈ ನೂತನ ಭಂಗಾರದ ಸಾಹಾಯದಿಂದ ತಮ್ಮ ನಷ್ಟಪರಿಹಾರದ ಸಾಲವನ್ನೆಲ್ಲಾ ತೀರಿಸಿಕೊಳ್ಳುವುದಲ್ಲದೆ ಪ್ರಪಂಚಕ್ಕೆಲ್ಲಾ ಅಗ್ಗದ ಭಂಗಾರವನ್ನು ತುಂಬಿಬಿಡುವರೆಂದು ಲಂಡನ್ ವೃತ್ತಪತ್ರಿಕೆಗಳು ಬರೆಯುತ್ತಲಿವೆ. ಲಂಡನ್ ವಿಶ್ವವಿದ್ಯಾಲಯದ ರಸಾಯನಶಾಸ್ತ್ರಜ್ಞರು ಈ ಭಂಗಾರರಚನೆಯು ಸಾಧ್ಯವೆಂದು ಒಪ್ಪಿಕೊಂಡರು. ಅತ್ಯಂತವಾದ ಔಷ್ಣ್ಯದಿಂದ ಎಂಥ ಲೋಹವನ್ನಾದರೂ ವಿಭಾಗಿಸಬಹುದೆಂದೂ, ಇನ್ನು ಅರ್ಧಶತಮಾನ ಕಾಲದೊಳಗೆ ಇಂಥ ಅದ್ಭುತರಚನೆಗಳೆಷ್ಟೋ ನಡೆದುಹೋಗುವುವೆಂದೂ ಹೇಳಿರುತ್ತಾರೆ.

ಇಂಡಿಪೆಂಡೆಂಟ್ ಎಂಬ ಪತ್ರಿಕೆಯ ಸಂಪಾದಕರಾಗಿದ್ದ ಜಾರ್ಜ್ ಜೋಸಫರನ್ನು ಸರ್ಕಾರದವರು ಹಿಡಿದು ಶಿಕ್ಷಿಸಿದರಷ್ಟೆ. ತದನಂತರ ಅದಕ್ಕೆ ಮಹಾದೇವ ದೇಶಾಯಿಯವರು (ಇವರು ಗಾಂಧಿಯವರ ಎಂಗ್ ಇಂಡ್ಯಾ ಪತ್ರಿಕೆಯ ಪ್ರಕಾಶಕರೂ ಗಾಂಧಿಯವರ ಮುಖ್ಯಾನುಚರರೂ ಆಗಿದ್ದರು.) ಇಂಡಿಪೆಂಡೆಂಟ್ ಪತ್ರಿಕೆಯ ಮುದ್ರಾಪಕರೂ ಪ್ರಕಾಶಕರೂ ಆಗಿ ಏರ್ಪಟ್ಟರು. ಅದಕ್ಕೆ ೨ ಸಾವಿರ ರೂಪಾಯಿಗಳ ಹೋಣೆಯನ್ನು ಕೊಡಬೇಕೆಂದು ಪ್ರಭುತ್ವದವರು ಆಜ್ಞೆಮಾಡಲು, ಅದರಂತೆ ಕಟ್ಟಿದರು. ಸ್ವಲ್ಪಕಾಲದೊಳಗೇ ಸರ್ಕಾರದವರು ಆ ಹಣವನ್ನು ಸ್ವಾಧೀನಪಡಿಸಿಕೊಂಡುಬಿಟ್ಟರು. ಅದರಮೇಲೆ ದೇಶಾಯಿಯವರು ಗಾಂಧಿಯವರ ಅಭಿಪ್ರಾಯವನ್ನನುಸರಿಸಿ ಇಂಡಿಪೆಂಡೆಂಟ್ ಪತ್ರಿಕೆಯನ್ನು ಕೈಬರಹದ ಪ್ರತಿಯಾಗಿ ಪ್ರಕಾಶಪಡಿಸಿದರು. ಅದರಮೇಲೆ ಸರ್ಕಾರದವರು ಅಪರಾಧವನ್ನು ಹೊರಿಸಿ ೧ ವರ್ಷ ಕಾರಾಗೃಹವಾಸ ಶಿಕ್ಷೆಯನ್ನೂ ೧೦೦ ರೂ. ಅರ್ಥದಂಡವನ್ನೂ ದೇಶಾಯಿಯವರಿಗೆ ವಿಧಿಸಿದರು. ಅವರ ಸ್ಥಾನಕ್ಕೆ ಈಗ ತಮ್ಮ ಮಗನಾದ ದೇವದಾಸ್ ಗಾಂಧಿಯೆಂಬುವರನ್ನು ಗಾಂಧಿಯವರು ನಿಯಮಿಸಿ ಇಂಡಿಪೆಂಡೆಂಟ್ ಪತ್ರಿಕೆಯನ್ನು ಟೈಪ್‌ರೈಟಿಂಗಿನಲ್ಲಿ ಪ್ರಕಟಿಸಿರುವರು.

ಈಜಿಪ್ಟಿಗೆ ಕೊಡುತ್ತೇವೆಂದು ಇಂಗ್ಲೀಷರು ಸೂಚಿಸಿದ ಸ್ವಾತಂತ್ರ್ಯದ ನಿಬಂಧನೆಗಳು ಈಜಿಪ್ಟಿಯನ್ನರಿಗೆ ಒಪ್ಪಿಗೆಯಾಗದೆಹೋದಕಾರಣ ಈ ಭಾಗದಲ್ಲಿ ತೊಡಗಿದ್ದ ಅಡ್ಲಿಪಾಷಾರವರು ತಮ್ಮ ಮಂತ್ರಿಪದವಿಗೆ ರಾಜೀನಾಮೆಯನ್ನು ಕೊಟ್ಟುಬಿಟ್ಟರು, ಮತ್ತು ಇನ್ನು ಈ ರಾಜಕೀಯ ವಿಷಯದಲ್ಲಿ ಪ್ರವೇಶಿಸುವುದೇ ಇಲ್ಲವೆಂದು ಹೇಳಿಬಿಟ್ಟರು. ಮಿತವಾದಿ ಪ್ರಮುಖರಾದ ಇವರು ತಟಸ್ಥರಾದುದರಿಂದ ಸಂಪೂರ್ಣಸ್ವಾತಂತ್ರ್ಯವನ್ನು ಕೋರುವ ಜಗ್ಲುಲ್‌ಪಾಷಾ ಪಕ್ಷದವರ ಹಾವಳಿಯು ಈಗ ಹೆಚ್ಚಿಕೊಂಡಿದೆ. ಜಗ್ಲುಲ್‌ಪಾಷಾರವರು ರಾಜಕೀಯದಲ್ಲಿ ಪ್ರವೇಶಿಸಲಾಗದೆಂದು ಈಜಿಪ್ಟ್ ಸೈನಿಕಾಧಿಕಾರಿಗಳು ಆಜ್ಞೆಮಾಡಿ, ಅವರನ್ನೂ ಅವರಪಕ್ಷದ ಇನ್ನು ೮ ಮಂದಿ ಪ್ರಮುಖರನ್ನೂ ಅವರ ಗ್ರಾಮಕ್ಕೆಹೋಗಿ ಸೇರಿಕೊಳ್ಳಬೇಕೆಂದು ವಿಧಿಸಿದರು. ಅವರು ಹೋಗಲಿಲ್ಲ. ಅದರಮೇಲೆ ಸೈನಿಕರು ಬಲಾತ್ಕಾರದಿಂದ ಅವರನ್ನೆಲ್ಲಾ ಸೂಯೆಜ್ ಕಡೆಯ ಗ್ರಾಮಗಳಿಗೆ ಸಾಗಿಸಿಕೊಂಡುಹೋಗಿ ಸೇರಿಸಿದರು. ಆಗ ಮುತ್ತಿಕೊಂಡ ಅನೇಕಜನರು ಉದ್ರೇಕದಿಂದ ಮೇಲೆ ಸಾಗಿಬರುತ್ತಿರಲು, ಅವರಮೇಲೆ ಪೋಲೀಸರು ಗುಂಡುಗಳನ್ನು ಹಾರಿಸಿ ಇಬ್ಬರನ್ನು ಕೊಂದರು; ೭ ಮಂದಿಗೆ ಗಾಯಕಾಣಿಸಿದರು. ಬೀದಿಯಲ್ಲಿ ಹೋಗುತ್ತಿದ್ದ ಒಬ್ಬ ಸೋಲ್ಜರನನ್ನು ಯಾರೋ ಗುಂಡುಹೊಡೆದು ಗಾಯಕಾಣಿಸಿದರು. ಅದರಮೇಲೆ ಪಟ್ಟಣದೊಳಗೆ ರಾತ್ರಿಹೊತ್ತು ಒಂದು ಗೊತ್ತಾದಕಾಲದನಂತರ ಯಾರೂ ದೀಪವನ್ನುರಿಯಿಸಲಾಗದೆಂದೂ ಬೀದಿಯಲ್ಲಿ ಸಂಚರಿಸಲಾಗದೆಂದೂ ಅಪ್ಪಣೆಮಾಡಿದ್ದಾರೆ. ಈಗ ಈಜಿಪ್ಟಿನ ಪ್ರಜೆಗಳಿಗೆಲ್ಲಾ ಜಗ್ಲುಲ್‌ಪಾಷಾರವರು ಸಹಾಯನಿರಾಕರಣ ಮಾಡಲಿಕ್ಕೆ ಪ್ರಕಟಿಸಿದ್ದಾರೆ. ಜಗ್ಲುಲ್‌ಪಾಷಾನ ಕಡೆಯಿಂದ ಮತ್ತು ಆತನ ಪಕ್ಷದವರ ಕಡೆಯಿಂದ ಬ್ಯಾಂಕಿನಲ್ಲಿ ಹಾಕಲ್ಪಟ್ಟಿರುವ ಆಸ್ತಿಯನ್ನು ಈಜಿಪ್ಟ್ ಕಮಿಷನರಾದ ಲಾರ್ಡ್ ಅಲನ್ಬಿಯವರ ಅಪ್ಪಣೆಯಿಲ್ಲದೆ ಯಾರಿಗೂ ಕೊಡಕೂಡದೆಂದು ವಿಧಿಸಿದ್ದಾರೆ. ಈಗ ಆ ದೇಶಗಲ್ಲೆಲ್ಲಾ ವಿಪ್ಲವದ ಸೂಚನೆಗಳು ತಲೆದೋರಿವೆ. ಪಾಠಶಾಲೆಗಳೆಲ್ಲಾ ವಿದ್ಯಾರ್ಥಿಗಳಿಲ್ಲದೆ ಮುಚ್ಚಿಹೋಗಿವೆ. ವಿಪ್ಲವಪ್ರೋತ್ಸಾಹದ ಕರಪತ್ರಗಳು ಎಲ್ಲೆಲ್ಲೂ ಹಂಚಲ್ಪಟ್ಟಿವೆ. ಟ್ರಾಂಬಂಡಿಗಳ ಸಂಚಾರವು ನಿಂತುಹೋಗಿದೆ. ಸೈನಿಕರು ನಾನಾಕಡೆಗಳಿಂದ ಈಜಿಪ್ಟಿಗೆ ಕಳುಹಿಸಲ್ಪಡುತ್ತಿದ್ದಾರೆ. ಸೈನಿಕರಿಗೂ ಪ್ರಜೆಗಳಿಗೂ ಬಡಿದಾಟವಾಗಿ ಪ್ರಾಣಾಹುತಿಗಳಾಗುತ್ತಿವೆ. ಸರ್ಕಾರಿ ಆಸ್ತಿಗಳನ್ನು ಸುಟ್ಟುಹಾಳುಮಾಡಲು ವಿದ್ಯಾರ್ಥಿಗಳೂ ಪ್ರಜೆಗಳೂ ಪ್ರಯತ್ನಿಸಿದ್ದಾರೆ ಇಂಥ ಕೃತ್ಯಗಳಿಗೆ ತೊಡಗಿದವರನ್ನು ಸುಟ್ಟುಹಾಕಲಿಕ್ಕೆ ಆಂಗ್ಲಪ್ರಭುತ್ವದವರು ಅಪ್ಪಣೆಮಾಡಿದ್ದಾರೆ. ಜಗ್ಲುಲ್‌ಪಾಷಾನ ಹೆಂಡತಿಯನ್ನು ಗಂಡನಬಳಿಗೇ ಹೋಗೆಂದು ಹೇಳಲು, ಆಕೆಯು ಅದಕ್ಕೆ ಒಪ್ಪದೆ, ತನ್ನ ಗಂಡನು ಪ್ರಜೆಗಳಿಗೆ ತಂದೆಯಂತೆ ಇದ್ದನೆಂದೂ ಅವನು ದೂರವಾದ ಬಳಿಕ ನಾನು ತಾಯಿಯಾಗಿದ್ದುಕೊಂಡು ಪ್ರಜೆಗಳನ್ನು ನಡೆಯಿಸುವೆನೆಂದು ಉತ್ತರಕೊಟ್ಟಳು. ಕೆಯಿರೋ ಪಟ್ಟಣಕ್ಕೆ ನೌಕಾಸೈನ್ಯವೂ ಸಹ ಕಳುಹಿಸಲ್ಪಟ್ಟಿದೆ. ಈಜಿಪ್ಟ್‌ವರ್ತಕರೂ ಪ್ರಜೆಗಳೂ ಆಂಗ್ಲದೇಶವಸ್ತ್ರಗಳಿಗೆ ಬಹಿಷ್ಕಾರ ಹಾಕಲು ಉಪಕ್ರಮಿಸಿರುವರಂತೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಕ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

ನಂಜನಗೂಡು.

ತಮ್ಮ ತಾ|| ೧೮-೧೨-೨೧ನೆ ಪತ್ರಿಕೆಯಲ್ಲಿ ನಂಜನಗೂಡು ವೃತ್ತಾಂತದಲ್ಲಿ ನಮೂದಿಸಿರುವ ದೊಡ್ಡ ರೈಲ್ವೆಸ್ಟೇಷನ್‌ಮಾಸ್ಟರ ವಿಷಯದಲ್ಲಿ ಬರೆದಿರುವ ಅಂಶಗಳು ನಿಮ್ಮ ಬಾತ್ಮಿದಾರರ ಅಭಿಪ್ರಾಯದಂತೆ ಅಲ್ಲ. ರೈಲ್ವೆ ಇಲಾಖೆಯ ಆಫೀಸರವರಿಂದ ಆಗಾಗ್ಗೆ ಸಾಮಾನುಗಳನ್ನು ಪ್ಯಾಸ್‌ಮಾಡಕೂಡದಾಗಿ ಆರ್ಡರು ಬರುತ್ತಲೇ ಇರುತ್ತವೆ. ಆಗಿನ ಕಾಲದಲ್ಲಿ ದಿನಕ್ಕೆ ಒಂದೇ ವಾಗನ್ ಪ್ಯಾಸ್‌ಮಾಡಿಸಿ ಸಾಮಾನುಗಳನ್ನು ಕಳುಹಿಸಬೇಕಾಗುತ್ತೇ ವಿನಾ ಹೆಚ್ಚಿಗೆ ಕಳಿಸಕೂಡದಾಗಿಯೂ ಇರುತ್ತದೆ. ಇಂಥ ಸಂದರ್ಭಗಳು ತಮ್ಮ ಬಾತ್ಮಿದಾರರಿಗೆ ತಿಳಿಯದೆಹೋಗಿರಬಹುದು. ತಮ್ಮ ಸಾಮಾನುಗಳು ಸಾಗಲಿಲ್ಲವೆಂಬ ಕೋಪಕ್ಕೆ ಮಾಸ್ಟರವರನ್ನು ನಿಂದಿಸಿ ಫಲವೇನೂ ಇಲ್ಲ. ಸಾಮಾನುಗಳು ಸಾಗದೆ ಇರಲು ಎರಡು ಕಾರಣಗಳುಂಟು. ೧ನೇದು ಗೂಡ್ಸು ಮೂಲಕ ಸಾಮಾನುಗಳನ್ನು ಪ್ಯಾಸ್‌ಮಾಡಕೂಡದೆಂತಲೂ, ೨ನೇದು ದಿನ ೧ಕ್ಕೆ ಇಷ್ಟಿಷ್ಟೇ ಕಳುಹಿಸಬೇಕೆಂತಲೂ ಮೇಲ್ಪಟ್ಟವರ ಹುಕುಂಗಳು ಇರುತ್ತವೆ. ಇದು ಕೆಲವರಿಗೆ ಬಹುಶಃ ತಿಳಿದಿರಲಾರದು. ಇಂಥ ಸಂದರ್ಭಗಳಲ್ಲಿ ನಿಮ್ಮ ಬಾತ್ಮಿದಾರರಿಗೆ ತೊಂದರೆಯಾಗಿರಬಹುದು. ಇದಕ್ಕಾಗಿ ದೊಡ್ಡ ಮಾಸ್ಟರಾದ ಮೆ|| ರಂಗಸ್ವಾಮಯ್ಯಂಗಾರರು ಸರ್ವಥಾ ದೂಷಣೆಗೆ ಅರ್ಹರಲ್ಲ. ಕೇವಲ ರೈಲ್ವೆಆಫೀಸರ ಆರ್ಡರುಗಳಿಂದ ವರ್ತಕರುಗಳಿಗೆ ಸಂದರ್ಭಾನುಸಾರ ಅನಾನುಕೂಲಗಳಾಗಬಹುದು. ಇದಕ್ಕೆ ಮಾಸ್ಟರವರು ಜವಾಬ್ದಾರರಲ್ಲ. ಆದುದರಿಂದ ಮಾಸ್ಟರನ್ನು ದೋಷಿಗಳೆಂದು ಹೇಳುವುದಕ್ಕೆ ಆಗುವುದಿಲ್ಲ. ಈ ವಿಷಯವನ್ನು ತಮ್ಮ ಘನವಾದ ಪತ್ರಿಕೆಯಲ್ಲಿ ತಿಳಿಸಿ ತಮ್ಮ ಬಾತ್ಮಿದಾರರ ಸಂಶಯವನ್ನು ಹೋಗಲಾಡಿಸುತ್ತೀರಾಗಿ ಪ್ರಾರ್ಥನೆ. ಮೊದಲಿಂದಲೂ ಈ ಮಾಸ್ಟರು ಯಾವ ವಿಧವಾದ ಪುಕಾರೂ ಇಲ್ಲದೆ ಪಬ್ಲಿಕ್ಕಿಗೆ ತುಂಬಾ ಸಹಾಯಮಾಡುವುದರ ಮೂಲಕ ತಮ್ಮ ಕರ್ತವ್ಯವನ್ನು ನೆರವೇರಿಸಿ ಪ್ರಜಾನುರಾಗಿಗಳಾಗಿರುತ್ತಾರೆ, ಅಲ್ಲದೆ ನಂಜನಗೂಡು ರೈಲ್ವೆನೌಕರಮಾನೇರೆಲ್ಲಾ ಪ್ರಜಾನುರಾಗಿಗಳಾಗಿರುತ್ತಾರಾದ್ದರಿಂದ ಸಂತೋಷಪಡಬೇಕಾಗಿದೆ.

ಷೇಕ್‌ಹುಸೇನ್,
ಟಿಂಬರ್ ಏಜನ್ಸಿ ಮತ್ತು ವ್ಯಾಪಾರಿ ನಂಜನಗೂಡು.

ಘೋರಕೃತ್ಯ.

ಫ್ರೆಂಚ್‌ರಾಕ್ಸ್ ಸಬ್‌ತಾಲ್ಲೋಕ್ ಮೇಲ್ಕೋಟೆಯಲ್ಲಿ ಅರ್ಕಸಾಲಿಗರು ಬಹುಕಾಲದಿಂದಲೂ ಒಂದು ಗಣಪತಿಯ ಉತ್ಸವಕ್ಕಾಗಿ ಬಹು ಕಷ್ಟನಷ್ಟಗಳನ್ನು ಪಟ್ಟುದರಮೇಲೆ ಸಿದ್ಧಾರ್ಥಿಸಂವತ್ಸರದಲ್ಲಿ ಗೌರ್ನಮೆಂಟಿನವರು ನಿಂತು ವಿಜೃಂಭಣೆಯಿಂದ ಉತ್ಸವವನ್ನು ನಡೆಯಿಸಿದರು. ಪುನಃ ರೌದ್ರಿಸಂವತ್ಸರದಲ್ಲಿ ಕ್ರೂರಿಗಳಾದ ಕೆಲವು ಮಂಡೇದ ಅಯ್ಯಂಗಾರ್ರುಗಳು ಉತ್ಸವಕಂಟಕರಾದದ್ದರಿಂದ ಪುನಃ ಕಷ್ಟನಷ್ಟಗಳನ್ನು ಪಟ್ಟುದರಮೇಲೆ ಇದೇ ದುರ್ಮತಿಸಂವತ್ಸರದ ಡಿಸೆಂಬರ್ ೯ನೇ ತಾರೀಖಿನ ದಿವಸ ಗೌರ್ನಮೆಂಟಿನವರು ಆರ್ಡರ್‌ಕೊಟ್ಟು ಡಿ|| ಅಮಲ್‌ದಾರರೂ, ಸಬ್‌ಇನ್ಸ್‌ಪೆಕ್ಟರೂ, ರಿಸರ್ವ್‌ಪೋಲೀಸ್ ಮತ್ತು ಪೋಲೀಸಿನವರೂ ಉತ್ಸವಕ್ಕೆ ಒಂದುದಿವಸ ಮುಂಚೆ ೮ನೇ ತಾರೀಖಿನದಿವಸ ರಾತ್ರೆ ೮ ಘಂಟೆಗೆ ಮೇಲ್ಕೋಟೆಗೆ ಬಂದು ಸೇರಿದರು. ಅಮಲ್‌ದಾರರನ್ನು ಎಲ್ಲರೂ ಕಂಡರು. ವೇಷ್ಕಾರರು ಊಟಕ್ಕೆ ಅಮಲ್‌ದಾರರನ್ನು ಕರೆದುಕೊಂಡುಹೋದರು. ಊಟವಾಗುವುದು ರಾತ್ರೆ ೧೦ ಗಂಟೆಯಾಯಿತು. ಇಷ್ಟುಮಾತ್ರ ಕಂಡದ್ದೇ ಬೆಳಗ್ಗೆ ೭ ಗಂಟೆಮೇಲೆ ತಡಕಾಡಲು ಆರಂಭ. ತಂತ್ರೀವರ್ತಮಾನಕ್ಕೂ ಆರಂಭ. ಹೀಗೆ ೨ ದಿವಸ ಕಳೆದನಂತರ ೧೧ನೇ ತಾರೀಖು ಭಾನುವಾರ ಬೆಳಗ್ಗೆ ೭ ಗಂಟೆಯಲ್ಲಿ ಕೈಕಾಲುಗಳು ವಕ್ರವಾಗಿ ಶವವು ಕಲ್ಯಾಣಿಯಲ್ಲಿ ತೇಲುತ್ತಿತ್ತು. ಇವರಿಗೆ ಚೆನ್ನಾಗಿ ಈಜುಬರುವುದು. ಇವರು ಕೊಳಕ್ಕೆ ಹೋಗುವ ಪದ್ಧತಿ ಇಲ್ಲವೇ ಇಲ್ಲ. ಮುನಿಸಿಪಲ್ ಆಫೀಸಿನಲ್ಲಿ ಪರಿಚಾರಕರೂ ಇದ್ದಾರೆ ಜವಾನರೂ ಇದ್ದಾರೆ, ಠಕ್ಕಸವೂ ಇದೆ. ಗೌರ್ನಮೆಂಟಿನವರು ಚೆನ್ನಾಗಿ ವಿಚಾರಮಾಡಬೇಕು. ಇಷ್ಟಕ್ಕೆ ಬಿಟ್ಟದ್ದೇ ಆದರೆ ಗೌರ್ನಮೆಂಟಿನವರ ಭಯವೇ ಇಲ್ಲದೆ ಇವರ ಹಾವಳಿ ಮುಂದೆ ಏನುಮಾಡುತ್ತದೆಯೋ! ಈ ಗ್ರಾಮದಲ್ಲಿ ಎಲ್ಲಾ ಮತಸ್ಥರೂ ಇವರನ್ನ ಮೇಲಕ್ಕೆತ್ತಿ ಕಾಪಾಡಿಕೊಂಡು ಬಂದದ್ದಕ್ಕೆ ಎಲ್ಲಾ ಮತದವರಿಗೂ ತೊಂದರೆಗೆ ಇವರೇ ಕಾರಣಸ್ಥರಾಗಿ ಇದ್ದಾರೆಂಬುದಕ್ಕೆ ಸಂದೇಹವಿಲ್ಲವು. ಇವರಮಟ್ಟಿಗೆ ಸ್ವತಂತ್ರರಾಜ್ಯವಾದ ಹಾಗೆ ಇದೆ. ಮೇಲ್ಕಂಡ ಅಯ್ಯಂಗಾರರುಗಳಿಗೆ ಲೈಸೆನ್ಸ್ ಇಲ್ಲದೇಇರುವುದೂ ಬಾಕಿ ಕೋಮಿನವರಿಗೆಲ್ಲಾ ಇರುವುದೂ ನೋಡಿದ್ದೇಆದರೆ ಹಿಂದುಳಿದವರು ಬಹಳ ದುಃಖವನ್ನು ಅನುಭವಿಸಬೇಕಾಗುತ್ತೆ. ಮೈಸೂರು, ಬೆಂಗಳೂರು ಆದಿಯಾಗಿ ಎಲ್ಲಾ ಊರುಗಳಲ್ಲಿಯೂ ಲೈಸೆನ್ಸ್ ಇರುವದರಿಂದ ಇಲ್ಲಿಯೂ ಅದರಂತೆ ಮಾಡಿದರೆ ಇವರುಗಳ ಹಾವಳಿ ಕಡಿಮೆಯಾಗಬಹುದು. ಧರ್ಮಸ್ವರೂಪರಾದ ಸರ್ಕಾರದವರು ಘನಚಿತ್ತಕ್ಕೆ ತಂದುಕೊಂಡದ್ದೇ ಆದರೆ ಗ್ರಾಮಕ್ಷೇಮ. ಇವರ ಭಯಕ್ಕಾಗಿ ಸ್ವಲ್ಪಮಂದಿಗಳು (ಸರ್ಕಾರಕ್ಕೆ ಮಕ್ಕಳಲ್ಲವೆ?) ದೇಶಭ್ರಷ್ಟರಾಗಿಹೋಗಬೇಕೇ!

ನಿಷ್ಪಕ್ಷಪಾತಿ.

ಚನ್ನಪಟ್ಟಣ.

ಅಯ್ಯಾ,

ತಾ|| ೨೫-೧೨-೨೧ರ ತಮ್ಮ ಪತ್ರಿಕೆಯಲ್ಲಿ ಚನ್ನಪಟ್ಟಣದ ಬಾತ್ಮೀದಾರರೊಬ್ಬರು ಇಲ್ಲಿಗೆ ಡೆಪುಟಿಕಮಿಷನರು ಬಂದು ಪ್ರಜೆಗಳಿಗೆ ಸಂದರ್ಶನ ಕೊಟ್ಟ ವಿಷಯದಲ್ಲಿ ನಡೆದ ವಿದ್ಯಮಾನಗಳನ್ನು ವಿಶದವಾಗಿಯೇನೋ ಬರೆದಿದ್ದರು. ಆದರೆ ಬಾತ್ಮೀದಾರರು ಒಂದು ಮುಖ್ಯ ಸಂಗತಿಯನ್ನು ಬಿಟ್ಟುಬಿಟ್ಟಿರುವರು. ಆ ವಿಷಯವನ್ನು ನಾನು ಬರೆಯಲು ಧೈರ್ಯ ಸಾಲದು; ಕೈಯೂ ಬಾರದು. ಆದರೂ ಅದನ್ನು ಬರೆಯದಿದ್ದರೆ ದಯಾಳುಗಳಾದ ನಮ್ಮ ಸರ್ಕಾರದವರಿಗೆ ಪ್ರಜಾನೆಮ್ಮದಿಗೋಸ್ಕರ ನೇಮಿಸಿರುವ ನೌಕರಮಾನೇರುಗಳಿಗೂ, ಪ್ರಜೆಗಳಿಗೂ ಇರುವ ಪ್ರೀತಿವಾತ್ಸಲ್ಯದ ವ್ಯತ್ಯಾಸವನ್ನು ತಿಳಿಸಿದಂತಾಗುವುದಿಲ್ಲವೆಂಬ ಶಂಕೆಯಿಂದ ಈ ಬಾತ್ಮಿಯನ್ನು ಬರೆಯಬೇಕಾಯಿತು. ನೆರೆದಿದ್ದ ಸಾವಿರಾರು ಪ್ರಜೆಗಳ ಮುಂದೆ ಡೆ|| ಕ|| ರವರು ಉಗ್ರಾವೇಶದಿಂದ "ನಿಮ್ಮನ್ನು ಕರೆಸಿದವರಾರು? ನಿನಗೆ ಮಕ್ಕಳೆಷ್ಟೆಂದು ಕೇಳಿದರೆ ಶ್ಯಾನುಭೋಗರನ್ನು ಕೇಳಬೇಕು ಬುದ್ಧಿ" ಎಂದು

ಹೇಳುವ ನಿಮಗೆ ನಮ್ಮ ವರೆಗೂ ದೂರುಹೇಳುವ ಧೈರ್ಯಬಂದಿತೋ ಇರಲಿ ಎಂದು ಹೇಳಿದುದಲ್ಲದೆ, ಪೊಲೀಸ್ ಅಧಿಕಾರಿಗಳಿಗೆ ನಮ್ಮನ್ನೆಲ್ಲ ಅರ್ಧಚಂದ್ರಪ್ರಯೋಗದಿಂದ ದೂಡುವಂತೆ ಕಟ್ಟಪ್ಪಣೆ ಮಾಡಿದರು. ದಣಿಯ ಅಪ್ಪಣೆಯು ಕ್ಷಣಾರ್ಧದಲ್ಲಿ ಜಾರಿಗೆ ಬಂತು. ವಾಚಕಮಹಾಶಯರೇ, ಆವಾಗ ಏನೇನು ನಡೆದಿರಬಹುದೆಂಬುದನ್ನು ನೀವೇ ಊಹಿಸಿಕೊಳ್ಳಿರಿ. ಡಿಸ್ಟ್ರಿಕ್ಟಿಗೆ ತಂದೆಯಂತಿರುವ ಈ ಮಹಾಶಯರಿಗೆ ಇಷ್ಟು ಕೋಪಾತಿಶಯವಾದರೆ ಪ್ರಜೆಗಳ ಗತಿಯೇನು ? ಈ ಮಹಾಶಯರು ಘನವಿದ್ಯಾವಂತರಾಗಿದ್ದು ಕೊಂಡು ಇಂಥಾ ಮಾತುಗಳನ್ನಾಡಿದರೆಂದರೆ ನಂಬತಕ್ಕದ್ದಾಗಿಲ್ಲ. ಆದರೆ ಮಹಾಶಯರು ಆ ಮಾತುಗಳನ್ನಾಡಿಯೇಬಿಟ್ಟರು. ಮಾಡತಕ್ಕದ್ದೇನು ? ನವೀನ ನಾಗರೀಕತೆಯ ಈ ಇಪ್ಪತ್ತನೆಯ ಶತಮಾನದಲ್ಲಿಯೂ ಪ್ರಜೆಗಳು ಹದಿನೆಂಟನೆಯ ಶತಮಾನದಲ್ಲಿದ್ದಂತೆಯೇ ಇರಬಹುದೆಂದು ನೌಕರಮಾನೇರುಗಳು ತಿಳಿದುಕೊಂಡಿರುವಂತಿದೆ. ಬಡ ರೈತನಿಗೂ ಕೂಡ ರಾಜ್ಯಾಡಳಿತದಲ್ಲಿ ತನ್ನ ಸ್ಥಾನವೆಲ್ಲಿರುವುದೆಂದು ಚರ್ಚಿಸುವ ಕಾಲ ಬಂದಿದೆ. ನಮ್ಮ ಅಜೂಬಾಜಿನ ಸಮಾಚಾರವೇನೆಂಬುದನ್ನು ತಿಳಿದುಕೊಳ್ಳುವುದಲ್ಲದೆ ನಮ್ಮ ಭಾರತಮಾತೆಯ ಸಮಾಚಾರವೇನೆಂಬುದನ್ನು ತಿಳಿಯಲುದ್ಯುಕ್ತರಾಗಿರುವರು. ಇಂಥ ಸಮಯದಲ್ಲಿ ಅಧಿಕಾರಬಲದಿಂದ ಪ್ರಜೆಗಳ ಬಾಯಿ ಬಡಿಯುವುದೆಂದರೇನು ? ಇದನ್ನೆಲ್ಲಾ ನೋಡಿದರೆ ಬ್ರಾಹ್ಮಣ ಬ್ರಾಹ್ಮಣೇತರರೆಂಬ ಭೇದಭಾವಗಳು ಇನ್ನೂ ಹೆಚ್ಚುತ್ತಲೇ ಇವೆಯೆಂಬುದಕ್ಕೆ ಅಭ್ಯಂತರವಿಲ್ಲ. ದೊಡ್ಡ ಪದವಿಗೆ ಬಂದವರು ಈ ಬೇದಭಾವಗಳನ್ನು ತೊರೆದು ಪ್ರಜೆಗಳ ಏಳಿಗೆಯಲ್ಲಿ ನಿರತರಾಗಿ ತನ್ಮೂಲಕ ಭಾರತಮಾತೆಯ ಸೇವೆಯನ್ನು ಮಾಡಲೆಂದು ಪ್ರಾರ್ಥಿಸುತ್ತೇನೆ. ಕೋಪವೇನೋ ಕೆಟ್ಟದ್ದು. ಒಂದುವೇಳೆ ಕೋಪಾವೇಶದಲ್ಲಿ ಏನಾದರೂ ನಡಿಸಿದರೂ ಆದನ್ನು ಸಿಂಹಾವಲೋಕನದಿಂದ ಸರಿಪಡಿಸಿಕೊಳ್ಳುವುದು ಉತ್ತಮ. ಪ್ರತ್ಯಕ್ಷದರ್ಶಿ.

ಹಾವೇರಿತಾಲ್ಲೂಕು ನೆಗಳೂರು

ನಮ್ಮ ಊರಲ್ಲಿ ಬ್ರಾಹ್ಮಣೇತರ ಜನಸಂಖ್ಯೆಯೇ ಹೆಚ್ಚಿಗೆ ಇರುತ್ತದೆ. ಆದರಲ್ಲಿ ನನ್ನ ವೀರಶೈವ, ಹಾಗೂ ಮುಸಲ್ಮಾನ, ಕುರುಬ, ರಡ್ಡೀ, ವಗೈರೆ ಎಲ್ಲ ಜನರು ಕೂಡಿ ಜರುಗಿಸಿದ ಸಮಾರಂಭಗಳನ್ನು ಇವರಜತೆಯಲ್ಲಿ ಬರೆದು ಕಳುಹಿಸಿರುತ್ತೇನೆ.—ಶ್ರೀಸ್ವಾಮಿಗಳವರು ಕೈಕೊಂಡ ಈ ಸಮಾಜೋನ್ನತಿಯ ಕಾರ್ಯಕ್ಕೆ ತಾವೂ ತಮ್ಮ ಕೈಲಾದಮಟ್ಟಿಗೆ ಸಹಾಯಮಾಡುವಿರೆಂದು ನಂಬಿದ್ದೇನೆ. ನಮ್ಮ ಇಂಗ್ಲೀಷ್ ಪ್ರೈ|| ಸ್ಕೂಲಿಗೆ ಒಬ್ಬ ಮಾಸ್ತರರ ಅವಶ್ಯಕತೆ ಇರುತ್ತದೆ. ತಮ್ಮ ಪರಿಚಯದ ಕ್ವಾಲೀಫೈಡ್ ಯೋಗ್ಯ ಇಸಮ ಬ್ರಾಹ್ಮಣೇತರ ಇದ್ದರೆ, ಜರೂರ ಇತ್ತಕಡೆ ತಿಳಿಸಿದಲ್ಲಿ ಲಾಯಖೀಮೇರೆಗೆ, ೨೫-೩೦ ರವರೆಗೆ ಸಂಬಳಕೊಡಲಿಕ್ಕೆ ಸಹ ನಮ್ಮ ಗ್ರಾಮದ ಮುಂದಾಳುಗಳು ತಯಾರ ಇರುತ್ತಾರೆ. ಸೆಕ್ರಟರಿ.

[ಇಷ್ಟವುಳ್ಳ ಯೋಗ್ಯರು ಹಾವೇರಿ ತಾ|| ನೆಗಳೂರಿನಲ್ಲಿರುವ ಇಂಗ್ಲೀಷ್ ಪ್ರೈ|| ಸ್ಕೂಲ್ ಸೆಕ್ರಟರಿ ಮ|| ಮಲಕಪ್ಪ ದೊಡ್ಡಬಸಪ್ಪ ಪತ್ರಿ ಇವರ ಹೆಸರಿಗೆ ಬರೆದುಕೊಳ್ಳಬಹುದು. ಪ. ಪ್ರ.]

ಗದಗ.

ಮಹನೀಯರೆ !

ಈ ಊರಲ್ಲಿ “ವೀರಶೈವತರುಣರ ಸಂಘವು” ಸನ್ ೧೯೧೫ನೆ ಇಸವಿಯಲ್ಲಿ ಶ್ರೀಮನ್ ಮೃತ್ಯುಂಜಯ ಮಹಾಸ್ವಾಮಿಗಳ ಅನುಗ್ರಹದಿಂದ ಸ್ಥಾಪಿಸಲ್ಪಟ್ಟಿತು. ಈ ಸಂಘವು, ತನ್ನ ಬಾಲ್ಯದಲ್ಲಿ ಮಹಾಸ್ವಾಮಿಗಳ ಆಶೀರ್ವಾದದಿಂದ, ವಾರವಾರಕ್ಕೊಮ್ಮೆ ಸಭೆಗಳನ್ನು ಮಾಡಲಿಕ್ಕೆ ಪ್ರಾರಂಭಿಸಿತು. ಸ್ತುತ್ಯವುದ್ದೇಶಗಳುಳ್ಳ ಈ ಸಂಘದ ವಿಷಯಕ್ಕೆ ಮೊಟ್ಟಮೊದಲು ಜನರು ಅಷ್ಟು ಅದರ ಬುದ್ಧಿಯುಳ್ಳವರಾಗದಿದ್ದರೂ ಅದರ ಚಾಲಕರಿಗೆ ತಮ್ಮ ಕೆಲಸದಲ್ಲಿ ಎಂಥ ಎಡರುಗಳು ಬಂದಾಗ್ಯೂ, ಅವರು ಕರ್ತವ್ಯಭ್ರಷ್ಟರಾಗದೇ, ಸಂಘವನ್ನು ಹಾಗೇ ನಡಿಸುತ್ತಾ ಬಂದಿರುತ್ತಾರೆ. ಇದನ್ನು ಬರಿಯಲಿಕ್ಕೆ ನನಗೆ ಪರಮಾನಂದವೆನಿಸುತ್ತದೆ. ಸದ್ಯಃ ಈ ತರುಣರ ಸಂಘದವರು ಮಾಡುತ್ತಿರುವ ಕೆಲಸಗಳನ್ನು ನೋಡಿದರೆ, ಪ್ರತಿಯೊಬ್ಬನಲ್ಲಿಯೂ ಸಮಾಜಾಭಿಮಾನವು ತಲೆದೋರದೆ ಉಳಿಯಲಾರದು. ಇದೇ ತಿಂಗಳಲ್ಲಿ ಕದಡಿ, ಲಕ್ಕುಂಡಿ, ಮೊದಲಾದ ಗ್ರಾಮಗಳಿಗೆಹೋಗಿ, ಸಮಾಜದಲ್ಲಿ ವಿದ್ಯಾಪ್ರಸಾರವಾಗಿ ಧಾರ್ಮಿಕವಿಷಯದಲ್ಲಿಯೂ ಕೂಡಾ, ಸಮಾಜವು ಮುಂದೆ ಬರಲಿಕ್ಕೆ ಕೈಕೊಳ್ಳಬೇಕಾದ ಉಪಾಯಗಳನ್ನು ಹುಡುಕಿಕೊಟ್ಟಿರುವರು. ಸಂಘದ ವಾಸಸ್ಥಾನವಾದ ಈ ಊರಲ್ಲಿ ಓಣಿಓಣಿಗೆ ಸಭೆಗಳನ್ನು ಕೂಡಿಸಿ, ಸಮಾಜದಲ್ಲಿ ಏಕಮತ್ಯವು ವುಂಟಾಗುವಂತೆ ಯತ್ನಿಸುತ್ತಿರುವರು. ಇನ್ನು ಮುಂದೆ ತನ್ನ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗೆಹೋಗಿ, ಅಲ್ಲಿ ಐದು ಜನರಿಗಿಂತ ಹೆಚ್ಚಿಗೆ ಉಳ್ಳ ಒಂದು ಕಮಿಟಿಯನ್ನು ಸ್ಥಾಪಿಸಿ, ಇವೆಲ್ಲಾ ಕಮಿಟಿಗಳು ಅಲ್ಲಿಂದಲೇ ಸಮಾಜೋನ್ನತಿಯ ವಿಷಯಕ್ಕೆ ಕೆಲಸಮಾಡುತ್ತಿರುವಂತೆ ಮಾಡಬೇಕೆಂದೂ ಮತ್ತೂ ಈ ಊರಲ್ಲಿ ಇಂಗ್ಲೀಷ್, ಸಂಸ್ಕೃತ, ಕನ್ನಡ ಮೊದಲಾದ ಭಾಷೆಗಳನ್ನು ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ದೊರಕಿಸಿ, ಅವರ ಮೇಲ್ವಿಚಾರಣೆಗೆ ತೆಗೆದುಕೊಂಡು ಅವರ ತಂದೆತಾಯಿಗಳು ಅಥವಾ ಇಲ್ಲಿಯ ಫಂಡಿನವರು ಕೊಡುತ್ತಿರುವ ಹಣವು ಸಾರ್ಥಕವಾಗುವಂತೆ ಮಾಡಬೇಕೆಂದೂ, ಯತ್ನಿಸುತ್ತಿರುವರು. ಇಂಥ ಶ್ಲಾಘನೀಯವಾದ ಉದ್ಯೋಗವನ್ನು ಕೈಕೊಂಡು ಸಮಾಜದ ಹಿತವನ್ನೇ ಹಗಲಿರುಳು ಚಿಂತಿಸುತ್ತಿರುವ ಈ ಸಂಘಕ್ಕೆ ಪ್ರತಿಯೊಬ್ಬ ಅಭಿಮಾನಿಯೂ ಯಾಕೆ ಸಹಾಯಮಾಡಲಿಕ್ಕಿಲ್ಲಾ ? ನಿಶ್ಚಯವಾಗಿ ಮಾಡೇಮಾಡುವರು. ಆದರಲ್ಲಿಯೂ ಈ ಊರವರು ಸಂಘದ ಮೆಂಬರಾಗಿಯಾಗಲಿ, ಅಥವಾ ಹಾಗೇಆಗಲಿ, ಶಕ್ತ್ಯನುಸಾರ ಸಹಾಯವನ್ನು ಯಾಕೆ ಮಾಡಲಿಕ್ಕಿಲ್ಲಾ ? ಅವಶ್ಯವಾಗಿ ಮಾಡುವರು. ಈ ರೀತಿಯಿಂದ ಸಮಾಜಸೇವೆಯನ್ನು ಮಾಡುವ ಸಂಘಕ್ಕೂ ಇಂಥಾ ಸಂಘಗಳಿಗೆ ಸಹಾಯವನ್ನೀಯುವ ಮಹಾನುಭಾವರಿಗೂ, ಐಶ್ವರ್ಯಾಯುರಾರೋಗ್ಯಗಳನ್ನು ಈಶ್ವರನು ಸದಾ ದಯಪಾಲಿಸುತ್ತಿರಲಿ ಎಂದು ಆತನನ್ನು ಪ್ರಾರ್ಥಿಸುತ್ತೇನೆ.

ಓರ್ವಸಮಾಜಸೇವಕ.

ಹುನಗುಂದ ತಾಲ್ಲೂಕು ಪೈಕಿ ಅಮ್ಮಿನಗಡ.

ಕಾರ್ತೀಕ ಶುಕ್ಲಪಕ್ಷ ಅಷ್ಟಮಿ ಇಂದುವಾರದ ದಿವಸ ಶ್ರೀಮನ್ನಿರಂಜನ ಶಿವಾನುಭವ ಚರವರ್ಯರಾದ ತೋಂಟದಾರ್ಯ ಮಹಾಸ್ವಾಮಿಗಳವರ ಮಠದಲ್ಲಿ ನಡೆದ ಧರ್ಮೋತ್ತೇಜಕ ಸಭೆಯ ಕಾರ್ಯಗಳೇನೆಂದರೆ— ಶ್ರೀ ಶಿವಯೋಗಮಂದಿರ ನಿವಾಸಿ ನಿರಂಜನ ಸ್ವರೂಪಿಗಳಾದ ಮಹಾಂತ ಶಿವಯೋಗಿಗಳು ಅಧ್ಯಕ್ಷಸ್ಥಾನವನ್ನು ಆರೋಹಣಮಾಡಿದ್ದು ಧರ್ಮ ಎಂಬ ವಿಷಯದಮೇಲೆ ಉಪನ್ಯಾಸವನ್ನು ತಮ್ಮ ಅಮೃತವಾಣಿಯಿಂದ ಮಾಡಿ ನೆರೆದ ವೀರಶೈವ ಜನಸಂದೋಹ ಮೊದಲುಗೊಂಡು ಅನ್ಯಮತೀಯರಿಗೂ ಕೂಡ ಪರಮಾಹ್ಲಾದವನ್ನುಂಟುಮಾಡಿದರು. ಅನಂತರ ಶ್ರೀಮನ್ನಿರಂಜನ ಶಿವಾನುಭವ ಚರವರ್ಯರಾದ ಚಿಕ್ಕತೋಂಟದಾರ್ಯ ಮಹಾಸ್ವಾಮಿಗಳವರು ಭಕ್ತಾಚಾರ ವಿಷಯದಲ್ಲಿ ತಮ್ಮ ಸರಸಭಾಷಣಗಳಿಂದ ಶ್ರೋತೃಗಳಾದ ವೀರಮಾಹೇಶ್ವರರಿಗೆ ಶ್ರವಣಾನಂದವನ್ನುಂಟುಮಾಡಿದರು. ನಂತರ ವೇದಮೂರ್ತಿ ಗುಳೇದಗುಡ್ಡದ ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿಗಳವರು ತಮ್ಮ ಪ್ರೌಢವಾದ ವಾಗ್ಸರಿಯಿಂದ ಯೌಗಿಕ ಮತ್ತು ಆಚಾರ ಈ ವಿಷಯದಲ್ಲಿ ಸರ್ವಜನ ಸಂದೋಹವನ್ನೂ ಪ್ರಸನ್ನಗೊಳಿಸಿದರು. ಸದರಿ ಮಿತಿ ಮೊದಲುಗೊಂಡು ದಶಮಿ ತಿಥಿಯವರೆಗೂ ನಡೆದ ವೀರಶೈವ ತಾತ್ವಿಕ ಸಭೆಯ ವೈಭವವನ್ನು ವರ್ಣಿಸಲು ಭೂಧಾರಕನಿಗೂ ಕೂಡ ಅಸದಳವು ಎಂದು ಕಂಡುಬಂದಿತು. ಪ್ರತಿದಿವಸ ಸಾಯಂಕಾಲ ೬ ಘಂಟೆಗೆ ಪ್ರಾರಂಭಿಸಿ ೧೦ ಘಂಟೆಗೆ ಸಭೆಯು ವಿಸರ್ಜಿಸಲ್ಪಟ್ಟು ಮೂರನೇ ದಿನದಲ್ಲಿ ಗಂಧಮಾಲ್ಯಾದಿಗಳಿಂದಲೂ, ಗಜರೆತುರಾಯಿಗಳಿಂದಲೂ, ಸದ್ಗಂಧ ಸೌರಭದಿಂದಲೂ ಸಭಿಕರು ಸತ್ಕರಿಸಲ್ಪಟ್ಟರು. ಪ್ರತ್ಯಕ್ಷದರ್ಶಿ.

ಅತ್ಯಾಗ್ರಹದ ಸೂಚನೆಯು.

ತಾರೀಖು ೧೫-೧೧-೨೧ ಇಸವಿಯ ಕರ್ನಾಟಕ ವೃತ್ತದಲ್ಲಿ ಎಚ್. ಎಸ್. ಹಿರೇಮಠ ಎಂಬುವರು ಶ್ರೀಮನ್ನಿರಂಜನ ಹಾನಗಲ್ಲ ಕುಮಾರ ಮಹಾಸ್ವಾಮಿಗಳಿಗೆ ಉಪಯೋಗಿಸಿದ ಶಬ್ದವನ್ನು ನೋಡಿದರೆ ಪ್ರತಿಯೊಬ್ಬ ವೀರಶೈವನ ಹೃದಯವು ದಹಿಸುವಂಥದ್ದಾಗಿರುವದು—ಅಯ್ಯಾ ಹಿರೇಮಠದ ಮಹಾಸ್ವಾಮಿಗಳೇ ಎಚ್ಚರಾಗಿರಿ, ಅವರು ಯಾರೆಂಬುದನ್ನು ನೋಡಿ, ಏನು ಬರೆಯಬೇಕೆಂಬುದನ್ನು ಕಲಿತುಕೊಳ್ಳಿರಿ. ಅವರಿಲ್ಲದಿದ್ದರೆ ಈ ಸಮಾಜವು ಯಾವ ಸ್ಥಿತಿಗೆ ಬರುತ್ತಿತ್ತೆಂಬುದನ್ನು ತಿಳಿದುಕೊಳ್ಳಿರಿ. ಇದೊಂದು ಮಠವು ಹಿಂದುಸ್ಥಾನದಲ್ಲಿ ಅತಿ ಪ್ರಾಚೀನವಾದದ್ದು ಪವಿತ್ರವಾದದ್ದೂ ವೇದಾಗಮೋಪನಿಷತ್ತಿನಿಂದ ಹೊಗಳಿಸಿಕೊಳ್ಳುವಂಥಾದ್ದೂ ಇರುವುದೆಂದು ಎರಡನೇ ಮತದವರಿಗಾಗಲೀ ಅಥವಾ ರಾಷ್ಟ್ರದವರಿಗಾಗಲೀ ತಿಳಿಯಬೇಕಾದರೆ ಇವರಿಂದ ರಚಿಸಲ್ಪಟ್ಟಂಥ ದೊಡ್ಡದೊಡ್ಡ ಮಹಾಸಭೆಗಳಲ್ಲಿ ಚರ್ಚಿಸಲ್ಪಟ್ಟ ಧರ್ಮದ ಸಂಬಂಧಿ ವಿಷಯಗಳು ಅವುಗಳ ರಿಪೋರ್ಟುಗಳೂ ಸಾಧನವಲ್ಲವೆ ? ಮತ್ತು ನಮ್ಮ ಗುರುವರ್ಗದವರೂ ಸಿಂಹಾಸನಾಧಿಪತಿಗಳೂ ಅಜ್ಞಾನರಿರುವದರಿಂದಲೇ ನಮ್ಮಿ ಸಮಾಜವು ಈ ಆಗಣ್ಯಸ್ಥಿತಿಗೆ ಬಂದಿತೆಂದು ತಿಳಿದು ಅವರಲ್ಲಿರುವ ಅಜ್ಞಾನವನ್ನು ಹೋಗಲಾಡಿಸುವುದೇ ಈ ಸಮಾಜವನ್ನು ಎಚ್ಚರಿಸಿದಂತೆಂದು ತಿಳಿದು ಶ್ರೀ ಶಿವಯೋಗಮಂದಿರವನ್ನೂ ಪಾಠಶಾಲೆಗಳನ್ನೂ ಅಲ್ಲಲ್ಲಿಗೆ ಬೋರ್ಡಿಂಗುಗಳನ್ನೂ ಸ್ಥಾಪಿಸಿದವರು ಇವರೇ ಅಲ್ಲವೆ ? ಹಾಲಿ ಸರ್ವಸುಖಗಳಿಗೆ ನೀರೆರೆದು ಸಮಾಜದ ಏಳ್ಗೆಯೇ ತಮ್ಮ ಏಳಿಗೆಯೆಂದು ಹಗಲಿರುಳೆನ್ನದೆ ಹಳ್ಳಿ ಪಟ್ಟಣವೆನ್ನದೆ “ಕರುವು ತಪ್ಪಿಸಿಕೊಂಡ ಆಕಳಂತೆ” ಭಕ್ತರಿರುವ ಊರಿಗೆ ತಯಾರುಮಾಡಿದ ಕೀರ್ತನಕೇಸರಿಗಳನ್ನು ಕರಕೊಂಡು ಹೋಗಿ ಎಚ್ಚರಿಸುತ್ತಿರುವರಲ್ಲವೆ ? ಈ ರೀತಿ ತಮ್ಮ ತಪೋಬಲದ ಸಾಮರ್ಥ್ಯದಿಂದ ಇನ್ನೂ ಅನೇಕ ಅಸಾಧಾರಣ ಮತೋಪಯೋಗಿ ಕಾರ್ಯಗಳನ್ನು ಮಾಡಿದ ಇಂಥ ಮಹಿಮರಿಗೆ ಈ ರೀತಿ ಬರೆದದ್ದೆಂದರೆ “ಚೋರನಿಂದಿಸಲಾಗಿ ಚಂದ್ರನಿಗೆ ಬಂದ ಕುಂದೇನು” ಎಂಬಂತೆ ಆಗಿರುವದಲ್ಲವೆ ? ಇದರಿಂದೇನಾದರೂ ಅವರ ಯೋಗ್ಯತೆ ಕಡಿಮೆಯಾಗಬಹುದೆ ? ಎಂದೂ ಆಗಲರಿಯದು. ಮಾತ್ರ ನಮ್ಮ ನಮ್ಮ ಸಮಾಜದಲ್ಲಿಯೇ ಈ ರೀತಿ ಇರುವದೆಂಬುದು ಅನ್ಯಮತದವರಿಗೆ ತಿಳಿದು ಚಪ್ಪಾಳೆ ಹೊಡೆದು ನಗಲಿಕ್ಕೆ ಆಸ್ಪದ ಕೊಟ್ಟಂತಾಗುವದು. ಕಾರಣ ಇನ್ನು ಮೇಲೆ ಯಾರ ಸಂಬಂಧಿಯೇ ಆಗಲಿ ಯಾರ ವಿಷಯಕ್ಕೇ ಆಗಲಿ ಬರೆಯುವುದಾದರೆ ಅವರವರ ಯೋಗ್ಯತಾನುಸಾರ ಮರ್ಯಾದೆಕೊಟ್ಟು ಬರೆಯಬೇಕೆಂದು ನಮ್ಮ ಅತ್ಯಾಗ್ರಹದ ಸೂಚನೆಯು. ತಮ್ಮ ಎಂ.ಪಿ.ಎ.

ದಾವಣಗೆರೆ.

ಇಲ್ಲಿ ಕಟ್ಟಲ್ಪಡುವ ಅಥಣಿ “ಶ್ರೀ ಮುರಘೇಂದ್ರ ಶಿವಯೋಗಾಶ್ರಮ”ಕ್ಕಾಗಿ ಶ್ರೀ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳು ತಾವು ಹತ್ತು ಸಾವಿರ ರೂಪಾಯಿಗಳನ್ನು ದಯಪಾಲಿಸುವುದಾಗಿಯೂ, ಪುರನಿವಾಸಿಗಳು ಹತ್ತು ಸಹಸ್ರ ರೂಪಾಯಿಗಳನ್ನು ಕೊಡಬೇಕೆಂದೂ, ಅಪ್ಪಣೆ ಮಾಡಿದ ಪ್ರಕಾರ ಇಲ್ಲಿಯ ಶ್ರೀ ಮೃತ್ಯುಂಜಯ ಸ್ವಾಮಿಗಳೂ, ಪುರಪ್ರಮುಖರೂ ಸೇರಿ ಆಗಲೇ ಪೂರಾ ಹಣಶೇಖರಿಸಿರುವುದಲ್ಲದೆ ಸ್ವಲ್ಪ ದಿವಸಗಳಲ್ಲೇ ಆಶ್ರಮದ ಅಸ್ತಿಭಾರವನ್ನು ಹಾಕತಕ್ಕವರಿರುತ್ತಾರೆ. ಈ ಮಹಾಕಾರ್ಯಕ್ಕಾಗಿ ಪುರಜನಗಳು ಉದಾರಹಸ್ತದಿಂದ ಹಣವನ್ನು ಕೊಟ್ಟಿದ್ದು ಶಿವಯೋಗಿಗಳವರಲ್ಲಿರುವ ತಮ್ಮ ಅಸಾಧಾರಣ ಭಕ್ತಿಯನ್ನು ವ್ಯಕ್ತಗೊಳಿಸುವುದಾಗಿದೆ. ಅಥಣಿಯಿಂದ ಶ್ರೀಮನ್ನಿರಂಜನ ಸಿದ್ಧಲಿಂಗ ಮಹಾಸ್ವಾಮಿಗಳವರೂ, ವಿಜಾಪುರದಿಂದ ಶ್ರೀ ಶಂಭುಲಿಂಗ ದೇಶಿಕೇಂದ್ರಸ್ವಾಮಿಗಳವರೂ, ಇಲ್ಲಿಗೆ ದಯಮಾಡಿಸಿರುತ್ತಾರೆ. ಮೊದಲೇ ಪ್ರಸಿದ್ಧಪಡಿಸಿದ ಮೇರೆಗೆ ಇಲ್ಲಿಯ “ತರುಣ ಸದುದ್ಯೋಗಸಂಘ” ದವರ ಪ್ರಾರ್ಥನೆಯಂತೆ ಶ್ರೀ ಶಂಭುಲಿಂಗ ದೇಶಿಕೇಂದ್ರಸ್ವಾಮಿಗಳವರಿಂದ ವಿರಕ್ತಮಠದಲ್ಲಿ ಮೂರು ಉಪನ್ಯಾಸಗಳು ಜರುಗಿದವು. ಆ ಕಾಲಕ್ಕೆ ಹೈಸ್ಕೂಲ್ ಹೆಡ್‌ಮಾಸ್ಟರ್ ಮಿ|| ದಾವೂದ್ ಎಂ. ಎ. ಯವರು ಡಾಕ್ಟರ್ ಮೊದಲಾದ ಅಧಿಕಾರಿ ವರ್ಗದವರೂ ಎಲ್ಲಾ ಮತದ ಪ್ರಮುಖರೂ ಸಭೆಗೆ ಆಗಮಿಸಿದ್ದರು. ವೇದ ಉಪನಿಷತ್ ಆಗಮ ಬೈಬಲೆ, ಖುರಾನ್, ಇತಿಹಾಸಾದಿಗಳಲ್ಲಿ ಶ್ರೀಗಳವರಿಗೆ ಇರುವ ಅಸಾಧಾರಣ ಪಾಂಡಿತ್ಯವೂ, ವಿಷಯ ವಿವೇಚನಾಶಕ್ತಿಯೂ ಸಭಿಕರಿಗೆ ಆತ್ಮಾನಂದವನ್ನುಂಟುಮಾಡಿ ಉಪನ್ಯಾಸದ ೨-೩ ತಾಸುಗಳು ೨-೩ ನಿಮಿಷಗಳು ಕಳೆದಂತೆ ಪರಿಣಮಿಸಿ ಸಭಿಕರಿಗೆ ಆಶ್ಚರ್ಯವನ್ನುಂಟುಮಾಡಿದವು. ಶ್ರೀ ಶಂಭುಲಿಂಗ ದೇಶಿಕೇಂದ್ರಸ್ವಾಮಿಗಳು ಹಿಂದಿ ಮಹಾರಾಷ್ಟ್ರ ಭಾಷೆಗಳಲ್ಲಿ ಅಸಾಧಾರಣ ಪಾಂಡಿತ್ಯವುಳ್ಳವರಾದರೂ ಕನ್ನಡ ಭಾಷೆಯಲ್ಲಿಯೂ ಪಂಡಿತರಿರುವರು. ಸ್ಪೆನ್ಸರ್ ಮೆಕಾಲೆ ಮೊದಲಾದ ಪಾಶ್ಚಿಮಾತ್ಯ ತತ್ವವೇತ್ತರ ಗ್ರಂಥಗಳನ್ನು ಪರಿಶೀಲಿಸಿ ಈ ಇಪ್ಪತ್ತನೇ ಶತಮಾನದ ಪರಿಸ್ಥಿತಿಯನ್ನು ಚನ್ನಾಗಿ ಬಲ್ಲವರಾಗಿರುವರು. ವೇ|| ಶಿವನಯ್ಯನವರ ಬಂಗಲೆಯಲ್ಲಿ ಸ್ವಾಮಿಗಳವರಿಂದ ನಡೆದ “ಪ್ರಭುಲಿಂಗಲೀಲಾ” ಪ್ರವಚನವನ್ನು ಕೇಳಿದವರನೇಕರು ಶ್ರೀಗಳವರ ಮಧುರಸ್ವರವನ್ನೂ ಗಾನ ವೈಖರಿಯನ್ನೂ ಕುರಿತು ಶ್ಲಾಘಿಸುತ್ತಿರುವುದನ್ನು ನೋಡಿದರೆ ಸಂಗೀತ ಸಾಹಿತ್ಯದಲ್ಲೂ ಶ್ರೀಗಳವರಿಗೆ ತುಂಬ ಪರಿಶ್ರಮವಿರುವುದಾಗಿ ತೋರುತ್ತದೆ. ಇಂಥಾ ವಿದ್ವನ್ಮಣಿಗಳು ನಮ್ಮ ಸಮಾಜದಲ್ಲೇಕೆ ಕರ್ಣಾಟಕದಲ್ಲೇ ವಿರಳವೆಂದು ಧಾರಾಳವಾಗಿ ಹೇಳಬಹುದು. ಶ್ರೀ ವಿವೇಕಾನಂದರ ಉಪನ್ಯಾಸವನ್ನು ಕೇಳಿ ಚಕಿತರಾದ ಚಿಕಾಗೊ ಪುರನಿವಾಸಿಗಳಂತೆ ದಾವಣಗೆರೆ ಪುರನಿವಾಸಿಗಳು ಧನ್ಯಧನ್ಯೋದ್ಗಾರಗಳನ್ನು ತೆಗದು ಶ್ರೀಗಳವರನ್ನು ಕೊಂಡಾಡುತ್ತಿರುವರು. ಪುರನಿವಾಸಿ.

“ ವೀರಶೈವ ತರುಣರ ಸಂಘ ” ಬೆಂಗಳೂರು.

ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಸ್ವಾರಿಯು ಶ್ರೀ ಶಿವಯೋಗ ಮಂದಿರಸ್ಥಾಪನೋದ್ದೇಶದಿಂದ ಬೆಂಗಳೂರಿಗೆ ದಯಮಾಡಿಸಿದ್ದಾಗ್ಗೆ, ತಾ 27-11-21ನೇ ಭಾನುವಾರ ಸೇರಿದ್ದ ಈ ಸಂಘದ ಕಾರ್ಯನಿರ್ವಾಹಕ ಮಂಡಲಿಯ ಸಭೆಗೆ ಸ್ವಾಮಿಗಳು ದಯಮಾಡಿಸಿ, ಆದಿವಸ ಮಾಡಿದ ಕೆಲವು ಠರಾವುಗಳನ್ನು (Resolutions) ಕೇಳಿ ಸಂತೋಷಿಸಿ, ಈ ಸಂಘಕ್ಕೆ ಒಂದುನೂರು ಒಂದು ರೂಪಾಯಿಗಳನ್ನು (101-0-0) ಆಶೀರ್ವದಿಸಿರುತ್ತಾರೆ. ಇಂಥಾ ಸನ್ಯಾಸಿ ಪೋಷಕರನ್ನು ಸಂಪಾದಿಸಿರತಕ್ಕುದು ಈ ಸಂಘದ ಉನ್ನತಿಗೆ ತುಂಭಾ ಶುಭಸೂಚನೆಯೆಂದು ನಂಬಿರುತ್ತೇನೆ.

ಹಾಸನದ ಡಿಸ್ಟ್ರಿಕ್ಟ ಮಂಜರಾಬಾದು ತಾಲ್ಲೂಕು ಯೆಸಳೂರು ಗ್ರಾಮದ ವೀರಶೈವ ಪ್ರಮುಖರೂ, ವಿದ್ಯಾರ್ಥಿಗಳೂ ಮ|| ಸಾಹುಕಾರ್ ಕೂಚಳ್ಳಿ, ಮಲ್ಲಪ್ಪಶೆಟ್ಟರವರ ಅಧ್ಯಕ್ಷತೆಯಲ್ಲಿ, ಸಂಘದ ಸಹಾಯಕ್ಕಾಗಿ ಸಭೆಸೇರಿ 150 ರೂಪಾಯಿಗಳ ಚಂದಾವಾಗ್ದಾನ ಮಾಡಿರುತ್ತಾರೆ, ಈ ಸಭೆಯ ನಡವಳಿಕೆಯು ಈ ಕೆಳಗೆ ವಿವರಿಸಲ್ಪಟ್ಟಿರುತ್ತೆ.

ಮ|| ವೈ. ಧರ್ಮಪ್ಪನವರೂ ಸಂಘದ ವಿಷಯದಲ್ಲಿ ಬೆಂಗಳೂರು ವೀರಶೈವ ಮಹಾಮಂಡಲಿಯವರು ಸೇರಿ ಮ|| ಜ. ಪರಮಶಿವಯ್ಯ ಬಿ.ಎ. ಎಲ್ ಎಲ್. ಬಿ. ಯವರ ಅಧ್ಯಕ್ಷತೆಯಲ್ಲಿ ನಡೆಯಿಸಿದ ಸಂಗತಿಗಳನ್ನು ಕುರಿತು ಸ್ವಾರಸ್ಯವಾಗಿ ಭಾಷಣಮಾಡಿದರು.

ಮ|| ಹೆಚ್. ಬಸಪ್ಪನವರು ವೀರಶೈವ ವಿದ್ಯಾರ್ಥಿಗಳಿಗೆ ಈಗ ಅನುಕೂಲ ಮಾಡಿಕೊಟ್ಟಿರತಕ್ಕ ಮಹನಿಯರ ಚರಿತ್ರೆ ಹೇಳಿದ್ದಲ್ಲದೆ ಆ ಅನುಕೂಲ ಪಡಿಸಿಕೊಡಬೇಕೆಂದು ನಮ್ಮವರು ಪ್ರಯತ್ನಿಸಿರುವ ಕಾರ್ಯಕ್ಕೆ ತಾವು ಶಕ್ತ್ಯಾನುಸಾರ ಉದಾರ ಭಾವದಿಂದ ಕೆಲಸಮಾಡುವುದರ ಮೂಲಕ ದ್ರವ್ಯ ಸಹಾಯವನ್ನು ಸಂಘದವರಿಗೆ ಕಳುಹಿಸಿ ಕೊಡಬೇಕಾಗಿಯೂ ಮತ್ತು ಪರದೇಶದಲ್ಲಿ ಯಾವರೀತಿ ನಮ್ಮವರು ಮುಂದೆ ಬಂದಿರುವರೆಂಬುದಾಗಿಯೂ ಕುರಿತು ವಿವರಿಸಿದರು.

ಅಧ್ಯಕ್ಷರ ಭಾಷಣ

ವೀರಶೈವ ಬಾಂಧವರೇ,

“ನೀವುಗಳು ಈ ದಿವಸ ನನಗೆ ಅಧ್ಯಕ್ಷಪದವಿಯನ್ನು ಕೊಟ್ಟದ್ದಕ್ಕಾಗಿ ತುಂಬಾ ಕೃತಜ್ಞನಾಗಿದ್ದೇನೆ. ಸದರಿ ಪದವಿ ವಹಿಸಲು ನನಗಿಂತಲೂ ಅನುಭವಶಾಲಿಗಳೂ, ಹಿರಿಯರೂ ಇದ್ದರೂ ಅವರನ್ನು ಬಿಟ್ಟು ನನ್ನನ್ನು ಚುನಾಯಿಸಿ ಕೆಲಸ ನಡೆಯಿಸಬೇಕೆಂದು ಪ್ರೀತಿಯಿಂದ ಒಪ್ಪಿಸಿದ ಮೇರೆ ನಾನು ಕೈಕೊಳ್ಳಬೇಕಾಗಿದೆ. ನೀವುಗಳು ಪ್ರೀತಿಯಿಂದ ಭಾಷಣವನ್ನು ಲಾಲಿಸಬೇಕಾಗಿ ನನ್ನ ಕೋರಿಕೆ. ಬೆಂಗಳೂರಲ್ಲಿ ವೀರಶೈವ ಮತಬಾಂಧವರು ನಮ್ಮ ತರುಣರನ್ನು ಮುಂದಕ್ಕೆ ತರಬೇಕೆಂಬುವ ಸದುದ್ದೇಶದಿಂದ ಕಳೆದ ಎರಡು ತಿಂಗಳಲ್ಲಿ ಮಿಟಿಂಗ್ ನಡೆಯಿಸಿ ಅದಕ್ಕೆ “ವೀರಶೈವ ಯಂಗ್‌ಮೆನ್ಸ್ ಅಸೋಸಿಯೇಷನ್” ಎಂಬ ನಾಮಕರಣವನ್ನು ಮಾಡಿ ಈ ನಾಮವು ಸರ್ವರಲ್ಲಿ ಜ್ಞಾಪಕವಿರುವಂತೆ ಇಲ್ಲಿಗೂ ಮ|| ವೈ. ಧರ್ಮಪ್ಪನವರ ಮೂಲಕ ತಿಳಿಯಿಸಿದ್ದಾರೆ. ಇದರ ಸುಪ್ರಸಿದ್ಧವಾದ ಹೆಸರು ಎಲ್ಲರಿಗೂ ಆನಂದದಾಯಕವಾಗಿದೆ. ನಮ್ಮಲ್ಲಿ ಹತ್ತಾರು ಜನಗಳು ತಮ್ಮ ತನು, ಮನ, ಧನಗಳನ್ನು ವೀರಶೈವ ಸಮಾಜಕ್ಕಾಗಿಯೇ ಅರ್ಪಿಸಿರುತ್ತಾರೆ ಅಂಥವರಲ್ಲಿ ರಾ|| ಬ|| ಧ|| ಕೈಲಾಸವಾಸಿ ಗುಬ್ಬಿ ತೋಟದಪ್ಪನವರು ಮೊದಲನೆಯವರಾಗಿ ಜಗದ್ವಿಖ್ಯಾತರಾಗಿರುವರು. ನಾವುಗಳು ದೊಡ್ಡದಾಗಿ ನಡೆಸಲು ಶಕ್ತಿಸಾಲದೆ ಹೋದರೂ ಶಕ್ತ್ಯಾನುಸಾರ ವುದಾರ ಬುದ್ಧಿಯಿಂದ ದ್ರವ್ಯ ಸಹಾಯಮಾಡಿ ಸಂಘದ ಏಳಿಗೆಗೂ ಧರ್ಮಕ್ಕೂ ಭಾಗಿಗಳಾಗಬೇಕೆಂದು ಕೋರುತ್ತೇನೆ. ಹೀಗೆ ಮಾಡುವುದರಿಂದ ನಮ್ಮ ಮತಬಾಂಧವರಿಗೆ ಪ್ರೀತಿಯುಂಟಾಗಿ ನಾವುಗಳು ಮುಂದೆ ಕೋರುವ ಸಹಾಯಗಳಿಗೆ ನಿಜವಾಗಿ ಸಹಾಯಕರಾಗಿ ನಮ್ಮ ಮಕ್ಕಳ ಮೂಲಕ ನಮ್ಮನ್ನು ಕೃತಾರ್ಥರನ್ನಾಗಿ ಮಾಡುತ್ತಾರೆಂದು ನಂಬಿದ್ದೇನೆ. ಆದ್ದರಿಂದ ನಿಮ್ಮಗಳ ಉದಾರ ಬುದ್ಧಿಯಿಂದ ಈಗ ಕೊಡಲ್ಪಡುವ ಅವರು ಕಳುಹಿಸಿದ ಅಪ್ಲಿಕೇಷನ್ ಫಾರಂಗಳಿಗೆ ರುಜುಮಾಡಿ ನಮ್ಮ ಗ್ರಾಮದ ಮತ್ತು ನಮ್ಮ ಮತದ ಗೌರವಕಾಪಾಡಿಕೊಂಡು ಧರ್ಮಭಾಗಿಗಳಾಗುತ್ತೀರೆಂತ ನಂಬಿರುತ್ತೇನೆ. ಈ ದಿವಸ ಸಭೆಸೇರಿ ಸಭಾಕಾರ್ಯವು ಆದಷ್ಟು ಗೌರವವಾಗಿ ನೆರವೇರಿದುದಕ್ಕೆ ನಾನು ತಂಬಾ ಸಂತೋಷಪಡುತ್ತೇನೆ. ವಿದ್ಯಾಭ್ಯಾಸದ ವಿಷಯದಲ್ಲಿಯೂ, ಸಂಘದ ವಿಷಯದಲ್ಲಿಯೂ, ಮ||ರಾ|| ವೈ. ಧರ್ಮಪ್ಪನವರೂ, ಇಂಗ್ಲಿಷ್ ಮಾಸ್ಟರ್ ಹೆಚ್. ಬಸಪ್ಪನವರೂ ಹೇಳಿದ ಸಂಗತಿಗಳು ನಿಮಗಾಗಲೆ ವಿವರವಾಗಿ ವೇದ್ಯವಾಗಿಧೆ.”

ಶಿರಹಟ್ಟಿ ನಾಟಕ ಕಂಪೆನಿಯವರು ಈ ಸಂಘದ ಸಹಾಯಕ್ಕಾಗಿ ವಿವೇಕ ವಿಜಯವೆಂಬ ನಾಟಕವನ್ನಾಡಿ ಉತ್ಪತ್ತಿಯಲ್ಲಿ 200 ರೂಪಾಯಿಗಳನ್ನು ಸಂಘಕ್ಕೆ ಕೊಟ್ಟಿರುತ್ತಾರೆ.

ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ಗುಬ್ಬಿನಾಟಕ ಸಭಾದವರು “ಪ್ರಭಾಮಣಿ” ಎಂಬ ಅವರ ಶ್ರೇಷ್ಠನಾಟಕವನ್ನು ಅಭಿನಯಿಸಿ ಉತ್ಪತ್ತಿಯಾದ 530 ರೂಪಾಯಿಗಳನ್ನು ಪೂರ್ತಿಯಾಗಿ ಕೊಟ್ಟಿರುತ್ತಾರೆ.

ಈ ಸಂಘದವರು ಶ್ರೀಗಳವರಿಗೂ, ಈ ನಾಟಕ ಕಂಪೆನಿಗಳಿಗೂ ಮತ್ತು ಎಸಳೂರುಪೇಟೆ ವೀರಶೈವ ಮಹನಿಯರಿಗೂ ತುಂಬಾ ಕೃತಜ್ಞರಾಗಿರುತ್ತಾರೆ. ಅಲ್ಲದೆ ಸಂಸ್ಥಾನದ ಇತರ ಭಾಗಗಳಲ್ಲಿರತಕ್ಕ ಎಲ್ಲಾ ವೀರಶೈವರೂ ಎಸಳೂರು ಪೇಟೆಯವರ ಕಾರ್ಯತತ್ಪರತೆ, ಶ್ರದ್ಧೆ, ಸಮಾಜ ಸೇವಾಸಕ್ತಿ ಸದ್ಗುಣಗಳನ್ನು ಉದಾಹರಣೆಯಾಗಿ ಅನುಸರಿಸಿ ಕೈಲಾದಷ್ಟು ಸ್ವಾರ್ಥತ್ಯಾಗದಿಂದ ಧನಸಹಾಯ ಜನಸಹಾಯ ಮಾಡಿ, ತಮ್ಮ ತರುಣರ ಪುರೋಭಿವೃದ್ಧಿಯನ್ನು ಕೋರುವುದರ ಮೂಲಕ ತಮ್ಮ ಉನ್ನತಿಯನ್ನು ಹೊಂದಲು ಯತ್ನಿಸಬೇಕೆಂದು ವಿನಂತಿ.

ಈ ಸಂಘಕ್ಕೆ ಚಂದಾಕೊಟ್ಟಿರತಕ್ಕ ಮಹನೀಯರುಗಳ ಹೆಸರೂ, ಚಂದಾಮೊಬಲಗೂ ಮುಂದೆ ಪ್ರಕಟಿಸಲ್ಪಡುತ್ತವೆ.

K. Thammiah.
ಆನರರಿ, ಸೆಕ್ರಟರಿ.

೧೯೨೨ ನೆಯ ಇಸವಿ ಜನವರಿ ತಾ|| ೮ ರಿಂದ ೧೯೨೨ ನೆಯ ಜನವರಿ ತಾ|| ೧೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿನಾಮಸಂವತ್ಸರದ ಪುಷ್ಯಶುದ್ಧ ದಶಮಿಯಿಂದ ಪುಷ್ಯ ಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
8	ಭಾನು	ದಶ	48-0	ಭರ	55-4	25
9	1ಸೋಮ	ಏಕಾ	47-56	ಕೃತ್ತಿ	56-14	26
10	2ಮಂಗಳ	ದ್ವಾದ	46-33	ರೋಹಿ	56-3	27
11	3ಬುಧ	ತ್ರಯೋ	43-57	ಮೃಗ	54-58	28
12	ಗುರು	ಚತು	40-19	ಆರ	52-51	29
13	ಶುಕ್ರ	ಪೂರ್ಣ	35-51	ಪುನ	49-51	30
14	4ಶನಿ	ಪಾಡ್ಯ	30-43	ಪುಷ್ಯ	46-8	1

(1) ಶ್ರೀರಂಗದಲ್ಲಿ ಕೊಡಾರೋತ್ಸವ. (2) ಮುಕ್ಕೋಟಿದ್ವಾದಶಿ. (3) ಮೂಗೂರುಹೊಡೆ, ಅಂಧಕಾಸುರಸಂಹಾರ. (4) ಉತ್ತರಾಯಣಪುಣ್ಯಕಾಲ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಿಲಿಯಂಸದಾಪುರೇಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜನವರಿ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೩

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
52 ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು.

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ಮಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ		ರೂ. ವರೆಗೆ.
4	0-12-0	,,	50-0-0
5	0- 8-0	,,	100-0-0
6	0-12-0	,,	100-0-0
7	6- 0-0	,,	100-0-0

ಬಿಡಿಮಣಿಗಳು 1ಕ್ಕೆ ಕ್ರಯ

3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

180 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ		ರೂ ವರೆಗೆ.
ಉದ್ದಿನ	,, 15-0-0	,,	40-0-0
ಮೆಣಸು	,, 7-8-0	,,	15-0-0
ಕಡಲೆ	,, 2-8-0	,,	7-0-0
ನೆನೆದಕಡಲೆ	,, 1-8-0	,,	3-0-0
ಕಮಲಾಕ್ಷಿ	,, 1-0-0	,,	2-0-0
ದೊಡ್ಡ	,, ,, 0-8-0	,,	1-0-0
ಅದಕ್ಕಿಂತ	,, 0-6-0	,,	0-8-0
ಸ್ಫಟಿಕ108ಕ್ಕೆ	4-8-0	,,	30-0-0
ಶ್ರೀಚಕ್ರ1ಕ್ಕೆ	8-0-0	,,	100-0-0
ಲಿಂಗ 1ಕ್ಕೆ	1-0-0	,,	100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರಬರೆ ತಿಳಿಯಿರಿ.

ವಿಳಾಸ:—ಎಸ್. ಯು. ನೇಪಾಳ ರುದ್ರಾಕ್ಷ
46 ಕಂಪನಿ. ಚೌಕಂಬಾ ಕಾಶೀ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಂಚಾರುಶೀಲೆಚರಿತ್ರೆ	೦—೧೦—
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಹ್ಲಾದಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು 30

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ ಬನವಾಸಿ, ಉತ್ತರಕನಡಾ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾನಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತಿಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಆದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
3 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಶ್ರೀ ಯುವಸಾರ್ವಭೌಮರ ದೇಶಸಂಚಾರ.

ಡಿಸೆಂಬರ್ ತಾ|| ೩೦ನೆ ಮಧ್ಯಾಹ್ನ ಇವರು ಕಲ್ಕತ್ತಾವನ್ನು ಬಿಟ್ಟು ಡಫರಿನ್ ಎಂಬ ಹಡಗನ್ನೇರಿ ಬರ್ಮಾದೇಶಕ್ಕೆ ಪ್ರಯಾಣಮಾಡಿದರು. ಜನವರಿ ತಾ|| ೨ನೆ ಸೋಮವಾರ ಬೆಳಗ್ಗೆ ರಂಗೂನ್‌ಪಟ್ಟಣವನ್ನು ಸೇರಿದರು. ಬರ್ಮಾ ಲೆ|| ಗೌರ್ನರೇ ಮೊದಲಾದ ಅಧಿಕಾರಿಗಳೂ ಪುರಪ್ರಮುಖರೂ ಉಚಿತ ಮರ್ಯಾದೆಗಳಿಂದ ಸ್ವಾಗತಿಸಿದರು. ಅಲ್ಲಿಯ ಮ್ಯುನ್ಸಿಪಾಲಿಟಿಯವರು ಒಪ್ಪಿಸಿದ ವಿಜ್ಞಾಪನಪತ್ರವನ್ನು ಯುವರಾಜರು ಅಂಗೀಕರಿಸಿ, ೧೮೫೨ ನೆ ವರ್ಷದಲ್ಲಿ ಕೆಲವು ಗುಡಿಸಲುಗಳ ಊರಾಗಿದ್ದ ಆಸ್ಥಲವು ಈಗ ಮಹಾಭಾಗ್ಯಶಾಲಿಯಾದ ಪಟ್ಟಣವಾಗಿರುವುದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಬರ್ಮಾರಾಜ್ಯದ ಪ್ರಾಮುಖ್ಯವನ್ನೂ ಅಲ್ಲಿಯ ಪ್ರಜೆಗಳ ರಾಜಭಕ್ತಿಯನ್ನೂ ಶ್ಲಾಘಿಸಿ, ಅವರ ಪುರೋಭಿವೃದ್ಧಿಯನ್ನು ಕೋರಿ ಅವರ ಸ್ವಾಗತಕ್ಕಾಗಿ ವಂದನೆಯನ್ನು ತಿಳಿಯಿಸಿದರು. ಬಿಡದಿಗೆ ದಯಮಾಡಿಸುವಾಗ್ಗೆ ರಾಜಮಾರ್ಗಗಳೆಲ್ಲಾ ಅಲಂಕೃತವಾಗಿದ್ದವು. ಪ್ರಜೆಗಳು ಇಕ್ಕೆಲದಲ್ಲೂ ಗುಂಪುಗುಂಪಾಗಿ ನಿಂತು ಹರ್ಷಧ್ವನಿಮಾಡುತ್ತ ಸ್ವಾಗತಿಸಿದರು. ಅದೇ ಮಧ್ಯಾಹ್ನ ವಿಶ್ವವಿದ್ಯಾಲಯಕ್ಕೆ ದಯಮಾಡಿಸಿ, ಅಲ್ಲಿಯ ವಿದ್ಯಾರ್ಥಿಗಳ ಪಕ್ಷದಿಂದ ರಾಜಭಕ್ತಿಪೂರ್ವಕವಾಗಿ ಅರ್ಪಿಸಲ್ಪಟ್ಟ ವಿಜ್ಞಾಪನಪತ್ರವನ್ನು ಸ್ವೀಕರಿಸಿದರು. ಸಾಯಂಕಾಲದಲ್ಲಿ ಡಾಲ್‌ಹೌಸಿ ಉದ್ಯಾನವನಕ್ಕೆ ದಯಮಾಡಿಸಿ, ಹಿಂದೆ ಯುದ್ಧಕ್ಕೆ ಹೋಗಿಬಂದಿದ್ದ ಭಟರುಗಳಿಗೆ ಸಂದರ್ಶನವನ್ನಿತ್ತು ಸಂಭಾಷಿಸಿ, ಅವರ ಮರ್ಯಾದೆಯನ್ನು ಕೈಕೊಂಡರು. ರಾತ್ರಿ ಪ್ರಭುತ್ವಭವನದಲ್ಲಿ ದೊಡ್ಡ ಔತಣವಾಯಿತು. ಮರುದಿನ ತಾ|| ೩ನೆ ಮಧ್ಯಾಹ್ನವೂ ಅಲ್ಲೇ ಮತ್ತೊಂದು ಔತಣವಾಯಿತು. ಅದಕ್ಕೆ ಪುರಪ್ರಮುಖರನೇಕರು ಕರೆಯಲ್ಪಟ್ಟಿದ್ದರು. ಅದು ಮುಗಿದನಂತರ ಬಾಲಭಟರ ಬಾಲಿಕಾಭಟರ ಪ್ರದರ್ಶನವನ್ನು ಯುವರಾಜರು ಪರಾಮರಿಸಿದರು. ಆದಿನ ರಾತ್ರಿ ಅಲ್ಲಿಯ ಜಮ್ಖಾನಾಕ್ಲಬ್ಬಿನಲ್ಲಿ ಔತಣವೂ ಯೂರೋಪ್ಯನರ್ತನವೂ ಜರುಗಿದುವು. ಅಲ್ಲಿಂದ ಹಡಗನ್ನೇರಿ ಮಾಂಡಲೆಪಟ್ಟಣಕ್ಕೆ ೫ನೆ ತಾ|| ಗುರುವಾರ ಸಾಯಂಕಾಲ ಸೇರಿದರು. ಅಲ್ಲಿಯೂ ಗೌರ್ನರ್ ದಂಪತಿಗಳೇ ಮೊದಲಾದವರು ಕಾದಿದ್ದು ಉಚಿತಗೌರವದಿಂದ ಸ್ವಾಗತಿಸಿದರು. ಪಟ್ಟಣವೆಲ್ಲಾ ಅಲಂಕೃತವಾಗಿದ್ದಿತು. ಭವ್ಯ

ವಾಗಿ ರಚಿಸಲ್ಪಟ್ಟಿದ್ದ ಮಂಟಪಕ್ಕೆ ಯುವರಾಜರು ದಯಮಾಡಿಸಿದಾಗ್ಗೆ ಮುನ್ಸಿಪಾಲಿಟಿಯವರು ವಿಜ್ಞಾಪನಪತ್ರವನ್ನು ಸಮರ್ಪಿಸಿದರು. ಅದಕ್ಕೆ ಪ್ರತ್ಯುತ್ತರವನ್ನು ಯುವರಾಜರು ಕೊಡುವಾಗ್ಗೆ ಬರ್ಮಾದೇಶದ ಶಿಲ್ಪಿಕಲಾನೈಪುಣ್ಯವನ್ನೂ ಬರ್ಮೀಯರ ಸೈಜಗುಣಗಳನ್ನೂ ನೋಡಬೇಕೆನ್ನುವವರು ಈ ಪಟ್ಟಣವನ್ನು ನೋಡಿಹೋಗಬೇಕೆಂದು ಹೇಳಿ, ಅದರ ಸೊಬಗನ್ನು ಕೊಂಡಾಡಿದರು. ತಾ|| ೭ನೆ ಬೆಳಗ್ಗೆ ಅಲ್ಲಿಯ ಸೈನಿಕರ ಕವಾಯತ್ತನ್ನು ಪರಾಮರಿಸಿದರು. ಆದಿನ ರಾತ್ರಿ ಅಲ್ಲಿಯ ಶಾನ್ ಜಾತಿಯವರು ಏರ್ಪಡಿಸಿದ್ದ ಔತಣಕ್ಕೆ ದಯಮಾಡಿಸಿದರು. ಆ ಜಾತಿಯ ಅನೇಕ ನಾರೀಮಣಿಯರು ಚಿತ್ರವಿಚಿತ್ರಗಳಾದ ಅವರದೇಶದ ಉಡುಪುಗಳನ್ನೂ ಆಭರಣಗಳನ್ನೂ ತೊಟ್ಟು ಬಂದಿದ್ದರು. ಅದನ್ನೆಲ್ಲಾ ನೋಡಿ ಯುವರಾಜರು ಬಹು ಸಂತೋಷಪಟ್ಟರು. ತಾ|| ೭ನೆ ರಾತ್ರಿ ಅಲ್ಲಿಂದ ಹೊರಟು ೮ನೆ ತಾ|| ಬೆಳಗ್ಗೆ ರಂಗೂನ್ ಪಟ್ಟಣಕ್ಕೆ ಮರಳಿಬಂದರು. ಆದಿನವೂ ಮರುದಿನವೂ ಅವರಿಗಾಗಿ ಏರ್ಪಡಿಸಿದ್ದ ವಿನೋದದನೋಟಗಳನ್ನೆಲ್ಲಾ ಪರಾಮರಿಸಿದರು. ತಾ|| ೯ರಲ್ಲಿ ಅಲ್ಲಿಯ ಸರೋವರದೊಳಗೆ ದೋಣಿಗಳ ಪಂದ್ಯವು ಜರುಗಿತು. ಆರಾತ್ರಿ ಪುರವೆಲ್ಲಾ ದೀಪಾವಳಿಯಿಂದ ದೇದೀಪ್ಯಮಾನವಾಗಿ ಅಲಂಕರಿಸಲ್ಪಟ್ಟಿದ್ದಿತು. ರಾಜವೀಧಿಗಳಲ್ಲಿ ಪುರಜನರೆಲ್ಲಾ ಕಿಕ್ಕಿರಿದು ನಿಂತಿದ್ದರು. ತಮ್ಮ ಬಿಡಾರದಿಂದ ೭ ಮೈಲಿಗಳ ದೂರದಲ್ಲಿ ಸಮುದ್ರತೀರಕ್ಕೆ ಯುವರಾಜರು ಸಪರಿವಾರರಾಗಿ ಮೋಟಾರಿನಲ್ಲಿ ಕುಳಿತು ಆ ರಾತ್ರಿ ೯ ಗಂಟೆಗೆ ಹೊರಟು, ಅಲ್ಲಿ ಸಿದ್ಧವಾಗಿ ನಿಂತಿದ್ದ ಡಫ್ರಿನ್ ಹಡಗನ್ನೇರಿ ಮದ್ರಾಸನ್ನು ಕುರಿತು ಪ್ರಯಾಣಮಾಡಿಬಂದರು. ತಾ|| ೧೩ನೆ ಶುಕ್ರವಾರ ಬೆಳಗ್ಗೆ ೯|| ಗಂಟೆಗೆ ಮದ್ರಾಸು ಪಟ್ಟಣವನ್ನು ಸೇರಿದರು.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೧೫ ನೆಯ ಭಾನುವಾರ.

ಶ್ರೀಮದಾಂಗ್ಲ ಯುವಸಾರ್ವಭೌಮರು

ನಮ್ಮ ಭವಿಷ್ಯಚ್ಚಕ್ರವರ್ತಿಗಳಾದ ಆಂಗ್ಲ ಯುವರಾಜರವರು ಭರತಖಂಡಕ್ಕೆ ಪ್ರವೇಶಿಸಿ ೨ ತಿಂಗಳುಗಳಾಗುತ್ತ ಬಂದವು. ಈಗ ಅವರು ಮದ್ರಾಸಿಗೆ ದಯಮಾಡಿಸಿದ್ದಾರೆ. ಮುಂದಣ ವಾರದಲ್ಲಿ ನಮ್ಮ ರಾಜಧಾನಿಗೆ ತಾ|| ೧೯ನೆ ಗುರುವಾರ ಬೆಳಗ್ಗೆ ದಯಮಾಡಿಸುತ್ತಾರೆಂಬುದು ಗೊತ್ತಾಗಿಯೇ ಇದೆ. ನಮ್ಮ ಶ್ರೀಮನ್ಮಹಾರಾಜರವರ ಬಿನ್ನಹದ ಮೇರೆಗೆ ನಮ್ಮ ಸಂಸ್ಥಾನಕ್ಕೆ ಅವರು ದಯಮಾಡಿಸಲು ಒಪ್ಪಿ ಬರುತ್ತಾರಾದಕಾರಣ, ನಮ್ಮ ಶ್ರೀಮನ್ಮಹಾರಾಜರ ಅತಿಥಿಗಳಾಗಿ ಬರುವ ಆ ಸಂಮಾನ್ಯ ಮಹಾಪುರುಷರು ನಮ್ಮ ಸಂಸ್ಥಾನದ ಅತಿಥಿಗಳಾಗಿಯೇ ಇರುತ್ತಾರೆ. ನಮ್ಮೆಲ್ಲರ ಪ್ರತಿನಿಧಿತ್ವದಿಂದ ಶ್ರೀಮನ್ಮಹಾರಾಜರು ಅವರಿಗೆ ನಡೆಯಿಸುವ ಆತಿಥ್ಯವು ನಮ್ಮೆಲ್ಲರಿಗೂ ಪ್ರೀತಿಕರವೂ ಉತ್ಸಾಹಕರವೂ ಆಗಿರುತ್ತದೆ. ದೇಶಕ್ಕೆ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಅವರ ಆತಿಥ್ಯ ಸಮಾರಂಭಗಳು ಬಹಳ ವಿಜೃಂಭಣೆಯಿಂದ ನಡೆಯುವುದಕ್ಕೆ ತಕ್ಕ ಏರ್ಪಾಟುಗಳೆಲ್ಲಾ ಜರುಗಿರುವುದರಿಂದ ದೇಶದ ಹಲವು ಕಡೆಯ ಪ್ರಜೆಗಳು ರಾಜಧಾನಿಗೆ ದಯಮಾಡಿಸಿ ಯುವಸಾರ್ವಭೌಮರ ಸಂದರ್ಶನವನ್ನೂ ಅವರ ಆತಿಥ್ಯ ಸಮಾರಂಭದ ವಿಜೃಂಭಣೆಯನ್ನೂ ಅವಲೋಕಿಸಲು ತವಕಪಡುತ್ತಿರುವರೆಂಬುದಕ್ಕೆ ಸಂಶಯವಿಲ್ಲ.

ಆ ಮಹನೀಯರನ್ನು ಉಚಿತ ರೀತಿಯಿಂದ ಸ್ವಾಗತಿಸಲು ರಾಜಧಾನಿಯು ಸರ್ವಾಲಂಕಾರ ಪರಿಪೂರಿತವಾಗುತ್ತಿದೆ. ಇಲ್ಲಿಯ ಪ್ರಜೆಗಳ ಮನೋಭಾವಗಳು ಕೂಡ ಬ್ರಿಟಿಷ್ ಇಂಡ್ಯಾದ ಕೆಲ ಪ್ರಜೆಗಳ ಮನೋಭಾವಗಳಂತೆ ಕಲುಷಿತವಾಗಲು ಕಾರಣವೂ ಆವಶ್ಯಕತೆಯೂ ಇಲ್ಲವಾಗಿರುವಕಾರಣ, ಸರ್ವರೂ ಸ್ವಾಗತಸಮಾರಂಭದಲ್ಲಿ ಬೆರೆದು ಆನಂದಿಸಲು ಕುತೂಹಲಬದ್ಧರಾಗಿರುವರು. ಕೆಲವರು ವರ್ತಕರು ಹರತಾಳವನ್ನಾಚರಿಸಲು ಯೋಚಿಸಿರುವರೆಂದು ಕೆಲರು ಹುಟ್ಟಿಸಿರುವ ಸುದ್ದಿಯು ವರ್ತಕರ ವಿಷಯದಲ್ಲಿ ಪ್ರಭುಗಳ ಚಿತ್ತವನ್ನು ಕೆಡಿಸಬೇಕೆಂಬ ದುರ್ಯೋಚನೆಯಿಂದ ಹುಟ್ಟಿರಬೇಕೇ ಹೊರತು ನಿಜಸ್ಥಿತಿಯು ಹಾಗೆಂದಿಗೂ ಇಲ್ಲವೆಂದು ಹೇಳಬಲ್ಲೆವು. ವಿದ್ಯಾರ್ಥಿ ಸಮೂಹದಲ್ಲಿ ಮುಂದಾಲೋಚನೆಯಿಲ್ಲದ ಕೆಲವರು ಪುರುಷಾರ್ಥವಿಲ್ಲದ ಶುಷ್ಕಪ್ರತಿಷ್ಠೆಗೆ ಬಲಿಬಿದ್ದು ಸಮಾರಂಭ ಕಾಲದಲ್ಲಿ ದೂರಸ್ಥರಾಗಿರಲು ಯೋಚಿಸಿರುವರೆಂದು ವರ್ತಮಾನವಿರುವುದು. ಇದರಲ್ಲಾದರೂ ತಥ್ಯಾಂಶವಿಲ್ಲದೆ ಹೋದರೆ ಸಂತೋಷವೇ ಸರಿ. ಏಕೆಂದರೆ—ಮೈಸೂರು ಸಂಸ್ಥಾನದ ಪೂರ್ವ ಚರಿತ್ರದ ಜ್ಞಾನವು ಸಾಮಾನ್ಯ ಪ್ರಜೆಗಳಿಗಿಂತಲೂ ವಿದ್ಯಾರ್ಥಿಗಳಿಗೆ ಪರಿಪೂರ್ಣವಾಗಿರುವುದು. ಆಂಗ್ಲ ಪ್ರಭುತ್ವದ ಸಾಹಾಯ್ಯವಿಲ್ಲದಿದ್ದರೆ ನಮ್ಮ ದೇಶವೂ ನಾವೂ ಈಗ ಯಾರ ಅಧೀನರಾಗಿರುತ್ತಿದ್ದೆವೆಂಬುದನ್ನು, ಮೈಸೂರ ರಾಜವಂಶವು ಈಗಣವೈಭವದಲ್ಲಿ ಉಳಿಯಬಹುದಾಗಿದ್ದಿತೇ? ಎಂಬುದನ್ನೂ ಅವರು ಚೆನ್ನಾಗಿ ಬಲ್ಲರು. ಭರತಖಂಡದ ಉಳಿದ ಕಡೆಯ ಪ್ರಜೆಗಳ ಸ್ಥಿತಿಯು ನಮ್ಮದಲ್ಲ. ನಾವು ಆಕಲ್ಪವಾಗಿ ಆಂಗ್ಲ ಪ್ರಭುತ್ವಕ್ಕೆ ಕೃತಜ್ಞತಾಬದ್ಧರಾಗಿದ್ದುಕೊಂಡು ನಡೆಯುವುದು ನಮಗೆ ಸದ್ಧರ್ಮವಾಗಿರುವುದು. ಹೀಗಿರುವಲ್ಲಿ ಅದಕ್ಕೆ ತಪ್ಪಿ ಹರತಾಳಾದಿಗಳ ಆಚರಣೆಗೆ ಮನಗೊಟ್ಟರೆ, ನಮ್ಮ ಶ್ರೀಮನ್ಮಹಾರಾಜರ ಅತಿಥಿಗಳಾಗಿ ಬರುವ ಯುವಸಾರ್ವಭೌಮರಿಗೆ ನಾವು ಮನಃಪೂರ್ವಕವಾಗಿ ಅಪನೂಷವನ್ನೆಣಿಸಿದವರಾಗುವುದೇ ಅಲ್ಲದೆ ತನ್ಮೂಲಕ ನಮ್ಮ ಶ್ರೀಮನ್ಮಹಾರಾಜರ ಅವಕೃಪೆಗೂ ಆಗ್ರಹಕ್ಕೂ ಪಾತ್ರರಾಗಬೇಕಾಗುವುದು. ಇದನ್ನು ಪರ್ಯಾಲೋಚಿಸದಷ್ಟು ಮೂರ್ಖಮತಿಗಳು ನಮ್ಮಲ್ಲಿ ಯಾರೂ ಇರಲಾರರೆಂದು ನಂಬುತ್ತೇವೆ.

ತತ್‌ಕ್ಷಣ ಸ್ವರಾಜ್ಯಪ್ರಾಪ್ತಿಗಾಗಿ ತವಕಪಡುತ್ತಲಿರುವ ಕಾಂಗ್ರೆಸ್ ಪಕ್ಷದವರು ಆಂಗ್ಲ ಯುವರಾಜರವರನ್ನು ಬಹಿಷ್ಕರಿಸಬೇಕೆಂದು ಗದ್ದಲವನ್ನೆಬ್ಬಿಸಿರುವ ಈ ಸಮಯದಲ್ಲೇ ಮೈಸೂರಿನಲ್ಲೂ ಅಂಥ ಕಾಂಗ್ರೆಸ್ ಶಾಖಾಸಂಘವನ್ನು ಸ್ಥಾಪಿಸಿ, ಸ್ವಲ್ಪ ಗದ್ದಲವನ್ನೆಬ್ಬಿಸದಿದ್ದರೆ ಈ ದೇಶದಲ್ಲಿ ಆ ತೆರದ ವಿಷದ ಸೊಂಕು ಮೂಡಲು ಅವಕಾಶವೇ ಇರುತ್ತಿರಲಿಲ್ಲ. ಆದರೆ ಇಲ್ಲಿ ಅದರ ಸ್ಥಾಪನೆಗೆ ಕಂಕಣಕಟ್ಟಿ ನಿಂತಿದ್ದ ಮುಖಂಡರ ಸ್ಥಿತಿಯೇ ಈಗ ಪುಣ್ಯವಶಾತ್ ಮಾರ್ಪಟ್ಟು ಹೋಗಿದೆ. ತಮ್ಮ ತಪ್ಪನ್ನು ತಾವೇ ತಿದ್ದಿಕೊಳ್ಳುವ ಸ್ಥಿತಿಯು ಅವರಿಗೆ ಪ್ರಾಪ್ತವಾಗಿದೆ. "ಮೈಸೂರು ಸಂಸ್ಥಾನಕ್ಕೆ ರಾಜಕೀಯವಾದ ತೊಂದರೆಗಳೇನಾದರೂ ಸಂಭವಿಸಿದರೆ ಸಂಸ್ಥಾನದ ಕ್ಷೇಮಕ್ಕೆ ಯಾವ ಕುಂದಕವೂ ಉಂಟಾಗದಂತೆ ಮಾಡಲು ಕಾಂಗ್ರೆಸ್ ಕಮಿಟಿಯು ಈ ದೇಶದಲ್ಲಿರುವುದು ಆವಶ್ಯಕ" (ಎಂದರೆ-ಮೈಸೂರು ಪ್ರಭುತ್ವದಿಂದ ಲಭಿಸಲಾರದ ಫಲವನ್ನು ಈ ದೇಶದ ಕಾಂಗ್ರೆಸ್ ಕಮಿಟಿಯು ಸಾಧಿಸಿಕೊಡುವುದೆಂದೂ,) "ನಮ್ಮ ಮಹಾಪ್ರಭುಗಳೂ ರಾಜಕುಟುಂಬಕ್ಕೆ ಸೇರಿದ ಮಹನೀಯರೂ ಅಧಿಕಾರಿಗಳೂ ಖಾಸಗಿ ಜನಗಳೂ ತಮ್ಮ ಆಯತಿಯಲ್ಲಿ ನಾಲ್ಕರಲ್ಲಿ ಒಂದು ಭಾಗವನ್ನು ಈ ಕಾಂಗ್ರೆಸ್ಸಿನ ಸ್ವರಾಜ್ಯದ ಫಂಡಿಗೆ ಕೊಟ್ಟು ಸ್ವರಾಜ್ಯಪ್ರಾಪ್ತಿಗೆ ಸಹಾಯಮಾಡಬೇಕು" ಎಂದೂ ಮೊದಲಾಗಿ ಹೇಳುತ್ತ ಕಾಂಗ್ರೆಸ್ ಪಕ್ಷವನ್ನು ಸಮರ್ಥನಮಾಡುತ್ತಲಿದ್ದ ಸಂಪದಭ್ಯುದಯ ಪತ್ರಿಕೆಯೂ ಅದರ ಅಧ್ವರ್ಯುಗಳಾದ ಮ|| ಸಟ್ಟೂರ್‌ರವರೂ ಕೂಡ "ಮೈಸೂರಿನಲ್ಲಿ ಸ್ವರಾಜ್ಯ ಸ್ವದೇಶಿ ಏರ್ಪಾಟುಗಳೆಲ್ಲಾ ಇವೆ; ರಾಮಮೂರ್ತಿಯರ ಉಪನ್ಯಾಸಗಳಿಗೆ ತಾವು ಒಪ್ಪಲಿಲ್ಲ, ಹರತಾಳಕ್ಕೆ ತಾವು ಒಪ್ಪುವುದಿಲ್ಲ; ಪ್ರಿನ್ಸ್‌ಆಫ್‌ವೇಲ್ಸ್‌ರವರ ಪದವಿಗೆ ಅನುರೂಪವಾದ ಸತ್ಕಾರವನ್ನು ಮಾಡುವುದು ಶ್ರೀಮನ್ಮಹಾರಾಜರಿಗೆ ಹೇಗೆ ಕರ್ತವ್ಯವೋ ಅವರ ಪ್ರಜೆಗಳಿಗೂ ಹಾಗೆಯೇ ಕರ್ತವ್ಯ; ನಮ್ಮ ಭವಿಷ್ಯಚ್ಚಕ್ರವರ್ತಿಗಳಿಗೆ ಅಕೃತ್ರಿಮವಾದ ರಾಜಭಕ್ತಿ ವಿಶ್ವಾಸಗಳನ್ನು ನಾವು ತೋರಿಸಬೇಕು." ಎಂದು ಬರೆದುಕೊಂಡಿರುತ್ತಾರೆ. ಇಂಥ ಲೇಖನವನ್ನು ಬರೆದುಕೊಳ್ಳಲಿಕ್ಕೆ ಅವರಿಗೆ ಉಂಟಾದ ಕಾರಣವೇನೆಂಬುದನ್ನು ಸದ್ಯಃ ನಾವು ಚರ್ಚಿಸಬೇಕಾದುದಿಲ್ಲ. ಅವರ ಅನುಯಾಯಿಗಳೆಲ್ಲಾ ಅವರ ಈ ಅಭಿಪ್ರಾಯಗಳನ್ನಾದರೂ ಗಮನಿಸಿ ಮೈಸೂರು ದೇಶದ ಅನಾದಿ ಸಂಸಿದ್ಧವಾದ ಸೌಮ್ಯ ಸದ್ಭಕ್ತಿ ಸಚ್ಛೀಲ ಸುಪ್ರತಿಷ್ಠೆಯೆಂಬ ಅಮೃತವಾರ್ಧಿಯಲ್ಲಿ ವಿಷಬಿಂದುವನ್ನು ಹಿಂಡುವ ಕೆಲಸವನ್ನು ಮಾಡದೆ ಇರುವಂತಾಗಬೇಕೆಂಬುದೇ ರಾಜಭಕ್ತಿ ವಿಖ್ಯಾತವಾದ ಮೈಸೂರು ದೇಶದ ಸತ್ಪ್ರಜೆಗಳೆಲ್ಲರ ಕೋರಿಕೆಯಾಗಿರುವುದು.

ಅಂಥ ಪ್ರಜೆಗಳೆಲ್ಲರ ಪಕ್ಷದಿಂದಲೂ ಶ್ರೀಮದ್ಯುವಸಾರ್ವಭೌಮರನ್ನು ನಮ್ಮ ಸಂಸ್ಥಾನಕ್ಕೆ ಸುಸ್ವಾಗತಿಸುವುದಲ್ಲದೆ, ಈ ದೇಶದಲ್ಲಿ ಇರುವಷ್ಟು ಕಾಲವೂ ಅವರ ಆತಿಥ್ಯ ಸಮಾರಂಭದ ಏರ್ಪಾಟುಗಳು ಅವರಿಗೆ ಉಲ್ಲಾಸಕರವಾಗಿಯೂ ಆರೋಗ್ಯಕರವಾಗಿಯೂ ಇದ್ದು, ಮೈಸೂರು ದೇಶದ ರಾಜಭಕ್ತಿ ವಿಶ್ವಾಸಗಳ ಅಚಲಿತತ್ವವು ಅವರ ಮೂಲಕ ಸಾಮ್ರಾಜ್ಯ ಪ್ರಭುತ್ವದವರಿಗೂ ನಿವೇದಿತವಾಗಿ, ಆಂಗ್ಲಸಾಮ್ರಾಜದ ಮತ್ತು ನಮ್ಮ ಸಂಸ್ಥಾನದ ಪರಸ್ಪರ ಪ್ರೀತಿವಿಶ್ವಾಸಗಳೂ ಸ್ನೇಹವೂ ಮತ್ತಷ್ಟು ದೃಢತರವಾಗಲು ಸಹಾಯಕಾರಿಯಾಗಲೆಂದು, ಕೋರುವೆವು.

ಐರ್ಲಂಡಿಗೆ ಸ್ವರಾಜ್ಯಪ್ರಾಪ್ತಿ.

ಆಂಗ್ಲಪ್ರಭುತ್ವದ ಪ್ರತಿನಿಧಿಗಳೂ ಐರ್ಲಂಡ್‌ದೇಶದ ಪ್ರತಿನಿಧಿಗಳೂ ಸಹ ಲಂಡನ್ ಪಟ್ಟಣದಲ್ಲಿ ಕಲೆತು ಚರ್ಚಿಸಿ ಒಪ್ಪಂದಮಾಡಿಕೊಂಡಿದ್ದ ಸಂಧಿನಿಬಂಧನೆಗಳನ್ನು ಎರಡು ದೇಶಗಳ ಪಾರ್ಲಿಮೆಂಟಿನವರೂ ಒಪ್ಪಬೇಕಾಗಿದ್ದಿತಷ್ಟೆ. ಆಂಗ್ಲದೇಶದ ಪಾರ್ಲಿಮೆಂಟುಗಳಲ್ಲಿ ಅದು ಆಗಲೇ ಅನುಮೋದಿತವಾಯಿತು. ಐರ್ಲಂಡ್‌ದೇಶದ ಡಯಿಲ್ ಇರಾನ್ ಎಂಬ ಸಿನ್‌ಫಿನಿಯನ್ ಪಾರ್ಲಿಮೆಂಟಿನಲ್ಲಿ ಇದು ಹೇಗೆ ಪರ್ಯವಸಾನವಾಗುವುದೋ ಎಂದು ಬಹು ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದ್ದಿತು. ಕಡೆಗೆ ಇದು ಅಲ್ಲಿ ಅಂಗೀಕೃತವಾಯಿತೆಂಬ ಸಂತೋಷವಾರ್ತೆಯು ಕಳೆದ ವಾರದಲ್ಲಿ ಬಂದಿರುವುದು. ಆ ಸಭೆಯ ಅಧ್ಯಕ್ಷರಾದ ಡಿ. ವೇಲರಾಯವರೂ ಅವರ ಪಕ್ಷದವರೂ ಈ ಒಡಂಬಡಿಕೆಗೆ ಒಪ್ಪದೆ ಕಡೆಯವರೆಗೂ ಖಂಡಿಸಿ ಚರ್ಚಿಸುತ್ತಾಬಂದರು. ಸರ್ವಸ್ವತಂತ್ರವಾದ ಪ್ರಜಾಸ್ವಾಮ್ಯಸ್ಥಾಪನೆಗೆ ಈ ಒಡಂಬಡಿಕೆಯಿಂದ ಅಡ್ಡಿಯಾಗುವುದೆಂಬುದೇ ಅವರ ವಾದವು ಐರ್ಲಂಡ್ ದೇಶವು ಆಂಗ್ಲಸಾಮ್ರಾಜಕ್ಕೆ ಸೇರಿ ದೇಶದೊಳಗೆ ಸ್ವತಂತ್ರಪರಿಪಾಲನೆ ಮಾಡಿಕೊಂಡಿರಲಿಕ್ಕೆ ಈಗಣ ಒಡಂಬಡಿಕೆಯಿಂದ ಅವಕಾಶವಾಗಿದೆ. ಇದಕ್ಕೆ ಒಪ್ಪದಿದ್ದರೆ ಐರ್ಲಂಡು ಯುದ್ಧಕ್ಕೆ ಸನ್ನದ್ಧವಾಗಬೇಕಾಗುತ್ತಿದ್ದಿತು. ದೇಶಕ್ಕೆ ಅಂಥ ವಿಪತ್ತನ್ನು ತಂದಿಕ್ಕುವುದು ಅನುಚಿತವೆಂದೂ, ಆಂಗ್ಲಸಾಮ್ರಾಜ್ಯಕ್ಕೇ ಸೇರಿದ್ದುಕೊಂಡು ತಮ್ಮ ದೇಶದ ಪರಿಪಾಲನವನ್ನು ತಾವು ಅನುಕೂಲವಾಗಿ ನೆರವೇರಿಸಿಕೊಂಡಿರಲಿಕ್ಕೆ ಅವಕಾಶವಿರುವಾಗ ಅಂಥ ಯೋಗವನ್ನು ಕಳೆದುಕೊಳ್ಳುವುದು ಸರಿಯಲ್ಲವೆಂದೂ, ಕಳೆದ ೮೦೦ ವರ್ಷಗಳಿಂದ ಬಡಿದಾಡಿದುದಕ್ಕೆ ಇಷ್ಟಾದರೂ ಸ್ವಾತಂತ್ರ್ಯವು ಲಭಿಸಿದುದನ್ನೂ ದೇಶದ ಪರಿಸ್ಥಿತಿಯನ್ನೂ ಅವಲೋಕಿಸಿ ಸಂಧಿಸಭೆಗೆ ಪ್ರತಿನಿಧಿಗಳಾಗಿ ಹೋಗಿದ್ದ ರಾಯಭಾರಿಗಳಾದ ಗ್ರಿಫಿತ್‌ರವರೂ, ಕಾಲಿನ್ಸ್‌ರವರೂ ಒಪ್ಪಿಕೊಂಡ ನಿಬಂಧನೆಗಳನ್ನು ಯುಕ್ತನೆಂದೂ ಭಾವಿಸಿದವರೇ ಐರ್ಲಂಡಿನಲ್ಲಿ ಹೆಚ್ಚು ಜನರಾದರು. ಒಪ್ಪದವರೂ ಅನೇಕರಿದ್ದರು. ಆದರೆ ಎರಡು ಪಕ್ಷವನ್ನೂ ಐಕ್ಯಗೊಳಿಸಬೇಕೆಂದು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಕಡೆಗೆ ಸಭೆಯಲ್ಲಿ ಓಟುಗಳನ್ನು ತೆಗೆದುಕೊಂಡಾಗ್ಗೆ ಸಂಧಿನಿಬಂಧನೆಗೆ ೬೪ ಮಂದಿಗಳು ಒಪ್ಪಿದರು; ೫೭ ಮಂದಿಗಳು ಒಪ್ಪದೆಹೋದರು. ಹೀಗಾಗಿ ಅಧಿಕ ಸಂಖ್ಯೆಯು ಅಂಗೀಕಾರದ ಕಡೆಗೆ ಬಂದುದರಿಂದ ಸಭಾಂಗೀಕಾರವು ಸಂಧಿಗೆ ದೊರೆದಂತೆ ತೀರ್ಮಾನವಾಯಿತು. ಜನವರಿ ತಾ|| ೭ ರಲ್ಲಿ ಹೀಗೆ ಓಟುಗಳನ್ನು ತೆಗೆದುಕೊಳ್ಳುವ ಕೆಲಸವಾಯಿತು. ಆ ಕಡೇಗಳಿಗೆಯಲ್ಲಿ ಸಭಾಧ್ಯಕ್ಷರಾದ ಡಿ. ವೇಲರಾರವರು ಒಂದು ಸಂಕ್ಷಿಪ್ತವಾದ ಉಪನ್ಯಾಸವನ್ನು ಮನೋವೇದನೆಯನ್ನು ಸಹಿಸಿಕೊಳ್ಳಲಾರದೆ ಮಾಡಿದರು. ಆಗ್ಗೆ ಅವರ ಮುಖವು ಕೆಂಜಗದಂತಾಗಿದ್ದಿತು; ಹಸ್ತಗಳು ನಡುಗುತ್ತಿದ್ದುವು. ಕಳೆದ ನಾಲ್ಕುವರ್ಷಗಳಿಂದಲೂ ಐರ್ಲಂಡು ಸ್ವಾತಂತ್ರ್ಯಕ್ಕಾಗಿ ಮಾಡಿದ ಹೋರಾಟವನ್ನೂ ಅಸಮಸಾಹಸವನ್ನೂ ತ್ಯಾಗವನ್ನೂ ವರ್ಣಿಸಿ, ಕಡೆಗೂ ಸಂಪೂರ್ಣಾಭೀಷ್ಟವನ್ನು ನೆರವೇರಿಸಿಕೊಳ್ಳದೆ ಪಾರ್ಲಿಮೆಂಟು ಸೋತುಹೋಗುವುದನ್ನು ಕುರಿತು ಬಹಳವಾಗಿ ಪರಿತಾಪವನ್ನು ಸೂಚಿಸುವಾಗ್ಗೆ ಅವರ ಕಂಠವು ಗದ್ಗದಿತವಾಯಿತು; ಧ್ವನಿಯು ಕುಗ್ಗಿಹೋಯಿತು; ಸಭೆಯಲ್ಲಿದ್ದ ಸ್ತ್ರೀ ಪ್ರತಿನಿಧಿಗಳ ಕಣ್ಣಿನಲ್ಲಿ ನೀರು ಧಾರೆಯಾಗಿ ಹರಿದಿತು. ಆದರಮೇಲೆ ಗ್ರಿಫಿತ್‌ರವರು ಉಪನ್ಯಾಸಮಾಡಿ ದೇಶದ ಪ್ರಜೆಗಳಲ್ಲಿ ೧೦೦ಕ್ಕೆ ೯೮ ಮಂದಿಗಳು ಸಂಧಿಯನ್ನೇ ಅಪೇಕ್ಷಿಸುತ್ತಿರುವರೆಂದೂ, ಅದನ್ನು ಧಿಕ್ಕರಿಸಿ ದೇಶವನ್ನು ರಕ್ತ ಪ್ರವಾಹದಲ್ಲಿ ಮುಳುಗಿಸುವುದು ಅನುಚಿತವೆಂದೂ ತಿಳಿಯಿಸಿದರು. ಆದರಮೇಲೆ ಓಟುಗಳನ್ನು ತೆಗೆದುಕೊಂಡಾಗ ಮೇಲೆ ಹೇಳಿದಂತೆ ಪರಿಣಾಮವಾಯಿತು. ಆಗ ಸಭಾಧ್ಯಕ್ಷರು ಎದ್ದುನಿಂತು ಸಂಧಿಯು ಸಭೆಯಿಂದ ಅಂಗೀಕೃತವಾಯಿತೆಂದು ಗೆಯಿಲಿಕ್ ಭಾಷೆಯಲ್ಲೂ ಆಂಗ್ಲಭಾಷೆಯಲ್ಲೂ ಹೇಳಿದ ಕೂಡಲೇ ಹೊರಗೆ ನಿಂತಿದ್ದ ಪ್ರಜಾಸ್ತೋಮವೆಲ್ಲಾ ಸಂತೋಷಧ್ವನಿಯನ್ನು ಮಾಡಿತು. ಸ್ವಾತಂತ್ರ್ಯದ ಹೋರಾಟದಲ್ಲಿ ಮುಂದಾಗಿದ್ದು ಕಾರಾಗೃಹವಾಸವನ್ನು ಉಪವಾಸದಿಂದ ಆಚರಿಸಿ ಅಲ್ಲೇ ಮೃತಪಟ್ಟ ಮ್ಯಾಕ್ಸನಿಯವರ ಪತ್ನಿಯು ಕೊನೆಯಲ್ಲಿ ಒಂದು ಸಣ್ಣ ಉಪನ್ಯಾಸವನ್ನು ಮಾಡಿ, ಪಾರ್ಲಿಮೆಂಟಿನವರು ದೇಶಕ್ಕೆ ದ್ರೋಹವನ್ನು ಮಾಡಿದರೆಂದು ಜರೆದುಬಿಟ್ಟಳು. ತನ್ನ ಪಕ್ಷವು ಜಯಿಸದೆ ಹೋದಕಾರಣ ಡಿ. ವೇಲಾರವರು ಬೇಸರಪಟ್ಟು ಸಭಾಧ್ಯಕ್ಷಪದವಿಗೆ ರಾಜೀನಾಮೆ ಕೊಟ್ಟುದಲ್ಲದೆ "ನನಗೆ ಈ ರಾಜಕೀಯ ವಿಚಾರದಲ್ಲಿ ಬೇಸರು ಹುಟ್ಟಿಹೋಗಿದೆ, ಏನು ಸಂಭವಿಸಿದರೂ ಸರಿ. ನಾನು ವಿಶ್ರಾಂತಿಯನ್ನು ಪಡೆದುಕೊಳ್ಳಬೇಕೆಂದೇ ನಿಶ್ಚಯಿಸಿದ್ದೇನೆ" ಎಂದು ಹೇಳಿಬಿಟ್ಟರು.

ಇನ್ನುಮುಂದೆ ಉಭಯಪಕ್ಷದವರೂ ಸೇರಿಯೋ ಅಥವಾ ಅಂಗೀಕಾರಪಕ್ಷದವರೇ ಸೇರಿಯೋ ತತ್ಕಾಲಿಕ ಪ್ರಭುತ್ವವನ್ನು ಐರ್ಲಂಡಿನಲ್ಲಿ ಏರ್ಪಡಿಸಿಕೊಳ್ಳುವರು. ಅದಕ್ಕೆ ಆಂಗ್ಲಪ್ರಭುತ್ವದವರು ಪರಿಪಾಲನಾಧಿಕಾರವನ್ನೊಪ್ಪಿಸುವರು. ಐರ್ಲಂಡಿನಲ್ಲಿ ಆಂಗ್ಲಪ್ರಭುತ್ವದವರು ಇದುವರೆಗೂ ಇಟ್ಟಿದ್ದ ಸೈನ್ಯವನ್ನು ಕೂಡಲೇ ಹಿಂದಕ್ಕೆ ಕರೆಯಿಸಿಕೊಂಡುಬಿಡುವರು.

ಎಷ್ಟೋ ಶತಮಾನಗಳಿಂದ ಮುಗಿಯದೆ ಹೋಗಿದ್ದ ಈ ಸಮಸ್ಯೆಯು ಲಾಯಿಡ್‌ಜಾರ್ಜರ ಕಾಲದಲ್ಲಿ ಬಗೆಹರಿದುಹೋದುದನ್ನು ನೋಡಿದರೆ ಅವರ ಲೋಕೋತ್ತರವಾದ ಮಂತ್ರಿತ್ವಸಾಮರ್ಥ್ಯವು ಎಷ್ಟುಮಟ್ಟಿನದೆಂಬುದು ವ್ಯಕ್ತವಾಗುವುದು. ಯುದ್ಧಕಾಲದ ಸಾಹಸಕ್ಕಿಂತಲೂ ಇದನ್ನು ಕೊನೆಮುಟ್ಟಿಸುವ ಸಾಹಸವು ಆಂಗ್ಲಪ್ರಭುತ್ವಕ್ಕೆ ಹೆಚ್ಚಿನದಾಗಿದ್ದಿತು. ಇದನ್ನು ಕೊನೆಮುಟ್ಟಿಸುವವರೆಗೆ ಲಾಯಿಡ್ ಜಾರ್ಜ್‌ರವರು ಅಮೇರಿಕಾದಲ್ಲಿ ನಡೆದ ಮುಖ್ಯವಾದ ಆಯುಧನಿಯಮನಸಭೆಗೂ ಕೂಡ ಹೋಗಲಿಲ್ಲ. ಕೊನೆಗಾದ ಪರಿಣಾಮವು ಆಂಗ್ಲಸಾಮ್ರಾಜ್ಯಕ್ಕೂ ಐರ್ಲಂಡಿಗೂ ತೃಪ್ತಿಕರವಾದುದಕ್ಕಾಗಿ ಪ್ರಪಂಚವೇ ಅದನ್ನು ಅಭಿನಂದಿಸುತ್ತಿದೆ. ಇದರಂತೆ ತುರ್ಕಿಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸಿದ ಕೀರ್ತಿಯನ್ನು ಲಾಯಿಡ್ ಜಾರ್ಜರು ಪಡೆದುಕೊಳ್ಳಲಿ. ಇಂಗ್ಲಂಡಿಗೂ ಐರ್ಲಂಡಿಗೂ ಸಮನಿಸಿದ ಈ ಸಖ್ಯವು ಶಾಶ್ವತವಾಗಿದ್ದುಕೊಂಡು ಪರಸ್ಪರ ಸಹಾಯದಿಂದ ಉಭಯದೇಶಗಳೂ ಅಭಿವೃದ್ಧಿಗೊಳ್ಳಲೆಂದು ಕೋರುವೆವು.

ಐರ್ಲಂಡ್ ದೇಶವು ಸಾಮ್ರಾಜ್ಯಾಧೀನವಾದ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕಾದರೂ ಎಷ್ಟು ಕಾಲವೂ ಎಷ್ಟು ಸಾಮರ್ಥ್ಯವೂ, ತ್ಯಾಗವೂ ಐಕಮತ್ಯ ಮೊದಲಾದ ಅರ್ಹತೆಗಳೂ ಅವಶ್ಯಕವಾದುವೆಂಬುದನ್ನು ಭರತಖಂಡದ ಸತ್ವರಸ್ವರಾಜ್ಯವಾದಿಗಳು ಯೋಚಿಸುವುದು ಮೇಲು.

PACKED.

The last few days are packed with events connected with the visit of His Royal Highness the Prince of Wales, the meetings of the National Congress and other Conferences at Ahmadabad, the National Liberal Federation at Allahabad and the Non-Brahmana Conferences in Southern India. These light throwing events were clouded with events of arrests for offences against the state and

against Law and Order. Ordinary minds were puzzled with events. There was excitement everywhere. It was impossible to escape from the influences of those exciting events whether old or young, an extremist or a moderate man or woman. Such was the atmosphere under which the Indian mind lived during the last few days. Many a weak mind did succumb to the distructive influences. Many an excitable temper lost its balance. Wild and vague were the thoughts of many. The same was the temperament with journals of different shades of creed. We have just emerged from such days packed with events and have settled down to cool thinking. The negative co-operation—an unnatural state of mind—has passed and the positive co-operation which alone can produce what is good for the people has followed. The packed events have begotten a sober mind. That is for British India.

We are in the Indian State which is the model Indian State for sobriety—and in loyalty to the British Throne. The whole country is looking forward to welcome the heir apparent to that Throne. That week in Mysore will be packed with rejoicings and festivities; will be packed with Loyal Demonstrations.

HERE ARE TWO PICTURES.

The Hindu has presented two pictures in its issues of the 3rd and 4th of this month, which cannot fail to attract attention and more so of the people of Mysore to whom the name of Mr. C. Ramalinga Reddy is of grateful memory. This is one picture and the other is that of Mr. S. Satya Murti who in inviting Mr. Ramalinga Reddy to withdraw from standing as a candidate to a seat in the Madras Legislative Council availed himself of the opportunity to burst out into expressions which could not but expose the real picture of Mr. Satyamurti—a picture of "Mighty Intellect" in the form of "volcanic eruption." An uncontrollable temperament of inconsistencies, incongruities and egotism, is the main characteristic of this picture. The noble picture is contained in the reply of the people's man—a cool and collected, gentle and beauteous picture. Logic and love of country are the points of this solemn picture as contrasted with the other boisterous picture.

Mr. C. R. Reddy has conclusively pointed out the errors of Mr. S. Satyamurti's conclusions that keeping away from the Councils is not the only means of fighting against repression and that a protest is no argument. A constitution must be met by constitutional methods when there are disagreements of whatever magnitude. The earnestness of Mr. Satyamurti's appeal to withdraw is lost when he proposed to oppose Mr. Reddy's candidature by a rival candidate of first rate reputation—and is Mr. A. Rameswamier who has since appeared as a rival candidate of such reputation as to be called, a "First Rate Man"? His name is new to the reading public. He has not made much appearance either in politics or in education. He seems to start with something on "Caste," which he does not want for his purposes. All the same he belongs to the highest caste under the sun—with "Mighty Intellect," to back him up.

Coming back to the two pictures, Mr. Satyamurti holds in both hands deadly weapons to destroy an administration which has done great service to India and Mr. Ramalinga Reddy's is one of reconstruction of a new fabric out of the same materials.

As Mr. Reddy has rightly pointed out, "Repression is not the only issue before the country." There are many more of greater importance and for the settlement of those greater issues, the battles must be fought within the vantage ground of the Councils which exist for constitutional wars.

As regards methods, "Protest" is one of the "rudest" methods, and amongst those of the elegant methods which are constitutional may be mentioned the most elegant method of Mr. Reddy viz. "Reason."

Though Mr. C. R. Reddy is only a recent recruit into the political body, his parts of undoubted merits will soon take him to the foremost front and as a combatant in logical arguments, few veterans will be able to stand against him.

Many like Mr. T. V. Seshagirier will, it is hoped, support his candidature and his success means a great advance in the country's cause. We wish him success.

ವೀರಶೈವ ಸಾಮಾನ್ಯ ಗೃಹಸ್ಥರೀರ್ವರ ಅಭಿನಂದನ.

ನಮ್ಮ ಸಮಾಜದ ಇಬ್ಬರು ಸಾಮಾನ್ಯಗೃಹಸ್ಥರನ್ನು ಅಭಿನಂದಿಸುವ ಯೋಗವು ನಮಗೆ ಲಭಿಸಿದುದಕ್ಕಾಗಿ ಸಂತೋಷಿಸುತ್ತೇವೆ. ಅವರಲ್ಲಿ ಒಬ್ಬರು ಜ್ಞಾನವಯೋವೃದ್ಧರಾದ ದಿವಾನ್ ಬಹದ್ದೂರ್ ಶಾಂತವೀರಪ್ಪ ವೀರಸಂಗಪ್ಪ ಮೆಣಸಿನಕಾಯಿಯವರು. ಇವರು ಧಾರವಾಡದ ವೀರಶೈವ ಪ್ರಮುಖರಲ್ಲೊಬ್ಬರಾಗಿರುವರಲ್ಲದೆ ಸಣ್ಣ ಕೆಲಸದಿಂದ ಹುಜೂರು ಡಿ|| ಕಲೆಕ್ಟರ್‌ಗಿರಿಯವರೆಗೆ ಸರ್ಕಾರದ ಉದ್ಯೋಗವನ್ನು ಪ್ರಭುತ್ವದವರೂ ಪ್ರಜೆಗಳೂ ಸಹ ಮೆಚ್ಚುವಂತೆ ನಿಸ್ಪೃಹತೆಯಿಂದಲೂ ಸತ್ಯಧರ್ಮಗಳಿಗೂ ಚ್ಯುತಿಬರದಂತೆಯೂ ನೆರವೇರಿಸಿ, ವಿಶ್ರಾಂತಿಪಡೆದುಕೊಂಡ ಮೇಲೂ ಧಾರವಾಡ ಮ್ಯುನ್ಸಿಪಾಲಿಟಿಯಲ್ಲಿ ೩ ವರ್ಷಗಳ ಕಾಲ ಆರಿಸಲ್ಪಟ್ಟ ಅಧ್ಯಕ್ಷರಾಗಿ ಸಾಮರ್ಥ್ಯದಿಂದ ಕೆಲಸಮಾಡಿದರು. ಅಲ್ಲದೆ ಧಾರವಾಡದ ವಿದ್ಯಾಭಿವೃದ್ಧಿ ಫಂಡಿನ ಅಧ್ಯಕ್ಷತೆ ಅಲ್ಲಿನ ಲಿಂಗಾಯತ ಹಾಲನ್ನು ಕಟ್ಟಿಸುವ ಆತುರತೆ ಮೊದಲಾದ ಕಾರ್ಯಗಳಲ್ಲಿ ಸ್ವಸಮಾಜದ ಸೇವೆಯಲ್ಲಿ ಬದ್ಧಾದರರಾಗಿ ಸಮಾಜದವರೆಲ್ಲರ ಮನ್ನಣೆಗೂ ಪಾತ್ರರಾಗಿರುವುದಕ್ಕೆ ಗುರುತಾಗಿ ಬೀರೂರಿನಲ್ಲಿ ನೆರೆದ ವೀರಶೈವ ಮಹಾಸಭೆಯ ಅಧ್ಯಕ್ಷತೆಯು ಇವರಿಗೆ ವಹಿಸಲ್ಪಟ್ಟಿದ್ದಿತು. ೭೦ ವರ್ಷದ ವಯೋವೃದ್ಧರಾಗಿದ್ದರೂ ಸಾರ್ವಜನಿಕ ಕಾರ್ಯಗಳಲ್ಲಿ ಈಗ್ಗೂ ತರುಣರಂತೆ ಉತ್ಸಾಹದಿಂದ ನೆರವಾಗುತ್ತಿರುವರು. ನಮ್ಮ ಔತ್ತರೇಯ ಸಮಾಜಬಾಂಧವರಲ್ಲಿ ಈ ಪ್ರಶಸ್ತಿಯನ್ನು ಪಡೆದವರಲ್ಲಿ ಇವರೇ ಮೊದಲನೆಯವರು. ವರ್ಧಿಷ್ಣುಗಳಾದ ನಮ್ಮ ಸಮಾಜದ ತರುಣರಿಗೆ ಇವರಂಥವರ ನಡೆನುಡಿಗಳೂ ಕಾರ್ಯದಕ್ಷತೆಯೂ ಆದರ್ಶಪ್ರಾಯಗಳಾಗಿರುತ್ತವೆ ಯಾದಕಾರಣ ಚಿರಕಾಲ ಇವರು ಸಮಾಜದಲ್ಲಿ ಭೂಷಣಪ್ರಾಯರಾಗಿದ್ದುಕೊಂಡು ದೇಶಸೇವೆಯನ್ನು ಮಾಡುವಂತೆ ಭಗವಂತನು ಅನುಗ್ರಹಿಸಲೆಂದು ಕೋರುವೆವು.

೨ ನೆಯವರು ಸೀಮೆಗೆ ಐ. ಸಿ. ಎಸ್. ಪರೀಕ್ಷೆಗೆ ಹೋಗಿದ್ದು ಈಗ ತಾನೇ ಹಿಂದಿರುಗಿ ಭರತಖಂಡಕ್ಕೆ ಬಂದ ಮ|| ಗುರುಸಿದ್ದಪ್ಪ ಹೂವಪ್ಪ ಗುಗ್ಗಳಿ ಬಿ. ಎ., ಐ. ಸಿ. ಎಸ್ ರವರ ಅಭಿನಂದನವಾಗಿರುವುದು. ಇವರು ಬಾಲ್ಯದಿಂದಲೂ ಕುಶಾಗ್ರಬುದ್ಧಿಗಳಾಗಿದ್ದುಕೊಂಡು ಬೊಂಬಾಯಿ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದುದರಿಂದ ವೀರಶೈವ ಸಮಾಜದವರು ಇವರನ್ನು ಇಂಡಿಯನ್ ಸರ್ವೀಸ್ ಪರೀಕ್ಷೆಗೆ ಓದಿಸಲಿಕ್ಕಾಗಿ ಇಂಗ್ಲಂಡಿಗೆ ಕಳುಹಿಸಿಕೊಟ್ಟು ೨ ವರ್ಷಗಳಾದುವು. ಇವರು ಅಲ್ಲಿಗೆ ಹೋಗಿ ಸೇರಿದ ೮ ತಿಂಗಳುಗಳೊಳಗೇ ಇಂಡ್ಯಾ ಸರ್ಕಾರದವರು ಇವರನ್ನು ಪರೀಕ್ಷೆ ಕೊಡುವ ಆವಶ್ಯಕತೆಯನ್ನೇ ಕೋರದೆ ಇಂಡ್ಯಾ ಸಿವಿಲ್ ಸರ್ವೀಸಿಗೆ ಸೇರಿಸಿಕೊಂಡರು. ಆದರೂ ಇವರು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸದೆ ಕೇಂಬ್ರಿಡ್ಜ್ ಕಲಾಶಾಲೆಯಲ್ಲಿ ಸೇರಿ ಮೊದಲನೆ ವರ್ಷದ ರ್ಯಾಂಗಲರ್ ಪರೀಕ್ಷೆಯಲ್ಲಿ ಮೊದಲನೆ ನಂಬರನ್ನು ಪಡೆದು ಅತ್ಯುತ್ತಮವಾಗಿ ತೇರ್ಗಡೆ ಹೊಂದಿದುದಲ್ಲದೆ ಬಹುಮಾನದ ಯೋಗ್ಯತಾ ವಿದ್ಯಾರ್ಥಿವೇತನವನ್ನೂ ಪಡೆದರು. ಇವರ ಅಸಾಧಾರಣ ಶಕ್ತಿಯನ್ನು ಆ ಕಲಾಶಾಲೆಯ ಪ್ರಿನ್ಸಿಪಾಲರು ಕೂಡ ಮೆಚ್ಚಿ ಅಭಿನಂದಿಸಿ ಯೋಗ್ಯತಾಪತ್ರವನ್ನು ಕೊಟ್ಟಿರುವರು. ೨ನೆ ವರ್ಷದ ಪರೀಕ್ಷೆಗೆ ಕುಳಿತಿದ್ದರೆ ಸ್ಟಾರ್ ರ್ಯಾಂಗಲರ್ ಪದವಿಯನ್ನು ಕೂಡ ಉತ್ತಮತರವಾಗಿ ಪಡೆಯದೆ ಬಿಡುತ್ತಿರಲಿಲ್ಲ. ಆದರೆ ಪ್ರಭುತ್ವದವರ ನಿರ್ಬಂಧದಿಂದ ಅಷ್ಟಕ್ಕವಕಾಶವಿಲ್ಲದೆ ಇವರು ಭರತಖಂಡಕ್ಕೆ ಪ್ರಯಾಣಮಾಡಿಬಂದರು. ಮುಂದೆ ತಮ್ಮ ಯೋಗ್ಯತೆಗೆ ಅನುಗುಣವಾದ ಮಹೋದ್ಯೋಗವು ಭರತಖಂಡದಲ್ಲಿ ಇವರಿಗೆ ಸಿದ್ಧವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಇಂಥವರ ಪುರೋವೃದ್ಧಿಯನ್ನೇ ಸಮಾಜವು ಹಾರೈಸುತ್ತಿರುವುದು. ಏಕೆಂದರೆ ಇಂಥವರ ಮೂಲಕ ಅದರ ಅಭ್ಯುದಯವಾಗಬೇಕಾಗಿರುವುದು. ನಮ್ಮ ಮೈಸೂರಿನಿಂದಲೂ ಮಂಜುನಾಥನೆಂಬ ವೀರಶೈವ ಸಿಹ್ಮವೊಂದು ಇದೇ ತೆರದ ವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಹೋಗಿರುವುದು. ಅದೂ ಜಯಶಾಲಿಯಾಗಿ ಸ್ವದೇಶಕ್ಕೆ ಬರಬೇಕೆಂದು ಕೋರುವೆವು. ಇಂಥ ಸಮಾಜರತ್ನಗಳು ಹಿಂದುಳಿದಿರುವ ಸಮಾಜದಲ್ಲಿ ಒಂದೊಂದಾಗಿ ಬೆಳಕಿಗೆ ಬಂದು ಸಮಾಜವನ್ನು ಉದ್ಧರಿಸುವಂತಾಗಲೆಂಬ ಭಾಗ್ಯಕ್ಕಿಂತಲೂ ಮಿಗಿಲಾದ ಭಾಗ್ಯವನ್ನು ನಾವು ಕೋರುವುದೇನಿದೆ? ಜಗದೀಶ್ವರನು ಮ|| ಗುಗ್ಗಳಿಯವರಿಗೆ ದೀರ್ಘಾಯುರಾರೋಗ್ಯಗಳನ್ನೀಯಲಿ.

ಬರುವ ತಾ|| ೧೯ರಲ್ಲಿ ಶ್ರೀಮದ್ಯುವರಾಜ ಸಾರ್ವಭೌಮರವರು ರಾಜಧಾನಿಗೆ ಚಿತ್ತೈಸಿದಾಗ್ಗೆ ರೈಲ್ವೆಸ್ಟೇಷನ್ನಿನಿಂದ ಬಿಡಾರವಾದ ಗೌರ್ನಮೆಂಟ್ ಹೌಸ್‌ವರೆಗೂ ನಡೆಯಬೇಕಾಗಿರುವ ಉತ್ಸವದ ಏರ್ಪಾಟೆಲ್ಲವೂ ಕಳೆದ ತಾ|| ೧೩ರ ಬೆಳಗ್ಗೆ ನಡಿಸಲ್ಪಟ್ಟು ಹುಜೂರುಸೆಕ್ರೆಟರಿಯವರು ಮ್ಯು|| ಪ್ರೆಸಿಡೆಂಟರು ಮತ್ತು ಡಿ|| ಕಮಿಷನರುಗಳೊಡನೆ ಪರಾಮರ್ಶಿಸಿದರು. ಇದೇ ರೀತಿ ತಾ|| ೧೮ರ ಪ್ರಾತಃಕಾಲ ಏರ್ಪಡಿಸಲ್ಪಟ್ಟು ಶ್ರೀಮನ್ಮಹಾರಾಜರವರಿಂದ ಪರಾಮರ್ಶಿಸಲ್ಪಡುವುದಾಗಿ ತಿಳಿಯಬರುತ್ತದೆ.

ಯಾವದ್ಭಾರತ ವೀರಶೈವ ಮಹಾಸಭಾಸ್ಥಾಯಿನಿಧಿಯ ಸಂಘ ಮತ್ತು ಮಹಾಸಭೆ.

ಮತದ ಸರ್ವಮುಖವಾದ ಏಳ್ಗೆಗೂ ಸಾಧನವಾಗಿರುವ ಮಹಾಸಭೆಯನ್ನು ಶಾಶ್ವತವಾಗಿ ನಡೆಯಿಸಿಕೊಂಡು ಹೋಗಲು ಏನುಮಾಡಬೇಕೆಂಬ ವಿಷಯವು ಬಹುಕಾಲದಿಂದ ಚರ್ಚೆಯಲ್ಲಿದ್ದು ಕಡೆಗೆ ದಾವಣಗೆರೆಯಲ್ಲಿ ವೀರಶೈವ ಮಹಾಸಭೆಯು ನೆರೆದಿದ್ದಾಗ್ಗೆ ದಯಮಾಡಿಸಿದ್ದ ಜಗದ್ಗುರು ಶ್ರೀಮನ್ನಿರಂಜನ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಕೃಪಾಶೀರ್ವಾದ ಬಲದಿಂದ ಅದಕ್ಕಾಗಿ ಒಂದು ಧನನಿಧಿಯ ಸಹಾಯವನ್ನೇರ್ಪಡಿಸುವುದೇ ಉಚಿತವೆಂದೂ, ಅದಕ್ಕೆ ೧೦೦೦ ರೂ.ಗಳಿಗೆ ಕಡಿಮೆಯಿಲ್ಲದೆ ಸಹಾಯಮಾಡುವ ದಾತೃಗಳಿಂದ ಮಾತ್ರವೇ ಧನಶೇಖರವನ್ನು ಮಾಡತಕ್ಕುದೆಂದೂ ಗೊತ್ತಾದ ಪ್ರಕಾರ ಆ ಸಭೆಯಲ್ಲೇ ೬೨ ಸಹಸ್ರ ರೂ.ಗಳ ವಾಗ್ದಾನವಾಗಿ ೩೩ ಸಹಸ್ರ ರೂ.ಗಳು ನಗದಾಗಿ ಕೂಡಿ ಹೋದ ಸಂಗತಿಯು ನಮ್ಮ ಪತ್ರಿಕಾವಾಚಕರಿಗೆ ಗೊತ್ತೇ ಇದೆ. ಈ ಚಿರಸ್ಥಾಯಿ ಫಂಡಿನ ವ್ಯವಸ್ಥೆಗೋಸ್ಕರ ಒಂದು ಸಂಘವು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ ಇರಬೇಕೆಂದೂ ಆ ಸಭೆಯಲ್ಲೇ ಏರ್ಪಡಿಸಲ್ಪಟ್ಟುದಲ್ಲದೆ, ಆ ಸಂಘದಲ್ಲಿ ಈ ಫಂಡಿಗೆ ಹಣವನ್ನು ಕೊಟ್ಟವರೇ ಸಭಿಕರಾಗಿರಬೇಕೆಂದೂ ಈ ಸಂಘದವರು ಮಹಾಸಭೆಯ ಸ್ಥಿರತೆಗಾಗಿ ತಕ್ಕ ನಿಬಂಧನೆಗಳನ್ನೇರ್ಪಡಿಸಿ ಮಹಾಸಭೆಯ ಅವಗಾಹನೆಗೆ ತರತಕ್ಕುದೆಂದೂ, ಈ ಫಂಡಿಗೆ ವಾಗ್ದಾನಮಾಡಿರುವವರಿಂದಲೂ ಇತರರಿಂದಲೂ ಧನವನ್ನು ಶೇಖರಿಸಲಿಕ್ಕೂ ಆವಶ್ಯಕವಾದಾಗ ಮೀಟಿಂಗುಗಳನ್ನು ಜರುಗಿಸಲಿಕ್ಕೂ ಸಹ ಅಧಿಕಾರವು ಕೊಡಲ್ಪಟ್ಟಿದ್ದಿತು.

ಇಷ್ಟು ಏರ್ಪಾಟಾಗಿ ಇಲ್ಲಿಗೆ ೪ ವರ್ಷಗಳಾದುವು. ಈ ಮಧ್ಯೆ ಸಂಘದವರು ಕೆಲವು ಮೀಟಿಂಗುಗಳನ್ನು ಮಾಡಿರಬಹುದು. ಕಡೆಯಸಲ ಕಳೆದ ನವೆಂಬರ್ ತಾ|| ೨೦ ರಲ್ಲಿ ಬೆಂಗಳೂರಿನೊಳಗೆ ನಡೆಯಿಸಿದ ಮೀಟಿಂಗಿನ ಪ್ರೊಸಿಡಿಂಗ್ಸಿನ ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ. ಅದನ್ನು ಈ ಪತ್ರದ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಅದನ್ನು ನೋಡುವಲ್ಲಿ ದಾವಣಗೆರೆಯ ಸಭೆಯಾದೀಚೆಗೆ ೨ ಸಹಸ್ರ ರೂ.ಗಳು ಮಾತ್ರ ವಾಗ್ದಾನಮಾಡಿದವರಿಂದ ಕೊಡಲ್ಪಟ್ಟಿರುವಂತೆ ಗೊತ್ತಾಗುತ್ತದೆ. ಮೊದಲು ಮೈಸೂರು ಬ್ಯಾಂಕಿನಲ್ಲಿಟ್ಟಿದ್ದ ಹಣವನ್ನು ತೆಗೆದು ಈಚೆಗೆ ಸರ್ಕಾರಿ ಸಾಲಕ್ಕೆ ಕೊಟ್ಟು ಹೆಚ್ಚು ಬಡ್ಡಿ ಬರುವಂತೆ ಸಂಘದವರು ಮಾಡಿದುದು ವಿಹಿತವಾಗಿರುತ್ತದೆ. ಈಗ್ಗೆ ಮೂಲಧನವೂ ಇದುವರೆಗೆ ಕೂಡಿರುವ ಬಡ್ಡಿಯೂ ಸೇರಿ ೪೨ ಸಹಸ್ರ ರೂ.ಗಳು ಸಂಘದ ವಶದಲ್ಲಿದೆಯೆಂದು ಗೊತ್ತಾಗುವುದು. ಈಗ್ಗೆ ಫಂಡು ವರ್ಷ ೧ಕ್ಕೆ ೨೬೪೧ ರೂ.ಗಳನ್ನು ಈಯುವುದಕ್ಕೆ ಸಿದ್ಧವಾಗಿರುತ್ತದೆ. ಫಂಡಿನ ನಿರ್ಮಾಣದ ಉದ್ದೇಶದ ಪ್ರಕಾರ ಯಾವ ಕಡೆಯಲ್ಲಿ ಮಹಾಸಭೆಯನ್ನು ನೆರವೇರಿಸುವವರಿಗಾದರೂ ಸಾಹಾಯ್ಯಪೇಕ್ಷೆಯಿರುವುದಾದರೆ ಈ ಬಡ್ಡಿಯನ್ನು ಕೊಡಲು ಸಂಘದವರು ನಿರ್ಧರಿಸಿ ಪ್ರಕಟಿಸಿದುದು ಯುಕ್ತವಾಗಿರುತ್ತದೆ. ಇವಿಷ್ಟು ಕಾರ್ಯವನ್ನು ಮಾಡಲು ಸಂಘದವರು ಇಷ್ಟು ಸಾವಕಾಶಮಾಡುವುದಕ್ಕಿಂತಲೂ ಪ್ರಥಮ ವರ್ಷದಲ್ಲೇ ಮುಗಿಯಿಸಿದ್ದರೆ ಚೆನ್ನಾಗಿರುತ್ತಿದ್ದಿತು.

ಈ ನಿಧಿಯು ಒಂದುಲಕ್ಷ ರೂ. ಗಳವರೆಗಾದರೂ ಕೂಡಿದರೆ ನಿರಾಯಾಸವಾಗಿ ವರ್ಷಕ್ಕೆ ೫ ಸಹಸ್ರ ರೂ. ಗಳ ಬಡ್ಡಿಯು ಬರುವುದು. ಯಾವ ಬೇಡುವಿಕೆಯೂ ಆವಶ್ಯಕವಿಲ್ಲದೆ ಪ್ರತಿಯೊಂದು ಡಿಸ್ಟ್ರಿಕ್ಟಿನ ವೀರಶೈವಜನಸಾಂದ್ರತೆಯಿರುವ ಪಟ್ಟಣಗಳಲ್ಲೆಲ್ಲಾ ಪ್ರತಿವರ್ಷಕ್ಕೆ ಒಂದೊಂದುಕಡೆಯಂತೆ ಮಹಾಸಭೆಯನ್ನು ಕೂಡಿಸಿ, ಆಯಾಸುತ್ತಿನ ಜನರಲ್ಲಿ ಕರ್ತವ್ಯಜ್ಞಾನವನ್ನೂ ಮತಾಭಿಮಾನವನ್ನೂ ಹುಟ್ಟಿಸಲು ಎಷ್ಟೋ ಅವಕಾಶವಾಗುತ್ತದೆ. ನಿರವಚ್ಛಿನ್ನವಾಗಿ ಮಹಾಸಭೆಯು ಈ ೩-೪ ವರ್ಷಗಳಲ್ಲಿ ನಡೆದಿದ್ದರೆ ವಾಗ್ದಾನವಾಗಿರುವ ೬೨ ಸಾವಿರ ರೂ. ಗಳೂ ಕೈಗೆಬಂದು ಇನ್ನು ಹೆಚ್ಚಿನ ವಾಗ್ದಾನವೂ ಆಗದೆ ನಿಲ್ಲುತ್ತಿರಲಿಲ್ಲ. ದುರ್ದೈವದಿಂದ ಬೀರೂರಿನ ಸಭೆಯಲ್ಲಿ ಆವಶ್ಯಕವಾಗಿದ್ದ ಮಹತ್ಕಾರ್ಯಗಳೊಂದೂ ಸಾಗದೆಹೋದುವು. ಫಂಡಿಗೆ ವಾಗ್ದಾನಮಾಡಿರುವ ಮಹನೀಯರುಗಳು ಮಹಾಸಭೆಯಲ್ಲಿ ಮಾಡಿಕೊಟ್ಟ ಭಾಷೆಗೆ ಭಂಗ ತಂದುಕೊಳ್ಳಬಾರದೆಂಬುದರ ಕಡೆಗೂ ಚಿರಕಾಲಿತವಾಗಿ ಶಾಶ್ವತ ಫಲಪ್ರದವಾದ ಸಮಾಜದ ಸೇವಾರೂಪ ಈ ಪರಮಪವಿತ್ರ ಮಹಾಪ್ರತಿಷ್ಠಾಪನೆಯ ಮಹತ್ವದಕಡೆಗೂ ಗಮನವಿತ್ತು ತಮ್ಮ ವಾಗ್ದಾನವನ್ನು ಶೀಘ್ರವಾಗಿ ಸಲ್ಲಿಸಿದರೆ ಎಷ್ಟೋ ಅನುಕೂಲವಾಗುವುದು.

ಮತ್ತು ಬೀರೂರಿನ ಸಭೆಯಾಗಿ ೨ ವರ್ಷಗಳು ಕಳೆದುಹೋದುವು. ಈವರ್ಷದ ಬೇಸಗೆಕಾಲದಲ್ಲಾಗಲೀ ಅಥವಾ ಕ್ರಿಸ್ಮಸ್‌ರಜಾ ದೊರೆಯುವ ಡಿಶಂಬರ್ ತಿಂಗಳಲ್ಲಾಗಲಿ ಇದುವರೆಗೆ ಮಹಾಸಭೆಯು ನೆರೆಯದಿರುವ ಮುಖ್ಯಸ್ಥಲಗಳಲ್ಲೊಂದುಕಡೆ ನಡೆಯಿಸುವುದು ವಿಹಿವಾಗಿರುತ್ತದೆ. ಮಹಾಸಭೆಯನ್ನು ನೆರವೇರಿಸುವಂಥ ಮಹಾಪ್ರಯತ್ನಕ್ಕೆ ನಡುಕಟ್ಟಿದವರು ಚಿರಸ್ಥಾಯಿಫಂಡಿನ ಆಶ್ರಯವನ್ನೇ ನಿರೀಕ್ಷಿಸಿಕೊಂಡಿರಲಾರರಾದರೂ, ಸಿದ್ಧವಾಗಿರುವ ಸಹಾಯವನ್ನು ಒದಗಿಸಿಕೊಳ್ಳುವುದೇನೂ ತಪ್ಪಲ್ಲ. ಮತ್ತು ಅವರಿಗೆ ಇದರ ಸಾಹಾಯ್ಯದಿಂದ ಧನವ್ಯಯಭಾರವು ಎಷ್ಟೋ ಹಗುರವಾಗುವುದರಲ್ಲಿ ಸಂಶಯವಿಲ್ಲ. ಅಂಥ ಉತ್ತೇಜನಕ್ಕಾಗಿಯೇ ಫಂಡಿನ ಪ್ರತಿಷ್ಠಾಪನೆಯಾಗಿರುತ್ತದೆ. ಈ ವಿಷಯವನ್ನು ಆಯಾಯ ಮುಖ್ಯಸ್ಥಲಗಳ ವೀರಶೈವ ಮಹನೀಯರು ಪರ್ಯಾಲೋಚಿಸುವವರಾಗಬೇಕು.

ವಾಗಿ ರಚಿಸಲ್ಪಟ್ಟಿದ್ದ ಮಂಟಪಕ್ಕೆ ಯುವರಾಜರು ದಯಮಾಡಿಸಿದಾಗ್ಗೆ ಮುನ್ಸಿಪಾಲಿಟಿಯವರು ವಿಜ್ಞಾಪನಪತ್ರವನ್ನು ಸಮರ್ಪಿಸಿದರು. ಅದಕ್ಕೆ ಪ್ರತ್ಯುತ್ತರವನ್ನು ಯುವರಾಜರು ಕೊಡುವಾಗ್ಗೆ ಬರ್ಮಾದೇಶದ ಶಿಲ್ಪಿಕಲಾನೈಪುಣ್ಯವನ್ನೂ ಬರ್ಮೀಯರ ನೈಜಗುಣಗಳನ್ನೂ ನೋಡಬೇಕೆನ್ನುವವರು ಈ ಪಟ್ಟಣವನ್ನು ನೋಡಿಹೋಗಬೇಕೆಂದು ಹೇಳಿ. ಅದರ ಸೊಬಗನ್ನು ಕೊಂಡಾಡಿದರು. ತಾ|| ೬ನೆ ಬೆಳಗ್ಗೆ ಅಲ್ಲಿಯ ಸೈನಿಕರ ಕವಾಯತ್ತನ್ನು ಪರಾಮರಿಸಿದರು. ಆದಿನ ರಾತ್ರಿ ಅಲ್ಲಿಯ ಷಾನ್ ಜಾತಿಯವರು ಏರ್ಪಡಿಸಿದ್ದ ಔತಣಕ್ಕೆ ದಯಮಾಡಿಸಿದರು. ಆ ಜಾತಿಯ ಅನೇಕ ನಾರೀಮಣಿಯರು ಚಿತ್ರವಿಚಿತ್ರಗಳಾದ ಅವರದೇಶದ ಉಡುಪುಗಳನ್ನೂ ಆಭರಣಗಳನ್ನೂ ತೊಟ್ಟು ಬಂದಿದ್ದರು. ಅದನ್ನೆಲ್ಲಾ ನೋಡಿ ಯುವರಾಜರು ಬಹು ಸಂತೋಷಪಟ್ಟರು. ತಾ|| ೭ನೆ ರಾತ್ರಿ ಅಲ್ಲಿಂದ ಹೊರಟು ೮ನೆ ತಾ|| ಬೆಳಗ್ಗೆ ರಂಗೂನ್ ಪಟ್ಟಣಕ್ಕೆ ಮರಳಿಬಂದರು. ಆದಿನವೂ ಮರುದಿನವೂ ಅವರಿಗಾಗಿ ಏರ್ಪಡಿಸಿದ್ದ ವಿನೋದದನೋಟಗಳನ್ನೆಲ್ಲಾ ಪರಾಮರಿಸಿದರು. ತಾ|| ೯ರಲ್ಲಿ ಅಲ್ಲಿಯ ಸರೋವರದೊಳಗೆ ದೋಣಿಗಳ ಪಂದ್ಯವು ಜರುಗಿತು. ಆರಾತ್ರಿ ಪುರವೆಲ್ಲಾ ದೀಪಾವಳಿಯಿಂದ ದೇದೀಪ್ಯಮಾನವಾಗಿ ಅಲಂಕರಿಸಲ್ಪಟ್ಟಿದ್ದಿತು. ರಾಜವೀಥಿಗಳಲ್ಲಿ ಪುರಜನರೆಲ್ಲಾ ಕಿಕ್ಕಿರಿದು ನಿಂತಿದ್ದರು. ತಮ್ಮ ಬಿಡಾರದಿಂದ ೭ ಮೈಲಿಗಳ ದೂರದಲ್ಲಿ ಸಮುದ್ರತೀರಕ್ಕೆ ಯುವರಾಜರು ಸಪರಿವಾರರಾಗಿ ಮೋಟಾರಿನಲ್ಲಿ ಕುಳಿತು ಆ ರಾತ್ರಿ ೯ ಗಂಟೆಗೆ ಹೊರಟು, ಅಲ್ಲಿ ಸಿದ್ಧವಾಗಿ ನಿಂತಿದ್ದ ಡಫ್ರಿನ್ ಹಡಗನ್ನೇರಿ ಮದ್ರಾಸನ್ನು ಕುರಿತು ಪ್ರಯಾಣಮಾಡಿಬಂದರು. ತಾ|| ೧೩ನೆ ಶುಕ್ರವಾರ ಬೆಳಗ್ಗೆ ೯|| ಗಂಟೆಗೆ ಮದ್ರಾಸು ಪಟ್ಟಣವನ್ನು ಸೇರಿದರು.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೧೫ ನೆಯ ಭಾನುವಾರ.

ಶ್ರೀಮದಾಂಗ್ಲ ಯುವಸಾರ್ವಭೌಮರು

ನಮ್ಮ ಭವಿಷ್ಯಚ್ಚಕ್ರವರ್ತಿಗಳಾದ ಆಂಗ್ಲ ಯುವರಾಜರವರು ಭರತಖಂಡಕ್ಕೆ ಪ್ರವೇಶಿಸಿ ೨ ತಿಂಗಳುಗಳಾಗುತ್ತ ಬಂದವು. ಈಗ ಅವರು ಮದ್ರಾಸಿಗೆ ದಯಮಾಡಿಸಿದ್ದಾರೆ. ಮುಂದಣ ವಾರದಲ್ಲಿ ನಮ್ಮ ರಾಜಧಾನಿಗೆ ತಾ|| ೧೯ನೆ ಗುರುವಾರ ಬೆಳಗ್ಗೆ ದಯಮಾಡಿಸುತ್ತಾರೆಂಬುದು ಗೊತ್ತಾಗಿಯೇ ಇದೆ. ನಮ್ಮ ಶ್ರೀಮನ್ಮಹಾರಾಜರವರ ಬಿನ್ನಹದ ಮೇರೆಗೆ ನಮ್ಮ ಸಂಸ್ಥಾನಕ್ಕೆ ಅವರು ದಯಮಾಡಿಸಲು ಒಪ್ಪಿ ಬರುತ್ತಾರಾದಕಾರಣ, ನಮ್ಮ ಶ್ರೀಮನ್ಮಹಾರಾಜರ ಅತಿಥಿಗಳಾಗಿ ಬರುವ ಆ ಸಂಮಾನ್ಯ ಮಹಾಪುರುಷರು ನಮ್ಮ ಸಂಸ್ಥಾನದ ಅತಿಥಿಗಳಾಗಿಯೇ ಇರುತ್ತಾರೆ. ನಮ್ಮೆಲ್ಲರ ಪ್ರತಿನಿಧಿತ್ವದಿಂದ ಶ್ರೀಮನ್ಮಹಾರಾಜರು ಅವರಿಗೆ ನಡೆಯಿಸುವ ಆತಿಥ್ಯವು ನಮ್ಮೆಲ್ಲರಿಗೂ ಪ್ರೀತಿಕರವೂ ಉತ್ಸಾಹಕರವೂ ಆಗಿರುತ್ತದೆ. ದೇಶಕ್ಕೆ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಅವರ ಆತಿಥ್ಯ ಸಮಾರಂಭಗಳು ಬಹಳ ವಿಜೃಂಭಣೆಯಿಂದ ನಡೆಯುವುದಕ್ಕೆ ತಕ್ಕ ಏರ್ಪಾಟುಗಳೆಲ್ಲಾ ಜರುಗಿರುವುದರಿಂದ ದೇಶದ ಹಲವು ಕಡೆಯ ಪ್ರಜೆಗಳು ರಾಜಧಾನಿಗೆ ದಯಮಾಡಿಸಿ ಯುವಸಾರ್ವಭೌಮರ ಸಂದರ್ಶನವನ್ನೂ ಅವರ ಆತಿಥ್ಯ ಸಮಾರಂಭದ ವಿಜೃಂಭಣೆಯನ್ನೂ ಅವಲೋಕಿಸಲು ತವಕಪಡುತ್ತಿರುವರೆಂಬುದಕ್ಕೆ ಸಂಶಯವಿಲ್ಲ.

ಆ ಮಹನೀಯರನ್ನು ಉಚಿತ ರೀತಿಯಿಂದ ಸ್ವಾಗತಿಸಲು ರಾಜಧಾನಿಯು ಸರ್ವಾಲಂಕಾರ ಪರಿಪೂರಿತವಾಗುತ್ತಿದೆ. ಇಲ್ಲಿಯ ಪ್ರಜೆಗಳ ಮನೋಭಾವಗಳು ಕೂಡ ಬ್ರಿಟಿಷ್ ಇಂಡ್ಯಾದ ಕೆಲ ಪ್ರಜೆಗಳ ಮನೋಭಾವಗಳಂತೆ ಕಲುಷಿತವಾಗಲು ಕಾರಣವೂ ಆವಶ್ಯಕತೆಯೂ ಇಲ್ಲವಾಗಿರುವಕಾರಣ, ಸರ್ವರೂ ಸ್ವಾಗತಸಮಾರಂಭದಲ್ಲಿ ಬೆರೆದು ಆನಂದಿಸಲು ಕುತೂಹಲಬದ್ಧರಾಗಿರುವರು. ಕೆಲವರು ವರ್ತಕರು ಹರತಾಳವನ್ನಾಚರಿಸಲು ಯೋಚಿಸಿರುವರೆಂದು ಕೆಲರು ಹುಟ್ಟಿಸಿರುವ ಸುದ್ದಿಯು ವರ್ತಕರ ವಿಷಯದಲ್ಲಿ ಪ್ರಭುಗಳ ಚಿತ್ತವನ್ನು ಕೆಡಿಸಬೇಕೆಂಬ ದುರ್ಯೋಚನೆಯಿಂದ ಹುಟ್ಟಿರಬೇಕೇ ಹೊರತು ನಿಜಸ್ಥಿತಿಯು ಹಾಗೆಂದಿಗೂ ಇಲ್ಲವೆಂದು ಹೇಳಬಲ್ಲೆವು. ವಿದ್ಯಾರ್ಥಿ ಸಮೂಹದಲ್ಲಿ ಮುಂದಾಲೋಚನೆಯಿಲ್ಲದ ಕೆಲವರು ಪುರುಷಾರ್ಥವಿಲ್ಲದ ಶುಷ್ಕಪ್ರತಿಷ್ಠೆಗೆ ಬಲಿಬಿದ್ದು ಸಮಾರಂಭ ಕಾಲದಲ್ಲಿ ದೂರಸ್ಥರಾಗಿರಲು ಯೋಚಿಸಿರುವರೆಂದು ವರ್ತಮಾನವಿರುವುದು. ಇದರಲ್ಲಾದರೂ ತಥ್ಯಾಂಶವಿಲ್ಲದೆ ಹೋದರೆ ಸಂತೋಷವೇ ಸರಿ. ಏಕೆಂದರೆ—ಮೈಸೂರು ಸಂಸ್ಥಾನದ ಪೂರ್ವ ಚರಿತ್ರದ ಜ್ಞಾನವು ಸಾಮಾನ್ಯ ಪ್ರಜೆಗಳಿಗಿಂತಲೂ ವಿದ್ಯಾರ್ಥಿಗಳಿಗೆ ಪರಿಪೂರ್ಣವಾಗಿರುವುದು. ಆಂಗ್ಲ ಪ್ರಭುತ್ವದ ಸಾಹಾಯ್ಯವಿಲ್ಲದಿದ್ದರೆ ನಮ್ಮ ದೇಶವೂ ನಾವೂ ಈಗ ಯಾರ ಅಧೀನರಾಗಿರುತ್ತಿದ್ದೆವೆಂಬುದನ್ನು, ಮೈಸೂರ ರಾಜವಂಶವು ಈಗಣವೈಭವದಲ್ಲಿ ಉಳಿಯಬಹುದಾಗಿದ್ದಿತೇ? ಎಂಬುದನ್ನೂ ಅವರು ಚೆನ್ನಾಗಿ ಬಲ್ಲರು. ಭರತಖಂಡದ ಉಳಿದ ಕಡೆಯ ಪ್ರಜೆಗಳ ಸ್ಥಿತಿಯು ನಮ್ಮದಲ್ಲ. ನಾವು ಆಕಲ್ಪವಾಗಿ ಆಂಗ್ಲಪ್ರಭುತ್ವಕ್ಕೆ ಕೃತಜ್ಞತಾಬದ್ಧರಾಗಿದ್ದುಕೊಂಡು ನಡೆಯುವುದು ನಮಗೆ ಸದ್ಧರ್ಮವಾಗಿರುವುದು. ಹೀಗಿರುವಲ್ಲಿ ಅದಕ್ಕೆ ತಪ್ಪಿ ಹರತಾಳಾದಿಗಳ ಆಚರಣೆಗೆ ಮನಗೊಟ್ಟರೆ, ನಮ್ಮ ಶ್ರೀಮನ್ಮಹಾರಾಜರ ಅತಿಥಿಗಳಾಗಿ ಬರುವ ಯುವಸಾರ್ವಭೌಮರಿಗೆ ನಾವು ಮನಃಪೂರ್ವಕವಾಗಿ ಅಪಮಾನವನ್ನೆಣಿಸಿದವರಾಗುವುದೇ ಅಲ್ಲದೆ ತನ್ಮೂಲಕ ನಮ್ಮ ಶ್ರೀಮನ್ಮಹಾರಾಜರ ಅವಕೃಪೆಗೂ ಆಗ್ರಹಕ್ಕೂ ಪಾತ್ರರಾಗಬೇಕಾಗುವುದು. ಇದನ್ನು ಪರ್ಯಾಲೋಚಿಸದಷ್ಟು ಮೂರ್ಖಮತಿಗಳು ನಮ್ಮಲ್ಲಿ ಯಾರೂ ಇರಲಾರರೆಂದು ನಂಬುತ್ತೇವೆ.

ತತ್‌ಕ್ಷಣ ಸ್ವರಾಜ್ಯಪ್ರಾಪ್ತಿಗಾಗಿ ತವಕಪಡುತ್ತಲಿರುವ ಕಾಂಗ್ರೆಸ್ ಪಕ್ಷದವರು ಆಂಗ್ಲ ಯುವರಾಜರವರನ್ನು ಬಹಿಷ್ಕರಿಸಬೇಕೆಂದು ಗದ್ದಲವನ್ನೆಬ್ಬಿಸಿರುವ ಈ ಸಮಯದಲ್ಲೇ ಮೈಸೂರಿನಲ್ಲೂ ಅಂಥ ಕಾಂಗ್ರೆಸ್ ಶಾಖಾಸಂಘವನ್ನು ಸ್ಥಾಪಿಸಿ, ಸ್ವಲ್ಪ ಗದ್ದಲವನ್ನೆಬ್ಬಿಸದಿದ್ದರೆ ಈ ದೇಶದಲ್ಲಿ ಆ ತೆರದ ವಿಷದ ಸೋಂಕು ಮೂಡಲು ಅವಕಾಶವೇ ಇರುತ್ತಿರಲಿಲ್ಲ. ಆದರೆ ಇಲ್ಲಿ ಅದರ ಸ್ಥಾಪನೆಗೆ ಕಂಕಣಕಟ್ಟಿ ನಿಂತಿದ್ದ ಮುಖಂಡರ ಸ್ಥಿತಿಯೇ ಈಗ ಪುಣ್ಯವಶಾತ್ ಮಾರ್ಪಟ್ಟು ಹೋಗಿದೆ. ತಮ್ಮ ತಪ್ಪನ್ನು ತಾವೇ ತಿದ್ದಿಕೊಳ್ಳುವ ಸ್ಥಿತಿಯು ಅವರಿಗೆ ಪ್ರಾಪ್ತವಾಗಿದೆ. ''ಮೈಸೂರು ಸಂಸ್ಥಾನಕ್ಕೆ ರಾಜಕೀಯವಾದ ತೊಂದರೆಗಳೇನಾದರೂ ಸಂಭವಿಸಿದರೆ ಸಂಸ್ಥಾನದ ಕ್ಷೇಮಕ್ಕೆ ಯಾವ ಕುಂದಕವೂ ಉಂಟಾಗದಂತೆ ಮಾಡಲು ಕಾಂಗ್ರೆಸ್ ಕಮಿಟಿಯು ಈ ದೇಶದಲ್ಲಿರುವುದು ಅವಶ್ಯಕ'' (ಎಂದರೆ-ಮೈಸೂರು ಪ್ರಭುತ್ವದಿಂದ ಲಭಿಸಲಾರದ ಫಲವನ್ನು ಈ ದೇಶದ ಕಾಂಗ್ರೆಸ್ ಕಮಿಟಿಯು ಸಾಧಿಸಿಕೊಡುವುದೆಂದೂ,) ''ನಮ್ಮ ಮಹಾಪ್ರಭುಗಳೂ ರಾಜಕುಟುಂಬಕ್ಕೆ ಸೇರಿದ ಮಹನೀಯರೂ ಅಧಿಕಾರಿಗಳೂ ಖಾಸಗಿ ಜನಗಳೂ ತಮ್ಮ ಆಯತಿಯಲ್ಲಿ ನಾಲ್ಕರಲ್ಲಿ ಒಂದು ಭಾಗವನ್ನು ಈ ಕಾಂಗ್ರೆಸ್ಸಿನ ಸ್ವರಾಜ್ಯದ ಫಂಡಿಗೆ ಕೊಟ್ಟು ಸ್ವರಾಜ್ಯಪ್ರಾಪ್ತಿಗೆ ಸಹಾಯಮಾಡಬೇಕು'' ಎಂದೂ ಮೊದಲಾಗಿ ಹೇಳುತ್ತ ಕಾಂಗ್ರೆಸ್ ಪಕ್ಷವನ್ನು ಸಮರ್ಥನಮಾಡುತ್ತಲಿದ್ದ ಸಂಪದಭ್ಯುದಯ ಪತ್ರಿಕೆಯೂ ಅದರ ಅಧ್ವರ್ಯುಗಳಾದ ಮ|| ಸಟ್ಲೂರ್‌ರವರೂ ಕೂಡ ''ಮೈಸೂರಿನಲ್ಲಿ ಸ್ವರಾಜ್ಯ ಸ್ವದೇಶಿ ಏರ್ಪಾಟುಗಳೆಲ್ಲಾ ಇವೆ; ರಾಮಮೂರ್ತಿಯರ ಉಪನ್ಯಾಸಗಳಿಗೆ ತಾವು ಒಪ್ಪಲಿಲ್ಲ, ಹರಿತಾಳಕ್ಕೆ ತಾವು ಒಪ್ಪುವುದಿಲ್ಲ; ಪ್ರಿನ್ಸ್‌ಆಫ್‌ವೇಲ್ಸ್‌ರವರ ಪದವಿಗೆ ಅನುರೂಪವಾದ ಸತ್ಕಾರವನ್ನು ಮಾಡುವುದು ಶ್ರೀಮನ್ಮಹಾರಾಜರಿಗೆ ಹೇಗೆ ಕರ್ತವ್ಯವೋ ಅವರ ಪ್ರಜೆಗಳಿಗೂ ಹಾಗೆಯೇ ಕರ್ತವ್ಯ; ನಮ್ಮ ಭವಿಷ್ಯಚ್ಚಕ್ರವರ್ತಿಗಳಿಗೆ ಅಕೃತ್ರಿಮವಾದ ರಾಜಭಕ್ತಿ ವಿಶ್ವಾಸಗಳನ್ನು ನಾವು ತೋರಿಸಬೇಕು.'' ಎಂದು ಬರೆದುಕೊಂಡಿರುತ್ತಾರೆ. ಇಂಥ ಲೇಖನವನ್ನು ಬರೆದುಕೊಳ್ಳಲಿಕ್ಕೆ ಅವರಿಗೆ ಉಂಟಾದ ಕಾರಣವೇನೆಂಬುದನ್ನು ಸದ್ಯಃ ನಾವು ಚರ್ಚಿಸಬೇಕಾದುದಿಲ್ಲ. ಅವರ ಅನುಯಾಯಿಗಳೆಲ್ಲಾ ಅವರ ಈ ಅಭಿಪ್ರಾಯಗಳನ್ನಾದರೂ ಗಮನಿಸಿ ಮೈಸೂರು ದೇಶದ ಅನಾದಿ ಸಂಸಿದ್ಧವಾದ ಸೌಮ್ಯ ಸದ್ಭಕ್ತಿ ಸಚ್ಛೀಲ ಸುಪ್ರತಿಷ್ಠೆಯೆಂಬ ಅಮೃತವಾರ್ಧಿಯಲ್ಲಿ ವಿಷಬಿಂದುವನ್ನು ಹಿಂಡುವ ಕೆಲಸವನ್ನು ಮಾಡದೆ ಇರುವಂತಾಗಬೇಕೆಂಬುದೇ ರಾಜಭಕ್ತಿ ವಿಖ್ಯಾತವಾದ ಮೈಸೂರು ದೇಶದ ಸತ್ಪ್ರಜೆಗಳೆಲ್ಲರ ಕೋರಿಕೆಯಾಗಿರುವುದು.

ಅಂಥ ಪ್ರಜೆಗಳೆಲ್ಲರ ಪಕ್ಷದಿಂದಲೂ ಶ್ರೀಮದ್ಯುವಸಾರ್ವಭೌಮರನ್ನು ನಮ್ಮ ಸಂಸ್ಥಾನಕ್ಕೆ ಸುಸ್ವಾಗತಿಸುವುದಲ್ಲದೆ, ಈ ದೇಶದಲ್ಲಿ ಇರುವಷ್ಟು ಕಾಲವೂ ಅವರ ಆತಿಥ್ಯ ಸಮಾರಂಭದ ಏರ್ಪಾಟುಗಳು ಅವರಿಗೆ ಉಲ್ಲಾಸಕರವಾಗಿಯೂ ಆರೋಗ್ಯಕರವಾಗಿಯೂ ಇದ್ದು, ಮೈಸೂರು ದೇಶದ ರಾಜಭಕ್ತಿ ವಿಶ್ವಾಸಗಳ ಅಚಲಿತತ್ವವು ಅವರ ಮೂಲಕ ಸಾಮ್ರಾಜ್ಯ ಪ್ರಭುತ್ವದವರಿಗೂ ನಿವೇದಿತವಾಗಿ, ಆಂಗ್ಲಸಾಮ್ರಾಜದ ಮತ್ತು ನಮ್ಮ ಸಂಸ್ಥಾನದ ಪರಸ್ಪರ ಪ್ರೀತಿವಿಶ್ವಾಸಗಳೂ ಸ್ನೇಹವೂ ಮತ್ತಷ್ಟು ದೃಢತರವಾಗಲು ಸಹಾಯಕಾರಿಯಾಗಲೆಂದು, ಕೋರುವೆವು.

ಐರ್ಲಂಡಿಗೆ ಸ್ವರಾಜ್ಯಪ್ರಾಪ್ತಿ.

ಆಂಗ್ಲಪ್ರಭುತ್ವದ ಪ್ರತಿನಿಧಿಗಳೂ ಐರ್ಲಂಡ್‌ದೇಶದ ಪ್ರತಿನಿಧಿಗಳೂ ಸಹ ಲಂಡನ್ ಪಟ್ಟಣದಲ್ಲಿ ಕಲೆತು ಚರ್ಚಿಸಿ ಒಪ್ಪಂದ ಮಾಡಿಕೊಂಡಿದ್ದ ಸಂಧಿನಿಬಂಧನೆಗಳನ್ನು ಎರಡು ದೇಶಗಳ ಪಾರ್ಲಿಮೆಂಟಿನವರೂ ಒಪ್ಪಬೇಕಾಗಿದ್ದಿತಷ್ಟೆ. ಆಂಗ್ಲದೇಶದ ಪಾರ್ಲಿಮೆಂಟುಗಳಲ್ಲಿ ಅದು ಆಗಲೇ ಅನುಮೋದಿತವಾಯಿತು. ಐರ್ಲಂಡ್‌ದೇಶದ ಡಯಿಲ್‌ಇರಾನ್ ಎಂಬ ಸಿನ್‌ಫಿನಿಯನ್ ಪಾರ್ಲಿಮೆಂಟಿನಲ್ಲಿ ಇದು ಹೇಗೆ ಪರ್ಯವಸಾನವಾಗುವುದೋ ಎಂದು ಬಹು ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದ್ದಿತು. ಕಡೆಗೆ ಇದು ಅಲ್ಲಿ ಅಂಗೀಕೃತವಾಯಿತೆಂಬ ಸಂತೋಷವಾರ್ತೆಯು ಕಳೆದ ವಾರದಲ್ಲಿ ಬಂದಿರುವುದು. ಆ ಸಭೆಯ ಅಧ್ಯಕ್ಷರಾದ ಡಿ. ವೆಲರಾಯವರೂ ಅವರ ಪಕ್ಷದವರೂ ಈ ಒಡಂಬಡಿಕೆಗೆ ಒಪ್ಪದೆ ಕಡೆಯವರೆಗೂ ಖಂಡಿಸಿ ಚರ್ಚಿಸುತ್ತಾಬಂದರು. ಸರ್ವಸ್ವತಂತ್ರವಾದ ಪ್ರಜಾಸ್ವಾಮ್ಯಸ್ಥಾಪನೆಗೆ ಈ ಒಡಂಬಡಿಕೆಯಿಂದ ಅಡ್ಡಿಯಾಗುವುದೆಂಬುದೇ ಅವರ ವಾದವು ಐರ್ಲಂಡ್ ದೇಶವು ಆಂಗ್ಲಸಾಮ್ರಾಜಕ್ಕೆ ಸೇರಿ ದೇಶದೊಳಗೆ ಸ್ವತಂತ್ರಪರಿಪಾಲನೆ ಮಾಡಿಕೊಂಡಿರಲಿಕ್ಕೆ ಈಗಣ ಒಡಂಬಡಿಕೆಯಿಂದಅವಕಾಶವಾಗಿದೆ. ಇದಕ್ಕೆ ಒಪ್ಪದಿದ್ದರೆ ಐರ್ಲಂಡು ಯುದ್ಧಕ್ಕೆ ಸನ್ನದ್ಧವಾಗಬೇಕಾಗುತ್ತಿದ್ದಿತು. ದೇಶಕ್ಕೆ ಅಂಥ ವಿಪತ್ತನ್ನು ತಂದಿಕ್ಕುವುದು ಅನುಚಿತವೆಂದೂ, ಆಂಗ್ಲಸಾಮ್ರಾಜ್ಯಕ್ಕೇ ಸೇರಿದ್ದುಕೊಂಡು ತಮ್ಮದೇಶದ ಪರಿಪಾಲನವನ್ನು ತಾವು ಅನುಕೂಲವಾಗಿ ನೆರವೇರಿಸಿಕೊಂಡಿರಲಿಕ್ಕೆ ಅವಕಾಶವಿರುವಾಗ ಅಂಥ ಯೋಗವನ್ನು ಕಳೆದುಕೊಳ್ಳುವುದು ಸರಿಯಲ್ಲವೆಂದೂ, ಕಳೆದ ೮೦೦ ವರ್ಷಗಳಿಂದ ಬಡಿದಾಡಿದುದಕ್ಕೆ ಇಷ್ಟಾದರೂ ಸ್ವಾತಂತ್ರ್ಯವು ಲಭಿಸಿದುದನ್ನೂ ದೇಶದ ಪರಿಸ್ಥಿತಿಯನ್ನೂ ಅವಲೋಕಿಸಿ ಸಂಧಿಸಭೆಗೆ ಪ್ರತಿನಿಧಿಗಳಾಗಿ ಹೋಗಿದ್ದ ರಾಯಭಾರಿಗಳಾದ ಗ್ರಿಫಿತ್‌ರವರೂ, ಕಾಲಿನ್ಸ್‌ರವರೂ ಒಪ್ಪಿಕೊಂಡ ನಿಬಂಧನೆಗಳನ್ನು ಯುಕ್ತವೆಂದೂ ಭಾವಿಸಿದವರೇ ಐರ್ಲಂಡಿನಲ್ಲಿ ಹೆಚ್ಚು ಜನರಾದರು. ಒಪ್ಪದವರೂ ಅನೇಕರಿದ್ದರು. ಆದರೆ ಎರಡು ಪಕ್ಷವನ್ನೂ ಐಕ್ಯಗೊಳಿಸಬೇಕೆಂದು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಕಡೆಗೆ ಸಭೆಯಲ್ಲಿ ಓಟುಗಳನ್ನು ತೆಗೆದುಕೊಂಡಾಗ್ಗೆ ಸಂಧಿನಿಬಂಧನೆಗೆ ೬೪ ಮಂದಿಗಳು ಒಪ್ಪಿದರು; ೫೭ ಮಂದಿಗಳು ಒಪ್ಪದೆಹೋದರು. ಹೀಗಾಗಿ ಅಧಿಕ ಸಂಖ್ಯೆಯು ಅಂಗೀಕಾರದ ಕಡೆಗೆ ಬಂದುದರಿಂದ ಸಭಾಂಗೀಕಾರವು ಸಂಧಿಗೆ ದೊರೆದಂತೆ ತೀರ್ಮಾನವಾಯಿತು. ಜನವರಿ ತಾ|| ೭ ರಲ್ಲಿ ಹೀಗೆ ಓಟುಗಳನ್ನು ತೆಗೆದುಕೊಳ್ಳುವ ಕೆಲಸವಾಯಿತು. ಆ ಕಡೇಗಳಿಗೆಯಲ್ಲಿ ಸಭಾಧ್ಯಕ್ಷರಾದ ಡಿ. ವೆಲರಾರವರು ಒಂದು ಸಂಕ್ಷಿಪ್ತವಾದ ಉಪನ್ಯಾಸವನ್ನು ಮನೋವೇದನೆಯನ್ನು ಸಹಿಸಿಕೊಳ್ಳಲಾರದೆ ಮಾಡಿದರು. ಆಗ್ಗೆ ಅವರ ಮುಖವು ಕೆಂಜಗದಂತಾಗಿದ್ದಿತು; ಹಸ್ತಗಳು ನಡುಗುತ್ತಿದ್ದುವು. ಕಳೆದ ನಾಲ್ಕುವರ್ಷಗಳಿಂದಲೂ ಐರ್ಲಂಡು ಸ್ವಾತಂತ್ರ್ಯಕ್ಕಾಗಿ ಮಾಡಿದ ಹೋರಾಟವನ್ನೂ ಅಸಮಸಾಹಸವನ್ನೂ ತ್ಯಾಗವನ್ನೂ ವರ್ಣಿಸಿ, ಕಡೆಗೂ ಸಂಪೂರ್ಣಾಭೀಷ್ಟವನ್ನು ನೆರವೇರಿಸಿಕೊಳ್ಳದೆ ಪಾರ್ಲಿಮೆಂಟು ಸೋತುಹೋಗುವುದನ್ನು ಕುರಿತು ಬಹಳವಾಗಿ ಪರಿತಾಪವನ್ನು ಸೂಚಿಸುವಾಗ್ಗೆ ಅವರ ಕಂಠವು ಗದ್ಗದಿತವಾಯಿತು; ಧ್ವನಿಯು ಕುಗ್ಗಿಹೋಯಿತು; ಸಭೆಯಲ್ಲಿದ್ದ ಸ್ತ್ರೀ ಪ್ರತಿನಿಧಿಗಳ ಕಣ್ಣಿನಲ್ಲಿ ನೀರು ಧಾರೆಯಾಗಿ ಹರಿದಿತು. ಅದರಮೇಲೆ ಗ್ರಿಫಿತ್‌ರವರು ಉಪನ್ಯಾಸಮಾಡಿ ದೇಶದ ಪ್ರಜೆಗಳಲ್ಲಿ ೧೦೦ಕ್ಕೆ ೯೮ ಮಂದಿಗಳು ಸಂಧಿಯನ್ನೇ ಅಪೇಕ್ಷಿಸುತ್ತಿರುವರೆಂದೂ, ಅದನ್ನು ಧಿಕ್ಕರಿಸಿ ದೇಶವನ್ನು ರಕ್ತ ಪ್ರವಾಹದಲ್ಲಿ ಮುಳುಗಿಸುವುದು ಅನುಚಿತವೆಂದೂ ತಿಳಿಯಿಸಿದರು. ಆದರಮೇಲೆ ಓಟುಗಳನ್ನು ತೆಗೆದುಕೊಂಡಾಗ ಮೇಲೆ ಹೇಳಿದಂತೆ ಪರಿಣಾಮವಾಯಿತು. ಆಗ ಸಭಾಧ್ಯಕ್ಷರು ಎದ್ದುನಿಂತು ಸಂಧಿಯು ಸಭೆಯಿಂದ ಅಂಗೀಕೃತವಾಯಿತೆಂದು ಗೆಯಿಲಿಕ್ ಭಾಷೆಯಲ್ಲೂ ಆಂಗ್ಲಭಾಷೆಯಲ್ಲೂ ಹೇಳಿದ ಕೂಡಲೇ ಹೊರಗೆ ನಿಂತಿದ್ದ ಪ್ರಜಾಸ್ತೋಮವೆಲ್ಲಾ ಸಂತೋಷಧ್ವನಿಯನ್ನು ಮಾಡಿತು. ಸ್ವಾತಂತ್ರ್ಯದ ಹೋರಾಟದಲ್ಲಿ ಮುಂದಾಗಿದ್ದು ಕಾರಾಗೃಹವಾಸವನ್ನು ಉಪವಾಸದಿಂದ ಆಚರಿಸಿ ಅಲ್ಲೇ ಮೃತಪಟ್ಟ ಮ್ಯಾಕ್ಸನಿಯವರ ಪತ್ನಿಯು ಕೊನೆಯಲ್ಲಿ ಒಂದು ಸಣ್ಣ ಉಪನ್ಯಾಸವನ್ನು ಮಾಡಿ, ಪಾರ್ಲಿಮೆಂಟಿನವರು ದೇಶಕ್ಕೆ ದ್ರೋಹವನ್ನು ಮಾಡಿದರೆಂದು ಜರೆದುಬಿಟ್ಟಳು. ತನ್ನ ಪಕ್ಷವು ಜಯಿಸದೆ ಹೋದಕಾರಣ ಡಿ. ವೆಲಾರವರು ಬೇಸರಪಟ್ಟು ಸಭಾಧ್ಯಕ್ಷಪದವಿಗೆ ರಾಜೀನಾಮೆ ಕೊಟ್ಟುದಲ್ಲದೆ ''ನನಗೆ ಈ ರಾಜಕೀಯ ವಿಚಾರದಲ್ಲಿ ಬೇಸರು ಹುಟ್ಟಿಹೋಗಿದೆ, ಏನು ಸಂಭವಿಸಿದರೂ ಸರಿ. ನಾನು ವಿಶ್ರಾಂತಿಯನ್ನು ಪಡೆದುಕೊಳ್ಳಬೇಕೆಂದೇ ನಿಶ್ಚಯಿಸಿದ್ದೇನೆ'' ಎಂದು ಹೇಳಿಬಿಟ್ಟರು.

ಇನ್ನು ಮುಂದೆ ಉಭಯಪಕ್ಷದವರೂ ಸೇರಿಯೋ ಅಥವಾ ಅಂಗೀಕಾರಪಕ್ಷದವರೇ ಸೇರಿಯೋ ತತ್ಕಾಲಿಕ ಪ್ರಭುತ್ವವನ್ನು ಐರ್ಲಂಡಿನಲ್ಲಿ ಏರ್ಪಡಿಸಿಕೊಳ್ಳುವರು. ಅದಕ್ಕೆ ಆಂಗ್ಲಪ್ರಭುತ್ವದವರು ಪರಿಪಾಲನಾಧಿಕಾರವನ್ನೊಪ್ಪಿಸುವರು. ಐರ್ಲಂಡಿನಲ್ಲಿ ಆಂಗ್ಲಪ್ರಭುತ್ವದವರು ಇದುವರೆಗೂ ಇಟ್ಟಿದ್ದ ಸೈನ್ಯವನ್ನು ಕೂಡಲೇ ಹಿಂದಕ್ಕೆ ಕರೆಯಿಸಿಕೊಂಡುಬಿಡುವರು.

ಎಷ್ಟೋ ಶತಮಾನಗಳಿಂದ ಮುಗಿಯದೆ ಹೋಗಿದ್ದ ಈ ಸಮಸ್ಯೆಯು ಲಾಯಿಡ್‌ಜಾರ್ಜರ ಕಾಲದಲ್ಲಿ ಬಗೆಹರಿದುಹೋದುದನ್ನು ನೋಡಿದರೆ ಅವರ ಲೋಕೋತ್ತರವಾದ ಮಂತ್ರಿತ್ವ ಸಾಮರ್ಥ್ಯವು ಎಷ್ಟುಮಟ್ಟಿನದೆಂಬುದು ವ್ಯಕ್ತವಾಗುವುದು. ಯುದ್ಧಕಾಲದ ಸಾಹಸಕ್ಕಿಂತಲೂ ಇದನ್ನು ಕೊನೆಮುಟ್ಟಿಸುವ ಸಾಹಸವು ಆಂಗ್ಲಪ್ರಭುತ್ವಕ್ಕೆ ಹೆಚ್ಚಿನದಾಗಿದ್ದಿತು. ಇದನ್ನು ಕೊನೆಮುಟ್ಟಿಸುವವರೆಗೆ ಲಾಯಿಡ್ ಜಾರ್ಜ್‌ರವರು ಅಮೇರಿಕಾದಲ್ಲಿ ನಡೆದ ಮುಖ್ಯವಾದ ಆಯುಧನಿಯಮನಸಭೆಗೂ ಕೂಡ ಹೋಗಲಿಲ್ಲ. ಕೊನೆಗಾದ ಪರಿಣಾಮವು ಆಂಗ್ಲಸಾಮ್ರಾಜ್ಯಕ್ಕೂ ಐರ್ಲಂಡಿಗೂ ತೃಪ್ತಿಕರವಾದುದಕ್ಕಾಗಿ ಪ್ರಪಂಚವೇ ಅದನ್ನು ಅಭಿನಂದಿಸುತ್ತಿದೆ. ಇದರಂತೆ ತುರ್ಕಿಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸಿದ ಕೀರ್ತಿಯನ್ನು ಲಾಯಿಡ್ ಜಾರ್ಜರು ಪಡೆದುಕೊಳ್ಳಲಿ. ಇಂಗ್ಲಂಡಿಗೂ ಐರ್ಲಂಡಿಗೂ ಸಮನಿಸಿದ ಈ ಸಖ್ಯವು ಶಾಶ್ವತವಾಗಿದ್ದುಕೊಂಡು ಪರಸ್ಪರ ಸಹಾಯದಿಂದ ಉಭಯದೇಶಗಳೂ ಅಭಿವೃದ್ಧಿಗೊಳ್ಳಲೆಂದು ಕೋರುವೆವು.

ಐರ್ಲಂಡ್ ದೇಶವು ಸಾಮ್ರಾಜ್ಯಾಧೀನವಾದ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕಾದರೂ ಎಷ್ಟು ಕಾಲವೂ ಎಷ್ಟು ಸಾಮರ್ಥ್ಯವೂ, ತ್ಯಾಗವೂ ಏಕಮತ್ಯ ಮೊದಲಾದ ಅರ್ಹತೆಗಳೂ ಅವಶ್ಯಕವಾದುವೆಂಬುದನ್ನು ಭರತಖಂಡದ ಸತ್ವರಸ್ವರಾಜ್ಯವಾದಿಗಳು ಯೋಚಿಸುವುದು ಮೇಲು.

PACKED.

The last few days are packed with events connected with the visit of His Royal Highness the Prince of Wales, the meetings of the National Congress and other Conferences at Ahmadabad, the National Liberal Federation at Allahabad and the Non-Brahmana Conferences in Southern India. These light throwing events were clouded with events of arrests for offences against the state and

against Law and Order. Ordinary minds were puzzled with events. There was excitement everywhere. It was impossible to escape from the influences of those exciting events whether old or young, an extremist or a moderate man or woman. Such was the atmosphere under which the Indian mind lived during the last few days. Many a weak mind did succumb to the distructive influences. Many an excitable temper lost its balance. Wild and vague were the thoughts of many. The same was the temperament with journals of different shades of creed. We have just emerged from such days packed with events and have settled down to cool thinking. The negative co-operation–an unnatural state of mind–has passed and the positive co-operation which alone can produce what is good for the people has followed. The packed events have begotten a sober mind. That is for British India.

We are in the Indian State which is the model Indian State for sobriety–and in loyalty to the British Throne. The whole country is looking forward to welcome the heir apparent to that Throne. That week in Mysore will be packed with rejoicings and festivities ; will be packed with Loyal Demonstrations.

HERE ARE TWO PICTURES.

The Hindu has presented two pictures in its issues of the 3rd and 4th of this month, which cannot fail to attract attention and more so of the people of Mysore to whom the name of Mr. C. Ramalinga Reddy is of grateful memory. This is one picture and the other is that of Mr. S. Satya Murti who in inviting Mr. Ramalinga Reddy to withdraw from standing as a candidate to a seat in the Madras Legislative Council availed himself of the opportunity to burst out into expressions which could not but expose the real picture of Mr. Satyamurti—a picture of "Mighty Intellect" in the form of "volcanic eruption." An uncontrollable temperament of inconsistencies, incongruities and egotism, is the main characteristic of this picture. The noble picture is contained in the reply of the people's man—a cool and collected, gentle and beauteous picture. Logic and love of country are the points of this solemn picture as contrasted with the other boisterous picture.

Mr. C. R. Reddy has conclusively pointed out the errors of Mr. S. Satyamurti's conclusions that keeping away from the Councils is not the only means of fighting against repression and that a protest is no argument. A constitution must be met by constitutional methods when there are disagreements of whatever magnitude. The earnestness of Mr. Satyamurti's appeal to withdraw is lost when he proposed to oppose Mr. Reddy's candidature by a rival candidate of first rate reputation—and is Mr. A. Rameswamier who has since appeared as a rival candidate of such reputation as to be called, a "First Rate Man"? His name is new to the reading public. He has not made much appearance either in politics or in education. He seems to start with something on "Caste," which he does not want for his purposes. All the same he belongs to the highest caste under the sun–with "Mighty Intellect," to back him up.

Coming back to the two pictures, Mr. Satyamurti holds in both hands deadly weapons to destroy an administration which has done great service to India and Mr. Ramalinga Reddy's is one of reconstruction of a new fabric out of the same materials.

As Mr. Reddy has rightly pointed out, "Repression is not the only issue before the country." There are many more of greater importance and for the settlement of those greater issues, the battles must be fought within the vantage ground of the Councils which exist for constitutional wars.

As regards methods, "Protest" is one of the "rudest" methods, and amongst those of the elegant methods which are constitutional may be mentioned the most elegant method of Mr. Reddy viz. "Reason."

Though Mr. C. R. Reddy is only a recent recruit into the political body, his parts of undoubted merits will soon take him to the foremost front and as a combatant in logical arguments, few veterans will be able to stand against him.

Many like Mr. T. V. Seshagirier will, it is ed, support his candidature and his success ns a great advance in the country's cause. wish him success.

ವೀರಶೈವ ಸಾಮಾನ್ಯ ಗೃಹಸ್ಥರೀರ್ವರ ಅಭಿನಂದನ.

ನಮ್ಮ ಸಮಾಜದ ಇಬ್ಬರು ಸಾಮಾನ್ಯಗೃಹಸ್ಥರನ್ನು ಅಭಿನಂದಿಸುವ ಯೋಗವು ನಮಗೆ ಲಭಿಸಿದುದಕ್ಕಾಗಿ ಸಂತೋಷಿಸುತ್ತೇವೆ. ಅವರಲ್ಲಿ ಒಬ್ಬರು ಜ್ಞಾನವಯೋವೃದ್ಧರಾದ ದಿವಾನ್ ಬಹದ್ದೂರ್ ಶಾಂತವೀರಪ್ಪ ವೀರಸಂಗಪ್ಪ ಮೆಣಸಿನಕಾಯಿಯವರು. ಇವರು ಧಾರವಾಡದ ವೀರಶೈವ ಪ್ರಮುಖರಲ್ಲೊಬ್ಬರಾಗಿರುವರಲ್ಲದೆ ಸಣ್ಣ ಕೆಲಸದಿಂದ ಹುಜೂರು ಡಿ|| ಕಲೆಕ್ಟರ್‌ಗಿರಿಯವರೆಗೆ ಸರ್ಕಾರದ ಉದ್ಯೋಗವನ್ನು ಪ್ರಭುತ್ವದವರೂ ಪ್ರಜೆಗಳೂ ಸಹ ಮೆಚ್ಚುವಂತೆ ನಿಸ್ಪೃಹತೆಯಿಂದಲೂ ಸತ್ಯಧರ್ಮಗಳಿಗೂ ಚ್ಯುತಿಬರದಂತೆಯೂ ನೆರವೇರಿಸಿ, ವಿಶ್ರಾಂತಿಪಡೆದುಕೊಂಡ ಮೇಲೂ ಧಾರವಾಡ ಮ್ಯುನ್ಸಿಪಾಲಿಟಿಯಲ್ಲಿ ೩ ವರ್ಷಗಳ ಕಾಲ ಆರಿಸಲ್ಪಟ್ಟ ಅಧ್ಯಕ್ಷರಾಗಿ ಸಾಮರ್ಥ್ಯದಿಂದ ಕೆಲಸಮಾಡಿದರು. ಅಲ್ಲದೆ ಧಾರವಾಡದ ವಿದ್ಯಾಭಿವೃದ್ಧಿ ಫಂಡಿನ ಅಧ್ಯಕ್ಷತೆ ಅಲ್ಲಿನ ಲಿಂಗಾಯತ ಹಾಲನ್ನು ಕಟ್ಟಿಸುವ ಆತುರತೆ ಮೊದಲಾದ ಕಾರ್ಯಗಳಲ್ಲಿ ಸ್ವಸಮಾಜದ ಸೇವೆಯಲ್ಲಿ ಬದ್ಧಾದರರಾಗಿ ಸಮಾಜದವರೆಲ್ಲರ ಮನ್ನಣೆಗೂ ಪಾತ್ರರಾಗಿರುವುದಕ್ಕೆ ಗುರುತಾಗಿ ಬೀರೂರಿನಲ್ಲಿ ನೆರೆದ ವೀರಶೈವ ಮಹಾಸಭೆಯ ಅಧ್ಯಕ್ಷತೆಯು ಇವರಿಗೆ ವಹಿಸಲ್ಪಟ್ಟಿದ್ದಿತು. ೭೦ ವರ್ಷದ ವಯೋವೃದ್ಧರಾಗಿದ್ದರೂ ಸಾರ್ವಜನಿಕ ಕಾರ್ಯಗಳಲ್ಲಿ ಈಗ್ಗೂ ತರುಣರಂತೆ ಉತ್ಸಾಹದಿಂದ ನೆರವಾಗುತ್ತಿರುವರು. ನಮ್ಮ ಔತ್ತರೇಯ ಸಮಾಜಬಾಂಧವರಲ್ಲಿ ಈ ಪ್ರಶಸ್ತಿಯನ್ನು ಪಡೆದವರಲ್ಲಿ ಇವರೇ ಮೊದಲನೆಯವರು. ವರ್ಧಿಷ್ಣುಗಳಾದ ನಮ್ಮ ಸಮಾಜದ ತರುಣರಿಗೆ ಇವರಂಥವರ ನಡೆನುಡಿಗಳೂ ಕಾರ್ಯದಕ್ಷತೆಯೂ ಆದರ್ಶಪ್ರಾಯಗಳಾಗಿರುತ್ತವೆ ಯಾದಕಾರಣ ಚಿರಕಾಲ ಇವರು ಸಮಾಜದಲ್ಲಿ ಭೂಷಣಪ್ರಾಯರಾಗಿದ್ದುಕೊಂಡು ದೇಶಸೇವೆಯನ್ನು ಮಾಡುವಂತೆ ಭಗವಂತನು ಅನುಗ್ರಹಿಸಲೆಂದು ಕೋರುವೆವು.

೨ ನೆಯವರು ಸೀಮೆಗೆ ಐ. ಸಿ. ಎಸ್. ಪರೀಕ್ಷೆಗೆ ಹೋಗಿದ್ದು ಈಗ ತಾನೇ ಹಿಂದಿರುಗಿ ಭರತಖಂಡಕ್ಕೆ ಬಂದ ಮ|| ಗುರುಸಿದ್ಧಪ್ಪ ಹೂವಪ್ಪ ಗುಗ್ಗಳಿ ಬಿ. ಎ., ಐ. ಸಿ. ಎಸ್ ರವರ ಅಭಿನಂದನವಾಗಿರುವುದು. ಇವರು ಬಾಲ್ಯದಿಂದಲೂ ಕುಶಾಗ್ರಬುದ್ಧಿಗಳಾಗಿದ್ದುಕೊಂಡು ಬೊಂಬಾಯಿ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದುದರಿಂದ ವೀರಶೈವ ಸಮಾಜದವರು ಇವರನ್ನು ಇಂಡಿಯನ್ ಸರ್ವೀಸ್ ಪರೀಕ್ಷೆಗೆ ಓದಿಸಲಿಕ್ಕಾಗಿ ಇಂಗ್ಲಂಡಿಗೆ ಕಳುಹಿಸಿಕೊಟ್ಟು ೨ ವರ್ಷಗಳಾದುವು. ಇವರು ಅಲ್ಲಿಗೆ ಹೋಗಿ ಸೇರಿದ ೪ ತಿಂಗಳುಗಳೊಳಗೇ ಇಂಡ್ಯಾ ಸರ್ಕಾರದವರು ಇವರನ್ನು ಪರೀಕ್ಷೆ ಕೊಡುವ ಆವಶ್ಯಕತೆಯನ್ನೇ ಕೋರದೆ ಇಂಡ್ಯಾ ಸಿವಿಲ್ ಸರ್ವೀಸಿಗೆ ಸೇರಿಸಿಕೊಂಡರು. ಆದರೂ ಇವರು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸದೆ ಕೇಂಬ್ರಿಡ್ಜ್ ಕಲಾಶಾಲೆಯಲ್ಲಿ ಸೇರಿ ಮೊದಲನೆ ವರ್ಷದ ರ್ಯಾಂಗಲರ್ ಪರೀಕ್ಷೆಯಲ್ಲಿ ಮೊದಲನೆ ನಂಬರನ್ನು ಪಡೆದು ಅತ್ಯುತ್ತಮವಾಗಿ ತೇರ್ಗಡೆ ಹೊಂದಿದುದಲ್ಲದೆ ಬಹುಮಾನದ ಯೋಗ್ಯತಾ ವಿದ್ಯಾರ್ಥಿವೇತನವನ್ನೂ ಪಡೆದರು. ಇವರ ಅಸಾಧಾರಣ ಶಕ್ತಿಯನ್ನು ಆ ಕಲಾಶಾಲೆಯ ಪ್ರಿನ್ಸಿಪಾಲರು ಕೂಡ ಮೆಚ್ಚಿ ಅಭಿನಂದಿಸಿ ಯೋಗ್ಯತಾ ಪತ್ರವನ್ನು ಕೊಟ್ಟಿರುವರು. ೨ನೆ ವರ್ಷದ ಪರೀಕ್ಷೆಗೆ ಕುಳಿತಿದ್ದರೆ ಸ್ಟಾರ್ ರ್ಯಾಂಗಲರ್ ಪದವಿಯನ್ನು ಕೂಡ ಉತ್ತಮತರವಾಗಿ ಪಡೆಯದೆ ಬಿಡುತ್ತಿರಲಿಲ್ಲ. ಆದರೆ ಪ್ರಭುತ್ವದವರ ನಿರ್ಬಂಧದಿಂದ ಅಷ್ಟಕ್ಕವಕಾಶವಿಲ್ಲದೆ ಇವರು ಭರತಖಂಡಕ್ಕೆ ಪ್ರಯಾಣಮಾಡಿಬಂದರು. ಮುಂದೆ ತಮ್ಮ ಯೋಗ್ಯತೆಗೆ ಅನುಗುಣವಾದ ಮಹೋದ್ಯೋಗವು ಭರತಖಂಡದಲ್ಲಿ ಇವರಿಗೆ ಸಿದ್ಧವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಇಂಥವರ ಪುರೋವೃದ್ಧಿಯನ್ನೇ ಸಮಾಜವು ಹಾರೈಸುತ್ತಿರುವುದು. ಏಕೆಂದರೆ ಇಂಥವರ ಮೂಲಕ ಅದರ ಅಭ್ಯುದಯವಾಗಬೇಕಾಗಿರುವುದು. ನಮ್ಮ ಮೈಸೂರಿನಿಂದಲೂ ಮಂಜುನಾಥನೆಂಬ ವೀರಶೈವ ಸಿಹ್ಮವೊಂದು ಇದೇ ತೆರದ ವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಹೋಗಿರುವುದು. ಅದೂ ಜಯಶಾಲಿಯಾಗಿ ಸ್ವದೇಶಕ್ಕೆ ಬರಬೇಕೆಂದು ಕೋರುವೆವು. ಇಂಥ ಸಮಾಜರತ್ನಗಳು ಹಿಂದುಳಿದಿರುವ ಸಮಾಜದಲ್ಲಿ ಒಂದೊಂದಾಗಿ ಬೆಳಕಿಗೆ ಬಂದು ಸಮಾಜವನ್ನು ಉದ್ಧರಿಸುವಂತಾಗಲೆಂಬ ಭಾಗ್ಯಕ್ಕಿಂತಲೂ ಮಿಗಿಲಾದ ಭಾಗ್ಯವನ್ನು ನಾವು ಕೋರುವುದೇನಿದೆ ? ಜಗದೀಶ್ವರನು ಮ|| ಗುಗ್ಗಳಿಯವರಿಗೆ ದೀರ್ಘಾಯುರಾರೋಗ್ಯಗಳನ್ನೀಯಲಿ.

ಬರುವ ತಾ|| ೧೯ರಲ್ಲಿ ಶ್ರೀಮದ್ಯುವರಾಜ ಸಾರ್ವಭೌಮರವರು ರಾಜಧಾನಿಗೆ ಚಿತ್ತೈಸಿದಾಗ್ಗೆ ರೈಲ್ವೆಸ್ಟೇಷನ್ನಿನಿಂದ ಬಿಡಾರವಾದ ಗೌರ್ನಮೆಂಟ್ ಹೌಸ್‌ವರೆಗೂ ನಡೆಯಬೇಕಾಗಿರುವ ಉತ್ಸವದ ಏರ್ಪಾಟೆಲ್ಲವೂ ಕಳೆದ ತಾ|| ೧೩ರ ಬೆಳಗ್ಗೆ ನಡಿಸಲ್ಪಟ್ಟು ಹುಜೂರುಸೆಕ್ರೆಟರಿಯವರು ಮ್ಯು|| ಪ್ರೆಸಿಡೆಂಟರು ಮತ್ತು ಡಿ|| ಕಮೀಷನರುಗಳೊಡನೆ ಪರಾಮರ್ಶಿಸಿದರು. ಇದೇ ರೀತಿ ತಾ|| ೧೮ರ ಪ್ರಾತಃಕಾಲ ಏರ್ಪಡಿಸಲ್ಪಟ್ಟು ಶ್ರೀಮನ್ಮಹಾರಾಜರವರಿಂದ ಪರಾಮರ್ಶಿಸಲ್ಪಡುವುದಾಗಿ ತಿಳಿಯಬರುತ್ತದೆ.

ಯಾವದ್ಭಾರತ ವೀರಶೈವ ಮಹಾಸಭಾಸ್ಥಾಯಿ ನಿಧಿಯ ಸಂಘ ಮತ್ತು ಮಹಾಸಭೆ.

ಮತದ ಸರ್ವಮುಖವಾದ ಏಳ್ಗೆಗೂ ಸಾಧನವಾಗಿರುವ ಮಹಾಸಭೆಯನ್ನು ಶಾಶ್ವತವಾಗಿ ನಡೆಯಿಸಿಕೊಂಡು ಹೋಗಲು ಏನುಮಾಡಬೇಕೆಂಬ ವಿಷಯವು ಬಹುಕಾಲದಿಂದ ಚರ್ಚೆಯಲ್ಲಿದ್ದು ಕಡೆಗೆ ದಾವಣಗೆರೆಯಲ್ಲಿ ವೀರಶೈವ ಮಹಾಸಭೆಯು ನೆರೆದಿದ್ದಾಗ್ಗೆ ದಯಮಾಡಿಸಿದ್ದ ಜಗದ್ಗುರು ಶ್ರೀಮನ್ನಿರಂಜನ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಕೃಪಾಶೀರ್ವಾದ ಬಲದಿಂದ ಅದಕ್ಕಾಗಿ ಒಂದು ಧನನಿಧಿಯ ಸಹಾಯವನ್ನೇರ್ಪಡಿಸುವುದೇ ಉಚಿತವೆಂದೂ, ಅದಕ್ಕೆ ೧೦೦೦ ರೂ.ಗಳಿಗೆ ಕಡಿಮೆಯಿಲ್ಲದೆ ಸಹಾಯಮಾಡುವ ದಾತೃಗಳಿಂದ ಮಾತ್ರವೇ ಧನಶೇಖರವನ್ನು ಮಾಡತಕ್ಕುದೆಂದೂ ಗೊತ್ತಾದ ಪ್ರಕಾರ ಆ ಸಭೆಯಲ್ಲೇ ೬೨ ಸಹಸ್ರ ರೂ.ಗಳ ವಾಗ್ದಾನವಾಗಿ ೩೩ ಸಹಸ್ರ ರೂ.ಗಳು ನಗದಾಗಿ ಕೂಡಿ ಹೋದ ಸಂಗತಿಯು ನಮ್ಮ ಪತ್ರಿಕಾವಾಚಕರಿಗೆ ಗೊತ್ತೇ ಇದೆ. ಈ ಚಿರಸ್ಥಾಯಿ ಫಂಡಿನ ವ್ಯವಸ್ಥೆಗೋಸ್ಕರ ಒಂದು ಸಂಘವು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ ಇರಬೇಕೆಂದೂ ಆ ಸಭೆಯಲ್ಲೇ ಏರ್ಪಡಿಸಲ್ಪಟ್ಟುದಲ್ಲದೆ, ಆ ಸಂಘದಲ್ಲಿ ಈ ಫಂಡಿಗೆ ಹಣವನ್ನು ಕೊಟ್ಟವರೇ ಸಭಿಕರಾಗಿರಬೇಕೆಂದೂ ಈ ಸಂಘದವರು ಮಹಾಸಭೆಯ ಸ್ಥಿರತೆಗಾಗಿ ತಕ್ಕ ನಿಬಂಧನೆಗಳನ್ನೇರ್ಪಡಿಸಿ ಮಹಾಸಭೆಯ ಅವಗಾಹನೆಗೆ ತರತಕ್ಕುದೆಂದೂ, ಈ ಫಂಡಿಗೆ ವಾಗ್ದಾನಮಾಡಿರುವವರಿಂದಲೂ ಇತರರಿಂದಲೂ ಧನವನ್ನು ಶೇಖರಿಸಲಿಕ್ಕೂ ಆವಶ್ಯಕವಾದಾಗ ಮೀಟಿಂಗುಗಳನ್ನು ಜರುಗಿಸಲಿಕ್ಕೂ ಸಹ ಅಧಿಕಾರವು ಕೊಡಲ್ಪಟ್ಟಿದ್ದಿತು.

ಇಷ್ಟು ಏರ್ಪಾಟಾಗಿ ಇಲ್ಲಿಗೆ ೪ ವರ್ಷಗಳಾದುವು. ಈ ಮಧ್ಯೆ ಸಂಘದವರು ಕೆಲವು ಮೀಟಿಂಗುಗಳನ್ನು ಮಾಡಿರಬಹುದು. ಕಡೆಯಸಲ ಕಳೆದ ನವಂಬರ್ ತಾ|| ೨೦ ರಲ್ಲಿ ಬೆಂಗಳೂರಿನೊಳಗೆ ನಡೆಯಿಸಿದ ಮೀಟಿಂಗಿನ ಪ್ರೊಸಿಡಿಂಗ್ಸಿನ ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ. ಅದನ್ನು ಈ ಪತ್ರದ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಅದನ್ನು ನೋಡುವಲ್ಲಿ ದಾವಣಗೆರೆಯ ಸಭೆಯಾದೀಚೆಗೆ ೨ ಸಹಸ್ರ ರೂ.ಗಳು ಮಾತ್ರ ವಾಗ್ದಾನಮಾಡಿದವರಿಂದ ಕೊಡಲ್ಪಟ್ಟಿರುವಂತೆ ಗೊತ್ತಾಗುತ್ತದೆ. ಮೊದಲು ಮೈಸೂರು ಬ್ಯಾಂಕಿನಲ್ಲಿಟ್ಟಿದ್ದ ಹಣವನ್ನು ತೆಗೆದು ಈಚೆಗೆ ಸರ್ಕಾರಿ ಸಾಲಕ್ಕೆ ಕೊಟ್ಟು ಹೆಚ್ಚು ಬಡ್ಡಿ ಬರುವಂತೆ ಸಂಘದವರು ಮಾಡಿದುದು ಉಚಿತವಾಗಿರುತ್ತದೆ. ಈಗ್ಗೆ ಮೂಲಧನವೂ ಇದುವರೆಗೆ ಕೂಡಿರುವ ಬಡ್ಡಿಯೂ ಸೇರಿ ೪೨ ಸಹಸ್ರ ರೂ.ಗಳು ಸಂಘದ ವಶದಲ್ಲಿದೆಯೆಂದು ಗೊತ್ತಾಗುವುದು. ಈಗ್ಗೆ ಫಂಡು ವರ್ಷ ೧ಕ್ಕೆ ೨೬೪೧ ರೂ.ಗಳನ್ನು ಈಯುವುದಕ್ಕೆ ಸಿದ್ಧವಾಗಿರುತ್ತದೆ. ಫಂಡಿನ ನಿರ್ಮಾಣದ ಉದ್ದೇಶದ ಪ್ರಕಾರ ಯಾವ ಕಡೆಯಲ್ಲಿ ಮಹಾಸಭೆಯನ್ನು ನೆರವೇರಿಸುವವರಿಗಾದರೂ ಸಾಹಾಯ್ಯಾಪೇಕ್ಷೆಯಿರುವುದಾದರೆ ಈ ಬಡ್ಡಿಯನ್ನು ಕೊಡಲು ಸಂಘದವರು ನಿರ್ಧರಿಸಿ ಪ್ರಕಟಿಸಿದುದು ಯುಕ್ತವಾಗಿರುತ್ತದೆ. ಇವಿಷ್ಟು ಕಾರ್ಯವನ್ನು ಮಾಡಲು ಸಂಘದವರು ಇಷ್ಟು ಸಾವಕಾಶಮಾಡುವುದಕ್ಕಿಂತಲೂ ಪ್ರಥಮ ವರ್ಷದಲ್ಲೇ ಮುಗಿಯಿಸಿದ್ದರೆ ಚೆನ್ನಾಗಿರುತ್ತಿದ್ದಿತು.

ಈ ನಿಧಿಯು ಒಂದುಲಕ್ಷ ರೂ. ಗಳವರೆಗಾದರೂ ಕೂಡಿದರೆ ನಿರಾಯಾಸವಾಗಿ ವರ್ಷಕ್ಕೆ ೫ ಸಹಸ್ರ ರೂ. ಗಳ ಬಡ್ಡಿಯು ಬರುವುದು. ಯಾವ ಬೇಡುವಿಕೆಯೂ ಆವಶ್ಯಕವಿಲ್ಲದೆ ಪ್ರತಿಯೊಂದು ಡಿಸ್ಟ್ರಿಕ್ಟಿನ ವೀರಶೈವಜನಸಾಂದ್ರತೆಯಿರುವ ಪಟ್ಟಣಗಳಲ್ಲೆಲ್ಲಾ ಪ್ರತಿವರ್ಷಕ್ಕೆ ಒಂದೊಂದುಕಡೆಯಂತೆ ಮಹಾಸಭೆಯನ್ನು ಕೂಡಿಸಿ, ಆಯಾಸುತ್ತಿನ ಜನರಲ್ಲಿ ಕರ್ತವ್ಯಜ್ಞಾನವನ್ನೂ ಮತಾಭಿಮಾನವನ್ನೂ ಹುಟ್ಟಿಸಲು ಎಷ್ಟೋ ಅವಕಾಶವಾಗುತ್ತದೆ. ನಿರವಚ್ಛಿನ್ನವಾಗಿ ಮಹಾಸಭೆಯು ಈ ೩-೪ ವರ್ಷಗಳಲ್ಲಿ ನಡೆದಿದ್ದರೆ ವಾಗ್ದಾನವಾಗಿರುವ ೬೨ ಸಾವಿರ ರೂ. ಗಳೂ ಕೈಗೆಬಂದು ಇನ್ನು ಹೆಚ್ಚಿನ ವಾಗ್ದಾನವೂ ಆಗದೆ ನಿಲ್ಲುತ್ತಿರಲಿಲ್ಲ. ದುರ್ದೈವದಿಂದ ಬೀರೂರಿನ ಸಭೆಯಲ್ಲಿ ಆವಶ್ಯಕವಾಗಿದ್ದ ಮಹತ್ಕಾರ್ಯಗಳೊಂದೂ ಸಾಗದೆಹೋದುವು. ಫಂಡಿಗೆ ವಾಗ್ದಾನಮಾಡಿರುವ ಮಹನೀಯರುಗಳು ಮಹಾಸಭೆಯಲ್ಲಿ ಮಾಡಿಕೊಟ್ಟ ಭಾಷೆಗೆ ಭಂಗ ತಂದುಕೊಳ್ಳಬಾರದೆಂಬುದರ ಕಡೆಗೂ ಚಿರಕಾಲಿಕವಾಗಿ ಶಾಶ್ವತ ಫಲಪ್ರದವಾದ ಸಮಾಜದ ಸೇವಾರೂಪ ಈ ಪರಮಪವಿತ್ರ ಮಹಾಪ್ರತಿಷ್ಠಾಪನೆಯ ಮಹತ್ವದಕಡೆಗೂ ಗಮನವಿತ್ತು ತಮ್ಮ ವಾಗ್ದಾನವನ್ನು ಶೀಘ್ರವಾಗಿ ಸಲ್ಲಿಸಿದರೆ ಎಷ್ಟೋ ಅನುಕೂಲವಾಗುವುದು.

ಮತ್ತು ಬೀರೂರಿನ ಸಭೆಯಾಗಿ ೨ ವರ್ಷಗಳು ಕಳೆದುಹೋದುವು. ಈವರ್ಷದ ಬೇಸಗೆಕಾಲದಲ್ಲಾಗಲೀ ಅಥವಾ ಕ್ರಿಸ್ತುಮಸ್‌ರಜಾ ದೊರೆಯುವ ಡಿಶಂಬರ್ ತಿಂಗಳಲ್ಲಾಗಲಿ ಇದುವರೆಗೆ ಮಹಾಸಭೆಯು ನೆರೆಯದಿರುವ ಮುಖ್ಯಸ್ಥಲಗಳಲ್ಲೊಂದುಕಡೆ ನಡೆಯಿಸುವುದು ಉಚಿತವಾಗಿರುತ್ತದೆ. ಮಹಾಸಭೆಯನ್ನು ನೆರವೇರಿಸುವಂಥ ಮಹಾಪ್ರಯತ್ನಕ್ಕೆ ನಡುಕಟ್ಟಿದವರು ಚಿರಸ್ಥಾಯಿಫಂಡಿನ ಆಶ್ರಯವನ್ನೇ ನಿರೀಕ್ಷಿಸಿಕೊಂಡಿರಲಾರರಾದರೂ, ಸಿದ್ಧವಾಗಿರುವ ಸಹಾಯವನ್ನು ಒದಗಿಸಿಕೊಳ್ಳುವುದೇನೂ ತಪ್ಪಲ್ಲ. ಮತ್ತು ಅವರಿಗೆ ಇದರ ಸಾಹಾಯ್ಯದಿಂದ ಧನವ್ಯಯಭಾರವು ಎಷ್ಟೋ ಹಗುರವಾಗುವುದರಲ್ಲಿ ಸಂಶಯವಿಲ್ಲ. ಅಂಥ ಉತ್ತೇಜನಕ್ಕಾಗಿಯೇ ಫಂಡಿನ ಪ್ರತಿಷ್ಠಾಪನೆಯಾಗಿರುತ್ತದೆ. ಈ ವಿಷಯವನ್ನು ಆಯಾಯ ಮುಖ್ಯಸ್ಥಲಗಳ ವೀರಶೈವ ಮಹನೀಯರು ಪರ್ಯಾಲೋಚಿಸುವವರಾಗಬೇಕು.

ಸದ್ಯದಲ್ಲಿ ನಮಗೆ ತೋರುವ ವಿಚಾರವೇನೆಂದರೆ—ದಾವಣಗೆರೆಯ ಸಭೆಯಾದೀಚೆಗೆ ಮೈಸೂರಿನಲ್ಲಿ ಮುಂದಣ ಸಭೆಯನ್ನು ನೆರೆಯಿಸಬೇಕೆಂದು ಇಲ್ಲಿಯ ಅಭಿಮಾನಿಗಳಲ್ಲನೇಕರ ಕುತೂಹಲವಾಗಿದ್ದಿತು, ಅದಕ್ಕಾಗಿ ಪ್ರಯತ್ನವೂ ನಡೆದಿದ್ದಿತು. ಮಧ್ಯೆ ಬೀರೂರಿನವರ ಕುತೂಹಲವು ಹೆಚ್ಚಾಗಿ ಸನ್ನಾಹಗಳು ಹೆಚ್ಚಾಗಿ ನಡೆದಿದ್ದುದರಿಂದ ಮೈಸೂರಿನವರು ತಮ್ಮ ಯತ್ನವನ್ನು ಉಪಸಂಹರಿಸಿಕೊಳ್ಳಬೇಕಾಯಿತು. ಆ ತಮ್ಮ ಉದ್ದೇಶವನ್ನು ಕೈಗೂಡಿಸಲಿಕ್ಕೆ ಮೈಸೂರು ಡಿಸ್ಟ್ರಿಕ್ಟ್ ವೀರಶೈವರಿಗೆ ಇದು ಸುಸಮಯವಾಗಿದೆ. ಸಾಮಾಜಿಕ ವಿಷಯದಲ್ಲಿ ಇತರ ಪ್ರಾಂತಗಳೆಲ್ಲಕ್ಕಿಂತಲೂ ಅಗ್ರೇಸರರಾಗಿ ಕೆಲಸ ಮಾಡಿ ಹೆಸರ್ಗೊಂಡ ಮೈಸೂರಿನಲ್ಲಿ ಮಹಾಸಭೆಯ ನಿರ್ವರ್ತನದಂಥ ಸಾಮಾಜಿಕ ಮುಖ್ಯಕಾರ್ಯವು ಒಂದುಸಲವೂ ನಡೆಯದೆ ಹೋಗಿರುವುದು ಇಲ್ಲಿಯ ವೀರಶೈವ ಮಹಾಜನರ ಸಾಮಾಜಿಕ ಪ್ರತಿಷ್ಠೆಗೆ ಕುಂದಕವೆಂದೇ ತೋರುವುದು. ಅಲ್ಲದೆ ವೀರಶೈವ ಜನವರ್ಗದಲ್ಲಿ ಚಿರಕಾಲದಿಂದಲೂ ವಿಶೇಷಾಭಿಮಾನವನ್ನಿಟ್ಟುಕೊಂಡು ಬಂದಿರುವ ಶ್ರೀಮನ್ಮಹಾರಾಜರವರ ವಾಸಸ್ಥಲವಾದ ಈ ಪಟ್ಟಣದಲ್ಲಿ ಅವರ ಪ್ರತ್ಯಕ್ಷದಲ್ಲಿ ಇಂಥ ಸಭೆಯನ್ನು ಕೂಡಿಸುವುದರ ಮಹತ್ವವು ಅತ್ಯಂತವಾಗಿರುವುದು. ಅಲ್ಲದೆ ಇಲ್ಲಿ ಕೂಡುವಸಭೆಗೆ ಎಲ್ಲ ಪ್ರಾಂತದ ಪ್ರತಿನಿಧಿಗಳೂ ವಿಶೇಷವಾಗಿ ನೆರೆಯಬಹುದಾದ್ದರಿಂದ ಸಭಾಕಾರ್ಯಗಳು ಅಭೂತಪೂರ್ವವಾದ ವಿಜೃಂಭಣೆಯಿಂದ ಸಾಂಗವಾಗುವುವೆಂಬುದಕ್ಕೆ ಸಂಶಯವಿಲ್ಲ. ಇದನ್ನು ಈ ಡಿಸ್ಟ್ರಿಕ್ಟಿನ ಮತ್ತು ರಾಜಧಾನಿಯ ಪ್ರಮುಖ ವೀರಶೈವರೆಲ್ಲರೂ ಗಮನಿಸಿ ಕರ್ತವ್ಯತತ್ಪರರಾಗದೆ ಇರಲಾರರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತಗಳು.

ಬರುವ ಫೆಬ್ರವರಿ ಎರಡನೆವಾರ ಹಿರಿಯೂರು ತಾಲ್ಲೂಕು ಮರಡಿಹಳ್ಳಿಯಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ರೆಡ್ಡಿ ಎರಡನೆ ಮಹಾಸಭೆಯು ಮಿ|| ಸಿ. ರಾಮಲಿಂಗರೆಡ್ಡಿ, ಎಂ. ಎ., ಯವರ ಅಧ್ಯಕ್ಷತೆಯಲ್ಲಿ ನೆರೆಯಲು ಏರ್ಪಾಡು ನಡೆಯುತ್ತಿರುವುದಾಗಿ ತಿಳಿಯಬರುತ್ತದೆ.

ಬೊಂಬಾಯಿ ಕರ್ನಾಟಕದಲ್ಲಿ ಇಬ್ಬರು ವೀರಶೈವಬಂಧುಗಳಿಗೆ ಎಂದರೆ ಗದಗಿನ ಶ್ರೀಮಂತರಾದ ಮ|| ಶಿವಪ್ಪಮಾಸ್ತಿಯವರಿಗೂ ಹುಬ್ಬಳ್ಳಿಯ ಮ|| ಚೆನ್ನಬಸಪ್ಪ ಶಿರಹಟ್ಟಿಯವರಿಗೂ ರಾವ್‌ಸಾಹೇಬ್ ಪದವಿಗಳು ಕೊಡಲ್ಪಟ್ಟಿರುವುದನ್ನು ತಿಳಿಯಿಸುವುದಕ್ಕೆ ಸಂತೋಷಿಸಿ ಆ ಉಭಯರನ್ನೂ ಈ ಮೂಲಕ ಅಭಿನಂದಿಸುತ್ತೇವೆ.

ನೂತನವರ್ಷದ ಬಿರುದಾವಳಿಗಳಲ್ಲಿ ನಮ್ಮ ಸಂಸ್ಥಾನದ ಉದ್ಯೋಗಿಗಳಲ್ಲಿ ಯಾರಿಗೂ ಯಾವ ಪ್ರಶಸ್ತಿಯೂ ಲಭಿಸಲಿಲ್ಲ. ಬೆಂಗಳೂರು ಕಂಟೋನ್ಮೆಂಟಿನ ಮ್ಯು|| ವೈಸ್‌ಪ್ರೆಸಿಡೆಂಟರಾದ ಮ|| ಸಿ. ಎಚ್. ಸೂರ್ಯನಾರಾಯಣರಾಯರಿಗೆ ರಾಯಬಹದ್ದೂರ್ ಬಿರುದೂ, ರೆಸಿಡೆನ್ಸಿ ಸರ್ಜನರಾದ ಲೆ|| ಕರ್ನಲ್ ಸ್ಟ್ಯಾಂಡೇಜ್‌ರವರಿಗೆ ಸಿ. ಐ. ಇ. ಬಿರುದೂ ಕೊಡಲ್ಪಟ್ಟಿವೆ.

ಬೆಂಗಳೂರಿನಲ್ಲಿ ಮ|| ದೇಶದ ಯಜಮಾನ್ ಬಸಪ್ಪನವರಿಗೂ ಮ|| ವೈ. ಜಿ. ಸಿದ್ಧವೀರಪ್ಪನವರಿಗೂ ಕ್ರಿಮಿನಲ್ ಕೋರ್ಟಿನಲ್ಲಿ ೨ ವರ್ಷಗಳಿಂದಲೂ ನಡೆಯುತ್ತಿದ್ದ ಕ್ರಿಮಿನಲ್ ಮಾನನಷ್ಟದ ವ್ಯಾಜ್ಯವು ಕಳೆದ ತಾ|| ೯ ರಲ್ಲಿ ಉಭಯಪಕ್ಷದವರೂ ಕೊಟ್ಟ ರಾಜೀನಾಮೆಯ ಮೂಲಕ ವಜಾ ಆಯಿತೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಸ್ವಸಮಾಜದೊಳಗೆ ಬಗೆಹರಿಸಿಕೊಳ್ಳಬಹುದಾದ ಇಂಥ ವಿಷಯಗಳನ್ನು ಕೋರ್ಟಿಗೆ ಹತ್ತುವವರೆಗೆ ಬಿಟ್ಟರೂ ಇಲ್ಲಿಯವರೆಗೂ ಅದು ಶಾಂತವಾಗದೆ ಇದ್ದುದೂ ಬಹಳ ಕೊರತೆಯಾಗಿದ್ದಿತು. ಉಭಯಪಕ್ಷದವರೂ ದೊಡ್ಡಮನಸ್ಸುಮಾಡಿ ಹೀಗೆ ಪರಿಹರಿಸಿಕೊಳ್ಳುವಲ್ಲಿ ಮಧ್ಯಸ್ಥಗಾರರಾಗಿದ್ದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು, ದಾವಣಗೆರೆಯ ಮ|| ಟಿ. ಷಡಕ್ಷರಪ್ಪಯ್ಯನವರು, ಉರುವುಕೊಂಡೆ ಚನ್ನಬಸಪ್ಪನವರು ಮೊದಲಾದವರ ಪ್ರಯತ್ನವನ್ನು ಸಾರ್ಥಕಪಡಿಸಿದುದು ಅವರಿಗೆ ಭೂಷಣವೂ ಸಮಾಜಕ್ಕೆ ಸಂತೋಷಪ್ರದವೂ ಆಯಿತು.

ಭರತಖಂಡದ ವೃತ್ತಾಂತಗಳು.

ಈಜಿಪ್ಟಿನಿಂದ ಹಿಡಿದುಕೊಂಡು ಹೋದ ಜಗ್ಲುಲ್‌ಪಾಷಾರವನ್ನು ಸಿಲೋನ್ ದ್ವೀಪಕ್ಕೆ ತಂದಿಟ್ಟಿದ್ದಾರೆ.

ಈಸಲ ನಡೆದ ಜನಪರಿಗಣತಿಯಪ್ರಕಾರ ಬೊಂಬಾಯಿ ಪಟ್ಟಣದ ಪ್ರಜಾಸಂಖ್ಯೆ ೧೭,೬೦,೦೦ ಇದರಲ್ಲಿ ೧೦ಕ್ಕೆ ೬॥ರಂತೆ ಪುರುಷರೂ, ೩॥ರಂತೆ ಹೆಂಗುಸರೂ ಇರುವರು.

ಮುದ್ರಣಶಾಸನವನ್ನನುಸರಿಸಿ ಪಂಜಾಬಿನಲ್ಲಿ ಅನೇಕ ಪತ್ರಿಕೆಗಳು ಶಿಕ್ಷಿತವಾಗಿರುವುವು. ಕೇಸರಿ, ಪ್ರತಾಪ, ವಂದೇಮಾತರಂ, ಸ್ವರಾಜ್, ಡೆಮೊಕ್ರಟಿಕ್ ಈ ಪತ್ರಿಕೆಗಳೆಲ್ಲಾ ಒಂದೊಂದುತೆರದಲ್ಲಿ ಶಿಕ್ಷಿತಗಳಾಗಿರುವುವು.

ಮದರಾಸು ಆಧಿಪತ್ಯದ ಕೃಷ್ಣಾ ಗೋದಾವರೀ ಜಿಲ್ಲೆಗಳ ಕೆಲ ಗ್ರಾಮಗಳಲ್ಲಿ ಕಾಂಗ್ರೆಸ್ ಅಪ್ಪಣೆಯಮೇರೆ ಭೂಗಂದಾಯವನ್ನು ಸರ್ಕಾರಕ್ಕೆ ಕೊಡುವುದನ್ನು ಈವರ್ಷದ ಮೊದಲ ಕಿಸ್ತಿನಿಂದಲೇ ನಿಲ್ಲಿಸಿಬಿಡಬೇಕೆಂದು ಸಭೆಗಳಮೂಲಕ ನಿಷ್ಕರ್ಷಿಸಿಕೊಳ್ಳುತ್ತಿದ್ದಾರೆ.

ಕಲ್ಕತ್ತಾ ಬಾರಾಬಜಾರ್ ಕಾಂಗ್ರೆಸ್‌ಸಂಘಾಧ್ಯಕ್ಷನೂ ಅಖಿಲ ಭಾರತ ಕಾಂಗ್ರೆಸ್ ಸ್ವಾಮಿಸಂಘಾಧ್ಯಕ್ಷನೂ ಸ್ವತಂತ್ರ ಎಂಬ ಪತ್ರಿಕೆಯ ಸಂಪಾದಕನೂ ಆದ ಪಂಡಿತ ಅಂಬಿಕಾಪ್ರಸಾದ ವಾಜಪೇಯಿ ಎಂಬಾತನಿಗೆ ೪ ತಿಂಗಳ ಕಠಿಣಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು.

ಕಲ್ಕತ್ತಾದಲ್ಲಿರುವ ಚಾರ್ಟರ್ಡ್‌ಬ್ಯಾಂಕ್ ಆಫ್ ಇಂಡ್ಯಾದ ಅ|| ಕ್ಯಾಷಿಯರಾದ ಕೃಷ್ಣಚಂದ್ರಘೋಸ್ ಎಂಬಾತನು ನಂಬುಗೆಯ ದ್ರೋಹದಿಂದ ಮೋಸದ ರುಜುಗಳನ್ನು ಮಾಡಿ ಕಳ್ಳತನದಿಂದ ೨,೨೭,೦೦೦ ರೂ. ಗಳ ಲಂಡನ್ ಬ್ಯಾಂಕ್ ಪತ್ರಗಳನ್ನು ಅಪಹರಿಸಿದನೆಂಬ ತಪ್ಪಿತದಮೇಲೆ ಹಿಡಿಯಲ್ಪಟ್ಟಿದ್ದಾನೆ.

ಅಲಹಾಬಾದಿನಲ್ಲಿ ಪಂಡಿತ ಮದನಮೋಹನಮಾಳವ್ಯರವರ ಕುಮಾರ ಗೋವಿಂದಮಾಳವ್ಯರವರೂ ಮದನಮೋಹನರ ಅಣ್ಣನಮಗನಾದ ಕೃಷ್ಣಕಾಂತಮಾಳವ್ಯರವರೂ ಇನ್ನಿಬ್ಬರೂ ಸಹ ಪಟ್ಟಣಿಗರೆಲ್ಲರೂ ಸ್ವಚ್ಛಂದಸೇವಕರಾಗಿ ಸೇರಬೇಕೆಂದು ಬೋಧಿಸಿದರೆಂಬ ತಪ್ಪಿತದಿಂದ ೧ ವರ್ಷ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟರು.

ಭರತಖಂಡದ ಎಲ್ಲಪಕ್ಷದ ರಾಜಕೀಯನಾಯಕರೂ ಪ್ರಕೃತರಾಜಕೀಯ ಸ್ಥಿತಿಯನ್ನು ಕುರಿತು ಸಮಾಲೋಚಿಸಲಿಕ್ಕಾಗಿ ಬೊಂಬಾಯಿಯಲ್ಲಿ ತಾ|| ೧೪-೧೫ನೆ ದಿವಸ ಸರ್ ಕವಾಸ್ಜಿ ಜಹಂಗೀರ್‌ರವರ ಹಾಲಿನಲ್ಲಿ ಸರ್ ಶಂಕರನ್‌ನಾಯರ್‌ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಅದಕ್ಕೆ ಮ|| ಗಾಂಧಿ, ಮಾಳವ್ಯ ಮೊದಲಾದವರೆಲ್ಲಾ ಸೇರಿರುವರು.

ಪಂಡಿತ ಮದನಮೋಹನಮಾಳವ್ಯರವರು ಕಾಂಗ್ರೆಸ್ ಸಂಪ್ರದಾಯಕ್ಕೆ ಅನುಸರಿಸಿ ಕ್ರೀಡಿಗೆ ರುಜುಹಾಕಿರುವರು. ಹೀಗೆ ಯಾರು ರುಜುಮಾಡಿದರೂ ಆ ಮಾತ್ರದಿಂದ ಅವರು ಅಸಹಾಯೋದ್ಯಮಕ್ಕೂ ಅಂಗೀಕರಿಸಿದರೆಂದು ಅಭಿಪ್ರಾಯವಲ್ಲವಂತೆ. ಅಸಹಾಯವಾದಿಗಳೂ ಸಹಾಯವಾದಿಗಳೂ ಎಲ್ಲರೂ ಕಾಂಗ್ರೆಸ್‌ಸಭಿಕರಾಗಿರಬಹುದು. ಮುಖ್ಯವಾಗಿ ಸಂಖ್ಯೆ ಹೆಚ್ಚಿದರೆಸರಿ.

ಸರ್ವೆಂಟ್ ಎಂಬ ಪತ್ರಿಕೆಯ ಸಂಪಾದಕರೂ ಬಂಗಾಳಾ ಪ್ರಾಂತಿಕ ಕಾಂಗ್ರೆಸ್ ಸಂಘದ ಅಧ್ಯಕ್ಷರೂ ಆಗಿದ್ದ ಶ್ಯಾಮಸುಂದರ ಚಕ್ರವರ್ತಿಯವರು ಒಂದಾನೊಂದು ಖಿಲಾಫತ್ ಕೇಸಿನಲ್ಲಿ ದಂಡಾಧಿಕಾರಿಯಿದಿರಿಗೆ ಸಾಕ್ಷ್ಯಕೊಡಲು ನಿರಾಕರಿಸಿದುದರಿಂದ ೩ ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಅದರ ಮೇಲೆ ಈಗ ಮತ್ತೊಂದು ಕೇಸು ಅವರ ಮೇಲೆ ಮಾಡಲ್ಪಟ್ಟು ವಿಚಾರಣೆ ನಡೆಯುತ್ತಿದೆ

ಮದ್ರಾಸಿಗೆ ಯುವರಾಜರು ದಯಮಾಡಿಸಿದ ದಿವಸ ಸಂಪೂರ್ಣ ಹರತಾಳವನ್ನು ಮಾಡಿಸಬೇಕೆಂದು ಕಾಂಗ್ರೆಸ್‌ಭಕ್ತರು ಬಹಳ ಪ್ರಯತ್ನವನ್ನು ಮಾಡಿದ್ದರು ಪ್ರಭುತ್ವದವರೂ ಜಸ್ಟಿಸ್ ಪಕ್ಷದವರೂ ಅದಕ್ಕೆ ವಿರುದ್ಧ ಪ್ರಯತ್ನಗಳನ್ನು ಅನೇಕ ಪ್ರಕಾರವಾಗಿ ಮಾಡಿದ್ದುದಲ್ಲದೆ ಆಧಿಪತ್ಯದ ನಾನಾಭಾಗಗಳಿಂದ ಬರುವ ವಿದ್ಯಾರ್ಥಿಗಳಿಗೆ ದಾರಿಯ ವೆಚ್ಚ ಮೊದಲಾದುವುಗಳನ್ನು ಕೊಡುವೆವೆಂದು ಪ್ರೋತ್ಸಾಹಿಸಿದ್ದರು. ಉಭಯಪಕ್ಷವೂ ತಕ್ಕಮಟ್ಟಿಗೆ ಜಯಶೀಲವಾಯಿತೆಂತಲೇ ತೋರುವುದು.

ಭರತಖಂಡದ ಉಗ್ರವಾದಿಪಕ್ಷಕ್ಕೆ ಸೇರಿದ ಎಸ್. ಎನ್. ಘೋಷ್ ಎಂಬುವನು ಅಮೇರಿಕಾದಲ್ಲಿದ್ದಾನೆ. ಈತನು ನಿನ್ನೆ ಅಹಮ್ಮದಾಬಾದಿನಲ್ಲಿ ಕೂಡಿದ್ದ ರಾಷ್ಟ್ರೀಯ ಸಭೆಯು ಪ್ರಜಾಸ್ವಾಮ್ಯಪ್ರಭುತ್ವವನ್ನು ಪ್ರಕಟಿಸಿತೆಂದೂ, ಆತ್ಮರಕ್ಷಣಾರ್ಥವಾಗಿ ದೌರ್ಜನ್ಯವನ್ನುಕೂಡ ಪ್ರಜೆಗಳು ಆಚರಿಸಬಹುದೆಂದು ತೀರ್ಮಾನಿಸಿತೆಂದೂ ಸುದ್ದಿಯನ್ನು ಆ ದೇಶದಲ್ಲಿ ಹರಡಿದನು. ಇದು ಸುಳ್ಳುಸುದ್ದಿಯೆಂದೂ ದೌರ್ಜನ್ಯಾವಲಂಬನೆ ಮಾಡಕೂಡದೆಂದು ಆ ಸಭೆಯು ತೀರ್ಮಾನಿಸಿತೆಂದೂ ನಿಜಸ್ಥಿತಿಯನ್ನು ಭಾರತದೇಶ ಕಾರ್ಯಾಲಯದವರು ಮತ್ತೊಂದು ಪ್ರಕಟನೆಯನ್ನು ಮಾಡಿದರು.

ಲಾಲಾಲಜಪತರಾಯಿಯವರ ವಿಚಾರಣೆಯೆಲ್ಲಾ ಲಾಹೋರ್ ಸೆಂಟ್ರಲ್‌ಜೈಲಿನಲ್ಲಿ ಮುಗಿದು ಇಂ|| ಪೀ|| ಕೋಡು ೧೪೫ನೆ ಸೆಕ್ಷನ್ನನುಸರಿಸಿ ೧ ವರ್ಷ ಕಠಿಣಕಾರಾಗೃಹವಾಸ ಶಿಕ್ಷೆಯೂ, ರಾಜದ್ರೋಹಸಭಾ ಶಾಸನದಮೂಲಕ ಮತ್ತೆ ೬ ತಿಂಗಳ ಸಾಮಾನ್ಯ ಕಾರಾಗೃಹವಾಸಶಿಕ್ಷೆಯೂ ೫೦೦ ರೂ. ಅರ್ಥದಂಡವೂ ವಿಧಿಸಲ್ಪಟ್ಟುವು. ಡಾಕ್ಟರು ಸಂತಾನಂ ಮತ್ತು ಗೋಪಿಚಂದ್ ಮಲ್ಲಿಕ್ ಮೊದಲಾದ ನಾಲ್ವರಿಗೂ ಹೀಗೆಯೇ ಸ್ವಲ್ಪ ಹೆಚ್ಚುಕಡಿಮೆ ಶಿಕ್ಷೆಗಳು ವಿಧಿಸಲ್ಪಟ್ಟುವು. ಆದರೆ ಪಂಜಾಬು ಸರ್ಕಾರವು ಲಜಪತರಾಯರ ಕಠಿನ ಕಾರಾಗೃಹವಾಸಶಿಕ್ಷೆಯನ್ನು ತೆಗೆದುಹಾಕಿತು.

ಸಿವಿಲ್ ಆಜ್ಞೋಲ್ಲಂಘನವನ್ನು ಆಯಾ ಪ್ರಾಂತದ ಸ್ಥಿತಿಗತಿಗಳನ್ನು ನೋಡಿಕೊಂಡು ಆಚರಣೆಗೆ ತರುವ ಸ್ವಾತಂತ್ರ್ಯವನ್ನು ರಾಷ್ಟ್ರೀಯ ಸಭೆಯವರು ಅಲ್ಲಲ್ಲಿಯ ಸಂಘಗಳಿಗೇ ಒಪ್ಪಿಸಿಬಿಟ್ಟಿದ್ದಾರೆ. ಇಂಥ ಆಜ್ಞೋಲ್ಲಂಘನಪ್ರಯತ್ನಗಳು ಅಲ್ಲಲ್ಲಿ ಜರುಗುತ್ತಿರುವ ವಾರ್ತೆಗಳು ಆಗಲೇ ಬರುತ್ತಿವೆ. ಆದರೆ ಈ ವಿಷಯವಾಗಿ ಪಂಜಾಬು ಸರ್ಕಾರದವರು ಒಂದುಅಪ್ಪಣೆಯನ್ನು ಈಗ ತಾನೇ ಹೀಗೆ ಪ್ರಕಟಿಸಿದ್ದಾರೆ—ಆಜ್ಞೋಲ್ಲಂಘನೆಯೆಂಬುದು ದೇಶದ ಶಾಂತಿಯುತಾಭಿವೃದ್ಧಿಗೆ ಭಂಗಕರವಾದ ದೊಡ್ಡ ತಪ್ಪಿತವು. ಇದುವರೆಗೆ ಅವಲಂಬಿಸಿದ್ದ ನಿರ್ಬಂಧವಿಧಾನಗಳಿಗಿಂತಲೂ ಅತ್ಯಂತ ಕಠಿನತರವಾದ ಚರ್ಯೆಗಳನ್ನವಲಂಬಿಸಿ ಅದನ್ನು ಅಣಗಿಸತಕ್ಕುದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರದ ಉದ್ಯೋಗಿಗಳೂ ಪೆನ್‌ಷನ್ಡ್ ಉದ್ಯೋಗಿಗಳೂ ಅಂಥ ತಪ್ಪಿತಕ್ಕೆ ಈಷನ್ಮಾತ್ರ ಪಾತ್ರರಾದರೂ ಸರ್ಕಾರವು ಸಹಿಸುವುದಿಲ್ಲ. ಕ್ರಮಪರಿಪಾಲನವನ್ನು ದೃಢಪಡಿಸಲಿಕ್ಕೆ ಆವಶ್ಯಕವಾದಷ್ಟು ಹೆಚ್ಚು ಪೋಲೀಸು ಸಿಬ್ಬಂದಿಯನ್ನು ಹೊಸದಾಗಿ ನಿಯಮಿಸಬೇಕಾಗುವುದು. ಅದರಿಂದ ಸರ್ಕಾರಕ್ಕೆ ವೆಚ್ಚವು ಹೆಚ್ಚುವುದು. ಅದುಕಾರಣ ಪ್ರಭುತ್ವಕ್ಕೂ ದೇಶಕ್ಕೂ ನಿಜವಾಗಿ ಹಿತವನ್ನು ಕೋರುವವರೆಲ್ಲರೂ ಚೆನ್ನಾಗಿ ಕಣ್ಣುಬಿಟ್ಟು ವಿಚಾರಮಾಡಿ ಈ ಆಜ್ಞೋಲ್ಲಂಘನದಿಂದ ಉಂಟಾಗತಕ್ಕ ಅನರ್ಥಗಳನ್ನು ತಿಳಿದುಕೊಂಡು ಅದನ್ನಣಗಿಸಲಿಕ್ಕೆ ಶ್ರದ್ಧೆಯಿಂದ ಕೆಲಸಮಾಡಬೇಕು ಎಂದು ಪ್ರಕಟಿಸಿದ್ದಾರೆ.

ಮಲಬಾರಿನಲ್ಲಿ ಗದ್ದಲವೆಲ್ಲಾ ಕೊನೆಮುಟ್ಟುತ್ತ ಬಂದಿದೆ. ಮಾಪಿಳ್ಳಾನಾಯಕರಲ್ಲಿ ಚಂಬರಾಸಿ ತಂಗಲ್, ಸೀತಕೋಯಿತಂಗಲ್ ಮೊದಲಾದ ನಾಲ್ಕು ಮಂದಿಗಳಿಗೆ ಮರಣದಂಡನೆಯನ್ನು ಮಾರ್ಷಲ್ ಕೋರ್ಟಿನವರು ವಿಧಿಸಿದ್ದರು. ತಾ|| ೯ರಲ್ಲಿ ಇವರನ್ನೆಲ್ಲಾ ಮಾಲಾಪುರದಲ್ಲಿ ಗುಂಡು ಹೊಡೆದು ಕೊಂದರು. ಏರಿಯ ಕುನ್ಹತ್‌ಕುಮ್ಮದ್‌ಹಾಜಿ ಎಂಬ ನಾಯಕನೂ ಅವನ ಅನುಚರರಾದ ೨೧ ಮಂದಿಗಳೂ ೩೦೦ ತುಪಾಕಿಗಳೊಡನೆ ಪೋಲೀಸರಿಗೆ ವಶರಾದರು. ಕಳೆದ ತಾ|| ೬ ರಲ್ಲಿ ಬೊಂಬಾಯಿಯಲ್ಲಿ ಸರ್ ಜೇಮ್‌ಸೆಟ್ಜಿ ಜೀಜೀಭಾಯಿಯವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆ ಕೂಡಿ ಮಲಬಾರಿನಲ್ಲಿ ವಿಪನ್ನಾವಸ್ಥೆಗೆ ಗುರಿಯಾಗಿರುವವರಿಗೆ ಸಹಾಯಕವಾಗಿ ಫಂಡನ್ನು ಕೂಡಿಸಿಕೊಡುವ ತೀರ್ಮಾನವಾಯಿತು. ಕಲ್ಲಿಕೋಟೆಯಲ್ಲಿ ಕಳೆದ ತಾ|| ೮ ರಲ್ಲಿ ಅಲ್ಲಿಯ ೩ನೆ ಜಾಮರಿನ್ ರಾಜರವರ ಅಧ್ಯಕ್ಷತೆಯಲ್ಲಿ ೧ ಸಭೆ ಕೂಡಿದ್ದು ಹಾಳಾಗಿ ಹೋಗಿರುವ ಮಲಬಾರು ಪ್ರಾಂತವನ್ನು ಮರಳಿ ಪೂರ್ವದ ಉನ್ನತಸ್ಥಿತಿಗೆ ತರಲು ಪ್ರಭುತ್ವದ ಮತ್ತು ಪ್ರಜೆಗಳ ಸಹಾಯದಿಂದ ಕೃಷಿ ಮಾಡತಕ್ಕುದು ಆವಶ್ಯಕವೆಂದು ನಿರ್ಧಾರಿತವಾಯಿತು. ಮಲಬಾರುಪುನರ್ನಿರ್ಮಾಣ ಸಂಘವೆಂಬ ಹೆಸರಿನಿಂದ ಒಂದು ಸಂಘವು ಸ್ಥಾಪಿಸಲ್ಪಟ್ಟಿತು. ಕಲ್ಲಿಕೋಟೆಯ ಜಾಮರಿನ್ ರಾಜರು ಅದರ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅದನ್ನು ಪೂರ್ವಸ್ಥಿತಿಗೆ ತರಬೇಕಾದರೆ ೧೦ ವರ್ಷಕಾಲ ಬೇಕೆಂದೂ, ಹಿಂದೂಮಹಮ್ಮದೀಯ ಪ್ರಜೆಗಳಲ್ಲಿ ವಿದ್ಯಾಭಿವೃದ್ಧಿಮಾಡಿ ಐಕಮತ್ಯವನ್ನು ಹೆಚ್ಚಿಸುವುದು ಮುಖ್ಯಕಾರ್ಯವೆಂದೂ ಸಭೆಯಲ್ಲಿ ಕೆಲವರು ಉಪನ್ಯಾಸಮಾಡಿದರು.

ರಡ್ಡಿ ಜನರ ಮಹಾಸಭೆಯು ಕರ್ನೂಲ್ ಪಟ್ಟಣದಲ್ಲಿ ಕಳೆದ ತಿಂಗಳು ತಾ|| ೨೮ರಲ್ಲಿ ಪನಪರ್ತಿ ಮಹಾರಾಜರವರ ಅಧ್ಯಕ್ಷತೆಯಿಂದ ನೆರೆದಿತು. ಹೈದರಾಬಾದ್ ಧಾರ್ವಾಡ ಮೈಸೂರು, ಬೊಂಬಾಯಿಪ್ರಾಂತ ಮದ್ರಾಸು ಆಧಿಪತ್ಯ ಅನೇಕ ಭಾಗಗಳಿಂದೆಲ್ಲಾ ಬಹುಮಂದಿ ಪ್ರತಿನಿಧಿಗಳು ಸೇರಿದ್ದರು. ತಮ್ಮ ಸಮಾಜದ ಸಾಂಘಿಕ ಮತ್ತು ವಿದ್ಯಾವಿಷಯಕ ಸುಧಾರಣೆಗಳಿಗಾಗಿಯೇ ಏರ್ಪಟ್ಟಿರುವ ಈ ಸಂಘದವರು ಕಳೆದ ವರ್ಷ ನೆರವೇರಿಸಿದ ಕಾರ್ಯವಿವರಣವು ಓದಲ್ಪಟ್ಟಿತು. ಇದುವರೆಗೆ ೧೮ ಸಾವಿರ ರೂ. ಗಳು ಫಂಡಿಗೆ ಕೂಡಿದೆಯಂತೆ. ಸಭಾಧ್ಯಕ್ಷರು ವರ್ಷಕ್ಕೆ ೨೪೦೦ ರೂ. ಬಡ್ಡಿ ಬರುವಷ್ಟು ದ್ರವ್ಯವನ್ನು ಸಹಾಯಮಾಡುವೆವೆಂದು ವಾಗ್ದಾನವಿತ್ತರು. ರಡ್ಡಿ ಹೆಂಗುಸರಲ್ಲಿ ಮೊದಲನೆ ಗ್ರಾಜುಯೇಟಾದ ಕೆ. ಅನ್ನಪೂರ್ಣಮ್ಮ ಎಂಬಾಕೆಗೆ ೧ ಭಂಗಾರದ ಪದಕವು ಕೊಡಲ್ಪಟ್ಟಿತು. ಸಭೆಯಲ್ಲಿ ಮ|| ಗಳಾದ ಕೆ. ಎಚ್. ರಾಮಯ್ಯನವರು, ನಲವಡಿಯವರು, ರಾಮಲಿಂಗರಡ್ಡಿಯವರೇ ಮೊದಲಾದ ವಾಗ್ಮಿಗಳು ವಿದ್ಯಾಭಿವೃದ್ಧಿಯನ್ನು ಕುರಿತು ಶ್ಲಾಘ್ಯಗಳಾದ ಭಾಷಣಗಳನ್ನು ಮಾಡಿದರು. ತಮ್ಮ ಬಾಲಬಾಲಿಕೆಯರ ವಿದ್ಯಾಭಿವೃದ್ಧಿಗಾಗಿ ಅಲ್ಲಲ್ಲಿ ಹಾಸ್ಟಲನ್ನು ಸ್ಥಾಪಿಸಿ, ವಿದ್ಯಾರ್ಥಿ ವೇತನಗಳನ್ನು ಕೊಡಬೇಕು. ಪಂಚಾಯತರಲ್ಲಿ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಬೇಕು. ದುಷ್ಪಾನ್ನಗಳನ್ನು ತ್ಯಜಿಸಬೇಕು. ಮದುವೆ ಮೊದಲಾದುವುಗಳಲ್ಲಿ ದುಂದುವೆಚ್ಚವನ್ನು ಬಿಡಬೇಕು. ಹೆಣ್ಣಿಗೆ ೧೫ ವರ್ಷ ಗಂಡಿಗೆ ೨೦ ವರ್ಷ ತುಂಬುವುದಕ್ಕೆ ಮುಂಚೆ ಮದುವೆಮಾಡಕೂಡದು. ಸಹಕಾರಸಂಘಗಳನ್ನೂ ಬ್ಯಾಂಕುಗಳನ್ನೂ ತಮ್ಮಲ್ಲಿ ಸ್ಥಾಪಿಸಬೇಕು. ಪ್ರತಿವರ್ಷದ ಜನವರಿ ತಾ|| ೧೯ರಲ್ಲಿ ವೇಮನಜಯಂತ್ಯುತ್ಸವವನ್ನು ಆಚರಿಸಬೇಕು. ಬೇಸಾಯಗಾರರು ಅವಕಾಶವಾದಾಗಲೆಲ್ಲಾ ರಾಟೆಗಳಲ್ಲಿ ನೂಲಬೇಕು. ಯುವಸಾರ್ವಭೌಮರವರು ಈ ದೇಶಕ್ಕೆ ದಯಮಾಡಿಸಿರುವುದು ತಮಗೆಲ್ಲಾ ಸಂತೋಷಕರವಾಗಿರುವುದರಿಂದ ಅವರಿಗೆ ಮನಃಪೂರ್ವಕವಾಗಿ ಸ್ವಾಗತವನ್ನಾಚರಿಸಬೇಕು. ಈರೀತಿಯ ನಿರ್ಧಾರಗಳು ಮಾಡಲ್ಪಟ್ಟುವು.

ದನಗಳ ಪ್ರದರ್ಶನ

ಹಾಸನದ ತಾಲ್ಲೂಕು ಗೊರೂರು.

ಈ ಊರಲ್ಲಿ ನಡೆಯುವ ಶ್ರೀಯೋಗಾನೃಸಿಂಹಸ್ವಾಮಿಯವರ ರಥೋತ್ಸವದ ಕಾಲದಲ್ಲಿ ತಾ|| 3-2-22ನೇ ಶುಕ್ರವಾರದ ಲಾಗಾಯ್ತು ದನಗಳ ಪರಿಷೆಯೂ ಸೇರುವುದು. ಅನೇಕ ಪ್ರಾಂತದ ದನಗಳು ಮಾರಾಟಕ್ಕೆ ಬರುವವು. ದನಗಳು ನಿಲ್ಲಲು ಅನುಕೂಲವಾದ ನೆರಳೂ ನದಿಯ ನೀರಿನ ಆಸರೆಯೂ ಇರುವುದು. ಯಾವ ವಿಧವಾದ ಸುಂಕವೂ ವಸೂಲ್ಮಾಡಲ್ಪಡುವುದಿಲ್ಲ. ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡಲಾಗುವುದು.

ಜೆ. ಶಿಲ್ವಪಿಳ್ಳೆ, ಎಂ. ಎ., ಎಲ್‌ಎಲ್.ಬಿ.,
ಪ್ರದರ್ಶನದ ಸಮಿತಿಯ ಅಧ್ಯಕ್ಷರು, ಗೊರೂರು.

ಭರತಖಂಡದ ಅಖಿಲ ವೀರಶೈವ ಮಹಾಸಭಾ ಚಿರಸ್ಥಾಯಿನಿಧಿಯ ಸಂಘ.

ತಾ|| 20-11-1921 ನೆಯ ಆದಿತ್ಯವಾರ ಪ್ರಾತಃಕಾಲ 8 ಗಂಟೆಯಿಂದ ಬೆಂಗಳೂರು ಸಿಟಿಯಲ್ಲಿ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಮೇಲ್ಕಂಡ ನಿಧಿಯ ದಾತೃಗಳು ಸಭೆ ಸೇರಿ ನಡೆಸಿದ ನಡವಳಿಕೆ:—

ಹಾಜರಿದ್ದವರು:—1. ಮ|| ರಾ|| ಗಳಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ.ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ. (ಸಭಾಧ್ಯಕ್ಷರು). 2. ಹೆಚ್. ಕೆ. ವೀರಬಸವಯ್ಯನವರು, ಬಿ. ಎ., ಬಿ. ಎಲ್., ಹಾಸನ, 3. ಟಿ.ಎಂ. ಷಡಕ್ಷರಪ್ಪಯ್ಯನವರು, ದಾವಣಗೆರೆ, 4. ಉರುವುಕೊಂಡೆ ಚನ್ನಬಸಪ್ಪನವರು, ದಾವಣಗೆರೆ, 5. ಆನಿಸೆಟ್ಟರ ಬಸವಲಿಂಗಪ್ಪನವರು, ದಾವಣಗೆರೆ, 6. ಪಲ್ಲಾಗಟ್ಟೆ ಗುರುಸಿದ್ದಪ್ಪನವರು, ದಾವಣಗೆರೆ, 7. ತಿಪ್ಪಣ್ಣನವರ ಮುರಿಗೆಪ್ಪನವರ ಹೇಮಗಿರಿಯಪ್ಪನವರು, ಹರಿಹರ, 8. ಮೂರುಕಲ್ ರಾಚಪ್ಪನವರು, ಹರಿಹರ, 9. ಎ. ಎಸ್. ಮಲ್ಲಪ್ಪನವರು, ಅಲೂರು, 10. ಎಸ್. ಶಿವಪ್ಪನವರು, ಬೆಂಗಳೂರು, 11. ಎಂ. ನಾಗಪ್ಪನವರು, ಬೆಂಗಳೂರು, 12. ಟಿ. ರಾಚಪ್ಪನವರು, ಬೆಂಗಳೂರು, 13. ವೈ. ಜಿ. ಚಿಕ್ಕವೀರಪ್ಪನವರು, ಬೆಂಗಳೂರು, 14. ಪಿ. ಮಹದೇವಯ್ಯನವರು, ಬಿ.ಎ.,ಬಿ.ಎಲ್. (ಸೆಕ್ರಿಟೆರಿ), 15 ಜಿ. ಕೆ. ರುದ್ರಾರ್ಯರು (ಅಸಿಸ್ಟೆಂಟ್ ಸೆಕ್ರಿಟೆರಿ).

ಪ್ರತಿನಿಧಿಗಳ (Proxies) ಮೂಲಕ ಹಾಜರಿದ್ದವರು:—

1. ಮ|| ರಾ|| ಗಳಾದ ಜಿ. ಎಂ. ಕಾಡಪ್ಪನವರು, ಶಿವಮೊಗ್ಗ, ಸಭಾಧ್ಯಕ್ಷರ ಮೂಲಕ. 2. ಪತ್ರಿ ಚಂ. ವೀರಪ್ಪಯ ನವರು, ಬೀರೂರು, ಸಭಾಧ್ಯಕ್ಷರ ಮೂಲಕ. 3. ಗೌಡರ ಸಣ್ಣಮಹಲಿಂಗಪ್ಪನವರ ಗುರುಶಾಂತಪ್ಪನವರು, ದಾವಣಗೆರೆ, ಟಿ. ಎಂ. ಷಡಕ್ಷರಪ್ಪಯ್ಯನವರ ಮೂಲಕ. 4. ಮಾಗಾನಳ್ಳಿ ಸಂಗಪ್ಪನವರು, ದಾವಣಗೆರೆ, ಸಭಾಧ್ಯಕ್ಷರ ಮೂಲಕ. 5. ದೊಗ್ಗಳ್ಳಿ ಬಸವಣ್ಣಪ್ಪನವರು, ದಾವಣಗೆರೆ, ಸಭಾಧ್ಯಕ್ಷರ ಮೂಲಕ. 6. ಪಟೇಲ್ ವಿರೂಪಾಕ್ಷಪ್ಪನವರ ಮಕ್ಕಳು ಸಿದ್ಧಲಿಂಗಪ್ಪನವರು, ಅಲಗಿಲ್ವಾಡ, ಪಲ್ಲಾಗಟ್ಟೆ ಗುರುಸಿದ್ದಪ್ಪನವರ ಮೂಲಕ. 7. ಬೆಳ್ಳೂಡಿ ಗುರುಸಿದ್ದಪ್ಪನವರು, ಕಂದನಕೋವಿ, ಗುರುಸಿದ್ದಪ್ಪನವರ ಮೂಲಕ. 8. ಎ. ಎಸ್. ಶ್ರೀಕಂಠಪ್ಪ, ಹಾಸನ, ಘನತಿ, ಇವರ ಅವಿಭಕ್ತ ಭ್ರಾತೃ ಎ. ಎಸ್. ಶಿವನಂಜಪ್ಪನವರು, ಮೈನರ್ ಗಾರ್ಡಿಯನ್ ರುದ್ರಪ್ಪನವರು, ಎ. ಎಸ್. ಮಲ್ಲಪ್ಪನವರ ಮೂಲಕ.

I. ತಾ|| 7-8-1921ರಲ್ಲಿ ನಡೆದ ಕಮಿಟಿಯ ಮಿಟಿಂಗಿನ ನಡವಳಿಕೆಗಳನ್ನು ಓದಿ ಅಂಗೀಕರಿಸಲಾಯಿತು.

II. ತಾ|| 20-11-1921ರಲ್ಲಿ ದಾತೃಗಳ ಸಭೆಯನ್ನು ಸೇರಿಸಲು ಕೊಡಲ್ಪಟ್ಟ ನೋಟೀಸನ್ನು ಓದಲಾಯಿತು.

III. ಮಹಾಸಭಾ ಚಿರಸ್ಥಾಯಿ ನಿಧಿಯ ಸ್ಥಿತಿ ತಾ|| 1-10-1921 ರಲ್ಲಿ ಈ ಕೆಳಗೆ ಕಂಡಂತೆ ಇತ್ತೆಂದು ಸಭಾಧ್ಯಕ್ಷರು ವಿವರಿಸಿದರು:—ದಾತೃಗಳು ಕೊಟ್ಟ ಒಟ್ಟು ಮೊಬಲಗು ರೂ. 34,032-0-0 ಮೈಸೂರು ಸರ್ಕಾರದ ಸೇಕಡ 6¼ ಬಡ್ಡಿಯ ಸಾಲದ ಪತ್ರ ರೂ. 37,300-0-0, ಡಿಟೋ 6¼ ಬಡ್ಡಿಯ ಸಾಲದ ಪತ್ರ ರೂ. 4,762-8-0, ಸಾಲಿಯಾನಾ ಮೇಲ್ಕಂಡ ಪತ್ರಗಳಿಂದ ಬರತಕ್ಕ ಹುಟ್ಟುವಳಿ ರೂ. 2,641-0-0.

IV. ಮಹಾಸಭಾ ಚಿರಸ್ಥಾಯಿ ನಿಧಿಯ ಮುಂದಿನ ಆಡಳಿತದ ವಿಚಾರವಾಗಿ ಸರ್ವತೋದೃಷ್ಟಿಯಿಂದ ಬಹಳಕಾಲ ಚರ್ಚೆ ನಡೆಯಿತು. ಆ ಚರ್ಚೆಯಲ್ಲಿ ಈ ಕೆಳಗೆ ಕಂಡ ಮೆಂಬರುಗಳು ಭಾಗಿಗಳಾಗಿದ್ದರು. 1. ಮ|| ರಾ|| ಗಳಾದ ಉರುವುಕೊಂಡೆ ಚನ್ನಬಸಪ್ಪನವರು, 2. ಟಿ. ಎಂ. ಷಡಕ್ಷರಪ್ಪಯ್ಯನವರು, 3. ಹರಿಹರದ ಹೇಮಗಿರಿಯಪ್ಪನವರು, 4. ಟಿ. ರಾಚಪ್ಪನವರು, 5. ವೈ. ಜಿ. ಚಿಕ್ಕವೀರಪ್ಪನವರು, 6. ಹೆಚ್. ಕೆ. ವೀರಬಸವಯ್ಯನವರು, ಬಿ. ಎ., ಬಿ. ಎಲ್. 7. ಎಂ. ನಾಗಪ್ಪನವರು, 8. ಎಸ್. ಶಿವಪ್ಪನವರು.

V. ಈ ಕೆಳಗೆ ಕಂಡ ನಿರ್ಣಯಗಳು ಸರ್ವಾನುಮತದಿಂದ ಮಾಡಲ್ಪಟ್ಟವು—1. ನಿಧಿಯ ಮೂಲಧನವನ್ನು ಮೈಸೂರು ಸರ್ಕಾರದ ಸಾಲದ ಪತ್ರಗಳಲ್ಲಿ ಶೇಖರಿಸಿರುವದನ್ನು ಒಪ್ಪಲಾಯಿತು. 2. ಕಾನ್ಪರೆನ್ಸು ಫಂಡು ಅಂದರೆ ಮಹಾಸಭಾ ನಿಧಿಯ ಆಡಳಿತವು ದಾತೃಗಳ ಕಮಿಟಿಯ ಅಧಿಕಾರದಲ್ಲಿ ಪೂರ್ಣವಾಗಿ ಇರತಕ್ಕದ್ದು. ಈ ನಿಧಿಗೆ ಮುಂದೆ ಚಂದಾಹಣವನ್ನು ಕೊಡುವವರನ್ನು ಸಹ ಆ ಕಮಿಟಿಯಲ್ಲಿ ಸೇರಿಸತಕ್ಕದ್ದು. ಫಂಡಿನ ಆಡಳಿತಕ್ಕೂ ಕೆಲಸವನ್ನು ನಡಿಸುವುದಕ್ಕೂ ಸೂಕ್ತವಾದ ನಿಬಂಧನೆಗಳನ್ನು ರಚಿಸುವುದಕ್ಕೂ ಕಮಿಟಿಗೆ ಅಧಿಕಾರವಿರತಕ್ಕದ್ದು. 3. ಹಾಗೆ ರಚಿಸಿದ ನಿಬಂಧನೆಗಳನ್ನು ಮುಂದಿನ ವೀರಶೈವ ಮಹಾಸಭೆಯಲ್ಲಿ ಅವರ ತಿಳುವಳಿಕೆಗಾಗಿಯೂ ಯಾವುದಾದರೂ ಸಲಹೆಗಳಿದ್ದರೆ ಸೂಚಿಸುವುದಕ್ಕಾಗಿಯೂ ಇಡತಕ್ಕದ್ದು. 4. ದಾತೃಗಳ ಕಮಿಟಿ ಮಿಟಿಂಗು ನಡೆಸುವುದಕ್ಕೆ ಸಾಕಾದಷ್ಟು ಮಂದಿ (quorum) 10 ಮೆಂಬರುಗಳು ಇರಬೇಕು. ಹೆಚ್ಚು ಜನರ ಸಮ್ಮತಿ ಅಂಗೀಕರಿಸಲ್ಪಡತಕ್ಕದ್ದು. ಉಭಯಪಕ್ಷದ ಸಮ್ಮತಿಗಳು ಸಮವಾದಾಗ ಅಧ್ಯಕ್ಷರಿಗೆ ಪರ್ಯವಸಾನದ ಸಮ್ಮತಿಯನ್ನು ಕೊಡುವ ಅಧಿಕಾರವಿರುವುದು. 5. ಕೋರಂ ಅಂದರೆ ಸಾಕಾದಷ್ಟು ಮಂದಿ ಇಲ್ಲದೆ ಮಿಟಿಂಗನ್ನು ಮುಂದಕ್ಕೆ ಇಟ್ಟಾಗ ಅದರ ಕೆಲಸವನ್ನು ಆ ಮುಂದಿನ ಮಿಟಿಂಗಿನಲ್ಲಿ ಕೋರಂ ಇಲ್ಲದೆ ನಡೆಸಬಹುದು.

VI. ಮ|| ರಾ|| ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ., ಯವರು ದಾತೃಗಳ ಕಮಿಟಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಅಲ್ಲದೆ ಮ|| ರಾ|| ಪಿ. ಮಹದೇವಯ್ಯ, ಬಿ. ಎ., ಬಿ. ಎಲ್., ಯವರನ್ನು ಈ ಕಮಿಟಿ ಸೆಕ್ರಿಟೆರಿಯವರಾಗಿಯೂ ಮ|| ರಾ|| ಜಿ. ಕೆ. ರುದ್ರಾರ್ಯರನ್ನು ಅಸಿಸ್ಟೆಂಟ್ ಸೆಕ್ರಿಟೆರಿಯವರಾಗಿಯೂ ಇರಬೇಕಾಗಿ ನಿಷ್ಕರ್ಷೆಯಾಯಿತು.

VII. ಮುಂದೆ ಹೇಳಲ್ಪಟ್ಟ ಮೆಂಬರುಗಳಿಂದ ಕೂಡಿದ ಒಂದು ಮ್ಯಾನೇಜಿಂಗ್‌ಕಮಿಟಿ ಅಂದರೆ ಕಾರ್ಯನಿರ್ವಾಹಕ ಸಂಘವು ನೇಮಿಸಲ್ಪಟ್ಟಿತು. 1. ಮ|| ರಾ|| ಗಳಾದ ದಿವಾನ್‌ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ. (ಸಭಾಧ್ಯಕ್ಷರು), 2. ಅಲಗಿಲ್ವಾಡದ ಪಟೇಲರು ವಿರೂಪಾಕ್ಷಪ್ಪನವರ ಮಕ್ಕಳು ಸಿದ್ಧಲಿಂಗಪ್ಪನವರು, 3. ಹೆಚ್. ಕೆ. ವೀರಬಸವಯ್ಯನವರು, ಬಿ. ಎ. ಬಿ. ಎಲ್., 4. ಟಿ. ಯಂ. ಷಡಕ್ಷರಪ್ಪಯ್ಯನವರು, 5. ಉರುವುಕೊಂಡೆ ಚನ್ನಬಸಪ್ಪನವರು, 6. ಟಿ. ರಾಚಪ್ಪನವರು, 7. ಮುರುಕಲ ರಾಚಪ್ಪನವರು ಹರಿಹರ, 8. ಎಸ್. ಶಿವಪ್ಪನವರು, 9. ಎಂ. ನಾಗಪ್ಪನವರು.

VIII. ಅವಶ್ಯಕವಾದ ನಿಬಂಧನೆಗಳನ್ನು ರಚಿಸಿ ಅವನ್ನು ದಾತೃಗಳ ಜನರಲ್‌ಕಮಿಟಿ ಮುಂದೆ ಇಡುವುದಕ್ಕೆ ಈ ಕೆಳಗೆ ಕಾಣುವ ಮೆಂಬರುಗಳಿಂದ ಕೂಡಿದ ಒಂದು ಸ್ಪೆಷಲ್‌ಕಮಿಟಿ ನೇಮಿಸಲ್ಪಟ್ಟಿತು. 1. ಮ|| ರಾ|| ಗಳಾದ ಪಲ್ಲಾಗಟ್ಟೆ ಗುರುಸಿದ್ದಪ್ಪನವರು, 2. ಟಿ. ರಾಚಪ್ಪನವರು, 3. ಹೆಚ್. ಕೆ. ವೀರಬಸವಯ್ಯನವರು, ಬಿ. ಎ, ಬಿ. ಎಲ್., 4. ಪಿ. ಮಹದೇವಯ್ಯನವರು, ಬಿ. ಎ., ಬಿ. ಎಲ್.,

IX. ಮ್ಯಾನೇಜಿಂಗ್‌ಕಮಿಟಿಯ ಮಿಟಿಂಗು ನಡೆಸುವದಕ್ಕೆ ನಾಲ್ಕು ಮೆಂಬರುಗಳು ಕೋರಂಯೆಂದು ಎಣಿಸತಕ್ಕದ್ದು. ಹೆಚ್ಚು ಜನರ ಮತವೇ ಅಂಗೀಕರಿಸಲ್ಪಡತಕ್ಕದ್ದು. ಸಮ್ಮತಿಗಳು ಸಮವಾದಾಗ ಅಧ್ಯಕ್ಷರಿಗೆ ಪರ್ಯವಸಾನದ ಸಮ್ಮತಿ ಕೊಡುವ ಅಧಿಕಾರವಿರುವುದು.

2. 1922ನೆ ವರ್ಷದ ಬೇಸಗೆ ರಜಾದಲ್ಲಿ ಅಥವಾ 1922ನೆ ಡಿಶಂಬರ್ ತಿಂಗಳಲ್ಲಿ ಯಾವುದಾದರೂ ಒಂದು ಅನುಕೂಲವಾದ ಸ್ಥಳದಲ್ಲಿ ಮುಂದಿನ ಮಹಾಸಭೆಯನ್ನು ನಡೆಸುವುದಕ್ಕೆ ವೀರಶೈವಮಹಾಜನಗಳನ್ನು ಕೇಳಿಕೊಂಡು ಆ ಬಗ್ಗೆ ಮೈಸೂರು ಸ್ಟಾರ್, ಪ್ರಬೋಧ (ಬೆಳಗಾಂ), ವಿಭಾಕರ (ಬೆಳಗಾಂ), ಕರ್ನಾಟಕ ಟೈಮ್ಸ್ (ಧಾರವಾಡ), ಈ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು. ಮತ್ತು ಆ ಪ್ರಕಟನೆಯಲ್ಲಿ ಈ ನಿಧಿಯಿಂದ ಸಂದರ್ಭಾನುಸಾರ ಒದಗಬಹುದಾದ ಧನಸಹಾಯವು ದೊರೆಯುವುದೆಂದು ಸಹ ಕಾಣಿಸತಕ್ಕದ್ದು.

X. 1904ನೇ ಇಸವಿಯ IIIನೇ ಮೈಸೂರು ಸೊಸೈಟಿ ರೆಗ್ಯುಲೇಷನ್ನಿಗೆ ಅನುಸಾರವಾಗಿ ದಾತೃಗಳ ಕಮಿಟಿಯನ್ನು ರಿಜಿಸ್ಟರು ಮಾಡಿಸಬೇಕೆಂತಲೂ ನಿರ್ಧಾರವಾಯಿತು.

ಕೆ. ಪಿ. ಪುಟ್ಟಣ್ಣಶೆಟ್ಟಿ,
ಸಭಾಧ್ಯಕ್ಷ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಪ್ರಜಾಪ್ರತಿನಿಧಿಸಭಾ ಮೆಂಬರುಗಳಲ್ಲಿ ವಿಜ್ಞಾಪನೆ.

ಸ್ವಾಮಿ,

ಪಟೇಲ್ ಶಾನುಭೋಗರುಗಳೇ ಮೊದಲಾದವರ ಇನಾಮತಿ ಜಮೀನುಗಳನ್ನು ಕ್ರಯ, ಆಧಾರ, ಭೋಗ್ಯ ಮಾಡುತ್ತಿರುವ ಪದ್ಧತಿ ಬಹುಕಾಲದಿಂದಲೂ ನಡೆದುಬರುತ್ತಿರುವುದು ಸರಿಯಷ್ಟೆ: ಕೆಲವರು ಪೂರಾ ಆಕಾರ ಕರಾವ್ ಆಗಿರತಕ್ಕ ಇನಾಮತಿ ಜಮೀನುಗಳನ್ನು ಮೇಲ್ಕಂಡಂತೆ ವಿಲೇವಾರಿ ಮಾಡುವುದರ ಮೂಲಕ ಪರಭಾರೆಮಾಡಿ ಮುಕ್ಕಾಲುಭಾಗ ಜನಗಳು ಹೊಟ್ಟೆಗಿ ವರಮಾನದಿಂದ ಮಾತ್ರವೇ ಕೆಲಸಮಾಡುತ್ತಿದ್ದಾರೆ. ಹೀಗಿದ್ದಾಗ್ಯೂ ಡೆಪ್ಯುಟೀಕಮಿಷನರ್ ಸಾಹೇಬರವರು, ಅಸಿಸ್ಟೆಂಟರು ಸಹ ಹಿಂದೆ ಪರಭಾರೆಯಾಗಿರುವವುಗಳನ್ನು ಕೂಡಲೇ ಹಾಲಿ ಕೆಲಸನೋಡತಕ್ಕವರಿಗೆ ಬಿಟ್ಟುಕೊಡಬೇಕೆಂಬ ಖಂಡಿತವಾದ ಆರ್ಡರುಗಳನ್ನು ಮಾಡುತ್ತಲೂ, ಮತ್ತು ಬಿಡಿಸುತ್ತಲೂ, ಪ್ರಜೆಗಳಿಗೆ ತೊಂದರೆಕೊಡುತ್ತಿರುವುದು ಯಾವಧರ್ಮ? ಪ್ರಜಾಪ್ರತಿನಿಧಿಸಭೆಗೆ ಪ್ರಜಾಪ್ರಮುಖರಾಗಿ ದಯಮಾಡಿಸುವ ಮೆಂಬರುಗಳಲ್ಲಿ ಅರಿಕೆಮಾಡಿಕೊಳ್ಳುವುದೇನಂದರೆ—ಕ್ರಯಮೂಲಕ ಪಡೆದು ಪೂರಾ ಆಕಾರ ಕರಾರಾಗಿರತಕ್ಕ ಇನಾಮತಿ ಜಮೀನುಗಳನ್ನು ವಾಪ್ಸು ಬಿಡಿಸಿಕೊಳ್ಳತಕ್ಕದ್ದು ತೃಪ್ತಿಕರವಾಗಿಲ್ಲವೆಂಬ ಅಂಶವನ್ನು ಘನಸರ್ಕಾರದವರ ಮುಂದಿರಿಸುವುದರ ಮೂಲಕ ಸರಿಯಾದ ತೀರ್ಮಾನದಿಂದ ಪ್ರಜಾವರ್ಗಕ್ಕಿರುವ ಈ ತೆರದ ತೊಂದರೆಗಳನ್ನು ಬಹುಮಟ್ಟಿಗೆ ತಪ್ಪಿಸಿಕೊಡಬೇಕಾಗಿ ಕೋರುತ್ತೇನೆ.

ಯಜಮಾನ್ ಭದ್ರಪ್ಪ ಶೆಟ್ಟಿ, ಕೊರಟಗೆರೆ ಸಬ್‌ತಾಲ್ಲೂಕು.

ಶಿರಾಳಕೊಪ್ಪದ ಮುನಿಸಿಪಾಲಟಿ.

ಶಿಕಾರಿಪುರದ ತಾಲ್ಲೂಕು ಶಿರಾಳಕೊಪ್ಪದ ಮೈನರ್ ಮುನ್ಸಿಪಾಲ್ಟಿ ಮೆಂಬರುಗಳನ್ನು ಸರ್ಕಾರದವರು ನಾಮಿನೇಟಾಗಿ ಸುಮಾರು 700 ಪ್ರಜಾಸಂಖ್ಯಾತರಾಗಿರುವ ಮಹಮ್ಮದೀಯರಲ್ಲಿ ಒಬ್ಬರನ್ನೂ 50 ಪ್ರಜಾಸಂಖ್ಯೆ ಇರುವ ಕೆಲವರಲ್ಲಿ ಒಬ್ಬರನ್ನೂ ವೈಶ್ಯರಲ್ಲಿ ಒಬ್ಬರನ್ನೂ, ಸುಮಾರು 60 ಅಥವಾ 70 ಪ್ರಜಾಸಂಖ್ಯೆಮಾತ್ರವೇ ಇದ್ದ ಮೆಂಬರುಗಳಲ್ಲಿ ಪ್ರಜಾನುರಾಗಿಗಳಲ್ಲದ ಇಬ್ಬರು ಮೆಂಬರುಗಳನ್ನೂ ಚುನಾಯಿಸಿ ಬಹಳ ಪ್ರಜಾಸಂಖ್ಯೆ ಎಂದರೆ 600ರ ಮೇಲಿರುವ ವೀರಶೈವರಲ್ಲಿ ಒಬ್ಬರನ್ನೂ ಚುನಾಯಿಸದೆ ಇರುವುದನ್ನು ನೋಡಿ ಇಲ್ಲಿಯ ಜನಂಗೆಬಹಳ ಅಸಮಾಧಾನವಾಗಿದೆ. ಯಾವಕಾರಣದಿಂದ ಈರೀತಿ ಮಾಡಿದರೋ ತಿಳಿಯಲಿಲ್ಲ. ಇಲ್ಲಿಯ ಜನರು ಖುದ್ದಾಗಿ ಡೆಪ್ಯುಟಿಕಮಿಷನರಲ್ಲಿಗೆ ಹೋಗಿ ವೀರಶೈವರಲ್ಲಿ ಒಬ್ಬರನ್ನು ತೆಗೆದುಕೊಳ್ಳಬೇಕೆಂದೂ ಈಗ ಚುನಾಯಿಸಿರುವ ೨ ಜನ ಮೆಂಬರುಗಳು ಪ್ರಜಾನುರಾಗಿಗಳಲ್ಲವೆಂದೂ ರೂಬರೂಬು ಹೇಳಿಕೊಂಡಾಗ್ಯೂ ಹಾಗೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿರುವರು. ದೊಡ್ಡ ಅಧಿಕಾರಿಗಳೇ ಹೀಗೆ ಮಾಡಿದರೆ ನಮ್ಮಗಳ ಗೋಳನ್ನು ಕೇಳುವವರೇ ಇಲ್ಲದಂತಾಯಿತು. ಈ ವಿಷಯವನ್ನು ಇಲ್ಲಿಯ ಜನಗಳು ದಿವಾನರವರ ವರೆಗೂ ಬರೆದುಕೊಂಡಿರುತ್ತಾರೆ. ದಯಾಳು ಸರ್ಕಾರದವರು ಈಗ ಇಲ್ಲಿಯ ಮುನ್ಸಿಪಾಲ್ಟಿಯ ಮೆಂಬರ್ ಚುನಾವಣೆಯ ರೀತಿಯನ್ನು ಪರಿಶೀಲಿಸಿ ನಾಮಿನೇಟಾದವರಲ್ಲಿ ಪ್ರಜೆಗಳ ಪ್ರೀತಿಗೆ ಪಾತ್ರರಾಗದಿರುವ ಮೆಂಬರುಗಳನ್ನು ವಜಾಮಾಡುತ್ತಾರಾಗಿಯೂ ಮತ್ತು ಬಹು ಸಂಖ್ಯಾಕರಾಗಿರುವ ವೀರಶೈವರಲ್ಲಿ ಒಬ್ಬರನ್ನು ನಾಮಿನೇಟಾಗಿ ತೆಗೆದುಕೊಳ್ಳುತ್ತಾರೆಂದು ಇಲ್ಲಿಯ ಜನಗಳು ನಂಬಿಕೊಂಡಿರುತ್ತಾರೆ.

ಪುರನಿವಾಸಿ.

ಈ ಸಂಗತಿಯು ನಿಜವಾಗಿದ್ದರೆ ಇದಕ್ಕೆ ಡಿ|| ಕಮಿಷನರು ಅವಕಾಶ ಕೊಟ್ಟಿರುವುದು ಸರಿಯಲ್ಲ. ಸ್ಥಳದ ಸ್ಥಿತಿಯನ್ನು ಅವರಾಗಲೀ ಪ್ರಭುತ್ವದವರಾಗಲೀ ಅವಶ್ಯವಾಗಿ ಗಮನಿಸದಿರಲಾರರೆಂದು ನಂಬುತ್ತೇವೆ.

ಪ. ಪ್ರ.

ಗುಂಡ್ಲುಪೇಟೆ ತಾ|| ಬಾಚಹಳ್ಳಿ ಆರ್. ಎ. ವಿ ಸ್ಕೂಲ್.

(ಉಡ್ಡ್‌ಪಾರ್ಟಿಷನನ್ನು ಕೂಡಲೇ ಹಾಕಿಸಬೇಕು.)

ಅಯ್ಯಾ, ಈ ಗ್ರಾಮದಲ್ಲಿ ಈಗ ಸ್ಕೂಲ್‌ಮಾಡುತ್ತಿರುವ ಬಾಯ್ಸ್ ಮತ್ತು ಗರ್ಲ್ಸ್‌ಸ್ಕೂಲುಗಳನ್ನೂ, ಅವುಗಳ ಸುತ್ತಣ ಕಾಂಪೌಂಡುಗೋಡೆಯನ್ನೂ ಸಹ, ಈ ಗ್ರಾಮದ ಸಾಹುಕಾರ್ ಮಿ|| ಹುಚ್ಚಪ್ಪನವರು ಮೂರುಸಾವಿರ (೩೦೦೦) ರೂಪಾಯಿಗಳನ್ನು ಖರ್ಚುಮಾಡಿ ಈಗ್ಗೆ ಐದು ವರ್ಷದಲ್ಲಿ ಕಟ್ಟಿಸಿದರು. ಇಂದಿಗೂ ಈ ಕಟ್ಟಡದ ಜೋಪಾನವೇ ತಮ್ಮ ಪ್ರಥಮಕಾರ್ಯವೆಂದು ಭಾವಿಸಿ, ಆಗಾಗ್ಗೆ ಸುಣ್ಣ ಬಳಿಸುತ್ತಲೂ, ಶಿಥಿಲವಾದ ಭಾಗವನ್ನು ತೂಡ್ಲೆ ಸರಿಪಡಿಸುತ್ತಲೂ ಇರುತ್ತಾರೆ. ಸುತ್ತಮುತ್ತಣ ಹಳ್ಳಿಗಳಿಂದ ಬರುವ ತಮ್ಮ ಮತದ ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲೇ ಅನ್ನೋದಕಗಳಿಗೂ ವಾಸಕ್ಕೂ ಏರ್ಪಡಿಸಿರುವುದಲ್ಲದೆ ಬ್ರಾಹ್ಮಣವಿದ್ಯಾರ್ಥಿಗಳಿಗೆ ವಸತಿಗಳನ್ನು ಕಲ್ಪಿಸಿಕೊಡುತ್ತಾ, ಪಾಠಶಾಲೆಯ ಅಭಿವೃದ್ಧಿ ವಿಷಯದಲ್ಲಿ ತುಂಬಾ ಮುತುವರ್ಜಿಯನ್ನೂ ವಹಿಸಿರುತ್ತಾರೆ. ಇವರ ಕಟ್ಟಡವಾಗುವುದಕ್ಕೆ ಮುಂಚೆ ಈ ಪಾಠಶಾಲೆಯಲ್ಲಿ ಇಬ್ಬರು ಮಾಸ್ತರುಮಾತ್ರ ಇದ್ದರು. ಕನ್ನಡ ಲೋ|| ಸೆ|| ತರಗತಿಯನ್ನು ಇಟ್ಟಿರಲಿಲ್ಲ. ಇವರು ಪಾಠಶಾಲೆಯನ್ನು ಕಟ್ಟಿಸಿದ ಈಚೆಗೆ ಮಾಸ್ತರುಗಳ ಸಂಖ್ಯೆಯು ನಾಲ್ಕಕ್ಕೆ ಹೆಚ್ಚಿತು. ಆರು ಹುಡುಗರು ಕನ್ನಡ ಲೋ|| ಸೆ|| ಪರೀಕ್ಷೆಯಲ್ಲಿ ತೇರ್ಗಡೆಯಾದರು. ಈಸಲ ಐದುಹುಡುಗರು ಪರೀಕ್ಷೆಗೆ ಕಟ್ಟಿರುತ್ತಾರೆ. ೧೯೨೦ನೇ ಜೂನ್ ಮಾಹೆಯಲ್ಲಿ ಇಂಗ್ಲೀಷುತರಗತಿಯು ಆರಂಭವಾಗಿ ಈಗ ಇಂಗ್ಲೀಷು ೩ನೇ ತರಗತಿಯವರೆಗೂ ವ್ಯಾಸಂಗ ನಡೆಯುತ್ತಲಿದೆ. ಈ ಗ್ರಾಮದಲ್ಲಿ ವಿದ್ಯೆಯು ಇಷ್ಟು ಪ್ರಚಾರಕ್ಕೆ ಬರಲು ಈ ಮಹನೀಯರೇ ಕಾರಣಕರ್ತರು. ಇಂಥ ಅಮೋಘಾಮೋಘವಾದ ಇವರ ಧರ್ಮಕ್ಕೆ ಧರ್ಮಿಷ್ಠರ ಹೃದಯದಲ್ಲೇ ನೆಲೆಸಿರುವ ದೇವರು ಮೆಚ್ಚಿ ಅಪುತ್ರವಂತರಾಗಿದ್ದ ಇವರಿಗೆ ಒಂದು ಪುತ್ರಸಂತಾನವನ್ನು ಕರುಣಿಸಿದ್ದು ಆಶ್ಚರ್ಯವೇನೂ ಅಲ್ಲ. ಆ ಬಾಲನು ಈ ಪಾಠಶಾಲೆಗೆ ಬರುವಂಥ ಸುಸಮಯವನ್ನು ದೇವರು ಜಾಗ್ರತೆಯಾಗಿ ಕರುಣಿಸಬೇಕೆಂಬುದೇ ನನ್ನ ಪ್ರಾರ್ಥನೆ. ಬಾಯ್ಸ್‌ಸ್ಕೂಲ್ ಕಟ್ಟಡವು ಖುಲ್ಲಾ ಒಂದೇ ಹಾಲಾಗಿರುತ್ತೆ. ಏಕಕಾಲದಲ್ಲಿ ಮೂರುಜನ ಮಾಸ್ತರು ಈ ಹಾಲಿನಲ್ಲಿ ಪಾಠಮಾಡಿಸಬೇಕಾಗಿರುವುದರಿಂದ ವಿಶೇಷ ಗಲಭೆಗೆ ಅವಕಾಶವಾಗಿ ನಡೆಯಲು ತುಂಬಾ ತೊಂದರೆಯಾಗಿದೆ. ಹಿಂದೆ ನಂಜನಗೂಡು ರೇಂಜ್ ಅ|| ಇ|| ರಾಗಿದ್ದ ಮಿ|| ಹೆಚ್. ನಾಗಪ್ಪನವರು ಉಡ್ಡ್‌ಪಾರ್ಟಿಷನ್ ಹಾಕಿ ಪ್ರತ್ಯೇಕಪ್ರತ್ಯೇಕ ರೂಮುಗಳನ್ನು ಗೌರ್ನಮೆಂಟ್ ಖರ್ಚಿನಿಂದ ಮಾಡಿಸುವ ವಿಷಯದಲ್ಲಿ ಇವರ ಅಭಿಪ್ರಾಯವನ್ನು ಕೇಳಲು, ಈ ಕಟ್ಟಡಕ್ಕೆ ಮೂರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿರುವ ಈ ಮಹನೀಯರ ಉತ್ತರವು ತಾವೇ ತಮ್ಮ ಸ್ವಂತ ಹಾತುಲಾಗೋಡಿನಿಂದ ಮಾಡಿಸುವುದಾಗಿ ಒಪ್ಪಿ ತಮ್ಮ ಉದಾರಭಾವನನ್ನು ಸೂಚಿಸಿದ್ದು ಸ್ವಾಭಾವಿಕವಾದದ್ದೇಸರಿ. ಈ ಕೆಲಸವು ಇನ್ನೂ ಆಗದೆ ಸಾವಕಾಶಕ್ಕೆ ಬಿದ್ದಿರೋಣದ್ದರಿಂದ ಸರ್ಕಾರದವರೇ ಈ ಕೆಲಸವನ್ನು ಆದಷ್ಟು ಜಾಗ್ರತೆಯಿಂದ ಮಾಡಿಸಬೇಕೆಂಬ ಏರ್ಪಾಡು ಇಡಿಸುತ್ತಿರುವರಾದ್ದರಿಂದ ಮೂರುಸಹಸ್ರ ರೂಪಾಯಿಗಳನ್ನು ಖರ್ಚುಮಾಡಿರುವ ತಮ್ಮ ಶಾಶ್ವತವಾದ ಧರ್ಮಕ್ಕೆ ಬಹುಶಃ ಒಂದುನೂರು ರೂಪಾಯಿಗಳನ್ನು ಮಾತ್ರ ಖರ್ಚುಮಾಡಬಹುದಾದ ಮತ್ತೊಬ್ಬರು ಭಾಗಿಗಳಾಗಿ ಬರದಹಾಗೆ ನಮ್ಮ ಸಾಹುಕಾರ್ ಮಿ|| ಹುಚ್ಚಪ್ಪನವರು ತಾವೇ ಈ ಕೆಲಸವನ್ನು ಮಾಡಿಸಿ ತಮಗೆ ತಮ್ಮ ಧರ್ಮದಲ್ಲಿರುವ ಅನಿರ್ವಚನೀಯವಾದ ಅಭಿಮಾನವನ್ನು ಪ್ರಚುರಪಡಿಸುತ್ತಾರೆಂದು ನಂಬಿರುತ್ತೇನಲ್ಲದೆ ಅತ ಎಂತ ಉದಾರಿಗಳಾದ ಇವರನ್ನು ದೇವರು ಇನ್ನೂ ಚಿರಕಾಲ ಸೌಖ್ಯದಿಂದ ಇಡಲೆಂದು ಪ್ರಾರ್ಥಿಸುತ್ತೇನೆ.

ಬಿ. ಎಸ್. ಎ.

ಸಂಪದಭ್ಯುದಯದ ಸಚ್ಛೂದ್ರ.

ಸ್ವಾಮಿ,

ಜನವರಿ ತಾ|| ೨ನೆ ಸಂಪದಭ್ಯುದಯಪತ್ರಿಕೆಯಲ್ಲಿ ಸಚ್ಛೂದ್ರ ಎಂಬ ಹೆಸರನ್ನಿಟ್ಟುಕೊಂಡು ಮ|| ಸಿ. ರಾಮಲಿಂಗರಡ್ಡಿಯವರನ್ನು ಕುರಿತು ಒಂದು ಕರಸ್ಪಾಂಡೆನ್ಸು ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ಮ|| ರಡ್ಡಿಯವರು ಮೈಸೂರು ವಿದ್ಯಾಭ್ಯಾಸ ಇಲಾಖೆಯ ನೌಕರಿಯಲ್ಲಿ ಇನ್ಸ್‌ಪೆಕ್ಟರರಾಗಿದ್ದಾಗ ಪರ್ಷಿಯಾದ ಷಾ ಮೊದಲಾದವರಂತೆ ನಡೆದರೆಂಬುದಾಗಿಯೂ, ಈಗ ಇವರಿಗೆ ಶುಕ್ರಮಹರ್ದಶೆ ಬರಲು ಉಪಕ್ರಮವಾಗಿರುವುದೆಂಬುದಾಗಿಯೂ, ಮದ್ರಾಸ್ ಲೆಜಿಸ್ಲೇಟೀವ್ ಕೌನ್ಸಿಲ್ಲಿಗೆ ಇವರು ಮೆಂಬರಾಗಿ ಚುನಾಯಿಸಲ್ಪಟ್ಟರೆಂಬುದಾಗಿಯೂ, ಇವರು ಪ್ರಪಂಚಕ್ಕೇ ಡಿಕ್ಟೇಟರುಗಳಾಗಿದ್ದರೆ ಹೇಗೋಹಾಗೆ ಬರೆವಣಿಗೆಯಲ್ಲೂ ಉಪನ್ಯಾಸಗಳಲ್ಲೂ ವಿಜೃಂಭಿಸುವರೆಂಬುದಾಗಿಯೂ ಇಂಡ್ಯಾ ಗೌರ್ನಮೆಂಟಿಗೂ ಬ್ರಿಟಿಷ್ ಗೌರ್ನಮೆಂಟಿಗೂ ಹುಚ್ಚು ಹಿಡಿದಿರುವುದೆಂಬದಾಗಿ ಇವರು ಹಿಂದೂಪತ್ರಿಕೆಗೆ ಬರೆದಿರುವರೆಂಬುದಾಗಿಯೂ, ಇದನ್ನು ನೋಡಿದರೆ ಇವರು ಇಂಡ್ಯಾದೇಶದ ಲೆನಿನ್ನರಾಗಬಹುದೆಂಬುದಾಗಿ ಕೆಲವರು ಹೇಳುತ್ತಾರೆಂಬುದಾಗಿಯೂ, ಇವರ ಅಧ್ಯಕ್ಷತೆಯಲ್ಲಿ ಜಸ್ಟಿಸ್ ಕಕ್ಷಿಯು ಮುಂದಕ್ಕೆ ಬರಬಹುದೆಂದು ತೋರುತ್ತದೆಂಬುದಾಗಿಯೂ ಮೊದಲಾಗಿ ಬರಯಲ್ಪಟ್ಟಿದೆ.

ಮ|| ರಡ್ಡಿಯವರು ಸಾಮರ್ಥ್ಯವುಳ್ಳವರು. ಪ್ರಪಂಚದ ಯಾವನೂಲೆಗೆ ಹೋದರೂ ಅವರಿಗೆ ಉಚಿತವಾದ ಪದವಿಯೂ ಸನ್ಮಾನವೂ ದೊರೆಯುವುದು ಸಿದ್ಧವಾಗಿದೆ. ಅವರು ಈಗ ಮದ್ರಾಸು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುತನಕ್ಕೆ ಅಲ್ಲಿನ ಯೂನಿವರ್ಸಿಟಿ ಪಕ್ಷದಿಂದ ಉಮೇದುವಾರರಾಗಿ ನಿಂತಿರುವದು ನಿಜ. ಆದರೆ ಅಲ್ಲಿಯೂ ಹುಟ್ಟಿರುವ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದದ ಸ್ಪರ್ಧೆಯಿಂದ ಪರ್ಯವಸಾನವು ಹೇಗಾಗುವುದೋ ಮುಂದೆ ತಿಳಿಯಬೇಕಾಗಿದೆ. ಆದರೆ ಸಂಪದಭ್ಯುದಯದ ಸಚ್ಛೂದ್ರನಿಗೆ ಅವರು ಆಗಲೇ ಮೆಂಬರಾಗಿ ಚುನಾಯಿಸಲ್ಪಟ್ಟರೆಂದು ಕನಸು ಬಿದ್ದಿರುವುದನ್ನು ನೋಡಿದರೆ ರಡ್ಡಿಯವರ ಸುದ್ದಿಯು ಈ ಲೇಖಕನಿಗೆ ಸಿಹ್ಮಸ್ವಪ್ನವು ಆನೆಗೆ ಬಿದ್ದಂತೆ ಸದಾಕಣ್ಣಿಗೆ ಕಟ್ಟಿರಬಹುದಾಗಿ ತೋರುತ್ತಿದೆ. ರಡ್ಡಿಯವರ ಅಭ್ಯುದಯವನ್ನು ಕೇಳಿ ಸೈರಿಸಲಾರದ ಕಾರಣದಿಂದ ಈಗಲೂ ಆ ಪತ್ರಿಕೆಯಲ್ಲಿ ಇಂಥ ಲೇಖನಗಳು ಬರುತ್ತಿರುವದನ್ನು ನೋಡಿದರೆ ಇವರ ಅಸೂಯಾಳುತ್ವವೂ ದೀರ್ಘದ್ವೇಷವೂ ತನ್ಮೂಲಕ ಸಿದ್ಧವಾಗಿರುವ ನೀಚಪ್ರವರ್ತನವೂ ಎಷ್ಟು ಉಲ್ಬಣವಾದುವೆಂಬುವದು ಸರ್ವರಿಗೂ ಗೊತ್ತಾಗುತ್ತದೆ. ಇಂಥ ಅಸೂಯೆಯ ಲೇಖನಗಳನ್ನು ರಡ್ಡಿಯವರ ವಿಷಯವಾಗಿ ಯಾವ ಸಚ್ಛೂದ್ರನಲ್ಲ, ದುಶ್ಶೂದ್ರನೂಕೂಡ ಬರೆಯಲಾರನೆಂಬುದು ಖಂಡಿತ. ಇವನು ಯಾವನೋ ಅಸದ್ಬ್ರಾಹ್ಮಣನಾಗಿರಬೇಕು; ಇಲ್ಲವೆ ಸಂಪದಭ್ಯುದಯಕರ್ತರು ಹೇಳುವಂಥ ಕರ್ಮಚಂಡಾಲನಾಗಿರಬೇಕು. ಮ|| ರಡ್ಡಿಯವರು ಈ ದೇಶವನ್ನು ಬಿಟ್ಟುಹೋಗಿದ್ದರೂಕೂಡ ಅವರನ್ನು ದ್ವೇಷಿಸುವ ಈ ಜಘನ್ಯತನವನ್ನು ನೋಡಿದರೆ ಈ ಲೇಖಕರು ಸತ್ತಮೇಲೂ ಕೂಡ ಪೀಡೆಯಾಗಿ ರಡ್ಡಿಯವರನ್ನು ಪೀಡಿಸದೆ ಇರಲಾರರೆಂದು ತೋರುತ್ತದೆ. ಆದರೆ ಅದು ರಾಮಲಿಂಗ; ಪೀಡೆಗೀಡೆಗಳ ಕಾಟಕ್ಕೆಲ್ಲಾ ಸಿಲ್ಕದ ಮೃತ್ಯುಂಜಯವಾಗಿದೆ.

ಮ|| ರಡ್ಡಿಯವರು ಗ್ರಾಮಾಂತರಗಳ ಅರಿಯದ ಪ್ರಜೆಗಳು ಅಸಹಾಯವಾದಿಗಳ ದುರ್ಬೋಧೆಯಿಂದ ಕೆಟ್ಟುಹೋಗಬಾರದೆಂಬ ಯೋಚನೆಯಿಂದ ಕಳೆದ ತಿಂಗಳಲ್ಲಿ ಮದ್ರಾಸು ಆಧಿಪತ್ಯದ ಕೆಲವುಭಾಗಗಳಿಗೆ ಹೋಗಿ ಅಲ್ಲಲ್ಲಿನ ಪ್ರಜೆಗಳನ್ನು ಕೂಡಿಸಿ ಉಪನ್ಯಾಸಗಳನ್ನು ಮಾಡಿ ಬಂದರು. ಸ್ವರಾಜ್ಯಸಾಧನೆಗೆ ಸಹಕಾರಯತ್ನವೇ ಸಾಧುವಾದುದೆಂಬುದು ಅವರ ದೃಢನಿಶ್ಚಯ. ಆದರೆ ಈಮಧ್ಯೆ ಇಂಡ್ಯಾ ಗೌರ್ನಮೆಂಟಿನವರೂ ಇತರ ಪ್ರಾಂತಿಕ ಸರ್ಕಾರದವರೂ ಅವಲಂಬಿಸಿರುವ ಕಠಿನಶಾಸನಪ್ರಯೋಗವನ್ನೂ ನಿರ್ಬಂಧವಿಧಾನಗಳನ್ನೂ ನೋಡಿ ಸೈರಿಸಲಾರದೆ ಎಷ್ಟೋಜನ ದೊಡ್ಡಮನುಷ್ಯರೂ ಪಂಡಿತರೂ ಇದು ಸರಿಯಾದ ಮಾರ್ಗವಲ್ಲವೆಂದು ಸರ್ಕಾರಕ್ಕೆ ಎಚ್ಚರವನ್ನು ಹೇಳಿದಂತೆಯೇ ಮ|| ರಡ್ಡಿಯವರಾದರೂ ಸಹಜಭಾವದಿಂದ ಹಿಂದೂಪತ್ರಿಕೆಗೆ ಒಂದು ಲೇಖನವನ್ನು ಬರೆದು, ಸರ್ಕಾರದ ಈ ಪ್ರವರ್ತನವನ್ನು ನೋಡಿದರೆ ಅವರಿಗೆ ಬುದ್ಧಿ ವಿಕಲ್ಪವಾಗಿಹೋಗಿರುವಂತೆ ತೋರುತ್ತದೆಯೆಂದು ಅಭಿಪ್ರಾಯಪಟ್ಟಿದ್ದರು. ಇದರಿಂದ ಅವರ ನ್ಯಾಯಪಕ್ಷಾಭಿಮಾನವೂ ದೇಶಾಭ್ಯುದಯ ಚಿಂತನಾಶಕ್ತಿಯೂ ನಿಸ್ಪೃಹತೆಯೂ ವ್ಯಕ್ತವಾಗುವವೇ ಹೊರತು, ಸರ್ಕಾರದ ಪ್ರವರ್ತನೆಯು ದುಷ್ಟವಾಗಿರಲಿ ಸುಷ್ಟುವಾಗಿ

ಸದ್ಯದಲ್ಲಿ ನಮಗೆ ತೋರುವ ವಿಚಾರವೇನೆಂದರೆ—ದಾವಣಗೆರೆಯ ಸಭೆಯಾದಮೇಲೆ ಮೈಸೂರಿನಲ್ಲಿ ಮುಂದಣ ಸಭೆಯನ್ನು ನೆರೆಯಿಸಬೇಕೆಂದು ಇಲ್ಲಿಯ ಅಭಿಮಾನಿಗಳಲ್ಲನೇಕರ ಕುತೂಹಲವಾಗಿದ್ದಿತು, ಅದಕ್ಕಾಗಿ ಪ್ರಯತ್ನವೂ ನಡೆದಿದ್ದಿತು. ಮಧ್ಯೆ ಬೇರೂರಿನವರ ಕುತೂಹಲವು ಹೆಚ್ಚಾಗಿ ಸನ್ನಾಹಗಳು ಹೆಚ್ಚಾಗಿ ನಡೆದಿದ್ದುದರಿಂದ ಮೈಸೂರಿನವರು ತಮ್ಮ ಯತ್ನವನ್ನು ಉಪಸಂಹರಿಸಿಕೊಳ್ಳಬೇಕಾಯಿತು. ಆ ತಮ್ಮ ಉದ್ದೇಶವನ್ನು ಕೈಗೂಡಿಸಲಿಕ್ಕೆ ಮೈಸೂರು ಡಿಸ್ಟ್ರಿಕ್ಟ್ ವೀರಶೈವರಿಗೆ ಇದು ಸುಸಮಯವಾಗಿದೆ. ಸಾಮಾಜಿಕ ವಿಷಯದಲ್ಲಿ ಇತರ ಪ್ರಾಂತಗಳೆಲ್ಲಕ್ಕಿಂತಲೂ ಅಗ್ರೇಸರರಾಗಿ ಕೆಲಸ ಮಾಡಿ ಹೆಸರ್ಗೊಂಡ ಮೈಸೂರಿನಲ್ಲಿ ಮಹಾಸಭೆಯ ನಿರ್ವರ್ತನದಂಥ ಸಾಮಾಜಿಕ ಮುಖ್ಯಕಾರ್ಯವು ಒಂದುಸಲವೂ ನಡೆಯದೆ ಹೋಗಿರುವುದು ಇಲ್ಲಿಯ ವೀರಶೈವ ಮಹಾಜನರ ಸಾಮಾಜಿಕ ಪ್ರತಿಷ್ಠೆಗೆ ಕುಂದಕವೆಂದೇ ತೋರುವುದು. ಅಲ್ಲದೆ ವೀರಶೈವ ಜನವರ್ಗದಲ್ಲಿ ಚಿರಕಾಲದಿಂದಲೂ ವಿಶೇಷಾಭಿಮಾನವನ್ನಿಟ್ಟುಕೊಂಡು ಬಂದಿರುವ ಶ್ರೀಮನ್ಮಹಾರಾಜರವರ ವಾಸಸ್ಥಲವಾದ ಈ ಪಟ್ಟಣದಲ್ಲಿ ಅವರ ಪ್ರತ್ಯಕ್ಷದಲ್ಲಿ ಇಂಥ ಸಭೆಯನ್ನು ಕೂಡಿಸುವುದರ ಮಹತ್ವವು ಅತ್ಯಂತವಾಗಿರುವುದು. ಅಲ್ಲದೆ ಇಲ್ಲಿ ಕೂಡುವಸಭೆಗೆ ಎಲ್ಲ ಪ್ರಾಂತದ ಪ್ರತಿನಿಧಿಗಳೂ ವಿಶೇಷವಾಗಿ ನೆರೆಯಬಹುದಾದ್ದರಿಂದ ಸಭಾಕಾರ್ಯಗಳು ಅಭೂತಪೂರ್ವವಾದ ವಿಜೃಂಭಣೆಯಿಂದ ಸಾಂಗವಾಗುವುವೆಂಬುದಕ್ಕೆ ಸಂಶಯವಿಲ್ಲ. ಇದನ್ನು ಈ ಡಿಸ್ಟ್ರಿಕ್ಟಿನ ಮತ್ತು ರಾಜಧಾನಿಯ ಪ್ರಮುಖ ವೀರಶೈವರೆಲ್ಲರೂ ಗಮನಿಸಿ ಕರ್ತವ್ಯತತ್ಪರರಾಗದೆ ಇರಲಾರರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತಗಳು

ಬರುವ ಫೆಬ್ರವರಿ ಎರಡನೆವಾರ ಹಿರಿಯೂರು ತಾಲ್ಲೂಕು ಮರಡಿಹಳ್ಳಿಯಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ರೆಡ್ಡಿ ಎರಡನೆ ಮಹಾಸಭೆಯು ಮಿ|| ಸಿ. ರಾಮಲಿಂಗರೆಡ್ಡಿ, ಎಂ. ಎ., ಯವರ ಅಧ್ಯಕ್ಷತೆಯಲ್ಲಿ ನೆರೆಯಲು ಏರ್ಪಾಡು ನಡೆಯುತ್ತಿರುವುದಾಗಿ ತಿಳಿಯಬರುತ್ತದೆ.

ಬೊಂಬಾಯಿ ಕರ್ನಾಟಕದಲ್ಲಿ ಇಬ್ಬರು ವೀರಶೈವಬಂಧುಗಳಿಗೆ ಎಂದರೆ ಗದಗಿನ ಶ್ರೀಮಂತರಾದ ಮ|| ಶಿವಪ್ಪಸ್ವಾಮಿಯವರಿಗೂ ಹುಬ್ಬಳ್ಳಿಯ ಮ|| ಚೆನ್ನಬಸಪ್ಪ ಶಿರಹಟ್ಟಿಯವರಿಗೂ ರಾವ್‌ಸಾಹೇಬ್ ಪದವಿಗಳು ಕೊಡಲ್ಪಟ್ಟಿರುವುದನ್ನು ತಿಳಿಯಿಸುವುದಕ್ಕೆ ಸಂತೋಷಿಸಿ ಆ ಉಭಯರನ್ನೂ ಈ ಮೂಲಕ ಅಭಿನಂದಿಸುತ್ತೇವೆ.

ನೂತನವರ್ಷದ ಬಿರುದಾವಳಿಗಳಲ್ಲಿ ನಮ್ಮ ಸಂಸ್ಥಾನದ ಉದ್ಯೋಗಿಗಳಲ್ಲಿ ಯಾರಿಗೂ ಯಾವ ಪ್ರಶಸ್ತಿಯೂ ಲಭಿಸಲಿಲ್ಲ. ಬೆಂಗಳೂರು ಕಂಟೋನ್ಮೆಂಟಿನ ಮ್ಯು|| ವೈಸ್‌ಪ್ರೆಸಿಡೆಂಟರಾದ ಮ|| ಸಿ. ಎ. ಸೂರ್ಯನಾರಾಯಣರಾಯರಿಗೆ ರಾಯಬಹದ್ದೂರ್ ಬಿರುದೂ, ರಸಿಡೆನ್ಸಿ ಸರ್ಜನರಾದ ಲೆ|| ಕರ್ನಲ್ ಸ್ಟಾಂಡೇಜ್‌ರವರಿಗೆ ಸಿ. ಐ. ಇ. ಬಿರುದೂ ಕೊಡಲ್ಪಟ್ಟಿವೆ.

ಬೆಂಗಳೂರಿನಲ್ಲಿ ಮ|| ದೇಶದ ಯಜಮಾನ್ ಬಸಪ್ಪನವರಿಗೂ ಮ|| ವೈ. ಜಿ. ಸಿದ್ಧವೀರಪ್ಪನವರಿಗೂ ಕ್ರಿಮಿನಲ್ ಕೋರ್ಟಿನಲ್ಲಿ ೨ ವರ್ಷಗಳಿಂದಲೂ ನಡೆಯುತ್ತಿದ್ದ ಕ್ರಿಮಿನಲ್ ಮಾನನಷ್ಟದ ವ್ಯಾಜ್ಯವು ಕಳೆದ ತಾ|| ೯ ರಲ್ಲಿ ಉಭಯಪಕ್ಷದವರೂ ಕೊಟ್ಟ ರಾಜೀನಾಮೆಯ ಮೂಲಕ ವಜಾ ಆಯಿತೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಸ್ವಸಮಾಜದೊಳಗೆ ಬಗೆಹರಿಸಿಕೊಳ್ಳಬಹುದಾದ ಇಂಥ ವಿಷಯಗಳನ್ನು ಕೋರ್ಟಿಗೆ ಹತ್ತುವವರೆಗೆ ಬಿಟ್ಟರೂ ಇಲ್ಲಿಯವರೆಗೂ ಅದು ಶಾಂತವಾಗದೆ ಇದ್ದುದೂ ಬಹಳ ಕೊರತೆಯಾಗಿದ್ದಿತು. ಉಭಯಪಕ್ಷದವರೂ ದೊಡ್ಡಮನಸ್ಸುಮಾಡಿ ಹೀಗೆ ಪರಿಹಸಿಕೊಳ್ಳುವಲ್ಲಿ ಮಧ್ಯಸ್ಥಗಾರರಾಗಿದ್ದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು, ದಾವಣಗೆರೆಯ ಮ|| ಟಿ. ಷಡಕ್ಷರಪ್ಪಯ್ಯನವರು, ಉರುವುಕೊಂಡೆ ಚನ್ನಬಸಪ್ಪನವರು ಮೊದಲಾದವರ ಪ್ರಯತ್ನವನ್ನು ಸಾರ್ಥಕಪಡಿಸಿದುದು ಅವರಿಗೆ ಭೂಷಣವೂ ಸಮಾಜಕ್ಕೆ ಸಂತೋಷಪ್ರದವೂ ಆಯಿತು.

ಭರತಖಂಡದ ವೃತ್ತಾಂತಗಳು.

ಈಜಿಪ್ಟಿನಿಂದ ಹಿಡಿದುಕೊಂಡು ಹೋದ ಜಗ್ಲುಲ್‌ಪಾಷಾರವನ್ನು ಸಿಲೋನ್ ದ್ವೀಪಕ್ಕೆ ತಂದಿಟ್ಟಿದ್ದಾರೆ.

ಈಸಲ ನಡೆದ ಜನಪರಿಗಣತಿಯಪ್ರಕಾರ ಬೊಂಬಾಯಿ ಪಟ್ಟಣದ ಪ್ರಜಾಸಂಖ್ಯೆ ೧೨,೬೦,೦೦ ಇದರಲ್ಲಿ ೧೦ಕ್ಕೆ ೬೫ರಂತೆ ಪುರುಷರೂ, ೩೫ರಂತೆ ಹೆಂಗುಸರೂ ಇರುವರು.

ಮುದ್ರಣಶಾಸನವನ್ನನುಸರಿಸಿ ಪಂಜಾಬಿನಲ್ಲಿ ಅನೇಕ ಪತ್ರಿಕೆಗಳು ಶಿಕ್ಷಿತವಾಗಿರುವುವು. ಕೇಸರಿ, ಪ್ರತಾಪ, ವಂದೇಮಾತರಂ, ಸ್ವರಾಜ್, ಡೆಮೊಕ್ರಟಿಕ್ ಈ ಪತ್ರಿಕೆಗಳೆಲ್ಲಾ ಒಂದೊಂದುತೆರದಲ್ಲಿ ಶಿಕ್ಷಿತಗಳಾಗಿರುವುವು.

ಮದರಾಸು ಆಧಿಪತ್ಯದ ಕೃಷ್ಣಾ ಗೋದಾವರೀ ಜಿಲ್ಲೆಗಳ ಕೆಲ ಗ್ರಾಮಗಳಲ್ಲಿ ಕಾಂಗ್ರೆಸ್ ಅಪ್ಪಣೆಯಮೇರೆ ಭೂಗಂದಾಯವನ್ನು ಸರ್ಕಾರಕ್ಕೆ ಕೊಡುವುದನ್ನು ಈವರ್ಷದ ಮೊದಲ ಕಿಸ್ತಿನಿಂದಲೇ ನಿಲ್ಲಿಸಿಬಿಡಬೇಕೆಂದು ಸಭೆಗಳಮೂಲಕ ನಿಷ್ಕರ್ಷಿಸಿಕೊಳ್ಳುತ್ತಿದ್ದಾರೆ.

ಕಲ್ಕತ್ತಾ ಬಾರಾಬಜಾರ್ ಕಾಂಗ್ರೆಸ್‌ಸಂಘಾಧ್ಯಕ್ಷನೂ ಅಖಿಲ ಭಾರತ ಕಾಂಗ್ರೆಸ್ ಸ್ಥಾಯಿಸಂಘಾಧ್ಯಕ್ಷನೂ ಸ್ವತಂತ್ರ ಎಂಬ ಪತ್ರಿಕೆಯ ಸಂಪಾದಕನೂ ಆದ ಪಂಡಿತ ಅಂಬಿಕಾಪ್ರಸಾದ ವಾಜಪೇಯಿ ಎಂಬಾತನಿಗೆ ೪ ತಿಂಗಳ ಕಠಿಣಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು.

ಕಲ್ಕತ್ತಾದಲ್ಲಿರುವ ಚಾರ್ಟರ್ಡ್‌ಬ್ಯಾಂಕ್ ಆಫ್ ಇಂಡ್ಯಾದ ಅ|| ಕ್ಯಾಷಿಯರಾದ ಕೃಷ್ಣಚಂದ್ರಘೋಸ್ ಎಂಬಾತನು ನಂಬುಗೆಯ ದ್ರೋಹದಿಂದ ಮೋಸದ ರುಜುಗಳನ್ನು ಮಾಡಿ ಕಳ್ಳತನದಿಂದ ೨,೨೭,೦೦೦ ರೂ. ಗಳ ಲಂಡನ್ ಬ್ಯಾಂಕ್ ಪತ್ರಗಳನ್ನು ಅಪಹರಿಸಿದನೆಂಬ ತಪ್ಪಿತದಮೇಲೆ ಹಿಡಿಯಲ್ಪಟ್ಟಿದ್ದಾನೆ.

ಅಲಹಾಬಾದಿನಲ್ಲಿ ಪಂಡಿತ ಮದನಮೋಹನಮಾಳವ್ಯರವರ ಕುಮಾರ ಗೋವಿಂದಮಾಳವ್ಯರವರೂ ಮದನಮೋಹನರ ಅಣ್ಣನಮಗನಾದ ಕೃಷ್ಣಕಾಂತಮಾಳವ್ಯರವರೂ ಇನ್ನಿಬ್ಬರೂ ಸಹ ಪಟ್ಟಣಿಗರೆಲ್ಲರೂ ಸ್ವಚ್ಛಂದಸೇವಕರಾಗಿ ಸೇರಬೇಕೆಂದು ಬೋಧಿಸಿದರೆಂಬ ತಪ್ಪಿತದಿಂದ ೧ ವರ್ಷ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟರು.

ಭರತಖಂಡದ ಎಲ್ಲಪಕ್ಷದ ರಾಜಕೀಯನಾಯಕರೂ ಪ್ರಕೃತರಾಜಕೀಯ ಸ್ಥಿತಿಯನ್ನು ಕುರಿತು ಸಮಾಲೋಚಿಸಲಿಕ್ಕಾಗಿ ಬೊಂಬಾಯಿಯಲ್ಲಿ ತಾ|| ೧೪-೧೫ನೆ ದಿವಸ ಸರ್ ಕವಾಸ್ಜಿ ಜಹಂಗೀರ್‌ರವರ ಹಾಲಿನಲ್ಲಿ ಸರ್ ಶಂಕರನ್‌ನಾಯರ್‌ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಅದಕ್ಕೆ ಮ|| ಗಾಂಧಿ, ಮಾಳವ್ಯ ಮೊದಲಾದವರೆಲ್ಲಾ ಸೇರಿರುವರು.

ಪಂಡಿತ ಮದನಮೋಹನಮಾಳವ್ಯರವರು ಕಾಂಗ್ರೆಸ್ ಸಂಪ್ರದಾಯಕ್ಕೆ ಅನುಸರಿಸಿ ಕ್ರೀಡಿಗೆ ರುಜುಹಾಕಿರುವರು. ಹೀಗೆ ಯಾರು ರುಜುಮಾಡಿದರೂ ಆ ಮಾತ್ರದಿಂದ ಅವರು ಅಸಹಾಯೋದ್ಯಮಕ್ಕೂ ಅಂಗೀಕರಿಸಿದರೆಂದು ಅಭಿಪ್ರಾಯವಲ್ಲವಂತೆ. ಅಸಹಾಯವಾದಿಗಳೂ ಸಹಾಯವಾದಿಗಳೂ ಎಲ್ಲರೂ ಕಾಂಗ್ರೆಸ್‌ಸಭಿಕರಾಗಿರಬಹುದು. ಮುಖ್ಯವಾಗಿ ಸಂಖ್ಯೆ ಹೆಚ್ಚಿದರೆಸರಿ.

ಸರ್ವೆಂಟ್ ಎಂಬ ಪತ್ರಿಕೆಯ ಸಂಪಾದಕರೂ ಬಂಗಾಳಾ ಪ್ರಾಂತಿಕ ಕಾಂಗ್ರೆಸ್ ಸಂಘದ ಅಧ್ಯಕ್ಷರೂ ಆಗಿದ್ದ ಶ್ಯಾಮಸುಂದರ ಚಕ್ರವರ್ತಿಯವರು ಒಂದಾನೊಂದು ಖಿಲಾಫತ್ ಕೇಸಿನಲ್ಲಿ ದಂಡಾಧಿಕಾರಿಯಿದಿರಿಗೆ ಸಾಕ್ಷ್ಯಕೊಡಲು ನಿರಾಕರಿಸಿದುದರಿಂದ ೩ ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಅದರ ಮೇಲೆ ಈಗ ಮತ್ತೊಂದು ಕೇಸು ಅವರ ಮೇಲೆ ಮಾಡಲ್ಪಟ್ಟು ವಿಚಾರಣೆ ನಡೆಯುತ್ತಿದೆ.

ಮದ್ರಾಸಿಗೆ ಯುವರಾಜರು ದಯಮಾಡಿಸಿದ ದಿವಸ ಸಂಪೂರ್ಣ ಹರತಾಳವನ್ನು ಮಾಡಿಸಬೇಕೆಂದು ಕಾಂಗ್ರೆಸ್‌ಭಕ್ತರು ಬಹಳ ಪ್ರಯತ್ನವನ್ನು ಮಾಡಿದ್ದರು ಪ್ರಭುತ್ವದವರೂ ಜಸ್ಟಿಸ್ ಪಕ್ಷದವರೂ ಅದಕ್ಕೆ ವಿರುದ್ಧ ಪ್ರಯತ್ನಗಳನ್ನು ಅನೇಕ ಪ್ರಕಾರವಾಗಿ ಮಾಡಿದ್ದುದಲ್ಲದೆ ಆಧಿಪತ್ಯದ ನಾನಾಭಾಗಗಳಿಂದ ಬರುವ ವಿದ್ಯಾರ್ಥಿಗಳಿಗೆ ದಾರಿಯ ವೆಚ್ಚ ಮೊದಲಾದುವುಗಳನ್ನು ಕೊಡುವೆವೆಂದು ಪ್ರೋತ್ಸಾಹಿಸಿದ್ದರು. ಉಭಯಪಕ್ಷವೂ ತಕ್ಕಮಟ್ಟಿಗೆ ಜಯಶೀಲವಾಯಿತೆಂತಲೇ ತೋರುವುದು.

ಭರತಖಂಡದ ಉಗ್ರವಾದಿಪಕ್ಷಕ್ಕೆ ಸೇರಿದ ಎಸ್. ಎನ್. ಘೋಷ್ ಎಂಬುವನು ಅಮೇರಿಕಾದಲ್ಲಿದ್ದಾನೆ. ಈತನು ನಿನ್ನೆ ಅಹಮ್ಮದಾಬಾದಿನಲ್ಲಿ ಕೂಡಿದ್ದ ರಾಷ್ಟ್ರೀಯ ಸಭೆಯು ಪ್ರಜಾಸ್ವಾಮ್ಯಪ್ರಭುತ್ವವನ್ನು ಪ್ರಕಟಿಸಿತೆಂದೂ, ಆತ್ಮರಕ್ಷಣಾರ್ಥವಾಗಿ ದೌರ್ಜನ್ಯವನ್ನುಕೂಡ ಪ್ರಜೆಗಳು ಆಚರಿಸಬಹುದೆಂದು ತೀರ್ಮಾನಿಸಿತೆಂದೂ ಸುದ್ದಿಯನ್ನು ಆ ದೇಶದಲ್ಲಿ ಹರಡಿದನು. ಇದು ಸುಳ್ಳುಸುದ್ದಿಯೆಂದೂ ದೌರ್ಜನ್ಯಾವಲಂಬನೆ ಮಾಡಕೂಡದೆಂದು ಆ ಸಭೆಯು ತೀರ್ಮಾನಿಸಿತೆಂದೂ ನಿಜಸ್ಥಿತಿಯನ್ನು ಭಾರತದೇಶ ಕಾರ್ಯಾಲಯದವರು ಮತ್ತೊಂದು ಪ್ರಕಟನೆಯನ್ನು ಮಾಡಿದರು.

ಲಾಲಾಲಜಪತರಾಯಿಯವರ ವಿಚಾರಣೆಯೆಲ್ಲಾ ಲಾಹೋರ್ ಸೆಂಟ್ರಲ್‌ಜೈಲಿನಲ್ಲಿ ಮುಗಿದು ಇಂ|| ಪೆ|| ಕೋಡು ೧೪೫ನೆ ಸೆಕ್ಷನ್ನನುಸರಿಸಿ ೧ ವರ್ಷ ಕಠಿಣಕಾರಾಗೃಹವಾಸಶಿಕ್ಷೆಯೂ, ರಾಜದ್ರೋಹಸಭಾ ಶಾಸನದಮೂಲಕ ಮತ್ತೆ ೬ ತಿಂಗಳ ಸಾಮಾನ್ಯ ಕಾರಾಗೃಹವಾಸಶಿಕ್ಷೆಯೂ ೫೦೦ ರೂ. ಅರ್ಥದಂಡವೂ ವಿಧಿಸಲ್ಪಟ್ಟುವು. ಡಾಕ್ಟರು ಸಂತಾನಂ ಮತ್ತು ಗೋಪಿಚಂದ್ ಮಲ್ಲಿಕ್ ಮೊದಲಾದ ನಾಲ್ವರಿಗೂ ಹೀಗೆಯೇ ಸ್ವಲ್ಪ ಹೆಚ್ಚುಕಡಿಮೆ ಶಿಕ್ಷೆಗಳು ವಿಧಿಸಲ್ಪಟ್ಟುವು. ಆದರೆ ಪಂಜಾಬು ಸರ್ಕಾರವು ಲಜಪತರಾಯರ ಕಠಿನ ಕಾರಾಗೃಹವಾಸಶಿಕ್ಷೆಯನ್ನು ತೆಗೆದುಹಾಕಿತು.

ಸಿವಿಲ್ ಆಜ್ಞೋಲ್ಲಂಘನವನ್ನು ಆಯಾ ಪ್ರಾಂತದ ಸ್ಥಿತಿಗತಿಗಳನ್ನು ನೋಡಿಕೊಂಡು ಆಚರಣೆಗೆ ತರುವ ಸ್ವಾತಂತ್ರ್ಯವನ್ನು ರಾಷ್ಟ್ರೀಯ ಸಭೆಯವರು ಅಲ್ಲಲ್ಲಿಯ ಸಂಘಗಳಿಗೇ ಒಪ್ಪಿಸಿಬಿಟ್ಟಿದ್ದಾರೆ. ಇಂಥ ಆಜ್ಞೋಲ್ಲಂಘನಪ್ರಯತ್ನಗಳು ಅಲ್ಲಲ್ಲಿ ಜರುಗುತ್ತಿರುವ ವಾರ್ತೆಗಳು ಆಗಲೇ ಬರುತ್ತಿವೆ. ಆದರೆ ಈ ವಿಷಯವಾಗಿ ಪಂಜಾಬು ಸರ್ಕಾರದವರು ಒಂದುಅಪ್ಪಣೆಯನ್ನು ಈಗ ತಾನೇ ಹೀಗೆ ಪ್ರಕಟಿಸಿದ್ದಾರೆ—ಆಜ್ಞೋಲ್ಲಂಘನೆಯೆಂಬುದು ದೇಶದ ಶಾಂತಿಯುತಾಭಿವೃದ್ಧಿಗೆ ಭಂಗಕರವಾದ ದೊಡ್ಡ ತಪ್ಪಿತವು. ಇದುವರೆಗೆ ಅವಲಂಬಿಸಿದ್ದ ನಿರ್ಬಂಧವಿಧಾನಗಳಿಗಿಂತಲೂ ಅತ್ಯಂತ ಕಠಿನತರವಾದ ಚರ್ಯೆಗಳನ್ನವಲಂಬಿಸಿ ಅದನ್ನು ಅಣಗಿಸತಕ್ಕುದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರದ ಉದ್ಯೋಗಿಗಳೂ ಪೆನ್ಷನ್ಡ್ ಉದ್ಯೋಗಿಗಳೂ ಅಂಥ ತಪ್ಪಿತಕ್ಕೆ ಈಷನ್ಮಾತ್ರ ಪಾತ್ರರಾದರೂ ಸರ್ಕಾರವು ಸಹಿಸುವುದಿಲ್ಲ. ಕ್ರಮಪರಿಪಾಲನವನ್ನು ದೃಢಪಡಿಸಲಿಕ್ಕೆ ಆವಶ್ಯಕವಾದಷ್ಟು ಹೆಚ್ಚು ಪೋಲೀಸು ಸಿಬ್ಬಂದಿಯನ್ನು ಹೊಸದಾಗಿ ನಿಯಮಿಸಬೇಕಾಗುವುದು. ಆದರಿಂದ ಸರ್ಕಾರಕ್ಕೆ ವೆಚ್ಚವು ಹೆಚ್ಚುವುದು. ಆದುಕಾರಣ ಪ್ರಭುತ್ವಕ್ಕೂ ದೇಶಕ್ಕೂ ನಿಜವಾಗಿ ಹಿತವನ್ನು ಕೋರುವವರೆಲ್ಲರೂ ಚೆನ್ನಾಗಿ ಕಣ್ಣುಬಿಟ್ಟು ವಿಚಾರಮಾಡಿ ಈ ಆಜ್ಞೋಲ್ಲಂಘನದಿಂದ ಉಂಟಾಗತಕ್ಕ ಅನರ್ಥಗಳನ್ನು ತಿಳಿದುಕೊಂಡು ಅದನ್ನಣಗಿಸಲಿಕ್ಕೆ ಶ್ರದ್ಧೆಯಿಂದ ಕೆಲಸಮಾಡಬೇಕು ಎಂದು ಪ್ರಕಟಿಸಿದ್ದಾರೆ.

ಮಲಬಾರಿನಲ್ಲಿ ಗದ್ದಲವೆಲ್ಲಾ ಕೊನೆಮುಟ್ಟುತ್ತ ಬಂದಿದೆ. ಮಾಪಿಳಾನಾಯಕರಲ್ಲಿ ಚಂಬರಾಸಿ ತಂಗಲ್, ಸೀತಕೋಯಿತಂಗಲ್ ಮೊದಲಾದ ನಾಲ್ಕು ಮಂದಿಗಳಿಗೆ ಮರಣದಂಡನೆಯನ್ನು ಮಾರ್ಷಲ್ ಕೋರ್ಟಿನವರು ವಿಧಿಸಿದ್ದರು. ತಾ|| ೯ರಲ್ಲಿ ಇವರನ್ನೆಲ್ಲಾ ಮಾಲಾಪುರದಲ್ಲಿ ಗುಂಡು ಹೊಡೆದು ಕೊಂದರು. ಮೇರಿಯ ಕುನ್ನತ್‌ಕುಮ್ಮದ್‌ಹಾಜಿ ಎಂಬ ನಾಯಕನೂ ಅವನ ಅನುಚರರಾದ ೨೧ ಮಂದಿಗಳೂ ೩೦೦ ತುಪಾಕಿಗಳೊಡನೆ ಪೋಲೀಸರಿಗೆ ವಶರಾದರು. ಕಳೆದ ತಾ|| ೬ ರಲ್ಲಿ ಬೊಂಬಾಯಿಯಲ್ಲಿ ಸರ್ ಜೇಮ್‌ಸೆಟ್ಜಿ ಜೀಜಿಭಾಯಿಯವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆ ಕೂಡಿ ಮಲಬಾರಿನಲ್ಲಿ ವಿಪನ್ನಾವಸ್ಥೆಗೆ ಗುರಿಯಾಗಿರುವವರಿಗೆ ಸಹಾಯಕವಾಗಿ ಫಂಡನ್ನು ಕೂಡಿಸಿಕೊಡುವ ತೀರ್ಮಾನವಾಯಿತು. ಕಲ್ಲಿಕೋಟೆಯಲ್ಲಿ ಕಳೆದ ತಾ|| ೮ ರಲ್ಲಿ ಅಲ್ಲಿಯ ೩ನೆ ಜಾಮರಿನ್ ರಾಜರವರ ಅಧ್ಯಕ್ಷತೆಯಲ್ಲಿ ೧ ಸಭೆ ಕೂಡಿದ್ದು ಹಾಳಾಗಿ ಹೋಗಿರುವ ಮಲಬಾರು ಪ್ರಾಂತವನ್ನು ಮರಳಿ ಪೂರ್ವದ ಉನ್ನತಸ್ಥಿತಿಗೆ ತರಲು ಪ್ರಭುತ್ವದ ಮತ್ತು ಪ್ರಜೆಗಳ ಸಹಾಯದಿಂದ ಕೃಷಿ ಮಾಡತಕ್ಕುದು ಅವಶ್ಯಕವೆಂದು ನಿರ್ಧಾರಿತವಾಯಿತು. ಮಲಬಾರುಪುನರ್ನಿರ್ಮಾಣ ಸಂಘವೆಂಬ ಹೆಸರಿನಿಂದ ಒಂದು ಸಂಘವು ಸ್ಥಾಪಿಸಲ್ಪಟ್ಟಿತು. ಕಲ್ಲಿಕೋಟೆಯ ಜಾಮರಿನ್‌ರಾಜರು ಅದರ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅದನ್ನು ಪೂರ್ವಸ್ಥಿತಿಗೆ ತರಬೇಕಾದರೆ ೧೦ ವರ್ಷಕಾಲ ಬೇಕೆಂದೂ, ಹಿಂದೂಮಹಮ್ಮದೀಯ ಪ್ರಜೆಗಳಲ್ಲಿ ವಿದ್ಯಾಭಿವೃದ್ಧಿಮಾಡಿ ಐಕಮತ್ಯವನ್ನು ಹೆಚ್ಚಿಸುವುದು ಮುಖ್ಯಕಾರ್ಯವೆಂದೂ ಸಭೆಯಲ್ಲಿ ಕೆಲವರು ಉಪನ್ಯಾಸಮಾಡಿದರು.

ರಡ್ಡಿ ಜನರ ಮಹಾಸಭೆಯು ಕರ್ನೂಲ್ ಪಟ್ಟಣದಲ್ಲಿ ಕಳೆದ ತಿಂಗಳು ತಾ|| ೨೮ರಲ್ಲಿ ಪನಪರ್ತಿ ಮಹಾರಾಜರವರ ಅಧ್ಯಕ್ಷತೆಯಿಂದ ನೆರೆದಿತು. ಹೈದರಾಬಾದ್ ಧಾರ್ವಾಡ ಮೈಸೂರು, ಬೊಂಬಾಯಿಪ್ರಾಂತ ಮದ್ರಾಸು ಆಧಿಪತ್ಯ ಅನೇಕ ಭಾಗಗಳಿಂದೆಲ್ಲಾ ಬಹುಮಂದಿ ಪ್ರತಿನಿಧಿಗಳು ಸೇರಿದ್ದರು. ತಮ್ಮ ಸಮಾಜದ ಸಾಂಘಿಕ ಮತ್ತು ವಿದ್ಯಾವಿಷಯಕ ಸುಧಾರಣೆಗಳಿಗಾಗಿಯೇ ಏರ್ಪಟ್ಟಿರುವ ಈ ಸಂಘದವರು ಕಳೆದ ವರ್ಷ ನೆರವೇರಿಸಿದ ಕಾರ್ಯವಿವರಣವು ಓದಲ್ಪಟ್ಟಿತು. ಇದುವರೆಗೆ ೧೮ ಸಾವಿರ ರೂ. ಗಳು ಫಂಡಿಗೆ ಕೂಡಿದೆಯಂತೆ. ಸಭಾಧ್ಯಕ್ಷರು ವರ್ಷಕ್ಕೆ ೨೪೦೦ ರೂ. ಬಡ್ಡಿ ಬರುವಷ್ಟು ದ್ರವ್ಯವನ್ನು ಸಹಾಯಮಾಡುವೆವೆಂದು ವಾಗ್ದಾನವಿತ್ತರು. ರಡ್ಡಿ ಹೆಂಗುಸರಲ್ಲಿ ಮೊದಲನೆ ಗ್ರಾಜುಯೇಟಾದ ಕೆ. ಅನ್ನಪೂರ್ಣಮ್ಮ ಎಂಬಾಕೆಗೆ ೧ ಬಂಗಾರದ ಪದಕವು ಕೊಡಲ್ಪಟ್ಟಿತು. ಸಭೆಯಲ್ಲಿ ಮ|| ಗಳಾದ ಕೆ. ಎಚ್. ರಾಮಯ್ಯನವರು, ನಲವಡಿಯವರು, ರಾಮಲಿಂಗರಡ್ಡಿಯವರೇ ಮೊದಲಾದ ವಾಗ್ಮಿಗಳು ವಿದ್ಯಾಭಿವೃದ್ಧಿಯನ್ನು ಕುರಿತು ಶ್ಲಾಘ್ಯಗಳಾದ ಭಾಷಣಗಳನ್ನು ಮಾಡಿದರು. ತಮ್ಮ ಬಾಲಬಾಲಿಕೆಯರ ವಿದ್ಯಾಭಿವೃದ್ಧಿಗಾಗಿ ಅಲ್ಲಲ್ಲಿ ಹಾಸ್ಟಲನ್ನು ಸ್ಥಾಪಿಸಿ, ವಿದ್ಯಾರ್ಥಿ ವೇತನಗಳನ್ನು ಕೊಡಬೇಕು. ಪಂಚಾಯತರಲ್ಲಿ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಬೇಕು. ದುಷ್ಪಾನ್ನಗಳನ್ನು ತ್ಯಜಿಸಬೇಕು. ಮದುವೆ ಮೊದಲಾದುವುಗಳಲ್ಲಿ ದುಂದುವೆಚ್ಚವನ್ನು ಬಿಡಬೇಕು. ಹೆಣ್ಣಿಗೆ ೧೫ ವರ್ಷ ಗಂಡಿಗೆ ೨೦ ವರ್ಷ ತುಂಬುವುದಕ್ಕೆ ಮುಂಚೆ ಮದುವೆಮಾಡಕೂಡದು. ಸಹಕಾರಸಂಘಗಳನ್ನೂ ಬ್ಯಾಂಕುಗಳನ್ನೂ ತಮ್ಮಲ್ಲಿ ಸ್ಥಾಪಿಸಬೇಕು. ಪ್ರತಿವರ್ಷದ ಜನವರಿ ತಾ|| ೧೯ರಲ್ಲಿ ವೇಮನಜಯಂತ್ಯುತ್ಸವವನ್ನು ಆಚರಿಸಬೇಕು. ಬೇಸಾಯಗಾರರು ಅವಕಾಶವಾದಾಗಲೆಲ್ಲಾ ರಾಟೆಗಳಲ್ಲಿ ನೂಲಬೇಕು. ಯುವಸಾರ್ವಭೌಮರವರು ಈ ದೇಶಕ್ಕೆ ದಯಮಾಡಿಸಿರುವುದು ತಮಗೆಲ್ಲಾ ಸಂತೋಷಕರವಾಗಿರುವುದರಿಂದ ಅವರಿಗೆ ಮನಃಪೂರ್ವಕವಾಗಿ ಸ್ವಾಗತವನ್ನಾಚರಿಸಬೇಕು. ಈರೀತಿಯ ನಿರ್ಧಾರಗಳು ಮಾಡಲ್ಪಟ್ಟುವು.

ದನಗಳ ಪ್ರದರ್ಶನ

ಹಾಸನದ ತಾಲ್ಲೂಕು ಗೊರೂರು.

ಈ ಊರಲ್ಲಿ ನಡೆಯುವ ಶ್ರೀಯೋಗಾನೃಸಿಂಹಸ್ವಾಮಿಯವರ ರಥೋತ್ಸವದ ಕಾಲದಲ್ಲಿ ತಾ|| 3-2-22ನೇ ಶುಕ್ರವಾರದ ಲಾಗಾಯ್ತು ದನಗಳ ಪರಿಷೆಯೂ ಸೇರುವುದು. ಅನೇಕ ಪ್ರಾಂತದ ದನಗಳು ಮಾರಾಟಕ್ಕೆ ಬರುವವು. ದನಗಳು ನಿಲ್ಲಲು ಅನುಕೂಲವಾದ ನೆರಳೂ ನದಿಯ ನೀರಿನ ಆಸರೆಯೂ ಇರುವುದು. ಯಾವ ವಿಧವಾದ ಸುಂಕವೂ ವಸೂಲ್ಮಾಡಲ್ಪಡುವುದಿಲ್ಲ. ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡಲಾಗುವುದು.

ಜೆ. ಕಿಲ್ವಪಿಳ್ಳೈ, ಎಂ. ಎ., ಎಲ್.ಎಲ್.ಬಿ.,
ಪ್ರದರ್ಶನದ ಸಮಿತಿಯ ಅಧ್ಯಕ್ಷರು, ಗೊರೂರು.

ಭರತಖಂಡದ ಅಖಿಲ ವೀರಶೈವ ಮಹಾಸಭಾ ಚಿರಸ್ಥಾಯಿ ನಿಧಿಯ ಸಂಘ.

ತಾ|| 20-11-1921 ನೆಯ ಆದಿತ್ಯವಾರ ಪ್ರಾತಃಕಾಲ 8 ಗಂಟೆಯಿಂದ ಬೆಂಗಳೂರು ಸಿಟಿಯಲ್ಲಿ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಮೇಲ್ಕಂಡ ನಿಧಿಯ ದಾತೃಗಳು ಸಭೆ ನೇರಿ ನಡೆಸಿದ ನಡವಳಿಕೆ:—

ಹಾಜರಿದ್ದವರು:—1. ಮ|| ರಾ|| ಗಳಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ.ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ. (ಸಭಾಧ್ಯಕ್ಷರು). 2. ಹೆಚ್. ಕೆ. ವೀರಬಸವಯ್ಯನವರು, ಬಿ. ಎ., ಬಿ. ಎಲ್., ಹಾಸನ, 3. ಟಿ.ಎಂ. ಷಡಕ್ಷರಪ್ಪಯ್ಯನವರು, ದಾವಣಗೆರೆ, 4. ಉರುವುಕೊಂಡೆ ಚನ್ನಬಸಪ್ಪನವರು, ದಾವಣಗೆರೆ, 5. ಆವಿಸೆಟ್ಟರ ಬಸವಲಿಂಗಪ್ಪನವರು, ದಾವಣಗೆರೆ, 6. ಪಲ್ಲಾಗಟ್ಟೆ ಗುರುಸಿದ್ಧಪ್ಪನವರು, ದಾವಣಗೆರೆ, 7. ತಿಪ್ಪಣ್ಣನವರ ಮುರಿಗಪ್ಪನವರ ಹೇಮಗಿರಿಯಪ್ಪನವರು, ಹರಿಹರ, 8. ಮೂರುಕಲ್ ರಾಚಪ್ಪನವರು, ಹರಿಹರ, 9. ಎ. ಎಸ್. ಮಲ್ಲಪ್ಪನವರು, ಆಲೂರು, 10. ಎಸ್. ಶಿವಪ್ಪನವರು, ಬೆಂಗಳೂರು, 11. ಎಂ. ನಾಗಪ್ಪನವರು, ಬೆಂಗಳೂರು, 12. ಟಿ. ರಾಚಪ್ಪನವರು, ಬೆಂಗಳೂರು, 13. ವೈ. ಜಿ. ಚಿಕ್ಕವೀರಪ್ಪನವರು, ಬೆಂಗಳೂರು, 14. ಪಿ. ಮಹದೇವಯ್ಯನವರು, ಬಿ.ಎ.,ಬಿ.ಎಲ್. (ಸೆಕ್ರಿಟರಿ), 15 ಜಿ. ಕೆ. ರುದ್ರಾರ್ಯರು (ಅಸಿಸ್ಟೆಂಟ್ ಸೆಕ್ರಿಟರಿ).

ಪ್ರತಿನಿಧಿಗಳ (Proxies) ಮೂಲಕ ಹಾಜರಿದ್ದವರು:—

1. ಮ|| ರಾ|| ಗಳಾದ ಜಿ. ಎಂ. ಕಾಡಪ್ಪನವರು, ಶಿವಮೊಗ್ಗ, ಸಭಾಧ್ಯಕ್ಷರ ಮೂಲಕ. 2. ಪತ್ರೆ ಚಂ. ವೀರಪ್ಪಯ್ಯನವರು, ಬೀರೂರು, ಸಭಾಧ್ಯಕ್ಷರ ಮೂಲಕ. 3. ಗೌಡರ ಸಣ್ಣಮಹಲಿಂಗಪ್ಪನವರ ಗುರುಶಾಂತಪ್ಪನವರು, ದಾವಣಗೆರೆ, ಟಿ. ಎಂ. ಷಡಕ್ಷರಪ್ಪಯ್ಯನವರ ಮೂಲಕ. 4. ಮಾಗಾನಳ್ಳಿ ಸಂಗಪ್ಪನವರು, ದಾವಣಗೆರೆ, ಸಭಾಧ್ಯಕ್ಷರ ಮೂಲಕ. 5. ದೊಗ್ಗಳ್ಳಿ ಬಸವಣ್ಣಪ್ಪನವರು, ದಾವಣಗೆರೆ, ಸಭಾಧ್ಯಕ್ಷರ ಮೂಲಕ. 6. ಪಟೇಲ್ ವಿರೂಪಾಕ್ಷಪ್ಪನವರ ಮಕ್ಕಳು ಸಿದ್ಧಲಿಂಗಪ್ಪನವರು, ಅಲಗಿಲ್ವಾಡ, ಪಲ್ಲಾಗಟ್ಟೆ ಗುರುಸಿದ್ಧಪ್ಪನವರ ಮೂಲಕ. 7. ಬೆಳ್ಳೂಡಿ ಗುರುಸಿದ್ಧಪ್ಪನವರು, ಕಂದನಕೋವಿ, ಗುರುಸಿದ್ಧಪ್ಪನವರ ಮೂಲಕ. 8. ಎ. ಎಸ್. ಶ್ರೀಕಂಠಪ್ಪ, ಹಾಸನ, ಫವತಿ, ಇವರ ಅವಿಭಕ್ತ ಭ್ರಾತೃ ಎ. ಎಸ್. ಶಿವನಂಜಪ್ಪನವರು, ಮೈನರ್ ಗಾರ್ಡಿಯನ್ ರುದ್ರಪ್ಪನವರು, ಎ. ಎಸ್. ಮಲ್ಲಪ್ಪನವರ ಮೂಲಕ.

I. ತಾ|| 7-8-1921ರಲ್ಲಿ ನಡೆದ ಕಮಿಟಿಯ ಮೀಟಿಂಗಿನ ನಡವಳಿಕೆಗಳನ್ನು ಓದಿ ಅಂಗೀಕರಿಸಲಾಯಿತು.

II. ತಾ|| 20-11-1921ರಲ್ಲಿ ದಾತೃಗಳ ಸಭೆಯನ್ನು ಸೇರಿಸಲು ಕೊಡಲ್ಪಟ್ಟ ನೋಟೀಸನ್ನು ಓದಲಾಯಿತು.

III. ಮಹಾಸಭಾ ಚಿರಸ್ಥಾಯಿ ನಿಧಿಯ ಸ್ಥಿತಿ ತಾ|| 1-10-1921ರಲ್ಲಿ ಈ ಕೆಳಗೆ ಕಂಡಂತೆ ಇತ್ತೆಂದು ಸಭಾಧ್ಯಕ್ಷರು ವಿವರಿಸಿದರು:—ದಾತೃಗಳು ಕೊಟ್ಟ ಒಟ್ಟು ಮೊಬಲಗು ರೂ. 34,032-0-0 ಮೈಸೂರು ಸರ್ಕಾರದ ಸೇಕಡ $6\frac{1}{4}$ ಬಡ್ಡಿಯ ಸಾಲದ ಪತ್ರ ರೂ. 37,300-0-0, ಡಿಟೋ $6\frac{1}{4}$ ಬಡ್ಡಿಯ ಸಾಲದ ಪತ್ರ ರೂ. 4,762-8-0, ಸಾಲಿಯಾನಾ ಮೇಲ್ಕಂಡ ಪತ್ರಗಳಿಂದ ಬರತಕ್ಕ ಹುಟ್ಟುವಳಿ ರೂ. 2,641-0-0.

IV. ಮಹಾಸಭಾ ಚಿರಸ್ಥಾಯಿ ನಿಧಿಯ ಮುಂದಿನ ಆಡಳಿತದ ವಿಚಾರವಾಗಿ ಸರ್ವತೋದೃಷ್ಟಿಯಿಂದ ಬಹಳಕಾಲ ಚರ್ಚೆ ನಡೆಯಿತು. ಆ ಚರ್ಚೆಯಲ್ಲಿ ಈ ಕೆಳಗೆ ಕಂಡ ಮೆಂಬರುಗಳು ಭಾಗಿಗಳಾಗಿದ್ದರು. 1. ಮ|| ರಾ|| ಗಳಾದ ಉರುವುಕೊಂಡೆ ಚನ್ನಬಸಪ್ಪನವರು, 2. ಟಿ. ಎಂ. ಷಡಕ್ಷರಪ್ಪಯ್ಯನವರು, 3. ಹರಿಹರದ ಹೇಮಗಿರಿಯಪ್ಪನವರು, 4. ಟಿ. ರಾಚಪ್ಪನವರು, 5. ವೈ. ಜಿ. ಚಿಕ್ಕವೀರಪ್ಪನವರು, 6. ಹೆಚ್. ಕೆ. ವೀರಬಸವಯ್ಯನವರು, ಬಿ. ಎ., ಬಿ. ಎಲ್. 7. ಎಂ. ನಾಗಪ್ಪನವರು, 8. ಎಸ್. ಶಿವಪ್ಪನವರು.

V. ಈ ಕೆಳಗೆ ಕಂಡ ನಿರ್ಣಯಗಳು ಸರ್ವಾನುಮತದಿಂದ ಮಾಡಲ್ಪಟ್ಟವು—1. ನಿಧಿಯ ಮೂಲಧನವನ್ನು ಮೈಸೂರು ಸರ್ಕಾರದ ಸಾಲದ ಪತ್ರಗಳಲ್ಲಿ ಶೇಖರಿಸಿರುವದನ್ನು ಒಪ್ಪಲಾಯಿತು. 2. ಕಾನ್ಫರೆನ್ಸು ಫಂಡು ಅಂದರೆ ಮಹಾಸಭಾ ನಿಧಿಯು ಆಡಳಿತವು ದಾತೃಗಳ ಕಮಿಟಿಯ ಅಧಿಕಾರದಲ್ಲಿ ಪೂರ್ಣವಾಗಿ ಇರತಕ್ಕದ್ದು. ಈ ನಿಧಿಗೆ ಮುಂದೆ ಚಂದಾಹಣವನ್ನು ಕೊಡುವವರನ್ನು ಸಹ ಆ ಕಮಿಟಿಯಲ್ಲಿ ಸೇರಿಸತಕ್ಕದ್ದು. ಫಂಡಿನ ಆಡಳಿತಕ್ಕೂ ಕೆಲಸವನ್ನು ನಡಿಸುವುದಕ್ಕೂ ಸೂಕ್ತವಾದ ನಿಬಂಧನೆಗಳನ್ನು ರಚಿಸುವುದಕ್ಕೂ ಕಮಿಟಿಗೆ ಅಧಿಕಾರವಿರತಕ್ಕದ್ದು. 3. ಹಾಗೆ ರಚಿಸಿದ ನಿಬಂಧನೆಗಳನ್ನು ಮುಂದಿನ ವೀರಶೈವ ಮಹಾಸಭೆಯಲ್ಲಿ ಅವರ ತಿಳುವಳಿಕೆಗಾಗಿಯೂ ಯಾವುದಾದರೂ ಸಲಹೆಗಳಿದ್ದರೆ ಸೂಚಿಸುವುದಕ್ಕಾಗಿಯೂ ಇಡತಕ್ಕದ್ದು. 4. ದಾತೃಗಳ ಕಮಿಟಿ ಮೀಟಿಂಗು ನಡೆಸುವುದಕ್ಕೆ ಸಾಕಾದಷ್ಟು ಮಂದಿ (quorum) 10 ಮೆಂಬರುಗಳು ಇರಬೇಕು. ಹೆಚ್ಚು ಜನರ ಸಮ್ಮತಿ ಅಂಗೀಕರಿಸಲ್ಪಡತಕ್ಕದ್ದು. ಉಭಯಪಕ್ಷದ ಸಮ್ಮತಿಗಳು ಸಮವಾದಾಗ ಅಧ್ಯಕ್ಷರಿಗೆ ಪರ್ಯವಸಾನದ ಸಮ್ಮತಿಯನ್ನು ಕೊಡುವ ಅಧಿಕಾರವಿರುವುದು. 5. ಕೋರಂ ಅಂದರೆ ಸಾಕಾದಷ್ಟು ಮಂದಿ ಇಲ್ಲದೆ ಮೀಟಿಂಗನ್ನು ಮುಂದಕ್ಕೆ ಇಟ್ಟಾಗ ಅದರ ಕೆಲಸವನ್ನು ಆ ಮುಂದಿನ ಮೀಟಿಂಗಿನಲ್ಲಿ ಕೋರಂ ಇಲ್ಲದೆ ನಡೆಸಬಹುದು.

VI. ಮ|| ರಾ|| ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ., ಯವರು ದಾತೃಗಳ ಕಮಿಟಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಅಲ್ಲದೆ ಮ|| ರಾ|| ಪಿ. ಮಹದೇವಯ್ಯ, ಬಿ. ಎ., ಬಿ. ಎಲ್., ಯವರನ್ನು ಈ ಕಮಿಟಿ ಸೆಕ್ರಿಟರಿಯವರಾಗಿಯೂ ಮ|| ರಾ|| ಜಿ. ಕೆ. ರುದ್ರಾರ್ಯರನ್ನು ಅಸಿಸ್ಟೆಂಟ್ ಸೆಕ್ರಿಟರಿಯವರಾಗಿಯೂ ಇರಬೇಕಾಗಿ ನಿಷ್ಕರ್ಷೆಯಾಯಿತು.

VII. ಮುಂದೆ ಹೇಳಲ್ಪಟ್ಟ ಮೆಂಬರುಗಳಿಂದ ಕೂಡಿದ ಒಂದು ಮ್ಯಾನೇಜಿಂಗ್‌ಕಮಿಟಿ ಅಂದರೆ ಕಾರ್ಯನಿರ್ವಾಹಕ ಸಂಘವು ನೇಮಿಸಲ್ಪಟ್ಟಿತು. 1. ಮ|| ರಾ|| ಗಳಾದ ದಿವಾನ್‌ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ. (ಸಭಾಧ್ಯಕ್ಷರು), 2. ಅಲಗಿಲ್ವಾಡದ ಪಟೇಲರು ವಿರೂಪಾಕ್ಷಪ್ಪನವರ ಮಕ್ಕಳು ಸಿದ್ಧಲಿಂಗಪ್ಪನವರು, 3. ಹೆಚ್. ಕೆ. ವೀರಬಸವಯ್ಯನವರು, ಬಿ. ಎ. ಬಿ. ಎಲ್., 4. ಟಿ. ಯಂ. ಷಡಕ್ಷರಪ್ಪಯ್ಯನವರು, 5. ಉರುವುಕೊಂಡೆ ಚನ್ನಬಸಪ್ಪನವರು, 6. ಟಿ. ರಾಚಪ್ಪನವರು, 7. ಮುರುಕಲ ರಾಚಪ್ಪನವರು ಹರಿಹರ, 8. ಎಸ್. ಶಿವಪ್ಪನವರು, 9. ಎಂ. ನಾಗಪ್ಪನವರು.

VIII. ಅವಶ್ಯಕವಾದ ನಿಬಂಧನೆಗಳನ್ನು ರಚಿಸಿ ಅವನ್ನು ದಾತೃಗಳ ಜನರಲ್‌ಕಮಿಟಿ ಮುಂದೆ ಇಡುವುದಕ್ಕೆ ಈ ಕೆಳಗೆ ಕಾಣುವ ಮೆಂಬರುಗಳಿಂದ ಕೂಡಿದ ಒಂದು ಸ್ಪೆಷಲ್‌ಕಮಿಟಿ ನೇಮಿಸಲ್ಪಟ್ಟಿತು. 1. ಮ|| ರಾ|| ಗಳಾದ ಪಲ್ಲಾಗಟ್ಟೆ ಗುರುಸಿದ್ಧಪ್ಪನವರು, 2. ಟಿ. ರಾಚಪ್ಪನವರು, 3. ಹೆಚ್. ಕೆ. ವೀರಬಸವಯ್ಯನವರು, ಬಿ. ಎ, ಬಿ. ಎಲ್., 4. ಪಿ. ಮಹದೇವಯ್ಯನವರು, ಬಿ. ಎ., ಬಿ. ಎಲ್.,

XI. ಮ್ಯಾನೇಜಿಂಗ್‌ಕಮಿಟಿಯ ಮೀಟಿಂಗು ನಡೆಸುವದಕ್ಕೆ ನಾಲ್ಕು ಮೆಂಬರುಗಳು ಕೋರಂಯೆಂದು ಎಣಿಸತಕ್ಕದ್ದು. ಹೆಚ್ಚು ಜನರ ಮತವೇ ಅಂಗೀಕರಿಸಲ್ಪಡತಕ್ಕದ್ದು. ಸಮ್ಮತಿಗಳು ಸಮವಾದಾಗ ಅಧ್ಯಕ್ಷರಿಗೆ ಪರ್ಯವಸಾನದ ಸಮ್ಮತಿ ಕೊಡುವ ಅಧಿಕಾರವಿರುವುದು.

2. 1922ನೆ ವರ್ಷದ ಬೇಸಗೆ ರಜಾದಲ್ಲಿ ಅಥವಾ 1922ನೆ ಡಿಸೆಂಬರ್ ತಿಂಗಳಲ್ಲಿ ಯಾವುದಾದರೂ ಒಂದು ಅನುಕೂಲವಾದ ಸ್ಥಳದಲ್ಲಿ ಮುಂದಿನ ಮಹಾಸಭೆಯನ್ನು ನಡೆಸುವುದಕ್ಕೆ ವೀರಶೈವಮಹಾಜನಗಳನ್ನು ಕೇಳಿಕೊಂಡು ಆ ಬಗ್ಗೆ ಮೈಸೂರು ಸ್ಟಾರ್, ಪ್ರಬೋಧ (ಬೆಳಗಾಂ), ವಿಭಾಕರ (ಬೆಳಗಾಂ), ಕರ್ನಾಟಕ ಟೈಮ್ಸ್ (ಧಾರವಾಡ), ಈ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು. ಮತ್ತು ಆ ಪ್ರಕಟನೆಯಲ್ಲಿ ಈ ನಿಧಿಯಿಂದ ಸಂದರ್ಭಾನುಸಾರ ಒದಗಬಹುದಾದ ಧನಸಹಾಯವು ದೊರೆಯುವುದೆಂದು ಸಹ ಕಾಣಿಸತಕ್ಕದ್ದು.

X. 1904ನೇ ಇಸವಿಯ IIIನೇ ಮೈಸೂರು ಸೊಸೈಟಿ ರೆಗ್ಯುಲೇಷನ್ನಿಗೆ ಅನುಸಾರವಾಗಿ ದಾತೃಗಳ ಕಮಿಟಿಯನ್ನು ರಿಜಿಸ್ಟರು ಮಾಡಿಸಬೇಕೆಂತಲೂ ನಿರ್ಧರವಾಯಿತು.

ಕೆ. ಪಿ. ಪುಟ್ಟಣ್ಣಶೆಟ್ಟಿ,
ಸಭಾಧ್ಯಕ್ಷ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಕ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಪ್ರಜಾಪ್ರತಿನಿಧಿಸಭಾ ಮೆಂಬರುಗಳಲ್ಲಿ ವಿಜ್ಞಾಪನೆ.

ಸ್ವಾಮಿ,

ಪಟೇಲ್ ಶಾನುಭೋಗರುಗಳೇ ಮೊದಲಾದವರ ಇನಾಮತಿ ಜಮೀನುಗಳನ್ನು ಕ್ರಯ, ಆಧಾರ, ಭೋಗ್ಯ ಮಾಡುತ್ತಿರುವ ಪದ್ಧತಿ ಬಹುಕಾಲದಿಂದಲೂ ನಡೆದುಬರುತ್ತಿರುವುದು ಸರಿಯಷ್ಟೆ; ಕೆಲವರು ಪೂರಾ ಆಕಾರ ಕರಾವ್ ಆಗಿರತಕ್ಕ ಇನಾಮತಿ ಜಮೀನುಗಳನ್ನು ಮೇಲ್ಕಂಡಂತೆ ವಿಲೇಮಾಡುವುದರ ಮೂಲಕ ಪರಭಾರೆಮಾಡಿ ಮುಕ್ಕಾಲುಭಾಗ ಜನಗಳು ಪೋಟಿಗೆ ವರಮಾನದಿಂದ ಮಾತ್ರವೇ ಕೆಲಸಮಾಡುತ್ತಿದ್ದಾರೆ. ಹೀಗಿದ್ದಾಗ್ಯೂ, ಡೆಪ್ಯುಟೀಕಮಿಷನ್ ಸಾಹೇಬರವರು, ಅಸಿಸ್ಟೆಂಟರು ಸಹ ಹಿಂದೆ ಪರಭಾರೆಯಾಗಿರುವವುಗಳನ್ನು ಕೂಡಲೇ ಹಾಲಿ ಕೆಲಸನೋಡತಕ್ಕವರಿಗೆ ಬಿಟ್ಟುಕೊಡಬೇಕೆಂಬ ಖಂಡಿತವಾದ ಆರ್ಡರುಗಳನ್ನು ಮಾಡುತ್ತಲೂ, ಮತ್ತು ಬಿಡಿಸುತ್ತಲೂ, ಪ್ರಜೆಗಳಿಗೆ ತೊಂದರೆಕೊಡುತ್ತಿರುವುದು ಯಾವಧರ್ಮ? ಪ್ರಜಾಪ್ರತಿನಿಧಿಸಭೆಗೆ ಪ್ರಜಾಪ್ರಮುಖರಾಗಿ ದಯಮಾಡಿಸುವ ಮೆಂಬರುಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನಂದರೆ—ಕ್ರಯಮೂಲಕ ಪಡೆದು ಪೂರಾ ಆಕಾರ ಕರಾವಾಗಿರತಕ್ಕ ಇನಾಮತಿ ಜಮೀನುಗಳನ್ನು ವಾಪ್ಸು ಬಿಡಿಸಿಕೊಳ್ಳತಕ್ಕದ್ದು ತೃಪ್ತಿಕರವಾಗಿಲ್ಲವೆಂಬ ಅಂಶವನ್ನು ಘನಸರ್ಕಾರದವರ ಮುಂದಿರಿಸುವುದರ ಮೂಲಕ ಸರಿಯಾದ ತೀರ್ಮಾನದಿಂದ ಪ್ರಜಾವರ್ಗಕ್ಕಿರುವ ಈ ತೆರದ ತೊಂದರೆಗಳನ್ನು ಬಹುಮಟ್ಟಿಗೆ ತಪ್ಪಿಸಿಕೊಡಬೇಕಾಗಿ ಕೋರುತ್ತೇನೆ.

ಯಜಮಾನ್ ಭದ್ರಪ್ಪ ತೀತ, ಕೊರಟಗೆರೆ ಸಬ್‌ತಾಲ್ಲೂಕು.

ಶಿರಾಳಕೊಪ್ಪದ ಮುನಿಸಿಪಾಲಟಿ.

ಶಿಕಾರಿಪುರದ ತಾಲ್ಲೂಕು ಶಿರಾಳಕೊಪ್ಪದ ಮೈನರ್ ಮುನ್ಸಿಪಾಲ್ಟಿ ಮೆಂಬರುಗಳನ್ನು ಸರ್ಕಾರದವರು ನಾಮಿನೇಟಾಗಿ ಸುಮಾರು 700 ಪ್ರಜಾಸಂಖ್ಯಾತರಾಗಿರುವ ಮಹಮ್ಮದೀಯರಲ್ಲಿ ಒಬ್ಬರನ್ನೂ 50 ಪ್ರಜಾಸಂಖ್ಯೆ ಇರುವ ಕೆಲವರಲ್ಲಿ ಒಬ್ಬರನ್ನೂ ವೈಶ್ಯರಲ್ಲಿ ಒಬ್ಬರನ್ನೂ, ಸುಮಾರು 60 ಅಥವಾ 70 ಪ್ರಜಾಸಂಖ್ಯೆಮಾತ್ರವೇ ಇದ್ದ ಮೆಂಬರುಗಳಲ್ಲಿ ಪ್ರಜಾನುರಾಗಿಗಳಲ್ಲದ ಇಬ್ಬರು ಮೆಂಬರುಗಳನ್ನೂ ಚುನಾಯಿಸಿ ಬಹಳ ಪ್ರಜಾಸಂಖ್ಯೆ ಎಂದರೆ 600ರ ಮೇಲಿರುವ ವೀರಶೈವರಲ್ಲಿ ಒಬ್ಬರನ್ನೂ ಚುನಾಯಿಸದೆ ಇರುವುದನ್ನು ನೋಡಿ ಇಲ್ಲಿಯ ಜನರಿಗೆಬಹಳ ಅಸಮಾಧಾನವಾಗಿದೆ. ಯಾವಕಾರಣದಿಂದ ಈರೀತಿ ಮಾಡಿದರೋ ತಿಳಿಯಲಿಲ್ಲ. ಇಲ್ಲಿಯ ಜನರು ಖುದ್ದಾಗಿ ಡೆಪ್ಯುಟಿಕಮಿಷನರಲ್ಲಿಗೆ ಹೋಗಿ ವೀರಶೈವರಲ್ಲಿ ಒಬ್ಬರನ್ನು ತೆಗೆದುಕೊಳ್ಳಬೇಕೆಂದೂ ಈಗ ಚುನಾಯಿಸಿರುವ ೨ ಜನ ಮೆಂಬರುಗಳು ಪ್ರಜಾನುರಾಗಿಗಳಲ್ಲವೆಂದೂ ರೂಬುರೂಬು ಹೇಳಿಕೊಂಡಾಗ್ಯೂ ಹಾಗೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿರುವರು. ದೊಡ್ಡ ಅಧಿಕಾರಿಗಳೇ ಹೀಗೆ ಮಾಡಿದರೆ ನಮ್ಮಗಳ ಗೋಳನ್ನು ಕೇಳುವವರೇ ಇಲ್ಲದಂತಾಯಿತು. ಈ ವಿಷಯವನ್ನು ಇಲ್ಲಿಯ ಜನಗಳು ದಿವಾನರವರ ವರೆಗೂ ಬರೆದುಕೊಂಡಿರುತ್ತಾರೆ. ದಯಾಳು ಸರ್ಕಾರದವರು ಈಗ ಇಲ್ಲಿಯ ಮುನ್ಸಿಪಾಲ್ಟಿಯ ಮೆಂಬರ್ ಚುನಾವಣೆಯ ರೀತಿಯನ್ನು ಪರಿಶೀಲಿಸಿ ನಾಮಿನೇಟಾದವರಲ್ಲಿ ಪ್ರಜೆಗಳ ಪ್ರೀತಿಗೆ ಪಾತ್ರರಾಗದಿರುವ ಮೆಂಬರುಗಳನ್ನು ವಜಾಮಾಡುತ್ತಾರಾಗಿಯೂ ಮತ್ತು ಬಹು ಸಂಖ್ಯಾತರಾಗಿರುವ ವೀರಶೈವರಲ್ಲಿ ಒಬ್ಬರನ್ನು ನಾಮಿನೇಟಾಗಿ ತೆಗೆದುಕೊಳ್ಳುತ್ತಾರೆಂದು ಇಲ್ಲಿಯ ಜನಗಳು ನಂಬಿಕೊಂಡಿರುತ್ತಾರೆ.

ಪುರನಿವಾಸಿ.

ಈ ಸಂಗತಿಯು ನಿಜವಾಗಿದ್ದರೆ ಇದಕ್ಕೆ ಡಿ|| ಕಮಿಷನರು ಅವಕಾಶ ಕೊಟ್ಟಿರುವುದು ಸರಿಯಲ್ಲ. ಸ್ಥಳದ ಸ್ಥಿತಿಯನ್ನು ಅವರಾಗಲೀ ಪ್ರಭುತ್ವದವರಾಗಲೀ ಅವಶ್ಯವಾಗಿ ಗಮನಿಸದಿರಲಾರರೆಂದು ನಂಬುತ್ತೇವೆ.

ಪ. ಪ್ರ.

ಗುಂಡ್ಲುಪೇಟೆ ತಾ|| ಬಾಚಹಳ್ಳಿ ಆರ್. ಎ. ವಿ ಸ್ಕೂಲ್.

(ಉಡ್‌ಪಾರ್ಟೀಷನನ್ನು ಕೂಡಲೇ ಹಾಕಿಸಬೇಕು.)

ಅಯ್ಯಾ, ಈ ಗ್ರಾಮದಲ್ಲಿ ಈಗ ಸ್ಕೂಲ್‌ಮಾಡುತ್ತಿರುವ ಬಾಯ್ಸ್ ಮತ್ತು ಗರ್ಲ್ಸ್‌ಸ್ಕೂಲುಗಳನ್ನೂ, ಅವುಗಳ ಸುತ್ತಣ ಕಾಂಪೌಂಡುಗೋಡೆಯನ್ನೂ ಸಹ, ಈ ಗ್ರಾಮದ ಸಾಹುಕಾರ್ ಮಿ|| ಹುಚ್ಚಪ್ಪನವರು ಮೂರುಸಾವಿರ (೩೦೦೦) ರೂಪಾಯಿಗಳನ್ನು ಖರ್ಚುಮಾಡಿ ಈಗ್ಗೆ ಐದು ವರ್ಷದಲ್ಲಿ ಕಟ್ಟಿಸಿದರು. ಇಂದಿಗೂ ಈ ಕಟ್ಟಡದ ಜೋಪಾನವೇ ತಮ್ಮ ಪ್ರಥಮಕಾರ್ಯವೆಂದು ಭಾವಿಸಿ, ಆಗಾಗ್ಗೆ ಸುಣ್ಣ ಬಳಿಸುತ್ತಲೂ, ಶಿಥಿಲವಾದ ಭಾಗವನ್ನು ಕೂಡ್ಲೆ ಸರಿಪಡಿಸುತ್ತಲೂ ಇರುತ್ತಾರೆ. ಸುತ್ತಮುತ್ತಣ ಹಳ್ಳಿಗಳಿಂದ ಬರುವ ತಮ್ಮಮತದ ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲೇ ಅನ್ನೋದಕಗಳಿಗೂ ವಾಸಕ್ಕೂ ಏರ್ಪಡಿಸಿರುವುದಲ್ಲದೆ ಬ್ರಾಹ್ಮಣವಿದ್ಯಾರ್ಥಿಗಳಿಗೆ ವಸತಿಗಳನ್ನು ಕಲ್ಪಿಸಿಕೊಡುತ್ತಾ, ಪಾಠಶಾಲೆಯ ಅಭಿವೃದ್ಧಿವಿಷಯದಲ್ಲಿ ತುಂಬಾ ಮುತವರ್ಜಿಯನ್ನೂ ವಹಿಸಿರುತ್ತಾರೆ. ಇವರ ಕಟ್ಟಡವಾಗುವುದಕ್ಕೆ ಮುಂಚೆ ಈ ಪಾಠಶಾಲೆಯಲ್ಲಿ ಇಬ್ಬರು ಮಾಸ್ತರುಮಾತ್ರ ಇದ್ದರು. ಕನ್ನಡ ಲೋ|| ಸೆ|| ತರಗತಿಯನ್ನು ಇಟ್ಟಿರಲಿಲ್ಲ. ಇವರು ಪಾಠಶಾಲೆಯನ್ನು ಕಟ್ಟಿಸಿದ ಈಚೆಗೆ ಮಾಸ್ತರುಗಳ ಸಂಖ್ಯೆಯು ನಾಲ್ಕಕ್ಕೆ ಹೆಚ್ಚಿತು. ಆರು ಹುಡುಗರು ಕನ್ನಡ ಲೋ|| ಸೆ|| ಪರೀಕ್ಷೆಯಲ್ಲಿ ತೇರ್ಗಡೆಯಾದರು. ಈಸಲ ಐದುಹುಡುಗರು ಪರೀಕ್ಷೆಗೆ ಕಟ್ಟಿರುತ್ತಾರೆ. ೧೯೨೦ನೇ ಜೂನ್ ಮಾಹೆಯಲ್ಲಿ ಇಂಗ್ಲೀಷುತರಗತಿಯು ಆರಂಭವಾಗಿ ಈಗ ಇಂಗ್ಲೀಷು ೩ನೇ ತರಗತಿಯವರೆಗೂ ವ್ಯಾಸಂಗ ನಡೆಯುತ್ತಲಿದೆ. ಈ ಗ್ರಾಮದಲ್ಲಿ ವಿದ್ಯೆಯು ಇಷ್ಟು ಪ್ರಚಾರಕ್ಕೆ ಬರಲು ಈ ಮಹನೀಯರೇ ಕಾರಣಕರ್ತರು. ಇಂಥ ಅಮೋಘಾಮೋಘವಾದ ಇವರ ಧರ್ಮಕ್ಕೆ ಧರ್ಮಿಷ್ಠರ ಹೃದಯದಲ್ಲೇ ನೆಲಸಿರುವ ದೇವರು ಮೆಚ್ಚಿ ಅಪುತ್ರವಂತರಾಗಿದ್ದ ಇವರಿಗೆ ಒಂದು ಪುತ್ರಸಂತಾನವನ್ನು ಕರುಣಿಸಿದ್ದು ಆಶ್ಚರ್ಯವೇನೂ ಅಲ್ಲ. ಆ ಬಾಲನು ಈ ಪಾಠಶಾಲೆಗೆ ಬರುವಂಥ ಸುಸಮಯವನ್ನು ದೇವರು ಜಾಗ್ರತೆಯಾಗಿ ಕರುಣಿಸಬೇಕೆಂಬುದೇ ನನ್ನ ಪ್ರಾರ್ಥನೆ. ಬಾಯ್ಸ್‌ಸ್ಕೂಲ್ ಕಟ್ಟಡವು ಖುಲ್ಲಾ ಒಂದೇ ಹಾಲಾಗಿರುತ್ತೆ. ಏಕಕಾಲದಲ್ಲಿ ಮೂರುಜನ ಮಾಸ್ತರು ಈ ಹಾಲಿನಲ್ಲಿ ಪಾಠಮಾಡಿಸಬೇಕಾಗಿರುವುದರಿಂದ ವಿಶೇಷ ಗಲಭೆಗೆ ಅವಕಾಶವಾಗಿ ನಡೆಯಲು ತುಂಬಾ ತೊಂದರೆಯಾಗಿದೆ. ಹಿಂದೆ ನಂಜನಗೂಡು ರೇಂಜ್ ಅ|| ಇ|| ರಾಗಿದ್ದ ಮಿ|| ಹೆಚ್. ನಾಗಪ್ಪನವರು ಉಡ್‌ಪಾರ್ಟಿಷನ್ ಹಾಕಿ ಪ್ರತ್ಯೇಕಪ್ರತ್ಯೇಕ ರೂಮುಗಳನ್ನು ಗೌರ್ನಮೆಂಟ್ ಖರ್ಚಿನಿಂದ ಮಾಡಿಸುವ ವಿಷಯದಲ್ಲಿ ಇವರ ಅಭಿಪ್ರಾಯವನ್ನು ಕೇಳಲು, ಈ ಕಟ್ಟಡಕ್ಕೆ ಮೂರುಸಾವಿರ ರೂಪಾಯಿಗಳನ್ನು ಖರ್ಚುಮಾಡಿರುವ ಈ ಮಹನೀಯರ ಉತ್ತರವು ತಾವೇ ತಮ್ಮ ಸ್ವಂತ ಹಾತುಲಾಗೋಡಿನಿಂದ ಮಾಡಿಸುವುದಾಗಿ ಒಪ್ಪಿ ತಮ್ಮ ಉದಾರಭಾವವನ್ನು ಸೂಚಿಸಿದ್ದು ಸ್ವಾಭಾವಿಕವಾದದ್ದೇಸರಿ. ಈ ಕೆಲಸವು ಇನ್ನೂ ಆಗದೆ ಸಾವಕಾಶಕ್ಕೆ ಬಿದ್ದಿರೋಣದ್ದರಿಂದ ಸರ್ಕಾರದವರೇ ಈ ಕೆಲಸವನ್ನು ಆದಷ್ಟು ಜಾಗ್ರತೆಯಿಂದ ಮಾಡಿಸಬೇಕೆಂಬ ಏರ್ಪಾಡು ಇಡಿಸುತ್ತಿರುವರಾದ್ದರಿಂದ ಮೂರುಸಹಸ್ರ ರೂಪಾಯಿಗಳನ್ನು ಖರ್ಚುಮಾಡಿರುವ ತಮ್ಮ ಶಾಶ್ವತವಾದ ಧರ್ಮಕ್ಕೆ ಬಹುಶಃ ಒಂದುನೂರು ರೂಪಾಯಿಗಳನ್ನು ಮಾತ್ರ ಖರ್ಚುಮಾಡಬಹುದಾದ ಮತ್ತೊಬ್ಬರು ಭಾಗಿಗಳಾಗಿ ಬರದಹಾಗೆ ನಮ್ಮ ಸಾಹುಕಾರ್ ಮಿ|| ಹುಚ್ಚಪ್ಪನವರು ತಾವೇ ಈ ಕೆಲಸವನ್ನು ಮಾಡಿಸಿ ತಮಗೆ ತಮ್ಮ ಧರ್ಮದಲ್ಲಿರುವ ಅನಿರ್ವಚನೀಯವಾದ ಅಭಿಮಾನವನ್ನು ಪ್ರಚುರಪಡಿಸುತ್ತಾರೆಂದು ನಂಬಿರುತ್ತೇನಲ್ಲದೆ ಅತ್ಯಂತ ಉದಾರಿಗಳಾದ ಇವರನ್ನು ದೇವರು ಇನ್ನೂ ಚಿರಕಾಲ ಸೌಖ್ಯದಿಂದ ಇಡಲೆಂದು ಪ್ರಾರ್ಥಿಸುತ್ತೇನೆ.

ಬ. ಎಸ್. ಎ.

ಸಂಪದಭ್ಯುದಯದ ಸಚ್ಛೂದ್ರ.

ಸ್ವಾಮಿ,

ಜನವರಿ ತಾ|| ೨ನೆ ಸಂಪದಭ್ಯುದಯಪತ್ರಿಕೆಯಲ್ಲಿ ಸಚ್ಛೂದ್ರ ಎಂಬ ಹೆಸರನ್ನಿಟ್ಟುಕೊಂಡು ಮ|| ಸಿ. ರಾಮಲಿಂಗರಡ್ಡಿಯವರನ್ನು ಕುರಿತು ಒಂದು ಕರಸ್ಪಾಂಡೆನ್ಸು ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ಮ|| ರಡ್ಡಿಯವರು ಮೈಸೂರು ವಿದ್ಯಾಭ್ಯಾಸ ಇಲಾಖೆಯ ಮೊಹ್ತೇಸರರಾಗಿದ್ದಾಗ ಪರ್ಷಿಯಾದ ಷಾ ಮೊದಲಾದವರಂತೆ ನಡೆದರೆಂಬದಾಗಿಯೂ, ಈಗ ಇವರಿಗೆ ಶುಕ್ರಮಹರ್ದಶೆ ಬರಲು ಉಪಕ್ರಮವಾಗಿರುವುದೆಂಬದಾಗಿಯೂ, ಮದ್ರಾಸ್ ಲೆಜಿಸ್ಲೇಟೀವ್ ಕೌನ್ಸಿಲ್ಲಿಗೆ ಇವರು ಮೆಂಬರಾಗಿ ಚುನಾಯಿಸಲ್ಪಟ್ಟರೆಂಬುದಾಗಿಯೂ, ಇವರು ಪ್ರಪಂಚಕ್ಕೇ ಡಿಕ್ಟೇಟರುಗಳಾಗಿದ್ದರೆ ಹೇಗೋಹಾಗೆ ಬರೆವಣಿಗೆಯಲ್ಲೂ ಉಪನ್ಯಾಸಗಳಲ್ಲೂ ವಿಜೃಂಭಿಸುವರೆಂಬುದಾಗಿಯೂ ಇಂಡ್ಯಾ ಗೌರ್ನಮೆಂಟಿಗೂ ಬ್ರಿಟಿಷ್ ಗೌರ್ನಮೆಂಟಿಗೂ ಹುಚ್ಚು ಹಿಡಿದಿರುವುದೆಂಬದಾಗಿ ಇವರು ಹಿಂದೂಪತ್ರಿಕೆಗೆ ಬರೆದಿರುವರೆಂಬುದಾಗಿಯೂ, ಇದನ್ನು ನೋಡಿದರೆ ಇವರು ಇಂಡ್ಯಾದೇಶದ ಲೆನಿನ್ನರಾಗಬಹುದೆಂಬುದಾಗಿ ಕೆಲವರು ಹೇಳುತ್ತಾರೆಂಬುದಾಗಿಯೂ, ಇವರ ಅಧ್ಯಕ್ಷತೆಯಲ್ಲಿ ಜಸ್ಟಿಸ್ ಪಕ್ಷಿಯು ಮುಂದಕ್ಕೆ ಬರಬಹುದೆಂದು ತೋರುತ್ತದೆಂಬುದಾಗಿಯೂ ಮೊದಲಾಗಿ ಬರೆಯಲ್ಪಟ್ಟಿದೆ.

ಮ|| ರಡ್ಡಿಯವರು ಸಾಮರ್ಥ್ಯಶಾಲಿಗಳವರು. ಪ್ರಪಂಚದ ಯಾವಮೂಲೆಗೆ ಹೋದರೂ ಅವರಿಗೆ ಉಚಿತವಾದ ಪದವಿಯೂ ಸನ್ಮಾನವೂ ದೊರೆಯುವುದು ಸಿದ್ಧವಾಗಿದೆ. ಅವರು ಈಗ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುತನಕ್ಕೆ ಅಲ್ಲಿನ ಯೂನಿವರ್ಸಿಟಿ ಪಕ್ಷದಿಂದ ಉಮೇದುವಾರರಾಗಿ ನಿಂತಿರುವದು ನಿಜ. ಆದರೆ ಅಲ್ಲಿಯೂ ಹುಟ್ಟಿರುವ ಬ್ರಾಹ್ಮಣಬ್ರಾಹ್ಮಣೇತರ ಎಂಬ ಭೇದದ ಸ್ಪರ್ಧೆಯಿಂದ ಪರ್ಯವಸಾನವು ಹೇಗಾಗುವುದೋ ಮುಂದೆ ತಿಳಿಯಬೇಕಾಗಿದೆ. ಆದರೆ ಸಂಪದಭ್ಯುದಯದ ಸಚ್ಛೂದ್ರನಿಗೆ ಅವರು ಆಗಲೇ ಮೆಂಬರಾಗಿ ಚುನಾಯಿಸಲ್ಪಟ್ಟರೆಂದು ಕನಸು ಬಿದ್ದಿರುವುದನ್ನು ನೋಡಿದರೆ ರಡ್ಡಿಯವರ ಸುದ್ದಿಯು ಈ ಲೇಖಕನಿಗೆ ಸಿಹಿಸ್ವಪ್ನವು ಆನೆಗೆ ಬಿದ್ದಂತೆ ಸದಾಕಣ್ಣಿಗೆ ಕಟ್ಟಿರಬಹುದಾಗಿ ತೋರುತ್ತಿದೆ. ರಡ್ಡಿಯವರ ಅಭ್ಯುದಯವನ್ನು ಕೇಳಿ ಸೈರಿಸಲಾರದ ಕಾರಣದಿಂದ ಈಗಲೂ ಆ ಪತ್ರಿಕೆಯಲ್ಲಿ ಇಂಥ ಲೇಖನಗಳು ಬರುತ್ತಿರುವದನ್ನು ನೋಡಿದರೆ ಇವರ ಅಸೂಯಾಳುತ್ವವೂ ದೀರ್ಘದ್ವೇಷವೂ ತನ್ಮೂಲಕ ಸಿದ್ಧವಾಗಿರುವ ನೀಚಪ್ರವರ್ತನವೂ ಎಷ್ಟು ಉಲ್ಬಣವಾದುವೆಂಬುವದು ಸರ್ವರಿಗೂ ಗೊತ್ತಾಗುತ್ತದೆ. ಇಂಥ ಅಸೂಯೆಯ ಲೇಖನಗಳನ್ನು ರಡ್ಡಿಯವರ ವಿಷಯವಾಗಿ ಯಾವ ಸಚ್ಛೂದ್ರನಲ್ಲ, ದುಶ್ಶೂದ್ರನೂಕೂಡ ಬರೆಯಲಾರನೆಂಬುದು ಖಂಡಿತ. ಇವನು ಯಾವನೋ ಅಸದ್ಬ್ರಾಹ್ಮಣನಾಗಿರಬೇಕು; ಇಲ್ಲವೆ ಸಂಪದಭ್ಯುದಯಕರ್ತರು ಹೇಳುವಂಥ ಕರ್ಮಚಂಡಾಲನಾಗಿರಬೇಕು. ಮ|| ರಡ್ಡಿಯವರು ಈ ದೇಶವನ್ನು ಬಿಟ್ಟುಹೋಗಿದ್ದರೂಕೂಡ ಅವರನ್ನು ದ್ವೇಷಿಸುವ ಈ ಜಘನ್ಯತನವನ್ನು ನೋಡಿದರೆ ಈ ಲೇಖಕರು ಸತ್ತಮೇಲೂ ಕೂಡ ಪೀಡೆಯಾಗಿ ರಡ್ಡಿಯವರನ್ನು ಪೀಡಿಸದೆ ಇರಲಾರರೆಂದು ತೋರುತ್ತದೆ. ಆದರೆ ಅದು ರಾಮಲಿಂಗ; ಪೀಡೆಗೀಡೆಗಳ ಕಾಟಕ್ಕೆಲ್ಲಾ ಸಿಲ್ಕದ ಮೃತ್ಯುಂಜಯವಾಗಿದೆ.

ಮ|| ರಡ್ಡಿಯವರು ಗ್ರಾಮಾಂತರಗಳ ಅರಿಯದ ಪ್ರಜೆಗಳು ಅಸಹಾಯವಾದಿಗಳ ಮರ್ಬೋಧೆಯಿಂದ ಕೆಟ್ಟುಹೋಗಬಾರದೆಂಬ ಯೋಚನೆಯಿಂದ ಕಳೆದ ತಿಂಗಳಲ್ಲಿ ಮದ್ರಾಸು ಆಧಿಪತ್ಯದ ಕೆಲವುಭಾಗಗಳಿಗೆ ಹೋಗಿ ಅಲ್ಲಲ್ಲಿನ ಪ್ರಜೆಗಳನ್ನು ಕೂಡಿಸಿ ಉಪನ್ಯಾಸಗಳನ್ನು ಮಾಡಿ ಬಂದರು. ಸ್ವರಾಜ್ಯಸಾಧನೆಗೆ ಸಹಕಾರಯತ್ನವೇ ಸಾಧುವಾದುದೆಂಬುದು ಅವರ ದೃಢನಿಶ್ಚಯ. ಆದರೆ ಈಮಧ್ಯೆ ಇಂಡ್ಯಾ ಗೌರ್ನಮೆಂಟಿನವರೂ ಇತರ ಪ್ರಾಂತಿಕ ಸರ್ಕಾರದವರೂ ಅವಲಂಬಿಸಿರುವ ಕಠಿನಶಾಸನಪ್ರಯೋಗವನ್ನೂ ನಿರ್ಬಂಧವಿಧಾನಗಳನ್ನೂ ನೋಡಿ ಸೈರಿಸಲಾರದೆ ಎಷ್ಟೋಜನ ದೊಡ್ಡಮನುಷ್ಯರೂ ಪಂಡಿತರೂ ಇದು ಸರಿಯಾದ ಮಾರ್ಗವಲ್ಲವೆಂದು ಸರ್ಕಾರಕ್ಕೆ ಎಚ್ಚರವನ್ನು ಹೇಳಿದಂತೆಯೇ ಮ|| ರಡ್ಡಿಯವರಾದರೂ ಸಹಜಭಾವದಿಂದ ಹಿಂದೂಪತ್ರಿಕೆಗೆ ಒಂದು ಲೇಖನವನ್ನು ಬರೆದು, ಸರ್ಕಾರದ ಈ ಪ್ರವರ್ತನವನ್ನು ನೋಡಿದರೆ ಅವರಿಗೆ ಬುದ್ಧಿ ವಿಕಲ್ಪವಾಗಿಹೋಗಿರುವಂತೆ ತೋರುತ್ತದೆಯೆಂದು ಅಭಿಪ್ರಾಯಪಟ್ಟಿದ್ದರು. ಇದರಿಂದ ಅವರ ನ್ಯಾಯಪಕ್ಷಾಭಿಮಾನವೂ ದೇಶಾಭ್ಯುದಯ ಚಿಂತನಾಶಕ್ತಿಯೂ ನಿಸ್ಪೃಹತೆಯೂ ವ್ಯಕ್ತವಾಗುವವೇ ಹೊರತು, ಸರ್ಕಾರದ ಪ್ರವರ್ತನೆಯು ದುಷ್ಟವಾಗಿರಲಿ ಸುಷ್ಟುವಾಗಿ

ರಲಿ ಅದನ್ನು ಮಂಡಿಸಿ ಆತ್ಮಲಾಭವನ್ನು ಮಾಡಿಕೊಳ್ಳಬೇಕೆಂಬ ಕೀಳುತನವು ಲೇಶಮಾತ್ರವೂ ಇಲ್ಲವೆಂಬುದು ಸುವ್ಯಕ್ತವಾಗುತ್ತದೆ. ಈ ವರ್ತನದಿಂದ ಅವರು ಇಂಡ್ಯಾದೇಶದ ಲೆನಿನ್ನರಾಗುತ್ತಾರೆಂದು ಬರೆದಿರುವುದು ಇಂಡ್ಯಾ ಗೌರ್ನಮೆಂಟು ಮೊದಲಾದುವುಗಳಿಗೆ ಇವರಮೇಲೆ ದ್ವೇಷಬುದ್ಧಿ ಹುಟ್ಟಲೆಂಬ ದುಷ್ಟಸಂಕಲ್ಪದಿಂದ ಬರೆದ ಮಾತಾಗಿದೆ. ಭರತಖಂಡವನ್ನು ರಷ್ಯಾದೇಶವನ್ನಾಗಿ ಮಾಡಬೇಕೆಂಬ ಲೆನಿನ್ ತತ್ವವು ಯಾವಗುಂಪಿನಲ್ಲಿದೆಯೆಂಬುದನ್ನು ಇಂಡ್ಯಾ ಸರ್ಕಾರದವರು ಇನ್ನೂ ತಿಳಿದುಕೊಂಡಿಲ್ಲವೆಂದು ಈ ಸಚ್ಛೂದ್ರರು ಭಾವಿಸಿದ್ದರೆ, ಅದು ಬರೀಭ್ರಮೆ. ಕೋತಿಯು ಮೊಸರನ್ನವನ್ನು ತಿಂದು ಮೇಕೆಯಬಾಯಿಗೆ ಒರಸಿದರೆ ಯಜಮಾನನು ಅದರ ಕಪಟಕ್ಕೆ ತಕ್ಕಶಾಂತಿಯನ್ನು ಮಾಡದೆ ಬಿಡುವನೆ? ಇಂಥ ನೀಚಪ್ರವರ್ತನವನ್ನು ಸಂಪದಭ್ಯುದಯದ ಸಚ್ಛೂದ್ರರು ಎಲ್ಲಿಯವರೆಗೆ ಮಾಡಿ ಏನನ್ನು ಸಾಧಿಸುವರೋ ನೋಡೋಣ.

ನ್ಯಾಯವಾದಿ.

ಬ್ರಾಹ್ಮಣರ ಬಾಹ್ಯಾಡಂಬರವು.

ಸ್ವರಾಜ್ಯವೆಂದು ಬಡಬಡಿಸುವ ಬ್ರಾಹ್ಮಣಬಂಧುಗಳೇ, ಸ್ವರಾಜ್ಯಪ್ರಾಪ್ತಿಯಾಗಬೇಕಾದರೆ ಏಕಮತ್ಯವೇ ಮೂಲಾಧಾರವಾದುದರಿಂದ ಹಿಂದೂದೇಶವಾಸಿಗಳೆಲ್ಲರೂ ಜಾತಿದ್ವೇಷವನ್ನು ಬಿಟ್ಟು ದೇಶೋದ್ಧಾರಕಾರ್ಯದಲ್ಲಿ ತೊಡಗಬೇಕೆಂದು ಮ|| ಗಾಂಧಿಯವರು ಬೋಧಿಸುವ ತತ್ವವು ಕೇವಲ ಮಾನ್ಯವಾದದ್ದೇಸರಿ. ಆದರೆ ಮಹಾತ್ಮರಂತೆ ಕಾರ್ಯದಕ್ಷತೆಯಿಂದಲೂ, ಸಹನಶೀಲತೆಯಿಂದಲೂ, ಸೌಜನ್ಯದಿಂದಲೂ ವಿಚಾರಪರಿಪೂರಿತ ಹೃದಯವುಳ್ಳವರಾಗಿ ನಿರಭಿಮಾನದಿಂದ ವರ್ತಿಸುವ ಯೋಗ್ಯತೆಯು ಯಾವ ಮನುಷ್ಯನಲ್ಲಿ ನೆಲೆಗೊಂಡಿರುವದೋ ಅವನೇ ಮಹಾತ್ಮರ ಆಜ್ಞೆಯನ್ನು ಪರಿಪಾಲಿಸಲು ಅರ್ಹನಲ್ಲವೆ? ಹೀಗಿದ್ದು ಈಗಿನ ಕಾಲದಲ್ಲಿ ಮಹಾತ್ಮರ ಆಜ್ಞೆಯನ್ನು ಪೂರ್ಣ ಪರಿಪಾಲಿಸತಕ್ಕವರಂತೆಯೂ ಅದರಂತೆ ವರ್ತಿಸಲು ಇತರರಿಗೆ ಸಹ ಬೋಧಿಸತಕ್ಕ ಜವಾಬ್ದಾರಿಯನ್ನು ಹೊತ್ತಿರುವವರೆಂತಲೂ ನಟಿಸುವವರು ನಮ್ಮ ಕರ್ನಾಟಕದೇಶದಲ್ಲಿ ಬಹುಶಃ ಬ್ರಾಹ್ಮಣರೇ ಅಲ್ಲವೆ? ಅಂದಮೇಲೆ ದೇಶೋದ್ಧಾರಕಾರ್ಯದಲ್ಲಿ ತಾವು ತೊಡಗಿ ಅನ್ಯರಿಗೆ ಸಹಾ ಬೋಧಿಸಿ ಸನ್ಮಾರ್ಗಕ್ಕೆ ತರುವ ಅಖಂಡವಾದ ಭಾರವನ್ನು ಹೊತ್ತು ಹೋರಾಡುವ ಸಾಮರ್ಥ್ಯವು ಎಷ್ಟರಮಟ್ಟಿಗೆ ಇರಬೇಕೆಂಬುವದನ್ನು ಈ ಬ್ರಾಹ್ಮಣರು ಪೂರ್ಣ ಅರಿತಿರುವರೇನು? ಅರಿತವರಾಗಿದ್ದರೆ ಇವರಿಗೆ ಜಾತಿಜಾತಿಯೊಳಗಿನ ವೈರಭಾವವೇತಕ್ಕೆ? ವೈರಭಾವವು ಬೇರೂರಿದ ಕುಟಿಲತನದಿಂದ ನಟಿಸುವದೇತಕ್ಕೆ? ಇಂಥಾ ಕುಟಿಲತನದಿಂದ ನಟಿಸುವ ಕಪಟನಾಟಕಕಾರರಮಾತು ಎಂದಿಗೂ ದಿಟವಾಗಲರಿಯದು. ಅಂತೂ ಹಿಂದೂಜನರಲ್ಲಿಯೂ ಮುಸಲ್ಮಾನರಲ್ಲಿಯೂ ಈಗ ಎಷ್ಟೋಮಟ್ಟಿಗೆ ಏಕಮತ್ಯವು ನೆಲೆಗೊಳ್ಳುತ್ತಾ ಬಂದಿರುವದನ್ನು ಪ್ರತ್ಯಕ್ಷ ಕಂಡು ಕೇಳಿ ಹಿಂದುಗಳಾದ ನಮ್ಮ ಬ್ರಾಹ್ಮಣಬಂಧುಗಳು ಹಿಂದೂಧರ್ಮದವರಮೇಲೆ ಗೊಂದಲವನ್ನೆಬ್ಬಿಸುತ್ತಿರುವ ಸಂಧಿಯನ್ನು ನೋಡಿದರೆ ಇದೊಂದುತರದ ಆನಂದವೆಂದೇ ತಿಳಿದಿರಬಹುದು. ಇಂಥವರಿಗೆ ನುಡಿಯಂತೆ ನಡೆಯಿಲ್ಲ ಎಂಬುವದೊಂದು ಬಹುಮಾನದ ಪದವಿಯೇ ಭೂಷಣಾಸ್ಪದವಾದದ್ದು. ಇರಲಿ. ಬಳ್ಳಾರಿಜಿಲ್ಲಾ ರಾಯದುರ್ಗದ ನಮ್ಮ ಬ್ರಾಹ್ಮಣಬಂಧುಗಳು ಬಹಳ ಮುಂದರಿದಿರುವರು. ಸದ್ಯಕ್ಕೆ ಈ ರಾಯದುರ್ಗಪ್ರದೇಶಕ್ಕೆ ಶ್ರೀಮದ್ವೀರಶೈವ ಮಹಾ ಮತಸ್ಥಾಪನಾಚಾರ್ಯರಲ್ಲೊಬ್ಬರಾದ ಶ್ರೀ ಹಿಮಾಚಲಪೀಠದ ಜಗದ್ಗುರುಗಳು ದಯಮಾಡಿಸಿದ್ದು ಅವರನ್ನು ರಾಯದುರ್ಗದ ವೀರಶೈವ ಮಂಡಳಿಯವರು ಅವರಿಗೆ ಸರಕಾರದವರು ಗೌರವಾರ್ಥವಾಗಿ ದಯಪಾಲಿಸಿರತಕ್ಕ ೩೨ ಬಿರುದಾವಳಿಗಳಿಂದ ಉತ್ಸವದೊಡನೆ ಬರಮಾಡಿಕೊಳ್ಳುವ ಕುತೂಹಲವುಳ್ಳವರಾಗಿದ್ದು ಅದಕ್ಕೆ ವಿರೋಧವಾಗಿ ಅಲ್ಲಿಯ ಬ್ರಾಹ್ಮಣಬಂಧುಗಳು ತಮ್ಮ ಮನಸ್ಸಿಗೆ ಬಹಳ ನೋವು ಉಂಟಾಗುವದೆಂದು ತಕರಾರುಮಾಡುತ್ತಿರುವರು. ಅಹೋ ಬ್ರಾಹ್ಮಣಬಂಧುಗಳೇ! ಸುಧಾರಿಸಿದವರೆಂದು ಸ್ವರಾಜ್ಯಧ್ವಜವನ್ನೇರಲು ಯತ್ನಿಸುವ ನಿಮಗೆ ಮನೋವ್ಯಥೆಯೆಲ್ಲಿಯದು? ನಿಮ್ಮಲ್ಲಿ ಏಕಮತ್ಯದ ಮೂರ್ತಿಯು ಎಷ್ಟು ಸ್ಫೂರ್ತಿದಾಯಕವಾಗಿ ನೆಲೆಗೊಂಡಿರುವದು? ನಿಮ್ಮಲ್ಲೇ ಒಂದು ಭಾಗದವರಾದ ಪ್ರಜೆಗಳ ಸ್ವಾತಂತ್ರ್ಯವನ್ನೂ ಗೌರವವನ್ನೂ ನೋಡಿ ಸೈರಿಸಲಾರದ ನಿಮಗೆ ಸ್ವರಾಜ್ಯಪ್ರಾಪ್ತಿಯ ಅರ್ಹತೆಯೆಲ್ಲಿರುವದು? ಒರೆಗಲ್ಲ ಮೇಲಿಟ್ಟಾಗಲಲ್ಲವೆ ಗಿಲೀಟು ನಗದ ಬಣ್ಣವು ಗೊತ್ತಾಗುವದು? ಸ್ವರಾಜ್ಯವು ಲಭಿಸಿದ ಮೇಲೆ ನೀವು ನಡೆಯಿಸುವ ಕಾರ್ಯಭಾರ ಸ್ವರೂಪವು ಹೇಗಿರುವದೆಂಬುದು ಇದೇ ಉದಾಹರಣೆಯಿಂದ ವ್ಯಕ್ತವಾಗುವುದು. ಈತರದ ದ್ವೇಷಭಾವನೆಯಿದ್ದ ಮೇಲೆ ದೇಶೋದ್ಧಾರಮಾಡುತ್ತೇವೆಂದು ಭಾರವನ್ನು ಹೊತ್ತು ಹೋರಾಡುವದೇತಕ್ಕೆ? ಬಾಯಿಂದ ಆಡಿದಂತೆ ಕೃತಿಯಿಂದ ನಡೆಯದಿದ್ದರೆ ಸದ್ಯಕ್ಕೆ ಕೈಕೊಂಡ ಕಾರ್ಯವು ಎಂದಿಗೂ ಯಶಸ್ವಿಯಾಗಲಾರದೆಂದು ಮುಂದಾದರೂ ಭಾವಿಸಿ ಸದ್ಯಕ್ಕೆ ದೇಶದಲ್ಲಿ ಏನು ನಡೆದದೆ ಎಷ್ಟು ಅನಾಹುತವಾಗಹತ್ತಿದೆ. ಇದಕ್ಕಾಗಿ ನಾವೆಲ್ಲರೂ ಮಾಡತಕ್ಕ ಕರ್ತವ್ಯಕರ್ಮವೇನು ಎಂಬುವದೊಂದು ತತ್ವವನ್ನು ಸಾಧಿಸಿರಿ. ವೃಥಾ ಬಡಬಡಿಸಿ ಕೈಕೊಂಡ ಕಾರ್ಯಕ್ಕೆ ಕಲಂಕವನ್ನು ತಂದುಕೊಳ್ಳಬೇಡಿರಿ. ನಿಮ್ಮಂತೆ ಇನ್ನುಳಿದ ಬಳ್ಳಾರಿ ಜಿಲ್ಲೆಯ ಬ್ರಾಹ್ಮಣರು ಹಾಗೂ ಇತರಪ್ರಾಂತದ ಬ್ರಾಹ್ಮಣರು ಅನುಸರಿಸಿದಾದರೆ ನುಡಿಯತಕ್ಕ ಮಾತಿಗೂ ನಡೆಯತಕ್ಕ ಕೃತಿಗೂ ಮಹದಂತರವುಂಟಾಗಿ ಬಹುತೇಕಜನರ ನಂಬಿಗೆಯು ನಿಮ್ಮಲ್ಲಿ ಉಳಿಯಲಿಕ್ಕಿಲ್ಲ. ಪ್ರಯುಕ್ತ ಪ್ರಿಯಬಂಧುಗಳೆ ಎಚ್ಚರಾಗಿರಿ. ಸ್ವಚ್ಛವಾದ ಮಾರ್ಗವನ್ನನುಸರಿಸಿರಿ.

ಓರ್ವ ವೀರಶೈವ.

ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು.

ಮಹಾಶಯರೇ,

ತರಂಗಶೀಲವಾದ ಕಪಿಲಾನದಿಯು ತರಂಗಭಂಗದಿಂದ ಈ ಪುರದ ಪೂರ್ವ, ಪಶ್ಚಿಮ ಮತ್ತು ಉತ್ತರದಿಕ್ಕುಗಳಲ್ಲಿ ಮಾಲೆಯಂತೆ ಪ್ರವಹಿಸುತ್ತಿರುವುದರಿಂದ “ಮಾಲಿಕಾಪುರ” ಎಂಬ ಅನ್ವರ್ಥನಾಮವು ಒಪ್ಪುತ್ತದೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಇಲ್ಲಿನ ನೈಸರ್ಗಿಕಸೌಂದರ್ಯ ವಿಶೇಷವು ಪ್ರೇಕ್ಷಣೀಯವಾಗಿರತಕ್ಕ ಅಂಶವಾಗಿದೆ. ಈ ತಾಲ್ಲೂಕಿನಲ್ಲೆಲ್ಲಾ ಅತ್ಯಂತ ಜನಸಾಂದ್ರತೆಯುಳ್ಳ ಈ ಪುರವು ವಿಶೇಷ ವ್ಯಾಪಾರಸ್ಥಳವಾಗಿರುವುದರಿಂದ, ಮನಿಯಾರ್ಡರು, ರಿಜಿಸ್ಟರು, ಇತ್ಯಾದಿಗಳನ್ನು ಸಕಾಲದಲ್ಲಿ ಪಾವತಿಮಾಡಲು, ಪೋಸ್ಟಾಫೀಸು ಇದ್ದರೂ ಇಲ್ಲದಿದ್ದರೆ ಹೇಗೋ ಹಾಗೆ ಭಾವಿಸಬೇಕಾಗಿದೆ. ಯಾಕೆಂದರೆ—ಇಲ್ಲಿನ ಪೋಸ್ಟುಮಾಸ್ಟರವರಿಗೆ ಒಂದೇ ಕೆಲಸವಿರುವುದಿಲ್ಲ. ಇವರು ಸರ್ಕಾರಿ ಗರ್ಲ್ಸಸ್ಕೂಲಿನಲ್ಲಿ ಅಸಿಸ್ಟೆಂಟ್ ಮಾಸ್ಟರಾಗಿಯೂ, ಸ್ಟೈಟ್‌ಸ್ಕೂಲ್ಮಾಸ್ಟರಾಗಿಯೂ, ಗೌರ್ನಮೆಂಟು ಆರ್ಡರಿಗೆ ವಿರುದ್ಧವಾಗಿ ಸ್ಟಾಂಪು ವೆಂಡರಾಗಿಯೂ ಇರುವುದಲ್ಲದೆ ಸುಮಾರು 25-30 ರೂ. ಕಂದಾಯಕೊಡತಕ್ಕ ಜಮೀನ್ದಾರರಾಗಿಯೂ ಇರುತ್ತಾರೆ. ಈರೀತಿಯಾಗಿ ಸರ್ವತೋಮುಖವಾದ ಆದಾಯವು ಇವರಿಗೆ ಇರುವುದರಿಂದಲೇ ಯಾವ ಕೆಲಸವನ್ನೂ ಮನಸಾಕ್ಷಿಗನುಸಾರವಾಗಿ ಮಾಡುತ್ತಾಯಿಲ್ಲವೆಂಬ ಅಂಶವನ್ನು ದೃಢವಾಗಿಯೂ ಹೇಳಬಹುದು. ಈ ಪೋಸ್ಟುಮಾಸ್ಟರು 1901 ನೇ ಇಸವಿಯಲ್ಲಿ ವಿದ್ಯಾಭ್ಯಾಸದ ಇಲಾಖೆಯಿಂದ ಬರ್ಖಾಸ್ತ ಮಾಡಲ್ಪಟ್ಟವರಾಗಿದ್ದಾಗ್ಯೂ, ತಮ್ಮ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಯಿಂದ ವಿದ್ಯಾಇಲಾಖಾ ಆಫೀಸರುಗಳನ್ನು ಮರುಳುಗೊಳಿಸಿ ಈಗ್ಗೆ 1½ ವರ್ಷಗಳಲ್ಲಿ ವಯಸ್ಸಿನ ರಿಯಾಯತಿಯನ್ನು ಹೊಂದಿ (25 ವರ್ಷಕ್ಕೆ ಮಿಕ್ಕಿರುವುದರಿಂದ) ಪುನಃ ಸ್ಕೂಲ್ಮಾಸ್ಟರ ಕೆಲಸಕ್ಕೆ ನೇಮಿಸಲ್ಪಟ್ಟಿರುತ್ತಾರೆ. ಇವರು ವಯಸ್ಸಿನ ರಿಯಾಯತಿಯನ್ನು ಪಡೆದು ಗರ್ಲ್ಸಸ್ಕೂಲ್ಮಾಸ್ಟರಾಗಿ ನೇಮಿಸಲ್ಪಟ್ಟಿದ್ದರೂ ತಮ್ಮ ನಿಜವಾದ ವಯಸ್ಸನ್ನು ಈಗಲೂ ಮರೆಮಾಚಿರುತ್ತಾರೆಂಬುವದು ಈ ಕೆಳಗೆ ಹೇಳಿರುವ ನಿದರ್ಶನಗಳಿಂದ ವೇದ್ಯವಾಗದಿರದು. ವಯಸ್ಸಿನ ರಿಯಾಯತಿಯಪ್ರಕಾರ ಇವರು ತಮ್ಮ ವಯಸ್ಸನ್ನು 31 ವರ್ಷವೆಂದ ಸರ್ಕಾರಕ್ಕೆ ತಿಳಿಸಿರುತ್ತಾರೆ. 1901 ನೇ ಇಸವಿಯಲ್ಲಿ ಸರ್ಕಾರದಿಂದ ನಿವೃತ್ತಿಯಾಗುವಾಗ ಇವರ ಈಗಿನ ವಯಸ್ಸಿನಪ್ರಕಾರ ಪರಾಮರ್ಶೆಮಾಡಿದರೆ 14 ವರ್ಷ ವಯಸ್ಸುಳ್ಳವರಾಗಿದ್ದರೆಂದೂ, ನಿವೃತ್ತಿಯಾಗುವುದಕ್ಕೆ ಪೂರ್ವಭಾವಿಯಾಗಿ ವಿದ್ಯಾ ಇಲಾಖೆಯಲ್ಲಿ 10-12 ವರ್ಷ ಸರ್ವಿಸ್ ಮಾಡಿರುವುದರಿಂದ ಇವರು 2 ವರ್ಷದ ಮಗುವಾಗಿರುವಾಗಲೇ ಸರ್ಕಾರಿಕೆಲಸಕ್ಕೆ ನೇಮಿಸಲ್ಪಟ್ಟಿದ್ದರೆಂದೂ ಭಾವಿಸಿದರೆ ಲೋ|| ಸೆ|| ಪರೀಕ್ಷೆಯಲ್ಲಿ ಮಾತೃಗರ್ಭದಲ್ಲಿರುವಾಗಲೇ ಉತ್ತೀರ್ಣರಾಗಿರಬಹುದೆಂದು ಭಾವಿಸಬೇಕಾಗುತ್ತದೆ. ಇಂತಹ ಕಾಲದಲ್ಲಿಯೂ ಇವರು ಸರ್ಕಾರಕ್ಕೆ ಸುಳ್ಳುವಯಸ್ಸನ್ನು ಕೊಟ್ಟು ತಮ್ಮ ದೋಷಗಳನ್ನು ಮರೆಮಾಚಿ ಸರ್ಕಾರದ ಕೆಲಸವನ್ನು ಪುನಃ ಸಂಪಾದಿಸಿರುವುದರಿಂದಲೇ ಇವರ ಪ್ರಚಂಡ ಬುದ್ಧಿಶಕ್ತಿಯು ವ್ಯಕ್ತಗೊಳ್ಳುವುದಿಲ್ಲವೇ? ಪೋಸ್ಟುಮಾಸ್ಟರು ಬೆಳಗ್ಗೆ 7½ ಘಂಟೆಯಿಂದ 10½ ವರೆಗೂ ಮಧ್ಯಾಹ್ನ 3 ಘಂಟೆಯಿಂದ 5 ರ ವರೆಗೂ ಗರ್ಲ್ಸಸ್ಕೂಲಿನಲ್ಲಿ ಕೆಲಸಮಾಡುತ್ತಾ ಇರುವುದರಿಂದ ಮಹಾಜನಗಳಿಗೆ ಕಾರ್ಡು, ಕವರು, ಸ್ಟಾಂಪು, ಛಾಪಾಕಾಗದ ಮುಂತಾದುವುಗಳನ್ನು ಕೊಳ್ಳುವುದಕ್ಕಾಗಲೀ ರಿಜಿಸ್ಟರು, ಮನಿಯಾರ್ಡರು, ಇವುಗಳನ್ನು ಪಾವತಿಮಾಡುವುದಕ್ಕಾಗಲೀ ಈ ಪೋಸ್ಟಾಫೀಸಿನಿಂದ ಸೌಕರ್ಯವೆಷ್ಟಿರುವುದನ್ನು ನಮ್ಮದಯಾಳು ಪೋಸ್ಟ್ ಡಿಪಾರ್ಟ್‌ಮೆಂಟಿನವರೂ ಮತ್ತು ವಾಚಕರೂ ಪರ್ಯಾಲೋಚಿಸಬಹುದು. ಪೋಸ್ಟುಮಾಸ್ಟರವರು ಗರ್ಲ್ಸಸ್ಕೂಲಿನಲ್ಲಿರುವಾಗ ಇವರಬಳಿಗೆ ಮೇಲೆ ಹೇಳಿರುವ ಕಾರಣಗಳಿಗಾಗಿ ಹೋದರೆ, ಗರ್ಲ್ಸಸ್ಕೂಲು ಹೆಡ್ಮಾಸ್ಟರವರು ಸ್ಕೂಲಿನೊಳಗೆ ಯಾರೂ ಪ್ರವೇಶಿಸಕೂಡದೆಂದು ಕೂಡಲೇ ಹೊರಕ್ಕೆ ಕಳುಹಿಸಿಬಿಡುತ್ತಾರೆ. ಈ ತಾಲ್ಲೂಕಿನಲ್ಲೆಲ್ಲಾ ಈ ಪೋಸ್ಟಾಫೀಸಿನಲ್ಲೇ ಉತ್ಪತ್ತಿ ಹೆಚ್ಚಾಗಿರುವುದರಿಂದ ಇಲ್ಲಿಗೆ ಒಂದು ಬ್ ಪೋಸ್ಟಾಫೀಸನ್ನು ದಯಪಾಲಿಸುವುದರಿಂದಲಾದರೂ ಮಹಾಜನಗಳಿಗೆ ಈ ಪೋಸ್ಟಾಫೀಸಿನಿಂದುಂಟಾಗಿರುವ ನ್ಯೂನತೆಗಳನ್ನು ಪರಿಹರಿಸಿ, ಸಕಾಲದಲ್ಲಿ ರಿಜಿಸ್ಟರು, ಮನಿಯಾರ್ಡರು ಇತ್ಯಾದಿಗಳನ್ನು ರವಾನಿಸಲು ತಕ್ಕಸೌಲಭ್ಯಗಳನ್ನು ನಮ್ಮ ದಯಾಳು ಪೋಸ್ಟಲ್ ಡಿಪಾರ್ಟ್‌ಮೆಂಟಿನವರು ಮಾಡುವರೆಂದು ನಂಬಿದ್ದೇವೆ. ಇವರ ಸುಳ್ಳುವಯಸ್ಸಿನ ವಿಚಾರವನ್ನು ನಮ್ಮದಯಾಳು ಗೌರ್ನಮೆಂಟಿನವರೂ, ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನವರೂ ಮತ್ತು ವಿದ್ಯಾ ಇಲಾಖೆಯ ಹ|| ಇ|| ಜ|| ಸಾಹೇಬರವರೂ ತಮ್ಮ ಘನವಾದಚಿತ್ತದಲ್ಲಿ ಪರಿಶೀಲಿಸಿ, ವಿಮರ್ಶೆಮಾಡುತ್ತಾರೆಂದು ನಂಬಿದ್ದೇವೆ.

ಸತ್ಯವಾದಿಗಳು.

ಸತ್ಕಾಲಕ್ಷೇಪ.

ಕಳೆದವಾರ ಚಿತ್ರದುರ್ಗದ ತಾಲ್ಲೂಕು ಭರಮಸಾಗರದ ಮಹಾಜನಗಳ ಕೋರಿಕೆಯ ಮೇರೆಗೆ ಇಲ್ಲಿನ ಪ್ರಸಿದ್ಧ ಕೀರ್ತನಕಾರರೂ, ಕರ್ನಾಟಕಾಂಧ್ರಕವಿವರರೂ ಆದ ಮ|| ಬಿ. ಭೀಮರಾಜುಯವರು ಬಂದು ಮೊದಲನೆಯದಿನ “ಕಿರಾತಾರ್ಜುನ” ವೆಂಬ ಶಿವಕಥೆಯನ್ನೂ ಎರಡನೆಯದಿನ “ಕಬೀರದಾಸ್” ಹರಿಕಥೆಯನ್ನೂ ಹೃದಯಂಗಮವಾದ ಸಂಗೀತಸಾಹಿತ್ಯದೊಡನೆ ನಿರೂಪಿಸಿ, ಸ್ತ್ರೀಪುರುಷರ ಮನಸ್ಸಿನಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳು ಆಗಲೇ ಪ್ರತಿಬಿಂಬಿಸುವಂತೆ ಮಾಡಿದರು. ಹಾಸ್ಯರಸವು ಅತ್ಯಂತ ಬೋಧಪ್ರದವಾಗಿ ಆಹ್ಲಾದಜನಕವಾಗಿದ್ದಿತು. ಸ್ವರಾಜ್ಯಸಾಧನೆಗಾಗಿ ಧರ್ಮಭೀಮಾರ್ಜುನರು ಹೇಗೆ ಧರ್ಮಮಾರ್ಗೈಕಪರಾಯಣರಾಗಿ ಪರಮೇಶ್ವರಾನುಗ್ರಹವನ್ನು ಸಂಪಾದಿಸಿದಾಗ್ಯೂ ಕಾಲಪರೀಕ್ಷಣೆಯನ್ನು ಮಾಡಿದರೋ ಅದನ್ನು ವರ್ತಮಾನಕಾಲದ ಸ್ವರಾಜ್ಯಸಾಧನೋದ್ಯಮಿಗಳು ಮಾಡುತ್ತಿರುವ ಕಾರ್ಯಗಳೊಡನೆ ತುಲನಮಾಡಿ ಗುಣ, ಕರ್ಮಸ್ವಭಾವಗಳಲ್ಲಿ ಏಕತ್ವವಿಲ್ಲದವರಿಗೆ ಸ್ವರಾಜ್ಯವು ದುರ್ಲಭವೆಂಬ ಅರ್ಥಕ್ಕೆ ಹೋಲಿಸಿ ಹಿಂದುಗಳಲ್ಲಿ ಅನಾದಿಯಿಂದ ಬಂದಿರುವ ಮಾತಾಪಿತೃಭಕ್ತಿ, ಗುರುಭಕ್ತಿ, ರಾಜಭಕ್ತಿ, ದೈವಭಕ್ತಿಗಳಿಗೆ ಲೋಪಬರಬಾರದೆಂದೂ ಬರೀ ಚಿತ್ರದಲ್ಲಿ ಅಥವಾ ಹೆಸರಿನಲ್ಲಿ ಧರ್ಮ, ಭೀಮಾರ್ಜುನರಾದವರಿಗೆ ಸ್ವರಾಜ್ಯವು ಜಲಲಿಪಿಯೆಂದೂ, ಮುಂತಾಗಿ ವಿವರಿಸಿದರು. ಕಬೀರ್‌ಮಹಾಶಯನು ಇಹವೇ ಪರರಾಜ್ಯವೆಂದು ಹೇಗೆ ಭಾವಿಸಿದ್ದನೋ ಅದು ಗಮನೀಯವೆಂದೂ, ಸರ್ವಸ್ವತಂತ್ರನೂ, ಸರ್ವರಕ್ಷಕನೂ ಆದ ಭಗವಂತನು ಹೊರತು ಚಕ್ರವರ್ತಿಪದವಿಯಲ್ಲಿರುವವರು ಸಹ ಅಸ್ವತಂತ್ರರೆಂದೂ, ಭಗವಂತನ ಅಧಿಕಾರವು ಅಪ್ರತಿಹತವಾದುದೆಂದೂ ಅವನ ಆಜ್ಞೆಯು ಚರಾಚರಾತ್ಮಕವಾದ ಪ್ರಾಣಿಗಳಲ್ಲೆಲ್ಲಾ ತಪ್ಪದೆ ನಡೆಯುವುದೆಂದೂ, ಕ್ಷುಲ್ಲಕರಾದ ನೀಚಮನುಜರ ಅಧಿಕಾರವು ಬಹುಳಾಕಾರವಾಗಿ ಪರಿಣಮಿಸಿರುವುದೆಂದೂ, ಗಾಳಿ, ಮಳೆ, ಬೆಳಕುಗಳು ಕ್ಷಣಕಾಲವಿಲ್ಲದಿದ್ದರೆ ಸ್ವತಂತ್ರವಾಗಿ ಅವುಗಳನ್ನು ಹೊಂದುವುದು ಅಸಾಧ್ಯವಾಗಿ ತಲ್ಲಣಿಸುವುದರಿಂದ ಸ್ವತಂತ್ರವೆಂಬ ಪದಕ್ಕೆ ಅನರ್ಥಮಾಡಿಕೊಂಡು ಬೆಂಕಿಯಲ್ಲಿ ಬಿದ್ದ ಪತಂಗಗಳು ನಾಶವಾಗುವಂತೆ ನಾಶವಾಗುವರೆಂದೂ “ಸ್ವದೇಶೋಭುವನತ್ರಯಂ” ಎಂಬ ಆರ್ಯೋಕ್ತಿಯು ಕೂಪಕೂರ್ಮ ನ್ಯಾಯದಂತೆ ಭಾವಿಸಿ ಭರತಖಂಡವು ಸ್ವದೇಶವೆಂದೂ, ಪಾಶ್ಚಿಮಾತ್ಯದೇಶಗಳು ಅನ್ಯದೇಶಗಳೆಂದೂ ಭಾವನೆಯು ಸಂಕುಚಿತಭಾವನೆಯೆಂದೂ, ಶಿವ, ಹರಿಕಥೆಗಳು ಶುಭಕರವಾದ ಮತ್ತು ಪಾಪಹರವಾದ ಕಥೆಗಳೆಂದೂ “ಜಾತಿನೀತಿಬೇರೆಜನ್ಮಂಗಳೊಂದೆಯೋ ಅರಿಯೆತಿಂಡಿಬೇರೆ ಹಸಿವು ಒಂದೇ | ಪಶುಗಳ್ಬಣ್ಣಬೇರೆಹಾಲೆಲ್ಲ ಒಂದೆಯೋ ವಿಶ್ವಕೋಭಿರಾಮ ಕೇಳುವೇಮ” || ಈ ಸಿದ್ಧಾಂತವು ಕಬೀರನ ಕಾಲದಲ್ಲಿ ಹೇಗೆ ಆಚರಣೆಯಲ್ಲಿದ್ದಿತೋ ಈಗ ಬರೀವಾಚಾ ಮಾತ್ರ ಉಳಿದು ಜಾತಿ, ಮತ, ಕುಲ, ಗೋತ್ರಗಳಿಗಾಗಿ ನಾನುಹೆಚ್ಚು ತಾನುಹೆಚ್ಚೆಂದು ಹೇಗೆ ಹೊಡೆದಾಡುತ್ತಲಿರುವರೋ ಇತ್ಯಾದಿ ಅನೇಕ ವಿಷಯಗಳನ್ನು ಸಪ್ರಮಾಣವಾಗಿಯೂ, ಸರಸವಾಗಿಯೂ ಜಯಜಯವೆನ್ನುವಂತೆ ವಿವರಿಸಿದರು. ಕೊನೆಯಲ್ಲಿ ಮ|| ರಾ|| ಭೀಮರಾಜುಯವರ ಅಸಾಧಾರಣ ವಾಕ್‌ಪಟುತ್ವ, ದೇಶಾಭಿಮಾನ, ಜನಾಭಿಮಾನಗಳು ಶ್ಲಾಘಿಸಲ್ಪಟ್ಟು ಕೀರ್ತನಕಾರರಿಗೆ ಆಯುರಾರೋಗ್ಯವನ್ನು ಕೋರಿ ಮಂಗಳಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶಿವಗಂಗೆ ದಕ್ಷಿಣಕಾಶೀ.

ನೆಲಮಂಗಲ ತಾಲ್ಲೂಕ್ ಶಿವಗಂಗೆ ದಕ್ಷಿಣಕಾಶೀ ಮಹಾಕ್ಷೇತ್ರದಲ್ಲಿ 14-1-22ನೇ ಶನಿವಾರ ರಾತ್ರಿ ಮಕರಸಂಕ್ರಮಣವಾದ್ದರಿಂದ ಸಂಕ್ರಮಣಕಾಲಕ್ಕೆ ಪರ್ವತದ ಮೇಲ್ಭಾಗದಲ್ಲಿ ಗಂಗೋತ್ಪತ್ತಿಯಾಗಿ ಆ ಗಂಗೆಯಿಂದ ಶ್ರೀ ಗಂಗಾಧರೇಶ್ವರ ಸ್ವಾಮಿಯವರಿಗೆ ಕಲ್ಯಾಣೋತ್ಸವವಾಗುವದ್ದರಿಂದ ಆಕಾಲದಲ್ಲಿ ಅನೇಕ ಯಾತ್ರಿಕರು ಬಂದು ದೇವತಾಸೇವೆಗಳನ್ನೇ ಮಾಡುವುದಲ್ಲದೆ ಆಗಿನ ಕಾಲಕ್ಕೆ ಅನೇಕ ಸಹಸ್ರ ದನಗಳು ಸೇರಿ ತುಂಬಾ ದೊಡ್ಡ ಜಾತ್ರೆನಡೆಯುವದ್ದರಿಂದ ಸರ್ವರೂ ಆ ಕಾಲಕ್ಕೆ ದಯಮಾಡಿ ಇತಕೋಪ್ಯಧಿಕ ಶ್ರೇಯಃಪ್ರಾರ್ಥನೆಮಾಡಿ ಕೃತಾರ್ಥರಾಗಬೇಕಾಗಿ ಕೋರುವುದಲ್ಲದೆ ಈ ಕ್ಷೇತ್ರಕ್ಕೆ ಬರಬೇಕಾದರೆ ತುಮಕೂರು ಮತ್ತು ಬೆಂಗಳೂರಿಗೂ ಇ ಮಧ್ಯೆ ಇರುವ ರೈಲ್ವೆಸ್ಟೇಷನ್ ನಿಡುವಂದದಲ್ಲಿಳಿದು 5 ಮೈಲಿ ದೂರದಲ್ಲಿರುವ ಮಹಾ ಕ್ಷೇತ್ರಕ್ಕೆ ಬರಬಹುದೆಂದು ಕೋರುವ,

ಚೆಂದಾದಾರ್.

ತರುಣಸಂಘ.

ಶ್ರೀ ಶಿವಯೋಗೀಶ್ವರ ಕೃಪಾಪಾತ್ರರಾದ ದಾವಣಗೆರೆ ವಿರಕ್ತಮಠದ ಶ್ರೀಮನ್ ನಿರಂಜನ ಮೃತ್ಯುಂಜಯಮಹಾಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ರಾಣೆಬೆನ್ನೂರು ತಾಲ್ಲೂಕು ಮೈಕ ಹಾದರಗೇರಿ ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ತಾ|| ೨-೧-೧೯೨೨ನೇ ಸೋಮವಾರ ಸಾಯಂಕಾಲ ೬ ಗಂಟೆಗೆ ವೀರಶೈವಸಭೆಯು ಸೇರಿ ನೈತಿಕ ಧಾರ್ಮಿಕ ವಿಷಯಗಳಬಗ್ಗೆ ಉಪನ್ಯಾಸಗಳು ನಡೆದನಂತರ ಈ ಗ್ರಾಮದಲ್ಲಿ ವೀರಶೈವತರುಣ ಸಂಘವು ಸ್ಥಾಪಿಸಲ್ಪಡಬೇಕೆಂದು ಶ್ರೀಗಳವರು ಸೂಚಿಸಿದ್ದಕ್ಕೆ ಸರ್ವರೂ ಆನಂದದಿಂದ ಠರಾವು ಪಾಸುಮಾಡಿದರು. ಉದ್ದೇಶ ವೀರಶೈವಸಮಾಜದಲ್ಲಿ ವಿದ್ಯಾಪ್ರಸಾರ, ಸಮಾಜಸುಧಾರಣೆ, ಧಾರ್ಮಿಕೋನ್ನತಿ, ಸಾಂಪತ್ತಿಕಾಭಿವೃದ್ಧಿ ಇವುಗಳ ವಿಷಯವಾಗಿ ಪ್ರಯತ್ನಿಸುವದು ಈ ಸಂಘದ ಉದ್ದೇಶವಾಗಿದೆ. ಈ ಸಂಘಕ್ಕೆ ಸಂಬಂಧಪಟ್ಟ ಒಂದು ಲೈಬ್ರರಿಯು ಸ್ಥಾಪಿಸಲ್ಪಟ್ಟಿದೆ. ಈ ಸಂಘಕ್ಕೆ ವೇ|| ಆರಾಧ್ಯಮಠದ ಗುದ್ದಪ್ಪಯ್ಯನವರು ಪ್ರಸಿಡೆಂಟರಾಗಿಯೂ, ಚನ್ನಬಸಪ್ಪ ಮತ್ತು ವೀರಪ್ಪ ಜೋಶಿ ಇವರು ಅನುಕ್ರಮವಾಗಿ ಸೆಕ್ರೆಟರಿ ಜಾಯಿಂಟ್‌ಸೆಕ್ರೆಟರಿಗಳಾಗಿಯೂ, ಪ್ರೋತ್ಸಾಹಕರು ಕೊಟ್ಟೂರು ಮಿರಳಘಟ್ಟಮಠದ ಷಡಕ್ಷರಪ್ಪನವರು ಆಗಿಯೂ ನೇಮಿಸಲ್ಪಟ್ಟು ಸರ್ವಾನುಮತದಿಂದ ಪಾಸುಮಾಡಲ್ಪಟ್ಟಿತು. ಈ ಸಂಘದ ಲೈಬ್ರರಿಗೆ ಕೆಲ ಮಹನೀಯರು ಮೆಂಬರರಾಗಿರುತ್ತಾರೆ.

ತರುಣಸಂಘ ಸೆಕ್ರೆಟರಿ.

ಮುಂಬಯಿಯಲ್ಲಿ ಶ್ರೀಯುತ ಜೆ. ಎಚ್. ಗುಗ್ಗಳಿ, ಬಿ.ಎ. ಐ. ಸಿ. ಎಸ್. ಇವರಿಗೆ ಸ್ವಾಗತಸಮಾರಂಭವು.

ರವಿವಾರ ತಾ|| ೮-೧-೧೯೨೨ನೆ ದಿವಸ ಸಂಜೆಯ ೫ ಘಂಟೆಯ ಸುಮಾರಕ್ಕೆ ಮುಂಬಯಿ ಲಿಂಗಾಯತಕಾಲೇಜು ವಿದ್ಯಾರ್ಥಿಗಳು ಶ್ರೀಯುತ ಗುಗ್ಗಳಿಯವರಿಗೆ ಸುಖಾಗಮನವನ್ನಿತ್ತು ಅವರ ವಿಷಯಕ್ಕಿದ್ದ ತಮ್ಮ ಪ್ರೇಮವನ್ನೂ ಆದರವನ್ನೂ ವ್ಯಕ್ತಪಡಿಸುವ ಕುರಿತು ಮ|| ರಾ|| ಬಾಬೂರಾವ ರಾಜಾಪೂರಕರ ಇವರ ಹಾಲಿನಲ್ಲಿ ಸಭೆಗೂಡಿಸಿದ್ದರು. ಸಭೆಗೆ ರಾವಬಹಾದ್ದೂರ ಮಲ್ಲಿನಾಯಕ ಪಾಟೀಲ, ಶ್ರೀಮಂತ ರಕ್ಕಸಗಿ ದೇಸಾಯರು, ಮ|| ರಾ|| ಗಂಗಾಧರಪ್ಪಾ ಸಾಬೋಜ ಮುಂತಾದ ಅನೇಕ ಸದ್ಗೃಸ್ಥರು ಆಗಮಿಸಿದ್ದರು. ಬನ್ನಟ್ಟಿಯ ಸುಪ್ರಸಿದ್ಧ ಮ|| ರಾ|| ತಮ್ಮಣ್ಣಪ್ಪಾ ಚಿಕ್ಕೋಡಿ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದಮೇಲೆ ಮಿ|| ಎಂ.ಎಸ್. ಕೇಸರಿ ಬಿ. ಎ., ಮಿ|| ಎಸ್. ಡಿ. ಚರಂಟಿ ಬಿ. ಎ., ಮಿ|| ಕೋರೆ ಬಿ.ಎ., ಶ್ರೀಮಂತ ರಕ್ಕಸಗಿ ದೇಶಾಯರು, ಮಿಸ್. ಕೃಷ್ಣಬಾಯಿ ಕೋರೆ ಮುಂತಾದವರು ಶ್ರೀಯುತ ಗುಗ್ಗಳಿಯವರ ಅಸಾಧಾರಣಬುದ್ಧಿ, ಸೌಜನ್ಯತೆ, ಕರ್ತವ್ಯದಕ್ಷತೆ ಮುಂತಾದ ಅನೇಕ ಸುಗುಣಗಳನ್ನು ಸಭಿಕರನಿದರ್ಶನಕ್ಕೆ ತಂದು ಭಾಷಣಮಾಡಿ ಅವರು ಕೈಗೊಳ್ಳುವ ರಾಜ್ಯದಾಡಳಿತೆಯು ಒಳ್ಳೇ ಸುಖಮಯವಾಗಲೆಂದೂ ಮತ್ತು ಅವರಿಂದ ಲಿಂಗಾಯತಸಮಾಜಕ್ಕೆ ಹಿತವಾಗಲೆಂದೂ ಜಗದೀಶನನ್ನು ಪ್ರಾರ್ಥಿಸಿದರು. ಮಿ|| ಮಿಣಜಿಗಿ ಎಂಬ ವಿದ್ಯಾರ್ಥಿಯು ಶ್ರೀಯುತ ಗುಗ್ಗಳಿಯವರ ಸುಖಾಗಮನಪ್ರೀತ್ಯರ್ಥವಾಗಿ ರಚಿಸಿದ ಪದ್ಯವನ್ನು ಮಧುರವಾಣಿಯಿಂದ ಹಾಡಿದನಂತರ ಮಿ|| ಗುಗ್ಗಳಿಯವರು ಸಭಿಕರ ಪ್ರಚಂಡಕರತಾಡನದಲ್ಲಿ ಎದ್ದು ಸಹಾಧ್ಯಾಯಿಗಳೂ ಮತ್ತು ಮಿತ್ರರೂ ತನ್ನನ್ನು ಬಹು ಪರಿಯಾಗಿ ಬಹುಮಾನಿಸಿದ್ದಕ್ಕಾಗಿ ಅವರೆಲ್ಲರಿಗೆ ಒಳ್ಳೇ ಆಭಾರಿಯಾಗಿದ್ದೇನೆಂದೂ ಮತ್ತು ಜನರ ಹಿತವನ್ನು ಸಾಧಿಸಲಿಕ್ಕೆ ಪ್ರಯತ್ನಿಸುತ್ತೇನೆಂದೂ ತಮ್ಮ ಅಸ್ಖಲಿತವಾಣಿಯಿಂದ ಹೇಳಿದರು. ಆಮೇಲೆ ಅಧ್ಯಕ್ಷರು ಲಿಂಗಾಯತಸಮಾಜದ ಉಜ್ವಲ ಪೂರ್ವೇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿ, ಶ್ರೀಯುತ ಗುಗ್ಗಳಿಯವರಂತೆ ತಮ್ಮ ಸಮಾಜದ ತರುಣರು ಪರದೇಶಗಳಿಗೆ ಗಮಿಸಿ ಅಲ್ಲಿಯ ಉಚ್ಚಶಿಕ್ಷಣವನ್ನು ಹೊಂದಿ ಲಿಂಗಾಯತಸಮಾಜವನ್ನು ರಾಜಕಾರಣದಲ್ಲಿ ಮುಂದಕ್ಕೆ ತರಬೇಕೆಂದು ಉಪದೇಶಿಸಿದರು. ನಂತರ ಎಲ್ಲ ವಿದ್ಯಾರ್ಥಿಗಳ ವತಿಯಿಂದ ಮಿ|| ದುಂಡಪ್ಪಾ ಪಾಟೀಲ ಬಿ. ಎ. ಇವರು ಪುನಃ ಶ್ರೀಯುತ ಗುಗ್ಗಳಿಯವರ ಸುಖಾಗಮನವನ್ನು ಬಯಸಿ, ಅವರ ಮತ್ತು ಅಧ್ಯಕ್ಷರ ಆಭಾರ ಮನ್ನಿಸಿದಮೇಲೆ ಸಭಾ ವಿಸರ್ಜನೆಯಾಗಿ ಶ್ರೀಯುತ ಗುಗ್ಗಳಿಯವರ ಸನ್ಮಾನಾರ್ಥವಾಗಿ ಉಪಾಹಾರ ಹಣ್ಣುಹಂಪಲುಗಳ ಭೋಜನವೂ ಮಾಡಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

೧೯೨೨ ನೆಯ ಇಸವಿ ಜನವರಿ ತಾ|| ೧೫ ರಿಂದ ೧೯೨೨ ನೆಯ ಜನವರಿ ತಾ|| ೨೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿನಾಮಸಂವತ್ಸರದ ಪುಷ್ಯಬಹುಳ ಬಿದಿಗೆಯಿಂದ ಪುಷ್ಯಬಹುಳ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮತರಮಾ
15	[1]ಭಾನು	ಬಿದಿ	25-1	ಆಶ್ಲೆ	42-8	2
16	ಸೋಮ	ತದಿ	19-14	ಮಖಾ	37-55	3
17	ಮಂಗಳ	ಚೌತಿ	13-17	ಪುಬ್ಬ	33-39	4
18	ಬುಧ	ಪಂಚ	7-28	ಉತ್ತ	29-41	5
19	ಗುರು	ಷ-ಬು 2-1	54-46	ಹಸ್ತ	26-6	6
20	ಶುಕ್ರ	ಅಷ್ಟ	52-30	ಚಿತ್ತ	23-9	7
21	[1]ಶನಿ	ನವ	49-4	ಸ್ವಾತಿ	20-58	8

(1) ಮೂಗೂರುರಥಃ, ಕನೂಹಬ್ಬ, ಚುಂಚನಕಟ್ಟೆ ರಾಮಸ್ವಾಮಿ ರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫. ಮೈಸೂರ್ ಸ್ಟಾರ್ ಸೆ ೧೯೨೨ ನೆಯ ಇಸವಿ ಜನವರಿ ತಾರೀಖು ೨೨ ನೆಯ ಭಾನುವಾರ. ಸಂಚಿಕೆ ೪

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.
3

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 31

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಪರಿಹಾಸಿ	೦—೮—೦
ವ್ರತಪಂಚಕ	೦—೯—೦

ಉತ್ತಮವಾದ ನೇಪಾಳ ರುದ್ರಾಕ್ಷಿಗಳು ಮತ್ತು ರೇಷ್ಮೆ ವಸ್ತ್ರಗಳು.

47

ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ	ರೂ. ವರೆಗೆ.
4	0-12-0	,	50-0-0
5	0-8-0	.	100-0-0
6	0-12-0	,,	100-0-0
7	6-0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0-6-0	ಇಂದ	10-0-0
8	0-8-0	,,	100-0-0
9	0-12-0	,,	100-0-0
10	0-14-0	,,	100-0-0
11	3-8-0	,,	100-0-0
12	4-0-0	,,	100-0-0
13	4-8-0	,,	100-0-0
14	6-0-0	,,	100-0-0

108 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರೆಯುವುದು.

ಪ್ರಮಾಣ	ರೂ.	ಇಂದ	ರೂ. ವರೆಗೆ.
ಉದ್ದಿನ	,, 15-0-0	,,	40-0-0
ಮೆಣಸು	,, 7-8-0	,,	15-0-0
ಕಡಲೆ	,, 2-8-0	,,	7-0-0
ನೆನೆಗಡಲೆ	,, 1-8-0	,,	3-0-0
ಕಮಲಾಕ್ಷಿ	,, 1-0-0	,,	2-0-0
ದೆಂಡ್ಲ	,, 0-8-0	,,	1-0-0
ಅಕ್ಕಿಂತ	,, 0-6-0	,,	0-8-0
ಸ್ಫಟಿಕ108ಕ್ಕೆ	4-8-0	,,	30-0-0
ಶ್ರೀಚಕ್ರ1ಕ್ಕೆ	8-0-0	,,	100-0-0
ಲಿಂಗ 1ಕ್ಕೆ	1-0-0	,,	100-0-0

ಗೌರೀಶಂಕರ1ಕ್ಕೆ 4 ರೂ. ಇಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ.40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

S. U. N. & Co., ಎಸ್. ಯು. ನೇಪಾಳ ರುದ್ರಾಕ್ಷಿ
Chaukhamba, ಕಂಪನಿ, ಚೌಕಂಬಾ ಕಾಶೀ.
Benares.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೦ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
4 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಶ್ರೀ ಯುವಸಾರ್ವಭೌಮರ ಸಂಚಾರ.

(ಮದ್ರಾಸು).

ಯುವರಾಜರನ್ನು ಕುಳ್ಳಿರಿಸಿಕೊಂಡು ಬರ್ಮಾದಿಂದ ಬಂದ ಡಫ್ರಿನ್ ಹಡಗು ತಾ|| ೧೩ನೆ ಶುಕ್ರವಾರ ಬೆಳಗ್ಗೆ ಮದ್ರಾಸು ರೇವೆಗೆ ಬಂದ ಕೂಡಲೇ ಮರ್ಯಾದಾರ್ಥವಾದ ೩೧ ಗುಂಡುಗಳು ಹಾರಿಸಲ್ಪಟ್ಟುವು, ಹಡಗಿನಿಂದ ತೀರದಮೇಲೆ ಇಳಿದಾಗಲೂ ಮತ್ತೆ ಗುಂಡುಗಳು ಹಾರಿಸಲ್ಪಟ್ಟವು. ಅಲ್ಲಿ ಗೌರ್ನರ್ ವೆಲ್ಲಿಂಗ್ಟನ್ನರು ಪತ್ನೀಸಮೇತರಾಗಿ ಕಾದಿದ್ದು ಇದಿರ್ಗೊಂಡು ಮರ್ಯಾದಿಸಿದರು. ಬಳಿಕ ತಮ್ಮ ಜತೆಯಲ್ಲಿದ್ದ ಸಿವಿಲ್ ಮಿಲಿಟರಿ ಮುಖ್ಯಾಧಿಕಾರಿಗಳ ಪರಿಚಯವನ್ನೆಲ್ಲಾ ಯುವರಾಜರಿಗೆ ಮಾಡಿಸಿದರು. ಬಳಿಕ ಸಾಲಾಗಿನಿಂತಿದ್ದ ಗೌರವರಕ್ಷಕ ಸೈನ್ಯವನ್ನು ಪರೀಕ್ಷಿಸಿ ಮುಂದಕ್ಕೆ ಹೊರಟು ಅಲ್ಲಿ ಏರ್ಪಡಿಸಿದ್ದ ಮಂಟಪದ ಬಳಿಯಲ್ಲಿ ತಿರುವಾಂಕೂರು, ಕೊಚ್ಚಿ ಮೊದಲಾದ ಸಂಸ್ಥಾನಿಕರುಗಳೂ ಶಾಸನಸಭಿಕರೇ ಮೊದಲಾದವರುಗಳೂ ಪರಿಚಯಮಾಡಿಸಲ್ಪಟ್ಟ ಬಳಿಕ ಅವರ ವಂದನೆಗಳನ್ನೆಲ್ಲಾ ಪರಿಗ್ರಹಿಸಿ, ಅಲ್ಲಿಂದ ಮುಂಗಡೆ ಏರ್ಪಡಿಸಿದ್ದ ಜಗತಿಯ ಮೇಲಣ ಮಂಟಪದಲ್ಲಿ ನಿರ್ಮಿಸಿದ್ದ ಆಸನದಬಳಿಗೆ ದಯಮಾಡಿಸಿದ ಕೂಡಲೇ ಮದ್ರಾಸು ಕಾರ್ಪೋರೇಷನ್ ಪ್ರೆಸಿಡೆಂಟರೂ ಕಮಿಷನರುಗಳೂ ಪರಿಚಯಮಾಡಿಸಲ್ಪಟ್ಟರು. ಕಾರ್ಪೋರೇಷನ್ ಪ್ರೆಸಿಡೆಂಟ್ ಸರ್ ಪಿ. ತ್ಯಾಗರಾಯಶೆಟ್ಟರು ಕಾರ್ಪೋರೇಷನ್ ಪಕ್ಷದಿಂದ ಸ್ವಾಗತಪತ್ರವನ್ನು ಓದಿ ಸಮರ್ಪಿಸಿದರು. ಅದರಲ್ಲಿ—ಭರತಖಂಡದೊಳಗೆ ಆಂಗ್ಲ ರಾಜ್ಯಾಧಿಕಾರಸ್ಥಾಪನೆಗೆ ಮುಖ್ಯಸ್ಥಾನವಾದ ಮದ್ರಾಸುಪಟ್ಟಣದ ಪುರಜನರ ಪಕ್ಷದಿಂದ ಮನಃಪೂರ್ವಕವಾದ ಸ್ವಾಗತವನ್ನರ್ಪಿಸುತ್ತೇವೆಂದೂ, ಮೊದಲನೆ ಚಾರ್ಲಸ್ ಕಾಲದಲ್ಲಿ (೧೬೩೯ನೆ ವರ್ಷದಲ್ಲಿ) ಈ ಪಟ್ಟಣವು ಮದ್ರಾಸಪಟ್ಟಣ ಎಂಬ ಹೆಸರಿನ ಗ್ರಾಮವಾಗಿ ಸ್ಥಾಪಿತವಾಗಿ, ಕ್ರಮಾಭಿವೃದ್ಧಿಗೊಂಡು ಈಗ್ಗೆ ಪ್ರಪಂಚದ ಮುಖ್ಯಪಟ್ಟಣಗಳ ಪಂಕ್ತಿಗೆ ಸೇರಿರುವಕಾರಣ ಇದರ ಕಾರ್ಯ

ನಿರ್ಬಾಹಭಾರವು ಬಹಳ ಹೆಚ್ಚಿಹೋಗಿರುವುದೆಂದೂ, ಕಳೆದ ವರ್ಷದಲ್ಲೇ ತಾವು ಭರತಖಂಡಕ್ಕೆ ದಯಮಾಡಿಸುವವರಾಗಿದ್ದೀರೆಂದು ತಿಳಿದು ತಮ್ಮನ್ನು ಸ್ವಾಗತಿಸುವುದಕ್ಕೆ ತವಕಪಡುತ್ತಿದ್ದ ನಮಗೆ ಈಗ ಸುಸಂಧಿಯು ದೊರೆತುದು ಸಂತೋಷಕರವಾಗಿರುವುದೆಂದೂ, ಕಳೆದ ಘೋರಯುದ್ಧದಲ್ಲಿ ಎಷ್ಟೋ ರಾಜ್ಯಗಳು ಪಟಾಪಂಚ ಭ್ರಷ್ಟವಾಗಿಹೋಗಿರುವಲ್ಲಿ ಆಂಗ್ಲಸಾಮ್ರಾಜ್ಯವು ವಿಜಯವನ್ನು ಪಡೆಯಿತೆಂದೂ, ಅಂಥ ಘೋರಸಮಯದಲ್ಲಿ ಭರತಖಂಡವು ಸಾಮ್ರಾಜ್ಯದ ಬಲುಮೆಯಿಂದಲೂ ಈಶ್ವರಕೃಪೆಯಿಂದಲೂ ಸುರಕ್ಷಿತವಾದುದಕ್ಕೆ ಅತ್ಯಂತ ಸಂತೋಷಪಟ್ಟಿರುವೆವೆಂದೂ, ಜಾರ್ಜ್‌ಸಾರ್ವಭೌಮರು ದಿಲ್ಲಿ ದರ್ಬಾರಿನಲ್ಲಿ ಅಪ್ಪಣೆಕೊಡಿಸಿದ ಮೇರೆಗೆ ಏರ್ಪಟ್ಟ ರಾಜಕೀಯ ಸಂಸ್ಕರಣಗಳಿಗಾಗಿ ನಾವು ಕೃತಜ್ಞರಾಗಿರುವೆವೆಂದೂ, ಅವು ಬೇಗನೆ ಸ್ವರಾಜ್ಯವನ್ನೊದಗಿಸಿಕೊಡಲು ಸಾಧನವಾಗುವುವೆಂದು ನಾವು ಆಶಿಸುತ್ತಿರುವೆವೆಂದೂ, ನಿಮ್ಮ ಆಗಮನವು ಶಾಂತಿಸಮಾಧಾನ ಸದ್ಭಾವಗಳನ್ನು ಅಭಿವೃದ್ಧಿಗೊಳಿಸಿ ದೇಶಕ್ಕೆ ಮೇಲ್ಮೆಯನ್ನುಂಟುಮಾಡುವುದಾಗಿ ನಂಬುತ್ತೇವೆಂದೂ, ತಮ್ಮಲ್ಲೂ ತಮ್ಮ ಜನಕರಾದ ಚಕ್ರವರ್ತಿಯವರಲ್ಲೂ ಅವರ ವಂಶೀಯರಲ್ಲೂ ನಮ್ಮಗಳಿಗೆ ದೃಢವಾದ ಭಕ್ತಿವಿಶ್ವಾಸಗಳಿರುವುವೆಂದು ನೀವು ನಿಸ್ಸಂದೇಹವಾಗಿ ನಂಬಬಹುದೆಂದೂ ಅಭಿಪ್ರಾಯವಿದ್ದಿತು.

ಇದಕ್ಕೆ ಯುವರಾಜರು ಪ್ರತ್ಯುತ್ತರವನ್ನು ಕೊಡುವಾಗ್ಗೆ ''ನಮ್ಮ ತಾತಂದಿರು ೧೮೭೫ನೆ ವರ್ಷದಲ್ಲಿ ಶಂಕುಸ್ಥಾಪನೆ ಮಾಡಿದ ರೇವೆಯ ಗಟ್ಟದಲ್ಲಿ ನಾನಿಳಿದು, ೧೯೦೬ನೆ ವರ್ಷದಲ್ಲಿ ನಮ್ಮ ತಂದೆಯವರು ಈ ರೇವೆಯಲ್ಲಿ ಇಳಿದ ಜ್ಞಾಪಕಾರ್ಥವಾಗಿ ಸ್ಥಾಪಿತವಾಗಿರುವ ಶಿಲಾಪ್ರತಿಷ್ಠಾಪನೆಯನ್ನು ದಾಟಿ, ಕಳೆದ ವರ್ಷ ನಮ್ಮ ಚಿಕ್ಕಪ್ಪಂದಿರಾದ ಕನ್ನಾಟ್ ಪ್ರಭುಗಳಿಗೆ ಹೃದಯಪೂರ್ವಕವಾಗಿ ಸ್ವಾಗತವನ್ನರ್ಪಿಸಿದ ಮದ್ರಾಸುಪಟ್ಟಣಕ್ಕೆ ನಾನು ಬರುತ್ತಿರುವಾಗ ಇದು ನನಗೆ ಪುರಾತನಸಂಬಂಧವೇ ಹೊರತು ಹೊಸದಲ್ಲವೆಂದು ತಿಳಿಯುತ್ತೇನೆ. ಪ್ರೇಮಭರಿತವಾದ ನಿಮ್ಮ ಸ್ವಾಗತವು ನನ್ನನ್ನು ಮಿತ್ರಮಂಡಲಿಯ ಮಧ್ಯದಲ್ಲಿರುವಂತೆ ಮಾಡಿರುತ್ತದೆ. ಆಂಗ್ಲರಾಜ್ಯಾಧಿಕಾರಕ್ಕೆ ಜನ್ಮಸ್ಥಲದಂತಿರುವ ಮದ್ರಾಸಿಗೆ ನಾನು ಎಂದಿಗೆಹೋಗುವೆನೋ ಎಂದು ಆಸೆಪಡುತ್ತಿದ್ದೆ. ಈ ನಗರವು ಚರಿತ್ರಪ್ರಸಿದ್ಧವಾದ ಕಟ್ಟಡಗಳಿಂದಲೂ ಪ್ರಖ್ಯಾತರಾದ ಮಹನೀಯರಿಂದಲೂ ಪ್ರಾಚೀನ ಚಾರಿತ್ರಕಸಂಘಟನಗಳಿಂದಲೂ ಅತ್ಯಂತ ಪ್ರಸಿದ್ಧವಾಗಿದೆ'' ಎಂದು ಹೇಳಿ ಮದ್ರಾಸು ಪುರಾಭಿವೃದ್ಧಿಯನ್ನು ತಾನು ಕೋರುತ್ತಿದ್ದೇನೆಂತಲೂ, ಶಾಸನಸಭಾಸಂಸ್ಕರಣ ಮೊದಲಾದ ಅಭಿವೃದ್ಧಿಸಾಧನಗಳಿಂದ ನಿಮ್ಮಗಳ ಅಭ್ಯುದಯವನ್ನು ನೀವು ಸಾಧಿಸಿಕೊಳ್ಳಲು ಸಾಹಸಪಡುವಿರೆಂದು ನಂಬುತ್ತೇನೆಂತಲೂ ಹೇಳಿ ಅವರ ಸ್ವಾಗತಸಮರ್ಪಣೆಗಾಗಿ ವಂದನೆಯನ್ನು ತಿಳಿಯಿಸಿದರು.

ಬಳಿಕ ಸ್ವಾಗತಸಂಘದ ಕಾರ್ಯದರ್ಶಿಯಾದ ಮಿ|| ಎ. ಕೆ. ಜಿ. ಅಹಮ್ಮದ್ ತಂಬಿಮರಕ್ಕಾಯರ್‌ರವರೂ, ಸರ್ ಎಂ. ಸಿ. ಟಿ. ಮುತ್ತಯ್ಯಸೆಟ್ಟಿಯವರೂ ಗೌರ್ನರವರಿಂದ ಯುವರಾಜರಿಗೆ ಪರಿಚಯಮಾಡಿಸಲ್ಪಟ್ಟರು. ಆಗ ಮದ್ರಾಸು ಪುರಜನರ ಪಕ್ಷದಿಂದ ಕಾರ್ಯದರ್ಶಿ ಮರಕ್ಕಾಯರ್‌ರವರು ಒಂದು ಸ್ವಾಗತಪತ್ರವನ್ನೋದಿ ಸಮರ್ಪಿಸಿದರು. ಅದಕ್ಕೂ ಯುವರಾಜರು ಉಚಿತ ಪ್ರತ್ಯುತ್ತರವನ್ನು ಅಪ್ಪಣೆಕೊಡಿಸಿ, ತಮ್ಮ ಹೆಸರಿನಲ್ಲಿ ಬಾಲವೈದ್ಯಶಾಲೆಯೊಂದನ್ನು ಕಟ್ಟಲು ನಡೆಯಿಸಿರುವ ಪ್ರಯತ್ನಕ್ಕಾಗಿ ತಮ್ಮ ಕೃತಜ್ಞತೆಯನ್ನು ತಿಳಿಯಿಸಿದರು.

ಬಳಿಕ ಯುವರಾಜರು ಗೌರ್ನರೇ ಮೊದಲಾದವರೊಡನೆ ರೇವೆಯ ಮಹಾದ್ವಾರದವರೆಗೆ ನಡೆದುಬಂದು ಅಲ್ಲಿ ಸಿದ್ಧವಾಗಿದ್ದ ರಥಗಳಲ್ಲಿ ಗೌರ್ನರೊಡನೆಯೂ ತಮ್ಮ ಅಂಗರಕ್ಷಕರೇ ಮೊದಲಾದ ಪರಿವಾರದೊಡನೆಯೂ ಕುಳಿತು ಗೊತ್ತಾಗಿದ್ದ ಸಾಲಂಕೃತ ವೀಧಿಗಳಲ್ಲಿ ಉತ್ಸವಗೊಂಡು ಹೊರಟರು. ಹಿಂದೆ ಸೋಲ್ಜರುಗಳ ಅಶ್ವದಳವೂ ಪದಾತಿಯೂ ನಡೆದುವು. ಉಭಯಪಾರ್ಶ್ವಗಳಲ್ಲೂ ಪೊಲೀಸರ ಕಾಲ್ಬಲದ ಸಾಲು ಗೌರ್ನಮೆಂಟು ಭವನದವರೆಗೂ ನಿಂತಿದ್ದಿತು. ಅಸಹಾಯವಾದಿಗಳ ಪ್ರಯತ್ನದಿಂದ ಊರಿನಲ್ಲಿ ಹರಿತಾಳವು ಬಹುಬಲವಾಗಿ ನಡೆಯಿಸಲ್ಪಟ್ಟಿತು. ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ವಿದೇಶೀಯರ ಶಾಪುಗಳು ಮಾತ್ರ ತೆರೆಯಲ್ಪಟ್ಟಿದ್ದುವು. ಮುಚ್ಚಿದ್ದ ಅಂಗಡಿಗಳನ್ನು ತೆಗೆಯಿಸುವುದಕ್ಕೂ ಅಂಗಡಿಗಳನ್ನು ಮುಚ್ಚದಂತೆ ಬೋಧಿಸುವುದಕ್ಕೂ ಜಸ್ಟೀಸ್‌ಪಕ್ಷದ ಸಹಾಯವಾದಿಗಳು ಬೇರೆ ಪ್ರಯತ್ನವನ್ನು ನಡೆಯಿಸಿದ್ದರು. ಅನೇಕ ಆದಿದ್ರಾವಿಡರೂ ಇದರಲ್ಲಿ ನಿಯೋಜಿಸಲ್ಪಟ್ಟಿದ್ದರು. ಹಿಂದೂ ಮುಸಲ್ಮಾನರಿಗೂ ಈ ಆದಿದ್ರಾವಿಡರಿಗೂ ಮದ್ರಾಸಿನಲ್ಲಿ ಕೆಲಕಾಲದಿಂದುಂಟಾಗಿರುವ ಮನಸ್ಸ್ಪರ್ಧೆಯ ಮೂಲಕ ಈಗಲೂ ಕೆಲಕಡೆ ಗುದ್ದಾಟವಾಯಿತು. ಅಸಹಾಯವಾದಿಗಳಿಂದ ಉಬ್ಬಿಸಲ್ಪಟ್ಟಿದ್ದ ಪುಂಡುಜನರಲ್ಲಿ ಕೆಲವರು ಜಘನ್ಯವಾದ ಅತ್ಯಾಚಾರಗಳನ್ನು ನಡೆಯಿಸಿದರು. ಬೀದಿಯಲ್ಲಿ ಸ್ಥಾಪಿಸಿದ್ದ ಧ್ವಜಪತಾಕೆಗಳನ್ನು ಕಿತ್ತು ತೋರಣಗಳನ್ನು ಹರಿದು ಸರ್ ತ್ಯಾಗರಾಯಸೆಟ್ಟರೇ ಮೊದಲಾದವರ ಮೇಲೆ ಮಣ್ಣೆರಚಿ ಅಗೌರವಪಡಿಸಲು ಹಿಂದೆಮುಂದೆ ನೋಡಲಿಲ್ಲ. ಒಂದು ಸಿನಿಮಾಕಂಪೆನಿಯ ಬಳಿಯಲ್ಲಿ ನಡೆದ ಗದ್ದಲದಲ್ಲಿ ಒಂದು ಪ್ರಾಣಹತಿಯಾಯಿತು. ಮತ್ತೊಂದುಕಡೆ ಜಟ್ಕಾ ಬಂಡಿಯವನೊಬ್ಬನು ಏಟುತಿಂದು ಮೃತಪಟ್ಟನೆಂದು ಸಮಾಚಾರಬಂದಿದೆ. ೩೦–೪೦ ಮಂದಿಗೆ ಏಟುಬಿದ್ದು ಗಾಯವಾಯಿತಂತೆ. ಆದರೆ ಸರ್ಕಾರದಕಡೆಯ ನಿರ್ಬಂಧವೇ ಆಗಲಿ ಕಠಿನಚರ್ಯೆಗಳೇ ಆಗಲಿ ಒಂದೂ ಇರಲಿಲ್ಲ.

ಯುವರಾಜರು ದಯಮಾಡಿಸಿದ ದಿವಸದ ಹೊರತು ಉಳಿದ ದಿನಗಳಲ್ಲೆಲ್ಲಾ ಹರಿತಾಳ ಮೊದಲಾದುವುಗಳೊಂದೂ ಇರಲಿಲ್ಲ. ಅವರ ಸತ್ಕಾರಕ್ಕಾಗಿ ಮಾಡಿದ್ದ ಏರ್ಪಾಡುಗಳೆಲ್ಲಾ ಸಾಂಗವಾಗಿ ಜರುಗಿದುವು. ಶುಕ್ರವಾರ ಮಧ್ಯಾಹ್ನ ೧೧|| ಗಂಟೆಗೆ ತಿರುವಾಂಕೂರು, ಕೊಚ್ಚಿ ಮಹಾರಾಜರುಗಳೂ ಆರ್ಕಾಟು ಪ್ರಭುಗಳೂ ಯುವರಾಜರ ಬಿಡಾರಕ್ಕೆ ಹೋಗಿ ದರ್ಶನಮಾಡಿ ಬಂದರು. ಮಧ್ಯಾಹ್ನ ಯುವರಾಜರೂ ವೆಲ್ಲಿಂಗ್ಡನ್ ಪ್ರಭು ದಂಪತಿಗಳೂ ಸಹ ಶಾಸನಸಭೆಗೆ ದಯಮಾಡಿಸಿದರು. ಅಲ್ಲಿ ಸಭಾಧ್ಯಕ್ಷರಾದ ಸರ್ ಪಿ. ರಾಜಗೋಪಾಲಾಚಾರ್ಯರು ಸ್ವಾಗತಪತ್ರವನ್ನೋದಿ ಸಮರ್ಪಿಸಿದರು. ಅದಕ್ಕೂ ಯುವರಾಜರು ಪ್ರತ್ಯುತ್ತರವನ್ನಿತ್ತರು. ಅಲ್ಲಿಂದ ಯುವರಾಜರೂ ಗೌರ್ನರೇ ಮೊದಲಾದವರೂ ವಿಶ್ವವಿದ್ಯಾಲಯಭವನಕ್ಕೆ ದಯಮಾಡಿಸಿದರು. ಸೆನೇಟ್ ಸಭಿಕರೂ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಸಭೆಯಲ್ಲಿ ನೆರೆದಿದ್ದರು. ವೈಸ್‌ಚಾನ್ಸಲರಾದ ಅ|| ಕೆ. ಶ್ರೀನಿವಾಸಯ್ಯಂಗಾರರು ಯುವರಾಜರನ್ನು ಕುರಿತು ಸ್ವಾಗತೋಪನ್ಯಾಸವನ್ನು ಮಾಡಿದರು. ಯುವರಾಜರವರು ಸಮಯೋಚಿತ ಪ್ರತ್ಯುತ್ತರವನ್ನಿತ್ತರು. ಅದನ್ನು ಮುಗಿಸಿಕೊಂಡು ಯುವರಾಜರು ಬಿಡಾರಕ್ಕೆ ದಯಮಾಡಿಸಿದ ಕೂಡಲೇ ದೊಡ್ಡದೊಡ್ಡ ಭೂಸ್ವಾಮಿಗಳು ಅಲ್ಲಿಗೆ ಬಂದು ಸ್ವಾಗತವನ್ನರ್ಪಿಸಿದರು. ಯುವರಾಜರು ಅವರ ಸ್ವಾಗತಕ್ಕೆ ಪ್ರತ್ಯುತ್ತರವನ್ನಿತ್ತು ಎಲ್ಲರ ಕುಶಲವನ್ನೂ ಕೇಳಿ ಬೀಳ್ಕೊಟ್ಟರು. ಸಾಯಂಕಾಲ ೭ ಗಂಟೆಗೆ ಕಾಸ್ಮಾಪಾಲಿಟನ್ ಕ್ಲಬ್ಬಿಗೆ ದಯಮಾಡಿಸಿದರು. ಆ ಭವನವೆಲ್ಲಾ ದೀಪಾವಳಿಗಳಿಂದಲೂ ಧ್ವಜಪತಾಕೆಗಳಿಂದಲೂ ಮನೋಹರವಾಗಿದ್ದಿತು. ಅಲ್ಲಿಯ ದೇಶೀಯ ವಿದೇಶೀಯ ಮೆಂಬರುಗಳೆಲ್ಲರೂ ಸ್ವಾಗತಿಸಿ ಉಚಿತಾಸನದಲ್ಲಿ ಕುಳ್ಳಿರಿಸಿದರು. ಏರ್ಪಡಿಸಿದ್ದ ನಾಟಕಾವಲೋಕನ ಸಂಗೀತಶ್ರವಣವಾದನಂತರ ಅಲ್ಪಾಹಾರದ ಸ್ವೀಕಾರವನ್ನು ಮಾಡಿ ಪುಷ್ಪಮಾಲಾಲಂಕೃತರಾಗಿ ತೆರಳಿದರು. ಶನಿವಾರ ಪೋಲೋ ಮೊದಲಾದ ವಿನೋದಗಳೂ, ಭಾನುವಾರ ಕ್ರೈಸ್ತ ದೇವಾಲಯದಲ್ಲಿ ಪ್ರಾರ್ಥನೆಯೂ ನಡೆದುವು.

ತಾ|| ೧೬ ರಲ್ಲಿ ಯುವರಾಜರ ಬಿಡಾರವಾದ ಸರ್ಕಾರಿಭವನದಲ್ಲಿ ಬಾಲಚಮೂವಿನವರೂ ಬಾಲಿಕಾಚಮೂವಿನವರೂ ಮದ್ರಾಸು ಅಧಿಪತ್ಯದ ಅನೇಕ ಜಿಲ್ಲೆಗಳಿಂದ ಬಂದಿದ್ದವರೆಲ್ಲಾ ಸೇರಿ ಸಾಲಾಗಿ ನಿಂತು ಯುವರಾಜರಿಗೆ ಮರ್ಯಾದಿಸಿದರು. ಬಳಿಕ ಅವರು ಮಾಡಿದ ಪ್ರದರ್ಶನವನ್ನು ಪರಾಮರಿಸಿದರು. ಅಲ್ಲಿಂದ ಯುವರಾಜರು ಕುದುರೆಯ ಮೇಲೆ ಕುಳಿತು ಐಲೆಂಡ್‌ಗ್ರೌಂಡ್ ಎಂಬ ಬಯಲಿಗೆ ಗೌರ್ನರೊಡನೆ ತೆರಳಿದರು. ಅಲ್ಲಿ ೧೦ ಸಾವಿರ ಮಂದಿ ವಿದ್ಯಾರ್ಥಿಗಳು ನೆರೆದಿದ್ದರು. ಅನೇಕಮಂದಿ ಉಪಾಧ್ಯಾಯರೂ ಬಂದಿದ್ದರು. ಅವರೆಲ್ಲರೂ ಸಾಲುಕಟ್ಟಿ ನಿಂತು ಮಾಡಿದ ಸ್ವಾಗತಮರ್ಯಾದೆಯನ್ನು ಯುವರಾಜರು ಸ್ವೀಕರಿಸಿದರು. ಅದೇ ಸ್ಥಲದಲ್ಲಿ ೮೦೦ ಮಂದಿ ಪೊಲೀಸರ ಕವಾಯತಾಯಿತು. ಅದನ್ನು ಅವಲೋಕಿಸಿದರು. ಅಲ್ಲಿಂದ ಇದಿರಿಗಿರುವ ಮನ್ರೋಶಿಲಾವಿಗ್ರಹಸ್ಥಲದವರೆಗೆ ನಡೆದೇಬಂದು, ಕಳೆದ ಯುದ್ಧಕ್ಕೆ ಹೋಗಿಬಂದಿದ್ದವರಾದ ದೇಶೀಯ ವಿದೇಶೀಯ ಸೈನಿಕರನ್ನೆಲ್ಲಾ ಅಲ್ಲಿ ಸಂದರ್ಶಿಸಿ ಅವರ ಸ್ವಾಗತವನ್ನು ಪರಿಗ್ರಹಿಸಿ ಸಂಭಾಷಿಸಿದರು. ಸಾಯಂಕಾಲ ಗಿಂಡಿಯಲ್ಲಿ ಪೋಲೋ ಆಡಿದರು. ಆ ರಾತ್ರಿ ಅಡಿಯಾರ್ ಕ್ಲಬ್ಬಿನಲ್ಲಿ ಔತಣವೂ ನರ್ತನವೂ ಆದುವು. ತಾ|| ೧೭ನೆ ಮಂಗಳವಾರ ಮಧ್ಯಾಹ್ನ ಗಿಂಡಿಯಲ್ಲಿ ನಡೆದ ಕುದುರೆ ಜೂಜಿಗೆ ಹೋಗಿದ್ದರು. ಬಳಿಕ ಗೌರ್ನರ ಪರಿವಾರದವರು ಮಾಡಿದ ಔತಣಕ್ಕೆ ಹೋಗಿದ್ದರು. ಅಲ್ಲಿಂದ ರಾಯಪೇಟೆಯಲ್ಲಿರುವ ಮದ್ರಾಸು ಕ್ಲಬ್ಬಿಗೆ ಹೋಗಿ ಔತಣವನ್ನು ಸ್ವೀಕರಿಸಿದರು. ಆ ರಾತ್ರಿ ಐಲೆಂಡ್ ಗ್ರೌಂಡಿನಲ್ಲಿ ೧ ಗಂಟೆಕಾಲ ಅತಿಶಯವಾದ ಬಾಣಗಾರಿಕೆಯಾಯಿತು. ಆ ಸಾಮಗ್ರಿಗಳನ್ನೆಲ್ಲಾ ಇಂಗ್ಲೆಂಡಿನಿಂದ ತರಿಸಿದ್ದರು. ಅಲ್ಲದೆ ಅಹಮ್ಮದ್‌ತಂಬಿಮರಕ್ಕಾಯರು ಕೆಲ ಬಾಣಗಾರಿಕೆ ಸಾಮಾನುಗಳನ್ನು ಜಪಾನಿನಿಂದ ತರಿಸಿದ್ದರು. ಅವೆಲ್ಲಾ ಬಹು ಪ್ರೇಕ್ಷಣೀಯವಾಗಿದ್ದುವು. ರಾತ್ರಿ ೧೦|| ಗಂಟೆಗೆ ಯುವರಾಜರು ಮದ್ರಾಸನ್ನು ಬಿಟ್ಟು ಸ್ಪೆಷಲ್ ಟ್ರೇನಿನ ಮೇಲೆ ಬೆಂಗಳೂರಿಗೆ ಪ್ರಯಾಣಮಾಡಿದರು. ಗೌರ್ನರ್ ದಂಪತಿಗಳೇ ಮೊದಲಾದನೇಕರು ನಿಲ್ದಾಣಕ್ಕೆ ಬಂದಿದ್ದು ಸಾಗಕಳುಹಿಸಿದರು.

(ಬೆಂಗಳೂರು).

ತಾ|| ೧೮ನೆ ಬುಧವಾರ ಬೆಳಗ್ಗೆ ಬೆಂಗಳೂರು ಪಟ್ಟಣದ ನಿಲ್ದಾಣದಲ್ಲಿಳಿದರು. ಬ್ರಿಟಿಷ್ ರೆಸಿಡೆಂಟರು ಅ|| ರೆಸಿಡೆಂಟರು ಮತ್ತು ಉಳಿದ ಸಿವಿಲ್ ಮಿಲಿಟರಿ ಅಧಿಕಾರಿಗಳೂ, ಮೈಸೂರು ಸಂಸ್ಥಾನದ ದಿವಾನರು ಕೌನ್ಸಿಲರು ಚೀಫ್‌ಕೋರ್ಟು ಜಡ್ಜರು ಶಾಖಾ ಮುಖ್ಯಾಧಿಕಾರಿಗಳೂ ಅನೇಕಮಂದಿ ಪುರಪ್ರಮುಖರೂ, ಕೆಲ ಸೈನಿಕರೂ ಕಾದಿದ್ದು ಸ್ವಾಗತ ಮಾಡಿದರು. ಉಳಿದ ಮರ್ಯಾದೆಗಳೆಲ್ಲಾ ಜರುಗಿದನಂತರ ಬ್ರಿ|| ರೆಸಿಡೆಂಟರೊಡನೆ ರಥಾರೂಢರಾಗಿ ಕಂಟೋನ್ಮೆಂಟಿಗೆ ದಯಮಾಡಿಸಿದರು. ಹಿಂದೆ ಮುಂದೆ ಸೋಲ್ಜರುಗಳ ಸೇನೆಯೂ ಅಶ್ವಸೇನೆಯೂ ನಡೆದುವು. ನಿಲ್ದಾಣದಿಂದ ರೆಸಿಡೆನ್ಸಿಯವರೆಗೂ ಬಹುಶಃ ೨ ಮೈಲಿಗಳ ದಾರಿಯ ಉಭಯಪಕ್ಕಗಳಲ್ಲೂ ಲಕ್ಷಾಂತರಜನರು ನೆರೆದಿದ್ದು ದರ್ಶನಮಾಡಿ ಆನಂದಪಟ್ಟರು. ದಾರಿಯುದ್ದಕ್ಕೂ ಗುಡಿತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಅಲಂಕರಿಸಿದ್ದರು. ಕೆಲ ಮಹಮ್ಮದೀಯರ ಹೊರತು ಯಾರೂ ಅಂಗಡಿಗಳನ್ನು ಮುಚ್ಚಿರಲಿಲ್ಲ. ಯುವರಾಜರ ಸ್ವಾಗತವು ಬಹು ವಿಜೃಂಭಣೆಯಿಂದ ನಡೆಯಿತು. ಉತ್ಸವವು ವಿಕ್ಟೋರಿಯಾ ಪ್ರತಿಮೆಯ ಚೌಕದ ಬಳಿಗೆ ದಯಮಾಡಿಸಿದ ಕೂಡಲೇ ಅಲ್ಲಿ ಕಂಟೋನ್ಮೆಂಟ್ ಮ್ಯುನ್ಸಿಪಾಲಿಟಿಯ ಪಕ್ಷದ ಸ್ವಾಗತಪತ್ರವು ವೈಸ್‌ಪ್ರೆಸಿಡೆಂಟರಿಂದ ಓದಿ ಸುಂದರವಾದ ಬೆಳ್ಳಿಯ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಲ್ಪಟ್ಟಿತು. ಅದಕ್ಕೆ ಪ್ರತ್ಯುತ್ತರವನ್ನಿತ್ತು ಯುವರಾಜರು ರಸಿಡೆನ್ಸಿಯನ್ನು ಸೇರಿದರು. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡ ಕೂಡಲೇ ೧೧ ಗಂಟೆಗೆ ಕವಾಯತ್ ಮೈದಾನಕ್ಕೆ ದಯಮಾಡಿಸಿದರು. ನೋಡುವುದಕ್ಕೆ ಕಂಟೋನ್ಮೆಂಟಿನ ಮತ್ತು ಪೇಟೆಯ ಮತ್ತು ಪರಸ್ಥಲದ ಜನರುಗಳು ವಿಶೇಷವಾಗಿ ನೆರೆದಿದ್ದರು. ಯುವರಾಜರು ಸೈನ್ಯದ ಕವಾಯತನ್ನೆಲ್ಲಾ ಪರಾಮರಿಸಿ ಅವರು ಮಾಡಿದ ಮರ್ಯಾದೆಯನ್ನು ಸ್ವೀಕರಿಸಿದುದಲ್ಲದೆ ಅಲ್ಲಿ ನೆರೆದಿದ್ದ ಹಳೆಯ ಸೈನಿಕರೊಡನೆಲ್ಲಾ ಕರಸ್ಪಂದನವನ್ನು ಮಾಡಿ ಸಂಭಾಷಿಸಿ ಬಿಡದಿಗೆ ತೆರಳಿದರು. ಮಧ್ಯಾಹ್ನಾತ್ಪರ ಪೋಲೋ ಗ್ರೌಂಡಿನಲ್ಲಿ ಮನೋಹರವಾಗಿ ನಡೆದ ಪೋಲೋ ಆಟದಲ್ಲಿ ಬೆರೆದು ಆನಂದಪಟ್ಟರು. ಇದನ್ನು ನೋಡುವುದಕ್ಕೂ ೩೦–೪೦ ಸಹಸ್ರ ಜನರು ನೆರೆದಿದ್ದರು. ಪೊಲೀಸರೂ ಸೈನಿಕರೂ ಜನರನ್ನು ದೂರದಲ್ಲೇ ತಡೆದು ನಿಲ್ಲಿಸಿದ್ದರು. ಈ ಕಾರಣದಿಂದ ಅನೇಕರು ಕೈಗಳಲ್ಲಿ ದುರ್ಬೀನುಗಳನ್ನು ಹಿಡಿದು ದೂರದಲ್ಲಿ ನಿಂತು ನೋಡುತ್ತಿದ್ದರು. ಆಟ ಮುಗಿದ ಕೂಡಲೇ ಯುವರಾಜರು ಜನರಿಗೆ ಮಾಡಲ್ಪಟ್ಟಿರುವ ನಿರ್ಬಂಧವನ್ನು ನೋಡಿ ಮರುಗಿ ಒಬ್ಬ ಸ್ವಾರನನ್ನು ಕರೆದು ಅವರನ್ನೆಲ್ಲಾ ತಡೆಮಾಡದೆ ಸಮೀಪಕ್ಕೆ ಬಿಟ್ಟುಬಿಡುವಂತೆ ಅಪ್ಪಣೆಮಾಡಿದರು. ಆಗ ಅಷ್ಟೊಂದು ಪ್ರಜಾಸ್ತೋಮವೂ ಹರ್ಷಧ್ವನಿ ಮಾಡುತ್ತ ಯುವರಾಜರ ಪಕ್ಕಕ್ಕೇ ಬಂದು ಸೇರಿ ದರ್ಶನಮಾಡಿ ಅತ್ಯಾನಂದಪಟ್ಟು ಕರತಾಡನ ಮಾಡಿದರು. ಯುವರಾಜರಿಗೆ ಪ್ರಜೆಗಳ ಮೇಲೆ ಇರುವ ಅಭಿಮಾನಾನುಕಂಪಗಳಿಗೆ ಇದು ನಿದರ್ಶನವಾಗಿದ್ದಿತು. ಆ ದಿವಸ ಕಂಟೋನ್ಮೆಂಟಿನಲ್ಲಿ ೨೦ ಕಡೆ ಅನೇಕ ಮಂದಿ ದೊಡ್ಡಮನುಷ್ಯರು ಹಿಂದೂ ಮುಸಲ್ಮಾನ್ ಕ್ರಿಶ್ಚಿಯನ್ ಯೂರೋಪಿಯನ್ ಯೂರೋಷಿಯನ್ ಮೊದಲಾದ ಸಕಲ ಜಾತಿಯ ಬಡಬಗ್ಗರಿಗೂ ಒಂದೊಂದುಕಡೆ ೨–೩ ಸಾವಿರ ಜನರಿಗೆ ಅನ್ನವಸ್ತ್ರಗಳನ್ನೂ ಫಲಾಹಾರಗಳನ್ನೂ ಕೊಡಿಸಲಿಕ್ಕೆ ಏರ್ಪಡಿಸಿ ತೃಪ್ತಿಪಡಿಸಿದರು. ರಾತ್ರಿ ರಸಿಡೆನ್ಸಿಯಲ್ಲಿ ದೊಡ್ಡ ಔತಣವಾಯಿತು. ಬಹುಜನರು ಅದಕ್ಕೆ ಕರೆಯಲ್ಪಟ್ಟಿದ್ದರು. ಆರೋಗಣೆಯನ್ನು ಮುಗಿಸಿಕೊಂಡು ಆ ರಾತ್ರಿಯೇ ಹೊಗೆಬಂಡಿಯನ್ನೇರಿ ಮೈಸೂರಿಗೆ ಪ್ರಯಾಣವನ್ನು ಬೆಳೆಸಿದರು.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೨೨ ನೆಯ ಭಾನುವಾರ.

ಶ್ರೀಮದ್ಯುವಸಾರ್ವಭೌಮರಿಗೆ ಮೈಸೂರು ಸತ್ಕಾರ.

ಈಗತಾನೇ ಆಗಮಿಸಿರುವ ಶ್ರೀ ಯುವಸಾರ್ವಭೌಮರನ್ನು ಗೌರವಿಸಿ ಆದರಿಸಿ ಸತ್ಕರಿಸುವುದರಲ್ಲಿ ನಮ್ಮ ಸಂಸ್ಥಾನವು ಬಹುಕಾಲದಿಂದ ನಡೆದುಬಂದಿರುವ ತನ್ನ ಕೀರ್ತಿಪ್ರತಿಷ್ಠೆಗಳನ್ನು ಮತ್ತೊಂದುಸಲ ಸ್ಥಿತಿಸ್ಥಾಪನೆಗೊಳಿಸಿಕೊಂಡಿತೆಂದು ಹೇಳುವಲ್ಲಿ ಅಭ್ಯಂತರವಿಲ್ಲ. ಭರತಖಂಡದ ಈಗಣ ವಿಷಮವಾತಾವರಣದೊಳಗೆ ಆ ಭರತಖಂಡದ ಒಂದು ಭಾಗವಾಗಿರುವ ನಮ್ಮ ಸಂಸ್ಥಾನದೊಳಗೆ ಯುವಸಾರ್ವಭೌಮರಿಗೆ ನಡೆದ ಪ್ರಜಾಮನಃಪೂರ್ವಕವಾದ ಸ್ವಾಗತಸತ್ಕಾರಗಳು ಅಭೂತಪೂರ್ವವಾಗಿದ್ದುವೆಂಬುದಕ್ಕೆ ಸಂಶಯವಿಲ್ಲ. ಅಸಹಾಯಧೂಳಿಯಿಂದ ಕಲುಷಿತಗಳಾಗಿದ್ದ ಅನೇಕ ಪಟ್ಟಣಗಳನ್ನು ಹೊಕ್ಕುಬಂದಿರುವ ನಮ್ಮ ಪ್ರಿಯ ಯುವಸಾರ್ವಭೌಮರನ್ನು ನಿಷ್ಕಳಂಕ ರಾಜಭಕ್ತಿಪ್ರಸನ್ನವಾತಾವರಣದಿಂದ ಭರಿತವಾಗಿರುವ ಮೈಸೂರು ಮೆಚ್ಚಿಸಿ, ಅವರಿಗೆ ಅತಿಶಯವಾದ ಸುಖಶಾಂತಿಗಳನ್ನುಂಟುಮಾಡದೆ ಹೋಗಿಲ್ಲ. ೧೦ ಸಾವಿರಕ್ಕೆ ಮೇಲ್ಪಟ್ಟ ವಿದ್ಯಾರ್ಥಿಗಳೂ ಸ್ಥಲಪರಸ್ಥಲಗಳ ಒಟ್ಟು ಒಂದು ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಪ್ರಜೆಗಳೂ ತಾ|| ೧೯ ನೆಯ ಗುರುವಾರ ಬೆಳಗ್ಗೆ ನಿಲ್ದಾಣದಿಂದ ರೆಸಿಡೆನ್ಸಿಯವರೆಗೆ ಇಕ್ಕೆಲಗಳಲ್ಲೂ ಮಾರ್ಗಗಳ ಮೇಲೂ ನಿಂತು, ಯುವಸಾರ್ವಭೌಮರ ಪ್ರಸನ್ನಮಂದಹಾಸಯುಕ್ತಮುಖಮಂಡಲದ ಸಂದರ್ಶನವನ್ನು ಮಾಡಿಯೂ, ಅಷ್ಟೊಂದು ವಿಶ್ವಾಸಯುಕ್ತಪ್ರಜಾಸಮುದಾಯದ ಹರ್ಷಧ್ವನಿಯನ್ನೂ ವಂದನೆಯನ್ನೂ ಯುವಸಾರ್ವಭೌಮರು ಆಲಿಸಿಯೂ, ಪರಸ್ಪರವಾಗಿ ಪಟ್ಟ ಆನಂದಾತಿಶಯವು ಅನುಪಮವಾಗಿದ್ದುವು. ಶುಷ್ಕಹರಿತಾಳದಿಂದ ಕ್ಷೋಭಿತಹೃದಯಗಳಾದ ಪಟ್ಟಣಗಳಲ್ಲಿ ಇಂಥ ಸೌಭಾಗ್ಯಕ್ಕೆ ಎಡೆಯೆಲ್ಲಿರುವುದು ?

ನಮ್ಮ ಯುವಸಾರ್ವಭೌಮರ ಜನಕರು ಯುವರಾಜರಾಗಿದ್ದಾಗ್ಗೆ ೧೯೦೬ನೆ ವರ್ಷದಲ್ಲಿ ಭರತಖಂಡದ ಸಂದರ್ಶನಾರ್ಥವಾಗಿ ದಯಮಾಡಿಸಿ ನಮ್ಮ ಸಂಸ್ಥಾನಕ್ಕೂ ದರ್ಶನವನ್ನಿತ್ತು ನಮ್ಮ ಸತ್ಕಾರವನ್ನು ಸ್ವೀಕರಿಸಿದ್ದರು. ಅವರ ಜನಕರಾದ ಎಡ್ವರ್ಡ್ ಪ್ರಭುಗಳು ಯುವಸಾರ್ವಭೌಮರಾಗಿದ್ದಾಗ್ಗೆ ಅದಕ್ಕೆ ಹಿಂದೆ ೩೦ ವರ್ಷಗಳಲ್ಲಿ ಅವರೂ ಭರತಖಂಡವನ್ನು ಪರಾಮರಿಸಿ ಆತಿಥ್ಯವನ್ನು ಪರಿಗ್ರಹಿಸಿ ಹೋಗಿದ್ದರು ಆ ಸಂಪ್ರದಾಯವನ್ನನುಸರಿಸಿಯೇ ನಮ್ಮ ಮುಂದಣ ಚಕ್ರವರ್ತಿಗಳಾಗಲಿಕ್ಕಿರುವ ಈ ಯುವರಾಜ ಎಡ್ವರ್ಡ್ ಪ್ರಭುಗಳೂ ಕೂಡ ಮುಂದೆ ತಮ್ಮ ಆಳಿಕೆಗೆ ಒಳಪಡುವುದಾಗಿರುವ ಈ ದೇಶವನ್ನು ಪರಾಮರಿಸಿಕೊಂಡು ಹೋಗಲಿಕ್ಕಾಗಿ ಈಗ ದಯಮಾಡಿಸಿರುವರು. ಅಸಹಾಯವಾದಿಗಳು ಹೇಳುವಂತೆ ಈ ದೇಶದ ಆಂಗ್ಲಾಧಿಕಾರಿಗಳ ಕುತಂತ್ರದಿಂದಲೇನೂ ಅವರು ಈ ದೇಶಕ್ಕೆ ದಯಮಾಡಿಸಿಲ್ಲ. ಆಂಗ್ಲಸಾಮ್ರಾಜ್ಯಕ್ಕೆ ಒಳಪಟ್ಟಿರುವ ಆಸ್ಟ್ರೇಲಿಯಾ ಕಾನಡಾ ಮೊದಲಾದ ದೇಶಗಳನ್ನೆಲ್ಲಾ ಮೊನ್ನೆವರ್ಷದಲ್ಲೇ ಅವರು ಪರಾಮರಿಸಿಕೊಂಡು ಬಂದರು. ಇದೊಂದು ಉಳಿದಿದ್ದಿತು. ಸ್ವಲ್ಪ ದೇಹಾಲಸ್ಯವಾಗದಿದ್ದರೆ ಕಳೆದ ವರ್ಷವೇ ಈ ದೇಶಕ್ಕೂ ಇವರು ದಯಮಾಡಿಸುತ್ತಿದ್ದರು.

ಈಗ್ಗೆ ೧೧ ವರ್ಷಗಳಲ್ಲಿ ಜಾರ್ಜ್ ಯುವಸಾರ್ವಭೌಮರು ದಯಮಾಡಿಸಿದ್ದಾಗಲೂ ಭರತಖಂಡದಲ್ಲಿ ವಂಗಭಂಗದಿಂದ ಪ್ರಜೆಗಳ ಮನಸ್ಸಿನಲ್ಲಿ ವ್ಯಥೆಯಿದ್ದೇ ಇದ್ದಿತು. ಆದರೆ ಅದಕ್ಕಾಗಿ ಆಗ ವಂಗದೇಶೀಯರೇ ಆಗಲಿ ಇತರ ಪ್ರಜೆಗಳೇ ಆಗಲಿ ಸರ್ಕಾರದುದ್ಯೋಗಿಗಳ ಮೇಲಣ ಕೋಪವನ್ನು ಪ್ರಭುಗಳ ಸತ್ಕಾರದ ವಿಷಯದಲ್ಲಿ ಲೇಶವೂ ತೋರಿಸಲಿಲ್ಲ. ನ್ಯಾಯವಾಗಿ ಮಾಡಬೇಕಾದ ಅತಿಥಿಸತ್ಕಾರ ಧರ್ಮವನ್ನು ಸಾಂಗವಾಗಿಯೇ ನೆರವೇರಿಸಿದರು. ಅದರಿಂದ ಭರತಖಂಡಕ್ಕೆ ಲಾಭವಾಯಿತೇ ಹೊರತು ಗೌರವಚ್ಯುತಿಯೇ ಆಗಲಿ ಇನ್ನಾವ ನಷ್ಟವೇ ಆಗಲಿ ಏನೂ ಸಂಭವಿಸಲಿಲ್ಲ. ವಂಗವಿಭಜನವನ್ನು ಆಂಗ್ಲಪ್ರಭುತ್ವದವರು ಪ್ರಜೆಗಳ ಇಷ್ಟಾನುಸಾರವಾಗಿ ತಪ್ಪಿಸಿಯೇ ಕೊಟ್ಟರು. ಈಗಲೂ ಕೂಡ ಅಸಹಾಯವಾದಿಗಳು ಯಾರ ಮೇಲಣ ಕೋಪವನ್ನೋ ಯಾರಮೇಲೆ ತೋರಿಸಿದರೆಂಬ ಗಾಥೆಯಂತೆ ನಡೆದುಕೊಳ್ಳದೆ, ಯುವಸಾರ್ವಭೌಮರು ಈ ದೇಶಕ್ಕೆ ದಯಮಾಡಿಸುವರೆಂಬುದು ಸಿದ್ಧವಾದ ಕೂಡಲೇ, ಪುರಾತನ ಸಂಪ್ರದಾಯಾನುಸಾರವಾಗಿ ಇವರಿಗೆ ತಾವು ಸ್ವಾಗತಸತ್ಕಾರವನ್ನು ಮಾಡಲು ಸಿದ್ಧರಾಗಿದ್ದೇವೆಂತಲೂ, ಆದರೆ ತಮ್ಮ ಕಷ್ಟಸುಖಗಳನ್ನೂ ಇಷ್ಟಗಳನ್ನೂ ಅವರೊಡನೆ ನಿವೇದಿಸಿಕೊಳ್ಳಲು ತಮಗೆ ಅವಕಾಶ ಕೊಡಬೇಕೆಂತಲೂ, ಹಾಗೆ ಕೊಡದೆ ತಪ್ಪಿದರೆ ಮಾತ್ರ ಹರಿತಾಳದಿಂದ ತಾವುಗಳು ದೂರಸ್ಥರಾಗಿರಬೇಕಾಗುವುದೆಂತಲೂ, ಭಾರತಪ್ರಭುತ್ವಕ್ಕೂ ಭಾರತಮಂತ್ರಿಯವರಿಗೂ ತಿಳಿಯಿಸಿಬಿಟ್ಟು ಈ ಕೆಲಸವನ್ನು ನಡೆಯಿಸಿದ್ದರೆ ಅಷ್ಟು ಆಕ್ಷೇಪವಿರುತ್ತಿರಲಿಲ್ಲ. ಹಾಗೆ ಮಾಡದೆಹೋದರು. ಪ್ರಪಂಚದ ೫ನೆ ೧ ಭಾಗಕ್ಕೂ ೪೦ ಕೋಟಿ ಪ್ರಜೆಗಳಿಗೂ ಅಧಿಪತಿಯಾಗಲಿಕ್ಕಿರುವ ಮಹನೀಯಾತಿಥಿಯನ್ನು ಮನೆಯ ಬಾಗಿಲಿಗೆ ಬಂದಾಗ ಧಿಕ್ಕರಿಸಿದರು. ಇದು ಭಾರತಮಾತೆಯು ಕೂಡ ಸಹಿಸಲಾರದ ಅಪಚಾರವೆಂಬುದಕ್ಕೆ ಸಂಶಯವಿಲ್ಲ. ಭರತಖಂಡವು ಲಾರ್ಡ್ ರೀಡಿಂಗರದೆ? ಅಥವಾ ಮತ್ತಾರಿಗಾದರೂ ಸೇರಿದುದೆ? ಇದು ನಮ್ಮದಲ್ಲವೆ? ನಮ್ಮ ಮನೆಯಲ್ಲವೆ? ''ನಾವಿಷ್ಣುಃ ಪೃಥಿವೀಪತಿಃ (ದೊರೆಯು ವಿಷ್ಣುವಿನವತಾರವೇ ಹೊರತು ಬೇರೆಯಲ್ಲ) ''ಅತಿಥಿದೇವೋಭವ (ಅತಿಥಿಗಳನ್ನೇ ದೈವವನ್ನಾಗಿ ಭಾವಿಸು) ''ಅಭ್ಯಾಗತಸ್ಸ್ವಯಂವಿಷ್ಣುಃ'' (ಅಭ್ಯಾಗತನಾಗಿ ಬಂದವನನ್ನು ಪ್ರತ್ಯಕ್ಷದೈವವೆಂದು ತಿಳಿ). ''ಅತಿಥೌತಿಷ್ಠತಿದ್ವಾರಿ ಯೋಭುಙ್ಕ್ತೇನ್ನಂವಿಹಾಯತಂ|ಗೋಮಾಂಸಸಮಮನ್ನಂತು ಸಚಂಡಾಲಸಮೋನರಃ'' (ಅತಿಥಿಯು ಮನೆಯಬಾಗಿಲಲ್ಲಿ ಬಂದು ನಿಂತಿರುವಾಗ ಅವನನ್ನು ಸತ್ಕರಿಸದೆ ಬಿಟ್ಟು ಯಾವನು ಭೋಜನವನ್ನು ಮಾಡುತ್ತಾನೋ ಅವನು ಚಂಡಾಲನಿಗೆ ಸಮನಾದವನು. ಅವನುಣ್ಣುವ ಅನ್ನವು ಗೋಮಾಂಸ ಸಮಾನವಾದುದು) ಎಂದು ಮೊದಲಾಗಿ ನಮ್ಮ ವೇದ ಶಾಸ್ತ್ರಾದಿಗಳ ವಿಧಿಯಿರುವುದು. ಇಂಥ ನಾವು, ಎಷ್ಟೋ ಬಗೆಯಿಂದ ಪ್ರಾರ್ಥಿಸಿದರೂ ಬಾರದ ಮಹಾಸುಕೃತ ಶರೀರಿಯಾದ ಸಮ್ಮಾನ್ಯಾತಿಥಿಯು ೪–೫ ಸಾವಿರ ಮೈಲಿಗಳ ದೂರದಿಂದ ತಾನಾಗಿ ನಮ್ಮ ದೇಶಕ್ಕೆ ಬಂದಿರುವಾಗ, ನಮ್ಮ ಯಥೋಚಿತ ಭಕ್ತಿಸತ್ಕಾರಗಳನ್ನು ಸಮರ್ಪಿಸದೆ ಹೋಗುವುದೆಂದರೆ ಅದಕ್ಕಿಂತಲೂ ನಮಗೆ ಧರ್ಮಭ್ರಷ್ಟತೆಯು ಇನ್ನಾವುದಿರುವುದು ?

ಸದ್ಯಃ ನಮ್ಮ ಮೈಸೂರು ಸಂಸ್ಥಾನವು ಅಂಥ ಕರ್ತವ್ಯಭ್ರಷ್ಟತೆಗೆ ಗುರಿಯಾಗದೆ ಹೋದುದು ಪರಮಸಂತೋಷವು.

ಭರತಖಂಡಕ್ಕೆ ದಯಮಾಡಿಸಿದ್ದ ಯುವಸಾರ್ವಭೌಮರು ನಮ್ಮ ಶ್ರೀಮನ್ಮಹಾರಾಜರ ಆಹ್ವಾನವನ್ನಂಗೀಕರಿಸಿ ಈ ದೇಶಕ್ಕೂ ತಮ್ಮ ಅಪೂರ್ವ ಸಂದರ್ಶನವನ್ನಿತ್ತುದಕ್ಕಾಗಿ ಪ್ರಜೆಗಳೆಲ್ಲರೂ ಅತ್ಯಂತವಾಗಿ ಸಂತೋಷಿಸಿ ಕೃತಜ್ಞರಾಗಿರುತ್ತಾರೆ. ತಮ್ಮ ಅಮೌಲ್ಯವೇಳೆಯಲ್ಲಿ ೫ ದಿನ ಕಾಲವನ್ನು ನಮ್ಮ ದೇಶದಲ್ಲಿ ಅವರು ಕಳೆಯಲು ಅನುಗ್ರಹಿಸಿರುತ್ತಾರೆ. ಈ ಕಾಲದಲ್ಲಿ ಅವರು ಇಲ್ಲಿ ಅವಲೋಕಿಸುವ ದೃಶ್ಯಗಳೊಳಗೆಲ್ಲಾ ಕಾರಾಪುರದ ಕ್ಯಾಂಪಿನಲ್ಲಿ ನಡೆಯುವ ಆನೆಗಳ ಕೆಡ್ಡಾ ಏರ್ಪಾಡು ಅವರಿಗೆ ಅಭೂತಪೂರ್ವವಾದ ನೋಟವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಶ್ರೀಮನ್ಮಹಾರಾಜರ ಮತ್ತು ಅವರ ಸಕಲಪ್ರಜೆಗಳ ನಿಷ್ಕಳಂಕ ಪ್ರೀತಿಭಕ್ತಿವಿಶ್ವಾಸಾತಿಶಯಗಳೂ ಮೈಸೂರುಪಟ್ಟಣದ ಮತ್ತು ಈ ದೇಶದ ಪ್ರಕೃತಿಸೌಂದರ್ಯಗಳೂ ಅವರಿಗೆ ವಿಶೇಷವಾಗಿ ಚಿತ್ತೋಲ್ಲಾಸವನ್ನುಂಟುಮಾಡಿ ಅವರಿಗೆ ಸ್ಮರಣೀಯವಾಗಿರುವುವೆಂಬುದಕ್ಕೆ ಸಂಶಯವಿಲ್ಲ.

ಭರತಖಂಡದ ದಕ್ಷಿಣದಿಕ್ಕಿನಲ್ಲಿ ಯುವಸಾರ್ವಭೌಮರು ದಯಮಾಡಿಸತಕ್ಕ ಪಟ್ಟಗಳೊಳಗೆಲ್ಲಾ ಇದೇ ಕೊನೆಯದಾಗಿರುತ್ತದೆ. ಈ ಟೆಂಕಣಕೊನೆಯಲ್ಲಿರುವ ನಮ್ಮ ಸಂಸ್ಥಾನಕ್ಕೆ ಯುವಸಾರ್ವಭೌಮರು ಬಹುದೂರ ಪ್ರಯಾಣಮಾಡಿ ಬಂದು ಈ ದೇಶದಮೇಲೆ ತಮಗಿರುವ ವಾತ್ಸಲ್ಯವನ್ನೂ ದಯೆಯನ್ನೂ ವ್ಯಕ್ತಪಡಿಸಿದುದಕ್ಕಾಗಿ ನಾವು ಸಂಪೂರ್ಣ ಕೃತಜ್ಞರಾಗಿರುತ್ತೇವೆ. ಈ ದೇಶದಲ್ಲಿ ಅವರಿರುವಷ್ಟುಕಾಲವೂ ಮತ್ತು ಅವರು ಭರತಖಂಡದಲ್ಲಿ ಸಂಚರಿಸುತ್ತಿರುವಷ್ಟುಕಾಲವೂ ಅವರಿಗೆ ಪೂರ್ಣಾರೋಗ್ಯ ಸುಖಶಾಂತಿಗಳುಂಟಾಗಿರಲೆಂದು ಭಗವಂತನನ್ನು ಪ್ರಾರ್ಥಿಸುವೆವು.

ಯುವಸಾರ್ವಭೌಮರು ರಾಜಧಾನಿಗೆ ದಯಮಾಡಿಸಿದ ದಿವಸ ಇಲ್ಲಿಯ ಎಲ್ಲ ಪಾಠಶಾಲಾ ಕಲಾಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೂ ಹಣ್ಣುಗಳೂ ಮಿಠಾಯಿದಿವಸುಗಳೂ ಹಂಚಿಸಲ್ಪಟ್ಟುವು.

ಅರಸೌತಣವಾದಾಗ ರೆಸಿಡೆನ್ಸಿಯಲ್ಲಿ ಶ್ರೀಮನ್ಮಹಾರಾಜರು ಮಾಡಿದ ಭಾಷಣವೂ ಅದಕ್ಕೆ ಯುವಸಾರ್ವಭೌಮರು ಕೊಟ್ಟ ಉತ್ತರವೂ ದೀರ್ಘವಾಗಿರುವುದರಿಂದ ಮುಂದಣವಾರದ ಸಂಚಿಕೆಯಲ್ಲಿ ಅವನ್ನು ಭಾಷಾಂತರಿಸಿ ಮುದ್ರಿಸುತ್ತೇವೆ.

ಯುವಸಾರ್ವಭೌಮರು ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದ್ದಾಗ್ಗೆ ಅಲ್ಲಿಯ ಪುರಜನಪಕ್ಷದಿಂದ ಮುನ್ಸಿಪಾಲಿಟಿಯವರು ಪುರವನ್ನೆಲ್ಲಾ ಶೃಂಗರಿಸಿದ್ದು ಅಲ್ಲಿಯ ಬಾಲಿಕಾಪಾಠಶಾಲೆಯ ಮುಂದೆ ಚಪ್ಪರವನ್ನು ಹಾಕಿಸಿದ್ದು ಅಲ್ಲಿಗೆ ಯುವರಾಜರ ಮೋಟಾರು ಬಂದಕೂಡಲೇ ಅವರನ್ನೂ ಶ್ರೀಮನ್ಮಹಾರಾಜರನ್ನೂ ಸ್ವಾಗತಿಸಿ ಪುಷ್ಪಹಾರ ಗುಚ್ಛಾದಿಗಳನ್ನು ಸಮರ್ಪಿಸಿ ಗೌರವಿಸಿದರು.

ರಾಜಧಾನಿಯಲ್ಲಿ ಯುವರಾಜರು ಇರುವಾಗ ಅವರ ಮೋಟಾರು ಬೀದಿಯಲ್ಲಿ ಹೋಗುವಾಗ ಪ್ರಜೆಗಳು ಹತ್ತಿರದಲ್ಲೇ ಮಗ್ಗುಲಲ್ಲೇ ಓಡೋಡುತ್ತ ಸಂದರ್ಶನವನ್ನು ಮಾಡಿ ಕರತಾಡನಮಾಡುವುದೂ, ಅದಕ್ಕೆ ಯುವರಾಜರು ನಗುತ್ತ ಪ್ರತಿವಂದನೆ ಮಾಡುವುದೂ ಬಹಳ ಹೃದಯಂಗಮವಾಗಿದ್ದುವು. ಅರಮನೆ ಸಜ್ಜೆಯಮೇಲೆ ಕುಳಿತು ಮದ್ದಿನ ನೋಟವನ್ನು ಪರಾಮರಿಸುವಾಗ ಪ್ರಜೆಗಳನ್ನು ತಡೆಯದೆ ಆನೆಯ ಬಾಗಿಲವರೆಗೂ ಬಿಟ್ಟುಬಿಟ್ಟಿದ್ದರು. ಜನರ ಕುತೂಹಲವನ್ನು ಯುವರಾಜರು ಕಂಡು ಆಸನದಿಂದ ಸಜ್ಜೆಯ ಮುಂಭಾಗದ ನೂಕಿಗೆ ಬಂದು ನಿಂತುಕೊಂಡು ಸರ್ವರಿಗೂ ಚೆನ್ನಾಗಿ ವಿದ್ಯುದ್ದೀಪದ ಬೆಳಕಿನಲ್ಲಿ ದರ್ಶನವನ್ನಿತ್ತರು. ಅದನ್ನು ನೋಡಿ ಪ್ರಜೆಗಳೆಲ್ಲಾ ಪರಮಾನಂದಪಟ್ಟರು. ಇಂಥ ಸುಕುಮಾರ ಸರಳಹೃದಯದ ಅಮಾಯಕ ರಾಜಕುಮಾರರ ವಿಷಯದಲ್ಲಿ ಹರಿತಾಳವನ್ನಾಚರಿಸಿ ಮನಸ್ಸು ನೋಯಿಸುವವರು ಎಂಥ ಸೈತಾನರೋ ಎಂದು ಎಷ್ಟೋ ಜನರು ಆಗ ಬಾಯ್ಬಿಟ್ಟು ಆಡಿಕೊಳ್ಳುತ್ತಿದ್ದರು.

THE MADRAS WELCOME.

The Madras Welcome to His Royal Highness the Prince of Wales has been one of the greater splendur than it was any where else till now in British Indian cities.

This great success was due mostly to the co-operation which was heartily given to the authorities by the non-Brahmana movement in Madras whose steadfast loyalty to the British Throne was manifest at every step of the Royal procession in Madras. The non-co-operators having been thus foiled in their seditious attempts to boycott the Prince's Visit turned their attention to the commission of criminal acts which were extremely outrageous. The rage of disappointment was turned towards the leaders of the non-Brahmanas.

In this, the conduct of the non-co-operators has shown who they realy are and what their object is. Their distant object is not the prosperity of the Indian people but some power, and this they call Swarajya.

What is the Madras Municipal Corporation? Is it not a form of Swarajya? How have these non-co-operators treated the Head of this Swrajya? Is it not freedom which is their aim? How did they then wrongfully confine the foremost leader of the people of Madras for the mere reason that he opposed the perversity of the non-co-operators? Is this non-violent non-co-operation to lay hands on the person of the oldest and the most patriotic man of Southren India? So far as Southern India is concerned, the non-co-operators are mostly of one class whose cards are put into the hands of some innocent people who unawaringly handle them. The game belongs to one selfish class. This class has the advantages of British Education to a arger extent than any other. The wealth of this class as a whole has tremendously increased under the British form of administration. The means which this class is employing to defeat the British supremacy in India is all British. It is British language, British press, British methods of locomotion and circulation, British ideas of independence, British thought and British strength. The entire machinery of body and mind employed by these non-co-operators is entirely British. How then will they succeed in their ungrateful attempt? They know they will not.

But their one object in Southern India as shown by their conduct on the 13th instant has been to put down non-Brahmana influence. How do they justify their conduct which is shown in their attacks on the rsidences of Sir P. Thagarayachetty and Mr. D. Thanikachalam Chetty? There can be no two stouter champions of the peoples' cause in Southern India than Sir P. T. Chetty and Mr. O. T. Chetty.

How do the Mylapur powers defend the conduct of their notorious followers? We were stunned when we heard of these atrocious acts of the Madras non-co-operators. If this is the virtue of this much talked of non-violence, the sooner it is ended the better.

ಶ್ರೀಮದ್ಯುವಸಾರ್ವಭೌಮರವರ ಆಗಮನ, ಮತ್ತು ಮೈಸೂರಿನ ಸತ್ಕಾರ.

ಘನತೆಯನ್ನೈದಿದ ಶ್ರೀಮನ್ ಎಡ್ವರ್ಡ್ ಆಲ್ಬರ್ಟ್ ಕ್ರಿಶ್ಚಿಯನ್ ಜಾರ್ಜ್ ಆಂಡ್ರ್ಯೂ ಪೇಟ್ರಿಕ್ ಡೇವಿಡ್, ಪ್ರಿನ್ಸ್‌ಆಫ್‌ವೇಲ್ಸ್, ಮತ್ತು ಅರ್ಲ್‌ಆಫ್‌ಚಸ್ಟರ್, ಡೂಕ್‌ಆಫ್ ಕಾರನ್ವಾಲ್, ಡ್ಯೂಕ್‌ಆಫ್‌ರೋದ್‌ಸೆ, ಅರ್ಲ್‌ಆಫ್‌ಕಾರಿಕ್, ಬಾರನ್‌ಆಫ್‌ರೆನ್‌ಫ್ರ್ಯೂ, ಲಾರ್ಡ್‌ಆಫ್‌ದಿಐಲೆಸ್, ಮತ್ತು ಗ್ರೇಟ್‌ಸ್ಟೂವರ್ಡ್‌ಆಫ್ ಸ್ಕಾಟ್ಲಾಂಡ್, ಕೆ. ಜಿ., ಜಿ. ಸಿ. ಎಸ್. ಐ., ಜಿ. ಎಂ. ಎಂ. ಜಿ., ಜಿ. ಸಿ. ಐ. ಇ., ಜಿ. ಸಿ. ವಿ. ಓ., ಜಿ. ಎಂ. ಬಿ. ಇ., ಎಂ. ಸಿ., ಯುವರಾದ ಯುವಸಾರ್ವಭೌಮರು ಸಪರಿವಾರರಾಗಿ ಕಳೆದ ಗುರುವಾರ ಬೆಳಗಿನ ೮|| ಗಂಟೆಗೆ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು. ಇವರ ಆಗಮನಸತ್ಕಾರಕ್ಕಾಗಿ ಪಟ್ಟಣವೂ ಅವರ ಬಿಡಾರವಾದ ರೆಸಿಡೆನ್ಸಿಭವನವೂ ಬಲುಬಗೆಯಿಂದ ಶೃಂಗರಿಸಲ್ಪಟ್ಟಿರುವುವು.

ಪುರಾಲಂಕಾರ.

ಈಸಲದ ಪುರಾಲಂಕಾರವು ಮಿತವಾಗಿ ಮಾಡಲ್ಪಟ್ಟಿದ್ದರೂ ಬಹು ರಮಣೀಯವಾಗಿದ್ದಿತು. ನಿಲ್ದಾಣದಲ್ಲೂ ಟವ್ನ್‌ಹಾಲಿನ ದಕ್ಷಿಣಭಾಗದ ಮಾರ್ಗ

ನಿರ್ವಾಹಭಾರವು ಬಹಳ ಹೆಚ್ಚಿಹೋಗಿರುವುದೆಂದೂ, ಕಳೆದ ವರ್ಷದಲ್ಲೇ ತಾವು ಭರತಖಂಡಕ್ಕೆ ದಯಮಾಡಿಸುವವರಾಗಿದ್ದೀರೆಂದು ತಿಳಿದು ತಮ್ಮನ್ನು ಸ್ವಾಗತಿಸುವುದಕ್ಕೆ ತವಕಪಡುತ್ತಿದ್ದ ನಮಗೆ ಈಗ ಸುಸಂಧಿಯು ದೊರೆತುದು ಸಂತೋಷಕರವಾಗಿರುವುದೆಂದೂ, ಕಳೆದ ಘೋರಯುದ್ಧದಲ್ಲಿ ಎಷ್ಟೋ ರಾಜ್ಯಗಳು ಪಟಾಪಂಚ ಭ್ರಷ್ಟವಾಗಿಹೋಗಿರುವಲ್ಲಿ ಆಂಗ್ಲಸಾಮ್ರಾಜ್ಯವು ವಿಜಯವನ್ನು ಪಡೆಯಿತೆಂದೂ, ಅಂಥ ಘೋರಸಮಯದಲ್ಲಿ ಭರತಖಂಡವು ಸಾಮ್ರಾಜ್ಯದ ಬಲುಮೆಯಿಂದಲೂ ಈಶ್ವರಕೃಪೆಯಿಂದಲೂ ಸುರಕ್ಷಿತವಾದುದಕ್ಕೆ ಅತ್ಯಂತ ಸಂತೋಷಪಟ್ಟಿರುವೆವೆಂದೂ, ಜಾರ್ಜ್‌ಸಾರ್ವಭೌಮರು ದಿಲ್ಲಿ ದರ್ಬಾರಿನಲ್ಲಿ ಅಪ್ಪಣೆಕೊಡಿಸಿದ ಮೇರೆಗೆ ಏರ್ಪಟ್ಟ ರಾಜಕೀಯ ಸಂಸ್ಕರಣಗಳಿಗಾಗಿ ನಾವು ಕೃತಜ್ಞರಾಗಿರುವೆವೆಂದೂ, ಅವು ಬೇಗನೆ ಸ್ವರಾಜ್ಯವನ್ನೊದಗಿಸಿಕೊಡಲು ಸಾಧನವಾಗುವುವೆಂದು ನಾವು ಆಶಿಸುತ್ತಿರುವೆವೆಂದೂ, ನಿಮ್ಮ ಆಗಮನವು ಶಾಂತಿಸಮಾಧಾನ ಸದ್ಭಾವಗಳನ್ನು ಅಭಿವೃದ್ಧಿಗೊಳಿಸಿ ದೇಶಕ್ಕೆ ಮೇಲ್ಮೆಯನ್ನುಂಟುಮಾಡುವುದಾಗಿ ನಂಬುತ್ತೇವೆಂದೂ, ತಮ್ಮಲ್ಲೂ ತಮ್ಮ ಜನಕರಾದ ಚಕ್ರವರ್ತಿಯವರಲ್ಲೂ ಅವರ ವಂಶೀಯರಲ್ಲೂ ನಮ್ಮಗಳಿಗೆ ದೃಢವಾದ ಭಕ್ತಿವಿಶ್ವಾಸಗಳಿರುವುವೆಂದು ನೀವು ನಿಸ್ಸಂದೇಹವಾಗಿ ನಂಬಬಹುದೆಂದೂ ಅಭಿಪ್ರಾಯವಿದ್ದಿತು.

ಇದಕ್ಕೆ ಯುವರಾಜರು ಪ್ರತ್ಯುತ್ತರವನ್ನು ಕೊಡುವಾಗ್ಗೆ "ನಮ್ಮ ತಾತಂದಿರು ೧೮೭೫ನೆ ವರ್ಷದಲ್ಲಿ ಶಂಕುಸ್ಥಾಪನೆ ಮಾಡಿದ ರೇವೆಯ ಗಟ್ಟದಲ್ಲಿ ನಾನಿಳಿದು, ೧೯೦೬ನೆ ವರ್ಷದಲ್ಲಿ ನಮ್ಮ ತಂದೆಯವರು ಈ ರೇವೆಯಲ್ಲಿ ಇಳಿದ ಜ್ಞಾಪಕಾರ್ಥವಾಗಿ ಸ್ಥಾಪಿತವಾಗಿರುವ ಶಿಲಾಪ್ರತಿಷ್ಠಾಪನೆಯನ್ನು ದಾಟಿ, ಕಳೆದ ವರ್ಷ ನಮ್ಮ ಚಿಕ್ಕಪ್ಪಂದಿರಾದ ಕನ್ನಾಟ್ ಪ್ರಭುಗಳಿಗೆ ಹೃದಯಪೂರ್ವಕವಾಗಿ ಸ್ವಾಗತವನ್ನರ್ಪಿಸಿದ ಮದ್ರಾಸುಪಟ್ಟಣಕ್ಕೆ ನಾನು ಬರುತ್ತಿರುವಾಗ ಇದು ನನಗೆ ಪುರಾತನಸಂಬಂಧವೇ ಹೊರತು ಹೊಸದಲ್ಲವೆಂದು ತಿಳಿಯುತ್ತೇನೆ. ಪ್ರೇಮಭರಿತವಾದ ನಿಮ್ಮ ಸ್ವಾಗತವು ನನ್ನನ್ನು ಮಿತ್ರಮಂಡಲಿಯ ಮಧ್ಯದಲ್ಲಿರುವಂತೆ ಮಾಡಿರುತ್ತದೆ. ಆಂಗ್ಲರಾಜ್ಯಾಧಿಕಾರಕ್ಕೆ ಜನ್ಮಸ್ಥಲದಂತಿರುವ ಮದ್ರಾಸಿಗೆ ನಾನು ಎಂದಿಗೆಹೋಗುವೆನೋ ಎಂದು ಆಸೆಪಡುತ್ತಿದ್ದೆ. ಈ ನಗರವು ಚರಿತ್ರಪ್ರಸಿದ್ಧವಾದ ಕಟ್ಟಡಗಳಿಂದಲೂ ಪ್ರಖ್ಯಾತರಾದ ಮಹನೀಯರಿಂದಲೂ ಪ್ರಾಚೀನ ಚಾರಿತ್ರಕಸಂಘಟನಗಳಿಂದಲೂ ಅತ್ಯಂತ ಪ್ರಸಿದ್ಧವಾಗಿದೆ" ಎಂದು ಹೇಳಿ ಮದ್ರಾಸು ಪುರಾಭಿವೃದ್ಧಿಯನ್ನು ತಾನು ಕೋರುತ್ತಿದ್ದೇನೆಂತಲೂ, ಶಾಸನಸಭಾಸಂಸ್ಕರಣ ಮೊದಲಾದ ಅಭಿವೃದ್ಧಿಸಾಧನಗಳಿಂದ ನಿಮ್ಮಗಳ ಅಭ್ಯುದಯವನ್ನು ನೀವು ಸಾಧಿಸಿಕೊಳ್ಳಲು ಸಾಹಸಪಡುವಿರೆಂದು ನಂಬುತ್ತೇನೆಂತಲೂ ಹೇಳಿ ಅವರ ಸ್ವಾಗತಸಮರ್ಪಣೆಗಾಗಿ ವಂದನೆಯನ್ನು ತಿಳಿಯಿಸಿದರು.

ಬಳಿಕ ಸ್ವಾಗತಸಂಘದ ಕಾರ್ಯದರ್ಶಿಯಾದ ಮಿ|| ಎ. ಕೆ. ಜಿ. ಅಹಮ್ಮದ್ ತಂಬಿಮರಕ್ಕಾಯರ್‌ರವರೂ, ಸರ್ ಎಂ. ಸಿ. ಟಿ. ಮುತ್ತಯ್ಯಸೆಟ್ಟಿಯವರೂ ಗೌರ್ನರವರಿಂದ ಯುವರಾಜರಿಗೆ ಪರಿಚಯಮಾಡಿಸಲ್ಪಟ್ಟರು. ಆಗ ಮದ್ರಾಸು ಪುರಜನರ ಪಕ್ಷದಿಂದ ಕಾರ್ಯದರ್ಶಿ ಮರಕ್ಕಾಯರ್‌ರವರು ಒಂದು ಸ್ವಾಗತಪತ್ರವನ್ನೋದಿ ಸಮರ್ಪಿಸಿದರು. ಅದಕ್ಕೂ ಯುವರಾಜರು ಉಚಿತ ಪ್ರತ್ಯುತ್ತರವನ್ನು ಅಪ್ಪಣೆಕೊಡಿಸಿ, ತಮ್ಮ ಹೆಸರಿನಲ್ಲಿ ಬಾಲವೈದ್ಯಶಾಲೆಯೊಂದನ್ನು ಕಟ್ಟಲು ನಡೆಯಿಸಿರುವ ಪ್ರಯತ್ನಕ್ಕಾಗಿ ತಮ್ಮ ಕೃತಜ್ಞತೆಯನ್ನು ತಿಳಿಯಿಸಿದರು.

ಬಳಿಕ ಯುವರಾಜರು ಗೌರ್ನರೇ ಮೊದಲಾದವರೊಡನೆ ರೇವೆಯ ಮಹಾದ್ವಾರದವರೆಗೆ ನಡೆದುಬಂದು ಅಲ್ಲಿ ಸಿದ್ಧವಾಗಿದ್ದ ರಥಗಳಲ್ಲಿ ಗೌರ್ನರೊಡನೆಯೂ ತಮ್ಮ ಅಂಗರಕ್ಷಕರೇ ಮೊದಲಾದ ಪರಿವಾರದೊಡನೆಯೂ ಕುಳಿತು ಗೊತ್ತಾಗಿದ್ದ ಸಾಲಂಕೃತ ವೀಧಿಗಳಲ್ಲಿ ಉತ್ಸವಗೊಂಡು ಹೊರಟರು. ಹಿಂದೆ ಸೋಲ್ಜರುಗಳ ಅಶ್ವದಳವೂ ಪದಾತಿಯೂ ನಡೆದುವು. ಉಭಯಪಾರ್ಶ್ವಗಳಲ್ಲೂ ಪೋಲೀಸರ ಕಾಲ್ಬಲದ ಸಾಲು ಗೌರ್ನಮೆಂಟು ಭವನದವರೆಗೂ ನಿಂತಿದ್ದಿತು. ಅಸಹಾಯವಾದಿಗಳ ಪ್ರಯತ್ನದಿಂದ ಊರಿನಲ್ಲಿ ಹರಿತಾಳವು ಬಹುಬಲವಾಗಿ ನಡೆಯಿಸಲ್ಪಟ್ಟಿತು. ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ವಿದೇಶೀಯರ ಷಾಪುಗಳು ಮಾತ್ರ ತೆರೆಯಲ್ಪಟ್ಟಿದ್ದುವು. ಮುಚ್ಚಿದ್ದ ಅಂಗಡಿಗಳನ್ನು ತೆಗೆಯಿಸುವುದಕ್ಕೂ ಅಂಗಡಿಗಳನ್ನು ಮುಚ್ಚದಂತೆ ಬೋಧಿಸುವುದಕ್ಕೂ ಜಸ್ಟೀಸ್‌ಪಕ್ಷದ ಸಹಾಯವಾದಿಗಳು ಬೇರೆ ಪ್ರಯತ್ನವನ್ನು ನಡೆಯಿಸಿದ್ದರು. ಅನೇಕ ಆದಿದ್ರಾವಿಡರೂ ಇದರಲ್ಲಿ ನಿಯೋಜಿಸಲ್ಪಟ್ಟಿದ್ದರು. ಹಿಂದೂ ಮುಸಲ್ಮಾನರಿಗೂ ಈ ಆದಿದ್ರಾವಿಡರಿಗೂ ಮದ್ರಾಸಿನಲ್ಲಿ ಕೆಲಕಾಲದಿಂದುಂಟಾಗಿರುವ ಮನಸ್ಸ್ಪರ್ಧೆಯ ಮೂಲಕ ಈಗಲೂ ಕೆಲಕಡೆ ಗುದ್ದಾಟವಾಯಿತು. ಅಸಹಾಯವಾದಿಗಳಿಂದ ಉಬ್ಬಿಸಲ್ಪಟ್ಟಿದ್ದ ಪುಂಡುಜನರಲ್ಲಿ ಕೆಲವರು ಜಘನ್ಯವಾದ ಅತ್ಯಾಚಾರಗಳನ್ನು ನಡೆಯಿಸಿದರು. ಬೀದಿಯಲ್ಲಿ ಸ್ಥಾಪಿಸಿದ್ದ ಧ್ವಜಪತಾಕೆಗಳನ್ನು ಕಿತ್ತು ತೋರಣಗಳನ್ನು ಹುಡಿದು ಸರ್ ತ್ಯಾಗರಾಯಸೆಟ್ಟರೇ ಮೊದಲಾದವರ ಮೇಲೆ ಮಣ್ಣೆರಚಿ ಅಗೌರವಪಡಿಸಲು ಹಿಂದೆಮುಂದೆ ನೋಡಲಿಲ್ಲ. ಒಂದು ಸಿನಿಮಾಕಂಪೆನಿಯ ಬಳಿಯಲ್ಲಿ ನಡೆದ ಗದ್ದಲದಲ್ಲಿ ಒಂದು ಪ್ರಾಣಹತಿಯಾಯಿತು. ಮತ್ತೊಂದುಕಡೆ ಜಟ್ಕಾ ಬಂಡಿಯವನೊಬ್ಬನು ಏಟುತಿಂದು ಮೃತಪಟ್ಟನೆಂದು ಸಮಾಚಾರಬಂದಿದೆ. ೩೦-೪೦ ಮಂದಿಗೆ ಏಟುಬಿದ್ದು ಗಾಯವಾಯಿತಂತೆ. ಆದರೆ ಸರ್ಕಾರದಕಡೆಯ ನಿರ್ಬಂಧವೇ ಆಗಲಿ ಕಠಿನಚರ್ಯೆಗಳೇ ಆಗಲಿ ಒಂದೂ ಇರಲಿಲ್ಲ.

ಯುವರಾಜರು ದಯಮಾಡಿಸಿದ ದಿವಸದ ಹೊರತು ಉಳಿದ ದಿನಗಳಲ್ಲೆಲ್ಲಾ ಹರಿತಾಳ ಮೊದಲಾದುವುಗಳೊಂದೂ ಇರಲಿಲ್ಲ. ಅವರ ಸತ್ಕಾರಕ್ಕಾಗಿ ಮಾಡಿದ್ದ ಏರ್ಪಾಡುಗಳೆಲ್ಲಾ ಸಾಂಗವಾಗಿ ಜರುಗಿದುವು. ಶುಕ್ರವಾರ ಮಧ್ಯಾಹ್ನ ೧೧|| ಗಂಟೆಗೆ ತಿರುವಾಂಕೂರು, ಕೊಚ್ಚಿ ಮಹಾರಾಜರುಗಳೂ ಆರ್ಕಾಟು ಪ್ರಭುಗಳೂ ಯುವರಾಜರ ಬಿಡಾರಕ್ಕೆ ಹೋಗಿ ದರ್ಶನಮಾಡಿ ಬಂದರು. ಮಧ್ಯಾಹ್ನ ಯುವರಾಜರೂ ವೆಲ್ಲಿಂಗ್ಡನ್ ಪ್ರಭು ದಂಪತಿಗಳೂ ಸಹ ಶಾಸನಸಭೆಗೆ ದಯಮಾಡಿಸಿದರು. ಅಲ್ಲಿ ಸಭಾಧ್ಯಕ್ಷರಾದ ಸರ್ ಪಿ. ರಾಜಗೋಪಾಲಾಚಾರ್ಯರು ಸ್ವಾಗತಪತ್ರವನ್ನೋದಿ ಸಮರ್ಪಿಸಿದರು. ಅದಕ್ಕೂ ಯುವರಾಜರು ಪ್ರತ್ಯುತ್ತರವನ್ನಿತ್ತರು. ಅಲ್ಲಿಂದ ಯುವರಾಜರೂ ಗೌರ್ನರೇ ಮೊದಲಾದವರೂ ವಿಶ್ವವಿದ್ಯಾಲಯಭವನಕ್ಕೆ ದಯಮಾಡಿಸಿದರು. ಸೆನೇಟ್ ಸಭಿಕರೂ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಸಭೆಯಲ್ಲಿ ನೆರೆದಿದ್ದರು. ವೈಸ್‌ಛಾನ್ಸಲರಾದ ಅ|| ಕೆ. ಶ್ರೀನಿವಾಸಯ್ಯಂಗಾರರು ಯುವರಾಜರನ್ನು ಕುರಿತು ಸ್ವಾಗತೋಪನ್ಯಾಸವನ್ನು ಮಾಡಿದರು. ಯುವರಾಜರವರು ಸಮಯೋಚಿತ ಪ್ರತ್ಯುತ್ತರವನ್ನಿತ್ತರು. ಅದನ್ನು ಮುಗಿಸಿಕೊಂಡು ಯುವರಾಜರು ಬಿಡಾರಕ್ಕೆ ದಯಮಾಡಿಸಿದ ಕೂಡಲೇ ದೊಡ್ಡದೊಡ್ಡ ಭೂಸ್ವಾಮಿಗಳು ಅಲ್ಲಿಗೆ ಬಂದು ಸ್ವಾಗತವನ್ನರ್ಪಿಸಿದರು. ಯುವರಾಜರು ಅವರ ಸ್ವಾಗತಕ್ಕೆ ಪ್ರತ್ಯುತ್ತರವನ್ನಿತ್ತು ಎಲ್ಲರ ಕುಶಲವನ್ನೂ ಕೇಳಿ ಬೀಳ್ಕೊಟ್ಟರು. ಸಾಯಂಕಾಲ ೬ ಗಂಟೆಗೆ ಕಾಸ್ಮಾಪಾಲಿಟನ್ ಕ್ಲಬ್ಬಿಗೆ ದಯೆಮಾಡಿಸಿದರು. ಆ ಭವನವೆಲ್ಲಾ ದೀಪಾವಳಿಗಳಿಂದಲೂ ಧ್ವಜಪತಾಕೆಗಳಿಂದಲೂ ಮನೋಹರವಾಗಿದ್ದಿತು. ಅಲ್ಲಿಯ ದೇಶೀಯ ವಿದೇಶೀಯ ಮೆಂಬರುಗಳೆಲ್ಲರೂ ಸ್ವಾಗತಿಸಿ ಉಚಿತಾಸನದಲ್ಲಿ ಕುಳ್ಳಿರಿಸಿದರು. ಏರ್ಪಡಿಸಿದ್ದ ನಾಟಕಾವಲೋಕನ ಸಂಗೀತಶ್ರವಣವಾದನಂತರ ಅಲ್ಪಾಹಾರದ ಸ್ವೀಕಾರವನ್ನು ಮಾಡಿ ಪುಷ್ಪಮಾಲಾಲಂಕೃತರಾಗಿ ತೆರಳಿದರು. ಶನಿವಾರ ಪೋಲೋ ಮೊದಲಾದ ವಿನೋದಗಳೂ, ಭಾನುವಾರ ಕ್ರೈಸ್ತ ದೇವಾಲಯದಲ್ಲಿ ಪ್ರಾರ್ಥನೆಯೂ ನಡೆದುವು.

ತಾ|| ೧೬ ರಲ್ಲಿ ಯುವರಾಜರ ಬಿಡಾರವಾದ ಸರ್ಕಾರಿ ಭವನದಲ್ಲಿ ಬಾಲಚಮೂವಿನವರೂ ಬಾಲಿಕಾಚಮೂವಿನವರೂ ಮದ್ರಾಸು ಆಧಿಪತ್ಯದ ಅನೇಕ ಜಿಲ್ಲೆಗಳಿಂದ ಬಂದಿದ್ದವರೆಲ್ಲಾ ಸೇರಿ ಸಾಲಾಗಿ ನಿಂತು ಯುವರಾಜರಿಗೆ ಮರ್ಯಾದಿಸಿದರು. ಬಳಿಕ ಅವರು ಮಾಡಿದ ಪ್ರದರ್ಶನವನ್ನು ಪರಾಮರಿಸಿದರು. ಅಲ್ಲಿಂದ ಯುವರಾಜರು ಕುದುರೆಯ ಮೇಲೆ ಕುಳಿತು ಐಲಂಡ್‌ಗ್ರೌಂಡ್ ಎಂಬ ಬಯಲಿಗೆ ಗೌರ್ನರೊಡನೆ ತೆರಳಿದರು. ಅಲ್ಲಿ ೧೦ ಸಾವಿರ ಮಂದಿ ವಿದ್ಯಾರ್ಥಿಗಳು ನೆರೆದಿದ್ದರು. ಅನೇಕಮಂದಿ ಉಪಾಧ್ಯಾಯರೂ ಬಂದಿದ್ದರು. ಅವರೆಲ್ಲರೂ ಸಾಲುಕಟ್ಟಿ ನಿಂತು ಮಾಡಿದ ಸ್ವಾಗತಮರ್ಯಾದೆಯನ್ನು ಯುವರಾಜರು ಸ್ವೀಕರಿಸಿದರು. ಅದೇ ಸ್ಥಲದಲ್ಲಿ ೮೦೦ ಮಂದಿ ಪೋಲೀಸರ ಕವಾಯತಾಯಿತು. ಅದನ್ನು ಅವಲೋಕಿಸಿದರು. ಅಲ್ಲಿಂದ ಇದಿರಿಗಿರುವ ಮನ್ರೋಶಿಲಾವಿಗ್ರಹಸ್ಥಲದವರೆಗೆ ನಡೆದೇಬಂದು, ಕಳೆದ ಯುದ್ಧಕ್ಕೆ ಹೋಗಿಬಂದಿದ್ದವರಾದ ದೇಶೀಯ ವಿದೇಶೀಯ ಸೈನಿಕರನ್ನೆಲ್ಲಾ ಅಲ್ಲಿ ಸಂದರ್ಶಿಸಿ ಅವರ ಸ್ವಾಗತವನ್ನು ಪರಿಗ್ರಹಿಸಿ ಸಂಭಾಷಿಸಿದರು. ಸಾಯಂಕಾಲ ಗಿಂಡಿಯಲ್ಲಿ ಪೋಲೋ ಆಡಿದರು. ಆ ರಾತ್ರಿ ಅದಿಯಾರ್ ಕ್ಲಬ್ಬಿನಲ್ಲಿ ಔತಣವೂ ನರ್ತನವೂ ಆದುವು. ತಾ|| ೧೭ನೆ ಮಂಗಳವಾರ ಮಧ್ಯಾಹ್ನ ಗಿಂಡಿಯಲ್ಲಿ ನಡೆದ ಕುದರೆ ಜೂಜಿಗೆ ಹೋಗಿದ್ದರು. ಬಳಿಕ ಗೌರ್ನರ ಪರಿವಾರದವರು ಮಾಡಿದ ಔತಣಕ್ಕೆ ಹೋಗಿದ್ದರು. ಅಲ್ಲಿಂದ ರಾಯಪೇಟೆಯಲ್ಲಿರುವ ಮದ್ರಾಸು ಕ್ಲಬ್ಬಿಗೆ ಹೋಗಿ ಔತಣವನ್ನು ಸ್ವೀಕರಿಸಿದರು. ಆ ರಾತ್ರಿ ಐಲಂಡ್ ಗ್ರೌಂಡಿನಲ್ಲಿ ೧ ಗಂಟೆಕಾಲ ಅತಿಶಯವಾದ ಬಾಣಗಾರಿಕೆಯಾಯಿತು. ಆ ಸಾಮಗ್ರಿಗಳನ್ನೆಲ್ಲಾ ಇಂಗ್ಲಂಡಿನಿಂದ ತರಿಸಿದ್ದರು. ಅಲ್ಲದೆ ಅಹಮ್ಮದ್‌ತಂಬಿಮರಕ್ಕಾಯರು ಕೆಲ ಬಾಣಗಾರಿಕೆ ಸಾಮಾನುಗಳನ್ನು ಜಪಾನಿನಿಂದ ತರಿಸಿದ್ದರು. ಅವೆಲ್ಲಾ ಬಹು ಪ್ರೇಕ್ಷಣೀಯವಾಗಿದ್ದುವು. ರಾತ್ರಿ ೧೦|| ಗಂಟೆಗೆ ಯುವರಾಜರು ಮದ್ರಾಸನ್ನು ಬಿಟ್ಟು ಸ್ಪೆಷಲ್ ಟ್ರೇನಿನ ಮೇಲೆ ಬೆಂಗಳೂರಿಗೆ ಪ್ರಯಾಣಮಾಡಿದರು. ಗೌರ್ನರ್ ದಂಪತಿಗಳೇ ಮೊದಲಾದನೇಕರು ನಿಲ್ದಾಣಕ್ಕೆ ಬಂದಿದ್ದು ಸಾಗಕಳುಹಿಸಿದರು.

(ಬೆಂಗಳೂರು).

ತಾ|| ೧೮ನೆ ಬುಧವಾರ ಬೆಳಗ್ಗೆ ಬೆಂಗಳೂರು ಪಟ್ಟಣದ ನಿಲ್ದಾಣದಲ್ಲಿಳಿದರು. ಬ್ರಿಟಿಷ್ ರೆಸಿಡೆಂಟರು ಅ|| ರೆಸಿಡೆಂಟರು ಮತ್ತು ಉಳಿದ ಸಿವಿಲ್ ಮಿಲಿಟರಿ ಅಧಿಕಾರಿಗಳೂ, ಮೈಸೂರು ಸಂಸ್ಥಾನದ ದಿವಾನರು ಕೌನ್ಸಿಲರು ಚೀಫ್‌ಕೋರ್ಟು ಜಡ್ಜರು ಶಾಖಾ ಮುಖ್ಯಾಧಿಕಾರಿಗಳೂ ಅನೇಕಮಂದಿ ಪುರಪ್ರಮುಖರೂ, ಕೆಲ ಸೈನಿಕರೂ ಕಾದಿದ್ದು ಸ್ವಾಗತ ಮಾಡಿದರು. ಉಳಿದ ಮರ್ಯಾದೆಗಳೆಲ್ಲಾ ಜರುಗಿದನಂತರ ಬ್ರಿ|| ರೆಸಿಡೆಂಟರೊಡನೆ ರಥಾರೂಢರಾಗಿ ಕಂಟೋನ್ಮೆಂಟಿಗೆ ದಯಮಾಡಿಸಿದರು. ಹಿಂದೆ ಮುಂದೆ ಸೋಲ್ಜರುಗಳ ಸೇನೆಯೂ ಅಶ್ವಸೇನೆಯೂ ನಡೆದುವು. ನಿಲ್ದಾಣದಿಂದ ರೆಸಿಡೆನ್ಸಿಯವರೆಗೂ ಬಹುಶಃ ೨ ಮೈಲಿಗಳ ದಾರಿಯ ಉಭಯಪಕ್ಕಗಳಲ್ಲೂ ಲಕ್ಷಾಂತರಜನರು ನೆರೆದಿದ್ದು ದರ್ಶನಮಾಡಿ ಆನಂದಪಟ್ಟರು. ದಾರಿಯುದ್ದಕ್ಕೂ ಗುಡಿತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಅಲಂಕರಿಸಿದ್ದರು. ಕೆಲ ಮಹಮ್ಮದೀಯರ ಹೊರತು ಯಾರೂ ಅಂಗಡಿಗಳನ್ನು ಮುಚ್ಚಿರಲಿಲ್ಲ. ಯುವರಾಜರ ಸ್ವಾಗತವು ಬಹು ವಿಜೃಂಭಣೆಯಿಂದ ನಡೆಯಿತು. ಉತ್ಸವವು ವಿಕ್ಟೋರಿಯಾ ಪ್ರತಿಮೆಯ ಚೌಕದ ಬಳಿಗೆ ದಯಮಾಡಿಸಿದ ಕೂಡಲೇ ಅಲ್ಲಿ ಕಂಟೋನ್ಮೆಂಟ್ ಮ್ಯುನ್ಸಿಪಾಲಿಟಿಯ ಪಕ್ಷದ ಸ್ವಾಗತಪತ್ರವು ವೈಸ್‌ಪ್ರೆಸಿಡೆಂಟರಿಂದ ಓದಿ ಸುಂದರವಾದ ಬೆಳ್ಳಿಯ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಲ್ಪಟ್ಟಿತು. ಅದಕ್ಕೆ ಪ್ರತ್ಯುತ್ತರವನ್ನಿತ್ತು ಯುವರಾಜರು ರಸಿಡೆನ್ಸಿಯನ್ನು ಸೇರಿದರು. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡ ಕೂಡಲೇ ೧೧ ಗಂಟೆಗೆ ಕವಾಯತ್ ಮೈದಾನಕ್ಕೆ ದಯಮಾಡಿಸಿದರು. ನೋಡುವುದಕ್ಕೆ ಕಂಟೋನ್ಮೆಂಟಿನ ಮತ್ತು ಪೇಟೆಯ ಮತ್ತು ಪರಸ್ಥಲದ ಜನರುಗಳು ವಿಶೇಷವಾಗಿ ನೆರೆದಿದ್ದರು. ಯುವರಾಜರು ಸೈನ್ಯದ ಕವಾಯತನ್ನೆಲ್ಲಾ ಪರಾಮರಿಸಿ ಅವರು ಮಾಡಿದ ಮರ್ಯಾದೆಯನ್ನು ಸ್ವೀಕರಿಸಿದುದಲ್ಲದೆ ಅಲ್ಲಿ ನೆರೆದಿದ್ದ ಹಳೆಯ ಸೈನಿಕರೊಡನೆಲ್ಲಾ ಕರಸ್ಪಂದನವನ್ನು ಮಾಡಿ ಸಂಭಾಷಿಸಿ ಬಿಡದಿಗೆ ತೆರಳಿದರು. ಮಧ್ಯಾಹ್ನಾತ್ಪರ ಪೋಲೋ ಗ್ರೌಂಡಿನಲ್ಲಿ ಮನೋಹರವಾಗಿ ನಡೆದ ಪೋಲೋ ಆಟದಲ್ಲಿ ಬೆರೆದು ಆನಂದಪಟ್ಟರು. ಇದನ್ನು ನೋಡುವುದಕ್ಕೂ ೨೦-೩೦ ಸಹಸ್ರ ಜನರು ನೆರೆದಿದ್ದರು. ಪೋಲೀಸರೂ ಸೈನಿಕರೂ ಜನರನ್ನು ದೂರದಲ್ಲೇ ತಡೆದು ನಿಲ್ಲಿಸಿದ್ದರು. ಈ ಕಾರಣದಿಂದ ಅನೇಕರು ಕೈಗಳಲ್ಲಿ ದುರ್ಬೀನುಗಳನ್ನು ಹಿಡಿದು ದೂರದಲ್ಲಿ ನಿಂತು ನೋಡುತ್ತಿದ್ದರು. ಆಟ ಮುಗಿದ ಕೂಡಲೇ ಯುವರಾಜರು ಜನರಿಗೆ ಮಾಡಲ್ಪಟ್ಟಿರುವ ನಿರ್ಬಂಧವನ್ನು ನೋಡಿ ಮರುಗಿ ಒಬ್ಬ ಸ್ವಾರನನ್ನು ಕರೆದು ಅವರನ್ನೆಲ್ಲಾ ತಡೆಮಾಡದೆ ಸಮೀಪಕ್ಕೆ ಬಿಟ್ಟುಬಿಡುವಂತೆ ಅಪ್ಪಣೆಮಾಡಿದರು. ಆಗ ಅಷ್ಟೊಂದು ಪ್ರಜಾಸ್ತೋಮವೂ ಹರ್ಷಧ್ವನಿ ಮಾಡುತ್ತ ಯುವರಾಜರ ಪಕ್ಕಕ್ಕೇ ಬಂದು ಸೇರಿ ದರ್ಶನಮಾಡಿ ಅತ್ಯಾನಂದಪಟ್ಟು ಕರತಾಡನ ಮಾಡಿದರು. ಯುವರಾಜರಿಗೆ ಪ್ರಜೆಗಳ ಮೇಲೆ ಇರುವ ಅಭಿಮಾನಾನುಕಂಪಗಳಿಗೆ ಇದು ನಿದರ್ಶನವಾಗಿದ್ದಿತು. ಆ ದಿವಸ ಕಂಟೋನ್ಮೆಂಟಿನಲ್ಲಿ ೨೦ ಕಡೆ ಅನೇಕಮಂದಿ ದೊಡ್ಡಮನುಷ್ಯರು ಹಿಂದೂ ಮುಸಲ್ಮಾನ್ ಕ್ರಿಶ್ಚಿಯನ್ ಯೂರೋಪಿಯನ್ ಯೂರೇಷಿಯನ್ ಮೊದಲಾದ ಸಕಲಜಾತಿಯ ಬಡಬಗ್ಗರಿಗೂ ಒಂದೊಂದುಕಡೆ ೨-೩ ಸಾವಿರ ಜನರಿಗೆ ಅನ್ನವಸ್ತ್ರಗಳನ್ನೂ ಫಲಾಹಾರಗಳನ್ನೂ ಕೊಡಿಸಲಿಕ್ಕೆ ಏರ್ಪಡಿಸಿ ತೃಪ್ತಿಪಡಿಸಿದರು. ರಾತ್ರಿ ರಸಿಡೆನ್ಸಿಯಲ್ಲಿ ದೊಡ್ಡ ಔತಣವಾಯಿತು. ಬಹುಜನರು ಅದಕ್ಕೆ ಕರೆಯಲ್ಪಟ್ಟಿದ್ದರು. ಆರೋಗಣೆಯನ್ನು ಮುಗಿಸಿಕೊಂಡು ಆ ರಾತ್ರಿಯೇ ಹೊಗೆಬಂಡಿಯನ್ನೇರಿ ಮೈಸೂರಿಗೆ ಪ್ರಯಾಣವನ್ನು ಬಳೆಸಿದರು.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೨೨ ನೆಯ ಭಾನುವಾರ.

ಶ್ರೀಮದ್ಯುವಸಾರ್ವಭೌಮರಿಗೆ ಮೈಸೂರು ಸತ್ಕಾರ.

ಈಗತಾನೇ ಆಗಮಿಸಿರುವ ಶ್ರೀ ಯುವಸಾರ್ವಭೌಮರನ್ನು ಗೌರವಿಸಿ ಆದರಿಸಿ ಸತ್ಕರಿಸುವುದರಲ್ಲಿ ನಮ್ಮ ಸಂಸ್ಥಾನವು ಬಹುಕಾಲದಿಂದ ನಡೆದುಬಂದಿರುವ ತನ್ನ ಕೀರ್ತಿಪ್ರತಿಷ್ಠೆಗಳನ್ನು ಮತ್ತೊಂದುಸಲ ಸ್ಥಿತಿಸ್ಥಾಪನೆಗೊಳಿಸಿಕೊಂಡಿತೆಂದು ಹೇಳುವಲ್ಲಿ ಅಭ್ಯಂತರವಿಲ್ಲ. ಭರತಖಂಡದ ಈಗಣ ವಿಷಮವಾತಾವರಣದೊಳಗೆ ಆ ಭರತಖಂಡದ ಒಂದು ಭಾಗವಾಗಿರುವ ನಮ್ಮ ಸಂಸ್ಥಾನದೊಳಗೆ ಯುವಸಾರ್ವಭೌಮರಿಗೆ ನಡೆದ ಪ್ರಜಾಮನಃಪೂರ್ವಕವಾದ ಸ್ವಾಗತಸತ್ಕಾರಗಳು ಅಭೂತಪೂರ್ವವಾಗಿದ್ದುವೆಂಬುದಕ್ಕೆ ಸಂಶಯವಿಲ್ಲ. ಅಸಹಾಯಧೂಳಿಯಿಂದ ಕಲುಷಿತಗಳಾಗಿದ್ದ ಅನೇಕ ಪಟ್ಟಣಗಳನ್ನು ಹೊಕ್ಕುಬಂದಿರುವ ನಮ್ಮ ಪ್ರಿಯ ಯುವಸಾರ್ವಭೌಮರನ್ನು ನಿಷ್ಕಳಂಕ ರಾಜಭಕ್ತಿಪ್ರಸನ್ನವಾತಾವರಣದಿಂದ ಭರಿತವಾಗಿರುವ ಮೈಸೂರು ಮೆಚ್ಚಿಸಿ, ಅವರಿಗೆ ಅತಿಶಯವಾದ ಸುಖಶಾಂತಿಗಳನ್ನುಂಟುಮಾಡದೆ ಹೋಗಿಲ್ಲ. ೧೦ ಸಾವಿರಕ್ಕೆ ಮೇಲ್ಪಟ್ಟ ವಿದ್ಯಾರ್ಥಿಗಳೂ ಸ್ಥಲಪರಸ್ಥಲಗಳ ಒಟ್ಟು ಒಂದು ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಪ್ರಜೆಗಳೂ ತಾ|| ೧೯ ನೆಯ ಗುರುವಾರ ಬೆಳಗ್ಗೆ ನಿಲ್ದಾಣದಿಂದ ರೆಸಿಡೆನ್ಸಿಯವರೆಗೆ ಇಕ್ಕೆಲಗಳಲ್ಲೂ ಮಾರ್ಗಗಳ ಮೇಲೂ ನಿಂತು, ಯುವಸಾರ್ವಭೌಮರ ಪ್ರಸನ್ನಮಂದಹಾಸಯುಕ್ತಮುಖಮಂಡಲದ ಸಂದರ್ಶನವನ್ನು ಮಾಡಿಯೂ, ಅಷ್ಟೊಂದು ವಿಶ್ವಾಸಯುಕ್ತಪ್ರಜಾಸಮುದಾಯದ ಹರ್ಷಧ್ವನಿಯನ್ನೂ ವಂದನೆಯನ್ನೂ ಯುವಸಾರ್ವಭೌಮರು ಆಲಿಸಿಯೂ, ಪರಸ್ಪರವಾಗಿ ಪಟ್ಟ ಆನಂದಾತಿಶಯವು ಅನುಪಮವಾಗಿದ್ದುವು. ಶುಷ್ಕಹರಿತಾಳದಿಂದ ಕ್ಷೋಭಿತಹೃದಯಗಳಾದ ಪಟ್ಟಣಗಳಲ್ಲಿ ಇಂಥ ಸೌಭಾಗ್ಯಕ್ಕೆ ಎಡೆಯೆಲ್ಲಿರುವುದು ?

ನಮ್ಮ ಯುವಸಾರ್ವಭೌಮರ ಜನಕರು ಯುವರಾಜರಾಗಿದ್ದಾಗ್ಗೆ ೧೯೦೬ನೆ ವರ್ಷದಲ್ಲಿ ಭರತಖಂಡದ ಸಂದರ್ಶನಾರ್ಥವಾಗಿ ದಯಮಾಡಿಸಿ ನಮ್ಮ ಸಂಸ್ಥಾನಕ್ಕೂ ದರ್ಶನವನ್ನಿತ್ತು ನಮ್ಮ ಸತ್ಕಾರವನ್ನು ಸ್ವೀಕರಿಸಿದ್ದರು. ಅವರ ಜನಕರಾದ ಎಡ್ವರ್ಡ್ ಪ್ರಭುಗಳು ಯುವಸಾರ್ವಭೌಮರಾಗಿದ್ದಾಗ್ಗೆ ಅದಕ್ಕೆ ಹಿಂದೆ ೩೦ ವರ್ಷಗಳಲ್ಲಿ ಅವರೂ ಭರತಖಂಡವನ್ನು ಪರಾಮರಿಸಿ ಆತಿಥ್ಯವನ್ನು ಪರಿಗ್ರಹಿಸಿ ಹೋಗಿದ್ದರು ಆ ಸಂಪ್ರದಾಯವನ್ನನುಸರಿಸಿಯೇ ನಮ್ಮ ಮುಂದಣ ಚಕ್ರವರ್ತಿಗಳಾಗಲಿಕ್ಕಿರುವ ಈ ಯುವರಾಜ ಎಡ್ವರ್ಡ್ ಪ್ರಭುಗಳೂ ಕೂಡ ಮುಂದೆ ತಮ್ಮ ಆಳಿಕೆಗೆ ಒಳಪಡುವುದಾಗಿರುವ ಈ ದೇಶವನ್ನು ಪರಾಮರಿಸಿಕೊಂಡು ಹೋಗಲಿಕ್ಕಾಗಿ ಈಗ ದಯಮಾಡಿಸಿರುವರು. ಅಸಹಾಯವಾದಿಗಳು ಹೇಳುವಂತೆ ಈ ದೇಶದ ಆಂಗ್ಲಾಧಿಕಾರಿಗಳ ಕುತಂತ್ರದಿಂದಲೇನೂ ಅವರು ಈ ದೇಶಕ್ಕೆ ದಯಮಾಡಿಸಿಲ್ಲ. ಆಂಗ್ಲಸಾಮ್ರಾಜ್ಯಕ್ಕೆ ಒಳಪಟ್ಟಿರುವ ಆಸ್ಟ್ರೇಲಿಯಾ ಕಾನಡಾ ಮೊದಲಾದ ದೇಶಗಳನ್ನೆಲ್ಲಾ ಮೊನ್ನೆವರ್ಷದಲ್ಲೇ ಅವರು ಪರಾಮರಿಸಿಕೊಂಡು ಬಂದರು. ಇದೊಂದು ಉಳಿದಿದ್ದಿತು. ಸ್ವಲ್ಪ ದೇಹಾಲಸ್ಯವಾಗದಿದ್ದರೆ ಕಳೆದ ವರ್ಷವೇ ಈ ದೇಶಕ್ಕೂ ಇವರು ದಯಮಾಡಿಸುತ್ತಿದ್ದರು.

ಈಗ್ಗೆ ೧೫ ವರ್ಷಗಳಲ್ಲಿ ಜಾರ್ಜ್ ಯುವಸಾರ್ವಭೌಮರು ದಯಮಾಡಿಸಿದ್ದಾಗಲೂ ಭರತಖಂಡದಲ್ಲಿ ವಂಗಭಂಗದಿಂದ ಪ್ರಜೆಗಳ ಮನಸ್ಸಿನಲ್ಲಿ ವ್ಯಥೆಯಿದ್ದೇ ಇದ್ದಿತು. ಆದರೆ ಅದಕ್ಕಾಗಿ ಆಗ ವಂಗದೇಶೀಯರೇ ಆಗಲಿ ಇತರ ಪ್ರಜೆಗಳೇ ಆಗಲಿ ಸರ್ಕಾರದುದ್ಯೋಗಿಗಳ ಮೇಲಣ ಕೋಪವನ್ನು ಪ್ರಭುಗಳ ಸತ್ಕಾರದ ವಿಷಯದಲ್ಲಿ ಲೇಶವೂ ತೋರಿಸಲಿಲ್ಲ. ನ್ಯಾಯವಾಗಿ ಮಾಡಬೇಕಾದ ಅತಿಥಿಸತ್ಕಾರ ಧರ್ಮವನ್ನು ಸಾಂಗವಾಗಿಯೇ ನೆರವೇರಿಸಿದರು. ಅದರಿಂದ ಭರತಖಂಡಕ್ಕೆ ಲಾಭವಾಯಿತೇ ಹೊರತು ಗೌರವಚ್ಯುತಿಯೇ ಆಗಲಿ ಇನ್ನಾವ ನಷ್ಟವೇ ಆಗಲಿ ಏನೂ ಸಂಭವಿಸಲಿಲ್ಲ. ವಂಗವಿಭಜನವನ್ನು ಆಂಗ್ಲಪ್ರಭುತ್ವದವರು ಪ್ರಜೆಗಳ ಇಷ್ಟಾನುಸಾರವಾಗಿ ತಪ್ಪಿಸಿಯೇ ಕೊಟ್ಟರು. ಈಗಲೂ ಕೂಡ ಅಸಹಾಯವಾದಿಗಳು ಯಾರ ಮೇಲಣ ಕೋಪವನ್ನೋ ಯಾರಮೇಲೆ ತೋರಿಸಿದರೆಂಬ ಗಾಥೆಯಂತೆ ನಡೆದುಕೊಳ್ಳದೆ, ಯುವಸಾರ್ವಭೌಮರು ಈ ದೇಶಕ್ಕೆ ದಯೆಮಾಡಿಸುವರೆಂಬುದು ಸಿದ್ಧವಾದ ಕೂಡಲೇ, ಪುರಾತನ ಸಂಪ್ರದಾಯಾನುಸಾರವಾಗಿ ಇವರಿಗೆ ತಾವು ಸ್ವಾಗತಸತ್ಕಾರವನ್ನು ಮಾಡಲು ಸಿದ್ಧರಾಗಿದ್ದೇವೆಂತಲೂ, ಆದರೆ ತಮ್ಮ ಕಷ್ಟಸುಖಗಳನ್ನೂ ಇಷ್ಟಗಳನ್ನೂ ಅವರೊಡನೆ ನಿವೇದಿಸಿಕೊಳ್ಳಲು ತಮಗೆ ಅವಕಾಶ ಕೊಡಬೇಕೆಂತಲೂ, ಹಾಗೆ ಕೊಡದೆ ತಪ್ಪಿದರೆ ಮಾತ್ರ ಹರಿತಾಳದಿಂದ ತಾವುಗಳು ದೂರಸ್ಥರಾಗಿರಬೇಕಾಗುವುದೆಂತಲೂ, ಭಾರತಪ್ರಭುತ್ವಕ್ಕೂ ಭಾರತಮಂತ್ರಿಯವರಿಗೂ ತಿಳಿಯಿಸಿಬಿಟ್ಟು ಈ ಕೆಲಸವನ್ನು ನಡೆಯಿಸಿದ್ದರೆ ಅಷ್ಟು ಆಕ್ಷೇಪವಿರುತ್ತಿರಲಿಲ್ಲ. ಹಾಗೆ ಮಾಡದೆಹೋದರು. ಪ್ರಪಂಚದ ೫ನೆ ೧ ಭಾಗಕ್ಕೂ ೪೦ ಕೋಟಿ ಪ್ರಜೆಗಳಿಗೂ ಅಧಿಪತಿಯಾಗಲಿಕ್ಕಿರುವ ಮಹನೀಯಾತಿಥಿಯನ್ನು ಮನೆಯ ಬಾಗಿಲಿಗೆ ಬಂದಾಗ ಧಿಕ್ಕರಿಸಿದರು. ಇದು ಭಾರತಮಾತೆಯು ಕೂಡ ಸಹಿಸಲಾರದ ಅಪಚಾರವೆಂಬುದಕ್ಕೆ ಸಂಶಯವಿಲ್ಲ. ಭರತಖಂಡವು ಲಾರ್ಡ್ ರೀಡಿಂಗರದೆ? ಅಥವಾ ಮತ್ತಾರಿಗಾದರೂ ಸೇರಿದುದೆ? ಇದು ನಮ್ಮದಲ್ಲವೆ? ನಮ್ಮ ಮನೆಯಲ್ಲವೆ? "ನಾವಿಷ್ಣುಃ ಪೃಥಿವೀಪತಿಃ (ದೊರೆಯು ವಿಷ್ಣುವಿನವತಾರವೇ ಹೊರತು ಬೇರೆಯಲ್ಲ) "ಅತಿಥಿದೇವೋಭವ (ಅತಿಥಿಗಳನ್ನೇ ದೈವವನ್ನಾಗಿ ಭಾವಿಸು) "ಅಭ್ಯಾಗತಸ್ಸ್ವಯಂವಿಷ್ಣುಃ" (ಅಭ್ಯಾಗತನಾಗಿ ಬಂದವನನ್ನು ಪ್ರತ್ಯಕ್ಷದೈವವೆಂದು ತಿಳಿ). "ಅತಿಥೌತಿಷ್ಠತಿದ್ವಾರಿ ಯೋಭುಙ್ಕ್ತೇನ್ನಂವಿಹಾಯತಂ|ಗೋಮಾಂಸಸಮಮನ್ನಂತು ಸಚಂಡಾಲಸನೋನರಃ" (ಅತಿಥಿಯು ಮನೆಯಬಾಗಿಲಲ್ಲಿ ಬಂದು ನಿಂತಿರುವಾಗ ಅವನನ್ನು ಸತ್ಕರಿಸದೆ ಬಿಟ್ಟು ಯಾವನು ಭೋಜನವನ್ನು ಮಾಡುತ್ತಾನೋ ಅವನು ಚಂಡಾಲನಿಗೆ ಸಮನಾದವನು. ಅವನುಣ್ಣುವ ಅನ್ನವು ಗೋಮಾಂಸ ಸಮಾನವಾದುದು) ಎಂದು ಮೊದಲಾಗಿ ನಮ್ಮ ವೇದ ಶಾಸ್ತ್ರಾದಿಗಳ ವಿಧಿಯಿರುವುದು. ಇಂಥ ನಾವು, ಎಷ್ಟೋ ಬಗೆಯಿಂದ ಪ್ರಾರ್ಥಿಸಿದರೂ ಬಾರದ ಮಹಾಸುಕೃತ ಶರೀರಿಯಾದ ಸಮ್ಮಾನ್ಯಾತಿಥಿಯು ೪-೫ ಸಾವಿರ ಮೈಲಿಗಳ ದೂರದಿಂದ ತಾನಾಗಿ ನಮ್ಮ ದೇಶಕ್ಕೆ ಬಂದಿರುವಾಗ, ನಮ್ಮ ಯಥೋಚಿತ ಭಕ್ತಿಸತ್ಕಾರಗಳನ್ನು ಸಮರ್ಪಿಸದೆ ಹೋಗುವುದೆಂದರೆ ಅದಕ್ಕಿಂತಲೂ ನಮಗೆ ಧರ್ಮಭ್ರಷ್ಟತೆಯು ಇನ್ನಾವುದಿರುವುದು ?

ಸದ್ಯಃ ನಮ್ಮ ಮೈಸೂರು ಸಂಸ್ಥಾನವು ಅಂಥ ಕರ್ತವ್ಯಭ್ರಷ್ಟತೆಗೆ ಗುರಿಯಾಗದೆ ಹೋದುದು ಪರಮಸಂತೋಷವು.

ಭರತಖಂಡಕ್ಕೆ ದಯೆಮಾಡಿಸಿದ್ದ ಯುವಸಾರ್ವಭೌಮರು ನಮ್ಮ ಶ್ರೀಮನ್ಮಹಾರಾಜರ ಆಹ್ವಾನವನ್ನಂಗೀಕರಿಸಿ ಈ ದೇಶಕ್ಕೂ ತಮ್ಮ ಅಪೂರ್ವ ಸಂದರ್ಶನವನ್ನಿತ್ತುದಕ್ಕಾಗಿ ಪ್ರಜೆಗಳೆಲ್ಲರೂ ಅತ್ಯಂತವಾಗಿ ಸಂತೋಷಿಸಿ ಕೃತಜ್ಞರಾಗಿರುತ್ತಾರೆ. ತಮ್ಮ ಅಮೌಲ್ಯವೇಳೆಯಲ್ಲಿ ೫ ದಿನ ಕಾಲವನ್ನು ನಮ್ಮ ದೇಶದಲ್ಲಿ ಅವರು ಕಳೆಯಲು ಅನುಗ್ರಹಿಸಿರುತ್ತಾರೆ. ಈ ಕಾಲದಲ್ಲಿ ಅವರು ಇಲ್ಲಿ ಅವಲೋಕಿಸುವ ದೃಶ್ಯಗಳೊಳಗೆಲ್ಲಾ ಕಾರಾಪುರದ ಕ್ಯಾಂಪಿನಲ್ಲಿ ನಡೆಯುವ ಆನೆಗಳ ಕೆಡ್ಡಾ ಏರ್ಪಾಡು ಅವರಿಗೆ ಅಭೂತಪೂರ್ವವಾದ ನೋಟವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಶ್ರೀಮನ್ಮಹಾರಾಜರ ಮತ್ತು ಅವರ ಸಕಲಪ್ರಜೆಗಳ ನಿಷ್ಕಳಂಕ ಪ್ರೀತಿಭಕ್ತಿವಿಶ್ವಾಸಾತಿಶಯಗಳೂ ಮೈಸೂರುಪಟ್ಟಣದ ಮತ್ತು ಈ ದೇಶದ ಪ್ರಕೃತಿಸೌಂದರ್ಯಗಳೂ ಅವರಿಗೆ ವಿಶೇಷವಾಗಿ ಚಿತ್ತೋಲ್ಲಾಸವನ್ನುಂಟುಮಾಡಿ ಅವರಿಗೆ ಸ್ಮರಣೀಯವಾಗಿರುವುವೆಂಬುದಕ್ಕೆ ಸಂಶಯವಿಲ್ಲ.

ಭರತಖಂಡದ ದಕ್ಷಿಣದಿಕ್ಕಿನಲ್ಲಿ ಯುವಸಾರ್ವಭೌಮರು ದಯಮಾಡಿಸತಕ್ಕ ಪಟ್ಟಗಳೊಳಗೆಲ್ಲಾ ಇದೇ ಕೊನೆಯದಾಗಿರುತ್ತದೆ. ಈ ಟೆಂಕಣಕೊನೆಯಲ್ಲಿರುವ ನಮ್ಮ ಸಂಸ್ಥಾನಕ್ಕೆ ಯುವಸಾರ್ವಭೌಮರು ಬಹುದೂರ ಪ್ರಯಾಣಮಾಡಿ ಬಂದು ಈ ದೇಶದಮೇಲೆ ತಮಗಿರುವ ವಾತ್ಸಲ್ಯವನ್ನೂ ದಯೆಯನ್ನೂ ವ್ಯಕ್ತಪಡಿಸಿದುದಕ್ಕಾಗಿ ನಾವು ಸಂಪೂರ್ಣ ಕೃತಜ್ಞರಾಗಿರುತ್ತೇವೆ. ಈ ದೇಶದಲ್ಲಿ ಅವರಿರುವಷ್ಟುಕಾಲವೂ ಮತ್ತು ಅವರು ಭರತಖಂಡದಲ್ಲಿ ಸಂಚರಿಸುತ್ತಿರುವಷ್ಟುಕಾಲವೂ ಅವರಿಗೆ ಪೂರ್ಣಾರೋಗ್ಯ ಸುಖಶಾಂತಿಗಳುಂಟಾಗಿರಲೆಂದು ಭಗವಂತನನ್ನು ಪ್ರಾರ್ಥಿಸುವೆವು.

ಯುವಸಾರ್ವಭೌಮರು ರಾಜಧಾನಿಗೆ ದಯಮಾಡಿಸಿದ ದಿವಸ ಇಲ್ಲಿಯ ಎಲ್ಲ ಪಾಠಶಾಲಾ ಕಲಾಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೂ ಹಣ್ಣುಗಳೂ ಮಿಠಾಯಿದಿವಸುಗಳೂ ಹಂಚಿಸಲ್ಪಟ್ಟುವು.

ಅರಸೌತಣವಾದಾಗ ರೆಸಿಡೆನ್ಸಿಯಲ್ಲಿ ಶ್ರೀಮನ್ಮಹಾರಾಜರು ಮಾಡಿದ ಭಾಷಣವೂ ಅದಕ್ಕೆ ಯುವಸಾರ್ವಭೌಮರು ಕೊಟ್ಟ ಉತ್ತರವೂ ದೀರ್ಘವಾಗಿರುವುದರಿಂದ ಮುಂದಣವಾರದ ಸಂಚಿಕೆಯಲ್ಲಿ ಅವನ್ನು ಭಾಷಾಂತರಿಸಿ ಮುದ್ರಿಸುತ್ತೇವೆ.

ಯುವಸಾರ್ವಭೌಮರು ಶ್ರೀರಂಗಪಟ್ಟಣಕ್ಕೆ ದಯೆಮಾಡಿದ್ದಾಗ್ಗೆ ಅಲ್ಲಿಯ ಪುರಜನಪಕ್ಷದಿಂದ ಮುನ್ಸಿಪಾಲಿಟಿಯವರು ಪುರವನ್ನೆಲ್ಲಾ ಶೃಂಗರಿಸಿದ್ದು ಅಲ್ಲಿಯ ಬಾಲಿಕಾಪಾಠಶಾಲೆಯ ಮುಂದೆ ಚಪ್ಪರವನ್ನು ಹಾಕಿಸಿದ್ದು ಅಲ್ಲಿಗೆ ಯುವರಾಜರ ಮೋಟಾರು ಬಂದಕೂಡಲೇ ಅವರನ್ನೂ ಶ್ರೀಮನ್ಮಹಾರಾಜರನ್ನೂ ಸ್ವಾಗತಿಸಿ ಪುಷ್ಪಹಾರ ಗುಚ್ಛಾದಿಗಳನ್ನು ಸಮರ್ಪಿಸಿ ಗೌರವಿಸಿದರು.

ರಾಜಧಾನಿಯಲ್ಲಿ ಯುವರಾಜರು ಇರುವಾಗ ಅವರ ಮೋಟಾರು ಬೀದಿಯಲ್ಲಿ ಹೋಗುವಾಗ ಪ್ರಜೆಗಳು ಹತ್ತಿರದಲ್ಲೇ ಮಗ್ಗುಲಲ್ಲೇ ಓಡೋಡುತ್ತ ಸಂದರ್ಶನವನ್ನು ಮಾಡಿ ಕರತಾಡನಮಾಡುವುದೂ, ಅದಕ್ಕೆ ಯುವರಾಜರು ನಗುತ್ತ ಪ್ರತಿವಂದನೆ ಮಾಡುವುದೂ ಬಹಳ ಹೃದಯಂಗಮವಾಗಿದ್ದುವು. ಅರಮನೆ ಸಜ್ಜೆಯಮೇಲೆ ಕುಳಿತು ಮದ್ದಿನ ನೋಟವನ್ನು ಪರಾಮರಿಸುವಾಗ ಪ್ರಜೆಗಳನ್ನು ತಡೆಯದೆ ಆನೆಯ ಬಾಗಿಲವರೆಗೂ ಬಿಟ್ಟುಬಿಟ್ಟಿದ್ದರು. ಜನರ ಕುತೂಹಲವನ್ನು ಯುವರಾಜರು ಕಂಡು ಆಸನದಿಂದ ಸಜ್ಜೆಯ ಮುಂಭಾಗದ ನೂಕಿಗೆ ಬಂದು ನಿಂತುಕೊಂಡು ಸರ್ವರಿಗೂ ಚೆನ್ನಾಗಿ ವಿದ್ಯುದ್ದೀಪದ ಬೆಳಕಿನಲ್ಲಿ ದರ್ಶನವನ್ನಿತ್ತರು. ಅದನ್ನು ನೋಡಿ ಪ್ರಜೆಗಳೆಲ್ಲಾ ಪರಮಾನಂದಪಟ್ಟರು. ಇಂಥ ಸುಕುಮಾರ ಸರಳಹೃದಯದ ಅಮಾಯಕ ರಾಜಕುಮಾರರ ವಿಷಯದಲ್ಲಿ ಹರಿತಾಳವನ್ನಾಚರಿಸಿ ಮನಸ್ಸು ನೋಯಿಸುವವರು ಎಂಥ ಸೈತಾನರೋ ಎಂದು ಎಷ್ಟೋ ಜನರು ಆಗ ಬಾಯ್ಬಿಟ್ಟು ಆಡಿಕೊಳ್ಳುತ್ತಿದ್ದರು.

THE MADRAS WELCOME.

The Madras Welcome to His Royal Highness the Prince of Wales has been one of the greater splendur than it was any where else till now in British Indian cities.

This great success was due mostly to the co-operation which was heartily given to the authorities by the non-Brahmana movement in Madras whose steadfast loyalty to the British Throne was manifest at every step of the Royal procession in Madras. The non-co-operators having been thus foiled in their seditious attempts to boycott the Prince's Visit turned their attention to the commission of criminal acts which were extremely outrageous. The rage of disappointment was turned towards the leaders of the non-Brahmanas.

In this, the conduct of the non-co-operators has shown who they realy are and what their object is. Their distant object is not the prosperity of the Indian people but some power, and this they call Swarajya.

What is the Madras Municipal Corporation? Is it not a form of Swarajya? How have these non-co-operators treated the Head of this Swrajya? Is it not freedom which is their aim? How did they then wrongfully confine the foremost leader of the people of Madras for the mere reason that he opposed the perversity of the non-co-operators? Is this non-violent non-co-operation to lay hands on the person of the oldest and the most patriotic man of Southren India? So far as Southern India is concerned, the non-co-operators are mostly of one class whose cards are put into the hands of some innocent people who unawaringly handle them. The game belongs to one selfish class. This class has the advantages of British Education to a arger extent than any other. The wealth of this class as a whole has tremendously increased under the British form of administration. The means which this class is employing to defeat the British supremacy in India is all British. It is British language, British press, British methods of locomotion and circulation, British ideas of independence, British thought and British strength. The entire machinery of body and mind employed by these non-co-operators is entirely British. How then will they succeed in their ungrateful attempt? They know they will not.

But their one object in Southern India as shown by their conduct on the 13th instant has been to put down non-Brahmana influence. How do they justify their conduct which is shown in their attacks on the rsidences of Sir P. Thagarayachetty and Mr. D. Thanikachalam Chetty? There can be no two stouter champions of the peoples' cause in Southern India than Sir P. T. Chetty and Mr. O. T. Chetty.

How do the Mylapur powers defend the conduct of their notorious followers? We were stunned when we heard of these atrocious acts of the Madras non-co-operators. If this is the virtue of this much talked of non-violence, the sooner it is ended the better.

ಶ್ರೀಮದ್ಯುವಸಾರ್ವಭೌಮರವರ ಆಗಮನ, ಮತ್ತು ಮೈಸೂರಿನ ಸತ್ಕಾರ.

ಘನತೆಯನ್ನುಳ್ಳ ಶ್ರೀಮಾನ್ ಎಡ್ವರ್ಡ್ ಆಲ್ಬರ್ಟ್ ಕ್ರಿಶ್ಚಿಯನ್ ಜಾರ್ಜ್ ಆಂಡ್ರೂ ಪೆಟ್ರಿಕ್ ಡೇವಿಡ್, ಪ್ರಿನ್ಸ್‌ಆಫ್‌ವೇಲ್ಸ್, ಮತ್ತು ಅರ್ಲ್‌ಆಫ್‌ಚೆಸ್ಟರ್, ಡೂಕ್‌ಆಫ್ ಕಾರನ್ವಾಲ್, ಡ್ಯೂಕ್‌ಆಫ್‌ರೋದ್‌ಸೆ, ಅರ್ಲ್‌ಆಫ್‌ಕಾರಿಕ್, ಬಾರನ್‌ಆಫ್‌ರೆನ್‌ಫ್ರು, ಲಾರ್ಡ್‌ಆಫ್‌ದಿಐಲೆಸ್. ಮತ್ತು ಗ್ರೇಟ್‌ಸ್ಟೂವರ್ಡ್‌ಆಫ್ ಸ್ಕಾಟ್ಲ್ಯಾಂಡ್, ಕೆ. ಜಿ., ಜಿ. ಸಿ. ಎಸ್. ಐ., ಜಿ. ಎಂ. ಎಂ. ಜಿ., ಜಿ. ಸಿ. ಐ. ಇ., ಜಿ. ಸಿ. ವಿ. ಓ., ಜಿ. ಎಂ. ಬಿ. ಇ., ಎಂ. ಸಿ., ಯುವರಾದ ಯುವಸಾರ್ವಭೌಮರು ಸಪರಿವಾರರಾಗಿ ಕಳೆದ ಗುರುವಾರ ಬೆಳಗಿನ ೮|| ಗಂಟೆಗೆ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು. ಇವರ ಆಗಮನಸತ್ಕಾರಕ್ಕಾಗಿ ಪಟ್ಟಣವೂ ಅವರ ಬಿಡಾರವಾದ ರೆಸಿಡೆನ್ಸಿ ಭವನವೂ ಬಲುಬಗೆಯಿಂದ ಶೃಂಗರಿಸಲ್ಪಟ್ಟಿರುವುವು.

ಪುರಾಲಂಕಾರ.

ಈಸಲದ ಪುರಾಲಂಕಾರವು ಮಿತವಾಗಿ ಮಾಡಲ್ಪಟ್ಟಿದ್ದರೂ ಬಹು ರಮಣೀಯವಾಗಿದ್ದಿತು. ನಿಲ್ದಾಣದಲ್ಲೂ ಟರ್ನ್‌ಹಾಲಿನ ದಕ್ಷಿಣಭಾಗದ ಮಾರ್ಗ

ದಲ್ಲೂ ಹಾಕಿಸಿದ್ದ ಭುವನೇಶ್ವರೀಮಂಟಪಗಳು ಬೆಂಡು ಮೇಣ ಕಾಗದ ಮೊದಲಾದುವುಗಳಿಂದ ರಚಿಸಿದ ನವಿಲುಗಳ ಸಾಲುಗಳಿಂದಲೂ ತಳಕುಪಟ್ಟಿಯ ಬೇಲುದಾರಿಯ ಸಣ್ಣ ಕೆಲಸದಿಂದಲೂ ಬಲು ಅಂದವಾಗಿ, ಮೈಸೂರಿನಲ್ಲಿರುವ ಮಹಮ್ಮದೀಯರೊಳಗೆ ಈ ಕೆಲಸದ ಚಾತುರ್ಯವು ಎಷ್ಟು ಮಟ್ಟಿಗೆ ಇನ್ನೂ ಉಳಿದಿದೆಯೆಂಬುದನ್ನು ತೋರಿಸುತ್ತಿದ್ದುವು. ಈ ಮಂಟಪಗಳೆರಡರಲ್ಲೂ ವಿದ್ಯುಚ್ಛಕ್ತಿದೀಪಗಳು ಜೋಡಿಸಲ್ಪಟ್ಟಿದ್ದುದರಿಂದ ಅವುಗಳ ಮನೋಹರತೆಯು ಮತ್ತಷ್ಟು ಹೆಚ್ಚಿದ್ದಿತು. ನಿಲ್ದಾಣದ ಬಹಿರ್ದ್ವಾರದಲ್ಲಿ ಒಂದು ಕಮಾನೂ, ಪಬ್ಲಿಕ್ ಲೈಬ್ರೆರಿಯ ಪಕ್ಕದ ಮಾರ್ಗದಲ್ಲಿ ಒಂದು ಹಸುರುವಾಣಿಯ ಕಮಾನೂ ಹಾಕಲ್ಪಟ್ಟಿದ್ದುವು. ಕರ್ಜನ್‌ಪಾರ್ಕಿನ ಫೌಂಟೆನ್ನಿನ ಬಳಿಯಲ್ಲೂ ಸ್ಟಾಚು ಸ್ಕ್ವೈರಿನ ಪೂರ್ವ ಪಶ್ಚಿಮ ಬಾಗಗಳಲ್ಲೂ ಯುದ್ಧ ಸ್ಮಾರಕ ಸ್ತಂಭಗಳಂತೆ ರಚಿಸಿದ್ದ ಏರ್ಪಾಟು ನೂತನವಾಗಿಯೂ ಪ್ರೇಕ್ಷಣೀಯವಾಗಿಯೂ ಇದ್ದಿತು. ಅವುಗಳ ಮೇಲೆ ಕಮಲಕೋಶಾಕೃತಿಯ ಕಲಶಗಳು ಒಳಗೆ ವಿದ್ಯುದ್ದೀಪವನ್ನು ಒಳಗೊಂಡು ರಾತ್ರಿಯ ಹೊತ್ತು ರಮ್ಯವಾಗಿ ತೋರುತ್ತಿದ್ದುವು. ೫-೬ ತೆರದ ದೊಡ್ಡ ದೊಡ್ಡ ಧ್ವಜಸ್ತಂಭಗಳನ್ನು ಒಂದೊಂದಕ್ಕೆ ೨೦-೨೫ ರೂ. ಗಳ ವರೆಗೆ ಮುಟ್ಟಿಸಿ ಮಾಡಿಸಿ ನಿಲ್ದಾಣದಿಂದ ರಸಿಡೆನ್ಸಿಯವರೆಗೂ ಮಾರ್ಗಗಳ ಪಕ್ಕಗಳಲ್ಲಿ ನೆಡಿಸಿ ಪತಾಕೆಗಳನ್ನು ಕಟ್ಟಿದ್ದರು. ಚಿತ್ರವಿಚಿತ್ರವಾದ ತೋರಣಗಳು ಕಟ್ಟಲ್ಪಟ್ಟಿದ್ದುವು. ಮನೋಹರವಾಗಿ ಉಭಯ ಪಾರ್ಶ್ವಗಳಲ್ಲೂ ಎದ್ದಿರುವ ಶಿಕುವೃಕ್ಷಗಳಿಂದ ಅಲಂಕೃತವಾಗಿರುವ ಸಯ್ಯಾಜಿರಾವ್ ಮಾರ್ಗಕ್ಕೆ ಬೇರೆ ಅಲಂಕಾರದ ಅವಶ್ಯಕತೆಯೇ ಇರಲಿಲ್ಲ. ಹಾರ್ಡಿಂಜ್ ಸರ್ಕಲ್ಲೂ ಆಲ್ಬರ್ಟ್‌ವಿಕ್ಟರ್ ಮಾರ್ಗವೂ ಸಹ ಸಮಾಸಮೃದ್ಧವಾಗಿರುವ ವನಲಕ್ಷ್ಮಿಯ ಅಲಂಕಾರದಿಂದ ಪ್ರತ್ಯೇಕಾಲಂಕಾರವನ್ನಪೇಕ್ಷಿಸಿಯೇ ಇರಲಿಲ್ಲ. ಸ್ಟಾಚು ಸ್ಕ್ವೈರಿನ ಮಧ್ಯದ ಪೂಗಿಡಗಳ ದಿಬ್ಬವು ಬಗೆಬಗೆಯ ಬಣ್ಣದ ವಿದ್ಯುದ್ದೀಪಗಳಿಂದ ತುಂಬಿ ಅತ್ಯಂತ ಪ್ರದರ್ಶನೀಯವಾಗಿದ್ದಿತು. ದೊಡ್ಡ ದೊಡ್ಡ ಕಟ್ಟಡಗಳ ಮೇಲೂ ಉದ್ದನಾದ ಧ್ವಜಸ್ತಂಭಗಳ ಮೇಲೂ ವಿಶಾಲವಾಗಿ ಕಟ್ಟಲ್ಪಟ್ಟಿದ್ದ ರಾಜಪತಾಕೆಗಳು ಗಾಳಿಯಿಂದ ಚಲಿಸಾಡುತ್ತ ಆಂಗ್ಲ ಸಾಮ್ರಾಜ್ಯಕ್ಕೆ ಸಮಾನವಾದ ಚಕ್ರಾಧಿಪತ್ಯವು ಪ್ರಪಂಚದಲ್ಲಿ ಬೇರೊಂದಿಲ್ಲವೆಂಬುದನ್ನು ಅಭಿನಯಿಸುತ್ತಿರುವುವೋ ಎಂಬಂತೆ ತೋರುತ್ತಿದ್ದುವು. ರೆಸಿಡೆನ್ಸಿಯ ಮಹಾದ್ವಾರದಿಂದ ಹಿಡಿದು ಬಂಗಲೆಯ ಒಳಹೊರಗೆಲ್ಲಾ ವಿದ್ಯುದ್ದೀಪಗಳು ಹೊಳೆಯುತ್ತಿದ್ದುವು. ಬೆಲೆಬಾಳುವ ಅತ್ಯಂತ ಶ್ರೇಷ್ಠವಾದ ಫರ್ನಿಚರುಗಳು ಭಂಗಾರದ ಕೆಲಸದ ಆಸನಗಳು ಮಂಚಗಳು ಮೊದಲಾದುವುಗಳಿಂದಲೂ, ಕನ್ನಡಿಯಂತೆ ತೋರುತ್ತಿರುವ ನೆಲಗಟ್ಟುಗಳಿಂದಲೂ, ಅನೌಲ್ಯವಾದ ರತ್ನಗಂಬಳಿಗಳು ಮಕಮಲ್ಲಿನ ಆಸ್ತರಣಗಳು ಮೊದಲಾದುವುಗಳಿಂದಲೂ ದೇದೀಪ್ಯಮಾನವಾಗಿ ಪ್ರತ್ಯಕ್ಷವಾದ ಇಂದ್ರನ ವೈಜಯಂತದಂತೆ ಭವನವು ತೋರುತ್ತಿದ್ದಿತು. ಆ ಬಂಗಲೆಯ ಉತ್ತರ ಭಾಗದಲ್ಲಿ ಸಾಲುಸಾಲಾಗಿ ನೂರಾರು ಗುಡಾರಗಳು ಪರಿವಾರದವರಿಗಾಗಿ ಏರ್ಪಡಿಸಲ್ಪಟ್ಟಿದ್ದುವು. ಗುರುವಾರ ಬೆಳಗಿನ ೬ ಗಂಟೆಯೊಳಗಾಗಿ ಉತ್ಸವದ ಬೀದಿಗಳಲ್ಲಿ ನೀರನ್ನು ಪಂಪುಮಾಡಿ ಧೂಳಿಯನ್ನಡಗಿಸಿ ತಂಪುಮಾಡಿದ್ದುದರಿಂದಲೂ ತಂಗಾಳಿಯು ಬೀಸುತ್ತಿದ್ದುದರಿಂದಲೂ, ಪುರಲಕ್ಷ್ಮಿಯು ಸರ್ವಾಲಂಕಾರ ಪೂರಿತೆಯಾಗಿ ತೋರಣಗಳೆಂಬ ಮಾಲಿಕೆಯನ್ನು ಹಿಡಿದು ಯುವರಾಜರನ್ನು ಸ್ವಾಗತಿಸುವುದಕ್ಕಾಗಿ ಸಿದ್ಧಳಾಗಿ ನಿಂತಿರುವಳೋ ಎಂಬಂತೆ ತೋರುತ್ತಿದ್ದಿತು. ಈ ಪುರಾಲಂಕರಣ ಕಾರ್ಯದಲ್ಲಿ ಮಿ|| ಕ್ರಂಬೀಗಲ್‌ರವರ ಸೂಚನೆಯೇ ಪ್ರಧಾನವಾಗಿ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರೂ ಮ್ಯು|| ಪ್ರೆಸಿಡೆಂಟ್ ಸಿ. ಶ್ರೀಕಂಠೇಶ್ವರಯ್ಯರವರೂ ಬಹಳ ಮುತುವರ್ಜಿವಹಿಸಿ ಎಲ್ಲವನ್ನೂ ಸಾಂಗಗೊಳಿಸಿದರು.

ಜನಸಂದಣಿ.

ಉತ್ಸವದಿನಕ್ಕೆ ೨-೩ ದಿನಗಳಿಂದಲೂ ಪರಸ್ಥಳಗಳ ಜನರು ಎಂದರೆ ಮೈಸೂರು ದೇಶದ ೮ ಡಿಸ್ಟ್ರಿಕ್ಟುಗಳಿಂದಲೇ ಅಲ್ಲದೆ ಹೊರಗಣಿಂದಲೂ ಬಂದು ಸೇರುತ್ತಿದ್ದರು. ಸ್ಪೆಷಲ್ ಟ್ರೇನುಗಳನ್ನು ಬಿಡಲು ಅವಕಾಶವು ಕಲ್ಪಿಸಲ್ಪಟ್ಟಿದ್ದರೆ ಇನ್ನೂ ವಿಶೇಷ ಜನಸ್ತೋಮವು ಸೇರಬಹುದಾಗಿದ್ದಿತು. ಅನೇಕರು ಹೊಗೆಬಂಡಿ ಸಿಕ್ಕದೆ ಪೇಚಾಡಿಕೊಂಡು ಗುರುವಾರ ಸಾಯಂಕಾಲವೂ ರಾಜಧಾನಿಗೆ ಬಂದು ಸೇರಿರುವರು. ಬಹುಶಃ ಹೀಗೆ ಹೊರಗಣಿಂದಲೇ ೫೦ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಜನರು ಬಂದು ನೆರೆದಿದ್ದರು. ಉತ್ಸವದ ದಿನ ಬಂದ ಜನರಿಗೆಲ್ಲಾ ಭೋಜನಾರ್ಥವಾಗಿ ಮ್ಯುನಿಸಿಪಾಲಿಟಿಯವರೂ ಪುರಪ್ರಮುಖ ವರ್ತಕರೂ ಸೇರಿ ೪-೬ ಕಡೆ ಏರ್ಪಾಟನ್ನು ಜಾತಿವಾರಾಗಿ ಮಾಡಿಸಿದ್ದರು. ನೋಟಕ್ಕಾಗಿ ಬಂದ ಜನರಿಗೆ ಪೋಲೀಸರ ನಿರ್ಬಂಧಗಳೊಂದೂ ಇಲ್ಲದಂತೆ ಮಾಡಲ್ಪಟ್ಟುದರಿಂದ ಮಾರ್ಗಗಳ ಇಕ್ಕೆಲಗಳಲ್ಲೂ ಮಾಡಗಳ ಮೇಲೂ ಸ್ಥಳವಿದ್ದೆಡೆಗಳಲ್ಲೆಲ್ಲಾ ತುಂಬಿಕೊಂಡಿದ್ದರು. ಬಹುಶಃ ೧೦ ಸಾವಿರ ಮಂದಿ ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಗ್ಯಾಲರಿಗಳನ್ನೂ ಬೆಂಚುಗಳನ್ನೂ ಇಕ್ಕೆಲದಲ್ಲೂ ಏರ್ಪಡಿಸಿದ್ದುದರಿಂದ ರಾಜಧಾನಿಯ ಎಲ್ಲ ಪಾಠಶಾಲಾ ಕಲಾಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಬಾಲಚಮೂವಿನವರೂ ತುಂಬಿ ಕುಳಿತಿದ್ದರು.

ಸತ್ಕಾರಸನ್ನಾಹ.

ನಿಲ್ದಾಣದಲ್ಲಿ ಪ್ಲಾಟ್‌ಫಾರಮ್ಮಿನ ಮೇಲೆ ಉತ್ತಮವಾದ ಚಿತ್ರಾಸನಗಳು ಹಾಸಲ್ಪಟ್ಟಿದ್ದುವು. ಆದೇದಿನ ಬೆಳಗ್ಗೆ ಬೆಂಗಳೂರಿನಿಂದ ದಯಮಾಡಿಸಿದ್ದ ಬ್ರಿ|| ರೆಸಿಡೆಂಟರು, ದಿವಾನರು, ಕೌನ್ಸಿಲರುಗಳು, ಚೀಫ್‌ಕೋರ್ಟ್ ಜಡ್ಜರು, ಮತ್ತು ಸರ್ದಾರರುಗಳು, ರಾಜಬಂಧುಗಳು, ಶಾಖಾಮುಖ್ಯಾಧಿಕಾರಿಗಳು ಪುರಪ್ರಮುಖರು, ಅರಮನೆಯ ೧೦೦ ಮಂದಿ ಸೈನಿಕರು ಇವರೆಲ್ಲಾ ಸೇರಿದ್ದರು. ನಿಲ್ದಾಣದ ಹೊರಗೆ ಅರಮನೆಯ ಚತುರಂಗ ಸೇನೆಯೂ ಸಕಲ ಬಿರುದಾವಳಿಗಳೂ ಬ್ಯಾಂಡಿನವರ ಗುಂಪುಗಳೂ ನಿಂತಿದ್ದುವು. ಟವರ್‌ಹಾಲಿನ ದಕ್ಷಿಣದಿಕ್ಕಿನಲ್ಲಿ ಹಾಕಿದ್ದ ೧೬ ಕಂಬದ ಮಂಟಪದಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳೂ ಇನ್ನೂ ಅನೇಕ ಪುರಪ್ರಮುಖರೂ ಕೆಲವೈದಿಕ ಮಂಡಲಿಯವರೂ ಸಿದ್ಧರಾಗಿದ್ದರು. ಆ ಮಂಟಪದ ಪಶ್ಚಿಮದಿಕ್ಕಿನ ಉಭಯ ಪಾರ್ಶ್ವದ ಗ್ಯಾಲರಿಗಳಮೇಲೂ ವಿದ್ಯಾರ್ಥಿನಿಯರು ತುಂಬಿದ್ದರು. ಮಾರ್ಗಗಳ ಉಭಯಪಾರ್ಶ್ವಗಳಲ್ಲೂ ಪೋಲೀಸರ ಸಿಪಾಯಿಗಳ ಓಲೀಕಾರರ ಸಾಲು ನಿಲ್ಲಿಸಲ್ಪಟ್ಟಿದ್ದಿತು. ೮| ಗಂಟೆಯಹೊತ್ತಿಗೆ ನಮ್ಮ ಶ್ರೀಮನ್ಮಹಾರಾಜ ಸಹೋದರರುಗಳು ದಿವ್ಯವಸ್ತ್ರಕಂಠಹಾರಾದಿ ವಿಭೂಷಿತರಾಗಿ ೬ ಕುದುರೆಗಳನ್ನು ಹೂಡಿದ ರಥದಲ್ಲಿ ಕುಳಿತು ಶ್ವೇತಛತ್ರವನ್ನು ಹಿಡಿಯಿಸಿಕೊಂಡು ಹಿಂದೆಮುಂದೆ ಅಂಗರಕ್ಷಕ ಸ್ವಾರರ ಸೈನ್ಯಗಳು ನಡೆದುಬರುತ್ತಿರಲು ನಿಲ್ದಾಣಕ್ಕೆ ದಯಮಾಡಿಸಿದರು. ಪ್ರೇಕ್ಷಕ ಜನಸ್ತೋಮವೆಲ್ಲಾ ಆ ಉತ್ಸವವನ್ನು ನೋಡಿಯೇ ಎಷ್ಟೋ ಆನಂದಪಟ್ಟು ಕರತಾಡನಗಳನ್ನು ಮಾಡಿದರು. ನಿಲ್ದಾಣಕ್ಕೆ ಬಂಡಿಯು ಹೋದಕೂಡಲೇ ಬ್ರಿ|| ರೆಸಿಡೆಂಟರೂ ದಿವಾನರೂ ಹೊರಕ್ಕೆಬಂದು ಇದಿರ್ಗೊಂಡು ಒಳಕ್ಕೆ ಕರೆದುಕೊಂಡು ಹೋದರು. ಸರ್ವರೂ ಮರ್ಯಾದಿಸಿದರು. ಅಲ್ಲಿದ್ದವರೆಲ್ಲಾ ತಂತಮ್ಮ ಸ್ಥಾನದಲ್ಲಿ ಸಾಲಾಗಿನಿಂತಿದ್ದರು. ಆಗ ಒಂದು ಸ್ಪೆಷಲ್‌ಬಂದಿಯು ಬಂದಿತು. ಅದು ಯುವರಾಜರ ಕಡೆಯ ಏಡಿಕಾಂಗರೇ ಮೊದಲಾದ ಪರಿವಾರದವರದಾಗಿದ್ದಿತು. ಬಳಿಕ ಸ್ವಲ್ಪಕಾಲದೊಳಗೆ ಯುವರಾಜರ ಬಂಡಿಯು ೮|| ಗಂಟೆಗೆ ಸರಿಯಾಗಿ ನಿಲ್ದಾಣಕ್ಕೆ ಬಂದು ನಿಂತಿತು. ಕೂಡಲೇ ಕೋಟೆಕೊತ್ತಲದಿಂದ ೩೧ ಗುಂಡುಗಳು ಹಾರಿಸಲ್ಪಟ್ಟುವು. ಆ ಕೂಡಲೇ ಯುವರಾಜರ ಬಂಡಿಯಿಂದ ಅವರ ಸೆಕ್ರೆಟರಿಯವರು ಮೊದಲೇ ಇಳಿದು ಯುವರಾಜರಿಗೆ ಕರಾವಲಂಬನವನ್ನಿತ್ತು ಕೆಳಕ್ಕೆ ಇಳಿಯಿಸಿದರು. ಕೂಡಲೇ ವಾದ್ಯಘೋಷಗಳಾದುವು. ಯುವರಾಜರು ಟೊಪ್ಪಿಗೆಯನ್ನು ತೆಗೆದುಕೊಂಡು ನಿಂತರು. ಲೆ|| ಕರ್ನಲ್ ಚಾಮರಾಜ ಅರಸರ ಆಜ್ಞೆಯಮೇರೆಗೆ ಸೈನಿಕರು ಮರ್ಯಾದಿಸಿದರು. ಅಷ್ಟರಲ್ಲಿ ಶ್ರೀಮನ್ಮಹಾರಾಜರು ೨-೩ ಹಜ್ಜೆ ಮುಂದಕ್ಕೆ ಸರಿಯಲು, ಯುವರಾಜರೂ ಮುಂದಕ್ಕೆ ದಯಮಾಡಿಸಿದರು. ಅವರವರಿಗೆ ಪರಸ್ಪರ ಕರಾಸ್ಪಂದನವು ನಡೆದಿತು. ಬಳಿಕ ಉಭಯರೂ ಎಡಕ್ಕೆ ತಿರುಗಿದರು. ಅಲ್ಲಿ ನಮ್ಮ ಮಹಾರಾಜರು ತಮ್ಮ ಸಹೋದರರಾದ ಯುವರಾಜರ ಪರಿಚಯವನ್ನು ಮಾಡಿಸಿದರು. ರೆಸಿಡೆಂಟರು ದಿವಾನರು, ಕರ್ನಲ್ ದೇಶರಾಜ ಅರಸಿನವರು, ಲಕ್ಷ್ಮೀಕಾಂತರಾಜ ಅರಸಿನವರು, ಪ್ರಿನ್ಸ್ ಗೋಪಾಲರಾಜೆ ಅರಸಿನವರು, ಚೀಫ್‌ಕೋರ್ಟ್ ನ್ಯಾಯಮೂರ್ತಿಗಳು, ಕೌನ್ಸಿಲರುಗಳು ಮೊದಲಾದವರ ಪರಿಚಯವನ್ನೆಲ್ಲಾ ಯುವಸಾರ್ವಭೌಮರಿಗೆ ಮಾಡಿಸಿದರು. ಸರ್ವರೂ ಯುವಸಾರ್ವಭೌಮರಿಗೆ ರಾಜಭಕ್ತಿಯಿಂದ ವಂದಿಸಿದರು. ಬಳಿಕ ಶ್ರೀಮದ್ಯುವರಾಜರನ್ನು ನಮ್ಮ ಮಹಾರಾಜರು ಒಡನೆ ಕರೆದುಕೊಂಡು ನಿಲ್ದಾಣದ ಹೊರಕ್ಕೆ ದಯಮಾಡಿಸಿದರು. ಅವರಹಿಂದೆ ಬ್ರಿ|| ರೆಸಿಡೆಂಟರು ಯುವರಾಜರು ದಿವಾನರು ಮೊದಲಾದವರೆಲ್ಲಾ ಹೊರಟರು. ಹೊರಗೆ ನಿಂತಿದ್ದ ಆನೆ ಕುದುರೆ ಒಂಟೆಗಳು ಬಾಲ್ಯದವರು ಸಿಪಾಯಿಗಳೆಲ್ಲರೂ ಮರ್ಯಾದಿಸಿದರು. ವಾದ್ಯಗಳು ಭೋರ್ಗರೆದುವು. ಜಿಲೋಗಳು ಫಳಫಳನೆ ಶಬ್ದಮಾಡಿದುವು, ಕೊಂಬುಗಳು ಊದಲ್ಪಟ್ಟುವು. ಆಗ ಯುವರಾಜರು ಪ್ರತಿವಂದನೆಯನ್ನು ಮಾಡಿ ಸಿದ್ಧವಾಗಿದ್ದ ರಥವನ್ನೇರಿದರು. ಬಲಗಡೆಯಲ್ಲಿ ಅವರೂ ಅವರ ಮಗ್ಗುಲಲ್ಲಿ ಎಡಗಡೆ ನಮ್ಮ ಮಹಾರಾಜರೂ ಕುಳಿತರು. ಇದಿರ್ಗಡೆ ಲಾರ್ಡ್ ಕ್ರೊಮರ್‌ರವರೂ ನಮ್ಮ ಯುವರಾಜರೂ ಕುಳಿತಿದ್ದರು. ಮೇಲ್ಗಡೆ ಛತ್ರಸೂರ್ಯಪಾನಗಳು ಹಿಡಿಯಲ್ಪಟ್ಟುವು. ಯುವಸಾರ್ವಭೌಮರು ಸಾಧಾರಣವಾದ ಬಿಳಿಯ ಉಡುಪನ್ನೂ ಕಲಶಹಾಕಿದ ಟೊಪ್ಪಿಗೆಯನ್ನೂ ಧರಿಸಿದ್ದರು. ರಥದ ಎಲ್ಲಕ್ಕೂಮುಂದೆ ಅಶ್ವಾರೂಢರಾಗಿ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರೂ ಅವರಹಿಂದೆ ಮೈಸೂರು ಕುದುರೆಸ್ವಾರರ ಸೈನ್ಯವೂ, ಅವುಗಳಹಿಂದೆ ಅಂಗರಕ್ಷಕ ಅಶ್ವಸೈನ್ಯವೂ ಎಡಬಲಪಕ್ಕಗಳಲ್ಲಿ ಕುದುರೆಯನ್ನೇರಿ ಚೀಫ್‌ಕಮ್ಯಾಂಡೆಂಟ್ ಲೆ|| ಕರ್ನಲ್ ಬಿ. ಚಾಮರಾಜ ಅರಸಿನವರೂ ಪೋಲೀಸ್ ಇನ್|| ಜನರಲ್‌ರವರೂ ಬಾಡಿಗಾರ್ಡ್ ಕಮ್ಯಾಂಡೆಂಟ್ ಮ|| ಗೋಪಾಲರಾಯರೂ ಹೊರಟರು. ಖಾಸಾಜಿಲ್ಲೋ ಸೈನಿಕರೂ ಚಾಮರಗಳನ್ನು ಹಿಡಿದವರೂ ಎರಡುಪಕ್ಕಗಳಲ್ಲೂ ಸಾಲಾಗಿ ನಡೆಯುತ್ತಿದ್ದರು. ಹಿಂಗಡೆಯೂ ಅಂಗರಕ್ಷಕ ತುರಗಸೈನ್ಯವೂ, ಅಶ್ವಸೈನ್ಯವೂ ಹೊರಟುವು. ಆ ರಥದ ಹಿಂಗಡೆಯಲ್ಲಿದ್ದ ೨ ಕುದುರೆಗಳ ೫-೬ ರಥಗಳ ಮೇಲೆ ಬ್ರಿ|| ರೆಸಿಡೆಂಟರು ಮಿಲಿಟರಿ ಸೆಕ್ರೆಟರಿ ಏಡಿಕಾಂಗರು ಮೊದಲಾದ ಪರಿವಾರದವರೂ ದಿವಾನರೂ ಇದ್ದರು. ಈ ಉತ್ಸವವು ನಿಲ್ದಾಣದ ಮಹಾದ್ವಾರದಿಂದ ಹೊರಟು ಸವಾರ್‌ಲೈನಿನ ಮುಂಗಡೆಯ ಮಾರ್ಗದಲ್ಲಿ ಹೊರಟು ಎರಡು ಪಕ್ಕಗಳಲ್ಲೂ ನಿಂತಿದ್ದ ವಿದ್ಯಾರ್ಥಿಗಳು ಮಾಡಿದ ಜಯಧ್ವನಿಪೂರ್ವಕ ಸ್ವಾಗತವನ್ನು ಯುವರಾಜರು ಮಂದಹಾಸದಿಂದ ಅಂಗೀಕರಿಸಿ ಪ್ರತಿವಂದನೆ ಮಾಡುತ್ತಲಿದ್ದರು. ದಾರಿಯುದ್ದಕ್ಕೂ ಹರ್ಷಧ್ವನಿ ಮಾಡುತ್ತಿದ್ದ ಪ್ರಜಾಸ್ತೋಮಕ್ಕೆ ಪ್ರತಿವಂದನೆ ಮಾಡುವುದರಲ್ಲಿ ಯುವಸಾರ್ವಭೌಮರ ಮೇಲಕ್ಕೆತ್ತಿದ ಹಸ್ತವು ಇಳಿಯಲೇ ಇಲ್ಲ. ನಿಷ್ಕಳಂಕಸಾರಳ್ಯ ಸಾತ್ವಿಕತ್ವವೇ ತುಂಬಿತುಳುಕುತ್ತಿದ್ದ ಯುವಸಾರ್ವಭೌಮರ ಪ್ರಸನ್ನವದನ ಮಂಡಲವನ್ನು ದರ್ಶನ ಮಾಡಿ ಪ್ರಜೆಗಳು ಪಟ್ಟ ಆನಂದಕ್ಕೆ ಎಣೆಯಿರಲಿಲ್ಲ. ಬೀದಿಗಳೆಲ್ಲಾ ಜಯಧ್ವನಿಮಯವಾದುವು. ಉತ್ಸವವು ಸಯ್ಯಾಜಿರಾವ್ ಮಾರ್ಗವನ್ನು ಹಾಯ್ದು ಕರ್ಜನ್‌ಪಾರ್ಕಿನೊಳಕ್ಕೆ ಪ್ರವೇಶಿಸಿ ಮ್ಯುನಿಸಿಪಲ್ ಚಪ್ಪರದೊಳಕ್ಕೆ ಪ್ರವೇಶಿಸುತ್ತಲೇ ರಥವು ನಿಲ್ಲಿಸಲ್ಪಟ್ಟಿತು. ಪುರಪಾಲಕ ಸಂಘದವರವಾದ ಸ್ವಾಗತಪತ್ರವನ್ನು ಹಿಡಿದು ಪ್ರಸಿಡೆಂಟ್ ದಿ|| ಬ|| ಸಿ. ಶ್ರೀಕಂಠೇಶ್ವರಯ್ಯರವರು ಮುಂದಕ್ಕೆ ಬಂದರು. ಅವರ ಪರಿಚಯವನ್ನು ಶ್ರೀಮನ್ಮಹಾರಾಜರು ಮಾಡಿಸಿದರು. ಸ್ವಾಗತಪತ್ರವನ್ನು ಅವರು ಓದಿ ಸುಂದರವಾದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಸ್ವಾಗತಪತ್ರದ ಅಭಿಪ್ರಾಯವೇನೆಂದರೆ—

ಮಹನೀಯರಾದ ಯುವಸಾರ್ವಭೌಮರೆ! ಶ್ರೀಮನ್ಮಹಾರಾಜರ ಪ್ರಜೆಗಳಾದ ನಾವು ಈ ಸುಸಮಯದಲ್ಲಿ ಮನಃಪೂರ್ವಕವಾಗಿಯೂ ರಾಜಭಕ್ತಿಪೂರಿತರಾಗಿಯೂ ತಮ್ಮ ಸುಖಾಗಮನವನ್ನು ಬಯಸುತ್ತೇವೆ. ೧೯೦೬ನೆ ವರ್ಷದ ಜನವರಿಯಲ್ಲಿ ತಮ್ಮ ವಿಖ್ಯಾತಜನಕರಾದ ಜಾರ್ಜ್ ಪ್ರಭುಗಳು ಇಲ್ಲಿಗೆ ಆಗಮಿಸಿದ್ದಾಗ್ಗೆ ಆದರಿಂದ ನಮಗೆಲ್ಲಾ ಸಾರ್ವತ್ರಿಕವಾಗಿ ಉಂಟಾಗಿದ್ದ ಪ್ರೀತಿಭಕ್ತಿಸಂತೋಷಗಳನ್ನು ವ್ಯಕ್ತಪಡಿಸಿದ್ದೆವು. ಅದೇ ತೆರದಲ್ಲಿ ನಮ್ಮ ಭಕ್ತಿವಿಶ್ವಾಸಗಳನ್ನು ಸಮರ್ಪಿಸಲಿಕ್ಕೆ ಮತ್ತೊಂದು ಸಂಧಿಯು ಈಗ ದೊರೆಯಿತು. ತಮ್ಮ ಆಗಮನದಿಂದ ಆಂಗ್ಲಸಾಮ್ರಾಜ್ಯಕ್ಕೂ ನಮಗೂ ಪರಸ್ಪರ ಸಂಬಂಧ ಸಾಮಿಪ್ಯವು ಹೆಚ್ಚಾಗುವುದಲ್ಲದೆ ಆಂಗ್ಲ ರಾಜಕುಟುಂಬದವರ ವಿಷಯದಲ್ಲಿ ನಮಗಿರುವ ಭಕ್ತಿಪ್ರೀತಿ ಗೌರವಗಳನ್ನು ಹೆಚ್ಚಿಸಲು ಅವಕಾಶವಾಗಿರುತ್ತದೆ. ನಮ್ಮ ಸಂಸ್ಥಾನದಲ್ಲೂ ವಿಸ್ತಾರವಾದ ಭರತಖಂಡದ ಇತರ ಪ್ರದೇಶಗಳಲ್ಲೂ ತಮ್ಮ ಸಂಚಾರವು ಸಂತೋಷಕರವಾಗಿರಲೆಂದು ನಾವು ಮನಃಪ್ರೀತಿಪೂರ್ವಕವಾಗಿ ಅಪೇಕ್ಷಿಸುವುದಲ್ಲದೆ ಇದನ್ನೆಲ್ಲಾ ಮುಗಿಸಿಕೊಂಡು ಸುರಕ್ಷಿತರಾಗಿ ಸ್ವಸ್ಥಾನವನ್ನು ತಾವು ಸೇರುವವರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಇದಕ್ಕೆ ಯುವಸಾರ್ವಭೌಮರು ಹೀಗೆ ಉತ್ತರವನ್ನು ದಯಪಾಲಿಸಿದರು:—"ನೀವು ರಾಜಭಕ್ತಿಪೂರಿತರಾಗಿ ವಿಜ್ಞಾಪನ ಪತ್ರವನ್ನು ಸಮರ್ಪಿಸಿದುದಕ್ಕಾಗಿ ನಿಮ್ಮಗಳನ್ನು ವಂದಿಸುತ್ತೇನೆ. ನಮ್ಮ ಪ್ರಿಯ ಜನಕರ ಮೇಲ್ಪಂಕ್ತಿಯನ್ನನುಸರಿಸಿ ಮೈಸೂರು ಸಂಸ್ಥಾನವನ್ನು ಸಂದರ್ಶಿಸಲು ಅವಕಾಶವಾದುದಕ್ಕಾಗಿ ನಾನು ಸಂತೋಷಪಟ್ಟಿದ್ದೇನೆ. ರಾಜಧಾನಿಯ ನಿವಾಸಿಗಳ ಸೌಖ್ಯಕ್ಕಾಗಿ ನೀವುಗಳು (ಮ್ಯುನಿಸಿಪಾಲಿಟಿಯವರು) ಮಾಡುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಕೇಳಲು ನನಗೆ ಸಂತೋಷವಾಗುತ್ತದೆ. ಶ್ರೀಮನ್ಮಹಾರಾಜರ ರಾಜಧಾನಿಯಾಗಿರುವ ಈ ನಗರಿಯನ್ನು ಅವರ ದರ್ಜೆಗೂ ಈ ಸಂಸ್ಥಾನದ ಘನತೆಗೂ ತಕ್ಕಂತೆ ರಚಿಸಬೇಕೆಂದಿರುವ ನಿಮ್ಮಧ್ಯೇಯವು ಪ್ರಶಂಸನೀಯವಾಗಿದೆ. ಮೈಸೂರುದೇಶದಲ್ಲಿ ನಾನು ಅನುಭವಿಸಿದ ಸಂಗತಿಗಳನ್ನೆಲ್ಲಾ ನನ್ನ ಸ್ಮರಣೆಯಲ್ಲಿಟ್ಟುಕೊಂಡಿರುತ್ತೇನೆ. ನೀವು ಸ್ವಾಗತಪತ್ರವನ್ನರ್ಪಿಸಿದುದಕ್ಕಾಗಿ ಮತ್ತೊಮ್ಮೆ ನಿಮಗೆ ವಂದಿಸುತ್ತೇನೆ." ಬಳಿಕ ಪ್ರತಿಯೊಬ್ಬ ಮ್ಯು|| ಕೌನ್ಸಿಲರನ್ನೂ ಪ್ರೆಸಿಡೆಂಟರು ಯುವಸಾರ್ವಭೌಮರಿಗೆ ಹೆಸರು ಹೇಳಿ ಪರಿಚಯ ಮಾಡಿಸಿದರು. ಬಳಿಕ ಪ್ರತಿವಂದನೆಯನ್ನು ಮಾಡಿ ಉತ್ಸವವು ಮುಂದಕ್ಕೆ ಸಾಗಿತು. ಪುರವೀಧೀ ಸೌಂದರ್ಯವನ್ನೂ ಮಧ್ಯಮಾರ್ಗದಲ್ಲಿದ್ದ ಉಪವನದ ಸೊಬಗನ್ನೂ ನೋಡಿ ಸಂತೋಷಿಸುತ್ತ ಅಲ್ಲಿಗಲ್ಲಿಗೆ ಶ್ರೀಮನ್ಮಹಾರಾಜರೊಡನೆಯೂ ಯುವರಾಜರೊಡನೆಯೂ ಸಂಭಾಷಿಸುತ್ತ ಬಿಡದಿಯನ್ನು ಯುವಸಾರ್ವಭೌಮರು ಸೇರುವ ಹೊತ್ತಿಗೆ ೯| ಗಂಟೆಯಾಯಿತು. ಅಲ್ಲಿ ಕಾದು ನಿಂತಿದ್ದ ಕಾಲ್ಬಲವು ಸೆಲ್ಯೂಟ್ ಮಾಡಿ ಗೌರವಿಸಿತು. ಬ್ಯಾಂಡಿನ ಮರ್ಯಾದೆಯು ನಡೆದಿತು. ಬಂಡಿಯಿಂದಿಳಿದ ಕೂಡಲೇ ೩೧ ಗುಂಡುಗಳು ಅಲ್ಲೇ ಹಾರಿಸಲ್ಪಟ್ಟುವು. ಬಿಡಾರಕ್ಕೆ ಅವರನ್ನು ಇಳಿಯಿಸಿ ಶ್ರೀಮನ್ಮಹಾರಾಜ ಸಹೋದರರು ಅರಮನೆಗೆ ಚಿತ್ತೈಸಿದರು.

ಮಿಜಾಜ್‌ಪರ್ಸಿ.

ಪದ್ಧತಿಯಂತೆ ೯|| ಗಂಟೆಗೆ ಮಿಜಾಜ್‌ಪರ್ಸಿಯೆಂಬ ಮರ್ಯಾದೆಗೆ ಆರಂಭವಾಯಿತು. ಶ್ರೀಮನ್ಮಹಾರಾಜರ ಪ್ರತಿನಿಧಿಗಳಾಗಿ ದಿವಾನರು ಕರ್ನಲ್ ದೇಶರಾಜಅರಸಿನವರು, ಸರ್ದಾರ್ ಗೋಪಾಲರಾಜಅರಸಿನವರು, ಕೌನ್ಸಿಲರ್ ಪಿ. ರಾಘವೇಂದ್ರರಾಯರು ಸಹ ಅರಮನೆಯಿಂದ ರಸಿಡೆನ್ಸಿಗೆ ದಯಮಾಡಿಸಿದರು. ಇವರುಗಳನ್ನು ಯುವಸಾರ್ವಭೌಮರ ಕಡೆಯವರು ಇದಿರ್ಗೊಂಡು ಕರೆದುಕೊಂಡು ಹೋಗಿ ಉಚಿತಾಸನಗಳಲ್ಲಿ ಕುಳ್ಳಿರಿಸಿದರು. ಸ್ವಲ್ಪಕಾಲ ಕುಶಲಪ್ರಶ್ನೆ ಸಂಭಾಷಣ ನಡೆದನಂತರ ತಮ್ಮೊಡನೆ ತಂದಿದ್ದ ಪುಷ್ಪಹಾರಾದಿಗಳನ್ನು ಇವರುಗಳು ಒಪ್ಪಿಸಿ ಅವರಿಂದಲೂ ಸತ್ಕೃತರಾದರು. ಶ್ರೀಮದ್ಯುವಸಾರ್ವಭೌಮರ ಪ್ರತಿನಿಧಿಗಳಾಗಿ ಬ್ರಿ|| ರಸಿಡೆಂಟರು ಅ|| ರಸಿಡೆಂಟರು ಏಡಿಕಾಂಗರು ಮೊದಲಾದ ಕೆಲವರು ಮೋಟಾರುಗಳ ಮೇಲೆ ಅರಮನೆಗೆ ದಯಮಾಡಿಸಿದರು. ಅರಮನೆಯಲ್ಲೂ ಯುವಸಾರ್ವಭೌಮರ ಕಡೆಯ ಪ್ರತಿನಿಧಿಗಳ ಮರ್ಯಾದೆಯು ಹೀಗೆಯೇ ನಡೆದಿತು.

ದರ್ಶನ ಪ್ರತಿದರ್ಶನಗಳು.

ಶ್ರೀಮನ್ಮಹಾರಾಜರು ಸಹೋದರರ ಸಮೇತರಾಗಿ ಮೋಟಾರಿನಲ್ಲಿ ಕುಳಿತು ಬಾಡಿಗಾರ್ಡ್ ಸೈನ್ಯ ಮರ್ಯಾದೆಯೊಡನೆ ರಸಿಡೆನ್ಸಿಗೆ ೧೧ ಗಂಟೆಗೆ ದಯಮಾಡಿಸಿದರು. ಇನ್ನು ಕೆಲ ಮೋಟಾರುಗಳಲ್ಲಿ ರಾಜಕುಮಾರ ಸಿ. ದೇಶರಾಜಅರಸ್, ಸರ್ ಕಾಂತರಾಜಅರಸ್, ಕರ್ನಲ್ ದೇಶರಾಜಅರಸ್, ಸರ್ದಾರ್ ಎಂ. ಗೋಪಾಲರಾಜೆಅರಸ್, ಸರ್ದಾರ್ ಎಂ. ಗೋಪಾಲಕೃಷ್ಣೆ ಅರಸ್, ಸರ್ ಲೆಸ್ಲಿಮಿಲ್ಲರ್, ಮಿ|| ಆರ್. ಎಚ್. ಕೇಂಬಲ್, ಮಿ|| ಎ. ಆರ್. ಬಾನರ್ಜಿ, ಮಿ|| ಪಿ. ರಾಘವೇಂದ್ರರಾವ್, ಮಿ|| ಹಂಜಾಹುಸೇನ್, ಮಿ|| ಮಿರ್ಜಾ, ಎಂ. ಇಸ್ಮಾಯಿಲ್, ಮಿ|| ಕೆ. ಮಥ್ಯಾನ್ ಇವರುಗಳು ಹೊರಟರು. ಬ್ರಿ|| ರೆಸಿಡೆಂಟರೂ ಯುವಸಾರ್ವಭೌಮರ ಏಡಿಕಾಂಗರೇ ಮೊದಲಾದವರು ದ್ವಾರಕ್ಕೆ ಬಂದು ಇದಿರ್ಗೊಂಡು ಒಳಕ್ಕೆ ಕರೆದುಕೊಂಡುಹೋದರು. ಒಳಬಾಗಿಲ ಬಳಿಗೆ ಶ್ರೀಮದ್ಯುವಸಾರ್ವಭೌಮರು ದಯಮಾಡಿಸಿ ಇದಿರ್ಗೊಂಡು ಕರಾಸ್ಪಂದನಮಾಡಿ ತಮ್ಮ ಬಲಗಡೆಯಲ್ಲಿ ಏರ್ಪಡಿಸಿದ್ದ ಬೆಳ್ಳಿಭಂಗಾರದ ಕೆಲಸದ ಕುರ್ಚಿಯ ಮೇಲೆ ಕುಳ್ಳಿರಿಸಿ ಎಡಗಡೆಯಲ್ಲಿದ್ದ ಅದೇ ತೆರದ ಕುರ್ಚಿಯನ್ನು ತಾವು ಅಲಂಕರಿಸಿದರು. ಅವರ ಎಡಗಡೆಗೆ ಸಾಲಾಗಿ ಬ್ರಿ|| ರಸಿಡೆಂಟರೇ ಮೊದಲಾದ ಮುಖಂಡರು ಕುಳಿತರು. ಶ್ರೀಮನ್ಮಹಾರಾಜರ ಬಲಗಡೆ ಸ್ವಲ್ಪ ಹಿಂದೆ ಸಾಲಾಗಿದ್ದ ಕುರ್ಚಿಗಳ ಮೇಲೆ ಯುವರಾಜರು ದಿವಾನರು ಕೌನ್ಸಿಲರೇ ಮೊದಲಾದವರು ಕುಳಿತರು. ಯುವರಾಜರ ಮತ್ತು ಮಹಾರಾಜರ ಹಿಂಗಡೆ ಛತ್ರಸೂರ್ಯಪಾನಿಗಳು ಹಿಡಿಯಲ್ಪಟ್ಟಿದ್ದುವು. ಪರಸ್ಪರ ಸ್ವಲ್ಪ ಸಂಭಾಷಣೆ ಜರುಗಿದನಂತರ ಏಡಿಕಾಂಗರಿಂದ ತರಲ್ಪಟ್ಟ ಪುಷ್ಪಹಾರಗುಚ್ಛವನ್ನು ಯುವಸಾರ್ವಭೌಮರೇ ಎದ್ದು ತೆಗೆದುಕೊಂಡು ಮಹಾರಾಜರಿಗೆ ಅರ್ಪಿಸಿದರು. ಬಳಿಕ ಏಡಿಕಾಂಗರು ನಮ್ಮ ಯುವರಾಜರು ದಿವಾನರು ಮೊದಲಾದವರಿಗೆಲ್ಲಾ ಹಾರ ತಾಂಬೂಲ ಮರ್ಯಾದೆಗಳನ್ನು ಅರ್ಪಿಸಿದರು. ಎಲ್ಲರೂ ವಂದಿಸಿ ಬೀಳ್ಕೊಂಡರು. ಯುವಸಾರ್ವಭೌಮರು ಒಳಬಾಗಿಲವರೆಗೂ ಒಡನೆಬಂದು ಸಾಗಗಳುಹಿಸಿದರು. ಶ್ರೀಮನ್ಮಹಾರಾಜರು ಹೀಗೆ ಬಂದಾಗಲೂತೆರಳಿದಾಗಲೂ ಮರ್ಯಾದಾರ್ಥವಾದ ೨೧-೨೧ ಗುಂಡುಗಳು ಹಾರಿಸಲ್ಪಟ್ಟುವು. ಬಳಿಕ ಯುವಸಾರ್ವಭೌಮರು ಪ್ರತಿದರ್ಶನಕ್ಕಾಗಿ ಸೇನಾಮರ್ಯಾದೆಯೊಡನೆ ಮೋಟಾರುಗಳಲ್ಲಿ ಕುಳಿತು ಬ್ರಿ|| ರೆಸಿಡೆಂಟರೇ ಮೊದಲಾದವರ ಸಂಗಡ ಅರಮನೆಗೆ ೧೨ ಗಂಟೆಗೆ ದಯಮಾಡಿಸಿದರು. ಮಹಾದ್ವಾರದಲ್ಲಿ ದಿವಾನರು ದರ್ಬಾರಭಕ್ಷಿಯವರು ಮೊದಲಾದವರು ಇದಿರ್ಗೊಂಡರು. ಸಭಾಂಗಣದ ಬಾಗಿಲಿಗೆ ಶ್ರೀಮನ್ಮಹಾರಾಜರು ದಯಮಾಡಿಸಿ ಇದಿರ್ಗೊಂಡು ಕರೆತಂದು ಬಲಗಡೆಯ ಭಂಗಾರದ ಕೆಲಸದ ಆಸನದ ಮೇಲೆ ಅವರನ್ನು ಕುಳ್ಳಿರಿಸಿ, ಎಡಗಡೆಯಲ್ಲಿ ಅದೇ ತೆರದ ಆಸನದ ಮೇಲೆ ತಾವು ಕುಳಿತರು. ಯುವಸಾರ್ವಭೌಮರ ಬಲಪಕ್ಕದಲ್ಲಿ ಅವರ ಪರಿವಾರದವರೂ ಶ್ರೀಮನ್ಮಹಾರಾಜರ ಎಡಪಕ್ಕದ ಆಸನಗಳ ಮೇಲೆ ಸ್ವಲ್ಪ ಹಿಂಗಡೆಯಲ್ಲಿ ಯುವರಾಜರೇ ಮೊದಲಾದವರೂ ಕುಳಿತರು. ಕೆಲ ಸೈನಿಕರ ಸಾಲೂ ನಿಂತಿದ್ದಿತು. ಅರಮನೆಯ ಅಲಂಕಾರ ವೈಭವವನ್ನು ನೋಡಿ ಯುವರಾಜರು ಆನಂದಪಟ್ಟರು. ಸ್ವಲ್ಪಕಾಲ ಸಂಭಾಷಣೆ ನಡೆದನಂತರ ದರ್ಬಾರ್‌ಭಕ್ಷಿಯವರಿಂದ ಭಂಗಾರದ ತಟ್ಟೆಯಲ್ಲಿ ತರಲ್ಪಟ್ಟ ಹಾರಗುಚ್ಛಾದಿಗಳನ್ನು ಶ್ರೀಮನ್ಮಹಾರಾಜರು ಯುವಸಾರ್ವಭೌಮರಿಗೆ ಎದ್ದು ಸಮರ್ಪಿಸಿದರು. ಅವರು ಕೊರಳನ್ನು ಬಗ್ಗಿಸಿ ಸ್ವೀಕರಿಸಿದರು. ಆ ಹಾರವು ಭಂಗಾರದಿಂದ ಮಾಡಿದ ೫ ಎಳೆಯ ಸರವೂ ರತ್ನಖಚಿತವಾದ ಪದಕವುಳ್ಳದೂ ಆಗಿದ್ದಿತೆಂದು ಕೇಳಿಕೆ. ಬಳಿಕ ಮಹಾರಾಜರು ಯುವಸಾರ್ವಭೌಮರ ಸೆಕ್ರೆಟರಿ ಲಾರ್ಡ್ ಕ್ರೊಮರ್‌ರವರನ್ನೂ ಬ್ರಿಟಿಷ್ ರಸಿಡೆಂಟರವರನ್ನೂ ಸಹ ತಮ್ಮ ಬಳಿಗೆ ಬರಮಾಡಿಕೊಂಡು ಪುಷ್ಪಹಾರಗಳನ್ನು ಹಾಕಿದರು. ಅನಂತರ ದಿವಾನರು ಸಾರ್ವಭೌಮರ ಪರಿವಾರದವರಿಗೆಲ್ಲಾ ಹಾರಗುಚ್ಛಮರ್ಯಾದೆಗಳನ್ನರ್ಪಿಸಿದರು. ಬಳಿಕ ಎಲ್ಲರೂ ಎದ್ದರು. ಮಹಾರಾಜರು ಯುವಸಾರ್ವಭೌಮರ ಜತೆಯಲ್ಲೇ ಬಾಗಿಲವರೆಗೆ ಬಂದು ಬಂಡಿಯನ್ನೇರಿಸಿ ಸಾಗಗಳುಹಿದರು. ಪ್ರತಿದರ್ಶನಕ್ಕೆ ಹೀಗೆ ಹೊರಟಾಗಲೂ ಬಂದಾಗಲೂ ೩೧-೩೧ ಗುಂಡುಗಳು ಹಾರಿಸಲ್ಪಟ್ಟುವು. ಈ ದಿನ ರಾತ್ರಿ ಅರಮನೆ ಟವರ್‌ಹಾಲು ಕ್ಲಾಕ್‌ಟವರು ಮೊದಲಾದ ಸ್ಥಳಗಳ ಮೇಲೆಲ್ಲಾ ವಿದ್ಯುದ್ದೀಪಾಲಂಕಾರವು ರಮಣೀಯವಾಗಿ ಮಾಡಲ್ಪಟ್ಟಿದ್ದಿತು. ಚಾಮುಂಡಿಬೆಟ್ಟದ ಮೇಲೆ ೪೦ ಅಡಿಯೆತ್ತರದ ಕಿರೀಟ (ಕ್ರೌನ್) ದಾಕೃತಿಯಲ್ಲಿ ವಿದ್ಯುದ್ದೀಪರಾಜಿಯನ್ನು ಏರ್ಪಡಿಸಿದ್ದುದು ಸುಂದರವಾಗಿ ಕಾಣುತ್ತಿದ್ದಿತು. ಮೂರುಜಾವದಲ್ಲಿ ಶ್ರೀಮನ್ಮಹಾರಾಜರು ಮೋಟಾರಿನ ಮೇಲೆ ಯುವಸಾರ್ವಭೌಮರನ್ನು ಕುಳ್ಳಿರಿಸಿಕೊಂಡು ಪಟ್ಟಣದಲ್ಲಿ ಪ್ರೇಕ್ಷಣೀಯವಾದ ಸ್ಥಳಗಳನ್ನು ತೋರಿಸಿಕೊಂಡು ಬಂದರು. ಜೂಜನಬೋರೆಯ ಬಯಲಿನಲ್ಲಿ ಪೋಲೋ ಆಟದಲ್ಲಿ ಯುವಸಾರ್ವಭೌಮರು ಬೆರೆದಿದ್ದರು. ರಾತ್ರಿ ೮ ಗಂಟೆಗೆ ರೆಸಿಡೆನ್ಸಿಯಲ್ಲಿ ದಿವ್ಯವಾದ ಅರಸೌತಣವು ಜರುಗಿತು. ಅವರ ಪಙ್ತಿಗೆ ನೂರಾರು ಮಂದಿ ಸನ್ಮಾನ್ಯ ಯುರೋಪ್ಯಾತಿಥಿಗಳು ಕಲಿತು ಶ್ಲಾಘನೀಯ ಭೋಜ್ಯಭಕ್ಷ್ಯಾದಿಗಳ ಆರೋಗಣೆಮಾಡಿದರು. ಹೊರಗೆ ಮನೋಹರವಾಗಿ ಬ್ಯಾಂಡು ಬಾಜಿಸಲ್ಪಡುತ್ತಿದ್ದಿತು. ೯|| ಗಂಟೆಗೆ ಭೋಜನವು ಮುಗಿದಿತು. ಅಷ್ಟು ಹೊತ್ತಿಗೆ ಶ್ರೀಮನ್ಮಹಾರಾಜ ಸಹೋದರರೂ ದಿವಾನರೇ ಮೊದಲಾದ ಅಧಿಕಾರಿಗಳೂ ದಯಮಾಡಿಸಿದರು. ಆ ಸಮಾರಂಭ ಕಾಲದಲ್ಲಿ ಶ್ರೀಮನ್ಮಹಾರಾಜರು ಒಂದು ಭಾಷಣವನ್ನು ಗಂಭೀರವಾಗಿ ಮಾಡಿ ಶ್ರೀಮದ್ಯುವಸಾರ್ವಭೌಮರಶ್ರೇಯಃಪ್ರಾರ್ಥನೆಯನ್ನು ಮಾಡಿ ಸರ್ವರೂ ಮಧುಪಾನಮಾಡಬೇಕೆಂದು ಕೋರಿದರು. ಅನಂತರ ಯುವಸಾರ್ವಭೌಮರು ಎದ್ದು ಪ್ರತಿ ಭಾಷಣವನ್ನು ಮಾಡಿ ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯಿಂದ ಸರ್ವರೂ ಮಧುಪಾನಮಾಡಬೇಕೆಂದು ಕೋರಿದರು.

ಶುಕ್ರವಾರದ ದಿವಸ ಯುವಸಾರ್ವಭೌಮರೂ ಅವರ ಪರಿವಾರದವರೂ ನಮ್ಮ ಶ್ರೀಮನ್ಮಹಾರಾಜ ಸಹೋದರರೊಡನೆ ಶ್ರೀರಂಗಪಟ್ಟಣಕ್ಕೂ ಕೃಷ್ಣರಾಜಸಾಗರಕ್ಕೂ ದಯಮಾಡಿಸಿ ನೋಡಿಕೊಂಡು ಬಂದರು. ರಾತ್ರಿ ರೆಸಿಡೆನ್ಸಿಯಲ್ಲಿ ದಿವ್ಯವಾದ ಔತಣವಾದನಂತರ ದೀಪಾಲಂಕಾರ ರಮಣೀಯವಾಗಿದ್ದ ಕೋಟೆಗೆ ೧೦ ಗಂಟೆಯ ಹೊತ್ತಿಗೆ ಸಪರಿವಾರರಾಗಿ ದಯಮಾಡಿದರು, ಶ್ರೀಮನ್ಮಹಾರಾಜರು ರಸಿಡೆನ್ಸಿಯಿಂದ ಒಡನೆ ಕರೆದುತಂದು ಸಜ್ಜಿತ ಸಭಾಮಂಟಪಕ್ಕೆ ಕರೆದುಕೊಂಡು ಅಣಿಯಾಗಿದ್ದ ಸೋಫಾದ ಮೇಲೆ ಕುಳ್ಳಿರಿಸಿ ತಾವೂ ಕುಳಿತರು. ಪರಿವಾರವೆಲ್ಲಾ ಕುಳಿತಿತು. ಅರಮನೆಯ [illegible] ಮತ್ತು ಮುಂದಣ ಅಂಗಳದ ವಿದ್ಯುದ್ದೀಪಗಳೆಲ್ಲಾ ಆರಿಸಲ್ಪಟ್ಟು ಅರಮನೆ ಬಾಲ್ಯದ ಸೈನದವರ ಪಂಜಿನ ಕವಾಯಿತು ಸೊಗಸಾಗಿ ನಡೆದುದನ್ನು ಪರಾಮರಿಸಿ ಆನಂದಪಟ್ಟರು. ಮುಗಿದ ಕೂಡಲೇ ಆಂಗ್ಲ ಕಿರೀಟದಂತೆ ಚಿತ್ರವಿಚಿತ್ರ ವರ್ಣದ ಮದ್ದುಗಳಿಂದ ರಚಿಸಲ್ಪಟ್ಟಿದ್ದ ಮದ್ದುಗಾರಿಕೆಯ ಸಾಮಾನು ಹೊತ್ತಿಸಲ್ಪಟ್ಟಿತು. ವಿದ್ಯುದ್ದೀಪಗಳು ಸರ್ವತ್ರ ಥಟ್ಟನೆ ಹೊತ್ತಿಕೊಂಡುವು. ಮುಂಭಾಗದ ಬಯಲಿನಲ್ಲಿ ಅರ್ಧಗಂಟೆಯ ಕಾಲ ಅರಮನೆಯ ಕಾರೇಗಾರದಿಂದಲೇ ನಿರ್ಮಿತವಾಗಿದ್ದ ಪರಿಪರಿಯ ಬಾಣಗಾರಿಕೆಯು ಮನೋಹರವಾಗಿ ನಡೆದಿತು. ಅದನ್ನೆಲ್ಲಾ ಪರಾಮರಿಸಿಕೊಂಡು, ಅಂಬಾವಿಲಾಸಕ್ಕೆ ಚಿತ್ತೈಸಿ, ಅಲ್ಲಿ ಅರ್ಧಗಂಟೆಯ ಕಾಲವಿದ್ದು ಅರಮನೆಯ ಸಂಗೀತ ವಿದ್ವಾಂಸರುಗಳಿಂದ ನಡೆಯಿಸಲ್ಪಟ್ಟ ಆರ್ಕೆಸ್ಟ್ರಾ ಮೊದಲಾದ ಬ್ಯಾಂಡು ಮೊದಲಾದ ಸಂಗೀತಗಳ ಶ್ರವಣವನ್ನು ಮಾಡಿ ಆನಂದಪಟ್ಟು ಶ್ರೀಮನ್ಮಹಾರಾಜರಿಂದ ಸತ್ಕೃತರಾಗಿ ಅವರೊಡನೆ ೧೧| ಗಂಟೆಗೆ ಅರಮನೆಯನ್ನು ಬಿಟ್ಟು ರೆಸಿಡೆನ್ಸಿಗೆ ದಯಮಾಡಿಸಿದರು.

ಶನಿವಾರ ಬೆಳಗ್ಗೆ ಆರೋಗಣೆಯನ್ನು ಮುಗಿಸಿಕೊಂಡು ಶ್ರೀಮನ್ಮಹಾರಾಜರೊಡನೆ ಶಿಕಾರಿಗೆ ಹೋಗಿದ್ದು ಬಳಿಕ ೧೨| ಗಂಟೆಗೆ ಕಾರಾಪುರದ ಕ್ಯಾಂಪಿಗೆ ಮೋಟಾರುಗಳಮೇಲೆ ಬೇಟೆಗಾಗಿ ದಯಮಾಡಿಸಿದರು. ಹೀಗೆ ರಾಜಧಾನಿಯಲ್ಲಿ ನಡೆದ ಸತ್ಕಾರದ ಏರ್ಪಾಟುಗಳೆಲ್ಲಾ ಸರ್ವಸಮರ್ಪಕವಾಗಿ ಜಯಶೀಲವಾದುವೆಂದು ಹೇಳಲು ಆನಂದವಾಗಿರುತ್ತದೆ. ಮಾಡಿದ ಉದ್ದೇಶವು ನ್ಯೂನಾತಿರೇಕವಿಲ್ಲದೆ ಕೊನೆಗಂಡುದಕ್ಕಾಗಿ ಇದರಲ್ಲಿ ಅಂಗಭೂತರಾಗಿದ್ದವರ ಶ್ರಮವೆಲ್ಲಾ ಸಾರ್ಥಕವಾಯಿತು. ಸೋಮವಾರದ ದಿವಸ ಅಲ್ಲಿಂದ ಯುವಸಾರ್ವಭೌಮರು ರಾಜಧಾನಿಗೆ ದಯಮಾಡಿಸಿ, ಅದೇ ರಾತ್ರಿ ೧೧ ಗಂಟೆಯಮೇಲೆ ಹೊಗೆಬಂಡಿಯನ್ನೇರಿ ನೇರವಾಗಿ ಹೈದರಾಬಾದು ಸಂಸ್ಥಾನಕ್ಕೆ ಬೆಂಗಳೂರಿನಮೇಲೆ ಪ್ರಯಾಣಮಾಡುವವರಾಗಿದ್ದಾರೆ.

ಒಳದೇಶದ ವೃತ್ತಾಂತಗಳು.

ಶ್ರೀ ಯುವಸಾರ್ವಭೌಮರು ನಮ್ಮ ದೇಶಕ್ಕೆ ದಯಮಾಡಿಸಿದ ಗೌರವಾರ್ಥವಾಗಿ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ ತಾ|| ೧೮-೧೯ ಈ ಎರಡು ದಿನಗಳಲ್ಲೂ, ರಾಜಧಾನಿಯಲ್ಲಿ ೧೮-೧೯-೨೦-೨೧ ಹೀಗೆ ನಾಲ್ಕು ದಿನಗಳೂ ವಿಶ್ರಾಂತಿಕೊಡಲ್ಪಟ್ಟಿದ್ದಿತು. ಮತ್ತು ಬೆಂಗಳೂರು ಮೈಸೂರು ಕಾರಾಗೃಹಗಳಲ್ಲಿರುವ ಬಂದಿಗಳಲ್ಲಿ ೧೦೦ ಕ್ಕೆ ೧೦ ಮಂದಿಯನ್ನು ಬಿಡುಗಡೆಮಾಡುವಂತೆಯೂ ಕೆಲವರ ಶಿಕ್ಷಾದಿನಾವಧಿಯನ್ನು ಕಡಿಮೆಮಾಡುವಂತೆಯೂ ಶ್ರೀಮನ್ಮಹಾರಾಜರು ಅಪ್ಪಣೆಮಾಡಿದ ಪ್ರಕಾರವೇ ನೆರವೇರಿಸಲ್ಪಟ್ಟಿತು.

೮ ಡಿಸ್ಟ್ರಿಕ್ಟುಗಳಿಂದಲೂ ರಾಜಧಾನಿಗೆ ಬಹುಶಃ ೧ ಸಾವಿರ ಮಂದಿಗಳಮೇಲೆಯೇ ಪೋಲೀಸರು ಬರಮಾಡಲ್ಪಟ್ಟಿದ್ದರು. ರಾಜಧಾನಿಯಲ್ಲೂ, ಕೆಡ್ಡಾಕ್ಯಾಂಪು, ಶ್ರೀರಂಗಪಟ್ಟಣ, ಕೃಷ್ಣರಾಜಸಾಗರದ ಮಾರ್ಗಗಳಲ್ಲೂ ಪೋಲೀಸುರಕ್ಷಣೆಯ ಏರ್ಪಾಟು ಸಮರ್ಪಕವಾಗಿ ಮಾಡಲ್ಪಟ್ಟಿದ್ದಿತು. ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಮ|| ಎ. ಸುಬ್ರಹ್ಮಣ್ಯಯ್ಯರವರು ಬೆಂಗಳೂರಿನಿಂದಲೂ ಯುವರಾಜರ ಸ್ಪೆಷಲ್‌ಬಂಡಿಯಲ್ಲೇ ಕಾವಲಾಗಿ ರಾಜಧಾನಿಗೆ ದಯಮಾಡಿಸಿದರು. ಬೆಂಗಳೂರಿಂದ ರಾಜಧಾನಿಯವರೆಗೂ ಲೋಹಮಾರ್ಗದಲ್ಲಿ ಆಯಾ ತಾಲ್ಲೂಕು ರೆವಿನ್ಯೂ ಪೋಲೀಸ್ ಅಧಿಕಾರಿಗಳು ತಕ್ಕಕಾವಲನ್ನು ಸಮರ್ಪಕವಾಗಿ ಮಾಡಿದ್ದರು.

ಇಂಥ ವಿಶೇಷಕಾಲಗಳಲ್ಲಿ ಸಂಮಾನ್ಯಾತಿಥಿಗಳನ್ನು ರಾಜಧಾನಿಗೆ ಕರೆತರುವುದಕ್ಕೆ ತಕ್ಕ ಸೆಲೂನ್‌ಬಂಡಿಯನ್ನು ನಮ್ಮ ಸರ್ಕಾರದವರು ಸೌತಿಂಡಿಯನ್ ರೈಲ್ವೆಯವರಿಂದ ಈಸಿಕೊಳ್ಳುತ್ತಿದ್ದರು. ಈ ತೊಂದರೆಯನ್ನು ತಪ್ಪಿಸಿ ಸ್ವಂತದಲ್ಲೇ ಒಂದು ಬಂಡಿಯನ್ನಿಟ್ಟುಕೊಂಡಿದ್ದರೆ ಮಹಾರಾಜರ ಪ್ರಯಾಣಕ್ಕೂ ಅನುಕೂಲಿಸುವುದೆಂದು ಯೋಚಿಸಿ ೧ ಲಕ್ಷ ರೂ. ಗಳ ಮೇಲೆಯೇ ಮುಟ್ಟಿಸಿ, ನಮ್ಮ ಸ್ವದೇಶದ ಕಾರೇಗಾರರಿಂದಲೇ ಮೈಸೂರು ರೈಲ್ವೆ ವರ್ಕ್‌ಷಾಪಿನಲ್ಲಿ ೩|| ತಿಂಗಳಿಂದ ಕಟ್ಟಿಸಿ ಮುಗಿಸಿದರು. ಆ ಬಂಡಿಯಲ್ಲೇ ಯುವಸಾರ್ವಭೌಮರು ರಾಜಧಾನಿಗೆ ದಯಮಾಡಿಸಿದರು. ಇದರ ಒಳಗಣ ಅಲಂಕಾರವೂ ಸೌಕರ್ಯಗಳೂ ಹೊರಗಣ ಅಂದಕ್ಕೂ ಮನೋಹರವಾಗಿರುತ್ತವೆ.

ನೋಟೀಸು.

ಶಿವಮೊಗ್ಗ ಡಿಸ್ಟ್ರಿಕ್ಟ್ ಹೊನ್ನಾಳಿ ತಾಲ್ಲೂಕು ನೇಮತಿವಾಸಿಗಳಾದ ಚನ್ನಹಳ್ಳಿ ಗಾಣಿಗರ ದೊಡ್ಡಲಿಂಗಪ್ಪ ಮತ್ತು ಇವರ ಮಗ ಮಹಲಿಂಗಪ್ಪ ಇವರು ಇದೇ ನೇಮತಿ ಕೇಣಿ ಹಾಲಪ್ಪ ದುಮ್ಮಿಶಂಕರಪ್ಪ ಇವರ ಪಲ್ಲಾಳಿ ಅಂಗಡಿಯಿಂದ ತಾ|| 28-6-21 ರಲ್ಲಿ ಒಪ್ಪಂದಮಾಡಿಕೊಂಡ ಕಂಕನಹಳ್ಳಿಯವರ ಸಣ್ಣ ಮಳಿಗೆಯಲ್ಲಿದ್ದ ಮಾರಾಟ ಬೆಲ್ಲದ ಪೈಕಿ ಕೆಲ ಮಟ್ಟಿಗೆ ದಫಾವಾರಾಗಿ ತೂಕಮಾಡಿಸಿಕೊಂಡು ಆ ಬಾಬತು ಒಟ್ಟು ಲೆಕ್ಕಾಚಾರವಾದ ಮೊಬಲಗಿನಲ್ಲಿ ವಸೂಲ್ ಕೊಟ್ಟದ್ದು ವಜಾ ಜಾತಾಬಾ[illegible] 973-5.5 ಪೈಗಳನ್ನು ಬಾಕಿ ನಿಲ್ಲಿಸಿಕೊಂಡು ಆ ಮೊಬಲಗನ್ನ ತಗಾದೆ ಮಾಡಿದಾಗ್ಯೂ ವಸೂಲ್ ಕೊಡದೆ ಇರುವದರಿಂದಲೂ ಬಾಕಿ ನಿಂತಿರುವ ಒಪ್ಪಂದದ ಬಾಬತು ಸುಮಾರು 320 ಮಣ ಬೆಲ್ಲವನ್ನು ತೂಕಮಾಡಿಸಿಕೊಂಡು ತಮ್ಮ ಸ್ವಾಧೀನ ತೆಗೆದುಕೊಳ್ಳದೇಲೂ ಆ ಬಾಬತು ಮೊಬಲಗನ್ನು ವಸೂಲ್ ಕೊಡದೇಲೂ ಲಾಯರ್ ನೋಟೀಸ್ ಕೊಡಿಸಿದಾಗ್ಯೂ ಈ ವರೆಗೂ ವ್ಯವಸ್ಥೆ ಮಾಡಿಕೊಳ್ಳದೆ ತಪ್ಪಿ ಹೋಗಿರುವ ಪ್ರಯುಕ್ತ ನೇಮತಿಯಲ್ಲಿರುವ ಸದರಿ ಕಂಕನಹಳ್ಳಿಯವರ ಸಣ್ಣ ಮಳಿಗೆಯಲ್ಲಿ [illegible] ನಿಂತಿರುವ ಸದರಿಯವರ ಒಪ್ಪಂದದ ಬಾಬತು ಬಾಕಿ ಏಶಿಷ್ಟು ಬೆಲ್ಲವನ್ನೂ ಕ್ರಮವಾಗಿ ತಾ|| 30-1-22ನೆ ಸೋಮವಾರ ಮಧ್ಯಾಹ್ನ 1 ಗಂಟೆ ಲಾಗಾಯತು 5 ಗಂಟೆವರೆಗೆ ಪಬ್ಲಿಕ್ಕಾಗಿ ಹರಾಜು ಮಾಡಿಸಲ್ಪಡುತ್ತೆ. ಖಾಯಿಸ್ ಇರತಕ್ಕವರು ಆ ದಿನ ಹಾಜರಾಗಿ ದರಬಾಸ್ತು ಮಾಡಬೇಕಾಗಿ ಕೋರಲ್ಪಟ್ಟಿರುತ್ತೆ. ಹರಾಜು ಷರತ್ತುಗಳನ್ನು ಆ ದಿವಸವೇ ತಿಳಿಸಲ್ಪಡುತ್ತೆ.

ನೇಮತಿ ಕೇಣಿದ ಹಾಲಪ್ಪನ ರುಜು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಜಗದ್ಗುರು ಶ್ರೀ ಗಿರಿರಾಜ ಸಿಹ್ಮಾಸನ ಸ್ಥಿರಪಟ್ಟಾಧ್ಯಕ್ಷರ ಪ್ರಕಟನೆ ಎಂದು ಬಂದಿರುವ ಪತ್ರವ್ಯವಹಾರದಲ್ಲಿ ಸಂಸ್ಥಾನದ ಸೈನ್ ಮೊಹರುಗಳಿಲ್ಲವಾದುದರಿಂದ ಪ್ರಕಟಿಸಲಾರೆವು. ಪ. ಪ್ರ.

ತಿದ್ದುವಿಕೆ—ಕಳೆದ ಸಂಚಿಕೆಯ ೩ನೆ ಪುಟದ ೧ ಮತ್ತು ೩ನೆ ಪಂಗ್ತಿಗಳಲ್ಲಿ ಸಾಮಾನ್ಯಗೃಹಸ್ಥರು ಎಂದು ತಪ್ಪು ಬಿದ್ದಿರುವುದನ್ನು ಸಂಮಾನ್ಯ ಗೃಹಸ್ಥರು ಎಂದು ತಿದ್ದಿಕೊಳ್ಳಬೇಕಾಗಿ ವಾಚಕರಿಗೆ ವಿನಂತಿ.

ಪ. ಪ್ರ.

ಪಂಚಮೋದ್ಧರಣ.

ಕ್ಲೋಸ್‌ಪೇಟೆ ಸಬ್‌ತಾಲ್ಲೂಕು ಬನ್ನಿಕುಪ್ಪೆಯಲ್ಲಿ ಕಳೆದವಾರ ಆ ಊರಿನ ಪಟೇಲರಾದ ಮ|| ರಾ|| ಬಿ. ಚೋಡಯ್ಯಗೌಡರು ಪಂಚಮರ ಸಭೆಯೊಂದನ್ನು ಸೇರಿಸಿ ಮದ್ಯಪಾನದಿಂದಾಗುವ ಹಾನಿಗಳನ್ನು ಕುರಿತು ಮನಗಾಣುವಂತೆ ಬುದ್ಧಿವಾದವನ್ನು ಹೇಳಿದರು. ಮದ್ಯಪಾನದಿಂದಾಗುವ ನಾನಾಬಗೆಯ ನಷ್ಟಕಷ್ಟ ಕುಂದುಕೊರತೆಗಳನ್ನು ತಿಳಿದುಕೊಂಡ ಮೇಲೆ ಸುಮಾರು ನೂರುಮಂದಿ ಪಂಚಮರು ದೇವಸ್ಥಾನಕ್ಕೆ ಹೋಗಿ ಇನ್ನುಮೇಲೆ ನಿಷಾದ್ರವ್ಯ ಸೇವನೆಮಾಡುವುದಿಲ್ಲವೆಂದು ಶಪಥಮಾಡಿಕೊಂಡರು. ಅಲ್ಲದೆ ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ ವಿದ್ಯೆಕಲಿಸುತ್ತೇವೆಂದೂ ಸಾಧ್ಯವಾದಷ್ಟು ಮಟ್ಟಿಗೂ ಶುಚಿಯಾಗಿರುತ್ತೇವೆಂದೂ ವಾಗ್ದಾನಮಾಡಿರುತ್ತಾರೆ. ಮ|| ರಾ|| ಚೋಡಯ್ಯಗೌಡರು ಇವರಿಗಾಗಿ ಒಂದು ಸ್ಕೂಲನ್ನು ಏರ್ಪಡಿಸಿಕೊಡಬೇಕೆಂದು ಪ್ರಯತ್ನಿಸುತ್ತಿರುತ್ತಾರೆ. ಅನೇಕರು ಪಂಚಮೋದ್ಧಾರಕರೆಂದು ದೊಡ್ಡದೊಡ್ಡ ಸಭೆಗಳನ್ನುಮಾಡಿ ಸೂರುಹಾರುವಂತೆ ಉಪನ್ಯಾಸ ಮಾಡುವುದುಂಟು. ಅವರ ಉಪನ್ಯಾಸವು ಪಂಚಮರ ಜೋಪಡಿಯವರೆಗೂ ಹೋಗುವುದೇ ಎಂಬುದು ಸಂದೇಹಾಸ್ಪದವಾಗಿದೆ. ಮತ್ತೆ ಕೆಲ ಪಂಚಮೋದ್ಧಾರಕರು ದೊಡ್ಡದೊಡ್ಡ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುತ್ತಾರೆ. ಈ ಲೇಖನಗಳನ್ನು ಓದಿ ಓದದ ಗಂಧವೇ ತಿಳಿಯದ ಪಂಚಮರೆಷ್ಟುಮಂದಿ ಉತ್ತಮಸ್ಥಿತಿಗೆ ಬಂದಿರುವರೋ ತಿಳಿಯದು. ಅಂತಹ ಉಪನ್ಯಾಸಕರೂ ಲೇಖಕರೂ ಪಂಚಮೋದ್ಧಾರಕರಾದ ಮೇಲೆಕಂಡ ಮ|| ರಾ|| ಚೋಡಯ್ಯಗೌಡರಂತೆ ಕೆಲಸಮಾಡಿ ತೋರಿಸಿದರೆ ಸಾರ್ಥಕ.

ದೇಶವತ್ಸಲರ ಸೇವಕ.

ಬ್ರಾಹ್ಮಣ ಗುಮಾಸ್ತರ ಹಾವಳಿ.

ಕೊರಟಗೆರೆ ಸಬ್‌ತಾಲ್ಲೂಕು ರಿಜಿಸ್ಟ್ರೇಷನ್ ಗುಮಾಸ್ತರಾಗಿ ಹೊಸಬರೊಬ್ಬರು ಈ ತಾಲ್ಲೂಕಿಗೆ ದಯಮಾಡಿಸಿ ಸುಮಾರು ೧೦-೧೫ ದಿವಸಗಳು ಮಾತ್ರವೇ ಆಗಿದ್ದಾಗ್ಗೂ ಸ್ಥಳದಲ್ಲಿ ಬೇರೂರುವುದಕ್ಕೆ ಮೊದಲೇ ಇವರ ಅವಾಂತರವು ಅಷ್ಟಿಷ್ಟೆಂದು ವರ್ಣಿಸಲಸದಳ. ಇವರು ಸ್ಥಳಾಸ್ಥಳದ ನಿಜಪರಿಸ್ಥಿತಿಯನ್ನರಿಯದೆ ಕೆಲಸಮಾಡುವುದರಲ್ಲಿ ತುಂಬಾ ಸಮರ್ಥರಾಗಿ ಕಾಣುತ್ತಾರೆ. ೫-೧-೨೨ನೆ ದಿನ ನಾನು ಎರಡು ರೂಪಾಯಿ ಕಾಗದವನ್ನು ರಿಜಿಸ್ಟರ್ ಮಾಡಿಸುವುದಕ್ಕಾಗಿ ಸದರಿಯವರಲ್ಲಿ ನಂಬರ್ ಹಾಕಿಕೊಳ್ಳಲು ಕೊಟ್ಟೆ; ದಕ್ಷಿಣೆ ಎರಡು ರೂಪಾಯಿ ಕೊಡುವಂತೆ ಕೇಳಿದರು. "ಯಾವ ದಕ್ಷಿಣ ಸ್ವಾಮಿ?" ಎಂದು ನಾನು ಕೇಳಿದ್ದಕ್ಕೆ ನಿಮ್ಮ ರಿಜಿಸ್ಟರ್ ಪತ್ರದ ದಕ್ಷಿಣೆ ಎಂದೂ ಮುಂತಾದ ಅಪಹಾಸ್ಯದ ವಿಜೃಂಭಣೆಯಿಂದ ಮಾತನಾಡುತ್ತ ದಕ್ಷಿಣೆಯಿಲ್ಲದೆ ಕಾರ್ಯವಾಗುವುದಿಲ್ಲವೆಂಬ ಸದುತ್ತರದಿಂದ ಕಾಗದ ವಾಪಸು ಕೊಟ್ಟೇಬಿಟ್ಟರು. ಸದರಿ ವಿಚಾರವನ್ನು ಮೇಲ್ಪಟ್ಟ ಆಫೀಸರ ಅವಗಾಹನೆಗೆ ತಂದಾಗ್ಗೂ ಗಮನ ಕೊಡುವಂತಿಲ್ಲ. ಆಫೀಸಲ್ಲವೂ ಈ ಜನಗಳಿಂದಲೇ ಕೂಡಿದ್ದು ಆ ದಿವಸ ನನ್ನ ದುರದೃಷ್ಟದಿಂದ ಯಾವದೊಂದು ಮಾತನಾಡುವುದಕ್ಕೂ ಅವಕಾಶವಿಲ್ಲದೆ ನಿರಾಶನಾಗಿ ವಾಪಸ್ಸು ಬಂದೆನು. ನಾನು ಹೋಗಿದ್ದ ದಿವಸ ಪತ್ರಗಳ ದಕ್ಷಿಣೆಯೆಂಬ ಒಂದು ಕಾಗದದ ಪೊಟ್ಟಣದಲ್ಲಿ ಸುಮಾರು ೧೫-೨೦ ರೂ. ಗಳಿವೆಯೆಂಬುದನ್ನೂ ಕೂಡ ತೋರಿಸಿದರು. ಅಹಾ! ಇವರ ಧೈರ್ಯವೆಷ್ಟಿರಬಹುದು? ಪಬ್ಲಿಕ್ ಆಫೀಸುಗಳಲ್ಲೇ ಈ ತರಹ ಮಾತುಗಳಿಗೆ ಅವಕಾಶದೊರೆತಿರುವ ವಿಷಯದಲ್ಲಿ ಸರ್ಕಾರದವರ ಬಗೆಯ ನಿಜಾಂಶವು ಪ್ರತ್ಯಕ್ಷತಃ ಪ್ರಕಾಶಗೊಂಡಂತಾಯಿತು. ಈ ಲಂಚವೆಂಬ ಪಿಶಾಚದ ಹಾವಳಿಯಿಂದ ಬಹಳಜನ ಗಾಬರಿಗೊಂಡು ಅಹರ್ನಿಶಿಯೂ ವ್ಯಥೆಗೊಳ್ಳುತ್ತಿರುವ ಅಂಶವು ಈ ಹೊತ್ತಿಗೇನೂ ಹೊಸದಲ್ಲ. ಹಿಂದೆ ಸದರಿ ಸ್ಥಾನದಲ್ಲಿದ್ದ ನಿಜಬ್ರಾಹ್ಮಣರಾದ ಮ|| ವೆಂಕಟಾಚಲಯ್ಯನವರು ಬಹಳ ನಿಸ್ಪೃಹರಾಗಿಯೂ ಜನಾನುರಾಗಿಗಳಾಗಿಯೂ ಕೆಲಸಮಾಡುತ್ತ ತಾಲ್ಲೂಕಿನ ರೈತಪ್ರಜೆಗಳ ಪ್ರೀತಿವಿಶ್ವಾಸಕ್ಕೆ ತುಂಬಾ ಪಾತ್ರರಿದ್ದರು. ಇದಲ್ಲವೆ ನಿಜಬ್ರಾಹ್ಮಣ್ಯ? ಇವರಿಗೆ ವರ್ಗವಾದದ್ದು ಮಹದ್ವಿಷಾದವಿಷಯ. ಸದರಿಯವರು ಇನ್ನುಮೇಲಾದರೂ ಇಂಥ ದುರ್ಮಾರ್ಗಕ್ಕೆ ಅವಕಾಶಕೊಡದೆ ಸಭ್ಯರೀತಿಯಿಂದ ವರ್ತಿಸುತ್ತ ಪ್ರಜೆಗಳ ಪೂರ್ಣವಿಶ್ವಾಸಗಳಿಗೆ ಪಾತ್ರರಾಗುತ್ತಾರೆಂದು ನಂಬಿ ನಿರೀಕ್ಷಿಸುತ್ತಿದ್ದೇನೆ. ಅಲ್ಲದೆ ಈ ವಿಷಯವನ್ನು ಮೇಲ್ಪಟ್ಟ ಆಫೀಸರವರ ಗಮನಕ್ಕೆ ತಂದು ಧರ್ಮರೀತಿಯಲ್ಲಿ ಸದರಿಯವರು ನಡೆಯುವಂತೆ ಏರ್ಪಾಡು ಮಾಡಿಸಿಕೊಡುತ್ತಾರೆಂದು ನಂಬಿರುತ್ತೇನೆ.

ಒಬ್ಬ ಬಡರೈತ.

ಪಕ್ಷಪಾತ.

ಅಯ್ಯಾ,

ಸಕಲೇಶಪುರದ ರೆವಿನ್ಯೂ ಸಬ್‌ಡಿವಿಜನ್ ಆಫೀಸರವರು ನೌಕರಿಗಳ ಮೊಕರೂರಿ ವಿಚಾರದಲ್ಲಿ ನ್ಯಾಯವಾಗಿ ಪ್ರವರ್ತಿಸದೆ ಎಷ್ಟರಮಟ್ಟಿಗೆ ಸ್ವಮತಾಭಿಮಾನವನ್ನು ತೋರ್ಪಡಿಸುತ್ತಿರುತ್ತಾರೆಂಬುದಕ್ಕೆ ಈಗ ಸ್ವಲ್ಪದಿನಗಳಲ್ಲಿ ಇವರು ಮಾಡಿರುವ ಒಂದು ನೌಕರಿ ವಿಚಾರದಲ್ಲಿ ಕೆಳಗೆಕಂಡ ನಿಜಾಂಶಗಳನ್ನು ಹೊರಪಡಿಸಲು ತುಂಬಾ ಕುತೂಹಲವಾಗಿದೆ. ಈ ಲೇಖನದ ಮುಖ್ಯೋದ್ದೇಶವು ಮೇಲ್ಕಂಡ ಸಂದರ್ಭದಲ್ಲಿ ಆಶಾಭಗ್ನರಾಗಿ ಅನ್ಯಾಯಕ್ಕೊಳಗಾಗಿರುವವರ ಅಹವಾಲನ್ನು ಮೇಲಿನವರಾದರೂ ಚೆನ್ನಾಗಿ ಪರಿಶೀಲಿಸಿ ತೀರ್ಮಾನಿಸಬೇಕೆಂಬುದೇ ಆಗಿದೆ. ಇಲ್ಲಿನ ಆಕ್ಸ್ರಿಯಮುತ್ತಿದ್ದ ಕೆಲಸಕ್ಕೆ ಹೊಳೇನರಸೀಪುರದಲ್ಲಿ ದಫ್ತರ್‌ಬಂದಿಯಾಗಿದ್ದವರನ್ನು ೧೨ ರೂ. ತಲಬಿನಮೇಲೆ ಆಕ್ಟಿಂಗಾಗಿ ನೇಮಿಸಿ ಅವರು ಬಂದು ಎರಡೂವರೆ ವರ್ಷಗಳಾಯ್ತು. ಇವರಿಗೆ ಕನ್ನಡವನ್ನು ಓದಲೂ ಬರೆಯಲೂ ತಕ್ಕಮಟ್ಟಿಗೆ ಚೆನ್ನಾಗಿಬರುತ್ತದೆ. ಇಂಗ್ಲೀಷಿನ ಗಂಧವೇ ಇಲ್ಲ. ಇಂಥವರಿಗೆ ೨೦ ರೂ. ತಲಬಿನ ಮುನಸಿಪಲ್ ಗುಮಾಸ್ತೆ ಕೆಲಸವನ್ನು ಖಾಯಮಾಗಿ ದಯಪಾಲಿಸಿದ್ದಾರೆ. ಈ ತದಂಗದಲ್ಲಿ ೧೫-೧-೨೦ ರೂ. ಖಾಲಿಬಿದ್ದದ್ದಕ್ಕೂ ಕೂಡ ಏಕದಂ ೨೦ ರೂ. ಭರ್ತಿಮಾಡಿ ಮೇಲ್ಕಂಡಂತೆ ಸ್ಥಳವನ್ನು ಉತ್ಪತ್ತಿಮಾಡಿಕೊಟ್ಟಿದ್ದಾರೆ. ಕೆಲಸಕಾರಗಳು ಹೇಗೆ ನಡೆಯುತ್ತವೆಂಬುದು ಖುದ್ದು ನೋಡಿದಲ್ಲದೆ ಬರೆಯುವದರಿಂದ ಪ್ರಯೋಜನವಿಲ್ಲ. ಇವರು ಸ್ವಜನರಾಗಿರುವದರಿಂದಲೇ ನಮ್ಮ ಸಾಹೇಬರ ದೃಷ್ಟಿಯು ಇವರಮೇಲೆ ಅತಿಸೌಮ್ಯಭಾವದಿಂದಿರುವದು. ಇವೆಲ್ಲಾ ಇರಲಿ. ಮೇಲ್ಕಂಡ ಕೆಲಸಕ್ಕೆ ಉಮೇದುವಾರರಾಗಿ ಬ್ರಾಹ್ಮಣರಾದ ಅಂದರೆ ಸ್ವಜನವಲ್ಲದ ಇಂಗ್ಲೀಷು ಲೋವರ್ ಸೆಕಂಡರಿ ಮತ್ತು ರೆವಿನ್ಯೂ ಪ್ಯಾಸುಮಾಡಿ ೧೨ ರೂ. ಖಾಯಂ ತಲಬಿನವರೊಬ್ಬರೂ ಹಿಂದೆ ವಿಲೇಜ್ ಇಂಪ್ರೂವ್‌ಮೆಂಟ್ ಕ್ಲಾರ್ಕಾಗಿದ್ದು ೨೦ ರೂ. ತೆಗೆಯುತ್ತಿದ್ದ ಇಂಗ್ಲೀಷ್ ಲೋವರ್‌ಸೆಕಂಡರಿ ಪ್ಯಾಸುಮಾಡಿ ೧೨ ರೂ. ತಲಬಿನಲ್ಲಿರುವ ಮತ್ತೊಬ್ಬರೂ ಈಮೇರೆ ಇಬ್ಬರು ಬ್ರಾಹ್ಮಣರೂ ಅಲ್ಲದೆ ಎಂಟ್ರೆನ್ಸ್ ಮತ್ತು ಇಂಗ್ಲೀಷ್ ಲೋವರ್‌ಸೆಕಂಡರಿ ಪ್ಯಾಸ್ಮಾಡಿದ ಇಬ್ಬರು ಬ್ರಾಹ್ಮಣೇತರರೂ ಈರೀತಿ ನಾಲ್ಕುಜನರಿದ್ದಾಗ್ಯೂ ಇವರನ್ನೆಲ್ಲಾ ನಾಲಾಯಖ್‌ಮಾಡಿ ಸ್ವಮತಾಭಿಮಾನದಿಂದ ಯಾವಪ್ಯಾಸೂ ಇಲ್ಲದ ಮತ್ತು ಕೆಲಸದ ಅನುಭವವೂ ಸಂಕೋಚವಾಗುಳ್ಳ ಕ್ವಾಲಿಫಿಕೇಷನ್ನಿಗೆ ಹೆಚ್ಚಿಗೆಪ್ರಾಶಸ್ತ್ಯ ಕೊಟ್ಟಿದ್ದಾರೆ. ಮೇಲ್ಕಂಡ ನಾಲ್ವರಪೈಕಿ ಒಬ್ಬರು ಈರೀತಿ ಅನ್ಯಾಯಮಾಡಿರುವದಾಗಿ ಅಪ್ಲಿಕೇಷನ್ ಕೊಟ್ಟಿದ್ದಕ್ಕೆ ನಿಮಗೆ ಕ್ಲಾರ್ಕ್‌ಷಿಪ್ ಪ್ಯಾಸಾಗಿಲ್ಲವಾಗಿ ನಿಮ್ಮ ವಿಚಾರ ಪುನರ್ವಿಮರ್ಶೆಮಾಡಲಾಗುವದಿಲ್ಲವೆಂತ ದಿವ್ಯ ಇಂಡಾರಸು ಬಂದಿದೆ. ಈ ರೂಲು ಸ್ವಜನರಾದವರಿಗೂ ಅನ್ವಯಿಸುವದಿಲ್ಲವೇನೊ? ಅಥವಾ ಎಕ್ಸೆಂಪ್ಷನ್ ಪಡೆದಿರಬಹುದು. ಈ ವಿಚಾರದಲ್ಲಿ ಡೆಪ್ಯುಟೀಕಮಿಷನರಿಗೂ ಅಪ್ಲಿಕೇಷನ್ ಹೋಗಿದೆ. ಇದು ಡಿಸ್ಟ್ರಿಕ್ಟು ಶಿರಸ್ತೆದಾರರ ಗೊಟ್ಟದಲ್ಲಿ ಬಿದ್ದು ಇವರ ಇಂದ್ರಜಾಲದಿಂದ ಸ್ವಮತಾಭಿಮಾನವು ಅಲ್ಲೂ ಬಲಪಡಿಸಲ್ಪಡುತ್ತದೋ ಅಥವಾ ನಿರ್ದಾಕ್ಷಿಣ್ಯವಾಗಿ ನ್ಯಾಯವಾದರೀತಿ ವಿಮರ್ಶನೆ ನಡೆದು, ಈಗ ಆಗಿರುವ ದಾಂಧಲೆ ಆರ್ಡರು ರದ್ದಾಗುತ್ತದೋ ಮುಂದೆ ನೋಡಬೇಕಾಗಿದೆ. ಈರೀತಿ ಮಾಡಿದ್ದಾಗ್ಗೂ ಮೇಲ್ಕಂಡ ನಮ್ಮ ಮ್ಯುನಿಸಿಪಾಲಿಟಿಯಲ್ಲಿ ಸರ್ಕಾರದಿಂದ ಆಗಾಗ್ಗೆ ಸಾದರಾಗಿರುವ ಹುಕುಮುಗಳು ಸರಿಯಾಗಿ ಜಾರಿಯಲ್ಲಿ ತರುತ್ತಿದ್ದೀರಾ? ಎಂತ ಹುಕುಂಬಂದದ್ದಕ್ಕೆ ನಮ್ಮ ಸಾಹೇಬರು ತಡೆಬಡುವಿಲ್ಲದೆ ಸರ್ಕಾರಿ ಆರ್ಡರಿಗೆ ಚಾಚೂ ತಪ್ಪದೆ ಜಾರಿಮಾಡುತ್ತಿರುವದಾಗಿ ರಿಪೋರ್ಟ್ ಗಿರುವದಂತೆ. ಈ ರಿಪೋರ್ಟಿನ ನಿಜಾಂಶವು ಈ ಒಂದು ಸಂದರ್ಭದಿಂದಲೇ ಹೊರಪಡುತ್ತದೆ. ಕೇಳುವವರಾರು? ನಮ್ಮ ಸಾಹೇಬರಿಗೆ ವರ್ಗವೆಂತ ಅಲ್ಲಲ್ಲೇ ಗಾಳಿವರ್ತಮಾನ. ಅಷ್ಟರೊಳಗೆ ಹೇಗಾದರೂ ಇವರನ್ನು ಮ್ಯುನಿಸಿಪಾಲಿಟಿಯಿಂದ ರೆವಿನ್ಯೂವಿಗೆ ವರ್ಗಾಯಿಸಿಬಿಡಬೇಕೆಂತ ತಕ್ಕ ಏರ್ಪಾಟುಗಳು ಆಗುತ್ತಿವೆ. ಎಲೈ ಸ್ವಜನಾಭಿಮಾನವೇ ನ್ಯಾಯವೂ ನಿನ್ನೊಡನೆ ಹೋರಾಡಲಾರದಲ್ಲಾ! ನೀನು ಈ ಕಾಲದಲ್ಲೂ ಇಷ್ಟು ಉತ್ಕಟಾವಸ್ಥೆಯನ್ನು ಹೊಂದಿರುವಿಯಾ! ಸ್ವಲ್ಪ ಸೈರಿಸು. ಈಗಲೇ ಎಚ್ಚತ್ತುಕೊ. ಕೊಂಚದಿನಗಳಲ್ಲಿಯೇ ತಲೆಕೆಳಗಾಗಿ ಚಿಂತಿಸಬೇಕಾದೀತು? ಇದಲ್ಲದೆ ಸಾಹೇಬರ ಮನೆ ಕೆಲಸಮಾಡಲು ರೆವಿನ್ಯೂ ಜವಾನರುಗಳು ಸಾಲದೆ ತಾಲ್ಲೂಕು ಬೋರ್ಡು ಜವಾನನನ್ನೂ ಸಕಲೇಶಪುರದ ಮುಸಾಫರ್‌ಖಾನೆ ಜವಾನನನ್ನೂ ಎಳೆದುಕೊಂಡಿರುತ್ತಾರೆ. ಮುಸಾಫರ್‌ಖಾನೆಗೆ ಜವಾನನನ್ನು ಕೊಟ್ಟಿರುವುದು ಪ್ರಜೆಗಳ ಅಂದರೆ ಮಾರ್ಗಸ್ಥರ ಅನುಕೂಲಕ್ಕಲ್ಲವೆ? ಈ ಮುಸಾಫರ್‌ಖಾನಾ ಅಜಮಾಯಿಷಿಮಾಡಿ ನಮ್ಮ ಡಿಸ್ಟ್ರಿಕ್ಟುಬೋರ್ಡು ವೈಸ್ ಪ್ರೆಸಿಡೆಂಟರು ಮ|| ರಾ|| ಎನ್. ಎಸ್. ನಂಜುಂಡಯ್ಯನವರು ಬರೆದಿರುವ ಷರಾಕ್ಕೆ ಯಾವಾಗ ನಿಗಾತೆಗೆದುಕೊಂಡು ಕ್ರಮಪಡುವದೋ ನೋಡಬೇಕು. "ಸರ್ವೇಜನಾಸ್ಸುಖಿನೋಭವಂತು."

ಸನ್ಮಾರ್ಗಾಭಿಲಾಷಿ.

ಮಂಜರಾಬಾದು ಜಮಾಬಂದಿ.

ಮಂಜರಾಬಾದು ತಾಲ್ಲೂಕು ಎಸಳೂರುಹೋಬಳಿ ಜಮಾಬಂದಿಯು ಕಳೆದ ಮಾಹೆ ೧೮-೧೯ಕ್ಕೆ ನಡೆಸುವುದಕ್ಕಾಗಿ ಸಬ್‌ಡಿವಿಜನ್ ಸಾಹೇಬರು ಆಮಲ್ದಾರರು ದಯಮಾಡಿಸಿದ್ದರು. ಈ ಹೋಬಳಿಯ ರೈತರು ಪಟೇಲರು ಶ್ಯಾನುಭೋಗರು ಸಹ ಹೋಗಿ ಹಾಜರಾಗಿದ್ದರು. ಈದಿನ ನಾಳೆದಿವಸ ನಾಡಿದ್ದು ಎಂದು ಶೇಕದಾರರು ಶ್ಯಾನುಭೋಗರು ಹೇಳಿದರು. ಜಮಾಬಂದಿ ಆಗಲಿಲ್ಲ. ಅನ್ನವಿಲ್ಲದೆ ಕಾದುಕೊಂಡಿದ್ದ ಬಡರೈತರುಗಳು ಕತ್ತಲೆಯಲ್ಲಿ ಬಿದ್ದುಕೊಂಡು ಬಂದದ್ದಾಯಿತು. ಲೆಕ್ಕಾಚಾರಗಳು ಸರಿಯಾಗಿಲ್ಲದ್ದರಿಂದ ಈ ಜನವರಿ ತಾ|| ೧೬-೧೮ಕ್ಕೆ ಜಮಾಬಂದಿ ಎಂದು ಹೇಳಿದರು. ಉದ್ಯೋಗಿಗಳಿಗೆ ಹೇಗಾದರೂ ಭತ್ಯಸಿಕ್ಕಿತು. ದೊರೆತನಕ್ಕೆ ಬಡತನವೇ ಎಂಬಂತೆ ಜಮಾಬಂದಿಗಾಗಿ ಬಂದ ಜನಗಳ ಕಷ್ಟಸುಖವನ್ನು ಕೇಳುವರೇ ದಿಕ್ಕಿಲ್ಲವಾಗಿದೆ. ಮ|| ಕೆ. ಸಿದ್ಧರಾಮಪ್ಪನವರು ಜಮಾಬಂದಿವರೆಗಾದರೂ ಇದ್ದಿದ್ದಲ್ಲಿ ಶ್ಯಾನುಭೋಗರ ಸ್ಥಿತಿಗಳು ಚೆನ್ನಾಗಿ ಸರ್ಕಾರಕ್ಕೆ ವೇದ್ಯವಾಗುತ್ತಿತ್ತು. ಈ ತಾಲ್ಲೂಕಿನಲ್ಲಿ ಹಿಂದೆ ಸಬ್‌ಡಿವಿಜನ್ ಸಾಹೇಬರಾಗಿ ಬಂದಿದ್ದ ಸಿ. ಮಾಚಯ್ಯನವರು ಗೋಪಾಲರಾಜೇಅರಸಿನವರು ಸಹ ೧ ವರುಷವಾದರೂ ಇರಲಿಲ್ಲವಲ್ಲ. ಇದು ನಮ್ಮ ತಾಲ್ಲೂಕಿನ ಸೌಭಾಗ್ಯವೋ ರೈತರ ದುರ್ಭಾಗ್ಯವೋ ತಿಳಿಯದು. ಜಾತಿಯ ಅಧಿಪತಿಗಳಾದುದರಿಂದ ಇದರ ಗದ್ದಲವೇ ಇಲ್ಲ. ಅಯ್ಯೊ ಪಾಪ! ಬಡಬ್ರಾಹ್ಮಣ, ಮುಂದೆ ಜಾಗ್ರತೆ ಲೆಖ್ಖ ಬರೆದಿಡುವಂತೆ ಅಪ್ಪಣೆಮಾಡಿ ಹೊರಟುಹೋದರು. ಶ್ಯಾನುಭೋಗರುಗಳು ಲೆಖ್ಖಗಳನ್ನು ಮತ್ತು ಖಾನೇಷುಮಾರಿ ಎಂಬುವದು ರೈತರುಗಳಿಗೆ ಹೇಳದೆ ಕೇಳದೆ ಹೋದವರುಷದ ಲೆಕ್ಕ ಇಟ್ಟುಕೊಂಡು ಪಾಳುಬಿದ್ದ ಜಮೀನು ಸಾಗು ಎಂದು ಬರೆದಿರುವುದು ಜಮಾಬಂದಿ ಕಾಲದಲ್ಲಿ ನಂಬರುವಾರು ವಿಂಗಡಿಸಿದರೆ ಗೊತ್ತಾಗುತ್ತದೆ. ಈ ತಾಲ್ಲೂಕಿನಲ್ಲಿ ತಕ್ಕ ಪ್ರಜಾಸಂಖೆಯಿಲ್ಲದೆ ಇನ್ನುಮುಂದೆ ಜಮೀನು ಸಾಗುಮಾಡತಕ್ಕವರಿಲ್ಲದೆ ಹಾಳುಬಿದ್ದಿರುವ ಕಾಫಿತೋಟದಂತೆ ಆಗುತ್ತದೆ. ಇದು ೨೦-೩೦ ವರುಷಕ್ಕೆ ಮುಂದೆ ಕಾಫಿದೆಸೆಯಿಂದ ತಕ್ಕಮಟ್ಟಿಗೆ ಇತ್ತು. ಸರ್ಕಾರದವರೇ ಮಲೆನಾಡು ಮೈನರ್‌ಕೆರೆ ಕಾಮಗಾರಿಗಳನ್ನು ಮಾಡಿಸದೆ ಕೆರೆಗಳೆಲ್ಲಾ ಹೂತುಹೋಗಿ ಜನಜಾನುವಾರುಗಳಿಗೂ ಜಮೀನುಗಳಿಗೂ ಸಹ ತೊಂದರೆಯಾಗಿದೆ. ಮೈದಾನಪ್ರದೇಶದಂತೆ ಇಲ್ಲಿ ದೊಡ್ಡಕೆರೆಗಳಿಲ್ಲ. ಸಣ್ಣ ಸಣ್ಣವುಗಳಾದರೂ ಹಾಳುಬಿದ್ದಿರುತ್ತವೆ.

ಬಡರೈತ.

ವೀರಶೈವವಿದ್ಯಾರ್ಥಿಗಳಿಗೆ ವಿಜ್ಞಾಪನೆ.

ಮಹಾಶಯರೆ!

ನಮ್ಮ ಸಮಾಜವು ವಿದ್ಯಾಭ್ಯಾಸದಲ್ಲಿ ಇತರ ಜನವರ್ಗದವರಿಗಿಂತಲೂ ಬಹಳ ಹಿಂದುಳಿದಿರುವುದರಿಂದ ಸಮಾಜದ ಹಿತಚಿಂತಕರುಗಳು ನಮ್ಮ

ದಲ್ಲೂ ಹಾಕಿಸಿದ್ದ ಭುವನೇಶ್ವರೀಮಂಟಪಗಳು ಬೆಂಡು ಮೇಣ ಕಾಗದ ಮೊದಲಾದುವುಗಳಿಂದ ರಚಿಸಿದ ನವಿಲುಗಳ ಸಾಲುಗಳಿಂದಲೂ ತಳಕುಪಟ್ಟಿಯ ಬೇಲುದಾರಿಯ ಸಣ್ಣ ಕೆಲಸದಿಂದಲೂ ಬಲು ಅಂದವಾಗಿ, ಮೈಸೂರಿನಲ್ಲಿರುವ ಮುಹಮ್ಮದೀಯರೊಳಗೆ ಈ ಕೆಲಸದ ಚಾತುರ್ಯವು ಎಷ್ಟುಮಟ್ಟಿಗೆ ಇನ್ನೂ ಉಳಿದಿದೆಯೆಂಬುದನ್ನು ತೋರಿಸುತ್ತಿದ್ದುವು. ಈ ಮಂಟಪಗಳೆರಡರಲ್ಲೂ ವಿದ್ಯುಚ್ಛಕ್ತಿದೀಪಗಳು ಜೋಡಿಸಲ್ಪಟ್ಟಿದ್ದುದರಿಂದ ಅವುಗಳ ಮನೋಹರತೆಯು ಮತ್ತಷ್ಟು ಹೆಚ್ಚಿದ್ದಿತು. ನಿಲ್ದಾಣದ ಬಹಿರ್ದ್ವಾರದಲ್ಲಿ ಒಂದು ಕಮಾನೂ, ಪಬ್ಲಿಕ್ ಲೈಬ್ರರಿಯ ಪಕ್ಕದ ಮಾರ್ಗದಲ್ಲಿ ಒಂದು ಹಸರುವಾಣಿಯ ಕಮಾನೂ ಹಾಕಲ್ಪಟ್ಟಿದ್ದುವು. ಕರ್ಜನ್‌ಪಾರ್ಕಿನ ಫೌಂಟೆನ್ನಿನ ಬಳಿಯಲ್ಲೂ ಸ್ಟಾಚು ಸ್ಕ್ವೈರಿನ ಪೂರ್ವ ಪಶ್ಚಿಮ ಬಾಗಗಳಲ್ಲೂ ಯುದ್ಧ ಸ್ಮಾರಕ ಸ್ತಂಭಗಳಂತೆ ರಚಿಸಿದ್ದ ಏರ್ಪಾಟು ನೂತನವಾಗಿಯೂ ಪ್ರೇಕ್ಷಣೀಯವಾಗಿಯೂ ಇದ್ದಿತು. ಅವುಗಳ ಮೇಲೆ ಕಮಲಕೋಶಾಕೃತಿಯ ಕಲಶಗಳು ಒಳಗೆ ವಿದ್ಯುದ್ದೀಪವನ್ನು ಒಳಗೊಂಡು ರಾತ್ರಿಯ ಹೊತ್ತು ರಮ್ಯವಾಗಿ ತೋರುತ್ತಿದ್ದುವು. ೫-೬ ತೆರದ ದೊಡ್ಡ ದೊಡ್ಡ ಧ್ವಜಸ್ತಂಭಗಳನ್ನು ಒಂದೊಂದಕ್ಕೆ ೨೦-೨೫ ರೂ. ಗಳ ವರೆಗೆ ಮುಟ್ಟಿಸಿ ಮಾಡಿಸಿ ನಿಲ್ದಾಣದಿಂದ ರಸಿಡೆನ್ಸಿಯವರೆಗೂ ಮಾರ್ಗಗಳ ಪಕ್ಕಗಳಲ್ಲಿ ನೆಡಿಸಿ ಪತಾಕೆಗಳನ್ನು ಕಟ್ಟಿದ್ದರು. ಚಿತ್ರವಿಚಿತ್ರವಾದ ತೋರಣಗಳು ಕಟ್ಟಲ್ಪಟ್ಟಿದ್ದುವು. ಮನೋಹರವಾಗಿ ಉಭಯ ಪಾರ್ಶ್ವಗಳಲ್ಲೂ ಎದ್ದಿರುವ ಓಕುವೃಕ್ಷಗಳಿಂದ ಅಲಂಕೃತವಾಗಿರುವ ಸಯ್ಯಾಜಿರಾವ್ ಮಾರ್ಗಕ್ಕೆ ಬೇರೆ ಅಲಂಕಾರದ ಅವಶ್ಯಕತೆಯೇ ಇರಲಿಲ್ಲ. ಹಾರ್ಡಿಂಜ್ ಸರ್ಕಲ್ಲೂ ಆಲ್ಬರ್ಟ್‌ವಿಕ್ಟರ್ ಮಾರ್ಗವೂ ಸಹ ಸಮಾಸನ್ನುದ್ಧವಾಗಿರುವ ವನಲಕ್ಷ್ಮಿಯ ಅಲಂಕಾರದಿಂದ ಪ್ರತ್ಯೇಕಾಲಂಕಾರವನ್ನಪೇಕ್ಷಿಸಿಯೇ ಇರಲಿಲ್ಲ. ಸ್ಟಾಚು ಸ್ಕ್ವೈರಿನ ಮಧ್ಯದ ಪೂಗಿಡಗಳ ದಿಬ್ಬವು ಬಗೆಬಗೆಯ ಬಣ್ಣದ ವಿದ್ಯುದ್ದೀಪಗಳಿಂದ ತುಂಬಿ ಅತ್ಯಂತ ಪ್ರದರ್ಶನೀಯವಾಗಿದ್ದಿತು. ದೊಡ್ಡ ದೊಡ್ಡ ಕಟ್ಟಡಗಳ ಮೇಲೂ ಉದ್ದನಾದ ಧ್ವಜಸ್ತಂಭಗಳ ಮೇಲೂ ವಿಶಾಲವಾಗಿ ಕಟ್ಟಲ್ಪಟ್ಟಿದ್ದ ರಾಜಪತಾಕೆಗಳು ಗಾಳಿಯಿಂದ ಚಲಿಸಾಡುತ್ತ ಆಂಗ್ಲ ಸಾಮ್ರಾಜ್ಯಕ್ಕೆ ಸಮಾನವಾದ ಚಕ್ರಾಧಿಪತ್ಯವು ಪ್ರಪಂಚದಲ್ಲಿ ಬೇರೊಂದಿಲ್ಲವೆಂಬುದನ್ನು ಅಭಿನಯಿಸುತ್ತಿರುವುವೋ ಎಂಬಂತೆ ತೋರುತ್ತಿದ್ದುವು. ರೆಸಿಡೆನ್ಸಿಯ ಮಹಾದ್ವಾರದಿಂದ ಹಿಡಿದು ಬಂಗಲೆಯ ಒಳಹೊರಗೆಲ್ಲಾ ವಿದ್ಯುದ್ದೀಪಗಳು ಹೊಳೆಯುತ್ತಿದ್ದುವು. ಬೆಲೆಬಾಳುವ ಅತ್ಯಂತ ಶ್ರೇಷ್ಠವಾದ ಫರ್ನಿಚರುಗಳು ಭಂಗಾರದ ಕೆಲಸದ ಆಸನಗಳು ಮಂಚಗಳು ಮೊದಲಾದುವುಗಳಿಂದಲೂ, ಕನ್ನಡಿಯಂತೆ ತೋರುತ್ತಿರುವ ನೆಲಗಟ್ಟುಗಳಿಂದಲೂ, ಅಮೌಲ್ಯವಾದ ರತ್ನಗಂಬಳಿಗಳು ಮಕಮಲ್ಲಿನ ಆಸ್ತರಣಗಳು ಮೊದಲಾದುವುಗಳಿಂದಲೂ ದೇದೀಪ್ಯಮಾನವಾಗಿ ಪ್ರತ್ಯಕ್ಷವಾದ ಇಂದ್ರನ ವೈಜಯಂತದಂತೆ ಭವನವು ತೋರುತ್ತಿದ್ದಿತು. ಆ ಬಂಗಲೆಯ ಉತ್ತರ ಭಾಗದಲ್ಲಿ ಸಾಲುಸಾಲಾಗಿ ನೂರಾರು ಗುಡಾರಗಳು ಪರಿವಾರದವರಿಗಾಗಿ ಏರ್ಪಡಿಸಲ್ಪಟ್ಟಿದ್ದುವು. ಗುರುವಾರ ಬೆಳಗಿನ ೬ ಗಂಟೆಯೊಳಗಾಗಿ ಉತ್ಸವದ ಬೀದಿಗಳಲ್ಲಿ ನೀರನ್ನು ಪಂಪುಮಾಡಿ ಧೂಳಿಯನ್ನಡಗಿಸಿ ತಂಪುಮಾಡಿದ್ದುದರಿಂದಲೂ ತಂಗಾಳಿಯು ಬೀಸುತ್ತಿದ್ದುದರಿಂದಲೂ, ಪುರಲಕ್ಷ್ಮಿಯು ಸರ್ವಾಲಂಕಾರ ಪೂರಿತೆಯಾಗಿ ತೋರಣಗಳೆಂಬ ಮಾಲಿಕೆಯನ್ನು ಹಿಡಿದು ಯುವರಾಜರನ್ನು ಸ್ವಾಗತಿಸುವುದಕ್ಕಾಗಿ ಸಿದ್ಧಳಾಗಿ ನಿಂತಿರುವಳೋ ಎಂಬಂತೆ ತೋರುತ್ತಿದ್ದಿತು. ಈ ಪುರಾಲಂಕರಣ ಕಾರ್ಯದಲ್ಲಿ ಮಿ|| ಕ್ರಂಬೀಗಲ್‌ರವರ ಸೂಚನೆಯೇ ಪ್ರಧಾನವಾಗಿ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರೂ ಮ್ಯು|| ಪ್ರೆಸಿಡೆಂಟ್ ಸಿ. ಶ್ರೀಕಂಠೇಶ್ವರಯ್ಯರವರೂ ಬಹಳ ಮುತುವರ್ಜಿವಹಿಸಿ ಎಲ್ಲವನ್ನೂ ಸಾಂಗಗೊಳಿಸಿದರು.

ಜನಸಂದಣಿ.

ಉತ್ಸವದಿನಕ್ಕೆ ೨-೩ ದಿನಗಳಿಂದಲೂ ಪರಸ್ಥಳಗಳ ಜನರು ಎಂದರೆ ಮೈಸೂರು ದೇಶದ ೮ ಡಿಸ್ಟ್ರಿಕ್ಟುಗಳಿಂದಲೇ ಅಲ್ಲದೆ ಹೊರಗಡೆಯಿಂದಲೂ ಬಂದು ಸೇರುತ್ತಿದ್ದರು. ಸ್ಪೆಷಲ್ ಟ್ರೇನುಗಳನ್ನು ಬಿಡಲು ಅವಕಾಶವು ಕಲ್ಪಿಸಲ್ಪಟ್ಟಿದ್ದರೆ ಇನ್ನೂ ವಿಶೇಷ ಜನಸ್ತೋಮವು ಸೇರಬಹುದಾಗಿದ್ದಿತು, ಅನೇಕರು ಹೊಗೆಬಂಡಿ ಸಿಕ್ಕದೆ ಪೇಚಾಡಿಕೊಂಡು ಗುರುವಾರ ಸಾಯಂಕಾಲವೂ ರಾಜಧಾನಿಗೆ ಬಂದು ಸೇರಿರುವರು. ಬಹುಶಃ ಹೀಗೆ ಹೊರಗಡೆಯಿಂದಲೇ ೫೦ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಜನರು ಬಂದು ನೆರೆದಿದ್ದರು. ಉತ್ಸವದ ದಿನ ಬಂದ ಜನರಿಗೆಲ್ಲಾ ಭೋಜನಾರ್ಥವಾಗಿ ಮ್ಯುನಿಸಿಪಾಲಿಟಿಯವರೂ ಪುರಪ್ರಮುಖ ವರ್ತಕರೂ ಸೇರಿ ೪-೬ ಕಡೆ ಏರ್ಪಾಟನ್ನು ಜಾತಿವಾರಾಗಿ ಮಾಡಿಸಿದ್ದರು. ನೋಟಕ್ಕಾಗಿ ಬಂದ ಜನರಿಗೆ ಪೊಲೀಸರ ನಿರ್ಬಂಧಗಳೊಂದೂ ಇಲ್ಲದಂತೆ ಮಾಡಲ್ಪಟ್ಟುದರಿಂದ ಮಾರ್ಗಗಳ ಇಕ್ಕೆಲಗಳಲ್ಲೂ ಮಾಡಗಳ ಮೇಲೂ ಸ್ಥಳವಿದ್ದೆಡೆಗಳಲ್ಲೆಲ್ಲಾ ತುಂಬಿಕೊಂಡಿದ್ದರು. ಬಹುಶಃ ೧೦ ಸಾವಿರ ಮಂದಿ ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಗ್ಯಾಲರಿಗಳನ್ನೂ ಬೆಂಚುಗಳನ್ನೂ ಇಕ್ಕೆಲದಲ್ಲೂ ಏರ್ಪಡಿಸಿದ್ದುದರಿಂದ ರಾಜಧಾನಿಯ ಎಲ್ಲ ಪಾಠಶಾಲಾ ಕಲಾಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಬಾಲಚಮೂವಿನವರೂ ತುಂಬಿ ಕುಳಿತಿದ್ದರು.

ಸತ್ಕಾರಸನ್ನಾಹ.

ನಿಲ್ದಾಣದಲ್ಲಿ ಪ್ಲಾಟ್‌ಫಾರಮ್ಮಿನ ಮೇಲೆ ಉತ್ತಮವಾದ ಚಿತ್ರಾಸನಗಳು, ಹಾಸಲ್ಪಟ್ಟಿದ್ದುವು. ಅದೇದಿನ ಬೆಳಗ್ಗೆ ಬೆಂಗಳೂರಿನಿಂದ ದಯಮಾಡಿಸಿದ್ದ ಬ್ರಿ|| ರೆಸಿಡೆಂಟರು, ದಿವಾನರು, ಕೌನ್ಸಿಲರುಗಳು, ಚೀಫ್‌ಕೋರ್ಟ್ ಜಡ್ಜರು, ಮತ್ತು ಸರ್ದಾರರುಗಳು, ರಾಜಬಂಧುಗಳು, ಶಾಖಾಮುಖ್ಯಾಧಿಕಾರಿಗಳು ಪುರಪ್ರಮುಖರು, ಅರಮನೆಯ ೧೦೦ ಮಂದಿ ಸೈನಿಕರು ಇವರೆಲ್ಲಾ ಸೇರಿದ್ದರು. ನಿಲ್ದಾಣದ ಹೊರಗೆ ಅರಮನೆಯ ಚತುರಂಗ ಸೇನೆಯೂ ಸಕಲ ಬಿರುದಾವಳಿಗಳೂ ಬ್ಯಾಂಡಿನವರ ಗುಂಪುಗಳೂ ನಿಂತಿದ್ದುವು. ಟೌನ್‌ಹಾಲಿನ ದಕ್ಷಿಣದಿಕ್ಕಿನಲ್ಲಿ ಹಾಕಿದ್ದ ೧೬ ಕಂಬದ ಮಂಟಪದಲ್ಲಿ ಮ್ಯುನ್ಸಿಪಲ್ ಕೌನ್ಸಿಲರುಗಳೂ ಇನ್ನೂ ಅನೇಕ ಪುರಪ್ರಮುಖರೂ ಕೆಲವೈದಿಕ ಮಂಡಲಿಯವರೂ ಸಿದ್ಧರಾಗಿದ್ದರು. ಆ ಮಂಟಪದ ಪಶ್ಚಿಮದಿಕ್ಕಿನ ಉಭಯ ಪಾರ್ಶ್ವದ ಗ್ಯಾಲರಿಗಳಮೇಲೂ ವಿದ್ಯಾರ್ಥಿನಿಯರು ತುಂಬಿದ್ದರು. ಮಾರ್ಗಗಳ ಉಭಯಪಾರ್ಶ್ವಗಳಲ್ಲೂ ಪೊಲೀಸರ ಸಿಪಾಯಿಗಳ ಓಲೆಕಾರರ ಸಾಲು ನಿಲ್ಲಿಸಲ್ಪಟ್ಟಿದ್ದಿತು. ೮| ಗಂಟೆಯಹೊತ್ತಿಗೆ ನಮ್ಮ ಶ್ರೀಮನ್ಮಹಾರಾಜ ಸಹೋದರರುಗಳು ದಿವ್ಯವಸ್ತ್ರಕಂಠಹಾರಾದಿ ವಿಭೂಷಿತರಾಗಿ ೬ ಕುದುರೆಗಳನ್ನು ಹೂಡಿದ ರಥದಲ್ಲಿ ಕುಳಿತು ಶ್ವೇತಛತ್ರವನ್ನು ಹಿಡಿಯಿಸಿಕೊಂಡು ಹಿಂದೆಮುಂದೆ ಅಂಗರಕ್ಷಕ ಸ್ವಾರರ ಸೈನ್ಯಗಳು ನಡೆದುಬರುತ್ತಿರಲು ನಿಲ್ದಾಣಕ್ಕೆ ದಯಮಾಡಿಸಿದರು. ಪ್ರೇಕ್ಷಕ ಜನಸ್ತೋಮವೆಲ್ಲಾ ಆ ಉತ್ಸವವನ್ನು ನೋಡಿಯೇ ಎಷ್ಟೋ ಆನಂದಪಟ್ಟು ಕರತಾಡನಗಳನ್ನು ಮಾಡಿದರು. ನಿಲ್ದಾಣಕ್ಕೆ ಬಂಡಿಯು ಹೋದಕೂಡಲೇ ಬ್ರಿ|| ರೆಸಿಡೆಂಟರೂ ದಿವಾನರೂ ಹೊರಕ್ಕೆಬಂದು ಇದಿರ್ಗೊಂಡು ಒಳಕ್ಕೆ ಕರೆದುಕೊಂಡು ಹೋದರು. ಸರ್ವರೂ ಮರ್ಯಾದಿಸಿದರು. ಅಲ್ಲಿದ್ದವರೆಲ್ಲಾ ತಂತಮ್ಮ ಸ್ಥಾನದಲ್ಲಿ ಸಾಲಾಗಿನಿಂತಿದ್ದರು. ಆಗ ಒಂದು ಸ್ಪೆಷಲ್‌ಬಂಡಿಯು ಬಂದಿತು. ಅದು ಯುವರಾಜರ ಕಡೆಯ ಏಡಿಕಾಂಗರೇ ಮೊದಲಾದ ಪರಿವಾರದವರದಾಗಿದ್ದಿತು. ಬಳಿಕ ಸ್ವಲ್ಪಕಾಲದೊಳಗೆ ಯುವರಾಜರ ಬಂಡಿಯು ೮|| ಗಂಟೆಗೆ ಸರಿಯಾಗಿ ನಿಲ್ದಾಣಕ್ಕೆಬಂದು ನಿಂತಿತು. ಕೂಡಲೇ ಕೋಟೆಕೊತ್ತಲದಿಂದ ೩೧ ಗುಂಡುಗಳು ಹಾರಿಸಲ್ಪಟ್ಟುವು. ಆ ಕೂಡಲೇ ಯುವರಾಜರ ಬಂಡಿಯಿಂದ ಅವರ ಸೆಕ್ರೆಟರಿಯವರು ಮೊದಲೇ ಇಳಿದು ಯುವರಾಜರಿಗೆ ಕರಾವಲಂಬನವನ್ನಿತ್ತು ಕೆಳಕ್ಕೆ ಇಳಿಯಿಸಿದರು. ಕೂಡಲೇ ವಾದ್ಯಘೋಷಗಳಾದುವು. ಯುವರಾಜರು ಟೊಪ್ಪಿಗೆಯನ್ನು ತೆಗೆದುಕೊಂಡು ನಿಂತರು. ಲೆ|| ಕರ್ನಲ್ ಚಾಮರಾಜ ಅರಸರ ಆಜ್ಞೆಯಮೇರೆಗೆ ಸೈನಿಕರು ಮರ್ಯಾದಿಸಿದರು. ಅಷ್ಟರಲ್ಲಿ ಶ್ರೀಮನ್ಮಹಾರಾಜರು ೨-೩ ಹಜ್ಜೆ ಮುಂದಕ್ಕೆ ಸರಿಯಲು, ಯುವರಾಜರೂ ಮುಂದಕ್ಕೆ ದಯಮಾಡಿಸಿದರು. ಅವರವರಿಗೆ ಪರಸ್ಪರ ಕರಾಸ್ಪಂದನವು ನಡೆಯಿತು. ಬಳಿಕ ಉಭಯರೂ ಎಡಕ್ಕೆ ತಿರುಗಿದರು. ಅಲ್ಲಿ ನಮ್ಮ ಮಹಾರಾಜರು ತಮ್ಮ ಸಹೋದರರಾದ ಯುವರಾಜರ ಪರಿಚಯವನ್ನು ಮಾಡಿಸಿದರು. ರೆಸಿಡೆಂಟರು ದಿವಾನರು, ಕರ್ನಲ್ ದೇಶರಾಜ ಅರಸಿನವರು, ಲಕ್ಷ್ಮೀಕಾಂತರಾಜ ಅರಸಿನವರು, ಪ್ರಿನ್ಸ್ ಗೋಪಾಲರಾಜೆ ಅರಸಿನವರು, ಚೀಫ್‌ಕೋರ್ಟ್ ನ್ಯಾಯಮೂರ್ತಿಗಳು, ಕೌನ್ಸಿಲರುಗಳು ಮೊದಲಾದವರ ಪರಿಚಯವನ್ನೆಲ್ಲಾ ಯುವಸಾರ್ವಭೌಮರಿಗೆ ಮಾಡಿಸಿದರು. ಸರ್ವರೂ ಯುವಸಾರ್ವಭೌಮರಿಗೆ ರಾಜಭಕ್ತಿಯಿಂದ ವಂದಿಸಿದರು. ಬಳಿಕ ಶ್ರೀಮದ್ಯುವರಾಜರನ್ನು ನಮ್ಮ ಮಹಾರಾಜರು ಒಡನೆ ಕರೆದುಕೊಂಡು ನಿಲ್ದಾಣದ ಹೊರಕ್ಕೆ ದಯಮಾಡಿಸಿದರು. ಅವರಹಿಂದೆ ಬ್ರಿ|| ರೆಸಿಡೆಂಟರು ಯುವರಾಜರು ದಿವಾನರು ಮೊದಲಾದವರೆಲ್ಲಾ ಹೊರಟರು. ಹೊರಗೆ ನಿಂತಿದ್ದ ಆನೆ ಕುದುರೆ ಒಂಟೆಗಳು ಬಾಲ್ಯದವರು ಸಿಪಾಯಿಗಳೆಲ್ಲರೂ ಮರ್ಯಾದಿಸಿದರು. ವಾದ್ಯಗಳು ಭೋರ್ಗರೆದುವು. ಜಲೋಗಳು ಘಳಘಳನೆ ಶಬ್ದಮಾಡಿದುವು, ಕೊಂಬುಗಳು ಊದಲ್ಪಟ್ಟುವು. ಆಗ ಯುವರಾಜರು ಪ್ರತಿವಂದನೆಯನ್ನು ಮಾಡಿ ಸಿದ್ಧವಾಗಿದ್ದ ರಥವನ್ನೇರಿದರು. ಬಲಗಡೆಯಲ್ಲಿ ಅವರೂ ಅವರ ಮಗ್ಗುಲಲ್ಲಿ ಎಡಗಡೆ ನಮ್ಮ ಮಹಾರಾಜರೂ ಕುಳಿತರು. ಇದಿರ್ಗಡೆ ಲಾರ್ಡ್ ಕ್ರೊಮರ್‌ರವರೂ ನಮ್ಮ ಯುವರಾಜರೂ ಕುಳಿತಿದ್ದರು. ಮೇಲ್ಗಡೆ ಛತ್ರಸೂರ್ಯಪಾನಗಳು ಹಿಡಿಯಲ್ಪಟ್ಟುವು. ಯುವಸಾರ್ವಭೌಮರು ಸಾಧಾರಣವಾದ ಬಿಳಿಯ ಉಡುಪನ್ನೂ ಕಲಶಹಾಕಿದ ಟೊಪ್ಪಿಗೆಯನ್ನೂ ಧರಿಸಿದ್ದರು. ರಥದ ಎಲ್ಲಕ್ಕೂಮುಂದೆ ಅಶ್ವಾರೂಢರಾಗಿ ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರೂ ಅವರಹಿಂದೆ ಮೈಸೂರು ಕುದುರೆಸ್ವಾರರ ಸೈನ್ಯವೂ, ಅವುಗಳಹಿಂದೆ ಅಂಗರಕ್ಷಕ ಅಶ್ವಸೈನ್ಯವೂ ಎಡಬಲಪಕ್ಕಗಳಲ್ಲಿ ಕುದುರೆಯನ್ನೇರಿ ಚೀಫ್‌ಕಮ್ಯಾಂಡೆಂಟ್ ಲೆ|| ಕರ್ನಲ್ ಬಿ. ಚಾಮರಾಜ ಅರಸಿನವರೂ ಪೊಲೀಸ್ ಇನ್|| ಜನರಲ್‌ರವರೂ ಬಾಡಿಗಾರ್ಡ್ ಕಮ್ಯಾಂಡೆಂಟ್ ಮ|| ಗೋಪಾಲರಾಯರೂ ಹೊರಟರು. ಖಾಸಾಜಿಲ್ಲೋ ಸೈನಿಕರೂ ಚಾಮರಗಳನ್ನು ಹಿಡಿದವರೂ ಎರಡುಪಕ್ಕಗಳಲ್ಲೂ ಸಾಲಾಗಿ ನಡೆಯುತ್ತಿದ್ದರು. ಹಿಂಗಡೆಯೂ ಅಂಗರಕ್ಷಕ ತುರಗಸೈನ್ಯವೂ, ಅಶ್ವಸೈನ್ಯವೂ ಹೊರಟುವು. ಆ ರಥದ ಹಿಂಗಡೆಯಲ್ಲಿದ್ದ ೨ ಕುದುರೆಗಳ ೫-೬ ರಥಗಳ ಮೇಲೆ ಬ್ರಿ|| ರೆಸಿಡೆಂಟರು ಮಿಲಿಟರಿ ಸೆಕ್ರೆಟರಿ ಏಡಿಕಾಂಗರು ಮೊದಲಾದ ಪರಿವಾರದವರೂ ದಿವಾನರೂ ಇದ್ದರು. ಈ ಉತ್ಸವವು ನಿಲ್ದಾಣದ ಮಹಾದ್ವಾರದಿಂದ ಹೊರಟು ಸವಾರ್‌ಲೈನಿನ ಮುಂಗಡೆಯ ಮಾರ್ಗದಲ್ಲಿ ಹೊರಟು ಎರಡು ಪಕ್ಕಗಳಲ್ಲೂ ನಿಂತಿದ್ದ ವಿದ್ಯಾರ್ಥಿಗಳು ಮಾಡಿದ ಜಯಧ್ವನಿಪೂರ್ವಕ ಸ್ವಾಗತವನ್ನು ಯುವರಾಜರು ಮಂದಹಾಸದಿಂದ ಅಂಗೀಕರಿಸಿ ಪ್ರತಿವಂದನೆ ಮಾಡುತ್ತಲಿದ್ದರು. ದಾರಿಯುದ್ದಕ್ಕೂ ಹರ್ಷಧ್ವನಿ ಮಾಡುತ್ತಿದ್ದ ಪ್ರಜಾಸ್ತೋಮಕ್ಕೆ ಪ್ರತಿವಂದನೆ ಮಾಡುವುದರಲ್ಲಿ ಯುವಸಾರ್ವಭೌಮರ ಮೇಲಕ್ಕೆತ್ತಿದ ಹಸ್ತವು ಇಳಿಯಲೇ ಇಲ್ಲ. ನಿಷ್ಕಳಂಕಸಾರಳ್ಯ ಸಾತ್ವಿಕತ್ವವೇ ತುಂಬಿತುಳುಕುತ್ತಿದ್ದ ಯುವಸಾರ್ವಭೌಮರ ಪ್ರಸನ್ನವದನ ಮಂಡಲವನ್ನು ದರ್ಶನ ಮಾಡಿ ಪ್ರಜೆಗಳು ಪಟ್ಟ ಆನಂದಕ್ಕೆ ಎಣೆಯಿರಲಿಲ್ಲ. ಬೀದಿಗಳೆಲ್ಲಾ ಜಯಧ್ವನಿಮಯವಾದುವು. ಉತ್ಸವವು ಸಯ್ಯಾಜಿರಾವ್ ಮಾರ್ಗವನ್ನು ಹಾಯ್ದು ಕರ್ಜನ್‌ಪಾರ್ಕಿನೊಳಕ್ಕೆ ಪ್ರವೇಶಿಸಿ ಮ್ಯುನ್ಸಿಪಲ್ ಚಪ್ಪರದೊಳಕ್ಕೆ ಪ್ರವೇಶಿಸುತ್ತಲೇ ರಥವು ನಿಲ್ಲಿಸಲ್ಪಟ್ಟಿತು. ಪುರಪಾಲಕ ಸಂಘದಪರವಾದ ಸ್ವಾಗತಪತ್ರವನ್ನು ಹಿಡಿದು ಪ್ರಸಿಡೆಂಟ್ ದಿ|| ಬ|| ಸಿ. ಶ್ರೀಕಂಠೇಶ್ವರಯ್ಯರವರು ಮುಂದಕ್ಕೆ ಬಂದರು. ಅವರ ಪರಿಚಯವನ್ನು ಶ್ರೀಮನ್ಮಹಾರಾಜರು ಮಾಡಿಸಿದರು. ಸ್ವಾಗತಪತ್ರವನ್ನು ಅವರು ಓದಿ ಸುಂದರವಾದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಸ್ವಾಗತಪತ್ರದ ಅಭಿಪ್ರಾಯವೇನೆಂದರೆ—

ಮಹನೀಯರಾದ ಯುವಸಾರ್ವಭೌಮರೆ! ಶ್ರೀಮನ್ಮಹಾರಾಜರ ಪ್ರಜೆಗಳಾದ ನಾವು ಈ ಸುಸಮಯದಲ್ಲಿ ಮನಃಪೂರ್ವಕವಾಗಿಯೂ ರಾಜಭಕ್ತಿಪೂರಿತರಾಗಿಯೂ ತಮ್ಮ ಸುಖಾಗಮನವನ್ನು ಬಯಸುತ್ತೇವೆ. ೧೯೦೬ನೆ ವರ್ಷದ ಜನವರಿಯಲ್ಲಿ ತಮ್ಮ ವಿಖ್ಯಾತಜನಕರಾದ ಜಾರ್ಜ್ ಪ್ರಭುಗಳು ಇಲ್ಲಿಗೆ ಆಗಮಿಸಿದ್ದಾಗ್ಗೆ ಅದರಿಂದ ನಮಗೆಲ್ಲಾ ಸಾರ್ವತ್ರಿಕವಾಗಿ ಉಂಟಾಗಿದ್ದ ಪ್ರೀತಿಭಕ್ತಿ ಸಂತೋಷಗಳನ್ನು ವ್ಯಕ್ತಪಡಿಸಿದ್ದೆವು. ಅದೇ ತೆರದಲ್ಲಿ ನಮ್ಮ ಭಕ್ತಿವಿಶ್ವಾಸಗಳನ್ನು ಸಮರ್ಪಿಸಲಿಕ್ಕೆ ಮತ್ತೊಂದು ಸಂಧಿಯು ಈಗ ದೊರೆಯಿತು. ತಮ್ಮ ಆಗಮನದಿಂದ ಆಂಗ್ಲಸಾಮ್ರಾಜ್ಯಕ್ಕೂ ನಮಗೂ ಪರಸ್ಪರ ಸಂಬಂಧ ಸಾಮೀಪ್ಯವು ಹೆಚ್ಚಾಗುವುದಲ್ಲದೆ ಆಂಗ್ಲ ರಾಜಕುಟುಂಬದವರ ವಿಷಯದಲ್ಲಿ ನಮಗಿರುವ ಭಕ್ತಿಪ್ರೀತಿ ಗೌರವಗಳನ್ನು ಹೆಚ್ಚಿಸಲು ಅವಕಾಶವಾಗಿರುತ್ತದೆ. ನಮ್ಮ ಸಂಸ್ಥಾನದಲ್ಲೂ ವಿಸ್ತಾರವಾದ ಭರತಖಂಡದ ಇತರ ಪ್ರದೇಶಗಳಲ್ಲೂ ತಮ್ಮ ಸಂಚಾರವು ಸಂತೋಷಕರವಾಗಿರಲೆಂದು ನಾವು ಮನಃಪ್ರೀತಿಪೂರ್ವಕವಾಗಿ ಅಪೇಕ್ಷಿಸುವುದಲ್ಲದೆ ಇದನ್ನೆಲ್ಲಾ ಮುಗಿಸಿಕೊಂಡು ಸುರಕ್ಷಿತರಾಗಿ ಸ್ವಸ್ಥಾನವನ್ನು ತಾವು ಸೇರುವವರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಇದಕ್ಕೆ ಯುವಸಾರ್ವಭೌಮರು ಹೀಗೆ ಉತ್ತರವನ್ನು ದಯಪಾಲಿಸಿದರು:—"ನೀವು ರಾಜಭಕ್ತಿಪೂರಿತರಾಗಿ ವಿಜ್ಞಾಪನ ಪತ್ರವನ್ನು ಸಮರ್ಪಿಸಿದುದಕ್ಕಾಗಿ ನಿಮ್ಮಗಳನ್ನು ವಂದಿಸುತ್ತೇನೆ. ನಮ್ಮ ಪ್ರಿಯ ಜನಕರ ಮೇಲ್ಪಂಕ್ತಿಯನ್ನನುಸರಿಸಿ ಮೈಸೂರು ಸಂಸ್ಥಾನವನ್ನು ಸಂದರ್ಶಿಸಲು ಅವಕಾಶವಾದುದಕ್ಕಾಗಿ ನಾನು ಸಂತೋಷಪಟ್ಟಿದ್ದೇನೆ. ರಾಜಧಾನಿಯ ನಿವಾಸಿಗಳ ಸೌಖ್ಯಕ್ಕಾಗಿ ನೀವುಗಳು (ಮ್ಯುನಿಸಿಪಾಲಿಟಿಯವರು) ಮಾಡುತ್ತಿರುವ ಅಭಿವೃದ್ಧಿಕಾರ್ಯಗಳನ್ನು ಕೇಳಲು ನನಗೆ ಸಂತೋಷವಾಗುತ್ತದೆ. ಶ್ರೀಮನ್ಮಹಾರಾಜರ ರಾಜಧಾನಿಯಾಗಿರುವ ಈ ನಗರಿಯನ್ನು ಅವರ ದರ್ಜೆಗೂ ಈ ಸಂಸ್ಥಾನದ ಘನತೆಗೂ ತಕ್ಕಂತೆ ರಚಿಸಬೇಕೆಂದಿರುವ ನಿಮ್ಮ ಧ್ಯೇಯವು ಪ್ರಶಂಸನೀಯವಾಗಿದೆ. ಮೈಸೂರುದೇಶದಲ್ಲಿ ನಾನು ಅನುಭವಿಸಿದ ಸಂಗತಿಗಳನ್ನೆಲ್ಲಾ ನನ್ನ ಸ್ಮರಣೆಯಲ್ಲಿಟ್ಟುಕೊಂಡಿರುತ್ತೇನೆ. ನೀವು ಸ್ವಾಗತಪತ್ರವನ್ನರ್ಪಿಸಿದುದಕ್ಕಾಗಿ ಮತ್ತೊಮ್ಮೆ ನಿಮಗೆ ವಂದಿಸುತ್ತೇನೆ." ಬಳಿಕ ಪ್ರತಿಯೊಬ್ಬ ಮ್ಯು|| ಕೌನ್ಸಿಲರನ್ನೂ ಪ್ರೆಸಿಡೆಂಟರು ಯುವಸಾರ್ವಭೌಮರಿಗೆ ಹೆಸರು ಹೇಳಿ ಪರಿಚಯ ಮಾಡಿಸಿದರು. ಬಳಿಕ ಪ್ರತಿವಂದನೆಯನ್ನು ಮಾಡಿ ಉತ್ಸವವು ಮುಂದಕ್ಕೆ ಸಾಗಿತು. ಪುರವೀಧೀ ಸೌಂದರ್ಯವನ್ನೂ ಮಧ್ಯಮಾರ್ಗದಲ್ಲಿದ್ದ ಉಪವನದ ಸೊಬಗನ್ನೂ ನೋಡಿ ಸಂತೋಷಿಸುತ್ತ ಅಲ್ಲಿಗಲ್ಲಿಗೆ ಶ್ರೀಮನ್ಮಹಾರಾಜರೊಡನೆಯೂ ಯುವರಾಜರೊಡನೆಯೂ ಸಂಭಾಷಿಸುತ್ತ ಬಿಡದಿಯನ್ನು ಯುವಸಾರ್ವಭೌಮರು ಸೇರುವ ಹೊತ್ತಿಗೆ ೯| ಗಂಟೆಯಾಯಿತು. ಅಲ್ಲಿ ಕಾದು ನಿಂತಿದ್ದ ಕಾಲ್ಬಲವು ಸೆಲ್ಯೂಟ್ ಮಾಡಿ ಗೌರವಿಸಿತು. ಬ್ಯಾಂಡಿನ ಮರ್ಯಾದೆಯು ನಡೆದಿತು. ಬಂಡಿಯಿಂದಿಳಿದ ಕೂಡಲೇ ೩೧ ಗುಂಡುಗಳು ಅಲ್ಲೇ ಹಾರಿಸಲ್ಪಟ್ಟುವು. ಬಿಡಾರಕ್ಕೆ ಅವರನ್ನು ಇಳಿಯಿಸಿ ಶ್ರೀಮನ್ಮಹಾರಾಜ ಸಹೋದರರು ಅರಮನೆಗೆ ಚಿತ್ತೈಸಿದರು.

ಮಿಜಾಜ್‌ಪರ್ಸಿ.

ಪದ್ಧತಿಯಂತೆ ೯|| ಗಂಟೆಗೆ ಮಿಜಾಜ್‌ಪರ್ಸಿಯೆಂಬ ಮರ್ಯಾದೆಗೆ ಆರಂಭವಾಯಿತು. ಶ್ರೀಮನ್ಮಹಾರಾಜರ ಪ್ರತಿನಿಧಿಗಳಾಗಿ ದಿವಾನರು ಕರ್ನಲ್ ದೇಶರಾಜಅರಸಿನವರು, ಸರ್ದಾರ್ ಗೋಪಾಲರಾಜಅರಸಿನವರು, ಕೌನ್ಸಿಲರ್ ಪಿ. ರಾಘವೇಂದ್ರರಾಯರು ಸಹ ಅರಮನೆಯಿಂದ ರಸಿಡೆನ್ಸಿಗೆ ದಯಮಾಡಿಸಿದರು. ಇವರುಗಳನ್ನು ಯುವಸಾರ್ವಭೌಮರ ಕಡೆಯವರು ಇದಿರ್ಗೊಂಡು ಕರೆದುಕೊಂಡು ಹೋಗಿ ಉಚಿತಾಸನಗಳಲ್ಲಿ ಕುಳ್ಳಿರಿಸಿದರು. ಸ್ವಲ್ಪಕಾಲ ಕುಶಲಪ್ರಶ್ನೆ ಸಂಭಾಷಣ ನಡೆದನಂತರ ತಮ್ಮೊಡನೆ ತಂದಿದ್ದ ಪುಷ್ಪಹಾರಾದಿಗಳನ್ನು ಇವರುಗಳು ಒಪ್ಪಿಸಿ ಅವರಿಂದಲೂ ಸತ್ಕೃತರಾದರು. ಶ್ರೀಮದ್ಯುವಸಾರ್ವಭೌಮರ ಪ್ರತಿನಿಧಿಗಳಾಗಿ ಬ್ರಿ|| ರಸಿಡೆಂಟರು ಅ|| ರಸಿಡೆಂಟರು ಏಡಿಕಾಂಗರು ಮೊದಲಾದ ಕೆಲವರು ಮೋಟಾರುಗಳ ಮೇಲೆ ಅರಮನೆಗೆ ದಯಮಾಡಿಸಿದರು. ಅರಮನೆಯಲ್ಲೂ ಯುವಸಾರ್ವಭೌಮರ ಕಡೆಯ ಪ್ರತಿನಿಧಿಗಳ ಮರ್ಯಾದೆಯು ಹೀಗೆಯೇ ನಡೆದಿತು.

ದರ್ಶನ ಪ್ರತಿದರ್ಶನಗಳು.

ಶ್ರೀಮನ್ಮಹಾರಾಜರು ಸಹೋದರರ ಸಮೇತರಾಗಿ ಮೋಟಾರಿನಲ್ಲಿ ಕುಳಿತು ಬಾಡಿಗಾರ್ಡ್ ಸೈನ್ಯ ಮರ್ಯಾದೆಯೊಡನೆ ರಸಿಡೆನ್ಸಿಗೆ ೧೧ ಗಂಟೆಗೆ ದಯಮಾಡಿಸಿದರು. ಇನ್ನು ಕೆಲ ಮೋಟಾರುಗಳಲ್ಲಿ ರಾಜಕುಮಾರ ಸಿ. ದೇಶರಾಜಅರಸ್, ಸರ್ ಕಾಂತರಾಜಅರಸ್, ಕರ್ನಲ್ ದೇಶರಾಜಅರಸ್, ಸರ್ದಾರ್ ಎಂ. ಗೋಪಾಲರಾಜೆಅರಸ್, ಸರ್ದಾರ್ ಎಂ. ಗೋಪಾಲಕೃಷ್ಣೆ ಅರಸ್, ಸರ್ ಲೇಸ್ಲಿಮಿಲ್ಲರ್, ಮಿ|| ಆರ್. ಎಚ್. ಕೇಂಬಲ್, ಮಿ|| ಎ. ಆರ್. ಬಾನರ್ಜಿ, ಮಿ|| ಪಿ. ರಾಘವೇಂದ್ರರಾವ್, ಮಿ|| ಹಂಚಾಹುಸೇನ್, ಮಿ|| ಮಿರ್ಜಾ, ಎಂ. ಇಸ್ಮಾಯಿಲ್, ಮಿ|| ಕೆ. ಮೆಥ್ಯೂ ಇವರುಗಳು ಹೊರಟರು. ಬ್ರಿ|| ರೆಸಿಡೆಂಟರೂ ಯುವಸಾರ್ವಭೌಮರ ಏಡಿಕಾಂಗರೇ ಮೊದಲಾದವರು ದ್ವಾರಕ್ಕೆ ಬಂದು ಇದಿರ್ಗೊಂಡು ಒಳಕ್ಕೆ ಕರೆದುಕೊಂಡುಹೋದರು. ಒಳಬಾಗಿಲ ಬಳಿಗೆ ಶ್ರೀಮದ್ಯುವಸಾರ್ವಭೌಮರು ದಯಮಾಡಿಸಿ ಇದಿರ್ಗೊಂಡು ಕರಾಸ್ಪಂದನಮಾಡಿ ತಮ್ಮ ಬಲಗಡೆಯಲ್ಲಿ ಏರ್ಪಡಿಸಿದ್ದ ಬೆಳ್ಳಿಭಂಗಾರದ ಕೆಲಸದ ಕುರ್ಚಿಯ ಮೇಲೆ ಕುಳ್ಳಿರಿಸಿ ಎಡಗಡೆಯಲ್ಲಿದ್ದ ಅದೇ ತೆರದ ಕುರ್ಚಿಯನ್ನು ತಾವು ಅಲಂಕರಿಸಿದರು. ಅವರ ಎಡಗಡೆಗೆ ಸಾಲಾಗಿ ಬ್ರಿ|| ರಸಿಡೆಂಟರೇ ಮೊದಲಾದ ಮುಖಂಡರು ಕುಳಿತರು. ಶ್ರೀಮನ್ಮಹಾರಾಜರ ಬಲಗಡೆ ಸ್ವಲ್ಪ ಹಿಂದೆ ಸಾಲಾಗಿದ್ದ ಕುರ್ಚಿಗಳ ಮೇಲೆ ಯುವರಾಜರು ದಿವಾನರು ಕೌನ್ಸಿಲರೇ ಮೊದಲಾದವರು ಕುಳಿತರು. ಯುವರಾಜರ ಮತ್ತು ಮಹಾರಾಜರ ಹಿಂಗಡೆ ಛತ್ರಸೂರ್ಯಪಾನಿಗಳು ಹಿಡಿಯಲ್ಪಟ್ಟಿದ್ದುವು. ಪರಸ್ಪರ ಸ್ವಲ್ಪ ಸಂಭಾಷಣೆ ಜರುಗಿದನಂತರ ಏಡಿಕಾಂಗರಿಂದ ತರಲ್ಪಟ್ಟ ಪುಷ್ಪಹಾರಗುಚ್ಛವನ್ನು ಯುವಸಾರ್ವಭೌಮರೇ ಎದ್ದು ತೆಗೆದುಕೊಂಡು ಮಹಾರಾಜರಿಗೆ ಅರ್ಪಿಸಿದರು. ಬಳಿಕ ಏಡಿಕಾಂಗರು ನಮ್ಮ ಯುವರಾಜರು ದಿವಾನರು ಮೊದಲಾದವರಿಗೆಲ್ಲಾ ಹಾರ ತಾಂಬೂಲ ಮರ್ಯಾದೆಗಳನ್ನು ಅರ್ಪಿಸಿದರು. ಎಲ್ಲರೂ ವಂದಿಸಿ ಬೀಳ್ಕೊಂಡರು. ಯುವಸಾರ್ವಭೌಮರು ಒಳಬಾಗಿಲವರೆಗೂ ಒಡನೆಬಂದು ಸಾಗಕಳುಹಿಸಿದರು. ಶ್ರೀಮನ್ಮಹಾರಾಜರು ಹೀಗೆ ಬಂದಾಗಲೂತೆರಳಿದಾಗಲೂ ಮರ್ಯಾದಾರ್ಥವಾದ ೨೧-೨೧ ಗುಂಡುಗಳು ಹಾರಿಸಲ್ಪಟ್ಟುವು. ಬಳಿಕ ಯುವಸಾರ್ವಭೌಮರು ಪ್ರತಿದರ್ಶನಕ್ಕಾಗಿ ಸೇನಾಮರ್ಯಾದೆಯೊಡನೆ ಮೋಟಾರುಗಳಲ್ಲಿ ಕುಳಿತು ಬ್ರಿ|| ರೆಸಿಡೆಂಟರೇ ಮೊದಲಾದವರ ಸಂಗಡ ಅರಮನೆಗೆ ೧೨ ಗಂಟೆಗೆ ದಯಮಾಡಿಸಿದರು. ಮಹಾದ್ವಾರದಲ್ಲಿ ದಿವಾನರು ದರ್ಬಾರಭಕ್ಷಿಯವರು ಮೊದಲಾದವರು ಇದಿರ್ಗೊಂಡರು. ಸಭಾಂಗಣದ ಬಾಗಿಲಿಗೆ ಶ್ರೀಮನ್ಮಹಾರಾಜರು ದಯಮಾಡಿಸಿ ಇದಿರ್ಗೊಂಡು ಕರೆತಂದು ಬಲಗಡೆಯ ಭಂಗಾರದ ಕೆಲಸದ ಆಸನದ ಮೇಲೆ ಅವರನ್ನು ಕುಳ್ಳಿರಿಸಿ, ಎಡಗಡೆಯಲ್ಲಿ ಅದೇ ತೆರದ ಆಸನದ ಮೇಲೆ ತಾವು ಕುಳಿತರು. ಯುವಸಾರ್ವಭೌಮರ ಬಲಪಕ್ಕದಲ್ಲಿ ಅವರ ಪರಿವಾರದವರೂ ಶ್ರೀಮನ್ಮಹಾರಾಜರ ಎಡಪಕ್ಕದ ಆಸನಗಳ ಮೇಲೆ ಸ್ವಲ್ಪ ಹಿಂಗಡೆಯಲ್ಲಿ ಯುವರಾಜರೇ ಮೊದಲಾದವರೂ ಕುಳಿತರು. ಕೆಲ ಸೈನಿಕರ ಸಾಲೂ ನಿಂತಿದ್ದಿತು. ಅರಮನೆಯ ಅಲಂಕಾರ ವೈಭವವನ್ನು ನೋಡಿ ಯುವರಾಜರು ಆನಂದಪಟ್ಟರು. ಸ್ವಲ್ಪಕಾಲ ಸಂಭಾಷಣೆ ನಡೆದನಂತರ ದರ್ಬಾರ್‌ಭಕ್ಷಿಯವರಿಂದ ಭಂಗಾರದ ತಟ್ಟೆಯಲ್ಲಿ ತರಲ್ಪಟ್ಟ ಹಾರಗುಚ್ಛಾದಿಗಳನ್ನು ಶ್ರೀಮನ್ಮಹಾರಾಜರು ಯುವಸಾರ್ವಭೌಮರಿಗೆ ಎದ್ದು ಸಮರ್ಪಿಸಿದರು. ಅವರು ಕೊರಳನ್ನು ಬಗ್ಗಿಸಿ ಸ್ವೀಕರಿಸಿದರು. ಆ ಹಾರವು ಭಂಗಾರದಿಂದ ಮಾಡಿದ ೫ ಎಳೆಯ ಸರವೂ ರತ್ನಖಚಿತವಾದ ಪದಕವುಳ್ಳದೂ ಆಗಿದ್ದಿತೆಂದು ಕೇಳಿಕೆ. ಬಳಿಕ ಮಹಾರಾಜರು ಯುವಸಾರ್ವಭೌಮರ ಸೆಕ್ರೆಟರಿ ಲಾರ್ಡ್ ಕ್ರೊಮರ್‌ರವರನ್ನೂ ಬ್ರಿಟಿಷ್ ರಸಿಡೆಂಟರವರನ್ನೂ ಸಹ ತಮ್ಮ ಬಳಿಗೆ ಬರಮಾಡಿಕೊಂಡು ಪುಷ್ಪಹಾರಗಳನ್ನು ಹಾಕಿದರು. ಅನಂತರ ದಿವಾನರು ಸಾರ್ವಭೌಮರ ಪರಿವಾರದವರಿಗೆಲ್ಲಾ ಹಾರಗುಚ್ಛಮರ್ಯಾದೆಗಳನ್ನರ್ಪಿಸಿದರು. ಬಳಿಕ ಎಲ್ಲರೂ ಎದ್ದರು. ಮಹಾರಾಜರು ಯುವಸಾರ್ವಭೌಮರ ಜತೆಯಲ್ಲೇ ಬಾಗಿಲವರೆಗೆ ಬಂದು ಬಂಡಿಯನ್ನೇರಿಸಿ ಸಾಗಕಳುಹಿದರು. ಪ್ರತಿದರ್ಶನಕ್ಕೆ ಹೀಗೆ ಹೊರಟಾಗಲೂ ಬಂದಾಗಲೂ ೩೧-೩೧ ಗುಂಡುಗಳು ಹಾರಿಸಲ್ಪಟ್ಟುವು. ಈ ದಿನ ರಾತ್ರಿ ಅರಮನೆ ಟೌನ್‌ಹಾಲು ಕ್ಲಾಕ್‌ಟವರು ಮೊದಲಾದ ಸ್ಥಳಗಳ ಮೇಲೆಲ್ಲಾ ವಿದ್ಯುದ್ದೀಪಾಲಂಕಾರವು ರಮಣೀಯವಾಗಿ ಮಾಡಲ್ಪಟ್ಟಿದ್ದಿತು. ಚಾಮುಂಡಿಬೆಟ್ಟದ ಮೇಲೆ ೪೦ ಅಡಿಯೆತ್ತರದ ಕಿರೀಟ (ಕ್ರೌನ್) ದಾಕೃತಿಯಲ್ಲಿ ವಿದ್ಯುದ್ದೀಪರಾಜಿಯನ್ನು ಏರ್ಪಡಿಸಿದ್ದುದು ಸುಂದರವಾಗಿ ಕಾಣುತ್ತಿದ್ದಿತು. ಮೂರುಜಾವದಲ್ಲಿ ಶ್ರೀಮನ್ಮಹಾರಾಜರು ಮೋಟಾರಿನ ಮೇಲೆ ಯುವಸಾರ್ವಭೌಮರನ್ನು ಕುಳ್ಳಿರಿಸಿಕೊಂಡು ಪಟ್ಟಣದಲ್ಲಿ ಪ್ರೇಕ್ಷಣೀಯವಾದ ಸ್ಥಳಗಳನ್ನು ತೋರಿಸಿಕೊಂಡು ಬಂದರು. ಜೂಜಿನಬೋರೆಯ ಬಯಲಿನಲ್ಲಿ ಪೋಲೋ ಆಟದಲ್ಲಿ ಯುವಸಾರ್ವಭೌಮರು ಬೆರೆದಿದ್ದರು. ರಾತ್ರಿ ೮ ಗಂಟೆಗೆ ರೆಸಿಡೆನ್ಸಿಯಲ್ಲಿ ದಿವ್ಯವಾದ ಅರಸೌತಣವು ಜರುಗಿತು. ಅವರ ಪಙ್ಕ್ತಿಗೆ ನೂರಾರು ಮಂದಿ ಸಮ್ಮಾನ್ಯ ಯುರೋಪ್ಯಾತಿಥಿಗಳು ಕುಳಿತು ಶ್ಲಾಘನೀಯ ಭೋಜ್ಯಭಕ್ಷ್ಯಾದಿಗಳ ಆರೋಗಣೆಮಾಡಿದರು. ಹೊರಗೆ ಮನೋಹರವಾಗಿ ಬ್ಯಾಂಡು ಬಾಜಿಸಲ್ಪಡುತ್ತಿದ್ದಿತು. ೯|| ಗಂಟೆಗೆ ಭೋಜನವು ಮುಗಿದಿತು. ಅಷ್ಟು ಹೊತ್ತಿಗೆ ಶ್ರೀಮನ್ಮಹಾರಾಜ ಸಹೋದರರೂ ದಿವಾನರೇ ಮೊದಲಾದ ಅಧಿಕಾರಿಗಳೂ ದಯಮಾಡಿಸಿದರು. ಆ ಸಮಾರಂಭ ಕಾಲದಲ್ಲಿ ಶ್ರೀಮನ್ಮಹಾರಾಜರು ಒಂದು ಭಾಷಣವನ್ನು ಗಂಭೀರವಾಗಿ ಮಾಡಿ ಶ್ರೀಮದ್ಯುವಸಾರ್ವಭೌಮರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸರ್ವರೂ ಮಧುಪಾನಮಾಡಬೇಕೆಂದು ಕೋರಿದರು. ಅನಂತರ ಯುವಸಾರ್ವಭೌಮರು ಎದ್ದು ಪ್ರತಿ ಭಾಷಣವನ್ನು ಮಾಡಿ ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯಿಂದ ಸರ್ವರೂ ಮಧುಪಾನಮಾಡಬೇಕೆಂದು ಕೋರಿದರು.

ಶುಕ್ರವಾರದ ದಿವಸ ಯುವಸಾರ್ವಭೌಮರೂ ಅವರ ಪರಿವಾರದವರೂ ನಮ್ಮ ಶ್ರೀಮನ್ಮಹಾರಾಜ ಸಹೋದರರೊಡನೆ ಶ್ರೀರಂಗಪಟ್ಟಣಕ್ಕೂ ಕೃಷ್ಣರಾಜಸಾಗರಕ್ಕೂ ದಯಮಾಡಿಸಿ ನೋಡಿಕೊಂಡು ಬಂದರು. ರಾತ್ರಿ ರೆಸಿಡೆನ್ಸಿಯಲ್ಲಿ ದಿವ್ಯವಾದ ಔತಣವಾದನಂತರ ದೀಪಾಲಂಕಾರ ರಮಣೀಯವಾಗಿದ್ದ ಕೋಟೆಗೆ ೧೦ ಗಂಟೆಯ ಹೊತ್ತಿಗೆ ಸಪರಿವಾರರಾಗಿ ದಯಮಾಡಿಸಿದರು, ಶ್ರೀಮನ್ಮಹಾರಾಜರು ರಸಿಡೆನ್ಸಿಯಿಂದ ಒಡನೆ ಕರೆದುತಂದು ಸಜ್ಜು ಸಭಾಮಂಟಪಕ್ಕೆ ಕರೆದುಕೊಂಡು ಅಣಿಯಾಗಿದ್ದ ಸೋಫಾದ ಮೇಲೆ ಕುಳ್ಳಿರಿಸಿ ತಾವೂ ಕುಳಿತರು. ಪರಿವಾರವೆಲ್ಲಾ ಕುಳಿತಿತು. ಅರಮನೆಯ ಕೋಲಣ ಮತ್ತು ಮುಂದಣ ಅಂಗಳದ ವಿದ್ಯುದ್ದೀಪಗಳೆಲ್ಲಾ ಆರಿಸಲ್ಪಟ್ಟು ಅರಮನೆ ಬಾಲ್ಯದ ಸೈನ್ಯದವರ ಪಂಜಿನ ಕವಾಯಿತು ಸೊಗಸಾಗಿ ನಡೆದುದನ್ನು ಪರಾಮರಿಸಿ ಆನಂದಪಟ್ಟರು. ಮುಗಿದ ಕೂಡಲೇ ಆಂಗ್ಲ ಕಿರೀಟದಂತೆ ಚಿತ್ರವಿಚಿತ್ರ ವರ್ಣದ ಮದ್ದುಗಳಿಂದ ರಚಿಸಲ್ಪಟ್ಟಿದ್ದ ಮದ್ದುಗಾಣಿಕೆಯ ಸಾಮಾನು ಹೊತ್ತಿಸಲ್ಪಟ್ಟಿತು. ವಿದ್ಯುದ್ದೀಪಗಳು ಸರ್ವತ್ರ ಥಟ್ಟನೆ ಹೊತ್ತಿಕೊಂಡುವು. ಮುಂಭಾಗದ ಬಯಲಿನಲ್ಲಿ ಅರ್ಧಗಂಟೆಯ ಕಾಲ ಅರಮನೆಯ ಕಾರೇಗಾರದಿಂದಲೇ ನಿರ್ಮಿತವಾಗಿದ್ದ ಪರಿಪರಿಯ ಬಾಣಗಾರಿಕೆಯು ಮನೋಹರವಾಗಿ ನಡೆದಿತು. ಅದನ್ನೆಲ್ಲಾ ಪರಾಮರಿಸಿಕೊಂಡು, ಅಂಬಾವಿಲಾಸಕ್ಕೆ ಚಿತ್ತೈಸಿ, ಅಲ್ಲಿ ಅರ್ಧಗಂಟೆಯ ಕಾಲವಿದ್ದು ಅರಮನೆಯ ಸಂಗೀತ ವಿದ್ವಾಂಸರುಗಳಿಂದ ನಡೆಯಿಸಲ್ಪಟ್ಟ ಆರ್ಕೆಸ್ಟ್ರಾ ಮೊದಲಾದ ಬ್ಯಾಂಡು ಮೊದಲಾದ ಸಂಗೀತಗಳ ಶ್ರವಣವನ್ನು ಮಾಡಿ ಆನಂದಪಟ್ಟು ಶ್ರೀಮನ್ಮಹಾರಾಜರಿಂದ ಸತ್ಕೃತರಾಗಿ ಅವರೊಡನೆ ೧೧| ಗಂಟೆಗೆ ಅರಮನೆಯನ್ನು ಬಿಟ್ಟು ರೆಸಿಡೆನ್ಸಿಗೆ ದಯಮಾಡಿಸಿದರು.

ಶನಿವಾರ ಬೆಳಗ್ಗೆ ಆರೋಗಣೆಯನ್ನು ಮುಗಿಸಿಕೊಂಡು ಶ್ರೀಮನ್ಮಹಾರಾಜರೊಡನೆ ಶಿಕಾರಿಗೆ ಹೋಗಿದ್ದು ಬಳಿಕ ೧೨| ಗಂಟೆಗೆ ಕಾರಾಪುರದ ಕ್ಯಾಂಪಿಗೆ ಮೋಟಾರುಗಳಮೇಲೆ ಬೇಟೆಗಾಗಿ ದಯಮಾಡಿಸಿದರು. ಹೀಗೆ ರಾಜಧಾನಿಯಲ್ಲಿ ನಡೆದ ಸತ್ಕಾರದ ಏರ್ಪಾಟುಗಳೆಲ್ಲಾ ಸರ್ವಸಮರ್ಪಕವಾಗಿ ಜಯಶೀಲವಾದುವೆಂದು ಹೇಳಲು ಆನಂದವಾಗಿರುತ್ತದೆ. ಮಾಡಿದ ಉದ್ದೇಶವು ನ್ಯೂನಾತಿರೇಕವಿಲ್ಲದೆ ಕೊನೆಗಂಡುದಕ್ಕಾಗಿ ಇದರಲ್ಲಿ ಅಂಗಭೂತರಾಗಿದ್ದವರ ಶ್ರಮವೆಲ್ಲಾ ಸಾರ್ಥಕವಾಯಿತು. ಸೋಮವಾರದ ದಿವಸ ಅಲ್ಲಿಂದ ಯುವಸಾರ್ವಭೌಮರು ರಾಜಧಾನಿಗೆ ದಯಮಾಡಿಸಿ, ಅದೇ ರಾತ್ರಿ ೧೧ ಗಂಟೆಯಮೇಲೆ ಹೊಗೆಬಂಡಿಯನ್ನೇರಿ ನೇರವಾಗಿ ಹೈದರಾಬಾದು ಸಂಸ್ಥಾನಕ್ಕೆ ಬೆಂಗಳೂರಿನಮೇಲೆ ಪ್ರಯಾಣಮಾಡುವವರಾಗಿದ್ದಾರೆ.

ಒಳದೇಶದ ವೃತ್ತಾಂತಗಳು.

ಶ್ರೀ ಯುವಸಾರ್ವಭೌಮರು ನಮ್ಮ ದೇಶಕ್ಕೆ ದಯಮಾಡಿಸಿದ ಗೌರವಾರ್ಥವಾಗಿ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ ತಾ|| ೧೮-೧೯ ಈ ಎರಡು ದಿನಗಳಲ್ಲೂ, ರಾಜಧಾನಿಯಲ್ಲಿ ೧೮-೧೯-೨೦-೨೧ ಹೀಗೆ ನಾಲ್ಕು ದಿನಗಳೂ ವಿಶ್ರಾಂತಿಕೊಡಲ್ಪಟ್ಟಿದ್ದಿತು. ಮತ್ತು ಬೆಂಗಳೂರು ಮೈಸೂರು ಕಾರಾಗೃಹಗಳಲ್ಲಿರುವ ಬಂದಿಗಳಲ್ಲಿ ೧೦೦ ಕ್ಕೆ ೧೦ ಮಂದಿಯನ್ನು ಬಿಡುಗಡೆಮಾಡುವಂತೆಯೂ ಕೆಲವರ ಶಿಕ್ಷಾದಿನಾವಧಿಯನ್ನು ಕಡಿಮೆಮಾಡುವಂತೆಯೂ ಶ್ರೀಮನ್ಮಹಾರಾಜರು ಅಪ್ಪಣೆಮಾಡಿದ ಪ್ರಕಾರವೇ ನೆರವೇರಿಸಲ್ಪಟ್ಟಿತು.

೮ ಡಿಸ್ಟ್ರಿಕ್ಟುಗಳಿಂದಲೂ ರಾಜಧಾನಿಗೆ ಬಹುಶಃ ೧ ಸಾವಿರ ಮಂದಿಗಳಮೇಲೆಯೇ ಪೊಲೀಸರು ಬರಮಾಡಲ್ಪಟ್ಟಿದ್ದರು. ರಾಜಧಾನಿಯಲ್ಲೂ, ಕೆಡ್ಡಾಕ್ಯಾಂಪು, ಶ್ರೀರಂಗಪಟ್ಟಣ, ಕೃಷ್ಣರಾಜಸಾಗರದ ಮಾರ್ಗಗಳಲ್ಲೂ ಪೊಲೀಸುರಕ್ಷಣೆಯ ಏರ್ಪಾಟು ಸಮರ್ಪಕವಾಗಿ ಮಾಡಲ್ಪಟ್ಟಿದ್ದಿತು. ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮ|| ಎ. ಸುಬ್ರಹ್ಮಣ್ಯಯ್ಯರವರು ಬೆಂಗಳೂರಿನಿಂದಲೂ ಯುವರಾಜರ ಸ್ಪೆಷಲ್‌ಬಂಡಿಯಲ್ಲೇ ಕಾವಲಾಗಿ ರಾಜಧಾನಿಗೆ ದಯಮಾಡಿಸಿದರು. ಬೆಂಗಳೂರಿಂದ ರಾಜಧಾನಿಯವರೆಗೂ ಲೋಹಮಾರ್ಗದಲ್ಲಿ ಆಯಾ ತಾಲ್ಲೂಕು ರೆವಿನ್ಯೂ ಪೊಲೀಸ್ ಅಧಿಕಾರಿಗಳು ತಕ್ಕಕಾವಲನ್ನು ಸಮರ್ಪಕವಾಗಿ ಮಾಡಿದ್ದರು.

ಇಂಥ ವಿಶೇಷಕಾಲಗಳಲ್ಲಿ ಸಂಮಾನ್ಯಾತಿಥಿಗಳನ್ನು ರಾಜಧಾನಿಗೆ ಕರೆತರುವುದಕ್ಕೆ ತಕ್ಕ ಸೆಲೂನ್‌ಬಂಡಿಯನ್ನು ನಮ್ಮ ಸರ್ಕಾರದವರು ಸೌತಿಂಡಿಯನ್ ರೈಲ್ವೆಯವರಿಂದ ಈಸಿಕೊಳ್ಳುತ್ತಿದ್ದರು. ಈ ತೊಂದರೆಯನ್ನು ತಪ್ಪಿಸಿ ಸ್ವಂತದಲ್ಲೇ ಒಂದು ಬಂಡಿಯನ್ನಿಟ್ಟುಕೊಂಡಿದ್ದರೆ ಮಹಾರಾಜರ ಪ್ರಯಾಣಕ್ಕೂ ಅನುಕೂಲಿಸುವುದೆಂದು ಯೋಚಿಸಿ ೧ ಲಕ್ಷ ರೂ. ಗಳ ಮೇಲೆಯೇ ಮುಟ್ಟಿಸಿ, ನಮ್ಮ ಸ್ವದೇಶದ ಕಾರೇಗಾರರಿಂದಲೇ ಮೈಸೂರು ರೈಲ್ವೆ ವರ್ಕ್‌ಷಾಪಿನಲ್ಲಿ ೩|| ತಿಂಗಳಿಂದ ಕಟ್ಟಿಸಿ ಮುಗಿಸಿದರು. ಆ ಬಂಡಿಯಲ್ಲೇ ಯುವಸಾರ್ವಭೌಮರು ರಾಜಧಾನಿಗೆ ದಯಮಾಡಿಸಿದರು. ಇದರ ಒಳಗಣ ಅಲಂಕಾರವೂ ಸೌಕರ್ಯಗಳೂ ಹೊರಗಣ ಅಂದಕ್ಕೆ ಮನೋಹರವಾಗಿರುತ್ತವೆ.

ನೋಟೀಸು.

ಶಿವಮೊಗ್ಗ ಡಿಸ್ಟ್ರಿಕ್ಟ್ ಹೊನ್ನಾಳಿ ತಾಲ್ಲೂಕು ನೇಮತಿವಾಸಿಗಳಾದ ಚನ್ನಹಳ್ಳಿ ಗಾಣಿಗರ ದೊಡ್ಡಲಿಂಗಪ್ಪ ಮತ್ತು ಇವರ ಮಗ ಮಹಲಿಂಗಪ್ಪ ಇವರು ಇದೇ ನೇಮತಿ ಕೇಣಿ ಹಾಲಪ್ಪ ದುಮ್ಮಿ ಶಂಕರಪ್ಪ ಇವರ ದಲ್ಲಾಲಿ ಅಂಗಡಿಯಿಂದ ತಾ|| 28-6-21 ರಲ್ಲಿ ಒಪ್ಪಂದಮಾಡಿಕೊಂಡ ಕಂಕನಹಳ್ಳಿಯವರ ಸಣ್ಣ ಮಳಿಗೆಯಲ್ಲಿದ್ದ ಮಾರಾಟ ಬೆಲ್ಲದ ಪೈಕಿ ಕೆಲ ಮುಟ್ಟಿಗೆ ದಫಾವಾರಾಗಿ ತೂಕಮಾಡಿಸಿಕೊಂಡು ಆ ಬಾಬತು ಒಟ್ಟು ಲೆಕ್ಕಾಚಾರವಾದ ಮೊಬಲಗಿನಲ್ಲಿ ವಸೂಲ್ ಕೊಟ್ಟದ್ದು ವಜಾ ಜಾತಾಬಾಕಿ 973-5.5 ಪೈಗಳನ್ನು ಬಾಕಿ ನಿಲ್ಲಿಸಿಕೊಂಡು ಆ ಮೊಬಲಗನ್ನ ತಗಾದೆ ಮಾಡಿದಾಗ್ಯೂ ವಸೂಲ್ ಕೊಡದೆ ಇರುವದರಿಂದಲೂ ಬಾಕಿ ನಿಂತಿರುವ ಒಪ್ಪಂದದ ಬಾಬತು ಸುಮಾರು 320 ಮಣ ಬೆಲ್ಲವನ್ನು ತೂಕಮಾಡಿಸಿಕೊಂಡು ತಮ್ಮ ಸ್ವಾಧೀನ ತೆಗೆದುಕೊಳ್ಳದೇಲೂ ಆ ಬಾಬತು ಮೊಬಲಗನ್ನು ವಸೂಲ್ ಕೊಡದೇಲೂ ಲಾಯರ್ ನೋಟೀಸ್ ಕೊಡಿಸಿದಾಗ್ಯೂ ಈವರೆಗೂ ವ್ಯವಸ್ಥೆ ಮಾಡಿಕೊಳ್ಳದೆ ತಪ್ಪಿ ಹೋಗಿರುವ ಪ್ರಯುಕ್ತ ನೇಮತಿಯಲ್ಲಿರುವ ಸದರಿ ಕಂಕನಹಳ್ಳಿಯವರ ಸಣ್ಣ ಮಳಿಗೆಯಲ್ಲಿ ಸಿಲ್ಕು ನಿಂತಿರುವ ಸದರಿಯವರ ಒಪ್ಪಂದದ ಬಾಬತು ಬಾಕಿ ವಿಶಿಷ್ಟು ಬೆಲ್ಲವನ್ನೂ ಕ್ರಮವಾಗಿ ತಾ|| 30-1-22ನೆ ಸೋಮವಾರ ಮಧ್ಯಾಹ್ನ 1 ಗಂಟೆ ಲಾಗಾಯಿತು 5 ಗಂಟೆವರೆಗೆ ಪಬ್ಲಿಕ್ಕಾಗಿ ಹರಾಜು ಮಾಡಿಸಲ್ಪಡುತ್ತೆ. ಖಾಯಿಷ್ ಇರತಕ್ಕವರು ಆ ದಿನ ಹಾಜರಾಗಿ ದರಖಾಸ್ತು ಮಾಡಬೇಕಾಗಿ ಕೋರಲ್ಪಟ್ಟಿರುತ್ತೆ. ಹರಾಜು ಷರತ್ತುಗಳನ್ನು ಆ ದಿವಸವೇ ತಿಳಿಸಲ್ಪಡುತ್ತೆ.

ನೇಮತಿ ಕೇಣಿದ ಹಾಲಪ್ಪನ ರುಜು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಜಗದ್ಗುರು ಶ್ರೀ ಗಿರಿರಾಜ ಸಿಂಹಾಸನ ಸ್ಥಿರಪಟ್ಟಾಧ್ಯಕ್ಷರ ಪ್ರಕಟನೆ ಎಂದು ಬಂದಿರುವ ಪತ್ರವ್ಯವಹಾರದಲ್ಲಿ ಸಂಸ್ಥಾನದ ಸ್ಟಾಂಪ್ ಮೊಹರುಗಳಿಲ್ಲವಾದುದರಿಂದ ಪ್ರಕಟಿಸಲಾರೆವು. ಪ. ಪ್ರ.

ತಿದ್ದುವಿಕೆ—ಕಳೆದ ಸಂಚಿಕೆಯ ೩ನೆ ಪುಟದ ೧ ಮತ್ತು ೩ನೆ ಪಂಗ್ತಿಗಳಲ್ಲಿ ಸಾಮಾನ್ಯಗೃಹಸ್ಥರು ಎಂದು ತಪ್ಪು ಬಿದ್ದಿರುವುದನ್ನು ಸಂಮಾನ್ಯಗೃಹಸ್ಥರು ಎಂದು ತಿದ್ದಿಕೊಳ್ಳಬೇಕಾಗಿ ವಾಚಕರಿಗೆ ವಿನಂತಿ.

ಪ. ಪ್ರ.

ಪಂಚಮೋದ್ಧರಣ.

ಕ್ಲೋಸ್‌ಪೇಟೆ ಸಬ್‌ತಾಲ್ಲೂಕು ಬನ್ನಿಕುಪ್ಪೆಯಲ್ಲಿ ಕಳೆದವಾರ ಆ ಊರಿನ ಪಟೇಲರಾದ ಮ|| ರಾ|| ಬಿ. ಚೋಡಯ್ಯಗೌಡರು ಪಂಚಮರ ಸಭೆಯೊಂದನ್ನು ಸೇರಿಸಿ ಮದ್ಯಪಾನದಿಂದಾಗುವ ಹಾನಿಗಳನ್ನು ಕುರಿತು ಮನಗಾಣುವಂತೆ ಬುದ್ಧಿವಾದವನ್ನು ಹೇಳಿದರು. ಮದ್ಯಪಾನದಿಂದಾಗುವ ನಾನಾಬಗೆಯ ನಷ್ಟಕಷ್ಟ ಕುಂದುಕೊರತೆಗಳನ್ನು ತಿಳಿದುಕೊಂಡ ಮೇಲೆ ಸುಮಾರು ನೂರುಮಂದಿ ಪಂಚಮರು ದೇವಸ್ಥಾನಕ್ಕೆ ಹೋಗಿ ಇನ್ನುಮೇಲೆ ನಿಷಾದ್ರವ್ಯ ಸೇವನೆಮಾಡುವುದಿಲ್ಲವೆಂದು ಶಪಥಮಾಡಿಕೊಂಡರು. ಅಲ್ಲದೆ ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ ವಿದ್ಯೆಕಲಿಸುತ್ತೇವೆಂದೂ ಸಾಧ್ಯವಾದಷ್ಟುಮಟ್ಟಿಗೂ ಶುಚಿಯಾಗಿರುತ್ತೇವೆಂದೂ ವಾಗ್ದಾನಮಾಡಿರುತ್ತಾರೆ. ಮ|| ರಾ|| ಚೋಡಯ್ಯಗೌಡರು ಇವರಿಗಾಗಿ ಒಂದು ಸ್ಕೂಲನ್ನು ಏರ್ಪಡಿಸಿಕೊಡಬೇಕೆಂದು ಪ್ರಯತ್ನಿಸುತ್ತಿರುತ್ತಾರೆ. ಅನೇಕರು ಪಂಚಮೋದ್ಧಾರಕರೆಂದು ದೊಡ್ಡದೊಡ್ಡ ಸಭೆಗಳನ್ನುಮಾಡಿ ಸೂರುಹಾರುವಂತೆ ಉಪನ್ಯಾಸ ಮಾಡುವುದುಂಟು. ಅವರ ಉಪನ್ಯಾಸವು ಪಂಚಮರ ಜೋಪಡಿಯವರೆಗೂ ಹೋಗುವುದೇ ಎಂಬುದು ಸಂದೇಹಾಸ್ಪದವಾಗಿದೆ. ಮತ್ತೆ ಕೆಲ ಪಂಚಮೋದ್ಧಾರಕರು ದೊಡ್ಡದೊಡ್ಡ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುತ್ತಾರೆ. ಈ ಲೇಖನಗಳನ್ನು ಓದಿ ಓದಿದ ಗಂಧವೇ ತಿಳಿಯದ ಪಂಚಮರೆಷ್ಟುಮಂದಿ ಉತ್ತಮಸ್ಥಿತಿಗೆ ಬಂದಿರುವರೋ ತಿಳಿಯದು. ಅಂತಹ ಉಪನ್ಯಾಸಕರೂ ಲೇಖಕರೂ ಪಂಚಮೋದ್ಧಾರಕರಾದ ಮೇಲೆಕಂಡ ಮ|| ರಾ|| ಚೋಡಯ್ಯಗೌಡರಂತೆ ಕೆಲಸಮಾಡಿ ತೋರಿಸಿದರೆ ಸಾರ್ಥಕ.

ದೇಶವತ್ಸಲರ ಸೇವಕ.

ಬ್ರಾಹ್ಮಣ ಗುಮಾಸ್ತರ ಹಾವಳಿ.

ಕೊರಟಗೆರೆ ಸಬ್‌ತಾಲ್ಲೂಕು ರಿಜಿಸ್ಟ್ರೇಷನ್ ಗುಮಾಸ್ತರಾಗಿ ಹೊಸಬರೊಬ್ಬರು ಈ ತಾಲ್ಲೂಕಿಗೆ ದಯಮಾಡಿಸಿ ಸುಮಾರು ೧೦-೧೫ ದಿವಸಗಳು ಮಾತ್ರವೇ ಆಗಿದ್ದಾಗ್ಗೂ ಸ್ಥಳದಲ್ಲಿ ಬೇರೂರುವುದಕ್ಕೆ ಮೊದಲೇ ಇವರ ಅವಾಂತರವು ಅನಿಷ್ಟವೆಂದು ವರ್ಣಿಸಲಸದಳ. ಇವರು ಸ್ಥಳಾಸ್ಥಳದ ನಿಜಪರಿಸ್ಥಿತಿಯನ್ನರಿಯದ ಕೆಲಸಮಾಡುವುದರಲ್ಲಿ ತುಂಬಾ ಸಮರ್ಥರಾಗಿ ಕಾಣುತ್ತಾರೆ. ೫-೧-೨೨ನೆ ದಿನ ನಾನು ಎರಡು ರೂಪಾಯಿ ಕಾಗದವನ್ನು ರಿಜಿಸ್ಟರ್ ಮಾಡಿಸುವುದಕ್ಕಾಗಿ ಸದರಿಯವರಲ್ಲಿ ನಂಬರ್ ಹಾಕಿಕೊಳ್ಳಲು ಕೊಟ್ಟೆ; ದಕ್ಷಿಣೆ ಎರಡು ರೂಪಾಯಿ ಕೊಡುವಂತೆ ಕೇಳಿದರು. "ಯಾವ ದಕ್ಷಿಣೆ ಸ್ವಾಮಿ?" ಎಂದು ನಾನು ಕೇಳಿದ್ದಕ್ಕೆ ನಿಮ್ಮ ರಿಜಿಸ್ಟರ್ ಪತ್ರದ ದಕ್ಷಿಣೆ ಎಂದೂ ಮುಂತಾದ ಅಪಹಾಸ್ಯದ ವಿಜೃಂಭಣೆಯಿಂದ ಮಾತನಾಡುತ್ತ ದಕ್ಷಿಣೆಯಿಲ್ಲದೆ ಕಾರ್ಯವಾಗುವುದಿಲ್ಲವೆಂಬ ಸದುತ್ತರದಿಂದ ಕಾಗದ ವಾಪಸು ಕೊಟ್ಟೇಬಿಟ್ಟರು. ಸದರಿ ವಿಚಾರವನ್ನು ಮೇಲ್ಪಟ್ಟ ಆಫೀಸರ ಅವಗಾಹನೆಗೆ ತಂದಾಗ್ಗೂ ಗಮನ ಕೊಡುವಂತಿಲ್ಲ. ಆಫೀಸೆಲ್ಲವೂ ಈ ಜನಗಳಿಂದಲೇ ಕೂಡಿದ್ದು ಆ ದಿವಸ ನನ್ನ ದುರದೃಷ್ಟದಿಂದ ಯಾವದೊಂದು ಮಾತನಾಡುವುದಕ್ಕೂ ಅವಕಾಶವಿಲ್ಲದೆ ನಿರಾಶನಾಗಿ ವಾಪಸ್ಸು ಬಂದೆನು. ನಾನು ಹೋಗಿದ್ದ ದಿವಸ ಪತ್ರಗಳ ದಕ್ಷಿಣೆಯೆಂಬ ಒಂದು ಕಾಗದದ ಪೊಟ್ಟಣದಲ್ಲಿ ಸುಮಾರು ೧೫-೨೦ ರೂ. ಗಳಿವೆಯೆಂಬುದನ್ನೂ ಕೂಡ ತೋರಿಸಿದರು. ಅಹಾ! ಇವರ ಧೈರ್ಯವೆಷ್ಟಿರಬಹುದು? ಪಬ್ಲಿಕ್ ಆಫೀಸುಗಳಲ್ಲೇ ಈ ತರಹ ಮಾತುಗಳಿಗೆ ಅವಕಾಶ ದೊರೆತಿರುವ ವಿಷಯದಲ್ಲಿ ಸರ್ಕಾರದವರ ಬಿಗಿಯ ನಿಜಾಂಶವು ಪ್ರತ್ಯಕ್ಷತಃ ಪ್ರಕಾಶಗೊಂಡಂತಾಯಿತು. ಈ ಲಂಚವೆಂಬ ಪಿಶಾಚದ ಹಾವಳಿಯಿಂದ ಬಹಳಜನ ಗಾಬರಿಗೊಂಡು ಅಹರ್ನಿಶಿಯೂ ವ್ಯಥೆಗೊಳ್ಳುತ್ತಿರುವ ಅಂಶವು ಈ ಹೊತ್ತಿಗೇನೂ ಹೊಸದಲ್ಲ. ಹಿಂದೆ ಸದರಿ ಸ್ಥಾನದಲ್ಲಿದ್ದ ನಿಜಬ್ರಾಹ್ಮಣರಾದ ಮ|| ವೆಂಕಟಾಚಲಯ್ಯನವರು ಬಹಳ ನಿಸ್ಪೃಹರಾಗಿಯೂ ಜನಾನುರಾಗಿಗಳಾಗಿಯೂ ಕೆಲಸಮಾಡುತ್ತ ತಾಲ್ಲೂಕಿನ ರೈತಪ್ರಜೆಗಳ ಪ್ರೀತಿವಿಶ್ವಾಸಕ್ಕೆ ತುಂಬಾ ಪಾತ್ರರಿದ್ದರು. ಇದಲ್ಲವೆ ನಿಜಬ್ರಾಹ್ಮಣ್ಯ? ಇವರಿಗೆ ವರ್ಗವಾದದ್ದು ಮಹದ್ವಿಷಾದವಿಷಯ. ಸದರಿಯವರು ಇನ್ನುಮೇಲಾದರೂ ಇಂಥ ದುರ್ಮಾರ್ಗಕ್ಕೆ ಅವಕಾಶಕೊಡದೆ ಸಭ್ಯರೀತಿಯಿಂದ ವರ್ತಿಸುತ್ತ ಪ್ರಜೆಗಳ ಪೂರ್ಣವಿಶ್ವಾಸಗಳಿಗೆ ಪಾತ್ರರಾಗುತ್ತಾರೆಂದು ನಂಬಿ ನಿರೀಕ್ಷಿಸುತ್ತೇನೆ. ಅಲ್ಲದೆ ಈ ವಿಷಯವನ್ನು ಮೇಲ್ಪಟ್ಟ ಆಫೀಸರವರ ಗಮನಕ್ಕೆ ತಂದು ಧರ್ಮರೀತಿಯಲ್ಲಿ ಸದರಿಯವರು ನಡೆಯುವಂತೆ ಏರ್ಪಾಡು ಮಾಡಿಸಿಕೊಡುತ್ತಾರೆಂದು ನಂಬಿರುತ್ತೇನೆ.

ಒಬ್ಬ ಬಡರೈತ.

ಪಕ್ಷಪಾತ.

ಅಯ್ಯಾ,

ಸಕಲೇಶಪುರದ ರೆವಿನ್ಯೂ ಸಬ್‌ಡಿವಿಷನ್ ಆಫೀಸರವರು ನೌಕರಿಗಳ ಮೊಕರೂರಿ ವಿಚಾರದಲ್ಲಿ ನ್ಯಾಯವಾಗಿ ಪ್ರವರ್ತಿಸದೆ ಎಷ್ಟರಮಟ್ಟಿಗೆ ಸ್ವಮತಾಭಿಮಾನವನ್ನು ತೋರ್ಪಡಿಸುತ್ತಿರುತ್ತಾರೆಂಬುದಕ್ಕೆ ಈಗ ಸ್ವಲ್ಪದಿನಗಳಲ್ಲಿ ಇವರು ಮಾಡಿರುವ ಒಂದು ನೌಕರಿ ವಿಚಾರದಲ್ಲಿ ಕೆಳಗೆಕಂಡ ನಿಜಾಂಶಗಳನ್ನು ಹೊರಪಡಿಸಲು ತುಂಬಾ ಕುತೂಹಲವಾಗಿದೆ. ಈ ಲೇಖನದ ಮುಖ್ಯೋದ್ದೇಶವು ಮೇಲ್ಕಂಡ ಸಂದರ್ಭದಲ್ಲಿ ಆಶಾಭಗ್ನರಾಗಿ ಅನ್ಯಾಯಕ್ಕೊಳಗಾಗಿರುವವರ ಅಹವಾಲನ್ನು ಮೇಲಿನವರಾದರೂ ಚೆನ್ನಾಗಿ ಪರಿಶೀಲಿಸಿ ತೀರ್ಮಾನಿಸಬೇಕೆಂಬುದೇ ಆಗಿದೆ. ಇಲ್ಲಿನ ಆಕ್ಟ್ರಾಯಿಮುತ್ಸದ್ದಿ ಕೆಲಸಕ್ಕೆ ಹೊಳೇನರಸೀಪುರದಲ್ಲಿ ದಫ್ತರ್‌ಬಂದಿಯಾಗಿದ್ದವರನ್ನು ೧೨ ರೂ. ತಲಬಿನಮೇಲೆ ಆಕ್ಟಿಂಗಾಗಿ ನೇಮಿಸಿ ಅವರು ಬಂದು ಎರಡೂವರೆ ವರ್ಷಗಳಾಯ್ತು. ಇವರಿಗೆ ಕನ್ನಡವನ್ನು ಓದಲೂ ಬರೆಯಲೂ ತಕ್ಕಮಟ್ಟಿಗೆ ಚನ್ನಾಗಿಬರುತ್ತದೆ. ಇಂಗ್ಲೀಷಿನ ಗಂಧವೇ ಇಲ್ಲ. ಇಂಥವರಿಗೆ ೨೦ ರೂ. ತಲಬಿನ ಮುನಿಸಿಪಲ್ ಗುಮಾಸ್ತೆ ಕೆಲಸವನ್ನು ಖಾಯಮಾಗಿ ದಯಪಾಲಿಸಿದ್ದಾರೆ. ಈ ತವಂಗದಲ್ಲಿ ೧೫-೧-೨೦ ರೂ. ಖಾಲಿಬಿದ್ದದ್ದಕ್ಕೂ ಕೂಡ ಏಕದಂ ೨೦ ರೂ. ಭರ್ತಿಮಾಡಿ ಮೇಲ್ಕಂಡಂತೆ ಸ್ಥಳವನ್ನು ಉತ್ಪತ್ತಿಮಾಡಿಕೊಟ್ಟಿದ್ದಾರೆ. ಕೆಲಸಕಾರಗಳು ಹೇಗೆ ನಡೆಯುತ್ತವೆಂಬುದು ಖುದ್ದು ನೋಡಿದಲ್ಲದೆ ಬರೆಯುವದರಿಂದ ಪ್ರಯೋಜನವಿಲ್ಲ. ಇವರು ಸ್ವಜನರಾಗಿರುವದರಿಂದಲೇ ನಮ್ಮ ಸಾಹೇಬರ ದೃಷ್ಟಿಯು ಇವರಮೇಲೆ ಅತಿಸೌಮ್ಯಭಾವದಿಂದಿರುವದು. ಇವೆಲ್ಲಾ ಇರಲಿ. ಮೇಲ್ಕಂಡ ಕೆಲಸಕ್ಕೆ ಉಮೇದುವಾರರಾಗಿ ಬ್ರಾಹ್ಮಣರಾದ ಅಂದರೆ ಸ್ವಜನವಲ್ಲದ ಇಂಗ್ಲೀಷು ಲೋವರ್ ಸೆಕಂಡರಿ ಮತ್ತು ರೆವಿನ್ಯೂ ಪ್ಯಾಸುಮಾಡಿ ೧೨ ರೂ. ಖಾಯಂ ತಲಬಿನವರೊಬ್ಬರೂ ಹಿಂದೆ ವಿಲೇಜ್ ಇಂಪ್ರೂವ್‌ಮೆಂಟ್ ಕ್ಲಾರ್ಕಾಗಿದ್ದು ೨೦ ರೂ. ತೆಗೆಯುತ್ತಿದ್ದ ಇಂಗ್ಲೀಷ್ ಲೋವರ್‌ಸೆಕಂಡರಿ ಪ್ಯಾಸುಮಾಡಿ ೧೨ ರೂ. ತಲಬಿನಲ್ಲಿರುವ ಮತ್ತೊಬ್ಬರೂ ಈಮೇರೆ ಇಬ್ಬರು ಬ್ರಾಹ್ಮಣರೂ ಅಲ್ಲದೆ ಎಂಟ್ರೆನ್ಸ್ ಮತ್ತು ಇಂಗ್ಲೀಷ್ ಲೋವರ್‌ಸೆಕಂಡರಿ ಪ್ಯಾಸ್ಮಾಡಿದ ಇಬ್ಬರು ಬ್ರಾಹ್ಮಣೇತರರೂ ಈರೀತಿ ನಾಲ್ಕುಜನರಿದ್ದಾಗ್ಯೂ ಇವರನ್ನೆಲ್ಲಾ ನಾಲಾಯಖ್‌ಮಾಡಿ ಸ್ವಮತಾಭಿಮಾನದಿಂದ ಯಾವಪ್ಯಾಸೂ ಇಲ್ಲದ ಮತ್ತೂ ಕೆಲಸದ ಅನುಭವವೂ ಸಂಕೋಚವಾಗುಳ್ಳ ಕ್ವಾಲಿಫಿಕೇಷನ್ನಿಗೆ ಹೆಚ್ಚಿಗೆಪ್ರಾಶಸ್ತ್ಯ ಕೊಟ್ಟಿದ್ದಾರೆ. ಮೇಲ್ಕಂಡ ನಾಲ್ವರಪೈಕಿ ಒಬ್ಬರು ಈರೀತಿ ಅನ್ಯಾಯಮಾಡಿರುವದಾಗಿ ಅಪ್ಲಿಕೇಷನ್ ಕೊಟ್ಟದ್ದಕ್ಕೆ ನಿಮಗೆ ಕ್ಲಾರ್ಕ್‌ಷಿಪ್ ಪ್ಯಾಸಾಗಿಲ್ಲವಾಗಿ ನಿಮ್ಮ ವಿಚಾರ ಪುನರ್ವಿಮರ್ಶೆಮಾಡಲಾಗುವದಿಲ್ಲವೆಂತ ದಿವ್ಯ ಇಂಡಾರಸು ಬಂದಿದೆ. ಈ ರೂಲು ಸ್ವಜನರಾದಮಾತ್ರಕ್ಕೇ ಅವರಿಗೆ ಅನ್ವಯಿಸುವದಿಲ್ಲವೇನೊ? ಅಥವಾ ಎಕ್ಸೆಂಪ್ಷನ್ ಪಡೆದಿರಬಹುದು. ಈ ವಿಚಾರದಲ್ಲಿ ಡೆಪ್ಯುಟೀಕಮಿಷನರಿಗೂ ಅಪ್ಲಿಕೇಷನ್ ಹೋಗಿದೆ. ಇದು ಡಿಸ್ಟ್ರಿಕ್ಟು ಶಿರಸ್ತೆದಾರರ ಗೊಟ್ಟದಲ್ಲಿ ಬಿದ್ದು ಇವರ ಇಂದ್ರಜಾಲದಿಂದ ಸ್ವಮತಾಭಿಮಾನವು ಅಲ್ಲೂ ಬಲಪಡಿಸಲ್ಪಡುತ್ತದೋ ಅಥವಾ ನಿರ್ದಾಕ್ಷಿಣ್ಯವಾಗಿ ನ್ಯಾಯವಾದರೀತಿ ವಿಮರ್ಶೆ ನಡೆದು, ಈಗ ಆಗಿರುವ ದಾಂಧಲೆ ಆರ್ಡರು ರದ್ದಾಗುತ್ತದೋ ಮುಂದೆ ನೋಡಬೇಕಾಗಿದೆ. ಈರೀತಿ ಮಾಡಿದ್ದಾಗ್ಗೂ ಮೇಲ್ಕಂಡ ನಮ್ಮ ಮ್ಯುನ್ಸಿಪಾಲಿಟಿಯಲ್ಲಿ ಸರ್ಕಾರದಿಂದ ಆಗಾಗ್ಗೆ ಸಾದರಾಗಿರುವ ಹುಕುಮುಗಳು ಸರಿಯಾಗಿ ಜಾರಿಯಲ್ಲಿ ತರುತ್ತಿದ್ದೀರಾ? ಎಂತ ಹುಕುಂಬಂದದ್ದಕ್ಕೆ ನಮ್ಮ ಸಾಹೇಬರು ತಡೆಬಡುವಿಲ್ಲದೆ ಸರ್ಕಾರಿ ಆರ್ಡರಿಗೆ ಚಾಚೂ ತಪ್ಪದೆ ಜಾರಿಮಾಡುತ್ತಿರುವದಾಗಿ ರಿಪೋರ್ಟಾಗಿರುವದಂತೆ. ಈ ರಿಪೋರ್ಟಿನ ನಿಜಾಂಶವು ಈ ಒಂದು ಸಂದರ್ಭದಿಂದಲೇ ಹೊರಪಡುತ್ತದೆ. ಕೇಳುವವರಾರು? ನಮ್ಮ ಸಾಹೇಬರಿಗೆ ವರ್ಗವೆಂತ ಅಲ್ಲಲ್ಲೇ ಗಾಳಿವರ್ತಮಾನ. ಅಷ್ಟರೊಳಗೆ ಹೇಗಾದರೂ ಇವರನ್ನು ಮ್ಯುನಿಸಿಪಾಲಿಟಿಯಿಂದ ರೆವಿನ್ಯೂವಿಗೆ ವರ್ಗಾಯಿಸಿಬಿಡಬೇಕೆಂತ ತಕ್ಕ ಏರ್ಪಾಟುಗಳು ಆಗುತ್ತಿವೆ. ಎಲೈ ಸ್ವಜನಾಭಿಮಾನವೇ ನ್ಯಾಯವೂ ನಿನ್ನೊಡನೆ ಹೋರಾಡಲಾರದಲ್ಲಾ! ನೀನು ಈ ಕಾಲದಲ್ಲೂ ಇಷ್ಟು ಉತ್ಕಟಾವಸ್ಥೆಯನ್ನು ಹೊಂದಿರುವಿಯಾ! ಸ್ವಲ್ಪ ಸೈರಿಸು. ಈಗಲೇ ಎಚ್ಚತ್ತುಕೊ. ಕೆಲವೇ ದಿನಗಳಲ್ಲಿಯೇ ತಲೆಕೆಳಗಾಗಿ ಚಿಂತಿಸಬೇಕಾದೀತು? ಇದಲ್ಲದೆ ಸಾಹೇಬರ ಮನೆ ಕೆಲಸಮಾಡಲು ರೆವಿನ್ಯೂ ಜವಾನರುಗಳು ಸಾಲದೆ ತಾಲ್ಲೂಕು ಬೋರ್ಡು ಜವಾನನನ್ನೂ ಸಕಲೇಶಪುರದ ಮುಸಾಫರ್‌ಖಾನೆ ಜವಾನನನ್ನೂ ಎಳೆದುಕೊಂಡಿರುತ್ತಾರೆ. ಮುಸಾಫರ್‌ಖಾನೆಗೆ ಜವಾನನನ್ನು ಕೊಟ್ಟಿರುವುದು ಪ್ರಜೆಗಳ ಅಂದರೆ ಮಾರ್ಗಸ್ಥರ ಅನುಕೂಲಕ್ಕಲ್ಲವೆ? ಈ ಮುಸಾಫರ್‌ಖಾನಾ ಅಜಮಾಯಿಷಿಮಾಡಿ ನಮ್ಮ ಡಿಸ್ಟ್ರಿಕ್ಟುಬೋರ್ಡ್ ವೈಸ್‌ಪ್ರೆಸಿಡೆಂಟರು ಮ|| ರಾ|| ಎಚ್. ಎಸ್. ನಂಜುಂಡಯ್ಯನವರು ಬರೆದಿರುವ ಷರಾಕ್ಕೆ ಯಾವಾಗ ನಿಗಾತೆಗೆದುಕೊಂಡು ಕ್ರಮಪಡುವದೋ ನೋಡಬೇಕು. "ಸರ್ವೇಜನಾಸ್ಸುಖಿನೋಭವಂತು." ಸನ್ಮಾರ್ಗಾಭಿಲಾಷಿ.

ಮಂಜರಾಬಾದು ಜಮಾಬಂದಿ.

ಮಂಜರಾಬಾದು ತಾಲ್ಲೂಕು ಎಸಳೂರುಹೋಬಳಿ ಜಮಾಬಂದಿಯು ಕಳೆದ ಮಾಹೆ ೧೮-೧೯ಕ್ಕೆ ನಡೆಸುವುದಕ್ಕಾಗಿ ಸಬ್‌ಡಿವಿಜನ್ ಸಾಹೇಬರು ಅಮಲ್ದಾರರು ದಯಮಾಡಿಸಿದ್ದರು. ಈ ಹೋಬಳಿಯ ರೈತರು ಪಟೇಲರು ಶ್ಯಾನುಭೋಗರು ಸಹ ಹೋಗಿ ಹಾಜರಾಗಿದ್ದರು. ಈದಿನ ನಾಳೆದಿವಸ ನಾಡಿದ್ದು ಎಂದು ಶೇಕದಾರರು ಶ್ಯಾನುಭೋಗರು ಹೇಳಿದರು. ಜಮಾಬಂದಿ ಆಗಲಿಲ್ಲ. ಅನ್ನವಿಲ್ಲದೆ ಕಾದುಕೊಂಡಿದ್ದ ಬಡರೈತರುಗಳು ಕತ್ತಲೆಯಲ್ಲಿ ಬಿದ್ದುಕೊಂಡು ಬಂದದ್ದಾಯಿತು. ಲೆಕ್ಕಾಚಾರಗಳು ಸರಿಯಾಗಿಲ್ಲದ್ದರಿಂದ ಈ ಜನವರಿ ತಾ|| ೧೬-೧೮ಕ್ಕೆ ಜಮಾಬಂದಿ ಎಂದು ಹೇಳಿದರು. ಉದ್ಯೋಗಿಗಳಿಗೆ ಹೇಗಾದರೂ ಭತ್ಯಸಿಕ್ಕಿತು. ದೊರೆತನಕ್ಕೆ ಬಡತನವೇ ಎಂಬಂತೆ ಜಮಾಬಂದಿಗಾಗಿ ಬಂದ ಜನಗಳ ಕಷ್ಟಸುಖವನ್ನು ಕೇಳುವರೇ ದಿಕ್ಕಿಲ್ಲವಾಗಿದೆ. ಮ|| ಕೆ. ಸಿದ್ಧರಾಮಪ್ಪನವರು ಜಮಾಬಂದಿವರೆಗಾದರೂ ಇದ್ದಿದ್ದಲ್ಲಿ ಶ್ಯಾನುಭೋಗರ ಸ್ಥಿತಿಗಳು ಚೆನ್ನಾಗಿ ಸರ್ಕಾರಕ್ಕೆ ವೇದ್ಯವಾಗುತ್ತಿತ್ತು. ಈ ತಾಲ್ಲೂಕಿನಲ್ಲಿ ಹಿಂದೆ ಸಬ್‌ಡಿವಿಜನ್ ಸಾಹೇಬರಾಗಿ ಬಂದಿದ್ದ ಸಿ. ಮಾಚಯ್ಯನವರು ಗೋಪಾಲರಾಜೇಅರಸಿನವರು ಸಹ ೧ ವರುಷವಾದರೂ ಇರಲಿಲ್ಲವಲ್ಲ. ಇದು ನಮ್ಮ ತಾಲ್ಲೂಕಿನ ಸೌಭಾಗ್ಯವೋ ರೈತರ ದುರ್ಭಾಗ್ಯವೋ ತಿಳಿಯದು. ಜಾತಿಯ ಅಧಿಪತಿಗಳಾದುದರಿಂದ ಇವರ ಗದ್ದಲವೇ ಇಲ್ಲ. ಅಯ್ಯೊ ಪಾಪ! ಬಡಬ್ರಾಹ್ಮಣ, ಮುಂದೆ ಜಾಗ್ರತೆ ಲೆಖ್ಖ ಬರೆದಿಡುವಂತೆ ಅಪ್ಪಣೆಮಾಡಿ ಹೊರಟುಹೋದರು. ಶ್ಯಾನುಭೋಗರುಗಳು ಲೆಖ್ಖಗಳನ್ನು ಮತ್ತು ಖಾನೇಷುಮಾರಿ ಎಂಬುವದು ರೈತರುಗಳಿಗೆ ಹೇಳದೆ ಕೇಳದೆ ಹೋದವರುಷದ ಲೆಕ್ಕ ಇಟ್ಟುಕೊಂಡು ಪಾಳುಬಿದ್ದ ಜಮೀನು ಸಾಗು ಎಂದು ಬರೆದಿರುವುದು ಜಮಾಬಂದಿ ಕಾಲದಲ್ಲಿ ನಂಬರುವಾರು ವಿಂಗಡಿಸಿದರೆ ಗೊತ್ತಾಗುತ್ತದೆ. ಈ ತಾಲ್ಲೂಕಿನಲ್ಲಿ ತಕ್ಕ ಪ್ರಜಾಸಂಖ್ಯೆಯಿಲ್ಲದೆ ಇನ್ನುಮುಂದೆ ಜಮೀನು ಸಾಗುಮಾಡತಕ್ಕವರಿಲ್ಲದೆ ಹಾಳುಬಿದ್ದಿರುವ ಕಾಫಿತೋಟದಂತೆ ಆಗುತ್ತದೆ. ಇದು ೨೦-೩೦ ವರುಷಕ್ಕೆ ಮುಂದೆ ಕಾಫಿದೆಸೆಯಿಂದ ತಕ್ಕಮಟ್ಟಿಗೆ ಇತ್ತು. ಸರ್ಕಾರದವರೇ ಮಲೆನಾಡು ಮೈಸೂರ್‌ಕೆರೆ ಕಾಮಗಾರಿಗಳನ್ನು ಮಾಡಿಸದೆ ಕೆರೆಗಳೆಲ್ಲಾ ಹೂತುಹೋಗಿ ಜನಜಾನುವಾರುಗಳಿಗೂ ಜಮೀನುಗಳಿಗೂ ಸಹ ತೊಂದರೆಯಾಗಿದೆ. ಮೈದಾನಪ್ರದೇಶದಂತೆ ಇಲ್ಲಿ ದೊಡ್ಡ ಕೆರೆಗಳಿಲ್ಲ. ಸಣ್ಣ ಸಣ್ಣವುಗಳಾದರೂ ಹಾಳುಬಿದ್ದಿರುತ್ತವೆ. ಬಡರೈತ.

ವೀರಶೈವವಿದ್ಯಾರ್ಥಿಗಳಿಗೆ ವಿಜ್ಞಾಪನೆ.

ಮಹಾಶಯರೆ!

ನಮ್ಮ ಸಮಾಜವು ವಿದ್ಯಾಭ್ಯಾಸದಲ್ಲಿ ಇತರ ಜನವರ್ಗದವರಿಗಿಂತಲೂ ಬಹಳ ಹಿಂದುಳಿದಿರುವುದರಿಂದ ಸಮಾಜದ ಹಿತಚಿಂತಕರುಗಳು ನಮ್ಮ

ಬಾಲಕರಲ್ಲಿ ವಿದ್ಯಾಭಿರುಚಿಯನ್ನು ಹೆಚ್ಚಿಸುವುದಕ್ಕಾಗಿ ಅನೇಕವಿಧವಾಗಿ ಪ್ರೋತ್ಸಾಹಾತಿಶಯಗಳನ್ನುಮಾಡುತ್ತಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ತಮ್ಮ ಸೇವಕನಾದ ನಾನುಕೂಡ ನನ್ನ ಯಥಾಶಕ್ತಿ ಸಮಾಜಸೇವೆಯನ್ನು ಮಾಡಬೇಕೆಂಬ ಲವಲವಿಕೆಯಿಂದ ಈಗ ೩-೪ ವರ್ಷಗಳಿಂದಲೂ ಎರಡು ಬಹುಮಾನಗಳನ್ನೇರ್ಪಡಿಸಿ, ಅದನ್ನು ಪ್ರೌಢಪರೀಕ್ಷೆಗಳಲ್ಲಿ ಉತ್ತಮವಾಗಿ ತೇರ್ಗಡೆಯಾಗಿರುವ ನಮ್ಮ ತರುಣರಿಗೆ ಕೊಡುತ್ತಾ ಇರುವುದುಸಹ ತಮ್ಮಗಳಿಗೆ ತಿಳಿದ ವಿಷಯವೇ ಆಗಿದೆ. ಹೀಗೆ ಬಹುಮಾನಗಳನ್ನು ಪಡೆಯುವ ತರುಣರು ಮುಂದೆ ತಮ್ಮ ಜೀವಮಾನದಲ್ಲಿ ಸ್ವಾರ್ಥಾಭಿಲಾಷಿಗಳಾಗದೆ ಆದಷ್ಟು ಸಮಾಜಸೇವೆಯಲ್ಲಿ ನಿರತರಾಗಿ ಸನ್ಮಾರ್ಗಪ್ರವರ್ತಕರಾಗಿ ಅನಾಥರೂ ಬಡವರೂ ಆದ ವಿದ್ಯಾರ್ಥಿಗಳಿಗೆ ಆಶ್ರಯದಾತರಾಗಿ ಶ್ರೀ ಪರಶಿವಪ್ರೀತಿಗೂ ಸಮಾಜದ ವಂದನೆಗೂ ಪಾತ್ರರಾಗುತ್ತ ಆಯಾ ಪ್ರದೇಶದ ನಮ್ಮ ತರುಣರನ್ನೆಲ್ಲಾ ಸಾಧ್ಯವಾದಷ್ಟು ಸಮಾಜದ ಪುರೋವೃದ್ಧಿಗೆ ಸಹಾಯರಾಗುವಂತೆ ಪ್ರೋತ್ಸಾಹಿಸುವರೆಂಬುದೇ ನನ್ನ ಮುಖ್ಯ ಕೋರಿಕೆಯಾಗಿದೆ. ಅದನ್ನು ತಾವುಗಳೆಲ್ಲಾ ಕೃತಕೃತಃ ಸಾರ್ಥಕಪಡಿಸುವಿರೆಂದು ನಂಬಿರುತ್ತೇನೆ. ಪರಂತು ೧೯೨೧ನೆ ವರ್ಷದಲ್ಲಿ ನಾನು ಕೊಡಬೇಕಾಗಿದ್ದ ಎರಡು ಬಹುಮಾನಗಳನ್ನು ಈ ಕೆಳಗೆ ಕಂಡಂತೆ ವಿನಿಯೋಗಿಸಲು ನಿರ್ಧರಿಸಿದ್ದೇನೆ. ೧. ಕೀರ್ತಿಶೇಷರಾಗಿ ಇಡೀಸಮಾಜದಲ್ಲೇ ಚಿರಸ್ಮರಣೀಯರಾಗಿರುವ ಮೈಸೂರಿನ ಯಜಮಾನರಾದ ಕೈ|| ಶ್ರೀ|| ವೈ. ವೀರಸಂಗಪ್ಪನವರ ಹೆಸರಿನ ಬಹುಮಾನವು ೧೯೨೧ನೆ ಇಸವಿಯಲ್ಲಿ ಇಂಜನೀಯರಿಂಗ್ ಕಲಾಶಾಲೆಯಿಂದ ಬಿ. ಇ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಾಲಿ ತುಮಕೂರಿನಲ್ಲಿ ಇಂಜನಿಯರಿಂಗ್ ಇಲಾಖೆಯಲ್ಲಿರುವ ಮ|| ಕೆ. ಜಿ. ಚೆನ್ನಬಸವಯ್ಯ, ಬಿ. ಇ. ಯವರಿಗೂ, ಮತ್ತು ೨ನೆ ಬಹುಮಾನವು ೧೯೨೧ನೆ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಾಲಿ ಬಿ. ಎ. ಕ್ಲಾಸಿನಲ್ಲಿ ವ್ಯಾಸಂಗಮಾಡುತ್ತಿರುವ ಮ|| ಜಿ. ಎಸ್. ತಮ್ಮಯ್ಯನವರಿಗೆ ನನ್ನ ಪ್ರಿಯಜನಕರಾದ ಕೈ|| ಶ್ರೀ|| ಗುಬ್ಬಿ ಕೊಟ್ಟೂರಯ್ಯನವರ ಹೆಸರಿನ ಬಹುಮಾನವೂ ದೊರೆತಿದೆ. (ಈ ಬಹುಮಾನಗಳು ಇಷ್ಟರಲ್ಲೇ ವಿನಿಯೋಗಿಸಲ್ಪಡುತ್ತವೆ) ಇದರಂತೆಯೇ ಈ ಬಹುಮಾನಗಳನ್ನು ೧೯೨೨ನೆ ಮಾರ್ಚಿ ತಿಂಗಳಲ್ಲಿ ನಡೆಯುವ ಬಿ. ಎ. ಮತ್ತು ಎಂಟರೆನ್ಸ್ ಪರೀಕ್ಷೆಗಳಿಗೆ ವಿನಿಯೋಗಿಸಲು ನಿರ್ಧರಿಸಿದೆಯಾಗಿ ನಮ್ಮ ವಿದ್ಯಾರ್ಥಿಗಳು ಇನ್ನೂ ಹೆಚ್ಚು ಶ್ರದ್ಧಾಸಕ್ತಿಗಳಿಂದ ವ್ಯಾಸಂಗಮಾಡುತ್ತಿರಬೇಕಾಗಿ ಕೋರುತ್ತೇನೆ. ಅಲ್ಲದೆ ರಾ||ಬ||ಧ|| ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳು ವಿಶೇಷ ಕುತೂಹಲದಿಂದ ಅಭ್ಯಾಸಮಾಡಿ ಈ ವರ್ಷದ ಪರೀಕ್ಷೆಗಳಲ್ಲಿ ಬಹುಜನಗಳು ತೇರ್ಗಡೆಯಾಗಿ ಧರ್ಮಕರ್ತರ ಸತ್ಸಂಕಲ್ಪವನ್ನು ಸಾರ್ಥಕಪಡಿಸುವುದರಮೂಲಕ ಈಗ ಈ ತರುಣರ ವಿಚಾರದಲ್ಲುಂಟಾಗಿರುವ ಸಾಮಾನ್ಯಾಭಿಪ್ರಾಯವನ್ನು ಸಹ ಹೋಗಲಾಡಿಸುವರೆಂದು ನಂಬಿ ನಿರೀಕ್ಷಿಸುತ್ತೇನೆ. ಪರಂತು ಬೆಂಗಳೂರಲ್ಲಿ ಹೊಸದಾಗಿ ಏರ್ಪಟ್ಟಿರುವ ವೀರಶೈವತರುಣಸಂಘಕ್ಕೆ ಪ್ರತಿಯೊಬ್ಬ ವೀರಶೈವರೂ ಮೆಂಬರುಗಳಾಗಿ ಸೇರಿ, ತಮ್ಮ ಪ್ರದೇಶಗಳಲ್ಲೂ ಅದರ ಶಾಖೆಗಳನ್ನೂ ವಾಚಕಮಂದಿರಗಳನ್ನೂ ಸ್ಥಾಪಿಸಿಕೊಂಡು ಇತರರ ಮರುಳುಮಾತಿಗೆ ಬೆರಗಾಗದೆ ರಾಜಭಕ್ತಿಯಿಂದಲೂ ಪರಸ್ಪರಪ್ರೀತಿಯಿಂದಲೂ ವರ್ತಿಸುತ್ತಾ ಐಕಮತ್ಯವನ್ನು ಬಲಪಡಿಸಿಕೊಂಡು ವಿದ್ಯೆ ಮತ್ತು ಸಾಮಾಜಿಕ ರಾಜಕೀಯ ಸುಧಾರಣೆಗಳಲ್ಲಿ ಕರ್ತವ್ಯತತ್ಪರರಾಗಿ ನಮ್ಮ ಜನಾಂಗದ ಪುರೋವೃದ್ಧಿಗೂ ದೇಶೋನ್ನತಿಗೂ ಬೆಂಬಲರಾಗುವರೆಂದು ಸಮಾಜದವರೆಲ್ಲರ ಪರವಾಗಿ ಪ್ರಾರ್ಥಿಸುವ,

ಸುಜನವಿಧೇಯ ಜಿ. ಗುರುಸಂಗಾರ್ಯ,
ಪ್ಲೀಡರ್, ತುಮಕೂರು.

ವಿನಂತಿ.

ಶ್ರೀ ಪಂ|| ಕಾಶೀನಾಥಶಾಸ್ತ್ರಿಗಳಿಗೂ ಮ|| ಪಾವಟೆ ಸಿದ್ಧರಾಮಪ್ಪ ವಕೀಲರಿಗೂ ವಿನಯಪೂರ್ವಕ ಸೂಚನೆಯೇನೆಂದರೆ—ನೀವೂ ಮತ್ತು ನಿಮ್ಮ ಪಕ್ಷದವರೂ ಸಹ ಶ್ರೀಮತ್ಪಂಚಾಚಾರ್ಯರ ವಿಷಯವಾಗಿಯೂ ಶ್ರೀ ಬಸವೇಶನ ವಿಷಯವಾಗಿಯೂ ಅನೇಕವಿಧ ನಿಂದಾಸ್ಪದವಾಗಿ ತಿರಸ್ಕಾರರೂಪದಿಂದ ಪರಸ್ಪರ ವೃತ್ತಪತ್ರಗಳಲ್ಲಿ ಟೀಕಾ ಮಾಡುತ್ತಲೂ ೧೦೫ ಪ್ರಶ್ನೆ, ಸನ್ಯಾಸಾಶ್ರಮವಿಮರ್ಶೆ, ಅಮಂಗಲಪ್ರಶ್ನಪರೀಕ್ಷಣ, ಬಸವಾದಿ ನಿಜತತ್ವದರ್ಪಣ, ಇತ್ಯಾದಿಗ್ರಂಥಗಳನ್ನು ಪ್ರಿಂಟುಮಾಡಿಸಿ ದೇಶದಲ್ಲಿ ಪ್ರಚಾರಮಾಡಿರುವದರಿಂದ ಯಾವತ್ತು ವೀರಶೈವ ಮಂಡಳಿಗೆ ಒಂದು ವಿಧವಾದ ಸಂಶಯಾಸ್ಪದವೂ ಅಗೌರವವೂ ಆದಂತಾಗಿರುವುದು. ಮತ್ತು ಸ್ವಮತ ಪರಮತಸ್ಥರಿಗೂ ಹಾಸ್ಯಾಸ್ಪದವಾಗುವಲ್ಲಿ ಸಂದೇಹವಿಲ್ಲ. ತಾವು ವಿದ್ಯಾವಂತರೂ ಪದವೀಧರರೂ ಇದ್ದು ಈ ಪ್ರಕಾರ ಬಹಿರಂಗವಾಗಿ ವಾದನಡೆಸುವದು ಸರ್ವರಿಗೂ ವಿಷಾದವೆನಿಸುವದು. ಆದುದರಿಂದ ದೇಶಮಧ್ಯದಲ್ಲಿ ಒಂದು ಸಭೆಯನ್ನು ಏರ್ಪಾಟುಮಾಡಿಸಿ ಮಧ್ಯವರ್ತಿಗಳಾದ ಪಂಡಿತರ ಸಮ್ಮುಖದಲ್ಲಿ ನಿಮ್ಮನಿಮ್ಮ ಸಿದ್ಧಾಂತಗಳನ್ನು ನಿರ್ಧರಮಾಡತಕ್ಕದ್ದು, ಅಥವಾ ಕೆಲವು ಕೆಲವು ಪ್ರಮುಖಜನರ ಸಮಕ್ಷ ಆಗಲಿ ಇಲ್ಲವೆ ಪರಸ್ಪರ ಪತ್ರದ್ವಾರಗಳಿಂದಾಗಲಿ ವಾದಗಳನ್ನು ಜರಗಿಸಬೇಕು. ಅಂದರೆ ಯೋಗ್ಯವೂ ಭೂಷಣವೂ ಆಗುವದು. ಇಂಥ ಗ್ರಂಥಾದಿಗಳ ರಚನಮಾಡಿ ಹರಡುವದರಿಂದ ಈಗ ನಡೆದಿರುವ ಚಳವಳಿಯಲ್ಲಿ ಇದೊಂದು ವಿಧವಾಗಿ ನಮ್ಮ (ವೀರಶೈವ) ಸಮಾಜದಲ್ಲಿ ಚಳವಳಿ ನಡೆದು, ಬೇರೆಬೇರೆ ಸಂಗತಿಗಳಾಗುವ ಭಾಗ ಬಂದೀತು. ಮತ್ತು ನಿಮ್ಮಗಳ ವಿಷಯದಲ್ಲಾದರೂ ಜನರಿಗೆ ತಿರಸ್ಕಾರಬುದ್ಧಿಯುಂಟಾಗಿ ದ್ವೇಷಾಸೂಯಾದಿಗಳು ಬೆಳೆಯುವ ಸಂಭವವಿದೆ. ಆ ರೀತಿ ಆಗದಂತೆ ಉಭಯರೂ ಒಂದೊಂದು ಪಕ್ಷ ಹಿಡಿಯದಂತೆ ಏಕಸ್ಥರಾಗಿ ಶಾಸ್ತ್ರದ ನಿಜತತ್ವವೇನಿರುವುದು ಎಂಬುದನ್ನು ನಮ್ಮ ಸಮಾಜಕ್ಕೆಲ್ಲಾ ಬೋಧನಮಾಡಿ ಯಶೋಭಾಗಿಗಳಾಗಬೇಕೆಂದು ವಿನಂತಿ.

ಎಚ್. ವಿರೂಪಾಕ್ಷಯ್ಯಾ ಪುರಾಣಿಕಮಠ.

ಮಾದರಿಯ ಮಾನವರು ಯಾರು ?

ನಮ್ಮ ಊರಲ್ಲಿಯ ಶ್ರೀ ಸಂಗಮೇಶ್ವರ ದೇವಾಲಯವು ಬಹಳ ಹಳೆಯ ಕಟ್ಟಡವಾಗಿತ್ತು. ಕಾರಣ ಈಗ ಬಹುಶಃ ೮-೧೦ ವರ್ಷಗಳ ಪೂರ್ವದಲ್ಲಿ ಇಲ್ಲಿಯ ಕೆಲಪ್ರಮುಖರು ದೇವಾಲಯವನ್ನು ಕೆಡಹಿಸಿ ಕಟ್ಟಿಸಲಿಕ್ಕೆ ಪ್ರಾರಂಭ ಮಾಡಿದರು. ಆದರೆ ಹಣದ ಅನಾನುಕೂಲತೆಯಿಂದ ಸದರಿ ಕಟ್ಟಡದ ಕೆಲಸವು ನಿಂತುಹೋಗಿತ್ತು. ಇಂಥ ಸ್ಥಿತಿಯನ್ನು ನೋಡಿ ಇಲ್ಲಿಯ ಶ್ರೀಮಂತ ಬಾಲಪ್ಪಣ್ಣ ನಾಗರಾಳ ಎಂಬ ಲೋಕವಿಖ್ಯಾತಗೃಹಸ್ಥರು ಈ ಕೆಲಸವನ್ನು ಕೈಕೊಂಡು ಈಗಾಗಲೇ ೧-೨ ವರ್ಷಗಳಲ್ಲಿ ಊರಜನರ ಸಹಾಯದಿಂದ ಕಟ್ಟಿಸುವ ಕೆಲಸವನ್ನು ಮುಗಿಸಿದರು. ಈ ಕೆಲಸದಲ್ಲಿ ಸದರಿ ಬಾಲಪ್ಪನವರು ನಾಗರಾಳ ಇವರು ತೋರಿಸಿದ ಸ್ವಾರ್ಥತ್ಯಾಗ, ಸಾಹಸ, ಧೈರ್ಯ, ಒಕ್ಕಟ್ಟು ಬೆಳಸುವ ಕುಶಲತೆ ಮೊದಲಾದ ಗುಣಗಳನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಸರಿ. ಇಂಥ ಕಾರ್ಯಕ್ಕೆ ಕೈಹಾಕಿ ಪೂರ್ಣಸಿದ್ಧಿಗೆ ಒಯ್ದ ನಮ್ಮ ನವತರುಣರಾದ ಬಾಲಪ್ಪನವರೇ ಮಾದರಿಯ ಮಾನವರಲ್ಲವೇ ? ಕಲ್ಪವೃಕ್ಷದಂತಿರುವ ಬಾಲಪ್ಪನವರು ಇನ್ನು ಮೇಲೆ ನಮ್ಮ ವೀರಶೈವ ತರುಣ ಸಂಘದ ವಿಷಯಕ್ಕೆ ಸ್ವಲ್ಪ ಕಾಳಜಿತೆಗೆದುಕೊಳ್ಳುವರೆಂದು ಆಶಿಸುತ್ತೇನೆ. ಹುನಗುಂದ ಸ್ಥಲವಾಸಿ.

ವೀರಶೈವ ತರುಣ ಸಂಘ, ಹುನಗುಂದ.

ತಾರೀಖು ೨೮-೧೨-೨೧ನೆ ದಿವಸ ಮ|| ಬಸೆಟ್ಟೆಪ್ಪಾ ಅಣ್ಣಾ ಬಳಬಟಗಿ ಶಿ. ಗುರುಬಸಯ್ಯನವರು ಇಂಗ್ಲೀಷ್ ಶಾಲಾ ಹೆಡ್‌ಮಾಸ್ತರ ಶಿವಪ್ಪ ಹಳಿಪೇಟೆ ಮತ್ತು ಸಿದ್ದಪ್ಪಾ ಕಡಪಟ್ಟಿ ಮೊದಲಾದವರು ಇಲ್ಲಿಯ ತರುಣ ಸಂಘದ ಸ್ವಯಂಸೇವಕರೊಡಗೂಡಿ ಪ್ರಸಿದ್ಧ ಕ್ಷೇತ್ರವಾದ ಶ್ರೀ ಸಂಗಮೇಶ್ವರದ ಕಾರ್ತಿಕೋತ್ಸವಕ್ಕೆ ಹೋಗಿ ೬-೭ ರೂಪಾಯಿ ಪೈಸಾಫಂಡನ್ನು ವಸೂಲು ಮಾಡಿ, ನಂತರ ತಂಗಡಗಿ ಮತ್ತು ಇದ್ದಲಗಿ ಬೆಳಗಲ್ಲ ಇತ್ಯಾದಿ ಗ್ರಾಮಗಳಲ್ಲಿ ಸಂಚರಿಸಿ ನಮ್ಮ ಗ್ರಾಮದ ತರುಣ ಸಂಘಕ್ಕೆ ೩-೪ ದಿವಸದಲ್ಲಿ ಸಾಧಾರಣ ೩೦-೩೫ ರೂಪಾಯಿಗಳನ್ನು ಕೂಡಿಸಿಕೊಟ್ಟರು. ಇಂಥ ಸಮಾಜಸೇವಾಧುರೀಣರೂ ಸ್ವಾರ್ಥತ್ಯಾಗಿಗಳೂ ಆದ ಮೇಲೆ ಬರೆದ ಸಭ್ಯಗೃಹಸ್ಥರಿಗೂ ಮತ್ತು ಸ್ವಯಂಸೇವಕರಿಗೂ ಧನಸಹಾಯವನ್ನು ಮಾಡಿದ ನಮ್ಮ ಬಾಂಧವರಿಗೂ ಆ ಪರಮದಯಾನಿಧಿಯಾದ ಶ್ರೀ ಶಂಕರನು ಯಶಸ್ಸನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ. ಈ ಮಹನೀಯರ ಸಾಹಸವು ಅನುಕರಣೀಯವಾದದ್ದೆಂದು ಹೇಳಲಿಕ್ಕೆ ಬಾಧಕವಿಲ್ಲ. ಇದರಂತೆ ಇಲ್ಲಿಯ ವೀರಶೈವರೆಲ್ಲಾ ಸ್ವಾರ್ಥತ್ಯಾಗಿಗಳಾಗಿ ಸಂಘವನ್ನು ಊರ್ಜಿತಸ್ಥಿತಿಗೆ ತಂದದ್ದಾದರೆ ನಾವು ಕೈಕೊಂಡ ಕಾರ್ಯವು ಸಿದ್ಧಿಗೆ ಹೋದಂತೆ ಆಗುವುದು.

ಪ್ರತ್ಯಕ್ಷದರ್ಶಿ.

[ಹಣ ವಸೂಲುಕೊಟ್ಟವರ ಪಟ್ಟಿಯನ್ನು ಮುದ್ರಿಸಲಿಕ್ಕೆ ಸ್ಥಲವಿಲ್ಲವಾದುದರಿಂದ ಬಿಟ್ಟಿದ್ದೇವೆ. ಪ. ಪ್ರ.]

ಪ್ರಿನ್ಸ್ ಆಫ್ ವೇಲ್ಸ್‌ರವರ ಸುಖಾಗಮನ.

ಹರಪನಹಳ್ಳಿ.

ಬಳ್ಳಾರಿಜಿಲ್ಲಾ ಹರಪನಹಳ್ಳಿಯಲ್ಲಿ ಇದೇ ತಾ|| ೧೫ನೆ ದಿವಸ ಇಲ್ಲಿ ವೀರಶೈವರು ಬ್ರಿಟಿಷ್ ಯುವಸಾರ್ವಭೌಮರು ಮದ್ರಾಸ್‌ಪಟ್ಟಣಕ್ಕೆ ದಯಮಾಡಿಸಿದ ಕಾಲದಲ್ಲಿ ಅವರ ಗೌರವಾರ್ಥವಾಗಿ ಬಡಜನರಿಗೆ ಮೃಷ್ಟಾನ್ನಭೋಜನ ಮಾಡಿಸುವ ಸತ್ಕಾರ್ಯವು ಮ|| ರಾ|| ಶ್ರೀಮಂತ ನೆ|| ಬೊ|| ಕೊಟ್ರಬಸಪ್ಪನವರ ಉದಾರಾಶ್ರಯದಿಂದ ಶ್ರೀ ಗುಂಜಳ್ಳಿಮಠದಲ್ಲಿ ಸಾಂಗವಾಗಿ ನೆರವೇರಿತು. ಈ ಕಾರ್ಯಕ್ಕೆ ವೇ|| ತಲಿಗಿ ಹರಪನಹಳ್ಳಿಮಠದ ಬ್ರ|| ಶ್ರೀ|| ಸಿದ್ಧಾಂತಿ ಹೊಳೆಬಸವಶಾಸ್ತ್ರಿಗಳವರು ಮ|| ಗಳಾದ ಸೆಟ್ಟರ ಮುರಿಗೆಪ್ಪ, ಎಡವೀರಪ್ಪ, ಅಕ್ಕಾಲವೀರಪ್ಪ, ಭಗವಂತಪ್ಪ ಮುಂತಾದವರು ಬಹಳ ಸಹಾಯಮಾಡಿ ಕೀರ್ತಿಭಾಜನರಾದರು. ಸಾಯಂಕಾಲದಲ್ಲಿ, ಶ್ರೀ ಗುಂಜಳ್ಳಿಮಠದಲ್ಲಿ ಮ|| ರಾ|| ನೆ|| ಬೊ|| ಕೊಟ್ರಬಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಭಜನಾಸಂಘದವರಿಂದ ಶ್ರೀ ಪರಮಾತ್ಮನ ಸಂಕೀರ್ತನೆಯಾದನಂತರ ಮಿ|| ಟಿ. ಹೆಚ್. ಎಂ. ಸಿದ್ಧಯ್ಯನವರು, ಶ್ರೀ ಯುವರಾಜರ ವಿದ್ಯಾಭ್ಯಾಸ ಮಹಾಯುದ್ಧದಲ್ಲಿ ತೋರಿಸಿದ ಅವರ ಸಾಹಸ, ಪ್ರಜೆಗಳಲ್ಲಿ ಅನುರಾಗ ಮುಂತಾದವುಗಳನ್ನು ಹೇಳಿ ಅವರನ್ನು ಗೌರವಿಸುವುದು ಬಹಳ ಪವಿತ್ರವಾದ ಕರ್ತವ್ಯವೆಂದು ಸೂಚಿಸಿದರು. ಅನಂತರ ಇಲ್ಲಿಯ ಮಿ|| ಹೆಚ್. ಲಿಂಗನಗೌಡರು ಲಿಂಗಾಯತರ ಪರವಾಗಿ ಶ್ರೀ ಯುವರಾಜರಿಗೆ ಸುಖಾಗಮನದ ಸ್ವಾಗತವನ್ನು ಬಯಸುವ ಠರಾವನ್ನು ತಂದರು. ಅದಕ್ಕೆ ಮಿ|| ನಂಜುಂಡಯ್ಯ, ಹಿರೇಮಠ ಇವರು ತಮ್ಮ ಅನುಮೋದನವಿತ್ತು ಸುಧಾರಣೆಯ ಖಾಯಿದೆಯ ಮಾಹಿತಿಯನ್ನೂ, ಬ್ರಿಟಿಷ್ ರಾಜ್ಯಾಂಗಪದ್ಧತಿಯನ್ನೂ ನೆರೆದ ಜನರಿಗೆ ವಿಶದವಾಗಿ ತಿಳಿಯಪಡಿಸಿದರು. ಅನಂತರ ಪದ್ಧತಿಯಪ್ರಕಾರ ಮಂಗಲವಾಗಿ ಜಯಘೋಷದೊಡನೆ ಎಲ್ಲರೂ ಶ್ರೀ ಯುವರಾಜರ ಶ್ರೇಯಸ್ಸನ್ನು ಹಾರೈಸಿದರು. ಸಭೆಯು ಮುಕ್ತಾಯವಾಯಿತು.

ಪ್ರೇಕ್ಷಕ.

ಹಲಗೇರಿ ವೀ. ತರುಣಸಂಘ.

ರಾಣಿಬೆನ್ನೂರು ತಾ|| ಹಲಗೇರಿಗ್ರಾಮಕ್ಕೆ ತಾ|| ೩೦-೧೨-೧೯೨೧ ಶುಕ್ರವಾರದಿವಸ ಶ್ರೀ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ರಾಣಿಬೆನ್ನೂರಿಂದ ದಯಮಾಡಿಸಿದರು. ಅದೇದಿವಸ ರಾತ್ರಿ ೯ ಗಂಟೆಗೆ ಮ|| ರಾ|| ತಮದೋಡರವರ ಭವ್ಯದಿವಾನಖಾನೆಯಲ್ಲಿ ಶ್ರೀಗಳವರ ಅಧ್ಯಕ್ಷತೆಯಕೆಳಗೆ ಸಭೆಸೇರಿತು. ಆಕಾಲಕ್ಕೆ ಊರೊಳಗಿನ ಸರ್ವಜನಗಳೂ ಬಂದಿದ್ದರಲ್ಲದೆ, ರಾಣಿಬೆನ್ನೂರಿಂದ ಕೆಲವು ಸಭ್ಯಗೃಹಸ್ಥರೂ ಬಂದಿದ್ದರು. ಮ|| ರಾ|| ವೀ. ಬಿ. ಪುರಾಣಿಕ ಇವರು "ವಿದ್ಯಾಪ್ರಸಾರ" ಎಂಬ ವಿಷಯದಮೇಲೆ ಭಾಷಣಮಾಡಿದನಂತರ ಶ್ರೀಗಳವರು ತಮ್ಮ ಅಧಿಕಾರಯುಕ್ತವಾಣಿಯಿಂದ "ಸಮಾಜಸೇವೆ ಮತ್ತು ಜಾಗೃತಿ" ಎಂಬ ವಿಷಯವನ್ನು ಕುರಿತು ಸಭಿಕರ ಮನಸ್ಸಿನಮೇಲೆ ಒಳ್ಳೇ ಪರಿಣಾಮವಾಗುವಂತೆ ಮಾತಾಡಿದರು. ಅವರ ಅಪ್ಪಣೆಯಮೇರೆಗೆ "ವೀರಶೈವತರುಣರ ಸಂಘ" ದ ಶಾಖೆಯೊಂದು ಇಲ್ಲಿ ಸ್ಥಾಪಿಸಲ್ಪಟ್ಟು, ಮ|| ರಾ|| ಸಿದ್ಧಪ್ಪ ಮುರಿಗೆಪ್ಪ ಕಬ್ಬಿಣದ ಇವರು ಅಧ್ಯಕ್ಷರಾಗಿಯೂ, ಮ|| ರಾ|| ಲಿಂಗನಗೌಡ ಪಾಟೀಲ ಇವರು ವಾ . ಕ. ಚೇರ್‌ಮನ್‌ರಾಗಿಯೂ, ಮ|| ರಾ|| ಚನ್ನಬಸವಪ್ಪ ಬಸವಲಿಂಗಪ್ಪ ಹಂಪಾಳಿ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಈ ಸಂಘದವರು ಇನ್ನು ಸ್ವಲ್ಪದಿವಸಗಳಲ್ಲಿಯೇ ಒಂದು ವಾಚನಾಲಯವನ್ನೂ ಬಡವಿದ್ಯಾರ್ಥಿಗಳ ವಿದ್ಯಾಪ್ರೋತ್ಸಾಹಕ್ಕಾಗಿ ಒಂದು ಸ್ಥಾನಿಕಫಂಡನ್ನೂ ಸ್ಥಾಪಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರುವರು. ಇವರ ಸ್ತುತ್ಯವಾದ ಉದ್ದೇಶವು ಈಡೇರಲಿ. ಕೇವಲ ಶ್ರೀಗಳವರ ಪ್ರಯತ್ನವಿಶೇಷದಿಂದಲೇ ನಡೆದಿರುವ ಧಾರವಾಡದ "ಫ್ರೀ ಬೋರ್ಡಿಂಗಿ" ಗೆ ಧಾನ್ಯರೂಪದಿಂದ ಸಹಾಯಮಾಡುವುದಕ್ಕೆ ಇಲ್ಲಿಯ ಮಹಾಜನಗಳು ವಾಗ್ದಾನಮಾಡಿರುವರು. ಮಂಗಳವಾದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವಗ್ರಾಮಸ್ಥ.

ವೀರಶೈವ ದಂಡಾವತಿ ಜಾತಿಬಾಂಧವರಿಗೆ ಸುವಿನಯ ಸೂಚನೆ.

ಪ್ರಿಯಬಾಂಧವರೆ ! ನೀವು ವಿದ್ಯೆಯಲ್ಲಿ ಬಹಳ ಹಿಂದೆ ಉಳಿದಿರುತ್ತೀರಿ. ಆದುದರಿಂದ ತಾವು ಮುಂದುವರಿಯುವುದು ಅತ್ಯವಶ್ಯವಿದೆ. ಯಾಕಂದರೆ ನೀವು ವಿದ್ಯಾಹೀನರಾಗಿರುವುದರಿಂದ ನಿಮ್ಮ ಮೇಲೆ ಮುಂದುವರಿದವರಿಂದ ಅನೇಕ ಅನ್ಯಾಯಗಳು ಮಾಡಲ್ಪಡುತ್ತವೆ. ನಿಮ್ಮ ಧನವು ವ್ಯರ್ಥವಾಗಿ ಸೆಳೆಯಲ್ಪಡುತ್ತದೆ. ಕುಲಕರ್ಣಿಗೆ ಹಪ್ತೆಕೊಟ್ಟು ಪಾವತಿ ತೆಗೆದುಕೊಳ್ಳುವಷ್ಟು ತಿಳುವಳಿಕೆ ನಿಮ್ಮಲ್ಲಿಲ್ಲ. ಎರಡನೆಯವರಿಂದ ಪತ್ರವನ್ನು ಬರೆಸಿ ಅಂಚೇಕಟ್ಟಿಗೆ ಹೋಗಿ ಹಾಕಿ ಪೋಸ್ಟ್‌ಮನ್ನರಿಗೆ "ತೀವ್ರ ಕಳಿಸಿಕೊಡಬೇಕೆಂದು" ಅಂಗಲಾಚಿ ಬೇಡಿಕೊಳ್ಳುವ ಎಷ್ಟೋ ಜನರನ್ನು ನಿಮ್ಮಲ್ಲಿ ಕಾಣಬಹುದಾಗಿದೆ. ಈ ತರದ ಹೀನಾವಸ್ಥೆಯಿಂದ ದೂರಾಗಬೇಕಾದರೆ ಜೋರಿನಿಂದ ವಿದ್ಯಾಸಂಪಾದನೆಯನ್ನು ಮಾಡಿರಿ. ನಮ್ಮ ದಯಾವಂತರಾದ ಆಂಗ್ಲ ಸರಕಾರದವರು ಹಿಂದೂಸ್ಥಾನ ನಿವಾಸಿಗಳಿಗೆ ವಿದ್ಯಾಮೃತವನ್ನು ಪಾನಮಾಡಿಸಲಿಕ್ಕೆ ಅನೇಕ ಸಮುತ್ತುಗಳನ್ನು ದಯಪಾಲಿಸಿದ್ದಾರೆ. ಇಂಥಾ ಸಮಯದಲ್ಲಿ ಅಲಕ್ಷ್ಯವನ್ನು ದೂಡಿ ವಿದ್ಯಾರ್ಜನೆಯನ್ನು ಮಾಡುವದು ನಿಮ್ಮ ಕರ್ತವ್ಯವಾಗಿದೆ. ಆದರೆ ಇತ್ತಲಾಗಿ ಅಸಹಕಾರರು "ಶಾಲೆಯನ್ನು ಬಿಡಿರಿ, ನೌಕರಿ ಬಿಡಿರಿ ಹಪ್ತೆ ಕೊಡಬೇಡಿರಿ. ಈ ಸರಕಾರವು ಯಮ—ಸೈತಾನ ಆಗಿದೆ" ಇತ್ಯಾದಿ ಬೊಗಳುತ್ತಿದ್ದಾರೆ. ಈ ಜಹಾಲಬಂಟರ ಜೊಳ್ಳುಮಾತಿಗೆ ಕಿವಿಗೊಡಬೇಡಿರಿ. ಯಾಕಂದರೆ "ಅಸಹಕಾರದ ಉದ್ದೇಶವು ರಾಜ್ಯಕ್ರಾಂತಿಯೇ ಇರುತ್ತದೆ" ಅವರ ತತ್ವದಲ್ಲಿ ಕದನ ದ್ವೇಷ ಮತ್ತು ಅವನತಿಯೆಂಬ ಶಬ್ದಗಳೇ ಕಂಡುಬರುತ್ತವೆ. ಈ ರೀತಿಯಿಂದ ಸ್ವರಾಜ್ಯವು ಎಂದಿಗೂ ದೊರಕಲಾರದು. ಸರಕಾರದವರ ಸಂಗಡ ಸಹಕಾರದಿಂದ ನಡೆದು ಯಾವತ್ತರೂ ಉಚ್ಚಶಿಕ್ಷಣವನ್ನು ಹೊಂದಿದರೆ ಸ್ವರಾಜ್ಯವು ತಾನಾಗಿಯೇ ದೊರೆಯುವುದು. ಸರಕಾರದ ಧ್ಯೇಯವಾದರೂ ಹೀಗೆಯೇ ಹಿಂದುಸ್ಥಾನವನ್ನು ಸ್ವರಾಜ್ಯಕ್ಕೆ ಲಾಯಖ್ ಮಾಡುವುದೇ ಆಗಿರುತ್ತದೆ. ಹೇಗೆಂದರೆ ನಿಮ್ಮ ಸುತ್ತಲಿನ ಶಾಲೆ ಕಾಲೇಜು ವಿಶ್ವವಿದ್ಯಾಲಯ ಇವುಗಳ ಕಡೆಗೆ ವಿಚಾರಿಸಿ ನೋಡಿದರೆ ಹಿಂದುಸ್ಥಾನವನ್ನು ನಿರಂತರವಾಗಿ ದಾಸ್ಯತ್ವದಲ್ಲಿ ಇಡುವದೇ ಬ್ರಿಟಿಷರ ಉದ್ದೇಶವಾಗಿದ್ದರೆ ಅವರು ಹಿಂದುಸ್ಥಾನಕ್ಕೆ ಈ ತರದ ಶಿಕ್ಷಣವನ್ನು ಎಂದೂ ಕೊಡುತ್ತಿದ್ದಿಲ್ಲ. ಮತ್ತು ವರ್ತಮಾನ ಪತ್ರಗಳನ್ನು ಎಂದೂ ಪ್ರಸಾರಮಾಡಗೊಡುತ್ತಿದ್ದಿಲ್ಲ. ಶಿಕ್ಷಣ ಹಾಗೂ ವರ್ತಮಾನ ಪತ್ರಗಳಿಲ್ಲದಿದ್ದರೆ ಸ್ವತಂತ್ರತೆಯ ಕಲ್ಪನೆಯು ಯಾರಿಗೂ ಬರುತ್ತಿದ್ದಿಲ್ಲ. ಆದುದರಿಂದ ಈ ರಾಷ್ಟ್ರಘಾತಕವಾದ ಚಳವಳಿಯಲ್ಲಿ ಯಾರೂ ಸೇರಬೇಡಿರಿ. ರಾಜನಿಷ್ಠೆಯುಳ್ಳವರಾಗಿ ವಿದ್ಯಾರ್ಜನೆಯನ್ನು ಮಾಡಿ, ನಿಮ್ಮ ಸಮಾಜ ಜಾಗ್ರತೆಮಾಡಿಕೊಳ್ಳಿರೆಂದು ಇಚ್ಛಿಸುವವ.

ಕಡಡಿ ನಿವಾಸಿ.

ರಾಣಿಬೆನ್ನೂರು ವೀ. ಫ್ರೀ ಬೋರ್ಡಿಂಗು.

ರಾಣೆಬೆನ್ನೂರ ಕೆಲವು ಉದಾರ ಮತ್ತು ವಿದ್ಯಾವಾತ್ಸಲ್ಯವುಳ್ಳ ಸಭ್ಯಗೃಹಸ್ಥರು ಕೂಡಿ ಎರಡುವರ್ಷಗಳ ಪೂರ್ವದಲ್ಲಿ ಒಂದು "ಫ್ರೀ ಬೋರ್ಡಿಂಗನ್ನು" ಇಲ್ಲಿ ನಡೆಸಬೇಕೆಂಬ ಉದ್ದೇಶದಿಂದ ಕೆಲವು ಹಣವನ್ನು ಶೇಖರಿಸಿದ್ದರು. ಆದರೆ ಕೆಲವು ಅನಿವಾರ್ಯಕಾರಣಗಳ ಮೂಲಕ ಈ ಉದ್ದೇಶವು ಕಾರ್ಯರೂಪದಲ್ಲಿ ಬಂದಿರಲಿಲ್ಲ. ಯಾವಮಹಾಸ್ವಾಮಿಗಳ ಆಶೀರ್ವಾದಬಲದಿಂದ ಈ ಸತ್ಕಾರ್ಯಕ್ಕೆ ಇಲ್ಲಿಯ ಜನರು ಮುಖವಿಟ್ಟಿದ್ದರೋ ಆ ಶ್ರೀ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ತಾ|| ೨೯-೧೨-೧೯೨೧ ಗುರುವಾರ ಇಲ್ಲಿಗೆ ದಯಮಾಡಿಸಲು, ನಿದ್ರಾವಸ್ಥೆಯಲ್ಲಿದ್ದ ಇಲ್ಲಿಯ ಮಹಾಜನಗಳು ಎಚ್ಚರಗೊಂಡು ಕಾರ್ಯತತ್ಪರರಾಗುವ ಸುಯೋಗವು ಕಂಡುಬಂತು. ಅದೇ ಗುರುವಾರ ಸಾಯಂಕಾಲ ೬ ಘಂಟೆಗೆ ಶ್ರೀ ಪ್ರಭುದೇವರ ಮಠದಲ್ಲಿ ಮಹಾಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿತ್ತು. ಆ ಕಾಲಕ್ಕೆ ತೀವ್ರತರವಾದ ಚರ್ಚೆಯೂ, ಸ್ಫೂರ್ತಿದಾಯಕ ಭಾಷಣಗಳೂ ನಡೆದ ತರುವಾಯ ಇದೇ ಮಾರ್ಚಿ ತಿಂಗಳಿಂದ ಸದರಿ ಮಠದಲ್ಲಿ "ಶ್ರೀ ಮೃತ್ಯುಂಜಯ ಫ್ರೀ ಬೋರ್ಡಿಂಗ್" ಪ್ರಾರಂಭಿಸಲ್ಪಡಬೇಕೆಂದು ನಿರ್ಧರಿಸಲ್ಪಟ್ಟಿತು. ಇದರ ವ್ಯವಸ್ಥೆಗೋಸ್ಕರ ಮ|| ರಾ|| ಸಿದ್ಧಪ್ಪ ಬಣಗಾರ, ಮ|| ರಾ|| ಚನ್ನವೀರಪ್ಪ ಬಾದಾಮಿ, ಮ|| ರಾ|| ಶಿವಪ್ಪ ಕೊಟ್ಟೂರು, ಮತ್ತು ಮ|| ರಾ|| ಕುರುವತ್ತೆಪ್ಪ ಕುರುವತ್ತಿ, ಈ ಸಭ್ಯಗೃಹಸ್ಥರದೊಂದು ವ್ಯವಸ್ಥಾಪಕ ಸಂಘವು ನಿಯಮಿಸಲ್ಪಟ್ಟಿತು. ಈ ಸಂಘದವರು ಬೋರ್ಡಿಂಗಿನ ಒಂದು ವರ್ಷದ ಖರ್ಚನ್ನು ಕೂಡಿಸಿಕೊಟ್ಟು ಅದು ಅವ್ಯಾಹತವಾಗಿ ನಡೆಯುವಂತೆ ಮಾಡುತ್ತೇವೆಂದು ವಾಗ್ದಾನ ಮಾಡಿರುವರು. ಮತ್ತು ವೇ|| ಗುರುಬಸವಯ್ಯನವರು ಹಿರೇಮಠ ಮ|| ರಾ|| ರುದ್ರಪ್ಪ ಪುರದ ಈ ಉಭಯರೂ ಒಂದು ವರ್ಷದ ವರೆಗೆ ಬೋರ್ಡಿಂಗಿನ ಚಾಲಕರಾಗಿ ಆರಿಸಲ್ಪಟ್ಟಿರುವರು. ಅಲ್ಲದೆ, ಇನ್ನೂ ಅನೇಕ ಉತ್ಸಾಹಿಜನಗಳು ಬೋರ್ಡಿಂಗಿನ ಕಾರ್ಯದಲ್ಲಿ ಯಾವಾಗಲೂ ವ್ಯವಸ್ಥಾಪಕ ಸಂಘದವರಿಗೆ ತುಂಬಾ ಸಹಾಯವನ್ನು ಮಾಡಲು ಸಿದ್ಧರಿದ್ದೇವೆಂದು ಸಭೆಯಲ್ಲಿ ಎದ್ದು ಹೇಳಿರುವರು. ಈ ಪ್ರಕಾರ ಕಳೆದ ಎರಡುವರ್ಷಗಳಿಂದ ಹಿಂದೆ ಬಿದ್ದಿದ್ದ ಸಾಮಾಜಿಕ ಕಾರ್ಯವು ಶ್ರೀಗಳವರ ಆಶೀರ್ವಾದ ಬಲದಿಂದ ಕಾರ್ಯತಃ ನಡೆದದ್ದನ್ನು ನೋಡಿ ಪ್ರತಿಯೊಬ್ಬ ವಿದ್ಯಾಭಿಮಾನಿಗೆ ಆನಂದವಾಗದೆ ಇರಲಿಕ್ಕಿಲ್ಲ. ಯಾಕಂದರೆ, ಈ ಭಾಗದಹಳ್ಳಿಗಳಿಂದ ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಬರುವ ಬಡವಿದ್ಯಾರ್ಥಿಗಳು ಹುಬ್ಬಳ್ಳಿ ಧಾರವಾಡ ಮೊದಲಾದ ದೊಡ್ಡ ಶಹರುಗಳಿಗೆ ಹೋಗುವುದು ಶಕ್ಯವಿಲ್ಲ. ಇದೇ ಗ್ರಾಮದಲ್ಲಿ ಕೆಲವು ಉದಾರಮನಸ್ಸಿನ ವಿದ್ಯಾಭಿಮಾನಿಗಳು ಎಷ್ಟೋ ಬಡವಿದ್ಯಾರ್ಥಿಗಳಿಗೆ ಅನ್ನವಸ್ತ್ರಾದಿಗಳನ್ನು ಕೊಟ್ಟು ಆಶ್ರಯವನ್ನು ಕೊಟ್ಟಿರುತ್ತಾರೆ. ಇದು ಸ್ತುತ್ಯವೇಸರಿ! ಆದರೆ ಇಂಗ್ಲೀಷ್ ವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೆ ಬೆಳೆಯುತ್ತಿರುವಾಗ, ಇಲ್ಲಿ ಒಂದು ಬೋರ್ಡಿಂಗನ್ನು ಸ್ಥಾಪಿಸದ ವಿನಾ ವಿದ್ಯಾರ್ಥಿಗಳ ತೃಪ್ತಿಕರವಾದ ವ್ಯವಸ್ಥೆಯಾಗುವುದು ಶಕ್ಯವಿಲ್ಲ. ಅಲ್ಲದೆ ಇಂಥಾ ಬೋರ್ಡಿಂಗ್ ಮೊದಲಾದ ಸಾರ್ವಜನಿಕ ಸಂಸ್ಥೆಗಳನ್ನು ನಡೆಸುವದರಿಂದ ವಿದ್ಯಾಪ್ರೋತ್ಸಾಹದ ಕಾರ್ಯವೊಂದೇ ನಡೆಯುವುದಲ್ಲದೆ, ಸಮಾಜಸೇವೆಯ ಕಾರ್ಯದಲ್ಲಿ ತತ್ಪರರೂ ನಿಪುಣರೂ ಆಗುವ ಮಾರ್ಗವೊಂದನ್ನು ಕೂಡ ನಾವೇ ನಮಗೋಸ್ಕರ ಕಲ್ಪಿಸಿಕೊಂಡಂತಾಗುವುದು. ಇದೊಂದು ಸಮಾಜ ಶಾಸ್ತ್ರದೃಷ್ಟಿಯಿಂದ ಮೇಲಿನ ಹಿತಕ್ಕಿಂತಲೂ ಹೆಚ್ಚು ಮಹತ್ವದ್ದಾಗಿದೆ. ಆದುದರಿಂದ ಈ ಮಹಾಶಯರು ಸ್ವಹಿತ ಮತ್ತು ಪರಹಿತಗಳನ್ನು ಒಂದೇ ಕಾಲಕ್ಕೆ ಸಾಧಿಸಿ, ಸರ್ವರಿಗೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟು ಕೀರ್ತಿಭಾಜನರಾಗುವರೆಂದು ನಂಬಿರುವ,

ಸುಜನವಿಧೇಯ ಓರ್ವನಗರವಾಸಿ.

೧೯೨೨ ನೆಯ ಇಸವಿ ಜನವರಿ ತಾ|| ೨೨ ರಿಂದ ೧೯೨೨ ನೆಯ ಜನವರಿ ತಾ|| ೨೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮಸಂವತ್ಸರದ ಪುಷ್ಯಬಹುಳ ದಶಮಿಯಿಂದ ಮಾಘಶುದ್ಧ ಪಾಡ್ಯದ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರಮಾ
22	ಭಾನು	ದಶ	46-49	ವಿಶಾ	19-45	9
23	ಸೋಮ	ಏಕಾ	45-36	ಅನೂ	19-38	10
24	ಮಂಗಳ	ದ್ವಾದ	45-47	ಜ್ಯೇಷ್ಠ	20-39	11
25	ಬುಧ	ತ್ರಯೋ	47-7	ಮೂಲ	22-56	12
26	ಗುರು	ಚತು	49-51	ಪೂಷಾ	26-23	13
27	[1]ಶುಕ್ರ	ಅಮಾ	53-38	ಉಷಾ.	31-3	14
28	[2]ಶನಿ	ಪಾಡ	58-22	ಶ್ರವ	36-42	15

(1) ಸರ್ವತ್ರ ಶೈವ್ಯಮಾವಾಸ್ಯ. (2) ಮಾಘ ಗೌರೀವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜನವರಿ ತಾರೀಖು ೧೫ ನೆಯ ಭಾನುವಾರ ಸಂಚಿಕೆ ೩

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! **ಏಕೆಂದರೆ ?**

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
4 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 32

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ರಿದಾಸಿ	೦— ೮—೦
[illegible]	೦— ೯—೦

ಹೊಸ ಗ್ರಂಥಗಳು ! **ಬೇಗನೆ ತರಿಸಿಕೊಳ್ಳಿರಿ !!**

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವಾಚ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖವಂತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಿಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಯಲ್ಲಾ ದೇವಾನುದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ
ಪ್ರೆಸ್, ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು ಮತ್ತು ರೇಷ್ಮೆ ವಸ್ತ್ರಗಳು.

48 ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಸ್ತ್ರಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0.12.0	,	50-0.0
5	0. 8.0	..	100-0.0
6	0-12.0	,,	100-0-0
7	6. 0.0	,,	100-0-0

ಬಿಡಿಮಣಿಗಳು 1ಕ್ಕೆ ಕ್ರಯ

3	0- 6.0	ಇಂದ	10-0-0
8	0- 8.0	,,	100-0-0
9	0-12-0	,,	100-0-0
10	0-14-0	,,	100-0-0
11	3- 8.0	,,	100-0-0
12	4- 0.0	,,	100-0-0
13	4- 8.0	,,	100-0-0
14	6- 0.0	,,	100-0-0

108 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರಿಯುವದು.

ಪ್ರಮಾಣ	ರೂ. ಇಂದ		ರೂ ವರೆಗೆ.
ಉದ್ದಿನ	,, 15-0-0	,,	40-0-0
ಮಣಸು	,, 7-8-0	,,	15-0-0
ಕಡಲೆ	,, 2-8-0	,,	7-0-0
ನೆನೆದಕಡಲೆ	,, 1-8-0	,,	3-0-0
ಕಮಲಾಕ್ಷಿ	,, 1-0-0	,,	2-0-0
ದೊಡ್ಡ ,,	,, 0-8-0	,,	1-0-0
ಅದಕ್ಕಿಂತ	,, 0-6-0	,,	0-8-0
ಸ್ಫಟಿಕ108ಕ್ಕೆ	4-8-0	,,	30-0-0
ಶ್ರೀಚಕ್ರ1ಕ್ಕೆ	8-0-0	,,	100-0-0
ಲಿಂಗ 1ಕ್ಕೆ	1-0-0	,,	100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

S U. N. & Co., ಎಸ್. ಯು. ನೇಪಾಳ ರುದ್ರಾಕ್ಷ
Chaukhamba, ಕಂಪನಿ, ಚೌಕಂಬಾ ಕಾಶೀ.
Benares.

ಬಾಲಕರಲ್ಲಿ ವಿದ್ಯಾಭಿರುಚಿಯನ್ನು ಹೆಚ್ಚಿಸುವುದಕ್ಕಾಗಿ ಅನೇಕವಿಧವಾಗಿ ಪ್ರೋತ್ಸಾಹಾತಿಶಯಗಳನ್ನುಮಾಡುತ್ತಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ತಮ್ಮ ಸೇವಕನಾದ ನಾನುಕೂಡ ನನ್ನ ಯಥಾಶಕ್ತಿ ಸಮಾಜಸೇವೆಯನ್ನು ಮಾಡಬೇಕೆಂಬ ಲವಲವಿಕೆಯಿಂದ ಈಗ ೩-೪ ವರ್ಷಗಳಿಂದಲೂ ಎರಡು ಬಹುಮಾನಗಳನ್ನೇರ್ಪಡಿಸಿ, ಅದನ್ನು ಪ್ರೌಢಪರೀಕ್ಷೆಗಳಲ್ಲಿ ಉತ್ತಮವಾಗಿ ತೇರ್ಗಡೆಯಾಗಿರುವ ನಮ್ಮ ತರುಣರಿಗೆ ಕೊಡುತ್ತಾ ಇರುವುದುಸಹ ತಮ್ಮಗಳಿಗೆ ತಿಳಿದ ವಿಷಯವೇ ಆಗಿದೆ. ಹೀಗೆ ಬಹುಮಾನಗಳನ್ನು ಪಡೆಯುವ ತರುಣರು ಮುಂದೆ ತಮ್ಮ ಜೀವಮಾನದಲ್ಲಿ ಸ್ವಾರ್ಥಾಭಿಲಾಷಿಗಳಾಗದೆ ಆದಷ್ಟು ಸಮಾಜಸೇವೆಯಲ್ಲಿ ನಿರತರಾಗಿ ಸನ್ಮಾರ್ಗಪ್ರವರ್ತಕರಾಗಿ ಅನಾಥರೂ ಬಡವರೂ ಆದ ವಿದ್ಯಾರ್ಥಿಗಳಿಗೆ ಆಶ್ರಯದಾತರಾಗಿ ಶ್ರೀ ಪರಶಿವಪ್ರೀತಿಗೂ ಸಮಾಜದ ವಂದನೆಗೂ ಪಾತ್ರರಾಗುತ್ತ ಆಯಾ ಪ್ರದೇಶದ ನಮ್ಮ ತರುಣರನ್ನೆಲ್ಲಾ ಸಾಧ್ಯವಾದಷ್ಟು ಸಮಾಜದ ಪುರೋವೃದ್ಧಿಗೆ ಸಹಾಯರಾಗುವಂತೆ ಪ್ರೋತ್ಸಾಹಿಸುವರೆಂಬುದೇ ನನ್ನ ಮುಖ್ಯ ಕೋರಿಕೆಯಾಗಿದೆ. ಅದನ್ನು ತಾವುಗಳೆಲ್ಲಾ ಕೃತಕೃತಃ ಸಾರ್ಥಕಪಡಿಸುವಿರೆಂದು ನಂಬಿರುತ್ತೇನೆ. ಪರಂತು ೧೯೨೨ನೆ ವರ್ಷದಲ್ಲಿ ನಾನು ಕೊಡಬೇಕಾಗಿದ್ದ ಎರಡು ಬಹುಮಾನಗಳನ್ನು ಈ ಕೆಳಗೆ ಕಂಡಂತೆ ವಿನಿಯೋಗಿಸಲು ನಿರ್ಧರಿಸಿದ್ದೇನೆ. ೧. ಕೀರ್ತಿಶೇಷರಾಗಿ ಇಹೀಸಮಾಜದಲ್ಲೇ ಚಿರಸ್ಮರಣೀಯರಾಗಿರುವ ಮೈಸೂರಿನ ಯಜಮಾನರಾದ ಕೈ|| ಶ್ರೀ|| ವೈ. ವೀರಸಂಗಪ್ಪನವರ ಹೆಸರಿನ ಬಹುಮಾನವು ೧೯೨೨ನೆ ಇಸವಿಯಲ್ಲಿ ಇಂಜನೀಯರಿಂಗ್ ಕಲಾಶಾಲೆಯಿಂದ ಬಿ. ಇ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಾಲಿ ತುಮಕೂರಿನಲ್ಲಿ ಇಂಜನಿಯರಿಂಗ್ ಇಲಾಖೆಯಲ್ಲಿರುವ ಮ|| ಕೆ. ಜಿ. ಚೆನ್ನಬಸವಯ್ಯ, ಬಿ. ಇ. ಯವರಿಗೂ, ಮತ್ತು ೨ನೆ ಬಹುಮಾನವು ೧೯೨೨ನೆ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಾಲಿ ಬಿ. ಎ. ಕ್ಲಾಸಿನಲ್ಲಿ ವ್ಯಾಸಂಗಮಾಡುತ್ತಿರುವ ಮ|| ಜಿ. ಎಸ್. ತಮ್ಮಯ್ಯನವರಿಗೆ ನನ್ನ ಪ್ರಿಯಜನಕರಾದ ಕೈ|| ಶ್ರೀ|| ಗುಬ್ಬಿ ಕೊಟ್ಟೂರಯ್ಯನವರ ಹೆಸರಿನ ಬಹುಮಾನವೂ ದೊರೆತಿವೆ. (ಈ ಬಹುಮಾನಗಳು ಇಷ್ಟರಲ್ಲೇ ವಿನಿಯೋಗಿಸಲ್ಪಡುತ್ತವೆ) ಇದರಂತೆಯೇ ಈ ಬಹುಮಾನಗಳನ್ನು ೧೯೨೨ನೆ ಮಾರ್ಚಿ ತಿಂಗಳಲ್ಲಿ ನಡೆಯುವ ಬಿ. ಎ. ಮತ್ತು ಎಂಟ್ರೆನ್ಸ್ ಪರೀಕ್ಷೆಗಳಿಗೆ ವಿನಿಯೋಗಿಸಲು ನಿರ್ಧರಿಸಿದೆಯಾಗಿ ನಮ್ಮ ವಿದ್ಯಾರ್ಥಿಗಳು ಇನ್ನೂ ಹೆಚ್ಚು ಶ್ರದ್ಧಾಸಕ್ತಿಗಳಿಂದ ವ್ಯಾಸಂಗಮಾಡುತ್ತಿರಬೇಕಾಗಿ ಕೋರುತ್ತೇನೆ. ಅಲ್ಲದೆ ರಾ||ಬ||ಧ|| ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳು ವಿಶೇಷ ಕುತೂಹಲದಿಂದ ಅಭ್ಯಾಸಮಾಡಿ ಈ ವರ್ಷದ ಪರೀಕ್ಷೆಗಳಲ್ಲಿ ಬಹುಜನಗಳು ತೇರ್ಗಡೆಯಾಗಿ ಧರ್ಮಕರ್ತರ ಸತ್ಸಂಕಲ್ಪವನ್ನು ಸಾರ್ಥಕಪಡಿಸುವುದರಮೂಲಕ ಈಗ ಈ ತರುಣರ ವಿಚಾರದಲ್ಲುಂಟಾಗಿರುವ ಸಾಮಾನ್ಯಾಭಿಪ್ರಾಯವನ್ನು ಸಹ ಹೋಗಲಾಡಿಸುವರೆಂದು ನಂಬಿ ನಿರೀಕ್ಷಿಸುತ್ತೇನೆ. ಪರಂತು ಬೆಂಗಳೂರಲ್ಲಿ ಹೊಸದಾಗಿ ಏರ್ಪಟ್ಟಿರುವ ವೀರಶೈವತರುಣಸಂಘಕ್ಕೆ ಪ್ರತಿಯೊಬ್ಬ ವೀರಶೈವರೂ ಮೆಂಬರುಗಳಾಗಿ ಸೇರಿ, ತಮ್ಮ ಪ್ರದೇಶಗಳಲ್ಲೂ ಅದರ ಶಾಖೆಗಳನ್ನೂ ವಾಚಕಮಂದಿರಗಳನ್ನೂ ಸ್ಥಾಪಿಸಿಕೊಂಡು ಇತರರ ಮರುಳುಮಾತಿಗೆ ಬೆರಗಾಗದೆ ರಾಜಭಕ್ತಿಯಿಂದಲೂ ಪರಸ್ಪರಪ್ರೀತಿಯಿಂದಲೂ ನರ್ತಿಸುತ್ತಾ ಐಕಮತ್ಯವನ್ನು ಬಲಪಡಿಸಿಕೊಂಡು ವಿದ್ಯೆ ಮತ್ತು ಸಾಮಾಜಿಕ ರಾಜಕೀಯ ಸುಧಾರಣೆಗಳಲ್ಲಿ ಕರ್ತವ್ಯತತ್ಪರರಾಗಿ ನಮ್ಮ ಜನಾಂಗದ ಪುರೋವೃದ್ಧಿಗೂ ದೇಶೋನ್ನತಿಗೂ ಬೆಂಬಲರಾಗುವರೆಂದು ಸಮಾಜದವರೆಲ್ಲರ ಪರವಾಗಿ ಪ್ರಾರ್ಥಿಸುವ,

ಸುಜನವಿಧೇಯ ಜಿ. ಗುರುಸಂಗಾರ್ಯ,
ಪ್ಲೀಡರ್, ತುಮಕೂರು.

ವಿನಂತಿ.

ಶ್ರೀ ಪಂ|| ಕಾಶೀನಾಥಶಾಸ್ತ್ರಿಗಳಿಗೂ ಮ|| ಪಾವಟೆ ಸಿದ್ಧರಾಮಪ್ಪ ವಕೀಲರಿಗೂ ವಿನಯಪೂರ್ವಕ ಸೂಚನೆಯೇನೆಂದರೆ—ನೀವೂ ಮತ್ತು ನಿಮ್ಮ ಪಕ್ಷದವರೂ ಸಹ ಶ್ರೀಮತ್ಪಂಚಾಚಾರ್ಯರ ವಿಷಯವಾಗಿಯೂ ಶ್ರೀ ಬಸವೇಶನ ವಿಷಯವಾಗಿಯೂ ಅನೇಕರೀತಿ ನಿಂದಾಸ್ಪದವಾಗಿ ತಿರಸ್ಕಾರರೂಪದಿಂದ ಪರಸ್ಪರ ವೃತ್ತಪತ್ರಗಳಲ್ಲಿ ಟೀಕಾ ಮಾಡುತ್ತಲೂ ೧೦೫ ಪ್ರಶ್ನೆ, ಸನ್ಯಾಸಾಶ್ರಮವಿಮರ್ಶೆ, ಅಮಂಗಲಪ್ರಶ್ನಪರೀಕ್ಷಣ, ಬಸವಾದಿ ನಿಜತತ್ವದರ್ಪಣ, ಇತ್ಯಾದಿಗ್ರಂಥಗಳನ್ನು ಪ್ರಿಂಟುಮಾಡಿಸಿ ದೇಶದಲ್ಲಿ ಪ್ರಚಾರಮಾಡಿರುವದರಿಂದ ಯಾವತ್ತು ವೀರಶೈವ ಮಂಡಳಿಗೆ ಒಂದು ವಿಧವಾದ ಸಂಶಯಾಸ್ಪದವೂ ಅಗೌರವವೂ ಆದಂತಾಗಿರುವುದು. ಮತ್ತು ಸ್ವಮತ ಪರಮತಸ್ಥರಿಗೂ ಹಾಸ್ಯಾಸ್ಪದವಾಗುವಲ್ಲಿ ಸಂದೇಹವಿಲ್ಲ. ತಾವು ವಿದ್ಯಾವಂತರೂ ಪದವೀಧರರೂ ಇದ್ದು ಈ ಪ್ರಕಾರ ಬಹಿರಂಗವಾಗಿ ವಾದನಡೆಸುವದು ಸರ್ವರಿಗೂ ವಿಷಾದವೆನಿಸುವದು. ಆದುದರಿಂದ ದೇಶಮಧ್ಯದಲ್ಲಿ ಒಂದು ಸಭೆಯನ್ನು ಏರ್ಪಾಟುಮಾಡಿಸಿ ಮಧ್ಯವರ್ತಿಗಳಾದ ಪಂಡಿತರ ಸಮ್ಮುಖದಲ್ಲಿ ನಿಮ್ಮನಿಮ್ಮ ಸಿದ್ಧಾಂತಗಳನ್ನು ನಿರ್ಧರಮಾಡತಕ್ಕದ್ದು, ಅಥವಾ ಕೆಲವು ಕೆಲವು ಪ್ರಮುಖಜನರ ಸಮಕ್ಷ ಆಗಲಿ ಇಲ್ಲವೆ ಪರಸ್ಪರ ಪತ್ರದ್ವಾರಗಳಿಂದಾಗಲಿ ವಾದಗಳನ್ನು ಜರಗಿಸಬೇಕು. ಅಂದರೆ ಯೋಗ್ಯವೂ ಭೂಷಣವೂ ಆಗುವದು. ಇಂಥ ಗ್ರಂಥಾದಿಗಳ ರಚನಮಾಡಿ ಹರಡುವದರಿಂದ ಈಗ ನಡೆದಿರುವ ಚಳವಳಿಯಲ್ಲಿ ಇದೊಂದು ವಿಧವಾಗಿ ನಮ್ಮ (ವೀರಶೈವ) ಸಮಾಜದಲ್ಲಿ ಚಳವಳಿ ನಡೆದು, ಬೇರೆಬೇರೆ ಸಂಗತಿಗಳಾಗುವ ಭಾಗ ಬಂದೀತು. ಮತ್ತು ನಿಮ್ಮುಗಳ ವಿಷಯದಲ್ಲಾದರೂ ಜನರಿಗೆ ತಿರಸ್ಕಾರಬುದ್ಧಿಯುಂಟಾಗಿ ದ್ವೇಷಾಸೂಯಾದಿಗಳು ಬೆಳೆಯುವ ಸಂಭವವಿದೆ. ಆ ರೀತಿ ಆಗದಂತೆ ಉಭಯರೂ ಒಂದೊಂದು ಪಕ್ಷ ಹಿಡಿಯದಂತೆ ಏಕಸ್ಥರಾಗಿ ಶಾಸ್ತ್ರದ ನಿಜತತ್ವವೇನಿರುವುದು ಎಂಬುದನ್ನು ನಮ್ಮ ಸಮಾಜಕ್ಕೆಲ್ಲಾ ಬೋಧಮಾಡಿ ಯಶೋಭಾಗಿಗಳಾಗಬೇಕೆಂದು ವಿನಂತಿ.

ಎಚ್. ವಿರೂಪಾಕ್ಷಯ್ಯಾ ಪುರಾಣಿಕಮಠ.

ಮಾದರಿಯ ಮಾನವರು ಯಾರು ?

ನಮ್ಮ ಊರಲ್ಲಿಯ ಶ್ರೀ ಸಂಗಮೇಶ್ವರ ದೇವಾಲಯವು ಬಹಳ ಹಳೆಯ ಕಟ್ಟಡವಾಗಿತ್ತು. ಕಾರಣ ಈಗ ಬಹುಶಃ ೮-೧೦ ವರ್ಷಗಳ ಪೂರ್ವದಲ್ಲಿ ಇಲ್ಲಿಯ ಕೆಲಪ್ರಮುಖರು ದೇವಾಲಯವನ್ನು ಕೆಡಹಿಸಿ ಕಟ್ಟಿಸಲಿಕ್ಕೆ ಪ್ರಾರಂಭ ಮಾಡಿದರು. ಆದರೆ ಹಣದ ಅನಾನುಕೂಲತೆಯಿಂದ ಸದರಿ ಕಟ್ಟಡದ ಕೆಲಸವು ನಿಂತುಹೋಗಿತ್ತು. ಇಂಥ ಸ್ಥಿತಿಯನ್ನು ನೋಡಿ ಇಲ್ಲಿಯ ಶ್ರೀಮಂತ ಬಾಲಪ್ಪಣ್ಣಾ ನಾಗರಾಳ ಎಂಬ ಲೋಕವಿಖ್ಯಾತಗೃಹಸ್ಥರು ಈ ಕೆಲಸವನ್ನು ಕೈಕೊಂಡು ಈಗಾಗಲೇ ೧-೨ ವರ್ಷಗಳಲ್ಲಿ ಊರಜನರ ಸಹಾಯದಿಂದ ಕಟ್ಟಿಸುವ ಕೆಲಸವನ್ನು ಮುಗಿಸಿದರು. ಈ ಕೆಲಸದಲ್ಲಿ ಸದರಿ ಬಾಲಪ್ಪನವರು ನಾಗರಾಳ ಇವರು ತೋರಿಸಿದ ಸ್ವಾರ್ಥತ್ಯಾಗ, ಸಾಹಸ, ಧೈರ್ಯ, ಒಕ್ಕಟ್ಟು ಬೆಳಸುವ ಕುಶಲತೆ ಮೊದಲಾದ ಗುಣಗಳನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಸರಿ. ಇಂಥ ಕಾರ್ಯಕ್ಕೆ ಕೈಹಾಕಿ ಪೂರ್ಣಸಿದ್ಧಿಗೆ ಒಯ್ದ ನಮ್ಮ ನವತರುಣರಾದ ಬಾಲಪ್ಪನವರೇ ಮಾದರಿಯ ಮಾನವರಲ್ಲವೇ ? ಕಲ್ಪವೃಕ್ಷದಂತಿರುವ ಬಾಲಪ್ಪನವರು ಇನ್ನು ಮೇಲೆ ನಮ್ಮ ವೀರಶೈವ ತರುಣ ಸಂಘದ ವಿಷಯಕ್ಕೆ ಸ್ವಲ್ಪ ಕಾಳಜಿತೆಗೆದುಕೊಳ್ಳುವರೆಂದು ಆಶಿಸುತ್ತೇನೆ. ಹುನಗುಂದ ಸ್ಥಲವಾಸಿ.

ವೀರಶೈವ ತರುಣ ಸಂಘ, ಹುನಗುಂದ.

ತಾರೀಖು ೨೬-೧೨-೨೧ನೆ ದಿವಸ ಮ|| ಬಸೆಟ್ಟೆಪ್ಪಾ ಅಣ್ಣಾ ಬಳಬಟಿಗಿ ಶಿ. ಗುರುಬಸಯ್ಯನವರು ಇಂಗ್ಲೀಷ್ ಶಾಲಾ ಹೆಡ್‌ಮಾಸ್ತರ ಶಿವಪ್ಪ ಹಳಿಪೇಟಿ ಮತ್ತು ಸಿದ್ದಪ್ಪಾ ಕಡಪಟ್ಟಿ ಮೊದಲಾದವರು ಇಲ್ಲಿಯ ತರುಣಸಂಘದ ಸ್ವಯಂಸೇವಕರೊಡಗೂಡಿ ಪ್ರಸಿದ್ಧ ಕ್ಷೇತ್ರವಾದ ಶ್ರೀ ಸಂಗಮೇಶ್ವರದ ಕಾರ್ತಿಕೋತ್ಸವಕ್ಕೆ ಹೋಗಿ ೬-೭ ರೂಪಾಯಿ ಪೈಸಾಫಂಡನ್ನು ವಸೂಲು ಮಾಡಿ, ನಂತರ ತಂಗಡಗಿ ಮತ್ತು ಇದ್ದಲಗಿ ಬೆಳಗಲ್ಲ ಇತ್ಯಾದಿ ಗ್ರಾಮಗಳಲ್ಲಿ ಸಂಚರಿಸಿ ನಮ್ಮ ಗ್ರಾಮದ ತರುಣ ಸಂಘಕ್ಕೆ ೩-೪ ದಿವಸದಲ್ಲಿ ಸಾಧಾರಣ ೩೦-೩೫ ರೂಪಾಯಿಗಳನ್ನು ಕೂಡಿಸಿಕೊಟ್ಟರು. ಇಂಥ ಸಮಾಜಸೇವಾಧುರೀಣರೂ ಸ್ವಾರ್ಥತ್ಯಾಗಿಗಳೂ ಆದ ಮೇಲೆ ಬರೆದ ಸದ್ಗೃಹಸ್ಥರಿಗೂ ಮತ್ತು ಸ್ವಯಂಸೇವಕರಿಗೂ ಧನಸಹಾಯವನ್ನು ಮಾಡಿದ ನಮ್ಮ ಬಾಂಧವರಿಗೂ ಆ ಪರಮದಯಾನಿಧಿಯಾದ ಶ್ರೀ ಶಂಕರನು ಯಶಸ್ಸನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ. ಈ ಮಹನೀಯರ ಸಾಹಸವು ಅನುಕರಣೀಯವಾದದ್ದೆಂದು ಹೇಳಲಿಕ್ಕೆ ಬಾಧಕವಿಲ್ಲ. ಇದರಂತೆ ಇಲ್ಲಿಯ ವೀರಶೈವರೆಲ್ಲಾ ಸ್ವಾರ್ಥತ್ಯಾಗಿಗಳಾಗಿ ಸಂಘವನ್ನು ಊರ್ಜಿತಸ್ಥಿತಿಗೆ ತಂದದ್ದಾದರೆ ನಾವು ಕೈಕೊಂಡ ಕಾರ್ಯವು ಸಿದ್ಧಿಗೆ ಹೋದಂತೆ ಆಗುವುದು.

ಪ್ರತ್ಯಕ್ಷದರ್ಶಿ.

[ಹಣ ವಸೂಲುಕೊಟ್ಟವರ ಪಟ್ಟಿಯನ್ನು ಮುದ್ರಿಸಲಿಕ್ಕೆ ಸ್ಥಳವಿಲ್ಲವಾದುದರಿಂದ ಬಿಟ್ಟಿದ್ದೇವೆ. ಪ. ಪ್ರ.]

ಪ್ರಿನ್ಸ್ ಆಫ್ ವೇಲ್ಸ್‌ರವರ ಶುಭಾಗಮನ.

ಹರಪನಹಳ್ಳಿ.

ಬಳ್ಳಾರಿಜಿಲ್ಲಾ ಹರಪನಹಳ್ಳಿಯಲ್ಲಿ ಇದೇ ತಾ|| ೧೩ನೆ ದಿವಸ ಇಲ್ಲಿ ವೀರಶೈವರು ಬ್ರಿಟಿಷ್ ಯುವಸಾರ್ವಭೌಮರು ಮದ್ರಾಸ್‌ಪಟ್ಟಣಕ್ಕೆ ದಯಮಾಡಿಸಿದ ಕಾಲದಲ್ಲಿ ಅವರ ಗೌರವಾರ್ಥವಾಗಿ ಬಡಜನರಿಗೆ ಮೃಷ್ಟಾನ್ನಭೋಜನ ಮಾಡಿಸುವ ಸತ್ಕಾರ್ಯವು ಮ|| ರಾ|| ಶ್ರೀಮಂತ ನೆ|| ಬೊ|| ಕೊಟ್ರಬಸಪ್ಪನವರ ಉದಾರಾಶ್ರಯದಿಂದ ಶ್ರೀ ಗುಂಜಳ್ಳಿಮಠದಲ್ಲಿ ಸಾಂಗವಾಗಿ ನೆರವೇರಿತು. ಈ ಕಾರ್ಯಕ್ಕೆ ವೇ|| ತಲಿಗಿ ಹರಪನಹಳ್ಳಿಮಠದ ಬ್ರ|| ಶ್ರೀ|| ಸಿದ್ಧಾಂತಿ ಹೊಳೆಬಸವಶಾಸ್ತ್ರಿಗಳವರು ಮ|| ಗಳಾದ ಸೆಟ್ಟರ ಮುರಿಗೆಪ್ಪ, ಎಡವೀರಪ್ಪ, ಅಕ್ಕಾಲವೀರಪ್ಪ, ಭಗವಂತಪ್ಪ ಮುಂತಾದವರು ಬಹಳ ಸಹಾಯಮಾಡಿ ಕೀರ್ತಿಭಾಜನರಾದರು. ಸಾಯಂಕಾಲದಲ್ಲಿ, ಶ್ರೀ ಗುಂಜಳ್ಳಿಮಠದಲ್ಲಿ ಮ|| ರಾ|| ನೆ|| ಬೊ|| ಕೊಟ್ರಬಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಭಜನಾಸಂಘದವರಿಂದ ಶ್ರೀ ಪರಮಾತ್ಮನ ಸಂಕೀರ್ತನೆಯಾದನಂತರ ಮಿ|| ಟಿ. ಹೆಚ್. ಎಂ. ಸಿದ್ದಯ್ಯನವರು, ಶ್ರೀ ಯುವರಾಜರ ವಿದ್ಯಾಭ್ಯಾಸ ಮಹಾಯುದ್ಧದಲ್ಲಿ ತೋರಿಸಿದ ಅವರ ಸಾಹಸ, ಪ್ರಜೆಗಳಲ್ಲಿ ಅನುರಾಗ ಮುಂತಾದವುಗಳನ್ನು ಹೇಳಿ ಅವರನ್ನು ಗೌರವಿಸುವುದು ಬಹಳ ಪವಿತ್ರವಾದ ಕರ್ತವ್ಯವೆಂದು ಸೂಚಿಸಿದರು. ಅನಂತರ ಇಲ್ಲಿಯ ಮಿ|| ಹೆಚ್. ಲಿಂಗನಗೌಡರು ಲಿಂಗಾಯತರ ಪರವಾಗಿ ಶ್ರೀ ಯುವರಾಜರಿಗೆ ಸುಭಾಗಮನದ ಸ್ವಾಗತವನ್ನು ಬಯಸುವ ಠರಾವನ್ನು ತಂದರು. ಅದಕ್ಕೆ ಮಿ|| ನಂಜುಂಡಯ್ಯ, ಹಿರೇಮಠ ಇವರು ತಮ್ಮ ಅನುಮೋದನವಿತ್ತು ಸುಧಾರಣೆಯ ಜಾಯಿದೆಯ ಮಾಹಿತೆಯನ್ನೂ, ಬ್ರಿಟಿಷ್ ರಾಜ್ಯಾಂಗಪದ್ಧತಿಯನ್ನೂ ನೆರೆದ ಜನರಿಗೆ ವಿಶದವಾಗಿ ತಿಳಿಯಪಡಿಸಿದರು. ಅನಂತರ ಪದ್ಧತಿಯಪ್ರಕಾರ ಮಂಗಲವಾಗಿ ಜಯಘೋಷದೊಡನೆ ಎಲ್ಲರೂ ಶ್ರೀ ಯುವರಾಜರ ಶ್ರೇಯಸ್ಸನ್ನು ಹಾರೈಸಿದರು. ಸಭೆಯು ಮುಕ್ತಾಯವಾಯ್ತು.

ಪ್ರೇಕ್ಷಕ.

ಹಲಗೇರಿ ವೀ. ತರುಣಸಂಘ.

ರಾಣಿಬೆನ್ನೂರು ತಾ|| ಹಲಗೇರಿಗ್ರಾಮಕ್ಕೆ ತಾ|| ೩೦-೧೨-೧೯೨೧ ಶುಕ್ರವಾರದಿವಸ ಶ್ರೀ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ರಾಣಿಬೆನ್ನೂರಿಂದ ದಯಮಾಡಿಸಿದರು. ಅದೇದಿವಸ ರಾತ್ರಿ ೯ ಗಂಟೆಗೆ ಮ|| ರಾ|| ತಮದೋಡರವರ ಭವ್ಯದಿವಾನಖಾನೆಯಲ್ಲಿ ಶ್ರೀಗಳವರ ಅಧ್ಯಕ್ಷತೆಯಕೆಳಗೆ ಸಭೆಸೇರಿತ್ತು. ಆಕಾಲಕ್ಕೆ ಊರೊಳಗಿನ ಸರ್ವಜನಗಳೂ ಬಂದಿದ್ದರಲ್ಲದೆ, ರಾಣಿಬೆನ್ನೂರಿಂದ ಕೆಲವು ಸದ್ಗೃಹಸ್ಥರೂ ಬಂದಿದ್ದರು. ಮ|| ರಾ|| ವೀ. ಬಿ. ಪುರಾಣಿಕ ಇವರು “ವಿದ್ಯಾಪ್ರಸಾರ” ಎಂಬ ವಿಷಯದಮೇಲೆ ಭಾಷಣಮಾಡಿದನಂತರ ಶ್ರೀಗಳವರು ತಮ್ಮ ಅಧಿಕಾರಯುಕ್ತವಾಣಿಯಿಂದ “ಸಮಾಜಸೇವೆ ಮತ್ತು ಜಾಗ್ರತಿ” ಎಂಬ ವಿಷಯವನ್ನು ಕುರಿತು ಸಭಿಕರ ಮನಸ್ಸಿನಮೇಲೆ ಒಳ್ಳೇ ಪರಿಣಾಮವಾಗುವಂತೆ ಮಾತಾಡಿದರು. ಅವರ ಅಪ್ಪಣೆಯಮೇರೆಗೆ “ವೀರಶೈವತರುಣರ ಸಂಘ” ದ ಶಾಖೆಯೊಂದು ಇಲ್ಲಿ ಸ್ಥಾಪಿಸಲ್ಪಟ್ಟು, ಮ|| ರಾ|| ಸಿದ್ಧಪ್ಪ ಮುರಿಗೆಪ್ಪ ಕಬ್ಬಿಣದ ಇವರು ಅಧ್ಯಕ್ಷರಾಗಿಯೂ, ಮ|| ರಾ|| ಲಿಂಗನಗೌಡ ಪಾಟೀಲ ಇವರು ವಾ . ಪ. ಚೇರ್‌ಮನ್‌ರಾಗಿಯೂ, ಮ|| ರಾ|| ಚನ್ನಬಸಪ್ಪ ಬಸವಲಿಂಗಪ್ಪ ಹಂಪಾಳಿ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಈ ಸಂಘದವರು ಇನ್ನು ಸ್ವಲ್ಪದಿವಸಗಳಲ್ಲಿಯೇ ಒಂದು ವಾಚನಾಲಯವನ್ನೂ ಬಡವಿದ್ಯಾರ್ಥಿಗಳ ವಿದ್ಯಾಪ್ರೋತ್ಸಾಹಕ್ಕಾಗಿ ಒಂದು ಸ್ಥಾನಿಕಫಂಡನ್ನೂ ಸ್ಥಾಪಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರುವರು. ಇವರ ಸ್ತುತ್ಯವಾದ ಉದ್ದೇಶವು ಈಡೇರಲಿ. ಕೇವಲ ಶ್ರೀಗಳವರ ಪ್ರಯತ್ನವಿಶೇಷದಿಂದಲೇ ನಡೆದಿರುವ ಧಾರವಾಡದ “ಫ್ರೀ ಬೋರ್ಡಿಂಗ್” ಗೆ ಧಾನ್ಯರೂಪದಿಂದ ಸಹಾಯಮಾಡುವುದಕ್ಕೆ ಇಲ್ಲಿಯ ಮಹಾಜನಗಳು ವಾಗ್ದಾನಮಾಡಿರುವರು. ಮಂಗಳವಾದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವಗ್ರಾಮಸ್ಥ.

ವೀರಶೈವ ದಂಡಾವತಿ ಜಾತಿಬಾಂಧವರಿಗೆ ಸುವಿನಯ ಸೂಚನೆ.

ಪ್ರಿಯಬಾಂಧವರೆ ! ನೀವು ವಿದ್ಯೆಯಲ್ಲಿ ಬಹಳ ಹಿಂದೆ ಉಳಿದಿರುತ್ತೀರಿ. ಆದುದರಿಂದ ತಾವು ಮುಂದುವರಿಯುವುದು ಅತ್ಯವಶ್ಯವಿದೆ. ಯಾಕಂದರೆ ನೀವು ವಿದ್ಯಾಹೀನರಾಗಿರುವುದರಿಂದ ನಿಮ್ಮ ಮೇಲೆ ಮುಂದುವರಿದವರಿಂದ ಅನೇಕ ಅನ್ಯಾಯಗಳು ಮಾಡಲ್ಪಡುತ್ತವೆ. ನಿಮ್ಮ ಧನವು ವ್ಯರ್ಥವಾಗಿ ಸೆಳೆಯಲ್ಪಡುತ್ತದೆ. ಕುಲಕರ್ಣಿಗೆ ಹಪ್ತೆಕೊಟ್ಟು ಪಾವತಿ ತೆಗೆದುಕೊಳ್ಳುವಷ್ಟು ತಿಳುವಳಿಕೆ ನಿಮ್ಮಲ್ಲಿಲ್ಲ. ಎರಡನೆಯವರಿಂದ ಪತ್ರವನ್ನು ಬರೆಸಿ ಅಂಚೇಕಟ್ಟೆಗೆ ಹೋಗಿ ಹಾಕಿ ಪೋಸ್ಟ್‌ಮನ್ನನಿಗೆ “ತೀವ್ರ ಕಳಿಸಿಕೊಡಬೇಕೆಂದು” ಅಂಗಲಾಚಿ ಬೇಡಿಕೊಳ್ಳುವ ಎಷ್ಟೋ ಜನರನ್ನು ನಿಮ್ಮಲ್ಲಿ ಕಾಣಬಹುದಾಗಿದೆ. ಈ ತರದ ಹೀನಾವಸ್ಥೆಯಿಂದ ದೂರಾಗಬೇಕಾದರೆ ಜೋರಿನಿಂದ ವಿದ್ಯಾಸಂಪಾದನೆಯನ್ನು ಮಾಡಿರಿ. ನಮ್ಮ ದಯಾವಂತರಾದ ಆಂಗ್ಲ ಸರಕಾರದವರು ಹಿಂದೂಸ್ಥಾನ ನಿವಾಸಿಗಳಿಗೆ ವಿದ್ಯಾಮೃತವನ್ನು ಪಾನಮಾಡಿಸಲಿಕ್ಕೆ ಅನೇಕ ಸಮುತ್ತುಗಳನ್ನು ದಯಪಾಲಿಸಿದ್ದಾರೆ. ಇಂಥಾ ಸಮಯದಲ್ಲಿ ಆಲಸ್ಯವನ್ನು ದೂಡಿ ವಿದ್ಯಾರ್ಜನೆಯನ್ನು ಮಾಡುವದು ನಿಮ್ಮ ಕರ್ತವ್ಯವಾಗಿದೆ. ಆದರೆ ಇತ್ತಲಾಗಿ ಅಸಹಕಾರರು “ಶಾಲೆಯನ್ನು ಬಿಡಿರಿ, ನೌಕರಿ ಬಿಡಿರಿ ಹಪ್ತೆಕೊಡಬೇಡಿರಿ. ಈ ಸರಕಾರವು ಯಮ—ಸೈತಾನ ಆಗಿದೆ” ಇತ್ಯಾದಿ ಬೊಗಳುತ್ತಿದ್ದಾರೆ. ಈ ಜಹಾಲಬಂಟರ ಜೊಳ್ಳುಮಾತಿಗೆ ಕಿವಿಗೊಡಬೇಡಿರಿ. ಯಾಕಂದರೆ “ಅಸಹಕಾರದ ಉದ್ದೇಶವು ರಾಜ್ಯಕ್ರಾಂತಿಯೇ ಇರುತ್ತದೆ” ಅವರ ತತ್ವದಲ್ಲಿ ಕದನ ದ್ವೇಷ ಮತ್ತು ಅವನತಿಯೆಂಬ ಶಬ್ದಗಳೇ ಕಂಡುಬರುತ್ತವೆ. ಈ ರೀತಿಯಿಂದ ಸ್ವರಾಜ್ಯವು ಎಂದಿಗೂ ದೊರಕಲಾರದು. ಸರಕಾರದವರ ಸಂಗಡ ಸಹಕಾರದಿಂದ ನಡೆದು ಯಾವತ್ತರೂ ಉಚ್ಚಶಿಕ್ಷಣವನ್ನು ಹೊಂದಿದರೆ ಸ್ವರಾಜ್ಯವು ತಾನಾಗಿಯೇ ದೊರೆಯುವುದು. ಸರಕಾರದ ಧ್ಯೇಯವಾದರೂ ಹೀಗೆಯೇ ಹಿಂದುಸ್ಥಾನವನ್ನು ಸ್ವರಾಜ್ಯಕ್ಕೆ ಲಾಯಖ್ ಮಾಡುವುದೇ ಆಗಿರುತ್ತದೆ. ಹೇಗೆಂದರೆ ನಿಮ್ಮ ಸುತ್ತಲಿನ ಶಾಲೆ ಕಾಲೇಜು ವಿಶ್ವವಿದ್ಯಾಲಯ ಇವುಗಳ ಕಡೆಗೆ ವಿಚಾರಿಸಿ ನೋಡಿದರೆ ಹಿಂದುಸ್ಥಾನವನ್ನು ನಿರಂತರವಾಗಿ ದಾಸ್ಯತ್ವದಲ್ಲಿ ಇಡುವದೇ ಬ್ರಿಟಿಷರ ಉದ್ದೇಶವಾಗಿದ್ದರೆ ಅವರು ಹಿಂದುಸ್ಥಾನಕ್ಕೆ ಈ ತರದ ಶಿಕ್ಷಣವನ್ನು ಎಂದೂ ಕೊಡುತ್ತಿದ್ದಿಲ್ಲ. ಮತ್ತು ವರ್ತಮಾನ ಪತ್ರಗಳನ್ನು ಎಂದೂ ಪ್ರಸಾರಮಾಡಗೊಡುತ್ತಿದ್ದಿಲ್ಲ. ಶಿಕ್ಷಣ ಹಾಗೂ ವರ್ತಮಾನ ಪತ್ರಗಳಿಲ್ಲದಿದ್ದರೆ ಸ್ವತಂತ್ರತೆಯ ಕಲ್ಪನೆಯು ಯಾರಿಗೂ ಬರುತ್ತಿದ್ದಿಲ್ಲ. ಆದುದರಿಂದ ಈ ರಾಷ್ಟ್ರಘಾತಕವಾದ ಚಳವಳಿಯಲ್ಲಿ ಯಾರೂ ಸೇರಬೇಡಿರಿ. ರಾಜನಿಷ್ಠೆಯುಳ್ಳವರಾಗಿ ವಿದ್ಯಾರ್ಜನೆಯನ್ನು ಮಾಡಿ, ನಿಮ್ಮ ಸಮಾಜ ಜಾಗ್ರತವಾಡಿಕೊಳ್ಳಿರೆಂದು ಇಚ್ಛಿಸುವೆವು.

ಕದಡಿ ನಿವಾಸಿ.

ರಾಣಿಬೆನ್ನೂರು ವೀ. ಫ್ರೀ ಬೋರ್ಡಿಂಗು.

ರಾಣಿಬೆನ್ನೂರ ಕೆಲವು ಉದಾರ ಮತ್ತು ವಿದ್ಯಾವಾತ್ಸಲ್ಯವುಳ್ಳ ಸದ್ಗೃಹಸ್ಥರು ಕೂಡಿ ಎರಡುವರ್ಷಗಳ ಪೂರ್ವದಲ್ಲಿ ಒಂದು “ಫ್ರೀಬೋರ್ಡಿಂಗನ್ನು” ಇಲ್ಲಿ ನಡೆಸಬೇಕೆಂಬ ಉದ್ದೇಶದಿಂದ ಕೆಲವು ಹಣವನ್ನು ಶೇಖರಿಸಿದ್ದರು. ಆದರೆ ಕೆಲವು ಅನಿವಾರ್ಯಕಾರಣಗಳ ಮೂಲಕ ಈ ಉದ್ದೇಶವು ಕಾರ್ಯರೂಪದಲ್ಲಿ ಬಂದಿರಲಿಲ್ಲ. ಯಾವಮಹಾಸ್ವಾಮಿಗಳ ಆಶೀರ್ವಾದಬಲದಿಂದ ಈ ಸತ್ಕಾರ್ಯಕ್ಕೆ ಇಲ್ಲಿಯ ಜನರು ಮುಖಿವಿಟ್ಟಿದ್ದರೋ ಆ ಶ್ರೀ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ತಾ|| ೨೯-೧೨-೧೯೨೧ ಗುರುವಾರ ಇಲ್ಲಿಗೆ ದಯಮಾಡಿಸಲು, ನಿದ್ರಾವಸ್ಥೆಯಲ್ಲಿದ್ದ ಇಲ್ಲಿಯ ಮಹಾಜನಗಳು ಎಚ್ಚರಗೊಂಡು ಕಾರ್ಯತತ್ಪರರಾಗುವ ಸುಯೋಗವು ಕಂಡುಬಂತು. ಅದೇ ಗುರುವಾರ ಸಾಯಂಕಾಲ ೬ ಘಂಟೆಗೆ ಶ್ರೀ ಪ್ರಭುದೇವರ ಮಠದಲ್ಲಿ ಮಹಾಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿತ್ತು. ಆ ಕಾಲಕ್ಕೆ ತೀವ್ರತರವಾದ ಚರ್ಚೆಯೂ, ಸ್ಫೂರ್ತಿದಾಯಕ ಭಾಷಣಗಳೂ ನಡೆದ ತರುವಾಯ ಇದೇ ಮಾರ್ಚಿ ತಿಂಗಳಿಂದ ಸದರಿ ಮಠದಲ್ಲಿ “ಶ್ರೀ ಮೃತ್ಯುಂಜಯ ಫ್ರೀ ಬೋರ್ಡಿಂಗ್” ಪ್ರಾರಂಭಿಸಲ್ಪಡಬೇಕೆಂದು ನಿರ್ಧರಿಸಲ್ಪಟ್ಟಿತು. ಇದರ ವ್ಯವಸ್ಥೆಗೋಸ್ಕರ ಮ|| ರಾ|| ಸಿದ್ಧಪ್ಪ ಬಣಗಾರ, ಮ|| ರಾ|| ಚನ್ನವೀರಪ್ಪ ಬಾದಾಮಿ, ಮ|| ರಾ|| ಶಿವಪ್ಪ ಕೊಟ್ಟೂರು, ಮತ್ತು ಮ|| ರಾ|| ಕುರುವತ್ತೆಪ್ಪ ಕುರುವತ್ತಿ, ಈ ಸದ್ಗೃಹಸ್ಥರದೊಂದು ವ್ಯವಸ್ಥಾಪಕ ಸಂಘವು ನಿಯಮಿಸಲ್ಪಟ್ಟಿತು. ಈ ಸಂಘದವರು ಬೋರ್ಡಿಂಗಿನ ಒಂದು ವರ್ಷದ ಖರ್ಚನ್ನು ಕೂಡಿಸಿಕೊಟ್ಟು ಅದು ಅವ್ಯಾಹತವಾಗಿ ನಡೆಯುವಂತೆ ಮಾಡುತ್ತೇವೆಂದು ವಾಗ್ದಾನ ಮಾಡಿರುವರು. ಮತ್ತು ವೇ|| ಗುರುಬಸವಯ್ಯನವರು ಹಿರೇಮಠ ಮ|| ರಾ|| ರುದ್ರಪ್ಪ ಪುರದ ಈ ಉಭಯರೂ ಒಂದು ವರ್ಷದ ವರೆಗೆ ಬೋರ್ಡಿಂಗಿನ ಚಾಲಕರಾಗಿ ಆರಿಸಲ್ಪಟ್ಟಿರುವರು. ಅಲ್ಲದೆ, ಇನ್ನೂ ಅನೇಕ ಉತ್ಸಾಹಿಜನಗಳು ಬೋರ್ಡಿಂಗಿನ ಕಾರ್ಯದಲ್ಲಿ ಯಾವಾಗಲೂ ವ್ಯವಸ್ಥಾಪಕ ಸಂಘದವರಿಗೆ ತುಂಬಾ ಸಹಾಯವನ್ನು ಮಾಡಲು ಸಿದ್ಧರಿದ್ದೇವೆಂದು ಸಭೆಯಲ್ಲಿ ಎದ್ದು ಹೇಳಿರುವರು. ಈ ಪ್ರಕಾರ ಕಳೆದ ಎರಡುವರ್ಷಗಳಿಂದ ಹಿಂದೆ ಬಿದ್ದಿದ್ದ ಸಾಮಾಜಿಕ ಕಾರ್ಯವು ಶ್ರೀಗಳವರ ಆಶೀರ್ವಾದ ಬಲದಿಂದ ಕಾರ್ಯತಃ ನಡೆದದ್ದನ್ನು ನೋಡಿ ಪ್ರತಿಯೊಬ್ಬ ವಿದ್ಯಾಭಿಮಾನಿಗೆ ಆನಂದವಾಗದೆ ಇರಲಿಕ್ಕಿಲ್ಲ. ಯಾಕಂದರೆ, ಈ ಭಾಗದಹಳ್ಳಿಗಳಿಂದ ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಬರುವ ಬಡವಿದ್ಯಾರ್ಥಿಗಳು ಹುಬ್ಬಳ್ಳಿ ಧಾರವಾಡ ಮೊದಲಾದ ದೊಡ್ಡ ಶಹರುಗಳಿಗೆ ಹೋಗುವುದು ಶಕ್ಯವಿಲ್ಲ. ಇದೇ ಗ್ರಾಮದಲ್ಲಿ ಕೆಲವು ಉದಾರಮನಸ್ಸಿನ ವಿದ್ಯಾಭಿಮಾನಿಗಳು ಎಷ್ಟೋ ಬಡವಿದ್ಯಾರ್ಥಿಗಳಿಗೆ ಅನ್ನವಸ್ತ್ರಾದಿಗಳನ್ನು ಕೊಟ್ಟು ಆಶ್ರಯವನ್ನು ಕೊಟ್ಟಿರುತ್ತಾರೆ. ಇದು ಸ್ತುತ್ಯವೇಸರಿ! ಆದರೆ ಇಂಗ್ಲೀಷ್ ವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೆ ಬೆಳೆಯುತ್ತಿರುವಾಗ, ಇಲ್ಲಿ ಒಂದು ಬೋರ್ಡಿಂಗನ್ನು ಸ್ಥಾಪಿಸದ ವಿನಾ ವಿದ್ಯಾರ್ಥಿಗಳ ತೃಪ್ತಿಕರವಾದ ವ್ಯವಸ್ಥೆಯಾಗುವುದು ಶಕ್ಯವಿಲ್ಲ. ಅಲ್ಲದೆ ಇಂಥಾ ಬೋರ್ಡಿಂಗ್ ಮೊದಲಾದ ಸಾರ್ವಜನಿಕ ಸಂಸ್ಥೆಗಳನ್ನು ನಡೆಸುವದರಿಂದ ವಿದ್ಯಾಪ್ರೋತ್ಸಾಹದ ಕಾರ್ಯವೊಂದೇ ನಡೆಯುವುದಲ್ಲದೆ, ಸಮಾಜಸೇವೆಯ ಕಾರ್ಯದಲ್ಲಿ ತತ್ಪರರೂ ನಿಪುಣರೂ ಆಗುವ ಮಾರ್ಗವೊಂದನ್ನು ಕೂಡ ನಾವೇ ನಮಗೋಸ್ಕರ ಕಲ್ಪಿಸಿಕೊಂಡಂತಾಗುವುದು. ಇದೊಂದು ಸಮಾಜ ಶಾಸ್ತ್ರದೃಷ್ಟಿಯಿಂದ ಮೇಲಿನ ಹಿತಕ್ಕಿಂತಲೂ ಹೆಚ್ಚು ಮಹತ್ವದ್ದಾಗಿದೆ. ಆದುದರಿಂದ ಈ ಮಹಾಶಯರು ಸ್ವಹಿತ ಮತ್ತು ಪರಹಿತಗಳನ್ನು ಒಂದೇ ಕಾಲಕ್ಕೆ ಸಾಧಿಸಿ, ಸರ್ವರಿಗೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟು ಕೀರ್ತಿಭಾಜನರಾಗುವರೆಂದು ನಂಬಿರುವ,

ಸುಜನವಿಧೇಯ ಓರ್ವನಗರವಾಸಿ.

೧೯೨೨ ನೆಯ ಇಸವಿ ಜನವರಿ ತಾ|| ೨೨ ರಿಂದ ೧೯೨೨ ನೆಯ ಜನವರಿ ತಾ|| ೨೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮಸಂವತ್ಸರದ ಪುಷ್ಯಬಹುಳ ದಶಮಿಯಿಂದ ಮಾಘಶುದ್ಧ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರಮಾ
22	ಭಾನು	ದಶ	46-49	ವಿಶಾ	19-45	9
23	ಸೋಮ	ಏಕಾ	45-36	ಅನೂ	19-38	10
24	ಮಂಗಳ	ದ್ವಾದ	45-47	ಜ್ಯೇಷ್ಠ	20-39	11
25	ಬುಧ	ತ್ರಯೋ	47-7	ಮೂಲ	22-56	12
26	ಗುರು	ಚತು	49-51	ಪೂಷಾ	26-23	13
27	[1] ಶುಕ್ರ	ಅಮಾ	53-38	ಉಷಾ.	31-3	14
28	[2] ಶನಿ	ಪಾಡ	58-22	ಶ್ರವ	36-42	15

(1) ಸರ್ವತ್ರ ಶ್ರೈಯ್ಯಮಾವಾಸ್ಯ. (2) ಮಾಘ ಗೌರೀವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿಕ್ಕೆಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜನವರಿ ತಾರೀಖು ೨೯ ನೆಯ ಭಾನುವಾರ ಸಂಚಿಕೆ ೫

REGISTERED NO. M. 124.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯ ಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
4 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 32

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ ೦—೧೪—೦
ಚಾರುಶೀಲೆಚರಿತ್ರೆ ೦—೧೦—೦
ಸರಿದಾಸಿ ೦—೮—೦
ಪ್ರತಾಪಸಿಂಹ ೦—೯—೦

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವಾಜೀಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂಂತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದವ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವನು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ? ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ
ಪ್ರೆಸ್, ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಛಾರ್ಜು ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮುಖಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು ಮತ್ತು ರೇಷ್ಮೆ ವಸ್ತ್ರಗಳು.

48 ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಡಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ.	ರೂ. ವರೆಗೆ.
4	0.12.0	,	50-0-0
5	0. 8.0	..	100-0-0
6	0.12.0	,,	100-0-0
7	6. 0.0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6.0	ಇಂದ	10-0-0
8	0- 8.0	,,	100-0-0
9	0-12-0	,,	100-0-0
10	0-14-0	,,	100-0-0
11	3- 8.0	,,	100-0-0
12	4- 0.0	,,	100-0-0
13	4- 8.0	,,	100-0-0
14	6- 0.0	,,	100-0-0

108 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರೆಯುವದು.

ಪ್ರಮಾಣ	ರೂ. ಇಂದ	ರೂ. ವರೆಗೆ.
ಉದ್ದಿನ	,, 15-0-0	,, 40-0-0
ಮಣಸು	,, 7-8-0	,, 15.0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ ,,	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ. 40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

S U. N. & Co., ಎಸ್. ಯು. ನೇಪಾಳ ರುದ್ರಾಕ್ಷ
Chaukhamba, ಕಂಪನಿ, ಚೌಕಂಬಾ ಕಾಶೀ.
Benares.

ನೋಟೀಸು.

ಗೋರಿಬಿದನೂರು ತಾಲ್ಲೂಕು ಇಡುಗೂರಿನಲ್ಲಿರುವ ಶಿವಾಚಾರದ ಹೊನ್ನಯ್ಯನವರ ಲಿಂಗಪ್ಪನ ಮಕ್ಕಳು 1ನೆ ದೊಡ್ಡಮಲ್ಲಣ್ಣ, 3ನೆ ಲಿಂಗಪ್ಪ ಉರುಫ್ ದೊಡ್ಡಪ್ಪಯ್ಯ, 4ನೆ ಚಿಕ್ಕಮಲ್ಲಣ್ಣ, 5ನೆ ಅಪ್ಪಣ್ಣ, 6ನೆ ಹೊನ್ನಯ್ಯ. ಇವರು 5 ಜನ ತಿಳಿಯಪಡಿಸುವದೇನೆಂದರೆ— ನಮ್ಮ ತಂದೆಗೆ ನಾವು 5 ಜನರಲ್ಲದೆ 2ನೆ ಯವನಾದ ಸುಬ್ಬಣ್ಣನೆಂಬುವನು ಸೇರಿ 6 ಜನ ಮಕ್ಕಳು ಅವಿಭಕ್ತಕುಟುಂಬದವರಾಗಿದ್ದೇವೆ. ನಮ್ಮ 6 ಜನಗಳ ಪೈಕಿ 2ನೆ ಸುಬ್ಬಣ್ಣನು ಕುಟುಂಬದ ಯಜಮಾನನಾಗಿಯೂ 6ನೆ ಹೊನ್ನಯ್ಯನು ಸಂಸಾರದ ಮಾನೇಜುಮೆಂಟ್ ನೋಡತಕ್ಕವನಾಗಿಯೂ ಈತಹಲ್‍ವರಿವಿಗೂ ನಡಿಸುತ್ತಾ ಬಂದರು. ಈ ಮಧ್ಯೆ ಕುಟುಂಬದಲ್ಲಿ ಒಬ್ಬರಿಗೊಬ್ಬರಿಗೆ ಕಲಹಹುಟ್ಟಿ ಪಂಚಾಯಿತರ ಮೂಲಕ ಭಾಗವಿಮರ್ಶೆಮಾಡಿಕೊಡದೆ ನಮ್ಮ ಚರಸ್ಥಿರಸ್ವತ್ತುಗಳನ್ನು 2ನೆ ಸುಬ್ಬಣ್ಣ ಎಂಬಾತನು ಅಪಹರಿಸಬೇಕೆಂಬ ದುರಾಲೋಚನೆವುಳ್ಳವನಾಗಿ ನಮ್ಮ ಸ್ವತ್ತುಗಳನ್ನು ಪರಾಧೀನಮಾಡಲು ಯತ್ನಿಸಿ ಮನೆಬಿಟ್ಟು ಹೋಗಿ ಸುಮಾರು ಒಂದು ತಿಂಗಳು ಮೇಲ್ಪಟ್ಟಿತು. ಈಚೆಗೆ ಸ್ವತ್ತುಗಳನ್ನು ನಮ್ಮಗಳಾರಿಗೂ ದಕ್ಕಿಸದೆ ತಾನೊಬ್ಬನೇ ಆಕ್ರಮಿಸಿಕೊಳ್ಳಬೇಕೆಂದು ದುರಾಲೋಚನೆ ಮಾಡುತ್ತಿರುವದಾಗಿ ತಿಳಿಯಬಂದಿದೆ. ಆದ್ದರಿಂದ ನಮ್ಮ 5 ಜನಗಳ ಸಮ್ಮತಿಯಿಲ್ಲದೆ ನಮ್ಮ ಕುಟುಂಬದ ಸ್ವತ್ತುಗಳನ್ನು ಸುಬ್ಬಣ್ಣನಿಂದ ಯಾರೇ ಆಗಲಿ ಕ್ರಯ ದಾನ ಭೋಗ್ಯ ಆಧಾರ ವಗೈರೆ ಮಾಡಿಕೊಳ್ಳಕೂಡದೆಂದೂ ಒಂದುವೇಳೆ ಇದನ್ನು ಲಕ್ಷಿಸದೆ ಮಾಡಿಕೊಂಡಲ್ಲಿ ನಮ್ಮ 5 ಜನರ ಹಿಸ್ಸೆ ಆಸ್ತಿಗಳು ಈಡಾಗತಕ್ಕದ್ದಲ್ಲವೆಂದೂ ಆದರಿಂದ ನಮಗುಂಟಾಗುವ ನಷ್ಟ ಕೋರ್ಟು ಖರ್ಚು ವಗೈರೆಗಳಿಗೆ ಅವರು ಜವಾಬ್ದಾರರಾಗಿರುವರೆಂದೂ ಈ ಮೂಲಕ ಎಚ್ಚರಿಸಿದೆ.

ಹೊನ್ನಯ್ಯನವರ ಲಿಂಗಪ್ಪನ ಮಕ್ಕಳು—
1ನೆ ದೊಡ್ಡಮಲ್ಲಪ್ಪನರುಜು,
3ನೆ ಲಿಂಗಪ್ಪ ಉರುಫ್ ದೊಡ್ಡಪ್ಪಯ್ಯನರುಜು,
4ನೆ ಚಿಕ್ಕಮಲ್ಲಪ್ಪನರುಜು,
5ನೆ ಅಪ್ಪಣ್ಣನರುಜು,
6ನೆ ಹೊನ್ನಯ್ಯನರುಜು.

ತಾ|| 24-1-22.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೨೯ ನೆಯ ಭಾನುವಾರ.

ಪ್ರಜಾಪ್ರತಿನಿಸಭೆಗೆ ಸಭಾಸ್ತರರ ಆರಿಸುವಿಕೆ.

ಪ್ರಜಾಪ್ರತಿನಿಧಿ ಸಭೆಗೆ ಪ್ರತಿನಿಧಿಗಳನ್ನು ಸಂಸ್ಥಾನದ ಸರ್ವಭಾಗಗಳಿಂದಲೂ ಆರಿಸಿ ಕಳುಹಿಸಿಕೊಡುವ ಕೆಲಸವು ಮೂರುವರ್ಷಕ್ಕೆ ಒಂದುಸಲ ನಡೆಯಬೇಕಾಗಿರುವ ಪದ್ಧತಿಯಂತೆ ಈ ವರ್ಷದಲ್ಲಿ ಅದು ನಡೆಯಬೇಕಾಗಿದೆ. ಈಗ ಆರಿಸಲ್ಪಟ್ಟ ಸಭಿಕರು ಮುಂದೆ ೩ ವರ್ಷಗಳ ವರೆಗೂ ಇರುವರು. ಈ ಆರಿಸುವಿಕೆಗಾಗಿ ನಡೆಯಬೇಕಾದ ಕಾಲಕ್ರಮ ಮೊದಲಾದುವುಗಳನ್ನು ಕುರಿತು ಸರ್ಕಾರದವರು ಪ್ರಕಟಪಡಿಸಿರುವ ಅಪ್ಪಣೆಯನ್ನು ಈ ಪತ್ರದ ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ. ವಾಚಕರು ಚೆನ್ನಾಗಿ ಅದನ್ನು ಓದಿ ಮನನಮಾಡಿಕೊಳ್ಳಬೇಕಾಗಿದೆ.

ಪ್ರಜೆಗಳ ಅಭಿಮತವೇನೆಂಬುದನ್ನು ತಿಳಿದುಕೊಂಡು ರಾಜ್ಯಪರಿಪಾಲನೆ ಮಾಡಬೇಕೆಂಬ ಉದಾತ್ತತತ್ತ್ವಕ್ಕನುಸಾರವಾಗಿ ಪ್ರಜಾಪ್ರತಿನಿಧಿ ಸಭೆಯು ನಡೆಸಲ್ಪಡುತ್ತಿರುವುದರಿಂದ, ದೇಶದ ಎಲ್ಲ ಪ್ರಜೆಗಳೂ ತಂತಮ್ಮ ಸ್ಥಲಗಳಿಗೆ ಸಂಬಂಧಿಸಿದ ಅಥವಾ ಸಾರ್ವತ್ರಿಕವಾದ ಕಷ್ಟನಿಷ್ಠುರಗಳನ್ನೂ ಕೊರತೆಗಳನ್ನೂ ಪರಿಹಾರಗಳನ್ನೂ ಪ್ರಭುತ್ವದವರ ಮುಂದೆ ಅರಿಕೆ ಮಾಡಿಕೊಳ್ಳುವುದಕ್ಕಾಗಿಯೇ ಈ ಸಭೆಯ ಮೂಲಕ ಸಕಲ ಪ್ರಜೆಗಳಿಗೂ ಅವಕಾಶವನ್ನು ಶ್ರೀಮನ್ಮಹಾರಾಜರು ದಯಪಾಲಿಸಿರುತ್ತಾರೆ. ವರ್ಷಕ್ಕೊಂದುಸಲ ಸಭೆ ನಡೆದರೆ ಕೆಲಸವು ಮುಗಿಯುವುದಿಲ್ಲವೆಂದು ತಿಳಿದು ೨ ಸಲ ನಡೆಯುವಂತೆ ಮಾಡಿಕೊಟ್ಟಿದ್ದಾರೆ. ಪ್ರಜಾಭಿಪ್ರಾಯವು ಪರಿಪುಷ್ಟವಾಗಬೇಕೆಂದೂ ಅದಕ್ಕೆ ಗೌರವವು ಹೆಚ್ಚಬೇಕೆಂದೂ ಅವರುಗಳ ಇಷ್ಟಾರ್ಥವು ನೆರವೇರಿ ದೇಶಕ್ಕೆ ಸುಖವಾಗಬೇಕೆಂದೂ ಉದ್ದೇಶಪಟ್ಟು ಪ್ರಭುತ್ವದವರು ಸಭೆಯ ಗೌರವವನ್ನೂ ಕರ್ತವ್ಯಭಾರವನ್ನೂ ದಿನೇ ದಿನೇ ಬಲಪಡಿಸುತ್ತಿದ್ದಾರೆ.

ಇಂಥ ಪ್ರಶಸ್ತವಾದ ಅವರ ಉದ್ದೇಶವನ್ನು ಸಫಲಗೊಳಿಸಬೇಕಾದರೆ ಪ್ರಜೆಗಳಲ್ಲಿ ಆತ್ಮೋದ್ಧರಣಬುದ್ಧಿಯೂ, ದೇಶಾಭಿಮಾನವೂ, ಐಕಮತ್ಯವೂ, ಪ್ರಯತ್ನವೂ ಹೆಪ್ಪುಗೊಳ್ಳಬೇಕು. ಸೋಂಬೇರಿತನವನ್ನೂ ಅಸಾಮರ್ಥ್ಯಭ್ರಮೆಯನ್ನೂ ಮೂಲೆಗೊತ್ತಿ, ತಂತಮ್ಮ ಕಷ್ಟಗಳನ್ನು ಮೊರೆಯಿಟ್ಟುಕೊಳ್ಳಲು ಪ್ರತಿಯೊಂದು ಜನವರ್ಗಗಳಲ್ಲಿ ಮಾತುಗಾರಿಗಳಾದವರೂ ಸಭೆಗೆ ಪ್ರತಿನಿಧಿಗಳಾಗಿ ಬಂದು ಪ್ರಜಾಪ್ರತಿನಿಧಿಯೆಂಬ ಹೆಸರನ್ನು ಸಭೆಗೆ ಸಾರ್ಥಕಪಡಿಸಬೇಕು. ಈ ಸಭೆಯು ಯಾವುದೊಂದು ಜಾತಿಗೇ ಆಗಲಿ ಕೇವಲ ವಿದ್ಯಾವಂತರಿಗೋಸ್ಕರವೇ ಆಗಲಿ ಕಲ್ಪಿಸಲ್ಪಟ್ಟಿದ್ದಲ್ಲ. ಎಲ್ಲರಿಗೂ ಸರ್ವಸಮಾನವಾಗಿ ತೆರೆದಿಡಲ್ಪಟ್ಟ ಬಾಗಿಲುಳ್ಳದಾಗಿದೆ.

ಸಭೆಯು ಹುಟ್ಟಿ ೪೦ ವರ್ಷಗಳು ಕಳೆದರೂ ಸಂಸ್ಥಾನದ ಸಕಲವರ್ಗ ಪ್ರತಿನಿಧಿಗಳೂ ಈ ಸಭೆಯಲ್ಲಿ ಸಮಗ್ರವಾಗಿ ಸೇರಿದ್ದಾರೆಂದು ಹೇಳುವ ಸ್ಥಿತಿಯು ಇನ್ನೂ ಪ್ರಾಪ್ತವಾಗದಿರುವುದನ್ನು ನೋಡಿ ವಿಷಾದಿಸಬೇಕಾಗಿದೆ. ಒಬ್ಬರ ಕಷ್ಟವನ್ನು ಮತ್ತೊಬ್ಬರ ಬಾಯಿಂದ ಹೇಳಿಸುವುದಕ್ಕಿಂತ ತಾವೇ ಹೇಳಿಕೊಳ್ಳುವುದರಲ್ಲಿ ಹೆಚ್ಚು ಗುಣವಿರುವ ಕಾರಣ, ಆಯಾ ಜನವರ್ಗಗಳು ತಂತಮ್ಮ ನಿಜವಾದ ಕಷ್ಟಸುಖಗಳನ್ನು ತಾವೇ ಹೇಳಿಕೊಳ್ಳಲು ಸಿದ್ಧರಾಗಿ ಬಂದಲ್ಲದೆ ಅವರು ಉದ್ಧಾರವಾಗುವುದಿಲ್ಲ. ಸಂಸ್ಥಾನದಲ್ಲಿ ಹಿಂದುಳಿದ ಜನವರ್ಗಗಳವರ ಸಂಖ್ಯೆಯೇ ಹೆಚ್ಚಾಗಿದ್ದರೂ ಅವರ ಪ್ರತಿನಿಧಿಗಳ ಸಂಖ್ಯೆಯು ಸಭೆಯಲ್ಲಿ ಮಾತ್ರ ತೀರ ಕಡಿಮೆಯಾಗಿದೆ. ಈ ಸ್ಥಿತಿಯನ್ನು ಅವರು ದೂರಮಾಡಿಕೊಳ್ಳದಿದ್ದರೆ ಅವರುಗಳ ವಿದ್ಯಾಭ್ಯಾಸದ ಕೊರತೆ ಗ್ರಾಮಾಂತರಗಳ ಅನನುಕೂಲತೆ ಮೊದಲಾದ ಕಷ್ಟಗಳು ಇನ್ನು ಶತಮಾನ ಕಳೆದರೂ ಪರಿಹಾರವಾಗುವುದು ಅಸಂಭವ. ಆದುಕಾರಣ ಪ್ರತಿ ಡಿಸ್ಟ್ರಿಕ್ಟಿನಿಂದಲೂ ತಾಲ್ಲೂಕಿನಿಂದಲೂ ಸಭೆಗೆ ಪ್ರತಿನಿಧಿಗಳಾಗಿ ಬರಲು ಅರ್ಹತೆಯುಳ್ಳ ಜನರು ಉದಾಸೀನರಾಗಿರದೆ ಉಮೇದುವಾರರಾಗಿ ನಿಲ್ಲಲು ಈಗ ಯತ್ನಿಸಬೇಕು. ಓಟನ್ನು ಕೊಡಲು ಅರ್ಹತೆಯುಳ್ಳವರ ಮತ್ತು ಪ್ರತಿನಿಧಿಗಳಾಗಿ ಬರಲು ಅರ್ಹತೆಯುಳ್ಳವರ ಹೆಸರುಗಳಲ್ಲಿ ಕೆಲವು ಅಜಾಗರೂಕತೆಯಿಂದಲೋ ಅಥವಾ ಗೊತ್ತಿಲ್ಲದೆಯೋ ಇಲ್ಲವೆ ಮನಃಪೂರ್ವಕವಾಗಿಯೋ ಸ್ಥಳೀಯಾಧಿಕಾರಿಗಳು ಕೊಟ್ಟಿರುವ ಪಟ್ಟಿಯಲ್ಲಿ ಬೀಳದೆ ತಪ್ಪಿಹೋಗಬಹುದು. ಓಟರುಗಳ ಮತ್ತು ಮೆಂಬರಾಗಲರ್ಹತೆಯುಳ್ಳವರ ಪಟ್ಟಿಗಳನ್ನು ಬರುವ ಮಾರ್ಚಿ ತಾ|| ೧೭ರೊಳಗೆ ಗೆಜೆಟ್ಟಿನಲ್ಲಿ ಪ್ರಕಟಿಸುತ್ತಾರೆ. ಅದರಲ್ಲಿ ಯಾರ ಹೆಸರಾದರೂ ಬಿಟ್ಟುಹೋಗಿದ್ದರೆ ಆ ವಿಷಯವನ್ನು ಕುರಿತು ೧ ತಿಂಗಳ ಕಾಲದೊಳಗಾಗಿ ಆಯಾ ಡಿಸ್ಟ್ರಿಕ್ಟ್ ಡಿ|| ಕಮಿಷನರುಗಳಿಗೆ ಅರ್ಜಿಬರೆದುಕೊಂಡರೆ ವಿಚಾರಿಸಿ ಹೆಸರುಗಳನ್ನು ಸೇರಿಸಿಕೊಡುತ್ತಾರೆ. ಪ್ರತಿನಿಧಿಗಳಾಗಿ ಬರಲು ಚುನಾವಣೆಗೆ ನಿಲ್ಲಬೇಕೆಂದಿರುವವರು ಮೇ ತಾ|| ೧೮ ರೊಳಗಾಗಿ ಆಯಾ ತಾಲ್ಲೂಕು ಅಮಲ್ದಾರರಿಗೆ ಲಿಖಿತಮೂಲಕವಾಗಿ ತಿಳಿಯಿಸಿಕೊಳ್ಳಬೇಕು. ಚುನಾವಣೆಗಾಗಿ ಗೊತ್ತುಮಾಡಿರುವ ದಿನವನ್ನು ಸ್ಥಲಾಧಿಕಾರಿಗಳು ಓಟರುಗಳಿಗೆಲ್ಲಾ ತಿಳುವಳಿಕೆ ಕೊಟ್ಟನಂತರ ಆ ದಿನಕ್ಕೆ ಸರಿಯಾಗಿ ಸ್ಥಲಕ್ಕೆ ಹೋಗಿ ತಮ್ಮ ನಂಬುಗೆಗೆ ಅರ್ಹರಾದ ಉಮೇದುವಾರರಿಗೆ ತಂತಮ್ಮ ಓಟುಗಳನ್ನು ಕೊಟ್ಟು, ಅಂಥವರೇ ಚುನಾವಣೆಗೊಂಡು ಬರುವಂತೆ ಮಾಡಬೇಕು. ಇಷ್ಟು ಶ್ರದ್ಧೆಯಿಂದ ಕೆಲಸ ಮಾಡದೆಹೋದರೆ ಪ್ರಭುತ್ವದವರು ಸಕಲ ಪ್ರಜೆಗಳ ಹಿತಾರ್ಥವಾಗಿ ಮಾಡಿಕೊಟ್ಟಿರುವ ಸೌಕರ್ಯಗಳನ್ನೆಲ್ಲಾ ನಾವು ಉಪಯೋಗಿಸಿಕೊಳ್ಳಲು ಅರಿಯದೆ ನಾವೇ ಕೆಟ್ಟುಹೋಗಬೇಕಾಗುವುದು. ಉದಾಸೀನರ ಅಜ್ಞಾನದ ಲಾಭವನ್ನು ಜಾಣರು ಮಾಡಿಕೊಂಡು ಸುಖಿಸುವರು.

MAGNANIMITY AND IGNOMINY.

These are the two states of mind which make and unmake public service a glorious service. An opposition, based on principle and on honest belief to serve public interests, is welcome in Parlimentary bodies and the persons forming the members of such opposition are honoured and respected even in their defeats. Municipal Councils of large towns and cities are of a Parlimentary character and a party in opposition in these bodies is necessary if its sense of duty is one of principle and is not one of selfish interests. We have the Bangalore City and the Mysore City Municipalities which are of great importance in this principle of Self-government. Ever since the recent elections have taken place there has been a growing spirit of public duty and selflessness on the part of a small section of the Councillors who have been working hard to make the Municipal administration one of greater service to the tax payer. The opposition in minority, consisting of men of courage and conviction, stood firmly for principle and did not take part in the election of the President. But when it came to the election of the Vice-President, they joined the party which they had opposed previously and showed a mind of magnanimity notwithstanding that the candidate was not entirely one of their creed. This was because Mr. B. Abdur Rahiman, B.A., deservod to be elected. It was magnanimity. There was room enough to oppose as we learn, his candidature from the point of party spirit merely. But that would have relegated the party to the realm of ignominy. We are glad to observe that this band of public-workers is not of that frame of mind.

This news of the unanimous election of the Vice-President comes to us with another piece of news relating to an additional-election which has been granted to the Municipality on account of the addition of an official President. There are now out of the 28 members 18 elected by the tax payers and one by the Chamber of Commerce. Nine are nominated. A tenth member is now nominated giving rise to another elected member.

The following tabular statement gives roughly the population and the amount of tax of each Division with the elected members allotted to each.

	*Population.	*Tax Rs.	Number elected.
I. Palace	6,600	14,400	1
II. Balepet	19,000	30,400	3
III. Manavarthpet	30,000	40,000	4
IV. Ulsore	16,000	16,000	2
V. Nagarathpet	6,000	12,500	1
VI. Lalbagh	8,400	5,800	1
VII. Fort and Chamarajpet	14,700	25,000	3
VIII. Basavangudi	6,400	13,100	2
IX. Mallaswaram	8,500	13,000	1

* These are rough figures.

Taking the population basis the 3rd and 4th Divisions should each have had 5 and 3 members respectively, but they have one each less. The 7th and 8th Divisions should have had only 2 and 1 respectively, but they have one each more. To which Division should the newly allotted elected member go? It is obvious. The 3rd or 4th Division as a matter of right and equity should have it. But which is the Division that goes to get it as recommended by the Council which was divided as in the case of the President's election? The 9th Division. The reason is obvious. It is a Division which claims strong fraternity with the 7th and 8th Divisions which have each an excess member already. We leave it there and hope that Government will do justice to the tax payers. The communication which we have to hand has greater details.

ಪಟೇಲರುಗಳ ಪರಿಷತ್ತು.

ಧಾರವಾಡ ಜಿಲ್ಲೆಯ ಪಟೇಲರುಗಳ ಪರಿಷತ್ತು ಧಾರವಾಡದಲ್ಲಿ ಶ್ರೀಮಂತ ಹಂದಿಗನೂರು ದೇಶಾಯಿ ಸರದಾರ್ ಬುಳ್ಳಪ್ಪ ಮಾಮಲೆ ಇವರ ಅಧ್ಯಕ್ಷತೆಯಿಂದ ನಡೆದಿತು. ಸಭೆಗೆ ಆಲಮೇಲ, ಹಂಗರಕಿ, ಮೊಮ್ಮಗಟ್ಟಿ ಸಂಸ್ಥಾನಗಳ ದೇಶಾಯರುಗಳೂ, ಶ್ರೀಮಂತ ಮದನಭಾವಿ ನಾಯಕರೂ, ಮಿ|| ಹುಲಕೋಟಿ ಬಿ. ಎ., ಎಲ್‍ಎಲ್. ಬಿ., ಎಂ. ಎಲ್. ಸಿ. ಮಿ|| ಮುದಿರೆಡ್ಡಿಯವರೇ ಮೊದಲಾದ ಅನೇಕ ಮಹನೀಯರೂ ಆಗಮಿಸಿದ್ದುದರಿಂದ ಸಭೆಯು ವಿಶೇಷ ತೇಜಸ್ಸುಳ್ಳುದಾಗಿದ್ದಿತು. ಪಟೇಲ್‍ಕಷ್ಟಸುಖ ಹಕ್ಕು ಹಿತ ಮೊದಲಾದುವುಗಳ ವಿಷಯವಾಗಿ ಸ್ವಾಗತಸಂಘಾಧ್ಯಕ್ಷರ ಮತ್ತು ಸಭಾಧ್ಯಕ್ಷರ ಇನ್ನೂ ಅನೇಕಮಂದಿಗಳ ಭಾಷಣಗಳಾದುವು. ಮಾಡಲ್ಪಟ್ಟ ನಿರ್ಧಾರಗಳೊಳಗೆ—ಪ್ರಿನ್ಸ್‍ಆಫ್‍ವೇಲ್ಸ್‍ರವರ ಸ್ವಾಗತಾಭಿನಂದನ ಆಂಗ್ಲಸಾಮ್ರಾಜ್ಯದಲ್ಲಿ ಪಟೇಲ್ ಜನರಿಗಿರುವ ರಾಜನಿಷ್ಠೆ, ಈಗಣ ದೇಶವಿಘಾತಕವಾದ ಅಸಹಾಯ ಚಳವಳಿಯ ನಿಷೇಧ, ಮತ್ತು ಅದರ ನಿರೋಧಕ್ಕೆ ತಕ್ಕ ಉಪಾಯಪರಿಗ್ರಹ, ಪಟೇಲರ ಕರ್ತವ್ಯದ ಜವಾಬ್ದಾರಿಯು ಹೆಚ್ಚಾಗಿರುವುದರಿಂದ ಕುಲಕರ್ಣಿ (ಶಾನುಭೋಗರ.) ಗಳಿಗಿಂತಲೂ ಪಟೇಲರ ಪೋಟಗಿಯನ್ನು ಹೆಚ್ಚಿಸಿಕೊಡಬೇಕು, ಎಂದರೆ ಆಯಾ ಗ್ರಾಮದ ಜಮಾಬಂದಿಯ ಮೇಲೆ ಮೊದಲನೇ ಸಾವಿರಕ್ಕೆ ೧೦೦ ರೂ. ೨ನೆ ಸಾವಿರಕ್ಕೆ ೫೦, ೩ನೆ ಸಾವಿರದಿಂದ ೨೫ ರೂ. ನಂತೆ ಹೆಚ್ಚಿಸಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದು, ಪಟೇಲರ ವತನಿಜಮೀನಿನ ಮೇಲೆ ಆಕಾರ ಹಾಕಿದ್ದನ್ನು ತಪ್ಪಿಸಿ ಮೊದಲಿನಂತೆ ಜೋಡಿಯನ್ನೇ ಹಾಕುವಂತೆ ಪ್ರಾರ್ಥಿಸುವುದು, ಮೊದಲಾದ ೧೬ ನಿರ್ಧಾರಗಳು ಮಾಡಲ್ಪಟ್ಟುವು. ನಮ್ಮ ಮೈಸೂರು ಸಂಸ್ಥಾನದಲ್ಲೂ ಪಟೇಲರ ಪರಿಷತ್ತನ್ನು ಕೂಡಿಸಬೇಕೆಂಬ ಕೂಗನ್ನು ವೃತ್ತಪತ್ರಿಕೆಗಳಲ್ಲಿ ಒಂದೆರಡು ಸಲ ಕಂಡುದಾಯಿತೇ ಹೊರತು ಕಾರ್ಯವು ಜರುಗಲಿಲ್ಲ. ಶ್ಯಾನುಭೋಗರುಗಳಲ್ಲಿರುವಷ್ಟು ಕರ್ತವ್ಯತತ್ಪರತೆಯೂ ಆತ್ಮರಕ್ಷಣಚಾತುರ್ಯವೂ ವಿದ್ಯಾಗಂಧವೂ ಮುಂದಾಳುಗಳ ಹುರುಪೂ ಪಟೇಲರುಗಳಲ್ಲಿಲ್ಲದಿರುವುದೇ ಇಂಥ ಆಲಸತೆಗೆ ಕಾರಣವೆಂದು ಹೇಳಬೇಕಾಗಿದೆ. ಎಲ್ಲತೆರದ ಜನರೂ ಸಂಘಗಳ ಮೂಲಕ ಇಷ್ಟಾರ್ಥವನ್ನು ಸಾಧಿಸಿಕೊಳ್ಳಲು ಚಳವಳವನ್ನು ಪಡುತ್ತಿರುವ ಈಗಣ ಕಾಲದಲ್ಲಿ ಗ್ರಾಮಗಳ ಬೆನ್ನೆಲುಬಿನಂತಿರುವ ಪಟೇಲರುಗಳು ಪ್ರಮತ್ತರಾಗಿರುವುದು ಧರ್ಮವಲ್ಲ.

ರೌಂಡ್ ಟೇಬಲ್ ಕಾನ್ಫರೆನ್ಸು.

ಬೊಂಬಾಯಿಯಲ್ಲಿ ತಾ|| ೧೪-೧೫-೧೬ರಲ್ಲಿ ಕೂಡಿದ್ದ ರಾಜಕೀಯ ಪ್ರಮುಖರ ಸಭೆಗೆ ಎಲ್ಲ ಪಕ್ಷದ ಪ್ರತಿನಿಧಿಗಳೂ ಸೇರಿರಲಿಲ್ಲ. ವಸ್ತುತಃ ಅದು ಮಿತವಾದಿಗಳ ಸಭೆಯೇ ಆಗಿದ್ದಿತು. ಅಸಹಾಯವಾದಿಗಳು ಮೊದಲೇ ಸೇರಿ ಮಾತನಾಡಿಕೊಂಡು ತಾವು ಯಾರೂ ಹೋಗಬಾರದೆಂದೂ ಹೋದರೂ ಅದರ ನಿರ್ಧಾರಗಳಲ್ಲಿ ಅಂಗವಾಗಿರಬಾರದೆಂದೂ ಪ್ರೇಕ್ಷಕರಾಗಿರಬೇಕೆಂದೂ ಗೊತ್ತುಮಾಡಿಕೊಂಡರು. ಮ|| ಗಾಂಧಿಯವರು ಹೋಗಿದ್ದರು. ಆದರೆ ತಾವು ಅಭಿಪ್ರಾಯವನ್ನು ಮಾತ್ರ ಸೂಚಿಸುತ್ತೇವೆಯೇ ಹೊರತು ಸಭೆಯಲ್ಲಿ ಆಗುವ ನಿರ್ಧಾರಕ್ಕೆ ತಮ್ಮ ಸಂಬಂಧವಿಲ್ಲವೆಂದು ಹೇಳಿದರು. ರೌಂಡ್ ಟೇಬಲು ಸಾರ್ಥಕವಾಗಬೇಕಾದರೆ ಅದರಲ್ಲಿ ಆದ ನಿರ್ಣಯದಂತೆ ಕೆಲಸ ನಡೆಯಿಸಲು ಲಾರ್ಡ್ ರೀಡಿಂಗರು ಸಾಮ್ರಾಜ್ಯ ಪ್ರಭುತ್ವದಿಂದ ಅನುಮತಿ ಪಡೆದು ಕುಳಿತುಕೊಳ್ಳಬೇಕೆಂದೂ, ಕಾಂಗ್ರೆಸ್ಸಿನವರ ಧ್ಯೇಯ ಎಂದರೆ ಪಂಜಾಬು ಖಿಲಾಪತ್ತುಗಳ ಅನ್ಯಾಯಪರಿಮಾರ್ಜನೆ ಅಧಿನಿವೇಶಗಳಲ್ಲಿರುವಂಥ ಪೂರ್ಣಸ್ವರಾಜ್ಯಪ್ರದಾನ ಇವಿಷ್ಟರಲ್ಲಿ ಲೇಶವೂ ಕೊರತೆಯಿಲ್ಲದಂತೆ ನೆರವೇರಿಸಿಕೊಟ್ಟರೇ ಅಸಹಾಯವಾದಿಗಳು ಒಪ್ಪುವರೆಂದೂ, ಪ್ರಭುತ್ವದವರು ಈಗಣ ತಮ್ಮ ನಿರ್ಬಂಧಶಾಸನಗಳನ್ನು ನಿಲ್ಲಿಸಿ ಕಾರಾಗೃಹಸ್ಥರಾಗಿರುವ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಿದರೆ ಅಸಹಾಯವಾದಿಗಳೂ ತಮ್ಮ ಚಳವಳವನ್ನು ನಿಲ್ಲಿಸಿ ರೌಂಡ್ ಟೇಬಲ್ಲಿಗೆ ಸೇರುವರೆಂದೂ, ಇದುವರೆಗೆ ಪರಿಗ್ರಹಿಸಿದ ಕಠಿನಚರ್ಯೆಗಾಗಿ ಪ್ರಭುತ್ವದವರು ಪಶ್ಚಾತ್ತಾಪ ಪ್ರದರ್ಶನಮಾಡಬೇಕೆಂದೂ ಮೊದಲಾಗಿ ಮ|| ಗಾಂಧಿಯವರು ಭಾಷಣಮಾಡಿದರು. ೨ನೆ ದಿನ ನಡೆದ ಸಭೆಯಲ್ಲಿ ಏರ್ಪಟ್ಟ ಉಪಸಂಘದಲ್ಲಿ ಸಭಿಕರಾಗಿರಲಿಕ್ಕೂ ಅವರು ಒಪ್ಪಲಿಲ್ಲ. ಇವೆಲ್ಲ ರೀತಿಗಳನ್ನು ನೋಡಿ ಅಧ್ಯಕ್ಷರಾದ ಸರ್ ಶಂಕರನ್ ನಾಯರ್‍ರವರು ಇದು ಕೊನೆಮುಟ್ಟುವ ರೀತಿಯಲ್ಲವೆಂದು ಯೋಚಿಸಿ, ತಮ್ಮ ಅಧ್ಯಕ್ಷಪದವಿಯನ್ನೇ ಬಿಟ್ಟು ಹೊರಟುಹೋದರು. ಟೈಂಸ್‍ಆಫ್ ಇಂಡ್ಯಾ ಪತ್ರಿಕೆಗೆ ತಮ್ಮ ಅನುಭವವನ್ನು ಕುರಿತು ಒಂದು ಲೇಖನವನ್ನು ಬರೆದರು. ಬಳಿಕ ಸರ್ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಿಂದ ಸಭೆ ನೆರೆದು ಕೆಲ ನಿರ್ಧಾರಗಳನ್ನು ಮಾಡಿರುತ್ತಾರೆ. ಜನವರಿ ೩೧ರ ವರೆಗೆ ಪಿಕಿಟಿಂಗನ್ನೂ ಶಾಸನೋಲ್ಲಂಘನ ಕಾರ್ಯವನ್ನೂ ನಿಲ್ಲಿಸುವುದಕ್ಕೆ ತಾವು ಒಪ್ಪಿರುತ್ತೇವೆಂದು ಗಾಂಧಿಯವರು ಹೇಳಿದ್ದಾರೆ. ಆ ಕಾಲವು ಇನ್ನು ೨-೩ ದಿನಗಳು ಉಳಿದುವು. ಪಂ|| ಮಾಳವ್ಯರವರು ಓಡಾಡುತ್ತಲೇ ಇದ್ದಾರೆ. ಮುಂದೆ ಈ ರೌಂಡ್ ಟೇಬಲು ನಡೆಯುವುದೂ ಅದು ಫಲಪ್ರದವಾಗುವುದೂ ಶಶವಿಷಾಣದಂತೆಯೇ ಕಾಣುತ್ತದೆ. ಏಕೆಂದರೆ ಸಾಮ್ರಾಜ್ಯಶಾಸನ ಸಭೆಯಲ್ಲೂ ಸ್ಟೇಟ್‍ಕೌನ್ಸಿಲ್ ಸಭೆಯಲ್ಲೂ ರೌಂಡ್ ಟೇಬಲ್ ಸಂಬಂಧವಾಗಿ ತೆಗೆದ ಚರ್ಚೆಗೆ ಸರ್ಕಾರದಿಂದ ಬಂದ ಉತ್ತರವು ಸುಮುಖವಾಗಿಲ್ಲ.

ಸರ್ಕಾರಕ್ಕೆ ಕಂದಾಯಗಳನ್ನು ಕೊಡದೆ ಹೋಗುವುದು.

ಅಸಹಾಯವಾದಿಗಳು ಮಾಡಿಕೊಂಡಿರುವ ನಿರ್ಧಾರಗಳಲ್ಲಿ ಸರ್ಕಾರಕ್ಕೆ ಕಂದಾಯಗಳನ್ನು ಕೊಡದೆ ನಿಲ್ಲಿಸಿಬಿಡುವುದೂ ಒಂದು ಭಾಗವಾಗಿದೆಯಷ್ಟೆ. ಮದ್ರಾಸಿನ ಆಂಧ್ರ ಜಿಲ್ಲೆಗಳಲ್ಲಿ ಕೆಲ ಜನರು ಇದನ್ನು ಬಳಕೆಗೆ ತರಲು ಬಹಳ ಪ್ರಯತ್ನಮಾಡುತ್ತಿದ್ದಾರೆ. ಅಸಹಾಯವಾದಿಗಳು ಸಭೆಗೂಡಿಸಿ, ರೈತರು ಸರ್ಕಾರಕ್ಕೆ ಕಂದಾಯದ ಮೊದಲನೇ ಕಂತನ್ನು ಕೂಡ ಈಗ ಕೊಡದೆ ನಿಲ್ಲಿಸಿಬಿಡಬೇಕೆಂತಲೂ, ಗ್ರಾಮೋದ್ಯೋಗಿಗಳು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಡಬೇಕೆಂತಲೂ ಸರ್ಕಾರದವರು ಭೂಮಿಗಳನ್ನು ಜಪ್ತಿಮಾಡಿ ಹರಾಜಿಗಿಟ್ಟರೆ ಯಾರೂ ಬೀಟು ಮಾಡಬಾರದೆಂತಲೂ, ಸ್ವರಾಜ್ಯಸ್ಥಾಪನೆಯಾದಾಗ ಅವರವರ ಭೂಮಿಗಳೂ ಶಾನುಬೋಗಿಕೆ ಹಕ್ಕುಗಳೂ ಅವರವರಿಗೆ ಮರಳಿ ಕೊಡಲ್ಪಡುವುವೆಂತಲೂ, ಆಗ ರೈತರು ಸರಿಯಾಗಿ ಕಂದಾಯವನ್ನು ಸಲ್ಲಿಸಬೇಕೆಂತಲೂ ಮೊದಲಾಗಿ ಬೋಧಿಸುತ್ತ ಇದ್ದಾರೆ. ಕೃಷ್ಣಾ ಗುಂಟೂರು ಜಿಲ್ಲೆಗಳಲ್ಲಿ ಕೆಲಕಡೆ ರೈತರು ಅದರಂತೆ ನಡೆಯಲೂ ತೊಡಗಿದ್ದಾರೆ. ರಾಜಕೀಯವಾದ ಹೋರಾಟದ ಮಧ್ಯಕ್ಕೆ ಅಸಹಾಯವಾದಿ ರಾಜಕೀಯ ಪಕ್ಷದವರು ಅಮಾಯಕರಾದ ರೈತರನ್ನು ತಂದು ಸಿಕ್ಕಿಸಿಕೊಂಡು ಅವರನ್ನೂ ಕೆಡಿಸಿ ದೇಶವನ್ನೂ ಅಪಾಯಕ್ಕೆ ಗುರಿಮಾಡುತ್ತಿದ್ದಾರೆ. ಈ ಹಾಳು ಹೋರಾಟಕ್ಕೂ ಮೊಂಡಾಟಕ್ಕೂ ರೈತರು ಬಲಿಬಿದ್ದು ಭೂಮಿಕಾಮಿಗಳನ್ನು ಕಳೆದುಕೊಂಡರೆ ಈ ಕೋಟೀಶ್ವರರುಗಳು ಅವರ ಕುಟುಂಬ ಭರಣ ಮಾಡುತ್ತಾರೆಯೆ? ಭೂಮಿಗಳೆಲ್ಲಾ ಪಾಳುಬಿದ್ದರೆ ದೇಶೀಯರ ಹೊಟ್ಟೆಗೆ ಗತಿಯೇನು? ಇದನ್ನೆಲ್ಲಾ ಯೋಚಿಸದೆ ಪಾಮರ ಜನರನ್ನೆಲ್ಲಾ ಅವರವರ ಉದ್ಯೋಗದಿಂದ ತಪ್ಪಿಸಿ ನಿರುದ್ಯೋಗಿಗಳನ್ನು ಮಾಡಿ ಗಲಾಟೆ ಹೆಚ್ಚಿಸಿ, ಸ್ವರಾಜ್ಯಕ್ಕೆ ಪ್ರತಿಯಾಗಿ ಸದ್ಯಃ ದೇಶಕ್ಕೆ ಅಭೋಜ್ಯವನ್ನುಂಟುಮಾಡುತ್ತಲಿರುವುದನ್ನು ನೋಡಿದರೆ ವಿಷಾದವಾಗುತ್ತದೆ. ಈ ಹಾವಳಿಯನ್ನು ನೋಡಿ ಪ್ರಭುತ್ವದವರು ಸುಮ್ಮನಿರುವುದುಂಟೆ? ಅವರು ತಕ್ಕ ಪ್ರತಿ ಕ್ರಿಯೆಗಳನ್ನು ಸಿದ್ಧಪಡಿಸಿಯೇ ಇದ್ದಾರೆ. ಮದರಾಸು ಪ್ರಭುತ್ವದವರು ಕಳೆದ ತಾ|| ೨೦-೨೧ರಲ್ಲಿ ಈ ಸಂಬಂಧವಾಗಿ ಮಾಡಿರುವ ಪ್ರಕಟನೆಗಳಲ್ಲಿ ಹೀಗೆ ತಿಳಿಯಿಸಿರುತ್ತಾರೆ— ಗುಂಟೂರು ಜಿಲ್ಲೆಯ ಕೆಲ ಗ್ರಾಮಗಳಲ್ಲಿ ಎಲ್ಲರೂ ಸೇರಿ ಆಲೋಚನೆ ಮಾಡಿ ಸರ್ಕಾರಿ ಕಂದಾಯವನ್ನು ನುಂಗಿ ಹಾಕಿಬಿಡಬೇಕೆಂದು ಯೋಚಿಸಿರುವರೆಂದೂ, ಗ್ರಾಮೋದ್ಯೋಗಿಗಳು ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವರೆಂದೂ, ಇನ್ನೂ ಅನೇಕರು ಕೊಡುವುದರಲ್ಲಿದ್ದಾರೆಂದೂ ವರದಿ ಬಂದಿದೆ. ಇವೆರಡು ಕೆಲಸಗಳೂ ಕೂಡ ಸರ್ಕಾರವನ್ನು ತಲೆಕೆಳಗುಮಾಡಬೇಕೆಂದು ಭಯಪಡಿಸಲಿಕ್ಕಾಗಿ ಏರ್ಪಡಿಸಿಕೊಂಡಿರುವ ಸಾಧನಗಳಲ್ಲಿ ಸೇರಿದುವುಗಳಾಗಿ ಪ್ರಕಟಿಸಲ್ಪಟ್ಟಿವೆ. ಆದುಕಾರಣ ಇದಕ್ಕೆ ತಕ್ಕ ಪ್ರತೀಕಾರವನ್ನು ಸರ್ಕಾರದವರು ಮಾಡಬೇಕಾದ ಅವಶ್ಯಕತೆಯುಂಟಾಗಿದೆ. ಇಂಥ ಪರಿಸ್ಥಿತಿಯಲ್ಲಿ ಗ್ರಾಮೋದ್ಯೋಗಿಗಳು ರಾಜೀನಾಮೆ ಕೊಟ್ಟರೆ ಅದನ್ನು ಅಂಗೀಕರಿಸಲಾರೆವು. ಯಾರು ತಮ್ಮ ಕೆಲಸವನ್ನು ಮಾಡದೆ ತಪ್ಪಿಹೋಗುತ್ತಾರೋ ಅವರನ್ನು ಡಿಸ್‍ಮಿಸ್ ಮಾಡಿಬಿಡಬೇಕು. ಈಗ ಜಮೀನ್‍ದಾರಿ ಗ್ರಾಮೋದ್ಯೋಗಿಗಳ ಸಂಬಳವನ್ನು ಹೆಚ್ಚಿಸುವ ಯೋಚನೆಯನ್ನು ಸರ್ಕಾರದವರು ಮಾಡುತ್ತಿದ್ದರು. ಆದರೆ ಈ ಮಧ್ಯೆ ರಾಜದ್ರೋಹಾಪರಾಧಕ್ಕಾಗಿ ಡಿಸ್‍ಮಿಸ್ ಆದ ಗ್ರಾಮೋದ್ಯೋಗಿಗಳ ವಾರಸತ್ವದ ಹಕ್ಕನ್ನು ಶಾಶ್ವತವಾಗಿ ತೊಲಗಿಸಿಬಿಡುವುದಕ್ಕಾಗಿ ತಕ್ಕ ಶಾಸನವನ್ನು ಮಾಡುವೆವು. ಈಗ ಮಾತ್ರ ಉದ್ದೇಶವಿಲ್ಲ. ಕಂದಾಯವನ್ನು ಕೊಡದೆಹೋದವರ ಭೂಮಿಯನ್ನೂ ಚರಾಸ್ತಿಯನ್ನೂ ವಿಧಿ ಪ್ರಕಾರ ಕೊಡಬೇಕಾದ ಅವಧಿಯನ್ನು ಕೂಡ ತಪ್ಪಿಸಿ ಕೂಡಲೇ ಜಪ್ತಿ ಹರಾಜು ಮಾಡಿಸಿಬಿಡುವೆವು. ಎಲ್ಲರೂ ಏಕವಾಗಿ ಬೀಟುಮಾಡದೆ ಹೋದರೆ ಅಂಥ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡು ನಿಮ್ನಜಾತಿ ಜನರಿಗೂ ಕಳೆದ ಯುದ್ಧದಲ್ಲಿ ಕೆಲಸಮಾಡಿದ ಸೋಲ್ಜರುಗಳಿಗೂ ಕೊಟ್ಟುಬಿಡುವರು. ಮತ್ತು ಗ್ರಾಮಾಂತರಗಳಲ್ಲಿ ಗದ್ದಲವು ಹೆಚ್ಚದಂತೆ ಮಾಡಿ ಕಾಪಾಡುವುದಕ್ಕಾಗಿ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನಿಡಬೇಕಾಗುವುದರಿಂದ ಅವರ ವೆಚ್ಚವನ್ನೆಲ್ಲಾ ಆಯಾ ಗ್ರಾಮಸ್ಥರೇ ಹೊತ್ತುಕೊಳ್ಳಬೇಕು. ಯಾವ ಗ್ರಾಮಗಳವರಾದರೂ ಮುಷ್ಕರವನ್ನು ಬಿಟ್ಟು ಕಂದಾಯವನ್ನು ಸಲ್ಲಿಸಿಬಿಟ್ಟರೆ ಪೊಲೀಸ್ ಸಿಬ್ಬಂದಿಯನ್ನು ತೆಗೆದುಬಿಡುವೆವು'' ಎಂದು ಆಜ್ಞಾಪಿಸಿರುವುದಲ್ಲದೆ ಹೆಚ್ಚು ಪೊಲೀಸುದಳವನ್ನು ಕೂಡ ಗುಂಟೂರು ಜಿಲ್ಲೆಗೆ ಕಳುಹಿಸಿಕೊಟ್ಟಿದ್ದಾರೆ. ಮತ್ತು ರಾಜೀನಾಮೆ ಕೊಟ್ಟ ಗ್ರಾಮೋದ್ಯೋಗಿಗಳ ಸ್ಥಾನಕ್ಕೆ ತಕ್ಕಷ್ಟು ವಿದ್ಯೆಯಿಲ್ಲದಿದ್ದರೂ ಕಾರ್ಯನಿರ್ವಾಹ ಮಾಡಬಲ್ಲ ಹೊಸ ಜನರನ್ನು ಕಲೆಕ್ಟರುಗಳು ನಿಯಮಿಸಿಕೊಳ್ಳಬಹುದೆಂದು ತಿಳಿಯಿಸಿದ್ದಾರೆ. ಮತ್ತು ಇಂಥ ಬೋಧನೆಗಾಗಿ ಸಭೆ ಕೂಡಿಸಲು ಪ್ರಯತ್ನಿಸಿದ ಕೆಲ ಪ್ರಮುಖರಿಗೆಲ್ಲಾ ಶಿಕ್ಷೆಯನ್ನು ಮಾಡಿಸುತ್ತಲಿದ್ದಾರೆ. ಆಗಲೇ ಕೆಲವರು ಕಾರಾಗೃಹವನ್ನು ಕಂಡಿದ್ದಾರೆ. ಈ ವಿಷಮಸ್ಥಿತಿಯು ಮುಂದೆ ಯಾವ ಯಾವ ತೆರದ ಕೇಡನ್ನು ತಂದಿಕ್ಕುವುದೋ ಹೇಳುವಹಾಗಿಲ್ಲ. ಈಗಲೇ ರೈತರುಗಳು ಎಚ್ಚತ್ತುಕೊಳ್ಳುವುದುತ್ತಮ. ಅಸಹಾಯವಾದಿಗಳ ಸಾಹಸ ಚಾತುರ್ಯಗಳು ''ವಿನಾಯಕಂಪ್ರಕುರ್ವಾಣೊ ರಚಯಾಮಾಸವಾನರಂ'' ಎನ್ನುವಂತಾಗಿದೆ.

ಮಿಶ್ರವಿವಾಹ ಶಾಸನ.

ಮ|| ವಿ. ಜೆ. ಪಟೇಲರು ಸಾಮ್ರಾಜ್ಯಶಾಸನ ಸಭೆಯ ಸಭಾಸ್ತರರಾಗಿದ್ದಾಗ್ಗೆ ಜಾತ್ಯಂತರ ಮಿಶ್ರವಿವಾಹ ಸಂಬಂಧವಾದ ಶಾಸನವೊಂದನ್ನು ಏರ್ಪಡಿಸಬೇಕೆಂಬುದಾಗಿ ಒಂದು ತೀರ್ಮಾನವನ್ನು ಚರ್ಚೆಗೆ ತಂದು ಪ್ರಯತ್ನಿಸಿದ್ದ ಸಂಗತಿಯನ್ನು ಹಿಂದೆ ಇದೇ ಪತ್ರದಲ್ಲಿ ನಾವು ಪ್ರಸ್ತಾವಿಸಿ ತಿಳಿಯಿಸಿದ್ದೇವೆ. ಪಟೇಲರು ಅಸಹಾಯಪಕ್ಷಕ್ಕೆ ಸೇರಿ ಶಾಸನಸಭೆಯ ಸಂಬಂಧವನ್ನು ಪರಿತ್ಯಜಿಸಿದ ಬಳಿಕ ಡಾಕ್ಟರ್ ಗೋರ್‍ರವರು ಪಟೇಲರು ಹಿಡಿದಿದ್ದ ಕಾರ್ಯವನ್ನೇ ಮುಂಬರಿಸಲು ಪ್ರಯತ್ನಿಸಿದರು. ಕಳೆದ ತಾ|| ೨೦ರಲ್ಲಿ ದಿಲ್ಲಿಯೊಳಗೆ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಈ ವಿಷಯವನ್ನು ಅವರು ಚರ್ಚೆಗೆ ತಂದರು. ಆ ದಿನದ ಸಭೆಗೆ ಪ್ರಭುತ್ವಪಕ್ಷದ ಸಭಿಕರೂ ಪಾಶ್ಚಾತ್ಯಸಭಿಕರೂ ಕೆಲಮಂದಿಗಳು ಮಾತ್ರವೇ ಬಂದಿದ್ದುದನ್ನು ನೋಡಲಾಗಿ ಈ ಸಂಬಂಧವಾಗಿ ಅವರಿಗಿರುವ ತಟಸ್ಥಭಾವವು ವ್ಯಕ್ತವಾಯಿತು.

ಡಾ|| ಗೋರ್‍ರವರು ಈ ಸಂಬಂಧವಾಗಿ ಉಪನ್ಯಾಸಕ್ಕಾರಂಭಿಸಿ, ''ಸಿವಿಲ್‍ಮ್ಯಾರೇಜ್ ಬಿಲ್ಲು ೧೮೭೨ನೆ ವರ್ಷದಲ್ಲಿ ಸರ್ ಹೆನ್ರಿ ಮೆಯಿನ್‍ರವರಿಂದ ಸಭೆಯ ಚರ್ಚೆಗೆ ತರಲ್ಪಟ್ಟಿದ್ದರೂ ದುರದೃಷ್ಟದಿಂದ ವಿಧಿಯಾಗದೆ ಹೋಯಿತು. ದೇಶಕ್ಷೇಮಕ್ಕೆ ಇಂಥ ಮಿಶ್ರವಿವಾಹದ ಕಾನೂನಾಗುವುದು ಅವಶ್ಯಕ. ಎಲ್ಲ ಸಭಿಕರೂ ಇದನ್ನನುಮೋದಿಸಬೇಕೆಂದು ಕೋರುತ್ತೇನೆ. ಬಿಲ್ಲನ್ನು ಉಪಸಂಘದವರ ವಿಮರ್ಶೆಗಾಗಿ ಕಳುಹಿಸಿಕೊಡಬೇಕು'' ಎಂದು ವಾದಿಸಿದರು. ಅದರ ಮೇಲೆ ಸಭಾಧ್ಯಕ್ಷರು-ಪ್ರಜಾಭಿಪ್ರಾಯಾರ್ಥವಾಗಿ ಮೊದಲೊಂದುಸಲ ಪ್ರಕಟಿಸಿ, ಉಪಸಂಘದವರು ಸವರಣೆಮಾಡಿದ ನಂತರ ಅದನ್ನು ಮತ್ತೊಂದುಸಲ ಪ್ರಕಟಿಸಬೇಕಾಗುತ್ತದೆ. ಅಲ್ಲದೆ ಉಪಸಂಘದವರಿಗೆ ಕಳುಹಿಸಿಕೊಟ್ಟುಬಿಟ್ಟರೆ ಆ ಬಿಲ್ಲಿನಲ್ಲಿ ಕಂಡ ಮುಖ್ಯಾಭಿಪ್ರಾಯಕ್ಕೆ ಪ್ರಭುತ್ವದವರು ಸಮ್ಮತಿಸಿದಂತೆಯೇ ಆಗುತ್ತದೆ. ಆದುಕಾರಣ ಡಾ|| ಗೋರ್‍ರವರ ಅಭಿಪ್ರಾಯದಂತೆ ಮಾಡಲಾಗುವುದಿಲ್ಲ. ಮೊದಲು ಸಭೆಯಲ್ಲಿ ಚರ್ಚಿತವಾಗಿ ಪರ್ಯವಸಾನವು ತೇಲಲಿ ಎಂದು ಹೇಳಿದರು.

ಬಳಿಕ ಚರ್ಚೆಗೆ ಆರಂಭವಾಯಿತು. ಯಾವ ಜಾತಿಯವರೇ ಆಗಲಿ ಯಾವ ಮತದವರೇ ಆಗಲಿ ಪರಸ್ಪರ ಮಾಡಿಕೊಂಡ ವಿವಾಹಗಳು ಶಾಸನಬದ್ಧವಾದುವುಗಳೆಂದು ಅಂಗೀಕರಿಸಲ್ಪಡಬೇಕೆಂಬುದೇ ಈ ಬಿಲ್ಲಿನ ತತ್ವ. ಇದರಮೇಲೆ ಅನೇಕರು ಅನುಕೂಲವಾಗಿಯೂ ಅನೇಕರು ಪ್ರತಿಕೂಲವಾಗಿಯೂ ಭಾಷಣ ಮಾಡದರು. ಮ|| ಟಿ. ವಿ. ಶೇಷಗಿರಿ ಅಯ್ಯರು (ಹಿಂದೆ ಮದ್ರಾಸು ಹೈಕೋರ್ಟು ನ್ಯಾಯಮೂರ್ತಿಗಳಾಗಿದ್ದವರು) ಮಾಡಿದ ಭಾಷಣದಲ್ಲಿ-ಪಂಚಮರೇ ಮೊದಲಾದವರನ್ನು ಅಸ್ಪೃಶ್ಯರೆಂದು ಹಿಂದೂಮತಸ್ಥರು ತಿರಸ್ಕರಿಸಿದುದರಿಂದ ಅವರಲ್ಲಿ ಬಹುಜನರು ಹಿಂದೂಮತವನ್ನೇ ಬಿಟ್ಟು ಕ್ರೈಸ್ತ ಮಹಮ್ಮದೀಯ ಮತಗಳನ್ನು ಸ್ವೀಕರಿಸಿಕೊಂಡರು. ಆದರೂ ಮಿಶ್ರವಿವಾಹ ಪ್ರತಿಬಂಧಕ ಭಾವಗಳು ಇನ್ನೂ ತಗ್ಗದಿರುವುದನ್ನು ನೋಡಿದರೆ ವಿಷಾದವಾಗುತ್ತದೆ ಈ ಬಿಲ್ಲನ್ನು ನಾವುಗಳು ಅಂಗೀಕರಿಸದೇ ಹೋದರೆ ಉತ್ತಮಹಿಂದುಗಳೂ ಕೂಡ ನಾವು ಹಿಂದುಗಳಲ್ಲವೆಂದು ಪ್ರಕಟಿಸಿಕೊಳ್ಳುವ ಅವಸ್ಥೆಯು ಬರುವುದು. ಈ ಬಿಲ್ಲಿನಲ್ಲಿ ೨ ಉಪಸವರಣಗಳನ್ನು ಮಾಡಿಬಿಟ್ಟು ಉಪಸಂಘಕ್ಕೆ ಕಳುಹಿಸುವುದು ಒಳ್ಳೆಯದು. ಆ ಸವರಣೆಯೇನೆಂದರೆ—೧. ಇಂಥ ಜಾತ್ಯಂತರ ಮಿಶ್ರವಿವಾಹ ಮಾಡಿಕೊಂಡವರಿಗೆ ಹುಟ್ಟಿದ ಮಕ್ಕಳು ಸನಾತನ ಹಿಂದೂಮತಕ್ಕೆ ಸೇರಿದ ತಾಯ್ತಂದೆಗಳ ಆಸ್ತಿಯಲ್ಲಿ ದಾಯಾದಹಕ್ಕನ್ನು ಕೇಳಕೂಡದು. ಸತ್ತುಹೋದ ತಂದೆಯ ಧರ್ಮಾದಾಯಗಳಿಗೆ ಪಾಲಕರಾಗಕೂಡದು. ೨. ಸನಾತನ ಧರ್ಮಾವಲಂಬಿಯಾದ ಹಿಂದೂತಂದೆಯ ಮಕ್ಕಳು ಇಂಥ ಮಿಶ್ರವಿವಾಹವನ್ನು ಮಾಡಿಕೊಂಡು ಬಿಟ್ಟರೆ ಆ ತಂದೆಯು ಬೇರೆ ಜನರನ್ನು ದತ್ತಸ್ವೀಕಾರ ಮಾಡಿಕೊಳ್ಳಲು ಅಪೇಕ್ಷಿಸಿದರೆ ಅದಕ್ಕೆ ಅವಕಾಶವಿರಬೇಕು ಎಂದು ಹೇಳಿದರು. ಇದರಿಂದ ಮ|| ಅಯ್ಯರು ಬಿಲ್ಲಿಗೆ ಅನುಕೂಲಭಾವವನ್ನು ಮೇಲೆ ತೋರಿಸಿದರೂ ಬಿಲ್ಲಿನ ಉತ್ಪಾದಕರ ಉದ್ದೇಶದ ಮೂಲಕ್ಕೇ ಕೊಡಲಿ ಹಾಕಿದಂತಾಯಿತು. ಮಿಶ್ರವಿವಾಹ ಮಾಡಿಕೊಂಡವರಿಗೆ ಪಿತ್ರಾರ್ಜಿತ ಆಸ್ತಿಯ ಹಕ್ಕಿಲ್ಲದಿರುವ ತೊಂದರೆಯನ್ನು ತಪ್ಪಿಸಿಬಿಡಬೇಕೆಂಬುದೇ ಬಿಲ್ಲಿನ ಮುಖ್ಯೋದ್ದೇಶವಾಗಿದೆ. ಹಿಂದೆ ಮೈಸೂರಿನಲ್ಲಿ ಮತಭ್ರಷ್ಟರ ದಾಯಭಾಗದ ಶಾಸನ ವಿಷಯವು ಪ್ರಸ್ತಾಪಕ್ಕೆ ಬಂದಿದ್ದುದೂ ಇದೇ ಕಾರಣಕ್ಕಾಗಿಯೇ. ಮತಾಂತರಕ್ಕೆ ಸೇರಿಹೋದವರಿಗೆ ದಾಯಭಾಗ ತಪ್ಪಿಹೋಗುವುದೆಂಬ ಭೀತಿಯಿರುವುದರಿಂದಲೇ ಜಾತಿಸಾಂಕರ್ಯಕ್ಕೆ ಈಗ ಅಷ್ಟೊ ಇಷ್ಟೊ ಪ್ರತಿಬಂಧಕವಿದೆ. ಅದು ತಪ್ಪಿದರೆ ''ಕಲೌಪಂಚಸಹಸ್ರಾಂತೇ ಜಾಯತೇಜಾತಿಸಂಕರಃ'' ಎಂಬ ವಚನವು ಮೂರೂಮುಕ್ಕಾಲು ಗಳಿಗೆಯಲ್ಲಿ ಸಿದ್ಧಿಸಿಹೋದೀತು.

ಕಡೆಗೆ ಖಾನ್‍ಬಹದ್ದೂರ್ ಸಫ್ರಜ್‍ಹುಸೇನ್, ಹಾಜಿ ವಜಿರುದ್ದೀನ್, ಭಕ್ಷಿ ಸೋಮಲಾಲ್, ಭಾಯಿಮಾನಸಿಂಗ್ ಮೊದಲಾದ ಹಿಂದೂಮಹಮ್ಮದೀಯ ಸಿಕ್‍ಸಭಿಕರು ಕೆಲವರು ಇಂಥ ಮಿಶ್ರವಿವಾಹಕ್ಕೆ ಹಿಂದೂಮತವೂ ಸಿಕ್‍ಮತವೂ ಮಹಮ್ಮದೀಯ ಮತವೂ ಕೂಡ ಒಪ್ಪುವುದಿಲ್ಲವೆಂತಲೂ, ಮಿಶ್ರವಿವಾಹದಿಂದ ಈಗಲೇ ಎಷ್ಟೋ ಅನರ್ಥವುಂಟಾಗಿರುವುದೆಂತಲೂ ಹೇಳಿ ನಿರಾಕರಿಸಿಬಿಟ್ಟರು.

ಬಳಿಕ ಡಾ|| ಗೋರ್‍ರವರು ಮತ್ತೊಂದುಪನ್ಯಾಸವನ್ನು ಮಾಡಿ, ಬಿಲ್ಲನ್ನು ಉಪಸಂಘಕ್ಕೆ ಕಳುಹಿಸಿಕೊಟ್ಟು ಅವರ ವಿಮರ್ಶೆಯಾದನಂತರ ವರದಿಯು ಹೊರಬಿದ್ದರೆ ಆ ಬಳಿಕ ಹಿಂದುಗಳು ಮಹಮ್ಮದೀಯ ಮತದೊಡನೆ ಸಂಬಂಧಮಾಡಿದರೆ ಎಂಬ ಮಾತನ್ನು ಬೇಕಿದ್ದರೆ ಬಿಲ್ಲಿನಲ್ಲಿ ತೆಗೆದುಬಿಡಲು ನಾನು ಒಪ್ಪುತ್ತೇನೆಂತಲೂ, ಮನುಸ್ಮೃತಿಯಲ್ಲಿ ವರ್ಣಾಂತರ ಜಾತ್ಯಂತರ ವಿವಾಹಗಳು ಪೂರ್ವದಲ್ಲಿ ಜರುಗುತ್ತಿದ್ದಂತೆ ಹೇಳಲ್ಪಟ್ಟಿರುವುದೆಂತಲೂ, ಹೈದರಾಬಾದಿನಲ್ಲಿ ಈಗ್ಗೂ ಹಿಂದೂ ಮಹಮ್ಮದೀಯರ ಮಧ್ಯದಲ್ಲಿ ಪರಸ್ಪರ ವಿವಾಹವು ನಡೆಯುತ್ತಿರುವುದೆಂತಲೂ, ಇಂಡ್ಯಾ ಸರ್ಕಾರದವರು ಇಂಥ ವಿಷಯದಲ್ಲಿ ತಾವೇ ಪ್ರವರ್ತಿಸಿ ಶಾಸನವನ್ನು ಮಾಡುವುದು ಅವಶ್ಯಕವೆಂತಲೂ, ಸಂಸ್ಕರಣಪ್ರಿಯರಾದ ಜನರ ಸ್ವಾತಂತ್ರ್ಯಕ್ಕೆ ಅಡ್ಡಿಯಿರುವಂತೆ ಮಾಡುವುದೂ, ಸನಾತನ ಧರ್ಮಾವಲಂಬಿಗಳ ದಯೆಗೆ ಇವರು ಕಾದುಕೊಂಡಿರುವಂತೆ ಮಾಡುವುದೂ, ನಾಗರಕಪ್ರಭುತ್ವದ ಧರ್ಮವಲ್ಲವೆಂತಲೂ, ಅಂಥ ಸರ್ಕಾರದವರು ಮಾಡಬೇಕಾದ ಕಾರ್ಯವನ್ನು ನಾನು ಮಾಡುತ್ತಿರುವಾಗ, ಮಾನವಸಾಮಾನ್ಯಸ್ವಾತಂತ್ರ್ಯರಕ್ಷಣೆಗಾಗಿ ನಾನು ಸ್ವಾರ್ಥಪರರೊಡನೆ ಹೋರಾಡುತ್ತಿರುವಾಗ, ಪ್ರಭುತ್ವಪಕ್ಷದ ಸಭಿಕರು ಇದಕ್ಕೆ ಸಹಾಯಮಾಡದೆ ಸಭೆಯನ್ನೇ ಬಿಟ್ಟು ಹೊರಟುಹೋಗುವುದು ಆಶ್ಚರ್ಯಕರವಾಗಿರುವುದೆಂತಲೂ, ದೇಶದಲ್ಲಿ ಇಂಥ ಶಾಸನವಿಲ್ಲದಿರುವುದರಿಂದ ಸಂಭವಿಸಿರುವ ಅನರ್ಥವನ್ನು ವರ್ಣಿಸಲು ಅಸದಳವಾಗಿರುವುದೆಂತಲೂ, ಬಂಗಾಳದಲ್ಲಿ ಎಷ್ಟೋ ಜನರು ತಮ್ಮ ಹೆಣ್ಣುಮಕ್ಕಳನ್ನು ಅನುಕೂಲರಾದವರುಗಳಿಗೆ ಕೊಡಲಿಕ್ಕೆ ತಮ್ಮ ಆಸ್ತಿಯನ್ನೆಲ್ಲಾ ಹಾಳ್ಮಾಡಿಕೊಳ್ಳುತ್ತಿರುವುದೇ ಅಲ್ಲದೆ ಅನೇಕರು ಅದಕ್ಕಾಗಿ ಮರಣಾಂತ ಋಣಕೂಪದಲ್ಲಿ ಮುಳುಗಿ ನರಳುತ್ತಿರುವರೆಂತಲೂ, ಅನೇಕರಿಗೆ ವರಶುಲ್ಕ ಮೊದಲಾದುವುಗಳನ್ನು ಕೊಡಲು ಶಕ್ತಿಯಿಲ್ಲದ ಕಾರಣ ಹೆಣ್ಣುಮಕ್ಕಳ ಮದುವೆಯನ್ನೇ ಮಾಡಲಾರದೆ ಜನ್ಮಾಂತದವರೆಗೆ ದುಃಖಿಸುತ್ತಿರುವರೆಂತಲೂ, ಅಂಥ ಜನಕರ ಮೇಲಾದರೂ ಈ ಸಭಿಕರಿಗೆ ಕನಿಕರವುಂಟಾಗಬಾರದೆ? ಎಂತಲೂ, ದೇಶದಮೇಲೆ ಜಾತಿ ನಿರ್ಬಂಧಕ್ಕೆ ಕಟ್ಟುಬಿದ್ದು ದಾರಿದ್ರ್ಯಕ್ಕೆ ಆಹುತಿಯಾಗಿ, ಅನುಕೂಲ ವರಪ್ರಾಪ್ತಿಯಿಲ್ಲದೆ ದೇಹಾಂತವಾಗಿ ವಿವಾಹಸುಖವನ್ನೇ ಕಾಣದೆ ಸಾಯುತ್ತಿರುವ ಹೆಣ್ಣುಮಕ್ಕಳ ಮೇಲಾದರೂ ದಯೆಯಿಡಬಾರದೆ? ಎಂತಲೂ, ಭರತಖಂಡವು ಈಗ ಹಿಂದಿನಂತೆ ಪ್ರತ್ಯೇಕ ದೇಶವಾಗಿ ಇರದೆ ವಿವಿಧ ಜಾತಿಗಳ ಜೋಡಿಯು ಇದರಮೇಲೆ ಬಿದ್ದಿರುವುದೆಂತಲೂ, ನೀವು ಸ್ವದೇಶೀಯರಲ್ಲಿ ವರ್ಣಾಂತರಮತಾಂತರ ವಿಭೇದದೃಷ್ಟಿಗಳನ್ನು ಬಿಟ್ಟು ಏಕಮತ್ಯವನ್ನು ಮಾಡಿಕೊಳ್ಳದೆ ಒಂಟೊಂಟಿಯಾಗಿಯೇ ಇರಬೇಕೆನ್ನುವುದಾದರೆ ನಿಮಗೆ ಈ ದೇಶದಲ್ಲಿ ನಿಲ್ಲುವುದಕ್ಕೂ ಕೂಡ ಮುಂದೆ ಎಡೆಯಿರಲಾರದೆಂತಲೂ, ಕ್ರಮಶಿಕ್ಷೆಯೂ ಸರ್ವಮತ ಸಮಾನತೆಯೂ ಉಳ್ಳ ಜನವರ್ಗದವರು ನಿಮ್ಮ ಸ್ಥಾನವನ್ನೆಲ್ಲಾ ಆಕ್ರಮಿಸಿಕೊಳ್ಳುವರೆಂತಲೂ, ತಾವುಗಳೆಲ್ಲರೂ ದೇಶಾಭಿವೃದ್ಧಿಯನ್ನು ಕೋರುವವರಾದರೆ ಈ ಬಿಲ್ಲನ್ನು ಅಂಗೀಕರಿಸುವುದು ಅವಶ್ಯಕವೆಂತಲೂ ಉಪನ್ಯಾಸಮಾಡಿದರು.

ಕಡೆಗೆ ಸಭಾಧ್ಯಕ್ಷರ ಅಪ್ಪಣೆಯ ಪ್ರಕಾರ ಸಭಿಕರ ಓಟುಗಳನ್ನು ತೆಗೆದುಕೊಳ್ಳಲು, ಬಿಲ್ಲಿಗೆ ಸರ್ ಶಿವಸ್ವಾಮಯ್ಯರು, ಶೇಷಗಿರಿಅಯ್ಯರು, ಜೋಷಿ, ಪಿ ಎಲ್. ಮಿಶ್ರ, ಈಶ್ವರಚರಣ್, ಕೋಟಿಲಿಂಗಂ ಮೊದಲಾದ ೨೫ ಮಂದಿಗಳು ಅನುಕೂಲವಾಗಿಯೂ, ಜೇಜಿಭಾಯಿ, ರಂಗಾಚಾರಿ, ಸುಬ್ರಹ್ಮಣ್ಯಂ, ಎಸ್. ಮೊದಲ್ಯಾರ್, ಅಬ್ದುಲ್ ಖಾಸಿಂ ಮೊದಲಾದ ೩೭ ಮಂದಿಗಳು ಪ್ರತಿಕೂಲವಾಗಿಯೂ ಮತಗಳನ್ನು ಕೊಟ್ಟರು. ಆದುಕಾರಣ ಮಿಶ್ರವಿವಾಹದ ತೀರ್ಮಾನದ ಕತೆಯು ಹೀಗೆ ಮುಗಿದು ಬಿದ್ದುಹೋಯಿತು.

ಹಳೆದೇಶದ ವೃತ್ತಾಂತಗಳು.

ಮಾಗಡಿಯಲ್ಲಿ ಶ್ರೀ ಸೋಮೇಶ್ವರ ರಥೋತ್ಸವವು ಫೆಬ್ರಮ ತಾ|| ೧೦ ರಲ್ಲಿ ನಡೆಯುವುದಲ್ಲದೆ ತತ್ಸಂಬಂಧವಾದ ಉತ್ಸವಕಾರ್ಯಗಳು ತಾ|| ೩ ರಿಂದಲೂ ಆರಂಭವಾಗುವುದೆಂದೂ ಇದೇ ವೇಳೆಯಲ್ಲಿ ದನಗಳ ಪರಿಷೆಯೂ ನಡೆಯುವುದೆಂದೂ ಈ

ನೋಟೀಸು.

ಗೌರಿಬಿದನೂರು ತಾಲ್ಲೂಕು ಇಡುಗೂರಿನಲ್ಲಿರುವ ಶಿವಾಚಾರದ ಹೊನ್ನಯ್ಯನವರ ಲಿಂಗಪ್ಪನ ಮಕ್ಕಳು 1ನೆ ದೊಡ್ಡಮಲ್ಲಣ್ಣ, 3ನೆ ಲಿಂಗಪ್ಪ ವುರುಫ್ ದೊಡ್ಡಪ್ಪಯ್ಯ, 4ನೆ ಚಿಕ್ಕಮಲ್ಲಣ್ಣ, 5ನೆ ಅಪ್ಪಣ್ಣ, 6ನೆ ಹೊನ್ನಯ್ಯ, ಇವರು 5 ಜನ ತಿಳಿಯಪಡಿಸುವದೇನೆಂದರೆ— ನಮ್ಮ ತಂದೆಗೆ ನಾವು 5 ಜನರಲ್ಲದೆ 2ನೆ ಯವನಾದ ಸುಬ್ಬಣ್ಣನೆಂಬುವನು ಸೇರಿ 6 ಜನ ಮಕ್ಕಳು ಅವಿಭಕ್ತ ಕುಟುಂಬದವರಾಗಿದ್ದೇವೆ. ನಮ್ಮ 6 ಜನಗಳ ಪೈಕಿ 2ನೆ ಸುಬ್ಬಣ್ಣನು ಕುಟುಂಬದ ಯಜಮಾನನಾಗಿಯೂ 6ನೆ ಹೊನ್ನಯ್ಯನು ಸಂಸಾರದ ಮಾನೇಜುಮೆಂಟ್ ನೋಡತಕ್ಕವನಾಗಿಯೂ ಈತಹಲ್‌ವರವಿಗೂ ನಡಿಸುತ್ತಾ ಬಂದರು. ಈ ಮಧ್ಯೆ ಕುಟುಂಬದಲ್ಲಿ ವಬ್ಬರಿಗೊಬ್ಬರಿಗೆ ಕಲಹಹುಟ್ಟಿ ಪಂಚಾಯಿತರ ಮೂಲಕ ಭಾಗವಿಭಾಗ ಮಾಡಿಕೊಡದೆ ನಮ್ಮ ಚರಸ್ಥಿರಸ್ವತ್ತುಗಳನ್ನು 2ನೆ ಸುಬ್ಬಣ್ಣ ಎಂಬಾತನು ಅಪಹರಿಸಬೇಕೆಂಬ ದುರಾಲೋಚನೆವುಳ್ಳವನಾಗಿ ನಮ್ಮ ಸ್ವತ್ತುಗಳನ್ನು ಪರಾಧೀನವಾಡಲು ಯತ್ನಿಸಿ ಮನೆಬಿಟ್ಟು ಹೋಗಿ ಸುಮಾರು ಒಂದು ತಿಂಗಳು ಮೇಲ್ಪಟ್ಟಿತು. ಈಚಿಗೆ ಸ್ವತ್ತುಗಳನ್ನು ನಮ್ಮಗಳಾರಿಗೂ ದಕ್ಕಿಸದೆ ತಾನೊಬ್ಬನೇ ಆಕ್ರಮಿಸಿಕೊಳ್ಳಬೇಕೆಂದು ದುರಾಲೋಚನೆ ಮಾಡುತ್ತಿರುವದಾಗಿ ತಿಳಿಯಬಂದಿದೆ. ಆದ್ದರಿಂದ ನಮ್ಮ 5 ಜನಗಳ ಸಮ್ಮತಿಯಿಲ್ಲದೆ ನಮ್ಮ ಕುಟುಂಬದ ಸ್ವತ್ತುಗಳನ್ನು ಸುಬ್ಬಣ್ಣನಿಂದ ಯಾರೇ ಆಗಲಿ ಕ್ರಯ ದಾನ ಭೋಗ್ಯ ಆಧಾರ ವಗೈರೆ ಮಾಡಿಕೊಳ್ಳಕೂಡದೆಂದೂ ಒಂದು ವೇಳೆ ಇದನ್ನು ಲಕ್ಷಿಸದೆ ಮಾಡಿಕೊಂಡಲ್ಲಿ ನಮ್ಮ 5 ಜನರ ಹಿಸ್ಸೆ ಆಸ್ತಿಗಳು ಈಡಾಗತಕ್ಕದ್ದಲ್ಲವೆಂದೂ ಅದರಿಂದ ನಮಗುಂಟಾಗುವ ನಷ್ಟ ಕೋರ್ಟು ಖರ್ಚು ವಗೈರೆಗಳಿಗೆ ಅವರು ಜವಾಬ್ದಾರರಾಗಿರುವರೆಂದೂ ಈ ಮೂಲಕ ಎಚ್ಚರಿಸಿದೆ.

ಹೊನ್ನಯ್ಯನವರ ಲಿಂಗಪ್ಪನ ಮಕ್ಕಳು—

1ನೆ ದೊಡ್ಡಮಲ್ಲಪ್ಪನರುಜು,
3ನೆ ಲಿಂಗಪ್ಪ ವುರುಫ್ ದೊಡ್ಡಪ್ಪಯ್ಯನರುಜು,
4ನೆ ಚಿಕ್ಕಮಲ್ಲಪ್ಪನರುಜು,
5ನೆ ಅಪ್ಪಣ್ಣನರುಜು,
6ನೆ ಹೊನ್ನಯ್ಯನರುಜು.

ತಾ|| 24-1-22.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಜನವರಿ ತಾ|| ೨೯ ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆಗೆ ಸಭಾಸ್ತರರ ಆರಿಸುವಿಕೆ.

ಪ್ರಜಾಪ್ರತಿನಿಧಿ ಸಭೆಗೆ ಪ್ರತಿನಿಧಿಗಳನ್ನು ಸಂಸ್ಥಾನದ ಸರ್ವಭಾಗಗಳಿಂದಲೂ ಆರಿಸಿ ಕಳುಹಿಸಿಕೊಡುವ ಕೆಲಸವು ಮೂರುವರ್ಷಕ್ಕೆ ಒಂದುಸಲ ನಡೆಯಬೇಕಾಗಿರುವ ಪದ್ಧತಿಯಂತೆ ಈ ವರ್ಷದಲ್ಲಿ ಅದು ನಡೆಯಬೇಕಾಗಿದೆ. ಈಗ ಆರಿಸಲ್ಪಟ್ಟ ಸಭಿಕರು ಮುಂದೆ ೩ ವರ್ಷಗಳ ವರೆಗೂ ಇರುವರು. ಈ ಆರಿಸುವಿಕೆಗಾಗಿ ನಡೆಯಬೇಕಾದ ಕಾಲಕ್ರಮ ಮೊದಲಾದುವುಗಳನ್ನು ಕುರಿತು ಸರ್ಕಾರದವರು ಪ್ರಕಟಪಡಿಸಿರುವ ಅಪ್ಪಣೆಯನ್ನು ಈ ಪತ್ರದ ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ. ವಾಚಕರು ಚೆನ್ನಾಗಿ ಅದನ್ನು ಓದಿ ಮನನಮಾಡಿಕೊಳ್ಳಬೇಕಾಗಿದೆ.

ಪ್ರಜೆಗಳ ಅಭಿಮತವೇನೆಂಬುದನ್ನು ತಿಳಿದುಕೊಂಡು ರಾಜ್ಯಪರಿಪಾಲನೆ ಮಾಡಬೇಕೆಂಬ ಉದಾತ್ತತತ್ತ್ವಕ್ಕನುಸಾರವಾಗಿ ಪ್ರಜಾಪ್ರತಿನಿಧಿ ಸಭೆಯು ನಡೆಸಲ್ಪಡುತ್ತಿರುವುದರಿಂದ, ದೇಶದ ಎಲ್ಲ ಪ್ರಜೆಗಳೂ ತಂತಮ್ಮ ಸ್ಥಲಗಳಿಗೆ ಸಂಬಂಧಿಸಿದ ಅಥವಾ ಸಾರ್ವತ್ರಿಕವಾದ ಕಷ್ಟನಿಷ್ಠುರಗಳನ್ನೂ ಕೊರತೆಗಳನ್ನೂ ಪರಿಹಾರಗಳನ್ನೂ ಪ್ರಭುತ್ವದವರ ಮುಂದೆ ಅರಿಕೆ ಮಾಡಿಕೊಳ್ಳುವುದಕ್ಕಾಗಿಯೇ ಈ ಸಭೆಯ ಮೂಲಕ ಸಕಲ ಪ್ರಜೆಗಳಿಗೂ ಅವಕಾಶವನ್ನು ಶ್ರೀಮನ್ಮಹಾರಾಜರು ದಯಪಾಲಿಸಿರುತ್ತಾರೆ. ವರ್ಷಕ್ಕೊಂದುಸಲ ಸಭೆ ನಡೆದರೆ ಕೆಲಸವು ಮುಗಿಯುವುದಿಲ್ಲವೆಂದು ತಿಳಿದು ೨ ಸಲ ನಡೆಯುವಂತೆ ಮಾಡಿಕೊಟ್ಟಿದ್ದಾರೆ. ಪ್ರಜಾಭಿಪ್ರಾಯವು ಪರಿಪುಷ್ಟವಾಗಬೇಕೆಂದೂ ಅದಕ್ಕೆ ಗೌರವವು ಹೆಚ್ಚಬೇಕೆಂದೂ ಅವರುಗಳ ಇಷ್ಟಾರ್ಥವು ನೆರವೇರಿ ದೇಶಕ್ಕೆ ಸುಖವಾಗಬೇಕೆಂದೂ ಉದ್ದೇಶಪಟ್ಟು ಪ್ರಭುತ್ವದವರು ಸಭೆಯ ಗೌರವವನ್ನೂ ಕರ್ತವ್ಯಭಾರವನ್ನೂ ದಿನೇ ದಿನೇ ಬಲಪಡಿಸುತ್ತಿದ್ದಾರೆ.

ಇಂಥ ಪ್ರಶಸ್ತವಾದ ಅವರ ಉದ್ದೇಶವನ್ನು ಸಫಲಗೊಳಿಸಬೇಕಾದರೆ ಪ್ರಜೆಗಳಲ್ಲಿ ಆತ್ಮೋದ್ಧರಣಬುದ್ಧಿಯೂ, ದೇಶಾಭಿಮಾನವೂ, ಐಕಮತ್ಯವೂ, ಪ್ರಯತ್ನವೂ ಹೆಚ್ಚುಗೊಳ್ಳಬೇಕು. ಸೋಂಬೇರಿತನವನ್ನೂ ಅಸಾಮರ್ಥ್ಯಭ್ರಮೆಯನ್ನೂ ಮೂಲೆಗೊತ್ತಿ, ತಂತಮ್ಮ ಕಷ್ಟಗಳನ್ನು ನೀಗಿಸಿಕೊಳ್ಳಲು ಪ್ರತಿಯೊಂದು ಜನವರ್ಗಗಳಲ್ಲಿ ಮಾತುಗಾರಿಗಳಾದವರೂ ಸಭೆಗೆ ಪ್ರತಿನಿಧಿಗಳಾಗಿ ಬಂದು ಪ್ರಜಾಪ್ರತಿನಿಧಿಯೆಂಬ ಹೆಸರನ್ನು ಸಭೆಗೆ ಸಾರ್ಥಕಪಡಿಸಬೇಕು. ಈ ಸಭೆಯು ಯಾವುದೊಂದು ಜಾತಿಗೇ ಆಗಲಿ ಕೇವಲ ವಿದ್ಯಾವಂತರಿಗೋಸ್ಕರವೇ ಆಗಲಿ ಕಲ್ಪಿಸಲ್ಪಟ್ಟಿದ್ದಲ್ಲ. ಎಲ್ಲರಿಗೂ ಸರ್ವಸಮಾನವಾಗಿ ತೆರೆದಿಡಲ್ಪಟ್ಟ ಬಾಗಿಲುಳ್ಳುದಾಗಿದೆ.

ಸಭೆಯು ಹುಟ್ಟಿ ೪೦ ವರ್ಷಗಳು ಕಳೆದರೂ ಸಂಸ್ಥಾನದ ಸಕಲವರ್ಗ ಪ್ರತಿನಿಧಿಗಳೂ ಈ ಸಭೆಯಲ್ಲಿ ಸಮಗ್ರವಾಗಿ ಸೇರಿದ್ದಾರೆಂದು ಹೇಳುವ ಸ್ಥಿತಿಯು ಇನ್ನೂ ಪ್ರಾಪ್ತವಾಗದಿರುವುದನ್ನು ನೋಡಿ ವಿಷಾದಿಸಬೇಕಾಗಿದೆ. ಒಬ್ಬರ ಕಷ್ಟವನ್ನು ಮತ್ತೊಬ್ಬರ ಬಾಯಿಂದ ಹೇಳಿಸುವುದಕ್ಕಿಂತ ತಾವೇ ಹೇಳಿಕೊಳ್ಳುವುದರಲ್ಲಿ ಹೆಚ್ಚು ಗುಣವಿರುವ ಕಾರಣ, ಆಯಾ ಜನವರ್ಗಗಳು ತಂತಮ್ಮ ನಿಜವಾದ ಕಷ್ಟಸುಖಗಳನ್ನು ತಾವೇ ಹೇಳಿಕೊಳ್ಳಲು ಸಿದ್ಧರಾಗಿ ಬಂದಲ್ಲದೆ ಅವರು ಉದ್ಧಾರವಾಗುವುದಿಲ್ಲ. ಸಂಸ್ಥಾನದಲ್ಲಿ ಹಿಂದುಳಿದ ಜನವರ್ಗಗಳವರ ಸಂಖ್ಯೆಯೇ ಹೆಚ್ಚಾಗಿದ್ದರೂ ಅವರ ಪ್ರತಿನಿಧಿಗಳ ಸಂಖ್ಯೆಯು ಸಭೆಯಲ್ಲಿ ಮಾತ್ರ ತೀರ ಕಡಿಮೆಯಾಗಿದೆ. ಈ ಸ್ಥಿತಿಯನ್ನು ಅವರು ದೂರಮಾಡಿಕೊಳ್ಳದಿದ್ದರೆ ಅವರುಗಳ ವಿದ್ಯಾಭ್ಯಾಸದ ಕೊರತೆ ಗ್ರಾಮಾಂತರಗಳ ಅನನುಕೂಲತೆ ಮೊದಲಾದ ಕಷ್ಟಗಳು ಇನ್ನು ಶತಮಾನ ಕಳೆದರೂ ಪರಿಹಾರವಾಗುವುದು ಅಸಂಭವ. ಅದುಕಾರಣ ಪ್ರತಿ ಡಿಸ್ಟ್ರಿಕ್ಟಿನಿಂದಲೂ ತಾಲ್ಲೂಕಿನಿಂದಲೂ ಸಭೆಗೆ ಪ್ರತಿನಿಧಿಗಳಾಗಿ ಬರಲು ಅರ್ಹತೆಯುಳ್ಳ ಜನರು ಉದಾಸೀನರಾಗಿರದೆ ಉಮೇದುವಾರರಾಗಿ ನಿಲ್ಲಲು ಈಗ ಯತ್ನಿಸಬೇಕು. ಓಟನ್ನು ಕೊಡಲು ಅರ್ಹತೆಯುಳ್ಳವರ ಮತ್ತು ಪ್ರತಿನಿಧಿಗಳಾಗಿ ಬರಲು ಅರ್ಹತೆಯುಳ್ಳವರ ಹೆಸರುಗಳಲ್ಲಿ ಕೆಲವು ಅಜಾಗರೂಕತೆಯಿಂದಲೋ ಅಥವಾ ಗೊತ್ತಿಲ್ಲದೆಯೋ ಇಲ್ಲವೆ ಮನಃಪೂರ್ವಕವಾಗಿಯೋ ಸ್ಥಳೀಯಾಧಿಕಾರಿಗಳು ಕೊಟ್ಟಿರುವ ಪಟ್ಟಿಯಲ್ಲಿ ಬೀಳದೆ ತಪ್ಪಿಹೋಗಬಹುದು. ಓಟರುಗಳ ಮತ್ತು ಮೆಂಬರಾಗಲರ್ಹತೆಯುಳ್ಳವರ ಪಟ್ಟಿಗಳನ್ನು ಬರುವ ಮಾರ್ಚಿ ತಾ|| ೧೭ರೊಳಗೆ ಗೆಜೆಟ್ಟಿನಲ್ಲಿ ಪ್ರಕಟಿಸುತ್ತಾರೆ. ಅದರಲ್ಲಿ ಯಾರ ಹೆಸರಾದರೂ ಬಿಟ್ಟುಹೋಗಿದ್ದರೆ ಆ ವಿಷಯವನ್ನು ಕುರಿತು ೧ ತಿಂಗಳ ಕಾಲದೊಳಗಾಗಿ ಆಯಾ ಡಿಸ್ಟ್ರಿಕ್ಟ್ ಡಿ|| ಕಮಿಷನರುಗಳಿಗೆ ಅರ್ಜಿಬರೆದುಕೊಂಡರೆ ವಿಚಾರಿಸಿ ಹೆಸರುಗಳನ್ನು ಸೇರಿಸಿಕೊಡುತ್ತಾರೆ. ಪ್ರತಿನಿಧಿಗಳಾಗಿ ಬರಲು ಚುನಾವಣೆಗೆ ನಿಲ್ಲಬೇಕೆಂದಿರುವವರು ಮೇ ತಾ|| ೧೮ರೊಳಗಾಗಿ ಆಯಾ ತಾಲ್ಲೂಕು ಅಮಲ್ದಾರರಿಗೆ ಲಿಖಿತಮೂಲಕವಾಗಿ ತಿಳಿಯಿಸಿಕೊಳ್ಳಬೇಕು. ಚುನಾವಣೆಗಾಗಿ ಗೊತ್ತುಮಾಡಿರುವ ದಿನವನ್ನು ಸ್ಥಲಾಧಿಕಾರಿಗಳು ಓಟರುಗಳಿಗೆಲ್ಲಾ ತಿಳುವಳಿಕೆ ಕೊಟ್ಟನಂತರ ಆ ದಿನಕ್ಕೆ ಸರಿಯಾಗಿ ಸ್ಥಲಕ್ಕೆ ಹೋಗಿ ತಮ್ಮ ನಂಬುಗೆಗೆ ಅರ್ಹರಾದ ಉಮೇದುವಾರರಿಗೆ ತಂತಮ್ಮ ಓಟುಗಳನ್ನು ಕೊಟ್ಟು, ಅಂಥವರೇ ಚುನಾವಣೆಗೊಂಡು ಬರುವಂತೆ ಮಾಡಬೇಕು. ಇಷ್ಟು ಶ್ರದ್ಧೆಯಿಂದ ಕೆಲಸ ಮಾಡದೆಹೋದರೆ ಪ್ರಭುತ್ವದವರು ಸಕಲ ಪ್ರಜೆಗಳ ಹಿತಾರ್ಥವಾಗಿ ಮಾಡಿಕೊಟ್ಟಿರುವ ಸೌಕರ್ಯಗಳನ್ನೆಲ್ಲಾ ನಾವು ಉಪಯೋಗಿಸಿಕೊಳ್ಳಲು ಅರಿಯದೆ ನಾವೇ ಕೆಟ್ಟುಹೋಗಬೇಕಾಗುವುದು. ಉದಾಸೀನರ ಅಜ್ಞಾನದ ಲಾಭವನ್ನು ಜಾಣರು ಮಾಡಿಕೊಂಡು ಸುಖಿಸುವರು.

MAGNANIMITY AND IGNOMINY.

These are the two states of mind which make and unmake public service a glorious service. An opposition, based on principle and on honest belief to serve public interests, is welcome in Parlimentary bodies and the persons forming the members of such opposition are honoured and respected even in their defeats. Municipal Councils of large towns and cities are of a Parlimentary character and a party in opposition in these bodies is necessary if its sense of duty is one of principle and is not one of selfish interests. We have the Bangalore City and the Mysore City Municipalities which are of great importance in this principle of Self-government. Ever since the recent elections have taken place there has been a growing spirit of public duty and selflessness on the part of a small section of the Councillors who have been working hard to make the Municipal administration one of greater service to the tax payer. The opposition in minority, consisting of men of courage and conviction, stood firmly for principle and did not take part in the election of the President. But when it came to the election of the Vice-President, they joined the party which they had opposed previously and showed a mind of magnanimity notwithstanding that the candidate was not entirely one of their creed. This was because Mr. B. Abdur Rahiman, B.A., deservod to be elected. It was magnanimity. There was room enough to oppose as we learn, his candidature from the point of party spirit merely. But that would have relegated the party to the realm of ignominy. We are glad to observe that this band of public-workers is not of that frame of mind.

This news of the unanimous election of the Vice-President comes to us with another piece of news relating to an additional election which has been granted to the Municipality on account of the addition of an official President. There are now out of the 28 members 18 elected by the tax payers and one by the Chamber of Commerce. Nine are nominated. A tenth member is now nominated giving rise to another elected member.

The following tabular statement gives roughly the population and the amount of tax of each Division with the elected members allotted to each.

	*Population.	*Tax Rs.	Number elected.
I. Palace	6,600	14,400	1
II. Balepet	19,000	30,400	3
III. Manavarthpet	30,000	40,000	4
IV. Ulsore	16,000	16,000	2
V. Nagarathpet	6,000	12,500	1
VI. Lalbagh	8,400	5,800	1
VII. Fort and Chamarajpet	14,700	25,000	3
VIII. Basavangudi	6,400	13,100	2
IX. Mallaswaram	8,500	13,000	1

* These are rough figures.

Taking the population basis the 3rd and 4th Divisions should each have had 5 and 3 members respectively, but they have one each less. The 7th and 8th Divisions should have had only 2 and 1 respectively, but they have one each more. To which Division should the newly allotted elected member go? It is obvious. The 3rd or 4th Division as a matter of right and equity should have it. But which is the Division that goes to get it as recommended by the Council which was divided as in the case of the President's election? The 9th Division. The reason is obvious. It is a Division which claims strong fraternity with the 7th and 8th Divisions which have each an excess member already. We leave it there and hope that Government will do justice to the tax payers. The communication which we have to hand has greater details.

ಪಟೇಲರುಗಳ ಪರಿಷತ್ತು.

ಧಾರವಾಡ ಜಿಲ್ಲೆಯ ಪಟೇಲರುಗಳ ಪರಿಷತ್ತು ಧಾರವಾಡದಲ್ಲಿ ಶ್ರೀಮಂತ ಹಂದಿಗನೂರು ದೇಶಾಯಿ ಸರದಾರ್ ಬುಳ್ಳಪ್ಪ ಮಾಮಲೆ ಇವರ ಅಧ್ಯಕ್ಷತೆಯಿಂದ ನಡೆದಿತು. ಸಭೆಗೆ ಆಲಮೇಲ, ಹಂಗರಕಿ, ಮೊಮ್ಮಿಗಟ್ಟಿ ಸಂಸ್ಥಾನಗಳ ದೇಶಾಯರುಗಳೂ, ಶ್ರೀಮಂತ ಮದನಭಾವಿ ನಾಯಕರೂ, ಮಿ|| ಹುಲಕೋಟಿ ಬಿ. ಎ., ಎಲ್‌ಎಲ್. ಬಿ., ಎಂ. ಎಲ್. ಸಿ. ಮಿ|| ಮುದಿರೆಡ್ಡಿಯವರೇ ಮೊದಲಾದ ಅನೇಕ ಮಹನೀಯರೂ ಆಗಮಿಸಿದ್ದುದರಿಂದ ಸಭೆಯು ವಿಶೇಷ ತೇಜಸ್ಸುಳ್ಳುದಾಗಿದ್ದಿತು. ಪಟೇಲ್‌ಕಷ್ಟನಿಷ್ಠುರ ಕುರಿತ ಮೊದಲಾದುವುಗಳ ವಿಷಯವಾಗಿ ಸ್ವಾಗತಸಂಘಾಧ್ಯಕ್ಷರ ಮತ್ತು ಸಭಾಧ್ಯಕ್ಷರ ಇನ್ನೂ ಅನೇಕಮಂದಿಗಳ ಭಾಷಣಗಳಾದುವು. ಮಾಡಲ್ಪಟ್ಟ ನಿರ್ಧಾರಗಳೊಳಗೆ—ಪ್ರಿನ್ಸ್‌ಆಫ್‌ವೇಲ್ಸ್‌ರವರ ಸ್ವಾಗತಾಭಿನಂದನ ಆಂಗ್ಲಸಾಮ್ರಾಜ್ಯದಲ್ಲಿ ಪಟೇಲ್ ಜನರಿಗಿರುವ ರಾಜನಿಷ್ಠೆ, ಈಗಣ ದೇಶವಿಘಾತಕವಾದ ಅಸಹಾಯ ಚಳವಳಿಯ ನಿಷೇಧ, ಮತ್ತು ಅದರ ನಿರೋಧಕ್ಕೆ ತಕ್ಕ ಉಪಾಯಪರಿಗ್ರಹ, ಪಟೇಲರ ಕರ್ತವ್ಯದ ಜವಾಬ್ದಾರಿಯು ಹೆಚ್ಚಾಗಿರುವುದರಿಂದ ಕುಲಕರ್ಣಿ (ಶಾನುಭೋಗರ.) ಗಳಿಗಿಂತಲೂ ಪಟೇಲರ ಪೋಟಗಿಯನ್ನು ಹೆಚ್ಚಿಸಿಕೊಡಬೇಕು, ಎಂದರೆ ಆಯಾ ಗ್ರಾಮದ ಜಮಾಬಂದಿಯ ಮೇಲೆ ಮೊದಲನೆ ಸಾವಿರಕ್ಕೆ ೧೦೦ ರೂ. ೨ನೆ ಸಾವಿರಕ್ಕೆ ೫೦, ೩ನೆ ಸಾವಿರದಿಂದ ೨೫ ರೂ. ನಂತೆ ಹೆಚ್ಚಿಸಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದು, ಪಟೇಲರ ವತನಿಜಮೀನಿನ ಮೇಲೆ ಆಕಾರ ಹಾಕಿದ್ದನ್ನು ತಪ್ಪಿಸಿ ಮೊದಲಿನಂತೆ ಜೋಡಿಯನ್ನೇ ಹಾಕುವಂತೆ ಪ್ರಾರ್ಥಿಸುವುದು, ಮೊದಲಾದ ೧೬ ನಿರ್ಧಾರಗಳು ಮಾಡಲ್ಪಟ್ಟುವು. ನಮ್ಮ ಮೈಸೂರು ಸಂಸ್ಥಾನದಲ್ಲೂ ಪಟೇಲರ ಪರಿಷತ್ತನ್ನು ಕೂಡಿಸಬೇಕೆಂಬ ಕೂಗನ್ನು ವೃತ್ತಪತ್ರಿಕೆಗಳಲ್ಲಿ ಒಂದೆರಡು ಸಲ ಕಂಡುದಾಯಿತೇ ಹೊರತು ಕಾರ್ಯವು ಜರುಗಲಿಲ್ಲ. ಶ್ಯಾನುಭೋಗರುಗಳಲ್ಲಿರುವಷ್ಟು ಕರ್ತವ್ಯತತ್ಪರತೆಯೂ ಆತ್ಮರಕ್ಷಣಚಾತುರ್ಯವೂ ವಿದ್ಯಾಗಂಧವೂ ಮುಂದಾಳುಗಳ ಹುರವೂ ಪಟೇಲರುಗಳಲ್ಲಿಲ್ಲದಿರುವುದೇ ಇಂಥ ಆಲಸತೆಗೆ ಕಾರಣವೆಂದು ಹೇಳಬೇಕಾಗಿದೆ. ಎಲ್ಲತೆರದ ಜನರೂ ಸಂಘಗಳ ಮೂಲಕ ಇಷ್ಟಾರ್ಥವನ್ನು ಸಾಧಿಸಿಕೊಳ್ಳಲು ಚಳವಳವನ್ನು ನಡುತ್ತಿರುವ ಈಗಣ ಕಾಲದಲ್ಲಿ ಗ್ರಾಮಗಳ ಬೆನ್ನೆಲುಬಿನಂತಿರುವ ಪಟೇಲರುಗಳು ಪ್ರಮತ್ತರಾಗಿರುವುದು ಧರ್ಮವಲ್ಲ.

ರೌಂಡ್ ಟೇಬಲ್ ಕಾನ್ಫರೆನ್ಸು.

ಬೊಂಬಾಯಿಯಲ್ಲಿ ತಾ|| ೧೪-೧೫-೧೬ ರಲ್ಲಿ ಕೂಡಿದ್ದ ರಾಜಕೀಯ ಪ್ರಮುಖರ ಸಭೆಗೆ ಎಲ್ಲ ಪಕ್ಷದ ಪ್ರತಿನಿಧಿಗಳೂ ಸೇರಿರಲಿಲ್ಲ. ವಸ್ತುತಃ ಅದು ಮಿತವಾದಿಗಳ ಸಭೆಯೇ ಆಗಿದ್ದಿತು. ಅಸಹಾಯವಾದಿಗಳು ಮೊದಲೇ ಸೇರಿ ಮಾತನಾಡಿಕೊಂಡು ತಾವು ಯಾರೂ ಹೋಗಬಾರದೆಂದೂ ಹೋದರೂ ಅದರ ನಿರ್ಧಾರಗಳಲ್ಲಿ ಅಂಗವಾಗಿರಬಾರದೆಂದೂ ಪ್ರೇಕ್ಷಕರಾಗಿರಬೇಕೆಂದೂ ಗೊತ್ತುಮಾಡಿಕೊಂಡರು. ಮ|| ಗಾಂಧಿಯವರು ಹೋಗಿದ್ದರು. ಆದರೆ ತಾವು ಅಭಿಪ್ರಾಯವನ್ನು ಮಾತ್ರ ಸೂಚಿಸುತ್ತೇವೆಯೇ ಹೊರತು ಸಭೆಯಲ್ಲಿ ಆಗುವ ನಿರ್ಧಾರಕ್ಕೆ ತಮ್ಮ ಸಂಬಂಧವಿಲ್ಲವೆಂದು ಹೇಳಿದರು. ರೌಂಡ್ ಟೇಬಲು ಸಾರ್ಥಕವಾಗಬೇಕಾದರೆ ಅದರಲ್ಲಿ ಆದ ನಿರ್ಣಯದಂತೆ ಕೆಲಸ ನಡೆಯಿಸಲು ಲಾರ್ಡ್ ರೀಡಿಂಗರು ಸಾಮ್ರಾಜ್ಯ ಪ್ರಭುತ್ವದಿಂದ ಅನುಮತಿ ಪಡೆದು ಕುಳಿತುಕೊಳ್ಳಬೇಕೆಂದೂ, ಕಾಂಗ್ರೆಸ್ಸಿನವರ ಧ್ಯೇಯ ಎಂದರೆ ಪಂಜಾಬು ಖಿಲಾಫತ್ತುಗಳ ಅನ್ಯಾಯಪರಿಮಾರ್ಜನೆ ಅಧಿವೇಶನಗಳಲ್ಲಿರುವಂಥ ಪೂರ್ಣಸ್ವರಾಜ್ಯಪ್ರದಾನ ಇವಿಷ್ಟರಲ್ಲಿ ಲೇಶವೂ ಕೊರತೆಯಿಲ್ಲದಂತೆ ನೆರವೇರಿಸಿಕೊಟ್ಟರೇ ಅಸಹಾಯವಾದಿಗಳು ಒಪ್ಪುವರೆಂದೂ, ಪ್ರಭುತ್ವದವರು ಈಗಣ ತಮ್ಮ ನಿರ್ಬಂಧಚರ್ಯೆಗಳನ್ನು ನಿಲ್ಲಿಸಿ ಕಾರಾಗೃಹಸ್ಥರಾಗಿರುವ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಿದರೆ ಅಸಹಾಯವಾದಿಗಳೂ ತಮ್ಮ ಚಳವಳವನ್ನು ನಿಲ್ಲಿಸಿ ರೌಂಡ್ ಟೇಬಲ್ಲಿಗೆ ಸೇರುವರೆಂದೂ, ಇದುವರೆಗೆ ಪರಿಗ್ರಹಿಸಿದ ಕಠಿನಚರ್ಯೆಗಾಗಿ ಪ್ರಭುತ್ವದವರು ಪಶ್ಚಾತ್ತಾಪ ಪ್ರದರ್ಶನಮಾಡಬೇಕೆಂದೂ ಮೊದಲಾಗಿ ಮ|| ಗಾಂಧಿಯವರು ಭಾಷಣಮಾಡಿದರು. ೨ನೆ ದಿನ ನಡೆದ ಸಭೆಯಲ್ಲಿ ಏರ್ಪಟ್ಟ ಉಪಸಂಘದಲ್ಲಿ ಸಭಿಕರಾಗಿರಲಿಕ್ಕೂ ಅವರು ಒಪ್ಪಲಿಲ್ಲ. ಇವೆಲ್ಲ ರೀತಿಗಳನ್ನು ನೋಡಿ ಅಧ್ಯಕ್ಷರಾದ ಸರ್ ಶಂಕರನ್ ನಾಯರ್‌ರವರು ಇದು ಕೊನೆಮುಟ್ಟುವ ರೀತಿಯಲ್ಲವೆಂದು ಯೋಚಿಸಿ, ತಮ್ಮ ಅಧ್ಯಕ್ಷಪದವಿಯನ್ನೇ ಬಿಟ್ಟು ಹೊರಟುಹೋದರು. ಟೈಂಸ್ ಆಫ್ ಇಂಡ್ಯಾ ಪತ್ರಿಕೆಗೆ ತಮ್ಮ ಅನುಭವವನ್ನು ಕುರಿತು ಒಂದು ಲೇಖನವನ್ನು ಬರೆದರು. ಬಳಿಕ ಸರ್ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಿಂದ ಸಭೆ ನೆರೆದು ಕೆಲ ನಿರ್ಧಾರಗಳನ್ನು ಮಾಡಿರುತ್ತಾರೆ. ಜನವರಿ ೩೧ರ ವರೆಗೆ ಪಿಕಿಟಿಂಗನ್ನೂ ಶಾಸನೋಲ್ಲಂಘನ ಕಾರ್ಯವನ್ನೂ ನಿಲ್ಲಿಸುವುದಕ್ಕೆ ತಾವು ಒಪ್ಪಿರುತ್ತೇವೆಂದು ಗಾಂಧಿಯವರು ಹೇಳಿದ್ದಾರೆ. ಆ ಕಾಲವು ಇನ್ನು ೨-೩ ದಿನಗಳು ಉಳಿದುವು. ಪಂ|| ಮಾಳವೀಯರವರು ಓಡಾಡುತ್ತಲೇ ಇದ್ದಾರೆ. ಮುಂದೆ ಈ ರೌಂಡ್ ಟೇಬಲು ನಡೆಯುವುದೂ ಅದು ಫಲಪ್ರದವಾಗುವುದೂ ಶಶವಿಷಾಣದಂತೆಯೇ ಕಾಣುತ್ತದೆ. ಏಕೆಂದರೆ ಸಾಮ್ರಾಜ್ಯಶಾಸನ ಸಭೆಯಲ್ಲೂ ಸ್ಟೇಟ್‌ಕೌನ್ಸಿಲ್ ಸಭೆಯಲ್ಲೂ ರೌಂಡ್ ಟೇಬಲ್ ಸಂಬಂಧವಾಗಿ ತೆಗೆದ ಚರ್ಚೆಗೆ ಸರ್ಕಾರದಿಂದ ಬಂದ ಉತ್ತರವು ಸುಮುಖವಾಗಿಲ್ಲ.

ಸರ್ಕಾರಕ್ಕೆ ಕಂದಾಯಗಳನ್ನು ಕೊಡದೆ ಹೋಗುವುದು.

ಅಸಹಾಯವಾದಿಗಳು ಮಾಡಿಕೊಂಡಿರುವ ನಿರ್ಧಾರಗಳಲ್ಲಿ ಸರ್ಕಾರಕ್ಕೆ ಕಂದಾಯಗಳನ್ನು ಕೊಡದೆ ನಿಲ್ಲಿಸಿಬಿಡುವುದೂ ಒಂದು ಭಾಗವಾಗಿದೆಯಷ್ಟೆ. ಮದ್ರಾಸಿನ ಆಂಧ್ರ ಜಿಲ್ಲೆಗಳಲ್ಲಿ ಕೆಲ ಜನರು ಇದನ್ನು ಬಳಕೆಗೆ ತರಲು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಅಸಹಾಯವಾದಿಗಳು ಸಭೆಗೂಡಿಸಿ, ರೈತರು ಸರ್ಕಾರಕ್ಕೆ ಕಂದಾಯದ ಮೊದಲನೇ ಕಂತನ್ನು ಕೂಡ ಈಗ ಕೊಡದೆ ನಿಲ್ಲಿಸಿಬಿಡಬೇಕೆಂತಲೂ, ಗ್ರಾಮೋದ್ಯೋಗಿಗಳು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಡಬೇಕೆಂತಲೂ ಸರ್ಕಾರದವರು ಭೂಮಿಗಳನ್ನು ಜಪ್ತಿಮಾಡಿ ಹರಾಜಿಗಿಟ್ಟರೆ ಯಾರೂ ಬೀಟು ಮಾಡಬಾರದೆಂತಲೂ, ಸ್ವರಾಜ್ಯಸ್ಥಾಪನೆಯಾದಾಗ ಅವರವರ ಭೂಮಿಗಳೂ ಶಾನುಬೋಗಿಕೆ ಹಕ್ಕುಗಳೂ ಅವರವರಿಗೆ ಮರಳಿ ಕೊಡಲ್ಪಡುವುವೆಂತಲೂ, ಆಗ ರೈತರು ಸರಿಯಾಗಿ ಕಂದಾಯವನ್ನು ಸಲ್ಲಿಸಬೇಕೆಂತಲೂ ಮೊದಲಾಗಿ ಬೋಧಿಸುತ್ತ ಇದ್ದಾರೆ. ಕೃಷ್ಣಾ ಗುಂಟೂರು ಜಿಲ್ಲೆಗಳಲ್ಲಿ ಕೆಲಕಡೆ ರೈತರು ಅದರಂತೆ ನಡೆಯಲೂ ತೊಡಗಿದ್ದಾರೆ. ರಾಜಕೀಯವಾದ ಹೋರಾಟದ ಮಧ್ಯಕ್ಕೆ ಅಸಹಾಯವಾದಿ ರಾಜಕೀಯ ಪಕ್ಷದವರು ಅಮಾಯಕರಾದ ರೈತರನ್ನು ತಂದು ಸಿಕ್ಕಿಸಿಕೊಂಡು ಅವರನ್ನೂ ಕೆಡಿಸಿ ದೇಶವನ್ನೂ ಅಪಾಯಕ್ಕೆ ಗುರಿಮಾಡುತ್ತಿದ್ದಾರೆ. ಈ ಹಾಳು ಹೋರಾಟಕ್ಕೂ ಮೊಂಡಾಟಕ್ಕೂ ರೈತರು ಬಲಿಬಿದ್ದು ಭೂಮಿಕಾಮಿಗಳನ್ನು ಕಳೆದುಕೊಂಡರೆ ಈ ಕೋಟೀಶ್ವರರುಗಳು ಅವರ ಕುಟುಂಬ ಭರಣ ಮಾಡುತ್ತಾರೆಯೆ? ಭೂಮಿಗಳೆಲ್ಲಾ ಪಾಳುಬಿದ್ದರೆ ದೇಶೀಯರ ಹೊಟ್ಟೆಗೆ ಗತಿಯೇನು? ಇದನ್ನೆಲ್ಲಾ ಯೋಚಿಸದೆ ಪಾಮರ ಜನರನ್ನೆಲ್ಲಾ ಅವರವರ ಉದ್ಯೋಗದಿಂದ ತಪ್ಪಿಸಿ ನಿರುದ್ಯೋಗಿಗಳನ್ನು ಮಾಡಿ ಗಲಾಟೆ ಹೆಚ್ಚಿಸಿ, ಸ್ವರಾಜ್ಯಕ್ಕೆ ಪ್ರತಿಯಾಗಿ ಸದ್ಯಃ ದೇಶಕ್ಕೆ ಅಭೋಜ್ಯವನ್ನುಂಟುಮಾಡುತ್ತಲಿರುವುದನ್ನು ನೋಡಿದರೆ ವಿಷಾದವಾಗುತ್ತದೆ. ಈ ಹಾವಳಿಯನ್ನು ನೋಡಿ ಪ್ರಭುತ್ವದವರು ಸುಮ್ಮನಿರುವುದುಂಟೆ? ಅವರು ತಕ್ಕ ಪ್ರತಿ ಕ್ರಿಯೆಗಳನ್ನು ಸಿದ್ಧಪಡಿಸಿಯೇ ಇದ್ದಾರೆ. ಮದರಾಸು ಪ್ರಭುತ್ವದವರು ಕಳೆದ ತಾ|| ೨೦-೨೧ರಲ್ಲಿ ಈ ಸಂಬಂಧವಾಗಿ ಮಾಡಿರುವ ಪ್ರಕಟನೆಗಳಲ್ಲಿ ಹೀಗೆ ತಿಳಿಯಿಸಿರುತ್ತಾರೆ— ಗುಂಟೂರು ಜಿಲ್ಲೆಯ ಕೆಲ ಗ್ರಾಮಗಳಲ್ಲಿ ಎಲ್ಲರೂ ಸೇರಿ ಆಲೋಚನೆ ಮಾಡಿ ಸರ್ಕಾರಿ ಕಂದಾಯವನ್ನು ನುಂಗಿ ಹಾಕಿಬಿಡಬೇಕೆಂದು ಯೋಚಿಸಿರುವರೆಂದೂ, ಗ್ರಾಮೋದ್ಯೋಗಿಗಳು ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವರೆಂದೂ, ಇನ್ನೂ ಅನೇಕರು ಕೊಡುವುದರಲ್ಲಿದ್ದಾರೆಂದೂ ವರದಿ ಬಂದಿದೆ. ಇವೆರಡು ಕೆಲಸಗಳೂ ಕೂಡ ಸರ್ಕಾರವನ್ನು ತಲೆಕೆಳಗುಮಾಡಬೇಕೆಂದು ಭಯಪಡಿಸಲಿಕ್ಕಾಗಿ ಏರ್ಪಡಿಸಿಕೊಂಡಿರುವ ಸಾಧನಗಳಲ್ಲಿ ಸೇರಿದುವುಗಳಾಗಿ ಪ್ರಕಟಿಸಲ್ಪಟ್ಟಿವೆ. ಅದುಕಾರಣ ಇದಕ್ಕೆ ತಕ್ಕ ಪ್ರತೀಕಾರವನ್ನು ಸರ್ಕಾರದವರು ಮಾಡಬೇಕಾದ ಅವಶ್ಯಕತೆಯುಂಟಾಗಿದೆ. ಇಂಥ ಪರಿಸ್ಥಿತಿಯಲ್ಲಿ ಗ್ರಾಮೋದ್ಯೋಗಿಗಳು ರಾಜೀನಾಮೆ ಕೊಟ್ಟರೆ ಅದನ್ನು ಅಂಗೀಕರಿಸಲಾರೆವು. ಯಾರು ತಮ್ಮ ಕೆಲಸವನ್ನು ಮಾಡದೆ ತಪ್ಪಿಹೋಗುತ್ತಾರೋ ಅವರನ್ನು ಡಿಸ್‌ಮಿಸ್ ಮಾಡಿಬಿಡಬೇಕು. ಈಗ ಜಮೀನ್‌ದಾರಿ ಗ್ರಾಮೋದ್ಯೋಗಿಗಳ ಸಂಬಳವನ್ನು ಹೆಚ್ಚಿಸುವ ಯೋಚನೆಯನ್ನು ಸರ್ಕಾರದವರು ಮಾಡುತ್ತಿದ್ದರು. ಆದರೆ ಈ ಮಧ್ಯೆ ರಾಜದ್ರೋಹಾಪರಾಧಕ್ಕಾಗಿ ಡಿಸ್‌ಮಿಸ್ ಆದ ಗ್ರಾಮೋದ್ಯೋಗಿಗಳ ವಾರಸತ್ವದ ಹಕ್ಕನ್ನು ಶಾಶ್ವತವಾಗಿ ತೊಲಗಿಸಿಬಿಡುವುದಕ್ಕಾಗಿ ತಕ್ಕ ಶಾಸನವನ್ನು ಮಾಡುವೆವು. ಈಗ ಮಾತ್ರ ಉದ್ದೇಶವಿಲ್ಲ. ಕಂದಾಯವನ್ನು ಕೊಡದೆಹೋದವರ ಭೂಮಿಯನ್ನೂ ಚರಾಸ್ತಿಯನ್ನೂ ವಿಧಿ ಪ್ರಕಾರ ಕೊಡಬೇಕಾದ ಅವಧಿಯನ್ನು ಕೂಡ ತಪ್ಪಿಸಿ ಕೂಡಲೇ ಜಪ್ತಿ ಹರಾಜು ಮಾಡಿಸಿಬಿಡುವೆವು. ಎಲ್ಲರೂ ಏಕವಾಗಿ ಬೀಟುಮಾಡದೆ ಹೋದರೆ ಅಂಥ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡು ನಿಮ್ನಜಾತಿ ಜನರಿಗೂ ಕಳೆದ ಯುದ್ಧದಲ್ಲಿ ಕೆಲಸಮಾಡಿದ ಸೋಲ್ಜರುಗಳಿಗೂ ಕೊಟ್ಟುಬಿಡುವರು. ಮತ್ತು ಗ್ರಾಮಾಂತರಗಳಲ್ಲಿ ಗದ್ದಲವು ಹೆಚ್ಚದಂತೆ ಮಾಡಿ ಕಾಪಾಡುವುದಕ್ಕಾಗಿ ಹೆಚ್ಚು ಪೋಲೀಸ್ ಸಿಬ್ಬಂದಿಯನ್ನಿಡಬೇಕಾಗುವುದರಿಂದ ಅವರ ವೆಚ್ಚವನ್ನೆಲ್ಲಾ ಆಯಾ ಗ್ರಾಮಸ್ಥರೇ ಹೊತ್ತುಕೊಳ್ಳಬೇಕು. ಯಾವ ಗ್ರಾಮಗಳವರಾದರೂ ಮುಷ್ಕರವನ್ನು ಬಿಟ್ಟು ಕಂದಾಯವನ್ನು ಸಲ್ಲಿಸಿಬಿಟ್ಟರೆ ಪೋಲೀಸ್ ಸಿಬ್ಬಂದಿಯನ್ನು ತೆಗೆದುಬಿಡುವೆವು" ಎಂದು ಆಜ್ಞಾಪಿಸಿರುವುದಲ್ಲದೆ ಹೆಚ್ಚು ಪೋಲೀಸುದಳವನ್ನು ಕೂಡ ಗುಂಟೂರು ಜಿಲ್ಲೆಗೆ ಕಳುಹಿಸಿಕೊಟ್ಟಿದ್ದಾರೆ. ಮತ್ತು ರಾಜೀನಾಮೆ ಕೊಟ್ಟ ಗ್ರಾಮೋದ್ಯೋಗಿಗಳ ಸ್ಥಾನಕ್ಕೆ ತಕ್ಕಷ್ಟು ವಿದ್ಯೆಯಿಲ್ಲದಿದ್ದರೂ ಕಾರ್ಯನಿರ್ವಾಹ ಮಾಡಬಲ್ಲ ಹೊಸ ಜನರನ್ನು ಕಲೆಕ್ಟರುಗಳು ನಿಯಮಿಸಿಕೊಳ್ಳಬಹುದೆಂದು ತಿಳಿಯಿಸಿದ್ದಾರೆ. ಮತ್ತು ಇಂಥ ಬೋಧನೆಗಾಗಿ ಸಭೆ ಕೂಡಿಸಲು ಪ್ರಯತ್ನಿಸಿದ ಕೆಲ ಪ್ರಮುಖರಿಗೆಲ್ಲಾ ಶಿಕ್ಷೆಯನ್ನು ಮಾಡಿಸುತ್ತಲಿದ್ದಾರೆ. ಆಗಲೇ ಕೆಲವರು ಕಾರಾಗೃಹವನ್ನು ಕಂಡಿದ್ದಾರೆ. ಈ ವಿಷಮಸ್ಥಿತಿಯು ಮುಂದೆ ಯಾವ ಯಾವ ತೆರದ ಕೇಡನ್ನು ತಂದಿಕ್ಕುವುದೋ ಹೇಳುವಹಾಗಿಲ್ಲ. ಈಗಲೇ ರೈತರುಗಳು ಎಚ್ಚೆತ್ತುಕೊಳ್ಳುವುದುತ್ತಮ. ಅಸಹಾಯವಾದಿಗಳ ಸಾಹಸ ಚಾತುರ್ಯಗಳು "ವಿನಾಯಕಂಪ್ರಕುರ್ವಾಣೋ ರಚಯಾಮಾಸವಾನರಂ" ಎನ್ನುವಂತಾಗಿದೆ.

ಮಿಶ್ರವಿವಾಹ ಶಾಸನ.

ಮ|| ವಿ. ಜೆ. ಪಟೇಲರು ಸಾಮ್ರಾಜ್ಯಶಾಸನ ಸಭೆಯ ಸಭಾಸ್ತಾರರಾಗಿದ್ದಾಗ್ಗೆ ಜಾತ್ಯಂತರ ಮಿಶ್ರವಿವಾಹ ಸಂಬಂಧವಾದ ಶಾಸನವೊಂದನ್ನು ಏರ್ಪಡಿಸಬೇಕೆಂಬುದಾಗಿ ಒಂದು ತೀರ್ಮಾನವನ್ನು ಚರ್ಚೆಗೆ ತಂದು ಪ್ರಯತ್ನಿಸಿದ್ದ ಸಂಗತಿಯನ್ನು ಹಿಂದೆ ಇದೇ ಪತ್ರದಲ್ಲಿ ನಾವು ಪ್ರಸ್ತಾವಿಸಿ ತಿಳಿಯಿಸಿದ್ದೇವೆ. ಪಟೇಲರು ಅಸಹಾಯಪಕ್ಷಕ್ಕೆ ಸೇರಿ ಶಾಸನಸಭೆಯ ಸಂಬಂಧವನ್ನು ಪರಿತ್ಯಜಿಸಿದ ಬಳಿಕ ಡಾಕ್ಟರ್ ಗೋರ್‌ರವರು ಪಟೇಲರು ಹಿಡಿದಿದ್ದ ಕಾರ್ಯವನ್ನೇ ಮುಂಬರಿಸಲು ಪ್ರಯತ್ನಿಸಿದರು. ಕಳೆದ ತಾ|| ೨೦ರಲ್ಲಿ ದಿಲ್ಲಿಯೊಳಗೆ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಈ ವಿಷಯವನ್ನು ಅವರು ಚರ್ಚೆಗೆ ತಂದರು. ಆ ದಿನದ ಸಭೆಗೆ ಪ್ರಭುತ್ವಪಕ್ಷದ ಸಭಿಕರೂ ಪಾಶ್ಚಾತ್ಯಸಭಿಕರೂ ಕೆಲಮಂದಿಗಳು ಮಾತ್ರವೇ ಬಂದಿದ್ದುದನ್ನು ನೋಡಲಾಗಿ ಈ ಸಂಬಂಧವಾಗಿ ಅವರಿಗಿರುವ ತಟಸ್ಥಭಾವವು ವ್ಯಕ್ತವಾಯಿತು.

ಡಾ|| ಗೋರ್‌ರವರು ಈ ಸಂಬಂಧವಾಗಿ ಉಪನ್ಯಾಸಕ್ಕಾರಂಭಿಸಿ, "ಸಿವಿಲ್‌ಮ್ಯಾರೇಜ್ ಬಿಲ್ಲು ೧೮೬೨ನೆ ವರ್ಷದಲ್ಲಿ ಸರ್ ಹೆನ್ರಿ ಮೆಯಿನ್‌ರವರಿಂದ ಸಭೆಯ ಚರ್ಚೆಗೆ ತರಲ್ಪಟ್ಟಿದ್ದರೂ ದುರದೃಷ್ಟದಿಂದ ವಿಧಿಯಾಗದೆ ಹೋಯಿತು. ದೇಶಕ್ಷೇಮಕ್ಕೆ ಇಂಥ ಮಿಶ್ರವಿವಾಹದ ಕಾನೂನಾಗುವುದು ಆವಶ್ಯಕ. ಎಲ್ಲ ಸಭಿಕರೂ ಇದನ್ನನುಮೋದಿಸಬೇಕೆಂದು ಕೋರುತ್ತೇನೆ. ಬಿಲ್ಲನ್ನು ಉಪಸಂಘದವರ ವಿಮರ್ಶೆಗಾಗಿ ಕಳುಹಿಸಿಕೊಡಬೇಕು" ಎಂದು ವಾದಿಸಿದರು. ಅದರ ಮೇಲೆ ಸಭಾಧ್ಯಕ್ಷರು-ಪ್ರಜಾಭಿಪ್ರಾಯಾರ್ಥವಾಗಿ ಮೊದಲೊಂದುಸಲ ಪ್ರಕಟಿಸಿ, ಉಪಸಂಘದವರು ಸವರಣೆಮಾಡಿದ ನಂತರ ಅದನ್ನು ಮತ್ತೊಂದುಸಲ ಪ್ರಕಟಿಸಬೇಕಾಗುತ್ತದೆ. ಅಲ್ಲದೆ ಉಪಸಂಘದವರಿಗೆ ಕಳುಹಿಸಿಕೊಟ್ಟುಬಿಟ್ಟರೆ ಆ ಬಿಲ್ಲಿನಲ್ಲಿ ಕಂಡ ಮುಖ್ಯಾಭಿಪ್ರಾಯಕ್ಕೆ ಪ್ರಭುತ್ವದವರು ಸಮ್ಮತಿಸಿದಂತೆಯೇ ಆಗುತ್ತದೆ. ಅದುಕಾರಣ ಡಾ|| ಗೋರ್‌ರವರ ಅಭಿಪ್ರಾಯದಂತೆ ಮಾಡಲಾಗುವುದಿಲ್ಲ. ಮೊದಲು ಸಭೆಯಲ್ಲಿ ಚರ್ಚಿತವಾಗಿ ಪರ್ಯವಸಾನವು ತೇಲಲಿ ಎಂದು ಹೇಳಿದರು.

ಬಳಿಕ ಚರ್ಚೆಗೆ ಆರಂಭವಾಯಿತು. ಯಾವ ಜಾತಿಯವರೇ ಆಗಲಿ ಯಾವ ಮತದವರೇ ಆಗಲಿ ಪರಸ್ಪರ ಮಾಡಿಕೊಂಡ ವಿವಾಹಗಳು ಶಾಸನಬದ್ಧವಾದುವುಗಳೆಂದು ಅಂಗೀಕರಿಸಲ್ಪಡಬೇಕೆಂಬುದೇ ಈ ಬಿಲ್ಲಿನ ತತ್ತ್ವ. ಇದರಮೇಲೆ ಅನೇಕರು ಅನುಕೂಲವಾಗಿಯೂ ಅನೇಕರು ಪ್ರತಿಕೂಲವಾಗಿಯೂ ಭಾಷಣ ಮಾಡಿದರು. ಮ|| ಟಿ. ವಿ. ಶೇಷಗಿರಿ ಅಯ್ಯರು (ಹಿಂದೆ ಮದ್ರಾಸು ಹೈಕೋರ್ಟು ನ್ಯಾಯಮೂರ್ತಿಗಳಾಗಿದ್ದವರು) ಮಾಡಿದ ಭಾಷಣದಲ್ಲಿ-ಪಂಚಮರೇ ಮೊದಲಾದವರನ್ನು ಅಸ್ಪೃಶ್ಯರೆಂದು ಹಿಂದೂಮತಸ್ಥರು ತಿರಸ್ಕರಿಸಿದುದರಿಂದ ಅವರಲ್ಲಿ ಬಹುಜನರು ಹಿಂದೂಮತವನ್ನೇ ಬಿಟ್ಟು ಕ್ರೈಸ್ತ ಮಹಮ್ಮದೀಯ ಮತಗಳನ್ನು ಸ್ವೀಕರಿಸಿಕೊಂಡರು. ಆದರೂ ಮಿಶ್ರವಿವಾಹ ಪ್ರತಿಬಂಧಕ ಭಾವಗಳು ಇನ್ನೂ ತಗ್ಗದಿರುವುದನ್ನು ನೋಡಿದರೆ ವಿಷಾದವಾಗುತ್ತದೆ ಈ ಬಿಲ್ಲನ್ನು ನಾವುಗಳು ಅಂಗೀಕರಿಸದೇ ಹೋದರೆ ಉತ್ತಮಹಿಂದುಗಳೂ ಕೂಡ ನಾವು ಹಿಂದುಗಳಲ್ಲವೆಂದು ಪ್ರಕಟಿಸಿಕೊಳ್ಳುವ ಅವಸ್ಥೆಯು ಬರುವುದು. ಈ ಬಿಲ್ಲಿನಲ್ಲಿ ೨ ಉಪಸವರಣಗಳನ್ನು ಮಾಡಿಬಿಟ್ಟು ಉಪಸಂಘಕ್ಕೆ ಕಳುಹಿಸುವುದು ಒಳ್ಳೆಯದು. ಆ ಸವರಣೆಯೇನೆಂದರೆ—೧. ಇಂಥ ಜಾತ್ಯಂತರ ಮಿಶ್ರವಿವಾಹ ಮಾಡಿಕೊಂಡವರಿಗೆ ಹುಟ್ಟಿದ ಮಕ್ಕಳು ಸನಾತನ ಹಿಂದೂಮತಕ್ಕೆ ಸೇರಿದ ತಾಯ್ತಂದೆಗಳ ಆಸ್ತಿಯಲ್ಲಿ ದಾಯಾದಹಕ್ಕನ್ನು ಕೇಳಕೂಡದು. ಸತ್ತುಹೋದ ತಂದೆಯ ಧರ್ಮಾದಾಯಗಳಿಗೆ ಪಾಲಕರಾಗಕೂಡದು. ೨. ಸನಾತನ ಧರ್ಮಾವಲಂಬಿಯಾದ ಹಿಂದೂತಂದೆಯ ಮಕ್ಕಳು ಇಂಥ ಮಿಶ್ರವಿವಾಹವನ್ನು ಮಾಡಿಕೊಂಡು ಬಿಟ್ಟರೆ ಆ ತಂದೆಯು ಬೇರೆ ಜನರನ್ನು ದತ್ತಸ್ವೀಕಾರ ಮಾಡಿಕೊಳ್ಳಲು ಅಪೇಕ್ಷಿಸಿದರೆ ಅದಕ್ಕೆ ಅವಕಾಶವಿರಬೇಕು ಎಂದು ಹೇಳಿದರು. ಇದರಿಂದ ಮ|| ಅಯ್ಯರು ಬಿಲ್ಲಿಗೆ ಅನುಕೂಲಭಾವವನ್ನು ಮೇಲೆ ತೋರಿಸಿದರೂ ಬಿಲ್ಲಿನ ಉತ್ಪಾದಕರ ಉದ್ದೇಶದ ಮೂಲಕ್ಕೇ ಕೊಡಲಿ ಹಾಕಿದಂತಾಯಿತು. ಮಿಶ್ರವಿವಾಹ ಮಾಡಿಕೊಂಡವರಿಗೆ ಪಿತ್ರಾರ್ಜಿತ ಆಸ್ತಿಯ ಹಕ್ಕಿಲ್ಲದಿರುವ ತೊಂದರೆಯನ್ನು ತಪ್ಪಿಸಿಬಿಡಬೇಕೆಂಬುದೇ ಬಿಲ್ಲಿನ ಮುಖ್ಯೋದ್ದೇಶವಾಗಿದೆ. ಹಿಂದೆ ಮೈಸೂರಿನಲ್ಲಿ ಮತಭ್ರಷ್ಟರ ದಾಯಭಾಗದ ಶಾಸನ ವಿಷಯವು ಪ್ರಸ್ತಾಪಕ್ಕೆ ಬಂದಿದ್ದುದೂ ಇದೇ ಕಾರಣಕ್ಕಾಗಿಯೇ. ಮತಾಂತರಕ್ಕೆ ಸೇರಿಹೋದವರಿಗೆ ದಾಯಭಾಗ ತಪ್ಪಿಹೋಗುವುದೆಂಬ ಭೀತಿಯಿರುವುದರಿಂದಲೇ ಜಾತಿಸಾಂಕರ್ಯಕ್ಕೆ ಈಗ ಅಷ್ಟೂ ಇಷ್ಟೂ ಪ್ರತಿಬಂಧಕವಿದೆ. ಅದು ತಪ್ಪಿದರೆ "ಕಲೌಪಂಚಸಹಸ್ರಾಂತೇ ಜಾಯತೇಜಾತಿಸಂಕರಃ" ಎಂಬ ವಚನವು ಮೂರೂಮುಕ್ಕಾಲು ಗಳಿಗೆಯಲ್ಲಿ ಸಿದ್ಧಿಸಿಹೋದೀತು.

ಕಡೆಗೆ ಖಾನ್‌ಬಹದ್ದೂರ್ ಸಫ್ರುಜ್‌ಹುಸೇನ್, ಹಾಜಿ ವಜಿರುದ್ದೀನ್, ಭಕ್ಷಿ ಸೋಮಲಾಲ್, ಭಾಯಿಮಾನಸಿಂಗ್ ಮೊದಲಾದ ಹಿಂದೂಮಹಮ್ಮದೀಯ ಸಿಕ್‌ಸಭಿಕರು ಕೆಲವರು ಇಂಥ ಮಿಶ್ರವಿವಾಹಕ್ಕೆ ಹಿಂದೂಮತವೂ ಸಿಕ್‌ಮತವೂ ಮಹಮ್ಮದೀಯ ಮತವೂ ಕೂಡ ಒಪ್ಪುವುದಿಲ್ಲವೆಂತಲೂ, ಮಿಶ್ರವಿವಾಹದಿಂದ ಈಗಲೇ ಎಷ್ಟೋ ಅನರ್ಥವುಂಟಾಗಿರುವುದೆಂತಲೂ ಹೇಳಿ ನಿರಾಕರಿಸಿಬಿಟ್ಟರು.

ಬಳಿಕ ಡಾ|| ಗೋರ್‌ರವರು ಮತ್ತೊಂದುಪನ್ಯಾಸವನ್ನು ಮಾಡಿ, ಬಿಲ್ಲನ್ನು ಉಪಸಂಘಕ್ಕೆ ಕಳುಹಿಸಿಕೊಟ್ಟು ಅವರ ವಿಮರ್ಶೆಯಾದನಂತರ ವರದಿಯು ಹೊರಬಿದ್ದರೆ ಆ ಬಳಿಕ ಹಿಂದುಗಳು ಮಹಮ್ಮದೀಯ ಮತದೊಡನೆ ಸಂಬಂಧಮಾಡಿದರೆ ಎಂಬ ಮಾತನ್ನು ಬೇಕಿದ್ದರೆ ಬಿಲ್ಲಿನಲ್ಲಿ ತೆಗೆದುಬಿಡಲು ನಾನು ಒಪ್ಪುತ್ತೇನೆಂತಲೂ, ಮನುಸ್ಮೃತಿಯಲ್ಲಿ ವರ್ಣಾಂತರ ಜಾತ್ಯಂತರ ವಿವಾಹಗಳು ಪೂರ್ವದಲ್ಲಿ ಜರುಗುತ್ತಿದ್ದಂತೆ ಹೇಳಲ್ಪಟ್ಟಿರುವುದೆಂತಲೂ, ಹೈದರಾಬಾದಿನಲ್ಲಿ ಈಗೂ ಹಿಂದೂ ಮಹಮ್ಮದೀಯರ ಮಧ್ಯದಲ್ಲಿ ಪರಸ್ಪರ ವಿವಾಹವು ನಡೆಯುತ್ತಿರುವುದೆಂತಲೂ, ಇಂಡ್ಯಾ ಸರ್ಕಾರದವರು ಇಂಥ ವಿಷಯದಲ್ಲಿ ತಾವೇ ಪ್ರವರ್ತಿಸಿ ಶಾಸನವನ್ನು ಮಾಡುವುದು ಆವಶ್ಯಕವೆಂತಲೂ, ಸಂಸ್ಕರಣಪ್ರಿಯರಾದ ಜನರ ಸ್ವಾತಂತ್ರ್ಯಕ್ಕೆ ಅಡ್ಡಿಯಿರುವಂತೆ ಮಾಡುವುದೂ, ಸನಾತನ ಧರ್ಮಾವಲಂಬಿಗಳ ದಯೆಗೆ ಇವರು ಕಾದುಕೊಂಡಿರುವಂತೆ ಮಾಡುವುದೂ, ನಾಗರಕಪ್ರಭುತ್ವದ ಧರ್ಮವಲ್ಲವೆಂತಲೂ, ಅಂಥ ಸರ್ಕಾರದವರು ಮಾಡಬೇಕಾದ ಕಾರ್ಯವನ್ನು ನಾನು ಮಾಡುತ್ತಿರುವಾಗ, ಮಾನವಸಾಮಾನ್ಯಸ್ವಾತಂತ್ರ್ಯರಕ್ಷಣೆಗಾಗಿ ನಾನು ಸ್ವಾರ್ಥಪರರೊಡನೆ ಹೋರಾಡುತ್ತಿರುವಾಗ, ಪ್ರಭುತ್ವಪಕ್ಷದ ಸಭಿಕರು ಇದಕ್ಕೆ ಸಹಾಯಮಾಡದೆ ಸಭೆಯನ್ನೇ ಬಿಟ್ಟು ಹೊರಟುಹೋಗುವುದು ಆಶ್ಚರ್ಯಕರವಾಗಿರುವುದೆಂತಲೂ, ದೇಶದಲ್ಲಿ ಇಂಥ ಶಾಸನವಿಲ್ಲದಿರುವುದರಿಂದ ಸಂಭವಿಸಿರುವ ಅನರ್ಥವನ್ನು ವರ್ಣಿಸಲು ಅಸದಳವಾಗಿರುವುದೆಂತಲೂ, ಬಂಗಾಳದಲ್ಲಿ ಎಷ್ಟೋ ಜನರು ತಮ್ಮ ಹೆಣ್ಣುಮಕ್ಕಳನ್ನು ಅನುಕೂಲರಾದವರುಗಳಿಗೆ ಕೊಡಲಿಕ್ಕೆ ತಮ್ಮ ಆಸ್ತಿಯನ್ನೆಲ್ಲಾ ಹಾಳ್ಮಾಡಿಕೊಳ್ಳುತ್ತಿರುವುದೇ ಅಲ್ಲದೆ ಅನೇಕರು ಅದಕ್ಕಾಗಿ ಮರಣಾಂತ ಋಣಕೂಪದಲ್ಲಿ ಮುಳುಗಿ ನರಳುತ್ತಿರುವರೆಂತಲೂ, ಅನೇಕರಿಗೆ ವರಶುಲ್ಕ ಮೊದಲಾದುವುಗಳನ್ನು ಕೊಡಲು ಶಕ್ತಿಯಿಲ್ಲದ ಕಾರಣ ಹೆಣ್ಣುಮಕ್ಕಳ ಮದುವೆಯನ್ನೇ ಮಾಡಲಾರದೆ ಜನ್ಮಾಂತದವರೆಗೆ ದುಃಖಿಸುತ್ತಿರುವರೆಂತಲೂ, ಅಂಥ ಜನಕರ ಮೇಲಾದರೂ ಈ ಸಭಿಕರಿಗೆ ಕನಿಕರವುಂಟಾಗಬಾರದೆ? ಎಂತಲೂ, ದೇಶದಮೇಲೆ ಜಾತಿ ನಿರ್ಬಂಧಕ್ಕೆ ಕಟ್ಟುಬಿದ್ದು ದಾರಿದ್ರ್ಯಕ್ಕೆ ಆಹುತಿಯಾಗಿ, ಅನುಕೂಲ ವರಪ್ರಾಪ್ತಿಯಿಲ್ಲದೆ ದೇಹಾಂತವಾಗಿ ವಿವಾಹಸುಖವನ್ನೇ ಕಾಣದೆ ಸಾಯುತ್ತಿರುವ ಹೆಣ್ಣುಮಕ್ಕಳ ಮೇಲಾದರೂ ದಯೆಯಿಡಬಾರದೆ? ಎಂತಲೂ, ಭರತಖಂಡವು ಈಗ ಹಿಂದಿನಂತೆ ಪ್ರತ್ಯೇಕ ದೇಶವಾಗಿ ಇರದೆ ವಿವಿಧ ಜಾತಿಗಳ ಜೋಡಿಯು ಇದರಮೇಲೆ ಬಿದ್ದಿರುವುದೆಂತಲೂ, ನೀವು ಸ್ವದೇಶೀಯರಲ್ಲಿ ವರ್ಣಾಂತರಮತಾಂತರ ವಿಭೇದದೃಷ್ಟಿಗಳನ್ನು ಬಿಟ್ಟು ಐಕಮತ್ಯವನ್ನು ಮಾಡಿಕೊಳ್ಳದೆ ಒಂಟೊಂಟಿಯಾಗಿಯೇ ಇರಬೇಕೆನ್ನುವುದಾದರೆ ನಿಮಗೆ ಈ ದೇಶದಲ್ಲಿ ನಿಲ್ಲುವುದಕ್ಕೂ ಕೂಡ ಮುಂದೆ ಎಡೆಯಿರಲಾರದೆಂತಲೂ, ಕ್ರಮಶಿಕ್ಷೆಯೂ ಸರ್ವಮತ ಸಮಾನತೆಯೂ ಉಳ್ಳ ಜನವರ್ಗದವರು ನಿಮ್ಮ ಸ್ಥಾನವನ್ನೆಲ್ಲಾ ಆಕ್ರಮಿಸಿಕೊಳ್ಳುವರೆಂತಲೂ, ತಾವುಗಳೆಲ್ಲರೂ ದೇಶಾಭಿವೃದ್ಧಿಯನ್ನು ಕೋರುವವರಾದರೆ ಈ ಬಿಲ್ಲನ್ನು ಅಂಗೀಕರಿಸುವುದು ಅವಶ್ಯಕವೆಂತಲೂ ಉಪನ್ಯಾಸಮಾಡಿದರು.

ಕಡೆಗೆ ಸಭಾಧ್ಯಕ್ಷರ ಅಪ್ಪಣೆಯ ಪ್ರಕಾರ ಸಭಿಕರ ಓಟುಗಳನ್ನು ತೆಗೆದುಕೊಳ್ಳಲು, ಬಿಲ್ಲಿಗೆ ಸರ್ ಶಿವಸ್ವಾಮಯ್ಯರು, ಶೇಷಗಿರಿಅಯ್ಯರು, ಜೋಷಿ, ಪಿ ಎಲ್. ಮಿಶ್ರ, ಈಶ್ವರಚರಣ್, ಕೋಟಿಲಿಂಗಂ ಮೊದಲಾದ ೨೫ ಮಂದಿಗಳು ಅನುಕೂಲವಾಗಿಯೂ, ಜೀಜಿಭಾಯಿ, ರಂಗಾಚಾರಿ, ಸುಬ್ರಹ್ಮಣ್ಯಂ, ಎಸ್. ಮೊದಲ್ಯಾರ್, ಅಬ್ದುಲ್‌ಖಾಸಿಂ ಮೊದಲಾದ ೩೭ ಮಂದಿಗಳು ಪ್ರತಿಕೂಲವಾಗಿಯೂ ಮತಗಳನ್ನು ಕೊಟ್ಟರು. ಅದುಕಾರಣ ಮಿಶ್ರವಿವಾಹದ ತೀರ್ಮಾನದ ಕತೆಯು ಹೀಗೆ ಮುಗಿದು ಬಿದ್ದುಹೋಯಿತು.

ಒಳದೇಶದ ವೃತ್ತಾಂತಗಳು.

ಮಾಗಡಿಯಲ್ಲಿ ಶ್ರೀ ಸೋಮೇಶ್ವರ ರಥೋತ್ಸವವು ಫೆಬ್ರವರಿ ತಾ|| ೧೦ ರಲ್ಲಿ ನಡೆಯುವುದಲ್ಲದೆ ತತ್ಸಂಬಂಧವಾದ ಉತ್ಸವಕಾರ್ಯಗಳು ತಾ|| ೩ ರಿಂದಲೂ ಆರಂಭವಾಗುವುದೆಂದೂ ಇದೇ ವೇಳೆಯಲ್ಲಿ ದನಗಳ ಪರಿಸೆಯೂ ನಡೆಯುವುದೆಂದೂ ಈ

ಉತ್ಸವಕ್ಕೆ ಬಹಳ ಜನರು ಸೇರುವುದರಿಂದ ವ್ಯಾಪಾರಸ್ಥರಿಗೂ ನಾಟಕ ಸರ್ಕಸ್ ಮೊದಲಾದ ವಿನೋದಕಾರರಿಗೆ ಸಂಪಾದನೆಗೆ ಒಳ್ಳೇ ಸಮಯವಾಗಿರುವುದೆಂದೂ, ಈ ದೇವಸ್ಥಾನದ ಜೀರ್ಣೋದ್ಧಾರಮಾಡಲು ಸರ್ಕಾರದವರು ಏರ್ಪಾಟುಮಾಡುವುದರಲ್ಲಿರುತ್ತಾರೆಂದೂ, ಈ ಕಾರ್ಯಕ್ಕೆ ಸಹಾಯಮಾಡಿ ಪುಣ್ಯಭಾಗಿಗಳಾಗತಕ್ಕ ಈಶ್ವರಭಕ್ತರು ತಮ್ಮಲ್ಲಿಗೆ ಚಂದಾಹಣವನ್ನು ಕಳುಹಿಸಿಕೊಡಬೇಕೆಂದೂ ಧರ್ಮಕಾರ್ಯದರ್ಶಿಗಳಾದ ಮ|| ಕರಣಿಕ ಕೃಷ್ಣಮೂರ್ತಿರಾಯರು ಅಪೇಕ್ಷಿಸುತ್ತಾರೆ.

ಶ್ರೀ ಯುವಸಾರ್ವಭೌಮರು ತಾ|| ೨೪ನೆ ಮಧ್ಯಾಹ್ನ ಕಾರಾಪುರದ ಕ್ಯಾಂಪಿನಿಂದ ರಾಜಧಾನಿಗೆ ದಯಮಾಡಿಸಿ, ಆ ರಾತ್ರಿಯ ಊಟವನ್ನು ಮುಗಿಸಿಕೊಂಡು ಸ್ಪೆಷಲ್ ಟ್ರೇನಿನಲ್ಲಿ ಬೆಂಗಳೂರು ಮಾರ್ಗವಾಗಿ ಹೈದರಾಬಾದಿಗೆ ಪ್ರಯಾಣವನ್ನು ಬೆಳೆಯಿಸಿದರು. ಶ್ರೀಮನ್ಮಹಾರಾಜ ಸಹೋದರರು ನಿಲ್ದಾಣಕ್ಕೆ ಜತೆಯಲ್ಲೇ ಹೋಗಿದ್ದು ಸಾಗಗಳುಹಿದರು. ಯುವಸಾರ್ವಭೌಮರು ತಾ|| ೨೫ನೆ ಬೆಳಿಗ್ಗೆ ಹೈದರಾಬಾದನ್ನು ಸೇರಿದರು. ನೈಜಾಮರೂ ಅವರ ಕಡೆಯ ಸರ್ದಾರರೇ ಮೊದಲಾದವರೂ ಬ್ರಿ|| ರಸಿಡೆಂಟರೂ ಬಹು ಸಂಭ್ರಮದಿಂದ ಸ್ವಾಗತಿಸಿದರು. ಪಟ್ಟಣವೆಲ್ಲಾ ಶೃಂಗಾರವಾಗಿತ್ತು. ಉತ್ಸವವಾಗಿ ಕರೆದುಕೊಂಡು ನಿಲ್ದಾಣದಿಂದ ೫ ಮೈಲಿಗಳಲ್ಲಿರುವ ಫಲಕ್‌ನಾಮಾ ಎಂಬ ಅರಮನೆಯಲ್ಲಿಳಿಯಿಸಿದರು. ದಾರಿಯುದ್ದಕ್ಕೂ ಲಕ್ಷಾಂತರ ಜನರು ನಿಂತಿದ್ದು ಸಂದರ್ಶಿಸಿ ಆನಂದ ಪ್ರದರ್ಶನಮಾಡಿದರು. ಸತ್ಕಾರದ ಏರ್ಪಾಟುಗಳು ಆ ಸಂಸ್ಥಾನದಲ್ಲೂ ಬಹಳ ಘನತರವಾಗಿಯೇ ಇವೆ.

ಯುವಸಾರ್ವಭೌಮರು ನಮ್ಮ ಶ್ರೀಮನ್ಮಹಾರಾಜರನ್ನು ಕುರಿತು ಹೈದರಾಬಾದಿನಿಂದ ಹೀಗೆ ತಂತ್ರೀವಾರ್ತೆಯನ್ನು ಕಳುಹಿಸಿದ್ದಾರೆ—" ನಿಮ್ಮ ಆತಿಥಿಸತ್ಕಾರಕ್ಕೂ ಅಪಾರವಾದ ಕೃಪೆಗೂ ನಾನು ನಿಮ್ಮನ್ನು ವಂದಿಸುತ್ತೇನೆ. ನಾನು ನಿಮ್ಮ ರಾಜ್ಯದಲ್ಲಿ ಸುಖವಾಗಿ ಕಾಲವನ್ನು ಕಳೆದೆನು. ನಿಮ್ಮ ಮೈತ್ರಿಯು ನನಗೆ ಅನಿರ್ವಚನೀಯವಾದ ಸಂತೋಷವನ್ನುಂಟುಮಾಡಿತು. ಮೈಸೂರು ದೇಶದ ಸೌಂದರ್ಯವನ್ನು ನಾನು ಮೆಚ್ಚಿಕೊಂಡೆನು. ನಿಮ್ಮ ಪ್ರಭುತ್ವವೈಭವವನ್ನೂ ಮೆಚ್ಚಿದೆನು. ನಿಮ್ಮ ಪ್ರಜೆಗಳು ಮನಃಪೂರ್ವಕವಾಗಿ ನನಗೆ ಸ್ವಾಗತವನ್ನು ಮಾಡಿದುದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ." ಇದಕ್ಕೆ ನಮ್ಮ ಮಹಾರಾಜರು ಕೊಟ್ಟ ಪ್ರತಿ ತಂತ್ರೀವಾರ್ತೆಯ ಅಭಿಪ್ರಾಯವೇನೆಂದರೆ—" ನೀವು ಕಳುಹಿಸಿದ ಸಂದೇಶವು ತಲುಪಿತು. ನಿಮ್ಮ ಆಗಮನದಿಂದ ನನಗೂ ನನ್ನ ಪ್ರಜೆಗಳಿಗೂ ವರ್ಣಿಸಲಸದಳವಾದಷ್ಟು ಆನಂದವುಂಟಾಗಿದೆ. ಇದನ್ನು ಸದಾಸ್ಮರಣೆಯಲ್ಲಿಟ್ಟುಕೊಳ್ಳುವುದು ನಮ್ಮ ಭಾಗ್ಯವಾಗಿದೆ."

ಮೈಸೂರು ಸಂಸ್ಥಾನದ ಅರಸೌತಣ ಕಾಲದಲ್ಲಿ ಶ್ರೀಮನ್ಮಹಾರಾಜರೂ ಯುವಸಾರ್ವಭೌಮರೂ ಮಾಡಿದ ಭಾಷಣಗಳ ಅಭಿಪ್ರಾಯ.

ಬ್ರಿಟಿಷ್ ಚಕ್ರಾಧಿಪತ್ಯದ ಯುವರಾಜರಾದ ತಾವು ನಮ್ಮ ಸಂಸ್ಥಾನಕ್ಕೆ ದಯಮಾಡಿಸಿ ನನಗೂ ನನ್ನ ಪ್ರಜೆಗಳಿಗೂ ಸಂದರ್ಶನವನ್ನು ಕೊಟ್ಟುದಕ್ಕಾಗಿ ನಮ್ಮ ಸಂತೋಷವನ್ನು ಸರಿಯಾಗಿ ತಿಳಿಸುವುದು ಅಸಾಧ್ಯವಾಗಿದೆ. ಬ್ರಿಟಿಷ್ ಯುವರಾಜರನ್ನು ಸತ್ಕರಿಸುವ ಭಾಗ್ಯವು ನಮಗೆ ದೊರೆತುದಕ್ಕೆ ಇದೇ ಮೊದಲಲ್ಲ. ನಮ್ಮ ವಿಶ್ವಾಸಕ್ಕೆ ಪಾತ್ರರಾದ ಚಕ್ರವರ್ತಿಗಳು ಯುವರಾಜರಾಗಿದ್ದಾಗ ಕುಟುಂಬಸಮೇತರಾಗಿ ಈಗ ಸುಮಾರು 16 ವರ್ಷಗಳಲ್ಲಿ ನಮ್ಮ ಮೇಲೆ ಕೃಪೆಯನ್ನಿಟ್ಟು ದಯಮಾಡಿಸಿ ನಮ್ಮ ಆತಿಥ್ಯವನ್ನು ಪರಿಗ್ರಹಿಸಿದ್ದರು. ಅದೇ ಅಭಿಮಾನವನ್ನಿಟ್ಟು ತಾವು ಈ ಆತಿಥ್ಯವನ್ನು ಈ ದಿವಸ ಪರಿಗ್ರಹಿಸಿರುವುದಕ್ಕಾಗಿ ನನಗೆ ಉಂಟಾಗಿರತಕ್ಕ ಸಂತೋಷಕ್ಕೆ ಪಾರವೇ ಇರುವುದಿಲ್ಲ. ಈ ಮೈಸೂರು ಸಂಸ್ಥಾನವೂ ನಾನೂ ಬ್ರಿಟಿಷ್ ಚಕ್ರವರ್ತಿಗಳ ಉಪಕಾರಕ್ಕೆ ಬದ್ಧರಾಗಿರುತ್ತೇವೆ. ಹಿಂದೆ ಬ್ರಿಟಿಷ್ ಗೌರ್ನಮೆಂಟಿನವರಿಂದ ನಾವು ಹೊಂದಿದ ಉಪಕಾರವನ್ನು ಮರೆಯುವುದು ಅಸಾಧ್ಯ. ಇಂಡಿಯಾ ದೇಶದ ಇನ್ನಾವ ಸಂಸ್ಥಾನದಲ್ಲಿಯೂ, ಈ ಸಂಸ್ಥಾನದಲ್ಲಿ ಇರುವಷ್ಟು ಅಕೃತ್ರಿಮವಾದ ರಾಜಭಕ್ತಿವಿಶ್ವಾಸಗಳು ಇರಲಾರವೆಂದು ನಾವು ಭಾವಿಸುತ್ತೇವೆ. ಚಕ್ರವರ್ತಿಗಳ ವಿಷಯದಲ್ಲಿ ನಾವು ತುಂಬಾ ರಾಜಭಕ್ತಿಯುಳ್ಳವರಾಗಿರುತ್ತೇವೆ. ಈ ವಿಷಯವನ್ನು ಚಕ್ರವರ್ತಿಗಳಿಗೆ ದಯವಿಟ್ಟು ಅರಿಕೆ ಮಾಡಬೇಕು. ಕಳೆದ ಯುದ್ಧದಲ್ಲಿ ಮೂರು ದೊಡ್ಡ ರಾಜ್ಯಗಳಲ್ಲಿ ಪ್ರಳಯಗಳುಂಟಾದವು. ಆದರೆ ಬ್ರಿಟಿಷ್ ರಾಜ್ಯದಲ್ಲಿ ಪ್ರಭುಗಳಿಗೂ ಪ್ರಜೆಗಳಿಗೂ ಇದ್ದ ಪ್ರೀತಿಯು ಹೆಚ್ಚಿತು. ಹಾಗೆ ಹೆಚ್ಚುವುದಕ್ಕೆ ಬ್ರಿಟಿಷ್ ರಾಜ್ಯದ ಸಾಂಕುಶಪ್ರವರ್ತನವೇ ಮುಖ್ಯಕಾರಣ. ಬ್ರಿಟಿಷ್ ಚಕ್ರವರ್ತಿಗಳ ಧರ್ಮಮಾರ್ಗೈಕಪರಾಯಣತೆಯು ಅದಕ್ಕಿಂತಲೂ ಮುಖ್ಯವಾದ ಕಾರಣ. ಧರ್ಮಿಷ್ಠರಾದ ವಿಕ್ಟೋರಿಯಾ ಮಹಾರಾಜ್ಞಿಯವರೂ, ಶಾಂತಿಯಲ್ಲಿ ಆಸಕ್ತರಾದ ಎಡ್ವರ್ಡ್ ಮಹಾಪ್ರಭುಗಳೂ ಧರ್ಮಮಾರ್ಗೈಕಪರಾಯಣರೆಂದು ಚರಿತ್ರೆಯಲ್ಲಿ ಅಸಾಧಾರಣವಾದ ಕೀರ್ತಿಯನ್ನು ಪಡೆದರು. ನಮ್ಮ ಚಕ್ರವರ್ತಿಗಳು ಈ ಭಯಂಕರವಾದ ಯುದ್ಧದಲ್ಲಿ ಅಸಾಧಾರಣವಾದ ದೇಶಬಾಂಧವತೆಯನ್ನೂ, ಧೈರ್ಯಸ್ಥೈರ್ಯಗಳನ್ನೂ, ಕರ್ತವ್ಯಜ್ಞಾನವನ್ನೂ ತೋರಿಸಿ, ಪ್ರಜೆಗಳ ಯೋಗಕ್ಷೇಮವೇ ತಮ್ಮ ಯೋಗಕ್ಷೇಮವಾಗಿರುವಂತೆ ಮಾಡಿಕೊಂಡು, ಪ್ರಜಾರಂಜನೆಯಲ್ಲಿ ಅದ್ವಿತೀಯರಾಗಿರುತ್ತಾರೆ. ತಮ್ಮ ಮಹಾಮಾತೃಶ್ರೀಯವರು ತಮ್ಮ ಅದ್ಭುತವಾದ ಸೇವೆಯಿಂದಲೂ, ಅಸಾಧಾರಣವಾದ ಅನುತಾಪದಿಂದಲೂ, ಅಪೂರ್ವವಾದ ಭೂತದಯೆಯಿಂದಲೂ ಚಕ್ರಾಧಿಪತ್ಯಕ್ಕೆ ಮಾತೆಯರಾಗಿ ಪರಿಣಮಿಸಿರುತ್ತಾರೆ. ತಾವು ವಯಸ್ಸಿನಲ್ಲಿ ಚಿಕ್ಕವರಾದಾಗ್ಯೂ, ತಮ್ಮ ಮಾತಾಪಿತೃಗಳ ಗುಣಾತಿಶಯಗಳನ್ನೂ, ಕೀರ್ತಿಶೇಷರಾದ ತಮ್ಮ ತಾತಂದಿರ ಮತ್ತು ವಿಕ್ಟೋರಿಯಾ ಮಹಾರಾಜ್ಞಿಯವರ ಗುಣಾತಿಶಯಗಳನ್ನೂ, ಪರಿಪೂರ್ಣವಾಗಿ ಅನುಸರಿಸಿ ಧರ್ಮಯುದ್ಧದಲ್ಲಿ ಹೇಗೋ ಹಾಗೆ ಸಮಾಧಾನದಲ್ಲಿ ಅಪ್ರತಿಹತವಾದ ಶಾಂತಿಯುಳ್ಳವರಾಗಿರುತ್ತೀರಿ. ದೇಶಾಟನದಿಂದಲೂ, ಪಂಡಿತ ಭಾಷಣದಿಂದಲೂ, ಲೋಕವ್ಯವಹಾರಜ್ಞಾನವನ್ನು ತಿಳಿಯುವುದಕ್ಕೋಸ್ಕರ ದೇಶಸಂಚಾರಕ್ಕೆ ನೀವು ಹೊರಟಿರುತ್ತೀರಿ. ತಮ್ಮ ಗುಣಾತಿಶಯಗಳನ್ನು ನೋಡಿದವರೆಲ್ಲಾ ತುಂಬಾ ವಿಸ್ಮಿತರಾಗಿ ತಮ್ಮಲ್ಲಿ ಅಕೃತ್ರಿಮವಾದ ಭಕ್ತಿ ವಿಶ್ವಾಸಗಳನ್ನು ತೋರಿಸುತ್ತಲಿದ್ದಾರೆ. ಇಂಡಿಯಾ ದೇಶದ ತಿದ್ದುಪಾಟುಗಳು ಆಚರಣೆಗೆ ಬಂದ ಕೂಡಲೇ ತಾವು ಇಲ್ಲಿಗೆ ದಯಮಾಡಿಸಿದುದನ್ನೂ ಈ ದೇಶದಲ್ಲಿ ಸಮಾಧಾನವನ್ನು ಉಂಟುಮಾಡುವ ಪ್ರಯತ್ನದಲ್ಲಿ ಬದ್ಧಾದರರಾಗಿರುವುದನ್ನೂ, ಪ್ರಜೆಗಳ ಅತೃಪ್ತಿಗೆ ಕಾರಣವಿಲ್ಲದಂತೆ ಮಾಡಬೇಕೆಂಬ ನಿಮ್ಮ ಸಂಕಲ್ಪವನ್ನೂ ಈ ಭರತಖಂಡದ ರಾಜ್ಯಭಾರಕ್ಕೆ ಸಾಧಕವಾದ ಗುಣಾತಿಶಯಗಳುಳ್ಳ ವೈಸ್ರಾಯರು ಈ ದೇಶಕ್ಕೆ ಬಂದಿರುವುದನ್ನೂ ನೋಡಿದರೆ ತುಂಬಾ ಸಂತೋಷವಾಗುತ್ತದೆ. ತಮಗೆ ದೀರ್ಘಾಯುರಾರೋಗ್ಯೈಶ್ವರ್ಯಗಳು ಉಂಟಾಗುವಂತೆ ಅನುಗ್ರಹಿಸಲೆಂದು ನಾನು ಸರ್ವೇಶ್ವರನನ್ನು ಪ್ರಾರ್ಥಿಸುತ್ತೇನೆ." ಇದಕ್ಕೆ ಶ್ರೀಯುವಸಾರ್ವಭೌಮರು ಕೊಟ್ಟ ಉತ್ತರವೇನೆಂದರೆ—

" ತಾವು ಅತ್ಯಂತ ಆದರಪೂರ್ವಕವಾಗಿ ಸ್ವಾಗತಗರ್ಭಿತವಾದ ಮರ್ಯಾದೆಗಳನ್ನು ಮಾಡಿರುವಿರಿ. ರಾಜಭಕ್ತಿಗರ್ಭಿತಗಳಾದ ಅಭಿಪ್ರಾಯಗಳನ್ನು ಪ್ರಕಾಶಗೊಳಿಸಿರುವಿರಿ. ನನಗೆ ಸಂತೋಷವನ್ನು ಉಂಟುಮಾಡುವ ಉಪಚಾರಗಳು ಏನೇನು ನಡೆಯಬೇಕೋ ಅವುಗಳನ್ನು ಅತ್ಯಂತ ಸಮರ್ಪಕವಾಗಿ ನಡಿಸಿರುತ್ತೀರಿ. 1906 ರಲ್ಲಿ ನಮ್ಮ ಯಜಮಾನರು ಯಾವ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರೋ ಆ ಕಟ್ಟಡವನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಕಳೆದ 16 ವರ್ಷಗಳಲ್ಲಿ ಈ ರಾಜಧಾನಿಯು ಬಹಳ ವೃದ್ಧಿಗೆ ಬಂದಿರುವುದು. ಈ ಸಂಸ್ಥಾನಕ್ಕೆ ಈಗ ಒಂದು ವಿಶ್ವವಿದ್ಯಾನಿಲಯ (ಯೂನಿವರ್ಸಿಟಿ) ವೂ ಕಲ್ಪಿಸಲ್ಪಟ್ಟಿರುವುದು. ಸಂಪದಭಿವೃದ್ಧಿಯ ಕೆಲಸಗಳು ಬಹಳಮಟ್ಟಿಗೆ ನಡೆದಿರುವುವು. ಕನ್ನಂಬಾಡಿ ಕಟ್ಟೆಯನ್ನೂ ವಿದ್ಯುಚ್ಛಕ್ತಿ ಯೇರ್ಪಾಟುಗಳನ್ನೂ ನೋಡಿದರೆ ಈ ಭಾಗದಲ್ಲಿ ನೀವು ಮಾಡಿರತಕ್ಕ ಕೆಲಸಗಳು ಗೊತ್ತಾಗುತ್ತವೆ. ನಿಮ್ಮ ದೇಶದ ಪ್ರಜಾಪ್ರತಿನಿಧಿಸಭೆಯೂ ಎಕನಾಮಿಕ್ ಕಾನ್‌ಫರೆನ್ಸುಗಳೂ ನ್ಯಾಯವಿಧಾಯಕ ಸಭೆಯೂ, ನಿಮ್ಮ ಸಾಂಕುಶಪ್ರವರ್ತನವನ್ನು ತೋರಿಸುತ್ತವೆ. ಬ್ರಿಟಿಷ್ ಪ್ರಭುಗಳಿಗೂ ನಿಮಗೂ ಇರತಕ್ಕ ಸಂಬಂಧವನ್ನೂ ಈ ಸಂಬಂಧವು ಹೇಗೆ ಅಪ್ರತಿಹತವಾಗಿರುವುದೋ ಅದನ್ನು ನೀವು ಕೃತಪಡಿಸಿದಿರಿ. ಕಳೆದ ಯುದ್ಧವು ಉಪಕ್ರಮಿಸಿದ ಕೂಡಲೇ ನೀವು ಮಾಡಿದ ಸಹಾಯದಿಂದಲೇ ಈ ಸಂಬಂಧವು ಎಷ್ಟು ನಿಸರ್ಗವಾದದ್ದೋ ಅದು ಗೊತ್ತಾಯಿತು. ನಮ್ಮ ತಂದೆಗಳು ಇಲ್ಲಿಗೆ ಬಂದಿದ್ದಾಗ ಇಂಪೀರಿಯಲ್ ಸರ್ವಿಸ್ ಸೈನ್ಯದವರು ಹೇಗೆ ಚಕ್ರಾಧಿಪತ್ಯದ ಸೇವೆಯನ್ನು ಮಾಡುತ್ತಿದ್ದರೋ ಅದನ್ನು ನೀವು ಸೂಚಿಸಿದ್ದಿರಿ. 1914ರಲ್ಲಿ ಇದರ ಪರಿಣಾಮವು ಹೇಗಾಯಿತೋ ಅದನ್ನು ನೋಡಿದರೆ ನೀವು ದೀರ್ಘದರ್ಶಿಗಳೆಂದು ಗೊತ್ತಾಗುತ್ತದೆ. ನಿಮ್ಮ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳು ಈಜಿಪ್ಟ್ ದೇಶಕ್ಕೆ ಹೋಗಿ ಆಗಣ ಯುದ್ಧದಲ್ಲಿ ಬಹಳ ಮೆಹನತ್ತು ಮಾಡಿದರು. ನಾನು ಖುದ್ದಾಗಿ ಇವರ ಮೆಹನತ್ತನ್ನು ನೋಡಿದೆನು. ಘಾಸಾ ಮತ್ತು ಜೆರೋಸಲೆಮ್ ಪಟ್ಟಣಗಳನ್ನು ತೆಗೆದುಕೊಳ್ಳುವುದರಲ್ಲಿ ನಿಮ್ಮ ಸೈನ್ಯದವರು ಬಹಳ ಪರಾಕ್ರಮವನ್ನು ತೋರಿಸಿದರು. ಜಾರ್ಡನ್ ಕಣಿವೆಯಲ್ಲಿಯೂ, ತುರ್ಕಿಯವರೊಡನೆ ಯುದ್ಧದಲ್ಲಿಯೂ, ಸಿರಿಯಾದ ಯುದ್ಧದಲ್ಲಿಯೂ ನಿಮ್ಮ ಸೈನ್ಯದವರು ಬಹಳ ಮೆಹನತ್ತನ್ನು ಮಾಡಿದರು. ಶತ್ರುಗಳನ್ನು ಹೈಫಾಪಟ್ಟಣದಿಂದಲೂ, ಮೌಂಟ್ ಕಾರ್ಮಲ್ ಎಂಬ ಪ್ರದೇಶದಿಂದಲೂ ಓಡಿಸಿ ಏಳು ಫಿರಂಗಿಗಳನ್ನೂ ೩೦೦ ಜನ ಖೈದಿಗಳನ್ನೂ ಹಿಡಿದರು. ಆಲಪೋ ಯುದ್ಧದಲ್ಲಿ ಬಹು ಜನಗಳುಳ್ಳ ಸೈನ್ಯದೊಡನೆ ಯುದ್ಧಮಾಡಿ ಕೆಲವು ಜನಗಳನ್ನು ಕಳೆದುಕೊಂಡರು. 1920ನೇ ಫೆಬ್ರವರಿ ತಿಂಗಳಲ್ಲಿ ಅವರು ಇಂಡಿಯಾ ದೇಶಕ್ಕೆ ಬಂದರು. ಅವರಿಗೆ ಬಂದಿರತಕ್ಕ ಮರ್ಯಾದೆಗಳೂ, ಅವರು ಸಂಪಾದಿಸಿರತಕ್ಕ ಬಿರುದು ಬಿಲ್ಲೆಗಳೂ, ಅವರ ಶಕ್ತಿಯನ್ನೂ ಅವರ ಧೈರ್ಯವನ್ನೂ ತೋರಿಸುವುವು. ನಿಮ್ಮ ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನವರು 1916 ರಲ್ಲಿ ಮೆಸೆಪೊಟೋಮಿಯಾಕ್ಕೆ ಹೋಗಿ ಯುದ್ಧವು ಪೂರೈಸುವ ವರೆಗೂ ಅಲ್ಲಿಯೇ ಇದ್ದರು. ಅಲ್ಲಿನ ಜನರಲ್‌ರವರು ಈ ಸೈನ್ಯದ ಮೆಹನತ್ತಿನ ವಿಷಯದಲ್ಲಿ ಬಹಳ ಶ್ಲಾಘಿಸಿರುತ್ತಾರೆ. ಇವುಗಳ ಜತೆಗೆ ನಿಮ್ಮ ಸಂಸ್ಥಾನದ ಪ್ರಜೆಗಳಲ್ಲಿ 5000 ಜನಗಳು ಇಂಡಿಯಾದ ಸೈನ್ಯಗಳಲ್ಲಿ ಸೇರಿ ಸಹಾಯ ಮಾಡಿದರು. ಅದು ಹಾಗಿರಲಿ. ಯುದ್ಧವು ಉಪಕ್ರಮವಾದ ಕೂಡಲೇ ಯುದ್ಧದ ಖರ್ಚಿಗೆ ತಾವು 50 ಲಕ್ಷ ರೂಪಾಯಿಗಳನ್ನು ಕೊಟ್ಟಿರಿ. ಅನಂತರ ಒಂದಾವೃತ್ತಿ 10 ಲಕ್ಷ ರೂಪಾಯನ್ನೂ, ಮತ್ತೊಂದಾವೃತ್ತಿ 13 ಲಕ್ಷ ರೂಪಾಯನ್ನೂ ಕೊಟ್ಟಿರಿ. ಇಂಪೀರಿಯಲ್ ರಿಲೀಫ್ ಫಂಡಿಗೆ 75 ಲಕ್ಷ ರೂಪಾಯಿಗಳನ್ನು ಕೊಟ್ಟಿರಿ. ಯುದ್ಧದ ಸಾಲಕ್ಕೆ ಒಂದು ಕೋಟಿಯೂ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿರಿ. ನಿಮ್ಮ ಸಂಸ್ಥಾನದ ಪ್ರಜೆಗಳು ಯುದ್ಧದ ಖರ್ಚಿಗೆ 2 ಲಕ್ಷ ರೂಪಾಯಿಗಳನ್ನು ಕೊಟ್ಟರು. ಯುದ್ಧದ ಸಾಲಕ್ಕೆ 43 ಲಕ್ಷ ರೂಪಾಯಿಗಳನ್ನು ಕೊಟ್ಟರು. ತಾವು ಖುದ್ದಾಗಿ ಕೊಟ್ಟುದು ಎರಡು ಕೋಟಿರೂಪಾಯಾಗುತ್ತದೆ. ಇದಲ್ಲದೆ ಚರ್ಮ, ಸಾಗವಾನಿ ಮರ, ಕಂಬಳಿಗಳು ಮೊದಲಾದ ಅನೇಕ ಪದಾರ್ಥಗಳು ನಿಮ್ಮ ಸಂಸ್ಥಾನದಿಂದ ಸರಬರಾಜಾಗಿರುವುವು. ಇದಕ್ಕೆಲ್ಲಾ ನಿಮಗೆ ನನ್ನ ವಂದನೆಯನ್ನು ಅರ್ಪಿಸುತ್ತೇನೆ. ಇಂಥಾ ಅಸಾಧಾರಣವಾದ ಕೆಲಸಗಳನ್ನು ಮಾಡಿದುದಕ್ಕೋಸ್ಕರ ನಾನು ಸಂತೋಷವುಳ್ಳವನಾಗಿದ್ದೇನೆ. ದೇವರು ನಿಮಗೆ ಸಕಲ ಸನ್ಮಂಗಳವನ್ನೂ ಮಾಡಲೆಂದು ನಾನು ಕೋರುತ್ತೇನೆ.

ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರ ಹುಕುಂನಾಮೆ.

ಹುಕುಂ ನಂಬರು ಎಂ. 2802-63—ಆರ್. ಎ. 27-21-1.

ಬೆಂಗಳೂರು, ತಾರೀಖು 3ನೆಯ ಜನವರಿ 1922.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಹತ್ತನೆಯ ತ್ರೈವಾರ್ಷಿಕ ಚುನಾವಣೆಯು, 1918ನೆಯ ಏಪ್ರಿಲ್ 22ನೆಯ ಮರ್ಕ್ಯುಂ 8-58—ಜಿ. ಎಂ. 610-17-1ನೆಯ ಕ್ಯಾಂಪ್ ನಂಬರಿನ ಸರ್ಕಾರಿ ಹುಕುಂ 1919ನೆಯ ಜೂನ್ 20ನೆಯ ಮರ್ಕ್ಯುಂ ಜಿ. 28217-67—ಆರ್. ಎ. 40-18-1ನೆಯ ನಂಬರಿನ ಸರ್ಕಾರಿ ಹುಕುಂ ಮತ್ತು 1920ನೆಯ ಆಗಸ್ಟ್ 22ನೆಯ ಮರ್ಕ್ಯುಂ ಜಿ. 4297—ಆರ್. ಎ. 1-20-2ನೆಯ ನಂಬರಿನ ಇಸ್ತಿಹಾರ್ನಾಮೆಯ ಪ್ರಕಾರ ಬದಲಾಯಿಸಿರುವ 1915ನೆಯ ಮಾರ್ಚಿ 22ನೆಯ ಮರ್ಕ್ಯುಂ ಜಿ. 10156—ಜಿ. ಎಂ. 33-14-1ನೆಯ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಸಾದರ್‌ಮಾಡಿರುವ ಪ್ರಜಾಪ್ರತಿನಿಧಿ ಸಭೆಯ ರಚನಾವಿಷಯಕ್ಕೂ ಕಾರ್ಯ ನಡೆಸುವ ವಿಷಯಕ್ಕೂ ಸಂಬಂಧಪಟ್ಟ ನಿಬಂಧನೆಗಳಿಗೆ ಅನುಸಾರವಾಗಿ ಚಾಲ್ತಿ ವರ್ಷದಲ್ಲಿ ನಡೆಯುತ್ತದೆ.

2. 1917ನೆಯ ಸೆಪ್ಟಂಬರ್ 26ನೆಯ ಮರ್ಕ್ಯುಂ ಜಿ. 4194-201—ಜಿ. ಎಂ. 399-15-11ನೆಯ ನಂಬರಿನ ಸರ್ಕಾರಿ ಹುಕುಮಿನಲ್ಲಿ ವಿಧಿಸಿರುವ ತಿಳುವಳಿಕೆಗಳಿಗೂ 1918ನೆಯ ಡಿಸೆಂಬರ್ 2ನೆಯ ಮರ್ಕ್ಯುಂ ಜಿ. 10065-125—ಆರ್. ಎ. 5-18-2ನೆಯ ನಂಬರಿನ ಮತ್ತು 1919ನೆಯ ಆಗಸ್ಟು 21ನೆಯ ಮರ್ಕ್ಯುಂ ಜಿ. 4353-60—ಆರ್. ಎ. 40-18-10ನೆಯ ನಂಬರಿನ ಸರ್ಕಾರಿ ಹುಕುಂಗಳ ಮೂಲಕ ಬದಲಾಯಿಸಿರುವ 1915ನೆಯ ಮಾರ್ಚಿ 22ನೆಯ ಮರ್ಕ್ಯುಂ ಜಿ. 10156—ಜಿ. ಎಂ. 33-14-1ನೆಯ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯ 13ನೆಯ ಪ್ಯಾರಗ್ರಾಫಿಗೂ ಅದೇ ಇಸ್ತಿಹಾರ್ನಾಮೆಯ 18 ಮತ್ತು 19ನೆಯ ಪ್ಯಾರಗ್ರಾಫುಗಳಲ್ಲದೆ 1915ನೆಯ ನವಂಬರ್ 24ನೆಯ ಮರ್ಕ್ಯುಂ ಜಿ. 6395-444—ಜಿ. ಎಂ. 311-15-1ನೆಯ ನಂಬರಿನ ಸರ್ಕಾರಿ ಹುಕುಮಿನಮೂಲಕ ಬದಲಾಯಿಸಿರುವ ಸದರಿ ಇಸ್ತಿಹಾರ್ನಾಮೆಯ 20ನೆಯ ಪ್ಯಾರಗ್ರಾಫಿಗೂ ಮತ್ತು ಇದಕ್ಕೆ ಲಗತ್ತುಮಾಡಿರುವ ಕ್ಯಾಲೆಂಡರಿಗೂ ಸಹ ಡೆಪ್ಯುಟಿ ಕಮೀಷನರುಗಳು ಗಮನ ಕೊಡತಕ್ಕದ್ದು. ಅಲ್ಲದೆ ನಾನಾ ಕಾರ್ಯಗಳಿಗಾಗಿ ಅವುಗಳಲ್ಲಿ ಕೊಟ್ಟಿರುವ ತಿಳುವಳಿಕೆಗಳಿಗೂ ಗೊತ್ತುಮಾಡಿರುವ ತಾರೀಖುಗಳಿಗೂ ಅನುಸಾರವಾಗಿ ತಪ್ಪದೆ ನಡೆದುಕೊಳ್ಳಬೇಕೆಂದು ಕೋರಲಾಗಿದೆ.

3. 1922-23ನೆಯ ವರ್ಷದಲ್ಲಿ ಪ್ರಜಾಪತಿನಿಧಿಸಭೆಯ ದಸರಾ ಅಧಿವೇಶನವು ಅಶ್ವಯುಜ ಶುದ್ಧ ದ್ವಾದಶಿಗೆ ಸರಿಯಾದ ಅಕ್ಟೋಬರ್ 2ನೆಯ ತಾರೀಖಿನ ದಿನ ಆರಂಭವಾಗುವುದು.

ಕೆ. ಮಾರ್ಥ,

ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ.

1922 ತ್ರೈವಾರ್ಷಿಕ ಚುನಾವಣೆ ಮತ್ತು ದಸರಾ ಕ್ಯಾಲೆಂಡರು.

1. ಮಾಘಮಾಸ ಮುಗಿಯುವುದರೊಳಗೆ—1922ನೆಯ ಫೆಬ್ರವರಿ 20 ರೊಳಗೆ—

ತಾಲ್ಲೂಕು ಮೆಂಬರುಗಳ ಚುನಾವಣೆಕಾಲದಲ್ಲಿ ಸಮ್ಮತಿಕೊಡಲು ಮತ್ತು ತಾಲ್ಲೂಕು ಮೆಂಬರುಗಳಾಗಿ ನಿಲ್ಲಲು ಅರ್ಹರಾದ ಜನರ ಪಟ್ಟಿಯನ್ನು ತಯಾರುಮಾಡಿ ಜನರಲ್ ಮತ್ತು ರೆವಿನ್ಯು ಸೆಕ್ರೆಟೆರಿಯೇಟಿಗೆ ಕಳುಹಿಸಿಕೊಡತಕ್ಕದ್ದು.

2. ಫಾಲ್ಗುಣಮಾಸದ ಅಂತ್ಯದೊಳಗಾಗಿ—1922ನೆಯ ಮಾರ್ಚಿ 17ರೊಳಗೆ—

ಮೇಲಿನ ಪಟ್ಟಿಗಳನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯೇಟಿನಲ್ಲಿ ಕೂಲಂಕಷವಾಗಿ ಪರೀಕ್ಷಿಸಿದಮೇಲೆ 1922ನೆಯ ಮಾರ್ಚಿ 17ನೆಯ ತಾರೀಖಿನೊಳಗಾಗಿ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಲಾಗುವುದು.

3. ಚೈತ್ರಮಾಸದ ಅಂತ್ಯದೊಳಗೆ-1922ನೆಯ ಏಪ್ರಿಲ್ 17 ರೊಳಗೆ.

2ನೆಯ ಕಲಮಿನಲ್ಲಿ ನಮೂದಿಸಿರುವ ಪಟ್ಟಿಗಳ ವಿಷಯಗಳಲ್ಲಿ ಆಕ್ಷೇಪಣೆಗಳನ್ನೂ ಸೂಚನೆಗಳನ್ನೂ 1922ನೆಯ ಏಪ್ರಿಲ್ 17ನೆಯ ತಾರೀಖಿಗೆ ಮೊದಲು ಡೆಪ್ಯುಟಿ ಕಮಿಷನರುಗಳಲ್ಲಿ ದಾಖಲು ಮಾಡತಕ್ಕದ್ದು.

4. ವೈಶಾಖಮಾಸದ ಅಂತ್ಯದೊಳಗೆ—1922ನೆಯ ಮೇ 17ರೊಳಗೆ.

ಮೇಲಿನ 3ನೆಯ ಕಲಮಿನಲ್ಲಿ ನಮೂದಿಸಿರುವ ಆಕ್ಷೇಪಣೆಗಳನ್ನೂ ಸೂಚನೆಗಳನ್ನೂ ಡೆಪ್ಯುಟಿ ಕಮಿಷನರುಗಳು 1922ನೆಯ ಮೇ 17ರೊಳಗೆ ಫೈಸಲ್ ಮಾಡತಕ್ಕದ್ದು.

5. ವೈಶಾಖ ಬಹುಳ ಅಷ್ಟಮಿವರೆಗೆ-1922ನೆಯ ಮೇ 18ರವರೆಗೆ.

(a) ಸಂಬಂಧಪಟ್ಟ ತಾಲ್ಲೂಕು ಅಥವಾ ಸಬ್ ತಾಲ್ಲೂಕುಗಳಲ್ಲಿ ಚುನಾವಣೆಗೆ ನಿಲ್ಲಲು ಇಷ್ಟಪಡುವ ಅರ್ಹರಾದಂಥ ಜನರು ಸಮ್ಮತಿ ಕೊಡುವವರ ತಿಳುವಳಿಕೆಬಗ್ಗೆ ಸ್ಥಳದಲ್ಲಿ ಪ್ರಕಟಿಸುವುದಕ್ಕೋಸ್ಕರ ತಮ್ಮ ಹೆಸರುಗಳನ್ನು ಬರವಣಿಗೆಯಮೂಲಕ ಅಮಲ್ದಾರರಿಗೆ 1922ನೆಯ ಮೇ 16ರೊಳಗೆ ಕೊಡತಕ್ಕದ್ದು.

(b) 1922ನೆಯ ಜೂನ್ 10ರಿಂದ 24ರೊಳಗೆ ಗೊತ್ತುಮಾಡುವ ಒಂದು ದಿನದಲ್ಲಿ ತಾಲ್ಲೂಕು ಕಸಬೆಗಳಲ್ಲಿ ಮೀಟಿಂಗು ಸೇರುವ, ತಾಲ್ಲೂಕು ಮೆಂಬರುಗಳನ್ನು ಚುನಾಯಿಸಲು ಅರ್ಹರಾದ ಜನರಿಗೆ 1922ನೆಯ ಮೇ 18ನೆಯ ತಾರೀಖು ಅಥವಾ ಆ ಮೊದಲು ತಿಳುವಳಿಕೆ ಕೊಡತಕ್ಕದ್ದು.

6. ಜ್ಯೇಷ್ಠಮಾಸದ ಅಂತ್ಯದೊಳಗೆ-1922ನೆಯ ಜೂನ್ 24ರೊಳಗೆ.

(a) ಹೀಗೆ ಮೀಟಿಂಗಿನಲ್ಲಿ ಸೇರಿದಾಗ ಮುಂದಿನ ಮೂರು ವರ್ಷಗಳಿಗೆ ಪ್ರಜಾಪ್ರತಿನಿಧಿ ಸಭೆಗೆ ಗೊತ್ತುಮಾಡಿರುವ ಸಂಖ್ಯೆಯಷ್ಟುಮಂದಿ ತಾಲ್ಲೂಕು ಮೆಂಬರುಗಳನ್ನು, ಮೇಲೆ 5 (a) ಕಲಮಿನಲ್ಲಿ ಸೂಚಿಸಿರುವ ಜನಗಳ ಪೈಕಿ, ಚುನಾಯಿಸತಕ್ಕದ್ದು.

(b) ಲೋಕಲ್ ಫಂಡ್ ಬೋರ್ಡುಗಳೂ, ಮ್ಯುನಿಸಿಪಲ್ ಕೌನ್ಸಿಲುಗಳೂ, ಅಂಗೀಕೃತವಾದ ಸಂಘಗಳೂ ಜ್ಯೇಷ್ಠ ಮಾಸದಲ್ಲಿ ಮೆಂಬರುಗಳನ್ನು ಕಳುಹಿಸತಕ್ಕದ್ದಲ್ಲದೆ ಈರೀತಿ ಕಳುಹಿಸಿದ ಮೆಂಬರುಗಳ ಹೆಸರುಗಳನ್ನು ಆ ತಿಂಗಳಿನಲ್ಲಿ ಪ್ರಕಟಿಸತಕ್ಕದ್ದು.

7. ಆಷಾಢಶುದ್ಧ ಚತುರ್ಥಿವರೆಗೆ-1922ನೆಯ ಜೂನ್ 28ರವರೆಗೆ.

(a) ತಾಲ್ಲೂಕು ಮೆಂಬರುಗಳು, ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳು, ಮ್ಯುನಿಸಿಪಲ್ ಕೌನ್ಸಿಲುಗಳು ಮತ್ತು ಅಂಗೀಕೃತವಾದ ಸಂಘಗಳು ಮೈಸೂರಿನಲ್ಲಿ ನಡೆಯುವ ಸಭೆಯ ಮುಂದಿನ ಮೀಟಿಂಗಿನಲ್ಲಿ ಹೇಳಿಕೊಳ್ಳುವ ಅಹವಾಲುಗಳನ್ನೂ ಚರ್ಚೆಮಾಡಬೇಕೆಂದು ಇಷ್ಟವಿರುವ ವಿಷಯಗಳಮೇಲಿನ ಸೂಚನೆಗಳನ್ನೂ, ಉತ್ತರ ಕೊಡಬೇಕಾಗಿರುವ ಪ್ರಶ್ನೆಗಳನ್ನೂ ಒಳಗೊಂಡಿರುವ ಪಟ್ಟಿಗಳನ್ನು, ಆಯಾ ಡೆಪ್ಯುಟಿ ಕಮಿಷನರುಗಳಿಗೆ ಕಳುಹಿಸತಕ್ಕದ್ದು.

(b) ಚುನಾಯಿಸಿ ಕಳುಹಿಸಿರುವ ಜನಗಳ ಪಟ್ಟಿಯನ್ನು ಮೀಟಿಂಗಿಗೆ ಹಾಜರಾಗಬಹುದಾದ ಮೆಂಬರುಗಳ ಸಂಖ್ಯೆಯ ಸಮಾಚಾರದೊಡನೆ ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ಕಳುಹಿಸತಕ್ಕದ್ದು.

8. ಆಷಾಢಬಹುಳ ಪಂಚಮಿವರೆಗೆ-1922ನೆಯ ಜುಲೈ 14ರ ವರೆಗೆ-

ಒಟ್ಟು ಪಟ್ಟಿಯಲ್ಲಿ ಸೇರಿಸುವುದಕ್ಕೋಸ್ಕರ ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ಕಳುಹಿಸುವುದಕ್ಕೆ ವಿಷಯಗಳನ್ನೂ ಪ್ರಶ್ನಾಂಶಗಳನ್ನೂ ಆಖೈರಾಗಿ ಚುನಾಯಿಸುವುದಕ್ಕಾಗಿ ಡೆಪ್ಯುಟಿ ಕಮಿಷನರುಗಳು ಡಿಸ್ಟ್ರಿಕ್ಟ್ ಕಸಬೆಗಳಲ್ಲಿ ಒಂದು ಮೀಟಿಂಗನ್ನು ನಡೆಸಬೇಕು.

9. ಶ್ರಾವಣಶುದ್ಧ ಚತುರ್ಥಿವರೆಗೆ-1922ನೆಯ ಜುಲೈ 27ರ ವರೆಗೆ—

(a) ಸಭೆಯಲ್ಲಿ ಚರ್ಚಿಸಬೇಕೆಂದೂ ಡೆಪ್ಯುಟಿ ಕಮಿಷನರ ಅಭಿಪ್ರಾಯಗಳ ಸಮೇತವಾಗಿಯೂ ಇರುವ ವಿಷಯಗಳನ್ನು ಒಟ್ಟುಗೂಡಿಸಿ ತಯಾರುಮಾಡಿರುವ ಪಟ್ಟಿಗಳನ್ನು ಪ್ರಶ್ನಾಂಶಗಳೊಡನೆ ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ತಲಪಿಸಬೇಕು.

(b) ಮೈಸೂರು ಯೂನಿವರ್ಸಿಟಿಯ ತರಫ್ ಚರ್ಚೆಯಬಗ್ಗೆ ಸೂಚಿಸಿರುವ ವಿಷಯಗಳನ್ನು ಅಲ್ಲಿಂದ ಸಭೆಗೆ ಬರಬಹುದಾದ ಮೆಂಬರುಗಳ ಹೆಸರುಗಳೊಡನೆ ರಿಜಿಸ್ಟ್ರಾರರವರು ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ಸೀದಾ ಕಳುಹಿಸತಕ್ಕದ್ದು.

10. ಆಶ್ವಯುಜ ಶುದ್ಧ ಚತುರ್ಥಿವರೆಗೆ—1922ನೆಯ ಸೆಪ್ಟಂಬರ್ 24ರ ವರೆಗೆ—

ಸಭೆಯ ಸಮಾರಂಭದ ದಿನದಲ್ಲಿ ಒಪ್ಪಿಸಬೇಕೆಂದಿರುವ ಎಲ್ಲಾ ಅಭಿನಂದನ ಪತ್ರಿಕೆಗಳ ನಕಲುಗಳನ್ನು ಮುಂದಾಗಿಯೇ ತ್ರಿಪ್ರತಿಗಳಲ್ಲಿ 1922ನೆಯ ಸೆಪ್ಟಂಬರ್ 24ನೆಯ ತಾರೀಖು ಅಥವಾ ಆ ಮೊದಲೇ ಚೀಫ್ ಸೆಕ್ರೆಟರಿಯವರಿಗೆ ತಲಪುವಂತೆ ಕಳುಹಿಸತಕ್ಕದ್ದು. (1917ನೆಯ ಮೇ 10ನೆಯ ಮರ್ಕ್ಯುಂ ಜಿ. 14902-11-ಜಿ. ಎಂ. 422-16-2ನೆಯ ನಂಬರುಳ್ಳ ಸರ್ಕಾರಿ ಹುಕುಮಿನ 4ನೆಯ ಪ್ಯಾರಾವನ್ನು ನೋಡತಕ್ಕದ್ದು.)

11. ಆಶ್ವಯುಜ ಶುದ್ಧ ದ್ವಾದಶಿ—1922ನೆಯ ಅಕ್ಟೋಬರ್ 2. ಸಭೆಯ ಸಮಾರಂಭದ ದಿನ.

12. ಆಶ್ವಯುಜ ಶುದ್ಧ ತ್ರಯೋದಶಿ—1922ನೆಯ ಅಕ್ಟೋಬರ್ 3. ಸಭೆಯ ಮೀಟಿಂಗುಗಳು ಪ್ರಾರಂಭವಾಗುವುವು.

13. ಆಶ್ವಯುಜ ಶುದ್ಧ ತ್ರಯೋದಶಿ-1922ನೆಯ ಅಕ್ಟೋಬರ್ 3.

ಸಭೆಯಲ್ಲಿ ಚರ್ಚೆಮಾಡಬೇಕೆಂದಿರುವ ಸಪ್ಲಿಮೆಂಟಲ್ ವಿಷಯಗಳನ್ನು 1922ನೆಯ ಅಕ್ಟೋಬರ್ 3ನೆಯ ತಾರೀಖು ಮಧ್ಯಾಹ್ನ 12 ಘಂಟೆಯೊಳಗಾಗಿ ಚೀಫ್ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು. (1915ನೆಯ ನವಂಬರ್ 24ನೆಯ ಮರ್ಕ್ಯುಂ ಜಿ. 6395-444—ಜಿ. ಎಂ. 311-15-1ನೆಯ ನಂಬರುಳ್ಳ ಸರ್ಕಾರಿ ಹುಕುಮನ್ನು ನೋಡತಕ್ಕದ್ದು.)

ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡು.

(ಸರ್ಕಾರಿ ನೌಕರಿಗೆ ಉಮೇದುವಾರರನ್ನು ತೆಗೆದುಕೊಳ್ಳುವ ಸಂಸ್ಥೆ)

ನೋಟೀಸ್.

ನಂ. ಇ. ಎ. 2736, ತಾರೀಖು 10ನೆಯ ಜನವರಿ 1922.

ಸರ್ಕಾರದಲ್ಲಿ ಗುಮಾಸ್ತೆ ಮತ್ತು ಕೆಳಗಣ ದರ್ಜೆಯ ಎಕ್ಸಿಕ್ಯೂಟೀವ್ ನೌಕರಿಗಳನ್ನು ಅಪೇಕ್ಷಿಸುವ ಎಲ್ಲಾ ಉಮೇದುವಾರರೂ (ಬ್ರಾಹ್ಮಣರೂ ಮತ್ತು ಬ್ರಾಹ್ಮಣೇತರರೂ) ಬೆಂಗಳೂರು ಪಬ್ಲಿಕ್ ಆಫೀಸುಗಳಲ್ಲಿರುವ ಸೆಂಟ್ರಲ್ ರಿಕ್ರೂಟ್‌ಮೆಂಟು ಬೋರ್ಡಿನ ಸೆಕ್ರೆಟರಿಯವರಿಗೆ ಇದರಜೊತೆಯಲ್ಲಿ ನಮೂದಿಸಿರುವ ನಮೂನೆಯಲ್ಲಿ ದ್ವಿಪ್ರತಿಯಲ್ಲಿ 1922ನೆಯ ಇಸವಿ ಜನವರಿ 31ನೆಯ ತಾರೀಖಿನ ಒಳಗೆ (ಈಚೆಗೆ ಈ ಅವಧಿಯನ್ನು ಫೆಬ್ರವರಿ ತಾ|| ೮ರವರೆಗೆ ಹೆಚ್ಚಿಸಿಕೊಟ್ಟಿದ್ದಾರೆ.) ಅರ್ಜಿಗಳನ್ನು ಹಾಕಿಕೊಳ್ಳತಕ್ಕದ್ದು. ಈಗಾಗಲೇ ಅರ್ಜಿಯನ್ನು ಹಾಕಿಕೊಂಡಿರುವವರೂ ಸಹ ತಿದ್ದುಪಡಿಯಾದ ಸದರಿ ನಮೂನೆಯಲ್ಲಿ ಅರ್ಜಿಯನ್ನು ಪುನಃ ಕಳುಹಿಸತಕ್ಕದ್ದು. ಇಲ್ಲವಾದರೆ ಅವರ ಅರ್ಜಿಗಳಿಗೆ ನಿಗಾಕೊಡುವುದಿಲ್ಲ.

2. ಈಗಾಗಲೇ ಸರ್ಕಾರಿ ನೌಕರಿಯಲ್ಲಿದ್ದು ಇತರ ಇಲಾಖೆಗಳಲ್ಲಿ ನೌಕರಿಗಳನ್ನು ಅಪೇಕ್ಷಿಸುವವರು ತಮ್ಮ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಕ್ರಮಪ್ರಕಾರ ತಮ್ಮ ಇಲಾಖಾ ಅಧಿಕಾರಿಗಳಮೂಲಕ ಹಾಕಿಕೊಳ್ಳತಕ್ಕದ್ದು.

3. ಅರ್ಜಿದಾರರಿಗೆ ಸರಬರಾಯಿ ಮಾಡುವುದಕ್ಕಾಗಿ ಅರ್ಜಿಗಳ ನಮೂನೆ ಪ್ರತಿಗಳನ್ನು ಇಟ್ಟಿರುವುದಿಲ್ಲ.

ಎ. ವಿ. ರಾಮನಾಥನ್,

ಸೆಕ್ರೆಟರಿ, ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡು.

ಬೆಂಗಳೂರು ಪಬ್ಲಿಕ್ ಆಫೀಸುಗಳಲ್ಲಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನ ಸೆಕ್ರೆಟರಿಯವರಿಗೆ.

ಸ್ವಾಮಿ,

ಮೈಸೂರು ಸರ್ಕಾರಿ ನೌಕರಿಗಾಗಿ ಈ ನನ್ನ ಅರ್ಜಿಯನ್ನು ಬೋರ್ಡಿನವರ ಪರ್ಯಾಲೋಚನ ಬಗ್ಗೆ ಹಾಜರ್ಪಡಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಅಂಶಗಳೂ ನಿಜವೆಂದೂ ವಾಸ್ತವವೆಂದೂ ದೃಢವಾಗಿ ತಿಳಿಸುತ್ತೇನೆ. ನನ್ನ ಇಂಗ್ಲೀಷು ಮತ್ತು ಕನ್ನಡಬರವಣಿಗೆಯ ನಮೂನೆಗಳನ್ನು ಫೂಲ್ಸ್‌ಕ್ಯಾಪ್ ಸೈಜಿನ ಅರ್ಧಗಜ ಕಾಗದದಲ್ಲಿ ನನ್ನ ಪ್ರಶಸ್ತಿ ಪತ್ರಗಳ ನಕಲುಗಳೊಡನೆ ಇದರಜೊತೆಗೆ ಲಗತ್ತಿಸಿರುತ್ತೇನೆ.

ಸ್ವಾಮಿ,

ತಮ್ಮ ಅತ್ಯಂತ ವಿಧೇಯನಾದ ಅರ್ಜಿದಾರ.

1. ಪೂರ್ಣವಾದ ಹೆಸರು.
2. ಪೋಸ್ಟು ಆಫೀಸು ವಿಳಾಸ.. (ವಿಳಾಸವು ಬದಲಾಯಿಸಿದರೆ ಒಡನೆ ಸೆ. ರಿ. ಬೋ. ಸೆಕ್ರೆಟರಿಯವರಿಗೆ ತಿಳಿಸತಕ್ಕದ್ದು)
3. ಹುಟ್ಟಿದ ತಾರೀಖು ಮತ್ತು ಕಳೆದಹುಟ್ಟಿದ ದಿವಸ ವಯಸ್ಸು.
4. ಹುಟ್ಟಿದ ಸ್ಥಳ (ಗ್ರಾಮ, ಅಥವಾ ಟೌನು, ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಇವುಗಳನ್ನು ತಿಳಿಸುವುದು)
5. ಹುಟ್ಟಿನಿಂದಾಗಲಿ ಅಥವಾ ಸ್ಥಿರವಾಸದಿಂದಾಗಲಿ ಮೈಸೂರು ದೇಶೀಯನೆ ?
6. ತಂದೆಯ ಹೆಸರು.
7. ತಂದೆಯ ಕಸಬು.
8. ಜಾತಿ.
9. ತೇರ್ಗಡೆಯಾಗಿರುವ ಪಬ್ಲಿಕ್ ಪರೀಕ್ಷೆ ಮತ್ತು ತೇರ್ಗಡೆಯಾದ ವರ್ಷ
10. ಹಿಂದೆ ಸರ್ಕಾರಿ ಅಥವಾ ಖಾಸಗಿ ನೌಕರಿ ಮಾಡಿದರೆ ಅದರ ತಪ್ಸೀಲುಗಳು.
11. ಮೈಸೂರು ಸಂಸ್ಥಾನದಲ್ಲಿ ಅರ್ಜಿದಾರನಿಗಾಗಲಿ ಅಥವಾ ಅವನ ಮನೆತನಕ್ಕಾಗಲಿ ಸ್ವತ್ತುಗಳಿದ್ದರೆ ಅವುಗಳ ತಪ್ಸೀಲುಗಳು. ಸ್ಥಿರಸ್ವತ್ತುಗಳಿದ್ದರೆ ಸ್ಥಳ ಅಥವಾ ಸ್ಥಳಗಳು.

ಅರ್ಜಿದಾರನಿಗೆ ವಿಶೇಷ ಪರಿಶ್ರಮವುಳ್ಳ ವಿಷಯ ಅಥವಾ ವಿಷಯಗಳು

ನೌಕರಿಯನ್ನು ಅಪೇಕ್ಷಿಸುವ ಸ್ಥಳ ಅಥವಾ ಸ್ಥಳಗಳು.

ಅಪೇಕ್ಷಿಸಿದ ನೌಕರಿ ಅಥವಾ ನೌಕರಿಗಳು.

ನಿರೀಕ್ಷಣೆಯಲ್ಲಿರುವ ಕನಿಷ್ಠ ಪಕ್ಷದ ಸಂಬಳ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಬಹುಮಾನ.

ಶ್ರೀಮನ್ಮಹಾದಕ್ಷಿಣಕಾಶೀ ಸಿಂಹಾಸನಾಧೀಶ ಸ್ವಾಮಿ ವಿರೂಪಾಕ್ಷ ಒಡೆಯರವರು ಸಂಸ್ಕೃತದಲ್ಲಿ ಬರೆದ ಅಪ್ರತಿಮವಾದ ಶಾಸ್ತ್ರಬೋಧವೆಂಬ ದೊಡ್ಡ ಪುಸ್ತಕದ ಅಮೌಲ್ಯ ವಿದ್ವತ್ತೆಗಾಗಿ ಇಂದೂರು ಸಂಸ್ಥಾನಾಧಿಪತಿಗಳಾದ ಶ್ರೀಮಂತ ತುಕೋಜೀರಾವ್ ಮಹಾರಾಜಾ ಬಹದ್ದೂರ ಜಿ. ಸಿ. ಎ. ಇ. ಯವರು ಬಹುಮಾನಪುರಸ್ಸರ ೨೦೧ ರೂಪಾಯಿಗಳನ್ನು ಸದರಿ ಶ್ರೀ ಸ್ವಾಮಿಗಳವರಿಗೆ ಭಕ್ಷೀಸ (ಇನಾಂ) ನ್ನು ಇದೇ ತಿಂಗಳಲ್ಲಿ ಕೊಟ್ಟದ್ದನ್ನು ಕೇಳಿ ವೀರಶೈವರಾದ ನಾವೆಲ್ಲರೂ ಒಳ್ಳೇ ಅಭಿಮಾನದಿಂದ ಮಹಾರಾಜರಿಗೆ ಕೃತಜ್ಞತೆಗಳನ್ನು ಅರ್ಪಿಸುವೆವು.

ಚೌಡಯ್ಯ ದಾನಪುರದ ನಿವಾಸಿಗಳು.

ದನಗಳ ಪರಿಸೆ.

ಹಾಸನದ ತಾಲ್ಲೂಕು ಗೊರೂರಿನಲ್ಲಿ ತಾ|| 3-2-22ನೇ ಶುಕ್ರವಾರದ ಲಾಗಾಯ್ತು ನಾಲ್ಕು ದಿನಗಳವರೆಗೆ ನಡೆಯುವ ದನಗಳ ಪ್ರದರ್ಶನಕ್ಕೆ ಧಾರವಾಡ, ಹುಬ್ಬಳ್ಳಿ, ಬೆಳಗಾಂವ, ಹಾವೇರಿ, ಮಂಗಳೂರು ಮೊದಲಾದ ಪ್ರಾಂತಗಳಿಂದ ವ್ಯಾಪಾರಕ್ಕಾಗಿ ಬರುವವರು ಅರಸೀಕೆರೆಯ ಮಾರ್ಗವಾಗಿ ಹಾಸನದ ರೈಲ್‌ಸ್ಟೇಷನ್ನಿನಲ್ಲಿಳಿದು ಗೊರೂರಿಗೆ ಬರಬೇಕಾಗಿರುವುದು. ಈ ಊರು ಹಾಸನ-ಅರ್ಕಲಗೂಡು ರಸ್ತೆಯಲ್ಲಿ ೧೪|| ಮೈಲಿಕಲ್ಲಿನ ಹತ್ತಿರ (ಹಾಸನದಿಂದ ದಕ್ಷಿಣಕ್ಕೆ) ಹೇಮಾವತೀ ನದಿಯ ಎಡಪಡದಲ್ಲಿದೆ. ವ್ಯಾಪಾರಕ್ಕಾಗಿ ಬರುವ ದೊಡ್ಡ ದೊಡ್ಡ ವರ್ತಕರು ಕಮಿಟಿಯ ಕಾರ್ಯದರ್ಶಿಯರಿಗೆ ೪ ದಿನ ಪೂರ್ವಭಾವಿಯಾಗಿ ತಿಳಿಸಿದಲ್ಲಿ ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧರಾಗಿರುತ್ತಾರೆ.

ಜಿ. ಶಿಲ್ಪಿಸಿಲ್ಲಿ ಎಂ. ಎ., ಎಲ್‌ಎಲ್. ಬಿ.

ಪ್ರದರ್ಶನ ಸಮಿತಿಯ ಅಧ್ಯಕ್ಷ, ಗೊರೂರು.

ಶಿರಾಳಕೊಪ್ಪಕ್ಕೆ ಬ್ಯಾಂಕ್ ಶಾಖೆ ಬೇಕು.

ಶಿಕಾರಿಪುರದ ತಾಲ್ಲೂಕು ಶಿರಾಳಕೊಪ್ಪಕ್ಕೆ ಒಂದು ಮೈಸೂರ್ ಬ್ಯಾಂಕ್ ಬ್ರಾಂಚ್‌ಆಫೀಸನ್ನು ಇಟ್ಟುಕೊಡಬೇಕೆಂದು ಇಲ್ಲಿಯ ಜನರು ಈ ಹಿಂದೆ ಕೇಳಿಕೊಂಡಿರುವಲ್ಲಿ ಎಕನಾಮಿಕ್ ಸೂಪರಿಂಟೆಂಡೆಂಟರು ಇಲ್ಲಿಯ ಜನರಿಗೆ ಕೆಲವು ಸಂಗತಿಗಳನ್ನು ಕೇಳಿದರು. ಅದಕ್ಕೆ ಇವರು ಸರಿಯಾದ ಉತ್ತರವನ್ನು ಕೊಟ್ಟು ಆಮೇಲೆ ಬಾಂಕ್‌ಮ್ಯಾನೇಜರಿಗೆ ಬರೆದುಕೊಂಡ ಮೇಲೆ ನ್ಯಾಮತಿಯಲ್ಲಿ ಒಂದು ಬ್ಯಾಂಕನ್ನು ಏರ್ಪಾಡು ಮಾಡುವೆವೆಂತಲೂ ಅದರ ಫಲಿತಾಂಶವನ್ನು ನೋಡದ ವಿನಾ ಇಲ್ಲಿಗೆ ಕೊಡಲು ಆಗುವುದಿಲ್ಲವೆಂತಲೂ ತಿಳಿಸಿರುತ್ತಾರೆ. ಈ ಪೂರು ಬೊಂಬಾಯಿ ಮೈಸೂರು ಸೀಮೆಯ ಮಧ್ಯೆ ಇದ್ದು ಸಾಗರ, ಸೊರಬ, ಹಿರೇಕೇರೂರು, ಚಿಕ್ಕೇರೂರು, ಆನವಟ್ಟಿ, ಶಿಕಾರಿಪುರ ಈ ಪೂರುಗಳಿಂದ ಮೇಲ್ಕಂಡ ಇನ್ನೊಂದು ಊರಿಗೆ ಹೋಗಬೇಕಾದರೆ ಈ ಊರಮೇಲೆ ಹಾಯ್ದು ಹೋಗಬೇಕಲ್ಲದೆ ಈ ಊರು ಅಕ್ಕಿವ್ಯಾಪಾರಕ್ಕೆ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿಯ ವರ್ತಕರು ಅಡಕೆ, ಬೆಲ್ಲ, ಅಕ್ಕಿ, ಎಣ್ಣೆ, ತಂಬಾಕು ಈ ವ್ಯಾಪಾರವನ್ನು ಬಹಳವಾಗಿ ಮಾಡುತ್ತಾರೆ. ಇವರು ಈ ವ್ಯಾಪಾರಕ್ಕೆ ಸರಿಯಾದ ಬಂಡವಾಳ ಇಲ್ಲದೆ ಧಾರ್ವಾಡಸೀಮೆಯ ಬ್ಯಾಡಗಿಯಲ್ಲಿ ಸಾಹುಕಾರರ ಹತ್ತಿರ ಸರಕುಗಳನ್ನು ಇಟ್ಟು ರೂಪಾಯಿತಂದು ವ್ಯಾಪಾರಮಾಡುವವರಾಗಿದ್ದಾರೆ. ಆದ್ದರಿಂದ ಇಲ್ಲಿಯ ವ್ಯಾಪಾರವೆಲ್ಲಾ ಪರಜಿಲ್ಲೆಯವರ ಸ್ವಾಧೀನವಾಗಿದೆ ಎಂದು ತಿಳಿಸಲು ವಿಷಾದವಾಗುತ್ತದೆ. ಆದ್ದರಿಂದ ಇಲ್ಲಿಗೆ ಜಾಗ್ರತೆಯಾಗಿ ಒಂದು ಬ್ಯಾಂಕನ್ನು ಓಪನ್ ಮಾಡಿಕೊಟ್ಟು ನಮ್ಮನ್ನು ಉದ್ಧಾರ ಮಾಡುತ್ತಾರೆಂದು ನಂಬಿರುವ ಸ್ಥಳಿಕರು.

ಹಾನಗಲ್ಲ ತಾಲ್ಲೂಕು.

ಹಾನಗಲ್ಲ ತಾ|| ಹಾವಣಗಿ, ಅರಳೇಶ್ವರ, ಸಂಕ್ರಿಕೊಪ್ಪ, ಆಡೂರ, ಆಲೂರ, ಹಿರೂರ ಈ ಗ್ರಾಮಗಳಲ್ಲಿ ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಗುರುವರ್ಗದ ಐಕ್ಯಹಾಗೂ ವಿದ್ಯಾವಶ್ಯಕತೆ ವಿಷಯಗಳ ಮೇಲೆ ವೆ|| ಬಸವಾರ್ಯ ಬಾವಿಹಾಳಮಠ, ಆ ಊರ ಕನ್ನಡ ಗಂಡುಹುಡುಗರ ಹೆಡ್ಮಾಸ್ತರ ಮಿ. ಚನ್ನವೀರಪ್ಪ, ಗಂಗಪ್ಪಶೆಟ್ಟರ ಮಿ. ಚನ್ನಬಸಪ್ಪ ಶಾಂತಪ್ಪ ಅಂಕಲಕೋಟಿ ಮಿ|| ಸಿಂಧೂರ ಇವರ ವ್ಯಾಖ್ಯಾನಗಳಾದವು. ಹಾಗೂ ಸದರಿ ಶ್ರೀಗಳವರಿಂದ ಷಟ್‌ಸ್ಥಲ ವಿಷಯವಾಗಿ ಆದ ಉಪನ್ಯಾಸವನ್ನು ಕೇಳಿ ಜನರು ಅತ್ಯಾನಂದಭರಿತರಾದರು. ಅಲ್ಲಿಯ ಪ್ರಮುಖರ ಇಚ್ಛಾನುಸಾರವಾಗಿ, ಹಾವಣಗಿ, ಸಂಕ್ರಿಕೊಪ್ಪ ಈ ಗ್ರಾಮಗಳಲ್ಲಿ ವೀರಶೈವತರುಣ ಸಂಘಗಳು ಇವಕ್ಕೆ ಸಂಬಂಧಿಸಿದ ವಾಚನಾಲಯಗಳು ಸಹ ಸ್ಥಾಪಿಸಲ್ಪಟ್ಟವು. ಮತ್ತು ಶ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಗಳವರ ಕೃಪಾಬಲದಿಂದ ಧಾರವಾಡದೊಳಗೆ ಸ್ಥಾಪಿಸಲ್ಪಟ್ಟಿರುವ ಶ್ರೀ ಮುರುಘಾಮಠದ ಫ್ರೀಬೋರ್ಡಿಂಗಿಗೆ ಹಾವಣಗಿಯಲ್ಲಿ, ಅರಳೇಶ್ವರದಲ್ಲಿ, ಸಂಕ್ರಿಕೊಪ್ಪದಲ್ಲಿ, ಆಲೂರಲ್ಲಿ ಭಕ್ತರು ಭಕ್ತಿಪೂರ್ವಕವಾಗಿ ವರ್ಷಾಶನಗಳನ್ನು ಸಲ್ಲಿಸಿದರು. ಸಂಕ್ರಿಕೊಪ್ಪದಲ್ಲಿ ಆದ ಧಾನ್ಯದ ವರ್ಷಾಶನವನ್ನು ಪುನಃ ಶ್ರೀಗಳವರು ಅಲ್ಲಿಯ ವೀರಶೈವ ತರುಣಸಂಘಕ್ಕೆ ಆಶೀರ್ವದಿಸಿರುತ್ತಾರೆ. ಈ ಪ್ರಕಾರ ಶ್ರೀಗಳವರು ಭಕ್ತವರ್ಗದ ಶ್ರೇಯಸ್ಸಿಗಾಗಿ ಪ್ರಯತ್ನಮಾಡುವದು ಧರ್ಮೋತ್ಕರ್ಷಕ್ಕೆ ಕಾರಣವಾಗಿರುವದು.

ಓರ್ವ ಸಮಾಜಹಿತೈಷಿ.

ವಿರಕ್ತಮಠ ಜಡೆ, ತಾ|| ಸೊರಬ.

ಇದೇ ದುರ್ಮತಿ ಸಂವತ್ಸರದ ಮಾಘಶುದ್ಧ ೧೫ ರವಿವಾರದ (ತಾ|| ೧೨-೨-೨೨) ಆರಭ್ಯ ಪದ್ಧತಿಮೇರೆಗೆ ಶ್ರೀಗುರು ಗದ್ದಿಗೆಯ ರಥೋತ್ಸವ ಕಾರ್ಯಗಳು ಈ ಕೆಳಗೆ ವಿವರಿಸಿರುವ ಪ್ರಕಾರ ಈ ನಮ್ಮ ಜಡೆ ಮಠದಲ್ಲಿ ನೆರವೇರಿಸಲ್ಪಡುವವು. ಮತ್ತು ರಥೋತ್ಸವಕಾಲದಲ್ಲಿಯೇ ವೀರಶೈವ ಪ್ರಾಂತಿಕಸಭೆಯು ಸಹ ಇಲ್ಲಿ ಕೂಡುತ್ತದೆ. ಪ್ರಯುಕ್ತ ಸರ್ವ ವೀರಶೈವ ಮಹನೀಯರುಗಳೂ ಈ ಕಾರ್ಯದಸಲುವಾಗಿ ಆಗಮಿಸಿ ಗುರುಗದ್ದಿಗೆಯ ದರ್ಶನಾಶೀರ್ವಾದಗಳಿಗೆ ಪಾತ್ರರಾಗತಕ್ಕದ್ದಲ್ಲದೆ ಸಭಾಕಾರ್ಯಗಳನ್ನು ಸಾಂಗಗೊಳಿಸಿ ಸಮಾಜೋನ್ನತಿಗೆ ಉತ್ತೇಜನವನ್ನುಂಟುಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ರಥೋತ್ಸವ ಕಾರಗಳವಿವರ—೧. ಮಾಘಶುದ್ಧ ೧೫ ರವಿವಾರ (ತಾ|| ೧೨-೨-೨೨) ಸಾಯಂಕಾಲಕ್ಕೆ ಪುಷ್ಪರಥಾರೋಹಣ ಮತ್ತು ಅನಾಥ ವೀರಶೈವವಟುಗಳ ಮಾಹೇಶ್ವರ ದೀಕ್ಷಾಸಂಸ್ಕಾರ. ೨. ಮಾಘ ಬಹುಳ ೨ ಸೋಮವಾರ (ತಾ|| ೧೩-೨-೨೨) ಸಾಯಂಕಾಲಕ್ಕೆ ಮಹಾರಥಾರೋಹಣ. ೩. ಮಾಘಬಹುಳ ೩ ಮಂಗಳವಾರ (ತಾ|| ೧೪-೨-೨೨) ಗಣಾರಾಧನೆ ಮತ್ತು ಶಿವಕೀರ್ತನ. ೪. ಮಾಘಬಹುಳ ೪ ಬುಧವಾರ (ತಾ|| ೧೫-೨-೨೨) ವೀರಶೈವ ಪ್ರಾಂತಿಕಸಭಾ ಮತ್ತು ಶಿವಕೀರ್ತನ. ೫. ಮಾಘಬಹುಳ ೫ ಗುರುವಾರ (ತಾ|| ೧೬-೨-೨೨) ಮಂಗಳಸ್ನಾನ ಮತ್ತು ಶಿವಕೀರ್ತನ ಸಹ.

ಸೂಚನೆ—ಪರಸ್ಥಳದಿಂದ ಬರತಕ್ಕ ಸರ್ವ ವೀರಶೈವ ಮಹನೀಯರುಗಳಿಗೂ ವಾಸ, ಭೋಜನ, ಇತ್ಯಾದಿಗಳ ಯೋಗ್ಯವ್ಯವಸ್ಥೆಯು ಮಾಡಲ್ಪಡುತ್ತದೆ.

ಚನ್ನವೀರಯ್ಯನವರು,

ಸರ್ವಾಧಿಕಾರಿ, ವಿರಕ್ತಮಠ.

ಸಕಲ ವೀರಶೈವ ಬಾಂಧವರಿಗೆ ಅರಿಕೆ.

ತಾರೀಖು ೨೨-೧-೧೯೨೨ರ ಸ್ಟಾರ ಪತ್ರದಲ್ಲಿ ಹಾಗು ೧೪-೧-೧೯೨೨ರ ಕರ್ನಾಟಕ ಟೈಯಿಮ್ಸು ಪತ್ರದಲ್ಲಿ ಪ್ರಕಟವಾದ ವಿನಂತಿಗಳಿಂದ ಕೆಲವರು ಸದ್ಗೃಹಸ್ಥರು ನನ್ನ ವಿಷಯದಲ್ಲಿ ತಪ್ಪುಗ್ರಹಿಕೆಯುಳ್ಳವರಾಗಿರುವರೆಂದು ತಿಳಿಯುತ್ತದೆ. ಈ ಗೃಹಸ್ಥರು ಹೇಳುವ ವಾದವನ್ನು ನಾನು ಹೂಡಿಲ್ಲ. ಉಜ್ಜನೀ ಮೊದಲಾದ ಮಠಸ್ಥರ ಸಹಾನುಭೂತಿಯಿಂದಲೂ ಉತ್ತೇಜನದಿಂದಲೂ ಕಾಶೀನಾಥಶಾಸ್ತ್ರಿಯೆಂಬುವರು ಒಮ್ಮೆ ಪರಮತಸ್ಥರ ನೋಗಿನಿಂದ ಒಮ್ಮೆ ಗುರುವರ್ಗ ಸಭೆಗಳ ನೆವದಿಂದ ಶ್ರೀಮದಲ್ಲಮಪ್ರಭುವಿನ ಹಾಗು ಶ್ರೀಮದ್ಬಸವಾದಿ ಪ್ರಮಥರ ಪುಣ್ಯನಾಮಗಳನ್ನು ದೂಷಿಸಹತ್ತಿದ್ದರಿಂದಲೂ ಅವರ ಇತಿಹಾಸಕ್ಕೆ ಕಲಂಕ ಹಚ್ಚಲು ಪ್ರಯತ್ನಪಡಹತ್ತಿದ್ದರಿಂದಲೂ ಭಕ್ತವರ್ಗಕ್ಕೇ ಅವಮಾನವಾಗುವ ಠರಾವುಗಳನ್ನು ಮಾಡಹತ್ತಿದ್ದರಿಂದಲೂ ನಾನು ಈ ವಾದದಲ್ಲಿ ಕೈಹಾಕಿರುವೆನು. ಸ್ವತಃ ಶ್ರೀ ಪಂಚಾಚಾರ್ಯರ ವಿಷಯದಲ್ಲಿ ನನ್ನ ಅಗೌರವ ಮತಿಯು ಎಂದೆಂದೂ ಇಲ್ಲ. ಕೆಲವು ಕೃತ್ರಿಮ ಗ್ರಂಥಗಳಿಂದ ನಿಜವಾದ ವೀರಶೈವ ಮಾರ್ಗಕ್ಕೆ ಪ್ರತಿಕೂಲ ಮತಗಳು ಪ್ರಸಾರವಾಗಹತ್ತಿದ್ದರಿಂದ ನಾನು ಈ ಗ್ರಂಥಗಳ ಖಂಡನಕ್ಕಾಗಿ ಯತ್ನಿಸಿದೆನು. ನನ್ನ ನಿಬಂಧಗಳನ್ನು ಓದಿದರೆ ನಾನೇನು ಪಂಚಾಚಾರ್ಯರ ನಿಂದಕನೋ ಹೇಗೆ ಎಂಬುದು ತಿಳಿಯುವುದು. ನನ್ನ ೧೦೫ ಪ್ರಶ್ನೆಗಳಲ್ಲಿ ಶ್ರೀ ಪಂಚಾಚಾರ್ಯರ ನಿಂದಾತ್ಮಕಪ್ರಶ್ನವನ್ನು ಒಂದಾದರೂ ತೋರಿಸಬೇಕು. ಅದೇ ಕಾಶೀನಾಥಶಾಸ್ತ್ರಿಯ ಶ್ರೀ ಬಸವಾದಿನಿಂದಾತ್ಮಕ ಪ್ರಶ್ನಗಳನ್ನು ನೋಡಿರಿ. ಸಮಾಜವು ಅತಿಪೂಜ್ಯಭಾವದಿಂದ ಕಾಣುವ ಶ್ರೀ ಬಸವೇಶನ ಹಾಗು ಶ್ರೀಮನ್ನಿರಂಜನ ಜಂಗಮರೂಪನಾದ ಶ್ರೀ ಪ್ರಭುವಿನ ನಿಂದೆಯನ್ನೂ ಭಕ್ತವರ್ಗದ ನಿಂದೆಯನ್ನೂ ಕೇಳಿ ನಾನು ಸುಮ್ಮನಿರತಕ್ಕುದಿತ್ತೆಂದು ಈ ವಿನಂತಿಯನ್ನು ಮಾಡುವ ಮಹಾಶಯರ ಅಭಿಪ್ರಾಯವಿದ್ದರೆ ನನ್ನ ಉಪಾಯವಿಲ್ಲ. ಕುಂದಗೋಳದಲ್ಲಿಯೂ ನವಲಗುಂದದಲ್ಲಿಯೂ ವಿದ್ವಾಂಸರ ಮುಖಾಂತರ ವಾದ ಜರುಗಿಸಲಿಕ್ಕೆ ನಾನು ಪ್ರಯತ್ನಪಟ್ಟು ನಿರರ್ಥಕವಾಗಲು ವಾದಲೇಖಗಳನ್ನು ಪ್ರಕಟಿಸಿರುವೆನು. ಈಗಲಾದರೂ ವಾದಕ್ಕೆ ನಾನು ಸಿದ್ಧನಿರುವೆನು. ಸಮಾಜಬಾಂಧವರು ನಿಂದಾಪರರಿಗೂ ನಿಂದಾಕರರನ್ನು ಎದುರಿಸುವವರಿಗೂ ಒಂದೇ ವರ್ಗದಲ್ಲಿ ಸಮಾವೇಶಮಾಡಬಾರದೆಂದು ನನ್ನ ವಿನಂತಿಯುಂಟು. ನಿಂದೆಯಲ್ಲಿ ತೊಡಗಿದ ವ್ಯಕ್ತಿಗಳನ್ನು ನಾನು ನಿಷೇಧಿಸಿರುವೆನು; ಶ್ರೀ ಪಂಚಾಚಾರ್ಯರನ್ನು ಸ್ವತಃ ನಾನೆಂದೂ ನಿಂದಿಸಿಲ್ಲ.

ಪಾವಟೆ ಸಿದ್ಧರಾಮಪ್ಪ.

[ಈ ಲೇಖನದಲ್ಲಿ ಕೆಲಭಾಗಗಳನ್ನು ನಾವು ತೆಗೆಯಬೇಕಾಯಿತು. ಪ.ಪ್ರ.]

ಘನತೆಯನ್ನು ಹೊಂದಿದ ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜ ರಾಜಸಾಹೇಬ್ ಬಹದ್ದೂರರವರ ಅಡಿದಾವರೆಯಲ್ಲಿ.

ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕಿನ ಬಡಪ್ರಜೆಗಳು ಪ್ರಾರ್ಥಿಸಿಕೊಳ್ಳುವುದೇನಂದರೆ—

ಮಹಾಸ್ವಾಮಿ,

ನಾವುಗಳು ವಾಸಮಾಡತಕ್ಕ ಈ ತಾಲ್ಲೋಕಿನಲ್ಲಿ ಈಗ್ಗೆ ಮೂರು ವರ್ಷಗಳ ಲಾಗಾಯ್ತು ಸುತರಾಂ ಮಳೆಯಿಲ್ಲದೆ ಜನದನಗಳಿಗೆ ಕುಡಿಯುವುದಕ್ಕೆ ನೀರು ಸಹಾಯವಿಲ್ಲದೆ ತುಂಬಾ ತೊಂದರೆಯಾಗಿರುತ್ತೆ. ನೀರಿಗೇನೇ ಇಂಥಾ ತೊಂದರೆಯಿರತಕ್ಕ ಭಾಗದಲ್ಲಿ ದವಸ ಮತ್ತು ಹುಲ್ಲಿನ ತೊಂದರೆ ಎಷ್ಟಿರಬೇಕೆಂಬುದನ್ನು ಮಹಾಸ್ವಾಮಿಯವರೇ ಯೋಚಿಸತಕ್ಕದ್ದಾಗಿದೆ. ಈಗ್ಗೇನೆ ಸಾವಿರಾರು ಸಂಸಾರಿಗಳು ಸ್ಥಳಗಳನ್ನು ಬಿಟ್ಟು ಜೀವನೋಪಾಯಕ್ಕೋಸ್ಕರ ಬೇರೇಕಡೆಗಳಿಗೆ ಹೊರಟುಹೋಗಿರುತ್ತಾರೆ. ಇದೇ ವಿಚಾರದಲ್ಲಿ ದಿವಾನ್‌ಸಾಹೇಬರವರಿಗೂ ಅರ್ಜಿಗಳ ಮೂಲಕ ಅರಿಕೆ ಮಾಡಿಕೊಂಡಾಗ್ಗೂ ನಮ್ಮಗಳನ್ನು ವಿಚಾರಿಸತಕ್ಕವರೇ ಇಲ್ಲವಾಗಿದೆ.

ಧರ್ಮರಾಜ್ಯವಾದ ತಮ್ಮ ರಾಜ್ಯದಲ್ಲಿ ನಮ್ಮಂಥಾ ಬಡಪ್ರಜೆಗಳ ತೊಂದರೆಯನ್ನು ನಿವೃತ್ತಿಮಾಡಲು ಏರ್ಪಡಿಸತಕ್ಕ ಘನಸರ್ಕಾರದವರೂ ಕೂಡ ಯಾವ ಏರ್ಪಾಡೂ ಮಾಡದೆ ತಾವು ಪ್ರಕಟಿಸತಕ್ಕ ಕಾಲಸ್ಥಿತಿ ರಿಪೋರ್ಟನೋಡಿದರೆ ಸ್ಥಳೀಯ ಅಧಿಕಾರಿಗಳು ನಿರಂಕುಶವಾದ ಪ್ರಭುತ್ವವನ್ನು ಅವಲಂಬಿಸಿರುವುದೇ ಕಾರಣವೆನ್ನುವುದು ವ್ಯಕ್ತಪಡುತ್ತದೆಯಲ್ಲದೆ ಜಮಾಬಂದಿಗೆ ದಯಮಾಡಿಸತಕ್ಕ ಆಫೀಸರವರಲ್ಲಿ ಅರ್ಜಿಮೂಲಕ ಅರಿಕೆಮಾಡಿಕೊಂಡದ್ದಕ್ಕೆ ನಮ್ಮಗಳ ಅರ್ಜಿಯಲ್ಲಿ ಪ್ರಾರ್ಥಿಸಿಕೊಳ್ಳುವ ರಿಮಿಷನ್; ರಿಲೀಫ್ ಕಾಂಗಾರಿ; ತಕಾವಿಸಾಲ; ಕುರುಡುಕುಂಟರಿಗೆ ಪಡಿತರಯಾನೆ ಭತ್ಯ; ವಗೈರೆಗಳು ಈ ಯುಗದಲ್ಲಿಯೇ ನಮ್ಮಗಳಿಗೆ ದೊರೆಯಲಾರದೆನ್ನುವುದಾಗಿ ಕೊಡಿಸುವ ಅಪ್ಪಣೆಮೇಲೆ ನಮ್ಮಗಳ ಅಹವಾಲ್ ಮುತ್ಕಾರಲ್ಲಿ ಅರಿಕೆಮಾಡಿಕೊಳ್ಳಬೇಕೆನ್ನುವುದು ತೋಚದೆ ತಡವರಿಸಿ ಮಹಾಸನ್ನಿಧಿಯಲ್ಲಿ ಅರಿಕೆಮಾಡಿಕೊಂಡಿರುತ್ತೇವೆ.

ಮೇಲ್ಕಂಡ ವಿಷಯಗಳೆಲ್ಲವೂ ಮಹಾಸನ್ನಿಧಿಗೆ ಗೊತ್ತಾಗಬೇಕಾದಲ್ಲಿ ಸ್ಪೆಷಲ್ ಆಫೀಸರವರನ್ನು ಕಳುಹಿಸಿಕೊಟ್ಟು ವಿಚಾರಮಾಡಿಸಿದರೆ ಗೊತ್ತಾಗುತ್ತೆಯೇವಿನಾ ನಿರಂಕುಶಪ್ರವರ್ತಕರಾದ ಸ್ಥಳೀಯ ಆಫೀಸರುಗಳಿಂದ ತಿಳಿಯುವುದಿಲ್ಲವಾದ್ದರಿಂದ ನಮ್ಮಗಳ ಪ್ರಾರ್ಥನೆಯನ್ನು ಘನವಾದ ಚಿತ್ತಕ್ಕೆ ತಂದು ನಮ್ಮಗಳ ಕಷ್ಟನಷ್ಟಗಳನ್ನು ಪರಿಹರಿಸಿ ಕಾಪಾಡಬೇಕಾಗಿ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ.

ಶಿರಾ ತಾಲ್ಲೂಕಿನ ರೈತರು.

[ಇದರ ಕೆಳಗೆ ಅನೇಕರ ರುಜುಗಳು ಮಾಡಲ್ಪಟ್ಟಿವೆ.—ಪ. ಪ್ರ.]

ಉತ್ಸವಕ್ಕೆ ಬಹಳ ಜನರು ಸೇರುವುದರಿಂದ ವ್ಯಾಪಾರಸ್ಥರಿಗೂ ನಾಟಕ ಸರ್ಕಸ್ ಮೊದಲಾದ ವಿನೋದಕಾರರಿಗೆ ಸಂಪಾದನೆಗೆ ಒಳ್ಳೇ ಸಮಯವಾಗಿರುವುದೆಂದೂ, ಈ ದೇವಸ್ಥಾನದ ಜೀರ್ಣೋದ್ಧಾರಮಾಡಲು ಸರ್ಕಾರದವರು ಏರ್ಪಾಟುಮಾಡುವುದರಲ್ಲಿರುತ್ತಾರೆಂದೂ, ಈ ಕಾರ್ಯಕ್ಕೆ ಸಹಾಯಮಾಡಿ ಪುಣ್ಯಭಾಗಿಗಳಾಗತಕ್ಕ ಈಶ್ವರಭಕ್ತರು ತಮ್ಮಲ್ಲಿಗೆ ಚಂದಾಹಣವನ್ನು ಕಳುಹಿಸಿಕೊಡಬೇಕೆಂದೂ ಧರ್ಮಕಾರ್ಯದರ್ಶಿಗಳಾದ ಮ|| ಕರಣಿಕ ಕೃಷ್ಣಮೂರ್ತಿರಾಯರು ಅಪೇಕ್ಷಿಸುತ್ತಾರೆ.

ಶ್ರೀ ಯುವಸಾರ್ವಭೌಮರು ತಾ|| ೨೩ನೆ ಮಧ್ಯಾಹ್ನ ಕಾರಾಪುರದ ಕ್ಯಾಂಪಿನಿಂದ ರಾಜಧಾನಿಗೆ ದಯಮಾಡಿಸಿ, ಆ ರಾತ್ರಿಯ ಔತಣವನ್ನು ಮುಗಿಸಿಕೊಂಡು ಸ್ಪೆಷಲ್ ಟ್ರೇನಿನಲ್ಲಿ ಬೆಂಗಳೂರು ಮಾರ್ಗವಾಗಿ ಹೈದರಾಬಾದಿಗೆ ಪ್ರಯಾಣವನ್ನು ಬೆಳೆಯಿಸಿದರು. ಶ್ರೀಮನ್ಮಹಾರಾಜ ಸಹೋದರರು ನಿಲ್ದಾಣಕ್ಕೆ ಜತೆಯಲ್ಲೇ ಹೋಗಿದ್ದು ಸಾಗಕಳುಹಿದರು. ಯುವಸಾರ್ವಭೌಮರು ತಾ|| ೨೪ನೆ ಬೆಳಿಗ್ಗೆ ಹೈದರಾಬಾದನ್ನು ಸೇರಿದರು. ನೈಜಾಮರೂ ಅವರ ಕಡೆಯ ಸರ್ದಾರರೇ ಮೊದಲಾದವರೂ ಬ್ರಿ|| ರಸಿಡೆಂಟರೂ ಬಹು ಸಂಭ್ರಮದಿಂದ ಸ್ವಾಗತಿಸಿದರು. ಪಟ್ಟಣವೆಲ್ಲಾ ಶೃಂಗಾರವಾಗಿತ್ತು. ಉತ್ಸವವಾಗಿ ಕರೆದುಕೊಂಡು ನಿಲ್ದಾಣದಿಂದ ೫ ಮೈಲಿಗಳಲ್ಲಿರುವ ಫಲಕ್‌ನಾಮಾ ಎಂಬ ಅರಮನೆಯಲ್ಲಿಳಿಯಿಸಿದರು. ದಾರಿಯುದ್ದಕ್ಕೂ ಲಕ್ಷಾಂತರ ಜನರು ನಿಂತಿದ್ದು ಸಂದರ್ಶಿಸಿ ಆನಂದ ಪ್ರದರ್ಶನಮಾಡಿದರು. ಸತ್ಕಾರದ ಏರ್ಪಾಟುಗಳು ಆ ಸಂಸ್ಥಾನದಲ್ಲೂ ಬಹಳ ಘನತರವಾಗಿಯೇ ಇವೆ.

ಯುವಸಾರ್ವಭೌಮರು ನಮ್ಮ ಶ್ರೀಮನ್ಮಹಾರಾಜರನ್ನು ಕುರಿತು ಹೈದರಾಬಾದಿನಿಂದ ಹೀಗೆ ತಂತ್ರೀವಾರ್ತೆಯನ್ನು ಕಳುಹಿಸಿದ್ದಾರೆ—'' ನಿಮ್ಮ ಅತಿಥಿಸತ್ಕಾರಕ್ಕೂ ಅಪಾರವಾದ ಕೃಪೆಗೂ ನಾನು ನಿಮ್ಮನ್ನು ವಂದಿಸುತ್ತೇನೆ. ನಾನು ನಿಮ್ಮ ರಾಜ್ಯದಲ್ಲಿ ಸುಖವಾಗಿ ಕಾಲವನ್ನು ಕಳೆದೆನು. ನಿಮ್ಮ ಮೈತ್ರಿಯು ನನಗೆ ಅನಿರ್ವಚನೀಯವಾದ ಸಂತೋಷವನ್ನುಂಟುಮಾಡಿತು. ಮೈಸೂರು ದೇಶದ ಸೌಂದರ್ಯವನ್ನು ನಾನು ಮೆಚ್ಚಿಕೊಂಡೆನು. ನಿಮ್ಮ ಪ್ರಭುತ್ವವೈಭವವನ್ನೂ ಮೆಚ್ಚಿದೆನು. ನಿಮ್ಮ ಪ್ರಜೆಗಳು ಮನಃಪೂರ್ವಕವಾಗಿ ನನಗೆ ಸ್ವಾಗತವನ್ನು ಮಾಡಿದುದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ.''

ಇದಕ್ಕೆ ನಮ್ಮ ಮಹಾರಾಜರು ಕೊಟ್ಟ ಪ್ರತಿ ತಂತ್ರೀವಾರ್ತೆಯ ಅಭಿಪ್ರಾಯವೇನೆಂದರೆ—'' ನೀವು ಕಳುಹಿಸಿದ ಸಂದೇಶವು ತಲುಪಿತು. ನಿಮ್ಮ ಆಗಮನದಿಂದ ನನಗೂ ನನ್ನ ಪ್ರಜೆಗಳಿಗೂ ವರ್ಣಿಸಲಸದಳವಾದಷ್ಟು ಆನಂದವುಂಟಾಗಿದೆ. ಇದನ್ನು ಸದಾಸ್ಮರಣೆಯಲ್ಲಿಟ್ಟುಕೊಳ್ಳುವುದು ನಮ್ಮ ಭಾಗ್ಯವಾಗಿದೆ.''

ಮೈಸೂರು ಸಂಸ್ಥಾನದ ಅರಸೌತಣ ಕಾಲದಲ್ಲಿ ಶ್ರೀಮನ್ಮಹಾರಾಜರೂ ಯುವಸಾರ್ವಭೌಮರೂ ಮಾಡಿದ ಭಾಷಣಗಳ ಅಭಿಪ್ರಾಯ.

ಬ್ರಿಟಿಷ್ ಚಕ್ರಾಧಿಪತ್ಯದ ಯುವರಾಜರಾದ ತಾವು ನಮ್ಮ ಸಂಸ್ಥಾನಕ್ಕೆ ದಯಮಾಡಿಸಿ ನನಗೂ ನನ್ನ ಪ್ರಜೆಗಳಿಗೂ ಸಂದರ್ಶನವನ್ನು ಕೊಟ್ಟುದಕ್ಕಾಗಿ ನಮ್ಮ ಸಂತೋಷವನ್ನು ಸರಿಯಾಗಿ ತಿಳಿಸುವುದು ಅಸಾಧ್ಯವಾಗಿದೆ. ಬ್ರಿಟಿಷ್ ಯುವರಾಜರನ್ನು ಸತ್ಕರಿಸುವ ಭಾಗ್ಯವು ನಮಗೆ ದೊರೆತುದಕ್ಕೆ ಇದೇ ಮೊದಲಲ್ಲ. ನಮ್ಮ ವಿಶ್ವಾಸಕ್ಕೆ ಪಾತ್ರರಾದ ಚಕ್ರವರ್ತಿಗಳು ಯುವರಾಜರಾಗಿದ್ದಾಗ ಕುಟುಂಬಸಮೇತರಾಗಿ ಈಗ ಸುಮಾರು 16 ವರ್ಷಗಳಲ್ಲಿ ನಮ್ಮ ಮೇಲೆ ಕೃಪೆಯನ್ನಿಟ್ಟು ದಯಮಾಡಿಸಿ ನಮ್ಮ ಆತಿಥ್ಯವನ್ನು ಪರಿಗ್ರಹಿಸಿದ್ದರು. ಅದೇ ಅಭಿಮಾನವನ್ನಿಟ್ಟು ತಾವು ಈ ಆತಿಥ್ಯವನ್ನು ಈ ದಿವಸ ಪರಿಗ್ರಹಿಸಿರುವುದಕ್ಕಾಗಿ ನನಗೆ ಉಂಟಾಗಿರತಕ್ಕ ಸಂತೋಷಕ್ಕೆ ಪಾರವೇ ಇರುವುದಿಲ್ಲ. ಈ ಮೈಸೂರು ಸಂಸ್ಥಾನವೂ ನಾನೂ ಬ್ರಿಟಿಷ್ ಚಕ್ರವರ್ತಿಗಳ ಉಪಕಾರಕ್ಕೆ ಬದ್ಧರಾಗಿರುತ್ತೇವೆ. ಹಿಂದೆ ಬ್ರಿಟಿಷ್ ಗೌರ್ನಮೆಂಟಿನವರಿಂದ ನಾವು ಹೊಂದಿದ ಉಪಕಾರವನ್ನು ಮರೆಯುವುದು ಅಸಾಧ್ಯ. ಇಂಡಿಯಾ ದೇಶದ ಇನ್ನಾವ ಸಂಸ್ಥಾನದಲ್ಲಿಯೂ, ಈ ಸಂಸ್ಥಾನದಲ್ಲಿ ಇರುವಷ್ಟು ಅಕೃತ್ರಿಮವಾದ ರಾಜಭಕ್ತಿವಿಶ್ವಾಸಗಳು ಇರಲಾರವೆಂದು ನಾವು ಭಾವಿಸುತ್ತೇವೆ. ಚಕ್ರವರ್ತಿಗಳ ವಿಷಯದಲ್ಲಿ ನಾವು ತುಂಬಾ ರಾಜಭಕ್ತಿಯುಳ್ಳವರಾಗಿರುತ್ತೇವೆ. ಈ ವಿಷಯವನ್ನು ಚಕ್ರವರ್ತಿಗಳಿಗೆ ದಯವಿಟ್ಟು ಅರಿಕೆ ಮಾಡಬೇಕು. ಕಳೆದ ಯುದ್ಧದಲ್ಲಿ ಮೂರು ದೊಡ್ಡ ರಾಜ್ಯಗಳಲ್ಲಿ ಪ್ರಳಯಗಳುಂಟಾದವು. ಆದರೆ ಬ್ರಿಟಿಷ್ ರಾಜ್ಯದಲ್ಲಿ ಪ್ರಭುಗಳಿಗೂ ಪ್ರಜೆಗಳಿಗೂ ಇದ್ದ ಪ್ರೀತಿಯು ಹೆಚ್ಚಿತು. ಹಾಗೆ ಹೆಚ್ಚುವುದಕ್ಕೆ ಬ್ರಿಟಿಷ್ ರಾಜ್ಯದ ಸಾಂಕುಶಪ್ರವರ್ತನವೇ ಮುಖ್ಯಕಾರಣ. ಬ್ರಿಟಿಷ್ ಚಕ್ರವರ್ತಿಗಳ ಧರ್ಮಮಾರ್ಗೈಕಪರಾಯಣತೆಯು ಅದಕ್ಕಿಂತಲೂ ಮುಖ್ಯವಾದ ಕಾರಣ. ಧರ್ಮಿಷ್ಠರಾದ ವಿಕ್ಟೋರಿಯಾ ಮಹಾರಾಜ್ಞಿಯವರೂ, ಶಾಂತಿಯಲ್ಲಿ ಆಸಕ್ತರಾದ ಎಡ್ವರ್ಡ್ ಮಹಾಪ್ರಭುಗಳೂ ಧರ್ಮಮಾರ್ಗೈಕಪರಾಯಣರೆಂದು ಚರಿತ್ರೆಯಲ್ಲಿ ಅಸಾಧಾರಣವಾದ ಕೀರ್ತಿಯನ್ನು ಪಡೆದರು. ನಮ್ಮ ಚಕ್ರವರ್ತಿಗಳು ಈ ಭಯಂಕರವಾದ ಯುದ್ಧದಲ್ಲಿ ಅಸಾಧಾರಣವಾದ ದೇಶಬಾಂಧವತೆಯನ್ನೂ, ಧೈರ್ಯಸ್ಥೈರ್ಯಗಳನ್ನೂ, ಕರ್ತವ್ಯಜ್ಞಾನವನ್ನೂ ತೋರಿಸಿ, ಪ್ರಜೆಗಳ ಯೋಗಕ್ಷೇಮವೇ ತಮ್ಮ ಯೋಗಕ್ಷೇಮವಾಗಿರುವಂತೆ ಮಾಡಿಕೊಂಡು, ಪ್ರಜಾರಂಜನೆಯಲ್ಲಿ ಅದ್ವಿತೀಯರಾಗಿರುತ್ತಾರೆ. ತಮ್ಮ ಮಹಾಮಾತೃಶ್ರೀಯವರು ತಮ್ಮ ಅದ್ಭುತವಾದ ಸೇವೆಯಿಂದಲೂ, ಅಸಾಧಾರಣವಾದ ಅನುತಾಪದಿಂದಲೂ, ಅಪೂರ್ವವಾದ ಭೂತದಯೆಯಿಂದಲೂ ಚಕ್ರಾಧಿಪತ್ಯಕ್ಕೆ ಮಾತೆಯರಾಗಿ ಪರಿಣಮಿಸಿರುತ್ತಾರೆ. ತಾವು ವಯಸ್ಸಿನಲ್ಲಿ ಚಿಕ್ಕವರಾದಾಗ್ಯೂ, ತಮ್ಮ ಮಾತಾಪಿತೃಗಳ ಗುಣಾತಿಶಯಗಳನ್ನೂ, ಕೀರ್ತಿಶೇಷರಾದ ತಮ್ಮ ತಾತಂದಿರ ಮತ್ತು ವಿಕ್ಟೋರಿಯಾ ಮಹಾರಾಜ್ಞಿಯವರ ಗುಣಾತಿಶಯಗಳನ್ನೂ, ಪರಿಪೂರ್ಣವಾಗಿ ಅನುಸರಿಸಿ ಧರ್ಮಯುದ್ಧದಲ್ಲಿ ಹೇಗೋ ಹಾಗೆ ಸಮಾಧಾನದಲ್ಲಿ ಅಪ್ರತಿಹತವಾದ ಶಾಂತಿಯುಳ್ಳವರಾಗಿರುತ್ತೀರಿ. ದೇಶಾಟನದಿಂದಲೂ, ಪಂಡಿತ ಭಾಷಣದಿಂದಲೂ, ಲೋಕವ್ಯವಹಾರಜ್ಞಾನವನ್ನು ತಿಳಿಯುವುದಕ್ಕೋಸ್ಕರ ದೇಶಸಂಚಾರಕ್ಕೆ ನೀವು ಹೊರಟಿರುತ್ತೀರಿ. ತಮ್ಮ ಗುಣಾತಿಶಯಗಳನ್ನು ನೋಡಿದವರೆಲ್ಲಾ ತುಂಬಾ ವಿಸ್ಮಿತರಾಗಿ ತಮ್ಮಲ್ಲಿ ಅಕೃತ್ರಿಮವಾದ ಭಕ್ತಿ ವಿಶ್ವಾಸಗಳನ್ನು ತೋರಿಸುತ್ತಲಿದ್ದಾರೆ. ಇಂಡಿಯಾ ದೇಶದ ತಿದ್ದುಪಾಟುಗಳು ಆಚರಣೆಗೆ ಬಂದ ಕೂಡಲೇ ತಾವು ಇಲ್ಲಿಗೆ ದಯಮಾಡಿಸಿದುದನ್ನೂ ಈ ದೇಶದಲ್ಲಿ ಸಮಾಧಾನವನ್ನು ಉಂಟುಮಾಡುವ ಪ್ರಯತ್ನದಲ್ಲಿ ಬದ್ಧಾದರರಾಗಿರುವುದನ್ನೂ, ಪ್ರಜೆಗಳ ಅತೃಪ್ತಿಗೆ ಕಾರಣವಿಲ್ಲದಂತೆ ಮಾಡಬೇಕೆಂಬ ನಿಮ್ಮ ಸಂಕಲ್ಪವನ್ನೂ ಈ ಭರತಖಂಡದ ರಾಜ್ಯಭಾರಕ್ಕೆ ಸಾಧಕವಾದ ಗುಣಾತಿಶಯಗಳುಳ್ಳ ವೈಸ್ರಾಯರು ಈ ದೇಶಕ್ಕೆ ಬಂದಿರುವುದನ್ನೂ ನೋಡಿದರೆ ತುಂಬಾ ಸಂತೋಷವಾಗುತ್ತದೆ. ತಮಗೆ ದೀರ್ಘಾಯುರಾರೋಗ್ಯೈಶ್ವರ್ಯಗಳು ಉಂಟಾಗುವಂತೆ ಅನುಗ್ರಹಿಸಲೆಂದು ನಾನು ಸರ್ವೇಶ್ವರನನ್ನು ಪ್ರಾರ್ಥಿಸುತ್ತೇನೆ.''

ಇದಕ್ಕೆ ಶ್ರೀಯುವಸಾರ್ವಭೌಮರು ಕೊಟ್ಟ ಉತ್ತರವೇನೆಂದರೆ—

'' ತಾವು ಅತ್ಯಂತ ಆದರಪೂರ್ವಕವಾಗಿ ಸ್ವಾಗತಗರ್ಭಿತವಾದ ಮರ್ಯಾದೆಗಳನ್ನು ಮಾಡಿರುವಿರಿ. ರಾಜಭಕ್ತಿಗರ್ಭಿತಗಳಾದ ಅಭಿಪ್ರಾಯಗಳನ್ನು ಪ್ರಕಾಶಗೊಳಿಸಿರುವಿರಿ. ನನಗೆ ಸಂತೋಷವನ್ನು ಉಂಟುಮಾಡುವ ಉಪಚಾರಗಳು ಏನೇನು ನಡೆಯಬೇಕೋ ಅವುಗಳನ್ನು ಅತ್ಯಂತ ಸಮರ್ಪಕವಾಗಿ ನಡಿಸಿರುತ್ತೀರಿ. 1906 ರಲ್ಲಿ ನಮ್ಮ ಯಜಮಾನರು ಯಾವ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರೋ ಆಕಟ್ಟಡವನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಕಳೆದ 16 ವರ್ಷಗಳಲ್ಲಿ ಈ ರಾಜಧಾನಿಯು ಬಹಳ ವೃದ್ಧಿಗೆ ಬಂದಿರುವುದು. ಈ ಸಂಸ್ಥಾನಕ್ಕೆ ಈಗ ಒಂದು ವಿಶ್ವವಿದ್ಯಾನಿಲಯ (ಯೂನಿವರ್ಸಿಟಿ) ವೂ ಕಲ್ಪಿಸಲ್ಪಟ್ಟಿರುವುದು. ಸಂಪದಭಿವೃದ್ಧಿಯ ಕೆಲಸಗಳು ಬಹಳಮಟ್ಟಿಗೆ ನಡೆದಿರುವುವು. ಕನ್ನಂಬಾಡಿ ಕಟ್ಟೆಯನ್ನೂ ವಿದ್ಯುಚ್ಛಕ್ತಿ ಏರ್ಪಾಟುಗಳನ್ನೂ ನೋಡಿದರೆ ಈ ಭಾಗದಲ್ಲಿ ನೀವು ಮಾಡಿರತಕ್ಕ ಕೆಲಸಗಳು ಗೊತ್ತಾಗುತ್ತವೆ. ನಿಮ್ಮ ದೇಶದ ಪ್ರಜಾಪ್ರತಿನಿಧಿಸಭೆಯೂ ಎಕನಾಮಿಕ್ ಕಾನ್‌ಫರೆನ್ಸುಗಳೂ ನ್ಯಾಯವಿಧಾಯಕ ಸಭೆಯೂ, ನಿಮ್ಮ ಸಾಂಕುಶಪ್ರವರ್ತನವನ್ನು ತೋರಿಸುತ್ತವೆ. ಬ್ರಿಟಿಷ್ ಪ್ರಭುಗಳಿಗೂ ನಿಮಗೂ ಇರತಕ್ಕ ಸಂಬಂಧವನ್ನೂ ಈ ಸಂಬಂಧವು ಹೇಗೆ ಅಪ್ರತಿಹತವಾಗಿರುವುದೋ ಅದನ್ನು ನೀವು ಕೃತಪಡಿಸಿದಿರಿ. ಕಳೆದ ಯುದ್ಧವು ಉಪಕ್ರಮಿಸಿದ ಕೂಡಲೇ ನೀವು ಮಾಡಿದ ಸಹಾಯದಿಂದಲೇ ಈ ಸಂಬಂಧವು ಎಷ್ಟು ನಿಸರ್ಗವಾದದ್ದೋ ಅದು ಗೊತ್ತಾಯಿತು. ನಮ್ಮ ತಂದೆಗಳು ಇಲ್ಲಿಗೆ ಬಂದಿದ್ದಾಗ ಇಂಪೀರಿಯಲ್ ಸರ್ವಿಸ್ ಸೈನ್ಯದವರು ಹೇಗೆ ಚಕ್ರಾಧಿಪತ್ಯದ ಸೇವೆಯನ್ನು ಮಾಡುತ್ತಿದ್ದರೋ ಅದನ್ನು ನೀವು ಸೂಚಿಸಿದ್ದಿರಿ. 1914ರಲ್ಲಿ ಇದರ ಪರಿಣಾಮವು ಹೇಗಾಯಿತೋ ಅದನ್ನು ನೋಡಿದರೆ ನೀವು ದೀರ್ಘದರ್ಶಿಗಳೆಂದು ಗೊತ್ತಾಗುತ್ತದೆ. ನಿಮ್ಮ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳು ಈಜಿಪ್ಟ್ ದೇಶಕ್ಕೆ ಹೋಗಿ ಆಗಣ ಯುದ್ಧದಲ್ಲಿ ಬಹಳ ಮೆಹನತ್ತು ಮಾಡಿದರು. ನಾನು ಖುದ್ದಾಗಿ ಇವರ ಮೆಹನತ್ತನ್ನು ನೋಡಿದೆನು. ಘಾಸಾ ಮತ್ತು ಜೆರೋಸಲೆಮ್ ಪಟ್ಟಣಗಳನ್ನು ತೆಗೆದುಕೊಳ್ಳುವುದರಲ್ಲಿ ನಿಮ್ಮ ಸೈನ್ಯದವರು ಬಹಳ ಪರಾಕ್ರಮವನ್ನು ತೋರಿಸಿದರು. ಜಾರ್ಡನ್ ಕಣಿವೆಯಲ್ಲಿಯೂ, ತುರ್ಕಿಯವರೊಡನೆ ಯುದ್ಧದಲ್ಲಿಯೂ, ಸಿರಿಯಾದ ಯುದ್ಧದಲ್ಲಿಯೂ ನಿಮ್ಮ ಸೈನ್ಯದವರು ಬಹಳ ಮೆಹನತ್ತನ್ನು ಮಾಡಿದರು. ಶತ್ರುಗಳನ್ನು ಹೈಫಾಪಟ್ಟಣದಿಂದಲೂ, ಮೌಂಟ್ ಕಾರ್ಮಲ್ ಎಂಬ ಪ್ರದೇಶದಿಂದಲೂ ಓಡಿಸಿ ಏಳು ಫಿರಂಗಿಗಳನ್ನೂ ೩೦೦ ಜನ ಖೈದಿಗಳನ್ನೂ ಹಿಡಿದರು. ಆಲಪೊ ಯುದ್ಧದಲ್ಲಿ ಬಹು ಜನಗಳುಳ್ಳ ಸೈನ್ಯದೊಡನೆ ಯುದ್ಧಮಾಡಿ ಕೆಲವು ಜನಗಳನ್ನು ಕಳೆದುಕೊಂಡರು. 1920ನೇ ಫೆಬ್ರುವರಿ ತಿಂಗಳಲ್ಲಿ ಅವರು ಇಂಡಿಯಾ ದೇಶಕ್ಕೆ ಬಂದರು. ಅವರಿಗೆ ಬಂದಿರತಕ್ಕ ಮರ್ಯಾದೆಗಳೂ, ಅವರು ಸಂಪಾದಿಸಿರತಕ್ಕ ಬಿರುದು ಬಿಲ್ಲೆಗಳೂ, ಅವರ ಶಕ್ತಿಯನ್ನೂ ಅವರ ಧೈರ್ಯವನ್ನೂ ತೋರಿಸುವುವು. ನಿಮ್ಮ ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನವರು 1916 ರಲ್ಲಿ ಮೆಸೆಪೊಟೋಮಿಯಾಕ್ಕೆ ಹೋಗಿ ಯುದ್ಧವು ಪೂರೈಸುವ ವರೆಗೂ ಅಲ್ಲಿಯೇ ಇದ್ದರು. ಅಲ್ಲಿನ ಜನರಲ್‌ರವರು ಈ ಸೈನ್ಯದ ಮೆಹನತ್ತಿನ ವಿಷಯದಲ್ಲಿ ಬಹಳ ಶ್ಲಾಘಿಸಿರುತ್ತಾರೆ. ಇವುಗಳ ಜತೆಗೆ ನಿಮ್ಮ ಸಂಸ್ಥಾನದ ಪ್ರಜೆಗಳಲ್ಲಿ 5000 ಜನಗಳು ಇಂಡಿಯಾದ ಸೈನ್ಯಗಳಲ್ಲಿ ಸೇರಿ ಸಹಾಯ ಮಾಡಿದರು. ಅದು ಹಾಗಿರಲಿ. ಯುದ್ಧವು ಉಪಕ್ರಮವಾದ ಕೂಡಲೇ ಯುದ್ಧದ ಖರ್ಚಿಗೆ ತಾವು 50 ಲಕ್ಷ ರೂಪಾಯಿಗಳನ್ನು ಕೊಟ್ಟಿರಿ. ಅನಂತರ ಒಂದಾವೃತ್ತಿ 10 ಲಕ್ಷ ರೂಪಾಯನ್ನೂ, ಮತ್ತೊಂದಾವೃತ್ತಿ 13 ಲಕ್ಷ ರೂಪಾಯನ್ನೂ ಕೊಟ್ಟಿರಿ. ಇಂಪೀರಿಯಲ್ ರಿಲೀಫ್ ಫಂಡಿಗೆ 75 ಲಕ್ಷ ರೂಪಾಯಿಗಳನ್ನು ಕೊಟ್ಟಿರಿ. ಯುದ್ಧದ ಸಾಲಕ್ಕೆ ಒಂದು ಕೋಟಿಯೂ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿರಿ. ನಿಮ್ಮ ಸಂಸ್ಥಾನದ ಪ್ರಜೆಗಳು ಯುದ್ಧದ ಖರ್ಚಿಗೆ 2 ಲಕ್ಷ ರೂಪಾಯಿಗಳನ್ನು ಕೊಟ್ಟರು. ಯುದ್ಧದ ಸಾಲಕ್ಕೆ 43 ಲಕ್ಷ ರೂಪಾಯಿಗಳನ್ನು ಕೊಟ್ಟರು. ತಾವು ಖುದ್ದಾಗಿ ಕೊಟ್ಟುದು ಎರಡು ಕೋಟಿರೂಪಾಯಾಗುತ್ತದೆ. ಇದಲ್ಲದೆ ಚರ್ಮ, ಸಾಗವಾನಿ ಮರ, ಕಂಬಳಿಗಳು ಮೊದಲಾದ ಅನೇಕ ಪದಾರ್ಥಗಳು ನಿಮ್ಮ ಸಂಸ್ಥಾನದಿಂದ ಸರಬರಾಜಾಗಿರುವುವು. ಇದಕ್ಕೆಲ್ಲಾ ನಿಮಗೆ ನನ್ನ ವಂದನೆಯನ್ನು ಅರ್ಪಿಸುತ್ತೇನೆ. ಇಂಥಾ ಅಸಾಧಾರಣವಾದ ಕೆಲಸಗಳನ್ನು ಮಾಡಿದುದಕ್ಕೋಸ್ಕರ ನಾನು ಸಂತೋಷವುಳ್ಳವನಾಗಿದ್ದೇನೆ. ದೇವರು ನಿಮಗೆ ಸಕಲ ಸನ್ಮಂಗಳವನ್ನೂ ಮಾಡಲೆಂದು ನಾನು ಕೋರುತ್ತೇನೆ.

ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರ ಹುಕುಂನಾಮೆ.

ಹುಕುಂ ನಂಬರು ಎಂ. 2802-63—ಆರ್. ಎ. 27-21-1.
ಬೆಂಗಳೂರು, ತಾರೀಖು 3ನೆಯ ಜನವರಿ 1922.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಹತ್ತನೆಯ ತ್ರೈವಾರ್ಷಿಕ ಚುನಾವಣೆಯು, 1918ನೆಯ ಏಪ್ರಿಲ್ 22ನೆಯ ಮರ್ಕೂಂ 8-58—ಜಿ. ಎಂ. 610-17-1ನೆಯ ಕ್ಯಾಂಪ್ ನಂಬರಿನ ಸರ್ಕಾರಿ ಹುಕುಂ 1919ನೆಯ ಜೂನ್ 20ನೆಯ ಮರ್ಕೂಂ ಜಿ. 28217-67—ಆರ್. ಎ. 40-18-1ನೆಯ ನಂಬರಿನ ಸರ್ಕಾರಿ ಹುಕುಂ ಮತ್ತು 1920ನೆಯ ಆಗಸ್ಟ್ 22ನೆಯ ಮರ್ಕೂಂ ಜಿ. 4297—ಆರ್. ಎ. 1-20-2ನೆಯ ನಂಬರಿನ ಇಸ್ತಿಹಾರ್ನಾಮೆಯ ಪ್ರಕಾರ ಬದಲಾಯಿಸಿರುವ 1915ನೆಯ ಮಾರ್ಚಿ 22ನೆಯ ಮರ್ಕೂಂ ಬಿ. 10156—ಜಿ. ಎಂ. 33-14-1ನೆಯ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಸಾದರಪಡಿರುವ ಪ್ರಜಾಪ್ರತಿನಿಧಿ ಸಭೆಯ ರಚನಾವಿಷಯಕ್ಕೂ ಕಾರ್ಯ ನಡೆಸುವ ವಿಷಯಕ್ಕೂ ಸಂಬಂಧಪಟ್ಟ ನಿಬಂಧನೆಗಳಿಗೆ ಅನುಸಾರವಾಗಿ ಚಾಲ್ತಿ ವರ್ಷದಲ್ಲಿ ನಡೆಯುತ್ತದೆ.

2. 1917ನೆಯ ಸೆಪ್ಟಂಬರ್ 26ನೆಯ ಮರ್ಕೂಂ ಜಿ. 4194-201—ಜಿ. ಎಂ. 399-15-11ನೆಯ ನಂಬರಿನ ಸರ್ಕಾರಿ ಹುಕುಮಿನಲ್ಲಿ ವಿಧಿಸಿರುವ ತಿಳವಳಿಕೆಗಳಿಗೂ 1918ನೆಯ ಡಿಸೆಂಬರ್ 2ನೆಯ ಮರ್ಕೂಂ ಜಿ. 10065-125—ಆರ್. ಎ. 5-18-2ನೆಯ ನಂಬರಿನ ಮತ್ತು 1919ನೆಯ ಆಗಸ್ಟು 21ನೆಯ ಮರ್ಕೂಂ ಜಿ. 4353-60—ಆರ್. ಎ. 40-18-10ನೆಯ ನಂಬರಿನ ಸರ್ಕಾರಿ ಹುಕುಂಗಳ ಮೂಲಕ ಬದಲಾಯಿಸಿರುವ 1915ನೆಯ ಮಾರ್ಚಿ 22ನೆಯ ಮರ್ಕೂಂ ಜಿ. 10156—ಜಿ. ಎಂ. 33-14-1ನೆಯ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯ 13ನೆಯ ಪ್ಯಾರಗ್ರಾಫಿಗೂ ಅದೇ ಇಸ್ತಿಹಾರ್ನಾಮೆಯ 18 ಮತ್ತು 19ನೆಯ ಪ್ಯಾರಗ್ರಾಫಿಗಳಲ್ಲದೆ 1915ನೆಯ ನವಂಬರ್ 24ನೆಯ ಮರ್ಕೂಂ ಜಿ. 6395-444—ಜಿ. ಎಂ. 311-15-1ನೆಯ ನಂಬರಿನ ಸರ್ಕಾರಿ ಹುಕುಮಿನಮೂಲಕ ಬದಲಾಯಿಸಿರುವ ಸದರಿ ಇಸ್ತಿಹಾರ್ನಾಮೆಯ 20ನೆಯ ಪ್ಯಾರಗ್ರಾಫಿಗೂ ಮತ್ತು ಇದಕ್ಕೆ ಲಗತ್ತುಮಾಡಿರುವ ಕ್ಯಾಲೆಂಡರಿಗೂ ಸಹ ಡೆಪ್ಯುಟಿ ಕಮಿಷನರುಗಳು ಗಮನ ಕೊಡತಕ್ಕದ್ದು. ಅಲ್ಲದೆ ನಾನಾ ಕಾರ್ಯಗಳಿಗಾಗಿ ಅವುಗಳಲ್ಲಿ ಕೊಟ್ಟಿರುವ ತಿಳವಳಿಕೆಗಳಿಗೂ ಗೊತ್ತುಮಾಡಿರುವ ತಾರೀಖುಗಳಿಗೂ ಅನುಸಾರವಾಗಿ ತಪ್ಪದೆ ನಡೆದುಕೊಳ್ಳಬೇಕೆಂದು ಕೋರಲಾಗಿದೆ.

3. 1922-23ನೆಯ ವರ್ಷದಲ್ಲಿ ಪ್ರಜಾಪ್ರತಿನಿಧಿಸಭೆಯ ದಸರಾ ಅಧಿವೇಶನವು ಅಶ್ವಯುಜ ಶುದ್ಧ ದ್ವಾದಶಿಗೆ ಸರಿಯಾದ ಅಕ್ಟೋಬರ್ 2ನೆಯ ತಾರೀಖಿನ ದಿನ ಆರಂಭವಾಗುವುದು.

ಕೆ. ಮಾಥನ್,
ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ.

1922 ತ್ರೈವಾರ್ಷಿಕ ಚುನಾವಣೆ ಮತ್ತು ದಸರಾ ಕ್ಯಾಲೆಂಡರು.

1. ಮಾಘಮಾಸ ಮುಗಿಯುವುದರೊಳಗೆ—1922ನೆಯ ಫೆಬ್ರವರಿ 20 ರೊಳಗೆ—

ತಾಲ್ಲೂಕು ಮೆಂಬರುಗಳ ಚುನಾವಣೆಕಾಲದಲ್ಲಿ ಸಮ್ಮತಿಕೊಡಲು ಮತ್ತು ತಾಲ್ಲೂಕು ಮೆಂಬರುಗಳಾಗಿ ನಿಲ್ಲಲು ಅರ್ಹರಾದ ಜನರ ಪಟ್ಟಿಯನ್ನು ತಯಾರುಮಾಡಿ ಜನರಲ್ ಮತ್ತು ರೆವಿನ್ಯು ಸೆಕ್ರೆಟೆರಿಯೇಟಿಗೆ ಕಳುಹಿಸಿಕೊಡತಕ್ಕದ್ದು.

2. ಫಾಲ್ಗುಣಮಾಸದ ಅಂತ್ಯದೊಳಗಾಗಿ—1922ನೆಯ ಮಾರ್ಚಿ 17ರೊಳಗೆ—

ಮೇಲಿನ ಪಟ್ಟಿಗಳನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯೇಟಿನಲ್ಲಿ ಕೂಲಂಕಷವಾಗಿ ಪರೀಕ್ಷಿಸಿದಮೇಲೆ 1922ನೆಯ ಮಾರ್ಚಿ 17ನೆಯ ತಾರೀಖಿನೊಳಗಾಗಿ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲಾಗುವುದು.

3. ಚೈತ್ರಮಾಸದ ಅಂತ್ಯದೊಳಗೆ-1922ನೆಯ ಏಪ್ರಿಲ್ 17 ರೊಳಗೆ.

2ನೆಯ ಕಲಮಿನಲ್ಲಿ ನಮೂದಿಸಿರುವ ಪಟ್ಟಿಗಳ ವಿಷಯಗಳಲ್ಲಿ ಆಕ್ಷೇಪಣೆಗಳನ್ನೂ ಸೂಚನೆಗಳನ್ನೂ 1922ನೆಯ ಏಪ್ರಿಲ್ 17ನೆಯ ತಾರೀಖಿಗೆ ಮೊದಲು ಡೆಪ್ಯುಟಿ ಕಮಿಷನರುಗಳಲ್ಲಿ ದಾಖಲು ಮಾಡತಕ್ಕದ್ದು.

4. ವೈಶಾಖಮಾಸದ ಅಂತ್ಯದೊಳಗೆ—1922ನೆಯ ಮೇ 17ರೊಳಗೆ.

ಮೇಲಿನ 3ನೆಯ ಕಲಮಿನಲ್ಲಿ ನಮೂದಿಸಿರುವ ಆಕ್ಷೇಪಣೆಗಳನ್ನೂ ಸೂಚನೆಗಳನ್ನೂ ಡೆಪ್ಯುಟಿ ಕಮಿಷನರುಗಳು 1922ನೆಯ ಮೇ 17ರೊಳಗೆ ಫೈಸಲ್ ಮಾಡತಕ್ಕದ್ದು.

5. ವೈಶಾಖ ಬಹುಳ ಅಷ್ಟಮಿವರೆಗೆ-1922ನೆಯ ಮೇ 18ರವರೆಗೆ.

(a) ಸಂಬಂಧಪಟ್ಟ ತಾಲ್ಲೂಕು ಅಥವಾ ಸಬ್ ತಾಲ್ಲೂಕುಗಳಲ್ಲಿ ಚುನಾವಣೆಗೆ ನಿಲ್ಲಲು ಇಷ್ಟಪಡುವ ಅರ್ಹರಾದಂಥ ಜನರು ಸಮ್ಮತಿ ಕೊಡುವವರ ತಿಳವಳಿಕೆಬಗ್ಗೆ ಸ್ಥಳದಲ್ಲಿ ಪ್ರಕಟಿಸುವುದಕ್ಕೋಸ್ಕರ ತಮ್ಮ ಹೆಸರುಗಳನ್ನು ಬರವಣಿಗೆಯಮೂಲಕ ಅಮಲ್ದಾರರಿಗೆ 1922ನೆಯ ಮೇ 16ರೊಳಗೆ ಕೊಡತಕ್ಕದ್ದು.

(b) 1922ನೆಯ ಜೂನ್ 10ರಿಂದ 24ರೊಳಗೆ ಗೊತ್ತುಮಾಡುವ ಒಂದು ದಿನದಲ್ಲಿ ತಾಲ್ಲೂಕು ಕಸಬೆಗಳಲ್ಲಿ ಮೀಟಿಂಗು ಸೇರುವ, ತಾಲ್ಲೂಕು ಮೆಂಬರುಗಳನ್ನು ಚುನಾಯಿಸಲು ಅರ್ಹರಾದ ಜನರಿಗೆ 1922ನೆಯ ಮೇ 18ನೆಯ ತಾರೀಖು ಅಥವಾ ಆ ಮೊದಲು ತಿಳವಳಿಕೆ ಕೊಡತಕ್ಕದ್ದು.

6. ಜ್ಯೇಷ್ಠ ಮಾಸದ ಅಂತ ದೊಳಗೆ-1922ನೆಯ ಜೂನ್ 24ರೊಳಗೆ..

(a) ಹೀಗೆ ಮೀಟಿಂಗಿನಲ್ಲಿ ಸೇರಿದಾಗ ಮುಂದಿನ ಮೂರು ವರ್ಷಗಳಿಗೆ ಪ್ರಜಾಪ್ರತಿನಿಧಿ ಸಭೆಗೆ ಗೊತ್ತುಮಾಡಿರುವ ಸಂಖ್ಯೆಯಷ್ಟುಮಂದಿ ತಾಲ್ಲೂಕು ಮೆಂಬರುಗಳನ್ನು, ಮೇಲೆ 5 (a) ಕಲಮಿನಲ್ಲಿ ಸೂಚಿಸಿರುವ ಜನಗಳ ಪೈಕಿ, ಚುನಾಯಿಸತಕ್ಕದ್ದು.

(b) ಲೋಕಲ್ ಫಂಡ್ ಬೋರ್ಡುಗಳೂ, ಮ್ಯುನಿಸಿಪಲ್ ಕೌನ್ಸಿಲುಗಳೂ, ಅಂಗೀಕೃತವಾದ ಸಂಘಗಳೂ ಜ್ಯೇಷ್ಠ ಮಾಸದಲ್ಲಿ ಮೆಂಬರುಗಳನ್ನು ಕಳುಹಿಸತಕ್ಕದ್ದಲ್ಲದೆ ಈರೀತಿ ಕಳುಹಿಸಿದ ಮೆಂಬರುಗಳ ಹೆಸರುಗಳನ್ನು ಆ ತಿಂಗಳಿನಲ್ಲಿ ಪ್ರಕಟಿಸತಕ್ಕದ್ದು.

7. ಆಷಾಢಶುದ್ಧ ಚತುರ್ಥೀವರೆಗೆ-1922ನೆಯ ಜೂನ್ 28ರವರೆಗೆ..

(a) ತಾಲ್ಲೂಕು ಮೆಂಬರುಗಳು, ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳು, ಮ್ಯುನಿಸಿಪಲ್ ಕೌನ್ಸಿಲುಗಳು ಮತ್ತು ಅಂಗೀಕೃತವಾದ ಸಂಘಗಳು ಮೈಸೂರಿನಲ್ಲಿ ನಡೆಯುವ ಸಭೆಯ ಮುಂದಿನ ಮೀಟಿಂಗಿನಲ್ಲಿ ಹೇಳಿಕೊಳ್ಳುವ ಅಹವಾಲುಗಳನ್ನೂ ಚರ್ಚೆಮಾಡಬೇಕೆಂದು ಇಷ್ಟವಿರುವ ವಿಷಯಗಳಮೇಲಿನ ಸೂಚನೆಗಳನ್ನೂ, ಉತ್ತರ ಕೊಡಬೇಕಾಗಿರುವ ಪ್ರಶ್ನೆಗಳನ್ನೂ ಒಳಗೊಂಡಿರುವ ಪಟ್ಟಿಗಳನ್ನು, ಆಯಾ ಡೆಪ್ಯುಟಿ ಕಮಿಷನರುಗಳಿಗೆ ಕಳುಹಿಸತಕ್ಕದ್ದು.

(b) ಚುನಾಯಿಸಿ ಕಳುಹಿಸಿರುವ ಜನಗಳ ಪಟ್ಟಿಯನ್ನು ಮೀಟಿಂಗಿಗೆ ಹಾಜರಾಗಬಹುದಾದ ಮೆಂಬರುಗಳ ಸಂಖ್ಯೆಯ ಸಮಾಚಾರದೊಡನೆ ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ಕಳುಹಿಸತಕ್ಕದ್ದು.

8. ಆಷಾಢಬಹುಳ ಪಂಚಮಿವರೆಗೆ-1922ನೆಯ ಜುಲೈ 14ರ ವರೆಗೆ.

ಒಟ್ಟು ಪಟ್ಟಿಯಲ್ಲಿ ಸೇರಿಸುವುದಕ್ಕೋಸ್ಕರ ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ಕಳುಹಿಸುವುದಕ್ಕೆ ವಿಷಯಗಳನ್ನೂ ಪ್ರಶ್ನಾಂಶಗಳನ್ನೂ ಆಖೈರಾಗಿ ಚುನಾಯಿಸುವುದಕ್ಕಾಗಿ ಡೆಪ್ಯುಟಿ ಕಮಿಷನರುಗಳು ಡಿಸ್ಟ್ರಿಕ್ಟ್ ಕಸಬೆಗಳಲ್ಲಿ ಒಂದು ಮೀಟಿಂಗನ್ನು ನಡೆಸಬೇಕು.

9. ಶ್ರಾವಣಶುದ್ಧ ಚತುರ್ಥಿವರೆಗೆ-1922ನೆಯ ಜುಲೈ 27ರ ವರೆಗೆ—

(a) ಸಭೆಯಲ್ಲಿ ಚರ್ಚಿಸಬೇಕೆಂದೂ ಡೆಪ್ಯುಟಿ ಕಮಿಷನರ ಅಭಿಪ್ರಾಯಗಳ ಸಮೇತವಾಗಿಯೂ ಇರುವ ವಿಷಯಗಳನ್ನು ಒಟ್ಟುಗೂಡಿಸಿ ತಯಾರುಮಾಡಿರುವ ಪಟ್ಟಿಗಳನ್ನು ಪ್ರಶ್ನಾಂಶಗಳೊಡನೆ ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ತಲಪಿಸಬೇಕು.

(b) ಮೈಸೂರು ಯೂನಿವರ್ಸಿಟಿಯ ತರಫ್ ಚರ್ಚೆಯಬಗ್ಗೆ ಸೂಚಿಸಿರುವ ವಿಷಯಗಳನ್ನು ಅಲ್ಲಿಂದ ಸಭೆಗೆ ಬರಬಹುದಾದ ಮೆಂಬರುಗಳ ಹೆಸರುಗಳೊಡನೆ ರಿಜಿಸ್ಟ್ರಾರರವರು ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯೇಟಿಗೆ ಸೀದಾ ಕಳುಹಿಸತಕ್ಕದ್ದು.

10. ಆಶ್ವಯುಜ ಶುದ್ಧ ಚತುರ್ಥೀವರೆಗೆ—1922ನೆಯ ಸೆಪ್ಟಂಬರ್ 24ರ ವರೆಗೆ—

ಸಭೆಯ ಸಮಾರಂಭದ ದಿನದಲ್ಲಿ ಒಪ್ಪಿಸಬೇಕೆಂದಿರುವ ಎಲ್ಲಾ ಅಭಿನಂದನ ಪತ್ರಿಕೆಗಳ ನಕಲುಗಳನ್ನು ಮುಂದಾಗಿಯೇ ತ್ರಿಪ್ರತಿಗಳಲ್ಲಿ 1922ನೆಯ ಸೆಪ್ಟಂಬರ್ 24ನೆಯ ತಾರೀಖು ಅಥವಾ ಆ ಮೊದಲೇ ಚೀಫ್ ಸೆಕ್ರೆಟರಿಯವರಿಗೆ ತಲಪುವಂತೆ ಕಳುಹಿಸತಕ್ಕದ್ದು. (1917ನೆಯ ಮೇ 10ನೆಯ ಮರ್ಕೂಂ ಜಿ. 14902-11-ಜಿ. ಎಂ. 422-16-2ನೆಯ ನಂಬರುಳ್ಳ ಸರ್ಕಾರಿ ಹುಕುಮಿನ 4ನೆಯ ಪ್ಯಾರಾವನ್ನು ನೋಡತಕ್ಕದ್ದು.)

11. ಆಶ್ವಯುಜ ಶುದ್ಧ ದ್ವಾದಶಿ—1922ನೆಯ ಅಕ್ಟೋಬರ್ 2. ಸಭೆಯ ಸಮಾರಂಭದ ದಿನ.

12. ಆಶ್ವಯುಜ ಶುದ್ಧ ತ್ರಯೋದಶಿ—1922ನೆಯ ಅಕ್ಟೋಬರ್ 3. ಸಭೆಯ ಮೀಟಿಂಗುಗಳು ಪ್ರಾರಂಭವಾಗುವುವು.

13. ಆಶ್ವಯುಜ ಶುದ್ಧ ತ್ರಯೋದಶಿ-1922ನೆಯ ಅಕ್ಟೋಬರ್ 3. ಸಭೆಯಲ್ಲಿ ಚರ್ಚೆಮಾಡಲು ತರಬೇಕೆಂದಿರುವ ಸಪ್ಲಿಮೆಂಟಲ್ ವಿಷಯಗಳನ್ನು 1922ನೆಯ ಅಕ್ಟೋಬರ್ 3ನೆಯ ತಾರೀಖು ಮಧ್ಯಾಹ್ನ 12 ಘಂಟೆಯೊಳಗಾಗಿ ಚೀಫ್ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು. (1915ನೆಯ ನವಂಬರ್ 24ನೆಯ ಮರ್ಕೂಂ ಜಿ. 6395-444—ಜಿ. ಎಂ. 311-15-1ನೆಯ ನಂಬರುಳ್ಳ ಸರ್ಕಾರಿ ಹುಕುಮನ್ನು ನೋಡತಕ್ಕದ್ದು.)

ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡು.

(ಸರ್ಕಾರಿ ನೌಕರಿಗೆ ಉಮೇದುವಾರರನ್ನು ತೆಗೆದುಕೊಳ್ಳುವ ಸಂಸ್ಥೆ)

ನೋಟೀಸ್.

ನಂ. ಇ. ಎ. 2736, ತಾರೀಖು 10ನೆಯ ಜನವರಿ 1922.

ಸರ್ಕಾರದಲ್ಲಿ ಗುಮಾಸ್ತೆ ಮತ್ತು ಕೆಳಗಣ ದರ್ಜೆಯ ಎಕ್ಸಿಕ್ಯೂಟೀವ್ ನೌಕರಿಗಳನ್ನು ಅಪೇಕ್ಷಿಸುವ ಎಲ್ಲಾ ಉಮೇದುವಾರರೂ (ಬ್ರಾಹ್ಮಣರೂ ಮತ್ತು ಬ್ರಾಹ್ಮಣೇತರರೂ) ಬೆಂಗಳೂರು ಪಬ್ಲಿಕ್ ಆಫೀಸುಗಳಲ್ಲಿರುವ ಸೆಂಟ್ರಲ್ ರಿಕ್ರೂಟ್‌ಮೆಂಟು ಬೋರ್ಡಿನ ಸೆಕ್ರೆಟರಿಯವರಿಗೆ ಇದರಜೊತೆಯಲ್ಲಿ ನಮೂದಿಸಿರುವ ನಮೂನೆಯಲ್ಲಿ ದ್ವಿಪ್ರತಿಯಲ್ಲಿ 1922ನೆಯ ಇಸವಿ ಜನವರಿ 31ನೆಯ ತಾರೀಖಿನ ಒಳಗೆ (ಈಚೆಗೆ ಈ ಅವಧಿಯನ್ನು ಫೆಬ್ರವರಿ ತಾ|| ೮ರವರೆಗೆ ಹೆಚ್ಚಿಸಿಕೊಟ್ಟಿದ್ದಾರೆ.) ಅರ್ಜಿಗಳನ್ನು ಹಾಕಿಕೊಳ್ಳತಕ್ಕದ್ದು. ಈಗಾಗಲೇ ಅರ್ಜಿಯನ್ನು ಹಾಕಿಕೊಂಡಿರುವವರೂ ಸಹ ತಿದ್ದುಪಡಿಯಾದ ಸದರಿ ನಮೂನೆಯಲ್ಲಿ ಅರ್ಜಿಯನ್ನು ಪುನಃ ಕಳುಹಿಸತಕ್ಕದ್ದು. ಇಲ್ಲವಾದರೆ ಅವರ ಅರ್ಜಿಗಳಿಗೆ ನಿಗಾಕೊಡುವುದಿಲ್ಲ.

2. ಈಗಾಗಲೇ ಸರ್ಕಾರಿ ನೌಕರಿಯಲ್ಲಿದ್ದು ಇತರ ಇಲಾಖೆಗಳಲ್ಲಿ ನೌಕರಿಗಳನ್ನು ಅಪೇಕ್ಷಿಸುವವರು ತಮ್ಮ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಕ್ರಮಪ್ರಕಾರ ತಮ್ಮ ಇಲಾಖಾ ಅಧಿಕಾರಿಗಳಮೂಲಕ ಹಾಕಿಕೊಳ್ಳತಕ್ಕದ್ದು.

3. ಅರ್ಜಿದಾರರಿಗೆ ಸರಬರಾಯಿ ಮಾಡುವುದಕ್ಕಾಗಿ ಅರ್ಜಿಗಳ ನಮೂನೆ ಪ್ರತಿಗಳನ್ನು ಇಟ್ಟಿರುವುದಿಲ್ಲ.

ಎ. ವಿ. ರಾಮನಾಥನ್,
ಸೆಕ್ರೆಟರಿ, ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡು.

ಬೆಂಗಳೂರು ಪಬ್ಲಿಕ್ ಆಫೀಸುಗಳಲ್ಲಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್
ಬೋರ್ಡಿನ ಸೆಕ್ರೆಟರಿಯವರಿಗೆ.

ಸ್ವಾಮಿ.

ಮೈಸೂರು ಸರ್ಕಾರಿ ನೌಕರಿಗಾಗಿ ಈ ನನ್ನ ಅರ್ಜಿಯನ್ನು ಬೋರ್ಡಿನವರ ಪರ್ಯಾಲೋಚನ ಬಗ್ಗೆ ಹಾಜರ್ಪಡಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಅಂಶಗಳೂ ನಿಜವೆಂದೂ ವಾಸ್ತವವೆಂದೂ ದೃಢವಾಗಿ ತಿಳಿಸುತ್ತೇನೆ. ನನ್ನ ಇಂಗ್ಲೀಷು ಮತ್ತು ಕನ್ನಡಬರವಣಿಗೆಯ ನಮೂನೆಗಳನ್ನು ಫುಲ್ಸ್‌ಕ್ಯಾಪ್ ಸೈಜಿನ ಅರ್ಧಗಜ ಕಾಗದದಲ್ಲಿ ನನ್ನ ಪ್ರಶಸ್ತಿ ಪತ್ರಗಳ ನಕಲುಗಳೊಡನೆ ಇದರಜೊತೆಗೆ ಲಗತ್ತಿಸಿರುತ್ತೇನೆ.

ಸ್ವಾಮಿ,
ತಮ್ಮ ಅತ್ಯಂತ ವಿಧೇಯನಾದ ಅರ್ಜಿದಾರ.

1. ಪೂರ್ಣವಾದ ಹೆಸರು.
2. ಪೋಸ್ಟು ಆಫೀಸು ವಿಳಾಸ.. (ವಿಳಾಸವು ಬದಲಾಯಿಸಿದರೆ ಒಡನೆ ಸೆ. ರಿ. ಬೋ. ಸೆಕ್ರೆಟರಿಯವರಿಗೆ ತಿಳಿಸತಕ್ಕದ್ದು)
3. ಹುಟ್ಟಿದ ತಾರೀಖು ಮತ್ತು ಕಳೆದಹುಟ್ಟಿದ ದಿವಸ ವಯಸ್ಸು.
4. ಹುಟ್ಟಿದ ಸ್ಥಳ (ಗ್ರಾಮ, ಅಥವಾ ಟೌನು, ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಇವುಗಳನ್ನು ತಿಳಿಸುವುದು)
5. ಹುಟ್ಟಿನಿಂದಾಗಲಿ ಅಥವಾ ಸ್ಥಿರವಾಸದಿಂದಾಗಲಿ ಮೈಸೂರು ದೇಶೀಯನೆ ?
6. ತಂದೆಯ ಹೆಸರು.
7. ತಂದೆಯ ಕಸಬು.
8. ಜಾತಿ.
9. ತೇರ್ಗಡೆಯಾಗಿರುವ ಪಬ್ಲಿಕ್ ಪರೀಕ್ಷೆ ಮತ್ತು ತೇರ್ಗಡೆಯಾದ ವರ್ಷ
10. ಹಿಂದೆ ಸರ್ಕಾರಿ ಅಥವಾ ಖಾಸಗಿ ನೌಕರಿ ಮಾಡಿದರೆ ಅದರ ತಪ್ಸೀಲುಗಳು.
11. ಮೈಸೂರು ಸಂಸ್ಥಾನದಲ್ಲಿ ಅರ್ಜಿದಾರನಿಗಾಗಲಿ ಅಥವಾ ಅವನ ಮನೆತನಕ್ಕಾಗಲಿ ಸ್ವತ್ತುಗಳಿದ್ದರೆ ಅವುಗಳ ತಪ್ಸೀಲುಗಳು. ಸ್ಥಿರ ಸ್ವತ್ತುಗಳಿದ್ದರೆ ಸ್ಥಳ ಅಥವಾ ಸ್ಥಳಗಳು.

ಅರ್ಜಿದಾರನಿಗೆ ವಿಶೇಷ ಪರಿಶ್ರಮವುಳ್ಳ ವಿಷಯ ಅಥವಾ ವಿಷಯಗಳು
ನೌಕರಿಯನ್ನು ಅಪೇಕ್ಷಿಸುವ ಸ್ಥಳ ಅಥವಾ ಸ್ಥಳಗಳು.
ಅಪೇಕ್ಷಿಸಿದ ನೌಕರಿ ಅಥವಾ ನೌಕರಿಗಳು.
ನಿರೀಕ್ಷಣೆಯಲ್ಲಿರುವ ಕನಿಷ್ಠ ಪಕ್ಷದ ಸಂಬಳ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಬಹುಮಾನ.

ಶ್ರೀಮನ್ಮಹಾದಕ್ಷಿಣಕಾಶೀ ಸಿಂಹಾಸನಾಧೀಶ ಸ್ವಾಮಿ ವಿರೂಪಾಕ್ಷ ಒಡೆಯರವರು ಸಂಸ್ಕೃತದಲ್ಲಿ ಬರೆದ ಅಪ್ರತಿಮವಾದ ಶಾಸ್ತ್ರಬೋಧವೆಂಬ ದೊಡ್ಡ ಪುಸ್ತಕದ ಅಮೌಲ್ಯ ವಿದ್ವತ್ತಿಗಾಗಿ ಇಂದೂರು ಸಂಸ್ಥಾನಾಧಿಪತಿಗಳಾದ ಶ್ರೀಮಂತ ತುಕೋಜೀರಾವ್ ಮಹಾರಾಜಾ ಬಹದ್ದೂರ ಜಿ. ಸಿ. ಐ. ಇ. ಯವರು ಬಹುಮಾನಪುರಸ್ಸರ ೨೦೧ ರೂಪಾಯಿಗಳನ್ನು ಸದರಿ ಶ್ರೀ ಸ್ವಾಮಿಗಳವರಿಗೆ ಭಕ್ಷೀಸ (ಇನಾಂ) ನ್ನು ಇದೇ ತಿಂಗಳಲ್ಲಿ ಕೊಟ್ಟದ್ದನ್ನು ಕೇಳಿ ವೀರಶೈವರಾದ ನಾವೆಲ್ಲರೂ ಒಳ್ಳೇ ಅಭಿಮಾನದಿಂದ ಮಹಾರಾಜರಿಗೆ ಕೃತಜ್ಞತೆಗಳನ್ನು ಅರ್ಪಿಸುವೆವು.

ಚೌಡಯ್ಯ ದಾನಪುರದ ನಿವಾಸಿಗಳು.

ದನಗಳ ಪರಿಷೆ.

ಹಾಸನದ ತಾಲ್ಲೂಕು ಗೊರೂರಿನಲ್ಲಿ ತಾ|| 3-2-22ನೇ ಶುಕ್ರವಾರದ ಲಾಗಾಯ್ತು ನಾಲ್ಕು ದಿನಗಳವರೆಗೆ ನಡೆಯುವ ದನಗಳ ಪ್ರದರ್ಶನಕ್ಕೆ ಧಾರವಾಡ, ಹುಬ್ಬಳ್ಳಿ, ಬೆಳಗಾಂವ, ಹಾವೇರಿ, ಮಂಗಳೂರು ಮೊದಲಾದ ಪ್ರಾಂತಗಳಿಂದ ವ್ಯಾಪಾರಕ್ಕಾಗಿ ಬರುವವರು ಅರಸೀಕೆರೆಯ ಮಾರ್ಗವಾಗಿ ಹಾಸನದ ರೈಲ್‌ಸ್ಟೇಷನ್ನಿನಲ್ಲಿಳಿದು ಗೊರೂರಿಗೆ ಬರಬೇಕಾಗಿರುವುದು. ಈ ಊರು ಹಾಸನ-ಅರ್ಕಲಗೂಡು ರಸ್ತೆಯಲ್ಲಿ ೧೪|| ಮೈಲಿಕಲ್ಲಿನ ಹತ್ತಿರ (ಹಾಸನದಿಂದ ದಕ್ಷಿಣಕ್ಕೆ) ಹೇಮಾವತೀ ನದಿಯ ಎಡದಡದಲ್ಲಿದೆ. ವ್ಯಾಪಾರಕ್ಕಾಗಿ ಬರುವ ದೊಡ್ಡ ದೊಡ್ಡ ವರ್ತಕರು ಕಮಿಟಿಯ ಕಾರ್ಯದರ್ಶಿಯರಿಗೆ ೪ ದಿನ ಪೂರ್ವಭಾವಿಯಾಗಿ ತಿಳಿಸಿದಲ್ಲಿ ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧರಾಗಿರುತ್ತಾರೆ.

ಜಿ. ಕೆಂಪಪಿಳ್ಳೆ ಎಂ. ಎ., ಎಲ್‌ಎಲ್. ಬಿ.
ಪ್ರದರ್ಶನ ಸಮಿತಿಯ ಅಧ್ಯಕ್ಷ, ಗೊರೂರು.

ಶಿರಾಳಕೊಪ್ಪಕ್ಕೆ ಬ್ಯಾಂಕ್ ಶಾಖೆ ಬೇಕು.

ಶಿಕಾರಿಪುರದ ತಾಲ್ಲೂಕು ಶಿರಾಳಕೊಪ್ಪಕ್ಕೆ ಒಂದು ಮೈಸೂರ್ ಬ್ಯಾಂಕ್ ಬ್ರಾಂಚ್‌ಆಫೀಸನ್ನು ಇಟ್ಟುಕೊಡಬೇಕೆಂದು ಇಲ್ಲಿಯ ಜನರು ಈ ಹಿಂದೆ ಕೇಳಿಕೊಂಡಿರುವಲ್ಲಿ ಎಕನಾಮಿಕ್ ಸೂಪರಿಂಟೆಂಡೆಂಟರು ಇಲ್ಲಿಯ ಜನರಿಗೆ ಕೆಲವು ಸಂಗತಿಗಳನ್ನು ಕೇಳಿದರು. ಅದಕ್ಕೆ ಇವರು ಸರಿಯಾದ ಉತ್ತರವನ್ನು ಕೊಟ್ಟು ಆಮೇಲೆ ಬ್ಯಾಂಕ್‌ಮ್ಯಾನೇಜರರಿಗೆ ಬರೆದುಕೊಂಡ ಮೇಲೆ ನ್ಯಾಮತಿಯಲ್ಲಿ ಒಂದು ಬ್ಯಾಂಕನ್ನು ಏರ್ಪಾಡು ಮಾಡುವೆವೆಂತಲೂ ಅದರ ಫಲಿತಾಂಶವನ್ನು ನೋಡದ ವಿನಾ ಇಲ್ಲಿಗೆ ಕೊಡಲು ಆಗುವುದಿಲ್ಲವೆಂತಲೂ ತಿಳಿಸಿರುತ್ತಾರೆ. ಈ ವೂರು ಬೊಂಬಾಯಿ ಮೈಸೂರು ಸೀಮೆಯ ಮಧ್ಯೆ ಇದ್ದು ಸಾಗರ, ಸೊರಬ, ಹಿರೇಕೇರೂರು, ಚಿಕ್ಕೇರೂರು, ಆನವಟ್ಟಿ, ಶಿಕಾರಿಪುರ ಈ ವೂರುಗಳಿಂದ ಮೇಲ್ಕಂಡ ಇನ್ನೊಂದು ಊರಿಗೆ ಹೋಗಬೇಕಾದರೆ ಈ ಊರಮೇಲೆ ಹಾಯ್ದು ಹೋಗಬೇಕಲ್ಲದೆ ಈ ಊರು ಅಕ್ಕಿ ವ್ಯಾಪಾರಕ್ಕೆ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿಯ ವರ್ತಕರು ಅಡಕೆ, ಬೆಲ್ಲ, ಅಕ್ಕಿ, ಎಣ್ಣೆ, ತಂಬಾಕು ಈ ವ್ಯಾಪಾರವನ್ನು ಬಹಳವಾಗಿ ಮಾಡುತ್ತಾರೆ. ಇವರು ಈ ವ್ಯಾಪಾರಕ್ಕೆ ಸರಿಯಾದ ಬಂಡವಾಳ ಇಲ್ಲದೆ ಧಾರವಾಡಸೀಮೆಯ ಬ್ಯಾಡಗಿಯಲ್ಲಿ ಸಾಹುಕಾರರ ಹತ್ತಿರ ಸರಕುಗಳನ್ನು ಇಟ್ಟು ರೂಪಾಯಿತಂದು ವ್ಯಾಪಾರಮಾಡುವವರಾಗಿದ್ದಾರೆ. ಆದ್ದರಿಂದ ಇಲ್ಲಿಯ ವ್ಯಾಪಾರವೆಲ್ಲಾ ಪರಜಿಲ್ಲೆಯವರ ಸ್ವಾಧೀನವಾಗಿದೆ ಎಂದು ತಿಳಿಸಲು ವಿಷಾದವಾಗುತ್ತದೆ. ಆದ್ದರಿಂದ ಇಲ್ಲಿಗೆ ಜಾಗ್ರತೆಯಾಗಿ ಒಂದು ಬ್ಯಾಂಕನ್ನು ಏರ್ಪಾಡುಮಾಡಿಕೊಟ್ಟು ನಮ್ಮನ್ನು ಉದ್ಧಾರ ಮಾಡುತ್ತಾರೆಂದು ನಂಬಿರುವ ಸ್ಥಳಿಕರು.

ಹಾನಗಲ್ಲ ತಾಲ್ಲೂಕು.

ಹಾನಗಲ್ಲ ತಾ|| ಹಾವಣಗಿ, ಅರಳೇಶ್ವರ, ಸಂಕ್ರಿಕೊಪ್ಪ, ಆಡೂರ, ಆಲೂರ, ಹಿರೂರ ಈ ಗ್ರಾಮಗಳಲ್ಲಿ ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಗುರುವರ್ಗದ ಐಕ್ಯಹಾಗೂ ವಿದ್ಯಾವಗ್ಯರೆ ವಿಷಯಗಳ ಮೇಲೆ ವೆ|| ಬಸವಾರ್ಯ ಬೂದಿಹಾಳಮಠ, ಆ ಊರ ಕನ್ನಡ ಗಂಡುಹುಡುಗರ ಹೆಡ್ಮಾಸ್ತರ ಮಿ. ಚನ್ನವೀರಪ್ಪ, ಗಂಗಪ್ಪಶೆಟ್ಟರ ಮಿ. ಚನ್ನಬಸಪ್ಪ ಶಾಂತಪ್ಪ ಅಂಕಲಕೋಟಿ ಮಿ|| ಸಿಂಧೂರ ಇವರ ವ್ಯಾಖ್ಯಾನಗಳಾದವು. ಹಾಗೂ ಸದರಿ ಶ್ರೀಗಳವರಿಂದ ಷಟ್‌ಸ್ಥಲ ವಿಷಯವಾಗಿ ಆದ ಉಪನ್ಯಾಸವನ್ನು ಕೇಳಿ ಜನರು ಅತ್ಯಾನಂದಭರಿತರಾದರು. ಅಲ್ಲಿಯ ಪ್ರಮುಖರ ಇಚ್ಛಾನುಸಾರವಾಗಿ, ಹಾವಣಗಿ, ಸಂಕ್ರಿಕೊಪ್ಪ ಈ ಗ್ರಾಮಗಳಲ್ಲಿ ವೀರಶೈವತರುಣ ಸಂಘಗಳು ಇದಕ್ಕೆ ಸಂಬಂಧಿಸಿದ ವಾಚನಾಲಯಗಳು ಸಹ ಸ್ಥಾಪಿಸಲ್ಪಟ್ಟುವು. ಮತ್ತು ಶ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಗಳವರ ಕೃಪಾಬಲದಿಂದ ಧಾರವಾಡದೊಳಗೆ ಸ್ಥಾಪಿಸಲ್ಪಟ್ಟಿರುವ ಶ್ರೀ ಮುರುಘಾಮಠದ ಫ್ರೀ ಬೋರ್ಡಿಂಗಿಗೆ ಹಾವಣಗಿಯಲ್ಲಿ, ಅರಳೇಶ್ವರದಲ್ಲಿ, ಸಂಕ್ರಿಕೊಪ್ಪದಲ್ಲಿ, ಆ ಊರಲ್ಲಿ ಭಕ್ತರು ಭಕ್ತಿಪೂರ್ವಕವಾಗಿ ವರ್ಷಾಶನಗಳನ್ನು ಸಲ್ಲಿಸಿದರು. ಸಂಕ್ರಿಕೊಪ್ಪದಲ್ಲಿ ಆದ ಧಾನ್ಯದ ವರ್ಷಾಶನವನ್ನು ಪುನಃ ಶ್ರೀಗಳವರು ಅಲ್ಲಿಯ ವೀರಶೈವ ತರುಣಸಂಘಕ್ಕೆ ಆಶೀರ್ವದಿಸಿರುತ್ತಾರೆ. ಈ ಪ್ರಕಾರ ಶ್ರೀಗಳವರು ಭಕ್ತವರ್ಗದ ಶ್ರೇಯಸ್ಸಿಗಾಗಿ ಪ್ರಯತ್ನಮಾಡುವದು ಧರ್ಮೋತ್ಕರ್ಷಕ್ಕೆ ಕಾರಣವಾಗಿರುವದು. ಓರ್ವ ಸಮಾಜಹಿತೈಷಿ.

ವಿರಕ್ತಮಠ ಜಡೆ, ತಾ|| ಸೊರಬ.

ಇದೇ ದುರ್ಮತಿ ಸಂವತ್ಸರದ ಮಾಘಶುದ್ಧ ೧೫ ರವಿವಾರದ (ತಾ|| ೧೨-೨-೨೨) ಆರಭ್ಯ ಪದ್ಧತಿಮೇರೆಗೆ ಶ್ರೀಗುರು ಗದ್ದಿಗೆಯ ರಥೋತ್ಸವ ಕಾರ್ಯಗಳು ಈ ಕೆಳಗೆ ವಿವರಿಸಿರುವ ಪ್ರಕಾರ ಈ ನಮ್ಮ ಜಡೆ ಮಠದಲ್ಲಿ ನೆರವೇರಿಸಲ್ಪಡುವವು. ಮತ್ತು ರಥೋತ್ಸವಕಾಲದಲ್ಲಿಯೇ ವೀರಶೈವ ಪ್ರಾಂತಿಕಸಭೆಯು ಸಹ ಇಲ್ಲಿ ಕೂಡುತ್ತದೆ. ಪ್ರಯುಕ್ತ ಸರ್ವ ವೀರಶೈವ ಮಹನೀಯರುಗಳೂ ಈ ಕಾರ್ಯದಸಲುವಾಗಿ ಆಗಮಿಸಿ ಗುರುಗದ್ದಿಗೆಯ ದರ್ಶನಾಶೀರ್ವಾದಗಳಿಗೆ ಪಾತ್ರರಾಗತಕ್ಕದ್ದಲ್ಲದೆ ಸಭಾಕಾರ್ಯಗಳನ್ನು ಸಾಂಗಗೊಳಿಸಿ ಸಮಾಜೋನ್ನತಿಗೆ ಉತ್ತೇಜನವನ್ನುಂಟುಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ರಥೋತ್ಸವ ಕಾರ್ಯಗಳವಿವರ—೧. ಮಾಘಶುದ್ಧ ೧೫ ರವಿವಾರ (ತಾ|| ೧೨-೨-೨೨) ಸಾಯಂಕಾಲಕ್ಕೆ ಪುಷ್ಪರಥಾರೋಹಣ ಮತ್ತು ಅನಾಥ ವೀರಶೈವವಟುಗಳ ಮಾಹೇಶ್ವರ ದೀಕ್ಷಾಸಂಸ್ಕಾರ. ೨. ಮಾಘ ಬಹುಳ ೨ ಸೋಮವಾರ (ತಾ|| ೧೩-೨-೨೨) ಸಾಯಂಕಾಲಕ್ಕೆ ಮಹಾರಥಾರೋಹಣ. ೩. ಮಾಘಬಹುಳ ೩ ಮಂಗಳವಾರ (ತಾ|| ೧೪-೨-೨೨) ಗಣಾರಾಧನೆ ಮತ್ತು ಶಿವಕೀರ್ತನ. ೪. ಮಾಘಬಹುಳ ೪ ಬುಧವಾರ (ತಾ|| ೧೫-೨-೨೨) ವೀರಶೈವ ಪ್ರಾಂತಿಕಸಭಾ ಮತ್ತು ಶಿವಕೀರ್ತನ. ೫. ಮಾಘಬಹುಳ ೫ ಗುರುವಾರ (ತಾ|| ೧೬-೨-೨೨) ಮಂಗಳಸ್ನಾನ ಮತ್ತು ಶಿವಕೀರ್ತನ ಸಹ.

ಸೂಚನೆ—ಪರಸ್ಥಳದಿಂದ ಬರತಕ್ಕ ಸರ್ವ ವೀರಶೈವ ಮಹನೀಯರುಗಳಿಗೂ ವಾಸ, ಭೋಜನ, ಇತ್ಯಾದಿಗಳ ಯೋಗ್ಯವ್ಯವಸ್ಥೆಯು ಮಾಡಲ್ಪಡುತ್ತದೆ.

ಚನ್ನವೀರಯ್ಯನವರು,
ಸರ್ವಾಧಿಕಾರಿ, ವಿರಕ್ತಮಠ.

ಸಕಲ ವೀರಶೈವ ಬಾಂಧವರಿಗೆ ಅರಿಕೆ.

ತಾರೀಖು ೨೨-೧-೧೯೨೨ರ ಸ್ಟಾರ ಪತ್ರದಲ್ಲಿ ಹಾಗು ೧೪-೧-೧೯೨೨ರ ಕರ್ನಾಟಕ ಟೈಯಿಮ್ಸು ಪತ್ರದಲ್ಲಿ ಪ್ರಕಟವಾದ ವಿನಂತಿಗಳಿಂದ ಕೆಲವರು ಸದ್ಗೃಹಸ್ಥರು ನನ್ನ ವಿಷಯದಲ್ಲಿ ತಪ್ಪುಗ್ರಹಿಕೆಯುಳ್ಳವರಾಗಿರುವರೆಂದು ತಿಳಿಯುತ್ತದೆ. ಈ ಗೃಹಸ್ಥರು ಹೇಳುವ ವಾದವನ್ನು ನಾನು ಹೂಡಿಲ್ಲ. ಉಜ್ಜನೀ ಮೊದಲಾದ ಮಠಸ್ಥರ ಸಹಾನುಭೂತಿಯಿಂದಲೂ ಉತ್ತೇಜನದಿಂದಲೂ ಕಾಶೀನಾಥಶಾಸ್ತ್ರಿಯೆಂಬುವರು ಒಮ್ಮೆ ಪರಮತಸ್ಥರ ಸೋಗಿನಿಂದ ಒಮ್ಮೆ ಗುರುವರ್ಗ ಸಭೆಗಳ ನೆವದಿಂದ ಶ್ರೀಮದಲ್ಲಮಪ್ರಭುವಿನ ಹಾಗು ಶ್ರೀಮದ್ಬಸವಾದಿ ಪ್ರಮಥರ ಪುಣ್ಯನಾಮಗಳನ್ನು ದೂಷಿಸಹತ್ತಿದ್ದರಿಂದಲೂ ಅವರ ಇತಿಹಾಸಕ್ಕೆ ಕಲಂಕ ಹಚ್ಚಲು ಪ್ರಯತ್ನಪಡಹತ್ತಿದ್ದರಿಂದಲೂ ಭಕ್ತವರ್ಗಕ್ಕೇ ಅವಮಾನವಾಗುವ ಠರಾವುಗಳನ್ನು ಮಾಡಹತ್ತಿದ್ದರಿಂದಲೂ ನಾನು ಈ ವಾದದಲ್ಲಿ ಕೈಹಾಕಿರುವೆನು. ಸ್ವತಃ ಶ್ರೀ ಪಂಚಾಚಾರ್ಯರ ವಿಷಯದಲ್ಲಿ ನನ್ನ ಅಗೌರವ ಮತಿಯು ಎಂದೆಂದೂ ಇಲ್ಲ. ಕೆಲವು ಕೃತ್ರಿಮ ಗ್ರಂಥಗಳಿಂದ ನಿಜವಾದ ವೀರಶೈವ ಮಾರ್ಗಕ್ಕೆ ಪ್ರತಿಕೂಲ ಮತಗಳು ಪ್ರಸಾರವಾಗ ಹತ್ತಿದ್ದರಿಂದ ನಾನು ಈ ಗ್ರಂಥಗಳ ಖಂಡನಕ್ಕಾಗಿ ಯತ್ನಿಸಿದೆನು. ನನ್ನ ನಿಬಂಧಗಳನ್ನು ಓದಿದರೆ ನಾನೇನು ಪಂಚಾಚಾರ್ಯರ ನಿಂದಕನೋ ಹೇಗೆ ಎಂಬುದು ತಿಳಿಯುವುದು. ನನ್ನ ೧೦೫ ಪ್ರಶ್ನಗಳಲ್ಲಿ ಶ್ರೀ ಪಂಚಾಚಾರ್ಯರ ನಿಂದಾತ್ಮಕಪ್ರಶ್ನವನ್ನು ಒಂದಾದರೂ ತೋರಿಸಬೇಕು. ಅದೇ ಕಾಶೀನಾಥಶಾಸ್ತ್ರಿಯ ಶ್ರೀ ಬಸವಾದಿನಿಂದಾತ್ಮಕ ಪ್ರಶ್ನಗಳನ್ನು ನೋಡಿರಿ. ಸಮಾಜವು ಅತಿಪೂಜ್ಯಭಾವದಿಂದ ಕಾಣುವ ಶ್ರೀ ಬಸವೇಶನ ಹಾಗು ಶ್ರೀಮನ್ನಿರಂಜನ ಜಂಗಮರೂಪನಾದ ಶ್ರೀ ಪ್ರಭುವಿನ ನಿಂದೆಯನ್ನೂ ಭಕ್ತವರ್ಗದ ನಿಂದೆಯನ್ನೂ ಕೇಳಿ ನಾನು ಸುಮ್ಮನಿರತಕ್ಕದ್ದಿತ್ತೆಂದು ಈ ವಿನಂತಿಯನ್ನು ಮಾಡುವ ಮಹಾಶಯರ ಅಭಿಪ್ರಾಯವಿದ್ದರೆ ನನ್ನ ಉಪಾಯವಿಲ್ಲ. ಕುಂದಗೋಳದಲ್ಲಿಯೂ ನವಲಗುಂದದಲ್ಲಿಯೂ ವಿದ್ವಾಂಸರ ಮುಖಾಂತರ ವಾದ ಜರುಗಿಸಲಿಕ್ಕೆ ನಾನು ಪ್ರಯತ್ನಪಟ್ಟು ನಿರರ್ಥಕವಾಗಲು ವಾದಲೇಖಗಳನ್ನು ಪ್ರಕಟಿಸಿರುವೆನು. ಈಗಲಾದರೂ ವಾದಕ್ಕೆ ನಾನು ಸಿದ್ಧನಿರುವೆನು. ಸಮಾಜಬಾಂಧವರು ನಿಂದಾಪರರಿಗೂ ನಿಂದಾಕರರನ್ನು ಎಮುರಿಸುವವರಿಗೂ ಒಂದೇ ವರ್ಗದಲ್ಲಿ ಸಮಾವೇಶಮಾಡಬಾರದೆಂದು ನನ್ನ ವಿನಂತಿಯುಂಟು. ನಿಂದೆಯಲ್ಲಿ ತೊಡಗಿದ ವ್ಯಕ್ತಿಗಳನ್ನು ನಾನು ನಿಷೇಧಿಸಿರುವೆನು; ಶ್ರೀ ಪಂಚಾಚಾರ್ಯರನ್ನು ಸ್ವತಃ ನಾನೆಂದೂ ನಿಂದಿಸಿಲ್ಲ.

ಪಾವಟೆ ಸಿದ್ಧರಾಮಪ್ಪ.

[ಈ ಲೇಖನದಲ್ಲಿ ಕೆಲಭಾಗಗಳನ್ನು ನಾವು ತೆಗೆಯಬೇಕಾಯಿತು. ಪ.ಪ್ರ.]

ಘನತೆಯನ್ನು ಹೊಂದಿದ ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜ ರಾಜಸಾಹೇಬ್ ಬಹದ್ದೂರರವರ ಅಡಿದಾವರೆಯಲ್ಲಿ.

ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕಿನ ಬಡಪ್ರಜೆಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ—

ಮಹಾಸ್ವಾಮಿ,

ನಾವುಗಳು ವಾಸಮಾಡತಕ್ಕ ಈ ತಾಲ್ಲೋಕಿನಲ್ಲಿ ಈಗ್ಗೆ ಮೂರು ವರ್ಷಗಳ ಲಾಗಾಯ್ತು ಸುತರಾಂ ಮಳೆಯಿಲ್ಲದೆ ಜನದನಗಳಿಗೆ ಕುಡಿಯುವುದಕ್ಕೆ ನೀರು ಸಹಾಯವಿಲ್ಲದೆ ತುಂಬಾ ತೊಂದರೆಯಾಗಿರುತ್ತೆ. ನೀರಿಗೇನೇ ಇಂಥಾ ತೊಂದರೆಯಿರತಕ್ಕ ಭಾಗದಲ್ಲಿ ದವಸ ಮತ್ತು ಹುಲ್ಲಿನ ತೊಂದರೆ ಎಷ್ಟಿರಬೇಕೆಂಬುದನ್ನು ಮಹಾಸ್ವಾಮಿಯವರೇ ಯೋಚಿಸತಕ್ಕದ್ದಾಗಿದೆ. ಈಗ್ಗೇನೆ ಸಾವಿರಾರು ಸಂಸಾರಿಗಳು ಸ್ಥಳಗಳನ್ನು ಬಿಟ್ಟು ಜೀವನೋಪಾಯಕ್ಕೋಸ್ಕರ ಬೇರೇಕಡೆಗಳಿಗೆ ಹೊರಟುಹೋಗಿರುತ್ತಾರೆ. ಇದೇ ವಿಚಾರದಲ್ಲಿ ದಿವಾನ್‌ಸಾಹೇಬರವರಿಗೂ ಅರ್ಜಿಗಳ ಮೂಲಕ ಅಂಕೆ ಮಾಡಿಕೊಂಡಾಗ್ಗೂ ನಮ್ಮುಗಳನ್ನು ವಿಚಾರಿಸತಕ್ಕವರೇ ಇಲ್ಲವಾಗಿದೆ.

ಧರ್ಮರಾಜ್ಯವಾದ ತಮ್ಮ ರಾಜ್ಯದಲ್ಲಿ ನಮ್ಮಂಥಾ ಬಡಪ್ರಜೆಗಳ ತೊಂದರೆಯನ್ನು ನಿವೃತ್ತಿಮಾಡಲು ಏರ್ಪಡಿಸತಕ್ಕ ಘನಸರ್ಕಾರದವರೂ ಕೂಡ ಯಾವ ಏರ್ಪಾಡೂ ಮಾಡದೆ ತಾವು ಪ್ರಕಟಿಸತಕ್ಕ ಕಾಲಸ್ಥಿತಿ ರಿಪೋರ್ಟ್‌ನೋಡಿದರೆ ಸ್ಥಳೀಯ ಅಧಿಕಾರಿಗಳು ನಿರಂಕುಶವಾದ ಪ್ರಭುತ್ವವನ್ನು ಅವಲಂಬಿಸಿರುವುದೇ ಕಾರಣವೆನ್ನುವುದು ವ್ಯಕ್ತಪಡುತ್ತದೆಯಲ್ಲದೆ ಜಮಾಬಂದಿಗೆ ದಯಮಾಡಿಸತಕ್ಕ ಆಫೀಸರವರಲ್ಲಿ ಅರ್ಜಿಮೂಲಕ ಅರಿಕೆಮಾಡಿಕೊಂಡದ್ದಕ್ಕೆ ನಮ್ಮುಗಳ ಅರ್ಜಿಯಲ್ಲಿ ಪ್ರಾರ್ಥಿಸಿಕೊಳ್ಳುವ ರಿಮಿಷನ್; ರಿಲೀಫ್ ಕಾಮಗಾರಿ; ತಕಾವಿಸಾಲ; ಕುರುಡಕುಂಟರಿಗೆ ಪಡಿತರಯಾನೆ ಭತ್ಯ; ವಗೈರೆಗಳು ಈ ಯುಗದಲ್ಲಿಯೇ ನಮ್ಮುಗಳಿಗೆ ದೊರೆಯಲಾರದೆನ್ನುವುದಾಗಿ ಕೊಡಿಸುವ ಅಪ್ಪಣೆಮೇಲೆ ನಮ್ಮುಗಳ ಅಹವಾಲ್ ಮುತ್ಕಾರಲ್ಲಿ ಅರಿಕೆಮಾಡಿಕೊಳ್ಳಬೇಕೆನ್ನುವುದು ತೋಚದೆ ತಡವರಿಸಿ ಮಹಾಸನ್ನಿಧಿಯಲ್ಲಿ ಅಂಕೆಮಾಡಿಕೊಂಡಿರುತ್ತೇವೆ.

ಮೇಲ್ಕಂಡ ವಿಷಯಗಳೆಲ್ಲವೂ ಮಹಾಸನ್ನಿಧಿಗೆ ಗೊತ್ತಾಗಬೇಕಾದಲ್ಲಿ ಸ್ಪೆಷಲ್ ಆಫೀಸರವರನ್ನು ಕಳುಹಿಸಿಕೊಟ್ಟು ವಿಚಾರಮಾಡಿಸಿದರೆ ಗೊತ್ತಾಗುತ್ತೆಯೇವಿನಾ ನಿರಂಕುಶಪ್ರವರ್ತಕರಾದ ಸ್ಥಳೀಯ ಆಫೀಸರುಗಳಿಂದ ತಿಳಿಯುವುದಿಲ್ಲವಾದ್ದರಿಂದ ನಮ್ಮುಗಳ ಪ್ರಾರ್ಥನೆಯನ್ನು ಘನವಾದ ಚಿತ್ತಕ್ಕೆ ತಂದು ನಮ್ಮುಗಳ ಕಷ್ಟನಷ್ಟಗಳನ್ನು ಪರಿಹರಿಸಿ ಕಾಪಾಡಬೇಕಾಗಿ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ.

ಶಿರಾ ತಾಲ್ಲೂಕಿನ ರೈತರು.

[ಇದರ ಕೆಳಗೆ ಅನೇಕರ ರುಜುಗಳು ಮಾಡಲ್ಪಟ್ಟಿವೆ.—ಪ. ಪ್ರ.]

ಕಡೂರು ತಾಲ್ಲೂಕು ಮಲಿದೇವಿಹಳ್ಳಿ.

ಇದೇ ಜನವರಿ ತಾ|| ೧೯ನೆ ಗುರುವಾರ ಪ್ರಾತಃಕಾಲ ೮|| ಗಂಟೆಗೆ ಬ್ರಿಟಿಷ್ ಚಕ್ರಾಧಿಪತ್ಯದ ಯುವಸಾರ್ವಭೌಮರೂ ಮಹಾಮಹಿಮರೂ ಆದ ಪ್ರಿನ್ಸ್‌ಆಫ್‌ವೇಲ್ಸ್‌ರವರು ಪರಿವಾರದೊಂದಿಗೆ ನಮ್ಮ ಶ್ರೀಮನ್ಮಹಾರಾಜರವರ ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ಅತಿಥಿಗಳಾಗಿ ಬಿಜಯಂಗೈಸಿ ನಮ್ಮನ್ನಾಳುವ ಮಹಾರಾಜರವರಿಗೂ ಅವರ ಪ್ರಜಾಸಮುದಾಯಕ್ಕೂ ತಮ್ಮ ಪ್ರಥಮಸಂದರ್ಶನವನ್ನು ದಯಪಾಲಿಸಿದುದು ನಮ್ಮ ಮೈಸೂರು ಸಂಸ್ಥಾನಕ್ಕೆ ಹೆಚ್ಚು ಆನಂದವನ್ನು ಉಂಟುಮಾಡಿರುವುದಲ್ಲದೆ ಇಂಥ ಮಹಾತ್ಮರ ಆಗಮನದಿಂದ ನಮ್ಮ ದೇಶವೇ ಪ್ರಜ್ವಲಿಸಿದಂತಾಯ್ತು. ಇಂಥ ಸುದಿವಸದಲ್ಲಿ ಇವರ ಆಗಮನೋತ್ಸವದ ಸ್ಮರಣಾರ್ಥವಾಗಿ ನಮ್ಮಗ್ರಾಮದ ಸ್ಕೂಲ್‌ಕಟ್ಟಡವನ್ನು ತಳಿರುತೋರಣಗಳಿಂದ ಅಲಂಕರಿಸಿ ಯುವಸಾರ್ವಭೌಮರವರ ಮತ್ತು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಭಾವಚಿತ್ರಗಳನ್ನು ಪುಷ್ಪಮಾಲಿಕೆಗಳಿಂದ ಶೃಂಗರಿಸಿ ಉಚಿತಾಸನದಲ್ಲಿ ಇಡಲ್ಪಟ್ಟಿದ್ದುವು. ಆಕಾಲದಲ್ಲಿ ಸ್ಕೂಲ್ ಬಾಲಕ ಬಾಲಕಿಯರು ಮತ್ತು ಗ್ರಾಮಪ್ರಮುಖರೇ ಮೊದಲಾದ ಸಮಸ್ತರೂ ಸ್ಕೂಲನ್ನು ಪ್ರವೇಶಿಸುವಾಗ ಸ್ಕೂಲ್ ಮುಂಭಾಗದಲ್ಲಿ ಕಟ್ಟಲ್ಪಟ್ಟಿದ್ದ ಜನರಲ್ ಬಾವುಟಕ್ಕೆ ಸೆಲ್ಯೂಟ್‌ಗಳನ್ನುಮಾಡಿ ಒಳಗೆ ಪ್ರವೇಶಿಸಿದ ಕೂಡಲೆ ಪ್ರಿನ್ಸ್‌ಆಫ್‌ವೇಲ್ಸರವರ ನಮ್ಮನ್ನಾಳುವ ಮಹಾಸ್ವಾಮಿಯವರ ಭಾವಚಿತ್ರಕ್ಕೆ ವಂದನೆಗಳನ್ನರ್ಪಿಸಿ ದೇವತಾಪ್ರಾರ್ಥನೆ ಮಾಡಿದಬಳಿಕ ಮ|| ರಾ|| ರಾಯಸದ ರಂಗರಾವ್ ಎಂಬುವರು ಬ್ರಿಟಿಷ್ ಚಕ್ರಾಧಿಪತ್ಯದವರು ನಮ್ಮದೇಶಕ್ಕೆ ಅನುಕೂಲಿಸಿಕೊಟ್ಟಿರುವ ಮಹೋಪಕಾರಗಳನ್ನು ಕುರಿತು ಉಪನ್ಯಾಸಮಾಡಿದ ಬಳಿಕ ಇದೇ ಗ್ರಾಮದ ಸ್ಕೂಲ್‌ಮ್ಯಾಸ್ಟರು ಮ|| ರಾ|| ಎ. ಚನ್ನಪ್ಪನವರು ಶ್ರೀಮನ್ಮಹಾರಾಜ ಸರ್ಕಾರದವರು ಪ್ರಜೋದ್ಧಾರಕ್ಕಾಗಿ ಪಡುತ್ತಿರುವ ಶ್ರಮವನ್ನು ಅವರ ಉದಾರಭಾಷಣಗಳಿಂದ ಹೊರಪಡಿಸಿ ನಮ್ಮದಯಾಳು ಸರ್ಕಾರದವರ ಮತ್ತು ದೇಶಾಭಿಮಾನಿಗಳವರ ಉದಾರಾಶ್ರಯದಿಂದ ನಡೆಯಬೇಕೆಂದಿರುವ II ನೇ ಗ್ರಾಂಟ್‌ಸ್ಕೂಲು ಉಪಾಧ್ಯಾಯರುಗಳ ಮಹಾಸಭೆಗೆ ಯುವಸಾರ್ವಭೌಮರವರ ನಮ್ಮನ್ನಾಳುವ ಮಹಾಸ್ವಾಮಿಯವರ ಕೃಪಾಕಟಾಕ್ಷವನ್ನು ಬೇಡಿ ಬಾಲಕ ಬಾಲಕಿಯರಿಂದ ಶ್ರೇಯಃಪ್ರಾರ್ಥನೆಯನ್ನು ಮಾಡಿಸಿ ಮಹಾಮಹಿಮರಾದ ಪ್ರಿನ್ಸ್‌ಆಫ್‌ವೇಲ್ಸರವರಿಗೂ ನಮ್ಮನ್ನಾಳುವ ಮಹಾಸ್ವಾಮಿಯವರಿಗೂ ಇವರ ರಾಜಕುಟುಂಬಕ್ಕೂ ಸಹ ಶಂಕರನು ದೀರ್ಘಾಯುರಾರೋಗ್ಯವನ್ನಿತ್ತು ನಿರಂತರವೂ ಕಾಪಾಡಲೆಂದು ಸಭಿಕರೆಲ್ಲ ಭಗವತ್ಪ್ರಾರ್ಥನೆ ಮಾಡುವುದರ ಮೂಲಕ ಸಭೆಯು ಮುಕ್ತಾಯವಾಯಿತು.

ಓರ್ವ ಪುರವಾಸಿ.

ಹಿರೇಕೆರೂರ.

ಮೆ|| ದಕ್ಷಿಣಭಾಗದ ಕಮಿಷನರ್ ಸಾ|| ಬಾ|| ರವರು ಹಿರೇಕೆರೂರ ತಾಲ್ಲೂಕಿನಲ್ಲಿ ಮುಕ್ಕಾಂ ಮಾಡಿದ್ದು ಇಲ್ಲಿಯ ತಾಲ್ಲೂಕು ಲೋಕಲ್ ಬೋರ್ಡಿಗೆ ಮಿ|| ದೊಡ್ಡ ಅಡಿವೆಪ್ಪಾ ಕುಬಸದ ಇವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಿ ಬಂದದ್ದರಿಂದ ಯಾವತ್ತು ತಾಲ್ಲೂಕಿನ ಲೋಕಲ್ ಬೋರ್ಡ ಮೆಂಬರರು ತಮ್ಮಬೋರ್ಡಿಗೆ ನಾನ್ ಅಫಿಸಿಯಲ್ ಪ್ರೆಸಿಡೆಂಟರನ್ನು ಸರ್ಕಾರದವರು ಕೊಟ್ಟ ಸಂತೋಷಾರ್ಥವಾಗಿ ತಾ|| ೧೫-೧-೧೯೨೨ನೆ ದಿವಸ ಮೆ|| ಕಮಿಷನರ್ ಸಾ|| ಬಾ|| ರವರಿಗೆ ಲೋಕಲ್ ಬೋರ್ಡಿನವತಿಯಿಂದ ಮಾನಪತ್ರಕೊಡುವ ಸಮಾರಂಭವನ್ನು ಒಳ್ಳೇ ಸಂಭ್ರಮದಿಂದ ಜರುಗಿಸಿದರು. ಈ ಸಮಾರಂಭಕ್ಕೆ ಮೆ|| ಕಮಿಷನರ್ ಸಾ|| ಬಾ|| ರವರು ಮೋಟಾರದಿಂದ ತಮ್ಮ ಪತ್ನೀಸಮೇತರಾಗಿ ಲೋ|| ಬೋ|| ಆಫೀಸಿಗೆ ಬಂದ ಕೂಡಲೇ ಮಿ|| ದೊಡ್ಡ ಅಡಿವೆಪ್ಪಾ ಕುಬಸದ ಲೋ|| ಬೋ|| ಪ್ರೆಸಿಡೆಂಟ್ ಇವರು ಯಾವತ್ತು ಮೆಂಬರರ ಪರಿಚಯವನ್ನು ಸಾ|| ಬಾ|| ರವರಿಗೆ ಮಾಡಿಕೊಟ್ಟ ನಂತರ ಎಲ್ಲರೂ ತಮ್ಮತಮ್ಮ ಸ್ಥಳದಲ್ಲಿ ಕುಳಿತರು. ನಂತರ ಸ್ವಾಗತಪದ್ಯಗಳಾದ ಮೇಲೆ ಮಿ|| ನಾಯಕ ವೈ|| ಪ್ರೆಸಿಡೆಂಟ್ ಚಿಕ್ಕೆರೂರ ಇವರು ಮಾನಪತ್ರವನ್ನು ಓದಿದ ತರುವಾಯ ಮಿ|| ಅಡಿವೆಪ್ಪ ಕುಬಸದ ಪ್ರೆಸಿಡೆಂಟ್ ಇವರು ಮಾನಪತ್ರವನ್ನು ಉತ್ತಮವಾದ ಗಂಧದ ಕರಂಡಕದಲ್ಲಿಂಸಿ ಸಾ|| ಬಾ|| ರವರಿಗೆ ಅರ್ಪಿಸಿದ ಕೂಡಲೇ ಸಾ|| ಬಾ|| ರವರು ತಮ್ಮ ಸುಶ್ರಾವ್ಯವಾದ ಇಂಗ್ಲೀಷ್‌ವಾಣಿಯಿಂದ ತಮಗೆ ಮಾನಪತ್ರವನ್ನು ಕೊಟ್ಟ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಲಾಗಿ ಅವರ ಭಾಷಣವನ್ನು ಇಲ್ಲಿಯ ಮಾಮಲೇದಾರರಾದ ರಾವಸಾಹೇಬ ಕಲಕೋಟಿ ಇವರು ಕನ್ನಡದಿಂದ ಸರ್ವರಿಗೂ ತಿಳಿಯುವಂತೆ ಹೇಳಿದರು. ಅನಂತರ ಹಾರತುರಾಯಿಗಳ ಸಮರ್ಪಣವಾಗಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮಿ|| ದೊಡ್ಡ ಅಡಿವೆಪ್ಪ ಕುಬಸದ ಲೋಕಲ್ ಬೋರ್ಡ ಪ್ರೆಸಿಡೆಂಟ್ ಇವರು ತಮ್ಮಮನೆಗೆ ಪಾನಸುಪಾರಿ ಬಗ್ಗೆ ಬರಬೇಕೆಂದು ಸಾ|| ಬಾ|| ರವರಿಗೆ ಈ ಮೊದಲೇ ಆಮಂತ್ರಣ ಕೊಟ್ಟದ್ದ ಪ್ರಕಾರ ಸಾ|| ಬಾ|| ರವರು ಪತ್ನೀಸಮೇತರಾಗಿ ಯಾವತ್ತು ಪರಿವಾರದೊಂದಿಗೆ ಕಾಲುನಡಗೆಯಿಂದ ಬ್ಯಾಂಡ್‌ವಾದ್ಯದೊಡನೆ ಪ್ರೆಸಿಡೆಂಟರಮನೆಯ ಮುಂಭಾಗದಲ್ಲಿ ಪ್ರಸಿದ್ಧ ಚಿತ್ರಕಲಾನಿಪುಣರಾದ ಮಿ|| ಕರೇಗೌಡ ಪಾಟೀಲ ಕುಡುಪ್ಲಿ ಇವರಿಂದ ನಿರ್ಮಿಸಿದ ಭವ್ಯವಾದ ಮಂಟಪಕ್ಕೆ ಸಾಯಂಕಾಲ ಐದುಘಂಟೆಗೆ ದಯಮಾಡಿಸಿದರು. ಮೆ|| ಸಾ|| ಬಾ|| ರವರು ಮತ್ತು ಅವರ ಪತ್ನಿಯವರು ಮಿ|| ಅಡಿವೆಪ್ಪನವರ ಮನೆಯೊಳಬಾಗಿಲವರೆಗೆ ಬಂದು ಅವರಮನೆಯ ಯಾವತ್ತು ಜನರ ಕುಶಲಪ್ರಶ್ನೆಗಳಾದನಂತರ ತಮ್ಮ ಉಚ್ಚಾಸನದಲ್ಲಿ ಕುಳಿತರು. ಸಭೆಗೆ ಸುಮಾರು ೬೦೦-೭೦೦ ಜನರು ಕೂಡಿದ್ದರು. ಈಸಭೆಗೆ ಮೊದಲೇ ಆಮಂತ್ರಣ ಕೊಟ್ಟು ಕರಿಸಿದಪ್ರಕಾರ ರಾಣಿಬೆನ್ನೂರ ಹಿರೇಕೆರೂರ ತಾಲ್ಲೂಕುಗಳ ಪ್ರಮುಖಜನರು ಆಗಮಿಸಿದ್ದರು. ಮಿ|| ಪುಟ್ಟರಾಜವಡೆಯರ ಜಾಡದಾನಪುರ ಇವರು ತಮ್ಮ ಸುಶ್ರಾವ್ಯವಾದ ವಾಣಿಯಿಂದ ಮಿ|| ಅಡಿವೆಪ್ಪನವರ ಗುಣಕಥನಮಾಡಿ ಈಗ ನಡೆದಿರುವ ಅಸಹಕಾರದ ವಿಷಯಕ್ಕೆ ಸರಕಾರದ ಕೂಡ ಸಹಕಾರದಿಂದನಡೆದು ನಮ್ಮ ಜನ್ಮಸಿದ್ಧಹಕ್ಕುಗಳನ್ನು ದೊರಕಿಸಿಕೊಳ್ಳಬೇಕೆಂಬ ವಿಷಯಕ್ಕೆ ಸರ್ವರಿಗೂ ತಿಳಿಯುವಂತೆ ಬಹುಸರಸವಾಗಿ ಭಾಷಣಮಾಡಿದರು. ಇದೇ ವಿಷಯದಮೇಲೆ ಮಿ|| ಮಂಣಬಸನಗೌಡ ಪಾಟೀಲ ಶಿಡೇನೂರ ಇವರು ಬಹು ಸರಸವಾಗಿ ಭಾಷಣಮಾಡಿದರು. ಮಿ|| ಕುಬಸದ ಲೋ|| ಬೋ|| ಪ್ರೆಸಿಡೆಂಟ್ ಇವರು ಸಾ|| ಬಾ|| ರವರ ಮತ್ತು ಅವರ ಪತ್ನಿಯವರ ಅಭಾರಮನ್ನಿಸಿ, ಹಾರ, ತುರಾಯಿ, ಅತ್ತರ್, ಪಾನಸುಪಾರಿ ಹಂಚಿದನಂತರ ರಾಷ್ಟ್ರಗೀತವಾಗಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ತಾರೀಖು ೧೫-೧-೨೨ ದಿವಸ ಬಬಲೇಶ್ವರ ವೀರಶೈವತರುಣ ಸಂಘದ:೧ನೇ ವಾರ್ಷಿಕ ಸಮ್ಮೇಲನವು.

ರಾ|| ಸಾ|| ಪಿ.ಜಿ. ಹಳಕಟ್ಟಿ ಇವರ ಅಧ್ಯಕ್ಷತೆಯ ಕೆಳಗೆ ಮೊದಲೇ ಗೊತ್ತಾದಪ್ರಕಾರ ಸರಿಯಾದ ವೇಳೆಗೆ ಸಭೆಯ ಕಾರ್ಯಕ್ರಮವು ನೆರವೇರಬೇಕಾಗಿತ್ತು. ಆದರೆ ಬೇರೆ ಕೆಲವುಮಹತ್ವದ ಕಾರಣಗಳ ಸಲುವಾಗಿ ಆಹೊತ್ತು ನವಿವಸ ಕೂಡದೆ ಮರುದಿವಸ ಅಂದರೆ ತಾ||೧೪-೧-೧೯೨೨ನೆ ಇಸವಿ ದಿವಸ ಮುಂಜಾನೆ ೧೦ ಘಂಟೆಗೆ ಸರಿಯಾಗಿ ಸದರಿ ಅಧ್ಯಕ್ಷತೆಯ ಕೆಳಗೆ ಕೂಡಿತ್ತು. ಸಭೆಗೆ ಬಹುಶಃ ನೂರಾರುಜನರು ಅನ್ಯಗ್ರಾಮಗಳಿಂದಲೂ ೧೫೦೦ ಜನರು ನಮ್ಮ ಊರವರು ಈ ಪ್ರಕಾರ ಜನರು ಕೂಡಿದ್ದರು.

ಸಭೆಯಲ್ಲಿ ೯ ಠರಾವುಗಳು ಪಾಸಾದವು—೧ ನೇ ಠರಾವು—ಮಿ|| ಗುರುಸಿದ್ಧಪ್ಪಾ ಹೂವಪ್ಪಾ ಗುಗ್ಗುಳ, ಬಿ.ಎ., ಐ. ಸಿ. ಎಸ್., ಇವರು ನಮ್ಮ ಮುಂಬಯಿ ಯೂನಿವರ್ಸಿಟಿಯ ಪರೀಕ್ಷೆಗಳಲ್ಲಿ ಉತ್ತಮರೀತಿಯಿಂದ ತೇರ್ಗಡೆಹೊಂದಿ ಇಂಗ್ಲಂಡಿಗೆ ಹೋಗಿ ಐ. ಸಿ. ಎಸ್. ಪದವಿಯನ್ನು ಹೊಂದಿ ಈಗ ಹಿಂದುಸ್ತಾನಕ್ಕೆ ಸುರಕ್ಷಿತವಾಗಿ ತಿರುಗಿಬಂದದ್ದಕ್ಕೆ ಸಂತೋಷವುಳ್ಳವರಾಗಿ ಈ ಸಭೆಯವರು ಅವರನ್ನು ಅಭಿನಂದಿಸುತ್ತಾರೆ. ೨ನೇ ಠರಾವು—ಈಗಿನಕಾಲಕ್ಕೆ ಇಂಗ್ಲೀಷ್ ಶಿಕ್ಷಣವು ಅತ್ಯವಶ್ಯಕವಿರುವದರಿಂದ ಬಬಲೇಶ್ವರದಲ್ಲಿ ಮಾರ್ಚ ೧೯೨೨ ರಲ್ಲಿ ಒಂದು ಇಂಗ್ಲೀಷ್ ಶಾಲೆಯನ್ನು ಸ್ಥಾಪಿಸತಕ್ಕದ್ದು ಮತ್ತು ಈ ಶಾಲೆಗೆ ಯಾವತ್ತು ಜನರು ಸಹಾಯಮಾಡಬೇಕೆಂದು ಈ ಸಭೆಯವರು ವಿನಂತಿಮಾಡಿಕೊಳ್ಳುತ್ತಾರೆ. ೩ನೇ ಠರಾವು—ನಮ್ಮದೇಶವು ಮತ್ತು ನಮ್ಮ ಸಮಾಜವು ಮುಂದರಿಯಬೇಕಾದರೆ ಸಕ್ತಿಶಿಕ್ಷಣದ ಪ್ರಸಾರಮಾಡುವದು ಅವಶ್ಯವಾಗಿರುವದರಿಂದ ಆ ಪ್ರಕಾರ ಸರ್ಕಾರದವರು ಅದನ್ನು ಕೂಡಲೇ ಅಮಲಿನಲ್ಲಿತರಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ೪ನೇ ಠರಾವು—ಈ ಊರಲ್ಲಿಯ ಪ್ರಾಥಮಿಕಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಇನ್ನೂ ಹೆಚ್ಚಾಗಲಿಕ್ಕೆ ಸಂಭವವಿದ್ದು ಅವರ ಶಿಕ್ಷಣಕ್ಕೆ ಸ್ಥಳದ ಮತ್ತು ಮಾಸ್ತರರ ಅನುಕೂಲತೆಗಳು ಇಂದ್ದರಿಂದ ಶಿಕ್ಷಣಪ್ರಸಾರಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ತೊಂದರೆಗಳು ದೂರಾಗುವಂತೆ ಶಾಳಾಖಾತೆಯವರು ವ್ಯವಸ್ಥೆಮಾಡುವರೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ೫ನೇ ಠರಾವು—ಈ ಎರಡುವರ್ಷಗಳ ಹಿಂದೆ ವಿಜಾಪುರದಲ್ಲಿ ಸ್ಥಾಪಿತವಾದ ಟ್ರೇನಿಂಗಸ್ಕೂಲು ತೆಗೆದುಹಾಕಲ್ಪಟ್ಟಿದೆ. ಪುನಃ ಸ್ಥಾಪನೆಯಾಗಬೇಕೆಂದು ಈ ಸಭೆಯವರು ವಿನಂತಿಮಾಡುತ್ತಾರೆ. ೬ನೇ ಠರಾವು—ಈ ಗ್ರಾಮವು ಮುಖ್ಯವಾಗಿ ಒಕ್ಕಲತನದ್ದು ಇದ್ದು ಇಲ್ಲಿ ಒಂದು ಪರಸ್ಪರ ಸಹಾಯಕಾರಕಸಂಘದ ಅವಶ್ಯಕತೆಯು ಬಹಳ ಇರುವದರಿಂದ ಇಂಥ ಸಂಘಗಳನ್ನು ಇಲ್ಲಿ ಸ್ಥಾಪಿಸಬೇಕೆಂದು ಈ ಸಭೆಯವರು ವಿನಂತಿಮಾಡಿಕೊಳ್ಳುತ್ತಾರೆ. ೭ನೇ ಠರಾವು—ವೀರಶೈವಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ, ನೈತಿಕ ಉನ್ನತಿಯನ್ನು ಹೊಂದಬೇಕಾದರೆ ಅವರಲ್ಲಿ ಒಳಪಂಗಡಗಳಲ್ಲಿರುವ ಮತಭೇದಗಳನ್ನು ತೆಗೆದುಹಾಕುವದು, ಮತ್ತು ಅವರಲ್ಲಿಯ ಅಂತಸ್ಥವ್ಯಾಜ್ಯಗಳನ್ನು ತಮ್ಮತಮ್ಮೊಳಗೆ ತೀರಿಸಿಕೊಳ್ಳುವದು ಅತ್ಯಂತ ಅವಶ್ಯವಾಗಿದ್ದು ಅವುಗಳು ಅಮಲಿನಲ್ಲಿ ಬರಲಿಕ್ಕೆ ಎಲ್ಲರೂ ಹೆಚ್ಚಾಗಿ ಪ್ರಯತ್ನಿಸಬೇಕೆಂದು ಈ ಸಭೆಯವರು ನಿರ್ಣಯಮಾಡುತ್ತಾರೆ. ೮ನೇ ಠರಾವು—ಅಲ್ಲಲ್ಲಿ ವೀರಶೈವತರುಣ ಸಂಘಗಳನ್ನು ಸ್ಥಾಪಿಸುವದು ಅತ್ಯಾವಶ್ಯಕವಾಗಿದ್ದು ಅವುಗಳನ್ನು ಎಲ್ಲಕಡೆಗೆ ಸ್ಥಾಪಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ೯ನೇ ಠರಾವು—ರಾವಸಾ|| ಪಿ.ಜಿ. ಹಳಕಟ್ಟಿ ಇವರು ತಮ್ಮ ಸನದನ್ನು ಎರಡನೇ ಜಿಲ್ಲೆಗೆ ವರ್ಗಮಾಡಿಸಿಕೊಂಡಿದ್ದು ಅದನ್ನು ಪರತ ವಿಜಾಪುರ ಜಿಲ್ಲೆಗೆ ಮಾಡಿಸಿಕೊಳ್ಳುವ ಬಗ್ಗೆ ವಿನಂತಿಮಾಡಿಕೊಳ್ಳಬೇಕೆಂದು ಠರಾವು ತರಲ್ಪಟ್ಟಿತು. ಅದು ಸರ್ವಾನುಮತಿಯಿಂದ ಪಾಸಾಯಿತು.

ಪ್ರೇಕ್ಷಕ.

ವಾರ್ಷಿಕೋತ್ಸವಪತ್ರಿಕಾ.

ಮಿ|| ಮಿ|| ಧಾರವಾಡ ಶಹರ ಹಾವೇರಿಪೇಟೆ ಶ್ರೀ ಮುರುಘಾಮಠದಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಸ್ಥಾಪನ ಮಾಡಿಸಿರುವ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿ ಬೋರ್ಡಿಂಗ್ ಮತ್ತು ಪಾಠಶಾಲಾ ಸಂಸ್ಥೆಯ ಕಾರ್ಯಕ್ರಮಗಳು ಐದನೇ ವರ್ಷದಲ್ಲಿಯೂ ಶ್ರೀ ಶಿವಯೋಗೀಶ್ವರ ಕೃಪಾಶೀರ್ವಾದ ಬಲದಿಂದ ಸುಯಂತ್ರಿತವಾಗಿ (ಸಾಂಗವಾಗಿ) ನೆರವೇರಿದ ಸಂತೋಷ ಸಮಾರಂಭೋತ್ಸವವು ಶಕೆ ೧೮೪೩ನೇ ದುರ್ಮತಿನಾಮ ಸಂವತ್ಸರದ ಮಾಘಶುದ್ಧ ೫ ತಾರೀಖು ೨-೨-೧೯೨೨ ಇಸವಿ ಗುರುವಾರ ಮಧ್ಯಾಹ್ನಾತ್ಪರ ೪ ಗಂಟೆಗೆ ಶ್ರೀ ಮುರುಘಾಮಠದಲ್ಲಿ ಮೆ|| ರೇವಣಸಿದ್ಧಪ್ಪಯ್ಯನವರು ಕಿತ್ತೂರ ಪ. ಅ. ಕಲೆಕ್ಟರ ಇವರ ಅಧ್ಯಕ್ಷತೆಯಲ್ಲಿ ಪದ್ಧತಿ ಪ್ರಕಾರ ನಡೆಸಲ್ಪಡುವುದು. ಆ ದಿವಸ ನೈತಿಕ, ಧಾರ್ಮಿಕ ಉಪನ್ಯಾಸ ಶಿವಕೀರ್ತನೆಗಳು ನಡೆಯುವವು. ಪ್ರಯುಕ್ತ ತಾವು ತಮ್ಮ ಇಷ್ಟಮಿತ್ರರೊಡನೆ ಆಗಮಿಸಿ ಸಮಾರಂಭವನ್ನು ಸಾಂಗಗೊಳಿಸಿ ಶ್ರೀಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಕೋರಿಕೆ.

ಸಮಾರಂಭ ಕಾರ್ಯಕ್ರಮ.

(೧) ಆದಿಮಂಗಲ ಶಿವಸ್ತುತಿ, ಶ್ರೀಲಿಂಗರಾಜಸ್ತುತಿ. (೨) ಶ್ರೀಮಂತ ಶಿರಸಂಗಿ ಸಂಸ್ಥಾನಾಧೀಶ್ವರ ಧನರಾಶಿಯಿಂದ ದೊರೆದ ಸಹಾಯ ಸಂತೋಷಪ್ರದರ್ಶನ. (೩) ಐದನೇ ವರ್ಷದ ರಿಪೋರ್ಟು ಓದುವಿಕೆ. (೪) ಮುಂದಿನವರ್ಷದ ಬಜೆಟ, ವ ಕಮಿಟಿಯ ನಿಯಮಗಳ ಸುಧಾರಣೆ. (೫) ಈ ಸಂಸ್ಥೆಯ ಸಹಾಯಕಾರಿಗಳವರ ಆಭಾರಮನ್ನಿಸುವಿಕೆ. (೬) ಹೊಸ ಕಮಿಟಿಯ ಆಲೋಚನೆ. ಅಖೈರಮಂಗಲ.

ತಮ್ಮ ವಿಧೇಯ,
ಶಿವಪ್ಪಾ ಚನವೀರಪ್ಪಾ ಮಟ್ಟಿ, ಚೇರಮನ್.

ಸನ್ ೧೯೧೬ ನೇ ಇಸವಿಯಿಂದ ಸನ್ ೧೯೨೧ ನೇ ಇಸವಿ ಡಿಶಂಬರ್ ಅಖೈರವರೆಗೆ (ಈ ಬೋರ್ಡಿಂಗಿಗೆ) ದಾಖಲಾದ ವಿದ್ಯಾರ್ಥಿಗಳು ೯೨ ಇವರಲ್ಲಿ ಮಾಹೇಶ್ವರರು ೩೯ ಭಕ್ತರು ೫೩.

೫ನೆ ವರ್ಷ ಹಾಜರಿಗೆ ದಾಖಲಾದ ವಿದ್ಯಾರ್ಥಿಗಳು ೬೩ ಇದರಲ್ಲಿ ಮಾಹೇಶ್ವರರು ೩೦ ಭಕ್ತರು ೩೩.

ವರ್ಷ. ಇಂ. ವಿ. ಸಂಸ್ಕೃತ ವಿ.
೧. - ೧೬ - ೮
೨. - ೧೬ - ೩
೩. - ೨೮ - ೮
೪. - ೪೧ - ೦
ಈ ನಾಲ್ಕು ವರ್ಷಗಳ ಒಟ್ಟು ಖರ್ಚು ಹತ್ತುಸಾವಿರ ಎರಡು ನೂರಾ ಮೂವತ್ತೈದು ರೂಪಾಯಿ ಏಳು ಆಣೆ ಹತ್ತು (೧೦೨೩೫-೭-೧೦) ಪೈ.

೫ನೇ ವರ್ಷದಲ್ಲಿ ಹಾಜರಿಗೆ ದಾಖಲಾದ (೬೩) ವಿದ್ಯಾರ್ಥಿಗಳ ವಿವರ.
ಜೂನಿಯರ್ ಬಿ.ಎ (೧) ಇಂಟರ (೬) ಪ್ರಿವಿ ಎಸ್ (೧೫) ಮ್ಯಾಟ್ರಿಕ (೧೪) ಇತರ ಕ್ಲಾಸು [೨೬]

ಧಾರವಾಡ ಜಿಲ್ಲಾ (೩೫) ವಿಜಾಪುರ (೪) ಬೆಳಗಾಂವ (೪) ಕಾರವಾರ (೨) ನಿಜಾಮಸ್ಟೇಟ (೩) ಮೈಸೂರ (೧) ಸಾಂಗಲಿ (೨) ಮಿರಜ (೫) ಜಮಖಂಡಿ (೩) ಮುಧೋಳ (೩) ರಾಮದುರ್ಗ (೧) ಅಂತು ೬೩.

ಧಾರವಾಡ ಡಿ. ೩೫ ವಿದ್ಯಾರ್ಥಿಗಳ ತಾಲೂಕವಾರ ವಿವರ-ಧಾರವಾಡ (೨) ನವಲಗುಂದ (೩) ರೋಣ (೬) ಗದಗ (೧) ಹುಬ್ಬಳ್ಳಿ (೧) ಬಂಕಾಪುರ (೨) ಕರ್ಜಗಿ (೧೦) ಹಾನಗಲ್ಲ (೨) ರಾಣೇಬೆನ್ನೂರ (೬) ಹಿರೇಕೆರೂರು (೨)

ಐದನೆ ವರ್ಷದಲ್ಲಿಯ ತಿಂಗಳ ವಾರ ಖರ್ಚು ವಿವರ--ಸನ್ ೧೯೨೧ನೆ ಇಸವಿ.

ತಿಂಗಳ.	ವಿ. ೦	ಅತಿಥಿ.	ನೌಕರ	ಖರ್ಚು ರೂ.
ಫೆಬ್ರವಾರಿ,	೪೧	೧೯	೫	೨೫೮|||—೯
ಮಾರ್ಚ,	೪೪	೨೦	೫	೨೪೯|=೧
ಎಪ್ರೈಲ್, ೪೩ ಮು. ಪ. ೧೧೯ ಮ್ಯಾ. ೧೧		೬	೫	೩೬೬||≡೦
ಮೇ,	೪೪	೨೦	೫	೦೯೯|||೦೨
ಜೂನ,	೫೫	೨೦	೪	೨೫೫||≡೬
ಜುಲೈ,	೬೦	೫೧	೪	೪೩೪||=೯
ಅಗಸ್ಟ,	೬೧	೪೦	೪	೪೩೨|೦೨
ಸಪ್ಟಂಬರು,	೬೨	೪೦	೪	೪೨೬|≡೯
ಅಕ್ಟೋಬರ,	೬೨	೩೦	೪	೨೮೨|≡೯
ನವಂಬರ,	೬೨	೨೦	೩	೨೬೩||≡೬
ಡಿಸೆಂಬರ.	೬೩	೩೧	೪	೪೨೬||=೯

ಒಟ್ಟು ರೂ .... ೩೫೦೭|||≡೩

ಇದರ ಹೊರತು ಇತರ ವ್ಯವಸ್ಥೆಯ ತಪಶೀಲು ವಾರ್ಷಿಕ ರಿಪೋರ್ಟಿನಲ್ಲಿ ಪ್ರಕಟಿಸಲ್ಪಡುವದು. ಆಗಾಗ್ಗೆ ಅನೇಕ ಶ್ರೀ. ಶ್ರೀ.. ( ) ಗಳವರು ದಯಮಾಡಿಸಿ ಈ ಬೋರ್ಡಿಂಗಿನ ವಿದ್ಯಾರ್ಥಿಗಳಿಗೆ ಸದುಪದೇಶ ಮಾಡಿ ಆಶೀರ್ವಾದ ದಯಪಾಲಿಸುತ್ತಿರುವದರಿಂದ ಸಮಸ್ತ ವಿದ್ಯಾರ್ಥಿಗಳೂ ಆರೋಗ್ಯಭಾಗ್ಯದಿಂದಲೂ ಆನಂದದಿಂದಲೂ ಇದ್ದಾರೆ. ಅಥಣಿ ಗಚ್ಚಿನಮಠದ ಶ್ರೀ. ಶ್ರೀ. ( ) ಗಳವರು ದಯಮಾಡಿಸಿ ಇಲ್ಲಿಯ ಭಕ್ತಮಂಡಳಿಯವರಿಗೂ, ಎಲ್ಲ ವಿದ್ಯಾರ್ಥಿಗಳಿಗೂ ಸದ್ಬೋಧಾಮೃತಪಾನಮಾಡಿಸಿ ಈ ಪಾಠಶಾಲಾ ಬೋರ್ಡಿಂಗ್ ಸಂಸ್ಥೆಗೆ, ಒಂದುನೂರಾ ಒಂದು ರೂಪಾಯಿಗಳನ್ನೂ ಫಲಾಶೀರ್ವಾದವನ್ನೂ ದಯಪಾಲಿಸಿದರು.

ಶ್ರೀ. ಶ್ರೀ. ( ) ಮಹಾತಪಸ್ವಿಗಳವರ ಮಹನೀಯರ ಆಶೀರ್ವಾದಬಲದಿಂದಲೂ, ಶ್ರೀ ಮೃತ್ಯುಂಜಯ ಸ್ವಾಮಿಗಳವರ ಅವಿಶ್ರಾಂತ ಪ್ರಯತ್ನದಿಂದಲೂ, ಹಾಗೂ ೨೦ನೆ ಶತಮಾನದ ಶಿವಶರಣ ಕೈ. ಶ್ರೀಮಂತ ಶಿರಸಂಗಿ ಲಿಂಗರಾಜೇಂದ್ರರ ಧರ್ಮ ದ್ರವ್ಯದ ಮತ್ತು ಅನೇಕ ಶ್ರೀಗಳವರೂ, ಶ್ರೀಮಂತರೂ, ಸದ್ಭಕ್ತಿಯುತರಾದ ಮತ ಪರಮತೀಯ ಪರೋಪಕಾರಿಗಳೂ ಮಾಡುತ್ತಿರುವ ಸಹಾಯದಿಂದಲೂ, ನಿರ್ವಿಘ್ನವಾಗಿ ನಡೆದಿರುವ ಈ ವಿದ್ಯಾದಾನ ಅನ್ನದಾನದ ಫಲಕ್ಕೂ ಕೀರ್ತಿಗೂ ಇನ್ನುಳಿದ ಸರ್ವ ಮಹನೀಯರೂ ಭಾಗಿಗಳಾಗಿ ಮತ್ತೂ, ಸಾಧ್ಯವಾದಷ್ಟು ವಿದ್ಯಾರ್ಥಿಗಳ ಸೌಲಭ್ಯಕ್ಕೆ ಅನುಕೂಲವನ್ನುಂಟುಮಾಡಿಕೊಡಬೇಕಾಗಿಯೂ ಸನ್ ೧೯೨೧ ನೇ ಇಸವಿ ಅಖೈರವರೆಗೆ ಶ್ರೀ || || ಬೋರ್ಡಿಂಗಿಗೆ ಬಾಕಿ ಕೊಡಬೇಕಾಗಿರುವ ವರ್ಷಾಶನ ಮತ್ತು ಮಾಸಾಶನ ರೂಪಾಯಿ ಧಾನ್ಯ ಹಾಗೂ ಇತರ ಜಿನಸುಗಳನ್ನು ಕೂಡಲೇ ಕಳಿಸಿಕೊಟ್ಟು ಇದೇ ವರ್ಷದ ರಿಪೋರ್ಟಿನಲ್ಲಿ ತಮ್ಮ ಹೆಸರು ದಾಖಲ ಮಾಡುವದಕ್ಕೆ ಅನುಕೂಲ ಮಾಡಬೇಕಾಗಿಯೂ ಪ್ರಾರ್ಥನೆ.

ಸೆಕ್ರೆಟರಿ,
ಬಸಪ್ಪಾ ಮಲ್ಲಪ್ಪಾ ಆಹೆಟ್ಟಿ.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
5 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೨೨ ನೆಯ ಇಸವಿ ಜನವರಿ ತಾ|| ೨೯ ರಿಂದ ೧೯೨೨ ನೆಯ ಫೆಬ್ರವರಿ ತಾ|| ೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿನಾಮಸಂವತ್ಸರದ ಮಾಘಶುದ್ಧ ಬಿದಿಗೆಯಿಂದ ಮಾಘಶುದ್ಧ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರಮಾ
29	ಭಾನು	ಬಿದಿ	60	ಧನಿ	43-1	16
30	[1] ಸೋಮ	ಬಿದಿ	4-6	ಶತ	49-38	17
31	[2] ಮಂಗಳ	ತದಿ	9-32	ಪೂಭಾ	56-13	18
1	ಬುಧ	ಚೌತಿ	14-40	ಉಭಾ	60	19
2.	ಗುರು	ಪಂಚ	19-15	ಉಭಾ	1-58	20
3	[3] ಶುಕ್ರ	ಷಷ್ಠಿ	22-58	ರೇವ	7-0	21
4	[4] ಶನಿ	ಸಪ್ತ	25-16	ಅಶ್ವಿ	10-55	22

(1) ಕೈಲಾಸಗೌರೀವ್ರತಂ. (2) ಮೌನಗೌರೀವ್ರತಂ, ಕುಂದಚತುರ್ಥೀ. (3) ಕುಮಾರಷಷ್ಠಿ. (4) ರಥಸಪ್ತಮಿ, ಸೂರ ಚಂದ್ರವ್ರತಂ, ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧೀನತರಾಜಮಂಡಲಿಕೃತಾ | ಘನಪಕ್ಷಕೃತಾವತಾರಾ ಪಶ್ಚಿಮ ನಕ್ಷತ್ರ ವೋಹರಾಜೀಯಾಶ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಫೆಬ್ರವರಿ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೬

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
5 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. **ಇಲ್ಲ**

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಚಟುಶೂಲಿ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 33

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಳ ವೀರಶೈವ ವಿವಾಹವಿಧಿಃ	೦—೧೩—೦
ರುಶೀಲಚರಿತ್ರೆ	೦—೧೦—೦
ವಾಸಿ	೦— ೮—೦
ಚಂಚಳೆ	೦— ೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವಾಪ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು.

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮುಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಆವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭೂತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
2 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ.ಪಿ. ಮೂಲಕ ಮನಿಯಾರ್ಡರ್ ಛಾರ್ಜು ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಚ್ಛಾದನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಪಟ್ಟಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಂ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು ಮತ್ತು ರೇಷ್ಮೆ ವಸ್ತ್ರಗಳು.

49 ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವ ತಿಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0.12.0	,	50.0.0
5	0. 8.0	..	100.0.0
6	0.12.0	,,	100.0.0
7	6. 0.0	,,	100.0.0
ಬಿಡಿಮಣಿಗಳು 1ಕ್ಕೆ ಕ್ರಯ			
3	0. 6.0	ಇಂದ	10.0.0
8	0. 8.0	,,	100.0.0
9	0.12.0	,,	100.0.0
10	0.14.0	,,	100.0.0
11	3. 8.0	,,	100.0.0
12	4. 0.0	,,	100.0.0
13	4. 8.0	,,	100.0.0
14	6. 0.0	,,	100.0.0

108 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5.6 ಮುಖ ಮಾತ್ರ ದೊರೆಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ·
ಉದ್ದಿನ	,, 15.0.0	,, 40.0.0
ದೊಣಸು	,, 7.8.0	,, 15.0.0
ಕಡಲೆ	,, 2.8.0	,, 7.0.0
ನೆನೆದಕಡಲೆ	,, 1.8.0	,, 3.0.0
ಕಮಲಾಕ್ಷಿ	,, 1.0.0	,, 2.0.0
ದೊಡ್ಡ	,, ,, 0.8.0	,, 1.0.0
ಅದಕ್ಕಿಂತ	,, 0.6.0	,, 0.8.0
ಸ್ಫಟಿಕ108ಕ್ಕೆ	4.8.0	,, 30.0.0
ಶ್ರೀಚಕ್ರ1ಕ್ಕೆ	8.0.0	,,100.0.0
ಲಿಂಗ 1ಕ್ಕೆ	1.0.0	,, 100.0.0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80.0.0 ಬಿ. 50.0.0 ಸಿ.40.0.0 ಡಿ. 25.0.0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

S.U. N. & Co., ಎಸ್. ಯು. ನೇಪಾಳ ರುದ್ರಾಕ್ಷ
Chaukhamba, ಕಂಪನಿ, ಚೌಕಂಬಾ ಕಾಶೀ.
Benares.

ಕಡೂರು ತಾಲ್ಲೂಕು ಮಲಿದೇವಿಹಳ್ಳಿ.

ಇದೇ ಜನವರಿ ತಾ|| ೧೯ನೆ ಗುರುವಾರ ಪ್ರಾತಃಕಾಲ ೮|| ಗಂಟೆಗೆ ಬ್ರಿಟಿಷ್ ಚಕ್ರಾಧಿಪತ್ಯದ ಯುವಸಾರ್ವಭೌಮರೂ ಮಹಾಮಹಿಮರೂ ಆದ ಪ್ರಿನ್ಸ್ ಆಫ್ ವೇಲ್ಸ್‌ರವರು ಪರಿವಾರದೊಂದಿಗೆ ನಮ್ಮ ಶ್ರೀಮನ್ಮಹಾರಾಜರವರ ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ಅತಿಥಿಗಳಾಗಿ ಬಿಜಯಂಗೈಸಿ ನಮ್ಮನ್ನಾಳುವ ಮಹಾರಾಜರವರಿಗೂ ಅವರ ಪ್ರಜಾಸಮುದಾಯಕ್ಕೂ ತಮ್ಮ ಪ್ರಥಮಸಂದರ್ಶನವನ್ನು ದಯಪಾಲಿಸಿದುದು ನಮ್ಮ ಮೈಸೂರು ಸಂಸ್ಥಾನಕ್ಕೆ ಹೆಚ್ಚು ಆನಂದವನ್ನು ಉಂಟುಮಾಡಿರುವುದಲ್ಲದೆ ಇಂಥ ಮಹಾತ್ಮರ ಆಗಮನದಿಂದ ನಮ್ಮ ದೇಶವೇ ಪ್ರಜ್ವಲಿಸಿದಂತಾಯ್ತು. ಇಂಥ ಸುದಿವಸದಲ್ಲಿ ಇವರ ಆಗಮನೋತ್ಸವದ ಸ್ಮರಣಾರ್ಥವಾಗಿ ನಮ್ಮ ಗ್ರಾಮದ ಸ್ಕೂಲ್ ಕಟ್ಟಡವನ್ನು ತಳಿರುತೋರಣಗಳಿಂದ ಆಲಂಕರಿಸಿ ಯುವಸಾರ್ವಭೌಮರವರ ಮತ್ತು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಭಾವಚಿತ್ರಗಳನ್ನು ಪುಷ್ಪಮಾಲಿಕೆಗಳಿಂದ ಶೃಂಗರಿಸಿ ಉಚಿತಾಸನದಲ್ಲಿ ಇಡಲ್ಪಟ್ಟಿದ್ದವು. ಆಕಾಲದಲ್ಲಿ ಸ್ಕೂಲ್ ಬಾಲಕ ಬಾಲಕಿಯರು ಮತ್ತು ಗ್ರಾಮಪ್ರಮುಖರೇ ಮೊದಲಾದ ಸಮಸ್ತರೂ ಸ್ಕೂಲನ್ನು ಪ್ರವೇಶಿಸುವಾಗ ಸ್ಕೂಲ್ ಮುಂಭಾಗದಲ್ಲಿ ಕಟ್ಟಲ್ಪಟ್ಟಿದ್ದ ಜನರಲ್ ಬಾವುಟಕ್ಕೆ ಸೆಲ್ಯೂಟ್‌ಗಳನ್ನುಮಾಡಿ ಒಳಗೆ ಪ್ರವೇಶಿಸಿದ ಕೂಡಲೆ ಪ್ರಿನ್ಸ್ ಆಫ್ ವೇಲ್ಸರವರ ನಮ್ಮನ್ನಾಳುವ ಮಹಾಸ್ವಾಮಿಯವರ ಭಾವಚಿತ್ರಕ್ಕೆ ವಂದನೆಗಳನ್ನರ್ಪಿಸಿ ದೇವತಾಪ್ರಾರ್ಥನೆ ಮಾಡಿದಬಳಿಕ ಮ|| ರಾ|| ರಾಯಸದ ರಂಗರಾವ್ ಎಂಬುವರು ಬ್ರಿಟಿಷ್ ಚಕ್ರಾಧಿಪತ್ಯದವರು ನಮ್ಮದೇಶಕ್ಕೆ ಅನುಕೂಲಿಸಿಕೊಟ್ಟಿರುವ ಮಹೋಪಕಾರಂಗಳನ್ನು ಕುರಿತು ಉಪನ್ಯಾಸಮಾಡಿದ ಬಳಿಕ ಇದೇ ಗ್ರಾಮದ ಸ್ಕೂಲ್‌ಮಾಸ್ಟರು ಮ|| ರಾ|| ಎ. ಚನ್ನಪ್ಪನವರು ಶ್ರೀಮನ್ಮಹಾರಾಜ ಸರ್ಕಾರದವರು ಪ್ರಜೋದ್ಧಾರಕ್ಕಾಗಿ ಪಡುತ್ತಿರುವ ಶ್ರಮವನ್ನು ಅವರ ಉದಾರಭಾಷಣಗಳಿಂದ ಹೊರಪಡಿಸಿ ನಮ್ಮ ದಯಾಳು ಸರ್ಕಾರದವರ ಮತ್ತು ದೇಶಾಭಿಮಾನಿಗಳವರ ಉದಾರಾಶ್ರಯದಿಂದ ನಡೆಸಬೇಕೆಂದಿರುವ II ನೇ ಗ್ರಾಂಟ್‌ಸ್ಕೂಲು ಉಪಾಧ್ಯಾಯರುಗಳ ಮಹಾಸಭೆಗೆ ಯುವಸಾರ್ವಭೌಮರವರ ನಮ್ಮನ್ನಾಳುವ ಮಹಾಸ್ವಾಮಿಯವರ ಕೃಪಾಕಟಾಕ್ಷವನ್ನು ಬೇಡಿ ಬಾಲಕ ಬಾಲಕಿಯರಿಂದ ಶ್ರೇಯಃಪ್ರಾರ್ಥನೆಯನ್ನು ಮಾಡಿಸಿ ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸರವರಿಗೂ ನಮ್ಮನ್ನಾಳುವ ಮಹಾಸ್ವಾಮಿಯವರಿಗೂ ಇವರ ರಾಜಕುಟುಂಬಕ್ಕೂ ಸಹ ಶಂಕರನು ದೀರ್ಘಾಯುರಾರೋಗ್ಯವನ್ನಿತ್ತು ನಿರಂತರವೂ ಕಾಪಾಡಲೆಂದು ಸಭಿಕರೆಲ್ಲ ಭಗವತ್ಪ್ರಾರ್ಥನೆ ಮಾಡುವುದರ ಮೂಲಕ ಸಭೆಯು ಮುಕ್ತಾಯವಾಯಿತು.

ಓರ್ವ ಪುರನಿವಾಸಿ.

ಹಿರೇಕೆರೂರ.

ಮೆ|| ದಕ್ಷಿಣಭಾಗದ ಕಮಿಷನರ್ ಸಾ|| ಬಾ|| ರವರು ಹಿರೇಕೆರೂರ ತಾಲ್ಲೂಕಿನಲ್ಲಿ ಮುಕ್ಕಾಂ ಮಾಡಿದ್ದು ಇಲ್ಲಿಯ ತಾಲ್ಲೂಕು ಲೋಕಲ್ ಬೋರ್ಡಿಗೆ ಮಿ|| ದೊಡ್ಡ ಅಡಿವೆಪ್ಪಾ ಕುಬಸದ ಇವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಿ ಬಂದದ್ದರಿಂದ ಯಾವತ್ತು ತಾಲ್ಲೂಕಿನ ಲೋಕಲ್ ಬೋರ್ಡ ಮೆಂಬರರು ತಮ್ಮಬೋರ್ಡಿಗೆ ನಾನ್ ಅಫಿಸಿಯಲ್ ಪ್ರೆಸಿಡೆಂಟರನ್ನು ಸರ್ಕಾರದವರು ಕೊಟ್ಟ ಸಂತೋಷಾರ್ಥವಾಗಿ ತಾ|| ೧೫-೧-೯೨೨ನೆ ದಿವಸ ಮೆ|| ಕಮಿಷನರ್ ಸಾ|| ಬಾ|| ರವರಿಗೆ ಲೋಕಲ್ ಬೋರ್ಡಿನವತಿಯಿಂದ ಮಾನಪತ್ರಕೊಡುವ ಸಮಾರಂಭವನ್ನು ಒಳ್ಳೇ ಸಂಭ್ರಮದಿಂದ ಜರುಗಿಸಿದರು. ಈ ಸಮಾರಂಭಕ್ಕೆ ಮೆ|| ಕಮಿಷನರ್ ಸಾ|| ಬಾ|| ರವರು ಮೋಟಾರದಿಂದ ತಮ್ಮ ಪತ್ನೀಸಮೇತರಾಗಿ ಲೋ|| ಬೋ|| ಆಫೀಸಿಗೆ ಬಂದ ಕೂಡಲೇ ಮಿ|| ದೊಡ್ಡ ಅಡಿವೆಪ್ಪಾ ಕುಬಸದ ಲೋ|| ಬೋ|| ಪ್ರೆಸಿಡೆಂಟ್ ಇವರು ಯಾವತ್ತು ಮೆಂಬರರ ಪರಿಚಯವನ್ನು ಸಾ|| ಬಾ|| ರವರಿಗೆ ಮಾಡಿಕೊಟ್ಟ ನಂತರ ಎಲ್ಲರೂ ತಮ್ಮತಮ್ಮ ಸ್ಥಳದಲ್ಲಿ ಕುಳಿತರು. ನಂತರ ಸ್ವಾಗತಪದ್ಯಗಳಾದ ಮೇಲೆ ಮಿ|| ನಾಯಿಕ ವೈ|| ಪ್ರೆಸಿಡೆಂಟ್ ಚಿಕ್ಕೆರೂರ ಇವರು ಮಾನಪತ್ರವನ್ನು ಓದಿದ ತರುವಾಯ ಮಿ|| ಅಡಿವೆಪ್ಪ ಕುಬಸದ ಪ್ರೆಸಿಡೆಂಟ್ ಇವರು ಮಾನಪತ್ರವನ್ನು ಉತ್ತಮವಾದ ಗಂಧದ ಕರಂಡಕದಲ್ಲಿರಿಸಿ ಸಾ|| ಬಾ|| ರವರಿಗೆ ಅರ್ಪಿಸಿದ ಕೂಡಲೇ ಸಾ|| ಬಾ|| ರವರು ತಮ್ಮ ಸುಶ್ರಾವ್ಯವಾದ ಇಂಗ್ಲೀಷ್‌ವಾಣಿಯಿಂದ ತಮಗೆ ಮಾನಪತ್ರವನ್ನು ಕೊಟ್ಟಬಗ್ಗೆ ಸಂತೋಷವನ್ನು ವ್ಯಕ್ತಪಡಿಸಲಾಗಿ ಅವರ ಭಾಷಣವನ್ನು ಇಲ್ಲಿಯ ಮಾಮಲೇದಾರರಾದ ರಾವಸಾಹೇಬ ಕಲಕೋಟಿ ಇವರು ಕನ್ನಡದಿಂದ ಸರ್ವರಿಗೂ ತಿಳಿಯುವಂತೆ ಹೇಳಿದರು. ಅನಂತರ ಹಾರತುರಾಯಿಗಳ ಸಮರ್ಪಣವಾಗಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮಿ|| ದೊಡ್ಡ ಅಡಿವೆಪ್ಪ ಕುಬಸದ ಲೋಕಲ್ ಬೋರ್ಡ ಪ್ರೆಸಿಡೆಂಟ್ ಇವರು ತಮ್ಮಮನೆಗೆ ಪಾನಸುಪಾರಿ ಬಗ್ಗೆ ಬರಬೇಕೆಂದು ಸಾ|| ಬಾ|| ರವರಿಗೆ ಮೊದಲೇ ಆಮಂತ್ರಣ ಕೊಟ್ಟಿದ್ದಪ್ರಕಾರ ಸಾ|| ಬಾ|| ರವರು ಪತ್ನೀಸಮೇತರಾಗಿ ಯಾವತ್ತು ಪರಿವಾರದೊಂದಿಗೆ ಕಾಲುನಡಿಗೆಯಿಂದ ಬ್ಯಾಂಡ್‌ವಾದ್ಯದೊಡನೆ ಪ್ರೆಸಿಡೆಂಟರಮನೆಯ ಮುಂಭಾಗದಲ್ಲಿ ಪ್ರಸಿದ್ಧ ಚಿತ್ರಕಲಾನಿಪುಣರಾದ ಮಿ|| ಕರೇಗೌಡ ಪಾಟೀಲ ಕುಡುಪ್ಲಿ ಇವರಿಂದ ನಿರ್ಮಿಸಿದ ಭವ್ಯವಾದ ಮಂಟಪಕ್ಕೆ ಸಾಯಂಕಾಲ ಐದುಘಂಟೆಗೆ ದಯಮಾಡಿಸಿದರು. ಮೆ|| ಸಾ|| ಬಾ|| ರವರು ಮತ್ತು ಅವರ ಪತ್ನಿಯವರು ಮಿ|| ಅಡಿವೆಪ್ಪನವರ ಮನೆಯೊಳಬಾಗಿಲವರೆಗೆ ಬಂದು ಅವರಮನೆಯ ಯಾವತ್ತು ಜನರ ಕುಶಲಪ್ರಶ್ನೆಗಳಾದನಂತರ ತಮ್ಮ ಉಚ್ಚಾಸನದಲ್ಲಿ ಮಂಡಿಸಿದರು. ಸಭೆಗೆ ಸುಮಾರು ೬೦೦-೭೦೦ ಜನರು ಕೂಡಿದ್ದರು. ಈಸಭೆಗೆ ಮೊದಲೇ ಆಮಂತ್ರಣ ಕೊಟ್ಟು ಕರಿಸಿದಪ್ರಕಾರ ರಾಣಿಬೆನ್ನೂರ ಹಿರೇಕೆರೂರ ತಾಲ್ಲೂಕುಗಳ ಪ್ರಮುಖಜನರು ಆಗಮಿಸಿದ್ದರು. ಮಿ|| ಪುಟ್ಟರಾಜವಡೆಯರ ಚೌಡದಾನಪುರ ಇವರು ತಮ್ಮ ಸುಶ್ರಾವ್ಯವಾದ ವಾಣಿಯಿಂದ ಮಿ|| ಅಡಿವೆಪ್ಪನವರ ಗುಣಕಥನಮಾಡಿ ಈಗ ನಡೆದಿರುವ ಅಸಹಕಾರದ ವಿಷಯಕ್ಕೆ ಸರಕಾರದ ಕೂಡ ಸಹಕಾರದಿಂದನಡೆದು ನಮ್ಮ ಜನ್ಮಸಿದ್ಧಹಕ್ಕುಗಳನ್ನು ದೊರಕಿಸಿಕೊಳ್ಳಬೇಕೆಂಬ ವಿಷಯಕ್ಕೆ ಸರ್ವರಿಗೂ ತಿಳಿಯುವಂತೆ ಬಹುಸರಸವಾಗಿ ಭಾಷಣಮಾಡಿದರು. ಇದೇ ವಿಷಯದಮೇಲೆ ಮಿ|| ಮಂಡಬಸನಗೌಡ ಪಾಟೀಲ ಶಿಡೇನೂರ ಇವರು ಬಹು ಸರಸವಾಗಿ ಭಾಷಣಮಾಡಿದರು. ಮಿ|| ಕುಬಸದ ಲೋ|| ಬೋ|| ಪ್ರೆಸಿಡೆಂಟ್ ಇವರು ಸಾ|| ಬಾ|| ರವರ ಮತ್ತು ಅವರ ಪತ್ನಿಯವರ ಅಭಾರಮನ್ನಿಸಿ, ಹಾರ, ತುರಾಯಿ, ಅತ್ತರ್, ಪಾನಸುಪಾರಿ ಹಂಚಿದನಂತರ ರಾಷ್ಟ್ರಗೀತವಾಗಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ತಾರೀಖು ೧೫-೧-೨೨ ದಿವಸ ಬಬಲೇಶ್ವರ ವೀರಶೈವತರುಣ ಸಂಘದ ೧ನೇ ವಾರ್ಷಿಕ ಸಮ್ಮೇಲನವು.

ರಾ|| ಸಾ|| ಪಿ.ಜಿ. ಹಳಕಟ್ಟಿ ಇವರ ಅಧ್ಯಕ್ಷತೆಯ ಕೆಳಗೆ ಮೊದಲೇ ಗೊತ್ತಾದಪ್ರಕಾರ ಸರಿಯಾದ ವೇಳೆಗೆ ಸಭೆಯ ಕಾರ್ಯಕ್ರಮವು ನೆರವೇರಬೇಕಾಗಿತ್ತು. ಆದರೆ ಬೇರೆ ಕೆಲವುಮಹತ್ವದ ಕಾರಣಗಳ ಸಲುವಾಗಿ ಆಹೊತ್ತಿನ ದಿವಸ ಕೂಡದೆ ಮರುದಿವಸ ಅಂದರೆ ತಾ||೧೪-೧-೧೯೨೨ನೆ ಇಸವಿ ದಿವಸ ಮುಂಜಾನೆ ೧೦ ಘಂಟೆಗೆ ಸರಿಯಾಗಿ ಸದರಿ ಅಧ್ಯಕ್ಷತೆಯ ಕೆಳಗೆ ಕೂಡಿತು. ಸಭೆಗೆ ಬಹುಶಃ ನೂರಾರುಜನರು ಅನ್ಯಗ್ರಾಮಗಳಿಂದಲೂ ೧೫೦೦ ಜನರು ನಮ್ಮ ಊರವರು ಈ ಪ್ರಕಾರ ಜನರು ಕೂಡಿದ್ದರು.

ಸಭೆಯಲ್ಲಿ ೯ ಠರಾವುಗಳು ಪಾಸಾದವು—೧ ನೇ ಠರಾವು—ಮಿ|| ಗುರುಸಿದ್ದಪ್ಪಾ ಹೂವಪ್ಪಾ ಗುಗ್ಗಳ, ಬಿ.ಎ., ಐ. ಸಿ. ಎಸ್., ಇವರು ನಮ್ಮ ಮುಂಬಯಿ ಯೂನಿವರ್ಸಿಟಿಯ ಪರೀಕ್ಷೆಗಳಲ್ಲಿ ಉತ್ತಮರೀತಿಯಿಂದ ತೇರ್ಗಡೆಹೊಂದಿ ಇಂಗ್ಲಂಡಿಗೆ ಹೋಗಿ ಐ. ಸಿ. ಎಸ್. ಪದವಿಯನ್ನು ಹೊಂದಿ ಈಗ ಹಿಂದುಸ್ತಾನಕ್ಕೆ ಸುರಕ್ಷಿತವಾಗಿ ತಿರುಗಿಬಂದದ್ದಕ್ಕೆ ಸಂತೋಷವುಳ್ಳವರಾಗಿ ಈ ಸಭೆಯವರು ಅವರನ್ನು ಅಭಿನಂದಿಸುತ್ತಾರೆ. ೨ನೇ ಠರಾವು—ಈಗಿನಕಾಲಕ್ಕೆ ಇಂಗ್ಲೀಷ್ ಶಿಕ್ಷಣವು ಅತ್ಯವಶ್ಯಕವಿರುವದರಿಂದ ಬಬಲೇಶ್ವರದಲ್ಲಿ ಮಾರ್ಚ ೧೯೨೨ ರಲ್ಲಿ ಒಂದು ಇಂಗ್ಲೀಷ್ ಶಾಲೆಯನ್ನು ಸ್ಥಾಪಿಸತಕ್ಕದ್ದು ಮತ್ತು ಈ ಶಾಲೆಗೆ ಯಾವತ್ತು ಜನರು ಸಹಾಯಮಾಡಬೇಕೆಂದು ಈ ಸಭೆಯವರು ವಿನಂತಿಮಾಡಿಕೊಳ್ಳುತ್ತಾರೆ. ೩ನೇ ಠರಾವು—ನಮ್ಮದೇಶವು ಮತ್ತು ನಮ್ಮ ಸಮಾಜವು ಮುಂದರಿಯಬೇಕಾದರೆ ಸಕ್ತಿಶಿಕ್ಷಣದ ಪ್ರಸಾರಮಾಡುವದು ಅವಶ್ಯವಾಗಿರುವದರಿಂದ ಆ ಪ್ರಕಾರ ಸರ್ಕಾರದವರು ಅದನ್ನು ಕೂಡಲೇ ಅಮಲಿನಲ್ಲಿತರಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ೪ನೇ ಠರಾವು—ಈ ಊರಲ್ಲಿಯ ಪ್ರಾಥಮಿಕಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಇನ್ನೂ ಹೆಚ್ಚಾಗಲಿಕ್ಕೆ ಸಂಭವವಿದ್ದು ಅವರ ಶಿಕ್ಷಣಕ್ಕೆ ಸ್ಥಳದ ಮತ್ತು ಮಾಸ್ತರರ ಅನುಕೂಲತೆಗಳು ಇರದ್ದರಿಂದ ಶಿಕ್ಷಣಪ್ರಸಾರಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ತೊಂದರೆಗಳು ದೂರಾಗುವಂತೆ ಶಾಲಾಖಾತೆಯವರು ವ್ಯವಸ್ಥೆ ಮಾಡುವರೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ೫ನೇ ಠರಾವು—ಈ ಎರಡುವರ್ಷಗಳ ಹಿಂದೆ ವಿಜಾಪುರದಲ್ಲಿ ಸ್ಥಾಪಿತವಾದ ಟ್ರೇನಿಂಗಸ್ಕೂಲು ತೆಗೆದುಹಾಕಲ್ಪಟ್ಟಿದೆ. ಪುನಃ ಸ್ಥಾಪನೆಯಾಗಬೇಕೆಂದು ಈ ಸಭೆಯವರು ವಿನಂತಿಮಾಡುತ್ತಾರೆ. ೬ನೇ ಠರಾವು—ಈ ಗ್ರಾಮವು ಮುಖ್ಯವಾಗಿ ಒಕ್ಕಲತನದ್ದು ಇದ್ದು ಇಲ್ಲಿ ಒಂದು ಪರಸ್ಪರ ಸಹಾಯಕಾರಕಸಂಘದ ಅವಶ್ಯಕತೆಯು ಬಹಳ ಇರುವದರಿಂದ ಇಂಥ ಸಂಘಗಳನ್ನು ಇಲ್ಲಿ ಸ್ಥಾಪಿಸಬೇಕೆಂದು ಈ ಸಭೆಯವರು ವಿನಂತಿಮಾಡಿಕೊಳ್ಳುತ್ತಾರೆ. ೭ನೇ ಠರಾವು—ವೀರಶೈವಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ, ನೈತಿಕ ಉನ್ನತಿಯನ್ನು ಹೊಂದಬೇಕಾದರೆ ಅವರಲ್ಲಿ ಒಳಪಂಗಡಗಳಲ್ಲಿರುವ ಮತಭೇದಗಳನ್ನು ತೆಗೆದುಹಾಕುವದು, ಮತ್ತು ಅವರಲ್ಲಿಯ ಅಂತಸ್ಥವ್ಯಾಜ್ಯಗಳನ್ನು ತಮ್ಮತಮ್ಮೊಳಗೆ ತೀರಿಸಿಕೊಳ್ಳುವದು ಅತ್ಯಂತ ಅವಶ್ಯವಾಗಿದ್ದು ಅವುಗಳು ಅಮಲಿನಲ್ಲಿ ಬರಲಿಕ್ಕೆ ಎಲ್ಲರೂ ಹೆಚ್ಚಾಗಿ ಪ್ರಯತ್ನಿಸಬೇಕೆಂದು ಈ ಸಭೆಯವರು ನಿರ್ಣಯಮಾಡುತ್ತಾರೆ. ೮ನೇ ಠರಾವು—ಅಲ್ಲಲ್ಲಿ ವೀರಶೈವತರುಣ ಸಂಘಗಳನ್ನು ಸ್ಥಾಪಿಸುವದು ಅತ್ಯಾವಶ್ಯಕವಾಗಿದ್ದು ಅವುಗಳನ್ನು ಎಲ್ಲಕಡೆಗೆ ಸ್ಥಾಪಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ೯ನೇ ಠರಾವು—ರಾವಸಾ|| ಪಿ.ಜಿ. ಹಳಕಟ್ಟಿ ಇವರು ತಮ್ಮ ಸನದನ್ನು ಎರಡನೇ ಜಿಲ್ಲೆಗೆ ವರ್ಗಮಾಡಿಸಿಕೊಂಡಿದ್ದು ಅದನ್ನು ಪರತ ವಿಜಾಪೂರ ಜಿಲ್ಲೆಗೆ ಮಾಡಿಸಿಕೊಳ್ಳುವ ಬಗ್ಗೆ ವಿನಂತಿಮಾಡಿಕೊಳ್ಳಬೇಕೆಂದು ಠರಾವು ತರಲ್ಪಟ್ಟಿತು. ಅದು ಸರ್ವಾನುಮತಿಯಿಂದ ಪಾಸಾಯಿತು.

ಪ್ರೇಕ್ಷಕ.

ವಾರ್ಷಿಕೋತ್ಸವಪತ್ರಿಕಾ.

ಮಿ|| ಮಿ|| ಧಾರವಾಡ ಶಹರ ಹಾವೇಂಪೇಟ ಶ್ರೀ ಮುರುಘಾಮಠದಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಸ್ಥಾಪನ ಮಾಡಿರುವ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿ ಬೋರ್ಡಿಂಗ್ ಮತ್ತು ಪಾಠಶಾಲಾ ಸಂಸ್ಥೆಯ ಕಾರ್ಯಕ್ರಮಗಳು ಐದನೇ ವರ್ಷದಲ್ಲಿಯೂ ಶ್ರೀ ಶಿವಯೋಗೀಶ್ವರ ಕೃಪಾಶೀರ್ವಾದ ಬಲದಿಂದ ಸುಯಂತ್ರಿತವಾಗಿ (ಸಾಂಗವಾಗಿ) ನೆರವೇರಿದ ಸಂತೋಷ ಸಮಾರಂಭೋತ್ಸವವು ಶಕೆ ೧೮೪೩ನೇ ದುರ್ಮತಿನಾಮ ಸಂವತ್ಸರದ ಮಾಘಶುದ್ಧ ೫ ತಾರೀಖು ೨-೨-೧೯೨೨ ಇಸವಿ ಗುರುವಾರ ಮಧ್ಯಾಹ್ನಾತ್ಪರ ೪ ಗಂಟೆಗೆ ಶ್ರೀ ಮುರುಘಾಮಠದಲ್ಲಿ ಮೆ|| ರೇವಣಸಿದ್ಧಪ್ಪಯ್ಯನವರು ಕಿತ್ತೂರ ಪ. ಅ. ಕಲೆಕ್ಟರ ಇವರ ಅಧ್ಯಕ್ಷತೆಯಲ್ಲಿ ಪದ್ಧತಿ ಪ್ರಕಾರ ನಡೆಸಲ್ಪಡುವುದು. ಆ ದಿವಸ ನೈತಿಕ, ಧಾರ್ಮಿಕ ಉಪನ್ಯಾಸ ಶಿವಕೀರ್ತನೆಗಳು ನಡೆಯುವವು. ಪ್ರಯುಕ್ತ ತಾವು ತಮ್ಮ ಇಷ್ಟಮಿತ್ರರೊಡನೆ ಆಗಮಿಸಿ ಸಮಾರಂಭವನ್ನು ಸಾಂಗಗೊಳಿಸಿ ಶ್ರೀಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಕೋರಿಕೆ.

ಸಮಾರಂಭ ಕಾರ್ಯಕ್ರಮ.

(೧) ಆದಿಮಂಗಲ ಶಿವಸ್ತುತಿ, ಶ್ರೀಲಿಂಗರಾಜಸ್ತುತಿ. (೨) ಶ್ರೀಮಂತ ಶಿರಸಂಗಿ ಸಂಸ್ಥಾನಾಧೀಶ್ವರ ಧನರಾಶಿಯಿಂದ ದೊರೆದ ಸಹಾಯ ಸಂತೋಷಪ್ರದರ್ಶನ. (೩) ಐದನೇ ವರ್ಷದ ರಿಪೋರ್ಟು ಓದುವಿಕೆ. (೪) ಮುಂದಿನವರ್ಷದ ಬಜೆಟ, ವ ಕಮಿಟಿಯ ನಿಯಮಗಳ ಸುಧಾರಣೆ. (೫) ಈ ಸಂಸ್ಥೆಯ ಸಹಾಯಕಾರಿಗಳವರ ಅಭಾರಮನ್ನಿಸುವಿಕೆ. (೬) ಹೊಸ ಕಮಿಟಿಯ ಆಲೋಚನೆ. ಆಖೈರಮಂಗಲ.

ತಮ್ಮ ವಿಧೇಯ,
ಶಿವಪ್ಪಾ ಚನವೀರಪ್ಪಾ ಮಟ್ಟಿ, ಚೇರಮನ್.

ಸನ್ ೧೯೧೬ ನೇ ಇಸವಿಯಿಂದ ಸನ್ ೧೯೨೧ ನೇ ಇಸವಿ ಡಿಶಂಬರ್ ಅಖೈರವರೆಗೆ (ಈ ಬೋರ್ಡಿಂಗಿಗೆ) ದಾಖಲಾದ ವಿದ್ಯಾರ್ಥಿಗಳು ೯೨ ಇವರಲ್ಲಿ ಮಾಹೇಶ್ವರರು ೩೯ ಭಕ್ತರು ೫೩.

೫ನೆ ವರ್ಷ ಹಾಜರಿಗೆ ದಾಖಲಾದ ವಿದ್ಯಾರ್ಥಿಗಳು ೬೩ ಇದರಲ್ಲಿ ಮಾಹೇಶ್ವರರು ೩೦ ಭಕ್ತರು ೩೩.

ವರ್ಷ.	ಇಂ. ಮಿ.	ಸಂಸ್ಕೃತ ಮಿ.	
೧.	೧೭	೮	ಈ ನಾಲ್ಕು ವರ್ಷಗಳ ಒಟ್ಟು ಖರ್ಚು ಹತ್ತುಸಾವಿರ ಎರಡು ನೂರಾ ಮೂವತ್ತೈದು ರೂಪಾಯಿ ಏಳು ಆಣೆ ಹತ್ತು (೧೦೨೩೫-೭-೧೦) ಪೈ.
೨.	೧೭	೩	
೩.	೨೮	೮	
೪.	೪೧	೦	

೫ನೇ ವರ್ಷದಲ್ಲಿ ಹಾಜರಿಗೆ ದಾಖಲಾದ (೬೩) ವಿದ್ಯಾರ್ಥಿಗಳ ವಿವರ.
ಜೂನಿಯರ್ ಬಿ.ಎ (೧) ಇಂಟರ (೬) ಪ್ರಿವ್ಹಿ ಎಸ್ (೧೫) ಮ್ಯಾಟ್ರಿಕ (೧೪)
ಇತರ ಕ್ಲಾಸು [೨೭]

ಧಾರವಾಡ ಜಿಲ್ಲಾ (೩೫) ವಿಜಾಪುರ (೪) ಬೆಳಗಾಂವ (೪) ಕಾರವಾರ (೨) ನಿಜಾಮಸ್ಟೇಟ (೩) ಮೈಸೂರ (೧) ಸಾಂಗಲಿ (೨) ಮಿರಜ (೫) ಜಮಖಂಡಿ (೩) ಮುಧೋಳ (೩) ರಾಮದುರ್ಗ (೧) ಅಂತು ೬೩.

ಧಾರವಾಡ ಡಿ. ೩೫ ವಿದ್ಯಾರ್ಥಿಗಳ ತಾಲೂಕವಾರ ವಿವರ-ಧಾರವಾಡ (೨) ನವಲಗುಂದ (೩) ರೋಣ (೬) ಗದಗ (೧) ಹುಬ್ಬಳ್ಳಿ (೧) ಬಂಕಾಪುರ (೨) ಕರ್ಜಗಿ (೧೦) ಹಾನಗಲ್ಲ (೨) ರಾಣೇಬೆನ್ನೂರ (೬) ಹಿರೇಕೆರೂರು (೨)

ಐದನೆ ವರ್ಷದಲ್ಲಿಯ ತಿಂಗಳ ವಾರ ಖರ್ಚು ವಿವರ--ಸನ್ ೧೯೨೧ನೆ ಇಸವಿ.

ತಿಂಗಳ.	ವಿ. ಂ	ಅತಿಥಿ.	ನೌಕರ	ಖರ್ಚು ರೂ.
ಫೆಬ್ರವಾರಿ,	೪೧	೧೯	೫	೨೫೮|||—೯
ಮಾರ್ಚ,	೪೪	೨೦	೫	೨೪೯|=೧
ಎಪ್ರೈಲ್, ೪೩ ಮು. ಪ. ೧೧೯ ಮ್ಯಾ. ೧೧		೬	೫	೩೬೬||≡೦
ಮೇ,	೪೪	೨೦	೫	೦೯೯||೦೨
ಜೂನ,	೫೫	೨೦	೪	೨೫೫||≡೬
ಜುಲೈ,	೬೦	೫೧	೪	೪೩೪||=೯
ಅಗಸ್ಟ,	೬೧	೪೦	೪	೪೩೨|೦೨
ಸಪ್ಟಂಬರು,	೬೨	೪೦	೪	೪೨೬|≡೯
ಅಕ್ಟೋಬರ,	೬೨	೩೦	೪	೨೮೨|≡೯
ನವಂಬರ,	೬೨	೨೦	೩	೨೬೩||≡೬
ಡಿಸೆಂಬರ.	೬೩	೩೧	೪	೪೨೬||=೯

ಒಟ್ಟು ರೂ .... ೩೫೦೬|||≡೩

ಇದರ ಹೊರತು ಇತರ ವ್ಯವಸ್ಥೆಯ ತಪಶೀಲು ವಾರ್ಷಿಕ ರಿಪೋರ್ಟಿನಲ್ಲಿ ಪ್ರಕಟಿಸಲ್ಪಡುವದು. ಆಗಾಗ್ಗೆ ಅನೇಕ ಶ್ರೀ. ಶ್ರೀ. ( ) ಗಳವರು ದಯಮಾಡಿಸಿ ಈ ಬೋರ್ಡಿಂಗಿನ ವಿದ್ಯಾರ್ಥಿಗಳಿಗೆ ಸದುಪದೇಶ ಮಾಡಿ ಆಶೀರ್ವಾದ ದಯಪಾಲಿಸುತ್ತಿರುವದರಿಂದ ಸಮಸ್ತ ವಿದ್ಯಾರ್ಥಿಗಳೂ ಆರೋಗ್ಯಭಾಗ್ಯದಿಂದಲೂ ಆನಂದದಿಂದಲೂ ಇದ್ದಾರೆ. ಅಥಣಿ ಗಚ್ಚಿನ ಮಠದ ಶ್ರೀ. ಶ್ರೀ. ( ) ಗಳವರು ದಯಮಾಡಿಸಿ ಇಲ್ಲಿಯ ಭಕ್ತಮಂಡಳಿಯವರಿಗೂ, ಎಲ್ಲ ವಿದ್ಯಾರ್ಥಿಗಳಿಗೂ ಸದ್ಬೋಧಾಮೃತಪಾನಮಾಡಿಸಿ ಈ ಪಾಠಶಾಲಾ ಬೋರ್ಡಿಂಗ್ ಸಂಸ್ಥೆಗೆ, ಒಂದುನೂರಾ ಒಂದು ರೂಪಾಯಿಗಳನ್ನೂ ಫಲಾಶೀರ್ವಾದವನ್ನೂ ದಯಪಾಲಿಸಿದರು.

ಶ್ರೀ. ಶ್ರೀ. ( ) ಮಹಾತಪಸ್ವಿಗಳವರ ಮಹನೀಯರ ಆಶೀರ್ವಾದಬಲದಿಂದಲೂ, ಶ್ರೀ ಮೃತ್ಯುಂಜಯ ಸ್ವಾಮಿಗಳವರ ಅವಿಶ್ರಾಂತ ಪ್ರಯತ್ನದಿಂದಲೂ, ಹಾಗೂ ೨೦ನೆ ಶತಮಾನದ ಶಿವಶರಣ ಕೈ. ಶ್ರೀಮಂತ ಶಿರಸಂಗಿ ಲಿಂಗರಾಜೇಂದ್ರರ ಧರ್ಮ ದ್ರವ್ಯದ ಮತ್ತು ಅನೇಕ ಶ್ರೀಗಳವರೂ, ಶ್ರೀಮಂತರೂ, ಸದ್ಭಕ್ತಿಯುತರಾದ ಮತ ಪರಮತೀಯ ಪರೋಪಕಾರಿಗಳೂ ಮಾಡುತ್ತಿರುವ ಸಹಾಯದಿಂದಲೂ, ನಿರ್ವಿಘ್ನವಾಗಿ ನಡೆದಿರುವ ಈ ವಿದ್ಯಾದಾನ ಅನ್ನದಾನದ ಫಲಕ್ಕೂ ಕೀರ್ತಿಗೂ ಇನ್ನುಳಿದ ಸರ್ವ ಮಹನೀಯರೂ ಭಾಗಿಗಳಾಗಿ ಮತ್ತೂ, ಸಾಧ್ಯವಾದಷ್ಟು ವಿದ್ಯಾರ್ಥಿಗಳ ಸೌಲಭ್ಯಕ್ಕೆ ಅನುಕೂಲವನ್ನುಂಟುಮಾಡಿಕೊಡಬೇಕಾಗಿಯೂ ಸನ್ ೧೯೨೧ ನೇ ಇಸವಿ ಅಖೈರವರೆಗೆ ಶ್ರೀ || ॥ ಬೋರ್ಡಿಂಗಿಗೆ ಬಾಕಿ ಕೊಡಬೇಕಾಗಿರುವ ವರ್ಷಾಶನ ಮತ್ತು ಮಾಸಾಶನ ರೂಪಾಯಿ ಧಾನ್ಯ ಹಾಗೂ ಇತರ ಜಿನಸುಗಳನ್ನು ಕೂಡಲೇ ಕಳಿಸಿಕೊಟ್ಟು ಇದೇ ವರ್ಷದ ರಿಪೋರ್ಟಿನಲ್ಲಿ ತಮ್ಮ ಹೆಸರು ದಾಖಲ ಮಾಡುವದಕ್ಕೆ ಅನುಕೂಲ ಮಾಡಬೇಕಾಗಿಯೂ ಪ್ರಾರ್ಥನೆ.

ಸೆಕ್ರೆಟರಿ,
ಬಸಪ್ಪಾ ಮಲ್ಲಪ್ಪಾ ಆಹೆಟ್ಟಿ.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
5 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೨೨ ನೆಯ ಇಸವಿ ಜನವರಿ ತಾ|| ೨೯ ರಿಂದ ೧೯೨೨ ನೆಯ ಫೆಬ್ರವರಿ ತಾ|| ೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿನಾಮಸಂವತ್ಸರದ ಮಾಘಶುದ್ಧ ಬಿದಿಗೆಯಿಂದ ಮಾಘಶುದ್ಧ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರಮಾ
29	ಭಾನು	ಬಿದಿ	60	ಧನಿ	43-1	16
30	[1]ಸೋಮ	ಬಿದಿ	4-6	ಶತ	49-38	17
31	[2]ಮಂಗಳ	ತದಿ	9-32	ಪೂಭಾ	56-13	18
1	ಬುಧ	ಚೌತಿ	14-40	ಉಭಾ	60	19
2.	ಗುರು	ಪಂಚ	19-15	ಉಭಾ	1-58	20
3	[3]ಶುಕ್ರ	ಷಷ್ಠಿ	22-58	ರೇವ	7-0	21
4	[4]ಶನಿ	ಸಪ್ತ	25-16	ಅಶ್ವಿ	10-55	22

(1) ಕೈಲಾಸಗೌರೀವ್ರತಂ. (2) ಮೌನಗೌರೀವ್ರತಂ, ಕುಂದಚತುರ್ಥಿ. (3) ಕುಮಾರಷಷ್ಠಿ. (4) ರಥಸಪ್ತಮಿ, ಸೂರ ಚಂದ್ರವ್ರತಂ, ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಫೆಬ್ರವರಿ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೬

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ತಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
5 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಶಕ್ತಿ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಚಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 33

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಕ ವೀರಶೈವ ವಿವಾಹವಿಧಿಃ	೦—೧೩—೦
ರುಶೀಲಚರಿತ್ರೆ	೦—೧೦—೦
ದಾಸಿ	೦—೮—೦
ವಂಚಕ	೦—೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವಾಜ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಅಕ್ಷರ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ

ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
2 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ.ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾನ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ, ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು ಮತ್ತು ರೇಷ್ಮೆ ವಸ್ತ್ರಗಳು.

49 ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಸ್ತ್ರಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ. ಇಂದ.		ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	,,	100-0-0
14	6- 0-0	,,	100-0-0

108 ಮಣಿಗಳ ಸರಗಳು 1ಕ್ಕೆ ಇದರಲ್ಲಿ 5-6 ಮುಖ ಮಾತ್ರ ದೊರಿಯುವವು.

ಪ್ರಮಾಣ	ರೂ. ಇಂದ	ರೂ ವರೆಗೆ.
ಉದ್ದಿನ	,, 15-0-0	,, 40-0-0
ಮೆಣಸು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಆಮಲಾಕ್ಷಿ	,, 1-0-0	,, 2-0-0
ದೊಡ್ಡ	,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ.40-0-0 ಡಿ. 35-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

S·U. N. & Co., ಎಸ್. ಯು. ನೇಪಾಳ ರುದ್ರಾಕ್ಷ
Chaukhamba, ಕಂಪನಿ, ಚೌಕಂಬಾ ಕಾಶೀ.
Benares.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಪೆಬ್ರವರಿ ತಾ|| ೫ ನೆಯ ಭಾನುವಾರ.

ಮೈಸೂರು ಸಾಬೂನು ಯಂತ್ರಾಲಯ.

ಮೈಸೂರು ಪ್ರಭುತ್ವದವರು ಬೆಂಗಳೂರಿನಲ್ಲಿ ಸ್ಥಾಪಿಸಿ ಕೆಲ ವರ್ಷಗಳಿಂದ ನಡೆಯಿಸಿಕೊಂಡು ಬರುತ್ತಿದ್ದ ಸಾಬೂನು ನಿರ್ಮಾಣದ ಯಂತ್ರಾಲಯವನ್ನು ಒಂದು ಸ್ವತಂತ್ರ ಸಂಘಕ್ಕೋ ಸ್ವತಂತ್ರ ವ್ಯಕ್ತಿಗೋ ವಹಿಸಿಬಿಟ್ಟದ್ದಾರೆಂದೂ, ವಹಿಸಿಬಿಡುವುದಕ್ಕಿದ್ದಾರೆಂದೂ ವೃತ್ತಪತ್ರಿಕೆಗಳಲ್ಲಿ ಬರೆಯಲ್ಪಡುತ್ತಿದ್ದಿತು. ಬಳಿಕ ಸರ್ಕಾರದವರು ಒಂದು ಪ್ರಕಟನವನ್ನು ಮಾಡಿ ಇತರರಾರಿಗೂ ವಹಿಸಿಕೊಟ್ಟಿಲ್ಲನೆಂದು ತಿಳಿಯಪಡಿಸಿದರು. ಈಚೆಗೂ ಇದರ ಸಂಬಂಧವಾದ ಸುದ್ದಿಗಳು ಪತ್ರಿಕೆಗಳಲ್ಲಿ ನಾನಾತರವಾಗಿ ಬರುವುದು ತಪ್ಪಿಲ್ಲ. ಈ ಸಂದರ್ಭದಲ್ಲಿ ನಾವು ಒಂದೆರಡು ಮಾತುಗಳನ್ನು ಆಡಲು ಇಷ್ಟಪಡುತ್ತೇವೆ. ಮುಖ್ಯವಾಗಿ ಸರ್ಕಾರದವರು ವ್ಯಾಪಾರಧರ್ಮಕ್ಕೆ ಪ್ರವರ್ತಿಸುವ ಪದ್ಧತಿಯನ್ನು ಸಾಕುಮಾಡಬೇಕಾಗಿದೆ. ಒಂದುವೇಳೆ ಈ ಯಂತ್ರಾಲಯದಿಂದ ಸರ್ಕಾರಕ್ಕೆ ಆದಾಯವೇ ಆಗುತ್ತಿದ್ದರೂ ಅಂಥ ಆದಾಯವನ್ನು ಕೆಲಮಟ್ಟಿಗೆ ತಮ್ಮ ಪ್ರಜೆಗಳೇ ಅನುಭವಿಸಲಿಕ್ಕೆ ಪ್ರಭುತ್ವದವರು ಅವಕಾಶ ಕೊಡಬಾರದೇಕೆ? ಇದುವರೆಗೆ ಈ ಯಂತ್ರಾಲಯದ ಕೆಲಸದಿಂದ ಸರ್ಕಾರಕ್ಕೆ ನಷ್ಟವೋ ಆದಾಯವೋ ಯಾರಿಗೂ ತಿಳಿಯದು. ಮೊದಲಿಂದಲೂ ಅದಕ್ಕಾಗಿ ಹಾಕಿರುವ ಬಂಡವಾಳವೆಷ್ಟು? ಅದರ ಬಡ್ಡಿಯೆಷ್ಟು? ವರ್ಷೇವರ್ಷೆ ಆಗುತ್ತಿರುವ ಸಿಬ್ಬಂದಿಯ ಮತ್ತು ಕೊಂಡುತಂದ ಉಪಕರಣಗಳ ವೆಚ್ಚವೆಷ್ಟು? ವರ್ಷೇವರ್ಷೆ ಆಗುತ್ತ ಬಂದ ಆದಾಯವೇನು? ಇವುಗಳನ್ನೆಲ್ಲಾ ವಿವರಿಸಿ ಒಂದು ಪ್ರಕಟನೆಯನ್ನು ಸರ್ಕಾರದವರು ಮಾಡುವುದು ಅತ್ಯವಶ್ಯಕ. ಮತ್ತು ಇದುವರೆಗೆ ಇದನ್ನು ಯಾರಿಗೂ ವಹಿಸಿಕೊಡದಿದ್ದ ಸಂದರ್ಭದಲ್ಲಿ ಯಾರಿಗಾದರೂ ಶುದ್ಧಕ್ರಯಕ್ಕೇ ಕೊಟ್ಟುಬಿಡಲು ತಕ್ಕ ಪ್ರಕಟನೆಯನ್ನು ಮಾಡುವುದು ಸರ್ವೋತ್ತಮ. ಹಾಗಿಲ್ಲದೆ ಸರ್ಕಾರಕ್ಕೆ ಆದಾಯವೂ ಇಲ್ಲದೆ ಅನಿರ್ವಾಹ ಸಂದರ್ಭದಿಂದ ಇನ್ನುಮುಂದೆಯೂ ಸರ್ಕಾರದ ತಲೆಗೇ ಕಟ್ಟಿಕೊಳ್ಳಬೇಕಾದ ಸಂದರ್ಭವಿದ್ದರೆ ಆ ಯಂತ್ರೋಪಕರಣಗಳನ್ನೆಲ್ಲಾ ಬಹಿರಂಗವಾದ ಹರಾಜಿಗೆ ಇಟ್ಟು ಕೈತೊಳೆದುಕೊಳ್ಳುವುದೇ ಒಳ್ಳೆಯದು. ಹೇಗೂ ಇದರಿಂದ ಲಾಭವಿರಲಿ ಅಥವಾ ನಷ್ಟವಿರಲಿ ಇಂಥ ಕಾರ್ಯಗಳ ಸಂಬಂಧವನ್ನು ಪ್ರಭುತ್ವದವರು ಕಳೆದುಕೊಳ್ಳಬೇಕೆಂಬುದೇ ನಮ್ಮ ಅಭಿಪ್ರಾಯವಾಗಿರುತ್ತದೆ. ಏಕೆಂದರೆ—ಇಂಥ ಸ್ಥಾಪನೆಗಳು ವರ್ತಕರ ಅಥವಾ ಸ್ವಂತ ಬಂಡವಾಳಗಾರರ ಕೈಯಲ್ಲಿ ಕೆಲಸಮಾಡುವ ರೀತಿಯಲ್ಲಿ ಸರ್ಕಾರದ ಸಂಬಳಗಾರರ ಅಧೀನದಲ್ಲಿ ದುಡಿದು ಸಂಪಾದಿಸಿಕೊಡಲಾರವು. ಒಂದು ಕಾಸು ನಷ್ಟವು ಸಂಭವಿಸಿದರೂ ನೋಡಿ ಸೈರಿಸಲಾರದೆ ಹೇಗಾದರೂ ಸುಧಾರಣೆಮಾಡಿಕೊಳ್ಳಬೇಕೆಂಬ ಅವಶ್ಯಕತೆಯು ಸ್ವಂತಗಾರನಿಗೆ ಇರುವಂತೆ ಸಂಬಳಗಾರರಿಗೆ ಎಲ್ಲಿರುವುದು? ಆಯಾ ತಿಂಗಳಲ್ಲಿ ಯಂತ್ರಾಲಯಕ್ಕೆ ಆದ ಆಯವ್ಯಯಗಳ ಪಟ್ಟಿಯನ್ನು ತೋರಿಸಿಬಿಟ್ಟು, ಕಾರ್ಯಾಲಯದಲ್ಲಿ ಕೆಲಸವೇನೋ ನಡೆಯುತ್ತಿದೆಯೆಂದು ತೋರಿಸಿಬಿಟ್ಟರೆ ಅವರ ಕರ್ತವ್ಯಭಾರವು ಮುಗಿದುಹೋಗುವುದು. ಇಂಥ ಸ್ಥಿತಿಯಲ್ಲಿ ಸರ್ಕಾರದ ಬೊಕ್ಕಸದ ಹಣವನ್ನು ಇಂಥ ಪ್ರತಿಷ್ಠಾಪನೆಗಳಿಗೆ ಉಪಯೋಗಿಸಬೇಕಾದುದೇನು? ಪ್ರಜೆಗಳು ತಮಗೆ ಅತ್ಯವಶ್ಯಕವೆಂದು ಮೊರೆಯಿಡುತ್ತಿರುವ ಕೆಲಸಗಳಿಗೆ ಹಣವಿಲ್ಲವೆಂಬ ಉತ್ತರದ ಪರಂಪರೆಗಳನ್ನು ಒಂದುಕಡೆ ಸುರಿಸುತ್ತ, ಬೇರೊಂದು ಕಡೆಯಲ್ಲಿ ಇಂಥ ವ್ಯಾಪಾರಗಳನ್ನು ನಡೆಯಿಸಿಕೊಂಡು ಹೋಗುವುದು ಎಂದಿಗೂ ಧರ್ಮವಲ್ಲವು.

IRRESISTIBLE.

Would it be right to keep quiet and with folded arms to look on large events without feeling and without expressing the same when those large events are likely to produce effects sooner or later on every part of India whether it is British India or Indian State? The former has no doubt every right to deal with every detail of these events to save the country from immediate catastrophe resulting from these events. The Indian States are concerned with distant consequences and, with reference to these apprehensions irresistible is the feeling and irresistible are the facts giving rise to apprehensions of a serious character.

The present unrest in India has attracted all attentions—the British and the Indian Press being alike interested in it. The recent Political Conference in Bombay convened for the purpose of coming to an agreement in respect of a "Round Table Conference," which is to consist of representatives of all shades of Political views and members of Government, has lifted up much of the cloud in which the present great Political question of India had been enshrouded. Sir Sankaran Nair's letter has unfolded the truth. Much has been written on this letter. This volume of publications has corroborated the conclusions of Sir Sankaran Nair and that is that one Man's rule is predominating and that one Man's mind is set on Non-Co-operation and Non-Settlement however subtle the argument may be to the contrary. There are no two opinions in any part of India as regards the saintly character and unselfish nature of this great Man who has such disciplined and determined mind that an army of the men on the opposite side of the argument will be utterly unable to make him move an inch from his position. His simple habits, greatness of soul and simple words carry away most of the young minds with him. His paper is rightly called "Young India." But the older and the more experienced heads consider that the consequences of the agitation–if the agitation triumphs–are more momentous than the immediate triumph itself. This appears to us to be the sole difference between the two classes of the Indian Political parties. The older class has the strength of experience in place of the vigor of the younger class. This has in view the immediate result and that the distant and lasting consequences. Sir Sankaran Nair has proved in his past career that freedom of thought and independence of opinion are the two redoubtable points of his public life and his honesty of purpose is unimpeachable. His opinions are seasoned, decisive, considered and conceived quickly and forcibly given effect to. Such is the son of India who withdrew from the deliberations of the Political Conference, because of the people of India whose destruction is in evitable with the advent of revolution. By whom was Sir Sankaran Nair succeeded to watch over these deliberations? The people of Mysore know sufficiently well of him and we leave it there.

But coming to the irresistibility of the subject matter, our view is that from what is being enacted on the British India Platform, we are able to see that the agitation carries in it such germs of Political infection that they may get into any neighbouring area under any other outward form. What is the nature of the correspondence which gets out from us to the papers like the Hindu and the Bombay Chronicle? How do papers of that ilk amongst us behave? What about the mind of the Mighty Intellect in the land? All these questions with reference to the revolutionary movement in British India have to be answered in the affirmative (S. S. S.) It is this in our mind that has induced us to state what we think of the exciting event of the day. We are with Sir Sankaran's wisdom. The seeds of revolution must be iradicated from the land on which they are sown and must be prevented from being imported to the neighbouring lands.

ನೂತನಶಾಸನ.

ಭಾರತ ಪ್ರಭುತ್ವದವರು ಕಠಿನ ಶಾಸನಬಲದಿಂದಲೇ ಸದ್ಯದ ರಾಜಕೀಯ ವೈಷಮ್ಯವನ್ನು ಅಣಗಿಸುವ ಬುದ್ಧಿಯನ್ನು ಬಲಪಡಿಸುತ್ತಿರುವಂತೆ ಕಾಣುತ್ತದೆ. ಪೊಲೀಸರಿಗೆ ಭಯಪಡಿಸಿ ಅಥವಾ ನಿರ್ಬಂಧಗೊಳಿಸಿ ಇಲ್ಲವೆ ಬೇರೆಯಾವುದಾದರೊಂದು ತೆರದಿಂದ ಅವರ ವಿಧ್ಯುಕ್ತ ಧರ್ಮಗಳನ್ನು ಅವರು ಆಚರಿಸದಂತೆ ಮಾಡುವುದಕ್ಕಾಗಿ ಪೊಲೀಸರಿಗೆ ದುರ್ಬೋಧನೆಮಾಡುವುದು, ಪ್ರಭುತ್ವ ವಿಷಯದಲ್ಲಿ ಪೊಲೀಸರ ಮನಸ್ಸಿನಲ್ಲಿ ಆಗ್ರಹವೂ ದ್ವೇಷವೂ ಹುಟ್ಟುವಂತೆ ಮಾಡುವುದು ಇತ್ಯಾದಿ ಪ್ರಯತ್ನಗಳು ಈಗ ದೇಶದಲ್ಲಿ ಜರಗುತ್ತಿರುವುದರಿಂದ, ಇಂಥ ಪ್ರಯತ್ನಗಳು ಶಿಕ್ಷಾರ್ಹಗಳೆಂದು ವಿಧಿಸಲಿಕ್ಕಾಗಿ ಒಂದು ಶಾಸನವನ್ನು ಹೊಸದಾಗಿ ಏರ್ಪಡಿಸಲು ಭರತಖಂಡ ಸರ್ಕಾರದವರು ನಿರ್ಧರಿಸಿದ್ದಾರೆ. ಕಳೆದ ವಾರ ಸಾಮ್ರಾಜ್ಯ ಶಾಸನ ಸಭೆಯಲ್ಲಿ ಈ ಸಂಬಂಧವಾದ ಬಿಲ್ಲನ್ನು ಸರ್ಕಾರಿ ಪಕ್ಷದ ಆ|| ವಿಲಿಯಂ ವಿಸೆಂಟ್‌ರವರು ಪ್ರವೇಶಗೊಳಿಸಿದರು. ೧೮೬೧ನೆ ವರ್ಷದಲ್ಲಿ ಏರ್ಪಟ್ಟಿರುವ ಪೊಲೀಸು ಶಾಸನದಲ್ಲಿ ಇಂಥ ದುಷ್ಕೃತ್ಯಗಳಿಗೆ ತಕ್ಕ ಶಿಕ್ಷೆಯು ವಿಧಿಸಲ್ಪಟ್ಟಿಲ್ಲವಾದಕಾರಣ ಈಗ ಇದನ್ನು ನೂತನವಾಗಿ ಏರ್ಪಡಿಸುತ್ತಾರಂತೆ. ಈ ಶಾಸನ ಪ್ರಕಾರ ಅಪರಾಧಿಗಳಿಗೆ ೨ ವರ್ಷಗಳ ವರೆಗೆ ಕಾರಾಗೃಹ ಶಿಕ್ಷೆಯೂ ೧೦೦೦ ರೂ. ಗಳ ವರೆಗೆ ಅರ್ಥದಂಡವೂ ವಿಧಿಸಲ್ಪಡಬಹುದಾಗಿದೆ. ಈಗಣ ಸಹಾಯನಿರಾಕರಣವಾದಿಗಳು ಪೊಲೀಸರಲ್ಲಿ ಪ್ರಭುತ್ವ ವಿಷಯವಾಗಿ ಕೋಪದ್ವೇಷಗಳನ್ನು ಹುಟ್ಟಿಸಿ ಅವರನ್ನು ವಿಧ್ಯುಕ್ತಧರ್ಮದಿಂದ ಚ್ಯುತರಾಗುವಂತೆ ಮಾಡಲು ಕರಪತ್ರಗಳನ್ನು ಹಂಚುತ್ತಿದ್ದಾರಂತೆ. ಇದು ಸರ್ಕಾರಕ್ಕೆ ಗೊತ್ತಾಗಿದೆ. ಅಲ್ಲದೆ ಬೋಧಕರ ಉಪದೇಶಕ್ಕೆ ಕಿವಿಗೊಡದೆ ದೃಢವಾಗಿದ್ದ ಕೆಲ ಪೊಲೀಸರನ್ನು ಕೊಂದುಬಿಟ್ಟದ್ದಾರೆ. ಕೆಲ ಪೊಲೀಸರನ್ನು ಸಹಾಯನಿರಾಕರಣವಾದಿಗಳು ಹೊಡೆದು ಬಡಿದು ಹಿಂಸೆಪಡಿಸಿದ್ದಾರೆ. ಇಂಥ ದುಷ್ಕೃತ್ಯಗಳಿಂದೆಲ್ಲಾ ಪೊಲೀಸರನ್ನು ರಕ್ಷಿಸುವುದೂ ಸಹ ಈ ಶಾಸನ ರಚನೆಯ ಉದ್ದೇಶವಾಗಿದೆ. ಪ್ರಾಂತಿಕ ಪ್ರಭುತ್ವಗಳಿಗೆಲ್ಲಾ ಈ ವಿಷಯವಾಗಿ ಬರೆದು ಕೇಳಿರಲು ಅವರೆಲ್ಲರೂ ಇಂಥ ಶಾಸನವು ಅತ್ಯವಶ್ಯಕವೆಂದು ಉತ್ತರಕೊಟ್ಟಿದ್ದಾರಂತೆ. ಈ ಬಿಲ್ಲು ಚರ್ಚೆಯೇನೂ ಇಲ್ಲದೆ ಸಭೆಗೆ ಪ್ರವೇಶಗೊಳಿಸಲ್ಪಟ್ಟಿತು. ಇಷ್ಟರಲ್ಲೇ ಶಾಸನವಾಗಿ ಏರ್ಪಡುವುದರಲ್ಲೂ ಇದೆ.

ಕೊಬರಿ ಮತ್ತು ಕೊಬರಿಯೆಣ್ಣೆ.

ಪ್ರಪಂಚದಲ್ಲಿ ಇದರ ಉಪಯೋಗವು ಬಹಳ ಹೆಚ್ಚುತ್ತಿದೆ. ಕೃತ್ರಿಮವಾದ ಬೆಣ್ಣೆಯನ್ನೂ, ಸಾಬೂನುಗಳನ್ನೂ, ಮಾರ್ಗರಾನನ್ನೂ ಮಾಡಲಿಕ್ಕೆ ಕೊಬರಿಯೆಣ್ಣೆಯನ್ನ ವಿಶೇಷವಾಗಿ ಉಪಯೋಗಿಸುತ್ತಾರೆ. ಸಾಬೂನು ಬೇಗನೆ ಗಟ್ಟಿಯಾಗುವುದಕ್ಕೂ, ಅದು ನೀರಿನಲ್ಲಿ ಸುಲಭವಾಗಿ ಕರಗುವುದಕ್ಕೂ, ನೊರೆಯು ಚೆನ್ನಾಗಿ ಬರುವಂತೆ ಮಾಡಲಿಕ್ಕೂ, ಈ ಉತ್ತಮ ಗುಣಗಳನ್ನೆಲ್ಲಾ ಸಾಬೂನಿನಲ್ಲಿ ಉಂಟುಮಾಡಲು ಕೊಬರಿಯೆಣ್ಣೆಯು ಸಾಧಕವಾಗುತ್ತದೆ. ಅದುಕಾರಣ ಎಲ್ಲ ವಿಧದ ಸಾಬೂನುಗಳಿಗೂ ಈ ಯೆಣ್ಣೆಯನ್ನು ಉಪಯೋಗಿಸುತ್ತಾರೆ. ಪಶ್ಚಿಮದೇಶಗಳಲ್ಲಿ ನಿರ್ಮಿತವಾಗತಕ್ಕ ಸಾಬೂನು ಮೊದಲಾದವುಗಳಿಗೆಲ್ಲಾ ಕೊಬರಿಯೋ ಅಥವಾ ಕೊಬರಿಯೆಣ್ಣೆಯೋ ಪೂರ್ವದೇಶಗಳಿಂದಲೇ ವಿಶೇಷವಾಗಿ ಹೋಗುವುವು. ಕೊಬರಿಯು ಸಿಂಹಳದ್ವೀಪದಲ್ಲಿ ವಿಶೇಷವಾಗಿ ಹುಟ್ಟುತ್ತದೆ. ಅಲ್ಲಿ ೧೦ ಲಕ್ಷ ಎಕರೆ ಭೂಮಿಯಲ್ಲಿ ತೆಂಗಿನ ತೋಟಗಳನ್ನು ಮಾಡಿದ್ದಾರೆ. ಭರತಖಂಡದಲ್ಲಿ ಮದ್ರಾಸು ಆಧಿಪತ್ಯದ ಕರಾವಳಿಗಳಲ್ಲಿ ಬಹುಶಃ ೮ ಲಕ್ಷ ಎಕರೆ ಭೂಮಿಗಳಲ್ಲಿ ತೆಂಗಿನ ತೋಟಗಳಿವೆ. ನಮ್ಮ ಮೈಸೂರು ಸಂಸ್ಥಾನದಲ್ಲೂ ಬಹುಶಃ ೧ ಲಕ್ಷ ಎಕರೆಯಷ್ಟು ಭೂಮಿಯಲ್ಲಿ ತೆಂಗಿನ ತೋಟಗಳಿವೆ. ಈ ನಮ್ಮ ಭರತಖಂಡ ಮತ್ತು ಸಿಂಹಳದ್ವೀಪ ಇವೆರಡೇ ಪ್ರಪಂಚಕ್ಕೆ ಬೇಕಾದ ಕೊಬರಿಯಲ್ಲಿ ಬಹು ಭಾಗವನ್ನು ಒದಗಿಸಿಕೊಡುತ್ತವೆ.

ಡಚ್ಚರ ಪೂರ್ವ ಇಂಡ್ಯಾ ದ್ವೀಪಗಳಲ್ಲೂ ಇದರ ತೋಟಗಳು ವಿಶೇಷವಾಗಿವೆ. ೧೯೧೯ ನೆ ವರ್ಷದಲ್ಲಿ ಆ ದ್ವೀಪಗಳೊಳಗೆ ೫೮೦೦೦೦ ಎಕರೆಯ ತೋಟಗಳಲ್ಲಿ ೧೦೮೦೦೦೦೦೦ ತೆಂಗಿನ ಮರಗಳಿದ್ದಂತೆ ಲೆಕ್ಕವಾಗಿದೆ. ೧೯೧೭ನೆ ವರ್ಷದಲ್ಲಿ ಆ ದ್ವೀಪಗಳವರು ಹೊರಕ್ಕೆ ೨೧೬೦೦೦೦ ಮಣಗಳಷ್ಟು ಕೊಬರಿಯೆಣ್ಣೆಯನ್ನು ಕಳುಹಿಸಿದ್ದರು. ಈಚೆಗೆ ೧೯೧೯ ನೆ ವರ್ಷದಲ್ಲಿ ಅದೇ ದ್ವೀಪಗಳಿಂದ ಹೊರಕ್ಕೆ ೭೧೬೦೦೦೦ ಮಣಗಳ ಎಣ್ಣೆಯನ್ನು ಕಳುಹಿಸಿದ್ದಾರೆ. ಇದರಿಂದ ಆ ವ್ಯವಸಾಯವು ಎಷ್ಟು ತೀವ್ರವಾಗಿ ವೃದ್ಧಿಹೊಂದುತ್ತಿದೆಯೆಂಬುದು ಗೊತ್ತಾಗುವುದು. ಅತ್ತ ಅಮೇರಿಕಾಕ್ಕೆ ಸೇರಿದ ಫಿಲಿಪೈನ್ ದ್ವೀಪಗಳಲ್ಲಿ ೬|| ಲಕ್ಷ ಎಕರೆ ತೋಟಗಳಲ್ಲಿ ೭೦೦೦೦೦೦೦ ತೆಂಗಿನ ಗಿಡಗಳನ್ನು ಬೆಳಸಿರುವರು. ದಿನೇದಿನೇ ಪ್ರಪಂಚದಲ್ಲಿ ತೆಂಗಿನ ವ್ಯವಸಾಯವು ಲಾಭಕರವಾಗಿ ಬಹಳ ಅಭಿವೃದ್ಧಿಹೊಂದುವ ಚಿಹ್ನೆಗಳು ತೋರುತ್ತಿರುವುವು. ಪಶ್ಚಿಮದೇಶಗಳು ಕೊಬರಿಯನ್ನೂ ಕೊಬರಿಯೆಣ್ಣೆಯನ್ನೂ ಹೊರಗಣಿಂದ ಸ್ವದೇಶಕ್ಕೆ ಎಷ್ಟೆಷ್ಟನ್ನು ಪ್ರತಿ ವರ್ಷದಲ್ಲೂ ತರಿಸಿಕೊಳ್ಳುತ್ತಿರುವರೆಂಬುದನ್ನು ಈ ಕೆಳಗಣ ವಿವರಣೆಯಿಂದ ತಿಳಿಯಬಹುದು.

	ಯುದ್ಧಕ್ಕೆ ಮುಂಚೆ.		೧೯೧೯ ನೆ ವರ್ಷದಲ್ಲಿ.	
	ಕೊಬರಿ.	ಕೊ||ಎಣ್ಣೆ.	ಕೊಬರಿ.	ಕೊ||ಎಣ್ಣೆ.
ಅಮೇರಿಕಾ	1627000	2122000	10350000	11243000
ಆಂಗ್ಲ	2766000	4710000	6409000	6834000
ಫ್ರಾನ್ಸ್	13634000	*205000	4538000	*867000

* ಎಲ್ಲಾ ಜಾತಿ ಯೆಣ್ಣೆಯೂ ಸೇರಿ.

ಶಿವೈಕ್ಯ ಶ್ರೀ ಜಗದ್ಗುರು ಪಂಚಾಕ್ಷರೀ ಮಹಾಸ್ವಾಮಿಗಳವರು.

ಶ್ರೀ ರಂಭಾಪುರೀ ಜಗದ್ಗುರು ಸಂಸ್ಥಾನದ ಚರಪಟ್ಟಾಧ್ಯಕ್ಷರಾಗಿದ್ದ ಪಂಚಾಕ್ಷರೀ ರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಕಳೆದ ಸೋಮವಾರದ ದಿವಸ ಸಂಸ್ಥಾನ ಮಠದಲ್ಲಿ ಶಿವೈಕ್ಯರಾದರೆಂಬ ವಿಷಯವನ್ನು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಪಟ್ಟಕ್ಕೆ ಬಂದು ಈಗ್ಗೆ ೨೭ ವರ್ಷಗಳು ತುಂಬಿಹೋದುವು. ಹಿಂದಣ ಶ್ರೀ ಚಂದ್ರಶೇಖರ ಮಹಾಸ್ವಾಮಿಗಳು ಶಿವೈಕ್ಯರಾಗುವಾಗ್ಗೆ ಅವರು ತಮ್ಮ ಉತ್ತರಾಧಿಕಾರಿಗಳನ್ನು ನಿಯಮಿಸದೆ ಹೋಗಿದ್ದುದರಿಂದ ಪೀಠವು ಕೆಲಕಾಲ ಅಧಿಕಾರಿ ಶೂನ್ಯವಾಗಿದ್ದಿತು. ಆಗ್ಗೆ ಬೀರೂರಿನ ಶ್ರೀಮಂತ ಕೈ|| ಪತ್ರಿ ರುದ್ರಪ್ಪಯ್ಯನವರೂ ಎಡೆಹಳ್ಳಿಯ ಮ|| ಇಂ|| ಶಾಂತಪ್ಪಶೆಟ್ಟರೂ ಪೀಠದ ಮೇಲಣ ಅಭಿಮಾನದಿಂದ ಮುಂದಾಗಿನಿಂತು, ಪ್ರಾಚೀನವೂ ಅತ್ಯಂತ ಪ್ರಮುಖವೂ ಆದ ಈ ಪೀಠವು ತನ್ನ ಪೂರ್ವ ವೈಭವವನ್ನು ಮರಳಿ ಪಡೆದುಕೊಳ್ಳುವಂತೆ ಮಾಡಬೇಕಾದರೆ ತಕ್ಕ ವಿದ್ಯಾದಿ ಯೋಗ್ಯತಾಸಂಪನ್ನರನ್ನೇ ಆರಿಸಿ ಅಧಿಕಾರಕ್ಕೆ ತರುವುದು ಅವಶ್ಯಕವೆಂದು ಪರಿಭಾವಿಸಿ, ಹತ್ತಾರು ಸಹಸ್ರಜನರ ಪ್ರಾತಿನಿಧ್ಯದ ಒಪ್ಪುಗೆಯನ್ನು ಪಡೆದು, ಕಾಶಿಯಲ್ಲಿ ವೈಯಾಕರಣ ಪಾಂಡಿತ್ಯವನ್ನು ಪಡೆದು ಸಾತ್ವಿಕಾದಿ ಗುಣಾತಿಶಯವುಳ್ಳವರಾಗಿದ್ದ ಮಲ್ಲಿನಾಥಶಾಸ್ತ್ರಿಗಳೆಂಬುವರನ್ನು ಈ ಪೀಠದ ಸ್ಥಿರಪಟ್ಟಾಧ್ಯಕ್ಷತೆಗೂ, ಮಠದ ಸಾಮಾನ್ಯ ಕಾರ್ಯಭಾರಗಳ ಪರಿಚಯವನ್ನೆಲ್ಲಾ ಪಡೆದಿದ್ದ ಇವರನ್ನು ಚರಪಟ್ಟಾಧ್ಯಕ್ಷತೆಗೂ ನಿರ್ಣಯಿಸಿ, ಏಕಕಾಲದಲ್ಲಿ ಪಟ್ಟಬಂಧನ ಮಹೋತ್ಸವವನ್ನು ಬಹು ವೈಭವದಿಂದ ಜರುಗಿಸಿದರು. ಮೊದಲನೆಯವರು ಗುರುಬಸವರಾಜಮಹಾಸ್ವಾಮಿಗಳೆಂಬ ಪೀಠಸಂಪ್ರದಾಯ ನಾಮವನ್ನು ತಾಳಿ, ದೇಶಪರ್ಯಟನಮಾಡಿದುದರಲ್ಲಿ ಪೀಠದ ಕೀರ್ತಿಪ್ರತಿಷ್ಠೆಗಳನ್ನು ಬಹುಮುಖವಾಗಿ ವೃದ್ಧಿಗೊಳಿಸುವರೆಂಬ ಪ್ರತ್ಯಯವನ್ನು ಮಠಸ್ಥರಲ್ಲಿ ಉಂಟುಮಾಡಿದರು. ಮಲೆನಾಡಿನ ವಾಯುಗುಣದ ವೈಷಮ್ಯದಿಂದ ಅವರಿಗೆ ದೇಹಾರೋಗ್ಯ ತಪ್ಪಿ ಸ್ವಲ್ಪ ಕಾಲದೊಳಗೇ ಮಠದ ದುರದೃಷ್ಟ ಸೂಚನೆಗಾಗಿಯೋ ಎಂಬಂತೆ ಶಿವೈಕ್ಯರಾದರು. ಅಂದಿನಿಂದ ಚರಪಟ್ಟಾಧ್ಯಕ್ಷರಾದ ಈ ಶ್ರೀಗಳವರೇ ಸಂಸ್ಥಾನದ ಕಾರ್ಯಭಾರಗಳನ್ನು ನಿರ್ವಹಿಸುತ್ತಿದ್ದರು. ಇವರ ಕಾಲದಲ್ಲಿ ಸಂಸ್ಥಾನಕ್ಕೂ ಸಮಾಜಕ್ಕೂ ಸ್ಮರಣೀಯವಾದ ಮಹತ್ಕಾರ್ಯಗಳಾವುವೂ ಜರುಗಲಿಲ್ಲವೆಂಬುದು ವಿಷಾದಸ್ಥಾನವು. ಆದರೂ ಪೀಠದ ಮೇಲಣ ಅಭಿಮಾನವೂ ಸಮಾಜದ ಹಿತಚಿಂತನೆಯೂ ಇವರಿಗೆ ತಪ್ಪಿರಲಿಲ್ಲ. ತಮ್ಮ ಶರೀರದಲ್ಲಿ ಆರೋಗ್ಯವು ಕಡಿಮೆಯಾಗಿದ್ದುದರಿಂದ ವಿದ್ಯಾದಿ ಸಾಮರ್ಥ್ಯ ಸಂಪನ್ನರಾದವರನ್ನು ತಮ್ಮ ಉತ್ತರಾಧಿಕಾರಕ್ಕೆ ನಿಯಮಿಸಿ ಸಮಾಜ ಕಲ್ಯಾಣವನ್ನೂ ಪೀಠದ ಪ್ರತಿಷ್ಠೆಯನ್ನೂ ಕಾಪಾಡಬೇಕೆಂಬ ಮನೋದಯವು ಇವರಿಗೆ ಪೂರ್ಣವಾಗಿದ್ದಿತು. ಬೀರೂರು ಮಹಾಸಭೆಯ ಕಾಲದಲ್ಲಿ ಈ ತಮ್ಮ ಸತ್ಸಂಕಲ್ಪವನ್ನು ನಮ್ಮ ಪ್ರತ್ಯಕ್ಷತಃ ಅಪ್ಪಣೆಕೊಡಿಸಿದ್ದರು. ತಮ್ಮ ಅವಸಾನ ಕಾಲದೊಳಗೆ ಅದಕ್ಕೆ ಯಾವ ಏರ್ಪಾಟನ್ನು ಮಾಡಿಟ್ಟಿದ್ದರೋ ತಿಳಿಯಲಿಲ್ಲ. ಮ|| ಇಂ|| ಶಾಂತಪ್ಪಶೆಟ್ಟರೇ ಮೊದಲಾದ ಪ್ರಮುಖ ಪೀಠಾಭಿಮಾನಿಗಳು ಕಾಲೋಚಿತವಾದ ಏರ್ಪಾಟನ್ನು ಮಾಡಿ ಪ್ರಾಚೀನ ಪೀಠದ ಗೌರವಪ್ರತಿಷ್ಠೆಗಳು ಪುನರುದ್ಧಾರಿತವಾಗುವುದಕ್ಕೆ ಮಾರ್ಗವನ್ನು ಮಾಡಲು ಆಲಸ್ಯಮಾಡಲಾರರೆಂದು ನಂಬುವೆವು.

ಆಂಗ್ಲಮಂತ್ರೀಶ್ವರರಿಗೂ ಯುವಸಾರ್ವಭೌಮರಿಗೂ ನಡೆದ ಉತ್ತರಪ್ರತ್ಯುತ್ತರಗಳು.

ಮುಖ್ಯಮಂತ್ರಿ ಲಾಯಿಡ್‌ಜಾರ್ಜ್‌ರವರು ಯುವಸಾರ್ವಭೌಮರಿಗೆ ಹೀಗೆ ತಂತ್ರೀವಾರ್ತೆಯನ್ನು ಕಳುಹಿಸಿದ್ದಾರೆ:—ಶ್ರೀಮನ್ ಪ್ರಿನ್ಸ್‌ಆಫ್‌ವೇಲ್ಸ್‌ರವರೇ! ಭರತಖಂಡದಲ್ಲಿ ನೀವು ದಯಮಾಡಿಸಿದ ಸ್ಥಳದಲ್ಲೆಲ್ಲಾ ಸಾನುಭೂತಿಯನ್ನೂ ಉದಾರಚಿತ್ತವನ್ನೂ ಅಧಿಕಾರಿಗಳಿಗೂ ಅನಧಿಕಾರಿ ಪ್ರಜೆಗಳಿಗೂ ನೀವು ವಿಶದಪಡಿಸುತ್ತಿರುವಿರೆಂದೂ, ನಿಮ್ಮ ವಿಧ್ಯುಕ್ತಧರ್ಮದ ನಿರ್ವಾಹದಲ್ಲಿ ನೀವು ಅತ್ಯುತ್ಸಾಹಶಾಲಿಗಳಾಗಿ ನಡೆದುಕೊಳ್ಳುತ್ತಿರುವಿರೆಂದೂ ಕೇಳಿ ಆಂಗ್ಲಪ್ರಜೆಗಳು ಆನಂದಪಡುತ್ತಿರುವರೆಂದು ತಿಳಿಯಿಸಲಿಕ್ಕೆ ನಾನೂ ನನ್ನ ಸಹೋದ್ಯೋಗಿಗಳೂ ಸಹ ಸಂತೋಷಭರಿತರಾಗಿದ್ದೇವೆ. ನಿಮ್ಮನ್ನು ದರ್ಶನ ಮಾಡಿದವರೆಲ್ಲರೂ ನಿಮ್ಮಲ್ಲಿ ಅತ್ಯಂತಾನುರಾಗಗೊಂಡು ಮರ್ಯಾದೆಯಿಂದ ಸತ್ಕರಿಸುತ್ತಿರುವರೆಂದು ನಂಬುಗೆಗರ್ಹವಾದ ಸುದ್ದಿಗಳು ನಮಗೆ ಸೇರುತ್ತಿವೆ. ಭಾರತಹೃದಯವು ನಿಮಗೆ ಸ್ವಾಧೀನವಾಗಿದೆ. ನಿಮ್ಮ ದಿವ್ಯಮಂಗಳಮೂರ್ತಿಯನ್ನು ಅವರು ಎಂದಿಗೂ ಮರೆಯಲಾರರು. ಅದು ನಿಮ್ಮ ಅದೃಷ್ಟವು. ನಿಮ್ಮ ಸೌಖ್ಯವು ಆಂಗ್ಲಸಾಮ್ರಾಜ್ಯದ ಪ್ರತಿಯೊಂದು ಜಾತಿಗೂ ಅತ್ಯಂತ ಮುಖ್ಯವಾದುದು. ಅದುಕಾರಣವೇ ಭರತಖಂಡವು ನಿಮ್ಮನ್ನು ಹೃದಯಪೂರ್ವಕವಾಗಿ ಸನ್ಮಾನಿಸುತ್ತಿರುವುದು ನಮ್ಮ ಮನಸ್ಸಿಗೆ ಆನಂದಕರವಾಗಿದೆ. ನಿಮ್ಮ ಸಂಚಾರಣೆಗೆ ಸಂಬಂಧಪಟ್ಟ ಸಮಾಚಾರಗಳನ್ನು ಕೇಳುವುದರಲ್ಲಿ ನಾವು ಆಸಕ್ತರಾಗಿರುವೆವು. ಭರತಖಂಡದ ಸ್ವದೇಶಸಂಸ್ಥಾನಾಧಿಪತಿಗಳು ನಿಮ್ಮನ್ನು ಅತ್ಯಂತ ವೈಭವಾತಿಶಯದಿಂದ ಸನ್ಮಾನಿಸುತ್ತಿರುವುದೂ, ಭಾರತಪ್ರಜೆಗಳೆಲ್ಲಾ ಅತ್ಯುತ್ಸಾಹದಿಂದ ನಿಮಗೆ ಸ್ವಾಗತಮಾಡುತ್ತಿರುವುದೂ, ಭರತಖಂಡದ ಬಾಲಕರು ನಿಮ್ಮನ್ನು ನೋಡಿ ಆನಂದಿಸುತ್ತಿರುವುದೂ, ಎಲ್ಲರೂ ಮನಃಪೂರ್ವಕವಾಗಿ ನಿಮ್ಮನ್ನು ಸತ್ಕರಿಸುತ್ತಿರುವುದೂ ಇತ್ಯಾದಿ ವಿಷಯಗಳೆಲ್ಲಾ ನಮ್ಮ ಮನಸ್ಸನ್ನು ಉಬ್ಬೇರಿಸುತ್ತಿರುವುವು. ನೀವು ಸಾಮ್ರಾಜ್ಯಸೇವೆಯನ್ನು ಮುಗಿಸಿಕೊಂಡು ಯಾವಾಗ ಸ್ವದೇಶಕ್ಕೆ ಹಿಂದಿರಿಗಿ ಬರುವಿರೋ ನಿಮಗೆ ಅರ್ಹವಾದ ರೀತಿಯಲ್ಲಿ ನಾವು ಯಾವಾಗ ಸ್ವಾಗತವನ್ನು ಮಾಡುವೆವೋ ಎಂದು ಇದಿರುನೋಡುತ್ತಿರುವೆವು."

ಇದಕ್ಕೆ ಯುವಸಾರ್ವಭೌಮರು ತಂತಿಯಮೂಲಕವಾಗಿ ಕೊಟ್ಟ ಪ್ರತ್ಯುತ್ತರವೇನೆಂದರೆ—"ನೀವು ಆಂಗ್ಲಪ್ರಜಾಪಕ್ಷದಿಂದ ನನಗೆ ಕಳುಹಿಸಿದ ತಂತ್ರೀವಾರ್ತೆಯು ಬಂದುಸೇರಿತು. ನಾನು ನಿಮಗೂ ಆಂಗ್ಲ ಮಂತ್ರಿಮಂಡಲಕ್ಕೂ ಇದಕ್ಕಾಗಿ ಕೃತಜ್ಞನಾಗಿದ್ದೇನೆ. ನಾನು ಎಲ್ಲಿಗೆ ಹೋದರೂ ಭರತಖಂಡದ ಸ್ವದೇಶಸಂಸ್ಥಾನಾಧಿಪತಿಗಳೂ ಭಾರತೀಯರೂ ಅತ್ಯುತ್ಸಾಹದಿಂದಲೂ ಮನಃಪೂರ್ವಕವಾಗಿಯೂ ನನ್ನನ್ನು ಆದರಿಸುತ್ತಿದ್ದಾರೆ. ಅದುಕಾರಣ ಭರತಖಂಡದ ಪ್ರಾಚೀನ ಕೀರ್ತಿಪ್ರತಿಷ್ಠೆಗಳು ಮುಂದೆ ನಿಷ್ಕಳಂಕವಾಗಿ ಅಭಿವೃದ್ಧಿಗೊಳ್ಳಬಲ್ಲವೆಂದು ನಾನು ನಂಬುತ್ತೇನೆ. ಆಂಗ್ಲಸಾಮ್ರಾಜ್ಯದಲ್ಲಿರುವ ವಿವಿಧಜಾತಿಗಳ ಏಕಮತ್ಯಾಭಿವೃದ್ಧಿಗೂ ಪರಸ್ಪರ ಮೈತ್ರಿಗೂ ನನ್ನ ಈ ಪರ್ಯಟನವು ಸಹಾಯಿಭೂತವಾದರೆ ನನ್ನ ಆನಂದಕ್ಕೆ ಪಾರವಿಲ್ಲ."

ಈಜಿಪ್ಟಿನ ಸ್ಥಿತಿ.

ಈಜಿಪ್ಟ ದೇಶೀಯರು ಕೋರುವಷ್ಟು ಸಂಪೂರ್ಣ ಸ್ವಾತಂತ್ರ್ಯವನ್ನು ಆಂಗ್ಲಪ್ರಭುತ್ವದವರು ಕೊಡದೆಹೋದುದರಿಂದ ಆ ದೇಶೀಯರು ಕ್ಷೋಭೆಗೊಂಡಿದ್ದಾರೆ. ಆ ದೇಶದಲ್ಲಿ ಆಂಗ್ಲ ಗೌರ್ನರಾಗಿರುವ ಅಲನ್ಬಿ ಪ್ರಭುಗಳು ಅಲ್ಲಿಯ ಜಾತೀಯವಾದಿ ನಾಯಕರಾದ ಜಗುಲ್‌ಪಾಷಾರವರನ್ನು ಹಿಡಿಯಿಸಿ ಲಂಕಾದ್ವೀಪಕ್ಕೆ ಕಳುಹಿಸಿಬಿಟ್ಟ ಬಳಿಕ ಜಗುಲ್‌ಪಾಷಾರವರ ಅನುಚರರು ಈಗ ಸಹಾಯನಿರಾಕರಣವನ್ನವಲಂಬಿಸಿ, ತತ್ಸಂಬಂಧವಾಗಿ ನಾನಾ ಪ್ರಕಟನೆಗಳನ್ನು ಮಾಡಿದ್ದಾರೆ. ಆಂಗ್ಲಜನರೊಡನೆ ಯಾವ ಸಾಂಘಿಕಸಂಬಂಧವನ್ನೂ ಇಟ್ಟುಕೊಳ್ಳದೆ ಬಿಟ್ಟುಬಿಡಬೇಕೆಂದೂ, ಈಜಿಪ್ಟ ದೇಶದ ಪ್ರಮುಖರಾರೂ ಮಂತ್ರಿಪದವಿಯನ್ನಂಗೀಕರಿಸಕೂಡದೆಂದೂ, ಇಂಗ್ಲೀಷ್ ಬ್ಯಾಂಕುಗಳಲ್ಲಿಟ್ಟಿರುವ ಡಿಪಾಜಿಟ್ಟನ್ನೆಲ್ಲಾ ತೆಗೆದುಕೊಂಡುಬಿಡಬೇಕೆಂದೂ, ಈಜಿಪ್ಟ ದೇಶೀಯರು ಇಂಗ್ಲೀಷ್ ಹಡಗುಗಳಿಗೆ ಸಾಮಾನುಗಳನ್ನೇ ಆಗಲಿ ಕಲ್ಲಿದ್ದಲನ್ನೇ ಆಗಲಿ ಸಾಗಿಸಿಕೊಡಕೂಡದೆಂದೂ, ಆಂಗ್ಲ ವರ್ತಕಸಂಬಂಧವನ್ನೂ ಆಂಗ್ಲವಸ್ತುಗಳನ್ನೂ ಬಹಿಷ್ಕರಿಸಬೇಕೆಂದೂ ಪ್ರಕಟಿಸಿಕೊಂಡಿದ್ದಾರೆ. ಇಂಥ ಪ್ರಕಟನಪತ್ರಗಳ ಮೇಲೆ ಹಸ್ತಾಕ್ಷರ ಹಾಕಿದ್ದವರನ್ನು ಪ್ರಭುತ್ವದವರು ಸೆರೆಹಿಡಿಯಿಸಿದ್ದಾರೆ. ಇಂಥ ಪ್ರಕಟನೆಗಳನ್ನು ಮುದ್ರಿಸಿದ ವೃತ್ತಪತ್ರಿಕೆಗಳು ಇನ್ನು ಪ್ರಕಟನಗೊಳ್ಳದಂತೆ ನಿಲ್ಲಿಸಿಬಿಟ್ಟರು. ನಿರ್ಬಂಧವಿಧಾನವನ್ನು ಕೇಳಿ ವಿದ್ಯಾರ್ಥಿಗಳು ಪಾಠಶಾಲಾ ಕಲಾಶಾಲೆಗಳನ್ನು ಬಹಿಷ್ಕರಿಸುತ್ತಿದ್ದಾರೆ. ಈಜಿಪ್ಟ ದೇಶದಲ್ಲಿ ಇಂಥ ವಿಷಮಪರಿಸ್ಥಿತಿಯು ಅಭಿವೃದ್ಧಿಹೊಂದುತ್ತಿರುವುದು ಸಾಮ್ರಾಜ್ಯಕ್ಷೇಮಕ್ಕೆ ಹಿತಕರವಲ್ಲವೆಂದು ಪರಿಭಾವಿಸಿ ಅನೇಕ ಆಂಗ್ಲಪ್ರಮುಖರು ಈಗಣ ರಾಜಕೀಯ ಧೋರಣವನ್ನು ಒಪ್ಪದೆಹೋಗಿದ್ದಾರೆ. ಆಂಗ್ಲದೇಶಕ್ಕೂ ಭರತಖಂಡಕ್ಕೂ ಹೋಗಿಬರುವ ಹಡಗುಗಳೆಲ್ಲಾ ಸೂಯೆಜ್ ಕಾಲ್ವೆಯ ಮೂಲಕವೇ ಹಾದು ಬರಬೇಕು. ಅದರ ಮಗ್ಗುಲಲ್ಲೇ ಈಜಿಪ್ಟದೇಶವು ಇದೆ. ಅದರೊಡನೆ ವೈರವನ್ನು ಕಟ್ಟಿಕೊಳ್ಳುವುದು ಮಗ್ಗುಲಲ್ಲಿ ಹಾವನ್ನು ಮಲಗಿಸಿಕೊಂಡಂತಾಗುತ್ತದೆ. ಲಾರ್ಡ್ ಕರ್ಜನರಂಥ ಸಂಕುಚಿತಮತಿಯುಳ್ಳವರು ಮಂತ್ರಿಮಂಡಲದಲ್ಲಿ ವಿದೇಶಾಂಗಮಂತ್ರಿಗಳಾಗಿರುವುದರಿಂದ ಇಂಥ ವಿಷಯಗಳು ಸಾನುಭೂತಿಯಿಂದ ಇತ್ಯರ್ಥವಾಗದೆ ವೈರವೃದ್ಧಿಗೆ ಅವಕಾಶವಾಗುತ್ತಿದೆಯೆಂದು ಆಕ್ಷೇಪಗಳು ಮಾಡಲ್ಪಡುತ್ತಿವೆ. ಈಜಿಪ್ಟಿನವರ ಕೋರಿಕೆಯು ನ್ಯಾಯವಾದುದೆಂದೂ ಅವರಿಗೆ ಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟು ಮೈತ್ರಿಯಲ್ಲಿಟ್ಟುಕೊಳ್ಳಬೇಕೆಂದೂ, ಪ್ರಾಚೀನಸಂಪ್ರದಾಯಪ್ರಿಯರಾದ ಸರ್ ವಾಲಂಟೈನ್ ಚಿರೋಲ್‌ರವರೂ ಲಾರ್ಡ್ ಮಿಲ್ನರ್‌ರವರೇ ಮೊದಲಾದ ಸಾಮ್ರಾಜ್ಯವಾದಿಗಳೂ ಸಹ ಹೇಳುತ್ತಿದ್ದಾರೆ. ಅಲ್ಲದೆ ಲಾರ್ಡ್ ಮೆಸ್ಟನ್, ಚಿರೋಲ್, ಲಾರ್ಡ್ ಮಿಲ್ಲರ್ ಮೊದಲಾದ ಕೆಲ ಪ್ರಮುಖರು ಈಜಿಪ್ಟ ಮಿತ್ರಸಂಘವೆಂಬದೊಂದನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿದ್ದಾರಂತೆ. ಈ ಸಂಘದವರು ಈಜಿಪ್ಟಿನ ಸ್ಥಿತಿಯನ್ನೂ ಅದರೊಡನೆ ಆಂಗ್ಲದೇಶವು ನಡೆದುಕೊಳ್ಳಬೇಕಾದ ರೀತಿಯನ್ನೂ, ಈಜಿಪ್ಟ ಸಮಸ್ಯೆಯನ್ನು ನ್ಯಾಯವಾಗಿ ಪರಿಷ್ಕರಿಸಬೇಕಾದ ಅವಶ್ಯಕತೆಯನ್ನೂ, ಆಂಗ್ಲಪ್ರಭುತ್ವದವರಿಗೆ ತಿಳಿಯಿಸಿಕೊಟ್ಟು ಆಂಗ್ಲದೇಶದ ಮೇಲೆ ಈಜಿಪ್ಟಿನವರಿಗೆ ಉಂಟಾಗಿರುವ ಅನುಮಾನವನ್ನು ಹೋಗಲಾಡಿಸಲು ಈ ಸಂಘದವರು ಪ್ರಯತ್ನಿಸುವರಂತೆ. ಇದು ಶ್ಲಾಘ್ಯವಾದ ಪ್ರಯತ್ನವೇ ಸರಿ. ಸಮಯೋಚಿತವಾಗಿ ಸಾಮ್ರಾಜ್ಯಕ್ಕೆ ಎಚ್ಚರನ್ನು ಕೊಡುವ ಮಹನೀಯರು ಸಾಮ್ರಾಜ್ಯದಲ್ಲಿ ಈಗಲೂ ತಕ್ಕಷ್ಟಿರುವುದರಿಂದಲೇ ಆಂಗ್ಲಾಧಿಪತ್ಯವು ಇತರಾಧಿಪತ್ಯಗಳೆಲ್ಲಕ್ಕಿಂತಲೂ ದೃಢವಾಗಿಯೂ ವಿಸ್ತಾರವಾಗಿಯೂ ಧರ್ಮಬದ್ಧವಾಗಿಯೂ ಇರುತ್ತದೆ. ಮೇಲೆಕಂಡ ಸಂಘದ ಪ್ರಯತ್ನವು ಸಫಲವಾಗಿ ಈಜಿಪ್ಟಿನವರ ಮನೋರಥವು ಈಡೇರಿ ಆಂಗ್ಲಸಾಮ್ರಾಜ್ಯದಲ್ಲಿ ಐರ್ಲಂಡಿನವರು ಪರಿತೃಪ್ತರಾಗಿ ನಿಂತಂತೆ ಈಜಿಪ್ಟೂ ಕೂಡ ನಿಲ್ಲುವಂಥ ಸ್ಥಿತಿಯುಂಟಾಗಲೆಂದು ಕೋರುತ್ತೇವೆ.

ಮ|| ಗಾಂಧಿಯವರ ವಿಚಾರ ವೈಚಿತ್ರ್ಯ.

ಮ|| ಗಾಂಧಿಯವರು ಪರ್ವತದಂತೆ ಅಚಲಮನಸ್ಕರಲ್ಲ. ಗಾಳಿಬೀಸಿದತ್ತ ಅಲೆಯುವ ವೃಕ್ಷಗಳಂತೆ ಸಮಯಾನುಸಾರವಾಗಿ ಒಲೆದಾಡುವ ಚಿತ್ತವುಳ್ಳವರಾಗಿದ್ದಾರೆ. ಕಳೆದ ವರ್ಷದಲ್ಲಿ ತಿಲಕ ಫಂಡನ್ನು ಕೂಡಿಸುವಾಗ್ಗೆ ಅವರ ವಿಚಾರ ಸರಣಿಯೂ ಮಾತುಗಳೂ ಹೇಗಿದ್ದುವು? ಡಿಸೆಂಬರ್ ತಿಂಗಳ ಕೊನೆಯೊಳಗಾಗಿ ಸ್ವರಾಜ್ಯ ಪ್ರಾಪ್ತಿಯಾಗದಿದ್ದರೆ ನನ್ನ ದೇಹವು ಉಳಿಯುವ ಸಂಭವವಿಲ್ಲವೆಂಬ ಮಾತುಗಳನ್ನು ಅವರು ಹೊರಗೆಡಹುತ್ತಿದ್ದರು. ಅದೇ ಗಾಂಧಿಯವರು ಈಗ ಸ್ವರಾಜ್ಯ ಪ್ರಾಪ್ತಿಯ ವಿಷಯದಲ್ಲಿ ಯಾವ ತೆರದ ಮಾತುಗಳನ್ನಾಡುತ್ತಿರುವರೆಂಬುದನ್ನು ನೋಡಿದವರಿಗೆಲ್ಲಾ ಅವರ ವಿಚಾರ ವೈಚಿತ್ರ್ಯವು ಗೊತ್ತಾಗುವುದು. ಭರತಖಂಡವು ಸ್ವರಾಜ್ಯ ನಿರ್ವಾಹಕ್ಕೆ ಸರ್ವವಿಧದ ಯೋಗ್ಯತೆಯನ್ನೂ ಪಡೆದುಕೊಂಡಿದೆಯೆಂದು ಎಷ್ಟೋ ಸಲ ಉಪನ್ಯಾಸಗಳಲ್ಲೂ ಲೇಖನಗಳಲ್ಲೂ ಅವರು ಅಡಿ ತೋರಿಸಿದ್ದರು. ಈಗ ಅದೇ ಗಾಂಧಿಯವರು ನಮಗೆ ಸ್ವರಾಜ್ಯವು ದೊರೆದುಬಿಟ್ಟರೆ ಹೇಗೆ ನಿರ್ವಹಿಸಿಕೊಳ್ಳಬಲ್ಲೆವು? ಎಂಬ ವಿಚಾರ ತರಂಗದಲ್ಲಿ ಮುಳುಗಿದ್ದೇವೆಂದು ಹೇಳುತ್ತಿದ್ದಾರೆ. ಗುಜರಾತಿ ಭಾಷೆಯಲ್ಲಿ ಅವರು ಪ್ರಕಟಿಸುತ್ತಿರುವ "ನವಜೀವನ" ಎಂಬ ವಾರಪತ್ರಿಕೆಯಲ್ಲಿ ಅವರೇ ಒಂದು ಲೇಖನವನ್ನು ಹೀಗೆ ಬರೆದಿರುತ್ತಾರೆ.—"ಸದ್ಯಃ ಸ್ಥಿತಿಯಲ್ಲಿ ಯಾವುದು ಉತ್ತಮಮಾರ್ಗವೋ ಅದನ್ನು ನಾನು ಗ್ರಹಿಸಲಾರದವನಾಗಿದ್ದೇನೆ. ನಾನು ನಿಜವಾಗಿಯೂ ಭಯದಿಂದ ನಡುಗುತ್ತಲಿದ್ದೇನೆ. ಯಾವುದಾದರೂ ಒಂದು ಪರಿಷ್ಕಾರವು ಈಗ ಮಾಡಲ್ಪಟ್ಟರೆ ನಮ್ಮ ಗತಿಯೇನು? ಪರಿಷ್ಕಾರವಾಗುವುದಕ್ಕೆ ಉಂಟಾಗುವ ಯಾವ ಅವಕಾಶವನ್ನೂ ನಾನು ವ್ಯರ್ಥಗೊಳಿಸಲಾರೆನು. ಆದರೆ ಭರತಖಂಡದ ಬಲವು ಇಷ್ಟರಮಟ್ಟಿನದೆಂಬುದನ್ನು ತಿಳಿದ ಬಳಿಕ ಪರಿಷ್ಕಾರವೆಂದರೆ ನನಗೂ ಭಯವಾಗುತ್ತದೆ. ನಾವು ಸಂಪೂರ್ಣವಾಗಿ ಪರೀಕ್ಷಿಸುವುದಕ್ಕೆ ಮುಂಚೆಯೇ ಪರಿಷ್ಕಾರವು ಜರುಗಿಹೋದರೆ ನಮ್ಮ ಸ್ಥಿತಿಯು ಯಾವ ರೀತಿಯಲ್ಲಿರುವುದು? ನವಮಾಸವು ತುಂಬದೆ ಹುಟ್ಟಿದ ಮಗುವಿನ ಅವಸ್ಥೆಯಂತಿರುವುದು. ಆ ಮಗುವು ಬೇಗನೆ ಸತ್ತುಹೋಗುವುದು. ಪೋರ್ಚುಗಲ್ ದೇಶದಲ್ಲಿ ಉಂಟಾದ ವಿಪ್ಲವದಿಂದ ಪ್ರಭುತ್ವವು ಒಂದು ನಿಮಿಷದಲ್ಲಿ ಮಾರ್ಪಟ್ಟುಹೋಯಿತು. ಆ ದೇಶದಲ್ಲಿ ಈಗ ಯಾವ ಪ್ರಭುತ್ವವಿಧಾನವೂ ನೆಲೆಗೊಂಡಿಲ್ಲ. ಪದೇಪದೇ ವಿಪ್ಲವಗಳು ಸಂಭವಿಸುತ್ತಲೇ ಇವೆ. ೧೯೦೮ನೆ ವರ್ಷದಲ್ಲಿ ತುರ್ಕಿ ದೇಶದಲ್ಲಿ ಆಕಸ್ಮಿಕವಾಗಿ ಪ್ರಭುತ್ವವು ಮಾರ್ಪಟ್ಟುಹೋದಾಗ ಎಲ್ಲ ದೇಶಗಳವರೂ ಅದಕ್ಕೆ ಅಭಿನಂದನ ಲೇಖನಗಳನ್ನು ಕಳುಹಿಸಿಕೊಟ್ಟರು. ಆದರೆ ಅದು ಮೂರು ದಿನದ ಬಾಳಾಗಿ ಹೋಯಿತು. ಆ ಮಾರ್ಪು ಸ್ವಪ್ನಸಮಾನವಾಗಿ ಹೋಯಿತು. ಆ ಬಳಿಕ ತುರ್ಕಿದೇಶವು ಬಹಳ ಕಷ್ಟಕ್ಕೆ ಗುರಿಯಾಯಿತು. ಧೀರರಾದ ತುರುಕರು ಇನ್ನೆಷ್ಟು ಹೆಚ್ಚು ಕಷ್ಟಗಳನ್ನು ಅನುಭವಿಸಬೇಕಾಗಿದೆಯೋ ಯಾರು ಬಲ್ಲರು? ಇಂಥ ವಿಷಯಗಳನ್ನೆಲ್ಲಾ ಆಲೋಚಿಸುತ್ತ ನಾನು ಆಂದೋಳನದಲ್ಲಿ ಆಗಾಗ್ಗೆ ಮುಳುಗುತ್ತಿದ್ದೇನೆ. ಸ್ವರಾಜ್ಯವೆಂಬುದು ಮಾನಸಿಕ ಸ್ಥಿತಿಯಾಗಿದೆ. ಭಾರತೀಯರಿಗೆ ಉಂಟಾದ ಅಂಥ ಮಾನಸಿಕಸ್ಥಿತಿಗೆ ಖಂಡನವು ಪ್ರಾಪ್ತವಾಗಿದೆ. ರಾಟೆಗಳಿಲ್ಲದೆ ಭರತಖಂಡವು ಸ್ವರಾಜ್ಯವನ್ನು ಪಡೆಯಲಾರದೆಂಬುದು ನಿಶ್ಚಯವು. ಅಕ್ಷರಜ್ಞಾನವೇ ಯಥಾರ್ಥವಾದ ವಿದ್ಯೆಯಲ್ಲ. ಸತ್ಪ್ರವರ್ತನ ದೇಹಕಷ್ಟದಿಂದ ಕೂಡಿದ ಪರಿಶ್ರಮ ಇವುಗಳೇ ವಿದ್ಯೆಯೆಂಬುದನ್ನು ಇನ್ನೂ ಬಹು ಜನರು ತಿಳಿದೇ ಇಲ್ಲ. ಅಕ್ಷರ ವಿದ್ಯಾವ್ಯಾಮೋಹವು ಇನ್ನೂ ಮಕ್ಕಳ ತಾಯ್ತಂದೆಗಳಿಗೂ ಪೋಷಕರಿಗೂ ಬಿಟ್ಟೇ ಇಲ್ಲ. ನದಿಯಾಡದಲ್ಲಿ ತಮ್ಮ ಮಕ್ಕಳನ್ನು ಪ್ರಭುತ್ವ ಪಾಠಶಾಲೆಗಳಲ್ಲಿ ಓದಿಸುವುದನ್ನು ಬಿಡಿಸಲಿಕ್ಕೂ ಅವರುಗಳನ್ನು ಜಾತೀಯ ಪಾಠಶಾಲೆಗಳಿಗೆ ಕಳುಹಿಸಿಕೊಡಲಿಕ್ಕೂ ಇನ್ನೂ ಹೆಚ್ಚು ಮಂದಿಗಳು ಅಂಗೀಕರಿಸುವುದೇ ಇಲ್ಲ. ನ್ಯಾಯವಿಚಾರಣವು ಅಧಿಕಥನವ್ಯಯದಿಂದ ಜರುಗಕೂಡದೆಂಬುದನ್ನು ನಾವು ಎಲ್ಲಾದರೂ ಗ್ರಹಿಸಿದೆವೆ? ಮತಕ್ಕೆ ಮೂಲಸ್ಥಾನವೆಂದು ತಿಳಿಯಲ್ಪಡುತ್ತಿರುವ ಮತಾಚಾರ್ಯರಾದ ಮಠಪತಿಗಳು ತಮ್ಮ ಮತವಿಷಯಕಗಳಾದ ವಿವಾದಗಳ ಪರಿಷ್ಕಾರವನ್ನು ಈಗ್ಗೂ ಆಂಗ್ಲದೇಶದಲ್ಲಿರುವ ಪ್ರಿವಿಕೌನ್ಸಿಲಿನಿಂದಲೇ ಪಡೆದುಕೊಳ್ಳಬೇಕೆಂದಿದ್ದಾರೆ. ಹೆಚ್ಚು ಫೀಜಿನ ಮೇಲಣ ಆಸೆಯು ವಕೀಲರಿಗೆ ಇನ್ನೂ ತೊಲಗಲೇ ಇಲ್ಲ. ಹಿಂದೂ ಮಹಮ್ಮದೀಯ ಮೈತ್ರಿಯನ್ನು ಕುರಿತು ಆವೆರಡು ಸಂಘಗಳವರಿಗೂ ಒಬ್ಬರಮೇಲೊಬ್ಬರಿಗೆ ಅನುಮಾನವು ಇನ್ನೂ ತೊಲಗಲೇ ಇಲ್ಲ. ದೇಶಕ್ಕೆ ಅವಶ್ಯಕವಾದ ಒಂದೇ ಒಂದು ಫಲವನ್ನು ಪಡೆದುಕೊಳ್ಳಲಿಕ್ಕೆ ಆವೆರಡು ಸಂಘಗಳೂ ಇನ್ನೂ ಏಕೀಭವಿಸಲಿಲ್ಲ. ಅವರು ಅದಕ್ಕಾಗಿ ಪ್ರಯತ್ನವನ್ನೇನೋ ಮಾಡುತ್ತಿದ್ದಾರೆ. ಮನಸ್ಸು ಇನ್ನೂ ಏಕೀಭವಿಸಿಲ್ಲ. ಈಗ ಏನಾದರೂ ಪರಿಷ್ಕಾರವುಂಟಾದರೆ ಆವೆರಡು ಸಂಘಗಳವರಿಗೂ ಮನಸ್ಸು ಏಕೀಭವಿಸುವುದರೊಳಗೆ ಈಗ ನಮ್ಮಲ್ಲಿ ಉಂಟಾಗುತ್ತಿರುವ ಅಭಿವೃದ್ಧಿಗೆ ಆತಂಕವೇ ಪ್ರಾಪ್ತವಾಗುವುದು. ಆವೆರಡು ಸಂಘಗಳವರ ಮನಸ್ಸುಗಳು ಪೂರ್ಣವಾಗಿ ಏಕೀಭವಿಸುವತನಕವೂ ಸ್ವರಾಜ್ಯವನ್ನು ಹಂಬಲಿಸುವುದು ನಿರುಪಯೋಗವು. ಅಸಹಾಯೋದ್ಯಮವು ಶಾಂತಿಯುಕ್ತವಾದುದೆಂಬ ಸಿದ್ಧಾಂತವು ಕೂಡ ಎಲ್ಲರಿಂದಲೂ ಅನುಮೋದಿಸಲ್ಪಟ್ಟಿದೆಯೆಂದು ನಾನು ಹೇಳಲಾರೆನು. ಶಾಂತಿಯು ಬಲಹೀನರ ಸಾಧನವೆಂದು ನಾವು ಭಾವಿಸುತ್ತೇವೆ. ಆದರೂ ಅದರ ಅಮೋಘತೆಯನ್ನು ನಾವು ಗ್ರಹಿಸಲಾರದೆ ಅದನ್ನು ನಿರಸನಮಾಡುತ್ತಿದ್ದೇವೆ. ದೌರ್ಜನ್ಯವನ್ನಾಚರಿಸಲಿಕ್ಕೆ ಸಾಧನವನ್ನಾಗಿ ಶಾಂತಿಶಬ್ದವನ್ನು ಉಪಯೋಗಿಸತಕ್ಕವರು ತಮ್ಮ ದೇಶಕ್ಕೆ ಮಾತ್ರವೇ ಅಲ್ಲದೆ ಪ್ರಪಂಚಕ್ಕೆಲ್ಲಾ ದ್ರೋಹಿಗಳು. ಶಾಂತಿಯು ಅತ್ಯಂತ ಬಲಯುಕ್ತವಾದ ಸಾಧನವೆಂದು ಗ್ರಹಿಸುವವರೆಗೂ ಹಾಗೆ ಅದನ್ನು ಉಪಯೋಗಿಸುವುದನ್ನು ಭಾರತೀಯರೆಲ್ಲಾ ಗ್ರಹಿಸುವವರೆಗೂ ರಾಜಕೀಯ ಪರಿಷ್ಕಾರವೆಂಬುದನ್ನು ಅಸ್ಪೃಶ್ಯತೆಯನ್ನು ಕಾಣುವ ಹಾಗೆ ಕಂಡು ಅದಕ್ಕೆ ಮೈಲಿದೂರದಲ್ಲೇ ಇರಬೇಕಾಗುವುದು. ನಮಗೆ ರಾಜಕೀಯ ಸಮಸ್ಯಾಪರಿಷ್ಕಾರವಾಗಬೇಕಾಗಿದ್ದರೆ ಅಸ್ಪೃಶ್ಯತೆಯು ಪೂರ್ಣವಾಗಿ ತೊಲಗಿಹೋಗಬೇಕು. ನಾವು ಮನಃಪೂರ್ವಕವಾಗಿ ಪ್ರಾಣಗಳನ್ನು ಪರಿತ್ಯಜಿಸಲಿಕ್ಕೆ ತಕ್ಕಷ್ಟು ಮನೋದಾರ್ಢ್ಯವನ್ನು ಪಡೆದಲ್ಲದೆ ಸ್ವಾತಂತ್ರ್ಯವನ್ನೂ ಸ್ವರಾಜ್ಯವನ್ನೂ ಪಡೆಯಲಾರೆವು. ಅದು ಸಿದ್ಧಿಸುವುದೇ ಸ್ವರಾಜ್ಯವು. ಉಳಿದುದೆಲ್ಲಾ ಭ್ರಾಂತಿ."

ದೇಶದ ಸದ್ಯಃ ಪರಿಸ್ಥಿತಿಯನ್ನು ಅವಲೋಕಿಸುತ್ತಾ ಬಂದಂತೆಲ್ಲಾ ಗಾಂಧಿಯವರ ಮನಸ್ಸಿನಲ್ಲಿ ಎಷ್ಟು ವಿಚಾರ ಪರಿವರ್ತನವುಂಟಾಗುತ್ತಿದೆಯೆಂಬುದಕ್ಕೆ ಈ ಲೇಖನವು ನಿದರ್ಶನವಾಗಿದೆ. ದಿನ ದಿನಕ್ಕೆ ಇದು ಬಲಿತು ಒಂದಾನೊಂದು ಕಾಲದಲ್ಲಿ ಅವರಿಗೆ ರಾಜಕೀಯ ವೈರಾಗ್ಯವು ಹುಟ್ಟುವುದು ಕೂಡ ಅಸಂಭವವಲ್ಲವೆಂದು ತೋರುತ್ತದೆ.

ಯುವಸಾರ್ವಭೌಮರ ದೇಶಸಂಚಾರ.

ಹೈದರಾಬಾದು.

ತಾ|| ೨೫ ರಲ್ಲಿ ಯುವಸಾರ್ವಭೌಮರಿಗೂ ನೈಜಾಮರಿಗೂ ದರ್ಶನ ಪ್ರತಿದರ್ಶನ ಮೊದಲಾದ ಮರ್ಯಾದೆಗಳೆಲ್ಲಾ ಸಾಂಗವಾಗಿ ಜರುಗಿದುವು. ರಾತ್ರಿ ಔತಣವಾಯಿತು. ತಾ|| ೨೬ ನೆ ಬೆಳಗ್ಗೆ ಮೋಟಾರಿನಲ್ಲಿ ಕುಳಿತು ಕಂಟೋನ್ಮೆಂಟಿಗೆ ದಯಮಾಡಿಸಿದರು. ಅಲ್ಲಿಯ ಪ್ರಜೆಗಳೆಲ್ಲಾ ಅತ್ಯಾನಂದದಿಂದ ಸ್ವಾಗತಿಸಿದರು. ಅಲ್ಲಿಯೂ ನೈಜಾಮರು ಕಾದಿದ್ದು ಸ್ವಾಗತಮಾಡಿದರು. ಬಯಲಿನಲ್ಲಿ ಕವಾಯಿತು ಮಾಡಿದ ಆಂಗ್ಲ ಸೈನ್ಯವನ್ನು ಪರಾಮರ್ಶಿಸಿದರು. ಆ ಮಧ್ಯಾಹ್ನ ಯುವರಾಜರು ಸಿಕಿಂದರಾಬಾದಿನಲ್ಲೇ ಇದ್ದು ಪೋಲೋ ಆಟವನ್ನಾಡಿದರು. ಆ ರಾತ್ರಿ ರಸಿಡೆಂಟರು ಔತಣವನ್ನು ಮಾಡಿಸಿದರು. ತಾ|| ೨೬ ನೆ ಬೆಳಗ್ಗೆ ಯುವರಾಜರು ರಸಿಡೆನ್ಸಿಯ ಕಾಂಪೌಂಡಿನೊಳಗೆ ರೈಲ್ವೆ ಪೊಲೀಸರನ್ನೂ ಪೆಷರ್‌ಡ್ ಸೈನಿಕರನ್ನೂ ಯುದ್ಧದಲ್ಲಿ ಮೃತರಾದವರ ವಾರಸ್‌ದಾರರನ್ನೂ ನೋಡಿ ಸಂಭಾಷಿಸಿದರು. ಮಧ್ಯಾಹ್ನಾತ್ಪರ ಫತ್ತೆಮೈದಾನಿನಲ್ಲಿ ಪೋಲೋ ಆಡಿದರು. ಸಾಯಂಕಾಲದ ಹೊತ್ತಿಗೆ ಊರೆಲ್ಲಾ ದೀಪಾಲಂಕಾರಗೊಂಡಿದ್ದಿತು. ಯುವರಾಜರು ನೈಜಾಮರೊಡನೆ ರಥದಲ್ಲಿ ಕುಳಿತು ಅಲಂಕೃತವಾಗಿದ್ದ ಪುರವೀಧಿಗಳಲ್ಲಿ ಕಿಕ್ಕಿರಿದು ಪ್ರಜೆಗಳು ನೋಡಿ ಸಂತೋಷಧ್ವಾನ ಮಾಡುತ್ತಿರಲು ಫಲಕ್ನಾಮ ಅರಮನೆಗೆ ತೆರಳಿದರು. ಆ ರಾತ್ರಿ ನೈಜಾಮರ ಚೌಮಹಲ್ ಎಂಬ ಅರಮನೆಯಲ್ಲಿ ದೊಡ್ಡ ಔತಣವಾಯಿತು. ತಾ|| ೨೮ ನೆ ಬೆಳಗ್ಗೆ ಫತ್ತೆಮೈದಾನದಲ್ಲಿ ದೇಹವ್ಯಾಯಾಮಕ್ಕೆ ಸಂಬಂಧಪಟ್ಟ ಕ್ರೀಡೆಗೆ ಏರ್ಪಾಟಾಗಿದ್ದಿತು. ಅದರಲ್ಲಿ ಯುವರಾಜರು ಸ್ವತಃ ಸೇರಿ ಆಡಿ ಬಹು ಕಠಿನವಾದ ನೀರು ಕಾಲ್ವೆಯನ್ನು ಹಾರುವ ಪಂಥದಲ್ಲಿ ತಾವು ಗೆದ್ದರು. ಆ ಮಧ್ಯಾಹ್ನ ಪೋಲೋ ಆಟವನ್ನಾಡಿದರು. ಬಳಿಕ ಸಿಕಿಂದರಾಬಾದಿನಲ್ಲಿ ಜರುಗಿದ ಸೈನಿಕರ ಆಟಗಳನ್ನು ನೋಡಲಿಕ್ಕೆ ಹೋಗಿದ್ದರು. ಅಲ್ಲಿ ಅನೇಕಾನೇಕ ಪ್ರಜೆಗಳು ಸೇರಿದ್ದರು. ಸೈನಿಕೋದ್ಯೋಗಿಗಳಿಂದ ಸತ್ಕೃತರಾದರು. ಅಲ್ಲಿ ಅಶ್ವಸೈನ್ಯವು ಮಾಡಿದ ಸಾಹಸವನ್ನು ನೋಡಿ ಆನಂದಪಟ್ಟರು. ಸಾಮ್ಯುಯಲ್ ಲೆವರ್ ಎಂಬುವರಿಗೆ ಬಹುಮಾನ ಪದಕವನ್ನಿತ್ತರು. ಆ ಸಾಯಂಕಾಲ ರಾಜವೀಧಿಯಲ್ಲಿ ಹೊರಟು ಸಿಕಂದರಾಬಾದ್ ಸ್ಟೇಷನಿಗೆ ತೆರಳಿದರು. ಅಲ್ಲಿ ನೈಜಾಮರೂ ಬ್ರಿಟಿಷ್ ರೆಸಿಡೆಂಟರೂ ಸರ್ ಅಲಿ ಇಮಾಂರವರೇ ಮೊದಲಾದ ಮುಖ್ಯೋದ್ಯೋಗಿಗಳೂ ಯುವರಾಜರನ್ನು ಮರ್ಯಾದಿಸಿ ಬಂಡಿಗೆ ಹತ್ತಿಸಿ ಬೀಳ್ಕೊಟ್ಟರು. ಹೈದರಾಬಾದಿನ ಸತ್ಕಾರಗಳೆಲ್ಲಾ ಯುವಸಾರ್ವಭೌಮರಿಗೆ ವಿಶೇಷ ಸಂತೋಷವನ್ನುಂಟುಮಾಡಿ ಸಾಂಗವಾಗಿ ಜರುಗಿದುವು.

ಶ್ರೀಮನ್ ಪ್ರಿನ್ಸ್‌ಆಫ್‌ವೇಲ್ಸ್‌ರವರು ಹೈದರಾಬಾದಿನಿಂದ ದಯಮಾಡಿಸಿ ನಾಗಪುರದ ಸ್ಟೇಷನಿನಲ್ಲಿಳಿದಾಗ್ಗೆ ಸ್ವಾಗತವು ಅತ್ಯದ್ಭುತವಾಗಿ ಜರುಗಿತು. ಸ್ಟೇಷನಿನಿಂದ ಹಿಡಿದು ಅವರ ಬಿಡದಿಯವರೆಗೆ ೨|| ಮೈಲಿಗಳ ದೂರ ಉದ್ದಕ್ಕೂ ಅಲಂಕೃತವಾಗಿದ್ದ ರಾಜವೀಧಿಯ ೨ ಪಕ್ಕಗಳಲ್ಲೂ ಆ ಪಟ್ಟಣದ ಮತ್ತು ಹೊರಗಣಿಂದ ಬಂದಿದ್ದ ಅನೇಕ ಪ್ರಜೆಗಳು ಸಾಲುಕಟ್ಟಿ ನಿಂತಿದ್ದು ದರ್ಶನಮಾಡಿ ಆನಂದಿಸಿದರು. ಸ್ಟೇಷನಿನಲ್ಲಿ ಮಧ್ಯಪ್ರಾಂತದ ಗೌರ್‍ನರೇ ಮೊದಲಾದ ಅಧಿಕಾರಿಗಳೂ ಕೆಲಮಂದಿ ಸ್ವದೇಶ ಸಂಸ್ಥಾನಾಧಿಪತಿಗಳೂ ಪುರಪ್ರಮುಖರೂ ಇದಿರ್ಗೊಂಡು ಸ್ವಾಗತಿಸಿದರು. ಬಿಡಾರಕ್ಕೆ ತಲಪುವುದರೊಳಗಾಗಿ ಬಾಲಬಾಲಿಕಾಸಮೂಹವವರು ಮರ್ಯಾದಿಸಿದರು. ಶಾಸನ ಸಭಾಸಭಿಕರು ಯುವಸಾರ್ವಭೌಮರಿಗೆ ಸನ್ಮಾನಪತ್ರವನ್ನು ಸಮರ್ಪಿಸಿದರು. ಅದಕ್ಕೆ ಸಮುಚಿತವಾದ ಪ್ರತ್ಯುತ್ತರವನ್ನಿತ್ತರು. ಆ ಮಧ್ಯಾಹ್ನ ಪೊಲೀಸ್ ದಳವನ್ನೂ ಪೆಷರ್‌ಡ್'' ಸೈನಿಕರನ್ನೂ ಪರಾಮರಿಸಿದರು. ಅನೇಕ ಮಂದಿ ಹಳೆಯ ಸಿಪಾಯಿಗಳೊಡನೆ ಸಂಭಾಷಿಸಿದರು. ಆ ಸಾಯಂಕಾಲ ಉಪವನದಲ್ಲಿ ಏರ್ಪಡಿಸಿದ್ದ ಔತಣಕ್ಕೆ ದಯಮಾಡಿಸಿದ್ದರು. ತೋಟವೆಲ್ಲಾ ದೀಪಾಲಂಕಾರದಿಂದ ರಾಜಿಸುತ್ತಿದ್ದಿತು. ಬಾಣಗಾರಿಕೆಯಾಯಿತು. ಆ ಪುರಿನಲ್ಲೂ ಹರಿತಾಳವು ಆಚರಿಸಲ್ಪಟ್ಟಿತು. ಕೆಲವು ಅಂಗಡಿಗಳು ತೆರೆಯಲ್ಪಟ್ಟಿದ್ದುವು. ತಾ|| ೩೧ ನೆ ಬೆಳಗ್ಗೆಯೇ ನಾಗಪುರದಿಂದ ಇಂದೋರ್ ಸಂಸ್ಥಾನಕ್ಕೆ ಯುವರಾಜರು ಪ್ರಯಾಣಮಾಡಿದರು.

ಅತ್ಯಂತ ಹೆಚ್ಚಾಗಿ ಕೆಲಸಮಾಡತಕ್ಕ ಮನುಷ್ಯರು ದೀರ್ಘಕಾಲ ಜೀವಿಸುತ್ತಾರೆಂಬುದು ಅಮೇರಿಕಾದ ಜನರ ಆರೋಗ್ಯಸಂಘ ಸ್ಥಾಪಕರಾದ ಡಾಕ್ಟರ್ ಸ್ಟೀಫನ್ ಸ್ಮಿತ್‌ರವರ ಖಂಡಿತವಾದ ಅಭಿಪ್ರಾಯವಾಗಿದೆ. ಮತ್ತು ಇವರು ತಮ್ಮ ೯೯ ನೆಯ ವರ್ಷ ವರ್ಧಂತೀ ಮಹೋತ್ಸವವನ್ನು ಇಷ್ಟರಲ್ಲೇ ನೆರವೇರಿಸತಕ್ಕವರಾಗಿದ್ದಾರೆ. ಪಟ್ಟಣಗಳಲ್ಲಿ ವಾಸಮಾಡಿಕೊಂಡು ಕೆಲಸಮಾಡುವುದರಿಂದ ಮುಪ್ಪನ್ನು ತಡೆಯಲಾಗುವುದಿಲ್ಲ. ಆದರೆ ಯಥೇಚ್ಛವಾಗಿ ಹಾಲನ್ನು ಕುಡಿದು ಸಂಪೂರ್ಣ ನಿದ್ರೆಮಾಡುವುದರಿಂದ ವೃದ್ಧಾಪ್ಯ ಪ್ರಾಪ್ತವಾಗದಂತೆ ಮಾಡಬಹುದೆಂದು ಈ ಡಾಕ್ಟರು ನಂಬುತ್ತಾರೆ. ೧೨೦ ಪ್ರಜಾಸಂಖ್ಯೆಯುಳ್ಳ ಒಂದು ಸಣ್ಣ ಗ್ರಾಮದಲ್ಲಿ ೧೮ ಜನರು ೧೦೦ ವರ್ಷ ವಯಸ್ಸಿಗೆ ಮೇಲ್ಪಟ್ಟವರಾಗಿರುತ್ತಾರೆ. ಕೀಫ್ ಪಟ್ಟಣದ ಡಾಕ್ಟರ್ ಕಾಡೆಮ್ಮಿನ್‌ರವರು ಆಜನರ ನಾಡಿಯ ಪರೀಕ್ಷೆಯನ್ನು ಮಾಡಿ ಅವರೆಲ್ಲರೂ ಹಾಲನ್ನೂ ಹಾಲಿನಿಂದ ಮಾಡಲ್ಪಟ್ಟ ಪದಾರ್ಥಗಳನ್ನೂ ಮಾತ್ರ ಆಹಾರಮಾಡಿಕೊಂಡಿದ್ದಾರೆಂದು ಕಂಡುಹಿಡಿದಿರುತ್ತಾರೆ.

ಒಳದೇಶದ ವೃತ್ತಾಂತಗಳು

ಬೆಂಗಳೂರು ಅರಳೆಪೇಟೆಯ ಶೆಟ್ಟರು ಮ|| ವೀರಭದ್ರಶೆಟ್ಟರು ಕೆಲಕಾಲದಿಂದ ಅಸ್ವಸ್ಥರಾಗಿದ್ದು ತಮ್ಮ ಪೂರ್ಣ ವೃದ್ಧವಯಸ್ಸಿನಲ್ಲಿ ಕಳೆದವಾರ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಸಂಸ್ಥಾನದ ಮದದ್ರವ್ಯಶಾಖೆಯವರು "ಎಕ್ಸೈಜ್ ಇಂಟಲಿಜೆನ್ಸ್" ಎಂಬ ಹೆಸರಿನ ವಾರಪತ್ರಿಕೆಯನ್ನು ಕನ್ನಡದಲ್ಲೂ ಇಂಗ್ಲೀಷಿನಲ್ಲೂ ಈ ತಿಂಗಳಿನಿಂದ ಪ್ರಕಟಿಸುವವರಾಗಿದ್ದಾರಂತೆ.

ಮಲೆನಾಡಿನಲ್ಲಿ ಕಂದಾಯವನ್ನು ಜನವರಿ ತಿಂಗಳಿಂದ ಎತ್ತುವುದಕ್ಕೆ ಪ್ರತಿಯಾಗಿ ಫೆಬ್ರವರಿ ತಿಂಗಳಿಂದ ಎತ್ತುವಂತೆ ಮಾಡಬೇಕೆಂಬ ಅಲ್ಲಿಯ ಪ್ರಜೆಗಳ ಪ್ರಾರ್ಥನೆಯನ್ನು ಗೌರ್‍ನಮೆಂಟಿನವರು ಅಂಗೀಕರಿಸಿ ಫೆಬ್ರವರಿ ತಿಂಗಳಿಂದಲೇ ಮೊದಲಿನ ಕಂತು ಆರಂಭವಾಗುವಂತೆ ಅಪ್ಪಣೆಮಾಡಿದ್ದಾರೆ.

ವಿದ್ಯಾಭ್ಯಾಸದ ಮೆಮೊರಾಂಡಂ ಸ್ಕೀಮನ್ನು ಬಳಕೆಗೆ ತರುವ ಉದ್ದೇಶದಿಂದ ಸರ್ಕಾರದವರು ಪ್ರತ್ಯೇಕವಾಗಿ ಒಬ್ಬ ಉದ್ಯೋಗಿಯನ್ನೂ ಇಬ್ಬರು ಗುಮಾಸ್ತರನ್ನೂ ಏರ್ಪಡಿಸಿರುವರೆಂದು ಒಕ್ಕಲಿಗರ ಪತ್ರಿಕೆಯು ಹೇಳುತ್ತದೆ. ಇದೇನು ಆಳುವವರ ಕಣ್ಣೊರೆಸುವ ರೂಪಕವೋ ನಿಜವಾದ ಪ್ರಯತ್ನವೋ ತಿಳಿಯಲಿಲ್ಲ.

ಕನ್ನಡದಲ್ಲಿ ಉತ್ತಮ ಗ್ರಂಥರಚನೆಯಾಗುವುದಕ್ಕೆ ಉತ್ತೇಜನಕೊಡುವ ಉದ್ದೇಶದಿಂದ ಕರ್ಣಾಟಕ ಸಾಹಿತ್ಯಪರಿಷತ್ತು ಈ ವರ್ಷ ಅಚ್ಚಾದ ಕನ್ನಡದ ಗ್ರಂಥಗಳಲ್ಲಿ ಅತ್ಯುತ್ತಮವಾದುದಕ್ಕೆ ಒಟ್ಟು ೨೫೦ ರೂಪಾಯಿಗಳಿಗೆ ಮೀರದ ಬಹುಮಾನವನ್ನು ಕೊಡುವಂತೆ ತೀರ್ಮಾನ ಮಾಡಿರುವುದರಿಂದ ಗ್ರಂಥಕರ್ತರು ತಮ್ಮ ಪುಸ್ತಕಗಳ ಒಂದೊಂದು ಪ್ರತಿಯನ್ನು ದಯವಿಟ್ಟು ಪರಿಷತ್ತಿಗೆ ಈ ಮಾರ್ಚಿ ಆಖೈರಿನೊಳಗಾಗಿ ಕಳುಹಿಸಬೇಕೆಂದು ಗೌ|| ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ.

ಹೇಮಾವತೀ ನದಿಗೆ ಅಕ್ಕಿಹೆಬ್ಬಾಳಿನ ಬಳಿಯಲ್ಲಿ ಸೇತುವನ್ನು ಕಟ್ಟಿಸಲು ಏರ್ಪಾಟಾಗಿತ್ತು. ಆದರೆ ಮಂದಗೆರೆಯ ಬಳಿಯಲ್ಲಿ ಕಟ್ಟಿಸಿಕೊಡಬೇಕೆಂಬುದು ಬಹುಪ್ರಜೆಗಳ ಕೋರಿಕೆಯಾಗಿದ್ದಿತು. ಅಲ್ಲಿ ಕಟ್ಟಿದರೆ ಸಾಧ್ಯವಾದಷ್ಟು ಧನಸಹಾಯವನ್ನು ತಾವು ಮಾಡುವುದಾಗಿ ಜೈನಮತ ಪ್ರತಿನಿಧಿಗಳು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರಿಗೆ ಅರಿಕೆ ಮಾಡಿಕೊಂಡಿದ್ದರು. ಈಗಳಾದರೊ ಸರ್ಕಾರದವರು ಅಕ್ಕಿಹೆಬ್ಬಾಳಿನ ಬಳಿಯ ಸೇತುನಿರ್ಮಾಣದ ಕಾರ್ಯವನ್ನು ನಿಲ್ಲಿಸಿಬಿಟ್ಟಿರುವಂತೆ ಸುದ್ದಿಯುಂಟಾಗಿದೆ. ಹಣದ ಕೊರತೆಯಿಂದ ಇದು ನೆನೆಗುದಿಗೆ ಬಿದ್ದಿರಬೇಕು. ಜೈನಜನರ ಪ್ರಾರ್ಥನೆಗೆ ಉತ್ತರವೇನು?

ರಾಜಧಾನಿಯ ಮ್ಯುನ್ಸಿಪಲ್ ಉದ್ಯಾನದ ಬಾಗಿಲುಗಳು ರಾತ್ರಿ ೭ ಗಂಟೆಗೇ ಮುಚ್ಚಿ ಬೀಗ ಮುದ್ರೆಹಾಕಲ್ಪಡುತ್ತಿರುವುವಂತೆ. ಬೆಳ್ದಿಂಗಳ ಕಾಲದಲ್ಲಿ ವಿಹರಿಸಿಕೊಂಡು ಹೋಗಲು ನಿಷತ್‌ಬಾಗೂ ಕೂಡ ತೆರೆದಿಡಲ್ಪಡುತ್ತಿರುವಾಗ ಈ ಪ್ರಜೋದ್ಯಾನದಲ್ಲಿ ಪ್ರಜೆಗಳಿಗೆ ವಿಹರಿಸಲು ನಿರ್ಬಂಧವೇಕೆ? ಸಾಯಂಕಾಲವಾಗುತ್ತಲೂ ಅಲ್ಲಿಯ ಮಾಲಿಗಳು ದನಗಳನ್ನಟ್ಟುವಂತೆ ಪುರಜನರನ್ನು ಗದರಿಸಿ ಒಳಕ್ಕೆ ಪ್ರವೇಶಗೊಡಿಸುವುದಿಲ್ಲವಂತೆ. ಇದನ್ನು ಸ್ವತಃ ಅನುಭವಿಸಿದ ನಮ್ಮ ಚಂದಾದಾರರೊಬ್ಬರು ನಮ್ಮ ಮ್ಯುನಿಸಿಪಲ್‌ಪಾರ್ಕು ಮಾಲಿಗಳ ಹುಲ್ಲುಗಾವಲೋ ಅಥವಾ ಅವರ ಸ್ವಂತದ ಮನೆಯ ಕಾಂಪೌಂಡೋ ಆಗಿರುವಂತಿದೆಯೆಂದು ಬರೆದಿರುತ್ತಾರೆ. ಇತ್ತ ಮ್ಯು|| ಅಧಿಕಾರಿಗಳು ಗಮನವಿಡಬೇಕು.

ರಾಜಧಾನಿಯ ಜೋಡಿತೆಂಗಿನಮರದ ಕಡೆಯ ಸ್ಮಶಾನ ಭೂಮಿಯನ್ನು ಯಾರೋ ಇಟ್ಟಿಗೆಗೂಡನ್ನು ಹಾಕಿಸಿರುವ ಮುಸಲ್ಮಾನ್ ಕಂಟ್ರಾಕ್ಟರು ವಹಿಸಿಕೊಂಡು, ಪುರಾತನ ಕಾಲದಿಂದ ಅಲ್ಲಿದ್ದ ಹಿಂದುಗಳ ವೃಂದಾವನ ಮೊದಲಾದುವುಗಳನ್ನೆಲ್ಲಾ ಅಗೆದುರುಳಿಸಿ ಇದ್ದ ಮರಗಳನ್ನೆಲ್ಲಾ ಕಡಿದು ಹಿಂದೂಗಳ ಮನಸ್ಸಿಗೆಲ್ಲಾ ಬಹಳ ನೋವನ್ನುಂಟುಮಾಡುತ್ತಿರುವರೆಂದು ಒಬ್ಬ ಬಾತ್ಮೀದಾರರು ಪ್ರತ್ಯಕ್ಷವಾಗಿ ನೋಡಿ ಬಂದು ನಮಗೆ ತಿಳಿಯಿಸಿರುತ್ತಾರೆ. ಈ ಅನ್ಯಾಯಕ್ಕೆ ಮ್ಯುನ್ಸಿಪಲ್ ಅಧಿಕಾರಿಗಳು ಏತಕ್ಕೆ ಅವಕಾಶಕೊಟ್ಟರೋ ತಿಳಿಯದು. ಮ್ಯುನ್ಸಿಪಾಲಿಟಿಯಲ್ಲಿರುವ ಹಿಂದೂ ಕೌನ್ಸಿಲರುಗಳಿಗಾದರೂ ಇದರ ಅಭಿಮಾನವು ಬೇಡವೆ? ಮ್ಯುನ್ಸಿಪಾಲಿಟಿಯು ಅವಶ್ಯವಾಗಿ ಇತ್ತ ಗಮನಿಸಬೇಕು.

ಭರತಖಂಡದ ವೃತ್ತಾಂತಗಳು.

ಮ|| ಸಿ. ರಾಮಲಿಂಗರೆಡ್ಡಿಯವರು ಮದ್ರಾಸು ಶಾಸನ ನಿರ್ಮಾಣ ಸಭೆಗೆ ಅಲ್ಲಿಯ ವಿಶ್ವವಿದ್ಯಾಲಯ ಸಂಘ ಪಕ್ಷದಿಂದ ಸಭಿಕರಾಗಿ ಆರಿಸಲ್ಪಟ್ಟರು.

ಆಫ್ಘಾನಿಸ್ಥಾನದೊಡನೆ ಸಂಧಿಜರುಗಿದ ಬಳಿಕ ಎಲ್ಲೆಕಟ್ಟಿನಲ್ಲಿ ಯಾವುದೊಂದು ಗದ್ದಲವೂ ಇಲ್ಲದೆ ಶಾಂತಿಯುಸ್ಥಾಪಿತವಾಗುತ್ತಿದೆಯೆಂದು ಕಾಬೂಲಿನ ವಾರ್ತೆಯು ತಿಳಿಸುತ್ತದೆ.

ಅನಿಬೆಸೆಂಟಮ್ಮನವರ ಶಿಷ್ಯಕೋಟಿಯವರಲ್ಲೊಬ್ಬರೂ ಆಡ್ಯಾರಿನ ಜಾತೀಯಪಾಠಶಾಲಾಧಿಕಾರಿಯೂ ಆಗಿದ್ದ ಜಾರ್ಜ್ ಎಸ್. ಅರುಂಡೇಲ್‌ರವರನ್ನು ಇಂದೋರ್ ಸಂಸ್ಥಾನದವರು ತಮ್ಮ ವಿದ್ಯಾಶಾಖಾಧ್ಯಕ್ಷ ಪದವಿಗೆ ನಿಯಮಿಸಿಕೊಂಡರು.

ರೌಂಡ್ ಟೇಬಲ್ ಸಮಾವೇಶವು ಜರುಗುವುದೆಂದು ಪಂಡಿತ ಮದನಮೋಹನರು ಆಸೆಯನ್ನು ಹೇಳುತ್ತಲೇ ಇದ್ದಾರೆ. ಆದರೆ ಮದ್ರಾಸು ಹಿಂದೂಪತ್ರಿಕೆಯು ಅದಕ್ಕೆ ಇಂಡ್ಯಾ ಸರ್ಕಾರವು ಒಪ್ಪುವುದಿಲ್ಲವೆಂದು ತನಗೆ ತಿಳಿದಂತೆ. ಪ್ರಕಟಿಸಿಕೊಂಡಿದೆ.

ಸೇಲಂ ಮ್ಯುನ್ಸಿಪಲ್ ಕೌನ್ಸಿಲ್ ಅಧ್ಯಕ್ಷರಾದ ವೆಂಕಟಪ್ಪಶೆಟ್ಟಿಗೂ, ಸುಬ್ರಹ್ಮಣ್ಯಯ್ಯರ್ ಮೊದಲಾದ ಕೆಲವರಿಗೂ ಸೇಲಮ್ಮಿನಲ್ಲೂ ಅತ್ತೂರಿನಲ್ಲೂ ಯಾವ ಸಭೆಗಳೊಳಗೂ ೨ ತಿಂಗಳವರೆಗೆ ಮಾತನಾಡಕೂಡದೆಂದೂ ಮದ್ಯದಂಗಡಿಗಳ ಹತ್ತಿರ ಬೋಧಿಸಕೂಡದೆಂದೂ ಸರ್ಕಾರದಪ್ಪಣೆಯಾಗಿದೆ.

ಬೊಂಬಾಯಿಯಲ್ಲಿ ೧೦೦೦ ರೂ. ನ ಬೆಲೆಯ ನೋಟುಗಳು ಸೃಷ್ಟಿಸಲ್ಪಟ್ಟು ಬಳಕೆಗೆ ತರಲ್ಪಟ್ಟಿವೆ. ಮಾರಲಿಕ್ಕೆ ಬಂದಾಗ ಇಂಥ ಮೋಸದ ೧ ನೋಟನ್ನು ಪೊಲೀಸರು ಕಂಡುಹಿಡಿದು ಅದನ್ನು ಮಾರುತ್ತಿದ್ದವನನ್ನೂ ಅವನ ಮೂಲಕ ಅದಕ್ಕೆ ಸಂಬಂಧಿಸಿದ ಇನ್ನು ಮೂವರನ್ನೂ ಸೃಷ್ಟನೆಗೆ ಸಂಬಂಧಪಟ್ಟ ಸಾಮಗ್ರಿಗಳನ್ನೂ ಸಹ ಹಿಡಿದಿರುವರು.

ಮದರಾಸು ತಿರುವಲಕ್ಕೇಣಿ ಅಯ್ಯಾಪಿಳ್ಳೆ ಬೀದಿಯಲ್ಲಿ ಕಳೆದ ತಾ|| ೩೦ ರಲ್ಲಿ ಹಗಲುಹೊತ್ತೇ ಪಾಪಾತಿಯಮ್ಮಾಳ್ ಎಂಬ ಹೆಂಗುಸೊಬ್ಬಳೇ ತನ್ನ ಮನೆಯಲ್ಲಿದ್ದಾಗ ಯಾವನೋ ಕಳ್ಳನು ಮನೆಗೆ ನುಗ್ಗಿ ಅವಳನ್ನು ಕೊಂದು ಅವಳ ಮೈಮೇಲಿದ್ದ ೪೦೦ ರೂ ಬೆಲೆಬಾಳುವ ನಗಗಳನ್ನೂ ಕೆಲವು ಬಟ್ಟೆಬರೆಗಳನ್ನೂ ಅಪಹರಿಸಿಕೊಂಡು ಹೋಗಿರುವನು.

ಅಮೃತಸರದಲ್ಲಿ ಖಿಲಾಪತ್ ಸಂಘಾಧ್ಯಕ್ಷರಾದ ಷೇಕ್ ಹುಸೇನುದ್ದೀನ್‌ರವರಿಗೂ ಮೌಲ್ವಿ ಅಬ್ದುಲ್‌ರಹಿಮಾನರಿಗೂ ೧|| ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯೂ ೨೦೦ ರೂ. ಅರ್ಥದಂಡವೂ, ರಾಯಬರೇಲಿಯಲ್ಲಿ ರಾಜದ್ರೋಹೋಪನ್ಯಾಸ ಮಾಡಿದುದಕ್ಕಾಗಿ ಮೌಲಾನಾರಯಿಸತಲ್ಲಿಯವರಿಗೆ ೨ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟುವು.

ಅಸ್ಸಾಮಿನ ಕೆಲಭಾಗಗಳಲ್ಲಿ ಪ್ರಜೆಗಳು ಕಂದಾಯವನ್ನು ಕೊಡದೆ ಸರ್ಕಾರದ ಉದ್ಯೋಗಿಗಳ ಮೇಲೆ ತಿರುಗಿಬಿದ್ದರು. ಅದರ ಮೇಲೆ ಕಲೆಕ್ಟರಿಗೆ ಸಹಾಯಕವಾಗಿ ಸೈನ್ಯವನ್ನು ಕಳುಹಿಸಿಕೊಟ್ಟರು. ರೈತರು ಬೆದರಿ ಈಗ ಕಂದಾಯವನ್ನು ಸಲ್ಲಿಸುತ್ತಿದ್ದಾರೆ. ಅಲ್ಲಿಯ ಪ್ರಾಂತಿಕ ಕಾಂಗ್ರೆಸ್ ಸಂಘದವರು ಆಜ್ಞೋಲ್ಲಂಘನವನ್ನು ಕುರಿತು ಪ್ರಚಾರಮಾಡಲಿಕ್ಕಾಗಿ ತೀರ್ಮಾನಿಸಿದ್ದಾರೆ.

ಕೃಷ್ಣಾ ಗೋದಾವರೀ ಜಿಲ್ಲೆಗಳಲ್ಲಿ ಕಂದಾಯವನ್ನು ಕೊಡಕೂಡದೆಂದು ರೈತರಿಗೆ ಬೋಧಿಸಿದ ಕಾಂಗ್ರೆಸ್ ಜನರನ್ನು ಸರ್ಕಾರದವರು ಹಿಡಿದು ಶಿಕ್ಷೆಮಾಡುತ್ತಿದ್ದಾರೆ. ರೆವಿನ್ಯೂ ಉದ್ಯೋಗಿಗಳು ಗ್ರಾಮಗಳಿಗೆ ಹೋಗಿ ಕಂದಾಯವನ್ನು ಕೊಡದವರ ಚರಸ್ವತ್ತುಗಳನ್ನು ಜಪ್ತಿಮಾಡುತ್ತಿದ್ದಾರೆ. ಅಲ್ಲಿಗೆಲ್ಲಾ ಪೊಲೀಸ್ ದಳವೂ ಸೈನಿಕರೂ ಸಾಯುಧರಾಗಿ ಸಹಾಯಕ್ಕೆ ಹೋಗುತ್ತಿದ್ದಾರೆ.

ಗುಜರಾತಿನ ಬರ್ದೋಲಿ ತಾಲ್ಲೂಕಿನಲ್ಲಿ ಆಜ್ಞೋಲ್ಲಂಘನೆಗೆ ಅವಶ್ಯವಾದ ಸಾಧನಶಿಕ್ಷಣಗಳೆಲ್ಲಾ ಪೂರ್ಣವಾಗಿವೆಯಂತೆ. ರೌಂಡ್‌ಟೇಬಲ್ ಸಮಾವೇಶವು ಜರುಗದೆ ಹೋಗುವ ಪಕ್ಷಕ್ಕೆ ಆ ತಾಲ್ಲೂಕಿನಲ್ಲಿ ಆಜ್ಞೋಲ್ಲಂಘನವು ಆರಂಭಿಸಲ್ಪಡುವುದಂತೆ. ಅವುಗಳಲ್ಲಿ ಮೊದಲನೆ ಪ್ರಯತ್ನವಾಗಿ ಭೂಗಂದಾಯವನ್ನು ಕೊಡದೆ ನಿಲ್ಲಿಸಿಬಿಡುವರಂತೆ. ಈ ತೀರ್ಮಾನವನ್ನು ಗಾಂಧಿಯವರೇ ಸಭೆಯಲ್ಲಿ ಉಪಪಾದಿಸಿದರು.

ಶ್ರೀಮನ್ ಪ್ರಿನ್ಸ್‌ಆಫ್‌ವೇಲ್ಸ್‌ರವರು ನಾಗಪುರದಿಂದ ಹೈದರಾಬಾದ್ ನೈಜಾಂರವರಿಗೆ ಹೀಗೆ ತಂತ್ರೀವಾರ್ತೆಯನ್ನು ಕಳುಹಿಸಿದ್ದಾರೆ.-"ನಾನು ನಿಮ್ಮ ಪಟ್ಟಣದಲ್ಲಿದ್ದಾಗ್ಗೆ ನೀವು ನನಗೆ ಮಾಡಿದ ಅತ್ಯದ್ಭುತವಾದ ಆತಿಥ್ಯಕ್ಕಾಗಿ ನಿಮಗೆ ವಂದನೆಯನ್ನರ್ಪಿಸುತ್ತೇನೆ. ನಿಮ್ಮ ರಾಜ್ಯದಲ್ಲಿರುವಾಗ್ಗೆ ನನಗೆ ಉಂಟಾದ ಆನಂದಕ್ಕೆ ಪಾರವಿಲ್ಲ. ನಿಮ್ಮ ಪ್ರಜೆಗಳು ನನಗೆ ಅರ್ಪಿಸಿದ ಸ್ವಾಗತಕ್ಕಾಗಿ ನಾನು ಬಹಳ ಮೆಚ್ಚಿದೆನು."

ಕಳೆದ ಸಾಮ್ರಾಜ್ಯಶಾಸನ ಸಭೆಯಲ್ಲಿ ಮಲಬಾರಿನ ವಿಷಯವನ್ನು ಕುರಿತು ಸಭಿಕರು ಮಾಡಿದ ಪ್ರಶ್ನೆಗೆ ಸರ್ಕಾರದಿಂದ ಹೀಗೆ ಉತ್ತರವು ಕೊಡಲ್ಪಟ್ಟಿದೆ—ಇದುವರೆಗೆ ಮಾಪಿಳ್ಳೆಗಳು ೧೦೦೦೦ ಮಂದಿ ಹಿಂದುಗಳನ್ನು ಬಲಾತ್ಕರಿಸಿ ಜಾತಿಭ್ರಷ್ಟರನ್ನು ಮಾಡಿರುವರೆಂದು ಮದ್ರಾಸು ಸರ್ಕಾರದವರು ತಿಳಿಯಿಸಿದ್ದಾರೆ. ಮಾಪಿಳ್ಳೆಗಳ ಅವಾಂತರದಿಂದ ಸರ್ಕಾರದವರು ಸೈನ್ಯಗಳನ್ನು ಕಳುಹಿಸಿಕೊಟ್ಟು ಆ ಸೈನಿಕರಿಗಾಗಿ ಮಾಡಿದ ವೆಚ್ಚವು ಕಳೆದ ಡಿಸೆಂಬರ್ ವರೆಗೆ ೧೫ ಲಕ್ಷ ರೂ. ಗಳಾಗಿವೆ. ಮಾಪಿಳ್ಳೆಗಳಿಂದ ನಷ್ಟಪಟ್ಟವರಿಗೆ ಪರಿಹಾರವನ್ನು ಕಲ್ಪಿಸುವ ವಿಷಯವನ್ನು ಮದ್ರಾಸು ಸರ್ಕಾರದವರು ಆಲೋಚಿಸುತ್ತಿದ್ದಾರೆ. ಇದುವರೆಗೆ ೨೨೫೦ ಮಂದಿ ಮಾಪಿಳ್ಳೆಗಳು ಕೊಲ್ಲಲ್ಪಟ್ಟರು; ೫೭೨ ಮಂದಿಗೆ ಸುಪ್ರೀಮ್ ಕೋರ್ಟಿನವರು ಶಿಕ್ಷೆಯನ್ನು ವಿಧಿಸಿದ್ದಾರೆ.

ಸಿ. ಎಫ್. ಆಂಡ್ರೂಸ್‌ರವರು ಈಗ ಮಲಬಾರಿಗೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಕಣ್ಣಾರ ನೋಡಿ ಪತ್ರಿಕೆಗಳಿಗೆ ಬರೆಯುತ್ತಿದ್ದಾರೆ. ಅಲ್ಲಿಯ ವಿಪನ್ನಶರಣಾಲಯಗಳ ಸ್ಥಿತಿಯು ಸಮರ್ಪಕವಾಗಿದೆಯೆಂದೂ, ಅಲ್ಲಿ ವಿದ್ಯೆಯನ್ನೂ ಕೈಗಾರಿಕೆಗಳನ್ನೂ ಕಲಿಸಿಕೊಡುತ್ತಿರುವರೆಂದೂ, ಅನೇಕರು ಈ ಶರಣಾಲಯಗಳನ್ನು ಬಿಟ್ಟು ತಂತಮ್ಮ ಗ್ರಾಮಗಳಿಗೆ ಹೋಗಲು ಇಷ್ಟಪಡುತ್ತಿರುವರೆಂದೂ, ಆದರೆ ಈಗಾಗಲೇ ಹಾಗೆ ಹೋಗುವುದರಲ್ಲಿ ಬಹಳ ಪ್ರಮಾದವಿರುವುದೆಂದೂ, ಹೀಗೆ ಹೋದ ಇಬ್ಬರು ಅಸ್ಪೃಶ್ಯರನ್ನು ಅಲ್ಲಿಯ ಮಾಪಿಳ್ಳೆಗಳು ಕಂಡು, ಹಿಂದೂಮತವನ್ನು ಬಿಟ್ಟು ಮಹಮ್ಮದೀಯ ಮತವನ್ನು ಸ್ವೀಕರಿಸಬೇಕೆಂದು ಬಲಾತ್ಕರಿಸಲಾಗಿ, ಅದಕ್ಕೆ ಇವರು ಒಪ್ಪದೆ ಹೋದಕಾರಣ ಕೊಂದುಬಿಟ್ಟರೆಂಬ ಸುದ್ದಿಯನ್ನು ಕೇಳಿದೆನೆಂದೂ, ಇಲ್ಲಿಯ ಅನಾಥ ಶರಣಾಲಯಗಳಿಗೆ ಬೊಂಬಾಯಿ ಪುರಜನರ ದಾತೃತ್ವವು ತುಂಬಾ ಸಹಾಯಕರವಾಗಿರುವುದೆಂದೂ, ಇನ್ನೂ ಹೆಚ್ಚು ಸಹಾಯವು ಬೇಕಾಗಿದೆಯೆಂದೂ ಬರೆದಿರುತ್ತಾರೆ.

ಕಳೆದ ತಾ|| ೨೬ ರಲ್ಲಿ ಕಲಕತ್ತಾಪಟ್ಟಣದ ಕಾಲೇಜ್ ಸ್ಕ್ವೈರಿನಲ್ಲಿ ಬಹು ದೊಡ್ಡ ಸಭೆ ಸೇರಿದ್ದಿತು. ಎಷ್ಟೋ ಸಾವಿರ ಮಂದಿ ವಿದ್ಯಾರ್ಥಿಗಳೂ ಸ್ವಚ್ಛಂದ ಸೈನಿಕರೂ ಇತರ ಪ್ರಜೆಗಳೂ ಸೇರಿದ್ದರು. ಸುತ್ತುಮುತ್ತಣ ಮಾರ್ಗಗಳಲ್ಲೆಲ್ಲಾ ತಿರುಗಾಡಲು ತಾವಿಲ್ಲದಂತೆ ಜನರು ತುಂಬಿದ್ದರು. ಬಂಡಿಗಳ ತಿರುಗಾಟವೆಲ್ಲಾ ಕಟ್ಟಾಯಿತು. ಆ ಸಭೆಯನ್ನು ಚದರಿಸಲಿಕ್ಕೆ ಸರ್ಕಾರದವರು ಆಯುಧಪಾಣಿಗಳಾದ ಗೂರ್ಖಾ ಸೈನಿಕರನ್ನೂ ದೊಡ್ಡ ಪೊಲೀಸ್ ದಳವನ್ನೂ ಕಳುಹಿಸಿಕೊಟ್ಟರು. ಅವರು ಹೇಳಿದ ಅಪ್ಪಣೆಯಿಂದ ಸಭೆಯು ಚದರಲಿಲ್ಲ. ಆದರ ಮೇಲೆ ಪೊಲೀಸರು ದೊಣ್ಣೆಯನ್ನುಪಯೋಗಿಸಿದರು; ಕೆಲರನ್ನು ಸೆರೆಹಿಡಿದರು. ಅನೇಕ ತುಂಟರು ಸೈನಿಕರ ಮೇಲೂ ಪೊಲೀಸರ ಮೇಲೂ ಕಲ್ಲುಗಳನ್ನು ಬೀರಿದರು. ಕೆಲರಿಗೆ ಗಾಯಗಳಾದವು. ಆಗ ಸೈನಿಕರು ಗುಂಡುಗಳನ್ನು ಹಾರಿಸಬೇಕಾಯಿತು. ಬಹುಮಂದಿಗೆ ಏಟುಬಿದ್ದುವು. ಆದಿನ ೫೦೦ ಮಂದಿಗಳನ್ನು ಪೊಲೀಸರು ಹಿಡಿದುಕೊಂಡು ಹೋದರು. ಅಲ್ಲಿಗೆ ಸಭೆಯು ಚದರಿಹೋಯಿತು.

ಸೇಲಂ ವಿಜಯರಾಘವಾಚಾರಿಯವರು ಒಬ್ಬ ಪತ್ರಿಕಾಪ್ರತಿನಿಧಿಯೊಡನೆ ಪ್ರಕೃತದ ರಾಜಕೀಯಸ್ಥಿತಿಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹೇಳಿರುವುದರಲ್ಲಿ "ರೌಂಡ್‌ಟೇಬಲ್ ಸಮಾವೇಶಕ್ಕೆ ತಕ್ಕ ಸಾನುಭೂತಿಯು ರೀಡಿಂಗ್ ಪ್ರಭುಗಳಿಗಿಲ್ಲ. ಅಲ್ಲದೆ ಭಾರತೀಯ ಪ್ರಜೆಗಳ ಇಷ್ಟಾರ್ಥವೇನೋ ಅಂಥದನ್ನು ನೆರವೇರಿಸಿ ಸಮಾಧಾನಪಡಿಸಲಿಕ್ಕೆ ವೈಸ್ರಾಯರಿಗೇ ಆಗಲಿ ಅವರ ಪ್ರಭುತ್ವದವರಿಗೇ ಆಗಲಿ ಯಾವ ಅಧಿಕಾರವೂ ಇಲ್ಲ. ಅದುಕಾರಣ ಇಲ್ಲಿಯ ಪ್ರಜೆಗಳೊಡನೆ ಸಮಾಧಾನಮಾಡಿಕೊಳ್ಳಲಿಕ್ಕೆ ಎಲ್ಲ ವಿಧದ ಅಧಿಕಾರವನ್ನೂ ಹೊಂದಿರುವ ಒಂದು ರಾಯಲ್ ಕಮಿಷನನ್ನಾಗಲಿ ಹೈಕಮಿಷನರನ್ನಾಗಲಿ ಸಾಮ್ರಾಜ್ಯ ಪ್ರಭುತ್ವದವರು ಇಲ್ಲಿಗೆ ಕಳುಹಿಸಿಕೊಡಬೇಕು. ಈ ಹೈಕಮಿಷನರ್ ಪದವಿಗೆ ಲಾರ್ಡ್ ಹಾರ್ಡಿಂಜ್‌ರವರು ಯೋಗ್ಯರಾಗಿದ್ದಾರೆ. ರಾಯಲ್‌ಕಮಿಷನ್ನಾದರೆ ಲಾರ್ಡ್ ಹಾರ್ಡಿಂಜ್‌ರವರು, ಲಾರ್ಡ್ ಮಾರ್ಲೆಯವರು, ಸರ್ ವಿಲಿಯಂಮೇಯರ್‌ರವರು ಅದರಲ್ಲಿ ಮೆಂಬರುಗಳಾಗಿದ್ದರೆ ಬಹಳ ಮೇಲು. ಇವರೆಲ್ಲರಿಗೂ ಭಾರತ ರಾಜಕೀಯಸ್ಥಿತಿಯು ಚೆನ್ನಾಗಿ ಗೊತ್ತುಂಟು," ಎಂದು ಹೇಳಿರುತ್ತಾರೆ. ಇದು ಉತ್ತಮವಾದ ಸೂಚನೆಯಾಗಿದೆ.

ಧಾರವಾಡದಲ್ಲಿ ವಿದ್ಯಾಶಾಖೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಪದವಿಯವರೆಗೆ ಏರಿ ಕೆಲಸಮಾಡಿ ವಿಶ್ರಾಂತಿವೇತನವನ್ನು ಪಡೆಯುತ್ತಿದ್ದ ವಿನಾಯಕರಾವ್ ಜೋಷಿಯೆಂಬುವರು ಅಲ್ಲಿಯ ಪ್ರಾಂತಿಕ ಕಾಂಗ್ರೆಸ್ ಸಂಘಕ್ಕೆ ಅಧ್ಯಕ್ಷರಾಗಿ, ಅಲ್ಲಿಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಶಿವಲಿಂಗಪ್ಪನವರ ಮೇಲೆ ನಿರಾಧಾರವಾದ ತಪ್ಪನ್ನು ಆಪಾದಿಸಿದುದಲ್ಲದೆ ಅದೇ ತೆರದ ಆಪಾದನೆಯನ್ನು ಅಲ್ಲಿಯ ಪೊಲೀಸ್ ಸೂಪರಿಂಟೆಂಡೆಂಟರ ಮೇಲೂ ಜಿಲ್ಲಾ ಮೆಜಿಸ್ಟ್ರೇಟರ ಮೇಲೂ ಆಪಾದಿಸಿ ದಾವಾಮಾಡಿದರು. ಆ ಆಪಾದನೆಗಳು ರುಜುವಾತಾಗಲಿಲ್ಲವೆಂದು ಧಾರ್‍ವಾಡದ ಸೆಷನ್ ಜಡ್ಜರು ತೀರ್ಮಾನಿಸಿದರು. ಮತ್ತು ಈ ಜೋಷಿಯವರು ಧಾರ್‍ವಾಡದಲ್ಲಿ ಜರುಗಿದ ಒಂದು ಸಭೆಯಲ್ಲಿ ವಿದೇಶವಸ್ತ್ರ ಬಹಿಷ್ಕಾರದ ತೀರ್ಮಾನವನ್ನು ತಾವೇ ಉಪಪಾದಿಸಿ ಈಗಣ ಆಂಗ್ಲ ಪ್ರಭುತ್ವವು ರಾಷ್ಟ್ರದ ಪ್ರಭುತ್ವವೆಂದು ಉಪನ್ಯಾಸಮಾಡಿದರು. ಮತ್ತು ಅಸಹಾಯೋದ್ಯಮವನ್ನೂ ಖಿಲಾಫತ್ ಪ್ರಕಟನವನ್ನೂ ಸ್ಥಿರಪಡಿಸಿದರು. ಹಿಂದೆ ಶಿಕ್ಷಿತರಾದ ಧಾರ್‍ವಾಡದ ಜನರನ್ನೆಲ್ಲಾ ಅಭಿನಂದಿಸಿದರು. ಈ ಕೆಲಸಗಳೆಲ್ಲಾ ಅಕ್ರಮಗಳೆಂದು ಬೊಂಬಾಯಿ ಸರ್ಕಾರದವರು ನಿರ್ಣಯಿಸಿ, ಜೋಷಿಯವರನ್ನು ಸಮಾಧಾನ ಕೇಳಿದರು. ಅವರು ಕೊಟ್ಟ ಉತ್ತರವು ತೃಪ್ತಿಕರವಾಗಿಲ್ಲದೆ ಹೋದುದರಿಂದ ಅವರಿಗೆ ಸಲ್ಲಿಸುತ್ತಿದ್ದ ಪಿಂಚನನ್ನು ಸರ್ಕಾರದವರು ನಿಲ್ಲಿಸಿಬಿಟ್ಟರು.

ಲಾರ್ಡ್ ನಾರ್ತ್‌ಕ್ಲಿಫ್‌ರವರು ಆಂಗ್ಲದೇಶದಲ್ಲಿ ಬಹು ಪ್ರಮುಖರಾದ ಮಾತುಬಾರಿಗಳು. ಲಂಡನ್ ಟೈಮ್ಸ್ ಪತ್ರಿಕೆಗೆ ಇವರೇ ಕರ್ತರು. ಇವರು ಭರತಖಂಡಕ್ಕೆ ಈಗ ಬಂದು ಇಲ್ಲಿಯ ಸ್ಥಿತಿಗತಿಗಳನ್ನೆಲ್ಲಾ ಪ್ರತ್ಯಕ್ಷವಾಗಿ ಅವಲೋಕಿಸಿರುವರು. ಇವರು ತಮ್ಮ ಪತ್ರಿಕೆಗೆ ಏನೇನನ್ನು ಬರೆದುಕಳುಹಿಸಿರುವರೋ ತಿಳಿಯದು. ಆದರೆ ಅವರಭಿಪ್ರಾಯದ ಛಾಯೆಯೇ ಆ ಪತ್ರಿಕೆಯಲ್ಲಿ ಬಂದಿದೆಯೆಂಬುದಕ್ಕೆ ಸಂಶಯವಿಲ್ಲ. ಈಗಣ ಭಾರತಸ್ಥಿತಿಯನ್ನು ಕುರಿತು ಕಳೆದ ವಾರ ಆ ಪತ್ರಿಕೆಯೊಳಗೆ ಹೀಗೆ ಬರೆಯಲ್ಪಟ್ಟಿದೆ:-೧೮೫೭ನೆ ವರ್ಷದಲ್ಲಿ ಭರತಖಂಡದಲ್ಲಿ ಸಂಭವಿಸಿದ್ದ ವಿಪ್ಲವ (ಸಿಪಾಯಿ ದಂಗೆ) ಕ್ಕಿಂತಲೂ ಈಗಣ ಸ್ಥಿತಿಯೇನೂ ಕಡಿಮೆಯಲ್ಲ; ಅದಕ್ಕಿಂತಲೂ ಮೀರಿದುದೆಂತಲೇ ಹೇಳಬಹುದು. ಇದುವರೆಗೆ ಶಾಂತವಾಗಿ ಬಾಳುತ್ತಿದ್ದ ಭಾರತ ಪ್ರಜೆಗಳನ್ನು ಒಂದು ಕಡೆ ಗಾಂಧಿಯುದ್ಯಮವೂ ಒಂದುಕಡೆ ಖಿಲಾಫತ್ ಆಂದೋಳನವೂ ಚಳವಳಗೊಳಿಸುತ್ತವೆ. ಮಹಮ್ಮದೀಯರಲ್ಲಿ ಅಶಾಂತಿಯು ದಿನದಿನಕ್ಕೆ ಹೆಚ್ಚುತ್ತಿದೆ. ತುರ್ಕಿ ಸಂಧಿಯನ್ನು ಅನುಕೂಲವಾಗಿ ಪರಿಷ್ಕರಿಸಿಬಿಟ್ಟರೆ ಮಹಮ್ಮದೀಯರನ್ನು ಶಾಂತಿಪಡಿಸಬಹುದು. ಆದರೆ ಆಂದೋಳನವೆಲ್ಲಾ ಒಂದೇ ಸಲ ಅಣಗಿಹೋಗುವುದಿಲ್ಲ. ಭರತಖಂಡಪ್ರಭುತ್ವದವರು ಬಿಗಿಪಟ್ಟಿನಿಂದ ಗಟ್ಟಿಯಾಗಿ ತಮ್ಮ ಜರ್ಬಿಯನ್ನು ಈಗಿನಂತೆಯೇ ವಿವೇಕದಿಂದಲೂ ಜಾಗರೂಕತೆಯಿಂದಲೂ ನಡೆಯಿಸುತ್ತಿರಬೇಕು. ಹಾಗಲ್ಲದೆ ದೇಶೀಯ ನಾಯಕರನ್ನು ಹದ್ದಿನಲ್ಲಿಡದೆ ಸ್ವೇಚ್ಛೆಯಾಗಿರಲು ಬಿಟ್ಟುಬಿಟ್ಟರೆ ಪ್ರಭುತ್ವದವರು ತಮ್ಮ ವಿಧ್ಯುಕ್ತಧರ್ಮದಿಂದ ಭ್ರಷ್ಟರಾಗುವರು.

ಕಳೆದ ತಾ|| ೩೦ನೆ ರಾತ್ರಿ ೧೧|| ಗಂಟೆ ಹೊತ್ತಿನಲ್ಲಿ ಲಾಹೋರ್ ಕಾರಾಗೃಹದಲ್ಲಿದ್ದ ಲಾಲಾಲಜಪತಿರಾಯ್ ಸಂತಾನಂ ಮೊದಲಾದವರು ನಿದ್ರಿಸುತ್ತಿದ್ದಾಗ ಸೆಂಟರಲ್ ಜೈಲ್ ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿ ಸಂತಾನಂರವರನ್ನು ಎಬ್ಬಿಸಿ ಕಾರಾಗೃಹದಿಂದ ನೀವುಗಳು ಹೊರಟುಹೋಗುವುದಕ್ಕೆ ಸಿದ್ಧರಾಗಬೇಕೆಂದು ತಿಳಿಯಿಸಿದರು. ಆ ಸುದ್ದಿಯನ್ನು ಇತರರಿಗೂ ನೀವು ತಿಳಿಯಿಸಬಹುದೆಂದು ಸಂತಾನಂರವರು ಹೇಳಲು, ನಿಮ್ಮೊಬ್ಬರನ್ನು ಬಿಟ್ಟುಬಿಡಲಿಕ್ಕೆ ಮಾತ್ರವೇ ಅಪ್ಪಣೆ ಬಂದಿದೆಯೆಂದು ಸೂಪರಿಂಟೆಂಡೆಂಟರು ಹೇಳಿದರು. ಕಾರಾಗೃಹದಲ್ಲಿದ್ದಷ್ಟು ಕಾಲವೂ ತನ್ನ ವಿಷಯದಲ್ಲಿ ಬಹಳ ಮರ್ಯಾದೆಯನ್ನು ತೋರಿಸಿದುದಕ್ಕಾಗಿ ಸಂತಾನಂರವರು ಸೂಪರಿಂಟೆಂಡೆಂಟರಿಗೆ ವಂದನೆಯನ್ನು ತಿಳಿಯಿಸಿದರು. ಬಳಿಕ ಅಲ್ಲಿದ್ದ ಪೊಲೀಸ್ ಡಿ|| ಸೂಪರಿಂಟೆಂಡೆಂಟರ ಮತ್ತು ಇನ್‌ಸ್ಪೆಕ್ಟರ ಅಪ್ಪಣೆ ಮೇರೆಗೆ ಪೊಲೀಸರು ತೆಗೆದುಕೊಂಡುಬಂದ ಮೋಟಾರಿನಲ್ಲಿ ಸಂತಾನಂರವರನ್ನು ಕುಳ್ಳಿರಿಸಿ ಅವರ ಮನೆಗೆ ಕಳುಹಿಸಿಬಿಟ್ಟರು. ಅದರಂತೆಯೇ ರಾತ್ರಿ ೧೨|| ಗಂಟೆಗೆ ಮಲ್ಲಿಕುಲಾಲ್ಚಾನರನ್ನೂ, ೧ ಗಂಟೆಗೆ ಡಾಕ್ಟರ್ ಗೋಪಿಚಂದರನ್ನೂ ಕಳುಹಿಸಿಬಿಟ್ಟರು. ರಾತ್ರಿ ೧|| ಗಂಟೆಯಲ್ಲಿ ಲಜಪತಿರಾಯರನ್ನು ಕೂಡ ಬಿಟ್ಟು ಅವರ ಸಾಮಾನುಗಳನ್ನೆಲ್ಲಾ ಮೋಟಾರಿಗೆ ಹಾಕಿದರು. ಲಜಪತಿರಾಯರು ಕಾರಾಗೃಹದ ಹೆಬ್ಬಾಗಿಲು ದಾಟಿ ಮೋಟಾರಿನ ಬಳಿಗೆ ಹೋಗುವುದರೊಳಗೆ ೨ ಗಂಟೆ ರಾತ್ರಿಯಲ್ಲಿ ಮತ್ತೆ ಅವರನ್ನು ಅಮೆಂಡ್‌ಮೆಂಟ್ ಶಾಸನಪ್ರಕಾರದ ಅಪರಾಧಕ್ಕಾಗಿ ಹಿಡಿದು ಕಾರಾಗೃಹದಲ್ಲಿ ಹಾಕಿರುವರು. ಈ ಸಂಬಂಧವಾದ ವಿಚಾರಣೆಯು ಮುಂದೆ ಜರುಗಬಹುದು. ಹಿಂದೆ ಇವರನ್ನು ಶಿಕ್ಷಿಸಿದ್ದುದಕ್ಕೆ ಸರ್ಕಾರದಪ್ಪಣೆಯನ್ನು ಮೀರಿ ಕಾಂಗ್ರೆಸ್ ಸಭೆಯನ್ನು ನೆರವೇರಿಸಿದರೆಂಬ ತಪ್ಪೇ ಕಾರಣವಾಗಿದ್ದಿತು. ಆದರೆ ಇವರು ಕೂಡಿಸಿದಂಥ ಕಾಂಗ್ರೆಸ್ ಸಂಘಗಳು ಬಹಿರಂಗ ಸಭೆಯಲ್ಲವೆಂದು ಪಂಜಾಬು ಪ್ರಭುತ್ವದವರು ನಿರ್ಣಯಿಸಿ, ಆ ವಿಷಯವನ್ನು ಸರ್ಕಾರಿ ಉದ್ಯೋಗಿಗಳಿಗೆಲ್ಲಾ ತಿಳಿಯಪಡಿಸಿರುವುದೂ, ಅದರ ಪ್ರಕಾರ ಲಜಪತಿರಾಯರಿಗೆ ವಿಧಿಸಿದ್ದ ಶಿಕ್ಷೆಯು ನ್ಯಾಯವಲ್ಲವೆಂದು ನಿರ್ಧರಿಸಿದುದೂ ಕಾರಣವಂತೆ. ಮುಂದಣ ಅಪರಾಧದ ವಿಚಾರಣೆಯು ಹೇಗಾಗುವುದೋ ನೋಡಬೇಕು.

ಭರತಖಂಡದೊಳಗೆ ಅಲ್ಲಲ್ಲಿ ಅಸಹಾಯವಾದಿಗಳು ಸರ್ಕಾರದ ಕಂದಾಯವನ್ನು ರೈತರು ಸಲ್ಲಿಸದಂತೆ ಮಾಡಲೂ, ಶಾಸನವನ್ನು ಲ್ಲಂಘಿಸಲೂ ಪ್ರಯತ್ನಿಸುತ್ತಿದ್ದಾರೆ. ಈ ಸಂಬಂಧವಾಗಿ ತಮ್ಮ ಅನುಚರರಿಗೆ ಮ|| ಗಾಂಧಿಯವರು ಹೀಗೆ ಅಪ್ಪಣೆ ಕೊಟ್ಟಿದ್ದಾರೆ-"ಈ ಅಪಾಯಕರವಾದ ಪ್ರಯತ್ನವನ್ನು ಕೈಕೊಳ್ಳುವುದಕ್ಕಿಂತ ಮುಂಚೆ ಎಲ್ಲರೂ ಅದರ ಸಾಧಕಬಾಧಕವನ್ನು ಕುರಿತು ಚೆನ್ನಾಗಿ ಆಲೋಚಿಸುವುದು ಆವಶ್ಯಕ. ದೌರ್ಜನ್ಯವನ್ನು ಕುರಿತು ನಾವು ಅಶ್ರದ್ಧೆಯನ್ನು ವಹಿಸಕೂಡದು. ತಮ್ಮ ದನಕರುಗಳನ್ನೂ ಮನೆಗಳನ್ನೂ ಪೈರುಪಚ್ಚೆಗಳನ್ನೂ ಸರ್ಕಾರದವರು ಜಪ್ತಿಮಾಡುತ್ತಿರುವಾಗ ಕಣ್ಣಿಂದ ನೋಡುತ್ತಿದ್ದರೂ ಪ್ರಜೆಗಳು ದೌರ್ಜನ್ಯಕ್ಕೆ ಬೀಳದೆ ಶಾಂತರಾಗಿರುತ್ತಿರುವರೆಂಬುದನ್ನು ಗಟ್ಟಿಪಡಿಸಿಕೊಳ್ಳಬೇಕು. ಪ್ರಭುತ್ವವನ್ನು ನಿರ್ಮೂಲಗೊಳಿಸಲಿಕ್ಕೆ ಕಂದಾಯಗಳನ್ನು ಕೊಡದೆ ನಿಲ್ಲಿಸಿಬಿಡುವುದು ಅತ್ಯಂತ ಶೀಘ್ರಸಾಧ್ಯವಾದ ಮಾರ್ಗಗಳಲ್ಲಿ ಒಂದಾಗಿದೆಯೆಂಬುದನ್ನು ನಾನು ಬಲ್ಲೆ. ಕಂದಾಯವನ್ನು ಕೊಡದೆ ನಿರಾಕರಿಸುವ ಕಾರ್ಯಕ್ರಮವನ್ನು ಜಯಪ್ರದವಾಗಿ ನಿರ್ವಹಿಸಲಿಕ್ಕೆ ಆವಶ್ಯಕವಾದ ಸಾಮರ್ಥ್ಯವನ್ನೂ ಶಿಕ್ಷಣವನ್ನೂ ನಾವು ಇನ್ನೂ ಹೊಂದಿಲ್ಲವೆಂದು ನನಗೆ ನಿಶ್ಚಯವಾಗಿ ತಿಳಿದಿರುವುದು. ಭರತಖಂಡದಲ್ಲಿ ಬರ್ದೋಲಿ ಸ್ವಲ್ಪಮಟ್ಟಿಗೆ ಆನಂದು ತಾಲ್ಲೂಕಿನ ಹೊರತು ಇನ್ನಾವುದೂ ಇದಕ್ಕೆ ಸಿದ್ಧವಾಗಿಲ್ಲ. ಕಂದಾಯವನ್ನು ಕೊಡದೆ ತಿರಸ್ಕರಿಸುತ್ತೇವೆಂದು ಹೇಳುವ ತಾಲ್ಲೂಕುಗಳಲ್ಲಿ ಇಷ್ಟು ಸಿದ್ಧವಾಗಿರಬೇಕು:-ಅಸ್ಪೃಶ್ಯತ್ವದೋಷವೇ ಇರಬಾರದು. ಆ ತಾಲ್ಲೂಕಿನಲ್ಲೇ ನಿರ್ಮಿಸಿದ ಖಾದಿ ಬಟ್ಟೆಗಳನ್ನುಪಯೋಗಿಸುತ್ತಿರಬೇಕು. ಅಹಿಂಸೆಯು ತ್ರಿಕರಣ ಶುದ್ಧವಾಗಿರಬೇಕು. ಪ್ರಜೆಗಳು ಇತರರೊಡನೆಲ್ಲಾ ಎಂದರೆ ಅವರು ಸಹಾಯನಿರಾಕರಣಾವಲಂಬಿಗಳೇ ಆಗಿರಲಿ ಅಥವಾ ಸಹಾಯವಾದಿಗಳೇ ಆಗಿರಲಿ ಸಂಪೂರ್ಣ ಸ್ನೇಹಭಾವದಿಂದಿರಬೇಕು. ಆವಶ್ಯಕವಾದ ಶಿಕ್ಷಣವನ್ನು ಹೊಂದದೆ ಕಂದಾಯವನ್ನು ನಿರಾಕರಿಸುವುದೆಂದರೆ ಅಕ್ಷಮ್ಯವಾದ ಉನ್ಮತ್ತತೆಯಾಗುವುದು. ಅದು ಸ್ವರಾಜ್ಯವನ್ನು ಸಂಪಾದಿಸಿಕೊಡುವುದಕ್ಕೆ ಬದಲು ಅರಾಜಕತ್ವವನ್ನು ಸಂಪಾದಿಸಿಕೊಡಲು ಅವಕಾಶವನ್ನುಂಟುಮಾಡುವುದು. ನನ್ನ ಸ್ವಂತಪರೀಕ್ಷೆಗೆ ಒಳಪಟ್ಟ ಹೊರತು ಮತ್ತು ದಿಲ್ಲಿಯಲ್ಲಿ ಕೂಡಿದ್ದ ಸಭೆಯವರು ಏರ್ಪಡಿಸಿರುವ ನಿಬಂಧನೆಗಳೆಲ್ಲವೂ ಬಳಕೆಗೆ ಬಾರದ ಹೊರತು ಜನಸಾಮಾನ್ಯರು ಶಾಸನೋಲ್ಲಂಘನೆಗೆ ಪ್ರವರ್ತಿಸಕೂಡದೆಂದು ಎಚ್ಚರುಗೊಳಿಸುವುದು ಆವಶ್ಯಕವಾಗಿದೆ" ಎಂದು ಮ|| ಗಾಂಧಿಯವರು ತಮ್ಮ ಎಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಹುಡುಗಾಟಿಕೆಯಾಗಿ ತಿಳಿದುಕೊಂಡು ಕಂದಾಯವನ್ನು ತಿರಸ್ಕರಿಸಬೇಕೆನ್ನುವ ಹುಚ್ಚು ಹಿಡಿದವರು ಈ ಬುದ್ಧಿವಾದವನ್ನಾದರೂ ಗ್ರಹಿಸುವುದು ಒಳ್ಳೆಯದು.

ವಿದೇಶದ ವೃತ್ತಾಂತಗಳು.

ಈಜಿಪ್ಟಿಗೆ ಕೊಡಬೇಕೆಂದಿರುವ ಸ್ವಾತಂತ್ರ್ಯದ ವಿಧಾನವನ್ನು ಇನ್ನಷ್ಟು ಸುಧಾರಿಸಬೇಕೆಂದು ಸಾಮ್ರಾಜ್ಯಪ್ರಭುತ್ವದವರು ಅಲನ್ಬಿ ಪ್ರಭುಗಳೊಡನೆ ಆಲೋಚಿಸುತ್ತಿದ್ದಾರಂತೆ.

ದಕ್ಷಿಣ ಧ್ರುವವನ್ನು ಕಾಣಬೇಕೆಂದು ಹಲವು ತಿಂಗಳುಗಳಿಂದ ಸಂಚಾರಮಾಡುತ್ತಿದ್ದ ಸರ್ ಇ. ಷೇಕಿಲ್ಟನ್‌ರವರು ಯಾವುದೋ ಒಂದು ವ್ಯಾಧಿಯಿಂದ ಮಾಂಟಿವಿಡೋವಿನಲ್ಲಿ ಕಳೆದ ತಾ|| ೫ರಲ್ಲಿ ಮೃತರಾದರು.

ಷಾಂಟೆಂಗ್ ದ್ವೀಪದ ವಿಷಯದಲ್ಲಿ ಚೀನಾಜಪಾನುಗಳಿಗೆ ಸಮಾಧಾನವು ನೆರವೇರಿತು. ಅಲ್ಲಿರುವ ಉಪ್ಪುಗಣಿಗಳನ್ನೆಲ್ಲಾ ಜಪಾನರು ಚೀನಾದವರಿಗೆ ಕೊಟ್ಟುಬಿಡಬೇಕು. ಅದಕ್ಕೆ ಅವರು ಉಚಿತವಾದ ಪ್ರತಿಫಲವನ್ನು ಕೊಡುವರು.

ಫ್ರಾನ್ಸಿನಲ್ಲಿ ಮಂತ್ರಿಮಂಡಲವು ಬದಲಾಗಿಹೋಯಿತು. ಹಿಂದೆ ಅಧ್ಯಕ್ಷರಾಗಿದ್ದ ಪಾಯಿಂಕೇರ್‌ರವರು ಈಗಣ ಮುಖ್ಯಮಂತ್ರಿಗಳಾಗಿದ್ದಾರೆ. ಈ ಆಧಿಪತ್ಯದಲ್ಲಿ ಆಂಗ್ಲ-ಫ್ರಾನ್ಸು ದೇಶಗಳ ಸಖ್ಯವು ದೃಢಮೂಲವಾಗುವ ಕಾರ್ಯಗಳು ಜರುಗುವಂತೆ ತೋರುತ್ತದೆ.

ಕಳೆದ ಫೆಬ್ರವರಿ ತಾ|| ೧ರಲ್ಲಿ ಪ್ಯಾರಿಸ್ ಪಟ್ಟಣದೊಳಗೆ ಇಂಗ್ಲಿಷ್ ಫ್ರಾನ್ಸ್ ಇಟಲಿ ಪ್ರಭುತ್ವಪ್ರತಿನಿಧಿಗಳು ಎಂದರೆ ಲಾರ್ಡ್ ಕರ್ಜನ್, ಪಾಯಿಂಕೇರ್, ಡೆಲ್ಲಾಟೊರೆಟ್ಟಾ ಈ ಮೂವರು ಸೇರಿ ಗ್ರೀಕ್-ತುರ್ಕಿ ವಿವಾದಸಮಸ್ಯೆ ಮೊದಲಾದುವುಗಳನ್ನು ಪರಿಷ್ಕರಿಸುವಂತೆ ಏರ್ಪಾಟಾಗಿದ್ದಿತು.

ಅಂಗೋರಾದಲ್ಲಿ ಒಂದು ಅದ್ಭುತವ್ಯಾಧಿ ತಲೆದೋರಿದೆ. ಅದು ಸೋಂಕಿದ ೯ ಗಂಟೆ ಕಾಲದೊಳಗಾಗಿ ರೋಗಿಯು ಮೃತನಾಗುವನು. ಸೋಂಕಿದ ಕೂಡಲೇ ನಡುಕವು ಹತ್ತುವುದು. ೨ ಗಂಟೆಯೊಳಗೆ ಸ್ಮೃತಿತಪ್ಪುವುದು. ಈ ರೋಗದಿಂದ ಆಗಲೇ ಎಷ್ಟೋ ಕುಟುಂಬಗಳು ನಿರ್ನಾಮವಾಗಿರುವುವಂತೆ.

ಜಪಾನಿನ ಚಕ್ರವರ್ತಿಯವರು ಅಸ್ವಸ್ಥರಾಗಿರುವುದರಿಂದ ಯುವರಾಜರೇ ರಾಜ್ಯಭಾರವನ್ನು ವಹಿಸಿರುತ್ತಾರಷ್ಟೆ. ಚಕ್ರವರ್ತಿಯವರ ದೇಹಸ್ಥಿತಿಯು ಇನ್ನೂ ಅನುಕೂಲವಾಗಿಲ್ಲವಾದಕಾರಣ ಇನ್ನು ಕೆಲಕಾಲ ಇವರೇ ರಾಜ್ಯನಿರ್ವಾಹ ಮಾಡುವರೆಂದು ಜಪಾನ್ ಮುಖ್ಯಮಂತ್ರಿ ವೈಕೌಂಟ್‌ತಕಹಾಷಿಯವರು ಅಲ್ಲಿಯ ಶಾಸನಸಭೆಯಲ್ಲಿ ಭಾಷಣ ಮಾಡಿದರು.

ರಷ್ಯಾ ಕ್ಷಾಮನಿವಾರಣೆಯ ಫಂಡಿಗೆ ಇದುವರೆಗೆ ೧೨೨೦೦೦೦ ಪೌನುಗಳು ಕೂಡಿವೆಯಂತೆ. ಇದರಿಂದ ೨೦ ಲಕ್ಷ ಪ್ರಜೆಗಳನ್ನು ಪೋಷಿಸಬಹುದೆಂದು ಅಲ್ಲಿಯ ಕ್ಷಾಮವಿಚಾರಣ ಸಂಘದವರು ತಿಳಿಯಿಸಿದ್ದಾರೆ. ಎಷ್ಟೇ ಸಹಾಯಮಾಡಿದರು ಲಕ್ಷಾಂತರ ಪ್ರಜೆಗಳು ಸಾಯುವುದು ಸಿದ್ಧವಂತೆ. ಕ್ಷಾಮಪೀಡಿತರಾಗಿರುವ ಅನೇಕರಿಗೆ ಜೀರ್ಣಶಕ್ತಿಯೇ ಹಾಳಾಗಿಹೋಗಿದೆಯಂತೆ.

ಲಂಡನ್ನಿನಲ್ಲಿ ಪ್ರಕಟವಾಗುವ ಮಾರ್ನಿಂಗ್ ಪೋಸ್ಟ್ ಎಂಬ ಪತ್ರಿಕೆಯು-ಗಾಂಧಿಯವರನ್ನು ಹಿಡಿದು ಕಾರಾಗೃಹದಲ್ಲಿ ಹಾಕಬೇಕೆಂದೂ, ಅವಶ್ಯವಾದರೆ ಗಲ್ಲಿಗೆ ಹಾಕಬೇಕೆಂದೂ ಬರೆದಿರುತ್ತದೆ. ಅಲ್ಲೇ ಪ್ರಕಟವಾಗುವ ನೇಷನ್ ಪತ್ರಿಕೆಯು ಈ ಸೂಚನೆಯು ಚೆನ್ನಾಗಿಲ್ಲವೆಂದೂ, ಗಾಂಧಿಯವರನ್ನು ಭರತಖಂಡದಲ್ಲಿರಿಸಲಿಕ್ಕಾಗದಿದ್ದರೆ ಭಾರತಪ್ರಭುತ್ವದವರು ಅವಲಂಬಿಸುವ ಚಳ್ಳೆಯನ್ನು ತಡೆಯುವುದಕ್ಕೆ ಆಂಗ್ಲದೇಶ ಭಾರತದೇಶಗಳ ಮಿತ್ರರುಗಳು ಯಾವ ಕಾರ್ಯವನ್ನೂ ಮಾಡಲಾರರೆಂದೂ ಹೇಳಿರುತ್ತಾರೆ.

ಕ್ರೈಸ್ತಜಗದ್ಗುರುಗಳಾದ ಪೋಪ್‌ರವರು ಇನ್‌ಫ್ಲೂಯಂಜಾ ಜ್ವರಪೀಡಿತರಾಗಿ ಕಳೆದ ತಾ|| ೨೧ ರಲ್ಲಿ ತಮ್ಮ ೬೭ನೆ ವಯಸ್ಸಿನಲ್ಲಿ ಇಟಲಿದೇಶದ ರೋಮುನಗರದಲ್ಲಿರುವ ತಮ್ಮ ಮಠದಲ್ಲಿ ಮೃತರಾದರು. ಇವರು ೧೮೫೪ನೆ ವರ್ಷದಲ್ಲಿ ಜೆನೋವಾ ಪಟ್ಟಣದಲ್ಲಿ ಜನಿಸಿ ತಮ್ಮ ೬೦ನೆ ವಯಸ್ಸಿನಲ್ಲಿ ಎಂದರೆ ಯೂರೋಪು ಘೋರಯುದ್ಧಾರಂಭವಾದ ವರ್ಷ ಜಗದ್ಗುರುಪಟ್ಟಕ್ಕೆ ಬಂದರು. ಇವರು ಪ್ರಪಂಚಶಾಂತಿಯನ್ನು ಕೋರುತ್ತ ಕಳೆದ ಘೋರಯುದ್ಧವನ್ನು ನೋಡಿ ಬಹಳ ಪರಿತಪಿಸುತ್ತಿದ್ದರು; ವಿಶಾಲಹೃದಯರಾಗಿದ್ದರು.

ಇಂಗ್ಲಂಡಿನಲ್ಲಿ ಈಗ ರಾಜ್ಯಭಾರವನ್ನು ನಿರ್ವಹಿಸುತ್ತಿರುವ ಮಂತ್ರಿಮಂಡಲದವರು ಕೊಯಲಿಷನ್ ಪಕ್ಷದವರಾಗಿರುತ್ತಾರೆ. ಈ ಪಕ್ಷವನ್ನು ಅಣಗಿಸಿ, ಅಧಿಕಾರವನ್ನು ತಾವು ವಹಿಸಿಕೊಳ್ಳಬೇಕೆಂಬುದಾಗಿ ವೈಕೌಂಟ್‌ಗ್ಲಾಡ್‌ಸ್ಟನ್‌ರವರೇ ಮೊದಲಾದವರು ಇಂಡಿಪೆಂಡೆಂಟ್ ಲಿಬರಲ್ ಪಕ್ಷವನ್ನು ಬಲಪಡಿಸುವುದಕ್ಕುಪಕ್ರಮಿಸಿದ್ದಾರೆ. ಇದಕ್ಕೆ ಆಸ್ಕ್ವಿತ್‌ರವರೂ ವೈಕೌಂಟ್‌ಗ್ರೆ ಮೊದಲಾದ ಪ್ರಮುಖರನೇಕರೂ ಸೇರಿದ್ದಾರೆ. ಲಾಯಿಡ್ ಜಾರ್ಜ್‌ರವರಿಗೂ ಈ ಪಕ್ಷಕ್ಕೂ ಪೋಟಾಪೋಟಿ ನಡೆಯುತ್ತಲಿದೆ. ಮುಂದಣ ಪಾರ್ಲಿಮೆಂಟ್ ಚುನಾವಣೆಯಲ್ಲಿ ಇದರ ಪರ್ಯವಸಾನವು ಗೊತ್ತಾಗುವುದು.

ಆಂಗ್ಲ ಮಂತ್ರಿಮಂಡಲದಲ್ಲೊಬ್ಬರಾದ ವಿನ್‌ಸ್ಟನ್ ಚರ್ಚಿಲ್‌ರವರಿಗೆ ಪೂರ್ವ ಆಫ್ರಿಕಾದ ಪ್ರತಿನಿಧಿಗಳು ಕಳೆದವಾರದಲ್ಲಿ ಒಂದು ಔತಣವನ್ನು ಮಾಡಿದರು. ಅಗ್ಗೆ ಚರ್ಚಿಲ್‌ರವರು ಉಪನ್ಯಾಸಮಾಡುತ್ತ ಪೂರ್ವದೇಶೀಯ ವಿಷಯವನ್ನು ಕುರಿತು ಹೀಗೆ ಹೇಳಿದರು.—"ಆಫ್ರಿಕಾ ಏಷ್ಯಾ ದೇಶಗಳಲ್ಲಿ ಅಸಂತೃಪ್ತರಾಗಿರುವ ಕೆಲವರು ತಾವು ಆಂಗ್ಲಪ್ರಭುತ್ವವನ್ನು ಅಧಿಕಾರದಿಂದ ಬಿಡಿಸಬಿಡಬೇಕೆಂದು ಹೇಳಿಕೊಂಡ ಮಾತ್ರದಿಂದಲೇ ಆಂಗ್ಲರು ಅದಕ್ಕೆ ಒಪ್ಪಿಕೊಳ್ಳುವರೆಂದು ತಿಳಿದುಕೊಂಡಿದ್ದಾರೆ. ಯುದ್ಧದಿಂದ ಉಂಟಾದ ಫಲದಲ್ಲಿ ಇದೊಂದು ವಿಚಿತ್ರವಾದ ಫಲಿತವು. ಇವರು ಯೋಚಿಸಿಕೊಂಡಿರುವಂಥ ವಿಧಾನವನ್ನು

ಆಂಗ್ಲರು ಅನುಸರಿಸುವವರಾಗಿಲ್ಲವೆಂದು ತಿಳಿಯಪಡಿಸುವ ಸಮಯವು ಪ್ರಾಪ್ತವಾಗಿದೆ.'' ಎಂದು ಹೇಳಿದರು. ಆಂಗ್ಲಹೃದಯವನ್ನು ಇವರು ಬಿಚ್ಚಿ ಹೇಳಿದುದಕ್ಕೆ ವಂದ್ಯವೇ ಸರಿ.

ಐರ್ಲಂಡಿನಲ್ಲಿ ಉತ್ತರ ದಕ್ಷಿಣವೆಂದು ೨ ಭಾಗಗಳಿರುವುವು. ಇವು ಒಂದಕ್ಕೊಂದು ವಿರೋಧಿಸುತ್ತಿದ್ದುವು. ಉತ್ತರ ಭಾಗವೇ ಅಲ್‌ಸ್ಟರ್ ಭಾಗವೆನಿಸಿಕೊಳ್ಳುವುದು. ಅದಕ್ಕೂ ದಕ್ಷಿಣ ಐರ್ಲಂಡಿಗೂ ಹತ್ತಿದ ಜಗಳವು ಹರಿಯುತ್ತಿರಲಿಲ್ಲ. ಆದರೆ ಈಗ ಐರ್ಲಂಡಿನ ಸ್ವಾತಂತ್ರ್ಯವು ಸಿದ್ಧಿಸಿದ ಬಳಿಕ ಆವೆರಡು ಭಾಗಗಳೂ ಅಂತರ್ವೈಷಮ್ಯಗಳನ್ನು ಬಿಟ್ಟು ಒಂದಾದುವೆಂಬ ವಾರ್ತೆಯು ಕಳೆದವಾರದಲ್ಲಿ ಬಂದಿರುವುದನ್ನು ನೋಡಿದರೆ ಐರ್ಲಂಡಿಗೆ ಸುಯೋಗವು ಒಂದರಹಿಂದೊಂದರಂತೆ ಬರಲಿಕ್ಕೆ ಆರಂಭವಾಯಿತೆಂದು ಹೇಳಬೇಕಾಗುತ್ತದೆ. ದಕ್ಷಿಣ ಐರ್ಲಂಡಿನ ಸಿನ್‌ಫೇನಿಯರ್ ನಾಯಕರಾದ ಕಾಲಿನ್ಸ್‌ರವರೂ ಅಲ್‌ಸ್ಟರ್ ಪ್ರಜೆಗಳ ನಾಯಕರಾದ ಕ್ರೇಗ್‌ರವರೂ ಕೂಡ ಈಗ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಂಡರು. ಈ ಮುಂಚೆ ಇವೆರಡು ಭಾಗದವರೂ ಒಬ್ಬರ ಪದಾರ್ಥವನ್ನು ಒಬ್ಬರು ತರಿಸಿಕೊಳ್ಳುತ್ತಿರಲಿಲ್ಲ. ಈಗ ಈರ್ವರೂ ಪರಸ್ಪರ ವಸ್ತುಬಹಿಷ್ಕಾರವನ್ನು ತೆಗೆದುಹಾಕಿಬಿಟ್ಟರು. ೨ ಭಾಗಗಳಿಗೂ ವ್ಯಾಪಾರ ಸಂಬಂಧವು ಇನ್ನುಮುಂದೆ ನಡೆಯುವುದು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ.

ಲಗ್ನದ ಕಾಣಿಕೆ.

ಕಾನಕಾನಹಳ್ಳಿ ಗುರುಕಾರ್ ಮ|| ರಾ|| ಚನ್ನಬಸಪ್ಪನವರ ಕುಮಾರ ಗಣೇಶಪ್ಪನವರ ನಿಷೇಕಪ್ರಸ್ತ ಸಮಯದಲ್ಲಿ ವಧೂವರರ ಕಡೆಯಿಂದ ಸಂಘಕ್ಕೆ ಕೊಟ್ಟದ್ದು ರೂಪಾಯಿಗಳು ೩-೦-೦.

ಹೊಸಕೋಟೆಯಲ್ಲಿರುವ ಬೆಂಚ್‌ಮ್ಯಾಜಿಸ್ಟ್ರೇಟ್ ಮ|| ರಾ|| ಜವಳಿ ಅಂಗಡಿ ರುದ್ರಪ್ಪನವರ ಕುಮಾರರಿಂದ ನಂಜುಂಡಯ್ಯನವರ ಲಗ್ನದಲ್ಲಿ ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಿ ಹೊಸಕೋಟೆ ತಾಲ್ಲೂಕು ಹೆಡ್‌ಕ್ಲಾರ್ಕ್ ಮ|| ರಾ|| ಬಸವಾರಾಧ್ಯರವರ ಮೂಲಕ ಬಂದ ರೂ. ೫-೦-೦.

ಕಾನಕಾನಹಳ್ಳಿ ತಾಲ್ಲೂಕು ಹಾರೋಹಳ್ಳಿ ಮ|| ರಾ|| ಹೆಚ್. ವಿ. ರುದ್ರಯ್ಯನವರ ಚಿಕ್ಕಮ್ಮನವರು ಶಿವಲೋಕವನ್ನೈದಿದ ಜ್ಞಾಪಕಾರ್ಥವಾಗಿ ಸವರಿಯವರಿಂದ ಬಂದದ್ದು ರೂ. ೫-೦-೦.

ಚಿಕ್ಕಮಗಳೂರು ತಾಲ್ಲೂಕು ಬಾಕನಹಳ್ಳಿ ಮ|| ರಾ|| ತೋಟಪ್ಪಶೆಟ್ಟರಿಂದ ಸಂಘಕ್ಕಾಗಿ ಬಂದದ್ದು ರೂ. ೫-೦-೦

ಕಲ್ಮದ ಮಠದ ವೇ|| ನಿರಂಜಪ್ಪನವರ ಕುಮಾರಿ ರೇವಮ್ಮನನ್ನು ನಾರಸಂದ್ರದಲ್ಲಿರುವ ಬೆಂಗಳೂರು ಸಿದ್ದಣ್ಣನವರ ಕುಮಾರ ಸಿದ್ದನಂಜಪ್ಪನಿಗೆ ಕೊಟ್ಟು ನಡೆಸಿದ ವಿವಾಹದಲ್ಲಿ ವೇ|| ಮಾಗಡಿ ವೀರಪ್ಪಶಾಸ್ತ್ರಿಗಳ ಮೂಲಕ ಸಂಘಕ್ಕೆ ಬಂದದ್ದು ರೂ. ೩-೦-೦.

ಗುಬ್ಬಿ—ಮ|| ರಾ|| ಗುಬ್ಬಿ ಪೇಟೆಶೆಟ್ಟರ ಕಪ್ಪಣ್ಣನವರು ಮತ್ತು ಯಜಮಾನ್ ಹುಚ್ಚವೀರಪ್ಪನವರ ಮೂಲಕ ಸಂಘಕ್ಕಾಗಿ ಬಂದಿರುವುದು:—ಮ|| ರಾ|| ಶಿವರಾತ್ರಪ್ಪನವರ ಕುಮಾರ್ತೆ ಲಗ್ನದಲ್ಲಿ ೫ ರೂ. ಮ|| ರಾ|| ಸುಬ್ರಾಯಪ್ಪನವರ ತಮ್ಮಂದಿರ ಲಗ್ನದಲ್ಲಿ ೫ ರೂ. ಹಳೆಗುಬ್ಬಿ ಮ|| ರಾ|| ಸಿದ್ಧಮಲ್ಲಯ್ಯನವರ ಕುಮಾರಿಯ ಲಗ್ನದಲ್ಲಿ ೨ ರೂ. ಜೆ.ಬಿ. ಮ|| ರಾ|| ಷಾಪ್ ಚನ್ನಬಸಪ್ಪನವರ ಪುತ್ರಿಯವರ ಲಗ್ನದಲ್ಲಿ ೩ ರೂ. ಮ|| ರಾ|| ಮರಿಯಪ್ಪನವರ ಕುಮಾರರ ಲಗ್ನದಲ್ಲಿ ರೂ. ೫ ಮ|| ರಾ|| ಸ್ಥಾ ಹುಚ್ಚನವರ ಪುತ್ರಿಯವರ ಲಗ್ನದಲ್ಲಿ ೩ ರೂ. ಮ|| ರಾ|| ಚನ್ನಮಲ್ಲಶೆಟ್ಟರಿಂದ ಮ|| ರಾ|| ಶಿವರುದ್ರಪ್ಪನವರ ಪುತ್ರಿಯವರ ಲಗ್ನದಲ್ಲಿ ರೂ. ೩ ಮ|| ರಾ|| ರೇವಣ್ಣನವರ ಪುತ್ರಿಯವರ ಲಗ್ನದಲ್ಲಿ ರೂ. ೨ ಜೆ. ಬಿ. ಹುಚ್ಚಪ್ಪನವರಿಂದ ರೂ. ೩ ಮ|| ರಾ|| ಛ|| ಚನ್ನವೀರಪ್ಪನವರ ಪುತ್ರಿಯವರ ಲಗ್ನದಲ್ಲಿ ಮತ್ತು ಮ|| ರಾ|| ಲಾಬರ್ಕ್ ಶಿವಲಿಂಗಪ್ಪನವರಿಂದ ಸಹಾ ರೂ. ೧೭.

ಮ|| ರಾ|| ಚನ್ನಬಸಪ್ಪನವರ ಲಗ್ನದಲ್ಲಿ ರೂ. ೩ ಮ|| ರಾ|| ಪುಟ್ಟಸಿದ್ಧಯ್ಯನವರಿಂದ ರೂ. ೩ ಮ|| ರಾ|| ಸಿದ್ಧನಂಜಯ್ಯನವರ ಮಗಳ ಲಗ್ನದಲ್ಲಿ ರೂ. ೫ ಮ||ರಾ|| ಗಂಗಪ್ಪನವರ ಕುಮಾರರ ಲಗ್ನದಲ್ಲಿ ರೂ. ೩.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಲೆಕ್ಟ್ರಿಕ್ ಕಂಟ್ರಾಕ್ಟ್‌ದಾರ್ ಮ|| ರಾ|| ಶಿವರುದ್ರಪ್ಪನವರ ಕುಮಾರರ ಲಗ್ನದಲ್ಲಿ ರೂ. ೫.

ಮಾಗಡಿ ತಾಲ್ಲೂಕು ಸೋಲೂರು ಮ|| ರಾ|| ವೀರಶೆಟ್ಟಪ್ಪನವರಿಂದ ಮ|| ರಾ|| ಬಳೆಚನ್ನಮಲ್ಲಪ್ಪನವರ ಗೃಹದಲ್ಲಿ ನಡೆದ ಲಗ್ನದಲ್ಲಿ ರೂ. ೩.

ಶಿಡ್ಲಘಟ್ಟದ ದೇಶದ ಪೇಟೆ ಮ|| ರಾ|| ಯಜಮಾನ್ ಹಂಪಯ್ಯನವರ ಗೃಹದಲ್ಲಿ ನಡೆದ ಕಾರ್ಯದಲ್ಲಿ ಫಂಡಿಗಾಗಿ ರೂ. ೨ ಒಟ್ಟು ೯೨-೦-೦ ರೂಪಾಯಿಗಳು.

ಬೆಂಗಳೂರು,
30-1-22.

ಜಿ. ಪರಮಶಿವಯ್ಯ, ಬಿ.ಎ.,ಎಲ್.ಎಲ್.ಬಿ.
ಆನರರಿ ಸೆಕ್ರೆಟರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

ಹಾನಗಲ್ಲ ತಾ|| ಹಿರೂರು.

ಈ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವಾಲಯದೊಳಗೆ ತಾ|| ೨೩-೧-೨೨ನೇ ಇಸವಿಯ ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಬ್ರಹ್ಮಚರ್ಯ, ವಿದ್ಯಾ, ವೇಳೆಯ ಮಹತ್ವ, ಸಾಹಸ, ಭಕ್ತಿ ಈ ವಿಷಯಗಳ ಮೇಲೆ ವಿದ್ಯಾರ್ಥಿಗಳು ಚನ್ನಾಗಿ ಉಪನ್ಯಾಸಮಾಡಿದರು. ನಂತರ ಶ್ರೀಗಳವರು ಸಮಾಜಸೇವಾ ಈ ವಿಷಯದಮೇಲೆ ಸ್ಫೂರ್ತಿದಾಯಕ ವ್ಯಾಖ್ಯಾನಮಾಡಿದರು. ಇಲ್ಲಿಯ ವೀರಶೈವ ಪ್ರಮುಖರ ಇಚ್ಛೆಯಪ್ರಕಾರ ತರುಣಸದ್ವರ್ತನ ಸಾಮರ್ಥ್ಯಕ್ಕೆ ಸಬಂಧಿಸಿ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ತರುವಾಯ ಇಲ್ಲಿಯ ಭಕ್ತರು ಸಂತೋಷಪಟ್ಟು ಶ್ರೀಗಳವರ ಕೃಪಾಬಲದಿಂದ ಧಾರವಾಡದಲ್ಲಿ ಸ್ಥಾಪಿಸಿರುವ ಶ್ರೀ ಮುರುಘಾ ಮಠದ ಪ್ರೀಬೋರ್ಡಿಂಗಿಗೆ ಧಾನ್ಯದ ವರ್ಷಾಶನವನ್ನು ಸಮರ್ಪಿಸಿದರು. ಆ ಮೇಲೆ ಇದರ ಪ್ರಿತ್ಯರ್ಥವಾಗಿ ನೂರಾರು ಜನ ತರುಣವರ್ಗದ ಆರಾಧನೆಯು ಜರುಗಿತು.

ಓರ್ವ ಸಮಾಜಹಿತೈಷಿ.

ಶಿವಕಥಾಕಾಲಕ್ಷೇಪ.

ಗುಬ್ಬಿ ತಾಲ್ಲೂಕು ಹೊಸಕೆರೆ ಗ್ರಾಮದಲ್ಲಿ (ತಾ|| ೯-೧-೧೯೨೨)ನೆ ಸೋಮವಾರ ರಾತ್ರಿ ವೇ|| ಹೊಸಮಠದ ಉಜ್ಜಯಿನೀ ದೇವರ ಪ್ರೋತ್ಸಾಹದಿಂದ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳು ರಾಜಶೇಖರ ವಿಳಾಸವೆಂಬ ಶಿವಕಥಾ ಸಂಕೀರ್ತನೆಯನ್ನು ನವರಸಾಲಂಕಾರಯುಕ್ತವಾಗಿಯೂ ಅಷ್ಟಾವರಣ ವಿಚಾರಪೂರ್ವಕವಾಗಿಯೂ ನಡೆಯಿಸಿದರು. ಈ ಶಿವಕಥಾಶ್ರವಣದಿಂದ ತತ್ಸಭಾಲಂಕೃತರಾಗಿದ್ದ ವೇ|| ರಾಮಕೃಷ್ಣಶಾಸ್ತ್ರಿಗಳು ಮ||ರಾ|| ವಿದ್ವಾನ್ ಕೊಂಡಮಾಚಾರರವರು ಮತ್ತು ಹಾಗಲವಾಡಿ ಸಮ್ಮತು ಶೇಕದಾರ್ ಮ|| ರಾ|| ಸ್ವಾಮಿರಾವ್‌ಯವರು ಇನ್ನೂ ಮುಂತಾದ ಮಹಾಜನರು ಮಹದಾನಂದಪಟ್ಟು ವೇ|| ಶಾಸ್ತ್ರಿಗಳನ್ನು ತುಂಬಾ ಶ್ಲಾಘಿಸಿದರು. ತದನಂತರ ಲೌಕಿಕ ಪಾರಮಾರ್ಥಿಕ ವಿಚಾರ ಪೂರ್ಣಾನುಭವಿಗಳಾದ ವೇ|| ಉಜ್ಜಯಿನೀ ದೇವರು ವೀರಶೈವ ಮತದಲ್ಲಿ ಈ ರೀತಿಯಾಗಿ ಧರ್ಮೋಪದೇಶ ರೂಪಮಾದ ಕೀರ್ತನೆಯನ್ನು ಮಾಡತಕ್ಕ ಮಹನೀಯರು ಇನ್ನೂ ಹೆಚ್ಚಲೆಂದೂ ನೆರೆದ ಮಹಾಜನರಿಗೂ ವೇ|| ಶಾಸ್ತ್ರಿಗಳಿಗೂ ಸೌಖ್ಯವನ್ನೀಯಲೆಂದೂ ಸದಾ ಶಿವನನ್ನು ಪ್ರಾರ್ಥಿಸಿದಮೇಲೆ ಸಭಾ ಭರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಶಿರಾಳಕೊಪ್ಪದ ವೀರಶೈವರು ಮಾಡತಕ್ಕ ಕರ್ತವ್ಯ.

ಈ ಪೂರಿನಲ್ಲಿ ೧೦-೧೫ ವರ್ಷಗಳ ಹಿಂದೆ ಇದ್ದ ವೀರಶೈವರ ಮತ್ತು ನಮ್ಮ ಈಗಿನ ಸ್ಥಿತಿಯನ್ನು ಹೋಲಿಸಿದರೆ ಅನೇಕ ಕುಂದುಕೊರತೆಗಳು ಕಾಣಬರುತ್ತವೆ. ಈ ಹಿಂದಿನ ನಮ್ಮ ಯಜಮಾನರ ಸ್ಥಿತಿಯನ್ನು ಇತರ ಊರಿನ ನಮ್ಮ ಜನರು ನೋಡಿ ಅನುಸರಿಸತಕ್ಕದ್ದಾಗಿದ್ದಿತು. ಈಗ ಸುಮಾರು ೮, ೧೦ ವರ್ಷಗಳಿಂದ ಒಂದು ಸಣ್ಣ ಗುಡಿಸಲಿನ ಮೇಲೆ ಒಂದು ಪ್ರಚಂಡಗಾಳಿ ಬೀಸಿದರೆ ಎಷ್ಟು ಅನಾಹುತವಾಗುತ್ತದೆಯೋ ಹಾಗೆ ನಮ್ಮ ಸಮಾಜದ ಒಬ್ಬೊಬ್ಬ ಮಹಾಪುರುಷರಿಂದ ಈ ಪೂರಿನ ನಮ್ಮವರಲ್ಲಿ ೨ ಪಂಗಡಗಳುಂಟಾಗಿ ಒಬ್ಬರಿಗೊಬ್ಬರು ದ್ವೇಷ ಬೆಳಸುತ್ತ ಕೋರ್ಟಿನಲ್ಲಿ ನಿಷ್ಕಾರಣವಾದ ಅಲ್ಪಸ್ವಲ್ಪ ಕೆಲಸಕ್ಕೆ ವ್ಯಾಜ್ಯಮಾಡಿ ದುಡ್ಡು ಹಾಳುಮಾಡಿಕೊಂಡದ್ದಲ್ಲದೆ ವಕೀಲರ ಮನೆಬಾಗಲಲ್ಲಿ ನಾಯಿಗಳಂತೆ ಬಿದ್ದುದನ್ನು ಪರಮತೀಯರು ನೋಡಿ ಹಾಸ್ಯಮಾಡುತ್ತಿದ್ದರು. ಹೀಗೆ ನಡೆಯುತ್ತಿರುವುದನ್ನು ನಮ್ಮ ಸಮೀಪದ ಶಿಕಾರಿಪುರದ ಕೆಲವು ಪ್ರಮುಖರು ನೋಡಿ ನಮ್ಮ ನಮ್ಮ ದ್ವೇಷಗಳು ಬೆಳೆಯನಂತೆ ಮಾಡಿದ ಮೇಲೆ ಈಗ ೨ ವರ್ಷಗಳಿಂದ ನಮ್ಮ ಸ್ಥಿತಿಯು ಸ್ವಲ್ಪ ಸುಧಾರಿಸಿದ್ದಕ್ಕೆ ಈ ವರ್ಷ ನಡೆದ ಮ್ಯುನ್ಸಿಪಾಲಿಟಿಯಲ್ಲಿ ನಮ್ಮವರು ಜಯಶೀಲರಾಗಿ ಬಂದುದೇ ಕಾರಣವಾಗಿದೆ. ಈಗ ಸುಮಾರು ನಾಲ್ಕು ತಿಂಗಳ ಕೆಳಗೆ ಇಲ್ಲಿಯ ಕೆಲವು ನಮ್ಮ ಸಮಾಜದ ತರುಣರು ಇಲ್ಲಿ ಒಂದು ಪ್ರಾಂತಿಕ ಸಭೆಯನ್ನು ನಡೆಸಿ ನಮ್ಮ ಸಮಾಜವನ್ನು ಜಾಗ್ರತಗೊಳಿಸಬೇಕೆಂದು ಪ್ರಯತ್ನಮಾಡಿದಾಗ್ಯೂ ಕೆಲವು ಅನಿವಾರ್ಯಕಾರಣಗಳಿಂದ ನಿಲ್ಲಿಸಬೇಕಾಗಿ ಬಂದಿತು. ಅಯ್ಯಾ ಸಮಾಜದ ಸ್ನೇಹಿತರೇ! ನಿಮ್ಮ ಈಗಿನ ಸ್ಥಿತಿಯನ್ನು ಯೋಚಿಸಿರಿ. ನಿಮ್ಮ ಅಭಿವೃದ್ಧಿಗೆ ಅನೇಕ ಕಂಟಕಗಳು ಪ್ರಾಪ್ತವಾಗಿವೆ. ಈಗ ನೀವು ಒಂದು ಪ್ರಾಂತಿಕ ಸಭೆಯನ್ನೇರ್ಪಡಿಸಿ ಐಕಮತ್ಯದಿಂದ ನಿಮ್ಮ ನಿಮ್ಮ ಕುಂದುಕೊರತೆಗಳನ್ನು ಹೋಗಲಾಡಿಸಿ ಅಭಿವೃದ್ಧಿಸ್ಥಿತಿಗೆ ಬರದಿದ್ದರೆ ನಮ್ಮ ಸಮಾಜದವರು ಇಲ್ಲಿ ನಿರ್ಮೂಲವಾಗುವ ಸಂಭವವಿದೆ. ಜಾಗೃತರಾಗಿರಿ ನೀವು ಜಾಗ್ರತೆಯಾಗಿ ಇಲ್ಲಿ ಒಂದು ಸಭೆಯನ್ನೇರ್ಪಡಿಸಿ ನಮ್ಮ ಸಮಾಜದವರು ಇಲ್ಲಿ ಸುಧಾರಿಸಬೇಕೆಂದು ಬೇಡಿಕೊಳ್ಳುವ,

ಓರ್ವ ಸಮಾಜಸೇವಕ.

''ಗುಬ್ಬಿ ತಾ|| ಕೊಂಡಜ್ಜಿ ಅಗ್ರಹಾರದ ರೈತರ ಗೋಳಾಟ''

ಸ್ವಾಮಿ:—

ತಾ|| 28-12-21ನೇ ಒಕ್ಕಲಿಗರ ಪತ್ರಿಕೆಯ 7ನೇ ಪುಟದಲ್ಲಿ - ಗುಬ್ಬಿ ತಾ|| ಕೊಂಡಜ್ಜಿ ಅಗ್ರಹಾರದ ರೈತರ ಗೋಳಾಟ" ವೆಂಬ ಲೇಖನವನ್ನು ಓದಿ ಆ ಅಗ್ರಹಾರಕ್ಕೆ ಹೋಗಿ ನೋಡಿದೆನು. ಈ ಅಗ್ರಹಾರವು ನಾಲ್ಕು ದಿಕ್ಕಿಗೆ ನಾಲ್ಕು ಉಪಗ್ರಾಮಗಳಾದ ಗೊಪ್ಪೇನಹಳ್ಳಿ; ಸೊಪ್ಪಿನಹಳ್ಳಿ ಲಾಳೂನಕಟ್ಟೆ, ಕಲಬೋರನಹಳ್ಳಿಗಳನ್ನೊಳಗೊಂಡು ಒಂದು ದೊಡ್ಡ ಅಗ್ರಹಾರವಾಗಿದೆ. ಇಂಥಾ ಅಗ್ರಹಾರವನ್ನು ಪಡೆದ ಮಹನೀಯರೇನೂ ಸಾಮಾನ್ಯಪುರುಷರಂತೆ ಕಂಡಬರುವುದಿಲ್ಲ. ಏತಕ್ಕೆಂದರೆ ಮಾತೃಗ್ರಾಮವಾದ ಕೊಂಡಜ್ಜಿಯು ಬಹಳ ಪುಷ್ಕಳವಾದ ಗ್ರಾಮವಾಗಿದೆ. ಊರು ಬಾಗಿಲಿಗೆ ಅರ್ಧಫರ್ಲಾಂಗು ದೂರದಲ್ಲಿ ಒಂದು ದೊಡ್ಡ ಕೋಡಿಹಳ್ಳವು ಹರಿಯುತ್ತದೆ. ಈ ಅಗ್ರಹಾರಕ್ಕೆ ಗೌರ್ಮೆಂಟಿನವರು ಸುಮಾರು 8-10 ಸಾವಿರ ರೂಪಾಯಿ ಖರ್ಚಿಟ್ಟು 40-50 ವರ್ಷಗಳ ಹಿಂದೆ ಒಡೆದುಹೋಗಿದ್ದ ಕೆರೆಯನ್ನು ಜೋಡಿದಾರರುಗಳಿಗೆ ಅನುಕೂಲವಾಗಿರುವಂತೆ ಕಟ್ಟಿಸುತ್ತಿದ್ದಾರೆ. ಈ ಕೆರೆಯು ಯಾವಾಗಲೂ ತುಂಬಿರುವಂತೆ ಕಾಣುತ್ತದೆ. ಏತಕೆಂದರೆ ಈ ಅಗ್ರಹಾರದ ಕೆರೆಗೆ ಮೇಲ್ಭಾಗದಲ್ಲಿ ಸಾಂಗೆಬೆಳ್ಳಿ ಅಮಾನಿಕೆರೆಯಿದೆ. ಈ ಕೆರೆಯಕೋಡಿ ಸರಿಯಾಗಿಲ್ಲದ್ದರಿಂದ ಕೆಳಗಿನ ಅಗ್ರಹಾರದ ಕೆರೆಗೆ ಸುಮಾರು ಒಂದು ತೂಬಿನ ನೀರುಬರುತ್ತದೆ. ಇಂಥಾ ಕೆರೆಯನ್ನಿಟ್ಟುಕೊಂಡು ಐದುಗ್ರಾಮಗಳಿಗೆ ಜೋಡಿದಾರರಾಗಿ, ಏನೂತಿಳಿಯದ ಬಡರೈತರನ್ನು ಹೆದರಿಸಿಕೊಂಡು ಧೀರರಾಗಿರತಕ್ಕ ಜೋಡಿದಾರರ ಆನಂದವನ್ನು ಹೇಳತೀರದು. ಇದೂ ಅಲ್ಲದೆ ಈ ಅಗ್ರಹಾರವು 40 ವೃತ್ತಿಗಳಾಗಿ ಭಾಗಿಸಲ್ಪಟ್ಟಿದೆ. ಈಗ್ಯೆ 40 ವರ್ಷಗಳ ಹಿಂದೆ ಸರ್ವೆಯಾದ ಪ್ರಕಾರ 4825 ಎಕರೆ ಜಮೀನುಗಳನ್ನೊಳಗೊಂಡಿದೆಯಂತೆ. ಅಗ್ರಹಾರದ ಕಂದಾಯವು ವೃತ್ತಿ ಒಂದಕ್ಕೆ 28-0-0 ರೂಪಾಯಿನ ಪ್ರಕಾರ 1120 ರೂಪಾಯಿಗಳಾಗುತ್ತದೆ. ಅಂದರೆ ಎಕರೆ ಒಂದಕ್ಕೆ 0-4-0 ಆಣೆಯೂ ಕೂಡ ಬೀಳಲಿಲ್ಲ. ಇದೂ ಅಲ್ಲದೆ ಜೋಡಿದಾರರು ತಮ್ಮ ವಶದಲ್ಲಿಟ್ಟುಕೊಂಡಿರತಕ್ಕ ತರೀ ಬಾಗಾಯ್ತು ಜಮೀನುಗಳಿಗೆ ಕಂದಾಯವನ್ನು ಕೊಡುವುದಿಲ್ಲ. ಒಟ್ಟು ಕಂದಾಯವೆಲ್ಲಾ ರೈತರಿಂದಲೇ ವಸೂಲಾಗತಕ್ಕದ್ದಾಗಿದೆ. ಈ ರೀತಿಕಂದಾಯವನ್ನು ಕೊಡದೆ ರೈತರಿಂದ ಹೆಚ್ಚಿಗೆ ಕಂದಾಯವನ್ನು ವಸೂಲ್‌ಮಾಡಿ, ವಂಶಪಾರಂಪರ್ಯವಾಗಿ ನಡೆದುಬರುತ್ತಿರುವ ರೈತರ ಹಕ್ಕನ್ನು ತಪ್ಪಿಸಿ, ಸುಖವಾಗಿ ಜೀವನಮಾಡಿಕೊಂಡಿರಬೇಕೆಂದು ಪ್ರಯತ್ನಪಡುತ್ತಿರುವ ಜೋಡಿದಾರರ ಆನಂದವನ್ನು ಹೇಳಲೇ ತೀರದು. ಈ ಅಗ್ರಹಾರವನ್ನು ಜೋಡಿಯಾಗಿ ಯಾರು ಕೊಟ್ಟವರು? ಏತಕ್ಕೋಸ್ಕರವೆಂದು ಒಬ್ಬ ವೃದ್ಧಜೋಡಿದಾರನನ್ನು ಕೇಳಲು, ಪೂರ್ವದಲ್ಲಿ ಅಂದರೆ ದಿವಾನ್ ಬಹದ್ದೂರ್ ಪೂರ್ಣಯ್ಯನವರ ಕಾಲದಲ್ಲಿ ಹಾಲಿ ಜೋಡಿದಾರರ ಪೂರ್ವಿಕರು ಪೂರ್ಣಯ್ಯನವರ ಮನೆಯಲ್ಲಿ ಪಾರಾಯಣ ಮಾಡಿದ್ದರಿಂದ ಬಂದಿತೆಂದು ಹೇಳಿದರು. ಇದರ ನಿಜಾಂಶವು ಸರಿಯಾಗಿ ಗೊತ್ತಾಗಲಿಲ್ಲ. ಈ ಅಗ್ರಹಾರದಲ್ಲಿ ಕೆಲವು ಶಾಸನಗಳಿವೆ. ಅವುಗಳಿಂದಲೇನಾದರೂ ತಿಳಿಯಬಹುದು. ಅದೂ ಹಾಗಿರಲಿ, ನಮ್ಮ ಮೈಸೂರು ಸಂಸ್ಥಾನದಲ್ಲಿ 440 ಸರ್ವಮಾನ್ಯಗಳೂ 450 ಬಾಯಂಗುತ್ತಗಳೂ 1208 ಜೋಡಿಗಳೂ ಇವೆ. ಈ ಗ್ರಾಮಗಳಲ್ಲು ಸಹ ಇದೇರೀತಿ ಕಂದಾಯ ವಸೂಲಾಗುತ್ತಿದಿಯೇ? ಈಗ ನಮ್ಮ ಗೌರ್ಮೆಂಟಿಗೆ ಸಾಲವಿರುವುದು ಸರ್ವರಿಗೂ ತಿಳಿದವಿಷಯವೇ ಆಗಿದೆ. ಇಂಥಾ ಸಮಯದಲ್ಲಿ 2098 ಅಗ್ರಹಾರಗಳಲ್ಲಿಯೂ ಇಷ್ಟು ಕಮ್ಮಿಕಂದಾಯವನ್ನು ಕೊಟ್ಟರೆ ದೇಶಾದಾಯವು ಎಷ್ಟು ಕಮ್ಮಿಯಾಗುತ್ತದೆ? ಎಷ್ಟು ಜನ ರೈತರುಗಳು ಸಂಕಟಪಡುತ್ತಿದ್ದಾರೆ? ಈ ವಿಷಯವನ್ನು ಸರ್ವರೂ ಆಲೋಚಿಸಬೇಕಾಗಿದೆ. ಈ ರೀತಿಯಾಗಿ ಅನೇಕ ರೈತರುಗಳು ಸಂಕಟಪಡುತ್ತಿದ್ದರೂ ಕೆಲವರ ಸುಖಕ್ಕೋಸ್ಕರ ಗೌರ್ಮೆಂಟಿನವರು ಸುಮ್ಮನಿರಬಾರದು. ಇದೂ ಅಲ್ಲದೆ ರೈತರನ್ನು ನೋಡಿದರೆ ಅವರ ಸಂಕಟವನ್ನು ಹೇಳತೀರದು, ಈ ಅಗ್ರಹಾರದಲ್ಲಿ ಸುಮಾರು 1000-1500 ರೈತಪ್ರಜೆಗಳಿರಬಹುದು. ಇವರಲ್ಲಿ ಶೇಕಡ 100 ರಂತೆ ಅವಿದ್ಯಾವಂತರಾಗಿರುತ್ತಾರೆಂದು ಹೇಳಿದರೆ ಖಂಡಿತ ಅತಿಶಯೋಕ್ತಿಯಾಗಲಾರದು. ಇವರ ಉಡುಪುಗಳನ್ನು ನೋಡಿದರೆ ಕಾಡುಜನಗಳಂತೆ ಕಾಣುತ್ತಾರೆ. ಇವರ ಚರಸ್ವತ್ತುಗಳನ್ನು ನೋಡಿದರೇನೂ ಬಂಡವಾಳವೇಯಿಲ್ಲ. ಸ್ಥಿರಸ್ವತ್ತುಗಳಿಗೆ ಜೋಡಿದಾರರುಗಳು ಗಾಳವನ್ನು ಹಾಕಿದ್ದಾರೆ. ಪ್ರತಿಯೊಬ್ಬ ರೈತನೂಸಹ ಜಮೀನಿನಿಂದಲ್ಲದೆ ಮತ್ತಾವ ಕೈಗಾರಿಕೆಗಳಿಂದಲೂ ಜೀವನಮಾಡುತ್ತಿಲ್ಲ. ಕೆಲವರು ಕೌಪಿನಧಾರಿಗಳಾಗಿಯೇ ಕಾಲವನ್ನು ಎಣಿಸುತ್ತಿದ್ದಾರೆ. ಅನೇಕರು ಒಪ್ಪತ್ತೇಊಟಮಾಡಿ ಜೀವಿಸಿಕೊಂಡಿದ್ದೇವೆಂದು ಹೊಟ್ಟೆಯನ್ನು ಬಡಿದುಕೊಂಡು ಹೇಳಿದರು. ನಿಜವಾಗಿಯೂ, ಈ ವಿಷಯಗಳನ್ನು ಹೇಳುವುದಕ್ಕಿಂತ ಪ್ರತ್ಯಕ್ಷವಾಗಿ ನೋಡಿದ ಪಕ್ಷದಲ್ಲಿ ಕಲ್ಲೆದೆಯವರಾದರೂ ಕೂಡ ಕಣ್ಣೀರುಸುರಿಸದೆ ಇರಲಾರರು. ಈ ರೀತಿಯಾಗಿ ನಮ್ಮ ದೇಶದ 2098 ಅಗ್ರಹಾರಗಳಲ್ಲೂ ರೈತರುಗಳು ಸಂಕಟಪಡುತ್ತಲಿರುವರೇ? ಈ ರೀತಿಯಾಗಿ ಮೂಢರಾಗಿರುವುದಕ್ಕೆ ಕಾರಣವೇನೆಂದು ರೈತರನ್ನು ಕೇಳಲು ಬರೆಯಲು ಸಾಧ್ಯವಾಗದಿರುವ ಕಷ್ಟಗಳನ್ನು ರೈತರು ಅನುಭವಿಸಿರುವುದೇ ಕಾರಣ ಎಂದು ಹೇಳಿದರು. ಈ ರೀತಿಯಿರುವಾಗ ಇನಾಂ ಕಮಿಷನ್ ರಿಪೋರ್ಟಿನ ಮೆಮೋರ್‍ಯಾಂಡಮ್ ಪ್ರಕಾರ ಕೆಲವು ಖಾನೂನುಗಳು ಜಾರಿಗೆ ಬಂದರೆ ನಿಜವಾಗಿಯೂ, ಖಂಡಿತವಾಗಿಯೂ, ಜೋಡಿಗ್ರಾಮಗಳ ರೈತರೇನೂ ಉಳಿಯುವ ರೀತಿಯಿಲ್ಲ. ಆದುದರಿಂದ ನಮ್ಮ ಘನವಾದ ಸರ್ಕಾರದವರು ಇನಾಂ ಕಮಿಷನ್ ರಿಪೋರ್ಟಿನಲ್ಲಿ ಅನೇಕಜನ ದೊಡ್ಡ ಮನುಷ್ಯರನ್ನು ವಿಚಾರಿಸಿರುವ ಹಾಗೆ ನಮೂದಿಸಿರುವ ಪ್ರಕಾರ ಜೋಡಿಗ್ರಾಮದ ರೈತರನ್ನೂ ವಿಚಾರಣೆಮಾಡಿ ಅವರ ಕಷ್ಟಗಳನ್ನು ಖಂಡಿತವಾಗಿಯೂ ನಿವಾರಿಸಬೇಕು. ಮತ್ತು ಇನಾಂಕಮಿಷನ್ ರಿಪೋರ್ಟಿನಲ್ಲಿ ಪಬ್ಲಿಷ್‌ಮಾಡಿರುವ ಪ್ರಕಾರ ಯಾವ ಜೋಡಿಗ್ರಾಮದ ಯಾವ ರೈತನೂ ಕೂಡ ಉತ್ತರವನ್ನು ಬರೆಯಲಾರನೆಂದು ದೃಢವಾಗಿ ನಂಬಬಹುದು. ಏತಕ್ಕೆಂದರೆ ಮುಕ್ಕಾಲು ಮೂರುವೀಸಪಾಲು (99%) ರೈತರೆಲ್ಲಾ ಅವಿದ್ಯಾವಂತರು. ಇದು ಅವರಿಗೆ ಸಾಧ್ಯವಾದ ಕೆಲಸವೆಂದು ಹೇಳಲಾಗುವುದಿಲ್ಲ. ಆದುದರಿಂದ ನಮ್ಮ ಘನಸರ್ಕಾರದವರು ತತ್‌ಕ್ಷಣದಲ್ಲೇ ರೈತರಕಷ್ಟಗಳನ್ನು ವಿಚಾರಿಸಿ ಪ್ರತಿಯೊಂದು ಅಗ್ರಹಾರಕ್ಕೂ ಸರ್ವೆಸೆಟ್ಲ್‌ಮೆಂಟುಮಾಡಿಸಿ ರೈತರಿಗೆ ಸರಿಯಾದ ದಾಖಲೆಗಳನ್ನು ಕೊಟ್ಟು, ಆದಾಯವನ್ನು ಹೆಚ್ಚಿಸಿ, ದೇಶಾಭಿವೃದ್ಧಿಯನ್ನು ಮಾಡುವರೆಂದು ದೃಢವಾಗಿ ನಂಬಿರುತ್ತೇನೆ.

"ಧರ್ಮವಿಜಯ"

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
6 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೨೨ ನೆಯ ಇಸವಿ ಪೆಬ್ರವರಿ ತಾ|| ೫ ರಿಂದ ೧೯೨೨ ನೆಯ ಪೆಬ್ರವರಿ ತಾ|| ೧೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿನಾಮಸಂವತ್ಸರದ ಮಾಘಶುದ್ಧ ಅಷ್ಟಮಿಯಿಂದ ಮಾಘಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರಮಾ
5	[1]ಭಾನು	ಅಷ್ಟ	26-5	ಭರಣಿ	13-37	23
6	ಸೋಮ	ನವ	25-53	ಕೃತ್ತಿ	15-5	24
7	[2]ಮಂಗಳ	ದಶ	24-20	ರೋಹಿ	15-18	25
8	[3]ಬುಧ	ಏಕಾ	21-41	ಮೃಗ	14-26	26
9	[4]ಗುರು	ದ್ವಾದ	17-58	ಆರ್ದ್ರಾ	12-30	27
10	ಶುಕ್ರ	ತ್ರಯೋ	13-26	ಪುನ	9-47	28
11	ಶನಿ	ಚತು	8-19	ಪುಷ್ಯ	6-25	29

(1) ಭಿಷ್ಮಾಷ್ಟಮಿ. (2) ಮುದುಕುತೊರೆ ಮಲ್ಲಿಕಾರ್ಜುನಸ್ವಾಮಿ ರಥಃ. (3) ಸರ್ವತ್ರಭಿಷ್ಮೈಕಾದಶಿ, ಶಿವನಸಮುದ್ರದ ರಂಗಸ್ವಾಮಿರಥಃ. (4) ಪ್ರದೋಷಃ, ಮಾಗಡಿ ಸೋಮೇಶ್ವರಸ್ವಾಮಿರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಪೆಬ್ರವರಿ ತಾರೀಖು ೧೨ ನೆಯ ಭಾನುವಾರ. ಸಂಚಿಕೆ ೭

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
6 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಶಕ್ತ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಚಳಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 34

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಕ ವೀರಶೈವ ವಿವಾಹವಿಧಿಃ	೦—೧೩—೦
ರುಶೀಲಚಂದ್ರ	೦—೧೦—೦
ದಾಸಿ	೦—೮—೦
ಪಂಚಕ	೦—೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವಾಚ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಕರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
3 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲ, ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಉತ್ತಮವಾದ ನೇಪಾಳ ರುದ್ರಾಕ್ಷಿಗಳು ಮತ್ತು ರೇಷ್ಮೆ ವಸ್ತ್ರಗಳು.

60 ಕ್ರಯ ಸುಲಭ.

ನಮ್ಮಲ್ಲಿ ರುದ್ರಾಕ್ಷಿಗಳು, ಶ್ರೀ ಚಕ್ರಗಳು, ಸ್ಫಟಿಕಲಿಂಗ, ಮಣಿಗಳು, ಕಸ್ತೂರಿ, ರೇಷ್ಮೆ ವಸ್ತ್ರಗಳು ಮೊದಲಾದ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ರವಾನಿಸುವೆವು. ಕಳುಹಿಸಿದ ಮಾಲುಗಳು ಮನಸ್ಸಿಗೆ ಬಾರದೇಹೋದರೆ ವಾಪಸ್ ತೆಗೆದುಕೊಂಡು ಬದಲುಮಾಲು ಕಳುಹಿಸಲಾದೀತು.

32 ಮಣಿಗಳ ಕಂಠಿ 1ಕ್ಕೆ

ಮುಖ	ರೂ.	ಇಂದ.	ರೂ. ವರೆಗೆ.
4	0-12-0	,	50-0-0
5	0- 8-0	..	100-0-0
6	0-12-0	,,	100-0-0
7	6- 0-0	,,	100-0-0
ಬಿಡಿಮಣಿಗಳು 1ಕ್ಕೆ ಕ್ರಯ			
3	0- 6-0	ಇಂದ	10-0-0
8	0- 8-0	,,	100-0-0
9	0-12-0	,,	100-0-0
10	0-14-0	,,	100-0-0
11	3- 8-0	,,	100-0-0
12	4- 0-0	,,	100-0-0
13	4- 8-0	.,	100-0-0
14	6- 0-0	,,	100-0-0

108 ಮಣಿಗಳ ಸರಗಳು 1ಕ್ಕೆ
ಇದರಲ್ಲಿ 5.6 ಮುಖ ಮಾತ್ರ
ದೊರಿಯುವದು.

ಪ್ರಮಾಣ	ರೂ. ಇಂದ	ರೂ ವರೆಗೆ
ಉದ್ದಿನ	,, 15-0-0	,, 40-0-0
ತೊಣಗು	,, 7-8-0	,, 15-0-0
ಕಡಲೆ	,, 2-8-0	,, 7-0-0
ನೆನೆದಕಡಲೆ	,, 1-8-0	,, 3-0-0
ಕಮಲಾಕ್ಷಿ	,, 1-0-0	,, 2-0-0
ದೊಡ್ಡ	,, ,, 0-8-0	,, 1-0-0
ಅದಕ್ಕಿಂತ	,, 0-6-0	,, 0-8-0
ಸ್ಫಟಿಕ108ಕ್ಕೆ	4-8-0	,, 30-0-0
ಶ್ರೀಚಕ್ರ1ಕ್ಕೆ	8-0-0	,,100-0-0
ಲಿಂಗ 1ಕ್ಕೆ	1-0-0	,, 100-0-0

ಗೌರೀಶಂಕರ1ಕ್ಕೆ 4 ರೂ. ಯಿಂದ 30 ರೂ. ಕಸ್ತೂರಿ ಎ. 80-0-0 ಬಿ. 50-0-0 ಸಿ.40-0-0 ಡಿ. 25-0-0 ಬೇರೆ ವಿಷಯಕ್ಕೆ ಪತ್ರರೂಪ ತಿಳಿಯಿರಿ.

S U. N. & Co., ಎಸ್. ಯು. ನೇಪಾಳ ರುದ್ರಾಕ್ಷಿ
Chaukhamba, ಕಂಪನಿ, ಚೌಕಂಬಾ ಕಾಶೀ.
Benares.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಫೆಬ್ರವರಿ ತಾ|| ೧೨ ನೆಯ ಭಾನುವಾರ.

ವೈಸ್ರಾಯರವರಿಗೆ ಮ|| ಗಾಂಧಿಯವರ ಅಂತ್ಯಸಂದೇಶ.

ಕಳೆದ ಫೆಬ್ರುವರಿ ತಾ|| ೧ ರಲ್ಲಿ ಮ|| ಗಾಂಧಿಯವರು ವೈಸ್ರಾಯರಿಗೆ ಈ ಕೆಳಗೆಕಂಡ ಅಭಿಪ್ರಾಯದ ಒಂದು ಲೇಖನವನ್ನು ಬರೆದಿದ್ದಾರೆ—" ಭಾರತೀಯರು ಪಂಜಾಬು, ಖಿಲಾಫತ್, ಸ್ವರಾಜ್ಯ—ಈ ವಿಷಯಗಳಲ್ಲಿ ಮಾಡಿದ ನಿರ್ಧಾರಗಳನ್ನು ಪ್ರಭುತ್ವದವರು ಯಾವಾಗಲೂ ನಿರಾಕರಿಸಿ ಅಪರಾಧ ಮಾಡಿದುದರಿಂದ ಪ್ರಭುತ್ವದಮೇಲೆ ದೇಶೀಯರಿಗೆ ಉಂಟಾಗಿರುವ ವಿಮುಖತ್ವವನ್ನು ವ್ಯಕ್ತಪಡಿಸಲಿಕ್ಕಾಗಿ ಬರ್ಡೋಲಿಯಲ್ಲಿ ಆಜ್ಞೋಲ್ಲಂಘನವನ್ನು ಆರಂಭಿಸಲು ಮೊದಲು ನಿಶ್ಚಯಿಸಲ್ಪಟ್ಟಿತು. ಆದರೆ ಬೊಂಬಾಯಿ ಗದ್ದಲದಿಂದ ಆ ಪ್ರಯತ್ನವು ನಿಂತುಹೋಯಿತು. ಈ ಮಧ್ಯೆ ಪ್ರಭುತ್ವದವರು ದೇಶದ ಅನೇಕ ಭಾಗಗಳಲ್ಲಿ ನಿರ್ಬಂಧವಿಧಾನಗಳನ್ನು ಆರಂಭಿಸಿದ ಕಾರಣ, ವಾಕ್ಸ್ವಾತಂತ್ರ್ಯ ಸಂಘಸ್ವಾತಂತ್ರ್ಯ ಮುದ್ರಣ ಸ್ವಾತಂತ್ರ್ಯಗಳನ್ನು ಕಾಪಾಡಿಕೊಳ್ಳುವುದು ಪ್ರಜೆಗಳ ಮೊದಲನೆ ಕೃತ್ಯವಾಗಿ ಏರ್ಪಟ್ಟಿದೆ. ಭಾರತಪ್ರಭುತ್ವದವರ ಈಗಣ ಮನಸ್ಥಿತಿಯನ್ನವಲೋಕಿಸಿಯೂ ದೇಶದ ದೌರ್ಜನ್ಯಶಕ್ತಿಗಳನ್ನು ಪೂರ್ಣವಾಗಿ ವಶಪಡಿಸಿಕೊಳ್ಳಲು ದೇಶವು ಸುಸಿದ್ಧವಾಗಿಲ್ಲದೆ ಇರುವುದನ್ನು ಅವಲೋಕಿಸಿಯೂ, ದೇಶೀಯನಾಯಕರ ಸಮಾವೇಶವನ್ನು ಜರುಗಿಸಲಿಕ್ಕಾಗಿ ನಿಮ್ಮನ್ನು ಪ್ರೋತ್ಸಾಹಿಸಲು ಮದನಮೋಹನ ಮಾಳವ್ಯರೇ ಮೊದಲಾದವರು ಕೂಡಿಸಿದ ಸಭೆಯೊಡನೆ ಸಂಬಂಧವನ್ನಿಟ್ಟುಕೊಳ್ಳಲಿಕ್ಕೆ ಅಸಹಾಯವಾದಿಗಳು ಅಂಗೀಕರಿಸಲಿಲ್ಲ. ಆದರೆ ಅನವಶ್ಯಕವಾದ ಪ್ರಜಾಹಿಂಸೆಯನ್ನು ನಿವಾರಿಸಲು ಕುತೂಹಲಬದ್ಧನಾಗಿರುವ ನಾನು ಮಾಲವ್ಯಾ ಸಭೆಯವರ ಸೂಚನೆಗಳನ್ನು ಅಂಗೀಕರಿಸುವಂತೆ ಕಾಂಗ್ರೆಸ್ ಕಾರ್ಯನಿರ್ವಾಹ ಸಂಘಕ್ಕೆ ಸೂಚಿಸಲು ಹಿಂದೆಗೆಯಲಿಲ್ಲ. ವೈಸ್ರಾಯರಾದ ನೀವು ಕಲಕತ್ತಾದಲ್ಲಿ ಮಾಡಿದ ಉಪನ್ಯಾಸದಲ್ಲಿ ಸೂಚಿಸಿದ ರೀತಿಯಂತೆಯೇ ಇರುವುದೆಂದು ಭಾವಿಸಿ ಮಾಳವ್ಯಾ ಸಭೆಯವರು ತೀರ್ಮಾನಗಳನ್ನು ಮಾಡಿದರೂ ನೀವು ಅದನ್ನು ನಿರ್ಲಕ್ಷ್ಯತನದಿಂದ ನಿರಾಕರಿಸಿದಿರಿ. ಆದುದರಿಂದ ದೇಶೀಯರು ತಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳಲಿಕ್ಕಾಗಿ ದೌರ್ಜನ್ಯರಹಿತವಾದ ಯಾವುದೋ ಒಂದು ವಿಧಾನವನ್ನು ಅವಲಂಬಿಸಿಯೇ ತೀರಬೇಕಾಗಿದೆ. ಆಲಿಸಹೋದರರು ಯಾವ ನಿಬಂಧನೆಯೂ ಇಲ್ಲದೆ ಕ್ಷಮಾಪಣೆಯನ್ನು ಕೇಳಿಕೊಂಡಾಗ ವೈಸ್ರಾಯರು ಏರ್ಪಡಿಸಿದ ನಾಗರಿಕ ಪದ್ಧತಿಯು ಈಗ ಸಂಪೂರ್ಣವಾಗಿ ಅತಿಕ್ರಮಿಸಲ್ಪಟ್ಟಿದೆಯೆಂಬುದು ಸದ್ಯಃ ನಡೆಯುತ್ತಿರುವ ಕಾರ್ಯಗಳಿಂದ ಸ್ಪಷ್ಟವಾಗುತ್ತದೆ. ಅಸಹಾಯವಾದಿಗಳು ಕೆಲಸದಲ್ಲೂ ಮಾತಿನಲ್ಲೂ ದೌರ್ಜನ್ಯವನ್ನು ತೋರಿಸದೆ ಇರುವವರೆಗೂ ಭಾರತಪ್ರಭುತ್ವದವರು ಅದರಲ್ಲಿ ಪ್ರವೇಶಿಸುವುದಿಲ್ಲವೆಂದು ಆಗ ವೈಸ್ರಾಯರು ನುಡಿದಿದ್ದರು. ಅದೇಪ್ರಕಾರ ಪ್ರಭುತ್ವದವರು ತಟಸ್ಥರಾಗಿದ್ದರೆ ಪ್ರಜಾಭಿಪ್ರಾಯವು ವಿಕಾಸಗೊಳ್ಳುತ್ತಿದ್ದಿತು. ದೇಶದಲ್ಲಿರುವ ದೌರ್ಜನ್ಯಶಕ್ತಿಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುವವರೆಗೂ, ಕೋಟ್ಯಂತರ ಸಂಖ್ಯಾಕರಾದ ಅಸಹಾಯವಾದಿಗಳಲ್ಲಿ ಅತಿಶಯವಾದ ಕ್ರಮಶಿಕ್ಷೆಯನ್ನು ನೆಲೆಗೊಳಿಸುವವರೆಗೂ ಕಾಂಗ್ರೆಸ್ಸಿನವರು ಆಜ್ಞೋಲ್ಲಂಘನೆಗೆ ಪ್ರವರ್ತಿಸಲು ಅನುಮತಿಕೊಡುತ್ತಿರಲಿಲ್ಲ. ಹಾಗಿಲ್ಲದೆ ನ್ಯಾಯರಹಿತವಾದ ನಿರ್ಬಂಧವಿಧಾನಗಳನ್ನು ಪ್ರಭುತ್ವದವರು ಪ್ರಾರಂಭಿಸಿದುದರಿಂದ ಸಮಷ್ಟಿ ಆಜ್ಞೋಲ್ಲಂಘನೆಯನ್ನು ಅವಲಂಬಿಸುವುದು ಅವಶ್ಯಕವಾಯಿತು. ಸದ್ಯಃ ಅದು ಬಾರ್ಡೋಲಿ ತಾಲ್ಲೂಕಿನಲ್ಲಿ ಮಾತ್ರ ಜರುಗುವುದು. ಆದರೆ ಆಂಧ್ರರಾಷ್ಟ್ರದಲ್ಲಿರುವ ಗುಂಟೂರು ಜಿಲ್ಲೆಯವರು ಕಾಂಗ್ರೆಸ್ ನಿಯಮಗಳೆಲ್ಲವನ್ನೂ ಪೂರ್ಣವಾಗಿ ನೆರವೇರಿಸಿದರೆ ಆ ಜಿಲ್ಲೆಯಲ್ಲಿ ನೂರು ಗ್ರಾಮಗಳಲ್ಲಿಯೂ ಸಮಷ್ಟಿಆಜ್ಞೋಲ್ಲಂಘನೆಯನ್ನವಲಂಬಿಸಲಿಕ್ಕೆ ನನಗಿರುವ ಅಧಿಕಾರವನ್ನನುಸರಿಸಿ ಕೂಡಲೇ ನಾನು ಅನುಮತಿಯನ್ನು ಕೊಡಬೇಕಾಗಿ ಬರಬಹುದು. ಆದರೆ ಬಾರ್ಡೋಲಿ ಪ್ರಜೆಗಳು ಆಜ್ಞೋಲ್ಲಂಘನವನ್ನು ಪ್ರಾರಂಭಿಸುವುದಕ್ಕೆ ಮೊದಲು ಪ್ರಭುತ್ವಕ್ಕೆ ಮುಖ್ಯಪುರುಷರಾದ ನೀವು ಈಗಣ ವಿಧಾನವನ್ನು ಮಾರ್ಪಡಿಸಿಕೊಳ್ಳಬೇಕೆಂದು ವಿನಯವಾಗಿ ಬೇಡುತ್ತೇನೆ. ದೌರ್ಜನ್ಯರಹಿತವಾದ ಕೆಲಸಗಳನ್ನು ಮಾಡಿದುದಕ್ಕಾಗಿ ಶಿಕ್ಷಿತರಾಗಿರುವವರನ್ನೂ ಮತ್ತೆ ವಿಚಾರಣೆಗೆ ಗುರಿಯಾಗಿರುವವರನ್ನೆಲ್ಲರನ್ನೂ ಸಹ ಬಿಡಿಸಿಬಿಡಬೇಕೆಂದು ಕೋರುತ್ತೇನೆ. ಪಂಜಾಬು ಖಿಲಾಫತ್ ಅಕ್ರಮಗಳನ್ನು ತೊಲಗಿಸುವುದಕ್ಕಾಗಲೀ ಸ್ವರಾಜ್ಯಸಿದ್ಧಿಗಾಗಲೀ ಮತ್ತಾವುದಕ್ಕೇ ಆಗಲೀ ದೇಶದಲ್ಲಿ ಜರಗುವ ಕೆಲಸಗಳು ದೌರ್ಜನ್ಯಶೂನ್ಯವಾಗಿರುವಷ್ಟು ಕಾಲವೂ, ಅವು ಕಠಿನಶಾಸನಗಳಿಗೆ ಅಥವಾ ಪೆನಲ್ ಕೋಡುಗಳಿಗೆ ಒಳಪಡುವವುಗಳಾಗಿದ್ದರೂ ಅವುಗಳೊಡನೆ ಪ್ರಭುತ್ವೋದ್ಯೋಗಿಗಳು ಪ್ರವೃತ್ತಿಸಕೂಡದೆಂದು ತಾವು ನಿರ್ಧರವಾಗಿ ಸ್ಪಷ್ಟಪ್ರಕಟನೆಯನ್ನು ಮಾಡಬೇಕೆಂದು ಕೋರುತ್ತೇನೆ. ಮುದ್ರಾಲಯಗಳಮೇಲೂ ಪತ್ರಿಕೆಗಳಮೇಲೂ ಸರ್ಕಾರಿ ಉದ್ಯೋಗಿಗಳು ಪರಿಶೀಲನೆಮಾಡುತ್ತಿರುವುದನ್ನು ಪೂರ್ಣವಾಗಿ ತಪ್ಪಿಸಿ, ಇದುವರೆಗೆ ತೆಗೆದುಕೊಂಡಿರುವ ದಂಡದ್ರವ್ಯವನ್ನೂ ಸೊತ್ತುಗಳನ್ನೂ ಮರಳಿ ಅವರವರಿಗೆ ಕೊಡಿಸಿಕೊಡಬೇಕೆಂದು ಕೋರುತ್ತೇನೆ. ಈಗ ನಾಗರಕತೆಯುಳ್ಳ ಪ್ರಭುತ್ವಗಳಿಗೆ ಒಳಪಟ್ಟಿರುವ ದೇಶಗಳೆಂದು ಭಾವಿಸಲ್ಪಡುತ್ತಿರುವ ದೇಶಗಳಲ್ಲಿ ಬಳಕೆಯಲ್ಲಿರುವ ವಿಧಾನಗಳಿಗೆ ಭಿನ್ನವಾಗಿ ನಿಮ್ಮನ್ನೇನೂ ಕೋರುವುದಿಲ್ಲ. ಈ ಲೇಖನವು ಪ್ರಕಟಿತವಾದ ದಿನ ಮೊದಲುಗೊಂಡು (ಅನೆ ತಾರೀಖಿನಾರಭ್ಯ) ೭ ದಿನಗಳೊಳಗೆ ನೀವು ಮೇಲೆ ಕಂಡಂತೆ ಆಚರಿಸಿ ಪ್ರಕಟಿಸುವುದು ಸಾಧ್ಯವಾದರೆ, ಕಾರಾಗೃಹಗಳಿಂದ ಬಿಡಲ್ಪಟ್ಟ ದೇಶೀಯ ನಾಯಕರು ದೇಶದ ಪರಿಸ್ಥಿತಿಯನ್ನು ಮತ್ತೆ ಆಲೋಚಿಸಿ ಹೊಸದಾಗಿ ನಿರ್ಧಾರಮಾಡುವವರೆಗೂ ಆಜ್ಞೋಲ್ಲಂಘನವನ್ನು ಪ್ರಾರಂಭಿಸದೆ ಇರುವಂತೆ ಮಾಡಲಿಕ್ಕೆ ನಾನು ಬದ್ಧನಾಗುತ್ತೇನೆ. ಪ್ರಭುತ್ವದವರು ಅಂಥ ಪ್ರಕಟನವನ್ನು ಮಾಡದೆಹೋದರೆ ಮಾತ್ರನೇ ಆಜ್ಞೋಲ್ಲಂಘನೆಯು ಪ್ರಾರಂಭಿಸಲ್ಪಡುವುದು "

ಈ ಮೇಲೆ ಕಂಡ ಲೇಖನವು ರೀಡಿಂಗ್‌ಪ್ರಭುಗಳಿಗೆ ಹಿತಸೂಚನೆಯಾಗಿ ಸೌಮನಸ್ಯದಿಂದ ಬರೆಯಲ್ಪಟ್ಟಿರುವುದೆಂದು ಮ|| ಗಾಂಧಿಯವರೂ ಅವರ ಅನುಚರರೂ ಹೇಳುತ್ತಿದ್ದಾರೆ. ರಣಾಗ್ರಕ್ಕೆ ಸಿದ್ಧರಾಗಿ ನಿಂತಿರುವ ಕ್ಷತ್ರಿಯರು ಇದಿರು ಪಕ್ಷದವರಿಗೆ ತಿಳಿಯಿಸುವ ಅಂತ್ಯಸಂದೇಶಕ್ಕೂ ಇದಕ್ಕೂ ಯಾವ ಭೇದವೂ ತೋರುವುದಿಲ್ಲ. ಪ್ರಭುತ್ವವನ್ನು ಹಿಂಗಟ್ಟು ಮುರಿಕಟ್ಟಿ " ಗಡೀಪಾರು " ಮಾಡಿಸಬೇಕೆಂಬುದು ಅಸಹಾಯವಾದಿಗಳ ತತ್ತ್ವವಾಗಿರುವಾಗ ಅದಕ್ಕನುಸಾರವಾದ ಕ್ರಿಯೆಯೇ ಇದಾಗಿರುತ್ತದೆಂದು ಹೇಳುವಲ್ಲಿ ಅಭ್ಯಂತರವಿಲ್ಲ. ಆದರೆ ದೌರ್ಜನ್ಯದೂರವಾದ ಸಾತ್ವಿಕಪ್ರಯತ್ನಗಳನ್ನು ಅವಲಂಬಿಸಿರುವೆವೆಂದು ಹೇಳಿಕೊಳ್ಳುವ ಪಕ್ಷದ ನಾಯಕರು, ರಾಜಸತ್ವವೇ ಮೂರ್ತಿಭವಿಸಿರುವ ಪ್ರಭುತ್ವದವರೊಡನೆ ನಡೆಯಿಸುವ ಸಂಧಾನಗಳೂ ಮಾತುಕತೆಗಳೂ ಸಾತ್ವಿಕಮಯವಾಗಿಲ್ಲದೆ ತಾಮಸಾತ್ಮಕ ಪದ್ಧತಿಗನುಸಾರವಾದರೆ ಅದರ ಫಲಗಳು ಸಾತ್ವಿಕವಾಗಿ ಎಂದೂ ಇರಲಾರವು. ಪ್ರಭುತ್ವದವರು ಅಪರಾಧ ಮಾಡಿರುವರೆಂದೂ, ಸಹಾಯನಿರಾಕರಣವನ್ನವಲಂಬಿಸಿದ ನಿರ್ಬಂಧಿತರೆಲ್ಲರನ್ನೂ ಅವರು ಬಿಟ್ಟು, ನಿರ್ಬಂಧಶಾಸನಗಳನ್ನು ವಿರಮಿಸಿ, ಮುದ್ರಣಸ್ವಾತಂತ್ರ್ಯ ಮೊದಲಾದುವುಗಳಿಗೆಲ್ಲಾ ಸ್ವೇಚ್ಛೆಯನ್ನು ೭ ದಿನಗಳಲ್ಲಿ ಕೊಡದಿದ್ದರೆ ನಾವು ಕಂದಾಯ ಕೊಡುವುದನ್ನು ನಿಲ್ಲಿಸಿಬಿಡುತ್ತೇವೆಂದೂ ಗಾಂಧಿಯವರು ಬೆದರಿಕೆಯನ್ನು ಹೇಳಿರುತ್ತಾರೆ. ಒಂದುವೇಳೆ ಅಷ್ಟನ್ನು ಸರ್ಕಾರದವರು ಮಾಡಿಕೊಟ್ಟರೂ ಇವರು ಮಾಡುವ ಪ್ರತಿಫಲವು ಎಷ್ಟು ಮಹತ್ತರವಾದುದು? ನೋಡಿರಿ-ಕಾರಾಗೃಹದಿಂದ ಹೊರಬಿದ್ದು ಬರುವ ನಾಯಕರು ಮತ್ತೆ ಯೋಚನೆಮಾಡಿ ಯಾವ ಮಾರ್ಗವನ್ನು ನಿರ್ಣಯಿಸುವರೋ ಅಲ್ಲಿಯವರೆಗೆ ಮಾತ್ರ ತಾವು ಶಾಸನೋಲ್ಲಂಘನವನ್ನು ನಿಲ್ಲಿಸಿಬಿಡುವರಂತೆ! ಮತ್ತೆ ಹಾಗೆ ನಿಲ್ಲಿಸುವುದು ಕೂಡ ಎಂದೆಂದಿಗೂ ಅಲ್ಲ, ಒಂದುವೇಳೆ ಆ ಮುಖಂಡರು ಶಾಸನೋಲ್ಲಂಘನವನ್ನು ಮಾಡಿಯೇ ತೀರಬೇಕೆಂದು ಆಗಲೂ ನಿರ್ಧರಿಸುವುದಾದರೆ ಅದಕ್ಕೆ ಗಾಂಧಿಯವರು ಉತ್ತರವಾದಿಗಳಲ್ಲ. ಇಷ್ಟುಮಾತ್ರದ ವರವನ್ನು ಪಡೆದುಕೊಳ್ಳಲಿಕ್ಕಾಗಿ ಪ್ರಭುತ್ವದವರು ತಾವು ಇದುವರೆಗೆ ನಡೆಯಿಸಿದ ಚರ್ಯೆಗಳನ್ನೆಲ್ಲಾ ಅನ್ಯಾಯವೆಂದೂ ಅಧರ್ಮವೆಂದೂ ಒಪ್ಪಿ, ಅದರ ಪ್ರಾಯಶ್ಚಿತ್ತಕ್ಕಾಗಿ ಗಾಂಧಿಯವರ ಸೂಚನೆಯಂತೆ ಪ್ರಕಟನಮಾಡಿ, ಕಾರಾಗೃಹ ಬಂಧಿತರನ್ನು ಬಿಡುಗಡೆಮಾಡುವುದೇ ಮೊದಲಾದ ಕೆಲಸಗಳನ್ನು ನಡೆಯಿಸಬೇಕಂತೆ! ವೈರಾಗ್ಯಮೂರ್ತಿಗಳೂ ನಿಸ್ಪೃಹರೂ ಶಾಂತಮಯರೂ ಪರಮಸಾತ್ವಿಕರೂ ಎನಿಸಿಕೊಂಡಿರುವ ಗಾಂಧಿಯವರೇ ಹೀಗೆ ವೀರರಸವನ್ನು ಚಲ್ಲುತ್ತಿರುವಾಗ, ಸಮಗ್ರರಾಜಸ ಬಲವುಳ್ಳ ಪ್ರಭುತ್ವದವರು ಅಂಜಿ ಕ್ಷಮಾಪಣೆ ಬೇಡಿಕೊಂಡು ಬಾಳಬಹುದೆ? ಮಾಳವ್ಯಸಭೆಯಲ್ಲೂ ಗಾಂಧಿಯವರು ಇದೇ ತೆರದ ಮಾತುಗಳನ್ನಾಡಿ, ರೀಡಿಂಗ್ ಪ್ರಭುಗಳು ಕ್ಷಮಾಪಣೆ ಬೇಡಿಕೊಳ್ಳುವಂತೆ ಮಾಡಬೇಕೆಂಬ ಅಭಿಪ್ರಾಯವನ್ನು ಸೂಚಿಸಿದುದರಿಂದಲೇ ಸರ್ ಶಂಕರನ್ ನಾಯರ್‌ರವರು ಜಿಗುಪ್ಸೆಪಟ್ಟು ಎದ್ದುಹೋದರು. ಅದರ ಪುನರಾವೃತ್ತಿಯನ್ನು ಗಾಂಧಿಯವರು ಈ ಲೇಖನದಲ್ಲಿ ಮಾಡಿದಂತಾಯಿತೇ ಹೊರತು ಇದರಲ್ಲಿ ಹೊಸದೇನೂ ಇಲ್ಲವೆಂದು ನಮಗೆ ತೋರುವುದು. ಆಗ ಸರ್ ನಾಯರ್‌ರವರೊಬ್ಬರು ಜಿಗುಪ್ಸೆ ತೋರಿಸಿದ್ದರು; ಇತರರು ತಮ್ಮ ಮನೋಭಾವವನ್ನು ಹೊರಪಡಿಸದೆ ನುಂಗಿಕೊಂಡಿದ್ದರು. ಈಗ ಈ ಲೇಖನವನ್ನು ನೋಡಿ ಮಾಳವ್ಯಸಭೆಯ ಉಪಸಂಘದವರೆಲ್ಲಾ ಹೇಸಿಕೊಂಡು " ಇಂಥ ಲೇಖನವನ್ನು ನೀವು ಬರೆದುದರಿಂದ ಕೆಲಸವೆಲ್ಲಾ ಹದಗೆಟ್ಟಿತು, ನಮ್ಮ ಆಸೆಯೆಲ್ಲಾ ಭಂಗವಾಯಿತು, ನಿಮ್ಮ ಲೇಖನದ ಅಭಿಪ್ರಾಯಗಳನ್ನು ನಾವೆಂದಿಗೂ ಒಪ್ಪಲಾರೆವು " ಎಂದು ಸ್ಪಷ್ಟವಾಗಿ ಲೋಕವೆಲ್ಲಾ ಕಾಣುವಂತೆ ಗಾಂಧಿಯವರಿಗೆ ಬರೆದು ತಿಳಿಯಿಸಿರುವರು.

ಕಾಂಗ್ರೆಸ್ಸಿನ ಪಕ್ಷದ ಅಟೆರ್ನಿ ಜನರಲ್ಲರಾಗಿರುವ ಗಾಂಧಿಯವರು ಈತೆರದ ಮುಷ್ಕರವನ್ನೇ ಹಿಡಿದು ಪ್ರವರ್ತಿಸುವವರೆಗೂ ಪ್ರಭುತ್ವದವರು ಎಂದಿಗೂ ಶಾಂತಿಯನ್ನು ವಹಿಸಲಾರರು. ಈತೆರದ ಸಂಧಾನಗಳೂ ಮಾತು ಕತೆಗಳೂ ಅವರನ್ನು ಮತ್ತಷ್ಟು ರೇಗಿಸದೆ ಬಿಡವು. ರೌಂಡ್‌ಟೇಬಲ್ ಸಮಾವೇಶಕ್ಕೆ ಅವಕಾಶವಾಗದಿರುವುದಕ್ಕೂ ಇಂಥ ಪ್ರವರ್ತನವೇ ಕಾರಣವು.

ಮ|| ಗಾಂಧಿಯವರ ಈ ನೋಟೀಸಿಗೆ ಪ್ರಭುತ್ವದವರು ಉತ್ತರವನ್ನು ಕೊಡದೆಹೋದರೆ ಇವರ ಪ್ರವರ್ತನವೇ ಮತ್ತು ಹೇಳಿಕೆಯೇ ಸಹಜವಾದುದೆಂದು ದೇಶೀಯರಿಂದ ಭಾವಿಸಲ್ಪಡಬಹುದಾದೀತೆಂದು ಭಾವಿಸಿ ಸರ್ಕಾರದವರು ಕಳೆದ ತಾ|| ೭ ರಲ್ಲೇ ಉತ್ತರವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಗಾಂಧಿಯವರ ಪ್ರತಿಯೊಂದು ಆಕ್ಷೇಪವನ್ನೂ ಸಹೇತುಕವಾಗಿ ಖಂಡಿಸಿ, ಅದು ಯಥಾರ್ಥವಾದುದಲ್ಲವೆಂಬುದನ್ನು ತೋರಿಸಿರುವುದಲ್ಲದೆ ತಾವು ನಿರ್ಬಂಧವಿಧಾನಗಳನ್ನವಲಂಬಿಸದಿದ್ದರೆ ದೇಶಶಾಂತಿರಕ್ಷಣೆಗೇ ಲೋಪಬರುತ್ತಿದ್ದುದರಿಂದ ನಿರ್ವಾಹವಿಲ್ಲದೆ ಮನಸ್ಸಿಲ್ಲದೆ ಅಂಥ ಚರ್ಯೆಗಳನ್ನು ಕೈಕೊಳ್ಳಬೇಕಾದ ಸಂದರ್ಭಗಳನ್ನು ಉದಾಹರಣಪೂರ್ವಕವಾಗಿ ವ್ಯಕ್ತಪಡಿಸಿರುತ್ತಾರೆ. ಮತ್ತು ಕಟ್ಟಕಡೆಯಲ್ಲಿ—ಗಾಂಧಿಯವರು ಮಾಡಿರುವ ಸೂಚನೆಗಳನ್ನು ಪ್ರಭುತ್ವದವರು ಅಂಗೀಕರಿಸುವುದು ಹಾಗಿರಲಿ, ಚರ್ಚಿಸಲಿಕ್ಕೂ ಕೂಡ ಅರ್ಹವಾದುವುಗಳಲ್ಲವೆಂಬುದನ್ನು ಯುಕ್ತಾಯುಕ್ತ ವಿಚಾರಪರರಾದವರೆಲ್ಲರೂ ಗ್ರಹಿಸಬಲ್ಲರೆಂದೂ, ಸಮಷ್ಟಿಆಜ್ಞೋಲ್ಲಂಘನವು ದೇಶಕ್ಕೆ ತುಂಬಾ ಉಪದ್ರವವನ್ನುಂಟುಮಾಡುವುದಾದ ಕಾರಣ ಅದನ್ನು ಕಠಿನವಾಗಿ ಪ್ರತಿಭಟಿಸಿದಲ್ಲದೆ ತೀರದೆಂದೂ, ಅದನ್ನು ಹತಗೊಳಿಸುವುದಕ್ಕಾಗಿ ಪ್ರಭುತ್ವದವರು ತಕ್ಕ ಚರ್ಯೆಯನ್ನು ಅವಲಂಬಿಸಿಯೇ ತೀರುವರೆಂದೂ, ನ್ಯಾಯಪ್ರವರ್ತಕರೂ ರಾಜಭಕ್ತರೂ ಆದ ಪ್ರಜೆಗಳೆಲ್ಲರೂ ಆ ವಿಷಯದಲ್ಲಿ ಪ್ರಭುತ್ವಕ್ಕೆ ಸಹಾಯೀಭವಿಸಬೇಕೆಂದೂ ಪ್ರಭುತ್ವದವರು ತಿಳಿಯಪಡಿಸಿದ್ದಾರೆ.

ಇನ್ನು ಗಾಂಧಿಯವರು ತಮ್ಮ ಅನುಚರರಿಗೆ ಸಮಷ್ಟಿ ಶಾಸನೋಲ್ಲಂಘನೆಗೆ ಆಜ್ಞೆ ಕೊಡುವರೆಂಬುದಕ್ಕೆ ಸಂಶಯವಿಲ್ಲ. ಕಂದಾಯ ಕೊಡುವುದನ್ನು ಅಲ್ಲಲ್ಲಿ ಪ್ರಜೆಗಳು ನಿಲ್ಲಿಸಿಬಿಡುತ್ತಾರೆ. ಅದನ್ನು ಸರ್ಕಾರದವರು ಎಂದಿಗೂ ಸಹಿಸುವುದಿಲ್ಲ. ಕಂದಾಯ ಕೊಡದಂತೆ ಬೋಧಿಸುವುದು ರಾಜದ್ರೋಹವೆಂದು ಈಗಾಗಲೇ ಅವರು ಮದ್ರಾಸಿನಲ್ಲಿ ಸೂಚನೆ ಕೊಟ್ಟಿದ್ದಾರೆ. ಅದಕ್ಕೆ ಬೇರೆ ದಂಡನೆಗಳು ಸಿದ್ಧವಾಗುವುವು. ಅದೊಂದು ತೆರದಿಂದ ಗದ್ದಲವು ಹೆಚ್ಚುವುದು. ಮದ್ದು ತುಪಾಕಿಗಳ ಅವಾಂತರವು ಹೆಚ್ಚುವುದು. ಭರತಖಂಡವು ಕುರು ಕ್ಷೇತ್ರವಾಗುವುದು. ಇದರಿಂದ ಮ|| ಗಾಂಧಿಯವರ ಪ್ರಯತ್ನಗಳು ಪ್ರಭುತ್ವದವರನ್ನು ಸಾಮರಸ್ಯದಿಂದ ಶಾಂತಿಯಕಡೆಗೆ ತಿರುಗಿಸಲಿಕ್ಕೆ ಸಹಾಯಪಡಿಸುತ್ತವೆಯೋ ಅಥವಾ ದೇಶವನ್ನು ರಣರಂಗವನ್ನಾಗಿ ಮಾಡಿಸಲಿಕ್ಕಾಗಿ ಸಹಾಯಪಡಿಸುತ್ತವೆಯೋ ಎಂಬುದನ್ನು ವಾಚಕರೇ ಪರ್ಯಾಲೋಚಿಸಬೇಕು.

RABIDITY.

This kind of madness has its peculiarities. It is one which develops rapidly and with an intensity which does excessive harm. From individuals it spreads to groups and classes. It is not confined to animals amongst which it is free from mental bias. When it spreads to human kind, its specialities make appearance. It is here that hatred and intelligence conspire with rabidity of mind. We were shocked to read things of the kind which appeared as communicated in the Wealth of Mysore of the 6th instant. It is again Mr. C. R. Reddy with whom this contemporary of ours wars. It takes exceptions to his statements as a member of the Malavya Conference. We have carefully read all that has been written on this subject from different points of view of the two extremes and the centre view. He is in neither flank. He stands in the middle and collects the best and the just matters from the right and from the left. It may be just a few days ago that he entered the political arena. The sun shines forth very soon. The clouds disappear before his rays. His services are sought and within a few days of his release from the prisons of officialdom, he is there in his right place. Even the remarkable woman admits it. But not the Wealth of Mysore in her communications. What poor Wealth is in her name! There is neither complex nor compound ignorance in the lucid statements of Mr. C. R. Reddy. But there appears to be some rabidity in reading those fine and logical thoughts. Who is more competent to advise the Andhras than Mr. C. R. Reddy who is one of their flesh and blood? Not those of the brains of the Wealth of Mysore. Is that brave man who calls the man of stubburnness "Mad" and the repressive measures "Madness," a man of the "Lick-spittle" spirit? Certainly not. He speaks from conviction and in whatever such a man says there can never be a ring of lick-spittleism. Why call all Governments "Down-right sinners." Is it that it speaks the spirit of the Wealth of Mysore? No Government, no law and no order. Civilisation and enlightenment are according to her, the componant parts of "Humbug." What? Barbarism and ignorance are then the creeds of this Nationalism! Astounding!

The long story of "Dharma" is all a nonsense fit for the age when the Indian was made the slave of the Exclusive Righteousness which belonged to the gods on earth and to no "Serf" of the Indian Sastras and Thantras. The universal "maitri" which is taught in this episode is not practised by the Trustees of these Sastras. Yet there are people who think that there is one law for the rich and powerful and that it is the same law for the poor and destitute. We find it in the Governments of men who are righteous and impartial. What about that law which "Manu" is said to have laid down? Does it prescribe one law and one punishment alike to a Brahman culprit and a Sudra culprit? The less we speak of this kind of sophistry the better for the solution of the modern problems of equal treatment, equal justice, freedom of speech and freedom of action. No one disputed the Government of God but those who created the Holeyars and Madigars. To govern men we want Governments of men. They err and it is the duty of every non-rabid man and non-rabid class to correct them. Wisdom lies in correcting and not in destroying. Rabidity overpowers every sane endeavour. It is natural to co-operate and to persist in pointing out the errors. Any other course smacks of rabidity.

If the man who is made up of the parts of Pitt, of Parnell, of Devalera, of Mazzini and of Garibaldi is going to save trouble for India, he is really one man who cannot in 24 hours give birth to 1,700,000 of his kind. Natural science will tell that such luxuriant growth and development is amongst the low. We do not take the same view of the great man as the author of this article. But we like to point out the error of logic. We are glad to note that Mr. C. R. Reddy is doing his best service to his fellow-beings. He is the people's man and to them are his services. He belongs to a class which the great Sastras and Thantras had neglected to spiritualise. They and their yokes had been left severely alone to toil and toil. It is the modern enlightenment which has thrown the gates of knowledge to them and Mr. C. R. Reddy is the product of that liberalism and we wish him success in his endeavour to attain peace and freedom to the great masses by standing for Law and Order. Rabidity does no good to the people. Good comes from good Government and that, thank God, we have here.

ವಿಚಿತ್ರಾಭಿಪ್ರಾಯಗಳು.

ಭರತಖಂಡದ ಈಗಣ ರಾಜಕೀಯ ವೈಷಮ್ಯವನ್ನು ಕುರಿತು ಅದರ ಶಾಂತಿಗಾಗಿ ದೇಶೀಯ ವಿದೇಶೀಯರಲ್ಲಿ ಹಲವರು ಹಲವುತೆರದ ಅಭಿಪ್ರಾಯಗಳನ್ನು ಪ್ರಭುತ್ವದವರಿಗೆ ಕೊಡುತ್ತಿದ್ದಾರೆ. ಲಾರ್ಡ್ ನಾರ್ತ್‌ಕ್ಲಿಫ್‌ರವರು ತುರ್ಕಿಸಮಸ್ಯೆಯನ್ನು ಮೊದಲು ಸರಿಪಡಿಸಬೇಕೆಂದರು. ಸಿ. ವಿಜಯರಾಘವಾಚಾರ್ಯರು ರಾಯಲ್‌ಕಮಿಷನನ್ನು ನಿಯಮಿಸಬೇಕೆಂದರು. ಇನ್ನು ಕೆಲರು ರೌಂಡ್‌ಟೇಬಲನ್ನು ಕೂಡಿಸಬೇಕೆಂದರು. ಕೆಲರು ಗಾಂಧಿಯವರನ್ನು ಗಡೀಪಾರು ಮಾಡಬೇಕೆಂದರು. ಆದರೆ ಅವರಲ್ಲಿ ಸರ್ ಫ್ರೆಡರಿಕ್‌ಲುಗಾರ್ಡ್ ಎಂಬವರು ಲಂಡನ್ ಟೈಮ್ಸ್ ಪತ್ರಿಕೆಗೆ ಬರೆದು ತಿಳಿಸಿರುವ ಸೂಚನೆಯು ಒಂದು ವಿಚಿತ್ರವಾಗಿದೆ. ಏನೆಂದರೆ—ಆಂಗ್ಲಪ್ರಭುತ್ವದವರು ಭರತಖಂಡದ ಸ್ವದೇಶೀಯ ಸಂಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಮತ್ತು ಈಗ ರಾಜಭಕ್ತಿಯಿಂದಿರುವ ದೇಶೀಯ ಸಂಸ್ಥಾನಗಳ ವೈಶಾಲ್ಯವನ್ನು ಹೆಚ್ಚಿಸಬೇಕು. ಮತ್ತು ರಾಜ್ಯಪರಿಪಾಲಕರಾಗಿದ್ದು ಯಾವ ಕಾರಣದಿಂದಲೋ ಅದನ್ನು ಕಳೆದುಕೊಂಡು ಕುಳಿತಿರುವವರನ್ನು ಆಂಗ್ಲರ ಸ್ವಾಮ್ಯವನ್ನು ರಕ್ಷಿಸಿಕೊಂಡು ಹೋಗತಕ್ಕವರನ್ನಾಗಿ ಏರ್ಪಡಿಸಿಕೊಂಡು ಅಂಥವರಿಗೆ ಮರಳಿ ಸಿಂಹಾಸನಾಧಿಪತ್ಯವನ್ನು ಕೊಡಬೇಕು. ಇಂಥ ವಿಧಾನಕ್ಕೆ ಅವಕಾಶವಿಲ್ಲದ ಬಂಗಾಳ ಮೊದಲಾದ ರಾಷ್ಟ್ರಗಳಲ್ಲಿ ಪ್ರಜಾಪ್ರತಿನಿಧಿಗಳ ಪರಿಪಾಲನವನ್ನು ಸ್ಥಾಪಿಸಬೇಕು. ಹೀಗೆ ಮಾಡಿದರೆ ಭರತಖಂಡಕ್ಕೆ ಆಂಗ್ಲಪ್ರಭುತ್ವದವರು ಮಾಡಿರುವ ವಾಗ್ದಾನವನ್ನು ನೆರವೇರಿಸಿದಂತೆಯೂ ಆಗುವುದು. ಮತ್ತು ಭರತಖಂಡದಲ್ಲಿ ಈಗ ಆಂಗ್ಲರನ್ನು ಪ್ರತಿಭಟಿಸುತ್ತಿರುವ ತೊಂದರೆಗಳೂ ತಪ್ಪಿಹೋಗುವುವು ಎಂಬುದೇ ಸರ್ ಲುಗಾರ್ಡ್‌ರವರ ಅಭಿಪ್ರಾಯವಾಗಿರುತ್ತದೆ. ಭರತಖಂಡದಲ್ಲಿ ಆಂಗ್ಲ ಪ್ರತಿಭಟನವು ಬ್ರಿಟಿಷ್ ಇಂಡ್ಯಾದಲ್ಲೇ ಹೊರತು ದೇಶೀಯ ಸಂಸ್ಥಾನಗಳಲ್ಲಿಲ್ಲದಿರುವುದನ್ನು ಕಂಡೂ, ದೇಶೀಯ ಸಂಸ್ಥಾನಾಧಿಪತಿಗಳ ಸಾಮ್ರಾಜ್ಯಭಕ್ತಿಯು ಅಚಲಿತವಾಗಿರುವುದೆಂಬುದು ಕಳೆದ ಯುದ್ಧದ ಮಹಾವಿಪತ್ಸಮಯದಲ್ಲಿಯೂ ಅದಕ್ಕೆ ಮುಂಚೆಯೂ ಈಗಣ ಯುವರಾಜಾಗಮನ ಸಮಯದಲ್ಲಿಯೂ ಸುವ್ಯಕ್ತವಾಗಿರುವುದನ್ನು ನೋಡಿಯೂ, ಯಾವೊಬ್ಬ ಆಂಗ್ಲೇಯನ ಮನಸ್ಸಿನಲ್ಲಿಯೂ ದೇಶೀಯಸಂಸ್ಥಾನಾಧಿಪತಿಗಳ ವಿಷಯದಲ್ಲಿ ಮನಸ್ಸು ವಿಕಾಸಕೊಂಡು ಮೇಲೆ ಕಂಡಂಥ ಅಭಿಪ್ರಾಯವನ್ನು ಹೊರಗೆಡಹುವುದು ಸಹಜವೇ ಆಗಿದೆ. ವಿಚಾರಮಾಡಿ ನೋಡಿದರೆ ಭಾರತೀಯರಿಗೆ ಅನ್ಯದೇಶೀಯ ಪ್ರಭುತ್ವವೆಂಬ ಕಾರಣದಿಂದ ಆಂಗ್ಲ ಪ್ರಭುತ್ವವನ್ನು ನೋಡುವಂಥ ದೃಷ್ಟಿಯಿಂದ ಸ್ವದೇಶೀಯ ಪ್ರಭುತ್ವವನ್ನು ನೋಡಲು ಕಾರಣವಿರುವುದಿಲ್ಲ. ಗುಣಾವಗುಣಗಳ ವಿಷಯವು ಬೇರೆ. ಗುಣಗಳೂ ಲೋಪಗಳೂ ಸಹ ಸ್ವದೇಶೀಯಪ್ರಭುತ್ವದಲ್ಲಾದರೂ ಇದ್ದೇ ಇರುವುವು, ಸ್ವರಾಜ್ಯಪ್ರಭುತ್ವದಲ್ಲಾದರೂ ಇರುವುವು, ಪ್ರಜಾಪ್ರಭುತ್ವದಲ್ಲಾದರೂ ಇರುವುವು. ಸರ್ ಲುಗಾರ್ಡ್‌ರವರ ಅಭಿಪ್ರಾಯದಂತೆ ಒಂದುವೇಳೆ ಸಾಮ್ರಾಜ್ಯಪ್ರಭುತ್ವದವರು ನಡೆಯಿಸಿಕೊಡಲು ಮನಸ್ಸುಮಾಡಿದರೆ, ದೇಶೀಯ ಸಂಸ್ಥಾನಾಧಿಪತಿಗಳ ಉತ್ಸಾಹವೂ ರಾಜಭಕ್ತಿಯೂ ಮತ್ತಷ್ಟು ಅಧಿಕವಾಗುವುದಲ್ಲದೆ ಅವರ ಏಕಮತ್ಯವೂ ಅಭಿವೃದ್ಧಿಯಾಗುವುದು. ಕಾರಣಾಂತರಗಳಿಂದ ಪದವೀಭ್ರಷ್ಟರಾಗಿರುವ ಪ್ರಭುವಂಶೀಯರು ಕೂಡ ಪೂರ್ವಾಧಿಕಾರವನ್ನು ಪಡೆದುಕೊಂಡ ಸಂತೋಷದಿಂದ ಸಾಮ್ರಾಜ್ಯದಲ್ಲಿ ದೃಢಭಕ್ತಿಸಂಪನ್ನರಾಗುವರು. ಹೀಗೆ ಆಗುವುದರಿಂದ ದೇಶೀಯ ಸಂಸ್ಥಾನಗಳ ವೈಶಾಲ್ಯವು ಹೆಚ್ಚಿ ಭರತಖಂಡಕ್ಕೆ ಅದೊಂದುತೆರದ ಸ್ವರಾಜ್ಯವೇ ಸಿದ್ಧಿಸಿದಂತಾಗುವುದು ನಿಶ್ಚಯ. ಆದರೆ ಈಗಣ ಅಸಹಾಯ ಸ್ವರಾಜ್ಯವಾದಿಗಳೊಳಗೆ ಆಂಗ್ಲಪ್ರಭುತ್ವದಲ್ಲಿ ಮಾತ್ರವೇ ಜುಗುಪ್ಸೆಯುಳ್ಳವರಾಗಿ ದೇಶೀಯಪ್ರಭುತ್ವಗಳ ವಿಷಯದಲ್ಲಿ ಅಭಿಮಾನವುಳ್ಳ ಮಹನೀಯರು ಎಷ್ಟುಮಂದಿಗಳಿರುವರು? ದೇಶೀಯ ಸಂಸ್ಥಾನಗಳನ್ನು ನಿರಂಕುಶಾಧಿಕಾರ ಜನ್ಮಭೂಮಿಗಳೆಂದು ಜರೆಯುತ್ತ, ಅವುಗಳ ನಿರ್ನಾಮವನ್ನು ಕೂಡ ಕೋರುತ್ತಲಿರುವ ಪುಣ್ಯಾತ್ಮರುಗಳಿಲ್ಲವೆ? ಮ|| ಸೆಟ್ಲೂರ್ ಶ್ರೀನಿವಾಸಯ್ಯಂಗಾರರು ಭರತಖಂಡದ ಚಿತ್ರಪಟದಲ್ಲಿ ಅಲ್ಲಲ್ಲಿಗೆ ಮಚ್ಚೆಗಳಂತೆ ಕಾಣುತ್ತಿರುವ ದೇಶೀಯ ಸಂಸ್ಥಾನಗಳ ಕಲೆಗಳೆಲ್ಲಾ ತೊಲಗಿಹೋದಲ್ಲದೆ ಸುಖವಾಗುವುದಿಲ್ಲವೆಂಬ ಸೂಕ್ತಿಮುಕ್ತಾಫಲಗಳನ್ನು ಸುರಿಸಿಲ್ಲವೆ? ಅಸಹಾಯವಾದಿಗಳಿಗೆ ಒಂದುತೆರದ ಅಧಿಕಾರಿಗಳ ಕೈಯಿಂದ ಮತ್ತೊಂದುತೆರದ ಅಧಿಕಾರಿಗಳ ಕೈಗೆ ರಾಜ್ಯವು ಹೋಗುವುದು ಬೇಕಿಲ್ಲ. ಅವರಿಗೆ ರಷ್ಯಾದ ಬೋಲ್ಷೆವಿಕ್ ಪ್ರಭುತ್ವದಂಥ ನಿಸ್ತಂದ್ರ ನಿರರ್ಗಳ ಸ್ವಚ್ಛಂದ ಪ್ರಭುತ್ವವೇ ಬೇಕಾಗಿರುವುದು. ಅಂತಹದು ಲಭಿಸುವವರೆಗೂ ಪ್ರತ್ಯಕ್ಷದೈವವೇ ಬಂದು ತಾನು ಪ್ರಭುವಾಗಿರುವೆನೆಂದು ಹೇಳಿದರೂ ಇವರುಗಳು ಒಪ್ಪುವಹಾಗಿಲ್ಲ. " ರಾಜಾ ಪ್ರತ್ಯಕ್ಷದೇವತಾ " ಎಂಬ ಶಾಸ್ತ್ರವಚನಕ್ಕೆ ಬದ್ಧವಾಗಿ ನಡೆಯುತ್ತಿದ್ದ ಪ್ರಾಚೀನಸಾತ್ವಿಕ ಭಾರತಭೂಮಿಯೇ ಬೇರೆ. ಈಗಣ ಅಸಹಾಯವಾದಿಗಳು ಕಲ್ಪಿಸಲೆಳಸಿರುವ ಭಾರತಭೂಮಿಯ ಕತೆಯೇ ಬೇರೆ. ಪ್ರಪಂಚದಲ್ಲಿ ಕೃಷ್ಣಪಕ್ಷವೇ ಇಲ್ಲದೆ ಶುಕ್ಲಪಕ್ಷವೇ ಇದ್ದರಾದೀತೆಂದು ಕೋರುವವರು ಕೆಲವರಿದ್ದರೆ, ಶುಕ್ಲಪಕ್ಷದ ಬೆಳ್ದಿಂಗಳನ್ನು ಶಪಿಸುವವರು ಕೂಡ ಇರುವುದಿಲ್ಲವೆ? ಕಡಲೆಲ್ಲಾ ಸಿಹಿನೀರಾದರೆ ಅನುಕೂಲವಾದೀತೆಂದು ಬಯಸುವವರು ಕೆಲವರಿದ್ದರೆ ಪಾರಾವಾರವೆಲ್ಲಾ ಸಾರಾಯಿಯ ಪೀಪಾಯಿಯಾದರೆ ಸುಖವಾದೀತೆಂದು ಹಂಬಲಿಸುವವರೂ ಇರುವುದಿಲ್ಲವೆ? ಆದರೆ ಇಂಥ ಸಕಲರ ಇಷ್ಟವನ್ನೂ ನೆರವೇರಿಸಲಿಕ್ಕೆ ಹಿಡಿದರೆ ಆ ಜಗದೀಶ್ವರನಿಗೂ ಕೂಡ ಹುಚ್ಚುಮುಂಡೆ ಪಟ್ಟವು ತಪ್ಪುವುದಿಲ್ಲ. ಯಾವ ಸೂಚನೆಯು ಯುಕ್ತವೋ ಅದನ್ನು ವಿಮರ್ಶೆಯಿಂದ ನಿರ್ಧರಿಸಿ ದೇಶಶಾಂತಿಗೆ ಹಿತವಾದ ಮಾರ್ಗವನ್ನು ಸಾಮ್ರಾಜ್ಯ ಪ್ರಭುತ್ವದವರು ಕೈಕೊಳ್ಳದೆ ಹೋಗಲಾರರು.

ಮಾಪಿಳ್ಳಾ ಬಂದಿಗಳ ಯಜ್ಞನಿವೇದಿಕೆ.

ವಾಗಿನ್ನಿನಲ್ಲಿ ಕೂಡಿ ಮಾಪಿಳ್ಳಾ ಬಂದಿಗಳನ್ನು ಯಜ್ಞಮಾಡಿದ ಸಂಬಂಧದ ವಿಚಾರಣೆಗಾಗಿ ಏರ್ಪಟ್ಟಿದ್ದ ಸಂಘದವರು ತಮ್ಮ ವರದಿಯನ್ನು ಮುಗಿಸಿದರಂತೆ. ಅದು ಆಗಲೇ ತಂತ್ರೀವಾರ್ತೆಯ ಮೂಲಕ ಸೀಮೆಗೆ ಹೋಗಿ ಅಲ್ಲಿಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅದನ್ನು ಕಂಡು ಭರತಖಂಡ ಸರ್ಕಾರದವರು ಅದರ ಸಾರಾಂಶವನ್ನು ತಾವೂ ಈಗ ಪ್ರಕಟಿಸಿದ್ದಾರೆ. ಮದ್ರಾಸ್ ಪ್ರಭುತ್ವದವರೂ ಈಗ ಪ್ರಕಟಿಸಿದ್ದಾರೆ. ಆದರೆ ಆ ವರದಿ ವಿಷಯವು ಮಾತ್ರ ಇನ್ನೂ ಸರ್ಕಾರದ ಪರ್ಯಾಲೋಚನೆಯಲ್ಲಿದೆಯಂತೆ. ಅದರ ಮುಖ್ಯಾಂಶವೇನೆಂದರೆ—ಗಾಳಿಯು ಒಳಕ್ಕೆ ಬರಲವಕಾಶವಿಲ್ಲದ ಬಂಡಿಯಲ್ಲಿ ಬಂದಿಗಳನ್ನು ತುಂಬಿದುದರಿಂದ ಉಸಿರಾಡದೆ ಅಷ್ಟು ಮಂದಿ ಸತ್ತರು. ಇದುವರೆಗೆ ಇಂಥ ಬಂಡಿಗಳಲ್ಲಿ ೩೨ ಸಲ ೨|| ಸಾವಿರ ಬಂದಿಗಳನ್ನು ತುಂಬಿ ಕಳುಹಿಸಿದ್ದರೂ ಯಾವ ವಿಪತ್ತೂ ಸಂಭವಿಸಿರಲಿಲ್ಲ. ಆದರೆ ಆ ಬಂಡಿಗಳು ಇಂಥವುಗಳೇ ಆದರೂ ಗಾಳಿಯು ಒಳಕ್ಕೆ ನುಗ್ಗಲು ಸ್ವಲ್ಪ ಅವಕಾಶವಿದ್ದಿತು. ಈ ಬಂಡಿಗೆ ಇದ್ದ ಕಬ್ಬಿಣದಜಾಲರಿಯ ಕಿಟಕಿಯ ರಂಧ್ರಗಳು ಬಣ್ಣಬಳಿದಿದ್ದ ಕಾರಣ ಮುಚ್ಚಿಹೋಗಿದ್ದುವು. ಆದರಿಂದ ಒಳಗಿದ್ದ ಜನರಿಗೆ ಬೇಕಾಗಿದ್ದಷ್ಟು ಗಾಳಿಯು ಒಳಕ್ಕೆಬಾರದೆ ಹೋಯಿತು. ಆದುಕಾರಣ ಆ ಬಂಡಿಯು ಕಿಟಕಿಯಿಲ್ಲದ ಬಂಡಿಯಲ್ಲ. ಅದನ್ನು ಉಪಯೋಗಿಸಿದುದು ಆಕ್ಷೇಪಣೀಯವಲ್ಲ. ಆದರಿಂದ ಬಂದಿಗಳಮೇಲೆ ನಿಷ್ಕರುಣೆಯನ್ನು ತೋರಿಸಿದರೆಂದು ಹೇಳಲಾಗುವುದಿಲ್ಲ. ಅಂಥ ಸಮಯದಲ್ಲಿ ಅಂಥ ಬಂಡಿಗಳನ್ನು ಉಪಯೋಗಿಸಿದುದರಲ್ಲಿ ತಪ್ಪೇನೂ ಇಲ್ಲ. ಆದರೆ ನಡೆವಳಿಕೆಯಲ್ಲಿ ಉತ್ತಮವಾದ ಏರ್ಪಾಟನ್ನು ಅನುಸರಿಸಿದ್ದರೆ ಚೆನ್ನಾಗಿದ್ದಿತು. ಕಿಟಕಿಗಳು ಗಾಳಿಬರುವುದಕ್ಕೆ ಸರಿಯಾಗಿವೆಯೋ ಇಲ್ಲವೆ ಎಂಬುದನ್ನು ಮುಂಚೆಯೇ ಪರೀಕ್ಷಿಸಿ ನೋಡಬೇಕಾಗಿತ್ತು. ಈ ವಿಷಾದ ಪರಿಣಾಮಕ್ಕೆ ಮುಖ್ಯವಾದ ಬಾಧ್ಯತೆಯು ರೈಲ್ವೆಕಂಪೆನಿಯ ಮೇಲೂ, ಅವರ ಪ್ರತಿನಿಧಿಯಾಗಿ ಅಲ್ಲಿರುವ ಟ್ರಾಫಿಕ್ ಇನ್ಸ್‌ಪೆಕ್ಟರ ಮೇಲೂ ಇರುವುದು. ಆ ಬಂಡಿಯು ಅಷ್ಟು ಜನರನ್ನು ತುಂಬಿ ಕಳುಹಿಸಲು ತಕ್ಕುದೋ ಅಲ್ಲವೋ ಎಂಬುದನ್ನು ಆತನು ನೋಡದೇಹೋದನು. ಅದುವರೆಗೆ ಉಪಯೋಗಿಸಿದ್ದಂಥ ಬಂಡಿಯನ್ನು ಆ ಸಲವೂ ಉಪಯೋಗಿಸಿದುದರಲ್ಲಿ ಸೈನಿಕೋದ್ಯೋಗಿಗಳು ಪೊಲೀಸ್ ಸಾರ್ಜಂಟು, ಸಬ್‌ಮೇಜಿಸ್ಟ್ರೇಟು ಇವರುಗಳ ತಪ್ಪೇನೂ ಇಲ್ಲ. ಅಷ್ಟು ಮಂದಿಗಳನ್ನು ತುಂಬಲು ತಕ್ಕುದಲ್ಲದ ಬಂಡಿಯಲ್ಲಿ ಸಾಗಿಸಿದುದು ಏನೋ ಅನಿವಾರ್ಯಸಂಬಂಧದಿಂದ ಸಂಭವಿಸಿದುದೇ ಹೊರತು ಅಶ್ರದ್ಧೆ ಉಪೇಕ್ಷೆ ಇವುಗಳಿಂದ ಸಂಭವಿಸಿದುದಲ್ಲ. ಸೈನಿಕಶಾಸನ ವ್ಯವಹರಣೆಯಿರುವುದರಿಂದ ಮುಖ್ಯವಾದ ಬಾಧ್ಯತೆಯು ಹೆಚ್ಚಾಗಿ ಮಿಲಿಟರಿ ಕಮ್ಯಾಂಡರುಗಳ ಮೇಲಿದ್ದಿತೋ ಅಥವಾ ಸ್ಪೆಷಲ್ ಸಿವಿಲ್ ಆಫೀಸರ ಮೇಲಿದ್ದಿತೋ ತಿಳಿಯಲಿಲ್ಲ. ಪದ್ಧತಿಯಾಗಿ ಇಂಥ ಏರ್ಪಾಟುಗಳೆಲ್ಲವೂ ಸಿವಿಲ್ ಉದ್ಯೋಗಿಗಳ ಮೇಲ್ವಿಚಾರಣೆಯಲ್ಲಿದ್ದುವು. ಸ್ಪೆಷಲ್ ಸಿವಿಲ್ ಆಫೀಸರು ಇದನ್ನು ಗಮನಿಸಬೇಕಾಗಿದ್ದಿತು. ಪ್ರಯಾಣಮಾಡುತ್ತಿದ್ದಾಗ ಬಂದಿಗಳು ಯಾವ ಸ್ಥಿತಿಯಲ್ಲಿದ್ದರೋ ಎಂಬುದನ್ನು ನೋಡಿಕೊಳ್ಳದೆ ಹೋದುದು ಪೊಲೀಸ್ ಸಾರ್ಜಂಟಿನ ಅಶ್ರದ್ಧೆಯಾಗಿರುತ್ತದೆ. ಆತನು ಎಚ್ಚರದಿಂದ ನೋಡಿಕೊಂಡಿದ್ದರೆ ಇಂಥ ವಿಷಾದಪರಿಣಾಮಕ್ಕೆ ಅವಕಾಶವೇ ಆಗುತ್ತಿರಲಿಲ್ಲ " ಎಂದು ಸಂಘದವರು ಏಕಗ್ರೀವದಿಂದ ಅಭಿಪ್ರಾಯಪಟ್ಟಿದ್ದಾರಂತೆ.

ವಿಚಾರಕ ಸಂಘದವರ ಈ ವರದಿಯು ಸೀಸದಲ್ಲಿ ಬೆರಲಿಟ್ಟು ಚೀಪಿದಷ್ಟು ಸ್ವಾರಸ್ಯವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಅವರೇನೋ ತೊಪ್ಪೆಸಾರಿಸಿ ಸಿದ್ಧಮಾಡಿದರು. ಇನ್ನು ಭಾರತಪ್ರಭುತ್ವದವರು ಯಾವತೆರದ ರಂಗವಲ್ಲಿಯನ್ನಿಟ್ಟು ಈ ರೂಪಕವನ್ನು ಪರಿಸಮಾಪ್ತಿಗೊಳಿಸುವರೋ ನೋಡಬೇಕು.

ಮ|| ಪಿ. ಜೆ. ಡಿಸೋಜಾಯವರ ವಾಙ್ಮೂಲ.

ಭರತಖಂಡದ ಆರ್ಥಿಕವಿಷಯ ವಿಚಾರಣೆಗಾಗಿ ಪ್ರಭುತ್ವದವರು ಸರ್ ಇಬ್ರಾಹಿಂ ರಹಿಮತುಲ್ಲಾಯವರ ಅಧ್ಯಕ್ಷತೆಯಿಂದ ಏರ್ಪಡಿಸಿರುವ ಸಂಘದವರು ದೇಶದ ಪ್ರಮುಖಪಟ್ಟಣಗಳಲ್ಲಿ ತಜ್ಞಜನರ ವಾಙ್ಮೂಲಗಳನ್ನು ತೆಗೆದುಕೊಂಡು ಕಳೆದ ವಾರ ಮದ್ರಾಸಿಗೆ ಬಂದಿರುವರು. ಅಲ್ಲಿ ನಡೆದ ವಿಚಾರಣೆಯ ಕಾಲದಲ್ಲಿ ನಮ್ಮ ದೇಶದ ವಾಣಿಜ್ಯಪರಿಶ್ರಮಶಾಖೆಯ ಡೈರೆಕ್ಟರವರಾದ ಮಿ|| ಪಿ. ಜೆ. ಡಿಸೋಜಾರವರ ವಾಙ್ಮೂಲವೂ ತೆಗೆದುಕೊಳ್ಳಲ್ಪಟ್ಟಿತು. ಆಗ ಅವರು ಭರತಖಂಡದ ವ್ಯಾಪಾರ ಕೈಗಾರಿಕೆಗಳ ರಕ್ಷಣವಿಷಯವನ್ನು ಕುರಿತು ಕೆಲ ಸಂಗತಿಗಳನ್ನು ಸ್ಪಷ್ಟವಾಗಿ ಹೇಳಿ, ಬಳಿಕ " ಇತರ ದೇಶಗಳು ತಮ್ಮ ವಾಣಿಜ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತ ಬಂದಂತೆಲ್ಲಾ ಇಂಗ್ಲಂಡು ತನ್ನ ವಾಣಿಜ್ಯಪದ್ಧತಿಯನ್ನು ಸ್ವಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಾಗಿ ಬಂದಿತು. ನಿರ್ಬಂಧ ವ್ಯಾಪಾರದಿಂದ ಭರತಖಂಡಕ್ಕೆ ಲಾಭವೇ ಇದ್ದರೂ ಪರಿಶ್ರಮಾಭಿವೃದ್ಧಿಗೆ ಅದರಿಂದ ಲಾಭವಿಲ್ಲ. ಭರತಖಂಡದಲ್ಲಿ ಹತ್ತಿ ಮೊದಲಾದ ಮೂಲವಸ್ತುಗಳನ್ನು ಬಳೆದು ಇತರ ದೇಶಗಳಿಗೆ ಸಾಗಿಸಿದರೆ ಅಲ್ಲಿ ಅವು ಬಟ್ಟೆಗಳಾಗಿ ನೇಯ್ಯಲ್ಪಟ್ಟು ಇಲ್ಲಿಗೆ ಕಳುಹಲ್ಪಡುತ್ತವೆ. ಆದರಿಂದ ಭರತಖಂಡದಲ್ಲಿ ಒಂದು ವಸ್ತುವನ್ನು ನಿರ್ಮಿಸಲಿಕ್ಕೆ ಸಾಧನವಾದ ಮೂಲವಸ್ತುವನ್ನು ಬೆಳೆಯುವುದು ಮಾತ್ರವೇ ಜರುಗುತ್ತಿದೆ. ಪರಿಶ್ರಮಗಳೇನೂ ವೃದ್ಧಿಯಾಗುತ್ತಲಿಲ್ಲ. ಆದುದರಿಂದ ಇಲ್ಲಿ ಬೆಳೆದ ವಸ್ತುಗಳನ್ನು ಇಲ್ಲೇ ಉಪಯೋಗಿಸಿ ಅದರಿಂದ ಬೇಕಾದ ಉಪಯೋಗ್ಯವಸ್ತುಗಳನ್ನು ಇಲ್ಲೇ ನಿರ್ಮಿಸುವಂತಾದರೆ ಪರಿಶ್ರಮಾಭಿವೃದ್ಧಿಯು ಚೆನ್ನಾಗಿ ಆಗುವುದು. ಇಲ್ಲಿ ಪರಿಶ್ರಮಗಳು ಅಭಿವೃದ್ಧಿಗೊಳ್ಳಲಿಕ್ಕೆ ಕೆಲ ಅಭ್ಯಂತರಗಳಿವೆ. ಉತ್ತಮವಾದ ಮೇಲ್ವಿಚಾರಣೆಗೊಳ್ಳತಕ್ಕ ಶಕ್ತರು ಇಲ್ಲ. ಕೆಲಸದ ಮರ್ಮಗಳನ್ನು ತಿಳಿದ ಕೆಲಸಗಾರರೂ ಇಲ್ಲ. ವ್ಯವಸಾಯವೂ ಕೂಡ ಇನ್ನೂ ಅಭಿವೃದ್ಧಿಗೊಳ್ಳಬೇಕಾಗಿದೆ. ಪರಸ್ಪರ ಸಹಾಯಕ ಸಂಘಗಳು ವ್ಯವಸಾಯಗಾರರಿಗೆ ತುಂಬಾ ಸಹಾಯ ಮಾಡುತ್ತಿರುವುವು. ಶಿಕ್ಷಣಾರ್ಥವಾದ ಸುಂಕದ ಜತೆಗೆ ದೇಶದ ವ್ಯವಸಾಯವನ್ನೂ ಅಭಿವೃದ್ಧಿಪಡಿಸಿ ಪರಿಶ್ರಮಗಳು ಅಭಿವೃದ್ಧಿಗೊಳ್ಳುವಂತೆ ಮಾಡಬೇಕು.

ಈ ಸಂಬಂಧದಲ್ಲಿ ವಿಚಾರಕ ಸಂಘದವರು ಮೈಸೂರು ಆರ್ಥಿಕವಿಷಯವನ್ನೂ ಗಮನಿಸಬೇಕು. ಭಾರತಪ್ರಭುತ್ವದವರಾಗಲಿ ಪ್ರಾಂತಿಕ ಪ್ರಭುತ್ವದವರಾಗಲಿ ಯಾವ ರಕ್ಷಣವಿಧಾನವನ್ನವಲಂಬಿಸಿದರೂ ಅದರಲ್ಲಿ ಮೈಸೂರು ಸಂಸ್ಥಾನಕ್ಕೆ ಭಾಗವಿರಬೇಕು. ಸುಂಕದ ವಿಧಾನಗಳಲ್ಲಿ ಮೈಸೂರಿಗೂ ತಕ್ಕಷ್ಟು ಭಾಗವಿರುವಂತೆ ಸೌಕರ್ಯವನ್ನು ಏರ್ಪಡಿಸಬೇಕು. ಪಬ್ಲಿಕ್ ಕೆಲಸಗಳಿಗಾಗಿ ಹೊರಗಣಿಂದ ತರಿಸಿಕೊಳ್ಳತಕ್ಕ ಸಾಮಾನುಗಳ ವಿಷಯದಲ್ಲಿ ಇತರ ಬ್ರಿಟಿಷ್ ಇಂಡ್ಯಾ ಪ್ರಭುತ್ವದವರಿಗೆ ಕೊಡುವಂಥ ಸೌಕರ್ಯಗಳನ್ನು ಮೈಸೂರಿಗೂ ಕೊಡಬೇಕು. ಮೈಸೂರು ಸಂಸ್ಥಾನದಲ್ಲಿ ಬೆಳೆಯುವ ಕೊಬರಿ ಮೊದಲಾದ ವಸ್ತುಗಳ ಮೇಲೆ ಸಾಗಿಸುವ ಸುಂಕವನ್ನು ಹಾಕತಕ್ಕ ಅಧಿಕಾರವನ್ನು ಮೈಸೂರಿಗೆ ಕೊಡಬೇಕು. ಅವಶ್ಯಕವಾದಾಗ ಪರಿಶ್ರಮಗಳ ಅಭಿವೃದ್ಧಿಗೆ ತಕ್ಕಸಹಾಯವನ್ನು ಮಾಡಬೇಕು. ದೇಶದ ಪರಿಶ್ರಮಾಭ್ಯುದಯಕ್ಕೆ ಹಡಗಿನ ಯಾತಾಯಾತ ಸೌಕರ್ಯಗಳು ಮುಂದೆ ಸರಿಯಾಗಬೇಕು. ವಾಣಿಜ್ಯಪರಿಶ್ರಾಮಿಕಗಳನ್ನು ಕುರಿತು ಆಲೋಚಿಸುವ ಆರ್ಥಿಕಸಂಘದಲ್ಲಿ ಮೈಸೂರಿಗೂ ಪ್ರಾತಿನಿಧ್ಯವಿರಬೇಕು " ಎಂಬದಾಗಿ ಹೇಳಿದರು.

ಕಳೆದ ಭಾನುವಾರ ಮದ್ರಾಸು ಆರ್ಮೀನಿಯನ್ ವೀಧಿಯಲ್ಲಿರುವ ಗೋಖಲೆ ಹಾಲಿನಲ್ಲಿ ಮೈಸೂರು ಗಾನವಿಶಾರದ ಬಿ. ಕೃಷ್ಣಪ್ಪನವರ ಸಂಗೀತಕಚೇರಿಯೂ ಮ|| ಚೌಡಯ್ಯನವರ ಪಿಟೀಲ್ ವಾದನವೂ ನಡೆದುವು. ಈದಿನವೂ ನಡೆಯುವುವು.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಫೆಬ್ರವರಿ ತಾ|| ೧೨ ನೆಯ ಭಾನುವಾರ.

ವೈಸ್ರಾಯರವರಿಗೆ ಮ|| ಗಾಂಧಿಯವರ ಅಂತ್ಯಸಂದೇಶ.

ಕಳೆದ ಫೆಬ್ರವರಿ ತಾ|| ೧ ರಲ್ಲಿ ಮ|| ಗಾಂಧಿಯವರು ವೈಸ್ರಾಯರಿಗೆ ಈ ಕೆಳಗೆಕಂಡ ಅಭಿಪ್ರಾಯದ ಒಂದು ಲೇಖನವನ್ನು ಬರೆದಿದ್ದಾರೆ—"ಭಾರತೀಯರು ಪಂಜಾಬು, ಖಿಲಾಫತ್, ಸ್ವರಾಜ್ಯ—ಈ ವಿಷಯಗಳಲ್ಲಿ ಮಾಡಿದ ನಿರ್ಧಾರಗಳನ್ನು ಪ್ರಭುತ್ವದವರು ಯಾವಾಗಲೂ ನಿರಾಕರಿಸಿ ಅಪರಾಧ ಮಾಡಿದುದರಿಂದ ಪ್ರಭುತ್ವದಮೇಲೆ ದೇಶೀಯರಿಗೆ ಉಂಟಾಗಿರುವ ವಿಮುಖತ್ವವನ್ನು ವ್ಯಕ್ತಪಡಿಸಲಿಕ್ಕಾಗಿ ಬರ್ಡೋಲಿಯಲ್ಲಿ ಆಜ್ಞೋಲ್ಲಂಘನವನ್ನು ಆರಂಭಿಸಲು ಮೊದಲು ನಿಶ್ಚಯಿಸಲ್ಪಟ್ಟಿತು. ಆದರೆ ಬೊಂಬಾಯಿ ಗದ್ದಲದಿಂದ ಆ ಪ್ರಯತ್ನವು ನಿಂತುಹೋಯಿತು. ಈ ಮಧ್ಯೆ ಪ್ರಭುತ್ವದವರು ದೇಶದ ಅನೇಕ ಭಾಗಗಳಲ್ಲಿ ನಿರ್ಬಂಧವಿಧಾನಗಳನ್ನು ಆರಂಭಿಸಿದ ಕಾರಣ, ವಾಕ್ಸ್ವಾತಂತ್ರ್ಯ ಸಂಘಸ್ವಾತಂತ್ರ್ಯ ಮುದ್ರಣ ಸ್ವಾತಂತ್ರ್ಯಗಳನ್ನು ಕಾಪಾಡಿಕೊಳ್ಳುವುದು ಪ್ರಜೆಗಳ ಮೊದಲನೆ ಕೃತ್ಯವಾಗಿ ಏರ್ಪಟ್ಟಿದೆ. ಭಾರತಪ್ರಭುತ್ವದವರ ಈಗಣ ಮನಸ್ಥಿತಿಯನ್ನವಲೋಕಿಸಿಯೂ ದೇಶದ ದೌರ್ಜನ್ಯಶಕ್ತಿಗಳನ್ನು ಪೂರ್ಣವಾಗಿ ವಶಪಡಿಸಿಕೊಳ್ಳಲು ದೇಶವು ಸುಸಿದ್ಧವಾಗಿಲ್ಲದೆ ಇರುವುದನ್ನು ಅವಲೋಕಿಸಿಯೂ, ದೇಶೀಯನಾಯಕರ ಸಮಾವೇಶವನ್ನು ಜರುಗಿಸಲಿಕ್ಕಾಗಿ ನಿಮ್ಮನ್ನು ಪ್ರೋತ್ಸಾಹಿಸಲು ಮದನಮೋಹನ ಮಾಳವ್ಯರೇ ಮೊದಲಾದವರು ಕೂಡಿಸಿದ ಸಭೆಯೊಡನೆ ಸಂಬಂಧವನ್ನಿಟ್ಟುಕೊಳ್ಳಲಿಕ್ಕೆ ಅಸಹಾಯವಾದಿಗಳು ಅಂಗೀಕರಿಸಲಿಲ್ಲ. ಆದರೆ ಅನವಶ್ಯಕವಾದ ಪ್ರಜಾಹಿಂಸೆಯನ್ನು ನಿವಾರಿಸಲು ಕುತೂಹಲಬದ್ಧನಾಗಿರುವ ನಾನು ಮಾಲವ್ಯಾಸಭೆಯವರ ಸೂಚನೆಗಳನ್ನು ಅಂಗೀಕರಿಸುವಂತೆ ಕಾಂಗ್ರೆಸ್ ಕಾರ್ಯನಿರ್ವಾಹ ಸಂಘಕ್ಕೆ ಸೂಚಿಸಲು ಹಿಂದೆಗೆಯಲಿಲ್ಲ. ವೈಸ್ರಾಯರಾದ ನೀವು ಕಲಕತ್ತಾದಲ್ಲಿ ಮಾಡಿದ ಉಪನ್ಯಾಸದಲ್ಲಿ ಸೂಚಿಸಿದ ರೀತಿಯಂತೆಯೇ ಇರುವುದೆಂದು ಭಾವಿಸಿ ಮಾಳವ್ಯಾಸಭೆಯವರು ತೀರ್ಮಾನಗಳನ್ನು ಮಾಡಿದರೂ ನೀವು ಅದನ್ನು ನಿರ್ಲಕ್ಷ್ಯತನದಿಂದ ನಿರಾಕರಿಸಿದಿರಿ. ಅದುದರಿಂದ ದೇಶೀಯರು ತಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳಲಿಕ್ಕಾಗಿ ದೌರ್ಜನ್ಯರಹಿತವಾದ ಯಾವುದೋ ಒಂದು ವಿಧಾನವನ್ನು ಅವಲಂಬಿಸಿಯೇ ತೀರಬೇಕಾಗಿದೆ. ಅಲಿಸಹೋದರರು ಯಾವ ನಿಬಂಧನೆಯೂ ಇಲ್ಲದೆ ಕ್ಷಮಾಪಣೆಯನ್ನು ಕೇಳಿಕೊಂಡಾಗ ವೈಸ್ರಾಯರು ಏರ್ಪಡಿಸಿದ ನಾಗರಿಕ ಪದ್ಧತಿಯು ಈಗ ಸಂಪೂರ್ಣವಾಗಿ ಅತಿಕ್ರಮಿಸಲ್ಪಟ್ಟಿದೆಯೆಂಬುದು ಸದ್ಯಃ ನಡೆಯುತ್ತಿರುವ ಕಾರ್ಯಗಳಿಂದ ಸ್ಪಷ್ಟವಾಗುತ್ತದೆ. ಅಸಹಾಯವಾದಿಗಳು ಕೆಲಸದಲ್ಲೂ ಮಾತಿನಲ್ಲೂ ದೌರ್ಜನ್ಯವನ್ನು ತೋರಿಸದೆ ಇರುವವರೆಗೂ ಭಾರತಪ್ರಭುತ್ವದವರು ಅದರಲ್ಲಿ ಪ್ರವೇಶಿಸುವುದಿಲ್ಲವೆಂದು ಆಗ ವೈಸ್ರಾಯರು ನುಡಿದಿದ್ದರು. ಅದೇಪ್ರಕಾರ ಪ್ರಭುತ್ವದವರು ತಟಸ್ಥರಾಗಿದ್ದರೆ ಪ್ರಜಾಭಿಪ್ರಾಯವು ವಿಕಾಸಗೊಳ್ಳುತ್ತಿದ್ದಿತು. ದೇಶದಲ್ಲಿರುವ ದೌರ್ಜನ್ಯಶಕ್ತಿಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುವವರೆಗೂ, ಕೋಟ್ಯಂತರ ಸಂಖ್ಯಾಕರಾದ ಅಸಹಾಯವಾದಿಗಳಲ್ಲಿ ಅತಿಶಯವಾದ ಕ್ರಮಶಿಕ್ಷೆಯನ್ನು ನೆಲೆಗೊಳಿಸುವವರೆಗೂ ಕಾಂಗ್ರೆಸ್ಸಿನವರು ಆಜ್ಞೋಲ್ಲಂಘನೆಗೆ ಪ್ರವರ್ತಿಸಲು ಅನುಮತಿಕೊಡುತ್ತಿರಲಿಲ್ಲ. ಹಾಗಿಲ್ಲದೆ ನ್ಯಾಯರಹಿತವಾದ ನಿರ್ಬಂಧವಿಧಾನಗಳನ್ನು ಪ್ರಭುತ್ವದವರು ಪ್ರಾರಂಭಿಸಿದುದರಿಂದ ಸಮಷ್ಟಿ ಆಜ್ಞೋಲ್ಲಂಘನೆಯನ್ನು ಅವಲಂಬಿಸುವುದು ಅವಶ್ಯಕವಾಯಿತು. ಸದ್ಯಃ ಅದು ಬಾರ್ಡೋಲಿ ತಾಲ್ಲೂಕಿನಲ್ಲಿ ಮಾತ್ರ ಜರುಗುವುದು. ಆದರೆ ಆಂಧ್ರರಾಷ್ಟ್ರದಲ್ಲಿರುವ ಗುಂಟೂರು ಜಿಲ್ಲೆಯವರು ಕಾಂಗ್ರೆಸ್ ನಿಯಮಗಳೆಲ್ಲವನ್ನೂ ಪೂರ್ಣವಾಗಿ ನೆರವೇರಿಸಿದರೆ ಆ ಜಿಲ್ಲೆಯಲ್ಲಿ ನೂರು ಗ್ರಾಮಗಳಲ್ಲಿಯೂ ಸಮಷ್ಟಿ ಆಜ್ಞೋಲ್ಲಂಘನೆಯನ್ನವಲಂಬಿಸಲಿಕ್ಕೆ ನನಗಿರುವ ಅಧಿಕಾರವನ್ನನುಸರಿಸಿ ಕೂಡಲೇ ನಾನು ಅನುಮತಿಯನ್ನು ಕೊಡಬೇಕಾಗಿ ಬರಬಹುದು. ಆದರೆ ಬಾರ್ಡೋಲಿ ಪ್ರಜೆಗಳು ಆಜ್ಞೋಲ್ಲಂಘನವನ್ನು ಪ್ರಾರಂಭಿಸುವುದಕ್ಕೆ ಮೊದಲು ಪ್ರಭುತ್ವಕ್ಕೆ ಮುಖ್ಯಪುರುಷರಾದ ನೀವು ಈಗಣ ವಿಧಾನವನ್ನು ಮಾರ್ಪಡಿಸಿಕೊಳ್ಳಬೇಕೆಂದು ವಿನಯವಾಗಿ ಬೇಡುತ್ತೇನೆ. ದೌರ್ಜನ್ಯರಹಿತವಾದ ಕೆಲಸಗಳನ್ನು ಮಾಡಿದುದಕ್ಕಾಗಿ ಶಿಕ್ಷಿತರಾಗಿರುವವರನ್ನೂ ಮತ್ತೆ ವಿಚಾರಣೆಗೆ ಗುರಿಯಾಗಿರುವವರನ್ನೆಲ್ಲರನ್ನೂ ಸಹ ಬಿಡಿಸಿಬಿಡಬೇಕೆಂದು ಕೋರುತ್ತೇನೆ. ಪಂಜಾಬು ಖಿಲಾಫತ್ ಅಕ್ರಮಗಳನ್ನು ತೊಲಗಿಸುವುದಕ್ಕಾಗಲೀ ಸ್ವರಾಜ್ಯಸಿದ್ಧಿಗಾಗಲೀ ಮತ್ತಾವುದಕ್ಕೇ ಆಗಲೀ ದೇಶದಲ್ಲಿ ಜರಗುವ ಕೆಲಸಗಳು ದೌರ್ಜನ್ಯಶೂನ್ಯವಾಗಿರುವಷ್ಟು ಕಾಲವೂ, ಅವು ಕಠಿನಶಾಸನಗಳಿಗೆ ಅಥವಾ ಪೆನಲ್ ಕೋಡುಗಳಿಗೆ ಒಳಪಡುವವುಗಳಾಗಿದ್ದರೂ ಅವುಗಳೊಡನೆ ಪ್ರಭುತ್ವೋದ್ಯೋಗಿಗಳು ಪ್ರವೃತ್ತಿಸಕೂಡದೆಂದು ತಾವು ನಿರ್ಧರವಾಗಿ ಸ್ಪಷ್ಟಪ್ರಕಟನೆಯನ್ನು ಮಾಡಬೇಕೆಂದು ಕೋರುತ್ತೇನೆ. ಮುದ್ರಾಲಯಗಳಮೇಲೂ ಪತ್ರಿಕೆಗಳಮೇಲೂ ಸರ್ಕಾರಿ ಉದ್ಯೋಗಿಗಳು ಪರಿಶೀಲನೆಮಾಡುತ್ತಿರುವುದನ್ನು ಪೂರ್ಣವಾಗಿ ತಪ್ಪಿಸಿ, ಇದುವರೆಗೆ ತೆಗೆದುಕೊಂಡಿರುವ ದಂಡದ್ರವ್ಯವನ್ನೂ ಸೊತ್ತುಗಳನ್ನೂ ಮರಳಿ ಅವರವರಿಗೆ ಕೊಡಿಸಿಕೊಡಬೇಕೆಂದು ಕೋರುತ್ತೇನೆ. ಈಗ ನಾಗರಕತೆಯುಳ್ಳ ಪ್ರಭುತ್ವಗಳಿಗೆ ಒಳಪಟ್ಟಿರುವ ದೇಶಗಳೆಂದು ಭಾವಿಸಲ್ಪಡುತ್ತಿರುವ ದೇಶಗಳಲ್ಲಿ ಬಳಕೆಯಲ್ಲಿರುವ ವಿಧಾನಗಳಿಗೆ ಭಿನ್ನವಾಗಿ ನಿಮ್ಮನ್ನೇನೂ ಕೋರುವುದಿಲ್ಲ. ಈ ಲೇಖನವು ಪ್ರಕಟಿತವಾದ ದಿನ ಮೊದಲುಗೊಂಡು (೬ನೆ ತಾರೀಖಿನಾರಭ್ಯ) ೭ ದಿನಗಳೊಳಗೆ ನೀವು ಮೇಲೆ ಕಂಡಂತೆ ಆಚರಿಸಿ ಪ್ರಕಟಿಸುವುದು ಸಾಧ್ಯವಾದರೆ, ಕಾರಾಗೃಹಗಳಿಂದ ಬಿಡಲ್ಪಟ್ಟ ದೇಶೀಯ ನಾಯಕರು ದೇಶದ ಪರಿಸ್ಥಿತಿಯನ್ನು ಮತ್ತೆ ಆಲೋಚಿಸಿ ಹೊಸದಾಗಿ ನಿರ್ಧಾರಮಾಡುವವರೆಗೂ ಆಜ್ಞೋಲ್ಲಂಘನವನ್ನು ಪ್ರಾರಂಭಿಸದೆ ಇರುವಂತೆ ಮಾಡಲಿಕ್ಕೆ ನಾನು ಬದ್ಧನಾಗುತ್ತೇನೆ. ಪ್ರಭುತ್ವದವರು ಅಂಥ ಪ್ರಕಟನವನ್ನು ಮಾಡದೆಹೋದರೆ ಮಾತ್ರವೇ ಆಜ್ಞೋಲ್ಲಂಘನೆಯು ಪ್ರಾರಂಭಿಸಲ್ಪಡುವುದು"

ಈ ಮೇಲೆ ಕಂಡ ಲೇಖನವು ರೀಡಿಂಗ್ ಪ್ರಭುಗಳಿಗೆ ಹಿತಸೂಚನೆಯಾಗಿ ಸೌಮನಸ್ಯದಿಂದ ಬರೆಯಲ್ಪಟ್ಟಿರುವುದೆಂದು ಮ|| ಗಾಂಧಿಯವರೂ ಅವರ ಅನುಚರರೂ ಹೇಳುತ್ತಿದ್ದಾರೆ. ರಣಾಗ್ರಕ್ಕೆ ಸಿದ್ಧರಾಗಿ ನಿಂತಿರುವ ಕ್ಷತ್ರಿಯರು ಇದಿರು ಪಕ್ಷದವರಿಗೆ ತಿಳಿಯಿಸುವ ಅಂತ್ಯಸಂದೇಶಕ್ಕೂ ಇದಕ್ಕೂ ಯಾವ ಭೇದವೂ ತೋರುವುದಿಲ್ಲ. ಪ್ರಭುತ್ವವನ್ನು ಹಿಂಗಟ್ಟು ಮುರಿಕಟ್ಟಿ "ಗಡೀಪಾರು" ಮಾಡಿಸಬೇಕೆಂಬುದು ಅಸಹಾಯವಾದಿಗಳ ತತ್ತ್ವವಾಗಿರುವಾಗ ಅದಕ್ಕನುಸಾರವಾದ ಕ್ರಿಯೆಯೇ ಇದಾಗಿರುತ್ತದೆಂದು ಹೇಳುವಲ್ಲಿ ಅಭ್ಯಂತರವಿಲ್ಲ. ಆದರೆ ದೌರ್ಜನ್ಯದೂರವಾದ ಸಾತ್ವಿಕಪ್ರಯತ್ನಗಳನ್ನು ಅವಲಂಬಿಸಿರುವೆವೆಂದು ಹೇಳಿಕೊಳ್ಳುವ ಪಕ್ಷದ ನಾಯಕರು, ರಾಜಸತ್ವವೇ ಮೂರ್ತೀಭವಿಸಿರುವ ಪ್ರಭುತ್ವದವರೊಡನೆ ನಡೆಯಿಸುವ ಸಂಧಾನಗಳೂ ಮಾತುಕತೆಗಳೂ ಸಾತ್ವಿಕಮಯವಾಗಿಲ್ಲದೆ ತಾಮಸಾತ್ಮಕ ಪದ್ಧತಿಗನುಸಾರವಾದರೆ ಅದರ ಫಲಗಳು ಸಾತ್ವಿಕವಾಗಿ ಎಂದೂ ಇರಲಾರವು. ಪ್ರಭುತ್ವದವರು ಅಪರಾಧ ಮಾಡಿರುವರೆಂದೂ, ಸಹಾಯನಿರಾಕರಣವನ್ನವಲಂಬಿಸಿದ ನಿರ್ಬಂಧಿತರೆಲ್ಲರನ್ನೂ ಅವರು ಬಿಟ್ಟು, ನಿರ್ಬಂಧಶಾಸನಗಳನ್ನು ವಿರಮಿಸಿ, ಮುದ್ರಣಸ್ವಾತಂತ್ರ್ಯ ಮೊದಲಾದುವುಗಳಿಗೆಲ್ಲಾ ಸ್ವೇಚ್ಛೆಯನ್ನು ೭ ದಿನಗಳಲ್ಲಿ ಕೊಡದಿದ್ದರೆ ನಾವು ಕಂದಾಯ ಕೊಡುವುದನ್ನು ನಿಲ್ಲಿಸಿಬಿಡುತ್ತೇವೆಂದೂ ಗಾಂಧಿಯವರು ಬೆದರಿಕೆಯನ್ನು ಹೇಳಿರುತ್ತಾರೆ. ಒಂದುವೇಳೆ ಅಷ್ಟನ್ನು ಸರ್ಕಾರದವರು ಮಾಡಿಕೊಟ್ಟರೂ ಇವರು ಮಾಡುವ ಪ್ರತಿಫಲವು ಎಷ್ಟು ಮಹತ್ತರವಾದುದು? ನೋಡಿರಿ-ಕಾರಾಗೃಹದಿಂದ ಹೊರಬಿದ್ದು ಬರುವ ನಾಯಕರು ಮತ್ತೆ ಯೋಚನೆಮಾಡಿ ಯಾವ ಮಾರ್ಗವನ್ನು ನಿರ್ಣಯಿಸುವರೋ ಅಲ್ಲಿಯವರೆಗೆ ಮಾತ್ರ ತಾವು ಶಾಸನೋಲ್ಲಂಘನವನ್ನು ನಿಲ್ಲಿಸಿಬಿಡುವರಂತೆ! ಮತ್ತೆ ಹಾಗೆ ನಿಲ್ಲಿಸುವುದು ಕೂಡ ಎಂದೆಂದಿಗೂ ಅಲ್ಲ, ಒಂದುವೇಳೆ ಆ ಮುಖಂಡರು ಶಾಸನೋಲ್ಲಂಘನವನ್ನು ಮಾಡಿಯೇ ತೀರಬೇಕೆಂದು ಆಗಲೂ ನಿರ್ಧರಿಸುವುದಾದರೆ ಅದಕ್ಕೆ ಗಾಂಧಿಯವರು ಉತ್ತರವಾದಿಗಳಲ್ಲ. ಇಷ್ಟುಮಾತ್ರದ ವರವನ್ನು ಪಡೆದುಕೊಳ್ಳಲಿಕ್ಕಾಗಿ ಪ್ರಭುತ್ವದವರು ತಾವು ಇದುವರೆಗೆ ನಡೆಯಿಸಿದ ಚರ್ಯೆಗಳನ್ನೆಲ್ಲಾ ಅನ್ಯಾಯವೆಂದೂ ಅಧರ್ಮವೆಂದೂ ಒಪ್ಪಿ, ಅದರ ಪ್ರಾಯಶ್ಚಿತ್ತಕ್ಕಾಗಿ ಗಾಂಧಿಯವರ ಸೂಚನೆಯಂತೆ ಪ್ರಕಟನಮಾಡಿ, ಕಾರಾಗೃಹ ಬಂಧಿತರನ್ನು ಬಿಡುಗಡೆಮಾಡುವುದೇ ಮೊದಲಾದ ಕೆಲಸಗಳನ್ನು ನಡೆಯಿಸಬೇಕಂತೆ! ವೈರಾಗ್ಯಮೂರ್ತಿಗಳೂ ನಿಸ್ಪೃಹರೂ ಶಾಂತಮಯರೂ ಪರಮಸಾತ್ವಿಕರೂ ಎನಿಸಿಕೊಂಡಿರುವ ಗಾಂಧಿಯವರೇ ಹೀಗೆ ವೀರರಸವನ್ನು ಚೆಲ್ಲುತ್ತಿರುವಾಗ, ಸಮಗ್ರರಾಜಸ ಬಲವುಳ್ಳ ಪ್ರಭುತ್ವದವರು ಅಂಜಿ ಕ್ಷಮಾಪಣೆ ಬೇಡಿಕೊಂಡು ಬಾಳಬಹುದೆ? ಮಾಳವ್ಯಸಭೆಯಲ್ಲೂ ಗಾಂಧಿಯವರು ಇದೇ ತೆರದ ಮಾತುಗಳನ್ನಾಡಿ, ರೀಡಿಂಗ್ ಪ್ರಭುಗಳು ಕ್ಷಮಾಪಣೆ ಬೇಡಿಕೊಳ್ಳುವಂತೆ ಮಾಡಬೇಕೆಂಬ ಅಭಿಪ್ರಾಯವನ್ನು ಸೂಚಿಸಿದುದರಿಂದಲೇ ಸರ್ ಶಂಕರನ್ ನಾಯರ್‌ರವರು ಜಿಗುಪ್ಸೆಪಟ್ಟು ಎದ್ದುಹೋದರು. ಅದರ ಪುನರಾವೃತ್ತಿಯನ್ನು ಗಾಂಧಿಯವರು ಈ ಲೇಖನದಲ್ಲಿ ಮಾಡಿದಂತಾಯಿತೇ ಹೊರತು ಇದರಲ್ಲಿ ಹೊಸದೇನೂ ಇಲ್ಲವೆಂದು ನಮಗೆ ತೋರುವುದು. ಆಗ ಸರ್ ನಾಯರ್‌ರವರೊಬ್ಬರು ಜಿಗುಪ್ಸೆ ತೋರಿಸಿದ್ದರು; ಇತರರು ತಮ್ಮ ಮನೋಭಾವವನ್ನು ಹೊರಪಡಿಸದೆ ನುಂಗಿಕೊಂಡಿದ್ದರು. ಈಗ ಈ ಲೇಖನವನ್ನು ನೋಡಿ ಮಾಳವ್ಯಸಭೆಯ ಉಪಸಂಘದವರೆಲ್ಲಾ ಹೇಸಿಕೊಂಡು "ಇಂಥ ಲೇಖನವನ್ನು ನೀವು ಬರೆದುದರಿಂದ ಕೆಲಸವೆಲ್ಲಾ ಹದಗೆಟ್ಟಿತು, ನಮ್ಮ ಆಸೆಯೆಲ್ಲಾ ಭಂಗವಾಯಿತು, ನಿಮ್ಮ ಲೇಖನದ ಅಭಿಪ್ರಾಯಗಳನ್ನು ನಾವೆಂದಿಗೂ ಒಪ್ಪಲಾರೆವು" ಎಂದು ಸ್ಪಷ್ಟವಾಗಿ ಲೋಕವೆಲ್ಲಾ ಕಾಣುವಂತೆ ಗಾಂಧಿಯವರಿಗೆ ಬರೆದು ತಿಳಿಯಿಸಿರುವರು.

ಕಾಂಗ್ರೆಸ್ಸಿನ ಪಕ್ಷದ ಅಟರ್ನಿ ಜನರಲ್ಲರಾಗಿರುವ ಗಾಂಧಿಯವರು ಈತೆರದ ಮುಷ್ಕರವನ್ನೇ ಹಿಡಿದು ಪ್ರವರ್ತಿಸುವವರೆಗೂ ಪ್ರಭುತ್ವದವರು ಎಂದಿಗೂ ಶಾಂತಿಯನ್ನು ವಹಿಸಲಾರರು. ಈತೆರದ ಸಂಧಾನಗಳೂ ಮಾತು ಕತೆಗಳೂ ಅವರನ್ನು ಮತ್ತಷ್ಟು ರೇಗಿಸದೆ ಬಿಡವು. ರೌಂಡ್‌ಟೇಬಲ್ ಸಮಾವೇಶಕ್ಕೆ ಅವಕಾಶವಾಗದಿರುವುದಕ್ಕೂ ಇಂಥ ಪ್ರವರ್ತನವೇ ಕಾರಣವು.

ಮ|| ಗಾಂಧಿಯವರ ಈ ನೋಟೀಸಿಗೆ ಪ್ರಭುತ್ವದವರು ಉತ್ತರವನ್ನು ಕೊಡದೆಹೋದರೆ ಇವರ ಪ್ರವರ್ತನವೇ ಮತ್ತು ಹೇಳಿಕೆಯೇ ಸಹಜವಾದುದೆಂದು ದೇಶೀಯರಿಂದ ಭಾವಿಸಲ್ಪಡಬಹುದಾದೀತೆಂದು ಭಾವಿಸಿ ಸರ್ಕಾರದವರು ಕಳೆದ ತಾ|| ೬ ರಲ್ಲೇ ಉತ್ತರವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಗಾಂಧಿಯವರ ಪ್ರತಿಯೊಂದು ಆಕ್ಷೇಪವನ್ನೂ ಸಹೇತುಕವಾಗಿ ಖಂಡಿಸಿ, ಅದು ಯಥಾರ್ಥವಾದುದಲ್ಲವೆಂಬುದನ್ನು ತೋರಿಸಿರುವುದಲ್ಲದೆ ತಾವು ನಿರ್ಬಂಧವಿಧಾನಗಳನ್ನವಲಂಬಿಸದಿದ್ದರೆ ದೇಶಶಾಂತಿರಕ್ಷಣೆಗೇ ಲೋಪಬರುತ್ತಿದ್ದುದರಿಂದ ನಿರ್ವಾಹವಿಲ್ಲದೆ ಮನಸ್ಸಿಲ್ಲದೆ ಅಂಥ ಚರ್ಯೆಗಳನ್ನು ಕೈಕೊಳ್ಳಬೇಕಾದ ಸಂದರ್ಭಗಳನ್ನು ಉದಾಹರಣಪೂರ್ವಕವಾಗಿ ವ್ಯಕ್ತಪಡಿಸಿರುತ್ತಾರೆ. ಮತ್ತು ಕಟ್ಟಕಡೆಯಲ್ಲಿ—ಗಾಂಧಿಯವರು ಮಾಡಿರುವ ಸೂಚನೆಗಳನ್ನು ಪ್ರಭುತ್ವದವರು ಅಂಗೀಕರಿಸುವುದು ಹಾಗಿರಲಿ, ಚರ್ಚಿಸಲಿಕ್ಕೂ ಕೂಡ ಅರ್ಹವಾದುವುಗಳಲ್ಲವೆಂಬುದನ್ನು ಯುಕ್ತಾಯುಕ್ತವಿಚಾರಪರರಾದವರೆಲ್ಲರೂ ಗ್ರಹಿಸಬಲ್ಲರೆಂದೂ, ಸಮಷ್ಟಿ ಆಜ್ಞೋಲ್ಲಂಘನವು ದೇಶಕ್ಕೆ ತುಂಬಾ ಉಪದ್ರವವನ್ನುಂಟುಮಾಡುವುದಾದ ಕಾರಣ ಅದನ್ನು ಕಠಿನವಾಗಿ ಪ್ರತಿಭಟಿಸದಲ್ಲದೆ ತೀರದೆಂದೂ, ಅದನ್ನು ಹತಗೊಳಿಸುವುದಕ್ಕಾಗಿ ಪ್ರಭುತ್ವದವರು ತಕ್ಕ ಚರ್ಯೆಯನ್ನು ಅವಲಂಬಿಸಿಯೇ ತೀರುವರೆಂದೂ, ನ್ಯಾಯಪ್ರವರ್ತಕರೂ ರಾಜಭಕ್ತರೂ ಆದ ಪ್ರಜೆಗಳೆಲ್ಲರೂ ಆ ವಿಷಯದಲ್ಲಿ ಪ್ರಭುತ್ವಕ್ಕೆ ಸಹಾಯೀಕರಿಸಬೇಕೆಂದೂ ಪ್ರಭುತ್ವದವರು ತಿಳಿಯಪಡಿಸಿದ್ದಾರೆ.

ಇನ್ನು ಗಾಂಧಿಯವರು ತಮ್ಮ ಅನುಚರರಿಗೆ ಸಮಷ್ಟಿ ಶಾಸನೋಲ್ಲಂಘನೆಗೆ ಆಜ್ಞೆ ಕೊಡುವರೆಂಬುದಕ್ಕೆ ಸಂಶಯವಿಲ್ಲ. ಕಂದಾಯ ಕೊಡುವುದನ್ನು ಅಲ್ಲಲ್ಲಿ ಪ್ರಜೆಗಳು ನಿಲ್ಲಿಸಿಬಿಡುತ್ತಾರೆ. ಅದನ್ನು ಸರ್ಕಾರದವರು ಎಂದಿಗೂ ಸಹಿಸುವುದಿಲ್ಲ. ಕಂದಾಯ ಕೊಡದಂತೆ ಬೋಧಿಸುವುದು ರಾಜದ್ರೋಹವೆಂದು ಈಗಾಗಲೇ ಅವರು ಮದ್ರಾಸಿನಲ್ಲಿ ಸೂಚನೆ ಕೊಟ್ಟಿದ್ದಾರೆ. ಅದಕ್ಕೆ ಬೇರೆ ದಂಡನೆಗಳು ಸಿದ್ಧವಾಗುವುವು. ಅದೊಂದು ತೆರದಿಂದ ಗದ್ದಲವು ಹೆಚ್ಚುವುದು. ಮದ್ದು ತುಪಾಕಿಗಳ ಅವಾಂತರವು ಹೆಚ್ಚುವುದು. ಭರತಖಂಡವು ಕುರುಕ್ಷೇತ್ರವಾಗುವುದು. ಇದರಿಂದ ಮ|| ಗಾಂಧಿಯವರ ಪ್ರಯತ್ನಗಳು ಪ್ರಭುತ್ವದವರನ್ನು ಸಾಮರಸ್ಯದಿಂದ ಶಾಂತಿಯಕಡೆಗೆ ತಿರುಗಿಸಲಿಕ್ಕೆ ಸಹಾಯಪಡಿಸುತ್ತಿವೆಯೋ ಅಥವಾ ದೇಶವನ್ನು ರಣರಂಗವನ್ನಾಗಿ ಮಾಡಿಸಲಿಕ್ಕಾಗಿ ಸಹಾಯಪಡಿಸುತ್ತಿವೆಯೋ ಎಂಬುದನ್ನು ವಾಚಕರೇ ಪರ್ಯಾಲೋಚಿಸಬೇಕು.

RABIDITY.

This kind of madness has its peculiarities. It is one which develops rapidly and with an intensity which does excessive harm. From individuals it spreads to groups and classes. It is not confined to animals amongst which it is free from mental bias. When it spreads to human kind, its specialities make appearance. It is here that hatred and intelligence conspire with rabidity of mind. We were shocked to read things of the kind which appeared as communicated in the Wealth of Mysore of the 6th instant. It is again Mr. C. R. Reddy with whom this contemporary of ours wars. It takes exceptions to his statements as a member of the Malavya Conference. We have carefully read all that has been written on this subject from different points of view of the two extremes and the centre view. He is in neither flank. He stands in the middle and collects the best and the just matters from the right and from the left. It may be just a few days ago that he entered the political arena. The sun shines forth very soon. The clouds disappear before his rays. His services are sought and within a few days of his release from the prisons of officialdom, he is there in his right place. Even the remarkable woman admits it. But not the Wealth of Mysore in her communications. What poor Wealth is in her name. There is neither complex nor compound ignorance in the lucid statements of Mr. C. R. Reddy. Ev there appears to be some rabidity in reading those fine and logical thoughts. Who is more competent to advise the Andhras than Mr. C. R. Reddy who is one of their flesh and blood? Not those of the brains of the Wealth of Mysore. Is that brave man who calls the man of stubburnness "Mad" and the repressive measures "Madness," a man of the "Lick-spittle" spirit? Certainly not. He speaks from conviction and in whatever such man says there can never be a ring of lick-spittle-ism. Why call all Governments "Down-right sinners." Is it that it speaks the spirit of the Wealth of Mysore? No Government, no law and no order. Civilisation and enlightenment are according to her, the componant parts of "Humbug." What? Barbarism and ignorance are then the creeds of this Nationalism! Astounding!

The long story of "Dharma" is all a nonsense fit for the age when the Indian was made the slave of the Exclusive Righteousness which belonged to the gods on earth and to no "Serf" the Indian Sastras and Thantras. The universal "maitri" which is taught in this episode is not practised by the Trustees of these Sastras. Ye

there are people who think that there is one law for the rich and powerful and that it is the same law for the poor and destitute. We find it in the Governments of men who are righteous and impartial. What about that law which "Manu" is said to have laid down? Does it prescribe one law and one punishment alike to a Brahman culprit and a Sudra culprit? The less we speak of this kind of sophistry the better for the solution of the modern problems of equal treatment, equal justice, freedom of speech and freedom of action. No one disputed the Government of God but those who created the Holeyars and Madigars. To govern men we want Governments of men. They err and it is the duty of every non-rabid man and non-rabid class to correct them. Wisdom lies in correcting and not in destroying. Rabidity overpowers every sane endeavour. It is natural to co-operate and to persist in pointing out the errors. Any other course smacks of rabidity.

If the man who is made up of the parts of Pitt, of Parnell, of Devalera, of Mazzini and of Garibaldi is going to save trouble for India, he is really one man who cannot in 24 hours give birth to 1,700,000 of his kind. Natural science will tell that such luxuriant growth and development is amongst the low. We do not take the same view of the great man as the author of this article. But we like to point out the error of logic. We are glad to note that Mr. C. R. Reddy is doing his best service to his fellow-beings. He is the people's man and to them are his services. He belongs to a class which the great Sastras and Thantras had neglected to spiritualise. They and their yokes had been left severely alone to toil and toil. It is the modern enlightenment which has thrown the gates of knowledge to them and Mr. C. R. Reddy is the product of that liberalism and we wish him success in his endeavour to attain peace and freedom to the great masses by standing for Law and Order. Rabidity does no good to the people. Good comes from good Government and that, thank God, we have here.

ವಿಚಿತ್ರಾಭಿಪ್ರಾಯಗಳು.

ಭರತಖಂಡದ ಈಗಣ ರಾಜಕೀಯ ವೈಷಮ್ಯವನ್ನು ಕುರಿತು ಅದರ ಶಾಂತಿಗಾಗಿ ದೇಶೀಯ ವಿದೇಶೀಯರಲ್ಲಿ ಹಲವರು ಹಲವುತೆರದ ಅಭಿಪ್ರಾಯಗಳನ್ನು ಪ್ರಭುತ್ವದವರಿಗೆ ಕೊಡುತ್ತಿದ್ದಾರೆ. ಲಾರ್ಡ್ ನಾರ್ತ್‌ಕ್ಲಿಫ್‌ರವರು ತುರ್ಕಿಸಮಸ್ಯೆಯನ್ನು ಮೊದಲು ಸರಿಪಡಿಸಬೇಕೆಂದರು. ಸಿ. ವಿಜಯರಾಘವಾಚಾರ್ಯರು ರಾಯಲ್ ಕಮಿಷನನ್ನು ನಿಯಮಿಸಬೇಕೆಂದರು. ಇನ್ನು ಕೆಲರು ರೌಂಡ್‌ಟೇಬಲನ್ನು ಕೂಡಿಸಬೇಕೆಂದರು. ಕೆಲರು ಗಾಂಧಿಯವರನ್ನು ಗಡೀಪಾರು ಮಾಡಬೇಕೆಂದರು. ಆದರೆ ಅವರಲ್ಲಿ ಸರ್ ಫ್ರೆಡರಿಕ್ ಲುಗಾರ್ಡ್ ಎಂಬವರು ಲಂಡನ್ ಟೈಮ್ಸ್ ಪತ್ರಿಕೆಗೆ ಬರೆದು ತಿಳಿಸಿರುವ ಸೂಚನೆಯು ಒಂದು ವಿಚಿತ್ರವಾಗಿದೆ. ಏನೆಂದರೆ—ಆಂಗ್ಲಪ್ರಭುತ್ವದವರು ಭರತಖಂಡದ ಸ್ವದೇಶೀಯ ಸಂಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಮತ್ತು ಈಗ ರಾಜಭಕ್ತಿಯಿಂದಿರುವ ದೇಶೀಯ ಸಂಸ್ಥಾನಗಳ ವೈಶಾಲ್ಯವನ್ನು ಹೆಚ್ಚಿಸಬೇಕು. ಮತ್ತು ರಾಜ್ಯಪರಿಪಾಲಕರಾಗಿದ್ದು ಯಾವ ಕಾರಣದಿಂದಲೋ ಅದನ್ನು ಕಳೆದುಕೊಂಡು ಕುಳಿತಿರುವವರನ್ನು ಆಂಗ್ಲರ ಸ್ವಾಮ್ಯವನ್ನು ರಕ್ಷಿಸಿಕೊಂಡು ಹೋಗತಕ್ಕವರನ್ನಾಗಿ ಏರ್ಪಡಿಸಿಕೊಂಡು ಅಂಥವರಿಗೆ ಮರಳಿ ಸಿಂಹಾಸನಾಧಿಪತ್ಯವನ್ನು ಕೊಡಬೇಕು. ಇಂಥ ವಿಧಾನಕ್ಕೆ ಅವಕಾಶವಿಲ್ಲದ ಬಂಗಾಳ ಮೊದಲಾದ ರಾಷ್ಟ್ರಗಳಲ್ಲಿ ಪ್ರಜಾಪ್ರತಿನಿಧಿಗಳ ಪರಿಪಾಲನವನ್ನು ಸ್ಥಾಪಿಸಬೇಕು. ಹೀಗೆ ಮಾಡಿದರೆ ಭರತಖಂಡಕ್ಕೆ ಆಂಗ್ಲಪ್ರಭುತ್ವದವರು ಮಾಡಿರುವ ವಾಗ್ದಾನವನ್ನು ನೆರವೇರಿಸಿದಂತೆಯೂ ಆಗುವುದು. ಮತ್ತು ಭರತಖಂಡದಲ್ಲಿ ಈಗ ಆಂಗ್ಲರನ್ನು ಪ್ರತಿಭಟಿಸುತ್ತಿರುವ ತೊಂದರೆಗಳೂ ತಪ್ಪಿಹೋಗುವುವು ಎಂಬುದೇ ಸರ್ ಲುಗಾರ್ಡ್‌ರವರ ಅಭಿಪ್ರಾಯವಾಗಿರುತ್ತದೆ. ಭರತಖಂಡದಲ್ಲಿ ಆಂಗ್ಲ ಪ್ರತಿಭಟನವು ಬ್ರಿಟಿಷ್ ಇಂಡ್ಯಾದಲ್ಲೇ ಹೊರತು ದೇಶೀಯ ಸಂಸ್ಥಾನಗಳಲ್ಲಿಲ್ಲದಿರುವುದನ್ನು ಕಂಡೂ, ದೇಶೀಯ ಸಂಸ್ಥಾನಾಧಿಪತಿಗಳ ಸಾಮ್ರಾಜ್ಯಭಕ್ತಿಯು ಅಚಲಿತವಾಗಿರುವುದೆಂಬುದು ಕಳೆದ ಯುದ್ಧದ ಮಹಾವಿಪತ್ಸಮಯದಲ್ಲಿಯೂ ಅದಕ್ಕೆ ಮುಂಚೆಯೂ ಈಗಣ ಯುವರಾಜಾಗಮನ ಸಮಯದಲ್ಲಿಯೂ ಸುವ್ಯಕ್ತವಾಗಿರುವುದನ್ನು ನೋಡಿಯೂ, ಯಾವೊಬ್ಬ ಆಂಗ್ಲೇಯನ ಮನಸ್ಸಿನಲ್ಲಿಯೂ ದೇಶೀಯಸಂಸ್ಥಾನಾಧಿಪತಿಗಳ ವಿಷಯದಲ್ಲಿ ಮನಸ್ಸು ವಿಕಾಸಕೊಂಡು ಮೇಲೆ ಕಂಡಂಥ ಅಭಿಪ್ರಾಯವನ್ನು ಹೊರಗೆಡಹುವುದು ಸಹಜವೇ ಆಗಿದೆ. ವಿಚಾರಮಾಡಿ ನೋಡಿದರೆ ಭಾರತೀಯರಿಗೆ ಅನ್ಯದೇಶೀಯ ಪ್ರಭುತ್ವವೆಂಬ ಕಾರಣದಿಂದ ಆಂಗ್ಲ ಪ್ರಭುತ್ವವನ್ನು ನೋಡುವಂಥ ದೃಷ್ಟಿಯಿಂದ ಸ್ವದೇಶೀಯ ಪ್ರಭುತ್ವವನ್ನು ನೋಡಲು ಕಾರಣವಿರುವುದಿಲ್ಲ. ಗುಣಾವಗುಣಗಳ ವಿಷಯವು ಬೇರೆ. ಗುಣಗಳೂ ಲೋಪಗಳೂ ಸಹ ಸ್ವದೇಶೀಯಪ್ರಭುತ್ವದಲ್ಲಾದರೂ ಇದ್ದೇ ಇರುವುವು, ಸ್ವರಾಜ್ಯಪ್ರಭುತ್ವದಲ್ಲಾದರೂ ಇರುವುವು, ಪ್ರಜಾಪ್ರಭುತ್ವದಲ್ಲಾದರೂ ಇರುವುವು. ಸರ್ ಲುಗಾರ್ಡ್‌ರವರ ಅಭಿಪ್ರಾಯದಂತೆ ಒಂದುವೇಳೆ ಸಾಮ್ರಾಜ್ಯಪ್ರಭುತ್ವದವರು ನಡೆಯಿಸಿಕೊಡಲು ಮನಸ್ಸುಮಾಡಿದರೆ, ದೇಶೀಯ ಸಂಸ್ಥಾನಾಧಿಪತಿಗಳ ಉತ್ಸಾಹವೂ ರಾಜಭಕ್ತಿಯೂ ಮತ್ತಷ್ಟು ಅಧಿಕವಾಗುವುದಲ್ಲದೆ ಅವರ ಐಕಮತ್ಯವೂ ಅಭಿವೃದ್ಧಿಯಾಗುವುದು. ಕಾರಣಾಂತರಗಳಿಂದ ಪದವೀಭ್ರಷ್ಟರಾಗಿರುವ ಪ್ರಭುವಂಶೀಯರು ಕೂಡ ಪೂರ್ವಾಧಿಕಾರವನ್ನು ಪಡೆದುಕೊಂಡ ಸಂತೋಷದಿಂದ ಸಾಮ್ರಾಜ್ಯದಲ್ಲಿ ದೃಢಭಕ್ತಿಸಂಪನ್ನರಾಗುವರು. ಹೀಗೆ ಆಗುವುದರಿಂದ ದೇಶೀಯ ಸಂಸ್ಥಾನಗಳ ವೈಶಾಲ್ಯವು ಹೆಚ್ಚಿ ಭರತಖಂಡಕ್ಕೆ ಅದೊಂದುತೆರದ ಸ್ವರಾಜ್ಯವೇ ಸಿದ್ಧಿಸಿದಂತಾಗುವುದು ನಿಶ್ಚಯ. ಆದರೆ ಈಗಣ ಅಸಹಾಯ ಸ್ವರಾಜ್ಯವಾದಿಗಳೊಳಗೆ ಆಂಗ್ಲಪ್ರಭುತ್ವದಲ್ಲಿ ಮಾತ್ರವೇ ಜುಗುಪ್ಸೆಯುಳ್ಳವರಾಗಿ ದೇಶೀಯಪ್ರಭುತ್ವಗಳ ವಿಷಯದಲ್ಲಿ ಅಭಿಮಾನವುಳ್ಳ ಮಹನೀಯರು ಎಷ್ಟುಮಂದಿಗಳಿರುವರು? ದೇಶೀಯ ಸಂಸ್ಥಾನಗಳನ್ನು ನಿರಂಕುಶಾಧಿಕಾರ ಜನ್ಮಭೂಮಿಗಳೆಂದು ಜರೆಯುತ್ತ, ಅವುಗಳ ನಿರ್ನಾಮವನ್ನು ಕೂಡ ಕೋರುತ್ತಲಿರುವ ಪುಣ್ಯಾತ್ಮರುಗಳಿಲ್ಲವೆ? ಮ|| ಸೆಟ್ಲೂರ್ ಶ್ರೀನಿವಾಸಯ್ಯಂಗಾರರು ಭರತಖಂಡದ ಚಿತ್ರಪಟದಲ್ಲಿ ಅಲ್ಲಲ್ಲಿಗೆ ಮಚ್ಚೆಗಳಂತೆ ಕಾಣುತ್ತಿರುವ ದೇಶೀಯ ಸಂಸ್ಥಾನಗಳ ಕಲೆಗಳೆಲ್ಲಾ ತೊಲಗಿಹೋದಲ್ಲದೆ ಸುಖವಾಗುವುದಿಲ್ಲವೆಂಬ ಸೂಕ್ತಿಮುಕ್ತಾಫಲಗಳನ್ನು ಸುರಿಸಿಲ್ಲವೆ? ಅಸಹಾಯವಾದಿಗಳಿಗೆ ಒಂದುತೆರದ ಅಧಿಕಾರಿಗಳ ಕೈಯಿಂದ ಮತ್ತೊಂದುತೆರದ ಅಧಿಕಾರಿಗಳ ಕೈಗೆ ರಾಜ್ಯವು ಹೋಗುವುದು ಬೇಕಿಲ್ಲ. ಅವರಿಗೆ ರಷ್ಯಾದ ಬೋಲ್ಷೆವಿಕ್ ಪ್ರಭುತ್ವದಂಥ ನಿಸ್ತಂದ್ರ ನಿರರ್ಗಳ ಸ್ವಚ್ಛಂದ ಪ್ರಭುತ್ವವೇ ಬೇಕಾಗಿರುವುದು. ಅಂತಹದು ಲಭಿಸುವವರೆಗೂ ಪ್ರತ್ಯಕ್ಷದೈವವೇ ಬಂದು ತಾನು ಪ್ರಭುವಾಗಿರುವೆನೆಂದು ಹೇಳಿದರೂ ಇವರುಗಳು ಒಪ್ಪುವಹಾಗಿಲ್ಲ. "ರಾಜಾ ಪ್ರತ್ಯಕ್ಷದೇವತಾ" ಎಂಬ ಶಾಸ್ತ್ರವಚನಕ್ಕೆ ಬದ್ಧವಾಗಿ ನಡೆಯುತ್ತಿದ್ದ ಪ್ರಾಚೀನಸಾತ್ವಿಕ ಭಾರತಭೂಮಿಯೇ ಬೇರೆ. ಈಗಣ ಅಸಹಾಯವಾದಿಗಳು ಕಲ್ಪಿಸಲೆಳಸಿರುವ ಭಾರತಭೂಮಿಯ ಕತೆಯೇ ಬೇರೆ. ಪ್ರಪಂಚದಲ್ಲಿ ಕೃಷ್ಣಪಕ್ಷವೇ ಇಲ್ಲದೆ ಶುಕ್ಲಪಕ್ಷವೇ ಇದ್ದರಾದೀತೆಂದು ಕೋರುವವರು ಕೆಲವರಿದ್ದರೆ, ಶುಕ್ಲಪಕ್ಷದ ಬೆಳ್ದಿಂಗಳನ್ನು ಶಪಿಸುವವರು ಕೂಡ ಇರುವುದಿಲ್ಲವೆ? ಕಡಲೆಲ್ಲಾ ಸಿಹಿನೀರಾದರೆ ಅನುಕೂಲವಾದೀತೆಂದು ಬಯಸುವವರು ಕೆಲವರಿದ್ದರೆ ಪಾರಾವಾರವೆಲ್ಲಾ ಸಾರಾಯಿಯ ಪೀಪಾಯಿಯಾದರೆ ಸುಖವಾದೀತೆಂದು ಹಂಬಲಿಸುವವರೂ ಇರುವುದಿಲ್ಲವೆ? ಆದರೆ ಇಂಥ ಸಕಲರ ಇಷ್ಟವನ್ನೂ ನೆರವೇರಿಸಲಿಕ್ಕೆ ಹಿಡಿದರೆ ಆ ಜಗದೀಶ್ವರನಿಗೂ ಕೂಡ ಹುಚ್ಚು ಮುಂಡೆ ಪಟ್ಟವು ತಪ್ಪುವುದಿಲ್ಲ. ಯಾವ ಸೂಚನೆಯು ಯುಕ್ತವೋ ಅದನ್ನು ವಿಮರ್ಶೆಯಿಂದ ನಿರ್ಧರಿಸಿ ದೇಶಶಾಂತಿಗೆ ಹಿತವಾದ ಮಾರ್ಗವನ್ನು ಸಾಮ್ರಾಜ್ಯ ಪ್ರಭುತ್ವದವರು ಕೈಕೊಳ್ಳದೆ ಹೋಗಲಾರರು.

ಮಾಪಿಳ್ಳಾ ಬಂಡಿಗಳ ಯಜ್ಞನಿವೇದಿಕೆ.

ವಾಗನ್ನಿನಲ್ಲಿ ಕೂಡಿ ಮಾಪಿಳ್ಳಾ ಬಂದಿಗಳನ್ನು ಯಜ್ಞಮಾಡಿದ ಸಂಬಂಧದ ವಿಚಾರಣೆಗಾಗಿ ಏರ್ಪಟ್ಟಿದ್ದ ಸಂಘದವರು ತಮ್ಮ ವರದಿಯನ್ನು ಮುಗಿಸಿದರಂತೆ. ಅದು ಆಗಲೇ ತಂತ್ರೀವಾರ್ತೆಯ ಮೂಲಕ ಸೀಮೆಗೆ ಹೋಗಿ ಅಲ್ಲಿಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅದನ್ನು ಕಂಡು ಭರತಖಂಡ ಸರ್ಕಾರದವರು ಅದರ ಸಾರಾಂಶವನ್ನು ತಾವೂ ಈಗ ಪ್ರಕಟಿಸಿದ್ದಾರೆ. ಮದ್ರಾಸ್ ಪ್ರಭುತ್ವದವರೂ ಈಗ ಪ್ರಕಟಿಸಿದ್ದಾರೆ. ಆದರೆ ಆ ವರದಿ ವಿಷಯವು ಮಾತ್ರ ಇನ್ನೂ ಸರ್ಕಾರದ ಪರ್ಯಾಲೋಚನೆಯಲ್ಲಿದೆಯಂತೆ. ಅದರ ಮುಖ್ಯಾಂಶವೇನೆಂದರೆ—ಗಾಳಿಯು ಒಳಕ್ಕೆ ಬರಲವಕಾಶವಿಲ್ಲದ ಬಂಡಿಯಲ್ಲಿ ಬಂದಿಗಳನ್ನು ತುಂಬಿದುದರಿಂದ ಉಸಿರಾಡದೆ ಅಷ್ಟು ಮಂದಿ ಸತ್ತರು. ಇದುವರೆಗೆ ಇಂಥ ಬಂಡಿಗಳಲ್ಲಿ ೩೨ ಸಲ ೩|| ಸಾವಿರ ಬಂದಿಗಳನ್ನು ತುಂಬಿ ಕಳುಹಿಸಿದ್ದರೂ ಯಾವ ವಿಪತ್ತೂ ಸಂಭವಿಸಿರಲಿಲ್ಲ. ಆದರೆ ಆ ಬಂಡಿಗಳು ಇಂಥವುಗಳೇ ಆದರೂ ಗಾಳಿಯು ಒಳಕ್ಕೆ ನುಗ್ಗಲು ಸ್ವಲ್ಪ ಅವಕಾಶವಿದ್ದಿತು. ಈ ಬಂಡಿಗೆ ಇದ್ದ ಕಬ್ಬಿಣದಜಾಲರಿಯ ಕಿಟಕಿಯ ರಂಧ್ರಗಳು ಬಣ್ಣಬಳಿದಿದ್ದ ಕಾರಣ ಮುಚ್ಚಿಹೋಗಿದ್ದುವು. ಅದರಿಂದ ಒಳಗಿದ್ದ ಜನರಿಗೆ ಬೇಕಾಗಿದ್ದಷ್ಟು ಗಾಳಿಯು ಒಳಕ್ಕೆ ಬಾರದೆ ಹೋಯಿತು. ಅದುಕಾರಣ ಆ ಬಂಡಿಯು ಕಿಟಕಿಯಿಲ್ಲದ ಬಂಡಿಯಲ್ಲ. ಅದನ್ನು ಉಪಯೋಗಿಸಿದುದು ಆಕ್ಷೇಪಣೀಯವಲ್ಲ. ಅದರಿಂದ ಬಂದಿಗಳಮೇಲೆ ನಿಷ್ಕರುಣೆಯನ್ನು ತೋರಿಸಿದರೆಂದು ಹೇಳಲಾಗುವುದಿಲ್ಲ. ಅಂಥ ಸಮಯದಲ್ಲಿ ಅಂಥ ಬಂಡಿಗಳನ್ನು ಉಪಯೋಗಿಸಿದುದರಲ್ಲಿ ತಪ್ಪೇನೂ ಇಲ್ಲ. ಆದರೆ ನಡೆವಳಿಕೆಯಲ್ಲಿ ಉತ್ತಮವಾದ ಏರ್ಪಾಟನ್ನು ಅನುಸರಿಸಿದ್ದರೆ ಚೆನ್ನಾಗಿದ್ದಿತು. ಕಿಟಕಿಗಳು ಗಾಳಿಬರುವುದಕ್ಕೆ ಸರಿಯಾಗಿವೆಯೇ ಇಲ್ಲವೆ ಎಂಬುದನ್ನು ಮುಂಚೆಯೇ ಪರೀಕ್ಷಿಸಿ ನೋಡಬೇಕಾಗಿತ್ತು. ಈ ವಿಷಾದ ಪರಿಣಾಮಕ್ಕೆ ಮುಖ್ಯವಾದ ಬಾಧ್ಯತೆಯು ರೈಲ್ವೆಕಂಪೆನಿಯ ಮೇಲೂ, ಅವರ ಪ್ರತಿನಿಧಿಯಾಗಿ ಅಲ್ಲಿರುವ ಟ್ರಾಫಿಕ್ ಇನ್‌ಸ್ಪೆಕ್ಟರ ಮೇಲೂ ಇರುವುದು. ಆ ಬಂಡಿಯು ಅಷ್ಟು ಜನರನ್ನು ತುಂಬಿ ಕಳುಹಿಸಲು ತಕ್ಕುದೋ ಅಲ್ಲವೋ ಎಂಬುದನ್ನು ಆತನು ನೋಡದೇಹೋದನು. ಅದುವರೆಗೆ ಉಪಯೋಗಿಸದ್ದಂಥ ಬಂಡಿಯನ್ನು ಆ ಸಲವೂ ಉಪಯೋಗಿಸಿದುದರಲ್ಲಿ ಸೈನಿಕೋದ್ಯೋಗಿಗಳು ಪೋಲೀಸ್ ಸಾರ್ಜಂಟು, ಸಬ್ ಮೇಜಿಸ್ಟ್ರೇಟು ಇವರುಗಳ ತಪ್ಪೇನೂ ಇಲ್ಲ. ಅಷ್ಟು ಮಂದಿಗಳನ್ನು ತುಂಬಲು ತಕ್ಕುದಲ್ಲದ ಬಂಡಿಯಲ್ಲಿ ಸಾಗಿಸಿದುದು ಏನೋ ಅನಿವಾರ್ಯಸಂಬಂಧದಿಂದ ಸಂಭವಿಸಿದುದೇ ಹೊರತು ಅಶ್ರದ್ಧೆ ಉಪೇಕ್ಷೆ ಇವುಗಳಿಂದ ಸಂಭವಿಸಿದುದಲ್ಲ. ಸೈನಿಕಶಾಸನ ವ್ಯವಹರಣೆಯಿರುವುದರಿಂದ ಮುಖ್ಯವಾದ ಬಾಧ್ಯತೆಯು ಹೆಚ್ಚಾಗಿ, ಮಿಲಟರಿ ಕಮ್ಯಾಂಡರುಗಳ ಮೇಲಿದ್ದಿತೋ ಅಥವಾ ಸ್ಪೆಷಲ್ ಸಿವಿಲ್ ಆಫೀಸರ ಮೇಲಿದ್ದಿತೋ ತಿಳಿಯಲಿಲ್ಲ. ಪದ್ಧತಿಯಾಗಿ ಇಂಥ ಏರ್ಪಾಟುಗಳೆಲ್ಲವೂ ಸಿವಿಲ್ ಉದ್ಯೋಗಿಗಳ ಮೇಲ್ವಿಚಾರಣೆಯಲ್ಲಿದ್ದುವು. ಸ್ಪೆಷಲ್ ಸಿವಿಲ್ ಆಫೀಸರು ಇದನ್ನು ಗಮನಿಸಬೇಕಾಗಿದ್ದಿತು. ಪ್ರಯಾಣಮಾಡುತ್ತಿದ್ದಾಗ ಬಂದಿಗಳು ಯಾವ ಸ್ಥಿತಿಯಲ್ಲಿದ್ದರೋ ಎಂಬುದನ್ನು ನೋಡಿಕೊಳ್ಳದೆ ಹೋದುದು ಪೋಲೀಸ್ ಸಾರ್ಜಂಟಿನ ಅಶ್ರದ್ಧೆಯಾಗಿರುತ್ತದೆ. ಆತನು ಎಚ್ಚರದಿಂದ ನೋಡಿಕೊಂಡಿದ್ದರೆ ಇಂಥ ವಿಷಾದಪರಿಣಾಮಕ್ಕೆ ಅವಕಾಶವೇ ಆಗುತ್ತಿರಲಿಲ್ಲ" ಎಂದು ಸಂಘದವರು ಏಕಗ್ರೀವದಿಂದ ಅಭಿಪ್ರಾಯಪಟ್ಟಿದ್ದಾರಂತೆ.

ವಿಚಾರಕ ಸಂಘದವರ ಈ ವರದಿಯು ನೀರಿನಲ್ಲಿ ಬೆರಳಿಟ್ಟು ಚೀಪಿದಷ್ಟು ಸ್ವಾರಸ್ಯವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಅವರೇನೋ ತೊಪ್ಪೆಸಾರಿಸಿ ಸಿದ್ಧಮಾಡಿದರು. ಇನ್ನು ಭಾರತಪ್ರಭುತ್ವದವರು ಯಾವತೆರದ ರಂಗವಲ್ಲಿಯನ್ನಿಟ್ಟು ಈ ರೂಪಕವನ್ನು ಪರಿಸಮಾಪ್ತಿಗೊಳಿಸುವರೋ ನೋಡಬೇಕು.

ಮ|| ಸಿ. ಜೆ. ಡಿಸೋಜಾಯವರ ವಾಙ್ಮೂಲ.

ಭರತಖಂಡದ ಆರ್ಥಿಕವಿಷಯ ವಿಚಾರಣೆಗಾಗಿ ಪ್ರಭುತ್ವದವರು ಸರ್ ಇಬ್ರಾಹಿಂ ರಹಿಮತುಲ್ಲಾಯವರ ಅಧ್ಯಕ್ಷತೆಯಿಂದ ಏರ್ಪಡಿಸಿರುವ ಸಂಘದವರು ದೇಶದ ಪ್ರಮುಖಪಟ್ಟಣಗಳಲ್ಲಿ ತಜ್ಞಜನರ ವಾಙ್ಮೂಲಗಳನ್ನು ತೆಗೆದುಕೊಂಡು ಕಳೆದ ವಾರ ಮದ್ರಾಸಿಗೆ ಬಂದಿರುವರು. ಅಲ್ಲಿ ನಡೆದ ವಿಚಾರಣೆಯ ಕಾಲದಲ್ಲಿ ನಮ್ಮ ದೇಶದ ವಾಣಿಜ್ಯಪರಿಶ್ರಮಶಾಖೆಯ ಡೈರೆಕ್ಟರವರಾದ ಮ|| ಸಿ. ಜೆ. ಡಿಸೋಜಾರವರ ವಾಙ್ಮೂಲವೂ ತೆಗೆದುಕೊಳ್ಳಲ್ಪಟ್ಟಿತು. ಆಗ ಅವರು ಭರತಖಂಡದ ವ್ಯಾಪಾರ ಕೈಗಾರಿಕೆಗಳ ರಕ್ಷಣವಿಷಯವನ್ನು ಕುರಿತು ಕೆಲ ಸಂಗತಿಗಳನ್ನು ಸ್ಪಷ್ಟವಾಗಿ ಹೇಳಿ, ಬಳಿಕ "ಇತರ ದೇಶಗಳು ತಮ್ಮ ವಾಣಿಜ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತ ಬಂದಂತೆಲ್ಲಾ ಇಂಗ್ಲಂಡು ತನ್ನ ವಾಣಿಜ್ಯಪದ್ಧತಿಯನ್ನು ಸ್ವಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಾಗಿ ಬಂದಿತು. ನಿರ್ಬಂಧ ವ್ಯಾಪಾರದಿಂದ ಭರತಖಂಡಕ್ಕೆ ಲಾಭವೇ ಇದ್ದರೂ ಪರಿಶ್ರಮಾಭಿವೃದ್ಧಿಗೆ ಅದರಿಂದ ಲಾಭವಿಲ್ಲ. ಭರತಖಂಡದಲ್ಲಿ ಹತ್ತಿ ಮೊದಲಾದ ಮೂಲವಸ್ತುಗಳನ್ನು ಬೆಳೆದು ಇತರ ದೇಶಗಳಿಗೆ ಸಾಗಿಸಿದರೆ ಅಲ್ಲಿ ಅವು ಬಟ್ಟೆಗಳಾಗಿ ನೆಯ್ಯಲ್ಪಟ್ಟು ಇಲ್ಲಿಗೆ ಕಳುಹಲ್ಪಡುತ್ತವೆ. ಅದರಿಂದ ಭರತಖಂಡದಲ್ಲಿ ಒಂದು ವಸ್ತುವನ್ನು ನಿರ್ಮಿಸಲಿಕ್ಕೆ ಸಾಧನವಾದ ಮೂಲವಸ್ತುವನ್ನು ಬೆಳೆಯುವುದು ಮಾತ್ರವೇ ಜರುಗುತ್ತಿದೆ. ಪರಿಶ್ರಮಗಳೇನೂ ವೃದ್ಧಿಯಾಗುತ್ತಲ್ಲಿಲ್ಲ. ಆದುದರಿಂದ ಇಲ್ಲಿ ಬೆಳೆದ ವಸ್ತುಗಳನ್ನು ಇಲ್ಲೇ ಉಪಯೋಗಿಸಿ ಅದರಿಂದ ಬೇಕಾದ ಉಪಯೋಗ್ಯವಸ್ತುಗಳನ್ನು ಇಲ್ಲೇ ನಿರ್ಮಿಸುವಂತಾದರೆ ಪರಿಶ್ರಮಾಭಿವೃದ್ಧಿಯು ಚೆನ್ನಾಗಿ ಆಗುವುದು. ಇಲ್ಲಿ ಪರಿಶ್ರಮಗಳು ಅಭಿವೃದ್ಧಿಗೊಳ್ಳಲಿಕ್ಕೆ ಕೆಲ ಅಭ್ಯಂತರಗಳಿವೆ. ಉತ್ತಮವಾದ ಮೇಲ್ವಿಚಾರಣೆಗೊಳ್ಳತಕ್ಕ ಶಕ್ತರು ಇಲ್ಲ. ಕೆಲಸದ ಮರ್ಮಗಳನ್ನು ತಿಳಿದ ಕೆಲಸಗಾರರೂ ಇಲ್ಲ. ವ್ಯವಸಾಯವೂ ಕೂಡ ಇನ್ನೂ ಅಭಿವೃದ್ಧಿಗೊಳ್ಳಬೇಕಾಗಿದೆ. ಪರಸ್ಪರ ಸಹಾಯಕ ಸಂಘಗಳು ವ್ಯವಸಾಯಗಾರರಿಗೆ ತುಂಬಾ ಸಹಾಯ ಮಾಡುತ್ತಿರುವುವು. ಶಿಕ್ಷಣಾರ್ಥವಾದ ಸುಂಕದ ಜತೆಗೆ ದೇಶದ ವ್ಯವಸಾಯವನ್ನೂ ಅಭಿವೃದ್ಧಿಪಡಿಸಿ ಪರಿಶ್ರಮಗಳು ಅಭಿವೃದ್ಧಿಗೊಳ್ಳುವಂತೆ ಮಾಡಬೇಕು.

ಈ ಸಂಬಂಧದಲ್ಲಿ ವಿಚಾರಕ ಸಂಘದವರು ಮೈಸೂರು ಆರ್ಥಿಕವಿಷಯನ್ನೂ ಗಮನಿಸಬೇಕು. ಭಾರತಪ್ರಭುತ್ವದವರಾಗಲಿ ಪ್ರಾಂತಿಕ ಪ್ರಭುತ್ವದವರಾಗಲಿ ಯಾವ ರಕ್ಷಣವಿಧಾನವನ್ನವಲಂಬಿಸಿದರೂ ಅದರಲ್ಲಿ ಮೈಸೂರು ಸಂಸ್ಥಾನಕ್ಕೆ ಭಾಗವಿರಬೇಕು. ಸುಂಕದ ವಿಧಾನಗಳಲ್ಲಿ ಮೈಸೂರಿಗೂ ತಕ್ಕಷ್ಟು ಭಾಗವಿರುವಂತೆ ಸೌಕರ್ಯವನ್ನು ಏರ್ಪಡಿಸಬೇಕು. ಪಬ್ಲಿಕ್ ಕೆಲಸಗಳಿಗಾಗಿ ಹೊರಗಣಿಂದ ತರಿಸಿಕೊಳ್ಳತಕ್ಕ ಸಾಮಾನುಗಳ ವಿಷಯದಲ್ಲಿ ಇತರ ಬ್ರಿಟಿಷ್ ಇಂಡ್ಯಾ ಪ್ರಭುತ್ವದವರಿಗೆ ಕೊಡುವಂಥ ಸೌಕರ್ಯಗಳನ್ನು ಮೈಸೂರಿಗೂ ಕೊಡಬೇಕು. ಮೈಸೂರು ಸಂಸ್ಥಾನದಲ್ಲಿ ಬೆಳೆಯುವ ಕೊಬರಿ ಮೊದಲಾದ ವಸ್ತುಗಳ ಮೇಲೆ ಸಾಗಿಸುವ ಸುಂಕವನ್ನು ಹಾಕತಕ್ಕ ಅಧಿಕಾರವನ್ನು ಮೈಸೂರಿಗೆ ಕೊಡಬೇಕು. ಅವಶ್ಯಕವಾದಾಗ ಪರಿಶ್ರಮಗಳ ಅಭಿವೃದ್ಧಿಗೆ ತಕ್ಕಸಹಾಯವನ್ನು ಮಾಡಬೇಕು. ದೇಶದ ಪರಿಶ್ರಮಾಭ್ಯುದಯಕ್ಕೆ ಹಡಗಿನ ಯಾತಾಯಾತ ಸೌಕರ್ಯಗಳು ಮುಂದೆ ಸರಿಯಾಗಬೇಕು. ವಾಣಿಜ್ಯಪರಿಶ್ರಾಮಿಕಗಳನ್ನು ಕುರಿತು ಆಲೋಚಿಸುವ ಆರ್ಥಿಕಸಂಘದಲ್ಲಿ ಮೈಸೂರಿಗೂ ಪ್ರಾತಿನಿಧ್ಯವಿರಬೇಕು" ಎಂಬದಾಗಿ ಹೇಳಿದರು.

ಕಳೆದ ಭಾನುವಾರ ಮದ್ರಾಸು ಆರ್ಮೇನಿಯನ್ ವೀಧಿಯಲ್ಲಿರುವ ಗೋಖಲೆ ಹಾಲಿನಲ್ಲಿ ಮೈಸೂರು ಗಾನವಿಶಾರದ ಬಿ. ಕೃಷ್ಣಪ್ಪನವರ ಸಂಗೀತಕಚೇರಿಯೂ ಮ|| ಚೌಡಯ್ಯನವರ ಪಿಟೀಲ್ ವಾದನವೂ ನಡೆದುವು. ಈದಿನವೂ ನಡೆಯುವುವು.

ಶ್ರೀಮನ್ ಯುವಸಾರ್ವಭೌಮರ ದೇಶಸಂಚಾರವು.

ಫೆಬ್ರವರಿ ತಾ|| ೧ನೆ ಬೆಳಗ್ಗೆ ಯುವಸಾರ್ವಭೌಮರು ಇಂದೋರ್ ಸಂಸ್ಥಾನದ ರಾಜಧಾನಿಯನ್ನು ಸೇರಿದರು. ನಿಲ್ದಾಣದಲ್ಲಿ ಹೋಳ್ಕರ್ ಮಹಾರಾಜರೂ ಅವರ ಅನೇಕಮಂದಿ ಸಾಮಂತರಾಜರೂ ಸಂಯುಕ್ತ ರಾಷ್ಟ್ರಗಳ ಗೌರ್ನರೂ ಇನ್ನೂ ಅನೇಕಾಧಿಕಾರಿಗಳೂ ಸಂಸ್ಥಾನದ ಮುಖ್ಯಪ್ರಜೆಗಳೂ ಕಾದಿದ್ದು ಇದಿರ್ಗೊಂಡು ಸನ್ಮಾನಿಸಿದರು. ಮಹಾರಾಜರು ಅಲಂಕೃತವಾಗಿ ಪುರಜನರಿಂದ ನಿಬಿಡವಾಗಿದ್ದ ರಾಜವೀಥಿಯಲ್ಲಿ ಯುವರಾಜರನ್ನು ಉತ್ಸವಪೂರ್ವಕವಾಗಿ ಕರೆದುಕೊಂಡು ಹೋಗಿ ಮಾಣಿಕ್ಯಬಾಗ್ ಭವನದಲ್ಲಿ ಇಳುಹಿಸಿದರು. ಆ ದಿನ ರಾತ್ರಿ ದೊಡ್ಡ ಔತಣವಾಯಿತು. ಆ ಸಮಯದಲ್ಲಿ ಹೋಳ್ಕರ್ ಮಹಾರಾಜರ ಮತ್ತು ಯುವರಾಜರ ಭಾಷಣ ಪ್ರತಿ ಭಾಷಣಗಳು ಪದ್ಧತಿಯಂತೆ ಜರುಗಿದುವು. ೨ ದಿನಗಳು ಮಾತ್ರ ಯುವರಾಜರು ಅಲ್ಲಿದ್ದರು. ಆಗ ಯುವರಾಜರು ಇಷ್ಟಬಂದ ಧರ್ಮಕಾರ್ಯಗಳಿಗೆ ವಿನಿಯೋಗಿಸಬಹುದೆಂದು ಹೇಳಿ ಧಾರ್ ಸಂಸ್ಥಾನದ ಮಹಾರಾಜರು ಯುವಸಾರ್ವಭೌಮರ ವಶಕ್ಕೆ ೧೦,೦೦೦ ರೂ. ಗಳನ್ನು ಸಮರ್ಪಿಸಿದರು. ಅವರು ಇಂದೋರಿನಲ್ಲಿರುವ ಕಿಂಗ್ ಎಡ್ವರ್ಡ್ ವೈದ್ಯಾಲಯಕ್ಕೆ ೫,೦೦೦ ರೂ. ಗಳನ್ನೂ, ರಾಬರ್ಟ್ ನರ್ಸಿಂಗ್‌ಹೋಮಿಗೆ ೫,೦೦೦ ರೂ. ಗಳನ್ನೂ ವಿನಿಯೋಗಿಸುವಂತೆ ಅಪ್ಪಣೆಮಾಡಿದರು. ಹೀಗೆಯೇ ಧರ್ಮಕಾರ್ಯಗಳಿಗೆ ವಿನಿಯೋಗಿಸಲಿಕ್ಕೆಂದು ಉದಯಪುರದ ಮಹಾರಾಜರು ಯುವಸಾರ್ವಭೌಮರ ವಶಕ್ಕೆ ೧ ಲಕ್ಷ ರೂ. ಗಳನ್ನು ಸಮರ್ಪಿಸಿದರು. ಅದರಲ್ಲಿ ||| ಲಕ್ಷವನ್ನು ಅಜ್ಮೀರಿನಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಲಿಕ್ಕೂ, ಘೋಸಾ ಹೆಂಗುಸರು ಸ್ನಾನಮಾಡಲನುಕೂಲಿಸುವಂತೆ ವರದಾನದಿಯಲ್ಲಿ ಒಂದು ಘಟ್ಟವನ್ನು ಮೇರಿ ರಾಜ್ಞಿಯವರ ಹೆಸರಿನಿಂದ ಪ್ರತ್ಯೇಕವಾಗಿ ಏರ್ಪಡಿಸಲು ೨೫ ಸಾವಿರವನ್ನೂ ವಿನಿಯೋಗಿಸುವಂತೆ ಯುವಸಾರ್ವಭೌಮರು ತೀರ್ಮಾನಿಸಿದರು. ತಾ|| ೩ರಲ್ಲಿ ಭೂಪಾಲ್ ಸಂಸ್ಥಾನಕ್ಕೆ ಪ್ರಯಾಣಮಾಡಿದರು. ೪ನೆ ಬೆಳಗ್ಗೆ ಅಲ್ಲಿಯ ನಿಲ್ದಾಣದಲ್ಲಿ ಬೇಗಂ ಸಾಹೇಬರು ಅವರ ಮಕ್ಕಳುಗಳು ಸಂಸ್ಥಾನದ ಅಧಿಕಾರಿಗಳೇ ಮೊದಲಾದವರಿಂದ ಸನ್ಮಾನಿಸಲ್ಪಟ್ಟು ೧ ದಿನ ಅಲ್ಲಿದ್ದು ರಾಜಭಕ್ತಿಪೂರಿತವಾದ ಆತಿಥ್ಯವನ್ನು ಸ್ವೀಕರಿಸಿ, ಆ ರಾತ್ರಿ ನಡೆದ ಔತಣದಲ್ಲಿ ಬೇಗಂ ಸಾಹೇಬರವರ ರಾಜ್ಯಪರಿಪಾಲನ ವೈಲಕ್ಷಣ್ಯವನ್ನೂ ರಾಜಭಕ್ತಿಯನ್ನೂ ಕೊಂಡಾಡಿ, ಮರುದಿನ ಅಲ್ಲಿಗೆ ೨೨ ಮೈಲಿಗಳ ದೂರದಲ್ಲಿರುವ ಕಾಚಿನೇರಿಯಾ ಎಂಬಲ್ಲಿಗೆ ಬೇಟೆಯಾಡಲಿಕ್ಕೆ ದಯಮಾಡಿಸಿದರು. ಅವರೊಡನೆ ಭೂಪಾಲ್ ಬೇಗಂರವರ ೩ನೆ ಕುಮಾರರಾದ ಲೆ|| ಕರ್ನಲ್ ನವಾಬ್‌ಜಾದಾರವರೂ ಹೋಗಿದ್ದರು. ಬೇಟೆಯನ್ನು ಮುಗಿಸಿಕೊಂಡು ಮಂಗಳವಾರ ಮರಳಿ ಬಂದರು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ದನಗಳು ದೊಡ್ಡರೋಗದಿಂದ ಸಾಯಲುಪಕ್ರಮವಾಗಿರುವುದು.

ತುರುವೇಕೆರೆಯ ಒಬ್ಬ ರೈತನ ಕುರಿಮಂದೆಯನ್ನು ಸಾಕಲಿಕ್ಕೆ ಆತನ ಪ್ರಾರ್ಥನೆಯ ಮೇರೆ ೭೦ ಎಕರೆ ಭೂಮಿಯನ್ನು ಸರ್ಕಾರದವರು ಅನುಗ್ರಹಿಸಿರುವರಂತೆ.

ಮೈಸೂರು ಸರ್ಕಾರದ ೭ ರೂ. ಬಡ್ಡಿಯ ಸಾಲದ ೧೦೦ ರೂ. ಬಾಬತು ಬಾಂಡುಗಳನ್ನು ಮದ್ರಾಸಿನಲ್ಲಿ ೧೦೫ ರೂ. ನಂತೆ ಕೊಂಡುಕೊಳ್ಳುವವರು ಬಹುಮಂದಿ ಇದ್ದಾರಂತೆ.

ಮೈಸೂರು ಬಿ. ಡಿವಿಜನ್ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮ|| ಜೆ. ಚೆನ್ನವೀರಪ್ಪನವರಿಗೆ ತಿ|| ನರಸಿಮ್ಮಪುರಕ್ಕೆ ವರ್ಗವಾಗಿ ಅಲ್ಲಿದ್ದ ಸಾಹೇಬರು ಇಲ್ಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಕೈ|| ಬೆಂಗಳೂರು ವೀರಭದ್ರಶೆಟ್ಟರು ಬಹುಕಾಲ ಅಲ್ಲಿಯ ಮ್ಯು|| ಕೌನ್ಸಿಲರಾಗಿದ್ದುದರಿಂದ ಅವರ ಗೌರವಾರ್ಥವಾಗಿ ಒಂದು ದಿನದ ಮ್ಯು|| ಮೀಟಿಂಗು ಅಡ್ಜರ್ನ್ ಮಾಡಲ್ಪಟ್ಟಿತು.

ಕಳೆದ ಭಾನುವಾರ ಬೆಂಗಳೂರು ಲಾಲ್‌ಬಾಗಿನಲ್ಲಿ ಫಲಪುಷ್ಪ ಪ್ರದರ್ಶನವು ನಡೆಯಿತು. ಉತ್ತಮವಾದ ವಸ್ತುಗಳಿಗೆ ಗೊತ್ತಾಗಿದ್ದ ಬಹುಮಾನಗಳು ದಿವಾನ್ ಸರ್ ಕಾಂತರಾಜ ಅರಸರವರ ಹಸ್ತದಿಂದ ಕೊಡಿಸಲ್ಪಟ್ಟುವು.

ರಾಜಧಾನಿಯಲ್ಲಿ ಚಿರತೆಗಳು ಅಲ್ಲಿ ಕಾಣಿಸಿಕೊಂಡವು ಇಲ್ಲಿ ಪ್ರಾಣಿಗಳನ್ನು ಕೊಂದವು ಎಂಬ ಸುದ್ದಿಯು ಇನ್ನೂ ಅಡಗಿಲ್ಲ. ಸಾವಿರಾರು ತುಪಾಕಿಗಳುಳ್ಳ ಇಂಥ ಪಟ್ಟಣದಲ್ಲಿ ಬೇಟೆಗಾರರ ಪೌರುಷಕ್ಕೆ ಮಸಿಹಚ್ಚುತ್ತಿರುವ ಚಿರತೆಗಳ ಸಾಹಸವೇ ಸಾಹಸ.

ರಾಜಧಾನಿಯ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕಸಭೆಯವರು ನೆನ್ನೆಯದಿನ ರಾತ್ರಿ ಟವನ್ ಹಾಲಿನಲ್ಲಿ ರುಕ್ಮಾಂಗದ ಚರಿತ್ರೆಯನ್ನು ನೂತನ ಉಡುಪು ಮತ್ತು ಸೀನರಿಗಳಿಂದ ಬಹಳ ಶ್ಲಾಘ್ಯವಾಗಿ ಅಭಿನಯಿಸಿ ಪ್ರೇಕ್ಷಕರ ಮನಸ್ಸನ್ನು ಆನಂದಗೊಳಿಸಿದರು. ದ್ರವ್ಯೋತ್ಪನ್ನವೂ ಹೆಚ್ಚಾಗಿದ್ದಿತು. ಬರುವ ತಾ|| ೧೮ ನೆಯ ಶನಿವಾರದ ರಾತ್ರಿ ಮಂದಾರವಲ್ಲಿ ಪರಿಣಯವನ್ನು ಅಭಿನಯಿಸುವವರಾಗಿರುವರು.

ರೈಲ್ವೆ ಅನನುಕೂಲಗಳನ್ನು ಕುರಿತು ಬೆಂಗಳೂರು ವರ್ತಕ ಸಂಘದ ಕಳೆದ ಮೀಟಿಂಗಿನಲ್ಲಿ ಅನೇಕಾಕ್ಷೇಪಣೆಗಳು ಮಾಡಲ್ಪಟ್ಟಾಗ ಅಲ್ಲೇ ಇದ್ದ ರೈಲ್ವೆ ಏಜಂಟರು—ಈ ತಿಂಗಳಿಂದ ಬೆಂಗಳೂರು ಮೈಸೂರು ಮಾರ್ಗದಲ್ಲಿ ಎರಡೆರಡು ಗೂಡ್ಸು ಬಂಡಿಗಳು ಮೊದಲಿಗಿಂತ ಹೆಚ್ಚಿನ ವೇಗದಲ್ಲಿ ನಡೆಯಿಸಲ್ಪಡುವುವೆಂದೂ ಹೊಸ ಎಂಜನ್ನುಗಳು ಬಾರದೆ ಇದ್ದುದರಿಂದ ಈ ತೊಂದರೆಯು ಪ್ರಾಪ್ತವಾಗಿದ್ದಿತೆಂದೂ ಹೇಳಿ ಸಮಾಧಾನಪಡಿಸಿದರು.

ಪ್ರಜಾಮಿತ್ರಮಂಡಲಿಯ ಅಧ್ಯಕ್ಷರೂ, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರೂ ಆದ ರಾವ್‌ಸಾಹೇಬ್ ಮ|| ಚೆನ್ನಯ್ಯನವರ ಮೂರನೆಯ ಕುಮಾರರಾದ ಮ|| ಎಚ್. ಸಿ. ದಾಸಪ್ಪ ಬಿ. ಎ., ಎಲ್.ಎಲ್. ಬಿ. ಯವರು ಈವರೆಗೆ ಬೆಂಗಳೂರಿನಲ್ಲಿ ಅಡ್ವೊಕೇಟರಾಗಿದ್ದು ಅನೇಕಮಿತ್ರರ ಅಪೇಕ್ಷೆಯಂತೆ ಈಗ ರಾಜಧಾನಿಗೆ ಬಂದು ಲ್ಯಾನ್ಸ್‌ಡೌನ್ ಬಜಾರಿನಲ್ಲಿ ಆಫೀಸನ್ನು ಮಾಡಿ ವಕೀಲಿಯನ್ನು ನಡಿಸುತ್ತಿರುವರು. ವಿವಾದವನ್ನು ನಡಿಸತಕ್ಕ ಸ್ಥಳ ಪರಸ್ಥಳದ ಜನರು ಮ|| ದಾಸಪ್ಪನವರಿಗೆ ಮೊಕದ್ದಮೆಗಳನ್ನು ವಹಿಸಿ ಪ್ರೋತ್ಸಾಹವನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

ಎಣ್ಣೆ ಬೆಣ್ಣೆ ಮೊದಲಾದ ಆಹಾರ್ಯಪದಾರ್ಥಗಳಲ್ಲಿ ಇತರ ವಸ್ತುಗಳನ್ನು ಮಿಶ್ರಮಾಡಿ ಮೋಸದಿಂದ ಮಾರುವ ಪದ್ಧತಿಯನ್ನು ತಪ್ಪಿಸಲಿಕ್ಕಾಗಿ ಅಂಥ ತಪ್ಪಿಗೆ ೫೦೦ ರೂ.ಗಳ ವರೆಗೆ ಶಿಕ್ಷೆಯನ್ನು ವಿಧಿಸಲು ಅವಕಾಶವನ್ನು ಕಲ್ಪಿಸಿರುವ ನೂತನ ಶಾಸನವು ಶ್ರೀಮನ್ಮಹಾರಾಜರ ಅನುಮೋದನೆಯನ್ನು ಪಡೆದಿರುತ್ತದೆ. ಸಂಸ್ಥಾನದ ಯಾವ ಭಾಗಕ್ಕಾದರೂ ಪ್ರಾಂತಿಕಾಧಿಕಾರಿಗಳು ಅಪೇಕ್ಷಿಸಿ ಇದನ್ನು ಇನ್ನು ಮುಂದೆ ವ್ಯವಹಾರಕ್ಕೆ ತಂದುಕೊಳ್ಳಬಹುದು.

ಶ್ರೀಮನ್ಮಹಾರಾಜರ ಸಂಸ್ಕೃತ ಕಲಾಶಾಲೆಯ ಬಹುಮಾನಪ್ರದಾನ ಮಹಾಸಭೆಯು ಶ್ರೀ ಪರಕಾಲಮಠದ ಸ್ವಾಮಿಗಳ ಅಧ್ಯಕ್ಷತೆಯಿಂದ ಕಳೆದ ೪ನೆ ತಾರೀಖಿನ ದಿವಸ ಪಾಠಶಾಲಾಭವನದಲ್ಲಿ ನಡೆದಿತು. ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಡಾಕ್ಟರ್ ಬ್ರಜೇಂದ್ರನಾಥಶೀಲ್‌ರವರು ಸಮಯೋಚಿತವಾಗಿ ಒಂದು ಭಾಷಣವನ್ನು ಮಾಡಿದರು. ಸಭಾಧ್ಯಕ್ಷರು ಸಂಕ್ಷಿಪ್ತವಾದ ಉಪನ್ಯಾಸವೊಂದನ್ನು ಮಾಡಿ ಬಹುಮಾನದ ಪುಸ್ತಕಗಳನ್ನು ಪ್ರದಾನಮಾಡಿದರು.

ಕುಣಿಗಲ್ ತಾಲ್ಲೂಕು ಎಡೆಯೂರುಹೋಬಳಿ ಕಗ್ಗೆರೆ ಗ್ರಾಮದಲ್ಲಿ ನಡೆಯುವ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ರಥೋತ್ಸವಕಾಲದಲ್ಲಿ 1922ನೇ ಮಾರ್ಚಿ ತಾ|| 6 ರ ಲಾಗಾಯ್ತು 6 ದಿವಸಗಳವರೆಗೆ ದನಗಳ ಪರಸೆ ನಡೆಯುತ್ತದೆ. ಜನಜಾನ್ವಾರುಗಳಿಗೆ ನೀರು ನೆರಳಿಗೆ ಅನುಕೂಲವಾಗಿಯೂ ಜಾತ್ರೆಯಲ್ಲಿ ಸೇರತಕ್ಕ ದನಗಳನ್ನು ಮಾರಾಟಮಾಡುವವರಿಗೂ ಕೊಂಡುಕೊಳ್ಳುವವರಿಗೂ ಊಟಕ್ಕೆ ಅನುಕೂಲವಾಗಿಯೂ ಇರುತ್ತದೆಂದು ತಾ|| ಬೋರ್ಡು ವೈಸ್‌ಪ್ರೆಸಿಡೆಂಟರವರು ತಿಳಿಸಿರುತ್ತಾರೆ.

ನಮ್ಮ ಸಂಸ್ಥಾನದ ಎ|| ಕೌನ್ಸಿಲ್ ೩ನೆ ಮೆಂಬರಾದ ಮಿ|| ಮೀರ್ ಹಂಜಾಹುಸೇನ್ ಸಾಹೇಬರವರು ತಮ್ಮ ಪರಿವಾರಾಧಿಕಾರಿಗಳೊಡನೆ ಶ್ರೀರಂಗಪಟ್ಟಣದಲ್ಲಿರುವ ಪ್ರಸಿದ್ಧ ವ್ಯವಸಾಯಗಾರರೂ, ಗೌ|| ಅನರರಿ ಲೆಕ್ಚರರೂ ಆದ ಮ|| ಸಿದ್ಧಲಿಂಗದೇವರು ಸ್ವಂತ ಪರಿಶ್ರಮದಿಂದಲೂ ವ್ಯವಸಾಯಶಾಸ್ತ್ರಾನುಭವದಿಂದಲೂ ಮಿತವ್ಯಯದಿಂದಲೂ ಅಧಿಕ ಫಲಪ್ರಾಪ್ತಿಯಿಂದಲೂ ನಿರ್ಮಿಸಿರುವ ಮನೋಜ್ಞವಾದ ತೋಟಕ್ಕೆ ದಯಮಾಡಿಸಿ ಎಲ್ಲ ವಿದ್ಯಮಾನಗಳನ್ನೂ ನೋಡಿ ಕೇಳಿ ಆನಂದಪಟ್ಟು ವಂದಿಸಿ ತೆರಳಿದರೆಂದು ಕೇಳಿದೆವು.

ಭರತಖಂಡದ ವೃತ್ತಾಂತಗಳು.

ಬಿಕನೀರ್ ಮಹಾರಾಜರು ಬರುವ ತಾ|| ೨೭ ರಲ್ಲಿ ಹೈದರಾಬಾದ್ ಸಂಸ್ಥಾನಕ್ಕೆ ದಯಮಾಡಿಸುತ್ತಾರೆ.

ಮಲಬಾರಿನ ವಿಪನ್ನ ರಕ್ಷಣಾರ್ಥವಾದ ಫಂಡಿಗೆ ಬೊಂಬಾಯಿಯಲ್ಲಿ ಇದುವರೆಗೆ ೧ ಲಕ್ಷದ ಮೇಲೆಯೇ ಚಂದಾ ಕೂಡಿದೆ.

ಕಂದಾಯವನ್ನು ಕೊಡಕೂಡದೆಂದು ಬೋಧಿಸುವುದು ರಾಜದ್ರೋಹಾಪರಾಧವಾಗುವುದೆಂದು ಗುಂಟೂರು ಜಿಲ್ಲಾ ಮೇಜಿಸ್ಟ್ರೇಟರು ಪ್ರಕಟನವನ್ನು ಮಾಡಿದ್ದಾರೆ.

ಈ ತಿಂಗಳಲ್ಲಿ ಅಲಹಾಬಾದಿನೊಳಗೆ ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆ ತೆಗೆದುಕೊಳ್ಳಲು ಏರ್ಪಾಟಾಗಿರುವುದು. ೭೭ಮಂದಿ ವಿದ್ಯಾರ್ಥಿಗಳು ಉಮೇದುವಾರರಾಗಿದ್ದಾರೆ.

ಕೃಷ್ಣಾ ಗುಂಟೂರು ಜಿಲ್ಲೆಗಳಲ್ಲಿ ಈಚೀಚೆಗೆ ಸರ್ಕಾರದ ಘೃಣೆಗಳ ಮತ್ತು ಅವರು ಅವಲಂಬಿಸಿದ ಕ್ರಮಗಳ ಭಯದಿಂದ ಅನೇಕ ರೈತರು ತಮ್ಮ ಭೂಕಂದಾಯದ ಮೊದಲನೆ ಕಂತನ್ನು ಸಲ್ಲಿಸಿಬಿಡುತ್ತಿದ್ದಾರೆ.

ಕರಾಚಿಯಿಂದ ಪ್ರಕಟವಾಗುವ ಸಿಂದ್ ಅಬ್ಜರ್ವರ್ ಎಂಬ ದೈನಿಕ ಪತ್ರಿಕೆಯು ತನಗೆ ದಿಲ್ಲಿಯಿಂದ ಬರೆದುಬಂದಿರುವ ಲೇಖನದಿಂದ ಗಾಂಧಿಯವರನ್ನು ಸರ್ಕಾರದವರು ಇಷ್ಟರಲ್ಲೇ ಹಿಡಿಯಲಿಕ್ಕೆ ಹವಣಿಸಿಕೊಂಡಿದ್ದಾರೆಂದು ತಿಳಿಯಬರುತ್ತದೆಂದು ಪ್ರಕಟಿಸಿದೆ.

ಪೂಣೆಯಲ್ಲಿ ಮೇಜಿಸ್ಟ್ರೇಟರ ಆಜ್ಞೆಯನ್ನು ಧಿಕ್ಕರಿಸಿ ನರಸಿಹ್ಮ ಚಿಂತಾಮಣಿ ಕೇಳ್ಕರ್‌ರವರು ಸಾರಾಯಿ ಅಂಗಡಿಯ ಹತ್ತಿರ ಬೋಧಿಸಿದರೆಂಬ ತಪ್ಪಿತಕ್ಕಾಗಿ ದಂಡಾಧಿಕಾರಿಯು ಅವರಿಗೆ ೫೦ ರೂ. ದಂಡವನ್ನು ವಿಧಿಸಿದರು. ಆದರೆ ಅವರು ಅದನ್ನು ಸಲ್ಲಿಸದೆ ಧಿಕ್ಕರಿಸಿದರು. ಸಾರಾಯಿ ಅಂಗಡಿಯ ಹತ್ತಿರ ನಿಂತು ಬೋಧಿಸುವುದು ನನ್ನ ಕರ್ತವ್ಯವೆಂದು ಹೇಳಿದರು.

ಸಮಷ್ಟಿ ಶಾಸನೋಲ್ಲಂಘನೆಯ ನಿಮಿತ್ತವಾಗಿ ಸರ್ಕಾರಿ ಕಂದಾಯವನ್ನು ಕೊಡದೆ ನಿಲ್ಲಿಸಿಬಿಡಲಿಕ್ಕೆ ಗಾಂಧಿಯವರ ಅಂಗೀಕಾರವನ್ನು ಪಡೆದವರ ಹೊರತು ಉಳಿದ ಭಾಗದವರೆಲ್ಲಾ ಕಂದಾಯವನ್ನು ಸಲ್ಲಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಂಘದವರು ಸೂರತ್‌ನಗರದಲ್ಲಿ ಹಕೀಂ ಅಜ್ಮಲ್‌ಖಾನರ ಅಧ್ಯಕ್ಷತೆಯಿಂದ ಕೂಡಿದ್ದ ಸಭೆಯಲ್ಲಿ ತೀರ್ಮಾನಿಸಿ ಪ್ರಕಟಿಸಿದ್ದಾರೆ.

ಆನಿಬೆಸೆಂಟಮ್ಮನವರಿಂದ ಕೃಷ್ಣಾವತಾರನೆಂದು ಕರೆಯಲ್ಪಡುತ್ತ ೧೦ ವರ್ಷಗಳ ಕೆಳಗೆ ಸೀಮೆಗೆ ಸಾಗಿಸಲ್ಪಟ್ಟಿದ್ದ ಜಿಡ್ಡು ಕೃಷ್ಣಮೂರ್ತಿ ಸಹೋದರರುಗಳು ಈಗ ಮದ್ರಾಸಿನ ಅದ್ಯಾರಿಗೆ ಬಂದು ಸೇರಿದ್ದಾರಂತೆ. ಕೃಷ್ಣಮೂರ್ತಿಯು ಈಗ ಒಂದು ಮಾಸಪತ್ರಿಕೆಗೆ ಸಂಪಾದಕರಾಗಿರುವಂತೆ. ಅವರ ತಮ್ಮ ನಿತ್ಯಾನಂದಂ ಆರ್ಡರ್ ಆಫ್ ದಿ ಸ್ಟಾರಿಗೆ ಕಾರ್ಯದರ್ಶಿಯಂತೆ.

ಪಾಲಘಾಟಿನಲ್ಲಿ ಒಬ್ಬ ವಿದ್ಯಾರ್ಥಿಯು ತನ್ನನ್ನು ಶಾಲಾಮುಖ್ಯೋಪಾಧ್ಯಾಯನು ಅಕ್ರಮವಾಗಿ ಹೊಡೆದನೆಂದು ಅಲ್ಲಿಯ ಸಬ್ ಜಡ್ಜರ ಕೋರ್ಟಿನಲ್ಲಿ ವ್ಯಾಜ್ಯ ಹೂಡಲಾಗಿ ಜಡ್ಜರು ವಿಚಾರಣೆಮಾಡಿ, ಉಪಾಧ್ಯಾಯನು ೧೫೦ ರೂ. ಪರಿಹಾರವನ್ನು ವಿದ್ಯಾರ್ಥಿಗೆ ಕೊಡಬೇಕೆಂದು ತೀರ್ಮಾನಿಸಿದರು. ಉಪಾಧ್ಯಾಯನು ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಲಾಗಿ ವಿದ್ಯಾರ್ಥಿಗಳನ್ನು ಉಪಾಧ್ಯಾಯರು ಮಿತವಾಗಿ ದಂಡಿಸುವುದು ತಪ್ಪಲ್ಲವೆಂದೂ ಮುಖ್ಯೋಪಾಧ್ಯಾಯನು ನಿರ್ದೋಷಿಯೆಂದೂ ತೀರ್ಮಾನಿಸಿ ಕೆಳಕೋರ್ಟಿನ ತೀರ್ಪನ್ನು ಹೊಡೆದುಬಿಟ್ಟರು.

ಬೊಂಬಾಯಿ ಸರ್ಕಾರದವರು ತಮ್ಮ ಎಲ್ಲಾ ಶಾಖಾಧಿಕಾರಿಗಳಿಗೂ ಹೀಗೆ ಅಪ್ಪಣೆಮಾಡಿದ್ದಾರೆ—"ಸರ್ಕಾರದ ಬೊಕ್ಕಸದ ಸ್ಥಿತಿಯು ತೃಪ್ತಿಕರವಾಗಿಲ್ಲ. ಕಂದಾಯಗಳನ್ನು ಹೆಚ್ಚಿಸಬೇಕು ಇಲ್ಲವೆ ಸರ್ಕಾರಿ ಉದ್ಯೋಗಸ್ಥರ ಸಂಖ್ಯೆಯನ್ನು ಕಡಿಮೆ ಹಾಕಬೇಕಾಗಿದೆ. ಅದುಕಾರಣ ವರ್ಷದ ಕೊನೆಯೊಳಗೆ ಸ್ವಲ್ಪ ಧನಶೇಷವು ಉಳಿಯುವಂತೆ ಮಾಡುವುದಕ್ಕಾಗಿ ವೆಚ್ಚವನ್ನು ತಗ್ಗಿಸಲು ಸರ್ವರೂ ಪ್ರಯತ್ನಪಡಬೇಕು. ಚಿಲ್ಲರೆಯ ವೆಚ್ಚಗಳನ್ನೂ ಸಂಚಾರದ ವೆಚ್ಚಗಳನ್ನೂ ಅಧಿಕಾರಿಗಳು ಕಡಿಮೆ ಹಾಕಿಕೊಳ್ಳಬೇಕು. ರಜಾ ತೆಗೆದುಕೊಳ್ಳುವುದನ್ನೂ ಕೂಡ ಕಡಿಮೆ ಹಾಕುವುದು ಯುಕ್ತವು.

ಈಗಣ ರಾಜಕೀಯ ಚಳವಳದಲ್ಲಿ ಮಿತಿಮೀರಿ ನಡೆದ ಪುರುಷರಿಗೆ ಮಾತ್ರ ಶಿಕ್ಷೆಗಳು ವಿಧಿಸಲ್ಪಡುವುದನ್ನು ಕೇಳುತ್ತಿದ್ದೆವು. ಸ್ತ್ರೀಯರು ಚಳವಳಿಯಲ್ಲಿ ಸೇರಿದ್ದು ಹಿಡಿಯಲ್ಪಟ್ಟರೂ ಕೂಡಲೇ ಬಿಡಲ್ಪಡುತ್ತಿದ್ದರು. ಅದರ ಮೇಲೆ ರಾಜಕೀಯ ರಂಗದಲ್ಲಿ ಸ್ತ್ರೀಯರ ಪ್ರವೇಶವೇ ಹೆಚ್ಚಾಗುತ್ತಿರುವುದು. ಕಡೆಗೆ ಸ್ತ್ರೀಯರ ಮೇಲೂ ಪ್ರಭುತ್ವದವರು ಅಸ್ತ್ರಪ್ರಯೋಗ ಮಾಡಲು ಸಿದ್ಧರಾಗಬೇಕಾಗಿ ಬಂದಿರುವುದು. ಡಾರ್ಜಿಲಿಂಗಿನಲ್ಲಿ ಸಾವಿತ್ರೀದೇವಿ ಎಂಬಾಕೆಯು ೧೪೪ನೆ ಸೆಕ್ಷನ್ ಮೇರೆ ಮಾಡಲ್ಪಟ್ಟ ಸರ್ಕಾರಿ ಅಪ್ಪಣೆಯನ್ನು ಮೀರಿ ನಡೆದ ತಪ್ಪಿಗಾಗಿ ೩ ತಿಂಗಳ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಳು.

೧೯೧೯ನೆ ವರ್ಷದಲ್ಲಿ ಅಮೃತಸರದೊಳಗೆ ರಾಷ್ಟ್ರೀಯ ಮಹಾಸಭಾಮಂಟಪವನ್ನು ಕಟ್ಟಿಕೊಟ್ಟ ಕಂಟ್ರಾಕ್ಟರಾದ ಬಾಂಡ್ ಬ್ರದರ್ಸ್ ಕಂಪನಿಯವರು ತಮಗೆ ಬರಬೇಕಾದ ೯೧ ಸಾವಿರ ರೂ. ಗಳಿಗಾಗಿ ಸನ್ಮಾನ ಸಂಘದವರ ಮೇಲೆ ಅಮೃತಸರದ ಸಬ್‌ಜಡ್ಜು ಕೋರ್ಟಿನಲ್ಲಿ ವ್ಯಾಜ್ಯ ಹೂಡಿರುವರು. ಸನ್ಮಾನಸಂಘವು ರಿಜಿಸ್ಟರಾದ ಸಂಘವಲ್ಲವಾದುದರಿಂದ ಕಾರ್ಯನಿರ್ವಾಹಕರನ್ನು ಮಾತ್ರವೇ ಅಲ್ಲದೆ ಸಂಘ ಸಭಿಕರನ್ನೆಲ್ಲಾ ಪ್ರತಿವಾದಿ ಸ್ಥಾನಕ್ಕೆ ಸೇರಿಸಿ ವ್ಯಾಜ್ಯತರಬೇಕೆಂದು ನ್ಯಾಯಾಧಿಪತಿಗಳು ಅಪ್ಪಣೆಮಾಡಿದರು. ಈಗಣ ಕಾಂಗ್ರೆಸ್ ನಾಯಕರು ಸಭಾಸಂಬಂಧಿ ಗೌರವವನ್ನು ಈ ಸ್ಥಿತಿಗೆ ಬರಲು ಬಿಟ್ಟುದು ಅನ್ಯಾಯ.

ಕಳೆದ ತಾ|| ೬ರಲ್ಲಿ ಪಂಡಿತ ಮದನಮೋಹನ ಮಾಳವ್ಯರವರು ಮ|| ಗಾಂಧಿಯವರಿಗೆ ಕೊಟ್ಟ ತಂತ್ರೀವಾರ್ತೆಯಲ್ಲಿ—"ನಾನು ಎಲ್ಲ ವಿಷಯಗಳನ್ನೂ ಕುರಿತು ಚರ್ಚಿಸಲಿಕ್ಕಾಗಿ ಬೊಂಬಾಯಿಗೆ ಬರುವವನಾಗಿದ್ದೇನೆ. ಒಂದು ವೇಳೆ ಈಗಣ ಪರಿಸ್ಥಿತಿಯಲ್ಲಿ ರೌಂಡ್‌ಟೇಬಲ್ ಸಮಾವೇಶವು ಜರುಗದೆ ಹೋದರೂ ಯಾವಾಗ್ಗಾದರೂ ಅದು ತಪ್ಪದೆ ಜರುಗಿಯೇ ಜರುಗುವುದೆಂದು ನೀವು ನಂಬಬಹುದು. ಬೊಂಬಾಯಿ ಸಭೆಯವರಿಂದ ಏರ್ಪಡಿಸಲ್ಪಟ್ಟಿರುವ ಉಪಸಂಘದವರು ಸಮಾವೇಶಕ್ಕಾಗಿ ಕೃಷಿಮಾಡುತ್ತಿರುವರು. ದೇಶಾಭ್ಯುದಯಕ್ಕಾಗಿ ಎಲ್ಲ ವಿಧದ ಪ್ರಯತ್ನಗಳೂ ವ್ಯರ್ಥವಾಗುವವರೆಗೂ ಶಾಸನೋಲ್ಲಂಘನವನ್ನು ಆರಂಭಿಸಕೂಡದೆಂದು ನಾನು ತಿಳಿಯುತ್ತೇನೆ" ಎಂದು ತಿಳಿಯಪಡಿಸಿದ್ದಾರೆ.

ಈಸಲ ನೆರೆದಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಅರ್ಹತೆಯುಳ್ಳ ಸ್ತ್ರೀಯರಿಗೆ ಶಾಸನಸಭಾ ಸಭಿಕರನ್ನು ಆರಿಸುವಾಗ್ಗೆ ಓಟನ್ನು ಕೊಡುವ ಅಧಿಕಾರವಿರಬೇಕು ಎಂಬ ತೀರ್ಮಾನವನ್ನು ಎಸ್. ಎಂ. ಜೋಷಿಯವರು ತಂದಿದ್ದರು. ಅದಕ್ಕೆ ಪ್ರತಿಕೂಲವಾಗಿ ಕೆಲವರೂ ಅನುಕೂಲವಾಗಿ ಕೆಲವರೂ ವಾದಿಸಿದರು. ತಮ್ಮ ಮಹಮ್ಮದೀಯ ಮತದ ಸ್ತ್ರೀಯರಿಗೆ ಇದರ ಸಂಬಂಧವೇ ಬೇಕಿಲ್ಲವೆಂದೂ ಯಾರಿಗೆ ಬೇಕೋ ಅವರಿಗೆ ಮಾತ್ರ ಕೊಡಬೇಕೆಂದೂ ಕೆಲ ಮಹಮ್ಮದೀಯ ಸಭಿಕರು ಖಂಡಿತವಾಗಿ ನುಡಿದರು. ಕಡೆಗೆ ತೀರ್ಮಾನವನ್ನು ಓಟಿಗೆ ಇಡಲು, ೪೧ ಮಂದಿಗಳು ಅನುಕೂಲವಾಗಿಯೂ ೧೭ ಮಂದಿ ಪ್ರತಿಕೂಲವಾಗಿಯೂ ಓಟುಕೊಟ್ಟ ಕಾರಣ ತೀರ್ಮಾನವು ಹರ್ಷಧ್ವನಿಯಿಂದ ಅಂಗೀಕೃತವಾಯಿತು.

ಜನರ ಮನಸ್ಸನ್ನು ರೇಗಿಸುವುದಕ್ಕೆ ಯಾವುದಾದರೊಂದುಪಾಯವನ್ನು ಕೆಲ ಅಸಹಾಯವಾದಿಗಳು ಕಲ್ಪಿಸುತ್ತಿರುವಂತೆ ಕಾಣುತ್ತದೆ. ಅಲಿಸೋದರರೇ ಮೊದಲಾದವರು ಕರಾಚಿಯ ಕಾರಾಗೃಹದಲ್ಲಿ ಆಹಾರವನ್ನು ಪರಿತ್ಯಜಿಸಿ ಉಪವಾಸ ಮಾಡುತ್ತಿದ್ದಾರೆಂದು ಕರಾಚಿ ಜಿಲ್ಲಾ ಕಾಂಗ್ರೆಸ್ ಸಂಘದ ಕಾರ್ಯದರ್ಶಿಯು ಪತ್ರಿಕೆಗಳಲ್ಲಿ ಪ್ರಕಟಿಸಿದರು. ಆದರೆ ಎಂಗ್ ಇಂಡ್ಯಾ ಪತ್ರಿಕೆಗೆ ಶೌಕತಾಲಿಯವರು ಒಂದು ಲೇಖನವನ್ನು ಬರೆದು ಅದರಲ್ಲಿ—ತಮ್ಮನ್ನೆಲ್ಲಾ ಕಾರಾಗೃಹದ ಉದ್ಯೋಗಿಗಳು ಚೆನ್ನಾಗಿ ಆದರಿಸುತ್ತಿರುವರೆಂದೂ, ಭೋಜನವನ್ನು ಬಿಟ್ಟು ಹಸಿದುಬಿದ್ದಿರುವುದು ಕಾರಾಗೃಹದಲ್ಲಿರುವ ಮಹಮ್ಮದೀಯರಿಗೆ ಅನುಚಿತವಾದ ಕಾರ್ಯವೆಂದೂ ತಿಳಿಯಿಸಿರುತ್ತಾರೆ. ಇದರಿಂದ ಕಾರ್ಯದರ್ಶಿಯು ಪ್ರಕಟಿಸಿದ ಸುದ್ದಿಯು ಸುಳ್ಳೆಂದು ಸಿದ್ಧವಾಗಿರುತ್ತದೆ.

ರೌಂಡ್ ಟೇಬಲ್ ಸಮಾವೇಶಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ಉಪಸಂಘದವರು ಭಾರತ ಪ್ರಭುತ್ವದವರೊಡನೆ ತಂತಿಯ ಮೂಲಕ ಪತ್ರವ್ಯವಹಾರವನ್ನು ನಡೆಯಿಸುತ್ತಿದ್ದರು. ದೇಶೀಯ ನಾಯಕರ ಸಮಾವೇಶವು ನಡೆಯಲಿಕ್ಕೆ ಪ್ರಧಾನವಾದ ವಿಷಯವು ಯಾವುದೋ ಅದೇ (ಎಂದರೆ ಅಸಹಾಯವಾದಿಪಕ್ಷದವರ ಬಾಧ್ಯತೆಯು) ಈ ಸಭಾನಿರ್ಧಾರದಲ್ಲಿಲ್ಲದಿರುವುದರಿಂದ ಇದನ್ನೆಲ್ಲಾ ಆದ್ಯಂತವಾಗಿ ಪರಿಶೀಲಿಸಿದುದರಲ್ಲಿ ಇದೇನೂ ಫಲಕರವಾದ ಪ್ರಯತ್ನವಾಗಿ ತೋರುವುದಿಲ್ಲವೆಂದು ವೈಸ್ರಾಯರು ತಿಳಿಯುತ್ತಾರೆಂಬುದಾಗಿ ವೈಸ್‌ರಾಯರ ಪ್ರೈ|| ಸೆಕ್ರೆಟರಿಯವರಿಂದ ಅವರಿಗೆ ಪ್ರತ್ಯುತ್ತರವು ಬಂದಿದ್ದಿತು. ಅದರ ಮೇಲೆ ಮತ್ತೆ ಅವರು ಪತ್ರವ್ಯವಹಾರವನ್ನು ನಡೆಯಿಸುವವರಾಗಿದ್ದರು. ಈ ಮಧ್ಯೆ ಗಾಂಧಿಯವರು ಸ್ವತಃ ವೈಸ್ರಾಯರಿಗೆ ಅಂತ್ಯಸಂದೇಶವನ್ನು ಬರೆದುಬಿಟ್ಟುದರಿಂದ ಮಾಳವ್ಯಾ ಸಭೆಯ ಉಪಸಂಘದವರಿಗೆ ಸಮಾವೇಶದಲ್ಲಿ ಅಷ್ಟೊ ಇಷ್ಟು ಉಳಿದಿದ್ದ ಆಶೆಯೆಲ್ಲಾ ಭಗ್ನವಾಗಿ ಹೋಯಿತಂತೆ. ನಮ್ಮ ಪ್ರಯತ್ನವೆಲ್ಲಾ ಇದರಿಂದ ವ್ಯರ್ಥವಾಗಿ ಹೋಯಿತೆಂದೂ, ನೀವು ಅಂಥ ಲೇಖನವನ್ನು ವೈಸ್‌ರಾಯರಿಗೆ ಬರೆದುದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆಂದೂ, ಆಶಾಭಂಗವಾಯಿತೆಂದೂ, ಉಪಸಂಘ ಕಾರ್ಯದರ್ಶಿಗಳು ಗಾಂಧಿಯವರಿಗೆ ಬರೆದು, ಧೂಳಿಯನ್ನೆಲ್ಲಾ ಅವರ ತಲೆಯಮೇಲೆ ಹಾಕಿ ತೆಪ್ಪಗಾದರು.

ಬರ್ಡೋಲಿ ತಾಲ್ಲೂಕಿಗೆ ಮ|| ಗಾಂಧಿಯವರೂ ಪಟೇಲರೂ ಹೋಗಿರುವರಷ್ಟೆ. ಜನವರಿ ತಾ|| ೩೦ರಲ್ಲಿ ೮-೯ ಸಹಸ್ರ ಗ್ರಾಮಾಂತರದ ಜನರಿಂದ ಕೂಡಿದ ದೊಡ್ಡ ಸಭೆಯಲ್ಲಿ ಪಟೇಲರು ಅಧ್ಯಕ್ಷರಾಗಿದ್ದರು. ಅವರೂ ಗಾಂಧಿಯವರೂ ಸಹ ಸಮಷ್ಟಿಶಾಸನೋಲ್ಲಂಘನದಲ್ಲಿರುವ ಕಷ್ಟಗಳನ್ನೆಲ್ಲಾ ವಿವರಿಸಿ ಹೇಳಿದುದಲ್ಲದೆ ದಿಲ್ಲಿಯ ಸಭೆಯ ನಿರ್ಧಾರದ ಪ್ರಕಾರ ಸರ್ವವಿಧವಾದ ಅರ್ಹತೆಯನ್ನು ಪಡೆದಿದ್ದವರೇ ಕಂದಾಯವನ್ನು ನಿಲ್ಲಿಸುವ ಕೆಲಸಕ್ಕೆ ಕೈ ಹಾಕಬೇಕೆಂದು ಉಪನ್ಯಾಸ ಮಾಡಿದರು. ಮತ್ತು ಇಲ್ಲಿ ಸ್ವಲ್ಪ ಮಾತ್ರ ಅಭಿವೃದ್ಧಿ ಸೂಚನೆಗಳು ಕಾಣುತ್ತಿವೆಯೇ ಹೊರತು ಅವು ಸಾಲವು; ಎಲ್ಲ ವಿಧದ ನಿಬಂಧನೆಗಳನ್ನೂ ನೀವು ಸರಿಯಾಗಿ ನೆರವೇರಿಸಿದನಂತರ ಸಮಷ್ಟಿಶಾಸನೋಲ್ಲಂಘನೆಗೆ ಉಪಕ್ರಮಿಸಬಹುದು; ಅದಕ್ಕೆ ಇನ್ನು ೧೫ ದಿನಗಳ ಗಡುವನ್ನು ಕೊಟ್ಟಿರುತ್ತೇನೆಂದು ಗಾಂಧಿಯವರು ಅಪ್ಪಣೆಕೊಡಿಸಿದರು. ಬಳಿಕ ಸಭಿಕರು ನಾವು ರಾಷ್ಟ್ರೀಯ ಸಭಾಸ್ಥಾಯಿ ಸಂಘದವರು ನಿರ್ಣಯಿಸಿರುವ ನಿಬಂಧನೆಗಳಂತೆಲ್ಲಾ ನಡೆಯಲು ಸಿದ್ಧರಾಗಿದ್ದೇವೆ. ನಾವು ಕಾರಾಗೃಹಕ್ಕೆ ಹೋಗಲಿಕ್ಕೂ ಏಟುಗಳನ್ನು ತಿನ್ನಲಿಕ್ಕೂ, ಪ್ರಾಣವನ್ನು ಒಪ್ಪಿಸಲಿಕ್ಕೂ ಸಿದ್ಧರಾಗಿದ್ದೇವೆ. ಅಂಥ ಸಂದರ್ಭಗಳಲ್ಲೆಲ್ಲಾ ಯಾವ ಪ್ರತಿಕ್ರಿಯೆಗೂ ಉಜ್ಜುಗಿಸದೆ ಶಾಂತಿಯಿಂದ ಅನುಭವಿಸಲಿಕ್ಕೆ ಸಿದ್ಧರಾಗಿದ್ದೇವೆ ಎಂದು ಮೊದಲಾದ ತೀರ್ಮಾನಗಳನ್ನು ಮಾಡಿದರು.

ಸಂಯುಕ್ತ ರಾಷ್ಟ್ರಗಳಿಗೆ ಸೇರಿದ ಗೋರಕ್‌ಪುರದಲ್ಲಿ ತಾ|| ೪ರಲ್ಲಿ ಅಸಹಾಯವಾದಿಗಳು ಸಂತೆಯಲ್ಲಿ ಮದ್ಯವನ್ನೂ ಮೀನನ್ನೂ ಮಾರುತ್ತಿದ್ದವರನ್ನು ತಡೆಯಲು ಪ್ರಯತ್ನಿಸಿದಾಗ ಅದನ್ನು ನಿಲ್ಲಿಸಲು ಪೋಲೀಸರು ಉಜ್ಜುಗಿಸಲು, ಪ್ರಜೆಗಳು ಪೋಲೀಸುಠಾಣವನ್ನು ಮುತ್ತಿದರು. ಅವರಿಗೂ ಪೋಲೀಸರಿಗೂ ಕದನವಾಯಿತು. ಕೆಲ ಪೋಲೀಸರೂ ಕೆಲ ಪ್ರಜೆಗಳೂ ಹತರಾದರು. ೨ ಪಕ್ಷದಲ್ಲೂ ಅನೇಕರಿಗೆ ಗಾಯಗಳಾಗಿರುವುವು. ೨೦೦೦ ಮಂದಿ ವಾಲಂಟಿಯರುಗಳು ಚೌಚೌರಾ ಪೋಲೀಸುಠಾಣವನ್ನು ಮುತ್ತಿ ಅದರೊಳಗಿದ್ದ ಎಲ್ಲ ಪೋಲೀಸರನ್ನೂ ಅವರಿಗೆ ಸಹಾಯಮಾಡಲು ಬಂದ ಸಾಯುಧರಾದ ೮ ಮಂದಿ ಪೋಲೀಸಾಳುಗಳನ್ನೂ ಒಬ್ಬ ಚೌಕೀದಾರನನ್ನು ಕೂಡ ಕೊಂದುಬಿಟ್ಟರು. ಠಾಣಾ ಮನೆಯನ್ನು ಸುಟ್ಟುಬಿಟ್ಟರು. ಹೆಣಗಳ ಮೇಲಿದ್ದ ಉಡುಪುಗಳನ್ನೆಲ್ಲಾ ಕಳೆದು ಹೆಣಗಳನ್ನು ಉರಿಯುತ್ತಿದ್ದ ಬೆಂಕಿಯೊಳಕ್ಕೆ ಬಿಸುಡಿಬಿಟ್ಟರು. ಗೋರಕ್‌ಪುರಿಗೂ ಈ ಚೌರಿಚೌರಾನಗರಕ್ಕೂ ಮಧ್ಯದಲ್ಲಿರುವ ಲೋಹಮಾರ್ಗವನ್ನು ಧ್ವಂಸಮಾಡಿದರು. ಈ ಗದ್ದಲದಲ್ಲಿ ಇಬ್ಬರು ಸಬ್ ಇನ್ಸ್‌ಪೆಕ್ಟರೂ ೧೫ ಮಂದಿ ಕಾನ್ಸ್‌ಟೇಬಲ್ಲುಗಳೂ ಸತ್ತಿರುವರೆಂದು ಲಕ್ನೋ ತಂತ್ರೀವಾರ್ತೆಯಿಂದ ತಿಳಿದುಬಂದಿದೆ. ಬರೇಲಿಯಲ್ಲಿ ತಾ|| ೫ ದಿನ ಬೆಳಗ್ಗೆ ಸರ್ಕಾರದ ಆಜ್ಞೆಯನ್ನುಲ್ಲಂಘಿಸಿ ೫೦೦೦ ಮಂದಿ ವಾಲಂಟಿಯರುಗಳು ಬೀದಿಯಲ್ಲಿ ಉತ್ಸವ ಹೊರಟರು. ಪೋಲೀಸರು ಗುಂಪನ್ನು ಚದರಿಸಿದರು. ಮತ್ತೆ ಅವರೆಲ್ಲಾ ಟವನ್‌ಹಾಲಿನ ಬಳಿಯಲ್ಲಿ ಸೇರಿ ಅದನ್ನಾಕ್ರಮಿಸಲಿಕ್ಕೆ ಯತ್ನಿಸಿ ದೌರ್ಜನ್ಯಕ್ಕೆ ತೊಡಗಿದರು. ಆಗ ತುಪಾಕಿಗಳನ್ನು ಹಾರಿಸಲಿಕ್ಕೆ ಜಿಲ್ಲಾ ಮೇಜಿಸ್ಟ್ರೇಟರು ಅಪ್ಪಣೆ ಮಾಡಿದರು. ಸೈನಿಕರನ್ನೂ ಬರಮಾಡಿದರು. ಜಿಲ್ಲಾ ಮೇಜಿಸ್ಟ್ರೇಟರಿಗೂ ಪೋಲೀಸ್ ಸೂಪರಿಂಟೆಂಡೆಂಟರಿಗೂ ಕಲ್ಲೇಟು ಬಿದ್ದುವು. ವಾಲಂಟಿಯರುಗಳಲ್ಲಿ ಇಬ್ಬರು ಸತ್ತರು, ೪ ಮಂದಿಗೆ ಗಾಯವಾಯಿತು.

ಕಳೆದ ತಾ|| ೩ರಲ್ಲಿ ಬೊಂಬಾಯಿಗೆ ಬಂದ ಮಾಸಿಡೋನಿಯಾ ಎಂಬ ಅಂಚೆ ಹಡಗಿನಲ್ಲಿ H. H. ಆಗಾಖಾನರು ದಯಮಾಡಿಸಿದರು. ಅವರನ್ನು ಬೊಂಬಾಯಿ ಮಹಮ್ಮದೀಯರು ಅತ್ಯಂತ ಗೌರವಭಕ್ತಿಯಿಂದ ಸ್ವಾಗತಿಸಿದರು. ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯು ಅವರನ್ನು ಕಂಡು ಖಿಲಾಫತ್ ವಿಷಯವಾಗಿ ಪ್ರಶ್ನೆಮಾಡಿದುದರಲ್ಲಿ ಆಗಾಖಾನರು ಹೀಗೆ ಹೇಳಿರುವರು—"ಖಿಲಾಫತ್ ವಿಷಯವಾಗಿ ಮಾಂಟೆಗೂರವರು ಮನಃಪೂರ್ವಕವಾಗಿ ಕೆಲಸಮಾಡಿದರೆಂದು ಹೇಳುವುದೇ ಸಾಲದು. ಅವರು ಖಿಲಾಫತ್ ಬಾಧ್ಯತೆಯನ್ನೇ ತನ್ನ ತಲೆಯಮೇಲೆ ಹೊತ್ತುಕೊಂಡರು. ಮತ್ತಾರಾದರೂ ಸರಿ ಅಥವಾ ಗಾಂಧಿಯವರಾದರೂ ಸರಿ ಸ್ಟೇಟ್ ಸೆಕ್ರೆಟರಿ ಸ್ಥಾನದಲ್ಲಿ ಈಗ ಇದ್ದರೆ ಮಾಂಟೆಗೂರವರು ಮಾಡಿದುದಕ್ಕಿಂತಲೂ ಹೆಚ್ಚಾಗಿ ಏನನ್ನೂ ಮಾಡಿರಲಾರರು. ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರು ಆಂಗ್ಲ ದೇಶಕ್ಕೆ ಹೋಗಿ ಸೇರಿದ ಬಳಿಕ ಖಿಲಾಫತ್ ವಿಷಯವಾಗಿ ಅತ್ಯಂತ ದೀಕ್ಷೆಯಿಂದ ಕೆಲಸಮಾಡುತ್ತಿದ್ದಾರೆ. ಅವರಿಬ್ಬರೂ ಸಫಲಮನೋರಥರಾಗದೆ ಹೋದರೂ ತುರ್ಕಿ ಸಮಸ್ಯಾಪರಿಷ್ಕಾರವನ್ನು ಕುರಿತು ಆಶಾಭಂಗಗೊಳ್ಳಬೇಕಾದುದಿಲ್ಲ. ಆಂಗ್ಲ ದೇಶದಲ್ಲಿ ಬೇರೆಬೇರೆ ಪಕ್ಷಗಳವರ ಅಭಿಪ್ರಾಯಗಳು ಬೇರೆಬೇರೆ ತೆರನಾಗಿದ್ದರೂ, ಭರತಖಂಡದಮೇಲೆ ಸಾನುಭೂತಿಯುಳ್ಳ ಪಕ್ಷಗಳೂ ಇರುವುವು. ಫ್ರಾನ್ಸ್ ಪ್ರಜಾಭಿಪ್ರಾಯವು ತುರ್ಕಿ ಸಮಸ್ಯೆಯ ವಿಷಯದಲ್ಲಿ ಅನುಕೂಲವಾಗಿದೆ. ಲಾರ್ಡ್ ನಾರ್ತ್‌ಕ್ಲಿಫ್‌ರವರಿಗೆ ನಂಬುಗೆ ಹುಟ್ಟಿಸುವುದು ಕಷ್ಟ. ಅವರಿಗೆ ಒಂದು ಸಲ ನಂಬುಗೆ ಹುಟ್ಟಿಬಿಟ್ಟರೆ ಅವರಿಗೆ ವಿಶಾರದ ದೃಢಾಭಿಮಾನಿಯಾದ ಮಿತ್ರನು ಬೇರೊಬ್ಬನಿಲ್ಲ. ತುರ್ಕಿ ಸಮಸ್ಯಾಪರಿಷ್ಕಾರ ವಿಷಯದಲ್ಲಿ ಸಹಾಯವಾದಿಗಳೂ ಅಸಹಾಯವಾದಿಗಳೂ ಸೇರಿ ಕೆಲಸಮಾಡುವುದು ಅತ್ಯವಶ್ಯಕ. ಕಾರ್ಯಸಾಫಲ್ಯದ ಅವಕಾಶವು ಸ್ವಲ್ಪ ಕಾಣಬರುತ್ತಿದ್ದರೂ ತಮ್ಮ ಪ್ರಯತ್ನವನ್ನು ಉಭಯಪಕ್ಷದವರೂ ಸ್ವಲ್ಪವೂ ತಗ್ಗಿಸಕೂಡದು."

ವಿದೇಶದ ವೃತ್ತಾಂತಗಳು.

ಐರ್ಲೆಂಡಿನವರು ನಾನಾ ರಾಷ್ಟ್ರಸಮ್ಮೇಳನದಲ್ಲಿ ತಮಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೋರುತ್ತಿದ್ದಾರೆ.

ಜರ್ಮನಿಯಲ್ಲಿ ರೈಲ್ವೆ ಕೆಲಸಗಾರರು ಮುಷ್ಕರಹಿಡಿದು ನಿಂತುಬಿಟ್ಟಿದ್ದಾರೆ. ಕಲ್ಲಿದ್ದಲಿಲ್ಲದೆ ಕ್ರುಪ್ ಯಂತ್ರಾಲಯವು ಮುಚ್ಚಿಹೋಗಿದೆ.

ಆಸ್ಟ್ರಿಯಾದ ವಿಯನ್ನಾಪಟ್ಟಣದಲ್ಲೂ ಅಮೇರಿಕಾದ ನ್ಯೂಯಾರ್ಕ್‌ಪಟ್ಟಣದಲ್ಲೂ ಇನ್‌ಫ್ಲುಯೆಂಜಾ ವ್ಯಾಧಿಯು ತೀವ್ರವಾಗಿರುವುದಂತೆ.

ಇಟಲಿ ಪ್ರಭುತ್ವದ ವಿದೇಶಾಂಗ ವಿಧಾನವು ಅಲ್ಲಿಯ ಪಾರ್ಲಿಮೆಂಟಿನವರಿಗೆ ಒಪ್ಪದೆಹೋದ ಕಾರಣ ಮಂತ್ರಿಮಂಡಲದವರೆಲ್ಲಾ ರಾಜೀನಾಮೆ ಕೊಟ್ಟರು.

ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೆಗೂರವರು ಚಕ್ರವರ್ತಿಯವರ ಸಂದರ್ಶನವನ್ನು ಮಾಡಿಕೊಂಡು ಸಂಭಾಷಿಸಿ ಬಂದರಂತೆ. ಭರತಖಂಡ ಸಮಸ್ಯೆಯು ಇದಕ್ಕೆ ಕಾರಣವಾಗಿದ್ದರೆ ಸಂತೋಷವೇ.

ಮತ್ತೆ ಅನುಕೂಲಪರಿಸ್ಥಿತಿಯಿಲ್ಲದಿದ್ದರೂ ಗ್ರೀಕರು ತುರ್ಕಿಯವರ ಮೇಲೆ ಉಸ್ಕಿಷರ್ ಪ್ರಾಂತದಲ್ಲಿ ಯುದ್ಧವನ್ನಾರಂಭಿಸಿದರೆಂದೂ ತುರುಕರು ಅವರನ್ನು ಹೊಡೆದೋಡಿಸಿದರೆಂದೂ ಅಂಗೋರಾದಿಂದ ಸುದ್ದಿಬಂದಿದೆ.

ಅಂಗೋರಾ ಪ್ರಭುತ್ವದವರ ಇಷ್ಟಪ್ರಕಾರ ರಷ್ಯಾದ ಸೋವಿಯಟ್ ಪ್ರಭುತ್ವದವರು ಎನ್ವರ್ ಪಾಷಾರವರನ್ನು ಹಿಡಿದುಕೊಟ್ಟಿರುವರು. ಇವರನ್ನು ಅಂಗೋರಾ ಪ್ರಭುತ್ವದವರು ರಾಜದ್ರೋಹಾಪರಾಧಕ್ಕಾಗಿ ವಿಚಾರಣೆ ಮಾಡುವವರಾಗಿದ್ದಾರಂತೆ.

ಅಮೇರಿಕಾದಲ್ಲಿ ವಿಪರೀತವಾಗಿ ಮಂಜುಸುರಿದು ೨ ಅಡಿ ಮಂದಕ್ಕೆ ಮಂಜಿನಗಡ್ಡೆಯು ಹೆಪ್ಪುಗಟ್ಟಿ ಕುಳಿತಿತು. ಇದರಿಂದ ಒಂದು ಸಿನಿಮಾ ನಾಟಕಶಾಲೆಯು ಕುಸಿದು ಬಿದ್ದುದರಿಂದ ಒಳಗಿದ್ದವರಲ್ಲಿ ೧೧೨ ಮಂದಿ ಸತ್ತರು. ೧೩೪ ಮಂದಿಗಳಿಗೆ ಗಾಯವಾಯಿತು.

ಲಾರ್ಡ್ ಬರ್ಕನ್‌ಹೇಡ್‌ರವರು ಲಂಡನ್‌ಪಟ್ಟಣದಲ್ಲಿ ಒಂದುಕಡೆ ಉಪನ್ಯಾಸ ಮಾಡುವಾಗ್ಗೆ—"ಭರತಖಂಡದಲ್ಲೂ ಈಜಿಪ್ಟಿನಲ್ಲೂ ಬಲವತ್ತರವಾದ ಉದ್ಯಮಗಳು ಹಬ್ಬುತ್ತಿವೆ. ಅವೆರಡರಲ್ಲಿ ಯಾವುದಾದರೊಂದರೊಳಗೆ ನಾವು ಯಾವತೆರದ ಬಲದಿಂದ ಅವನ್ನು ಗೆದ್ದೆವೋ ಆ ಬಲವನ್ನೇ ಮತ್ತೆ ಪ್ರದರ್ಶಿಸಬೇಕಾಗುವುದು" ಎಂದು ಹೇಳಿದರು.

ಪ್ಯಾರಿಸ್ಸಿನಲ್ಲಿ ಕೂಡಲಿಕ್ಕಿರುವ ಸಭೆಯಲ್ಲಿ ತುರ್ಕಿ ಸಮಸ್ಯೆಯು ಇತ್ಯರ್ಥವಾಗುವುದೆಂಬ ನಿರೀಕ್ಷಣೆಯು ಬಹಳವಾಗಿದ್ದಿತು. ಆದರೆ ಏನೋ ಅನಿವಾರ್ಯಕಾರಣಗಳಿಂದ ಆ ಸಮಾವೇಶವು ಸದ್ಯಃ ನಡೆಯದೆ ನಿಲ್ಲಬೇಕಾಯಿತಂತೆ. ಇದಕ್ಕಾಗಿ ಆಂಗ್ಲರು ವಿಷಾದಪ್ರದರ್ಶನವನ್ನು ಮಾಡಿದ್ದಾರೆ. ಆಂಗ್ಲ ಫ್ರಾನ್ಸ್ ಮನೋವೈಷಮ್ಯವೇ ಇದಕ್ಕೆ ಕಾರಣವಾಗಿರಬೇಕೆಂದು ತೋರುತ್ತದೆ.

ಐರ್ಲೆಂಡಿನಲ್ಲಿ ಉತ್ತರಭಾಗ ದಕ್ಷಿಣಭಾಗಗಳ ಪ್ರಭುತ್ವಗಳವರಿಬ್ಬರೂ ತಮ್ಮತಮ್ಮ ಎಲ್ಲೆಕಟ್ಟುಗಳನ್ನು ನಿರ್ಣಯಿಸಿಕೊಳ್ಳಲಿಕ್ಕಾಗಿ ನಡೆಯಿಸಿದ ಪ್ರಯತ್ನವು ಸಫಲವಾಗಲಿಲ್ಲ. ಆ ಸಂಬಂಧದಲ್ಲಿ ಅವರುಗಳ ಮನಸ್ಸು ಒಟ್ಟುಗೂಡಲಿಲ್ಲ. ಅದೇ ಸಂಬಂಧದಲ್ಲಿ ಮುಂದೆ ರಕ್ತಪಾತವಾಗದೆ ತಪ್ಪದೆಂಬ ಚಿಹ್ನೆಗಳು ಕಾಣುತ್ತಿವೆ. ಈ ಎಲ್ಲೆಕಟ್ಟಿನ ವ್ಯವಸ್ಥೆಗಾಗಿ ಸಾಮ್ರಾಜ್ಯಪ್ರಭುತ್ವದವರು ಒಂದು ಸಂಘವನ್ನೇರ್ಪಡಿಸಬೇಕಾದೀತು. ಐರ್ಲೆಂಡ್ ಮುಖ್ಯಮಂತ್ರಿಗಳು ಲಂಡನ್ನಿಗೆ ಹೋಗಿದ್ದಾರೆ.

ವಾಷಿಂಗ್‌ಟನ್‌ಪಟ್ಟಣದಲ್ಲಿ ಕೂಡಿದ್ದ ಸಭೆಯವರು ನೌಕಾನಿಯಮನ ವಿಷಯವಾಗಿ ಏರ್ಪಡಿಸಿದ್ದ ಉಪಸಂಘದವರು ಮಾಡಿದ ತೀರ್ಮಾನದ ಸೂಚನೆಗಳಿಗೆ ಅಮೇರಿಕಾ ಇಂಗ್ಲೆಂಡ್ ಫ್ರಾನ್ಸ್ ಇಟಲಿ ಜಪಾನ್ ಈ ೫ ಪ್ರಮುಖರಾಷ್ಟ್ರಪ್ರತಿನಿಧಿಗಳೂ ಒಪ್ಪಿದರು. ಈ ಒಪ್ಪಂದವು ೧೯೩೬ನೆ ವರ್ಷದ ಕೊನೆಯವರೆಗೂ ವ್ಯವಹಾರದಲ್ಲಿರುವುದು. ಅಲ್ಲಿಗೆ ಇದನ್ನು ಮುಗಿಸಿಕೊಳ್ಳಲಿಕ್ಕೆ ಯಾವ ರಾಜ್ಯವಾದರೂ ಅಪೇಕ್ಷಿಸಿದರೆ ೨ ವರ್ಷಗಳಿಗೆ ಮುಂಚೆ ನೋಟೀಸನ್ನು ಕೊಡಬೇಕೆಂದು ನಿರ್ಧಾರವಾಯಿತು.

ಈಜಿಪ್ಟಿಗೆ ಕೊಡಲ್ಪಡುವ ಸ್ವಾತಂತ್ರ್ಯನಿಬಂಧನೆಗಳಲ್ಲಿ ಕೆಲ ಸುಧಾರಣೆಮಾಡಿ ಮತ್ತೊಂದು ಪ್ರಕಟನೆಯನ್ನು ಸಾಮ್ರಾಜ್ಯಪ್ರಭುತ್ವದವರು ಸೂಚಿಸಿದ್ದಾರೆ. ಅದರಲ್ಲಿ ಈಜಿಪ್ಟಿನೊಳಗೆ ಆಂಗ್ಲಸಾಮ್ರಾಜ್ಯದ ರಹದಾರಿ ಸಂರಕ್ಷಣೆಗೆ ಈಜಿಪ್ಟಿನವರು ಹೊಣೆಗಾರರಾಗಿರಬೇಕು. ಈಜಿಪ್ಟಿನಲ್ಲಿ ವಿದೇಶೀಯರನ್ನು ಸಂರಕ್ಷಿಸುವ ಅಧಿಕಾರವು ಆಂಗ್ಲರಧೀನದಲ್ಲೇ ಇರಬೇಕು. ಈಜಿಪ್ಟನ್ನು ವಿದೇಶಗಳ ಅಪಾಯದಿಂದ ಆಂಗ್ಲರೇ ಸಂರಕ್ಷಿಸುತ್ತಲಿರುವರು. ಈಜಿಪ್ಟ್ ಪ್ರಭುತ್ವದವರಿಗೂ ಆಂಗ್ಲ ಪ್ರಭುತ್ವದವರಿಗೂ ಈ ವಿಷಯದಲ್ಲಿ ಸಮಾಧಾನವು ಕುದುರಿದ ಕೂಡಲೇ ಇದನ್ನಂಗೀಕರಿಸಲು ಪಾರ್ಲಿಮೆಂಟು ಕೂಡಿಸಲ್ಪಡುವುದು. ಮೇಲೆ ಕಂಡ ಸೂಚನೆಗಳಿಗೆ ಈಜಿಪ್ಟಿನವರು ಒಪ್ಪಿದರೆ ಈಜಿಪ್ಟನ್ನು ಸಂರಕ್ಷಕರಾಷ್ಟ್ರತ್ವದಿಂದ ತೊಲಗಿಸಿ ರಾಜಪರಿಪಾಲಕ ರಾಷ್ಟ್ರವನ್ನಾಗಿ ಮಾಡುವುದಲ್ಲದೆ ಈಜಿಪ್ಟ್ ಪಾರ್ಲಿಮೆಂಟನ್ನು ಏರ್ಪಡಿಸಲಿಕ್ಕೂ ಅಂಗೀಕರಿಸುವರು. ಆದರೆ ಈ ಸುಧಾರಣೆಗೂ ಈಜಿಪ್ಟಿನವರು ಅಂಗೀಕರಿಸುವವರಾಗಿಲ್ಲವಂತೆ.

ಲಂಡನ್ನಿನಿಂದ ಪ್ರಕಟವಾಗುವ ಡೇಲಿನ್ಯೂಸ್ ಎಂಬ ಪತ್ರಿಕೆಯು ಗಾಂಧಿಯವರನ್ನು ಕುರಿತು ಹೀಗೆ ಬರೆದಿರುತ್ತದೆ—ನಾವು ಭರತಖಂಡದಲ್ಲಿ ಅದರ ಪೋಷಕರ ರೀತಿಯಲ್ಲಿದ್ದೇವೆಯೇ ಹೊರತು ಅದನ್ನು ಜಯಿಸಿ ಪಾಲಿಸುವವರ ರೀತಿಯಲ್ಲಿರುವುದಿಲ್ಲ. ಭರತಖಂಡದ ಅಭಿವೃದ್ಧಿಯೇ ಅವರ ಲಕ್ಷ್ಯ. ಗಾಂಧಿಯವರಿಗೂ ಅದೇ ಲಕ್ಷ್ಯವಾಗಿದ್ದರೆ ಅವರು ಪ್ರಭುತ್ವದವರೊಡನೆ ಸಹಕಾರದಿಂದ ನಡೆಯಬೇಕು. ಹಾಗೆ ನಡೆಯದೆಹೋದರೆ ಅವರ ಕಾರ್ಯದಿಂದ ರಕ್ತಪಾತಮಿಳಿತವಾದ ಕಷ್ಟಗಳು ದೇಶಕ್ಕೆ ಸಂಭವಿಸುವುವು. ಆಂಗ್ಲಪ್ರಭುತ್ವದಲ್ಲಿ ಎಷ್ಟು ಲೋಪಗಳಿದ್ದರೂ ಆ ಪ್ರಭುತ್ವವಿಲ್ಲದಿದ್ದರೆ ಅದಕ್ಕೆ ಮುಂಚೆ ಭರತಖಂಡವನ್ನು ಯಾವ ತೆರದ ವಿಪತ್ತುಗಳಿಂದ ಅವರು ಕಾಪಾಡಿದರೋ ಅಂಥ ಆಪತ್ತುಗಳೇ ಮತ್ತೆ ಅದಕ್ಕೆ ಪ್ರಾಪ್ತವಾಗುವುವು. ಗಾಂಧಿಯವರು ಈ ವಿಷಯವನ್ನು ಸಾವಧಾನವಾಗಿ ಗ್ರಹಿಸದೆಹೋದರೆ ಪ್ರಭುತ್ವದವರು ಯಾವ ತೆರದ ಚರ್ಯೆಯಿಂದಲಾದರೂ ದೇಶದ ಶಾಂತಿಯನ್ನೂ ಭದ್ರತೆಯನ್ನೂ ಕಾಪಾಡಿಯೇ ತೀರುವರು. ಅದು ಅವರ ಕರ್ತವ್ಯವು.

ನೋಟೀಸು.

ಇದರಿಂದ ಸಮಸ್ತ ಡಾಕ್ಟರವರುಗಳಿಗೂ ಯುನಾನಿ ವೈದ್ಯರುಗಳಿಗೂ ನೇಟಿವ್ ವೈದ್ಯರುಗಳಿಗೂ ತಿಳಿಯಪಡಿಸುವುದೇನಂದರೆ—

ಬೆಂಗಳೂರು ದಂಡು ಕೋಲ್ಸುರೋಡಿನಲ್ಲಿರುವ ಮಂಡಿ ವ್ಯಾಪಾರದ ಕಪ್ಪಣ್ಣ ಕೇಳಿಕೊಳ್ಳುವದೇನಂದರೆ—ನನ್ನ ಭಾವಮೈದನಾದ ಲೇಟ್ ಆಪ್ಗಾರಿ ರುದ್ರಪ್ಪನವರ ಮಗ ಸುಮಾರು ೪೦ ವರುಷ ವಯಸ್ಸುಳ್ಳ ಗಂಗಪ್ಪನು ಈಗ ೫ ತಿಂಗಳಿಂದಲೂ ಮೂತ್ರವ್ಯಾಧಿಯಿಂದ ಬಾಧೆಪಡುತ್ತಾ ಇದ್ದಾನೆ. ಈತನಿಗೆ ಡಾಕ್ಟರುಗಳಿಂದ ಈವರೆಗೂ ತೋರಿಸಿ ಔಷಧಗಳು ಇಂಜಕ್ಷನ್‌ಗಳು ಕೊಡಿಸಲಾಗ್ಯೂ ಏನೂ ಗುಣಕಂಡುಬರಲಿಲ್ಲವು. ಆದ್ದರಿಂದ ಯಾವ ಡಾಕ್ಟರವರೇ ಆಗಲಿ ಯುನಾನಿ ವೈದ್ಯರೇ ಆಗಲಿ ನೇಟೀವ್ ಪಂಡಿತರೇ ಆಗಲಿ ಈತನ ಖಾಯಿಲೆ ಗುಣಪಡಿಸುತ್ತೇವೆಂದು ಖಂಡಿತವಾಗಿಯೂ ಧೃಢವಾಗಿಯೂ ಹೇಳಿ ಔಷಧ ಕೊಟ್ಟು ಗುಣಮಾಡಿದವರಿಗೆ ೨೦೦೦ ರೂಪಾಯಿಗಳನ್ನು ಕೊಡುತ್ತೇನೆಂದು ಈ ಮೂಲಕ ತಿಳಿಸಿರುತ್ತೇನೆ.

N. KAPPANNA,
19, Coles Road,
Bangalore Cant.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುವುದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಶ್ರೀಮದ್ವೀರಶೈವ ಶಿವಯೋಗಮಂದಿರದ ಮಹಾ ಶಿವರಾತ್ರಿಯ ಸಮಾರಂಭವು.

ವಾಡಿಕೆಯಂತೆ ಇದೇ ಮಾಘ ಬ|| ೧೪-೩೦ ಫಾಲ್ಗುಣ ಶು|| ೧ ಫೆಬ್ರವರಿ ತಾರೀಖು ೨೪, ೨೫, ೨೬ ಸನ್ ೧೯೨೨ ಇಸವಿ ಶುಕ್ರವಾರ

ಶ್ರೀಮನ್ ಯುವಸಾರ್ವಭೌಮರ ದೇಶಸಂಚಾರವು.

ಫೆಬ್ರವರಿ ತಾ|| ೧ನೆ ಬೆಳಗ್ಗೆ ಯುವಸಾರ್ವಭೌಮರು ಇಂದೋರ್ ಸಂಸ್ಥಾನದ ರಾಜಧಾನಿಯನ್ನು ಸೇರಿದರು. ನಿಲ್ದಾಣದಲ್ಲಿ ಹೋಳ್ಕರ್ ಮಹಾರಾಜರೂ ಅವರ ಅನೇಕಮಂದಿ ಸಾಮಂತರಾಜರೂ ಸಂಯುಕ್ತ ರಾಷ್ಟ್ರಗಳ ಗೌರ್ನರೂ ಇನ್ನೂ ಅನೇಕಾಧಿಕಾರಿಗಳೂ ಸಂಸ್ಥಾನದ ಮುಖ್ಯಪ್ರಜೆಗಳೂ ಕಾದಿದ್ದು ಇದಿರ್ಗೊಂಡು ಸನ್ಮಾನಿಸಿದರು. ಮಹಾರಾಜರು ಅಲಂಕೃತವಾಗಿ ಪುರಜನರಿಂದ ನಿಬಿಡವಾಗಿದ್ದ ರಾಜವೀಧಿಯಲ್ಲಿ ಯುವರಾಜರನ್ನು ಉತ್ಸವಪೂರ್ವಕವಾಗಿ ಕರೆದುಕೊಂಡು ಹೋಗಿ ಮಾಣಿಕ್ಯಬಾಗ್ ಭವನದಲ್ಲಿ ಇಳುಹಿಸಿದರು. ಆ ದಿನ ರಾತ್ರಿ ದೊಡ್ಡ ಔತಣವಾಯಿತು. ಆ ಸಮಯದಲ್ಲಿ ಹೋಳ್ಕರ್ ಮಹಾರಾಜರ ಮತ್ತು ಯುವರಾಜರ ಭಾಷಣ ಪ್ರತಿ ಭಾಷಣಗಳು ಪದ್ಧತಿಯಂತೆ ಜರುಗಿದುವು. ೨ ದಿನಗಳು ಮಾತ್ರ ಯುವರಾಜರು ಅಲ್ಲಿದ್ದರು. ಆಗ ಯುವರಾಜರು ಇಷ್ಟಬಂದ ಧರ್ಮಕಾರ್ಯಗಳಿಗೆ ವಿನಿಯೋಗಿಸಬಹುದೆಂದು ಹೇಳಿ ಧಾರ್ ಸಂಸ್ಥಾನದ ಮಹಾರಾಜರು ಯುವಸಾರ್ವಭೌಮರ ವಶಕ್ಕೆ ೧೦,೦೦೦ ರೂ. ಗಳನ್ನು ಸಮರ್ಪಿಸಿದರು. ಅವರು ಇಂದೋರಿನಲ್ಲಿರುವ ಕಿಂಗ್ ಎಡ್ವರ್ಡ್ ವೈದ್ಯಾಲಯಕ್ಕೆ ೫,೦೦೦ ರೂ. ಗಳನ್ನೂ, ರಾಬರ್ಟ್ ನರ್ಸಿಂಗ್‌ಹೋಮಿಗೆ ೫,೦೦೦ ರೂ. ಗಳನ್ನೂ ವಿನಿಯೋಗಿಸುವಂತೆ ಅಪ್ಪಣೆಮಾಡಿದರು. ಹೀಗೆಯೇ ಧರ್ಮಕಾರ್ಯಗಳಿಗೆ ವಿನಿಯೋಗಿಸಲಿಕ್ಕೆಂದು ಉದಯಪುರದ ಮಹಾರಾಜರು ಯುವಸಾರ್ವಭೌಮರ ವಶಕ್ಕೆ ೧ ಲಕ್ಷ ರೂ. ಗಳನ್ನು ಸಮರ್ಪಿಸಿದರು. ಅದರಲ್ಲಿ ||| ಲಕ್ಷವನ್ನು ಅಜ್ಮೀರಿನಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಲಿಕ್ಕೂ, ಘೋಷಾ ಹೆಂಗುಸರು ಸ್ನಾನಮಾಡಲನುಕೂಲಿಸುವಂತೆ ವರದಾನದಿಯಲ್ಲಿ ಒಂದು ಘಟ್ಟವನ್ನು ಮೇರಿ ರಾಜ್ಞಿಯವರ ಹೆಸರಿನಿಂದ ಪ್ರತ್ಯೇಕವಾಗಿ ನಿರ್ಮಿಸಲು ೨೫ ಸಾವಿರವನ್ನೂ ವಿನಿಯೋಗಿಸುವಂತೆ ಯುವಸಾರ್ವಭೌಮರು ತೀರ್ಮಾನಿಸಿದರು. ತಾ|| ೩ರಲ್ಲಿ ಭೂಪಾಲ್ ಸಂಸ್ಥಾನಕ್ಕೆ ಪ್ರಯಾಣಮಾಡಿದರು. ೪ನೆ ಬೆಳಗ್ಗೆ ಅಲ್ಲಿಯ ನಿಲ್ದಾಣದಲ್ಲಿ ಬೇಗಂ ಸಾಹೇಬರು ಅವರ ಮಕ್ಕಳುಗಳು ಸಂಸ್ಥಾನದ ಅಧಿಕಾರಿಗಳೇ ಮೊದಲಾದವರಿಂದ ಸನ್ಮಾನಿಸಲ್ಪಟ್ಟು ೧ ದಿನ ಅಲ್ಲಿದ್ದು ರಾಜಭಕ್ತಿಪೂರಿತವಾದ ಆತಿಥ್ಯವನ್ನು ಸ್ವೀಕರಿಸಿ, ಆ ರಾತ್ರಿ ನಡೆದ ಔತಣದಲ್ಲಿ ಬೇಗಂ ಸಾಹೇಬರವರ ರಾಜ್ಯಪರಿಪಾಲನ ವೈಲಕ್ಷಣ್ಯವನ್ನೂ ರಾಜಭಕ್ತಿಯನ್ನೂ ಕೊಂಡಾಡಿ, ಮರುದಿನ ಅಲ್ಲಿಗೆ ೨೨ ಮೈಲಿಗಳ ದೂರದಲ್ಲಿರುವ ಕಾಚಿನೇರಿಯಾ ಎಂಬಲ್ಲಿಗೆ ಬೇಟೆಯಾಡಲಿಕ್ಕೆ ದಯಮಾಡಿಸಿದರು. ಅವರೊಡನೆ ಭೂಪಾಲ್ ಬೇಗಂರವರ ೩ನೆ ಕುಮಾರರಾದ ಲೆ|| ಕರ್ನಲ್ ನವಾಬ್‌ಜಾದಾರವರೂ ಹೋಗಿದ್ದರು. ಬೇಟೆಯನ್ನು ಮುಗಿಸಿಕೊಂಡು ಮಂಗಳವಾರ ಮರಳಿ ಬಂದರು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ದನಗಳು ದೊಡ್ಡರೋಗದಿಂದ ಸಾಯ ಉಪಕ್ರಮವಾಗಿರುವುದು.

ತುರುವೆಕೆರೆಯ ಒಬ್ಬ ರೈತನು ಕುರಿಮಂದೆಯನ್ನು ಸಾಕಲಿಕ್ಕೆ ಆತನ ಪ್ರಾರ್ಥನೆಯ ಮೇರೆ ೭೦ ಎಕರೆ ಭೂಮಿಯನ್ನು ಸರ್ಕಾರದವರು ಅನುಗ್ರಹಿಸಿರುವರಂತೆ.

ಮೈಸೂರು ಸರ್ಕಾರದ ೭ ರೂ. ಬಡ್ಡಿಯ ಸಾಲದ ೧೦೦ ರೂ. ಬಾಬತು ಬಾಂಡುಗಳನ್ನು ಮದ್ರಾಸಿನಲ್ಲಿ ೧೦೫ ರೂ. ನಂತೆ ಕೊಂಡುಕೊಳ್ಳುವವರು ಬಹುಮಂದಿ ಇದ್ದಾರಂತೆ.

ಮೈಸೂರು ಬಿ. ಡಿವಿಜನ್ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮ|| ಜೆ. ಚೆನ್ನವೀರಪ್ಪನವರಿಗೆ ತಿ|| ನರಸೀಪುರಕ್ಕೆ ವರ್ಗವಾಗಿ ಅಲ್ಲಿದ್ದ ಸಾಹೇಬರು ಇಲ್ಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಕೈ|| ಬೆಂಗಳೂರು ವೀರಭದ್ರಶೆಟ್ಟರು ಬಹುಕಾಲ ಅಲ್ಲಿಯ ಮ್ಯು|| ಕೌನ್ಸಿಲರಾಗಿದ್ದುದರಿಂದ ಅವರ ಗೌರವಾರ್ಥವಾಗಿ ಒಂದು ದಿನದ ಮ್ಯು|| ಮೀಟಿಂಗು ಅಡ್ಜರ್ನ್ ಮಾಡಲ್ಪಟ್ಟಿತು.

ಕಳೆದ ಭಾನುವಾರ ಬೆಂಗಳೂರು ಲಾಲ್‌ಬಾಗಿನಲ್ಲಿ ಫಲಪುಷ್ಪ ಪ್ರದರ್ಶನವು ನಡೆಯಿತು. ಉತ್ತಮವಾದ ವಸ್ತುಗಳಿಗೆ ಗೊತ್ತಾಗಿದ್ದ ಬಹುಮಾನಗಳು ದಿವಾನ್ ಸರ್ ಕಾಂತರಾಜ ಅರಸರವರ ಹಸ್ತದಿಂದ ಕೊಡಿಸಲ್ಪಟ್ಟುವು.

ರಾಜಧಾನಿಯಲ್ಲಿ ಚಿರತೆಗಳು ಅಲ್ಲಿ ಕಾಣಿಸಿಕೊಂಡವು ಇಲ್ಲಿ ಪ್ರಾಣಿಗಳನ್ನು ಕೊಂದವು ಎಂಬ ಸುದ್ದಿಯು ಇನ್ನೂ ಅಡಗಿಲ್ಲ. ಸಾವಿರಾರು ತುಪಾಕಿಗಳುಳ್ಳ ಇಂಥ ಪಟ್ಟಣದಲ್ಲಿ ಬೇಟೆಗಾರರ ಪೌರುಷಕ್ಕೆ ಮಸಿಹಚ್ಚುತ್ತಿರುವ ಚಿರತೆಗಳ ಸಾಹಸವೇ ಸಾಹಸ.

ರಾಜಧಾನಿಯ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕಸಭೆಯವರು ನೆನ್ನೆಯದಿನ ರಾತ್ರಿ ಟವ್ನ್ ಹಾಲಿನಲ್ಲಿ ರುಕ್ಮಾಂಗದ ಚರಿತ್ರೆಯನ್ನು ನೂತನ ಉಡುಪು ಮತ್ತು ಸೀನರಿಗಳಿಂದ ಬಹಳ ಶ್ಲಾಘ್ಯವಾಗಿ ಅಭಿನಯಿಸಿ ಪ್ರೇಕ್ಷಕರ ಮನಸ್ಸನ್ನು ಆನಂದಗೊಳಿಸಿದರು. ದ್ರವ್ಯೋತ್ಪನ್ನವೂ ಹೆಚ್ಚಾಗಿದ್ದಿತು. ಬರುವ ತಾ|| ೧೮ ನೆಯ ಶನಿವಾರದ ರಾತ್ರಿ ಮಂದಾರವಲ್ಲಿ ಪರಿಣಯವನ್ನು ಅಭಿನಯಿಸುವವರಾಗಿರುವರು.

ರೈಲ್ವೆ ಅನನುಕೂಲಗಳನ್ನು ಕುರಿತು ಬೆಂಗಳೂರು ವರ್ತಕ ಸಂಘದ ಕಳೆದ ಮೀಟಿಂಗಿನಲ್ಲಿ ಅನೇಕಾಕ್ಷೇಪಣೆಗಳು ಮಾಡಲ್ಪಟ್ಟಾಗ ಅಲ್ಲೇ ಇದ್ದ ರೈಲ್ವೆ ಏಜಂಟರು—ಈ ತಿಂಗಳಿಂದ ಬೆಂಗಳೂರು ಮೈಸೂರು ಮಾರ್ಗದಲ್ಲಿ ಎರಡೆರಡು ಗೂಡ್ಸು ಬಂಡಿಗಳು ಮೊದಲಿಗಿಂತ ಹೆಚ್ಚಿನ ವೇಗದಲ್ಲಿ ನಡೆಯಿಸಲ್ಪಡುವುವೆಂದೂ ಹೊಸ ಎಂಜನ್ನುಗಳು ಬಾರದೆ ಇದ್ದುದರಿಂದ ಈ ತೊಂದರೆಯು ಪ್ರಾಪ್ತವಾಗಿದ್ದಿತೆಂದೂ ಹೇಳಿ ಸಮಾಧಾನಪಡಿಸಿದರು.

ಪ್ರಜಾಮಿತ್ರಮಂಡಲಿಯ ಅಧ್ಯಕ್ಷರೂ, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರೂ ಆದ ರಾವ್‌ಸಾಹೇಬ್ ಮ|| ಚೆನ್ನಯ್ಯನವರ ಮೂರನೆಯ ಕುಮಾರರಾದ ಮ|| ಎಚ್. ಸಿ. ದಾಸಪ್ಪ ಬಿ. ಎ., ಎಲ್‌ಎಲ್. ಬಿ. ಯವರು ಈವರೆಗೆ ಬೆಂಗಳೂರಿನಲ್ಲಿ ಅಡ್ವೋಕೇಟರಾಗಿದ್ದು ಅನೇಕಮಿತ್ರರ ಅಪೇಕ್ಷೆಯಂತೆ ಈಗ ರಾಜಧಾನಿಗೆ ಬಂದು ಲ್ಯಾನ್ಸ್‌ಡೌನ್ ಬಜಾರಿನಲ್ಲಿ ಆಫೀಸನ್ನು ಮಾಡಿ ವಕೀಲಿಯನ್ನು ನಡಿಸುತ್ತಿರುವರು. ವಿವಾದವನ್ನು ನಡಿಸತಕ್ಕ ಸ್ಥಳ ಪರಸ್ಥಳದ ಜನರು ಮ|| ದಾಸಪ್ಪನವರಿಗೆ ಮೊಖದ್ದಮೆಗಳನ್ನು ವಹಿಸಿ ಪ್ರೋತ್ಸಾಹವನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

ಎಣ್ಣೆ ಬೆಣ್ಣೆ ಮೊದಲಾದ ಆಹಾರ್ಯಪದಾರ್ಥಗಳಲ್ಲಿ ಇತರ ವಸ್ತುಗಳನ್ನು ಮಿಶ್ರಮಾಡಿ ಮೋಸದಿಂದ ಮಾರುವ ಪದ್ಧತಿಯನ್ನು ತಪ್ಪಿಸಲಿಕ್ಕಾಗಿ ಅಂಥ ತಪ್ಪಿಗೆ ೫೦೦ ರೂ.ಗಳ ವರೆಗೆ ಶಿಕ್ಷೆಯನ್ನು ವಿಧಿಸಲು ಅವಕಾಶವನ್ನು ಕಲ್ಪಿಸಿರುವ ನೂತನ ಶಾಸನವು ಶ್ರೀಮನ್ಮಹಾರಾಜರ ಅನುಮೋದನೆಯನ್ನು ಪಡೆದಿರುತ್ತದೆ. ಸಂಸ್ಥಾನದ ಯಾವ ಭಾಗಕ್ಕಾದರೂ ಪ್ರಾಂತಿಕಾಧಿಕಾರಿಗಳು ಅಪೇಕ್ಷಿಸಿ ಇದನ್ನು ಇನ್ನು ಮುಂದೆ ವ್ಯವಹಾರಕ್ಕೆ ತಂದುಕೊಳ್ಳಬಹುದು.

ಶ್ರೀಮನ್ಮಹಾರಾಜರ ಸಂಸ್ಕೃತ ಕಲಾಶಾಲೆಯ ಬಹುಮಾನಪ್ರದಾನ ಮಹಾಸಭೆಯು ಶ್ರೀ ಪರಕಾಲಮಠದ ಸ್ವಾಮಿಗಳ ಅಧ್ಯಕ್ಷತೆಯಿಂದ ಕಳೆದ ೪ನೆ ತಾರೀಖಿನ ದಿವಸ ಪಾಠಶಾಲಾಭವನದಲ್ಲಿ ನಡೆದಿತು. ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ಡಾಕ್ಟರ್ ವ್ರಜೇಂದ್ರನಾಥಶೀಲ್‌ರವರು ಸಮಯೋಚಿತವಾಗಿ ಒಂದು ಭಾಷಣವನ್ನು ಮಾಡಿದರು. ಸಭಾಧ್ಯಕ್ಷರು ಸಂಕ್ಷಿಪ್ತವಾದ ಉಪನ್ಯಾಸವೊಂದನ್ನು ಮಾಡಿ ಬಹುಮಾನದ ಪುಸ್ತಕಗಳನ್ನು ಪ್ರದಾನಮಾಡಿದರು.

ಕುಣಿಗಲ್ ತಾಲ್ಲೂಕು ಎಡೆಯೂರುಹೋಬಳಿ ಕಗ್ಗೆರೆ ಗ್ರಾಮದಲ್ಲಿ ನಡೆಯುವ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ರಥೋತ್ಸವಕಾಲದಲ್ಲಿ 1922ನೇ ಮಾರ್ಚಿ ತಾ|| 6ರ ಲಾಗಾಯ್ತು 6 ದಿವಸಗಳವರೆಗೆ ದನಗಳ ಪರಸೆ ನಡೆಯುತ್ತದೆ. ಜನಜಾನ್ವಾರುಗಳಿಗೆ ನೀರು ನೆರಳಿಗೆ ಅನುಕೂಲವಾಗಿಯೂ ಜಾತ್ರೆಯಲ್ಲಿ ಸೇರತಕ್ಕ ದನಗಳನ್ನು ಮಾರಾಟಮಾಡುವವರಿಗೂ ಕೊಂಡುಕೊಳ್ಳುವವರಿಗೂ ಊಟಕ್ಕೆ ಅನುಕೂಲವಾಗಿಯೂ ಇರುತ್ತದೆಂದು ತಾ|| ಬೋರ್ಡು ವೈಸ್‌ಪ್ರೆಸಿಡೆಂಟರವರು ತಿಳಿಸಿರುತ್ತಾರೆ.

ನಮ್ಮ ಸಂಸ್ಥಾನದ ಎ|| ಕೌನ್ಸಿಲ್ ೩ನೆ ಮೆಂಬರಾದ ಮಿ|| ಮೀರ್ ಹಂಜಾಹುಸೇನ್ ಸಾಹೇಬರವರು ತಮ್ಮ ಪರಿವಾರಾಧಿಕಾರಿಗಳೊಡನೆ ಶ್ರೀರಂಗಪಟ್ಟಣದಲ್ಲಿರುವ ಪ್ರಸಿದ್ಧ ವ್ಯವಸಾಯಗಾರರೂ, ಗೌ|| ಆನರರಿ ಲೆಕ್ಚರರೂ ಆದ ಮ|| ಸಿದ್ಧಲಿಂಗದೇವರು ಸ್ವಂತ ಪರಿಶ್ರಮದಿಂದಲೂ ವ್ಯವಸಾಯ ಶಾಸ್ತ್ರಾನುಭವದಿಂದಲೂ ಮಿತವ್ಯಯದಿಂದಲೂ ಅಧಿಕ ಫಲಪ್ರಾಪ್ತಿಯಿಂದಲೂ ನಿರ್ಮಿಸಿರುವ ಮನೋಜ್ಞವಾದ ತೋಟಕ್ಕೆ ದಯಮಾಡಿಸಿ ಎಲ್ಲ ವಿದ್ಯಮಾನಗಳನ್ನೂ ನೋಡಿ ಕೇಳಿ ಆನಂದಪಟ್ಟು ವಂದಿಸಿ ತೆರಳಿದರೆಂದು ಕೇಳಿದೆವು.

ಭರತಖಂಡದ ವೃತ್ತಾಂತಗಳು.

ಬಿಕನೀರ್ ಮಹಾರಾಜರು ಬರುವ ತಾ|| ೨೭ ರಲ್ಲಿ ಹೈದರಾಬಾದ್ ಸಂಸ್ಥಾನಕ್ಕೆ ದಯಮಾಡಿಸುತ್ತಾರೆ.

ಮಲಬಾರಿನ ವಿಪನ್ನ ರಕ್ಷಣಾರ್ಥವಾದ ಫಂಡಿಗೆ ಬೊಂಬಾಯಿಯಲ್ಲಿ ಇದುವರೆಗೆ ೧ ಲಕ್ಷದ ಮೇಲೆಯೇ ಚಂದಾ ಕೂಡಿದೆ.

ಕಂದಾಯವನ್ನು ಕೊಡಕೂಡದೆಂದು ಬೋಧಿಸುವುದು ರಾಜದ್ರೋಹಾಪರಾಧವಾಗುವುದೆಂದು ಗುಂಟೂರು ಜಿಲ್ಲಾ ಮೇಜಿಸ್ಟ್ರೇಟರು ಪ್ರಕಟನವನ್ನು ಮಾಡಿದ್ದಾರೆ.

ಈ ತಿಂಗಳಲ್ಲಿ ಅಲಹಾಬಾದಿನೊಳಗೆ ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆ ತೆಗೆದುಕೊಳ್ಳಲು ಏರ್ಪಾಟಾಗಿರುವುದು. ೭೬ಮಂದಿ ವಿದ್ಯಾರ್ಥಿಗಳು ಉಮೇದುವಾರರಾಗಿದ್ದಾರೆ.

ಕೃಷ್ಣಾ ಗುಂಟೂರು ಜಿಲ್ಲೆಗಳಲ್ಲಿ ಈಚೀಚೆಗೆ ಸರ್ಕಾರದ ಪ್ಪಣೆಗಳ ಮತ್ತು ಅವರು ಅವಲಂಬಿಸಿದ ಕ್ರಮಗಳ ಭಯದಿಂದ ಅನೇಕ ರೈತರು ತಮ್ಮ ಭೂಕಂದಾಯದ ಮೊದಲನೆ ಕಂತನ್ನು ಸಲ್ಲಿಸಿಬಿಡುತ್ತಿದ್ದಾರೆ.

ಕರಾಚಿಯಿಂದ ಪ್ರಕಟವಾಗುವ ಸಿಂದ್ ಅಬ್ಜರ್ವರ್ ಎಂಬ ದೈನಿಕ ಪತ್ರಿಕೆಯು ತನಗೆ ದಿಲ್ಲಿಯಿಂದ ಬರೆದುಬಂದಿರುವ ಲೇಖನದಿಂದ ಗಾಂಧಿಯವರನ್ನು ಸರ್ಕಾರದವರು ಇಷ್ಟರಲ್ಲೇ ಹಿಡಿಯಲಿಕ್ಕೆ ಹವಣಿಸಿಕೊಂಡಿದ್ದಾರೆಂದು ತಿಳಿಯಬರುತ್ತದೆಂದು ಪ್ರಕಟಿಸಿದೆ.

ಪುಣೆಯಲ್ಲಿ ಮೇಜಿಸ್ಟ್ರೇಟರ ಆಜ್ಞೆಯನ್ನು ಧಿಕ್ಕರಿಸಿ ನರಸಿಂಹ ಚಿಂತಾಮಣಿ ಕೇಳ್ಕರ್‌ರವರು ಸಾರಾಯಿ ಅಂಗಡಿಯ ಹತ್ತಿರ ಬೋಧಿಸಿದರೆಂಬ ತಪ್ಪಿತಕ್ಕಾಗಿ ದಂಡಾಧಿಕಾರಿಯು ಅವರಿಗೆ ೫೦ ರೂ. ದಂಡವನ್ನು ವಿಧಿಸಿದರು. ಆದರೆ ಅವರು ಅದನ್ನು ಸಲ್ಲಿಸದೆ ಧಿಕ್ಕರಿಸಿದರು. ಸಾರಾಯಿ ಅಂಗಡಿಯ ಹತ್ತಿರ ನಿಂತು ಬೋಧಿಸುವುದು ನನ್ನ ಕರ್ತವ್ಯವೆಂದು ಹೇಳಿದರು.

ಸಮಷ್ಟಿ ಶಾಸನೋಲ್ಲಂಘನೆಯ ನಿಮಿತ್ತವಾಗಿ ಸರ್ಕಾರಿ ಕಂದಾಯವನ್ನು ಕೊಡದೆ ನಿಲ್ಲಿಸಿಬಿಡಲಿಕ್ಕೆ ಗಾಂಧಿಯವರ ಅಂಗೀಕಾರವನ್ನು ಪಡೆದವರ ಹೊರತು ಉಳಿದ ಭಾಗದವರೆಲ್ಲಾ ಕಂದಾಯವನ್ನು ಸಲ್ಲಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಂಘದವರು ಸೂರತ್‌ನಗರದಲ್ಲಿ ಹಕೀಂ ಅಜ್ಮಲ್‌ಖಾನರ ಅಧ್ಯಕ್ಷತೆಯಿಂದ ಕೂಡಿದ್ದ ಸಭೆಯಲ್ಲಿ ತೀರ್ಮಾನಿಸಿ ಪ್ರಕಟಿಸಿದ್ದಾರೆ.

ಅನಿಬೆಸೆಂಟಮ್ಮನವರಿಂದ ಕೃಷ್ಣಾವತಾರನೆಂದು ಕರೆಯಲ್ಪಡುತ್ತ ೧೦ ವರ್ಷಗಳ ಕೆಳಗೆ ಸೀಮೆಗೆ ಸಾಗಿಸಲ್ಪಟ್ಟಿದ್ದ ಜಿಡ್ಡು ಕೃಷ್ಣಮೂರ್ತಿ ಸಹೋದರರುಗಳು ಈಗ ಮದ್ರಾಸಿನ ಅಡ್ಯಾರಿಗೆ ಬಂದು ಸೇರಿದ್ದಾರಂತೆ. ಕೃಷ್ಣಮೂರ್ತಿಯು ಈಗ ಒಂದು ಮಾಸಪತ್ರಿಕೆಗೆ ಸಂಪಾದಕರಾಗಿರುವಂತೆ. ಅವರ ತಮ್ಮ ನಿತ್ಯಾನಂದಂ ಆರ್ಡರ್ ಆಫ್ ದಿ ಸ್ಟಾರಿಗೆ ಕಾರ್ಯದರ್ಶಿಯಂತೆ.

ಪಾಲಘಾಟಿನಲ್ಲಿ ಒಬ್ಬ ವಿದ್ಯಾರ್ಥಿಯು ತನ್ನನ್ನು ಶಾಲಾಮುಖ್ಯೋಪಾಧ್ಯಾಯನು ಅಕ್ರಮವಾಗಿ ಹೊಡೆದನೆಂದು ಅಲ್ಲಿಯ ಸಬ್ ಜಡ್ಜರ ಕೋರ್ಟಿನಲ್ಲಿ ವ್ಯಾಜ್ಯ ಹೂಡಲಾಗಿ ಜಡ್ಜರು ವಿಚಾರಣೆಮಾಡಿ, ಉಪಾಧ್ಯಾಯನು ೧೫೦ ರೂ. ಪರಿಹಾರವನ್ನು ವಿದ್ಯಾರ್ಥಿಗೆ ಕೊಡಬೇಕೆಂದು ತೀರ್ಮಾನಿಸಿದರು. ಉಪಾಧ್ಯಾಯನು ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಲಾಗಿ ವಿದ್ಯಾರ್ಥಿಗಳನ್ನು ಉಪಾಧ್ಯಾಯರು ಮಿತವಾಗಿ ದಂಡಿಸುವುದು ತಪ್ಪಲ್ಲವೆಂದೂ ಮುಖ್ಯೋಪಾಧ್ಯಾಯನು ನಿರ್ದೋಷಿಯೆಂದೂ ತೀರ್ಮಾನಿಸಿ ಕೆಳಕೋರ್ಟಿನ ತೀರ್ಪನ್ನು ಹೊಡೆದುಬಿಟ್ಟರು.

ಬೊಂಬಾಯಿ ಸರ್ಕಾರದವರು ತಮ್ಮ ಎಲ್ಲಾ ಶಾಖಾಧಿಕಾರಿಗಳಿಗೂ ಹೀಗೆ ಅಪ್ಪಣೆಮಾಡಿದ್ದಾರೆ—‘‘ಸರ್ಕಾರದ ಬೊಕ್ಕಸದ ಸ್ಥಿತಿಯು ತೃಪ್ತಿಕರವಾಗಿಲ್ಲ. ಕಂದಾಯಗಳನ್ನು ಹೆಚ್ಚಿಸಬೇಕು ಇಲ್ಲವೆ ಸರ್ಕಾರಿ ಉದ್ಯೋಗಸ್ಥರ ಸಂಖ್ಯೆಯನ್ನು ಕಡಿಮೆ ಹಾಕಬೇಕಾಗಿದೆ. ಅದುಕಾರಣ ವರ್ಷದ ಕೊನೆಯೊಳಗೆ ಸ್ವಲ್ಪ ಧನಶೇಷವು ಉಳಿಯುವಂತೆ ಮಾಡುವುದಕ್ಕಾಗಿ ವೆಚ್ಚವನ್ನು ತಗ್ಗಿಸಲು ಸರ್ವರೂ ಪ್ರಯತ್ನಪಡಬೇಕು. ಚಿಲ್ಲರೆಯ ವೆಚ್ಚಗಳನ್ನೂ ಸಂಚಾರದ ವೆಚ್ಚಗಳನ್ನೂ ಅಧಿಕಾರಿಗಳು ಕಡಿಮೆ ಹಾಕಿಕೊಳ್ಳಬೇಕು. ರಜಾ ತೆಗೆದುಕೊಳ್ಳುವುದನ್ನೂ ಕೂಡ ಕಡಿಮೆ ಹಾಕುವುದು ಯುಕ್ತವು.

ಈಗಣ ರಾಜಕೀಯ ಚಳವಳದಲ್ಲಿ ಮಿತಿಮೀರಿ ನಡೆದ ಪುರುಷರಿಗೆ ಮಾತ್ರ ಶಿಕ್ಷೆಗಳು ವಿಧಿಸಲ್ಪಡುವುದನ್ನು ಕೇಳುತ್ತಿದ್ದೆವು. ಸ್ತ್ರೀಯರು ಚಳವಳಿಯಲ್ಲಿ ಸೇರಿದ್ದು ಹಿಡಿಯಲ್ಪಟ್ಟರೂ ಕೂಡಲೇ ಬಿಡಲ್ಪಡುತ್ತಿದ್ದರು. ಅದರ ಮೇಲೆ ರಾಜಕೀಯ ರಂಗದಲ್ಲಿ ಸ್ತ್ರೀಯರ ಪ್ರವೇಶವೇ ಹೆಚ್ಚಾಗುತ್ತಿರುವುದು. ಕಡೆಗೆ ಸ್ತ್ರೀಯರ ಮೇಲೂ ಪ್ರಭುತ್ವದವರು ಅಸ್ತ್ರಪ್ರಯೋಗ ಮಾಡಲು ಸಿದ್ಧರಾಗಬೇಕಾಗಿ ಬಂದಿರುವುದು. ಡಾರ್ಜಿಲಿಂಗಿನಲ್ಲಿ ಸಾವಿತ್ರೀದೇವಿ ಎಂಬಾಕೆಯು ೧೪೪ನೆ ಸೆಕ್ಷನ್ ಮೇರೆ ಮಾಡಲ್ಪಟ್ಟ ಸರ್ಕಾರಿ ಅಪ್ಪಣೆಯನ್ನು ಮೀರಿ ನಡೆದ ತಪ್ಪಿಗಾಗಿ ೩ ತಿಂಗಳ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಳು.

೧೯೧೯ನೆ ವರ್ಷದಲ್ಲಿ ಅಮೃತಸರದೊಳಗೆ ರಾಷ್ಟ್ರೀಯ ಮಹಾಸಭಾಮಂಟಪವನ್ನು ಕಟ್ಟಿಕೊಟ್ಟ ಕಂಟ್ರಾಕ್ಟರಾದ ಜಾಂಡ್ ಬ್ರದರ್ಸ್ ಕಂಪನಿಯವರು ತಮಗೆ ಬರಬೇಕಾದ ೯೧ ಸಾವಿರ ರೂ. ಗಳಿಗಾಗಿ ಸನ್ಮಾನ ಸಂಘದವರ ಮೇಲೆ ಅಮೃತಸರದ ಸಬ್‌ಜಡ್ಜು ಕೋರ್ಟಿನಲ್ಲಿ ವ್ಯಾಜ್ಯ ಹೂಡಿರುವರು. ಸನ್ಮಾನಸಂಘವು ರಿಜಿಸ್ಟರಾದ ಸಂಘವಲ್ಲವಾದುದರಿಂದ ಕಾರ್ಯನಿರ್ವಾಹಕರನ್ನು ಮಾತ್ರವೇ ಅಲ್ಲದೆ ಸಂಘ ಸಭಿಕರನ್ನೆಲ್ಲಾ ಪ್ರತಿವಾದಿ ಸ್ಥಾನಕ್ಕೆ ಸೇರಿಸಿ ವ್ಯಾಜ್ಯತರಬೇಕೆಂದು ನ್ಯಾಯಾಧಿಪತಿಗಳು ಅಪ್ಪಣೆಮಾಡಿದರು. ಈಗಣ ಕಾಂಗ್ರೆಸ್ ನಾಯಕರು ಸಭಾಸಂಬಂಧಿ ಗೌರವವನ್ನು ಈ ಸ್ಥಿತಿಗೆ ಬರಲು ಬಿಟ್ಟುದು ಅನ್ಯಾಯ.

ಕಳೆದ ತಾ|| ೯ರಲ್ಲಿ ಪಂಡಿತ ಮದನಮೋಹನ ಮಾಳವ್ಯರವರು ಮ|| ಗಾಂಧಿಯವರಿಗೆ ಕೊಟ್ಟ ತಂತ್ರೀವಾರ್ತೆಯಲ್ಲಿ—‘‘ನಾನು ಎಲ್ಲ ವಿಷಯಗಳನ್ನೂ ಕುರಿತು ಚರ್ಚಿಸಲಿಕ್ಕಾಗಿ ಬೊಂಬಾಯಿಗೆ ಬರುವವನಾಗಿದ್ದೇನೆ. ಒಂದು ವೇಳೆ ಈಗಣ ಪರಿಸ್ಥಿತಿಯಲ್ಲಿ ರೌಂಡ್‌ಟೇಬಲ್ ಸಮಾವೇಶವು ಜರುಗದೆ ಹೋದರೂ ಯಾವಾಗ್ಗಾದರೂ ಅದು ತಪ್ಪದೆ ಜರುಗಿಯೇ ಜರುಗುವುದೆಂದು ನೀವು ನಂಬಬಹುದು. ಬೊಂಬಾಯಿ ಸಭೆಯವರಿಂದ ಏರ್ಪಡಿಸಲ್ಪಟ್ಟಿರುವ ಉಪಸಂಘದವರು ಸಮಾವೇಶಕ್ಕಾಗಿ ಕೃಷಿಮಾಡುತ್ತಿರುವರು. ದೇಶಾಭ್ಯುದಯಕ್ಕಾಗಿ ಎಲ್ಲ ವಿಧದ ಪ್ರಯತ್ನಗಳೂ ವ್ಯರ್ಥವಾಗುವವರೆಗೂ ಶಾಸನೋಲ್ಲಂಘನವನ್ನು ಆರಂಭಿಸಕೂಡದೆಂದು ನಾನು ತಿಳಿಯುತ್ತೇನೆ’’ ಎಂದು ತಿಳಿಯಪಡಿಸಿದ್ದಾರೆ.

ಈಸಲ ನೆರೆದಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಅರ್ಹತೆಯುಳ್ಳ ಸ್ತ್ರೀಯರಿಗೆ ಶಾಸನಸಭಾ ಸಭಿಕರನ್ನು ಆರಿಸುವಾಗ್ಗೆ ಓಟನ್ನು ಕೊಡುವ ಅಧಿಕಾರವಿರಬೇಕು ಎಂಬ ತೀರ್ಮಾನವನ್ನು ಎಸ್. ಎಂ. ಜೋಷಿಯವರು ತಂದಿದ್ದರು. ಅದಕ್ಕೆ ಪ್ರತಿಕೂಲವಾಗಿ ಕೆಲವರೂ ಅನುಕೂಲವಾಗಿ ಕೆಲವರೂ ವಾದಿಸಿದರು. ತಮ್ಮ ಮಹಮ್ಮದೀಯ ಮತದ ಸ್ತ್ರೀಯರಿಗೆ ಇದರ ಸಂಬಂಧವೇ ಬೇಕಿಲ್ಲವೆಂದೂ ಯಾರಿಗೆ ಬೇಕೋ ಅವರಿಗೆ ಮಾತ್ರ ಕೊಡಬೇಕೆಂದೂ ಕೆಲ ಮಹಮ್ಮದೀಯ ಸಭಿಕರು ಖಂಡಿತವಾಗಿ ನುಡಿದರು. ಕಡೆಗೆ ತೀರ್ಮಾನವನ್ನು ಓಟಿಗೆ ಇಡಲು, ೪೧ ಮಂದಿಗಳು ಅನುಕೂಲವಾಗಿಯೂ ೧೭ ಮಂದಿ ಪ್ರತಿಕೂಲವಾಗಿಯೂ ಓಟುಕೊಟ್ಟ ಕಾರಣ ತೀರ್ಮಾನವು ಹರ್ಷಧ್ವನಿಯಿಂದ ಅಂಗೀಕೃತವಾಯಿತು.

ಜನರ ಮನಸ್ಸನ್ನು ರೇಗಿಸುವುದಕ್ಕೆ ಯಾವುದಾದರೊಂದುಪಾಯವನ್ನು ಕೆಲ ಅಸಹಾಯವಾದಿಗಳು ಕಲ್ಪಿಸುತ್ತಿರುವಂತೆ ಕಾಣುತ್ತದೆ. ಅಲಿಸೋದರರೇ ಮೊದಲಾದವರು ಕರಾಚಿಯ ಕಾರಾಗೃಹದಲ್ಲಿ ಆಹಾರವನ್ನು ಪರಿತ್ಯಜಿಸಿ ಉಪವಾಸ ಮಾಡುತ್ತಿದ್ದಾರೆಂದು ಕರಾಚಿ ಜಿಲ್ಲಾ ಕಾಂಗ್ರೆಸ್ ಸಂಘದ ಕಾರ್ಯದರ್ಶಿಯು ಪತ್ರಿಕೆಗಳಲ್ಲಿ ಪ್ರಕಟಿಸಿದರು. ಆದರೆ ಎಂಗ್ ಇಂಡ್ಯಾ ಪತ್ರಿಕೆಗೆ ಶೌಕತಾಲಿಯವರು ಒಂದು ಲೇಖನವನ್ನು ಬರೆದು ಅದರಲ್ಲಿ—ತಮ್ಮನ್ನೆಲ್ಲಾ ಕಾರಾಗೃಹದ ಉದ್ಯೋಗಿಗಳು ಚೆನ್ನಾಗಿ ಆದರಿಸುತ್ತಿರುವರೆಂದೂ, ಭೋಜನವನ್ನು ಬಿಟ್ಟು ಹಸಿದುಬಿದ್ದಿರುವುದು ಕಾರಾಗೃಹದಲ್ಲಿರುವ ಮಹಮ್ಮದೀಯರಿಗೆ ಅನುಚಿತವಾದ ಕಾರ್ಯವೆಂದೂ ತಿಳಿಯಿಸಿರುತ್ತಾರೆ. ಇದರಿಂದ ಕಾರ್ಯದರ್ಶಿಯು ಪ್ರಕಟಿಸಿದ ಸುದ್ದಿಯು ಸುಳ್ಳೆಂದು ಸಿದ್ಧವಾಗಿರುತ್ತದೆ.

ರೌಂಡ್ ಟೇಬಲ್ ಸಮಾವೇಶಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ಉಪಸಂಘದವರು ಭಾರತ ಪ್ರಭುತ್ವದವರೊಡನೆ ತಂತಿಯ ಮೂಲಕ ಪತ್ರವ್ಯವಹಾರವನ್ನು ನಡೆಯಿಸುತ್ತಿದ್ದರು. ದೇಶೀಯ ನಾಯಕರ ಸಮಾವೇಶವು ನಡೆಯಲಿಕ್ಕೆ ಪ್ರಧಾನವಾದ ವಿಷಯವು ಯಾವುದೋ ಅದೇ (ಎಂದರೆ ಅಸಹಾಯವಾದಿ ಪಕ್ಷದವರ ಬಾಧ್ಯತೆಯು ಈ ಸಭಾನಿರ್ಧಾರದಲ್ಲಿಲ್ಲದಿರುವುದರಿಂದ ಇದನ್ನೆಲ್ಲಾ ಆದ್ಯಂತವಾಗಿ ಪರಿಶೀಲಿಸಿದುದರಲ್ಲಿ ಇದೇನೂ ಫಲಕರವಾದ ಪ್ರಯತ್ನವಾಗಿ ತೋರುವುದಿಲ್ಲವೆಂದು ವೈಸ್ರಾಯರು ತಿಳಿಯುತ್ತಾರೆಂಬುದಾಗಿ ವೈಸ್‌ರಾಯರ ಪ್ರೈ|| ಸೆಕ್ರೆಟರಿಯವರಿಂದ ಅವರಿಗೆ ಪ್ರತ್ಯುತ್ತರವು ಬಂದಿದ್ದಿತು. ಅದರ ಮೇಲೆ ಮತ್ತೆ ಅವರು ಪತ್ರವ್ಯವಹಾರವನ್ನು ನಡೆಯಿಸುವವರಾಗಿದ್ದರು. ಈ ಮಧ್ಯೆ ಗಾಂಧಿಯವರು ಸ್ವತಃ ವೈಸ್ರಾಯರಿಗೆ ಅಂತ್ಯಸಂದೇಶವನ್ನು ಬರೆದುಬಿಟ್ಟುದರಿಂದ ಮಾಳವ್ಯಾ ಸಭೆಯ ಉಪಸಂಘದವರಿಗೆ ಸಮಾವೇಶದಲ್ಲಿ ಅಷ್ಟೊ ಇಷ್ಟು ಉಳಿದಿದ್ದ ಆಶೆಯೆಲ್ಲಾ ಭಗ್ನವಾಗಿ ಹೋಯಿತಂತೆ. ನಮ್ಮ ಪ್ರಯತ್ನವೆಲ್ಲಾ ಇದರಿಂದ ವ್ಯರ್ಥವಾಗಿ ಹೋಯಿತೆಂದೂ, ನೀವು ಅಂಥ ಲೇಖನವನ್ನು ವೈಸ್‌ರಾಯರಿಗೆ ಬರೆದುದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆಂದೂ, ಆಶಾಭಂಗವಾಯಿತೆಂದೂ, ಉಪಸಂಘ ಕಾರ್ಯದರ್ಶಿಗಳು ಗಾಂಧಿಯವರಿಗೆ ಬರೆದು, ಧೂಳಿಯನ್ನೆಲ್ಲಾ ಅವರ ತಲೆಯಮೇಲೆ ಹಾಕಿ ತೆಪ್ಪಗಾದರು.

ಬರ್ಡೋಲಿ ತಾಲ್ಲೂಕಿಗೆ ಮ|| ಗಾಂಧಿಯವರೂ ಪಟೇಲರೂ ಹೋಗಿರುವರಷ್ಟೆ. ಜನವರಿ ತಾ|| ೩೦ರಲ್ಲಿ ೮೯ ಸಹಸ್ರ ಗ್ರಾಮಾಂತರದ ಜನರಿಂದ ಕೂಡಿದ ದೊಡ್ಡ ಸಭೆಯಲ್ಲಿ ಪಟೇಲರು ಅಧ್ಯಕ್ಷರಾಗಿದ್ದರು. ಅವರೂ ಗಾಂಧಿಯವರೂ ಸಹ ಸಮಷ್ಟಿಶಾಸನೋಲ್ಲಂಘನದಲ್ಲಿರುವ ಕಷ್ಟಗಳನ್ನೆಲ್ಲಾ ವಿವರಿಸಿ ಹೇಳಿದುದಲ್ಲದೆ ದಿಲ್ಲಿಯ ಸಭೆಯ ನಿರ್ಧಾರದ ಪ್ರಕಾರ ಸರ್ವವಿಧವಾದ ಅರ್ಹತೆಯನ್ನು ಪಡೆದಿದ್ದವರೇ ಕಂದಾಯವನ್ನು ನಿಲ್ಲಿಸುವ ಕೆಲಸಕ್ಕೆ ಕೈ ಹಾಕಬೇಕೆಂದು ಉಪನ್ಯಾಸ ಮಾಡಿದರು. ಮತ್ತು ಇಲ್ಲಿ ಸ್ವಲ್ಪ ಮಾತ್ರ ಅಭಿವೃದ್ಧಿ ಸೂಚನೆಗಳು ಕಾಣುತ್ತಿವೆಯೇ ಹೊರತು ಅವು ಸಾಲವು; ಎಲ್ಲ ವಿಧದ ನಿಬಂಧನೆಗಳನ್ನೂ ನೀವು ಸರಿಯಾಗಿ ನೆರವೇರಿಸಿದನಂತರ ಸಮಷ್ಟಿಶಾಸನೋಲ್ಲಂಘನೆಗೆ ಉಪಕ್ರಮಿಸಬಹುದು; ಅದಕ್ಕೆ ಇನ್ನು ೧೫ ದಿನಗಳ ಗಡುಬವನ್ನು ಕೊಟ್ಟಿರುತ್ತೇನೆಂದು ಗಾಂಧಿಯವರು ಅಪ್ಪಣೆಕೊಡಿಸಿದರು. ಬಳಿಕ ಸಭಿಕರು ನಾವು ರಾಷ್ಟ್ರೀಯ ಸಭಾಸ್ಥಾಯಿ ಸಂಘದವರು ನಿರ್ಣಯಿಸಿರುವ ನಿಬಂಧನೆಗಳಂತೆಲ್ಲಾ ನಡೆಯಲು ಸಿದ್ಧರಾಗಿದ್ದೇವೆ. ನಾವು ಕಾರಾಗೃಹಕ್ಕೆ ಹೋಗಲಿಕ್ಕೂ ಏಟುಗಳನ್ನು ತಿನ್ನಲಿಕ್ಕೂ, ಪ್ರಾಣವನ್ನು ಒಪ್ಪಿಸಲಿಕ್ಕೂ ಸಿದ್ಧರಾಗಿದ್ದೇವೆ. ಅಂಥ ಸಂದರ್ಭಗಳಲ್ಲೆಲ್ಲಾ ಯಾವ ಪ್ರತಿಕ್ರಿಯೆಗೂ ಉಜ್ಜುಗಿಸದೆ ಶಾಂತಿಯಿಂದ ಅನುಭವಿಸಲಿಕ್ಕೆ ಸಿದ್ಧರಾಗಿದ್ದೇವೆ ಎಂದು ಮೊದಲಾದ ತೀರ್ಮಾನಗಳನ್ನು ಮಾಡಿದರು.

ಸಂಯುಕ್ತ ರಾಷ್ಟ್ರಗಳಿಗೆ ಸೇರಿದ ಗೋರಕ್‌ಪುರದಲ್ಲಿ ತಾ|| ೪ರಲ್ಲಿ ಅಸಹಾಯವಾದಿಗಳು ಸಂತೆಯಲ್ಲಿ ಮದ್ಯವನ್ನೂ ಮಾಂಸವನ್ನೂ ಮಾರುತ್ತಿದ್ದವರನ್ನು ತಡೆಯಲು ಪ್ರಯತ್ನಿಸಿದಾಗ ಅದನ್ನು ನಿಲ್ಲಿಸಲು ಪೋಲೀಸರು ಉಜ್ಜುಗಿಸಲು, ಪ್ರಜೆಗಳು ಪೋಲೀಸುಠಾಣವನ್ನು ಮುತ್ತಿದರು. ಅವರಿಗೂ ಪೋಲೀಸರಿಗೂ ಕದನವಾಯಿತು. ಕೆಲ ಪೋಲೀಸರೂ ಕೆಲ ಪ್ರಜೆಗಳೂ ಹತರಾದರು. ೨ ಪಕ್ಷದಲ್ಲೂ ಅನೇಕರಿಗೆ ಗಾಯಗಳಾಗಿರುವುವು. ೨೦೦೦ ಮಂದಿ ವಾಲಂಟಿಯರುಗಳು ಚೌರಿಚೌರಾ ಪೋಲೀಸು ಠಾಣವನ್ನು ಮುತ್ತಿ ಅದರೊಳಗಿದ್ದ ಎಲ್ಲ ಪೋಲೀಸರನ್ನೂ ಅವರಿಗೆ ಸಹಾಯಮಾಡಲು ಬಂದ ಸಾಯುಧರಾದ ೮ ಮಂದಿ ಪೋಲೀಸಾಳುಗಳನ್ನೂ ಒಬ್ಬ ಚೌಕೀದಾರನನ್ನು ಕೂಡ ಕೊಂದುಬಿಟ್ಟರು. ಠಾಣಾ ಮನೆಯನ್ನು ಸುಟ್ಟುಬಿಟ್ಟರು. ಹೆಣಗಳ ಮೇಲಿದ್ದ ಉಡುಪುಗಳನ್ನೆಲ್ಲಾ ಕಳೆದು ಹೆಣಗಳನ್ನು ಉರಿಯುತ್ತಿದ್ದ ಬೆಂಕಿಯೊಳಕ್ಕೆ ಬಿಸುಡಿಬಿಟ್ಟರು. ಗೋರಕ್‌ಪೂರಿಗೂ ಈ ಚೌರಿಚೌರಾನಗರಕ್ಕೂ ಮಧ್ಯದಲ್ಲಿರುವ ಲೋಹಮಾರ್ಗವನ್ನು ಧ್ವಂಸಮಾಡಿದರು. ಈ ಗದ್ದಲದಲ್ಲಿ ಇಬ್ಬರು ಸಬ್ ಇನ್ಸ್‌ಪೆಕ್ಟರೂ ೧೫ ಮಂದಿ ಕಾನ್ಸ್ಟೆಬಲ್ಲುಗಳೂ ಸತ್ತಿರುವರೆಂದು ಲಕ್ನೋ ತಂತ್ರೀವಾರ್ತೆಯಿಂದ ತಿಳಿದುಬಂದಿದೆ. ಬೆರೇಲಿಯಲ್ಲಿ ತಾ|| ೫ ದಿನ ಬೆಳಗ್ಗೆ ಸರ್ಕಾರದ ಆಜ್ಞೆಯನ್ನುಲ್ಲಂಘಿಸಿ ೫೦೦೦ ಮಂದಿ ವಾಲಂಟಿಯರುಗಳು ಬೀದಿಯಲ್ಲಿ ಉತ್ಸವ ಹೊರಟರು. ಪೋಲೀಸರು ಗುಂಪನ್ನು ಚದರಿಸಿದರು. ಮತ್ತೆ ಅವರೆಲ್ಲಾ ಟವ್ನ್ ಹಾಲಿನ ಬಳಿಯಲ್ಲಿ ಸೇರಿ ಅದನ್ನಾಕ್ರಮಿಸಲಿಕ್ಕೆ ಯತ್ನಿಸಿ ದೌರ್ಜನ್ಯಕ್ಕೆ ತೊಡಗಿದರು. ಆಗ ತುಪಾಕಿಗಳನ್ನು ಹಾರಿಸಲಿಕ್ಕೆ ಜಿಲ್ಲಾ ಮೇಜಿಸ್ಟ್ರೇಟರು ಅಪ್ಪಣೆ ಮಾಡಿದರು. ಸೈನಿಕರನ್ನೂ ಬರಮಾಡಿದರು. ಜಿಲ್ಲಾ ಮೇಜಿಸ್ಟ್ರೇಟರಿಗೂ ಪೋಲೀಸ್ ಸೂಪರಿಂಟೆಂಡೆಂಟರಿಗೂ ಕಲ್ಲಿನೇಟು ಬಿದ್ದುವು. ವಾಲಂಟಿಯರುಗಳಲ್ಲಿ ಇಬ್ಬರು ಸತ್ತರು, ೪ ಮಂದಿಗೆ ಗಾಯವಾಯಿತು.

ಕಳೆದ ತಾ|| ೩ರಲ್ಲಿ ಬೊಂಬಾಯಿಗೆ ಬಂದ ಮಾಸಿಡೋನಿಯಾ ಎಂಬ ಅಂಚೆ ಹಡಗಿನಲ್ಲಿ H. H. ಆಗಾಖಾನರು ದಯಮಾಡಿಸಿದರು. ಅವರನ್ನು ಬೊಂಬಾಯಿ ಮಹಮ್ಮದೀಯರು ಅತ್ಯಂತ ಗೌರವಭಕ್ತಿಯಿಂದ ಸ್ವಾಗತಿಸಿದರು. ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯು ಅವರನ್ನು ಕಂಡು ಖಿಲಾಫತ್ ವಿಷಯವಾಗಿ ಪ್ರಶ್ನೆಮಾಡಿದುದರಲ್ಲಿ ಆಗಾಖಾನರು ಹೀಗೆ ಹೇಳಿರುವರು—‘‘ಖಿಲಾಫತ್ ವಿಷಯವಾಗಿ ಮಾಂಟೂಗ್‌ರವರು ಮನಃಪೂರ್ವಕವಾಗಿ ಕೆಲಸಮಾಡಿದರೆಂದು ಹೇಳುವುದೇ ಸಾಲದು. ಅವರು ಖಿಲಾಫತ್ ಬಾಧ್ಯತೆಯನ್ನೇ ತನ್ನ ತಲೆಯಮೇಲೆ ಹೊತ್ತುಕೊಂಡರು. ಮತ್ತಾರಾದರೂ ಸರಿ ಅಥವಾ ಗಾಂಧಿಯವರಾದರೂ ಸರಿ ಸ್ಟೇಟ್ ಸೆಕ್ರೆಟರಿ ಸ್ಥಾನದಲ್ಲಿ ಈಗ ಇದ್ದರೆ ಮಾಂಟೂಗ್‌ರವರು ಮಾಡಿದುದಕ್ಕಿಂತಲೂ ಹೆಚ್ಚಾಗಿ ಏನನ್ನೂ ಮಾಡಿರಲಾರರು. ಲಾರ್ಡ್ ಚಲ್ಮ್ಸ್‌ಫರ್ಡ್‌ರವರು ಆಂಗ್ಲ ದೇಶಕ್ಕೆ ಹೋಗಿ ಸೇರಿದ ಬಳಿಕ ಖಿಲಾಫತ್ ವಿಷಯವಾಗಿ ಅತ್ಯಂತ ದೀಕ್ಷೆಯಿಂದ ಕೆಲಸಮಾಡುತ್ತಿದ್ದಾರೆ. ಅವರಿಬ್ಬರೂ ಸಫಲಮನೋರಥರಾಗದೆ ಹೋದರೂ ತುರ್ಕಿ ಸಮಸ್ಯಾಪರಿಷ್ಕಾರವನ್ನು ಕುರಿತು ಆಶಾಭಂಗಗೊಳ್ಳಬೇಕಾದುದಿಲ್ಲ. ಆಂಗ್ಲ ದೇಶದಲ್ಲಿ ಬೇರೆಬೇರೆ ಪಕ್ಷಗಳವರ ಅಭಿಪ್ರಾಯಗಳು ಬೇರೆಬೇರೆ ತೆರನಾಗಿದ್ದರೂ, ಭರತಖಂಡದಮೇಲೆ ಸಾನುಭೂತಿಯುಳ್ಳ ಪಕ್ಷಗಳೂ ಇರುವುವು. ಫ್ರಾನ್ಸ್ ಪ್ರಜಾಭಿಪ್ರಾಯವು ತುರ್ಕಿ ಸಮಸ್ಯೆಯ ವಿಷಯದಲ್ಲಿ ಅನುಕೂಲವಾಗಿದೆ. ಲಾರ್ಡ್ ನಾರ್ತ್‌ಕ್ಲಿಫ್‌ರವರಿಗೆ ನಂಬುಗೆ ಹುಟ್ಟಿಸುವುದು ಕಷ್ಟ. ಅವರಿಗೆ ಒಂದು ಸಲ ನಂಬುಗೆ ಹುಟ್ಟಿಬಿಟ್ಟರೆ ಅವರಿಗೆ ಮೀರಿದ ದೃಢಾಭಿಮಾನಿಯಾದ ಮಿತ್ರನು ಬೇರೊಬ್ಬನಿಲ್ಲ. ತುರ್ಕಿ ಸಮಸ್ಯಾಪರಿಷ್ಕಾರ ವಿಷಯದಲ್ಲಿ ಸಹಾಯವಾದಿಗಳೂ ಅಸಹಾಯವಾದಿಗಳೂ ಸೇರಿ ಕೆಲಸಮಾಡುವುದು ಅತ್ಯವಶ್ಯಕ. ಕಾರ್ಯಸಾಫಲ್ಯದ ಅವಕಾಶವು ಸ್ವಲ್ಪ ಕಾಣಬರುತ್ತಿದ್ದರೂ ತಮ್ಮ ಪ್ರಯತ್ನವನ್ನು ಉಭಯಪಕ್ಷದವರೂ ಸ್ವಲ್ಪವೂ ತಗ್ಗಿಸಕೂಡದು.’’

ವಿದೇಶದ ವೃತ್ತಾಂತಗಳು.

ಐರ್ಲಂಡಿನವರು ನಾನಾ ರಾಷ್ಟ್ರಸಮ್ಮೇಳನದಲ್ಲಿ ತಮಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೋರುತ್ತಿದ್ದಾರೆ.

ಜರ್ಮನಿಯಲ್ಲಿ ರೈಲ್ವೆ ಕೆಲಸಗಾರರು ಮುಷ್ಕರಹಿಡಿದು ನಿಂತುಬಿಟ್ಟಿದ್ದಾರೆ. ಕಲ್ಲಿದ್ದಲಿಲ್ಲದೆ ಕ್ರುಪ್ ಯಂತ್ರಾಲಯವು ಮುಚ್ಚಿಹೋಗಿದೆ.

ಆಸ್ಟ್ರಿಯಾದ ವಿಯನ್ನಾಪಟ್ಟಣದಲ್ಲೂ ಅಮೇರಿಕಾದ ನ್ಯೂಯಾರ್ಕ್‌ಪಟ್ಟಣದಲ್ಲೂ ಇನ್‌ಫ್ಲುಯೆಂಜಾ ವ್ಯಾಧಿಯು ತೀವ್ರವಾಗಿರುವುದಂತೆ.

ಇಟಲಿ ಪ್ರಭುತ್ವದ ವಿದೇಶಾಂಗ ವಿಧಾನವು ಅಲ್ಲಿಯ ಪಾರ್ಲಿಮೆಂಟಿನವರಿಗೆ ಒಪ್ಪದೆಹೋದ ಕಾರಣ ಮಂತ್ರಿಮಂಡಲದವರೆಲ್ಲಾ ರಾಜೀನಾಮೆ ಕೊಟ್ಟರು.

ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೂಗ್‌ರವರು ಚಕ್ರವರ್ತಿಯವರ ಸಂದರ್ಶನವನ್ನು ಮಾಡಿಕೊಂಡು ಸಂಭಾಷಿಸಿ ಬಂದರಂತೆ. ಭರತಖಂಡ ಸಮಸ್ಯೆಯು ಇದಕ್ಕೆ ಕಾರಣವಾಗಿದ್ದರೆ ಸಂತೋಷವೇ.

ಮತ್ತೆ ಅನುಕೂಲಪರಿಸ್ಥಿತಿಯಿಲ್ಲದಿದ್ದರೂ ಗ್ರೀಕರು ತುರ್ಕಿಯವರ ಮೇಲೆ ಉಸ್ಕಿಷರ್ ಪ್ರಾಂತದಲ್ಲಿ ಯುದ್ಧವನ್ನಾರಂಭಿಸಿದರೆಂದೂ ತುರುಕರು ಅವರನ್ನು ಹೊಡೆದೋಡಿಸಿದರೆಂದೂ ಅಂಗೋರಾದಿಂದ ಸುದ್ದಿಬಂದಿದೆ.

ಅಂಗೋರಾ ಪ್ರಭುತ್ವದವರ ಇಷ್ಟಪ್ರಕಾರ ರಷ್ಯಾದ ಸೋವಿಯಟ್ ಪ್ರಭುತ್ವದವರು ಎನ್ವರ್‌ಪಾಷಾರವರನ್ನು ಹಿಡಿದುಕೊಟ್ಟಿರುವರು. ಇವರನ್ನು ಅಂಗೋರಾ ಪ್ರಭುತ್ವದವರು ರಾಜದ್ರೋಹಾಪರಾಧಕ್ಕಾಗಿ ವಿಚಾರಣೆ ಮಾಡುವವರಾಗಿದ್ದಾರಂತೆ.

ಅಮೇರಿಕಾದಲ್ಲಿ ವಿಪರೀತವಾಗಿ ಮಂಜುಸುರಿದು ೨ ಅಡಿ ಮಂದಕ್ಕೆ ಮಂಜಿನಗಡ್ಡೆಯು ಹೆಪ್ಪುಗಟ್ಟಿ ಕುಳಿತಿತು. ಇದರಿಂದ ಒಂದು ಸಿನಿಮಾ ನಾಟಕಶಾಲೆಯು ಕುಸಿದು ಬಿದ್ದುದರಿಂದ ಒಳಗಿದ್ದವರಲ್ಲಿ ೧೧೨ ಮಂದಿ ಸತ್ತರು. ೧೩೪ ಮಂದಿಗಳಿಗೆ ಗಾಯವಾಯಿತು.

ಲಾರ್ಡ್ ಬರ್ಕನ್‌ಹೇಡ್‌ರವರು ಲಂಡನ್ ಪಟ್ಟಣದಲ್ಲಿ ಒಂದುಕಡೆ ಉಪನ್ಯಾಸ ಮಾಡುವಾಗ್ಗೆ—‘‘ಭರತಖಂಡದಲ್ಲೂ ಈಜಿಪ್ಟಿನಲ್ಲೂ ಬಲವತ್ತರವಾದ ಉದ್ಯಮಗಳು ಹಬ್ಬುತ್ತಿವೆ. ಅವೆರಡರಲ್ಲಿ ಯಾವುದಾದರೊಂದರೊಳಗೆ ನಾವು ಯಾವತೆರದ ಬಲದಿಂದ ಅವನ್ನು ಗೆದ್ದೆವೋ ಆ ಬಲವನ್ನೇ ಮತ್ತೆ ಪ್ರದರ್ಶಿಸಬೇಕಾಗುವುದು’’ ಎಂದು ಹೇಳಿದರು.

ಪ್ಯಾರಿಸ್ಸಿನಲ್ಲಿ ಕೂಡಲಿಕ್ಕಿರುವ ಸಭೆಯಲ್ಲಿ ತುರ್ಕಿ ಸಮಸ್ಯೆಯು ಇತ್ಯರ್ಥವಾಗುವುದೆಂಬ ನಿರೀಕ್ಷಣೆಯು ಬಹಳವಾಗಿದ್ದಿತು. ಆದರೆ ಏನೋ ಅನಿವಾರ್ಯಕಾರಣಗಳಿಂದ ಆ ಸಮಾವೇಶವು ಸದ್ಯಃ ನಡೆಯದೆ ನಿಲ್ಲಬೇಕಾಯಿತಂತೆ. ಇದಕ್ಕಾಗಿ ಆಂಗ್ಲರು ವಿಷಾದಪ್ರದರ್ಶನವನ್ನು ಮಾಡಿದ್ದಾರೆ. ಆಂಗ್ಲ ಫ್ರಾನ್ಸ್ ಮನೋವೈಷಮ್ಯವೇ ಇದಕ್ಕೆ ಕಾರಣವಾಗಿರಬೇಕೆಂದು ತೋರುತ್ತದೆ.

ಐರ್ಲಂಡಿನಲ್ಲಿ ಉತ್ತರಭಾಗ ದಕ್ಷಿಣಭಾಗಗಳ ಪ್ರಭುತ್ವಗಳವರಿಬ್ಬರೂ ತಮ್ಮತಮ್ಮ ಎಲ್ಲೆಕಟ್ಟುಗಳನ್ನು ನಿರ್ಣಯಿಸಿಕೊಳ್ಳಲಿಕ್ಕಾಗಿ ನಡೆಯಿಸಿದ ಪ್ರಯತ್ನವು ಸಫಲವಾಗಲಿಲ್ಲ. ಆ ಸಂಬಂಧದಲ್ಲಿ ಅವರುಗಳ ಮನಸ್ಸು ಒಟ್ಟುಗೂಡಲಿಲ್ಲ. ಅದೇ ಸಂಬಂಧದಲ್ಲಿ ಮುಂದೆ ರಕ್ತಪಾತವಾಗದೆ ತಪ್ಪದೆಂಬ ಚಿಹ್ನೆಗಳು ಕಾಣುತ್ತಿವೆ. ಈ ಎಲ್ಲೆಕಟ್ಟಿನ ವ್ಯವಸ್ಥೆಗಾಗಿ ಸಾಮ್ರಾಜ್ಯಪ್ರಭುತ್ವದವರು ಒಂದು ಸಂಘವನ್ನೇರ್ಪಡಿಸಬೇಕಾದೀತು. ಐರ್ಲಂಡ್ ಮುಖ್ಯಮಂತ್ರಿಗಳು ಲಂಡನ್ನಿಗೆ ಹೋಗಿದ್ದಾರೆ.

ವಾಷಿಂಗ್‌ಟನ್ ಪಟ್ಟಣದಲ್ಲಿ ಕೂಡಿದ್ದ ಸಭೆಯವರು ನೌಕಾನಿಯಮನ ವಿಷಯವಾಗಿ ಏರ್ಪಡಿಸಿದ್ದ ಉಪಸಂಘದವರು ಮಾಡಿದ ತೀರ್ಮಾನದ ಸೂಚನೆಗಳಿಗೆ ಅಮೇರಿಕಾ ಇಂಗ್ಲಂಡ್ ಫ್ರಾನ್ಸ್ ಇಟಲಿ ಜಪಾನ್ ಈ ೫ ಪ್ರಮುಖರಾಷ್ಟ್ರ ಪ್ರತಿನಿಧಿಗಳೂ ಒಪ್ಪಿದರು. ಈ ಒಪ್ಪಂದವು ೧೯೩೬ನೆ ವರ್ಷದ ಕೊನೆಯವರೆಗೂ ವ್ಯವಹಾರದಲ್ಲಿರುವುದು. ಅಲ್ಲಿಗೆ ಇದನ್ನು ಮುಗಿಸಿಕೊಳ್ಳಲಿಕ್ಕೆ ಯಾವ ರಾಜ್ಯವಾದರೂ ಅಪೇಕ್ಷಿಸಿದರೆ ೨ ವರ್ಷಗಳಿಗೆ ಮುಂಚೆ ನೋಟೀಸನ್ನು ಕೊಡಬೇಕೆಂದು ನಿರ್ಧಾರವಾಯಿತು.

ಈಜಿಪ್ಟಿಗೆ ಕೊಡಲ್ಪಡುವ ಸ್ವಾತಂತ್ರ್ಯನಿಬಂಧನೆಗಳಲ್ಲಿ ಕೆಲ ಸುಧಾರಣೆಮಾಡಿ ಮತ್ತೊಂದು ಪ್ರಕಟನೆಯನ್ನು ಸಾಮ್ರಾಜ್ಯಪ್ರಭುತ್ವದವರು ಸೂಚಿಸಿದ್ದಾರೆ. ಅದರಲ್ಲಿ ಈಜಿಪ್ಟಿನೊಳಗೆ ಆಂಗ್ಲಸಾಮ್ರಾಜ್ಯದ ರಹದಾರಿ ಸಂರಕ್ಷಣೆಗೆ ಈಜಿಪ್ಟಿನವರು ಹೊಣೆಗಾರರಾಗಿರಬೇಕು. ಈಜಿಪ್ಟಿನಲ್ಲಿ ವಿದೇಶೀಯರನ್ನು ಸಂರಕ್ಷಿಸುವ ಅಧಿಕಾರವು ಆಂಗ್ಲರಧೀನದಲ್ಲೇ ಇರಬೇಕು. ಈಜಿಪ್ಟನ್ನು ವಿದೇಶಗಳ ಅಪಾಯದಿಂದ ಆಂಗ್ಲರೇ ಸಂರಕ್ಷಿಸುತ್ತಲಿರುವರು. ಈಜಿಪ್ಟ್ ಪ್ರಭುತ್ವದವರಿಗೂ ಆಂಗ್ಲ ಪ್ರಭುತ್ವದವರಿಗೂ ಈ ವಿಷಯದಲ್ಲಿ ಸಮಾಧಾನವು ಕುದುರಿದ ಕೂಡಲೇ ಇದನ್ನಂಗೀಕರಿಸಲು ಪಾರ್ಲಿಮೆಂಟು ಕೂಡಿಸಲ್ಪಡುವುದು. ಮೇಲೆ ಕಂಡ ಸೂಚನೆಗಳಿಗೆ ಈಜಿಪ್ಟಿನವರು ಒಪ್ಪಿದರೆ ಈಜಿಪ್ಟನ್ನು ಸಂರಕ್ಷಕರಾಷ್ಟ್ರತ್ವದಿಂದ ತೊಲಗಿಸಿ ರಾಜಪರಿಪಾಲಕ ರಾಷ್ಟ್ರವನ್ನಾಗಿ ಮಾಡುವುದಲ್ಲದೆ ಈಜಿಪ್ಟ್ ಪಾರ್ಲಿಮೆಂಟನ್ನು ಏರ್ಪಡಿಸಲಿಕ್ಕೂ ಅಂಗೀಕರಿಸುವರು. ಆದರೆ ಈ ಸುಧಾರಣೆಗೂ ಈಜಿಪ್ಟಿನವರು ಅಂಗೀಕರಿಸುವವರಾಗಿಲ್ಲವಂತೆ.

ಲಂಡನ್ನಿನಿಂದ ಪ್ರಕಟವಾಗುವ ಡೇಲಿನ್ಯೂಸ್ ಎಂಬ ಪತ್ರಿಕೆಯು ಗಾಂಧಿಯವರನ್ನು ಕುರಿತು ಹೀಗೆ ಬರೆದಿರುತ್ತದೆ—ನಾವು ಭರತಖಂಡದಲ್ಲಿ ಅದರ ಪೋಷಕರ ರೀತಿಯಲ್ಲಿದ್ದೇವೆಯೇ ಹೊರತು ಅದನ್ನು ಜಯಸಿ ಪಾಲಿಸುವವರ ರೀತಿಯಲ್ಲಿರುವುದಿಲ್ಲ. ಭರತಖಂಡದ ಅಭಿವೃದ್ಧಿಯೇ ಅವರ ಲಕ್ಷ್ಯ. ಗಾಂಧಿಯವರಿಗೂ ಅದೇ ಲಕ್ಷ್ಯವಾಗಿದ್ದರೆ ಅವರು ಪ್ರಭುತ್ವದವರೊಡನೆ ಸಹಕಾರದಿಂದ ನಡೆಯಬೇಕು. ಹಾಗೆ ನಡೆಯದೆಹೋದರೆ ಅವರ ಕಾರ್ಯದಿಂದ ರಕ್ತಪಾತಮಿಳಿತವಾದ ಕಷ್ಟಗಳು ದೇಶಕ್ಕೆ ಸಂಭವಿಸುವುವು. ಆಂಗ್ಲಪ್ರಭುತ್ವದಲ್ಲಿ ಎಷ್ಟು ಲೋಪಗಳಿದ್ದರೂ ಆ ಪ್ರಭುತ್ವವಿಲ್ಲದಿದ್ದರೆ ಅದಕ್ಕೆ ಮುಂಚೆ ಭರತಖಂಡವನ್ನು ಯಾವ ತೆರದ ವಿಪತ್ತುಗಳಿಂದ ಅವರು ಕಾಪಾಡಿದರೋ ಅಂಥ ಆಪತ್ತುಗಳೇ ಮತ್ತೆ ಅದಕ್ಕೆ ಪ್ರಾಪ್ತವಾಗುವುವು. ಗಾಂಧಿಯವರು ಈ ವಿಷಯವನ್ನು ಸಾವಧಾನವಾಗಿ ಗ್ರಹಿಸದೆಹೋದರೆ ಪ್ರಭುತ್ವದವರು ಯಾವ ತೆರದ ಚರ್ಯೆಯಿಂದಲಾದರೂ ದೇಶದ ಶಾಂತಿಯನ್ನೂ ಭದ್ರತೆಯನ್ನೂ ಕಾಪಾಡಿಯೇ ತೀರುವರು. ಅದು ಅವರ ಕರ್ತವ್ಯವು.

ನೋಟೀಸು.

ಇದರಿಂದ ಸಮಸ್ತ ಡಾಕ್ಟರವರುಗಳಿಗೂ ಯುನಾನಿ ವೈದ್ಯರುಗಳಿಗೂ ನೇಟಿವ್ ವೈದ್ಯರುಗಳಿಗೂ ತಿಳಿಯಪಡಿಸುವುದೇನಂದರೆ—

ಬೆಂಗಳೂರು ದಂಡು ಕೋಲ್ಸುರೋಡಿನಲ್ಲಿರುವ ಮಂಡಿ ವ್ಯಾಪಾರದ ಕಪ್ಪಣ್ಣ ಕೇಳಿಕೊಳ್ಳುವದೇನಂದರೆ—ನನ್ನ ಭಾವಮೈದನಾದ ಲೇಟ್ ಅಪ್ಪಾರಿ ರುದ್ರಪ್ಪನವರ ಮಗ ಸುಮಾರು ೪೦ ವರುಷ ವಯಸ್ಸುಳ್ಳ ಗಂಗಪ್ಪನು ಈಗ ೫ ತಿಂಗಳಿಂದಲೂ ಮೂತ್ರವ್ಯಾಧಿಯಿಂದ ಬಾಧೆಪಡುತ್ತಾ ಇದ್ದಾನೆ. ಈತನಿಗೆ ಡಾಕ್ಟರುಗಳಿಂದ ಈವರೆಗೂ ತೋರಿಸಿ ಔಷಧಗಳು ಇಂಜಕ್ಷನ್‌ಗಳು ಕೊಡಿಸಿದಾಗ್ಯೂ ಏನೂ ಗುಣಕಂಡುಬರಲಿಲ್ಲವು. ಆದ್ದರಿಂದ ಯಾವ ಡಾಕ್ಟರವರೇ ಆಗಲಿ ಯುನಾನಿ ವೈದ್ಯರೇ ಆಗಲಿ ನೇಟೀವ್ ಪಂಡಿತರೇ ಆಗಲಿ ಈತನ ಖಾಯಿಲೆ ಗುಣಪಡಿಸುತ್ತೇವೆಂದು ಖಂಡಿತವಾಗಿಯೂ ದೃಢವಾಗಿಯೂ ಹೇಳಿ ಔಷಧ ಕೊಟ್ಟು ಗುಣಮಾಡಿದವರಿಗೆ ೨೦೦೦ ರೂಪಾಯಿಗಳನ್ನು ಕೊಡುತ್ತೇನೆಂದು ಈ ಮೂಲಕ ತಿಳಿಸಿರುತ್ತೇನೆ.

N. KAPPANNA,
19, Coles Road,
Bangalore Cant.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಶ್ರೀಮದ್ವೀರಶೈವ ಶಿವಯೋಗಮಂದಿರದ ಮಹಾ ಶಿವರಾತ್ರಿಯ ಸಮಾರಂಭವು.

ವಾಡಿಕೆಯಂತೆ ಇದೇ ಮಾಘ ಬ|| ೧೪-೩೦ ಫಾಲ್ಗುಣ ಶು|| ೧ ಫೆಬ್ರವರಿ ತಾರೀಖು ೨೪, ೨೫, ೨೬ ಸರ್ ೧೯೨೨ ಇಸವಿ ಶುಕ್ರವಾರ

ಶನಿವಾರ ರವಿವಾರ ಈ ಮೂರು ದಿವಸ ಇಲ್ಲಿ ಯಾತ್ರಾ ಸಮಾರಂಭವೂ ಮಹಿಳಾಪರಿಷತ್ತೂ ಜರಗುವವು, ವಕ್ತೃತ್ವಕಲೆಯುಳ್ಳ ಪಂಡಿತರ ವ್ಯಾಖ್ಯಾನ ಪುರಾಣ ಹಾಗೂ ಶಿವಕೀರ್ತನ ಸಂಗೀತ ಭಜನೆಗಳು ಮಂಗಲ ರಥೋತ್ಸವ ಮುಂತಾದ ಕಾರ್ಯಗಳು ಜರಗುವವು. ಆದುದರಿಂದ ಧರ್ಮಾಭಿಮಾನಿಗಳಾದ ತಾವು ತಮ್ಮ ಪ್ರಾಂತದ ಜನರೊಡನೆ ಇತರ ಕ್ಷೇತ್ರಯಾತ್ರೆಗಳಿಗೆ ಹೋಗುವಂತೆ ಸಕಲ ಸನ್ನಾಹದೊಡನೆ ಇಲ್ಲಿಗೆ ಕುಟುಂಬಸಹಿತವಾಗಿ ಬಂದು ಇಲ್ಲಿ ಜರಗುವ ಪುಣ್ಯಕಾರ್ಯಗಳ ಫಲಭಾಗಿಗಳಾಗಿ ಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕಾಗಿ ಕೋರುವ.

ವ್ಯವಸ್ಥಾಪಕ ಶಿವಯೋಗಮಂದಿರ.

ಮಂದಿರವು ವಿಜಾಪುರ ಜಿಲ್ಲಾ ಬಾದಾಮಿ ಸ್ಟೇಷನ್ನಿಂದ ೧೦ ಮೈಲು ಅಂತರದಲ್ಲಿದೆ. ಬಾಡಿಗೆಯ ಟಾಂಗಾ ಹಾಗು ಬಂಡಿಗಳು ಸ್ಟೇಶನ್ನಿನ ಮೇಲೆ ದೊರೆಯುವವು.

ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ಷಾಣ್ಮಾಸಿಕ ಕಮಿಟಿ, ಹೂಲಿತಾಲ್ಲೂಕು ಸರಸಗಡ.

ಕಳೆದ ಜಾನೆವಾರಿ ತಾ॥ ೨೨ನೆ ರವಿವಾರ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದಲ್ಲಿ ಪ್ರಾತಃಕಾಲದ ೮ ಘಂಟೆಯ ಸುಮಾರಿಗೆ ಮೊದಲೇ ನೇಮಿಸಿದಂತೆ ಕಮಿಟಿಯು ನೆರೆದಿತ್ತು, ಈ ವಾಚನಾಲಯದ ಮೆಂಬರ ಜನರ ಭಾಷಣಗಳಾಗಿ ಕೆಳಗಿನ ವಿಷಯಗಳು ಸರ್ವಾನುಮತದಿಂದ ಪಾಸಾದವು, ೧. ಜನರ ಶಾಂತತಾ ಭಂಗಮಾಡತಕ್ಕಂಥ ಅಸಹಕಾರವಾದಿಗಳ ಮತವನ್ನು ಖಂಡಿಸುವದು ಪ್ರತಿಯೊಬ್ಬನ ಕರ್ತವ್ಯವಾಗಿರುವದು. ೨. ರಾ॥ ಬ॥ ಶಾಂತವೀರಪ್ಪಾ ಅಣ್ಣಾ ಮೆಣಸಿನಕಾಯಿ ಇವರಿಗೆ ದಿವಾನ್ ಬಹದ್ದೂರ್ ಪದವಿಯು ದೊರೆತದ್ದಕ್ಕಾಗಿ ಈ ಕಮಿಟಿಯವರು ಇವರನ್ನು ಆದರಪೂರ್ವಕವಾಗಿ ಅಭಿನಂದಿಸುತ್ತಾರೆ. ೩. ಆಯ್. ಸಿ. ಎಸ್. ಗುಗ್ಗಳಿಯವರು ಸೀಮೆಯಿಂದ ತಮ್ಮ ಜನ್ಮಭೂಮಿಗೆ ತಲ್ಪಿದ್ದಕ್ಕಾಗಿ ಇವರನ್ನು ಅಭಿನಂದಿಸುವದು ಯೋಗ್ಯವದೆ. ೪. ಟ್ರೇನಿಂಗ್ ಕಾಲೇಜದಿಂದ ಹೊರಗೆ ಹಾಕಲ್ಪಟ್ಟ ವಿದ್ಯಾರ್ಥಿಗಳ ಹಾನಿಯನ್ನು ತಿರುಗಿಸುವುದಕ್ಕೆ ಪ್ರಯತ್ನಪಟ್ಟ ಚಿಕ್ಕೋಡಿ ಪ್ರಭೃತಿಯವರನ್ನು ಅಭಿನಂದಿಸುವದು ಸ್ತುತ್ಯವದೆ. ಇಷ್ಟಾದಮೇಲೆ ಇಲ್ಲಿ ಸ್ಥಾಪಿಸಿದ ವೀರವಿಜಯ ಜ್ಯೋತಿಷ ವೈದಿಕ ಪಾಠಶಾಲೆಯ ಪರೀಕ್ಷೆಯು ಶ್ರೀಕ್ಷೇತ್ರಕಾಶಿಯಿಂದ ಆಗಮಿಸಿದ ಸ್ಥಿರಪಟ್ಟಾಧ್ಯಕ್ಷ ಮಹೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳಿಂದ ತೆಗೆದುಕೊಳ್ಳಲ್ಪಟ್ಟು ಜಗದ್ಗುರು ವಿಶ್ವಾರಾಧ್ಯರ ಜಯಘೋಷದೊಡನೆ ೧೨ ಘಂಟೆಯ ಸುಮಾರಿಗೆ ಸಭೆಯುವಿಸರ್ಜನೆಯಾಯ್ತು. ಪ್ರತ್ಯಕ್ಷದರ್ಶಿ.

ದೇಶಭಾಂಧವರಿಗೆ ಸೂಚನೆ.

ಮಹಾಶಯರೆ ಪ್ರತಿವರ್ಷದಲ್ಲಿಯೂ ಪದ್ಧತಿಪ್ರಕಾರ ನಡೆಯುತ್ತಿರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿಯ ರಥೋತ್ಸವವು ಇದೇಮಾಘ ಬ॥ ೧೦ ಅಂದರೆ ತಾರೀಖು 21-2-22ರಲ್ಲಿ ನಡೆಯುವುದು. ಆದರೆ ದೇಶಮಧ್ಯದಲ್ಲಿ ಅನೇಕ ತೀರ್ಥಯಾತ್ರೆಗಳ ಸಂಚಾರದಿಂದ ನಮ್ಮ ಬಾಂಧವರು ಸಂಪಾದಿಸುವ ಪುಣ್ಯಕ್ಕೆ ಭಾಗಿಗಳಾಗುವರೆಂಬುದರಲ್ಲಿ ಅತಿಶಯೋಕ್ತಿಯಾಗಲಾರದು. ಏಕೆಂದರೆ ಪ್ರತಿಯೊಂದು ಯಾತ್ರೆಗಳಲ್ಲಿ ಆಯಾ ಯಾತ್ರಾಧಿದೇವತೆಗಳ ಮಹತ್ವಚರಿತ್ರೆಯನ್ನು ಹೇಳಿ ತೋರಿಸುವವರಿಲ್ಲವೆಂಬ ಕೊರತೆಯು ಸರ್ವರಿಗೂ ವಿದಿತವಾದ ವಿಷಯವೇ ಈ ಕೊರತೆಯ ನಿವಾರಣೆಗೋಸ್ಕರ ಇದೇಗ್ರಾಮದಲ್ಲಿ ಸ್ಥಾಪಿಸಲ್ಪಟ್ಟ ಧರ್ಮಬೋಧಕ ಭಜನ ಸಂಘದ ಷಡ್ವಿದ್ಯಾ ಪಾಠಶಾಲಾಕಂಪಿನಿಯು ಸಕಾಲವನ್ನನುಸರಿಸಿ, ವೇ॥ ಕೊಟ್ಟೂರು ಕೆಂಭಾವಿಮಠದ ಗುರುಬಸವ ಶಾಸ್ತ್ರಿಗಳಿಂದ ಜನಗಳಿಗೆ ಸುಬೋಧವಾಗುವಂತೆ ರಚಿಸಲ್ಪಟ್ಟ ಶ್ರೀ ಸ್ವಾಮಿಯ ಚರಿತ್ರೆಯನ್ನು ಉತ್ತಮ ಡ್ರೆಸ್, ಸೀನ್ಸ್, ಸಂಗೀತಾದಿಗಳಿಂದ ನೇತ್ರಶ್ರೋತ್ರಾನಂದಗೊಳ್ಳುವಂತೆ ನಾಟಕರೂಪವಾಗಿ ಪ್ರತ್ಯಕ್ಷಪವಾಡಗಳನ್ನು ತೋರಿಸುವದಲ್ಲದೆ ಇನ್ನೂಕೆಲವು ವೀರಶೈವ ತತ್ವಬೋಧಕಗಳಾದ ಚರಿತ್ರೆಗಳನ್ನು ಆಡಿ ತೋರಿಸುತ್ತಾರೆ. ಆದ್ದರಿಂದ ಬರುವ ಭಕ್ತವೃಂದಕ್ಕೆ ಇಲ್ಲಿ ನಡೆಯುವ ರಥೋತ್ಸವಾದಿಸಮಾರಂಭವನ್ನು ನೋಡಿ ಮಹಾಸ್ವಾಮಿಯ ದರ್ಶನಾಶೀರ್ವಾದಕ್ಕೆ ಪಾತ್ರರಾಗುವದರಿಂದ ಅವರವರ ಯಾತ್ರಾಶ್ರಮವು ಸಫಲವಾಗುವುದೆಂಬುವ ಬಗ್ಗೆ ಹೇಳಬೇಕಾದ ಅವಶ್ಯಕವಿಲ್ಲ. ಇಲ್ಲಿ ಹವಾ ಮೊದಲಾದುವುಗಳು ಚನ್ನಾಗಿರುತ್ತವೆ.

ಧರ್ಮಬೋಧಕ ಭಜನಸಂಘ,
ಕೆಂಭಾವಿಮಠ, ಕೊಟ್ಟೂರು.

ಬ್ರಾಹ್ಮಣೇತರ ಜಾಹೀರಸಭೆಯು.

ತಾರೀಖು ೬-೨-೧೯೨೨ ನೆ ದಿವಸ ಗದಗ ತಾ॥ ಕದಡೀಗ್ರಾಮದಲ್ಲಿ ಶ್ರೀಮಂತ ರಾಮಪ್ಪಾ ಸಕರಪ್ಪಾ ಗೋಜನೂರ ಇವರ ಅಧ್ಯಕ್ಷತೆಯ ಕೆಳಗೆ ಬ್ರಾಹ್ಮಣೇತರ ಜಾಹೀರಸಭೆಯು ಜರಗಿತ್ತು. ಈ ಸಭೆಯಲ್ಲಿ—ಮ॥ ರಾ॥ ಭರಮಗೌಡಾ ಪೋಲೀಸ ಪಾಟೀಲ, ಮ॥ ರಾ॥ ದ್ಯಾಮಪ್ಪಾ ಗೋಜನೂರ, ಮ॥ ರಾ॥ ಅಯ್ಯಪ್ಪಾ ಮೂಳಗೊಂಡ, ಇನ್ನೂ ಮುಂತಾದ ಜನರು ತಮ್ಮ ಅಸ್ಖಲಿತವಾಣಿಯಿಂದ ಜನರಮೇಲೆ ಒಳ್ಳೇ ಪರಿಣಾಮವಾಗುವಂತೆ ಸಾಮಾಜಿಕ, ಧಾರ್ಮಿಕ, ಶೈಕ್ಷಣೀಕ, ವಗೈರೆ ವಿಷಯಗಳ ಮೇಲೆ ಭಾಷಣಮಾಡಿದರು. ಮತ್ತೂ ಈ ಸಭೆಹುಲ್ಲಿ ಕೆಳಗೆಕೊಟ್ಟ ಠರಾವುಗಳು ಪಾಸಾದವು— ೧. ಯುವರಾಜರ ಸ್ವಾಗತವನ್ನು ಆನಂದದಿಂದಲೂ ಮತ್ತು ರಾಜನಿಷ್ಠೆಯಿಂದಲೂ ಈ ಸಭೆಯು ಇಚ್ಛಿಸುತ್ತದೆ. ೨. ಪಂಡಿತ ಕಾಶೀನಾಥಶಾಸ್ತ್ರಿ ಇವರ ಪ್ರೇರಣೆಯಿಂದ ಶಾಂತಪ್ಪಾ ಕುಬಸದ ಇವರು ಬರೆದ «ಬಸವಾದಿ ನಿಜತತ್ವದರ್ಪಣ» ವೆಂಬ ಪುಸ್ತಕವು ಈ ಸಭೆಯಲ್ಲಿ ಓದಲ್ಪಟ್ಟಿತು. ಆದರೆ ಇದರೊಳಗಿನ ಪ್ರಶ್ನಗಳು ಅಯೋಗ್ಯವಿದ್ದು ವೀರಶೈವ ಸಮಾಜ ಘಾತಕವಿರುವದರಿಂದ ಈ ಪುಸ್ತಕವು ಈ ಸಭೆಯಲ್ಲಿ ಜೋರಿನಿಂದ ನಿಷೇಧ ಮಾಡಲ್ಪಟ್ಟಿತು. ೩. ಶ್ರೀಮಂತ ಲಿಂಗಪ್ಪಾ ಚಾಯಪ್ಪಾ ಸರದೇಸಾಯರು ಶಿರಸಂಗಿಕರ ಇವರು ತಮ್ಮ ಮೃತ್ಯುಪತ್ರದಲ್ಲಿ ತನ್ನ ಜಾತಿಯ ಕುಡಿವಕ್ಕಲಿಗ ವಿದ್ಯಾರ್ಥಿಗಳಿಗೆ ಮೊದಲು ಸ್ಕಾಲರ್‌ಶಿಪ್ ಕೊಡಬೇಕೆಂದು ಬರೆದಿದ್ದಾರೆ. ಆ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಈಗ ಸ್ಕಾಲರ್‌ಶಿಪ್ ಕೊಟ್ಟಿರುವದಿಲ್ಲ. ಕೆಲವರಿಗೆ ಅಲ್ಪಸ್ವಲ್ಪ ಕೊಟ್ಟಿರುತ್ತಾರೆ. ಇದರಿಂದ ಕುಡಿವಕ್ಕಲಿಗರ ಸಮಾಜಕ್ಕೆ ಅಸಮಾಧಾನವುಂಟಾಗಿದೆ. ಆದುದರಿಂದ ಈ ಸಮಾಜದ ಪ್ರತಿ ಒಬ್ಬ ವಿದ್ಯಾರ್ಥಿಗೆ ಸಾಕಷ್ಟು ಸ್ಕಾಲರ್‌ಶಿಪ್ ಕೊಡಬೇಕೆಂದು ಈ ಫಂಡಿನ ಪ್ರೆಸಿಡೆಂಟರವರಿಗೆ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. ೪. ಮ್ಯಾಟ್ರಿಕ್ ಫಾಯನಲ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಯಾವ ವಿಷಯದಲ್ಲಿ ನಾಪಾಸ ಆಗುತ್ತಾರೋ (ಪಾಸಾದ ವಿಷಯಗಳನ್ನು ಬಿಟ್ಟು) ಆ ವಿಷಯಗಳನ್ನೇ ಮಾತ್ರ ಪುನಃ ಪರೀಕ್ಷೆ ತಕ್ಕೊಳ್ಳಬೇಕು. ಮತ್ತು ಸದರೀ ಪರೀಕ್ಷೆಗಳನ್ನು ವರ್ಷಕ್ಕೆ ಎರಡುಸಾರೆ ತಕ್ಕೊಳ್ಳಬೇಕು. ಅಂದರೆ ಹಿಂದುಳಿದವರಿಗೆ ಮುಂದೆಬರಲಿಕ್ಕೆ ಮಾರ್ಗವಾಗುತ್ತದೆ. ಈ ವಿಷಯವನ್ನು ನಾಮದಾರ ಗವರ್ನರ ಇನ್‌ಕೌನ್ಸಿಲಿನಲ್ಲಿ ತಂದು ಈ ಠರಾವು ಪಾಸಮಾಡಿಸಬೇಕೆಂದು ಶ್ರೀಯುತ ಕಂಬಳೀ ವಕೀಲರಿಗೆ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. ೫. ಸಕ್ತಿಶಿಕ್ಷಣದ ವೆಚ್ಚದಬಗ್ಗೆ, ಅ. ರೈತರಮೇಲೆ ಬಲ್ಲೂಲ ಕರವನ್ನು ಹೇರಬಾರದು. ಬ. ಸರಕಾರಿ ನೌಕರಿಯಲ್ಲಿ ದರ ತಿಂಗಳ ೫೦ ರೂ. ಹೆಚ್ಚುಳ್ಳ ಪಗಾರಿಜನರ ಸಂಬಳವನ್ನು ¼ ಕಡಿಮೇ ಮಾಡಬೇಕು. ಕ. ಪರದೇಶದಿಂದ ಬರುವ ಮಾಲಿಗೆ ಹೆಚ್ಚಿಗೆ ಕರವನ್ನು ಕೂಡ್ರಿಸಬೇಕು. ಡ. ಇನಾಮು ಜಮೀನುಗಳುಳ್ಳವರಿಗೆ ಒಂದು ನೇಮದಿಂದ ಕರವನ್ನು ಹಾಕಬೇಕು. ಈ ಪ್ರಕಾರ ವಸೂಲಾದ ಹಣವನ್ನು ಸಕ್ತಿಶಿಕ್ಷಣಕ್ಕೆ ಉಪಯೋಗಮಾಡಬೇಕೆಂದು ಈ ಸಭೆಯು ಸರಕಾರಕ್ಕೆ ವಿನಂತಿಮಾಡಿಕೊಳ್ಳುತ್ತದೆ. ೬. ಈ ಊರಲ್ಲಿಯ ಪ್ರಾಥಮಿಕ ಶಾಲೆಯಲ್ಲಿ ೯೪-೯೫ ಹುಡುಗರಿದ್ದು ಒಬ್ಬನೇ ಮಾಸ್ತರನು ಇರುವದರಿಂದ ಶಿಕ್ಷಣಪ್ರಸಾರಕ್ಕೆ ಬಹಳ ತೊಂದರೆಯುಂಟಾಗಿರುತ್ತದೆ. ಆದ್ದರಿಂದ ಶಾಲಾಖಾತೆಯವರು ಈ ಕೊರತೆಯನ್ನು ದೂರಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. ಈಪ್ರಕಾರ ಠರಾವುಗಳು ಸರ್ವಾನುಮತದಿಂದ ಪಾಸಾಗಿ ಅಧ್ಯಕ್ಷರ ಆಭಾರಮನ್ನಿಸಿ ಸಭೆಯು ವಿಸರ್ಜಿತವಾಯಿತು.

ಭರಮಗೌಡಾ ಪೋ. ಪಾಟೀಲ, ಕದಡಿ.

ಆಲೂರು ರಾಜನಿಷ್ಠ ಸಭೆ.

ಹಾನಗಲ್ಲ ತಾಲ್ಲೂಕು ಆಲೂರುಗ್ರಾಮದಲ್ಲಿ ರಾಜನಿಷ್ಠ ಸಭೆಯು ತಾ॥ ೨೫-೧-೧೯೨೨ ನೆ ದಿನ ಶ್ರೀ ವೀರಭದ್ರದೇವರಗುಡಿ ಮುಂಭಾಗದಲ್ಲಿ ತಳಿರು ತೋರಣಗಳಿಂದ ಶೃಂಗರಿಸಿದ ಮಂಟಪದಲ್ಲಿ ಪಂಚಮಜಾರ್ಜ್ ಬಾದಶಹರ ಭಾವಪಟವನ್ನು ಶೃಂಗಾರದೊಡನೆ ಉಚ್ಚಾಸನದಲ್ಲಿರಿಸಿ ಮೆ॥ ಕಲೆಕ್ಟರ್ ಸಾಹೇಬ ಬಹದ್ದೂರ ಜಿಲ್ಲಾ ಧಾರವಾಡ ಈ ದೊರೆಗಳವರ ಅಧ್ಯಕ್ಷತೆಯಲ್ಲಿ ರಾಜನಿಷ್ಠ ಸಭೆಯು ಅಟ್ಟಹಾಸದಿಂದ ನೆರೆದಿತ್ತು. ಈ ಸಭೆಗೆ ಈ ಊರ ನೆರೆಪೂರ ಯಾವತ್ತು ಜಾತಿಯ ಬಹುಶಃ ೬೦೦-೮೦೦ ಜನರು ಕೂಡಿದ್ದರು. ಈ ಸಭೆಯಲ್ಲಿ ಮಿ॥ ತುಪ್ಪದ ಮಿ॥ ಶೆಟ್ಟರ ಮಿ॥ ಬಸವಾರ ಬೂದಿಹಾಳಮಠ ಇವರು ಅಸಹಕಾರಿಗಳ ಆಚರಣೆಯನ್ನು ಖಂಡಿಸಿ, ಯಾವತ್ತೂ ರಾಜನಿಷ್ಠರಾಗಿರಬೇಕೆಂಬ ಬಗ್ಗೆ ಚೆನ್ನಾಗಿ ಭಾಷಣಮಾಡಿದರು. ನಂತರ ಅಧ್ಯಕ್ಷರು ೧ ನವಕರಿ, ೨ ಜನಸಂಖ್ಯೆ, ೩ ಸ್ವದೇಶಿ ಅರಿವೆ, ೪ ಸ್ವರಾಜ್ಯ ಈ ವಿಷಯಗಳ ಕುರಿತು ಹೇಳಿದ್ದೇನೆಂದರೆ—

೧. ನಾನು ೧೦, ೧೨ ವರ್ಷಗಳ ಮೊದಲು ಈ ಜಿಲ್ಲೆಯಲ್ಲಿ ಅ॥ ಕಲೆಕ್ಟರನಿದ್ದಾಗ್ಗೆ ಹುಜೂರುಡೆಪ್ಯುಟಿ ಕಲೆಕ್ಟರವಗೈರೆ ಜಾಗಾಗಳು ಹಿಂದಿ ಜನರಿಗೆ ಸ್ವಲ್ಪ ಇದ್ದವು. ಆದರೆ ಸದರಿ ಅವಧಿಯಲ್ಲಿ ಹಿಂದೂಜನರಿಗೆ ನವಕರಿ ಆಗಿದ್ದುದಕ್ಕಿಂತಲೂ ಈಗ ಹೆಚ್ಚು ಹುದ್ದೆಗಳು ಆಗಿವೆ. ಇನ್ನಾದರೂ ಸರಕಾರವು ಹಿಂದೂಜನರಿಗೆ ದೊಡ್ಡದೊಡ್ಡ ಅಧಿಕಾರಗಳನ್ನು ಕೊಡುವ ಇರಾದೆಯಲ್ಲಿದ್ದಾರೆ. ೨. ಧಾರವಾಡ ಜಿಲ್ಲೆಯಲ್ಲಿ ಎಂಟುಲಕ್ಷ ಲಿಂಗಾಯತ ವಸತಿ ಇದ್ದು, ಬ್ರಾಹ್ಮಣಜನಸಂಖ್ಯೆ ಕಡಿಮೆ ಇದ್ದು ಅವರೇ ನವಕರಿಯಲ್ಲಿ ಹೆಚ್ಚಿದ್ದಾರೆ. ಆದರಿಂದ ಅವರು ಸುಧಾರಿಸುತ್ತಾರೆಂಬುದು ಸ್ಪಷ್ಟವು. ಜನಸಂಖ್ಯೆಯ ಮೇಲಿಂದ ವಿಚಾರಿಸಿದರೆ ನೀವೇ ಹೆಚ್ಚಾಗಿರಬೇಕಾಗಿತ್ತು. ಹಾಗಾಗಿಲ್ಲ. ಇದರಿಂದ ನೀವು ಹಿಂದೆ ಉಳಿದಿದ್ದೀರೆಂಬುದು ನಿಜ. ೩. ಪರದೇಶಿ ಅರಿವೆಗೆ ಬಹಿಷ್ಕಾರಹಾಕಿದರೆ ಸ್ವರಾಜ್ಯ ಸಿಕ್ಕಂತಾಗುವುದಿಲ್ಲ. ಆದರೆ ಸ್ವದೇಶದ ಅರಿವೆಗೂ ಸ್ವರಾಜ್ಯಕ್ಕೂ ಏನೂ ಸಂಬಂಧವಿಲ್ಲ. ಟೊಪ್ಪಿಗೆ ಹೊರ್ತಾಗಿ ನನ್ನ ಬೆತ್ತ ಕೋಟುಗಳು ಸ್ವದೇಶಿ ಅವೆ. ಟೊಪ್ಪಿಗೆ ಹಳೇದು ಆಗಿದ್ದು ಅದನ್ನು ಸುಡಲಿಕ್ಕೆ ಸಹ ತಯಾರ ಇದ್ದೇನೆ. ಅರ್ಥಾತ್ ನಿಮ್ಮ ದೇಶೀ ಬಟ್ಟೆಗಳು ಪುರವಿತ ಆಗುವವರೆಗೆ ಪರದೇಶಿ ಬಟ್ಟೆಗಳನ್ನು ಧರಿಸಲು ಅಡ್ಡಿ ಏನು? ನನಗಾದರೂ ಸ್ವದೇಶಾಭಿಮಾನವುಂಟು. ೪. ಸರಕಾರದವರು ಸ್ವರಾಜ್ಯ ಕೊಡಲಿಕ್ಕೆ ಸಿದ್ಧರಿದ್ದಾರೆ. ಆದರೆ ಈಗ ಕೊಡಬೇಕೋ, ಹಪ್ತೆಗಳಮೂಲಕ ಕೊಡಬೇಕೋ; ಯಾವದು ಕೊಟ್ಟರೆ ಹಿಂದುಸ್ಥಾನಕ್ಕೆ ಸರ್ವಸ್ವೀ ಹಿತವಾದೀತು, ಎಂಬ ಬಗ್ಗೆ ವಿಚಾರವದೆ. ಇದರ ವಿಚಾರವನ್ನು ಮಾಡಿಯೇ ಚೆಮ್ಸ್‌ಫರ್ಡ್ ಬಿಲ್ಲಿನಪ್ರಕಾರ ಅಧಿಕಾರಕೊಟ್ಟದೆ. ಇದು ನನ್ನ ವಿಚಾರದಂತೆ ಹಿತವದೆ. ನೀವಾದರೂ ಈಬಗ್ಗೆ ವಿಚಾರಮಾಡಿರಿ. ನೀವೆಲ್ಲರೂ ಸಹಕಾರಿಗಳಾಗಿ ಇರುವದರಿಂದ ನಿಮಗೆ ಈ ವಿಷಯವನ್ನು ಸೂಚಿಸಿದ್ದೇನೆ. ಆದರೆ ಇದೇಮಾತನ್ನು ಗುಜರಾಥದಲ್ಲಿ ಹೇಳಿದರೆ ನನ್ನ ವಿಷಯದ ಕಡೆಗೆ ಯಾರೂ ಲಕ್ಷ್ಯ ಕೊಡಲಿಕ್ಕಿಲ್ಲ. ಈಪ್ರಕಾರ ಅಧ್ಯಕ್ಷರ ಸ್ಫೂರ್ತಿದಾಯಕ ಭಾಷಣವಾದಮೇಲೆ ಕೆಳಗೆ ತೋರಿಸಿದ ವಿಷಯಗಳು ಸರ್ವಾನುಮತದಿಂದ ಪಾಸಾದವು. (ಅ) ಸರಕಾರದವರು ಗೊತ್ತುಮಾಡಿದ ಪ್ರಕಾರ ಕಂತುಗಳ ಮೂಲಕವೇ ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡಬೇಕೆಂದು ಈ ಸಭೆಯು ಒಪ್ಪುತ್ತದೆ. (ಬ) ಶ್ರೀಯುತ ಅಡಿವೆಪ್ಪ ಶಿವಲಿಂಗಪ್ಪ ಕುಪ್ಪಸದ ಹಿರೇಕೆರೂರ ಇವರಿಗೆ ಸರಕಾರದವರು ಕೂಡ ತಾಲ್ಲೂಕ ಲೋಕಲ್‌ಬೋರ್ಡ ಪ್ರೆಸಿಡೆಂಟ್ ಜಾಗಗಳನ್ನು ಕೊಟ್ಟಬಗ್ಗೆ ಸರಕಾರದವರ ಉಪಕಾರವನ್ನು ಈ ಸಭೆಯು ಮನ್ನಿಸುವದಲ್ಲದೆ ಈಬಗ್ಗೆ ಶಿಫಾರಸುಮಾಡಿದಂಥ ಮೆ॥ ಕಲೆಕ್ಟರ ಸಾಹೇಬರವರನ್ನು ಸಹ ಈ ಸಭೆಯು ಅಭಿನಂದಿಸುತ್ತದೆ. (ಕ) ಈಪ್ರಕಾರ ಬ್ರಾಹ್ಮಣೇತರ ಜನರಿಗೆ ಲೋಕಲ್ ಬೋರ್ಡ ಇತರ ಖಾತೆಗಳಲ್ಲಿ ದೊಡ್ಡದೊಡ್ಡ ಹುದ್ದೆಗಳನ್ನು ಕೊಡುವ ಬಗ್ಗೆ ಸರಕಾರದವರಿಗೆ ಈ ಸಭೆಯು ಪ್ರಾರ್ಥಿಸುತ್ತದೆ. ಹೀಗೆ ಕೆಲಸಗಳು ಜರುಗಿ ಅಧ್ಯಕ್ಷರ ಇತರ ಸಭಿಕರ ಆಭಾರಮನ್ನಣೆ ಆದಮೇಲೆ, ರಾಷ್ಟ್ರಗೀತವಾದನಂತರ ಸುಗಂಧ ತಾಂಬೂಲಗಳನ್ನು ಕೊಟ್ಟು ಜಯಘೋಷದೊಡನೆ ಸಭೆಯು ವಿಸರ್ಜಿತವಾಯ್ತು.

ಸಿ. ವೀ. ಸಿಂಧೂರ.

ಜಗಳೂರು.

ನಮ್ಮ ಗ್ರಾಮಕ್ಕೆ ತಾ॥ ೨೮-೧-೨೨ ನೆ ಸಾಯಂಕಾಲ ೫ ಘಂಟೆಗೆ ನಮ್ಮ ನೂತನ ಡೆ॥ ಕ॥ ಸಾ॥ ರವರ ಸ್ವಾರಿಯು ದಯಮಾಡಿಸಿತು. ಆಗಮನ ನಿರೀಕ್ಷಣೆಯಲ್ಲಿಯೇ ಕಾದಿದ್ದ ತಾ॥ ಅಮಲ್ದಾರ್‌ರವರೂ, ಮ್ಯುನ್ಸಿಪಲ್ ವೈಸ್‌ಪ್ರಸಿಡೆಂಟರವರೂ ಮ್ಯುನ್ಸಿಪಲ್ ಮೆಂಬರುಗಳವರೂ ಸಹ ಆದರಪೂರ್ವಕವಾಗಿ ಇದಿರ್ಗೊಂಡು ಕರೆದುಕೊಂಡು ಬಂದು ಟ್ರಾವಲರ್ಸ್ ಬಂಗಲೆಯಲ್ಲಿಳಿಸಿದರು. ಆ ದಿವಸ ಸಾಹೇಬರವರು ಮಾರ್ಗಾಯಾಸದಿಂದ ಬಳಲಿದ್ದರಿಂದಲೂ ಅಸ್ತಮಯಕಾಲವು ಸಮೀಪಿಸಿದ್ದರಿಂದಲೂ ಇನ್ನಾವ ಕೆಲಸಕಾರ್ಯಗಳೂ ಜರುಗಲಿಲ್ಲ. ಮರುದಿನ ಕೆಲವು ವಿಲೇಜು ಇನ್ಸ್‌ಪೆಕ್ಷನ್ ತೀರಿಸಿಕೊಂಡು, ಬಂದನಂತರ ಈ ಗ್ರಾಮದಲ್ಲಿ ಈಗ ೪-೫ ವರ್ಷಗಳಾರಭ್ಯ ಚಂದಾವಸೂಲಿ ಕಟ್ಟಡದ ನಿವೇಶನದ ವಿಷಯ ಚರ್ಚೆ ಮುಂತಾದ್ದರಲ್ಲಿಯೇ ಕಾಲಹರಣವಾಗುತ್ತಿದ್ದ ಟೌನ್‌ಹಾಲ್ ವಿಷಯದಲ್ಲಿ ಚರ್ಚೆಬಂದು ಕೆಲವರು ಹಳೇ ಸಂತೆಪೇಟೆಯಲ್ಲಿ ಕಟ್ಟಿಸಬೇಕೆಂತಲೂ ಕೆಲವರು ಸ್ಕೂಲಿಗೆ ದಕ್ಷಿಣದಿಕ್ಕಿನಲ್ಲಿ ಕಟ್ಟಬೇಕೆಂತಲೂ ವಿವಾದವಾಗಿ ಕೊನೆಗೆ ಸ್ಕೂಲಿಗೆ ದಕ್ಷಿಣದಿಕ್ಕಿನಲ್ಲಿಯೇ ಆಗಬಹುದೆಂದು ಸರ್ವಾನುಮತದಿಂದ ಪಾಸಾಯ್ತು. ತರುವಾಯ, ಹಾಲಿದ್ದ ಕಾಲದಲ್ಲಿಯೇ ಹಬ್ಬವಂ ಮಾಡೆಂಬ ನಾಣ್ನುಡಿಯಂತೆ ಈಗಲೇ ನಮ್ಮ ಡೆ॥ ಕ॥ ಸಾ॥ ರವರ ಹಸ್ತದಿಂದಲೇ ಈ ಕಟ್ಟಡದ ಶಂಕುಸ್ಥಾಪನೆಯ ಮಹೋತ್ಸವವು ಜರುಗಬೇಕೆಂದು ನಿರ್ಧರಿಸಿ ತಾ॥ ೩೦ನೇ ಸೋಮವಾರ ಸಾಯಂಕಾಲ ೬ ಘಂಟೆಗೆ ಶಂಕುಸ್ಥಾಪನೆಯ ಮುಹೂರ್ತವಂ ನಿರ್ಧರಿಸಿ ತತ್‌ಕ್ಷಣದಲ್ಲಿಯೇ ಶಂಕುಸ್ಥಾಪನೆಯಾಗಬೇಕಾದ ಸ್ಥಳದಲ್ಲಿ ತಳಿರ್ತೋರಣಗಳಿಂದಲಂಕೃತವಾದ ಚಿಕ್ಕದೊಂದು ಮಂಟಪವನ್ನು ರಚಿಸಿದರು. ಪುರಪ್ರಮುಖರೂ, ಅಬಾಲವೃದ್ಧರಾದಿಯಾಗಿ ಸರ್ವರೂ ಈ ಸುಸಮಯಕ್ಕೆ ಸರಿಯಾಗಿ ನೆರೆದರು. ಆಗ ಮೆಂಬರುಗಳವರು ಡೆ॥ ಕ॥ ಸಾ॥ ರವರನ್ನು ವಾದ್ಯಘೋಷಗಳೊಂದಿಗೆ ಮಂಟಪಕ್ಕೆ ಕರೆದುಕೊಂಡು ಬಂದರು. ಸಾಹೇಬರವರ ಸ್ವಾರಿಯು ದಯಮಾಡಿಸಿದೊಡನೆಯೇ ಸರ್ವರೂ ಹರ್ಷಧ್ವನಿಗೈದರು. ನಂತರ ವೈಸ್‌ಪ್ರಸಿಡೆಂಟ್ ರಾಮಯ್ಯನವರು ತಾವು ದಯವಿಟ್ಟು ಅಧ್ಯಕ್ಷಸ್ಥಾನವನ್ನಲಂಕರಿಸಿ ಈ ಕಾರ್ಯವಂಸಾಂಗಗೊಳಿಸಬೇಕೆಂದು ಪ್ರಾರ್ಥಿಸಿದಮೇರೆಗೆ ಸಾಹೇಬರು ಅಗ್ರಾಸನವನ್ನಲಂಕರಿಸಿದರು. ಸರ್ವರೂ ಜಯಧ್ವನಿಗೈದರು. ಆ ಮೇಲೆ ಪ್ರಜಾರಂಜಕರಾದ ನಮ್ಮ ಅಧ್ಯಕ್ಷರವರು ಎದ್ದುನಿಂತು ಗಂಭೀರವಾದ ತಮ್ಮ ಅಮೃತವಾಣಿಯಿಂದ ಈ ರೀತಿಯಾಗಿ ಅಪ್ಪಣೆಕೊಡಿಸಿದರು—ಮಹನೀಯರೆ! ಯಾವುದೊಂದು ಕಾರ್ಯವು ನೆರವೇರಬೇಕಾದರೂ ಒಂದು ನಿಯಮಿತ ಕಾಲವು ಬೇಕು. ಅದು ದೈವ ನಿಯಾಮಕವೇ ಹೊರ್ತು ಮಾನುಷಯತ್ನವಲ್ಲ. ಈಗ 4-5 ವರ್ಷಗಳಿಂದಲೂ ಚರ್ಚೆಯಲ್ಲಿದ್ದು ತೀರ್ಮಾನವಾಗದೆ ನೆನ್ನೆಯದಿವಸವೆಲ್ಲಾ ಕಟ್ಟಡವು ಯಾವ ಸ್ಥಳದಲ್ಲಿ ಆಗಬೇಕೆಂಬ ವಿಷಯದಲ್ಲಿ ದೀರ್ಘಕಾಲ ವಿವಾದಜರುಗಿ ಈ ದಿವಸ 5 ನಿಮಿಷಗಳಲ್ಲಿ ಕಟ್ಟಡವು ಇದೇ ಸ್ಥಳದಲ್ಲಿ ಆಗಬೇಕೆಂತಲೂ ಶಂಕುಸ್ಥಾಪನಾ ಮಹೋತ್ಸವವು ಈ ದಿನವೇ ಜರುಗಬೇಕೆಂತಲೂ ಸರ್ವಾನುಮತದಿಂದ ನಿರ್ಧರವಾದುದನ್ನು ನೋಡಿ ನನಗೆ ಆನಂದಾಶ್ಚರ್ಯಗಳು ಏಕಕಾಲದಲ್ಲುಂಟಾದುವು. ಏಕೆಂದರೆ ನಮ್ಮ ಘನವನ್ನು ಹೊಂದಿದ ಮಹಾಮಹಿಮರಾದ ಪ್ರಿನ್ಸ್ ಆಫ್‌ವೇಲ್ಸರವರು ನಮ್ಮ ದೇಶಕ್ಕೆ ದಯಮಾಡಿಸಿದ ಈ ನೂತನ ಪವಿತ್ರವರ್ಷದಲ್ಲಿಯೇ ಈ ಕಟ್ಟಡಕ್ಕೆ ಅಸ್ತಿವಾರವನ್ನು ಹಾಕಬೇಕೆಂತಲೇ ದೈವೇಚ್ಛೆ ಇದ್ದಿರಬಹುದೆಂತಲೂ ನಡೆಯದೆನಿಂತಿದ್ದ ಈ ಮಹತ್ಕಾರ್ಯವು ಈ ದಿವಸವೇ ಸಂಭ್ರಮದಿಂದ ಜರುಗಲನುಕೂಲವಾಯಿತೆಂತಲೂ ಗೋಚರವಾಗುತ್ತದೆ. ಅಂದಮೇಲೆ ಯುವಸಾರ್ವಭೌಮರವರ ಆಗಮನಮಹಿಮಾ ವಿಶೇಷದಿಂದಲೇ ಈ ಕಾರ್ಯವು ನಡೆಯಿತೆಂಬ ಆಶ್ಚರ್ಯವೂ ಈ ಸುಸಮಯವು ಒದಗಿದುದಕ್ಕಾಗಿ ಆನಂದವೂ ಏಕಕಾಲದಲ್ಲುಂಟಾದುವೆಂದು ಅಪ್ಪಣೆ ಕೊಡಿಸಿದರು.

ಇದರ ಮೇಲಿಂದ ನಮ್ಮ ಡೆ॥ ಕ॥ ಸಾ॥ ರವರಿಗೆ ಎಷ್ಟು ನಿಸರ್ಗವಾದ ಮತ್ತೂ ಅಕೃತ್ರಿಮವಾದ ರಾಜಭಕ್ತಿ ಇರುತ್ತದೆಂಬುದನ್ನು ಮತ್ತೆ ಬೇರೆ ಹೇಳಬೇಕಾಗಿಲ್ಲ. ಈ ತೆರದ ಮಹನೀಯರೂ ಇಂಥವರ ಮೇಲ್‌ಪಙ್ತಿಯನ್ನೇ ಅನುಸರಿಸುತ್ತಾ ನಡೆಯಬಲ್ಲ ಇವರಾಧಿಪತ್ಯಕ್ಕೊಳಗಾದ ಪ್ರಜೆಗಳೇ ಅಲ್ಲವೆ ದೇಶಕ್ಷೇಮಹಿತೈಷಿಗಳು?

ತರುವಾಯ ಅಧ್ಯಕ್ಷರವರು ಎದ್ದು ಶುಭಮುಹೂರ್ತದಲ್ಲಿ ಶಂಕುಸ್ಥಾಪನಾ ಕಾರ್ಯವಂ ನೆರವೇರಿಸಿದರು. ವಾದ್ಯಗಳು ಭೋರ್ಗರೆದುವು. ಸರ್ವರೂ ಜಯಧ್ವನಿಗೈದರು. ಬಾಲಕರು ಭಗವತ್ಪ್ರಾರ್ಥನೆಯನ್ನೂ ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ಮಾಡಿದರು. ಸರ್ವರಿಗೂ ಸಕ್ಕರೆ ಗಂಧ ತಾಂಬೂಲಾದಿಗಳು ಹಂಚಲ್ಪಟ್ಟವು. ತರುವಾಯ ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ಅಧ್ಯಕ್ಷರವರಿಗೂ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನ್ನೀಯಲೆಂಬ ತ್ರಿವಾರಜಯಘೋಷದಿಂದ ಸಭೆಯವಿಸರ್ಜನೆಯಾಯ್ತು.

ಪ್ರತ್ಯಕ್ಷದರ್ಶಿ.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
7 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೨೨ ನೆಯ ಇಸವಿ ಪೆಬ್ರವರಿ ತಾ॥ ೧೨ರಿಂದ ೧೯೨೨ನೆಯ ಪೆಬ್ರವರಿ ತಾ॥ ೧೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿನಾಮಸಂವತ್ಸರದ ಮಾಘಶುದ್ಧ ಪೌರ್ಣಮಿಯಿಂದ ಮಾಘಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭಮಾಸ
12	ಭಾನು	ಪೌ-ಉ	2-40-54-17	ಆಶ್ಲೆ	2-35	1
13	ಸೋಮ	ಬಿದಿ	50-53	ಪುಬ್ಬ	54-14	2
14	ಮಂಗಳ	ತದಿ	44-55	ಉತ್ತ	50-9	3
15	ಬುಧ	ಚೌತಿ	39-26	ಹಸ್ತ	46-23	4
16	ಗುರು	ಪಂಚ	34-27	ಚಿತ್ತ	13-15	5
17	ಶುಕ್ರ	ಷಷ್ಠಿ	30-15	ಸ್ವಾತಿ	40-40	6
18	ಶನಿ	ಸಪ್ತ	27-1	ವಿಶಾ	39-25	7

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೯ ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಪೆಬ್ರವರಿ ತಾರೀಖು ೧೯ ನೆಯ ಭಾನುವಾರ. ಸಂಚಿಕೆ ೮

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
7 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಶಫ. ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವ[illegible]ನಸ್ಥ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋ[illegible]ಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ [illegible]ಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, [illegible]ಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ [illegible]ರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 55

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬ[illegible] ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕ[illegible]ದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ [illegible]ಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

[illegible]ಕ ವೀರಶೈವ ವಿವಾಹವಿಧಿ	೦—೧೩—೦
[illegible]ಶೀಲಚರಿತ್ರೆ	೦—೧೦—೦
[illegible]ಶಿ	೦—೮—೦
[illegible]ಂಚಕ	೦—೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು.

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನುದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ. ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ

ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
4 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ—ಶಿವನ ಪಂಚವಿಂಶತಿ ಲೀಲೆಗಳು—ಅನೇಕ ಶಿವಶರಣರ ಚರಿತ್ರೆಗಳು—ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕತತ್ವಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎಮ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
8 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಸೂಚನೆ.

ಬರುವ ತಾ|| ೨೫ನೆ ಶನಿವಾರ ಮಹಾಶಿವರಾತ್ರಿಯಾಗಿರುವ ಪ್ರಯುಕ್ತ ತಾ|| ೨೬ನೆ ಭಾನುವಾರದ ಸ್ಟಾರ್ ಪತ್ರಿಕೆಯು ಹೊರಡುವುದಿಲ್ಲವು.

ಮೈಸೂರು ಪ್ರಜಾಮಿತ್ರ ಮಂಡಲಿಯವರಿಂದ ಹಿಂದುಳಿದ ಜನಾಂಗಗಳ ಪ್ರಮುಖರಲ್ಲಿ ವಿಜ್ಞಾಪನೆ.

1. ಈ ವರ್ಷದ ದಸರಾ ಪ್ರಜಾಪ್ರತಿನಿಧಿ ಸಭೆಗೆ ಹೊಸ ಮೆಂಬರುಗಳ ಚುನಾವಣೆಯು ನಡೆಯತಕ್ಕದ್ದಿದೆ.

2. ತಾಲ್ಲೂಕು ಮತ್ತು ಸಬ್‌ತಾಲ್ಲೂಕುಗಳಲ್ಲಿ ಈ ಕೆಳಗೆ ಕಂಡ ಅರ್ಹತೆಯುಳ್ಳ ದೊಡ್ಡಮನುಷ್ಯರು ಚುನಾವಣೆಗೆ ನಿಲ್ಲುವುದಕ್ಕೂ ಮತ್ತು ಓಟುಗಳನ್ನು ಕೊಡುವುದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(a) ತಮ್ಮ ಖಾತೆಗೆ 50 ರೂ. ಭೂಗಂದಾಯವನ್ನು ಸರ್ಕಾರದವರಿಗಾಗಲಿ ಅಥವಾ ಇನಾಂದಾರರಿಗಾಗಲಿ ಕೊಡತಕ್ಕವರು; ಮ್ಯುನಿಸಿಪಾಲಿಟಿಗಳಲ್ಲಿ 10 ರೂ. ಮನೆ ಅಥವಾ ಅಂಗಡಿ ಕಂದಾಯವನ್ನು ಕೊಡತಕ್ಕವರು.

(b) ಆ ತಾಲ್ಲೂಕು ಅಥವಾ ಸಬ್‌ತಾಲ್ಲೂಕಿನಲ್ಲಿ ವಾಸಮಾಡುತ್ತಲಿರುವ 250 ರೂ. ಬೇರೀಜು ಉಳ್ಳ ಗ್ರಾಮಗಳ ಇನಾಂದಾರರು.

(c) ಆಯಾ ತಾ|| ಅಥವಾ ಸಬ್ ತಾ|| ಗಳಲ್ಲಿ ವಾಸಮಾಡತಕ್ಕ ಯೂನಿವರ್ಸಿಟಿ ಗ್ರಾಜುಯೇಟರು. (University Graduates.)

3. ಮೇಲೆಕಂಡಂತೆ ಮೆಂಬರಾಗಿ ಬರಲು ಅರ್ಹತೆಯುಳ್ಳವರ ಮತ್ತು ಮೆಂಬರುಗಳನ್ನು ಚುನಾಯಿಸುವ ಅಧಿಕಾರವುಳ್ಳವರ (Voters) ಹೆಸರುಗಳು ಬರುವ ಮಾರ್ಚಿ ತಿಂಗಳು 17 ನೆ ತಾರೀಖಿನ (17—3—22 ರ) ಒಳಗಾಗಿ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುತ್ತವೆ.

4. ಸಭೆಗೆ ಮೆಂಬರಾಗಿ ಬರಲು ಅರ್ಹತೆಯುಳ್ಳವರ ಮತ್ತು ಚುನಾಯಿಸಲು ಅಧಿಕಾರವುಳ್ಳ ಯಾರ ಹೆಸರಾದರೂ ಗೆಜೆಟ್ಟಿನಲ್ಲಿ ಕಾರಣಾಂತರದಿಂದ ಬಿಟ್ಟುಹೋಗಿದ್ದ ಪಕ್ಷಕ್ಕೆ ಏಪ್ರಿಲ್ 17 ನೇ ತಾ|| ನ ಒಳಗಾಗಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರಲ್ಲಿ ಅರ್ಜಿ ಹಾಕಿ ಕ್ರಮಪಡಿಸಬಹುದು.

5. ಹಿಂದುಳಿದ ಜನಾಂಗಗಳಿಗೆ ಸೇರಿದ ಪ್ರತಿಯೊಬ್ಬ ದೇಶಾಭಿಮಾನಿಯೂ ಎಚ್ಚರಿಕೆಯಿಂದಿದ್ದು ಪೂರ್ಣ ಪ್ರಯತ್ನಪಟ್ಟು ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಆರಿಸಲ್ಪಡುವುದರಿಂದಲೂ, ಮತ್ತು ತಮ್ಮ ಏಳ್ಗೆಯನ್ನು ಬಯಸುವ ಪ್ರತಿನಿಧಿಗಳಿಗೇನೇ ತಮ್ಮ ಓಟನ್ನು ಕೊಡುವುದರಿಂದಲೂ ತಮ್ಮ ಕಾರ್ಯದಕ್ಷತೆಯನ್ನು ವ್ಯಕ್ತಪಡಿಸಬೇಕಾಗಿ ಪ್ರಾರ್ಥನೆ.

ಬೆಂಗಳೂರು,
ತಾ|| 16-2-1922. }
ಜಿ. ಪರಮಶಿವಯ್ಯ,
ಜಾಯಿಂಟ್ ಸೆಕ್ರೆಟರಿ.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಫೆಬ್ರವರಿ ತಾ|| ೧೯ ನೆಯ ಭಾನುವಾರ.

ರಾ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು ಮತ್ತೂ ಆರ್ಥಿಕಸಂಘ.

ಭರತಖಂಡದ ಯಾವುದೊಂದುಭಾಗದ ಸರ್ಕಾರದ ಆರ್ಥಿಕಸ್ಥಿತಿಯನ್ನು ನೋಡಿದರೂ ಅನಕ್ಕೆ ಶುಷ್ಕಸ್ಥಿತಿಯೇ ಪ್ರಾಪ್ತವಾಗಿರುವಂತೆ ಕಂಡುಬರುತ್ತದೆ. ನಮ್ಮ ಮೈಸೂರು ಪ್ರಭುತ್ವದ ಬೊಕ್ಕಸಕ್ಕೂ ಆ ಗತಿಯು ತಪ್ಪಿಲ್ಲ. ಹಿಡಿದುಕೊಂಡಿರುವ ದೊಡ್ಡದೊಡ್ಡ ಕೆಲಸಗಳಿಗೆ ಹಣವನ್ನು ಒದಗಿಸುವ ಕಷ್ಟವು ಮಿತಿಮೀರಿಹೋಗಿದೆ. ಇದು ಹಿಂದಣಪ್ರಭುತ್ವದ ದಬಾದುಬಿಯೇರ್ಪಾಟುಗಳಿಂದ ಅನುಸರಿಸಿ ಬಂದ ಅನಿಷ್ಟವಾಗಿದೆ. ಈಗಣ ಪ್ರಭುತ್ವದವರ ತಲೆಗೆ ಅದರ ನಿರ್ವಾಹಭಾರವು ಕಟ್ಟಿಬಿದ್ದಿದೆ. ಶಾಶ್ವತ ಲಾಭಕರ ಪ್ರತಿಷ್ಠಾಪನೆಗಳೆಂದು ಹಿಂದೆಯೇ ಆರಂಭಿಸಲ್ಪಟ್ಟು ನಡೆಯುತ್ತಿರುವ ಕಾರ್ಯಗಳಿಗಾಗಿ ಈಗಣವರು ಸಾಲಮಾಡಿ ಹಣವನ್ನು ಒದಗಿಸುತ್ತಿರುವುದಲ್ಲದೆ ಸಾಲದಬಡ್ಡಿಯನ್ನು ವರ್ಷೆವರ್ಷೆ ತೆರಬೇಕಾಗಿದೆ, ಅಲ್ಲದೆ ಸರ್ಕಾರದ ದೈನಿಕ ವ್ಯವಹಾರದ ವೆಚ್ಚಗಳೂಕೂಡ ಹೆಚ್ಚಿಹೋಗಿವೆ. ಒಬ್ಬರು ಮಾಡಬಹುದಾದ ಕೆಲಸವನ್ನು ಮೂವರು ನಾಲ್ವರು ಮಾಡುತ್ತಿರುವುದರಿಂದ ದುಂದುವೆಚ್ಚವು ಅಧಿಕವಾಗಿದೆ. ಈ ಲೋಪಗಳನ್ನೆಲ್ಲಾ ಕೂಲಂಕಷವಾಗಿ ವಿಚಾರಿಸಿ ನಿವಾರಿಸದಿದ್ದರೆ ಸಂಸ್ಥಾನದ ಸ್ಥಿತಿಯು ಅಧೋಗತಿಗೀಡಾಗದೆ ಉಳಿಯುವುದಿಲ್ಲ. ಹಿಂದೆ ರಿಟ್ರೆಂಚ್‌ಮೆಂಟ್ ಕಮಿಟಿಯನ್ನೂ ಫೈನಾನ್ಸ್ ಕಮಿಟಿಯನ್ನೂ ಸರ್ಕಾರದವರು ಏರ್ಪಡಿಸಿದರು. ಅವುಗಳಿಂದ ಯತ್ಕಿಂಚಿತ್ತಯೋಜನವುಕಂಡುಬಂದರೂ ಈಗಣ ಮುಗ್ಗಟ್ಟಿನಿರುವಿಕೆಯಿಂದ ಎಚ್ಚತ್ತುಕೊಳ್ಳುವಂಥ ದೃಢಸ್ಥಿತಿಯು ಸರ್ಕಾರಕ್ಕೆ ಉಂಟಾಗಿಲ್ಲ. ಆದುಕಾರಣ ದೀರ್ಘಾಲೋಚನಪರರಾದ ಶ್ರೀಮನ್ಮಹಾರಾಜರು ಈ ವಿಷಯಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿ, ಸರ್ಕಾರದ ಆರ್ಥಿಕಸ್ಥಿತಿಯನ್ನು ತೃಪ್ತಿಕರವಾಗಿರುವಂತೆ ಮಾಡಬೇಕಾದರೆ ಏನೇನನ್ನು ಮಾಡಬೇಕೆಂಬುದನ್ನು ವರದಿಮಾಡಲಿಕ್ಕಾಗಿ ಸರ್ಕಾರಿ ಉದ್ಯೋಗಿಗಳೂ ಸ್ವತಂತ್ರಪ್ರಜೆಗಳೂ ಸಭಿಕರಾಗುಳ್ಳ ಒಂದು ಸಂಘವನ್ನೇರ್ಪಡಿಸಿದ್ದಾರೆ. ಇದಕ್ಕೆ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ರವರನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ. ಸಂಘದ ಸಭಿಕಸ್ಥಾನಕ್ಕೂ ಅರ್ಹರಾದವರನ್ನೇ ಆರಿಸಿಕೊಂಡಿರುತ್ತಾರೆ. ಮ|| ಪುಟ್ಟಣ್ಣಶೆಟ್ಟರು ಸಣ್ಣ ಉದ್ಯೋಗದಿಂದ ಎಕ್ಸಿಕ್ಯುಟೀವ್ ಕೌನ್ಸಿಲಿನ ಮೊದಲನೆ ಸಭಿಕಸ್ಥಾನದವರೆಗೂ ಏರಿ ಆ ಪ್ರತಿಯೊಂದು ಕಾರ್ಯಗಳನ್ನೂ ಬಹಳ ಸಾಮರ್ಥ್ಯದಿಂದಲೂ ಪ್ರಜಾಪ್ರಭುಗಳು ಮೆಚ್ಚುವರೀತಿಯಿಂದಲೂ ನಡೆಯಿಸಿ, ಸ್ವದೇಶ ಪರದೇಶದ ದಿವಾನರುಗಳ ಕಾರ್ಯಭಾರಗಳಲ್ಲೆಲ್ಲಾ ಪ್ರಶಂಸಾಪಾತ್ರರಾಗಿ ಬಂದಿರುವುದಲ್ಲದೆ, ಬೆಂಗಳೂರು ಹೊಸತರಗುಪೇಟೆಯ ನಿರ್ಮಾಣದಂಥ ದುರ್ಘಟಕಾರ್ಯಗಳನ್ನೆಲ್ಲಾ ಸಾಧಿಸಿ ಉತ್ತಮರಾದ ಪ್ರಜಾಬಂಧುಗಳೂ ನಿಸ್ಸೀಮರಾದ ರಾಜಭಕ್ತರೂ ಎಂದು ಎಲ್ಲರ ಬಾಯಿಂದಲೂ ಹೇಳಿಸಿಕೊಳ್ಳುತ್ತಿದ್ದಾರೆ. ಸರ್ಕಾರದ ಉದ್ಯೋಗದಿಂದ ಇವರನ್ನು ವಿಶ್ರಾಂತರನ್ನಾಗಿ ಮಾಡಿದರೂ, ದೇಶಸೇವೆಯಭಾರವು ಈಗ್ಗೂ ಇವರಿಗೆ ತಪ್ಪಿಲ್ಲ. ಬೆಂಗಳೂರು ಮ್ಯುನ್ಸಿಪಾಲಿಟಿಯ ಆನರರಿ ಪ್ರೆಸಿಡೆಂಟರಾಗಿದ್ದುಕೊಂಡು ೭ ವರ್ಷ ಕಾಲ ನಡೆಯಿಸಿದ ಕಾರ್ಯಭಾರಗಳು ಎಂದರೆ ಅದರ ಆರ್ಥಿಕಾದಿಸ್ಥಿತಿಯನ್ನು ಸರ್ವೋತ್ತಮಗೊಳಿಸಿದುದೂ ಪಟ್ಟಣದಲ್ಲಿ ನಡೆಯಿಸಿರುವ ಅಭಿವೃದ್ಧಿಕಾರ್ಯಗಳೂ ಸರ್ವರಿಗೂ ಗೋಚರವಾಗಿವೆ. ಮೈಸೂರು ಬ್ಯಾಂಕು ಅಭೂತಪೂರ್ವವಾದ ಉನ್ನತಸ್ಥಿತಿಯನ್ನು ಪಡೆದುಕೊಂಡು ದೇಶೀಯರಿಗೆಲ್ಲಾ ಉಪಕಾರಮಾಡುತ್ತ ಸಂಸ್ಥಾನಕ್ಕೆ ಕೀರ್ತಿಪ್ರದವಾಗಿರುವುದಕ್ಕೆ ಇವರ ಅಧ್ಯಕ್ಷತೆಯೇ ಮುಖ್ಯಕಾರಣ. ಮೂಲೆಗೆ ಬಿದ್ದುಹೋಗಿದ್ದ ಚಿಕ್ಕಬಳ್ಳಾಪುರದ ಲೋಹಮಾರ್ಗದ ಕೆಲಸವು ಇವರು ಕೈಹಾಕಿದುದರಿಂದ ಸಫಲವಾಯಿತು. ಮೈಸೂರು ಕೃಷ್ಣರಾಜಮಿಲ್ಲು ಕೂಡ ಇವರ ಯಾಜಮಾನ್ಯವನ್ನು ಬಿಟ್ಟಿಲ್ಲ. ಸಂಸ್ಥಾನದಲ್ಲಿ ಸಾರ್ವತ್ರಿಕವಾದ ಯಾವುದೊಂದು ಸಂಘವಾಗಲೀ ಸಮ್ಮೇಳನವಾಗಲೀ ಇವರ ಸಂಬಂಧವನ್ನು ಬಿಟ್ಟುದೇ ಇಲ್ಲ. ಪ್ರಭುತ್ವದ ಸಂಪದಭ್ಯುದಯ ಸಂಘ, ನಿಯಮನಿರ್ಮಾಣ ಸಭೆ ಮೊದಲಾದುವುಗಳಲ್ಲೆಲ್ಲಾ ಇವರು ಸಭಿಕರಾಗಿದ್ದುಕೊಂಡು ತಮ್ಮ ದೀರ್ಘಾನುಭವಫಲವನ್ನು ಅವುಗಳಿಗೆ ಉಂಟುಮಾಡಿಕೊಡುತ್ತಿದ್ದಾರೆ. ಇಂಥ ಸರ್ವತಸ್ಸಾಮರ್ಥ್ಯವುಳ್ಳವರಿಗೆ ಕೆಲಕಾಲದವರೆಗಾದರೂ ಸಂಸ್ಥಾನದ ಮಂತ್ರಿಪದವಿಯು ಕೊಡಲ್ಪಡದಂತೆ ಆಗಿಹೋದ ವಿಷಯದಲ್ಲಿ ಪಶ್ಚಾತ್ತಾಪವು ಶ್ರೀಮನ್ಮಹಾರಾಜರಿಗೆ ಆಗಿಂದಾಗ್ಗೆ ಉಂಟಾಗದೆ ಇರಲಾರದು. ಇವರಮೇಲೆ ಎಷ್ಟು ಭರವಸೆಯನ್ನು ಪ್ರಭುಗಳು ಇಟ್ಟುಕೊಂಡಿರುವರೆಂಬುದಕ್ಕೆ ಯಾವುದೊಂದು ಮುಖ್ಯಸಂದರ್ಭಗಳಲ್ಲೂ ಇವರ ಸಾಹಾಯ್ಯವನ್ನು ಪಡೆದುಕೊಳ್ಳುತ್ತಿರುವುದೇ ದೃಷ್ಟಾಂತವಾಗಿದೆ. ಈಗಣ ಆರ್ಥಿಕಸಂಘದ ಅಧ್ಯಕ್ಷತೆಗೆ ಇವರನ್ನು ನಿಯಮಿಸಲಿಕ್ಕೂ ಅದೇ ಕಾರಣವು. ಕೃಷ್ಣರಾಜಸಾಗರದ ವಿಚಾರಕ ಸಂಘದ ಅಧ್ಯಕ್ಷತೆಯನ್ನು ವಹಿಸಿದ್ದು ಅದನ್ನು ಕಳೆದ ತಿಂಗಳಲ್ಲೇ ಮುಗಿಸಿದರು. ಕಳೆದ ತಾ|| ೧೧ರಲ್ಲಿ ಶೆಟ್ಟರು ರಾಜಧಾನಿಗೆ ದಯಮಾಡಿಸಿದ್ದಾಗ್ಗೆ ಶ್ರೀಮನ್ಮಹಾರಾಜರು ಇವರನ್ನು ಬರಮಾಡಿಕೊಂಡು ಸಂಭಾಷಣವನ್ನು ನಡೆಯಿಸಿ, ಆರ್ಥಿಕಸಂಘಾಧ್ಯಕ್ಷತೆಯ ಭಾರವನ್ನು ಇವರಿಗೆ ಪ್ರತ್ಯಕ್ಷತಃ ವಹಿಸಿಕೊಟ್ಟರೆಂದು ಕೇಳಿದೆವು. ಸಂಸ್ಥಾನಕ್ಕೆ ಈಗಣಂಥ ದುರ್ಧರಪ್ರಸಂಗ ಪೊದಗಿರುವಾಗ, ಅದರ ಸಮುದ್ಧರಣೆಗೆ ಉಪಯುಕ್ತಗಳಾದ ಸಾಧನಗಳನ್ನು ಸೂಚಿಸಿಕೊಡುವಲ್ಲಿ ಮ|| ಶೆಟ್ಟರೂ ಅವರ ಸಹಾಯಕ್ಕೆ ನಿಯಮಿತರಾಗಿರುವ ಸಂಘಸಭಿಕರೂ ಮಾಡುವ ಕಾರ್ಯಗಳೂ ಶ್ರಮಸಾಹಸಗಳೂ ಶ್ರೀಮನ್ಮಹಾರಾಜರನ್ನು ಸಂತೃಪ್ತಿಪಡಿಸುವುದೇ ಅಲ್ಲದೆ ಸಂಸ್ಥಾನಕ್ಕೆ ಸ್ಮರಣೀಯವಾದ ಉಪಕಾರಕಾರಿಗಳೆನ್ನಿಸಿಕೊಳ್ಳದೆ ಹೋಗುವುದಿಲ್ಲ. ಶ್ರೀಮನ್ಮಹಾರಾಜರು ಇಟ್ಟಿರುವ ಭರವಸೆಯನ್ನು ಸರ್ವಪ್ರಕಾರದಿಂದಲೂ ಸಂಘದವರು ಸಾರ್ಥಕಪಡಿಸದಿರಲಾರರೆಂದು ನಂಬುತ್ತೇವೆ. ಆದರೆ ಇದಕ್ಕಾಗಿ ಕೊಡಲ್ಪಟ್ಟಿರುವ ೬ ವಾರಗಳ ಕಾಲವ್ಯವಧಿಯು ಈ ಕೆಲಸಕ್ಕೆ ಸಾಕಾಗುವುದೇ ಎಂದು ನಮಗೆ ಸಂಶಯ. ಮ|| ಶೆಟ್ಟರೂ, ಮಿ|| ಅಬ್ಬಾಸ್ ಖಾನರೂ ನಿಯಮನಿರ್ಮಾಣಸಭೆಯಲ್ಲಿ ಕಳೆದವರ್ಷದ ಬಜೆಟ್ ವಿಷಯಕವಾದ ಚರ್ಚೆಯಸಂಬಂಧದಲ್ಲಿ ಅನೇಕ ನ್ಯೂನಾತಿರೇಕಗಳನ್ನು ಎತ್ತಿ ಆಡಿದ್ದರು. ಈಗ ಅವುಗಳ ಪರಿಹಾರಕ್ಕೆಲ್ಲಾ ತಕ್ಕಸೂಚನೆಯನ್ನು ಮಾಡಿ ಸಾರ್ಥಕಪಡಿಸಲು ಅನುಕೂಲಸಮಯವೇ ದೊರೆತಿದೆ. ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ಸಂಘದ ಕಾರ್ಯವು ಜರುಗುವುದು ಅತ್ಯವಶ್ಯಕ. ಅತಿಮುಖ್ಯವಾದ ಈ ಸಂಘದ ವರದಿಯನ್ನು ದೇಶೀಯರೆಲ್ಲರೂ ಆತುರದಿಂದ ನಿರೀಕ್ಷಿಸುವರೆಂಬುದಕ್ಕೆ ಸಂಶಯವಿಲ್ಲ.

BUREAUCRACY.

This is the expression conveying the idea of much political exploitation of the present day agitation in India. To whatever side of an argument one turns, he will be confronted with a statement that a state of things has come to existence—which exists for the Bureaucract, and who that Bureaucrat is, and which that Bureaucracy is are defined in all political papers as a Britisher and a British system of Government respectively. We do not propose to deal now with this aspect of the question. But the wide and continued discussion of this subject in British Indian Press has opened our eyes to see and examine what it is with us in Mysore. An esteemed correspondent of ours has sent us a letter with a genealogical tree to illustrate his statements, which discloses certain astounding facts relating to the Bureaucracy in Mysore. As we do not agree with his details relating to personalities, we have declined to give publicity to the communication. But certain generalities can easily be gathered from it, which are deducible from the facts of Government which prevailed in Mysore under the successive Dewans of Mysore preceding the present People's Dewan. In the genealogical tree we find that the stem is marked with the letter "B" indicating the genera of the huge tree which has developed out of it. The main branches which have come out of it are marked S, K, M & A and various are there the family groups of smaller branches ending in lively twigs of this gigantic "B" tree. Here and there are some lovely and sickly twigs which have either died or are dying. These are the twigs with no family connection with the main or its immediate subsidiary branches. The Mysore Civil List can be distributed into one of these main branches of family interests or a special class. These are the members of the great Bureaucracy in Mysore—a system which has centralised the government of the country through a carefully and regularly graded series of families which, some 40 years ago were unknown in the country of Mysore. The net-work is so closely built up that the dying twigs are so few and cut in such vital parts of its growth that the formation of a thriving family out of it is an impossibility. If one carefully examines the Mysore Civil List a staggering fact comes into view and that is that the Bureaucracy in Mysore is as much foreign to her people's interests as any foreign system could elsewhere be. This is a state of affairs nearer at home which has–as our good fortune would have it–received the earnest attention of the present Government endeavouring to put in new life to break the 40 year old Bureaucracy whose main object has been to build up a system of family groups holding the public service in a series of hands forming an unbreakable claim. Is such a system of Bureaucracy desirable to exist amongst us?

It is for the people to know and to ask of their kind and Parental Sovereign to grant them in course of time a truly people's Government bereft of the existing B–systematized Bureaucracy.

ಮ|| ಗಾಂಧಿಯವರು ಉಪಕ್ರಮಿಸಿದ್ದ ಯುದ್ಧವು ನಿಂತುಹೋಯಿತು.

ಸಹಾಯನಿರಾಕರಣೋದ್ಯಮವು ಅನರ್ಥದಾಯಕವಾಗುವುದೆಂದೂ, ಗಾಂಧಿಯವರು ತಾವು ಮಾತ್ರ ಸಾತ್ವಿಕಮೂರ್ತಿಗಳಾಗಿದ್ದುಕೊಂಡು ತ್ರಿಕರಣಶುದ್ಧಿಯಿಂದ ದೌರ್ಜನ್ಯನಿರಾಕರಣವನ್ನು ಮಾಡಿದವರಾಗಿದ್ದರೂ, ಅವರ ಬೋಧೆಗೆ ಪಾತ್ರರಾದವರೆಲ್ಲಾ ಹಾಗೆಯೇ ಸಾತ್ವಿಕಮೂರ್ತಿಗಳಾಗಿರುವರೆಂದು ನಂಬಲಾಗುವುದಿಲ್ಲವೆಂದೂ, ಅಸಹಾಯೋದ್ಯಮಬೋಧೆಯು ಜನಸಾಮಾನ್ಯದಲ್ಲಿಯೂ ಮಾಡಲ್ಪಡುವುದರಿಂದ ಅಪಾತ್ರನಿಗೆ ಮಾಡಿದ ತತ್ವಬೋಧೆಯಂತೆ ಅನರ್ಥಪರಿಣಾಮಿಯಾಗದೆ ತಪ್ಪುವುದಿಲ್ಲವೆಂದೂ, ಪರಿಪಕ್ವಮತಿಗಳಲ್ಲದ ಯುವಕರು ಮೊದಲಾದವರನ್ನೆಲ್ಲಾ ಉದ್ರೇಕಗೊಳಿಸಿ ರಾಷ್ಟ್ರೀಯಸಭಾ ಸ್ವಚ್ಛಂದಸೇವಕರನ್ನಾಗಿ ಸೇರಿಸಿಕೊಂಡು ಅವರ ಮೂಲಕ ಸ್ವರಾಜ್ಯಪ್ರಾಸಾದಕ್ಕೆ ಮೆಟ್ಟಲನ್ನು ಕಟ್ಟಿಸುತ್ತೇವೆಂದು ಪ್ರವರ್ತಿಸುವುದು ಅರಿಯದ ಮಕ್ಕಳ ಕೈಗೆ ಚಂದ್ರಾಯುಧವನ್ನು ಕೊಟ್ಟಂತೆ ಅಪಾಯಕರವೆಂದೂ, ರಾಜಾಜ್ಞೋಲ್ಲಂಘನಕ್ರಮವು ದೇಶಕ್ಕೆ ಅರಾಜಕತ್ವಪ್ರದಾಯಕವೆಂದೂ ಮೊದಲಾಗಿ ದೇಶಭಕ್ತರಾದ ಅನೇಕ ಮಿತವಾದಿಗಳೂ ಮತ್ತು ಪ್ರಭುತ್ವದವರೂ ಸಹ ಎಷ್ಟೋ ವೇಳೆ ಹೇಳುತ್ತ ಬಂದಿದ್ದರೂ ಕೂಡ ಮ|| ಗಾಂಧಿಯವರು ಅದನ್ನು ಕೇಳಲಿಲ್ಲ. ಉಪಾಧ್ಯಾಯನ ಸ್ಥಿತಿಯೇ ಹಾಗಾದ ಮೇಲೆ ಶಿಷ್ಯರ ಸ್ಥಿತಿಯನ್ನು ಹೇಳುವುದೇನು? ದೇಶದ ಎಲ್ಲ ಮೂಲೆಗಳಲ್ಲೂ ಶಾಸನೋಲ್ಲಂಘನೆಯ ಅಬ್ಬರವೇ ತುಂಬಿ ತುಳುಕುವಂತಾಯಿತು. ಕಡೆಗೆ ಗಾಂಧಿಯವರು ಅಂತ್ಯಸಂದೇಶವನ್ನೂ ಕೂಡ ವೈಸ್ರಾಯರಿಗೆ ಕಳುಹಿಸಿ, ೭ ದಿನದ ಗಡುಬದಲ್ಲಿ ನಿಮ್ಮ ಚರ್ಯೆಗಳನ್ನೆಲ್ಲಾ ಉಪಸಂಹರಿಸಿಕೊಳ್ಳದಿದ್ದರೆ ಸಮಷ್ಟಿಶಾಸನೋಲ್ಲಂಘನೋದ್ಯಮಕ್ಕೆ ಆರಂಭಿಸುವೆನೆಂದು ಜ್ಯಾನಾದವನ್ನು ಮಾಡುತ್ತ ಶಂಖವನ್ನು ಪೂರೈಸಿದರು. ಆದರೇನು? ''ಅನ್ಯಥಾಚಿಂತಿತಂ ಕಾರ್ಯಂದೈವೇನಾನ್ಯತ್ರಚಿಂತಿತಂ'' ತಾನೊಂದು ಬಗೆದರೆ ದೈವವೊಂದು ಬಗೆದಿತು ಎಂಬಂತೆ ಗಾಂಧಿಯವರ ಕಾರ್ಯಕಲಾಪವು ಪರಿಣಮಿಸಿತು. ಯಾವ ಫೆಬ್ರವರಿ ೧೧ನೆ ತಾರೀಖಿನಲ್ಲಿ ಯಾವ ಸ್ಥಳದಲ್ಲಿ ಗಾಂಧಿಯವರು ಸಮಷ್ಟಿಶಾಸನೋಲ್ಲಂಘನದ ಮೊದಲನೆ ಫಿರಂಗಿಗುಂಡನ್ನು ಹಾರಿಸಬೇಕಾಗಿದ್ದಿತೋ ಅದೇ ಗಳಿಗೆಯಲ್ಲಿ ಅದೇ ಸ್ಥಳದಲ್ಲಿ ಆ ಫಿರಂಗಿಯನ್ನು ಒಡೆದುಬಿಟ್ಟು ಹಿಮ್ಮೊಗವಾಗಿ ತೆರಳಿ ಕೃತಕರ್ಮಕ್ಕೆ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳುವ ಸ್ಥಿತಿಯು ಪ್ರಾಪ್ತವಾಯಿತು.

ಸಂಯುಕ್ತರಾಷ್ಟ್ರದ ಗೋರಕ್‌ಪೂರ್ ಜಿಲ್ಲೆಯಲ್ಲಿ ಆ ವಾರದೊಳಗೆ ಕಾಂಗ್ರೆಸ್ ಸ್ವಚ್ಛಂದಸೇವಕರು ನರ್ಕಾನಾ ಹತ್ಯೆಗಳಿಗಿಂತಲೂ ಭಯಂಕರವಾದ ಕೊಲೆಗಳನ್ನು ಸರ್ಕಾರದ ಪೋಲೀಸರುಗಳ ಮೇಲೆ ನಡೆಯಿಸಿದುದೇ ಮೊದಲಾದ ಅತ್ಯಾಚಾರಗಳು ಗಾಂಧಿಯವರ ಮತ್ತು ಅವರ ಅನುಚರರ ಕಣ್ಣನ್ನು ತೆರೆಯಿಸಿಬಿಟ್ಟವು. ತಮ್ಮ ಉದ್ಯಮವನ್ನು ನಿರಂಕುಶವಾಗಿ ಸಾಗಿಸುವುದರಿಂದ ಎಷ್ಟು ಅನರ್ಥವು ದೇಶದಲ್ಲಿ ಉಂಟಾಗುವುದೆಂಬುದು ಅವರಿಗೆ ಪ್ರತ್ಯಕ್ಷಪ್ರಮಾಣದಿಂದ ಗೋಚರಿಸಿದಂತಾಯಿತು. ಹರತಾಳದ ಆಚರಣೆಯ ಸಂದರ್ಭದಲ್ಲಿ ಬೊಂಬಾಯಿಯಲ್ಲೂ ಮದ್ರಾಸಿನಲ್ಲೂ ನಡೆದ ಅತ್ಯಾಚಾರಗಳಿಗಿಂತಲೂ ಮಿಗಿಲಾದ ಅತ್ಯಾಚಾರಗಳು ಗೋರಕ್‌ಪೂರಿನಲ್ಲಿ ನಡೆದುಹೋದುವು. ಸಮಷ್ಟಿಶಾಸನೋಲ್ಲಂಘನೆಯ ಹೆಸರಿನಿಂದ ಕಂದಾಯವನ್ನು ಕೊಡದೆ ನಿಲ್ಲಿಸಿಬಿಡುವ ಉಬ್ಬುಗಕ್ಕೆ ಗಾಂಧಿಯವರು ಅಪ್ಪಣೆ ಮಾಡಿದ್ದರೆ ಸರ್ ಶಂಕರ್‌ನಾಯರ್‌ರವರೇ ಮೊದಲಾದವರು ಹೇಳಿದಂತೆ ರಕ್ತಪ್ರವಾಹವು ಆಸೇತುಹಿಮಾಚಲಾಂತವಾಗಿ ಹರಿದಾಡಿಹೋಗುತ್ತಿದ್ದಿತೆಂಬುದಕ್ಕೆ ಸಂಶಯವೇ ಇರಲಿಲ್ಲ. ''ಶಾಸನೋಲ್ಲಂಘನವು ಪರಿಗ್ರಹಿಸತಕ್ಕುದಲ್ಲ; ವಿರಮಿಸತಕ್ಕುದೇ ಸರಿ'' ಎಂದು ಗಾಂಧಿಯವರ ಕುಮಾರರೇ ಸ್ವತಃ ತಂದೆಯವರಿಗೆ ಬಿನ್ನಯಿಸಿಕೊಂಡರು. ಹಕೀಂಅಜ್ಮಲ್ ಖಾನ್ ಪಂಡಿತಮದನಮೋಹನಮಾಳವ್ಯರಂಥ ಗಾಂಧಿಯವರ ಎಡಬಲಭುಜಗಳೂ ಕೂಡ ಆ ಉದ್ಯಮವು ಪರಿಗ್ರಾಹ್ಯವಲ್ಲವೆಂದು ಬೋಧಿಸಲಿಕ್ಕೆ ಹತ್ತಿದುವು. ಅದರ ಮೇಲೆ ಗಾಂಧಿಯವರು ಕೂಡ ಸ್ವತಃ ಪರಿತಾಪಗರ್ತದಲ್ಲಿ ಮುಳುಗಿಹೋಗಿದ್ದರು. ಈ ಕಾರಣದಿಂದೆಲ್ಲಾ ಅವರು ನಿರುತ್ಸಾಹರಾಗಿ, ಬೊಂಬಾಯಿಯಲ್ಲಿದ್ದ ಮದನಮೋಹನಮಾಳವ್ಯ, ಜಯಕರ್, ನಟರಾಜನ್, ಜಿನ್ನಾ ಮೊದಲಾದವರೊಡನೆ ಪರ್ಯಾಲೋಚಿಸಿ, ಅವರನ್ನೆಲ್ಲಾ ಬರ್ಡೋಲಿಗೆ ಕರೆದುಕೊಂಡುಹೋಗಿ, ತಾ|| ೧೧ರಲ್ಲಿ ಅಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಂಘವನ್ನು ಕೂಡಿಸಿ, ದೇಶಸ್ಥಿತಿಗಳನ್ನೆಲ್ಲಾ ನಿವೇದಿಸಿ, ತಾವೇ ಬರೆದು ತಂದಿದ್ದ ತೀರ್ಮಾನಗಳನ್ನು ಸಭೆಯ ಮುಂದೆ ಹೇಳಿ, ಅವನ್ನು ಸಭೆಯಿಂದ ಅನುಮೋದನೆಗೊಳಿಸಿದಂತೆ ಮಾಡಿದರು. ಆ ತೀರ್ಮಾನದ ಮುಖ್ಯಭಾಗಗಳೇನೆಂದರೆ—''ಚೌರಿಚೌರಾದಲ್ಲಿ ಜನರ ಗುಂಪು ಅಡವಿಯ ಮೃಗಗಳಂತೆ ರಾಕ್ಷಸಕೃತ್ಯವನ್ನು ನಡೆಯಿಸಿ ಪೋಲೀಸರನ್ನೆಲ್ಲಾ ಭಯಂಕರವಾಗಿ ಸಮ್ಹರಿಸಿ ಮನೆಗಳನ್ನೆಲ್ಲಾ ಸುಟ್ಟುಬಿಟ್ಟುದು ನಮಗೆ ತುಂಬಾ ವಿಷಾದಕರವಾಗಿದೆ. ಕಂದಾಯವನ್ನು ನಿಲ್ಲಿಸಿಬಿಡುವುದೇ ಮೊದಲಾದ ಆಜ್ಞೋಲ್ಲಂಘನೆಯನ್ನು ಆರಂಭಿಸಲಿಕ್ಕೆ ಸರ್ವಸನ್ನಾಹವನ್ನು ಮಾಡಿಕೊಳ್ಳುವ ತರುಣದಲ್ಲಿಯೇ ಪ್ರತಿಸಲವೂ ಪ್ರಜೆಗಳ ದುರಾತಗವು ಎಲ್ಲಾದರೊಂದುಕಡೆ ಹೀಗೆ ಹೊರಬೀಳುತ್ತದೆ. ಇದರಿಂದ ಸಮಷ್ಟಿ ಆಜ್ಞೋಲ್ಲಂಘನೆಗೆ ಇರಬೇಕಾದ ಶಾಂತಸ್ಥಿತಿಯು ಇನ್ನೂ ಅಳವಟ್ಟಿಲ್ಲವೆಂದು ಸಿದ್ಧವಾಗುತ್ತದೆ. ಆದುಕಾರಣ ಈಗ ಬರ್ಡೋಲಿಯಲ್ಲೇ ಆಗಲೀ ಮತ್ತಾವ ಕಡೆಯಲ್ಲೇ ಆಗಲೀ ಆಜ್ಞೋಲ್ಲಂಘನೆ ಮಾಡುವುದನ್ನು ನಿಲ್ಲಿಸಿಬಿಡಬೇಕು. ಬೇಸಾಯಗಾರರೆಲ್ಲರೂ ಸರ್ಕಾರಕ್ಕೆ ಸಲ್ಲಿಸಬೇಕಾದ ಕಂದಾಯಗಳನ್ನೆಲ್ಲಾ ಸಲ್ಲಿಸಿಬಿಡಬೇಕು. ಮತ್ತು ಅಪರಾಧಸ್ವಭಾವದ ಯಾವುದೊಂದು ಕೆಲಸಕ್ಕೂ ಅವರು ಪ್ರವರ್ತಿಸಕೂಡದು. ಬೊಂಬಾಯಿ ಮದ್ರಾಸುಗಳಲ್ಲಿ ಜರುಗಿದಂಥ ತುಂಟತನಗಳು ಎಲ್ಲೂ ಜರುಗದಂಥ ಶಾಂತಸ್ಥಿತಿಯು ದೇಶದಲ್ಲಿ ನೆಲೆಗೊಳ್ಳುವವರೆಗೂ ಸಮಷ್ಟಿ ಆಜ್ಞೋಲ್ಲಂಘನೆಯನ್ನು ಎಲ್ಲೂ ಪ್ರಾರಂಭಿಸಕೂಡದು. ಮತ್ತು ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಲಿಕ್ಕಾಗಿ ಮತ್ತೆ ನಾವು ಅನುಮತಿ ಕೊಡುವವರೆಗೂ ಪ್ರಜೆಗಳು ತಾವಾಗಿ ಸರ್ಕಾರದವರಿಂದ ಹಿಡಿಯಲ್ಪಡುವುದಕ್ಕೆ ಆಣೆಯಾಗಿ ಕಾರಾಗೃಹಕ್ಕೆ ಹೋಗುವ ಕೆಲಸಗಳಿಗೆ ಮುಂಬರಿಯಕೂಡದು. ಎಲ್ಲಿ ಸಂಪೂರ್ಣಶಾಂತಿಯಿರುವುದೆಂದು ಗಟ್ಟಿಯಾದ ನಂಬುಗೆಯಿರುವುದೋ ಅಲ್ಲಿ ಹರತಾಳ ಮೊದಲಾದ ಕಾಂಗ್ರೆಸ್ ಉದ್ಯಮಪ್ರಚಾರವನ್ನು ಮಾಡಬೇಕು. ಮದ್ಯಪಾನನಿರೋಧಕವನ್ನೂ ಕೂಡ ಶಾಂತವಾಗಿ ಬೋಧಿಸಬೇಕೇ ಹೊರತು ನಿರೋಧಕಪ್ರಯತ್ನಗಳನ್ನು ಮಾಡಬಾರದು. ಅಂಥ ಬೋಧೆ ಮಾಡಲಿಕ್ಕೆ ಯೋಗ್ಯರನ್ನು ಮಾತ್ರವೇ ಆರಿಸಿ ನಿಯೋಜಿಸಬೇಕು. ರಾಜದ್ರೋಹಸಭಾಶಾಸನ ಮೊದಲಾದುವುಗಳನ್ನು ಧಿಕ್ಕರಿಸುವ ಉದ್ದೇಶದಿಂದಲೇ ಸಭೆಗಳನ್ನೂ ಮೆರವಣಿಗೆಗಳನ್ನೂ ನಡೆಯಿಸಕೂಡದು. ಸ್ವಚ್ಛಂದಸೇವಕರನ್ನು ಸೇರಿಸಿಕೊಳ್ಳುವಲ್ಲಿ ಪ್ರಮಾಣಕ್ಕೆ ಬದ್ಧರಾಗಿ ನಡೆದುಕೊಳ್ಳಲು ತಕ್ಕವರನ್ನು ಮಾತ್ರವೇ ಸೇರಿಸಿಕೊಂಡು ಅದಕ್ಕೆ ಅನರ್ಹರಾದವರನ್ನೆಲ್ಲಾ ತೊಲಗಿಸಿಬಿಡಬೇಕು'' ಈ ಅಭಿಪ್ರಾಯದ ತೀರ್ಮಾನಗಳನ್ನು ಪ್ರಕಟಿಸಿರುವರು.

ಇದರಮೇಲೆ ದೇಶದ ಎಲ್ಲಭಾಗದಲ್ಲೂ ಸದ್ಯಃ ಶಾಸನೋಲ್ಲಂಘನೆ-ಎಂದರೆ ಕಂದಾಯಕೊಡಬಾರದೆಂಬ ಗುಲ್ಲು ನಿಂತುಹೋಗಿರುವುದಲ್ಲದೆ, ಅದೊಂದು ಸಂದರ್ಭದಿಂದ ಹುಟ್ಟಬಹುದಾಗಿದ್ದ ಗದ್ದಲವೂ ಅಪಾಯವೂ ನಿಂತುಹೋಗಿದೆಯೆಂದು ಹೇಳಬಹುದು. ಮ|| ಗಾಂಧಿಯವರಿಗೆ ಈಗಳಾದರೂ ಹೀಗೆ ಭಾವಪರಿವರ್ತನವು ಉಂಟಾದುದಕ್ಕಾಗಿ ನಾವು ಸಂತೋಷಿಸುತ್ತೇವೆ. ಒಂದಲ್ಲ ಎರಡಲ್ಲ ಮೂರುಸಲ ಅವರಿಗೆ ಇಂಥ ಉದಾಹರಣೆಗಳು ಪ್ರತ್ಯಕ್ಷಗೋಚರವಾಗಿರುತ್ತವೆ. ದೈವಬಲ ಧರ್ಮಬಲಗಳಲ್ಲೇ ವಿಶ್ವಾಸವಿಟ್ಟಿರುವ ಗಾಂಧಿಯವರು ಹೀಗೆ ಮೂರುಸಲವೂ ತಮ್ಮ ಪ್ರಯತ್ನಕ್ಕೆ ತೊಡಗಿದ ದೈವವಿಮುಖತೆಯ ಸೂಚನೆಗಳನ್ನು ಕಂಡೂ ಕೂಡ ಆ ಅಸಹಾಯೋದ್ಯಮವನ್ನು ಸಂಪೂರ್ಣವಾಗಿ ವಿರಮಿಸದೆ ಇನ್ನೂ ಅದರಲ್ಲಿ ಭವಿಷ್ಯದಾಶೆಯನ್ನು ಇಟ್ಟುಕೊಂಡು, ಈ ಮೇಲೆಕಂಡ ತೀರ್ಮಾನಗಳು ಯಾವದ್ಭಾರತ ಕಾಂಗ್ರೆಸ್ ಸ್ಥಾಯಿಸಂಘ ಸಭೆಯು ಜರುಗುವವರೆಗೂ ಆಚರಣೆಯಲ್ಲಿರತಕ್ಕುದೆಂದೂ, ಆ ಬಳಿಕ ಆ ಸಭೆಯವರು ನಿರ್ಧರಿಸುವ ಪದ್ಧತಿಯೇ ವ್ಯವಹಾರಕ್ಕೆ ಬರುವುದೆಂದೂ ಮಾಡಿರುವ ತೀರ್ಮಾನವನ್ನು ನೋಡಿದರೆ ದೈವಬಲದ ನಂಬುಗೆಯು ಇನ್ನೂ ಇವರಲ್ಲಿ ದೃಢವಾಗಿಲ್ಲವೆಂದು ಹೇಳಬೇಕಾಗುವುದು. ಪ್ರತ್ಯಕ್ಷ ಕಾಂಗ್ರೆಸ್ಸೇ ಆಗಲಿ ಸ್ಥಾಯಿಸಂಘವೇ ಆಗಲಿ ಕಾರ್ಯಕಾರಿ ಸಂಘವೇ ಆಗಲಿ ಹೆಸರಿನಲ್ಲಿ ಬೇರೆಬೇರೆಯಾಗಿವೆಯೇ ಹೊರತು ಅವೆಲ್ಲಾ ಈಗ ಗಾಂಧಿಯವರ ಅಂಗೋಪಾಂಗಗಳೇ ಆಗಿರುತ್ತವೆ. ಆ ಯಾವ ಸಭೆಗಳಲ್ಲೂ ಗಾಂಧಿಯವರ ಮುದ್ರೆಯೇ ಹೊರತು ಬೇರೊಬ್ಬರ ಮಾತೇ ನಡೆಯುವುದಿಲ್ಲ. ಹೀಗಿರುವಾಗ ಸ್ಥಾಯಿಸಂಘದ ತಡಿಕೆಯೊಂದನ್ನು ಇವರು ಒಡ್ಡಿ ನಿಲ್ಲಿಸಬೇಕಾಗಿಯೇ ಇರಲಿಲ್ಲ. ಎಂಥ ಸಾತ್ವಿಕತಪೋಮೂರ್ತಿಯಾಗಿದ್ದರೂ ರಾಜಕೀಯ ರಾಜಸರಂಗಕ್ಕೆ ನುಗ್ಗಿದರೆ ಅವರಿಗೆ ಅದರ ವಾಸನೆಯು ತಟ್ಟದೆ ಬಿಡುವುದಿಲ್ಲವಷ್ಟೆ? ಅದರಿಂದಲೇ ಗಾಂಧಿಯವರೂ ಹಿಡಿದ ಪಟ್ಟನ್ನು ಬಿಟ್ಟರೆ ಅಪಮಾನವಾಗುತ್ತದೆಂಬ ಲೌಕಿಕ ಪಾಶಪ್ರವಾಹದ ಸೆಳತಕ್ಕೆ ಸಿಕ್ಕಿ ಹಿಂದೂಮುಂದಕ್ಕೆ ಈಜಾಡುತ್ತಿದ್ದಾರೆ. ಇದುವರೆಗಣ ಪರೀಕ್ಷೆಯಲ್ಲಿ ತಮಗೆ ದೈವಸಹಾಯವಿಲ್ಲವೆಂಬುದನ್ನು ಗಾಂಧಿಯವರು ಅರಿತುಕೊಂಡು ಸಂಪೂರ್ಣವಾಗಿ ಅದರಿಂದ ನಿರ್ಲಿಪ್ತರಾಗುವುದು ಅವರ ಘನತೆಗೆ ತಕ್ಕುದಾಗಿದ್ದಿತು. ತಾವು ಮಾಡಿದುದು ತಪ್ಪೆಂದು ತಿಳಿದುಕೊಂಡು ಅದರ ಪ್ರಾಯಶ್ಚಿತ್ತಕ್ಕಾಗಿ ೫ ದಿನಗಳ ಉಪವಾಸವ್ರತವನ್ನು ಗಾಂಧಿಯವರು ಈಗ ಅವಲಂಬಿಸಿದ ಬಳಿಕ ಪ್ರಾಯಶ್ಚಿತ್ತಾರ್ಹವಾದ ಅಂಥ ತಪ್ಪಿತದ ಕೆಲಸಕ್ಕೆ ವಿಚಾರಪರರು ಮತ್ತೆ ಎಂದಿಗೂ ಪ್ರವರ್ತಿಸಬಾರದಲ್ಲವೆ? ಹಾಗೆ ಮಾಡದೆಹೋದರೆ ಈಗಣ ಪ್ರಾಯಶ್ಚಿತ್ತಾದಿಗಳೆಲ್ಲಾ ನಟನೆಯೆಂದು ಭಾವಿಸಲ್ಪಡಲು ಅವಕಾಶವಾಗುವುದು. ಮತ್ತು ಬೊಂಬಾಯಿ ಅತ್ಯಾಚಾರಾದಿಗಳು ನಡೆದಾಗ ೩ ದಿನ ಉಪವಾಸವನ್ನು ಗಾಂಧಿಯವರು ಮಾಡಿದ್ದರು. ಅದರಿಂದ ಅದ ಚರಿತಾರ್ಥವೇನು? ಈಗಳೂ ಅದರಂತೆಯೇ ಸರಿ! ಅಲ್ಲದೆ ಅರಿಯದೆ ಮಾಡಿದ ದೋಷಕ್ಕೆ ಪ್ರಾಯಶ್ಚಿತ್ತವೇ ಹೊರತು ಅರಿತೂ ಮಾಡುವ ದೋಷಕ್ಕೆ ಪ್ರಾಯಶ್ಚಿತ್ತವೆಂದರೇನು?

ಪಂಜಾಬಿನಲ್ಲಿ ನಡೆದ ಘೋರಹತ್ಯ ಪಾಪನಿವಾರಣೆಯಾಗಬೇಕೆಂದು ಹಟತೊಟ್ಟು ಅಸಹಾಯೋದ್ಯಮಕ್ಕೆ ಯಾವ ನಾಯಕರು ಪ್ರವರ್ತಿಸಿರುವರೋ ಅವರುಗಳೇ ತಮ್ಮ ಉದ್ಯಮದಿಂದ ಅಂಥ ಘೋರಹತ್ಯೆಗಳು ಒಂದರ ಹಿಂದೊಂದು ಸಾಗಲಿಕ್ಕೆ ದೇಶದಲ್ಲಿ ಅವಕಾಶ ಮಾಡಿದುವುದಕ್ಕಿಂತಲೂ ಅವಮಾನಕರವಾದ ಸಂಗತಿಯು ಬೇರೊಂದಿರಲಾರದು. ಅಂತೂ ತಾ|| ೧೧ರಲ್ಲಿ ಶಾಸನೋಲ್ಲಂಘನೆಗೆ ಗಾಂಧಿಯನುಚರರು ಪ್ರಯತ್ನಿಸಿದ್ದರೆ ಪ್ರಭುತ್ವದವರು ಅದನ್ನಣಗಿಸಲಿಕ್ಕೆ ಎಷ್ಟೋ ತೆರದ ಪ್ರಯತ್ನಗಳನ್ನು ಮಾಡಬೇಕಾಗುತ್ತಿದ್ದಿತು. ಅದನ್ನು ದೈವವೇ ತಪ್ಪಿಸಿತು. ಅದು ಪ್ರಭುತ್ವದವರ ದೈವಬಲವೋ ಭರತಖಂಡದ ಅದೃಷ್ಟದ ಫಲವೋ ತಿಳಿಯಲಿಲ್ಲ. ಸದ್ಯಕ್ಕೆ ಗಾಂಧಿಯವರು ಉಪಕ್ರಮಿಸಲಿಕ್ಕಿದ್ದ ಯುದ್ಧವು ತಾನೇ ನಿಂತುಹೋಯಿತು. ಆ ಭಾಗದ ಕುತ್ತು ಅಷ್ಟಕ್ಕೇ ತೊಲಗಿಹೋದುದು ಸಂತೋಷಸ್ಥಾನವು.

ಹಾಸನ ಡಿಸ್ಟ್ರಿಕ್ಟ್ ೬ ನೆಯ ಕಾನ್ಫರೆನ್ಸು ಈ ತಾ|| ೨೦ ರಿಂದ ೨೨ ದಿನಗಳ ವರೆಗೆ ಹಾಸನದ ಜೂಬಿಲಿ ಹಾಲಿನಲ್ಲಿ ನಡೆಯುವುದು.

ಶ್ರೀಮಾನ್ ಯುವಸಾರ್ವಭೌಮರ ದೇಶಸಂಚಾರವು.

ಭೂಪಾಲಸಂಸ್ಥಾನವನ್ನು ತಾ|| ೭ ರಲ್ಲಿ ಬಿಟ್ಟು ತಾ|| ೮ ನೆ ಬುಧವಾರ ಬೆಳಗ್ಗೆ ಗ್ವಾಲಿಯರ್ ಸಂಸ್ಥಾನವನ್ನು ಸೇರಿದರು. ಅವರ ಸತ್ಕಾರಕ್ಕಾಗಿ ಅಲ್ಲಿ ಮಾಡಲ್ಪಟ್ಟಿದ್ದ ಏರ್ಪಾಟುಗಳೆಲ್ಲಾ ಸಮರ್ಪಕವಾಗಿದ್ದುವು. ಸಂಸ್ಥಾನದ ಪರ್ವತೋಪಮಾನವಾದ ಆನೆಗಳೂ ಕುದುರೆಗಳೂ ರಥಪದಾತಿಗಳೂ ಸಾಲಂಕೃತವಾಗಿ ನಿಲ್ದಾಣದಲ್ಲಿ ಕಾದಿದ್ದುವು. ಸಿಂಧ್ಯಾ ಮಹಾರಾಜರವರು ತಮ್ಮ ಕುಮಾರ ಕುಮಾರಿಯರೊಡನೆ (ಇವರಲ್ಲಿ ಕುಮಾರನ ಹೆಸರು ಜಾರ್ಜ್, ಕುಮಾರಿಯ ಹೆಸರು ಮೇರಿ) ನಿಲ್ದಾಣದಲ್ಲಿ ಕಾದಿದ್ದು ಯುವಸಾರ್ವಭೌಮರನ್ನು ಸ್ವಾಗತಿಸಿದರು. ಪಟ್ಟಣವೆಲ್ಲಾ ಅಲಂಕೃತವಾಗಿದ್ದಿತು. ಉತ್ಸವಗೊಂಡುಹೋದ ಬೀದಿಗಳಲ್ಲಿ ಪ್ರಜೆಗಳು ವಿಶೇಷವಾಗಿ ಸೇರಿ ದರ್ಶನಮಾಡಿ ಆನಂದದಿಂದ ಮರ್ಯಾದಿಸಿದರು. ಬಿಡದಿಯಲ್ಲಿಳಿಸಿದ ಬಳಿಕ ದರ್ಶನ ಪ್ರತಿದರ್ಶನಾದಿ ಮರ್ಯಾದೆಗಳೆಲ್ಲಾ ಸಾಂಗವಾಗಿ ಜರುಗಿದುವು. ಲಷ್ಕರ್ ಮ್ಯುನ್ಸಿಪಾಲಿಟಿಯವರು ಯುವರಾಜರಿಗೆ ಉತ್ಸವವಾಗಿ ಹೋಗುವ ಕಾಲದಲ್ಲೇ ವಿಜ್ಞಾಪನಪತ್ರವನ್ನು ಸಮರ್ಪಿಸಿದರು. ಆ ರಾತ್ರಿ ಅರಸೌತಣವನ್ನು ಸಿಂಧ್ಯಾ ಮಹಾರಾಜರು ಬಹಳ ವೈಭವದಿಂದ ಮಾಡಿಸಿದರು. ಪದ್ಧತಿಯಂತೆ ಭಾಷಣಮಾಡುವಾಗ್ಗೆ ಯುವರಾಜರು ಸಿಂಧ್ಯಾರವರ ಆತಿಥ್ಯವೈಭವವನ್ನು ಕೊಂಡಾಡಿ,ಆದಿಯಿಂದಲೂ ಸಾಮ್ರಾಜ್ಯಕ್ಕಾಗಿ ಅವರು ತೋರಿಸುತ್ತಿರುವ ಭಕ್ತಿ ಸೇನಾಸಾಹಾಯ್ಯ ಮೊದಲಾದುವುಗಳನ್ನು ಕುರಿತು ಕೊಂಡಾಡಿ ವಂದಿಸಿದರು. ಯುವರಾಜರು ತಮ್ಮ ಸಂಸ್ಥಾನಕ್ಕೆ ದಯಮಾಡಿಸಿದ ಸಂದರ್ಭದ ಸ್ಮರಣಾರ್ಥವಾಗಿಯೂ ಅವರ ಗೌರವಾರ್ಥವಾಗಿಯೂ ಜಾರ್ಜ್ ಸಾರ್ವಭೌಮರ ಹೆಸರಿನಮೇಲೆ ಒಂದು ಉದ್ಯಾನವನ್ನು ಆ ಪಟ್ಟಣದಲ್ಲಿ ಸ್ಥಾಪಿಸಲಿಕ್ಕೆ ಮಹಾರಾಜರು ಉದ್ದೇಶಪಟ್ಟು ಅದರ ಪ್ರಾರಂಭಮಹೋತ್ಸವವನ್ನು ಯುವಸಾರ್ವಭೌಮರ ಮೂಲಕ ತಾ|| ೮ ರಲ್ಲಿ ನೆರವೇರಿಸಿದರು. ಅದೇದಿನ ಪೋಲೀಸರ ಕವಾಯತ್ತನ್ನು ಪರಾಮರಿಸಿದರು. ತಾ|| ೯ ರಲ್ಲಿ ಆ ಸಂಸ್ಥಾನದ ೬೦೦೦ ಮಂದಿ ಸೈನಿಕರ ಕವಾಯಿತು ನಡೆಯಿಸಿದುದನ್ನು ನೋಡಿ ಬಹಳಸಂತೋಷಪಟ್ಟರು. ತಾ|| ೧೧ ರಲ್ಲಿ ಕುದುರೆಯ ಜೂಜು ನಡೆದಿತು. ಮತ್ತು ೨ದಿನಗಳಕಾಲ ಬೇಟೆಗೆ ಹೋಗಿದ್ದರು. ೮ ಹುಲಿಗಳು ೧ ಚಿರತೆ ಇನ್ನು ಕೆಲವು ಅಟವೀಮೃಗಗಳನ್ನು ಸಹ ಬೇಟೆಯಾಡಿದರು.

ಗ್ವಾಲಿಯರಿನಿಂದ ಹೊರಟ ಯುವಸಾರ್ವಭೌಮರು ತಾ|| ೧೩ ನೆ ಮಧ್ಯಾಹ್ನ ೧೨ ಗಂಟೆಗೆ ಆಗ್ರಾಪಟ್ಟಣವನ್ನು ಸೇರಿದರು. ನಿಲ್ದಾಣದಲ್ಲಿ ಜಿಲ್ಲಾಬೋರ್ಡಿನ ಮ್ಯುನ್ಸಿಪಾಲಿಟಿಯ ಸಭಿಕರೂ ಪ್ರಜಾಪ್ರಮುಖರೂ ಕಾದಿದ್ದು ಸ್ವಾಗತಮಾಡಿದರು. ಬೀದಿಯಲ್ಲೆಲ್ಲಾ ಪ್ರಜೆಗಳು ವಿಶೇಷವಾಗಿ ಕೂಡಿದ್ದು ಸಂದರ್ಶನಮಾಡಿ ಆನಂದಿಸಿದರು. ಆ ಸಾಯಂಕಾಲ ಯುವರಾಜರಿಗೆ ಅಲ್ಲಿಯ ಜಮೀನ್‌ದಾರರುಗಳೆಲ್ಲಾ ಸೇರಿ ಔತಣವನ್ನು ಮಾಡಿಸಿದರು. ಅಲ್ಲಿರುವಾಗ ತಾಜಮಹಲ್ಲು ಮೊದಲಾದುವುಗಳನ್ನು ಯುವರಾಜರು ನೋಡಿಬಂದರು. ತಾ|| ೧೪ನೆ ಸಾಯಂಕಾಲ ೪|| ಗಂಟೆಗೆ ಯುವಸಾರ್ವಭೌಮರು ದಿಲ್ಲಿಯನ್ನು ಸೇರಿದರು. ಪಟ್ಟಣವೆಲ್ಲಾ ಬಹುಚೆನ್ನಾಗಿ ಅಲಂಕರಿಸಲ್ಪಟ್ಟಿದ್ದಿತು. ನಿಲ್ದಾಣದಲ್ಲಿ ವೈಸ್ರಾಯರೂ ಕಾರ್ಯನಿರ್ವಾಹಕ ಸಭಿಕರೂ ಕಾರ್ಯದರ್ಶಿಗಳೂ, ದಿಲ್ಲಿ ಚೀಫ್‌ಕಮಿಷನರೂ ಶಾಸನಸಭಾಧ್ಯಕ್ಷರೂ ಇನ್ನು ಅನೇಕ ಪ್ರಜಾಪ್ರಮುಖರೂ ಸ್ವಾಗತಿಸಿದರು. ಬಳಿಕ ವೈಸ್ರಾಯರು ತೆರಳಿಹೋದರು. ಅನಂತರ ಯುವರಾಜರು ಉತ್ಸವವಾಗಿ ಹೊರಟು ಶಾಸನಸಭಾಸಭಿಕರು ನಿಂತಿದ್ದ ಮಂಟಪದಬಳಿಗೆ ಹೋಗಿ ಅಲ್ಲಿ ಏರ್ಪಡಿಸಿದ್ದ ಸಿಂಹಾಸನದಮುಂದೆ ನಿಂತುಕೊಂಡರು. ಶಾಸನಸಭಾ ಸಭಿಕರನ್ನೆಲ್ಲಾ ಅಧ್ಯಕ್ಷರು ಯುವರಾಜರಿಗೆ ಪರಿಚಯಮಾಡಿಸಿದರು. ಬಳಿಕ ಮ್ಯುನ್ಸಿಪಲ್ ವಿಜ್ಞಾಪನಪತ್ರವು ಓದಿ ಅರ್ಪಿಸಲ್ಪಟ್ಟಿತು. ಅದಕ್ಕೆ ಯುವರಾಜರು ಪ್ರತ್ಯುತ್ತರವನ್ನು ಕೊಟ್ಟರು. ಅಲ್ಲಿಂದ ಉತ್ಸವವಾಗಿ ಹೊರಟು ಸರ್ಕಾರಿಭವನಕ್ಕೆ ತೆರಳಿದರು. ೨ ಮೈಲಿಗಳ ದೂರ ಸಾಗಿದ ಆ ಉತ್ಸವವನ್ನು ದಾರಿಯುದ್ದಕ್ಕೂ ವಿದ್ಯಾರ್ಥಿಗಳು ಪುರಜನರು ಸುತ್ತುಮುತ್ತಣ ಗ್ರಾಮವಾಸಿಗಳೆಲ್ಲಾ ದಟ್ಟವಾಗಿ ನಿಂತಿದ್ದು ನೋಡಿ ಆನಂದಪಟ್ಟರು. ಬಿಡಾರದ ಒಳಿಯಲ್ಲಿ ವೈಸ್ರಾಯದಂಪತಿಗಳು ಸ್ವಾಗತಿಸಿದರು. ಒಳಗಣ ಭವನದಲ್ಲಿ ಅನೇಕ ಸ್ವದೇಶಸಂಸ್ಥಾನಾಧಿಪತಿಗಳು ಸಾಲಂಕೃತರಾಗಿ ಕಾದಿದ್ದರು. ಅವರೊಡನೆಲ್ಲಾ ಕುಶಲಪ್ರಶ್ನೆಯನ್ನು ಮಾಡಿದರು. ಆದಿನ ದಿಲ್ಲಿಯಲ್ಲಿ ಕೆಲಭಾಗದೊಳಗೆಲ್ಲಾ ಹರತಾಳವನ್ನು ಆಚರಿಸಿದರು. ತಾ|| ೧೫ ರಲ್ಲಿ ಎಡ್ವರ್ಡ್ ಚಕ್ರವರ್ತಿಯವರ ವಿಗ್ರಹ ಪ್ರತಿಷ್ಠಾಮಹೋತ್ಸವವನ್ನು ಜರುಗಿಸಿದರು. ಮತ್ತು ಲಾರ್ಡ್ ಹಾರ್ಡಿಂಜ್ ಪತ್ನಿಯವರ ಹೆಸರಿನಿಂದ ಸ್ಥಾಪಿತವಾಗಿರುವ ಸ್ತ್ರೀ ವೈದ್ಯಕಲಾಶಾಲೆಯಲ್ಲಿ ಹಾರ್ಡಿಂಜ್ ಪ್ರಭ್ವಿಣಿಯವರ ಶಿಲಾಮೂರ್ತಿ ಪ್ರತಿಷ್ಠಾಪನೆಯನ್ನು ಕೂಡ ನೆರವೇರಿಸಿದರು. ವೈಸ್ರಾಯರು ಏರ್ಪಡಿಸಿದ್ದ ಔತಣದ ಕಾಲದಲ್ಲಿ ಮಾಡಿದ ತಮ್ಮ ಭಾಷಣದೊಳಗೆ ರೀಡಿಂಗ್ ಪ್ರಭುಗಳ ಬುದ್ಧಿಮತ್ತೆಯನ್ನು ಕೊಂಡಾಡಿ, ಅಂಥವರು ವೈಸ್ರಾಯರಾಗಿ ದೊರೆತಿರುವುದು ಭರತಖಂಡದ ಅದೃಷ್ಟವೆಂದೂ, ತಮ್ಮ ಸಂಚಾರವೆಲ್ಲಾ ಅತ್ಯುತ್ಸಾಹಕರವಾಗಿ ಜರುಗುವಂತೆ ಏರ್ಪಡಿಸಿದ್ದುದಕ್ಕಾಗಿ ಅವರು ವಂದ್ಯರೆಂದೂ, ತಮ್ಮ ಸಂಚಾರಕಾಲದಲ್ಲಿ ಭಾರತೀಯರು ತಮ್ಮ ವಿಷಯದಲ್ಲಿ ತೋರಿಸಿದ ಪ್ರೇಮದಿಂದ ನಾನು ಆಪ್ತಸ್ನೇಹಿತರ ಮಧ್ಯದಲ್ಲಿದ್ದಂತೆ ತನಗೆ ಆಗಿರುವುದೆಂದೂ, ಭಾರತದೇಶದ ಉತ್ಕೃಷ್ಟವಿಷಯಗಳನ್ನು ಈ ಸಂಚಾರಕಾಲದಲ್ಲಿ ನಾನು ಪರಿಗ್ರಹಿಸುತ್ತಿದ್ದೆನೆಂದೂ ಅಪ್ಪಣೆ ಕೊಡಿಸಿದರು.

ಪರ್ಷಿಯಾದಲ್ಲಿ ಎದ್ದ ವಿಪ್ಲವಗಾರರಾದ ಕೋಸಕ್ಕರು ನಾಲ್ಕುಕಡೆಗಳಿಂದಲೂ ತೆಬ್ರಿಜ್ ನಗರವನ್ನು ಮುತ್ತಿ ವಶಪಡಿಸಿಕೊಂಡು ಸುತ್ತಣ ಲೋಹಮಾರ್ಗ ತಂತ್ರೀಸಂಬಂಧಗಳನ್ನೆಲ್ಲಾ ಕಡಿದುಬಿಟ್ಟಿದ್ದರು. ಈಚೆಗೆ ಪ್ರಭುತ್ವಸೈನಿಕರು ಅವರನ್ನೆಲ್ಲಾ ಸೋಲಿಸಿ ಪಟ್ಟಣವನ್ನು ತಮ್ಮ ವಶಪಡಿಸಿಕೊಂಡರೆಂದೂ ಸುದ್ದಿಬಂದಿದೆ,

ಒಳದೇಶದ ವೃತ್ತಾಂತಗಳು

ಬೆಂಗಳೂರು ಮ್ಯುನ್ಸಿಪಾಲಿಟಿಗೆ ಚೀಫ್ ಆಫೀಸರು ಅನವಶ್ಯಕವೆಂದು ಕೌನ್ಸಿಲಿನಲ್ಲಿ ತೀರ್ಮಾನವಾಯಿತು.

ದಿವಾನ್ ಸರ್ ಕಾಂತರಾಜ ಅರಸಿನವರು ಇಷ್ಟರಲ್ಲೇ ರಜಾಪಡೆದುಕೊಳ್ಳುವವರಾಗಿದ್ದಾರೆಂಬ ನಿರಾಧಾರವಾದ ಸುದ್ದಿಯನ್ನು ಕೆಲವರು ಹುಟ್ಟಿಸಿದ್ದಾರೆ.

ವಿದೇಶಗಳಿಗೆ ವಿದ್ಯಾಭ್ಯಾಸಕ್ಕಾಗಿ ಹೋಗುವವರಿಗಾಗಿ ಸರ್ಕಾರದಿಂದ ಕೊಡಲ್ಪಡುತ್ತಿರುವ ವಿದ್ಯಾರ್ಥಿ ವೇತನಗಳು ಉಚಿತಾರ್ಥವಾಗಲ್ಲದೆ ಮುಂದೆ ಹಿಂದಿರಿಗಿಕೊಡಲ್ಪಡತಕ್ಕ ಸಾಲದ ರೂಪವಾದ ವೇತನವಾಗಿರಬೇಕೆಂದು ನಿರ್ಣಯಿಸಿರುವರೆಂದು ಕೇಳುತ್ತೇವೆ. ಇದುವರೆಗೆ ಉಚಿತವಾಗಿ ಪಡೆದು ಹೋಗಿದ್ದವರೇ ಪುಣ್ಯವಂತರು !

೧ ನೆ ಕೌನ್ಸಿಲರಾದ ಮ|| ಎ. ಆರ್. ಬಾನರ್ಜಿಯವರು ಒಂದೆರಡು ತಿಂಗಳಲ್ಲಿ ಬ್ರಿಟಿಷ್ ಸರ್ವೀಸಿಗೆ ಎಂದರೆ ಮದ್ರಾಸಾಧಿಪತ್ಯದಲ್ಲಿ ಒಂದು ಕೆಲಸಕ್ಕೆ ತೆರಳುವವರಾಗಿದ್ದಾರೆಂದು ನಿಜವಾದ ವರ್ತಮಾನವನ್ನು ಕೇಳುತ್ತೇವೆ. ೬ ವರ್ಷಕಾಲ ನಮ್ಮ ಸಂಸ್ಥಾನದಲ್ಲಿ ಇವರು ಚಟುವಟಿಕೆಯಿಂದ ಕೆಲಸಮಾಡಿ ಕೂಡಿದಮಟ್ಟಿಗೂ ನಿಷ್ಪಕ್ಷಪಾತಿಗಳೆನಿಸಿಕೊಂಡಿದ್ದರು.

ಜಮಾಬಂದಿಗಾಗಿ ಹೋಗತಕ್ಕ ಅಮಲ್ದಾರರೂ ಡೆ|| ಅಮಲ್ದಾರರೂ ಇನ್ನು ಮುಂದೆ ತಮ್ಮ ಜತೆಗೆ ೩ ಜನ ಗುಮಾಸ್ತೆಯರು ೩ ಮಂದಿ ಆಳುಗಳಿಗಿಂತ ಹೆಚ್ಚಾಗಿ ಕರೆದುಕೊಂಡು ಹೋಗಕೂಡದೆಂದೂ, ಉಳಿದಾಗ ಇಬ್ಬರು ಗುಮಾಸ್ತೆಯರು ಇಬ್ಬರು ಆಳುಗಳಿಗಿಂತ ಹೆಚ್ಚಾಗಿ ಒಡನೆ ಕರೆದುಕೊಂಡುಹೋಗಕೂಡದೆಂದೂ ಸರ್ಕಾರದ ಅಪ್ಪಣೆಯಾಗಿದೆ.

ಮೈಸೂರು ಸಂಸ್ಥಾನದಲ್ಲಿ ಹುಟ್ಟಿ ಬೆಳೆಯುತ್ತಲಿರುವ ಅನಾಥರಾದ ಅಥವಾ ಸಂರಕ್ಷಿಸಿಕೊಳ್ಳಲು ಚೈತನ್ಯವಿಲ್ಲದಿರುವ ಕುಂಟ ಕುರುಡ ಮುಂತಾದ ಅಂಗಹೀನರಿಗೆ ಅವರ ಸಂರಕ್ಷಣೆಯ ಬಗ್ಗೆ ಸರ್ಕಾರದಿಂದ ಪೆನ್ಷನ್ ದಯಪಾಲಿಸುವಂತೆ ಅಥವಾ ಯಾವುದಾದರೊಂದು ವಿಧದಲ್ಲಿ ಸಂರಕ್ಷಣೆಗೆ ಏರ್ಪಾಡು ಮಾಡುವಂತೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರಕ್ಕೆ ಕೃತಪಡಿಸಿಕೊಳ್ಳಬೇಕಾಗಿ ಶಿಕಾರಿಪುರದ ಯಸ್. ಹುಚ್ಚಾರಾವ್ ರವರು ಪ್ರತಿನಿಧಿಸಭಾ ಮೆಂಬರುಗಳನ್ನು ಪ್ರಾರ್ಥಿಸುತ್ತಾರೆ.

ಸಂಪದಭ್ಯುದಯ ಪತ್ರಿಕಾಕರ್ತರಿಗೆ ದಿವಾನರ ಮೇಲೆ ಇರುವ ಹೊಟ್ಟೆಕಿಚ್ಚು ಇನ್ನೂ ತಪ್ಪಲಿಲ್ಲ. ಭದ್ರಾವತೀ ಕಬ್ಬಿಣದ ಕಾರ್ಖಾನೆಯಿಂದ ಸೇಕಡಾ ೧|| ರೂ. ನಫೆಯೂ ಕೂಡ ಬರುವ ಸಂಭವವಿಲ್ಲದಿರುವಾಗ ಅಂಥ ನಷ್ಟಕರವಾದ ಏರ್ಪಾಟುಗಳನ್ನು ಇವರು ಮಾಡುತ್ತಿದ್ದಾರೆಂಬುದಾಗಿಯೂ, ೩|| ಕೋಟಿ ರೂ. ಸಾಲವು ಇವರಿಂದಾಯಿತೆಂಬುದಾಗಿಯೂ ತಾ|| ೧೭ ನೆ ಪತ್ರಿಕೆಯಲ್ಲಿ ಬರೆದುಕೊಂಡಿರುತ್ತಾರೆ. ಸರ್ ವಿಶ್ವೇಶ್ವರಯ್ಯನವರು ಬಿಟ್ಟುಹೋದ ಕುರ್ಚಿಯಮೇಲೆ ಸರ್ ಕಾಂತರಾಜ ಅರಸಿನವರು ಕುಳಿತಿರುವುದರಿಂದ ಅವರನ್ನು ನಿಂದಿಸಿದರೂ ಒಂದೇ ಇವರನ್ನು ನಿಂದಿಸಿದರೂ ಒಂದೇ ಎಂದು ಈ ಪತ್ರಿಕಾಕರ್ತರು ಭಾವಿಸಿ ಹೀಗೆ ಬರೆದಿದ್ದರೆ ಈ ಬುದ್ಧಿವಿಶೇಷಕ್ಕೆ ಮೆಚ್ಚಲೇಬೇಕು.

ಹುಣಸೂರು ತಾ|| ಹಳೇಬೀಡು ಗ್ರಾಮದಲ್ಲಿ ಶ್ರೀಮಾದೇಶ್ವರಸ್ವಾಮಿಯ ಜಾತ್ರೆಯೂ ದನಗಳ ಪ್ರದರ್ಶನವೂ ಈ ತಿಂಗಳು ತಾ|| ೨೫ ರಿಂದ ೫ ದಿನಗಳವರೆಗೆ ನಡೆಯುವುವೆಂದೂ, ಪ್ರದರ್ಶನಕ್ಕೆ ಬರತಕ್ಕ ದನಗಳಲ್ಲಿ ಉತ್ತಮವಾದ ಬೀಜದ ಹೋರಿಗಳಿಗೂ ಬಂಡಿಯನ್ನೆಳೆಯತಕ್ಕ ದನಗಳಿಗೂ ಬಹುಮಾನಗಳು ಕೊಡಲ್ಪಡುವುವೆಂತಲೂ, ಜನಗಳು ಬಹಳವಾಗಿ ಸೇರುವುದರಿಂದ ದನಗಳ ವ್ಯಾಪಾರವು ಚುಂಚನಕಟ್ಟೆ ಹೇಮಗಿರಿ ಮೊದಲಾದ ಸ್ಥಳಗಳಗಿಂತ ಹೆಚ್ಚಾಗಿ ನಡೆಯುವುದೆಂತಲೂ, ದನಗಳ ಮೇವಿಗೂ ನೀರಿಗೂ ಅನುಕೂಲವಾಗಿರುವುದೆಂತಲೂ, ನಾಟಕದವರೂ, ವ್ಯಾಪಾರಸ್ಥರೂ ೪ ದಿನಗಳ ಮುಂದಾಗಿ ತಿಳಿಸಿದಲ್ಲಿ ಸ್ಥಳವೇರ್ಪಡಿಸಿಕೊಡಲ್ಪಡುವುದೆಂತಲೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕೋಲಾರ ಡಿ|| ಗೋರೀಬಿದನೂರು ತಾಲ್ಲೂಕು ಅಲಕಾಪುರಿ ಹಲಕೂರು "ಶ್ರೀ ಸೋಮೇಶ್ವರಸ್ವಾಮಿ" ರಥೋತ್ಸವ ಮತ್ತು ಎತ್ತಿನ ಪರೀಕ್ಷೆ ಸಹ ಮಾಮೂಲಿನಂತೆ ತಾ|| ೧೪-೩-೨೨ ರಿಂದ ೨೨-೩-೨೨ ರ ವರೆಗೆ ನಡೆಯುತ್ತದೆ. ದನಕರುಗಳಿಗೆ ಸ್ಥಳ ಮತ್ತು ನೀರಿನ ವಸತಿ ಅನುಕೂಲವಾಗಿದೆ. ಪರಸ್ಥಳದ ಜನಗಳ ಅನುಕೂಲಕ್ಕಾಗಿ ಅಜೂಬಾಜು ಗ್ರಾಮಗಳ ಭಕ್ತಾದಿಗಳಿಂದ ಕೊಪ್ಪಲುಗಳ ಏರ್ಪಾಡು ಮಾಡಲ್ಪಟ್ಟಿದೆ. ಈ ಹಲಕೂರು ಗ್ರಾಮವು ಗೋರೀಬಿದನೂರು ತೊಂಡೇಭಾವಿ ರೈಲ್ವೆ ಸ್ಟೇಷನ್‌ಗಳಿಗೆ ಮೂರು ಮೈಲಿಗಳ ಸಮೀಪದಲ್ಲಿರುವ ರಸ್ತೆ ಜಾಗವಾಗಿರುತ್ತೆ. ದೇಶಾಭಿಮಾನಿಗಳು ಜಾತ್ರೆಯ ಕಾಲಕ್ಕೆ ದಯಮಾಡಿ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ.

ಸರ್ಕಾರದ ಆಯವ್ಯಯಸ್ಥಿತಿಗಳನ್ನು ಪರಿಶೋಧಿಸಿ ಆಯವನ್ನು ಹೆಚ್ಚಿಸುವ ಇಲ್ಲವೆ ವೆಚ್ಚವನ್ನು ತಗ್ಗಿಸಿ ಒಂದು ಸ್ಥಿಮಿತಕ್ಕೆ ತರುವ ವಿಷಯವನ್ನು ಸೂಚಿಸುವುದಕ್ಕಾಗಿ ಒಂದು ಸಂಘವನ್ನು ಶ್ರೀಮನ್ಮಹಾರಾಜ ಸರ್ಕಾರದವರು ಏರ್ಪಡಿಸಿರುತ್ತಾರೆ. ಇದಕ್ಕೆ ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಅಧ್ಯಕ್ಷರಾಗಿಯೂ ಈಗ ವಿದ್ಯಾಶಾಖಾಧ್ಯಕ್ಷರಾಗಿರುವ ಮಿ|| ಸಿ. ಎಸ್. ಬಾಲಸುಂದರಂ ಅಯ್ಯರು, ಫೈನಾನ್ಸ್ ಸೆಕ್ರೆಟರಿ ಮಿ|| ಎಂ. ಎ. ಕೃಷ್ಣರಾಯರು—ಇವರಿಬ್ಬರೂ ಸರ್ಕಾರದಪಕ್ಷದ ಸಭಿಕರಾಗಿಯೂ, ರಾ|| ಬ|| ಎಂ. ಸಿ. ರಂಗಯ್ಯಂಗಾರರು, ರಾ|| ಸಾ|| ಚೆನ್ನಯ್ಯನವರು, ಮಿ|| ಮಹಮ್ಮದ್ ಅಬ್ಬಾಸ್ ಖಾನರು, ಮಿ|| ಎಸ್. ಆರ್. ಬಾಲಕೃಷ್ಣರಾಯರು—ಈ ನಾಲ್ವರು ಪ್ರಜಾಪಕ್ಷದ ಸಭಿಕರಾಗಿಯೂ, ಸೀನಿಯರ್ ಅ|| ಕಮಿಷನರ್ ಮಿ|| ಬಿ. ಶ್ರೀನಿವಾಸಯ್ಯಂಗಾರರು ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಭರತಖಂಡದ ವೃತ್ತಾಂತಗಳು.

ಬಂಗಾಳಾದ ಕಾರಾಗೃಹಗಳಲ್ಲಿ ಈಗ ೬೪೮೭ ಮಂದಿಗಳು ರಾಜಕೀಯಾಪರಾಧ ಶಿಕ್ಷೆಯನ್ನನುಭವಿಸುತ್ತಿದ್ದಾರೆ. ಅವರಲ್ಲಿ ೫೬೦೦ ಮಂದಿಗಳು ಕಲಕತ್ತಾದವರೇ ಆಗಿರುತ್ತಾರೆ.

ಬಂಗಾಳಾ ಖಿಲಾಪತ್ ಸಂಘಾಧ್ಯಕ್ಷರಾದ ಮೌ|| ಅಬ್ದುಲ್‌ಕಲಾಂ ಅಜದ್‌ರವರಿಗೆ ೧೨೪ ಎ. ಸೆಕ್ಷನ್‌ಪ್ರಕಾರ ೧ ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಕಲಕತ್ತಾದಲ್ಲಿ ೧೦ಸಾವಿರ ರೂ. ಬೆಲೆಬಾಳುವ ೨ ಮಣ ಅಫೀಮನ್ನು ತನ್ನಬಳಿಯಲ್ಲಿಟ್ಟುಕೊಂಡಿದ್ದ ಫೀಲ್ಡ್ ಎಂಬ ಈಸ್ಟ್‌ಇಂಡಿಯನ್ನನ್ನು ಕಳೆದ ತಾ|| ೧೧ರಲ್ಲಿ ಪೋಲೀಸರು ಹಿಡಿದಿರುವರು.

ಬಂಗಾಳಾ ಗೌರ್ನರ್‌ಪದವಿಗೆ ಹೊಸದಾಗಿ ನಿಯಮಿಸಲ್ಪಟ್ಟಿರುವ ಲಿಟ್ಟನ್ ಪ್ರಭುಗಳು ಕಲ್ಕತ್ತಾಕ್ಕೆ ಬಂದ ಕೂಡಲೇ ಅವರಿಗೆ ಒಂದು ಸ್ವಾಗತ ಪತ್ರವನ್ನು ಸಮರ್ಪಿಸಬೇಕೆಂದು ಅಲ್ಲಿಯ ಕಾರ್ಪೊರೇಷನ್ನಿನವರು ನಿಶ್ಚಯಿಸಿದ್ದಾರೆ.

ಬರುವ ತಾ|| ೨೪ರಲ್ಲಿ ದಿಲ್ಲಿಪಟ್ಟಣದೊಳಗೆ ಡಾ|| ಅನ್ಸಾರಿಯವರ ಮನೆಯಲ್ಲಿ ಯಾವದ್ಭಾರತ ರಾಷ್ಟ್ರೀಯ ಮಹಾಸಭಾ ಸ್ಥಾಯಿಸಂಘ ಸಭೆಯು ಜರುಗುವಂತೆ ಗೊತ್ತಾಗಿದೆ. ಆಗಲೇ ಅಲ್ಲೇ ಕಾರ್ಯಕಾರಿ ಸಂಘವೂ ಕೂಡುವುದು.

೧೯೨೧-೧೯೨೨ ನೆ ವರ್ಷದಲ್ಲಿ ಭರತಖಂಡದಲ್ಲೆಲ್ಲ ೨೭೬೪೯೦೦೦ ಎಕರೆ ಭೂಮಿಯಲ್ಲಿ ಗೋದುವೆಯ ಬೆಳಸು ಮಾಡಲ್ಪಟ್ಟಿತು. ಕಳೆದವರ್ಷಕ್ಕಿಂತ ಸೇಕಡಾ ೬ ರಷ್ಟು ವಿಸ್ತೀರ್ಣವು ಹೆಚ್ಚಿತು. ಈಗ ನಿಂತಿರುವ ಬೆಳಸು ಚೆನ್ನಾಗಿದೆಯಂತೆ.

ಖೈರಾ ಜಿಲ್ಲೆಯಲ್ಲಿ ಆಜ್ಞೋಲ್ಲಂಘನೆಗೆ ಅನುಕೂಲ ಪ್ರದೇಶವೆಂದು ಅಸಹಾಯವಾದಿಗಳು ಗೊತ್ತುಮಾಡಿದ್ದ ಸ್ಥಲವಾದ ಆನಂದು ತಾಲ್ಲೂಕಿನಲ್ಲಿ ವಸೂಲಾಗಬೇಕಾಗಿದ್ದ ಕಂದಾಯದಲ್ಲಿ ೧೦೦ಕ್ಕೆ ೯೮ ಭಾಗವು ಆಗಲೇ ವಸೂಲಾಗಿಹೋಗಿದ್ದಿತು.

ಮಂಗಳೂರಿನಲ್ಲಿ ಕಳೆದ ತಾ|| ೧೦-೧೧ರಲ್ಲಿ ಶ್ರೀಮತಿ ಸರೋಜಿನೀ ನಾಯಡುಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾಂತಿಕ ದ್ವಿತೀಯ ಸಭೆಯು ನಡೆದಿತು. ಅದಕ್ಕೆ ಮೈಸೂರು ಕಾಂಗ್ರೆಸ್ ಭಕ್ತರು ಯಾರೊಬ್ಬರೂ ದರ್ಶನಕೊಡದೆ ಹೋದುದೊಂದು ವಿಶೇಷ.

ಫೆಬ್ರವರಿ ತಾ|| ೨೬ರಿಂದ ಮಲಬಾರಿನಲ್ಲಿ ಸೈನಿಕಶಾಸನ ಪರಿಪಾಲನವು ತಪ್ಪಿಸಲ್ಪಡುವುದು. ಬಳಿಕ ಶಾಂತಿಸ್ಥಾಪನೆಯ ಕೆಲಸಕ್ಕಾಗಿ ಮದ್ರಾಸು ಗೌರ್ನರಿಗೆ ಪ್ರತ್ಯೇಕಾಧಿಕಾರವನ್ನು ಕೊಡುವ ವಿಷಯವನ್ನು ಭಾರತಸರ್ಕಾರದವರು ಪರ್ಯಾಲೋಚಿಸುತ್ತಿರುವರು

ರೆವಿನ್ಯೂ ಜಪ್ತಿಯಲ್ಲಿ ಬೇಸಾಯದ ಮುಟ್ಟುಗಳನ್ನೂ ಉಳುವ ಎತ್ತುಗಳನ್ನೂ ಜಪ್ತೀಮಾಡಲು ಅವಕಾಶವಿರಲಿಲ್ಲ. ಈಗಣ ಸ್ಥಿತಿಯಲ್ಲಿ ಸರ್ಕಾರದ ಕಂದಾಯಕ್ಕಾಗಿ ಅವುಗಳನ್ನೂ ಜಪ್ತೀಮಾಡಲು ಮದರಾಸ್ ಸರ್ಕಾರದವರು ನೂತನ ವಿಧಿಯನ್ನು ಏರ್ಪಡಿಸಿದ್ದಾರೆ.

ಗುಂಟೂರುಜಿಲ್ಲಾ ಕಾಂಗ್ರೆಸ್ ಸಂಘದವರು ಸಭೆಗೂಡಿ, ಪ್ರತಿಗ್ರಾಮದವರೂ ಸರ್ಕಾರಿ ಕಂದಾಯವನ್ನು ನಿಲ್ಲಿಸಿಕೊಳ್ಳದೆ ಸಾಧ್ಯವಾದರೆ ರಾಜೀನಾಮಾ ಕೊಟ್ಟಿರುವ ಗ್ರಾಮೋದ್ಯೋಗಿಗಳ ಹಸ್ತದಲ್ಲೇ ಸರ್ಕಾರಿಬೊಕ್ಕಸಕ್ಕೆ ಇರಿಸಾಲು ಮಾಡಿಸಬೇಕೆಂದು ತೀರ್ಮಾನಿಸಿದರು.

ಗಾಂಧಿಯವರ ಕುಮಾರರಾದ ದೇವದಾಸ ಗಾಂಧಿಯವರು ಬರ್ಡೋಲಿಗೆ ಹೋಗಿ ಸ್ಥಿತಿಗತಿಯನ್ನೆಲ್ಲಾ ಪ್ರತ್ಯಕ್ಷವಾಗಿ ಅವಲೋಕಿಸಿ ಸರ್ಕಾರದವರು ಅಲ್ಲಿಯ ನಡೆವಳಿಕೆಯನ್ನು ಕುರಿತು ಪ್ರಕಟಿಸಿರುವುದೆಲ್ಲಾ ನಿಜವೆಂದು ತಮ್ಮ ತಂದೆಯವರಿಗೆ ತಂತಿಯ ಮೂಲಕ ತಿಳಿಯಪಡಿಸಿದ್ದಾರೆ.

ಅಫ್ಘಾನಿಸ್ಥಾನದ ಪಕ್ಷದ ರಾಯಭಾರಿಗಳಾಗಿ ಲಂಡನ್ನಿನಲ್ಲಿರಲಿಕ್ಕೆ ಸರ್ದಾರ್ ಅಬ್ದುಲ್‌ಹಾದಿಯವರು ನಿರ್ಣಯಿಸಲ್ಪಟ್ಟಿದ್ದಾರೆ. ಇವರು ಕಳೆದ ತಾ|| ೬ರಲ್ಲಿ ಪಿಷಾವರಿಗೆ ಬಂದಾಗ ಆಂಗ್ಲಾಧಿಕಾರಿಗಳು ಉಚಿತವಾಗಿ ಗೌರವಿಸಿದರು. ಇವರು ಕೆಲದಿನ ಭರತಖಂಡದಲ್ಲಿದ್ದು ಬಳಿಕ ಲಂಡನ್ನಿಗೆ ತೆರಳುವರು.

"ಬುದ್ಧಿತಪ್ಪಿ ದುರದೃಷ್ಟರಾದ ವೈಸ್ರಾಯರು ಗಾಂಧಿಯವರನ್ನು ಹಿಡಿಯಿಸಿದರೆ ಭಾರತಮಾತೃವಿಮುಕ್ತಿಗಾಗಿ ನಾವೆಲ್ಲಾ ಅಹಿಂಸಾಮಾರ್ಗದಲ್ಲೇ ನಡೆದು ಪ್ರಾಣವನ್ನರ್ಪಿಸಲಿಕ್ಕೂ ಸಿದ್ಧರಾಗಿರಬೇಕು" ಎಂಬದಾಗಿ ಅಲಿಸೋದರರ ತಾಯಿಯು ಗಯಾಕ್ಷೇತ್ರದಲ್ಲಿ ಸ್ತ್ರೀಯರ ಸಭೆಯೊಳಗೆ ಉಪನ್ಯಾಸಮಾಡಿರುವಳು.

ಕರಾಚಿ ಕಾರಾಗೃಹದಲ್ಲಿರುವ ಮಹಮ್ಮದಾಲಿಯವರು ಅತಿಮೂತ್ರವ್ಯಾಧಿಯಿಂದ ೨೫ ಪೌನ್ ತೂಕ ಭಾರದಲ್ಲಿ ಕಡಿಮೆಯಾಗಿದ್ದಾರಂತೆ. ಅವರಿಗೆ ಪ್ರತಿದಿನವೂ ೨ ಆಣೆ ನೆಲಗಡಲೆಕಾಯನ್ನೂ ಬೆಣ್ಣೆಯನ್ನೂ ಅವರಿಷ್ಟಪ್ರಕಾರ ಆಹಾರಾರ್ಥವಾಗಿ ಕೊಡುತ್ತಿದ್ದಾರೆ. ಶೌಕತಾಲಿಯವರು ೪೦ ಪೌನ್ ತೂಕ ಕಡಿಮೆಯಾಗಿದ್ದಾರಂತೆ.

ಗಾಂಧಿಯವರನ್ನು ಇನ್ನೂ ಏತಕ್ಕೆ ಹಿಡಿಯಲಿಲ್ಲ? ಎಂದು ಪಾರ್ಲಿಮೆಂಟಿನಲ್ಲಿ ಒಬ್ಬ ಸಭಿಕರು ಮಾಡಿದ ಪ್ರಶ್ನೆಗೆ ಸ್ಟೇಟ್ ಸೆಕ್ರೆಟರಿಯವರು ಭರತಖಂಡದಲ್ಲಿರುವ ಅಧಿಕಾರಿಯೇ ಅದಕ್ಕೆ ತಕ್ಕಚರ್ಯೆಯನ್ನು ಪರಿಗ್ರಹಿಸುವರು. ಭಾರತೀಯರಿಗೆ ರಾಜಭಕ್ತಿ ಹೆಚ್ಚು. ಅದಕ್ಕೆ ಯುವರಾಜರ ಸಂಚಾರವಿವರಣವೇ ನಿದರ್ಶನವು ಎಂದು ಹೇಳಿದರು.

ಕಳೆದ ತಾ|| ೧೩ರಲ್ಲಿ ಕಲಕತ್ತಾದೊಳಗೆ ೨೦೦೦ ಮಂದಿ ವಾಲಂಟಿಯರುಗಳು ಶಿಕ್ಷಿತರಾದ ಅಬ್ದುಲ್‌ಕಲಂ ಆಜದ್‌ರವರನ್ನು ಅಭಿನಂದಿಸಲಿಕ್ಕಾಗಿ ಒಂದು ಸಭೆಯನ್ನು ಕೂಡಿಸಲು ಯತ್ನಿಸಿದರು ಅದನ್ನು ಪೋಲೀಸರು ಅಡ್ಡಿಪಡಿಸಿದರು. ಅವರ ಮೇಲೆ ಕಲ್ಲಿನಮಳೆಯನ್ನು ವಾಲಂಟಿಯರುಗಳು ಸುರಿಸಿದರು. ಕೆಲ ಪೋಲೀಸರಿಗೆ ಗಾಯವಾಯಿತು. ೪೫೦ ಮಂದಿಗಳನ್ನು ಪೋಲೀಸರು ಹಿಡಿದರು.

ಕಳೆದ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಬೇಕಾಗಿದ್ದ ಚಿತ್ತರಂಜನದಾಸರನ್ನು ಸಭೆ ಕೂಡುವುದಕ್ಕೆ ಮುಂಚೆಯೇ ಹಿಡಿದು ವಿಚಾರಣಾರ್ಥವಾಗಿ ಕಾರಾಗೃಹದಲ್ಲಿಟ್ಟದ್ದು ಇಲ್ಲಿಗೆ ೨ ತಿಂಗಳ ಮೇಲೆಯೇ ಆಯಿತು. ಈಗ ಅವರ ವಿಚಾರಣೆಯು ಮುಗಿದು ಕಳೆದ ತಾ|| ೧೪ರಲ್ಲಿ ಅಮೆಂಡ್‌ಮೆಂಟ್ ಶಾಸನದ ಪ್ರಕಾರ ಅವರಿಗೆ ೬ ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಸಂಯುಕ್ತರಾಷ್ಟ್ರಗಳ ಗೋರಕ್‌ಪೂರ್ ಜಿಲ್ಲಾ ಕಾಂಗ್ರೆಸ್ ಸಂಘದವರು ಎಂದರೆ ಅಬದ್‌ಸೊಬಾನಿ, ಪಂಡಿತ ಜಗಜ್ಜೀವನ ಮೊದಲಾದವರು ಸಭೆಕೂಡಿ, ಅಲ್ಲಿರುವ ಸ್ವಚ್ಛಂದಸೇವಕ ಸಂಘಗಳನ್ನೆಲ್ಲಾ ತೆಗೆದುಹಾಕಿಬಿಡುವುದಕ್ಕೂ, ಜಿಲ್ಲೆಯಲ್ಲೆಲ್ಲಾ ಅಸಹಾಯೋದ್ಯಮ ಪ್ರಚಾರವನ್ನು ತಪ್ಪಿಸಲಿಕ್ಕೂ ತೀರ್ಮಾನಮಾಡಿದರು ಎಂದು ದೇವದಾಸ್ ಗಾಂಧಿಯವರು ತಮ್ಮ ತಂದೆಯವರಿಗೆ ತಂತ್ರೀವಾರ್ತೆಯನ್ನು ಕಳುಹಿಸಿರುವರು.

ಪೂರ್ವಾಫ್ರಿಕಾದಲ್ಲಿರುವ ಭಾರತೀಯರ ಕಷ್ಟದ ಸಂದರ್ಭಗಳನ್ನು ವೈಸ್ರಾಯರಲ್ಲಿ ಪ್ರತ್ಯಕ್ಷತಃ ಅರಿಕೆಮಾಡಿಕೊಳ್ಳಲಿಕ್ಕಾಗಿ ಸರ್ ಜೇಂಷಡ್ಜಿ ಜೇಜೀಭಾಯಿ, ಸರ್ ವಿ. ಥಾಕರ್ಸೆ ಲಲ್ಲೂಭಾಯಿ ಶ್ಯಾಮಲದಾಸ್ ಮೊದಲಾದ ಕೆಲಜನರ ರಾಯಭಾರವು ಹೋಗುವುದಕ್ಕಿದೆ. ಇವರ ಜತೆಯಲ್ಲಿ ಮಿ|| ಆಂಡ್ರೂಸ್‌ರವರೂ ದಕ್ಷಿಣಾಫ್ರಿಕಾದಲ್ಲಿದ್ದು ಈಗ ಭರತಖಂಡಕ್ಕೆ ಬಂದು ವಾಸಿಸುತ್ತಿರುವ ನಾಲ್ಕುಮಂದಿ ಭಾರತೀಯರೂ ಸಹ ಹೋಗುವರು.

ಮದ್ರಾಸಾಧಿಪತ್ಯದ ಚೆಂಡವರಂ ಎಂಬ ಗ್ರಾಮದಲ್ಲಿ ಕಳೆದ ತಾ|| ೬ನೆ ದಿನ ಒಂದುಮನೆಗೆ ಬೆಂಕಿಬಿದ್ದು ೨ ಗಂಟೆ ಹೊತ್ತಿನೊಳಗೆ ೬೦೦ ಮನೆಗಳು ಸುಟ್ಟು ಬೂದಿಯಾದುವು. ಒಬ್ಬ ಹೆಂಗುಸು ಸತ್ತಳು ದನಕರುಗಳು ಕೋಳಿ ಮೊದಲಾದ ಪ್ರಾಣಿಗಳು ಲೆಕ್ಕವಿಲ್ಲದಷ್ಟು ದಗ್ಧವಾದುವು. ಜಲಾಧಾರ ಸಾಹಾಯ್ಯವು ತಕ್ಕಷ್ಟು ಇಲ್ಲದೆ ಹೋದುದರಿಂದ ಗ್ರಾಮಸ್ಥರು ಎಷ್ಟು ಪ್ರಯಾಸಪಟ್ಟರೂ ಬೆಂಕಿಯನ್ನಾರಿಸುವುದಕ್ಕೆ ಸಾಧ್ಯವಲ್ಲದೆಹೋಯಿತು.

ಲಾಹೋರಿನಲ್ಲಿ ಅಜದ್ ಅಕಲಿ ಎಂಬ ಒಂದು ವಾರ್ತಾಪತ್ರಿಕೆಯು ಸರ್ದಾರ್ ಗೋಪಾಲಸಿಂಗ್‌ರವರ ಸಂಪಾದಕತ್ವದಿಂದ ಹೊರಡುತ್ತಿದೆ. ಮುದ್ರಣಶಾಸನವನ್ನು ಪರಿಹಾಸಗೊಳಿಸಿ ಭಂಗಪಡಿಸುವುದಕ್ಕಾಗಿ ಈ ಪತ್ರಿಕೆಗೆ ಸಂಬಂಧಪಟ್ಟಂತೆ ಒಂದುಸಂಘವು ಸ್ಥಾಪಿಸಲ್ಪಟ್ಟಿದೆ. ಒಬ್ಬರಿಗೆ ಶಿಕ್ಷೆಯಾದರೆ ಮತ್ತೊಬ್ಬರು ಆ ಸ್ಥಾನಕ್ಕೆ ಸಂಪಾದಕರಾಗಿಯೂ ಮುದ್ರಾಪಕರಾಗಿಯೂ ನಿಂತುಕೊಳ್ಳಲಿಕ್ಕೆ ಒಪ್ಪಿ ೫೦ ಮಂದಿಗಳು ಆ ಸಂಘದಲ್ಲಿ ಸಭಿಕರಾಗಿದ್ದಾರೆ.

ಪಾಲಸ್ತೈನಿನ ಈಗಣ ಪರಿಪಾಲನ ಕ್ರಮವು ಸರಿಯಾಗಿಲ್ಲವೆಂದೂ, ಅದು ಯಹೂದರಿಗೆ ಅನುಕೂಲವಾಗಿಯೂ ಅರಬ್ಬಿಯವರಿಗೆ ಪ್ರತಿಕೂಲವಾಗಿಯೂ ಇದೆಯೆಂದೂ ತಿಳಿಯಿಸಲಿಕ್ಕಾಗಿ ಅರಬ್ಬಿಯವರು ಒಂದು ರಾಯಭಾರವನ್ನು ಅಧಿನಿವೇಶ ಮಂತ್ರಿಯವರ ಬಳಿಗೆ ಕಳುಹಿಸಿದ್ದರು. ಅದಕ್ಕೆ ಅವರು ಪಾಲಸ್ತೈನಿನಲ್ಲಿ ಬ್ರಿಟಿಷ್ ಹೈಕಮಿಷನರ ಕೆಳಗೆ ಒಂದು ಶಾಸನಸಭೆಯನ್ನೇರ್ಪಡಿಸುತ್ತೇವೆಂದೂ ಅದರ ಸಭ್ಯರಲ್ಲಿ ಕೆಲವರು ಪ್ರಜೆಗಳಿಂದ ಆರಿಸಲ್ಪಡುವರೆಂದೂ, ಕೆಲವರು ನಿಯುಕ್ತರಾಗುವರೆಂದೂ ಉತ್ತರವನ್ನು ಕೊಟ್ಟಿರುವರು.

"ಈಗಣಸ್ಥಿತಿಯಲ್ಲಿ ಮುಖ್ಯವಾಗಿ ಅಯೋಧ್ಯೆಯಲ್ಲಿ ಸಮಷ್ಟಿ ಆಜ್ಞೋಲ್ಲಂಘನೆಯು ಸಾಧ್ಯವಲ್ಲ. ಬರ್ಡೋಲಿಯಲ್ಲಿ ಆಜ್ಞೋಲ್ಲಂಘನವನ್ನು ಆರಂಭಿಸಿದರೆ ಅದರ ಸಂಪರ್ಕದೋಷವು ಉಳಿದಸ್ಥಲಗಳಿಗೂ ವ್ಯಾಪಿಸದೆ ಬಿಡದು. ಆದುಕಾರಣ ದೌರ್ಜನ್ಯಕ್ಕೆ ಸಿದ್ಧರಾಗಬೇಕಾಗುವುದು. ಇಲ್ಲವೆ ಸಮಷ್ಟಿಆಜ್ಞೋಲ್ಲಂಘನವನ್ನು ನಿಲ್ಲಿಸಿಬಿಡಬೇಕು." ಎಂಬುದಾಗಿ ಅಸಹಾಯವಾದಿಗಳಲ್ಲಿ ಪ್ರಮುಖರಾದ ಮುನ್ಶೀರ್ ಹುಸೇನ್, ಗಿದ್ವಾಯಿ, ಹಕೀಂ ಅಜ್ಮಲ್‌ಖಾನ್, ಡಾಕ್ಟರ್ ಅನ್ಸಾರಿ ಇವರುಗಳು ಲಕ್ನೋಪಟ್ಟಣದಿಂದ ಗಾಂಧಿಯವರಿಗೆ ತಂತ್ರೀವಾರ್ತೆಯನ್ನು ಕಳುಹಿಸಿಕೊಟ್ಟರು.

ಕಲ್ಕತ್ತಾದಲ್ಲಿ ಮಿತವಾದಿಗಳು ಸಭೆಸೇರಿ, ಭಾರತ ಪ್ರಭುತ್ವದವರು ಈಗ ಅವಲಂಬಿಸಿರುವ ಚರ್ಯೆಯು ಯುಕ್ತವಾದುದೆಂದೂ, ಪ್ರಜೆಗಳೆಲ್ಲಾ ಅವರ ಪಕ್ಷವಾಗಿಯೇ ಇರಬೇಕೆಂದೂ ಗಾಂಧಿಯವರ ಉದ್ಯಮವು ಹಾನಿಕರವೆಂದೂ, ಬರ್ಡೋಲಿಯಲ್ಲಿ ಈಗ ಮಾಡಿದ ತೀರ್ಮಾನವು ಅವರ ಅಪಜಯಕ್ಕೆ ಸೂಚಕವೆಂದೂ, ಆದರೂ ಅವರು ತಮ್ಮ ಉದ್ಯಮವನ್ನು ಪೂರ್ಣವಾಗಿ ಬಿಟ್ಟಂತಾಗಲಿಲ್ಲವೆಂದೂ, ೧ ಕೋಟಿ ವಾಲಂಟಿಯರುಗಳನ್ನು ಸೇರಿಸಬೇಕೆಂದು ಅವರು ಮಾಡಿದ ತೀರ್ಮಾನವು ಮರಳಿ ದೇಶೋಪದ್ರವಕಾರಕವೆಂದೂ ಮೊದಲಾಗಿ ತೀರ್ಮಾನಿಸಿದರು.

ಆಂಗ್ಲ ಸಾರ್ವಭೌಮರು ಕಳೆದ ತಾ|| ೭ರಲ್ಲಿ ಪಾರ್ಲಿಮೆಂಟನ್ನು ಆರಂಭಿಸಿದರು. ಪದ್ಧತಿಯಂತೆ ಆಗ ಮಾಡಿದ ಭಾಷಣದಲ್ಲಿ ವಾಷಿಂಗ್‌ಟನ್ ಸಭೆಯ ಪ್ರಯೋಜನ, ಸಾಮ್ರಾಜ್ಯದ ವ್ಯಯಭಾರವನ್ನು ತಗ್ಗಿಸುವುದು, ಐರ್ಲಂಡಿನ ಸಂಧಿಸಮಾಪನೆಯ ಸಂತೋಷ, ಅಂತರ್ಜಾತೀಯ ವ್ಯಾಪಾರ ಸಂಘಸ್ಥಾಪನೆ ಮೊದಲಾದ ಮುಖ್ಯ ವಿಷಯಗಳನ್ನೆಲ್ಲಾ ಕುರಿತು ಮಾತನಾಡಿದರು ಭರತಖಂಡದ ವಿಷಯವನ್ನು ಮಾತ್ರ ಎತ್ತಲೇ ಇಲ್ಲ. ಇದು ಭಾರತೀಯರಿಗೆ ಸಮಾಧಾನವನ್ನುಂಟುಮಾಡಿಲ್ಲ. ಆದರೆ ಇಷ್ಟರಲ್ಲೇ ಭರತಖಂಡದ ಚರ್ಚೆಯು ಸಭೆಯಲ್ಲಿ ಬರುವುದಾಗಿದೆಯಂತೆ.

ಭಾರತ ಸರ್ಕಾರದವರು ತಮ್ಮ ಲೇಖನಕ್ಕೆ ಪ್ರತಿಯಾಗಿ ಕೊಟ್ಟ ಉತ್ತರಕ್ಕೆ ಪ್ರತ್ಯುತ್ತರವನ್ನು ಮ|| ಗಾಂಧಿಯವರು ತಾ|| ೭ರಲ್ಲಿ ಪ್ರಕಟಮಾಡಿ ಅದರಲ್ಲಿ-ಪ್ರಭುತ್ವದ ಲೇಖನದೊಳಗೆ ಮುಖ್ಯ ಸಂಗತಿಗಳನ್ನು ಮರೆಮಾಡಿ ಹೇಳಿರುವರೆಂದು ತಿಳಿಯಿಸಿರುತ್ತಾರೆ. ಮತ್ತು ತಮ್ಮ ಮಾತನ್ನೇ ಹಠವನ್ನೇ ಮತ್ತೊಂದು ಸಲ ಸಾಧಿಸಿಕೊಂಡಿರುತ್ತಾರೆ. ಇದಕ್ಕೂ ಪ್ರತ್ಯುತ್ತರವನ್ನು ಕೊಡುವ ಹಂಬಲನ್ನು ಸರ್ಕಾರದವರು ಇಟ್ಟುಕೊಳ್ಳಲಿಲ್ಲ. ಆದರೆ ಶಾಸನ ಸಭೆಯಲ್ಲಿ ಈ ಸಂಬಂಧವಾಗಿ ಮಾಡಲ್ಪಟ್ಟ ಪ್ರಶ್ನೆಗೆ ಸರ್ ವಿನ್‌ಸೆಂಟ್‌ರವರು ಪ್ರತ್ಯುತ್ತರರೂಪದ ಕೆಲಮಾತುಗಳನ್ನಾಡಿ ಖಂಡಿಸಿ ಸರ್ಕಾರದಚರ್ಯೆಯನ್ನು ಸಮರ್ಥನಮಾಡಿರುವರು.

ಮದ್ರಾಸು ಅಧಿಪತ್ಯದಲ್ಲಿ ಗ್ರಾಮೋದ್ಯೋಗಿಗಳ ಸಂಬಳವನ್ನು ಹೆಚ್ಚಿಸಿದ ಕಾರಣ ಈಗ ಅಮಲಾಗುತ್ತಿರುವ ವಾರ್ಷಿಕವ್ಯಯವು ೧೫|| ಲಕ್ಷದಿಂದ ೩೧|| ಲಕ್ಷಕ್ಕೆ ಹೆಚ್ಚುವುದಂತೆ. ಮತ್ತು ಗ್ರಾಮಮುನ್ಸೀಫರು ಬಹುಕಾಲದಿಂದ ಬೇಡಿಕೊಳ್ಳುತ್ತಿರುವ ಕಾರಣ ಅವರ ಸಂಬಳವನ್ನು ೧೨|| ಇಂದ ೧೫ ರೂ. ಗೆ ಹೆಚ್ಚಿಸಬೇಕಂತೆ. ಇದಕ್ಕಾಗಿ ೧೭ ಲಕ್ಷ ರೂ. ಗಳ ಹೆಚ್ಚುವೆಚ್ಚವು ಹಿಡಿಯುವುದು. ಇದನ್ನೆಲ್ಲಾ ತಾಳಿಕೊಳ್ಳಲಿಕ್ಕೆ ಸರ್ಕಾರದ ಬೊಕ್ಕಸದಲ್ಲಿ ಸತ್ವವಿಲ್ಲ. ಆದುಕಾರಣ ರೈತ್ವಾರಿವಿಲೇಜ್ ಸರ್ವೀಸ್ ಸೆಸ್ಸನ್ನು ರೂಪಾಯಿಗೆ ೧ ಆಣೆಯಂತೆ ಹೊಸದಾಗಿ ವಿಧಿಸುವೆನೆಂದು ಮದ್ರಾಸು ಸರ್ಕಾರದವರು ಪ್ರಕಟಿಸಿದ್ದಾರೆ.

"ಆಜ್ಞೋಲ್ಲಂಘನ ಪ್ರಯತ್ನವನ್ನು ಆರಂಭಿಸಿದವನು ನಾನು; ಆದುಕಾರಣ ಅದರಿಂದ ಸಂಭವಿಸುವ ಲಾಭನಷ್ಟಗಳಿಗೆಲ್ಲಾ ನಾನೇ ಉತ್ತರವಾದಿಯು. ಗೋರಕ್‌ಪೂರದಲ್ಲಿ ಈಗ ಜರುಗಿದ ರಾಕ್ಷಸಕೃತ್ಯಗಳಿಗೆ ತಕ್ಕ ಶಿಕ್ಷೆಯಾಗಬೇಕು. ಆ ಹತ್ಯಗಳನ್ನು ಮಾಡಿದವರು ತಾವಾಗಿ ಸರ್ಕಾರಕ್ಕೆ ಹೋಗಿ ತಮ್ಮ ತಪ್ಪುಗಳನ್ನೊಪ್ಪಿಕೊಳ್ಳಬೇಕು. ನಾನೂ ಇದಕ್ಕೆ ಬಾಧ್ಯನಾದುದರಿಂದ ಅದರ ಪ್ರಾಯಶ್ಚಿತ್ತಕ್ಕಾಗಿ ದೊಡ್ಡ ತಪಸ್ಸನ್ನು ಮಾಡಬೇಕಾಗಿದೆ. ಉಪವಾಸವ್ರತವು ತಪಸ್ಸೂ ಶಿಕ್ಷೆಯೂ ಕೂಡ ಆಗಿರುತ್ತದೆ" ಎಂದು ಗಾಂಧಿಯವರು ಹೇಳಿಕೊಂಡು ತಾ|| ೧೨ ರಿಂದ ೨ ವಾರಗಳ ಕಾಲ ಉಪವಾಸವನ್ನು ಮಾಡಲಿಕ್ಕೆ ಸಂಕಲ್ಪಿಸಿದರಂತೆ. ಆದರೆ ಅವರ ಪರಿವಾರದವರೆಲ್ಲಾ ಅದಕ್ಕೆ ಒಪ್ಪದೆ ನಿರ್ಬಂಧಪಡಿಸಿದುದರಿಂದ ತಾ|| ೧೬ರ ವರೆಗೆ ೫ ದಿನಗಳ ಕಾಲಮಾತ್ರ ಉಪವಾಸವನ್ನು ಹಿಡಿದಿರುವರು.

ಅಹಮ್ಮದಾಬಾದ್ ಮ್ಯುನ್ಸಿಪಾಲಿಟಿಯನ್ನು ೨ ವರ್ಷಗಳವರೆಗೂ ಸೂರತ್ ಮ್ಯುನ್ಸಿಪಾಲಿಟಿಯನ್ನು ೩ ವರ್ಷಗಳವರೆಗೂ ನಿಲ್ಲಿಸಿಬಿಡಲಿಕ್ಕೆ ಬೊಂಬಾಯಿ ಸರ್ಕಾರದವರು ನಿಶ್ಚಯಿಸಿರುವರು. ಕಾರಣವೇನೆಂದರೆ—ಅಹಮ್ಮದಾಬಾದ್ ಮ್ಯುನ್ಸಿಪಾಲಿಟಿಯವರು ಪ್ರಾಥಮಿಕ ಪಾಠಶಾಲೆಗಳನ್ನು ಪೋಷಿಸುವ ತಮ್ಮ ಕರ್ತವ್ಯವನ್ನು ಮುಷ್ಕರದಿಂದ ಉಲ್ಲಂಘಿಸಿಬಿಟ್ಟರು. ಮತ್ತು ಪ್ರಭುತ್ವದವರ ಅಪ್ಪಣೆಯನ್ನು ನಿರಾಕರಿಸಿ ತಮ್ಮ ಅಧಿಕಾರವನ್ನು ದುರ್ವಿನಿಯೋಗಪಡಿಸಿದರು. ಸೂರತ್ ಮ್ಯುನ್ಸಿಪಾಲಿಟಿಯವರು ಪ್ರಾಥಮಿಕ ಪಾಠಶಾಲೆಗಳನ್ನು ಪೋಷಿಸದೆ ಹೋದುದು ಮಾತ್ರವೇ ಅಲ್ಲದೆ ಆ ಪಾಠಶಾಲೆಗಳನ್ನು ಅಂಗೀಕೃತವಲ್ಲದ ಒಂದು ಸಂಘಕ್ಕೆ ವಶಪಡಿಸಿ, ಆ ಸಂಘಕ್ಕೆ ೪೦ ಸಹಸ್ರ ರೂ. ಗಳನ್ನು ಕೊಟ್ಟು ಸರ್ಕಾರದಪ್ಪಣೆಯನ್ನು ಮೀರಿ ತಮ್ಮ ಅಧಿಕಾರವನ್ನು ದುರ್ವಿನಿಯೋಗಪಡಿಸಿದರು ಎಂಬುದಾಗಿ ಸರ್ಕಾರದವರು ಪ್ರಕಟಿಸಿದ್ದಾರೆ.

ಮ|| ಗಾಂಧಿಯವರು ಬರ್ಡೋಲಿ ಪ್ರಜೆಗಳಿಗೆ ತಾ|| ೯ರಲ್ಲಿ ಹೀಗೆ ಬರೆದು ತಿಳಿಯಿಸಿರುತ್ತಾರೆ-ನೀವೂ ನಾನೂ ವಹಿಸಿರುವ ಬಾಧ್ಯತೆಯು ಸಾಮಾನ್ಯವಲ್ಲ; ನೀವು ದೇಶಭಾರವನ್ನೆಲ್ಲಾ ಹೊರಲು ಯೋಚಿಸಿದ್ದೀರಿ. ಅಸ್ಪೃಶ್ಯಬಾಲಕರನ್ನು ೧೮ ಜಾತೀಯ ಪಾಠಶಾಲೆಗಳಿಗೆ ಸೇರಿಸಿಕೊಂಡರೆಂದು ಕೆಲ ದಿನಗಳ ಕೆಳಗೇ ತಿಳಿಯಿಸಿದ್ದುದನ್ನು ಕೇಳಿ ಸಂತೋಷಿಸಿದೆನು. ಅಸ್ಪೃಶ್ಯ ಬಾಲಕರನ್ನು ಸೇರಿಸಿಕೊಳ್ಳಲಿಕ್ಕೆ ಒಪ್ಪದೆ ಇರುವ ಜಾತೀಯ ಪಾಠಶಾಲೆಯು ಒಂದಾನೊಂದು ಇದ್ದರೂ ಕೂಡ ಮಹಾ ಸಭೆಯ ತೀರ್ಮಾನಕ್ಕೆ ಬೆಲೆಯಿಲ್ಲದೆ ಹೋಗುವುದು. ಬರ್ಡೋಲಿಯಲ್ಲಿರುವ ಆಲೋಚನಾಪರರಾದ ಯಾರೊಬ್ಬರೂ ಸರ್ಕಾರಿ ಕಂದಾಯವನ್ನು ಸಲ್ಲಿಸದೆ ಇರುವರೆಂದು ನಂಬುತ್ತೇನೆ. ಸರ್ಕಾರದವರು ಆಸ್ತಿಯನ್ನು ಜಪ್ತಿಮಾಡಬಹುದು. ದನಕರುಗಳನ್ನು ಮಾರಬಹುದು. ಅದನ್ನೆಲ್ಲಾ ನಾವು ಸೈರಿಸಿಕೊಂಡೇ ತೀರಬೇಕು. ನಮ್ಮ ಯುದ್ಧವು ಆತ್ಮವಿಶ್ವಾಸದ ಮೇಲೆ ಆಧಾರಪಟ್ಟುಕೊಂಡಿದೆ. ಆದುಕಾರಣ ನಮಗೆ ದೈವವೇ ದಿಕ್ಕು ಎಂದು ಎಲ್ಲರಿಗೂ ನಂಬುಗೆಯಿರಬೇಕು" ಎಂದು ತಿಳಿಯಪಡಿಸಿದ್ದರು.

ಚೌರಿಚೌರಾದಲ್ಲಿ ಆದ ಗದ್ದಲದಿಂದ ಊರಿನ ಅನೇಕ ಕುಟುಂಬದವರು ಮಕ್ಕಳು ಮರಿಗಳೊಡನೆ ಊರನ್ನೇ ಬಿಟ್ಟು ಓಡಿಹೋಗಿರುವರು. ಈಚೆಗೆ ಊರಿನ ಸ್ಥಿತಿಯೆಲ್ಲಾ ಶಾಂತವಾಗಿದೆ. ಆ ಪ್ರಾಂತದ ಪ್ರಜಾಪ್ರಮುಖರು ಗೋರಖ್‌ಪೂರ್ ಮೊದಲಾದ ಕಡೆಗಳಲ್ಲಿ ಅಸಹಾಯವಾದಿಗಳೆಂದು ಹೇಳಿಕೊಳ್ಳುವವರು ನಡೆಯಿಸಿದ ಘೋರಕೃತ್ಯಗಳನ್ನೆಲ್ಲಾ (ಪ್ರಾಣಸಹಿತ ಮನುಷ್ಯರನ್ನು ಬೆಂಕಿಗೆ ಹಾಕಿ ಸುಟ್ಟುದೇ ಮೊದಲಾದುವು) ರಾಕ್ಷಸ ಕೃತ್ಯವೆಂದೂ, ಅಸಹಾಯೋದ್ಯಮಕ್ಕೆ ಕಳಂಕದಾಯಕವೆಂದೂ, ಪಾಮರ ಜನರಿಗೆ ಉದ್ರೇಕಕರವಾಗಿ ಕೆಲರು ಮಾಡಿದ ಬೋಧೆಯಿಂದಲೇ ಇಂಥ ಪರಿಣಾಮವಾಯಿತೆಂದೂ, ಈ ತೆರದ ಪ್ರವರ್ತನದಿಂದ ದೇಶಕ್ಕೆ ಎಂಥ ವಿಪತ್ತು ಪ್ರಾಪ್ತವಾಗುವುದೆಂಬುದನ್ನು ಇದುವರೆಗೂ ಗುರ್ತಿಸಲಾರದವರು ಈಗಲಾದರೂ ಗುರ್ತಿಸಲೆಂದೂ ಪ್ರಕಟಮಾಡಿದ್ದಾರೆ. ಮತ್ತು ಸಂಯುಕ್ತ ರಾಷ್ಟ್ರಗಳ ಕಾಂಗ್ರೆಸ್ ಸಂಘಾಧ್ಯಕ್ಷರಾದ ಮೌಲ್ವಿ ಸುಭಾನುಲ್ಲಾರವರು ಈ ಪ್ರಾಂತದಲ್ಲಿ ಆಜ್ಞೋಲ್ಲಂಘನವನ್ನು ಪ್ರಾರಂಭಿಸಕೂಡದೆಂದೂ, ಮುಖ್ಯವಾಗಿ ಗೋರಕ್‌ಪೂರ್ ಜಿಲ್ಲೆಯಲ್ಲಿ ಆರಂಭಿಸಲಾಗದೆಂದೂ ಗಾಂಧಿಯವರಿಗೂ ಹಕೀಂ ಅಜ್ಮಲ್‌ಖಾನರಿಗೂ ತಂತ್ರೀವಾರ್ತೆಯನ್ನು ಕಳುಹಿಸಿಕೊಟ್ಟರು.

ಬಂಗಾಳಿಗಳು ಭಾರತೀಯರಲ್ಲಿ ಅತಿಶಯ ಮೇಧಾವಿಗಳೆಂಬುದು ಸುಪ್ರಸಿದ್ಧವು. ಶಿಷ್ಟರಲ್ಲಿರುವ ಆ ಮೇಧಾವಿತೆಯು ಸನ್ಮಾರ್ಗದಲ್ಲಿಪ್ರವರ್ತಿಸಿ ಲೋಕೋಪಕಾರಿಯಾಗುವಂತೆ ದುಷ್ಟರಲ್ಲಿರುವ ಆ ಮೇಧಾವಿತೆಯು ದುರ್ಮಾರ್ಗದಲ್ಲಿ ಪ್ರವರ್ತಿಸಿ ಲೋಕಕಂಟಕವಾಗುವುದು. ಉದಾಹರಣೆ:—ಢಕ್ಕಾ ಜಿಲ್ಲಾ ಕಂಚಪುರ ಎಂಬ ಗ್ರಾಮಕ್ಕೆ ಒಂದು ತಿಂಗಳ ಕೆಳಗೆ ಇಬ್ಬರು ಬಂಗಾಳಿಗಳು ಬಂದಿದ್ದರು. ಅವರು ಸಕ್ಕರೆಯ ಯಂತ್ರಾಲಯವನ್ನು ಸ್ಥಾಪಿಸುತ್ತೇವೆಂದು ಹೇಳುತ್ತ ಊರಹೊರಗೆ ಒಂದು ಗುಡಿಸಲನ್ನು ಹಾಕಿಕೊಂಡು ವಾಸವಾಗಿದ್ದರು. ಅದರೊಳಗೆ ತಂತ್ರೀವಾರ್ತೆಯನ್ನು ಕಳುಹಿಸುವ ಯಂತ್ರಸಾಮಗ್ರಿಗಳನ್ನು ಗುಟ್ಟಾಗಿ ಇಟ್ಟುಕೊಂಡು ಅಲ್ಲಿಂದ ತಂತಿಯನ್ನು ಭೂಮಿಯಲ್ಲೇ ಹೂಳಿಕೊಂಡು ರೈಲ್ವೆ ತಂತಿಕಂಬದ ತಂತಿಗಳಿಗೆ ಜೋಡಿಸಿದ್ದರು. ಇದರಿಂದ ಬೇಕಾದ ಕಡೆಗೆ ತಾವು ವಾರ್ತೆಗಳನ್ನು ತಂತಿಯ ಮೂಲಕ ಕಳುಹಿಸಲಿಕ್ಕೂ, ಹೊರಗಣಿಂದ ನಿಲ್ದಾಣಕ್ಕೆ ಕಳುಹಿಸಲ್ಪಡುವ ತಂತ್ರೀವಾರ್ತೆಗಳನ್ನು ತಾವು ತಿಳಿದುಕೊಳ್ಳಲಿಕ್ಕೂ ಅನುಕೂಲಪಡಿಸಿಕೊಂಡರು. ಕಳೆದ ಜನವರಿ ೨೪-೨೫ ರಲ್ಲಿ ಇವರು ೧೮ ಸಾವಿರ ರೂ. ಗಳನ್ನು ತಂತ್ರೀಮನಿಯಾರ್ಡರ ದ್ವಾರಾ ಕಳುಹಿಸಿಕೊಡಬೇಕೆಂದು ಅಂಚೆಯಧಿಕಾರಿಗಳಿಗೆ ವಾರ್ತೆ ಕಳುಹಿಸಿದಂತೆ ಕೆಲ ಪಟ್ಟಣಗಳಿಗೆ ತಂತ್ರೀವಾರ್ತೆಯನ್ನು ಕಳುಹಿಸಿದರು. ಇದರ ಮೇಲೆ ಅಧಿಕಾರಿಗಳಿಗೆ ಸ್ವಲ್ಪ ಸಂದೇಹವುಂಟಾಯಿತು. ಹೀಗಿರುವಲ್ಲಿ ತಂತಿ ಕಂಬಗಳ ಸಾಲನ್ನು ಇನ್‌ಸ್ಪೆಕ್ಷನ್ ಮಾಡುವ ಉದ್ಯೋಗಿಯು ಪದ್ಧತಿಯ ಮೇರೆ ಪರಿಶೋಧನೆ ಮಾಡಿಕೊಂಡು ಬರುತ್ತಿರುವಾಗ್ಗೆ ಒಂದು ಕಡೆ ಕಂಬದಲ್ಲಿ ೨ ತಂತಿಗಳು ಹೆಚ್ಚಾಗಿರುವಂತೆ ಕಂಡುಬಂದಿತು. ಅಲ್ಲಿ ಗಮನವಿಟ್ಟು ಪರಿಶೋಧಿಸಲು ಬಂಗಾಳಿಗಳು ಮಾಡಿದ್ದ ತಂತ್ರವೆಲ್ಲವೂ ಗೊತ್ತಾಯಿತು. ಅಷ್ಟರೊಳಗೇ ಆ ಬಂಗಾಳಿಗಳು ಹೇಗೋ ಮಾಯವಾಗಿಹೋಗಿದ್ದರು. ಪೋಲೀಸರು ಗುಡಿಸಲನ್ನೂ ಒಳಗಿದ್ದ ಸಾಮಾನುಗಳನ್ನೂ ವಶಪಡಿಸಿಕೊಂಡು ಆ ಮೋಸಗಾರರನ್ನು ತಡಕುತ್ತಿದ್ದಾರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಅರಸೀಕೆರೆ ತಾಲ್ಲೂಕು ದೇಶಾನಿ.

ಅಯ್ಯಾ, ನನ್ನ ನಮಸ್ಕಾರಗಳನ್ನು ಸರ್ವರಿಗೂ ಸಮರ್ಪಿಸುತ್ತೇನೆ. ನಮ್ಮ ಗ್ರಾಮಕ್ಕೆ ಗ್ರಾಂಟ್‌ಸ್ಕೂಲು ಬಂದು ೪-೫ ವರ್ಷಗಳಾದುವು. ಆಗ್ಗೆ ಅನೇಕ ಹುಡುಗರು ಓದುತ್ತಾ ಇದ್ದರು. ಕಾರಣಾಂತರದಿಂದ ಗ್ರಾಂಟು ನಿಂತಿತು. ಕಾರಣ ತಿಳಿಯಲಿಲ್ಲ. ಪದೇಪದೇ ತಗಾದೆ ಮಾಡಿದಾಗ್ಯೂ ಮಾಸ್ತರೂ ಬರಲಿಲ್ಲ. ನಾವೇ ಒಬ್ಬ ಮಾಸ್ತರನ್ನು ನೇಮಿಸಿಕೊಂಡು ಇನ್‌ಸ್ಪೆಕ್ಟರವರಿಗೂ ಇನ್‌ಸ್ಪೆಕ್ಟರ್ ಜನರಲ್-ಸಾಹೇಬರವರ ಸನ್ನಿಧಿಗೂ ಅರ್ಜಿ ಬರೆದು ಕೇಳಲು, ನಿಮ್ಮ ಗ್ರಾಮಕ್ಕೆ ಸ್ಕೂಲು ಕೊಡಲು ಯೋಚನೆ ಮಾಡುತ್ತೇವೆ. ಎಂದು ಹುಕುಂ ಕೊಟ್ಟಿರುತ್ತಾರೆ. ನಮ್ಮ ಗ್ರಾಮಕ್ಕೆ ಕೊಡಬಾರದೆ ? ಶ್ರೀಮನ್ ಮಹಾರಾಜರಿಗೆ ನಾವು ಪ್ರಜೆಗಳಲ್ಲವೆ ? ನಾವು ಯಾರನ್ನು ಕೇಳಿಕೊಳ್ಳಬೇಕು ? ವಾಚಕಮಹಾಶಯರೇ ಯೋಚಿಸಿ. ಈ ಮಾಸ್ತರು ಹಂದ್ರಾಳು ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದರು. ಇವರ ಯೋಗ್ಯತೆ ಚೆನ್ನಾಗಿದೆಯೆಂದು ಅಮಲ್ದಾರರೂ ಇನ್‌ಸ್ಪೆಕ್ಟರೂ ರಿಜಿಸ್ಟರು ಪುಸ್ತಕದಲ್ಲಿ ಬರೆದಿರುತ್ತಾರೆ. ನಮ್ಮ ಮಾಸ್ತರ ಯೋಗ್ಯತೆ ಚೆನ್ನಾಗಿದೆಯೆಂದು ದಿವಾನ್ ಸಾಹೇಬರವರ ಸನ್ನಿಧಿಗೂ ಅರ್ಜಿ ಬರೆದದ್ದಾಯಿತು. ಅಲ್ಲಿಂದ ಜವಾಬೇ ಬರಲಿಲ್ಲ. ಈಗಲೂ ನಮ್ಮ ಘನ ಹೊಂದಿದ ಸರ್ಕಾರದವರು ನಮ್ಮ ಗ್ರಾಮಕ್ಕೆ ಸ್ಕೂಲ್ ಮಂಜೂರು ಕೊಡಿಸುತ್ತಾರೆಂತ ನಂಬಿರುತ್ತೇನೆ. ನಮ್ಮ ಗ್ರಾಮಕ್ಕೆ ಮಾಸ್ತರು ಬಂದು ೩ ತಿಂಗಳು ಆಯಿತು. ೨೫-೨೬ ಹುಡುಗರು ಓದುತ್ತಾ ಇರುತ್ತಾರೆ. ಅನೇಕರು ಅಪೇಕ್ಷಿಸುತ್ತಾರೆ.

ಒಬ್ಬ ಪರೋಪಕಾರಿ.

ಐಕಮತ್ಯದಲ್ಲಿ ಬಲವುಂಟೇನು ?

"ಹನಿಗೂಡಿ ಹಳ್ಳ ತೆನೆಗೂಡಿ ದವಸ, ಎಂಬ ಗಾದೆಯೂ, ಹತ್ತುಹುಲ್ಲುಕಡ್ಡಿ ಒಬ್ಬನ ತಲೆಹೊರೆ ಎಂಬ ಮಾತೂ, ಸುಳ್ಳಾಗುವ ಕಾಲವೂ, ಮತ್ತು ಇವಕ್ಕೆ ವ್ಯತಿರಿಕ್ತವಾಗಿ ನಡೆಯಲು ಹುರಿದುಂಬಿಸುವ ಕಾಲವೂ ಈಗತಾನೇ ಬಂದಿದೆ. ಪ್ರಾಜ್ಞರು ಹಾಗೂ ವಿದ್ಯಾವಂತರು ಐಕಮತದಿಂದಿರಬೇಕು. ಹೀಗಿದ್ದರೆ ಸಕಲಕಾರ್ಯಗಳನ್ನೂ ಸಾಧಿಸಬಹುದೆಂದೂ, ವಿಭಾಗವಾಗಬಾರದೆಂದೂ ಅಲ್ಲಲ್ಲೇ ಸಂಘಗಳನ್ನೇರ್ಪಡಿಸಿಕೊಂಡು ಲೋಕೋದ್ಧಾರಕ್ಕಾಗಿ ತಮ್ಮತಮ್ಮ ಜನಾಂಗಗಳಲ್ಲಿ ಬೋಧಿಸುತ್ತಿರುವುದನ್ನು ನಿತ್ಯವೂ ವೃತ್ತಪತ್ರಿಕಾ ಮುಖೇನ ನೋಡುತ್ತಲೇ ಇರುತ್ತೇವೆ. ಹೀಗಿದ್ದಾಗ್ಯೂ ಬಿಗಿಗಟ್ಟು ನಿಂದಲೇ ಎಂದರೆ ವಿಭಾಗವಾಗಿಯೇ ಇರಬೇಕೆಂದೂ, ಹಾಗೆ ಬಿಗಟ್ಟಿಗೆ ಎಡೆಗೊಡಿರಲು "ಬಿಳಿಹಲ್ಲಿನ ಬಸ್ವೇಗೌಡರು" ಮೊದಲಾದ ತಮ್ಮ ಮನಸ್ಸಿಗೆಬಂದ ವಾಕ್ಯಗಳಿಂದ ನಿಂದಿಸಲು Red teeth ನ add talk ನವರೂ ಕೆಂಪುಹಲ್ಲಿನ ಕೆಂಪುರದಪ್ಪನವರೇ ವಗೈರೆಯವರು ಪ್ರಯತ್ನಮಾಡಿಯೂ, ಮಾಡುತ್ತಲೂ, ಹೇಗೆ ವಿಭಾಗವಾಗುತ್ತಾರೆ ನೋಡುವ ಎಂಬ ಸಾಹಸದ ಕುಯುಕ್ತಿಗಳನ್ನು ಮಾಡುತಲೂ ಇರತಕ್ಕವರಿಗೆ ಐಕಮತ್ಯದಲ್ಲಿ ಬಲವಿಲ್ಲ. ವಿಭಾಗವಾಡಲೇಬೇಕೆಂದು ಕುಯುಕ್ತಿಗೊಳಿಸುತ್ತಿರುವ ಮಹನೀಯರು ಯಾತ್ರೋ ತಮ್ಮ ಸ್ವಪ್ರಯೋಜನದ ಫಲಕ್ಕಾಗಿಯೇ ಪ್ರಯತ್ನಿಸುತ್ತ ಕುಯುಕ್ತಿಗಳಂ ಪ್ರಕಾಶಿಸುತ್ತಲಿರುವರೇ ಹೊರ್ತು ವಿಭಾಗಕರ್ತರ ಪೂರ್ಣಾಭಿವೃದ್ಧಿಗೆ ಯತ್ನಿಸುತ್ತಲಿಲ್ಲವೆಂಬ ಗುಂಭಾರ್ಥವನ್ನು ತಿಳಿಯದೆ ಗುರುಹಿರಿಯರ ಮಾತು ತಿರಸ್ಕರಿಸಿ ತಮಗೆ ಹಾನಿಯನ್ನು ಕೋರತಕ್ಕ ಕುಯುಕ್ತಿಗಳವರ ಹಿತಚಿಂತನೆಗೆ ಅವಕಾಶಕೊಡುವವರೂ ಲೋಕದಲ್ಲಿರುವ ಕಾಲವೂ ಈಗತಾನೇ ಬಂದಿದೆ. ಸದಾ ತಂಬಾಕ್ ಧೇವಿಯ ಬಲೆಗೆ ಒಳಗಾಗಿ ಸಣ್ಣಹಲ್ಲನ್ನು ದಪ್ಪಗೊಳಿಸುತ್ತಾ ಕಾಲಕಾಲಕ್ಕೆ ಕರಿಯಿಂದುಜ್ಜಿ ಕೆಂಪನ್ನು ಕಳೆಯಲಾರದೆ ಕೆಟ್ಟ ಹಲ್ಲುಗಳಂ ಮಾಡಿಕೊಂಡು ಕೆಂಪುಬಾಯಲ್ಲಿ ಕರೆನಿಟ್ಟಿರುವ ಕೆಂಪುಹಲ್ಲುಗಳನ್ನು ಬಿಡುತ್ತಾ ತಾನೇ ಹೆತ್ತಿಂದುಕೊಂಡು ಕುಯುಕ್ತಿಗಳನ್ನು ಬೀರುತ್ತಾ ನನ್ನಬಾಯಿಯ ಕೆಂಪುವಪ್ಪಗಳಿಂದ ತುಂಬಿದೆ ಎನ್ನುವ ಕಾಲವೂ, ತನ್ನದಾರಿಗೆ ಬರದವರನ್ನು ಬಾಲಕಳೆದುಕೊಂಡ ನರಿಯ ಉಪದೇಶದಂತೆ "White teether" ಎನ್ನುವಕಾಲವೂ ಈಗತಾನೇ ಬಂದಿದೆ. ಇಂಥ ಲೋಕಸೇವನಿರತ ಮಹಾಶಯರನ್ನು ಮರಲ್ಲಿ ಹೂತು ಮನೆಯಲ್ಲಿ ಹುಡುಕಿದರೆ ಸಿಕ್ಕುವರೇ ? ಛೀ ! ಪಾಪ !! ತನ್ನಮೋರೆ ತನಗೇಚಂದ ಎಂಬಂತೆ ಹತಾರುಹಗಳಿಂದ ದೂಷಿಸಿಕೊಳ್ಳುತ್ತಿದ್ದರೂ ಪೂಜಿಸಿಕೊಳ್ಳುತ್ತೇವೆಂದು ಅಂದುಕೊಳ್ಳುವ ಮಹಾಶಯರಿಗೆ ಐಕಮತ್ಯದಲ್ಲಿ ಬಲವುಂಟೇನು ? ಮೇಲಿನ ನಡೆವಳಿಕೆಯ ಕುಯುಕ್ತಿದಾರರ ಕುಯುಕ್ತಿಗಳ ಗುಣಾವಗುಣಗಳ ಗುಟ್ಟನ್ನು ತನ್ನಲ್ಲಿತಾನೇ ಆಲೋಚಿಸಿ ಸದ್ವರ್ತನೆಗೆ ಅವಕಾಶ ಉಂಟುಮಾಡಿಕೊಳ್ಳುವರೆಂದು ಸದಾ ಹಾರೈಸುವ. ಐಕಮತ್ಯಾಭಿಮಾನಿ.

ಮದ್ದೂರು ಎ. ವಿ. ಸ್ಕೂಲಿನ ಅವ್ಯವಸ್ಥೆ.

ನಮ್ಮ ಘನಸರ್ಕಾರದವರು ಪಂಚಮ ಬಾಲಕರಿಗೆ ಗೌರ್ನಮೆಂಟು ಎ. ವಿ. ಸ್ಕೂಲಿನಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶಕೊಟ್ಟಂದಿನಿಂದ ಬ್ರಾಹ್ಮಣರು ಪ್ರತ್ಯೇಕ ಒಂದು ಪಾಠಶಾಲೆಯನ್ನು ಏರ್ಪಡಿಸಿಕೊಂಡು ಅದಕ್ಕೆ "ನ್ಯಾಷನಲ್ ಸ್ಕೂಲ್" ಎಂದು ಹೆಸರಿಟ್ಟುಕೊಂಡು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಪಡಿಸಿಕೊಂಡರು. ಗೌರ್ನಮೆಂಟು ಎ. ವಿ. ಸ್ಕೂಲಿನಲ್ಲಿದ್ದ ಚಿಕ್ಕ ವಯಸ್ಸಿನ ಹೆಡ್ಮಾಸ್ತರೊಬ್ಬರು ಟ್ರೈನಿಂಗಿಗಾಗಿ ಮೈಸೂರಿಗೆ ಹೋದರು. ಇವರು ಬ್ರಾಹ್ಮಣರಾದಾಗ್ಯೂ ಈಗಿನ ರಾಜಧರ್ಮವನ್ನರಿತು ನಿರ್ವಂಚನೆಯಿಂದ ಕೆಲಸಮಾಡುತ್ತಿದ್ದರು. ಇವರು ಮೈಸೂರಿಗೆ ಹೋದನಂತರ ಹೆಡ್ಮಾಸ್ತರ ಕೆಲಸವು ಇಂಗ್ಲೀಷನ್ನು ಅರಿಯದ ಬ್ರಾಹ್ಮಣ ಮುದುಕರೊಬ್ಬರ ಪಾಲಿಗೆ ಬಂದಿತು. ಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಪಾಠ ನಡೆವುದೂ, ಸ್ಕೂಲ್ ಬಾಗಿಲು ಹಾಕುವುದು ತೆರೆಯುವುದೂ, ಗಂಟೆ ಬಾರಿಸುವುದೂ, ನೋಡಿದರೆ ಹೆಡ್ಮಾಸ್ತರ ಅಧಿಕಾರವು ಸ್ವಲ್ಪವೂ ನಡೆಯದಂತೆ ಕಾಣುತ್ತದೆ. ಇವರ ಕೈಕೆಳಗೆ ಕೆಲಸಮಾಡುವ ಇಬ್ಬರು, ಮೂವರು, ವಿನಾ ಉಳಿದವರು ಯಾವಾಗಲೂ, ಕಾಫಿ ಹೋಟಲುಗಳಲ್ಲಿಯೂ, ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಂನಲ್ಲಿಯೂ, ನಾಟಕವನ್ನು ಕಲಿಯುವುದರಲ್ಲಿಯೂ, ಅಭಿನಯಿಸುವುದರಲ್ಲಿಯೂ ಕಾಲಕಳೆಯುತ್ತಾ ಸರ್ಕಾರದಿಂದ ದೊರೆಯುವ ತಲಬನ್ನು ನಿರ್ವಂಚನೆಯಿಂದ ತೆಗೆದುಕೊಳ್ಳುತ್ತಾ ನಿರಾಯಾಸವಾಗಿ ಕಾಲಕಳೆಯುತ್ತಲಿದ್ದಾರೆ. ಸ್ಕೂಲಿನಲ್ಲಿ ಗೊತ್ತಾದ ಈ ೩—೪ ಜನರು ಟೀಚರುಗಳೇ ಒಂದು ಕಡೇ, ಬಾಲಕರೇ ಒಂದುಕಡೆ, ಪಾಠಗಳು ಸುತರಾಂ ನಡೆಯುತ್ತಲಿಲ್ಲ. ಸ್ಕೂಲಿಗೆ ಪಂಚಮರು ಬಂದರಲ್ಲಾ ಎಂಬ ಆಕ್ರೋಶವೋ ಅಥವಾ ಕೆಲಸಮಾಡಲಾರದ ಸೋಮಾರಿತನವೋ ಅಥವಾ ಶಕ್ತರಾದ ಹೆಡ್ಮಾಸ್ತರೊಬ್ಬರು ಇವರ ಮೇಲೆ ಇಲ್ಲದ ಕಾರಣವೋ, ತಿಳಿಯದು. ಈ ಮೇಲ್ಕಂಡ ಉಪಾಧ್ಯಾಯರುಗಳಲ್ಲಿ ಹುಚ್ಚರೊಬ್ಬರು ಕಳೆದ ಮಾರ್ಚಿ ತಿಂಗಳಲ್ಲಿ ಇವರಿಗೆ ಬುದ್ಧಿ ಸ್ಥಿಮಿತವಿಲ್ಲವೆಂತ ಇವರನ್ನು ಸೆಕ್ಷನ್ ಕೆಲಸದಿಂದ ತಪ್ಪಿಸಿದರು. ಅವರಿಗೆ ಸಲೀಸು ಸಂಬಳ ದೊರೆಯುತ್ತಲಿದೆ. ಅಯ್ಯೋ ! ಪಾಪ ಬ್ರಾಹ್ಮಣ ಏನು ಮಾಡುವುದು ಎಂದು ಪ್ರತಿಯೊಬ್ಬರೂ ಯೋಚಿಸುತ್ತಲಿದ್ದಾರೆಂತ ಕಾಣುತ್ತದೆ. ಮೈಸೂರಿನಂಥ ಷಹರಿನಲ್ಲಿ ಒಬ್ಬ ಬಿಪ್ಪು ಬ್ರಾಹ್ಮಣನಿಗೆ ಒಂದುನೂರು ರೂಪಾಯಿಗಳು ಸಂಬಳ ದೊರೆಯುತ್ತಲಿರುವಲ್ಲಿ ಮದ್ದೂರಿನಂಥ ಹಳ್ಳಿಯಲ್ಲಿ ಹುಚ್ಚರೊಬ್ಬರಿಗೆ ೧೦-೧೨ ದೊರೆಯುತ್ತಲಿರುವುದು ಏನಾಶ್ಚರ್ಯ ? ಇದೇ ಹುಚ್ಚ ಉಪಾಧ್ಯಾಯನೊಬ್ಬನು ಬ್ರಾಹ್ಮಣೇತರನಾಗಿದ್ದರೆ ಇಷ್ಟರಲ್ಲಿ ಹುಚ್ಚರ ಆಸ್ಪತ್ರೆಯಲ್ಲಿ ಸ್ಥಳ ಕೊಡಿಸಿಬಿಡುತ್ತಿದ್ದರು. ಈ ಸ್ಕೂಲು ಅವ್ಯವಸ್ಥೆ ವಿಚಾರದಲ್ಲಿ ಹ|| ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರಿಗೆ ಅರ್ಜಿಕೊಟ್ಟದ್ದಾಯಿತು. ಅದರ ಮೇಲೆ ಸರ್ಕಲ್ ಇನ್‌ಸ್ಪೆಕ್ಟರಿಗೆ ಅಹವಾಲು ತಿಳಿಸಿಕೊಳ್ಳುವಂತೆ ಇಂಡಾರ್ಸು ಆಯಿತು. ಅಷ್ಟರಲ್ಲಿ ಕೌನ್ಸಿಲರ್ ಮ|| ಹಂಜಾಹುಸೇನ್‌ಸಾಹೇಬರು ದಯಮಾಡಿಸಿ ಎಲ್ಲಾ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡು ಹೋಗಿರುತ್ತಾರೆ. ತಾ|| ೬-೨-೨೨ ರಲ್ಲಿ ಎಜುಕೇಷನ್ ಇನ್‌ಸ್ಪೆಕ್ಟರ್ ಜನರಲ್ ಬಾಲಸುಂದರಂ ಐಯರ್‌ರವರು ಸಹ ಸ್ಕೂಲ್ ಇನ್‌ಸ್ಪೆಕ್ಷನ್ ಬಗ್ಗೆ ದಯಮಾಡಿಸಿದ್ದರು. ಸಾಯಂಕಾಲ ಆರುಗಂಟೆಗೆ ಅವರು ದಯಮಾಡಿಸಿದ್ದರು. ಆದಕಾರಣ ಸಾಯಂಕಾಲ ಆರುಗಂಟೆ ಒಳಗೆ ಸ್ಕೂಲು ಮುಚ್ಚಿದ್ದಿತು. ಗ್ರಾಮಸ್ಥರ ಪೈಕಿ ಒಬ್ಬೊಬ್ಬರು ಹೋಗಿ ತಮ್ಮ ಸ್ಕೂಲು ಅಹವಾಲುಗಳನ್ನು ತಿಳಿಸಿಕೊಳ್ಳಲು ನಾವು ಇನ್ನು ೪-೬ ದಿವಸಗಳಲ್ಲಿ ಬರುತ್ತೇವೆ ಎಂಬದಾಗಿ ಅಪ್ಪಣೆ ಕೊಡಿಸಿ ಮೋಟಾರು ಸ್ಟಾರ್ಟು ಮಾಡಿದರು. ಇದುವರೆಗೂ ದಿನೇ ದಿನೇ ಸ್ಕೂಲಿನಲ್ಲಿ ಅವ್ಯವಸ್ಥೆ ಹೆಚ್ಚುತ್ತಾ ಇದೆ. ತಮ್ಮ ವೃತ್ತಪತ್ರಿಕೆಯಲ್ಲಿ ಪ್ರಚುರಪಡಿಸಿದರೆ ಮೇಲ್ಕಂಡ ವಿಷಯಗಳಿಗೆಲ್ಲ ಸಂಬಂಧಪಟ್ಟ ಆಫೀಸರುಗಳು ಗಮನಕ್ಕೆ ತಂದು ನಮ್ಮ ಬಡವರುಗಳನ್ನು ಕಾಪಾಡುತ್ತಾರೆಂದು ನಂಬಿಕೆ.

ವಿದ್ಯಾಭಿಮಾನಿ.

ಚೆನ್ನಪಟ್ಟಣದ ಶ್ಯಾನುಭೋಗರ ಗುಟ್ಟು ಬಯಲಾಯಿತು.

ಚೆನ್ನಪಟ್ಟದ ತಾಲ್ಲೋಕ್ ಅಮಲ್ದಾರರವರಾದ ಮ|| ಸಿದ್ಧರಾಮಯ್ಯನವರು ತಾಲ್ಲೋಕಿನಾಮಲೆ ಜಮಾಬಂದಿಗೆ ಆರಂಭಿಸಿ ಪೂರೈಸಿಕೊಂಡು ಬಂದಿರುವುದು ಇಲ್ಲಿನ ತಾಲ್ಲೋಕ್ ನಿವಾಸಿಗಳೆಲ್ಲರೂ ತಿಳಿದ ವಿಷಯವೇ ಆಗಿದೆ. ಆದರೆ ಈ ತಾಲ್ಲೋಕಿನ ರೈತರುಗಳು ಈವರ್ಷ ನಡೆದ ಜಮಾಬಂದಿಯನ್ನು ನೋಡಿ ಇಂಥಾ ಜಮಾಬಂದಿಯು ಹಿಂದೆ ಯಾವಾಗಲೂ ನಡೆಯಲಿಲ್ಲವೆಂದು ಜಮಾಬಂದಿಯನ್ನು ವರ್ಣನೆಮಾಡುತ್ತಾ ಒಬ್ಬರಿಗೊಬ್ಬರು ಆನಂದಭರಿತರಾಗಿರುತ್ತಾರೆ ಇದನ್ನು ನೋಡಿದರೆ ಬಹಳ ಆಶ್ಚರ್ಯಕರವಾಗಿರುವ ಪ್ರಯುಕ್ತ ಆ ವಿಷಯಗಳೆಲ್ಲವನ್ನೂ ಈ ಮೂಲಕ ಸರ್ವರಿಗೂ ತಿಳಿಯಪಡಿಸಿಕೊಂಡಿರುತ್ತೇನೆ.

ಹಿಂದಿನ ಜಮಾಬಂದಿ ಕಾಲಗಳಲ್ಲಿ ಶ್ಯಾನುಭೋಗರುಗಳು ರೈತರಿಂದ ದುಡ್ಡು ಕಸಿದು ತಿಂದು ಜೀರ್ಣಿಸಿಕೊಳ್ಳುತ್ತಿದ್ದ ಮದದಿಂದ ಸರ್ಕಾರದ ಲೆಕ್ಕಗಳನ್ನು ಸರಿಯಾಗಿಟ್ಟುಕೊಳ್ಳದಿದ್ದರೂ ರೈತರನ್ನು ಕಾಪಾಡತಕ್ಕ ಪ್ರಭುಗಳು ನಾವೇ ಯೆಂಬ ಅಟ್ಟಹಾಸದಿಂದ ರೈತಾಪಿಜನಗಳನ್ನು ನಿಕೃಷ್ಟವಾಗಿ ಕಾಣುತ್ತಾ ಇದ್ದದ್ದು ತಿಳಿದವಿಷಯವೇ ಆಗಿದೆ. ಈ ವರ್ಷದ ಜಮಾಬಂದಿಯಲ್ಲಿ ಅಮಲ್ದಾರರವರು ಪ್ರತಿಯೊಬ್ಬ ಶ್ಯಾನುಭೋಗರ ಲೆಕ್ಕವನ್ನೂ ತನಿಖೆಮಾಡಿದ್ದರಿಂದ ಕಂದಾಯದಬಾಕಿಯು ವಿಶೇಷವಾಗಿ ನಿಂತಿರುವಂತೆ ತಿಳಿದುಬಂದದ್ದರ ಮೇಲೆ ಹಾಜರಿದ್ದ ರೈತರನ್ನು ವಿಚಾರಮಾಡುವಲ್ಲಿ ರೈತರು ಕಂದಾಯವನ್ನು ಪಾವತಿಮಾಡಿ ಶ್ಯಾನುಭೋಗರಿಂದ ಪಡೆದಿದ್ದ ದಾಖಿಲೆಗಳನ್ನು ತೋರಿಸಿದರು. ಸದರಿದಾಖಲೆ ರಶೀತಿ ಮತ್ತು ಪಟ್ಟಿಯಲ್ಲಿಕಂಡ ವಸೂಲಿಹಣವನ್ನು ಇರಸಾಲ್ ಬಗ್ಗೆ ಕಿರ್ದಿಯಲ್ಲಿ ಬರೆಯದೆ ತಾವೇ ಉಪಯೋಗಿಸಿಕೊಂಡಿರುವಂತೆ ಸದರಿ ಶ್ಯಾನುಭೋಗರ ಲೆಕ್ಕಗಳಿಂದಲೇ ನಿದರ್ಶನವಾಗಿ ಕಂಡುಬಂದದ್ದರಿಂದ ಶ್ಯಾನುಭೋಗರುಗಳ ಪ್ರಾಯವು ತಗ್ಗಿಹೋಗಿ ೯೦ ವರ್ಷ ವಯಸ್ಸುಳ್ಳವರು ಚಳಿಯಿಂದ ನಡಗುವಹಾಗೆ ಅಮಲ್ದಾರರವರ ಮುಂದೆ ಗಡಗಡನೆ ನಡುಗುತ್ತಾ ಬಾಯಿಯಲ್ಲಿ ಮಾತುಗಳೇ ಹೊರಡದೆ ತೊದಲುಮಾತುಗಳನ್ನಾಡುತ್ತಾ ನಿಶ್ಶಬ್ದರಾಗಿ ನಿಂತುಕೊಂಡಿದ್ದರು. ಉಳಿದ ಶ್ಯಾನುಭೋಗರುಗಳಿಗೆ ಮುಖನೆಲ್ಲಾ ಬಾಡಿಹೋಗಿ ಜನಗಳ ಸಮೂಹವನ್ನು ಬಿಟ್ಟು ದೂರವಾಗಿ ಪದಾರ್ಥವನ್ನು ಕಳಕೊಂಡವರು ಹುಡುಕುವಂತೆ ಅಲೆದಾಡುತ್ತಿದ್ದರು. ಆ ತರುವಾಯ ತಮ್ಮ ತಮ್ಮ ಗ್ರಾಮದ ರೈತರಮುಂದೆ ನಿಂತುಕೊಂಡು ಅಯ್ಯಾ ನೀವೆಲ್ಲರೂ ಸೇರಿ ನಮ್ಮನ್ನು ಕಾಪಾಡಿ. ನೀವು ಕೊಟ್ಟಿರುವ ಕಂದಾಯದ ಹಣವನ್ನು ನಿಮಗೆ ವಾಪಸ್ ಕೊಡುತ್ತೇವೆ, ನಾನು ಕೊಟ್ಟರಶಕ್ಕ ರಸೀದಿಗಳನ್ನು ಯಾರಿಗೂ ತೋರಿಸಬೇಡಿ, ನೀವೇ ಹರಿದುಬಿಡಿ. ನಾನು ತಪ್ಪುಮಾಡಿದೆ, ನಾನು ಬಡಬ್ರಾಹ್ಮಣ, ಮಕ್ಕಳಂದಿಗ, ನನ್ನ ಅಪರಾಧವನ್ನು ಕ್ಷಮಿಸಿ ನನ್ನ ಅನ್ನಸ್ಥಿತಿಯನ್ನು ಉಳಿಸಿಕೊಡಿ, ನೀವೇ ನಮಗೆ ತಂದೆತಾಯಿಗಳು, ನೀವು ಕೈಬಿಟ್ಟರೆ ನಾನುಕೆಟ್ಟೆ, ಯೆಂದು ಪೇಚಾಡುತ್ತಾ ರೈತರ ಕೈಕಾಲುಗಳನ್ನು ಹಿಡಿದುಕೊಂಡು ಗೋಳಾಡುತ್ತಿರುವುದನ್ನು ಆ ರೈತಾಪಿಜನರು ನೋಡಿ-ಇದೆಲ್ಲಿ ಪಾಡಪ್ಪ, ನಾವು ಇದ್ದಸಂಗತಿ ಹೇಳಿರುತ್ತೇವೆ; ನಿಮಗೋಸ್ಕರ ಸುಳ್ಳುಹೇಳಬೇಕೇ? ನೀವು ಹೇಳುವುದು ಚೆನ್ನಾಯಿತು ಸ್ವಾಮಿ; ಅಹಂಕಾರಪಟ್ಟವರಿಗೆ ಓಂಕಾರ ಇದ್ದೇಯಿದೆ. ರೈತರದುಡ್ಡು ಬಿಟ್ಟಿಸಿಕ್ಕಿದೆ ಎಂದು ಅಂಗಳಿಲ್ಲದೆ ನುಂಗಿದ್ದೀರಿ, ಮಾಡಿದ್ದುಣ್ಣೋ ಮಾರಾಯ ಎಂಬಂತೆ ನೀವು ಮಾಡಿದ್ದು ನೀವೇ ಅನುಭವಿಸಿಕೊಳ್ಳಿ ಎಂದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು.

ಈ ಶ್ಯಾನುಭೋಗರುಗಳ ಮಂತ್ರಕ್ಕೆ ರೈತರುಗಳು ಒಪ್ಪದೆಹೋದ ಕಾರಣ ತಂತ್ರಗಾರರಾದ ಶ್ಯಾನುಭೋಗರುಗಳೆಲ್ಲಾ ಒಟ್ಟಾಗಿಸೇರಿಕೊಂಡು ಈ ರೈತರುಗಳ ಪಾರ್ಟಿಗೆ ಮುಖಂಡರಾಗಿರುವ ಗ್ರಾಮಾಧಿಕಾರಿಗಳಿಂದ ರೈತರುಗಳಿಗೆ ಹೇಳಿಸಿ ಆಮೂಲಕ ತಮ್ಮ ಕಾರ್ಯಭಾಗಗಳನ್ನೆಲ್ಲಾ ನೆರವೇರಿಸಿಕೊಳ್ಳಬೇಕೆಂಬ ಆಲೋಚನೆಮಾಡಿಕೊಂಡು ಆ ಮುಖಂಡರಾದವರ ಮನೆಗಳಿಗೆ ಪದೇಪದೇ ಅಲೆಯುತ್ತಾ ಅನ್ನಾನೀರು ಬಿಟ್ಟು ಉಪವಾಸವಿದ್ದುಕೊಂಡು ಕಾರ್ಯಸಾಧಕ ಕತ್ತೆಕಾಲಕಟ್ಟು ಎಂಬಂತೆ-ನಮ್ಮ ಕೆಲಸಗಳನ್ನು ಮಾಡಿಕೊಡುತ್ತೇನೆಂದು ನೀನು ನಂಬಿಕೆಕೊಡುವವರೆಗೂ ನಾವು ಅನ್ನಾ ತಿನ್ನುವುದಿಲ್ಲ ನೀನೇ ನಮ್ಮದೇವರು ನಿನ್ನನ್ನುಬಿಟ್ಟರೆ ನಮಗೆ ಯತ್ನವಿಲ್ಲ ಈಗ ನೀನು ಏನುಹೇಳಿದಾಗ್ಯೂ ಕೇಳುತ್ತೇವೆ; ಈ ಅಮಲ್ದಾರರವರು ಈ ಹೊತ್ತು ಇದ್ದು ನಾಳೆ ಹೊರಟುಹೋಗುತ್ತಾರೆ; ನಾವುಗಳೆಲ್ಲರೂ ಒಂದೇಕಡೆ ಇರುವವರು; ನೀನು ಗ್ರಾಮಕ್ಕೆ ತಾಯಿ; ನಮ್ಮಮೇಲೆ ಪ್ರೀತಿಯಿಟ್ಟು ನಿನ್ನ ಪಾರ್ಟಿ ರೈತರುಗಳಿಗೆಲ್ಲಾ ಸಮಾಧಾನಹೇಳಿ ಅವರಿಗೆ ಕೊಡತಕ್ಕ ದುಡ್ಡುಗಳನ್ನು ನಮ್ಮಿಂದ ಕೊಡಿಸಿ ನಮ್ಮಮೇಲೆ ಸಾಕ್ಷಿಹೇಳುವುದನ್ನು ತಪ್ಪಿಸಿ ಬ್ರಾಹ್ಮಣರಾದ ನಮ್ಮ ಅನ್ನಸ್ಥಿತಿಯನ್ನು ಉಳಿಸಿಕೊಟ್ಟು ಸಹಾಯಮಾಡಬೇಕು ಎಂದು ಆ ಮುಖಂಡರುಗಳಿಗೆ ಹೇಳಿಕೊಂಡು ಅವರಿಂದ ರೈತರುಗಳಿಗೆಲ್ಲಾ ಹೇಳಿಸಿ ಸಮಾಧಾನಪಡಿಸಿಕೊಂಡಿರುವುದರಿಂದ ರೈತರುಗಳು ಗ್ರಾಮಾಧಿಕಾರಿಗಳ ಮಾತನ್ನು ಮೀರಿದರೆ ತಮಗೆ ಯಾವ ತೊಂದರೆಬರುವುದೋ ಎಂಬ ಭಯದಿಂದ ಇನ್ನುಮುಂದೆ ಶ್ಯಾನುಭೋಗರಮೇಲೆ ಸರಿಯಾಗಿ ಸಾಕ್ಷಿಹೇಳುವಂತೆ ತೋರುವುದಿಲ್ಲ. ಸರ್ಕಾರದ ಹಣವನ್ನು ತಿಂದುಹಾಕಿರುವ ಶ್ಯಾನುಭೋಗರುಗಳ ಮೇಲೆ ಮೊಖದ್ದಮೆಗಳು ಆಗಿ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗಳು ನಡೆಯುತ್ತಾ ಇವೆ. ಚೆನ್ನಪಟ್ಟದ ಮ್ಯುನಿಸಿಪಾಲಿಟಿಯ ಹಣವನ್ನು ತಿಂದುಹಾಕಿದ್ದ ಒಬ್ಬ ಶ್ಯಾನುಭೋಗರಮೇಲೆ ರಿಕಾರ್ಡನಡೆದು ಈಗ ಪೋಲೀಸಿನಲ್ಲಿ ವಿಚಾರಣೆಯಾಗುತ್ತಾ ಇದೆ.

ಶ್ಯಾನುಭೋಗರುಗಳೆಲ್ಲಾ ಏಕಮತ್ಯವಾಗಿ ಗುಂಪುಕಟ್ಟಿಕೊಂಡು ಗ್ರಾಮಾಂತರಗಳನ್ನೆಲ್ಲಾ ಸುತ್ತುತ್ತಾ ಸರ್ಕಾರದಲ್ಲಿ ಕೆಳಗಿನ ಅಂತಸ್ತಿನಿಂದ ಮೇಲಿನ ಅಂತಸ್ತುವರೆಗೆ ಬ್ರಾಹ್ಮಣರೇ ಅಧಿಕಾರಿಗಳಾಗಿರುವುದರಿಂದ ನಾವು ಏನು ತಪ್ಪುಮಾಡಿದಾಗ್ಯೂ ಬಚಾಯಿಸಿಕೊಳ್ಳುತ್ತೇವೆ ಈ ಅಮಲ್ದಾರರವರನ್ನು ಈ ತಿಂಗಳಲ್ಲಿಯೇ ಖಂಡಿತವಾಗಿ ವರ್ಗಮಾಡಿಸುತ್ತೇವೆ ಅದುವರೆಗೂ ನಾವು ಕಂದಾಯ ವಸೂಲಿಮಾಡುವುದಿಲ್ಲವೆಂಬದಾಗಿಯೂ, ಇದೇ ವಿಷಯವನ್ನು ಕುರಿತು ಮೇಲ್ಪಟ್ಟ ಅಧಿಕಾರಿಗಳಿಗೆ ಅರ್ಜಿಬರೆದುಕೊಂಡಿರುವಂತೆಯೂ ಮೇಲ್ಪಟ್ಟ ಅಧಿಕಾರಿಗಳು ಶ್ಯಾನುಭೋಗರುಗಳಿಗೆ ಸಹಾಯಮಾಡುತ್ತಾರೆಂತಲೂ ಹೇಳಿಕೊಳ್ಳುತ್ತಲಿರುತ್ತಾರೆ. ಈ ಶ್ಯಾನುಭೋಗರುಗಳು ಸರ್ಕಾರವನ್ನು ಗಣನೆಗೆ ತಾರದೆ ಇಂಥಾ ರಾಜದ್ರೋಹಕೆಲಸವನ್ನು ಮಾಡಿದ್ದರೂ ಕೂಡ ನಿರ್ಭಯವಾಗಿ ಆಡುತ್ತಿರುವ ಮಾತುಗಳನ್ನು ನೋಡಿದರೆ ಸರ್ಕಾರದ ಅಧಿಕಾರಿಗಳಪೈಕಿ ಯಾರೋ ಸಹಾಯವಾಗಿರಬಹುದೆಂದು ತೋರುತ್ತದೆ. ಈ ಅಮಲ್ದಾರರವರ ಕಾಲದಲ್ಲಿ ಶ್ಯಾನುಭೋಗರ ದುರಾಶೆಗೆ ಅವಕಾಶವಿಲ್ಲದ ಸಬಬು ಮಳೆಬೆಳೆಗಳಿಲ್ಲದೆ ಕ್ಷಾಮವುಂಟಾದರೆ ಪ್ರಜೆಗಳು ಅನ್ನಕ್ಕೋಸ್ಕರ ದಂಗೆಯೆದ್ದು ಹೇಗೆ ತಿರುಗುತ್ತಾರೋ ಅದರಂತೆ ಶ್ಯಾನುಭೋಗರುಗಳು ಮಾಡಿಕೊಳ್ಳುತ್ತಿದ್ದ ದುಷ್ಟಸಂಪಾದನೆಗೆ ಕ್ಷಾಮಹಿಡಿದಿರುವುದು ಈರೀತಿಯಾದ ಗಲಾಟೆಗೆಲ್ಲಾ ಮುಖ್ಯಕಾರಣವಾಗಿರುತ್ತದೆ. ಆದುದರಿಂದ ಈಶ್ಯಾನುಭೋಗರುಗಳು ಗಲಾಟೆಮಾಡಿದಮಾತ್ರಕ್ಕೇನೇ ಸರ್ಕಾರದಕೆಲಸವನ್ನು ಬಹಳ ಮುತುವರ್ಜಿಯಿಂದ ಮಾಡುತ್ತಲೂ ಪ್ರಜಾನುರಾಗಿಗಳಾಗಿ ನ್ಯಾಯ ಅನ್ಯಾಯಗಳನ್ನು ಶೋಧನೆಮಾಡಿಕೊಂಡು ನಿಷ್ಪಕ್ಷಪಾತದಿಂದ ಕೆಲಸಮಾಡುತ್ತಾ ಈ ಚೆನ್ನಪಟ್ಟಣ ತಾಲ್ಲೋಕಿಗೆ ಲಾಯಕ್ಕಾಗಿರುವ ಈ ಅಮಲ್ದಾರರವರನ್ನು ನಿಷ್ಕಾರಣವಾಗಿ ವರ್ಗಮಾಡುವುದು ಸರ್ಕಾರದವರಿಗೆ ನ್ಯಾಯವಾಗಿರುವುದಿಲ್ಲ. ಇರಸಾಲ್ ಮಾಡತಕ್ಕ ಕಂದಾಯದ ಹಣವನ್ನು ಶ್ಯಾನುಭೋಗರುಗಳೇ ತಿಂದುಹಾಕಿರುವ ಭಾಗದಲ್ಲಿ ಸರ್ಕಾರವೆನ್ನುವುದು ಅವರಿಗೆ ಎಷ್ಟು ಅಲಕ್ಷ್ಯವಾಗಿರಬಹುದು! ಸರ್ಕಾರವನ್ನೇ ಲೆಕ್ಕದಲ್ಲಿಟ್ಟುಕೊಳ್ಳದವರು ತಿಳುವಳಿಕೆಯಿಲ್ಲದ ರೈತರನ್ನು ಯಾವರೀತಿ ಕಾಣಬಹುದು! ಅವರಿಂದ ಕಂದಾಯತೆಗೆದುಕೊಂಡರೆ ಸರಿಯಾದ ಲೆಕ್ಕಕೊಡುತ್ತಾರೆಯೆ? ಈ ಮೊದಲಾದ ವಿಷಯಗಳನ್ನೆಲ್ಲಾ ಸರ್ಕಾರದವರೇ ಯೋಚಿಸಿಕೊಳ್ಳಬಹುದಾಗಿದೆ. ಶ್ಯಾನುಭೋಗರುಗಳಿಂದ ನಮ್ಮಗಳಿಗೆ ಉಂಟಾಗತಕ್ಕ ತೊಂದರೆಗಳನ್ನೆಲ್ಲಾ ತಪ್ಪಿಸಿಕೊಟ್ಟು ಕಾಪಾಡಬೇಕೆಂದು ತಾಲ್ಲೋಕ್ ಅಮಲ್ದಾರರುಗಳಿಗೆ ಹೇಳಿಕೊಂಡರೆ ಅವರು ಸುಮ್ಮನೆ ಇರುತ್ತಾರೆ. ಡೆಪ್ಯುಟಿಕಮಿಷನರ್ ಸಾಹೇಬರವರಿಗೂ ಸಬ್‌ಡಿವಿಜನ್ ಸಾಹೇಬರುಗಳಿಗೂ ಹೇಳಿಕೊಳ್ಳುವುದಕ್ಕೆ ಹೋದರೆ ಅವರು ರೈತರಾದ ನಮ್ಮನ್ನು ಗದರಿಸಿ ಓಡಿಸಿಬಿಡುತ್ತಾರೆ ಶ್ಯಾನುಭೋಗರು ಯಾವ ತಪ್ಪುಮಾಡಿದಾಗ್ಯೂ ಕೂಡ ಅವರನ್ನು ಶಿಕ್ಷೆಮಾಡದೆ ಸ್ವಜಾತಿ ಅಭಿಮಾನದಿಂದ ಬಿಟ್ಟುಬಿಟ್ಟು ರೈತರಿಗೆಮಾತ್ರ ತೊಂದರೆಪಡಿಸುತ್ತಾ ಇರುವುದು ಯಾವಧರ್ಮ? ಇದನ್ನು ಕೇಳುವಂಥ ಪ್ರಭುಗಳು ಯಾರೂ ಇಲ್ಲವೆ? ಆತ್ಮಜ್ಞಾನವನ್ನು ಅರಿತವರಾಗಿಯೂ ನ್ಯಾಯ ಅನ್ಯಾಯಗಳನ್ನು ತಿಳಿದವರಾಗಿಯೂ ಸದಾ ವಿಚಾರಶೀಲರಾಗಿಯೂ ಇರುವಂಥ ಸರ್ಕಾರದ ದೊಡ್ಡ ಅಧಿಕಾರಿಗಳು ಸಮಸ್ತ ಜೀವಿಗೂ, ಮಾತಾನಾಸ್ತಿ ಪಿತಾನಾಸ್ತಿ ನಾಸ್ತಿಬಂಧುಸ್ಸಹೋದರಃ | ಅರ್ಥಂನಾಸ್ತಿ ಗೃಹಂನಾಸ್ತಿ ತಸ್ಮಾತ್‌ಜಾಗ್ರತಜಾಗ್ರತ || ಎಂಬ ಸತ್ಪುರುಷರ ವಾಕ್ಯವನ್ನು ಅರಿತವರಾಗಿದ್ದರೂ ಕೂಡ ಮತಾಭಿಮಾನದಿಂದ ಶ್ಯಾನುಭೋಗರ ತಪ್ಪನ್ನು ಮುಚ್ಚಿಡುತ್ತಾ ಬಡರೈತರನ್ನು ಕಷ್ಟಪಡಿಸುತ್ತಿರುವುದು ನೋಡಿದರೆ ಪ್ರಪಂಚದಲ್ಲಿ ಸಂಬಂಧವೆನ್ನುವುದು (ಪ್ರಾಣಹೋದರೂ ಹೋಗಲಿ ಹೊಟ್ಟೆಗೆ ಒಳ್ಳೇ ಔಷಧಬಿದ್ದಿರುತ್ತೆಂಬ ವೈದ್ಯರ ಮಾತಿನಂತೆ) ಬಹಳ ದೊಡ್ಡದಾಗಿರುವುದಿಲ್ಲವೆ? ಕರ್ಣಾರ್ಜುನರ ಕಾಳಗದಲ್ಲಿ ಕರ್ಣನರಥವು ಮುರಿದುಹೋದ ಕಾರಣ ಕರ್ಣನು ಸರಿಮಾಡಿಕೊಳ್ಳುತ್ತಿರುವಾಗ ಅರ್ಜುನನ ಸಾರಥಿಯಾಗಿದ್ದ ಶ್ರೀಕೃಷ್ಣಪರಮಾತ್ಮನು ಅರ್ಜುನನನ್ನು ಕುರಿತು ಈ ಸಮಯದಲ್ಲಿ ನೀನು ಬಾಣಪ್ರಯೋಗವನ್ನು ಮಾಡು, ಕರ್ಣನು ಬಿದ್ದುಹೋಗುವನು ಎಂದು ಹೇಳಿದಪ್ರಕಾರ ಅರ್ಜುನನು ಪ್ರಯತ್ನಿಸಲು ಆ ಸಮಯದಲ್ಲಿ ಕರ್ಣಾರ್ಜುನರಿಬ್ಬರೂ ಅಣ್ಣತಮ್ಮಂದಿರಾದ ಪ್ರಯುಕ್ತ ಸಂಬಂಧಜ್ಞಾನವು ಅರ್ಜುನನಿಗೆ ಹುಟ್ಟಿ ಹೊಡೆಯಲಿಕ್ಕೆ ಕೈಗಳು ಬಾರದೆ ಸುಮ್ಮನೆ ನಿಂತುಕೊಂಡನೆಂಬುದೇ ಉದಾಹರಣೆಯಾಗಿರುವುದಲ್ಲವೆ? ಸಕಲಸಂಪತ್ತಿನಿಂದ ಕೂಡಿದ್ದ ಹರಿಶ್ಚಂದ್ರಮಹಾರಾಜನು ಸತ್ಯಕ್ಕೋಸ್ಕರ ರಾಜಭೋಗವನ್ನೂ ಹೆಂಡತಿಮಕ್ಕಳನ್ನೂ ಬಿಟ್ಟು ಚಂಡಾಲನಿಗೆ ಸೇವಕನಾಗಿ ಆತನ ಅಪ್ಪಣೆಯಂತೆ ಸ್ಮಶಾನವನ್ನು ಕಾಯುತ್ತಿರುವಾಗ ಸರ್ಪದಷ್ಟನಾಗಿ ಸತ್ತುಹೋಗಿದ್ದ ತನ್ನಮಗನಾದ ರೋಹಿತಾಶ್ವನನ್ನು ತನ್ನ ಹೆಂಡತಿಯಾದ ಚಂದ್ರಮತಿಯೋರ್ವಳೇ ಹೂಳುವುದಕ್ಕೆ ಹೊತ್ತುಕೊಂಡುಬಂದುದನ್ನು ನೋಡಿ ಪುತ್ರವಿಯೋಗದಿಂದ ಬಹಳ ದುಃಖಬಂದಾಗ್ಯೂ ಕೂಡ ಸಹಿಸಿಕೊಂಡು ತನ್ನ ಸಂಬಂಧವನ್ನೂ ತ್ಯಜಿಸಿ ಯಜಮಾನನ ಅಪ್ಪಣೆಯಂತೆ ಬಂದು ಹೆಣವನ್ನು ಹೂಳುವುದಕ್ಕೆ ಒಂದು ಹಣವನ್ನು ಕೊಟ್ಟಹೊರತು ಹೂಳಲಿಕ್ಕಾಗುವುದಿಲ್ಲವೆಂದು ಅಡ್ಡಿಪಡಿಸಿ ತನ್ನದಣಿಯ ಅಪ್ಪಣೆಯನ್ನು ಜಾರಿಯಲ್ಲಿ ತಂದಿರುವಂತೆಯೂ, ನಮ್ಮ ಶ್ರೀಮನ್ಮಹಾರಾಜರವರು ಹಿಂದುಳಿದ ಜನಾಂಗದವರ ವಿದ್ಯಾಭಿವೃದ್ಧಿಗೋಸ್ಕರ ವಿಶೇಷವಾಗಿ ದ್ರವ್ಯವನ್ನು ವೆಚ್ಚಮಾಡಿ ವಿದ್ಯಾಭ್ಯಾಸದ ಶಾಖೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿ ಅನುಕೂಲಮಾಡಿಕೊಟ್ಟಿರುವಂತ ರೆವಿನ್ಯೂ ಇಲಾಖೆಗೆ ಸೇರಿ ರೈತರಿಗೆ ತುಂಬಾ ಅಪಾಯಕರವಾಗಿರುವ ಶ್ಯಾನುಭೋಗರ ಲೆಕ್ಕಗಳವಿಚಾರದಲ್ಲಿ ಪ್ರಜೆಗಳಿಗೆ ಅನುಕೂಲ ಪ್ರತಿಕೂಲಗಳನ್ನು ನೋಡಿ ಬದಲಾವಣೆಮಾಡಿಕೊಡಬೇಕಲ್ಲದೆ ತಪ್ಪುಮಾಡಿರುವ ಶ್ಯಾನುಭೋಗರುಗಳಿಗೆ ನಿರ್ದಯದಿಂದ ಸರಿಯಾದ ಬಂದೋಬಸ್ತುಮಾಡಿ ಪ್ರಜೆಗಳಿಗೆ ಅನುಕೂಲಮಾಡಿಕೊಟ್ಟು ಕಾಪಾಡಬೇಕೆಂದು ಘನಸರ್ಕಾರದವರಲ್ಲಿ ನಾವುಗಳೆಲ್ಲರೂ ಈಮೂಲಕ ಪ್ರಾರ್ಥಿಸಿಕೊಳ್ಳೋಣ.

ನಿಷ್ಪಕ್ಷಪಾತ.

ಹುನಗುಂದ ವೀರಶೈವ ತರುಣಸಂಘದ ೧ನೆ ವಾರ್ಷಿಕ ಸಮ್ಮೇಲನವು.

ಶ್ರೀಮನ್ನಿರಂಜನ ಮಹಾಂತಸ್ವಾಮಿ ಶಿವಯೋಗಮಂದಿರ ಇವರ ಅಧ್ಯಕ್ಷತೆಯ ಕೆಳಗೆ ಸಂಜೆ ೬ ಗಂಟೆಗೆ ಸಭೆಯು ಕೂಡಿತು. ಸಭೆಗೆ ಕಮತಗಿ, ಅಮೀನಗಡ, ಅಮರವಾದಿಗಿ, ಕರಡಿ, ಇಲಕಲ್ಲ ವಗೈರೆ ಗ್ರಾಮಗಳಿಂದ ನೂರಾರು ಜನರು ಬಂದಿದ್ದರು. ಮೊದಲೇ ಗೊತ್ತುಮಾಡಿದ ಪ್ರಕಾರ ವೀರಶೈವ ತರುಣಸಂಘದ ರಿಪೋರ್ಟನ್ನು ಶ್ರೀಯುತ ವೀರಪ್ಪ ಘಣಮೂಕಣ್ಣವರ ಇವರು ಓದಿ ಯಾವತ್ತು ನೆರೆದಂಥ ಸಭಿಕರ ಮೇಲೆ ಪರಿಣಾಮಕರವಾಗುವಂತೆ ಭಾಷಣವನ್ನು ಮಾಡಿದರು. ಸಭೆಯಲ್ಲಿ ೫ ಠರಾವುಗಳು ಪಾಸಾದವು. ೧ನೆ ಮಿ|| ಗುರುಸಿದ್ಧಪ್ಪಾ ಗುಗ್ಗಳ ಬಿ. ಎ. ಇವರು ಇಂಗ್ಲಂಡಿಗೆ ಹೋಗಿ ಐ. ಸಿ. ಎಸ್. ಪದವಿಯನ್ನು ಹೊಂದಿ ಹಿಂದುಸ್ಥಾನಕ್ಕೆ ಸುರಕ್ಷಿತ ಬಂದು ಮುಟ್ಟಿದುದಕ್ಕೆ ಸಂತೋಷವುಳ್ಳವರಾಗಿ ಈ ಸಭೆಯವರು ಅವರನ್ನು ಅಭಿನಂದಿಸುತ್ತಾರೆ. ೨ನೆ ಧಾರವಾಡ ಟ್ರೇನಿಂಗ್ ಕಾಲೇಜಿನಿಂದ ಹೊರಗೆ ಹಾಕಲ್ಪಟ್ಟ ೫೫ ವಿದ್ಯಾರ್ಥಿಗಳ ಪರೀಕ್ಷೆಯನ್ನು ಪುನಃ ತಗೆದುಕೊಂಡದ್ದಕ್ಕಾಗಿ ಈ ಸಭೆಯವರು ನೇಕನಾಮದಾರ ಗೌರ್ನರವರ ಆಭಾರವನ್ನು ಮನ್ನಿಸುತ್ತಾರೆ. ೩ನೆ ಸಕ್ತಿಶಿಕ್ಷಣವನ್ನು ಸರ್ಕಾರದವರು ತೀವ್ರವಾಗಿ ಅಮಲಿನಲ್ಲಿ ತರಬೇಕೆಂದು ಈ ಸಭೆಯವರು ಠರಾಯಿಸುತ್ತಾರೆ. ೪ನೆ ವೀರಶೈವ ತರುಣ ಸಂಘಗಳನ್ನು ಅಲ್ಲಲ್ಲಿ ಅವಶ್ಯವಾಗಿ ಸ್ಥಾಪಿಸಬೇಕೆಂತಲೂ ಮತ್ತು ಈಗಾಗಲೇ ಸ್ಥಾಪಿಸಿದ ಸಂಘಗಳು ಯೋಗ್ಯ ಕೆಲಸಗಳನ್ನುದಕ್ಷತೆಯಿಂದ ಮಾಡಬೇಕೆಂತಲೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ. ೫ನೆ ಮ|| ಪಿ. ಜಿ. ಹಳಕಟ್ಟಿ ಇವರು ಎರಡನೇ ಜಿಲ್ಲೆಗೆ ವರ್ಗಮಾಡಿಸಿಕೊಂಡಿದ್ದು ಪುನಃ ಇದೇ ಜಿಲ್ಲೆಗೆ ತಮ್ಮನ್ನು ವರ್ಗಮಾಡಿಸಿಕೊಳ್ಳಬೇಕೆಂತ ಠರಾವು ತರಲ್ಪಟ್ಟಿತು. ಅದು ಸರ್ವಾನುಮತದಿಂದ ಪಾಸಾಯಿತು. ನಂತರ ಅಧ್ಯಕ್ಷರ ಆಭಾರಮನ್ನಿಸಿ ಹಾರ ತುರಾಯಿ ಪಾನಸುಪಾರಿ ಅತ್ತರ ವಗೈರೆ ಹಂಚಿದನಂತರ ದೇವರ ಸ್ತೋತ್ರವಾಗಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ತಮ್ಮ ಚನಮಲ್ಲಪ್ಪಾ ಶ್ರೇಷ್ಠಿ ಕಮತಗಿ.

ಧಾರವಾಡ.

ಹಾವೇರಿ ಪೇಟೆಯ ಮುರುಘ ಮಠದ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಬೋರ್ಡಿಂಗಿಗೆ ಪ್ರಿನ್ಸಿಪಾಲ್ ಮಿ|| ಸಿಸನ್‌ಸಾಹೇಬರವರ ಆಗಮನವು.

ತಾರೀಖು ೫-೨-೧೯೨೨ನೆ ದಿವಸ ಧಾರವಾಡ ಕರ್ನಾಟಕ ಕಾಲೇಜ್ ಪ್ರಿನ್ಸಿಪಾಲ್ ಮಿ|| ಸಿಸನ್‌ರವರು ಮುಂಜಾನೆ ೧೦ ಗಂಟೆಗೆ ಆಗಮಿಸಿದ್ದರು. ಅವರನ್ನು ವಿದ್ಯಾರ್ಥಿಗಳು ಬಹು ಸಂತೋಷದಿಂದ ಸತ್ಕರಿಸಿ ಬರಮಾಡಿಕೊಂಡರು. ಅವರಿಗೋಸ್ಕರ ಏರ್ಪಡಿಸಿದ್ದ ಆಸನದ ಮೇಲೆ ಅವರು ಕುಳಿತ ನಂತರ ಮಿ|| ಹಂಪಯ್ಯ ಚನಬಸಯ್ಯ ಹಲಗಲ ಇವರು ಬೋರ್ಡಿಂಗಿನ ವಿಷಯವಾಗಿ ಮಾಹಿತಿಕೊಟ್ಟನಂತರ ಪ್ರಿನ್ಸಿಪಾಲರವರು ವಿದ್ಯಾರ್ಥಿಗಳಿಗೆ ಉಪದೇಶಪರವಾದ ಭಾಷಣವನ್ನು ಹೀಗೆ ಮಾಡಿದರು.-ಅಧುನಿಕ ಶಿಕ್ಷಣ ಪದ್ಧತಿಯಲ್ಲಿ ಮುಖ್ಯವಾದ ದೋಷವೆಂದರೆ (deffect) ಧಾರ್ಮಿಕ ಶಿಕ್ಷಣದ ಅಭಾವ. ಆದುದರಿಂದಲೇ ಎಷ್ಟೋ ವಿದ್ಯಾರ್ಥಿಗಳು ಧರ್ಮಲಂಡರು (Sceptics) ಆಗಿರುತ್ತಾರೆ. ಅವರನ್ನು ಧರ್ಮದ ವಿಷಯವಾಗಿ ಕೇಳಿದರೆ "ನಮಗೆ ಏನೂ ಗೊತ್ತಿಲ್ಲ" ವೆಂದು ಹೇಳುತ್ತಾರೆ. ಇಂಥ ದೋಷವನ್ನು ಹೋಗಲಾಡಿಸುವುದಕ್ಕೆ ಇಂಥ ಸಂಸ್ಥೆಗಳ ಅವಶ್ಯಕತೆ ಬಹಳ ಇರುತ್ತದೆಂದು ಹೇಳಿದರು. ತಮಗೆ ಚಿಕ್ಕಂದಿನಲ್ಲಿ ನಮ್ಮ ಆಚಾರ್ಯರಿಂದಲೂ (Priests) ಗುರುಹಿರಿಯರಿಂದಲೂ ತಮ್ಮ ಮನಸ್ಸಿನ ಮೇಲೆ ಉಂಟಾದ ಧಾರ್ಮಿಕ ಪರಿಣಾಮವು (Impression) ಇನ್ನೂ ಹೋಗಿಲ್ಲವೆಂತಲೂ ಹೇಳಿದರು. ಅದರಂತೆ ಈಗ್ಗೂ ವರ್ತಿಸುತ್ತಿರುವೆವೆಂದು ತಿಳಿಸಿದರು. ಆದುದರಿಂದ ವಿದ್ಯಾರ್ಥಿಗಳಾದವರು ಧಾರ್ಮಿಕ ವಿಷಯದ ಕಡೆಗೆ ಅಲಕ್ಷ್ಯಮಾಡದೆ ತಮ್ಮ ವಿದ್ಯಾಭ್ಯಾಸದೊಡನೆ ತಮ್ಮ ಧಾರ್ಮಿಕೋನ್ನತಿಯನ್ನೂ ಮಾಡಿಕೊಳ್ಳಬೇಕೆಂತಲೂ ತಮ್ಮ ತಮ್ಮ ಪೂರ್ವಜರ (fore-fathers) ಧರ್ಮದಂತೆ ನಡೆದುಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯವೆಂತಲೂ ಹೇಳಿದರು. ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸದೊಡನೆಯೇ ಧಾರ್ಮಿಕ ಶಿಕ್ಷಣವೂ ಈ ಸಂಸ್ಥೆಯ ಚಾಲಕರಾದ ಶ್ರೀ ಮೃತ್ಯುಂಜಯಸ್ವಾಮಿಗಳವರಿಂದಲೂ ಸಮಾಜದ ಮುಂದಾಳುಗಳಿಂದಲೂ ಕೊಡಲ್ಪಡುವುದನ್ನು ನೋಡಿ ತಮ್ಮ ಮನಸ್ಸಿಗೆ ಪರಮಾನಂದವಾಯಿತೆಂದು ತಿಳಿಸಿದರು. ಇಷ್ಟಾದನಂತರ ಮ|| ರಾ|| ಬಿ. ಎಲ್. ಪಾಟೀಲ ಬಿ, ಎ, ಎಲ್. ಎಲ್. ಬಿ. ಇವರು ಪ್ರಿನ್ಸಿಪಾಲರ ಆಭಾರಮನ್ನಿಸುವಾಗ್ಗೆ ಧರ್ಮದ ಕಡೆಗೆ ನಮ್ಮ ಅಲಕ್ಷ್ಯವಾದದ್ದು ನಿಜವೆಂತಲೂ ಹಾಗೆ ಮಾಡದೆ ನಾವೆಲ್ಲರೂ ಪ್ರಿನ್ಸಿಪಾಲರವರು ಹೇಳಿದಂತೆ ಧರ್ಮವನ್ನು ಮುಖ್ಯವಾಗಿಟ್ಟುಕೊಂಡು ವರ್ತಿಸಬೇಕೆಂತಲೂ ಹೇಳಿದರು. ಪಾಶ್ಚಿಮಾತ್ಯ ಸುಧಾರಣೆಯಲ್ಲಿ ಎಷ್ಟೋ ದೋಷಗಳು ಇವೆ. ಆ ಎಲ್ಲ ಸುಧಾರಣೆಯನ್ನೂ ನಾವು ಗ್ರಹಣಮಾಡಿದುದರ ಫಲವು ಧರ್ಮಲಂಡತನವೆಂದು ತಿಳಿಸಿದರು. ಇದಾದ ನಂತರ ಬೋರ್ಡಿಂಗಿನ ಬಾಲಕರ ಪತಿಯಿಂದಲೂ ಜನರಲ್ ಕಮಿಟಿಯವರ ಪತಿಯಿಂದಲೂ ಪ್ರಿನ್ಸಿಪಾಲರವರು ಅಭಿಮಾನವಿಟ್ಟು ಬೋರ್ಡಿಂಗಿಗೆ ಶ್ರಮಪಟ್ಟು ಬಂದುದಕ್ಕೆ ಅವರನ್ನು ಮನಃಪೂರ್ವಕವಾಗಿ ಆಭಾರ ಮನ್ನಿಸಿದರು. ಪೂಮಾಲೆ ಹಾಕಿದನಂತರ ಶ್ರೀ|| - - ಗಳವರಿಂದ ಫಲರೂಪ ಆಶೀರ್ವಾದ ಪಡೆದು ಹೋಗುವಾಗ್ಗೆ ಮುಂದಿನ ವರ್ಷ ಶ್ರೀ|| - - ಗಳವರ ದರ್ಶನಕ್ಕೆ ಬರುವಾಗ್ಗೆ ಕನ್ನಡ ಕಲಿತು ಬರುವೆವೆಂದು ಉತ್ಕಟೇಚ್ಛೆಯನ್ನು ವ್ಯಕ್ತಪಡಿಸಿದರು.

ಕೆಳಗೆ ಬರೆದ ಪ್ರಕಾರ ವಿಜಿಟರ್ಸ್ ಬುಕ್ಕಿನಲ್ಲಿ ಬರೆದಿರುವರು—

"I have had the greatest pleasure in visiting this institution, and I was most kindly received. The religious leader who is the guiding spirit of the institution is carrying out a work of the highest value and I am delighted to see him a practical example of the bond of union between religion and education.

Sd.
C. J. Cesson
M. A., I. E. S
Ag. Principal Karnatak
College, Dharwar.

ಸೆಕ್ರೆಟರಿ ಬಸಪ್ಪಾ ಮಲ್ಲಪ್ಪಾ ಅಹೆಟ್ಟಿ
ಶ್ರೀ ಬೋರ್ಡಿಂಗ್.

ನೋಟೀಸು.

ಇದರಿಂದ ಸಮಸ್ತ ಡಾಕ್ಟರವರುಗಳಿಗೂ ಯುನಾನಿ ವೈದ್ಯರುಗಳಿಗೂ ನೇಟಿವ್ ವೈದ್ಯರುಗಳಿಗೂ ತಿಳಿಯಪಡಿಸುವುದೇನಂದರೆ—

ಬೆಂಗಳೂರು ದಂಡು ಕೋಲ್ಸ್‌ರೋಡಿನಲ್ಲಿರುವ ಮಂಡಿ ವ್ಯಾಪಾರದ ಕಪ್ಪಣ್ಣ ಕೇಳಿಕೊಳ್ಳುವದೇನಂದರೆ—ನನ್ನ ಭಾವಮೈದನಾದ ಲೇಟ್ ಆಪ್ಪಾಗಿ ರುದ್ರಪ್ಪನವರ ಮಗ ಸುಮಾರು ೪೦ ವರುಷ ವಯಸ್ಸುಳ್ಳ ಗಂಗಪ್ಪನು ಈಗ ೫ ತಿಂಗಳಿಂದಲೂ ಮೂತ್ರವ್ಯಾಧಿಯಿಂದ ಬಾಧೆಪಡುತ್ತಾ ಇದ್ದಾನೆ. ಈತನಿಗೆ ಡಾಕ್ಟರುಗಳಿಂದ ಈವರೆಗೂ ತೋರಿಸಿ ಔಷಧಗಳು ಇಂಜೆಕ್ಷನ್‌ಗಳು ಕೊಡಿಸದಾಗ್ಯೂ ಏನೂ ಗುಣಕಂಡುಬರಲಿಲ್ಲವು. ಆದ್ದರಿಂದ ಯಾವ ಡಾಕ್ಟರವರೇ ಆಗಲಿ ಯುನಾನಿ ವೈದ್ಯರೇ ಆಗಲಿ ನೇಟೀವ್ ಪಂಡಿತರೇ ಆಗಲಿ ಈತನ ಬಾಯಿಲೆ ಗುಣಪಡಿಸುತ್ತೇವೆಂದು ಖಂಡಿತವಾಗಿಯೂ ದೃಢವಾಗಿಯೂ ಹೇಳಿ ಔಷಧ ಕೊಟ್ಟು ಗುಣಮಾಡಿದವರಿಗೆ ೨೦೦೦ ರೂಪಾಯಿಗಳನ್ನು ಕೊಡುತ್ತೇನೆಂದು ಈ ಮೂಲಕ ತಿಳಿಸಿರುತ್ತೇನೆ.

೨
N. KAPPANNA,
19, Coles Road,
Bangalore Cant.

೧೯೨೨ ನೆಯ ಇಸವಿ ಫೆಬ್ರವರಿ ತಾ|| ೧೯ರಿಂದ ೧೯೨೨ನೆಯ ಫೆಬ್ರವರಿ ತಾ|| ೨೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿನಾಮಸಂವತ್ಸರದ ಮಾಘಬಹುಳ ಅಷ್ಟಮಿಯಿಂದ ಮಾಘಬಹುಳ ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ಮಾಸ
19	ಭಾನು	ಅಷ್ಟ	24-45	ಅನೂ	39-0	8
20	ಸೋಮ	ನವ	23-40	ಜ್ಯೇಷ್ಠ	39-45	9
21	ಮಂಗಳ	ದಶ	23-47	ಮೂಲ	41-48	10
22	[1]ಬುಧ	ಏಕಾ	25-15	ಪೂಷಾ	45-0	11
23	ಗುರು	ದ್ವಾ	27-44	ಉಷಾ	49-21	12
24	[2]ಶುಕ್ರ	ತ್ರಯೋ	31-42	ಶ್ರವ	45-43	13
25	ಶನಿ	ಚತು	36-30	ಧನಿ	60	14

(1) ಸರ್ವತ್ರೈಕಾದಶಿ. (2) ಮಹಾಶಿವರಾತ್ರಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ ಮೈಸೂರ್ ಸ್ಟಾರ್ ಸರ್ ೧೯೨೨ನೆಯ ಇಸವಿ ಮಾರ್ಚಿ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೧೦

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾನುಗ್ರಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತಗದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
8 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಪಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ಕುರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 36

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವಾಜ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿಯೊಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿ ಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ಪ್ರತ್ಯಕ್ಷವೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಸೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
5 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ಕೃಷ್ಟವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮುನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಳಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
9 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಮಾರ್ಚಿ ತಾ|| ೫ ನೆಯ ಭಾನುವಾರ.

ಪ್ರಭುತ್ವಗಳ ಆರ್ಥಿಕ ದಾರಿದ್ರ್ಯ

ಭರತಖಂಡಕ್ಕೆ ಬರುಬರುತ್ತಾ ಬಡತನವು ಹೆಚ್ಚುತ್ತಿದೆಯೆಂಬುದು ದೇಶೀಯರ ವಾದವಾಗಿದ್ದರೆ ದೇಶವು ಹಿಂದಿಗಿಂತ ಈಗ ಸಂಪತ್ಪರಿಪುಷ್ಟವಾಗಿದೆಯೆಂಬುದು ಪಾಶ್ಚಾತ್ಯರ ವಾದವಾಗಿರುತ್ತದೆ. ಎರಡು ಪಕ್ಷದವರೂ ತಂತಮ್ಮ ವಾದಸಮರ್ಥನಕ್ಕೆ ಕೆಲಕೆಲ ಕಾರಣಗಳನ್ನು ಒಡ್ಡಿ ತೋರಿಸುತ್ತಾರೆ. ಆ ದೊಡ್ಡ ವಿಚಾರವು ಪ್ರಕೃತಕ್ಕೆ ಬೇಡ. ಭರತಖಂಡದ ಎಲ್ಲ ಭಾಗಗಳ ಪ್ರಭುತ್ವಗಳಿಗೂ ಈಗ ಆರ್ಥಿಕದಾರಿದ್ರ್ಯರೂಪಕ್ಷಯರೋಗವು ಸಂಘಟಿಸಿರುವ ವಿಷಯವು ಕೇವಲ ವಿಚಾರಕ್ಕೆ ಎಡೆಗೊಟ್ಟಿರುತ್ತದೆ. ಭಾರತ ಸರ್ಕಾರವು ಪ್ರತಿವರ್ಷವೂ ಕೋಟ್ಯಂತರ ಸಾಲವನ್ನು ಮಾಡುತ್ತಲೇ ಬಂದಿದೆ. ಕಳೆದ ವರ್ಷ ೭ ರ ಬಡ್ಡಿಯಿಂದ ಸೀಮೆಯಲ್ಲಿ ಸ್ಟೇಟ್ ಸೆಕ್ರೆಟರಿಯವರು ಕೋಟ್ಯಂತರ ಸಾಲವನ್ನು ತೆಗೆದರು. ಈಗ ವೆಚ್ಚಕ್ಕೆ ೩೪ ಕೋಟಿ ರೂ.ಗಳು ಸಾಲದೆಂದು ಬೊಕ್ಕಸದ ಮಂತ್ರಿಯವರು ಹೇಳಿ ಹೊಸಹೊಸ ತೆರುಗೆಗಳನ್ನು ವಿಧಿಸಬೇಕೆಂದು ಸೂಚಿಸಿದ್ದಾರೆ. ಈಗ ಎಲ್ಲ ಪ್ರಭುತ್ವಗಳೂ ತಂತಮ್ಮ ಬೊಕ್ಕಸಗಳನ್ನು ಒದರಿನೋಡಿಕೊಳ್ಳುವ ಕಾಲವಷ್ಟೆ? ಹಾಗೆ ನೋಡುತ್ತಾ ಬಂದುದರಲ್ಲಿ ಎಲ್ಲ ಪ್ರಭುತ್ವಗಳಿಗೂ ಆದಾಯವು ಕುಗ್ಗಿ ವ್ಯಯವು ಹೆಚ್ಚಿ ಕಣ್ಣಾಯಿಬಿಡುವಂಥ ಸ್ಥಿತಿಯು ಪ್ರಾಪ್ತವಾಗಿದೆಯೆಂಬುದು ಗೊತ್ತಾಗಿದೆ. ಎಲ್ಲ ಪ್ರಾಂತಿಕ ಪ್ರಭುತ್ವಗಳ ಆರ್ಥಿಕ ಮಂತ್ರಿಗಳೂ ಶಾಸನಸಭೆಗಳಲ್ಲಿ ಸಾವೇರಿ ರಾಗವನ್ನು ಪೂರಯಿಸಿರುತ್ತಾರೆ. ಬೊಂಬಾಯಿ ಪ್ರಭುತ್ವಕ್ಕೆ ಈವರ್ಷ ಆದಾಯದಲ್ಲಿ ೫೭ ಲಕ್ಷ ಕಡಿಮೆ; ಮುಂದಣವರ್ಷ ೧ ಕೋಟಿಯೂ ೧೫ ಲಕ್ಷ ರೂ. ಕಡಿಮೆ ಬೀಳಬಹುದೆಂಬ ನಿರೀಕ್ಷಣೆ. ಅದುಕಾರಣ ಹೊಸತೆರುಗೆಗಳ ಮೂಲಕ ೧ ಕೋಟಿ ರೂ. ಗಳ ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಆ ಪ್ರಭುತ್ವದವರು ಪ್ರಯತ್ನಿಸಿದ್ದಾರೆ.

ಪಂಜಾಬು ಪ್ರಭುತ್ವದಲ್ಲಿ ಈವರ್ಷದ ಆದಾಯದಲ್ಲಿ ೯೯ ಲಕ್ಷ ಕಡಿಮೆಬಿದ್ದಿದೆ. ಮುಂದಣವರ್ಷ ೧೫೮ ಲಕ್ಷ ಕಡಿಮೆ ಬೀಳಬಹುದೆಂಬ ನಿರೀಕ್ಷಣೆಯಿದೆ. ಕಡಿಮೆ ಬಿದ್ದುದನ್ನು ಭರ್ತಿಮಾಡಿಕೊಳ್ಳಲು ಅವರೂ ಹೊಸತೆರುಗೆಯ ಮಾರ್ಗಗಳನ್ನು ಹುಡುಕುವರೆಂಬುದಕ್ಕೆ ಸಂಶಯವಿಲ್ಲ.

ಬಂಗಾಳಾ ಪ್ರಭುತ್ವಕ್ಕೆ ಬರುವ ವರ್ಷಕ್ಕೆ ೧ ಕೋಟಿಯೂ ೨೦ ಲಕ್ಷ ರೂ. ಗಳು ಕಡಿಮೆ ಬೀಳುವುವೆಂದು ನಿರೀಕ್ಷಣೆಯಿದೆ. ಆದಾಯವು ೯,೦೪,೧೬,೦೦೦ ರೂ. ಗಳಾದರೆ ವ್ಯಯವು ೧೦,೨೨,೪೫,೦೦೦ ರೂ. ಗಳಾಗುವುವೆಂದು ನಿರೀಕ್ಷಿಸಲ್ಪಟ್ಟಿದೆ. ಅದುಕಾರಣ ಅವರೂ ಕೂಡ ಹೊಸಕಂದಾಯಗಳ ಮೂಲಕ ೧ ಕೋಟಿಯೂ ೪೦ ಲಕ್ಷ ರೂ. ಗಳ ವರಮಾನವನ್ನು ಹೆಚ್ಚಿಸಿಕೊಳ್ಳಬೇಕೆಂದಿದ್ದಾರೆ.

ಮದ್ರಾಸು ಪ್ರಭುತ್ವದವರಿಗೆ ೧೪೪ ಲಕ್ಷ ರೂ. ಗಳು ಕಡಿಮೆ ಬಿದ್ದಿವೆ. ಅವರೂ ಕೂಡ ಹೊಸಕಂದಾಯಗಳನ್ನು ವಿಧಿಸಲು ಏರ್ಪಡಿಸಿಕೊಂಡಿದ್ದಾರೆ. ಆದರೆ ಹೀಗೆ ಹೊಸಕಂದಾಯಗಳನ್ನು ಪ್ರಜೆಗಳಮೇಲೆ ಹೇರಿ ಎತ್ತುವುದು ಸುಲಭವಲ್ಲ. ಪ್ರಜೆಗಳಿಗೆ ಈಗ ಹಾಕಲ್ಪಟ್ಟಿರುವ ಕಂದಾಯಗಳ ಹೊರೆಯೇ ಹೆಚ್ಚಾಗಿದೆ. ಆ ಭಾರವನ್ನೇ ಹೊರಲಾರದೆ ಅವರ ಕತ್ತು ಉರುಳಾಡುತ್ತಿದೆ. ಅದುಕಾರಣ ಶಾಸನಸಭೆಗಳಲ್ಲಿ ಪ್ರಜೆಗಳ ಪ್ರತಿನಿಧಿಗಳಾಗಿ ಹೋಗಿರುವ ಸಭಿಕರು ಪ್ರಭುತ್ವದವರು ಹೊಸಕಂದಾಯಗಳನ್ನು ವಿಧಿಸಲಿಕ್ಕಾಗಿ ತರುವ ತೀರ್ಮಾನಗಳಿಗೆ ತಮ್ಮ ಸಮ್ಮತಿಗಳನ್ನು ಕೊಡುವುದಕ್ಕೆ ಹಿಂಜರಿಯುತ್ತಿದ್ದಾರೆ. ಈಗಾಗಲೇ ಬೊಂಬಾಯಿ ಮದ್ರಾಸು ಮೊದಲಾದ ಕಡೆಯ ಶಾಸನ ಸಭೆಗಳಲ್ಲಿ ಹೊಸಕಂದಾಯದ ವಿಧಾಯಕದ ತೀರ್ಮಾನವು ಅನಂಗೀಕೃತವಾಗಿ ಬಿದ್ದುಹೋದ ವಾರ್ತೆಗಳು ಬಂದಿರುತ್ತವೆ. ವಿನೋದಾರ್ಥವಾದ ನಾಟಕಪ್ರದರ್ಶನ ಸಿನಿಮಾ ನೋಟ, ಕುದುರೆಜೂಜು ಇತ್ಯಾದಿಗಳ ಮೇಲೆ ಹೆಚ್ಚು ಸುಂಕವನ್ನು ವಿಧಿಸಬೇಕೆಂದು ಬೊಂಬಾಯಿ ಪ್ರಭುತ್ವದವರು ತಂದಿದ್ದ ತೀರ್ಮಾನವು ಸಭೆಯಲ್ಲಿ ಅನುಮೋದಿತವಾಗದೆಹೋಯಿತು. ವಿಲೇಜ್ ಸರ್ವೀಸ್ ಸೆಸ್ ಎಂಬುದೊಂದನ್ನು ವಿಧಿಸಬೇಕೆಂಬ ತೀರ್ಮಾನವು ಮದ್ರಾಸು ಶಾಸನಸಭೆಯಲ್ಲಿ ಅಂಗೀಕೃತವಾಗದೆ ಹೋಯಿತು. ದೇಶದಲ್ಲಿ ಅಸಹಾಯವಾದಿಗಳ ಚಳವಳಿಯಿಂದ ಪ್ರಭುತ್ವಗಳಿಗೆ ಮದದ್ರವ್ಯಶಾಖೆಯಿಂದ ಆಗುತ್ತಿದ್ದ ವರಮಾನವು ಕುಗ್ಗಿಹೋಗುತ್ತಿದೆ. ಮತ್ತು ವ್ಯಾಪಾರಶಾಖೆಯ ಆದಾಯವೂ ಈ ಚಳವಳದ ಮೂಲದಿಂದಲೇ ಸಂಕೋಚಗೊಳ್ಳುತ್ತಿದೆ. ಇವುಗಳ ಜತೆಗೆ ಪ್ರಭುತ್ವದ ವ್ಯಯಭಾರವು ಮಾತ್ರ ದಿನದಿನಕ್ಕೆ ಹೆಚ್ಚಿಹೋಗುತ್ತಿದೆ. ಸರ್ಕಾರದ ದುಂದುವೆಚ್ಚಗಳನ್ನು ಕಡಿಮೆಮಾಡಿ ಆಯವ್ಯಯಗಳನ್ನು ಸರಿಪಡಿಸಿಕೊಳ್ಳಬೇಕೇ ಹೊರತು ವೆಚ್ಚಕ್ಕೆ ಸಾಲದೆಂದು ಹೊಸತೆರುಗೆಗಳನ್ನು ಹಾಕಕೂಡದೆಂಬುದು ಪ್ರಜೆಗಳ ಮತವಾಗಿರುತ್ತದೆ. ಶಾಸನಸಭೆಗಳಲ್ಲಿ ಎಷ್ಟೋ ಸಭಿಕರು ಸ್ಪಷ್ಟವಾಗಿ ಈ ಮಾತನ್ನು ಆಡಿಮುಗಿಸಿದ್ದಾರೆ. ಆದರೆ ಅತ್ತಕಡೆಗೆ ಸರ್ಕಾರದ ಗಮನವು ಸಮರ್ಪಕವಾಗಿ ಕೊಡಲ್ಪಡುತ್ತಲಿಲ್ಲ. ಆದಾಯವನ್ನು ಹೆಚ್ಚಿಸಿಕೊಳ್ಳುವ ಮಾರ್ಗದಲ್ಲೇ ಅವರ ಲಕ್ಷ್ಯವು ವಿಶೇಷವಾಗಿರುವಂತೆ ಕಂಡುಬರುತ್ತದೆ.

ಈ ಮಧ್ಯೆ ಮದ್ರಾಸಿನವರು ತಮ್ಮ ಆರ್ಥಿಕ ದುಸ್ಸ್ಥಿತಿಯ ತೊಂದರೆಯನ್ನು ತಪ್ಪಿಸಿಕೊಳ್ಳಲಿಕ್ಕೆ ಒಂದು ಉಪಾಯವನ್ನು ಪ್ರಯೋಗಿಸಿ ನೋಡಿದರು. ಎಂದರೆ ಸಾಮ್ರಾಜ್ಯಶಾಸನ ಸಭೆಯಲ್ಲಿ ಮದ್ರಾಸು ಪ್ರಾಂತದ ಪ್ರತಿನಿಧಿಯಾಗಿ ಹೋಗಿರುವ ಮ|| ಸಂಬಂಧಮೊದಲ್ಯಾರರು ಒಂದು ತೀರ್ಮಾನವನ್ನು ಆ ಸಭೆಯ ಮುಂದಿಟ್ಟರು. ಏನೆಂದರೆ-ಮದ್ರಾಸು ಸರ್ಕಾರಕ್ಕೆ ದುಡ್ಡಿನ ಕೊರತೆ ವಿಶೇಷವಾಗಿರುವುದರಿಂದ ಭಾರತ ಸರ್ಕಾರಕ್ಕೆ ವರ್ಷವರ್ಷ ಮದ್ರಾಸು ಪ್ರಾಂತಿಕ ಪ್ರಭುತ್ವದಿಂದ ಸಲ್ಲಿಸಬೇಕಾಗಿರುವ ೧ ಕೋಟಿಯೂ ೮೮ ಲಕ್ಷ ರೂ. ಗಳಲ್ಲಿ ೮೮ ಲಕ್ಷವನ್ನು ಬಿಟ್ಟು ೧ ಕೋಟಿಯನ್ನು ಮಾತ್ರವೇ ಭಾರತ ಸರ್ಕಾರವು ತೆಗೆದುಕೊಳ್ಳುವಂತೆ ಮಾಡಬೇಕೆಂಬುದೇ ಅವರ ತೀರ್ಮಾನವಾಗಿದ್ದಿತು. ಆದರೆ ಇದಕ್ಕೆ ಸರ್ಕಾರದ ಸಭಿಕರೂ ಇತರ ಕೆಲ ಸಭಿಕರೂ ಯಾವ ಯಾವ ಕಾರಣಗಳನ್ನೋ ತಂದೊಡ್ಡಿ ಮುಂದಣ ಸಭಾಸಮಾವೇಶದಲ್ಲಿ ಈ ವಿಷಯವನ್ನು ಚರ್ಚಿಸೋಣವೆಂದು ಹೇಳಿ ದಾಟಿಸಿಬಿಟ್ಟರು. ಹೀಗೆ ಆ ಪ್ರಯತ್ನವು ಫಲೋನ್ಮುಖವಾಗದೆ ಹೋದಮೇಲೆ ಮತ್ತೊಂದು ಪ್ರಯತ್ನವನ್ನು ಈಗ ಮದ್ರಾಸು ಪ್ರಭುತ್ವದವರು ಮಾಡಿದ್ದಾರೆ. ಸ್ವತಃ ಮದ್ರಾಸು ಗೌರ್ನರೇ ಈಗ ದಿಲ್ಲಿಗೆ ಹೋಗಿರುವರಲ್ಲದೆ, ಶಾಸನ ಸಭಿಕರಲ್ಲಿ ಕೆಲರನ್ನು ಒಂದು ರಾಯಭಾರವಾಗಿ ಏರ್ಪಡಿಸಿ ಈ ವಿಷಯವನ್ನು ಪ್ರತ್ಯಕ್ಷವಾಗಿ ವೈಸ್ರಾಯರಲ್ಲಿ ಬಿನ್ನಯಿಸಿಕೊಳ್ಳಲಿಕ್ಕೆ ಏರ್ಪಡಿಸಿದ್ದಾರೆ. ಈ ರಾಯಭಾರಕ್ಕೆ ವೈಸ್ರಾಯರು ಅನುಮತಿಕೊಟ್ಟದ್ದಾರೆ. ಪರ್ಯವಸಾನವೇನಾಗುವುದೋ ನೋಡಬೇಕು. ಆದರೆ ಈ ಮಧ್ಯೆ ಮದ್ರಾಸು ಪ್ರಭುತ್ವದವರು ಆದಾಯವೃದ್ಧಿಯ ಮಾರ್ಗಾಂತರಗಳನ್ನು ನೋಡಿಕೊಳ್ಳದೆ ಉಪೇಕ್ಷಿಸಿಲ್ಲ. ಕೋರ್ಟುಫೀಜು ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಶಾಖೆಗಳ ಮೂಲಕ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಶಾಸನಸಭೆಯಲ್ಲಿ ಅಂಗೀಕಾರವನ್ನು ಪಡೆದುಕೊಂಡುಬಿಟ್ಟರು. ಮೊದಲಿಗಿಂತ ಈಗ ೧೦೦ಕ್ಕೆ ೨೦ರಷ್ಟು ಸ್ಟಾಂಪುಡ್ಯೂಟಿಯನ್ನೂ ರಿಜಿಸ್ಟ್ರೇಷನ್ ಫೀಜುಗಳನ್ನೂ ಹೆಚ್ಚಿಸಿಬಿಟ್ಟರು. ಈ ಏರ್ಪಾಟಿನಿಂದ ವರ್ಷಕ್ಕೆ ೭೦ ಲಕ್ಷ ರೂ.ಗಳ ಆದಾಯವೃದ್ಧಿಯಾಗುವುದಂತೆ. ರಿಜಿಸ್ಟ್ರೇಷನ್ ಶಾಖೆಯಲ್ಲಿ ವೆಚ್ಚವನ್ನು ಕಡಿಮೆಹಾಕುವುದಕ್ಕಾಗಿ ಸರ್ಕಾರದವರು ಯೋಚಿಸಿ, ಕೆಲವು ಕಡೆಯ ಆಫೀಸುಗಳನ್ನೇ ತೆಗೆದುಬಿಡಬೇಕೆಂದು ಉಜ್ಜುಗಿಸಿದರು. ಆದರೆ ದೂರದೂರಕ್ಕೆ ರಿಜಿಸ್ಟ್ರೇಷನ್ ಆಫೀಸುಗಳಿರುವುದಾದರೆ ಪ್ರಜೆಗಳಿಗೆ ಹೋಗಿಬರಲು ತೊಂದರೆಯು ಹೆಚ್ಚುವುದೆಂದು ಹಲವು ಕಡೆಗಳಿಂದ ಸರ್ಕಾರಕ್ಕೆ ದೂರುಬಂದ ಕಾರಣ ಆ ವಿಷಯ ವಿಚಾರವನ್ನು ಬಿಟ್ಟು ಸ್ಟಾಂಪು ಡ್ಯೂಟಿಯ ಹೆಚ್ಚುಗೆ ಮತ್ತು ಫೀಜಿನ ಹೆಚ್ಚುಗೆಯ ದಾರಿಯನ್ನೇ ನಿರ್ಧರಿಸಿದರಂತೆ.

ಅಂತೂ ದೇಶದಲ್ಲಿ ರಾಜಕೀಯ ವಾತಾವರಣವು ಪ್ರಕ್ಷುಬ್ಧವಾಗಿರುವ ಈ ಕಾಲದಲ್ಲೇ ಕಂದಾಯದ ಹೆಚ್ಚುಗೆಯ ಗಡಬಿಡಿಯೂ ಹೆಚ್ಚಿ ಪ್ರಜೆಗಳನ್ನು ಮತ್ತಷ್ಟು ದಿಗ್ಭ್ರಮೆಗೊಳಿಸುವ ಸ್ಥಿತಿಯು ಪ್ರಾಪ್ತವಾಗುತ್ತಲಿದೆ. ಸರ್ಕಾರಗಳು ವ್ಯಯವನ್ನು ಕುಗ್ಗಿಹಾಕುವ ಸಂಭವವನ್ನು ಸ್ವೀಕರಿಸದೆ ಹೋಗುವಾಗ ಆದಾಯಕ್ಕೆ ತಕ್ಕ ದಾರಿಯನ್ನು ಕಲ್ಪಿಸಿಕೊಳ್ಳಲೇ ಬೇಕಾಗುವುದು. ಅದಕ್ಕೆ ಎರಡೇ ಎರಡು ದಾರಿಗಳಿರುವುವು. ಒಂದು ಹೊಸ ತೆರುಗೆಯನ್ನು ವಿಧಿಸುವುದು, ೨ನೆಯದು ಸಾಲವನ್ನು ತೆಗೆಯುವುದು. ಇವೆರಡೂ ಪ್ರಜೆಗಳಿಗೆ ಅನಿಷ್ಟಕಾರಕಗಳೇ. ಅದುಕಾರಣ ಪ್ರಭುತ್ವಗಳು ವ್ಯಯಭಾರವನ್ನು ಕುಗ್ಗಿಸುವ ಮಾರ್ಗವನ್ನು ಅವಲಂಬಿಸದಿದ್ದರೆ ದೇಶಕ್ಕೆ ಕ್ಷೇಮವಾಗುವುದಿಲ್ಲ.

ನೆರೆಹೊರೆಯ ಪ್ರಭುತ್ವಗಳ ಈ ಆರ್ಥಿಕ ವೈಷಮ್ಯ ಸಂಘಟನೆಯ ಸಮಯದಲ್ಲೇ ಆರ್ಥಿಕ ದುಸ್ಥಿತಿ ಪರಿಮಾರ್ಜನೆಯ ಕಷ್ಟವು ಮೈಸೂರು ದೇಶಕ್ಕೂ ಪ್ರಾಪ್ತವಾಗಿದೆಯಷ್ಟೆ. ಇದಕ್ಕಾಗಿ ಏರ್ಪಡಿಸಲ್ಪಟ್ಟಿರುವ ಸಂಘದವರು ಯಾವ ತೆರದ ತೀರ್ಮಾನಗಳನ್ನು ಸೂಚಿಸುವುದಕ್ಕಿರುವರೋ ತಿಳಿಯದು. ಆಂಗ್ಲ ಪ್ರಭುತ್ವಗಳ ಆರ್ಥಿಕ ಶಾಖೆಯವರು ತೋರಿಸುವ ದಾರಿಯನ್ನೇ ಇವರೂ ಹಿಡಿಯದೆ ಬಿಡಲಾರರು. ಕಂದಾಯಗಳನ್ನು ಹೆಚ್ಚಿಸುವುದರ ಮೂಲಕ ವ್ಯಯಕ್ಕೆ ತಕ್ಕಷ್ಟು ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂಬುದೇ ಈ ಸಂಘದವರ ಸೂಚನೆಯಾಗಿ ಪರಿಣಮಿಸುವುದಾದರೆ ಅದನ್ನು ಯಾರೂ ಮರ್ಯಾದಿಸಲಾರರು. ಆ ಭಾಗ್ಯಕ್ಕಾಗಿ ಪ್ರಭುತ್ವದವರು ಇದನ್ನು ಏರ್ಪಡಿಸಿದುದೇ ವ್ಯರ್ಥವೆಂದು ಭಾವಿಸಲ್ಪಟ್ಟೀತು. ವ್ಯಯಭಾರವನ್ನು ತಗ್ಗಿಸುವುದರಲ್ಲಿ ನಮ್ಮಾ ಸಂಘದವರು ನಿರ್ದಾಕ್ಷಿಣ್ಯವಾಗಿ ತೋರಿಸುವ ಕೌಶಲವೂ ಸಾಹಸವೂ ಶ್ಲಾಘಾಪಾತ್ರತೆಯನ್ನು ಪಡೆಯುವುವು. ಭರತಖಂಡದ ಆಂಗ್ಲ ಪ್ರಭುತ್ವದವರು ಅನುಸರಿಸುವ ಪದ್ಧತಿಯನ್ನೇ ನಮ್ಮಲ್ಲೂ ಅನುಸರಿಸುವುದು ಧರ್ಮವಲ್ಲ. ಆ ಪ್ರಭುತ್ವಗಳ ಪರಿಸ್ಥಿತಿಯೇ ಬೇರೆ; ನಮ್ಮ ಸ್ವದೇಶಸಂಸ್ಥಾನದ ಸ್ವರಾಜ್ಯ ಪ್ರಭುತ್ವದ ಸ್ಥಿತಿಯೇ ಬೇರೆ. ಸಂಬಳಸಾರಿಗೆಗಳನ್ನು ತಗ್ಗಿಸದಿರುವುದಕ್ಕೆ ಆ ಪ್ರಭುತ್ವಗಳಲ್ಲಿ ವಿಶಿಷ್ಟ ಕಾರಣಗಳು ಇರುತ್ತಿರಬಹುದು. ಅಂಥ ಕಾರಣಗಳು ನಮ್ಮಲ್ಲಿರುವುದಿಲ್ಲ. ಪ್ರತಿ ಶಾಖೆಯಲ್ಲೂ ದುಂದುವೆಚ್ಚಗಳು ನಮ್ಮಲ್ಲಿ ವಿಶೇಷವಾಗಿವೆ. ದೊಡ್ಡದೊಡ್ಡ ಸಂಬಳವನ್ನು ತೆಗೆಯುವ ಉದ್ಯೋಗಿಗಳಲ್ಲಿ ಕಾಲುಪಾಲು ಜನರಿಗೆ ಅವರ ಸಂಬಳಕ್ಕೆ ತಕ್ಕಷ್ಟು ಕೆಲಸವೇ ಇಲ್ಲವೆಂದು ಹೇಳಬಹುದು. ದೊಡ್ಡ ಉದ್ಯೋಗಿಗಳ ಕೈಕೆಳಗಿನ ಸಿಬ್ಬಂದಿಗಳು ಮಿತಿಮೀರಿರುವ ಕಡೆಯಲ್ಲಿ ಬಹಳ ಸಂಕೋಚಮಾಡಬೇಕಾಗಿದೆ. ಮತ್ತು ಹಿಂದೆ ನಾವು ಹಲವು ಸಲ ಹೇಳಿರುವಂತೆ ಬತ್ಯಗಳ ರೂಪವಾಗಿ ಆಗುತ್ತಿರುವ ಹೇರಳವಾದ ಕೋಡಿಯನ್ನು ಮೊದಲು ಮುಚ್ಚಿಯೇ ತೀರಬೇಕು. ದಾಕ್ಷಿಣ್ಯಕ್ಕೋ ಮತ್ತಾವ ಕಾರಣಕ್ಕೋ ನೂತನ ಸ್ಥಾನಕಲ್ಪನೆಮಾಡಿ ಆಪ್ತಬಾಂಧವೇಷ್ಟಜನರನ್ನು ಪ್ರತಿಷ್ಠಾಪಿಸುತ್ತಿರುವ ಪದ್ಧತಿಯು ನಿಶ್ಶೇಷವಾಗಬೇಕು. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಮೈಸೂರು ಸರ್ಕಾರದ ಬೊಕ್ಕಸಕ್ಕೆ ಜ್ಯೇಷ್ಠಾಲಕ್ಷ್ಮಿಯನ್ನು ಪ್ರವೇಶಗೊಳಿಸಿರುವ ಭದ್ರಾವತೀ ಲೋಹಯಂತ್ರಾಲಯ ಮತ್ತು ಕೃಷ್ಣರಾಜಸಾಗರ ಈ ಕೆಲಸಗಳು ಬೇಗನೆ ಪರಿಸಮಾಪ್ತಿಗೊಂಡು ಹೋಗುವಂತೆ ಆಗುವುದು ಅವಶ್ಯಕವೆಂದು ನಮಗೆ ತೋರುವುದು. ನೂರೆಂಟು ಗುಳ್ಳೆನರಿ ಮೊಲ ಮೊದಲಾದುವುಗಳನ್ನು ಬೇಟೆಯಾಡುವುದಕ್ಕಿಂತಲೂ ಒಂದು ವ್ಯಾಘ್ರವನ್ನು ಪರಿಹರಿಸುವುದು ಮೃಗಯಾಕಾರ್ಯದಲ್ಲಿ ಹೇಗೆ ಪ್ರಶಂಸಾಪಾತ್ರವೋ ಆ ಮಾರ್ಗವನ್ನೇ ವ್ಯಯವನ್ನು ಕಡಿಮೆ ಮಾಡುವಲ್ಲಿ ಅನುಸರಿಸುವುದು ಪ್ರಯೋಜಕವು. ಮತ್ತು ವಿದ್ಯಾಶಾಖೆ, ವೈದ್ಯಶಾಖೆ, ಆರೋಗ್ಯರಕ್ಷಣಶಾಖೆ, ನ್ಯಾಯಪರಿಪಾಲನಶಾಖೆ ಇಂಥ ಅತ್ಯುಪಯುಕ್ತ ಶಾಖೆಗಳ ಭಾಗದಲ್ಲಿ ಸಂಕೋಚಕಲ್ಪನೆಮಾಡುವುದು ವಿಹಿತವಲ್ಲವೆಂಬುದನ್ನು ಅನುಭವಪೂರ್ಣರಾದ ಸಂಘ ಸಭಿಕರಿಗೆ ನಾವು ಒತ್ತಿ ಹೇಳಬೇಕಾಗಿಲ್ಲವೆಂದು ನೆನಸುತ್ತೇವೆ. ಲೋಹಮಾರ್ಗಶಾಖೆಯನ್ನು ಅಧೀನದಲ್ಲೇ ಇಟ್ಟುಕೊಳ್ಳುವುದರಿಂದ ಅಥವಾ M.S.M.R. ಕಂಪನಿಗೆ ವಹಿಸಿಬಿಡುವುದರಿಂದ ಉಂಟಾಗಬಹುದಾದ ಲಾಭಾಲಾಭಗಳನ್ನು ಸಂಘದವರು ಚೆನ್ನಾಗಿ ಪರ್ಯಾಲೋಚಿಸಿ ತೀರ್ಮಾನಿಸುವುದೂ ಅವಶ್ಯಕವಾಗಿದೆ. ಪ್ರಭುತ್ವದ ತಿರುಳನ್ನು ಕುಟ್ಟಿ ಹುಳವಿನಂತೆ ಕೊರೆಯುತ್ತಿರುವ ಇಂಜನಿಯರಿಂಗ್ ಶಾಖೆಯ ದುಂದುಗಾರಿಕೆಗೆ ಎಷ್ಟು ತೀಕ್ಷ್ಣವಾದ ಮದ್ದನ್ನು ಪಯೋಗಿಸಿದರೂ ಅಷ್ಟೂ ಪ್ರಯೋಜಕವೇ ಆಗುವುದು. ಮುಖ್ಯವಾಗಿ ಈಗ ಆಗಿರುವ ಸಾಲವು ಕ್ಲುಪ್ತಕಾಲದಲ್ಲಿ ತೀರುವುದಕ್ಕೂ, ಮುಂದೆ ಸಾಲ ಮಾಡುವ ಸಂಭವವು ಉಂಟಾಗದಿರುವುದಕ್ಕೂ ಅವಶ್ಯಕವಾದ ಸೂಚನೆಗಳು ಈ ಸಂಘದಿಂದ ಹೊರಟು, ತನ್ಮೂಲಕ ಸ್ಮರಣೀಯತೆಯನ್ನು ಸಂಘವು ಪಡೆದುಕೊಳ್ಳುವಂತಾಗಲೆಂಬುದೇ ನಮ್ಮ ಕೋರಿಕೆಯು.

IN TIME.

Who are those in our State, who have been frantically clamouring for liberty of speech and liberty of Press? We have been repeatedly and emphatically pointing out that outsiders, who have nothing to do with us here, come in whether invited or uninvited to sow the seeds of discontentment and disobedience to authority, and this act of mischief if unchecked is sure to produce serious effects later on, when it might not be possible to control the irresponsible following of the outside mischief-mongers.

The action taken by the police of the Bangalore City to stop this sort of propoganda was very timely. The crazy demagogues are the pests of these troublous days. Stop their pratings with a firm hand, and everything is safe. This is our straight opinion, but the roarers for liberty do not like this. With them freedom consists in permitting them and them alone to talk as they like without opposition.

A class of people began to criticize most unreasonably a just Order of Government and we found it necessary to open an English column to fight these non-co-operators. With that just cause as our "Motto," we have been trying our best to bring to light the hollowness of these agitators. This has greatly irritated our young contemporary of the Mysore Chronicle, who desires us to stop our un-English column. The public should know the truths and facts, and it matters not that the language in which it is told is not strictly literary and classic as our esteemed contemporary professes to possess both, and within that cover of gloss and glamour she roars for liberty and at the same time does not permit us the freedom of a short English column. Well! We thank her for her advice and at the same time tell her that our English column has come to existence "in time" and will be stopped when the mission for which it was ushered is done. Have toleration. Every thing will come "In Time."

ಪದ್ಧತಿಯಂತೆ ಹುಣಸುಮಾಗನಹಳ್ಳಿಯ ಶ್ರೀ ಚಂದ್ರಮೌಳೀಶ್ವರಸ್ವಾಮಿಯವರ ರಥೋತ್ಸವ ಕಾರ್ಯಗಳು ಇದೇ ಫಾಲ್ಗುಣ ಶುದ್ಧ ೧೨ ಯಿಂದ ಬಹುಳ ೨ ಬುಧವಾರದವರೆಗೆ ನಡೆಯುವುವೆಂದು ವ್ಯವಸ್ಥಾಪಕರು ತಿಳಿಯಿಸಿರುತ್ತಾರೆ.

ಪಾರ್ಲಿಮೆಂಟು ಮತ್ತು ಭರತಖಂಡ.

ಭರತಖಂಡವು ತೋರಿಸುತ್ತಿರುವ ಸ್ವರಾಜ್ಯದಾಹಕ್ಕೆ ಭಾರತಪ್ರಭುತ್ವವು ಶಾಂತಿಯನ್ನೇನೂ ಮಾಡುವ ಹಾಗಿಲ್ಲ. ಅದರ ಕೈಯಲ್ಲಿ ಆ ಅಧಿಕಾರವು ಇಲ್ಲವೂಇಲ್ಲ. ಆದಕ್ಕಾಗಿ ಅದು ಯಾವಾಗಲೂ ಪಾರ್ಲಿಮೆಂಟಿನ ಮತ್ತು ಮಂತ್ರಿಮಂಡಲದ ಕಡೆಗೆ ಬೆರಲನ್ನು ತೋರಿಸುತ್ತಲೇ ಬರುತ್ತದೆ. ಕಳೆದ ಪಕ್ಷದಲ್ಲಿ ಪಾರ್ಲಿಮೆಂಟಿನೊಳಗೆ ಭರತಖಂಡದ ವಿಷಯವಾಗಿ ಕೆಲ ಚರ್ಚೆಗಳು ನಡೆದಿರುತ್ತವೆ. ಅವುಗಳನ್ನು ನೋಡುವಾಗ್ಗೆ ಭರತಖಂಡಕ್ಕೆ ಸ್ವರಾಜ್ಯದಾನಮಾಡುವ ವಿಷಯದಲ್ಲಿ ಸಾಮ್ರಾಜ್ಯಪ್ರಭುತ್ವದವರ ಹಸ್ತವು ಎಷ್ಟು ಬಿಗಿಯಾಗಿರುವುದೆಂಬುದು ಗೊತ್ತಾಗುತ್ತದೆ. ಮತ್ತು ಈ ಭರತಖಂಡದಲ್ಲಿನ ಅಸಹಾಯವಾದಿಗಳು ನಡೆಯಿಸುತ್ತಿರುವ ಹರಿತಾಳ ಮೊದಲಾದ ಗದ್ದಲಗಳೂ, ಸರ್ಕಾರದ ಕಾರ್ಯಸ್ತಂಭನ ಪ್ರಯತ್ನಗಳೂ ಸಾಮ್ರಾಜ್ಯಪ್ರಭುತ್ವದವರ ಮನಸ್ಸನ್ನು ಎಷ್ಟು ರೋಷಾಕ್ರಾಂತ ಮಾಡಿರುತ್ತವೆಂಬುದೂ ಸಹ ಗೊತ್ತಾಗುತ್ತದೆ. ಫೆಬ್ರುವರಿ ತಾ|| ೧೮ ರಲ್ಲಿ ಕಾಮನ್ಸ್ ಸಭೆಯೊಳಗೆ ಮಿ|| ಜಾಯಿನ್ಸ್‌ಹಿಕ್ಸ್ ಎಂಬ ಸಭಿಕರು ಒಂದು ತೀರ್ಮಾನವನ್ನು ತಂದು ಭರತಖಂಡದಲ್ಲಿ ಈಗ ಉಂಟಾಗಿರುವ ಅನಾಹುತಗಳಿಗೆಲ್ಲಾ ಕಳೆದ ಮೂರುವರ್ಷಗಳಿಂದಲೂ ಸ್ಟೇಟ್‌ಸೆಕ್ರೆಟರಿಯವರು ಅವಲಂಬಿಸಿರುವ ಪರಿಪಾಲನಾ ವಿಧಾನವೇ ಕಾರಣವೆಂತಲೂ, ಅದುಕಾರಣ ಪ್ರಭುತ್ವದವರು ಅವರನ್ನು ತೊಲಗಿಸಬೇಕೆಂತಲೂ, ತಕ್ಕ ಚರ್ಯೆಯನ್ನವಲಂಬಿಸಿ ದೇಶರಕ್ಷಣೆ ಮಾಡಬೇಕೆಂತಲೂ, ಮತ್ತು ಗಾಂಧಿಯವರನ್ನು ಕೆಲವರ್ಷಗಳ ಹಿಂದೆಯೇ ಹಿಡಿದುಹಾಕಬೇಕಾಗಿದ್ದಿತೆಂತಲೂ ಉಪಪಾದಿಸಿದರು. ಇನ್ನು ಕೆಲರು ಇದನ್ನೇ ಪುಷ್ಟೀಕರಿಸಿದರು. ಇದಕ್ಕೆ ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೂಗ್‌ರವರು ಉತ್ತರಕೊಡುವಾಗ್ಗೆ—"ಗಾಂಧಿಯವರನ್ನು ಹಿಡಿಯಲಿಕ್ಕೆ ಕೆಲದಿನಗಳ ಹಿಂದೆಯೇ ಅಪ್ಪಣೆ ಕೊಡಲ್ಪಟ್ಟಿದ್ದಿತು. ಆದರೆ ಅವರೂ ಅವರ ಅನುಚರರೂ ಸಹ ಅಸಹಾಯೋದ್ಯಮವನ್ನೂ ಇತರ ಶಾಸನವಿರುದ್ಧಕಾರ್ಯವನ್ನೂ ಅವಲಂಬಿಸಕೂಡದೆಂದು ತೀರ್ಮಾನಿಸಿದ ಕಾರಣ, ಅವರು ಹಾಗೆ ಶಾಸನವಿರುದ್ಧ ಕಾರ್ಯಗಳನ್ನು ಆಚರಿಸದೆ ಎಲ್ಲಿಯವರೆಗೆ ಇರುವರೋ ಅದನ್ನು ನಿರೀಕ್ಷಿಸುವುದಕ್ಕಾಗಿ ಆ ಅಪ್ಪಣೆಯನ್ನು ನಿಲ್ಲಿಸಬೇಕಾಯಿತು. ಭರತಖಂಡವು ಸ್ವಪರಿಪಾಲನವನ್ನು ಹೊಂದುವ ವಿಷಯದಲ್ಲಿ ಪಾರ್ಲಿಮೆಂಟಿನವರು ಎಂದಿಗೂ ಅಡ್ಡಬರುವುದಿಲ್ಲ. ಆದರೆ ಭರತಖಂಡಕ್ಕೆ ಆಂಗ್ಲಸಂಬಂಧವನ್ನೇ ತಪ್ಪಿಸುವುದು, ಯುವಸಾರ್ವಭೌಮರಿಗೆ ಸ್ವಾಗತವನ್ನು ಕೊಡದಂತೆ ಮಾಡುವುದು, ಚಕ್ರವರ್ತಿಯವರ ಮೇಲೆ ಪ್ರಜೆಗಳಿಗಿರುವ ಭಕ್ತಿಯನ್ನು ತೊಲಗಿಸಲಿಕ್ಕಾಗಿ ಮಾಡುವ ಪ್ರಯತ್ನ—ಇವುಗಳಿಂದ ಭಾರತೀಯರ ಆಶಯಗಳ ಮೇಲೆ ಆಂಗ್ಲರಿಗೆ ಇರುವ ಸಾನುಭೂತಿಯು ಸ್ವಲ್ಪ ತಗ್ಗಿಹೋಗುವುದು. ಪಾರ್ಲಿಮೆಂಟಿನವರು ಭರತಖಂಡದ ಹಕ್ಕನ್ನು ನಿರಾಕರಿಸುವವರಲ್ಲವಾದರೂ ಭರತಖಂಡದಲ್ಲಿ ನಮ್ಮ ಸಾಮ್ರಾಜ್ಯದ ಅಸ್ತಿತ್ವಕ್ಕೇ ಭಂಗತರಲು ಯತ್ನಿಸಿ ಆ ದೇಶದಲ್ಲಿ ನಮ್ಮ ವಿಧ್ಯುಕ್ತಕರ್ಮಗಳನ್ನು ನೆರವೇರಿಸಲಿಕ್ಕೆ ಅವಕಾಶವಿಲ್ಲದಂತೆ ಅಡ್ಡಿಗಳನ್ನು ಮಾಡುವುದಾದರೆ ಅಂಥ ಪ್ರತಿಘಟನೆಗೆ ಆಂಗ್ಲರು ತಕ್ಕ ಪ್ರತ್ಯುತ್ತರವನ್ನು ಕೊಟ್ಟೇಕೊಡುವರು. ಭರತಖಂಡವು ಮಿತಿಮೀರಿದ ದುರಾಶೆಯನ್ನಿಟ್ಟುಕೊಂಡು ಪ್ರಪಂಚದಲ್ಲೆಲ್ಲಾ ಅತ್ಯಂತ ಬಲಿಷ್ಠವಾಗಿರುವ ಆಂಗ್ಲಜಾತಿಯನ್ನು ಪ್ರತಿಭಟಿಸಲಾರದು. ಭರತಖಂಡದ ಅಶಾಂತಿಗೆ ಆರ್ಥಿಕಪರಿಸ್ಥಿತಿಯ ಕೊರತೆಯೂ, ಅಲ್ಲಿ ಕಂದಾಯಗಳು ಹೆಚ್ಚಾಗಿರುವುದೂ, ಪದಾರ್ಥಗಳ ಬೆಲೆ ಹೆಚ್ಚಿರುವುದೂ ಅಲ್ಲಿಯ ಪ್ರಜೆಗಳ ಬಡತನವೂ ಕಾರಣವಾಗಿವೆ. ಆ ದೇಶದಲ್ಲಿ ಕೃಷಿ ಶಿಲ್ಪಗಳನ್ನು ಅಭಿವೃದ್ಧಿಪಡಿಸಿದರೆ ಅಶಾಂತಿಯು ನಿರ್ಮೂಲವಾಗುವುದು. ತುರ್ಕಿಗ್ರೀಕರ ವಿರೋಧವು ಇನ್ನೂ ಬೆಳೆಯುತ್ತಿರುವುದು ಪ್ರಪಂಚದ ಅಶಾಂತಿಗೆ ಕಾರಣವಾಗಿದೆ. ಪಂಜಾಬು ಸಂಗತಿಯೂ ಸಹ ಆ ಭರತಖಂಡದ ಆಂದೋಳನಕ್ಕೆ ಕಾರಣವಾಗಿದೆ. ಬೋಲ್ಷೆವಿಕ್ಕರ ಪ್ರಯತ್ನವೂ ಸ್ವಲ್ಪಮಟ್ಟಿಗೆ ಕಾರಣವಾಯಿತು.'' ಎಂದು ಹೇಳಿ ತಮ್ಮ ಉತ್ತರವಾದಿತ್ವವು ಏನೂ ಇಲ್ಲವೆಂದು ತೋರಿಸಿಕೊಂಡ ಬಳಿಕ, ಈಗ ಕೊಟ್ಟಿರುವ ರಾಜಕೀಯ ಸಂಸ್ಕರಣಗಳು ಚೆನ್ನಾಗಿ ಕೆಲಸಮಾಡುತ್ತಿವೆಯೆಂದೂ, ಅದು ಭವಿಷ್ಯದಭಿವೃದ್ಧಿಗೆ ಸೂಚಕವೆಂದೂ, ಶಾಂತಿಯಿಂದ ಕೆಲಕಾಲದವರೆಗೆ ಅದನ್ನೇ ಸಾಗಿಸಿಕೊಂಡು ಹೋಗಬೇಕೆಂದೂ, ಈಮಧ್ಯೆ ಕ್ಲುಪ್ತಕಾಲದೊಳಗೆ ಪಾರ್ಲಿಮೆಂಟಿನವರು ಅವನ್ನು ಬದಲಾಯಿಸಲೂ ಕೂಡದು ವಿಶಾಲವನ್ನೂ ಮಾಡಕೂಡದೆಂದೂ, ಈಗಣ ಸಂಸ್ಕರಣಗಳು ಎಷ್ಟು ಮಟ್ಟಿಗೆ ಸಫಲವಾದುವೆಂಬುದನ್ನು ಪರೀಕ್ಷಿಸಿದನಂತರವೇ ಪಾರ್ಲಿಮೆಂಟಿನವರು ಮುಂದೆ ಕೆಲಸಂಸ್ಕರಣಗಳನ್ನು ಕೊಡುವರೆಂದೂ, ಆದರೆ ಭರತಖಂಡದಲ್ಲಿ ಕೆಲವರು ಆಂಗ್ಲಸಾಮ್ರಾಜ್ಯದಿಂದ ತಾವು ಕಳೆದುಕೊಂಡು ಹೋಗಬೇಕೆಂದು ಯೋಚಿಸುತ್ತಿದ್ದಾರೆ. ಕಳೆದ ಮಹಾಯುದ್ಧದಲ್ಲಿ ಯಾವುದಕ್ಕಾಗಿ ಸಾವಿರಗಟ್ಟಲೆ ಭಾರತೀಯರೂ ಆಂಗ್ಲರೂ ಬಲಿಯಾದರೋ ಅಂಥ ಆಂಗ್ಲದೇಶದಲ್ಲಿ ಭಾರತೀಯರು ನಂಬುಗೆಯಿಟ್ಟು ಪಾರ್ಲಿಮೆಂಟಿನವರು ಕೊಟ್ಟುದರಲ್ಲಿ ತೃಪ್ತಿಪಟ್ಟುಕೊಂಡಿದ್ದರೆ ಆಗ ಆಂಗ್ಲದೇಶವು ಭರತಖಂಡಕ್ಕೆ ಸ್ವಾತಂತ್ರ್ಯವನ್ನು ಕೊಡುವುದೇ ಹೊರತು ಹಾಗಲ್ಲದೆಹೋದರೆ ಸ್ವಾತಂತ್ರ್ಯವನ್ನು ಎಂದಿಗೂ ಕೊಡುವುದಿಲ್ಲವೆಂದೂ, ಮತ್ತು ಅರಾಜಕತ್ವವನ್ನೂ ಕೊಡಗೊಡಿಸದೆಂದೂ, ದೇಶಕ್ಕೆ ಅದು ಅಭ್ಯುದಯವನ್ನು ಕೊಡುವುದೇ ಹೊರತು ಕ್ಷೀಣತೆಯನ್ನುಂಟುಮಾಡದೆಂದೂ ಹೇಳಿದರು. ಕಡೆಗೆ ಹಿಕ್ಸ್‌ರವರ ತೀರ್ಮಾನವು ಬಿದ್ದುಹೋಯಿತು. ಈಗಣ ಭಾರತಪ್ರಭುತ್ವ ಚರ್ಯೆಯಲ್ಲಿ ನಮಗೆ ನಂಬುಗೆಯಿದೆಯೆಂಬಭಿಪ್ರಾಯವು ಬಹುಮಂದಿಸಭಿಕರಿಂದ ಅಂಗೀಕೃತವಾಯಿತು.

ಇದರ ಮಧ್ಯದಲ್ಲಿ ಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರೂ ಕೂಡ ಸಮಯೋಚಿತವಾಗಿ ಒಂದು ಭಾಷಣವನ್ನು ಮಾಡಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ—"ಭರತಖಂಡದ ಈಗಣ ಪರಿಸ್ಥಿತಿಗಳು ಕ್ಲಿಷ್ಟವಾಗಿದ್ದರೂ ಭಯಪಡಬೇಕಾಗಿಲ್ಲ. ನಾವು ಅದಕ್ಕೆ ಎದೆಗೊಡಬಲ್ಲೆವು. ಆದರೆ ಅಲ್ಲಿಯ ಸ್ಥಿತಿಯನ್ನು ಪಾರ್ಲಿಮೆಂಟಿನವರೂ ಸಾಮ್ರಾಜ್ಯಪ್ರಭುತ್ವದವರೂ ಎಚ್ಚರಿಕೆಯಿಂದ ಪರಿಶೀಲಿಸುತ್ತಿರಬೇಕು. ಭರತಖಂಡದ ಈ ಆಂದೋಳನವು ೨ ವರ್ಷಗಳಿಂದೀಚೆಗೆ ಉಂಟಾದುದೆಂದು ಹೇಳುವುದು ಸರಿಯಲ್ಲ. ಭಾರತೀಯರು ಆಂಗ್ಲ ವಿದ್ಯಾಪೀಠಗಳಲ್ಲಿ ಓದಿ ಪೂರ್ವಾತ್ಯಾಚಾರಗಳನ್ನೂ ಈಗಣ ನಾಗರಿಕಾಚಾರಗಳನ್ನೂ ಹೊಂದಿಸಿಕೊಳ್ಳುತ್ತಾ ಬಂದುದರಿಂದಲೇ ಇಂಥ ಸ್ಥಿತಿಯು ಪ್ರಾಪ್ತವಾಯಿತು. ಚೀನಾ ಜಪಾನುಗಳ ಚರಿತ್ರೆಯಂತೆಯೇ ಭಾರತ ಚರಿತ್ರೆಯೂ ಆಗಿದೆ. ಯುದ್ಧದಿಂದ ಆಂದೋಳನವು ತೀಕ್ಷ್ಣವಾಯಿತು. ತುರ್ಕಿಯೊಡನೆ ತಕ್ಕ ಸಂಧಿಯಾದರೆ ಇದು ಸ್ವಲ್ಪ ತಗ್ಗುವುದು. ಪಾರ್ಲಿಮೆಂಟಿನ ಚರ್ಚೆಗಳಮೇಲೆ ಭಾರತೀಯರ ಅಭಿಪ್ರಾಯಗಳು ಆಧಾರಪಟ್ಟುಕೊಂಡಿರುವುವು. ಅದುಕಾರಣ ಚರ್ಚಾಸಮಯದಲ್ಲಿ ಸಭಿಕರು ಎಚ್ಚರಿಕೆಯಿಂದಿರಬೇಕು. ಭರತಖಂಡದ ವಿಷಯದಲ್ಲಿ ನಮ್ಮ ಕರ್ತವ್ಯವನ್ನು ನೆರವೇರಿಸಲಿಕ್ಕೆ ನಾವು ಮನಸ್ಸಿಲ್ಲದವರಾಗಿರುವರೆಂದು ನಮ್ಮ ಚರ್ಚೆಗಳಿಂದ ಭಾರತೀಯರು ತಿಳಿದುಕೊಳ್ಳುವುದಾದರೆ ಅದರಿಂದ ಬಹಳ ಶೋಚನೀಯವಾದ ಫಲವುಂಟಾಗುವುದು. ಈಗ ಕೊಟ್ಟಿರುವ ಸಂಸ್ಕರಣಗಳನ್ನು ಸಫಲಗೊಳಿಸಲಿಕ್ಕೆ ಭರತಖಂಡದ ವಿದ್ಯಾಧಿಕ ಜನರು ಅವಕಾಶವನ್ನುಂಟುಮಾಡಬೇಕು. ಆಂಗ್ಲದೇಶದಲ್ಲಿ ನೂರು ವರ್ಷಗಳೊಳಗೆ ಜರುಗತಕ್ಕ ಮಾರ್ಪು ಭರತಖಂಡದೊಳಗೆ ಸ್ವಲ್ಪಕಾಲದಲ್ಲೇ ಜರುಗಿಹೋಗುವುದೆಂಬ ಸೂತ್ರವನ್ನು ಬೋಧಿಸತಕ್ಕವರು ಸತ್ಯದೂರವೂ ಅಪಾಯಕರವೂ ಆದ ಸೂತ್ರವನ್ನು ಬೋಧಿಸಿದವರಾಗುವರು. ಭರತಖಂಡದಲ್ಲಿ ಪ್ರಭುತ್ವಾಧಿಕಾರವನ್ನು ನಿರಾತಂಕವಾಗಿ ಸ್ಥಾಪಿಸಬೇಕು. ಅಲ್ಲಿಯ ವೈಸ್ರಾಯರು ಶಾಸನೋಲ್ಲಂಘನೆಯು ದೇಶಕ್ಕೆ ಅಪಾಯಕರವೆಂದೂ, ಅದನ್ನು ತೀವ್ರವಾಗಿ ಅಣಗಿಸಿಬಿಡುತ್ತೇವೆಂದೂ ಪ್ರಕಟಿಸಿರುವುದು ಸಂತೃಪ್ತಿಕರವಾಗಿದೆ. ಅಧಿಕಾರ ಸ್ಥಾಪನೆಗಾಗಿ ಭಾರತಪ್ರಭುತ್ವದವರು ಪರಿಗ್ರಹಿಸುವ ಚರ್ಯೆಯನ್ನೆಲ್ಲಾ ಆಂಗ್ಲಪ್ರಭುತ್ವದವರು ಅನುಮೋದಿಸುವರು. ಭರತಖಂಡವನ್ನು ನಾವು ಬಿಟ್ಟುಹೋಗುತ್ತೇವೆಂಬ ಸುಳ್ಳುಸುದ್ದಿಗಳನ್ನು ಕೆಲರು ಭರತಖಂಡದಲ್ಲೂ ಆಂಗ್ಲದೇಶದಲ್ಲೂ ಸಹ ಹರಡುತ್ತಿದ್ದಾರೆ. ಇದು ದುರ್ಮಾರ್ಗತನ. ಎಂಥ ಪರಿಸ್ಥಿತಿ ಪ್ರಾಪ್ತವಾದರೂ ಏನು ಬಂದರೂ ಆಂಗ್ಲ ಸಾರ್ವಭೌಮರ ಸಾಮ್ರಾಜ್ಯದ ಪರಿಮಿತಿಯಲ್ಲಿ ಲೇಶಮಾತ್ರವನ್ನಾದರೂ ತಗ್ಗಿಸಲಿಕ್ಕೆ ಯೋಚಿಸುವುದೂ, ಭರತಖಂಡದಲ್ಲಿ ನಮ್ಮಮೇಲೆ ಇಡಲ್ಪಟ್ಟಿರುವ ಭಾರವನ್ನು ಬಿಟ್ಟುಕೊಡುವುದೂ ಸಹ ಅಮಾನುಷವೂ ಮತ್ತು ಅಪಮಾನಕರವೂ ಆದ ಕಾರ್ಯವಾಗಿರುತ್ತದೆ. ನಾವು ಭರತಖಂಡವನ್ನು ಬಿಟ್ಟರೆ ಏನಾಗುತ್ತದೆ?—ಗಾಂಧಿಯವರು ಒಂದು ಹತ್ತುಲಕ್ಷಮಂದಿ ಭಾರತೀಯರನ್ನಾದರೂ ಕೊಲೆ ಸುಲಿಗೆಗಳ ಅವಾಂತರಗಳಿಂದ ತಪ್ಪಿಸಬಲ್ಲರೆ? ಆಂಗ್ಲರು ಇದ್ದುಕೊಂಡಿದ್ದರೂ ಮಲಬಾರಿನಲ್ಲಿ ಏನು ಜರುಗಿರುವುದೋ ಅದನ್ನು ನೋಡಿದರೆ ಈ ವಿಷಯವು ಸುವ್ಯಕ್ತವಾಗುವುದು. ಭರತಖಂಡವನ್ನು ಒಂದು ಜಾತಿಯನ್ನಾಗಿ ಎಣಿಸಲು ಅವಕಾಶವಿಲ್ಲ. ಆಂಗ್ಲ ಪರಿಪಾಲನೆಯಿಂದಲೇ ಭರತಖಂಡದಲ್ಲಿ ಐಕ್ಯವುಂಟಾಗಿರುವುದು. ಮತ್ತೆ ಅದನ್ನು ಆಂಗ್ಲರು ಬಿಟ್ಟುಹೋದರೆ ಅರಾಜಕವೂ ಗಾಗಳವೂ ಮೊದಲಿನಂತೆ ಹಬ್ಬುವುವು.''

ಈ ಪ್ರಕಾರವಾಗಿ ಸ್ಟೇಟ್ ಸೆಕ್ರೆಟರಿಯವರೂ ಮುಖ್ಯಮಂತ್ರಿಯವರೂ ಮಾಡಿರುವ ಸಿಂಹಗರ್ಜನೆಯು ಭರತಖಂಡದ ತತ್‌ಕ್ಷಣ ಸ್ವರಾಜ್ಯವಾದಿಗಳ ಮನಸ್ಸಿನಲ್ಲಿ ಯಾವತೆರದ ಉರಿಯನ್ನೆಬ್ಬಿಸಿರಬಹುದೆಂಬುದನ್ನು ಅವರೇ ಬಲ್ಲರು. ಮುಖ್ಯವಾಗಿ ಬೀದಿಯ ಫಕೀರರಂತೆ ಮೊಂಡತನದ ಕಾಯಕದಿಂದ ಸ್ವರಾಜ್ಯವನ್ನು ಇಷ್ಟು ಬೇಗನೆ ಸಾಧಿಸಿಕೊಳ್ಳುತ್ತೇವೆಂದು ಹಟತೊಟ್ಟು ಸರ್ಕಾರಕ್ಕೆ ಪ್ರತಿಭಟಿಸಿ ಅಸಹಾಯೋದ್ಯಮದಿಂದ ಅವರಿಗೆ ಕಿರುಕುಳವನ್ನು ಹೆಚ್ಚಿಸುತ್ತ ಬಂದಂತೆಲ್ಲಾ ಭರತಖಂಡದ ಸ್ವರಾಜ್ಯಪ್ರಾಪ್ತಿಯು ದೂರವಾಗುತ್ತ ಹೋಗುವುದೇ ಹೊರತು ಸಮೀಪಸ್ಥವಾಗುವುದಕ್ಕೆ ಸಾಮ್ರಾಜ್ಯ ಪ್ರಭುತ್ವದವರು ಎಂದಿಗೂ ಅವಕಾಶಕೊಡುವುದಿಲ್ಲವೆಂಬುದು ಮೇಲೆ ಕಂಡ ಭಾಷಣಗಳಿಂದ ಸರ್ವರಿಗೂ ಗೊತ್ತಾಗುತ್ತದೆ. ಯುವಸಾರ್ವಭೌಮರ ವಿಷಯದಲ್ಲಿ ಗಾಂಧಿಯನುಚರರು ತೋರಿಸಿದ ನಡತೆಯು ಆಂಗ್ಲಜನತೆಯನ್ನೇ ಕ್ಷುಬ್ಧಗೊಳಿಸಲಿಕ್ಕೆ ಹೇಗೆ ಕಾರಣವಾಯಿತೆಂಬುದನ್ನು ಮೇಲೆಕಂಡ ಭಾಷಣಗಳ ಧ್ವನಿಯಿಂದ ಊಹಿಸಬಹುದು. ಸದ್ಯಃ ಸ್ವರಾಜ್ಯಪ್ರಾಪ್ತಿಗೆ ಗಡುಬನ್ನಿಡುವುದನ್ನು ಅಸಹಾಯವಾದಿಗಳು ಪರಿತ್ಯಜಿಸಿದುದು ಜಾಣತನವಾಯಿತು. ದಿನದಿನಕ್ಕೆ ಅಸಹಾಯೋದ್ಯಮವನ್ನೇ ದೂಷೀಕರಿಸುವ ಯೋಗವು ಕೂಡ ಬರದೆಹೋಗಲಾರದು. ಬಲಿಷ್ಠವಾದ ಸಾಮ್ರಾಜ್ಯಪ್ರಭುತ್ವದ ಪ್ರೀತಿಯನ್ನು ಸಂಪಾದಿಸುವ ಮೂಲಕ ಕ್ರಮಾನುಗತ ಸ್ವರಾಜ್ಯವನ್ನುಗಳಿಸುವುದೇ ಭರತಖಂಡಕ್ಕೆ ಶ್ರೇಯಸ್ಕರವು.

ಕಾಂಗ್ರೆಸ್ ಸ್ಥಾಯಿಸಂಘದ ತೀರ್ಮಾನವು.

ದಿಲ್ಲಿಯಲ್ಲಿ ಕಳೆದ ತಿಂಗಳು ತಾ|| ೨೪-೨೫ ರಲ್ಲಿ ರಾಷ್ಟ್ರೀಯ ಮಹಾಸಭಾ ಸ್ಥಾಯಿಸಂಘವೂ ಕಾರ್ಯಕಾರಿ ಸಂಘವೂ ಸೇರಿ ಬರ್ಡೋಲಿಯಲ್ಲಿ ಆಗಿದ್ದ ನಿರ್ಧಾರವನ್ನು ಕುರಿತು ಚರ್ಚೆನಡೆಯಿಸಿದುದರಲ್ಲಿ ಶಾಸನೋಲ್ಲಂಘನೆಯನ್ನು ಸಮಷ್ಟಿಯಾಗಿ ನಡೆಯಿಸದೆ, ಆಯಾ ಪ್ರಾಂತಿಕ ಕಾಂಗ್ರೆಸ್ ಸಂಘಗಳ ಅನುಮತಿಯನ್ನು ಪಡೆದು ವ್ಯಕ್ತಿಮಾತ್ರವಾಗಿ ಎಂದರೆ ತಂತಮ್ಮ ಉತ್ತರವಾದಿತ್ವದ ಮೇಲೆ ಯಾರು ಬೇಕಿದ್ದರೂ ಶಾಸನೋಲ್ಲಂಘನೆಯನ್ನು ಮಾಡಬಹುದೆಂಬ ಅಭಿಪ್ರಾಯದ ತೀರ್ಮಾನವು ಆಗಿರುವುದು. ಬರ್ಡೋಲಿ ತೀರ್ಮಾನವು ಶಾಸನೋಲ್ಲಂಘನೆಯ ವಿಷಯದಲ್ಲಿ ಹಾಕಿದ್ದ ಕಟ್ಟೆಯಲ್ಲಿ ಒಂದು ಕಲ್ಲನ್ನು ಇದರಿಂದ ಕಿತ್ತುಹಾಕಿದಂತಾಯಿತು. ಮ|| ಗಾಂಧಿಯವರು ದೇಶಪರಿಸ್ಥಿತಿಯನ್ನು ನೋಡಿ ಪೂರ್ಣವಾಗಿ ದೀರ್ಘಾಲೋಚನೆ ಮಾಡಿ ಶಾಸನೋಲ್ಲಂಘನೆಯು ಅನುಷ್ಠೇಯವಲ್ಲವೆಂದು ನಿರ್ಧರಿಸಿದ್ದರು. ಆದರೆ ದೇಶದಲ್ಲಿ ಅಶಾಂತಿಯನ್ನು ಹಬ್ಬಿಸಿ ಏನನ್ನೋ ಮಾಡಬೇಕೆಂದಿರುವವರಿಗೆ ಅದು ಸ್ವೈರಣೆಗೆ ಬರುವುದುಂಟೆ? ಮಹಾತ್ಮ ಮಾಹಾತ್ಮ ಎಂದು ಅವರನ್ನು ಉಬ್ಬಿಸಿ ಮುಂಜೂರಿಗೆ ನಿಲ್ಲಿಸಿ ಎಷ್ಟೋದೂರ ಕಾರ್ಯವನ್ನು ಸಾಗಿಸಿದರು. ಕಡೆಗೆ ಅವರಿಗೆ ಒಳಗಣ ಲೋಪಗಳು ಗೊತ್ತಾದ ಬಳಿಕ ಅವರು ಎಚ್ಚತ್ತು ನಡೆಯಲು ಉಪಕ್ರಮಿಸಿದರು. ಈಗ ಅವರ ಅನುಯಾಯಿಗಳೆನಿಸಿಕೊಂಡಿದ್ದವರೇ ಅವರ ಮೇಲೆ ತಿರುಗಿಬಿದ್ದು ಇವರು ರಾಜಕೀಯ ನಾಯಕರಾಗಿರುವುದಕ್ಕೆ ಅರ್ಹರಲ್ಲವೆಂತಲೂ, ಸ್ಥಾನವನ್ನು ಬಿಟ್ಟು ಕದಲಬಹುದೆಂತಲೂ, ಮೊದಲಾಗಿ ವಾಗ್ಬಾಣಗಳನ್ನು ಪ್ರಯೋಗಿಸಲುಪಕ್ರಮಿಸಿರುವರು. ಅದನ್ನು ತಡೆದುಕೊಳ್ಳಲಾರದೆ ವ್ಯಕ್ತಿಮಾತ್ರದ ಶಾಸನೋಲ್ಲಂಘನೆಗೆ ಗಾಂಧಿಯವರು ಒಪ್ಪಿರಬಹುದೇ ಹೊರತು ಬೇರೆಯೇನೂ ಕಾರಣವಿದ್ದಂತೆ ನಮಗೆ ತೋರುವುದಿಲ್ಲ. ಅಸಹಾಯೋದ್ಯಮವೇ ಸರಿಯಲ್ಲವೆಂದು ಬೋಧಿಸಿ ಉಪನ್ಯಾಸಮಾಡಿದ ಪಂಡಿತ ಮದನಮೋಹನ ಮಾಳವ್ಯರ ಮಾತಿಗೆ ಸಭೆಯಲ್ಲಿ ಬೆಲೆಯೇ ಇಲ್ಲದೆ ಹೋಯಿತು. ಅಸಹಾಯೋದ್ಯಮಾದಿಗಳನ್ನು ಬಿಟ್ಟು ಸಹಕಾರದಿಂದ ವರ್ತಿಸಿ ಶಾಸನ ಸಭೆ ಮೊದಲಾದುವುಗಳ ಸ್ಥಾನವನ್ನು ಪಡೆದು ಹೊಡೆದಾಡುವ ಮೂಲಕ ಸ್ವರಾಜ್ಯಸಾಧನೆಮಾಡುವುದೇ ಯುಕ್ತವೆಂದು ದಿಲ್ಲಿ ಸಭೆಯಲ್ಲಿ ಸೂಚಿಸಲಿಕ್ಕಿದ್ದ ಶ್ರದ್ಧಾನಂದರವರು ತಮ್ಮ ಬೇಳೆಯೇನೂ ಬೆಯ್ಯಲಾರದೆಂದು ಯೋಚಿಸಿಕೊಂಡೋ ಏನೋ ಸಭೆಗೇ ಬಾರದೆಹೋದರು. ಬರ್ಡೋಲಿ ತೀರ್ಮಾನದ ವಿಷಯವನ್ನು ಕುರಿತು ಸಾಮ್ರಾಜ್ಯಶಾಸನ ಸಭೆಯಲ್ಲಿ ಮಾಡಲ್ಪಟ್ಟ ಪ್ರಶ್ನೆಗೆ ಸರ್ ವಿಲಿಯಂ ವಿನ್‌ಸೆಂಟ್‌ರವರು—"ಈ ತೀರ್ಮಾನದಿಂದ ಅಸಹಾಯವಾದಿಗಳ ಪದ್ಧತಿಯಲ್ಲಿ ಮಾರ್ಪೇನೂ ಉಂಟಾದಂತಿಲ್ಲ. ಆಜ್ಞೋಲ್ಲಂಘನವನ್ನು ಅವರು ತಾತ್ಕಾಲಿಕವಾಗಿ ನಿಲ್ಲಿಸಿರುವರು; ಪೂರ್ಣವಾಗಿ ಅದನ್ನು ನಿರೋಧಿಸಲಿಲ್ಲ. ಪ್ರಭುತ್ವವನ್ನು ತೊಲಗಿಸಬೇಕೆಂಬ ಅವರ ನಿಶ್ಚಯವು ಲೇಶಮಾತ್ರವೂ ಮಾರ್ಪಟ್ಟಿಲ್ಲ. ಇಂಥ ವಿಧಾನವನ್ನು ಅವರು ಸಂಪೂರ್ಣವಾಗಿ ಪರಿತ್ಯಜಿಸುವವರೆಗೂ ಪ್ರಭುತ್ವದವರು ಈಗ ಅವಲಂಬಿಸಿರುವ ವಿಧಾನದಲ್ಲಿ ಮಾರ್ಪಾಟಾಗಲು ಅವಕಾಶವಿಲ್ಲ. ಈ ವಿಧಾನದಿಂದ ದೇಶದಲ್ಲಿ ಉಪದ್ರವಕರವಾದ ಸ್ಥಿತಿಗಳು ಈಗಲೇ ಪ್ರಾಪ್ತವಾಗಿವೆ. ಮುಂದೆ ಯಾವ ಕ್ಷಣದಲ್ಲಾದರೂ ರಕ್ತಪ್ರವಾಹಗಳೂ ಅತ್ಯಾಚಾರಗಳೂ ಜರುಗಿಯೇ ಜರುಗಬಹುದು'' ಎಂದು ಹೇಳಿ, ದೇಶದ ಅಶಾಂತಸ್ಥಿತಿಗೆ ಅಸಹಾಯವಾದಿಗಳ ಪ್ರಯತ್ನಗಳೇ ಹೇತುಭೂತಗಳೆಂದು ಬಾರ್ಡೋಲಿ ತೀರ್ಮಾನವಾದ ಮೇಲೂ ಕೂಡ ಹೇಳಿದ್ದರು. ಇನ್ನು ಅದೂ ತಪ್ಪಿ ವ್ಯಕ್ತಿಮಾತ್ರ ಶಾಸನೋಲ್ಲಂಘನೆಗೆ ಕಾಂಗ್ರೆಸ್ ಸ್ಥಾಯಿ ಸಂಘದವರು ಅಪ್ಪಣೆಕೊಟ್ಟರೆಂದ ಮೇಲೆ ಪ್ರಭುತ್ವ ಪದ್ಧತಿಯನ್ನು ಹೇಳುವುದೇನಿದೆ? ಪಾಲ್‌ರಿಚರ್ಡ್‌ರವರೊಡನೆ ಗಾಂಧಿಯವರು ಮಾತನಾಡುವಾಗ್ಗೆ-ದೇಶ ಸ್ವಾತಂತ್ರ್ಯಕ್ಕಾಗಿ ಸತ್ಯವನ್ನಾದರೂ ಬಿಡಲಿಕ್ಕೆ ನಾನು ಸಂಶಯಪಡುವುದಿಲ್ಲವೆಂದು ತಿಲಕರು ಅಭಿಪ್ರಾಯಪಟ್ಟಿದ್ದರೆಂದೂ, ನಾನಾದರೊ ಸತ್ಯಕ್ಕಾಗಿ ಸ್ವಾತಂತ್ರ್ಯವನ್ನಾದರೂ ಕಳೆದುಕೊಳ್ಳಲು ಸಂಶಯಪಡುವುದಿಲ್ಲವೆಂದೂ, ನನ್ನ ಪರಮಾರ್ಥವು ಭಾರತಸ್ವಾತಂತ್ರ್ಯವಾಗಿರದೆ ಪ್ರಪಂಚದಲ್ಲಿ ಅಹಿಂಸೆಯು ನೆಲಸುವಂತಾಗುವುದೇ ಪರಮಾರ್ಥವಾಗಿದೆಯೆಂದೂ ಹೇಳಿದ್ದರಂತೆ. ಇಂಥ ವೈರಾಗ್ಯಮೂರ್ತಿಗಳಾದ ಗಾಂಧಿಯವರು ಕ್ಷಣಕ್ಕೊಂದು ತೆರನಾಗುವ ರಾಜಕೀಯ ತಂತ್ರದಲ್ಲಿ ಸಿಕ್ಕಿ ಈಗಲೇ ಎಷ್ಟೋ ಬೇಸರುಪಟ್ಟಿರುವರೆಂಬುದಕ್ಕೆ ಸಂಶಯವಿಲ್ಲ. ಮುಂದೆ ಅವರು ಯಾವ ಕ್ಷಣದಲ್ಲಿ ಈ ಸಂಬಂಧಕ್ಕೇ ಸಂಪೂರ್ಣ "ರಾಜೀನಾಮೆ" ಕೊಟ್ಟು ಗುಹಾಂತರಕ್ಕೆ ಸೇರುವರೋ ಹೇಳಲಿಕ್ಕಿಲ್ಲ. ಆಗ್ಗೆ ಅತಿವಾದಿಗಳೂ ಉಗ್ರವಾದಿಗಳೂ ಸೇರಿ ಭರತಖಂಡವನ್ನು ಪ್ರತ್ಯಕ್ಷ ನರಕವನ್ನಾಗಿ ಮಾಡುವುದರಲ್ಲಿ ಸಂಶಯವಿಲ್ಲ. ಅದುದರಿಂದ ಪ್ರಜೆಗಳು ವೃಥಾ ಅಸಹಾಯವಾದಿಗಳ ದುರ್ಬೋಧೆಗೆ ಮರುಳಾಗಿ ಕೆಡುವುದಕ್ಕಿಂತ ಭರತಖಂಡವನ್ನು ನೂರಾರು ವರ್ಷಗಳಿಂದ ಶಾಂತಸ್ಥಿತಿಗೆ ತಂದಿಟ್ಟು ಕಾಪಾಡಿದ ಆಂಗ್ಲ ಪ್ರಭುತ್ವದಲ್ಲಿ ಭರವಸೆಯಿಟ್ಟು ರಾಜಭಕ್ತಿಯಿಂದ ಸಹಕರಿಸಿ ನಡೆದು, ತಮ್ಮಲ್ಲಿ ಸ್ವಪರಿಪಾಲನೆಗೆ ಸಾಂಗವಾದ ಅರ್ಹತೆಯುಂಟಾದ ಬಳಿಕ ಲಭಿಸುವ ಪದವಿಯನ್ನು ಪಡೆದು ಬಾಳುವುದೇ ಶ್ರೇಯಸ್ಕರವು.

ಮೈಸೂರಿನಲ್ಲಿ ಈಗ ಹೊಸದಾಗಿ ಏರ್ಪಟ್ಟಿರುವ ಆರ್ಥಿಕ ಸಂಘದ ಮೆಂಬರುಗಳಿಗೆ ತಿಂಗಳಿಗೆ ೫೦೦ ರೂ. ಅಧ್ಯಕ್ಷರಿಗೆ ೧೦೦೦ ರೂ. ಸಂಬಳವೆಂದು ಗೊತ್ತಾಗಿದೆಯಂತೆ.

ಮ|| ಗಾಂಧಿಯವರ ಪ್ರತಿಗರ್ಜನೆ.

ಆಂಗ್ಲ ಮಂತ್ರಿವರ್ಯರೂ ಭಾರತಮಂತ್ರಿಯವರೂ ಲಂಡನ್ನಿನಲ್ಲಿ ಮಾಡಿರುವ ಗರ್ಜನೆಗೆ ಪ್ರತಿಯಾಗಿ ಗಾಂಧಿಯವರು ಒಂದು ಗರ್ಜನೆಯನ್ನು ತಮ್ಮ ಪತ್ರಿಕೆಯಲ್ಲಿ ಮಾಡಿದ್ದಾರೆ. ಅದರ ಅಭಿಪ್ರಾಯವೇನೆಂದರೆ—ಈ ಬೆದರಿಕೆಗೆ ಈಗಣ ಜಾಗರೂಕವಾದ ಭರತಖಂಡವು ಬೆದರುವುದಿಲ್ಲ. ಅಕ್ಕಿಯನ್ನವನ್ನು ತಿಂದು ದುರ್ಬಲವಾಗಿರುವ ಭಾರತ ದೇಶವು ತನ್ನ ಮುಕ್ತಿಯನ್ನು ಪಶುಬಲದಿಂದಲ್ಲದೆ ಆತ್ಮಬಲದಿಂದಲೇ ಸಂಪಾದಿಸಲು ಕೃತನಿಶ್ಚಯವಾಗಿದೆ. ೧೯೨೦ನೆ ವರ್ಷದಲ್ಲಿ ಆರಂಭವಾಗಿರುವ ಸಾತ್ವಿಕ ಯುದ್ಧವು ೧ ತಿಂಗಳು ೧ ವರ್ಷ ಅಥವಾ ಎಷ್ಟು ವರ್ಷಗಳವರೆಗಾದರೂ ಸಾಗುವುದೆಂಬುದನ್ನು ಅವರು ತಿಳಿದುಕೊಳ್ಳಲಿ. ಅಹಂಕಾರಕ್ಕೆ ಅಹಂಕಾರವನ್ನು ಮೆರೆಯಿಸುವುದು ನಮ್ಮ ಕರ್ತವ್ಯವಲ್ಲ. ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧವಾದ ಹಕ್ಕು. ಅದನ್ನು ಸಂಪಾದಿಸಿದಲ್ಲದೆ ನಾವು ಶಾಂತರಾಗುವ ಹಾಗಿಲ್ಲ. ಧರ್ಮವಾದ ನಮ್ಮ ಸಂಕಲ್ಪವನ್ನು ಭಗವಂತನೇ ಈಡೇರಿಸುವನು. ಅಧಿಕಾರ ಮತ್ತತೆಯಿಂದಲೂ ದುರ್ಬಲ ಜನಾಂಗವನ್ನು ಸುಲಿದುಕೊಳ್ಳುವುದರಿಂದಲೂ ಬಿರ್ರನೆ ಬೀಗುವ ರಾಜ್ಯವು ಪ್ರಪಂಚದಲ್ಲಿ ಬಹುಕಾಲ ನಿಂತಿರುವುದಿಲ್ಲ'' ಎಂಬುದಾಗಿ.

ಒಳದೇಶದ ವೃತ್ತಾಂತಗಳು.

ಬರುವ ಏಪ್ರಿಲ್ ತಾ|| ೪ ರಿಂದ ಸಂಸ್ಥಾನದ ಸಿವಿಲ್ ಕೋರ್ಟುಗಳಿಗೆಲ್ಲಾ ೬ ವಾರಗಳ ಬೇಸಗೆ ರಜಾಕೊಡಲ್ಪಡುವುದು.

ಹಿಂದುಳಿದ ಜನವರ್ಗಗಳಿಗೆ ಕೊಡಲ್ಪಡುತ್ತಿರುವ ವಿದ್ಯಾರ್ಥಿವೇತನವು ಬರುವ ವರ್ಷದಲ್ಲೂ ಪದ್ಧತಿಪ್ರಕಾರ ಸಲ್ಲಿಸಲ್ಪಡುವುದು.

ಶ್ರೀಮನ್ಮಹಾರಾಜರು ಇಷ್ಟರಲ್ಲೇ ಭದ್ರಾವತಿಯ ಕಬ್ಬಿಣದ ಯಂತ್ರಾಲಯ ಕಾರ್ಯಕಲಾಪದ ಪರಾಮರಿಕೆಗಾಗಿ ದಯಮಾಡಿಸುವವರಾಗಿದ್ದಾರೆ.

ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆಗಳಿಗೆ ಹೋಗುವ ಪಂಚಮರು ಈಗಿಂದ ೩ ವರ್ಷಗಳವರೆಗೆ ಪ್ರವೇಶಧನವನ್ನು ಕೊಡಬೇಕಾಗಿಲ್ಲವೆಂದು ಅಪ್ಪಣೆಯಾಗಿದೆ.

ಬರುವ ತಾ|| ೧೯ರಲ್ಲಿ ಚೆನ್ನರಾಯಪಟ್ಟಣದ ಬಾಗೂರಿನಲ್ಲಿ ಒಕ್ಕಲಿಗರ ಮಹಾಸಭೆಯನ್ನು ವಿಜೃಂಭಣೆಯಿಂದ ನಡೆಯಿಸಲಿಕ್ಕೆ ಸನ್ನಾಹವಾಗುತ್ತಲಿದೆ.

ಬೆಂಗಳೂರು ತಾತಾ ಶಾಸ್ತ್ರಶೋಧನಶಾಖೆಯಲ್ಲಿ ಗತಿಸಿದ ತಾತಾರವರ ವಿಗ್ರಹಪ್ರತಿಷ್ಠಾಪನ ಮಹೋತ್ಸವ ಕಾರ್ಯವನ್ನು ನಮ್ಮ ಶ್ರೀಮನ್ಮಹಾರಾಜರವರು ಬರುವ. ತಾ|| ರಲ್ಲಿ ನೆರವೇರಿಸುವವರಾಗಿದ್ದಾರೆ.

ಮಾಗಡಿಯಲ್ಲಿ ನಡೆದ ಶ್ರೀ ಸೋಮೇಶ್ವರ ರಥೋತ್ಸವ ಕಾಲಕ್ಕೆ ಮೆ|| ಕರಣಿಕ ಕೃಷ್ಣಮೂರ್ತಿಯವರ ಪ್ರಾರ್ಥನೆಯ ಮೇರೆಗೆ ದಿವಾನ್ ಸರ್ ಕಾಂತರಾಜ ಅರಸಿನವರು ದಯಮಾಡಿಸಿದ್ದರು.

ಮೈಸೂರು ಬೆಂಗಳೂರು ವೈದ್ಯಶಾಲೆಗಳಲ್ಲಿ ಮಾತ್ರ ಕಾಂಪೌಂಡರುಗಳನ್ನು ತಯಾರಿಸುವುದಕ್ಕೆ ಇದ್ದ ಪದ್ಧತಿಯನ್ನು ಎಲ್ಲ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರ್ ವೈದ್ಯಾಲಯಗಳಲ್ಲೂ ನಡೆಯಿಸುವಂತೆ ಸರ್ಕಾರದಪ್ಪಣೆಯಾಗಿದೆ.

ನಮ್ಮ ಶ್ರೀಮನ್ಮಹಾರಾಜರ ಪ್ರೈ|| ಸೆಕ್ರೆಟರಿ ಮಿ|| ಆರ್. ಎಚ್. ಕೇಂಬಲ್‌ರವರು ಬರುವ ತಾ|| ೨೨ ರಿಂದ ೪ ತಿಂಗಳೂ ೬ ದಿನಗಳ ಹಕ್ಕಿನ ರಜವನ್ನೂ ಬಳಿಕ ೩ ತಿಂಗಳೂ ೨೩ ದಿನಗಳ ಫರ್ಲೋ ರಜವನ್ನೂ ಪಡೆದುಕೊಂಡು ಸೀಮೆಗೆ ತೆರಳುವವರಾಗಿದ್ದಾರೆ.

ಸಂಸ್ಥಾನದಲ್ಲಿ ನಿರ್ಮಿತವಾಗುವ ಸಾರಾಯಿಗಳ ಬೆಲೆಯನ್ನು ಬೆಂಗಳೂರು ಮೈಸೂರು ಪಟ್ಟಣಗಳಲ್ಲೂ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲೂ ಗ್ಯಾಲನ್ನಿಗೆ ೬|| ರೂ. ನಂತೆಯೂ ಉಳಿದ ಕಡೆಯಲ್ಲೆಲ್ಲಾ ಗ್ಯಾಲನ್ನಿಗೆ ೫|| ಯಂತೆಯೂ ವಿಕ್ರಯಿಸಲು ಸರ್ಕಾರದವರು ಗೊತ್ತುಮಾಡಿದ್ದಾರೆ.

ಮೈಸೂರು ಚೀಫ್ ಕೋರ್ಟು ಜಡ್ಜರಾದ ರಾಜಮಂತ್ರಪ್ರವೀಣ ಮ|| ಕೆ. ಎಸ್. ಚಂದ್ರಶೇಖರಯ್ಯರವರು ಮಾರ್ಚಿ ತಾ|| ೨ ರಿಂದ ಒಂದು ತಿಂಗಳ ರಜಾಪಡೆದುಕೊಂಡಿದ್ದಾರೆ. ಸರ್ ಲೇಸ್ಲಿ ಮಿಲ್ಲರ್‌ರವರು ಆರೋಗ್ಯಗೊಂಡು ಬಂದು ಚೀಫ್ ಜಡ್ಜಿ ಉದ್ಯೋಗವನ್ನು ವಹಿಸಿಕೊಂಡಿದ್ದಾರೆ.

ಹಾಸನಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗಿನಲ್ಲಿ ಡಿಸ್ಟ್ರಿಕ್ಟ್ ಡಿ|| ಕಮಿಷನರು ಅಧ್ಯಕ್ಷರಾಗಿ ಕುಳಿತುಕೊಂಡಿದ್ದರು. ವಿದ್ಯಾಭ್ಯಾಸದ ಕಂದಾಯವನ್ನು ರೂ. ಗೆ ೧ ಆಣೆಯಂತೆ ವಿಧಿಸಬೇಕೆನ್ನುವ ವಿಷಯದಲ್ಲಿ ೫ ತಾಲ್ಲೂಕು ಬೋರ್ಡುಗಳು ಅನುಮತಿ ಕೊಡಲಿಲ್ಲವೆಂದೂ, ೩ ಬೋರ್ಡುಗಳು ಒಪ್ಪಿದುವೆಂದೂ ಪ್ರಕಟವಾಗಿದೆ. ಯೋಚಿಸಿದ್ದಂತೆಯೇ ಆಗಿದೆ.

ನಮ್ಮ ಸಾರ್ವಭೌಮರ ಏಕಪುತ್ರಿಯಾದ ಶ್ರೀಮತಿ ಮೇರಿಯವರಿಗೆ ಕಳೆದ ಮಂಗಳವಾರ ವಿವಾಹಮಹೋತ್ಸವವು ಲಂಡನ್ನಿನಲ್ಲಿ ಅತ್ಯಂತವೈಭವದಿಂದ ಸಾಗಿತು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಎತ್ತಲ್ಪಡುತ್ತಿದ್ದ ರೈಲ್ವೆ ಸೆಸ್ಸನ್ನು ಇನ್ನು ಮುಂದೆ ನಿಲ್ಲಿಸಿಬಿಟ್ಟು, ಇದುವರೆಗೆ ಆ ರೂಪದಿಂದ ಕೂಡಿರುವ ಹಣವನ್ನು ಸರ್ಕಾರದ ಅನುಮತಿಪಡೆದು ಮೈಸೂರುಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ಬಡ್ಡಿಹಣವನ್ನು ಮೋಟಾರುಬಸ್ಸುಗಳು ಓಡಾಡುವ ಮಾರ್ಗಗಳ ಜೀರ್ಣೋದ್ಧಾರಕ್ಕೆ ಉಪಯೋಗಿಸಬೇಕೆಂದು ಡಿಸ್ಟ್ರಿಕ್ಟು ಬೋರ್ಡಿನವರು ತೀರ್ಮಾನಿಸಿದ್ದಾರೆ.

ಚೆನ್ನಪಟ್ಟಣದ ಒಕ್ಕಲಿಗ ವಿದ್ಯಾರ್ಥಿ ಸಂಘದಿಂದ ಪ್ರಕಟವಾಗುವ ಕರ್ಣಾಟಕವಿದ್ಯಾರ್ಥಿ ಎಂಬ ದ್ವೈಮಾಸಿಕ ಪತ್ರವು ಕೆಲಕಾಲದಿಂದ ನಿಂತಿದ್ದು ಈಗ ಮತ್ತೆ ಪ್ರಕಟವಾಗಲಾರಂಭವಾಗಿದೆ. ಅದರ ವಿಷಯಗಳು ಮನೋಹರವಾಗಿಯೂ ಉಪಯೋಗಕರಗಳಾಗಿಯೂ ಇವೆ. ಆದರೆ ವಿದ್ಯಾರ್ಥಿಗಳ ಸಂಬಂಧವಾದುದಾಗಿರುವ ಕಾರಣ ಭಾಷಾಶುದ್ಧಿಯಕಡೆಗೆ ಇನ್ನಷ್ಟು ಹೆಚ್ಚುಗಮನವನ್ನು ಕೊಡುವುದು ಒಳ್ಳೆಯದು.

ರಾಜಧಾನಿಯಲ್ಲಿ ೧-೨ ತಿಂಗಳಿಂದಲೂ ಅಲ್ಲಲ್ಲಿ ಕಾಣಿಸಿಕೊಂಡು ಹಿಂಸೆಗೊಳಿಸುತ್ತಿದ್ದ ದೊಡ್ಡ ಚಿರತೆಯನ್ನು ಕೃಷ್ಣಮೂರ್ತಿಯವರ ಕಾವಲಲ್ಲಿ ಅರಮನೆ ಉದ್ಯೋಗಿಯಾದ ಮಂಗರಾಜು ಎಂಬ ಬೇಂಟೆಗಾರನು ಕಳೆದ ಸೋಮವಾರ ತುಪಾಕಿಯಿಂದಹೊಡೆದು ಕೊಂದನು. ಅದರ ಶವದ ಮೆರೆವಣಿಗೆಯು ಊರಿನಲ್ಲೆಲ್ಲಾ ನಡೆದಾಗ ಜನರು ನೋಡಿ ಸಂತೋಷಪಟ್ಟು ಬೇಂಟೆಗಾರನನ್ನು ಶ್ಲಾಘಿಸಿದರು.

ಹಿಂದೆ ವಿದ್ಯಾಶಾಖಾಧ್ಯಕ್ಷರಾಗಿದ್ದ ರಾ|| ಬ|| ಎಂ. ಶ್ಯಾಮರಾವ್ ಎಂ. ಎ. ರವರ ಏಕಮಾತ್ರಪುತ್ರರಾಗಿಯೂ ಯೌವನಸ್ಥರಾಗಿಯೂ ಇದ್ದ ಮ|| ಎಂ. ಎಸ್. ನಾರಾಯಣರಾಯರು ನ್ಯುಮೋನಿಯಾ ಜ್ವರದಿಂದ ಮೃತರಾಗಿ, ಅವರ ವಯಸ್ಸಿನಲ್ಲಿರುವ ತಂದೆಯವರಿಗೂ ೩-೪ ಮಂದಿ ಸಣ್ಣಮಕ್ಕಳಿಗೂ ಭಾರ್ಯೆಗೂ ಅಪಾರವಾದ ದುಃಖವನ್ನುಂಟುಮಾಡಿದರೆಂದು ತಿಳಿಯಿಸಲಿಕ್ಕೆ ವಿಷಾದಿಸುತ್ತೇವೆ.

ಬ್ರಿಟಿಷ್ ಇಂಡ್ಯಾದಿಂದ ಮೈಸೂರುದೇಶಕ್ಕೆ ಕೆಲವರು ಕಾಂಗ್ರೆಸ್ ಭಕ್ತರನ್ನು ಬರಮಾಡಿ ಉಪನ್ಯಾಸಮಾಡುತ್ತಿದ್ದುದರಿಂದ ಇಲ್ಲಿಯ ಕಾಂಗ್ರೆಸ್ ಸೆಕ್ರೆಟರಿ ಮ|| ಸೆಟ್ಲೂರ್‌ರವರಿಗೂ ಬಿಜಾಪುರದ ವಕೀಲ್ ಕೌಜಲಗಿ ರಜ್ವಿ ಮೊದಲಾದವರಿಗೂ ೨ ತಿಂಗಳಕಾಲ ಉಪನ್ಯಾಸಮಾಡಕೂಡದೆಂದೂ, ಬಹಿರಂಗ ಸಭೆಗಳಲ್ಲಿ ಕೆಲಸಮಾಡಕೂಡದೆಂದೂ, ನಿರ್ಬಂಧಾಜ್ಞೆಯನ್ನು ೧೪೪ನೆ ಸೆಕ್ಷನ್ ಪ್ರಕಾರ ಬೆಂಗಳೂರು ಮ್ಯಾಜಿಸ್ಟ್ರೇಟರು ಮಾಡಿದ್ದರು. ಇದನ್ನು ತಪ್ಪಿಸಬೇಕೆಂದು ಅವರುಗಳು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಪ್ರಾರ್ಥಿಸಿದರೂ ಆಗಲಾರದೆಂದು ಅಪ್ಪಣೆಮಾಡಿದರು.

ರಾಜಧಾನಿಯಲ್ಲಿ ಮಂಡಿಮೊಹಲ್ಲಾ ಕಾಳಮ್ಮನಗುಡಿಯ ಹಿಂದಿರುವ ೩೨ ಮನೆಗಳನ್ನು ಅಕ್ವೈರ್‌ಮಾಡಿ ಅಲ್ಲಿ ಒಂದು ಕ್ಷಯರೋಗ ಪರೀಕ್ಷಾ ವೈದ್ಯಾಲಯವನ್ನು ಕಟ್ಟಲು ಏರ್ಪಾಟಾಗಿದೆಯೆಂದು ಕೇಳುತ್ತೇವೆ. ಅಲ್ಲದೆ ದೇವರಾಜಮೊಹಲ್ಲಾ ಮಾರಕಟ್ಟಿನ ಚೌಕವನ್ನು ವಿಸ್ತರಿಸುವ ಕೆಲಸಕ್ಕೂ ಆರಂಭವಾಗುವುದರಲ್ಲಿದೆಯಂತೆ. ಸರ್ಕಾರಕ್ಕೆ ದುಡ್ಡಿನ ಮುಗ್ಗಟ್ಟು ಬಂದಿದ್ದರೂ ನಮ್ಮ ಟ್ರಸ್ಟ್ ಬೋರ್ಡಿನ ವಿನೋದಕ್ಕೇನೂ ನ್ಯೂನತೆಬರುವಹಾಗೆ ಕಾಣಲಿಲ್ಲ. ಆ ವೈದ್ಯಾಲಯವನ್ನು ತುಂಬಿದಮನೆಗಳ ಮಧ್ಯದಲ್ಲೇ ಕಟ್ಟಬೇಕೆ? ಸವಾರ್ ಲೈನಿನ ಬಳಿಯಲ್ಲಿರುವ ೨ ಬಯಲುಗಳಲ್ಲಿ ಕಟ್ಟಿದರೆ ಪ್ರಜೆಗಳಿಗೆ ಹಿಂಸೆಕೊಟ್ಟು ಮನೆ ಬಿಡಿಸುವುದೂ ತಪ್ಪುತ್ತಿದ್ದಿತು; ಸರ್ಕಾರಕ್ಕೆ ಹೆಚ್ಚು ವೆಚ್ಚವಾಗುವುದೂ ತಪ್ಪುತ್ತಿದ್ದಿತಲ್ಲವೆ?

ಇನ್‌ಫ್ಲುಯಂಜಾ ರೋಗಕ್ಕೆ ಚಿಕಿತ್ಸೆ.

ರಾಜಧಾನಿಯಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯು ಹೆಚ್ಚುತ್ತಿದೆಯೆಂದು ಸುದ್ದಿಯಿದೆ. ಅದುಕಾರಣ ಎಲ್ಲಾ ಜನರೂ ಇದರ ನಿವಾರಣೋಪಾಯವನ್ನು ತಿಳಿದುಕೊಂಡಿದ್ದರೆ ಉತ್ತಮ.

ಚಿಹ್ನೆಗಳು—ಆರಂಭದಲ್ಲಿ ಕಾಲಪ್ರವೃತ್ತಿಯು ಸರಿಯಾಗಿ ಆಗದಿರುವುದು, ತಲೆಭಾರವು, ನೆಗಡಿ, ತದನಂತರ ಜ್ವರ ಬರುವುದು, ಅನಂತರ ಕೆಮ್ಮು, ಪಕ್ಕೆನೋವು ಬರುವುದು. ಈ ಚಿಹ್ನೆಗಳು ಕಂಡ ವೇಳೆಯಲ್ಲಿ ವೈದ್ಯರ ಚಿಕಿತ್ಸೆಗೊಳಪಡಬೇಕು.

ಊರಿನಲ್ಲಿ ಯಾವ ಭಾಗದಲ್ಲಿಯಾದರೂ ಕೆಲಮಂದಿಗಳು ಈ ಚಿಹ್ನೆಗಳಿಂದ ಕೂಡಿದವರಾಗಿದ್ದಾರೆಂಬ ಸುದ್ದಿಯು ಹುಟ್ಟಿದೊಡನೆಯೇ ಇತರರೆಲ್ಲರೂ ಭೋಜನಾನಂತರ ಪರ್ಮಾಂಗನೇಟ್ ಆಫ್ ಪೊಟಾಷ್ (Permangonate of potash)ನ್ನು ನೀರಿನಲ್ಲಿ ಗುಲಾಬಿಬಣ್ಣವು ಬರುವಮಟ್ಟಿಗೆ ಮಿಶ್ರಮಾಡಿ ಆ ನೀರಿನಿಂದ ಬಾಯಿ ಮುಕ್ಕಳಿಸಬೇಕು, ಮತ್ತು ಒಂದೆರಡಾವೃತ್ತಿ ಮೂಗಿನದ್ವಾರಾ ಸೆಳೆದು ಬಾಯಿಂದ ಹೊರಗೆ ಉಗುಳಬೇಕು. ಹೀಗೆ ಮಾಡುವುದರಿಂದ ಈ ರೋಗದ ಕ್ರಿಮಿಗಳು ನಶಿಸಿಹೋಗುವುವು. ಈ ರೀತಿ ೧೫ ದಿನಗಳವರೆಗೆ ಪ್ರಯೋಗಮಾಡಬೇಕು. ಮತ್ತು ಮೊಟ್ಟಮೊದಲು ಒಂದಾವೃತ್ತಿ ಕ್ಯಾಸ್ಟರ್ ಆಯಿಲ್ ಅರ್ಧ ಔನ್ಸು ಅಥವಾ ಭೇದಿ ಉಪ್ಪು ಅರ್ಧ ಔನ್ಸು ವಯೋನುಗುಣವಾಗಿ ತೆಗೆದುಕೊಂಡಲ್ಲಿ ಕಾಲಪ್ರವೃತ್ತಿಯು ಕ್ರಮವಾಗಿ ಆಗುವುದು. ಆಹಾರವನ್ನು ಮಿತಿಯಾಗಿ ಉಪಯೋಗಮಾಡಬೇಕು.

ಚುಂಚನಗಿರಿ ಒಕ್ಕಲಿಗರ ಮಹಾಸಭೆ.

ನಾಗಮಂಗಲದ ತಾಲ್ಲೂಕು ಶ್ರೀ ಆದಿಚುಂಚನಗಿರಿ ಪುಣ್ಯಕ್ಷೇತ್ರದಲ್ಲಿ ಕಳೆದ ಶಿವರಾತ್ರಿ ಮಹೋತ್ಸವ ಕಾಲದಲ್ಲಿ ಅಂದರೆ ಫೆಬ್ರವರಿ ೨೪ ಮತ್ತು ೨೫ನೆ ಶುಕ್ರವಾರ ಶನಿವಾರ ಒಕ್ಕಲಿಗರ ಮಹಾಸಭೆಯು ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರು ಮತ್ತು ಒಕ್ಕಲಿಗಸಂಘದ ಜನರಲ್ ಕೌನ್ಸಿಲ್ ಪ್ರೆಸಿಡೆಂಟರಾದ ರಾವ್‌ಸಾಹೇಬ್ ಎಚ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಕೆಳಗೆ ಕಂಡ ದೊಡ್ಡಮನುಷ್ಯರು ಸೇರಿದ್ದರು. ಮ|| ಗಳಾದ ಕೆ. ಎಚ್. ರಾಮಯ್ಯ, ಬಿ. ಎ., ಬಾರ್-ಅಟ್-ಲಾ, ಎಂ. ಎಲ್. ರಾಮೇಗೌಡರು, ಎಚ್. ಸಿ. ದಾಸಪ್ಪನವರು, ಬಿ. ಎ., ಎಲ್‌ಎಲ್.ಬಿ., ಕಾಂತರಾಜಪುರದ ಎಂ. ನಂಜಪ್ಪನವರು, ಎಂ. ಪುಟ್ಟನಂಜಪ್ಪನವರು, ಮದ್ದೂರು ಲಿಂಗೇಗೌಡರು, ಹಿರಿಸಾವೆ ಮಾದಯ್ಯನವರು ಮತ್ತು ವಿಷಕಂಠಯ್ಯನವರು, ಪೋಲೀಸ್ ಇನ್‌ಸ್ಪೆಕ್ಟರ್ ಪಕ್ರುದೀನ್ ಸಾಹೇಬರು, ತುಮ್ಕೂರು ಕೆ. ರಾಘವನ್‌ರವರು, ಬ್ಯಾಲಕೆರೆ ಡಿ. ಕೃಷ್ಣಪ್ಪನವರು, ಕಾಗಡಿಹಳ್ಳಿ ತಿಮ್ಮೇಗೌಡರು, ಸುಬೇದಾರ್ ಚೆನ್ನಪ್ಪನವರು, ಬೆಳ್ಳೂರು ಪಂಡಿತ ಮಹಮ್ಮದ್ ಬುರ್ಹಾನ್ ಸಾಹೇಬರು, ಮಹಮ್ಮದ್ ಅಬ್ದುಲ್ ಸಾಹೇಬರು, ಚೀರಳ್ಳಿ ಪಟೇಲ್ ನಂಜುಂಡೇಗೌಡರು, ಯಜಮಾನ್ ಅಬ್ದುಲ್‌ಕರೀಂ ಸಾಹೇಬರು, ಕಳಸೇಗೌಡರು, ಲಕ್ಕಣ್ಣಗೌಡರು, ತಿಗಳರಳ್ಳಿ ಪಟೇಲ್ ರಂಗೇಗೌಡರು, ಬಂಗಲೆ ಚೌಡೇಗೌಡರು, ಶಾನುಭೋಗ ಚೆನ್ನವೀರೇಗೌಡರು, ಹಾಡ್ಯದ ಲಿಂಗಾಮೇಸ್ತ್ರಿ ಹೊಸಳ್ಳಿ ಕೆಂಪೇಗೌಡರು.

ಸಭೆಯು ಶುಕ್ರವಾರದ ದಿನ ಸಾಯಂಕಾಲ ಆರುಘಂಟೆಗೆ ಪ್ರಾರಂಭವಾಗಿ ರಾತ್ರಿ ಹತ್ತುಘಂಟೆಯವರೆಗೂ ನಡೆಯಿತು. ಮ|| ಗಳಾದ ಎಂ. ಸಿ. ಲಿಂಗೇಗೌಡರೂ, ಎಚ್.ಸಿ. ದಾಸಪ್ಪನವರೂ, ಹಿರೀಸಾವೆ ಮಂಜಯ್ಯನವರೂ, ಕಾಂತರಾಜಪುರದ ಎಂ. ನಂಜಪ್ಪನವರೂ, ಕೆ. ಎಚ್. ರಾಮಯ್ಯನವರೂ, ಒಕ್ಕಲಿಗರಮಂಡಲಿಯು ಅಭಿವೃದ್ಧಿಸ್ಥಿತಿಗೆ ಬರಬೇಕಾಗಿರುವ ಮಾರ್ಗಗಳ ವಿಷಯವಾಗಿ ಬಹಳ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಮೆ. ಲಿಂಗೇಗೌಡರು, ಒಕ್ಕಲಿಗರ ಸಂಘದವರು ತಮ್ಮ ಮತದವರ ಏಳಿಗೆಗಾಗಿ ಮಾಡುತ್ತಿರುವ ಪ್ರಯತ್ನಗಳ ವಿಷಯವಾಗಿ ತಿಳಿಸಿದರು. ಮೆ. ದಾಸಪ್ಪನವರು, ವಿದ್ಯಾಭ್ಯಾಸದ ಅವಶ್ಯಕತೆಯನ್ನು ವಿಶದವಾಗಿ ಹೇಳಿದರು. ಮೆ|| ಮಂಜಯ್ಯನವರು ತಮ್ಮ ಕುಲೋದ್ಧಾರಕ್ಕಾಗಿ ಪ್ರಯತ್ನಪಡುತ್ತಿರುವ ಮತ್ತು ತಮ್ಮಕುಲಕ್ಕೆ ಕೀರ್ತಿಪ್ರಾಯರಾಗಿರುವ ಒಕ್ಕಲಿಗರ ಸಂಘದ ಮುಖಂಡರನ್ನು ತಾವುಗಳೆಲ್ಲರೂ ಹಿಂಬಾಲಿಸಿ ಅವರಿಗೆ ತಕ್ಕ ವತ್ತಾಸೆಯನ್ನು ಕೊಡಬೇಕೆಂದು ಒತ್ತಿಹೇಳಿದರು. ಮೆ|| ಎಂ. ನಂಜಪ್ಪನವರು, ಗೃಹಕೃತ್ಯ, ವ್ಯವಸಾಯ, ಸಾಮಾಜಿಕ ಮತ್ತು ರಾಜಕೀಯ ವಿಷಯವಾಗಿ ಉಪಯುಕ್ತವಾದ ಉಪನ್ಯಾಸವನ್ನು ಕೊಟ್ಟರು. ಮೆ|| ಕೆ. ಎಚ್. ರಾಮಯ್ಯನವರ ಭಾಷಣವು ಯಾವಾಗಲೂ ಇರುವಂತೆ ಬಹಳ ಸ್ವಾರಸ್ಯವಾಗಿಯೂ ಮನಸ್ಸಿಗೆ ನಾಟುವಂತಾದ್ದಾಗಿಯೂ ಇದ್ದಿತು. ಒಕ್ಕಲಿಗ ಮಂಡಲಿಯು ಇತರ ಮತದವರಿಗಿಂತ ಜನಸಂಖ್ಯೆಯಲ್ಲಿಯೂ, ಕಂದಾಯತರುವುದರಲ್ಲಿಯೂ ಮುಂದಾಗಿದ್ದರೂ ಇತರ ವಿಚಾರದಲ್ಲಿ ಬಹಳ ಹೀನಸ್ಥಿತಿಯಲ್ಲಿರುವದು ಶೋಚನೀಯವಾದ ವಿಷಯವೆಂದೂ ಇದಕ್ಕೆಲ್ಲಾ ವಿದ್ಯೆಯನ್ನು ಬಿಟ್ಟಿರುವುದೇ ಮುಖ್ಯಕಾರಣವೆಂದೂ ಈಗಿನ ವಿದ್ಯಮಾನಗಳಿಗನುಸಾರವಾಗಿ ನಡದುಕೊಂಡು ಹೋಗಬೇಕೆಂದೂ ಇತರರಿಗೆ ಆಶ್ರಿತರಾಗದೆ ಸ್ವಾತಂತ್ರ್ಯವನ್ನು ಪಡಿಯಬೇಕೆಂದೂ ಹೇಳಿದರು. ಅಧ್ಯಕ್ಷರಾದ ರಾವ್‌ಸಾಹೇಬ್ ಚೆನ್ನಯ್ಯನವರು ಈ ಪುಣ್ಯಕ್ಷೇತ್ರದಲ್ಲಿ ಸಭೆನಡದದ್ದು ಒಳ್ಳೇ ಶುಭಸೂಚನೆಯೆಂದೂ ಈಗಿರತಕ್ಕಂತಾ ದುಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಪ್ರತಿಯೊಬ್ಬರೂ ಪ್ರಯತ್ನಪಡಬೇಕೆಂದೂ ತಾವೆಲ್ಲರೂ ಏಕಮತ್ಯವಾಗಿ ಸೇರಿ ಈ ಜನಾಂಗವು ಮುಂದೆ ತಲೆ ಎತ್ತುವುದಕ್ಕೆ ಸಹಕಾರಿಗಳಾಗಬೇಕೆಂದೂ ತಿಳಿಸಿದರು.

ಮಾರನೆ ದಿನ ಬೆಳಿಗ್ಗೆ ೧೦ ಗಂಟೆಯಿಂದ ಮಧ್ಯಾಹ್ನ ಮೂರು ಗಂಟೆವರೆಗೂ ಸಭೆ ನಡೆಯಿತು. ಶ್ರೀ ಆದಿ ಚುಂಚನಗಿರಿಯ ಮಠದ ನಡವಳಿಕೆಗಳು ಬಹಳ ಅಸಮರ್ಪಕವಾಗಿ ನಡಿಯುತ್ತಾ ಇರುವುದನ್ನು ಸರಿಪಡಿಸಬೇಕೆಂಬದು ಮುಖ್ಯವಿಷಯವಾಗಿದ್ದರಿಂದ ಅನೇಕರು ಆ ವಿಚಾರದಲ್ಲಿ ಪ್ರಸ್ತಾಪಿಸಿದರು. ಈಗ ನೇಮಿಸಲ್ಪಟ್ಟಿರುವ ಧರ್ಮದರ್ಶಿಗಳ ಸಂಗಡ ಏಕವಾಕ್ಯದಿಂದ ಈ ಸಭೆಯಲ್ಲಿ ಚುನಾಯಿಸಲ್ಪಟ್ಟ ದಡಮುಡಿಕೆ ಕೆಂಪೇಗೌಡರು, ಚೀರಳ್ಳಿ ಪಟೇಲ್ ನಂಜುಂಡೇಗೌಡರು, ಕಳಸೇಗೌಡರ ಮಗ ಲಕ್ಕಣ್ಣಗೌಡರು ಮತ್ತೆ ಇಬ್ಬರು ಒಟ್ಟು ಐದು ಮಂದಿ ಜನರು ಧರ್ಮದರ್ಶಿಗಳಾಗಿ ಇರಬೇಕೆಂದು ಸರ್ಕಾರದವರಿಗೆ ತಿಳಿಸುವುದೆಂದು ತೀರ್ಮಾನವಾಯಿತು. ಶ್ರೀಮನ್ ಮಹಾರಾಜರವರ ಮತ್ತು ಯುವರಾಜರವರ ಶ್ರೇಯಃಪ್ರಾರ್ಥನೆ ಮಾಡಿ ಅವರಿಗೆ ಪ್ರೀತಿಪೂರ್ವಕವಾಗಿ ತಮ್ಮ ಅತಿಶಯವಾದ ರಾಜಭಕ್ತಿಯನ್ನು ತೋರ್ಪಡಿಸಬೇಕೆಂದೂ ಒಕ್ಕಲಿಗರು ಏಕಮತವಾಗಿದ್ದು ವಿದ್ಯಾಭಿವೃದ್ಧಿಯನ್ನು ಹೊಂದಲಿಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಬೇಕೆಂದೂ ಒಕ್ಕಲಿಗರ ಸಂಘಕ್ಕೆ ಎಲ್ಲರೂ ಶಕ್ತಿಮಿರಿ ಸಹಾಯಮಾಡಬೇಕೆಂದೂ ಠರಾವುಗಳನ್ನು ಮಾಡಲಾಯಿತು. ಚಂದಾವಸೂಲ್‌ಮಾಡಿದ್ದರಲ್ಲಿ ಸುಮಾರು ೪೦೦ ರೂ. ವಾಗ್ದಾನವಾಗಿ ೧೦೦ ರೂ. ವರೆವಿಗೂ ಅಲ್ಲೇ ವಸೂಲಾಯಿತು. ಅಧ್ಯಕ್ಷರು ಕೊನೆಯಲ್ಲಿ ಉಚಿತವಾದ ಕೆಲವು ಮಾತುಗಳನ್ನಾಡಿದ ಬಳಿಕ ಶ್ರೀಮನ್ ಮಹಾರಾಜರವರ ಮತ್ತು ಶ್ರೀಮನ್ ಯುವರಾಜರವರ ಶ್ರೇಯಸ್ಸಿಗಾಗಿ ಜಯಘೋಷಮಾಡಿ ಸಭೆ ಮುಕ್ತಾಯವಾಯಿತು. ಬಂದಿದ್ದ ಮಹನೀಯರು ಮಠಾಧಿಪತಿಗಳವರ ದರ್ಶನಕ್ಕೆ ಪಾತ್ರರಾಗಿರುವಲ್ಲಿ ಮಠಾಧಿಪತಿಗಳು ಸಂಘದವರು ಮಾಡಿರುವ ತೀರ್ಮಾನಕ್ಕೆ ತಮ್ಮ ಸಂಪೂರ್ಣ ಸಮ್ಮತಿ ಇರುವುದೆಂದೂ ತಮ್ಮ ಕೈಯಲ್ಲಾದಮಟ್ಟಿಗೆ ಮಠೋದ್ಧಾರಕ್ಕಾಗಿ ತಾವು ಪ್ರಯತ್ನಪಡುತ್ತೇವೆಂದೂ ಅಪ್ಪಣೆಕೊಡಿಸಿದರು. ಪ್ರತ್ಯಕ್ಷದರ್ಶಿ.

ಮೈಸೂರು ಪ್ರಜಾಮಿತ್ರಮಂಡಲಿಯವರಿಂದ ಹಿಂದುಳಿದ ಜನಾಂಗಗಳ ಪ್ರಮುಖರಲ್ಲಿ ವಿಜ್ಞಾಪನೆ.

1. ಈ ವರ್ಷದ ದಸರಾ ಪ್ರಜಾಪ್ರತಿನಿಧಿ ಸಭೆಗೆ ಹೊಸ ಮೆಂಬರುಗಳ ಚುನಾವಣೆಯು ನಡೆಯತಕ್ಕದ್ದಿದೆ.

2. ತಾಲ್ಲೂಕು ಮತ್ತು ಸಬ್‌ತಾಲ್ಲೂಕುಗಳಲ್ಲಿ ಈ ಕೆಳಗೆ ಕಂಡ ಅರ್ಹತೆಯುಳ್ಳ ದೊಡ್ಡಮನುಷ್ಯರು ಚುನಾವಣೆಗೆ ನಿಲ್ಲುವುದಕ್ಕೂ ಮತ್ತು ಓಟುಗಳನ್ನು ಕೊಡುವುದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(a) ತಮ್ಮ ಖಾತೆಗೆ 50 ರೂ. ಭೂಗಂದಾಯವನ್ನು ಸರ್ಕಾರದವರಿಗಾಗಲಿ ಅಥವಾ ಇನಾಂದಾರ ಗಾಗಲಿ ಕೊಡತಕ್ಕವರು; ಮ್ಯುನಿಸಿಪಾಲಿಟಿಗಳಲ್ಲಿ ರೂ. ಮನೆ ಅಥವಾ ಅಂಗಡಿ ಕಂದಾಯವನ್ನು ಡತಕ್ಕವರು.

(b) ಆ ತಾಲ್ಲೂಕು ಅಥವಾ ಸಬ್‌ತಾಲ್ಲೂಕಿನಲ್ಲಿ ವಾಸಮಾಡುತ್ತಲಿರುವ 250 ರೂ. ಬೇರೀಜು ಉಳ್ಳ ಗ್ರಾಮಗಳ ಇನಾಂದಾರರು.

(c) ಆಯಾ ತಾ|| ಅಥವಾ ಸಬ್ ತಾ|| ಗಳಲ್ಲಿ ವಾಸಮಾಡತಕ್ಕ ಯೂನಿವರ್ಸಿಟಿ ಗ್ರಾಜುಯೇಟರು. (University Graduates.)

3. ಮೇಲೆಕಂಡಂತೆ ಮೆಂಬರಾಗಿ ಬರಲು ಅರ್ಹತೆಯುಳ್ಳವರ ಮತ್ತು ಮೆಂಬರುಗಳನ್ನು ಚುನಾಯಿಸುವ ಅಧಿಕಾರವುಳ್ಳವರ (Voters) ಹೆಸರುಗಳು ಬರುವ ಮಾರ್ಚಿ ತಿಂಗಳು 17 ನೆ ತಾರೀಖಿನ (17—3—22ರ) ಒಳಗಾಗಿ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುತ್ತವೆ.

4. ಸಭೆಗೆ ಮೆಂಬರಾಗಿ ಬರಲು ಅರ್ಹತೆಯುಳ್ಳವರ ಮತ್ತು ಚುನಾಯಿಸಲು ಅಧಿಕಾರವುಳ್ಳ ಯಾರ ಹೆಸರಾದರೂ ಗೆಜೆಟ್ಟಿನಲ್ಲಿ ಕಾರಣಾಂತರದಿಂದ ಬಿಟ್ಟುಹೋಗಿದ್ದ ಪಕ್ಷಕ್ಕೆ ಏಪ್ರಿಲ್ 17 ನೇ ತಾ|| ನ ಒಳಗಾಗಿ ಆಯಾ ಡಿಸ್ಟ್ರಿಕ್ಟ ಡೆಪ್ಯುಟಿಕಮಿಷನರವರಲ್ಲಿ ಅರ್ಜಿ ಹಾಕಿ ಕ್ರಮಪಡಿಸಬಹುದು

5. ಹಿಂದುಳಿದ ಜನಾಂಗಗಳಿಗೆ ಸೇರಿದ ಪ್ರತಿಯೊಬ್ಬ ದೇಶಾಭಿಮಾನಿಯೂ ಎಚ್ಚರಿಕೆಯಿಂದಿದ್ದು ಪೂರ್ಣ ಪ್ರಯತ್ನಪಟ್ಟು ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಆರಿಸಲ್ಪಡುವುದರಿಂದಲೂ, ಮತ್ತು ತಮ್ಮ ಏಳ್ಗೆಯನ್ನು ಬಯಸುವ ಪ್ರತಿನಿಧಿಗಳಿಗೇನೇ ತಮ್ಮ ಓಟನ್ನು ಕೊಡುವುದರಿಂದಲೂ ತಮ್ಮ ಕಾರ್ಯದಕ್ಷತೆಯನ್ನು ವ್ಯಕ್ತಪಡಿಸಬೇಕಾಗಿ ಪ್ರಾರ್ಥನೆ.

ಬೆಂಗಳೂರು, } ಜಿ. ಪರಮಶಿವಯ್ಯ,
ತಾ|| 16-2-1922. } ಜಾಯಿಂಟ್ ಸೆಕ್ರೆಟರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಿಸಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ರಾಜನಿಷ್ಠ ಸಭೆ.

ತಾರೀಖು ೧೨-೨-೧೯೨೨ನೆ ಇಸವಿ ದಿನ ತಮ್ಮ ಪತ್ರಿಕೆಯಲ್ಲಿ ಆಲೂರ ರಾಜನಿಷ್ಠ ಸಭೆ ಎಂಬ ಶಿರೋ ಲೇಖನದಲ್ಲಿ ಮಿ|| ಲಿಂಗಪ್ಪ ಬಸಪ್ಪ, ಕೂಬಹಾಳ ಇವರ ಹೆಸರು ಬಿಟ್ಟದ್ದರಿಂದ ಜನರಿಗೆಲ್ಲ ಅಸಮಾಧಾನವಾಗಿದೆ. ಈ ರಾಜನಿಷ್ಠ ಸಭೆಯು ಸದರಿ ಕೂಬಹಾಳ ಇವರ ಪರಿಶ್ರಮದಿಂದ ಆಗಿರುವುದು. ಸದರಿ ಕೂಬಹಾಳ ಇವರು ಈ ಸಭೆಯ ಸ್ವಾಗತಸಂಘಾಧ್ಯಕ್ಷರಿದ್ದರು. ಪ್ರಯುಕ್ತ ದಯವಿಟ್ಟು ಹಾನಗಲ್ಲ ತಾ|| ಆಲೂರ ಗ್ರಾಮದ ರಾಜನಿಷ್ಠ ಸಭೆ ಈ ಶಿರೋ ಲೇಖನದಲ್ಲಿ ಇವರ ಹೆಸರು ಮರೆತದ್ದರಿಂದ ಈಸಾರೆ ಪ್ರಸಿದ್ಧ ಮಾಡಬೇಕಾಗಿ ಇಚ್ಛಿಸುತ್ತೇವೆ.

ಚನ್ನವೀರೇಶ ವಾಚನಮಂದಿರ ಸೆಕ್ರೆಟರಿ.

ವೀರಶೈವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ.

ಈ ವರ್ಷ ನಡೆಯುವ ಎಸ್. ಎಸ್. ಎಲ್. ಸಿ. (Metricu- tion) ಪರೀಕ್ಷೆಯಲ್ಲಿ ಉತ್ತಮತರಗತಿಯಲ್ಲಿ (First class) ರ್ಗಡೆಯಾಗುವ ವೀರಶೈವ ವಿದ್ಯಾರ್ಥಿಗಳಿಗೆ ಎಂ. ಎಂ. ಹರ್ಡೇಕರ್ ಚಿತ ಎಲ್ಲಾ ಪುಸ್ತಕಗಳನ್ನೂ ಮತ್ತು Indian Nation uilders Part I· II· III· ಎಂಬ ಮೂರು ಇಂಗ್ಲೀಷ್ ಸ್ತಕಗಳನ್ನೂ ಬಹುಮಾನವಾಗಿ ಕೊಡುತ್ತೇವಾದ್ದರಿಂದ ದಯವಿಟ್ಟು ತ್ತಮ ತರಗತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ತಮ್ಮ ರಿಜಿಸ್ಟರ್ ಬರು ವಿಳಾಸ ಇತ್ಯಾದಿಗಳೊಡನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇ ಗಿ ಕೋರಿದೆ. ದಾವಣಗೆರೆ, ಎಸ್. ಎಂ. ಹಿರೇಮಠ.

ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರ ಸೆಂಟರಿನಲ್ಲಿ ಈ ವರ್ಷದಲ್ಲಿ ಯುವ ಕನ್ನಡ ಮತ್ತು ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಅವರ ಸಂಗಡ ಬರತಕ್ಕ ಶೈವ ಮಾಷ್ಟರುಗಳಿಗೂ ಸಹ ಪರೀಕ್ಷೆಯ ದಿನದಾರಭ್ಯ ಪರೀಕ್ಷೆ ಮುಗಿಯುವವರೆಗೂ ಭೋಜನದ ಏರ್ಪಾಟಿಗೋಸ್ಕರ ಇದೇ ತಾಲ್ಲೂಕು ಆರಶಿನಗೆರೆ ವಾಸಿಗಳಾದ ದೊಡ್ಡಹಳ್ಳಿ ಸಿದ್ದಮ್ಮ ಎಂಬವರು ತಮ್ಮ ಸ್ವಂತಖರ್ಚಿನಿಂದ ನಡಿಸಲು ಉದಾರವಾಗಿ ವಾಗ್ದಾನಮಾಡಿರುವದರಿಂದ ಆ ಕಾಲಕ್ಕೆ ಬರತಕ್ಕ ಎಲ್ಲಾ ವೀರಶೈವ ವಿದ್ಯಾರ್ಥಿಗಳೂ ಮಾಷ್ಟರುಗಳೂ ಸಹ ಎರಡುವಾರ ಮುಂಚಿತವಾಗಿ (ಬರುವ ಮಾರ್ಚಿ ೧೫ ತಾರೀಖಿನೊಳಗಾಗಿ) ಶಿಕಾರಿಪುರದ ವೀರಶೈವ ವಿದ್ಯಾವರ್ಧಕ ಸಂಘದ ಸೆಕ್ರೆಟರಿಯವರಲ್ಲಿಗೆ ಬರಹಮೂಲಕವಾದ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. (ವಿದ್ಯಾರ್ಥಿಗಳೂ ಮತ್ತು ಮಾಷ್ಟರುಗಳೂ ಸಹ ತಮ್ಮ ತಮ್ಮ ಹಾಸಿಗೆ ಹೊದಿಕೆಗಳನ್ನು ತಾವೇ ತರತಕ್ಕದ್ದು.)

ಚನ್ನವೀರಪ್ಪ ಮದನಭಾವಿ ಶಿವಪ್ಪ
ಹುಲಿಯಪ್ಪನವರ್ ಸೆಕ್ರೆಟರಿಗಳು.

ಶಿರಾಳಕೊಪ್ಪ.

ಇಲ್ಲಿಗೆ ಮೈಸೂರ್ ಬ್ಯಾಂಕಿನ ಶಾಖೆಯೊಂದನ್ನು ಇಟ್ಟುಕೊಡಬೇಕೆಂದು ಇಲ್ಲಿಯವರು ಬ್ಯಾಂಕ್ ಮ್ಯಾನೇಜರವರ ಮೂಲಕ ಬಹಳ ಕರೆಸ್ಪಾಂಡೆನ್ಸ್ ನಡೆಸಿದಾಗ್ಯೂ ಇನ್ನೂ ಸಫಲವಾಗಲಿಲ್ಲ. ಮೊನ್ನೆತಾನೇ ಇಲ್ಲಿಯ ತಾಲ್ಲೂಕು ಅಮಲ್ದಾರರವರಿಗೆ ಇಲ್ಲಿಯ ಜನರಿಗೆ ಬ್ಯಾಂಕಿನಿಂದ ಆಗುವ ಅನುಕೂಲಗಳನ್ನು ತಿಳಿಸಬೇಕೆಂದು ಬರೆದಹಾಗೆ ತಿಳಿದು ಬಂದಿತು. ಈಗ ಇಲ್ಲಿಯವರುಸರಿಯಾದ ಕಾರಣಗಳನ್ನು ಅರ್ಜಿಯ ಮೂಲಕ ಅಮಲ್ದಾರರವರಿಗೆ ತಿಳಿಸಿಕೊಂಡಿರುತ್ತಾರೆ ಮತ್ತು ಇಲ್ಲಿಯವರು ತಮಗಿರತಕ್ಕ ತೊಂದರೆಗಳನ್ನು ಖುದ್ದಾಗಿ ಹೋಗಿ ಹೇಳಲಿಕ್ಕೆ ಇಷ್ಟರಲ್ಲೇ ಬ್ಯಾಂಕ್‌ಮ್ಯಾನೇಜರವರ ಹತ್ತಿರ ಹೋಗತಕ್ಕವರಾಗಿದ್ದಾರೆ. ದಯಾಳು ಮ್ಯಾನೇಜರವರು ಇಲ್ಲಿ ಒಂದು ಏಜನ್ಸಿಯನ್ನು ಏರ್ಪಡಿಸಲಿಕ್ಕೆ ನಮ್ಮ ತಾಲ್ಲೂಕು ಅಮಲ್ದಾರರವರು ಬಹಳವಾಗಿ ಸಹಾಯಮಾಡುತ್ತಾರೆಂಬುದಾಗಿ ನಂಬುತ್ತೇನೆ. ಮತ್ತು ಇಲ್ಲಿಯ ಮುನ್ಸಿಪಲ್ ಮೆಂಬರುಗಳನ್ನು ನಾಮಿನೇಟ್ ಮೂಲಕವಾಗಿ ಚುನಾಯಿಸಿದ್ದು ಅನ್ಯಾಯವಾಗಿದೆಯೆಂದೂ ಮತ್ತು ಪ್ರಜೆಗಳ ಪ್ರೀತಿಗೆ ಪಾತ್ರರಲ್ಲದಿದ್ದವರನ್ನು ಚುನಾಯಿಸಿದ್ದಾರೆಂದು ದಿವಾನ್‌ರವರಿಗೆ ತಿಳಿಸಿಕೊಂಡಾಗ್ಯೂ, ಇನ್ನೂ ತೀರ್ಮಾನವಾಗದಿರುವುದು ನಮ್ಮಗಳ ದುರ್ದೈವವೋ ಏನೋ ತಿಳಿಯದು. ಪ್ರಜಾಹಿತೈಷಿ.

ತರೀಕೆರೆ ವೃತ್ತಾಂತ.

ಈಗ ಸುಗ್ಗಿಯ ಕಾಲವಾದಾಗ್ಯೂ ಕೂಡ ದಿನಸಿಯ ಧಾರಣೆಗಳು ಇಳಿಯಲಿಲ್ಲ. ಮುಂದೆ ಜೀವನಕ್ಕೇನೇ ಬಹಳ ತೊಂದರೆಯಾಗಬಹುದು. ದನಕರುಗಳಿಗೆ ಸಾಕಾಗುವಷ್ಟು ಹುಲ್ಲು ಸಹ ಆಗಲಿಲ್ಲ. ರೈತರು ದನಕರುಗಳನ್ನು ಮಾರುವವರಲ್ಲಿದಾರೆ, ಕಂದಾಯಕೊಡಲು ಬಹಳ ತೊಂದರೆಯಾಗಿದೆ. ಘನತೆಯೊಂದದ ಸರ್ಕಾರದವರು ರಿಮಿಷನ್ ಮಾಡಿಕೊಟ್ಟು ಜನರನ್ನು ಕಾಪಾಡಬೇಕೆಂದು ಹಾರೈಸುತ್ತಿದ್ದಾರೆ. ತಾ|| 19-2-22 ರಲ್ಲಿ ಇಲ್ಲಿನ ಕೋ ಆಪರೇಟೀವ್ ಸೊಸೈಟಿಯ ಜನರಲ್ ಮೀಟಿಂಗು ನಡೆಯಿತು. ಇಲ್ಲಿನ ಸಬ್‌ರಿಜಿಸ್ಟ್ರಾರ್ ಮ|| ವೆಂಕಟೇಶಮೂರ್ತಿಗಳು ಅಗ್ರಾಸನ ವಹಿಸಿದ್ದರು. ಕಾರ್ಯಕ್ರಮಗಳನ್ನು ಅತಿವಿಚಕ್ಷಣೆಯಿಂದ ನಡೆಸಿದ್ದಲ್ಲದೆ ಸೊಸೈಟಿಯ ಕಾರ್ಯಕ್ರಮಗಳನ್ನು ತಿಳಿಸಿದರು. ಮತ್ತು ಸ್ಟೋರ್ಸ್ ಸ್ಥಾಪಿಸುವದು ಅತಿಮುಖ್ಯವೆಂದು ತಿಳಿಸಿ ಅದರ ಆಲೋಚನೆಗಾಗಿ ಒಂದು ಕಮಿಟಿಯನ್ನು ಏರ್ಪಡಿಸಿದ್ದಾರೆ. ಇವರು ಬಂದು ಕೊಂಚದಿನಗಳಾದಾಗ್ಯೂ ಆಗಾಗ್ಗ ಇಲ್ಲಿ ನಡೆಯಬಹುದಾದ ಸಭೆಯಕೂಟಗಳಲ್ಲಿ ಸೇರಿ ಏಕಮತ್ಯ ವಿದ್ಯೆಯೆ ಮೊದಲಾದ ವಿಷಯಗಳನ್ನು ತಿಳಿಸುತ್ತಾ ಜನಗಳಲ್ಲಿ ವಿಶ್ವಾಸಪರರಾಗಿಧಾರೆ. ಮುಚ್ಚಿಹೋಗಿದ್ದ ರೀಡಿಂಗ್ ರೂಮನ್ನು ಪುನಃ ಸ್ಥಾಪಿಸಿರುತ್ತಾರೆ. ಪಬ್ಲಿಕ್ ಲೈಬ್ರರಿಗೆ ಸದ್ಬೋಧ ಗ್ರಂಥಗಳನ್ನೂ ಮಹನೀಯರ ಚರಿತ್ರೆಗಳನ್ನೂ ತರಿಸಿ ಜನರಿಗೆ ಓದಲು ಪ್ರೀತಿಯನ್ನುಂಟುಮಾಡಿದ್ದಾರೆ. ಸ್ಕೂಲ್‌ವಿದ್ಯಾರ್ಥಿಗಳಿಗೆ ಆಟಪಾಟಗಳಲ್ಲಿ ಉತ್ಸಾಹವನ್ನುಂಟುಮಾಡುತ್ತಾ ಅವರ ಜತೆಯಲ್ಲಿ ಆಟಪಾಟಗಳಿಗೆ ಸೇರುತ್ತಾ, ಸ್ಕೂಲಿನಲ್ಲಿ ನಡೆಯುವ ಮೀಟಿಂಗುಗಳಲ್ಲಿ ಅನೇಕ ಹಿತೋಕ್ತಿಗಳನ್ನು ತಿಳಿಸುತ್ತಾರೆ. ಅಲ್ಲದೆ ಎಲ್ಲರ ಪ್ರೀತಿಗೂ ಪಾತ್ರರಾಗಿರುತ್ತಾರೆ. ನಮ್ಮ ಮ್ಯಾಜಿಸ್ಟ್ರೇಟ್‌ರವರು ಮಾಡಿದ ತೀರ್ಮಾನದ ಮೇಲೆ ಕೆಲವು ಕೆಲಸಗಳು ಚೀಫ್‌ಕೋರ್ಟಿನಲ್ಲಿಯೂ ಇವರ ಅಭಿಪ್ರಾಯದಂತೆಯೇ ತೀರ್ಮಾನವಾದದ್ದು ತುಂಬಾ ಶ್ಲಾಘನೀಯವಾಗಿರುತ್ತದೆ. ನಮ್ಮ ಪೋಲೀಸ್ ಇನ್‌ಸ್ಪೆಕ್ಟರು ಬಹಳದಕ್ಷತೆಯಿಂದ ಕೆಲಸಮಾಡುತ್ತ ಪ್ರಜಾನೆಮ್ಮದಿಯನ್ನು ನೋಡಿಕೊಳ್ಳುತ್ತ ಇದ್ದಾರೆ. ಒಬ್ಬ ವರ್ತಕ.

ಬಳ್ಳಾರಿ ಜಿಲ್ಲಾ ಹುವ್ವಿನಹಡಗಲಿ ತಾಲ್ಲೂಕು ಪೈಕಿ ನೆಲ್ಕುದುರಿ ಮಜರಾ ಚಿಮ್ಮನಹಳ್ಳಿ.

ಹಗರಿ ಬಸವೇಶ್ವರ ಸ್ವಾಮಿಯ ರಥೋತ್ಸವವು ಈ ದುರ್ಮತಿ ಸಂ|| ರದ ಮಾಘಶುದ್ಧ ೧೧ ಬುಧವಾರ ಸಾಯಂಕಾಲ ಮೂರು ಗಂಟೆ ಸಮಯದಲ್ಲಿ ಅನಾದಿನವಾಗಿ ನಡೆದುಕೊಂಡು ಬಂದಂತೆ ಜರುಗಿತು ಈ ವರ್ಷ ನೆಲ್ಕುದುರಿ ಚಿಮ್ಮನಹಳ್ಳಿ ಪೂಲನತ್ತಿ ಕೋಗಳಿ ಇಟಗಿ ಈ ಗ್ರಾಮಗಳ ಮಹಾದೈವದವರು ಈ ರಥೋತ್ಸವದ ಉತ್ತೇಜನಕ್ಕಾಗಿ ಎತ್ತುಗಳ ಪ್ರದರ್ಶನವನ್ನೂ ಜಟ್ಟಿಗಳ ಕಾಳಗವನ್ನೂ ಹೆಚ್ಚು ಉತ್ಸಾಹದಿಂದ ಜರುಗಿಸಿದರು. ಸದರಿ ಕಮಿಟಿಯವರು ಕುಸ್ತಿಯಲ್ಲಿ ಗೆದ್ದವರಿಗೆ ಮತ್ತು ಉತ್ತಮವಾದ ಹೋರಿಗಳನ್ನು ತಂದಿದ್ದವರಿಗೆ ಭಂಗಾರದ ಮತ್ತು ಬೆಳ್ಳಿಯ ಮೆಡಲುಗಳನ್ನು ಕಡಗಗಳನ್ನು ಸಹ ಕೊಟ್ಟರು ಇದಲ್ಲದೆ ಎತ್ತುಗಳ ಪ್ರದರ್ಶನಕಾಲದಲ್ಲಿ ಕಮಿಟಿಯವರು ದೊಡ್ಡ ಸಭೆಯನ್ನು ಕೂಡಿಸಿ ರೈತಾಪಿ ಜನಗಳಿಗೆ ಭೂಮಿಗೆ ಗೊಬ್ಬರಮಾಡುವ ಬೀಜಗಳು ಬಿತ್ತುವ ಮತ್ತು ಎತ್ತುಗಳ ಆರೈಕೆಮಾಡುವ ವಿಷಯಗಳಲ್ಲಿ ಉಪನ್ಯಾಸಮಾಡಿಸಿದರು. ಇದಕ್ಕಾಗಿ ಸರ್ವಮಹನೀಯರೂ ಮಹದಾನಂದ ತುಂದಿಲರಾದರು ಮುಂದಿನ ಸಂ|| ರಕ್ಕೆ ಜರಗುವ ಉತ್ಸವಕಾಲಕ್ಕೆ ಸರ್ವರೂ ಆಗಮಿಸತಕ್ಕದ್ದಾಗಿ ಪ್ರಾರ್ಥನೆ. ಮತ್ತು ಈ ರಥಕ್ಕೆ ಭಕ್ತಿಸಂಪನ್ನರಾದ ಶ್ರೀಮಂತ ನೆಲ್ಕುದುರಿ ಬಸವಣ್ಣನವರ ಕೊಟ್ರಬಸವಪ್ಪನವರು ತಮ್ಮ ಉದಾರಮನಸ್ಸಿನಿಂದ ನಾಲ್ಕು ಕಲ್ಲು ಗಾಲಿಗಳನ್ನು ನೂತನವಾಗಿ ತಯಾರಿಸಿ ದಾನರೂಪವಾಗಿ ಒಪ್ಪಿಸಿದರು. ಇಂಥ ಸತ್ಕಾರ್ಯವನ್ನು ಮಾಡುವಂಥ ಮಹನೀಯರಿಗೆ ಇದು ಮೇಲ್ಪಂಕ್ತಿಯಾಗಿದೆ. ಈ ರಥೋತ್ಸವದ ಕಾಲಕ್ಕೆ ಕೋಗಳಿ ಮತ್ತು ನೆಲ್ಕುದ್ರಿ ನಾಟಕಮಂಡಲಿಯವರು ಬಂದು ನೀತಿಬೋಧಕವಾದ ನಾಟಕಗಳನ್ನು ಇಂಪಾದ ಗಾನದಿಂದಲೂ, ಆಶ್ಚರ್ಯಯುಕ್ತವಾದ ಸೀನರಿಗಳಿಂದಲೂ ಪ್ರದರ್ಶಿಸಿ ಪ್ರೇಕ್ಷಕರನ್ನು ಬಹಳ ಆನಂದಪಡಿಸಿದರು. ಈ ರಥಕ್ಕೆ ಗಡ್ಡಿಕಟ್ಟುವದಕ್ಕೆ ಈ ಕಮಿಟಿಯವರು ಸರಿಯಾದ ಏರ್ಪಾಟನ್ನಿಟ್ಟುಕೊಂಡಿದ್ದಾರೆ ಅನೇಕ ಮಹನೀಯರು ಸಹಾಯಮಾಡತಕ್ಕದ್ದಾಗಿದೆ. ಪ್ರೇಕ್ಷಕ.

ರಾಯಚೂರುಜಿಲ್ಲೆಗೆ ಸೇರಿದ ಮಸ್ಕಿ.

ಇದು ಮಾಸಂಗಿ ಪಟ್ಟಣವೆಂದು ಅಶೋಕಮಹಾರಾಜನ ಕಾಲದಿಂದಲೂ ಪುರಾಣಪ್ರಸಿದ್ಧವಾದದ್ದು. ಸ್ವಲ್ಪದಿವಸಗಳ ಕೆಳಗೆ ಇಲ್ಲಿಗೆ ಬಂದಿದ್ದ ಶಿಲ್ಪಶೋಧಕರ ಶೋಧನೆಯಲ್ಲಿ ಸದರಿ ಅಶೋಕಮಹಾರಾಜನ ಆಳಿಕೆಯ ಕಾಲದಲ್ಲಿ ಆತನಿಂದ ಸ್ಥಾಪಿತವಾದ ಒಂದು ಶಿಲಾಲೇಖವು ಇಲ್ಲಿ ದೊರೆಯಿತು. ಇದರ ವಿಸ್ತಾರವನ್ನು ಮುಂಬಯಿ ವೆಂಕಟೇಶ್ವರ ಸಮಾಚಾರವೆಂಬ ವಾರಪತ್ರಿಕೆಯಲ್ಲಿಯೂ ಹೈದರಾಬಾದದ ಸಿಹೀಫಾ ಎಂಬ ದಿನಪತ್ರದ ತಾ|| ೧-೫-೨೧ರ ಸಂಚಿಕೆಯಲ್ಲಿಯೂ ನೋಡಬಹುದು. ಅಲ್ಲದೆ ಈ ಗ್ರಾಮವು ಐವತ್ತಾರು ದೇಶದ ಕಟ್ಟೆಮನಿ ಮಸ್ಕಿ ಎಂದು ಪ್ರಸಿದ್ಧವಾಗಿ ಬಹುದೂರದೂರದಿಂದ ಜನರು ಬಂದು ತಮ್ಮೊಳಗೆ ಬಗೆಹರಿಯದೆ ಇದ್ದ ನ್ಯಾಯಗಳನ್ನು ಇಲ್ಲಿಯೇ ನಿಷ್ಕರ್ಷೆಯನ್ನು ಹೊಂದುವ ಕ್ರಮವಿದ್ದಿತು. ಆದರೆ ಸಾಂಪ್ರತಕಾಲ ವೈಚಿತ್ರ್ಯದಿಂದ ಅಷ್ಟು ಮಹತ್ವದ ಕಾರ್ಯಗಳು ಇಲ್ಲಿ ನಡೆಯದೇ ಇದ್ದ ಮೂಲಕ, ಕಳಕಳಿಯುಳ್ಳ ಕೆಲವು ಪುಢಾರಿಗಳು ಇಂಥಾ ಮೇಲ್ಪಂಙ್ತಿಯನ್ನು ಪಡೆದ ಈ ಗ್ರಾಮದಲ್ಲಿ ಸುಧಾರಣೆ ಪೂರ್ವದಂತೆಯೇ ವಿಷಯಗಳ ಜೀರ್ಣೋದ್ಧಾರವನ್ನು ಮಾಡಿ ಪುರೋವೃದ್ಧಿಗೆ ಒಯ್ಯಬೇಕೆಂದು ಯತ್ನಿಸಹತ್ತಿದ್ದಾರೆ. ಮೊನ್ನೆತಾನೇ ಮಾಘ ಶು|| ೧೫ ಗೆ ಜರಗಿದ ಶ್ರೀ ಮಲ್ಲಿಕಾರ್ಜುನದೇವರ ವಾರ್ಷಿಕ ರಥೋತ್ಸವದಲ್ಲಿ ನಡೆದ ವಿಷಯಗಳನ್ನು ನೋಡಿದರೆ ತಾನೇ ವ್ಯಕ್ತವಾಗುವದು. ಜಾತ್ರೆಯು ಮಾಘ ಶು|| ೧೪ ಯಿಂದ ಬ|| ೨ ವರೆಗೆ ಕಾರ್ಯಕ್ರಮಗಳೊಡನೆ ಅತಿವಿಜೃಂಭಣೆಯಿಂದ ಜರಗಿತು. ಬಹಳ ದೂರದೇಶದ ಜನರು ಕೂಡಿದ್ದರು. ಅಲ್ಲದೆ ಈ ಗ್ರಾಮಕ್ಕೆ ಸಂಬಂಧಿಸಿದ ಡಿವೀಜನ್ ಲಿಂಗಸೂಗೂರಿನ ಬಗಿರಾಮಿ ಖಿದಮತ್ ಆಲೀಜನಾಬ ಮುನಸೂಫ್ ಸಾಹೇಬರು ಎರಡು ದಿವಸದ ರಜೆಯನ್ನು ತೆಗೆದುಕೊಂಡು ಆಲಿಜನಾಬ್‌ರಾಯ ರಘುನಾಥಪ್ರಸಾದ ದುವ್ವಂ ತಾಲೂಕದಾರ ಸಾಹೇಬರು ತಮ್ಮದವರಾದ ಮೇಲೆಯೂ, ಇನ್ನುಳಿದ ಕಾಮದಾರರೂ ಬಾಕಿ ಎಷ್ಟೋ ಜನರು ಪ್ರೇಕ್ಷಣಾರ್ಥವಾಗಿಯೂ ಇಲ್ಲಿಗೆ ಬಂದಿದ್ದರು. ಜಾತ್ರೆಯು ಯಥಾಸಾಂಗವಾಗಿ ಜರಗಿದ ಬಳಿಕ ಮೂರನೆ ದಿವಸ ಒಂದು ಕಮಿಟಿಯು ಕೂಡಿತು. ಅದರಲ್ಲಿ ವಿದ್ಯಾ ವಿಷಯಕವಾಗಿಯೂ, ಔದ್ಯೋಗಿಕ, ಏಕಮತ್ಯ, ನೀತಿ ಮತ್ತು ಕೈಗಾರಿಕೆಯ ಪ್ರೋತ್ಸಾಹ ಮೊದಲಾದ ವಿಷಯಗಳಮೇಲೆಯೂ ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ಸುರಸವಾಗಿ ಭಾಷಣಮಾಡಿದರು. ಸಭಾಧ್ಯಕ್ಷತೆಯನ್ನು ಇಲ್ಲಿಯ ಜನಾಬ್ ಮೌಲ್ವಿಷೇಕ ಅಬ್ಬಾಸ್ ಮುಂತಜಮ್ ಸಾ|| ರು ವಹಿಸಿದ್ದರು. ಜಾತ್ರೆಯ ವ್ಯವಸ್ಥಾಪಕರಾದರೂ, ನಮ್ಮ ವೀರಶೈವ ಮಂಡಳಿಯೊಡನೆ ಸೇರಿದ್ದರು. ಉತ್ತಮಭಾಷಣ ಮಾಡಿದವರಿಗೆ ಮೆಡಲುಗಳು ಕೊಡಲ್ಪಟ್ಟವು. ನಂತರ ಶ್ರೀ ದೇವರ ಹೆಸರಿನಮೇಲೆ ಮಲ್ಲಿಕಾರ್ಜುನ ವಾಚನಾಲಯವೆಂದು ಒಂದು ಲೈಬ್ರರಿಯು ಸ್ಥಾಪಿತವಾಯಿತು, ಆ ಕೂಡಲೇ ವಾರಪತ್ರಿಕೆ ದಿನಪತ್ರಿಕೆ ಮಾಸಪತ್ರಿಕೆಗಳನ್ನು ತರಿಸಿಕೊಡಲು ಎಷ್ಟೋ ಉದಾರಿಗಳು ಸಂತೋಷದಿಂದ ಒಪ್ಪಿಕೊಂಡರು. ಮರುದಿವಸ ಶಾಲೆಯ ವಿದ್ಯಾರ್ಥಿಗಳನ್ನೆಲ್ಲ ಬರಮಾಡಿಕೊಂಡು ಪರೀಕ್ಷೆ ತೆಗೆದುಕೊಂಡು ಪಾಸಾದ ಹುಡುಗರಿಗೆ ಸಹ ಮೆಡಲುಗಳನ್ನು ಕೊಟ್ಟರು. ಇದಾದ ನಂತರ ಎ. ಕೆ. ಪೇಂಟರ್ ಸಾ|| ರು ಈ ಊರ ನಾಟಕದ ಪರದೆಗಳನ್ನು ಬಹಳ ಮನೋಹರವಾಗಿ ಬರೆದದ್ದಕ್ಕಾಗಿ ಮೊದಲ ದಿನವೇ ನಾಟಕನೋಡಿ ಬಂದ ನಮ್ಮ ಮುಂತಜಮ್ ಸಾ|| ರು ಪ್ರೋತ್ಸಾಹಕ್ಕಾಗಿ ಮೆಡಲನ್ನು ಅವರಿಗೆ ಕೊಟ್ಟರು. ಮೂರುಸಂಜೆಯ ಮುಂದೆ ಕೈಗಾರಿಕೆಯ ವಸ್ತುಗಳಲ್ಲಿ ಚೆನ್ನಾಗಿ ಕೆಲಸ ಮಾಡಿದವರಿಗೆ ಇನಾಮುಗಳು ಕೊಡಲ್ಪಟ್ಟವು. ಪ್ರಸಿದ್ಧರಾದ ವೇ|| ಸುರಪುರದ ಬೂದೆಯ್ಯನವರು ಶ್ರೋತೃಗಳ ಮನಸ್ಸಾನಂದವಾಗುವಂತೆ ಮೂರುದಿವಸ ಬಹುಮನೋಜ್ಞವಾಗಿ ಶಿವಕೀರ್ತನೆಯನ್ನು ಮಾಡಿದರು. ಜಾತ್ರೆಯು ನಿರ್ವಿಘ್ನವಾಗಿ ಕೊನೆಗಂಡಿತು. ಯಾವಾಗಲೂ ಇಂಥ ಉತ್ತೇಜನಕಾರಕವಾದ ಕಾರ್ಯಕ್ಕೆ ಸರ್ವರಿಗೂ ಬುದ್ಧಿಯನ್ನೀಯಲೆಂದು ದೇವರನ್ನು ಪ್ರಾರ್ಥಿಸುವ. ಓರ್ವ ಪ್ರತ್ಯಕ್ಷದರ್ಶಿ.

ದಾವಣಗೆರೆ ನಿವಾಸಿಗಳಿಗೆ ವಿನಂತಿ.

ಮೂಢಪದ್ಧತಿಯಂತೆ ಈಸಾರೆಯೂ ಶ್ರೀ ದುರ್ಗಮ್ಮನ ಜಾತ್ರೆಯು ನಿಮ್ಮ ಊರಲ್ಲಿ ಬರುವ ಫಾಲ್ಗುಣಮಾಸದಲ್ಲಿ ಜರುಗುವ ಕಾಲಕ್ಕೆ ತಿಳುವಳಿಕೆಯಿಲ್ಲದ ಹಲವು ಜನರು ಧರ್ಮದ ಹೆಸರಿನಲ್ಲಿ ಸಾವಿರಾರು ಬಡಮೂಕಪ್ರಾಣಿಗಳನ್ನು ಬಲಿಕೊಡುತ್ತಾರೆಂದೂ, ಸದರಿ ಅಮ್ಮನ ಜಾತ್ರೆಯನ್ನು ಬಹು ಸಂಭ್ರಮದಿಂದ ನಡೆಯಿಸಲು ನಿಮ್ಮ ಊರ ಕೆಲವು ಲಿಂಗಾಯತ ದೊಡ್ಡಮನುಷ್ಯರೂ, ಕೆಲವು ಬ್ರಾಹ್ಮಣ ಆಚಾರಿಗಳೂ ಅದರಲ್ಲಿ ಸೇರಿ ತುಂಬಾ ಶ್ರದ್ಧೆಯಿಂದ ಕೆಲಸಮಾಡುತ್ತಾರೆಂದೂ, ಈ ಅಧರ್ಮವಾದ ಹಿಂಸೆಯ ಪದ್ಧತಿಯನ್ನು ನಿಲ್ಲಿಸಲು ನೀವಾದರೂ ಪ್ರಯತ್ನಮಾಡುವಷ್ಟು ಕುತೂಹಲವುಳ್ಳವರಾಗಿಲ್ಲವೆಂದೂ ಕೇಳಿ ನನಗೆ ತುಂಬಾ ವ್ಯಸನವಾಗುತ್ತದೆ. ಅನಾಗರಿಕ ಕಾಲದಲ್ಲಿ ಅಜ್ಞಾನ ಜನರು ಮೂಢತನದಿಂದ ಅನುಸರಿಸುತ್ತಿದ್ದ ಅಧರ್ಮವಾದ ಪದ್ಧತಿಯನ್ನೇ ಶ್ರೇಷ್ಠವೆಂದೂ, ಅದರಲ್ಲಿ ಏನಾದರೂ ಮಹತ್ವವಿರಬೇಕೆಂದೂ ತಿಳಿದು ಅನುಸರಿಸುವುದು ಜ್ಞಾನಮಯವಾದ ಈಗಿನ ನಾಗರಿಕ ಕಾಲದಲ್ಲಿ ಯಾರಿಗೆ ದುಃಖವನ್ನುಂಟುಮಾಡಲಾರದು? ಯಾವ ಪ್ರಾಣಿಯನ್ನೂ ಯಾವ ಕಾರಣದಿಂದಲೂ ಹಿಂಸಿಸುವುದಾಗಲಿ, ಕೊಲ್ಲುವುದಾಗಲಿ ಮಾಡಬಾರದೆಂದೂ, ಹಾಗೆ ಮಾಡಿದರೆ ಅದು ನಿಜವಾದ ಧರ್ಮಕ್ಕೆ ತುಂಬಾ ವಿರೋಧವಾದುದೆಂದೂ ಪ್ರಾಣಿ ದಯಾಪರರಾದ ಸಜ್ಜನರು ತಿಳಿದಿರುವರು "ಮಾಹಿಂಸ್ಯಾತ್ಸರ್ವಭೂತಾನಿ ನಮಾಗ್‌ಂಸಮಶ್ನೀಯಾತ್" ಎಂದರೆ ಯಾವ ಪ್ರಾಣಿಗಳನ್ನೂ ಹಿಂಸಿಸಬಾರದು ಮಾಂಸವನ್ನು ತಿನ್ನಬಾರದು ಎಂದು ಪ್ರತ್ಯಕ್ಷ ವೇದವಚನವೇ ಇರುವುದು. ಪ್ರಾಣಿಗಳನ್ನು ಕೊಲ್ಲುವುದರಿಂದ ಮೋಕ್ಷವಾಗಲಿ, ಪುಣ್ಯವಾಗಲಿ, ಐಶ್ವರ್ಯವಾಗಲಿ, ಅಥವಾ ಯಾವ ಬಗೆಯ ಹಿತವಾಗಲಿ ಯಾರಿಗೂ ಲಭಿಸುವುದಿಲ್ಲವೆಂಬುದು ಮಹಾನುಭಾವರ ತಿಳುವಳಿಕೆಯಿಂದ ವ್ಯಕ್ತವಾಗುತ್ತದೆ. ಧರ್ಮದ ಹೆಸರಿನಲ್ಲಿ ಪ್ರಾಣಿಗಳನ್ನು ಕೊಲ್ಲುವುದು ಅಥವಾ ಕೊಲ್ಲಿಸುವುದೆಂದರೆ, ಎರಡು ರೀತಿಯಲ್ಲಿ ಪಾಪಮಾಡಿದಂತಾಗುತ್ತದೆ. ಕೊಲ್ಲುವುದು ಮೊದಲನೆಯ ಪಾಪ; ಧರ್ಮವನ್ನು ಕೆಡಿಸುವುದು ಎರಡನೆಯ ಪಾಪ; ಇಷ್ಟೇ ಅಲ್ಲ ಧರ್ಮದ ಹೆಸರಿನಲ್ಲಿ ಪ್ರಾಣಿಗಳನ್ನು ಕೊಲ್ಲುವುದನ್ನು ನೋಡಿ, ಕೇಳಿ, ಅದನ್ನು ನಿಲ್ಲಿಸಲು ಏನೂ ಪ್ರಯತ್ನಮಾಡದೆ ಸುಮ್ಮನೆ ಕುಳಿತುಕೊಳ್ಳುವುದು ಮೂರನೆ ತರದ ಪಾಪಮಾಡಿದಂತಾಗುತ್ತದೆಂದು ನನಗೆ ತೋರುತ್ತದೆ. ಬುದ್ಧ, ಮಹಾವೀರ ಮೊದಲಾದ ಮಹಾತ್ಮರು ಅವತರಿಸಿ, ಪ್ರಾಣಿಗಳಿಗೆ ಆಗುವ ಈ ತರದ ಹಿಂಸೆಯನ್ನು ನಿಲ್ಲಿಸಲು ಬಹು ಪ್ರಯತ್ನಪಟ್ಟು "ಅಹಿಂಸಾಪರಮೋಧರ್ಮಃ" ಎಂಬ ಶ್ರೇಷ್ಠವಾದ ತತ್ವವನ್ನು ಸ್ಥಾಪಿಸಿದರು. ಇದೇ ತತ್ವವನ್ನು ಮಹಾತ್ಮಗಾಂಧಿಯವರು ಈ ನಮ್ಮ ಕಾಲದಲ್ಲಿ ಪ್ರಸಾರಗೊಳಿಸುವ ಕಾರ್ಯದಲ್ಲಿ ಮಗ್ನರಾಗಿರುವರಲ್ಲವೆ? ಆಗಲೇ, ನಮ್ಮ ಹಿಂದೂಸ್ಥಾನದ ಎಷ್ಟೋ ಸ್ಥಳಗಳಲ್ಲಿ ಮೂಕಬಡಪ್ರಾಣಿಗಳನ್ನು ಬಲಿಕೊಡುವ ಮಹಾಪಾಪಕಾರ್ಯವು ಸಂಪೂರ್ಣವಾಗಿ ನಿಂತಿರುವುದನ್ನು ಕೇಳಿ ಪುಣ್ಯಕಾಲವು ಸಮೀಪಿಸಿತೆಂದು ಧಾರಾಳವಾಗಿ ಹೇಳಬಹುದು. ಅಂಥ ಪುಣ್ಯಕಾಲವು ಕ್ಷಿಪ್ರದಲ್ಲಿಯೇ ಬರಲೆಂದು ಹಾರೈಸುತ್ತಾ ಸರ್ವರೂ ಏಕಮತ್ಯದಿಂದ ತುಂಬಾ ಪ್ರಯತ್ನಮಾಡಬೇಕಾದುದು ಅವಶ್ಯಕವಲ್ಲವೆ? ಆದುದರಿಂದ ದಾವಣಗೆರೆ ನಿವಾಸಿಗಳಾಗಿರುವ ನನ್ನ ಬಂಧುಗಳೇ, ನೀವೂ ನಿಮ್ಮ ಊರಲ್ಲಿ ಆಗುವ ಹಿಂಸೆಯನ್ನು ನಿಲ್ಲಿಸಲು ಪ್ರಯತ್ನಮಾಡುವಿರಾ? ನೀವು ಅನೇಕ ಘನವಾದ ಕಾರ್ಯಗಳಿಗೆ ಸಹಾಯಮಾಡಿದ್ದೀರೆಂದೂ, ಅನೇಕ ಮಹದುಪಕಾರದ ಕಾರ್ಯಗಳನ್ನು ಮಾಡಿದ್ದೀರೆಂದೂ, ಇನ್ನೂ ಮಾಡತಕ್ಕವರಾಗಿರುವಿರೆಂದೂ ಕೇಳಿ ತುಂಬಾ ಸಂತೋಷವಾಗುತ್ತದೆ. ಇಷ್ಟು ಪ್ರಸಿದ್ಧಿಯು

ನ್ನು ಪಡೆದ ನಿಮ್ಮಂಥ ಜನರಿಗೆ ಆ ಅಧರ್ಮಪದ ತಿಯನ್ನು ನಿಲ್ಲಿಸುವುದ ಅಷ್ಟು ದೊಡ್ಡದಲ್ಲ. ಸ್ವಲ್ಪ ದಯಾಮನಸ್ಸಿನಿಂದ ಏಕಮತ್ಯವಾಗಿ ಪ್ರಯತ್ನ ಪಟ್ಟರೆ ಸಾಕು. ಸರ್ಕಾರದವರಾಗಲಿ, ಅನ್ಯ ಊರಿನವರಾಗಲಿ ಬಂದು ಆ ಪಾಪಕೃತ್ಯವನ್ನು ನಿಲ್ಲಿಸುವಂತೆ ಮಾಡಲಿಕ್ಕೆ ಆಸ್ಪದಕೊಡದೆ, ಊರಿನವರಾದ ನೀವುಗಳು ಏಕಮತ್ಯದಿಂದಲೂ, ಶಾಂತತೆಯಿಂದಲೂ ಕೈಹಾಕಿ ನಿಲ್ಲಿಸುವುದು ಯೋಗ್ಯವಲ್ಲವೆ? ಹಾಗೆ ಮಾಡುವುದು ನಿಮ್ಮ ಕರ್ತವ್ಯವಲ್ಲವೆ? ಅದರಿಂದ ನಿಮ್ಮಗಳಿಗೆ ತುಂಬಾ ಕೀರ್ತಿಬರುತ್ತದೆ. ಪುಣ್ಯಬರುತ್ತದೆ. ಆದುದರಿಂದ ಹಾಗೆ ಮಾಡುವಿರಾ?

ಸರ್ವ ಪ್ರಾಣಿಗಳ ಬಂಧು.

ಸಹಕಾರಿ ಪರಿಷತ್ತು.

ಧಾರವಾಡ ಜಿಲ್ಲಾ ರೋಣ ತಾ|| ಪೈಕಿ ಜಕ್ಕಲಿಯಲ್ಲಿ ಮೊದಲೇ ಠರಾಯಿಸಿದಂತೆ ಜಿಲ್ಲಾ ಸಹಕಾರಿಪರಿಷತ್ತು ಜನವರಿ ತಿಂಗಳ ೨೮-೨೯ನೇ ತಾರೀಖುಗಳಲ್ಲಿ ಮೆ|| ಪಿ. ಆರ್. ಛ್ಯಾಡೆಲ್‌ಸಾಹೇಬ ಬಾಹದ್ದೂರ್ ಕಮಿಶನರ್ ಸದರ್ನ್ ಡಿವಿಜನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಗೊತ್ತಾದ ವೇಳೆಗೆ ರೋಣದಿಂದ ಮೋಟಾರುಬಂಡಿಯಲ್ಲಿ ಒಂದು ಗಂಟೆಗೆ ದಯಮಾಡಿಸಿದರು. ಅಷ್ಟರಲ್ಲಿ ಮೆ|| ಅ|| ರಿಜಿಸ್ಟ್ರಾರ್ ಸಾಹೇಬರು, ದಿವಾನ್ ಬಾಹದ್ದೂರ್ ಮೆಣಸಿನಕಾಯಿ, ರಾವ್‌ಬಹದ್ದೂರ ನಾಯಕ ಮತ್ತು ಇನ್‌ಸ್ಟಿಟ್ಯೂಟಿನ ಪ್ರೆಸಿಡೆಂಟರಾದ ಮಿ|| ನಲವಡಿಯವರೂ ಸ್ವಾಗತಕಮಿಟಿಯ ಚೇರ್‌ಮನ್ನರಾದ ಮಿ|| ತೋಟಪ್ಪಾ ಕಡಗದ ವೈಸ್ ಚೇರಮನ್ ಮಿ|| ಗುರುಸಿದ್ಧಪ್ಪಚಟ್ಟಿಗು ಮಿ|| ವೆಂಕನಗೌಡ ಹಾಳಕೇರಿ, ಮಿ|| ಸಂಗನಬಸಪ್ಪ ನರೇಗಲ್ಲ, ಮಿ|| ಬಸನಗೌಡ ಅಬ್ಬಿಗೇರಿ, ಮಿ|| ಲಿಂಗಪ್ಪ ಮೇಟಿ ಮುಂತಾದವರು ಕೂಡಿ ಮುಂದಕ್ಕೆ ಹೋಗಿ ಅಧ್ಯಕ್ಷರ ಸ್ವಾಗತ ಮಾಡಿ ಕರತಂದರು. ಸಭೆಯ ಮಂಟಪಕ್ಕೆ ಅಧ್ಯಕ್ಷರು ಆಗಮಿಸಿದ ಕೂಡಲೇ ಮಂಗಲಕರವಾದ ವಾದ್ಯಗಳು ಸರ್ವ ಸಭಿಕರಿಗೂ ಅಧ್ಯಕ್ಷರ ಆಗಮನವನ್ನು ಸೂಚಿಸಿ ಆನಂದವನ್ನುಂಟುಮಾಡಿದವು. ಆ ಕಾಲಕ್ಕೆ ಆ ಊರ ಅ|| ಮಾಸ್ತರಾದ ಮಿ|| ಸ್ವಾಟಿ ಮತ್ತು ಉಚ್ಚಂಗಿ ಮಠ ಇವರು ತಮ್ಮ ವಿದ್ಯಾರ್ಥಿಗಳಿಂದ ಒಳ್ಳೇ ಸಿಸ್ತಿನಿಂದ ಕವಾಯಿತನ್ನು ಮಾಡಿಸಿದ್ದನ್ನು ಅಧ್ಯಕ್ಷರು ಸಂತೋಷದಿಂದ ನೋಡುತ್ತ ತಮ್ಮ ಸ್ಥಾನವನ್ನು ಸ್ವೀಕರಿಸಿದರು. ಆಮೇಲೆ ಅಲ್ಲಿಯ ಹೆಡ್‌ಮಾಸ್ತರರಾದ ಮಿ|| ವೆಂಕಟೇಶ ಕುಲಕರ್ಣಿಯವರು ರಚಿಸಿದ ಸ್ವಾಗತ ಪದಗಳನ್ನು ತಮ್ಮ ವಿದ್ಯಾರ್ಥಿಗಳಿಂದ ಒಳ್ಳೇ ಮನೋಹರವಾಗಿ ಗಾಯನಮಾಡಿಸಿದರು. ಸಭೆಯಾರಂಭದಲ್ಲಿ ನಮ್ಮ ಭರತಖಂಡಕ್ಕೆ ಈಗ ಬಂದಿರುವ ಯುವರಾಜರ ಸ್ವಾಗತವನ್ನು ಮತ್ತು ಅವರು ಸುಖಪ್ರವಾಸದಿಂದ ತಿರಿಗಿ ತಮ್ಮ ದೇಶಕ್ಕೆ ಸುರಕ್ಷಿತವಾಗಿ ಮುಟ್ಟಲೆಂದು ಪರಮಾತ್ಮನನ್ನು ಸ್ಮರಿಸತಕ್ಕ ಠರಾವನ್ನು ಧಾರವಾಡದ ಸುಪ್ರಸಿದ್ಧ ವಕೀಲರಾದ ಮಿ|| ಸೂರ್ಯವಂಶಿವಕೀಲರು ಸಭೆಯ ಮುಂದೆ ತಂದರು. ಅದಕ್ಕೆ ಮಿ|| ನರಸಿಂಗರಾವನಾಡಗೌಡ ಇವರು ಅನುಮೋದಿಸಿ, ಇದನ್ನು ತಾರಿನಿಂದ ಅವರಿಗೆ ತಿಳಿಸತಕ್ಕದ್ದೆಂದು ಹೇಳಿದ್ದರಿಂದ ಸರ್ವರೂ ಕರತಾಡನದಿಂದ ಸಮ್ಮತಿಸಿ ಪ್ಯಾಸ್‌ಮಾಡಿದರು. ಈ ಸಭೆಗೆ ಧಾರವಾಡ ಜಿಲ್ಲೆಯ ಬಹುತೇಕ ಯಾವತ್ತು ತಾಲ್ಲೂಕಿನ ಸಹಕಾರಿ ಬಾಂಧವರು ಒಳ್ಳೇ ಉತ್ಸುಕತೆಯಿಂದ ಬಂದಿದ್ದರು. ಹಾಗು ಸಹಕಾರಿ ಖಾತೆಯ ಬಹುಶಃ ಯಾವತ್ತು ಅಮಲ್ದಾರರೂ ಮತ್ತು ಆನರರಿ ಆರ್ಗನೈಜರರೂ ಎಲ್ಲಾ ಭಾಗಗಳಿಂದ ಸಭೆಗೆ ಹಾಜರಿದ್ದರು. ಹಾಗು ವ್ಯಸಾಯ ಶಾಖೆಯ ಡೆಪ್ಯುಟಿ ಡೈರೆಕ್ಟರರಾದ ಮೆ|| ಗಿಲ್ಬರ್ಟ್‌ಸಾಹೇಬರು ಮಿ|| ಧಾರವಾಡಕರ ಮಿ|| ಸಾಲಿಮಠ ಮೊದಲಾದ ಆ ಶಾಖೆಯ ಆಫೀಸರರು ಸಹ ಬಂದಿದ್ದರು. ಇದಲ್ಲದೆ ರೆವಿನ್ಯೂ ಶಾಖೆಯ ದೊಡ್ಡ ದೊಡ್ಡ ಅಧಿಕಾರಿಗಳಾದ ಆ ಭಾಗದ ಇಲಾಖಿ ಸಾಹೇಬರು ಮತ್ತು ಗದಗ ರೋಣ ತಾಲ್ಲೂಕುಗಳ ಮಾಮಲೇದಾರರೂ ಹಾಗು ಮುಂಡರಗಿಯ ಮಹಾಲಕರಿ ಮೊದಲಾದವರೂ ಆಗಮಿಸಿದ್ದರು. ರೋಣ, ಗದಗ, ನವಲ್ಗುಂದ ಬಾದಾಮಿ ತಾಲ್ಲೂಕುಗಳಲ್ಲಿಯ ಸಂಘಗಳ ಜನರು ಬಹುಶಃ ಮೂರು ಸಾವಿರದ ಮೇಲೆ ಬಂದಿದ್ದರು. ಸಭೆಯ ಭವ್ಯವಾದ ಮಂಟಪವು ಜನಸ್ತೋಮದಿಂದ ತುಂಬಿ ಹೊರಸೂಸುತ್ತಿತ್ತು. ಮೊದಲನೆಯ ದಿವಸ ಅಧ್ಯಕ್ಷರು ೫|| ಗಂಟೆಯವರೆಗೆ ಸಭೆಯ ಕೆಲಸವನ್ನು ಒಳ್ಳೆ ಶಾಂತರೀತಿಯಿಂದ ನಡಿಸಿ ರಾವ್‌ಸಾಹೇಬ್ ಲಿಂಗನಗೌಡ ಪಾಟೀಲ ಇವರಿಗೆ ಅವರ ರಾವ್‌ಸಾಹೇಬ ಪದವಿಯ ಬಹುಮಾನದ ಪದಕವನ್ನು ಇದೇ ಕಾಲಕ್ಕೆ ದಯಪಾಲಿಸಿದರು. ಮುಂದೆ ಸ್ವಾಗತ ಕಮಿಟಿ ಪಕ್ಷದಿಂದ ಚೇರ್‌ಮನ್ನರು ಕೊಟ್ಟ ಮೇಜವಾನಿಯನ್ನು ಒಳ್ಳೇ ಸಂಭ್ರಮದಿಂದ ಸ್ವೀಕರಿಸಿದರು. ಆಮೇಲೆ ಕೃಷಿಶಾಖೆಯವರ ರಂಟೆ ಪ್ರದರ್ಶನವನ್ನು ನಿರೀಕ್ಷಿಸಿ ಫೋಟೋತೆಗೆಸಿದನಂತರ ಸರ್ವಸಭಿಕರ ಅಪ್ಪಣೆಯನ್ನು ತೆಗೆದುಕೊಂಡು ಅಧ್ಯಕ್ಷರು ಗದಗಿಗೆ ಹೊರಟು ಹೋದರು. ಎರಡನೆ ದಿವಸ ಉಪಾಧ್ಯಕ್ಷರಾದ ಮೆ|| ನಾಯಕ ಗೊನೆಹಳ್ಳಿ ಸಾಹೇಬರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿ ಸಭೆಯ ಕೆಲಸವನ್ನು ಉತ್ತಮರೀತಿಯಿಂದ ನಡಿಸಿದರು. ಈ ಸಭೆಯಲ್ಲಿ ಸಹಕಾರಿ ಸಂಘಗಳಿಗೆ ಮತ್ತು ಬಡರೈತಜನರಿಗೆ ಅನುಕೂಲವಾದ ಎಷ್ಟೋ ಮಹತ್ವದ ವಿಷಯಗಳು ಪ್ಯಾಸ್ ಆದುವು. ಮೊದಲನೆ ದಿವಸದ ರಾತ್ರಿ ಶ್ರೀಮಂತ ಪಂಪಾಪತಿ ಬಲ್ಲಾಳರಾಯ ದೇಸಾಯಿ ಸಾ|| ಅಮ್ಮಿನಭಾವಿ ಇವರ ಉದಾರಾಶ್ರಯದಿಂದ ತಯಾರಾದ ಸಹಕಾರಿ ನಾಟಕವನ್ನು ಆ ಊರಸಂಘದವರು ಪ್ರಯೋಗ ಮಾಡಿ ತೋರಿಸಿದರು. ಇದರಿಂದ ಯಾವತ್ತು ಜನರಿಗೆ ಸಹಕಾರದಿಂದಾಗುವ ಲಾಭಗಳು ಚನ್ನಾಗಿ ಮನವರಿಕೆಯಾದವು. ವ್ಯವಸಾಯಶಾಖೆ ಇವರು ತಮ್ಮ ಕಬ್ಬಿಣರಂಟೆಯ ಪ್ರಯೋಗವನ್ನೂ ಗೋಧಿಹುಲ್ಲನ್ನು ತಿಳಿಸುವ ಯಂತ್ರದ ಪ್ರಯೋಗಗಳನ್ನೂ ತೋರಿಸಿದರು. ಮಿ|| ಸಾಲಿಮಠ ಇವರು ಒಳ್ಳೇ ಸರಸವಾಣಿಯಿಂದ ಸರ್ವರಿಗೂ ಅವುಗಳಲಾಭವನ್ನು ತಿಳಿಸಿ ಹೇಳಿದರು.

ಈ ಜಕ್ಕಲಿಯು ರೋಣ ತಾ|| ನಲ್ಲಿ ಒಂದು ಸಾಧಾರಣವಾದ ಹಳ್ಳಿಯಾಗಿರುತ್ತದೆ. ಇದು ರೈಲ್ವಿಗೆ ೧೫-೨೦ ಮೈಲಿ ದೂರದಲ್ಲಿದೆ. ಆದರೂ ಸಭೆಗೆ ಬಂದ ಮೂರುಸಾವಿರ ಜನರ ಅನ್ನ ನೀರು ಹಾಗೂ ಇಳಿದುಕೊಳ್ಳುವ ವ್ಯವಸ್ಥೆಯನ್ನು ಬಹಳ ಉತ್ತಮರೀತಿಯಿಂದ ಸ್ವಾಗತ ಕಮಿಟಿಯವರು ಮಾಡಿದ್ದರು. ಮೂರುಸಾವಿರ ಜನರು ಸಭೆಯಕಾಲಕ್ಕೆ ಒಳ್ಳೇ ಸಿಸ್ತಿನಿಂದ ವಿರಲವಾಗಿ ಕುಳ್ಳಿರಲಿಕ್ಕೆ ಬರುವಂತೆ ಒಂದು ಭವ್ಯವಾದ ಮಂಟಪವನ್ನು ಮಿ|| ತೋಟದಪ್ಪ ಕಡಗದ ಇವರ ಜಿನ್ನಿನಕಾಂಪೌಂಡಿನಲ್ಲಿ ಮಿ|| ಮಹಂತಪ್ಪ ನಿಲ್ವಾಡದ ಮಿ|| ಚನ್ನಯ ಇವರು ಒಳ್ಳೆ ವ್ಯವಸ್ಥೆಯಿಂದ ರಚಿಸಿದ್ದರು. ಈ ಸಭೆಯಕೆಲಸಗಳಲ್ಲಿ ಜಕ್ಕಲಿಯೂನಿಯನ್ನಿಗೆ ಸಮಾವೇಶವಾದ ಯಾವತ್ತು ಹಳ್ಳಿಗಳಿಂದ ಸಹಾಯವು ಸಿಕ್ಕಿದುದಲ್ಲದೆ, ಸೂಡಿ, ನರೇಗಲ್ಲ, ಮಲ್ಲಾಪುರ, ರೋಣ ಮೊದಲಾದ ಸಂಘದವರಿಂದ ಯೋಗ್ಯಸಹಾಯವು ದೊರೆದಿರುತ್ತದೆ. ಹಾಗು ಗದಗಿನಲ್ಲಿಯ ರಾವ್ ಸಾಹೇಬ ವೀರಪ್ಪ ಮಾನ್ವಿ, ರಾವ್ ಸಾಹೇಬ ಶಿವಪ್ಪ ಮಾನ್ವಿ ಮತ್ತು ಮಿ|| ವೀರಪ್ಪ ಅಣ್ಣಾಚವಡಿ ಮೊದಲಾದವರ ಕಡೆಯಿಂದ ತಕ್ಕಷ್ಟು ಸಹಾಯವು ದೊರೆದಿದ್ದುದಲ್ಲದೆ ಮೇಲಿಂದಮೇಲೆ ತಮ್ಮ ಅನುಭವ ಸಿದ್ಧವಾದ ಸೂಚನೆಗಳನ್ನು ಸರಿಯಾದ ವೇಳೆಗೆ ಅವರು ಕೊಡುತ್ತಲಿದ್ದರು. ಸ್ವಾಗತ ಕಮಿಟಿಯವರಲ್ಲಿ ಮಿ|| ಸಿದ್ದಪ್ಪ ಅಣ್ಣಾ ಚವಡಿ, ಗುರುಸಿದ್ದಪ್ಪಾ ಸೂಡಿ, ವೆಂಕಟನಗೌಡ ಹಾಳಕೇರಿ, ಬಸವನಗೌಡ ಅಬ್ಬಿಗೇರಿ, ಸಂಗನಬಸಪ್ಪಾ ನರೇಗಲ್ಲ, ಕಂಟಿಯ ರೇಣುಕಮಠ ರಾಚಪ್ಪ ಮಾನ್ವಿ, ಮುದ್ದಪ್ಪಾ ಕೋಟಿ ಮಹಂತಪ್ಪಾ ನಿಲ್ವಾಡದ ಇವರು ಒಳ್ಳೇತಳಕಳಿಯಿಂದ ಹಗಲಿರುಳೂ ಶ್ರಮವಹಿಸಿ ಈ ಸಭೆಯ ಕೆಲಸದಲ್ಲಿ ಸಹಾಯ ಮಾಡಿರುವರು. ಹಾಗು ಗದಗ ತಾ|| ಆನರರಿ ಆರ್ಗನೈಜರ ಮಡಿವಾಳಪ್ಪಾ ತುರ್ಕಾಣಿ ಮತ್ತು ರೋಣ ತಾ|| ಆನರರಿ ಆರ್ಗನಾಯಜರ ಗೋವಿಂದಪ್ಪಾ ಹುಬ್ಬಳ್ಳಿ ಇವರು ಸಹ ತಕ್ಕಷ್ಟು ಸಹಾಯಮಾಡಿರುವರು. ಮತ್ತು ಗದಗ ಕಾಟನ್‌ಸೇಲ್ ಸೊಸೈಟಿಯ ಮ್ಯಾನೇಜಿಂಗ ಡೈರೆಕ್ಟರರಾದ ಮಿ|| ವಡೇರಮಠ ಇವರು ಆರಂಭದಿಂದ ಈ ಕಾರ್ಯದಲ್ಲಿ ಒಳ್ಳೇ ಶ್ಲಾಘನೀಯವಾದ ಪ್ರಯತ್ನ ಮಾಡಿದರು. ಮುಂಬಯಿ ಸೆಂಟ್ರಲ್ ಬ್ಯಾಂಕಿನ ಇನ್‌ಸ್ಪೆಕ್ಟರಾದ ಮಿ|| ಡಿ. ಆರ್. ಕಾಳೆಯವರು ಸರಿಯಾದ ಸಹಾಯಮಾಡಿರುವರು. ಈ ಸಭೆಯ ಮೂಲ ಉತ್ಪತ್ತಿಗೆ ಮತ್ತು ಅದರ ನಿರ್ವಾಹಕ ಕೆಲಸಕ್ಕೆ ಮೆ|| ರಿ|| ರಿಜಿಸ್ಟ್ರಾರ್ ಹೂಲಿ ಸಾಹೇಬರು ಹಾಗು ಅಗ್ರಿಕಲ್ಚರಲ್ ಆರ್ಗನೈಜರ್ ಮಿ|| ಪಾಟೀಲರವರು ಇರುತ್ತಾರೆ. ಮೂರುವರ್ಷಗಳಿಂದ ರೋಣದಲ್ಲಿ ಸಹಕಾರಿ ಕಾನ್‌ಫರೆನ್ಸನ್ನು ನೆರವೇರಿಸಬೇಕೆಂದಿದ್ದ ಅವರ ಲವಲವಿಕೆಯನ್ನು ಜಕ್ಕಲಿಯೂನಿಯನ್ನಿನವರ ಸಹಾಯದಿಂದ ತೋಟಪ್ಪ ಕಡಗದ ಇವರು ಪೂರೈಸಿದರು. ರಾ|| ತೋಟಪ್ಪ ಕಡಗದ ಇವರು ಯಾವಾಗಲೂ ಸಮಾಜದ ಕೆಲಸದಲ್ಲಿ ಒಳ್ಳೇ ಮುಂದಾಳಾಗಿ ಹಗಲಿರುಳೂ ತ್ರಿಕರಣಪೂರ್ವಕವಾಗಿ ಸಮಾಜಸೇವಾಮಾಡುತ್ತಿರುವರು. ಇದರಂತೆ ಪದೇಪದೇ ಸಮಾಜಸೇವೆಮಾಡಲಿಕ್ಕೆ ಅವರಿಗೆ ದಯಾಘನನಾದ ಶ್ರೀ ಪರಮೇಶ್ವರನು ದೀರ್ಘಾಯುಷ್ಯವನ್ನೂ ಸುಬುದ್ಧಿಯನ್ನೂ ಕೊಡಲೆಂದು ಬಯಸುವ.

ಓರ್ವಸಹಕಾರಿ.

ಶ್ರೀ ಉಳವಿಬಸವೇಶ್ವರ ಯಾತ್ರೆಯ ಹಾಗೂ ವೀರಶೈವ ಮಹಾಸಭೆಯ ಬಗ್ಗೆ ಸೂಚನೆಯು.

“ಯತೋಧರ್ಮಸ್ತತೋಜಯಃ”

ಈ ಸಾರೆಯ ಶ್ರೀ ಉಳವಿಬಸವೇಶ್ವರ ಯಾತ್ರೆಯು ಪ್ರತಿವರ್ಷದಂತೆ ಮಾಘಶುದ್ಧ ಪೂರ್ಣಿಮೆಯ ದಿವಸ ಮತ್ತು ಅದರ ಮಾರನೆಯದಿವಸ ಅಂದರೆ ಸೋಮವಾರದಿವಸ ಬಹಳ ವಿಜೃಂಭಣೆಯಿಂದ ಸಾಂಗವಾಯಿತು. ಈ ಯಾತ್ರೆಗೆ ಧಾರವಾಡ, ಬೆಳಗಾವ, ವಿಜಾಪುರ, ಶಿವಮೊಗ್ಗಾ, ಶಿಕಾರಿಪುರ ಬೆಂಗಳೂರು, ಸೊರಬ, ಸೊಲ್ಲಾಪುರ ಮೊದಲಾದ ಕಡೆಯ ಅನೇಕ ಮಂದಿ ಯಾತ್ರಿಕರು ಬಂದಿದ್ದರು. ಈ ವರ್ಷದ ಯಾತ್ರೆಗೆ ಸುಮಾರು ೭-೮ ಸಾವಿರ ಜನರು ಕೂಡಿದ್ದರು. ಶಿರಸಿಯ ರುದ್ರಮಠದ ಶ್ರೀಮನ್ನಿರಂಜನ ಶಾಂತವೀರ ಸ್ವಾಮಿಗಳು: ಶ್ರೀಮನ್ನಿರಂಜನ ಇಳಕಲ್ಲ ಮಹಾಂತಸ್ವಾಮಿಗಳು, ಧಾರವಾಡದ ಶ್ರೀಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳು, ನವಲಗುಂದದ ಶ್ರೀಗುರುಸಿದ್ಧದೇವರು, ಶ್ರೀ ಅಂಕಲಗಿ ಸ್ವಾಮಿಗಳು, ಮೊದಲಾದ ಪೂಜ್ಯ ವಿರಕ್ತಸ್ವಾಮಿಗಳು, ಅನೇಕಮಂದಿ ಇತರ ಗುರು ವರ್ಗದ ಜನರು, ಹಾಗು ಪ್ರಮುಖಭಕ್ತ ಜನರು ಕೂಡಿದ್ದರು. ಈ ಸಾರೆ ಶಿವಯೋಗ ಮಂದಿರದ ಕೀರ್ತನ ಕಾರರಾದ ವೇ|| ಬಸವಲಿಂಗ ಶಾಸ್ತ್ರಿಗಳು ಎರಡುದಿವಸ ತಮ್ಮ ಸುಶ್ರಾವ್ಯವಾದ ಬೋಧಪರಕೀರ್ತನಗಳಿಂದಲೂ ಇಳಕಲ್ಲ ಶ್ರೀ ಮಹಾಂತಸ್ವಾಮಿಗಳು ಭಕ್ತಿಪರವಿಷಯದ ಮೇಲಿನ ತಮ್ಮ ಅನೇಕವಾದ ಉಪನ್ಯಾಸಗಳಿಂದಲೂ ಶ್ರೋತೃವರ್ಗದ ಜನರನ್ನು ಆನಂದಮಯಮಾಡಿದರು ಧಾರವಾಡದ ಶ್ರೀಯುತ ಶೆಟ್ಟೀ ಮಾಸ್ತರರು ಹಾಗೂ ಇನ್ನೂ ೨-೩ ಮಂದಿ ವಕ್ತೃಗಳು “ಧರ್ಮ ಮತ್ತು ಭಕ್ತಿ” ಎಂಬ ವಿಷಯದ ಮೇಲೆ ತಮ್ಮ ಉಪನ್ಯಾಸಮಾಡಿದರು. ಕೀರ್ತನ, ಭಜನ, ಮತ್ತು ಉಪನ್ಯಾಸಗಳಿಂದ ಈ ಸಾರೆಯ ಯಾತ್ರೆಗೆ ಒಂದು ಅತ್ಯಂತ ಮಹತ್ವವಾದ ಸ್ವರೂಪವು ಬಂದಿದ್ದಿತು. ದೇವಸ್ಥಾನದ ಉತ್ತಮ ಆಡಳಿತೆಯಬಗ್ಗೆ ವಿಚಾರಮಾಡುವ ಕುರಿತು ದೇವಸ್ಥಾನದ ಜನರಲ್ ಕಮಿಟಿಯು ಸುಪಾಪೇಟೆಯ ಮಹಾಲಕರಿಯವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಆಗ ದೇವಸ್ಥಾನದ ವಾರ್ಷಿಕೋತ್ಸವದ ಬಗ್ಗೆ ಮತ್ತು ದೇವಸ್ಥಾನದ ಹಣದ ಎತ್ತುವಳಿ ಮತ್ತು ವಿನಿಯೋಗ ಇವುಗಳ ಬಗ್ಗೆ ಸುಧಾರಣೆಯನ್ನು ಮಾಡುವ ಕುರಿತು ಕೆಲವು ವೇಳೆ ಆಲೋಚನೆನಡೆದು ವರ್ಷಕ್ಕೆ ೧ ರೂಪಾಯಿ ಚಂದಾಯ ಕೊಡುವ ಮಹನೀಯರನ್ನು ದೇವಸ್ಥಾನದ ಜನರಲ್ ಕಮಿಟಿಯ ಮೆಂಬರರನ್ನಾಗಿ ಮಾಡಿಕೊಳ್ಳಬೇಕೆಂತಲೂ ದೇವಸ್ಥಾನದ ಉತ್ಪನ್ನ ಮತ್ತು ಖರ್ಚುಗಳ ಬಗ್ಗೆ ಯೋಗ್ಯವ್ಯವಸ್ಥೆಯನ್ನಿರಿಸಲಿಕ್ಕೆ ಟ್ರಸ್ಟುರರು, ಆಡಿಟರರು, ಸೆಕ್ರೆಟರಿಗಳು ಇರಬೇಕೆಂತಲೂ ಹಿಂದಕ್ಕೆ ಹಣದ ವಿನಿಯೋಗವನ್ನು ಸರಿಯಾಗಿ ಮಾಡದೆ ಮತ್ತು ತಮ್ಮ ಕಡೆಗೆ ಬಂದ ಹಣದ ಲೆಕ್ಕವನ್ನು ಒಪ್ಪಿಸದೇ ಇರುವ ದೇವಸ್ಥಾನದ ಮೊಕ್ತೇಸರರ ಮೇಲೆ ದಿವಾಣೀಕೋರ್ಟಿನಲ್ಲಿ ದಾವೆ ತರಬೇಕೆಂತಲೂ ಠರಾವುಗಳು ಮಾಡಲ್ಪಟ್ಟವು. ಈ ಕಮಿಟಿಯಲ್ಲಿ ಹಿಂದಿನ ೨೫-೩೦ ಜನರು ಕಮಿಟಿಯಲ್ಲಿ ಪಾಸಾದ ಹೊಸನಿಯಮಕ್ಕನುಸರಿಸಿ ಮೆಂಬರರಾದುದಲ್ಲದೆ ಹೊಸದಾಗಿ ಸಹಾ ೧೮-೨೦ ಜನರು ತಮ್ಮ ಚಂದಾಯವನ್ನು ಅಲ್ಲಿಂದಲೇ ಕೊಟ್ಟು ಮೆಂಬರರಾದರು. ಹಾಗೂ ಆ ದಿವಸ ಸಾಯಂಕಾಲಕ್ಕೆ ಎರಡನೆ ಕಡೆಗೆ ಸಭೆಕೂಡಿ ಶ್ರೀಮಹಾಂತಸ್ವಾಮಿಗಳು, ಶ್ರೀ ಮೃತ್ಯುಂಜಯಸ್ವಾಮಿಗಳು, ಶ್ರೀಯುತ ಶೆಟ್ಟಿ ಮಾಸ್ತರರು ಮೊದಲಾದವರು ಉಪನ್ಯಾಸಗಳನ್ನು ಮಾಡಿದನಂತರ ಸುಮಾರು ೮೦ ಜನರು ತಮ್ಮ ಚಂದಾಯವನ್ನು ಕೊಟ್ಟು ಮೆಂಬರರಾದರು. ಮಾರನೆದಿವಸ ಬೆಳಗ್ಗೆ ಸಹ ಮೆಂಬರರನ್ನು ಹೆಚ್ಚಿಗೆ ಮಾಡಿಕೊಳ್ಳುವಬಗ್ಗೆ ಕಮಿಟಿಯು ಕೂಡತಕ್ಕದ್ದಿತ್ತು. ಇನ್ನೂ ಹೆಚ್ಚಿಗೆ ಜನರು ಮೆಂಬರರಾಗಿರಬಹುದೆಂಬುದರಲ್ಲಿ ತಿಲಾಂಶವಾದರೂ ಸಂದೇಹವಿಲ್ಲ. ಈ ಪರಮಪವಿತ್ರ ದೇವಸ್ಥಾನದ ಬಗ್ಗೆ ವೀರಶೈವರಲ್ಲಿ ಅತುಲ ಅಭಿಮಾನ ವಿರುವದನ್ನು ನೋಡಿದರೆ ವರ್ಷಾರು ತಿಂಗಳಲ್ಲಿ ೧ ಸಾವಿರ ಜನರು ಮೆಂಬರರು ಸುಲಭವಾಗಿ ಆಗುವರೆಂದು ನನಗೆ ತೋರುತ್ತದೆ. ಈ ದೇವಸ್ಥಾನದ ಪೂಜಾ, ನೈವೇದ್ಯ ಇವುಗಳ ವಿನಿಯೋಗದ ಸಲುವಾಗಿ ಸರಕಾರದವರು ವರ್ಷಕ್ಕೆ ಸುಮಾರು (340) ರೂಪಾಯಿ ಗ್ರಾಂಟ್ ಕೊಡುತ್ತದ್ದು; ಭಕ್ತಜನರು ಬೆಳ್ಳಿ ಭಂಗಾರದ ಸಾಮಾನುಗಳನ್ನೂ ನಗದು ಕಾಣಿಕೆಗಳನ್ನೂ ಅರ್ಪಿಸುತ್ತಿರುವುದರಿಂದ ಈ ದೇವಸ್ಥಾನದ ಉತ್ಪನ್ನವು ಪ್ರತಿವರ್ಷ ವಿಶೇಷವಾಗುತ್ತಬೆಂಬದರಲ್ಲಿ ಸಂದೇಹವಿಲ್ಲ. ಆದರೆ ಈ ದೇವಸ್ಥಾನದ ಮೇಲ್ವಿಚಾರಣೆಯು ಅನೇಕ ವರ್ಷ ಸರಿಯಾಗಿದ್ದಿಲ್ಲ. ದೇವಸ್ಥಾನಕ್ಕೆ ಬಂದ ಉತ್ಪನ್ನವೆಲ್ಲ ನಿರರ್ಥಕವಾಗಿ ಹಾಳಾಗುತ್ತಿತ್ತು. ಆದುದರಿಂದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಸಂಸ್ಥಾನ ಚಿತ್ರಕಲ್ಲದುರ್ಗ ಇವರು ಈಗ ೫-೬ ವರ್ಷಗಳಹಿಂದೆ ಶ್ರೀ ಉಳವೀ ಕ್ಷೇತ್ರಕ್ಕೆ ದಯಮಾಡಿಸಿ ದೇವಸ್ಥಾನದ ಮೊಕ್ತೇಸರರ ಜವಾಬದಾರಿಯ ಬಗ್ಗೆ ಚರ್ಚೆಯನ್ನು ನಡಿಸಿ, ದೇವಸ್ಥಾನದ. ಜನರಲ್ ಕಮಿಟಿ ಮತ್ತು ವ್ಯವಸ್ಥಾಪಕ ಕಮಿಟಿ ಇವೆರಡನ್ನು ಸ್ಥಾಪನೆಮಾಡಿ ಬಂದಂದಿನಿಂದ ಮೊದಲಿನ ಅವ್ಯವಸ್ಥೆಯು ಅಳಿದುಹೋಗಿ, ಅದು ಈಗ ಸುಧಾರಣಾಪಥದಲ್ಲಿರುತ್ತದೆ. ಆದರೂ ಇನ್ನೂ ಅನೇಕ ಸುಧಾರಣೆಗಳನ್ನು ಅಲ್ಲಿಮಾಡುವದು ತೀರಾ ಅವಶ್ಯವದೆ. ಈ ದೇವಸ್ಥಾನದ ಯಾವತ್ತು ಕೆಲಸವನ್ನು ನಿಯಮಬದ್ಧವಾಗಿ ಮಾಡುವುದಕ್ಕೆ ಈ ವರ್ಷದ ಜನರಲ್ ಕಮಿಟಿಯಲ್ಲಿ ಒಂದು ಸಬ್ ಕಮಿಟಿಯು ನೇಮಿಸಲ್ಪಟ್ಟದಲ್ಲದೆ ಈ ಸಂಸ್ಥೆಯ ಅಧ್ಯಕ್ಷರಾದ ಶಿರಸಿಯ ರುದ್ರಮಠದ ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳಿಗೆ ಸಹಾಯ ಮಾಡುವುದಕ್ಕಾಗಿ ಶ್ರೀಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳನ್ನು ಉಪಾಧ್ಯಕ್ಷರಾಗಿ ಆರಿಸಿ 3 ಜನರು ಸೆಕ್ರೆಟರಿಗಳನ್ನೂ, ಒಬ್ಬ ಟ್ರಸ್ಟುರರನ್ನೂ ಒಬ್ಬ ಆಡಿಟರರನ್ನೂ ನೇಮಿಸಿದ ಸಂಗತಿಯು ಉಚಿತವೇ ಸರಿ.

ಈ ಕ್ಷೇತ್ರದ ಮಹತ್ವವನ್ನು ವೀರಶೈವರಿಗೆ ಹೊಸದಾಗಿ ಹೇಳ ಕಾರಣವಿಲ್ಲ. ಇಲ್ಲಿ ಪ್ರತಿಸಾರೆ ಯಾತ್ರೆಯು ಕೂಡುವಕಾಲಕ್ಕೆ ಕೀರ್ತನ ಭಜನೆ, ಉಪನ್ಯಾಸ ಇವುಗಳನ್ನು ವ್ಯವಸ್ಥಿತರೀತಿಯಿಂದ ಸಾಂಗಪಡಿಸಿದ ಇಲ್ಲಿ ನಮ್ಮ ಸಮಾಜಕ್ಕೆ ಧಾರ್ಮಿಕ ಮತ್ತು ಸಾಮಾಜಿಕ ಶಿಕ್ಷಣವನ್ನು ಕೊಡಲಿಕ್ಕೆ ಬಹಳ ಅನುಕೂಲವಾಗುತ್ತದೆ. ವೀರಶೈವ ಮಹಾಸಭೆಯನ್ನು ವರ್ಷಕ್ಕೊಮ್ಮೆ ಬೇರೆ ಬೇರೆ ಸ್ಥಳಗಳಲ್ಲಿ ಕೂಡಿಸಿ ಸಭಾಮಂಟಪಕ್ಕೆ ಮತ್ತು ಭೋಜನಕ್ಕೆ ೧೦-೨೦ ಸಾವಿರ ರೂಪಾಯಿ ಖರ್ಚುಮಾಡುವದಕ್ಕಿಂತ ಈ ಕ್ಷೇತ್ರದಲ್ಲಿಯೇ ಮಹಾ ಸಭೆಯನ್ನು ಕೂಡಿಸಿದರೆ ಬಹಳ ಉತ್ತಮವಾಗುವುದು. ಪ್ರತಿನಿಧಿಗಳಿಗೆ ಮತ್ತು ಪ್ರೇಕ್ಷಕರಿಗೆ ರೂಪಾಯಕೊಟ್ಟು ಟಿಕೀಟು ಕೊಳ್ಳುವ ಅಗತ ವಿಲ್ಲ. ಸಭೆಯ ಮಂಟಪವನ್ನು ಹಾಕುವ ಅಗತ ವಿಲ್ಲ. ಜನರಿಗೆ ಕೂಡ್ರಲಿಕ್ಕೆ ಖುರ್ಚಿಗಳನ್ನೂ ಬೆಂಚುಗಳನ್ನೂ ತರಿಸುವ ಅಗತ್ಯ ವಿಲ್ಲ. ಮೇಲಾಗಿ ಪ್ರತಿನಿಧಿಗಳಿಗೆ ಅಥವಾ ಪ್ರೇಕ್ಷಕರಿಗೆ ಇಳಿದುಕೊಳ್ಳಲಿಕ್ಕೆ ಬಿಡಾರವನ್ನು ಗೊತ್ತುಪಡಿಸುವ ಅಥವಾ ಅವರಿಗಾಗಿ ಭೋಜನದ ವ್ಯವಸ್ಥೆಯನ್ನು ಮಾಡಿಸುವ ತೊಂದರೆಯು ಅಥವಾ ಖರ್ಚು ಯತ್ಕಿಂಚಿತ್ತಾದರೂ ಹತ್ತುವುದಿಲ್ಲ. ನಮ್ಮ ಜೈನಬಾಂಧವರು ತಮ್ಮ ಮಹಾ ಸಭೆಯನ್ನು ನಿಪ್ಪಾಣಿಯ ಹತ್ತಿರದ ಸ್ತವನಿಧಿ ಎಂಬ ಕ್ಷೇತ್ರದಲ್ಲಿ ಈಗ ೧೦-೧೨ ವರ್ಷಗಳಿಂದ ಕೂಡಿಸುತ್ತಿದ್ದಾರೆ. ಅದರಂತೆ ನಾವಾದರೂ ಶ್ರೀಉಳವಿಕ್ಷೇತ್ರದಲ್ಲಿ ನಮ್ಮ ಮಹಾಸಭೆಯನು ಕೂಡಿಸಬೇಕೆಂದು ನನ್ನ ಸೂಚನೆಯು ಇರುತ್ತದೆ. ವಿಶಾಲವಾದ ಬೈಲು ಸ್ಥಳದಲ್ಲಿ ಸಭೆಯಸಲುವಾಗಿ ಒಂದು ಸ್ಥಳವನ್ನು ಗೊತ್ತುಮಾಡಿ ಕೆಲವುವ್ಯವಸ್ಥಾಪಕರು ಮತ್ತು ನೂರಾರು ಸ್ವಯಂಸೇವಕರು ಕೂಡಿ ನೂರಾರು ರೂಪಾಯಿ ಖರ್ಚಿನಲ್ಲಿ ಬೇಕಾದ ತರದ ವ್ಯವಸ್ಥೆಯನ್ನು ಸಭೆಗೋಸ್ಕರ ಮಾಡಲಿಕ್ಕೆ ಬರುವಂತೆ ಇರುತ್ತದೆ. ಈ ಬಗ್ಗೆ ಬೆಂಗಳೂರಲ್ಲಿರುವ ವೀರಶೈವ ಮಹಾಸಭೆಯ ಚಿರಸ್ಥಾಯಿ ಫಂಡ್ ಕಮಿಟಿಯವರು ಯೋಗ್ಯವಿಚಾರ ಮಾಡುವರೆಂದು ನಾನು ಕೋರುತ್ತೇನೆ. ಬೀರೂರು ಮಹಾಸಭೆಯಾದ ನಂತರ ಈಗ ೨-೩ ವರ್ಷಗಳಲ್ಲಿ ಮಹಾಸಭೆಯು ಕೂಡಿಲ್ಲ. ಹಾಗೂ ಮಹಾಸಭೆಯನ್ನು ಎರಡನೆ ಕಡೆಗೆ ಕೂಡಿಸಬೇಕೆಂದು ಯಾರೂ ಮನಮುಟ್ಟಿ ವಿಚಾರವನ್ನು ಸಹಾ ಮಾಡಿದಂತೆ ಕಾಣುವುದಿಲ್ಲ. ಬೆಂಗಳೂರು ಚಿರಸ್ಥಾಯಿ ಫಂಡು ಕಮಿಟಿಯವರು ತಮ್ಮ ಹತ್ತಿರ ೪೦ ಸಾವಿರ ರೂಪಾಯಿ ಫಂಡುಕೂಡಿರುವುದೆಂತಲೂ ತಾವು ಅದರ ಬಡ್ಡಿಯಿಂದ ಮಹಾಸಭೆಗೆ ಖರ್ಚನ್ನು ಕೊಡಿಸುವೆವೆಂತಲೂ ಊರೂರಿಗೆ ಛಾಪಿಸಿ ತಿಳಿಸಿರುತ್ತಾರೆ. ಇದು ಸುತ್ಯವೇ ಸರಿ. ಆದರೆ ಬೀರೂರು ಮಹಾಸಭೆಯನ್ನು ಮಾಡಿದ ಕಾಲಕ್ಕೆ ನಮ್ಮ ಸಮಾಜದ ಮಾಹೇಶ್ವರವರ್ಗದಲ್ಲಿ ಮತ್ತು ಭಕ್ತ ವರ್ಗದಲ್ಲಿ ಅಂತಃಕಲಹಗಳು ಒಡೆದು ಕಾಣಿಸಿದ ಕಾರಣ ಅನೇಕಜನರು ಎದೆಯನ್ನು ಒಡೆದು ಕೊಂಡಿದ್ದಾರೆ. ನಮ್ಮ ಸಮಾಜದಲ್ಲಿ ನೂರೆಂಟು ಪಂಗಡಗಳು ಮೊದಲಿನಿಂದ ಉಂಟೇ ಉಂಟು. ಜಾತಿ ಉಪಜಾತಿಗಳಲ್ಲಿಯ ಪಂಗಡಗಳು ಮತ್ತು ಪ್ರತಿ ಊರಲ್ಲಿ ಜಗಳಗಳು ಇರುತ್ತವೆ. ಹೀಗಿದ್ದು ಈಗ ಸ್ವತಃ ಗುರುವರ್ಗದಲ್ಲಿ ಅಂದರೆ ವಿರಕ್ತಸ್ವಾಮಿಗಳು ಮತ್ತು ಪಂಚಸಿಂಹಾಸನದವರು ಇವರಲ್ಲಿ ಹಾಗೂ ವಿರಕ್ತ ವಿರಕ್ತರೊಳಗೆ ಅನ್ಯೋನ್ಯ ಮರ್ಯಾದೆಯ ಬಗ್ಗೆ ಮತ್ತು ಧಾರ್ಮಿಕ ಹಕ್ಕುಗಳ ಬಗ್ಗೆ ಕಲಹಗಳು ನಡೆದಿರುವುದರಿಂದ ಅನೇಕ ಜನರು ನಿರಾಶೆಯಿಂದ ಮೌನವೃತ್ತಿಯನ್ನು ಧಾರಣಮಾಡಿರುತ್ತಾರೆ. ಬರೇನಿರಾಶೆಯಿಂದ ಕುಳಿತರೆ ಬಗೆಹರಿವುದೆಂದಿಗೆ? ಅದರ ಬಗ್ಗೆ ಯೋಗ್ಯ ವಿಚಾರವನ್ನು ಕೈಕೊಂಡು ಅವರ ಹಕ್ಕು ಮರ್ಯಾದೆಗಳ ವಾದವನ್ನು ತಾವು ತೀರಿಸಿಬಿಡತಕ್ಕದ್ದು. ಇದಕ್ಕಾಗಿ ವೀರಶೈವ ಸಮಾಜದೊಳಗಿನ ಕೆಲವು ಸಮತೋಲ ಬುದ್ಧಿಯ ನಿಸ್ಪೃಹ ಮುತ್ಸದ್ದೀ ಜನರು ಅಗತ್ಯವಾಗಿ ಪ್ರಯತ್ನಮಾಡತಕ್ಕದ್ದು. ಜಾತಿ ಉಪಜಾತಿಗಳಲ್ಲಿಯ ಅನ್ಯೋದಕ ಸಂಬಂಧದ ಭೇದಭಾವದ ಪ್ರಶ್ನವನ್ನು ಒಮ್ಮೆಲೇ ತೀರಿಸುವುದು ಕಠಿಣವದೆ. ಅದಕ್ಕೆ ವಿಶೇಷ ಕಾಲವು ಹೋಗಲಿಕ್ಕೆ ಬೇಕು. ಈ ಜಾತಿ ಉಪಜಾತಿಗಳ ಭೇದಭಾವದ ಪ್ರಶ್ನವನ್ನು ಬದಿಗಿಟ್ಟು ಯಾವತ್ತೂ ಗುರುಸ್ಥಲದವರು ಮತ್ತು ಭಕ್ತರು ತಮ್ಮ ಸಮಾಜದ ಹಿತಚಿಂತೆಯ ದೃಷ್ಟಿಯಿಂದ ಮಾಹೇಶ್ವರ ವರ್ಗದಲ್ಲಿ ಹುಟ್ಟಿರುವ ಕಲಹವನ್ನು ತೀರಿಸಿಬಿಡತಕ್ಕದ್ದು. ಅಂದರೆ ಮಹಾಸಭೆಯ ಕೆಲಸವು ಸುಲಲಿತವಾಗಿ ಸಾಗುವುದು. ಹಗ್ಗವನ್ನು ಹೋರಿನಲ್ಲಿಟ್ಟು ಹೋರನ್ನು ಮುಚ್ಚುವುದರಿಂದ ಹೇಗೆ ಹಿತವಾಗಲಾರದೋ ಹಾಗೆ ಭಕ್ತ ಮಾಹೇಶ್ವರರಲ್ಲಿಯ ಈ ಮೇಲ್ಕಂಡ ಐಕ್ಯಾಭಾವದ ಕಾರಣವನ್ನು ಹೋಗಲಾಡಿಸಲಿಕ್ಕೆ ಮುಂಚಿತವಾಗಿ ಪ್ರಯತ್ನ ಮಾಡದೆ ಮಹಾಸಭೆಯನ್ನು ಸೇರಿಸಲಿಕ್ಕೆ ಪ್ರಯತ್ನ ಮಾಡುವುದರಿಂದ ಪ್ರಯೋಜನವಿಲ್ಲ. ಈ ಮಹಾಸಭೆಯನ್ನು ಶ್ರೀಉಳವಿಕ್ಷೇತ್ರದಲ್ಲಿ ನೆರೆಸುವದು ಸುಲಭ ಸಾಧ್ಯವೆಂದು ನನ್ನ ಅಲ್ಪಮತಿಗೆ ಗೋಚರವಾಗುತ್ತದೆ. ಆದುದರಿಂದ ಬೆಂಗಳೂರು ಮೈಸೂರು ಧಾರವಾಡ ಬೆಳಗಾವ, ವಿಜಾಪುರ, ಕಾರವಾರ, ಸೋಲ್ಲಾಪುರಗಳಲ್ಲಿಯ ಪ್ರಮುಖ ವೀರಶೈವ ಜನರು ಬೆಂಗಳೂರಲ್ಲಿ, ಸೋಲ್ಲಾಪುರದಲ್ಲಿ ಅಥವಾ ಧಾರವಾಡ ಬೆಳಗಾವಿನಲ್ಲಿ ಒಂದು ಆಲೋಚನಾ ಕಮಿಟಿಯನ್ನು ಕೂಡಿಸಿ ಮೇಲಿನ ಮಾಹೇಶ್ವರವರ್ಗದ ಕಲಹವನ್ನು ತೀರಿಸಿ ಮುಂದಿನ ಸಾರೆಯ ಮಹಾಸಭೆಯನ್ನು ಶ್ರೀಉಳವಿಕ್ಷೇತ್ರದಲ್ಲಿ ಸೇರಿಸತಕ್ಕದ್ದೆಂದು ನನ್ನ ವಿನಯಾನ್ವಿತ ಸೂಚನೆಯುಂಟು.

ಧಾರವಾಡ.
ತಾರೀಕು ೧೬-೨-೧೯೨೨ನೇ ಇಸ್ವಿ } ಗ. ಹು. ಹೊನ್ನಾಪುರಮಠ.

೧೯೨೨ ನೆಯ ಇಸವಿ ಮಾರ್ಚಿ ತಾ|| ೫ರಿಂದ ೧೯೨೨ನೆಯ ಮಾರ್ಚಿ ತಾ|| ೧೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಫಾಲ್ಗುಣಶುದ್ಧ ಷಷ್ಠಿಯಿಂದ ಫಾಲ್ಗುಣಶುದ್ಧ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ಮಾಸ
5	ಭಾನು	ಷಷ್ಠಿ	3-1	ಕೃತ್ತಿ	34-47	22
6	ಸೋಮ	ಸಪ್ತ	2-34	ರೋಹಿ	35-17	23
7	ಮಂಗಳ	ಅ-ಉ	0-37 57-51	ಮೃಗ	34-38	24
8	ಬುಧ	ದಶ	54-58	ಆರಿ	32-57	25
9	[1]ಗುರು	ಏಕಾ	50-2	ಪುನ	30-19	26
10	ಶುಕ್ರ	ದ್ವಾ	44-50	ಪುಷ್ಯ	27-4	27
11	ಶನಿ	ತ್ರಯೋ	39-7	ಆಶ್ಲೇ	23-14	28

(1) ಸ್ಮಾರ್ತಾನಾಂವೈಷ್ಣವಾನಾಂಚೈಕಾದಶಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿಕ್ಕೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಮಾರ್ಚಿ ತಾರೀಖು ೧೨ ನೆಯ ಭಾನುವಾರ ಸಂಚಿಕೆ ೧೧

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
9 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಪಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 37

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೮—೦
ವೃಷಪಂಚಕ	೦—೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನವಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭೂತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗುಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
6 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಥೂಲಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿವೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷೆಯುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
10 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ನ್ನು ಪಡೆದ ನಿಮ್ಮಂಥ ಜನರಿಗೆ ಆ ಅಧರ್ಮಕರ ಕೃತಿಯನ್ನು ನಿಲ್ಲಿಸುವುದ ಅಷ್ಟು ದೊಡ್ಡದಲ್ಲ. ಸ್ವಲ್ಪ ದಯಾಮನಸ್ಸಿನಿಂದ ಏಕಮತ್ಯವಾಗಿ ಪ್ರಯತ್ನ ಪಟ್ಟರೆ ಸಾಕು. ಸರ್ಕಾರದವರಾಗಲಿ, ಅನ್ಯ ಊರಿನವರಾಗಲಿ ಬಂದು ಆ ಪಾಪಕೃತ್ಯವನ್ನು ನಿಲ್ಲಿಸುವಂತೆ ಮಾಡಲಿಕ್ಕೆ ಆಸ್ಪದಕೊಡದೆ, ಊರಿನವರಾದ ನೀವುಗಳು ಏಕಮತ್ಯದಿಂದಲೂ, ಶಾಂತತೆಯಿಂದಲೂ ಕೈಹಾಕಿ ನಿಲ್ಲಿಸುವುದು ಯೋಗ್ಯವಲ್ಲವೆ? ಹಾಗೆ ಮಾಡುವುದು ನಿಮ್ಮ ಕರ್ತವ್ಯವಲ್ಲವೆ? ಅದರಿಂದ ನಿಮ್ಮಗಳಿಗೆ ತುಂಬಾ ಕೀರ್ತಿಬರುತ್ತದೆ. ಪುಣ್ಯಬರುತ್ತದೆ. ಆದುದರಿಂದ ಹಾಗೆ ಮಾಡುವಿರಾ?

ಸರ್ವ ಪ್ರಾಣಿಗಳ ಬಂಧು.

ಸಹಕಾರಿ ಪರಿಷತ್ತು.

ಧಾರವಾಡ ಜಿಲ್ಲಾ ರೋಣ ತಾ|| ಪೈಕಿ ಜಕ್ಕಲಿಯಲ್ಲಿ ಮೊದಲೇ ಠರಾಯಿಸಿದಂತೆ ಜಿಲ್ಲಾ ಸಹಕಾರಿಪರಿಷತ್ತು ಜನವರಿ ತಿಂಗಳ ೨೮-೩೦ನೇ ತಾರೀಖುಗಳಲ್ಲಿ ಮೆ|| ಪಿ. ಆರ್. ಫ್ಯಾಡಲ್‌ಸಾಹೇಬ ಬಾಹದ್ದೂರ್ ಕಮಿಶನರ್ ಸದರ್ನ್ ಡಿವಿಜನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಗೊತ್ತಾದ ವೇಳೆಗೆ ರೋಣದಿಂದ ಮೋಟಾರುಬಂಡಿಯಲ್ಲಿ ಒಂದು ಗಂಟೆಗೆ ದಯಮಾಡಿಸಿದರು. ಅಷ್ಟರಲ್ಲಿ ಮೆ|| ಅ|| ರಿಜಿಸ್ಟ್ರಾರ್ ಸಾಹೇಬರು, ದಿವಾನ್ ಬಾಹದ್ದೂರ್ ಮೊಹಸಿನಕಾಯಿ, ರಾವ್‌ಬಹದ್ದೂರ ನಾಯಕ ಮತ್ತು ಇನ್‌ಸ್ಟಿಟ್ಯೂಟಿನ ಪ್ರೆಸಿಡೆಂಟರಾದ ಮಿ|| ನಲವಡಿಯವರೂ ಸ್ವಾಗತಕಮಿಟಿಯ ಚೇರ್‌ಮನ್ನರಾದ ಮಿ|| ತೋಟಪ್ಪಾ ಕಡಗದ ವೈಸ್ ಚೇರಮನ್ ಮಿ|| ಗುರುಸಿದ್ಧಪ್ಪ ಚಿಟ್ಟಗು ಮಿ|| ವೆಂಕನಗೌಡ ಹಾಳಕೇರಿ, ಮಿ|| ಸಂಗನಬಸಪ್ಪ ನರೇಗಲ್ಲ, ಮಿ|| ಬಸನಗೌಡ ಅಬ್ಬಿಗೇರಿ, ಮಿ|| ಲಿಂಗಪ್ಪ ಮೇಟಿ ಮುಂತಾದವರು ಕೂಡಿ ಮುಂದಕ್ಕೆ ಹೋಗಿ ಅಧ್ಯಕ್ಷರ ಸ್ವಾಗತ ಮಾಡಿ ಕರತಂದರು. ಸಭೆಯ ಮಂಟಪಕ್ಕೆ ಅಧ್ಯಕ್ಷರು ಆಗಮಿಸಿದ ಕೂಡಲೇ ಮಂಗಲಕರವಾದ ವಾದ್ಯಗಳು ಸರ್ವ ಸಭಿಕರಿಗೂ ಅಧ್ಯಕ್ಷರ ಆಗಮನವನ್ನು ಸೂಚಿಸಿ ಆನಂದವನ್ನುಂಟುಮಾಡಿದವು. ಆ ಕಾಲಕ್ಕೆ ಆ ಊರ ಅ|| ಮಾಸ್ತರಾದ ಮಿ|| ಪ್ಯಾಟಿ ಮತ್ತು ಉಚ್ಚಂಗಿ ಮಠ ಇವರು ತಮ್ಮ ವಿದ್ಯಾರ್ಥಿಗಳಿಂದ ಒಳ್ಳೇ ಶಿಸ್ತಿನಿಂದ ಕವಾಯಿತನ್ನು ಮಾಡಿಸಿದ್ದನ್ನು ಅಧ್ಯಕ್ಷರು ಸಂತೋಷದಿಂದ ನೋಡುತ್ತ ತಮ್ಮ ಸ್ಥಾನವನ್ನು ಸ್ವೀಕರಿಸಿದರು. ಆಮೇಲೆ ಅಲ್ಲಿಯ ಹೆಡ್‌ಮಾಸ್ತರರಾದ ಮಿ|| ವೆಂಕಟೇಶ ಕುಲಕರ್ಣಿಯವರು ರಚಿಸಿದ ಸ್ವಾಗತ ಪದಗಳನ್ನು ತಮ್ಮ ವಿದ್ಯಾರ್ಥಿಗಳಿಂದ ಒಳ್ಳೇ ಮನೋಹರವಾಗಿ ಗಾಯನಮಾಡಿಸಿದರು. ಸಭೆಯಾರಂಭದಲ್ಲಿ ನಮ್ಮ ಭರತಖಂಡಕ್ಕೆ ಈಗ ಬಂದಿರುವ ಯುವರಾಜರ ಸ್ವಾಗತವನ್ನು ಮತ್ತು ಅವರು ಸುಖಪ್ರವಾಸದಿಂದ ತಿರಿಗಿ ತಮ್ಮ ದೇಶಕ್ಕೆ ಸುರಕ್ಷಿತವಾಗಿ ಮುಟ್ಟಲೆಂದು ಪರಮಾತ್ಮನನ್ನು ಸ್ಮರಿಸತಕ್ಕ ಠರಾವನ್ನು ಧಾರವಾಡದ ಸುಪ್ರಸಿದ್ಧ ವಕೀಲರಾದ ಮಿ|| ಸೂರ್ಯವಂಶಿವಕೀಲರು ಸಭೆಯ ಮುಂದೆ ತಂದರು. ಅದಕ್ಕೆ ಮಿ|| ನರಸಿಂಗರಾವನಾಡಗೌಡ ಇವರು ಅನುಮೋದಿಸಿ, ಇದನ್ನು ತಾರಿನಿಂದ ಅವರಿಗೆ ತಿಳಿಸತಕ್ಕದ್ದೆಂದು ಹೇಳಿದ್ದರಿಂದ ಸರ್ವರೂ ಕರತಾಡನದಿಂದ ಸಮ್ಮತಿಸಿ ಪ್ಯಾಸ್‌ಮಾಡಿದರು. ಈ ಸಭೆಗೆ ಧಾರವಾಡ ಜಿಲ್ಲೆಯ ಬಹುತೇಕ ಯಾವತ್ತು ತಾಲ್ಲೂಕಿನ ಸಹಕಾರಿ ಬಾಂಧವರು ಒಳ್ಳೇ ಉತ್ಸುಕತೆಯಿಂದ ಬಂದಿದ್ದರು. ಹಾಗು ಸಹಕಾರಿ ಖಾತೆಯ ಬಹುಶಃ ಯಾವತ್ತು ಅಮಲ್ದಾರರೂ ಮತ್ತು ಆನರರಿ ಆರ್ಗನೈಜರರೂ ಎಲ್ಲಾ ಭಾಗಗಳಿಂದ ಸಭೆಗೆ ಹಾಜರಿದ್ದರು. ಹಾಗು ವ್ಯಸಾಯ ಶಾಖೆಯ ಡೆಪ್ಯುಟಿ ಡೈರೆಕ್ಟರರಾದ ಮೆ|| ಗಿಲ್ಬರ್ಟ್‌ಸಾಹೇಬರು ಮಿ|| ಧಾರವಾಡಕರ ಮಿ|| ಸಾಲಿಮಠ ಮೊದಲಾದ ಆ ಶಾಖೆಯ ಆಫೀಸರರು ಸಹ ಬಂದಿದ್ದರು. ಇದಲ್ಲದೆ ರೆವಿನ್ಯೂ ಶಾಖೆಯ ದೊಡ್ಡದೊಡ್ಡ ಅಧಿಕಾರಿಗಳಾದ ಆ ಭಾಗದ ಇಲಾಖಾ ಸಾಹೇಬರು ಮತ್ತು ಗದಗ ರೋಣ ತಾಲ್ಲೂಕುಗಳ ಮಾಮಲೇದಾರರೂ ಹಾಗು ಮುಂಡರಿಗಿಯ ಮಹಾಲಕರಿ ಮೊದಲಾದವರೂ ಆಗಮಿಸಿದ್ದರು. ರೋಣ, ಗದಗ, ನವಲ್ಗುಂದ ಬಾದಾಮಿ ತಾಲ್ಲೂಕುಗಳಲ್ಲಿಯ ಸಂಘಗಳ ಜನರು ಬಹುಶಃ ಮೂರು ಸಾವಿರದ ಮೇಲೆ ಬಂದಿದ್ದರು. ಸಭೆಯು ಭವ್ಯವಾದ ಮಂಟಪವು ಜನಸ್ತೋಮದಿಂದ ತುಂಬಿ ಹೊರಸೂಸುತಿತ್ತು. ಮೊದಲನೆಯ ದಿವಸ ಅಧ್ಯಕ್ಷರು ೫|| ಗಂಟೆಯವರೆಗೆ ಸಭೆಯ ಕೆಲಸವನ್ನು ಒಳ್ಳೆ ಶಾಂತರೀತಿಯಿಂದ ನಡಿಸಿ ರಾವ್‌ಸಾಹೇಬ್ ಲಿಂಗನಗೌಡ ಪಾಟೀಲ ಇವರಿಗೆ ಅವರ ರಾವ್‌ಸಾಹೇಬ ಪದವಿಯ ಬಹುಮಾನದ ಪದಕವನ್ನು ಇದೇ ಕಾಲಕ್ಕೆ ದಯಪಾಲಿಸಿದರು. ಮುಂದೆ ಸ್ವಾಗತ ಕಮಿಟಿ ಪಕ್ಷದಿಂದ ಚೇರ್‌ಮನ್ನರು ಕೊಟ್ಟ ಮೇಜವಾನಿಯನ್ನು ಒಳ್ಳೇ ಸಂಭ್ರಮದಿಂದ ಸ್ವೀಕರಿಸಿದರು. ಆಮೇಲೆ ಕೃಷಿಶಾಖೆಯವರ ರಂಟೆ ಪ್ರದರ್ಶನವನ್ನು ನಿರೀಕ್ಷಿಸಿ ಫೋಟೋತೆಗೆಸಿದನಂತರ ಸರ್ವಸಭಿಕರ ಅಪ್ಪಣೆಯನ್ನು ತೆಗೆದುಕೊಂಡು ಅಧ್ಯಕ್ಷರು ಗದಗಿಗೆ ಹೊರಟು ಹೋದರು. ಎರಡನೆ ದಿವಸ ಉಪಾಧ್ಯಕ್ಷರಾದ ಮ|| ನಾಯಕ ಗೊನೆಹಳ್ಳಿ ಸಾಹೇಬರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿ ಸಭೆಯ ಕೆಲಸವನ್ನು ಉತ್ತಮರೀತಿಯಿಂದ ನಡಿಸಿದರು. ಈ ಸಭೆಯಲ್ಲಿ ಸಹಕಾರಿ ಸಂಘಗಳಿಗೆ ಮತ್ತು ಬಡರೈತಜನರಿಗೆ ಅನುಕೂಲವಾದ ಎಷ್ಟೋ ಮಹತ್ವದ ವಿಷಯಗಳು ಪ್ಯಾಸ್ ಆದುವು. ಮೊದಲನೆ ದಿವಸದ ರಾತ್ರಿ ಶ್ರೀಮಂತ ಪಂಪಾಪತಿ ಬಲ್ಲಾಳರಾಯ ದೇಸಾಯಿ ಸಾ|| ಅಮ್ಮಿನಭಾವಿ ಇವರ ಉದಾರಾಶ್ರಯದಿಂದ ತಯಾರಾದ ಸಹಕಾರಿ ನಾಟಕವನ್ನು ಆ ಊರಸಂಘದವರು ಪ್ರಯೋಗ ಮಾಡಿ ತೋರಿಸಿದರು. ಇದರಿಂದ ಯಾವತ್ತು ಜನರಿಗೆ ಸಹಕಾರದಿಂದಾಗುವ ಲಾಭಗಳು ಚನ್ನಾಗಿ ಮನವರಿಕಯಾದವು. ವ್ಯವಸಾಯಶಾಖೆ ಇವರು ತಮ್ಮ ಕಬ್ಬಿಣರಂಟೆಯ ಪ್ರಯೋಗವನ್ನೂ ಗೋಧಿಹುಲ್ಲನ್ನು ತಿಳಿಸುವ ಯಂತ್ರದ ಪ್ರಯೋಗಗಳನ್ನೂ ತೋರಿಸಿದರು. ಮಿ|| ಸುಲಿಮಠ ಇವರು ಒಳ್ಳೇ ಸರಸವಾಣಿಯಿಂದ ಸರ್ವರಿಗೂ ಅವುಗಳಲಾಭವನ್ನು ತಿಳಿಸಿ ಹೇಳಿದರು.

ಈ ಜಕ್ಕಲಿಯು ರೋಣ ತಾ|| ನಲ್ಲಿ ಒಂದು ಸಾಧಾರಣವಾದ ಹಳ್ಳಿಯಾಗಿರುತ್ತದೆ. ಇದು ರೈಲ್ವೆಗೆ ೧೫-೨೦ ಮೈಲಿ ದೂರದಲ್ಲಿದೆ. ಆದರೂ ಸಭೆಗೆ ಬಂದ ಮೂರುಸಾವಿರ ಜನರ ಅನ್ನ ನೀರು ಹಾಗೂ ಇಳಿದುಕೊಳ್ಳುವ ವ್ಯವಸ್ಥೆಯನ್ನು ಬಹಳ ಉತ್ತಮರೀತಿಯಿಂದ ಸ್ವಾಗತ ಕಮಿಟಿಯವರು ಮಾಡಿದ್ದರು. ಮೂರುಸಾವಿರ ಜನರು ಸಭೆಯಕಾಲಕ್ಕೆ ಒಳ್ಳೇ ಶಿಸ್ತಿನಿಂದ ವಿರಳವಾಗಿ ಕುಳ್ಳಿರಲಿಕ್ಕೆ ಬರುವಂತೆ ಒಂದು ಭವ್ಯವಾದ ಮಂಟಪವನ್ನು ಮಿ|| ತೋಟದಪ್ಪ ಕಡಗದ ಇವರ ಜನ್ನಿಸಕಾಂಪೌಂಡಿನಲ್ಲಿ ಮಿ|| ಮಹಂತಪ್ಪ ನಿಲ್ವಾಡದ ಮಿ|| ಚನ್ನಯ ಇವರು ಒಳ್ಳೆ ವ್ಯವಸ್ಥೆಯಿಂದ ರಚಿಸಿದ್ದರು. ಈ ಸಭೆಯಕೆಲಸಗಳಲ್ಲಿ ಜಕ್ಕಲಿಯೂನಿಯನ್ನಿಗೆ ಸಮಾವೇಶವಾದ ಯಾವತ್ತು ಹಳ್ಳಿಗಳಿಂದ ಸಹಾಯವು ಸಿಕ್ಕಿದುದಲ್ಲದೆ, ಸೂಡಿ, ನರೇಗಲ್ಲ, ಮಲ್ಲಾಪುರ, ರೋಣ ಮೊದಲಾದ ಸಂಘದವರಿಂದ ಯೋಗ್ಯಸಹಾಯವು ದೊರೆದಿರುತ್ತದೆ. ಹಾಗು ಗದಗಿನಲ್ಲಿಯ ರಾವ್ ಸಾಹೇಬ ವೀರಪ್ಪ ಮಾನ್ವಿ, ರಾವ್ ಸಾಹೇಬ ಶಿವಪ್ಪ ಮಾನ್ವಿ ಮತ್ತು ಮಿ|| ವೀರಪ್ಪ ಅಣ್ಣಾಚವಡಿ ಮೊದಲಾದವರ ಕಡೆಯಿಂದ ತಕ್ಕಷ್ಟು ಸಹಾಯವು ದೊರೆದಿದ್ದುದಲ್ಲದೆ ಮೇಲಿಂದ ಮೇಲೆ ತಮ್ಮ ಅನುಭವ ಸಿದ್ಧವಾದ ಸೂಚನೆಗಳನ್ನು ಸರಿಯಾದ ವೇಳೆಗೆ ಅವರು ಕೊಡುತ್ತಲಿದ್ದರು. ಸ್ವಾಗತ ಕಮಿಟಿಯವರಲ್ಲಿ ಮಿ|| ಸಿದ್ದಪ್ಪ ಅಣ್ಣಾ ಚವಡಿ, ಗುರುಸಿದ್ದಪ್ಪಾ ಸೂಡಿ, ವೆಂಕಟನಗೌಡ ಹಾಳಕೇರಿ, ಬಸನಗೌಡ ಅಬ್ಬಿಗೇರಿ, ಸಂಗನಬಸಪ್ಪಾ ನರೇಗಲ್ಲ, ಕಂಟಿಯ ರೇಣುಕಮಠ ರಾಚಪ್ಪ ಮಾನ್ವಿ, ಮುದ್ದಪ್ಪಾ ಕೋಟಿ ಮಹಂತಪ್ಪಾ ನಿಲ್ವಾಡದ ಇವರು ಒಳ್ಳೇತಳಕಳಿಯಿಂದ ಹಗಲಿರುಳೂ ಶ್ರಮವಹಿಸಿ ಈ ಸಭೆಯ ಕೆಲಸದಲ್ಲಿ ಸಹಾಯ ಮಾಡಿರುವರು. ಹಾಗು ಗದಗ ತಾ|| ಆನರರಿ ಆರ್ಗನೈಜರ ಮುಡಿವಾಳಪ್ಪಾ ತುರ್ಕಾಣಿ ಮತ್ತು ರೋಣ ತಾ|| ಆನರರಿ ಆರ್ಗನಾಯಜರ ಗೋವಿಂದಪ್ಪಾ ಹುಬ್ಬಳ್ಳಿ ಇವರು ಸಹ ತಕ್ಕಷ್ಟು ಸಹಾಯಮಾಡಿರುವರು. ಮತ್ತು ಗದಗ ಕಾಟನ್‌ಸೇಲ್ ಸೊಸೈಟಿಯ ಮ್ಯಾನೇಜಿಂಗ ಡೈರೆಕ್ಟರರಾದ ಮಿ|| ವಡೇರಮಠ ಇವರು ಆರಂಭದಿಂದ ಈ ಕಾರ್ಯದಲ್ಲಿ ಒಳ್ಳೇ ಶ್ಲಾಘನೀಯವಾದ ಪ್ರಯತ್ನ ಮಾಡಿದರು. ಮುಂಬಯಿ ಸೆಂಟ್ರಲ್ ಬ್ಯಾಂಕಿನ ಇನ್‌ಸ್ಪೆಕ್ಟರಾದ ಮಿ|| ಡಿ. ಆರ್. ಕಾಳೆಯವರು ಸರಿಯಾದ ಸಹಾಯಮಾಡಿರುವರು. ಈ ಸಭೆಯ ಮೂಲ ಉತ್ಪತ್ತಿಗೆ ಮತ್ತು ಅದರ ನಿರ್ವಾಹಕ ಕೆಲಸಕ್ಕೆ ಮೆ|| ರಿ|| ರಿಜಿಸ್ಟ್ರಾರ್ ಹೂಲಿ ಸಾಹೇಬರು ಹಾಗು ಅಗ್ರಿಕಲ್ಚರಲ್ ಆರ್ಗನೈಜರ್ ಮಿ|| ಪಾಟೀಲರವರು ಇರುತ್ತಾರೆ. ಮೂರುವರ್ಷಗಳಿಂದ ರೋಣದಲ್ಲಿ ಸಹಕಾರಿ ಕಾನ್‌ಫರೆನ್ಸನ್ನು ನೆರವೇರಿಸಬೇಕೆಂದಿದ್ದ ಅವರ ಲವಲವಿಕೆಯನ್ನು ಜಕ್ಕಲಿಯೂನಿಯನ್ನಿನವರ ಸಹಾಯದಿಂದ ತೋಟಪ್ಪ ಕಡಗದ ಇವರು ಪೂರೈಸಿದರು. ರಾ|| ತೋಟಪ್ಪ ಕಡಗದ ಇವರು ಯಾವಾಗಲೂ ಸಮಾಜದ ಕೆಲಸದಲ್ಲಿ ಒಳ್ಳೇ ಮುಂದಾಳಾಗಿ ಹಗಲಿರುಳೂ ತ್ರಿಕರಣಪೂರ್ವಕವಾಗಿ ಸಮಾಜಸೇವಾಮಾಡುತ್ತಿರುವರು. ಇದರಂತೆ ಪದೇಪದೇ ಸಮಾಜಸೇವೆಮಾಡಲಿಕ್ಕೆ ಅವರಿಗೆ ದಯಾಘನನಾದ ಶ್ರೀ ಪರಮೇಶ್ವರನು ದೀರ್ಘಾಯುಷ್ಯವನ್ನೂ ಸುಬುದ್ಧಿಯನ್ನೂ ಕೊಡಲೆಂದು ಬಯಸುವ.

ಓರ್ವಸಹಕಾರಿ.

ಶ್ರೀ ಉಳವಿಬಸವೇಶ್ವರ ಯಾತ್ರೆಯ ಹಾಗೂ ವೀರಶೈವ ಮಹಾಸಭೆಯ ಬಗ್ಗೆ ಸೂಚನೆಯು.

“ಯತೋಧರ್ಮಸ್ತತೋಜಯಃ”

ಈ ಸಾರೆಯ ಶ್ರೀ ಉಳವಿಬಸವೇಶ್ವರ ಯಾತ್ರೆಯು ಪ್ರತಿವರ್ಷದಂತೆ ಮಾಘಶುದ್ಧ ಪೂರ್ಣಿಮೆಯ ದಿವಸ ಮತ್ತು ಅದರ ಮಾರನೆಯದಿವಸ ಅಂದರೆ ಸೋಮವಾರದಿವಸ ಬಹಳ ವಿಜೃಂಭಣೆಯಿಂದ ಸಾಂಗವಾಯಿತು. ಈ ಯಾತ್ರೆಗೆ ಧಾರವಾಡ, ಬೆಳಗಾವ, ವಿಜಾಪುರ, ಶಿವಮೊಗ್ಗ, ಶಿಕಾರಿಪುರ ಬೆಂಗಳೂರು, ಸೊರಬ, ಸೊಲ್ಲಾಪುರ ಮೊದಲಾದ ಕಡೆಯ ಅನೇಕ ಮಂದಿ ಯಾತ್ರಿಕರು ಬಂದಿದ್ದರು. ಈ ವರ್ಷದ ಯಾತ್ರೆಗೆ ಸುಮಾರು ೭-೮ ಸಾವಿರ ಜನರು ಕೂಡಿದ್ದರು. ಶಿರಸಿಯ ರುದ್ರಮಠದ ಶ್ರೀಮನ್ನಿರಂಜನ ಶಾಂತವೀರ ಸ್ವಾಮಿಗಳು, ಶ್ರೀಮನ್ನಿರಂಜನ ಇಳಕಲ್ಲ ಮಹಾಂತಸ್ವಾಮಿಗಳು, ಧಾರವಾಡದ ಶ್ರೀಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳು, ನವಲಗುಂದದ ಶ್ರೀಗುರುಸಿದ್ಧದೇವರು, ಶ್ರೀ ಅಂಕಲಗಿ ಸ್ವಾಮಿಗಳು, ಮೊದಲಾದ ಪೂಜ್ಯ ವಿರಕ್ತಸ್ವಾಮಿಗಳು, ಅನೇಕಮಂದಿ ಇತರ ಗುರುವರ್ಗದ ಜನರು, ಹಾಗು ಪ್ರಮುಖಭಕ್ತ ಜನರು ಕೂಡಿದ್ದರು. ಈ ಸಾರೆ ಶಿವಯೋಗ ಮಂದಿರದ ಕೀರ್ತನ ಕಾರರಾದ ವೇ|| ಬಸವಲಿಂಗ ಶಾಸ್ತ್ರಿಗಳು ಎರಡುದಿವಸ ತಮ್ಮ ಸುಶ್ರಾವ್ಯವಾದ ಬೋಧಪರಕೀರ್ತನಗಳಿಂದಲೂ ಇಳಕಲ್ಲ ಶ್ರೀ ಮಹಾಂತಸ್ವಾಮಿಗಳು ಭಕ್ತಿಪರವಿಷಯದ ಮೇಲಿನ ತಮ್ಮ ಅನೇಕವಾದ ಉಪನ್ಯಾಸಗಳಿಂದಲೂ ಶ್ರೋತೃವರ್ಗದ ಜನರನ್ನು ಆನಂದಮಯಮಾಡಿದರು ಧಾರವಾಡದ ಶ್ರೀಯುತ ಶೆಟ್ಟೀ ಮಾಸ್ತರರು ಹಾಗೂ ಇನ್ನೂ ೨-೩ ಮಂದಿ ವಕ್ತೃಗಳು “ಧರ್ಮ ಮತ್ತು ಭಕ್ತಿ” ಎಂಬ ವಿಷಯದ ಮೇಲೆ ತಮ್ಮ ಉಪನ್ಯಾಸಮಾಡಿದರು. ಕೀರ್ತನ, ಭಜನ, ಮತ್ತು ಉಪನ್ಯಾಸಗಳಿಂದ ಈ ಸಾರೆಯ ಯಾತ್ರೆಗೆ ಒಂದು ಅತ್ಯಂತ ಮಹತ್ವವಾದ ಸ್ವರೂಪವು ಬಂದಿದ್ದಿತು. ದೇವಸ್ಥಾನದ ಉತ್ತಮ ಆಡಳಿತೆಯಬಗ್ಗೆ ವಿಚಾರಮಾಡುವ ಕುರಿತು ದೇವಸ್ಥಾನದ ಜನರಲ್ ಕಮಿಟಿಯು ಸುಪಾಪೇತೆಯ ಮಹಾಲಕರಿಯವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಆಗ ದೇವಸ್ಥಾನದ ವಾರ್ಷಿಕೋತ್ಸವದ ಬಗ್ಗೆ ಮತ್ತು ದೇವಸ್ಥಾನದ ಹಣದ ಎತ್ತುವಳಿ ಮತ್ತು ವಿನಿಯೋಗ ಇವುಗಳ ಬಗ್ಗೆ ಸುಧಾರಣೆಯನ್ನು ಮಾಡುವ ಕುರಿತು ಕೆಲವು ವೇಳೆ ಆಲೋಚನೆನಡೆದು ವರ್ಷಕ್ಕೆ ೧ ರೂಪಾಯಿ ಚಂದಾಯ ಕೊಡುವ ಮಹನೀಯರನ್ನು ದೇವಸ್ಥಾನದ ಜನರಲ್ ಕಮಿಟಿಯ ಮೆಂಬರರನ್ನಾಗಿ ಮಾಡಿಕೊಳ್ಳಬೇಕೆಂತಲೂ ದೇವಸ್ಥಾನದ ಉತ್ಪನ್ನ ಮತ್ತು ಖರ್ಚುಗಳ ಬಗ್ಗೆ ಯೋಗ್ಯವ್ಯವಸ್ಥೆಯನ್ನಿರಿಸಲಿಕ್ಕೆ ಟ್ರಸ್ಟುರರು, ಆಡಿಟರರು, ಸೆಕ್ರೆಟರಿಗಳು ಇರಬೇಕೆಂತಲೂ ಹಿಂದಕ್ಕೆ ಹಣದ ವಿನಿಯೋಗವನ್ನು ಸರಿಯಾಗಿ ಮಾಡದೆ ಮತ್ತು ತಮ್ಮ ಕಡೆಗೆ ಬಂದ ಹಣದ ಲೆಕ್ಕವನ್ನು ಒಪ್ಪಿಸದೇ ಇರುವ ದೇವಸ್ಥಾನದ ಮೊಕ್ತೇಸರರ ಮೇಲೆ ದಿವಾಣೀಕೋರ್ಟಿನಲ್ಲಿ ದಾವೆ ತರಬೇಕೆಂತಲೂ ಠರಾವುಗಳು ಮಾಡಲ್ಪಟ್ಟವು. ಈ ಕಮಿಟಿಯಲ್ಲಿ ಹಿಂದಿನ ೨೫-೩೦ ಜನರು ಕಮಿಟಿಯಲ್ಲಿ ಪಾಸಾದ ಹೊಸನಿಯಮಕ್ಕನುಸರಿಸಿ ಮೆಂಬರರಾದುದಲ್ಲದೆ ಹೊಸದಾಗಿ ಸಹಾ ೧೮-೨೦ ಜನರು ತಮ್ಮ ಚಂದಾಯವನ್ನು ಅಲ್ಲಿಂದಲೇ ಕೊಟ್ಟು ಮೆಂಬರರಾದರು. ಹಾಗೂ ಆ ದಿವಸ ಸಾಯಂಕಾಲಕ್ಕೆ ಎರಡನೆ ಕಡೆಗೆ ಸಭೆಕೂಡಿ ಶ್ರೀಮಹಾಂತಸ್ವಾಮಿಗಳು, ಶ್ರೀ ಮೃತ್ಯುಂಜಯಸ್ವಾಮಿಗಳು, ಶ್ರೀಯುತ ಶೆಟ್ಟಿ ಮಾಸ್ತರರು ಮೊದಲಾದವರು ಉಪನ್ಯಾಸಗಳನ್ನು ಮಾಡಿದನಂತರ ಸುಮಾರು ೮೦ ಜನರು ತಮ್ಮ ಚಂದಾಯವನ್ನು ಕೊಟ್ಟು ಮೆಂಬರರಾದರು. ಮಾರನೆದಿವಸ ಬೆಳಗ್ಗೆ ಸಹ ಮೆಂಬರರನ್ನು ಹೆಚ್ಚಿಗೆ ಮಾಡಿಕೊಳ್ಳುವಬಗ್ಗೆ ಕಮಿಟಿಯು ಕೂಡತಕ್ಕದ್ದಿತ್ತು. ಇನ್ನೂ ಹೆಚ್ಚಿಗೆ ಜನರು ಮೆಂಬರರಾಗಿರಬಹುದೆಂಬುದರಲ್ಲಿ ತಿಲಾಂಶವಾದರೂ ಸಂದೇಹವಿಲ್ಲ. ಈ ಪರಮಪವಿತ್ರ ದೇವಸ್ಥಾನದ ಬಗ್ಗೆ ವೀರಶೈವರಲ್ಲಿ ಅತುಲ ಅಭಿಮಾನ ವಿರುವದನ್ನು ನೋಡಿದರೆ ವರ್ಷಾವರು ತಿಂಗಳಲ್ಲಿ ೧ ಸಾವಿರ ಜನರು ಮೆಂಬರರು ಸುಲಭವಾಗಿ ಆಗುವರೆಂದು ನನಗೆ ತೋರುತ್ತದೆ. ಈ ದೇವಸ್ಥಾನದ ಪೂಜಾ, ನೈವೇದ್ಯ ಇವುಗಳ ವಿನಿಯೋಗದ ಸಲುವಾಗಿ ಸರಕಾರದವರು ವರ್ಷಕ್ಕೆ ಸುಮಾರು (340) ರೂಪಾಯಿ ಗ್ರ್ಯಾಂಟ್ ಕೊಡುತ್ತದ್ದು; ಭಕ್ತಜನರು ಬೆಳ್ಳಿ ಬಂಗಾರದ ಸಾಮಾನುಗಳನ್ನೂ ನಗದು ಕಾಣಿಕೆಗಳನ್ನೂ ಅರ್ಪಿಸುತ್ತಿರುವುದರಿಂದ ಈ ದೇವಸ್ಥಾನದ ಉತ್ಪನ್ನವು ಪ್ರತಿವರ್ಷ ವಿಶೇಷವಾಗುತ್ತದೆಂಬದರಲ್ಲಿ ಸಂದೇಹವಿಲ್ಲ. ಆದರೆ ಈ ದೇವಸ್ಥಾನದ ಮೇಲ್ವಿಚಾರಣೆಯು ಅನೇಕ ವರ್ಷ ಸರಿಯಾಗಿದ್ದಿಲ್ಲ. ದೇವಸ್ಥಾನಕ್ಕೆ ಬಂದ ಉತ್ಪನ್ನವೆಲ್ಲ ನಿರರ್ಥಕವಾಗಿ ಹಾಳಾಗುತ್ತಿತ್ತು. ಆದುದರಿಂದ ಶ್ರೀಮನ್ನಿರಂಜನ ಜಗದ್ಗುರುಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಸಂಸ್ಥಾನ ಚಿತ್ರಕಲ್ಲದುರ್ಗ ಇವರು ಈಗ ೫-೬ ವರ್ಷಗಳಹಿಂದೆ ಶ್ರೀ ಉಳವಿಕ್ಷೇತ್ರಕ್ಕೆ ದಯಮಾಡಿಸಿ ದೇವಸ್ಥಾನದ ಮೊಕ್ತೇಸರರ ಜವಾಬದಾರಿಯ ಬಗ್ಗೆ ಚರ್ಚೆಯನ್ನು ನಡಿಸಿ, ದೇವಸ್ಥಾನದ. ಜನರಲ್ ಕಮಿಟಿ ಮತ್ತು ವ್ಯವಸ್ಥಾಪಕ ಕಮಿಟಿ ಇವೆರಡನ್ನು ಸ್ಥಾಪನೆಮಾಡಿ ಬಂದಂದಿನಿಂದ ಮೊದಲಿನ ಅವ್ಯವಸ್ಥೆಯು ಅಳಿದುಹೋಗಿ, ಅದು ಈಗ ಸುಧಾರಣಾಪಥದಲ್ಲಿರುತ್ತದೆ. ಆದರೂ ಇನ್ನೂ ಅನೇಕ ಸುಧಾರಣೆಗಳನ್ನು ಅಲ್ಲಿಮಾಡುವದು ತೀರಾ ಅವಶ್ಯವದೆ. ಈ ದೇವಸ್ಥಾನದ ಯಾವತ್ತು ಕೆಲಸವನ್ನು ನಿಯಮಬದ್ಧವಾಗಿ ಮಾಡುವುದಕ್ಕೆ ಈ ವರ್ಷದ ಜನರಲ್ ಕಮಿಟಿಯಲ್ಲಿ ಒಂದು ಸಬ್ ಕಮಿಟಿಯು ನೇಮಿಸಲ್ಪಟ್ಟದಲ್ಲದೆ ಈ ಸಂಸ್ಥೆಯ ಅಧ್ಯಕ್ಷರಾದ ಶಿರಸಿಯ ರುದ್ರಮಠದ ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳಿಗೆ ಸಹಾಯಮಾಡುವುದಕ್ಕಾಗಿ ಶ್ರೀಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳನ್ನು ಉಪಾಧ್ಯಕ್ಷರಾಗಿ ಆರಿಸಿ 3 ಜನರು ಸೆಕ್ರೆಟರಿಗಳನ್ನೂ, ಒಬ್ಬ ಟ್ರಸ್ಟುರರನ್ನೂ ಒಬ್ಬ ಆಡಿಟರರನ್ನೂ ನೇಮಿಸಿದ ಸಂಗತಿಯು ಉಚಿತವೇ ಸರಿ.

ಈ ಕ್ಷೇತ್ರದ ಮಹತ್ವವನ್ನು ವೀರಶೈವರಿಗೆ ಹೊಸದಾಗಿ ಹೇಳ ಕಾರಣವಿಲ್ಲ. ಇಲ್ಲಿ ಪ್ರತಿಸಾರೆ ಯಾತ್ರೆಯು ಕೂಡುವಕಾಲಕ್ಕೆ ಕೀರ್ತನ ಭಜನೆ, ಉಪನ್ಯಾಸ ಇವುಗಳನ್ನು ವ್ಯವಸ್ಥಿತರೀತಿಯಿಂದ ಸಾಂಗಪಡಿಸಿದ ಇಲ್ಲಿ ನಮ್ಮ ಸಮಾಜಕ್ಕೆ ಧಾರ್ಮಿಕ ಮತ್ತು ಸಾಮಾಜಿಕ ಶಿಕ್ಷಣವನ್ನು ಕೊಡಲಿಕ್ಕೆ ಬಹಳ ಅನುಕೂಲವಾಗುತ್ತದೆ. ವೀರಶೈವ ಮಹಾಸಭೆಯನ್ನು ವರ್ಷಕ್ಕೊಮ್ಮೆ ಬೇರೆ ಬೇರೆ ಸ್ಥಳಗಳಲ್ಲಿ ಕೂಡಿಸಿ ಸಭಾಮಂಟಪಕ್ಕೆ ಮತ್ತು ಭೋಜನಕ್ಕೆ ೧೦-೨೦ ಸಾವಿರ ರೂಪಾಯಿ ಖರ್ಚುಮಾಡುವದಕ್ಕಿಂತ ಈ ಕ್ಷೇತ್ರದಲ್ಲಿಯೇ ಮಹಾ ಸಭೆಯನ್ನು ಕೂಡಿಸಿದರೆ ಬಹಳ ಉತ್ತಮವಾಗುವುದು. ಪ್ರತಿನಿಧಿಗಳಿಗೆ ಮತ್ತು ಪ್ರೇಕ್ಷಕರಿಗೆ ರೂಪಾಯಿಕೊಟ್ಟು ಟಿಕೀಟು ಕೊಳ್ಳುವ ಅಗತ ವಿಲ್ಲ. ಸಭೆಯ ಮಂಟಪವನ್ನು ಹಾಕುವ ಅಗತ ವಿಲ್ಲ ಜನರಿಗೆ ಕೂಡ್ರಲಿಕ್ಕೆ ಖುರ್ಚಿಗಳನ್ನೂ ಬೆಂಚುಗಳನ್ನೂ ತರಿಸುವ ಅಗತ್ಯವಿಲ್ಲ. ಮೇಲಾಗಿ ಪ್ರತಿನಿಧಿಗಳಿಗೆ ಅಥವಾ ಪ್ರೇಕ್ಷಕರಿಗೆ ಇಳಿದುಕೊಳ್ಳಲಿಕ್ಕೆ ಬಿಡಾರವನ್ನು ಗೊತ್ತುಪಡಿಸುವ ಅಥವಾ ಅವರಿಗಾಗಿ ಭೋಜನದ ವ್ಯವಸ್ಥೆಯನ್ನು ಮಾಡುವ ತೊಂದರೆಯು ಅಥವಾ ಖರ್ಚು ಯತ್ಕಿಂಚಿತ್ತಾದರೂ ಹತ್ತುವುದಿಲ್ಲ. ನಮ್ಮ ಜೈನಬಾಂಧವರು ತಮ್ಮ ಮಹಾ ಸಭೆಯನ್ನು ನಿಪ್ಪಾಣಿಯ ಹತ್ತಿರುವ ಸ್ತವನಿಧಿ ಎಂಬ ಕ್ಷೇತ್ರದಲ್ಲಿ ಈಗ ೧೦-೧ ವರ್ಷಗಳಿಂದ ಕೂಡಿಸುತ್ತಿದ್ದಾರೆ. ಅದರಂತೆ ನಾವಾದರೂ ಶ್ರೀಉಳವಿಕ್ಷೇತ್ರದಲ್ಲಿ ನಮ್ಮ ಮಹಾಸಭೆಯನು ಕೂಡಿಸಬೇಕೆಂದು ನನ್ನ ಸೂಚನೆಯು ಇರುತ್ತದೆ. ವಿಶಾಲವಾದ ಬೈಲು ಸ್ಥಳದಲ್ಲಿ ಸಭೆಯಸಲುವಾಗಿ ಒಂದು ಸ್ಥಳವನ್ನು ಗೊತ್ತುಮಾಡಿ ಕೆಲವುವ್ಯವಸ್ಥಾಪಕರು ಮತ್ತು ನೂರಾರು ಸ್ವಯಂಸೇವಕರು ಕೂಡಿ ನೂರಾರು ರೂಪಾಯಿ ಖರ್ಚಿನಲ್ಲಿ ಬೇಕಾದ ತರದ ವ್ಯವಸ್ಥೆಯನ್ನು ಸಭೆಗೋಸ್ಕರ ಮಾಡಲಿಕ್ಕೆ ಬರುವಂತೆ ಇರುತ್ತದೆ. ಈ ಬಗ್ಗೆ ಬೆಂಗಳೂರಲ್ಲಿರುವ ವೀರಶೈವ ಮಹಾಸಭೆಯ ಚಿರಸ್ಥಾಯಿ ಫಂಡ ಕಮಿಟಿಯವರು ಯೋಗ್ಯವಿಚಾರ ಮಾಡುವರೆಂದು ನಾನು ಕೋರುತ್ತೇನೆ. ಬೀರೂರು ಮಹಾಸಭೆಯಾದ ನಂತರ ಈಗ ೨-೩ ವರ್ಷಗಳಲ್ಲಿ ಮಹಾಸಭೆಯು ಕೂಡಿಲ್ಲ. ಹಾಗೂ ಮಹಾಸಭೆಯನ್ನು ಎರಡನೆ ಕಡೆಗೆ ಕೂಡಿಸಬೇಕೆಂದು ಯಾರೂ ಮನಮುಟ್ಟಿ ವಿಚಾರವನ್ನು ಸಹಾ ಮಾಡಿದಂತೆ ಕಾಣುವುದಿಲ್ಲ. ಬೆಂಗಳೂರು ಚಿರಸ್ಥಾಯಿ ಫಂಡು ಕಮಿಟಿಯವರು ತಮ್ಮ ಹತ್ತಿರ ೪೦ ಸಾವಿರ ರೂಪಾಯಿ ಫಂಡುಕೂಡಿರುವುದೆಂತಲೂ ತಾವು ಅದರ ಬಡ್ಡಿಯಿಂದ ಮಹಾಸಭೆಗೆ ಖರ್ಚನ್ನು ಕೊಡಿಸುವೆವೆಂತಲೂ ಊರೂರಿಗೆ ಛಾಪಿಸಿ ತಿಳಿಸಿರುತ್ತಾರೆ. ಇದು ಸುತ್ತ್ಯವೇ ಸರಿ. ಆದರೆ ಬೀರೂರು ಮಹಾಸಭೆಯನ್ನು ಮಾಡಿದ ಕಾಲಕ್ಕೆ ನಮ್ಮ ಸಮಾಜದ ಮಾಹೇಶ್ವರವರ್ಗದಲ್ಲಿ ಮತ್ತು ಭಕ್ತ ವರ್ಗದಲ್ಲಿ ಅಂತಃಕಲಹಗಳು ಒಡೆದು ಕಾಣಿಸಿದ ಕಾರಣ ಅನೇಕಜನರು ಎದೆಯನ್ನು ಒಡೆದು ಕೊಂಡಿದ್ದಾರೆ. ನಮ್ಮ ಸಮಾಜದಲ್ಲಿ ನೂರೆಂಟು ಪಂಗಡಗಳು ಮೊದಲಿನಿಂದ ಉಂಟೇ ಉಂಟು. ಜಾತಿ ಉಪಜಾತಿಗಳಲ್ಲಿಯ ಪಂಗಡಗಳು ಮತ್ತು ಪ್ರತಿ ಊರಲ್ಲಿ ಜಗಳಗಳು ಇರುತ್ತವೆ. ಹೀಗಿದ್ದು ಈಗ ಸ್ವತಃ ಗುರುವರ್ಗದಲ್ಲಿ ಅಂದರೆ ವಿರಕ್ತಸ್ವಾಮಿಗಳು ಮತ್ತು ಪಂಚಸಿಂಹಾಸನದವರು ಇವರಲ್ಲಿ ಹಾಗೂ ವಿರಕ್ತ ವಿರಕ್ತರೊಳಗೆ ಅನ್ಯೋನ್ಯ ಮರ್ಯಾದೆಯ ಬಗ್ಗೆ ಮತ್ತು ಧಾರ್ಮಿಕ ಹಕ್ಕುಗಳ ಬಗ್ಗೆ ಕಲಹಗಳು ನಡೆದಿರುವುದರಿಂದ ಅನೇಕ ಜನರು ನಿರಾಶೆಯಿಂದ ಮೌನವೃತ್ತಿಯನ್ನು ಧಾರಣಮಾಡಿರುತ್ತಾರೆ. ಬರೇನಿರಾಶೆಯಿಂದ ಕುಳಿತರೆ ಬಗೆಹರಿವುದೆಂದಿಗೆ? ಅದರ ಬಗ್ಗೆ ಯೋಗ್ಯ ವಿಚಾರವನ್ನು ಕೈಕೊಂಡು ಅವರ ಹಕ್ಕು ಮರ್ಯಾದೆಗಳ ವಾದವನ್ನು ತಾವು ತೀರಿಸಿಬಿಡತಕ್ಕದ್ದು. ಇದಕ್ಕಾಗಿ ವೀರಶೈವ ಸಮಾಜದೊಳಗಿನ ಕೆಲವು ಸಮತೋಲ ಬುದ್ಧಿಯ ನಿಸ್ಪೃಹ ಮುತ್ಸದ್ದೀ ಜನರು ಅಗತ್ಯವಾಗಿ ಪ್ರಯತ್ನಮಾಡತಕ್ಕದ್ದು. ಜಾತಿ ಉಪಜಾತಿಗಳಲ್ಲಿಯ ಅನ್ಯೋದಕ ಸಂಬಂಧದ ಭೇದಭಾವದ ಪ್ರಶ್ನವನ್ನು ಒಮ್ಮೆಲೇ ತೀರಿಸುವುದು ಕಠಿಣವದೆ. ಅದಕ್ಕೆ ಏನಿಕೆ ಕಾಲವು ಹೋಗಲಿಕ್ಕೆ ಬೇಕು. ಈ ಜಾತಿ ಉಪಜಾತಿಗಳ ಭೇದಭಾವದ ಪ್ರಶ್ನವನ್ನು ಬದಿಗಿಟ್ಟು ಯಾವತ್ತೂ ಗುರುಸ್ಥಲದವರು ಮತ್ತು ಭಕ್ತರು ತಮ್ಮ ಸಮಾಜದ ಹಿತಚಿಂತೆಯ ದೃಷ್ಟಿಯಿಂದ ಮಾಹೇಶ್ವರ ವರ್ಗದಲ್ಲಿ ಹುಟ್ಟಿರುವ ಕಲಹವನ್ನು ತೀರಿಸಿಬಿಡತಕ್ಕದ್ದು. ಅಂದರೆ ಮಹಾಸಭೆಯ ಕೆಲಸವು ಸುಲಲಿತವಾಗಿ ಸಾಗುವುದು. ಹೆಗ್ಗಣವನ್ನು ಹೋರಿನಲ್ಲಿಟ್ಟು ಹೋರನ್ನು ಮುಚ್ಚುವುದರಿಂದ ಹೇಗೆ ಹಿತವಾಗಲಾರದೋ ಹಾಗೆ ಭಕ್ತ ಮಾಹೇಶ್ವರರಲ್ಲಿಯ ಈ ಮೇಲ್ಕಂಡ ಐಕ್ಯಾಭಾವದ ಕಾರಣವನ್ನು ಹೋಗಲಾಡಿಸಲಿಕ್ಕೆ ಮುಂಚಿತವಾಗಿ ಪ್ರಯತ್ನ ಮಾಡದೆ ಮಹಾಸಭೆಯನ್ನು ಸೇರಿಸಲಿಕ್ಕೆ ಪ್ರಯತ್ನ ಮಾಡುವುದರಿಂದ ಪ್ರಯೋಜನ ವಿಲ್ಲ. ಈ ಮಹಾಸಭೆಯನ್ನು ಶ್ರೀಉಳವಿಕ್ಷೇತ್ರದಲ್ಲಿ ನೆರೆಸುವದು ಸುಲಭ ಸಾಧ್ಯವೆಂದು ನನ್ನ ಅಲ್ಪಮತಿಗೆ ಗೋಚರವಾಗುತ್ತದೆ. ಆದುದರಿಂದ ಬೆಂಗಳೂರು ಮೈಸೂರು ಧಾರವಾಡ ಬೆಳಗಾವ, ವಿಜಾಪುರ, ಕಾರವಾರ, ಸೊಲ್ಲಾಪುರಗಳಲ್ಲಿಯ ಪ್ರಮುಖ ವೀರಶೈವ ಜನರು ಬೆಂಗಳೂರಲ್ಲಿ, ಸೊಲ್ಲಾಪುರದಲ್ಲಿ ಅಥವಾ ಧಾರವಾಡ ಬೆಳಗಾವಿನಲ್ಲಿ ಒಂದು ಆಲೋಚನಾ ಕಮಿಟಿಯನ್ನು ಕೂಡಿಸಿ ಮೇಲಿನ ಮಾಹೇಶ್ವರವರ್ಗದ ಕಲಹವನ್ನು ತೀರಿಸಿ ಮುಂದಿನ ಸಾರೆಯ ಮಹಾಸಭೆಯನ್ನು ಶ್ರೀಉಳವಿಕ್ಷೇತ್ರದಲ್ಲಿ ಸೇರಿಸತಕ್ಕದ್ದೆಂದು ನನ್ನ ವಿನಯಾನ್ವಿತ ಸೂಚನೆಯುಂಟು.

ಧಾರವಾಡ.
ತಾರೀಖು ೧೬-೨-೧೯೨೨ನೇ ಇಸ್ವಿ } ಗ. ಹು. ಹೊನ್ನಾಪುರಮಠ.

೧೯೨೨ ನೆಯ ಇಸವಿ ಮಾರ್ಚಿ ತಾ|| ೫ರಿಂದ ೧೯೨೨ನೆಯ ಮಾರ್ಚಿ ತಾ|| ೧೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ಫಾಲ್ಗುಣಶುದ್ಧ ಷಷ್ಠಿಯಿಂದ ಫಾಲ್ಗುಣಶುದ್ಧ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ಮಾಸ
5	ಭಾನು	ಷಷ್ಠಿ	3-1	ಕೃತ್ತಿ	34-47	22
6	ಸೋಮ	ಸಪ್ತ	2-34	ರೋಹಿ	35-17	23
7	ಮಂಗಳ	ಅ-ಉ	0-37 57-51	ಮೃಗ	34-38	24
8	ಬುಧ	ದಶ	54-58	ಆರಿ	32-57	25
9	(1) ಗುರು	ಏಕಾ	50-2	ಪುನ	30-19	26
10	ಶುಕ್ರ	ದ್ವಾ	44-50	ಪುಷ್ಯ	27-4	27
11	ಶನಿ	ತ್ರಯೋ	39-7	ಆಶ್ಲೆ	23-14	28

(1) ಸ್ಮಾರ್ತಾನಾಂವೈಷ್ಣವಾನಾಂಚೈಕಾದಶಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಚಿಕ್ರೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೊಳೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಮಾರ್ಚಿ ತಾರೀಖು ೧೨ ನೆಯ ಭಾನುವಾರ ಸಂಚಿಕೆ ೧೧

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
9 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ವಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ಕುರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 37

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
6 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂಪ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷೆಯುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
10 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಮಾರ್ಚಿ ತಾ|| ೧೨ ನೆಯ ಭಾನುವಾರ.

ಭಾರತಪ್ರಭುತ್ವದ ಆಯವ್ಯಯಪತ್ರ; ಹೊರಲಾಗದಷ್ಟು ಹೊಸತೆರುಗೆಗಳು.

ಸಾಮ್ರಾಜ್ಯಶಾಸನ ಸಭೆಯಲ್ಲಿ ಕೋಶಾಧಿಕಾರಿಗಳಾದ ಸರ್ ಮಾಲ್ಕಂ ಹೇಯಲಿರವರು ಓದಿದ ಭಾರತಪ್ರಭುತ್ವದ ಕಳೆದ ವರ್ಷದ ಮತ್ತು ಮುಂದಣ ವರ್ಷದ ಆಯವ್ಯಯಗಳಿಗೆ ಸಂಬಂಧಪಟ್ಟ ಪತ್ರವು ದೇಶೀಯರಿಗೆಲ್ಲಾ ಅತ್ಯಂತವಾಗಿ ಮನೋವ್ಯಥೆಯನ್ನುಂಟುಮಾಡತಕ್ಕದಾಗಿದೆ. ೧೯೨೧-೨೨ನೆ ವರ್ಷದಲ್ಲಿ ಒಟ್ಟು ಆದಾಯವು ೧೨೮ ಕೋಟಿಯೂ ೩೩ ಲಕ್ಷವೂ, ವ್ಯಯವು ೧೨೭|| ಕೋಟಿಯೂ ಆಗುವುದೆಂದೂ, ವೆಚ್ಚ ಕಳೆದು ೭೧ ಲಕ್ಷವು ಉಳಿಯುವುದೆಂದೂ ವರ್ಷಾರಂಭದಲ್ಲೇ ನಿರೀಕ್ಷೆಮಾಡಿದ್ದುದಕ್ಕೆ ಪರ್ಯವಸಾನವು ಹೇಗಾಯಿತೆಂದರೆ ಆದಾಯವು 108¾ ಕೋಟಿಯೂ, ವ್ಯಯವು ೧೪೨||| ಕೋಟಿಯೂ ಆಗಿ ೩೪ ಕೋಟಿ ರೂ. ಗಳು ವೆಚ್ಚಕ್ಕೇ ಸಾಲದೆ ಹೋದುವು. ಹೀಗೆ ನಷ್ಟ ಸಂಭವಿಸಿದುದಕ್ಕೆ ಇದೇ ಮೊದಲಲ್ಲ; ಹಿಂದೆ ೫ ವರ್ಷಗಳಿಂದಲೂ ಇದೇ ಹಾಡಾಗಿಬರುತ್ತಿದೆ. ೧೯೧೮-೧೯ನೆ ವರ್ಷದಲ್ಲಿ ೯ ಕೋಟಿ ಕಡಿಮೆ ಬಿದ್ದಿತು. ೧೯೧೯-೨೦ರಲ್ಲಿ ೨೪ ಕೋಟಿ ಕಡಿಮೆಬಿದ್ದಿತು. ೧೯೨೦-೨೧ರಲ್ಲಿ ೨೬ ಕೋಟಿ ಕಡಿಮೆಬಿದ್ದಿತು. ೧೯೨೧-೨೨ರಲ್ಲಿ ೩೪ ಕೋಟಿಯು ಕಡಿಮೆಬಿದ್ದಿದೆ. ಮುಂದಣ ವರ್ಷದಿಂದಾದರೂ ಈ ಶೋಚನೀಯಾವಸ್ಥೆಯು ತಪ್ಪೀತೆ ಎಂದರೆ ಅದೂ ಕೂಡ ಇಲ್ಲವೆಂದು ತೋರುವುದು. ಏಕೆಂದರೆ ಮುಂದಣ ವರ್ಷದಲ್ಲಿ ೧೧೦ ಕೋಟಿ ಆದಾಯವೂ ೧೪೨|| ಕೋಟಿ ವೆಚ್ಚವೂ ಆಗಬಹುದೆಂದು ನಿರೀಕ್ಷಿಸಿರುವ ಕಾರಣ ಮುಂದಣ ವರ್ಷದಲ್ಲೂ ೩೧|| ಕೋಟಿ ಕಡಿಮೆ ಬೀಳುವುದೆಂದು ಗೊತ್ತಾಗುತ್ತದೆ. ಈ ನಿರೀಕ್ಷಣೆಯು ಕಡೆಗೆ ಇನ್ನೆಷ್ಟು ತಾರುಮಾರಾಗುವುದೋ ಹೇಳಲಾಗುವುದಿಲ್ಲ. ನಿರೀಕ್ಷಣೆಗಿಂತಲೂ ಆದಾಯವು ಕಡಿಮೆಯಾಗಿ ವ್ಯಯವು ಹೆಚ್ಚಾಗಿಬಿಟ್ಟರೆ ಅದೇನೂ ಆಶ್ಚರ್ಯವಾಗಿ ಕಾಣುವುದಿಲ್ಲ. ಹೀಗೆ ಉಂಟಾಗುತ್ತಿರುವ ಹಣದ ಮುಗ್ಗಟ್ಟು ಇಷ್ಟರಲ್ಲೇ ತೀರಿಹೋಗುವಂತೆ ತೋರುವುದಿಲ್ಲವೆಂದು ಹೇಯಲಿಯವರು ಹೇಳಿರುವುದನ್ನು ನೋಡಿದರೆ ಭಾರತಪ್ರಭುತ್ವಕ್ಕೆ ದಿವಾಳಿಯ ಮಾರ್ಗವು ಹತ್ತಿದೆಯೆಂದೇ ತೋರುತ್ತಿರುವುದು. ಹಾಸುಗೆಯಿದ್ದಷ್ಟು ಕಾಲುನೀಡಬೇಕೆಂಬ ಗಾಥೆಯಂತೆ ಆಯಕ್ಕೆ ತಕ್ಕಷ್ಟು ವ್ಯಯವನ್ನು ಮಾಡದಿದ್ದರೆ ಯಾವ ಮನುಷ್ಯನಿಗೇ ಆಗಲಿ ಪ್ರಭುತ್ವಕ್ಕೇ ಆಗಲಿ ಆಗುವ ಗತಿಯು ಹೀಗೆಯೇ ತಾನೆ? ಇದುವರೆಗೆ ಯಾವಾಗಲಾದರೂ ಅಷ್ಟೊ ಇಷ್ಟೊ ಆದಾಯವು ಕಡಿಮೆ ಬಿದ್ದರೆ ಕರೆನ್ಸಿ ನೋಟುಗಳನ್ನು ಅಚ್ಚುಮಾಡಿಯೊ ಟ್ರಜರಿ ಬಿಲ್ಲುಗಳ ಮೂಲಕ ಸಾಲವನ್ನು ತಂದೋ ನಷ್ಟವನ್ನು ಸರಿಪಡಿಸಿಕೊಳ್ಳುತ್ತಿದ್ದರು. ಅಂಥ ರೀತಿಯನ್ನು ಕೂಡ ಇನ್ನು ಮುಂದೆ ಆಚರಿಸಲು ಅವಕಾಶವಿಲ್ಲವೆಂದು ಹೇಯಲಿಯವರು ಹೇಳಿರುತ್ತಾರೆ. ಇಷ್ಟೇ ಅಲ್ಲದೆ ಚಿನ್ನದ ಸ್ಟ್ಯಾಂಡರ್ಡ್ ರಿಜರ್ವಿನಿಂದ ಹಣವನ್ನು ತೆಗೆದುಕೊಳ್ಳಲಿಕ್ಕೂ ರೂಪಾಯಿ ಸೌರನ್ನುಗಳ ಎಂದರೆ ನಾಣ್ಯಗಳ ಆಧಾರದ ಮೇಲೆ ಸಾಲ ತೆಗೆಯುವುದಕ್ಕೂ ಅವಕಾಶವಿಲ್ಲವಂತೆ. ಇಷ್ಟೆಲ್ಲಾ ಕಷ್ಟವಿರುವಾಗ ವೆಚ್ಚವನ್ನಾದರೂ ಕಡಿಮೆಹಾಕಬಾರದೆ ಎಂದರೆ ಸೈನಿಕಶಾಖೆಯ ವ್ಯಯವನ್ನೇ ಆಗಲಿ ಸಿವಿಲ್ ಶಾಖೆಯ ವ್ಯಯವನ್ನೇ ಆಗಲಿ ಈಗ ನಿರ್ಣಯಿಸಿರುವುದಕ್ಕಿಂತಲೂ ತಗ್ಗಿಸುವುದು ಸಾಧ್ಯವೇ ಅಲ್ಲವಂತೆ! ಇದುವರೆಗೆ ಚೆನ್ನಾಗಿ ಪರಿಶೋಧಿಸಿ ನಿಲ್ಲಿಸಿಬಿಡಬಹುದಾದ ವೆಚ್ಚಗಳನ್ನೆಲ್ಲಾ ತೆಗೆದುಬಿಟ್ಟಿರುವಕಾರಣ ಅನವಶ್ಯಕವಾದ ವೆಚ್ಚಗಳೊಂದೂ ಸೇರಿಸಲ್ಪಟ್ಟಿಲ್ಲವೆಂದು ಹೆಯಲಿಯವರು ಹೇಳಿರುವುದು ಆಶ್ಚರ್ಯಕರವಾಗಿದೆ. ಸೀಮೆಯಲ್ಲಿ ಆಂಗ್ಲಪ್ರಭುತ್ವದವರು ತಮ್ಮ ಆಯವ್ಯಯಗಳನ್ನು ಪರಿಶೋಧಿಸಿ ವೆಚ್ಚವನ್ನು ಕಡಿಮೆಮಾಡಬಹುದಾದುದನ್ನು ಸೂಚಿಸುವುದಕ್ಕಾಗಿ ಗೆಡ್ಡೀಸ್‌ರವರ ಅಧ್ಯಕ್ಷತೆಯಿಂದ ಒಂದು ಸಂಘವನ್ನು ಏರ್ಪಡಿಸಿ, ಅವರು ಕೊಟ್ಟ ಸೂಚನೆಯಲ್ಲಿ ೮ ಕೋಟಿಯೂ ಎಂಭತ್ತು ಲಕ್ಷ ಸವರನ್ನುಗಳಷ್ಟು ವ್ಯಯವನ್ನು ತಗ್ಗಿಸಬಹುದೆಂದು ಹೇಳಿದ್ದುದರ ಮೇಲೆ ಪ್ರಭುತ್ವದವರು ೬ ಕೋಟಿಯೂ ೪೦ ಲಕ್ಷ ಸವರನ್ನುಗಳಷ್ಟು ವೆಚ್ಚವನ್ನು ತಗ್ಗಿಸಲು ಈಗ ತಾನೇ ಒಪ್ಪಿಕೊಂಡಿರುವರು. ಹೀಗಿರುವಾಗ ನಮ್ಮ ಭಾರತ ಪ್ರಭುತ್ವದವರು ವೆಚ್ಚವನ್ನು ತಗ್ಗಿಸುವುದಕ್ಕೇ ಸಾಧ್ಯವಿಲ್ಲವೆಂದು ಹೇಳುವುದು ಯುಕ್ತವಾಗಿಲ್ಲ. ಶಾಸನಸಭಾಸಭಿಕರು ಈ ಆಯವ್ಯಯ ಪತ್ರದ ಮೇಲೆ ಎಷ್ಟೋ ಆಕ್ಷೇಪಗಳನ್ನು ಮಾಡಿ ವೆಚ್ಚವನ್ನು ತಗ್ಗಿಸಲು ಸೂಚಿಸುವರೆಂಬುದಕ್ಕೆ ಸಂಶಯವಿಲ್ಲ. ಆದರೆ ಅವರಿಂದ ಆಗುವ ಫಲವು ಅಷ್ಟರಲ್ಲೇ ಇರುತ್ತದೆಯೆಂಬುದು ಇದುವರೆಗಣ ಅನುಭವದಿಂದ ವ್ಯಕ್ತವಾಗಿರುತ್ತದೆ.

ವರ್ಷಾರಂಭದಲ್ಲಿ ಮಾಡಿದ್ದ ಆಯವ್ಯಯ ನಿರೀಕ್ಷಣೆಯಲ್ಲಿ ಇಷ್ಟು ತಾರುಮಾರುಂಟಾದುದಕ್ಕೆ ಕೆಲಕಾರಣಗಳನ್ನು ಇವರು ಹೇಳಿರುತ್ತಾರೆ—ಮಳೆಬೆಳೆಗಳು ಅನುಕೂಲವಾಗಿರಲಿಲ್ಲ. ರಾಜಕೀಯ ಚಳವಳದಿಂದಲೂ ಆರ್ಥಿಕಪರಿಸ್ಥಿತಿಯಿಂದಲೂ ವ್ಯಾಪಾರವು ಕಡಿಮೆಯಾಯಿತು. ಕಲ್ಲಿದ್ದಲ ಗಣಿಯಲ್ಲಿ ಉಂಟಾದ ಮುಷ್ಕರದಿಂದ ತಕ್ಕಷ್ಟು ಇದ್ದಲು ದೊರೆಯದೆ ಹೊರಗಣಿಂದ ತರಿಸಿಕೊಳ್ಳಬೇಕಾಯಿತು. ರಷ್ಯಾ ಮೊದಲಾದ ದೇಶಗಳಲ್ಲಿ ಮಹಾಕ್ಷಾಮವುಂಟಾಗಿದ್ದುದರಿಂದ ನಮ್ಮ ದೇಶದ ಸಾಮಾನುಗಳನ್ನು ಅಲ್ಲಿಯವರು ಹೆಚ್ಚಾಗಿ ತರಿಸಿಕೊಳ್ಳಲಿಲ್ಲ. ಹೀಗೆಯೇ ಜರ್ಮನಿ ಮೊದಲಾದ ಇತರ ದೇಶಗಳು ತರಿಸಿಕೊಂಡ ಸಾಮಾನುಗಳೂ ಕಡಿಮೆಯಾದುದರಿಂದ ಆ ಭಾಗದಲ್ಲೆಲ್ಲಾ ಬರುತ್ತಿದ್ದ ಸುಂಕದ ಉತ್ಪತ್ತಿಯು ಕಡಿಮೆಯಾಯಿತು. ಎಂದರೆ ವಾಣಿಜ್ಯ ಮುಖದಲ್ಲೇ ೩೩ ಕೋಟಿಯು ಕಡಿಮೆಬಿದ್ದುಹೋಯಿತು. ರೈಲ್ವೆ ಪೋಸ್ಟು ಈ ಶಾಖೆಗಳಲ್ಲಿ ಜನರು ಮುಷ್ಕರಹಿಡಿದುದರಿಂದ ಕೆಲಸವು ಕಡಿಮೆಯಾಯಿತು. ಸಂಬಳ ಸಾರಿಗೆಗಳನ್ನು ಹೆಚ್ಚಿಸಿದುದರಿಂದ ವೆಚ್ಚವು ಹೆಚ್ಚಾಯಿತು. ಈ ಕಾರಣದಿಂದ ರೈಲ್ವೆ ಶಾಖೆಯಲ್ಲಿ ೨|| ಕೋಟಿ ನಷ್ಟವುಂಟಾಗಿದೆ. ಅಂಚೆಯ ಶಾಖೆಯಲ್ಲಿ ಕಳೆದ ವರ್ಷ ಕೆಲವು ರೇಟುಗಳನ್ನು ಹೆಚ್ಚಿಸಿದುದರಿಂದ ಬಂದ ಹೆಚ್ಚಿಗೆಯ ಆದಾಯವು ೩೫ ಲಕ್ಷ ಮಾತ್ರವಾಗಿರುತ್ತದೆ. ಆದರೂ ಅಂಚೆ ತಂತಿ ಇವೆರಡರಲ್ಲೂ ೯೦ ಲಕ್ಷ ರೂ. ಗಳು ನಷ್ಟವಾಗಿವೆ. ಹೀಗೆ ಅನೇಕ ಭಾಗಗಳಲ್ಲಿ ಆದಾಯವು ಕಡಿಮೆಯಾದುದಲ್ಲದೆ ವ್ಯಯದಲ್ಲೂ ಕೆಲಭಾಗವು ಅನಿರ್ವಾಹವಾಗಿ ಹೆಚ್ಚಿತು. ಈ ದೇಶದಲ್ಲೂ ಸೀಮೆಯಲ್ಲೂ ತೆಗೆದ ಸಾಲದ ಬಡ್ಡಿಗೆ ೨ ಕೋಟಿಯನ್ನು ಕೊಡಬೇಕಾಯಿತು. ವಜೀರಸ್ಥಾನದ ಯುದ್ಧವು ಪ್ರಾಪ್ತವಾದುದರಿಂದ ಅದಕ್ಕೇ ೬|| ಕೋಟಿಯನ್ನು ವೆಚ್ಚಮಾಡಬೇಕಾದ ಕಾರಣ ನಿರೀಕ್ಷಿತವಾಗಿದ್ದುದಕ್ಕಿಂತಲೂ ಸೈನಿಕವ್ಯಯವು ೩ ಕೋಟಿ ಹೆಚ್ಚಿತು. ಎಂದರೆ ಸೈನಿಕಶಾಖೆಗೆ ೬೫ ಕೋಟಿ ವೆಚ್ಚವಾಯಿತು. ನಾಣ್ಯದ ವಿನಿಮಯದ ದರಗಳು ಬಹಳ ಹೆಚ್ಚುಕಡಿಮೆಯಾದುದರಿಂದ ಅದರಿಂದಲೂ ವೆಚ್ಚವು ಹೆಚ್ಚಲು ಅವಕಾಶವಾಯಿತು. ಎಂದು ಕಾರಣಗಳನ್ನು ಹೇಳಿರುತ್ತಾರೆ.

ಇದನ್ನು ಪರಿಶೀಲಿಸುವಲ್ಲಿ ಪ್ರಪಂಚದ ಪರಿಸ್ಥಿತಿಯನ್ನನುಸರಿಸಿ ಕೆಲವು ಕಷ್ಟಗಳು ನಮ್ಮ ಭರತಖಂಡಕ್ಕೂ ತಟ್ಟಿರುವುದರ ಜತೆಗೆ ಈ ದೇಶದಲ್ಲಿ ಎಬ್ಬಿಸಲ್ಪಟ್ಟಿರುವ ರಾಜಕೀಯ ಚಳವಳದಿಂದ ವಿದೇಶದ ಬಟ್ಟೆಗಳನ್ನು ತರಿಸುವುದು ಕಡಿಮೆಯಾಗಿ ಅವುಗಳ ಸುಂಕದ ರೂಪದಿಂದ ಬರುತ್ತಿದ್ದ ಆದಾಯವು ಕಡಿಮೆಬಿದ್ದುಹೋಗಲು ಕಾರಣವಾಯಿತು. ಅಲ್ಲದೆ ಯಂತ್ರಾಲಯಗಳೇ ಮೊದಲಾದುವುಗಳ ಕೆಲಸಗಾರರಿಗೂ ರೈಲ್ವೆ ಅಂಚೆ ಮೊದಲಾದ ಶಾಖೆಗಳ ಕೆಲಸಗಾರರಿಗೂ ಹಿತಚಿಂತಕರಂತೆ ಅಸಹಾಯವಾದಿಗಳು ಅವರ ಬೆನ್ನಹಿಂದೆ ನಿಂತು ಅವರ ಸಂಬಳಗಳನ್ನು ಹೆಚ್ಚಿಸಿಕೊಳ್ಳಲಿಕ್ಕೆ ಪ್ರೋತ್ಸಾಹಿಸುತ್ತ ಬಂದುದರಿಂದ ವೆಚ್ಚಗಳು ಹೆಚ್ಚಿಕೊಂಡುವು. ಹೀಗೆ ಸಂಬಳಗಳನ್ನು ಹೆಚ್ಚಿಸಬೇಕಾಗಿ ಬಂದುದರಿಂದಲೇ ಆ ಶಾಖೆಗಳ ವೆಚ್ಚವು ಮಿತಿಮೀರಿಹೋಗಿ ನಷ್ಟವಾಗುತ್ತಿರುವುದು. ಅಲ್ಲದೆ ಅಸಹಾಯವಾದಿಗಳು ಮದ್ಯಪಾನ ನಿರೋಧಕ್ಕೆ ಬೇರೆ ಉಜ್ಜುಗಿಸಿ ಸರ್ಕಾರದ ಆದಾಯದ್ವಾರಕ್ಕೆ ಆನೊಂದು ಕಲ್ಲನ್ನು ಮುಚ್ಚುತ್ತಿದ್ದಾರೆ. ಯದ್ಯಪಿ ಮಾದಕ ದ್ರವ್ಯಸೇವನೆಯ ನಿಷೇಧವು ಕರ್ತವ್ಯವೇ ಆಗಿದ್ದರೂ ಈಗಣ ಅಸಹಾಯವಾದಿಗಳು ಮಾಡತಕ್ಕ ಪಿಕೆಟಿಂಗು ಸರ್ಕಾರದ ಕಾರ್ಯಸ್ತಂಭನದ ದುರುದ್ದೇಶದಿಂದ ಆರಂಭಿಸಲ್ಪಟ್ಟಿರುವುದಾದಕಾರಣ ದುಷ್ಟ ಬೀಜಾವಾಪನೆಯಿಂದ ಹುಟ್ಟಿದ ಸಸಿಯ ಹುಳುಕು ಹಣ್ಣಿನಂತೆ ಈ ಪಿಕೆಟಿಂಗಿನ ಫಲೋದಯವಾಗುತ್ತಲಿದೆ. ಇದರ ಮೇಲೆ ಅಸಹಾಯವಾದಿಗಳು ಕಂದಾಯವನ್ನು ಕೊಡದಂತೆ ನಿಲ್ಲಿಸಿಬಿಡಬೇಕೆಂಬುದನ್ನು ವ್ಯವಹಾರಕ್ಕೆ ತಂದಿದ್ದುದಾದರೆ ಸರ್ಕಾರಕ್ಕೆ ಹಣದ ಮುಗ್ಗಟ್ಟು ಇನ್ನೂ ವಿಶೇಷವಾಗಿರುತ್ತಿದ್ದಿತೆಂಬುದಕ್ಕೆ ಸಂಶಯವೇ ಇಲ್ಲ. ಅಸಹಾಯವಾದಿಗಳ ಪ್ರಯತ್ನದಿಂದ ಯಾವ ಯುಗಕ್ಕೆ ಯಾವ ಸತ್ಫಲವುಂಟಾಗುವುದೋ? ಅದು ಹಾಗಿರಲಿ; ಸದ್ಯಃ ಸರ್ಕಾರದ ಆಯಭಾಗಗಳಿಗೆ ನ್ಯೂನತೆಯುಂಟಾಗಿ, ಹೆಚ್ಚು ತೆರುಗೆಯನ್ನು ಪ್ರಜೆಗಳ ಮೇಲೆ ಹೇರುವ ಮೂಲಕ ಆ ಕೊರತೆಯನ್ನು ಭರ್ತಿಮಾಡಿಕೊಳ್ಳಬೇಕೆಂದು ಸರ್ಕಾರದವರು ನಿರ್ಧರಿಸಿರುವುದರಿಂದ ಬಡಬಗ್ಗರಾದಿಯಾಗಿ ಅಸಹಾಯವಾದಿಗಳೂ ಸಹಾಯವಾದಿಗಳೂ ಒಟ್ಟಿಗೆ ಈ ಹೆಚ್ಚು ತೆರುಗೆಯ ಭಾರವನ್ನು ಹೊರಬೇಕಾಗಿರುವುದೇ ಸದ್ಯಃಫಲವಾಗಿ ನಿಂತಿದೆ.

ಸರ್ಕಾರದ ವೆಚ್ಚಕ್ಕೆ ಸಾಲದೆಹೋಗಿರುವ ೩೪ ಕೋಟಿ ರೂ. ಗಳನ್ನು ಬೇರೆ ಯಾವರೀತಿಯಿಂದಲೂ ಒದಗಿಸಿಕೊಳ್ಳಲು ಆಗುವಂತಿಲ್ಲವಾದ ಕಾರಣ ಹೆಚ್ಚು ತೆರುಗೆಗಳನ್ನು ವಿಧಿಸುವ ಮೂಲಕವೇ ಅದನ್ನು ಭರ್ತಿಮಾಡಿಕೊಳ್ಳದಿದ್ದರೆ ತೀರದೆಂದು ಹೆಯಲಿಯವರು ಹೇಳಿ ಯಾವಯಾವ ಭಾಗದಲ್ಲಿ ಎಷ್ಟೆಷ್ಟು ತೆರುಗೆಯನ್ನು ಹೆಚ್ಚಿಸಬೇಕಾಗಿದೆಯೆಂಬುದರ ದೊಡ್ಡಪಟ್ಟಿಯನ್ನು ಕೊಟ್ಟಿರುತ್ತಾರೆ. ವಿವರವು ಹೇಗೆಂದರೆ—ರೈಲ್ವೆ ಪ್ರಯಾಣಿಕರ ಬಾಡಿಗೆಯನ್ನು ಈಗಿರುವುದಕ್ಕಿಂತಲೂ ಸೇಕಡಾ ೨೫ ರಷ್ಟು ಹೆಚ್ಚಿಸುವುದು. ಹೀಗೆ ಮಾಡುವುದರಿಂದ ೬ ಕೋಟಿ ರೂ. ಗಳ ವರಮಾನವು ಆ ಶಾಖೆಯಲ್ಲಿ ಹೆಚ್ಚುವುದಂತೆ. ಅಂಚೆಯಲ್ಲಿ ೩ ಕಾಸಿನ ಕಾರ್ಡನ್ನು ತಪ್ಪಿಸಿಬಿಟ್ಟು ಕಾರ್ಡಿಗೆ ಅರ್ಧಾಣೆ, ೨|| ತೊಲೆತೂಕದೊಳಗಿರುವ ಕವರುಗಳಿಗೆಲ್ಲಾ ೧ ಆಣೆ ಯಂತೆ ನಿರ್ಧರಿಸುವುದು. ಹೀಗೆ ಮಾಡುವುದರಿಂದ ೧ ಕೋಟಿಯೂ ೬೦ ಲಕ್ಷ ವರಮಾನವು ಹೆಚ್ಚುವುದಂತೆ. ವಿದೇಶಗಳಿಂದ ಬರುತ್ತಿದ್ದ ಬಟ್ಟೆ ಮೊದಲಾದ ಕೆಲವು ವಸ್ತುಗಳ ಮೇಲೆ ೧೦೦ ಕ್ಕೆ ೧೧ ರಂತೆ ವಿಧಿಸುತ್ತಿದ್ದ ಸುಂಕವನ್ನು ೧೫ಕ್ಕೆ ಹೆಚ್ಚಿಸುವುದು ಅಲ್ಲದೆ ಸ್ವದೇಶದಲ್ಲಿ ನಿರ್ಮಿತವಾಗುವ ಬಟ್ಟೆಗಳಮೇಲೂ ಈಗ ಇರುತ್ತಿರುವ ಸೇಕಡಾ ೩|| ರೂ. ಸುಂಕವನ್ನು ಇನ್ನುಮೇಲೆ ೭|| ರೂ. ಗೆ ಹೆಚ್ಚಿಸುವುದು. ಹೀಗೆ ಮಾಡುವುದರಿಂದ ೫ ಕೋಟಿಯೂ ೪೫ ಲಕ್ಷ ರೂ. ಗಳ ಆದಾಯವು ಹೆಚ್ಚುವುದಂತೆ. ಮತ್ತು ಹೊರಗಣ ದೇಶಗಳಿಂದ ಇಲ್ಲಿಗೆ ಬರುವ ಯಂತ್ರಸಾಮಗ್ರಿಗಳು ರೈಲ್ವೆ ಸಾಮಗ್ರಿಗಳು ಇವುಗಳ ಮೇಲೆ ಈಗ ಇರುತ್ತಿರುವ ಸೇಕಡಾ ೨|| ರೂ. ನ ಸುಂಕವನ್ನು ೧೦ ರೂ. ಗೆ ಹೆಚ್ಚಿಸಿದರೆ ೨ ಕೋಟಿ ರೂ. ಗಳ ವರಮಾನವು ಹೆಚ್ಚುವುದಂತೆ. ದೀಪದಕಡ್ಡಿ ಪೆಟ್ಟಿಗೆಗಳಿಗೆ ಈಗ ೧೨ ಡಜನ್ (೧ ಗ್ರೋಸು) ಪೆಟ್ಟಿಗೆಗಳಿಗೆ ೧೨ ಆಣೆ ಸುಂಕವಿದ್ದುದನ್ನು ೧|| ರೂ. ಗೆ ಹೆಚ್ಚಿಸುವುದು. ಇದರಿಂದ ೯೫ ಲಕ್ಷ ವರಮಾನವು ಹೆಚ್ಚುವುದಂತೆ. ಉಪ್ಪಿನ ಮೇಲೆ ಈಗ ಮಣಕ್ಕೆ ೧.|. ರೂ. ನಂತೆ ಇರುವ ಸುಂಕವನ್ನು ೨|| ರೂ. ಗೆ ಹೆಚ್ಚಿಸುವುದು. ಇದರಿಂದ ೫ ಕೋಟಿ ವರಮಾನವು ಹೆಚ್ಚುವುದಂತೆ. ಸಕ್ಕರೆಯ ಮೇಲಣ ಸುಂಕವು ಈಗ ೧೦೦ಕ್ಕೆ ೧೫ ರೂ. ಇರುತ್ತಿರುವುದನ್ನು ೨೫ ರೂ. ಗೆ ಹೆಚ್ಚಿಸುವುದು. ಇದರಿಂದ ೨ ಕೋಟಿ ವರಮಾನವು ಹೆಚ್ಚುವುದು. ಅಲ್ಲದೆ ವರಮಾನದ ತೆರುಗೆಯೂ ಕೂಡ ೩೦ ಸಾವಿರ ರೂ. ಗಳ ಮೇಲ್ಪಟ್ಟುವುಗಳ ದರಗಳು ಕೂಡ ಸ್ವಲ್ಪ ಹೆಚ್ಚಿಸಲ್ಪಡುವುದು. ಈ ದೇಶದಲ್ಲಿ ಹುಟ್ಟುವ ಸೀಮೆಯಣ್ಣೆಗಳಿಗೆ ಗ್ಯಾಲನ್ ೧ಕ್ಕೆ ೧ ಆಣೆಯಂತೆ ಹೊಸದಾಗಿ ಸುಂಕವನ್ನು ಹಾಕುವುದು. ಹೊರಗಣಿಂದ ಬರುವ ಪೆಟ್ರೋಲ್ ಸುಂಕವನ್ನು ೧|| ಆಣೆಯಿಂದ ೨|| ಆಣೆಗೆ ಹೆಚ್ಚಿಸುವುದು, ಹೊರಗಣಿಂದ ಬರುವ ನೂಲಿನ ಮೇಲೂ ೧೦೦ ಕ್ಕೆ ೫ ರೂ. ನಂತೆ ಹೊಸದಾಗಿ ಸುಂಕವನ್ನು ಹೇರುವುದು, ಇದಲ್ಲದೆ ಹೊರಗಣಿಂದ ಬರುವ ಇತರ ಯಾವಯಾವ ವಸ್ತುಗಳ ಮೇಲೆ ೧೦೦ಕ್ಕೆ ೨೦ ರಂತೆ ಸುಂಕವಿದ್ದಿತೋ ಅದನ್ನೆಲ್ಲಾ ೩೦ಕ್ಕೆ ಹೆಚ್ಚಿಸುವುದು. ದ್ರಾಕ್ಷಾ ಸಾರಾಯಿಯ ಹೊರತು ಇತರ ವಿದೇಶೀಯ ಮದ್ಯಗಳ ಮೇಲೆಲ್ಲಾ ೧೦೦ಕ್ಕೆ ೨೦ರಂತೆ ಕಂದಾಯವು ಹೇರಲ್ಪಡುವುದು. ಹೀಗೆಲ್ಲಾ ಮಾಡುವುದರಿಂದ ೨೯ ಕೋಟಿ ರೂ. ಗಳ ಆದಾಯವನ್ನು ಹೆಚ್ಚಿಸಿಕೊಂಡು ಹಣದ ಮುಗ್ಗಟ್ಟನ್ನು ನೀಗಿಸಿಕೊಳ್ಳಬಹುದೆಂದು ಕೋಶಾಧಿಕಾರಿಗಳು ಹೇಳಿರುವುದಲ್ಲದೆ ರೈಲ್ವೆ ಮೊದಲಾದ ಶಾಶ್ವತ ಪ್ರತಿಷ್ಠಾಪನ ಕಾರ್ಯಗಳಿಗೆ ಒದಗಿಸುವುದಕ್ಕಾಗಿ ೫೧|| ಕೋಟಿ ರೂ. ಗಳ ಸಾಲವನ್ನು ಕೂಡ ಮಾಡಬೇಕಾಗಿದೆಯೆಂದು ಹೇಳಿರುತ್ತಾರೆ. ಇದುವರೆಗೆ ಭಾರತ ಪ್ರಭುತ್ವದವರು ೬೨.|. ಕೋಟಿ ರೂ. ಗಳ ಸಾಲವನ್ನು ಮಾಡಿ ಕೋಟಿಗಟ್ಟಲೆ ಬಡ್ಡಿಯನ್ನು ವರ್ಷಗಟ್ಟಲೆ ತೆರುತ್ತಿದ್ದಾರೆ. ಅದರ ಮೇಲೆ ಈಗಲೂ ಇಷ್ಟು ದೊಡ್ಡ ಮೊತ್ತವನ್ನು ಸಾಲಮಾಡಬೇಕೆಂದಿರುವುದನ್ನೂ ಆಯಕ್ಕಿಂತ ವ್ಯಯವು ದಿನೇ ದಿನೇ ಹೆಚ್ಚುತ್ತಿರುವುದನ್ನೂ ಇಷ್ಟಾದರೂ ವೆಚ್ಚದ ಭಾಗಗಳನ್ನು ಸಂಕೋಚಗೊಳಿಸಲು ಪ್ರಭುತ್ವದವರು ಪ್ರಯತ್ನ ಮಾಡದಿರುವುದನ್ನೂ ಉಪ್ಪು ಅಂಚೆಯ ಕಾರ್ಡು ದೀಪದಕಡ್ಡಿ ಮೊದಲಾದ ದೈನಿಕ ಉಪಯೋಗ್ಯವಸ್ತುಗಳ ಮೇಲೂ ಕೂಡ ಹೆಚ್ಚು ಕಂದಾಯಗಳು ಬಿದ್ದು ತನ್ಮೂಲಕ ಅವುಗಳ ಬೆಲೆ ಹೆಚ್ಚಿ ಅದನ್ನನುಭವಿಸುವ ಕಷ್ಟವು ಬಡಬಗ್ಗರ ಮೇಲೆಲ್ಲಾ ಬಿದ್ದಿರುವುದನ್ನೂ ನೋಡಿದರೆ ಪ್ರತಿಯೊಬ್ಬ ದೇಶಾಭಿಮಾನಿಗೂ ದುಸ್ಸಹ ಸಂಕಟವುಂಟಾಗುವುದು. ಅಸಹಾಯವಾದಿಗಳ ಬೋಧೆಯಿಂದ ಪ್ರಜೆಗಳ ಮನಸ್ಸು ಪ್ರಭುತ್ವವಿಷಯದಲ್ಲಿ ಕಲುಷಿತವಾಗುತ್ತಿರುವ ಈಗಣ ಸಂದರ್ಭದಲ್ಲಿಯೇ ಪ್ರಭುತ್ವದವರು ಹೀಗೆ ಹೆಚ್ಚು ಕಂದಾಯಗಳನ್ನು ವಿಧಿಸುವ ಮೂಲಕ ಮತ್ತಷ್ಟು ಅವರುಗಳ ಮನಸ್ಸನ್ನು ಅತೃಪ್ತಿಪಡಿಸುವುದು ಉತ್ತಮ ರಾಜತಂತ್ರವೆಂದು ಎಂದಿಗೂ ಎಣಿಸಲ್ಪಡುವುದಿಲ್ಲ.

ಮೈಸೂರು ವಿದ್ಯಾಭ್ಯಾಸದ ತೆರುಗೆ.

ಭಾರತಪ್ರಭುತ್ವದವರು ಹೀಗೆ ತಮ್ಮ ದೊಡ್ಡರಾಜ್ಯಭಾರನಿರ್ವಾಹಕಾರ್ಯಕ್ಕೆ ಸಾಲದೆಬಂದ ಹಣವನ್ನು ತೆರುಗೆಗಳನ್ನು ಹೆಚ್ಚಿಸುವ ಮೂಲಕ ಕೂಡಿಸಿಕೊಳ್ಳಲು ಸಿದ್ಧರಾಗಿರುವಾಗ ಚಿಕ್ಕದಾದ ನಮ್ಮ ಮೈಸೂರು ಸರ್ಕಾರಕ್ಕೂ ತಕ್ಕಷ್ಟು ಹಣದ ಮುಗ್ಗಟ್ಟು ಸಂಭವಿಸಿರುವುದು ಎಲ್ಲರಿಗೂ ಗೊತ್ತೇ ಇದೆ. ಆದರೆ ಈ ಮುಗ್ಗಟ್ಟಿನ ಮಧ್ಯದಲ್ಲೇ ವಿದ್ಯಾಭ್ಯಾಸದ ಮೆಮೊರಾಂಡಂ ಪ್ರಕಾರ ಕಾರ್ಯಭಾಗಗಳನ್ನು ವ್ಯವಹಾರಕ್ಕೆ ತರುವುದು ದೇಶಕ್ಷೇಮಕ್ಕೆ ಅತ್ಯವಶ್ಯಕವಾಗಿರುತ್ತದೆ. ನಿಯತವಾಗಿರುವ ಈಗಣ ಉತ್ಪತ್ತಿಯಲ್ಲಿ ಇನ್ನೂ ಹೆಚ್ಚು ಹಣವನ್ನು ವಿದ್ಯಾಶಾಖೆಗೆ ಒದಗಿಸುವುದು ಅಸಾಧ್ಯವಾಗಿದೆ. ಒದಗಿಸದಿದ್ದರೆ ಮೆಮೊರಾಂಡಂ ಕಾರ್ಯಕ್ರಮವು ವ್ಯವಹಾರಕ್ಕೆ ಬರಲು ಮಾರ್ಗವೇ ಇಲ್ಲ. ಹೀಗಿರುವುದರಿಂದ ಸಾಧಾರಣವಾಗಿ ಒಂದು ಹೊಸಕಂದಾಯವನ್ನಾದರೂ ವಿಧಿಸಿ ತನ್ಮೂಲಕ ಬರುವ ಆದಾಯವನ್ನು ಇದಕ್ಕೆ ಉಪಯೋಗಿಸಿಕೊಳ್ಳೋಣವೆಂದು ಪ್ರಭುತ್ವದವರು ಪರ್ಯಾಲೋಚಿಸಿದುದು ಯುಕ್ತವೇ ಆಗಿರುತ್ತದೆ. ಅಲ್ಲದೆ ಪ್ರಜೆಗಳಲ್ಲೂ ಅನೇಕರು ಇದಕ್ಕೆ ಸಂಮತಿಸಿರುತ್ತಾರೆ. ಪ್ರಜಾಪ್ರತಿನಿಧಿ ಸಭೆಯಲ್ಲೂ ನಿಯಮನಿರ್ಮಾಣ ಸಭೆಯಲ್ಲೂ ಕೂಡ ಇದರ ಚರ್ಚೆಯು ಬಂದು ಅನುಕೂಲ ಪ್ರತಿಕೂಲ ಮತಗಳೆರಡೂ ವ್ಯಕ್ತವಾಗಿರುತ್ತವೆ. ಆದರೆ ಇದರ ಪರ್ಯವಸಾನವನ್ನು ಬೇಗನೆ ತೀಲಿಸಲು ತಕ್ಕ ದಾರಿಯನ್ನು ಸರ್ಕಾರದವರು ಹಾಕಲಿಲ್ಲ. ಡಿಸ್ಟ್ರಿಕ್ಟ್‌ಬೋರ್ಡುಗಳ ಅಭಿಪ್ರಾಯವೇನೆಂಬುದನ್ನು ತಿಳಿಯಬೇಕೆಂದು ಅಪ್ಪಣೆಮಾಡಿ ನೆನೆಹಾಕಿಬಿಟ್ಟರು. ಇದು ಹೋಗದ ಊರಿಗೆ ದಾರಿತೋರಿಸುವುದಕ್ಕೆ ಸಮನಾದ ಅಪ್ಪಣೆಯೆಂದು ಆಗಲೇ ಅನೇಕರು ಭಾವಿಸಿದ್ದರು. ಇಂಥ ವಿಷಯವನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹಾಕುವುದೇ ತಪ್ಪೆಂದು ನಾವು ದೃಷ್ಟಾಂತಪೂರ್ವಕವಾಗಿ ಕಳೆದವರ್ಷದ ಅಕ್ಟೋಬರ್ ತಾ|| ೩೦ ರ ಸ್ಟಾರ್ ಪತ್ರಿಕೆಯಲ್ಲಿ ಬರೆದಿರುತ್ತೇವೆ. ಹೇಗಾದರೂ ಮಾಡಿ ಮೆಮೊರಾಂಡಮನ್ನು ವ್ಯವಹಾರಕ್ಕೆ ಬರುವಂತೆ ಮಾಡಿ ಜನಸಾಮಾನ್ಯದ ವಿದ್ಯಾಭ್ಯಾಸವನ್ನು ಬಲಪಡಿಸಬೇಕೆಂಬ ಅಕ್ಕರೆಯು ತ್ರಿಕರಣಪೂರ್ವಕವಾಗುಳ್ಳ ಅಧಿಕಾರಿಗಳೇ ಆಗಲಿ ಸ್ವತಂತ್ರಪ್ರಜೆಗಳೇ ಆಗಲಿ ರೂಪಾಯಿಗೆ ೧ ಆಣೆಯಷ್ಟು ಸಾಮಾನ್ಯವಾದ ಕಂದಾಯವನ್ನು ವಿಧಿಸುವುದಕ್ಕೂ ತೆರುವುದಕ್ಕೂ ಹಿಂದೆಮುಂದೆ ನೋಡಲಾರರು. “ರೂಪಾಯಿಗೆ ೧ ಆಣೆಯಲ್ಲ. ೨-೩ ಆಣೆಯಂತೆಯಾದರೂ ವಿಧಿಸಿಕೊಳ್ಳಿ, ಮುಖ್ಯವಾಗಿ ನಮ್ಮ ಗ್ರಾಮಾಂತರದ ಮಕ್ಕಳುಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ಮಾಡಿಕೊಡಿ” ಎಂದು ಪ್ರಜಾಪ್ರತಿನಿಧಿ ಸಭೆಯಲ್ಲೇ ಕೆಲಸಭಿಕರು ವಾದಿಸಿದರು. ಆದರೆ ಮೆಮೊರಾಂಡಂ ವ್ಯವಹಾರಕ್ಕೆ ಬಂದರೆ ಗ್ರಾಮಾಂತರದವರಿಗೆಲ್ಲಾ ವಿದ್ಯೆ ಹೆಚ್ಚುವುದೆಂಬ ಅಸೂಯೆಯಿಂದಲೋ ಏನೋ ಮೊದಲಿಂದಲೂ ಕೆಲವರು ಅದಕ್ಕೆ ಪ್ರತಿಭಟಿಸುವವರು ಇದ್ದೇ ಇದ್ದಾರೆ. ಅದನ್ನು ಸರ್ಕಾರವು ಪ್ಯಾಸ್ ಮಾಡದಂತೆ ಮಾಡಬೇಕೆಂದು ವಿಶ್ವಪ್ರಯತ್ನವನ್ನು ಕೂಡ ಮಾಡಿದರು. ಆದರೆ ಅದೊಂದೂ ಫಲವಾಗಲಿಲ್ಲ. ಹಣವೊದಗದ ಕಾರಣದಿಂದ ಅದು ವ್ಯವಹಾರಕ್ಕೆ ಬರದಂತೆ ಆಗಿಹೋದರಾದರೂ ತಮ್ಮ ಇಷ್ಟವು ನೆರವೇರಿದಂತಾಗುವುದೆಂಬುದು ಅಂಥವರ ನಿರೀಕ್ಷಣೆಯಾಗಿದೆ. ಅಂಥ ಮಹನೀಯರು ಅರಿಯದ ರೈತರ ಮುಂದೆ ಈ ಸಮಯದಲ್ಲಿ “ಈಗ ನಿಮ್ಮ ಮೇಲೆ ಬಿದ್ದಿರುವ ತೆರುಗೆಯೇ ಹೆಚ್ಚಾಗಿರುವಾಗ ಇನ್ನೊಂದು ವಿದ್ಯಾಭ್ಯಾಸದ ತೆರುಗೆಯನ್ನು ಹಾಕುವರಂತೆ” ಎಂದು ಹೇಳಿ ಬೆದರಿಕೆ ಹಾಕಿ ಅವರುಗಳಿಗೇನೋ ಹಿತವನ್ನು ಮಾಡುವವರಂತೆ ನಟಿಸಿ, ತಮ್ಮ ಅಂತರುದ್ದೇಶವನ್ನು ಸಾಧಿಸಿಕೊಳ್ಳುವರು. “ಮಗುವೇ ಔಷಧವು ಕಹಿಯಾಗಿದೆ; ನೀನು ಕುಡಿಯುತ್ತೀಯೇನಪ್ಪಾ?” ಎಂದು ವೈದ್ಯನು ಕೇಳುವುದಕ್ಕುಪಕ್ರಮಿಸಿದರೆ ಮಕ್ಕಳು ಅದನ್ನು ಕುಡಿಯುವುದುಂಟೆ? ಉಚಿತಬಲಾತ್ಕಾರ ಶಾಸನಪ್ರಯೋಗದಿಂದಲೂ ಕೂಡ ವಿದ್ಯೆಯ ಕಡೆಗೆ ಗಮನ ಕೊಡದಿರುವ ಜನರು ಅದಕ್ಕಾಗಿ ಒಂದಿಷ್ಟು ದುಡ್ಡನ್ನು ತೆರಬೇಕೆಂದು ಕೇಳಿದರೆ ಸಂತೋಷದಿಂದ ಒಪ್ಪಿಕೊಳ್ಳುವುದುಂಟೆ? ಭಾರತಪ್ರಭುತ್ವದವರು ೩೦ ಕೋಟಿ ಹಣವನ್ನು ಹುಟ್ಟಿಸಿಕೊಳ್ಳಲಿಕ್ಕೆ ಹೊಸ ಕಂದಾಯವನ್ನು ವಿಧಿಸುವಾಗ ನಿಯಮನಿರ್ಮಾಣಸಭೆ ಸ್ಟೇಟ್ ಕೌನ್ಸಿಲುಗಳ ಹೊರತು ಇನ್ನಾರ ಅಭಿಪ್ರಾಯವನ್ನೂ ಕೇಳಬೇಕೆಂದು ಕುಳಿತುಕೊಳ್ಳಲಿಲ್ಲ. ನಮ್ಮ ಸರ್ಕಾರದವರು ಎಲ್ಲೋ ೮-೧೦ ಲಕ್ಷ ರೂ.ಗಳನ್ನು ಅಲ್ಪವಾದ ತೆರುಗೆಯ ಮೂಲಕ ಉತ್ಪತ್ತಿ ಮಾಡಿಕೊಳ್ಳುವ ಕೆಲಸಕ್ಕೆ ಅನುಮತಿ ಕೊಡಲು ಪ್ರಜಾಪ್ರತಿನಿಧಿಸಭೆ ಶಾಸನಸಭೆಗಳು ಅಪ್ರಯೋಜಕಗಳೆಂದು ಭಾವಿಸಿಯೋ ಅಥವಾ ಅವಕ್ಕೆ ನಿಜವಾದ ಪ್ರಜಾಪ್ರತಿನಿಧಿತ್ವವಿಲ್ಲವೆಂದು ಯೋಚಿಸಿಯೋ ಡಿಸ್ಟ್ರಿಕ್ಟುಬೋರ್ಡುಗಳಿಗೆ ಪ್ರಾಧಾನ್ಯ ಕೊಟ್ಟು ಅಲ್ಲಿಗೆ ನೂಕಿಬಿಟ್ಟರು. ಇದರಿಂದ ಈ ಸೆಸ್ಸನ್ನು ವಿಧಿಸಲಿಕ್ಕೆ ಅವಕಾಶವಾಗಬಾರದೆಂಬ ಅಂತರುದ್ದೇಶವನ್ನಿಟ್ಟುಕೊಂಡಿದ್ದವರೇ ಇಂಥ ಅಪ್ಪಣೆಗೆ ಮೂಲಭೂತರಾದವರೆಂದು ಭಾವಿಸಬೇಕಾಗಿರುವುದಲ್ಲದೆ ಈ ಚರ್ಯೆಯಿಂದ ಪ್ರಜಾಪ್ರತಿನಿಧಿ ಸಭೆಯ ನಿರತಿಶಯವಾದ ಘನತೆಗೆ ಅವರು ಕುಂದನ್ನು ತಂದಂತೆಯೂ ಆಯಿತು. ಅಲ್ಲದೆ ಎಲ್ಲ ತಾಲ್ಲೂಕುಬೋರ್ಡುಗಳಿಂದಲೂ ಪ್ರತಿನಿಧಿಗಳಾಗಿ ಬಂದವರು ಪ್ರಜಾಪ್ರತಿನಿಧಿ ಸಭೆಯಲ್ಲಿರುವಾಗ ಇಲ್ಲಿಯವರ ಅಭಿಪ್ರಾಯವು ಬೋರ್ಡುಗಳ ಅಭಿಪ್ರಾಯವಲ್ಲವೆಂದು ಸರ್ಕಾರವು ನೆನಸಿಕೊಂಡಿತೆಂದು ಇತರರು ಸಂಭಾವಿಸಲೂ ಅವಕಾಶಕೊಟ್ಟಂತಾಯಿತು.

ಕಡೆಗೇನು? ಪ್ರತಿ ಡಿಸ್ಟ್ರಿಕ್ಟಿನಲ್ಲೂ ಮುಖ್ಯಾಂಶಭಾಗದಷ್ಟು ಬೋರ್ಡುಗಳ ಅಭಿಪ್ರಾಯವು ಅನುಕೂಲವಾಗಿ ಬಂದರೆ ಈ ಸೆಸ್ಸನ್ನು ವಿಧಿಸುವುದೆಂದು ನಿರ್ಧರವಾಗಿರುವುದು. ಡಿಸ್ಟ್ರಿಕ್ಟುಬೋರ್ಡುಗಳಲ್ಲಿ ಈ ವಿಷಯಕ್ಕೆ ಅನುಕೂಲಾಭಿಪ್ರಾಯಗಳು ಬರುವಂತೆ ಮಾಡಲು ಅವಕಾಶ ಕೊಡುವಷ್ಟು ಮೂಢಜನರು ವಿದ್ಯಾಧಿಕಜನರಲ್ಲಿರುವುದುಂಟೆ? ಬೋರ್ಡುಗಳ ಪರ್ಯವಸಾನಕ್ಕೆ ಮೊದಲನೆ ದೃಷ್ಟಾಂತವನ್ನು ಹಾಸನ ಡಿಸ್ಟ್ರಿಕ್ಟು ಆಗಲೇ ತೋರಿಸಿಕೊಟ್ಟಿರುತ್ತದೆ. ೩ ತಾಲ್ಲೂಕುಬೋರ್ಡುಗಳು ಆಗಬಹುದೆಂದು ಹೇಳುವುದರೊಳಗಾಗಿ ೫ ಬೋರ್ಡುಗಳು ಕೂಡದೆಂದು ಹೇಳಿಬಿಟ್ಟುವಂತೆ! ಅನುಮೋದನ ಕೊಟ್ಟ ೩ ಬೋರ್ಡುಗಳವರಿಗೆ ಮ|| ಎಚ್. ಬಸವೇಗೌಡರು ವಂದನೆಯನ್ನು ಸಭೆಯಲ್ಲಿ ತಿಳಿಸಿದ ಬಳಿಕ ಕೂಡದೆಂದು ವಿರೋಧಿಸಿದ ೫ ಬೋರ್ಡುಗಳಿಗೆ ಮ|| ರಾಮಸ್ವಾಮಯ್ಯಂಗಾರರೆಂಬುವರು ವಂದನೆಯನ್ನು ಒಪ್ಪಿಸಿದರಂತೆ! ಪ್ರತಿರೋಧಕಸಾಮಗ್ರಿಯು ಎಲ್ಲಿದೆಯೆಂಬುದನ್ನು ಇದರಿಂದ ಚೆನ್ನಾಗಿ ತಿಳಿದುಕೊಳ್ಳಬಹುದು. ಮುಖ್ಯವಾಗಿ ಹಳ್ಳಿಗಾಡಜನರ ದೌರ್ಭಾಗ್ಯಕ್ಕೆ ಇನ್ನೂ ಅಳಿಗಾಲವು ಬಂದಿಲ್ಲ. ಅವರು ದಡ್ಡರಾಗಿಯೇ ಇದ್ದರೆ ತಮ್ಮ ಫಲಪ್ರಾಪ್ತಿಗನುಕೂಲವೆಂದು ಕಾದಿರುವವರ ದಶೆಗೂ ಅಳಿಗಾಲವಿಲ್ಲ. ಉಳಿದ ಬೋರ್ಡುಗಳಲ್ಲೆಲ್ಲಾ ಬಹುಶಃ ಇದೇ ತೆರದ ಪರ್ಯವಸಾನವೇ ತೋರಿಬಂದರೂ ಆಶ್ಚರ್ಯಪಡಬೇಕಾದುದಿಲ್ಲ. ಈ ಫಲಪ್ರಾಪ್ತಿಯೇ ಈ ಸಂಬಂಧವಾದ ಸರ್ಕಾರಿ ಅಪ್ಪಣೆಗೆ ಉದ್ದೇಶವಾಗಿದ್ದರೆ ಅವರೇ ತೃಪ್ತಿಪಡಲಿ. ಇನ್ನಾವ ಭಾಗದಿಂದಲಾದರೂ ಕಡೆಗೆ ಪ್ರೌಢವಿದ್ಯಾಭಾಗದ ವೆಚ್ಚವನ್ನು ಕಡಿಮೆ ಹಾಕಿಯಾದರೂ ಮೆಮೊರಾಂಡಮ್ಮನ್ನು ವ್ಯವಹಾರಕ್ಕೆ ತರುವಂತೆ ಸರ್ಕಾರವು ಮಾಡಿಕೊಡಲಿ. ಅದೇ ಹಿಂದುಳಿದವರ ಕೋರಿಕೆಯು.

SIR M. KANTARAJ URS'S ILLNESS.

The news of the recent illness of our popular Dewan, Sir M. Kantaraj Urs will have caused much anxiety in the minds of the people of our State. Their anxiety would have become all the greater owing to the exaggerated and disquieting rumours spread through some local and outside journals. A writer in the *Hindu* of Madras styling himself "an occasional correspondent" even stated that the medical opinion was that the Dewan would never be able to take up the reigns of the high office once again. There could be nothing more deprecatory than an irresponsible statement like this. We are in a position to deny this statement altogether. We are credibly informed that the illness is after all not so serious as was sought to be made out, and that with some rest he would regain his health completely. When one sees how hard, onerous and trying the Dewan's task has been during these critical years, what efforts he had to make in order to reclaim the State from the ruinous policies inagurated during the previous *regime* and establish a sense of proportion in the administration and, what is more, to push through two of the most popular measures of reform in Education and Public Service and all this in face of an opposition of a most clamourous and objectionable kind by a section of the Press and the Public, one can easily see that the strain was heavy enough to tell upon the health of even the strongest constitution. But, as we stated, there is nothing that the people need be anxious over, as Sir M. Kantaraj Urs is reported to be improving rapidly. We would assure the Dewan that the fervent wishes of the people of Mysore are with him for his speedy restoration to perfect health, so that he may assume active work of the administration. If rest is needed we hope he will not deny himself that, and coming back after the rest doubly strong he would be all the better fit for his heavy task.

THE FINANCES.

The Indian Patriots are everywhere troubled with two things i.e. a surplus of non-co-operation and a deficit in Budget, the former bringing forth riots, murders etc., and the latter new taxes—no part of India is free from this trouble not even Indian States into which British form of efficiency in the persons of high paid officials of un-sympathetic attitudes is introduced, such as our State. The Budget speeches so far from the one of Government of India to those of the British Provinces are a series of mourning stories, some of which are traced to the movement of non-co-operation giving rise to new and extra expenditure. The leading journals, whether Anglo Indian, Moderate Indian, or Extremist Indian, have all sung one kind of chorus about the Budget of the Government of India. The Statesman calls it "A veritable calamity Budget," "The Englishman characterises it as "A budget depressing in the extreme with no silver line anywhere." The Bengali describes it as "A dismal Budget, a tale of remarkable bankruptcy, a tale of deepest financial tragedy."

The question of finances has at all times been one of considerable importance. As Sir C. G. Todhunter has pointed out in his preface to his Budget speech in the Madras Legislative Council, even in the third century before Christ, Kautilya said "All undertakings depend upon Finances." What of the Finances in these days of complex conflicts? Many they are, and the wisdom consists in the people co-operating with the authorities in solving the problem. The better course in this is—as the Advocate of India has observed—instead of increasing revenue to meet expenditure, the expenditure itself ought to be cut down.

We have, in these early budgets of the British Indian Provinces, seen huge deficits and this makes us think of our own budget coming up in a few months. There are already whispers in all quarters that our position is similarly a tragic one and that about 40 lakhs of rupees would be wanting to balance the huge expenditure. New taxes are of course out of question. The only wise course would be to cut down expenditure which with the introduction of the new Departments has grown altogether out of proportions. The D. P. W., the Railways, the Departments of Industries and Agriculture, the Secretariat and the Comptroller's Office, the Department of Mines and Geology have rapidly swelled out of all proportion and consume a very large proportion of revenue without due return. At a distressing time like the present, these are the departments which alone could afford relief without retrenching on the efficiency of administration as a whole. The old departments which are the backbone of administration should remain without interference—more especially the Judicial, Education, Medical and Sanitary Departments.

The root cause of the trouble is in the witchery departments of new birth and new development—in the departments of luxury and pomp which might be revived when money becomes plenty. We do not propose to deal with the details of retrenchments as they are being dealt with by the most competent Chairman of the new Finance Committee, who holds the retrenchment scissors in firm hands of mature experience guided by a cool head and strong common sense. But one word we venture to suggest and that is "Immediate." Protracted action is no good. In that lengthy and weary travel, influences come in and spoil the sport of retrenchment game. If the action is "immediate," the result will be talismanic. We have no doubt that the Committee will earn the lasting gratitude of the people of Mysore by enabling the Government of Mysore to present a Budget which is sound and safe and at the same time free from tragic influences—no touch of new taxes, but all efficient shearing of offices and establishments involving heavy and unnecessary expenditure. We eagerly look forward to hear no lamentable tale in connection with the Mysore Budget but to hear of a budget wise and thoughtful—good and beneficent.

ಒಳದೇಶದ ವೃತ್ತಾಂತಗಳು.

ಮೈಸೂರು ಡಿಸ್ಟ್ರಿಕ್ಟ್ ಕೋಆಪರೇಟಿವ್ ಕಾನ್ಫರೆನ್ಸು ಈ ತಾ|| ೨೭ರಲ್ಲಿ ರಾಜಧಾನಿಯಲ್ಲಿ ನಡಿಯುವುದು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಕಾನ್ಫರೆನ್ಸು ಈ ತಾ|| ೨೨ರಿಂದ ೨೪ ವರೆಗೆ ಹುಹುರದಲ್ಲಿ ಡೆ|| ಕಮಿಷನರ ಅಧ್ಯಕ್ಷತೆಯಲ್ಲಿ ಜರಗುವುದು.

ಅಸಿಸ್ಟೆಂಟ್ ಕಮಿಷನರ್ ಮ|| ಎ. ಕೃಷ್ಣಸ್ವಾಮಿಅಯ್ಯರ್‌ರವರು ೨ನೆ ತರಗತಿಯಿಂದ ೧ನೆ ತರಗತಿಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳೂ ವಿದ್ಯಾಶಾಲೆಗಳೂ ಬರುವ ಮೇ ತಾ|| ೨೪ ರ ದಿವಸ ‘ಎಂಪೈರ್‌ಡೆ’ ಉದ್ದೇಶದಿಂದ ಮುಚ್ಚಲ್ಪಡುವುವಾಗಿ ಸರ್ಕಾರದಪ್ಪಣೆಯಾಗಿದೆ.

ಮಂಡ್ಯದ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ಜಿ. ಮಲ್ಲಿಕಾರ್ಜುನಯ್ಯನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖಿನಿಂದ ೧೫ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಸರ್ಕಾರಿಯುದ್ಯೋಗದಲ್ಲಿರುವ ಮಹಮ್ಮದೀಯರಿಗೆ ಪ್ರತಿ ಶುಕ್ರವಾರದ ದಿವಸ ನಮಾಜ್ ಮಾಡಲು ೧೨|| ಯಿಂದ ಮಧ್ಯಾಹ್ನ ೧|| ಗಂಟೆವರೆಗೆ ವ್ಯವಧಾನಕೊಡತಕ್ಕದಾಗಿ ಅಪ್ಪಣೆಮಾಡಲ್ಪಟ್ಟಿದೆ.

ಮೈಸೂರು ನಾಗಮಂಗಲ ತಾಲ್ಲೂಕು ಕಾನ್ಫರೆನ್ಸು ಕಳೆದ ತಾ|| ೮ ರಲ್ಲಿ ಜರುಗಿತು. ಮತ್ತು ಚಾಮರಾಜನಗರದ ತಾಲ್ಲೂಕು ಕಾನ್ಫರೆನ್ಸು ಈ ತಾ|| ೧೫ ರಲ್ಲಿ ನಂಜನಗೂಡು ಸಬ್‌ಡಿವಿಜನ್ ಆಫೀಸರ ಅಧ್ಯಕ್ಷತೆಯಲ್ಲಿ ನಡಿಯುವುದು.

ಪೊಲೀಸು ಸೂಪರಿಂಟೆಂಡೆಂಟರುಗಳಾದ ಮ|| ಸಿ. ಮಾಚಯ್ಯ, ಬಿ.ಎ., ಯವರು ಚಿನ್ನದಗಣಿಯಿಂದ ಮಿ|| ವಿಚರ್ಡ್‌ರವರು ಬಂದಮೇಲೆ ಕೋಲಾರ ಡಿಸ್ಟ್ರಿಕ್ಟಿಗೂ, ಮ|| ಸಿ. ಲಕ್ಷ್ಮಣರಾವ್, ಬಿ.ಎ., ಬಿ.ಎಲ್., ರವರು ಕೋಲಾರ ಡಿ|| ಇಂದ ತುಮಕೂರು ಡಿ|| ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ನೂರಡಿ ರಸ್ತೆಯಲ್ಲಿ ಅಂಬಳೆಅಣ್ಣಯ್ಯಪಂಡಿತರ ಬಾಲಿಕಾಪಾಠಶಾಲೆಯ ನೆರೆವಾಸಸ್ಥನಾದ ಗೊಲ್ಲರ ರಾಮಯ್ಯನೆಂಬುವನ ಹೆಂಡತಿಯು ತನ್ನ ೭ ವರ್ಷದ ಮಗನು ರೋಗಗ್ರಸ್ತನಾಗಿದ್ದು ವಿಧಿವಶನಾಗಲು ತಾಯಿಯು ಪುತ್ರವಿಯೋಗದುಃಖವನ್ನು ಸಹಿಸಲಾರದೆ ಬಾವಿಯೊಳಗೆ ಬಿದ್ದು ಪ್ರಾಣವನ್ನು ಕಳೆದುಕೊಂಡಳಂತೆ.

ಮುಜರಾಯಿ ಸೂಪರಿಂಟೆಂಡೆಂಟರಾದ ಮ|| ಟಿ. ಇ. ಜಯರಾಮಯ್ಯರ್, ಬಿ.ಎ., ಬಿ.ಎಲ್., ರವರಿಗೆ ಬರುವ ಏಪ್ರಿಲ್ ತಾ|| ೩ ರಿಂದ ಅಥವಾ ಅವರುಪಯೋಗಿಸುವ ದಿನದಿಂದ ೩ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ರೆವಿನ್ಯೂಶಾಖಾ ಸೆಕ್ರೆಟರಿಯವರು ತಮ್ಮ ಕೆಲಸದೊಡನೆ ಮುಜರಾಯಿ ಸೂಪರಿಂಟೆಂಡೆಂಟರ ಕೆಲಸವನ್ನು ನೋಡತಕ್ಕದಾಗಿ ಅಪ್ಪಣೆಯಾಗಿದೆ.

ಬರುವ ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಆರಿಸಲ್ಪಡಲು ಮತ್ತು ಮೆಂಬರುಗಳಿಗೆ ವೋಟನ್ನು ಕೊಡಲು ಕೋಲಾರ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಅರ್ಹರಾಗಿರತಕ್ಕವರ ಹೆಸರುಗಳು ಈ ತಾ|| ೯ ರ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾ

ಗಿವೆ. ಇದರಲ್ಲಿ ಅರ್ಹರಾದವರ ಹೆಸರು ಬಿಟ್ಟುಹೋಗಿದ್ದಲ್ಲಿ ಅಂತಹವರು ಕೂಡಲೆ ಆ ಡಿಸ್ಟ್ರಿಕ್ಟಿನ ಡೆ|| ಕಮಿಷನರಿಗೆ ಬರೆದುಕೊಳ್ಳತಕ್ಕದು.

ಹಾಸನದ ಡಿ|| ಪೊಲೀಸ್ ಸೂಪರಿಂಟೆಂಡೆಂಟರಾದ ಮಿ|| ಎಂ. ಅಬ್ದುಲ್‌ಹಕ್, ಬಿ. ಎ., ಯವರಿಗೆ ಈ ತಾ|| ೫ ರಿಂದ ಅಥವಾ ಅವರುಪಯೋಗಿಸಿಕೊಳ್ಳುವ ದಿನದಿಂದ ೧೫ ದಿನಗಳ ರಜವು ಕೊಡಲ್ಪಟ್ಟಿರುವುದರಿಂದ ಅವರು ಬರುವವರೆಗೆ ಪ್ರ|| ಅ|| ಕಮಿಷನರ್ ಮ|| ಪಿ. ಸೂರ್ಯನಾರಾಯಣಸೆಟ್ಟಿ, ಬಿ.ಎ., ಎಲ್.ಎಲ್.ಬಿ. ಯವರು ಡೆ|| ಪೊಲೀಸ್ ಸೂಪರಿಂಟೆಂಡೆಂಟ್ ಉದ್ಯೋಗವನ್ನೋಡಿಕೊಳ್ಳಲು ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಲಷ್ಕರ್‌ಮಹಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳಾದ ಮ|| ಬಿ. ಬಸವಾರಾಧ್ಯರು, ಮಿ|| ಮಹಮುದ್ ಸೇಟರು, ಮ|| ಧನಕೋಟಿಶೆಟ್ಟರು ಮತ್ತು ಮ|| ವೈ. ಏರೂಪಾಕ್ಷಯ್ಯನವರು ಕಳೆದ ಭಾನುವಾರ ಮ್ಯು|| ಕಲೆಕ್ಟರು, ಶೇಕದಾರರು ಮತ್ತು ಮುತ್ಸದ್ದಿಗಳೊಡನೆ ತಮ್ಮ ಮಹಲ್ಲಾದಲ್ಲಿ ಹೊಸದಾಗಿ ಕಂದಾಯವನ್ನು ಹಾಕಿರುವ ಕೆಲ ಮನೆಗಳನ್ನು ಪರೀಕ್ಷಿಸಿ ಅವುಗಳ ಯೋಗ್ಯತಾನುಸಾರ ಹೆಚ್ಚುಕಡಿಮೆಯನ್ನು ಮಾಡಿದುದಲ್ಲದೆ ಯಾವ್ಯಾವ ಸ್ಥಲದಲ್ಲಿ ಶುಚೀಕರ್ಣವು ಎಷ್ಟರಮಟ್ಟಿಗೆ ನಡೆಯುತ್ತಿದೆಯೆಂಬುದನ್ನೂ ಜನರಿಗೆ ಯಾವ ವಿಚಾರದಲ್ಲಿ ತೊಂದರೆಯಿರುತ್ತದೆಂಬುದನ್ನೂ ಕೇಳಿ ತಿಳಿದುಕೊಂಡು ಬಂದರೆಂದೂ, ಇದರಿಂದ ಕಂದಾಯವನ್ನು ಕೊಡುವ ಜನರಿಗೆ ಎಷ್ಟೋ ಸಂತೋಷವಾಯಿತೆಂದೂ, ಇದೇ ರೀತಿ ಇತರ ಮಹಲ್ಲೆಗಳ ಮ್ಯು|| ಕೌನ್ಸಿಲರುಗಳು ವಾರಕ್ಕೊಂದಾವರ್ತಿ ವಿರಾಮ ಮಾಡಿಕೊಂಡು ತಂತಮ್ಮ ಸರಹದ್ದುಗಳಲ್ಲಿ ಸಂಚರಿಸಿ ಜನರ ಕುಂದುಕೊರತೆಗಳ ಭಾಗಗಳನ್ನು ವಿಚಾರಿಸಿ ಅನುಕೂಲಪಡಿಸಿಕೊಡಲು ಪ್ರಯತ್ನಿಸಿದಲ್ಲಿ ಜನರಿಗೆ ಮಹೋಪಕಾರ ಮಾಡಿದಂತಾಗುತ್ತದೆಂದೂ ಒಬ್ಬ ನಗರವಾಸಿಗಳು ಬರೆದಿರುತ್ತಾರೆ.

ಮೈಸೂರು ಪೇಟ್ರಿಯಟ್ ಮತ್ತು ಸಂಪದಭ್ಯುದಯ ಪತ್ರಿಕೆಗಳಲ್ಲಿ ರಾಜದ್ರೋಹಕಾರಕವಾದ ಲೇಖನಗಳು ಬರೆಯಲ್ಪಟ್ಟಿದ್ದುವೆಂಬ ಅಪರಾಧದಮೇಲೆ ಈ ಪತ್ರಿಕೆಗಳ ಸಂಪಾದಕರಾದ ಮ|| ಎಂ. ವೆಂಕಟಕೃಷ್ಣಯ್ಯನವರು ಬೆಂಗಳೂರಲ್ಲಿ ಚೀಫ್‌ಜಡ್ಜ್ ಸರ್ ಎಲ್. ಮಿಲ್ಲರ್‌ರವರಿಂದ ನೆನ್ನೆಯದಿನ ವಿಚಾರಿಸಲ್ಪಡತಕ್ಕವರಾಗಿದ್ದರು. ಇವರಪರ ವಕೀಲಿಯನ್ನು ಮದ್ರಾಸ್ ಅಡ್ವೋಕೇಟ್ ಜನರಲ್ಲಾಗಿದ್ದ ದಿ|| ಬ|| ಕೃಷ್ಣಸ್ವಾಮಯ್ಯಂಗಾರ್ ಸಿ.ಐ.ಇ. ಯವರು ವಹಿಸಿರುವರು. ಈ ವಿವಾದವನ್ನು ನಡಿಸುವುದರ ವೆಚ್ಚಕ್ಕಾಗಿ ಮ|| ವೆಂಕಟಕೃಷ್ಣಯ್ಯನವರ ಹಿತೈಷಿಗಳೆಲ್ಲರೂ ದ್ರವ್ಯಸಹಾಯ ಮಾಡಬೇಕೆಂದು ಮ|| ಸೆಟ್ಲೂರ್‌ರವರು ಹಿಂದೂಪತ್ರಿಕೆಯ ಮೂಲಕ ಪ್ರಾರ್ಥಿಸಿಕೊಂಡಿರುತ್ತಾರೆ. ಮ|| ವೆಂಕಟಕೃಷ್ಣಯ್ಯನವರಿಗೆ ಶ್ರೀಮತ್ ಮಹಾರಾಜರವರ ಕೃಪೆಯಿಂದ ಸಲ್ಲುತ್ತಿದ್ದ ೫೦ ರೂ. ಮಾಸಾಶನವು ಈ ಸಂದರ್ಭದಲ್ಲಿ ನಿಲ್ಲಿಸಲ್ಪಟ್ಟಿರುವುದಾಗಿ ವರ್ತಮಾನವಿದೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗು ಕಳೆದ ತಾ|| ೧೦ ರ ಸಾಯಂಕಾಲ ಟೌನ್‌ಹಾಲಿನಲ್ಲಿ ನಡೆದು ಹೋದವರ್ಷ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಮ್ಯುನಿಸಿಪಾಲಿಟಿಯಿಂದ ಹೋಗಿದ್ದ ಮ|| ಗಳಾದ ಧರ್ಮಪ್ರಕಾಶ ಬನುಮಯ್ಯನವರು, ಎಂ. ಮಾದಪ್ಪನವರು, ಸೆಟ್ಟಪ್ಪ ಸಿದ್ದಪ್ಪನವರು ಮತ್ತು ಸೆಟ್ಟಾಚಿರಾಯರು— ಈ ನಾಲ್ವರು ವರ್ಧಂತಿ ಮಹೋತ್ಸವಕಾಲದಲ್ಲಿ ನಡಿಯುವ ಪ್ರಜಾಪ್ರತಿನಿಧಿ ಸಭೆಗೆ ಹೋಗತಕ್ಕದೆಂದು ಗೊತ್ತುಮಾಡಿದುದಲ್ಲದೆ, ರಾಜಧಾನಿಯ ಲಷ್ಕರ್ ಮೊಹಲ್ಲಾದಲ್ಲಿರುವ [illegible]ಗೆರೆ ಮೊದಲಾದ ಎತ್ತರವಾದ ಪ್ರದೇಶಗಳಲ್ಲಿ ಈಗಿರುವ ನಲ್ಲಿಗಳಲ್ಲಿ ನೀರು ಹತ್ತದೆ ಜನರಿಗೆ ಬಹಳ ತೊಂದರೆಯಾಗಿರುವ ಪ್ರಯುಕ್ತ ಹೈಪ್ರಷರ್‌ನಿಂದ ನೀರುಹತ್ತುವ ಏರ್ಪಾಟು ಮಾಡಿಸಿಕೊಡಬೇಕು, ಮತ್ತು ಬಹಳಜನ ವಾಸವಾಗಿರುವಕಡೆ ನೀರಿನ ನಲ್ಲಿ-ಕೊಳಾಯಿಗಳನ್ನಿಡಿಸಿಕೊಡಬೇಕು; ಈಗ ಟ್ರಸ್ಟ್‌ಬೋರ್ಡೂ ಮ್ಯುನಿಸಿಪಾಲಿಟಿಯೂ ಬೇರೆಬೇರೆ ಇಲಾಖೆಗಳಾಗಿರುವುದನ್ನು ತಪ್ಪಿಸಿ ಟ್ರಸ್ಟ್‌ಬೋರ್ಡನ್ನು ಮ್ಯುನಿಸಿಪಾಲಿಟಿಗೆ ಸೇರಿಸಿಕೊಡಬೇಕು; ಅನರರಿ ಪ್ರೆಸಿಡೆಂಟರಿಗೂ ವೈಸ್‌ಪ್ರೆಸಿಡೆಂಟರಿಗೂ ಎಕ್ಸ್‌ಕ್ಯುಟಿವ್ ಅಧಿಕಾರವಿರುವುದರಿಂದ ಚೀಫ್‌ಆಫೀಸರ ಸ್ಥಾನವನ್ನು ತಪ್ಪಿಸಿ ಖರ್ಚು ಕಡಿಮೆಯಾಗುವಂತೆ ಮಾಡಿಸಬೇಕು; ವಿದ್ಯುಚ್ಛಕ್ತಿಯ ದೀಪದ ಛಾರ್ಜು ದುಬಾರಿಯಾಗಿರುವುದರಿಂದ ಮದ್ರಾಸು ಬೊಂಬಾಯಿ ಮೊದಲಾದ ಪಟ್ಟಣಗಳಲ್ಲಿರುವಂತೆ ಪ್ರತಿಯೊಂದು ಲೈಟಿಗೂ ಛಾರ್ಜುಮಾಡದೆ ಒಟ್ಟು ಮಿನಿಮಂ ಛಾರ್ಜನ್ನು ಗೊತ್ತುಮಾಡಿ ಹೆಚ್ಚಾಗಿ ಉಪಯೋಗಿಸಿಕೊಂಡುದಕ್ಕೆ ಮೀಟರ್‌ಪ್ರಕಾರ ಛಾರ್ಜುಮಾಡುವಂತೆ ಅನುಕೂಲಪಡಿಸಿಕೊಡಬೇಕು; ರಾಜಧಾನಿಯ ವರ್ತಕರುಗಳಿಗೆ ವ್ಯಾಪಾರಸೌಕರ್ಯಕ್ಕಾಗಿ ಟೆಲಿಫೋನನ್ನು ಇಡಿಸಿಕೊಡಬೇಕು, ಅನೇಕ ವರ್ತಕರು ಇದನ್ನಿಡಿಸಿಕೊಳ್ಳಲು ಸಿದ್ಧರಾಗಿರುವರು; ಮ್ಯುನಿಸಿಪಲ್ ಎಲ್ಲೆಯೊಳಗಿರುವ ಮಾದಕಪದಾರ್ಥದ ಅಂಗಡಿಗಳ ಕಂದಾಯದಲ್ಲಿ ಒಂದು ಭಾಗವು ಮ್ಯುನಿಸಿಪಾಲಿಟಿಗೆ ಸಲ್ಲುವಂತಾಗಬೇಕು; ಆರಿಸಲ್ಪಡುವ ಕೌನ್ಸಿಲರುಗಳ ಸಂಖ್ಯೆಯನ್ನು ೨೦ ರಿಂದ ೨೫ ಕ್ಕೆ ಹೆಚ್ಚಿಸಿಕೊಡಬೇಕು; ಸಿವಿಲ್ ಕೋರ್ಟುಗಳಲ್ಲಿ ದಾವಾ ದಾಖಿಲಾದಾರಭ್ಯ ನಾಲಿಯಾನ ಶೇಕಡ ೬ ರೂಪಾಯಿ ನಂತೆ ಬಡ್ಡಿಯ ದರವನ್ನು ವಿಧಿಸುವರು, ಈಗ ಬ್ಯಾಂಕಿನ ಬಡ್ಡಿಯು ಸಹ ೧೨ ರೂ. ನಂತೆ ಇರುವುದರಿಂದ ವರ್ತಕರುಗ ನಷ್ಟವಾಗದಂತೆ ಶೇಕಡ ೧೨ ರೂ. ನಂತೆ ಬಡ್ಡಿಯ ದರವನ್ನು ವಿಧಿಸುವಹಾಗೆ ಅಪ್ಪಣೆಯಾಗಬೇಕು. ಮತ್ತು ಮೊಕದ್ದಮೆಗಳು ವರ್ಷಗಟ್ಟಲೆ ಫೈಸಲಾಗದೆ ಕಕ್ಷಿಗಾರರಿಗೆ ಹೇಳಲಾರದಷ್ಟು ನಷ್ಟ ಕಷ್ಟಗಳುಂಟಾಗುತ್ತಿರುವುದರಿಂದ, ಬೇರೆ ಸರ್ಕಾರಗಳಲ್ಲಿ ನಡಿಯುವರೀತಿ ೩ ರಿಂದ ೬ ತಿಂಗಳುಗಳೊಳಗಾಗಿ ಫೈಸಲ್ಮಾಡುವಂತೆ ಏರ್ಪಾಟಾಗಬೇಕು; ಆದಾಯದ ತೆರಿಗೆಯನ್ನು ವಿಧಿಸುವಾಗ್ಗೆ ವರ್ತಕರುಗಳಿಗೆ ವ್ಯಾಪಾರಸಂಬಂಧದಲ್ಲಿ ನ್ಯಾಯವಾಗಿ ಮಾಡಬೇಕಾಗಿರುವ ಖರ್ಚನ್ನು ಸಹ ಸೇರಿಸಬೇಕೆಂದೂ, ಗಾಡಿಬಾಡಿಗೆ ಮೊದಲಾದ ಸಣ್ಣಪುಟ್ಟ ಖರ್ಚುಗಳಿಗೆಲ್ಲಾ ವೋಚರುಗಳನ್ನು ತೋರಿಸಬೇಕೆಂದೂ ನಿರ್ಬಂಧಪಡಿಸುತ್ತಾರೆ. ಇದು ಸಾಧ್ಯವಲ್ಲವಾದುದರಿಂದ ಆ ರೀತಿ ನಿರ್ಬಂಧಪಡಿಸದ ಹಾಗೆ ಅಪ್ಪಣೆಯಾಗಬೇಕು. ಇತ್ಯಾದಿ ಸಜ್ಜೆಕ್ಟುಗಳು ಕಳುಹಿಸಿಕೊಡಬೇಕಾಗಿ ನಿರ್ಧರಿಸಲ್ಪಟ್ಟಿತು.

ದಿವಾನ್ ಸರ್ ಕಾಂತರಾಜ ಅರಸಿನವರ ದೇಹಾಲಸ್ಯ.

ಸರ್ ಕಾಂತರಾಜ ಅರಸಿನವರ ಸೋದರಳಿಯಂದರಾದ ಗುಬ್ಬಿ ಸಬ್ ಡಿವಿಜನ್ನಿನ ಅಸಿಸ್ಟೆಂಟ್ ಕಮಿಷನರಾದ ಮ|| ಬಾಳರಾಜಅರಸಿನವರು ಕುದುರೆಸ್ವಾರಿಯಿಂದ ತಮ್ಮ ಪೃಷ್ಠಭಾಗದಲ್ಲಿ ಗಾಯವಾಗಿ ಬಾಧೆಯು ಹೆಚ್ಚಾದುದರ ಮೇಲೆ ರಾಜಧಾನಿಗೆ ದಯಮಾಡಿ ಕೋಟೆಯಲ್ಲಿರುವ ದಿವಾನರ ಮನೆಯಲ್ಲಿಳಿದುಕೊಂಡು ಡಾಕ್ಟರ್ ಅರ್ಮುಗಂ ಮೊದಲಿಯಾರರು ಮತ್ತು ಡಾ|| ರಂಗಾಚಾರ್ಯರುಗಳಿಂದ ಚಿಕಿತ್ಸೆಯನ್ನು ಹೊಂದುತ್ತಿದ್ದರು. ದಿವಾನರು ಇವರನ್ನು ನೋಡುವುದಕ್ಕಾಗಿ ಆದಿವಾರದಲ್ಲಿ ರಾಜಧಾನಿಗೆ ಬೆಂಗಳೂರಿಂದ ದಯಮಾಡಿಸಿ ಮ|| ಬಾಳರಾಜ ಅರಸಿನವರಿಗೆ ಶಸ್ತ್ರಚಿಕಿತ್ಸೆಯಾಗುತ್ತಿದ್ದುದನ್ನು ನೋಡುತ್ತಿರುವಾಗ್ಗೆ ಇವರ ಕಣ್ಣುಗಳು ತಿರುಗಿ ಸ್ಮೃತಿತಪ್ಪಿತು. ಆ ಕೂಡಲೆ ಡಾಕ್ಟರುಗಳ ಔಷಧೋಪಚಾರ ನಡೆದು ಸ್ಮೃತಿಯು ಬಂದನಂತರ ತಮ್ಮ ಜಯಲಕ್ಷ್ಮೀವಿಲಾಸ ಪ್ರಾಸಾದಕ್ಕೆ ತೆರಳಿ ಔಷಧೋಪಚಾರದಿಂದ ಗುಣವನ್ನು ಹೊಂದುತ್ತಿರುವರೆಂದು ತಿಳುಹಲು ಪರಮಾನಂದವಾಗುತ್ತದೆ. ಆದರೆ ಬೆಂಗಳೂರಿನ ಯಾರೋ ಒಬ್ಬ ಸುದ್ದಿದಾಯಕನು ದಿವಾನ್ ಕಾಂತರಾಜ ಅರಸಿನವರಿಗೆ ಲಕವಹೊಡೆದು ಅವರ ದೇಹಸ್ಥಿತಿಯು ಬಹಳ ಅಪಾಯಕರವಾಗಿದೆಯೆಂದೂ, ಮುಂದೆ ಉದ್ಯೋಗವನ್ನು ಮಾಡಲಾಗುವುದಿಲ್ಲವೆಂದು ಡಾಕ್ಟರು ಅಭಿಪ್ರಾಯಪಟ್ಟಿರುತ್ತಾರೆಂದೂ ಈ ಕಾರಣದಿಂದ ಅರಸಿನವರು ಮುಂದೆ ಉದ್ಯೋಗಕ್ಕೆ ಬರುವುದಿಲ್ಲವಾದ ಪ್ರಯುಕ್ತ ಸದ್ಯದಲ್ಲಿ ಮಿ|| ಬಾನರ್ಜಿಯವರು ದಿವಾನಗಿರಿಯನ್ನು ಅನಿತ್ಯವಾಗಿ ನೋಡುತ್ತಿದಾರೆ, ಒಂದು ವೇಳೆ ಇವರು ದಿವಾನರಾಗಿ ನಿಯಮಿಸಲ್ಪಡದಿದ್ದರೆ ಮುಂದೆ ನಿಯಮಿಸಲ್ಪಡಬಹುದಾದವರ ಹೆಸರುಗಳನ್ನೂ ಇದರಿಂದುಂಟಾಗುವ ಕೆಲ ಉದ್ಯೋಗಗಳ ಬದಲಾವಣೆಗಳನ್ನೂ ಸೂಚಿಸಿ ಒಂದು ಲೇಖನವನ್ನು ಬರೆದು ಜನರ ಮನಸ್ಸಿನಲ್ಲಿ ಕಳವಳವನ್ನುಂಟುಮಾಡಿದಾರೆ. ಈ ರೀತಿ ಊಹಿಸಿ ಬರೆಯಲು ಆ ಲೇಖಕರ ಉದ್ದೇಶವೇನಿದ್ದಿತೋ ತಿಳಿಯದು.

ಆದರೆ ಸರ್ ಕಾಂತರಾಜ ಅರಸಿನವರ ದೇಹಸ್ಥಿತಿಯು ಸಂಪೂರ್ಣ ಗುಣಮುಖವಾಗಿ ಉದ್ಯೋಗದ ಮೇಲೆ ಹೋಗುವಂತಿರುವುದಾದರೂ ವೈದ್ಯರು ಅಭಿಪ್ರಾಯಪಟ್ಟಲ್ಲಿ ಸ್ವಲ್ಪಕಾಲ ವಿಶ್ರಮಿಸಿಕೊಳ್ಳುವುದುತ್ತಮವೆಂದು ತೋರುತ್ತದೆ. ಸ್ವದೇಶಹಿತ ಚಿಂತನೆಯಲ್ಲಿ ಮಗ್ನರಾಗಿರುವ ಸರ್ ಕಾಂತರಾಜ ಅರಸಿನವರು ಮೊದಲಿಗಿಂತಲೂ ಅಧಿಕವಾದ ದೇಹದಾರ್ಢ್ಯವನ್ನು ಹೊಂದಿ ವಿಶೇಷ ಉತ್ತರವಾದಿತ್ವವುಳ್ಳ ಮಂತ್ರಿಪದವಿಯನ್ನು ಬಹಳಕಾಲ ನಿರ್ವಹಿಸುವಂತೆ ಆಶೀರ್ವದಿಸಬೇಕೆಂದು ಮೈಸೂರು ದೇಶೀಯರೆಲ್ಲರೂ ಅನನ್ಯಭಾವದಿಂದ ಈಶ್ವರನನ್ನು ಪ್ರಾರ್ಥಿಸುತ್ತಾರೆ.

ತಾಂಬೂಲ ಸೇವನೆ.

ನವಯುಗ ಪತ್ರಿಕೆಗೆ ಈ ಕೆಳಗೆ ಕಂಡ ಲೇಖನವನ್ನು ಒಬ್ಬರು ಬರೆದಿರುತ್ತಾರೆ.—

ದೇಶದ ಉಚ್ಛ್ರಾಯಸ್ಥಿತಿಗೆ ಅಡ್ಡಕಟ್ಟುವ ಸೇಂದಿ, ಶರಾಬು, ಗಾಂಜಾ, ಅಫೀಮು ಮುಂತಾದ ಮಾದಕ ಪದಾರ್ಥಗಳ ಸೇವನೆಯ ದುರಭ್ಯಾಸಗಳನ್ನು ನಿವಾರಿಸಲು ರಾಷ್ಟ್ರಭಕ್ತರು ತಮ್ಮ ತನುಮನ ಧನಗಳನ್ನು ವೆಚ್ಚಮಾಡುತ್ತಿರುವರು. ಜನರ ಸಾಂಪತ್ತಿಕ ಸ್ಥಿತಿಯನ್ನು ಕುಂದಿಸುವ ಹಾಗೂ ದೇಹ ಸುಖವನ್ನು ಕೆಡಿಸುವ ಹಾಳು ಅಭ್ಯಾಸಗಳಿಗೆ ಈ ಕಾಲದಲ್ಲಿ ಎಲ್ಲೆಡೆಯಲ್ಲೂ ತಿರಸ್ಕಾರ ಬಹಿಷ್ಕಾರಗಳಲ್ಲದೆ ಬೇರೆ ಇಲ್ಲ. ಯಾವುದೊಂದು ಅಭ್ಯಾಸವೂ ಎಷ್ಟೇ ಪುರಾತನದ್ದಾಗಿರಲಿ, ಅದನ್ನು ನಮ್ಮ ಹಿರಿಯರು ಉಚಿತವೆಂದೇ ಭಾವಿಸಿರಲಿ, ಅದು ಈಗಿನ ಕಾಲಕ್ಕೆ ತಕ್ಕುದಲ್ಲವೆಂದು ಮನಗಂಡರೆ, ಒಡನೆಯೇ ಕಿತ್ತೊಗೆದು ಬಿಡಬೇಕೆಂಬದೇ ನವನಾಗರಿಕತೆಯ ಅಂತೂ ನವಯುಗದ ಸಿದ್ಧಾಂತವು.

ನಮ್ಮ ಭಾರತೀಯರಲ್ಲಿ ತಾಂಬೂಲಸೇವನೆ ಮಾಡದವರು ಅತಿ ವಿರಳ. ಈ ಅಭ್ಯಾಸವು ವಂಶ ಪಾರಂಪರ್ಯವಾಗಿ ಬಂದು ಒಂದು ಪದ್ಧತಿಯಾಗಿ ನಿಂತಿದೆ. ಕೆಲವು ವೇಳೆ ಇದೊಂದು ದೃಢವಾದ ನಂಬುಗೆಯ ವಸ್ತುವಾಗಿಯೂ ಗಣಿಸ್ಪಡುವುದು. ಧುರವೀಳ್ಯ, ವಿವಾಹಕಾಲದ ನಿಶ್ಚಯತಾಂಬೂಲವೇ ಇದಕ್ಕೆ ನಿದರ್ಶನಗಳಾಗಿವೆ.

ಉಪಚಾರಗಳಲ್ಲಂತೂ ತಾಂಬೂಲವೇ ಮೊದಲನೇಯದು ವಿವಾಹ ಉಪನಯನಾದಿ ಶುಭಲೇಖನಗಳಲ್ಲಿ "ತಾಂಬೂಲಾದಿ ಉಪಚಾರಗಳನ್ನು ಸ್ವೀಕರಿಸಿಕೊಳ್ಳಿರಿ" ಎಂಬ ಮಾತುಗಳನ್ನು ಬರೆಯುವುದು ಬಳಿಕೆಯಾಗಿದೆ. ನಮ್ಮ ಮನೆ ಬಾಗಿಲಿಗೆ ಬಂದ ಗೃಹಸ್ಥನಿಗೆ ಒಂದು ತುತ್ತು ಅನ್ನ ಹಾಕದಿದ್ದರೂ ದೊಡ್ಡದಲ್ಲ, ಆದರೆ ತಾಂಬೂಲ ಕೊಡದಿದ್ದರೆ ಮಾತ್ರ ದೂರಿಗೆ ಅವಕಾಶವಾಗುವದೆಂಬದಾಗಿ ನಮ್ಮವರು ಭಾವಿಸುವರು. ಈ ಮಹಾ ಮರ್ಯಾದೆಯ ಅಭ್ಯಾಸವು ಹಳ್ಳಿಯಿಂದ ಡಿಲ್ಲಿಯವರೆಗೂ ಎಲ್ಲೆಲ್ಲಿಯೂ ಹರಡಿರುವುದು.

ತಾಂಬೂಲ ಸೇವಿಸದವನ ಬಾಯಿಯು ಬಿಲದ ಬಾಯಿಗೆ ಸಮಾನವೆಂದೂ, ಅವನ ಮುಖದಲ್ಲಿ ಸಿರಿ ಇಲ್ಲವೆಂದೂ, ಅದನ್ನು ತಿನ್ನುವುದರಿಂದ ಮೋರೆಗೆ ಸೊಬಗುಂಟಾಗುವುದೆಂದೂ ತಾಂಬೂಲ ಭಕ್ತರ ಅಂಬೋಣವಾಗಿದೆ.

ಉಪಚಾರರೂಪದಿಂದ ಪ್ರಚಾರಕ್ಕೆ ಬಂದ ಈ ಮಹಾ ಮರ್ಯಾದೆಯ ಅಭ್ಯಾಸವು ನಮ್ಮ ಆರೋಗ್ಯಕ್ಕೆ ತಕ್ಕುದೇ ಹೇಗೆಂಬುದನ್ನು ವಿಚಾರ ಮಾಡಿದರೆ, ಆಗ ನಮಗೆ ಗೊತ್ತಾಗುವುದು. ಕಲ್ಕತ್ತೆಯ ಹೆಲ್ತ್ ಆಫೀಸರರಾದ ಡಾಕ್ಟರ್ ಕ್ಲಾರ್ಕ ಎಂಬವರು ತಾಂಬೂಲ ಸೇವನೆಯಿಂದ ಈ ಕೆಳಗಿನ ದೋಷಗಳಿವೆ ಎಂದು ತಮ್ಮ ಪರಿಶೋಧನೆಯಿಂದ ಬರೆದಿರುವರು. ವೀಳ್ಯದೆಲೆ ತಿನ್ನುವುದರಿಂದ ಉಗುಳಿ ಉಗುಳಿ ನಾಲಿಗೆಯ ದ್ರವವು ಆರುವುದು; ಓಕರಿಕೆ ಹುಟ್ಟುವುದು; ತಲೆ ತಿರುಗುವುದು; ಸ್ನಾಯುಗಳು ಬಲಹೀನವಾಗುವುವು; ನಾಡಿಯು ಅಕ್ರಮವಾಗಿ ಬಡಿಯುವುದು; ಕಣ್ಣುಗೊಂಬೆ ವಿಕಾಸ ಅಥವಾ ಸಂಕೋಚವಾಗುವುದು. ಇವಲ್ಲದೆ ಎಲೆಯಲ್ಲಿ ವಿಸ್ಮೃತಿಯನ್ನುಂಟುಮಾಡುವ ಪದಾರ್ಥವಿದೆ ಎಂದೂ, "ಅಡಿಕೆ" ಇದರಿಂದ ಗುಂಡಿಗೆಯ ಮತ್ತು ನರಗಳ ಶಕ್ತಿ ಕುಂದಿಹೋಗುತ್ತದೆಂದೂ, ಸುಣ್ಣದಿಂದ ಖಜ್ಜಿ ಮುಂತಾದ ವ್ರಣಗಳು ಹುಟ್ಟುತ್ತವೆಂದೂ ಬರೆದಿರುವರು. ಹಲವರು ತಾಂಬೂಲದೊಡನೆ ಹೊಗೆಸೊಪ್ಪನ್ನು ಸೇವಿಸುವರು. ಇದರಿಂದಾಗುವ ಕೆಡಕು ವಿಮುಸತೀರದು. ಎಲೆ ಅಡಿಕೆ ಹೊಗೆಸೊಪ್ಪು ಮತ್ತು ಸುಣ್ಣ ಈ ನಾಲ್ಕು ಕೂಡುವುದರಿಂದ ಆಹಾರ ಕೋಶದ ಜೀರ್ಣಶಕ್ತಿ ಸಹಾ ಕುಂದಿಹೋಗುವುದೆಂದೂ ವೈದ್ಯರ ಅಭಿಪ್ರಾಯವಾಗಿರುತ್ತದೆ. ಯೌವನಸ್ಥರು ಈ ತಾಂಬೂಲಸೇವನೆ ಮಾಡುವದರಿಂದ ಅವರಲ್ಲಿ ಕಾಮಾತುರವೂ ಹೆಚ್ಚಿ ಸ್ವಭಾವ ವಿರುದ್ಧವಾದ ವಿಲಾಸಗಳಲ್ಲಿ ನಿರತರಾಗುವರು ಎಂದೂ, ಇದರಿಂದ ಧಾತು ದೌರ್ಬಲ್ಯ ಉಂಟಾಗುವುದೆಂದೂ ಪ್ರಖ್ಯಾತ ವೈದ್ಯರ ಅಭಿಪ್ರಾಯವಾಗಿರುತ್ತದೆ.

ಆರೋಗ್ಯದ ಮಾತಂತೂ ಹಾಗಿರಲಿ! ತಾಂಬೂಲ ಸೇವಿಸುವವರು ಸದಾ ಉಗುಳಬೇಕಾಗುತ್ತದೆ. ಅನೇಕ ಕುಟುಂಬಗಳಲ್ಲಿ ಈ ಉಗುಳಿಗಾಗಿ ಹಲವು ಪಾತ್ರೆಗಳಿರುತ್ತವೆ. ಈ ಪಾತ್ರೆಗಳನ್ನು ದಿನಕ್ಕೆ ಎರಡಾವರ್ತಿ ಇಲ್ಲವೇ ದಿನವಹಿ ತೊಳೆಯಬೇಕಾಗುತ್ತದೆ. ಅನೇಕ ಮನೆಗಳಲ್ಲಿ ಈ ಕೆಲಸವನ್ನು ದಾದಿಯರಿಂದ ಮಾಡಿಸುವರು. ಹಲವು ಕುಟುಂಬಗಳಲ್ಲಿ ದಾದಿಯರೇ ಇಲ್ಲ. ಸ್ವತಹ ತೆಗಿಯಲು ಅಸಹ್ಯಪಡುವದರಿಂದಲೋ, ಅಥವಾ ಆಲಸ್ಯದಿಂದಲೋ, ಪಾತ್ರೆಯಲ್ಲಿ ತುಂಬಿದ ತಾಂಬೂಲವು ಹುಳುತು ಅದರಿಂದ ಒಂದು ವಿಧದ ದುರ್ಗಂಧವು ಹೊರಟು ವಾಯುವನ್ನೇ ಹಾಳುಮಾಡುತ್ತಿರುವುದೂ, ಅದಕ್ಕೆ ನುಸಿಗಳೂ, ನೊಣಗಳೂ ಪ್ರದಕ್ಷಿಣೆ ಮಾಡುತ್ತಿರುವುದೂ, ನೋಡಿರುವ ಸಂಗತಿಯೇ. ಅನೇಕರಲ್ಲಿ ಇಂಥಾ ಪಾತ್ರೆಯಲ್ಲಿ ಆದರೂ ಚಾವಡಿಯ ಕೆಳ ಜಗಲಿ ಮೆಟ್ಟಲು, ಗೋಡೆಸಂದುಗಳೆಲ್ಲಾ ಕೆಂಪು ಬಣ್ಣ ಬಳಿದಂತೆ ಉಗುಳಿನಿಂದ ಮುಚ್ಚಿ ಹೋಗಿರುತ್ತದೆ. ಕೆಲವು ಮಹನೀಯರ ಬೈಟಕುಖಾನೆಯ ಕಿಟಕಿಯ ಸರಳುಗಳೆಲ್ಲಾ ಈ ಎಂಜಲು ಲೇಪದಿಂದ ಪುಷ್ಟಿಯಾಗಿರುತ್ತವೆ. ಹೀಗೆ ತಾಂಬೂಲ ಸೇವಿಸುವವರ ಮನೆ, ಬಟ್ಟೆ ಕೈವಸ್ತ್ರಗಳೆಲ್ಲಾ ಎಂಜಲುಮಯವಾಗಿರುತ್ತವೆ.

ತಾಂಬೂಲ ಸೇವನೆಯಿಂದ ಶರೀರಕ್ಕೆ ಹಾನಿಯಾಗುವುದಲ್ಲದೆ ಧನಹಾನಿ ಸಹ ಉಂಟಾಗುವುದು. ಪ್ರತಿ ಒಬ್ಬರೂ ದಿನಕ್ಕೆ ಮೂರುಕಾಸು ವೆಚ್ಚಮಾಡಿದರೆ ಇಡೀ ದೇಶದಲ್ಲಿ ದಿನವಹಿ ಲಕ್ಷಾಂತರ ಹಣವು ಈ ಹಾಳು ವ್ಯಸನಕ್ಕಾಗಿ ವೆಚ್ಚವಾದಂತಾಗುವುದು. ಇದನ್ನು ಸೇವಿಸುವವರ ಸಂಖ್ಯೆಯು ಹೆಚ್ಚಾಗಿರುವುದರಿಂದ ಇದರ ಸೇವನೆಗೆ ಬೇಕಾದ ವಸ್ತುಗಳ ಬೆಲೆಯು ದಿನದಿನಕ್ಕೆ ಏರುತ್ತಲಿದೆ. ಕೀಳು ಜಾತಿಯವರ ಆದಿಯಾಗಿ ಮೇಲು ಜಾತಿಯವರ ವರೆಗೂ, ದರಿದ್ರನೇ ಮೊದಲುಗೊಂಡು ಧನಿಕನ ವರೆಗೂ ಇದಕ್ಕೆ ಬಲಿ ಬೀಳದೆ ಇಲ್ಲ. ಈ ಅಭ್ಯಾಸಕ್ಕೆ ತುತ್ತಾದ ಒಬ್ಬ ವ್ಯಕ್ತಿಯ ಒಂದು ವಾರದ ವೆಚ್ಚವು ಬಲು ಕಡಿಮೆ ಎಂದರೆ 6 ಆಣೆ ತಗಲಬಹುದು. ಹಾಗೆಯೇ ಒಂದು ವರುಷಕ್ಕೆ 19-8-0 ಬೇಕಾಗುವುದು. ಅಂಥವನು ತನ್ನ 18ನೇ ವಯಸ್ಸಿನಲ್ಲಿ ಈ ಅಭ್ಯಾಸಕ್ಕೆ ಆರಂಭಿಸಿ 60 ವಯಸ್ಸಿನ ವರೆಗೆ ಸೇವಿಸಿದರೆ ಅವನ ಸಂಪಾದನೆಯಲ್ಲಿ 819 ರೂಪಾಯಿಯು ಜಗಿದು ಉಗಿಯುವ ಈ ಕೆಟ್ಟ ಚಾಳಿಗೆ ವಿನಿಯೋಗಿಸಿದಂತಾಗುವುದು. ಒಬ್ಬನ ವೆಚ್ಚವು ಇಷ್ಟಾದಮೇಲೆ ಈ ವ್ಯಸನಕ್ಕೆ ಸಿಕ್ಕಿಬಿದ್ದವರ ದೊಡ್ಡ ದೊಡ್ಡ ಕುಟುಂಬಗಳ ವೆಚ್ಚವು ಎಷ್ಟಾಗಬೇಕು? ಇದಕ್ಕೆ ವೆಚ್ಚವಾಗುವ ಹಣವನ್ನು ಜನೋಪಕಾರವಾದ ಮತ್ತಾವ ಕಾರ್ಯಗಳಿಗಾದರೂ ವಿನಿಯೋಗ ಮಾಡಿದರೆ ಒಳ್ಳೆಯದಲ್ಲವೇ? ತಾವು ತಿಂದು ಪರರಿಗೂ ಕೊಟ್ಟು ಸತ್ಕಾರ ರೂಪದಿಂದ, ಎಲ್ಲರಲ್ಲೂ ಹರಡಿರುವ ಈ ಅಭ್ಯಾಸವನ್ನು ನಿರ್ನಾಮ ಮಾಡುವುದು ಯುಕ್ತವಲ್ಲವೇ?

ಇಷ್ಟೆಲ್ಲಾ ಕೆಡಕು ನಷ್ಟಗಳಿದ್ದರೂ ಬಿ.ಎ., ಎಮ್.ಎ. ಪರೀಕ್ಷೆಗಳಲ್ಲಿ ಕೃತಾರ್ಥರಾದ ಪೂಣ ವಿದ್ಯಾಧುರೀಣರೂ, ದೊಡ್ಡದೊಡ್ಡ ಹುದ್ದೇದಾರರೂ, ನ್ಯಾಯವಾದಿಗಳೂ, ಪಂಡಿತರೆಂದು ಹೇಳಿಸಿಕೊಳ್ಳುವವರೂ, ಮುಂತಾದ ನಾಗರೀಕರೆಲ್ಲರೂ ದಾಸಾನುದಾಸರಾಗಿ ಹಗಲಿರುಳೂ ಈ ತಾಂಬೂಲಸೇವನೆಯಲ್ಲಿ ಮುಳುಗಿರುವರು. ಸರ್ವಜ್ಞರೆಂದು ಹೊಗಳಿಸಿಕೊಳ್ಳುವರೇ ಈ ದುರ್ವೃತ್ತಿಗೆ ಒಳಗಾಗಿರುವಾಗ ಇನ್ನು ಅಜ್ಞಾನಿಗಳನ್ನು ಹೇಳುವುದೇನು?

ಬಂಧು ಭಗಿನಿಯರಿರಾ! ಅಫೀಮು ತಿನ್ನುವ ಅಭ್ಯಾಸವು ಚೀನದ ಜನರನ್ನೂ, ಹೊಗೆಸೊಪ್ಪು ಸೇದುವ ಅಭ್ಯಾಸವು ಯುರೋಪ್ ಅಮೇರಿಕಾ ಖಂಡದ ಜನರನ್ನೂ, ಹೇಗೆ ಅಧೋಗತಿಗೆ ಇಳಿಸುತ್ತಾ ಬರುತ್ತದೆಯೋ ಹಾಗೆಯೇ ನಮ್ಮ ಭರತಖಂಡದ ಜನರನ್ನು ವೀಳ್ಯದೆಲೆ ತಿನ್ನುವ ಅಭ್ಯಾಸವು ಕೆಳಗಿಳಿಸುತ್ತದೆಂದರೆ ಅತಿಶಯೋಕ್ತಿಯಾಗಲಾರದು.

ಅದುದರಿಂದ ಮೇಲೆ ವಿವರಿಸಿದ ವಿಷಯಗಳನ್ನು ವಾಚಕರು ಚೆನ್ನಾಗಿ ಆಲೋಚಿಸಿ ಅನಾರೋಗ್ಯಕರವಾಗಿಯೂ, ಧನನಾಶವನ್ನು ಮಾಡತಕ್ಕುದಾಗಿಯೂ ಇರುವ ತಾಂಬೂಲಸೇವನೆಯ ಅಭ್ಯಾಸವನ್ನು ಬಿಟ್ಟು ಆರೋಗ್ಯವಂತರಾಗಿ ಇರಬೇಕೆಂದು ಪುನಃ ಪ್ರಾರ್ಥಿಸಿ ಈ ಲೇಖನವನ್ನು ಕೊನೆಗಾಣಿಸುವೆನು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

ಪರೀಕ್ಷಾ ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕದ್ದು.

ಈಸಲ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗಳಿಗಾಗಿ ಬೆಂಗಳೂರು ಸೆಂಟರಿಗೆ ಬರತಕ್ಕಂಥ ವೀರಶೈವ ವಿದ್ಯಾರ್ಥಿಗಳಿಗೂ ಅವರ ಕೂಡ ಬರತಕ್ಕ ಮಾಸ್ಟರುಗಳಿಗೂ ಪದ್ಧತಿಪ್ರಕಾರ ವಾಸಕ್ಕೂ ಭೋಜನಕ್ಕೂ ಏರ್ಪಡಿಸಿದೆ. ಬರತಕ್ಕವರ ಸಂಖ್ಯೆಯನ್ನೂ ಹೆಸರು ವಿಳಾಸವನ್ನೂ ಈ ಕೆಳಗೆ ಕಂಡ ವಿಳಾಸಕ್ಕೆ ೮ ದಿನಗಳು ಮುಂದಾಗಿ ಬರೆದು ತಿಳಿಸಬೇಕು. ಎಸ್. ಕಳ್ಳಪ್ಪ

ಊದುಬತ್ತಿಷಾಪು, ದೊಡ್ಡಪೇಟೆ, ಬೆಂಗಳೂರು ಸಿಟಿ.

ತುಮಕೂರು ಸೆಂಟರು.

ಇದೇ ೧೯೨೨ನೇ ಏಪ್ರಿಲ್ ತಿಂಗಳಲ್ಲಿ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಲೋವರ್ ಸಿಕೆಂಡರಿ ಪರೀಕ್ಷೆಗೆ ತುಮಕೂರು ಸೆಂಟರಿಗೆ ಬರತಕ್ಕ ವೀರಶೈವ ಮತ್ತು ಇವರಲ್ಲಿ ಭೋಜನಮಾಡತಕ್ಕ ಇತರ ಮತಸ್ಥರ ವಿದ್ಯಾರ್ಥಿಗಳಿಗೆ ಪದ್ಧತಿಪ್ರಕಾರ ತುಮಕೂರು ವರ್ತಕಮಂಡಲಿಯವರು ಭೋಜನಕ್ಕೆ ಏರ್ಪಾಡು ಮಾಡಿರುವದರಿಂದ ಸದರಿಕಾಲದಲ್ಲಿ ಹಾಜರಾಗಲು ಇಷ್ಟವುಳ್ಳ ವಿದ್ಯಾರ್ಥಿಗಳು ಈ ಕೆಳಗಿನ ಅಡ್ರೆಸ್ಸಿಗೆ ಎಂಟುದಿವಸ ಮುಂಚಿತವಾಗಿಯೇ ಬರೆದುಕೊಳ್ಳಬೇಕಾಗಿ ಈ ಮೂಲಕ ತಿಳಿಯಪಡಿಸಿದೆ. ತಂಬಿಗೆ ಹಾಸಿಗೆ ಜೊತೆಯಲ್ಲಿ ತರತಕ್ಕದ್ದು.

ಅತ್ತಿ ಸಂಗಪ್ಪನವರು, ಯಜ್ಞ. ಗಂಗಾಧರಪ್ಪನವರು,
ಜವಳಿ ಅಂಗಡಿ ವೀರಣ್ಣನವರು.

ಶಿರಾ ಸೆಂಟರು.

ತುಮಕೂರು ಡಿಸ್ಟ್ರಿಕ್ಟ್ ಶಿರಾ ಸೆಂಟರಿನಲ್ಲಿ ಈ ವರ್ಷ ನಡಿಯುವ ಕನ್ನಡ ಮತ್ತು ಇಂಗ್ಲೀಷ್ ಲೋವರ್ ಸೆಕೆಂಡರೀ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಅವರ ಸಂಗಡ ಬರತಕ್ಕ ವೀರಶೈವ ಮಾಸ್ಟರುಗಳಿಗೂ ಸಹಾ ಪರೀಕ್ಷೆಯದಿನದಾರಭ್ಯ ಪರೀಕ್ಷೆ ಮುಗಿಯುವವರಿಗೂ ಭೋಜನದ ಏರ್ಪಾಟಿಗೋಸ್ಕರ ಇದೇ ಶಿರಾ ಟವನ್ನಿನಲ್ಲಿರುವ ಸಾಹುಕಾರ್ ಹರಳಕಟ್ಟೆ ಬಸಪ್ಪ ವಗೈರೇರು ಏರ್ಪಾಟು ಮಾಡಿರುವದರಿಂದ ಆ ಕಾಲಕ್ಕೆ ಬರತಕ್ಕ ವೀರಶೈವ ವಿದ್ಯಾರ್ಥಿಗಳೂ ಮತ್ತು ಮಾಸ್ಟರುಗಳೂ ಸಹ ಇದೇ ಮಾರ್ಚಿ ತಾರೀಖು ೨೦ ರ ಒಳಗಾಗಿ ಈ ಕೆಳಗಿನ ಅಡ್ರೆಸ್ಸಿಗೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಮತ್ತು ವಿದ್ಯಾರ್ಥಿಗಳೂ ಮಾಸ್ಟರುಗಳೂ ಸಹ ತಮ್ಮತಮ್ಮ ಹಾಸಿಕೆ ಹೊದ್ದಿಕೆ ತಂಬಿಗೆ ಸಹಾ ತರತಕ್ಕದ್ದು.

ಶಿರಾ ಹರಳಕಟ್ಟೆ ಬಸಪ್ಪ.

ಚಳ್ಳಕೆರೆ ಸೆಂಟರು.

ಚಿತ್ರದುರ್ಗದ ಡಿ|| ಚಳ್ಳಕೆರೆ ಸೆಂಟರಿನಲ್ಲಿ ಈ ವರ್ಷದಲ್ಲಿ ನಡೆಯುವ ಕನ್ನಡ ಮತ್ತು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿಗೂ ಸಹ ಪರೀಕ್ಷೆ ನಡೆಯುವ ದಿವಸಗಳಲ್ಲಿ ಭೋಜನದ ಏರ್ಪಾಟಿಗೋಸ್ಕರ ಇದೇ ತಾಲ್ಲೂಕು ಹಿರೆಮಧುರೆ ಮಠದ ನೀಲಕಂಠಪ್ಪಯ್ಯನವರು ತಮ್ಮ ಸ್ವಂತಖರ್ಚಿನಿಂದ ನಡೆಸಲು ಉದಾರವಾಗಿ ವಾಗ್ದಾನಮಾಡಿರುವದರಿಂದ ಆಕಾಲಕ್ಕೆ ಬರತಕ್ಕ ವೀರಶೈವ ವಿದ್ಯಾರ್ಥಿಗಳೂ ಮತ್ತು ವಿದ್ಯಾರ್ಥಿನಿಯರೂ ಸಹ ಈ ಮಾಹೆ ಆಖೈರಿನೊಳಗಾಗಿ ಈ ಕೆಳಗಿನ ವಿಳಾಸಕ್ಕೆ ದರಖಾಸ್ತನ್ನು ಹಾಕಿಕೊಳ್ಳತಕ್ಕದ್ದು.

ಹೆಚ್. ಎಂ. ಮುದ್ದುವೀರಯ್ಯ,
ಕಾರ್ಯದರ್ಶಿ.
ಅಸಿಸ್ಟೆಂಟ್ ಮಾಸ್ಟರ್ ಎ.ವಿ. ಸ್ಕೂಲು, ಚಳ್ಳಕೆರೆ.

ನಿಪ್ಪಾಣಿ.

ತಾ|| ೨೨-೨-೨೨ನೆ ಬುಧವಾರದ ದಿವಸ ಇಲ್ಲಿ ಶ್ರೀ ಮುರುಘೇಂದ್ರ ವಾಚನಾಯದಲ್ಲಿ ಶ್ರೀ ಚೆನ್ನಬಸವಸ್ವಾಮಿಗಳಿಂದ ಒಂದು ತರುಣಸಂಘವು ಸ್ಥಾಪಿತವಾಯಿತು. ಶ್ರೀಗಳು ಜನಗಳಿಗೆ ಸ್ಫೂರ್ತಿದಾಯಕವಾದ ವ್ಯಾಖ್ಯಾನವಮಾಡಿದರು. ಶ್ರೀ ಶಿವಾನಂದಸ್ವಾಮಿ ಇವರು ತರುಣ ಸಂಘದಿಂದ ಆಗುವ ಪ್ರಯೋಜನ ಮತ್ತು ವಾಚನಾಲಯದ ಮಹತ್ವ ಈ ವಿಷಯಗಳ ಮೇಲೆ ಸ್ಫೂರ್ತಿದಾಯಕವಾದ ವ್ಯಾಖ್ಯಾನಕೊಟ್ಟರು. ಈ ಸಭೆಯಲ್ಲಿ ಅನೇಕ ಜನರು ಕೂಡಿದ್ದರು ಶ್ರೀಗಳ ವ್ಯಾಖ್ಯಾನವು ಆದನಂತರ ಮುರುಘೇಶನ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ನಿಷಾಪದಾರ್ಥವರ್ಜನ.

ಅರಕಲಗೂಡು ತಾಲ್ಲೂಕು ಬಸವಾಪಟ್ಟಣದ ಕೆಲವು ಉತ್ತಮರೂ ಮತ್ತು ಪಂಚಮರೂ ಸಹ ಇಂದಿಗೆ ಆರು ತಿಂಗಳಲ್ಲಿ ಒಂದು ಮೀಟಿಂಗು ಮಾಡಿ ನಿಷಾಪದಾರ್ಥಗಳಿಂದುಂಟಾಗುವ ಕೆಡಕುಗಳನ್ನು ತಿಳಿದುಕೊಂಡು ಇನ್ನುಮುಂದೆ ನಮ್ಮ ಗುಂಪಿನಲ್ಲಿ ಯಾರೊಬ್ಬರೂ ನಿಷಾಪದಾರ್ಥಗಳನ್ನು ಸೇವನೆ ಮಾಡಬಾರದೆಂದು ಮಾಡಿಕೊಂಡ ಕಟ್ಟು ಕಟ್ಟಳೆ ಇದುವರೆಗೂ ನಡೆದುಬಂದಿರುತ್ತದೆ. ಇನ್ನುಮುಂದೂ ಸಹ ಇದೇ ಕಟ್ಟಳೆಯು ನಡೆದು ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದಲ್ಲದೆ ಸ್ಥಿರಪ್ರಯತ್ನ ಒಕ್ಕಟ್ಟು? ಈ ಪೇಟೆಯ ಸಮೀಪದಲ್ಲಿರುವ ಹಾನಗಲ್ಲು ಮತ್ತು ಅಂಜನಹೊಸಳ್ಳಿಯ ಕೆಲವು ಪುಣ್ಯಾತ್ಮರುಗಳು ಮಾತ್ರ ನಿಷಾಸೇವನೆಯನ್ನು ಬಿಟ್ಟಿರುವುದಿಲ್ಲವಂತೆ! ಇದೊಂದು ಕೊರತೆಯೇ ಸರಿ. ಸ್ಥಳಿಕ.

ಒಬ್ಬುಮತಬಾಂಧವರ ಔದಾರ್ಯ.

ಕಡೂರು ತಾ|| ಚನ್ನಾಪುರದ ಪಟೇಲರು ಮ|| ರಾ|| ಗಿರೀಗೌಡರ ಧರ್ಮಪತ್ನಿ ಸೌ|| ಮುದ್ದಮನವರು ಕಳೆದ ಮಾರ್ಗಶಿರಮಾಸದಲ್ಲಿ ಶಿವಾಧೀನರಾದರು. ಇವರು ತಮ್ಮ ಮಹಾಗಣಾರಾಧನೆ ದಿವಸ| ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ರೂ. 50-0-0 ನ್ನು ಕಳುಹಿಸಿಕೊಡುವಂತೆ ತಮ್ಮ ಪತಿಯವರನ್ನು ಕೇಳಿಕೊಂಡ ಪ್ರಕಾರ, ಅವರ ಸತ್ಸಂಕಲ್ಪದಂತೆ ಮ||ರಾ|| ಗಿರೀಗೌಡರು ಸದ್ರಿ ಮೊಬಲಗನ್ನು ಕಡೂರು ತಾ|| ನಿಡಘಟ್ಟದ ರೂರಲ್ ಎ. ವಿ. ಸ್ಕೂಲು ಹೆಡ್ಮಾಸ್ಟರ್ ಹೆಚ್. ಬಸವಯ್ಯನವರ ಮೂಲಕ ಕಳುಹಿಸಿಕೊಟ್ಟಿರುತ್ತಾರಾಗಿ, ಸಂಘದವರು ಮ|| ರಾ|| ಗಿರೀಗೌಡರಿಗೆ ತಮ್ಮ ಕೃತಜ್ಞತೆಯನ್ನು ಇದರ ಮೂಲಕ ಸೂಚಿಸುತ್ತಾರೆ.

ಬೆಂಗಳೂರು } ಜಿ. ಪರಮಶಿವಯ್ಯ, ಆನರರಿಸೆಕ್ರೆಟರಿ
9-3-1922 } ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ರಥೋತ್ಸವ.

ಬೆಂಗಳೂರು ಡಿಸ್ಟ್ರಿಕ್ಟ್ ದೇವನಹಳ್ಳಿ ತಾಲ್ಲೂಕು ಹುಣಸಮಾರನಹಳ್ಳಿಯಲ್ಲಿ ಶ್ರೀ ಚಂದ್ರಮೌಳೀಶ್ವರಸ್ವಾಮಿ ರಥೋತ್ಸವ ಮತ್ತು ಎತ್ತಿನ ಪರಿಷೆ ಸಹ ಮಾಮೂಲಿನಂತೆ ೧೦-೩-೨೨ ರಿಂದ ೧೬-೩-೨೨ ವರೆಗೆ ನಡೆಯುತ್ತೆ. ದನಕರುಗಳಿಗೆ ನೀರಿನ ವಸತಿ ಅನುಕೂಲವಾಗಿದೆ. ಪರಸ್ಥಳದ ಜನಗಳ ಅನುಕೂಲಕೆಗೆ ಶ್ರೀಮಠದಿಂದಲೇ ಏರ್ಪಾಡು ಮಾಡಲ್ಪಟ್ಟಿದೆ. ಉತ್ಸವಾದಿಗಳು ವಿಶೇಷ ವೈಭವಗಳಿಂದ ನಡೆಯುತ್ತವೆ. ಈ ಹುಣಸಮಾರನಹಳ್ಳಿ ಗ್ರಾಮವು ಎಲಹಂಕ ಮತ್ತು ದೊಡ್ಡಜಾಲ ರೈಲ್ವೆಸ್ಟೇಷನ್ನುಗಳಿಗೆ ೩ ಮೈಲಿ ಸಮೀಪದಲ್ಲಿರುವ ರಸ್ತೆಜಾಗವಾಗಿರುತ್ತೆ. ದೇಶಾಭಿಮಾನಿಗಳು ಜಾತ್ರೆಯ ಕಾಲಕ್ಕೆ ದಯಮಾಡಿ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ ಎಸ್. ಎಲ್. ಮುದ್ದುಬಸವಯ್ಯ.

ರಥೋತ್ಸವ.

ಪ್ರತಿವರ್ಷದಲ್ಲಿಯೂ ಪದ್ಧತಿಪ್ರಕಾರ ನಡೆಯುತ್ತಿರುವ ನಾಯಕನಹಟ್ಟಿ ಶ್ರೀ ತಿಪ್ಪೆರುದ್ರಸ್ವಾಮಿಯ ರಥೋತ್ಸವವು ಇದೇ ಫಾಲ್ಗುಣ ಬ|| ೨ ಬುಧವಾರ ಅಂದರೆ ೧೫-೩-೨೨ ರಲ್ಲಿ ನಡೆಯುತ್ತದೆ. ಈ ರಥೋತ್ಸವದಲ್ಲಿ ಯಾತ್ರಿಕಜನರ ಚಿತ್ತಾನಂದಕ್ಕಾಗಿ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕು ಕೊಟ್ಟೂರು ಕೆಂಬಾವಿ ಮಠದಲ್ಲಿ ಧರ್ಮಬೋಧಕ ಜನಸಂಘದ ಸದ್ವಿದ್ಯಾ ನಾಟಕಶಾಲಾ ಕಂಪೆನಿಯು ಸದರಿ ಮಠಾಧಿಪತಿಗಳಾದ ಮ|| ಗುರುಬಸವಶಾಸ್ತ್ರಿಗಳಿಂದ ಸರ್ವಜನಗಳಿಗೆ ಸುಬೋಧವಾಗುವಂತೆ ರಚಿಸಲ್ಪಟ್ಟ ಶ್ರೀ ತಿಪ್ಪೆರುದ್ರಮಹಾಸ್ವಾಮಿಯಚರಿತ್ರೆಯನ್ನು ಉತ್ತಮಡ್ರೆಸ್ ಸೀನರಿ ಸಂಗೀತಾದಿಗಳಿಂದ ನೋಟಕರಿಗೆ ಆತನು ಮಾಡಿದ ಮಹತ್ವಗಳನ್ನು ನಾಟಕರೂಪವಾಗಿ ತೋರಿಸುವದಲ್ಲದೆ ಇನ್ನೂ ಕೆಲವು ವೀರಶೈವ ತತ್ವಬೋಧಕಗಳಾದ ಚರಿತ್ರೆಗಳನ್ನು ಹಾಡಿ ತೋರಿಸುವದಕ್ಕೋಸ್ಕರ ಈ ವರ್ಷ ಸದರಿ ಕಂಪನಿಯು ನಾಯಕನಹಟ್ಟಿಗೆ ಬರುವದಾಗಿರುತ್ತದೆ. ಆದ್ದರಿಂದ ಯಾತ್ರಿಕಜನರು ಈ ಸಮಯವನ್ನು ಕಳೆದುಕೊಳ್ಳಲಾರರೆಂದು ಪೂರ್ಣ ನಂಬಿರುತ್ತೇನೆ. ಮತ್ತು ಈ ಸ್ವಾಮಿಯ ಉತ್ಸವಾದಿಗಳನ್ನು ನೋಡುವುದರಿಂದಲೂ ಈತನ ಸತ್ಕಥೆಯನ್ನು ಕೇಳುವುದರಿಂದಲೂ ಯಾತ್ರಿಕರ ಯಾತ್ರಾಶ್ರಮವು ಸಫಲವಾಗುವದೆಂದು ಹೇಳುವ ಅವಶ್ಯಕತೆಯೇ ಇಲ್ಲ. ಶಿವಭಕ್ತ.

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಜಾತ್ರೆ.

೧೯೨೨ನೇ ಮಾರ್ಚಿ ತಾ|| ೮ ರಿಂದ ೧೫ರ ವರೆಗೆ ಗುಬ್ಬಿಯಲ್ಲಿ ನಡೆಯುವ ಶ್ರೀ ಚನ್ನಬಸವೇಶ್ವರಸ್ವಾಮಿ ಜಾತ್ರೆ ಕಾಲದಲ್ಲಿ ದನಗಳ ಪಂಕ್ತಿಯು ಕೂಡುವಂತೆ ಏರ್ಪಾಡು ಮಾಡಿರುತ್ತೆ. ದನಗಳ ಸೌಕರ್ಯಕ್ಕೆ ಸರಿಯಾದ ಸ್ಥಳವಸತಿ, ನೆರಳು, ನೀರು ಯಥೇಷ್ಟವಾಗಿರುತ್ತೆ. ಜನಗಳಿಗೆ ಜಾತ್ರದಾಸೋಹದಲ್ಲಿ ಉಚಿತವಾದ ಊಟದ ಏರ್ಪಾಟು ಮಾಡುವುದಾಗುತ್ತೆ. ತಾ|| ೧೩ನೇ ಸೋಮವಾರ ದನಗಳ ಪ್ರದರ್ಶನದಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನಗಳು ದೊರೆಯಬಹುದು. ದನಗಳ ಬಿಕರಿ ಮಾಡುವವರೂ, ಕೊಂಡುಕೊಳ್ಳುವವರೂ ರಾಸುಗಳನ್ನು ಹೊಡೆದುಕೊಂಡು ಬರಬೇಕಾಗಿ ಕೋರಿದೆ. ಬಿಕರಿಗೆ ಬರತಕ್ಕ ರಾಸುಗಳ ಮೇಲೆ ಯಾವ ರುಸುಮನ್ನೂ ವಸೂಲ್ಮಾಡುವುದಿಲ್ಲ. ಗುಬ್ಬಿ ರೈಲ್ವೆಸ್ಟೇಷನ್ ಸ್ಥಳದಲ್ಲಿ ಮೆಯಿಲ್ ವಗೈರೆ ಎಲ್ಲಾ ಟ್ರೈನ್‌ಗಳೂ ಇಲ್ಲಿ ನಿಲ್ಲುವುದರಿಂದ ಪ್ರಯಾಣದ ಸೌಲಭ್ಯಗಳು ಚೆನ್ನಾಗಿವೆ. ನೂತನವಾಗಿ ಮಾಡಿಸಿರುವ ರಥೋತ್ಸವ.

ಜಾತ್ರೆಯಲ್ಲಿ ನಡೆಯತಕ್ಕ ಉತ್ಸವಗಳ ಪ್ರೋಗ್ರಾಂ.

ತಾ|| ೮-೩-೨೨ ನೂತನ ರಥೋತ್ಸವ, ೯-೩-೨೨ ರುದ್ರಾಕ್ಷಿ ಮಂಟಪದಲ್ಲಿ ಉತ್ಸವ, ೧೦-೩-೨೨ ನವರಂಗಪಲ್ಲಕ್ಕಿಯಲ್ಲಿ ಉತ್ಸವ, ೧೧-೩-೨೨ ಬಿಲ್ವವೃಕ್ಷವಾಹನದ ಉತ್ಸವ, ೧೨-೩-೨೨ ನಕ್ಷತ್ರ ಮಂಟಪದಲ್ಲಿ ಉತ್ಸವ, ೧೩-೩-೨೨ ಬೆಳ್ಳಿ ಪಲ್ಲಕ್ಕಿಯಲ್ಲಿ ಉತ್ಸವ, ೧೪-೩-೨೨ ಕರೀ ಆನೆವಾಹನದಲ್ಲಿ ಉತ್ಸವ, ೧೫-೩-೨೨ ತೆಪ್ಪೋತ್ಸವ, ಈ ರೀತಿ ದೇವತಾ ಉತ್ಸವಕಾರ್ಯಗಳು ಬಹಳ ವಿಜೃಂಭಣೆಯಿಂದ ನಡೆಯುತ್ತವೆ.

ಸ್ವಾಟ ಶೆಟ್ಟರು, ಯಜಮಾನರು, (ಧರ್ಮದರ್ಶಿಗಳು.)

ಪಂಚಮರು.

ಕೊಪ್ಪೀಸ್‌ಪೇಟೆ ತಾಲ್ಲೂಕಿನಲ್ಲಿ ಪಂಚಮೋದ್ಧರಣಕಾರ್ಯವು ಮುಂದುವರಿಯುತ್ತಿದೆ. ಬನ್ನಿಕುಪ್ಪೆಯ ಪಂಚಮರು ಮದ್ಯಪಾನಾದಿಗಳನ್ನು ಸಂಪೂರ್ಣವಾಗಿ ವಜಮಾಡಿರುವರೆಂದು ಹಿಂದೆಯೊಂದಾವರ್ತಿ ತಿಳಿಸಿದ್ದಿತು. ಅಲ್ಲಿಯ ಪಟೇಲರಾದ ಮ|| ರಾ|| ಬಿ. ಚೌಡಯ್ಯಗೌಡರವರು, ಚಿಕ್ಕ ಅಂಕನಹಳ್ಳಿ, ದೊಡ್ಡ ಅಂಕನಹಳ್ಳಿ ಉಗೇನಹಳ್ಳಿ ಮುಂತಾದ ಗ್ರಾಮಗಳ ಪಂಚಮರಿಗೆ ತಕ್ಕ ಬೋಧನೆಗಳನ್ನು ಮಾಡಿ ಅವರೆಲ್ಲರೂ ಕುಡಿತವನ್ನು ವಜಾಮಾಡುವಂತೆ ಮಾಡಿರುವರು. ಅಂಕನಹಳ್ಳಿಯಲ್ಲಿ ಈಗ ಸುಮಾರು ನೂರು ಜನರು ಸಂಪೂರ್ಣವಾಗಿ ಬಿಟ್ಟುಬಿಟ್ಟಿರುತ್ತಾರೆ. ಈ ಪಂಚಮರಲ್ಲಿ ಮುಖ್ಯಸ್ಥರಾದ ಚಾನು, ಚೌಡ, ಬೋರ ಎಂಬುವರು ತಮ್ಮ ಜನಗಳ ಅಭಿವೃದ್ಧಿಯಲ್ಲಿ ತುಂಬಾ ಶ್ರದ್ಧೆವಹಿಸುತ್ತಿರುವರೆಂದು ತಿಳಿದುಬಂದಿದೆ. ಹಾಗೆಯೇ ಉಗೇನಹಳ್ಳಿಯಲ್ಲಿ ರಾಮ, ದೊಡ್ಡದಾಸ, ದಾಸ ಮುಂತಾದವರು ಮುಂದಾಳುಗಳಾಗಿರುತ್ತಾರೆ. ಇವರ ಈ ವಿಧವಾದ ಉತ್ಸಾಹವು ಇತರ ಪಕ್ಕದ ಹಳ್ಳಿಗಳಿಗೂ ಹಬ್ಬಿ ಕೂಡಲೇ ಈ ತಾಲ್ಲೂಕಿನಲ್ಲಿ ಎಲ್ಲರೂ ನಿಷಾಸೇವನೆಯನ್ನು ವರ್ಜಿಸುವರೆಂದು ಧಾರಾಳವಾಗಿ ನಂಬಬಹುದಾಗಿದೆ. ಇದರಿಂದ ಸಮಾಜಸ್ಥಿತಿಯಲ್ಲಿ ಈ ತಾಲ್ಲೂಕೇ ಎಲ್ಲಾ ತಾಲ್ಲೂಕುಗಳಿಗಿಂತಲೂ ಮುಂದಾಗಬಹುದೆಂದು ನಂಬಬಹುದಾಗಿದೆ. ಇದಕ್ಕೆಲ್ಲ ಬನ್ನಿಕುಪ್ಪೆ ಮ|| ರಾ|| ಬಿ. ಚೌಡಯ್ಯಗೌಡರವರೇ ಕಾರಣಕರ್ತರೆಂದು ತಿಳಿಯಲು ಬಹಳ ಸಂತೋಷವಾಗುತ್ತದೆ. ಇವರಿಗೆ ಮ|| ರಾ|| ಜಿ. ಹನುಮೇಗೌಡರವರು ಸ್ಕೂಲ್ಮಾಸ್ಟರು ಮ|| ರಾ|| ಟಿ. ಮರಿಯಪ್ಪನವರೂ ಒತ್ತಾಸೆಯಾಗಿ ಕೆಲಸಮಾಡುತ್ತಿರುವರು. ಇವರ ಸನ್ಮಾರ್ಗವನ್ನು ದೇಶಹಿತೈಷಿಗಳೆಲ್ಲಾ ಅನುಸರಿಸಿ ಕೆಲಸಮಾಡಿ ದೀನರಕ್ಷಕನಾದ ಭಗವಂತನ ಕೃಪೆಗೆ ಪಾತ್ರರಾಗಲೆಂದು ಕೋರುತ್ತೇನೆ. ದೇಶೋದ್ಧಾರಕರ ಸೇವಕ.

ಶ್ರೀ ಹಿಮವತ್ಕೇದಾರದ ಜಗದ್ಗುರುಗಳು (ರಾಯದುರ್ಗ.)

ನಾನು ಕಳೆದ ತಿಂಗಳು ತಾ|| ೧೩ಕ್ಕೆ ರಾಯದುರ್ಗಕ್ಕೆ ಹೋದೆನು. ಆ ಕಾಲಕ್ಕೆ ಅಂದರೆ ತಾ|| ೧೫ಕ್ಕೆ ಜಗದ್ಗುರುಗಳು ಪುರಪ್ರವೇಶ ಮಾಡುತ್ತಾರೆಂಬುದನ್ನು ಕೇಳಿ ನಿಂತುಬಿಟ್ಟೆನು. ತಾ|| ೧೫ಕ್ಕೆ ಆ ಪಟ್ಟಣದ ತುಂಬಾ ಪರಸ್ಥಳದ ಜನರು ತುಂಬಿಬಿಟ್ಟರು. ಹೋಟೇಲ್ ಮನೆಗಳಲ್ಲಿ ೧ ಊಟಕ್ಕೆ ೮ ಆಣೆಯಾಯಿತು. ಬೀದಿಗಳಲ್ಲಿ ಎಲ್ಲಿ ನೋಡಿದರೂ ಜಗದ್ಗುರುಗಳ ಆಗಮನದ ಬಿರುದಾಂಕಿತದ ಪಟಗಳು ಕಟ್ಟಲ್ಪಟ್ಟಿದ್ದುವು. ತಾ|| ೧೫ರಲ್ಲಿ ಪಟ್ಟಣದ ತುಂಬಾ ಜನಗಳ ಗಲಾಟೆ ಬಹಳವಾಯಿತು. ಸಾಯಂಕಾಲಕ್ಕೆ ಸರಿಯಾಗಿ ಮಹಾಸ್ವಾಮಿಯು ದಿಗ್ವಿಜಯ ಮಾಡಿತು. ಆಗ ಶೃಂಗಾರನಿರ್ಮಿತವಾದ ಅಡ್ಡಪಲ್ಲಕ್ಕಿಯಲ್ಲಿ ಜಗದ್ಗುರುಗಳು ಪರಮೇಶ್ವರನಂತೆ ಒಪ್ಪುತ್ತಿದ್ದರು. ಆನೆಗಳು ಕುದುರೆಗಳ ಸಾಲುಗಳ ಕುಣಿತ ಜಯಘೋಷ ಮುಂತಾದವುಗಳೊಡನೆ ಪುರಪ್ರವೇಶವಾಯಿತು. ಆ ಗ್ರಾಮದ ಶ್ರೀಮಂತರಾದ ಮ|| ರಾ|| ಕೆರಿನಾಗಶೆಟ್ಟಿ ಶರಣಪ್ಪನವರು ಗಡಿಗೆ ಸಂಗೂರಪ್ಪನವರು ಸೊಂಡೂರು ಮುರಿಗೆಪ್ಪನವರು ಡಿಪ್ಟಿ ಕಲೆಕ್ಟರ್‌ಸಾಹೇಬರವರು ತಹಶೀಲ್‌ದಾರರವರು ಇನ್ಸ್‌ಪೆಕ್ಟರರೇ ಮೊದಲಾದವರು ಅಡ್ಡಪಲ್ಲಕ್ಕಿ ಮುಂಭಾಗದಲ್ಲಿ ಜನಗಳ ಗಲಾಟೆಯಿಲ್ಲದಂತೆ ನೋಡಿಕೊಳ್ಳುತ್ತಿದ್ದರು ಈ ಗ್ರಾಮದಲ್ಲಿ ವೀರಶೈವರ ಸಂಖ್ಯೆಯು ಬಹಳ ಕಡಿಮೆಯಿದ್ದಂತೆ ತೋರುತ್ತದೆ. ಇದ್ದುದರೊಳಗೆ ಭೂಮಿಕೆಯೊಂದಿದ ಮನೆತನದವರಾದ ಶ್ರೀಮಂತ ಗಡಿಗೆ ಸಂಗೂರಪ್ಪನವರ ಸಾಹಸಕ್ಕೆ ಬಂದ ಜನರೆಲ್ಲರೂ ಅತನನ್ನು ಕೊಂಡಾಡುತ್ತಿದ್ದರು ಆ ನಂತರ ಉಳಿದ ಶ್ರೀಮಂತ ವೀರಶೈವರೆಲ್ಲರೂ ಜಗದ್ಗುರುಗಳ ವಿಷಯದಲ್ಲಿಯೂ ಸಮಾಜ ವಿಷಯದಲ್ಲಿಯೂ ಮುಂದುವರಿದರೆ ವೀರಶೈವ ಮತವು ಎಷ್ಟೋ ಅಭಿವೃದ್ಧಿಗೆ ಬರುವುದು. ಮಹಾಸ್ವಾಮಿಯು ಬಾಸಬಿತಗೆ ದಯಮಾಡಿದ ಮೇಲೆ ಸರ್ವರೂ ಆಶೀರ್ವಾದಪಡೆದು ತಮ್ಮ ತಮ್ಮ ನೆಲೆಗೆ ತೆರಳಿದರು. ಪ್ರತ್ಯಕ್ಷದರ್ಶಿ.

ಸಮಾಜಸೇವೆಯೇ ದೇವರಸೇವೆಯು.

ತಾ|| ೨೪-೨-೧೯೨೨ ದಿವಸ ಇಲ್ಲಿಯ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ವಾಚನಾಲಯದವರ ವ್ಯವಸ್ಥೆಯ ಕೆಳಗೆ ಅಸ್ಪೃಶ್ಯವರ್ಗದವರದೊಂದು ಕಮಿಟಿಯು ಕೂಡಿತ್ತು. ಈ ಕಮಿಟಿಗೆ ಇಲ್ಲಿಯ ಎಂಬತ್ತು ಬ್ರಾಹ್ಮಣೇತರ ಜನರು ನೆರೆದಿದ್ದು ಇಲ್ಲಿಯ ಮೆಂಬರ ಜನರು ಅಸ್ಪೃಶ್ಯವರ್ಗದವರ ಉದ್ಧಾರ ಈ ವಿಷಯದಮೇಲೆ ಎಂಬತ್ತು ಅಸ್ಪೃಶ್ಯವರ್ಗದವರಿಗೆ ತಿಳಿಯುವಂತೆ ಭಾಷಣಮಾಡಿದಮೇಲೆ ಕೆಳಗಿನ ಠರಾವುಗಳು ಸರ್ವಾನುಮತಿಯಿಂದ ಪಾಸಾದವು. ೧. ಈ ಹೂಲಿಯ ಗ್ರಾಮದಲ್ಲಿ ಹೊಲೆಯರೂ ಮಾದಿಗರೂ ಕೂಡಿ ೧೫೦ ಜನರಿದ್ದು ಇಲ್ಲಿ ಒಂದು ಢೇಡಸ್ಕೂಲ ಸ್ಥಾಪಿಸುವದು ಮುಖ್ಯವಾದ ಕಾರಣ ಈ ಕಮಿಟಿಯವರು ಸರ್ಕಾರಕ್ಕೆ ತೀವ್ರ ಶಾಲೆಯನ್ನು ಸ್ಥಾಪಿಸುವದಕ್ಕೆ ವಿನಂತಿಮಾಡಿಕೊಳ್ಳುತ್ತೇವೆ. ೨. ಹಿಂದೆ ಈ ಊರಲ್ಲಿ ಢೇಡಸ್ಕೂಲ ಇದ್ದು ಕೆಲವು ಅಸೂಯಾಪರರ ಪ್ರೋತ್ಸಾಹದಿಂದ ಶಾಲೆಯ ವ್ಯವಸ್ಥೆಯು ಸ್ವಲ್ಪ ಕೆಟ್ಟದ್ದರಿಂದ ಸರಕಾರದವರು ಶಾಲೆಯನ್ನು ತೆಗೆದುಹಾಕಿದ್ದಕ್ಕೆ ಈ ಕಮಿಟಿಯವರು ವಿಷಾದಿಸುತ್ತಾರೆ. ೩. ಪ್ರತಿವಂದು ಗ್ರಾಮದಲ್ಲಿ ರಾಜನಿಷ್ಠಾಸಂಘವನ್ನು ಸ್ಥಾಪಿಸಿ ಅದರಮುಖಾಂತರ ಕೆಲವು ಸ್ವಯಂಸೇವಕರನ್ನು ಗೊತ್ತುಮಾಡಿ ಅಗ್ಗೆ ಜನರ ಶಾಂತತಾಭಂಗಮಾಡತಕ್ಕ ಜನರ ತಂಟವನ್ನು ಖಂಡನಮಾಡಬರುವಂತೆ ಆ ಸ್ವಯಂಸೇವಕರಿಗೆ ತಿಳಿಸತಕ್ಕದ್ದು. ಸದರಿ ಸ್ವಯಂಸೇವಕರ ವ್ಯವಸ್ಥೆಯನ್ನು ಆ ಆ ಸಂಘದವರೇ ಮಾಡತಕ್ಕದ್ದು. ಈಪ್ರಕಾರ ಸಭೆಯಲ್ಲಿ ಠರಾವುಗಳು ಪಾಸಾದ ಮೇಲೆ ಜಗದ್ಗುರು ವಿಶ್ವಾರಾಧ್ಯರ ಆಶೀರ್ವಾದದಿಂದ ಸ್ಥಾಪಿಸಲ್ಪಟ್ಟ ರಾಜನಿಷ್ಠಾ ಸಂಘಕ್ಕೆ ಬ್ರಾಹ್ಮಣೇತರ ಜನರ ಪ್ರೋತ್ಸಾಹ ಕೊಟ್ಟದ್ದಲ್ಲದೆ ಅನೇಕ ಜನರು ಮೆಂಬರರಾದರು. ಮುಂದೆ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಸೆಕ್ರೆಟರಿ, ಶ್ರೀಮಜ್ಜಗದ್ಗುರು ವಿಶ್ವಾರಾಧ್ಯವಾಚನಾಲಯ ಹುಲಿ.

ವೀರಶೈವರ ಏಳಿಗೆ.

ತಾರೀಖು ೨೪-೨-೧೯೨೨ ಇಸವಿ ದಿವಸ ಮಹಾಶಿವರಾತ್ರಿ ಇದ್ದ ಮೂಲಕ ಇಲ್ಲಿಯ ಶ್ರೀ ಪಂಚಲಿಂಗೇಶ್ವರ ದೇವಾಲಯದಲ್ಲಿ ಪ್ರತಿವರ್ಷ ಜರಗುವಂತೆ ಇಲ್ಲಿಯ ವೀರಶೈವ ತರುಣಸಂಘದವರು ಹೂಲಿಯಿಂದ ಬಂದ ವೇ|| ಚನ್ನಬಸವಸ್ವಾಮಿ ಹಿರೇಮಠ ಇವರಕಡೆಯಿಂದ ಸಂಜೆ ೮ ಘಂಟೆಯಿಂದ ಬೆಳಗಿನ ೪ ಘಂಟೆಯವರೆಗೆ ವಿಧಿಪೂರ್ವಕವಾಗಿ ರುದ್ರಾಭಿಷೇಕ ಮೊದಲಾದ ಪೂಜಾವಿಧಾನವನ್ನು ಒಳ್ಳೇ ಉತ್ಸಾಹಪೂರ್ವಕವಾಗಿ ಜರುಗಿಸಿದರು. ಮತ್ತು ತಾ|| ೨೫-೨-೨೨ ದಿವಸ ಶನಿವಾರ ಮುಂಜಾನೆ ೬ ಘಂಟೆಯಿಂದ ಸಂಜೆ ೨ ಘಂಟೆಯವರೆಗೆ ಗಣಾರಾಧನೆಯಾದ ನಂತರ ಸಂಜೆಯ ೪|| ಘಂಟೆಯ ಸುಮಾರಕ್ಕೆ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯರ ಪಂಡಿತಾರಾಧ್ಯರ ಜಯಂತಿ ಉತ್ಸವದ ಮೆರವಣಿಗೆಯು ಪಂಚಲಿಂಗೇಶ್ವರ ದೇವಾಲಯದಿಂದ ಹೊರಟು ಒಳ್ಳೇ ವೈಭವದಿಂದಲೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಘೋಷದಿಂದಲೂ ಸಂಜೆಯ ೬ ಘಂಟೆಗೆ ಇಲ್ಲಿಯ ಶ್ರೀ ಬಸವೇಶ್ವರ ಪ್ರಾಸಾದಿಕ ಲೈಬ್ರರಿಗೆ ಬಂದು ತಲ್ಪಿತು. ಮುಂದೆ ಪಂಚಾಚಾರ್ಯರ ಭಾವಚಿತ್ರದ ಅಧ್ಯಕ್ಷತೆಯ ಕೆಳಗೆ ಸಭೆಯುಸೇರಿ (ಜಯಂತಿ) ಈ ವಿಷಯದಮೇಲೆ ಹೂಲಿಯ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ಕಡೆಯಿಂದ ಬಂದ ಶ್ರೀ|| ಮರುಳಸಿದ್ಧಯ್ಯಾ ಶಿರವಾಳಮಠ ಸಾ|| ರಾಮದುರ್ಗ ಇವರು ಭಾಷಣಮಾಡಿದ ನಂತರ (ವೀರಶೈವರಿಗೆ ಅಕಂತ ಅವಶ್ಯಕತೆ) ಈ ವಿಷಯದಮೇಲೆ ಮ|| ರಾ|| ರಾ|| ನರಪ್ಪನವರು ಬಾಳಿ ಇವರು ಭಾಷಣಮಾಡಿದ ನಂತರ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು. ೧. ನಮ್ಮ ಧರ್ಮದ ಜಯಂತಿ ಉತ್ಸವಗಳನ್ನು ರೂಢಿಯಲ್ಲಿತಂದು ಅದರ ಮಹತ್ವವನ್ನು ಜನರಿಗೆ ಪ್ರಕಟಪಡಿಸುವದು. ೨. ವೀರಶೈವರಲ್ಲಿ ಇದ್ದ ಮನವೈಷಮ್ಯಗಳನ್ನು ತೆಗೆದುಹಾಕುವದು. ೩. ನಮ್ಮ ಧರ್ಮದ ಜನರಲ್ಲಿ

ಗಿವೆ. ಇದರಲ್ಲಿ ಅರ್ಹರಾದವರ ಹೆಸರು ಬಿಟ್ಟುಹೋಗಿದ್ದಲ್ಲಿ ಅಂತಹವರು ಕೂಡಲೆ ಆ ಡಿಸ್ಟ್ರಿಕ್ಟಿನ ಡೆ|| ಕಮಿಷನರಿಗೆ ಬರೆದುಕೊಳ್ಳತಕ್ಕದ್ದು.

ಹಾಸನದ ಡಿ|| ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಎಂ. ಅಬ್ದುಲ್‌ಹಕ್, ಬಿ. ಎ., ಯವರಿಗೆ ಈ ತಾ|| ೫ ರಿಂದ ಅಥವಾ ಅವರುಪಯೋಗಿಸಿಕೊಳ್ಳುವ ದಿನದಿಂದ ೧೫ ದಿನಗಳ ರಜವು ಕೊಡಲ್ಪಟ್ಟಿರುವುದರಿಂದ ಅವರು ಬರುವವರೆಗೆ ಪ್ರ|| ಅ|| ಕಮಿಷನರ್ ಮ|| ಪಿ. ಸೂರ್‍ಯನಾರಾಯಣಸೆಟ್ಟಿ, ಬಿ.ಎ., ಎಲ್‌ಎಲ್.ಬಿ. ಯವರು ಡೆ|| ಪೋಲೀಸ್ ಸೂಪರಿಂಟೆಂಡೆಂಟ್ ಉದ್ಯೋಗವನ್ನೋಡಿಕೊಳ್ಳಲು ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಲಷ್ಕರ್‌ಮಹಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳಾದ ಮ|| ಬಿ. ಬಸವಾರಾಧ್ಯರು, ಮಿ|| ಮಹಮುದ್ ಸೇಟರು, ಮ|| ಧನಕೋಟಿಶೆಟ್ಟರು ಮತ್ತು ಮ|| ವೈ. ವಿರೂಪಾಕ್ಷಯ್ಯನವರು ಕಳೆದ ಭಾನುವಾರ ಮ್ಯು|| ಕಲೆಕ್ಟರು, ಶೇಕದಾರರು ಮತ್ತು ಮುತ್ಸದ್ದಿಗಳೊಡನೆ ತಮ್ಮ ಮಹಲ್ಲಾದಲ್ಲಿ ಹೊಸದಾಗಿ ಕಂದಾಯವನ್ನು ಹಾಕಿರುವ ಕೆಲ ಮನೆಗಳನ್ನು ಪರೀಕ್ಷಿಸಿ ಅವುಗಳ ಯೋಗ್ಯಾತಾನುಸಾರ ಹೆಚ್ಚು ಕಡಿಮೆಯನ್ನು ಮಾಡಿದುದಲ್ಲದೆ ಯಾವ್ಯಾವಸ್ಥಲದಲ್ಲಿ ಶುಚೀಕರ್ಣವು ಎಷ್ಟರಮಟ್ಟಿಗೆ ನಡೆಯುತ್ತಿದೆಯೆಂಬುದನ್ನೂ ಜನರಿಗೆ ಯಾವ ವಿಚಾರದಲ್ಲಿ ತೊಂದರೆಯಿರುತ್ತದೆಂಬುದನ್ನೂ ಕೇಳಿ ತಿಳಿದುಕೊಂಡು ಬಂದರೆಂದೂ, ಇದರಿಂದ ಕಂದಾಯವನ್ನು ಕೊಡುವ ಜನರಿಗೆ ಎಷ್ಟೋ ಸಂತೋಷವಾಯಿತೆಂದೂ, ಇದೇ ರೀತಿ ಇತರ ಮಹಲ್ಲೆಗಳ ಮ್ಯು|| ಕೌನ್ಸಿಲರುಗಳು ವಾರಕ್ಕೊಂದಾವರ್ತಿ ವಿರಾಮ ಮಾಡಿಕೊಂಡು ತಂತಮ್ಮ ಸರಹದ್ದುಗಳಲ್ಲಿ ಸಂಚರಿಸಿ ಜನರ ಕುಂದುಕೊರತೆಗಳ ಭಾಗಗಳನ್ನು ವಿಚಾರಿಸಿ ಅನುಕೂಲಪಡಿಸಿಕೊಡಲು ಪ್ರಯತ್ನಿಸಿದಲ್ಲಿ ಜನರಿಗೆ ಮಹೋಪಕಾರ ಮಾಡಿದಂತಾಗುತ್ತದೆಂದೂ ಒಬ್ಬ ನಗರವಾಸಿಗಳು ಬರೆದಿರುತ್ತಾರೆ.

ಮೈಸೂರು ಪೇಟ್ರಿಯಟ್ ಮತ್ತು ಸಂಪದಭ್ಯುದಯ ಪತ್ರಿಕೆಗಳಲ್ಲಿ ರಾಜದ್ರೋಹಕಾರಕವಾದ ಲೇಖನಗಳು ಬರೆಯಲ್ಪಟ್ಟಿದ್ದುವೆಂಬ ಅಪರಾಧದಮೇಲೆ ಈ ಪತ್ರಿಕೆಗಳ ಸಂಪಾದಕರಾದ ಮ|| ಎಂ. ವೆಂಕಟಕೃಷ್ಣಯ್ಯನವರು ಬೆಂಗಳೂರಲ್ಲಿ ಚೀಫ್‌ಜಡ್ಜ್ ಸರ್ ಎಲ್. ಮಿಲ್ಲರ್‌ರವರಿಂದ ನೆನ್ನೆಯದಿನ ವಿಚಾರಿಸಲ್ಪಡತಕ್ಕವರಾಗಿದ್ದರು. ಇವರಪರ ವಕೀಲಿಯನ್ನು ಮದ್ರಾಸ್ ಅಡ್ವೋಕೇಟ್ ಜನರಲ್ಲಾಗಿದ್ದ ದಿ|| ಬ|| ಕೃಷ್ಣಸ್ವಾಮಯ್ಯಂಗಾರ್ ಸಿ.ಐ.ಇ. ಯವರು ವಹಿಸಿರುವರು. ಈ ವಿವಾದವನ್ನು ನಡಿಸುವುದರ ವೆಚ್ಚಕ್ಕಾಗಿ ಮ|| ವೆಂಕಟಕೃಷ್ಣಯ್ಯನವರ ಹಿತೈಷಿಗಳೆಲ್ಲರೂ ದ್ರವ್ಯಸಹಾಯ ಮಾಡಬೇಕೆಂದು ಮ|| ನೆಟ್ಲೂರ್‌ರವರು ಹಿಂದೂಪತ್ರಿಕೆಯ ಮೂಲಕ ಪ್ರಾರ್ಥಿಸಿಕೊಂಡಿರುತ್ತಾರೆ. ಮ|| ವೆಂಕಟಕೃಷ್ಣಯ್ಯನವರಿಗೆ ಶ್ರೀಮತ್ ಮಹಾರಾಜರವರ ಕೃಪೆಯಿಂದ ಸಲ್ಲುತ್ತಿದ್ದ ೫೦ ರೂ. ಮಾಸಾಶನವು ಈ ಸಂದರ್ಭದಲ್ಲಿ ನಿಲ್ಲಿಸಲ್ಪಟ್ಟಿರುವುದಾಗಿ ವರ್ತಮಾನವಿದೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ ಮೀಟಿಂಗು ಕಳೆದ ತಾ|| ೧೦ ರ ಸಾಯಂಕಾಲ ಟೌನ್‌ಹಾಲಿನಲ್ಲಿ ನಡೆದು ಹೋದವರ್ಷ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಮ್ಯುನಿಸಿಪಾಲಿಟಿಯಿಂದ ಹೋಗಿದ್ದ ಮ|| ಗಳಾದ ಧರ್ಮಪ್ರಕಾಶ ಬನುಮಯ್ಯನವರು, ಎಂ. ಮಾದಪ್ಪನವರು, ಸೆಟ್ಟಪ್ಪ ಸಿದ್ದಪ್ಪನವರು ಮತ್ತು ಸೆಟ್ಟಾಚಿರಾಯರು—ಈ ನಾಲ್ವರು ವರ್ಧಂತಿ ಮಹೋತ್ಸವಕಾಲದಲ್ಲಿ ನಡಿಯುವ ಪ್ರಜಾಪ್ರತಿನಿಧಿ ಸಭೆಗೆ ಹೋಗತಕ್ಕದೆಂದು ಗೊತ್ತಾದುದಲ್ಲದೆ, ರಾಜಧಾನಿಯ ಲಷ್ಕರ್ ಮೊಹಲ್ಲಾದಲ್ಲಿರುವ ವೀರನಗೆರೆ ಮೊದಲಾದ ಎತ್ತರವಾದ ಪ್ರದೇಶಗಳಲ್ಲಿ ಈಗಿರುವ ನಲ್ಲಿಗಳಲ್ಲಿ ನೀರು ಹತ್ತದೆ ಜನರಿಗೆ ಬಹಳ ತೊಂದರೆಯಾಗಿರುವ ಪ್ರಯುಕ್ತ ಹೈಪ್ರಷರ್‌ನಿಂದ ನೀರುಹತ್ತುವ ಏರ್ಪಾಟು ಮಾಡಿಸಿಕೊಡಬೇಕು, ಮತ್ತು ಬಹಳಜನ ವಾಸವಾಗಿರುವಕಡೆ ನೀರಿನ ನಲ್ಲಿ-ಕೊಳಾಯಿಗಳನ್ನಿಡಿಸಿಕೊಡಬೇಕು; ಈಗ ಟ್ರಸ್ಟ್‌ಬೋರ್ಡೂ ಮ್ಯುನಿಸಿಪಾಲಿಟಿಯೂ ಬೇರೆಬೇರೆ ಇಲಾಖೆಗಳಾಗಿರುವುದನ್ನು ತಪ್ಪಿಸಿ ಟ್ರಸ್ಟ್‌ಬೋರ್ಡನ್ನು ಮ್ಯುನಿಸಿಪಾಲಿಟಿಗೆ ಸೇರಿಸಿಕೊಡಬೇಕು; ಅವರು ಪ್ರೆಸಿಡೆಂಟರಿಗೂ ವೈಸ್‌ಪ್ರೆಸಿಡೆಂಟರಿಗೂ ಎಕ್ಸಿಕ್ಯುಟಿವ್ ಅಧಿಕಾರವಿರುವುದರಿಂದ ಚೀಫ್‌ಆಫೀಸರ ಸ್ಥಾನವನ್ನು ತಪ್ಪಿಸಿ ಖರ್ಚು ಕಡಿಮೆಯಾಗುವಂತೆ ಮಾಡಿಸಬೇಕು; ವಿದ್ಯುಚ್ಛಕ್ತಿಯ ದೀಪದ ಛಾರ್ಜು ದುಬಾರಿಯಾಗಿರುವುದರಿಂದ ಮದ್ರಾಸು ಬೊಂಬಾಯಿ ಮೊದಲಾದ ಪಟ್ಟಣಗಳಲ್ಲಿರುವಂತೆ ಪ್ರತಿಯೊಂದು ಲೈಟಿಗೂ ಛಾರ್ಜುಮಾಡದೆ ಒಟ್ಟು ಮಿನಿಮಂ ಛಾರ್ಜನ್ನು ಗೊತ್ತುಮಾಡಿ ಹೆಚ್ಚಾಗಿ ಉಪಯೋಗಿಸಿಕೊಂಡುದಕ್ಕೆ ಮೀಟರ್‌ಪ್ರಕಾರ ಛಾರ್ಜುಮಾಡುವಂತೆ ಅನುಕೂಲಪಡಿಸಿಕೊಡಬೇಕು; ರಾಜಧಾನಿಯ ವರ್ತಕರುಗಳಿಗೆ ವ್ಯಾಪಾರಸೌಕರ್ಯಕ್ಕಾಗಿ ಟೆಲಿಫೋನನ್ನು ಇಡಿಸಿಕೊಡಬೇಕು, ಅನೇಕ ವರ್ತಕರು ಇದನ್ನಿಡಿಸಿಕೊಳ್ಳಲು ಸಿದ್ಧರಾಗಿರುವರು; ಮ್ಯುನಿಸಿಪಲ್ ಎಲ್ಲೆಯೊಳಗಿರುವ ಮಾದಕಪದಾರ್ಥದ ಅಂಗಡಿಗಳ ಕಂದಾಯದಲ್ಲಿ ಒಂದು ಭಾಗವು ಮ್ಯುನಿಸಿಪಾಲಿಟಿಗೆ ಸಲ್ಲುವಂತಾಗಬೇಕು; ಆರಿಸಲ್ಪಡುವ ಕೌನ್ಸಿಲರುಗಳ ಸಂಖ್ಯೆಯನ್ನು ೨೦ ರಿಂದ ೨೫ ಕ್ಕೆ ಹೆಚ್ಚಿಸಿಕೊಡಬೇಕು; ಸಿವಿಲ್ ಕೋರ್ಟುಗಳಲ್ಲಿ ದಾವಾ ದಾಖಿಲಾದಾರಭ್ಯ ಸಾಲಿಯಾನ ಶೇಕಡ ೬ ರೂಪಾಯಿನಂತೆ ಬಡ್ಡಿಯ ದರವನ್ನು ವಿಧಿಸುವರು, ಈಗ ಬ್ಯಾಂಕಿನ ಬಡ್ಡಿಯು ಸಹ ೧೨ ರೂ. ನಂತೆ ಇರುವುದ್ದರಿಂದ ವರ್ತಕರಿಗ ನಷ್ಟವಾಗದಂತೆ ಶೇಕಡ ೧೨ ರೂ. ನಂತೆ ಬಡ್ಡಿಯ ದರವನ್ನು ವಿಧಿಸುವಹಾಗೆ ಅಪ್ಪಣೆಯಾಗಬೇಕು. ಮತ್ತು ಮೊಕದ್ದಮೆಗಳು ವರ್ಷಗಟ್ಟಲೆ ಫೈಸಲಾಗದೆ ಕಕ್ಷಿಗಾರರಿಗೆ ಹೇಳಲಾರದಷ್ಟು ನಷ್ಟ ಕಷ್ಟಗಳುಂಟಾಗುತ್ತಿರುವುದರಿಂದ ಬೇರೆ ಸರ್ಕಾರಗಳಲ್ಲಿ ನಡಿಯುವರೀತಿ ೩ ರಿಂದ ೬ ತಿಂಗಳುಗಳೊಳಗಾಗಿ ಫೈಸಲ್ಮಾಡುವಂತೆ ಏರ್ಪಾಟಾಗಬೇಕು; ಅದಾಯದ ತೆರುಗೆಯನ್ನು ವಿಧಿಸುವಾಗ್ಗೆ ವರ್ತಕರುಗಳಿಗೆ ವ್ಯಾಪಾರಸಂಬಂಧದಲ್ಲಿ ನ್ಯಾಯವಾಗಿ ಮಾಡಬೇಕಾಗಿರುವ ಖರ್ಚನ್ನು ಸಹ ಸೇರಿಸಬೇಕೆಂದೂ, ಗಾಡಿಬಾಡಿಗೆ ಮೊದಲಾದ ಸಣ್ಣಪುಟ್ಟ ಖರ್ಚುಗಳಿಗೆಲ್ಲಾ ವೋಚರುಗಳನ್ನು ತೋರಿಸಬೇಕೆಂದೂ ನಿರ್ಬಂಧಪಡಿಸುತ್ತಾರೆ. ಇದು ಸಾಧ್ಯವಲ್ಲವಾದುದರಿಂದ ಆ ರೀತಿ ನಿರ್ಬಂಧಪಡಿಸದ ಹಾಗೆ ಅಪ್ಪಣೆಯಾಗಬೇಕು. ಇತ್ಯಾದಿ ಸಬ್ಜೆಕ್ಟುಗಳು ಕಳುಹಿಸಿಕೊಡಬೇಕಾಗಿ ನಿರ್ಧರಿಸಲ್ಪಟ್ಟಿತು.

ದಿವಾನ್ ಸರ್ ಕಾಂತರಾಜ ಅರಸಿನವರ ದೇಹಾಲಸ್ಯ.

ಸರ್ ಕಾಂತರಾಜ ಅರಸಿನವರ ಸೋದರಳಿಯಂದರಾದ ಗುಬ್ಬಿ ಸಬ್ ಡಿವಿಜನ್ನಿನ ಅಸಿಸ್ಟೆಂಟ್ ಕಮಿಷನರಾದ ಮ|| ಬಾಳರಾಜಅರಸಿನವರು ಕುದುರೆಸ್ವಾರಿಯಿಂದ ತಮ್ಮ ಪೃಷ್ಠಭಾಗದಲ್ಲಿ ಗಾಯವಾಗಿ ಬಾಧೆಯು ಹೆಚ್ಚಾದುದರ ಮೇಲೆ ರಾಜಧಾನಿಗೆ ದಯಮಾಡಿ ಕೋಟೆಯಲ್ಲಿರುವ ದಿವಾನರ ಮನೆಯಲ್ಲಿದ್ದುಕೊಂಡು ಡಾಕ್ಟರ್ ಅರ್ಮುಗಂ ಮೊದಲಿಯಾರರು ಮತ್ತು ಡಾ|| ರಂಗಾಚಾರ್‍ಯರುಗಳಿಂದ ಚಿಕಿತ್ಸೆಯನ್ನು ಹೊಂದುತ್ತಿದ್ದರು. ದಿವಾನರು ಇವರನ್ನು ನೋಡುವುದಕ್ಕಾಗಿ ಆಚೆವಾರದಲ್ಲಿ ರಾಜಧಾನಿಗೆ ಬೆಂಗಳೂರಿಂದ ದಯಮಾಡಿಸಿ ಮ|| ಬಾಳರಾಜ ಅರಸಿನವರಿಗೆ ಶಸ್ತ್ರಚಿಕಿತ್ಸೆಯಾಗುತ್ತಿದ್ದುದನ್ನು ನೋಡುತ್ತಿರುವಾಗ್ಗೆ ಇವರ ಕಣ್ಣುಗಳು ತಿರುಗಿ ಸ್ಮೃತಿತಪ್ಪಿತು. ಆ ಕೂಡಲೆ ಡಾಕ್ಟರುಗಳ ಔಷಧೋಪಚಾರ ನಡೆದು ಸ್ಮೃತಿಯು ಬಂದನಂತರ ತಮ್ಮ ಜಯಲಕ್ಷ್ಮೀವಿಲಾಸ ಪ್ರಾಸಾದಕ್ಕೆ ತೆರಳಿ ಔಷಧೋಪಚಾರದಿಂದ ಗುಣವನ್ನು ಹೊಂದುತ್ತಿರುವರೆಂದು ತಿಳುಹಲು ಪರಮಾನಂದವಾಗುತ್ತದೆ. ಆದರೆ ಬೆಂಗಳೂರಿನ ಯಾರೋ ಒಬ್ಬ ಸುದ್ದಿದಾಯಕನು ದಿವಾನ್ ಕಾಂತರಾಜ ಅರಸಿನವರಿಗೆ ಲಕವಹೊಡೆದು ಅವರ ದೇಹಸ್ಥಿತಿಯು ಬಹಳ ಅಪಾಯಕರವಾಗಿದೆಯೆಂದೂ, ಮುಂದೆ ಉದ್ಯೋಗವನ್ನು ಮಾಡಲಾಗುವುದಿಲ್ಲವೆಂದು ಡಾಕ್ಟರು ಅಭಿಪ್ರಾಯಪಟ್ಟಿರುತ್ತಾರೆಂದೂ ಈ ಕಾರಣದಿಂದ ಅರಸಿನವರು ಮುಂದೆ ಉದ್ಯೋಗಕ್ಕೆ ಬರುವುದಿಲ್ಲವಾದ ಪ್ರಯುಕ್ತ ಸದ್ಯದಲ್ಲಿ ಮಿ|| ಬಾನರ್ಜಿಯವರು ದಿವಾನಗಿರಿಯನ್ನು ಅನಿತ್ಯವಾಗಿ ನೋಡುತ್ತಿದಾರೆ, ಒಂದು ವೇಳೆ ಇವರು ದಿವಾನರಾಗಿ ನಿಯಮಿಸಲ್ಪಡದಿದ್ದರೆ ಮುಂದೆ ನಿಯಮಿಸಲ್ಪಡಬಹುದಾದವರ ಹೆಸರುಗಳನ್ನೂ ಇದರಿಂದುಂಟಾಗುವ ಕೆಲ ಉದ್ಯೋಗಗಳ ಬದಲಾವಣೆಗಳನ್ನೂ ಸೂಚಿಸಿ ಒಂದು ಲೇಖನವನ್ನು ಬರೆದು ಜನರ ಮನಸ್ಸಿನಲ್ಲಿ ಕಳವಳವನ್ನುಂಟುಮಾಡಿದಾರೆ. ಈ ರೀತಿ ಊಹಿಸಿ ಬರೆಯಲು ಆ ಲೇಖಕರ ಉದ್ದೇಶವೇನಿದ್ದಿತೋ ತಿಳಿಯದು.

ಆದರೆ ಸರ್ ಕಾಂತರಾಜ ಅರಸಿನವರ ದೇಹಸ್ಥಿತಿಯು ಸಂಪೂರ್ಣ ಗುಣಮುಖವಾಗಿ ಉದ್ಯೋಗದ ಮೇಲೆ ಹೋಗುವಂತಿರುವುದಾದರೂ ವೈದ್ಯರು ಅಭಿಪ್ರಾಯಪಟ್ಟಲ್ಲಿ ಸ್ವಲ್ಪಕಾಲ ವಿಶ್ರಮಿಸಿಕೊಳ್ಳುವುದುತ್ತಮವೆಂದು ತೋರುತ್ತದೆ. ಸ್ವದೇಶಹಿತ ಚಿಂತನೆಯಲ್ಲಿ ಮಗ್ನರಾಗಿರುವ ಸರ್ ಕಾಂತರಾಜ ಅರಸಿನವರು ಮೊದಲಿಗಿಂತಲೂ ಅಧಿಕವಾದ ದೇಹದಾರ್ಢ್ಯವನ್ನು ಹೊಂದಿ ವಿಶೇಷ ಉತ್ತರವಾದಿತ್ವವುಳ್ಳ ಮಂತ್ರಿಪದವಿಯನ್ನು ಬಹಳಕಾಲ ನಿರ್ವಹಿಸುವಂತೆ ಆಶೀರ್ವದಿಸಬೇಕೆಂದು ಮೈಸೂರು ದೇಶೀಯರೆಲ್ಲರೂ ಅನನ್ಯಭಾವದಿಂದ ಈಶ್ವರನನ್ನು ಪ್ರಾರ್ಥಿಸುತ್ತಾರೆ.

ತಾಂಬೂಲ ಸೇವನೆ.

ನವಯುಗ ಪತ್ರಿಕೆಗೆ ಈ ಕೆಳಗೆ ಕಂಡ ಲೇಖನವನ್ನು ಒಬ್ಬರು ಬರೆದಿರುತ್ತಾರೆ.—

ದೇಶದ ಉಚ್ಛ್ರಾಯಸ್ಥಿತಿಗೆ ಅಡ್ಡಕಟ್ಟುವ ಸೇಂದಿ, ಶರಾಬು, ಗಾಂಜಾ, ಅಫೀಮು ಮುಂತಾದ ಮಾದಕ ಪದಾರ್ಥಗಳ ಸೇವನೆಯ ದುರಾಭ್ಯಾಸಗಳನ್ನು ನಿವಾರಿಸಲು ರಾಷ್ಟ್ರಭಕ್ತರು ತಮ್ಮ ತನುಮನ ಧನಗಳನ್ನು ವೆಚ್ಚಮಾಡುತ್ತಿರುವರು. ಜನರ ಸಾಂಪತ್ತಿಕ ಸ್ಥಿತಿಯನ್ನು ಕುಂದಿಸುವ ಹಾಗೂ ದೇಹ ಸುಖವನ್ನು ಕೆಡಿಸುವ ಹಾಳು ಅಭ್ಯಾಸಗಳಿಗೆ ಈ ಕಾಲದಲ್ಲಿ ಎಲ್ಲೆಡೆಯಲ್ಲೂ ತಿರಸ್ಕಾರ ಬಹಿಷ್ಕಾರಗಳಲ್ಲದೆ ಬೇರೆ ಇಲ್ಲ. ಯಾವುದೊಂದು ಅಭ್ಯಾಸವೂ ಎಷ್ಟೇ ಪುರಾತನದ್ದಾಗಿರಲಿ, ಅದನ್ನು ನಮ್ಮ ಹಿರಿಯರು ಉಚಿತವೆಂದೇ ಭಾವಿಸಿರಲಿ, ಅದು ಈಗಿನ ಕಾಲಕ್ಕೆ ತಕ್ಕುದಲ್ಲವೆಂದು ಮನಗಂಡರೆ, ಒಡನೆಯೇ ಕಿತ್ತೊಗೆದು ಬಿಡಬೇಕೆಂಬದೇ ನವನಾಗರಿಕತೆಯ ಅಂತೂ ನವಯುಗದ ಸಿದ್ಧಾಂತವು.

ನಮ್ಮ ಭಾರತೀಯರಲ್ಲಿ ತಾಂಬೂಲಸೇವನೆ ಮಾಡದವರು ಅತಿ ವಿರಳ. ಈ ಅಭ್ಯಾಸವು ವಂಶ ಪಾರಂಪರ್ಯವಾಗಿ ಬಂದು ಒಂದು ಪದ್ಧತಿಯಾಗಿ ನಿಂತಿದೆ. ಕೆಲವು ವೇಳೆ ಇದೊಂದು ದೃಢವಾದ ನಂಬುಗೆಯ ವಸ್ತುವಾಗಿಯೂ ಗಣಿಸಲ್ಪಡುವುದು. ಧುರವೀಳ್ಯ, ವಿವಾಹಕಾಲದ ನಿಶ್ಚಯತಾಂಬೂಲವೇ ಇದಕ್ಕೆ ನಿದರ್ಶನಗಳಾಗಿವೆ.

ಉಪಚಾರಗಳಲ್ಲಂತೂ ತಾಂಬೂಲವೇ ಮೊದಲನೆಯದು ವಿವಾಹ ಉಪನಯನಾದಿ ಶುಭಲೇಖನಗಳಲ್ಲಿ "ತಾಂಬೂಲಾದಿ ಉಪಚಾರಗಳನ್ನು ಸ್ವೀಕರಿಸಿಕೊಳ್ಳಿರಿ" ಎಂಬ ಮಾತುಗಳನ್ನು ಬರೆಯುವುದು ಬಳಿಕೆಯಾಗಿದೆ. ನಮ್ಮ ಮನೆ ಬಾಗಲಿಗೆ ಬಂದ ಗೃಹಸ್ಥನಿಗೆ ಒಂದು ತುತ್ತು ಅನ್ನ ಹಾಕದಿದ್ದರೂ ದೊಡ್ಡದಲ್ಲ, ಆದರೆ ತಾಂಬೂಲ ಕೊಡದಿದ್ದರೆ ಮಾತ್ರ ದೂರಿಗೆ ಅವಕಾಶವಾಗುವದೆಂಬದಾಗಿ ನಮ್ಮವರು ಭಾವಿಸುವರು. ಈ ಮಹಾ ಮರ್ಯಾದೆಯ ಅಭ್ಯಾಸವು ಹಳ್ಳಿಯಿಂದ ಡಿಲ್ಲಿಯವರೆಗೂ ಎಲ್ಲೆಲ್ಲಿಯೂ ಹರಡಿರುವುದು.

ತಾಂಬೂಲ ಸೇವಿಸದವನ ಬಾಯಿಯು ಬಿಲದ ಬಾಯಿಗೆ ಸಮಾನವೆಂದೂ, ಅವನ ಮುಖದಲ್ಲಿ ಸಿರಿ ಇಲ್ಲವೆಂದೂ, ಅದನ್ನು ತಿನ್ನುವುದರಿಂದ ಮೋರೆಗೆ ಸೊಬಗುಂಟಾಗುವುದೆಂದೂ ತಾಂಬೂಲ ಭಕ್ತರ ಅಂಬೋಣವಾಗಿದೆ.

ಉಪಚಾರರೂಪದಿಂದ ಪ್ರಚಾರಕ್ಕೆ ಬಂದ ಈ ಮಹಾ ಮರ್ಯಾದೆಯ ಅಭ್ಯಾಸವು ನಮ್ಮ ಆರೋಗ್ಯಕ್ಕೆ ತಕ್ಕುದೇ ಹೇಗೆಂಬುದನ್ನು ವಿಚಾರ ಮಾಡಿದರೆ, ಆಗ ನಮಗೆ ಗೊತ್ತಾಗುವುದು. ಕಲ್ಕತ್ತೆಯ ಹೆಲ್ತ್ ಆಫೀಸರರಾದ ಡಾಕ್ಟರ್ ಕ್ಲಾರ್ಕ ಎಂಬವರು ತಾಂಬೂಲ ಸೇವನೆಯಿಂದ ಈ ಕೆಳಗಿನ ದೋಷಗಳಿವೆ ಎಂದು ತಮ್ಮ ಪರಿಶೋಧನೆಯಿಂದ ಬರೆದಿರುವರು. ವೀಳ್ಯದೆಲೆ ತಿನ್ನುವುದರಿಂದ ಉಗುಳಿ ಉಗುಳಿ ನಾಲಿಗೆಯ ದ್ರವವು ಆರುವುದು; ಓಕರಿಕೆ ಹುಟ್ಟುವುದು; ತಲೆ ತಿರುಗುವುದು; ಸ್ನಾಯುಗಳು ಬಲಹೀನವಾಗುವುವು; ನಾಡಿಯು ಅಕ್ರಮವಾಗಿ ಬಡಿಯುವುದು; ಕಣ್ಣುಗೊಂಬೆ ವಿಕಾಸ ಅಥವಾ ಸಂಕೋಚವಾಗುವುದು. ಇವಲ್ಲದೆ ಎಲೆಯಲ್ಲಿ ವಿಸ್ಮೃತಿಯನ್ನುಂಟುಮಾಡುವ ಪದಾರ್ಥವಿದೆ ಎಂದೂ, "ಅಡಿಕೆ" ಇದರಿಂದ ಗುಂಡಿಗೆಯ ಮತ್ತು ನರಗಳ ಶಕ್ತಿ ಕುಂದಿಹೋಗುತ್ತದೆಂದೂ, ಸುಣ್ಣದಿಂದ ಬಜ್ಜಿ ಮುಂತಾದ ವ್ರಣಗಳು ಹುಟ್ಟುತ್ತವೆಂದೂ ಬರೆದಿರುವರು. ಹಲವರು ತಾಂಬೂಲದೊಡನೆ ಹೊಗೆಸೊಪ್ಪನ್ನು ಸೇವಿಸುವರು. ಇದರಿಂದಾಗುವ ಕೆಡಕು ವಿವರಿಸತೀರದು. ಎಲೆ ಅಡಿಕೆ ಹೊಗೆಸೊಪ್ಪು ಮತ್ತು ಸುಣ್ಣ ಈ ನಾಲ್ಕು ಕೂಡುವುದರಿಂದ ಆಹಾರ ಕೋಶದ ಜೀರ್ಣಶಕ್ತಿ ಸಹಾ ಕುಂದಿಹೋಗುವುದೆಂದೂ ವೈದ್ಯರ ಅಭಿಪ್ರಾಯವಾಗಿರುತ್ತದೆ. ಯೌವನಸ್ಥರು ಈ ತಾಂಬೂಲಸೇವನೆ ಮಾಡುವದರಿಂದ ಅವರಲ್ಲಿ ಕಾಮಾತುರವೂ ಹೆಚ್ಚಿ ಸ್ವಭಾವ ವಿರುದ್ಧವಾದ ವಿಲಾಸಗಳಲ್ಲಿ ನಿರತರಾಗುವರು ಎಂದೂ, ಇದರಿಂದ ಧಾತು ದೌರ್ಬಲ್ಯ ಉಂಟಾಗುವುದೆಂದೂ ಪ್ರಖ್ಯಾತ ವೈದ್ಯರ ಅಭಿಪ್ರಾಯವಾಗಿರುತ್ತದೆ.

ಆರೋಗ್ಯದ ಮಾತಂತೂ ಹಾಗಿರಲಿ! ತಾಂಬೂಲ ಸೇವಿಸುವವರು ಸದಾ ಉಗುಳಬೇಕಾಗುತ್ತದೆ. ಅನೇಕ ಕುಟುಂಬಗಳಲ್ಲಿ ಈ ಉಗುಳಿಗಾಗಿ ಹಲವು ಪಾತ್ರೆಗಳಿರುತ್ತವೆ. ಈ ಪಾತ್ರೆಗಳನ್ನು ದಿನಕ್ಕೆ ಎರಡಾವರ್ತಿ ಇಲ್ಲವೇ ದಿನವಹಿ ತೊಳೆಯಬೇಕಾಗುತ್ತದೆ. ಅನೇಕ ಮನೆಗಳಲ್ಲಿ ಈ ಕೆಲಸವನ್ನು ದಾದಿಯರಿಂದ ಮಾಡಿಸುವರು. ಹಲವು ಕುಟುಂಬಗಳಲ್ಲಿ ದಾದಿಯರೇ ಇಲ್ಲ. ಸ್ವತಃ ತೆಗಿಯಲು ಅಸಹ್ಯಪಡುವದರಿಂದಲೋ, ಅಥವಾ ಆಲಸ್ಯದಿಂದಲೋ, ಪಾತ್ರೆಯಲ್ಲಿ ತುಂಬಿದ ತಾಂಬೂಲವು ಹುಳುತು ಅದರಿಂದ ಒಂದು ವಿಧದ ದುರ್ಗಂಧವು ಹೊರಟು ವಾಯುವನ್ನೇ ಹಾಳುಮಾಡುತ್ತಿರುವುದೂ, ಅದಕ್ಕೆ ನುಸಿಗಳೂ, ನೊಣಗಳೂ ಪ್ರದಕ್ಷಿಣೆ ಮಾಡುತ್ತಿರುವುದೂ, ನೋಡಿರುವ ಸಂಗತಿಯೇ. ಅನೇಕರಲ್ಲಿ ಇಂಥಾ ಪಾತ್ರೆಯಲ್ಲಿ ಆದರೂ ಚಾವಡಿಯ ಕೆಳ ಜಗಲಿ ಮೆಟ್ಟಲು, ಗೋಡೆಸಂದುಗಳಲ್ಲೆಲ್ಲಾ ಕೆಂಪು ಬಣ್ಣ ಬಳಿದಂತೆ ಉಗುಳಿನಿಂದ ಮುಚ್ಚಿ ಹೋಗಿರುತ್ತದೆ. ಕೆಲವು ಮಹನೀಯರ ಬೈಟಕುಖಾನೆಯ ಕಿಟಕಿಯ ಸರಳುಗಳೆಲ್ಲಾ ಈ ಎಂಜಲು ಲೇಪದಿಂದ ಪುಷ್ಟಿಯಾಗಿರುತ್ತವೆ. ಹೀಗೆ ತಾಂಬೂಲ ಸೇವಿಸುವವರ ಮನೆ, ಬಟ್ಟೆ ಕೈವಸ್ತ್ರಗಳೆಲ್ಲಾ ಎಂಜಲುಮಯವಾಗಿರುತ್ತವೆ.

ತಾಂಬೂಲ ಸೇವನೆಯಿಂದ ಶರೀರಕ್ಕೆ ಹಾನಿಯಾಗುವುದಲ್ಲದೆ ಧನಹಾನಿ ಸಹ ಉಂಟಾಗುವುದು. ಪ್ರತಿ ಒಬ್ಬರೂ ದಿನಕ್ಕೆ ಮೂರುಕಾಸು ವೆಚ್ಚಮಾಡಿದರೆ ಇಡೀ ದೇಶದಲ್ಲಿ ದಿನವಹಿ ಲಕ್ಷಾಂತರ ಹಣವು ಈ ಹಾಳು ವ್ಯಸನಕ್ಕಾಗಿ ವೆಚ್ಚವಾದಂತಾಗುವುದು. ಇದನ್ನು ಸೇವಿಸುವವರ ಸಂಖ್ಯೆಯು ಹೆಚ್ಚಾಗಿರುವುದರಿಂದ ಇದರ ಸೇವನೆಗೆ ಬೇಕಾದ ವಸ್ತುಗಳ ಬೆಲೆಯು ದಿನದಿನಕ್ಕೆ ಏರುತ್ತಲಿದೆ. ಕೀಳು ಜಾತಿಯವರ ಆದಿಯಾಗಿ ಮೇಲು ಜಾತಿಯವರ ವರೆಗೂ, ದರಿದ್ರನೇ ಮೊದಲುಗೊಂಡು ಧನಿಕನ ವರೆಗೂ ಇದಕ್ಕೆ ಬಲಿ ಬೀಳದೆ ಇಲ್ಲ. ಈ ಅಭ್ಯಾಸಕ್ಕೆ ತುತ್ತಾದ ಒಬ್ಬ ವ್ಯಕ್ತಿಯ ಒಂದು ವಾರದ ವೆಚ್ಚವು ಬಲು ಕಡಿಮೆ ಎಂದರೆ 6 ಆಣೆ ತಗಲಬಹುದು. ಹಾಗೆಯೇ ಒಂದು ವರುಷಕ್ಕೆ 19-8-0 ಬೇಕಾಗುವುದು. ಅಂಥವನು ತನ್ನ 18ನೇ ವಯಸ್ಸಿನಲ್ಲಿ ಈ ಅಭ್ಯಾಸಕ್ಕೆ ಆರಂಭಿಸಿ 60 ವಯಸ್ಸಿನ ವರೆಗೆ ಸೇವಿಸಿದರೆ ಅವನ ಸಂಪಾದನೆಯಲ್ಲಿ 819 ರೂಪಾಯಿಯು ಜಗಿದು ಉಗಿಯುವ ಈ ಕೆಟ್ಟ ಚಾಳಿಗೆ ವಿನಿಯೋಗಿಸಿದಂತಾಗುವುದು. ಒಬ್ಬನ ವೆಚ್ಚವು ಇಷ್ಟಾದಮೇಲೆ ಈ ವ್ಯಸನಕ್ಕೆ ಸಿಕ್ಕಿಬಿದ್ದವರ ದೊಡ್ಡ ದೊಡ್ಡ ಕುಟುಂಬಗಳ ವೆಚ್ಚವು ಎಷ್ಟಾಗಬೇಕು? ಇದಕ್ಕೆ ವೆಚ್ಚವಾಗುವ ಹಣವನ್ನು ಜನೋಪಕಾರವಾದ ಮತ್ತಾವ ಕಾರ್ಯಗಳಿಗಾದರೂ ವಿನಿಯೋಗ ಮಾಡಿದರೆ ಒಳ್ಳೆಯದಲ್ಲವೇ? ತಾವು ತಿಂದು ಪರರಿಗೂ ಕೊಟ್ಟು ಸತ್ಕಾರ ರೂಪದಿಂದ, ಎಲ್ಲರಲ್ಲೂ ಹರಡಿರುವ ಈ ಅಭ್ಯಾಸವನ್ನು ನಿರ್ನಾಮ ಮಾಡುವುದು ಯುಕ್ತವಲ್ಲವೇ?

ಇಷ್ಟೆಲ್ಲಾ ಕೆಡಕು ನಷ್ಟಗಳಿದ್ದರೂ ಬಿ.ಎ., ಎಮ್.ಎ. ಪರೀಕ್ಷೆಗಳಲ್ಲಿ ಕೃತಾರ್ಥರಾದ ಪೂಣ ವಿದ್ಯಾಧುರೀಣರೂ, ದೊಡ್ಡದೊಡ್ಡ ಹುದ್ದೇದಾರರೂ, ನ್ಯಾಯವಾದಿಗಳೂ, ಪಂಡಿತರೆಂದು ಹೇಳಿಸಿಕೊಳ್ಳುವವರೂ, ಮುಂತಾದ ನಾಗರೀಕರೆಲ್ಲರೂ ದಾಸಾನುದಾಸರಾಗಿ ಹಗಲಿರುಳೂ ಈ ತಾಂಬೂಲಸೇವನೆಯಲ್ಲಿ ಮುಳುಗಿರುವರು. ಸರ್ವಜ್ಞರೆಂದು ಹೊಗಳಿಸಿಕೊಳ್ಳುವರೇ ಈ ದುರ್ವೃತ್ತಿಗೆ ಒಳಗಾಗಿರುವಾಗ ಇನ್ನು ಅಜ್ಞಾನಿಗಳನ್ನು ಹೇಳುವುದೇನು?

ಬಂಧು ಭಗಿನಿಯರಿರಾ! ಅಫೀಮು ತಿನ್ನುವ ಅಭ್ಯಾಸವು ಚೀನದ ಜನರನ್ನೂ, ಹೊಗೆಸೊಪ್ಪುಸೇದುವ ಅಭ್ಯಾಸವು ಯುರೋಪ್ ಅಮೇರಿಕಾ ಖಂಡದ ಜನರನ್ನೂ, ಹೇಗೆ ಅಧೋಗತಿಗೆ ಇಳಿಸುತ್ತಾ ಬರುತ್ತದೆಯೋ ಹಾಗೆಯೇ ನಮ್ಮ ಭರತಖಂಡದ ಜನರನ್ನು ವೀಳ್ಯದೆಲೆ ತಿನ್ನುವ ಅಭ್ಯಾಸವು ಕೆಳಗಿಳಿಸುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ಅದುದರಿಂದ ಮೇಲೆ ವಿವರಿಸಿದ ವಿಷಯಗಳನ್ನು ವಾಚಕರು ಚೆನ್ನಾಗಿ ಆಲೋಚಿಸಿ ಅನಾರೋಗ್ಯಕರವಾಗಿಯೂ, ಧನನಾಶವನ್ನು ಮಾಡತಕ್ಕುದಾಗಿಯೂ ಇರುವ ತಾಂಬೂಲಸೇವನೆಯ ಅಭ್ಯಾಸವನ್ನು ಬಿಟ್ಟು ಆರೋಗ್ಯವಂತರಾಗಿ ಇರಬೇಕೆಂದು ಪುನಃ ಪ್ರಾರ್ಥಿಸಿ ಈ ಲೇಖನವನ್ನು ಕೊನೆಗಾಣಿಸುವೆನು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಸ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

ಪರೀಕ್ಷಾ ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕದ್ದು.

ಈಸಲ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗಳಿಗಾಗಿ ಬೆಂಗಳೂರು ಸೆಂಟರಿಗೆ ಬರತಕ್ಕಂಥ ವೀರಶೈವ ವಿದ್ಯಾರ್ಥಿಗಳಿಗೂ ಅವರ ಕೂಡ ಬರತಕ್ಕ ಮಾಷ್ಟರುಗಳಿಗೂ ಪದ್ಧತಿಪ್ರಕಾರ ವಾಸಕ್ಕೂ ಭೋಜನಕ್ಕೂ ಏರ್ಪಡಿಸಿವೆ. ಬರತಕ್ಕವರ ಸಂಖ್ಯೆಯನ್ನೂ ಹೆಸರು ವಿಳಾಸವನ್ನೂ ಈ ಕೆಳಗೆ ಕಂಡ ವಿಳಾಸಕ್ಕೆ ೮ ದಿನಗಳು ಮುಂದಾಗಿ ಬರೆದು ತಿಳಿಸಬೇಕು. ಎಸ್. ಕಳ್ಳಪ್ಪ

ಊದುಬತ್ತಿಷಾಪು, ದೊಡ್ಡಪೇಟೆ, ಬೆಂಗಳೂರು ಸಿಟಿ.

ತುಮಕೂರು ಸೆಂಟರು.

ಇದೇ ೧೯೨೨ನೇ ಏಪ್ರಿಲ್ ತಿಂಗಳಲ್ಲಿ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗೆ ತುಮಕೂರು ಸೆಂಟರಿಗೆ ಬರತಕ್ಕ ವೀರಶೈವ ಮತ್ತು ಇತರರಲ್ಲಿ ಭೋಜನಮಾಡತಕ್ಕ ಇತರ ಮತಸ್ಥರ ವಿದ್ಯಾರ್ಥಿಗಳಿಗೆ ಪದ್ಧತಿಪ್ರಕಾರ ತುಮಕೂರು ವರ್ತಕಮಂಡಲಿಯವರು ಭೋಜನಕ್ಕೆ ಏರ್ಪಾಡು ಮಾಡಿರುವದ್ದರಿಂಥ ಸದರಿಕಾಲದಲ್ಲಿ ಹಾಜರಾಗಲು ಇಷ್ಟವುಳ್ಳ ವಿದ್ಯಾರ್ಥಿಗಳು ಈ ಕೆಳಗಿನ ಅಡ್ರೆಸ್ಸಿಗೆ ಎಂಟುದಿವಸ ಮುಂಚಿತವಾಗಿಯೇ ಬರೆದುಕೊಳ್ಳಬೇಕಾಗಿ ಈ ಮೂಲಕ ತಿಳಿಯಪಡಿಸಿದೆ. ತಂಬಿಗೆ ಹಾಸಿಗೆ ಜೊತೆಯಲ್ಲಿ ತರತಕ್ಕದ್ದು.

ಅತ್ತಿ ಸಂಗಪ್ಪನವರು, ಯಚ್. ಗಂಗಾಧರಪ್ಪನವರು,
ಜವಳಿ ಅಂಗಡಿ ವೀರಣ್ಣನವರು.

ಶಿರಾ ಸೆಂಟರು.

ತುಮಕೂರು ಡಿಸ್ಟ್ರಿಕ್ಟ್ ಶಿರಾ ಸೆಂಟರಿನಲ್ಲಿ ಈ ವರ್ಷ ನಡಿಯುವ ಕನ್ನಡ ಮತ್ತು ಇಂಗ್ಲೀಷ್ ಲೋವರ್ ಸೆಕೆಂಡರೀ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಅವರ ಸಂಗಡ ಬರತಕ್ಕ ವೀರಶೈವ ಮಾಷ್ಟರುಗಳಿಗೂ ಸಹಾ ಪರೀಕ್ಷೆಯದಿವಸದಾರಭ್ಯ ಪರೀಕ್ಷೆ ಮುಗಿಯುವವರಿಗೂ ಭೋಜನದ ಏರ್ಪಾಟಿಗೋಸ್ಕರ ಇದೇ ಶಿರಾ ಟವನ್ನಿನಲ್ಲಿರುವ ಸಾಹುಕಾರ್ ಹರಳಕಟ್ಟೆ ಬಸಪ್ಪ ವಗೈರೇರು ಏರ್ಪಾಟು ಮಾಡಿರುವದರಿಂದ ಆ ಕಾಲಕ್ಕೆ ಬರತಕ್ಕ ವೀರಶೈವ ವಿದ್ಯಾರ್ಥಿಗಳೂ ಮತ್ತು ಮಾಷ್ಟರುಗಳೂ ಸಹ ಇದೇ ಮಾರ್ಚಿ ತಾರೀಖು ೩೦ ರ ಒಳಗಾಗಿ ಈ ಕೆಳಗಿನ ಅಡ್ರೆಸ್ಸಿಗೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಮತ್ತು ವಿದ್ಯಾರ್ಥಿಗಳೂ ಮಾಷ್ಟರುಗಳೂ ಸಹ ತಮ್ಮತಮ್ಮ ಹಾಸಿಕೆ ಹೊದ್ದಿಕೆ ತಂಬಿಗೆ ಸಹಾ ತರತಕ್ಕದ್ದು.

ಶಿರಾ ಹರಳಕಟ್ಟೆ ಬಸಪ್ಪ.

ಚಳ್ಳಕೆರೆ ಸೆಂಟರು.

ಚಿತ್ರದುರ್ಗದ ಡಿ|| ಚಳ್ಳಕೆರೆ ಸೆಂಟರಿನಲ್ಲಿ ಈ ವರ್ಷದಲ್ಲಿ ನಡೆಯುವ ಕನ್ನಡ ಮತ್ತು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿಗೂ ಸಹ ಪರೀಕ್ಷೆ ನಡೆಯುವ ದಿವಸಗಳಲ್ಲಿ ಭೋಜನದ ಏರ್ಪಾಟಿಗೋಸ್ಕರ ಇದೇ ತಾಲ್ಲೂಕು ಹಿರೆಮಧುರೆ ಮಠದ ನೀಲಕಂಠಪ್ಪಯ್ಯನವರು ತಮ್ಮ ಸ್ವಂತಖರ್ಚಿನಿಂದ ನಡೆಸಲು ಉದಾರವಾಗಿ ವಾಗ್ದಾನಮಾಡಿರುವದರಿಂದ ಆಕಾಲಕ್ಕೆ ಬರತಕ್ಕ ವೀರಶೈವ ವಿದ್ಯಾರ್ಥಿಗಳೂ ಮತ್ತು ವಿದ್ಯಾರ್ಥಿನಿಯರೂ ಸಹ ಈ ಮಾಹೆ ಅಖೈರಿನೊಳಗಾಗಿ ಈ ಕೆಳಗಿನ ವಿಳಾಸಕ್ಕೆ ದರಖಾಸ್ತನ್ನು ಹಾಕಿಕೊಳ್ಳತಕ್ಕದ್ದು.

ಹೆಚ್. ಎಂ. ಮುದ್ದುವೀರಯ್ಯ,
ಕಾರ್ಯದರ್ಶಿ.
ಅಸಿಸ್ಟೆಂಟ್ ಮಾಷ್ಟರ್ ಎ.ವಿ. ಸ್ಕೂಲು, ಚಳ್ಳಕೆರೆ.

ನಿಪ್ಪಾಣಿ.

ತಾ|| ೨೨-೨-೨೨ನೆ ಬುಧವಾರದ ದಿವಸ ಇಲ್ಲಿ ಶ್ರೀ ಮುರುಘೇಂದ್ರ ವಾಚನಾಲಯದಲ್ಲಿ ಶ್ರೀ ಚೆನ್ನಬಸವಸ್ವಾಮಿಗಳಿಂದ ಒಂದು ತರುಣಸಂಘವು ಸ್ಥಾಪಿತವಾಯಿತು. ಶ್ರೀಗಳು ಜನಗಳಿಗೆ ಸ್ಫೂರ್ತಿದಾಯಕವಾದ ವ್ಯಾಖ್ಯಾನಮಾಡಿದರು. ಶ್ರೀ ಶಿವಾನಂದಸ್ವಾಮಿ ಇವರು ತರುಣ ಸಂಘದಿಂದ ಆಗುವ ಪ್ರಯೋಜನ ಮತ್ತು ವಾಚನಾಲಯದ ಮಹತ್ವ ಈ ವಿಷಯಗಳ ಮೇಲೆ ಸ್ಫೂರ್ತಿದಾಯಕವಾದ ವ್ಯಾಖ್ಯಾನಕೊಟ್ಟರು. ಈ ಸಭೆಯಲ್ಲಿ ಅನೇಕ ಜನರು ಕೂಡಿದ್ದರು ಶ್ರೀಗಳ ವ್ಯಾಖ್ಯಾನವು ಆದನಂತರ ಮುರುಘೇಶನ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ನಿಷಾಪದಾರ್ಥವರ್ಜನ.

ಅರಕಲಗೂಡು ತಾಲ್ಲೂಕು ಬಸವಾಪಟ್ಟಣದ ಕೆಲವು ಉತ್ತಮರೂ ಮತ್ತು ಪಂಚಮರೂ ಸಹ ಇಂದಿಗೆ ಆರು ತಿಂಗಳಲ್ಲಿ ಒಂದು ಮೀಟಿಂಗು ಮಾಡಿ ನಿಷಾಪದಾರ್ಥಗಳಿಂದುಂಟಾಗುವ ಕೆಡಕುಗಳನ್ನು ತಿಳಿದುಕೊಂಡು ಇನ್ನುಮುಂದೆ ನಮ್ಮ ಗುಂಪಿನಲ್ಲಿ ಯಾರೊಬ್ಬರೂ ನಿಷಾಪದಾರ್ಥಗಳನ್ನು ಸೇವನೆ ಮಾಡಬಾರದೆಂದು ಮಾಡಿಕೊಂಡ ಕಟ್ಟು ಕಟ್ಟಳೆ ಇದುವರೆಗೂ ನಡೆದುಬಂದಿರುತ್ತದೆ. ಇನ್ನುಮುಂದೂ ಸಹ ಇದೇ ಕಟ್ಟಳೆಯು ನಡೆದು ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದಲ್ಲವೆ ಸ್ಥಿರಪ್ರಯತ್ನ ಒಕ್ಕಟ್ಟು? ಈ ಪೇಟೆಯ ಸಮೀಪದಲ್ಲಿರುವ ಹಾನಗಲ್ಲು ಮತ್ತು ಅಂಜನಹೊಸಳ್ಳಿಯ ಕೆಲವು ಪುಣ್ಯಾತ್ಮರುಗಳು ಮಾತ್ರ ನಿಷಾಸೇವನೆಯನ್ನು ಬಿಟ್ಟಿರುವುದಿಲ್ಲವಂತೆ! ಇದೊಂದು ಕೊರತೆಯೇ ಸರಿ. ಸ್ಥಳಿಕ.

ಒಬ್ಬಮತಬಾಂಧವರ ಔದಾರ್ಯ.

ಕಡೂರು ತಾ|| ಚನ್ನಾಪುರದ ಪಟೇಲರು ಮ|| ರಾ|| ಗಿರೀಗೌಡರ ಧರ್ಮಪತ್ನಿ ಸೌ|| ಮುದ್ದಮನವರು ಕಳೆದ ಮಾರ್ಗಶಿರಮಾಸದಲ್ಲಿ ಶಿವಾಧೀನರಾದರು. ಇವರು ತಮ್ಮ ಮಹಾಗಣಾರಾಧನೆ ದಿವಸ|ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ರೂ. 50-0-0 ನ್ನು ಕಳುಹಿಸಿಕೊಡುವಂತೆ ತಮ್ಮ ಪತಿಯವರನ್ನು ಕೇಳಿಕೊಂಡ ಪ್ರಕಾರ, ಅವರ ಸತ್ಸಂಕಲ್ಪದಂತೆ ಮ|| ರಾ|| ಗಿರೀಗೌಡರು ಸದ್ರಿ ಮೊಬಲಗನ್ನು ಕಡೂರು ತಾ|| ನಿಡಘಟ್ಟದ ರೂರಲ್ ಎ. ವಿ. ಸ್ಕೂಲು ಹೆಡ್ಮಾಸ್ಟರ್ ಹೆಚ್. ಬಸವಯ್ಯನವರ ಮೂಲಕ ಕಳುಹಿಸಿಕೊಟ್ಟಿರುತ್ತಾರಾಗಿ, ಸಂಘದವರು ಮ|| ರಾ|| ಗಿರೀಗೌಡರಿಗೆ ತಮ್ಮ ಕೃತಜ್ಞತೆಯನ್ನು ಇದರ ಮೂಲಕ ಸೂಚಿಸುತ್ತಾರೆ.

ಬೆಂಗಳೂರು } ಜಿ. ಪರಮಶಿವಯ್ಯ, ಆನರರಿಸೆಕ್ರೆಟರಿ
9-3-1922 } ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ರಥೋತ್ಸವ.

ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕು ಹುಣಸಮಾರನಹಳ್ಳಿಯಲ್ಲಿ ಶ್ರೀ ಚಂದ್ರಮೌಳೀಶ್ವರಸ್ವಾಮಿ ರಥೋತ್ಸವ ಮತ್ತು ಎತ್ತಿನ ಪರಿಷೆ ಸಹ ಮಾಮೂಲಿನಂತೆ ೧೦-೩-೨೨ ರಿಂದ ೧೬-೩-೨೨ ವರೆಗೆ ನಡೆಯುತ್ತೆ. ದನಕರುಗಳಿಗೆ ನೀರಿನ ವಸತಿ ಅನುಕೂಲವಾಗಿದೆ. ಬರತಕ್ಕ ಜನಗಳ ಅನುಕೂಲಕೆಗೆ ಶ್ರೀಮಠದಿಂದಲೇ ಏರ್ಪಾಡು ಮಾಡಲ್ಪಟ್ಟಿದೆ. ಉತ್ಸವಾದಿಗಳು ವಿಶೇಷ ವೈಭವಗಳಿಂದ ನಡೆಯುತ್ತವೆ. ಈ ಹುಣಸಮಾರನಹಳ್ಳಿ ಗ್ರಾಮವು ಎಲಹಂಕ ಮತ್ತು ದೊಡ್ಡಜಾಲ ರೈಲ್ವೆಸ್ಟೇಷನ್ನುಗಳಿಗೆ ೩ ಮೈಲಿ ಸಮೀಪದಲ್ಲಿರುವ ರಸ್ತೆಜಾಗವಾಗಿರುತ್ತೆ. ದೇಶಾಭಿಮಾನಿಗಳು ಜಾತ್ರೆಯ ಕಾಲಕ್ಕೆ ದಯಮಾಡಿ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ ಎಸ್. ಎಲ್. ಮುದ್ದುಬಸವಯ್ಯ.

ರಥೋತ್ಸವ.

ಪ್ರತಿವರ್ಷದಲ್ಲಿಯೂ ಪದ್ಧತಿಪ್ರಕಾರ ನಡೆಯುತ್ತಿರುವ ನಾಯಕನಹಟ್ಟಿ ಶ್ರೀ ತಿಪ್ಪೆರುದ್ರಸ್ವಾಮಿಯ ರಥೋತ್ಸವವು ಇದೇ ಫಾಲ್ಗುಣ ಬ|| ೨ ಬುಧವಾರ ಅಂದರೆ ೧೫-೩-೨೨ ರಲ್ಲಿ ನಡೆಯುತ್ತದೆ. ಈ ರಥೋತ್ಸವದಲ್ಲಿ ಯಾತ್ರಿಕಜನರ ಚಿತ್ತಾನಂದಕ್ಕಾಗಿ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕು ಕೊಟ್ಟೂರು ತೆಂಬಾವಿ ಮಠದಲ್ಲಿ ಧರ್ಮಬೋಧಕ ಜನಸಂಘದ ಸದ್ವಿದ್ಯಾಪಾಠಶಾಲಾ ಕಂಪೆನಿಯು ಸದರಿ ಮಠಾಧ್ಯಕ್ಷರಾದ ಮ|| ಗುರುಬಸವಶಾಸ್ತ್ರಿಗಳಿಂದ ಸರ್ವಜನಗಳಿಗೆ ಸುಬೋಧವಾಗುವಂತೆ ರಚಿಸಲ್ಪಟ್ಟ ಶ್ರೀ ತಿಪ್ಪೆರುದ್ರಮಹಾಸ್ವಾಮಿಯಚರಿತ್ರೆಯನ್ನು ಉತ್ತಮದ್ರೆಸ್ ಸೀನರಿ ಸಂಗೀತಾದಿಗಳಿಂದ ನೋಟಕರಿಗೆ ಆತನು ಮಾಡಿದ ಮಹತ್ವಗಳನ್ನು ನಾಟಕರೂಪವಾಗಿ ತೋರಿಸುವದಲ್ಲದೆ ಇನ್ನೂ ಕೆಲವು ವೀರಶೈವ ತತ್ವಬೋಧಕಗಳಾದ ಚರಿತ್ರೆಗಳನ್ನು ಹಾಡಿ ತೋರಿಸುವದಕ್ಕೋಸ್ಕರ ಈ ವರ್ಷ ಸದರಿ ಕಂಪನಿಯು ನಾಯಕನಹಟ್ಟಿಗೆ ಬರುವದಾಗಿರುತ್ತದೆ. ಆದ್ದರಿಂದ ಯಾತ್ರಿಕಜನರು ಈ ಸಮಯವನ್ನು ಕಳೆದುಕೊಳ್ಳಲಾರರೆಂದು ಪೂರ್ಣ ನಂಬಿರುತ್ತೇನೆ. ಮತ್ತು ಈ ಸ್ವಾಮಿಯ ಉತ್ಸವಾದಿಗಳನ್ನು ನೋಡುವುದರಿಂದಲೂ ಈತನ ಸತ್ಕಥೆಯನ್ನು ಕೇಳುವುದರಿಂದಲೂ ಯಾತ್ರಿಕರ ಯಾತ್ರಾಶ್ರಮವು ಸಫಲವಾಗುವದೆಂದು ಹೇಳುವ ಅವಶ್ಯಕತೆಯೇ ಇಲ್ಲ. ಓರ್ವಭಕ್ತ.

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಜಾತ್ರೆ.

೧೯೨೨ನೇ ಮಾರ್ಚಿ ತಾ|| ೮ ರಿಂದ ೧೫ರ ವರೆಗೆ ಗುಬ್ಬಿಯಲ್ಲಿ ನಡೆಯುವ ಶ್ರೀ ಚನ್ನಬಸವೇಶ್ವರಸ್ವಾಮಿ ಜಾತ್ರೆ ಕಾಲದಲ್ಲಿ ದನಗಳ ಪರಿಷೆಯು ಕೂಡುವಂತೆ ಏರ್ಪಾಡು ಮಾಡಿರುತ್ತೆ. ದನಗಳ ಸೌಕರ್ಯಕ್ಕೆ ಸರಿಯಾದ ಸ್ಥಳವಸತಿ, ನೆರಳು, ನೀರು ಯಥೇಚ್ಛವಾಗಿರುತ್ತೆ. ಜನಗಳಿಗೆ ಜಾತ್ರೆದಾಸೋಹದಲ್ಲಿ ಉಚಿತವಾದ ಊಟದ ಏರ್ಪಾಟು ಮಾಡುವುದಾಗುತ್ತೆ. ತಾ|| ೧೩ನೇ ಸೋಮವಾರ ದನಗಳ ಪ್ರದರ್ಶನದಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನಗಳು ದೊರೆಯಬಹುದು. ದನಗಳ ಬಿಕರಿ ಮಾಡುವವರೂ, ಕೊಂಡುಕೊಳ್ಳುವವರೂ ರಾಸುಗಳನ್ನು ಹೊಡೆದುಕೊಂಡು ಬರಬೇಕಾಗಿ ಕೋರಿದೆ. ಬಿಕರಿಗೆ ಬರತಕ್ಕ ರಾಸುಗಳ ಮೇಲೆ ಯಾವ ರುಸುಮನ್ನೂ ವಸೂಲ್ಮಾಡುವುದಿಲ್ಲ. ಗುಬ್ಬಿ ರೈಲ್ವೆಸ್ಟೇಷನ್ ಸ್ಥಳದಲ್ಲಿ ಮೆಯಿಲ್ ವಗೈರೆ ಎಲ್ಲಾ ಟ್ರೈಯಿನ್ನುಗಳೂ ಇಲ್ಲಿ ನಿಲ್ಲುವುದರಿಂದ ಪ್ರಯಾಣದ ಸೌಲಭ್ಯಗಳು ಚೆನ್ನಾಗಿವೆ. ನೂತನವಾಗಿ ಮಾಡಿಸಿರುವ ರಥೋತ್ಸವ.

ಜಾತ್ರೆಯಲ್ಲಿ ನಡೆಯತಕ್ಕ ಉತ್ಸವಗಳ ಪ್ರೋಗ್ರಾಂ.

ತಾ|| ೮-೩-೨೨ ನೂತನ ರಥೋತ್ಸವ, ೯-೩-೨೨ ರುದ್ರಾಕ್ಷಿ ಮಂಟಪದಲ್ಲಿ ಉತ್ಸವ, ೧೦-೩-೨೨ ನವರಂಗಪಲ್ಲಕ್ಕಿಯಲ್ಲಿ ಉತ್ಸವ, ೧೧-೩-೨೨ ಬಿಲ್ವವೃಕ್ಷವಾಹನದ ಉತ್ಸವ, ೧೨-೩-೨೨ ನಕ್ಷತ್ರ ಮಂಟಪದಲ್ಲಿ ಉತ್ಸವ, ೧೩-೩-೨೨ ಬೆಳ್ಳಿ ಪಲ್ಲಕ್ಕಿಯಲ್ಲಿ ಉತ್ಸವ, ೧೪-೩-೨೨ ಕರೀ ಆನೆ ವಾಹನದಲ್ಲಿ ಉತ್ಸವ, ೧೫-೩-೨೨ ತೆಪ್ಪೋತ್ಸವ, ಈ ರೀತಿ ದೇವತಾ ಉತ್ಸವಕಾರ್ಯಗಳು ಬಹಳ ವಿಜೃಂಭಣೆಯಿಂದ ನಡೆಯುತವೆ.

ಸ್ವಾದ ಶೆಟ್ಟರು, ಯಜಮಾನರು, (ಧರ್ಮದರ್ಶಿಗಳು.)

ಪಂಚಮರು.

ಕ್ಲೋಸ್‌ಪೇಟೆ ತಾಲ್ಲೂಕಿನಲ್ಲಿ ಪಂಚಮೋದ್ಧರಣಕಾರ್ಯವು ಮುಂದುವರಿಯುತ್ತಿದೆ. ಬನ್ನಿಕುಪ್ಪೆಯ ಪಂಚಮರು ಮದ್ಯಪಾನಾದಿಗಳನ್ನು ಸಂಪೂರ್ಣವಾಗಿ ವರ್ಜಮಾಡಿರುವರೆಂದು ಹಿಂದೆಯೊಂದಾವರ್ತಿ ತಿಳಿಸಿದ್ದಿತು. ಅಲ್ಲಿಯ ಪಟೇಲರಾದ ಮ|| ರಾ|| ಬಿ. ಚೌಡಯ್ಯಗೌಡರವರು, ಚಿಕ್ಕ ಅಂಕನಹಳ್ಳಿ, ದೊಡ್ಡ ಅಂಕನಹಳ್ಳಿ ಉಗೇನಹಳ್ಳಿ ಮುಂತಾದ ಗ್ರಾಮಗಳ ಪಂಚಮರಿಗೆ ತಕ್ಕ ಬೋಧನೆಗಳನ್ನು ಮಾಡಿ ಅವರೆಲ್ಲರೂ ಕುಡಿತವನ್ನು ವರ್ಜಮಾಡುವಂತೆ ಮಾಡಿರುವರು. ಅಂಕನಹಳ್ಳಿಯಲ್ಲಿ ಈಗ ಸುಮಾರು ನೂರು ಜನರು ಸಂಪೂರ್ಣವಾಗಿ ಬಿಟ್ಟುಬಿಟ್ಟಿರುತ್ತಾರೆ. ಈ ಪಂಚಮರಲ್ಲಿ ಮುಖ್ಯಸ್ಥರಾದ ಚಾಮ, ಚೌಡ, ಬೋರ ಎಂಬುವರು ತಮ್ಮ ಜನಗಳ ಅಭಿವೃದ್ಧಿಯಲ್ಲಿ ತುಂಬಾ ಶ್ರದ್ಧೆವಹಿಸುತ್ತಿರುವರೆಂದು ತಿಳಿದುಬಂದಿದೆ. ಹಾಗೆಯೇ ಉಗೇನಹಳ್ಳಿಯಲ್ಲಿ ರಾಮ, ದೊಡ್ಡದಾಸ, ದಾಸ ಮುಂತಾದವರು ಮುಂದಾಳುಗಳಾಗಿರುತ್ತಾರೆ. ಇವರ ಈ ವಿಧವಾದ ಉತ್ಸಾಹವು ಇತರ ಪಕ್ಕದ ಹಳ್ಳಿಗಳಿಗೂ ಹಬ್ಬಿ ಕೂಡಲೇ ಈ ತಾಲ್ಲೂಕಿನಲ್ಲಿ ಎಲ್ಲರೂ ನಿಷಾಸೇವನೆಯನ್ನು ವರ್ಜಿಸುವರೆಂದು ಧಾರಾಳವಾಗಿ ನಂಬಬಹುದಾಗಿದೆ. ಇದರಿಂದ ಸಮಾಜಸಂಸ್ಥಿತಿಯಲ್ಲಿ ಈ ತಾಲ್ಲೂಕೇ ಎಲ್ಲಾ ತಾಲ್ಲೂಕುಗಳಿಗಿಂತಲೂ ಮುಂದಾಗಬಹುದೆಂದು ನಂಬಬಹುದಾಗಿದೆ. ಇದಕ್ಕೆಲ್ಲ ಬನ್ನಿಕುಪ್ಪೆ ಮ|| ರಾ|| ಬಿ. ಚೌಡಯ್ಯಗೌಡರವರೇ ಕಾರಣಕರ್ತರೆಂದು ತಿಳಿಯಲು ಬಹಳ ಸಂತೋಷವಾಗುತ್ತದೆ. ಇವರಿಗೆ ಮ|| ರಾ|| ಜಿ. ಹನುಮೇಗೌಡರವರು ಸ್ಕೂಲ್ಮಾಷ್ಟರು ಮ|| ರಾ|| ಟಿ. ಮರೆಯ್ಯನವರೂ ಏಕಾತ್ಮೆಯಾಗಿ ಕೆಲಸಮಾಡುತ್ತಿರುವರು. ಇವರ ಸನ್ಮಾರ್ಗವನ್ನು ದೇಶಹಿತೈಷಿಗಳೆಲ್ಲಾ ಅನುಸರಿಸಿ ಕೆಲಸಮಾಡಿ ದೀನರಕ್ಷಕನಾದ ಭಗವಂತನ ಕೃಪೆಗೆ ಪಾತ್ರರಾಗಲೆಂದು ಕೋರುತ್ತೇನೆ. ದೇಶೋದ್ಧಾರಕರ ಸೇವಕ.

ಶ್ರೀ ಹಿಮವತ್ಕೇದಾರದ ಜಗದ್ಗುರುಗಳು (ರಾಯದುರ್ಗ.)

ನಾನು ಕಳೆದ ತಿಂಗಳು ತಾ|| ೧೩ಕ್ಕೆ ರಾಯದುರ್ಗಕ್ಕೆ ಹೋದೆನು. ಆ ಕಾಲಕ್ಕೆ ಅಂದರೆ ತಾ|| ೧೫ಕ್ಕೆ ಜಗದ್ಗುರುಗಳು ಪುರಪ್ರವೇಶ ಮಾಡುತ್ತಾರೆಂಬುದನ್ನು ಕೇಳಿ ನಿಂತುಬಿಟ್ಟೆನು. ತಾ|| ೧೪ಕ್ಕೆ ಆ ಪಟ್ಟಣದ ತುಂಬಾ ಪರಸ್ಥಳದ ಜನರು ತುಂಬಿಬಿಟ್ಟರು. ಹೋಟೇಲ್ ಮನೆಗಳಲ್ಲಿ ೧ ಊಟಕ್ಕೆ ೮ ಆಣೆಯಾಯಿತು. ಬೀದಿಗಳಲ್ಲಿ ಎಲ್ಲಿ ನೋಡಿದರೂ ಜಗದ್ಗುರುಗಳ ಆಗಮನದ ಬಿರುದಾಂಕಿತದ ಪಟಗಳು ಕಟ್ಟಲ್ಪಟ್ಟಿದ್ದವು. ತಾ|| ೧೫ರಲ್ಲಿ ಪಟ್ಟಣದ ತುಂಬಾ ಜನಗಳ ಗಲಾಟೆ ಬಹಳವಾಯಿತು. ಸಾಯಂಕಾಲಕ್ಕೆ ಸರಿಯಾಗಿ ಮಹಾಸ್ವಾಮಿಯು ದಿಗ್ವಿಜಯ ಮಾಡಿತು. ಆಗ ಭಂಗಾರದಿಂದ ಸಿಂಗರಿತವಾದ ಅಡ್ಡಪಲ್ಲಕ್ಕಿಯಲ್ಲಿ ಜಗದ್ಗುರುಗಳು ಪರಮೇಶ್ವರನಂತೆ ಒಪ್ಪುತ್ತಿದ್ದರು. ಆನೆಗಳು ಕುದುರೆಗಳ ಸಾಲುಗಳ ಕುಣಿತ ಜಯಘೋಷ ಮುಂತಾದವುಗಳೊಡನೆ ಪುರಪ್ರವೇಶವಾಯಿತು. ಆ ಗ್ರಾಮದ ಶ್ರೀಮಂತರಾದ ಮ|| ರಾ|| ಕರಿನಾಗಶೆಟ್ಟಿ ಶರಣಪ್ಪನವರು ಗಡಿಗೆ ಸಣ್ಣೂರಪ್ಪನವರು ಸೋಂಪೂರು ಮುರಿಗೆಪ್ಪನವರು ಡಿಪ್ಟಿ ಕಲೆಕ್ಟರ್‌ಸಾಹೇಬರವರು ತಹಶೀಲ್ದಾರರವರು ಇನ್ಸ್‌ಪೆಕ್ಟರವರೇ ಮೊದಲಾದವರು ಅಡ್ಡಪಲ್ಲಕ್ಕಿ ಮುಂಭಾಗದಲ್ಲಿ ಜನಗಳ ಗಲಾಟೆಯಿಲ್ಲದಂತೆ ನೋಡಿಕೊಳ್ಳುತ್ತಿದ್ದರು. ಈ ಗ್ರಾಮದಲ್ಲಿ ವೀರಶೈವರ ಸಂಖ್ಯೆಯು ಬಹಳ ಕಡಿಮೆಯಿದ್ದಂತೆ ತೋರುತ್ತದೆ. ಇದ್ದುದರೊಳಗೆ ಭೂಪತಿಯೊಂದಿದ ಮನೆತನದವರಾದ ಶ್ರೀಮಂತ ಗಡಿಗೆ ಸಣ್ಣೂರಪ್ಪನವರ ಸಾಹಸಕ್ಕೆ ಬಂದ ಜನರೆಲ್ಲರೂ ಅತನನ್ನು ಕೊಂಡಾಡುತ್ತಿದ್ದರು ಆನಂತ ಊರಿದ ಶ್ರೀಮಂತ ವೀರಶೈವರೆಲ್ಲರೂ ಜಗದ್ಗುರುಗಳ ವಿಷಯದಲ್ಲಿಯೂ ಸಮಾಜ ವಿಷಯದಲ್ಲಿಯೂ ಮುಂದುವರಿದರೆ ವೀರಶೈವ ಮತವು ಎಷ್ಟೋ ಅಭಿವೃದ್ಧಿಗೆ ಬರುವುದು ಮಹಾಸ್ವಾಮಿಯು ಬಾಸಬಿತುಗೆ ದಯಮಾಡಿದ ಮೇಲೆ ಸರ್ವರೂ ಆಶೀರ್ವಾದಪಡೆದು ತಮ್ಮ ತಮ್ಮ ನೆಲೆಗೆ ತೆರಳಿದರು. ಪ್ರತ್ಯಕ್ಷದರ್ಶಿ.

ಸಮಾಜಸೇವೆಯೇ ದೇವರಸೇವೆಯು.

ತಾ|| ೨೪-೨-೧೯೨೨ ದಿವಸ ಇಲ್ಲಿಯ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ವಾಚನಾಲಯದವರ ವ್ಯವಸ್ಥೆಯ ಕೆಳಗೆ ಅಸ್ಪೃಶ್ಯವರ್ಗದವರದೊಂದು ಕಮಿಟಿಯು ಕೂಡಿತು. ಈ ಕಮಿಟಿಗೆ ಇಲ್ಲಿಯ ಯಾವತ್ತು ಬ್ರಾಹ್ಮಣೇತರ ಜನರು ನೆರೆದಿದ್ದು ಇಲ್ಲಿಯ ಮೆಂಬರ ಜನರು ಅಸ್ಪೃಶ್ಯವರ್ಗದವರ ಉದ್ಧಾರ ಈ ವಿಷಯದಮೇಲೆ ಯಾವತ್ತು ಅಸ್ಪೃಶ್ಯವರ್ಗದವರಿಗೆ ತಿಳಿಯುವಂತೆ ಭಾಷಣಮಾಡಿದಮೇಲೆ ಕೆಳಗಿನ ಠರಾವುಗಳು ಸರ್ವಾನುಮತಿಯಿಂದ ಪಾಸಾದವು ೧. ಈ ಹೂಲಿಯ ಗ್ರಾಮದಲ್ಲಿ ಹೊಲೆಯರೂ ಮಾದಿಗರೂ ಕೂಡಿ ೧೪೦ ಜನರಿದ್ದು ಇಲ್ಲಿ ಒಂದು ಧೇಡಸ್ಕೂಲ ಸ್ಥಾಪಿಸುವದು ಮುಖ್ಯವಾದ ಕಾರಣ ಈ ಕಮಿಟಿಯವರು ಸರ್ಕಾರಕ್ಕೆ ತೀವ್ರ ಶಾಲೆಯನ್ನು ಸ್ಥಾಪಿಸುವದಕ್ಕೆ ವಿನಂತಿಮಾಡಿಕೊಳ್ಳುತ್ತೇವೆ. ೨. ಹಿಂದೆ ಈ ಊರಲ್ಲಿ ಧೇಡಸ್ಕೂಲ ಇದ್ದು ಕೆಲವು ಅಸೂಯಾಪರರ ಪ್ರೋತ್ಸಾಹದಿಂದ ಶಾಲೆಯ ವ್ಯವಸ್ಥೆಯು ಸ್ವಲ್ಪ ಕೆಟ್ಟದ್ದರಿಂದ ಸರಕಾರದವರು ಶಾಲೆಯನ್ನು ತೆಗೆದುಹಾಕಿದ್ದಕ್ಕೆ ಈ ಕಮಿಟಿಯವರು ವಿಷಾದಿಸುತ್ತಾರೆ. ೩. ಪ್ರತಿವಂದು ಗ್ರಾಮದಲ್ಲಿ ರಾಜನಿಷ್ಠಾ ಸಂಘವನ್ನು ಸ್ಥಾಪಿಸಿ ಆದರಮುಖಾಂತ ಕೆಲವು ಸ್ವಯಂಸೇವಕರನ್ನು ಗೊತ್ತುಮಾಡಿ ಆಗ್ಗೆ ಜನರ ಶಾಂತತಾಭಂಗಮಾಡತಕ್ಕ ಜನರ ತಂಟವನ್ನು ಖಂಡನಮಾಡಿಬರುವಂತೆ ಆ ಸ್ವಯಂಸೇವಕರಿಗೆ ತಿಳಿಸತಕ್ಕದ್ದು. ಸದರಿ ಸ್ವಯಂಸೇವಕರ ವ್ಯವಸ್ಥೆಯನ್ನು ಆ ಆ ಸಂಘದವರೇ ಮಾಡತಕ್ಕದ್ದು. ಈಪ್ರಕಾರ ಸಭೆಯಲ್ಲಿ ಠರಾವುಗಳು ಪಾಸಾದ ಮೇಲೆ ಜಗದ್ಗುರು ವಿಶ್ವಾರಾಧ್ಯರ ಆಶೀರ್ವಾದದಿಂದ ಸ್ಥಾಪಿಸಲ್ಪಟ್ಟ ರಾಜನಿಷ್ಠಾ ಸಂಘಕ್ಕೆ ಬ್ರಾಹ್ಮಣೇತರ ಜನರ ಪ್ರೋತ್ಸಾಹ ಕೊಟ್ಟದ್ದಲ್ಲದೆ ಅನೇಕ ಜನರು ಮೆಂಬರರಾದರು. ಮುಂದೆ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಸೆಕ್ರೆಟರಿ, ಶ್ರೀಮಜ್ಜಗದ್ಗುರು ವಿಶ್ವಾರಾಧ್ಯವಾಚನಾಲಯ ಹೂಲಿ.

ವೀರಶೈವರ ಎಳಿಗೆ.

ತಾರೀಖು ೨೪-೨-೧೯೨೨ ಇಸವಿ ದಿವಸ ಮಹಾಶಿವರಾತ್ರಿ ಇದ್ದ ಮೂಲಕ ಇಲ್ಲಿಯ ಶ್ರೀ ಪಂಚಲಿಂಗೇಶ್ವರ ದೇವಾಲಯದಲ್ಲಿ ಪ್ರತಿವರ್ಷ ಜರಗುವಂತೆ ಇಲ್ಲಿಯ ವೀರಶೈವ ತರುಣಸಂಘದವರು ಹೂಲಿಯಿಂದ ಬಂದ ವೇ|| ಚನ್ನಬಸವಸ್ವಾಮಿ ಹಿರೇಮಠ ಇವರಕಡೆಯಿಂದ ಸಂಜೆ ೮ ಘಂಟೆಯಿಂದ ಬೆಳಗಿನ ೪ ಘಂಟೆಯವರೆಗೆ ವಿಧಿಪೂರ್ವಕವಾಗಿ ರುದ್ರಾಭಿಷೇಕ ಮೊದಲಾದ ಪೂಜಾವಿಧಾನವನ್ನು ಒಳ್ಳೇ ಉತ್ಸಾಹಪೂರ್ವಕವಾಗಿ ಜರುಗಿಸಿದರು. ಮತ್ತು ತಾ|| ೨೫-೨-೨೨ ದಿವಸ ಶನಿವಾರ ಮುಂಜಾನೆ ೬ ಘಂಟೆಯಿಂದ ಸಂಜೆ ೨ ಘಂಟೆಯವರೆಗೆ ಗಣಾರಾಧನೆಯಾದ ನಂತರ ಸಂಜೆಯ ೪|| ಘಂಟೆಯ ಸುಮಾರಕ್ಕೆ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯರ ಪಂಡಿತಾರಾಧ್ಯರ ಜಯಂತಿ ಉತ್ಸವದ ಮೆರವಣಿಗೆಯು ಪಂಚಲಿಂಗೇಶ್ವರ ದೇವಾಲಯದಿಂದ ಹೊರಟು ಒಳ್ಳೇ ವೈಭವದಿಂದಲೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಘೋಷದಿಂದಲೂ ಸಂಜೆಯ ೬ ಘಂಟೆಗೆ ಇಲ್ಲಿಯ **ಶ್ರೀ ಬಸವೇಶ್ವರ ಪ್ರಾಸಾದಿಕ ಲೈಬ್ರರಿಗೆ ಬಂದು ತಲ್ಪಿತು. ಮುಂದೆ ಪಂಚಾಚಾರ್ಯರ ಭಾವಚಿತ್ರದ ಅಧ್ಯಕ್ಷತೆಯ ಕೆಳಗೆ ಸಭೆಯುಸೇರಿ (ಜಯಂತಿ) ಈ ವಿಷಯದಮೇಲೆ ಹೂಲಿಯ ಜಗದ್ಗುರು ವಿಶ್ವಾರಾಧ್ಯ ವಾಚನಾಲಯ ವತಿಯಿಂದ ಬಂದ ಶ್ರೀ|| ಮರುಳಸಿದ್ಧಯ್ಯಾ ಶಿರವಾಳಮಠ ಸಾ|| ರಾಮದುರ್ಗ ಇವರು ಭಾಷಣಮಾಡಿದ ನಂತರ (ವೀರಶೈವರಿಗೆ ಅಂತಂತ ಅವಶ್ಯಕತೆ) ಈ ವಿಷಯದಮೇಲೆ ಮ|| ರಾ|| ರಾ|| ನರಸಪ್ಪನವರು ಬಾಳಿ ಇವರು ಭಾಷಣಮಾಡಿದ ನಂತರ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು. ೧. ನಮ್ಮ ಧರ್ಮದ ಜಯಂತಿ ಉತ್ಸವಗಳನ್ನು ರೂಢಿಯಲ್ಲಿತಂದು ಅದರ ಮಹತ್ವವನ್ನು ಜನರಿಗೆ ಪ್ರಕಟಪಡಿಸುವದು. ೨. ವೀರಶೈವರಲ್ಲಿ ಇದ್ದ ಮತವೈಷಮ್ಯಗಳನ್ನು ತೆಗೆದುಹಾಕುವದು. ೩. ನಮ್ಮ ಧರ್ಮದ ಜನರಲ್ಲಿ**

ಶುದ್ಧಾಚರಣೆಗಳನ್ನು ಬಳಕೆಯಲ್ಲಿ ತರುವನು. ಈಪ್ರಕಾರ ಠರಾವುಗಳು ಪಾಸಾದ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಸೆಕ್ರೆಟರಿ ಮುನವಳ್ಳಿ.

ಬೇಲೂರು ಶ್ರೀ ಚನ್ನಕೇಶವಸ್ವಾಮಿ ರಥೋತ್ಸವ.

ಭೂವೈಕುಂಠವೆಂದು ಖ್ಯಾತಿಯಂ ಪಡೆದು, ಚಿತ್ರಕಲಾಕೌಶಲ್ಯಕ್ಕೆ ಮಾತೃಸ್ಥಾನವೆಂದು ಪ್ರಪಂಚದ ನಾಗರೀಕ ಜನಾಂಗವನ್ನು ಆಕರ್ಷಿಸುತ್ತಿರುವ ಶ್ರೀ ಚನ್ನಕೇಶವಸ್ವಾಮಿಯ ರಥೋತ್ಸವಾಂಗವಾದ ಅಂಕುರಾರ್ಪಣವು 3-4-22 ರಲ್ಲಿ, ಬನ್ನಿಪುಷ್ಪಮಂಟಪಾರೋಹಣವು 6-4-22 ರಲ್ಲಿ, ಶ್ರೀಮದಾಂಜನೇಯೋತ್ಸವವು 7-4-22ರಲ್ಲಿ, ಕುಂಕುಮವಸಂತಪೂರ್ವಕಪುಷ್ಪಗರುಡೋತ್ಸವವು 8-4-22ರಲ್ಲಿ, 9-4-22 ರಲ್ಲಿ ದಿವ್ಯರಥೋತ್ಸವವೂ ನಡೆದು 14-4-22ರಲ್ಲಿ ದಿವ್ಯರಾಜವೀಧಿ ಅಲಂಕಾರರಥೋತ್ಸವದೊಂದಿಗೆ ಶ್ರೀಯವರ ರಥೋತ್ಸವಾಂಗವಾದ ಉತ್ಸವಗಳೆಲ್ಲಾ ಆ ದಿನಕ್ಕೆ ಪರಿಪೂರ್ತಿಯಾಗುವುವು. ಈ ರಥೋತ್ಸವಕ್ಕೆ ಪ್ರತಿವರ್ಷವೂ 8-10 ಸಾವಿರಮಂದಿ ಭಕ್ತಾದಿಗಳು ಬಂದು, ಶ್ರೀಯವರ ಸಂದರುಶನವನ್ನು ಮಾಡಿ ಕೃತಾರ್ಥರಾಗುತ್ತಿರುವರು. ಈ ದೇವಸ್ಥಾನದಲ್ಲಿ ಹೆಚ್ಚಾದ ತಸ್ತೀಕುಗಳಿಲ್ಲದೆ, ಭಕ್ತಾದಿಗಳಿಗೆ ಊಟ ಉಪಚಾರಗಳಿಗವಕಾಶವಿಲ್ಲದೆ ತಮ್ಮ ಸ್ವಂತ ಖರ್ಚಿನಿಂದ 1-2 ದಿವಸಗಳಿದ್ದು ಪ್ರಯಾಣಮಾಡುತ್ತಿದ್ದರು. ಆಸ್ತಿಕಶಿರೋಮಣಿಗಳೂ ಪ್ರಜಾವತ್ಸಲರೂ ಆದ ಶ್ರೀಮಾನ್ ಯನ್. ಸುಬ್ಬಾರಾವ್ ಯವರು ಈ ತಾಲ್ಲೂಕಿಗೆ ಅಮಲ್ದಾರರಾಗಿ ದಯಮಾಡಿಸಿರುವುದರಿಂದ ಅವರು ಈ ವರ್ಷದಿಂದ ಅಂದರೆ 8-4-22 ರಿಂದ 12-4-22 ರವರೆಗೆ 4 ದಿವಸಗಳು ಭಕ್ತಾದಿಗಳಿಗೆ ಶ್ರೀಯವರ ಸನ್ನಿಧಿಯಲ್ಲಿ ಆರಾಧನೆಗಳನ್ನು ಏರ್ಪಡಿಸುವುದರಿಂದ ಭಕ್ತಾದಿಗಳು ಶ್ರೀಯವರ ಸಂದರುಶನಲಾಭವನ್ನು ನಿರಾತಂಕವಾಗಿ ಹೊಂದಬಹುದು. ಅಲ್ಲದೆ ಮೇಲ್ಕಂಡ ನಾಲ್ಕು ದಿವಸಗಳೂ ವ್ಯಾಪಾರಸ್ಥರಿಗೂ ವ್ಯವಸಾಯಗಾರರಿಗೂ ಅವರವರ ಕಸಬಿನ ಉತ್ತೇಜನವನ್ನುಂಟುಮಾಡಲು ದನಗಳ ಪ್ರದರ್ಶನವನ್ನು ಕಲ್ಪಿಸಿ ಅಗ್ಗೆ ಬರುವ ರಾಸುಗಳಿಗೆ ತೃಣಜಲವಸತಿಯಂ ಕಲ್ಪಿಸಿರುವುದಲ್ಲದೆ ಅವುಗಳಮೇಲೆ ಯಾವ ವಿಧವಾದ ಸುಂಕವನ್ನು ವಸೂಲ್ ಮಾಡುವುದಿಲ್ಲವೆಂದು ಮಾಡಿರುವ ಪ್ರೋತ್ಸಾಹವು ಶ್ಲಾಘ್ಯವಾಗಿದೆ. ಇಂತಹ ರಥೋತ್ಸವಕ್ಕೆ ಭಕ್ತಾದಿಗಳೂ ವ್ಯಾಪಾರಸ್ಥರೂ ವ್ಯವಸಾಯಗಾರರೂ ಈ ಬೇಲೂರಿಗೆ ಬಂದು ಶ್ರೀಯವರು ಸಂದರುಶನಲಾಭದೊಂದಿಗೆ ಐಹಿಕ ಪ್ರಯೋಜನವಂ ಹೊಂದುವರೆಂದು ಕೋರುವ

ಆಸ್ತಿಕಾಭಿಮಾನಿ.

ಗುರುದೇವತಾಭಕ್ತಿ, ಧರ್ಮತತ್ಪರತೆ.

ಅಯ್ಯಾ—ಕಡೂರು ಡಿ|| ಶಿವನಿ ಹೋಬಳಿ ಬುಕ್ಕಾಂಬುಧಿ ಗ್ರಾಮದ ಸಾಹುಕಾರ್ ಮತ್ತು ಜಮೀನ್ದಾರ್ ವೇ|| ತಾವರೆಕೆರೆ ಶಿರಾಮಠದ ಚಂ|| ನಂ|| ವೀರಯ್ಯನವರ ಮಾತೃಶ್ರೀ ಗೌರಮ್ಮನವರು ಸುಮಾರು ೮೫ ವರ್ಷ ವಯೋವೃದ್ಧರಾಗಿ ದಾನ ಧರ್ಮ ಪರೋಪಕಾರ ಶಿವಪೂಜಾನಿಷ್ಠೆಯಿಂದ ಬಾಳಿದರು. ಇವರ ಹೆಸರನ್ನು ಆಚಂದ್ರಾರ್ಕವಾಗಿ ಸ್ಥಿರಪಡಿಸಲು ಇವರ ಪುತ್ರರಾದ ಶಾಂತವೀರಯ್ಯನವರು ವೀರಯ್ಯನವರು ವಿಭಕ್ತರಾಗುವಾಗ್ಗೆ ಉಭಯರ ಮಧ್ಯೆ ಮಾತೃಭಕ್ತಿಗಾಗಿ ಅವರ ಜೀವಮಾನಾವಧಿ ಧರ್ಮ ಖರ್ಚಿನ ಸಲುವಾಗಿ (೨೦೦೦) ಸಾವಿರ ರೂಪಾಯಿ ಬೆಲೆ ಬಾಳುವ (ಬಾಗಾಯತು) ಅಡಕೆ ತೋಟವನ್ನು ಸದರಿ ಯಜಮಾನಿಯವರ ಸುಪರ್ದಿಗೆ ವಹಿಸಿಕೊಟ್ಟಿದ್ದ ಸ್ವತ್ತನ್ನು ತಾ|| ೨೫-೨-೨೨ನೆ ದಿವಸ ಸದರಿ ಯಜಮಾನಿ ಗೌರಮ್ಮನವರು ಮರಣಶಾಸನಬರೆದುದರಲ್ಲಿ ಕೊಲ್ಲಾಪುರದ ಛತ್ರಪತಿ ಮಹಾರಾಜರ ಭಕ್ತಿವಿಶ್ವಾಸಕ್ಕೆ ಪಾತ್ರರಾಗಿದ್ದ ಬುಕ್ಕಾಂಬುಧಿ ಸ್ಥಲದಲ್ಲಿ ಕಳೆದ ವರ್ಷ ಶಿವೈಕ್ಯರಾದ ಚಿತ್ರದುರ್ಗ ಜಗದ್ಗುರು ಜ್ಞಾನಸಿಂಹಾಸನದ ಅಧಿಕಾರಕ್ಕೆ ಒಳಪಟ್ಟ ಕೊಲ್ಲಾಪುರ ಮಠದ ಶ್ರೀ ಶ್ರೀ ಶಾಂತವೀರಸ್ವಾಮಿಗಳವರ ಗದ್ದಿಗೆ ಮತ್ತು ಅಲ್ಲಿಯದ ಪ್ರಸನ್ನ ಪಂಪಾವಿರೂಪಾಕ್ಷೇಶ್ವರ ಸ್ವಾಮಿಯವರ ತ್ರಿಕಾಲ ದೀಪಾರಾಧನೆ ಪೂಜಾಸೇವಾದಿ ಸದ್ವಿನಿಯೋಗಕ್ಕೆಂದು ಧರ್ಮಬುದ್ಧಿಯಿಂದ ಸಂಕಲ್ಪಪೂರ್ವಕ ಸಹಿರಣ್ಯೋದಕ ದಾನಪತ್ರದೊಡನೆ ಧಾರೆಯನ್ನೆರೆದು ಈ ಧರ್ಮಕಾರ್ಯವು ಸಾರೋದ್ಧಾರವಾಗಿ ನಡೆಸಲು ನಿಯಮಿತರಾದ (ಧರ್ಮದರ್ಶಿ) ಟ್ರಸ್ಟಿಗಳವರ ಸಮ್ಮುಖದಲ್ಲಿ ಧರ್ಮ ದಾನದ ಸೊತ್ತನ್ನು ಶ್ರೀ ವಿರೂಪಾಕ್ಷೇಶ್ವರ ಮತ್ತು ಗುರುಸ್ವಾಮಿಯವರ ಸೇವಾಪರರಾದ ಅರ್ಚಕ ಬಸಪ್ಪನವರ ವಶಕ್ಕೆ ವಹಿಸಿ ಕೊಡಲ್ಪಟ್ಟಿತು. ಈ ಉದಾರದ ಧರ್ಮಕರ್ತರಾದ ಸದರಿ ಗೌರಮ್ಮನವರಿಗೆ ಅವರ ಮುಂದಿನ ಕೈಲಾಸಯಾತ್ರೆಯಲ್ಲಿ ಸದ್ಗತಿಯಾಗಲೆಂದೂ ಇವರ ಉತ್ತರವಾರಸು ಸಂತಾನದವರಿಗೆ ಉತ್ತರೋತ್ತರ ಶ್ರೇಯಃಪ್ರಾರ್ಥನೆ ಬಗ್ಗೆ ತ್ರಿಕಾಲದಲ್ಲಿಯೂ ಜಗದ್ಗುರು ಮಹಾಸ್ವಾಮಿಗಳವರು ಶಿವಪೂಜಾವೇಳೆ ಸ್ಮರಣೆಗೆ ತರಬೇಕೆಂದೂ ಸೇರಿದ ಸಭಾಸದರಿಂದ ಜಗದ್ಗುರು ಮಹಾಸ್ವಾಮಿಗಳವರ ಸನ್ನಿಧಿಗೆ ಬಿನ್ನೈಸಿಕೊಳ್ಳಲ್ಪಟ್ಟಿತು.

ಪ್ರತ್ಯಕ್ಷದರ್ಶಿ ಪಟೇಲ್ ನಾಗಪ್ಪ.

ಮೈಸೂರು ದೇಶೀಯ ಪಂಡಿತರಿಗೆ ಒಂದು ಬಹಿರಂಗಪತ್ರ.

ಸತ್ಯವಾದಿಯ ಫೆಬ್ರವರಿ ತಿಂಗಳ ಪ್ರಥಮ ಸಂಚಿಕೆಯಲ್ಲಿ ದೇಶೀಯ ಪಂಡಿತರೊಬ್ಬರು ವರ್ಣವ್ಯವಸ್ಥೆಯ ವಿಚಾರವಾಗಿ ಜಾತಿಬ್ರಾಹ್ಮಣತ್ವವನ್ನು ಸ್ಥಿರೀಕರಿಸಿ ಒಂದು ಲೇಖನವನ್ನು ಪ್ರಕಟಪಡಿಸಿದ್ದರು. ಈ ಲೇಖನಕ್ಕೆ ಸರಿಯಾದ ಉತ್ತರವನ್ನು ಸುಮಾರು ಹತ್ತು ಹನ್ನೆರಡುದಿವಸಗಳ ಹಿಂದೆಯೇ ಮೇಲ್ಕಂಡ ಪತ್ರಿಕಾ ಸಂಪಾದಕರಿಗೆ ಪ್ರಕಟನೆಗಾಗಿ ಕಳುಹಿಸಿದ್ದೆವು. ಆದರೆ ಅವರು ಯಾವ ಕಾರಣದಿಂದಲೋ ಅದನ್ನು ಪ್ರಚುರಪಡಿಸಿರುವದಿಲ್ಲ. ನಾವು ಈ ದೇಶಸ್ಥರಲ್ಲದಿರುವದರಿಂದಲೂ, ಕರ್ನಾಟಕ ಭಾಷಾಪರಿಚಯವಿಲ್ಲದಿರುವದರಿಂದಲೂ ಪತ್ರಿಕೆಗಳಮೂಲಕ ನಮ್ಮ ಅಭಿಪ್ರಾಯವನ್ನು ತಿಳಿಸುವದು ಸುಲಭಕರವಾಗಿರುವುದಿಲ್ಲ. ಆದುದರಿಂದ ನಾವು ಮೇಲ್ಕಂಡ ಲೇಖನವನ್ನು ಬರೆದಿರುವ ಪಂಡಿತರಿಗೂ ಮತ್ತು ಬ್ರಾಹ್ಮಣತ್ವವು ಹುಟ್ಟುವಿಕೆಯಿಂದಲೇ ಬರುವುದೆಂದು ಹೇಳುವ ಇತರರಿಗೂ ತಿಳಿಯಪಡಿಸುವದೇನಂದರೆ:—ಈ ವಿಷಯದಲ್ಲಿ ಪಂಡಿತರೊಂದಿಗೆ ಚರ್ಚೆಮಾಡಲು ನಾವು ಸಿದ್ಧರಾಗಿರುವೆವೆಂದು ಎಲ್ಲರಿಗೂ ತಿಳಿದು ಇದ್ದರೂ ವೃಥಾಪತ್ರಿಕೆಗಳಲ್ಲಿ ವೇದಸಮ್ಮತಗಳಲ್ಲದ ವಿಷಯಗಳಿಂದ ಕೂಡಿರುವ ಲೇಖನಗಳನ್ನು ಬರೆಯುವದರಿಂದ ಯಾವವಿಧವಾದ ಪುರುಷಾರ್ಥ ಯಾ ಪರಮಾರ್ಥ ಬಂದಹಾಗಾಯಿತು? ಮೇಲ್ಕಂಡ ಲೇಖನದಲ್ಲಿ ಬರೆದಿರುವ ಜಾತಿಬ್ರಾಹ್ಮಣತ್ವದ ಪಕ್ಷವನ್ನು ಸ್ಥಿರೀಕರಿಸಲು ಶಕ್ತರಾಗಿರುವವರು ಈ ಲೇಖನವನ್ನೇ ಆಮಂತ್ರಣವನ್ನಾಗಿ ಭಾವಿಸಿ ಪ್ರಥಮತಃ ನಿಯಮಗಳನ್ನು ಸ್ಥಿರೀಕರಿಸಿ ನಮ್ಮೊಂದಿಗೆ ಶಾಸ್ತ್ರಾರ್ಥವನ್ನು ಮಾಡಲಿ. ಅಥವಾ ನಮ್ಮ ಸಮಾಜದ ಉದ್ದೇಶಗಳೂ ಅಸಮಂಜಸವಾಗಿದ್ದಲ್ಲಿ ನಮ್ಮ ತಪ್ಪುತಿಳುವಳಿಕೆಗಳಿಂದ ನಮ್ಮನ್ನು ಪುನೀತರನ್ನಾಗಿ ಮಾಡುವದು ದೇಶೀಯಪಂಡಿತರ ಕರ್ತವ್ಯವಲ್ಲವೆ? ಹಾಗಾದರೂ ಸರಿಯೆ. ಜನಾಂಗವನ್ನು ಸತ್ಪಥದಲ್ಲಿ ಒಯ್ಯುವ ಉದ್ದೇಶವು ದೇಶಿಯ ಪಂಡಿತರಿಗಿದ್ದಲ್ಲಿ ನಮ್ಮೊಂದಿಗೆ ಶಾಸ್ತ್ರಾರ್ಥವನ್ನು ಮಾಡಲು ಹಿಂಜರಿಯುವದಿಲ್ಲ. ಈ ಲೇಖನದ ಮೂಲಕ ಸಕಲರಿಗೂ ನಮ್ಮ ಉದ್ದೇಶವನ್ನು ತಿಳಿಸಿಯೂ ಅವರು ಸುಮ್ಮನಿದ್ದಲ್ಲಿ ಅವರನ್ನು ಶುಭೋಧಕರೆಂದು ಸಕಲರೂ ತಿಳಿಯದೆ ಇರಲಾರರು.

ಸತ್ಯಾನಂದ ಸ್ವಾಮಿ.

ಚನ್ನಪಟ್ಟಣದ ತಾಲ್ಲೋಕ್ ಕಂದಾಯದವಸೂಲಿ ವಿಚಾರ.

ಅಯ್ಯಾ ನಮ್ಮ ಸಂಸ್ಥಾನಾದ್ಯಂತ ಪ್ರತಿವರ್ಷವೂ ಫೆಬ್ರವರಿ ತಿಂಗಳಾಗಾಯ್ತು ಕಂದಾಯದ ವಸೂಲಿಗೆ ಶ್ಯಾನುಬೋಗರು ಮತ್ತು ಪಟೇಲರುಗಳು ಪುರುವಾತಿ ವಸೂಲಿಕ್ರಮ ನಡೆಯಿಸುತ್ತಾ ಇರುವುದು ತಮ್ಮೆಲ್ಲರಿಗೂ ತಿಳಿದವಿಷಯವೇ ಆಗಿರುತ್ತೆ. ಈ ಚನ್ನಪಟ್ಟಣದ ತಾಲ್ಲೋಕಿನಲ್ಲಿ ಶ್ಯಾನುಬೋಗರುಗಳಲ್ಲಿ ಅನೇಕರು ಕಂದಾಯಕ್ಕಾಗಿ ರೈತರಿಂದ ತೆಗೆದುಕೊಂಡ ದುಡ್ಡನ್ನು ಖಜಾನೆಗೆ ಇರಸಾಲ್ ಮಾಡದೆ ತಾವೇ ದುರುಪಯೋಗಪಡಿಸಿಕೊಂಡು ತಿಂದುಹಾಕಿರುವ ಸಬಬು ತಾಲ್ಲೋಕಾದ್ಯಂತ ಕಂದಾಯದ ಬಾಕಿಯು ವಿಶೇಷವಾಗಿ ನಿಂತುಹೋಗುತ್ತಾ ಬಂದು ಈಗ ರೈತರುಗಳಿಗೆ ನಾನಾವಿಧವಾದ ಕಷ್ಟನಷ್ಟಗಳು ಸಂಭವಿಸಿರುವಕಾರಣ ಸದರಿ ಶ್ಯಾನುಬೋಗರ ವಶಕ್ಕೆ ಕಂದಾಯ ಪಾವತಿಮಾಡುವುದಿಲ್ಲವೆಂದು ರೈತರು ಪಿರ್ಯಾದು ತಂದದ್ದರಮೇಲೆ ಹಾಲಿ ಅಮಲ್ದಾರ್ರವರು ಯೋಚಿಸಿ ರೂಲ್ಸ್ ಪ್ರಕಾರ ಪಟೇಲರುಗಳೇ ಕಂದಾಯದ ಹಣವನ್ನು ತೆಗೆದುಕೊಳ್ಳಬೇಕೆಂದೂ ಶ್ಯಾನುಬೋಗರು ಪಟೇಲರಿಗೆ ಕುಮ್ಮಕ್ ಮಾಡಬೇಕೆಂದೂ ತೀರ್ಮಾನಮಾಡಿದ್ದರಿಂದ ಶ್ಯಾನುಬೋಗರುಗಳ ದುಸ್ಸಂಪಾದನೆಗಳಿಗೆಲ್ಲಾ ಅವಕಾಶವಿಲ್ಲದೇಹೋದ ಪ್ರಯುಕ್ತ (ಹಸಿದು ಬಳಲುತ್ತಿದ್ದ ಹುಲಿಕೈಗೆ ಮೇಕೆಯು ಸಿಕ್ಕಿ ತಪ್ಪಿಸಿಕೊಂಡುಹೋದಂತೆ ಆಗಿ) ಪುನಃ ಶ್ಯಾನುಬೋಗರುಗಳೆಲ್ಲಾ ಗುಂಪುಕಟ್ಟಿಕೊಂಡು ಪ್ರತಿಯೊಬ್ಬರೂ ವಸೂಲಿಗೆ ಹೋಗಕೂಡದೆಂದೂ ನಾವು ವಸೂಲಿಗೆ ಹೋಗದೇನಿಂತರೆ ಖಜಾನೆಗೆ ಹಣವೇಬರುವುದಿಲ್ಲವೆಂದೂ (ತನ್ನಕೋಳಿ ಕೂಗಿದರೇನೆ ಬೆಳಗಾಗುವುದೆಂಬ ಮುದುಕಿ ಯೋಚನೆಯಂತೆ) ಮಾತನಾಡಿಕೊಂಡು ವಸೂಲಿಗೆ ಹೋಗದೆ ನಿಂತುಬಿಟ್ಟರು. ಪಟೇಲರುಗಳೇ ವಸೂಲಿ ಕೆಲಸವೆಲ್ಲವನ್ನು ನಡೆಸಲು ಅವರುಗಳಿಗೆ ಸರಿಯಾಗಿ ಖಾತೆ ಕಿರ್ದಿ ಲೆಖ್ಖಗಳನ್ನು ಕೊಡದೆ ಬಹಳ ತೊಂದರೆಗೆ ಕಾರಣರಾಗಿರುತ್ತಾರೆ. ಈರೀತಿ ಸರ್ಕಾರದ ಕೆಲಸಕ್ಕೆ ತೊಂದರೆಮಾಡಿರುವಂತಹವರಿಗೆ ಶಿಕ್ಷೆ ಉಂಟೋ ಇಲ್ಲವೋ ಗೊತ್ತಿಲ್ಲ. ಇಷ್ಟಾರಣವಾಗಿ ಸರ್ಕಾರಿ ಕೆಲಸವನ್ನು ಕ್ಲಪ್ತಕಾಲಗಳಲ್ಲಿ ಮಾಡದೆಹೋದರೆ ತಮಗೆ ತೊಂದರೆಬರುವುದೆಂಬ ಸಂಗತಿ ತಿಳಿದಿದ್ದರೂ ಕೂಡ ನಿರ್ಭಯವಾಗಿ ಸರ್ಕಾರಿ ಕೆಲಸವನ್ನು ಮಾಡದೆ ಮುಷ್ಕರ ಹಿಡಿದಿರುವುದು ನೋಡಿದರೆ ಸರ್ಕಾರದಲ್ಲಿ ಬಿಗಿ ಇಲ್ಲವೆಂದು ಕಂಡುಬರುತ್ತದೆ. ಕೆಲವು ಜನ ಶ್ಯಾನುಬೋಗರುಗಳು ಮಾತ್ರ ಈ ಶ್ಯಾನುಬೋಗರ ಗುಂಪಿಗೆ ಸೇರದೆ ಪಟೇಲರಜೊತೆಯಲ್ಲಿ ರೂಲ್ಸ್ ಪ್ರಕಾರ ವಸೂಲಿಕ್ರಮ ನಡೆಸುತ್ತಾ ಇದ್ದಾರೆ. ಈರೀತಿ ಬಹಳಜನ ಶ್ಯಾನುಬೋಗರುಗಳು ವಸೂಲಿಗೆ ಬಾರದೇಹೋದ್ದರಿಂದ ಅಮಲ್ದಾರ್ರವರು ಬಹಳ ಸಾಹಸಪಟ್ಟು ವಿದ್ಯಾವಂತರಾದ ಪಟೇಲರುಗಳಿಗೆಲ್ಲಾ ಕುಮ್ಮಕ್ ಕೊಟ್ಟು ವಸೂಲಿಗೆ ತರದೂದು ಮಾಡಿರುವ ವಿಚಾರದಲ್ಲಿ ಅಮಲ್ದಾರ್ರವರು ತುಂಬಾ ಸಾಹಸಿಗಳೆಂಬುವುದರಲ್ಲಿ ಸಂದೇಹವಿಲ್ಲ. ಶ್ಯಾನುಬೋಗರುಗಳು ವಸೂಲಿಗೆ ಬಾರದೇಹೋದ ಕಾರಣ ರೈತರುಗಳಿಗೆ ಉಂಟಾಗಿದ್ದ ಅನುಮಾನವೆಲ್ಲಾ ಪರಿಹಾರವಾಗಿ ತಾವು ದಂಡವಾಗಿಕೊಡುತ್ತಿದ್ದ ಮಸಿಕಾಣಿಕೆ ವಗ್ಯೆರೆ ಕಂಗೆಗಳೆಲ್ಲಾ ಉಳಿದು ಧಾಯಿದೆಯೊದ್ದರಿಂದ ಇದು ಒಳ್ಳೇಸಮಯವೆಂದು ರೈತರುಗಳೆಲ್ಲಾ ತಿಳಿದು ಕಂದಾಯವನ್ನು ಪಟೇಲರವಶಕ್ಕೆ ಕೊಟ್ಟು ತಮ್ಮ ಇಷ್ಟದಂತೆ ಸರಿಯಾದ ಲೆಖ್ಖಗಳನ್ನು ಬರೆಸಿಕೊಂಡಿರುವ ಕಾರಣ ಖಜಾನೆಗೆ ಪ್ರತಿವರ್ಷವೂ ಮೊದಲನೇ ಕಿಸ್ತಿನಲ್ಲಿ ಬರುತ್ತಿದ್ದ ಹಣದ ಎರಡರಷ್ಟು ಈವರುಷ ಇರಸಾಲ್ ಆಗಬಹುದೆಂದು ತೋರುತ್ತೆ. ಈ ವಿಷಯದಲ್ಲಿ ದುರ್ಜನರಿಗೆ ಬಂದ ಸಂತಸ ಸಜ್ಜನರಿಗೆ ಬಂದ ವಿರಸವೂ ಸಹ ಬಹಳದಿವಸ ಇರುವುದಿಲ್ಲವೆಂಬುದು ಉದಾಹರಣೆಯಾಗಿರುತ್ತೆ. ಈ ಮಾಹೆ ೩ ನೇ ತಾರೀಖಿನಿಂದಾಗಾಯ್ತು ಹುಜೂರು ಜಮಾಬಂದಿಯು ಶುರುವಾಗಿ ನಡೆಯುತ್ತಾ ಇದೆ. ಈ ತಾಲ್ಲೋಕಿಗೆಲ್ಲಾ ಡೆಪ್ಯುಟಿಕಮಿಷನರ್ ಸಾಹೇಬರವರು ಎರಡೇ ಕ್ಯಾಂಪುಗಳನ್ನು ಮಾಡಿಕೊಂಡಿರುವುದರಿಂದ ದೂರಭಾಗದಲ್ಲಿರುವ ರೈತರುಗಳು ತಮ್ಮ ಅಹವಾಲ್ ಗಳನ್ನು ಹೇಳಿಕೊಳ್ಳಲು ತೊಂದರೆಯಾಗಿರುತ್ತೆ. ರೈತರುಗಳು ಶ್ಯಾನುಬೋಗರಿಂದ ತಮಗೆ ಉಂಟಾಗಿರುವ ತೊಂದರೆಗಳನ್ನೆಲ್ಲಾ ಪರಿಹಾರಮಾಡಿಕೊಳ್ಳುವ ಉದ್ದೇಶ್ಯವಾಗಿ ಡೆಪ್ಯುಟಿಕಮಿಷನರ್ ಸಾಹೇಬರವರ ಆಗಮನವನ್ನೇ ಹಗಲೂ ರಾತ್ರಿಯೂ ಬಯಸುತ್ತಾ ಇದ್ದಾರಾದಕಾರಣ ಇಲಾಖಾ ಪ್ರಭುಗಳು ಬಡರೈತರ ಅಹವಾಲ್ ಗಳನ್ನು ಘನವಾದಚಿತ್ತದಲ್ಲಿ ತಂದು ಶ್ಯಾನುಬೋಗರುಗಳ ಲೆಖ್ಖಗಳಿಂದ ರೈತರುಗಳಿಗೆ ಉಂಟಾಗುತ್ತಿರುವ ತೊಂದರೆಗಳನ್ನೆಲ್ಲಾ ತಪ್ಪಿಸಿ ಸರಿಯಾದ ಲೆಖ್ಖಗಳನ್ನು ಕೊಡಿಸಿಕೊಡುವದಲ್ಲದೆ ತಪ್ಪುಮಾಡಿರುವ ಶ್ಯಾನುಬೋಗರ ವಿಚಾರದಲ್ಲಿ ಅಭಿಮಾನವಿಡದೆ ತಕ್ಕ ಶಿಕ್ಷೆಯನ್ನು ವಿಧಿಸಿ ಸರಿಯಾದ ಬಂದೋಬಸ್ತು ಮಾಡಿ ರೈತರನ್ನು ಕಾಪಾಡುತ್ತಾರೆಂದು ನಂಬಿರುತ್ತೇನೆ.

ಒಬ್ಬರೈತ.

ಹಾವೇರಿಪೇಟೆ ಧಾರವಾಡ.

ಧಾರವಾಡ ಹಾವೇರಿಪೇಟೆ ಮುರಘ ಮಠದ ಶ್ರೀ · · ಬೋರ್ಡಿಂಗ್ ಮತ್ತು ಪಾಠಶಾಲಾ ಸಂಸ್ಥೆಯ ವಾರ್ಷಿಕ ಸಮಾರಂಭವು ತಾ|| ೨-೩-೧೯೨೨ನೇ ಇಸವಿ ದಿವಸ ಶ್ರೀ ಮಠದೊಳಗೆ ಹಾನಗಲ್ಲ ಶ್ರೀ · · ಮಹಾಸ್ವಾಮಿಗಳವರ ಸನ್ನಿಧಾನದಲ್ಲಿ ನಡೆಯಿತು. ಈ ಸಭಾಕಾಲದಲ್ಲಿ ಶ್ರೀಮನ್ನಿರಂಜನ ಪ್ರಣವ ಸ್ವರೂಪ ಅಥಣಿಗಚ್ಚಿನ ಮಠದ ಶ್ರೀ ಗುರುಶಾಂತಸ್ವಾಮಿಗಳವರೂ ಶ್ರೀ ಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳವರೂ ಹುಬ್ಬಳ್ಳಿ ಕಲ್ಯಾಣಮಠದ ಶ್ರೀ ಬಸವಸ್ವಾಮಿಗಳವರೂ ಶಹಾಪೂರ ಮಠದ ಜಡೆಯಪ್ಪ ಸ್ವಾಮಿಗಳೂ ವಿರಾಜಮಾನರಾಗಿದ್ದರು. ಈ ಸಮಾರಂಭಕ್ಕೆ ಧಾರವಾಡ ಟ್ರೇನಿಂಗ್ ಕಾಲೇಜ್ ಪ್ರಿನ್ಸಿಪಾಲ್ ಕೆರೂರರಾಯರೂ, ವೈಸ್ ಪ್ರಿನ್ಸಿಪಾಲ್ ನವಲಗುಂದರಾಯರೂ ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸ್ಪೆಕ್ಟರ್ ಚಂದಾವಾರಕರವರೂ, ಪರ್ಸನಲ್ ಇನ್ಸ್ಪೆಕ್ಟರ ಗೋಖಲೆಯವರೂ ಹೈಸ್ಕೂಲ ಹೆಡ್ ಮಾಸ್ತರರಾದ ವಿವೇಕರರವರೂ, ರೆಸಿಡೆಂಟ್ ಮ್ಯಾಜಿಸ್ಟ್ರೇಟ್ ಕೊಟ್ರಬ ಪ್ರಸವರೇ ಮುಂತಾದ ಅಧಿಕಾರಿಗಳೂ ರಾವ್ ಬಹಾದ್ದೂರ ಗೋಪಾಳ ಅನಂತಗಿರಿಯವರೂ, ಮ|| ರಾ|| ಹುಲಕೋಟಿ ಎಮ್. ಎಲ್. ಸಿ. ಯವರೇ ಮೊದಲಾದ ಸ್ಥಳೀಯ ಪ್ರಮುಖರೂ ಶ್ರೀಮಂತ ಸರದಾರ ಬುಳ್ಳಪ್ಪ ಮಾಮಲೇದೇಸಾಯಿ ಸಂಸ್ಥಾನ ಹಂದಿಗನೂರುಯವರೂ ತೊಂಡೂರ ದಾವಣಗೆರೆ ಕಾರನಹಳ್ಳಿ, ಆಲೂರು, ಹುಬ್ಬಳ್ಳಿ, ಗದಗ, ಹಾವೇರಿ, ಹಿರೇಕೆರೂರು, ಮರೆವಾಡ, ಬಿನರಳ್ಳಿ, ಹೆಬ್ಬಾಳ, ಇಟಗಿ, ಮುಂತಾದ ಅನೇಕ ಪರಸ್ಥಳದ ಪ್ರಮುಖರೂ ಆಗಮಿಸಿದ್ದರು. ಕರ್ನಾಟಕ, ಕಾಲೇಜ ಟ್ರೇನಿಂಗಕಾಲೇಜ್ ಹೈಸ್ಕೂಲ್ ಹಾಗೂ ಕನ್ನಡ ಸ್ಕೂಲುಗಳ ವಿದ್ಯಾರ್ಥಿಗಳೂ ಮತ್ತು ಮಾಸ್ತರರೂ ಬಂದಿದ್ದರು. ಶ್ರೀಮಠದ ಮುಂಭಾಗದ ಮಂಟಪದಲ್ಲಿ ಜನಸಮೂಹಕ್ಕೆ ಸ್ಥಳವು ಏರ್ಪಾಟು ಮಾಡಲ್ಪಟ್ಟಿತ್ತು. ಈ ಕೆಳಗೆ ಕೊಟ್ಟ ಕಾರ್ಯಕ್ರಮದ ಪ್ರಕಾರ ಕಾರ್ಯಗಳು ಜರಗಿದವು. (೧) ಶ್ರೀ ಶಿವಯೋಗೀಶ್ವರ ಸ್ತುತಿಯು ಶ್ರೀ ಬೋರ್ಡಿಂಗಿನ ಎಲ್ಲ ವಿದ್ಯಾರ್ಥಿಗಳಿಂದ ಮಾಡಲ್ಪಟ್ಟಿತು. (೨) ಶ್ರೀಮಂತ ಲಿಂಗರಾಜಸ್ತುತಿ ವಿದ್ಯಾರ್ಥಿ ಚೆನ್ನಯ್ಯ ಹಿರೇಮಠ ಇವರಿಂದ ಮಾಡಲ್ಪಟ್ಟಿತು. (೩) ಅಧ್ಯಕ್ಷಸ್ಥಾನಾರೋಹಣವು. ಮ|| ರಾ|| ಶಿವಪ್ಪ ಮಟ್ಟಿ ಶ್ರೀ ಬೋರ್ಡಿಂಗಿನ ಮ್ಯಾನೇಜಿಂಗ್ ಕಮಿಟಿಯ ಚೇರ್ಮನ್ನಾ ಇವರಿಂದ ಸೂಚಿಸಲ್ಪಟ್ಟು, ಮಿ|| ಕೇಶವರಾವ್ ಹುಂಡಿ ಇವರಿಂದ ಅನುಮೋದಿಸಲ್ಪಟ್ಟು ಒಡನೇ ಶ್ರೀಗಳವರ ಮಂಗಲಾಶೀರ್ವಾದ ಮತ್ತು ಸಭಿಕರ ಜಯಘೋಷದಲ್ಲಿ ಮೆ|| ರೇವಣಸಿದ್ಧಪ್ಪಯ್ಯನವರು ಕಿತ್ತೂರ ಡಿ. ಡಿ. ಕಲೆಕ್ಟರ ೧ನೇ ಡಿವ್ಹಿಜನ್ ಧಾರವಾಡ ಇವರಿಂದ ವಹಿಸಲ್ಪಟ್ಟಿತು. (೪) ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಾನದಿಂದ ಸಕಾಲಕ್ಕೆ ಬಂದ. ಗೆ. ನ. ೩೪ ೩೧-೧-೨೨ನೇ ಆಶೀರ್ವಾದ ನಿರೂಪವನ್ನು ಕಾರಭಾರಿ ಚನ್ನಬಸವಯ್ಯ ಹೇಮಗಿರಿಮಠ ಇವರು ಓದಿದೊಡನೆ ಭಕ್ತರು ಆನಂದ ಹೊಂದಿದರು. (೫) ಶ್ರೀಮಂತ ಶಿರಸಂಗಿ ಲಿಂಗರಾಜೇಂದ್ರರ ಫಂಡಿನಿಂದ ದೊರೆಯುವ ಸಹಾಯದ ಸಂತೋಷಪ್ರದರ್ಶನವನ್ನು ಮೆ|| ಬಸವಾರ್ಯ ಬೂದಿಹಾಳ ಆಲೂರ, ಮಾಸ್ತರ ಇವರು ಮಾಡಿದರು. (೬) ಐದನೇವರ್ಷದ ರಿಪೋರ್ಟನ್ನು ಮೆ|| ಎಸ್. ಆರ್. ಸಬರದ ಇವರು ಓದಿದರು. (೭) ಈ ಸಂಸ್ಥೆಯ ಸಹಾಯಕಾರಿಗಳೆಲ್ಲರ ಆಭಾರವನ್ನು ಮಿ|| ಎಸ್. ಎ. ಶೆಟ್ಟಿಮಾಸ್ತರ ಇವರು ಮನ್ನಿಸಿದರು. (೮) ಧಾರ್ಮಿಕ ವಿಷಯದ ಮೇಲೆ ಶ್ರೀ ಬೋರ್ಡಿಂಗಿನ ವಿದ್ಯಾರ್ಥಿ ಹಂಪಯ್ಯಾ ಹಲಗಲಿ ಜುನಿಯರ್ ಬಿ.ಎ. ಇವರು ಸುಶ್ರಾವ್ಯವಾಗಿ ಭಾಷಣಮಾಡಿದರು. (೯) ವಿದ್ಯಾರ್ಥಿಗಳ ಕ್ರಮಾಚರಣೆ ಎಂಬ ವಿಷಯವಾಗಿ ಮ|| ರಾ|| ಹನಸವಾಡಿ ಪಟೇಲ ಗಡ್ಡಬಸಪ್ಪನವರಿಂದ ಆಧಾರಯುಕ್ತವಾಗಿ ತಿಳಿಸಲ್ಪಟ್ಟಿತು. (೧೦) ಶ್ರೀಯುತ ವೀರಬಸಪ್ಪ ಶ್ರೇಷ್ಠಿ ಇವರಿಂದ ಒಳ್ಳೆ ಬೋಧಪ್ರದವಾದ ವಿಷಯವು ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಸಭಿಕರೆಲ್ಲರೂ ಆನಂದಸಾಗರದಲ್ಲಿ ಓಲಾಡುವಂತೆ ಪ್ರತಿಪಾದನ ಮಾಡಲ್ಪಟ್ಟಿತು. (೧೧) ಅಧ್ಯಕ್ಷಮಹಾಶಯರಾದ ರೇವಣಸಿದ್ಧಪ್ಪಯ್ಯನವರು ಈ ಸಂಸ್ಥೆಯ ಊರ್ಜಿತಾವಸ್ಥೆಯ ದೆಸೆಯಿಂದ ತಕ್ಕಭಾಷಣವನ್ನು ಮಾಡಿದರು. ಸತ್ಯವಕ್ತಸಾತಿಗಳೂ ಸತ್ಕಾರ್ಯನಿರತರೂ ಸದಾಚಾರಸಂಪನ್ನರೂ ರಾಜಕಾರ್ಯ ನಿಪುಣರೂ ಆದ ಈ ಮಹನೀಯರು ಮಾಡಿದ ಸದುಪದೇಶವು ಈ ಸಂಸ್ಥೆಯ ಚಾಲಕರನ್ನೂ ಕಮಿಟಿಯವರನ್ನೂ ಅತ್ಯಂತ ಪ್ರೋತ್ಸಾಹಪಡಿಸಿ, ಕಾರ್ಯನಡೆಸುವ ಶಕ್ತಿಯನ್ನು ಹೆಚ್ಚುಬಲಪಡಿಸಿತು. ಆಗಲೇ ಶ್ರೀ · · ಗಳವರ ಆಶೀರ್ವಾದ ರೂಪ ಪುಷ್ಪಮಾಲೆಯು ಅಧ್ಯಕ್ಷರಿಗೆ ಹಾಕಲ್ಪಟ್ಟಿತು. (೧೨) ಶ್ರೀ ಕ್ಷೇತ್ರಶಿವಯೋಗ ಮಂದಿರದ ಕೀರ್ತನ ಧುರೀಣರಾದ ದ್ಯಾಮಪುರಮಠದ ವೇ|| ಬಸವಲಿಂಗಶಾಸ್ತ್ರಿಗಳವರಿಂದ ಬ್ರಹ್ಮಚರ್ಯ, ಶಿವಭಕ್ತಿ, ದಾಂಪತ್ಯವಿಚಾರಗಳನ್ನು ಕುರಿತು ಅನಸೂಯ ಅತ್ರೀಯಯರ ಕಥೆಯು ಅನೇಕ ಆಧಾರಗಳಿಂದ ಯುಕ್ತಾಯುಕ್ತವಾಗಿ ಸಭಿಕರ ಮನಸ್ಸನ್ನು ಆನಂದ ಗೊಳಿಸುವಂತೆ ಹೇಳಲ್ಪಟ್ಟಿತು. (೧೩) ಅಧ್ಯಕ್ಷರ ಮತ್ತು ಸಭಿಕರ ಆಭಾರಮನ್ನಿಸುವಿಕೆಯು ಮ|| ರಾ|| ಎಸ್. ಎ. ಶೆಟ್ಟಿಮಾಸ್ತರ ಇವರಿಂದ ಜರಗಿತು. (೧೪) ಮುಂದಿನವರ್ಷದ ಬಜೆಟ್ ಮತ್ತು ಹೊಸಕಮಿಟಿಯ ಆಲೋಚನೆಯು ತಾ|| ೫-೩-೧೯೨೨ನೇ ದಿವಸ ನಡೆಯುವುದಾಗಿ ನಿರ್ಧರಿಸಲ್ಪಟ್ಟಿತು. ಹಾನಗಲ್ಲ ಶ್ರೀ · · ಗಳವರ ಸೂಚನೆಯಂತೆ ಆಶೀರ್ವಾದ ಅಪ್ಪಣೆ ಆದನಂತರ ಕಡೆಯ ಮಂಗಲವಾಗಿ ಮ|| ಗುರುಪಾದಪ್ಪ ಕಲ್ಲಾ ಐಶಟ್ಟಿ ಗದಗ ಇವರಿಂದ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿ ಶ್ರೀ ಜಗದ್ಗುರು ಕೋಟಿದಾರ್ಯ ಮಹಾಸ್ವಾಮಿ ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೀ ಶಿವಶರಣ ಲಿಂಗರಾಜೇಂದ್ರ ಸಕ್ಕರೆ ಕರಡೆಪ್ಪನವರು ವಾರದ ಅಪ್ಪಾಸಾಹೇಬರವರು, ಇವರ ನಾಮಸ್ಮರಣೆಯ ಜಯರವದೊಡನೆ ಸಭಾಕಾರ್ಯವು ಪೂರ್ತಿಯಾಗಿ ಶ್ರೀ, ಶ್ರೀ, ಸನ್ನಿಧಾನದಿಂದ ಅಧ್ಯಕ್ಷರಾದಿಯಾಗಿ ಸರ್ವರಿಗೂ ಆಶೀರ್ವಾದವು ದಯಪಾಲಿಸಲ್ಪಟ್ಟಿತು, ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಶ್ರೀ · · ಬೋರ್ಡಿಂಗಿಗೆ ೪೧ ರೂಪಾಯಿಕೊಟ್ಟು ಆಶೀರ್ವಾದ ಪಡೆದರು. ತಾ|| ೩-೩-೨೨ನೇ ದಿವಸ ಶ್ರೀಯುತರಾವ್ ಬಹದ್ದೂರ ಗೋಪಾಳ ಅನಂತಗಿರಿ, ಧಾರವಾಡ ಇವರು ತಮ್ಮ ಅಮೋಲ್ಯ ಅಂತಃಕರಣ ಮತ್ತು ವಿದ್ಯಾಭಿಮಾನ ಮತ್ತು ದೀನದಯಾಪರತೆಯ ಸದ್ಗುಣವನ್ನು ಅನುಸರಿಸಿ ವೀರಶೈವ ಬಡವಿದ್ಯಾರ್ಥಿಗಳ ಕೊರತೆಯನ್ನು ದೂರಮಾಡಲು ಉಪಕ್ರಮಿಸಿರುವ ಈ ಕಾರ್ಯಭಾಗದಲ್ಲಿ ಭಾಗಿಗಳಾಗಿ ಪ್ರತಿತಿಂಗಳೂ ಐದು ರೂಪಾಯಿ ಕೊಡುವ ಸಂಕಲ್ಪದಿಂದ ಶ್ರೀಗಳವರಿಗೆ ಪತ್ರಬರೆದು ೫ ರೂಪಾಯಿಗಳನ್ನು ಮೊದಲನೇ ತಿಂಗಳಿಗಾಗಿ ಕಳಿಸಿರುತ್ತಾರೆ. ಈ ಪರೋಪಕಾರಿಗಳಾದ ರಾವ್ ಬಹದ್ದೂರರವರಿಗೆ ಜಗದೀಶನು ಸುಖಸಂಪತ್ತನ್ನುಂಟುಮಾಡಲೆಂಬದಾಗಿ ಹರಸಿ ನಿರೂಪ ಬರೆಸಿರುತ್ತಾರೆ. ಕಮಿಟಿಯವರೆಲ್ಲರ ವತಿಯಿಂದ ಈ ದಿವಸದ ಕೀರ್ತನದ ವೇಳೆಯಲ್ಲಿ ಇವರ ಆಭಾರವನ್ನುಸಲ್ಪತು. ತಾ|| ೫-೩-೨೨ನೇ ಪುನಃ ಕಮಿಟಿಯು ಸೇರಿ ಶ್ರೀ · · ಬೋರ್ಡಿಂಗಿನ ಕಾರ್ಯಕ್ಕೆ ಸತ್ಕಾರ್ಯನಿರತರು ಇನ್ನೂ ಹೆಚ್ಚಾಗಿರಬೇಕೆಂದು ನಿರ್ಣಯಿಸಿ ಶ್ರೀಯುತ ಧಾರವಾಡ ಪಾಟೀಗೆ ಶೆಟ್ರ ಮಡಿವಾಳಪ್ಪನವರನ್ನು ಮತ್ತು ಅನುಭವಶಾಲಿಗಳಾದ ಮಾಸ್ತರ ಸಿದ್ಧಗಿರೆಪ್ಪ ಸಬರದ ಇವರನ್ನೂ ಜನರಲ್ ಕಮಿಟಿಯ ಮೆಂಬರನ್ನಾಗಿ ಚುನಾಯಿಸಿ ಮ್ಯಾನೇಜಿಂಗ್ ಕಮಿಟಿಯ ಮೆಂಬರಸ್ಥಳಕ್ಕೂ ನೇಮಿಸಿಕೊಳ್ಳುವದರಲ್ಲಿ ಬಂದಿರುವುದು.

ಬಸಪ್ಪ ಮಲ್ಲಪ್ಪ ಆಹೆಟ್ಟಿ,
ಸೆಕ್ರೆಟರಿ.

೧೯೨೨ನೆಯ ಇಸವಿ ಮಾರ್ಚಿ ತಾ|| ೧೨ರಿಂದ ೧೯೨೨ನೆಯ ಮಾರ್ಚಿ ತಾ|| ೧೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುರ್ಮತಿ ನಾಮಸಂವತ್ಸರದ ಫಾಲ್ಗುಣಶುದ್ಧ ಚತುರ್ದಶಿಯಿಂದ ಫಾಲ್ಗುಣ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಚಂ ದಿನ
12	(1)ಭಾನು	ಚತು	33-4	ಮಖಾ	19-9	29
13	ಸೋಮ	ಪೌರ್ಣ	27-0	ಪುಬ್ಬ	10-57	30
14	ಮಂಗಳ	ಪಾಡ್ಯ	21-7	ಉತ್ತ	10-51	1
15	ಬುಧ	ಬಿದಿ	15-38	ಹಸ್ತ	7-8	2
16	ಗುರು	ತದಿ	10-41	ಚಿತ್ತ	3-55	3
17	ಶುಕ್ರ	ಚೌತಿ	6-29	ಸ್ವಾತಿ	1-24	4
18	ಶನಿ	ಪಂಚ	3-11	ಅನೂ	58-21	5

(1) ಕಾಮದಹನ, ಹೋಳಿಹಬ್ಬ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಬಸವ ಸಮಿತಿ
ಬೆಂಗಳೂರು.

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಯೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ ಮೈಸೂರ್ ಸ್ಟಾರ್ ಸ ೧೯೨೨ ನೆಯ ಇಸವಿ ಮಾರ್ಚಿ ತಾರೀಖು ೧೨ ನೆಯ ಭಾನುವಾರ ಸಂಚಿಕೆ ೧೨

ಶ್ರೀರಾಮವಿಜಯಂ

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
10 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಪಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ಕುರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 38

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಟೀಕ ವೀರಶೈವ ವಿವಾಹವಿಧಿಃ	೦—೧೪—೦
ಾರುಶೀಲೆಚರಿತ್ರ	೦—೧೦—೦
ಂದಾಸಿ	೦— ೮—೦
ತ್ರಪಂಚಕ	೦— ೯—೦

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇವರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ಮಂಥಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು.

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಆಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವಕ್ಕೆತಂದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗುಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್ ಡಿಪೋ ಪ್ರೆಸ್,
7 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಶ್ರೇಷ್ಠತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷಿತರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
11 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್

೧೯೨೨ ನೆ ಇಸವಿಯ ಮಾರ್ಚಿ ತಾ|| ೧೯ ನೆಯ ಭಾನುವಾರ.

ಮ|| ಗಾಂಧಿಯವರು ಸೆರೆಹಿಡಿಯಲ್ಪಟ್ಟರು.

ಅಲಿ ಸಹೋದರರು, ನೆಹ್ರೂ, ಸಿ. ಆರ್. ದಾಸ್‌ರವರು, ಮೊದಲಾದ ಸ್ವರಾಜ್ಯಾಪೇಕ್ಷಿಗಳೂ, ಸಹಾಯನಿರಾಕರಣವಾದಿಗಳೂ ಸೆರೆ ಹಿಡಿಯಲ್ಪಟ್ಟ ವೇಳೆಯಲ್ಲಿ ಇವರ ನಾಯಕರಾದ ಮ|| ಗಾಂಧಿಯವರೂ ಸೆರೆಹಿಡಿಯಲ್ಪಡುವರೆಂಬ ವದಂತಿಯು ಪ್ರಬಲವಾಗಿದ್ದಿತಾದರೂ, ಮ|| ಗಾಂಧಿಯವರ ಬೋಧೆಗಳಾದ ಸಹಾಯನಿರಾಕರಣ ಮತ್ತು ಶಾಸನೋಲ್ಲಂಘನ ಇವುಗಳಿಂದ ಅನರ್ಥಗಳುಂಟಾಗುವುವೇ ಹೊರತು ದೇಶಕ್ಕೆ ಹಿತವಾಗುವುದಿಲ್ಲವೆಂಬುದು ಅವರ ಮನವರಿಕೆಯಾಗಲೆಂಬ ಅಭಿಪ್ರಾಯದಿಂದಲೋ ಏನೋ ಈ ವರೆಗೆ ಬಿಟ್ಟುಕೊಡಲ್ಪಟ್ಟಿದ್ದಂತೆ ತೋರುತ್ತದೆ. ಆದರೆ ಆ ರೀತಿಯಾಗದೆ ಅವರ ಬೋಧೆಯಿಂದ ಭರತಖಂಡದ ಕೆಲವೆಡೆಗಳಲ್ಲಿ ಅನರ್ಥಗಳಾದುವಲ್ಲದೆ ಚೌರಿಚೂರದಲ್ಲಿ ಜನರು ಪೋಲೀಸು ನಿಲ್ದಾಣವನ್ನು ಸುಟ್ಟು, ಕೆಲ ಪೋಲೀಸಾಳುಗಳನ್ನು ಕೊಂದುದರ ಮೇಲೆ ಬೊಂಬಾಯಿ ಸರ್ಕಾರದವರು ಮ|| ಗಾಂಧಿಯವರನ್ನು ಉಚ್ಛೃಂಖಲರಾಗಿ ಬಿಟ್ಟುಕೊಟ್ಟಲ್ಲಿ ಮಹಾನರ್ಥವುಂಟಾಗಿ ಜನರ ನೆಮ್ಮದಿಗೆ ಭಂಗ ಬರುತ್ತದೆಂಬಭಿಪ್ರಾಯದಿಂದ ಭರತಖಂಡದ ಪ್ರಭುತ್ವದವರ ಅನುಮತಿಯನ್ನು ಪಡೆದು ಮ|| ಗಾಂಧಿಯವರನ್ನು ಸೆರೆ ಹಿಡಿಯಲಪ್ಪಣೆಮಾಡಿದರು.

ಪೋಲೀಸು ಸೂಪರಿಂಟೆಂಡೆಂಟರು ಬೊಂಬಾಯಿ ಸರ್ಕಾರದಪ್ಪಣೆ ಮೇರೆಗೆ ಕಳೆದ ತಾ|| ೧೦ರ ರಾತ್ರಿ ೧೧ ಗಂಟೆ ಸಮಯದಲ್ಲಿ ಮೋಟಾರುಬಂಡಿಯಲ್ಲಿ ಕುಳಿತು ಸುವರ್ಣವತಿ ನದಿಯ ದಡದಮೇಲಿರುವ ಮ|| ಗಾಂಧಿಯವರ ವಾಸಸ್ಥಾನವಾದ ಸತ್ಯಾಗ್ರಹ ಆಶ್ರಮಕ್ಕೆ ಬರುತ್ತ ಮಾರ್ಗದಲ್ಲಿ ಗಾಂಧಿಯವರ ಆಶ್ರಮದಿಂದ ಅನುಸೂಯಾಬಾಯಿಯವರ ಕೂಡ ಮೋಟಾರುಬಂಡಿಯಲ್ಲಿ ಹಿಂದಿರುಗಿ ಬರುತ್ತಿದ್ದ "ಎಂಗ್ ಇಂಡ್ಯಾ ಪತ್ರಿಕೆಯ ಪ್ರಕಾಶಕರಾದ ಶಂಕರಲಾಲ್ ಬ್ಯಾಂಕರ್‌ರವರನ್ನು ಕಂಡು ಅವರ ಬಂಡಿಯನ್ನು ನಿಲ್ಲಿಸಿ ಶಂಕರಲಾಲ್‌ರವರನ್ನು ಸೆರೆಹಿಡಿದು ತನ್ನ ಮೋಟಾರುಬಂಡಿಯಲ್ಲಿ ಕುಳ್ಳಿರಿಸಿಕೊಂಡು ಸತ್ಯಾಗ್ರಹ ಆಶ್ರಮಕ್ಕೆ ಬಂದು ಒಳಗೆ ಪ್ರವೇಶ ಮಾಡದೆ ತಮ್ಮ ಕೂಡ ಬಂದ ಅನುಸೂಯಾಬಾಯಿಯವರ ಮೂಲಕ ಗಾಂಧಿಯವರನ್ನು ಸೆರೆ ಹಿಡಿಯಲು ಸರ್ಕಾರದಪ್ಪಣೆ ಮೇರೆಗೆ ಬಂದಿರುತ್ತೇನೆಂದೂ ಅವರು ಬರುವವರೆಗೆ ತಾನು ಕಾದುಕೊಂಡಿರುತ್ತೇನೆಂದೂ ಹೇಳಿ ಕಳುಹಿಸಿದನು. ಮ|| ಗಾಂಧಿಯವರು ಈ ಸಮಾಚಾರವನ್ನು ಕೇಳಿದ ಕೂಡಲೆ ಕೆಲವು ಪುಸ್ತಕಗಳನ್ನು ತೆಗೆದುಕೊಂಡು ಹೊರಗೆಬಂದು ಪೋಲೀಸು ಸೂಪರಿಂಟೆಂಡೆಂಟರ ಮೋಟಾರಿನಲ್ಲಿ ಕುಳಿತುಕೊಂಡರು; ಕೂಡಲೆ ಸಬರಮತಿ ಕಾರಾಗೃಹಕ್ಕೆ ಸಾಗಿಸಲ್ಪಟ್ಟರು. ಮ|| ಗಾಂಧಿಯವರ ಪತ್ನಿಯವರು ಮತ್ತೆ ಕೆಲರು ಮ|| ಗಾಂಧಿಯವರ ಕೂಡ ಕಾರಾಗೃಹದವರೆಗೆ ಹೋಗಿಬಂದರು.

ಮ|| ಗಾಂಧಿಯವರು ತಾವು ಸೆರೆ ಹಿಡಿಯಲ್ಪಡುವರೆಂಬ ಸುದ್ದಿಯನ್ನು ೮-೯ ದಿನಗಳ ಮೊದಲೇ ಅರಿತಿದ್ದರಾದುದರಿಂದ "ನಾನು ಸೆರೆಹಿಡಿಯಲ್ಪಟ್ಟರೆ ಯಾರೊಬ್ಬರೂ ಪ್ರಕ್ಷುಬ್ಧರಾಗಿ ಹರತಾಳ ಮೊದಲಾದ ಕಾರ್ಯಗಳನ್ನು ಆಚರಿಸಬಾರದು. ಅಶಾಂತಿಯಿಂದ ಬಹಳ ಅನರ್ಥಗಳುಂಟಾಗಿ ನಮ್ಮ ಸ್ವರಾಜ್ಯಪ್ರಾಪ್ತಿಗೆ ಭಂಗಬರುತ್ತಾದ ಪ್ರಯುಕ್ತ ಎಲ್ಲರೂ ಶಾಂತರಾಗಿರತಕ್ಕದು. ಶಾಸನೋಲ್ಲಂಘನ ಮಾಡಲು ಇನ್ನೂ ತಕ್ಕಕಾಲ ಒದಗದಿರುವುದರಿಂದ ಯಾರೂ ಅದಕ್ಕೆ ಪ್ರಯತ್ನಿಸಕೂಡದು. ಪರದೇಶದ ಬಟ್ಟೆಗಳನ್ನು ನಾಶಪಡಿಸಿ ಸ್ವದೇಶೀ ಬಟ್ಟೆಗಳನ್ನು ಮಾತ್ರ ಉಪಯೋಗಿಸುತ ಬಂದಲ್ಲಿ ನನ್ನ ಮನಸ್ಸಿಗೆ ತೃಪ್ತಿಯುಂಟಾಗುವುದಲ್ಲದೆ ನಮ್ಮ ಕಾರ್ಯಸಿದ್ಧಿಯಾಗುವುದು." ಎಂದು ಒಂದು ಸಂದೇಶವನ್ನು ತಮ್ಮ ಮಿತ್ರಮಂಡಲಿಗೆ ಕಳುಹಿಸಿಕೊಟ್ಟಿರುವರು. ಇವರ ವಿಚಾರಣೆಯು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮಿ|| ಆರ್. ಎಸ್. ಬ್ರೂಂಫೀಲ್ಡ್‌ರವರಲ್ಲಿ ನೆನ್ನೆಯದಿನ ಬೆಳಿಗ್ಗೆ ೧೧|| ಗಂಟೆಗೆ ಬೊಂಬಾಯಿನ ಅಡ್ವೋಕೇಟ್ ಜನರಲ್‌ರವರಾದ ಸರ್ ಥಾಮಸ್ ಸ್ಟ್ರಾಂಗ್‌ಮನ್ ರವರಿಂದ ನಡಿಸಲ್ಪಟ್ಟು ಕೆಲಗಂಟೆ ಕಾಲದೊಳಗೆ ಪೂರೈಸಲ್ಪಡುವುದಾಗಿ ನಿರೀಕ್ಷಿಸಲ್ಪಟ್ಟಿದ್ದಿತು.

We publish elsewhere a correspondence relating to the Congress activities in Mysore.

We have been from the beginning expressing an emphatic protest against the Congress work in Mysore. From the day that Mr. Satyamurthy addressed an Assembly of boys and men of no standing at Bangalore, we have been pointing out in no ambiguous terms that a dangerous political propoganda is being carried on under some guise or other. No hesitating or faltering action will stop the contagion. The propoganda is foreign to us and we are not in need of it. We agree with the correspondent generally, and we have no doubt that the Government of Mysore will no longer tolerate anything of this political agitation.

Of late all sorts of things are getting into Madras papers about Mysore affairs. Take for instance what the Hindu corrdspondent said of the indisposition of the Dewan of Mysore. It was a mischievously exaggerated statement. The information related to the condition of health of no ordinary person, and still it was published without sufficient enquiry by a paper of the standing of the Hindu. Such things ought not to be tolerated. We hope that proper action will be taken to stop political agitation in Mysore.

ಇಂಡ್ಯಾ ಸ್ಟೇಟಿನಸೆಕ್ರೆಟರಿಯಾಗಿದ್ದ ಮಿ|| ಮಾಂಟೂಗ್‌ಯವರು.

ಪೂರ್ಣಪಂಡಿತರೂ, ಕಾರ್ಯದಕ್ಷರೂ ಎಂದು ಪ್ರಖ್ಯಾತರಾಗಿರುವ ಮತ್ತು ಭರತಖಂಡದ ರಾಜ್ಯಾಡಳಿತದಲ್ಲಿ ಭಾರತೀಯರಿಗೆ ಹೆಚ್ಚು ಅನುಭವವುಂಟಾಗಿ ಕಾಲಕ್ರಮೇಣ ಸ್ವರಾಜ್ಯಪ್ರಾಪ್ತವಾಗಲು ಅವಕಾಶದೊರೆಯುವಂತೆ ಅನೇಕ ಸುಧಾರಣೆಗಳನ್ನು ಮಾಡಲು ಕಾರಣಭೂತರಾಗಿ ಭಾರತೀಯರ ಚಿರಸ್ಮರಣೆಗೆ ಪಾತ್ರರಾದ ಮಿ|| ಮಾಂಟೂಗ್‌ರವರು ಬಹಳ ಸಮರ್ಥತೆಯಿಂದ ನಿರ್ವಹಿಸುತ್ತಿದ್ದ ಇಂಡ್ಯಾಸ್ಟೇಟ್ ಸೆಕ್ರೆಟರಿ ಉದ್ಯೋಗದಿಂದ ನಿವೃತ್ತರಾದರೆಂದು ತಿಳುಹಲು ವ್ಯಸನವಾಗುತ್ತದೆ.

ತುರ್ಕಿ ಸಂಬಂಧವಾದ ಒಡಂಬಡಿಕೆಯಲ್ಲಿ ಮಹಮ್ಮದೀಯರಿಗೆ ಸಮಾಧಾನವಾಗುವಂತೆ ಕೆಲ ವ್ಯತ್ಯಾಸಗಳನ್ನು, ಅಂದರೆ ಕಾನಸ್ಟಾಂಟಿನೋಪಲನ್ನು ಇತರರು ಬಿಟ್ಟುಕೊಡಬೇಕು; ಪವಿತ್ರಸ್ಥಾನದ ಮೇಲೆ ಸುಲ್ತಾನನ ಯಾಜಮಾನ್ಯವು ಸಂಪೂರ್ಣವಾಗಿರಬೇಕು; ತುರುಷ್ಕತ್ರೇಸು ಮತ್ತು ಅಡ್ರಿಯಾನೋಪಲ್ ಪಟ್ಟಣವು ತುರ್ಕಿಗೆ ಸೇರಿಸಿಕೊಡಲ್ಪಡಬೇಕು; ಸ್ಮಿರ್ನಾನೂ ತುರ್ಕಿಯವರಿಗೆ ಸೇರಬೇಕು. ಈ ಮೂರು ಮುಖ್ಯ ವಿಷಯಗಳನ್ನು ಸೂಚಿಸಿ ಭರತಖಂಡದ ಪ್ರಭುತ್ವದವರು ಸಾರ್ವಭೌಮ ಸರ್ಕಾರಕ್ಕೆ ಬರೆದಿದ್ದ ಲೇಖನವು ಮಂತ್ರಿ ಮಂಡಲದಲ್ಲಿ ಇತ್ಯರ್ಥವಾಗುವುದಕ್ಕೆ ಮೊದಲೇ ಭರತಖಂಡದಲ್ಲಿ ಪ್ರಕಟವಾಗಲು ಮಾಂಟೂಗ್‌ರವರು ಅನುಮತಿಯನ್ನು ಕೊಟ್ಟದು ಆಕ್ಷೇಪಕರವಾದುದೆಂದು ಮುಖ್ಯ ಮಂತ್ರಿಯಾದ ಲಾಯಿಡ್ ಜಾರ್ಜ್‌ರವರು ಮಾಂಟೂಗ್‌ರವರ ವರ್ತನವನ್ನು ಖಂಡಿಸಿದುದರ ಮೇಲೆ ಮಾಂಟೂಗ್‌ರವರು ಸೆಕ್ರೆಟರಿ ಉದ್ಯೋಗವನ್ನು ಬಿಟ್ಟುಕೊಟ್ಟರು. ಭಾರತೀಯರ ಹಿತಚಿಂತಕರಾದ ಮಾಂಟೂಗ್‌ರವರು ಭರತಖಂಡ ರಾಜ್ಯಾಡಳಿತ ಸಂಬಂಧವನ್ನು ಬಿಟ್ಟುದಕ್ಕಾಗಿ ಭಾರತೀಯರೆಲ್ಲರೂ ಚಿಂತಿಸುತ್ತಾರೆ.

ದಿವಾನ್ ಸರ್ ಕಾಂತರಾಜ ಅರಸಿನವರ ದೇಹಾರೋಗ್ಯವು.

ಸರ್ ಕಾಂತರಾಜ ಅರಸಿನವರು ಕಳೆದ ವಾರದಿಂದೀಚೆಗೆ ಸಂಪೂರ್ಣ ಗುಣವನ್ನು ಹೊಂದಿ ಪ್ರತಿನಿತ್ಯದಲ್ಲೂ ವಾಯುವಿಹಾರಕ್ಕಾಗಿ ಮೋಟಾರುಬಂಡಿಯಲ್ಲಿ ಕುಳಿತು ಹೊರಗಡೆ ಸಂಚರಿಸುತ್ತಿರುವರೆಂದು ತಿಳುಹಲು ಸಂತೋಷವಾಗುತ್ತದೆ ೨-೩ ವಾರ ಉದಕಮಂಡಲದಲ್ಲಿದ್ದು ಬರಲು ನೆನ್ನೆಯದಿನ ಮಿತಪರಿವಾರದೊಡನೆ ಪ್ರಯಾಣಮಾಡಿದರು. ಅಲ್ಲಿಂದ ಬಂದಮೇಲೆ ಉದ್ಯೋಗವನ್ನು ವಹಿಸಿಕೊಳ್ಳುವರೆಂದು ಕೇಳುತ್ತೇವೆ. ಲೋಕಪ್ರಿಯರಾದ ಅರಸಿನವರು ಉದಕಮಂಡಲದ ಪ್ರವಾಸದಿಂದ ಮೊದಲಿಗಿಂತಲೂ ಅತಿಶಯವಾದ ದೇಹದಾರಢ್ಯವನ್ನು ಹೊಂದಿ ತಮ್ಮುದ್ಯೋಗದ ಮೇಲೆ ಬಂದು ಅತಿಶಯವಾದ ಲವಲವಿಕೆಯಿಂದ ರಾಜಕಾರ್ಯನಿರ್ವಾಹ ಮಾಡಿ ಸಂಸ್ಥಾನವನ್ನು ಈಗುಂಟಾಗಿರುವ ದ್ರವ್ಯಾಭಾವದ ಕೊರತೆಯಿಂದ ಪಾರಗಾಣಿಸುವರೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು

ಮೈಸೂರು ಯೂನಿವರ್ಸಿಟಿಯ ವೈಸ್‌ಚಾನ್ಸಲರಾದ ಡಾ|| ವ್ರಜೇಂದ್ರನಾಥಶೀಲ್, ಎಂ. ಎ., ಪಿ. ಎಚ್. ಡಿ., ಯವರಿಗೆ ೧೯೨೨ ನೇ ಫೆಬ್ರವರಿ ತಾ|| ೧೮ ರಿಂದ ಮಾರ್ಚಿ ತಾ|| ೧೧ ರ ವರೆಗೆ ರಜವು ಕೊಡಲ್ಪಟ್ಟಿದ್ದಿತು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯಟ್ಟಿನ ಸೂಪರಿಂಟೆಂಡೆಟ್‌ರಾದ ಮ|| ಬಿ. ಸುಬ್ಬರಾವ್ ಬಿ. ಎ., ಬಿ. ಎಲ್., ರವರಿಗೆ ೧೯೨೨ ನೇ ಫೆಬ್ರವರಿ ತಾ|| ೭ ರಿಂದ ಕೊಡಲ್ಪಟ್ಟಿದ್ದ ೧ ತಿಂಗಳ ಪ್ರಿವಿಲೆಜ್ ರಜವು ಇನ್ನೊಂದು ತಿಂಗಳಿಗೆ ಹೆಚ್ಚಿಸಲ್ಪಟ್ಟಿದೆ.

ಶ್ರೀಮದ್ರಂಭಾಪುರೀ ಮಹಾಸಂಸ್ಥಾನದ ಪೀಠಾಧಿಕಾರಿಗಳನ್ನು ಗೊತ್ತುಮಾಡುವ ವಿಚಾರವಾಗಿ ಶ್ರೀಮದುಜ್ಜಯಿನಿ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಅಂಕೆಮಾಡಿಕೊಳ್ಳಲು ಕೆಲ ವೀರಶೈವ ಪ್ರಮುಖರು ಈ ತಾ|| ೨೩ರಲ್ಲಿ ಹೋಗುವವರಾಗಿರುವರೆಂದು ತಿಳಿಯುತ್ತೇವೆ.

ಅಸಿಸ್ಟೆಂಟ್ ಕಮಿಷನರುಗಳಾದ ಮ|| ಪಿ.ಎಚ್. ಕೃಷ್ಣರಾವ್, ಎಂ. ಎ, ಯವರು, ಮ|| ಟಿ. ಎ. ಎ. ಈಶ್ವರನ್, ಬಿ. ಎ., ಯವರು ಮತ್ತು ಮಿ|| ಟಿ. ಅಬ್ದುಲ್‌ಖಾದರ್, ಬಿ. ಎ., ಯವರು ೧೯೨೨ನೇ ಫೆಬ್ರವರಿ ತಾ|| ೧೬ ರಿಂದ ೫ ನೇ ತರಗತಿಯಿಂದ ೪ ನೇ ತ|| ಗೂ; ಮ|| ಎಂ. ಸದಾಶಿವರಾವ್, ಬಿ. ಎ., ಬಿ. ಎಲ್., ರವರು ೧೯೨೨ ನೇ ಫೆಬ್ರವರಿ ತಾ|| ೨೫ ರಿಂದ ೪ ನೇ ತರಗತಿಯಿಂದ ೩ ನೇ ತ|| ಗೂ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಇಂಡಸ್ಟ್ರಿಯಲ್ ಬ್ಯಾಂಕಿನ ಚೇರ್ಮನ್ನರೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಮ|| ಮಾಣಿಕ್ಯವೇಲು ಮೊದಲಿಯಾರರು ಮ|| ಎ. ಆರ್. ಬ್ಯಾನರ್ಜಿ ದಂಪತಿಗಳನ್ನು ನೆನ್ನೆಯದಿನ ಸಾಯಂತರ ತಮ್ಮ ಬಂಗಲೆಗೆ ಬರಮಾಡಿಕೊಂಡು ಆಟಪಾಟಗಳಿಂದಲೂ ಅಲ್ಪಾಹಾರದಿಂದಲೂ ಸತ್ಕರಿಸಿದರು. ಸರ್ಕಾರಿಯಧಿಕಾರಿಗಳೂ ಮ್ಯು|| ಕೌನ್ಸಿಲರುಗಳೂ, ವಕೀಲರುಗಳೂ, ಇತರ ದೊಡ್ಡ ಮನುಷ್ಯರೂ ಆಹ್ವಾನಿಸಲ್ಪಟ್ಟಿದ್ದರು.

ಮೈಸೂರು ಸೆಂಟರಿನಲ್ಲಿ ಈವರ್ಷ ನಡೆಯುವ ಕನ್ನಡ ಮತ್ತು ಇಂಗ್ಲೀಷು ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಸಹ ಪರೀಕ್ಷೆನಡೆಯುವ ದಿವಸಗಳಲ್ಲಿ ಮೈಸೂರು ಕಿಲ್ಲೆ ಮೊಹಲ್ಲಾ ಗುರುಕಾರ್ ದೇವಣ್ಣನವರ ಬೀದಿ (ಹಳೇ ಅಗ್ರಹಾರದಲ್ಲಿ) 443 ನೆ ನಂ. ಮನೆಯಲ್ಲಿರುವ ಭಕ್ಷಿ ಸಿ. ಸೋಮಶೇಖರಯ್ಯನವರು ಪದ್ಧತಿಯಮೇರೆ ಮುಡುಕತೊರೆ ಶ್ರೀ ವೀರಶೈವ ಮತ ಸಂವರ್ಧಿನಿ ಸಭೆಯಪರವಾಗಿ ಭೋಜನಕ್ಕೂ ಮತ್ತು ವಾಸಕ್ಕೂ ಏರ್ಪಾಡು ಮಾಡಿರುತ್ತಾರಾಗಿ ಬರತಕ್ಕವರು 1 ವಾರ ಮುಂಚಿತವಾಗಿ ಸದರಿಯವರಿಗೆ ತಿಳಿಸಬೇಕಾಗಿ ಕೋರುತ್ತಾರೆ.

ಅರಸೀಕೆರೆ ತಾ|| ಹೊಳಲ್ಕೆರೆಯ ಶ್ರೀ ಪ್ರಸನ್ನ ರಾಮೇಶ್ವರಸ್ವಾಮಿಯ ರಥೋತ್ಸವವು ಬರುವ ಏಪ್ರಿಲ್ ತಾ|| ೫ರಿಂದ ೩ ದಿನಗಳ ವರೆಗೆ ನಡಿಯುವುದು. ಆ ಕಾಲದಲ್ಲಿ ದನಗಳ ಪ್ರದರ್ಶನವನ್ನು ನಡಿಸಿ ಉತ್ತಮವಾದ ರಾಸುಗಳಿಗೆ ಬಹುಮಾನವು ಕೊಡಲ್ಪಡಲು ಏರ್ಪಡಿಸಿರುವುದರಿಂದ ಮತ್ತು ಹೆಚ್ಚು ಜನರು ಸೇರಿ ವ್ಯಾಪಾರವು ವಿಶೇಷವಾಗಿ ನಡಿಯಲವಕಾಶವಿರುವುದರಿಂದ ದನಗಳನ್ನು ಸಾಕಿರುವವರೂ ವ್ಯಾಪಾರಸ್ಥರೂ ನಾಟಕದವರೂ ಮೊದಲಾದವರಿಗೆ ಒಳ್ಳೇ ಸಮಯವಾಗಿದೆ ಎಂದು ಈ ಪ್ರದರ್ಶನದ ಸೆಕ್ರೆಟರಿಗಳಾದ ಮ|| ಎಚ್. ಕೃಷ್ಣಮೂರ್ತಿಯವರು ಮತ್ತು ಮ|| ಎಂ. ಎಚ್. ಹರಿಯಣ್ಣನವರು ತಿಳಿಸಿರುತ್ತಾರೆ.

ಕ್ಲೋಸ್‌ಪೇಟೆ ತಾಲ್ಲೂಕಿಗೆ ಸೇರಿದ ಹುಲೀಸಂದ್ರ ಎಂಬ ಗ್ರಾಮದವರು ಪ್ಲೇಗಿನ ದೆಸೆಯಿಂದ ಊರಹೊರಗೆ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುತ್ತಿರುವರು. ಹೋದ ತಿಂಗಳು ತಾ|| ೨೫ರಲ್ಲಿ ವೀರಶೈವರು ವಾಸಿಸುತ್ತಿದ್ದ ಗುಡಿಸಲಿಗೆ ಬೆಂಕಿಬಿದ್ದು ಹೊತ್ತಿಕೊಂಡು ಗಾಳಿಯು ವಿಶೇಷವಾಗಿ ಬೀಸುತ್ತಿದ್ದುದರಿಂದ ಜ್ವಾಲೆಯು ಹೆಚ್ಚಿ ಒಳಗಿದ್ದವರು ಹೊರಕ್ಕೆಬರಲೂ ಹೊರಗಿನವರು ಒಳಗೆ ನುಗ್ಗಿ ಒಳಗಿದ್ದವರನ್ನು ಕರೆದುಕೊಂಡು ಬರಲೂ ಬಹಳ ಪ್ರಯಾಸವಾಯ್ತು. ಆದರೂ ಕೆಲವರು ಸಾಹಸಪಟ್ಟು ಒಳಕ್ಕೆ ನುಗ್ಗಿ ಇಬ್ಬರು ಹೆಂಗುಸರನ್ನೂ ಒಬ್ಬ ಗಂಡಸನ್ನೂ ಪ್ರಯಾಸಪಟ್ಟು ಹೊರಕ್ಕೆ ಎತ್ತಿಕೊಂಡು ಬಂದರು. ಇವರುಗಳಿಗೆ ದೇಹದ ಕೆಲಭಾಗಗಳು ಸುಟ್ಟುಹೋಗಿರುತ್ತವೆ. ಇವರಲ್ಲದೆ ಒಂದೇ ಹಾಸಿಗೆಯಮೇಲೆ ಮಲಗಿಕೊಂಡು ನಿದ್ರಿಸುತ್ತಿದ್ದ ಅಣ್ಣತಮ್ಮ ಅಕ್ಕತಂಗಿಯರಾದ ನಾಲ್ಕು ಮಕ್ಕಳುಗಳು ಸುಟ್ಟು ಇದ್ದಲಾಗಿದ್ದುದನ್ನು ಕಣ್ಣುಗಳಿಂದ ನೋಡಲಿಕ್ಕಾಗುತ್ತಿರಲಿಲ್ಲವೆಂದು ಆ ಗ್ರಾಮದ ನಿವಾಸಿಯೊಬ್ಬರು ಬರೆದಿರುತ್ತಾರೆ.

ಶಿವಮೊಗ್ಗ ಟವನ್ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳು ೧೯೨೨ನೆ ಮಾರ್ಚಿ ತಾ|| ೧ ರಿಂದ ೩ ವರ್ಷಗಳ ಕಾಲ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.—೧. ಮ|| ಗಳಾದ ಎಸ್. ಆರ್. ಬಾಲಕೃಷ್ಣರಾವ್, ಬಿ.ಎ., ಎಲ್.ಎಲ್.ಬಿ., ಇವರು; ೨. ಬೇರೂರು ಭೀಮರಾಯರು; ೩. ಬಿ. ಎನ್. ರಾಘವಯ್ಯ, ಬಿ.ಎ., ಬಿ.ಎಲ್., ಇವರು; ೪. ಜಿ. ಎಂ. ಕಾಡಪ್ಪನವರು; ೫. ಯು. ಸುಬ್ಬರಾವ್ ನಾಯಕ್‌ರವರು; ೬. ಬೆಲಗೂರು ವೆಂಕಣ್ಣನವರು; ೭. ಕೋರಿ ಹಾಲಪ್ಪಶೆಟ್ಟರು; ೮. ಎ. ಅನಂತಯ್ಯನವರು; ೯. ಪಿ. ವೆಂಕಪ್ಪಯ್ಯನವರು; ೧೦. ಸಿ. ಸುಬ್ಬರಾವ್, ಬಿ.ಎ., ಬಿ.ಎಲ್., ರವರು ಜನರಿಂದ ಓಟು ಮೂಲಕ ಆರಿಸಲ್ಪಟ್ಟವರಾಗಿಯೂ, ೧. ಮ|| ಗಳಾದ ವೆಂಡರ್ ಗೋಪಾಲರಾಯರು; ೨. ಬಿ. ರುಕ್ಮಯ್ಯನವರು; ೩. ಜೈನಲಾಬುದೀನ್ ಸಾಹೇಬರು; ೪. ಬುರ್ಹಾನ್‌ಖಾನ್‌ರವರು; ೫. ಟಿ. ಲಕ್ಷ್ಮಣಯ್ಯನವರು; ೬. ಎಸ್. ಸೀತಾರಾಮಯ್ಯನವರು; ೭. ಶಿವಮೊಗ್ಗ ಕಬ್ಬಿಣದ ಕಾರ್ಖಾನೆಯ ಸಿ. ಆರ್. ವಾಲೆಂಟೈರ್ ರವರು ಸರ್ಕಾರದಿಂದ ನೇಮಿಸಲ್ಪಟ್ಟವರಾಗಿಯೂ ಇರುತ್ತಾರಲ್ಲದೆ, ಡೆ|| ಕಮಿಷನರೂ ಎಕ್ಸೆಕ್ಯುಟಿವ್ ಇಂಜನಿಯರೂ, ಡಿ|| ಮೆಡಿಕಲ್ ಆಫೀಸರೂ ಮೆಂಬರುಗಳಾಗಿರುತ್ತಾರೆ.

ಮೈಸೂರು ಪೇಟ್ರಿಯಾಟ್ ಮತ್ತು ಸಂಪದಭ್ಯುದಯ ಪತ್ರಿಕೆಗಳ ಸಂಪಾದಕರಾದ ಮ|| ಎಂ. ವೆಂಕಟಕೃಷ್ಣಯ್ಯನವರು ತಮ್ಮ ಪತ್ರಿಕೆಗಳಲ್ಲಿ ರಾಜದ್ರೋಹಕರವಾದ ಲೇಖನಗಳನ್ನು ಬರೆದಿದ್ದರೆಂಬ ಅಪರಾಧವು ಹೊರಿಸಲ್ಪಟ್ಟು ಬೆಂಗಳೂರ ಚೀಫ್‌ಕೋರ್ಟಿನ ಚೀಫ್ ಜಡ್ಜರಿಂದ ಕಳೆದ ತಾ|| ೧೧ರಲ್ಲಿ ವಿಚಾರಿಸಲ್ಪಡತಕ್ಕವರಾಗಿದ್ದರೆಂದು ಹಿಂದೆ ತಿಳಿಸಿದ್ದೆವಷ್ಟೆ. ನಿಮ್ಮನ್ನು ಎಷ್ಟೋ ವೇಳೆ ಎಚ್ಚರಿಸಿದಾಗ್ಯೂ ಲಕ್ಷಿಸದೆ ಆಕ್ಷೇಪಕರವಾದ ಲೇಖನಗಳನ್ನು ನಿಮ್ಮ ಪತ್ರಿಕೆಯಲ್ಲಿ ಬರೆದಿರುವುದರಿಂದ ಪತ್ರಿಕೆಗಳನ್ನು ಪ್ರಕಟಿಸಲು ನಿಮಗೆ ಸರ್ಕಾರದಿಂದ ಕೊಡಲ್ಪಟ್ಟಿರುವ ಅನುಜ್ಞೆಯು ಯಾತಕ್ಕಾಗಿ ತಪ್ಪಿಸಲ್ಪಡಕೂಡದೆಂಬ ಬಗೆಗೆ ಕಾರಣವೇನಾದರೂ ಇದ್ದಲ್ಲಿ ತಿಳಿಸಬೇಕೆಂದು ಕೇಳಿದುದರ ಮೇಲೆ ಅದಕ್ಕೆ ತಕ್ಕ ಸಮಾಧಾನವನ್ನು ಬರೆದು ಈ ತಾ|| ೧೮ ರಲ್ಲೊಪ್ಪಿಸುವುದಾಗಿ ಅವಧಿಯನ್ನು ಪಡೆದುಕೊಂಡಿದ್ದರು. ಇದನ್ನು ಮದ್ರಾಸಿನಲ್ಲಿರುವ ಮ|| ಶ್ರೀನಿವಾಸಯ್ಯಂಗಾರ್ ಸಿ. ಐ. ಇ., ಯವರಿಂದ ಬರೆಸಿಕೊಂಡು ಬರಲು ಮದ್ರಾಸಿಗೆ ಮ|| ವೆಂಕಟಕೃಷ್ಣಯನವರು ತಮ್ಮ ಮಿತ್ರರಾದ ಮ|| ಸಟ್ಲೂರರವರನ್ನು ಕರೆದುಕೊಂಡು ಮದ್ರಾಸಿಗೆ ಹೋಗಿದ್ದರೆಂದೂ ಕಳೆದ ತಾ|| ೧೧ರಲ್ಲಿ ಚೀಫ್ ಕೋರ್ಟಿನಲ್ಲಿ ನಡೆದ ವಿದ್ಯಾಮಾನವನ್ನು ತಿಳಿಯಲು ಬೆಂಗಳೂರಿನಲ್ಲಿಯ ಮ|| ವೆಂಕಟಕೃಷ್ಣಯ್ಯನವರ ಆಪ್ತೇಷ್ಟರಾದ ವಕೀಲರು ಮೊದಲಾದವರು ಚೀಫ್ ಕೋರ್ಟಿನಲ್ಲಿ ಕಿಕ್ಕಿರಿಯುವಂತೆ ಸೇರಿದ್ದರಲ್ಲದೆ ರಾಜಧಾನಿಯಿಂದಲೂ ವಕೀಲರು ಮೊದಲಾದ ಕೆಲ ಅಭಿಮಾನಶಾಲಿಗಳು ಹೋಗಿದ್ದರೆಂದೂ ತಿಳಿಯಬರುತ್ತದೆ. ಮ|| ವೆಂಕಟಕೃಷ್ಣಯ್ಯನವರಿಂದ ಕೊಡಲ್ಪಡುವ ಸಮಾಧಾನದ ಮೇಲೆ ಚೀಫ್ ಜಡ್ಜರು ತಮ್ಮಭಿಪ್ರಾಯವನ್ನು ಬರೆದು ಸರ್ಕಾರಕ್ಕೆ ಕಳುಹಿಸಿಕೊಡುವರು. ಅವರ ಮೇಲೆ ಸರ್ಕಾರದವರು ತಮ್ಮ ತೀರ್ಪನ್ನು ಹೇಳುವುದಾಗಿ ತಿಳಿಯುತ್ತೇವೆ.

ಸ್ವಪ್ನದಲ್ಲಿ ಮಹಾತ್ಮನ ದರ್ಶನ

ಕೃಷ್ಣಾ ಡಿಸ್ಟ್ರಿಕ್ಟು ಎರ್ರಗುಡಂ ತಾಲ್ಲೂಕು ಕೊವ್ವೂರು ಫಿರ್ಕಾಕ್ಕೆ ಸೇರಿದ ದೊಮ್ಮೇರು ಗ್ರಾಮದ ಮುನಸೀಫನ ಸ್ವಪ್ನದಲ್ಲಿ ಮಹಾತ್ಮನೊಬ್ಬನು ಕಾಣಿಸಿಕೊಂಡ ಈ ಕೆಳಗಿನ ಸಂಗತಿಯು ಹಿಂದೂಪತ್ರಿಕೆಯ ಕಳೆದ ತಾ|| ೯ ರಲ್ಲಿ ಪ್ರಕಟವಾಗಿರುತ್ತದೆ.—ಈ ಗ್ರಾಮಮುನಸೀಫನು ಬ್ರಿಟಿಷ್ ಸರ್ಕಾರಕ್ಕೆ ವಿಧೇಯನಾಗಿದ್ದುಕೊಂಡು ಗ್ರಾಮದ ಕಂದಾಯವನ್ನೆಲ್ಲಾ ಬೇಬಾಕಾಗಿ ವಸೂಲುಮಾಡಿದುದರ ಮೇಲೆ ಸರ್ಕಾರದವರು ಪೆನಕರಮೇಟಿಲಾ ಗ್ರಾಮದ ಕಂದಾಯವಸೂಲಿಯನ್ನೂ ವಹಿಸಿಕೊಟ್ಟರು. ಅವನು ಆ ಕೂಡಲೆ ಆ ಗ್ರಾಮಕ್ಕೆ ಹೋಗಿ ಆ ರಾತ್ರಿ ಗ್ರಾಮ ಚಾವಡಿಯಲ್ಲಿ ತಂಗಿದನು. ರಾತ್ರಿ ನಿದ್ರೆ ಹೋದ ವೇಳೆಯಲ್ಲಿ ಒಬ್ಬ ಮಹಾತ್ಮನು ಪ್ರತ್ಯಕ್ಷನಾಗಿ ನೀನು ಸರ್ಕಾರಿ ಉದ್ಯೋಗವನ್ನು ಬಿಟ್ಟುಬಿಡಬೇಕೆಂದು ಆಜ್ಞೆ ಮಾಡಿದಂತಾಯಿತು. ಮಾರನೆ ಬೆಳಿಗ್ಗೆ ಮುನ್ಸೀಫನು ಎದ್ದು ಅದೇ ಪ್ರಕಾರ ಉದ್ಯೋಗವನ್ನು ಬಿಟ್ಟು ಆ ಗ್ರಾಮಗಳಲ್ಲೆಲ್ಲಾ ಸಹಾಯನಿರಾಕರಣದಲ್ಲಿ ಪ್ರಮುಖನಾಗಿರುವನು.

ಇದರ ನಿಜಾಂಶ— ಆ ಫಿರ್ಕಾದ ರೆವಿನ್ಯೂ ಇನ್ಸ್‌ಪೆಕ್ಟರು ಇದರ ನಿಜಸ್ಥಿತಿಯನ್ನು ಕುರಿತು ವರದಿಮಾಡಿರುವುದೇನೆಂದರೆ — ಈಗ ಮುನಸೀಫನು ೬೫ ವರ್ಷ ವಯಸ್ಸಿನ ವೃದ್ಧನಾಗಿದ್ದು ಕಳೆದ ೩೫ ವರ್ಷಗಳಿಂದಲೂ ಕೆಲಸನೋಡುತ್ತಿದ್ದಾನೆ. ಇತ್ತೀಚೆಗೆ ವೃದ್ಧಾಪ್ಯದೆಸೆಯಿಂದ ತೃಪ್ತಿಕರವಾಗಿ ಕೆಲಸಮಾಡಲು ಅಶಕ್ತನಾಗಿ ಜನವರಿ ತಿಂಗಳ ಕಿಸ್ತು ವಸೂಲಿಯಲ್ಲಿ 200 ರೂ. ಗಳ ಬಾಕಿಯನ್ನುಳಿಸಿಕೊಂಡಿದ್ದುದರ ಮೇಲೆ ಕಳೆದ ಜನವರಿ ತಾ|| ೩೧ ರಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರು ಕಂದಾಯದ ವಸೂಲಿಗಾಗಿ ಪೆನಕರಮೆಟಿಲ ಗ್ರಾಮಕ್ಕೆ ಹೋಗಿರುವಾಗ್ಗೆ ಅಲ್ಲಿ ಗ್ರಾಮಾಧಿಕಾರಿಗಳಾರು ಇಲ್ಲದಿದ್ದುದರಿಂದ ದೊಮ್ಮೇರು ಗ್ರಾಮ ಮುನಸೀಫನು ಇನ್ಸ್‌ಪೆಕ್ಟರ ಕೂಡ ಹೋಗಿದ್ದು ಅದೇದಿವಸ ತನ್ನಗ್ರಾಮಕ್ಕೆ ಹಿಂದಿರುಗಿ ಹೋದನು. ವಸೂಲಿಯ ಕೆಲಸವೇನನ್ನೂ ಅವನು ಮಾಡಲಿಲ್ಲ. ಅಲ್ಲಿ ಗ್ರಾಮಚಾವಡಿಯಿಲ್ಲದಿದ್ದುದರಿಂದ ತಾನು ಆ ಗ್ರಾಮದಲ್ಲಿ ನಿಲ್ಲಬೇಕಾದ ಪ್ರಮೇಯವಿರಲಿಲ್ಲ. ಮತ್ತು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ತನಗೆ ಸ್ವಪ್ನದಲ್ಲಿ ಮಹಾತ್ಮನ ದರ್ಶನವಾದುದು ಸುಳ್ಳು ಮತ್ತು ತನ್ನ ಕೈಲಾಗದಿದ್ದುದರಿಂದ ಕೆಲಸವನ್ನು ಬಿಟ್ಟಿರುತ್ತೇನೆ ಎಂದು ರೆವಿನ್ಯೂ ಇನ್ಸ್‌ಪೆಕ್ಟರಲ್ಲಿ ಕೈಫಿಯತ್ತನ್ನು ಕೊಟ್ಟಿರುತ್ತಾನೆ. ಎಂದು ಪಬ್ಲಿಸಿಟಿ ಬೀರುಯವರು ಪ್ರಕಟಿಸಿರುತ್ತಾರೆ.

MR. S. S. SETLUR AND CONGRESS WORK.

Dear Editor,

Will you please publish in your valuable columns my views on what I consider to be an absolutely uncalled for propoganda in the Mysore State, which has kept Mr. Setlur's pen rather very active during the last few months? Personally I entertain the profoundest regard for Mr. Setlur and an undiminished admiration for his learning in law. There can be no two opinions amongst us in Mysore that he possesses one of the keenest intellects. There is no doubt we are very much proud that he is a Mysorean. But where we miss Mr. Setlur as a Mysorean is in his political training, and in this activity of his I am not able to see eye to eye with him. His early training appears to be responsible for much of his political views. In this he is more an All-India man of political visions than a Mysore Patriot.

I have been carefully reading his recent utterances and publications in the news papers on his Congress work in Mysore and his latest communication published in the Hindu of the 10th instant on "Congress Work in Mysore" shows that he thinks that Mysore wants something of the political doses which are being gratuitously distributed by Messrs. Kasturi Ranga Iyengar, Satymurthi, Mudedkar and Kowjalgi. I ask what occasion there has been to invite these gentlemen to Mysore to preach their creed. They are men of more or less political leadership in India. They hold views which are of an extreme nature as regards the British System of administration. Whatever might be the name they give to the subject of their discourse, their creed is purely politics. They might be right or they might not be right in their views. But Mysore has nothing to do with British India politics and Mr. Setlur will not have anything to do with the local politics of Mysore. What work then has the political body of Congress Committee to do in Mysore? What is the political reputation of the gentleman whom Mr. Setlur says he invited to Mysore to address people? The long three column letter of Mr. Setlur in the Hindu of the 10th instant does not furnish an answer to the above questions. The very genesis as he calls of the Congress work in Mysore betrays the wrong work begun in Mysore. What has Mysore to do with this fund, and why should Mysore money go elsewhere when any amount of it is required here for the amelioration of the so many social conditions in life? No objection was taken to stop the first meetings of this series, and this is no reason why the subsequent meetings should not be stopped. No blunder could be perpetuated on the ground that at first it was committed for some reason or other.

Mr. Setlur then speaks of the students Lock-out. The young materials with which politics was negotiated was the very first step which cannot be characterised as anything other than mischievous. Because Mysore and Tumkur afforded ample facilities for the mischief to play, it does not necessarily mean that what Congress Committee was doing was right or was wanted.

If I remember right, on each occasion these gentlemen addressed meetings in Mysore, you have warned the public against the danger of this propoganda. And it has worked for six months nearly without proper check and the result is that the activity is considered as legitimate or as unquestionable.

I thought of addressing you this letter as I found in your articles that you did not stand for this propoganda. This ought to be stopped entirely and with a strong hand. Any the slightest weakness on the part of the authorities is sure to land us in difficulties. Mysore has become a rendezvous for outside men, who have little sympathy for the people of Mysore. Their object is esploitation. I think we are having all that which gives happiness and contentment. If the external agitations are kept away, Mysore will have no trouble.

I wish that Mr. Setlur who is one of Mysore's best man will devote his energy towards the improvement of social evils in Mysore. It will be a great gain to Mysore if Mr. Setlur gives up this Congress work, as we have absolutely nothing to do with the aims and objects of the Congress originally conceived. I am far from following his constructive propoganda.

A MYSOREAN.

ರೇಷ್ಮೆ ಕೈಗಾರಿಕೆಯನ್ನು ಉಪ ಉದ್ಯೋಗವೆಂದು ಕರೆಯುವುದರ ಅರ್ಥವೇನು ?

ರೇಷ್ಮೆ ಕೈಗಾರಿಕೆಯಿಂದ ನಮ್ಮ ದೇಶಕ್ಕೆ ಹೆಚ್ಚು ಪ್ರಯೋಜನವುಂಟೆಂದು ಹೇಳುವಾಗ, ಇದು ನಮ್ಮ ರೈತರು ಮಾಡಬಹುದಾದ ಉಪ ಉದ್ಯೋಗಗಳಲ್ಲಿ ಸರ್ವೋತ್ಕೃಷ್ಟವಾದದ್ದೆಂದು ಮುಖ್ಯವಾಗಿ ಉದಹರಿಸುತ್ತಾರೆ. ರೇಷ್ಮೆ ಹುಳುವನ್ನು ಸಾಕುವುದರಿಂದ ರೈತನ ಆರಂಬದ ಕೆಲಸಕ್ಕೆ ಸ್ವಲ್ಪವೂ ಕುಂದಕ ವಿಲ್ಲವೆಂಬುದೇ ಇದರ ಅರ್ಥ. ಈ ಮರ್ಮವನ್ನು ತಿಳಿಯದ ಜನಗಳು ಕೆಲವುವೇಳೆ—ನಮಗೆ ರೇಷ್ಮೆ ಯಾಕೆ? ರಾಗಿ ಬೆಳದರೆ ಸಾಕು—ಎನ್ನುತ್ತಾರೆ. ಆದರೆ ಸ್ವಲ್ಪ ಯೋಚನೆ ಮಾಡಿದರೆ, ರೇಷ್ಮೆ ಬೆಳೆಮಾಡುವುದರಿಂದ ಆಹಾರ ಜಿನಸಿಯನ್ನು ಬೆಳೆಯುವುದಕ್ಕೆ ಕುಂದಕವಿಲ್ಲವೆಂಬುದು ಸ್ಪಷ್ಟಪಡುತ್ತದೆ. ರೇಷ್ಮೆ ಹುಳವನ್ನು ಸಾಕುವುದಕ್ಕಾಗಿ ಆರಂಬ ಕೆಲಸವನ್ನು ಬಿಡಬೇಕಾದ್ದೇನೂ ಇಲ್ಲ: ಇದು ಹ್ಯಾಗೆಂಬುದನ್ನು ವಿಚಾರಮಾಡೋಣ.

ಪ್ರಯೋಜನಕಾರಿಯಾದ ಅಂದರೆ ಬೆಲೆಯುಳ್ಳ ಯಾವದಾದರೂ ಒಂದು ವಸ್ತುವನ್ನು ಉತ್ಪತ್ತಿಮಾಡಬೇಕಾದರೆ, ಮೂರು ಸಲಕರಣೆಗಳು ಅವಶ್ಯಕವಾಗಿ ಬೇಕು. ಅವು (1) ಭೂಮಿ, ಅಥವ ಭೂಸಂಬಂಧವಾದ ಪದಾರ್ಥ (2) ಮನುಷ್ಯಸಂಬಂಧವಾದ ಸಾಹಸ, ಅಥವ ಪ್ರಯತ್ನ, ಮತ್ತು (3) ಬಂಡವಾಳ.

ಯಾವನಾದರೂ ತನ್ನ ಜೀವನೋಪಾಯಕ್ಕಾಗಿ ಮಾಡುತ್ತಿರುವ ಕಸಬಿನಲ್ಲಿ ತನಗೆ ಇರಬಹುದಾದ ಈ ಮೂರು ಸಲಕರಣೆಗಳನ್ನೂ ಸಂಪೂರ್ಣವಾಗಿ ಉಪಯೋಗಿಸುತ್ತಿದ್ದರೆ, ಅಂಥವನು ಇನ್ನಾವದಾದರೂ ಒಂದು ಉದ್ಯೋಗವನ್ನು ಕೈಗೊಳ್ಳಬೇಕಾದರೆ ಚೆನ್ನಾಗಿ ಯೋಚಿಸಬೇಕು. ಯಾಕೆಂದರೆ.— ಈಗ ಸಂಪೂರ್ಣವಾಗಿ ಉಪಯೋಗಿಸಲ್ಪಡುತ್ತಿರುವ ಮೇಲ್ಕಂಡ ಸಲಕರಣೆಗಳ ಪೈಕಿ ಅವನು ಕೆಲವು ಭಾಗವನ್ನಾದರೂ ತಾನು ಇದುವರೆಗೂ ಮಾಡುತ್ತಿರುವ ಕಸಬಿನಿಂದ, ಮುಂದೆ ಮಾಡಬೇಕೆಂದಿರುವ ಕಸಬಿಗೆ ವರ್ಗಾಯಿಸಬೇಕಾಗುತ್ತದೆ. ಈ ವರ್ಗಾವಣೆಯು ವಿವೇಕವೇ, ಅವಿವೇಕವೇ, ಎಂಬುದನ್ನು ಫಲಿತಾಂಶದಿಂದ ತಿಳಿಯಬೇಕೆ ವಿನ, ವಿಚಾರವಿಲ್ಲದೆಯೇ ಹೇಳಲಿಕ್ಕಾಗುವುದಿಲ್ಲ. ಹಳೇ ಕಸಬಿಗೆ ಗಮನ ಕಡಿಮೆಯಾದದ್ದರಿಂದ, ಅದರಿಂದ ಬರುತ್ತಿದ್ದ ವರಮಾನವು ಸ್ವಲ್ಪ ಕಡಿಮೆಯಾಗುತ್ತದೆ ಆದರೆ ಇದರ ಬದಲು ಹೊಸಕಸಬಿನಿಂದ ಹೊಸದಾಗಿ ವರಮಾನ ಬರಲಾರಂಭಿಸುತ್ತದೆ. ಹಳೇ ಕಸಬಿನಲ್ಲಿ ಕಡಿಮೆಯಾಗುವ ಭಾಗಕ್ಕಿಂತಲೂ ಹೊಸ ಕಸಬಿನಿಂದ ಬರುವ ಉತ್ಪತ್ತಿ ಅಧಿಕವಾದಲ್ಲಿ ಇದು ವಿವೇಕವಾದ ಕೆಲಸ. ಕಡಿಮೆಯಾದಲ್ಲಿ ಅವಿವೇಕ.

ಆದರೆ ಅವನಿಗೆ ಇರಬಹುದಾದ ಸಲಕರಣೆಗಳೆಲ್ಲವೂ ಅವನು ಜೀವನಕ್ಕಾಗಿ ಮಾಡುತ್ತಿರುವ ಕಸಬಿನಲ್ಲಿ ಉಪಯೋಗವಾಗುತ್ತಿಲ್ಲವಾದರೆ ಹ್ಯಾಗೆ ? ಅವನ ಶಕ್ತಿಗೆ, ಅಥವ ಅವನಿಗೆ ಇರಬಹುದಾದ ಇತರ ಅನುಕೂಲತೆಗೆ ತಕ್ಕ ಫಲವನ್ನು ಅವನು ಪಡೆಯುತ್ತಿಲ್ಲವೆಂದು ಹೇಳಬಹುದಲ್ಲವೇ ? ಈಗ ವ್ಯರ್ಥವಾಗಿ ಕಳೆದು ಹೋಗುತ್ತಿರುವ ಈ ಸಂಪಾದನಾಶಕ್ತಿಗೆ ಉಪಯೋಗವನ್ನು ಉಂಟುಮಾಡಿಕೊಂಡು ಇವನು ಉತ್ಪತ್ತಿಮಾಡಬಹುದಾದ ವರಮಾನವೆಲ್ಲಾ ಅಪ್ಪಟ ಲಾಭವೇ ಹೌದೋ, ಅಲ್ಲವೋ ?

ಈಗ ನಮ್ಮ ರೈತರ ಪಾಡುನೋಡಿ. ಅವರಿಗೆ ವರ್ಷದ ಸದಾಕಾಲದಲ್ಲಿಯೂ ಕೆಲಸವಿರುವುದಿಲ್ಲ. ಅವರ ಮನೆಯ ಜನಕ್ಕೆ ಸಾಮಾನ್ಯವಾಗಿ ಹೆಚ್ಚು ಕೆಲಸವಿರುವುದಿಲ್ಲ. ಅದರಲ್ಲೂ ಘೋಷಾಪದ್ಧತಿಯನ್ನಾಚರಿಸುವ ಜನಗಳಲ್ಲಂತು ಹೇಳಬೇಕಾದ್ದೇ ಇಲ್ಲ. ಸ್ವಾಭಾವಿಕವಾಗಿ ಈ ಜನಗಳಲ್ಲಿ ಬಡತನವೂ ಹೆಚ್ಚು; ಯಾಕಂದರೆ ಕೆಲಸಮಾಡುವ ಕೈಗಳು ಎರಡಾದರೆ, ಊಟಮಾಡುವ ಬಾಯಿಗಳು ಅನೇಕ. ಇಂಥಾ ಸಂದರ್ಭದಲ್ಲಿ ಸುಲಭವಾಗಿ ಕಲಿಯಬಹುದಾದ, ಹೆಚ್ಚು ದೇಹಶ್ರಮವನ್ನೇ ಆಗಲಿ, ವಿಶೇಷ ಬಂಡವಾಳವನ್ನೇ ಆಗಲಿ ಕೇಳದೇ ಇರುವ, ಮುಖ್ಯವಾಗಿ ಮನೆಯಲ್ಲಿಯೇ ಆಚರಿಸಬಹುದಾದ ಒಂದು ಲಾಭಕರವಾದ ಉಪ ಉದ್ಯೋಗ ವದಗಿದರೆ ಬಡತನವು ಹರಿದ ಹಾಗಲ್ಲವೇ ? ಈ ಕಸಬಿನ ಉತ್ಪತ್ತಿ ವರ್ಷಕ್ಕೆ ಅನೇಕಾವರ್ತಿ ಬರತಕ್ಕದ್ದಾಗಿದ್ದರೆ ಇನ್ನೂ ಮೇಲಲ್ಲವೆ? ಇದರಿಂದ ಮೊದಲು ಮಾಡುತ್ತಿದ್ದ ಕಸಬಿಗೆತಾನೆ ಕುಂದಕವೇನು ? ಅದರಲ್ಲಿ ಉಪಯೋಗವಾಗದೆ ವುಳಿದು ನಷ್ಟವಾಗಿ ಹೋಗುತ್ತಿದ್ದ ಸಾಮಗ್ರಿಗಳನ್ನಲ್ಲವೆ ನಾವು ಈಗ ಉಪಯೋಗಿಸಬೇಕೆಂಬುವುದು ?

ರೇಷ್ಮೆ ಕೈಗಾರಿಕೆ ಇಂಥಾ ಕಸಬಾಗಿದೆ--ಮತ್ತು ಇಂಥಾ ಕಸಬುಗಳಲ್ಲೆಲ್ಲಾ ಶ್ರೇಷ್ಠವಾದ್ದಾಗಿದೆ. ಈ ಕಸಬನ್ನು ಎಲ್ಲಾ ದೇಶಗಳಲ್ಲಿಯೂ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಮೈಸೂರು ದೇಶದಲ್ಲಿ ಮಾತ್ರ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿಯೂ ಬಹಳ ಚೆನ್ನಾಗಿ ಮಾಡುವುದಕ್ಕೆ ನಮ್ಮ ಭೂಸಾರದಿಂದಲೂ, ಹವದಿಂದಲೂ, ಅನುಕೂಲವಿದೆ. ಇದು ನಮ್ಮ ಭಾಗ್ಯವಲ್ಲವೇ ? ಇದರ ಪ್ರಯೋಜನವನ್ನು ನಾವು ಪಡೆಯದಿದ್ದರೆ ನಾವು ಮೂಢರೇ ಸರಿ. ಈ ಕಸಬು ದೊಡ್ಡ ಸಂಸಾರಿಯಾದ ಬಡವನ ಪಾಲಿನ ಲಕ್ಷ್ಮಿ ಎಂದು ಹೇಳಬಹುದು. ಇದರ ಮುಖ್ಯ ಅನುಕೂಲತೆಗಳನ್ನು ಕೆಳಗೆ ಸಂಕ್ಷೇಪವಾಗಿ ಹೇಳುವೆವು.

(1) ಇದನ್ನು ಸುಲಭವಾಗಿ ಕಲಿಯಬಹುದು.-ಒಂದೆರಡು ಬೆಳೆಗಳನ್ನು ಮಾಡುವುದರೊಳಗಾಗಿ ಈ ಕೈಗಾರಿಕೆಯ ಮರ್ಮವನ್ನು ತಿಳಿದುಕೊಳ್ಳಬಹುದು. ಮೈಸೂರು ಪಟ್ಟಣಕ್ಕೆ ಬರಲು ಅನುಕೂಲವುಳ್ಳವರಿಗಾಗಿ ಇಲ್ಲಿನ ರೇಷ್ಮೆ ಕೈಗಾರಿಕೆಯ ಪಾಠಶಾಲೆಯಲ್ಲಿ 1½ ತಿಂಗಳಿನ ಅವಧಿಯ ಸುಲಭ ಪಾಠಗಳು ಏರ್ಪಟ್ಟಿವೆ. ಈ ಕಾಲದಲ್ಲಿ ವಿದ್ಯಾರ್ಥಿಗೆ ದಿನವಹಿ 5 ಆಣೆಯ ವೇತನವನ್ನು ಕೊಡಲಾಗುವುದು. ಮೈಸೂರು ದೇಶದ ಇತರ ಭಾಗಗಳಲ್ಲಿ ಅಂದರೆ, ಚನ್ನಪಟ್ಣ, ತಿ. ನರಸೀಪುರ, ಹೊಳೇನರಸೀಪುರ, ದೇವನಹಳ್ಳಿ, ಕೋಲಾರ, ಶಿಡ್ಲಘಟ್ಟ, ಹಿಂಡಿಗನಾಳು, ಚಿಕ್ಕಮಗಳೂರು, ಕುಣಿಗಲು, ಈ ಸ್ಥಳಗಳಲ್ಲಿ ರೇಷ್ಮೆ ಇಲಾಖೆಯ ಕಾರ್ಖಾನೆಗಳಿರುವವು. ಇವುಗಳ ಹತ್ತಿರದಲ್ಲಿರುವವರು ಇವುಗಳಲ್ಲಿ ಕೆಲಸಮಾಡಿ ಅನುಭವ ಮಾಡಿಕೊಳ್ಳಲು ಅವಕಾಶ ದೊರೆಯುವುದು.

(2) ಇದು ದೇಹಕ್ಕೆ ಶ್ರಮವಿಲ್ಲದ, ಬುದ್ಧಿಗೆ ಚಟವಟಿಗೆಯನ್ನೂ, ಹರ್ಷವನ್ನೂ ಉಂಟುಮಾಡುವ ಕೆಲಸ.—ಇದಕ್ಕೆ ಶರೀರದ ಬಲ ಹೆಚ್ಚುಬೇಕಿಲ್ಲ. ಹೆಂಗಸರು ಮಕ್ಕಳು ಇದನ್ನು ಸುಲಭವಾಗಿ ತಮ್ಮ ಮನೆ ಕೆಲಸ, ಓದು ಅಥವ ಆಟಪಾಟಗಳ ಸಂಗಡ ಮಾಡಿಕೊಳ್ಳುತ್ತಾರೆ. ಇದರಲ್ಲಿ ಸರಿಯಾದ ಪದ್ಧತಿಗೂ, ಚಮತ್ಕಾರಕ್ಕೂ ಅವಕಾಶವಿರುವುದರಿಂದ ಇದು ಬುದ್ಧಿಯನ್ನೂ ಸಹ ಕುದುರುಪಾಟು ಮಾಡುತ್ತದೆ.

(3) ಇದಕ್ಕೆ ಹೆಚ್ಚು ಭೂಮಿಯೇ ಆಗಲಿ ಬಂಡವಾಳವೇ ಆಗಲಿ ಬೇಕಿಲ್ಲ.—ಅರ್ಧ ಎಕರೆಯಲ್ಲಿ ಹಿಪ್ಪನೇರಳೆ ನೆಟ್ಟರೆ ವರ್ಷಕ್ಕೆ 150 ರೂ. ನಿವ್ವಳ ಲಾಭವನ್ನು ಸಂಪಾದಿಸಬಹುದು. ಇದಕ್ಕೆ ಖರ್ಚು, ತೋಟವನ್ನು ಮಾಡುವುದಕ್ಕೆ ಪ್ರಾ

ರಂಭದಲ್ಲಿ ಸುಮಾರು 60 ರೂ ನಂತರ ಪ್ರತಿವರ್ಷವೂ ವ್ಯವಸಾಯ ಮೊದಲಾದ ಖರ್ಚು, ಸುಮಾರು 30 ರೂ.

(4) ಇದರ ವರಮಾನವು ಬಹುಜಾಗ್ರತೆಯಾಗಿ ಬರತಕ್ಕದ್ದು, ಮತ್ತು ವರ್ಷಕ್ಕೆ ಅನೇಕಸಲ ಬರತಕ್ಕದ್ದು.-ಮೈಸೂರು ದೇಶೀ ಹುಳಗಳನ್ನು ಸಾಕಿದರೆ ವರ್ಷಕ್ಕೆ 8 ಬೆಳೆಗಳವರೆಗೂ ತೆಗೆಯಬಹುದು. ರೇಷ್ಮೆ ಗೂಡಿದ್ದರೆ ಹಣವಿದ್ದಂತೆಯೆ. ಕ್ರಯಕ್ಕೆ ಕೊಳ್ಳುವ ಜನಗಳು ಯಾವಾಗಲೂ ಕಾದಿರುತ್ತಾರೆ.

(5) ಮುಖ್ಯವಾಗಿ ಈ ಕಸಬು ಮಾಡುವುದು ದೇಶದ ಸೇವೆಯಾಗಿದೆ.-ಇದರಿಂದ ನಮ್ಮ ದೇಶದ ಸೌಭಾಗ್ಯವೂ, ನಮ್ಮ ಸಹೋದರರಾದ, ಲಕ್ಷಾಂತರ ಸಂಖ್ಯೆಯುಳ್ಳ ನಮ್ಮ ದೇಶೀಯರ ಸೌಖ್ಯವೂ ಅಭಿವೃದ್ಧಿಗೊಳ್ಳುತ್ತವೆ. ಇದರ ಗಿಂತಲೂ ಪುರುಷಾರ್ಥವುಂಟೇ ?

ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೈಸೂರು ಸರ್ಕಾರದವರು ಅನೇಕ ರಿಯಾಯಿತಿಗಳನ್ನು ಮಂಜೂರ್ಮಾಡಿದ್ದಾರೆ. ಈ ವಿಚಾರದಲ್ಲಿ ಹೆಚ್ಚು ತಪ್ಸೀಲನ್ನು ಅಪೇಕ್ಷಿಸುವವರು ಮೈಸೂರಿನಲ್ಲಿರುವ ರೇಷ್ಮೆ ಇಲಾಖಾ ಸೂಪರಿಂಟೆಂಡೆಂಟರಿಗೆ ಬರೆದುಕೊಳ್ಳಬಹುದು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಥಾನದಿಂದ.—

ಚಿತ್ರದುರ್ಗ ಸೆಂಟರಿನಲ್ಲಿ ಈ ವರ್ಷ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಅವರ ಸಂಗಡ ಬರತಕ್ಕ ವೀರಶೈವ ಮಾಸ್ತರುಗಳಿಗೂ ಮತ್ತು ವೀರಶೈವರಲ್ಲಿ ಭೋಜನಮಾಡತಕ್ಕ ಪರಮತೀಯ ವಿದ್ಯಾರ್ಥಿಗಳಿಗೂ ಚಿತ್ರದುರ್ಗದ ಶ್ರೀ ಜಯದೇವ ಹಾಸ್ಟಲ್‌ನಲ್ಲಿ ಪರೀಕ್ಷೆಯದಿನದಾರಭ್ಯ ಪರೀಕ್ಷೆ ಮುಗಿಯುವವರೆವಿಗೂ ಭೋಜನದ ಏರ್ಪಾಟು ಮಾಡಲ್ಪಡುವುದು. ಆದ್ದರಿಂದ ಆ ಕಾಲಕ್ಕೆ ಬರತಕ್ಕ ವಿದ್ಯಾರ್ಥಿಗಳೂ, ವೀರಶೈವ ಮಾಸ್ತರುಗಳೂ ಈ ತಿಂಗಳು ೨೫ನೇ ತಾರೀಖಿನೊಳಗಾಗಿ ಶ್ರೀ ಜಯದೇವ ಹಾಸ್ಟಲ್ ಸೆಕ್ರಟರಿಯವರಿಗೆ ಬರಹಮೂಲಕ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು. ವಿದ್ಯಾರ್ಥಿಗಳೂ ಉಪಾಧ್ಯಾಯರೂ ತಮ್ಮತಮ್ಮ ತಂಬಿಗೆ ಮತ್ತು ಹಾಸಿಗೆ ಹೊದ್ದಿಕೆಗಳನ್ನು ಸಂಗಡ ತೆಗೆದುಕೊಂಡು ಬರತಕ್ಕದ್ದು.

ಲಿಂಗಪ್ಪ, ಏಜಂಟ್, ಸಂ|| ಚಿತ್ರದುರ್ಗ.

ಕಳೆದ ೮-೧೦ ವರ್ಷಗಳಿಂದಲೂ ಕಡೂರು ಸೆಂಟರಿನಲ್ಲಿ ನಡೆಯುವ ಲೋ|| ಸೆ|| ಪರೀಕ್ಷಾ ಕಾಲದಲ್ಲಿ ಅಲ್ಲಿಗೆ ಬರತಕ್ಕ ವೀರಶೈವ ಮತಸ್ಥರಾದ ಮತ್ತು ಅವರಲ್ಲಿ ಊಟಮಾಡತಕ್ಕ ಇತರ ಮತಸ್ಥರಾದ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರುಗಳಿಗೂ, ಭೋಜನ, ಉಪಹಾರಾದಿಗಳಿಗೆ ಅನುಕೂಲವನ್ನು ಕಲ್ಪಿಸಿ ಸಹಾಯಮಾಡುತ್ತಿರುವ ಆನರೆರಿ ಬೆಂಚು ಮ್ಯಾಜಿಸ್ಟ್ರೇಟರೂ, ಡಿಸ್ಟ್ರಿಕ್ಟುಬೋರ್ಡು ಮತ್ತು ರೆಪ್ರೆಜೆಂಟೇಟಿವ್ ಅಸೆಂಬ್ಲಿಯ ಮೆಂಬರೂ, ಬೀರೂರು ಟೌನ್ ಮ್ಯುನಿಸಿಪಲ್ ಆನರೆರಿ ವೈಸ್‌ಪ್ರೆಸಿಡೆಂಟರೂ ಆದ ಮ|| ಉಭ್ರಾಣಿಮಠದ ಎಸ್. ಎಂ. ಶಿವಲಿಂಗಪ್ಪಯ್ಯನವರು ಈ ವರ್ಷವೂ ಪದ್ಧತಿಯಂತೆ ಕಡೂರಲ್ಲಿರುವ ತಮ್ಮ ಬಂಗಲೆಯಲ್ಲಿ ಸತ್ಕಾರವನ್ನು ನಡೆಸಲು ಏರ್ಪಡಿಸಿರುವುದರಿಂದ, ಪರೀಕ್ಷೆಗಾಗಿ ಬರತಕ್ಕವರು ಸದರಿ ಧರ್ಮಕರ್ತರಿಗೆ ದಯವಿಟ್ಟು ಈ ಮಾಹೆ ೨೫ನೇ ತಾರೀಖಿನೊಳಗಾಗಿ ತಿಳಿಸಬೇಕಾಗಿ ಅಪೇಕ್ಷಿಸಲ್ಪಟ್ಟಿದೆ. ವಿದ್ಯಾಭಿಮಾನಿ.

ವೀರಶೈವ ಮತಸಂವರ್ಧಿನೀಸಭಾ ಮುಡುಕುದೊರೆ.

ಮುಡುಕುದೊರೆ ಶ್ರೀ ಮಲ್ಲಿಕಾರ್ಜುನಸ್ವಾಮಿ ರಥೋತ್ಸವ ಕಾಲದಲ್ಲಿ ಪ್ರತಿವರ್ಷವೂ ನಡೆಯುವಂತೆ ನಿಶ್ಚಯಿಸಲ್ಪಟ್ಟ ಪ್ರಕಾರ ಈ ವರ್ಷವೂ, ಹೋದ ತಿಂಗಳು ತಾರೀಖು ೭-೮-೯ ರಲ್ಲು ವೀರಶೈವ ಮತಸಂವರ್ಧಿನೀ ಎಂಬ ವೈದಿಕಸಭೆಯು ನಡೆಯಿತು. ಮೈಸೂರು, ಕೊಳ್ಳೇಗಾಲ, ನಂಜನಗೂಡು, ನರಸೀಪುರ, ಮಧುವನಹಳ್ಳಿ ಮೊದಲಾದ ಅನೇಕ ಕಡೆಯಿಂದ ಮತಾಭಿಮಾನಿಗಳು ದಯಮಾಡಿಸಿದ್ದರು. ಮೊದಲನೆ ದಿವಸ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಆಜೀವ ಸಭಾಧ್ಯಕ್ಷರಾದ ಆಸ್ಥಾನ ಮಹಾವಿದ್ವಾನ್ ಕರ್ನಾಟಕ ಭಾಷಾರತ್ನ ಪಿ. ಆರ್. ಕರಿಬಸವಶಾಸ್ತ್ರಿಗಳು ಅಧ್ಯಕ್ಷ ಪೀಠವನ್ನಲಂಕರಿಸಿದರು. ಪ್ರಾರಂಭದಲ್ಲಿ ದೇವತಾಪ್ರಾರ್ಥನೆಯಾಯಿತು. ಅನಂತರ ಸಭೆಯ ಉದ್ದೇಶಾನುಸಾರವಾಗಿ ಅಧ್ಯಕ್ಷರು ಸಮಯೋಚಿತವಾದ ಭಾಷಣವನ್ನು ಮಾಡಿದರು. ಆವೇಳೆ ಮೊದಲೇ ನಿಯಮಿತವಾದಂತೆ ಅನೇಕ ಕಡೆಯಿಂದ ಬಂದ ವಿದ್ವಾಂಸರ ಉಪನ್ಯಾಸಗಳು ಓದಲ್ಪಟ್ಟವು. ಮರುದಿವಸ ಯಥಾಪ್ರಕಾರ ಸಭೆಗೂಡಿತು. ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು ಸರ್ವಜನ ಹೃದಯಂಗಮವಾಗುವಂತೆ ವೀರಶೈವ ಸಿದ್ಧಾಂತವನ್ನು ಭಾಷಣ ಮಾಡಿದರು. ಮೂರನೆ ದಿವಸ ನಾಲ್ಕು ಘಂಟೆಗೆ ಸರಿಯಾಗಿ ಬಹಿರಂಗ ಸಭೆಯು ಪ್ರಾರಂಭವಾಯಿತು. ಆಹ್ವಾನ ಮಾಡಲ್ಪಟ್ಟವರೇ ನಂಜನಗೂಡು ಸಬ್‌ಡಿವಿಜನ್ ಆಫೀಸರು, ಅಮಲ್ದಾರರು, ಮೊದಲಾದ ಸರ್ಕಾರದುದ್ಯೋಗಿಗಳಿಂದಲೂ, ಅನೇಕ ವೀರಶೈವ ಮಹಾಜನಗಳಿಂದಲೂ, ಸಭಾಮಂಟಪವು ನಿಬಿಡೀಕೃತವಾಗಿತ್ತು. ಆಗ ವೇ|| ಮಹಾವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳು ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಕ್ಷೇಪವಾಗಿ ಗಂಭೀರ ವಾಣಿಯಿಂದ ಸಭಿಕರೆಲ್ಲರಿಗೂ ಬೋಧೆಯಾಗುವಂತೆ ಬೋಧಿಸಿದರು. ಗತವರ್ಷದಲ್ಲಿ ಗೊತ್ತಾಗಿದ್ದ ಮೇರೆ ಬಂದಿದ್ದ ವಿದ್ವಾಂಸರ ಉಪನ್ಯಾಸಗಳನ್ನು ಪರಿಶೋಧಿಸಿ ನೋಡಿ ಉತ್ತಮ ತರಗತಿಯಲ್ಲಿ ತೇರ್ಗಡೆಯಾದ ಶಿರಸಿ ಗುರುಶಾಂತ ಶಾಸ್ತ್ರಿಗಳಿಗೆ ಸುವರ್ಣ ಪದಕದೊಡನೆ ಶಿವಾದ್ವೈತ ವಿದ್ಯಾವಿಭೂಷಣ, ಎಂಬ ಪ್ರಶಸ್ತಿಯು ಸಭಾಧ್ಯಕ್ಷರಾದ ಆಸ್ಥಾನ ಮಹಾವಿದ್ವಾನ್ ವೇ|| ಕರಿಬಸವಶಾಸ್ತ್ರಿಗಳವರಿಂದ ಕೊಡಲ್ಪಟ್ಟಿತು. ಇತರ ಉಪನ್ಯಾಸಕರಿಗೆ ಗೊತ್ತಾದಪ್ರಕಾರ ಯಥೋಚಿತ ಸಂಭಾವನೆಯು ಕೊಡಲ್ಪಟ್ಟಿತು. ಅನಂತರ ಸಬ್‌ಡಿವಿಜನ್ ಆಫೀಸರು ತಮಗುಂಟಾದ ಸಂತೋಷವನ್ನು ಉಪನ್ಯಾಸ ಮೂಲಕ ಸೂಚಿಸಿದರು. ಆವೇಳೆ ಸಂಗೀತವು ನಡೆದು ಸಭಿಕರಿಗೆಲ್ಲಾ ಗಂಧ ತಾಂಬೂಲಾದಿಗಳು ಸಮರ್ಪಿಸಲ್ಪಟ್ಟ ನಂತರ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಧ್ಯಾನಪೂರ್ವಕ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಸಭಿಕ.

ಬೆಂಗಳೂರು ವೀರಶೈವ ವರ್ತಕಮಂಡಲಿ.

ಈ ಮಂಡಲಿಯವರು ಈ ತಾ|| ೧೨ನೆಯ ಭಾನುವಾರ ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಕೈ|| ಗೌ|| ವೀರಭದ್ರಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿ ಪ್ರಸಿದ್ಧ ಕೀರ್ತನಕಾರರು ಮತ್ತು ಶಿವಕಥಾ ಭೂಷಣ ಎಂಬ ಬಿರುದಾಂಕಿತರೂ ಆದ ಹುಣಸೀಗಟ್ಟ ಮಠದ ವೇ|| ನಂಜುಂಡಾರಾಧ್ಯರವರಿಂದ "ವೃಷಭಯೋಗೀಶ್ವರ ಮಹಿಮೆ" ಎಂಬ ಚರಿತ್ರೆಯನ್ನು ಕೀರ್ತನ ಮಾಡಿಸಿದರು. ಅಲ್ಲಿ ನೆರದಿದ್ದ ಐವತ್ತು ಜನರು ಈ ಕೀರ್ತನಾಕಾರರ ವಿದ್ಯಾಪ್ರೌಢಿಮೆಗೆ ಮೆಚ್ಚಿ ತಲೆದೂಗಿದರು. ಹೃದಯಂಗಮವಾಗುವಂತೆ ಇವರು ಸಂಗೀತ ಸಾಹಿತ್ಯದೊಡನೆ ಕಾಲಕ್ಕನುಗುಣವಾಗಿ ತಮ್ಮ ಅಸ್ಖಲಿತವಾಣಿಯಿಂದ ಸರ್ವರಮನಸ್ಸು ಭಕ್ತಿಜ್ಞಾನ ವೈರಾಗ್ಯಗಳಲ್ಲಿ ಆಳವಡುವಂತೆ ಮಾಡಿದರು. ಮೇಲ್ಕಂಡ ಮಂಡಲಿಯ ಪ್ರಸಿಡೆಂಟರಾದ ಮ|| ರಾ|| ಪಿ. ಯಂ. ಬಸಪ್ಪನವರು ಕೀರ್ತನಾಕಾರರ ಬೋಧಪ್ರದವೂ ಬಹು ಗಂಭೀರಯುಕ್ತವೂ ಆದ ಕಥೆಗೆ ಮೆಚ್ಚಿ ಮಂಡಲಿಯ ಪರವಾಗಿ ಅವರಿಗೆ ವಂದನೆಗಳನ್ನರ್ಪಿಸಿದ ಬಳಿಕ ಮ|| ರಾ|| ಎಚ್. ಕೆ. ಮಲ್ಲಪ್ಪನವರು ಕೀರ್ತನಾಕಾರರ ಬುದ್ಧಿ ಸೌಜನ್ಯತೆ ಮೊದಲಾದ ಸುಗುಣಗಳನ್ನು ಕುರಿತು ಭಾಷಣಮಾಡಿದರು. ಸಭಿಕರಲ್ಲನೇಕರು ಆರಾಧ್ಯರ ಕೀರ್ತನೆಯನ್ನು ಮತ್ತೊಮ್ಮೆ ಕೇಳಲು ಕುತೂಹಲವನ್ನು ವ್ಯಕ್ತಪಡಿಸುವಷ್ಟರಲ್ಲಿ ಬೆಂಚು ಮ್ಯಾಜಿಸ್ಟ್ರೇಟರು ಮತ್ತು ಕಂಟ್ರಾಕ್ಟುದಾರರು ಆದ ಮ|| ರಾ|| ಟಿ. ರಾಚಪ್ಪನವರು ತಮ್ಮ ಸ್ವಂತ ಗೃಹದಲ್ಲಿ ನಾಳೆಯದಿವಸವೇ "ಮನ್ಮಥದಹನ" ಎಂಬ ಕಥೆಯನ್ನು ಮಾಡಬೇಕೆಂದು ಅಪೇಕ್ಷಿಸಲು ಆರಾಧ್ಯರು ಅವರ ಆಮಂತ್ರಣವನ್ನು ಸ್ವೀಕಾರಮಾಡಿ ತಾ|| ೧೩ನೆಯ ಸೋಮವಾರ ಸಾಯಂಕಾಲ ಮ|| ರಾ|| ಟಿ. ರಾಚಪ್ಪನವರ ಸ್ವಗೃಹದಲ್ಲಿ ಮನ್ಮಥ ದಹನಲೀಲೆ ಎಂಬ ಶಿವಕಥೆಯನ್ನು ಅತ್ಯಂತ ಉತ್ಸಾಹದಿಂದ ಅನೇಕ ವಿಷಯಗಳನ್ನು ಸಪ್ರಮಾಣವಾಗಿಯೂ ಸರಸವಾಗಿಯೂ ಮಧ್ಯೆ ಮಧ್ಯೆ ಕರತಾಡನವನ್ನು ಮಾಡುವಂತೆ ವಿವರಿಸಿ ಹೇಳಿದರು. ಅಲ್ಲಿ ನೆರದಿದ್ದ ಮ|| ರಾ|| ಗಳಾದ ದಿವಾನ್‌ಬಹದ್ದೂರು ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ., ರಾವ್‌ಸಾಹೇಬ್ ಚನ್ನಯ್ಯನವರು, ವರ್ದರಾಜೈಯಂಗಾರ್, ಡಾಕ್ಟರ್ ರಾಘವೇಂದ್ರರಾಯರು, ಸಿ. ಹೈವದನರಾಯರು, ಜಿ. ಶಾಂತವೀರಪ್ಪನವರು, ಜಿ. ಪರಮಶಿವಯ್ಯನವರು, ಕ್ಯಾಪ್ಟನ್ ವೈ. ವಿ. ಐಯ್ಯನವರು, ಟಿ. ನಂಜಪ್ಪನವರು, ಪಿ. ಯಂ. ಬಸಪ್ಪನವರು ಎಚ್. ಕೆ. ಮಲ್ಲಪ್ಪನವರು, ವರ್ತಕಮಂಡಲಿಯ ಸೆಕ್ರಟರಿಯವರೇ ಆದಿಯಾಗಿ ಸರ್ವರೂ ಕಥಾಶ್ರವಣದಿಂದ ಸಂತೋಷಪಟ್ಟರು. ಕೀರ್ತನಾಕಾರರಿಗೂ ಮ|| ರಾ|| ಟಿ. ರಾಚಪ್ಪನವರಿಗೂ ವಂದನೆಗಳು ಸಮರ್ಪಿಸಲ್ಪಟ್ಟವು.

ಓರ್ವ ಪ್ರತ್ಯಕ್ಷದರ್ಶಿ.

ಜಮಖಂಡಿ ವಾಚನಾಲಯ.

ದೇಶಿಯ ಸಂಸ್ಥಾನದ ರಾಜಧಾನಿಯ ಸ್ಥಳವಾದ ನಮ್ಮ ಜಮಖಂಡಿಯಲ್ಲಿ ಲಿಂಗಾಯತರ ಸಾರ್ವಜನಿಕ ವಾಚನಾಲಯವೊಂದು ಇಲ್ಲದ್ದು ನಾಚಿಕೆಯ ಸಂಗತಿಯಾಗಿತ್ತು. ಇದನ್ನು ದೂರಮಾಡುವ ಕುರಿತು ಈಗ ಸುಮಾರು ೮-೧೦ ವರುಷಗಳ ಕೆಳಗೆ ಇಲ್ಲಿಯ ಪೇಟೆಯೊಳಗಿನ ವ್ಯಾಪಾರಸ್ಥರಾದ ಲಿಂಗಾಯತ ಬಾಂಧವರು ಒಂದು ವಾಚನಾಲಯವನ್ನು ಸ್ಥಾಪಿಸಿದ್ದರು. ಆಗ ಉತ್ಸಾಹಿಗಳೂ, ಸುಶಿಕ್ಷಿತರೂ ಆದ ನಮ್ಮ ತರುಣರು ಅಷ್ಟು ಜನರು ಇಲ್ಲದ್ದರಿಂದಲೂ, ಉದ್ಯೋಗಸ್ಥರಾದ ವೃದ್ಧರಿಂದ ಅತ್ತಕಡೆಗೆ ಅಷ್ಟೊಂದು ಲಕ್ಷ್ಯವನ್ನು ಕೊಡಲಿಕ್ಕೆ ಆಗದ್ದರಿಂದಲೂ ಅದು ಹೇಗೆ ಉದಯ ಹೊಂದಿತ್ತೋ ಹಾಗೆಯೇ ಅಗ್ಗೇ ಲಯಹೊಂದಿತ್ತು. ಈಗ ಸರ್ವಸಾಧಾರಣವಾಗಿ ಆ ಕೊರತೆಯು ದೂರಾಗಿ ನಮ್ಮ ಸುಶಿಕ್ಷಿತರಾದ ತರುಣರ ಸಂಖ್ಯೆಯು ಉಂಟಾದುದರಿಂದಲೂ, ಅವರಿಗೆ ತಮ್ಮಲ್ಲಿ ತಮ್ಮವರ ವಾಚನಾಲಯ ವಿಲ್ಲದ್ದು ಕೆಡಕು ತೋರಿದ್ದರಿಂದಲೂ, ತಮ್ಮದೊಂದು ಸಂಘವನ್ನು ಸ್ಥಾಪಿಸಿಕೊಂಡು ಆ ಸಂಘದವತಿಯಿಂದ ಆ ಲಯಹೊಂದಿದ ವಾಚನಾಲಯವನ್ನು ಪುನಃ ಉದಯಗೊಳಿಸಿದರು. ಈ ಸಂಘದಲ್ಲಿ ಈಗಿನ ಪರಿಸ್ಥಿತಿಗನುಸರಿಸಿ ಎಲ್ಲ ಜಾತಿಯ ಬಾಂಧವರನ್ನು ಸೇರಿಸಿಕೊಂಡಿರುವರು. ನಮ್ಮ ಸಾಹುಕಾರಿಯ ಜಿಲ್ಲಾಪೈಕಿ ಶಾಸಗಾಂವದ ಪಾಟೀಲರಾದ ಶ್ರೀಮಂತ ಮುರಾರರಾವ ಮಾಧವರಾವ ಇವರೂ, ಇದೇ ಸಂಸ್ಥಾನದ ಪೈಕಿ ಮಾಜಿ ಕೌಜಲಗಿಯ ಪಾಟೀಲರಾದ ಮ|| ರಾ|| ರಾ|| ತಮ್ಮಣಗೌಡ ಇವರೂ "ಈ ವಾಚನಾಲಯವು ಸುವ್ಯವಸ್ಥೆಯಿಂದ ನಡೆದದ್ದಾದರೆ, ನಾವು ಪ್ರತಿಯೊಬ್ಬರು ಪ್ರತಿವರ್ಷ ಇಪ್ಪತ್ತೈದು ರೂಪಾಯಿಗಳನ್ನು ವರ್ಗಣಿರೂಪದಿಂದ ಕೊಡುವೆವು" ಎಂದು ಅಭಯವಿತ್ತುದಲ್ಲದೆ, ಈವರ್ಷದ ಬಗ್ಗೆ ತಾವು ಕೊಡತಕ್ಕ ೫೦ ರೂಪಾಯಿಗಳನ್ನು ರೋಖಕೊಟ್ಟು ಈ ಸಂಘದವರಿಗೆ ಉತ್ತೇಜನವನ್ನು ಕೊಟ್ಟಿರುವರು. ಶ್ರೀಮಂತ ಮುರಾರರಾವ ಇವರು ವರ್ಷಾ ಎಂಟುಹತ್ತು ಸಾವಿರರೂಪಾಯಿಯ ಇನಾಮುದಾರರಿದ್ದು ಯಾವಾಗಲು ಇಂಥ ಲೋಕೋಪಕಾರಿಯಾದ ಸಂಸ್ಥೆಗಳಿಗೆ ತ್ರಿಕರಣಪೂರ್ವಕವಾಗಿ ಪ್ರಯತ್ನಿಸುತ್ತಿರುವರಲ್ಲದೆ, ಹತ್ತಿದಷ್ಟು ಧನಸಹಾಯವನ್ನು ಮಾಡಿ ಎತ್ತಿ ಹಿಡಿಯುವಷ್ಟು ಉದಾರರೂ ಇರುವರು. ಈ ಮಹಾಶಯರ ಅನುಕರಣವನ್ನು ಇನ್ನುಳಿದ ಇನಾಮುದಾರರು ಮಾಡುವರೆಂದು ನೆರೆನಂಬಿರುವೆವು.

ತಾರೀಖು ೮ನೆಯ ಮಾರ್ಚಿ ಸನ್ ೧೯೨೨ನೆಯ ಬುಧವಾರ ಮುಂಜಾನೆ ಶುಭಮುಹೂರ್ತದಲ್ಲಿ ಶ್ರೀಮದ್ಬಸವಾದಿಗಳ ಭಾವಚಿತ್ರಗಳ ಮಂಗಲಪೂಜೆಯು ಆಗಿ, ಇಲ್ಲಿಯ ಸುಪ್ರಸಿದ್ಧ ಶೆಟ್ಟರಾದ ಮ|| ರಾ|| ರಾ|| ಶಿವಪುತ್ರಪ್ಪ ಶಿವಲಿಂಗಪ್ಪ ಇಂಗಳಗಿ ಇವರ ಅಧ್ಯಕ್ಷತೆಯಕೆಳಗೆ ಸಭೆಗೂಡಿ ಬೋಧಪರ ವ್ಯಾಖ್ಯಾನಗಳು ಆದಬಳಿಕ, ಸಂಘದ ಕಾರ್ಯಕ್ಕೆ ಬೇಕಾದ ಮೆಂಬರರು ಆರಿಸಲ್ಪಟ್ಟು ಕೆಳಗೆ ತೋರಿಸಿದ ಉದ್ದೇಶಗಳೊಂದಿಗೆ ವಾಚನಾಲಯವು ಉದಯಹೊಂದಿತು.

೧. ಜಾತಿಜಾತಿಗಳಲ್ಲಿರುವ ಮತ್ಸರಭಾವವು ನಾಮಾವಶೇಷವಾಗುವಂತೆ ವರ್ತಿಸುವದು. ೨. ಹಿಂದೆಬಿದ್ದ ಜನಾಂಗಗಳು ಬೇಗನೆ ಮುಂದೆಬೀಳುವ ಉಪಾಯಗಳನ್ನು ಕಂಡುಹಿಡಿದು ಅನುವರ್ತಿಸುವದು. ೩. ವಚನ ಶಾಸ್ತ್ರ ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ ಅಡಕವಾಗಿರುವ ಸನಾತನಧರ್ಮ ತತ್ವಗಳನ್ನು ಪ್ರಕಾಶಿಸುವದರಿಂದಲೂ, ಅನುವರ್ತಿಸುವದರಿಂದಲೂ ಜನರ ವಿಕಾರವನ್ನು ಕುಂದಿಸುವದೂ, ನಿಜಹಾದಿಯನ್ನು ಹಿಡಿಸುವದು. ೪. ಬಡಬಗ್ಗರಿಗೂ, ಲೋಭಿಗಳಿಗೂ ನಿಸ್ಸಂಶಯವಾಗಿ ವಾಚನಾಲಯವನ್ನು ಉಪಯೋಗಿಸಿಕೊಳ್ಳಲಿಕ್ಕೆ ಅನುಕೂಲವಾಗುವ ಹಾಗೆ ಅದಷ್ಟು ಪ್ರಯತ್ನದಿಂದ ಸಾಗಿಸುವದು. ೫. ಕೇವಲ ಅಭಿಮಾನದಿಂದ ಸಮಾಜದ ಘಟನೆಗೆ ವ್ಯತ್ಯಯವಾಗಿ ರೂಢವಾಗಿರುವ ನಡಾವಳಿಗಳನ್ನೆಲ್ಲ ಕಡೆದು, ಸತ್ಯವಾದವುಗಳನ್ನು ಪ್ರಚಾರದಲ್ಲಿ ತರಲಿಕ್ಕೆ ಪ್ರಯತ್ನಿಸುವದು.

ಸೆಕ್ರೆಟರಿ ವಾಚನಮಂದಿರ ಜಮಖಂಡಿ.

ನೋಟೀಸು.

ಈರಿ ಕೋಮ ಈರಪ್ಪಾ ಹುಲಗೇರಿ ಸಾಕೀನ ಹನಗೋಡಿ ತಾಲ್ಲೂಕು ಹಂಪರ ಇಲಾಖಾ ಮೈಸೂರು ಇಕಿಗೆ.—

ಕೆಳಗೆ ಸಹಿಮಾಡಿದವನು ಈ ನೋಟೀಸು ಕೊಡೋದೇನಂದರೆ — ನೀನು ನನ್ನ ಲಗ್ನದ ಹೆಂಡತಿ ಇದ್ದು ಕೆಲವುದಿವಸ ನೀನೂ ನಾನೂ ಕೂಡಿ ಬಾಳ್ವೆ ಮಾಡಿದೆವು. ಆದರೆ ಈಗ ೨ ವರುಷದ ಕೆಳಗೆ ನಿನ್ನ ವ್ಯಭಿಚಾರದ ರೀತಿ ಕಂಡು ನಿನ್ನನ್ನು ನಮ್ಮ ಮನೆ ಬಿಟ್ಟು ಹೊರಗೆ ಹಾಕಿದೆನು. ಆ ಲಾಗಾಯಿತು ನೀನು ನಿನ್ನ ತವರುಮನೆಯಲ್ಲಿಯೇ ಇರುತ್ತಾ ಬಂದಿರುತ್ತಿ. ಮತ್ತು ನಾನು ನಿನ್ನ ಸಂಪರ್ಕ ಸಹ ಮಾಡಿಲ್ಲ. ಹೀಗಿದ್ದು ನೀನು ಈಗ ೬-೭ ತಿಂಗಳು ವ್ಯಭಿಚಾರದಿಂದ ಗರ್ಭಿಣಿ ಆಗಿದ್ದೀಯಂತ ಸುದ್ದಿ ಬಂದಿರುವದರಿಂದ ಈ ನೋಟೀಸು ಕೊಟ್ಟಿದ್ದೇನೆ. ಈಗ ನೀನು ಹಡಿಯುವ ಶಿಶುವಿಗೆ ನನ್ನ ಹೆಸರು ಜನನಮರಣದ ರಿಜಿಸ್ಟರದಲ್ಲಿ ದಾಖಲಮಾಡಿಸಬಾರದು. ನೀನು ಮತ್ತು ನಿನ್ನ ಹಡೆದ ಕೂಸು ನನ್ನ ಆಸ್ತಿಮೇಲೆ ವ ಮನೆಮೇಲೆ ಯಾವ ತರಹೇದಿಂದಲೂ ಹಕ್ಕು ಇರುವದಿಲ್ಲ. ಇದೇ ನಿನಗೆ ಸೋಡ ಚೀಟಿ ಅಂತ ತಿಳಿಯಬೇಕು ಅಂತ ಬರಕೊಟ್ಟ ಲೇಖಿ ನೋಟೀಸು ಸಹಿ.

ವೀರಪ್ಪ ಬಸಪ್ಪ ಹುಲಗೇರಿ

ತಾ|| ೩-೩-೨೨. ಸಾಕಿನ್ ನಾಗೇನಹಳ್ಳಿ ತಾಲ್ಲೂಕು, ರಾಣಿಬೆನ್ನೂರು.

ನೋಟೀಸು.

ಅರಸೀಕೆರೆ ತಾಲ್ಲೋಕು ಕಣಕಟ್ಟೆ ಹೋಬಳಿ ಹಲ್ಕೂರು ಗ್ರಾಮದಲ್ಲಿರುವ ಸಾಹುಕಾರ್ ಗುರುನಂಜಶೆಟ್ಟರ ಮಗ ಮರುಳಶಿದ್ದಪ್ಪಶೆಟ್ಟಿಯು ಮತ್ತು ಈರಪ್ಪಶೆಟ್ಟರ ಮಗ ಸಾಹುಕಾರ್ ರುದ್ರಪ್ಪಶೆಟ್ಟಿಯೂ ಸಹಾ ತಿಳಿಯಪಡಿಸುವದೇನಂದರೆ.—

ಅರಸೀಕೆರೆ ಕಸಬಾದಲ್ಲಿ "ಹಲ್ಕೂರು ಮರುಳಶಿದ್ದಪ್ಪಶೆಟ್ಟರು" ಎಂಬ ಹೆಸರಿನ ಮೇಲೆ ಮಂಡಿಯಿಟ್ಟು ನಾವುಗಳು ಎರಡು ಜನರು ಮತ್ತು ಅರಸೀಕೆರೆ ತಿಮ್ಮಯ್ಯನವರಮಗ ರಂಗಯ್ಯ ಉರುಫ್ ಪಾಪಯ್ಯನವರು ಸಹಾ ಪಾಲುದಾರರಾಗಿ ರಂಗಯ್ಯ ಉರುಫ್ ಪಾಪಯ್ಯನವರು ಕಾರ್ಯಾಡಳಿತವನ್ನು ನಡಿಸಿಕೊಂಡು ಬಂದ ಈ ಮಂಡಿಯಲ್ಲಿ ನಾವುಗಳು ಪಾಲು ಅಗಲಿಕೆಮಾಡಿಕೊಂಡು ಈ ಮಂಡಿಯಲ್ಲಿ ನಮಗೆ ಉಂಟಾಗಿದ್ದ ಸಮಸ್ತ ಹಕ್ಕು ಬಾಧ್ಯತೆ ಜವಾಬ್‌ದಾರಿಗಳನ್ನು ನಾವುಗಳು 1922 ನೇ ಇಸವಿ ಜನವರಿ 22 ನೇ ಮರ್ಯ್ಯಂ ರಿಜಿಸ್ಟರು ದಸ್ತಾವೇಜು ಮೂಲಕ ಇದೇ ಅರಸೀಕೆರೆ ಗ್ರಾಮದಲ್ಲಿರುವ ಮೇಲ್ಕಂಡ ರಂಗಯ್ಯ ಉರುಫ್ ಪಾಪಯ್ಯನವರು ದುಮ್ಮೇನಹಳ್ಳಿ ಕೃಷ್ಣಪ್ಪನವರ ಮಕ್ಕಳು ಚಲುವೈಯ್ಯನವರು ಕಂಟ್ರಾಕ್ಟರ್ ಕೆಂಚಪ್ಪನವರು ಮತ್ತು ಬಾಣಾವಾರದ ಸಾಹುಕಾರ್ ವಾಣಿಯಲ್ಲಪ್ಪಶೆಟ್ಟರು ಈ ನಾಲ್ಕು ಜನಗಳಿಗೆ ವಹಿಸಿಕೊಟ್ಟಿರುತ್ತೇವೆಯಾಗಿ ಈ ಮೇಲ್ಕಂಡ ನಾಲ್ಕು ಜನಗಳು ಮಂಡಿಯ ಆದಾಯನಷ್ಟಗಳಿಗೂ ಲೇವಾದೇವಿಗಳಿಗೂ ಸಹಾ ಜವಾಬ್‌ದಾರರಾಗಿ ಬಾಧ್ಯಪಟ್ಟಿರುತ್ತಾರೆಂಬ ಅಂಶವನ್ನು ಸರ್ವರಿಗೂ ಈ ಮೂಲಕ ಪ್ರಕಟಪಡಿಸಿದೆ.

(ಸ್ವ) ಹಲ್ಕೂರು ಮರುಳಶಿದ್ದಪ್ಪಶೆಟ್ಟಿ.
ಅರಸೀಕೆರೆ (ಸ್ವ) ಹಲ್ಕೂರು ರುದ್ರಪ್ಪಶೆಟ್ಟಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸಂಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುಸಾಯಕನ ಬೀದಿ, ಮದರಾಸು.



೧೯೨೨ನೆಯ ಇಸವಿ ಮಾರ್ಚಿ ತಾ|| ೧೯ರಿಂದ ೧೯೨೨ನೆಯ ಮಾರ್ಚಿ ತಾ|| ೨೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ ನೆಯ ದುರ್ಮತಿ ನಾಮಸಂವತ್ಸರದ ಫಾಲ್ಗುಣಬಹುಳ ಷಷ್ಠಿಯಿಂದ ಫಾಲ್ಗುಣಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ದಿನ ಮಾಸ
19	ಭಾನು	ಷ-ಉ	0-54-58-7	ಜ್ಯೇಷ್ಠ	58-52	6
20	ಸೋಮ	ಅಷ್ಟ	59-9	ಮೂಲ	60	7
21	ಮಂಗಳ	ನವ	60	ಮೂಲ	1-20	8
22	ಬುಧ	ನವ	1-21	ಪೂಷಾ	4-18	9
23	ಗುರು	ದಶ	4-4	ಉಷಾ	8-28	10
24	[1]ಶುಕ್ರ	ಏಕಾ	7-48	ಶ್ರವ	13-40	11
25	[2]ಶನಿ	ದ್ವಾದ	12-25	ಧನಿ	19-42	12

(1) ಸರ್ವತ್ರೈಕಾದಶಿ, ಹಿಮವದ್ಗೋಪಾಲಸ್ವಾಮಿರಥಃ. (2) ಪ್ರದೋಷಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರಾನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]
[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಮಾರ್ಚಿ ತಾರೀಖು ೨೬ ನೆಯ ಭಾನುವಾರ (ಸಂಚಿಕೆ ೧೩

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಲ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
11 ಮೈಸೂರು.

SREE SITHARAGHAVA
VAIDYASALA

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 39

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೬
ಚಾರುಶೀಲಚರಿತ್ರೆ	೦—
ಹರಿದಾಸಿ	೦—
ವ್ರತಪಂಚಕ	೦—

ವ ಇತರ
ಲಭಿಸುವ
ಸಹಾಯ

ಹೊಸ ಗ್ರಂಥಗಳು ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
8 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿವೂ ಇರುವಂತೆ ಸ್ಫುಟಾಕ್ಷರಾಗಿರುವುದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸರಿ. [illegible]ತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ವಾದುದ[illegible]ಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾದಲಾದ್ ಖರ್ಚು ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
13 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಮಾರ್ಚಿ ತಾ|| ೨೬ ನೆಯ ಭಾನುವಾರ.

ಗತಿಸುತ್ತಿರುವ ಮತ್ತು ಉದಿಸುತ್ತಿರುವ ವರ್ಷಗಳು.

ಇನ್ನು ಮೂರುದಿನಗಳು ತುಂಬಿದರೆ ನಾವು ಕಾಲಚಕ್ರದಲ್ಲಿ ಒಂದು ವರ್ಷವನ್ನು ಕಳೆದು ಮತ್ತೊಂದು ನವವರ್ಷದಲ್ಲಿ ಹೆಜ್ಜೆಯನ್ನಿಡಲಿಕ್ಕಿರುವೆವು. ಗತಿಸುತ್ತಿರುವ ದುರ್ಮತಿ ಸಂವತ್ಸರವು ತನ್ನ ದುಸ್ಸ್ಥಿತಿಯನ್ನು ಬಹುಪರಿಯಾಗಿ ವ್ಯಕ್ತಗೊಳಿಸಿಕೊಂಡಿತು. ದೇಶದಲ್ಲಿ ಮಳೆಬೆಳೆಗಳ ಸ್ಥಿತಿಯೂ ಆಹಾರ್ಯವಸ್ತುಗಳ ಬೆಲೆಯೂ ಪ್ರಜೆಗಳಿಗೆ ಸಂತೋಷಪ್ರದವಾಗಿರಲಿಲ್ಲ. ಪ್ರಜಾಪ್ರಭುಗಳ ಮಧ್ಯದಲ್ಲಿ ಉಂಟಾದ ಪರಸ್ಪರ ಪ್ರಕ್ಷುಬ್ಧಭಾವಗಳು ಹಿಂದೆ ಯಾವಾಗಲೂ ಕಾಣದಿದ್ದಷ್ಟು ಆಗಿದ್ದುವು. ದುರ್ಮತಿ ಸಂವತ್ಸರದಲ್ಲಿ ರಾಜಕೀಯ ವಾತಾವರಣವು ಕಲುಷಿತವಾಗಿದ್ದಷ್ಟು ಮತ್ತಾವ ವರ್ಷದಲ್ಲೂ ಆಗಿರಲಿಲ್ಲ. ಮಹಾಮಹಾ ದೇಶಭಕ್ತರುಗಳು ಮಾತೃಭೂಮಿ ಸೇವೆಯೆಂದು ಆರಂಭಿಸಿದ ಪ್ರಯತ್ನಗಳೆಲ್ಲಾ ರಾಜದ್ರೋಹರೂಪವಾಗಿ ಪ್ರಭುತ್ವದವರಿಗೆ ತೋರಿ ದಂಡಿತರಾಗುವಂತಾದುದು ದುರ್ಮತಿಸಂವತ್ಸರದ ಪ್ರಭಾವವು. ದುರ್ಮತಿ ಸಂವತ್ಸರದಲ್ಲಿ ರಾಜಕೀಯ ಬಂದಿಗಳಾಗಿ ಕಾರಾಗೃಹವನ್ನು ಸೇರಿರುವಷ್ಟು ಜನರು ಹಿಂದೆ ಎಂದೂ ಸೇರಿದುದಿಲ್ಲವೆಂಬುದನ್ನು ಇತಿಹಾಸಜ್ಞರೆಲ್ಲರೂ ಬಲ್ಲರು. ಪ್ರಭುತ್ವವನ್ನು ಪ್ರಜೆಗಳೂ ಪ್ರಜೆಗಳನ್ನು ಪ್ರಭುತ್ವದವರೂ ನಂಬದೆ ವಕ್ರದೃಷ್ಟಿಯಿಂದ ಕಂಡು ಪರಸ್ಪರ ದಮನಕ್ಕೆ ಪ್ರವರ್ತಿಸಿದ ಭೀಕರ ರಂಗವು ದುರ್ಮತಿ ಸಂವತ್ಸರದ ಪ್ರಭಾವವಲ್ಲದೆ ಬೇರೊಂದಲ್ಲ. ಮಲಬಾರಿನಲ್ಲಿ ಪ್ರಜೆಗಳೊಳಗೇ ಪರಸ್ಪರ ಬಡಿದಾಟಗಳೂ ಪ್ರಭುತ್ವದ ಮೇಲೆ ತಿರುಗಿಬಿದ್ದುದೂ, ಅದರಿಂದ ಅನಾಹುತಗಳೂ. ಸಾಮಾನುಬಂಡಿಯಲ್ಲಿ ಮಾಪ್ಳೆಗಳನ್ನು ಕುರಿಗಳಂತೆ ತುಂಬಿ ಕೊಂದುದೂ, ಲೋಕವಿಶ್ರುತ ಸಂಗತಿಗಳಾಗಿ ನಿಂತುವು. ಮ|| ಗಾಂಧಿಯವರಂಥ ಸಾತ್ವಿಕರ ಪ್ರವರ್ತನವು ಕೂಡ ದುಷ್ಟವಾಗಿ ಪ್ರಭುತ್ವದವರಿಗೆ ತೋರಿ ಅನಿರೀಕ್ಷಿತವಾದಷ್ಟು (೬ ವರ್ಷ ಕಾರಾಗೃಹವಾಸ ಶಿಕ್ಷೆ) ವಿಧಿಸಲ್ಪಟ್ಟುದೂ ದುರ್ಮತಿ ಪ್ರಭಾವವಲ್ಲದೆ ಬೇರೊಂದಲ್ಲ. ಪ್ರಮುಖರ ಬಂಧನದಿಂದ ಚಳವಳವು ಶಾಂತವಾಗುವುದೆಂದೂ, ಅದೇ ಶಾಂತಿರಕ್ಷಣೆಗೆ ಸಾಧನವೆಂದೂ ಪ್ರಭುತ್ವದವರು ಭಾವಿಸಿದ್ದರೂ ಬೇರೊಂದು ರೂಪದಲ್ಲಿ ಚಳವಳಿಯು ಚಿಗುರುತ್ತಲೇ ಇರುವುದು ದುರ್ಮತಿ ಸಂವತ್ಸರದ ರಕ್ತಬೀಜಪ್ರಭಾವವು. ವಯೋಜ್ಞಾನವೃದ್ಧರೂ ನ್ಯಾಯಮೂರ್ತಿಗಳೂ ಸತ್ಯಪ್ರಿಯರೂ ಆದ ರೀಡಿಂಗ್ ಪ್ರಭುಗಳು ವೈಸ್ರಾಯರಾಗಿ ಬಂದ ಪ್ರಥಮವರ್ಷದಲ್ಲೇ ಅವರಂಥ ಶಾಂತಮಾರ್ಗ ಪ್ರವರ್ತಕರನ್ನು ಕೂಡ ದಂಡನಮಾರ್ಗಕ್ಕೆ ಪ್ರವರ್ತಿಸಿದಲ್ಲದೆ ನಿರ್ವಾಹವಿಲ್ಲದಂತೆ ಮಾಡಿದುದೂ ಭರತಖಂಡಕ್ಷೇಮಚಿಂತನೆಯನ್ನು ಬಲುಮಟ್ಟಿಗೆ ಮಾಡುತ್ತಿದ್ದ ಮಿ|| ಮಾಂಟೂಗ್‌ರವರ ಮಂತ್ರಿತ್ವವು ಭರತಖಂಡಕ್ಕೆ ತಪ್ಪಿಹೋದುದೂ ದುರ್ಮತಿಮೂರ್ತಿಯ ಪ್ರಭಾವವಲ್ಲದೆ ಮತ್ತೇನು ?

ಇಷ್ಟೆಲ್ಲಾ ದುಸ್ಸಂಗತಿಗಳೊಳಗೆ ಶ್ರೀ ಯುವಸಾರ್ವಭೌಮರು ಈ ದೇಶಕ್ಕೆ ಸಂದರ್ಶನವನ್ನಿತ್ತುದೊಂದು ಮಾತ್ರ ಸ್ಮರಣೀಯವಾದ ಸತ್ಸಂಗತಿಯಾಗಿದ್ದಿತಾದರೂ ಅಸಹಾಯವಾದಿಗಳು ಮತಿಗೆಟ್ಟು ಅವರ ಆಗಮನವನ್ನು ಬಹಿಷ್ಕರಿಸಿ ಹರಿತಾಳವನ್ನಾಚರಿಸಲು ಪ್ರವರ್ತಿಸಿದುದು ಈ ಹಾಳು ದುರ್ಮತಿವರ್ಷದ ಪ್ರಭಾವವೇ ಆಗಿರಬೇಕು. ದೇಶದ ಪ್ರತಿಯೊಂದು ಸರ್ಕಾರಕ್ಕೂ ವೆಚ್ಚಕ್ಕೆ ತಕ್ಕಷ್ಟು ಹಣವು ಹುಟ್ಟದೆ ಗೋಳಿಡುತ್ತಿರುವ ದೌರ್ಭಾಗ್ಯವು ಈ ವರ್ಷದಲ್ಲಿ ಕಾಣಿಸಿಕೊಂಡಿದ್ದಂತೆ ಹಿಂದೆ ಯಾವಾಗಲೂ ಕಾಣಿಸಿಕೊಂಡುದಿಲ್ಲ. ಅದರಿಂದ ದೇಶದ ಪ್ರಜೆಗಳು ಹೊರಲಾಗದಷ್ಟು ತೆರುಗೆಗಳ ಭಾರವನ್ನು ಹೊರಬೇಕಾಗಿ ಬಂದಿರುವುದು ಈ ದುರ್ಮತಿ ಸಂವತ್ಸರದ ಅಂತ್ಯದಲ್ಲೇ. ಹೀಗೆಯೇ ವಿಚಾರಮಾಡುತ್ತಾ ಹೋದರೆ ದುರ್ಮತಿ ಸಂವತ್ಸರದ ಮಾಲಿನ್ಯವು ಬಣ್ಣಬಣ್ಣವಾಗಿ ಹೊರಸೂಸುತ್ತಿರುವುದು. ಯಾವ ತೆರದಲ್ಲೂ ದೇಶಕ್ಕೆ ಈ ವರ್ಷವು ಶುಭಪ್ರದವಾಗಿರಲಿಲ್ಲ. ಆದರೆ ಭಗವತ್ಸಂಕಲ್ಪದಂತೆ ಅಂಥ ವರ್ಷವು ಕೂಡ ಈಗ ಕೊನೆಗಾಣುತ್ತಿರುವುದು. ದುಃಖಸುಖಗಳೂ ರಾತ್ರಿ ಹಗಲುಗಳೂ ಒಂದರಹಿಂದೊಂದು ಪರಿವರ್ತಿಸುತ್ತಿರುವುವು. ಈ ದುಃಖದುಸ್ಥಿತಿಯೇ ಭರತಖಂಡಕ್ಕೆ ಶಾಶ್ವತವಲ್ಲ. ದುಸ್ಸಂಧಿದುಸ್ಸನ್ನಿವೇಶಪ್ರಭಾವದಿಂದ ಈಗ ಉಂಟಾಗಿರುವ ವೈಷಮ್ಯವು ಬೇಗನೆ ತೊಲಗಿಹೋಗುವ ಕಾಲವು ಬಂದೇಬರುವುದು. ಈ ಮುಂದಣ ದುಂದುಭಿ ಸಂವತ್ಸರವು ಅಂಥ ಸತ್ಫಲವನ್ನುಂಟುಮಾಡಿಕೊಟ್ಟ ಕೀರ್ತಿಯನ್ನು ತನ್ನ ಭಾಗಕ್ಕೆ ತಂದುಕೊಳ್ಳುವಂತಾಗಲೆಂದೂ ಆಂಗ್ಲ ಪ್ರಭುತ್ವದ ಸದ್ಧರ್ಮ ದುಂದುಭಿ ನಾದವು ನೂತನ ದುಂದುಭಿ ಸಂವತ್ಸರದಲ್ಲಿ ದಶದಿಕ್ಕುಗಳಿಗೂ ಮೊಳಗುವಂತೆ ಆಗಲೆಂದೂ ಕೋರುವೆವು.

ಮುಂದಣ ದುಂದುಭಿ ವರ್ಷಕ್ಕೆ ನಮ್ಮ ಜ್ಯೋತಿಸ್ಸಿದ್ಧಾಂತದ ಪ್ರಕಾರ ಬುಧನು ರಾಜನಾಗಿಯೂ, ಬೃಹಸ್ಪತಿಯು ಮಂತ್ರಿಯಾಗಿಯೂ, ಸೂರ್ಯನು ಸಸ್ಯಾಧಿಪತಿಯಾಗಿಯೂ, ಶುಕ್ರನು ಧಾನ್ಯಾಧಿಪತಿಯಾಗಿಯೂ, ಬುಧನು ಮೇಘಾಧಿಪತಿಯಾಗಿಯೂ, ಅಂಗಾರಕನು ರಸಾಧಿಪತಿಯಾಗಿಯೂ, ಬುಧನು ಅರ್ಘಾಧಿಪತಿಯಾಗಿಯೂ ಸೇನಾಧಿಪತಿಯಾಗಿಯೂ, ಬಲರಾಮನು ಪಶುನಾಯಕನಾಗಿಯೂ ಇರುವರು. ಹೀಗೆ ಶುಭಗ್ರಹಗಳಿಗೇ ವಿಶೇಷಾಧಿಪತ್ಯವು ಮುಂದಣ ವರ್ಷದಲ್ಲಿ ಬಂದಿರುವ ಕಾರಣ ಶುಭಫಲವೇ ವಿಶೇಷವಾಗಿದ್ದೀತೆಂದು ಹೇಳಬಹುದು. ನೂತನ ವರ್ಷವು ದೇಶಕ್ಕೆ ಸುಖಶಾಂತಿಪ್ರದವಾಗಿ ನಮ್ಮ ಪತ್ರಿಕಾ ವಾಚಕವರ್ಗಕ್ಕೆ ಕಲ್ಯಾಣಪ್ರದವಾಗುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಕೋರುವೆವು.

ಶ್ರೀ ಯುವಸಾರ್ವಭೌಮರು ಭರತಖಂಡದಿಂದ ಬೀಳ್ಕೊಂಡರು.

ನಾಲ್ಕುತಿಂಗಳ ಕಾಲ ಭರತಖಂಡದಲ್ಲಿ ಸಂಚರಿಸುತ್ತ ತಮ್ಮ ನಡೆನುಡಿಗಳಿಂದಲೂ ಗಾಢವಿಶ್ವಾಸದಿಂದಲೂ ದೇಶೀಯರ ಚಿತ್ತವನ್ನೆಲ್ಲಾ ಆಕರ್ಷಿಸಿದ ಶ್ರೀ ಯುವಸಾರ್ವಭೌಮರು ಕಳೆದ ತಾ|| ೧೭ರಲ್ಲಿ ಕರಾಚಿ ರೇವೆಯಲ್ಲಿ ಸಪರಿವಾರರಾಗಿ ರಿನೌನ್ ಎಂಬ ಹಡಗನ್ನೇರಿ ಪ್ರಯಾಣವನ್ನು ಬೆಳೆಯಿಸಿದರು. ಸಿಲೋನ್ ಮಾರ್ಗವಾಗಿ ಇವರು ಜಪಾನಿಗೆ ದಯಮಾಡಿಸಿ ಅಲ್ಲಿಂದ ಸ್ವದೇಶಕ್ಕೆ ಸೇರುವರು. ಈ ದೇಶದ ಸಂಚರಣಕಾಲವು ಇವರಿಗೆ ಸರ್ವವಿಧದಲ್ಲಿಯೂ ಸುಖಾರೋಗ್ಯಪ್ರದವಾಗಿರುವಂತೆ ಜಗದೀಶ್ವರನು ಅನುಗ್ರಹಿಸಿದುದಕ್ಕಾಗಿ ಸಂತೋಷಿಸುವೆವು. ಇವರ ಪ್ರತ್ಯಕ್ಷಸಂದರ್ಶನ ಸಂಭಾಷಣಂಗಳಿಂದ ಭವಿಷ್ಯಚ್ಚಕ್ರವರ್ತಿತ್ವಕ್ಕೆ ಅರ್ಹವಾದ ಧೀರೋದಾತ್ತಗುಣಗಳು ಎಷ್ಟುಮಟ್ಟಿಗೆ ಇವರಲ್ಲಿ ಪೂರ್ಣವಾಗಿರುವುವೆಂಬುದು ಭರತಖಂಡಕ್ಕೆ ವ್ಯಕ್ತವಾಯಿತು. ಇವರು ಈ ದೇಶವನ್ನು ಬಿಡುವಾಗ್ಗೆ ವೈಸ್ರಾಯರಿಗೆ ಕಳುಹಿಸಿಕೊಟ್ಟಿರುವ ತಂತ್ರೀವಾರ್ತೆಯಲ್ಲಿ ಈ ದೇಶದ ಪ್ರಜೆಗಳೂ ಸಂಸ್ಥಾನಿಕರೂ ತಮ್ಮ ವಿಷಯದಲ್ಲಿ ತೋರಿಸಿದ ಪ್ರೀತಿವಿಶ್ವಾಸಗಳಿಗಾಗಿ ವಿಶೇಷವಾಗಿ ಮೆಚ್ಚಿಕೊಂಡಿರುವುದಲ್ಲದೆ ಮುಂದಣ ವರ್ಷದಲ್ಲಿ ಮತ್ತೊಂದುಸಲ ಈ ದೇಶವನ್ನು ಸಂದರ್ಶಿಸುವ ಕುತೂಹಲವು ತಮಗಿರುವುದೆಂಬುದನ್ನು ಕೂಡ ವ್ಯಕ್ತಪಡಿಸಿರುವುದನ್ನು ನೋಡಿದರೆ ಈ ದೇಶವು ಅವರ ಚಿತ್ತವನ್ನು ಎಷ್ಟುಮಟ್ಟಿಗೆ ಆಕರ್ಷಿಸಿರುವುದು; ಅವರು ಈ ದೇಶದಮೇಲೆ ಎಷ್ಟು ಮಮತೆಯನ್ನಿಟ್ಟಿರುವರು ಎಂಬುದು ಸ್ಪಷ್ಟವಾಗಿರುತ್ತದೆ. ಈ ಭಾವವು ಭರತಖಂಡದ ಭಾವಿಶ್ರೇಯಸ್ಸಿಗೆ ಸಾಧಕವಾಗಿ ಪರಿಣಮಿಸದೆ ಹೋಗಲಾರದು. ಹಿತಪರಿಣಾಮಿಯಾದ ರಾಜಸಂದೇಶವನ್ನು ತರುವ ದೇವದೂತರಾಗಿ ಮುಂದಣ ವರ್ಷದಲ್ಲಿ ಮತ್ತೊಮ್ಮೆ ನಮ್ಮ ದೇಶಕ್ಕೆ ಇವರು ದಯಮಾಡಿಸುವುದಾದರೆ ಭರತಖಂಡವು ತನ್ನ ಸಹಸ್ರ ಹಸ್ತಂಗಳಿಂದಲೂ ಕರಾಸ್ಫಂದನವನ್ನಿತ್ತು ಸ್ವಾಗತಿಸಲು ಸಿದ್ಧವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಯುವಸಾರ್ವಭೌಮರಿಗೆ ಜಗದೀಶನು ಸರ್ವ ಸನ್ಮಂಗಳವನ್ನುಂಟುಮಾಡಲಿ.

THE MYSORE FINANCES.

The one subject of grave consideration just now with our Government and the people alike is the distressing financial situation we are confronted with We expressed our general views on it a fortnight ago, and we are every day in the expectation of the practical proposals of the new Finance Committee. This Committee has already been in deep deliberation for nearly two months and the public is at a loss to know what it is doing. This is one of those urgent matters in which it behoves the Committee and the Government to keep the public informed of the progress made from week to week if not at even shorter intervals. It is essential for the public to know the broad lines at least on which it is working, as it would give an opportunity to make suggestions for a speedier progress. We want to have the proof that it is really working vigourously and effectively. As we pointed out before, the result must be "immediate" and "effective."

We see in the Civil List a dozen Probationary Assistant Commissioners without fixed work. Is this not the time to take work from these young men instead of treating them as scholarship holders on Rs. 200 a month to pass departmental examinations and tests? They can study and at the same time do such work as their qualifications justify. Those who have passed the Account Examination can be Treasury Assistant Commissioners, and those who have got through the Criminal Examination can be Special Second Grade Magistrates, or heads of minor Revenue Sub-Divisions. In this way all of them can come in to help the Government in effecting immediate savings. Instead, we see them not being entrusted with any responsible work whatever. The Comptroller's Office is one of those unlimitedly elastic department, which takes in any number of Assistant Commissioners. It is shocking to see the large number of them on still more shocking higher grades. Fancy one getting Rs. 600 + two allowances and another Rs. 400 + one allowance and a third with a series of allowances.

There seems to be no reason for so many high-paid officers burdening the department with extravagance. Officers getting allowances of different denominations appear to be in this department next to that of the Economic or Development Branch. These are items for immediate attention.

From the large number of officers working at the Head-Quarter Offices like the Secretariat and the Comptroller's, it looks that a faulty or unnecessary system is at work. The system or form should therefore be remodled. The form of administration under the cloak of "efficiency" has much to do with the large number of hands either as officers or as officials at work. Simplify the system as in the Judicial Department, half of these men might go.

There was a time for growing—every month saw increase in establishment. The cry was for more hands. The forms increased, correspondence multiplied, with which typing, recording and registering also increased. As taste in dressing and toileting and other fashions of civilization increased, so did official work increase. Cases (in form) were made out for increase of staff—though not in substance. And we are here to-day in a frightful condition.

The defect appears to us to be in the form of administration. There are the Banks and Business Firms working with less number of hands and at the same time more efficiently. But administration dealing with no man's money is considered as no business of anyone. Hence delicacies in form and in appearancec crept into the administration with the advent of ministers whose aim was firstly self and secondly ambition. To guard these two interests, intricate forms were necessary. The system is thus the primary cause of heavy expenditure. We hope that the Finance Commmittee would in its last stages consider this aspect of retrenchment—retrenchment of work and form. This requires a deaper and closer examination. If it is taken at first, we fear that immediate savings could not be shown. We earnestly hope to see that our finances when disclosed in our budget will not expose that gloomy picture which one sees all round in the British Indian Provinces. Every one is looking forward to know that the efforts of the Finance Committee will result in satisfactory savings.

ಒಳದೇಶದ ವೃತ್ತಾಂತಗಳು.

ಈಗ ಬೆಂಗಳೂರಲ್ಲಿರುವ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನವೂ ಶ್ರೀಮದ್ಯುವರಾಜರೂ ಯುಗಾದಿ ಹಬ್ಬದುದ್ದೇಶದಿಂದ ಈ ದಿವಸ ರಾಜಧಾನಿಗೆ ಚಿತ್ತೈಸಿ ಹಬ್ಬವಾದ ನಂತರ ಉದಕಮಂಡಲಕ್ಕೆ ದಯಮಾಡಿಸುವುದಾಗಿ ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ದಿವಾನ್ ಸರ್ ಎಂ. ಕಾಂತರಾಜ ಅರಸ್, ಕೆ. ಸಿ. ಐ. ಇ., ಸಿ. ಎಸ್. ಐ., ಯವರಿಗೆ ೧೯೨೨ನೆಯ ಮಾರ್ಚಿ ತಾ|| ೬ ರಿಂದ ಒಂದು ತಿಂಗಳು ಮತ್ತು ೨೪ ದಿನಗಳವರೆಗೆ ಪ್ರಿವಿಲೆಜ್ ರಜವನ್ನು ದಯಪಾಲಿಸಿ ಒಂದನೆಯ ಕೌನ್ಸಿಲರಾದ ಮ|| ಎ. ಆರ್. ಬಾನರ್ಜಿ, ಸಿ. ಎಸ್. ಐ., ಸಿ. ಐ. ಇ., ಐ. ಸಿ. ಎಸ್., ರವರನ್ನು ಮೇಲ್ಕಂಡವಧಿಯವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಅಫಿಷಿಯೇಟಿಂಗ್ ದಿವಾನರನ್ನಾಗಿ ನೇಮಕ ಮಾಡಿರುತ್ತಾರೆ.

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾಗಿದ್ದ ಮಿ|| ಆರ್. ಎಚ್. ಕ್ಯಾಂಬೆಲ್, ಸಿ. ಐ. ಇ., ಯವರು ೧೯೨೨ ನೆಯ ಫೆಬ್ರುವರಿ ತಾ|| ೧೮ ರಿಂದ ರಜವನ್ನು ಪಡೆದುಕೊಂಡಿರುವುದರಿಂದ ಹುಜೂರು ಸೆಕ್ರೆಟರಿಯವರಾದ ಅಮೀನ್-ಉಲ್-ಮುಲ್ಕ್ ಮಿರ್ಜಾ ಎಂ. ಇಸ್ಮಾಯಿಲ್ ಬಿ. ಎ., ರವರು ಆಕ್ಟಿಂಗ್ ಪ್ರೈವೆಟ್ ಸೆಕ್ರೆಟರಿಗಳಾಗಿಯೂ, ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮ|| ಟಿ. ತಂಬೂಸೆಟ್ಟಿ ಬಿ. ಎ., ಯವರು ಆಕ್ಟಿಂಗ್ ಹುಜೂರು ಸೆಕ್ರೆಟರಿಗಳಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಜದಮೇಲೆ ಸೀಮೆಗೆ ಪ್ರಯಾಣಮಾಡಿದ ಮಿ|| ಕ್ಯಾಂಬೆಲ್ ದಂಪತಿಗಳನ್ನು ಅವರ ರಾಜಧಾನಿಯ ಮಿತ್ರರು ಕಳೆದ ತಾ|| ೨೦ ರ ಸಾಯಂಕಾಲ ಅವರ ಬಂಗಲೆಯಲ್ಲಿ ಆಟಪಾಟ ವಿನೋದಗಳಿಂದಲೂ ಅಲ್ಪಾಹಾರದಿಂದಲೂ ಸತ್ಕರಿಸಿ ಅವರುಗಳ ಮೇಲೆ ತಮ್ಮಗಳಿಗಿರುವ ಪ್ರೀತಿವಿಶ್ವಾಸವನ್ನು ಪ್ರದರ್ಶಿಸಿದರು. ಮಿ|| ಕ್ಯಾಂಬೆಲ್‌ರವರು ತಮ್ಮನ್ನು ಸತ್ಕರಿಸಿದವರನ್ನು ವಂದಿಸುವ ಸಂದರ್ಭದಲ್ಲಿ ತಾವು ದಂಪತಿಗಳು ಇನ್ನು ೮ ತಿಂಗಳ ಅನ[illegible]ರ ಈ ನಗರಕ್ಕೆ ಬರುವ ಕುತೂಹಲವುಳ್ಳವರಾಗಿದ್ದೇವೆಂದು [illegible]ಳಿಸಿದರು.

ರಾಜ[illegible]ನಿಯ ಕುರುಡ ಮೂಕ ಕಿವುಡರ ಪಾಠಶಾಲೆಯಲ್ಲಿ ಸಂಗೀತ ವಿದ್ಯೆಯನ್ನು [illegible]ಲಿಯುತ್ತಿದ್ದ ಯಡತೊರೆ ತಾ|| ಕರ[illegible]ಳು ಗ್ರಾಮದ ೧೨ ವರ್ಷ ವಯಸ್ಸಿನ ಕುರುಡ ಹುಡುಗನು ಕಳೆದ ತಾ|| ೧೭ರ ರಾತ್ರಿ ಇತರ ವಿದ್ಯಾರ್ಥಿಗಳೊ ನೆ ಮಲಗಿಕೊಂಡು ನಿದ್ದೆಹೋಗುತ್ತಿರುವಾಗ್ಗೆ ಒಂದು ಸರ್ಪ ಹೇಗೋ ಬಂದು ಆ ಹುಡುಗನನ್ನು ಕಚ್ಚಿತು. ಆ ಹುಡುಗ ನೋವಿನಿಂದ ಎಚ್ಚತ್ತು ಕೂಗಿಕೊಂಡನು. ಕೂಡಲೆ ಇತ ರೆದ್ದು ಹುಡುಕುವಲ್ಲಿ ಕಣ್ಣಿಗೆ ಬಿದ್ದ ಆ ಹಾವನ್ನು ಕೊಂದು ಹಾಕಿದರು. ಆ ಹುಡುಗನನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿದಾಗ್ಯೂ ಗುಣವನ್ನು ಹೊಂದದೆ ಸತ್ತುಹೋದನು.

ಚನ್ನರಾಯಪಟ್ಟಣ ತಾ|| ಬಾಗೂರಿನಲ್ಲಿ ಒಕ್ಕಲಿಗ ಮಹಾಜನರ ಸಭೆಯು ಚೀಫ್ ಕೋರ್ಟಿನಲ್ಲಿ ಡಿಪ್ಯುಟಿ ರಿಜಿಸ್ಟ್ರಾರಾಗಿದ್ದು ನಿವೃತ್ತರಾಗಿರುವ ಮ|| ಎಂ. ಎಲ್. ಶಾಮೇಗೌಡರ ಅಧ್ಯಕ್ಷತೆಯಲ್ಲಿ ಈ ಮಾರ್ಚಿ ತಾ|| ೧೯ ಮತ್ತು ೨೦ರಲ್ಲಿ ನಡೆದಿತು. ಬೆಂಗಳೂರಿಂದ ಬ್ಯಾರಿಸ್ಟರ್ ಮ|| ಕೆ. ಎಚ್. ರಾಮಯ್ಯನವರು ಮೊದಲಾದವರೂ ಮೈಸೂರಿನಿಂದ ಅಡ್ವೋಕೇಟ್ ಮ|| ಎಚ್. ಸಿ. ದಾಸಪ್ಪನವರು, ಮ|| ಎಂ. ಪುಟ್ಟಸಂಜಪ್ಪನವರು ಮೊದಲಾದ ಒಕ್ಕಲಿಗ ದೊಡ್ಡಮನುಷ್ಯರೂ ಶ್ರವಣಬೆಳಗೊಳದಿಂದ ಸಾಹುಕಾರ್ ಪದ್ಮರಾಜಯ್ಯನವರೂ ದಯಮಾಡಿಸಿದ್ದರು. ಸಭೆಯಲ್ಲಿ ಒಟ್ಟು ೪೦೦೦ ಜನರವರೆಗೆ ಸೇರಿದ್ದಿತು. ಅಧ್ಯಕ್ಷರು, ಮ|| ಕೆ. ಎಚ್. ರಾಮಯ್ಯನವರು, ದಾಸಪ್ಪನವರು ಮತ್ತೆ ಕೆಲರು ಒಕ್ಕಲಿಗರು ವಿದ್ಯಾವಂತರಾಗಿ ಒಕ್ಕಟ್ಟಿನಿಂದ ನಡೆದು ಅಭಿವೃದ್ಧಿಗೆ ಬರಲು ಮಾಡಬೇಕಾದ ಉಪಾಯಗಳನ್ನು ಕುರಿತು ಕಾಲೋಚಿತವಾದ ಹಿತೋಪದೇಶಗಳನ್ನು ಮಾಡಿದರು. ತರುವಾಯ ಒಕ್ಕಲಿಗ ವಿದ್ಯಾಭಿವೃದ್ಧಿ ಫಂಡಿಗೆ ಹಣವನ್ನೆತ್ತಲುಪಕ್ರಮವಾಗಿ ಆ ಕೂಡಲೆ ೧೪೦೦ ರೂ. ಕೊಡಲ್ಪಟ್ಟಿತಲ್ಲದೆ ೧೨೦೦ ರೂ. ಕೊಡಲ್ಪಡುವುದಾಗಿ ವಾಗ್ದಾನವಾಯಿತೆಂದು ಕೇಳುತ್ತೇವೆ. ಇದೇ ರೀತಿಯಾಗಿ ಒಕ್ಕಲಿಗ ಪ್ರಮುಖ ವಿದ್ಯಾವಂತರು ತಮ್ಮ ಮಂಡಲಿಯು ಹೆಚ್ಚಾಗಿರುವ ಕಡೆ ಸಭೆಯನ್ನು ಮಾಡಿ ಜನರಿಗೆ ಹಿತಬೋಧೆಯನ್ನು ಮಾಡುತಬಂದಲ್ಲಿ ಅವರ ಜನಾಂಗವು ಕೂಡಲೆ ಅಭಿವೃದ್ಧಿಗೆ ಬರಲು ಅಭ್ಯಂತರವಿಲ್ಲವು.

ಮ|| ಗಾಂಧಿಯವರು ವಿಚಾರಣೆಯ ಕಾಲದಲ್ಲಿ ತಮ್ಮ ಹೇಳಿಕೆಯನ್ನು ಬರೆದು ಕೋರ್ಟಿಗೊಪ್ಪಿಸಿದುದು.

ರಾಜಭಕ್ತನು ರಾಜದ್ರೋಹಿಯಾದುದು.

ಪರಮರಾಜಭಕ್ತನಾಗಿದ್ದ ನಾನು ಪ್ರಭುತ್ವದಲ್ಲಿ ಅನುರಾಗವಿಲ್ಲದವನಾಗಿಯೂ, ಸಹಾಯ ನಿರಾಕರಣವಾದಿಯಾಗಿಯೂ ಮಾರ್ಪಡಲು ಕಾರಣವನ್ನು ನನ್ನ ದೇಶಬಾಂಧವರಿಗೂ, ನನ್ನ ಮೇಲೆ ಈ ಅಭಿಯೋಗವನ್ನು ನಡಿಸಲು ಯಾರು ಸಂತೋಷಪಟ್ಟುಕೊಂಡಿರುವರೋ ಅಂತಹ ಆಂಗ್ಲದೇಶೀಯರಿಗೂ ತಿಳಿಸಬೇಕಾಗಿದೆ. ಭರತಖಂಡದಲ್ಲಿ ನ್ಯಾಯಶಾಸ್ತ್ರಾನುಸಾರವಾಗಿ ಏರ್ಪಟ್ಟಿರುವ ಪ್ರಭುತ್ವದಲ್ಲಿ ಅವಿಶ್ವಾಸವನ್ನು ಅಭಿವೃದ್ಧಿಗೊಳಿಸುತ್ತಿರುವೆನೆಂಬ ಅಪರಾಧವನ್ನು ನಾನು ಮಾಡಿದುದುಂಟೆಂದೊಪ್ಪಿಕೊಳ್ಳಬೇಕಾದ ಕಾರಣವನ್ನು ನ್ಯಾಯಸ್ಥಾನಾಧಿಪತಿಗಳಿಗೂ ಕೂಡ ತಿಳಿಸಬೇಕಾಗಿದೆ.

ದಕ್ಷಿಣಾಫ್ರಿಕಾ ದೇಶದ ಪರಿಸ್ಥಿತಿಯು ಬಹಳ ವಿಷಮವಾಗಿದ್ದ ತರುಣದಲ್ಲಿ ಅಂದರೆ 1893ರಲ್ಲಿ ನಾನು ಅಲ್ಲಿಯ ಪ್ರಜಾಸೇವೆಗೆ ಆರಂಭಿಸಿದೆನು. ಮಟ್ಟಮೊದಲು ಆ ದೇಶದ ಬ್ರಿಟಿಷ್ ಅಧಿಕಾರಿಗಳ ಕೂಡ ನನ್ನ ಸಹಚರ್ಯವು ಅನುಕೂಲವಾಗಿ ಪರಿಣಮಿಸಲಿಲ್ಲವು. ಮನುಷ್ಯನಾಗಿಯೂ, ಭಾರತೀಯನಾಗಿಯೂ ನನಗಿರಬೇಕಾದ ಬಾಧ್ಯತೆಯಾವುದೂ ನನಗಿಲ್ಲವೆಂದು ಆಗ ನಾನು ಗ್ರಹಿಸಿದೆನು. ಇಷ್ಟೇ ಅಲ್ಲದೆ ನಾನು ಭರತಖಂಡದಲ್ಲಿ ಜನಿಸಿದುದರಿಂದ ಮಾತ್ರ ಮನುಷ್ಯನಿಗೆ ಸಹಜವಾಗಿರಬೇಕಾದ ಸ್ವಾತಂತ್ರ್ಯವು ಕೂಡ ನನಗೆ ಇಲ್ಲದಂತಾಯಿತಲ್ಲ ಎಂದು ನಾನು ಗ್ರಹಿಸಿದೆನಾದರೂ ಅಷ್ಟು ಮಾತ್ರಕ್ಕೆ ಭಗ್ನ ಮನೋರಥನಾಗಲಿಲ್ಲವು. ಬ್ರಿಟಿಷ್ ಪ್ರಭುತ್ವವಿಧಾನವು ಸಹಜವಾಗಿಯೂ ಸಾಂಗವಾಗಿಯೂ ಉತ್ತಮವಾದುದೆಂದೂ ದಕ್ಷಿಣಾಫ್ರಿಕಾದಲ್ಲಿ ಮಾತ್ರ ಆ ವಿಧಾನಕ್ಕೆ ವಕ್ರಿಕತ್ವವುಂಟಾಗಿದೆಯೆಂದೂ ನಾನು ಭಾವಿಸಿದೆನು. ಪ್ರಭುತ್ವಹಿತಾಪೇಕ್ಷೆಯಿಂದ ಅಪ್ರಾರ್ಥಿತನಾಗಿಯೂ, ಮನಃಪೂರ್ವಕವಾಗಿಯೂ ಸಹಕಾರಿಯಾಗಿ ನಿಂತೆನಲ್ಲದೆ ಅದರ ವಿನಾಶವನ್ನು ಎಂದೂ ಕೋರದೆ ಅದರಭಿವೃದ್ಧಿಯ ಕಾಂಕ್ಷೆಯಿಂದ ನನಗೆ ದೋಷವೆಂದು ತೋರಿದ ವಿಷಯಗಳನ್ನೆಲ್ಲಾ ಉದ್ಘಾಟಿಸಿ ಪ್ರಕಟಿಸಿದೆನು.

ಸರ್ಕಾರಕ್ಕೆ ನಾನು ಮಾಡಿದಸೇವೆ.

1899ನೆಯ ಇಸವಿಯಲ್ಲಿ ಬೋಯರು ಬ್ರಿಟಿಷ್ ಪ್ರಭುತ್ವದವರ ಮೇಲೆ ಯುದ್ಧಕ್ಕೆ ಸನ್ನದ್ಧರಾದಾಗ ನಾನು ಪ್ರಭುತ್ವಸೇವೆಯನ್ನು ಮಾಡುತ್ತೇನೆಂದು ತಿಳಿಸಿ ವೈದ್ಯಸಹಾಯಕ್ಕೆಚ್ಛಕದಳವನ್ನು ಸಿದ್ಧಪಡಿಸಿ ಲೇಡಿಸ್ಮಿತ್ ಪಟ್ಟಣವನ್ನು ಬಿಡಿಸಿಕೊಳ್ಳಲು ನಡೆದ ಅನೇಕ ಯುದ್ಧ ಪ್ರಕರಣದಲ್ಲಿ ಸಹಾಯಮಾಡಿದೆನು. 1906 ರಲ್ಲಿ ಜೂಲೂ ಜನರು ತಿರುಗಿ ಬಿದ್ದಾಗ ಕೂಡ ಗಾಯವಡೆದವರನ್ನು ಸಾಗಿಸಿಕೊಂಡು ಹೋಗಲು ಡೋಲಿಯನ್ನು ಹೊರುವ ಜನರ ದಳವನ್ನು ಏರ್ಪಡಿಸಿ ದಂಗೆಯು ನಿಲ್ಲುವವರೆಗೂ ಸಹಾಯಮಾಡಿದೆನು. ಆ ಎರಡು ಸಂದರ್ಭದಲ್ಲೂ ನಾನು ಮಾಡಿದ ಸಾಹಾಯ್ಯವು ಅಭಿನಂದಿಸಲ್ಪಟ್ಟು ನನಗೆ ಬಹುಮಾನ ಪದಕವು ಕೊಡಲ್ಪಟ್ಟುದಲ್ಲದೆ ಬ್ರಿಟಿಷ್ ಪ್ರಭುತ್ವದವರಿಗೆ ಬರೆದ ಲೇಖನದಲ್ಲಿ ಕೂಡ ನನ್ನ ಸಹಾಯವು ಪ್ರಶಂಸಿ ಬರೆಯಲ್ಪಟ್ಟಿದ್ದಿತು. ದಕ್ಷಿಣಾಫ್ರಿಕಾದಲ್ಲಿ ನಾನು ಮಾಡಿದ ಸಾಹಾಯ್ಯಕ್ಕಾಗಿ ಹಾರ್ಡಿಂಜ್ ಪ್ರಭುಗಳು ನನಗೆ ಕೇಸರಿಹಿಂದ್ ಸುವರ್ಣಪದಕವನ್ನು ಸಹ ಕೊಟ್ಟರು. 1914ರಲ್ಲಿ ಜರ್ಮನಿ ಯುದ್ಧವು ಪ್ರಾರಂಭವಾದಾಗ ನಾನು ಆಂಗ್ಲದೇಶದಲ್ಲಿದ್ದೆನು. ಆಗ ಲಂಡನ್ನಿನಲ್ಲಿದ್ದ ಭಾರತೀಯರನ್ನು ಮುಖ್ಯವಾಗಿ ವಿದ್ಯಾರ್ಥಿಗಳನ್ನು ವೈದ್ಯ ಸಹಾಯಕ್ಕೆಚ್ಛಕದಳವನ್ನಾಗಿ ಏರ್ಪಡಿಸಿದೆನು. ಆ ದಳವು ಮಾಡಿದ ಘನತರವಾದ ಸಾಹಾಯ್ಯವನ್ನು ಆಗಿನ ಸೈನ್ಯಾಧಿಕಾರಿಯು ಪ್ರಶಂಸಿಸಿದನು. ಆ ಯುದ್ಧವು ನಡೆಯುತ್ತಿರುವಾಗಲೇ ನಾನು ಭರತಖಂಡಕ್ಕೆ ಬಂದುಬಿಟ್ಟೆನು. ಆ ಮೇಲೆ 1917ರಲ್ಲಿ ಡಿಲ್ಲಿ ಪಟ್ಟಣದಲ್ಲಿ ಜರುಗಿದ ಯುದ್ಧ ಸಭೆಯಲ್ಲಿ ವೈಸ್‌ರಾಯಿ ಚೆಂಸ್‌ಫರ್ಡ್ ಪ್ರಭುಗಳು ಭಾರತದಳವನ್ನೇರ್ಪಡಿಸಬೇಕೆಂದು ಕೋರಿದಾಗ್ಗೆ ನಾನು ಅಸ್ವಸ್ಥನಾಗಿದ್ದರೂ ಕೂಡ ಲೆಖ್ಖಿಸದೆ ಈ ದೇಶದಲ್ಲಿ ಒಂದು ದಳವನ್ನೇರ್ಪಡಿಸಲು ಬಹಳ ಪ್ರಯತ್ನಪಟ್ಟೆನು. ಅನೇಕ ಮಂದಿ ಬಂದು ಸೇರಿದರು. ಆದರೆ ಅಷ್ಟರಲ್ಲಿ ಯುದ್ಧವು ಪೂರೈಸಿದುದರಿಂದ ಆ ದಳದ ಅವಶ್ಯಕತೆಯು ಬೀಳಲಿಲ್ಲವು. ಬ್ರಿಟಿಷ್ ಸಾಮ್ರಾಜ್ಯಕ್ಕೊಳಪಟ್ಟಿರುವ ಇತರ ದೇಶಗಳ ಸಮಾನವಾಗಿ ಸ್ವಾತಂತ್ರ್ಯ ಗೌರವವು ಭರತಖಂಡಕ್ಕೂ ಲಭಿಸುವುದೆಂಬ ನಂಬುಗೆಯಿಂದಲೇ ನಾನು ಈ ರೀತಿಯಾಗಿ ಪ್ರಭುತ್ವಕ್ಕೆ ಸಹಾಯಮಾಡಿದುದಾಗಿದೆ.

ಆಶಾಭಂಗ ಪರಂಪರೆಯು.

ಇವುಗಳಲ್ಲಿ ರೌಲಟ್ ಆಕ್ಟು ಮಟ್ಟಮೊದಲನೆಯದಾಗಿದೆ. ಪ್ರಜೆಗಳಿಗಿರುವ ಯಥಾರ್ಥವಾದ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ತಪ್ಪಿಸುವುದಕ್ಕೋಸ್ಕರ ಈ ರೌಲಟ್ ಆಕ್ಟು ನಿರ್ಮಿಸಲ್ಪಟ್ಟುದಾಗಿದೆ. ಆದಕಾರಣ ಅದರ ಪ್ರತಿಕೂಲವಾಗಿ ಕೂಡಲೆ ಆಂದೋಳನವನ್ನು ನಡಿಸುವುದು ಆವಶ್ಯಕವಿಧಿಯೆಂದು ನಾನು ನಿಶ್ಚಯಿಸಿದೆನು. ಅಷ್ಟರಲ್ಲಿಯೇ ಜಲಿಯನ್‌ವಾಲಾಬಾಗ್ ಸಂಘಸಂಹಾರಕ್ರಿಯೆಯು ಪ್ರಾರಂಭವಾಗಿ ತೆವಳಿಕೊಂಡು ಹೋಗುವುದು ನಡುವೀದಿಯಲ್ಲಿ ಕೊರಡಾದಿಂದ ಹೊಡೆಸಿಕೊಳ್ಳುವುದು ಮೊದಲಾಗಿ ವರ್ಣಿಸಲಾಗದಷ್ಟು ಪರಾಭವಕೃತ್ಯಗಳಿಂದ ಕೊನೆಗೊಂಡ ಪಂಜಾಬು ದೌರ್ಜನ್ಯಗಳು ನಡೆದುವು. ಮಹಮ್ಮದೀಯರ ಪುಣ್ಯಕ್ಷೇತ್ರವು ಕಾಪಾಡಲ್ಪಡುವುದಕ್ಕಾಗಿ ತುರ್ಕಿ ಸಂಧಿ ಮೊದಲಾದವಿಷಯವನ್ನು ಕುರಿತು ಪ್ರಧಾನ ಮಂತ್ರಿಯು ಭರತಖಂಡದ ಮಹಮ್ಮದೀಯರಿಗೆ ಕೊಟ್ಟ ವಾಗ್ದಾನವನ್ನು ನೆರವೇರಿಸುವುದು ಕೂಡ ಅಸಂಭವವೆಂದು ನಾನು ಆಗಲೇ ತಿಳಿದೆನು.

ಪ್ರಭುತ್ವಸಹಾಯವನ್ನು ಕೋರಲು ಇನ್ನು ಪ್ರಯತ್ನಿಸುವುದುಂಟೇ?

ಇಂತಹ ನಿದರ್ಶನಗಳೆಷ್ಟೋ ಆಗಿದ್ದರೂ ಮತ್ತು ನನ್ನ ಮಿತ್ರರು ನನ್ನನ್ನು ಬಹಳವಾಗಿ ಎಚ್ಚರಿಸಿದ್ದರೂ ಕೂಡ 1919 ರಲ್ಲಿ ಅಮೃತಸರದಲ್ಲಿ ಕಾಂಗ್ರೆಸು ಸಭೆಯು ನಡೆದಾಗ್ಗೆ ಮಾಂಟಿಗೂ—ಚೆಮ್ಸ್‌ಫರ್ಡ್ ಸಂಸ್ಕರಣವ (ಸುಧಾರಣೆಯ)ನ್ನು ನೆರವೇರಿಸುವಲ್ಲಿ ದೇಶೀಯರಿಗೆ ಸಹಾಯಮಾಡಬೇಕೆಂದು ನಾನು ವಾದಿಸಿದೆನು. ಆರೀತಿ ಮಾಡುವುದರಿಂದ ಪ್ರಧಾನ ಮಂತ್ರಿಯು ಮಹಮ್ಮದೀಯರಿಗೆ ಮಾಡಿದ ವಾಗ್ದಾನವು ನೆರವೇರಿಸಲ್ಪಡುವುದೆಂದೂ, ಪಂಜಾಬು ಮನೋವ್ರಣವು ಮಾಯಿಸಲ್ಪಡುವುದೆಂದೂ ರಾಜ್ಯಾಂಗಸಂಸ್ಕರಣವು (ಸುಧಾರಣೆಯು) ಅಲ್ಪವಾಗಿ ಮತ್ತು ಅತೃಪ್ತಿಕರವಾಗಿ ಇದ್ದರೂ ಕೂಡ ಅವುಗಳಿಂದ ದೇಶೀಯ ಜೀವನಕ್ಕೆ ಆಶಾಜನಕವಾದ ನೂತನ ಶಕವು ಪ್ರಾರಂಭವಾಗುವುದೆಂದೂ ನಾನು ಭಾವಿಸಿದೆನು.

ಆ ಆಶೆಯೆಲ್ಲವೂ ಭಿನ್ನಾಭಿನ್ನವಾಗಿ ಹೋಯಿತು. ಕಿಲಾಫತ್ತು ವಾಗ್ದಾನವು ನೆರವೇರಿಸಲ್ಪಡತಕ್ಕುದಾಗಿರಲಿಲ್ಲವು. ಪಂಜಾಬು ಅಕೃತ್ಯವು ತಿಪ್ಪೆಸಾರಿಸಲ್ಪಟ್ಟಿತು ಮತ್ತು ಅನೇಕ ಅಪರಾಧಿಗಳು ಶಿಕ್ಷಿಸಲ್ಪಡುವುದಕ್ಕೆ ಬದಲು ಉದ್ಯೋಗದಲ್ಲಿ ಉಳಿಸಲ್ಪಟ್ಟರು. ಅವರಲ್ಲಿ ಕೆಲವರಿಗೆ ಭರತಖಂಡದುತ್ಪನ್ನದಿಂದ ಪಿಂಚಿನ್ನು ಕೊಡಲ್ಪಡುತ್ತಿರುವುದು. ಅಲ್ಲದೆ ಅವರಲ್ಲಿ ಬೇರೆ ಕೆಲವರಿಗೆ ಬಹುಮಾನಗಳು ಸಹ ಕೊಡಲ್ಪಟ್ಟುವು. ಈ ರಾಜಕೀಯ ಸಂಸ್ಕರಣದಿಂದ ಅಧಿಕಾರಿಗಳ ಮನಸ್ಸು ಕೊಂಚವಾದರೂ ಬದಲಾಯಿಸಲಿಲ್ಲವು. ಅಷ್ಟುಮಾತ್ರವಲ್ಲದೆ ಭರತಖಂಡದ ದ್ರವ್ಯವು ಇನ್ನೂ ಸಾಗಿಹೋಗಲೂ ಭರತಖಂಡಕ್ಕೆ ಇನ್ನೂ ದಾಸ್ಯನಿರ್ಬಂಧವನ್ನು ಹೆಚ್ಚಿಸಲೂ ಈ ರಾಜಕೀಯ ಸಂಸ್ಕರಣವು ಸಾಧನವಾಯಿತು. ರಾಜಕೀಯ ಮತ್ತು ಆರ್ಥಿಕವಿಷಯಗಳಲ್ಲಿ ಹಿಂದೆ ಯಾವಾಗಲೂ ಸಂಭವಿಸದಿದ್ದುದಷ್ಟು ಅಸಹಾಯಸ್ಥಿತಿಯು ಬ್ರಿಟಿಷರ ಸಂಬಂಧವಾದ ಮೇಲೆಯೇ ಪ್ರಾಪ್ತವಾಯಿತೆಂಬ ಅಭಿಪ್ರಾಯವು ನಾನೆಷ್ಟು ಪ್ರಯತ್ನಿಸಿದರೂ ಬದಲಾಯಿಸಲಿಲ್ಲವು. ನಿರಾಯುಧವಾಗಿ ಮಾಡಲ್ಪಟ್ಟಿರುವ ಭರತಖಂಡವು ತನ್ನಮೇಲೆ ಬರುವಂತಹ ಶತೃಗಳನ್ನು ಸಾಯುಧವಾಗಿ ನಿಗ್ರಹಿಸಲು ಈಗ ಭರತಖಂಡಕ್ಕೆ ಲೇಶಮಾತ್ರವೂ ಶಕ್ತಿ ಸಾಲದು. ಅಧಿನಿವೇಶನಗಳಿಗಿರತಕ್ಕ ಸ್ವಾತಂತ್ರ್ಯವು ಭರತಖಂಡಕ್ಕೆ ಲಭಿಸಲು ಅನೇಕ ತಲಾಂತರವಾಗಬೇಕೆಂದು ಪ್ರಾಜ್ಞರಾದ ಭಾರತೀಯರು ಭಾವಿಸಿರುತ್ತಾರೆ. ದುರ್ಭಿಕ್ಷಪ್ರಾಪ್ತವಾದ ವೇಳೆಯಲ್ಲಿ ಪ್ರಜೆಗಳು ಸಹಿಸಿಕೊಳ್ಳಲಾರದಷ್ಟು ದಾರಿದ್ರ್ಯ ದೆಶೆಯು ಪ್ರಾಪ್ತವಾಗಿದೆ. ಬ್ರಿಟಿಷರು ಭರತಖಂಡಕ್ಕೆ ಬರುವುದಕ್ಕೆ ಮೊದಲು ಲಕ್ಷಾಂತರ ಕುಟುಂಬದವರು ನೂಲನ್ನು ಮಾಡಿ ಬಟ್ಟೆಗಳನ್ನು ನೇದು ಮನೆಕೈಗಾರಿಕೆಯನ್ನು ನಡಿಸುತ್ತಿದ್ದರು. ವ್ಯವಸಾಯಗಾರರಿಗೆ ಸಿಕ್ಕುತಿದ್ದ ಅಲ್ಪಾದಾಯಕ್ಕೆ ಈ ವಿಧವಾದ ಕೈಗಾರಿಕೆಯಿಂದ ತಕ್ಕಮಟ್ಟಿಗೆ ಸಹಾಯವಾಗುತ್ತಿದ್ದಿತು. ಭಾರತೀಯರ ಜೀವನಕ್ಕೆ ಅಷ್ಟು ಆಧಾರ ಭೂತವಾದ ಈ ಮನೇ ಕೈಗಾರಿಕೆಯು ನಂಬುಕೂಡದ ಕಠಿನ ಕಿರಾತರಾಕ್ಷಸ ಕೃತ್ಯಗಳಿಂದ ರೂಪಾಂತರವನ್ನು ಹೊಂದಿ ಆದಾಯವು ನಾಶವಾಗಿರುವುದೆಂದು ಆಂಗ್ಲೇಯರು ಕೊಟ್ಟಿರುವ ವಾಙ್ಮೂಲದಿಂದ ಸ್ಪಷ್ಟವಾಗಿ ತಿಳಿಯಬರುತ್ತದೆ. ಹಳ್ಳಿಗಳಲ್ಲಿ ವಾಸಮಾಡುವವರಿಗೆ ಒಪ್ಪತ್ತಿನ ಅನ್ನವಾದರೂ ಸಂಪೂರ್ಣವಾಗಿ ಸಿಕ್ಕಲು ಮಾರ್ಗವಿಲ್ಲದೆ ಶುಷ್ಕರಾಗುತ್ತಿರುವ ಸಾಮಾನ್ಯ ಪ್ರಜೆಗಳು ಕ್ರಮೇಣ ಹೇಗೆ ಜೀವಚ್ಛವವಾಗುತ್ತಲಿರುವರೆಂಬುದನ್ನು ಪಟ್ಟಣವಾಸಿಗಳು ಸ್ವಲ್ಪವೂ ತಿಳಿಯರು. ಧನಾನ್ವೇಷಕರಾದ ವಿದೇಶೀಯರು ಪಟ್ಟಣವಾಸಿಗಳಿಂದ ತಮ್ಮ ಸೇವೆಯನ್ನು ಮಾಡಿಸಿಕೊಂಡು ಅವರಿಗೆ ಅಲ್ಪಸ್ವಲ್ಪ ದಳ್ಳಾಳಿಯನ್ನು ಕೊಟ್ಟು ಅಧಿಕಲಾಭವನ್ನು ತಾವೇ ತೆಗೆದುಕೊಂಡು ಹೋಗುತ್ತಿರುವರು. ಆ ಲಾಭವೂ ಈ ದಳ್ಳಾಳಿಯ ರುಸುಮ್ಮೂ ಗ್ರಾಮವಾಸಿಗಳಾದ ಸಾಮಾನ್ಯ ಪ್ರಜೆಗಳಿಂದಲೇ ಸುಲಿಯಲ್ಪಡತಕ್ಕುದಾಗಿವೆ. ಈ ಸಂಗತಿಯನ್ನು ಸ್ವಲ್ಪ ಗ್ರಹಿಸಿದರೆ ಪಟ್ಟಣವಾಸಿಗಳು ಆ ದಳ್ಳಾಳಿರುಸುಮ್ಮಿನಿಂದ ನಾಮಮಾತ್ರ ಸುಖವನ್ನನುಭವಿಸುವರೆಂದು ವ್ಯಕ್ತವಾಗುವುದು. ಸಾಮಾನ್ಯಪ್ರಜೆಗಳ ದ್ರವ್ಯವು ಈ ರೀತಿಯಾಗಿ ಸಾಗಿಸಲ್ಪಡುವುದಕ್ಕಾಗಿ ಈ ದೇಶದಲ್ಲಿ ಪ್ರಭುತ್ವವು ನಡಿಸಲ್ಪಡುತ್ತಿರುವುದೆಂಬ ವಿಷಯವು ಪಟ್ಟಣವಾಸಿಗಳು ಗ್ರಹಿಸಿಲ್ಲವು.

ಮಾನವ ಸಂಘಕ್ಕುಂಟಾಗಿರುವ ಅಪರಾಧವೂ, ಗ್ರಾಮಗಳಲ್ಲಿ ಪ್ರತ್ಯಕ್ಷವಾಗಿ ಕಂಡುಬರುವ ಜನರ ಅಸ್ಥಿಪಂಜರಸ್ಥಿತಿಯೂ, ಲೆಕ್ಕವಿಲ್ಲದಷ್ಟು ಕುತರ್ಕಗಳಿಂದಲೂ ಇಂದ್ರಜಾಲಗಳಿಂದಲೂ ಮರೆಮಾಚಲ್ಪಡಲಾಗುವುದಿಲ್ಲವು. ಇದು ಐತಿಹಾಸಿಕವಾದ ಎಲ್ಲಾ ಅಪರಾಧವನ್ನು ಮೀರಿಸಿದ ಮಹಾಪಾತಕವಾಗಿದೆ. ಇದಕ್ಕೆ ಪಟ್ಟಣವಾಸಿಗಳೂ ಬ್ರಿಟಿಷರೂ ಬಾಧ್ಯರು. ನಿಜವಾಗಿ ದೇವರೊಬ್ಬನಿರುವುದಾದರೆ ಅವನಿಗೆ ಅವರು ಉತ್ತರವಾದಿಗಳಾಗದೆ ತಪ್ಪರು. ಈ ದೇಶಕ್ಕೆ ಬಂದ ವಿದೇಶೀಯರು ಧನಾರ್ಜನೆಮಾಡಲು ನ್ಯಾಯಶಾಸ್ತ್ರ ನಿಬಂಧನೆಗಳುಕೂಡ ಅನುಕೂಲವಾಗಿವೆ. ನಾನು ನಿಷ್ಪಕ್ಷಪಾತತೆಯಿಂದ ಪಂಜಾಬು ಸೈನಿಕಶಾಸನ ವಿಚಾರಣೆಯನ್ನು ಪರಿಕ್ಷಿಸಿದುದರಲ್ಲಿ ೧೦೦ಕ್ಕೆ ೯೫ ಜನರಿಗೆ ವಿಧಿಸಲ್ಪಟ್ಟ ಶಿಕ್ಷೆಯು ಸಂಪೂರ್ಣವಾಗಿ ಅನ್ಯಾಯವೆಂದು ತಿಳಿಯಬಂದಿತು. ಇದೇ ರೀತಿಯಾಗಿ ಇಂಡ್ಯಾದಲ್ಲಿ ನಡೆದ ರಜಕೀಯ ಸಂಬಂಧವಾದ ವಿಚಾರಣೆಗಳಲ್ಲಿ ಶಿಕ್ಷಿಸಲ್ಪಟ್ಟ ೧೦ ಮಂದಿಗಳಲ್ಲಿ ೯ ಜನರು ಕೇವಲ ನಿರ್ದೋಷಿಗಳೆಂದು ಅನುಭವಿಸಿದ್ದವಾಗಿ ಹೇಳುವೆನು. ಮಾತೃದೇಶವನ್ನು ಪ್ರೀತಿಸಿದುದುಮಾತ್ರವೇ ಅವರು ಮಾಡಿದ ಅಪರಾಧವಾಗಿರುವುದು. ಪಾಶ್ಚಾತ್ಯರಿಗೆ ಸಂಬಂಧಪಟ್ಟ ವಿವಾದಗಳಲ್ಲಿ ಈ ದೇಶದ ನ್ಯಾಯಸ್ಥಾನಗಳಲ್ಲಿ ತೀರ್ಮಾನವಾಗುವ ೧೦೦ ಕ್ಕೆ ೯೯ ಕೇಸುಗಳಲ್ಲಿ ದೇಶೀಯರಿಗೇ ಅನ್ಯಾಯವಾಗುತ್ತಿರುವುದು. ಇದರಲ್ಲಿ ಅತಿಶಯೋಕ್ತಿಯೇನೂ ಇಲ್ಲವು. ಅಂತಹ ಕೇಸುಗಳಲ್ಲಿ ಯಾವ ರೀತಿಯಿಂದಾದರೂ ಸಂಬಂಧಪಟ್ಟಿದ್ದ ಭಾರತೀಯರೆಲ್ಲರಿಗೂ ಈ ವಿಷಯವು ಸಂಪೂರ್ಣ ಅನುಭವಕ್ಕೆ ಬಂದ ಸಂಗತಿಯಾಗಿದೆ. ಈ ರೀತಿಯಾಗಿ ಧನಾಪೇಕ್ಷಿಗಳಾದ ವಿದೇಶೀಯರ ಅನುಕೂಲಕ್ಕಾಗಿಯೇ ನ್ಯಾಯನಿಬಂಧನೆಗಳು ಬುದ್ಧಿಪೂರ್ವಕವಾಗಿಯೋ ಇಲ್ಲದೆಯೋ ಪರಿಪಾಲಿಸಲ್ಪಡುತ್ತಿವೆ.

ಮಹಾದುರದೃಷ್ಟವು.

ಈ ಪ್ರಕಾರವಾದ ಮಹಾಪಾತಕವು ತಮಗೆ ಸಂಬಂಧಪಟ್ಟುದೆಂದು ದೇಶಪರಿಪಾಲನೆಯುದ್ಯೋಗದಲ್ಲಿರುವ ಆಂಗ್ಲೇಯರೂ ಅವರಿಗೆ ಸಹಾಯಕರಾಗಿರುವ ಭಾರತೀಯರು ಕೂಡ ಗ್ರಹಿಸದಿರುವುದು ಮಹಾದುರದೃಷ್ಟವೇ ಸರಿ. ಈ ರಾಜ್ಯಪರಿಪಾಲನವಿಧಾನವು ಪ್ರಪಂಚದಲ್ಲೆಲ್ಲಾ ಉತ್ತಮೋತ್ತಮವಾದುದೆಂದೂ, ಇದರಿಂದ ಭರತಖಂಡಕ್ಕೆ ಅಭಿವೃದ್ಧಿಯು ಸಾವಕಾಶದಿಂದಲಾದರೂ ಆಗುವುದು ಖಂಡಿತವೆಂದೂ ಅನೇಕ ಆಂಗ್ಲೇಯ ಮತ್ತೂ ಭಾರತೀಯ ಉದ್ಯೋಗಿಗಳು ನಿಷ್ಕಪಟವಾಗಿ ನಂಬಿಕೊಂಡಿರುವರೆಂದು ಸಹ ನಾನು ತಿಳಿದಿರುವೆನು. ಒಂದುಕಡೆ ಸಮರ್ಥಭಯವಶೀಕರಣವಿಧಾನವನ್ನೂ ಸಕ್ರಮ ಪಶುಬಲ ಪ್ರದರ್ಶನವನ್ನೂ ಮತ್ತೊಂದುಕಡೆ ಪ್ರಜೆಗಳ ಆತ್ಮರಕ್ಷಣ ಮತ್ತು ಪ್ರತಿಘಟನಶಕ್ತಿಯು ಕುಂದಿ ಪೌರುಷಸತ್ವಹೀನರಾಗುವಂತೆಯೂ ಮಾಡುವ ಪ್ರಯತ್ನದಲ್ಲಿ ಕಪಟನಟನದ ದುರಭ್ಯಾಸವು ತಮ್ಮಲ್ಲಿ ಪ್ರಬಲಿಸುತ್ತಿರುವುದೆಂಬುದನ್ನು ಅಧಿಕಾರಿಗಳು ತಿಳಿಯರು. ಪರಿಪಾಲಿಸುವವರ ಅಜ್ಞಾನ ಆತ್ಮವಂಚನೆಗಳನ್ನು ಕಪಟನಟನೆಯಘೋರವಾದ ದುರಭ್ಯಾಸವು ವೃದ್ಧಿಗೊಳಿಸುತ್ತಿರುವುದು.

ಸೆಕ್ಷನ್ ೧೨೪-ಎ.

ಹಿಂದೂದೇಶದ ಶಿಕ್ಷಾಸ್ಮೃತಿಯಲ್ಲೂ, ರಾಜಕೀಯ ನಿಬಂಧನೆಗಳಲ್ಲೂ 124-ಎ ನಿಬಂಧನೆಯು (ಸೆಕ್ಷನ್ನು) ಪ್ರಧಾನವಾದುದೆಂದು ಹೇಳಬಹುದು. ಈಗ ಆ ನಿಬಂಧನೆಯ ಪ್ರಕಾರವೇ ನನ್ನಮೇಲೆ ವಿವಾದವು ನಡಿಸಲ್ಪಟ್ಟಿರುವುದು. ಪ್ರಜೆಗಳ ಸ್ವಾತಂತ್ರ್ಯವನ್ನು ಅಡಗಿಸುವುದಕ್ಕಾಗಿಯೇ ಈ ನಿಬಂಧನೆಯು ಮಾಡಲ್ಪಟ್ಟುದಾಗಿದೆ. ಪ್ರೀತಿಯು ಹುಟ್ಟುವಂತೆ ಮಾಡಲು ನಿಬಂಧನೆಯಿಂದ ಸಾಧ್ಯವಲ್ಲವು. ಒಬ್ಬನಿಗೆ ಒಬ್ಬಮನುಷ್ಯನ ಮೇಲಾಗಲಿ ಅಥವಾ ಒಂದು ವಸ್ತುವಿನ ಮೇಲಾಗಲಿ ಪ್ರೀತಿವಿಶ್ವಾಸವು ಇಲ್ಲದಿರುವಾಗ ದೌರ್ಜನ್ಯಕ್ಕೆ ಮನಸ್ಸನ್ನು ಕೊಡದೆಯೂ, ದೌರ್ಜನ್ಯವು ಪ್ರಬಲಿಸುವಂತೆ ಮಾಡದೆಯೂ, ದೌರ್ಜನ್ಯದಿಂದ ಇತರರಿಗೆ ಬಾಧೆಯನ್ನುಂಟುಮಾಡದೆಯೂ ಎಷ್ಟು ಕಾಲದವರೆಗೂ ಇರುವನೋ ಅಷ್ಟು ಕಾಲದವರೆಗೂ ಆತನು ತನ್ನ ಅವಿಶ್ವಾಸವನ್ನು ಸಂಪೂರ್ಣವಾಗಿ ಪ್ರದರ್ಶಿಸಲು ಸರ್ವಸ್ವಾತಂತ್ರನಾಗಿರಬೇಕು. ಆದರೆ ನನ್ನಮೇಲೂ ಬಾಂಕರಮೇಲೂ ಕೇಸುಮಾಡಲ್ಪಟ್ಟಿರುವ ಸೆಕ್ಷನ್ನಿನ ಪ್ರಕಾರ ಅವಿಶ್ವಾಸವನ್ನು ಅಭಿವೃದ್ಧಿಗೊಳಿಸುತ್ತಿರುವುದಕ್ಕಾಗಿಯೇ ಎಂದು ವ್ಯಕ್ತವಾಗುತ್ತದೆ. ಈ ಸೆಕ್ಷನ್ನಿನ ಪ್ರಕಾರ ವಿಚಾರಣೆ ನಡಿಸಲ್ಪಟ್ಟ ಕೆಲಕೇಸುಗಳನ್ನು ನಾನು ಪರೀಕ್ಷಿಸಿದೆನು. ಭಾರತೀಯರಿಂದ ಬಹಳವಾಗಿ ಪ್ರೀತಿಸಲ್ಪಡುತ್ತಿದ್ದ ಕೆಲದೇಶಭಕ್ತರು ಈ ಸೆಕ್ಷನ್ನಿನ ಪ್ರಕಾರ ಶಿಕ್ಷಿಸಲ್ಪಟ್ಟರು. ಆದಕಾರಣ ಅದೇ ಸೆಕ್ಷನ್ನಿನ ಪ್ರಕಾರ ನನ್ನ ಮೇಲೂ ಕೇಸು ನಡಿಸಲ್ಪಟ್ಟಿರುವುದು ನನಗೊಂದು ಗೌರವವಾಯಿತೆಂತಲೇ ಭಾವಿಸುತ್ತೇನೆ.

ವಿಶ್ವಾಸವು ತಪ್ಪಿದುದು ಒಂದು ಸುಗುಣವು.

ನನಗಿದ್ದ ವಿಶ್ವಾಸವು ತಪ್ಪಿಹೋದುದರ ಕಾರಣವನ್ನು ಬಹಳ ಸಂಕ್ಷೇಪವಾಗಿ ವಿವರಿಸಿ ಹೇಳಿರುವೆನು. ಪರಿಪಾಲಕವರ್ಗದವರಲ್ಲಿ ಯಾವ ವ್ಯಕ್ತಿಯಮೇಲೂ ನನಗೆ ದ್ವೇಷವಿಲ್ಲವು. ರಾಜರಮೇಲಂತೂ ಸಂಪೂರ್ಣವಾಗಿ ದ್ವೇಷವಿಲ್ಲವು. ಇದುವರೆಗೆ ಯಾವ ಪ್ರಭುತ್ವವಿಧಾನದಿಂದ ಭರತಖಂಡಕ್ಕೆ ಒಟ್ಟಿನಲ್ಲಿ ಹೆಚ್ಚು ಕೇಡುಂಟಾಗಿದೆಯೋ ಅಂಥ ಪ್ರಭುತ್ವದಮೇಲೆ ನನಗೆ ಅವಿಶ್ವಾಸವುಂಟಾದುದು ಒಂದು ಸುಗುಣವೆಂದೇ ನಾನು ನಂಬುತ್ತೇನೆ. ಈ ಪ್ರಭುತ್ವದಲ್ಲಿ ಹಿಂದೆ ಯಾವಾಗಲೂ ಭಾರತೀಯರು ಇಷ್ಟು ಹೆಚ್ಚಾಗಿ ಪೌರುಷವಿಹೀನರಾಗಿರಲಿಲ್ಲವು. ಅಂತಹ ನಂಬುಗೆಯು ನನಗಿದ್ದುದರಿಂದಲೇ ಅಂತಹ ಪ್ರಭುತ್ವವಿಧಾನವನ್ನು ಪ್ರೀತಿಸುವುದು ಪಾತಕವೆಂದು ನಾನು ತಿಳಿದಿದ್ದೆನು. ನಾನು ಈವರೆಗೆ ನಿದರ್ಶನಪೂರ್ವಕವಾಗಿ ಹೇಳಿದ ವಿಷಯದಲ್ಲಿ ಕಂಡ ಅಂಶಗಳನ್ನು ಲೇಖಿಸಿದರಿಂದ ಅಮೂಲ್ಯ ಗೌರವವುಂಟಾಯಿತೆಂದು ನಾನು ಭಾವಿಸಿರುತ್ತೇನೆ. ಆಂಗ್ಲ ಭಾರತದೇಶಗಳೆರಡೂ ನಡಿಸುತ್ತಿರುವ ಅಕ್ರಮವಿಧಾನದಿಂದ ವಿಮುಕ್ತವಾಗುವ ಮಾರ್ಗವನ್ನು ಅಸಹಾಯೋದ್ಯಮದಿಂದ ನಾನು ತೋರಿಸಿಕೊಟ್ಟು ತನ್ಮೂಲಕ ನಾನು ಈ ಎರಡು ದೇಶಗಳಿಗೂ ಒಳ್ಳೇ ಸೇವೆಮಾಡಿರುತ್ತೇನೆಂದು ಭಾವಿಸುತ್ತೇನೆ.

ಸಹಾಯನಿರಾಕರಣವು ಮುಖ್ಯವಾದವಿಧಿ.

ಉತ್ತಮಕಾರ್ಯಗಳಿಗೆ ಸಹಾಯಮಾಡಬೇಕಾಗಿರುವಂತೆಯೇ ದುಷ್ಕಾರ್ಯಗಳಿಗೆ ಸಹಾಯಮಾಡದಿರುವುದು ಮನುಷ್ಯರಿಗೆ ಮುಖ್ಯವಾದ ವಿಧಿಯೆಂದು ನಾನು ನಂಬುತ್ತೇನಾದರೂ ಈವರೆಗೂ ನಡೆದ ದುಷ್ಕಾರ್ಯಗಳಲ್ಲಿ ಮಾಡಲ್ಪಟ್ಟ ಅಸಹಾಯೋದ್ಯಮದಿಂದ ಬುದ್ಧಿಪೂರ್ವಕವಾಗಿ ದೌರ್ಜನ್ಯವೇ ನಡೆದಿರುತ್ತದೆ. ದೌರ್ಜನ್ಯದಿಂದ ಮಾಡಿದ ಅಸಹಾಯೋದ್ಯಮದಿಂದ ದುಷ್ಕಾರ್ಯಗಳೇ ಹೆಚ್ಚುವುವು. ದುಷ್ಕಾರ್ಯಕ್ಕೆ ದೌರ್ಜನ್ಯವೇ ಆಧಾರವಾದುದರಿಂದ ದೌರ್ಜನ್ಯವನ್ನು ಪೂರ್ತಿಯಾಗಿ ಬಿಟ್ಟಹೊರತು ದುಷ್ಕಾರ್ಯಕ್ಕೆ ನಿರಾಧಾರಸ್ಥಿತಿಯು ಬರುವುದಿಲ್ಲವು. ಸಹಾಯನಿರಾಕರಣ ಪ್ರಯತ್ನದಲ್ಲಿ ಉಂಟಾಗುವ ದುಷ್ಕೃತ್ಯದ ಫಲವನ್ನು ಅನುಭವಿಸುವುದರಿಂದ ಸ್ವಭಾವಸಿದ್ಧವಾದ ದೌರ್ಜನ್ಯವನ್ನು ಬಿಟ್ಟಂತಾಗುವುದೆಂದು ನನ್ನ ದೇಶೀಯರಿಗೆ ಬೋಧಿಸಲಿಚ್ಛಿಸುತ್ತೇನೆ.

ನ್ಯಾಯಾಧೀಶರಿಗೆ ಪ್ರಾರ್ಥನೆ:

ನಿಮ್ಮ ನ್ಯಾಯಶಾಸ್ತ್ರಪ್ರಕಾರ ಅಪರಾಧವಾಗಿಯೂ, ನನ್ನ ಅಭಿಪ್ರಾಯದಲ್ಲಿ ಪಟ್ಟಣವಾಸಿಯಾದ ನನಗೆ ಧರ್ಮವಾಗಿಯೂ ತೋರಿದ ಕಾರ್ಯವನ್ನು ನಾನು ಮಾಡಿದುದಕ್ಕಾಗಿ ಅತ್ಯಂತ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕೆಂದು ನಿಮ್ಮನ್ನು ಪ್ರಾರ್ಥಿಸಿ ಆ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸಲು ಸಿದ್ಧನಾಗಿರುವೆನು. ನ್ಯಾಯಾಧಿಪತಿಗಳೂ, ನ್ಯಾಯ ಸಹಾಯಕರು (ಅಸಿಸೆಸರು) ಗಳೂ ಆದ ನೀವುಗಳು ಪರಿಪಾಲಿಸಲಿಕ್ಕಿರುವ ನ್ಯಾಯನಿಬಂಧನೆಯು ದೋಷಯುಕ್ತವೆಂದೂ ನಾನು ನಿರ್ದೋಷಿಯೆಂದೂ ನೀವು ತಿಳಿದಿದ್ದಲ್ಲಿ ನಿಮ್ಮುದ್ಯೋಗವನ್ನು ಬಿಟ್ಟುಬಿಡುವುದೂ, ಹಾಗಲ್ಲದೆ ಆ ನಿಬಂಧನೆಯ ಪರಿಪಾಲನ ಕ್ರಮವು ಒಳ್ಳೆಯದೆಂದೂ ಭಾರತೀಯರಿಗೆ ಲಾಭಕರವಾದುದೆಂದೂ, ನನ್ನ ಪ್ರಯತ್ನವು ಪ್ರಜೆಗಳಿಗೆ ಭಂಗಕರವಾದುವೆಂದೂ ನೀವು ನಂಬಿದ್ದಲ್ಲಿ ನನಗೆ ಕಠಿಣ ಶಿಕ್ಷೆಯನ್ನು ವಿಧಿಸುವುದೂ ನಿಮ್ಮ ಮುಖ್ಯ ಕರ್ತವ್ಯವೆಂದು ಬಿನ್ನೈಸಿಕೊಳ್ಳುತ್ತೇನೆ. ಎಂ. ಕೆ. ಗಾಂಧಿ.

ಆಪಾದಿಸಲ್ಪಟ್ಟ ಅಪರಾಧವನ್ನೊಪ್ಪಿಕೊಂಡುದರ ಮೇಲೆ ಮ|| ಗಾಂಧಿಯವರಿಗೆ ೬ ವರ್ಷ ಸಾಮಾನ್ಯ ಕಾರಾಗೃಹವಾಸಶಿಕ್ಷೆಯೂ ಬಾಂಕರಿಗೆ ೧ ವರ್ಷ ಸಾದಾ ಕಾರಾಗೃಹವಾಸಶಿಕ್ಷೆಯೂ ೧೦೦೦ ರೂ. ದಂಡವೂ ವಿಧಿಸಲ್ಪಟ್ಟಿತು.

ಪತ್ರವ್ಯವಹಾರ.

ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಬರುವ ಏಪ್ರೆಲ್ ತಿಂಗಳಲ್ಲಿ ದಾವಣಗೆರೆ ಸೆಂಟರಿನಲ್ಲಿ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿನಿಯರಿಗೂ, ಮಾಸ್ತರುಗಳಿಗೂ, ಸಹಾ ಈ ಸಂಘದಿಂದ ಶ್ರೀ ವಿರಕ್ತಮಠದಲ್ಲಿ ಊಟಕ್ಕೂ, ವಾಸಕ್ಕೂ ಏರ್ಪಡಿಸಿದೆ. ಇವರುಗಳು ತಂತಮ್ಮ ಹಾಸಿಗೆ ಹೊದ್ದಿಕೆಗಳನ್ನು ತೆಗೆದುಕೊಂಡು ಬರತಕ್ಕದ್ದು.

ಸೆಕ್ರೆಟರಿ,
ದಾವಣಗೆರೆ, ವೀರಶೈವ ವಿದ್ಯಾವರ್ಧಕ ಫಂಡು ಸಂಘ.

ರಾಂಪುರ.

ಕೊಡಗು ನಂಜರಾಜಪಟ್ಟಣದ ತಾಲ್ಲೂಕು ರಾಮಸ್ವಾಮಿ ಕಣಿವೆ ಹೋಬಳಿ ರಾಂಪುರದ ಪೇಟೆಯಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಾಲಯದಲ್ಲಿ ಇದೇ ಏಪ್ರಲ್ ಮಾಹೆ ೪ ನೇ ಮಂಗಳವಾರ ಅಂಕುರಾರ್ಪಣವೂ ೫ನೆ ಬುಧವಾರ ಧ್ವಜಾರೋಹಣವೂ, ೬ನೆ ಗುರುವಾರ ಗಂಗಾಭಿಷೇಕ

ಮತ್ತು ರಥಾರೋಹಣವೂ, ಒನೆ ಶುಕ್ರವಾರ ತೆಪ್ಪೋತ್ಸವವೂ ಆನೆ ಶನಿವಾರ ತೀರ್ಥಸ್ನಾನವೂ ಅತಿ ವಿಜೃಂಭಣೆಯಿಂದ ಮಾಮೂಲ್ ಮೇರೆ ನಡೆಯುತ್ತದೆಯಾದ್ದರಿಂದ ಭಕ್ತಾದಿಗಳೆಲ್ಲರೂ ಆ ಸಮಯಕ್ಕೆ ದಯಮಾಡಿಸಿ ಸ್ವಾಮಿ ಸೇವೆಮಾಡಿ ಕೃತಾರ್ಥರಾಗಬೇಕಾಗಿ ಕೋರುತ್ತೇವೆ. ಈ ಮಹೋತ್ಸವದಲ್ಲಿ ಮಾಮೂಲ್ ಮೇರೆ ಗೋಪ್ರದರ್ಶನ ಸಹ ಜರಗುತ್ತದೆ.

ಆರ್. ಎಚ್. ಅಪ್ಪಯ್ಯ, ವಿ. ಪಿ. ಕೃಷ್ಣಶೆಟ್ಟಿ, ಟ್ರಸ್ಟೀಸ್.

ದೇವರುತ್ಸವ.

ಕೋಲಾರದ ಡಿಸ್ಟ್ರಿಕ್ ಶಿಡ್ಲಘಟ್ಟದಲ್ಲಿರುವ ಬಹಳ ಪುರಾತನಕಾಲದ ಶ್ರೀ ಸೋಮೇಶ್ವರಸ್ವಾಮಿ ದೇವಾಲಯವು ಈ ಊರಿನ ಪಾಳೆಗಾರನಾಗಿದ್ದ ಪ್ರಸಿದ್ಧ ಶಿವನೇಗೌಡರ ಕಾಲದಲ್ಲಿ ಅಭಿವೃದ್ಧಿಸ್ಥಿತಿಯಲ್ಲಿದ್ದು ಈಚೆಗೆ ಜೀರ್ಣಸ್ಥಿತಿಗೆ ಬಂದು ಬಹಳ ಹೀನಸ್ಥಿತಿಯಲ್ಲಿದ್ದಿತಲ್ಲದೆ ಸುಮಾರು ೩೦ ವರುಷಗಳಿಂದಲೂ ಉತ್ಸವಾದಿಗಳು ನಡೆಯದೆ ನಿಂತುಹೋಗಿದ್ದಿತು. ಊರಿಗೆ ಪ್ರಧಾನವಾದ ಈ ಶಿವಾಲಯವನ್ನು ದುರಸ್ತು ಮಾಡಿಸಿ ೨೮-೩-೧೯೨೨ನೆಯ ತಾರೀಖಿನ ದಿನ ಬ್ರಹ್ಮರಥೋತ್ಸವ ನಡೆಯುವಂತೆಯೂ ತದಂಗವಾದ ಉತ್ಸವ ಕಾರ್ಯಗಳು ೨೪-೩-೨೨ನೆಯ ತಾರೀಖು ಆರಂಭಿಸಿ ೧-೪-೨೨ರ ವರಿವಿಗೂ ವಿಜೃಂಭಣೆಯಿಂದ ನಡಿಸಲು ಭಕ್ತಾದಿಗಳ ಸಹಾಯದಿಂದ ಏರ್ಪಾಡುಮಾಡಿರುತ್ತೆ. ಈ ಶುಭೋತ್ಸವಕ್ಕೆ ಸರ್ವರೂ ದಯಮಾಡಿಸಿ ಈಶ್ವರಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

ಎಸ್. ಹಂಪಯ್ಯ, ವೈಸ್‌ಪ್ರೆಸಿಡೆಂಟ್,
ಶಿಡ್ಲಘಟ್ಟ ಮ್ಯುನಿಸಿಪಾಲಿಟಿ.

೧೧೦ಲ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸ್ವಾಮಿಯ ವಾರ್ಷಿಕ ರಥೋತ್ಸವವು.

ಆಸೇತುಹಿಮಾಚಲ ವೀರಶೈವ ಮಹಾಜನಂಗಳಿಗೆ ಸೂಚಿಸುವದೇನಂದರೆ.—ಶ್ರೀ ಮಹಾಸಂಸ್ಥಾನ ಮಠದಲ್ಲಿ ಪ್ರತಿ ವರ್ಷವೂ ಪದ್ಧತಿಯಂತೆ ನಡೆಯುತ್ತಲಿರುವ ಶ್ರೀ ಮಹಾಸ್ವಾಮಿಯ ರಥೋತ್ಸವವು ಫಾಲ್ಗುಣ ಶುದ್ಧ ೮ರಿಂದ ಬಹುಳ ೮ ರವರೆಗೆ ವಿಜೃಂಭಣೆಯಿಂದ ಸಾಗಲು ಆರಂಭವಾಗಿದೆ. ಶ್ರೀ ಜಗದಾಚಾರ್ಯಸ್ವಾಮಿಯ ಸೇವೆಗಾಗಿ ನರಸಿಂಹರಾಜಪುರ, ಚಿಕ್ಕನಾಯಕನಹಳ್ಳಿ, ಅರಸೀಕೆರೆ, ಹೊಳೆನರಸೀಪುರ, ಮಾವಿನಕೆರೆ, ಆಲ್ದೂರು, ಕೆಳಗೂರು, ತರೀಕೆರೆ, ರಾಣಿಬೆನ್ನೂರು, ದಾವಣಗೆರೆ ಮುಂತಾದ ಗ್ರಾಮಗಳ ಭಕ್ತಮಾಹೇಶ್ವರರ ಸಮುದಾಯವು ಸೇರಿದ್ದುದರಿಂದ ಈ ವರ್ಷದ ಸಮಾರಂಭವು ಅತ್ಯಾನಂದವನ್ನುಂಟುಮಾಡುತ್ತಿರುವದು. ಈ ಸಮಯದಲ್ಲಿ ಶ್ರೀ ಶಿವೈಕ್ಯ ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯರವರ ಮಹಾಸಮಾರಾಧನೆಯಾದನಂತರ ಶ್ರೀ ಜಗದ್ಗುರು ರಂಭಾಪುರೀ ಪೀಠದ ಮಹಾಸ್ವಾಮಿಗಳವರ ಉತ್ತರಾಧಿಕಾರದ ವಿಷಯಕವಾಗಿ ಸಭೆಯು ನಡೆದು ಸರ್ವರ ಒಪ್ಪಿಗೆಯಿಂದ ಸದರಿ ಶ್ರೀ ಮಹಾಗುರುಗಳವರ ಉಪದೇಶದಂತೆ ಶ್ರೀ ಜಗದ್ಗುರು ಉಜ್ಜಯಿನೀ ಸಂಸ್ಥಾನ ಶ್ರೀ ಮಹಾಸ್ವಾಮಿಗಳವರ ಮುಕ್ಕಾಂ ಸ್ಥಳಕ್ಕೆ ಹೋಗಿ ಮಹಾ ಸನ್ನಿಧಿಯಲ್ಲಿಯೇ ಆಲೋಚಿಸಿ ವ್ಯವಸ್ಥೆಗೊಳಿಸತಕ್ಕದ್ದೆಂದು ನಿರ್ಧರಿಸಲ್ಪಟ್ಟಿತು. ಈ ನಿಮಿತ್ತವಾಗಿ ಇದೇ ಮಾಹೆ ೨೩ನೆ ಗುರುವಾರ ಕೆಲ ಪ್ರಮುಖರು ಶ್ರೀ ಉಜ್ಜಯಿನೀ ಮಹಾಸ್ವಾಮಿಗಳವರ ಸನ್ನಿಧಿಗೆ ಅರಿಕೆಪಡಿಸಲು ಹೋಗತಕ್ಕವರಿದ್ದರು.

ಶ್ರೀ ಮಹಾಸಂಸ್ಥಾನ ಏಜಂಟ್, ಎಚ್. ಕೆ.ಎಂ. ರುದ್ರಯ್ಯ,

'' ಲಿಂಗೋಪಾಸನಾ. ''

ಲಿಂಗ ಮತ್ತು ಲಿಂಗಪೂಜೆಯು ಯಾವ ಸಮಯದಿಂದ ಯಾವ ರೀತಿಯಾಗಿ ಬಂತೆಂಬ ವಿಷಯದಲ್ಲಿ ಆಧುನಿಕ ಕೆಲವು ಲೇಖಕರು ವಿಸ್ತೃತವಾದ ಲೇಖನಗಳನ್ನು ಬರಿಯುತ್ತ ಬಂದಿದ್ದು ಅದರಲ್ಲೊರ್ವ ಮದ್ರಾಸ ಇಲಾಖೆಯ ಬ್ರಹ್ಮಪುರ ಕಾಲೇಜದ ಲೇಟ್ ಪ್ರಿನ್ಸಿಪಾಲರಾದ ಗೋವಿಂದನಾಥ ಗುಹ ಎಮ್. ಎ. ಎಂಬುವರು ಲಘು ರಾಮಾಯಣವೆಂಬ ಪುಸ್ತಕದ ಆಲೋಚನಾ ಎಂಬ ಪ್ರಸ್ತಾವನೆಯಲ್ಲಿ ಲಿಂಗವು ರಾಕ್ಷಸರ ದೇವರೆಂತಲೂ ಲಿಂಗಾರಾಧನೆಯು ರಾಕ್ಷಸರ ಧರ್ಮವೆಂತಲೂ ಲಿಂಗವನ್ನು (ಶಿಶ್ನವನ್ನು) ದೇವರೆಂದು ಭಾವಿಸಿ ಅದನ್ನು ಪೂಜಿಸುವ ವಿಚಾರವು ಮೊದಲು ರಾಕ್ಷಸರಲ್ಲಿ ಉತ್ಪನ್ನವಾಯಿತೆಂತಲೂ ಇದಕ್ಕೆ ಋಗ್ವೇದದ ೭-೧೧ನೆ ಮಂಡಲದಲ್ಲಿಯ ಎರಡು ಮಂತ್ರಗಳನ್ನು ಹಾಗೂ ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿಯ, ಮತ್ತು ಲಿಂಗಪುರಾಣದಲ್ಲಿಯ ಕೆಲವು ಶ್ಲೋಕಗಳನ್ನು ಆಧಾರವಾಗಿ ತೋರಿಸಿರುವರು. "ನಯಾತವ ಇಂದ್ರಜೂಜುವುರ್ನೋನವಂದನಾಶವಿಷ್ಠ ವೇದ್ಯಾಭಿಃ | ಸಶರ್ದರ್ಯೋವಿಷುಣಸ್ಯಜಂ ತೋರ್ಮಾಶಿಶ್ನದೇವಾ ಅಪಿ ಗುರ್ಋತಂನಃ || (ಋಗ್ವೇದಮಂಡಲ ೭-೨-೨೧).

ಸವಾಜಂಯಾತಾಪದುಷ್ಪದಾಯನ್ತ್ಸ್ವರ್ಹಾತಾಪರಿಷದತ್ ಸನಿಷ್ಯನ್ | ಅನರ್ವಾಯಚ್ಛತದುರಸ್ಯವೇದೋಘ್ನಿಶ್ನದೇವಾಪಿ ಅಭಿವರ್ಪಸಾಭೂತ || (ಋಗ್ವೇದಮಂಡಲ ೧೦-೯೯).

(ಶಿಶ್ನೇನದೀವ್ಯಂತಿಕ್ರೀಡಂತಿ ಇತಿಶಿಶ್ನದೇವಾಃ ಅಬ್ರಹ್ಮಚರ್ಯಾಃ ಇತ್ಯರ್ಥಃ) ಎಂದು ಸಾಯನಭಾಷ್ಯದಲ್ಲಿ ಹೇಳಿದ್ದು.—ಈ ಸಾಯನಾಚಾರ್ಯರ ಭಾಷ್ಯದಂತೆ ಮೇಲೆ ತೋರಿಸಿದ ವೇದಮಂತ್ರಾರ್ಥವು—"ಎಲೈ ಬಲಾಢ್ಯನಾದ ಇಂದ್ರದೇವನೇ ? ರಾಕ್ಷಸರು (ಯಾತವಃ ರಾಕ್ಷಸಾಃ ಇತಿ ಸಾಯನಃ) ನಮ್ಮನ್ನು ಹಿಂಸಿಸದಂತೆಯೂ ಹಾಗೂ ನಮ್ಮ ಪ್ರಜೆಗಳಿಂದ ಅಥವಾ ಸಂತಾನದಿಂದ ನಮ್ಮನ್ನು ದೂರಮಾಡದಂತೆಯೂ ರಕ್ಷಣೆಮಾಡು, ಮತ್ತು ಸರ್ವರಿಗೂ ಸ್ವಾಮಿಯಾದ ನೀನು ದುಷ್ಟಪ್ರಾಣಿಗಳ ಶಾಸನದಲ್ಲಿ ಉತ್ಸಾಹಿತನಾಗಿ ನಮ್ಮ ಯಜ್ಞಭೂಮಿಯಲ್ಲಿಯೂ ಸತ್ಕ್ರಿಯೆಗಳಲ್ಲಿಯೂ (ಶಿಶ್ನದೇವರನ್ನು) ಅಂದರೆ ಬ್ರಹ್ಮಚರ್ಯಪಾಲಿಸದಿದ್ದವರನ್ನು ಬರಗೊಡದಂತೆ ಮಾಡೆಂಬದಾಗಿ ಇಂದ್ರದೇವನನ್ನು ಋಷಿಗಳು ಪ್ರಾರ್ಥಿಸಿಕೊಂಡಿರುವರು." ಈ ರೀತಿಯಾದರ್ಥವನ್ನು ಸಾಯನಾಚಾರ್ಯರು ಪೌರಾಣಿಕ ಕಥಾನುಪರವಾಗಿ ಮಾಡಿದ್ದು ಇದಕ್ಕೆ ಎರಡನೇ ರೀತಿಯಾದ ಸರ್ವೋತ್ತಮಾರ್ಥವೂ ಆಗುತ್ತಿರುವದು. ಹಾಗೆಂದರೆ—"ಎಲೈ ಸರ್ವೈಶ್ವರ್ಯಶಾಲಿಯಾದ ಪರಮಾತ್ಮನೇ ? ಸರ್ವತ್ರ ಗಮನಶೀಲಗಳಾದ ನಮ್ಮ ಇಂದ್ರಿಯಗಳಿಂದ ಯಾವ ಬಾಧೆಯೂ ಆಗದಂತೆ ಹಾಗು ನಾವು ನಿನ್ನ ಪರವಾದ ಸ್ತುತಿ ಜ್ಞಾನಾದಿಗಳಿಂದ ಪೃಥಕ್ ಆಗದಂತೆಯೂ ನಮ್ಮನ್ನು ಸರ್ವದಾ ರಕ್ಷಿಸು ಅರ್ಥಾತ್ ಸರ್ವದಾ ನಾವು ನಿನ್ನ ಸಂಬಂಧಿಯಾದ ಅಗಾಧಜ್ಞಾನದಲ್ಲಿಯೇ ಮಗ್ನರಾಗಿರುವಂತೆ ಮಾಡು ಯಾಕಂದರೆ ನೀನು ಸರ್ವಸತ್ತಾಧೀಶನಾದ ಸ್ವಾಮಿಯು ನಿನ್ನ ಸೃಷ್ಟಿನಿಯಮಕ್ಕೆ ವಿರುದ್ಧ ನಡೆಯುವಂಥಾ ಹಾಗೂ ನಿನ್ನ ನಿಜಸ್ವರೂಪವನ್ನರಿಯಲು ಪ್ರಯತ್ನಿಸದೇ ಇದ್ದಂಥಾ ಪ್ರಾಣಿಗಳ ಶಾಸನದಲ್ಲಿ ನೀನು ಯಾವಾಗಲೂ ಉತ್ಸಾಹಿತನಾಗಿರುವಿಯಾದ್ದರಿಂದ ನಮ್ಮ ಸತ್ಯಜ್ಞಾನಾನುಸಂಧಾನ ವಿಷಯದಲ್ಲಿ ವಿಘ್ನಕಾರಿಗಳಾದ ಇಂದ್ರಿಯಗಳ ಸದಸದ್ವಿವೇಕರಹಿತವಾದ ಸ್ವೇಚ್ಛಾ ವಿಹಾರವನ್ನು ಪ್ರತಿಬಂಧ ಮಾಡೆಂಬದಾಗಿ ಋಷಿಗಳು ಅನನ್ಯಭಾವನೆಯಿಂದ ಈಶ್ವರನನ್ನು ಪ್ರಾರ್ಥಿಸಿಕೊಂಡಿರುವರು." ಈ ರೀತಿಯಾದ ದಿವ್ಯಮಂತ್ರಾರ್ಥವನ್ನು ಗೋವಿಂದನಾಥ ಗುಹ ಎಂ. ಎ. ಯವರು ಅರಿಯದೆ ಈ ಮಂತ್ರಗಳಲ್ಲಿರುವ ಶಿಶ್ನಶಬ್ದವು ಲಿಂಗವಾಚಕವೆಂತಲೂ, ಲಿಂಗ ಮತ್ತು ಲಿಂಗಪೂಜೆಯು ಆಚಾರವಿಚಾರಗಳನ್ನು ನರಮಾಂಸಭಕ್ಷಕ, ಅಸತ್ಯ, ಅನ್ಯಾಯ, ಅನೀತಿ ಮೊದಲಾದ ದುರ್ಗುಣಗಳಿಂದ ವ್ಯಾಪ್ತರಾದ ಅನಾರ್ಯ ರಾಕ್ಷಸರು ನಿರ್ಮಿಸಿದರೆಂತಲೂ ಲಿಂಗಪೂಜೆಯು ಕೇವಲ ರಾಕ್ಷಸಧರ್ಮವೆಂತಲೂ ವೇದಸಮಯದಿಂದ ಕೆಲವು ಕಾಲದವರೆಗೆ ರಾಕ್ಷಸರಿಗೂ ಆರ್ಯರಿಗೂ ಭಯಂಕರಗಳಾದ ಕಲಹಗಳು ನಡೆದು ಕಾಲಾಂತರದಲ್ಲಿ ಉಭಯರಿಗೂ ಒಪ್ಪಂದದ ಸಮಯವು ಒದಗಿ ಈ ರಾಕ್ಷಸರ ಲಿಂಗಪೂಜಾವೃತ್ತಿಯನ್ನೂ ಹಾಗೂ ರಾಕ್ಷಸ ಕನ್ಯಕೆಯರನ್ನು ಆರ್ಯರು ಅಂಗೀಕರಿಸಿದರೆಂತಲೂ ಮತ್ತು ಆರ್ಯರ ಯಜ್ಞಯಾಗಾದಿಗಳನ್ನೂ ಹಾಗೂ ಆರ್ಯಕನ್ಯಕೆಯರನ್ನೂ ರಾಕ್ಷಸರು ಅಂಗೀಕರಿಸಿದರೆಂತಲೂ, ಇದರಂತೆ ಪರಸ್ಪರ ಒಪ್ಪಂದವಾದನಂತರ ಆರ್ಯರು ಈ ರಾಕ್ಷಸಧರ್ಮವಾದ ಲಿಂಗಪೂಜೆಯನ್ನು ಮಾಡಲು ಪ್ರಾರಂಭಿಸಿದ್ದು ಇದು ಸರ್ವಥಾ ಅನಾರ್ಯವೃತ್ತಿಯಾಗಿದ್ದರೂ "ಅಗ್ನಿರ್ವೈರುದ್ರಃ" ಎಂದು ಶತಪಥಾದಿ ಬ್ರಾಹ್ಮಣ ಸಂಹಿತೆಗಳಲ್ಲಿ ರುದ್ರನೇ ಲಿಂಗವಾಚಕನಾಗಿದ್ದು ಆ ರುದ್ರನೇ ಅಗ್ನಿಸ್ವರೂಪ ಅಗ್ನಿವಾಚಕನೆಂತಲೂ ರುದ್ರಾಗ್ನಿಯರ ಅಭೇದವನ್ನು ತೋರಿಸಿಕೊಂಡು ಆರ್ಯರಲ್ಲಿ ಲಿಂಗಪೂಜೆಯು ಪ್ರಾರಂಭವಾಯಿತೆಂದು ಹಾಗೂ ಇದಕ್ಕೆ ವಾಲ್ಮೀಕಿ ರಾಮಾಯಣ ಉತ್ತರಕಾಂಡದ, ಮತ್ತು ಲಿಂಗಪುರಾಣದ ಕೆಲವು ಶ್ಲೋಕಗಳನ್ನು ಪ್ರಮಾಣವನ್ನಾಗಿ ಕೊಟ್ಟಿರುವರು. ರಾಕ್ಷಸರ ನರಮಾಂಸ ಭಕ್ಷಣೆ ಮೊದಲಾದ ವ್ಯಕ್ತಿಯಬಗ್ಗೆ ಋಗ್ವೇದ, ರಾಮಾಯಣ ಮೊದಲಾದುವುಗಳು. "ನಿಯತಾಃ ಸರ್ವಕಾಲೇಷು ಏವಿರ್ಭೈರ್ನಿಯಮೈರ್ವನೇ | ಭಕ್ಷ್ಯಂತೇರಾಕ್ಷಸೈ ರ್ಘೋರೈರ್ವಿಕೃತೈರ್ವನಚಾರಿಭಿಃ || (ರಾಮಾ- ಅರಣ್ಯ- ಸರ್ಗ ೩-೨೩) ಎಹಿಪಶ್ಯ ಶರೀರಾಣಿ ಮುನೀನಾಂ ಭಾವಿತಾತ್ಮನಾಂ | ಹಂತಾನಾಂ ರಾಮರಕ್ಷೋಭಿರ್ಬಹೂನಾಂ ಬಹುಧಾವನೇ || (ರಾಮ-ಅರಣ್ಯ- ಸರ್ಗ ೨-೧೮) ವೃತೆಜಾಪ್ಯಸಮಾಪ್ತೇ ಮೆಯಜ್ಞಘ್ನಾರಾಕ್ಷಸಾಧನಾ || ವೇದಿಃ ಮಭ್ಯೇತ ಕರಸಾರುಧಿರೇಣಾಭ್ಯವರ್ಷತಾಂ || (ರಾಮ-ಆದಿ-ಸ-೩-೬)

ಇವೇ ಮೊದಲಾದ ಶ್ಲೋಕಗಳನ್ನು ಆಧಾರ ತೋರಿಸಿ, "ಅಸಂಶ್ಯಾರ್ಯಾವರ್ತಸ್ಯ ಮಹಾವನೇಷುದಂಡಕಾಯಾಂಚನರಭಕ್ಷ ಕಾಲಿಂಗೋಪಾಸಕಾಶ್ಚ ನರಾ ರಾಕ್ಷಸಾನಾಮ | ನವರಿಜಗ್ಮುಹುಸ್ತೆ ಆರ್ಯಾಣಾಮೇಕ ಮಪಿ ದೇವಂ | ನಕೇವಲಂ ತೆ ಅಕರ್ಮಾಣೋ ಅದೇವಯಜೋ ಅನ್ಯಚೋ ಅನ್ಯತಾ ಅಬ್ರಾಹ್ಮಣೋ ಅಯಜ್ವಾನಶ್ಚಾ ಸನ್ | ಪ್ರತ್ಯುತ ಯಜ್ಞವೇದಿಸ್ತರಸಾಭ್ಯುಪೇತ ರುಧಿರೇಣಾಭಿವವೃಷುಃ ಮಹರ್ಷೀಣ್‌ಭಕ್ಷಯಾಮಾಸುಃ | ತತಃಕೇಚಿದ್ಯಾಗೇನಾಗ್ನಿ ಮೂರ್ತಿಂಲಿಂಗಮುಪಾಸಾಂ, ಲಿಂಗರುದ್ರ........ ಯೋರುದ್ರಾಗ್ನ್ಯೋಃ ಶ್ಚಾಭೇದೋಪಲಿಂಗಾತ್ | ಏವಮೇವಕ್ರಮೇಣ ವೈದಿಕಧರ್ಮೇ ಅಂಶತಃ ಆರ್ಯರಾಕ್ಷಸೇನಾಶಿಶ್ರಿಯೇ ಇತ್ಯಾದಿ" (ಇದಕ್ಕೆ ಪ್ರಮಾಣಗಳನ್ನಾಗಿ ಋಗ್ವೇದಾದಿ ಮಂತ್ರಗಳನ್ನೇ ತೋರಿಸಿರುವರು.

ಈರೀತಿಯಾದ ಗೋವಿಂದನಾಥ ಗುಹ ಎಂಬುವರ ಶೋಧವೂ ಹಾಗೂ ವಿಚಾರವೂ ಎಷ್ಟು ತುಚ್ಛ ಹಾಗೂ ಹಾಸ್ಯಾಸ್ಪದ ಎಂಬುವದನ್ನು ವಾಚಕರು ಲಕ್ಷದಲ್ಲಿತಂದು ಮತ್ತು ಇದರಂತೆ ತಾ|| ೨೮-೨-೧೯೨೨ ನೇ ಪುಣೆಯ ಮರಾಠಿ ಕೇಸರೀ ಪತ್ರದಲ್ಲಿ "ಅಸ್ಪೃಶ್ಯವಿಚಾರ; ಲೇಖಾಂಕ, ೮, ಎಂಬುವಲೇಖದಲ್ಲಿ ಲೇಖಕರಾದ ಶ್ರೀ, ಮ, ಮಾಡೆ, ಎಂಬ ಪಂಡಿತಂಮನ್ಯರು ಲಿಂಗಪೂಜಾ, ಹಾಗೂ ಶಿವ, ಲಿಂಗ ವಗೈರೆ ವಿಷಯಕ್ಕೆ ಎಷ್ಟು ನೀಚತರವಾದ ವಿಚಾರಗಳನ್ನು ಪ್ರಕಟಿಸಿರುವರೆಂಬುದನ್ನೂ ವಾಚಕರು ಆ ಪತ್ರದಲ್ಲಿಯ ದೊಡ್ಡದಾದ ಲೇಖವನ್ನು ಸಂಪೂರ್ಣ ಓದುವದರಿಂದಲೇ ತಿಳಿದು ಬರುವದು. ಅದರಲ್ಲಿ ರಾ|| ಮಾಡೇಯವರು, "ಶಿವನು — ಅನಾರ್ಯರಪಕ್ಷಪಾತಿಯೂ, ಅನಾರ್ಯರ ದೇವತೆಯಾಗಿಯೂ, ಆರ್ಯರನ್ನು ತನ್ನ ತಹಬಂದಿಯಲ್ಲಿಟ್ಟುಕೊಳ್ಳುವ ಅಕರಾಳ ವಿಕರಾಳಸ್ವರೂಪದಿಂದ ಕೂಡಿದ ಹಿಮಾಲಯಪರ್ವತದ ಸುತ್ತಲೂ ತಿರುಗುವ ಅನಾರ್ಯರ ಪುಢಾರಿಯಾದ ಜಂಗಲಿಮನುಷ್ಯನೆಂತಲೂ ಆರ್ಯರ ಮಹಾಶತ್ರುವಾದ ರಾವಣನನ್ನೇ ಪಟ್ಟಶಿಷ್ಯನನ್ನಾಗಿ ಮಾಡಿಕೊಂಡಿದ್ದನೆಂತಲೂ, ಈ ರೀತಿಯಾದ ಅನಾರ್ಯ ಶಿವನಿಗೆ ಹಿಮಾಲಯದಲ್ಲಿರುವ ಆರ್ಯದಕ್ಷನಕನ್ಯಕೆಯಾದ ಪಾರ್ವತಿಯು ಸಿಕ್ಕಿದಳೆಂತಲೂ, ಈ ಪಾರ್ವತಿಯು ತಂದೆಯಾದ ದಕ್ಷನಿಗೆ ಅಳಿಯನಾದ ಶಿವನ ಅಮಂಗಲವೇಷ, ಭಾಷಾ ಆಕೃತಿ, ವಂಶವೊದಲಾದವುಗಳು ಸೇರದ್ದರಿಂದ ಪಾರ್ವತಿಗೆ ಆಕೆಯ ಗಂಡನಮನೆಗೆ ಕಳುಹಿಸುವುದು, ಲಗ್ನದಲ್ಲಿ ಅಳಿಯನನ್ನ ಕರಿಸುವದು ಇವೇಮೊದಲಾದ ಏನೊಂದು ಕಾರ್ಯಗಳನ್ನೂ ದಕ್ಷನು ಮಾಡದೇ ಇದ್ದದರಿಂದ ಶಿವನು ಸಿಟ್ಟಾಗಿ ಆರ್ಯದಕ್ಷನ ಯಜ್ಞ, ವಿಧ್ವಂಸಮಾಡಿದನೆಂತಲೂ ಈ ಯಜ್ಞಧ್ವಂಸವೇ ಶಿವನ ಅನಾರ್ಯತ್ವದ ಪ್ರತೀತಿಯಾಗಿರುವದೆಂತಲೂ ಒಂದಾನೊಂದು ಸಮಯದಲ್ಲಿ ಶಿವನಿಗೆ ಸಂತಾಪಬಂದು ಆ ತಾಪದ ಭರದಲ್ಲಿ ಶಿವನು ತನ್ನ ಲಿಂಗವನ್ನೇ ಕಡಿದು ಸರೋವರದಲ್ಲಿ ಹಾಕಿದನೆಂತಲೂ, ಆ ಲಿಂಗವನ್ನು ಪರಾಕ್ರಮಿಗಳಾದ ಭಕ್ತರಾಕ್ಷಸರು ತಮ್ಮ ದೇವತೆಯಾದ ಶಿವನ ಸ್ಮಾರಕ (ಗುರ್ತುಚಿನ್ನ) ವೆಂದು ಭಾವಿಸಿ ಒಳ್ಳೇಕಾಳಜೀಪೂರ್ವಕ ಅದನ್ನು ಕಾದಿಟ್ಟುಕೊಳ್ಳುವದಕ್ಕಾಗಿ ದಕ್ಷಿಣದಿಕ್ಕಿಗಿರುವ ತಮ್ಮ ಮನೆಗಳಲ್ಲಿ ಒಯ್ದಿಟ್ಟು ಅದನ್ನು ಅತಿಭಕ್ತಿ ಭಾವನೆಯಿಂದ ಪೂಜಿಸಲಾರಂಭಮಾಡಿದರೆಂತಲೂ ಅದೇ ಪೂಜೆಯೇ ಈಗ್ಗೂ ದಕ್ಷಿಣದೇಶದಲ್ಲಿ ವಿಶೇಷ ಪ್ರಸಾರದಲ್ಲಿರುವದೆಂತಲೂ, ಈ ರೀತಿಯಾದ ಲಿಂಗಪೂಜಾ, ಲಿಂಗಧಾರಣೆ ಮೊದಲಾದದ್ದನ್ನು ಅನಾರ್ಯರಿಂದ ಆರ್ಯರು ಸ್ವೀಕರಿಸಿದ್ದು ಆರ್ಯರ ಮೇಲೆ ಅನಾರ್ಯರ ದೇವನಾದ ಶಿವನ ಎಂಥಾಪ್ರೌಢವಿಜಯವಿದು ನೋಡಿರಿ. ಇಷ್ಟೇ ಅಲ್ಲದೇ ಕಾಶಿ ಮೊದಲಾದ ಮಹಾಮಹಾಕ್ಷೇತ್ರಗಳಲ್ಲಿಯೂ, ಉನ್ನತವಾದ ಗುಡ್ಡಗಾಡುಗಳ ಶಿಖರಗಳಲ್ಲಿಯೂ ಈ ಶಿವಲಿಂಗವೇ ಶಿವಲಿಂಗ, ಇದೇ ಆರ್ಯಅನಾರ್ಯರ ಒಪ್ಪಂದದ ದ್ಯೋತಕವು"—ಇತ್ಯಾದಿ ಬಹುರೀತಿ ಲಿಂಗವಿಷಯದಲ್ಲಿ ರಾ|| ಮಾಡೇಯವರು ಬಡಬಡಿಸಿದ್ದನ್ನು ಹಾಗೂ ಹಿಂದೆ ತೋರಿಸಿದ ಮಿ|| ಗುಹ ಎಂಬುವರ ಅಮಂಗಲವಾಣಿಯನ್ನೂ ಸಮಯಾನುಸಾರ ಅದೇ ಮಂತ್ರಗಳ ಆಧಾರದಿಂದ ಕೂಡಿದ ಕೆಲವು ಲೇಖನಗಳಿಂದ ಕ್ರಮಶಃ ತುಚ್ಛೀಕರಿಸುವೆವು. ಮತ್ತು ಪ್ರತಿಯೊಬ್ಬ ಲಿಂಗಾಂಗಿಯೇ ಆಗಲಿ, ಅಥವಾ ಸರ್ವಸಾಮಾನ್ಯನಾದ ಶೈವನೇ ಆಗಲಿ, ಲಿಂಗವಿಷಯಕ ಯಥಾರ್ಥಶೋಧಮಾಡಿ ಮೇಲೆ ತೋರಿಸಿದ ಪರರ ತುಚ್ಛವಿಚಾರಗಳನ್ನು ಹೋಗಲಾಡಿಸದಿದ್ದ ಪಕ್ಷದಲ್ಲಿ ಈಗೂ ಲಿಂಗೋಪಾಸನೆಮಾಡುವವರು ರಾಕ್ಷಸರೆಂತಲೂ ಅಥವಾ ರಾಕ್ಷಸಾನುಯಾಯಿಗಳೆಂತಲೂ ಪ್ರತಿ ಒಬ್ಬ ಲಿಂಗೋಪಾಸಕನಿಗೆ ನಿಂದ್ಯಧರ್ಮಾಸಕ್ತಿಯು ಹಾಗೂ ಧರ್ಮೋನ್ನತಿಗೆ ಬಾಧೆಯೂ ನಿಸ್ಸಂದೇಹವಾಗಿ ಬರುವದಾದ್ದರಿಂದ ಪ್ರತಿಒಬ್ಬರಿಗೆ ಇದರ ಯೋಗ್ಯವಿಚಾರಮಾಡುವದು ಅತ್ಯವಶ್ಯಕವಾಗಿರುವುದು.

ಇನ್ನು ಒಂದುವೇಳೆ ಲಿಂಗೋಪಾಸನೆಯು ಕೇವಲ ರಾಕ್ಷಸಧರ್ಮವಾಗಿದ್ದರೆ ಬಹುಕಾಲದವರೆಗೆ ಪರಕೀಯ ಕರ್ಮಗಳನ್ನು ಯಾವ ಆರ್ಯನೂ ಅಷ್ಟೊಂದು ಭಕ್ತಿಯಿಂದ ಅಂಗೀಕರಿಸುತ್ತಿದ್ದಿಲ್ಲ. ಏನೋ ಆಗನ ಕಾಲಕ್ಕಷ್ಟೇ ಕಲಹಶಾಂತಿಗಾಗಿ ಸ್ವೀಕರಿಸಿ ಕಾಲಾಂತರದಲ್ಲಿ ಅದನ್ನು ತ್ಯಜಿಸಿ ತಮ್ಮ ನಿಜಕರ್ಮದಲ್ಲಿಯೇ ನಿರತರಾಗುತ್ತಿದ್ದರು. ಆದರೆ ರಾ|| ಮಾಡಿಯವರು ಮುಸಲ್ಮಾನ ಧರ್ಮದ ಪೀಠಸ್ಥಾನ ಮೊದಲಾದವುಗಳನ್ನು ಹಿಂದುಗಳು ಮನ್ನಿಸಲು ಪ್ರಾರಂಭಮಾಡಿದ್ದೇ ಪರರ ಧರ್ಮವನ್ನು ಏಕೀಕರಿಸಿಕೊಳ್ಳುವ ಉದಾತ್ತ ವಿಚಾರವನ್ನು ಆರ್ಯರು ಅಂಗೀಕರಿಸುತ್ತ ಬಂದರೆನ್ನಲಿಕ್ಕೆ ಸಾಕ್ಷಿ ತೋರಿಸಿರುವರು. ಆದರೆ ಆಯಾಯ ಮುಸಲ್ಮಾನ ಮೊದಲಾದ ಧರ್ಮಗಳು ಆಯಾಯ ಧರ್ಮದವರಿಗೆ ನಿಜವಾಗಿ ಶ್ರೇಷ್ಠವಾಗಿಯೇ ಇರುವವು. ಆದರೆ ಯಾವನಾದರೂ ತನ್ನ ಮೊದಲಿನ ಧರ್ಮತ್ಯಾಗಮಾಡಿ ಪರಧರ್ಮವನ್ನು ಸ್ವೀಕರಿಸುವದು ಶ್ರೇಯಸ್ಕರವೆಂತಲೂ ಹೂಣ, ಯವನ, ಮ್ಲೇಚ್ಛ, ಕ್ರಿಸ್ತ ಮೊದಲಾದ ಪರಧರ್ಮಗಳನ್ನು ಸ್ವೀಕರಿಸೆಂತಲೂ ಯಾವ ಋಷಿಗಳೂ ಯಾವ ಗ್ರಂಥಗಳಲ್ಲಿಯೂ ಹೇಳಿದ್ದು ಕಂಡು ಬರುವದಿಲ್ಲ. ಇಷ್ಟೇ ಅಲ್ಲದೆ "ಸ್ವಧರ್ಮೇನಿಧನಂಶ್ರೇಯಃ ಪರಧರ್ಮೋಭಯಾವಹಃ" ಎಂದು ಭಗವದ್ಗೀತಾದಿ ಗ್ರಂಥಗಳಲ್ಲಿ ಪರಧರ್ಮ ಸ್ವೀಕರಿಸುವದನ್ನು ನಿಂದಿಸಿರುವರು. ಇನ್ನು ಲಿಂಗೋಪಾಸನೆಯು ಮತ್ತು ಲಿಂಗಧಾರಣೆಯು ಎಂದೂ ಹಾಗೆ ಪರಧರ್ಮವೆನಿಸದೇ ವೇದಗಳಲ್ಲಿ ಅತಿ ಪ್ರಾಧಾನ್ಯ ಪವಿತ್ರವಾದ "ಓಂತತ್ಸವಿತುರ್ವರೇಣ್ಯಂ ಇತ್ಯಾದಿ ಗಾಯತ್ರೀ ಮಂತ್ರದಿಂದಲೂ ಹಾಗೂ ಯಾಂ ಮೇಧಾಂ ದೇವಗಣಾ, ಮತ್ತು ಅಯಂಮೇಹಸ್ತೋ ಭಗವಾನ್, ಪವಿತ್ರಂತೆವಿತತಂ ಬ್ರಹ್ಮಣಸ್ಪತೇ" ಇತ್ಯಾದಿ ಋಗ್ವೇದ ಯಜುರ್ವೇದ ಮಂತ್ರಗಳಿಂದಲೂ ಲಿಂಗಧಾರಣ, ಪೂಜಾದಿಗಳು ಪ್ರತಿಪಾದಿಸಲ್ಪಟ್ಟಿದ್ದು, ಆ ಲಿಂಗಧಾರಣ ಪೂಜಾದಿಗಳ ದೆಸೆಯಿಂದಲೇ ಋಷಿಗಳು ಅನಂತಶಾಸ್ತ್ರಗಳನ್ನು ಸಹ ನಿರ್ಮಿಸಿ ತಮ್ಮ ಅಭೀಷ್ಟ ದೇವತೆಗಳಾದ ವಿಷ್ಣು, ಬ್ರಹ್ಮೇಂದ್ರಾದಿ ಮೂರ್ತಿಗಳಲ್ಲಿಯೂ ಆ ಪರಶಿವಮೂರ್ತಿಯನ್ನುಧರಿಸಿ, ದಿವ್ಯಜ್ಞಾನಿಗಳಾದ ತಾವೂ ಅದನ್ನು ಹಸ್ತಮಸ್ತಕಗಳಲ್ಲಿ ಧರಿಸಿ ಅನನ್ಯಭಾವನೆಯಿಂದ ಆ ಋಷಿಗಳು ಪೂಜಿಸಿರುವರು. ಅಲ್ಲದೇ ಇದು ಆರ್ಯಧರ್ಮವಾಗಿರದಿದ್ದ ಪಕ್ಷದಲ್ಲಿ ಹ್ಯಾಗೆ ಪೂಜಿಸಾರು ? ಇತ್ಯಾದಿ ಅಮೌಲ್ಯ ವಿಚಾರಗಳನ್ನು ಲಕ್ಷ್ಯಕ್ಕೆ ತರದೇ ಐರೋಪ್ಯ ಮಿಷನರೀ ಜನರು "ತುಮ್‌ಲೋಕ ಮಟ್ಟೀಕಾ ಗಾಣಪತೀಕಾ ಮೂರ್ತೀಬನಾಕೇ ಪೂಜಾಕರತೇಹೋ (ಅಂದರೆ ನೀವು ಮಣ್ಣಿನ ಗಣಪತಿ ಮಾಡಿ ಪೂಜಿಸುವಿರಿ) ಎಂದು ಅನ್ನುವ ಕುಚೇಷ್ಟೆಯ ಅಬದ್ಧಪ್ರಲಾಪಗಳನ್ನು ಕೇಳುವಂತೆ ರಾ|| ಗುಹ, ಮಾಡಿ ಮೊದಲಾದವರ ವಿಚಾರಗಳು ವಿಸಂಗತವಾಗಿದ್ದು ಅವರು ನಿಜವಾದ ವೈದಿಕ ಧರ್ಮವನ್ನು ಇನ್ನೂ ರಸಾತಲಕ್ಕೆ ಹಾಕಬೇಕೆಂಬ ಪ್ರಯತ್ನದಲ್ಲಿದ್ದಂತೆ ಕಂಡುಬರುವದು. ಆದರೆ ಇದರಿಂದ ಕೋಮಲ ಮನಸ್ಕರಾದ ಭಾರತೀಯ ತರುಣ ವಿದ್ಯಾರ್ಥಿಗಳಿಗೆ ಕಾಲೇಜ ಮೊದಲಾದ ಸಂಸ್ಥೆಗಳಲ್ಲಿ "ಬಾಯಬಲ್" ಮೊದಲಾದ ಧಾರ್ಮಿಕ ಶಿಕ್ಷಣವು ಸಕ್ತಿಯಿಂದ ಕೊಡುವದು ಎಷ್ಟು ಅನಿಷ್ಟಕರವೆಂಬುವದನ್ನು ವಿಚಾರಿಸಿ ಈ ಬಾಯಬಲ್ ಮೊದಲಾದ ಪರಕೀಯರ ಧಾರ್ಮಿಕ ಶಿಕ್ಷಣದ ಸಕ್ತಿಯನ್ನು ಕಾಲೇಜ ಮೊದಲಾದ ಸಂಸ್ಥೆಗಳಿಂದ ತೆಗೆದುಹಾಕಿ ಬಿಡಬೇಕೆಂದು ಕೆಲವು ದಿವಸಗಳ ಪೂರ್ವದಲ್ಲಿ ಸಂಯುಕ್ತಪ್ರಾಂತದ ಕೌನ್ಸಿಲದ ಮುಂದೆ ಪಂಡಿತ ಹೃದಯನಾಥ ಕುಂಜ್ರುರು ಎಂಬುವರು ಠರಾವನ್ನು ತಂದು ಅದನ್ನು ಪಾಸಮಾಡಿಕೊಂಡಂತೆ ಮುಂಬಯಿ ಕಾಯಿದೆ ಕೌನ್ಸಿಲದಲ್ಲಿಯೂ ಇದೇ ತಿಂಗಳಲ್ಲಿ ಕುಲಾಬಾ ಜಿಲ್ಲೆಯ ರಾಧಡೆ ವಕೀಲ ಎಂಬ ಮೆಂಬರರು ಈ ವಿಷಯವಾಗಿ ಠರಾವು ತರುವವರಿದ್ದು ಅದನ್ನು ಪಾಸಮಾಡಿಕೊಳ್ಳುವದು ಮುಂಬಯಿ ಪ್ರಾಂತದವರಿಗೆ ಎಷ್ಟು ಹಿತವಾಗಿಯೂ, ಎಷ್ಟು ಸುಖಕರವಾಗಿಯೂ ಇರುವದೆಂಬುವದನ್ನು ವಾಚಕರೇ ಊಹಿಸಬಹುದು.

ಲೇಖಕ, ಸ್ವಾಮಿ ವಿರೂಪಾಕ್ಷವಡೆಯರ್,
ಪ್ರೊಫೇಸರ, ಸಂಸ್ಕೃತಕಾಲೇಜ, ಇಂದೋರ.

ಗೆಜ್ಜೆ ಕಟ್ಟದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 2

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬಿನಾಯಕನ ಬೀದಿ, ಮದರಾಸು.

೧೯೨೨ನೆಯ ಇಸವಿ ಮಾರ್ಚಿ ತಾ|| ೨೬ರಿಂದ ೧೯೨೨ನೆಯ ಏಪ್ರಿಲ್ ತಾ|| ೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೩ನೆಯ ದುರ್ಮತಿನಾಮಸಂವತ್ಸರದ ಫಾಲ್ಗುಣಬಹುಳ ತ್ರಯೋದಶಿಯಿಂದ ಶಾಲಿವಾಹನಶಕ ೧೮೪೪ನೆಯ ದುಂದುಭಿನಾಮ ಸಂವತ್ಸರದ ಚೈತ್ರಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಾನ ಮಾಸ
26	ಭಾನು	ತ್ರಯೋ	17-33	ಶತ	26-10	13
27	ಸೋಮ	ಚತು	22-54	ಪೂಭಾ	32-51	14
28	[1]ಮಂಗಳ	ಅಮಾ	27-51	ಉಭಾ	39-2	15
29	[2]ಬುಧ	ಪಾಡ್ಯ	32-7	ರೇವ	44-35	16
30	ಗುರು	ಬಿದಿ	35-57	ಅಶ್ವಿ	50-16	17
31	ಶುಕ್ರ	ತದಿಗೆ	39-2	ಭರ	53-12	18
1	ಶನಿ	ಚೌತಿ	39-13	ಕೃತ್ತಿ	55-0	19

(1) ಸರ್ವತ್ರ ಅಮಾವಾಸ್ಯೆ. (2) ಚಾಂದ್ರಸಂವತ್ಸರಾದಿಃ, ನಿಂಬಾಕುಸುಮಭಕ್ಷಣಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮತಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸ೯ ೧೯೨೨ ನೆಯ ಇಸವಿ ಏಪ್ರಿಲ್ ತಾರೀಖು ೨ ನೆಯ ಭಾನುವಾರ (ಸಂಚಿಕೆ ೧೪

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾನುಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

SREE SITHARAGHAVA VAIDYASALA

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
12 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಸ್ಖಲಿತ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಪಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಪಟಕೂಲಿ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ತುರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 10

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಸಂಚಿಕೆ	೦—೯—೦

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೇಜ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು.

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಆಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಿಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಚಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭೂತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಕರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆಕೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ
ಅಂಡ್ ಸನ್ಸ್, ಕರ್ನಾಟಕ ಬುಕ್ ಡಿಪೋ ಪ್ರೆಸ್,
9 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ—ಶಿವನ ಪಂಚವಿಂಶತಿ ಲೀಲೆಗಳು—ಅನೇಕ ಶಿವಶರಣರ ಚರಿತ್ರೆಗಳು—ಷಟ್‌ಸ್ಥಲ ಪ್ರಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
13 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಏಪ್ರಿಲ್ ತಾ|| ೨ ನೆಯ ಭಾನುವಾರ.

ಹೊಸ ತೆರುಗೆಗಳು.

ಭರತಖಂಡದ ಪ್ರಭುತ್ವದ ಆಯವ್ಯಯ ಪಟ್ಟಿಯ ಮತ್ತು ಹೊಸ ತೆರುಗೆಗಳ ವಿಧಿಯ ಮೇಲಣ ಚರ್ಚೆಯು ಸಾಮ್ರಾಜ್ಯ ಶಾಸನ ಸಭೆಯಲ್ಲೂ ಸ್ಟೇಟ್ ಕೌನ್ಸಿಲ್ಲಿನಲ್ಲೂ ವಿಸ್ತಾರವಾಗಿ ನಡೆಯಿತು. ಆದರೇನು? ಫಲವು ಮಾತ್ರ ಬೆಟ್ಟವನ್ನಗೆದು ಇಲಿಯನ್ನು ಹಿಡಿದಂತಾಯಿತು. ೧೪೨|| ಕೋಟಿ ರೂ. ಗಳ ವೆಚ್ಚದಲ್ಲಿ ೯೫ ಲಕ್ಷ ರೂ. ಗಳನ್ನು ಮಾತ್ರ ಕಡಿಮೆ ಹಾಕಿಸಲು ಸಾಧ್ಯವಾಯಿತು. ಆದುಕಾರಣ ವೆಚ್ಚಕ್ಕೆ ಸಾಲದೆಹೋಗುವ ದೊಡ್ಡ ಮೊತ್ತವನ್ನು ನೂತನವಾಗಿ ಹುಟ್ಟಿಸಿಕೊಳ್ಳಲು ಹೊಸ ತೆರುಗೆಯ ವಿಧಾಯಕದ ಮಾರ್ಗವನ್ನು ಸಭಿಕರು ಒಪ್ಪಿಯೇ ತೀರಬೇಕಾಯಿತು. ಆದರಲ್ಲೂ ಸರ್ಕಾರದವರು ಸೂಚಿಸಿದ್ದ ವಿಧಾನಗಳಲ್ಲಿ ಕೆಲವನ್ನು ಸಭಿಕರು ಬಿಗಿಪಟ್ಟು ಹಿಡಿದು ಒಪ್ಪದೆಹೋದರು. ಉಪ್ಪಿನ ಮೇಲಣ ಸುಂಕವನ್ನು ಹೆಚ್ಚಿಸುವುದಕ್ಕೆ ಸಭಿಕರು ಒಪ್ಪಲಿಲ್ಲ. ಮತ್ತು ಪರದೇಶಗಳಿಂದ ಬರುವ ಬಟ್ಟೆಗಳ ಮೇಲಣ ಸುಂಕವನ್ನು ೧೦೦ಕ್ಕೆ ೧೧ ರಿಂದ ೧೫ ರ ವರೆಗೆ ಹೆಚ್ಚಿಸಬೇಕೆಂದು ಬಡ್ಜೆಟ್ಟಿನಲ್ಲಿ ಕಾಣಿಸಲ್ಪಟ್ಟಿದ್ದ ಸೂಚನೆಯನ್ನೂ ಮತ್ತು ಸ್ವದೇಶದಲ್ಲಿ ನಿರ್ಮಿತವಾಗುವ ಬಟ್ಟೆಗಳ ಮೇಲೆ ೧೦೦ಕ್ಕೆ ೩|| ಯಂತೆ ವಿಧಿಸುತ್ತಿದ್ದ ಸುಂಕವನ್ನು ೭|| ಗೆ ಹೆಚ್ಚಿಸಬೇಕೆಂದಿದ್ದ ಸೂಚನೆಯನ್ನೂ ಸಹ ಸಭಿಕರು ತಿರಸ್ಕರಿಸಿಬಿಟ್ಟರು. ಇದರಿಂದ ಉಪ್ಪಿನ ಬೆಲೆ ಏರದಿರುವುದಕ್ಕೂ ಸ್ವದೇಶವಿದೇಶದ ಬಟ್ಟೆಗಳ ಬೆಲೆಯು ಮತ್ತಷ್ಟು ಏರಿಕೊಳ್ಳದಿರುವುದಕ್ಕೂ ಸ್ವಲ್ಪಮಟ್ಟಿಗೆ ಅನುಕೂಲವಾಯಿತು. ಆದರೆ ಅಂಚೆಯ ದರವನ್ನು ಹೆಚ್ಚಿಸುವುದನ್ನೂ ಬೆಂಕಿಕಡ್ಡಿಯ ಪೆಟ್ಟಿಗೆ ಮೇಲಣ ಸುಂಕವನ್ನು ಹೆಚ್ಚಿಸುವುದನ್ನೂ ಸೀಮೆಯೆಣ್ಣೆಯ ಮೇಲೆ ಹೊಸದಾಗಿ ಸುಂಕ ಹೇರುವುದನ್ನೂ ತಪ್ಪಿಸಬೇಕೆಂದು ಸಭಿಕರು ಮಾಡಿದ ಸಾಹಸವೆಲ್ಲಾ ವ್ಯರ್ಥವಾಯಿತು. ಕಾರ್ಡಿಗೆ ಅರ್ಧಾಣೆ ಕವರಿಗೆ ೧ ಆಣೆ ಬೆಲೆಯು ಸಿದ್ಧವಾಯಿತು. ಇದರಿಂದ ಬಡಪ್ರಜೆಗಳ ಮೇಲೆ ಭಾರವು ಹೆಚ್ಚಲವಕಾಶವಾಯಿತು. ಅಂತೂ ಕಡೆಗೆ ಆದ ಪರ್ಯವಸಾನವೇನೆಂದರೆ ಹೊಸ ತೆರುಗೆಗಳಿಂದ ೨೯ ಕೋಟಿ ರೂ. ಗಳ ವರಮಾನವನ್ನು ಹೆಚ್ಚಿಸಿಕೊಳ್ಳಬಹುದೆಂದು ಬಡ್ಜೆಟ್ಟಿನಲ್ಲಿ ಸೂಚಿಸಲ್ಪಟ್ಟಿದ್ದುದಕ್ಕೆ ಸಭೆಯ ಚರ್ಚಾಪರಿಣಾಮದಲ್ಲಿ ೧೯|| ಕೋಟಿ ರೂ. ಗಳನ್ನು ಮಾತ್ರ ಹುಟ್ಟಿಸಿಕೊಳ್ಳಬಹುದೆಂದು ಸಿದ್ಧವಾಯಿತು. ಇದರಿಂದ ಇನ್ನೂ ೯ ಕೋಟಿ ಚಿಲ್ಲರೆ ರೂ. ಗಳು ವೆಚ್ಚಕ್ಕೆ ಸಾಲದೆ ಹೋಗುತ್ತವೆ. ಇದನ್ನು ಯಾವ ದಾರಿಯಲ್ಲೂ ಭರ್ತಿಮಾಡಿಕೊಳ್ಳಲು ಅವಕಾಶವಿಲ್ಲದಿರುವಾಗ ಸಾಲಮಾಡಿಯೇ ತುಂಬಿಕೊಳ್ಳುವರೆಂದು ಹೇಳಬೇಕಾಗುತ್ತದೆ. ಸೈನ್ಯದ ವೆಚ್ಚ ೬೨ ಕೋಟಿಯಲ್ಲಿ ೧ ಕಾಸನ್ನೂ ಕೂಡ ಕಡಿಮೆ ಮಾಡಲು ಸಭಿಕರ ಆಧೀನದಲ್ಲಿ ಅಧಿಕಾರವಿಲ್ಲ. ರೈಲ್ವೆವೆಚ್ಚಗಳನ್ನು ತಗ್ಗಿಸಲಾಗಲಿಲ್ಲ. ಶಾಸನಸಭೆಯವರು ಮಾಡಿದ ತೀರ್ಮಾನಗಳನ್ನೇ ಸ್ಟೇಟ್ ಕೌನ್ಸಿಲ್ಲಿನವರೂ ಕೂಡ ಅಂಗೀಕರಿಸಿದರು. ಪ್ರಭುತ್ವದವರೂ ಕೂಡ ಈ ಮೇಲ್ಕಂಡಂತೆ ಆದ ತೀರ್ಮಾನಗಳಿಗೇ ಅನುಮತಿಸಿದರೆಂದು ಅರ್ಥಿಕಸಭ್ಯರಾದ ಮಿ|| ಹೆಯಲಿಯವರು ಆಡಿತೋರಿಸಿರುವುದರಿಂದ ಈ ಮೇಲ್ಕಂಡ ನಿರ್ಧಾರಗಳ ಮೇಲೆ ಮುಂದೆ ಪ್ರಭುತ್ವದವರು ಯಾವ ಬದಲಾವಣೆಯನ್ನೂ ಮಾಡುವಂತೆ ತೋರಲಿಲ್ಲ. ಆದರೂ ಈ ಪರ್ಯವಸಾನದಿಂದ ಸರ್ಕಾರದ ಹಣದ ಕೊರತೆಯೆಲ್ಲಾ ನೀಗಿದಂತಾಗಲಿಲ್ಲ. ಪದಾರ್ಥಗಳ ಬೆಲೆಯು ಹೆಚ್ಚಿಹೋಗಿ ಪ್ರಜೆಗಳು ಆ ಭಾರವನ್ನು ಹೊರುವುದು ತಪ್ಪಲಿಲ್ಲ. ಪ್ರಭುತ್ವದವರು ವೆಚ್ಚಗಳನ್ನು ಕಡಿಮೆಹಾಕಿಕೊಳ್ಳದೆ ಹೋದರೆ ಇಂಥ ದುಡ್ಡಿನ ಬಿಕ್ಕಟ್ಟು ತಪ್ಪುವ ಸಂಭವವೇ ಇಲ್ಲ. ಭರತಖಂಡಕ್ಕೆ ಯುದ್ಧಾದಿ ಸಂಭವಗಳು ಎತ್ತಲೂ ತೋರದಿರುವ ಈಗಣ ಕಾಲದಲ್ಲೂ ಸೈನಿಕವ್ಯಯವನ್ನು ಬಹಳ ಹೆಚ್ಚಿಗೆ ಇಟ್ಟುಕೊಂಡಿರುವುದೇ ಭಾರತಪ್ರಭುತ್ವದ ಆರ್ಥಿಕಸ್ಥಿತಿಯ ಹೀನಾವಸ್ಥೆಗೆ ಮೂಲಭೂತವಾಗಿದೆ. ಅದನ್ನು ಪರಿಹರಿಸುವ ಕಡೆಗೆ ಪ್ರಭುತ್ವದವರು ಮನಸ್ಸು ಕೊಟ್ಟರೆ ದೇಶಕ್ಕೆ ಸುಖವಾಗುವುದು.

THE NEW DEWAN OF MYSORE.

Our contemporary "The Daily Post" says that it is in a position to State that Sir M. Kantaraj Urs, K.C.I.E., C.S.I., will retire on the expiry of his leave and Mr. A. R. Banerji, I.C.S., C.S.I., C.I.E., the officiating Dewan will be confirmed. The New Dewan requires no introduction to the Mysore public. For six years he has been in the State as Councillor. He has also acted as Dewan for six months during the illness of Sir Kantharaj Urs, and this short period of his Dewanship was marked by much ability, firmness, and courage He has always been known as a capable administrator. His work in Cochin is still remembered well. As Dewan of Cochin, he was a Cochinite. As Dewan of Mysore, we earnestly hope he will be a genuine Mysorean. It might be, as Councillor he did not find sufficient incentive to come out with his best for the State. But we have no doubt that with his acknowledged ability and throughness, with the driving power that he possesses to run the administrative machinary and with the independence for which he is conspicuous he will prove to be one of the most successful Dewans of Mysore. We learn with pleasure that he is likely to sever his connection with the British Service. Freed from British official strings he will be at liberty to work out here his ideas into practice unhampered. It may be worthy of note that he is the first Bengalee to become the Dewan of this ancient State, and we are sure he will bring to play his wide and liberal outlook and his large sympathies into the administration of the State. Mysore has entered on an era of progress, as landmarks of which stand the liberal measures inaugurated by Sir M. Kantaraj Urs and we sincerely hope that the same liberal policy will characterise Mr. Banerji's *regime.*

We cannot deny that Mr. Banerji is assuming the reigns of his office at a very critical time when the financial situation is most embarrassing, as a result of the wreckless expenditure in the past. Though, be it said to the lasting credit of Sir M. Kantaraj Urs—he did much to improve the financial condition of the State—still the final solution has not yet been offered. We cannot also deny that the reactionary and conservative elements here are still as strong as ever. Add to that, the unsympathetic element in Public Service is growing steadily. The country will remember the name of Mr. Banerji with gratitude if during his Dewanship he sets his foot firmly on the situation, effects drastic reductions in expenditure, liberalises the administration by introducing more of popular element into it and paves the way for Responsible Government in the State.

ಮುದ್ರಣಶಾಸನವನ್ನು ತೆಗೆದುಬಿಡುವುದು.

ಕಳೆದವಾರ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಮುದ್ರಣ ಶಾಸನವನ್ನು ತೆಗೆದುಬಿಡುವುದರ ಸಂಬಂಧವಾದ ವಿಧಿಯ ಚರ್ಚೆಯು ಬಂದಿದ್ದಿತು. ಇದು ಇದಕ್ಕೆ ಮುಂಚೆಯೇ ಉಪಪಾದಿತವಾಗಿದ್ದು ಅದರ ಮೇಲೆ ಉಪಸಂಘದವರ ವಿಮರ್ಶೆಗೆ ವಹಿಸಲ್ಪಟ್ಟಿದ್ದು, ಈಗ ಆ ಸಂಘದವರು ಮಾಡಿದ ತಿದ್ದುಪಾಟಿನೊಡನೆ ಸಭೆಗೆ ಬಂದಿದ್ದಿತು. ಮಸೂದೆಯಲ್ಲಿ ಪತ್ರಿಕಾ ಸಂಪಾದಕರ ಹೆಸರು ಪತ್ರಿಕೆಯ ಮೊದಲನೆ ಪುಟದ ಮೇಲೆ ಯಾವಾಗಲೂ ಮುದ್ರಿಸುತ್ತಿರಬೇಕೆಂಬ ನಿಬಂಧನೆಯಿದ್ದಿತು. ತಿದ್ದುಪಾಟಾದ ಮಸೂದೆಯಲ್ಲಿ ಆ ಹೆಸರನ್ನು ಪತ್ರಿಕೆಯ ಯಾವ ಪುಟದಲ್ಲಾದರೂ ಮುದ್ರಿಸಬಹುದೆಂದು ಕಾಣಿಸೋಣವಾಗಿದೆ. ಅಂತೂ ಸಂಪಾದಕರ ಹೆಸರು ಪತ್ರಿಕೆಯಲ್ಲಿ ಕಂಡಿರಬೇಕೆಂಬುದೇ ಸಿದ್ಧವಾಯಿತು. ಇದುವರೆಗೂ ಈ ತೆರದ ನಿರ್ಬಂಧವಿರಲಿಲ್ಲ. ಈ ಏರ್ಪಾಟು ಅನೇಕಮಂದಿ ಪತ್ರಿಕಾ ಸಂಪಾದಕರಿಗೆ ಸಂಮತವಾಗಲಾರದು. ಈ ನಿರ್ಬಂಧವನ್ನು ಏತಕ್ಕೆ ಕಲ್ಪಿಸಬೇಕೋ ತಿಳಿಯಲಿಲ್ಲ. ನಾಮಮಾತ್ರಕ್ಕೆ ಮುಂಚೂಣಿಗೆ ಯಾರನ್ನಾದರೂ ನಿಲ್ಲಿಸಿ ಅವರ ಹೆಸರನ್ನು ಮುದ್ರಿಸಿಬಿಟ್ಟು, ಒಳಗೆ ಯಾರುಬೇಕಿದ್ದರೂ ಪತ್ರಿಕಾ ಸಂಪಾದಕತ್ವವನ್ನು ನಿರ್ವಹಿಸುತ್ತಿರಬಹುದು. ಆಗ್ಗೆ ಈ ನಿರ್ಬಂಧದ ಚರಿತಾರ್ಥವೇನಾಗುವುದು? ಈಗಳಾದರೂ ಅನೇಕರು ಹಾಗೆಯೇ ಮಾಡುತ್ತಿರುವರು. ಮುದ್ರಣಶಾಸನವನ್ನು ತೆಗೆದುಬಿಡುವ ಪ್ರಯತ್ನವನ್ನೇನೋ ಪ್ರಭುತ್ವದವರು ಕಾಣಿಸುತ್ತಿದ್ದರೂ, ಬೇರೆ ತೆರದ ನಿರ್ಬಂಧಗಳನ್ನು ಬಲಮಾಡಿ ಮುದ್ರಣಶಾಸನದ ಹೆಸರುಮಾತ್ರ ಇಲ್ಲದಂತೆ ಮಾಡುವಹಾಗೆ ತೋರುತ್ತದೆ. ಈಸಲದ ಸಭೆಯಲ್ಲಿ ಈ ಶಾಸನದ ವಿಷಯವು ಮುಗಿಯಲಿಲ್ಲ; ಮುಂದಣ ಸಮಾವೇಶಕಾಲದಲ್ಲಿ ಇನ್ನು ಕೆಲ ತಿದ್ದುಪಾಟುಗಳನ್ನು ಮಾಡಿ ಸಭೆಯ ಮುಂದಿಡುವುದಾಗಿ ವಿನ್ಸೆಂಟ್‌ರವರು ಹೇಳಿರುವುದನ್ನು ನೋಡಿದರೆ ತೊಡಕುಗಳು ತಕ್ಕಷ್ಟು ಕಲ್ಪಿಸಲ್ಪಡುವುದರಲ್ಲಿ ಸಂಶಯವು ತೋರಲಿಲ್ಲ.

ಕೈ|| ಗೋಪಾಲಕೃಷ್ಣ ಗೋಖಲೆಯವರು.

ಬೊಂಬಾಯಿಯಲ್ಲಿ ನೂತನವಾಗಿ ಸ್ಥಾಪಿತವಾದ ಗೋಪಾಲಕೃಷ್ಣ ಗೋಖಲೆಯವರ ಶಿಲಾವಿಗ್ರಹದ ಪ್ರಕಾಶನಮಹೋತ್ಸವವನ್ನು ಬೊಂಬಾಯಿ ಗೌರ್ನರಾದ ಸರ್ ಜಾರ್ಜ್ ಲಾಯಿಡ್‌ರವರು ಕಳೆದವಾರ ಮಾಡಿದರು. ಆಗ್ಗೆ ಅವರು ಮಾಡಿದ ಭಾಷಣವು ಸಮಯೋಚಿತವಾಗಿ ಹೃದಯಂಗಮವಾಗಿದ್ದಿತು. ಕೈ|| ಗೋಖಲೆಯವರಂಥ ದೇಶಭಕ್ತರೂ, ರಾಜತಂತ್ರಜ್ಞರೂ, ದೀರ್ಘಾಲೋಚನಪರರೂ ಆದ ಮುಂದಾಳುಗಳು ಭರತಖಂಡದಲ್ಲಿ ಅವರ ಹೊರತು ಮತ್ತೊಬ್ಬರನ್ನು ಇದುವರೆಗೂ ಕಾಣುವುದು ಸಾಧ್ಯವಲ್ಲ. ಅವರಿಗೆ ಸಮಾನರಾದವರು ಅವರೇ ಎಂದು ಹೇಳಬೇಕಾಗುತ್ತದೆ. ದೇಶವನ್ನು ವಿಪ್ಲವಕ್ಕೆ ಹಚ್ಚದೆ ವಾಂಛಿತಸಿದ್ಧಿಗೆ ಯಾವ ತೆರದ ಸಾಧನವನ್ನು ಪರಿಗ್ರಹಿಸಬೇಕೆಂಬುದನ್ನು ಅವರು ಬಲು ಸಮರ್ಪಕವಾಗಿ ದಿಗ್ದರ್ಶನಮಾಡಿ ಕೊಡುತ್ತಿದ್ದರು. ಅವರ ಕಾರ್ಯದಲ್ಲೂ ಮಾತಿನಲ್ಲೂ ಪ್ರಜೆಗಳಿಗೆ ಹೇಗೋ ಹಾಗೆ ಪ್ರಭುತ್ವದವರಿಗೂ ವಿಶೇಷ ಗೌರವವಿದ್ದಿತು. ತಿಲಕ್, ಗಾಂಧಿ, ಮೇಥಾ, ಬಾನರ್ಜಿ, ಮಾಳವ್ಯ ಮೊದಲಾದ ಮುಂದಾಳುಗಳ ಕಾರ್ಯಜಾಲದಲ್ಲಿ ಎಷ್ಟೋ ಲೋಪದೋಷಗಳು ವ್ಯಕ್ತವಾಗಿ ದೇಶವನ್ನು ಅಲ್ಲಕಲ್ಲೋಲಸ್ಥಿತಿಗೆ ಒಯ್ಯುತ್ತಿರಬಹುದು. ಗೋಖಲೆಯವರ ಮಾರ್ಗದಲ್ಲಿ ಅಂಥ ದೋಷ ಲೇಶಕ್ಕೂ ಎಡೆಯಿರಲಿಲ್ಲ. ಅಂಥವರು ಇಲ್ಲದೆಹೋದುದರ ದುಷ್ಪರಿಣಾಮವೇ ಈಗ ಭರತಖಂಡದಲ್ಲಿ ತಾಂಡವವಾಡುತ್ತಿದೆ. ಬೊಂಬಾಯಿ ಗೌರ್ನರು ಮಾಡಿದ ಭಾಷಣದಲ್ಲಿ ಗೋಖಲೆಯವರು ಕಾಶಿಯಲ್ಲಿ ಕೂಡಿದ್ದ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾಡಿದ್ದ ಭಾಷಣದ ವಿಶೇಷ ಭಾಗಗಳನ್ನು ಎತ್ತಿ ಓದಿ ಗೋಖಲೆಯವರ ರಾಜಕೀಯ ತತ್ತ್ವಗಳು ಎಷ್ಟು ಸಮಂಜಸವಾಗಿದ್ದುವೆಂಬುದನ್ನು ಸ್ಪಷ್ಟಪಡಿಸುವಾಗ್ಗೆ—ಅವರ ಮರಣದಿಂದ ದೇಶಕ್ಕೆ ಎಷ್ಟು ಅಪಾರ ನಷ್ಟವಾಯಿತೆಂಬುದನ್ನು ಸಹಸ್ರಮುಖ ವಿಪ್ಲವದಲ್ಲಿ ಮುಳುಗಿರುವ ಭರತಖಂಡವು ಈಗ ತಿಳಿದುಕೊಳ್ಳಬಲ್ಲುದು. ಅವರು ಬದುಕಿದ್ದರೆ ಈಗಣಂಥ ದುಸ್ಥಿತಿಯು ಈ ದೇಶಕ್ಕೆ ಒದಗುತ್ತಲೇ ಇರಲಿಲ್ಲ; ಈಗಣಂಥ ಅಶಾಂತಿ ವಿಪ್ಲವ ಪ್ರಾಣನಷ್ಟಗಳೊಂದೂ ಸಂಭವಿಸುತ್ತಿರಲಿಲ್ಲವೆಂದು ನಾನು ತಿಳಿಯುತ್ತೇನೆ. ಅಧಿನಿವೇಶನಗಳಿಗಿರುವಂಥ ಸ್ವಪರಿಪಾಲನವೇ ರಾಷ್ಟ್ರೀಯ ಮಹಾಸಭೆಯವರ ವಾಂಛಿತವೆಂದು ಅವರು ತಮ್ಮ ಉಪನ್ಯಾಸದಲ್ಲಿ ಆಡಿ ತೋರಿಸಿದ್ದರು. ಪ್ರಭುತ್ವ ವಿದ್ಯಾಲಯಗಳನ್ನು ವಿದ್ಯಾರ್ಥಿಗಳು ದೂರೀಕರಿಸಕೂಡದೆಂದು ಅವರು ಎಚ್ಚರಿಸಿದ್ದರು. "ಆಂಗ್ಲೇಯರನ್ನು ನಂಬಕೂಡದು, ಅವರ ಕೈಕೆಳಗೆ ಭರತಖಂಡವು ವೃದ್ಧಿಗೆ ಬರಲಾರದು" ಎಂದು ಕೆಲವರು ವಾದಿಸುತ್ತಾರೆ. ಅದು ತಪ್ಪು ಎಂಬದಾಗಿ ಗೋಖಲೆಯವರು ಹೇಳಿದ್ದರು. ಅವರ ಅಭಿಪ್ರಾಯಗಳೆಲ್ಲಾ ಸಮಂಜಸವಾದುವು. ಅಧಿನಿವೇಶನಗಳ ಸ್ವಪರಿಪಾಲನ ಪ್ರಾಪ್ತಿಗೆ ಕ್ರಮಾಭ್ಯಾಸವು ಬೇಕು. ಅದಕ್ಕೆ ಕಾಲಾವಕಾಶವು ಅವಶ್ಯಕ. ಈಗಣ ಅಸಹಾಯವಾದಿಗಳು ವಿನಾಶಕರ ವಿಪ್ಲವಕರ ಮಾರ್ಗದ ಬೋಧೆಗಳನ್ನು ಮಾಡುತ್ತಿಧಾರೆ. ಇವರ ಬೋಧೆಗೂ ಗೋಖಲೆಯವರ ಬೋಧೆಗೂ ಬಹಳ ವ್ಯತ್ಯಾಸವಿರುವುದು. ದೇಶಭಕ್ತರಲ್ಲಿ ಗೋಖಲೆಯವರು ಅಗ್ರಗಣ್ಯರಲ್ಲವೆಂದು ಯಾರೂ ಹೇಳಲಾರರು. ಬರಿಯ ದೇಶಭಕ್ತಿಯೊಂದೇ ಇದ್ದರೆ ಸಾಲದು. ಅದರ ಜತೆಗೆ ವಿವೇಕ ವಿಜ್ಞಾನಗಳು ಜತೆಯಾಗಿದ್ದರೆ ಅಭಿವೃದ್ಧಿ ಸಾಧಕವಾಗುವುದು. ಅಭಿವೃದ್ಧಿಯು ಶೀಘ್ರವಾಗಿ ಆಗದಿದ್ದರೂ ಸಾವಧಾನವಾಗಿಯಾದರೂ ಪ್ರಾಪ್ತವಾಗುವುದು. ಇತ್ಯಾದಿಯಾಗಿ ಭಾಷಣ ಮಾಡಿದರು. ಅಂಧತಮೋ ರಾತ್ರಿಯಲ್ಲೂ ನಕ್ಷತ್ರಗಳು ಮಾರ್ಗಸ್ಥರಿಗೆ ಸಹಾಯಮಾಡುವಂತೆ ದೇಶವು ಮಾರ್ಗತಪ್ಪಿ ಕಣ್ಣುಬಾಯಿ ಬಿಡುತ್ತಿರುವಾಗ ಕೈ|| ಗೋಖಲೆಯವರಂಥ ಮಹಾಜ್ಯೋತಿಗಳ ಚರಿತ್ರಗತವಾದ ಸುಬೋಧೆಯು ಸತ್ಪಥಕ್ಕೆ ಹಚ್ಚಲು ಸಹಾಯವಾಗದೆ ಹೋಗುವುದಿಲ್ಲ.

ಒಳದೇಶದ ವೃತ್ತಾಂತಗಳು.

ಸಂಸ್ಥಾನದ ಸಿವಿಲ್ ಕೋರ್ಟುಗಳು ಈ ತಾ|| ೩ ರಿಂದ ೬ ವಾರಗಳವರೆಗೆ ಬೇಸಿಗೆ ರಜಕ್ಕಾಗಿ ಮುಚ್ಚಲ್ಪಟ್ಟು ಮೇ ತಾ|| ೧೫ ನೆಯ ಸೋಮವಾರ ತೆರೆಯಲ್ಪಡುವುವು.

ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಪಂಚರಥವು ಈ ತಾ|| ೮ ನೆಯ ಶನಿವಾರ ನಡೆಯುವುದು. ತದಂಗವಾದ ಮಹೋತ್ಸವಗಳು ಈ ತಾ|| ೧ ರಲ್ಲಿ ಪ್ರಾರಂಭವಾಗಿ ತಾ|| ೧೧ ರ ವರೆಗೂ ಜರಗುವುವು.

ರೆವಿನ್ಯೂ ಸೆಕ್ರೆಟರಿಯವರಾದ ಮ|| ಸಿ. ವೆಂಕಟರಾಯರು ಸದ್ಯದಲ್ಲಿ ೩ ತಿಂಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದಲ್ಲದೆ ಮುಂದೆ ದೀರ್ಘಕಾಲ ಫರ್ಲೋರಜವನ್ನು ತೆಗೆದುಕೊಳ್ಳುವವರಾಗಿರುವರೆಂದು ಕೇಳುತ್ತೇವೆ. ಇವರ ರಜಾಕಾಲದಲ್ಲಿ ಮ|| ಎ. ಎ. ರಾಮನಾಥರವರು ರೆ|| ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುವರು.

ಅರಸೀಕೆರೆ ತಾ|| ಹೊಳಲ್ಕೆರೆಯ ಶ್ರೀ ಪ್ರಸನ್ನರಾಮೇಶ್ವರಸ್ವಾಮಿಯವರ ರಥೋತ್ಸವವು ಈ ತಾ|| ೫ರಲ್ಲಿ ನಡೆಯುವುದು. ಈ ಸಮಯದಲ್ಲಿ ದನಗಳ ಪ್ರದರ್ಶನವು ೩ ದಿನಗಳವರೆಗೆ ನಡಿಸಲ್ಪಟ್ಟು ಉತ್ತಮವಾದ ರಾಸುಗಳಿಗೆ ಬಹುಮಾನಗಳೂ ಸರ್ಟಿಫಿಕೇಟೂ ಕೊಡಲ್ಪಡುವುದಾಗಿಯೂ ಜನರು ಹೆಚ್ಚಾಗಿ ಸೇರುವುದರಿಂದ ವ್ಯಾಪಾರಸ್ಥರಿಗೂ ನಾಟಕದವರಿಗೂ ದ್ರವ್ಯಸಂಪಾದನೆಯಾಗಲವಕಾಶವಿರುವುದಾಗಿಯೂ ಕಾರ್ಯದರ್ಶಿಗಳಾದ ಮ|| ಎಚ್. ಕೃಷ್ಣಮೂರ್ತಿಯವರೂ ಮ|| ಎಂ. ಎಚ್. ಹರಿಯಣ್ಣನವರೂ ತಿಳಿಸುತ್ತಾರೆ.

ಮುನಸೀಫರುಗಳು ಮ|| ಗಳಾದ ಎ. ಜಿ. ಲಕ್ಷ್ಮೀನರಸಿಂಹಯ್ಯಂಗಾರರು ಚಿಕ್ಕಬಳ್ಳಾಪುರದಿಂದ ಹಾಸನಕ್ಕೆ, ಎ. ಸುಂದರರಾಜಾರಾಯರು ಹಾಸನದಿಂದ ಚಿಕ್ಕಮಗಳೂರಿಗೆ, ಎಂ. ಎ. ಸುಬ್ಬಣ್ಣನವರು ಚಿಕ್ಕಮಗಳೂರಿಂದ ಹೊಳೇನರಸೀಪುರಕ್ಕೆ, ಎಚ್. ನಂಜುಂಡಯ್ಯನವರು ಹೊಳೇನರಸೀಪುರದಿಂದ ಶಿವಮಗ್ಗೆಗೆ, ಎ. ಶ್ರೀನಿವಾಸರಾಘವಾಚಾರ್ಯರು ಶಿವಮಗ್ಗೆಯಿಂದ ತುಮಕೂರಿನ ಮೊದಲನೆ ಕೋರ್ಟಿಗೆ, ಎಸ್. ವೆಂಕಟರಂಗಯ್ಯಂಗಾರರು ತುಮಕೂರಿನಿಂದ ಸಾಗರಕ್ಕೆ ಮತ್ತು ಸಿ. ಬಿ. ನಾಗಭೂಷಣರಾವ್ ಬ್ಯಾರಿಸ್ಟರು ಸಾಗರದಿಂದ ಚಿಕ್ಕಬಳ್ಳಾಪುರಕ್ಕೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಸಂಸ್ಥಾನದ ಕೈಗಾರಿಕೆಗಳಿಗೆಲ್ಲಾ ಶಿಖರಪ್ರಾಯವಾಗಿಯೂ ೩-೪ಸಾವಿರ ಕೂಲಿಕಾರರಿಗೆ ಜೀವನಪ್ರದವಾಗಿಯೂ ಇರುವ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಸ್ಥಾಪನೆಗೆ ಕಾರಣಭೂತರೂ ಆಗರ್ಭ ಶ್ರೀಮಂತರೂ ಆದ ಮ|| ಎಂ. ಎಲ್. ವರ್ಧಮಾನಯ್ಯನವರು ತಮ್ಮ ಜ್ಯೇಷ್ಠಪುತ್ರಿಯಾದ ಚಿ|| ಸೌ|| ನಿರ್ಮಲಕುಮಾರಿಯವರನ್ನು ತಮ್ಮ ಭಾವನವರಾದ ಸಾಹುಕಾರ್ ಕೆ. ಚನ್ನಪ್ಪನವರ ಜ್ಯೇಷ್ಠಕುಮಾರ ಚಿ|| ರಾ|| ನಾಗರಾಜಯ್ಯನವರಿಗೆ ಕೊಟ್ಟು ಈ ಏಪ್ರಿಲ್ ತಾ|| ೨೧ ನೆಯ ಶುಕ್ರವಾರ ಮಧ್ಯಾಹ್ನ ೧|| ಗಂಟೆಯಲ್ಲಿ ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ತಮ್ಮ ಬಂಗಲೆಯಲ್ಲಿ ವಿವಾಹಮಹೋತ್ಸವವನ್ನು ತಮ್ಮ ಘನತೆಗೂ ಶ್ರೀಮಂತಿಕೆಗೂ ತಕ್ಕಂತೆ ವೈಭವದಿಂದ ನೆರವೇರಿಸಲು ನಿಶ್ಚಯಿಸಿರುವರೆಂದು ತಿಳುಹಲು ಹರ್ಷವಾಗುತ್ತದಲ್ಲದೆ ನೂತನ ದಂಪತಿಗಳಿಗೆ ಈಶ್ವರನು ಸಮಸ್ತಸನ್ಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಮ|| ಗಾಂಧಿಯವರನ್ನು ಪುನಾ ಬಳಿಯಲ್ಲಿರುವ ಎರೋಡಾ ಕಾರಾಗೃಹಕ್ಕೆ ತಂದು ಇಟ್ಟಿದ್ದಾರೆ.

ಯುವಸಾರ್ವಭೌಮರು ಸಿಲೋನ್ ದ್ವೀಪದ ಕೊಳಂಬೋ ಪಟ್ಟಣದಿಂದ ಕಳೆದ ತಾ|| ೨೫ರಲ್ಲಿ ಜಪಾನಿಗೆ ಪ್ರಯಾಣ ಮಾಡಿದರು.

ಮಾಂಟೂಗ್‌ರವರು ಬಿಟ್ಟ ಸ್ಟೇಟ್ ಸೆಕ್ರೆಟರಿ ಸ್ಥಾನಕ್ಕೆ ಲಾರ್ಡ್ ಪೀಲ್‌ರವರು ನಿಯಮಿತರಾಗಿದ್ದಾರೆ. ಇವರಿಗೆ ೫೪ ವರ್ಷ. ೧೯೧೯ನೆ ವರ್ಷದಿಂದಲೂ ಇವರು ಯುದ್ಧಕಾರ್ಯಾಲಯದಲ್ಲಿ ಅಂಡರ್ ಸೆಕ್ರೆಟರಿಯಾಗಿದ್ದರು.

ಲಾರ್ಡ್ ಸಿನ್ಹರವರು ದೇಹಾರೋಗ್ಯಕ್ಕಾಗಿ ಸೀಮೆಗೆ ಪ್ರಯಾಣ ಮಾಡಿದರು. ಅವರು ಪರಿತ್ಯಜಿಸಿದ ಬೀಹಾರ್ ಗೌರ್ನರ್ ಪದವಿಗೆ ಬಂಗಾಳಾ ಪ್ರಭುತ್ವದ ಸಭಿಕರಾಗಿದ್ದ ಸರ್ ಹೆನ್ರಿ ವೀಲರ್‌ರವರು ನಿಯಮಿಸಲ್ಪಟ್ಟರು.

ಹಿಮವತ್ಪರ್ವತದ ಎವರೆಸ್ಟ್ ಶಿಖರವನ್ನು ಏರುವುದಕ್ಕಾಗಿ ಪ್ರಯತ್ನಿಸಿರುವ ಬ್ರಿಗೇಡಿಯರ್ ಜನರಲ್ ಬ್ರೂಸ್‌ರವರೂ ಅವರ ಗುಂಪಿನವರು ಸಹ ಕಳೆದ ತಾ|| ೨೭ರಲ್ಲಿ ಡಾರ್ಜಿಲಿಂಗಿನಿಂದ ಪರ್ವತಾರೋಹಣಕ್ಕೆ ಆರಂಭಿಸಿದರು.

ಮ|| ಗಾಂಧಿಯವರನ್ನು ಸೆರೆಹಿಡಿದು ಶಿಕ್ಷಿಸಿದ ಕಾರಣಕ್ಕಾಗಿ ದೇಶದಲ್ಲಿ ಯಾವ ತೆರದ ಗದ್ದಲವೂ ಕಾಣಿಸಿಕೊಳ್ಳಲಿಲ್ಲ. ಆದರೂ ಆಯಾ ಪ್ರಭುತ್ವಗಳು ಅಸಹಾಯವಾದಿ ಪ್ರಮುಖರನ್ನು ಹಿಡಿಯುವ ಶಿಕ್ಷಿಸುವ ಕೆಲಸವನ್ನು ಇನ್ನೂ ಸಾಗಿಸುತ್ತಲೇ ಇದ್ದಾರೆ.

ಹೊಸ ಅಂಚೆಯ ದರಗಳು ಎಂದರೆ ಕಾರ್ಡಿಗೆ ೬ ಪೈ, ೨|| ತೊಲೆಯೊಳಗಣ ತೂಕದ ಕವರಿಗೆ ೧ ಆಣೆ ಅದರಮೇಲೆ ಪ್ರತಿ ೨|| ತೊಲೆ ತೂಕಕ್ಕೂ ೧ ಆಣೆಯಂತೆ ಏರ್ಪಟ್ಟಿರುವ ದರಗಳು ಇದೇ ಏಪ್ರಿಲ್ ತಾ|| ೨೪ ರಿಂದ ವ್ಯವಹಾರಕ್ಕೆ ಬರತಕ್ಕುದೆಂದು ಭಾರತಪ್ರಭುತ್ವದವರು ಪ್ರಕಟಿಸಿದ್ದಾರೆ.

ಭಾರತ ಪ್ರತಿನಿಧಿ ನಾಮಕರಣದಿಂದ ಇಂಗ್ಲೆಂಡ್ ಅಮೇರಿಕಾ ಜನೀವಾ ಸಭೆಗಳಿಗೆ ಹೋಗಿದ್ದ ಅ|| ಶ್ರೀನಿವಾಸಶಾಸ್ತ್ರಿಗಳು ಭರತಖಂಡಕ್ಕೆ ಬಂದರು. ಸ್ಟೇಟ್ ಕೌನ್ಸಿಲ್ಲಿಗೆ ಕಳೆದವಾರ ಅವರು ಬಂದು ಸಂದರ್ಶನವನ್ನಿತ್ತಾಗ್ಗೆ ಸಭಿಕರುಗಳು ಅವರ ಅಭಿನಂದನವನ್ನು ವಿಶೇಷವಾಗಿ ಮಾಡಿ ಹಿಗ್ಗಿದರು.

ಲಾಹೋರಿನಲ್ಲಿರುವ ಮಾಂಟಗಮರಿ ಕಾರಾಗೃಹದ ಬಂದಿಗಳಲ್ಲಿ ಪಠಾಣರಿಗೂ ಸಿಕ್ಕರಿಗೂ ಬಡಿದಾಟವಾಗಿ ಉಭಯಪಕ್ಷದಲ್ಲೂ ಒಬ್ಬೊಬ್ಬನು ಸತ್ತನು ಮತ್ತು ೪೦ ಜನರವರೆಗೆ ಪೂರಾ ಪೆಟ್ಟು ಬಿದ್ದಿದೆ. ಇವರಲ್ಲಿ ಒಬ್ಬಿಬ್ಬರು ಬದುಕುವಂತಿಲ್ಲ. ಪೋಲೀಸಿನವರು ಗುಂಡನ್ನು ಪ್ರಯೋಗಿಸದೆ ಸಾಹಸದಿಂದ ಗದ್ದಲವನ್ನು ಅಡಗಿಸಿದರು.

ಇಂಗ್ಲೆಂಡಿನಲ್ಲಿರುವ ಇಂಡ್ಯಾ ಕೌನ್ಸಿಲ್ ಸಭಿಕರಾಗಿದ್ದ ಸರ್ ಜಿ. ಲೀಸ್ ಕೆಸ್ಸೆಲ್‌ರವರು ಮೃತವಾದುದರಿಂದ ಅವರ ಸ್ಥಾನಕ್ಕೆ ಇಂಡ್ಯಾ ಸರ್ಕಾರದ ಹೋಂ ಮೆಂಬರಾಗಿರುವ ಸರ್ ವಿಲಿಯಂ ವಿನ್ಸೆಂಟ್‌ರವರು ನಿಯಮಿತರಾದರು. ಆದರೆ ಇವರು ಇನ್ನು ಕೆಲಕಾಲ ಹೋಂ ಮೆಂಬರು ಪದವಿಯಲ್ಲೇ ಇದ್ದು ಬಳಿಕ ಸೀಮೆಗೆ ತೆರಳುವವರಾಗಿಧಾರೆ.

ವಾಗಿನ್ನುಗಳಲ್ಲಿ ಮೃತರಾದ ಮಾಪಿಳ್ಳೆಗಳ ಪ್ರತಿಕುಟುಂಬಕ್ಕೂ ೩೦೦ ರೂ. ಗಳಂತೆ ಧನಸಹಾಯಮಾಡಲು ಮದ್ರಾಸು ಸರ್ಕಾರದವರು ನಿರ್ಧರಿಸಿಧಾರೆ. ಆದರೆ ಆ ಭೀಕರಪರಿಣಾಮಕ್ಕೆ ಕಾರಣಭೂತರಾದವರಿಗೆ ಏನು ಶಿಕ್ಷೆಯೆಂಬುದು ಗೊತ್ತಾಗಲಿಲ್ಲ. ಆಯುಸ್ಸು ತುಂಬಿದುದರಿಂದ ಸತ್ತರೆಂದು ಭಾವಿಸುವ ಹಿಂದೂ ಮುಸಲ್ಮಾನರಿಗೆ ಮರಣಕಾರಣಭೂತದ ಚರ್ಚೆಯೇಕೆಂದು ಹೇಳಿದರೂ ಆಯಿತು.

ಕಾರಾಗೃಹದಲ್ಲಿರುವ ಮ|| ಗಾಂಧಿಯವರು "ನನಗೆ ಖಾದಿಯನ್ನು ಕೊಡಿ ನಿಮಗೆ ಸ್ವರಾಜ್ಯವನ್ನು ಕೊಡುತ್ತೇನೆ" ಎಂದು ತಮ್ಮ ಸಂದರ್ಶನಕ್ಕೆ ಬಂದಿದ್ದ ದೊಡ್ಡ ಮನುಷ್ಯರೊಬ್ಬರೊಡನೆ ಹೇಳಿದ್ದರಂತೆ. ಈಗ ಮ|| ಪಂಡಿತ ಮದನಮೋಹನ ಮಾಳವ್ಯರು ಖಾದಿಪ್ರಸಾರಕ್ಕಾಗಿ ಅಧ್ವರ್ಯುಗಳಾಗಿ ನಿಂತಿದ್ದಾರೆ. ಮತ್ತು ಗಾಂಧಿಯವರು ಸೆರೆಮನೆಗೆ ಹೋದಮೇಲೆ ನನ್ನ ಕಾರ್ಯದಕ್ಷತೆಯು ವ್ಯಕ್ತವಾಗುವುದು ಎಂದು ಹಿಂದೆ ಇವರು ಆಡಿದ್ದರಂತೆ. ಅದನ್ನು ಈಗ ಮಾಡಿ ತೋರಿಸುತ್ತಿದ್ದಾರೆ. ಖದ್ದರ್‌ಫಂಡು ಎಂಬುದನ್ನು ಕೂಡಿಸಲು ಆರಂಭಿಸಿದ್ದಾರೆ.

ಗ್ರೀಕು-ತುರ್ಕಿ ಸಮಸ್ಯೆ.

ಸಂಧಿಸೂಚನಾಸಂಘದವರ ತೀರ್ಮಾನವು.

ಕಾನ್‌ಸ್ಟಾಂಟಿನೋಪಲೂ, ಪೂರ್ವಥ್ರೇಸಿನಲ್ಲಿ ವಿಶೇಷಭಾಗವೂ ತುರ್ಕಿಪ್ರಭುತ್ವದವರಿಗೆ ವಹಿಸಲ್ಪಡಬೇಕು. ಮಿತ್ರಮಂಡಲಿಯವರ ಸೇನೆಯು ಸಂಧಿಯು ಕುದುರಿದ ಮೇಲೆ ಕಾನ್‌ಸ್ಟಾಂಟಿನೋಪಲಿನಿಂದ ತೆಗೆದುಹಾಕಲ್ಪಡಬೇಕು. ಆಗ ಈ ವರೆಗೆ ಸೇವರ್ಸ್ ಸಂಧಿಯ ಪ್ರಕಾರ ನಿಯಮಿತವಾದುದಕ್ಕಿನ್ನ ಹೆಚ್ಚಾಗಿ ಸೇನೆಯನ್ನು ತುರುಷ್ಕಪ್ರಭುತ್ವದವರು ಕಾನ್‌ಸ್ಟಾಂಟಿನೋಪಲಿನಲ್ಲಿಟ್ಟುಕೊಳ್ಳಲಾಗುವುದು.

ಜಲಸಂಧಿ.

ತುರುಷ್ಕ ಜಲಸಂಧಿ ಪ್ರಾಂತದಲ್ಲಿರುವ ಪ್ರದೇಶವು ಗ್ರೀಸಿನವರಿಗೆ ಕೊಡಲ್ಪಟ್ಟರಾಗಲಿ ತುರುಷ್ಕರಿಗೆ ಕೊಡಲ್ಪಟ್ಟರಾಗಲಿ ಅಲ್ಲಿ ಅವರು ಸೇನೆಯನ್ನಿಟ್ಟುಕೊಳ್ಳುವಂತಿಲ್ಲ. ಅಂತರ್ಜಾತೀಯ ಸಂಘದವರ ಯಾಜಮಾನ್ಯದಲ್ಲಿ ಜಲಸಂಧಿಯು ಇರಬೇಕಾಗುವುದು. ಮರ್ಮರಾ ಸಮುದ್ರದಲ್ಲಿರುವ ಲೇಮಸ್ಸು, ಇಂಬರ್ಸು, ಟೀನಡಸು, ಸಮಾಥ್ರೇಸು, ಮಿಟಿಲಿನಿ ದ್ವೀಪಗಳಲ್ಲಿರುವ ಸೇನೆಯೆಲ್ಲವೂ ತೆಗೆದುಹಾಕಲ್ಪಡುವುವು. ತುರುಷ್ಕರ ನಷ್ಟಪರಿಹಾರವು ಮುಂದೆ ನಿರ್ಣಯಿಸಲ್ಪಡುವುದು. ಮಧ್ಯದರಾ ಸಮುದ್ರದಿಂದ ಕಪ್ಪುಕಡಲಿನವರೆಗೂ, ಟ್ರಾನ್ಸುಕಕೇಷಿಯಾ ಪರ್ಷಿಯಾ ಸರಹದ್ದಿನಿಂದ ಹಿಡಿದು ಈಜಿನಿ ಸಮುದ್ರದವರೆಗೂ ಇರುವ ಅಂಟೋಲಿಯಾವು ತುರುಷ್ಕ ಪ್ರಭುತ್ವದಲ್ಲಿಯೇ ಇರತಕ್ಕುದಾಗಿದೆ.

ತುರ್ಕಿಪ್ರಭುತ್ವವು.

ತುರುಷ್ಕಜಾತೀಯ ಪ್ರಭುತ್ವವು ಪುನಃ ಸ್ಥಾಪಿತವಾಗಬೇಕೆಂದು ಮಿತ್ರಮಂಡಲಿಯವರು ಅಪೇಕ್ಷಿಸುತ್ತಾರೆ. ತುರ್ಕಿಸುಲ್ತಾನನ ರಾಜಕೀಯಮತ ಸಂಬಂಧವಾದ ಅಧಿಕಾರವು ಅವಿಚ್ಛಿನ್ನವಾಗಿ ನಡೆದುಕೊಂಡು ಬರಬೇಕೆಂಬುದು ಮಿತ್ರಮಂಡಯವರ ಅಪೇಕ್ಷೆಯಾಗಿದೆ.

ಗ್ರೀಕು ಮತ್ತು ತುರ್ಕಿ ಪ್ರಭುತ್ವಗಳೆರಡಕ್ಕೂ ಸ್ನೇಹಭಾವವುಂಟಾಗುವುದಕ್ಕಾಗಿ ಈ ಪ್ರಭುವತ್ವ ಪ್ರದೇಶದಲ್ಲಿ ಅಲ್ಪಸಂಖ್ಯಾಕರಾದವರ ಸಂರಕ್ಷಣೆಯಲ್ಲಿ ವಿಶೇಷ ಶ್ರದ್ಧೆವಹಿಸಲ್ಪಡಬೇಕೆಂದು ಮಿತ್ರಮಂಡಲಿಯವರು ಕೋರುತ್ತಾರೆ.

ತುರ್ಕಿ ನಷ್ಟಪರಿಹಾರವು.

ತುರ್ಕಿ ಪ್ರಭುತ್ವದ ಆರ್ಥಿಕ ಸ್ವಾತಂತ್ರ್ಯದ ವಿಚಾರವು ಮಿತ್ರಮಂಡಲಿಯವರ ಪರ್ಯಾಲೋಚನೆಯಲ್ಲಿರುವುದು. ಕಳೆದ ಮಹಾ ಯುದ್ಧದಲ್ಲಿ ತುರ್ಕಿಯು ಮಧ್ಯ ಐರೋಪ್ಯ ದೇಶದಲ್ಲಿ ಸೇರಿದುದರಿಂದ ನಿಯಮಿತ ಪ್ರಕಾರ ಕೊಂಚ ನಷ್ಟಪರಿಹಾರವನ್ನು ಹೊಂದಬೇಕಾಗಿರುತ್ತದೆ. ಈ ಮೊತ್ತವನ್ನು ಮಿತ್ರಮಂಡಲೆಯವರು ಮುಂದೆ ಗೊತ್ತುಮಾಡುವರು. ತುರ್ಕಿ ಸಾಮ್ರಾಜ್ಯದವರು ಮಿತ್ರಮಂಡಲಿಯವರಿಗೆ ವ್ಯಾಪಾರ ವಿಚಾರದಲ್ಲಿ ಕೊಂಚ ಸದುಪಾಯವನ್ನು ಕಂಡು ಹಿಡಿಯಬೇಕಾಗಿರುವುದು.

ಗಲ್ಲಿಪೋಲಿಯಲ್ಲಿ ಮಿತ್ರಮಂಡಲಿಯವರು ಯುದ್ಧದಲ್ಲಿ ಬಹಳ ನಷ್ಟವನ್ನು ಅನುಭವಿಸಿದರು. ಆ ಪ್ರದೇಶದಲ್ಲಿ ಗ್ರೀಕರು ಬಹಳ ಸಂಖ್ಯಾಕರಾಗಿರುವುದರಿಂದ ತುರುಷ್ಕರಿಗೆ ಸೇರಬೇಕಾದುದಿಲ್ಲವು. ಸ್ಮಿರ್ನಾ ಮಾತ್ರ ತುರ್ಕಿಗೆ ಸೇರಿಸಲ್ಪಡಬೇಕು. ಪೂರ್ವಥ್ರೇಸು ಗ್ರೀಕರಿಂದ ಸ್ವಾಧೀನಪಡಿಸಿಕೊಳ್ಳಲ್ಪಟ್ಟಿರುವುದಲ್ಲದೆ ಅಲ್ಲಿ ಗ್ರೀಸ್ ಜನಸಂಖ್ಯೆಯು ಅಧಿಕವಾಗಿರುವುದರಿಂದ ಪೂರ್ವಥ್ರೇಸು ಮತ್ತು ಅನಟೋಲಿಯವು ತುರ್ಕಿಯವರ ಸ್ವಾಧೀನದಲ್ಲಿರಬೇಕೆಂದು ಮಿತ್ರಮಂಡಲಿಯವರ ಅಭಿಪ್ರಾಯವು. ಈ ಸಂಧಿಸಂಘದವರು ಗೊತ್ತುಪಡಿಸುವ ಸಂಗತಿಯನ್ನೊಪ್ಪಿಕೊಂಡಲ್ಲಿ ಕಾನ್‌ಸ್ಟಾಂಟಿನೋಪಲ್ಲಿಗೆ ಗ್ರೀಸಿನಿಂದ ಯಾವ ಭಯವೂ ಇರುವುದಿಲ್ಲ. ತುರ್ಕಿಯವರು ಗ್ರೀಕರ ಪ್ರದೇಶವನ್ನು ಕೂಡ ಅಪ್ಯಾಡಿಸಲಾರರು. ಗ್ರೀಕಿನವರಿಗೂ ತುರ್ಕಿಯವರಿಗೂ ಸಮಾನವಾದ ನ್ಯಾಯವು ಏರ್ಪಟ್ಟಿರುವುದರಿಂದ ಈ ಎರಡು ದೇಶಗಳಿಗೆ ಸಮಾಧಾನವುಂಟಾಗಲು ಮಿತ್ರಮಂಡಲ್ಲಿಯವರು ಪ್ರಯತ್ನಿಸುತ್ತಿರುವರು. ಆದುಕಾರಣ ಸ್ಮಿರ್ನಾ, ಅದ್ರಿಯಾನೋಪಲುಗಳಲ್ಲಿ ಪ್ರತ್ಯೇಕ ಪ್ರಭುತ್ವವೇರ್ಪಡುವುದುಚಿತವೆಂದು ಸಂಧಿಸಂಘದವರ ಅಭಿಪ್ರಾಯವು. ಆಸ್ಯಾ ಮೈನರನ್ನು ಶಾಂತಿ ಪರಿಸ್ಥಿತಿಯಲ್ಲಿ ಗ್ರೀಕರು ಬಿಟ್ಟುಕೊಡುವುದರ ಮೇಲೆ ಈ ಪುರಸ್ಕಾರವು ಬಹಳವಾಗಿ ಅವಲಂಬಿಸಿದೆಯಾಧುದರಿಂದ ತಾತ್ಕಾಲಿಕ ಸಂಧಿಸಂಘದವರು ಬಿಟ್ಟುಕೊಡಬೇಕೆಂದು ಸೂಚಿಸಿರುವರು. ಗ್ರೀಕರ ಪರಿಹಾರವಿಚಾರವು ಯೋಚಿಸಲ್ಪಡುವುದು. ಸಂಧಿಸಂಘದವರ ಪ್ರಕಟನೆಯಲ್ಲಿ ಕಂಡ ಮೇರೆಗೆ ಡಾರ್ಡಿನಲ್ಸ್ ಜಲಸಂಧಿಯ ಆಸಿಯಾ ತೀರವು ತುರ್ಕಿಯವರಿಗೆ ಕೊಡಲ್ಪಡುವುದು. ಈ ಜಲಸಂಧಿಯ ರಕ್ಷಣೆಗಾಗಿ ಮಿತ್ರಮಂಡಲಿಯವರು ಗಲ್ಲಿಪೋಲಿಯನ್ನು ತಮ್ಮಧೀನದಲ್ಲಿಟ್ಟುಕೊಳ್ಳುವರು. ಈ ಸಂಧಿನಿಬಂಧನೆಯು ಅನುಷ್ಠಾನಕ್ಕೆ ಬಂದ ೨ ತಿಂಗಳೊಳಗೆ ಇಟಲಿ, ಜಪಾನು, ಆಂಗ್ಲಪರಾಸು, ತುರ್ಕಿ ಈ ರಾಜ್ಯಗಳ ಪ್ರತಿನಿಧಿಗಳ ಸಂಘವೊಂದೇರ್ಪಟ್ಟು ತುರ್ಕಿಯ ಆರ್ಥಿಕ ಪರಿಪಾಲನವನ್ನು ಪರಿಶೀಲಿಸುವರು. ಮಿತ್ರಮಂಡಲಿಯವರ ಷರತ್ತುಗಳು ಗ್ರೀಕು ತುರ್ಕಿ ಪ್ರಭುತ್ವದವರಿಗೆ ತಿಳಿಯಪಡಿಸಲ್ಪಟ್ಟು ಇದಕ್ಕೆ ಪ್ರತ್ಯುತ್ತರವನ್ನು ಕೊಡಲು ೩ ವಾರ ವಾಯಿದೆ ಕೊಡಲ್ಪಟ್ಟಿರುವುದು. ಅಷ್ಟರಲ್ಲಿ ಆ ಉಭಯ ಪ್ರಭುತ್ವದವರು ತಮ್ಮ ಪ್ರತಿನಿಧಿಗಳನ್ನು ಮಿತ್ರಮಂಡಲಿಯವರಲ್ಲಿಗೆ ಕಳುಹಿಸಿಕೊಡಬೇಕಾಗಿರುವುದು.

ಮೈಸೂರು ಸರ್ಕಾರಿ ಹುಕುಮು.

ಸಿವಿಲ್ ಕೋರ್ಟುಗಳಲ್ಲಿ ಸಾಕ್ಷಿಗಳ ಭತ್ಯದ ಬದಲಾವಣೆ.

ಸನ್ 1911 ನೆಯ ಇಸವಿ ಸಿವಿಲ್ ಪ್ರೊಸೀಜರ್ ಕೋಡಿನ 16 ನೆಯ ಆರ್ಡರಿನ 2ನೆಯ ನಿಯಮವನ್ನು ಅನುಸರಿಸಿ ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರು 1922 ನೇ ಡಿಸೆಂಬರ್ 7 ನೆಯ ತಾರೀಖಿನ ಇಸ್ತಿಹಾರ್ನಾಮೆಯಲ್ಲಿ ವಿಧಾಯಕ ಮಾಡಲ್ಪಟ್ಟ ಸಿವಿಲ್ ಮೊಕದ್ದಮೆಗಳಲ್ಲಿ ಹಾಜರಾಗುವ ಸಾಕ್ಷಿಭತ್ಯದ ದರವನ್ನು ರದ್ದುಪಡಿಸಿ ಇದರಲ್ಲಿ ಕಂಡ ದರಗಳನ್ನು ವಿಧಾಯಕ ಮಾಡಿರುತ್ತಾರೆ.—

2. ಸಾಕ್ಷಿಗಳನ್ನು ಮೂರು ತರಹ ವಿಂಗಡಿಸತಕ್ಕದ್ದು.—ಮೂರನೆಯ ತರಗತಿ—ತಿಂಗಳಿಗೆ 100 ರೂಪಾಯಿಗೆ ಕಮ್ಮಿಯಾಗಿ ವರಮಾನವುಳ್ಳವರು. ಎರಡನೆಯ ತರಗತಿ—ತಿಂಗಳಿಗೆ 100 ರೂಪಾಯಿಯಾಗಲಿ ಅಥವಾ ಅದಕ್ಕೆ ಮೇಲ್ಪಟ್ಟಾಗಲಿ ವರಮಾನವುಳ್ಳವರು. ಮೊದಲನೆಯ ತರಗತಿ—ತಿಂಗಳಿಗೆ 250 ರೂಪಾಯಿಯಾಗಲಿ ಅಥವಾ ಅದಕ್ಕೆ ಮೇಲ್ಪಟ್ಟಾಗಲಿ ವರಮಾನವುಳ್ಳವರು.

3. ಸಾಕ್ಷಿಗಳ ಭತ್ಯದ ದರವು ಇದರಡಿ ಕಂಡಂತೆ ಇರತಕ್ಕದ್ದು. ಸಾಕ್ಷಿಯ ಊರಲ್ಲದೆ ಬೇರೆ ಊರಿನಲ್ಲಿ ಕೋರ್ಟು ಕಟ್ಟಡವು ಇದ್ದರೆ ಅಲ್ಲಿಗೆ ಹೋಗುವುದಕ್ಕೂ ಅಲ್ಲಿಂದ ಬರುವುದಕ್ಕೂ ಪ್ರಯಾಣದ ಭತ್ಯ.

ಸಾಕ್ಷಿಗಳ ತರಗತಿಗಳು	ರೈಲ್ವೆ ದ್ವಾರ	ರಸ್ತೆದ್ವಾರ		ಊಟದ ಭತ್ಯ ದಿನವಹಿ ಖರ್ಚು ಸೇರಿ
		ಬಾಡಿಗೆಗಾಗಿ ಮೋಟಾರ್ ಬಸ್ ಅಂತಹ ಪಬ್ಲಿಕ್ ಗಾಡಿ ಇದ್ದರೆ	ಬಾಡಿಗೆಗಾಗಿ ಪಬ್ಲಿಕ್ ಗಾಡಿ ಇಲ್ಲವಾದರೆ	
3 ನೆಯ ತರಗತಿ	ಕನಿಷ್ಠ ತರಗತಿ ಚಾರ್ಜು ಒಂದು	ಕನಿಷ್ಠ ತರಗತಿ ಚಾರ್ಜು ಒಂದು	ಮೈಲಿ ಒಂದಕ್ಕೆ ಎರಡಾಣೆ.	ಎಂಟಾಣೆ
2 ನೆಯ ತರಗತಿ	ಸೆಕೆಂಡ್‌ಕ್ಲಾಸ್ ಚಾರ್ಜು ಒಂದು	ಒಂದು ಸೆಕೆಂಡು ಕ್ಲಾಸು ಅಥವಾ ಎರಡನೇ ತರಗತಿಗಳಿದ್ದರೆ ಕನಿಷ್ಠ ತರಗತಿ ಚಾರ್ಜು ಒಂದು	ಮೈಲಿ ಒಂದಕ್ಕೆ ನಾಲ್ಕಾಣೆ.	ಹನ್ನೆರಡಾಣೆ
1 ನೆಯ ತರಗತಿ	ಪಬ್ಲಿಕ್ ಗಾಡಿಗಳಲ್ಲಿ ಸಿಕ್ಕಬಹುದಾದ ಉತ್ತಮ ತರಗತಿಯಲ್ಲಿ ಸಾಕ್ಷಿಯು ವಾಡಿಕೆಯಾಗಿ ಪ್ರಯಾಣ ಮಾಡುವರೆಂದು ಪ್ರತಿಯೊಂದು ಕೋರ್ಟಿನ ಮೊಕದ್ದಮೆಯನ್ನು ವಿಚಾರಿಸುವ ಜಡ್ಜಿಯವರಿಗೆ ತೃಪ್ತಿಕರವಾಗಿ ಕಂಡು ಬಂದರೆ ಅವರು ನಿರ್ಧರಿಸಿ ಒಂದು ಫಸ್ಟ್ ಕ್ಲಾಸ್ ಚಾರ್ಜನ್ನು ಕೊಡಿಸಬಹುದು. ಇತರ ಸಂದರ್ಭಗಳಲ್ಲಿ ಸೆಕೆಂಡು ಕ್ಲಾಸು ಚಾರ್ಜು ಒಂದು ಮಾತ್ರ.		ಮೈಲಿ ಒಂದಕ್ಕೆ ಎಂಟಾಣೆ.	ಒಂದು ರೂಪಾಯಿ ಎಂಟಾಣೆ

ಟಿಪ್ಪಣಿ—1. ಈ ಮೇಲ್ಕಂಡ ನಿಯಮಗಳಿಂದ ತೊಂದರೆಯಾಗಬಹುದಾದ ವಿಶೇಷ ಸಂದರ್ಭಗಳಲ್ಲಿ ಪ್ರಯಾಣದ ಬಗ್ಗೆ ಸಾಕ್ಷಿಯು ನಿಜವಾಗಿಯೂ ಖರ್ಚುಮಾಡಿದರೆ ಅದನ್ನು ತಾಗುವಂತೆ ತನಗೆ ಯುಕ್ತವಾಗಿ ಕಂಡುಬಂದಷ್ಟು ಹೆಚ್ಚಿಗೆ ಮೊಬಲಗನ್ನು ಕೊಡಿಸುವುದನ್ನು ಜಡ್ಜಿಯವರ ವಿವೇಚನೆಗೆ ಬಿಟ್ಟಿದೆ.—2. ವೃದ್ಧ ಅಥವಾ ಲಾಯರಿ ಅಂಥಾ ಕಸಬಿನಲ್ಲಿರುವ ಸಾಕ್ಷಿಗಳಿಗೆ ಗೈರ್‌ಹಾಜರಿಯಿಂದ ಅವರಿಗೆ ಆಗಬಹುದಾದ ಲುಕ್ಸಾನನ್ನು ಸರಿಮಾಡುವುದಕ್ಕೆ ಸಂದರ್ಭಗಳನ್ನು ಅನುಸರಿಸಿ ಜಡ್ಜಿಯವರು ಪ್ರತ್ಯೇಕ ಭತ್ಯವನ್ನು ಕೊಡಿಸಬಹುದು.—3. ಯೂರೋಪಿಯನ್ ಅಥವಾ ಈಸ್ಟ್ ಇಂಡಿಯನ್ ಸಾಕ್ಷಿಗಳಾದರೆ ಮೇಲ್ಕಂಡ ದರಕ್ಕೆ ಎರಡರಷ್ಟು ಊಟದ ಭತ್ಯವನ್ನು ಕೊಡತಕ್ಕದ್ದು.—4. ಸಾಕ್ಷಿಯು ವಾಸಮಾಡುವ ಊರಿನಲ್ಲೇ ಕೋರ್ಟು ಕಟ್ಟಡವು ಇದ್ದರೆ ಊಟದ ಭತ್ಯಕ್ಕೆ ಬದಲಾಗಿ ಸಾಕ್ಷಿಯ ಅಂತಸ್ತಿಗೆ ತಕ್ಕಂತೆ ಗಾಡಿ (ಉಪಯೋಗಿಸಲ್ಪಟ್ಟದ್ದರೆ) ಬಾಡಿಗೆಗಾಗಿ ನ್ಯಾಯವಾದ ಮೊಬಲಗನ್ನು ಕೊಡಿಸುವುದನ್ನು ಜಡ್ಜಿಯವರ ವಿವೇಚನೆಗೆ ಬಿಟ್ಟಿದೆ.

ಪ್ರಪಂಚದಲ್ಲೆಲ್ಲಾ ಇರುವ ಮಹಮ್ಮದೀಯ ಪ್ರತಿನಿಧಿಸಭೆಯು ಬರುವ ಜುಲೈ ತಿಂಗಳಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಕೂಡುವುದಾಗಿದೆ.

ಪ್ಯಾರಿಸ್ ಪಟ್ಟಣದಲ್ಲಿ ಮಿತ್ರಮಂಡಲಿಯವರೆಲ್ಲಾ ಸೇರಿ ಪ್ರಾಚ್ಯದೇಶಸಮಸ್ಯೆ ಎಂದರೆ ಗ್ರೀಸ್, ತುರ್ಕಿ, ಅರ್ಮೀನಿಯಾ ಮೊದಲಾದ ರಾಷ್ಟ್ರಗಳ ವಿವಾದಪರಿಷ್ಕಾರವನ್ನು ಮಾಡಲು ಚರ್ಚಿಸುತ್ತವೆ. ಇದಕ್ಕಾಗಿ ತಾತ್ಕಾಲಸಂಧಿಗೆ ಗ್ರೀಕರು ಒಪ್ಪಿದರು. ಆದರೆ ಅಂಗೋರಾ ಪ್ರಭುತ್ವದವರು ಮಾತ್ರ ಸ್ಮರ್ನಾ ಥ್ರೇಸು ಮೊದಲಾದ ಭಾಗಗಳನ್ನು ಮರಳಿ ಗ್ರೀಸಿಗೆ ಒಪ್ಪಿಸುವುದಿಲ್ಲವೆಂಬ ವಿಷಯಕ್ಕೆ ಮಿತ್ರಮಂಡಲಿಯವರು ಹೊಣೆಯಾದರೆ ತಾತ್ಕಾಲಿಕ ಸಂಧಿಗೆ ಒಪ್ಪುವಂತೆ ಕಾಣುತ್ತದೆ.

ಪತ್ರವ್ಯವಹಾರ.

ವೀರಶೈವ ಮತಸ್ಥಾಪನಾಚಾರ್ಯರ ಜಯಂತ್ಯುತ್ಸವಗಳು.

ಹಾನಗಲ್ಲ ತಾ॥ ಆಲೂರ ಗ್ರಾಮದಲ್ಲಿ ಮಾಘವದಿ ಮಹಾಶಿವರಾತ್ರಿ ಪುಣ್ಯತಿಥಿಯಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಈ ಉಭಯಾಚಾರ್ಯರ ಮತ್ತು ಫಾಲ್ಗುಣ ಶುದ್ಧ ತ್ರಯೋದಶಿ ಈ ಪುಣ್ಯತಿಥಿಯ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವಗಳು ಅತಿ ಆನಂದದೊಡನೆ ಪವಿತ್ರ ಹಬ್ಬಗಳೆಂದು ಮಾಡಲ್ಪಟ್ಟವು. ಸದರಿ ಪುಣ್ಯ ತಿಥಿಗಳಲ್ಲಿ ಈ ಆಚಾರ್ಯರ ಚರಿತ್ರವು ಉಪದೇಶಿಸಲ್ಪಟ್ಟಿತು.

ಓರ್ವ ಸಮಾಜಸೇವಕ.

೧೬ ನೇ ಧಾರ್ಮಿಕ ಮಹೋತ್ಸವವು.

ಹಾನಗಲ್ಲ ತಾ॥ ಆಲೂರು ಗ್ರಾಮದಲ್ಲಿ ಶ್ರೀ ವೀರಭದ್ರದೇವಾಲಯದೊಳಗೆ ಚನ್ನವೀರೇಶವಾಚನಮಂದಿರದ ೧೬ ನೇ ಧಾರ್ಮಿಕ ಮಹೋತ್ಸವವು ಶ್ರೀಮಂತ ರಾಚೋಟೆಪ್ಪ ಚನ್ನಬಸಪ್ಪ ಸಿಂಧೂರ ಸುರಳೇಶ್ವರ ಇವರ ಅಧ್ಯಕ್ಷತೆಯಲ್ಲಿ ತಾರೀಖು ೭-೫-೧೯೨೨ ನೇ ಇಸ್ವಿ ದಿನ ಜರಗುವದು ಆ ಕಾಲಕ್ಕೆ ಕೀರ್ತನ ಹಾಗೂ ವ್ಯಾಖ್ಯಾನಗಳು ನಡೆಯುವವು. ಇದಲ್ಲದೆ ಈ ಮಹೋತ್ಸವದಲ್ಲಿ ಕೆಳಗೆ ತೋರಿಸಿದ ವಿಷಯಗಳನ್ನು ಉಪನ್ಯಾಸಕ್ಕೆ ಇಟ್ಟಿದೆ. ಬರೆದು ಕಳುಹಿಸತಕ್ಕವರು ಸ್ವಚ್ಛ ಅಕ್ಷರಗಳಿಂದ ಮಾರ್ಜಿನ ಬಿಟ್ಟು ಕೆಳಗೆ ಸಹಿ ಮಾಡಿದವರ ಕಡಿಗೆ ಎಪ್ರೀಲ ತಿಂಗಳ ಆಖೈರದೊಳಗಾಗಿ ತಿಳಿಸಬೇಕಾಗಿ ಇಚ್ಛಿಸುತ್ತೇನೆ.

ವಿಷಯ.	ಇನಾಮು
೧. ರಾಜನಿಷ್ಠೆ	೨೫
೨. ಶಕ್ತಿಸಿಕ್ಷಣ	೩೫
೩. ಹೊಸ ರೂಢಿಗಳಾದ ಬಗ್ಗೆ ಸಂತೋಷಪ್ರದ ಶರಣವೂ ಸಂಸ್ಥೆಗಳಿಗೆ ನೇಮಗಳ ಅವಶ್ಯಕತೆಯೂ	೨೫

ಆಲೂರು ಹಾನಗಲ್ಲ — ಸಿ. ವೀ. ಸಿಂಧೂರ,
ಚನ್ನವೀರೇಶವಾಚನಮಂದಿರ ಸೆಕ್ರೆಟರಿ.

ಶ್ರೀ ಕೂಡಲಸಂಗಮೇಶ್ವರ ಮಹಾಯಾತ್ರಾ.

ಈ ಸಮಾರಂಭವು ಪ್ರತಿ ವರ್ಷದ ಪದ್ಧತಿಯಂತೆ ಇದೇ ದುಂದುಭಿನಾಮಸಂವತ್ಸರದ ಚೈತ್ರ ಬ॥ ೫-೬ ಮತ್ತು ೭ ರವಿವಾರ ಸೋಮವಾರ ಮಂಗಳವಾರ ಏಪ್ರಿಲ್ ತಾ॥ ೧೬, ೧೭, ೧೮ ಈ ಮೂರು ದಿವಸಗಳಲ್ಲಿ ಜರಗುತ್ತಿದ್ದದ್ದು ಸರ್ವಶ್ರುತವದೆಯಷ್ಟೆ; ಆದರೆ ಇದೇ ಸಮಯದಲ್ಲಿ "ಸಂಗಮೇಶ್ವರ ವೀರಶೈವ ವಿದ್ಯಾವರ್ಧಕಸಂಘ"ದ, ವತಿಯಿಂದ ಧಾರ್ಮಿಕ ವಿಷಯಗಳ ಮೇಲೆ ಸುಪ್ರಸಿದ್ಧ ವ್ಯಾಖ್ಯಾತರುಗಳಿಂದ ವ್ಯಾಖ್ಯಾನಮಾಡಿಸುವದಾದರೂ ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಇದೇ ಪದ್ಧತಿಯಂತೆ ಈ ವರ್ಷವಾದರೂ ಕೆಳಗೆ ಬರೆದ ವಿಷಯಗಳ ಮೇಲೆ ಮಿ॥ ವೀರಬಸವಶ್ರೇಷ್ಠಿ ಬಿ. ಎ. ಮಿ॥ ಸಿದ್ಧರಾಮಪ್ಪಾ ಪಾವಟೆ ಬಿ.ಎ.ಎಲ್.ಎಲ್.ಬಿ. ವಕೀಲ ಬಿಳೀ ಅಂಗಡಿ ವಕೀಲ ಮುಂತಾದ ಪದವೀಧರರ ಮತ್ತು ತಾಲಾಮಾಸ್ತರರ ವ್ಯಾಖ್ಯಾನಗಳಾಗತಕ್ಕವುಗಳಿರುತ್ತವೆ. ಮತ್ತು ಇದೇ ಸಮಯದಲ್ಲಿ ಶ್ರೀ ಶಿವಯೋಗಮಂದಿರದ ಶಿವಯೋಗಿಗಳವರ ವ್ಯಾಖ್ಯಾನಗಳೂ ಆಗುತ್ತವೆ. ಆದ್ದರಿಂದ ಧರ್ಮಾಭಿಮಾನಿಗಳಾದ ತಾವೆಲ್ಲರೂ ಆಗಮಿಸಬೇಕಾಗಿ ಕೋರುತ್ತೇನೆ. ವಿಷಯಗಳು—(೧) ಶ್ರೀ ಬಸವೇಶ್ವರನ ತತ್ವ ಮತ್ತು ಬಸವಾದಿಪ್ರಮಥರು ಮಾಡಿದ ಕಾರ್ಯಗಳು (೨) ವೀರಶೈವರಲ್ಲಿ ಪರಸ್ಪರ ಐಕ್ಯತೆ (೩) ವೀರಶೈವರಲ್ಲಿ ಲೌಕಿಕ ವಿದ್ಯೆಯೊಡನೆ ಧಾರ್ಮಿಕ ವಿದ್ಯೆಯ ಆವಶ್ಯಕತೆ (೪) ವೀರಶೈವರಲ್ಲಿ ವಿದ್ಯಾಪ್ರಸಾರ.

ಸಂಗನಗೌಡಾ ಗಂಗಪ್ಪಗೌಡಾ ಪಾಟೀಲ್ ಸಂಗಮೇಶ್ವರ
ವಿದ್ಯಾವರ್ಧಕಸಂಘ ಚೇರ್ಮನ್.

ಟೀಪು—ಸಭಾಕಾಲದಲ್ಲಿ ಅವಶ್ಯ ಕಂಡ ವಿಷಯಗಳ ಮೇಲೆ ವ್ಯಾಖ್ಯಾನಮಾಡಿಸುವದು ಸಂಘದ ಮರ್ಜಿ ಮೇಲೆ ಅವಲಂಬಿಸಿರುವದು.

ಸಕಲೇಶಪುರ.

ಈ ಪ್ರಾಂತ್ಯ ಬಿಸಲಿನವರೆಗೆ ಹೆಚ್ಚಾಗಿರುತ್ತೆ, ಭತ್ತದಬೆಳೆ ಹುಲುಸು ಕಡಿಮೆ, ಆದರು ಧಾರಣೆವಾಸಿ ತಕ್ಕಮಟ್ಟಿಗೆ ಅನುಕೂಲವಾಗಿ ರಾಗಿಬೆಲೆ ಕಡಮೆ ಆಗದೆ ಇದ್ದರೂ ಬಡವರು ಹರುಷವಾಗಿದ್ದರು. ಮಂಗಳೂರು ಪ್ರಾಂತ್ಯಕ್ಕೆ ಭತ್ತಸಾಗುವದರಿಂದ ಯರಡುವಾರಗಳಿಂದ ಧಾರಣೆಯೇರುತ್ತಲಿರುವದನ್ನು ನೋಡಿ ಮುಂದೇನಾಗುತ್ತೊಯೆಂದು ಭಯಪಡಲಾರಂಭಿಸಿದ್ದಾರೆ. ಇಂಪ್ಲುಯಂಜಾ ವಗ್ಗೈರೆ ಬಾಯಿಲೆಯಿಂದ ಟೌನ್ ಮತ್ತು ಹಳ್ಳಿಗಳಲ್ಲಿ ಬಹಳವಾಗಿ ಜನಗಳು ತೊಂದ್ರೆ ಅನುಭವಿಸುತ್ತಲಿರುತ್ತಾರೆ. ಇಲ್ಲಿನ ಡಾಕ್ಟರವರು 1 ಘಂಟೆ ವರಿವಿಗೆ ಆಸ್ಪತ್ರೆಯಲ್ಲಿದ್ದು ಸರ್ವತ್ರ ತುಂಬಾಮುತವರ್ಜಿಯಿಂದ ಅವುಷಧಕೊಟ್ಟು ಪಥ್ಯವಗ್ಗೈರೆ ವಿಚಾರಗಳನ್ನು ಚನ್ನಾಗಿ ತಿಳುವಳಿಕೆಹೇಳುತ್ತಾರೆ. ಈ ಮಹನೀಯರು ಇಲ್ಲಿಗೆ ಬಂದ ನಂತರ ಅನೇಕರು ಕೆಟ್ಟಬಾಯಿಲೆಯಿಂದ ಯಮನಬಾಗಲಿಗೆ ಹೋಗಿ ವಾಪಸ್ಸು ಬಂದು ಡಾಕ್ಟರ್ ಸಾಹೇಬರನ್ನು ಕೊಂಡಾಡುತ್ತಲಿರುತ್ತಾರೆ. ಅಲ್ಲದೆ ಹಿಂದೆ ಇದ್ದ ಡಾ॥ ಪರ್ನಾಂಡಿಸರವರ ಕಾಲಕ್ಕಿಂತಲೂ ಅನುಕೂಲವೆಂತ ಹೇಳುತ್ತಾರೆ. ಈರೀತಿ ಉಪಕಾರಿಗಳಾದ ಡಾಕ್ಟರ್ ಪಿ. ಶ್ಯಾಮರಾಯರವರು ಇಲ್ಲಿಂದ ವರ್ಗಮಾಡಿಸಿಕೊಳ್ಳಲು ಪ್ರಯತ್ನಪಟ್ಟಿರುತ್ತಾರೆಂಬ ಸುದ್ದಿ ಹುಟ್ಟಿ ಬಹುಜನಗಳು ವ್ಯಾಕುಲಕ್ಕೆ ಸಿಕ್ಕಿರುತ್ತಾರೆ. ನಮ್ಮಗಳಮೇಲೆ ಈ ಮಹಾನುಭಾವರು ಪೂರ್ಣ ಅಭಿಮಾನವಿಟ್ಟು ಇನ್ನೂ ಬಹುಕಾಲವಿದ್ದು ನಮ್ಮಗಳ ಕ್ಷೇಮಚಿಂತಕರಾಗಲೆಂದು ಕೋರುತ್ತೇವೆ. ಅಲ್ಲದೆ ಇವರಿಗೆ ಮೇಲ್ಪಟ್ಟವರಾದರೂ ಇಲ್ಲಿನ ಪ್ರಜೆಗಳಮೇಲೆ ಅಭಿಮಾನವಿಟ್ಟು ಇನ್ನು ನಾಲ್ಕಾರು ವರುಷಗಳು ಮೆ॥ ಡಾಕ್ಟರ್ ಶ್ಯಾಮರಾಯರವರನ್ನೇ ಇಲ್ಲಿಟ್ಟುಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

(ಪ್ರಜಾಭಿಮಾನಿ.)

* * *

ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಕರಿಮುದ್ದನಹಳ್ಳಿ ಗ್ರಾಮಸಮೀಪದಲ್ಲಿ ಹರಿಯುವ ಗಂಗಾಭವಾನಿ ದಡದ ದಕ್ಷಿಣಪಾರ್ಶ್ವದಲ್ಲಿ ಸ್ಥಾಪಿತವಾಗಿರುವ ಶ್ರೀ ಮಹಾದೇಶ್ವರ ಸ್ವಾಮಿಯವರು ಶ್ರೀ ಕೆಂಡಗಣ್ಣಮಹಾಸ್ವಾಮಿಯವರ ಮಹಿಮೆಯಿಂದ ಶ್ರೀ ಸನ್ನಿಧಾನಕ್ಕೆ ಅನೇಕರು ದಯಮಾಡಿಸಿ ಭಕ್ತಿಯಿಂದ ಆರಾಧನೆ ವಗ್ಗೈರೆ ಸೇವೆಮಾಡಿಕೊಂಡು ಹೋಗುತ್ತಾರೆ. ಶ್ರೀ ಸ್ವಾಮಿಯವರ ಸನ್ನಿಧಿಯೂ ಪರಮಪುಣ್ಯಕ್ಷೇತ್ರವಾಗಿರುತ್ತೆ. ಈ ಕ್ಷೇತ್ರಸ್ಥಳಕ್ಕೆ ಹೆಗ್ಗಡದೇವನಕೋಟೆ ತಾಲ್ಲೂಕು ಚಿನ್ನಹಳ್ಳಿಮಠದ ವೇ॥ ಆರ್. ಕುಮಾರಾರಾಧ್ಯರೂ ಇವರ ಜನಾಂಗದವರು ಸಹ ಇದೇ ಮಾರ್ಚಿ ಮಾಹೆ ೧೬ನೇ ಸಾಯಂಕಾಲ ದಯಮಾಡಿಸಿ ೧೭ನೇ ಶುಕ್ರವಾರ ೧೮ನೇ ಶನಿವಾರ ಸಂತರ್ಪಣೆ ನಡಿಸಿ ಶ್ರೀ ಕೆಂಡಗಣ್ಣ ಮಹಾಸ್ವಾಮಿಯವರ ಪಡಿತರ ಸೇವೆಗಾಗಿ ತಮ್ಮ ಬಾಬತು ತರಿಕಲ್ಲು ಗ್ರಾಮದ ನಾಲಾಕೆಳಭಾಗದಲ್ಲಿ ತಮ್ಮ ಹೆಸರಿನ ಪಟ್ಟಾಬಾಬತು ಒಂದು ಎಕರಮಟ್ಟಿಗೆ ತರಿಜಮೀನ್ ದಾನಪೂರ್ವಕವಾಗಿ ಅರ್ಪಿಸಿರುತ್ತಾರೆ. ಮತ್ತು ಅನಾಥಾಲಯದ ಧರ್ಮಫಂಡಿಗಾಗಿ ೧ ರೂ. ಸ್ಟಾರ್ ಪತ್ರಿಕೆಯ ಪ್ರೋತ್ಸಾಹಕ್ಕಾಗಿ ೧ ರೂ. ಸಹ ಕೊಟ್ಟಿರುತ್ತಾರೆ. ತಾ॥ ೧೯ನೇ ಭಾನುವಾರ ಶ್ರೀ ಕೆಂಡಗಣ್ಣ ಮಹಾಸ್ವಾಮಿಯವರ ದಿವ್ಯಸನ್ನಿಧಿ ಮೊಕ್ಕಾಂಗೆ ಶ್ರೀಮನ್ಮಹಾ ಮೈಸೂರು ಸಂಸ್ಥಾನವನ್ನಾಳುವ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ. ಮಹಾಸ್ವಾಮಿಯವರ ಸವಾರಿಯೂ ಹುಲಿ ಶಿಕಾರಿಗಾಗಿ ದಯಮಾಡಿಸಿರಲು ವೇ॥ ಆರ್. ಕುಮಾರಾರಾಧ್ಯರು ಸದರಿ ದೇವಸ್ಥಾನದ ಜೀರ್ಣೋದ್ಧಾರ ವಿಚಾರವಾಗಿ ಮಹಾಪ್ರಭುಗಳಿಗೆ ಅರ್ಜಿ ಕೊಟ್ಟು ಅರಿಕೆಮಾಡಿರುತ್ತಾರೆ. ಈಗ ಮಹಾತ್ಮರ ಉದ್ದೇಶವು ಇವರ ದೈವಭಕ್ತಿಯಿಂದ ಮಹಾಪ್ರಭುಗಳು ನೆರವೇರಿಸಲೆಂತ ಶ್ರೀ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ ಜಗದ್ಗುರು ಶ್ರೀ ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಮೂಲಪೀಠದಿಂದ ಈ ಪ್ರಾಂತಕ್ಕೆ ದಯಮಾಡಿಸಿದ್ದು ಸದ್ಯಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸುತ್ತಿರುವದು. ಈ ಪ್ರದೇಶದ ರಾಯದುರ್ಗ ಹಿರೇಹಾಳು ಇತ್ಯಾದಿ ಗ್ರಾಮದ ಸದ್ಭಕ್ತರು ಪ್ರಾಚೀನಕಾಲದಿಂದ ಮಹಾ ರಾಜಾಧಿರಾಜರಿಂದಲೂ ಬ್ರಿಟೀಷ ಗವರ್ನಮೆಂಟಿನವರಿಂದಲೂ ದೊರೆತಿರತಕ್ಕ ಗೌರವಕ್ಕನುಸಾರವಾಗಿ ೭೨ ಬಿರುದಾವಳಿಗಳಿಂದ ಅತ್ಯುತ್ಸಾಹದೊಡನೆ ಬರಮಾಡಿಕೊಂಡು ತಮ್ಮ ಗುರುಭಕ್ತಿಯನ್ನು ಪ್ರಕಾಶಗೊಳಿಸಿದರು. ಸದ್ಯಃ ಈ ಪೀಠಾಧಿಕಾರಿಗಳು ವಿದ್ಯಾವಂತರೂ ಜಿತೇಂದ್ರಿಯರೂ ತಪೋನಿಷ್ಠರೂ ವೈರಾಗ್ಯಶಾಲಿಗಳೂ ಹಾಗೂ ಮೂಲಪೀಠವನ್ನೂ ಸಮಾಜವನ್ನೂ ಅಭಿವೃದ್ಧಿಗೊಳಿಸುವ ಉತ್ಕಟೇಚ್ಛೆಯುಳ್ಳವರೂ ಇರುವದರಿಂದ ಇದೊಂದು ನಮ್ಮ ಸಮಾಜದ ಸುದೈವವೆಂದೇ ಭಾವಿಸಬೇಕಾಗಿದೆ. ಇರಲಿ. ಸದ್ಯಕ್ಕೆ ಶ್ರೀ ಮಹಾಸನ್ನಿಧಿಗೆ ಸೊಂಡೂರು ಪುರಾಧಿಪ ಶ್ರೀಮಂತ ರಾಜಾಸಾಹೇಬ ಬಾಹದ್ದೂರರವರು ತಮ್ಮ ರಾಜಧಾನಿಗೆ ಸವಾರಿಯು ದಯಮಾಡಿಸಬೇಕೆಂಬುದಾಗಿ ಶಾಂತಪ್ಪ ಕುರುಬಸದ ಹಮ್ಮಿಗಿ ಇವರ ಪರಿಮುಖದಿಂದ ಬಿನ್ನಹಪತ್ರಿಕೆಯನ್ನು ಬರೆದುಕೊಂಡ ಪ್ರಕಾರಕ್ಕೆ ಇಷ್ಟರಲ್ಲೇ ಜಗದ್ಗುರುಗಳ ಸವಾರಿಯು ಸೊಂಡೂರು ರಾಜಧಾನಿಗೆ ದಯಮಾಡಿಸತಕ್ಕದ್ದಾಗಿದೆ. ಈ ಬಳ್ಳಾರಿಜಿಲ್ಲೆಯ ವೀರಶೈವರು ಮಹಾಪೀಠಕ್ಕಿರುವ ಋಣವಿಮೋಚನೆಗಾಗಿ ಕೇವಲ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವರು. ಇದರಂತೆ ಇನ್ನುಳಿದ ಪ್ರಾಂತದವರು ತಮ್ಮ ತಮ್ಮ ಯೋಗ್ಯತೆ ಮೀರಿ ಸಹಾಯಮಾಡಿದಲ್ಲಿ ಕೆಲಕೆಲವು ಭಾಗ ಶಿಥಿಲವಾಗಿರುವದನ್ನು ಸುವ್ಯವಸ್ಥೆಗೊಳಿಸಿ ಮಹಾಪೀಠವನ್ನು ಪೂರ್ವದಂತೆ ತೇಜೋಮಯವಾಗಿ ಮಾಡಿದಂತಾಗುವದಲ್ಲದೆ ನಮ್ಮ ವೀರಶೈವ ಸಮಾಜಕ್ಕೆ ಎಷ್ಟೋ ಭೂಷಣವಾಗುತ್ತದೆ. ಈ ಸಂಗತಿಯನ್ನು ಸರ್ವರೂ ಲಕ್ಷದಲ್ಲಿಟ್ಟು ಗುರುಭಕ್ತಿಯನ್ನು ಪ್ರಕಾಶಗೊಳಿಸುವಿರೆಂದು ನಂಬಿರುವ,

ಓರ್ವ ಗುರುಭಕ್ತಸೇವಕ.

ನೈಜಾಂ ಇಲಾಖಾ ನೀರಡಗುಂಭದ ಯಾತ್ರಾಸಮಾರಂಭವು.

ಪದ್ಧತಿಯ ಪ್ರಕಾರ ಇದೇ ದುರ್ಮತಿ॥ ಫಾಲ್ಗುಣಬ॥ ೩ ದಿನ ಇಲ್ಲಿನ ವಿರಕ್ತಮಠದಲ್ಲಿ ಸದರಿ ಸಮಾರಂಭವು ಜರುಗಿತು. ಉತ್ಸವಕ್ಕಾಗಿ ಶಾಸ್ತ್ರಿವರ್ಗವೂ ಗಾಯಕರ ಮಂಡಲವೂ ವಿದ್ಯಾರ್ಥಿಗಳ ತರಗತಿಯೂ ಹಾಗೂ ದೊಡ್ಡದೊಡ್ಡ ಶ್ರೀಮಂತರ ಸಂದಣಿಯೂ ನೆರೆದಿತ್ತೆಂದು ತಿಳುಹಲು ಹರ್ಷವಾಗುತ್ತದೆ. ಆ ದಿನ ಸಾಯಂಕಾಲ ೪ ಗಂಟೆಯಿಂದ ಅನಂಪಲ್ಲಿ ಶಾಂತಮೂರ್ತಿ ಗವಾಯಿಗಳ ಶಿವಕೀರ್ತನವು ೬ ಗಂಟೆಗೆ ಮುಗಿದ ಕೂಡಲೆ ಅರಿಷಣಿಗಿ ಚನ್ನವೀರಯ್ಯ ವಿದ್ಯಾರ್ಥಿ ಈತನ ಚಾಲಕತ್ವದೊಡನೆ ನಾರಾಯಣಪೇಟೆಯ ಶಾಲಾವಿದ್ಯಾರ್ಥಿಗಳೂ ಹಾಗೂ ನೀರಡಗುಂಭದವರೂ ಬ್ರಹ್ಮಚರ್ಯ ಭಕ್ತಿ ಸದಾಚಾರ ಇತ್ಯಾದಿಗಳ ಬಗ್ಗೆ ಬಹು ಸರಸವಾಗಿ ಭಾಷಿಸಿದರು. ಅನಂತರ ರಥೋತ್ಸವವು ವೇದಪಾಠದೊಡನೆ ಒತ್ತರದಿಂದ ನಡೆದಿತು. ಮರುದಿನ ಬೆಳಿಗ್ಗೆ ಸಭಾಮಂಟಪವು ಕಿಕ್ಕಿರಿಯುವಂತೆ ಜನಸಂದಣಿಯು ನೆರೆಯಲಾಗಿ ಮಟಮರಿ ಹಂಪಯ್ಯ ಗವಾಯಿ, ಅನಂಪಲ್ಲಿ ಗವಾಯಿ ಮತ್ತು ಮುಕ್ಕಾನು ನಾರಾಯಣಪೇಟೆಯಲ್ಲಿದ್ದ ಚಿಕ್ಕೋಡಿಕರ ಗವಾಯಿ ಇವರ ಪಲ್ಲವಿಯ ಗಾನವೂ, ಗಡ್ಡಿಪ್ರಭಯ್ಯ ಗವಾಯಿ ರಾಯಚೂರು ಇವರ ಪಿಟೀಲಿನ ಮಂಜುಳ ನುಡಿತವೂ, ಸಂ॥ ಸಬ್ಬಣ್ಣ ರಾಯಚೂರು ಇವರ ಅಸಾಧಾರಣವಾದ ಮೃದಂಗದ ಮಧುರನಾದವೂ ಸೇರಿ ಸಭಿಕರನ್ನೊಮ್ಮೆ ಚಕಿತರನ್ನಾಗಿ ಮಾಡುತ್ತಿದ್ದವೆನ್ನುವದತಿಶಯೋಕ್ತಿಯೆನಿಸದು. ಆ ಮೇಲೆ ಇನ್ನುಳಿದ ವಿದ್ಯಾರ್ಥಿಗಳೂ ಮತ್ತು ಸದರಿ ಮಠದ ಶಿವಯೋಗಿಗಳೂ ಶಾಲಾಧ್ಯಾಪಕ ಗು॥ ಸಿದ್ಧಲಿಂಗಶಾಸ್ತ್ರಿಯು ಭಕ್ತಿಪರವಾಗಿ, ನಾರಾಯಣಪೇಟೆ ಶಾಲಾಧ್ಯಾಪಕ ಚ॥ ಗುರುಪಾದಶಾಸ್ತ್ರಿಯು ಯೋಗವಿಷಯವಾಗಿ, ರಾಯಚೂರು ಶಾಲಾಧ್ಯಾಪಕ ಮ॥ ಚನ್ನಯ್ಯಶಾಸ್ತ್ರಿಯು ಶಕ್ತಿವಿಶಿಷ್ಟಾದ್ವೈತದ ಬಗ್ಗೆಯೂ, ಮ॥ ವೆಂಕಟರಾವ ಉರ್ಫ ಶಿವರಾವ ಜೇಗರಕಲ್ಲು ಪಾಟೀಲ ಇವರು ಗೃಹಸ್ಥಾಶ್ರಮದ ನಡತೆಯ ಬಗ್ಗೆ ಬಹಳ ಹೊತ್ತಿನವರೆಗೂ ವ್ಯಾಖ್ಯಾನ ಕೊಟ್ಟರಲ್ಲದೆ ಆ ದಿನ ರಾಯಚೂರು ಶಾಲಾಧ್ಯಾಪಕ ಮ॥ ಚ॥ ಇವರಿಂದ ಪರೀಕ್ಷಿಸಲ್ಪಟ್ಟು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸದರಿ ಗೌಡರು ಯಥಾ ಬಹುಮಾನ ಹಂಚಿದರು. ನಂತರ ಶಿ॥ ಮುಕ್ತಲಿ ಬಸವಲಿಂಗಪ್ಪನವರು ಈ ಮೊದಲೇ ತಮಗೆ ವಹಿಸಿದ ಚಾಲಕತ್ವವನ್ನು ಸರಿಯಾಗಿ ಮಾಡುತ್ತ ಕೊನೆಗೆ ಇದರಂತೆ ಅಕ್ಷರವಂತರೂ ಶ್ರೀಮಂತರೂ ತಪ್ಪದೆ ನೆರೆಯಬೇಕೆಂತಲೂ ರಾಮುಗಡ್ಡಿ ಕೈ॥ ವಾ॥ ಶ್ರೀಗಳ ಬಗ್ಗೆ ಪ್ರತಿಯೊಬ್ಬನ ಅಭಿಮಾನವಿರಬೇಕೆಂತಲೂ ಹೇಳಿ ಆ ದಿನದ ಧರ್ಮೋತ್ತೇಜಕ ಎಂಬ ಸಭೆಯನ್ನು ಮಂಗಲ ಮಾಡಿದರು.

ಓರ್ವಪ್ರತ್ಯಕ್ಷದರ್ಶಿ.

ಮಂಡ್ಯದ ತಾಲ್ಲೂಕು ವೃತ್ತಾಂತ.

ಪ್ಲೇಗಿನಿಂದ ಊರನ್ನು ಬಿಟ್ಟಿದ್ದ ಜನರು ಮಂಡ್ಯವನ್ನು ಸೇರುತ್ತಿದ್ದಾರೆ. ಬಿಸಲಿನತಾಪವನ್ನು ಸಹಿಸುವುದು ಅಸಾಧ್ಯವಾಗಿದೆ. ಕೆರೆಯಲ್ಲಿ ನೀರಿಲ್ಲದೆ ಗೋಕಾಯಿಗಳಿಗಾಗಿ ಒಂದು ಕಟ್ಟೆಯನ್ನು ತೆಗೆಸುತ್ತಿದ್ದಾರೆ. ಇಲ್ಲಿನ ಅಮಲ್ದಾರರು ಮೆ॥ ನಾಗನಾಯ್ಕರ್‌ರವರು ಚಾಮರಾಜನಗರಕ್ಕೆ ವರ್ಗಮಾಡಲ್ಪಡುವರೆಂದು ವದಂತಿ ಇದೆ. ವರ್ಷಒಂದಕ್ಕೆ ಸುಮಾರು ಸಾವಿರ ರೂಪಾಯಿ ಉತ್ಪತ್ತಿಯುಳ್ಳ ಮ್ಯುನಿಸಿಪಾಲಿಟಿಯ ಸಿಬ್ಬಂದಿಯು ೫೦೦ ೬೦೦ ರೂ.ಗೆ ಬರುತ್ತದೆ. ಉಳಿದದ್ದರಲ್ಲಿ ಜನರಿಗೆ ಉಪಯೋಗವಾಗುವ ಕಾರ್ಯಗಳನ್ನೇನು ಮಾಡಬಹುದೋ ತಿಳಿಯದು. ಮ್ಯುನಿಸಿಪಲ್ ಗುಮಾಸ್ತರು ಅಂಗಡಿಗುಮಾಸ್ತೀಕೆಲಸವನ್ನೂ ಮಾಡುತ್ತಿರುವುದರಿಂದ ಮ್ಯುನಿಸಿಪಾಲಿಟಿಯ ಕೆಲಸವು ತೃಪ್ತಿಕರವಾಗಿ ನಡೆಯಲು ಅವಕಾಶವಿಲ್ಲದಂತೆ ಕಾಣುತ್ತದೆ. ಹೊಸಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರು ತಮ್ಮ ಕೆಲಸದಲ್ಲಿ ಉತ್ಸಾಹಿಗಳಾಗಿರುವಂತೆ ಕಂಡುಬರುವುದಿಲ್ಲ. ಮುಂದೆ ಈ ರೀತಿಯ ನ್ಯೂನತೆಗೆ ಅವಕಾಶಕೊಡಲಾರರೆಂದು ನಂಬಿದೆ. ಇಲ್ಲಿನ ಬೆಂಚ್‌ಕೋರ್ಟಿನ ಗುಮಾಸ್ತೆಯರ ಅಧಿಕಾರವೇ ಪ್ರಾಮುಖ್ಯವೆಂದೂ, ಈಗಿನ ಬೆಂಚಿನ ನ್ಯಾಯವಿಚಾರದಲ್ಲಿ ಜನರು ತುಂಬಾ ಅಸಮಾಧಾನವುಳ್ಳವರಾಗಿದ್ದಾರೆಂದೂ, ಒಬ್ಬ ಮ್ಯಾಜಿಸ್ಟ್ರೇಟರು ಅಸಮಾಧಾನದಿಂದ ಕೆಲಸಕ್ಕೆ ರಾಜೀನಾಮವನ್ನು ಕೊಟ್ಟಿರುವರೆಂದೂ ವದಂತಿಯಿದೆ. ಪ್ರಜಾನುರಾಗಿಗಳಾಗಿರುವ ರೈಲ್ವೇ ಸ್ಟೇಷನ್ ಮಾಸ್ಟರು ಮೈಸೂರಿಗೆ ವರ್ಗಾಯಿಸಲ್ಪಡುವರೆಂದು ಕೇಳುತ್ತೇವೆ. ಈ ಊರಿನಲ್ಲಿರತಕ್ಕ ಹೋಟಲುಗಳಲ್ಲಿ ತಯಾರಾಗುವ ತಿಂಡಿಗಳು ಅನಾರೋಗ್ಯಕರವಾದುವೆಂದು ಮ್ಯುನಿಸಿಪಾಲಿಟಿಯವರ ಅವಗಾಹನೆಗೆ ಬರಬೇಕಾಗಿದೆ. ಹೋಟಲಿನವರು ಶ್ರೀಮಂತರಾಗುತ್ತಿದ್ದಾರೆ. ಅನೇಕ ಜನರು ಹೋಟಲಿಗಾಗಿ ಸ್ವೇಚ್ಛೆಯಾಗಿ ದುಂದುಮಾಡಿ ತಮ್ಮ ಮನೆಯಲ್ಲಿರುವವರ ಯೋಗಕ್ಷೇಮವನ್ನೇ ನೋಡುವಂತಿಲ್ಲ. ಅಂತು ಹೋಟಲಿನವರ ಅದೃಷ್ಟ. ಸಾಹುಕಾರ್ ಮ॥ ಅರಳೀಸಂಗಪ್ಪನವರು ಗರ್ಲ್ಸ್‌ಸ್ಕೂಲಿಗಾಗಿ ಒಂದು ಕಟ್ಟಡವನ್ನು ಕಟ್ಟಿಸುವ ಅಭಿಪ್ರಾಯದಲ್ಲಿರುವರೆಂದು ಜನರು ಮಾತನಾಡುತ್ತಿರುವರು. ಈ ತಾಲ್ಲೂಕಿನಲ್ಲಿ ಪ್ಲೇಗಿನಿಂದ ಬಿಟ್ಟಿದ್ದ ಅನೇಕ ಗ್ರಾಮಗಳಲ್ಲಿ ಜನರು ಗ್ರಾಮಗಳನ್ನು ಸೇರುತ್ತಿರುವರು. ಮಳೆ ಇಲ್ಲದಿರುವುದರಿಂದ ದನಕರುಗಳಿಗೂ ಜನರಿಗೂ ನೀರಿಗೆ ತೊಂದರೆಯಾಗಿದೆ. ಈ ತಾಲ್ಲೋಕಿನಲ್ಲಿ ಅನೇಕ ಸ್ಥಳಗಳಲ್ಲಿ ಜೂಜಾಟವು ಪ್ರಬಲವಾಗುತ್ತಿರುವುದು. ಪೋಲೀಸು ಅಧಿಕಾರಿಗಳು ಬಹಿರಂಗದಲ್ಲಿ ಜೂಜು ನಡೆಯುತ್ತಿದ್ದರೂ ಆಟಗಾರರನ್ನು ಶಿಕ್ಷೆಗೆಗುರಿಮಾಡದಿರುವುದು ಮುಂದೆ ಕಳ್ಳತನಕ್ಕೆ ಪ್ರಾರಂಭವಾಗಬಹುದೆಂದು ಜನರು ಪ್ರಸ್ತಾಪಿಸುತ್ತಿರುವರು. ಇಲ್ಲಿನ ಲೋಕಲ್‌ಬೋರ್ಡ್‌ಕೆಲಸವು ತೃಪ್ತಿಕರವಾಗಿ ನಡೆದಿರುವುದೆಂದು ತಾಲ್ಲೋಕು ಕಾನ್ಫರೆನ್ಸಿನಿಂದ ತಿಳಿಯುತ್ತದೆ. ಅಲ್ಲಲ್ಲಿ ಸಿಡುಬು ತಲೆದೋರಿರುತ್ತದೆ. ಮದ್ದೂರು ರೈಲ್ವೆ ಸ್ಟೇಷನ್ನಿನಲ್ಲಿರುವ ಹೋಟಲಿನ ತಿಂಡಿಯು ಅನಾರೋಗ್ಯಕರವಾದ ರೀತಿಯಲ್ಲಿ ತಯಾರಾಗುತ್ತಿದ್ದರೂ ರೆಲ್ವೇ ಇಲಾಖೆಯವರ ನಿಗಾಕ್ಕೆ ಬಂದಂತೆ ಕಾಣುವುದಿಲ್ಲ. ಈ ತಾಲ್ಲೋಕಿನ ವಿದ್ಯಾಭ್ಯಾಸವು ಅತ್ಯಂತ ಹೀನಸ್ಥಿತಿಯಲ್ಲಿರುವದು. ಎಲ್ಲಿಲ್ಲಿ ನೋಡಿದರೂ ಕೋರ್ಟುಕಚೇರಿಯ ವಿಚಾರವನ್ನು ಮಾತನಾಡದವನೇ ಇಲ್ಲ. ಬಿಸಿಲು ಮಳೆ ಎಂದು ಲಕ್ಷಿಸದೆ ಸಂಪಾದಿಸಿದ ಹಣವನ್ನು ವೃಥಾ ಕೋರ್ಟು ಮತ್ತು ಲಾಯರುಗಳ ಪಾಲುಮಾಡಿ ತಾವು ಮತ್ತು ತಮಗೆ ಸೇರಿದವರು ಸುಖವಾಗಿ ತಿಂದು ಜೀವಿಸುವುದನ್ನು ಯೋಚಿಸದ ಈ ಜನರಿಗೆ ದೇವರೇ ತಿಳಿವಳಿಕೆಯನ್ನು ಕೊಡಬೇಕು. ಒಂದೆರಡು ಹೋಬಳಿಗಳ ಶಾನುಭೋಗರುಗಳು ತಾವೇ ಪಾಳಯಗಾರರೆಂದು ಭಾವಿಸಿ ಜನರನ್ನು ಹಿಂಸಿಸುತ್ತಿರುವರು.

ಗ್ರಾಮವಾಸಿ.

ನೋಟೀಸು.

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ— ಮಳವಳ್ಳಿ ತಾಲ್ಲೂಕು ಹಲಗೂರು ಹೋಬಳಿ ಚಿಲ್ಲಾಪುರದ ಗ್ರಾಮದಲ್ಲಿರುವ ಹುಚ್ಚಬಸವಯ್ಯನ ಬಸವಚಾರಿಯು ಶೃತಪಡಿಸುವದೇನಂದರೆ— ಇದೇ ಗ್ರಾಮದಲ್ಲಿರುವ ಬಸವಾಚಾರಿಯಾದ ನನಗೆ ಪಿತ್ರಾರ್ಜಿತವಾಗಿ ಬಂದಿರುವ ಮನೆ ಮತ್ತು ಹೊಲವನ್ನು ನನ್ನ ಅಣ್ಣನ ಹೆಂಡತಿ ಪಂಡಿತಹಳ್ಳಿ ರಾಚಮ್ಮನೆಂಬವಳು ಈಗ ಅಪುತ್ರವಂತಳಾಗಿರುವ ಸಬಬ್ ಸದರಿ ಸೊತ್ತುಗಳಲ್ಲಿ ಜೀವಾವಧಿ ಅನುಭವಿಸುವ ಹಕ್ಕು ಉಳ್ಳವಳಾಗಿರುವದರಿಂದ ಸದರಿಯವಳ ಕಾಲಾನಂತರ ಮೇಲ್ಕಂಡ ಸೊತ್ತುಗಳಿಗೆ ನಾನು ದಾಯಾದಿ ಮತ್ತು ಉತ್ತರಾಧಿಕಾರಿಯಾಗುತ್ತೇನಾದ್ದರಿಂದ ಈ ಸೊತ್ತುಗಳನ್ನು ಮೇಲ್ಕಂಡ ರಾಚಮ್ಮನೆಂಬವಳಿಂದ ಯಾರಾದರೂ ಚಿತಾವಣೆಯಿಂದ ಕ್ರಯ ಭೋಗ್ಯ ವಗ್ಗೈರೆ ಪರಾಧೀನ ತೆಗೆದುಕೊಂಡದ್ದೇ ಆದರೆ ತೆಗೆದುಕೊಳ್ಳುವವರಿಗೆ ಯಾವ ವಿಧವಾದ ಹಕ್ಕುಬಾಧ್ಯತೆ ಉಂಟಾಗಲಾರದೆಂದು ಈ ಮೂಲಕ ಪ್ರಸಿದ್ಧಪಡಿಸಿರುತ್ತೆ.

ಹುಚ್ಚಬಸವಯ್ಯನ ಬಸವಾಚಾರಿ, ಚಿಲ್ಲಾಪುರ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಶನ್ ವಜ್ರದ ಬೆಂಡೋಲೆ. 3

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುಸಾಯಕನ ಬೀದಿ, ಮದರಾಸು.

೧೯೨೨ನೆಯ ಇಸವಿ ಏಪ್ರಿಲ್ ತಾ॥ ೨ರಿಂದ ೧೯೨೨ನೆಯ ಏಪ್ರಿಲ್ ತಾ॥ ೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಚೈತ್ರಶುದ್ಧ ಪಂಚಮಿಯಿಂದ ಚೈತ್ರಶುದ್ಧ ಏಕಾದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
2	ಭಾನು	ಪಂಚ	37-53	ರೋಹಿ	55-29	20
3	ಸೋಮ	ಷಷ್ಠಿ	36-3	ಮೃಗ	54-58	21
4	ಮಂಗಳ	ಸಪ್ತ	33-10	ಆದ್ರಾ	53-35	22
5	ಬುಧ	ಅಷ್ಟ	29-13	ಪುನ	51-8	23
6	ಗುರು	ನವ	24-28	ಪುಷ್ಯ	47-51	24
7	ಶುಕ್ರ	ದಶ	19-9	ಆಶ್ಲೇ	44-5	25
8	ಶನಿ	ಏಕಾ	13-20	ಮಖ	40-0	26

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಏಪ್ರಿಲ್ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೧೪

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
13 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಶಾಕಿ) ಗುಪ್ತಪ್ರದೇಶದ ಮೇಲೆ ನಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ಆರೋಗ್ಯತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 11

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ಮುಂತಾದ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿನಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗ್ಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗುಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
10 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾನಗ್ರಂಥ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಶರಣಸತಿ ಲಿಂಗಪತಿ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ॥ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
14 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಶನ್ ವಜ್ರದ ಬೆಂಡೋಲೆ. 4

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುಸಾಯಕನ ಬೀದಿ, ಮದರಾಸು.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಏಪ್ರಿಲ್ ತಾ|| ೯ ನೆಯ ಭಾನುವಾರ.

ಮಂತ್ರಿಪದವಿ.

ಸರ್ ಕಾಂತರಾಜ ಅರಸಿನರು.

ಸರ್ ಕಾಂತರಾಜ ಅರಸಿನವರು ಆರೋಗ್ಯದೃಢಕಾಯರಲ್ಲ. ತನ್ನ ದೇಶವೆಂಬ ಅಭಿಮಾನವು ಶ್ರೀಮನ್ಮಹಾರಾಜರಿಗೆ ಹೇಗೆ ಇರುವುದೋ ಅದರಂತೆ ಆತ್ಮೀಯಾಭಿಮಾನದಿಂದ ದೇಶಪಾಲನೆ ಮಾಡುವುದರಲ್ಲಿ ಇವರಿಗೆ ಎಷ್ಟು ಶ್ರದ್ಧಾಕುತೂಹಲವಿರುವುದೋ ಮುಖ್ಯವಾದ ದೇಹಾರೋಗ್ಯಭಾಗ್ಯವು ಅಷ್ಟುಮಟ್ಟಿಗಿರುವುದಿಲ್ಲ. ಮಂತ್ರಿಪದವಿಯನ್ನು ಆದಿಯಲ್ಲಿ ಇವರು ವಹಿಸುವಾಗ್ಗೂ ೬ ತಿಂಗಳ ಕಾಲ ವಿಶ್ರಾಂತಿಪಡೆದು ದೇಹಾರೋಗ್ಯಕ್ಕಾಗಿ ತೆರಳಬೇಕಾಯಿತು. ಕಳೆದ ೩|| ವರ್ಷ ಕಾಲದಲ್ಲಿ ಸಂಸ್ಥಾನದ ಕಾರ್ಯಭಾರವನ್ನು ನಿರ್ವಹಿಸುವುದರಲ್ಲಿ ಅವರ ಆರೋಗ್ಯವು ಮತ್ತಷ್ಟು ನೀರಸವಾಗುತ್ತ ಬಂದಿತು. ದೇಹಾಂತವಾಗಿ ದೇಶಸೇವೆ ಮಾಡುವುದಕ್ಕೆ ಅವರು ಸಿದ್ಧರಾಗಿದ್ದರೂ ಅವರ ದೇಹಾರೋಗ್ಯವನ್ನು ಮುಖ್ಯವಾಗಿ ಕೋರುವ ಶ್ರೀಮನ್ಮಹಾರಾಜರೂ ಮಹಾಮಾತೃಶ್ರೀಯವರೇ ಮೊದಲಾದ ಬಂಧುವರ್ಗದವರೂ ಅವರಂತೆಯೇ ಅವರ ಶ್ರೇಯಶ್ಚಿಂತಕರಾದ ಪ್ರಜಾಮಂಡಲಿಯೂ ಕೂಡ ಅವರು ಇನ್ನೂ ರಾಜ್ಯಭಾರಕ್ಲೇಶದಲ್ಲಿ ತೊಳಲುವುದನ್ನು ಇಚ್ಛೈಸುವುದಿಲ್ಲ. ಈ ಕಾರಣದಿಂದ ಅವರು ಮಂತ್ರಿಪದವಿಯಿಂದ ನಿವೃತ್ತಿಯನ್ನು ಪಡೆಯಬೇಕಾಯಿತು. ದೇಹಾರೋಗ್ಯವಿಲ್ಲದ ಕಾರಣದಿಂದ ಅವರು ಇಷ್ಟುಬೇಗನೆ ರಾಜ್ಯಸೂತ್ರವನ್ನು ಕೈಬಿಡುವಂತೆ ಆದುದಕ್ಕಾಗಿ ಅನೇಕಾನೇಕ ಪ್ರಜೆಗಳೊಡನೆ ನಾವು ವಿಷಾದಿಸುತ್ತೇವೆ. ಇವರ ಅಧಿಕಾರ ಕಾಲದಲ್ಲಿ ಬಹಳ ಕ್ಲಿಷ್ಟಗಳಾದ ಸಮಸ್ಯೆಗಳು ಸಂಸ್ಥಾನದಲ್ಲಿ ಸಂಘಟಿಸಿಕೊಂಡಿದ್ದುವು. ಬೆಲೆ ಹೆಚ್ಚಾಗೆಯಿಂದ ಸಣ್ಣ ಉದ್ಯೋಗಿಗಳು ತಾಪತ್ರಯ ಪಡುತ್ತ ಇದ್ದುದನ್ನು ತಪ್ಪಿಸಲಿಕ್ಕೆ ಉದಾರವಾಗಿ ಅಲೋಯನ್ಸುಗಳನ್ನು ಕೊಡಿಸಿದರು. ಹಿಂದೆ ಉಪಕ್ರಮಗೊಂಡುಹೋಗಿದ್ದ ದೊಡ್ಡದೊಡ್ಡ ಪ್ರತಿಷ್ಠಾಪನೆಗಳಿಗಾಗಿ ಕೋಟ್ಯಂತರ ಹಣವನ್ನು ಒದಗಿಸುವ ಭಾರವು ಬಿದ್ದಿತು. ಎಲ್ಲ ದಿಕ್ಕಿನಿಂದಲೂ ಹಣದ ಮುಗ್ಗಟ್ಟೇ ಗೋಚರಿಸುವಂತಾಯಿತು. ಈ ದುರ್ಧರಸಮಸ್ಯೆಗಳಿಗೆಲ್ಲಾ ಎದೆಗೊಟ್ಟುಕೊಂಡು ರಾಜ್ಯರಥವನ್ನು ಸಾಗಿಸಿದರು. ಎಜ್ಯುಕೇಷನ್ ಮೆಮೊರಾಂಡಂ ಮಿಲ್ಲರ್ ಕಮಿಟಿ ವರದಿ ಇವುಗಳ ಸಂಬಂಧವಾದ ಸರ್ಕಾರಿ ಅಪ್ಪಣೆಯು ವಿಘ್ನಪರಂಪರೆಗಳನ್ನೆಲ್ಲಾ ದಾಂಟಿ ವ್ಯವಹಾರಕ್ಕೆ ಬರುವಂತೆ ಮಾಡುವಲ್ಲಿ ಇವರು ಸಂಪೂರ್ಣದಕ್ಷತೆಯನ್ನು ವ್ಯಕ್ತಪಡಿಸಿದರು. ಇವರ ಕಾಲದಲ್ಲಿಲ್ಲದಿದ್ದರೆ ಅವು ಇಷ್ಟುಬೇಗನೆ ಈಚೆಗೆ ಬರುತ್ತಿರಲಿಲ್ಲ, ಅಥವಾ ಜನ್ಮಸ್ಥಲದಲ್ಲೇ ಮರಣವನ್ನಾದರೂ ಹೊಂದಬಹುದಾಗಿದ್ದಿತು. ಅವೆರಡನ್ನೂ ಬಳಕೆಗೆ ಬರುವಂತೆ ಮಾಡುವಲ್ಲಿ ಇವರು ತೋರಿಸಿದ ಶ್ರದ್ಧೆಗಾಗಿ ಹಿಂದುಳಿದ ಪ್ರಜಾಸ್ತೋಮವೆಲ್ಲವೂ ಸರ್ ಕಾಂತರಾಜ ಅರಸಿನವರಿಗೆ ಶಾಶ್ವತ ಕೃತಜ್ಞವಾಗಿರುವುದು. ಇವೆರಡರ ಕಲ್ಪನೆಯ ಮೂಲಕ ಸಾಮಾನ್ಯಜನವರ್ಗಕ್ಕೆಲ್ಲಾ ವಿದ್ಯೆ ಅಧಿಕಾರ ಇವುಗಳು ಕೈಸೇರಿಹೋಗುವುವೆಂಬುದನ್ನು ಯೋಚಿಸಿ, ಅದನ್ನು ಸೈರಿಸಲಾರದ ಕಾರಣದಿಂದ ಕೆಲವರು ಮಾಡುತ್ತಬಂದ ಕಠಿನವಾದ ವಿಮರ್ಶೆಗೂ ದೂಷಣೆಗೂ ಸಹ ಅರಸಿನವರು ಗುರಿಯಾದರು. ಆದರೂ ಅದೊಂದನ್ನೂ ಲಕ್ಷಿಸದೆ ಪರಮಾರ್ಥದಲ್ಲೇ ದೃಷ್ಟಿಯಿಟ್ಟು ಕೆಲಸಮಾಡಿ ಸಿದ್ಧಿಗೊಂಡರು. ನಿಮ್ನಜಾತಿ ಸಮುದ್ಧಾರಕ್ಕೆ ಬೇಕಾದಷ್ಟು ಅನುಕೂಲ್ಯವನ್ನು ಕಲ್ಪಿಸಿದರು.

ಮುಖ್ಯವಾಗಿ ಇವರಲ್ಲಿದ್ದ ಒಂದು ದೊಡ್ಡ ಸುಗುಣವು ಸಂಸ್ಥಾನಕ್ಕೆ ಅಹಿತವನ್ನು ಮಾಡಲು ಸಾಧಕವಾದುದನ್ನು ಮಾತ್ರ ಹೇಳದಿದ್ದರೆ ತೀರದು. ಇವರು ಪರಮ ಕರುಣಾಳುಗಳು. ಯಾರನ್ನೂ ನೋಯಿಸಬೇಕೆಂಬುದೂ ಹೊಟ್ಟೆಯಮೇಲೆ ಹೊಡೆಯಬೇಕೆಂಬುದೂ ಇವರ ಕನಸುಮನಸ್ಸಿನಲ್ಲಿಯೂ ಸಹ ಇಲ್ಲ. ಈ ಹೆಣ್ಣೆದೆಯು ಸಂಸ್ಥಾನದ ಉದ್ಯೋಗಿಗಳಿಗೆಲ್ಲಾ ನಿರ್ಭೀತತೆಯನ್ನೂ ಸ್ವಚ್ಛಂದವನ್ನೂ ಹುಟ್ಟಿಸಿಕೊಡಲು ಅವಕಾಶ ಮಾಡಿತು; ಭಯವೇ ತಪ್ಪಿತು; ದರ್ಪವು ನಿರ್ಮೂಲವಾಯಿತು; ಉದ್ಯೋಗಿಗಳು ಲಂಚದಲ್ಲಿ ತೇಲಿಮುಳುಗುವಂತಾಯಿತು; ಅವರ ಸುಲಿಗೆಯನ್ನು ಪ್ರಜೆಗಳು ತಾಳಿಕೊಳ್ಳಲಾರದೆ ತತ್ತರಿಸುವಂತಾಯಿತು; ಸರ್ಕಾರದ ಹಣಕಾಸುಗಳು ಹೇಗೆಹೇಗೋ ದುರ್ವಿನಿಯೋಗವಾಗಲು ಮಾರ್ಗವಾಯಿತು. ಈ ತೆರನಾದ ದೋಷವೊಂದರ ಹೊರತು ಇವರ ಕಾರ್ಯಭಾರದಲ್ಲಿ ಮತ್ತಾವ ದೋಷವನ್ನೂ ಕಾಣೆವು. ಈಗ ಸಂಸ್ಥಾನದಲ್ಲಿ ಒದಗಿರುವ ದುಡ್ಡಿನ ಮುಗ್ಗಟ್ಟನ್ನು ತೊಲಗಿಸಲಿಕ್ಕಾಗಿ ಆರ್ಥಿಕ ಸಂಘದವರು ಸೂಚಿಸುವ ಹೊಸಹೊಸ ಏರ್ಪಾಟುಗಳನ್ನು ರೂಢಿಸಬೇಕಾಗಿರುವ ಕಾಲ. ಅದನ್ನೆಲ್ಲಾ ನಿರ್ದಾಕ್ಷಿಣ್ಯವಾಗಿಯೂ ದಕ್ಷತೆಯಿಂದಲೂ ವ್ಯವಹಾರಕ್ಕೆ ತರಬೇಕು. ಆ ಕೆಲಸವನ್ನು ನಿರ್ದಾಕ್ಷಿಣ್ಯದಿಂದ ಇವರು ಎಷ್ಟುಮಟ್ಟಿಗೆ ಸಾಧಿಸುತ್ತಿದ್ದರೋ ಹೇಳಲಾಗುವುದಿಲ್ಲ. ಅದಕ್ಕಿಂತಲೂ ಈಗ ಆ ದುರ್ಧರಪ್ರಸಂಗದಿಂದ ದೂರಸ್ಥರಾಗುವಂತಾದುದೇ ಮೇಲೆಂದು ಹೇಳಬಹುದು. ಅಂತೂ ಆಧುನಿಕ ರಾಜಬಂಧುವರ್ಗದಲ್ಲಿ ವಿದ್ಯಾವಂತರೂ ಮೇಧಾವಿಗಳೂ ಎನಿಸಿಕೊಂಡು ಸಂಸ್ಥಾನದ ಮಂತ್ರಿಪದವಿಯನ್ನು ನಿರ್ವಹಿಸಿ ಶ್ರೇಷ್ಠವಾದ "ಸರ್" ಪ್ರಶಸ್ತಿಯನ್ನು ಪಡೆದು, ಇವೆಲ್ಲಕ್ಕಿಂತಲೂ ಅತಿಶಯವಾಗಿ ಪ್ರಜಾಪ್ರೀತಿಯನ್ನು ಸಂಪಾದಿಸಿ ರಾಜ್ಯಕಾರ್ಯದಿಂದ ವಿಶ್ರಾಂತಿಯನ್ನು ಪಡೆಯುವವರಾಗಿರುವ ಮ|| ಅರಸಿನವರು ಅವರ ವಂಶಕ್ಕೆ ಅಭೂತಪೂರ್ವವಾದ ಕೀರ್ತಿಪ್ರತಿಷ್ಠೆಯನ್ನುಂಟುಮಾಡಿದರು. ರಾಜ್ಯಭಾರಕ್ಲೇಶ ಪರಿತ್ಯಾಗದಿಂದ ವಿಶ್ರಾಂತಿಗೊಂಡಿರುವ ಮ|| ಅರಸಿನವರು ದೀರ್ಘಾಯುರಾರೋಗ್ಯಗಳನ್ನು ಪಡೆದು ಚಿರಕಾಲ ಶ್ರೀಮನ್ಮಹಾರಾಜರಿಗೆ ಆಪ್ತಾಲೋಚಕರಾಗಿರುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಕೋರುವೆವು

ಮ|| ಎ. ಆರ್. ಬಾನರ್ಜಿಯವರು.

ಮಂತ್ರಿಪದವಿಗೆ ಈಗ ಬಂದಿರುವ ಮ|| ಬಾನರ್ಜಿಯವರ ಕಾರ್ಯದಕ್ಷತೆಯು ದೇಶೀಯರಿಗೆ ಅಪರಿಚಿತವೇನೂ ಅಲ್ಲ. ಇನ್ನು ೧೦-೧೫ ದಿನಗಳು ತಡವಾಗಿದ್ದರೆ ಇವರು ಮೈಸೂರು ಉದ್ಯೋಗ ಸಂಬಂಧವನ್ನೇ ಕಳೆದುಕೊಂಡು ಭಾರತಪ್ರಭುತ್ವದ ಯಾವುದಾದರೊಂದು ಉದ್ಯೋಗಕ್ಕೆ ಹೊರಟುಹೋಗುತ್ತಿದ್ದರು. ಇವರ ಮಂತ್ರಿಪದವಿಯ ಫಲವನ್ನನುಭವಿಸುವ ಯೋಗವು ಸಂಸ್ಥಾನಕ್ಕೆ ಇದ್ದುದರಿಂದಲೇ ಅವರು ಮಾಡಿದ್ದ ಪ್ರಯಾಣವೆಲ್ಲಾ ನಿಂತು ಈಗಣ ಬದಲಾವಣೆಗಳು ಆದುವೆಂದು ಹೇಳಬಹುದು. ಶ್ರೀಮನ್ಮಹಾರಾಜರು ಇವರ ಕಾರ್ಯನಿರ್ವಹಶಕ್ತಿಯ ಮೇಲೆ ಭರವಸೆಯಿಟ್ಟು ಮಂತ್ರಿಪದವಿಗೆ ಇವರನ್ನು ನಿಯಮಿಸಿರುವುದಕ್ಕಾಗಿ ಪ್ರಜೆಗಳೆಲ್ಲಾ ತೃಪ್ತಿಪಡುವರೆಂಬುದರಲ್ಲಿ ಸಂಶಯವಿಲ್ಲ. ಸರ್ ಕಾಂತರಾಜ ಅರಸಿನವರ ಅಧಿಕಾರವಿಯೋಗದಿಂದ ಪ್ರಜೆಗಳ ಮನಸ್ಸಿನಲ್ಲಿ ಉಂಟಾಗಿರುವ ಕಳವಳವನ್ನು ಇವರು ಸಂಪೂರ್ಣವಾಗಿ ತಪ್ಪಿಸಿಬಿಡುವಂತೆ ಕಾರ್ಯಮಾಡಬಲ್ಲರೆಂದು ಅವರುಗಳು ನಂಬಿದ್ದಾರೆ. ವಿದ್ಯುಚ್ಛಕ್ತಿಯಂತೆ ಕೆಲಸಮಾಡುವ ತೀವ್ರಶಕ್ತಿಯು ಇವರಲ್ಲಿರುವುದೆಂಬುದನ್ನು ಕಳೆದ ೬ ವರ್ಷಗಳಲ್ಲಿ ಸಂಸ್ಥಾನದೊಳಗೆ ತಮ್ಮ ಭಾಗಕ್ಕೆ ದೊರೆದಷ್ಟು ಅಧಿಕಾರವನ್ನು ವಿನಿಯೋಗಿಸುವಲ್ಲಿ ಇವರು ಹೇಗೆ ನಡೆಯಿಸಿರುವರೆಂಬುದನ್ನು ಪ್ರಜೆಗಳು ಬಲ್ಲರು. ಮೊಟ್ಟಮೊದಲು ಇವರನ್ನು ಮೈಸೂರು ಸಂಸ್ಥಾನದ ಉದ್ಯೋಗಕ್ಕೆ ತಂದಾಗ ಸ್ವಾರ್ಥೈಕಧುರಂಧರರಾದ ಕೆಲ ಪತ್ರಿಕಾಕರ್ತರು ಅನ್ಯದೇಶೀಯರನ್ನು ಈ ದೇಶದ ಉದ್ಯೋಗಕ್ಕೆ ತಂದು ಶ್ರೀಮನ್ಮಹಾರಾಜರು ಅಪರಾಧಮಾಡಿದರೆಂದು ದೂರಿದರು. ಮ|| ಬಾನರ್ಜಿಯವರೂ ಬೇಕಾದಷ್ಟು ವಿಮರ್ಶೆಗೆ ಗುರಿಯಾದರು. ಆದರೆ ಆ ಕಾಲದಲ್ಲೇ ನಾವು ಅಂಥ ಲೇಖನಗಳಿಗೆ ಪ್ರತ್ಯುತ್ತರ ಕೊಡುವಾಗ್ಗೆ ಮ|| ಬಾನರ್ಜಿಯವರ ಯೋಗ್ಯತಾಂಶಗಳನ್ನೆಲ್ಲಾ ಆಡಿ ತೋರಿಸಿ, ದೇಶದಲ್ಲಿ ಹುಟ್ಟಿದ ಮಾತ್ರಕ್ಕೇ ರೋಗವು ತನಗೆ ಪ್ರಿಯವೇ? ಕಾಡು ಮೂಲಿಕೆಯು ಹೊರಗೆ ಬೆಳೆದ ಮಾತ್ರಕ್ಕೇ ಅದು ಅಪ್ರಿಯವೇ? ಎಂದು ಹೇಳಿ ಬಿಂಡಿಸಿ, ಇವರನ್ನು ಸ್ವಾಗತಿಸಿದ್ದೆವು. ಈಚೀಚೆಗೆ ಇವರ ಶಕ್ತಿಸಾಮರ್ಥ್ಯಗಳಿಂದ ಮುಗ್ಧರಾದ ಆ ಜನರು ಹೇಪ ಮುಖವನ್ನು ಹಾಕಿಕೊಂಡು ಇಂದ್ರಚಂದ್ರ ದೇವೇಂದ್ರನೆಂದು ಅದೇ ಬಾನರ್ಜಿಯವರನ್ನೇ ಹೊಗಳುತ್ತಿದ್ದಾರೆ. ಸ್ತುತಿ ನಿಂದೆಗಳಿಗೆ ಹಿಗ್ಗದ ತಗ್ಗದ ಸ್ವಭಾವವೂ ನ್ಯಾಯೈಕಪಕ್ಷಪಾತತೆಯೂ ಮ|| ಬಾನರ್ಜಿಯವರಲ್ಲಿ ಪೂರ್ಣವಾಗಿದೆ. ಮುಂದಾದರೂ ಸಂಸ್ಥಾನದ ಕಾರ್ಯನಿರ್ವಾಹದಲ್ಲಿ ಆ ಗುಣಗಳೇ ಉತ್ತರಮುಖಿಯಂತೆ ಇದ್ದುಕೊಂಡು ಶ್ರೀಮನ್ಮಹಾರಾಜರೂ ಪ್ರಜೆಗಳೂ ತಮ್ಮಲ್ಲಿಟ್ಟಿರುವ ಭರವಸೆ ಪ್ರೀತಿಗಳು ಸರ್ವಪ್ರಕಾರದಿಂದಲೂ ಸಫಲವಾಗುವಂತೆ ಮಾಡಿಕೊಳ್ಳದೆ ಇರಲಾರರೆಂದು ನಂಬುತ್ತೇವೆ. ಊರು ಕೇರಿಯ ಕೊಚ್ಚೆಯ ನಿರ್ಮೂಲನಕ್ಕೆ ದೊಡ್ಡ ಮಳೆಯು ಅವಶ್ಯಕವಾಗಿರುವಂತೆ ಪ್ರತಿ ಶಾಖೆಯಲ್ಲೂ ತುಂಬಿತುಳುಕುತ್ತಿರುವ ಲಂಚ, ಸ್ವಚ್ಛಂದ, ದ್ರೋಹ, ಪ್ರಜಾಪೀಡೆ ಮೊದಲಾದ ದೋಷಗಳು ಇವರ ಕಾರ್ಯಭಾರ ಕಾಲದಲ್ಲಿ ನಿಶ್ಶೇಷವಾಗದಿರಲಾರವೆಂದು ಸಂತೋಷದಿಂದ ಇದಿರುನೋಡುತ್ತಿರುವೆವು.

THE MYSORE CHAMBER OF COMMERCE AND THE MILLER COMMITTEE REPORT.

(Communicated.)

In the last Dasara Session of the Mysore Representative Assembly, the Government Order on the Miller Committee Report was discussed at great length for three days. For one who was present at the discussions, nothing could have seemed more futile and frivolous than the arguments put forth by the opponents of the Order, and nothing could have been more cogent and convincing than the arguments advanced by its supporters. If there is anybody who entertains any doubt regarding the above statement a reference to the Proceedings of the Assembly lately published by the Government might be made.

Knowing full well the above facts, Mr. Ramachandra Rao Scindia of Bangalore who was present during the discussions and who has been deputed by the Mysore Chamber of Commerce to the ensuing Birthday Session of the Assembly, seems to have sent in a subject to be discussed in the Assembly, asking for the revocation of the Government Order on the Miller Committee Report. The Dewan in his concluding speech said "amongst the subjects discussed at great length the one that took up the longest time was the recent Order of Government on the subject of the representation of all communities in the Public Service. I believe the discussion on this subject which was continued for three days, has been of value in clearing misunderstandings and enabling each side to appreciate the other's point of view. A large number of the Brahmin members of the Assembly have presented a memorandum explaining their position with regard to this question. They have expressed themselves as 'perfectly sympathising with the legitimate aspirations of the non-Brahmins to secure a large representation in Government Service,' and this must be as gratifying to the backward communities as it is to the Government ……After this discussion and interchange of ideas, I venture to hope that the cordial relations which subsisted between the several communities in the State will be restored." This clearly explains the good intentions of the Government and there is no reason for the re-opening of the subject. I might here state some facts regarding the circumstances under which this subject got passed in the preliminary meeting held for the discussion of subjects to be sent from the Bangalore District. The last day for sending the subject to the respective Deputy Commissioners by the Taluk Members and District Boards, Municipal Councils and Recognised Associations was the 22nd of Februrry 1922. But this particular subject seems to have been sent or to have been brought by the member concerned when he attended the meeting on the 18th March. Though the meeting was fixed at 1 P.M., it commenced at 2 P.M. No non-Brahmin member was made aware of such a subject being sent, and by the time it was taken up for discussion it was past 5 P.M., when some of the non-Brahmin members had left the meeting with the permission of the Deputy Commissioner, who presided over the meeting. Thus, one can see how easy it was to get the subject passed in that meeting.

Has this representative of the Chamber sent the subject on his own responsibility or on behalf of the Chamber with its approval? If the Chamber has approved or is going to approve of such a controversial subject being sent on its behalf, is it consistent with the policy of the Chamber, which concerns itself mainly with questions of trade and commerce, to involve itself with such a subject as one under discussion? It appears highly objectionable and greatly prejudicial to the growth and development of the Chamber of Commerce, which has been started with a view to safeguard the interests of the Mercantile classes in the State to identify itself with any movement which aims at aggrandisement of a social or a political character.

ರೈಲ್ವೆ ಅನಾಹುತವು.

ಕಲಕತ್ತಾದಿಂದ ಪಂಜಾಬಿಗೆ ಹೊಗೆಬಂಡಿಯು ತಿರುಗಾಡಲು ಒಂದು ಲೋಹಮಾರ್ಗವೂ ಅದರ ಪಕ್ಕದಲ್ಲಿಯೇ ಪಂಜಾಬಿನಿಂದ ಕಲಕತ್ತಾಕ್ಕೆ ಬಂಡಿಯು ತಿರುಗಾಡಲು ಮತ್ತೊಂದು ಮಾರ್ಗವೂ ಇರುವುವು. ಕಳೆದ ತಾ|| ೩ರ ರಾತ್ರಿ ಎರಡು ಕಡೆಯಿಂದಲೂ ಬರುವ ಬಂಡಿಗಳನ್ನುರುಳಿಸಬೇಕೆಂಬ ದುರಾಲೋಚನೆಯಿಂದ ಯಾರೋ ದುರ್ಮಾರ್ಗಿಗಳು ಜಯಂತಿನದಿಯ ಸೇತುವೆ ಆಚೆ ೫೦೦ ಗಜಗಳ ದೂರದಲ್ಲಿ ಕರಮತೂರಿಗೂ ಮಧುಪುರಿಗೂ ಮಧ್ಯೆ ಕಂಬಿಯನ್ನು ಕಿತ್ತು ಅಡ್ಡಲಾಗಿ ಹಾಕಿದ್ದರು. ಇದಕ್ಕೆ ಮೊದಲೇ ಒಂದುಬಂಡಿಯು ೧೦|| ಗಂಟೆಯಲ್ಲಿ ಯಾವ ಅಪಾಯಕ್ಕೂ ಗುರಿಯಾಗದೆ ಸಾಗಿಹೋಗಿದ್ದಿತು. ಆದರೆ ಪಂಜಾಬಿನ ಕಡೆ ಹೋಗುವ ಟಪಾಲು ಬಂಡಿಯು ಅತಿ ವೇಗದಿಂದ ಬರುತ್ತಿದ್ದಿತಾದರೂ ಇಂಜನ್ನನ್ನು ನಡಿಸುತ್ತಿದ್ದ ಕೂಪರನು ಅಡ್ಡಬಿದ್ದಿದ್ದ ಕಂಬಿಯನ್ನು ದೂರದಿಂದ ಕಂಡು ಬಂಡಿಯನ್ನುನಿಲ್ಲಿಸಲು ಬಹಳ ಸಾಹಸಮಾಡಿದಾಗ್ಗೂ ಮಾರ್ಗವು ಬಹಳ ಇಳಿಜಾರಾಗಿದ್ದುದರಿಂದ ಸಾಧ್ಯವಾಗದೆ ಇಂಜನ್ನು ಕಂಬಿಯನ್ನು ಬಿಟ್ಟು ದಡದಿಂದ ೨೦೦ ಗಜಗಳ ದೂರ ಉರುಳಿಕೊಂಡು ಹೋಯಿತು. ಇದರ ಹಿಂದಣ ಬಂಡಿಗಳು ಒಂದರಮೇಲೊಂದುರುಳಿದವು. ಇದರಿಂದ ಡ್ರೈವರೂ ಅವನ ಕೂಡ ಇದ್ದವರೂ ಸತ್ತುಹೋದರು. ಟಪಾಲು ಬಂಡಿಯಲ್ಲಿ ೨೦ ಜನರಿದ್ದರು, ಅವರಲ್ಲಿ ಕಾಗದಗಳನ್ನು ವಿಂಗಡಿಸುವ ರಾಮರೋಖಸಿಂಗ್ ಎಂಬುವವನು ಮಾತ್ರ ಸತ್ತುಹೋದನು. ಈ ಬಂಡಿಯಲ್ಲಿದ್ದ ವಿದ್ಯುಚ್ಛಕ್ತಿಯನ್ನು ಹುಟ್ಟಿಸುವ ಬ್ಯಾಟರಿಯು ಹೊತ್ತಿಕೊಂಡು ಅದರ ಜ್ವಾಲೆಯು ಕೆಲರಿಗೆ ತಗಲಿ ಗಾಯವಾಯಿತು ಮತ್ತು ಕಾಗದಗಳ ಚೀಲಗಳಿಗೆ ತಾಕಿತಾದರೂ ಕಾಗದಗಳಿಗೆ ನಷ್ಟವೇನೂ ಆಗಲಿಲ್ಲವು.

ಈ ಬಂಡಿಯಲ್ಲೇ ಪ್ರಯಾಣಮಾಡುತ್ತಿದ್ದ ಡಿಸ್ಟ್ರಿಕ್ಟು ಇನ್‌ಸ್ಪೆಕ್ಟರು ಅಪಾಯಸಂಭವಿಸಿದ ಕೂಡಲೆ ಸಮೀಪದಲ್ಲಿದ್ದ ಟೆಲಿಫೋನುಮನೆಗೆ ಹೋಗಿ ಹೀಗೆ ಅಪಾಯಸಂಭವಿಸಿದೆ ಇತ್ತಕಡೆಗೆ ಬರುವ ಬಂಡಿಗಳನ್ನು ಬಿಡದೆ ನಿಲ್ಲಿಸಿಬಿಡಬೇಕು ಎಂದು ಸಮೀಪದಲ್ಲಿದ್ದ ಸ್ಟೇಷನ್ನಿಗೆ ವರ್ತಮಾನವನ್ನು ಕೊಟ್ಟನು. ತತ್ಕ್ಷಣದಲ್ಲೇ ಮಧುಪುರದ ಸ್ಟೇಷನ್ ಮಾಸ್ಟರನೂ ರೈಲ್ವೆ ಪೋಲೀಸು ಅಧಿಕಾರಿಗಳೂ ಬಂಡಿಗಳು ಬಿದ್ದಿರುವ ಸ್ಥಳಕ್ಕೆ ಬಂದು ಪ್ರಯಾಣಿಕರನ್ನುಪಚರಿಸಲುಪಕ್ರಮಿಸಿದರು. ಗಾಯವಡೆದವರೂ ಸತ್ತವರೂ ಸ್ಪೆಷಲ್ ಬಂಡಿಯಲ್ಲಿ ಮಧುಪುರಿಗೆ ಸಾಗಿಸಲ್ಪಟ್ಟರು. ೬ ಜನರು ಸತ್ತುಹೋಗಿದ್ದರು ಮತ್ತು ೨೬ ಜನರಿಗೆ ಬಹಳ ಪೆಟ್ಟುಬಿದ್ದಿತು. ಡ್ರೈವರಿನ ಶವಸಂಸ್ಕಾರವು ಕ್ರಮವಾಗಿ ಮಾಡಲ್ಪಟ್ಟಿತು. ಇಂಟರ್‌ಮಿಡಿಯಿಟ್ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ಮಾರ್ವಾಡಿ ವರ್ತಕನು ಸತ್ತುಹೋದನು. ಅವನಬಳಿ ಇದ್ದ ೧೮೪೦೦ ರೂಪಾಯಿಗಳನ್ನು ಪೋಲೀಸರು ತಮ್ಮವಶಕ್ಕೆ ತೆಗೆದುಕೊಂಡರು. ಕಾಗದಗಳನ್ನು ಹಾಕಿದ್ದ ಚೀಲದಲ್ಲಿದ್ದ ಇನ್‌ಷೂರು ಕಾಗದವನ್ನು ಅಪಹರಿಸಲು ಪ್ರಯತ್ನಮಾಡುತ್ತಿದ್ದವನೊಬ್ಬನನ್ನು ಪೋಲೀಸರು ಆ ಕೂಡಲೇ ಸೆರೆಹಿಡಿದರು, ಬಂಡಿಗಳುರುಳಿದ್ದ ಸ್ಥಳದಲ್ಲಿ ಪೋಲೀಸು ಕಾವಲಿಡಲ್ಪಟ್ಟಿದ್ದಿತು. ಮತ್ತು ಮ್ಯಾಜಿಸ್ಟ್ರೇಟರ ವಿಚಾರಣೆಯು ನೆನ್ನೆಯದಿನ ನಡೆಯತಕ್ಕುದಾಗಿದ್ದಿತು.

ಪ್ರಯಾಣಿಕರ ಅನುಭವವು.

ಪಾಟ್ನಾದ ರೆವಿನ್ಯೂಬೋರ್ಡಿನ ಸೆಕ್ರೆಟರಿ ಎಚ್. ಎಲ್. ಕಾಸಗೀರ್‌ರವರ ಮಗಳಾದ ಕಮಲಾವತಿ ಕಸ್ತರು ಎಂಬ ನಾರಿಮಣಿಯು ಈ ಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದಳು. ಆಕೆಯು ಪತ್ರಿಕಾ ವಿಲೇಖಕನ ಕೂಡ ಹೇಳಿದುದೇನೆಂದರೆ—ಈ ಅಪಾಯವು ಸಂಭವಿಸಿದಾಗ್ಗೆ ನಾನು ನಿದ್ರೆಹೋಗುತ್ತಿದ್ದೆನು. ಬಂಡಿಯುರುಳಿದ ಕೂಡಲೆ ನಾನು ಎಚ್ಚೆತ್ತು ಕುಳಿತುಕೊಂಡೆನು. ದೀಪವು ಆರಿಹೋಗಿದ್ದಿತು, ಬಂಡಿಯೊಳಗಿದ್ದವರೆಲ್ಲರೂ ಒಬ್ಬರ ಮೇಲೊಬ್ಬರು ಬಿದ್ದರು. ಏನಾಗುತ್ತಿದ್ದಿತೆಂಬುದು ಯಾರಿಗೂ ತಿಳಿಯಲಿಲ್ಲವು. ಬೆಳಗಾಗುವವರೆಗೂ ನಾನು ಹಾಗೆಯೇ ಬಂಡಿಯೊಳಗೇಯಿದ್ದೆನು. ಈ ಅನಾಹುತವು ಅತ್ಯಂತ ಭಯಂಕರವಾಗಿದ್ದಿತು. ದೇವರ ದಯದಿಂದ ನಮ್ಮ ಬಂಡಿಯಲ್ಲಿದ್ದವರಲ್ಲೊಬ್ಬರಿಗೂ ಗಾಯವಾಗಲಿಲ್ಲವು. ಮಧುಪುರದ ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದ ಒಬ್ಬ ಪ್ರಯಾಣಿಕನು ಹೀಗೆ ಹೇಳಿದನು.——ನಾನು ಇಂಟರ್‌ಮಿಡಿಯಟ್ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದೆನು. ಬಂಡಿಯು ಬಿದ್ದುಹೋದಾಗ ಕಿಟಕಿಯಿಂದ ಹೊರಕ್ಕೆ ದೂರಿಹೋಗುವ ಪ್ರಯತ್ನದಲ್ಲಿ ನನಗೆ ಪೂರಾ ಪೆಟ್ಟುಬಿದ್ದಿತು. ಮತ್ತೊಬ್ಬ ಮಾರ್ವಾಡಿಯು-ನನ್ನ ಬಲದೊಡೆಗೆ ಪೂರಾ ಪೆಟ್ಟುಬಿದ್ದಿತು. ಈ ಅಪಾಯ ಸಂಭವಿಸಿದಾಗ್ಗೆ ಎಲ್ಲರೂ ಕೊಂಚಕಾಲದವರೆಗೆ ನಿಶ್ಚೇಷ್ಟಿತರಾಗಿದ್ದೆವು ಮತ್ತು ಮೇಲ್ಭಾಗದಲ್ಲಿ ಮಲಗಿದ್ದವರೆಲ್ಲರೂ ಅಲ್ಲಿದ್ದ ಸಾಮಾನುಗಳೊಡನೆ ಕೆಳಕ್ಕೆ ಬಿದ್ದುಬಿಟ್ಟೆವು ಎಂದು ಹೇಳಿದನು. ಎರಡನೇ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಆಂಗ್ಲಸ್ತ್ರೀ ಪುರುಷರುಗಳೂ ಇತರರೂ ಒಬ್ಬರ ಮೇಲೊಬ್ಬರು ಉರುಳಿಕೊಂಡರು. ವಿವಾಹಮಹೋತ್ಸವವನ್ನು ತೀರಿಸಿಕೊಂಡು ವಧೂವರರ ಸಮೇತ ೨೦ಜನರವರೆಗೆ ಪ್ರಯಾಣಮಾಡುತ್ತಿದ್ದವರಲ್ಲಾರಿಗೂ ಅಪಾಯವಾಗಲಿಲ್ಲವು.

ಈ ಅಪಾಯ ಸಂಭವಿಸಿದ ಸುದ್ದಿಯನ್ನು ಕೇಳಿದ ಕೂಡಲೇ ಗಾಯವಡೆದವರನ್ನು ವಿಚಾರಿಸುವುದಕ್ಕಾಗಿ ಮಧುಪುರಿಯ ಕಾಂಗ್ರೆಸ್ಸು ಕಮಿಟಿಯವರು ತಮ್ಮಲ್ಲಿಯ ಕೆಲ ಸ್ವಚ್ಛಂದಸೇವಕರನ್ನು ಕಳುಹಿಸಿಕೊಟ್ಟರು. ಆದರೆ ಪೋಲೀಸಿನವರು ಅವರೊಬ್ಬರನ್ನೂ ಹತ್ತಿರಕ್ಕೆ ಸೇರಿಸಲಿಲ್ಲವು.

ರೈಲ್ವೆ ಏಜಂಟರ ಪ್ರಕಟನೆಯು.

ಅರಿಷ್ಟವೆಲ್ಲವೂ ೬ ಜನರ ಸಾವಿನಲ್ಲಿ ಪರ್ಯವಸಾನವಾಯಿತೆಂದು ಹೇಳಬಹುದು. ಸತ್ತುಹೋದ ಡ್ರೈವರು ಬಂಡಿಯನ್ನು ನಿಲ್ಲಿಸಲು ತನ್ನಕೈಯಲ್ಲಾದ ಸಾಹಸವನ್ನೆಲ್ಲಾ ಮಾಡಿದನಾದರೂ ಪ್ರಯೋಜನವಾಗಲಿಲ್ಲವು. ಆದರೆ ಆ ಡ್ರೈವರು ಅಜಾಗರೂಕನಾಗಿದ್ದಲ್ಲಿ ಬಂಡಿಗಳೆಲ್ಲವೂ ಧ್ವಂಸವಾಗಿ ಪ್ರಯಾಣಿಕರಲ್ಲಿ ಅನೇಕರು ಸಾಯುತ್ತಿದ್ದರು.

ಪಂಜಾಬಿನಿಂದ ಕಲಕತ್ತಾಕ್ಕೆ ಹೊರಟ ಮೇಲ್ ಬಂಡಿಯಲ್ಲಿ ಸರ್ ವಿಲಿಯಂವಿನ್ಸೆಂಟ್‌ರವರು ಪ್ರಯಾಣಮಾಡುತ್ತಿದ್ದರು. ಬಿಹಾರಿನ ಆಕ್ಟಿಂಗ್ ಗವರ್ನರಾದ ಸರ್ ಜಿ. ವಿ. ಮೆಸಲಿಯಾರ್‌ರವರು ಮಾರನೆಯ ಮಧುಪುರಿಗೆ ಬಂದು ಮ್ಯಾಜಿಸ್ಟ್ರೇಟರ ವಿಚಾರಣೆ ನಡೆಯಲಿಕ್ಕೇರ್ಪಾಡುಮಾಡಿದರು.

ಬಹುಮಾನವು.

ಈ ಅನಾಹುತಕ್ಕೆ ಕಾರಣಭೂತರಾದ ದುರ್ಮಾರ್ಗಿಗಳನ್ನು ಹಿಡಿದು ಶಿಕ್ಷಿಸಲು ಸಹಾಯಮಾಡುವವರಿಗೆ ೫೦೦೦ ರೂಪಾಯಿಗಳು ಬಹುಮಾನಿಸಲ್ಪಡುವುದಾಗಿ ಪ್ರಕಟವಾಗಿದೆ.

ಒಳದೇಶದ ವೃತ್ತಾಂತಗಳು.

ಎಗ್ಸಿಕ್ಯುಟಿವ್ ಇಂಜನಿಯರಾದ ಮ|| ಎಂ. ಎ. ಶ್ರೀನಿವಾಸಾಚಾರಿಯವರು ರೈಲ್ವೆ ಇಲಾಖೆಯಿಂದ ರಾಜಧಾನಿಯ ಟ್ರಸ್ಟ್‌ಬೋರ್ಡಿಗೆ ವರ್ಗಾಯಿಸಲ್ಪಟ್ಟಿರುವರು.

ಚೀಫ್‌ಕೋರ್ಟಿನ ಚೀಫ್‌ಜಡ್ಜರಾದ ಸರ್ ಲೇಸ್ಲಿಮಿಲ್ಲರ್‌ರವರು ಬರುವ ಜೂನ್ ತಿಂಗಳ ಕಡೆಯಲ್ಲಿ ಉದ್ಯೋಗದಿಂದ ನಿವೃತ್ತರಾಗುವರೆಂದೂ, ಎರಡನೆಯ ಜಡ್ಜರಾದ ಮ|| ಚಂದ್ರಶೇಖರಯ್ಯರ್‌ರವರು ಚೀಫ್‌ಜಡ್ಜರಾಗಿ ನಿಯಮಿಸಲ್ಪಡುವರೆಂದೂ ಪ್ರಬಲವಾದ ವರ್ತಮಾನವಿದೆ.

ಖುಷ್ಕಿ ಜಮೀನುಗಳಲ್ಲಿ ಕೆರೆಯ ನೀರನ್ನುಪಯೋಗಿಸಿಕೊಂಡು ತರೀ ಫಸಲನ್ನು ಬೆಳೆಯುವುದಾದರೆ ಅಂತಹ ಜಮೀನುಗಳಿಗೆ ಅವುಗಳ ನೆರೆ ಖುಷ್ಕಿಜಮೀನಿನ ಕಂದಾಯಕ್ಕೂ ತರೀಜಮೀನಿನ ಕಂದಾಯಕ್ಕೂ ಇರುವ ವ್ಯತ್ಯಾಸದ ಎರಡರಷ್ಟು ಕಂದಾಯವು ವಿಧಿಸಲ್ಪಡಬೇಕಾಗಿ ಸರ್ಕಾರದ ಅಪ್ಪಣೆಯಾಗಿದೆ.

ರಾಣೀವಾಸದವರೆಲ್ಲರೂ ನಾಳೆಯದಿನ ಉದಕಮಂಡಲಕ್ಕೆ ದಯಮಾಡಿಸುವುದಾಗಿಯೂ ಶ್ರೀಮನ್ಮಹಾರಾಜರವರು ಪ್ರೈವೇಟ್ ಸೆಕ್ರೆಟರಿಯವರೊಡನೆ ಸಿಮ್ಲಾಕ್ಕೆ ಪ್ರಯಾಣಮಾಡಿ ಅಲ್ಲಿ ವೈಸ್ರಾಯರ ದರ್ಶನ ಭಾಷಣಗಳನ್ನು ಮಾಡಿಕೊಂಡು ಅಲ್ಲಿಂದ ಕಾಶ್ಮೀರಕ್ಕೆ ದಯಮಾಡಿಸಿ ಅಲ್ಲಿ ಬೇಸಿಗೆಕಾಲವು ಪೂರೈಸುರೆಗೂ ಇದ್ದು ತಮ್ಮ ವರ್ಧಂತಿಯ ಮಹೋತ್ಸವ ಸಮಯವಕ್ಕೆ ರಾಜಧಾನಿಗೆ ಚಿತ್ತೈಸುವುದಾಗಿಯೂ ತಿಳಿಯಬರುತ್ತದೆ.

ಶ್ರೀಮದ್ ಯುವರಾಜ ಚಕ್ರವರ್ತಿಯವರು ದಯಮಾಡಿಸಿದ್ದಾಗ್ಗೆ ಏರ್ಪಡಿಸಲ್ಪಟ್ಟಿದ್ದ ಖೆಡ್ಡಾದಲ್ಲಿ ಹಿಡಿಯಲ್ಪಟ್ಟ ಕೆಲ ಮರಿಗಳ ಸಮೇತ ೨೦ ಗಂಡು ಮತ್ತು ಹೆಣ್ಣು ಆನೆಗಳು ವಿಕ್ರಯಿಸಲ್ಪಡುವುವು. ಇವುಗಳನ್ನು ರಾಜಧಾನಿಯಿಂದ ೩೦ ಮೈಲಿ ದೂರದಲ್ಲಿ ಹುಣಸೂರಿಗೆ ಸಮೀಪವಾಗಿರುವ ಮರದೂರು ಎಂಬ ಗ್ರಾಮದಲ್ಲಿ ನೋಡಬಹುದು ಮತ್ತು ಇವುಗಳ ಬೆಲೆ ಮೊದಲಾದ ವಿಷಯಗಳನ್ನು ಬೆಂಗಳೂರಲ್ಲಿರುವ ಕನ್ಸರ್ವೇಟರಿಗೆ ಬರೆದು ತಿಳಿದುಕೊಳ್ಳಬಹುದು.

ಬರುವ ಜೂನ್ ತಿಂಗಳಲ್ಲಿ ಕೌನ್ಸಿಲರುಗಳಾದ ಮ|| ಪಿ. ರಾಘವೇಂದ್ರರಾಯರೂ, ಮಿ|| ಎಂ. ಹಂಸಾಹುಸೇನ್ ಸಾಹೇಬರೂ ಉದ್ಯೋಗಗಳಿಂದ ನಿವೃತ್ತಿಗೊಳಿಸಲ್ಪಟ್ಟು ರೆ|| ಕಮಿಷನರಾದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ೧ನೇ ಕೌನ್ಸಿಲರಾಗಿಯೂ, ಡಿಸ್ಟ್ರಿಕ್ ಜಡ್ಜರಾದ ಮ|| ಬ್ಯಾರಿಸ್ಟರ್ ನಾಗಪ್ಪನವರು ಎರಡನೆಯ ಕೌನ್ಸಿಲರಾಗಿಯೂ ನಿಯಮಿಸಲ್ಪಡುವರೆಂದೂ, ಕೌನ್ಸಿಲರುಗಳುದ್ಯೋಗವೇ ತಪ್ಪಿಸಲ್ಪಡುವುದೆಂದೂ ನಿರಾಧಾರವಾದ ವರ್ತಮಾನಗಳು ತರಂಗತರಂಗವಾಗಿ ಹುಟ್ಟುತ್ತಿವೆ.

ರಾಜಧಾನಿಯ ನೀರನಗೆರೆ ಮೊದಲಾದ ಎತ್ತರ ಪ್ರದೇಶಗಳಲ್ಲಿರುವ ಕೆಲ ನೀರಿನ ಕೊಳಾಯಿಗಳಲ್ಲಿ ನೀರು ಸುತರಾಂ ಬಾರದೆಯೂ ಒಂದೆರಡರಲ್ಲಿ ಅಲ್ಪಸ್ವಲ್ಪವಾಗಿ ಬಂದರೂ ಒಂದು ಕೊಡ ನೀರಿಗಾಗಿ ೩-೪ ಗಂಟೆಗಳ ಕಾಲ ಕಾದುಕೊಂಡಿರಬೇಕಾಗಿರುವುದರಿಂದಲೂ, ನೀರಿನ ಬಾವಿಗಳು ಮುಚ್ಚಲ್ಪಟ್ಟಿರುವುದರಿಂದಲೂ ಆ ಪ್ರಾಂತದ ಜನರು ಕುಡಿಯುವ ನೀರಿಗಾಗಿ ಬಹಳ ಕಷ್ಟಪಡುತ್ತಿದಾರಾದುದರಿಂದ ಮ್ಯುನಿಸಿಪಾಲಿಟಿಯವರು ಇತ್ತಕಡೆ ಗಮನಿಸಿ ನೀರಿನಕೊರತೆಯನ್ನು ತಪ್ಪಿಸಲಿಕ್ಕೇರ್ಪಾಟನ್ನು ಮಾಡುವರೆಂದೂ, ನೀರಿನ ಕೊರತೆಯು ನಿವಾರಣೆಯಾಗುವವರೆಗೆ ಜನರ ಮನೆಗಳಿಗೆ ಹೊಸದಾಗಿ ನಲ್ಲಿಗಳನ್ನಿಟ್ಟುಕೊಳ್ಳಲು ಅವಕಾಶ ಕೊಡಬಾರದೆಂದೂ ಸೂಚಿಸುತ್ತೇವೆ.

ಶ್ರೀ ಚಾಮುಂಡೇಶ್ವರಿ ಕರ್ನಾಟಕನಾಟಕಸಭಾ ಲಿಮಿಟೆಡ್‌ಯವರು ಈ ತಾ|| ೬ನೆಯ ಗುರುವಾರ ರಾತ್ರಿ ಟೌನ್ ಹಾಲಿನಲ್ಲಿ ಮಂದಾರವಲ್ಲಿ ಪರಿಣಯವನ್ನು ಶ್ಲಾಘ್ಯವಾಗಿ ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ಹೆಚ್ಚಾಗಿದ್ದಿತು. ಈ ಸಭೆಯವರು ಬೆಂಗಳೂರಿಗೆ ಅಲ್ಲಿಯ ಕೆಲ ದೊಡ್ಡಮನುಷ್ಯರುಗಳ ಅಪೇಕ್ಷೆಯಂತೆ ಪ್ರಯಾಣಮಾಡಿ ಈ ಏಪ್ರಿಲ್ ೧೦, ೧೨, ೧೫, ೧೬, ೧೯, ೨೨, ೨೩, ೨೬ ಮತ್ತು ೨೯ ಈ ತಾರೀಖುಗಳಲ್ಲಿ ಬೆಂಗಳೂರು ತುಳಸಿತೋಟದಲ್ಲಿರುವ ನಾಟಕಮಂದಿರದಲ್ಲಿ ತಮ್ಮ ಪ್ರಖ್ಯಾತವಾದ ಶಾಕುಂತಲ ಮೊದಲಾದ ನಾಟಕಗಳನ್ನು ಅಭಿನಯಿಸುವವರಾಗಿರುವರು. ಈ ಸಭೆಯವರಿಗೆ ಅಲ್ಲಿ ವಿಶೇಷ ದ್ರವ್ಯೋತ್ಪತ್ತಿಯೂ ಸನ್ಮಾನವೂ ಆಗುವುದೆಂದು ನಿರೀಕ್ಷಿಸುತ್ತೇವೆ.

ಮಂಡ್ಯ ತಾ|| ನಿಡಗಟ್ಟದಲ್ಲಿ ಮ|| ತಮ್ಮಣ್ಣಗೌಡರು ೪೦೦೦ ರೂ. ವೆಚ್ಚದಿಂದ ಒಂದು ಸ್ಕೂಲು ಕಟ್ಟಡವನ್ನೂ, ಎಡತೊರೆ ತಾ|| ಮಿರ್ಲೆಯಲ್ಲಿ ಮ|| ಲಕ್ಷ್ಮೀರಾಮೇಗೌಡರು ೧೫೦೦ ವೆಚ್ಚದಿಂದ ಒಂದು ಪ್ರಯಾಣಿಕರಿಳಿದುಕೊಳ್ಳುವ ಶಾಲೆ (ಮುಸಾಫರ್ ಖಾನೆ) ಯನ್ನೂ, ಕೃಷ್ಣರಾಜಪೇಟೆ ತಾ|| ಶೀಳಗೆರೆಯಲ್ಲಿ ಮ|| ತಿಮ್ಮೇಗೌಡರು ಒಂದು ಸ್ಕೂಲು ಕಟ್ಟಡವನ್ನೂ, ಗುಂಡ್ಲುಪೇಟೆ ತಾ|| ಕಬ್ಬಳ್ಳಿಯ ಸಾಹುಕಾರ್ ಚನ್ನಬಸಪ್ಪನವರು ೪೦೦೦೦ ರೂ. ಗಳನ್ನು ವ್ಯಯಮಾಡಿ ರಾಜಧಾನಿಯಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನೂ ಕಟ್ಟಿಸಿಕೊಡಲು ವಾಗ್ದಾನಮಾಡಿರುವುದಾಗಿ ಕಳೆದ ಮಾರ್ಚಿ ತಾ|| ೨೭ರಲ್ಲಿ ರಾಜಧಾನಿಯಲ್ಲಿ ಜರುಗಿದ ಡಿಸ್ಟ್ರಿಕ್ಟ್ ಕಾನ್‌ಫರೆನ್ಸಿನಲ್ಲಿ ತಿಳುಹಲ್ಪಟ್ಟಿತು. ಈ ಧರ್ಮಕಾರ್ಯಗಳು ಜಾಗ್ರತೆಯಲ್ಲಿ ನೆರವೇರಿ ಧರ್ಮಕರ್ತರುಗಳ ಉದ್ದಿಷ್ಟ ಫಲಪ್ರದವಾಗಲೆಂದು ಹಾರೈಸುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ತಮ್ಮ ಮುಂದಣವರ್ಷದ ಅಂದರೆ ೧೯೨೨-೨೩ರ ಆಯವ್ಯಯದ ನಿರೀಕ್ಷಿತಲೆಖ್ಖವನ್ನು ಪರಿಶೀಲಿಸುವುದಕ್ಕಾಗಿ ನೆನ್ನೆಯದಿನ ಬೆಳಿಗ್ಗೆ ಸಭೆ ಸೇರಿದ್ದರು. ಲೆಖ್ಖದ ಅಚ್ಚಾದ ಪುಸ್ತಕಗಳು ತಮ್ಮಗಳಿಗೆ ಕೊಡಲ್ಪಟ್ಟಿಲ್ಲವಾಗಿ ಅವುಗಳಿಲ್ಲದೆ ಲೆಖ್ಖವನ್ನು ಪರಿಶೀಲನ ಮಾಡಲಾಗುವುದಿಲ್ಲವೆಂದು ಮೆಂಬರುಗಳು ಹೇಳಿದುದರ ಮೇಲೆ ಲೆಖ್ಖದ ಪರಿಶೀಲನೆಗಾಗಿ ಈ ತಾ|| ೨೯ ರಲ್ಲಿ ಮೀಟಿಂಗು ನಡೆಯಬೇಕೆಂದೂ ಇನ್ನು ೮-೧೦ ದಿನಗಳೊಳಗೆ ಲೆಖ್ಖದ ಪುಸ್ತಕಗಳು ಅಚ್ಚುಮಾಡಲ್ಪಟ್ಟು ಪ್ರತಿಯೊಬ್ಬ ಮೆಂಬರಿಗೂ ಕೊಡಲ್ಪಡಬೇಕಾಗಿಯೂ ನಿರ್ಧರಿಸಲ್ಪಟ್ಟಿತು. ಪ್ರತಿ ವರ್ಷದಲ್ಲೂ ಆಯವ್ಯಯ ಲೆಖ್ಖವು ಪ್ರೆಸಿಡೆಂಟರಿಂದ ಫೆಬ್ರುವರಿ ತಿಂಗಳೊಳಗೆ ಸಿದ್ಧಗೊಳಿಸಲ್ಪಟ್ಟು ಮ್ಯಾನೇಜಿಂಗ್ ಕಮಿಟಿಯವರ ಪರಿಶೀಲನೆಗಿಡಲ್ಪಟ್ಟು ಅವರ ಅಭಿಪ್ರಾಯದೊಡನೆ ಮಾರ್ಚಿ ತಿಂಗಳೊಳಗೆ ಕೌನ್ಸಿಲ್ ಮೀಟಿಂಗಿನಲ್ಲಿ ವಿಮರ್ಶೆಗಾಗಿ ತರಲ್ಪಡತಕ್ಕುದೂ, ಅವರ ಸಮ್ಮತಿಯಿಂದ ಏಪ್ರಿಲ್ ತಾ|| ೧೫ ರೊಳಗೆ ಸರ್ಕಾರಕ್ಕೆ ಕಳುಹಲ್ಪಡತಕ್ಕುದೂ ಈವರೆಗೂ ನಡೆದುಬಂದ ಪದ್ಧತಿಯಾಗಿಯೂ ರೂಲ್ಸಿಗೆ ಅನುಸಾರವಾಗಿಯೂ ಇವೆ. ಆದರೆ ಈ ವೇಳೆಮಾತ್ರ ಮ್ಯಾನೇಜಿಂಗ್ ಕಮಿಟಿಯವರ ಪರಿಶೀಲನೆಗೆ ತರಲ್ಪಡದೆ ಗೌರ್ನಮೆಂಟಿನವರ ಅನುಮತಿಗಾಗಿ ಕಳುಹಬೇಕಾದ ಅವಧಿಯ ಅವಸರದಲ್ಲಿ ಅತ್ಯಂತ ಮುಖ್ಯವಾದ ಈ ಬಜೆಟ್ಟಿನ ವಿಚಾರವು ಕೌನ್ಸಿಲರುಗಳ ಪರಿಶೀಲನೆಗೆ ನೇರವಾಗಿ ತರಲ್ಪಟ್ಟುದು ಶುದ್ಧ ಅಕ್ರಮವೆಂದು ಮೆಂಬರುಗಳು ಅಭಿಪ್ರಾಯಪಟ್ಟುದರಮೇಲೆ ಪ್ರೆಸಿಡೆಂಟರು ಕೊಟ್ಟ ಸಮಾಧಾನವನ್ನು ಮೆಂಬರುಗಳೊಪ್ಪದೆ ಈ ಅಕ್ರಮಕ್ಕಾಗಿ ತಮ್ಮ ವಿಷಾದವನ್ನು ಪ್ರದರ್ಶಿಸಿದರೆಂದು ತಿಳಿಯುತ್ತೇವೆ.

ಪತ್ರವ್ಯವಹಾರ.

TO THE EDITOR OF THE MYSORE STAR.

Sir,

My attention has been called to a "Mysorean's" letter published in the "Mysore Star" of the 19th instant.

Let me first convey to the writer my grateful thanks for the excellent love of the letter and for the courtesy and almost affectionate regard which he seems to entertain for me. Quality of his head is as great as the breadth of his heart, as is proved by the correctness of his analysis of the psychology of my mind. He is quite right when he in effect charges me for not being Provincial in my political outlook. That is exactly the reason why he and I differ on Mysore politics. I am sure, fairminded as he is, he will not refuse my humble claim to be as patriotic a Mysorean as he is. I belong to a family which owes its existance in Mysore to the Royal family of H. H. the Maharaja. My exile out of Mysore at an early age was due to an excess of not a defect in Mysore Patriotism. Further, I belong to a community which like the Ursoo Community is out and out Mysorean without any connection with communities outside Mysore.

Therefore, I hope your esteemed correspondent will not doubt that whatever I do in Mysore the first and foremost consideration for me is the good of the State and the safety and prosperity of the Royal family.

If I had the least doubt as to the fitness of the Congress constructive programme to the circumstances of our Province, I should have been the last man to care for it. "A Mysorean" himself invites me not to quietude but to social work. May I ask if the removal of "untouchability" which is one of the main planks of the Congress platform is not social. This subject has long formed a subject of my special study, and is it a crime that I wish to take advantage of the British Indian enthusiasm to hasten the removal of this blot on our beautiful social fabric. Mysore Government has made itself a champion of this reform—— specially our amiable tender-hearted Yuvaraja. The "Star" I believe is a powerful advocate of this reform. Why should a "Mysorean" or the "Mysore Government" damn us simply because we wish to start a powerful propaganda for this reform in the name of the Congress Committee. My friend seems to have an abhorrance for British Indian politicians and their politics. May I point out that to me such a feeling appears immoral in a "Mysorean" on historical grounds. I am old enough to know that but for whole-hearted exertion and advocacy of such British Indian politicians as Rao Saheb Mandlik and others, the writer should not have been a Mysorean, because there would have been no Mysore. Ingratitude is put down by Hindus as a sin beyond any penance. Therefore, I consider that no "Mysorean" can morally be justified in taking sides actively in a quarrel between the British Indian Government and British Indian politicians. It was the magnanimity of the British nation roused by the agitation of British Indian politicians, Indian and Anglo Indian, that restored Mysore to our Royal family.

In view of this, I perfectly agree with your correspondent that the agressive politics of British India are out of place in Mysore owing to our past history and present policy and expediency.

But by far the best part of the Congress propaganda is its constructive programme. I have already mentioned one item.

The second is hand spinning and weaving. Before the Rendition, Charaka formed an important item of the house-hold goods of every Ryot. Old Charakas are still in existence in their homes. What objection can there be, if we carry on an active propaganda to bring home to our ignorant ryots, the economical punishment, they are suffering for consigning their machines to their lumber-room. Why should a "Mysorean" or his Government fly into a rage over this.

The third item is the prohibition of drink. Is this not a social and moral problem. If I should try to bring this reform about by creating a strong public opinion in its favour, am I to be put down as an enemy of the state of the Maharaja. That is exactly what the Government of Sirdar Kantarajurs has done! No doubt in its latest stages this propaganda might affect the public revenue. But when the very life of hundreds of His Highness's subjects is dependent on the right solution of this question, is it not the duty of the Government to welcome our assistance. Is it not the duty of the Government to gradually so adjust its finance as to be able to adopt the principle of prohibition out and out. Moreover, recognizing the conflict of interests between the government and the people on this question, we have not taken it up at present.

Under these circumstances may I ask our friend why he should ask me to give up the congress committee.

He seems to think that we are sending away all the money outside the Province. He is entirely wrong. We retain almost the whole amount except a small fraction with us and use it for our work here.

I am sure "a Mysorean" is as proud of the reputation of our Government for sound policy as I am. In all British Indian political differences, it has ever been the time—honoured policy of our Government to maintain strict neutrality. The only occasion on which this tradition was given up was when Mr. Sastri was prohibited from speaking by Dewan Anandarow. Do we not now look small for that folly?

Is not Mr. Srinivasa Shastry now a Privy Councillor and an honoured ministrel of the British Government to sing its praises all over the civilized world. Is he not now "Right Honourable." If he should choose to come to Mysore will not the Resident be displeased if he is not given the honors due to His Majesty's Privy Councillor. Will not the Maharaja feel awkward because of the mistake of his Government in the past. Does this incident not prove conclusively that our old policy of neutrality was safer and sounder and more dignified for our administration. It is this feature that secured for our beloved Maharaja and his State not merely the respect but the affection of all publicists in British India and the regard of all Britishers. It was this that has saved our State from the contempt which British Indians generally have for Native States and its subjects. Many of the Northern Native States are systematically used to pull the political chest nuts out of the fire for many of the reactionary Anglow-Indian Officers. We have instances of this in Kolhapur and Jypore which will go down to History. Is it not a mistake to suppose that those officers entertain in their heart of hearts any greater respect for them as the man in the proverb had for his tailed instrument.

I quite agree that it would be a crime to any Mysorean to indulge in any anti British propaganda in Mysore. I have scrpulously omitted it, of course, it is impossible for me or for any man on earth or even god in heaven to convert Mysore into a water-tight political compartment. (She cannot escape getting warm by the heat of the British Indian Conflagration when it is raging so fiercely all round her borders. But that does not justify any one of us fanning it here. We are not doing it. On the other hand we have only recognized its existence here from before our Committee came into existence and are directing it into constructive channels. If the authorities that be, blindly oppose and create friction and increase the heat disproportionately, theirs will be the responsibility not ours. Then again a Mysorean should not-forget that the religious question of Kilafat is involved in British Indian Politics. Religion does not recognize political or other artificial barriers. A Kilafatist in Mysore is bound to work for rescuing his Kalifa from the disaster awaiting him in Europe as one living in any other country. Nevertheless, our Congress Committee Kilafatists have proved their loyalty to the Maharaja by refraining from any active anti-British propaganda in Mysore. In this respect there is a clear conflict of duty. But we have given preference to our duty to our State and is it right that such enlightened Mysoreans as the Mysore Star's worthy correspondent should not recognize this and the Secretariat should run amuck in spite of it! The subject is difficult as all questions of higher politics are. I will not pursue it further. I hope I have said enough to show that we have religiously avoided doing anything to which either the British or Mysorean authorities can reasonably object. I joined the Committee because I honestly believe in the principle enunciated by Bhavabhuti ಪೂರೋತ್ಪೀಡೇತಟಾಕಸ್ಯ ಪರೀವಾಹಃಪ್ರತಿಕ್ರಿಯಾ | I am convinced that the best and only way for loyal Mysoreans to prevent the State from being drawn into the vortex of British Indian politics not only at present but in the future is to take the matter in hand and direct and confine its energy into constructive channels. This conviction has come to me because of my wider outlook which I have got by my lifelong experience of British Indian and Mysorean politics. I go still further and maintain that not to do so will do permanent injury to our State.

I may be wrong, but I do honestly believe so. Am I not bound to act on that conviction for the sake of our Maharaja if I am to be true to his salt which my family, community and caste, though not I, have eaten? I beg "a Mysorean" to ponder over this aspect of the question dispassionately.

Bangalore City,
29-3-22.

S. S. Setlur.

ವೀರಶೈವ ನಯನಜ ಶೀಲವಂತರ ವೃತ್ತಿಸುಧಾರಣ.

೩ನೆ ಕಾನ್‌ಫರೆನ್ಸು.

ಸಿಂಗೇನಹಳ್ಳಿ, ಹೊಳಲ್ಕೆರೆ ತಾ||

೧. ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಯವರ ದಿವ್ಯಕೃಪಾಪೋಷಣದಿಂದ ನಡೆಸಲ್ಪಟ್ಟ ಈ ವೃತ್ತಿಸುಧಾರಣ ಸಂಘವು ಶ್ರೀಮದುಜ್ಜಿನಿ ಮಹಾ ಸಂಸ್ಥಾನದ ಕಾರಭಾರಿ ವೇ|| ರುದ್ರಾರಾಧ್ಯಸ್ವಾಮಿ ಭಾರ್ಗವಪುರಿ ಮಠಾಧ್ಯಕ್ಷ ಇವರ ಅಧ್ಯಕ್ಷತೆಯಲ್ಲಿ ತಾ|| ೧-೩-೨೨ ರ ಲಾಗಾಯಿತು ೩ ದಿವಸಗಳ ವರೆಗೆ ನಡೆಸಲ್ಪಟ್ಟಿತು. ಸುಮಾರು ೧ ಸಾವಿರ ಜನರಿಗೆ ಮೇಲ್ಪಟ್ಟು ಪ್ರೇಕ್ಷಕರು ಸಭೆಯನ್ನಲಂಕರಿಸಿದ್ದರು. ಚಿತ್ರದುರ್ಗ, ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಿಂದಲೂ ಬ್ರಿಟಿಷ್ ಅಧಿಪತ್ಯದ ಧಾರ್ವಾಡ, ಬಳ್ಳಾರಿ ಜಿಲ್ಲೆಗಳಿಂದಲೂ ನಯನಜವಂಶೀಯರೇ ಸುಮಾರು ೩೦೦ ಜನಗಳ ವರೆಗೆ ಸೇರಿದ್ದರು. ವೀರಶೈವ ಮತೇತರ ಭದ್ರಾಕರಣ ನಿರಾಕರಣೆಯ ವಿಚಾರದಲ್ಲಿ ನಡೆಯುವ ಚರ್ಚೆ ತೀರ್ಮಾನಾದಿಗಳನ್ನು ನೋಡಬೇಕೆಂಬ ಕುತೂಹಲದಿಂದಲೇ ಇತರ ಮತೀಯರನೇಕರು ಪ್ರೇಕ್ಷಕರಾಗಿ ಬಂದಿದ್ದರು.

೨. ಕೇವಲ ಅಧೋಗತಿಯನ್ನು ಪಡೆದಿದ್ದ ನಮ್ಮ ವೀರಶೈವ ಸಮಾಜವು ಇತ್ತೀಚೆಗೆ ವಿದ್ಯಾದಿ ಸಾಂಪತ್ತಿಕ ಮಾರ್ಗಗಳಲ್ಲಿ ಮುಂದುವರಿದು ನುಗ್ಗುತ್ತಿರುವುದು ವೀರಶೈವರ ಸುಯೋಗದ ಬಲವೇ ಆಗಿದ್ದಾಗ್ಯೂ ಮತೋದ್ಧಾರಕರಾದ ಪುರಾತನರಾಚರಣೀಯವಾಗಿಯೂ ಆಯಾ ವರ್ಣಾನುಗತವಾಗಿಯೂ ಬಂದಿರುವ ವೃತ್ತಿಗಳಲ್ಲಿ ಮಾತ್ರ ನಮ್ಮವರು ಅಶ್ರದ್ಧೆಯನ್ನೂ, ಪುರಾತನರ ನಿಯಮಕ್ಕೆ ವಿರೋಧವಾದ ವರ್ತನೆಯನ್ನೂ ಕೈಗೊಂಡು ನಡೆಯುತ್ತಿರುವುದು ಪವಿತ್ರ ವೀರಶೈವ ಮತಕ್ಕೆ ತುಂಬಾ ಕಳಂಕವನ್ನು ತಂದೊಡ್ಡಿ ದಂಡಕಾಗಿರುವುದಲ್ಲದೆ ಶಾಸ್ತ್ರಬಾಹಿರರಾಗಿ ಭಗವದಾಗ್ರಹಕ್ಕೆ ನಾವು ಗುರಿಯಾಗಬೇಕಾಗಿರುತ್ತದೆ. ಆದ್ದರಿಂದ ವಿದ್ಯಾ ಕೈಗಾರಿಕೆ ಅಧಿಕಾರ ಮುಂತಾದವುಗಳಲ್ಲಿ ಮುಂದುವರಿಯಲಿಚ್ಛೆಯುಳ್ಳ ಪ್ರತಿಯೊಬ್ಬ ವೀರಶೈವನೂ ಶಿಷ್ಟಾಚಾರವಾದ ತಮ್ಮತಮ್ಮ ಮೂಲವೃತ್ತಿಗಳಲ್ಲಿ ಪುರಾತನರ ನಿಯಮಕ್ಕೆ ಭಂಗಬಾರದಂತೆ ವರ್ತಿಸಬೇಕೆಂಬಂಶವನ್ನು ಕುರಿತು ಅಧ್ಯಕ್ಷರು ಭಾಷಣವನ್ನು ಮಾಡಿದರು.

೩. ವೇದಾಗಮಾದಿಗಳಲ್ಲಿ ಶ್ರೇಷ್ಠತ್ವವನ್ನು ಪಡೆದ ಮತ್ತು ಅಪ್ರಾಕೃತವಾದ ವೀರಶೈವ ಮತವು ಅಷ್ಟಾವರ್ಣಗಳ ಮಹತ್ತಿನಿಂದ ಪಿತ್ರಾದಿ ಷೋಡಶಕರ್ಮಗಳೂ ಜನನಾದಿ ಸೂತಕಗಳೂ ಇಲ್ಲದೆ ಸದಾ ಪರಿಶುದ್ಧವಾಗಿರುವ ಸದ್ಬ್ರಾಹ್ಮಣ್ಯತ್ವವನ್ನು ಪಡೆದಿರುವುದೆಂದೂ ಇಂಥ ಶ್ರೇಷ್ಠಮತೀಯರು ಯಾವ ವಿಧದಲ್ಲಿಯೂ ಭವಿಸಂಸರ್ಗವನ್ನು ಮಾಡಬಾರದೆಂಬ ಪುರಾತನರ ಕಟ್ಟಳೆಯಿಂದಲೇ ಅನಾದಿಯಿಂದಲೂ ಶಿವಾನುಭವಿಗಳಾದ ಮಹನೀಯರುಗಳು ಒಂದೊಂದು ವೃತ್ತಿಯನ್ನವಲಂಬಿಸಿದ್ದುದರಿಂದ ಈ ಮತದಲ್ಲಿ ಅನೇಕ ಪ್ರಭೇದಗಳೇರ್ಪಟ್ಟವೆಂದೂ, ವೀರಶೈವರಲ್ಲಿ ಯಾವ ಜಾತಿಯವನಾಗಿದ್ದಾಗ್ಯೂ ಸಹಪಙ್ಕ್ತಿ ಭೋಜನಾದಿಗಳಲ್ಲಿ ಭೇದವನ್ನೆಣಿಸಕೂಡದೆಂದಿದ್ದರೂ ಇತ್ತೀಚೆಗೆ ಶ್ರೇಷ್ಠ ನಯನಜಶೀಲವಂತರಲ್ಲಿ ಮಾಹೇಶ್ವರವರ್ಗದವರು ವಿನಾ ಬಹುಭಾಗದ ಜನಾಂಗವು ಒಳ್ಳೇ ಭೋಜನಾದಿಗಳನ್ನು ಬಿಟ್ಟಿರುವುದು ಅತ್ಯಂತಾಶ್ಚರ್ಯವ್ಯಸನಗಳನ್ನುಂಟುಮಾಡುವುದೆಂದೂ ಹೀಗೆ ಇವರು ಸಮಾಜಭಾಗದವರ ತಿರಸ್ಕಾರಕ್ಕೆ ಕಾರಣರಾಗಲು ಮತಧರ್ಮಶಾಸ್ತ್ರ ಪುರಾತನರ ನಿಯಮಗಳಿಗೆ ವಿರೋಧವಾಗಿ ವೀರಶೈವೇತರರ ಕ್ಷೌರಕರ್ಮವನ್ನಾಚರಿಸುವುದೇ ಮುಖ್ಯ ಕಾರಣವಲ್ಲದೆ ಶಾಸ್ತ್ರಸಮ್ಮತ ಗುರ್ವಾಜ್ಞೆಗಳೇನೂ ಇರುವುದಿಲ್ಲವೆಂದೂ, ಇವರನ್ನು ಸಮಾಜ ಸಂಸರ್ಗಕ್ಕೆ ದೂರರನ್ನಾಗಿ ಮಾಡಿದ ಆ ದುರ್ವರ್ತನೆಯನ್ನು ಇವರು ಖಂಡಿತ ನಿರೋಧಿಸಿದ್ದಾದರೆ ಇವರಲ್ಲಿ ಒಳ್ಳೆ ಭೋಜನಾದಿಗಳನ್ನು ಮಾಡುವದರಲ್ಲೇನೂ ಅಭ್ಯಂತರವಿರುವುದಿಲ್ಲವೆಂದೂ ಶಾಸ್ತ್ರಾಗಮಾದಿ ಸಪ್ರಮಾಣಗಳಿಂದ ಮಿ|| ಎಚ್. ಕರಿಬಸಪ್ಪ ಶಾಲಾಹೆಡ್ಮಾಸ್ಟರ್ ಚೀರನಹಳ್ಳಿ ಇವರು ಮಾಡಿದ ಭಾಷಣವು ಬಹಳ ಸ್ವಾರಸ್ಯವಾಗಿಯೂ ಸಭಿಕರಿಗೆಲ್ಲಾ ಪರಮಾನಂದಕಾರಿಯಾಗಿಯೂ ಇತ್ತು.

೪. ಉಪದೇಶಮಾಡುವದರಲ್ಲಿ ತಾವು ಘಟ್ಟಿಗರಾಗಿದ್ದು ಸ್ವಾನುಷ್ಠಾನದಲ್ಲಿ ಮಾತ್ರ ಕೇವಲ ಪಾಮರರಾಗಿರುವ ಬರೀವಾಗ್ಬ್ರಹ್ಮಿಗಳಿಂದಲೇ ಯಾವ ಮತವೂ ಎಂದಿಗೂ ಉನ್ನತಸ್ಥಿತಿಗೆ ಬರಲಾರದು. ಆದ್ದರಿಂದ ಪ್ರತಿಯೊಬ್ಬ ಮನುಷ್ಯನೂ ಆಯಾ ಮತಕಟ್ಟಳೆಗಳನುಸಾರವಾಗಿ ಕಾಯಾವಾಚಮನಗಳಲ್ಲಿ ಧರ್ಮದಿಂದ ನಡೆಯುವದೂ, ಹಾಗೆನಡೆಯದ ಅಧರ್ಮಪ್ರವರ್ತಕನನ್ನು ಕ್ರೂರವಾದ ಸಮಾಜ ತಿರಸ್ಕಾರಕ್ಕೆ ಗುರಿಮಾಡುವುದೂ ಇತ್ಯಾದಿ ಕಾರ್ಯಗಳಿಂದ ಜಾಗ್ರತೆಯಾಗಿಯೂ ಸುಲಭವಾಗಿಯೂ ಸನ್ಮಾರ್ಗಕ್ಕೆ ತರಬಹುದೆಂಬ ವಿಷಯವನ್ನು ಕುರಿತು ಮಿ|| ಸಂಜೀವರಾವ್ ಸ್ಕೂಲ್ ಹೆಡ್ಮಾಸ್ಟರ್ ತುಪ್ಪದಹಳ್ಳಿ ಇವರು ಮಾಡಿದ ಭಾಷಣವು ತುಂಬಾಶ್ಲಾಘನೀಯವಾಗಿದ್ದಿತು.

೫. ನವಸುಧಾರಣಕಾಲವಾದ ಈ ಕಾಲದಲ್ಲಿ ಬಹುಭಾಗವೀರಶೈವಮತೀಯರು ಹಳ್ಳಿ, ಪಟ್ಟಣಗಳೆಲ್ಲೆಲ್ಲಾ ಅಲಿಂಗಿಗಳಾದ ನಾಪಿತರಿಂದ ಆಯುಷ್ಕರ್ಮವನ್ನು ಮಾಡಿಸುತ್ತಿರುವುದು ಈ ಮತಕ್ಕೆ ಪ್ರಬಲವಾದ ಕೊರತೆಯಾಗಿ ಪರಿಣಮಿಸಿರುವುದಲ್ಲದೆ ಪರಮತೀಯರ ಅವಹೇಳನೆಗೆ ಕಾರಣವಾಗಿರುತ್ತದೆ. ಆದ್ದರಿಂದ ಈ ದುರ್ವೃತ್ತಿಯನ್ನು ಎಲ್ಲಾ ಕಡೆಯಲ್ಲಿಯೂ ಖಂಡಿತ ನಿರೋಧಿಸುವ ಬಗ್ಗೆ ತಕ್ಕ ಏರ್ಪಾಡನ್ನು ಗುರುವರ್ಗದವರೂ ಮತ್ತು ಮತಧರ್ಮತತ್ವವನ್ನರಿತ ಪ್ರತಿಯೊಬ್ಬ ವೀರಶೈವನೂ ಅಗತ್ಯವಾಗಿ ಕೈಗೊಳ್ಳಬೇಕೆಂದು ವೇ|| ಹರಳಹಳ್ಳಿ ಮಠದ ಬಸವಪ್ಪಯ್ಯನವರು ತಿಳಿಸಿದರು.

೬. ನಮ್ಮ ಶ್ರೇಷ್ಠವೀರಶೈವ ಜನಾಂಗವು ಅವಿದ್ಯೆಯ ಬೆಂಬಲವನ್ನು ಪಡೆದು ಸ್ವದೇಶಪರದೇಶಾಟನೆಗಳನ್ನೂ ನವೀನ ಕೈಗಾರಿಕೆ ವ್ಯಾಪಾರಾದಿಗಳನ್ನೂ ಮಾಡದೆ "ಕೂಪಕರ್ಮ" ನ್ಯಾಯದಂತೆ ಬರೀವಕ್ಕಲತನವೊಂದನ್ನೇ ನಂಬಿಕೊಂಡು ಬಂದುದರಿಂದ ಮತದ ಶ್ರೇಷ್ಠತ್ವವು ಪ್ರಕಾಶಗೊಳ್ಳದೆ ಮಂಕುಹತ್ತಿ ಹೋಗಿರುವುದು. ಈಗಲಾದರೋ ಹಿಂದುಳಿದ ಜನಾಂಗದವರ ಸುದೈವಯೋಗದಿಂದ ದೊರೆತಿರುವ ಮಹಾರಾಜಸರ್ಕಾರದವರ ಸಹಾಯಬಲವೂ, ಸಿರಸಂಗಿಯವರ ಮತ್ತು ದೇಶೀಯ ವೀರಶೈವ ವಿದ್ಯಾವರ್ಧಕಫಂಡಿನ ಧನರಾಶಿಗಳ ಬಲವೂ ವಿಶೇಷವಾಗಿರುವ ಈ ಕಾಲದಲ್ಲಿ ನಮ್ಮವರು ಇನ್ನೂ ಭಾರೀಮೌಢ್ಯದಿಂದ ಅಂಧಸಂಕೋಲೆಯಲ್ಲಿರುವದು ತುಂಬಾ ವ್ಯಸನಕರವಾಗಿರುತ್ತದೆ. ಇನ್ನು ಮೇಲಾದರೂ ಇಂಥಾ ಸುಸಮಯವನ್ನು ವ್ಯರ್ಥವಾಗಿ ಕಳೆಯದೆ ಪ್ರತಿಯೊಬ್ಬ ವೀರಶೈವನೂ ಏಳಿಗೆಗೆ ಮೂಲಾಧಾರವಾದ ವಿದ್ಯೆಯನ್ನು ಸಂಪಾದಿಸಲು ತಮ್ಮತಮ್ಮ ಮಕ್ಕಳನ್ನು ಹಚ್ಚಬೇಕೆಂಬ ವಿಷಯವನ್ನು ಕುರಿತು ಮ|| ರಾ|| ಶ್ರೀಮಂತಗಡಗೀಗೆಣೆಪ್ಪ ಬಳ್ಳಾರಿ ಇವರು ತಮ್ಮ ಸರಳವಾಗ್ಝರಿಯಿಂದ ಸಭೆಯನ್ನು ಸಂತೋಷಿಗೊಳಿಸಿದರು.

೭. ಮ|| ರಾ|| ಸಾರಥಿ ಭೀಮಪ್ಪನವರಿಂದ ಓದಲ್ಪಟ್ಟ "ವೀರಶೈವಧರ್ಮಸುಧಾರಣೆ" ಎಂಬ ಉಪನ್ಯಾಸವು ಬಹಳ ಮನೋಹರವಾಗಿದ್ದಿತು.

೮. ಶ್ರೀಮದ್ವೀರಶೈವ ಜಗದ್ಗುರು ಪೀಠಾಧೀಶರುಗಳ ಮಹಾ ಸಂಸ್ಥಾನಗಳಿಂದ ಸಾದರರಾಗಿರುವ ಭವಿಗಳ ಭದ್ರಾಕರಣ ನಿರಾಕರಣೆಯ ಆಜ್ಞಾಪತ್ರಗಳನ್ನು ಮ|| ರಾ|| ಹೊಗತಿಹಳ್ಳಿ ವೀರಪ್ಪನವರು ಓದಿ ಹೇಳಿದರಲ್ಲದೆ ಈ ವಿಧವಾದ ದುರ್ವರ್ತನೆಯನ್ನಾಚರಣೆಯಲ್ಲಿಟ್ಟುಕೊಂಡಿರುವವರ ಮನಸ್ಸು ಕರಗಿ ಅನುತಾಪಗೊಳ್ಳುವಂಥ ಬುದ್ಧಿವಾದಗಳನ್ನು ತಕ್ಕ ಉದಾಹರಣೆಗಳಿಂದ ತಿಳಿಸಿದ ಬಳಿಕ ಅದನ್ನು ಕೇಳಿದ ಧೂರ್ತಮಾರ್ಗಾವಲಂಭಿಗಳು ತಮ್ಮ ತಮ್ಮ ದುಷ್ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟುಕೊಂಡು ತತ್ಕ್ಷಣ ಎದ್ದುನಿಂತು ಇನ್ನು ಮುಂದೆ ಮತವಿರೋಧಕರವಾದ ಕೃತ್ಯವನ್ನು ಕೈಗೊಳ್ಳುವುದಿಲ್ಲವೆಂದು ಏಕಕಂಠದಿಂದ ನುಡಿದು ಅಧ್ಯಕ್ಷರ ಮುಂದೆ ದೀರ್ಘದಂಡ ನಮಸ್ಕಾರವನ್ನು ಮಾಡಿದರಲ್ಲದೆ ತಮ್ಮ ತಮ್ಮ ಸ್ವಹಸ್ತ ಲಿಖಿತ ಮೂಲಕ ಮುಚ್ಚಳಿಕೆಗಳನ್ನು ಸಹಾ ಮಾಡಿಕೊಟ್ಟರು. ತರುವಾಯ ಈ ಕಾನ್ಫರೆನ್ಸಿಗೆ ಸಂಬಂಧಪಟ್ಟ ೮ ತಾಲ್ಲೂಕುಗಳಿಂದಲೂ ಬಂದಿದ್ದ ಆ ಜನಗಳ ಹೆಸರಿನ ಲೀಸ್ಟ್ ಬರೆಯಲ್ಪಟ್ಟು ಬರದ ನಿಂತಿದ್ದವರ ಸುಧಾರಣೆ ಬಗ್ಗೆ ತಾಲ್ಲೂಕಾವಳಿ ಯೋಗ್ಯರಾದ ಮೆಂಬರುಗಳನ್ನು ಗೊತ್ತುಮಾಡಿ ಅವರುಗಳ ಮುಖೇನ ತಕ್ಕ ವ್ಯವಸ್ಥೆಯು ನಡೆಯುವಂತೆ ಸಭೆಯು ನಿರ್ಣಯಗೊಳಿಸಿತು.

೯. ಮತ ಮತ್ತು ದೇಶಸೇವೆಯನ್ನು ಮಾಡಲು ಬದ್ಧಕಂಕಣಧಾರಿಯಾಗಿ ಹೊರಟಿರುವ ಲೋಕಮಾನ್ಯ ಮೈಸೂರು ಸ್ಟಾರ್ ಪತ್ರಿಕೆಯ ಮೂಲಕರ್ತರಾಗಿ ಮತೋದ್ಧಾರ ಕಾರ್ಯಗಳಲ್ಲಿ ತಮ್ಮ ತನು ಮನ ಧನಗಳನ್ನೆಲ್ಲಾ ಸೂರೆಗೊಟ್ಟಿರುವ ಕೈ|| ವೀರಸಂಗಪ್ಪನವರಿಗೆ ವೀರಶೈವರಾದ ನಾವುಗಳೆಲ್ಲಾ ತುಂಬಾ ಋಣಿಗಳಾಗಿದ್ದೇವೆ. ಆದ್ದರಿಂದ ಇಂಥಾ ಶುಭೋದಯ ಕಾರ್ಯಗಳಲ್ಲಿ ಆ ಮಹನೀಯರ ಸ್ಮಾರಕದ ಬಗ್ಗೆ ಅವರ ಹೆಸರಿನ ಮೇಲೆ ಅಗ್ರತಾಂಬೂಲವನ್ನು ಅವಶ್ಯಕವಾಗಿ ತೆಗೆಯಬೇಕೆಂದೂ ಮತಸಂಬಂಧವಾದ ಕರೆಸ್ಪಾಂಡೆನ್ಸನ್ನು ಸಂಗ್ರಹಿಸಿ ಬೋಧಿಸುವ ಮೈಸೂರು ಸ್ಟಾರ್ ಪತ್ರಿಕೆಗೆ ಅಕ್ಷರಸ್ಥನಾದ ಪ್ರತಿಯೊಬ್ಬ ವೀರಶೈವನೂ ಚಂದಾದಾರನಾಗುವದು ಅತ್ಯಾವಶ್ಯಕವೆಂದೂ ಮಿ|| ಎಚ್. ಕರಿಬಸಪ್ಪನವರು ತಂದ ಸಲಹೆಯು ಸರ್ವಾನುಮತದಿಂದ ಠರಾವ್‌ಗೊಳಿಸಲ್ಪಟ್ಟು ಅಗ್ರತಾಂಬೂಲ ಸಹಿತ ೩ ರೂಪಾಯಿಗಳನ್ನು ಸ್ಟಾರ್ ಪತ್ರಿಕಾಕರ್ತರಿಗೆ ಕಳುಹಿಸುವಬಗ್ಗೆ ಮಿ|| ಕರಿಬಸಪ್ಪನವರ ವಶಕ್ಕೆ ಒಪ್ಪಿಸಿ ಕೆಲವರು ಪತ್ರಿಕೆಗೆ ಚಂದಾದಾರರಾಗಲು ತಮ್ಮ ಅಡ್ರಸ್ ಲೀಸ್ಟನ್ನು ಬರೆದುಕೊಟ್ಟರು.

೧೦. ಸಭೆಯ ಉದ್ದೇಶಕಾರ್ಯಗಳು ನಿರ್ವಿಘ್ನತೆಯಿಂದ ನೆರವೇರಿದರಿಂದುಂಟಾದ ಸಂತೋಷವಾರ್ತೆಯನ್ನು ಶ್ರೀಮನ್ ಮಹಾರಾಜನಿರಂಜನ ಜಗದ್ಗುರು ಚಿತ್ರದುರ್ಗ ಸಂಸ್ಥಾನದ ಮಹಾ ಸನ್ನಿಧಿಗೆ ಬಿನ್ನವಿಸಿಕೊಳ್ಳಬೇಕೆಂದು ಸಭೆಯು ನಿರ್ಣಯಿಸಿ ಆ ಕ್ಷಣವೇ ಬರೆಯಲ್ಪಟ್ಟ ಬಿನ್ನಹಪತ್ರವು ಮಹಾ ಸನ್ನಿಧಿಗೆ ಕಳುಹಿಸಲ್ಪಟ್ಟಿತು. ಬಳಿಕ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಕುಟುಂಬವರ್ಗದವರ ಆಯುರಾರೋಗ್ಯ ಶ್ರೇಯಃಪ್ರಾರ್ಥನೆಗಳು ನಡೆದು ಕೂಡಿದ್ದ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಜಯಘೋಷದೊಡನೆ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಪ್ರೇಕ್ಷಕ.

[ಸುಧಾರಣೆಗಳನ್ನು ಕಾಲದೇಶಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕು. ಮತ್ತು ಸಭೆಗಳ ಮೂಲಕ ಇಂಥ ನಿರ್ಧಾರಗಳನ್ನು ಮಾಡಿದ ಮಾತ್ರದಿಂದಲೇ ಅವು ಸಫಲವಾಗುವುದು ಕಷ್ಟ. ಮಸಲ ಈಗ ಲಿಂಗಧಾರಿ ನಾಪಿತರಿಂದಲೇ ಕ್ಷೌರಕರ್ಮವನ್ನು ಸಕಲ ವೀರಶೈವರೂ ಮಾಡಿಸಿಕೊಳ್ಳಬೇಕಾದುದು ವಿಧಿಬದ್ಧವಾದುದಾದರೂ ಈಗಣ ಕಾಲದಲ್ಲಿ ಅದು ವ್ಯವಹಾರಕ್ಕೆ ಸುಲಭವಲ್ಲ. ಎಷ್ಟೋ ಸ್ಥಳಗಳಲ್ಲಿ ಆ ಜನರೇ ಇಲ್ಲ. ಭವಿಸಂಗ ಪರಿತ್ಯಾಗವು ಶಾಸ್ತ್ರಸಿದ್ಧವಾಗಿದ್ದರೂ ಈಗ ಅದು ಆಚರಣಸಾಧ್ಯವಲ್ಲ. ಅದುಕಾರಣ ಸಾಧ್ಯಾಸಾಧ್ಯತೆಯನ್ನು ನೋಡಿಕೊಂಡು ಕಾರ್ಯವನ್ನಾರಂಭಿಸಬೇಕು. ಪ. ಪ್ರ.]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

೧೯೨೨ನೆಯ ಇಸವಿ ಏಪ್ರಿಲ್ ತಾ|| ೯ರಿಂದ ೧೯೨೨ನೆಯ ಏಪ್ರಿಲ್ ತಾ|| ೧೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಚೈತ್ರಶುದ್ಧ ದ್ವಾದಶಿಯಿಂದ ಚೈತ್ರಬಹುಳ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾಸ ತೇ
9	[1]ಭಾನು	ದ್ವಾದ	7-18	ಪುಬ್ಬ	35-44	27
10	[2]ಸೋಮ	ತ್ರ-ಉ	1-16 53-57	ಉತ್ತ	31-37	28
11	[3]ಮಂಗಳ	ಪೌರ್ಣ	49-32	ಹಸ್ತ	27-45	29
12	ಬುಧ	ಪಾಡ್ಯ	44-30	ಚಿತ್ತ	24-23	30
13	ಗುರು	ಬಿದಿ	40-12	ಸ್ವಾತಿ	21-30	1
14	ಶುಕ್ರ	ತದಿ	36-48	ವಿಶಾ	19-48	2
15	ಶನಿ	ಚೌತಿ	34-30	ಅನೂ	18-55	3

(1) ಪ್ರದೋಷ, ಬೇಲೂರು ಚನ್ನಕೇಶವಸ್ವಾಮಿರಥ, ಮೇಲುಕೋಟೆ ಚಲುವರಾಯಸ್ವಾಮಿರಥ. (2) ಮಾಗಡಿ ರಂಗಸ್ವಾಮಿರಥ. (3) ಚಿತ್ರಾಪೂರ್ಣಿಮಾ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾನತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೬) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಏಪ್ರಿಲ್ ತಾರೀಖು ೧೬ ನೆಯ ಭಾನುವಾರ (ಸಂಚಿಕೆ ೧೬

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾನುಯುಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
14 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಸ್ಖಲನ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಸಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ಸುರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 12

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
11 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶಕಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
15 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.



ಇಮಿಟೇಷನ್ ವಜ್ರದ ಬೆಂಡೋಲೆ. 5

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇವರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಏಪ್ರಿಲ್ ತಾ|| ೧೬ ನೆಯ ಭಾನುವಾರ.

ಮೈಸೂರು ಮ್ಯುನ್ಸಿಪಾಲಿಟಿ.

ನಮ್ಮ ರಾಜಧಾನಿಯ ಮ್ಯುನ್ಸಿಪಾಲಿಟಿಯ ಅವ್ಯವಸ್ಥೆಯನ್ನು ಕುರಿತು ನಮಗೆ ಕೆಲಕಾಲದಿಂದಲೂ ಹಲವು ಸುದ್ದಿಗಳು ಬರುತ್ತಿವೆ. ಕೆಲವು ನಮ್ಮ ಪ್ರತ್ಯಕ್ಷಾನುಭವದಿಂದಲೂ ಸಿದ್ಧವಾಗಿವೆ. ಅವುಗಳಲ್ಲಿ ಸಣ್ಣ ಪುಟ್ಟ ಸಂಗತಿಗಳನ್ನು ಬಿಟ್ಟು ಸ್ಥೂಲವಾದ ವಿಷಯಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸಬೇಕೆಂದಿದ್ದೇವೆ. ಇವುಗಳೊಳಗೆ ಅಸಹಜವಾದ ವಿಷಯವೇನಾದರೂ ಇದ್ದು ಮ್ಯುನ್ಸಿಪಲ್ ಅಧಿಕಾರಿಗಳು ಅದನ್ನು ತಿಳಿಯಪಡಿಸಿದರೆ ಸಂತೋಷದಿಂದ ಪ್ರಕಟಿಸುತ್ತೇವೆ. ನಮ್ಮ ಮ್ಯುನ್ಸಿಪಾಲಿಟಿಯ ಈಗಣ ಅಂತರ್ಬಾಹ್ಯಸ್ಥಿತಿಗಳನ್ನು ಪರಿಶೀಲಿಸಿದರೆ ಈಗಣಷ್ಟು ಶೋಚನೀಯಸ್ಥಿತಿಗೆ ಈ ಮ್ಯುನ್ಸಿಪಾಲಿಟಿಯು ಹಿಂದೆ ಯಾವಾಗಲೂ ಈಡಾಗಿರಲಿಲ್ಲವೆಂದು ವ್ಯಕ್ತವಾಗುತ್ತದೆ. ಮೊದಲನೆಯ ಹೀನಸ್ಥಿತಿಯೆಂದರೆ ಮ್ಯುನ್ಸಿಪಾಲಿಟಿಯು ಬರಿಗೈಯಾಗಿರುವುದು. ಅದರ ಕೈಯಲ್ಲಿ ವೆಚ್ಚಕ್ಕೆ ತಕ್ಕಷ್ಟು ಹಣವು ಕೂಡ ಇಲ್ಲ. ರಕ್ಷಿತ ಧನವೆಂಬುದು ಗಗನ ಕುಸುಮವಾಗಿದೆ. ಮ್ಯುನ್ಸಿಪಲ್ ಕೆಲಸಗಳನ್ನು ಮಾಡಿ ಪೂರೈಸಿಕೊಟ್ಟ ಕಂಟ್ರಾಕ್ಟರುಗಳಿಗೆ ಹಣವನ್ನು ಸಲ್ಲಿಸುವುದಕ್ಕೆ ತಾಪತ್ರಯವಾಗಿದೆ. ಇದಕ್ಕೆಲ್ಲಾ ವೆಚ್ಚದ ಬಾಬುಗಳು ಮ್ಯಾನೇಜಿಂಗ್ ಕಮಿಟಿಯ ಮತ್ತು ಕೌನ್ಸಿಲ್ಲಿನ ತಿಳುವಳಿಕೆಗೆ ತರಲ್ಪಡದೆಯೇ ಪ್ರೆಸಿಡೆಂಟರು ಸ್ವಚ್ಛಂದವಾಗಿ ವೆಚ್ಚಗಳನ್ನು ದುಂದಾಗಿ ನಡೆಯಿಸುತ್ತಿರುವುದೇ ಕಾರಣವಾಗಿದೆ. ಕೌನ್ಸಿಲು ನಾಮಮಾತ್ರಕ್ಕಿದೆಯೇ ಹೊರತು ಪ್ರೆಸಿಡೆಂಟರು ಅದನ್ನು ಲಕ್ಷ್ಯದಲ್ಲಿಟ್ಟಂತೆಯೇ ಇಲ್ಲ. ಕೌನ್ಸಿಲರುಗಳ ಸಲಹೆಗಳೂ ವಾದಗಳೂ ಎಷ್ಟೋಸಲ ಅರಣ್ಯರೋದನವಾಗುವುದೇ ಹೆಚ್ಚು. ಕೆಲ ಸಂದರ್ಭಗಳಲ್ಲಿ ಕೌನ್ಸಿಲರುಗಳ ಬಾಯಿಕಟ್ಟುವುದಕ್ಕೆ ಕೆಲವು ಸಲ ಆ|| ಪ್ರೆಸಿಡೆಂಟರು ಮಹಾಪ್ರಭುಗಳ ಸನ್ನಿಧಿಯ ಸಂಬಂಧವನ್ನು ಹೇಳುವುದನ್ನು ವಾಡಿಕೆ ಮಾಡಿಕೊಂಡಿದ್ದಾರೆ. ಪುರಪ್ರಜೆಗಳ ಸೌಖ್ಯವನ್ನೇ ಪ್ರಾಣವನ್ನಾಗಿ ತಿಳಿದಿರುವ ಮಹಾಪ್ರಭುಗಳು ಪುರಜನರ ಸೌಕರ್ಯ ವಿಷಯಗಳಿಗೆ ಆತಂಕಪಡಿಸುವ ಸಂದರ್ಭಗಳಿಗೆ ಎಂದಿಗಾದರೂ ಸಂಬಂಧಿಸುವುದುಂಟೆ?

ಮ್ಯುನ್ಸಿಪಲ್ ಉದ್ಯೋಗಿಗಳಲ್ಲಿ ಇಬ್ಬಣವಾಗಿದೆ. ಕಾರ್ಯಗಳು ಸಮರ್ಪಕವಾಗಿಸಾಗುತ್ತಲಿಲ್ಲ. ಇರುವಕೆಲಸವು ಸ್ವಲ್ಪವೇ. ಮೇಲ್ಪಟ್ಟ ಅಧಿಕಾರಿಗಳು ಮುವರು.—೫೦೦ ರೂ. ಅಲೋಯನ್ಸ್ ಪಡೆಯುವ ಪ್ರೆಸಿಡೆಂಟರೊಬ್ಬರು, ೪೦೦ ರೂ. ಸಂಬಳದ ಚೀಫ್ ಆಫೀಸರೊಬ್ಬರು, ಮತ್ತು ೧೦೦ ರೂ. ಅಲೋಯನ್ಸಿನ ವೈಸ್‌ಪ್ರೆಸಿಡೆಂಟರೊಬ್ಬರು. ಇಷ್ಟು ಇದ್ದರೂ ಮ್ಯು|| ಕೆಲಸಗಳು ಸಕಾಲದಲ್ಲಿ ನಡೆಯುತ್ತಲಿಲ್ಲ. ಅರ್ಜಿಗಳು ತಿಂಗಳುಗಟ್ಟಲೆ ವರ್ಷಗಟ್ಟಲೆ ಕೊಳೆಯುತ್ತಿವೆಯೆಂಬ ದೂರುತಪ್ಪಿಲ್ಲ. ಮ್ಯುನ್ಸಿಪಲ್ ಲೆಕ್ಕಗಳು ೩-೪ ವರ್ಷಗಳಿಂದ ಆಡಿಟ್ಟಾಗದದ್ದು ಕೌನ್ಸಿಲರ ವಿಮರ್ಶೆಗೆ ಬಂದೇಇಲ್ಲ. ಮೊಹತರ್ಪಬಾಕಿಯು ೫೦ ಸಾವಿರ ರೂ. ಗಳವರೆಗೆ ನಿಂತುಹೋಗಿದೆ. ದುಂದುವೆಚ್ಚವನ್ನು ತಪ್ಪಿಸಿ ಆಯಕ್ಕೆ ತಕ್ಕಂತೆ ವ್ಯಯಮಾರ್ಗವನ್ನು ಕಲ್ಪಿಸದೆ ಹೊಸಹೊಸತೆರಿಗೆಗಳನ್ನು ಹೆಚ್ಚಿಸುವುದರಮೂಲಕ ಆದಾಯ ವೃದ್ಧಿಮಾಡಿಕೊಳ್ಳುವುದರಲ್ಲಿ ಆ|| ಪ್ರೆಸಿಡೆಂಟರಿಗೆ ಆದರವು ಹೆಚ್ಚಾಗಿದೆ. ಪ್ರೆಸಿಡೆಂಟರು ವಾರಕ್ಕೆರಡುದಿನ ಆಫೀಸಿಗೆ ಬರುತ್ತಾರೆ. ವೈಸ್‌ಪ್ರೆಸಿಡೆಂಟರಿಗೆ ವಹಿಸಿರುವ ಕೆಲಸವೇ ಶೂನ್ಯ. ಸರ್ವಸಾಮ್ರಾಜ್ಯಸ್ವಾತಂತ್ರ್ಯವೂ ಚೀಫ್ ಆಫೀಸರಲ್ಲಿದೆ. ಅವರನ್ನು ಯಾರೂಅಳ್ಳಾಡಿಸುವಹಾಗಿಲ್ಲ. ಸ್ಟೇಷನರಿ ಮೊದಲಾದ ಕೆಲ ಬಾಬುಗಳ ವೆಚ್ಚವು ೧ ಕ್ಕೆ ೪-೫ ರಷ್ಟು ಹೆಚ್ಚಿಹೋಗಿದೆ. ಇದರಲ್ಲಿ ಸದ್ವಿನಿಯೋಗವೆಷ್ಟು? ದುರ್ವಿನಿಯೋಗವೆಷ್ಟೆಂಬುದು ಅಂತರ್ಯಾಮಿಗೇ ಗೊತ್ತು.

ಇನ್ನು ಬಾಹ್ಯಸ್ವರೂಪವನ್ನು ಕುರಿತು ವಿಚಾರಮಾಡಿದರೆ ಮತ್ತಷ್ಟು ವಿಷಾದಕರವೇ. ಆರೋಗ್ಯಶಾಖೆಯಲ್ಲಿ ೪೦೦ ರೂ. ನ ಹೆಲ್ತಾಫೀಸರಿದ್ದಾರೆ. ಕೈಕೆಳಗಣ ಸ್ಯಾ|| ಇನ್ಸ್‌ಪೆಕ್ಟರುಗಳೂ, ಓವರ್ಸಿಯರುಗಳೂ ಪಟಾಲಮ್ಮಿನಂತೆ ಇದ್ದಾರೆ. ಆದರೇನು? ಬೆಳಗಿನ ೮ ಗಂಟೆಯಾದರೂ ಕೆಲಬೀದಿಗಳು ಕಸಪೊರಕೆಯನ್ನು ಕಾಣವು. ಯಾವ ಕಚರವೂ ಕಾಲಕಾಲಕ್ಕೆ ಹೊರಕ್ಕೆ ಸಾಗಿಸಲ್ಪಡುತ್ತಲಿಲ್ಲ. ಪಬ್ಲಿಕ್ ಜಲಮಲವಿಸರ್ಜನಸ್ಥಳಗಳನ್ನು ಏರ್ಪಡಿಸಿಯೇ ಇಲ್ಲ. ಎಷ್ಟೋಬೀದಿಗಳಲ್ಲಿ ದುರ್ಗಂಧವನ್ನು ಸೈರಿಸಲಾಗುವುದಿಲ್ಲ. ಪಟ್ಟಣದ ಜನಾರೋಗ್ಯವು ಸಮರ್ಪಕವಾಗಿಲ್ಲ. ಆ|| ಪ್ರೆಸಿಡೆಂಟರಾಗಲಿ ಇತರ ಉದ್ಯೋಗಿಗಳೇ ಆಗಲಿ ೬ ತಿಂಗಳಿಗೊಂದುಸಲವೂ ಕೆಲವು ಬೀದಿಗಳಿಗೆ ದರ್ಶನವನ್ನು ಕೊಡುತ್ತಲಿಲ್ಲ. ಕೆಲಬೀದಿಗಳಿಗೆ ಪ್ರೆಸಿಡೆಂಟರ ಸವಾರಿಯು ಮೋಟಾರಿನಮೇಲೆ ದಯಮಾಡಿಸಿದಾಗ್ಗೆ ತಮ್ಮ ಮೂಗುಬಾಯನ್ನು ಕರವಸ್ತ್ರದಿಂದಾಚ್ಛಾದಿಸಿಕೊಂಡು ಬರುವುದುಂಟು. ಅದರಿಂದ ಆಯಾಬೀದಿಗಳ ಆರೋಗ್ಯಸ್ಥಿತಿಯು ಎಷ್ಟು ಅಸಮರ್ಪಕವಾಗಿದೆಯೆಂಬುದು ಪ್ರೆಸಿಡೆಂಟರ ಚಿತ್ತಕ್ಕೆ ವೇದ್ಯವಾದಂತೆ ತೋರುತ್ತದೆ. ಆದರೇನು? ಸ್ವಲ್ಪಹೊತ್ತು ಪ್ರವೇಶಿಸಿ ಇರಲಾಗದ ಅನಾರೋಗ್ಯಕರವಾದ ಬೀದಿಗಳಲ್ಲಿ ಪ್ರಜೆಗಳು ಸರ್ವದಾ ಹೇಗೆ ವಾಸಮಾಡುತ್ತಿರಬೇಕೆಂದು ಅವರ ಮನಸ್ಸು ಕರಗದ ದೃಷ್ಟಾಂತವೇನೂ ಇಲ್ಲ. ಆಗತಾನೇ ಪ್ಯಾಸ್ ಮಾಡಿದ ಸ್ಯಾ|| ಇನ್ಸ್‌ಪೆಕ್ಟರುಗಳ ಮೆಹನತ್ತನ್ನು ಹೇಳತೀರದು. ಪ್ರಜೆಗಳೊಡನೆ ಪ್ರೀತಿಯಿಂದ ಮಾತಾಡಿ ಆರೋಗ್ಯ ಮತ್ತು ಶುಚಿಗಳಿಗೆ ಸಂಬಂಧಪಟ್ಟ ವಿಧಾನಗಳನ್ನು ಸರಿಯಾಗಿ ಅವರುಗಳು ಅವಲಂಬಿಸುವಂತೆ ಮಾಡಲಿಕ್ಕೆ ಇವರಲ್ಲಿ ಅನೇಕರಿಗೆ ತಿಳಿಯದು. ಇವರುಗಳು ಇಲ್ಲದಿದ್ದರೂ ಓವರ್ಸಿಯರುಗಳೇ ಇವರಕೆಲಸಗಳನ್ನು ನಿರ್ವಹಿಸಿಕೊಳ್ಳಬಲ್ಲರು.

ಇನ್ನು ನೀರಿನ ಸೌಕರ್ಯದ ದುರವಸ್ಥೆಯೋ ವಾಚಾಮಗೋಚರವು. ಕುಡಿಯಲಿಕ್ಕೇ ತಕ್ಕಷ್ಟು ನೀರು ಊರಿಗೆ ಒದಗದಂತಾಗಿದೆ. ಇನ್ನು ಈ ಕಡುಬೇಸಗೆಯಲ್ಲಿ ಮುಖ್ಯ ಮಾರ್ಗಗಳನ್ನು ನೀರಿನಿಂದ ತೋಯಿಸುವುದುಂಟೆ? ಹಿಂದಣ ಎಲ್ಲ ಪ್ರೆಸಿಡೆಂಟರುಗಳೂ ಈ ವಿಷಯದಲ್ಲಿ ಇಷ್ಟು ಉಪೇಕ್ಷೆಯನ್ನು ಮಾಡಿರಲಿಲ್ಲ. ಹಗಲು ೬ ಗಂಟೆಯಿಂದ ಸಾಯಂಕಾಲ ೪ ಗಂಟೆಯವರೆಗೆ ನಲ್ಲಿಗಳಲ್ಲಿ ನೀರನ್ನು ಒದಗಿಸುತ್ತೇವೆಂದು ಕಳೆದ ವಾರದಿಂದ ಮ್ಯುನ್ಸಿಪಾಲಿಟಿಯವರು ಸಾರಿಸಿರುವರು. ನಡವಳಿಕೆಯಲ್ಲಿ ಅಷ್ಟಕ್ಕೂ ಗತಿಯಿಲ್ಲ. ಮಧ್ಯಾಹ್ನ ೧೧ ಗಂಟೆಗೇ ನಲ್ಲಿಗಳು ಬರಿದಾಗಿ ಹೋಗಿರುತ್ತವೆ ಒಂದೊಂದು ದಿನ ರಾತ್ರಿಹೊತ್ತು ಸ್ವಲ್ಪ ಕಾಲ ನೀರು ಬರುವುದೂ ಉಂಟು. ಈ ಉರಿಬೇಸಗೆಯಲ್ಲಿ ಪರಸ್ಥಳದಿಂದ ಬಂದ ಜನರಿಗೆ ಕುಡಿಯಲಿಕ್ಕೂ ನೀರಿಗೆ ಅಭಾವವಾಗಿರುವಾಗ ವಾಣೀವಿಲಾಸ ಸನ್ನಿಧಾನದ ದಾನವು ಎಷ್ಟುಮಟ್ಟಿಗೆ ಊರ್ಜಿತವಾಗುತ್ತಿದೆಯೋ ಹೇಳಬೇಕಾಗಿಲ್ಲ. ಈ ಗಣಂಥ ಬೇಸಗೆ ಕಾಲದಲ್ಲಿ ಹಗಲೂ ರಾತ್ರಿಯೂ ಅವಿಚ್ಛಿನ್ನವಾಗಿ ನಲ್ಲಿಗಳಲ್ಲಿ ನೀರಿರುವಂತೆ ಮಾಡುವುದು ಮ್ಯುನ್ಸಿಪಾಲಿಟಿಗೆ ಮುಖ್ಯಕರ್ತವ್ಯವಾಗಿತ್ತು. ಅಕಸ್ಮಾತ್ ಎಲ್ಲಾದರೂ ಅಗ್ನಿಪ್ರವೇಶವಾದರೆ ಗತಿಯೇನು? ಈ ವಿಷಯದಲ್ಲಿ ಮುಂದಾಗಿ ಎಚ್ಚರಗೊಂಡು ನ್ಯೂನಾತಿರೇಕಗಳನ್ನು ಸರಿಪಡಿಸಿಕೊಳ್ಳದೆ ಮ್ಯುನ್ಸಿಪಲ್ ಅಧಿಕಾರಿಗಳು ತೋರಿಸಿರುವ ಅಶ್ರದ್ಧೆಯು ಅಕ್ಷಮ್ಯವಾದುದೆಂದು ಹೇಳುವಲ್ಲಿ ಅಡ್ಡಿಯೇ ಇಲ್ಲ. ಕಾವೇರೀನಾಲೆಯಿಂದ ನೀರು ವಿದ್ಯುಚ್ಛಕ್ತಿ ಸಹಾಯದಿಂದ ರಾಜಧಾನಿಗೆ ಅವ್ಯಾಹತವಾಗಿ ಸಾಗಿಬರುವುದಕ್ಕೆ ಏರ್ಪಾಟಾಗಿದೆ. ಈಗ ನಾಲೆ ನೀರಿಗೆ ದುರ್ಭಿಕ್ಷವಿಲ್ಲ; ವಿದ್ಯುಚ್ಛಕ್ತಿಗೆ ಕೊರತೆಯಿಲ್ಲ. ಕುಡಿಯುವ ನೀರಿಗೇಕೆ ದುರ್ಭಿಕ್ಷ? ಯಂತ್ರಗಳೇನಾದರೂ ಕೆಟ್ಟಿದ್ದರೆ ಮುಂದಾಗಿ ಎಚ್ಚರಿಕೆಯಿಂದಿರಬಾರದೆ? ಅಲ್ಲದೆ ರಾಜಧಾನಿಗೆ ಕುಡಿಯುವುದಕ್ಕಾಗಿ ಒದಗಿಸಲ್ಪಡುವ ನೀರಿನಲ್ಲಿ ಪ್ರಜೆಗಳಿಗೆ ಉಪಯೋಗವಾಗುವ ನೀರಿಗಿಂತಲೂ ಹೆಚ್ಚಾಗಿ ಉದ್ಯಾನ ಮೊದಲಾದುವುಗಳಿಗೆ ವಿನಿಯೋಗವಾಗುತ್ತಿದೆಯೆಂದು ಕೇಳುತ್ತೇವೆ. ಇದು ನಿಜವಾಗಿದ್ದರೆ ಅದನ್ನೇಕೆ ತಪ್ಪಿಸಬಾರದು? ಪುರದ ಉದ್ಯಾನಗಳೆಲ್ಲಾ ತಗ್ಗು ಪ್ರದೇಶದಲ್ಲೇ ಇವೆ. ಸ್ವಲ್ಪದರಲ್ಲಿ ನೀರೂರುವ ಪ್ರದೇಶವಾಗಿವೆ. ಅಲ್ಲಲ್ಲಿಗೆ ಬಾವಿಗಳನ್ನು ತೆಗೆಯಿಸಿ ತೋಟಗಾರರು ಅವುಗಳಿಂದ ನೀರನ್ನು ಸೇದಿ ಉಪಯೋಗಿಸುವಂತೆ ಏತಕ್ಕೆ ಮಾಡಬಾರದು? ಈಗಳಾದರೂ ನೀರಿಗಾಗಿ ಪುರಜನರೂ ಪರಸ್ಥಳದ ಜನರೂ ಪಡುತ್ತಿರುವ ಕಷ್ಟಕ್ಕೆ ಮಿತಿಯಿಲ್ಲ. ಬೀದಿಬೀದಿಗಳಲ್ಲಿ ಕೊಡಗಳನ್ನು ಹಿಡಿದು ಸಾಲುಸಾಲಾಗಿ ಅಲೆಯುತ್ತಿರುವ ಜನರನ್ನು ನೋಡಿದರೆ ಪರಿತಾಪವಾಗುತ್ತದೆ. ಇದನ್ನು ಉಪೇಕ್ಷಿಸುವುದು ದಯಾಶಾಲಿಯಾಗಿರಬೇಕಾದ ಮ್ಯುನ್ಸಿಪಾಲಿಟಿಗೆ ಧರ್ಮವಲ್ಲ.

ವಿಚಾರಮಾಡುತ್ತ ಹೋದರೆ ಹೀಗೆಯೇ ನಮ್ಮ ಮ್ಯುನ್ಸಿಪಾಲಿಟಿಯ ದುರವಸ್ಥೆಗಳು ಎಷ್ಟೋಸಿಕ್ಕುವುವು. ಮುಖ್ಯವಾಗಿ ನಮ್ಮ ಮ್ಯುನ್ಸಿಪಾಲಿಟಿಗೆ ದಿವಾನ್ ವಿಶ್ವೇಶ್ವರಯ್ಯನವರಂದೀಚೆಗೆ ದರ್ಶನಕೊಟ್ಟ ದಿವಾನರೇ ಆಗಲೀ ಕೌನ್ಸಿಲರೇ ಆಗಲಿ ಒಬ್ಬರೂ ಇಲ್ಲ. ನಮ್ಮ ಆಕ್ಟಿಂಗ್ ದಿವಾನ್ ಸಾಹೇಬರಾದ ಮ|| ಎ. ಆರ್. ಬಾನರ್ಜಿಯವರು ತಮ್ಮ ಕಟಾಕ್ಷವನ್ನು ಪ್ರಸರಿಸಿದರೆ ಇದರ ರೋಗವೆಲ್ಲಾ ವಿಮೋಚನವಾದೀತು; ನಗರವು ಉದ್ಧಾರವಾದಿತು. ಹೆಚ್ಚು ದಿನದಿಂದ ನಿಂತಿರುವ ಅಧಿಕಾರಿಗಳ ನಿರಂಕುಶತ್ವದಿಂದ ವಿಮೋಚನಗೊಂಡಲ್ಲದೆ ಮ್ಯುನ್ಸಿಪಾಲಿಟಿಯ ಈಗಣ ಅಧೋಗತಿಯು ತಪ್ಪಲಾರದು.

ನಂಜನಗೂಡು ರಥೋತ್ಸವ.

ಈ ವರ್ಷದ ದೊಡ್ಡಜಾತ್ರೆಗೆ ಜನರು ವಿಶೇಷವಾಗಿಯೇ ಬಂದಿದ್ದರು. ಸ್ಪೆಷಲ್ ರೈಲುಗಳು ಹೋಗಿ ಬರುವುದಕ್ಕೂ ಏರ್ಪಾಟು ಮಾಡಲ್ಪಟ್ಟಿದ್ದಿತು. ರೋಗಾದಿಗಳ ಭಯವೊಂದೂ ಇರಲಿಲ್ಲ. ಜಾತ್ರೆಯು ಚೆನ್ನಾಗಿಯೇ ನಡೆಯಿತು. ದೈವಭಕ್ತಿಧುರಂಧರರಾದ ಶ್ರೀಮನ್ಮಹಾರಾಜರು ಸಪರಿವಾರರಾಗಿ ಆ ದಿವಸ ಬೆಳಿಗ್ಗೆ ಮೋಟಾರುಗಳಲ್ಲಿ ಬಂದು ಅರಮನೆಯಲ್ಲಿಳಿದುಕೊಂಡಿದ್ದರು. ಸ್ವಾಮಿ ರಥವು ಸೂರ್ಯೋದಯ ಕಾಲಕ್ಕೆ ಸರಿಯಾಗಿ ಹೊರಟು ಅರಮನೆಯ ಬಳಿಗೆ ಬಂದಾಗ್ಗೆ ಶ್ರೀಮನ್ಮಹಾರಾಜರು ದಯಮಾಡಿಸಿ ರಾಜಮಾರ್ಗದಲ್ಲಿ ರಥದ ಇದಿರಿಗೆ ನಿಂತು ದೇವತಾದರ್ಶನ ಮಾಡಿ ಮಂಗಳಾರತಿಯನ್ನು ಮಾಡಿಸಿ ಪ್ರಸಾದ ಸ್ವೀಕಾರ ಮಾಡಿ ವಂದಿಸಿ ತೆರಳಿದರು. ರಥದ ಚಕ್ರಗಳು ಹೊಸದಾಗಿ ಮಾಡಲ್ಪಟ್ಟುವು. ಮರವು ಸ್ವಲ್ಪ ಹಸಿಯಾಗಿತ್ತೋ ಏನೋ ಉರುಳುಬಳೆಯು ಸಿಡಿದು ಗುಂಬಗಟ್ಟಿನ ಹತ್ತಿರ ಸುರವುಸ್ವಲ್ಪ ಬಿರಿಕು ಬಿಟ್ಟಿದ್ದುದರಿಂದ ಅರಮನೆಗೆ ಸ್ವಲ್ಪ ದೂರ ಬರುವುದರಲ್ಲೇ ರಥವು ನಿಂತುಹೋಗಿ ಸರಿಪಡಿಸಿಕೊಂಡು ಮುಂದಕ್ಕೆ ಸಾಗಿಲು ೧-೧|| ಗಂಟೆಯಾಯಿತು. ಅರಮನೆಯಿಂದಾಚೆಗೆ ಸ್ವಲ್ಪದೂರ ಸಾಗಿದ ಕೂಡಲೇ ಇನ್ನಷ್ಟು ರಿಪೇರಿಗೆ ಬಂತು. ಅದನ್ನು ಸರಿಪಡಿಸುವ ಹೊತ್ತಿಗೆ ಮಧ್ಯಾಹ್ನ ಬಿಸಿಲು ಜೋರಾಗಿ ಎಳೆಯುವ ಭಕ್ತಾದಿಗಳೆಲ್ಲಾ ಚದರಿಹೋಗಲು ಆ ದಿನವೆಲ್ಲಾ ರಥವು ಅಲ್ಲೇ ನಿಂತುಹೋಯಿತು. ಮರುದಿನ ಭಾನುವಾರ ಬೆಳಿಗ್ಗೆ ಜನರ ಕುಮ್ಮಕ್ಕಿನಿಂದ ರಥವನ್ನು ಸಾಗಿಸಿ ಸ್ಥಾನಕ್ಕೆ ನಿಲ್ಲಿಸಿದರು. ಆ ಬಳಿಕ ಉಳಿದ ನಾಲ್ಕು ತೇರುಗಳೂ ಹರಿದುವು. ವ್ಯಾಪಾರವು ಚೆನ್ನಾಗಿ ನಡೆಯಿತು. ಭಾನುವಾರ ಸಾಯಂಕಾಲ ಮಳೆಬಂದು ಸ್ವಲ್ಪ ತೊಂದರೆ ಮಾಡಿತು.

ಬೆಲ್ಲದ ತುಲಾಭಾರ.

ಅನೇಕಜನ ಭಕ್ತಾದಿಗಳು ಹರಕೆಯನ್ನು ಮಾಡಿಕೊಂಡು ಬಂದು ಇಲ್ಲಿ ಅವರವರ ತೂಕಕ್ಕೆ ಬೆಲ್ಲವನ್ನು ತೂಗಿಸಿ ಅದನ್ನು ಕಂಬಿತುಂಬಿಸುವುದೂ ಬಡಬಗ್ಗರಿಗೆ ದಾನಮಾಡುವುದೂ ಸಮಾರಾಧನೆಗೆ ಉಪಯೋಗಿಸುವುದೂ ಬಹುಕಾಲದಿಂದ ಬಂದ ಪದ್ಧತಿಯಾಗಿದೆ. ಇದರಿಂದ ಕಂಬಿಯವರು ತಮ್ಮ ಕಂಬಿಗಳಮೇಲೆ ಪಾನಕವನ್ನು ಮಾಡಿ ಹೊತ್ತುಕೊಂಡು ಪರಸ್ಥಜನಕ್ಕೆ ಕುಡಿಸುತ್ತಿದ್ದರು; ಬಡಬಗ್ಗರಿಗೂ ಯಾಚಕರಿಗೂ ಎಷ್ಟೋ ಪ್ರಯೋಜನವಾಗುತ್ತಲೂ ಇತ್ತು. ಈಚೆಗೆ ಸ್ವಲ್ಪಕಾಲದಿಂದ ದೇವಸ್ಥಾನದ ಮತ್ತು ತಾಲ್ಲೂಕಿನ ಅಧಿಕಾರಿಗಳಲ್ಲಿ ಕೆಲವರು ಸೇರಿಕೊಂಡು, ಯಾವ ವರ್ತಕರೂ ತಮ್ಮ ಅಂಗಡಿಗಳಲ್ಲಿ ತಕ್ಕಡಿಗಳನ್ನಿಟ್ಟು ಬೆಲ್ಲದ ತುಲಾಭಾರ ಮಾಡಿಸಕೂಡದೆಂದು ನಿರ್ಬಂಧಮಾಡಿರುವುದಲ್ಲದೆ ದೇವಸ್ಥಾನದ ಬಾಗಿಲು ಒಳಗಣ ಅಂಗಳದಲ್ಲಿ ೨ ಚೀಲ ಬೆಲ್ಲವನ್ನು ತುಂಬಿಟ್ಟು ಒಂದು ತಕ್ಕಡಿ ಕಟ್ಟಿಧಾರೆ. ಹರಕೆ ಹೊತ್ತವರೆಲ್ಲಾ ಅಲ್ಲಿಗೆಹೋಗಿ ಆ ಚೀಲದ ಬೆಲ್ಲವನ್ನು ತೂಗಹಾಕಿ ಅದಷ್ಟು ಬೆಲೆಯನ್ನು ಅಲ್ಲಿಯೇ ಸಲ್ಲಿಸಿಬಿಡುವಂತೆ ಏರ್ಪಡಿಸಿದ್ದಾರೆ. ನೂರುಜನ ಬಂದರೂ ಅದೇ ಬೆಲ್ಲವನ್ನೇ ತೂಗುತ್ತಿರುವುದು; ಇಳಕಿ ಮಡಗುವದು ಹೀಗೆ ಮಾಡಿದ್ದಾರೆ. ಈ ಬಾಬನ್ನು ಕಂಟ್ರಾಕ್ಟು ಬಾಬಾಗಿ ಏರ್ಪಡಿಸಿ ಇಟ್ಟಿದ್ದಾರೆ. ಇದರಿಂದ ಭಕ್ತರ ಮತ್ತು ವರ್ತಕರ ಸ್ವಾತಂತ್ರ್ಯವೆರಡಕ್ಕೂ ಭಂಗಮಾಡಿರುತ್ತಾರೆ. ಮತ್ತು ಆಚರಣೆಯೂ ಮಹಾದ್ರೋಹವಾಗಿರುತ್ತದೆ. ಒಂದಾವೃತ್ತಿ ಶಿವಾರ್ಪಿತವಾಗಿ ತೂಗಿದ ಬೆಲ್ಲವನ್ನೇ ಮತ್ತೆ ತೂಗುವುದೆಂದರೆ ಒಂದು ಸಲ ದೇವರಿಗೆ ಸಮರ್ಪಿಸಿದ ವಸ್ತುವನ್ನೇ ಮತ್ತೆ ಅರ್ಪಿಸಲು ಇಟ್ಟ ಹಾಗೆ ಆಗುತ್ತದೆ. ಒಂದು ಸಲ ಒಡೆದು ಮುರಿದು ಅರ್ಪಿಸಿದ ಕಾಯಿ ಹಣ್ಣನ್ನೇ ಮತ್ತೆಮತ್ತೆ ಅರ್ಪಿಸುವುದು ನಿರ್ಮಾಲ್ಯ ಸಮರ್ಪಣೆಮಾಡಿದ ಮಹಾಪಾಪವಾಗುತ್ತದೆ. ಶಿವಾಗಮದಲ್ಲಿ "ಅರ್ಪಿತಾನ್ಯರ್ಪಯೇದ್ವಸ್ತು ಕಾರವಂನರಕಂವ್ರಜೇತ್" ಎಂದರೆ ಒಂದುಸಲ ದೇವರಿಗೆಸಮರ್ಪಣೆಮಾಡಿದ ನಿರ್ಮಾಲ್ಯವನ್ನೇ ಮತ್ತೊಂದು ಸಲ ಸಮರ್ಪಿಸಿದರೆ ಅವನಿಗೆ ನರಕವಾಗುತ್ತದೆ ಎಂದು ಪ್ರಮಾಣವಿದೆ. ಹೀಗಿರುವಾಗ ಒಬ್ಬನು ದೇವರಿಗೆ ಹರಕೆ ಒಪ್ಪಿಸಿದ ಬೆಲ್ಲವನ್ನೇ ಮತ್ತೊಬ್ಬರೂ ಮಗದೊಬ್ಬರೂ ಮರಳಿಮರಳಿ ಒಪ್ಪಿಸುವಂತೆ ಮಾಡಿದವರಿಗೆ ದೇವತಾಭಕ್ತಿಯೂ ಪಾಪಭೀತಿಯೂ ವ್ಯವಹಾರಜ್ಞಾನವೂ ಇರುವುದೆ? ಈ ದೋಷಕ್ಕೆ ಯಾರು ಪಾತ್ರರು? ಈ ಅನ್ಯಾಯವು ನಡೆಯುವುದಕ್ಕೆ ಅವಕಾಶಮಾಡಿರುವವರನ್ನು ವಿಚಾರಣೆಯಿಂದ ಕೂಡಲೇ ಶಿಕ್ಷಿಸುವಂತೆ ಮಾಡಲು ಶ್ರೀಮನ್ಮಹಾರಾಜರು ಎಂದಿಗೂ ಉದಾಸೀನಮಾಡಲಾರರು. ಈ ವಿಷಯವು ಅವರ ಗಮನಕ್ಕೆ ಬಂದಿಲ್ಲ. ಭಕ್ತಾದಿಗಳೂ ಸ್ಥಲದ ವರ್ತಕರೂ ಶ್ರೀಮನ್ಮಹಾರಾಜರ ಸನ್ನಿಧಿಗೆ ಈ ದ್ರೋಹಾಚರಣೆಯನ್ನು ಬಿನ್ನಯಿಸಿಕೊಂಡರೆ ಕೂಡಲೇ ಪರಿಹಾರ ಮಾಡಿಕೊಡದೆ ಇರಲಾರರು. ಅಷ್ಟಕ್ಕೆ ಮುಂಚೆ ದೇವಾಲಯದ ಅಧಿಕಾರಿಗಳೂ ತಾಲ್ಲೂಕಾಧಿಕಾರಿಗಳೂ ಎಚ್ಚೆತ್ತು ತಾವೇ ಇದನ್ನು ತಪ್ಪಿಸಿದರೆ ಶ್ರೇಯಸ್ಸುಂಟು. ಅಲ್ಲದೆ ಹರಕೆ ಸಮರ್ಪಿಸಬೇಕಾಗಿರುವವರಲ್ಲಿ ಹೆಂಗುಸರೇ ಮೊದಲಾದವರು ದೇವಾಲಯದ ಬಾಗಿಲಲ್ಲಿ ತೂಗಿಸಿಕೊಳ್ಳಲಿಕ್ಕೆ ಲಜ್ಜೆಪಟ್ಟು ಹಿಂದೆಗೆದು ಸಂಕಟಪಡುತ್ತಿದ್ದಾರೆ.

ಬೆಲ್ಲದ ಹರಕೆಯನ್ನು ಮಾತ್ರ ದೇವಾಲಯದಲ್ಲಿ ಸಲ್ಲಿಸಬೇಕೆಂದು ನಿರ್ಬಂಧಿಸಿದವರು ನಾಳೆಯ ದಿನ ಹರಕೆಯ ಗಣಾರಾಧನೆ ಸಮಾರಾಧನೆಗಳನ್ನೂ ಅವರವರ ಇಷ್ಟ ಬಂದ ಸ್ಥಲಗಳಲ್ಲಿ ನಡೆಯಿಸಿಕೊಳ್ಳಲಾಗದು; ಆ ಬಾಬತು ಮೊಬಲಗನ್ನು ದೇವಾಲಯದ ಗೋಲಕಕ್ಕೇ ಹಾಕಬೇಕು ಅಥವಾ ಶಿವಕೂಟಕ್ಕೆ ಸಲ್ಲಿಸಬೇಕು ಎಂದು ನಿರ್ಬಂಧಿಸಲಿಕ್ಕೂ ಹಿಂಜರಿಯಲಾರರು. ಪ್ರಜೆಗಳು ವಿದ್ಯಾಬುದ್ಧಿವಂತರಾಗದಿರುವದರಿಂದ ಅಧಿಕಾರಿಗಳು ಹೀಗೆ ಸ್ವಚ್ಛಂದಾಜ್ಞೆಗಳನ್ನು ಮಾಡಿ ಪ್ರಜಾಸ್ವಾತಂತ್ರ್ಯಹರಣಮಾಡಲು ಅವಕಾಶವಿರುತ್ತದೆ. ಪ್ರಜೆಗಳು ಎಚ್ಚತ್ತು ನಡೆದರೆ ಇಂಥ ತೊಂದರೆಗಳು ಸಂಭವಿಸುವುದೇ ಅಪೂರ್ವ.

ನಿಯಮ ನಿರ್ಮಾಣಸಭೆ.

ಮೈಸೂರು ನಿಯಮ ನಿರ್ಮಾಣಸಭೆಯು ಕಳೆದ ಸೋಮವಾರ ಮಧ್ಯಾಹ್ನ ಬೆಂಗಳೂರಿನಲ್ಲಿ ಆ|| ದಿವಾನ್ ಮ|| ಎಂ. ಆರ್. ಬಾನರ್ಜಿಯವರ ಅಧ್ಯಕ್ಷತೆಯಿಂದ ಕೂಡಿದ್ದಿತು. ಅಧ್ಯಕ್ಷರು ಮಾಡಿದ ಆರಂಭ ಭಾಷಣದಲ್ಲಿ ಸರ್ ಕಾಂತರಾಜ ಅರಸಿನವರು ಅಸ್ವಸ್ಥರಾಗಿದ್ದುದನ್ನೂ ಈಗ ನೀಲಗಿರಿಯಲ್ಲಿ ಆರೋಗ್ಯಗೊಂಡಿರುವುದನ್ನೂ ವಿವರಿಸಿ, ಬಳಿಕ ಸಂಸ್ಥಾನದ ಆರ್ಥಿಕಪರಿಸ್ಥಿತಿ ಅದರ ನಿವಾರಣೆಯ ಪರ್ಯಾಲೋಚನೆಗಾಗಿ ಏರ್ಪಟ್ಟಿರುವ ಆರ್ಥಿಕ ಸಂಘದವರು ಮಾಡುತ್ತಿರುವ ಕೆಲಸವನ್ನೂ ಅವರು ಮಾಡುವ ವರದಿಯನ್ನೂ ಪ್ರಜೆಗಳ ಅಭಿಪ್ರಾಯಕ್ಕಾಗಿ ಪ್ರಕಟಿಸಿ ಪ್ರಜಾಭಿಪ್ರಾಯವನ್ನು ತಿಳಿದನಂತರ ಆದರ ವಿಷಯದಲ್ಲಿ ಸರ್ಕಾರದವರು ತೀರ್ಮಾನಿಸುವರೆಂದೂ, ಹಣದ ಮುಗ್ಗಟ್ಟೆಲ್ಲಾ ಸರ್ಕಾರದ ವೆಚ್ಚವನ್ನು ಕಡಿಮೆಮಾಡುವುದೊಂದರಿಂದಲೇ ತೀರುವ ಹಾಗಿಲ್ಲವೆಂದೂ ಅಲ್ಪಸ್ವಲ್ಪ ಅದರಿಂದ ಪರಿಹಾರವೊದಗಿದರೂ ಅದರ ಜತೆಗೆ ಪ್ರಜೆಗಳೂ ಸ್ವಲ್ಪ

ಭಾರವನ್ನು ಹೊರಬೇಕಾಗುವುದೆಂತಲೂ ಹೇಳಿದರು. ಇದರಿಂದ ಕೆಲವು ಹೊಸ ಕಂದಾಯಗಳ ಭಾರವನ್ನು ಮೈಸೂರು ಪ್ರಜೆಗಳು ಹೊರುವುದಕ್ಕೆ ಸಿದ್ಧರಾಗಬೇಕಾಗುವುದೆಂಬುದು ಸಿದ್ಧವಾಯ್ತು. ಇವರು ಅಪ್ಪಣೆಕೊಡಿಸಿದ ವಿಷಯಗಳಲ್ಲಿ ಇನ್ನೊಂದು ಮುಖ್ಯ ವಿಷಯವಿದ್ದಿತು. ಏನೆಂದರೆ-ಕೆಲವು ರಾಜಕೀಯ ಸುಧಾರಣೆಗಳ ಮೂಲಕ ಪ್ರಜಾಮತಕ್ಕೆ ಆಧಿಕ್ಯವನ್ನು ಹೆಚ್ಚಿಸಲು ಸರ್ಕಾರದವರಿಗೆ ಇಷ್ಟವಿರುವುದೆಂದೂ, ಆದರೆ ಆ ಸಂಸ್ಕರಣಗಳು ಯಾವ ರೀತಿಯಲ್ಲಾಗಬೇಕೆಂಬುದು ಕ್ಲಿಷ್ಟತರವಾಗಿರುವುದರಿಂದ ಮಹಾಜನರು ತಂತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ಸಾವಧಾನವಾಗಿ ಗೌರ್ನಮೆಂಟಿನವರು ಪರ್ಯಾಲೋಚಿಸುವರೆಂದೂ ತಿಳಿಯಿಸಿದರು.

ಈಸಲದ ಸಭೆಯಲ್ಲಿ ನಡೆದ ಕಾರ್ಯಗಳೊಳಗೆ ಅರ್ಹರಾದ ಸ್ತ್ರೀಯರಿಗೆ ಓಟನ್ನು ಕೊಡುವ ಅಧಿಕಾರವನ್ನೀಯಬೇಕು ಎಂಬ ವಿಷಯವು ಸರ್ವಾನುಮತದಿಂದ ತೀರ್ಮಾನಹೊಂದಿದ ಸಂಗತಿಯು ಪ್ರಮುಖವಾಗಿದೆ. ಈ ವಿಷಯದ ಚರ್ಚೆಯು ಆ ಸಭೆಗೆ ಇಡಲ್ಪಟ್ಟಿರುವುದೆಂಬುದನ್ನು ತಿಳಿದು ಜಸ್ಟಿಸ್ ಚಂದ್ರಶೇಖರಯ್ಯನವರ ಪತ್ನಿಯವರು, ದಿ|| ಬ|| ಪುಟ್ಟಣ್ಣಶೆಟ್ಟಿಯವರ ಪತ್ನಿಯವರೇ ಮೊದಲಾದ ಕೆಲಮಂದಿ ನಾರೀಮಣಿಯರು ಪ್ರೇಕ್ಷಕೀಯರಾಗಿ ಸಭೆಗೆ ಬಂದಿದ್ದರು. ಕಡೆಗೆ ಸಭಿಕರೆಲ್ಲರ ಏಕವಾಕ್ಯತೆಯಿಂದ ಅರ್ಹತೆಯುಳ್ಳ ಸ್ತ್ರೀಯರಿಗೆ ಓಟನ್ನು ಕೊಡುವ ಅಧಿಕಾರವನ್ನೀಯಬೇಕೆಂಬ ತೀರ್ಮಾನವಾದ ಕೂಡಲೇ ಅವರೆಲ್ಲರೂ ಆನಂದಿತರಾದರು.

ಸಭಿಕರಿಂದ ಮಾಡಲ್ಪಟ್ಟ ಅನೇಕ ಪ್ರಶ್ನೆಗಳಿಗೆ ಸರ್ಕಾರದ ಪ್ರತ್ಯುತ್ತರವು ಕೊಡಲ್ಪಟ್ಟಿತು. ಅವುಗಳಲ್ಲಿ ಭದ್ರಾವತೀ ಕಬ್ಬಿಣದ ಕಾರ್ಯಾಲಯಕ್ಕೆ ಇದುವರೆಗೆ ಆಗಿರುವ ವೆಚ್ಚವೆಷ್ಟು? ಮುಂದೆ ಇನ್ನೂ ಒದಗಿಸಬೇಕಾದುದೆಷ್ಟು? ಅದನ್ನು ಯಾವುದಾದರೂ ಜಾಯಿಂಟ್‌ಸ್ಟಾಕ್ ಕಂಪೆನಿಗೆ ವಹಿಸಿಬಿಡುವ ಯೋಚನೆಯು ಸರ್ಕಾರಕ್ಕುಂಟೆ? ಎಂದು ಮಾಡಲ್ಪಟ್ಟ ಪ್ರಶ್ನೆಗೆ—ಕಳೆದ ಫೆಬ್ರುವರಿ ಕೊನೆಯುವರೆಗೆ ೧೫೭|| ಲಕ್ಷ ರೂ. ವೆಚ್ಚವಾಗಿದೆ; ಇನ್ನೂ ೮೪ ಲಕ್ಷ ರೂ. ಗಳನ್ನು ವೆಚ್ಚಮಾಡಬೇಕಾಗಿರುವುದು. ಇತರರಾರಿಗೂ ಅದನ್ನು ವಹಿಸುವ ಯೋಚನೆಯು ಸರ್ಕಾರಕ್ಕಿಲ್ಲ ಎಂದು ಉತ್ತರವು ಕೊಡಲ್ಪಟ್ಟಿತು.

NEW DEWAN'S SPEECH.

The opening speech of Mr. A. R. Banerji, the new Dewan, at the meeting of the Mysore Legislative Council held on the 10th April, 1922, is, we may say at the outset, not likely to evoke that generous response from the public which he, in conclusion, appealed for. His determination to establish an equalibrium in the State finances at an early date is most welcome, and we are glad to know from him that the Special Finance Committee are working vigourously and "have been conducting their deliberations with commendable promptitude. It is also pleasing to note that the recommendations of this Committee will be made public and placed before the ensuing session of the Representative Assembly, and before the Legislative Council before final orders are passed by the Government. A Special Officer is proposed to assist Mr. Banerji in working out the recommendations of the Finance Committee.

But what is really disappointing and one which causes anxiety in the mind of the public is Mr. Banerji's eagerness to augment the revenue by additional taxation. We had always a shrewd suspicion that Mr. Banerji was one for imposing new taxes, and now, there is a painful confirmation of the same. He leaves no trace of doubt in the matter when he says "mere retrenchments in the present scale of expenditure by themselves will not solve our present difficulty and it will be necessary to take every possible step to raise our revenue." His vague qualification that he would desire to do it "without adding unduly to the burdens of taxation" would not make it any the less unwelcome. True enough, there is his assurance that the public would be taken into fullest confidence and every measure of importance and step in the increase of resources would be placed before the constituted assemblies. But what for? For nothing more than "*an expression of their opinion.*" The people are painfully aware what these expressions of their opinion have counted for in days gone by and we have no reasons to expect any better fate for them hereafter. It is sad to think that we in Mysore have not yet passed the stage of expressing our opinion and feeling that as the greatest privilege conferred on its people. It is also evident that Mr. Banerji is reluctant to cut down the scale of expenditure to a sufficient degree, and to shear the salaries of the officers on the top. We expected that economies effected by reducing the salaries of high officials and by doing away with all superfluous hands, though each by itself would not seem much, would yet in total show an appreciable saving. We would at least have liked that some indication as to the general lines of taxation was shown in the speech.

The other matter, on which Mr. Banerji made some remarks was the question of constitutional Reforms, and it is indeed regrettable to note that the promise held out by Sir M. Kantaraj Urs at the last Dassara Session of the Representative Assembly that a scheme may be evolved and placed before the next Birthday Sessions cannot be fulfilled by Mr. Banerji. No one denies that the question of Reforms in an Indian State is more complex than outside but no one can at the same time believe that human intelligence and ingenuity need such a long time to prepare a draft scheme to be placed before the public for discussion. Surely if any difficulties crop up they may be set right at the deliberations before the Assembly first and then before the Legislative Coucil. Besides, nothing prevents us from making the necessary modifications even after the Reforms are set in motion, for we are not hampered here by any foreign Parliament the Joint Committee of which is to sit once in ten years to gauge the progress of the reforms. However, we hope at least that Mr. Banerji's promise to place the scheme at the next Dassara Sessions will not meet with a further postponement, and when it does come it will be put into execution without much loss of time. We need hardly assure the new Dewan that he will have the heartiest co-operation of the people in all measures affecting their moral and material welfare.

ಒಳದೇಶದ ವೃತ್ತಾಂತಗಳು.

ಇನ್ನುಮೇಲೆ ಸಂಸ್ಥಾನದ ಎ|| ಕೌನ್ಸಿಲಿನಲ್ಲಿ ಮೂವರಿಗೆ ಬದಲಾಗಿ ಇಬ್ಬರೇಮೆಂಬರುಗಳಿರತಕ್ಕುದೆಂದು ನಿಶ್ಚಯವಾಗಿದೆ.

ನೀಲಗಿರಿಗೆ ದಯಮಾಡಿಸಿರುವ ಸರದಾರ್ ಎಂ. ಕಾಂತರಾಜ ಅರಸ್, ಸಿ.ಐ.ಇ., ಯವರ ದೇಹಾರೋಗ್ಯವು ಬಹಳ ಮಟ್ಟಿಗೆ ಅನುಕೂಲವಾಗಿ ಅವರು ಹೊರಗಡೆ ಧಾರಾಳವಾಗಿ ಸಂಚರಿಸುತ್ತಿರುವರೆಂದು ತಿಳುಹಲು ಹರ್ಷವಾಗುತ್ತದೆ.

ರೈಲ್ವೆ ಏಜಂಟ್ ಮಿ|| ಡಿ. ಜೆ. ಡಾನಿಯವರು ಬ್ರಿಟಿಷ್ ಸರ್ವೀಸಿಗೆ ಹಿಂದಿರುಗಿ ಕಳುಹಿಸಲ್ಪಟ್ಟು ಇಂಜಿನಿಯರ್ ಡೌವಿಲ್‌ಸರ್‌ರವರಿಗೇ ಏಜಂಟ್ ಕೆಲಸವು ವಹಿಸಲ್ಪಡುವುದರಲ್ಲಿದೆ. ಟ್ರಾಫಿಕ್ ಸೂಪರಿಂಟೆಂಡೆಂಟ್ ಕೆಲಸಕ್ಕೆ ಹೊರಗಣಿಂದ ಮತ್ತೊಬ್ಬರು ತರಲ್ಪಡುವರಂತೆ.

ಬೆಂಗಳೂರಿನ ಟ್ರೂತ್‌ಪತ್ರಿಕೆಯಲ್ಲಿ ಪ್ರಕಟವಾದ ಕೆಲ ಲೇಖನಗಳು ಆಕ್ಷೇಪಕರಗಳಾಗಿವೆಯೆಂದು ಸರ್ಕಾರದವರು ಹೇಳಿ ಚೀಫ್‌ಕೋರ್ಟಿನಲ್ಲಿ ವಿಚಾರಣೆ ನಡೆಯಲು ಅಪ್ಪಣೆಮಾಡಿದ್ದಾರೆ. ಕೋರ್ಟುಬಾಗಿಲು ತೆಗೆದಬಳಿಕ ಜೂನ್-ಮೆ ತಿಂಗಳಲ್ಲಿ ವಿಚಾರಣೆನಡೆಯುವುದು.

ಪ್ರೈವೇಟ್‌ಸೆಕ್ರೆಟರಿ ಮತ್ತು ಕೆಲ ಮಿತಪರಿವಾರದೊಡನೆ ಶ್ರೀಮನ್ಮಹಾರಾಜರವರು ಈ ತಾ|| ೨೪ ರಲ್ಲಿ ಸಿಂಲಾಪಟ್ಟಣಕ್ಕೆ ಚಿತ್ತೈಸುವರು. ಅಲ್ಲಿಯ ಏರ್ಪಾಟಿಗಾಗಿ ಏಡಿಕಾಂಗರಾದ ಮಿ|| ಎಸ್. ಜಡ್. ಷಾರವರು ಮುಂದಾಗಿ ಪ್ರಯಾಣ ಮಾಡುವರೆಂದು ತಿಳಿಯುತ್ತೇವೆ.

ಸಂಸ್ಥಾನದಲ್ಲಿ ಸರ್ಕಾರಿ ಉದ್ಯೋಗವು ಖಾಲಿಬಿದ್ದರೆ ಆದಕ್ಕೆ ಉಮೇದುವಾರರಾಗಿ ಬಂದವರಲ್ಲಿ ಮೊಟ್ಟಮೊದಲು ಅರ್ಹರಾದ ಪಂಚಮರಿದ್ದರೆ ಅವರಿಗೆ ಕೊಡಬೇಕೆಂದು ಸರ್ಕಾರದ ಅಪ್ಪಣೆಯಾದುದರಿಂದ ಇದಕ್ಕಾಗಿ ಕೃತಜ್ಞತೆಯನ್ನು ಪ್ರದರ್ಶಿಸಲು ಬೆಂಗಳೂರಿನಲ್ಲಿ ಮ|| ಎಂ. ಸುಬ್ಬಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆಕೂಡಿದ್ದಿತು.

ರಾಜಧಾನಿಯಲ್ಲಿ ಬಿಸಿಲಿನತಾಪವು ಬಹಳ ದುಸ್ಸಹವಾಗಿದೆ. ಇದುವರೆಗೂ ಮಳೆಯುಬೀಳಲಿಲ್ಲ. ಕಳೆದವರ್ಷ ಈಕಾಲದೊಳಗೆ ರೇವತೀಮಳೆಯು ಹುಯ್ದು ಜೋಳದಬಿತ್ತನೆಯು ನಡೆದಿದ್ದಿತು. ಈಸಲ ಅನೇಕ ಗ್ರಾಮಗಳಲ್ಲಿ ಕುಡಿಯುವುದಕ್ಕೂ ನೀರಿಲ್ಲದೆ ಬಹಳ ತಾಪತ್ರಯವಾಗಿದೆ. ರಾಜಧಾನಿಯಲ್ಲಿ ೮-೧೦ ದಿನಗಳಿಂದ ಇನ್‌ಫ್ಲುಯಂಜಾವ್ಯಾಧಿಯು ಪ್ರಬಲಿಸುವ ಚಿಹ್ನೆಯಿದೆ.

ಶ್ರೀಮನ್ಮಹಾರಾಜರವರ ಅಂಗರಕ್ಷಕ ಸೇನೆಯವರಿ (ಬಾಡಿಗಾರ್ಡ್ಸ್) ಗೆ ರಾಜಧಾನಿಯ ಕುರುಬಾರಹಳ್ಳಿಯ ಬಳಿ ಕಟ್ಟಿಸಿಕೊಟ್ಟಿರುವ ಸಾಲ್ಗೇರಿಯಲ್ಲಿ ವಾಸಮಾಡುವ ಮಹಮ್ಮದೀಯರ ನಮಾಜಿಗಾಗಿ ೧೫-೨೦ ಸಾವಿರ ರೂ. ವೆಚ್ಚದಿಂದ ಚಿಕ್ಕದಾಗಿಯೂ ಸುಂದರವಾಗಿಯೂ ಅರಮನೆಯಿಂದ ಕಟ್ಟಿಸಲ್ಪಟ್ಟಿರುವ ಹೊಸಮಸೀತಿಯ ಪ್ರವೇಶೋತ್ಸವವು ತಾ|| ೧೪ ನೆಯ ಶುಕ್ರವಾರ ಮಧ್ಯಾಹ್ನ ೧ ಗಂಟೆಯಲ್ಲಿ ಶ್ರೀಮನ್ಮಹಾರಾಜರವರಿಂದ ನೆರವೇರಿಸಲ್ಪಟ್ಟಿತು. ಆಕಾಲದಲ್ಲಿ ಮಹಾಸ್ವಾಮಿಯವರು ಮಾಡಿದ ಭಾಷಣದಲ್ಲಿ ಮಸೀತಿ, ದೇವಸ್ಥಾನ ಚರ್ಚು ಮೊದಲಾದ ಪವಿತ್ರಸ್ಥಾನಗಳ ನಿರ್ಮಾಣದಿಂದ ಜನರಿಗೆ ಒಗತಕ್ಕ ಅಹಿಕಾಮುಷ್ಮಿಕ ಪ್ರಯೋಜನಗಳನ್ನೂ, ಈ ಪವಿತ್ರಸ್ಥಾನಗಳಲ್ಲಿ ಜನರು ಯಾವಭಾವನೆಯಿಂದ ವರ್ತಿಸಬೇಕೆಂಬುದನ್ನೂ ಎಂತಹ ನಾಸ್ತಿಕನ ಮನಸ್ಸೂ ಕರಗುವಂತೆ ಉರದು ಮತ್ತು ಹಿಂದೂಸ್ಥಾನಿ ಭಾಷೆಗಳಲ್ಲಿ ಮೃದುಮಧುರ ವಚನಗಳಿಂದ ಅಪ್ಪಣೆ ಕೊಡಿಸಿದರಲ್ಲದೆ ತಾವು ತಮ್ಮ ಪ್ರಜೆಗಳಲ್ಲಿ ಹಿಂದು, ಮಹಮ್ಮದೀಯ, ಕ್ರೈಸ್ತ ಎಂಬ ಭೇದವನ್ನಿಡದೆ ಸಮಸ್ತರನ್ನೂ ಒಂದೇ ಭಾವನೆಯಿಂದ ಕಾಣುವುದು ತಮ್ಮ ಧರ್ಮವೆಂದು ತಿಳಿಸಿದರು. ಈ ಉತ್ಸವಕ್ಕಾಗಿ ಮಸೀತಿಯ ಒಳಗೂ ಹೊರಗೂ ತಳಿರುತೋರಣಗಳಿಂದಲಂಕರಿಸಲ್ಪಟ್ಟಿದ್ದಿತು ಮತ್ತು ಆದಿನ ಪ್ರಾತಃಕಾಲದಲ್ಲಿ ಮಹಮ್ಮದೀಯರಿಗೆ ಮೃಷ್ಟಾನ್ನ ಭೋಜನಮಾಡಿಸಲ್ಪಟ್ಟಿತೆಂದು ತಿಳಿಯಬರುತ್ತದೆ.

ಮೈಸೂರು ಗೌರ್ನಮೆಂಟ್ 3-12-21 ನೇ ಮರ್ಕ್ಯಂ 3242 Ml 55-21-49 ನೇ ನಂಬರು ಆರ್ಡರ್ ಅನುಸರಿಸಿ ಚಾಮರಾಜನಗರದ ಟವನ್ ಮ್ಯುನಿಸಿಪಲ್ ಸರಹದ್ದಿನೊಳಗೆ ಟೋಲ್ ಗೇಟುಗಳಮೂಲಕ ಪ್ರವೇಶಿಸುವ ಯಾನ ಮತ್ತು ಪ್ರಾಣಿಗಳ ಮೇಲೆ ಟೋಲ್‌ನ್ನು 1922ನೇ ಜುಲೈ 1ನೇ ತಾರೀಖುಲಾಗಾಯ್ತು 1923ನೇ ಜೂನ್ 30ರ ವರೆಗೆ ವಸೂಲ್ ಮಾಡುವ ಹಕ್ಕನ್ನು ಚಾಮರಾಜನಗರದ ಟವನ್ ಮ್ಯುನಿಸಿಪಲ್ ಪ್ರೆಸಿಡೆಂಟರವರು ತಾ|| 15-5-1922ನೇ ಸೋಮವಾರ ದಿವಿ 11 ಘಂಟೆಗೆ ಚಾಮರಾಜನಗರದ ಮ್ಯುನಿಸಿಪಲ್ ಆಫೀಸಿನಲ್ಲಿ ಬಹಿರಂಗವಾಗಿ ಹರಾಜುಮಾಡಿಸುತ್ತಾರೆ. ಹರಾಜುವಿಷಯದ ಬಾಕಿಷರತ್ತುಗಳನ್ನು ಹರಾಜು ಇಸ್ತಿಹಾರ್‌ನಲ್ಲಿ ಪ್ರಸಿದ್ಧಪಡಿಸಿರುತ್ತೆ, ಮತ್ತು ಆಫೀಸ್ ನೋಟೀಸ್ ಬೋರ್ಡಿನಲ್ಲಿಯೂ ಚಿಕಟಾಯಿಸಿರುತ್ತೆ. ಮ್ಯುನಿಸಿಪಲ್ ಆಫೀಸಿನಿಂದ ಇಸ್ತಿಹಾರ್ ಷರತ್ತುಗಳನ್ನು ಪಡೆಯಬಹುದೆಂತ ತಿಳಿಯಪಡಿಸಿದೆ.

(Sd.) B. K. SREENIVASALU NAIDU,
President, Town Municipal Council,
Chamarajanagar,

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಲದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಮೈಸೂರ್ ಸ್ಟಾರ್ ಪತ್ರಿಕರ್ತಕರಿಗೆ.

ನಿಮ್ಮ ಮಾರ್ಚಿ 19 ನೇ ತಾರೀಖಿನ ಅಂಕದಲ್ಲಿ ನಾನು ಮತ್ತು ಮ|| ವೆಂಕಟಕೃಷ್ಣಯ್ಯನವರು ಅವರ ಮೊಕದ್ದಮೆಗಾಗಿ ಮದ್ರಾಸಿಗೆ ಹೋಗಿದ್ದೆವೆಂದುಬರೆದಿರುತ್ತೀರಿ. ನಾನಾಗಲಿ, ಅವರಾಗಲಿ ಹೋಗಿರಲಿಲ್ಲ. ಮೈಸೂರು ಸುಪ್ರಸಿದ್ಧವಕೀಲರಾದ ಮ|| ರಾ|| ಚಂದ್ರಶೇಖರಯ್ಯನವರು ತಯಾರ್ಮಾಡಿದ ಟೀಕೆಯನ್ನು ಮದ್ರಾಸಿಗೆ ಅವರೇ ಕಳುಹಿಸಿದ್ದರು. ಅದನ್ನು ಮ|| ರಾ|| ಎಸ್. ಶ್ರೀನಿವಾಸೈಯ್ಯಂಗಾರ್ರವರು ಪರಿಷ್ಕರಿಸಿ ಶನಿವಾರ ಬೆಳಿಗ್ಗೆ ಇಲ್ಲಿಗೆ ಕಳುಹಿಸಿದರು. ಅದನ್ನು ಓದಿನೋಡಿ ನಾನು ನನಗೆ ದೇವರು ಬುದ್ಧಿಕೊಟ್ಟಂತೆ ಸ್ವಲ್ಪ ಬರೆದುಕೊಟ್ಟೆನು.

ಬೆಂಗಳೂರು.
S. S. Setlur.

ರಾಮೋತ್ಸವಸಮಾರಂಭ.

ಚಿಕ್ಕನಾಯಕನಹಳ್ಳಿ ತಾ|| ಮಾಳಿಗೆ ಹಳ್ಳಿಯಲ್ಲಿ ಮ|| ಗಳಾದ ಸಿ. ಶಿವರುದ್ರಪ್ಪ ಶೆಟ್ಟಿ ಸವುಲೆ ಮತ್ತು ಆರ್. ಮರುಳಪ್ಪಶೆಟ್ಟರು ಇವರುಗಳಿಂದ ಸ್ಥಾಪಿಸಲ್ಪಟ್ಟಿರುವ ವೀವಿಂಗ್‌ಫ್ಯಾಕ್ಟರಿಯಲ್ಲಿ ಕೆಲಸಮಾಡುವರು ಕಾರ್ಯಾಲಯವನ್ನು ಶ್ರೀಕಲ್ಯಾಣಬಸವೇಶ್ವರ, ಶ್ರೀರಾಮಪಟ್ಟಾಭಿಷೇಕ ಮೊದಲಾದ ಚಿತ್ರಪಟಗಳಿಂದಲೂ ತಳಿರು ತೋರಣಗಳಿಂದಲೂ ಅಲಂಕರಿಸಿ ಶ್ರೀ ರಾಮೋತ್ಸವವನ್ನು ವಿಜೃಂಭಣೆಯಿಂದ ಜರುಗಿಸಿದರು. ಪುರಪ್ರಮುಖರು ಬರಮಾಡಲ್ಪಟ್ಟು ಬೆಂಗಳೂರು ಈಶ್ವರಪ್ಪನವರು ಹೇಳಿದ ಪುರಾಣಶ್ರವಣದಿಂದಲೂ, ಪಟೇಲ್ ಸಿದ್ದೇಗೌಡರ ಸಂಗೀತದಿಂದಲೂ ಅಲ್ಪಹಾರದಿಂದಲೂ ಪಾನಕಪನ್ನಾರದಿಂದಲೂ ಗಂಧಪುಷ್ಪಹಾರಗಳಿಂದಲೂ ಸತ್ಕರಿಸಲ್ಪಟ್ಟರು. ನಂತರ ಮ|| ಎನ್. ಸಿದ್ದಪ್ಪನವರು ವೀವಿಂಗ್‌ಫ್ಯಾಕ್ಟರಿಯವರು ಮಾಡಿದ ಸತ್ಕಾರಕ್ಕೆ ನೆರವಿದ್ದ ಸಭಿಕರ ಪರವಾಗಿ ವಂದಿಸಿ ಫ್ಯಾಕ್ಟರಿಯು ಇನ್ನೂ ಅಭಿವೃದ್ಧಿಗೆ ಬರಲೆಂದು ಪ್ರಾರ್ಥಿಸಿದರು.

ಪ್ರತ್ಯಕ್ಷದರ್ಶಿ.

ಉಪನಯನ ಮಹೋತ್ಸವಪತ್ರಿಕಾ.

ಸಮಸ್ತ ಮಹಸ್ಥರಿಗೂ ಮಹೇಶ್ವರರುಗಳಿಗೂ ವಿನಯ ಪೂರ್ವಕವಾಗಿ ದಾವಣಗೆರೆ ಗೌತ್ರ ಸಣ್ಣಮಹಾಲಿಂಗಪ್ಪ ಗುರುಶಾಂತಪ್ಪ ಇವರು ಬಿನ್ನೈಸಿಕೊಳ್ಳುವುದೇನೆಂದರೆ:—ಈ ದುಂದುಭಿ ಸಂ|| ವೈಶಾಖ ಶುದ್ಧ ೧೨ ಸೋಮವಾರ ಬೆಳಿಗ್ಗೆ ೨೪ ರಿಂದ ೪, ೨೪ ಘಳಿಗೆವರೆಗೆ ಸಲ್ಲುವ ವೃಷಭ ಲಗ್ನದಲ್ಲಿ ಈಗುರು ಕಾರ್ಯವನ್ನು ದಾವಣಗೆರೆ ಬಕ್ಕೇಶ್ವರಸ್ವಾಮಿಯಚೌಕಿಯಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುತ್ತಾರಾದಕಾರಣ ತಾವುಗಳು ವಟುಗಳ ಸಮೇತ ೨ ದಿನಗಳ ಮುಂಚಿತವಾಗಿ ತಮ್ಮ ಇಷ್ಟಮಿತ್ರರೊಡನೆ ದಯಮಾಡಿಸಬೇಕಾಗಿಯೂ, ತಮ್ಮಲ್ಲಿ ದೊರೆಯತಕ್ಕ ವಟುಗಳು ಎಷ್ಟು ಎಂಬುದನ್ನು ೮ ದಿನಗಳ ಮುಂಚಿತವಾಗಿ ಪತ್ರ ದಯಪಾಲಿಸಬೇಕೆಂದೂ ಬೇಡುತ್ತೇವೆ. ಇಲ್ಲಿಗೆ ಬರತಕ್ಕ ಸಮಸ್ತ ಮಹೇಶ್ವರರಿಗೂ ಊಟಕ್ಕೆ ಮತ್ತು ವಾಸಕ್ಕೆ ಸಹಾ ಸ್ಥಲ ಏರ್ಪಡಿಸಲ್ಪಟ್ಟಿದೆ. ವಟುಗಳನ್ನು ಕರೆದುಕೊಂಡು ಬರತಕ್ಕ ಮಹನೀಯರು ವೈಶಾಖ ಶು ೧೧ ಭಾನುವಾರ ಸಾಯಂಕಾಲ ತಪ್ಪದೆ ಬರಬೇಕೆಂದು ಕೋರಿಕೆ.

ತಮ್ಮ ವಿಧೇಯರು
ಗೌತ್ರ ಸಣ್ಣಮಹಾಲಿಂಗಪ್ಪ ಗುರುಶಾಂತಪ್ಪ ದಾವಣಗೆರೆ.

ಸೊರಬದ ತಾಲ್ಲೋಕ್ ಜಡೆ.

ಇಲ್ಲಿಯ ವಿರಕ್ತಮಠದಲ್ಲಿ ಸ್ಥಾಪಿಸಲ್ಪಟ್ಟಿದ್ದ ವೈದಿಕ-ಪಾಠಶಾಲೆಯು ೪ ವರ್ಷಗಳಿಂದಲೂ ಅವಿಚ್ಛಿನ್ನವಾಗಿ ನಡೆಯುತ್ತಿದ್ದು ಈಗ್ಯೆ ೫-೬ ತಿಂಗಳುಗಳ ಲಾಗಾಯ್ತು ಕೆಲವು ಅನಿವಾರ್ಯದಿಂದ ನಿಂತುಹೋಗಿತ್ತು. ಆದರೂ ಈಗ ಈ ವಿರಕ್ತಮಠದ ಸರ್ವಾಧಿಕಾರಿಗಳಾದ ವೇ|| ಚನ್ನವೀರಯ್ಯನವರು ಚಗಟೂರು ಸುರಗೀಮಠದ ವೇ|| ಬಸವಣ್ಣಯ್ಯನವರು, ವೇ|| ಕಸಬಾ ಮಠದ ಕರಿಬಸವಯ್ಯನವರು ಮತ್ತು ಮಿ|| ಸೊರಡಿಗಿ ಸೋಮಪ್ಪಗೌಡರು ಈ ಜನಗಳು ಪಾಠಶಾಲಾ ವಿಷಯದಲ್ಲಿ ಬಹಳ ಮುತುವರ್ಜಿವಹಿಸಿ ವಿದ್ಯಾರ್ಥಿಗಳ ಊಟದ ವಿಷಯದಲ್ಲಿಯೂ, ಶಾಸ್ತ್ರಿಗಳಿಗೆ ಸಲ್ಲಿಸಬೇಕಾದ ವೇತನದ ವಿಷಯದಲ್ಲಿಯೂ ಯಾವ ನ್ಯೂನತೆಯೂ ಬಾರದಂತೆ ಯೋಗ್ಯವ್ಯವಸ್ಥೆ ಮಾಡಿ ಪಾಠಶಾಲೆಯು ಅವಿಚ್ಛಿನ್ನವಾಗಿ ನಡೆಯುವ ಏರ್ಪಾಟುಮಾಡಿರುತ್ತಾರೆ. ಈ ತಾ|| ೬-೪-೧೯೨೨ ದಿವಸ ಪಾಠಶಾಲೆಯು ಆರಂಭಿಸಲ್ಪಟ್ಟಿರುತ್ತದೆ. ಪಾಠಶಾಲೆಯಲ್ಲಿ ವೈದಿಕಭಾಗಗಳೂ, ಸಂಸ್ಕೃತ, ಮತ್ತು ಜ್ಯೋತಿಷಪಾಠಗಳುಸಹ ಯೋಗ್ಯರೀತಿಯಿಂದ ಸಮರ್ಪಕವಾಗಿ ಹೇಳಿಕೊಡಲ್ಪಡುವವು. ವಿದ್ಯಾರ್ಥಿಗಳಿಂದ ಯಾವಸಂಬಧವಾಗಿಯಾಗಲೀ ಫೀಯು ತೆಗೆದುಕೊಳ್ಳಲ್ಪಡುವುದಿಲ್ಲ. ವಿದ್ಯಾರ್ಥಿಗಳನ್ನು ಅಭ್ಯಾಸಕ್ಕೋಸ್ಕರವಾಗಿ ಕಳುಹಿಸಿ ಉತ್ತೇಜನ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಸೆಕ್ರೆಟರಿ ವೀರಶೈವ ಸಮಾಜಸುಧಾರಣ ಸಂಘ.

ದುಃಖಪ್ರದರ್ಶನ.

ಮುಲೆಬೆನ್ನೂರು ಸ್ಕೂಲ್ ಹೆಡ್ಮಾಸ್ಟರ್ ಮ|| ರಾ|| ಸಿ. ಸಿದ್ದಯ್ಯನವರಿಗೆ ಇನ್‌ಫ್ಲೂಯಂಜಾ ವ್ಯಾಧಿ ಸಂಭವಿಸಿ, ಇಲ್ಲಿನ ಡಾಕ್ಟರು ಕೇವಲ ಶ್ರದ್ಧೆವಹಿಸಿ ಎಷ್ಟು ಚಿಕಿತ್ಸೆಮಾಡಿದಾಗ್ಯೂ, ಗುಣವಾಗದೆ ತಾ|| 27-3-22 ರಲ್ಲಿ ಶಿವಾಧೀನರಾದರು. ಈ ಊರಿನ ವೀರಶೈವ ಪ್ರಮುಖರೆಲ್ಲರೂ ಸೇರಿ ಪದ್ಧತಿಯ ಪ್ರಕಾರ ವಿಧಿವತ್ತಾಗಿ ಸಮಾಧಿಕಾರ್ಯವನ್ನು ನೆರವೇರಿಸಿದರು. ಇವರ ಅಕಾಲಮರಣಕ್ಕೆ ಈ ಗ್ರಾಮದ ಮತ್ತು ಆಸ್‌ಪಾಸ್ ಗ್ರಾಮದ ಜನರೆಲ್ಲಾ ಶೋಕಭರಿತರಾದರು. ಇವರು ಮರಣವಾದೊಡನೆ ಇಲ್ಲಿಗೆ ಕಾರ್ಯಾರ್ಥವಾಗಿ ದಯಮಾಡಿಸಿದ್ದ ಸಬ್ ತಾ|| ಅಮಲ್ದಾರ್‌ರವರು ಹಿಂದುಸ್ಥಾನಿ ಸ್ಕೂಲ್ ಅ|| ಇನ್‌ಸ್ಪೆಕ್ಟರವರು ಸಹ ಅಲ್ಲಿಗೆ ಆಗಮಿಸಿ, ತಮ್ಮ ದುಃಖಪ್ರದರ್ಶನ ಮಾಡಿದರು. ಈ ಹೆ|| ಮಾಸ್ತರವರು ಇಲ್ಲಿಯೇ ೩೦ ವರ್ಷಕ್ಕೆ ಮೇಲ್ಪಟ್ಟು ಸರ್ವೀಸ್ ಮಾಡಿ ಅನಾಮಧೇಯ ಸ್ಥಿತಿಯಲ್ಲಿದ್ದ ಇಲ್ಲಿಯ ಪಾಠಶಾಲೆಯನ್ನು ಇವರ ಸ್ವಸಾಮರ್ಥ್ಯದಿಂದಲೇ ಕೇವಲ ಊರ್ಜಿತಸ್ಥಿತಿಗೆ ತಂದು, ಉಪಾಧ್ಯಾಯರ ಸಂಖ್ಯೆಯನ್ನು 9 ರ ವರೆಗೆ ಹೆಚ್ಚಿಸಿ, ರೂರಲ್ ಎ.ವಿ. ಸ್ಕೂಲಾಗುವಂತೆ ಮಾಡಿದರು. ಇವರ ಕೈಕೆಳಗೆ ನೂರಾರುಜನ ವಿದ್ಯಾರ್ಥಿಗಳು, ಲೋ|| ಸೆ|| ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರಲ್ಲದೆ, ಅನೇಕರು ಉಪಾಧ್ಯಾಯರಾಗಿರುವರು. ಇವರು ಒಳ್ಳೇ ವಿದ್ಯಾವಂತರಾಗಿಯೂ, ಸದ್ಗುಣಶಾಲಿಗಳಾಗಿಯೂ, ಬೋಧನದಕ್ಷರಾಗಿಯೂ, ಇದ್ದು ಸಮಸ್ತರ ಪ್ರೀತಿಗೌರವ ವಿಶ್ವಾಸಗಳಿಗೆ ಪಾತ್ರರಾಗಿ ವೀರಶೈವ ಸಮಾಜಕ್ಕೆ ಭೂಷಣಪ್ರಾಯರಾಗಿದ್ದರು. ಇವರ ಮರಣದಿಂದ ಸಮಾಜಕ್ಕೆ ದೊಡ್ಡ ನಷ್ಟ ಉಂಟಾದುದಲ್ಲದೆ, ಇವರ ವಿಯೋಗದುಃಖವನ್ನನುಭವಿಸುವುದಕ್ಕೆ ಇವರಿಗೆ ಒಬ್ಬ ಪತ್ನಿಯೂ, 5 ಜನ ಚಿಕ್ಕಮಕ್ಕಳೂ ಇದ್ದಾರೆ. ಈ ಸಂಸಾರಕ್ಕೆ ದುಃಖಶಾಂತಿಯನ್ನೂ ಮೃತರ ಆತ್ಮಕ್ಕೆ ವಿಶ್ರಾಂತಿಯನ್ನೂ ಪರಮೇಶ್ವರನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಪಟೇಲ್ ಮಹಂತಪ್ಪ, ಮುಲೇಬೆನ್ನೂರು.

ಅಖಿಲ ಅಂಬಿಗಜಾತಿ ಎರಡನೇ ಮಹಾಸಭೆಯು.

ರಾಣೇಬೆನ್ನೂರ ತಾ|| ಚವಡಯ ದಾನಪುರದಲ್ಲಿ ಪದ್ಧತಿಯ ಪ್ರಕಾರ ದುರ್ಮತಿ ಸಂವತ್ಸರದ ಮಹಾಶಿವರಾತ್ರಿಯ ದಿವಸ ಶ್ರೀ ಶರಣ ಚವಡಯ್ಯನವರ ಜಾತ್ರೆಯು ತುಂಗಭದ್ರಾತೀರದಲ್ಲಿ ಒಳ್ಳೆ ಸಂಭ್ರಮದಿಂದ ಜರುಗಿಸಲ್ಪಟ್ಟಿತು. ಈ ಸಮಾರಂಭಕ್ಕೆ ಮೈಸೂರು ಇಲಾಖಾ ಅರಸೀಕೆರೆ, ಕಡೂರು, ಶಿವಮೊಗ್ಗಾ, ವಗೈರೆ ಭಾಗದ ಜನರೂ, ಮದ್ರಾಸು ಇಲಾಖೆಯ ಧಾರವಾಡ, ಬೆಳಗಾವಿ, ವಿಜಾಪುರ ಪ್ರಾಂತಗಳಿಂದಲೂ ಅನೇಕ ಅಂಬಿಗ ಜಾತಿಯ ಜನರು ಸೇರಿದ್ದರು. ಮಹಾಶಿವರಾತ್ರಿಯ ದಿವಸ ಸಕಲ ಅಂಬಿಗ ಜಾತಿಯ ಗುರುಗಳಾದ ಶ್ರೀಮನ್ಮಹಾದಕ್ಷಿಣಕಾಶಿ ಸಿಂಹಾಸನದ ಮಹಾಸ್ವಾಮಿಗಳವರು ಶ್ರೀ ಶರಣ ಚವುಡಯ್ಯನ ಗದ್ದುಗೆಯ ಅಭಿಷೇಕದ ಸಲುವಾಗಿ ತಮ್ಮ ಯಾವತ್ತು ಶಿಷ್ಯಮಂಡಳಿಯೊಡನೆ ಪಲ್ಲಕ್ಕಿಯಲ್ಲಿ ವಾದ್ಯವೈಭವಗಳೊಡನೆ ಮಠದಿಂದ ಹೊರಟು ರಾತ್ರಿ ೧೦ ಘಂಟೆಗೆ ದಯಮಾಡಿಸಿ ಅಭಿಷೇಕ ಪ್ರಾರಂಭಿಸಿ ರುದ್ರಾಭಿಷೇಕವು ಮುಗಿದ ನಂತರ ಬಂದಂಥಾ ಯಾವತ್ತು ಭಕ್ತಮಂಡಳಿಗೆ ಫಲಾಹಾರಾದಿಗಳಿಂದ ಸಂತೃಪ್ತಿಗೊಳಿಸಿದರು. ಅನಂತರ ಜಾಗರಣೆಯ ಸಲುವಾಗಿ ಮೊದಲೇ ಜಾಹೀರಪಡಿಸಿದ ಪ್ರಕಾರ ರಾಣೇಬೆನ್ನೂರ ಪಂಡಿತ ಕಣ್ವೆಕಣ್ಣಪ್ಪನವರು ಶಿವಕೀರ್ತನೆಯನ್ನು ಸರ್ವರ ಮನರಂಜಿಸುವಂತೆ ೩ ತಾಸುಗಳವರೆಗೆ ಬಹಳ ಸರಸವಾಗಿ ಮಾಡಿದರು. ಮರುದಿನ ಮಧ್ಯಾಹ್ನದ ೩ ಘಂಟೆಯ ಮೇಲೆ ಶರಣ ಚವಡಯ್ಯನವರ ಗದ್ದುಗೆಯ ಎದುರಿಗೆ ನಿರ್ಮಿಸಿದ್ದ ಭವ್ಯವಾದ ಮಂಟಪದಲ್ಲಿ ಯಾವತ್ತು ಅಂಬಿಗಜಾತಿಯ ದೊಡ್ಡ ಸಭೆಯು ನೆರೆಯಿಸಲ್ಪಟ್ಟಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ವೇ|| ಪುಟ್ಟರಾಜವಡಿಯರು ಸ್ವೀಕರಿಸುವರೆಂದು ಮೊದಲೇ ಜಾಹೀರಪತ್ರಿಕೆಗಳಿಂದ ಪ್ರಕಟಿಸಿದ್ದ ಪ್ರಕಾರ ಅಧ್ಯಕ್ಷರು ಸ್ಥಾನಾಪನ್ನರಾದ ಮೇಲೆ ತಮ್ಮ ಭಾಷಣದಲ್ಲಿ ಅಂಬಿಗಜಾತಿಯ ಏಳಿಗೆಯ ವಿಷಯವಾಗಿ ಒಳ್ಳೆ ಸರಸವಾಣಿಯಿಂದ ಭಾಷಣಮಾಡಿದ್ದಲ್ಲದೆ, ಈಗ ನಡೆವಿರುವ ಅಸಹಕಾರದ ನಿಷೇಧಾರ್ಥವಾಗಿ ಸರ್ವರಿಗೂ ತಿಳಿಯುವಂತೆ ಬಹಳ ಸರಸವಾಗಿ ಭಾಷಣಮಾಡಿದರು. ಅನಂತರ ಸಂಸ್ಥಾನದ ಕಾರಭಾರಿ ವೇ|| ಅಜ್ಜಯ್ಯಶಾಸ್ತ್ರಿಗಳು ಕನವಳ್ಳಿ, ಹನುಮಂತಪ್ಪ ಅಂಬಿಗರ ಮಾಸ್ತರ ಇಟ್ಟಿಗಿದುರ್ಗ, ಕೆಂಚಪ್ಪಾ ಮರ್ಚೆಂಟ್ ಅರಸೀಕೆರೆ, ಗುಡ್ಡಪ್ಪಾ ದಡ್ಡಿಕೊಪ್ಪ ಹಾನಗಲ್, ರಾಮಚಂದ್ರಪ್ಪಾ ಹುಬ್ಬಳ್ಳಿ, ಲಕ್ಷ್ಮಪ್ಪಾ ಫುಮಚಗಿ ವಗೈರೆ ಜನರು ಅಂಬಿಗಜಾತಿಯ ಏಳ್ಗೆಯ ವಿಷಯವಾಗಿ ಅಜ್ಞಜನರಿಗೆ ತಿಳಿಯುವಂತೆ ಒಳ್ಳೇ ಸರಸವಾಗಿ ಭಾಷಣಮಾಡಿದರು. ಅನಂತರ ಈ ಜಾತಿಯವರು ನೂಲಬಿಡುವ ಪದ್ಧತಿಯನ್ನು ಬಂದುಮಾಡುವ ಕುರಿತು, ಅಂಬಿಗರು ನಾವಾಡಿಗರಿದ್ದು ಹಂಗೋಲ ಮುಕ್ತಿಯನ್ನು ಸರ್ಕಾರದವರು ತಮ್ಮ ಜಾತಿಯ ಜನರಿಗೆ ಕೊಡಬೇಕೆಂತಲೂ, ಧಾರವಾಡ ಟ್ರೇನಿಂಗ್ ಕಾಲೇಜದಲ್ಲಿ ತಮ್ಮ ಜಾತಿಯ ವಿದ್ಯಾರ್ಥಿಗಳನ್ನು ಹೆಚ್ಚಿಗೆ ಸೇರಿಸಿಕೊಳ್ಳಬೇಕೆಂದು ಸರ್ಕಾರದವರಿಗೆ ವಿನಂತಿಮಾಡಿಕೊಳ್ಳಬೇಕೆಂತಲೂ, ಬ್ರಿಟಿಷ್ ಸರ್ಕಾರದ ಛತ್ರವು ತಮ್ಮ ಮೇಲೆ ಸ್ಥಿರವಾಗಿರುವ ಬಗ್ಗೆ ಪ್ರಾರ್ಥಿಸಬೇಕೆಂತಲೂ ಇನ್ನು ಅನೇಕ ಠರಾವು ಪಾಸ್ ಮಾಡಲ್ಪಟ್ಟವು. ಅನಂತರ ಈ ಸಭೆಯ ಅಧ್ಯಕ್ಷಸ್ಥಾನವನ್ನು ಮತ್ತು ಈ ವರ್ಷದ ಉತ್ಸವವನ್ನು ಒಳ್ಳೆ ಆಸ್ಥೆಯಿಂದ ಜರುಗಿಸಿದ ಶ್ರೀ ಪುಟ್ಟರಾಜವಡಿಯರವರ ಆಭಾರಮನ್ನಿಸಿದ್ದಲ್ಲದೆ ಬಂದಂಥ ಯಾವತ್ತು ಸದ್‌ಗೃಹಸ್ಥರಿಗೆ ಆದರಾತಿಥ್ಯಮಾಡಿದ ರಾ|| ಹೊನ್ನಪ್ಪಾ ನುಣಗಾರ ವ ಮಲ್ಲಾರೆಪ್ಪಾ ಹಾವನೂರ ಇವರ ಉಪಕಾರ ಮನ್ನಿಸಿ; ಅತ್ತರ ಗುಲಾಬು ಹಾರ ತುರಾಯಿ ಆದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಸಭೆಯಲ್ಲಿ ಹಾಜರಿದ್ದ ಓರ್ವ ಅಂಬಿಗ ಮತಾಭಿಮಾನಿ.

ಜಯಂತಿಯಿಂದಾಗುವ ಲಾಭಗಳು.

ಮೊದಲೇ ಸಿದ್ಧಚೈತನ್ಯರ ಜಯಂತಿಯ ಬಗ್ಗೆ ಸೂಚಿಸಿದ ಪ್ರಕಾರ ನಿನ್ನೆ ತಾ|| ೬-೪-೧೯೨೨ ಇಸವಿ ಗುರುವಾರ ಪ್ರಾತಃಕಾಲಕ್ಕೆ ಬೆಳಗಾಂ ಡಿ|| ಹೂಲಿಯಲ್ಲಿ ಶ್ರೀ ಸಿದ್ಧನಂದೀಶ್ವರ ಶಿವಾಚಾರ್ಯರ ಗದ್ದುಗೆಯ ಅಭಿಷೇಕವು ಇಲ್ಲಿಯ ವೀರವಿಜಯ ಪಾಠಶಾಲಾ ವಿದ್ಯಾರ್ಥಿಗಳಿಂದ ವಿಧಿಯುಕ್ತವಾಗಿ ಜರುಗಿಸಲ್ಪಟ್ಟಿತು. ಮುಂದೆ ಸಾಯಂಕಾಲದ ೪ ಗಂಟೆಯ ಸುಮಾರಕ್ಕೆ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದಲ್ಲಿ ಸಭೆಯು ಸೇರಿತು. ಈ ಸಭೆಗೆ ವಾಚನಾಲಯದ ಮೆಂಬರರು, ವೀರಶೈವ ಮುಂದಾಳುಗಳು, ಇಲ್ಲಿಯ ರಾಜನಿಷ್ಠಾ ಸಂಘದ ಮೆಂಬರರು ಮೊದಲಾದ ಬ್ರಾಹ್ಮಣೇತರ ಜನರು ಆಗಮಿಸಿದ್ದರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಇಲ್ಲಿಯ ಬೃಹನ್ಮಠದ ಸ್ಥಿರಪಟ್ಟಾಧ್ಯಕ್ಷ ಮಹೇಶ್ವರ ಶಿವಾಚಾರ್ಯರು ಸ್ವೀಕರಿಸಿದ್ದರು. ಮುಂದೆ "ಅಷ್ಟಾವರ್ಣಮಹಾತ್ಮ" ಈ ವಿಷಯದ ಮೇಲೆ ೨ ಘಂಟೆ ವರೆಗೆ ಪಾಠಶಾಲೆಯ ವಿದ್ಯಾರ್ಥಿಗಳ ಭಾಷಣವಾದ ಮೇಲೆ, ವೇ|| ಮು. ಶಾ. ಶಿರವಾಳಮಠ ಸಂ|| ರಾಮದುರ್ಗ ಇವರು ಭಾಷಣಮಾಡಿದ್ದೇನೆಂದರೆ—ಈ ಹೊತ್ತು ಇಲ್ಲಿಯ ಶ್ರೀ ಸಿದ್ಧಚೈತನ್ಯರ ಜಯಂತಿಗಾಗಿ ತಾವೆಲ್ಲರೂ ಇಲ್ಲಿ ನೆರೆದದ್ದು ನೋಡಿ ಬಹಳ ಆನಂದವಾಗುತ್ತದೆ. ಈ ಸಿದ್ಧಚೈತನ್ಯ ಶಿವಾಚಾರ್ಯರ ಚರಿತ್ರೆಯನ್ನು ಸ್ವಲ್ಪದರಲ್ಲಿ ಹೇಳುತ್ತೇನೆಂದು ತಮ್ಮ ಭಾಷಣವನ್ನು ಪ್ರಾರಂಭ ಮಾಡಿದರು. ಅದರ ಸಾರಾಂಶವೇನೆಂದರೆ—ವೇದವ್ಯಾಸಂ ಸೂತ್ರಕಾರಂ ಚೈತನ್ಯಂ ವೃತ್ತಿಕಾರಕಂ | ಭಾಷ್ಯಕೃನ್ನೀಲಕಂಠಾರ್ಯ, ಆಶ್ರಯೇ ಭೀಷ್ಟಸಿದ್ಧಯೇ ಎಂಬ "ಶಿವಾದ್ವೈತದರ್ಪಣ" ಮೊದಲಾದ ಗ್ರಂಥಗಳ ಆಧಾರದಿಂದಲೂ ಶ್ರೀ ಸಿದ್ಧಚೈತನ್ಯ ಶಿವಾಚಾರ್ಯರು ತಿರುಕಂಕರಾರ ನೆಂಬ ಒಬ್ಬ ವೀರಮಾಹೇಶ್ವರರ ಪುತ್ರರಾಗಿ ಕಾಂಚಿ ಎಂಬ ಪಟ್ಟಣದಲ್ಲಿ ಜನಿಸಿದರು. ಇವರ ತಾಯಿ ಶಾಂತಿದೇವಿ. ಇವರೇ ಈ ಹೂಲಿಯ ಬೃಹನ್ಮಠದ ಮೂಲಸ್ಥಾಪನಾಚಾರ್ಯರು. ಇವರು ಶಾಲಿವಾಹನಶಕದ ಪೂರ್ವದಲ್ಲಿ ಇದ್ದರೆಂದು ತಿಳಿಯಬರುತ್ತದೆ. ಇವರು ಬ್ರಹ್ಮಸೂತ್ರಗಳ ಮೇಲೆ ಚೈತನ್ಯವೃತ್ತಿ ಎಂಬ ಗ್ರಂಥವನ್ನು ಬರೆದು ಪ್ರಸಿದ್ಧಿಯನ್ನು ಹೊಂದಿರುವರು. ಇವರ ತರುವಾಯ ಆಗಿಹೋದ ಶ್ರೀ ಶಿವಾಧಿಕ್ಯ ಶಿವಾಚಾರ್ಯ, ನೀಲಕಂಠ ಶಿವಾಚಾರ್ಯ, ಚಿದ್ಘನಲಿಂಗ ಶಿವಾಚಾರ್ಯ, ಶ್ರೀ ಶಿವಾನುಭವ ಶಿವಾಚಾರ್ಯ, ಶ್ರೀ ಸ್ವಪ್ರಭಾನಂದ ಶಿವಾಚಾರ್ಯ ಎಂಬವರು ಸಿದ್ಧನಂದೀಶ್ವರ ಶಿವಾಚಾರ್ಯರೆಂಬ ಹೆಸರಿನವರು ೩೨ ಮಂದಿ ಮಹಾಸ್ವಾಮಿಗಳೂ ಸಿದ್ಧನಂಜೇಶ್ವರ ಶಿವಾಚಾರ್ಯರೆಂಬ ಹೆಸರಿನ ೧೯ ಮಂದಿ ಮಹಾಸ್ವಾಮಿಗಳೂ ಪಟ್ಟವಾಳಿರುವರು. ಇವರಲ್ಲಿ ಕೆಲವು ಸ್ವಾಮಿಗಳು ವೈಶೇಷಿಕಶಾಸ್ತ್ರದಲ್ಲಿ ಸಪ್ತಪದಾರ್ಥಿ ಲಕ್ಷಣಮಾಲಾ ಪ್ರಶಸ್ತವಾದ ಭಾಷ್ಯಕ್ಕೆ ಯೋಮವತಿ ನಾಮಕವಾದ ವ್ಯಾಖ್ಯಾನವೆಂಬ ಗ್ರಂಥಗಳನ್ನು ಶಕ್ತಿಸಂದೋಹ ಚೈತನ್ಯವೃತ್ತಿಗೆ ಚಿತ್ಕಲಾ ಎಂಬ ವ್ಯಾಖ್ಯಾನವನ್ನು ಕೆಲವರು ಶಿವಾದ್ವೈತ ತರ್ಕಾಂಬುಧಿ, ಶಿವಾದ್ವೈತ ಸುಧಾಕರ, ಶಿವಾದ್ವೈತದರ್ಪಣ, ಶಿವಾದ್ವೈತಮಂಜರಿ, ಶಿವಾನುಭವಸಿದ್ಧಾಂತ "ಪಂಚಾಕ್ಷರೀ ಪುರಶ್ಚರಣಪದ್ಧತಿ", ಮಂತ್ರಸಂಹಿತೆ ಬ್ರಹ್ಮಸೂತ್ರ, ಶಿವಸೂತ್ರ ಭಾಷ್ಯವನ್ನೂ, ಪಂಚವರ್ಣ ಮಹಾಸೂತ್ರಭಾಷ್ಯ, ವೃಷ್ಟಿಮಹಾಸೂತ್ರದ ಭಾಷ್ಯ, ಸಿದ್ಧನಂಜೇಶ್ವರಪುರಾಣ, ರಾಘವಾಂಕನಕಾವ್ಯ, ಇಂಥ ಅಮೌಲ್ಯ ಗ್ರಂಥಗಳನ್ನು ಬರೆದು ಪ್ರಖ್ಯಾತಿ ಹೊಂದಿದ ಸ್ವಾಮಿಗಳ ಮೂಲಪುರುಷರಾದ ಶ್ರೀ ಪೂವಲಿ ಸಿದ್ಧಚೈತನ ಶಿವಾಚಾರರ ಜಯಂತಿಯು ಯೋಗವೆಂದೂ ಇದರಂತೆ ಹಿಂದೆ ನಮ್ಮ ವೀರಶೈವ ಸಮಾಜದಲ್ಲಿ ಆಗಿಹೋದ ಮಹಾಸ್ವಾಮಿಗಳ ಮತ್ತು ಶಿವಯೋಗಿಗಳ ಅನೇಕ ಮಹತ್ವವನ್ನು ತೋರಿದ ಶಿವಶರಣರ ಜಯಂತಿಗಳನ್ನೂ, ಅವರಚರಿತ್ರೆಗಳನ್ನೂ ಆಗಿಂದಾಗ್ಗೆ ಪ್ರಕಟಪಡಿಸುವದೂ ಅವರು ರಚಿಸಿದ ಗ್ರಂಥಗಳನ್ನು ಪ್ರಕಾಶಗೊಳಿಸುವುದೂ, ನಮ್ಮ ವೀರಶೈವಮತದ ಏಳ್ಗೆಗೂ ಪ್ರಾಚೀನ ಇತಿಹಾಸಕ್ಕೂ ಬಲವತ್ತರವಾಗುವುದು; ಅಲ್ಲಿಗೆ ಸಮಾಜದ ಮಹಿಮೆಯು ನಿಜವಾಗಿ ತೋರುವುದು. ಎಂದು ಹೇಳಿ ಈ ಗ್ರಾಮವು ಬಹು ಪ್ರಾಚೀನವಿದ್ದು ಇದು ಹಿಂದೆ ಅನೇಕರಾಜರ ಆಡಳಿತಕ್ಕೆ ಒಳಗಾಗಿದ್ದು ಈ ಪಟ್ಟಣವನ್ನು "ಶಾಲಿವಾಹನ ಶಕ ೯ನೇ ಶತಮಾನದಲ್ಲಿ ವೀರವಿಜಯನೆಂಬ ವೀರಶೈವ ರಾಜನು ಆಳಿರುವನೆಂದು ಇಲ್ಲಿಯ ಶಿಲಾಲೇಖಗಳ ಆಧಾರದಿಂದಲೂ ಮೊನ್ನೆ ಸಿರಸಂಗಿ ಸಂಸ್ಥಾನದಲ್ಲಿ ದೊರೆತ ಕೈ|| ವಾ|| ಲಿಂಗರಾಜಭೂಪರು ಸಂಗ್ರಹಿಸಿಟ್ಟ ಪೂವಲ್ಲಿ ಪಟ್ಟಾವಲೀಚರಿತ್ರೆ ಈ ಹೆಸರಿನ ತಾಡವಾಲೆಯ ಗ್ರಂಥಗಳ ಆಧಾರದಿಂದಲೂ ಯಾವತ್ತರಿಗೂ ತಿಳಿಯುವಂತೆ ೨ ಘಂಟೆಗಳವರೆಗೆ ಸರಸವಾದ ಭಾಷಣವನ್ನು ಮಾಡಲು ತಕ್ಷಣವೇ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದವರು ಇಂಥಗ್ರಂಥಗಳನ್ನು ಸಂಗ್ರಹಿಸುವುದೂ ಅವುಗಳನ್ನು ಪ್ರಚುರಪಡಿಸುವದೂ ಯೋಗ್ಯವೆಂದು ಪ್ರಾಚೀನ ಗ್ರಂಥಸಂಗ್ರಹಸಂಘ ಎಂಬ ಹೆಸರಿನ ಸಂಘವೊಂದನ್ನು ಸ್ಥಾಪಿಸಿ ಈ ಸಂಘದ ಮುಖಾಂತರ ಪ್ರಾಚೀನ ಗ್ರಂಥಗಳನ್ನು ಶೋಧಮಾಡಿಕೊಟ್ಟವರಿಗೆ ಬಹುಮಾನವನ್ನುಕೊಡುವಂತೆ ವ್ಯವಸ್ಥೆಯನ್ನು ಮಾಡಲು ತೀರ್ಮಾನಿಸಿ ಯಾವತ್ತರೂ ಆನಂದದೊಡನೆ ಜಗದ್ಗುರು ವಿಶ್ವಾರಾಧ್ಯರ ಮಂಗಲದಿಂದ ಸಭಾಕಾರ್ಯವನ್ನು ಸಮಾಪ್ತಗೊಳಿಸಿದರು.

ಸೆಕ್ರೆಟರಿ
ಜಗದ್ಗುರು ವಿಶ್ವಾರಾಧ್ಯವಾಚನಾಲಯ.

ವೀರಶೈವ ಸಮಾಜದೇಳ್ಗೆಯ ಸುಚಿಹ್ನಗಳು.

ಧಾರವಾಡ ಹಾವೇರಿಪೇಟೆ ಶ್ರೀ ಮುರುಘಾಮಠದಲ್ಲಿ "ಶ್ರೀ ಜಗದ್ಗುರು ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳವರ" ಬೋರ್ಡಿಂಗ ಸ್ಥಾಪಿಸಲ್ಪಟ್ಟು ಅಲ್ಲಿ ಪ್ರತಿ ನಿತ್ಯವೂ ೬೩ ಮಂದಿ ಕಾಲೇಜ ಹೈಸ್ಕೂಲ ವಿದ್ಯಾರ್ಥಿಗಳಿಗೆ ಪ್ರಸಾದವು ಕೊಡಲ್ಪಡುತ್ತಿರುವದೆಂಬ ಸಂಗತಿಯು ಯಾವತ್ತು ವಾಚಕ ವೃಂದಕ್ಕೆ ಗೊತ್ತಿರುವದಷ್ಟೆ. ಆ ಸಂಸ್ಥೆಯ ಉತ್ಪಾದಕರೂ ಮತ್ತು ಅಧಣಿ ಶ್ರೀ ಶಿವಯೋಗೀಶ್ವರರ ಕೃಪಾಪಾತ್ರರೂ ಆದ ಶ್ರೀ ಮೃತ್ಯುಂಜಯ ಸ್ವಾಮಿಗಳವರು ತಮ್ಮ ಈ ಮೇಲ್ಕಂಡ ಗುರುಕುಲವಾಸದಲ್ಲಿರುವ ವಿದ್ಯಾರ್ಥಿವೃಂದವು ಧರ್ಮ, ವಿದ್ಯೆ ಮತ್ತು ಸಮಾಜಸೇವಾ ತತ್ಪರರಾಗಬೇಕೆಂಬ ಉದ್ದೇಶದಿಂದ ಹಗಲಿರುಳು ಶ್ರಮವಹಿಸಿ ಆ ವೃಂದಕ್ಕೆ ಧರ್ಮ ರಹಸ್ಯವನ್ನೂ, ಪರಸ್ಪರ ಬಂಧು ಪ್ರೇಮ ಹಾಗೂ ಭೂತದಯಾ ತತ್ವಗಳನ್ನೂ ಬೋಧಿಸಿ ಅವರನ್ನು ಧರ್ಮಾಸಕ್ತಿಯುಳ್ಳವರನ್ನಾಗಿಯೂ, ದೇಶಸೇವಾ ಹಾಗೂ ಸಮಾಜಸೇವಾಗಳ ಕಡೆಗೆ ಮನಸ್ಸುಳ್ಳವರನ್ನಾಗಿಯೂ ಮಾಡುತ್ತಲಿದ್ದಾರೆ. ಇವುಗಳ ಜೊತೆಯಲ್ಲಿಯೇ ಈ ಇಪ್ಪತ್ತನೇ ಶತಮಾನಕ್ಕನುಸಾರವಾಗಿ ವರ್ಷಕ್ಕೊಮ್ಮೆ ಪ್ರಯಾಣ ಪದ್ಧತಿಯನ್ನೂ ಮತ್ತು "ವಾಕ್ಪಟುತ್ವದ ಮೇಲಾಟ" ದಲ್ಲಿ ಮೇಲ್ತರದ ಭಾಷಣ ಮಾಡಿದವರಿಗೆ ಕಾಲೇಜಗಳ ಪದ್ಧತಿಯಂತೆ ಇನಾಮುಗಳನ್ನು ದಯಪಾಲಿಸುತ್ತ ವಿದ್ಯಾಭಿವೃದ್ಧಿಗೆ ಸಹಾಯಮಾಡುತ್ತಲಿದ್ದಾರೆ. ಪ್ರಯಾಣದ ಉದ್ದೇಶವು "ಮಹಾತ್ಮರ ದರ್ಶನದ ಲಾಭ" "ಸೃಷ್ಟಿಸೌಂದರ್ಯ" ಹಾಗೂ "ಐತಿಹಾಸಿಕ ಸ್ಥಳಗಳ ಮಹತ್ವ" ಗಳನ್ನು ತೋರಿಸುವದಿದ್ದು ಅದು ಈಗ ೨ ವರ್ಷಗಳಿಂದ ನಡೆಯುತ್ತ ಬಂದದೆ. ಇದೇ ಪ್ರಕಾರ ಈ ವರ್ಷವಾದರೂ ಧಾರವಾಡದಿಂದ ಮೈಸೂರವರೆಗೆ "ಸಿದ್ಧಗಂಗಾ ಕ್ಷೇತ್ರ" ವನ್ನು ಪ್ರಾಮುಖ್ಯವಾಗಿಟ್ಟುಕೊಂಡು ತಾರೀಖು ೨೫ನೇ ಏಪ್ರಿಲಿನಿಂದ ಪ್ರಯಾಣಕ್ಕೆ ಹೊರಡಲು ನಿಶ್ಚಯವಾಗಿದೆ. ಇನ್ನು ವಾಕ್ಪಾಂಡಿತ್ಯದ ಮೇಲಾಟದ ಉದ್ದೇಶವು ವಿದ್ಯಾರ್ಥಿಗಳಲ್ಲಿ ಭಾಷಣಮಾಡುವ ಶಕ್ತಿಯನ್ನು ಹುಟ್ಟಿಸಿ ಅದರ ಬಲದಿಂದ ಅವರನ್ನು ದೇಶಸೇವಾಸಮಾಜಸೇವಾ ಮಾಡಲು ಅರ್ಹರನ್ನಾಗಿ ಮಾಡುವದಿದ್ದು ಅದು ಈ ವರ್ಷದಿಂದ ಸುರುವಾಗಿರುತ್ತದೆ. ಈ ತರದ ಮೇಲಾಟದ ಸಭೆಯು ಮೊನ್ನೆ ತಾ|| ೭-೪-೧೯೨೨ನೇ ಇಸ್ವಿ ದಿವಸ ಜರುಗಿತು. ಸಭೆಗೆ ಶ್ರೀ ಪಟ್ಟದ್ದೇವರು ಗದಗ ಸಂಸ್ಥೆಯ ಮೆಂಬರರು ಕೆಲವರು ಸ್ಥಳದ ಮಹಾಶಯರು ಹಾಗೂ ಯಾವತ್ತು ವಿದ್ಯಾರ್ಥಿ ವೃಂದವು ಆಗಮಿಸಿತ್ತು. ಶ್ರೀ "   " ಗಳವರು ಸಭಾಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ವೇ|| ಚನ್ನಬಸಯ್ಯನವರು ಮಠದ ಚಿನ್ನೂರು ಮತ್ತು ಶ್ರೀಯುತ ಚೆನ್ನಬಸಪ್ಪನವರು ಕರ್ಜಗಿ ಸಾ|| ಹಾವೇರಿ ಇವರಿಬ್ಬರನ್ನು ತೀರ್ಪುಕೊಡುವವರನ್ನಾಗಿ (Judges) ನೇಮಿಸಲ್ಪಟ್ಟಿತ್ತು. ಈ ಕೆಳಗೆ ಬರೆದ ವಿಷಯಗಳು ಆ ಮೇಲಾಟದಲ್ಲಿಡಲ್ಪಟ್ಟದ್ದು ಆಯಾ ಮಗ್ಗಲಿಗೆ ಬರೆದ ವಿದ್ಯಾರ್ಥಿಗಳು ಅವಕ್ಕೆ ಉಮೇದವಾರರಾಗಿ ನಿಂತಿದ್ದರು.

೧. ಪ್ರವಾಸದ ಮಹತ್ವ ಮಿ|| ಗುರುವಯ್ಯ ಹಿರೇಮಠ, ೨. ಆರೋಗ್ಯದ ಮಹತ್ವ ಮಿ|| ಸಂಗಯ್ಯ ಕಲ್ಮಠ, ೩. ವಿದ್ಯಾ ಗುರುಸಿದ್ಧಯ್ಯ ಹಿರೇಮಠ, ೪. ಪರಸ್ಪರಬಂಧುಪ್ರೇಮ, ೫. ನೈತಿಕಧೈರ್ಯ ಮಿ|| ಶಂಕರಗೌಡ ಪಾಟೀಲ ೬. ವೇಳೆಯ ಮಹತ್ವ ಮಿ|| ಕಲ್ಯಾಣಪ್ಪ ಬ್ಯಾಳಿ, ೭. ಹಣದ ಉಪಯೋಗ ಮಿ|| ನಾಗೇಂದ್ರಯಲಿ, ೮. ಗುರುಕುಲವಾಸ ಮತ್ತು ಬೋರ್ಡಿಂಗ ಮಿ|| ನೀಲಕಂಠಯ್ಯ ಶಾಂತಗಿರಿ. ಸಭೆಯು ಸಂಜೆ ೬ ಗಂಟೆಗೆ ಸುರುವಾಯಿತು. ಆ ಪೂರ್ವದಲ್ಲಿ ಈಶ್ವರನ ಭಜನೆಯಾಯಿತು. ನಂತರ ಶ್ರೀ ಪಟ್ಟದ್ದೇವರು ಗದಗ ಇವರು "ಮಹಾತ್ಮರ ದರ್ಶನ ಲಾಭ" ಹಾಗೂ "ಸೋದಕದಾನ" ಗಳು ಇವುಗಳ ಮೇಲೆ ಬಹು ಪರಿಣಾಮಕರವಾಗಿ ಭಾಷಣಮಾಡಿದರು. ತದನಂತರ ಕಾರ್ಯಕ್ರಮವು ಸುರುವಾಗಿ ತೀರ್ಪುಗಾರರ ಠರಾವಿನ ಪ್ರಕಾರ ಈ ಕೆಳಗೆ ಬರೆದ ವಿದ್ಯಾರ್ಥಿಗಳಿಗೆ ಅವರವರ ಭಾಷಣದ ಯೋಗ್ಯತೆಯ ಪ್ರಕಾರ ಶ್ರೀ ಗಳವರ ಹಸ್ತದಿಂದ ಇನಾಮುಗಳು ಕೊಡಲ್ಪಟ್ಟವು.

೧. ಮಿ|| ನೀಲಕಂಠಯ್ಯ ಶಾಂತಗಿರಿ ೨ ರೂ. ೨. ಮಿ|| ನಾಗೇಂದ್ರಯಲಿ ೧ ರೂ. ೩. ಮಿ|| ಕಲ್ಯಾಣಪ್ಪ ಬ್ಯಾಳಿ ೧ ರೂ. ೪. ಮಿ|| ಶಂಕರಗೌಡ ಪಾಟೀಲ ೧ ರೂ. ೫. ಮಿ|| ಸಂಗಯ್ಯ ಕಲ್ಮಠ ೧ ರೂ. ಈ ಐದು ಇನಾಮುಗಳು ಸ್ವತಃ ಪರೀಕ್ಷಕರಿಂದ ಕೊಡಲ್ಪಟ್ಟದ್ದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ—ತಮಗೆ ಯೋಗ್ಯತೆಯಿಲ್ಲದಿದ್ದಾಗ್ಯೂ ಕೂಡ ಶ್ರೀ ಶಿವಯೋಗೀಶ್ವರರೇ ಈ ಇನಾಮುಗಳನ್ನು ಕೊಡಲು ತಮ್ಮನ್ನು ಪ್ರೇರಿಸಿದರೆಂತಲೂ ಮತ್ತು ಅಂಥಾ ಸುಸಂಧಿಯಲ್ಲಿ ತಮಗೆ ಆ ತಪಸ್ವಿಯು ಆಗಾಗೆ ಒದಗಿಸಿಕೊಡಲೆಂತಲೂ ಹಾರೈಸಿ ಪುನಃ ವಿದ್ಯಾರ್ಥಿಗಳ ಫಲಹಾರಕ್ಕೆಂದು ೨ ರೂಪಾಯಿಗಳನ್ನು ಕೊಟ್ಟು ಸ್ಥಾನಸ್ವೀಕರಿಸಿದರು. ಆ ಮೇಲೆ ಶ್ರೀ ಗದಗದ ಪಟ್ಟದ್ದೇವರು "ಗುರುಕುಲವಾಸ" ಈ ವಿಷಯದ ಮೇಲೆ ತಮ್ಮ ಮತ್ತೆರಡು ಬೋಧಾಮೃತದ ಮಾತುಗಳನ್ನು ಹೇಳಿದರು. ತದನಂತರ ಶ್ರೀ "   " ಗಳವರು ಆನಂದೋದ್ರೇಕದಿಂದ ಎದ್ದು ಸಭಾಸದರೊಂದಿಗೆ ಶ್ರೀ ಶಿವಯೋಗೀಶ್ವರರ ಸ್ತೋತ್ರಮಾಡಿ ತಮ್ಮ ಅಸ್ಖಲಿತವಾಣಿಯಿಂದ ಯಾವತ್ತು ವಿದ್ಯಾರ್ಥಿವೃಂದವನ್ನು ಬೋಧಾಮೃತವೆಂಬ ಸರೋವರದಲ್ಲಿ ತೇಲಾಡಿಸಿದರು. ಆಮೇಲೆ ಬಂದಂಥ ಅತಿಥಿಗಳ ಆಭಾರಮನ್ನಿಸಿ ಸಭೆಯು ಜಯಘೋಷದೊಡನೆ ವಿಸರ್ಜನೆಮಾಡಲ್ಪಟ್ಟಿತು.

Shivanagowda B. Patil.
ವ್ಯವಸ್ಥಾಪಕ (ವಿದ್ಯಾರ್ಥಿ)

ಪಾಲುಬಿಡುಗಡೆ ನೋಟಿಸ್.

ಅರ್ಸೀಕೆರೆಯಲ್ಲಿ ಮೋಡೇನಹಳ್ಳಿ ಯಂ. ಚನ್ನಬಸವಪ್ಪ, ಯಂ. ರಾಮಯ್ಯ ಎಂಬ ನಾವಿಬ್ಬರು ಜಾಯಿಂಟನಲ್ಲಿ ಮೇಲ್ಕಂಡ ಹೆಸರಿನಿಂದ ಮಂಡಿವ್ಯಾಪಾರಮಾಡುತ್ತಿದ್ದೆವು. ತಾ|| 19-12-1921 ರಲ್ಲಿ ಕಾರಣಾಂತರಗಳಿಂದ ಯಂ. ರಾಮಯ್ಯನಾದ ನಾನು ನನ್ನ ಪಾಲುದಾರ್ ಯಂ. ಚನ್ನಬಸವಪ್ಪನವರಿಗೇನೇ ಮೇಲ್ಕಂಡ ಮಂಡಿ ಆಡಳಿತಗಳೆಲ್ಲಾ ವಹಿಸಿಕೊಟ್ಟು ನಾನು ಬಿಡುಗಡೆಹೊಂದಿ ಸದರಿಯವರಿಂದ ಪಂಚಾಯಿತರ ಸಮಕ್ಷಮುಕ್ರಮವಾದ ರಶೀದಿವಗೈರೆಗಳನ್ನು ಪಡೆದಿರುತ್ತೇನಾದ್ದರಿಂದ ಮೇಲ್ಕಂಡ ತಾರೀಖು ಲಾಗಾಯ್ತು ಲೇವಾದೇವಾ ಮತ್ತು ಪ್ರತ್ಯವ್ಯವಹಾರಗಳೆಲ್ಲಾ ಸದರಿ ಯಂ. ಚನ್ನಬಸಪ್ಪನವರಿಗೆ ಸಂಬಂಧಪಟ್ಟದ್ದೆಂದು ಮತ್ತು ಎಲ್ಲಕ್ಕೂ ಅವರೇ ಜವಾಬ್ದಾರರಾಗಿದ್ದಾರೆಂದು ಈ ಮೂಲಕ ಶ್ರುತಪಡಿಸಿದ್ದೇನೆ.

ರುಜು
ಯಂ. ರಾಮೈಯ್ಯ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

೧೯೨೨ನೆಯ ಇಸವಿ ಏಪ್ರಿಲ್ ತಾ|| ೧೬ರಿಂದ ೧೯೨೨ನೆಯ ಏಪ್ರಿಲ್ ತಾ|| ೨೨ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಚೈತ್ರಬಹುಳ ಪಂಚಮಿಯಿಂದ ಚೈತ್ರಬಹುಳ ಏಕಾದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷಮಾ
16	ಭಾನು	ಪಂಚ	33-18	ಜ್ಯೇಷ್ಠ	19-8	4
17	ಸೋಮ	ಷಷ್ಠಿ	33-23	ಮೂಲ	20-34	5
18	ಮಂಗಳ	ಸಪ್ತ	34-44	ಪೂಷಾ	13-16	6
19	ಬುಧ	ಅಷ್ಟ	37-19	ಉಷಾ	27-10	7
20	ಗುರು	ನವ	41-5	ಶ್ರವ	32-13	8
21	ಶುಕ್ರ	ದಶ	45-36	ಧನಿ	38-6	9
22	ಶನಿ	ಏಕಾ	50-44	ಶತ	44-33	10

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೀಯಿಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಏಪ್ರಿಲ್ ತಾರೀಖು ೨೩ ನೆಯ ಭಾನುವಾರ (ಸಂಚಿಕೆ ೧೩

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

SREE SITHARAGHAVA
VAIDYASALA

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
15 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಪಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲಿ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 43

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ;
ಪೋಸ್ಟ್ ಬನವಾಸಿ, ಉತ್ತರಕನಡಾ.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ಮಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚೆನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗುಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
12 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾನಗ್ರಂಥ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕರತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
16 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 6



ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುರಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಏಪ್ರಿಲ್ ತಾ|| ೨೩ ನೆಯ ಭಾನುವಾರ.

ರಾಜ್ಯಾಂಗ ಸಂಸ್ಕರಣ.

ರಾಜ್ಯಾಂಗದಲ್ಲಿ ಪ್ರಜೆಗಳಿಗೆ ಇನ್ನಷ್ಟು ಹೆಚ್ಚಿನ ಅಧಿಕಾರ ಸ್ವಾತಂತ್ರ್ಯಗಳನ್ನು ಕೊಡುವ ಸಂಸ್ಕರಣಗಳನ್ನು ನಡೆಯಿಸಿಕೊಡಬೇಕೆಂದು ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ಸರ್ಕಾರಕ್ಕೆ ಬಿನ್ನಯಿಸಿಕೊಳ್ಳಲ್ಪಟ್ಟಿದ್ದಿತು. ದಿವಾನರು ಸಭೋಪಸಂಹಾರಕಾಲದಲ್ಲಿ ಮಾಡಿದ ಭಾಷಣದೊಳಗೆ ಈ ಸಂಬಂಧವಾಗಿ ನಾಲ್ಕು ಮಾತುಗಳನ್ನಾಡಿ ಶ್ರೀಮನ್ಮಹಾರಾಜರಿಗೆ ಬಿನ್ನೈಸಿ ಕೆಲವು ನೂತನ ಸಂಸ್ಕರಣಗಳನ್ನು ಏರ್ಪಡಿಸಿಕೊಡುವ ಕುತೂಹಲವನ್ನು ವ್ಯಕ್ತಪಡಿಸಿದ್ದರು. ಈಗಣ ಆಕ್ಟಿಂಗ್ ದಿವಾನರಾಗಿರುವ ಮ|| ಬಾನರ್ಜಿಯವರು ಮೊನ್ನೆತಾನೇ ನಿಯಮನಿರ್ಮಾಣಸಭೆಯಲ್ಲಿ ಭಾಷಣಮಾಡಿದಾಗ್ಗೆ ಕೆಲವು ನೂತನ ಸಂಸ್ಕರಣಗಳನ್ನು ಏರ್ಪಡಿಸುವ ವಿಷಯವಾಗಿ ಪರ್ಯಾಲೋಚಿಸುತ್ತಿದ್ದಾರೆಂದೂ, ಬ್ರಿಟಿಷ್ ಇಂಡ್ಯಾದಲ್ಲಿ ನೂತನ ಸಂಸ್ಕರಣಗಳಿಂದ ಉಂಟಾದ ಅನುಭವವನ್ನೂ ಮೈಸೂರುದೇಶದ ಪರಿಸ್ಥಿತಿಯನ್ನೂ ಅನುಸರಿಸಿ ಯಾವ ತೆರದ ಸಂಸ್ಕರಣಗಳನ್ನು ಮಾಡಿದರೆ ಅನುಕೂಲವಾಗುತ್ತವೆಂಬುದನ್ನು ಪರಿಶೀಲಿಸುತ್ತಿರುವರೆಂದೂ, ನೂತನ ಸಂಸ್ಕರಣಗಳನ್ನೇರ್ಪಡಿಸುವುದೆಂದರೆ ಮೊರಕ್ಕೆ ಸುಲಭವಾಗಿ ತೋರುವಂತೆ ಅದರ ಒಳವಿಷಯಗಳು ಸುಲಭತರವಾಗಿಲ್ಲವೆಂದೂ, ಬಹು ಕ್ಲಿಷ್ಟವಾಗಿರುವುವೆಂದೂ, ಅದು ಕಾರಣ ಈ ವಿಷಯ ಪರಿಶೀಲನದ ಭಾರವನ್ನು ಪ್ರಭುತ್ವದವರಿಗೇ ಬಿಡದೆ ಪ್ರಜೆಗಳೂ ವಹಿಸಿ ಸೂಕ್ತವಾದ ಸೂಚನೆಗಳನ್ನು ಕೊಡುವುದು ಅವಶ್ಯಕವೆಂದೂ ಹೇಳಿರುವರು. ಸಂಸ್ಕರಣದ ವಿವರಣಗಳು ಕ್ಲಿಷ್ಟವಾಗಿರಬಹುದು. ಸಂಸ್ಕರಣತತ್ವವು ನಿಜವಾದ ಪ್ರಜಾಸ್ವಾತಂತ್ರ್ಯಕ್ಕೆ ಆಧಿಕ್ಯವನ್ನು ಕೊಡಬೇಕೆಂಬುದು ನಿಶ್ಚಿತವಾಗಿದ್ದರೆ ಸಂಸ್ಕರಣ ಕಲ್ಪನೆಯೇನೂ ಕಷ್ಟವಾಗುವುದಿಲ್ಲ. ದ್ರಾವಿಡ ಪ್ರಾಣಾಯಾಮದಂತೆಯೂ, ಮಂತ್ರ ಕಡಿಮೆ ಉಗುಳು ಹೆಚ್ಚಾಗಿರುವ ಪುರೋಹಿತನ ತಂತ್ರದಂತೆಯೂ ಸಂಸ್ಕರಣಗಳು ಆದರೆ ಪ್ರಯೋಜನವೇನೂ ಇಲ್ಲ. ಮುಖ್ಯವಾಗಿ ಪ್ರಜೆಗಳಿಗೆ ಆರ್ಥಿಕಸ್ವಾತಂತ್ರ್ಯವು ಬರಬೇಕು. ಸಂಪಾದಿಸಿಕೊಡುವುದಕ್ಕೆ ಮಾತ್ರ ಪ್ರಜೆಗಳು, ಅದನ್ನು ಮನಸ್ಸುಬಂದಂತೆ ವೆಚ್ಚಮಾಡುವುದಕ್ಕೆ ಮಾತ್ರ ಸರ್ಕಾರದ ಅಧಿಕಾರಿಗಳು ಆಗಿದ್ದುಕೊಂಡು ಎಷ್ಟು ತೆರದ ನೂತನ ಸಂಸ್ಕರಣ ವರದಾನಮಾಡಿದರೂ ಪ್ರಯೋಜನವೇನೂ ಆಗುವುದಿಲ್ಲ. ಬಜೆಟ್ಟಿನ ಮೇಲೆ ರೆಜಲ್ಯೂಷನ್ ಮಾಡುವ ಅಧಿಕಾರವು ಪ್ರಜಾಪ್ರತಿನಿಧಿಗಳಿಗೆ ಬರಬೇಕು. ಪ್ರತಿನಿಧಿಗಳ ತಿಳಿವಿಕೆಗೆ ಬಂದು ಅವರು ಒಪ್ಪದ ಹೊರತು ಯಾವುದೊಂದು ದೊಡ್ಡ ವೆಚ್ಚದ ಬಾಬುಗಳು ಸರ್ಕಾರದಿಂದ ಸ್ವತಂತ್ರಿಸಿ ನಡೆಯಿಸಲ್ಪಡದಂತೆ ಆಗಬೇಕು. ಅಂಥ ಏರ್ಪಾಟು ಇದುವರೆಗೇ ಉಂಟಾಗಿದ್ದರೆ ಈಗ ಉಂಟಾಗಿರುವಂಥ ೩|| ಕೋಟಿ ರೂ.ಗಳ ಸಾಲದ ಭಾರವೂ ಇತರ ಆರ್ಥಿಕ ಸಂಕಷ್ಟಗಳೂ ಸರ್ಕಾರಕ್ಕೆ ಸಂಭವಿಸುತ್ತಲೇ ಇರಲಿಲ್ಲ. ಇದನ್ನು ಲಕ್ಷಿಸಿ ಪ್ರಜೆಗಳೂ ದೃಢವಾದ ಕೋರಿಕೆಯನ್ನು ಪ್ರಭುತ್ವದವರಿಗೆ ನಿವೇದಿಸುವುದಲ್ಲದೆ ಪ್ರಭುತ್ವದವರೂ ಕೂಡ ಪ್ರಜೆಗಳ ಮೇಲೆ ನಿಜವಾದ ಔದಾರ್ಯವನ್ನು ತೋರಿಸಿ ಸಂಕುಚಿತವಲ್ಲದ ಸಂಸ್ಕರಣಗಳನ್ನು ಕೊಟ್ಟು ಇತರ ಸಂಸ್ಥಾನಗಳಿಗೂ ಕಡೆಗೆ ಭಾರತ ಪ್ರಭುತ್ವಕ್ಕೂ ಮಾರ್ಗದರ್ಶಕರೆನ್ನಿಸಿಕೊಳ್ಳುವ ಕೀರ್ತಿಯನ್ನು ಸಂಪಾದಿಸಿಕೊಳ್ಳುವವರಾಗಲೆಂದು ಕೋರುತ್ತೇವೆ.

ಯೂರೋಪುಖಂಡದ ರಾಜಕೀಯ ಸಭೆಗಳು.

ಪ್ರಪಂಚದಲ್ಲಿ ಶಾಂತಿಸ್ಥಾಪನೆ ಮಾಡುವುದಕ್ಕೆಂದು ಯೂರೋಪುಖಂಡದ ಪ್ರಭುತ್ವಗಳವರು ಪಡುತ್ತಿರುವ ತಾಪತ್ರಯಗಳಿಗೆ ಕೊನೆಮೊದಲಿಲ್ಲ. ಯುದ್ಧಮುಗಿದ ನಂತರ ಮೊಟ್ಟಮೊದಲು ನಾನಾ ರಾಷ್ಟ್ರೀಯಸಭೆಯೆಂಬುದನ್ನು ಏರ್ಪಡಿಸಿದರು. ಅದರ ಫಲವು ವಾಗಾಡಂಬರದಲ್ಲಿ ಮಾತ್ರ ಪರ್ಯವಸನ್ನವಾಗಿದೆ. ಅದಲ್ಲದೆ ೮-೧೦ ಸಭೆಗಳು ಜರುಗಿರುವುವು. ಅವೆಲ್ಲಾ ನಿಷ್ಫಲವೆಂದೂ ಲಾಯಿಡ್ ಜಾರ್ಜರವರ ಪ್ರಹಸನವೆಂದೂ ಮಿ|| ಆಸ್ಕ್ವಿತ್‌ರವರು ಪರಿಹಾಸಮಾಡುತ್ತಿದ್ದಾರೆ. ವಾಷಿಂಗ್‌ಟನ್ ಪಟ್ಟಣದಲ್ಲಿ ಸಮುದ್ರಸೈನ್ಯವನ್ನು ಸ್ಥಿಮಿತಗೊಳಿಸುವ ಕೆಲಸವೇನೋ ಆಗಿದೆ. ಈಗ ಜಿನೀವಾಪಟ್ಟಣದಲ್ಲಿ ಭೂಸೈನ್ಯವನ್ನು ಸ್ಥಿಮಿತಗೊಳಿಸುವ ಉದ್ದೇಶಕ್ಕೆಂದು ಒಂದು ಸಭೆಯು ಕೂಡಿಸಲ್ಪಟ್ಟು ನಡೆಯುತ್ತಿದೆ. ಇದಕ್ಕೆ ಅಮೇರಿಕಾ ಪ್ರತಿನಿಧಿಗಳು ಬಂದಿಲ್ಲ. ಬೋಲ್ಷೆವಿಕ್ ಪ್ರಭುತ್ವವನ್ನು ನಾಗರೀಕ ಪ್ರಭುತ್ವಕೋಟಿಯಲ್ಲಿ ನಾವು ಗಣಿಸುವುದಿಲ್ಲವೆಂದು ಯಾವ ಮಿತ್ರಮಂಡಲಿಯವರು ಹಿಂದೆ ಹೇಳುತ್ತಿದ್ದರೋ ಅವರೇ ಈಗ ರಷ್ಯಾಪ್ರಭುತ್ವದವರಿಗೆ ಈ ಸಭೆಗೆ ಆಹ್ವಾನವನ್ನು ಕೊಟ್ಟು ಅವರ ಪ್ರತಿನಿಧಿಗಳನ್ನು ಬರಮಾಡಿಕೊಂಡಿದ್ದಾರೆ. ಉಳಿದ ಯೂರೋಪ್ಯ ರಾಷ್ಟ್ರಗಳ ಎಲ್ಲ ಪ್ರತಿನಿಧಿಗಳೂ ಜರ್ಮನ್ ಪ್ರತಿನಿಧಿಯೂ ಸಹ ಸೇರಿದ್ದಾರೆ. ಆದರೇನು ನಡೆಯುತ್ತಿರುವ ಚರ್ಚೆಗಳನ್ನು ನೋಡಿದರೆ ಆಸ್ಕ್ವಿತ್‌ರವರ ಮಾತೇ ನಿಜವಾಗುವಂತೆ ತೋರುತ್ತಿದೆ. ನಿಮ್ಮ ಸೈನ್ಯವನ್ನು ಇಷ್ಟೇ ಕ್ಲುಪ್ತಪಡಿಸಬೇಕೆಂದು ಮಿತ್ರಮಂಡಲಿಯವರು ರಷ್ಯಾಪ್ರತಿನಿಧಿಗಳಿಗೆ ತಿಳಿಸಲು, ಯೂರೋಪು ರಾಜ್ಯಗಳವರು ತಮ್ಮ ರಷ್ಯಾದೇಶದ ಮೇಲೆ ಯಾವಾಗ್ಗೂ ದಂಡೆತ್ತಿಬರುವುದಿಲ್ಲವೆಂಬ ಷರ್ತಕ್ಕೆ ಹೊಣೆಕೊಟ್ಟರೆ ನಾವು ಹಾಗೆಯೇ ಸೈನ್ಯವನ್ನು ಕಡಿಮೆಹಾಕುತ್ತೇವೆಂದು ರಷ್ಯನರು ಉತ್ತರಕೊಟ್ಟರು. ಈಗ ಆರ್ಥಿಕವಿಷಯದ ಚರ್ಚೆ ನಡೆಯುತ್ತಿದೆ. ಮಿತ್ರರಾಷ್ಟ್ರದವರಿಗೆ ರಷ್ಯನರು ಸಲ್ಲಿಸಬೇಕಾದ ಹಿಂದಣ ಋಣವನ್ನೆಲ್ಲಾ ತೀರಿಸಿಬಿಡಬೇಕೆಂದು ಇವರುಗಳು ಒಂದು ಪ್ರಶ್ನೆಯನ್ನು ಹಾಕಿದರು. ಅದಕ್ಕೆ ರಷ್ಯನರು ನಮಗೇ ಮಿತ್ರಮಂಡಲಿಯವರು ಋಣವನ್ನು ತೀರಿಸಬೇಕಾದವರಾಗಿದ್ದಾರೆಂದು ಅವರು ಉತ್ತರಕೊಟ್ಟರು. ಹೀಗೆನ್ನುವುದರಲ್ಲಿ ಅವರ ಅಭಿಪ್ರಾಯವೇನೆಂದರೆ ರಷ್ಯಾದೇಶದ ಮೇಲೆ ಜರ್ಮನಿಯೇ ಮೊದಲಾದವರೂ ಮಿತ್ರರಾಷ್ಟ್ರದವರೂ ಹಿಂದೆ ನಡೆಯಿಸಿದ ದಾಳಿಗಳಿಂದ ಉಂಟಾಗಿರುವ ನಷ್ಟವು ಮಿತ್ರಮಂಡಲಿಗೆ ತಾವು ತೆರಬೇಕಾಗಿರುವ ನಷ್ಟಕ್ಕಿಂತಲೂ ಮಿಗಿಲಾಗಿರುವುದೆಂದು ಅವರ ಲೆಕ್ಕ. ಈ ಪ್ರಕಾರವಾದ ರಷ್ಯನ್ ಚಾತುರ್ಯಗಳನ್ನು ನೋಡಿ ಮಿತ್ರಮಂಡಲಿಯವರು ಬೆರಳುಕಚ್ಚಿಕೊಳ್ಳುವಂತಾಗಿದೆ. ರಷ್ಯಾದ ಕಡೆಯಿಂದ ಪ್ರತಿನಿಧಿಗಳಾಗಿ ಬಂದಿರುವ ಚಿಚೆರನ್, ಕ್ರಾಸಿನ್ ಎಂಬುವವರ ಆರ್ಥಿಕ ವಿಷಯಕವಾದ ಚರ್ಚೆಯು ಅತ್ಯದ್ಭುತವಾಗಿದ್ದಿತಂತೆ. ಇಷ್ಟು ಮಟ್ಟಿಗೆ ರಷ್ಯನ್ ಪ್ರತಿನಿಧಿಗಳು ಸಕಾರಣವಾಗಿ ವಾದಪ್ರತಿವಾದಗಳನ್ನು ನಡೆಯಿಸುವರೆಂದು ಲಾಯಿಡ್ ಜಾರ್ಜರೇ ಮೊದಲಾದವರು ಸ್ವಪ್ನದಲ್ಲೂ ಸ್ಮರಿಸಿರಲಿಲ್ಲ. ಯುದ್ಧದಿಂದ ಸಂಭವಿಸಿದ ನಷ್ಟವನ್ನು ನಾವು ಅಂಗೀಕರಿಸುವುದಿಲ್ಲವೆಂದು ಲಾಯಿಡ್ ಜಾರ್ಜರು ಖಂಡಿತವಾಗಿ ನುಡಿದುದಲ್ಲದೆ, ಹಿಂದೆ ಮಿತ್ರಮಂಡಲಿಗೆ ಸಲ್ಲಿಸಬೇಕಾದ ಋಣವನ್ನು ಈಗಲೇ ಸಲ್ಲಿಸಬೇಕೆಂದು ನಾವು ಕೇಳುವುದಿಲ್ಲವೆಂದೂ, ಆದರೆ ರಷ್ಯಾವು ಮಿತ್ರಮಂಡಲೀ ಋಣಬದ್ಧವಾಗಿದೆಯೆಂಬುದಿಷ್ಟೇ ನಮ್ಮಭಿಪ್ರಾಯವೆಂತಲೂ ಅದಕ್ಕಂಗೀಕರಿಸಬೇಕೆಂತಲೂ ಲಾಯಿಡ್ ಜಾರ್ಜರು ಹೇಳಲು, ತಾವೂ ಕೂಡ ತಮ್ಮ ನಷ್ಟವನ್ನು ಈಗಲೇ ಸಲ್ಲಿಸಬೇಕೆಂದು ಯೂರೋಪು ರಾಷ್ಟ್ರದವರನ್ನು ಕೇಳುವುದಿಲ್ಲವೆಂತಲೂ, ರಷ್ಯಾಕ್ಕೆ ಅವರು ಋಣಬದ್ಧರು ಎಂದಿದ್ದರೆ ಸಾಕೆಂತಲೂ ರಷ್ಯನರು ಉತ್ತರಕೊಟ್ಟಿರುವರು. ಹೀಗೆ ಸೇರಿಗೆ ಸವಾಸೇರು ಎನ್ನುವಂತೆ ವಾಗ್ವಾದಗಳು ನಡೆಯುತ್ತಿರುವುವು. ಪರ್ಯವಸಾನವು ಇಷ್ಟರಲ್ಲೇ ಗೊತ್ತಾಗುವುದು.

ಅತ್ತ ಲಾರ್ಡ್ ಕರ್ಜನರು ಪ್ಯಾರಿಸ್ಸಿನಲ್ಲಿ ಕೂಡಿ ನಡೆಯಿಸಿದ ಸಭೆಯಲ್ಲಿ ತುರ್ಕಿಸಮಸ್ಯಾ ಪರಿಷ್ಕಾರದ ವಿಷಯದಲ್ಲಿ ಸೂಚಿಸಿದ ನಿಬಂಧನೆಗಳು ತುರುಷ್ಕಪ್ರಪಂಚಕ್ಕೆ ಸಮ್ಮತವಾಗಿಲ್ಲವೆಂಬುದು ಕಂಡೇಯಿದೆ. ತಾತ್ಕಾಲಿಕ ಸಂಧಿವಿಷಯದಲ್ಲಿ ಅಂಗೋರಾ ಗ್ರೀಕರ ನಡವಳಿಕೆಯನ್ನು ಕುರಿತು ಮಾಡಿದ್ದ ಸೂಚನೆಗಳಿಗೂ ಕೂಡ ಅಂಗೋರಾ ಪ್ರಭುತ್ವದವರು ಒಪ್ಪಲಿಲ್ಲ. ಅವರು ಸೂಚಿಸಿದ ನಿಯಮಗಳಿಗೆ ಮಿತ್ರಮಂಡಲಿಯು ಒಪ್ಪಲಿಲ್ಲ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರು ತಮ್ಮಲ್ಲೊಬ್ಬರನ್ನು ಪ್ರೆಸಿಡೆಂಟರನ್ನಾಗಿ ಆರಿಸಿಕೊಳ್ಳುವುದು.

ಈ ವಿಷಯವನ್ನೂ ಮತ್ತೆರಡು ವಿಷಯಗಳನ್ನೂ ಚರ್ಚಿಸುವುದಕ್ಕಾಗಿ ಮ್ಯು|| ಕೌನ್ಸಿಲಿನ ಒಂದು ಸ್ಪೆಷಲ್ ಮೀಟಿಂಗು ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರ ಅಧ್ಯಕ್ಷತೆಯಲ್ಲಿ ಕಳೆದ ತಾ|| ೧೯ರ ಸಾಯಂಕಾಲ ೫|| ಗಂಟೆಯಲ್ಲಿ ಸೇರಿದ್ದಿತು. ಅಧ್ಯಕ್ಷರು ಸಹಿತ ಒಟ್ಟು ೨೨ ಮೆಂಬರುಗಳು ಬಂದಿದ್ದರು. ಮ|| ಪುರುಷೋತ್ತಮಾನಂದಗಿರಿ ಗೋಸ್ವಾಮಿಯವರು ನಮ್ಮ ಮೈಸೂರು ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರನ್ನು ಸರ್ಕಾರದವರೇ ನಿಯಮಿಸುವುದನ್ನು ಬಿಟ್ಟು ಕೌನ್ಸಿಲಿನವರೇ ತಮ್ಮಗಳಲ್ಲೊಬ್ಬರನ್ನು ಆರಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂದು ನಮ್ಮ ಘನಸರ್ಕಾರದವರನ್ನು ಬಹಳ ವಿಧೇಯತೆಯಿಂದ ಪ್ರಾರ್ಥಿಸಿಕೊಳ್ಳಬೇಕೆಂಬ ಸೂಚನೆಯನ್ನು ತಂದಾಗ್ಗೆ ಖಾನ್ ಸಾಹೇಬ್ ಮಿ|| ಪಾಲಂಜಿ ಸೇಟರು "ಅವಸರವಸರದಲ್ಲಿ ಈ ಸ್ಪೆಷಲ್ ಮೀಟಿಂಗನ್ನು ನಡಿಸಿ ಬಹಳ ಪ್ರಾಮುಖ್ಯವಾದ ಪ್ರೆಸಿಡೆಂಟರನ್ನು ಆರಿಸುವಿಕೆಯ ವಿಚಾರವನ್ನು ಕುರಿತು ಚರ್ಚಿಸಬೇಕಾದ ಅವಶ್ಯಕತೆ ಏನಿದ್ದಿತೋ ನನಗೆ ತಿಳಿಯಲಿಲ್ಲವು. ಈ ಸ್ಪೆಷಲ್ ಮೀಟಿಂಗು ನಡೆಯುತ್ತದೆಂಬುದು ಮುಂದಾಗಿ ತಿಳಿಯಲಿಲ್ಲವಾದುದರಿಂದ ನಾನು ಪರಸ್ಥಳಕ್ಕೆ ಹೋಗಿದ್ದು ನೆನ್ನೆಯದಿನ ಬಂದೆನು. ರೈ|| ಎಡ್ವರ್ಡ್‌ರವರು ಸಹ ಊರಲ್ಲಿಲ್ಲ. ಅಲ್ಲದೆ ಈ ಮೀಟಿಂಗು ನಡೆಯುವ ವಿಚಾರವು ಎಲ್ಲ ಮೆಂಬರುಗಳ ಗಮನಕ್ಕೂ ತರಲ್ಪಟ್ಟಿಲ್ಲ. ಅದುಕಾರಣ ಈ ಮೀಟಿಂಗು ಸಕ್ರಮವಾದುದಲ್ಲವಾದುದರಿಂದ ಘನತರವಾದ ವಿಚಾರವು ಈ ದಿವಸ ಚರ್ಚಿಸಲ್ಪಡಕೂಡದೆಂದು ನಾನು ನಿಷೇಧಿಸುತ್ತೇನೆ" ಎಂದು ವಾದಿಸಿದರು.

ಅದರ ಮೇಲೆ ಮ|| ಗೋಸ್ವಾಮಿಯವರು—ಖಾನ್ ಸಾಹೇಬ್ ಪಾಲಂಜಿಯವರು ಈ ಸ್ಪೆಷಲ್ ಮೀಟಿಂಗನ್ನು ನಡಿಸುವುದು ನ್ಯಾಯಸಮ್ಮತವಾಗಿಲ್ಲವೆಂದು ಹೇಳುವಲ್ಲಿ ಈ ಮೀಟಿಂಗು ನಡೆಯಬೇಕೆಂದು ಅಪೇಕ್ಷಿಸಿರುವ ಮೆಂಬರುಗಳ ಮನಸ್ಸಿಗೆ ಖೇದಕರವಾದ ಶಬ್ದಗಳನ್ನು ಪ್ರಯೋಗಿಸಿರುತ್ತಾರೆ. ಇದನ್ನು ಪ್ರೆಸಿಡೆಂಟರು ಪರ್ಯಾಲೋಚಿಸಬೇಕೆಂದೂ ಮ್ಯುನಿಸಿಪಲ್ ರೆಗ್ಯುಲೇಷನ್ ೨೭ನೆಯ ಸೆಕ್ಷನ್ ಪ್ರಕಾರ ಈ ಮೀಟಿಂಗು ನೆರೆಯಿಸಲ್ಪಟ್ಟಿದೆ ಎಂದೂ ಹೇಳಿದರು. ಆಗ ಪ್ರೆಸಿಡೆಂಟರು, ಮಿ|| ಪಾಲಂಜಿಯವರು ಆಡಿದ ಮಾತಿನಲ್ಲಿ ಯಾರಿಗೂ ಖೇದವಾಗುವಂತಿಲ್ಲವು; ಈ ಮೀಟಿಂಗಿನ ವಿಚಾರವು ಬಹಳ ಜನ ಕೌನ್ಸಿಲರಿಗೆ ತಿಳಿಯಲಿಲ್ಲವಾಗಿ ಅವರುಗಳು ಬರಲಶಕ್ಯವಾಗಲಿಲ್ಲವು ಎಂಬುದು ಅವರಭಿಪ್ರಾಯವು ಎಂದು ಚಮತ್ಕಾರವಾಗಿ ಸಮಾಧಾನವನ್ನು ಹೇಳಿದರು. ಕೊಂಚಕಾಲ ವಾದಪ್ರತಿವಾದಗಳು ನಡೆದು ಕಡೆಗೆ ಮಿ|| ಪಾಲಂಜಿಯವರು "ಮೀಟಿಂಗನ್ನು ನಡಿಸುವ ವಿಚಾರದಲ್ಲಿ ನನಗುಂಟಾದ ಸಂಶಯವನ್ನು ಪ್ರೆಸಿಡೆಂಟರಿಗೆ ತಿಳಿಸಿದೆನಲ್ಲದೆ ಯಾವಮೆಂಬರ ಮನಸ್ಸಿಗೂ ಖೇದವನ್ನುಂಟುಮಾಡಬೇಕೆಂದು ಹೇಳಿದುದಲ್ಲವು" ಎಂದು ಸಮಾಧಾನ ಹೇಳಿದುದರಮೇಲೆ ಆ ಚರ್ಚಾಸ್ಪದವಾದ ವಿಷಯವು ಅಲ್ಲಿಗೇ ಬಿಡಲ್ಪಟ್ಟು ಮಿ|| ಗೋಸ್ವಾಮಿಯವರಿಂದ ಸೂಚಿತವಾದ ವಿಷಯವು ವಿಮರ್ಶೆಗೆ ತೆಗೆದುಕೊಳ್ಳಲ್ಪಟ್ಟಿತು. ಆಗ ಮ|| ವೈ. ವಿರೂಪಾಕ್ಷಯ್ಯನವರು ಆ ಸೂಚನೆಗೆ ತಮ್ಮ ಅನುಮೋದನೆಯನ್ನು ಕೊಡುವಾಗ್ಗೆ ಕೌನ್ಸಿಲರುಗಳು ತಮ್ಮಲ್ಲೊಬ್ಬರನ್ನು ವೈಸ್‌ಪ್ರೆಸಿಡೆಂಟರನ್ನಾಗಿ ಆರಿಸಿಕೊಳ್ಳುವ ಅಧಿಕಾರವು ಸರ್ಕಾರದವರಿಂದ ಕೊಡಲ್ಪಟ್ಟಿರುವಂತೆಯೂ, ಬೆಂಗಳೂರು, ತುಮಕೂರು ಮತ್ತು ಚಿಕ್ಕಮಗಳೂರು ಮ್ಯುನಿಸಿಪಾಲಿಟಿಗಳಿಗೆ ಪ್ರೆಸಿಡೆಂಟರನ್ನು ಆರಿಸಿಕೊಳ್ಳುವ ಅಧಿಕಾರವು ಕೊಡಲ್ಪಟ್ಟಿರುವಂತೆಯೂ ರಾಜಧಾನಿಯ ಮ್ಯುನಿಸಿಪಾಲಿಟಿಗೆ ಪ್ರೆಸಿಡೆಂಟರನ್ನು ಆರಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂದು ಘನ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾದ ಆವಶ್ಯಕತೆಯನ್ನು ತಿಳಿಸಿದರು. ಅನಂತರ ಮ|| ಬಿ. ಬಸವಾರಾಧ್ಯರು ಅದೇ ವಿಚಾರವನ್ನು ಬಹಳ ಯುಕ್ತಿಯುಕ್ತವಾಗಿ ಪುಷ್ಟೀಕರಿಸಿ ಮಾತನಾಡಿದರು. ಆಮೇಲೆ ಮಿ|| ಪಾಲಂಜಿಯವರೆದ್ದು ರಾಜಧಾನಿಯ ಮ್ಯುನಿಸಿಪಾಲಿಟಿಯು ಇತರ ಮ್ಯುನಿಸಿಪಾಲಿಟಿಗಳಂತೆ ಸಾಮಾನ್ಯವಾಗಿರದೆ ಬಹಳ ಜವಾಬ್ದಾರಿಯುಳ್ಳದ್ದಾಗಿರುವುದರಿಂದಲೂ ಈ ಅಧಿಕಾರವನ್ನು ನಿರ್ವಹಿಸಿಕೊಳ್ಳುವಷ್ಟು ಚೈತನ್ಯವು ಇನ್ನೂ ಉಂಟಾಗಿರುವುದಿಲ್ಲವೆಂಬುದು ಬೆಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಈಚೆಗೆ ನಡೆದ ವಿದ್ಯಮಾನದಿಂದ ನಿದರ್ಶನಕ್ಕೆ ಬಂದಿರುವುದರಿಂದಲೂ ನಾವು ಈ ರಾಜಧಾನಿಯ ಮ್ಯುನಿಸಿಪಾಲಿಟಿಗೆ ಅಂತಹ ಅಧಿಕಾರವನ್ನು ಪಡೆದುಕೊಳ್ಳುವ ಅರ್ಹತೆಯುಂಟಾಗಿಲ್ಲವೆಂದೂ ತಮ್ಮ ನಿಷೇಧಾಭಿಪ್ರಾಯವನ್ನು ಕೊಟ್ಟುದರಮೇಲೆ ಓಟಿಗೆ ಹಾಕಲ್ಪಟ್ಟಿತು. ಆಗ ಮ|| ಗಳಾದ ಪಿ. ಎಸ್. ಅನಂತರಾಯರು, ಮಹಮದ್ ಜಾಫರ್‌ಸಾಹೇಬರು, ಎಂ. ಎಲ್. ವಾಸುದೇವಯ್ಯನವರು, ಎಂ. ಕೆ. ಮಾಧವರಾಯರು, ಕೆ. ಧನಕೋಟಿಸೆಟ್ಟರು, ಶ್ರೀಕಂಠಾಚಾರರು, ಎಂ. ಮಾದಪ್ಪನವರು, ಎಂ. ನಾರಾಯಣಸ್ವಾಮಿಯವರು, ಮಹಮದ್ ಸೇಟರವರು, ವೈ. ವಿರೂಪಾಕ್ಷಯ್ಯನವರು, ಪುರುಷೋತ್ತಮಾನಂದಗಿರಿ ಗೋಸ್ವಾಮಿಯವರು, ಬಿ. ಮುನಿವೆಂಕಟಪ್ಪನವರು, ಟೀಪುಸುಲ್ತಾನ್ ಅಲ್ಲಿಖಾನರವರು, ಸೆಟ್ಟೋಜಿರಾಯರು, ಲಿಂಗೋಜಿರಾಯರು, ಡಾಕ್ಟರ್ ಸಿದ್ದಪ್ಪನವರು, ಧರ್ಮಪ್ರವರ್ತಕ ಬನುಮಯ್ಯನವರು ಮತ್ತು ಬಿ. ಬಸವಾರಾಧ್ಯರು, ಈ ೧೮ ಜನರು ಅನುಕೂಲವಾಗಿ ಓಟನ್ನು ಕೊಟ್ಟರು. ಮ|| ಗಳಾದ ಅಣ್ಣಯ್ಯಪಂಡಿತರೂ, ಚಿಕ್ಕಲಿಂಗಸ್ವಾಜಿ ಅರಸಿನವರೂ ಬೇಡವೆಂದಾಗಲಿ ಬೇಕೆಂದಾಗಲಿ ಓಟನ್ನು ಕೊಡದೆ ಮೌನವಾಗಿದ್ದರು. ಆದರೆ ಮಿ|| ಪಾಲಂಜಿಸೇಟರು ಮಾತ್ರ ಪ್ರತಿಕೂಲವಾಗಿ ಕೊಟ್ಟರು. ಹೀಗೆ ಬಹುಸಮ್ಮತಿಯು ಬಂದುದರಮೇಲೆ "ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರು ಇತಃಪರಃ ತಮ್ಮ ಮೆಂಬರುಗಳಲ್ಲಿಯೇ ಒಬ್ಬರನ್ನು ಪ್ರೆಸಿಡೆಂಟರನ್ನಾಗಿ ಆರಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕಾಗಿ ದಯಾಳು ಸರಕಾರದವರನ್ನು ಬಹು ವಿನಯದಿಂದ ಪ್ರಾರ್ಥಿಸಿಕೊಳ್ಳಬೇಕು" ಎಂದು ನಿರ್ಧಾರಮಾಡಲ್ಪಟ್ಟು ಉಳಿದ ವಿಚಾರಗಳ ಚರ್ಚೆಯು ಮುಂದೆಬರುವ ಬಡ್ಜೆಟ್ ಮೀಟಿಂಗಿನಲ್ಲಿ ನಡಿಯತಕ್ಕುದೆಂದು ತೀರ್ಮಾನಿಸಲ್ಪಟ್ಟಿತು.

ಭಾರತೀಯರು ಸ್ವರಾಜ್ಯಪ್ರಾಪ್ತಿಗಾಗಿ ಹೋರಾಡುತ್ತಿರುವಾಗ್ಗೆ ಮತ್ತು ನಮ್ಮ ಸಂಸ್ಥಾನದ ರಾಜ್ಯಾಂಗದಲ್ಲಿ ಪ್ರಜೆಗಳಿಗೆ ಹೆಚ್ಚು ಅಧಿಕಾರ ಸ್ವಾತಂತ್ರ್ಯವಿರುವಂತೆ ಕೆಲ ಸುಧಾರಣೆಗಳನ್ನು ಮಾಡಿಕೊಡಬೇಕೆಂದು ಪ್ರಜಾಪ್ರತಿನಿಧಿಗಳು ಸರ್ಕಾರದವರನ್ನು ಪ್ರಾರ್ಥಿಸುತ್ತಿರುವಾಗ್ಗೆ ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟ್ ಉದ್ಯೋಗವನ್ನು ನಿರ್ವಹಿಸುವಷ್ಟು ಅರ್ಹತೆಯು ಇಲ್ಲಿಯ ಕೌನ್ಸಿಲರುಗಳಿಗಿಲ್ಲವಾದುದರಿಂದ ತಮ್ಮಲ್ಲೊಬರನ್ನು ಪ್ರೆಸಿಡೆಂಟರನ್ನಾಗಿ ಮಾಡಿಕೊಳ್ಳುವ ಅಧಿಕಾರವನ್ನು ಅಪೇಕ್ಷಿಸಬಾರದೆಂದು ಮಿ|| ಪಾಲಂಜಿಯವರು ವಾದಿಸಿದುದು ಸಖೇದಾಶ್ಚರ್ಯವಾಗಿರುವುದಲ್ಲದೆ ಪರಪ್ರೇರಣೆಯಿಂದಿರಬಹುದೆಂದು ತೋರುತ್ತದೆ. ಇದೂ ಅಲ್ಲದೆ ಆ ದಿವಸದ ಮೀಟಿಂಗಿನಲ್ಲಿ ಪ್ರೆಸಿಡೆಂಟರು ಮಿ|| ಪಾಲಂಜಿಯವರ ಪಕ್ಷವನ್ನು ವಹಿಸಿ ಮಾತನಾಡಿದುದೂ, ಮೆಂಬರುಗಳು ಮಾತನಾಡುವಾಗ್ಗೆ ಹದ್ದನ್ನು ಮೀರಿ ಮಾತನಾಡುತ್ತೀರಿ (out of order) ಎಂದು ಪದೇ ಪದೇ ಹೇಳಿ ತಮ್ಮ ಅಸಮಾಧಾನವನ್ನು ಪ್ರಕಾಶಗೊಳಿಸುತ್ತಿದ್ದುದೂ ನಿಗೂಢಕಾರಣವಾಗಿದ್ದಿತು. ರಾಜಧಾನಿಯಂಥ ಪ್ರಮುಖಸ್ಥಲದ ಮ್ಯುನ್ಸಿಪಾಲಿಟಿಗೆ ಎಲೆಕ್ಟೆಡ್ ಪ್ರೆಸಿಡೆಂಟರಿಲ್ಲವೆನ್ನುವುದು ಸಂಸ್ಥಾನದ ಗೌರವಕ್ಕೆ ಚ್ಯುತಿ.

THE VILLAGE OFFICERS IN MYSORE.

In reply to a question put by Mr. A. Ananthiah Chetty of Chitaldrug in the Legislative Council, Government were pleased to State that they are not aware of the practice of many of the Shanbogues collecting revenue in contravention of the Revenue Rules. They further stated that they

were not also aware of any instances in which *Gumastas* have been allowed to act in the place of Shanbogues registered as such, and of instances where the Shanbogues have been living outside their respective *firkas* or circles. We wonder how Government could have been kept ignorant of the above circumstances, which are within the knowledge of every Revenue officer from Shekdar upwards, unless the authorities concerned have purposely avoided to bring them to the notice of Government. We had occasion to publish more than one correspondence in our columns on the subject particularly with a view to attract the attention of Government to the irregularities which are very rampant in the country, but we regret much that the above attempt of ours had not the desired effect.

There is so much of laxity in enforcement of Revenu rules relating to the conduct of these village officers, that they resent the exercise of any little control over them by their superior officers. By way of illustration we may quote here the instance of Channapatna Taluk. When many instances of defalcation were brought to the notice of the Amaldar by the people of that Taluk, he is said to have set himself earnestly to enquire into the matter. He called upon the Shanbogues to submit *Kulawar baki and Hisse Patties* (ಕುಳವಾರು ಬಾಕಿಪಟ್ಟಿ ಮತ್ತು ಹಿಸ್ಸೆಪಟ್ಟಿ), which are nothing but list showing the balance of revenue against each individual and the names of individuals who possess different shares in particular survey numbers. Any one can see that the above information was called for duly with a view to verify the various allagations made against the Shanbogues. They at once revolted and refused to furnish the required information. They seem to have also marched on a deputation to the Revenue Commissioner to protest against the action of the Amaldar. We are not yet aware of any order having been passed by the Revenue Commissioner, but the public is anxious to know what it would be.

We would urge on the attention of the Government the great importance of this question on the solution of which depends greatly the peace and the even progress of the country. It is a notorions fact that the illegetimate retention of all the facts relating to the right, title and interest of the landholders in the hands of the Shanbogues to the exclusion of the legitmate right of the Patels is the primary cause of so much of civil and criminal disputes, and the source of infinite hardships to the villagers. We cannot deny that any attempt to put an end to this evil will meet with some amount of opposition by the Shaubnogues in whose interest it is to perpetuate it, but the Government will, it is earnestly hoped, go into the matter carefully and without further loss of time redress this grave and long-standing grievance of the people.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಡಿಸ್ಟ್ರಿಕ್ಟ ಡಿ|| ಕಮಿಷನರ್ ಮ|| ಎಂ. ಎ. ನಾರಾಯಣಯ್ಯಂಗಾರರ ರಜವು ಇನ್ನೂ ೬ ತಿಂಗಳಿಗೆ ಹೆಚ್ಚಿಸಲ್ಪಟ್ಟಿದೆ.

ಮೈಸೂರು ಆರ್ಥಿಕ ಸಂಘದ ಮೆಂಬರುಗಳೂ ಸಭಾಧ್ಯಕ್ಷರೂ ಸಹ ತಾವು ಮಾಡಿದ ಕೆಲಸಕ್ಕೆ ಅಲೋಯನ್ಸೇನೂ ಅವಶ್ಯವಿಲ್ಲವೆಂದು ಸರ್ಕಾರಕ್ಕೆ ಬರೆದಿರುವರೆಂದು ಪ್ರಕಟವಾಗಿರುವ ಸುದ್ದಿಯು ನಿಜವೆ?

ದಿವಾನ್ ಮ|| ಬಾನರ್ಜಿಯವರು ಈ ದಿವಸ ಬೆಳಗ್ಗೆ ರಾಜಧಾನಿಗೆ ಬರುವುದಾಗಿ ನಿರೀಕ್ಷಿಸಲ್ಪಟ್ಟಿದ್ದಿತು. ಮತ್ತು ಇವರು ತಾ|| ೨೪ರಲ್ಲಿ ಶ್ರೀಮನ್ಮಹಾರಾಜರವರ ಕೂಡ ಸಿಮ್ಲಾಪಟ್ಟಣಕ್ಕೆ ಹೋಗುವುದಾಗಿಯೂ, ಅವರು ಬರುವವರೆಗೂ ಒಂದನೆಯ ಕೌನ್ಸಿಲರು ದಿವಾನರುದ್ಯೋಗವನ್ನು ನೋಡುವುದಾಗಿಯೂ ಕೇಳುತ್ತೇವೆ.

ಕೋಲಾರ ಚಿನ್ನದ ಗಣಿಯ ಸ್ಪೆಷಲ್ ಮೇಜಿಸ್ಟ್ರೇಟರಾದ ಮ|| ಕೆ. ವಿ. ಅನಂತರಾಮನ್‌ರವರನ್ನು ಆಕ್ಟಿಂಗ್ ದಿವಾನರವರು ತಮ್ಮ ಪ್ರೈವೆಟ್ ಸೆಕ್ರೆಟರಿಯನ್ನಾಗಿ ಮಾಡಿಕೊಂಡರು. ಹಾಸನ ಡಿಸ್ಟ್ರಿಕ್ಟ್ ಆಕ್ಟಿಂಗ್ ಅ|| ಕಮಿಷನರಾದ ಮ|| ಎಚ್. ಶ್ಯಾಮಣ್ಣನವರು ಚಿನ್ನದ ಗಣಿಯ ಸ್ಪೆಷಲ್ ಮೇಜಿಸ್ಟ್ರೇಟರಾಗಿ ಮಾಡಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ಕಳೆದ ೩-೪ ದಿನಗಳಿಂದಲೂ ಸಾಯಂಕಾಲದ ವೇಳೆಯಲ್ಲಿ ಮೋಡವು ಕವಿದುಕೊಂಡು ದೊಡ್ಡಮಳೆಯು ಬರುವಹಾಗೆ ತೋರುತ ಕೆಲಹನಿಗಳನ್ನುದುರಿಸಿ ಹಾಗೆಯೇ ಮಾಯವಾಗುತ್ತಿರುವುದು. ಗಾಳಿಯೇನೋ ಪ್ರಚಂಡವಾಗಿ ಬೀಸುತ್ತಿದೆ. ಇದರಿಂದ ಕೊಂಚದಗೆಯು ಕಡಿಮೆಯಾದಂತೆ ತೋರಿದರೂ ಜನರಕಣ್ಣಿಗೆ ದೂಳುತುಂಬಿಕೊಂಡು ತೊಂದರೆಪಡುವುದಾಗಿದೆ. ರೈತಾಪಿಜನರು ಪ್ರತಿಕ್ಷಣದಲ್ಲೂ ಮಳೆಯನ್ನೇ ಇದಿರುನೋಡುತ್ತಿರುವರು.

ಮೈಸೂರು ಮ್ಯುನ್ಸಿಪಲ್ ಕೌನ್ಸಿಲಿನವರು ತಮಗೆ ಎಲೆಕ್ಟೆಡ್ ಪ್ರೆಸಿಡೆಂಟ್ ಆಗಬೇಕೆಂಬ ಅಭಿಪ್ರಾಯವನ್ನು ದೃಢವಾಗಿ ಹೊಂದಿ ಆ ಅರ್ಥಕ್ಕೆ ಮೀಟಿಂಗಿನಲ್ಲಿ ರೆಜಲ್ಯೂಷನ್ನೂ ಮಾಡಿರುತ್ತಾರೆ. ಪರರ ಮೇಲಣ ಹೊಟ್ಟೆಕಿಚ್ಚಿನಿಂದ ಬೇಳೆಯುತ್ತಲಿರುವ ಮೈಸೂರು ಸಂಪದಭ್ಯುದಯಕ್ಕೆ ಎಲ್ಲಿ ಹಿಂದುಳಿದವರಾರಾದರೂ ಪ್ರೆಸಿಡೆಂಟ್‌ಗಿರಿಗೆ ಬಂದುಬಿಟ್ಟಾರೋ ಎಂಬ ಹೊಟ್ಟೆಬೇನೆಯು ಕಂಡುಹೋಗಿದೆ. ಅದಕ್ಕಾಗಿ ಕೌನ್ಸಿಲರನ್ನೆಲ್ಲಾ ಜಾತಿ ಮತದ್ವೇಷದವರೆಂದು ಆಡಿ ಸಾಧಿಸುತ್ತದೆ. ಹುಟ್ಟಿದ ಸುಳಿಯು ಬೋಳಿಸಿದರೆ ಹೋದೀತೆ? ಕೌನ್ಸಿಲರ ದೃಢವಾದ ಕೋರಿಕೆಗೆ ಅವಕಾಶ ಕೊಟ್ಟು ಪ್ರಭುತ್ವದವರು ಫಲವನ್ನು ನಿರೀಕ್ಷಿಸುವುದೇ ಧರ್ಮವಾಗಿದೆ.

ನಾವು ಹಿಂದೆ ತಿಳಿಸಿದ್ದಂತೆ ರಾಜಧಾನಿಯ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರು ತಮ್ಮ ಜ್ಯೇಷ್ಠ ಪುತ್ರಿ ಸೌಭಾಗ್ಯವತಿ ನಿರ್ಮಲಕುಮಾರಿಯವರನ್ನು ತಮ್ಮ ಭಾವನವರಾದ ಸಾಹುಕಾರ್ ಮ|| ಕೆ. ಚನ್ನಪ್ಪನವರ ಜ್ಯೇಷ್ಠ ಪುತ್ರ ರಾ|| ನಾಗರಾಜಯ್ಯನವರಿಗೆ ಕೊಟ್ಟು ಈ ಚೈತ್ರ ಬಹುಳ ೧೦ ಶುಕ್ರವಾರ (ತಾ|| ೨೧-೪-೨೨) ಮಧ್ಯಾಹ್ನ ೧|| ಗಂಟೆಗೆ ಸಂದ ಸಿಂಹಲಗ್ನದಲ್ಲಿ ಪಾಣಿಗ್ರಹಣ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಜರುಗಿಸಿದರು. ಸ್ಥಳ ಪರಸ್ಥಳಗಳ ಮಿತ್ರಮಂಡಲಿಗೆಲ್ಲಾ ಸಾವಿರಾರು ಆಹ್ವಾನ ಪತ್ರಿಕೆಗಳು ಕೊಡಲ್ಪಟ್ಟಿದ್ದುವು. ಬೆಂಗಳೂರು, ಶಿವಮೊಗ್ಗ, ತಿಪಟೂರು, ಕೋಲಾರ, ಹಾಸನ ಮೊದಲಾದ ಸ್ಥಳಗಳಿಂದ ನೂರಾರು ದೊಡ್ಡ ಮನುಷ್ಯರುಗಳೂ, ಬಂಧುಗಳೂ ಬಂದಿರುವರು. ಸರ್ ಎಂ. ಕಾಂತರಾಜ ಅರಸಿನವರೂ ಮತ್ತೆ ಕೆಲ ಸರ್ಕಾರಿಯಧಿಕಾರಿಗಳೂ ದೊಡ್ಡ ಮನುಷ್ಯರುಗಳೂ ಬರಲನುಕೂಲವಿಲ್ಲದ್ದರಿಂದ ನೂತನದಂಪತಿಗಳ ಶ್ರೇಯಸ್ಸನ್ನು ಕೋರಿ ತಂತಿಗಳನ್ನು ಕೊಟ್ಟಿದ್ದರು. ಸ್ಥಳದ ಸರ್ಕಾರಿಯಾಧಿಕಾರಿಗಳೂ, ಲಾಯರುಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ವರ್ತಕರುಗಳೂ ಸೇರಿ ಸುಮಾರು ೫ ಸಾವಿರ ಜನರವರೆಗೆ ಬಂದಿದ್ದರೆಂದು ತೋರುತ್ತದೆ. ಮ|| ವರ್ಧಮಾನಯ್ಯನವರು ಮಧ್ಯಾಹ್ನದಲ್ಲಿ ತಾವೇ ಮಂಟಪದ ದ್ವಾರದಲ್ಲಿದ್ದು ಬಂದಂತಹವರನ್ನೆಲ್ಲಾ ಸ್ವಾಗತಿಸಿ, ಕೊಳಲು ವಾದ್ಯದಿಂದಲೂ, ಗಂಧ ಪುಷ್ಪ ಫಲ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಿ ಕಳುಹಿಕೊಡುತ್ತಿದ್ದರು. ಕಲ್ಯಾಣ ಮಂಟಪವು ಭುವನೇಶ್ವರಿಯಿಂದ ಕೂಡಿ ಶಾಗೆಶ್ವಂಗದಿಂದ ಬಹಳ ಸುಂದರವಾಗಿ ರಚಿಸಲ್ಪಟ್ಟು ಅದನ್ನು ಕಟ್ಟಿದವರ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದಿತು. ಹೊರಭಾಗದಲ್ಲಿ ವಿಶಾಲವಾದ ಚಪ್ಪರವು ಹಾಕಲ್ಪಟ್ಟು ಚಿತ್ರವಿಚಿತ್ರ ಬಟ್ಟೆಗಳ ಮೇಲ್ಕಟ್ಟಿನಿಂದಲೂ ವಿದ್ಯುಲ್ಲತಾ ದೀಪಾವಳಿಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು. ಮ||ವರ್ಧಮಾನಯ್ಯನವರು ಹೊರಾಡಂಬರದ ದುಂದುವೆಚ್ಚಕ್ಕೆ ಆಸ್ಪದಕೊಡದೆ ತಮ್ಮ ಶ್ರೀಮಂತಿಕೆಗೆ ತಕ್ಕಂತೆ ಘನತರವಾಗಿಯೂ ವಿಚಕ್ಷಣೆಯಿಂದಲೂ ಮಹೋತ್ಸವ ಸಮಾರಂಭವನ್ನು ನಡೆಯಿಸಿದರಲ್ಲದೆ, ಇದರ ಸಂತೋಷಸೂಚನಾರ್ಥವಾಗಿ ಈ ದಿವಸ ತಮ್ಮ ವಿದ್ಯಾರ್ಥಿನಿಲಯದ ಬಂಗಲೆಯಲ್ಲಿ ೨೫ ಪಲ್ಲ ಅಕ್ಕಿಯ ಲವಾಜಮೆಯಿಂದ ರಾಜಧಾನಿಯ ಸಮಸ್ತ ಜಾತಿಯ ಕುರುಡ ಕುಂಟ ಮೊದಲಾದ ಬಡಬಗ್ಗರಿಗೆ ಮೃಷ್ಟಾನ್ನಭೋಜನ ಮಾಡಿಸಲು ಏರ್ಪಡಿಸಿರುವರೆಂದು ಕೇಳಿ ನಾವು ಬಹಳವಾಗಿ ಸಂತೋಷಿಸುವೆವಲ್ಲದೆ ಈ ಸಾರ್ಥಕವಾದೇರ್ಪಾಟನ್ನು ಮಾಡಿ ತಮ್ಮಂತಹ ಶ್ರೀಮಂತರಿಗೆಲ್ಲಾ ಮೇಲುಪಂಗ್ತಿಯನ್ನು ಹಾಕಿಕೊಟ್ಟುದಕ್ಕಾಗಿ ನಾವು ಇವರನ್ನು ವಂದಿಸಿ ನೂತನ ದಂಪತಿಗಳಿಗೆ ಎಲ್ಲಾ ಸುಖಸಂಪತ್ತುಂಟಾಗಲೆಂದು ಹರಸುತ್ತೇವೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

DIE-HARDS.

DEAR EDITOR,

For sometime past the local organs *Sadvi* and *Sampadabhydaya* were some what sober, but again the latter journal has thrown open its columns in its issues of the 10th and 11th of April to two erratic and scurrilous articles against our popular Dewan Sir M. Kantaraj Urs, who is on leave in Ooty, recouping his health from his recent illness. Writing under the title "The Dewanship of Mysore" the correspondents who term themselves "Fair-play" and "Truth"—and the public know by this time whom these psuedonyms represent and to what disgraceful use they are put to—have launched a most unworthy and unholy attack on Sir M. Kantaraj Urs, and with it dragged the rest of the non-Brahmin officials. It is needless to say how absolutely devoid of propriety and decency it is to write such trash when Sir M. Kantaraj Urs is still in a convalascent stage, nor is it necessary to give any detailed reply to the various irresponsible statements they have made. 'Fair-play' finds fault with the *Vakkaligara Patrike* for having paid a tribute to Sir M. Kantaraj Urs for his two notable and memorable measures the orders on the Miller Committee Report and the Educational Memorandum, and for his efforts to uplift the Depressed classes. I wonder whether the world could furnish a more selfish, narrow-minded set of men than "Fair-play" and those whom he represents. At any other part of the globe these very measures would have been hailed as measures for the redemption of the ignorant and illiterate masses. "Fairplay" says that in no Government on the surface of the globe does such Report or such order disgrace Government proceedings. All that I can say to it is that he is blissfully ignorant of what is happening in the Madras and Bombay Governments, and of what has been the Imperial Government's policy for a very long time in regard to the representation of Muhammadans. I may also ask whether in any part of the globe does such an iniquitous, inhuman, irrational social system prevail? At one place 'Fairplay' says that Sir M. Kantaraj Urs "does not hate Brahmins as a class. He hates only a few of them whom he does not like," but at another place he says, he "would have been a tower of strength to us, if he had not been prevailed upon to hate and dislike *us*." That word "us" shows the writers partisanlike complexion very clearly.

'Truth' in the issue of the 11th April in the same paper is more vulgar and the Editorial note at the end to the effect that it is a matter of regret that matters of personal interest have found a place in the article is only to palm off the censure that is justly due to it for disgracing its columns with such nauseating stuff. The right course was to have rejected the contribution, but evidently the Editor's object is not to suppress such things but to give publicity; and hence such a dirty procedure, a thing not uncommon to that rag.

"Truth" finds fault with Sir M. Kantaraj Urs for not approaching the financial question with a spirit of self sacrifice and extols Sir M. Visweswariah for his numerous virtues. Could he not first ask why the latter whose personal responsibilities were much less got his pay increased from Rs. 4000 to Rs. 5000, and does he not know that it is Sir M. Visweswariah's extension of all fanciful departments and fanciful schemes, that has landed the State into such a deplorable crisis. Further, it is perhaps not so widely known that Sir M. Kantaraj Urs did make an earnest effort to lower the salaries of the high officers but he was met with a stout opposition from those interested quarters to whose benefit it was to keep the salaries as they were. That was the very reason why Sir M. Kantaraj Urs appointed a strong committee to suggest the retrenchments and the public would have known what he could have done had he not been unfortunately necssitated to take leave.

'Truth' is not in favour of sofas, easy chairs, electric fans etc., for high officers but will he tell us whose creation they were, Sir Kantaraj Urs's or Sir Visweswariah's? Sir Kantaraj Urs's whole time was taken in consolidating what his expensive predecessor had done and yet with a wanton disregard of truth "Truth" says that the financial crisis is one for which Sir M. Kantaraj Urs and his advisers are responsible and that the Government running into debt is due to his want of capacity. May I not ask what his own advisers and colleagues, of whom Mr. Banerji was one were doing all the time? It is evident to every one that Sir Kantaraj Urs would have well nigh solved the financial problem with the help of the Special Finance Committee had he not been prevented by

ಮೌಲಾನ ಹಜರತ್ ಮೊಹನಿಯವರನ್ನು ಕಳೆದ ತಾ|| ೧೫ ರಲ್ಲಿ ಕಾನ್ಪೂರಿನಲ್ಲಿ ಹಿಡಿದು ಅಹಮ್ಮದಾಬಾದ್ ಜೆಲ್ಲಿಯ ಸಬರ್ಮತಿ ಕಾರಾಗೃಹಕ್ಕೆ ಸೇರಿಸಿರುವರು. ರಾಜದ್ರೋಹಾಪರಾಧಕ್ಕಾಗಿ ಇವರ ವಿಚಾರಣೆಯು ನಡೆಯುವುದು. ಕಳೆದ ನ್ಯಾಷನಲ್ ಕಾಂಗ್ರೆಸ್ಸಿನಲ್ಲಿ ಆಂಗ್ಲಸಂಬಂಧವೇ ಇಲ್ಲದ ಸ್ವರಾಜ್ಯವು ನಮಗೆ ಬೇಕೆಂದುಉಪನ್ಯಾಸಮಾಡಿದ್ದವರೇ ಇವರು.

ಜಿನೀವಾಪಟ್ಟಣದಲ್ಲಿ ಒಂದುಕಡೆ ಸಭೆಯು ನಡೆಯುತ್ತಿರುವಾಗ ಒಂದುಕಡೆ ರಷ್ಯನರು ಜರ್ಮನರೂ ಪ್ರತ್ಯೇಕ ಸಂಧಿಯನ್ನು ಮಾಡಿಕೊಂಡು ತಂತಮ್ಮ ಯುದ್ಧ ನಷ್ಟವನ್ನು ಬಿಟ್ಟು ರೂ ಕೇಳದಿರುವಂತೆ ಅದರಲ್ಲಿ ಒಪ್ಪಂದ ಮಾಡಿಕೊಂಡಿರುವರಂತೆ. ಇದು ಸಭೆಗೆ ಬಂದಿರುವ ಇತರ ರಾಷ್ಟ್ರಗಳವರಿಗೆಲ್ಲಾ ವಿಸ್ಮಯವನ್ನೂ ಆಗ್ರಹವನ್ನೂ ಹುಟ್ಟಿಸಿದೆ.

unexpected illness to go on leave. The low mentality of the writer is no where so apparent as when he says that "the last straw that broke the camel's back was the enforcement of the Press Regulation against some news-papers in the State." Yet such are the units that form the *intelligentia* in the State, and such to be the leaders of humanity. I can only say that so long as such die-hards and pests continue to exist in our society there is no future for this great, ancient and historic land. We want sympathy, love, charity and friendliness. Where is the hope for such a state with such "Fairplays" and "Truths" as abound the *Sampadabhudaya?*

JUSTICE.

ಶ್ರೀಮದ್ಬಸವಜಯಂತಿ.

ಈ ವರ್ಷ ವೈಶಾಖ ಶುದ್ಧ ತದಿಗೆ ಭಾನುವಾರ (ತಾ|| ೩೦-೪-೨೨) ರೋಹಿಣಿ ನಕ್ಷತ್ರವು ಬರುವುದರಿಂದ ಪದ್ಧತಿಯಪ್ರಕಾರ ಸಕಲರೂ ವೈಶಾಖ ಶುದ್ಧ ೩ ಭಾನುವಾರ ದಿವಸ ಶ್ರೀ ಬಸವಜಯಂತ್ಯುತ್ಸವವನ್ನು ಜರುಗಿಸಿ ಪುಣ್ಯಭಾಗಿಗಳಾಗಬೇಕಾಗಿ ಕೋರಿದೆ.

ಕಾರ್ಯದರ್ಶಿ,
ವೀರಶೈವ ಹಿತೋಪದೇಶಕ ಸಂಘ, ದಾವಣಗೆರೆ.

ಪ್ರಸಿದ್ಧ ಪತ್ರಿಕೆ.

ಶ್ರೀಮನ್ನಿರಂಜನ ಚನ್ನಮಲ್ಲೇಶ್ವರ ಸಂಸ್ಥಾನದ ಮಠಾಧೀಶರಾದ ವೀರಂತಪ್ಪಸ್ವಾಮಿಗಳವರ ಪ್ರಯತ್ನದಿಂದ ಜರಗುವ ನೈಜಾಂಇಲಾಖಾ ೨ ನೆಯ ಶ್ರೀಮದ್ವೀರಶೈವ ಧರ್ಮೋದ್ಧಾರಿಣೀ ಸಭಾ.

ಸಾ|| ಇಟ್ಗಿ ತಾಲೂಕು ಚಿಡಗುಪ್ಪಿ ಜಿಲ್ಲಾ ಗುಲ್ಬುರ್ಗಾ.

ಸಮಸ್ತ ವೀರಶೈವರಿಗೆ ವಿನಯಪೂರ್ವಕವಾದ ವಿಜ್ಞಾಪನೆಗಳು.— ಈ ಸಭೆಯು ಇದೇ ದುಂದುಭಿ ನಾಮಸಂವತ್ಸರದ ವೈಶಾಖ ಶುಕ್ಲ ತೃತೀಯಾ, ಮತ್ತು ಚತುರ್ಥೀ ಈ ಎರಡು ದಿನಗಳಲ್ಲಿ ಜರಗುವದು. ಸಭೆಯ ಅಧ್ಯಕ್ಷಸ್ಥಾನವನ್ನು ನಿರ್ಮಲದೇಶಮುಖ ಶ್ರೀಮಂತ ಬಾಪೂರಾವ್ ಹೈಕೋರ್ಟ ವಕೀಲರು ವಹಿಸುವರು. ಈ ಸಭೆಯಲ್ಲಿ ನೈಜಾಂ ಇಲಾಖೆಯ ವೀರಶೈವರಲ್ಲಿ ಧರ್ಮ, ವಿದ್ಯಾ, ಕೃಷಿ, ವ್ಯಾಪಾರ, ಕೈಗಾರಿಕೆ, ನೀತಿ, ಐಕಮತ್ಯಾದಿಗಳು ವೃದ್ಧಿಯಾಗಲು ಮಾಡತಕ್ಕ ಉಪಾಯಗಳಬಗ್ಗೆ ವಕ್ತೃತ್ವಶಾಲಿಗಳ ಉಪನ್ಯಾಸಗಳು ನಡೆಯುವವು. ಈ ಸ್ಥಳಕ್ಕೆ ಬರುವವರು ಗುಲ್ಬುರ್ಗಾ ಸ್ಟೇಶನಕ್ಕಿಳಿದು ಕಾಲುದಾರಿಯಿಂದ ೩೦ ಮೈಲು ಬರಬೇಕಾಗುವದು. ಸಭೆಗೆಬರುವವರ ದೆಶೆಯಿಂದ ಗುಲ್ಬುರ್ಗಾದಲ್ಲಿ ಬಂಡಿ, ಟಾಂಗಾ ಮುಂತಾದವುಗಳ ದೆಶೆಯಿಂದ ಯೋಗ್ಯವ್ಯವಸ್ಥೆಯನ್ನು ಮಾಡಿಸಲಾಗಿದೆ. ಈ ಸಭಾಸ್ಥಳವು ವೀರಶೈವರಿಗೆ ಪವಿತ್ರಸ್ಥಾನಗಳಾದ ಕಲ್ಯಾಣ ಬಸವತೀರ್ಥಾದಿಗಳಿಗೆ ಅತ್ಯಂತ ಸಮೀಪವಾಗಿರುತ್ತದೆ. ಪ್ರಯುಕ್ತ ಪ್ರತಿಯೊಬ್ಬರೂ ಆಗಮಿಸಿ ಸಭೆಗೆ ಅಲಂಕಾರವನ್ನಿತ್ತು ಪುಣ್ಯಕ್ಷೇತ್ರಗಳ ದರ್ಶನದಿಂದ ಪುನೀತರಾಗಬೇಕಾಗಿ ಕೋರಿಕೆ.

ಇಟ್ಗಿ.
ತಾಲೂಕು ಚಿಡಗುಪ್ಪಿ.

ವೇ|| ಬಸವಣ್ಣಶಾಸ್ತ್ರಿಗಳು,
ಸ್ವಾಗತ ಸಂಘದ ಜನರಲ್ ಸೆಕ್ರೆಟರಿ.

ರಾಯಚೂರು ರಾಮಲಿಂಗದೇವರ ರಥೋತ್ಸವವು,

ಇಡೀ ನೈಜಾಮು ಭೂದೇವಿಗೆ ತಲೆಮಣಿಯಂತೊಪ್ಪುವ ರಾಯಚೂರು ಪಟ್ಟಣದ ನೈರುತ್ಯ ದಿಕ್ಕಿನಲ್ಲಿ ಮೇಲ್ಕಾಣಿಸಿದ ಶ್ರೀ ಸ್ವಾಮಿಯ ಭವ್ಯವಾದ ದೇವಾಲಯವಿರುವದು. ಗುಡಿಯ ಪ್ರಕಾರದ ಸುತ್ತಲೂ ಅಚ್ಚ ಬಿಳೀಕಲ್ಲಿನ ಗುಡ್ಡಗಳಿರುವದರಿಂದಲೂ, ಮಹಂತರ ಜಪಾನುಷ್ಠಾನ ವಿಧಿಗಳಿಗೆ ಯೋಗ್ಯಮಂದಿರವಾಗಿರುವದರಿಂದಲೂ, ಮತ್ತು ಬಹು ಪುರಾತನದಿರುವದರಿಂದಲೂ ಈಪವಿತ್ರಸ್ಥಾನವು ವೇದಾದಿಗಳಲ್ಲಿ ಪೆಸರೊಂದಿದ ಹಾಗೂ ರಾಮಲಿಂಗನಿಗೆ ಮುಖ್ಯಗೃಹವಾದ ಆ ರಜತಾಚಲವೆಂದರೂ ಅತಿಶಯೋಕ್ತಿಯೆನಿಸದು. ಅಂತೇ ಈ ದೇವರಮೇಲೆ ಸುತ್ತ ಹಳ್ಳಿಪಳ್ಳಿಯ ಜನಗಳೂ ರಾಯಚೂರು ನಾಗರಿಕರೂ ದಟ್ಟವಾದ ಭಕ್ತಿಮಂತರಾಗಿರುವುದರಿಂದ ಪದ್ಧತಿಯಂತೆ ಇದೇ ದುಂದುಭಿ ಸಂವತ್ಸರದ ಚೈತ್ರ ಶುದ್ಧ ೧೪ ರಲ್ಲಿ ಗಣಾರಾಧನೆಯು ಹಾಗು ಪ್ರಭೆಯ ಸಂಭ್ರಮವೂ ಮರುದಿನ ಮಧ್ಯಾಹ್ನ ೪ ಘಂಟೆಯಿಂದಾರಂಭಿಸಿ ಸಾಯಂಕಾಲ ೮ ಘಂಟೆಯವರೆಗೂ ವೈದಿಕರ ವೇದಪಾಠದಿಂದಲೂ ನಂದಿಧ್ವಜದಿಂದಲೂ ಇತರ ವಾದ್ಯ ಮುಂತಾದ ವೈಭವದಿಂದಲೂ ರಥೋತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ಉತ್ಸವಕ್ಕಾಗಿ ನಾಗರೀಕ ಸ್ತ್ರೀಪುರುಷರೂ ಬಾಲಬಾಲಕಿಯರೂ ಉಡಿಗೆತೊಡಿಗೆಗಳಿಂದಲಂಕೃತರಾಗಿ ಬಹು ಉಲ್ಲಾಸದಿಂದ ಆಗಮಿಸಿದ್ದರಲ್ಲದೆ ಪ್ರತಿಯೊಬ್ಬರೂ ತೆಂಗು ಮಲ್ಲಿಗೆ ದವನ ಮುಂತಾದವುಗಳನ್ನು ಹಿಡಿದುಕೊಂಡು ಒಬ್ಬರಿಗೊಬ್ಬರು ಎಡತಾಕುತ್ತ ಗುಡಿಯೊಳಗೆ ಸಡಗರದಿಂದ ನಡೆಯುವದನ್ನು ನೋಡಿ ಆದಿನದ ದವನದ ಹುಣ್ಣಿವೆಯ ಸಾರ್ಥಕ್ಯವು ಅಲ್ಲಿನ ಪ್ರೇಕ್ಷಕರಿಂದ ಬಣ್ಣಿಸಲ್ಪಡುವಂತಿತ್ತು. ಬಹುಶಃ ಈ ದೇವಸ್ಥಾನವು ರೈಲ್ವೆಸ್ಟೇಷನ್ನಿಗೆ ತೀರಾಸಮೀಪ ವಿರುವದರಿಂದ ಅಲ್ಲಿನ ಉದ್ಯೋಗಿಗಳಾದ ಎಲ್ಲಾ ಮತೀಯರು ಕೈಕಟ್ಟಿಕೊಂಡು ಭಕ್ತಿಯಿಂದ ಆ ಸ್ವಾಮಿಗೆ ಕಾಯಿ ಕರ್ಪೂರಗಳನ್ನು ಅರ್ಪಿಸುವದಕ್ಕಾಗಿ ಸಾಲುಕಟ್ಟಿದ್ದರು. ಇತ್ತ ಪುರಜನರು ವ್ಯವಹಾರ ಉದ್ಯೋಗ ಮುಂತಾದವುಗಳು ಸತತ ವಿರುವದರಿಂದ ಕ್ಷೋಭೆಗೊಂಡಿದ್ದ ಮನಸ್ಸಿಗೆ ಆದಿನದ ೩-೪ ತಾಸುಗಳವರೆಗೆ ವಿಶ್ರಾಂತಿಯನ್ನು ಕೊಟ್ಟಿದ್ದರಲ್ಲದೆ ತಾವಿರುವ ಮನೆಗಳಿಗೂ ಇಡೀ ಪಟ್ಟಣಕ್ಕೂ ಮತ್ತು ಇವುಗಳನ್ನು ಸತತಹೊತ್ತುಕೊಂಡ ಭೂಮಾತೆಗೂ ವಿಶ್ರಾಂತಿಯನ್ನು ಕೊಟ್ಟಿದ್ದರೆಂದು ತಿಳುಹಲು ಮತ್ತಷ್ಟು ಆನಂದವಾಗುತ್ತದೆ. ಹೀಗೆಯೆ ಪ್ರತಿವರ್ಷ ಇದಕ್ಕಿಂತಲೂ ಹೆಚ್ಚಿನ ಸುವ್ಯವಸ್ಥೆಯನ್ನು ಇಲ್ಲಿನ ಪುರವಾಸಿಗಳು ಮಾಡುವಂತೆ ಪ್ರೇರಿಸಲೆಂದು ಆ ಭಗವಂತನಾದ ರಾಮಲಿಂಗನನ್ನು ಸ್ತುತಿಸಿ ಈಚಿಕ್ಕಲೇಖನಕ್ಕೆ ವಿರಾಮವನ್ನು ಕೊಡುತ್ತೇನೆ.

ಓರ್ವ ಕಣ್ಣುತುಂಬ ನೋಡಿದವ.

ಅಥಣಿ ಶ್ರೀ ಶಿವಯೋಗಿಗಳ ಸ್ಮಾರಕೋತ್ಸವವು ದಾವಣಗೆರೆ.

ಕಳೆದ ತಾ|| ೧೨-೪-೧೯೨೨ ನೆ ಬುಧವಾರ ದಾವಣಗೆರೆಯಲ್ಲಿ, ನಿರುಪಮಿತರಾಗಿಯೂ, ನಿರ್ಲೇಪ, ನಿರ್ಮಲ, ನಿರವಯವರಾಗಿಯೂ ಮತ್ತು ನಿಶ್ಚಿಂತ, ನಿರ್ಮಲ, ನಿರತಿಶಯ, ನಿಷ್ಕಾಮ, ನಿತ್ಯಾನಂದ ನಿರ್ದ್ವಂದ್ವರಾಗಿಯೂ ಬೇಡಿದ ನಿಜಭಕ್ತರುಗಳಿಗೆ ಅವರವರ ಇಷ್ಟಾರ್ಥವನ್ನು ನಾನಾರೂಪಗಳಲ್ಲಿ ದಯಪಾಲಿಸುತ್ತಲೂ, ಪ್ರಪಂಚಕ್ಕೆ ಚಂದ್ರಪ್ರಾಯರಾಗಿ ಸದಾಚಾರ, ಸದ್ಧರ್ಮ, ಸದ್ಭಕ್ತಿ ಮುಂತಾದ ಘನತರ ನಡತೆಗಳ ವಿಷಯವಾಗಿ ತಮ್ಮ ಬೋಧಾಮೃತವನ್ನು ತುಂಬುವವರಾಗಿಯೂ ಮೃತ್ಯುಂಜಯ ಸ್ವರೂಪರಾಗಿಯೇ ಈ ಭೂಲೋಕದಲ್ಲಿ ಅವತರಿಸಿ ಭಕ್ತೋದ್ಧಾರ ಮಾಡಿದ ಮತ್ತು ಲೋಕಹಿತೋತ್ಸಕ ತಿಲಕರೆಂಬ ಬಿರುದಾವಳಿಯನ್ನು ಹೊಂದಿದ ಮಹಾವಿರಕ್ತಿಗಳಾದ ಅಥಣಿ ಶ್ರೀ ಶಿವಯೋಗೀಶ್ವರರ ಸ್ಮಾರಕೋತ್ಸವವನ್ನು ದಾವಣಗೆರೆಯ ಭಕ್ತಮಹಾಶಯರು ಊಹಿಸಲಶಕ್ಯವಾದ ವಿಜೃಂಭಣೆಯಿಂದಲೂ ಮತ್ತು ಅನವರತವಾದ ಭಕ್ತಿಯಿಂದಲೂ ಸಾಂಗೋಪಾಂಗವಾಗಿ ನಡೆಯಿಸಿದರು. ಈ ಶುಭ ಮತ್ತು ಪುಣ್ಯೋಜ್ವಲ ದಿನದಲ್ಲಿ ಶ್ರೀ ಪ್ರಣವಸ್ವರೂಪಿಗಳಾದ ಮೃತ್ಯುಂಜಯ ಸ್ವಾಮಿಗಳು ಇಲ್ಲಿಯೇ ಇದ್ದದ್ದು ದಾವಣಗೆರೆ ಭಕ್ತರ ಪೂರ್ವಪುಣ್ಯ ಮತ್ತು ಅವರ ಭಕ್ತಿಯ ಫಲವನ್ನು ಸೂಚಿಸುವುದಿಲ್ಲವೇ? ಆ ದಿವಸ ಪ್ರಾತಃಕಾಲ, ನಾನಾಬಗೆಗಳಲ್ಲಿ ಅಲಂಕೃತವಾದ ಶ್ರೀ ವಿರಕ್ತಮಠದಲ್ಲಿ ೮ ಘಂಟೆಯಿಂದ ಮಧ್ಯಾಹ್ನ ೧ ಘಂಟೆಯವರೆಗೂ ಗಣಾರಾಧನೆಯು ಅತಿಸಂಭ್ರಮದಿಂದ ಜರುಗಿತು. ಸಾಯಂಕಾಲ ೫ ಘಂಟೆಯಿಂದ ಶ್ರೀ ಶಿವಯೋಗಿಗಳವರ ಪುರಾಣಶ್ರವಣವೂ ನಡೆಯಿತು. ಎಲ್ಲಾ ಸಭಿಕರು ಏಕೋಭಾವದಿಂದಲೂ ಭಕ್ತಿಯಿಂದಲೂ ಶ್ರವಣ ಮಾಡುತ್ತಿದ್ದರು. ನಂತರ ಮ|| ರಾ|| ಅನೇಕೊಂಡದ ಮುಪ್ಪಣ್ಣನವರೂ ಶ್ರೀ ಮೃತ್ಯುಂಜಯಸ್ವಾಮಿಗಳೂ ಅಪ್ಪಣೆ ಕೊಡಿಸಿದ ಪ್ರಕಾರ ದಾವಣಗೆರೆ ವೀರಶೈವ ಸ್ಟೂಡೆಂಟ್ಸ್ ಸಂಘದಪರವಾಗಿ, "ಸತ್ಸಹವಾಸ" ಎಂಬ ವಿಷಯದಲ್ಲಿ ಕನ್ನಡದಲ್ಲೂ ಮತ್ತು ಅರ್ಥಸಮರ್ಥನ ಮಾಡುವ ಶಬ್ದಗಳ ಜೋಡಣೆಯಿಂದಲೂ ವೇ|| ಹಿರೇಮಠದ ಚಂದ್ರಶೇಖರಯ್ಯನವರು, ಬಿ.ಎ., "ಧರ್ಮ" (about religion) ಎಂಬ ವಿಷಯದಲ್ಲಿ ಇಂಗ್ಲೀಷಿನಲ್ಲು ಸಭಿಕರಿಗೆಲ್ಲಾ ವಿನೋದವುಂಟಾಗುವಂತೆ ಉಪನ್ಯಾಸ ಮಾಡಿದುದಲ್ಲದೆ ಅದೇಕಾಣೇ ಶಿವಯೋಗಿಗಳ ಮಹಿಮೆಯಿಂದ ಬರಮಾಡಲ್ಪಟ್ಟರೋ ಏನೋ ಎಂಬುವಂತೆ ಈ ಊರಿಗೆ ವರ್ಗಾಯಿಸಲ್ಪಟ್ಟು ಬಂದಿದ್ದ ಮ|| ರಾ|| ಮಲ್ಲರಾಜ ಅರಸ್, ಅಮಲ್ದಾರ್, ಇವರಿಗೆ ಶಿವಯೋಗಿಗಳು ಸದಾಕಾಲ ಸುಖಕೊಟ್ಟು ಬಹುಕಾಲ ಇಲ್ಲಿಯೇ ಇರಿಸಲೆಂದು ಹಾರೈಸಿ ತಮ್ಮ ಭಾಷಣವನ್ನು ಮುಗಿಸಿದರು. ನಂತರ ಮಂಗಳವನ್ನು ಮಾಡಿ ಶ್ರೀ ಶಿವಯೋಗಿಗಳ ಭಾವಚಿತ್ರದ ಪಟವನ್ನು ಕುಶಲವಿದೆಯಿಂದ ಅಲಂಕೃತವಾದ ರಥದಲ್ಲಿರಿಸಿ ಅನೇಕ ಭಜನಾಸಂಘಗಳ ಮಂಗಳಧ್ವನಿಯಿಂದಲೂ ವಾದ್ಯ ಮೃದಂಗದಿಂದಲೂ ಕೂಡಿ ಉತ್ಸವವು ರಾತ್ರಿ ೮ ಘಂಟೆಗೆ ಹೊರಟಿತು. ಪುರಜನರಿಂದ ದೀಪಾರಾಧನೆ, ತೋರಣಾದಿಗಳಿಂದ ಅಲಂಕೃತವಾದ ಪಟ್ಟಣದ ಪ್ರತಿಯೊಂದು ಬೀದಿಯಲ್ಲಿಯೂ ಸ್ವಾಮಿಸವಾರಿ ಬರುತ್ತಿರುವಾಗ ಪುರನಿವಾಸಿಗಳಿಂದಲೂ ವಿದ್ಯಾರ್ಥಿಗಳಿಂದಲೂ ತುಂಬಿತುಳುಕುತ್ತಿರುವ ಉತ್ಸವವನ್ನು ನೋಡಲು ಎರಡು ನೇತ್ರಗಳೂ ಸಾಕಾಗಿರಲಿಲ್ಲವು ಅಂದ ಬಳಿಕ ಉತ್ಸವದ ವಿಜೃಂಭಣೆಯನ್ನು ನೀವೇ ಊಹಿಸಿನೋಡಿ! ಇಂತಹ ಉತ್ಸವದೊಡಗೂಡಿ ಬರುತ್ತಿರುವ ಸ್ವಾಮಿಯನ್ನು ನೋಡಿದರೆ ಕೈಲಾಸಾಧಿಪತಿಯು ಈ ಪುರಜನರ ಭಕ್ತಿಗೆ ಮೆಚ್ಚಿ ತನ್ನ ಸದ್ದರ್ಶನವನ್ನೀಯಲು ಆಗಮಿಸಿದ್ದನೋ ಎನ್ನುವ ಹಾಗೆ ದಿಗ್ಭ್ರಮೆಗೊಳಿಸುತ್ತಿದ್ದಿತು ಹೀಗೆ ಎಲ್ಲರಿಗೂ ದರ್ಶನವನ್ನಿತ್ತು ಸ್ವಾಮಿ ರಾತ್ರಿ ೨ ಗಂಟೆಗೆ ಮಠವನ್ನು ಸೇರಿತು. ಮಂಗಳ ಮುಗಿದ ನಂತರ ಶ್ರೀ ಪ್ರಣವಸ್ವರೂಪಿಗಳಾದ ಮೃತ್ಯುಂಜಯ ಸ್ವಾಮಿಗಳು ಈ ಪುರಜನರ ಕಾರ್ಯತತ್ಪರತೆಗೂ ಮತ್ತು ಭಕ್ತಿಗೂ ಬಹು ಸಂತೋಷಿಸಿ ಅವರಿಗೆ ಆಶೀರ್ವಾದವನ್ನಿತ್ತುದಲ್ಲದೆ ಶ್ರೀ ಶಿವಯೋಗಿಗಳ ಮಹಾಕೃಪಾಬಲದಿಂದ ಇದೇ ಊರಲ್ಲಿ ಹಿಂದೆ ಆಲೋಚಿಸಿದ್ದ ಅಮರಗಣಂಗಳ ಮಹಾಪೂಜೆಯು ನಡದೇ ನಡೆಯುತ್ತೆಂದು ಭರವಸವನ್ನಿತ್ತು ತಮ್ಮ ಭಾಷಣವನ್ನು ಮುಗಿಸಿದರು.

ಈ ಮಹಾಕಾರ್ಯದಲ್ಲಿ ದಾವಣಗೆರೆ ವೀರಶೈವ ವಿದ್ಯಾರ್ಥಿಗಳು ಬಹಳ ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಮತ್ತು ಕಾರ್ಯತತ್ಪರತೆಯಿಂದಲೂ ಸ್ವಾಮಿಸೇವೆಯನ್ನು ಮಾಡಿದುದಕ್ಕೋಸ್ಕರ ಅವರ ಶ್ರೇಯಃಪ್ರಾರ್ಥನೆ ಮಾಡಿ ಆಶೀರ್ವದಿಸಿದರು. ಹೀಗೆ ಪ್ರತಿವರ್ಷದಲ್ಲೂ ಕಾರ್ಯೋತ್ಸವವನ್ನು ಶ್ರೀ ಶಿವಯೋಗಿಗಳು ದಯಪಾಲಿಸಲೆಂದು ಪ್ರಾರ್ಥಿಸುವ

ಪ್ರತ್ಯಕ್ಷದರ್ಶಿ.

ಉಸ್ಮಾನಿಯಾ ವಾಚನಾಲಯಸ್ಥಾಪನ ಕಮಲಾಪುರ.

ನೈಜಾಂ ಇಲಾಖಾ ಪೈಕಿ ಗುಲಬುರ್ಗಾ ತಾಲೂಕಿಗೆ ಸೇರಿದ ಕಮಲಾಪುರ ಗ್ರಾಮಕ್ಕೆ ಶ್ರೀಪೂಜ್ಯಪಾದರಾದ ಗುರುಮಠಕಾಲ ಶಾಂತವೀರಸ್ವಾಮಿಗಳವರು ಆಗಮಿಸಿ ಭಕ್ತರಿಗೆ ಹಿತೋಪದೇಶವನ್ನು ಮಾಡುತ್ತಿರುವಾಗ ವಾಚನಾಲಯದ ಅವಶ್ಯಕತೆಯನ್ನು ಬೋಧಿಸಿದರು. ಏತದ್ವಿಷಯವು ಮಹಾಜನರ ಮನಸ್ಸಿನ ಮೇಲೆ ಪರಿಣಮವಾದ್ದರಿಂದ ಮರುದಿವಸವೇ ವಾಚನಾಲಯವನ್ನು ಸ್ಥಾಪಿಸುವಂತೆ ಆಲೋಚಿಸಿ ತತ್ಸಂಬಂಧ ಜಾಹೀರಸಭೆಯನ್ನು ನೂತನವಾಗಿ ತಯಾರಾದ ಸರಕಾರಿ ಶಾಲಾಕಟ್ಟಡದಲ್ಲಿ ಕೂಡಿಸಿದರು. ಸಭೆಗೆ ಮಹಾಗಾಂವ, ಅಂಬಲಗಿ, ಓಕಳಿ, ಕುರುಕುನೂರು ಮುಂತಾದ ಗ್ರಾಮಗಳ ಮುಖಂಡರೇ ಮೊದಲಾದ ಅನೇಕ ಸದ್ಗೃಹಸ್ಥರು ಆಗಮಿಸಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ಸದರಿ ಶ್ರೀಗಳವರೇ ವಹಿಸಬೇಕೆಂದು ಕಮಲಾಪೂರ ಶಾಲಾ ಹೆಡ್ ಮಾಸ್ಟರ ರಾಮಕಿಶನ್ ಲಾಲ್ ರವರು ಸೂಚಿಸಿದರು. ಅದಕ್ಕೆ ಪೋಲೀಸ್ ಪಾಟೀಲ ರಾಚಪ್ಪನವರು ಅನುಮೋದನ ಕೊಟ್ಟನಂತರ ಸಭಿಕರು ಕರತಾಡನ ರೂಪದಿಂದ ಸಮ್ಮತ ವ್ಯಕ್ತಪಡಿಸಿದರು. ನಂತರ ಶ್ರೀಗಳವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಆಮೇಲೆ ಮಹಾಗಾಂವ ಜ್ಯೋತಿಷ ಪಾಠಶಾಲಾಧ್ಯಾಪಕರಾದ ರುದ್ರಾರಾಧ್ಯಶಾಸ್ತ್ರಿಗಳು ಮತ್ತು ಗುರುಲಿಂಗಸಿದ್ಧಕವಿಗಳು ಮೊದಲಾದ ವಕ್ತೃತ್ವಶಾಲಿಗಳೆಲ್ಲರೂ ನೀತಿ, ಐಕ್ಯ, ರಾಜಭಕ್ತಿ, ವಾಚನಾಲಯದ ಉಪಯೋಗ, ಇತ್ಯಾದಿ ವಿಷಯಗಳ ಬಗ್ಗೆ ಉಪನ್ಯಾಸ ಮಾಡಿದರು. ತರುವಾಯ ವಾಚನಾಲಯದ ಕಾರ್ಯಕ್ರಮದ ವಿಚಾರಕ್ಕಾರಂಭವಾಗಿ ಸರ್ವಜನರಿಗೆ ಸಮ್ಮತವಾದ ಉಸ್ಮಾನಿಯಾ ವಾಚನಾಲಯವೆಂಬ ಹೆಸರು ನಿಶ್ಚೈಸಿ ಸದರಿ ವಾಚನಾಲಯವನ್ನು ನಡೆಸಿಕೊಂಡುಹೋಗುವದಕ್ಕಾಗಿ ನೇಮಿಸಿದ ತಪಸೀಲು.— ಪ್ರಸಿಡೆಂಟ್— ರಾ|| ಪೋ|| ಪಾ|| ರಾಚಪ್ಪನವರು, ವೈಸ್ ಪ್ರಸಿಡೆಂಟ್ ರಾ|| ಮಿಸ್ಟರ್ ರಾಮಕಿಶನ್ ಲಾಲ್ ಹೆಡ್ ಮಾಸ್ಟರ್ ಸಾಹೇಬ, ಕೋಶಾಧ್ಯಕ್ಷ— ರಾ|| ಚೆನ್ನಬಸಪ್ಪಾ ನಿಂಬರಗಿ, ಸೆಕ್ರೆಟರಿ— ವೇ|| ಪರ್ವತಯ್ಯಾ ಅಸಿಸ್ಟೆಂಟ್ ಮಾಸ್ಟರ್, ಮೆಂಬರರು— ೧. ರಾ|| ಶೆಟ್ಟಿ ಶಿವಲಿಂಗಪ್ಪಾ, ೨. ರಾ|| ಗುರುಪಾದಪ್ಪಾ ಬೊಮ್ಮಣ್ಣಿ, ೩. ಮಹಾಗಾಂವ ವೀರಶೆಟ್ಟಿ, ೪. ರಾ|| ರೇವಣಸಿದ್ಧಪ್ಪಾ ಹಾಗರಗಿ, ೫. ರಾ|| ಗುರುಸಿದ್ಧಪ್ಪಾ ಬೊಮ್ಮಣ್ಣಿ, ೬. ರಾ|| ಚೆನ್ನಪ್ಪಾ ಪಾಟೀಲ, ೭. ರಾ|| ಕೃಷ್ಣಾಜಿ ಲೋಹಾರ, ೮. ರಾ|| ನಾರಪ್ಪಾ ಗೌಡಗೋಳ, ೯. ರಾ|| ಅಂಬಾರಾವ ಮಾ|| ಪಾ||, ೧೦. ರಾ|| ನಾರಾಯಣರಾವ ಕುಲಕರಣಿ, ೧೧. ಜನಾಬ ಮಹಮ್ಮದಹುಸೇನ್ ಸಾಯಬ ಖಾಜಿಸಾಹೇಬ. ಈ ಮಹಾಜನರನ್ನು ಮೆಂಬರರನ್ನಾಗಿ ನೇಮಿಸಿದರು. ಆಮೇಲೆ ವಾಚನಾಲಯವು ನಿರ್ವಿಘ್ನತೆಯಿಂದ ನಡೆಯುವದಕ್ಕಾಗಿ ವಾರ್ಷಿಕವರ್ಗಣಿಯಾದರೆ ಉತ್ತಮವೆಂಬ ವಿಷಯ ನಡೆದು ಗುರುಮಠಕಾಲ ಶ್ರೀಗಳವರು ೨೫ ರೂಪಾಯಿಗಳು ಕೊಟ್ಟನಂತರ ಮೇಲ್ಕಂಡ ಸಭೆಯಲ್ಲಿ ನಗದು ವರ್ಗಣಿದಾರರು ಸಮರ್ಪಿಸಿದ ತಪಸೀಲು.— ಸಂಗಶೆಟ್ಟಿ ಪೋ|| ಪಾ|| ಮಹಾಗಾಂವ ೧೦ ರೂ., ಗುರುಪಾದಪ್ಪಾ ಬೊಮ್ಮಣ್ಣಿ ೧೨ ರೂ., ಶೆಟ್ಟಿಶಿವಲಿಂಗಪ್ಪಾ ೧೦ ರೂ., ಚೆನ್ನಬಸವಯ್ಯಾ ಹಿರೇಮಠ ೨ ರೂ., ಮಹಿಕಾಬಸಾ|| ತಂಬೋಲಿ ೨ ರೂ., ಚನ್ನಬಸಪ್ಪಾ ನಿಂಬರಗಿ ೬ ರೂ., ರಾಚಪ್ಪಾ ಪೋ|| ಪಾ|| ೧೨ ರೂ., ವೀರಭದ್ರಪ್ಪಾಗೋಣಿ ೬ ರೂ., ಮಹಮ್ಮದಹುಸೇನ್ ಸಾಹೇಬ ನಾಯಬ ಖಾಜಿ ೫ ರೂ., ಗುರುಪಾದಪ್ಪಾ ಕಶೆಟ್ಟಿ ೫ ರೂ., ಅಬ್ದುಲ್ ಸತ್ತಾರ ಸಾ|| ಸುಪ್ರವೈಜರ್ ೫ ರೂ., ಕೃಷ್ಣಾಜಿ ಕಮ್ಮಾರ ೪ ರೂ., ರೇವಣಸಿದ್ಧಪ್ಪಾ ಕಶೆಟ್ಟಿ ೪ ರೂ., ರೇವಣಸಿದ್ಧಪ್ಪಾ ಹಾಗರಗಿ ೪ ರೂ., ಭದ್ರಪ್ಪಾ ಕೋಮಟಿ ೨ ರೂ. ಒಟ್ಟು ನೂರಹದಿನಾಲ್ಕು ರೂಪಾಯಿ ನಗದು ಶ್ರೀಗಳವರ ಸಮಕ್ಷಮ ಕೂಡಿರುತ್ತವೆ. ಮತ್ತು ಉಳಿದ ವರ್ಗಣಿದಾರರ ಹೆಸರು ವರ್ಗಣಿಯ ಖಾತೆಯಲ್ಲಿ ಸೇರಿರುತ್ತದೆ. ಈ ಪ್ರಕಾರ ಕೊಡುವ ಠರಾವಾದಮೇಲೆ ಅಧ್ಯಕ್ಷರು ವಾಚನಾಲಯವನ್ನು ದಕ್ಷತೆಯಿಂದ ನಡೆಯಿಸಿಕೊಂಡು ಹೋಗುವಂತೆ ಪ್ರಸಿಡೆಂಟರೇ ಆದಿಯಾದ ಎಲ್ಲರಿಗೂ ಅಪ್ಪಣೆಕೊಡಿಸಿ ಉತ್ತಮವಿಷಯಗಳಿಂದ ಪ್ರಕಟವಾಗುತ್ತಿರುವ ಮೈಸೂರು ಸ್ಟಾರ್, ಟೈಮ್ಸು, ಧರ್ಮತರಂಗಿಣಿ ಇತ್ಯಾದಿ ಪತ್ರಿಕೆಗಳನ್ನು ತರಿಸಲು ಹೇಳಿ ಪತ್ರ ಬರೆಯಲು ಸೆಕ್ರೆಟರಿಯವರಿಗೆ ಸೂಚಿಸಿದರು. ನಂತರ ಮಹಾಗಾಂವಿಯ ಗುರುಲಿಂಗಸಿದ್ಧಕವಿಗಳು ಇದುವರೆಗೆ ರಚಿಸಿರುವ ಗ್ರಂಥಗಳನ್ನೂ ಸ್ವಾಗತಪರವಾದ ಪದ್ಯಗಳನ್ನೂ ನೋಡಿ ಕನ್ನಡದ ಕವಿತಾಚಾತುರ್ಯವುಳ್ಳವರೆಂಬುವದಕ್ಕಾಗಿ (ಕನ್ನಡಕವಿತಿಲಕ) ವೆಂಬ ನಾಮವನ್ನು ಸರ್ವಜನ ಸಮ್ಮತಿಯಿಂದ ದಯಪಾಲಿಸಿ ಹರಸಿದರು. ಆಮೇಲೆ ಮಾಸ್ತರರ ಪ್ರಾರ್ಥನೆಯ ಮೇರೆಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪರೀಕ್ಷೆಯನ್ನು ತೆಗೆದುಕೊಂಡು ಚೆನ್ನಾಗಿ ಅಭ್ಯಾಸಿಸುವ ಬಡ ವಿದ್ಯಾರ್ಥಿಗಳ ಪುಸ್ತಕಗಳ ವೆಚ್ಚಕ್ಕಾಗಿ ನಾಲ್ಕುರೂಪಾಯಿಗಳನ್ನು ಸಮಾಜಸೇವಾಧುರಂಧರರಾದ ಮಹಾಗಾಂವ ಸಂಗಶೆಟ್ಟಿಗೌಡರ ಹಸ್ತದಿಂದ ಕೊಡಿಸಿ ವಿದ್ಯಾರ್ಥಿನಿಯರಲ್ಲಿ ಚೆನ್ನಾಗಿ ಓದಿದ ಪೋ|| ಪಾ|| ರಾಚಪ್ಪನವರ ಪುತ್ರಿ ಗಂಗಾಬಾಯಿಗೆ ಸ್ತ್ರೀಧರ್ಮನೀತಿ ಎಂಬ ಪುಸ್ತಕವೂ ಗೌರಮ್ಮನೆಂಬ ವಿದ್ಯಾರ್ಥಿನಿಗೆ ಸಾವಿತ್ರಿಯೆಂಬ ಪುಸ್ತಕವೂ ಇನ್ನುಳಿದವರಿಗೆ ಬಾಲಿಕಾಗೀತೆಗಳೂ ಬಹುಮಾನವಾಗಿ ಕೊಡಲ್ಪಟ್ಟವು. ನಂತರ ತಾಂಬೂಲಾದಿಗಳಿಂದಲೂ ಗುಚ್ಛತುರಾಯಿಗಳಿಂದಲೂ ಸಭಿಕರನ್ನು ಸತ್ಕರಿಸಿ ಕನ್ನಡಕವಿತಿಲಕ ಗುರುಲಿಂಗಪ್ಪನವರಿಂದ ರಚಿತವಾದ ಮಂಗಲವನ್ನು ಹಾಡಿ ನಮ್ಮನ್ನಾಳುವ ಉಸ್ಮಾನ್ ಬಾದಶಹರ ಜಯಧ್ವನಿಯೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವಪ್ರತ್ಯಕ್ಷದರ್ಶಿ.

ಪಾಲುಬಿಡುಗಡೆ ನೋಟಿಸ್.

ಅರ್ಸೀಕೆರೆಯಲ್ಲಿ ಮೇಣೀನಹಳ್ಳಿ ಯಂ. ಚನ್ನಬಸವಪ್ಪ, ಯಂ. ರಾಮೈಯ ಎಂಬ ನಾವಿಬ್ಬರು ಜಾಯಿಂಟನಲ್ಲಿ ಮೇಲ್ಕಂಡ ಹೆಸರಿನಿಂದ ಮಂಡಿವ್ಯಾಪಾರಮಾಡುತ್ತಿದ್ದೆವು. ತಾ|| 19-12-1921 ರಲ್ಲಿ ಕಾರಣಾಂತರಗಳಿಂದ ಯಂ. ರಾಮೈಯ್ಯನಾದ ನಾನು ನನ್ನ ಪಾಲುದಾರ್ ಯಂ. ಚನ್ನಬಸವಪ್ಪನವರಿಗೇನೇ ಮೇಲ್ಕಂಡ ಮಂಡಿ ಆಡಳಿತಗಳನ್ನೆಲ್ಲಾ ವಹಿಸಿಕೊಟ್ಟು ನಾನು ಬಿಡುಗಡೆಹೊಂದಿ ಸದರಿಯವರಿಂದ ಪಂಚಾಯಿತರ ಸಮಕ್ಷಮುಕ್ತ್ಯಮವಾದ ರಸೀದಿವಗೈರೆಗಳನ್ನು ಪಡೆದಿರುತ್ತೇನಾದ್ದರಿಂದ ಮೇಲ್ಕಂಡ ತಾರೀಖು ಲಾಗಾಯ್ತು ಲೇವಾದೇವಿ ಮತ್ತು ಪ್ರತ್ಯವ್ಯವಹಾರಗಳೆಲ್ಲಾ ಸದರಿ ಯಂ. ಚನ್ನಬಸಪ್ಪನವರಿಗೆ ಸಂಬಂಧಪಟ್ಟದ್ದೆಂದು ಮತ್ತು ಎಲ್ಲಕ್ಕೂ ಅವರೇ ಜವಾಬ್ದಾರರಾಗಿದ್ದಾರೆಂದು ಈ ಮೂಲಕ ಕೃತಪಡಿಸಿದ್ದೇನೆ.

ರುಜು
ಯಂ. ರಾಮೈಯ್ಯ.

ಶ್ರೀ ಬಸವೇಶ್ವರ ಜಯಂತಿ ಉತ್ಸವ ಸಲುವಾಗಿ ಶ್ರೀ ಬಸವೇಶ್ವರನ ಖಾಸ ಫೋಟೋ ತರಿಸಿಕೊಳ್ಳಿ. ೧೮ × ೧೨ ಸಾಯಿಜ ಪ್ರತಿ ೧ಕ್ಕೆ ೦-೮-೦ ಕೈಬಣ್ಣದ್ದು ಪ್ರತಿ ೧ಕ್ಕೆ ರೂ ೧. ಟ. ಖ. ಬೇರೆ. ಇದರ ಹೊರ್ತು ನಮ್ಮಲ್ಲಿ ಶ್ರೀ ಚನ್ನಬಸವೇಶ್ವರ ಜನ್ಮ, ಶ್ರೀ ಅಲ್ಲಮಪಾದಪೂಜಾ, ಶ್ರೀ ಮಡಿವಾಳ ಮಾಚಿದೇವಮಹಿಮಾ, ಶ್ರೀ ಬಸವೇಶ್ವರ ಸಂಗಮೈಕ್ಯ, ಕಾಶಿ, ಕೇದಾರ, ಬಾಳಿಹಳ್ಳಿ, ಪರ್ವತ, ಉಜ್ಜನಿ, ಮೂಲಪಂಚಾಚಾರ್ಯರು ಲಿಂಗದಲ್ಲಿ ಉದ್ಭವಿಸಿದ ಫೋಟೋಗಳು ಶ್ರೀ ಹನುಮಾನ ಲಿಂಗಧಾರಣ ಮುಂತಾದ ದೇವಾದಿಕರ ಫೋಟೊಗಳು ಸಿಗುತ್ತವೆ ಕ್ರಯ ಫು|| ಸಾ|| ಪ್ರತಿ ೧ಕ್ಕೆ ರೂ. ೧-೪-೦, ಕ್ಯಾ|| ಸಾ|| ಕ್ಕೆ ರೂ. ೦-೧೨-೦ ಟ. ಖ. ಬೇರೆ. ಗಡಿಯಾರ ಸರಪಣಿಗೆ ಹಚ್ಚುವ ಸುಂದರ ಫೋಟೋ ಲಾಕೆಟಗಳು ಸಿಗುತ್ತವೆ. || ಸ್ಟಾಂಪು ಕಳಿಸಿ ಕ್ಯಾಟಲಾಕು ತರಿಸಿಕೊಳ್ಳಿ.

ಗಂಗಪ್ಪ ಜೇರಿಗೆ
ಫೋಟೋ ಆರ್ಟಿಸ್ಟ ಸೋಲಾಪೂರ ಸಿಟಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

೧೯೨೨ನೆಯ ಇಸವಿ ಏಪ್ರಿಲ್ ತಾ|| ೨೩ರಿಂದ ೧೯೨೨ನೆಯ ಏಪ್ರಿಲ್ ತಾ|| ೨೯ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿ ನಾಮಸಂವತ್ಸರದ ಚೈತ್ರಬಹುಳ ದ್ವಾದಶಿಯಿಂದ ವೈಶಾಖ ಶುದ್ಧ ಬಿದಿಗೆ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷಮಾ
23	ಭಾನು	ದ್ವಾದ	56.6	ಪೂಭಾ	51.7	11
24	ಸೋಮ	ತ್ರಯೋ	60	ಉಭಾ	57.38	12
25	ಮಂಗಳ	ತ್ರಯೋ	0.53	ರೇವ	60	13
26	¹ಬುಧ	ಚತು	5.3	ರೇವ	3.8	14
27	²ಗುರು	ಅಮಾ	8.11	ಅಶ್ವಿ	7.48	15
28	ಶುಕ್ರ	ಪಾಡ್ಯ	10.8	ಭರ	11.19	16
29	ಶನಿ	ಬಿದಿ	10.51	ಕೃತ್ತಿ	13.41	17

(1) ಸರ್ವತ್ರಅಮಾವಾಸ್ಯೆ. (2) ಕರಗವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿಕ್ಕೈಸಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಏಪ್ರಿಲ್ ತಾರೀಖು ೩೦ ನೆಯ ಭಾನುವಾರ (ಸಂಚಿಕೆ ೧೮

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್ಫ್ಲೂಯನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
16 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ವಾಪಸ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲಿ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ಆರೋಗ್ಯತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 14

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿಮಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿಮಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್ ಡಿಪೋ ಪ್ರೆಸ್,
13 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
17 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬುರ್ಗಾ.

ಗೆಜ್ಜೆಕಟ್ಟದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಾರಿ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 7

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಟಪಾಲು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಲಗ್ನಕಾಲ.

ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಕಾಣಿಕೆಯನ್ನೆತ್ತಿ ಕಳುಹಿಸಿಕೊಡುವ ಕೆಲಸವನ್ನು ಮರೆಯಬೇಡಿರಿ.

ಸ್ಥಳದ ಪ್ರಮುಖರೂ ವಿದ್ಯಾರ್ಥಿಗಳೂ ಈ ವಿಷಯದಲ್ಲಿ ಮುತುವರ್ಜಿ ವಹಿಸಿ ಲಗ್ನಕಾಲದಲ್ಲಿ ಮೊದಲು ವಿದ್ಯಾಭಿವೃದ್ಧಿ ಫಂಡಿಗೆ ಉಚಿತವಾದ ಕಾಣಿಕೆಯನ್ನು ತೆಗೆದು ಕಳುಹಿಸುವುದರಿಂದ ಉಂಟಾಗುವ ವಿದ್ಯಾದಾನವೆಫಲ ಸಮಾಜಸೇವಾ ಪುಣ್ಯ— ಇತ್ಯಾದಿಗಳನ್ನು ತಿಳಿಯಹೇಳಿ ಎಲ್ಲ ಡಿಸ್ಟ್ರಿಕ್ಟ ತಾಲ್ಲೂಕು ಹೋಬಳಿ ಗ್ರಾಮಾಂತರಗಳಲ್ಲೆಲ್ಲಾ ಈ ಕಾಣಿಕೆಯನ್ನೆತ್ತಿ ಬೆಂಗಳೂರಿನಲ್ಲಿರುವ ವಿದ್ಯಾಭಿವೃದ್ಧಿ ಫಂಡ್ ಸೆಕ್ರೆಟೆರಿಯವರಲ್ಲಿಗೆ ಕಳುಹಿಸುವಲ್ಲಿ ತಪ್ಪಬಾರದು.

ವ. ಪ್ರ.

ವಿಜ್ಞಾಪನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಜನರಲ್ ಕಮಿಟಿ ಮೀಟಿಂಗು 1922 ನೇ ಇಸವಿ ಮೇ ತಾ|| 27 ನೇ ಶನಿವಾರ ಸಾಯಂಕಾಲ 4 ಘಂಟೆಗೆ ಸರಿಯಾಗಿ ಬೆಂಗಳೂರಲ್ಲಿರುವ ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ನಡೆಯಬೇಕೆಂದು ನಿರ್ಧಾರವಾಗಿರುವುದರಿಂದ ತಾವು ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

(1) ಕಳೆದ ಜನರಲ್ ಕಮಿಟಿ ಮೀಟಿಂಗಿನ ತಾ|| 3-7-21 ರಿಂದ ತಾ|| 27-5-22 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.

(2) ಸೆಕ್ರೆಟರಿಯವರ ರಿಪೋರ್ಟು.

(3) ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರನ್ನು ಚುನಾಯಿಸುವುದು.

(4) ಇತರ ವಿಷಯಗಳು (ಮೆಂಬರುಗಳಿಂದ ಒಂದು ವಾರ ಮುಂಚಿತವಾಗಿ ಯಾವುದಾದರೂ ತಿಳುಹಿಸಲ್ಪಟ್ಟದ್ದು ಮೀಟಿಂಗಿನಲ್ಲಿ ಇಡಲ್ಪಟ್ಟರೆ)

ಬೆಂಗಳೂರು.
ತಾ|| 26-4-22.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್. ಬಿ.,
ಸೆಕ್ರೆಟರಿ, ಮೈಸೂರು ವೀರಶೈವ
ವಿದ್ಯಾಭಿವೃದ್ಧಿ ಫಂಡ್ ಸಂಘ.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಏಪ್ರಿಲ್ ತಾ|| ೩೦ ನೆಯ ಭಾನುವಾರ.

ತಾಮಸಕೋಲಾಹಲ

ಸರ್ ಎಂ. ಕಾಂತರಾಜ ಅರಸಿನವರು ದಿವಾನಗಿರಿಯಲ್ಲಿದ್ದಾಗ ಯಾವಯಾವ ಕಾರಣದಿಂದಲೋ ಅವರನ್ನು ದ್ವೇಷಿಸಿ ದೂಷಿಸುತ್ತಿದ್ದ ತಾಮಸಾತ್ಮಕರಿಗೆ ಅವರು ಉದ್ಯೋಗದಿಂದ ನಿವೃತ್ತರಾದ ಬಳಿಕ ಮತ್ತಷ್ಟು ಬಾಯಿತೀಂಟೆಯನ್ನು ತೀರಿಸಿಕೊಳ್ಳಲು ಹಬ್ಬವಾಗಿದೆ. ಸ್ವದೇಶದ ಪತ್ರಿಕೆಗಳಲ್ಲೇ ಅಲ್ಲದೆ ಮದ್ರಾಸು ಮಂಗಳೂರು ಮೊದಲಾದ ಕಡೆಯ ವೃತ್ತಪತ್ರಿಕೆಗಳಿಗೆಲ್ಲಾ ಇವರುಗಳು ಲೇಖನಗಳನ್ನು ಬರೆದು ಅರಸಿನವರು ಜಾತಿ ಮತದ್ವೇಷವನ್ನು ಹೆಚ್ಚಿಸಿದರೆಂದೂ, ಅವರಕಾಲದಲ್ಲಿ ಸಂಸ್ಥಾನದ ಆಡಳಿತವೆಲ್ಲಾ ಕೆಟ್ಟುಹೋಯಿತೆಂದೂ, ಬಾನರ್ಜಿಯವರಿಗೆ ಔತಣಮಾಡಿ ಬ್ರಿಟಿಷ್ ಸರ್ವೀಸಿಗೆ ಕಳುಹಿಸಿಬಿಡಬೇಕೆಂದು ಪ್ರಯತ್ನಿಸಿಕೊಂಡಿದ್ದ ಅರಸಿನವರಿಗೆ ೧ ವಾರ ಕಾಲದೊಳಗಾಗಿ ಪಾರ್ಶ್ವವಾಯು ಕಾಣಿಸಿಕೊಂಡು ತಾವೇ ಫರ್ಲೋ ಹಿಲ್ಲಿಗೆ ಹೋಗಿ ಬಾನರ್ಜಿಯವರೇ ದಿವಾನಗಿರಿ ಮಾಡುವಂತಾಯಿತೆಂದೂ, ಅವರು ಕೃತಕರ್ಮಕ್ಕನುಸಾರವಾದ ಫಲವನ್ನು ಅನುಭವಿಸಿದರೆಂದೂ ಮೊದಲಾಗಿ ಕೋಲಾಹಲ ಮಾಡುತ್ತಿರುವುದೇ ಅಲ್ಲದೆ, ಅವರಮದುವೆಯ ಕಾಲದಲ್ಲಿ ಅರಮನೆಗೆ ಬೆಂಕಿಬಿದ್ದು ಸುಟ್ಟುಹೋಯಿತು ಎಂಬುದನ್ನು ಕೂಡ ಆಡಿಕೊಂಡು ತಮ್ಮ ಅಸೂಯಾಗ್ನಿಯನ್ನು ಶಾಂತಿಪಡಿಸಿಕೊಂಡಿದ್ದಾರೆ. ದ್ವೇಷವು ಎಂಥವರ ವಿವೇಕವನ್ನೂ ಹಾಳುಮಾಡುವುದೆಂಬುದು ಸುಳ್ಳಲ್ಲ. ಇಂಥ ಬರವಣಿಗೆ ಬರೆಯಲಿಕ್ಕೂ ಹೇಸದಂಥ ಅಜ್ಞಸ್ಥಿತಿಗೆ ಅವರುಗಳು ಬಂದಿರುವುದನ್ನು ನೋಡಿದರೆ ವಿಷಾದವಾಗುತ್ತದೆ.

ಕೃತಕರ್ಮಕ್ಕನುಸಾರವಾದ ಫಲವನ್ನು ಅನುಭವಿಸುವುದು ಲೋಕದಲ್ಲಿರುವ ಸರ್ವರಿಗೂ ಸಿದ್ಧವಾದುದು. "ಪಾಪೀ ಚಿರಾಯುಃ" ಎಂಬಂತೆ ಬಹುಕಾಲ ಬದುಕಿ ಕಪಟನಾಟಕದಿಂದ ಯಾವಯಾವ ತೆರದ ದ್ರೋಹಾಚರಣೆಗಳನ್ನು ಮಾಡಿದುದರಿಂದ ಯಾವಯಾವ ತೆರದ ವಿಪತ್ತಿಗೆ ಗುರಿಯಾಗಿ ಕುಳಿತಿರುವೆನೆಂಬುದು ಅವರವರಿಗೇ ಗೊತ್ತು. ಸರ್ ಕಾಂತರಾಜ ಅರಸಿನವರ ದಿವಾನಗಿರಿಯು ಬೇಗನೆ ಮುಕ್ತಾಯಗೊಳ್ಳುವುದಕ್ಕೂ ಅವರ ಕೃತಕರ್ಮವೇ ಕಾರಣವೆಂಬುದು ಸಹಜ. ಅವರು ತಮ್ಮ ದೇಹಾರೋಗ್ಯವನ್ನು ಸರಿಯಾಗಿ ಕಾಪಾಡಿಕೊಳ್ಳದೇ ಇದ್ದುದೇ ಅವರು ಮಾಡಿದ ದುಷ್ಕರ್ಮ. ಅದರಿಂದಲೇ ಅಷ್ಟು ಬೇಗನೆ ಅವರು ನಿವೃತ್ತರಾಗಬೇಕಾಯಿತು. ಅವರು ಅರೋಗದೃಢಕಾಯರಾಗಿದ್ದರೆ ಇನ್ನೂ ನಾಲ್ಕಾರು ವರ್ಷಗಳು ಅದೇ ಪದವಿಯಲ್ಲಿದ್ದು ಈಗಣ ಆರ್ಥಿಕವೈಷಮ್ಯ ಸ್ಥಿತಿಯಿಂದ ಸಂಸ್ಥಾನವು ಉದ್ಧಾರಗೊಂಡು ಒಂದು ಸ್ಥಿಮಿತಕ್ಕೆ ಬಂದುನಿಲ್ಲುವಂತೆ ಮಾಡುವವರೆಗೂ ನಿವೃತ್ತರಾಗುತ್ತಲೇ ಇರಲಿಲ್ಲ; ಶ್ರೀಮನ್ಮಹಾರಾಜರು ಕೂಡ ನಿವೃತ್ತಿಮಾಡಿಸುತ್ತಿರಲಿಲ್ಲ. ಅದು ಹಾಗಿರಲಿ. ಅವರ ಕಾಲದಲ್ಲಿ ಜಾತಿ ಮತದ್ವೇಷಗಳು ಹೆಚ್ಚಿದುವೆಂದೂ ಅದಕ್ಕೆ ಅವರು ಉಪೋದ್ಬಲಕರಾಗಿದ್ದರೆಂದೂ ಈ ತಾಮಸಾತ್ಮರು ಕೂಗುತ್ತಾರಷ್ಟೆ? ಅದನ್ನಷ್ಟು ವಿಚಾರಮಾಡುವ. ಮಿಲ್ಲರ್ ಕಮಿಟಿ ರಿಪೋರ್ಟನ್ನು ಪ್ಯಾಸ್ ಮಾಡಿ, ವಿದ್ಯಾಭ್ಯಾಸದ ಮೆಮೋರಾಂಡಮ್ಮನ್ನು ಜಾರಿಗೆಬರುವಂತೆ ಮಾಡಿದುದೇ ಜಾತಿ ಮತದ್ವೇಷವನ್ನು ಹೆಚ್ಚಿಸುವುದಕ್ಕೆ ಸಾಧಕವಾದ ಕಾರ್ಯಗಳೆಂದು ಇವರುಗಳು ವಾದಿಸುತ್ತಾರೆ. ಇವೆರಡರಲ್ಲಿ ವಿದ್ಯಾಭ್ಯಾಸದ ಮೆಮೋರಾಂಡಮ್ಮು ಪ್ರಜಾಸಾಮಾನ್ಯದಲ್ಲೂ ವಿದ್ಯಾವ್ಯಾಪನೆಯನ್ನು ಮಾಡಲು ಉದ್ದೇಶವುಳ್ಳದಾಗಿರುತ್ತದೆ. ಮಿಲ್ಲರ್ ಕಮಿಟಿ ರಿಪೋರ್ಟು ವಿದ್ಯಾದಿಯೋಗ್ಯತೆಯನ್ನು ಪಡೆದ ಎಲ್ಲಾ ತೆರದ ಪ್ರಜಾವರ್ಗಕ್ಕೂ ಸಂಸ್ಥಾನದ ಕಾರ್ಯನಿರ್ವಾಹದಲ್ಲಿ ಭಾಗವನ್ನು ಕಲ್ಪಿಸಿಕೊಡುವ ಉದ್ದೇಶವುಳ್ಳದಾಗಿರುತ್ತದೆ. ಇವುಗಳಲ್ಲಿ ಜಾತಿ ಮತದ್ವೇಷವನ್ನು ಹೆಚ್ಚಿಸತಕ್ಕ ಭಾಗವೇನಿದೆ? ಸಂಸ್ಥಾನವನ್ನಾಳತಕ್ಕ ಪ್ರಭುವಿಗೆ ಸರ್ವ ಪ್ರಜೆಗಳನ್ನೂ ಸಮದೃಷ್ಟಿಯಿಂದ ಕಂಡು ಸಕಲ ಪ್ರಜೆಗಳ ಸಮಾನವಾದ ಏಳ್ಗೆಯನ್ನು ಸಾಧಿಸುವುದೇ ಪ್ರಥಮ ಕರ್ತವ್ಯವೆಂಬುದನ್ನು ರಾಜರ್ಷಿಗಳಾಗಿರುವ ನಮ್ಮ ಶ್ರೀಮನ್ಮಹಾರಾಜರು ಪರಿಭಾವಿಸಿ ಮಿಲ್ಲರ್ ಕಮಿಟಿ ರಿಪೋರ್ಟಿನ ಅವತರಣಕ್ಕೆ ಅವರೇ ಆಜ್ಞೆಯಿತ್ತರು. ಅಲ್ಲದೆ ಆಗ್ಗೆ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಕೂಡ ಅದನ್ನು ಅನುಮೋದಿಸಿದ್ದರು. ಅವರ ಕಾಲದಲ್ಲೇ ಇದಕ್ಕೆ ಅಂಕುರಾರೋಪಣವಾದುದು. ಮಿಲ್ಲರ್ ಕಮಿಟಿ ರಿಪೋರ್ಟು ಜಾತಿ ಮತದ್ವೇಷೋತ್ಪಾದಕವಾಗಿದ್ದರೆ ಅಂತಹದನ್ನು ಆರಂಭಮಾಡಿಸಿದ ಶ್ರೀ ಮಹಾಪ್ರಭುಗಳೂ ಸರ್ ಎಂ. ವಿಶ್ವೇಶ್ವರಯ್ಯನವರೂ ಸಹ ಆ ದೋಷಕ್ಕೆ ಪಾತ್ರರಾಗಬೇಕಾಯಿತು. ವಿಚಾರಮಾಡಿ ನೋಡಿದರೆ ಸಂಸ್ಥಾನದಲ್ಲಿ ಜಾತಿ ಮತದ್ವೇಷವನ್ನು ಮಿಲ್ಲರ್ ಕಮಿಟಿ ರಿಪೋರ್ಟೇ ಆಗಲಿ ಮತ್ತಾವುದೇ ಆಗಲಿ ಹುಟ್ಟಿಸಲಿಲ್ಲ. ಸಮುದ್ರದಲ್ಲಿಲ್ಲದಿದ್ದ ವಿಷವನ್ನು ಆದಿಶೇಷನು ಕಡೆತದ ರಭಸವನ್ನು ತಾಳಲಾರದೆ ತಾನಾಗಿ ಕಕ್ಕಿ ಉಂಟುಮಾಡಿದಂತೆ ಕಾಲಚಕ್ರಗತಿಯನ್ನನುಸರಿಸಿ ಜಗತ್ತೆಲ್ಲಾ ಎಚ್ಚತ್ತುಕೊಳ್ಳುತ್ತ ಬಂದುದನ್ನು ನೋಡಿ ಸೈರಿಸಲಾರದ ದುರಾತ್ಮರು ಜಾತಿ ಮತದ್ವೇಷವನ್ನು ಹುಟ್ಟಿಸುತ್ತಿದ್ದಾರೆಯೇ ಹೊರತು ಮತ್ತೆಬೇರೆಯಿಲ್ಲ. ವಿದ್ಯಾಭ್ಯಾಸದ ಮೆಮೋರಾಂಡಮ್ಮಿನಿಂದ ಎಲ್ಲ ಜನರೂ ವಿದ್ಯಾವಂತರಾಗುವುದಕ್ಕೆ ಅವಕಾಶವಾಯಿತು! ಮಿಲ್ಲರ್ ಕಮಿಟಿ ರಿಪೋರ್ಟಿನ ಆಧಾರದಿಂದ ಓದಿ ಪ್ಯಾಸ್ಮಾಡಿದ ಜನರೆಲ್ಲಾ ಸರ್ಕಾರದ ಅಧಿಕಾರದ ಪಾಲಿಗೆ ಬರುವಂತಾಯಿತು! ಮುಂದೇನುಗತಿ! ನಾವು ಹಾಯಾಗಿ ಮೇಯುತ್ತಿದ್ದ ಅಮೃತಮಹಾಲ್ ಕಾವಲಿಗೆ ಇತರ ರಾಸುಗಳೂ ನುಗ್ಗುವಂತಾಯಿತಲ್ಲಾ ಎಂಬ ಅಸೂಯೆಯಿಂದ ಬೆಂದುಬೆಂಡಾದವರು ಮಿಲ್ಲರ್ ಕಮಿಟಿ ರಿಪೋರ್ಟು ಮೊದಲಾದವುಗಳ ಮೇಲೆ ಒಂದು ಕೆಟ್ಟ ಹೆಸರಿಡುವುದಕ್ಕೆ ಆರಂಭಿಸಿದರು. ಅಲ್ಲದೆ ಸ್ವಜನರಲ್ಲದ ಇತರರ ಏಳ್ಗೆಯನ್ನು ಸೈರಿಸಲಾರದ ಹುಟ್ಟುಗುಣವುಳ್ಳ ಈ ಜನರಿಗೆ ಬ್ರಾಹ್ಮಣೇತರರಾದ ಸರ್ ಕಾಂತರಾಜ ಅರಸಿನವರು ದಿವಾನಗಿರಿಗೆ ಬಂದುದು ಹೃದಯಶಲ್ಯವಾದಂತಾಗಿರಲು ಅವರನ್ನೂ ಅವರ ಕಾರ್ಯಭಾರವನ್ನೂ ಯಾವುದಾದರೂ ಅಪಖ್ಯಾತಿಗೆ ಈಡುಮಾಡಬೇಕೆಂಬ ದುರ್ಬುದ್ಧಿಯಿಂದ ಮಿಲ್ಲರ್ ಕಮಿಟಿ ರಿಪೋರ್ಟು ಮತ್ತು ವಿ|| ಮೆಮೋರಾಂಡಮ್ಮು ಜಾತಿ ಮತದ್ವೇಷವನ್ನು ಹೆಚ್ಚಿಸತಕ್ಕವೆಂದೂ ಅವನ್ನು ಪ್ಯಾಸ್ ಮಾಡಿಸಿದ ಅರಸಿನವರೇ ಸಂಸ್ಥಾನದಲ್ಲಿ ಜಾತಿ ಮತದ್ವೇಷವನ್ನು ಹೆಚ್ಚಿಸಲು ಕಾರಣಭೂತರಾದರೆಂದೂ ಕೋಲಾಹಲಮಾಡಲಾರಂಭಿಸಿದರು. ಇವುಗಳ ನೆಪದಿಂದ ಅವರನ್ನು ಆಡಬಾರದ ಮಾತುಗಳನ್ನೆಲ್ಲಾ ಆಡಿ ಬೇಕಾದಷ್ಟು ಪಾಪದ ಬುತ್ತಿಯನ್ನು ಕಟ್ಟಿಕೊಂಡು ಉಣ್ಣುತ್ತಿರುವರು.

ಪ್ರಜಾಮಿತ್ರಮಂಡಲಿಯವರ ಡೆಪ್ಯುಟೇಷನ್ನಿಗೆ ಶ್ರೀಮನ್ಮಹಾರಾಜರು ಉತ್ತರವನ್ನು ಕೊಡುವಾಗ "ಹಿಂದುಳಿದ ಜನವರ್ಗಗಳ ಅಭ್ಯುದಯದಲ್ಲಿ ಮುಂದಾಗಿರುವ ಜನವರ್ಗದವರುಸಾನುಭೂತಿಯುಳ್ಳವರಾಗಿರಬೇಕು." ಎಂದು ಅಪ್ಪಣೆಕೊಡಿಸಿದರು. ಅದಕ್ಕೂ ಕೂಡ ಈ ಜನರು ಮುಸಿ ಒಳೆದರು. ವಿದ್ಯಾಭ್ಯಾಸದ ಮೆಮೊರಾಂಡಮನ್ನೂ ಮಿಲ್ಲರ್‌ಕಮಿಟಿ ರಿಪೋರ್ಟನ್ನೂ ಈ ಜನರು ಯಾವಾಗ ನಿಷೇಧಿಸುತ್ತ ಬಂದರೊ ಆಗಲೇ ಹಿಂದುಳಿದ ಜನವರ್ಗದ ಏಳ್ಗೆಯನ್ನೆಲ್ಲಾ ಇವರು ಸೈರಿಸದೆ ಇರತಕ್ಕವರು ಎಂಬುದು ಇತರಜನರಿಗೆಲ್ಲಾ ಗೊತ್ತಾಗಿಹೋಯಿತು; ಇವರ ಮೇಲಿಟ್ಟಿದ್ದ ವಿಶ್ವಾಸವು ತಪ್ಪೆಂದು ಅವರುಗಳು ತಿಳಿದುಕೊಳ್ಳಬೇಕಾಯಿತು. ದೇಶದ ಬಹುಭಾಗ ಪ್ರಜೆಗಳ ಏಳ್ಗೆಯನ್ನೆಲ್ಲಾ ಯಾವಾಗ ಇವರುಗಳು ದ್ವೇಷಿಸುವುದಕ್ಕಾರಂಭಿಸಿದರೋ ಆಗಲೇ ಅವರೆಲ್ಲಾ ಇವರನ್ನು ದ್ವೇಷಿಸುವುದಕ್ಕವಕಾಶವಾಯಿತು. ಹೀಗಾಗಿ ಜಾತಿಮತದ್ವೇಷವನ್ನು ಇವರುಗಳೇ ಬೆಳೆಯಿಸುತ್ತಿರುವರೇ ಹೊರತು ಮತ್ತಾರೂ ಅಲ್ಲ. ಆದರೂ ಇವರು ಮಾಡುತ್ತಿರುವ ಕೋಲಾಹಲವನ್ನು ನೋಡಿದರೆ ಮನೆಗೆನುಗ್ಗಿದ ಕಳ್ಳನು ತಲೆತಪ್ಪಿಸಿಕೊಂಡುಹೋಗುವ ಸಂದರ್ಭದಲ್ಲಿ "ಕಳ್ಳ ಬಂದ ಕಳ್ಳಬಂದ; ಹಿಡಿಯಿರಿ ಹಿಡಿಯಿರಿ" ಎಂದು ಕೂಗಿಕೊಳ್ಳುತ್ತ ಓಡಿಹೋದ ಸಂದರ್ಭವನ್ನು ಸ್ಮರಣೆಗೆ ತರುತ್ತಲಿದೆ.

ಇವರು ಇಂಥಾ ಕಪಟನಾಟಕವನ್ನಾಡುತ್ತಿದ್ದರೆ ಜಾತಿ ಮತದ್ವೇಷವು ಎಂದಿಗೂ ಶಾಂತವಾಗುವಹಾಗಿಲ್ಲ. ಹಿಂದುಳಿದವರ ಅಭ್ಯುದಯದಲ್ಲಿ ಅಸೂಯೆಯನ್ನು ಇವರು ಮೊದಲು ಬಿಡಬೇಕು. ಅವರ ಏಳ್ಗೆಗೆ ಇವರು ಸಹಾಯಮಾಡುತ್ತಾ ಬಂದರೆ ಇವರ ಪೂಜ್ಯತೆಯೂ ವಿಶ್ವಾಸವೂ ಎಷ್ಟೋವೃದ್ಧಿಯೊಂದುವುವು. ಅಷ್ಟಕ್ಕೆ ಸೈರಣೆಯಿಲ್ಲದಿದ್ದರೆ ತಟಸ್ಥರಾಗಿಯಾದರೂ ಇರಬೇಕು.

ಬಾನರ್ಜಿಯವರೇ ಆಗಲಿ ಮತ್ತಿನ್ನಾರೇ ಆಗಲಿ ದಿವಾನಗಿರಿಗೆ ಬಂದರೂ ವಿ|| ಮೆಮೋರಾಂಡಮನ್ನೂ ಮಿಲ್ಲರ್‌ಕಮಿಟಿ ರಿಪೋರ್ಟನ್ನೂ ಬಳಕೆಗೆ ಬರುವಂತೆ ಮಾಡಿಯೇ ತೀರಬೇಕು. ಸಕಲಪ್ರಜೆಗಳು ವಿದ್ಯಾವಂತರಾಗಿ ರಾಜ್ಯಕಾರ್ಯದಲ್ಲಿ ಎಲ್ಲರೂ ನುರಿಯುವಂತಾಗಬೇಕೆಂಬ ಉದಾತ್ತ ತತ್ತ್ವವನ್ನು ಯಾವ ಅವಿವೇಕಿಯೂ ಮಣ್ಣುಗೂಡಿಸಲಾರನು.

ಈ ತಾಮಸಾತ್ಮರಿಗೆ ಚತುರುಪಾಯದಿಂದಲೂ ಇತರರಲ್ಲಿ ಉತ್ಸಾಹಭಂಗವನ್ನುಂಟುಮಾಡುವ ಮಹಾ ಕೆಟ್ಟಗುಣವೊಂದಿದೆ. ಆಪ್ತವಾದಿಗಳಂತೆ ನಟಿಸಿ ವಿಷಪ್ರಾಶನಮಾಡಿಸುತ್ತಾರೆ. ಇತರರೆಲ್ಲಾ ತಂತಮ್ಮ ಕುಲಕಸಬನ್ನು ಮಾಡಿಕೊಂಡಿರುವುದೇ ಧರ್ಮವೆಂದು ಬೋಧಿಸುತ್ತಾರೆ. ಒಬ್ಬ ಶ್ರೋತ್ರಿಯನ ಮಗನು ಹಣಕೊಯ್ಯುವ ಉದ್ಯೋಗಕ್ಕೆ ಬಂದರೆ ಅದಕ್ಕೆ ಮಾತ್ರ ಸದ್ದೆತ್ತುವುದಿಲ್ಲ. ಬ್ರಾಹ್ಮಣೇತರಾಧಿಕಾರಿಗಳ ಮೇಲೆ ಏನಾದರೂ ಕೆಟ್ಟಕೂಗನ್ನು ಕೂಗಿ ಅಪವಾದಕ್ಕೆ ಗುರಿಮಾಡಬೇಕೆಂಬುದು ಇವರ ದೀಕ್ಷೆಯಾಗಿದೆ. ಅವರು ಸ್ವಜನರಿಗೆ ಉದ್ಯೋಗಗಳನ್ನು ಕೊಟ್ಟರು, ಜಾತಿ ಪಕ್ಷಪಾತವನ್ನು ತೋರಿಸಿದರು ಎಂದು ಮೊದಲಾಗಿ ಯಾವಾಗಲೂ ಬ್ರಾಹ್ಮಣೇತರಾಧಿಕಾರಿಗಳ ಮೇಲೆ ವ್ಯಾಖ್ಯಾನಮಾಡುತ್ತಿರುತ್ತಾರೆ. ಯಾವ ಅಧಿಕಾರಿಯು ತಾನೇ ತನ್ನ ಕೈ ನಡೆಯುವಾಗ ತನ್ನವರಿಗೆ ಸಹಾಯಮಾಡದಿರುವನು? ಹಿಂದುಳಿದ ಜನವರ್ಗದಲ್ಲಿ ವಿದ್ಯಾವಂತರಾಗಿ ಅಂಥ ಸಂಧಿಗಳನ್ನೇ ಕಾದಿದ್ದು ಹುಳುಕುಗಳನ್ನೆಲ್ಲಾ ಎತ್ತಿಹಾಕಿ ಪತ್ರಿಕೆಗಳಿಗೆ ಬರೆದು ಗಲಾಟೆಮಾಡತಕ್ಕವರು ವಿರಳರಾಗಿದ್ದಾರೆ. ಮುಂದಾದ ಜನವರ್ಗದವರಲ್ಲಿ ಅಂಥವರ ಸಂಖ್ಯೆ ವಿಶೇಷವಾಗಿದೆ. ಈ ಕಾರಣದಿಂದಲೇ ಬ್ರಾಹ್ಮಣೇತರಾಧಿಕಾರಿಗಳು ಬೈಲಿಗೆ ಎಳೆಯಲ್ಪಡುತ್ತಲಿರುವುದು. ಅಂತೂ ಈ ತಾಮಸಾತ್ಮರ ಕಪಟನಾಟಕವೇ ಪರಿಹಾಸನಿಂದಾವಚನಗಳೇ ಇತರರನ್ನೆಲ್ಲಾ ತಟ್ಟೆಬ್ಬಿಸಿದುವು. ಅದುಕಾರಣ ಇವರು ಒಂದು ವಿಧದಲ್ಲಿ ಉಪಕರಿಸಿದಂತೆಯೇ ಆಯಿತು; ಮುಂದೆಯೂ ಹೀಗೆಯೇ ಉಪಕರಿಸುತ್ತಿರಲಿ. ಮುಖ್ಯವಾಗಿ ಹಿಂದುಳಿದ ಜನವರ್ಗಗಳೆಲ್ಲಾ ಏಕಮತ್ಯದಿಂದಿದ್ದು ಆತ್ಮರಕ್ಷಣೆಯಲ್ಲಿ ವ್ಯಗ್ರರಾಗಿರಲಿ.

A LABOURED RIGMAROLE.

The professional journalists of our State have started an inglorious campaign against the popular *regime* of Sir. M. Kantaraj Urs as Dewan of Mysore, and one of them Mr. Gundappa of the *Karnataka* fame contributed one of his usual laboured rigmaroles under the title "Mysore Affairs" to the *Hindu* of Madras on the 15th instant covering no less than four long columns in small type. The object of the lengthy contribution seems to us first, to condemn whatever Sir M. Kantaraj Urs did, secondly, to extol whatever Sir M. Visveswaraya did, thirdly, to decry the non-Brahmin movement and lastly to advise the new Dewan Mr. A. R. Bauerji about the administration. The splendid awakening of the masses in recent days this writer, born and having his being in that close priestly oligarchy to which the world cannot furnish another example, calls a "communal cancer," for, how could the people expect anything better from those who have been accustomed for ages to tyrannise over the rest of the people, who from their birth, no matter what their merits were, claimed all the privileges to plunder others, and get worshipped in return. It is funny to talk of communal differences as though they were a latter day manufacture of anybody—while they have been existing for centuries, and further to say that they form a communal cancer, as though these very differences created and crystalised centuries ago for the benefit of the privileged have not been the curse of this ill-fated land and have not driven away all spirit of independence and self-confidence from the Hindu community as a whole. When the time, however belated it was, did come and the unprivileged realised their rights as a result of the selfless work of men like Dr. T. M. Nair, Sir P. Thyagaraya Chetty and Mr. M. Basaviah, the clamour of those who throve on the ancient system became unceasing and vociferous. And if a noble statesman, fired by the imagination of the uplift of these sunken, ignorant masses adopts some measures—themselves far from the full dues they are entitled to—for their redemption, there is at once an exhibition of the worst traits of a selfish, narrow and monopolistic nature in a violent not to say disagreeable and odious manner. It is a pity that those classes who are finding fault with the administration of Sir M. Kantaraj Urs cannot see the high and noble mission he had in view and how righteously he strove for the sake of his country. It is not in the particular measures alone that Sir M. Kantaraj Urs's substantial work is to be appreciated. Its permanence lies in the broadened outlook that he gave to public questions, that they are not to be viewed from the narrow vision of interested classes and, what is worse individuals, but from the popular and mass view on which depends the true progress of any country. The denunciation of irresponsible and immature politicians cannot mar the lasting work of Sir M. Kantaraj Urs and gratitude for his services on behalf of the people of the State is writ large in the heart of every child of the soil.

It is needless to deal with that portion of Mr. Gundappa's article which relates to Sir M. Visveswariah's ideal *regime*. We cannot deny that his administration had its merits but the question remains how far they were overshadowed by its demerits. The writer himself leaves a wide margin in his tribute when he says that Sir M. Visveswariah is to be held responsible for the increase in expenditure and that his work was marred by all the defects arising from hurry, overenthusiasm and unreliable assistance. The fact is, that he knew little of finance, and add to that, he was a spendthrift, fit more for schemes than statesmanship. It is no wonder that in these circumstances what the writer calls his "idealism" turned out to be largely one of a utopian nature, at the terrible expense of the people's money.

It is sad to think that the opposition to popular aspirations continues unabated. This writer in dragging an old story of the Presidential Election of the Bangalore City Municipal Council into prominence says that rather than see a Brahmana elected some of the members absented themselves from the original meeting and the adjourned one—while the fact is that at the first meeting all were present and neither of the candidates got the required number of votes. The whole story of the disagreeable episode is well known to the public and any amount of sugar-coating by the writer will not alter the facts or the situation. In regard to the constitution of the Special Finance Committee, he says that the choice of two of the four non-officials cannot be said to have any merit except that of flattering the clamourous clans. We doubt if there is any class anywhere on earth more clamourous and loud-mouthed than that to which the scribe of the article in question belongs, and is not most of their whole occupation and living dependent on this clamour? Need we ask again what earthly use there is in such writings, in throwing undeserved blame on one of the most disinterested and popular Dewans and in decrying a liberal and steadily growing movement. One thing is certain: it will not help the decriers. We hope with the advent of the new *regime* at least there would be less of such writings from men "who know not what they do."

ಒಳದೇಶದ ವೃತ್ತಾಂತಗಳು.

ಶ್ರೀ ಮದ್ಯುವರಾಜರು ತಮ್ಮ ಪ್ರೈವೇಟ್ ಸೆಕ್ರೆಟರಿಯವರೊಡನೆ ಉದಕಮಂಡಲಕ್ಕೆ ದಯಮಾಡಿಸಿದರು.

ಚನ್ನಪಟ್ಟಣದ ಸಮೀಪದಲ್ಲಿರುವ ಮಹಾದೇಶ್ವರಗ್ರಾಮದಲ್ಲಿ ವಾರಕ್ಕೊಂದುವೇಳೆ ದನಗಳ ಸಂತೆನಡೆಯಲೇರ್ಪಾಟಾಗಿದೆ.

ಬೆಂಗಳೂರಲ್ಲಿರುವ ನ್ಯಾಷನಲ್ ಹೈಸ್ಕೂಲಿನ ಸಹಾಯಾರ್ಥವಾಗಿ ಶ್ರೀಮದ್ಯುವರಾಜರು ೨೦೦೦ ರೂ. ಗಳನ್ನೂ ಮ|| ಬಿ. ವಿ. ಕೃಷ್ಣಯಂಗಾರರು ೧೦೦೦ ರೂ. ಗಳನ್ನೂ ಕೊಟ್ಟಿರುವರು.

ಒಕ್ಕಲಿಗರ ಮಹಾಸಭೆಯು ಚನ್ನರಾಯಪಟ್ಟಣ ತಾ|| ಹಿರೀಸಾವೆಯಲ್ಲಿ ಇದೇ ತಾ|| ೨೧ ಮತ್ತು ೨೨ ರಲ್ಲಿ ಮ|| ಎಂ. ಎಲ್. ಶಾಮೇಗೌಡರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿರುವುದು.

ಕೈಗಾರಿಕೆ ಮತ್ತು ವ್ಯಾಪಾರ ಬೋರ್ಡಿಗೆ ಒಂದನೆಯ ಕೌನ್ಸಿಲರ್ ಮ|| ಪಿ. ರಾಘವೇಂದ್ರರಾಯರು, ವ್ಯವಸಾಯ ಬೋರ್ಡಿಗೆ ಎರಡನೆಯ ಕೌನ್ಸಿಲರ್ ಮಿ|| ಹಂಪಾಹುಸೇನ್ ಸಾಹೇಬರು ಮತ್ತು ವಿದ್ಯಾಭ್ಯಾಸ ಬೋರ್ಡಿಗೆ ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಡಾ|| ಸೀಲ್‌ರವರು ಚೇರ್ಮನ್ನರುಗಳಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯಲ್ಲಿ ಕೆಲದಿನಗಳಿಂದಲೂ ಮೋಡಮುಸಿಕಿಕೊಂಡು ಮಳೆಬರುವ ಚಿನ್ಹೆಯಲ್ಲೇಯಿದ್ದು ಕಳೆದ ಮಂಗಳವಾರ ರಾತ್ರಿ ಒಂದು ಹದ ಮಳೆಯು ಬಂದು ಭೂಮಿಯನ್ನು ಕೊಂಚಮಟ್ಟಿಗೆ ತಂಪುಮಾಡಿತು. ಹೊಲಗಳನ್ನುತ್ತು ಹಸನುಮಾಡಿಕೊಂಡು ಮೇಘವನ್ನೇ ನೋಡುತ್ತಿದ್ದ ರೈತರು ಜೋಳ, ಎಳ್ಳು ಕಾರ್‌ರಾಗಿ ಮೊದಲಾದ ಧಾನ್ಯಗಳನ್ನು ಬಿತ್ತುವ ಸಡಗರದಲ್ಲಿರುವರು. ೨-೩ ದಿನಗಳಿಂದಲೂ ಮಳೆಯು ಬರುವಹಾಗೆ ಆರ್ಭಟಿಸುತ್ತಿದೆ. ಇನ್ನೂ ೨-೩ ದೊಡ್ಡಮಳೆಯು ಬಂದಹೊರತು ದಗೆಯಡಗುವಂತಿಲ್ಲವು.

ಪ್ರೈವೇಟ್ ಸೆಕ್ರೆಟರಿ ಮಿ|| ಮಿರ್ಜಾರವರು, ಏಡಿಕಾಂಗ್ ಸಾರವರು, ಸರದಾರರುಗಳಾದ ಗೋಪಾಲಕೃಷ್ಣ ಅರಸಿನವರು ಮತ್ತು ಎ. ಎ. ಸುಬ್ರಹ್ಮಣ್ಯರಾಜ ಅರಸಿನವರು, ಎಸ್. ಪಿ. ರಾಜಗೋಪಾಲಾಚಾರರು, ಡಾಕ್ಟರ್ ರಂಗಾಚಾರರು ಮತ್ತೆ ಕೆಲ ಮಿತ ಪರಿವಾರದೊಡನೆ ಶ್ರೀಮನ್ಮಹಾರಾಜರವರು ಕಳೆದ ಸೋಮವಾರ ರಾತ್ರಿ ೮|| ಗಂಟೆಯಲ್ಲಿ ಹೆಚ್ಚುಕಟ್ಟಲೆಯ ರೈಲುಬಂಡಿಯಲ್ಲಿ ಸಿಮ್ಲಾ ಪಟ್ಟಣಕ್ಕೆ ಪ್ರಯಾಣಮಾಡಿದರು. ಸಿಲ್ದಾಣದಲ್ಲಿ ದಿವಾನ್ ಮಿ|| ಬಾನರ್ಜಿಯವರು ಮ್ಯು|| ಪ್ರೆಸಿಡೆಂಟರು ಮೊದಲಾದವರು ಶ್ರೀಯವರನ್ನು ಇದಿರ್ಗೊಂಡು ಮರ್ಯಾದಿಸಿ ಬೀಳ್ಕೊಟ್ಟರು.

ದಿವಾನ್ ಮ|| ಬಾನರ್ಜಿಯವರು ಕಳೆದ ಭಾನುವಾರ ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ದರ್ಶನವನ್ನು ತೆಗೆದುಕೊಂಡನಂತರ ಪಟ್ಟಣದ ಕೆಲಪ್ರದೇಶಗಳನ್ನು ಪರಾಮರಿಸಿ ಮಂಗಳವಾರ ರಾತ್ರಿ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣಮಾಡಿದರು. ಮ್ಯು|| ಪ್ರೆಸಿಡೆಂಟರು ಮತ್ತು ಟ್ರಸ್ಟ್‌ಬೋರ್ಡ್ ಚೇರ್ಮನ್ನರಾದ ಮ|| ಶ್ರೀಕಂಠೇಶ್ವರಯ್ಯರ್‌ರವರು ಮ್ಯುನಿಸಿಪಾಲಿಟಿಯ ಹಾಗೂ ಟ್ರಸ್ಟ್‌ಬೋರ್ಡಿನ ಆಡಳಿತದ ಕಾಗದ ಪತ್ರಗಳನ್ನು ಬಂಡಿಗಳ ಮೇಲೆ ತುಂಬಿಸಿಕೊಂಡು ದಿವಾನರಲ್ಲಿಗೆ ಹೋಗಿ ತೋರಿಸಿಬಂದರೆಂದು ವರ್ತಮಾನವಿದೆ. ಮ|| ಬಾನರ್ಜಿಯವರು ಬರೇ ಬಾಯಿ ಮಾತಿಗೆ ಮನಸೋಲುವುದಾದರೆ ಮ|| ಅಯ್ಯರ್‌ರವರು ಅವರನ್ನು ಮರಳುಮಾಡುವುದರಲ್ಲಿ ನಿಪುಣರು. ಮ|| ಬಾನರ್ಜಿಯವರು ರಾಜಧಾನಿಯ ಮ್ಯುನಿಸಿಪಲ್ ಆಡಳಿತದ ನಿಜಸ್ಥಿತಿಯನ್ನು ತಿಳಿಯಬೇಕೆಂಬಿಚ್ಛೆಯುಳ್ಳವರಾಗಿದ್ದಲ್ಲಿ ಬಂಡಿಗಳ ಮೇಲೆ ಕಾಗದಪತ್ರಗಳನ್ನು ತರಿಸಿಕೊಳ್ಳುವುದಕ್ಕೆ ಬದಲು ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಕೆಲವರನ್ನು ಬರಮಾಡಿಕೊಂಡು ವಿಚಾರಮಾಡಿದ್ದರೆ ನಿಜಸ್ಥಿತಿಯು ಹೊರಬೀಳುತ್ತಿದ್ದಿತು. ಇನ್ನೊಂದುವೇಳೆ ಬಂದಾಗಲಾದರೂ ಆರೀತಿ ಮಾಡುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಶ್ರೀಮಂತ ವರ್ಧಮಾನಯ್ಯನವರ ಕುಮಾರಿಯ ವಿವಾಹಮಹೋತ್ಸವ ಸಮಾರಂಭವೆಲ್ಲವೂ ಮುಗಿದಿತು. ಪರಸ್ಥಳದಿಂದ ಬಂದಿದ್ದ ಬಂಧುವರ್ಗವನ್ನೂ ಮಿತ್ರಮಂಡಲಿಯನ್ನೂ ಯೋಗ್ಯತಾನುಸಾರ ಉಡುಗೆರೆಗಳಿಂದ ಮರ್ಯಾದಿಸಿ ಕಳುಹಿಸಿಕೊಡುತ್ತಿರುವರು ಅಲ್ಲದೆ ತಮ್ಮಾಶ್ರಯದಲ್ಲಿರುವ ನೂರಾರು ಜನರಿಗೆ ಬಟ್ಟೆಬರೆಗಳನ್ನು ಕೊಟ್ಟ ಸಂತೋಷಗೊಳಿಸುತ್ತಿರುವರು. ಮಂಗಳವಾರ ರಾತ್ರಿ ನೂತನ ದಂಪತಿಗಳನ್ನು ಮೋಟಾರು ಬಂಡಿಯಲ್ಲಿ ಕುಳ್ಳಿರಿಸಿ ಅರಮನೆಯ ಬಾಲ್ಯ ಬಿರುದಾವಳಿಗಳಿಂದಲೂ ಕರ್ನಾಟಕ ಬ್ಯಾಂಡ್ ವಾದ್ಯ ವಿಶೇಷದಿಂದಲೂ ದೀಪಾವಳಿಗಳಿಂದಲೂ ಸಾವಿರಾರು ಜನರ ಸಮೂಹದಿಂದಲೂ ಉತ್ಸವ ಪೂರ್ವಕವಾಗಿ ಲಕ್ಷ್ಮೀಪುರದಿಂದ ಹೊರಟು ಸಂತೇಪೇಟೆ ದೊಡ್ಡಪೇಟೆಗಳ ಮಾರ್ಗವಾಗಿ ಜೈನಬೋರ್ಡಿಂಗ್ ಹೋಮಿನಲ್ಲಿರುವ ಜಿನದೇವರ ದೇವಸ್ಥಾನಕ್ಕೆ ಕರೆತಂದು ಮಂಗಳಾರತಿ ತೀರ್ಥಪ್ರಸಾದ ಸ್ವೀಕಾರಾನಂತರ ಅಗ್ರಹಾರದ ಮಾರ್ಗವಾಗಿ ಲಕ್ಷ್ಮೀಪುರಂ ಬಂಗಲೆಗೆ ಕರೆದುಕೊಂಡು ಹೋದರು. ಮಹೋತ್ಸವಕ್ಕೆ ಮ|| ರಂಗನಾಥರಾವ್ ಸಾಹೇಬರು, ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರ್ ಎಸ್. ಸುಬ್ಬರಾಯರು ಮೊದಲಾದ ಅಧಿಕಾರಿಗಳೂ ಮ|| ಗಳಾದ ಮಂಡಿ ಹುಲಿಯಣ್ಣ, ಬಿ. ಕೆ. ಗರುಡಾಚಾರರು ಮೊದಲಾದ ದೊಡ್ಡಮನುಷ್ಯರುಗಳೂ ಬಂದಿದ್ದರು. ಅತಿಥಿಗಳ ಸತ್ಕಾರಕ್ಕಾಗಿ ಉತ್ಕೃಷ್ಟವಾದ ಏರ್ಪಾಟು ಮಾಡಲ್ಪಟ್ಟಿದ್ದಿತು.

ವರ್ತಮಾನಸಂಗ್ರಹ.

ಡಾಕ್ಟರ್ ಅನಿಬೆಸೆಂಟಮ್ಮನವರು ಆಸ್ಟ್ರೇಲಿಯಾಕ್ಕೆ ಪ್ರಯಾಣಮಾಡಿ ಹೋದರು.

ತಿಲಕ್‌ಫಂಡಿಗೆ ಬೊಂಬಾಯಿಯ ಒಬ್ಬ ಸೇಟರು ೧ ಲಕ್ಷ ರೂ. ಕೊಟ್ಟರು. ದೇಶಸೇವಾರ್ಥವಾಗಿ ವಕೀಲತನವನ್ನು ಬಿಟ್ಟವರ ಸಹಾಯಾರ್ಥವಾಗೆಂದು ಬೊಂಬಾಯಿಯ ಜಮುನಾಲಾಲ್ ಬಜಾಜ್‌ರವರು ೧ ಲಕ್ಷ ರೂ. ಕೊಟ್ಟರು.

ತಾತಾ ಬ್ಯಾಂಕಿನವರಿಗೆ ಕಳೆದ ಮಾರ್ಚಿ ತಾ|| ೩೧ ಕ್ಕೆ ಕಡೆಯಾದ ವರ್ಷದಲ್ಲಿ ೧೮೬೫೦೦೦ ರೂ. ಗಳ ಲಾಭವು ಬಂದಿದೆ. ಇದರಲ್ಲಿ ೬|| ಲಕ್ಷವನ್ನು ರಿಜರ್ವ್ ಫಂಡಿಗಿಟ್ಟು ಉಳಿದುದನ್ನು ಷೇರ್‌ದಾರರಿಗೆ ಡಿವಿಡೆಂಡ್ ಹಂಚಿದರು.

ವಾಯವ್ಯದ ಕಣಿವೆಯಲ್ಲಿ ಕೆಲವು ಕಳ್ಳರು ಬಡ್ಷಾಹುಗುಲ್ ಎಂಬ ಆಫ್ಘನ್ ಸುಲಿಗೆಗಾರರನ್ನು ಮುಂದಿಟ್ಟುಕೊಂಡು ಒಂದು ಗ್ರಾಮಕ್ಕೆ ನುಗ್ಗಿ ಕೆಲವು ಸೊತ್ತುಗಳನ್ನು ಅಪಹರಿಸಿ ಮೂವರನ್ನು ಸೆರೆಹಿಡಿದುಕೊಂಡು ಓಡುತ್ತಿದ್ದರು. ಅಷ್ಟರಲ್ಲಿ ಬ್ರಿಟಿಷ್ ಪೊಲೀಸರು ಬೆನ್ನಂಟೆ ಕಾಳಗಮಾಡಲಾಗಿ ಕಳ್ಳರ ಪ್ರಮುಖನು ಸತ್ತನು; ಇನ್ನು ಕೆಲವರಿಗೆ ಗಾಯವಾಯಿತು. ಸೆರೆಹಿಡಿಯಲ್ಪಟ್ಟಿದ್ದವರನ್ನೂ ಬಿಡಿಸಿಕೊಂಡು ಬಂದರು.

ಅಸಹಾಯವಾದಿಗಳಿಗಿರುವ ಆಯುಧಧಾರಣದ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಪ್ರಭುತ್ವಾಧಿಕಾರಿಗಳು ಆರಂಭಮಾಡಿದ್ದಾರೆ. ಕಾಶೀ ಜಿಲ್ಲಾ ಮೇಜಿಸ್ಟ್ರೇಟರು ಕಾಶಿಯ ಸುಪ್ರಸಿದ್ಧರಾದ ಬಾಬು ಭಗವಾನ್‌ದಾಸ್ ಎಂಬ ಅಸಹಾಯವಾದಿಗಳಿಗೆ ನೋಟೀಸ್ ಕೊಟ್ಟು ಆಯುಧಧಾರಣದ ಹಕ್ಕನ್ನು ನೀವು ಉಪಯೋಗಿಸಕೂಡದೆಂದು ತಿಳಿಯಪಡಿಸಿದ್ದಾರೆ. ಅದಕ್ಕೆ ಇವರು ಕೊಟ್ಟ ಉತ್ತರವನ್ನು ಮೇಜಿಸ್ಟ್ರೇಟರು ಲಕ್ಷಿಸಲೇ ಇಲ್ಲ.

ಅಮೃತಬಜಾರ್ ಪತ್ರಿಕೆಯ ಮುಖ್ಯ ಸಂಪಾದಕರಾದ ಬಾಬು ಮೋತೀಲಾಲ್ ಘೋಷರು ೬ ತಿಂಗಳಿಂದಲೂ ತುಂಬಾ ಅಸ್ವಸ್ಥರಾಗಿ ಈಗ ಅಂತ್ಯಾವಸ್ಥೆಯಲ್ಲಿದ್ದಾರೆ. ಇವರನ್ನು ಕಾಣುವುದಕ್ಕಾಗಿ ಜೆ. ಪಟೇಲರೂ ಕಂಗಟೂರಿ ಪ್ರಕಾಶಂರವರೂ ಹೋಗಿರಲು, ಘೋಷರು ಅವರಿಗೆ ಮಾಡಿದ ಅಂತ್ಯೋಪದೇಶವೇನೆಂದರೆ-ಶಾಸನಸಭೆಗಳಿಗೆ ಉಮೇದುವಾರರಾಗಿ ನಾವು ಎಂದೆಂದಿಗೂ ನಿಲ್ಲಬಾರದು. ಮೊದಲಿಂದಲೂ ಗಾಂಧಿಯವರೂ ನಾನೂ ಅದನ್ನೇ ಹೇಳುತ್ತಿದ್ದೇವೆ. ಏಕೆಂದರೆ ಅಲ್ಲಿಗೆ ಹೋಗಿ ಸೇರಿದರೆ ಅಲ್ಲಿಯ ವಿಷಗಾಳಿಯು ತಗಲುವುದು.

ಒಬ್ಬ ಮಹಮ್ಮದೀಯನು ಮುಲ್ಲನ ಉಡುಪುಗಳನ್ನು ಧರಿಸಿ, ಒಬ್ಬ ಬಿಲ್ಲೆಯ ಜವಾನನ ಕೈಲಿ ಚಂದಾಪಟ್ಟಿಯ ಪುಸ್ತಕವನ್ನು ಹಿಡಿಸಿಕೊಂಡು ಬಹಳ ಆಟ್ಟಹಾಸದಿಂದ ಮೊಟ್ಟಮೊದಲು ಕಲೆಕ್ಟರಲ್ಲಿಗೆ ಬಂದು ನಾನುದ್ದೇಶಿಸಿರುವ ಧರ್ಮಶಾಲೆಯನ್ನು ಕಟ್ಟಿಸಲು ದ್ರವ್ಯಸಹಾಯ ಮಾಡಬೇಕೆಂದು ಪ್ರಾರ್ಥಿಸಿದುದರ ಮೇಲೆ ಕಲೆಕ್ಟರು ೨ ರೂ. ಗಳನ್ನು ಕೊಟ್ಟು ಪುಸ್ತಕದಲ್ಲಿ ಬರೆದರು. ಆ ವೇಷಧಾರಿ ಮುಲ್ಲನು ೨ ಸಂಖ್ಯೆಯ ಮುಂದೆ ಒಂದು ಸೊನ್ನೆಯನ್ನು ಹಾಕಿ ೨೦ ರೂ. ಮಾಡಿ ಸೆಷನ್ಸು ಜಡ್ಜರಲ್ಲಿಗೆ ಹೋಗಿ ಕಲೆಕ್ಟರು ಬರೆದಿರುವುದನ್ನು ತೋರಿಸಿ ಸಹಾಯಮಾಡಬೇಕೆಂದು ಕೇಳಿಕೊಳ್ಳಲು ಜಡ್ಜಿಯರು ೧೫ ರೂ. ಗಳನ್ನು ಕೊಟ್ಟರು. ಅಲ್ಲಿಂದ ಆಫೀಸಿನ ಇತರ ಕೆಲಸಗಾರರಿಂದಲೂ ತಕ್ಕಮಟ್ಟಿಗೆ ಸಹಾಯವಾಯಿತು. ಆ ದಿವಸ ಸಾಯಂಕಾಲ ಕಲೆಕ್ಟರೂ ಜಡ್ಜಿಯರೂ ಕ್ಲಬ್ಬಿನಲ್ಲಿ ಕಲತು ಮಾತನಾಡುವಾಗ್ಗೆ ಮುಲ್ಲನಿಗೆ ಸಹಾಯಮಾಡಿದ ಪ್ರಸ್ತಾಪ ಬಂದು ತಾವು ಕೊಟ್ಟ ಚಂದಾಮೊಬಲಗನ್ನು ತಿದ್ದಿದ್ದಾನೆಂದು ಗೊತ್ತಾಗಿ ಆ ಮುಲ್ಲನನ್ನು ಸೆರೆ ಹಿಡಿಸಿ ವಿಚಾರಣೆಗೆ ಗುರಿಮಾಡಿದರು. ಆ ಮುಲ್ಲನು ವಿಚಾರಣೆ ಕಾಲದಲ್ಲಿ ಕಲೆಕ್ಟರು ೨ ರೂ. ಕೊಟ್ಟರೆಂದು ಜನರಿಗೆ ತಿಳಿದಲ್ಲಿ ಅವರ ಗೌರವಕ್ಕೆ ಕಡಿಮೆಯೆಂಬುದರ ಮೇಲೆ ೨೦ ರೂ. ಎಂದು ತಿದ್ದಿರುತ್ತೇನೆ ವಿನಾ ಮೋಸಮಾಡಬೇಕೆಂಬ ದುರಭಿಪ್ರಾಯದಿಂದಲ್ಲವೆಂದು ವಾದಿಸಿದನಂತೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಜಯಂತ್ಯುತ್ಸವಗಳು.

ವೈಶಾಖ ಶುದ್ಧ ಬಿದಿಗೆ ಶ್ರೀ ಬಸವೇಶ್ವರಜಯಂತಿ, ವೈಶಾಖ ಶುದ್ಧ ತದಿಗೆ ಶ್ರೀ ಏಕೋರಾಮಾರಾಧ್ಯರ ಜಯಂತಿ, ವೈಶಾಖ ಶುದ್ಧ ಪಂಚಮಿ ಶ್ರೀ ದಾರುಕಾಚಾರ್ಯರ ಜಯಂತಿ, ಈ ಪ್ರಕಾರ ಪುಣ್ಯತಿಥಿಗಳಲ್ಲಿ ಜಯಂತ್ಯುತ್ಸವಗಳನ್ನು ಪ್ರತಿವರ್ಷ ಪದ್ಧತಿಮೇರೆಗೆ ಜರುಗಿಸಿ ಯಶೋಭಾಗಿಗಳಾಗಬೇಕೆಂದು ವಿಜ್ಞಾಪಿಸುತ್ತೇವೆ.

ಸಿಂಧೂರ,
ಚನ್ನವೀರೇಶವಾಚನಮಂದಿರ ಸೆಕ್ರೆಟರಿ,
ಆಲೂರು (ಹಾನಗಲ್ಲು).

ಧಾರವಾಡದ ವೀರಶೈವ ಬೋರ್ಡಿಂಗ್ ವಿದ್ಯಾರ್ಥಿಗಳು.

ಮೈಸೂರು ಪ್ರಾಂತ್ಯದಲ್ಲಿ ಇಕ್ಷ್ವಾಕ್ಕುಯಂಚಾ ಕಾಯಿಲೆಯು ಪ್ರಾರಂಭವಾದ್ದರಿಂದ ವಿದ್ಯಾರ್ಥಿಗಳು ಈ ವರ್ಷ ಶ್ರೀ ಸಿದ್ಧಗಂಗಾಕ್ಷೇತ್ರ ಮೈಸೂರು ರಾಜಧಾನಿಗಳಿಗೆ ಹೊರಡಬೇಕಾದ್ದ ಪ್ರವಾಸವನ್ನು ನಿಲ್ಲಿಸಿ ಕಲ್ಯಾಣ ಕಲಬುರ್ಗಿ ಸೊಲ್ಲಾಪುರ ಶ್ರೀ ಶಿವಯೋಗಿಮಂದಿರ ಕ್ಷೇತ್ರಗಳ ದರ್ಶ

ನಾರ್ಥವಾಗಿ ಹೊರಡುವ ನಿರ್ಧರವಾಗಿ ತಾರೀಖು ೨೫-೪-೨೨ ನೇ ದಿವಸ ಗದಗ ಬಾಗಲಕೋಟೆ ಮಾರ್ಗವಾಗಿ ಪ್ರಯಾಣಮಾಡಿದರು.

ಶ್ರೀ ಬೋರ್ಡಿಂಗ್ ವಿದ್ಯಾರ್ಥಿ.

ಕೂಡ್ಲಿಗಿ ತಾ|| ಹೂಲಿಕೆರೆ.

ಯುಗಾದಿ ಹಬ್ಬದಲ್ಲಿ ಪ್ರತಿವರ್ಷವೂ ನಿಶ್ಚಯಿಸಲ್ಪಟ್ಟ ಪ್ರಕಾರ ತಾ|| 31-3-1922 ರಲ್ಲಿ ವೀರಶೈವ ಮತಾಚಾರಜ್ಞಾನೋಪದೇಶಕ ಸಂಘದ ಸಭೆಯು ಜೋಗಿಹಳ್ಳಿ ಮಹಾಪುರದ ಮಠಾಧ್ಯಕ್ಷರಾದ ವೆ|| ಚಂದ್ರಶೇಖರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಮ|| ಹೂಲಿಕೆರೆಗ್ರಾಮದಲ್ಲಿರುವ ಸಂಘದ ಕಾರ್ಯದರ್ಶಿಗಳಾದ ವಿ. ಯಾ. ವೀರಭದ್ರಗೌಡರಿಂದ ನಿರ್ವಿಘ್ನವಾಗಿ ನೆರವೇರಿಸಲ್ಪಟ್ಟಿತು. ಕೆಲವು ವಿದ್ವಾಂಸರಿಂದ ಉಪನ್ಯಾಸಗಳು ಹೇಳಲ್ಪಟ್ಟವು. ತರುವಾಯ ಅಧ್ಯಕ್ಷರು ಸಭೆಯ ಮುಖ್ಯೋದ್ದೇಶವನ್ನೂ, ವೀರಶೈವ ಮತಸಿದ್ಧಾಂತದ ಸರ್ವೋತ್ಕೃಷ್ಟತೆಯನ್ನೂ, ಪಾರಮಾರ್ಥಿಕ ತತ್ವವಿಚಾರಪರತೆಯ ಶ್ರೇಷ್ಠತ್ವವನ್ನೂ ವಿಶದವಾಗಿ ಗಂಭೀರವಾಣಿಯಿಂದ ಸಭಿಕರೆಲ್ಲರಿಗೂ ಮಹಾನಂದ ಉಂಟಾಗುವಂತೆಯೂ, ಬೋಧೆಯಾಗುವಂತೆಯೂ ಉಪನ್ಯಸಿಸಿದರು. ಆಮೇಲೆ ಸಂಗೀತವೂ ನಡೆದು ಸಭಿಕರಿಗೆಲ್ಲಾ ಗಂಧ ತಾಂಬೂಲಾದಿಗಳು ಸಮರ್ಪಿಸಲ್ಪಟ್ಟ ನಂತರ ಸರ್ವಾಂತರ್ಯಾಮಿಯಾದ ಜಗದೀಶ್ವರನ ಧ್ಯಾನಪೂರ್ವಕವಾದ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರೇಕ್ಷಕ.

ಅರುಹುವುಳ್ಳ ಸದ್ಗುರುವು.

ಶ್ರೀಮನ್ಮ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಧಾರವಾಡ ಕಾವೇರಿಸೇಟಿ ಮುರುಘಾಮಠದ ಶ್ರೀ ಪಾಠಶಾಲಾ ಮತ್ತು ಬೋರ್ಡಿಂಗ ಮ್ಯಾನೇಜಿಂಗ ಕಮಿಟಿಯು ತಾರೀಖು ೨೩-೪-೨೨ನೆ ದಿವಸ ಕೂಡಿದಾಗ್ಗೆ ನೌಕರರಲ್ಲಿ ಅಂತಃಕರಣವುಳ್ಳ ಶ್ರೀ ಮೃತ್ಯುಂಜಯಸ್ವಾಮಿಗಳವರು ಯೋಗ್ಯ ಕೆಲಸಮಾಡುವವರಿಗೆ ಬಹುಮಾನ ಕೊಡುವ ವಿಷಯವನ್ನು ಕಮಿಟಿಯಲ್ಲಿಡಿಸಿದರು. ವೇ|| ಚೆನ್ನಬಸವಯ್ಯ ಹೇಮಗಿರಿ ಮಠ ಬನ್ನಿಕೊಪ್ಪ ಇವರು ಬೋರ್ಡಿಂಗಿನ ಯಾವತ್ತು ನೇಮಗಳ ಸುಧಾರಣೆ ಮತ್ತು ಸುವ್ಯವಸ್ಥೆಯ ಬಗ್ಗೆ ಕಳಕಳಿಯಿಂದ ಉತ್ತಮ ಕೆಲಸಮಾಡಿದ ಬಗ್ಗೆ ಮರ್ಯಾದೆಕೊಡುವ ವಿಷಯವು ಕಮಿಟಿಯ ಅಧ್ಯಕ್ಷರಿಂದ ಸೂಚಿಸಲ್ಪಟ್ಟಿ ಗುರುಸಿದ್ದಪ್ಪ ಅಂಗಡಿ ಇವರ ಅನುಮೋದನವಾಗಿ ಸರ್ವಾನುಮತದಿಂದ ಒಂದುನೂರ ಇಪ್ಪತ್ತು ರೂಪಾಯಿಗಳನ್ನು ಬಹುಮಾನವಾಗಿ ಕೊಡುವ ಠರಾವು ಪಾಸಾಯಿತು. ಮನಃಪೂರ್ವಕ ಕೆಲಸ ಮಾಡುವವರಿಗೆ ಈ ರೀತಿ ಉತ್ತೇಜನಗಳು ದೊರೆದರೆ ಮುಂದೆ ಕೆಲಸಮಾಡತಕ್ಕವರು ತೃಪ್ತಿಯಿಂದ ಕೆಲಸಮಾಡುವರು ಇದರಿಂದ ಕೆಲಸಮಾಡುವ ಮತ್ತು ಮಾಡಿಸುವವರಲ್ಲಿ ಸಂತೋಷವು ಅಭಿಮಾನವು ನೆಲೆಗೊಳ್ಳುವದು. ವಿದ್ಯಾರ್ಥಿಗಳಿಗೆ ಕ್ಷೇತ್ರ ಪ್ರವಾಸಮಾಡಿಸಬೇಕೆಂಬ ಆನಂದದಿಂದ ಈ ಹಿಂದೆ ಐದು ವರ್ಷಗಳಲ್ಲಿಯೂ ಬೋರ್ಡಿಂಗ ವಿದ್ಯಾರ್ಥಿಗಳಿಗೆ ಒಂದೊಂದು ಕ್ಷೇತ್ರಪ್ರವಾಸಮಾಡಿಸುತ್ತಿದ್ದ ಶ್ರೀ|| ಗಳವರು ಈಸಾರೆ ಕಲ್ಯಾಣ, ಕಲಬುರ್ಗಾ, ಸೊಲ್ಲಾಪುರ ಶಿವಯೋಗ ಮಂದಿರ ಮುಂತಾದ ಕ್ಷೇತ್ರಗಳಿಗೆ ಹೋಗುವ ವಿಷಯವನ್ನು ಕಮಿಟಿಯಲ್ಲಿ ಮಂಜೂರ ಮಾಡಿಸಿರುವ ಪ್ರಕಾರ ಈ ದಿವಸ ಮಠದಲ್ಲಿ ಶ್ರೀ ಶಿವಯೋಗೀಶ್ವರರ ಪೂಜಾ ಆರಾಧನೆಗಳನ್ನು ನಡಿಸಿ ವಿದ್ಯಾರ್ಥಿ ವೃಂದದೊಡನೆ ಆನಂದದಿಂದ ಹುಬ್ಬಳ್ಳಿಗೆ ಪ್ರಯಾಣ ಬೆಳಸಿದರು. ಸಮಾಜದ ಉದ್ಧಾರವನ್ನೇ ಮುಖ್ಯಧ್ಯೇಯವಾಗಿಟ್ಟುಕೊಂಡು ಕಾರ್ಯಚಾಲಕರಲ್ಲಿ ಪೂರ್ಣ ಅಭಿಮಾನವಹಿಸಿ ಪ್ರೋತ್ಸಾಹಿಸಿ ಭಾವೀಸಂಪತ್ತಿನಭಾಗ್ಯವಾಗಿರುವ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಪ್ರಯತ್ನಪಡುತ್ತಿರುವ ಗುರುಗಳೇ ಅರುಹುವುಳ್ಳ ಸದ್ಗುರುಗಳಾಗಿರುವರಲ್ಲವೆ ?

ಶ್ರೀ ಬೋರ್ಡಿಂಗ ಚೇರ್‌ಮನ್, ಶಿವಪ್ಪ ಮಟ್ಟಿ.

ಹೊಸಹುಲುಬು.

ಯಾವಧರ್ಮದಲ್ಲಿ ಸಾಕಾದಷ್ಟು ವಚನಗ್ರಂಥಗಳು ತಕ್ಕಷ್ಟು ಪುರಾಣಗಳೂ ಮಾರ್ಮಿಕ ಧರ್ಮಗ್ರಂಥಗಳೂ ಅಸಾಧಾರಣ ವೇದಶಾಸ್ತ್ರಾಗಮ ಪ್ರಮಾಣಗಳೂ ಇರುವವೋ ಆ ಧರ್ಮವೇಪರಿಪೂರಣ ಧರ್ಮವೆನಿಸುವದು. ಅಂಥ ಧರ್ಮಕ್ಕೆ ಯಾವಕಾಲದಲ್ಲಾದರೂ ಗೌರವಹೆಚ್ಚಿದ್ದು ಅದು ಎಲ್ಲರ ಆದರಕ್ಕೂ ತಕ್ಕದ್ದಾಗಿರುತ್ತದೆ. ನಮ್ಮ ವೀರಶೈವ ಧರ್ಮದಲ್ಲಿ ಅತ್ಯುತ್ತಮ ಪುರಾತನರ ವಚನ ಗ್ರಂಥಗಳಿಗೂ, ಮೇಲಾದ ಪುರಾಣಗಳಿಗೂ ಸಿದ್ಧಾಂತ ಶಿಖಾಮಣಿಯೇ ಮೊದಲಾದ ಮಹತ್ವ ಗ್ರಂಥಗಳಿಗೂ ಯಾವಕೊರತೆಯೂ ಇರುವದಿಲ್ಲ. ನಮ್ಮ ಮತದ ಪಿತ್ರಾರ್ಜಿತ ಆಸ್ತಿ ಎನಿಸುವ ಈ ಧಾರ್ಮಿಕ ಗ್ರಂಥಗಳಲ್ಲಿ ಕೆಲವು (ಗ್ರಂಥಗಳು) ಜೀನನಬದಿಕು ನುಸಿಮುಟ್ಟಿತೆಂಬ ಸಾಮ್ಯದಂತೆ ಹಾಳಾಗಿರುವದೂ ಮತ್ತು ಹಾಳಾಗುತ್ತಿರುವದೂ ನಮ್ಮ ದುರ್ದೈವದವೇಸರಿ. ಹೋದಷ್ಟು ಹೋಗಲಿ, ಇನ್ನೂ ಪ್ರಿಂಟಾಗದೆ ಹಾಗೆಯೂಲೆ ಮುಕ್ಕಟ್ಟನಲ್ಲಿ ಅರಿವೆಯಮೇಲೆ ಅರವಿಯನ್ನು ಹಾಕಿ ಬಿಗಿಬಿಗಿದು ಕಟ್ಟಿಟ್ಟ ಗ್ರಂಥಗಳನ್ನು ಪ್ರಂಟಿಗೆಕೊಟ್ಟು ಪ್ರಸಿದ್ಧಮಾಡುವದು ಒಳ್ಳೇದಲ್ಲವೇ ! ನಮ್ಮಲ್ಲಿ ಆಗಿಹೋದ ಪುರಾತನರು ಬಹಳ ಮಹತ್ವಶರು. ಅವರ ಸರಳ ಕನ್ನಡವಚನಗಳು ವೇದವಾಕ್ಯಕ್ಕೆ ಸರಿಯಾಗಿರುವವು. ಸಧ್ಯದಲ್ಲಿ ಪ್ರಾಕ್ತನ ವಿಮರ್ಶ ವಿಚಕ್ಷಣರಾದ ರಾವಬಹದ್ದೂರ್ ಆರ್ ನರಸಿಂಹಾಚಾರ್ಯ ಎಂ. ಎ. ಎಂ. ಆರ್. ಎಸ್. ಬೆಂಗಳೂರ ಇವರು ನಮ್ಮ ಪುರಾತನರ ವಚನಗಳನ್ನು ಬಹು ಶ್ರಮಪಟ್ಟು ಶೋಧಿಸಿ ಮಾದರಿಗಾಗಿ ಕೆಲವು ವಚನಗಳನ್ನು ತಮ್ಮ ಕರ್ನಾಟಕ ಕವಿಚರಿತ್ರೆಯಲ್ಲಿ ಪ್ರಕಟಿಸಿ ವೀರಶೈವರ ಮೇಲೆ ಮಹದುಪಕಾರಮಾಡಿರುವರು. ಅನ್ಯರು ನಮ್ಮ ದೆಸೆಯಿಂದ ಇಷ್ಟೊಂದು ಶ್ರಮಪಡುತ್ತಿರುವಾಗ ನಮ್ಮ ಧರ್ಮನಿಧಿ ಎನಿಸುವ ಮತಗ್ರಂಥಗಳನ್ನೂ ನಾವು ಶೋಧಿಸದೇ ಇರುವದು ಎಂಥ ಲಜ್ಜಾಸ್ಪದವಮಾತು ? ಧರ್ಮಸುಧಾರಣೆಗಾಗಿ ಹೋರಾಡುವ ಪ್ರತಿಯೊಬ್ಬ ಮನುಷ್ಯನ ಆದ್ಯ ಮತ್ತು ಅತ್ಯ ಕರ್ತವ್ಯವೆಂದರೆ ಗ್ರಂಥಶೋಧನೆ ಮಾಡಿ ಪ್ರಕಟಿಸುವದಿರುತ್ತದೆ. ಇಂಥಮಹತ್ವ ವ್ಯಕ್ತಿಗಳೇ ಸಮಾಜದ ಸರ್ವ ಗೌರವಕ್ಕೆಪಾತ್ರರು. ಸಧ್ಯದಲ್ಲಿ ವೇ|| ಶಾಂತವೀರಸ್ವಾಮಿ ನಿಶಾನಿಮಠ ದಾವಣಗೆರೆ ಇವರಲ್ಲಿ ಅನೇಕ ವಚನಗ್ರಂಥಗಳರಾಶಿ ಇದ್ದು ಅವುಗಳನ್ನು ಅವರು ಪ್ರಕಟಿಸತಕ್ಕವರಿರುವರೆಂದು ಕೇಳಿದ್ದೇನೆ. ಪ್ರತಿಯೊಬ್ಬರ ವಚನಗಳು ಬಹಳ ಮಹತ್ವವುಳ್ಳವಿರುವಕಾರಣ ಸದರಿಯವರು ಅವುಗಳನ್ನು ತೀವ್ರಪ್ರಕಟಿಸಿದರೆ ಸಮಾಜಕ್ಕೆ ಬಹಳ ಪ್ರಯೋಜನಕಾರಿಯಾಗುವದೆಂದು ಕೋರುವ.

ಸಜ್ಜನವಿಧೇಯ
ಆರ್. ಎಸ್. ಕೋಟಗಿ.

ಶ್ರೀಬಾಳೆಹಳ್ಳಿ ಜಗದ್ಗುರು ರೇಣುಕಾಚಾರ್ಯ ಪೀಠದ ನೂತನ ಪಟ್ಟಾಧಿಕಾರ.

ಶ್ರೀ ಬಾಳೆಹಳ್ಳಿ ಸಂಸ್ಥಾನವು ವೀರಶೈವಸಮಾಜಾಂತರ್ಗತವಾದ ಪಂಚಗುರು ಪೀಠಗಳಲ್ಲಿ ಒಂದಾಗಿದೆ. ಈ ಪೀಠಗಳೆಲ್ಲಾ ನಮ್ಮ ಸಮಾಜದ ಧಾರ್ಮಿಕ, ನೈತಿಕ, ಸಾಮಾಜಿಕ ಸುವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕೋಸ್ಕರ ಪೂರ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಗಳಾಗಿವೆ. ಇವುಗಳು ಪ್ರಾಚೀನಕಾಲದಲ್ಲಿ ಸಮಾಜದ ಕ್ಷೇಮಚಿಂತನದಲ್ಲಿ ನಿರತವಾಗಿಯೂ, ವೀರಶೈವಧರ್ಮಕ್ಕೆ ಮೂಲಾಧಾರವಾಗಿಯೂ ಇದ್ದು ಬಹು ಪ್ರಾಶಸ್ತ್ಯವನ್ನು ಹೊಂದಿದ್ದುವು. ಇತ್ತೀಚಿಗೆ ಸಮಾಜದ ದುರ್ದೈವದಿಂದ ಈ ಗುರುಸ್ಥಾನಗಳು ವಿದ್ಯಾವಿಹೀನರ ಕೈವಶವಾಗಿ ಕ್ರಮೇಣ ಹೀನಸ್ಥಿತಿಯನ್ನು ಪಡೆಯಲಾರಂಭಿಸಿದವು. ಈ ಸ್ಥಾನಗಳಲ್ಲಿ ನೆಲಸಿದ ಪಟ್ಟದಚರಮೂರ್ತಿಗಳು ವಿದ್ಯಾವಿಹೀನರಾಗಿಯೂ, ಕರ್ತವ್ಯಜ್ಞಾನರಹಿತರಾಗಿಯೂ, ಆಚಾರದಲ್ಲಿ ದುರ್ಲಕ್ಷ್ಯವುಳ್ಳವರಾಗಿಯೂ, ವಿನೋದಶೀಲರಾಗಿಯೂ, ಮೆರೆಯುತ್ತಾ ಈ ಗುರುಪೀಠಗಳ ಯೋಗ್ಯತೆಯನ್ನೆಲ್ಲಾ ಕ್ಷೀಣಗೊಳಿಸಿದರು. ಅನ್ಯಮತೀಯರು ಈ ವೀರಶೈವಧರ್ಮವನ್ನೂ ಮತ್ತು ಧರ್ಮಪ್ರಕಾಶಕರನ್ನೂ ಅನುತವಾಗಿ ನಿಂದಿಸಿದರೂ ಕೇಳುವವರೇ ದಿಕ್ಕಿಲ್ಲದಂತಾಯಿತು ! ಯಜಮಾನನಿಲ್ಲದ ಕುಟುಂಬದೋಪಾದಿಯಲ್ಲಿ ಸಮಾಜವೆಲ್ಲಾ ಛಿದ್ರಿಸಿ ಧರ್ಮಜ್ಞಾನವಿಲ್ಲದೆ ಮೌಢ್ಯಾಚರಣೆಗಳಿಂದಲೂ, ಪರಸ್ಪರ ದ್ವೇಷಾಸೂಯೆಗಳಿಂದಲೂ, ತುಂಬಿತುಳುಕುವಂತಾಯಿತು. ಈ ದುಷ್ಪರಿಣಾಮಗಳಿಗೆಲ್ಲಾ ಈ ಪಂಚ ಪೀಠಗಳ ಕ್ಷೀಣಗತಿಯೇ ಕಾರಣವಲ್ಲವೇ ? ಇಂಥಾ ದುಸ್ಥಿತಿಯು ಇನ್ನು ಮುಂದಾದರೂ ಸಂಭವಿಸದಂತೆ ಎಚ್ಚತ್ತು ಕೊಳ್ಳುವುದು ಸಮಾಜ ಹಿತಚಿಂತಕರಾದ ಪ್ರತಿಯೊಬ್ಬರ ಪವಿತ್ರ ಕರ್ತವ್ಯವಾಗಿದೆ. ಸಮಾಜವೆಂದರೆ ಒಂದು ದೊಡ್ಡ ಕಟುಂಬವಲ್ಲವೇ ? ಇದಕ್ಕೋಸ್ಕರ ಈಗಿನಕಾಲಕ್ಕನುಸರಿಸಿ ನೂತನ ಪದ್ಧತಿಗಳನ್ನು ಕಲ್ಪಿಸಿಕೊಂಡು ಈ ಸಂಸ್ಥಾನಗಳನ್ನು ಪುನರುಜ್ಜೀವಿಸುವುದಕ್ಕೆ ಸರ್ವರೂ ಪ್ರಯತ್ನಿಸುವುದು ಅವಶ್ಯಕವಾಗಿದೆ. ಈಗಿನಕಾಲದ ಪ್ರತಿಯೊಂದು ಸಂಸ್ಥೆಯೂ ರಾಜ್ಯಾಡಳಿತವೂ ಪ್ರಜಾಸತ್ತಾತ್ಮಕವಾಗಿವೆ ಎಂಬುದನ್ನೂ ಎಲ್ಲರೂ ತಿಳಿದಿರುವರಷ್ಟೆ ? ಇದರಂತೆಯೇ ನಮ್ಮ ಧರ್ಮಸಂಸ್ಥೆಗಳಾದರೂ ಪ್ರಜಾನುರಾಗಕ್ಕೆ ಪಾತ್ರಗಳಾಗಬೇಕಾದರೆ ಪ್ರಜೆಗಳ ಸಮ್ಮತಿಯಿಂದಲೇ ಎಲ್ಲಾ ಕಾರ್ಯಗಳು ನಿರ್ವಹಿಸಲ್ಪಡಬೇಕು. ಪ್ರತಿಯೊಂದು ಪೂಜ್ಯಸ್ಥಾನದಲ್ಲಿಯೂ ಪ್ರಜೆಗಳಿಂದ ಆರಿಸಲ್ಪಟ್ಟ ಚರಮೂರ್ತಿಗಳು ಮಹಾಸ್ಥಾಪಕರೂ ಇರಬೇಕು. ಮೊಟ್ಟಮೊದಲು ಇಂಗ್ಲೀಷು ಮತ್ತು ಸಂಸ್ಕೃತ ಭಾಷಾಭಿಜ್ಞರಾಗಿಯೂ, ಸತ್ಕುಲಪ್ರಸೂತರಾಗಿಯೂ ಆಯಾಯ ಪೀಠದ ಸೂತ್ರದವರಾಗಿಯೂ, ಧರ್ಮಾಚರಣೆಯುಳ್ಳವರಾಗಿಯೂ, ಮಾಜಹಿತಚಿಂತಕರಾಗಿಯೂ ಇರತಕ್ಕ ವಟುಗಳನ್ನು ಬರಮಾಡಿಕೊಳ್ಳಬೇಕು. ಅವರೊಳಗೆ ಅತ್ಯಂತ ಶ್ರೇಷ್ಠತೆಯನ್ನು ಹೊಂದಿದವರನ್ನು ಆರಿಸುವುದಕ್ಕೋಸ್ಕರ ಒಂದು ತಿಂಗಳು ಮುಂಚಿತವಾಗಿ ಸಮಾಜದವರೆಲ್ಲರಿಗೂ ಪ್ರಸಿದ್ಧಪತ್ರಿಕೆಗಳ ಮೂಲಕವೂ, ವರ್ತಮಾನಪತ್ರಗಳ ಮೂಲಕವೂ, ತಿಳುವಳಿಕೆಯನ್ನು ಕೊಡಬೇಕು. ನಿಯಮಿತಕಾಲಕ್ಕೆ ಸಭೆಯನ್ನು ಸೇರಿಸಿ ಬಹುಮತದ ಪ್ರಕಾರ ಯೋಗ್ಯರಾದ ಗುರುವರ್ಯರನ್ನು ಚುನಾಯಿಸಬೇಕು. ಈ ಪ್ರಕಾರವಾಗಿ ಆರಿಸಲ್ಪಟ್ಟ ಮೂರ್ತಿಗಳು ಸರ್ವಮಾನ್ಯರಾಗಿಯೂ, ಪೂಜ್ಯಸ್ಥಾನಕ್ಕೆ ಭೂಷಣಪ್ರದರಾಗಿಯೂ ಇದ್ದಲ್ಲಿ ಸಮಾಜವು ಅಭ್ಯುದಯವನ್ನು ಪಡೆಯಲಿಕ್ಕೆ ಅವಕಾಶವಾಗುವುದು. ಈ ಪದ್ಧತಿಯನ್ನು ಬಿಟ್ಟು ಕೇವಲಕುತಂತ್ರಗಳಿಂದಲೂ, ದುರಭಿಮಾನದಿಂದಲೂ, ಸ್ವಾರ್ಥದೃಷ್ಟಿಯಿಂದಲೂ ಅನರ್ಹರಾದವರನ್ನು ತಂದಿಡುವುದು ಕೇವಲ ಲಜ್ಜಾಸ್ಪದವಾಗಿದೆ. ಒಂದುವೇಳೆ ಅಕ್ರಮವಾಗಿ ಯೋಗ್ಯತೆಯಿಲ್ಲದವರನ್ನು ಆರಿಸಿದರೆ ಅಂಥವರನ್ನು ಗುರುಗಳೆಂದು ಯಾರೂ ಮನ್ನಿಸಲಾರರು. ಈ ನವೀನ ಪ್ರಗತಿಯನ್ನು ಕಣ್ತೆರದು ನೋಡಿ ಈ ಧರ್ಮಸಂಸ್ಥೆಗಳ ಅಭಿವೃದ್ಧಿಯ ಕಡೆಗೆ ಗಮನಿಸಬೇಕಾದುದು ಸಮಾಜಹಿತಾಪೇಕ್ಷಿಗಳ ಕರ್ತವ್ಯವಾಗಿರುವುದರಿಂದ ಈ ಸಮಾಜಮುಖಂಡರೂ, ಮಠಾಧಿಕಾರಿಗಳೂ, ವರ್ತಮಾನಪತ್ರಿಕಾಕರ್ತರೂ, ಈ ಮಹತ್ಕಾರ್ಯಕ್ಕೆ ನೆರವಾಗಿ ಸಹಕರಿಸುವುದು ಅವಶ್ಯಕವಾಗಿದೆ. ಇದರಂತೆಯೇ ಘನ ಮೈಸೂರು ಸರ್ಕಾರದವರೂ ಸಹ ತಮ್ಮ ಮುಜರಾಯಿ ಇಲಾಖೆಗೊಳಪಟ್ಟ ಈ ಬಾಳೆಹಳ್ಳಿ ಸಂಸ್ಥಾನದ ವ್ಯವಸ್ಥೆಯಮೇಲೆ ದೃಷ್ಟಿಯನ್ನಿಡಬೇಕೆಂದು ಕೋರುತ್ತೇವೆ. ಸರ್ವಸಮಾಜಗಳ ಹಿತವನ್ನೂ ಕೋರುವುದು ಸರ್ಕಾರದವರ ಕರ್ತವ್ಯವಲ್ಲವೇ ? ಪ್ರಕೃತದಲ್ಲಿ ಎಡೆಹಳ್ಳಿ ತಾಲ್ಲೂಕು ಬಾಳೆಹಳ್ಳಿ ಪೀಠಾಧ್ಯಕ್ಷರು ಶಿವಾಧೀನರಾಗಿ 4 ತಿಂಗಳು ಕಳೆದರೂ ಈ ಮುಂದಿನ ಪಟ್ಟದ ಮೂರ್ತಿಗಳನ್ನು ಚುನಾಯಿಸುವುದಕ್ಕಾಗಿ ಯಾವಯಾವ ಪ್ರಯತ್ನಗಳು ನಡೆದಿರುತ್ತವೆಂಬುದು ಪ್ರಕಟವಾಗಿಲ್ಲ. ಇನ್ನುಮೇಲಾದರೂ ಮೇಲಿನ ಸೂಚನೆಯಪ್ರಕಾರ ಯೋಗ್ಯರಾದ ಮೂರ್ತಿಗಳನ್ನು ಆರಿಸತಕ್ಕ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಗಳು ಸಾಗಬೇಕೆಂದು ಕೋರುತ್ತೇವೆ. ಇಂಥಹವರು ಚುನಾಯಿಸಲ್ಪಡುವವರೆಗೂ ಸರ್ಕಾರದವರು ಈ ಪೀಠದ ಬಾಬತು ಭೂಮಿಕಾಣಿಗಳು ಅನ್ಯಾಕ್ರಾಂತವಾಗದಂತೆ ಸರ್ಕಾರಿ ಆಫೀಸರುಗಳಿಂದ ಝುಡತಿ ತೆಗೆದುಕೊಂಡು ಮೇಲ್ವಿಚಾರಣೆಗೊಳಪಡಿಸಿಕೊಂಡರೆ ಮಹದುಪಕಾರ ಮಾಡಿದಂತೆ ಎಣಿಸುತ್ತೇವೆ. (ಈ ಮಹತ್ಕಾರ್ಯವು ಸಮಾಜದವರಿಗೆಲ್ಲಾ ಅನ್ವಯಿಸಿರುವುದರಿಂದ ಈ ಲೇಖದ ಪ್ರತಿಗಳನ್ನು ಶ್ರೀ ಬಾಳೆಹಳ್ಳಿ ಪೀಠದ ಕಾರಬಾರಿಗಳಿಗೂ ಇನ್ನುಳಿದ ಪೀಠಾಧಿಕಾರಿಗಳಿಗೂ ಜನಗಳ ತಿಳುವಳಿಕೆಗೋಸ್ಕರ ವರ್ತಮಾನಪತ್ರಗಳಲ್ಲಿ ಪ್ರಕಟಿಸುವಂತೆ ಮೈಸೂರು ಸ್ಟಾರ್ ಸಂಪಾದಕರಿಗೂ ಶ್ರೀ ಜಗದ್ಗುರು ಶೂನ್ಯಸಿಂಹಾಸನಾಧಿಕಾರಿಗಳಿಗೂ, ಮತ್ತು ಮೈಸೂರು ಸರ್ಕಾರದವರಿಗೂ ಸಹ ಕಳುಹಿಸಿರುತ್ತೇವೆ ಈ ಕಾರ್ಯದ ಮಹತ್ವವನ್ನು ಗ್ರಹಿಸಿ ಎಲ್ಲರಿಗೂ ಮಾನ್ಯವಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಜರುಗಿಸುವುದು ಅವಶ್ಯಕ.

ವೀರಶೈವ.

ಅಥಣಿ ಯಾತ್ರೋತ್ಸವವು.

ಮಹಾನುಹಿಮಾನ್ವಿತರಾಗಿ ಪ್ರಖ್ಯಾತಿಗೊಂಡಿದ್ದ ಅಥಣಿ ಗಚ್ಚಿನಮಠದ ಶ್ರೀ ಮುರಘೇಂದ್ರ ಶಿವಯೋಗಿಗಳ ಜ್ಞಾಪಕಾರ್ಥವಾಗಿ ಪ್ರತಿವರ್ಷವೂ ರಥೋತ್ಸವವನ್ನು ನಡೆಯಿಸಬೇಕೆಂಬದಾಗಿ ಈ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗೇಶ್ವರ ಚರಮೂರ್ತಿಗಳು ಮತ್ತು ಇಲ್ಲಿಯ ಪ್ರಮುಖ ಸದ್ಗೃಹಸ್ಥರುಗಳು ಆಲೋಚನಸಭೆಯನ್ನು ಸೇರಿಸಿ ವಿಚಾರಮಾಡುವಲ್ಲಿ ಸಮಸ್ತಜನಗಳು ಶ್ರೀ ತಪಸ್ವಿಗಳ ವಿಷಯದಲ್ಲಿ ತಮಗಿರುವ ಅತ್ಯುತ್ಕಟವಾದ ಭಕ್ತಿಗನುಗುಣವಾಗಿ ನಾನು ತಾನೆಂಬದಾಗಿ ಮುಂಬರಿದು ಸಾವಿರಾರು ರೂಪಾಯಿಗಳಿಗೆ ಮೇಲ್ಪಟ್ಟು ದ್ರವ್ಯವನ್ನು ಮತ್ತು ಈ ಕಾರ್ಯಕ್ಕೆ ಬೇಕಾಗಿರುವ ಇತರ ಅನುಕೂಲತೆಗಳನ್ನು ಸಹಾಯಮಾಡಿದುದರಿಂದ ಈ ಮುಂದೆ ವಿವರಿಸುವ ಪ್ರಕಾರ ಕಾರ್ಯಕ್ರಮಗಳು ಜರುಗಿಸಲ್ಪಟ್ಟವು. ಇದೇ ದುಂದುಭಿನಾಮಸಂವತ್ಸರದ ಚೈತ್ರ ಶುದ್ಧ ೧೩ ಸೋಮವಾರ ಬೆಳಿಗ್ಗೆ ಶ್ರೀ ಗದ್ದುಗೆಯಲ್ಲಿ ಮಹಾರುದ್ರಾಭಿಷೇಕಾದಿ ಪೂಜಾಸಮಾರಂಭವು ತರುವಾಯ ಪಲ್ಲಕ್ಕಿಯ ಉತ್ಸವವು, ಸಾಯಂಕಾಲದಲ್ಲಿ ಶ್ರೀ ಪುರಾಣಶ್ರವಣ ಶಿವಭಜನೆಯು ಜರುಗಿತು. ಪೂರ್ಣಿಮಾ ಮಂಗಳವಾರ ಶ್ರೀ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಗಣಸಂತರ್ಪಣೆಯು, ಸಾಯಂಕಾಲಕ್ಕೆ ಶ್ರೀ ಸಿದ್ಧೇಶ್ವರ ದೇವಸ್ಥಾನದ ಬಳಿಯಲ್ಲಿ ಜಟ್ಟಿಗಳಕುಸ್ತಿ ಮೊದಲಾದ ಆಟಬಾಟಗಳು ನಡದವು. ತಾ|| ೧೨-೪-೨೨ನೆ ಪ್ರತಿಪದ ಬುಧವಾರ ಮಹಾಗಣಾರಾಧನೆಯು ಉತ್ಸವಕ್ಕಾಗಿ ಬಂದಿದ್ದ ಎಲ್ಲಾ ಜನಗಳಿಗೂ ಅನ್ನಸಂತರ್ಪಣೆಯು ನಡೆದ ನಂತರ ಸಾಯಂಕಾಲ ೬ ಘಂಟೆಗೆ ಶ್ರೀ ರಥೋತ್ಸವವು ಮಠದಿಂದ ಹೊರಟು ಬಹುವಿಧವಾದ ವಾದ್ಯಧ್ವನಿಗಳಿಂದಲೂ, ಶಿವಭಜನೆಯವರಸುನಾದ ಶ್ರವಣದಿಂದಲೂ, ಪ್ರೇಕ್ಷಕರಿಗೆ ಪರಮಾನಂದವನ್ನುಂಟುಮಾಡತಕ್ಕದ್ದಾಗಿ ಗವೀಮಠದ ವರೆಗೆ ನಡದು ಅಲ್ಲಿಂದ ತಳಿರುತೋರಣ ಧ್ವಜಪತಾಕೆಗಳಿಂದಲೂ, ದೀಪಾವಳಿಗಳಿಂದಲೂ, ನೀರಾಜನಗಳನ್ನೆತ್ತಿ ಪುಷ್ಪ ಫಲಾದಿಗಳನ್ನರ್ಪಿಸುತ್ತಿರುವ ಸದ್ಭಕ್ತಾದಿಗಳಿಂದಲೂ, ಮನೋಹರವಾಗಿ ಶೋಭಿಸುತ್ತಿರುವ ಪುರವೀಧಿಗಳಲ್ಲಿ ಸಾಗಿ ರಾತ್ರಿ ೧೨ ಘಂಟೆಗೆ ಸರಿಯಾಗಿ ಶ್ರೀ ಮಠಕ್ಕೆ ಬ ಯಂಗೈಸಿತು. ಈ ಮಹೋತ್ಸವಕ್ಕಾಗಿ ವಿಜಾಪುರದ ಚರಮೂರ್ತಿ ಮಠ ಶ್ರೀ ಶಂಭುಲಿಂಗಸ್ವಾಮಿಗಳು, ಮಹಾಲಿಂಗಪುರದ ಮಠದ ಶ್ರೀಗಳವರು, ಕೊಕ್ಕಟನೂರು ಮಠದ ಶ್ರೀಗಳವರು, ಚಿಮ್ಮಡದ ಮಠದ ಶ್ರೀಗಳವರು, ಬಂಕಾಪುರದ ಮಠದ ಶ್ರೀಗಳವರು, ಹೊನವಾಡ ಮಠದ ಶ್ರೀಗಳವರು, ಚಲಸಂಗದಮಠದ ಪಟ್ಟದ ಶ್ರೀಗಳವರು ಮೊದಲಾದ ಗುರುವರ್ಗದವರು, ೫-೬ ಸಾವಿರದವರೆಗೆ ಜನಸಮುದಾಯವು ಸೇರಿತ್ತು. ಈ ಸಮಾರಂಭದಲ್ಲಿ ದನಗಳ ಜಾತ್ರೆಯು ಸಹ ನಡೆಯುವಂತೆ ಏರ್ಪಾಡುಮಾಡಿದ್ದುದರಿಂದ ಸಾವಿರಾರು ಜಾನುವಾರುಗಳು ಸೇರಿದ್ದವು. ಇವುಗಳಲ್ಲಿ ಉತ್ತಮವಾದ ಹೋರಿ ಮೊದಲಾದವುಗಳಿಗೆ ಬಹುಮಾನವು ಕೊಡಲ್ಪಟ್ಟಿತು. ಮರುದಿವಸ ಪೈಲ್ವಾನರು ಮೊದಲಾದವರ ಅಂಗಸಾಧನೆ ಮುಂತಾದ ಕುಶಲವಿದ್ಯೆಗಳು ಮತ್ತು ನೀರಿನಮೇಲೆ ಪದ್ಮಾಸನವನ್ನು ಹಾಕಿಕೊಂಡು ಮೇಲುಮುಖವಾಗಿ ಮಲಗಿ ತೇಲುತ್ತಾ ಯದೆಯಮೇಲೆ ತಟ್ಟೆಯಲ್ಲಿ ಅನ್ನವನ್ನಿಟ್ಟುಕೊಂಡು ಊಟಮಾಡುವದು ಮತ್ತು ಇದೇ ಪದ್ಮಾಸನಸ್ಥಿತಿಯಲ್ಲಿ ಎರಡು ಕೈಗಳಿಂದಲೂ ತಂಬಾಕುಹಾಕಿ ಚುಟ್ಟವನ್ನು ಕಟ್ಟಿಕೊಂಡು ಬೆಂಕೀಕಡ್ಡಿಯನ್ನು ಹತ್ತಿಸಿ ಸೇದುವದು ಮೊದಲಾದ ಆಶ್ಚರ್ಯಕರವಾದ ವಿದ್ಯೆಗಳು ಸಹ ಸಾಧಕರಿಂದ ತೋರಿಸಲ್ಪಟ್ಟವು. ಅನಂತರ ಸಾಯಂಕಾಲ ೪ ಘಂಟೆಗೆ ಶ್ರೀ ಶಿವಯೋಗಿಗಳಗದ್ದುಗೆ ಸನ್ನಿಧಾನದಲ್ಲಿ (ತಪೋವನದಲ್ಲಿ) ಈ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಗಳ ಅಪ್ಪಣೆಯಂತೆ ದೊಡ್ಡ ಸಭೆಯು ಕೂಡಿತು. ಮ|| ರಾವ್‌ಸಾಹೇಬ್ ಒಡೆಯರು ಮಾಮುಲೆದಾರ್ರು, ಮ|| ಶಿರಸ್ತೇದಾರ್ರು ರೈನಾಪುರ, ಮ|| ವಕೀಲರು ಮಂಗಳಸೂಳಿಯವರು ಮೊದಲಾದವರು ಮತ್ತು ವಿದ್ವಾಂಸರುಗಳು ದಯಮಾಡಿಸಿ ಸಭೆಯನ್ನಲಂಕರಿಸಿದ್ದರು. ಧರ್ಮೋಪದೇಶಾಧ್ಯಕ್ಷತೆಯನ್ನು ಶ್ರೀ ಶಂಭುಲಿಂಗಸ್ವಾಮಿಗಳು ಅಂಗೀಕರಿಸಿದ ತರುವಾಯ ಇಲ್ಲಿಯ ಸಂಸ್ಕೃತಪಾಠಶಾಲಾ ವಿದ್ಯಾರ್ಥಿಗಳಲ್ಲಿ ಶಿವಾನಂದಮರಿದೇವರು ಆತ್ಮಾನಾತ್ಮ ವಿಚಾರದಲ್ಲೂ, ಮಾಡಳ್ಳಿಮಠ ಮೃತ್ಯುಂಜಯದೇವರು ಸತ್ಸಹವಾಸ ವಿಷಯದಲ್ಲೂ, ಗವಿಗಯ್ಯನವರು ಧರ್ಮವಿಷಯದಲ್ಲೂ, ಆನಸಬಾವಿ ಮರಿದೇವರು ಬ್ರಹ್ಮಚರ್ಯಪಾಲನೆಯಿಂದುಂಟಾಗುವ ಪ್ರಯೋಜನ ವಿಷಯದಲ್ಲೂ, ಈ ಮಠದ ಚನ್ನಬಸವದೇವರು ಸದಾಚಾರಗಳ ವಿಷಯದಲ್ಲೂ ಉಪನ್ಯಾಸಮಾಡಿದರು.

ಈ ಪಾಠಶಾಲಾಧ್ಯಾಪಕರಾದ ವೇ|| ಸಂಪಿಗೆ ಹಿರೇಮಠದ ಸಿದ್ಧಲಿಂಗಶಾಸ್ತ್ರಿಗಳು ಸದ್ಗುರುಮಹತ್ವ ಭಕ್ತಿವಿಚಾರಗಳನ್ನು ಕುರಿತು ಶ್ರೋತೃಗಳಿಗೆ ಹೃದಯಂಗಮವಾಗುವಂತೆ ಭಾಷಣಮಾಡಿದರು. ತರುವಾಯ ಅಧ್ಯಕ್ಷರಾದ ಶ್ರೀ ಶಂಭುಲಿಂಗಸ್ವಾಮಿಗಳು ಅಸ್ಖಲಿತವಾದ ಸರಸವಾಣಿಯಿಂದ ಲೌಕಿಕವಾದ ವಿಷಯ ಸುಖವು ಅನಿತ್ಯವಾದದ್ದೆಂತಲೂ, ಭೂಮಶಬ್ದ ಪ್ರತಿಪಾದ್ಯವಾದ ಬ್ರಹ್ಮಾನಂದವೇ ಶಾಶ್ವತಸುಖವೆಂತಲೂ ವೇದಾಗಮಪ್ರಮಾಣಪುರಸ್ಸರವಾಗಿ ಪ್ರತಿಪಾದಿಸಿ ಮಹಾತ್ಮರಾದ ಶ್ರೀ ಶಿವಯೋಗಿಗಳು ಇಂತಹ ಅದ್ವಿತೀಯ ಲಿಂಗಾಂಗಸಾಮರಸ್ಯಜ್ಞಾನ ನಿರತರಾಗಿ ಪರಶಿವಸಾಯುಜ್ಯವನ್ನು ಪಡೆದು ಜಗತ್ಪೂಜ್ಯರಾದರೆಂಬುವದೇ ಮೊದಲಾದ ಸಿದ್ಧಾಂತ ವಿಷಯವನ್ನು ಸಭಿಕರ ಹೃದಯದಲ್ಲಿ ಪ್ರತಿಬಿಂಬಿಸಿ ಆನಂದ ತುಂಬಿಸುವಂತೆ ಭಾಷಣಮಾಡಿ ಇಂತಹ ಪೂಜ್ಯರಾದ ಶ್ರೀ ಮಹನೀಯರ ಸ್ಮರಣಾರ್ಥವಾಗಿ ಪ್ರತಿವರ್ಷ ರಥೋತ್ಸವವನ್ನು ನಡೆಯಿಸುವುದು ಸಕಲಶ್ರೇಯಸ್ಸುಗಳಿಗೂ ಕಾರಣವಾಗಿರುತ್ತೆಂಬದಾಗಿ ಮಂಗಲಾಚರಣೆಯು ಮಾಡಲ್ಪಟ್ಟಿತು. ಆ ಬೆಳಗಿನ ದಿವಸ ಶ್ರೀ ಶಂಭುಲಿಂಗಸ್ವಾಮಿಗಳೇ ಈ ಪಾಠಶಾಲಾ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಂಡು ಮುಂದಿನ ವರ್ಷ ಇಷ್ಟಿಷ್ಟು ಪಾಠಗಳು ನಡೆಯಬೇಕೆಂಬುದಾಗಿ ಶ್ರೀ ಸ್ವಾಮಿಗಳವರ ಮತ್ತು ಮೇಂಬರುಗಳ ಅಭಿಪ್ರಾಯಾನುಗುಣವಾಗಿ ನಿರ್ಧರಿಸಿದರು. ಮ|| ತಾಲ್ಲೋಕು ಅಮಲ್ದಾರ್ರವರ ಅಧ್ಯಕ್ಷತೆಯಲ್ಲಿ ವಿದ್ವಾಂಸರುಗಳಿಗೂ ಮತ್ತು ಜಾನುವಾರುಗಳಿಗೂ ಬಹುಮಾನವು ಕೊಡಲ್ಪಟ್ಟಿತು. ಇಷ್ಟು ದೊಡ್ಡ ಉತ್ಸವದಲ್ಲಿ ಮ|| ಅಮಲ್ದಾರ್ರವರು ಪೊಲೀಸು ಶಿಬ್ಬಂದಿ ಸಮೇತ ದಯಮಾಡಿಸಿ ಯಾವದೊಂದು ಗದ್ದಲವೂ ನಡೆಯದಂತೆ ಸುವ್ಯವಸ್ಥೆಯಿಂದ ಉತ್ಸವವನ್ನು ನಡಸಿಕೊಟ್ಟದ್ದಕ್ಕಾಗಿ ಸರ್ಕಾರದವರ ಉಪಕಾರವು ಶ್ಲಾಘನೀಯವಾಗಿರುತ್ತೆ.

ಮೈಸೂರು ಸ್ಟಾರ್ ಪತ್ರಿಕೆಯು ಬಹುವಿಧವಾಗಿ ನಮ್ಮ ಮತದ ಸೇವೆಗಾಗಿ ದುಡಿಯುತ್ತಿರುವುದರಿಂದ ಮಹೋತ್ಸವ ಸಮಯದಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳ ಸನ್ನಿಧಾನದಿಂದ ೨ ರೂಪಾಯಿಗಳು ಆಶೀರ್ವಾದರೂಪಿನಿಂದ ಕಳುಹಿಸಲ್ಪಟ್ಟಿರುತ್ತೆ.

ಪ್ರತ್ಯಕ್ಷದರ್ಶಿ ಗುರುಭಕ್ತ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.
(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೪—೦
ಚಾರುಶೀಲೆಚರಿತ್ರೆ	೦—೧೦—೦
ಹಂದಾಸಿ	೦—೮—೦
ವ್ರತಪಂಚಕ	೦—೬—೦

೧೯೨೨ನೆಯ ಇಸವಿ ಏಪ್ರಿಲ್ ತಾ|| ೩೦ರಿಂದ ೧೯೨೨ನೆಯ ಮೇ ತಾ|| ೬ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ವೈಶಾಖಶುದ್ಧ ತದಿಗೆಯಿಂದ ವೈಶಾಖ ಶುದ್ಧ ದಶಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾ
30	ಭಾನು	ತದಿಗೆ	10.15	ರೋಹಿ	14.44	18
1	ಸೋಮ	ಚೌತಿ	8.25	ಮೃಗ	14.37	19
2	ಮಂಗಳ	ಪಂಚ	5.28	ಆರ್ದ್ರಾ	13.22	20
3	ಬುಧ	ಷ.ಸ	1.33 55.46	ಪುನ	11.11	21
4	ಗುರು	ಅಷ್ಟ	51.49	ಪುಷ್ಯ	8.14	22
5	ಶುಕ್ರ	ನವ	45.52	ಆಶ್ಲೆ	4.42	23
6	ಶನಿ	ದಶ	39.40	ಮಖ	0.44	24

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಮೇ ತಾರೀಖು ೭ ನೆಯ ಭಾನುವಾರ (ಸಂಚಿಕೆ ೧೯

SREE SITHARAGHAVA
VAIDYASALA

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.
17

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ವಾಪಸ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂವಾವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟ[illegible]) ಗುಪ್ತಪ್ರದೇಶದ ಮೇಲೆ ವಾಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಹಟಿಶೂಲೆ, ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ಕುರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 45

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ ಬನವಾಸಿ, ಉತ್ತರಕನಡಾ.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಭೂಂತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯ ಸ್ವಪ್ನದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳ[illegible] ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ [illegible] ಯಾವ ಗಿಡಮುಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದಿರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್ ಡಿಪೋ ಪ್ರೆಸ್,
14 ಬಳ್ಳಾರಿ.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮೀಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ೬೨ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧ[illegible]ಗಿವೆ. ಮೊದಲಿಗಿಂತಲೂ ಇದು ಚೆನ್ನಾಗಿ ಪರಿಷ್ಕ[illegible]ಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟು [illegible] ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂ

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನ ಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿ ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರು ರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸ ಮುಹೂರ್ತಗಳನ್ನೂ, ಪ್ರಯಾಣೀತ್ಯಾದಿ ಅನೇಕ ಪ್ರಶ್ನೆಗಳನ್ನೂ ಮ ರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇ ದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂ ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯು

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾ ರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತ ಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳ ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
18 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬಗ



ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳ

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರ ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡ ಗಳಂತೆ ಮುಂಭಾಗದಲ್ಲಿ ಕ ಇಟ್ಟು ತೆಗೆಯುವುದಕ್ಕೂ ಹ ವದಕ್ಕೂ ಕಷ್ಟ ತೋರುವು ಇದರಲ್ಲಿ 150 ಗೆಜ್ಜೆಗಳು ಕಟ್ಟಿ ಚಿನ್ನದ ಡಾಬಿಗೂ ಇದಕ್ಕೂ ವ್ಯತ್ಯಾಸವೂ ಇಲ್ಲ. ಒಂದು ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರು ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ದ ನಗೆಗಳನ್ನು ಉಪಯೋಗಿಸುವವರೂ ಕೊಡ ವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಜುಮಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾ

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಮೇ ತಾ|| ೭ ನೆಯ ಭಾನುವಾರ.

ಸ್ವೇಚ್ಛೆಯಿಂದ ನಿವೃತ್ತರಾದ ಮಂತ್ರಿವರ್ಯರು.

ಸರ್ ಎಂ. ಕಾಂತರಾಜಅರಸ್, ಕೆ.ಸಿ.ಐ.ಇ., ಸಿ.ಎಸ್.ಐ., ರವರು ತಮ್ಮ ದೇಹಾನಾರೋಗ್ಯ ನಿಮಿತ್ತ ಉದ್ಯೋಗದಿಂದ ನಿವೃತ್ತರಾಗಲು ಶ್ರೀಮನ್ ಮಹಾರಾಜರವರ ಅನುಜ್ಞೆಯನ್ನು ಕೇಳಿಕೊಂಡಿದ್ದುದರ ಮೇಲೆ ಸರ್ಕಾರದಿಂದ ಕೊಡಲ್ಪಟ್ಟಿರುವ ಅಪ್ಪಣೆಯು ಈ ಪತ್ರಿಕೆಯ ಬೇರೊಂದು ಕಡೆ ಪ್ರಕಟಿಸಲ್ಪಟ್ಟಿದೆ. ಈ ಅಪ್ಪಣೆಯು ಕೊಡಲ್ಪಡುವ ಸಂದರ್ಭದಲ್ಲಿ ಉಚಿತರೀತಿಯಿಂದ ಯೋಗ್ಯತಾಪ್ರಶಂಸೆಯು ಮಾಡಲ್ಪಟ್ಟಿರುವುದು. ಅವರ ಮಂತ್ರಿಪದವಿಯ ನಿರ್ವಾಹಶಕ್ತಿ ಪರಿಮಾಣವು "1918 ರಲ್ಲಿ ಸಂಸ್ಥಾನದ ದಿವಾನರಾಗಿ ನಿಯಮಿಸಲ್ಪಟ್ಟರು. ಮತ್ತು ರಾಜ್ಯಾಡಳಿತದಲ್ಲಿ ತಮಗಿರುವ ಪರಿಪೂರ್ಣವೂ ನಾನಾ ಮುಖವೂ ಆದ ಅನುಭವವನ್ನೂ, ಪ್ರಜೆಗಳ ಮೇಲೆ ತಮಗಿರುವ ಸಾನುಭೂತಿ ಅನುರಾಗಗಳನ್ನೂ ಮತ್ತು ಅಪಾರವಾದ ನ್ಯಾಯತತ್ಪರತೆಯನ್ನೂ ಈ ಉಚ್ಚಪದವಿಯಲ್ಲಿ ತಾವಿದ್ದ ಮೂರುವರ್ಷ ಕಾಲಾವಧಿಯಲ್ಲಿ ತಮ್ಮುದ್ಯೋಗನಿರ್ವಾಹ ಸಂದರ್ಭದಲ್ಲಿ ತೋರಿಸಿ ಶ್ರೀಮನ್ ಮಹಾರಾಜರವರ ವಿಶ್ವಾಸ ಸನ್ಮಾನಗಳಿಗೆ ಮಾತ್ರವಲ್ಲದೆ ಅವರ ಪ್ರಜೆಗಳಲ್ಲಿ ಎಲ್ಲವರ್ಗದ ಜನರ ಪ್ರೀತಿಗೌರವಗಳಿಗೂ ಪಾತ್ರರಾಗಿರುವರು" ಎಂಬ ಯೋಗ್ಯತಾಪ್ರಶಂಸೆಯಿಂದಲೇ ವ್ಯಕ್ತವಾಗುತ್ತದೆ. ಶ್ರೀಮನ್ ಮಹಾರಾಜರವರಿಂದಲೂ ಸರಕಾರದವರಿಂದಲೂ ಮಾಡಲ್ಪಟ್ಟಿರುವ ಗುಣಪ್ರಶಂಸೆಯ ಜತೆಗೆ ಸಂಸ್ಥಾನದ ಪ್ರಜೆಗಳ ಪರವಾಗಿ ನಾವು ಒಂದೆರಡು ಮಾತುಗಳನ್ನಾಡಲಿಚ್ಛಿಸುತ್ತೇವೆ. ಸರ್ ಎಂ. ಕಾಂತರಾಜ ಅರಸಿನವರು ರಾಜವಂಶದಲ್ಲಿ ಜನಿಸಿ ಪ್ರಪಂಚದ ಎಲ್ಲ ಸುಖಸಂಪತ್ತುಗಳನ್ನುಳ್ಳವರಾಗಿದ್ದರೂ ಸರ್ವದಾ ಪ್ರಜಾಪಕ್ಷದವರೆಂದು ಖ್ಯಾತಿಗೊಂಡಿರುವರು. ಇವರ ಹಿಂದಣ ದಿವಾನರಾರಿಗೂ ಇಂತಹ ಯೋಗ್ಯತೆಯು ಲಭ್ಯವಾಗಿರಲಿಲ್ಲವು. ಇವರು ಯಾವಾಗಲೂ ದೊಡ್ಡವರಿಂದ ಚಿಕ್ಕವರವರೆಗೂ ಪ್ರತಿಯೊಬ್ಬರನ್ನೂ ಕರುಣೆ [illegible] ತಾಳ್ಮೆಯಿಂದಲೂ ನೋ ತ್ತಿದ್ದರಲ್ಲದೆ ನಾನು ಎಲ್ಲರಿಗೂ [illegible] ಎಂದು ಪ್ರತಾಪ ಕೊಚ್ಚಿಕೊಳ್ಳುತ್ತಿರಲಿಲ್ಲ. ಪ್ರಜೆಗಳು ಇವರನ್ನು ಮ್ಮ ಮಿತ್ರರೆಂದು ಭಾವಿಸಿ ತಮ್ಮ ಕಷ್ಟಸುಖಗಳನ್ನೆಲ್ಲಾ ರಲ್ಲಿ ಧಾರಾಳವಾಗಿ ಹೇಳಿಕೊಳ್ಳುತ್ತಿದ್ದರು. ಇವರು ಮಿ ಕಮಿಟಿ ರಿಪೋರ್ಟು ವಿದ್ಯಾಭ್ಯಾಸದ ಮೆಮೋರಾಂಡಂಗ ನು ಅನುಷ್ಠಾನಕ್ಕೆ ತರುವಂತೆ ಸರ್ಕಾರಿಯಪ್ಪಣೆ ಮಾ ಮತ್ತು ಪಂಚಮೋದ್ಧಾರಕ್ಕೆ ಬೇಕಾದ ಏರ್ಪಾಟನ್ನು ಡಿಸಿ ಈ ದೇಶೀಯರಿಗೆ ಮಹೋಪಕಾರವನ್ನು ಮಾಡಿ ರ ಚಿರಸ್ಮರಣೆಗೆ ಪಾತ್ರರಾಗಿರುತ್ತಾರೆ. ಲೋಕಪ್ರಿಯರಾದ ಕಾಂತರಾಜ ಅರಸಿನವರು ತಮ್ಮ ವಿಶ್ರಾಂತಿಸುಖವನ್ನು ಕಾಲದವರೆಗೆ ಅನುಭವಿಸುತ್ತ ಶ್ರೀಮನ್ ಮಹಾರಾಜರ ಗೂ ಅವರ ಪ್ರಜೆಗಳಿಗೂ ತಮ್ಮ ಅನುಭವಪೂರ್ವಕವಾದ ಕೋಚಿತ ಸಲಹೆಗಳನ್ನು ಕೊಟ್ಟು ಸಹಾಯ ಮಾಡುವ ಗಲೆಂದು ಹಾರೈಸುತ್ತೇವೆ.

THE RETIRED DEWAN.

The Government notification announcing the rement of Sir M. Kantaraj Urs, K.C.I.E., C.S.I., wan of Mysore has been published in the sore Gazette Extraordinary, and in so doing a y well-deserved and handsome tribute has n paid to him. There could have been no er estimate of his work as Dewan than what notification contains.—"He was appointed van in December 1918 and during the period of rly three years that he held this high office, he ught to bear in the discharge of his duty his and varied experience of administration, his t devotion to duty, his wide sympathy and love the people and his high sense of justice which e won for him the esteem and regard not only His Highness the Maharaja, but of all classes is subjects." To this recognition of His Highness and the Government we on behalf of the le of the State would desire to add our own. of the royal blood and bestowed with all the bings of the world, Sir M. Kantaraj Urs was re-eminently a people's man in a sense which ot applicable to any other Dewan before him. dly, courteous and patient always from the hest to the humblest, there was no note of a onising air with him. The people found in , as in no other equally high-placed official a d with whom they could confide all their vances and wants freely and unreservedly. Not ugh his many popular measures only confer a lasting benefit to the people, such as the Orders on the Miller Committee Report, the Educational Memorandum, and the push he gave to the Panchama uplift magnificient though they were is his greatness to be reckoned. It is the democratic outlook that he gave to every act of the State in a manner which will affect every measure or reform that will hereafter be inangurated, and from which there is no more going back in spite of the obstructionist hissings of a conservative section that will give him a foremost place among the makers of modern Mysore when the history of Mysore comes to be written. There is enough talk of nationalism in and outside the State but Sir M. Kantaraj Urs could never divorce democracy from nationalism, and this was the secret, the essence of all his work in the Mysore State. It is to the infinite good fortune of the Mysoreans and the glory of Mysore that at a juncture like this they found a Dewan like Sir M. Kantaraj Urs. It was said once years ago by a very high placed official when leaving the Mysore State and when he was entertained by the public that he did not know a Hindu was capable of worshipping the setting sun. We can assure Sir M. Kantaraj Urs that the vast masses of Mysore at any rate know how to feel grateful to one who has given his best for them and cherish his services in loving memory. In conclusion, we hope that Sir M. Kantaraj Urs may be spared a long life not only to enjoy his days of retirement but also to utilise his undoubted talents and experience for the service of His Highness the Maharaja and the His Highness' subjects in his non-official capacity.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಎಲ್ಲ ವಿಧವಾದ ಕಂದಾಯಗಳಮೇಲೆ ರೂಪಾಯೊಂದಕ್ಕೆ ಆರು ಕಾಸಿನ ಪ್ರಕಾರ ವಿದ್ಯಾಭ್ಯಾಸದ ತೆರಿಗೆಯನ್ನು ೧೯೨೧-೨೨ ನೆಯ ವರ್ಷದಿಂದಲೇ ಎತ್ತಬೇಕೆಂದೂ, ಈ ಹಣವು ವಿದ್ಯಾಭಿವೃದ್ಧಿಗಾಗಿಯೇ ವಿನಿಯೋಗಿಸಲ್ಪಡಬೇಕೆಂದೂ ಸರ್ಕಾರದಪ್ಪಣೆಯಾಗಿದೆ.

ಟೆನ್ನಿಸ್ ಎಂಬ ಚೆಂಡಿನ ಆಟದಲ್ಲಿ ಬಹಳ ಪ್ರಖ್ಯಾತರಾದ ಮ|| ಯು. ಡಿ. ರಂಗನಾಯರ ತಂದೆಯವರಾದ ಮತ್ತು ಸರ್ ಕಾಂತರಾಜ ಅರಸಿನವರ ಜಯಲಕ್ಷ್ಮೀಪ್ರಾಸಾದದ ಸೂಪರಿಂಟೆಂಡೆಂಟರಾಗಿದ್ದ ಮ|| ಯು. ಡಿ. ಶ್ರೀನಿವಾಸರಾವ್ ಬಿ.ಎ., ಯವರು ಸ್ವಾಸಬಂಧನದಿಂದ ಅಕಾಲಮರಣವನ್ನು ಹೊಂದಿದರೆಂದು ತಿಳುಹಲು ವಿಷಾದಿಸುತ್ತೇವೆ. ಇವರು ಬಹಳ ಸಾತ್ವಿಕರೂ ಡಾಂಭಿಕರಹಿತರೂ ಆಗಿದ್ದರು.

ರಾಜಸೇವಾಧುರೀಣ ಸರ್ ಎಂ. ಕಾಂತರಾಜ ಅರಸ್, ಕೆ.ಸಿ.ಐ.ಇ., ಸಿ.ಎಸ್.ಐ., ರವರು ದಿವಾನಪದವಿಯಿಂದ ನಿವೃತ್ತರಾಗಿರುವ ಪ್ರಯುಕ್ತ ಅವರ ಸ್ಥಾನದಲ್ಲಿ ಆಲ್ಬಿಯನ್ ರಾಜಕುಮಾರ ಬಾನರ್ಜಿ, ಸಿ.ಎಸ್.ಐ., ಸಿ.ಐ.ಇ., ಯವರನ್ನು ಶ್ರೀಮನ್ಮಹಾರಾಜರವರು ಅವರ ರಾಜಭಕ್ತಿ, ಸಾಮರ್ಥ್ಯ ಮತ್ತು ವಿವೇಚನೆಗಳಲ್ಲಿ ಭರವಸೆಯನ್ನಿಟ್ಟು ಮೈಸೂರು ಸಂಸ್ಥಾನದ ದಿವಾನರನ್ನಾಗಿಯೂ, ಕೌನ್ಸಿಲ್ಲಿನ ಪ್ರೆಸಿಡೆಂಟರನ್ನಾಗಿಯೂ ನೇಮಿಸಿರುತ್ತಾರೆ.

ಈ ಸಲ ಬೊಂಬಾಯಿ ವಿಶ್ವವಿದ್ಯಾಲಯದ ಎಲ್ಎಲ್. ಬಿ., ಪರೀಕ್ಷೆಗೆ ಹೋಗಿದ್ದ ವೀರಶೈವ ವಿದ್ಯಾರ್ಥಿಗಳಲ್ಲಿ ದಾವಣಗೆರೆಯ ಮ|| ಎಚ್. ಚಂದ್ರಶೇಖರಯ್ಯನವರು ಮತ್ತು ತ್ಯಾಮಗೊಂಡಲಿನ ಮ|| ಜಿ. ರುದ್ರಪ್ಪನವರು ಉತ್ತೀರ್ಣರಾಗಿರುವರೆಂದು ತಿಳಿದು ಸಂತೋಷಿಸುತ್ತೇವಲ್ಲದೆ ಮುಂದೆ ಇವರುಗಳು ತಮಗೆ ಅನುಕೂಲವಾದ ಸ್ಥಳದಲ್ಲಿ ವಕೀಲರಾಗಿದ್ದು ಅಭಿವೃದ್ಧಿಯನ್ನು ಹೊಂದಲೆಂದೂ ದೇಶಾಭ್ಯುದಯ ಕಾರ್ಯದಲ್ಲಿ ನೆರವಾಗಲೆಂದೂ ಇಚ್ಛಿಸುತ್ತೇವೆ.

ಸೀನಿಯರ್ ಸರ್ಜನರಾದ ಡಾ|| ಮೈಲ್ವಾಗನ್‌ರವರು ೬ ವಾರಗಳ ಪ್ರಿವಿಲೇಜ್ ರಜವನ್ನು ಪಡೆದುಕೊಂಡು ಉದಕಮಂಡಲಕ್ಕೆ ಹೋಗಿರುವುದರಿಂದ, ಅವರು ಬರುವವರೆಗೆ ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾ|| ಎಂ. ಡಿ. ಉಸ್ಮಾನ್‌ರವರು ಆಕ್ಟಿಂಗ್ ಸೀನಿಯರ್ ಸರ್ಜನರಾಗಿಯೂ, ಇದೇ ಆಸ್ಪತ್ರೆಯಲ್ಲಿ ನೇತ್ರಚಿಕಿತ್ಸಕರಾಗಿರುವ ಡಾ|| ಎಸ್. ಕೆ. ನಾರಾಯಣರಾಯರು ಆಕ್ಟಿಂಗ್ ಮೆಡಿಕಲ್ ಆಫೀಸರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ವಿದ್ಯಾಭ್ಯಾಸದ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್‌ರವರಾದ ಮ|| ಬಿ. ದಾಸಪ್ಪನವರು ಏಪ್ರಿಲ್ ತಾ|| ೩ರಿಂದ ೨ ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಅವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಬೆಂಗಳೂರು ಸರ್ಕಲ್ ಇನ್ಸ್ಪೆಕ್ಟರಾದ ಮ|| ಡಿ. ವೆಂಕಟರಾಮಯ್ಯನವರು ವಿದ್ಯಾಭ್ಯಾಸದ ಡಿ|| ಇ|| ಜನರಲ್‌ರವರಾಗಿಯೂ, ಮೈಸೂರು ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಪಾಲ್‌ಚಿನ್ನಪ್ಪನವರು ಬೆಂಗಳೂರು ಸರ್ಕಲ್ ಇನ್ಸ್ಪೆಕ್ಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಕನ್ನಡ ಸಾಹಿತ್ಯಪರಿಷತ್ತಿನ ೮ ನೆಯ ಅಧಿವೇಶನವು ಈ ತಿಂಗಳು ತಾ|| ೧೨-೧೩ ಮತ್ತು ೧೪ರಲ್ಲಿ ದಾವಣಗೆರೆಯಲ್ಲಿ ಮ|| ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡಿಯುವುದಾಗಿಯೂ, ಈ ಪರಿಷತ್ತಿನ ಸ್ವಾಗತಸಂಘದ ಅಧ್ಯಕ್ಷತೆಯನ್ನು ಚಿತ್ರದುರ್ಗ ಡಿ|| ಕಮಿಷನರಾದ ಮಿ|| ಟಾಜ್‌ಪೀರ್‌ಸಾಹೇಬರು ವಹಿಸಿರುವುದಾಗಿಯೂ ಪ್ರಕಟವಾಗಿದ್ದಿತು. ಆದರೆ ಈಚೆಗೆ ನಮ್ಮಲ್ಲಿಗೆ ಬಂದಿರುವ ಪತ್ರವ್ಯವಹಾರಗಳಿಂದ ಈ ಅಧಿವೇಶನದ ಅಧ್ಯಕ್ಷತೆಯನ್ನು ದಿವಾನ್‌ಬಹದ್ದೂರು ಕೆ. ಪಿ. ಪುಟ್ಟಣ್ಣಸೆಟ್ಟರು ವಹಿಸಲೊಪ್ಪಿರುವುದಾಗಿ ತಿಳಿಯಪಡಿಸಿದುದರ ಮೇಲೆ ಮಿ|| ಟ್ಯಾಜ್‌ಪೀರ್ ಸಾಹೇಬರು ಸ್ವಾಗತಸಂಘದ ಅಧ್ಯಕ್ಷರಾಗಿರಲು ಸಮ್ಮತಿಸಿದ್ದು ಈಗ ಮ|| ವೆಂಕಟಕೃಷ್ಣಯ್ಯನವರು ಅಧ್ಯಕ್ಷರಾಗುವರೆಂದು ತಿಳಿದು ಸ್ವಾ|| ಸಂಘಾಧ್ಯಕ್ಷತೆಯನ್ನು ತಿರಸ್ಕರಿಸಿರುವುದಾಗಿ ತಿಳಿಯಬರುತ್ತದೆ.

ರಾಜಧಾನಿಯ ಮ್ಯುನಿಸಿಪಾಲಿಟಿಗೆ ಬರಬೇಕಾದ ಮನೆಯ ಕಂದಾಯವು ಬಹಳವಾಗಿ ಬಾಕಿಬಿದ್ದಿರುವುದಾಗಿಯೂ, ಮಂಡಿಮೊಹಲ್ಲಾ ಮುತ್ಸದ್ದಿಯೊಬ್ಬನು ಕಂದಾಯದ ಹಣದಲ್ಲಿ ೧೨||| ರೂಪಾಯಿಯನ್ನು ದುರುಪಯೋಗಪಡಿಸಿದ್ದುದರ ವಿಚಾರಣೆಯು ಕಳೆದ ೬ ತಿಂಗಳಿಂದಲೂ ನಡೆಯುತ್ತ ಇನ್ನೂ ಪರ್ಯವಸಾನವಾಗದೆ ಇರುವುದೆಂದೂ, ಲಷ್ಕರ್ ಮೊಹಲ್ಲಾದ ಮುತ್ಸದ್ದಿಯು ೩೦೦ ಚಿಲ್ಲರೆ ರೂಪಾಯಿಗಳನ್ನು ದುರುಪಯೋಗಪಡಿಸಿದ್ದುದು ಈಚೆಗೆ ಗೊತ್ತಾಗಿ ಅವನಿಂದ ಆ ಮೊಬಲಗು ಬರಮಾಡಲ್ಪಟ್ಟು ಅವನು ವಿಚಾರಣೆಗೆ ಗುರಿಮಾಡಲ್ಪಟ್ಟಿರುವುದಾಗಿಯೂ ತಿಳಿಯಬರುತ್ತದೆ. ಇದರ ವಿಚಾರಣೆಯು ಇನ್ನೆಷ್ಟು ದೀರ್ಘಕಾಲ ನಡಿಯುವುದೋ ಮತ್ತು ಇದರಂತೆ ಇನ್ನೆಷ್ಟು ಹಣವು ದುರುಪಯೋಗವಾಗಿರುವುದೋ? ಇದಕ್ಕೆಲ್ಲಾ ಮ್ಯುನಿಸಿಪಲ್ ಅಧಿಕಾರಿಗಳ ಅಶ್ರದ್ಧೆ ಮತ್ತು ಅಜಾಗರೂಕತೆಗಳೇ ಕಾರಣವೆಂದು ನಿರ್ಧರವಾಗಿ ಹೇಳಬಹುದು.

ಮೈಸೂರು ಗೆಜೆಟ್ ವಿಶೇಷಪತ್ರಿಕೆ.

ಸರ್ಕಾರಿಯಪ್ಪಣೆ.

ನಂ. 6780—C.B. 234-21-1 ತಾ|| 30ನೆಯ ಏಪ್ರಿಲ್ 1922.

ಮೈಸೂರು ಸಂಸ್ಥಾನದ ದಿವಾನರಾದ ರಾಜಸೇವಾಧುರೀಣ ಸರ್ ಎಂ. ಕಾಂತರಾಜ ಅರಸ್, ಕೆ.ಸಿ.ಐ.ಇ., ಸಿ.ಎಸ್.ಐ., ರವರು ತಮ್ಮ ದೇಹಾನಾರೋಗ್ಯದೆಸೆಯಿಂದ ಉದ್ಯೋಗದಿಂದ ನಿವೃತ್ತರಾಗಲು ಅಪ್ಪಣೆಯನ್ನು ಕೊಡಬೇಕೆಂದು ಶ್ರೀಮನ್ಮಹಾರಾಜರವರನ್ನು ಪ್ರಾರ್ಥಿಸಿಕೊಂಡಿದ್ದುದರ ಮೇಲೆ, 1922ನೆಯ ಏಪ್ರಿಲ್ ತಾ|| 30ರಿಂದ ನಿವೃತ್ತರಾಗಲು ಶ್ರೀಮನ್ಮಹಾರಾಜರವರು ಸಂತೋಷದೊಡನೆ ಅನುಜ್ಞೆಯನ್ನಿತ್ತಿರುವರು. ಸರ್ ಎಂ. ಕಾಂತರಾಜ ಅರಸಿನವರು ಕಳೆದ ೨೮ ವರ್ಷಗಳಲ್ಲಿ ರಾಜಭಕ್ತಿಯಿಂದ ಮಾಡಿರುವ ಅಮೋಘವಾದ ಸೇವೆಯ ವಿಚಾರದಲ್ಲಿ ತಮಗುಂಟಾಗಿರುವ ಅತಿಶಯವಾದ ಮೆಚ್ಚುಗೆಯು ಈ ಪ್ರಕಾರವಾಗಿ ಬರೆದಿಡಲ್ಪಡಬೇಕೆಂದು ಶ್ರೀಮನ್ಮಹಾರಾಜರವರು ಇಚ್ಛಿಸುತ್ತಾರೆ.

ಸರ್ ಎಂ. ಕಾಂತರಾಜ ಅರಸಿನವರು ಮೊಟ್ಟಮೊದಲು ಸರ್ಕಾರಿ ಉದ್ಯೋಗಕ್ಕೆ ಸೇರಿದ ವೇಳೆಯಲ್ಲಿ ಮಹಾರಾಣೀ ರೀಜೆಂಟ್‌ರವರಿಗೆ ಅಸಿಸ್ಟೆಂಟ್ ಪ್ರೈವೇಟ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟು ನಾಲ್ಕು ವರ್ಷಗಳಿಗಿಂತ ಹೆಚ್ಚಾಗಿ ಆ ಉದ್ಯೋಗದಲ್ಲಿದ್ದು ಮಹಾರಾಣಿಯವರ ಸೇವೆಯನ್ನು ಅತಿಶಯವಾಗಿ ಮಾಡಿರುತ್ತಾರೆ. ರೆವಿನ್ಯೂ ಶಾಖೆಯಲ್ಲಿ ಸಬ್‌ಡಿವಿಜನ್ ಆಫೀಸರಾಗಿಯೂ ಅನಂತರ ಡೆಪ್ಯುಟಿ ಕಮಿಷನರಾಗಿಯೂ ಕೆಲಸ ಮಾಡಿ 1912 ರಲ್ಲಿ ಎಕ್ಸೈಸ್ ಕಮಿಷನರ ಸ್ಥಾನಕ್ಕೇರಿ ಅಲ್ಲಿಂದ 1913ರಲ್ಲಿ ಎಕ್ಸಿಕ್ಯುಟಿವ್ ಕೌನ್ಸಿಲ್ಲಿನ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟರು. ಕಳೆದ ಯುದ್ಧಕಾಲದಲ್ಲಿ ವಾರ್ ಲೋನು, ರಿಲೀಫ್‌ಫಂಡು ಇವುಗಳಿಗೆ ಧನವನ್ನೂ, ಸೇನೆಗೆ ಭಟರನ್ನೂ ಒದಗಿಸುವ ವಿಚಾರದಲ್ಲಿ ಬಹಳ ಸಾಹಸಪಟ್ಟರು. ಇವರು 1918ರಲ್ಲಿ ಸಂಸ್ಥಾನದ ದಿವಾನರಾಗಿ ನಿಯಮಿಸಲ್ಪಟ್ಟರು ಮತ್ತು ರಾಜ್ಯಾಡಳಿತದಲ್ಲಿ ತಮಗಿರುವ ಪರಿಪೂರ್ಣವೂ ನಾನಾ ಮುಖವೂ ಆದ ಅನುಭವವನ್ನೂ, ಪ್ರಜೆಗಳ ಮೇಲೆ ತಮಗಿರುವ ಸಾನುಭೂತಿಅನುರಾಗಗಳನ್ನೂ ಮತ್ತು ಅಪಾರವಾದ ನ್ಯಾಯತತ್ಪರತೆಯನ್ನೂ ಈ ಉಚ್ಚಪದವಿಯಲ್ಲಿ ತಾವಿದ್ದ ೩ ವರ್ಷ ಕಾಲಾವಧಿಯಲ್ಲಿ ತಮ್ಮುದ್ಯೋಗನಿರ್ವಾಹ ಸಂದರ್ಭದಲ್ಲಿ ತೋರಿಸಿ ಶ್ರೀಮನ್ಮಹಾರಾಜರವರ ವಿಶ್ವಾಸಸನ್ಮಾನಗಳಿಗೆ ಮಾತ್ರವಲ್ಲದೆ ಅವರ ಪ್ರಜೆಗಳಲ್ಲಿ ಎಲ್ಲವರ್ಗದ ಜನರ ವಿಶ್ವಾಸಗೌರವಗಳಿಗೂ ಪಾತ್ರರಾಗಿರುವರು.

ಇವರ ಉದ್ಯೋಗ ಸನ್ಮಾನಾರ್ಥವಾಗಿ ಶ್ರೀಮನ್ಮಹಾರಾಜರವರು 1916 ರಲ್ಲಿ ರಾಜಸೇವಾಧುರೀಣ ಎಂಬ ಪ್ರಶಸ್ತಿಯನ್ನು ದಯಪಾಲಿಸಿ ರತ್ನಖಚಿತವಾದ ಮೊದಲನೆ ತರಗತಿಯ ಗಂಡಭೇರುಂಡ ಪದಕದಿಂದಲಂಕರಿಸಿದರು. ಚಕ್ರವರ್ತಿ ಸಾರ್ವಭೌಮರವರು ಸರ್ ಎಂ. ಕಾಂತರಾಜಅರಸಿನವರ ಕಾರ್ಯನಿರ್ವಾಹಶಕ್ತಿಗೆ ಮೆಚ್ಚಿ ಕಂಪ್ಯಾನಿಯನ್ ಆಫ್ ದಿ ಮೋಸ್ಟ್ ಎಕ್ಸಾಲ್ಟೆಡ್ ಆರ್ಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯಾ (ಸಿ.ಎಸ್.ಐ.) ಎಂಬ ಪ್ರಶಸ್ತಿಯನ್ನು 1914 ರಲ್ಲೂ ನೈಟ್‌ಹುಡ್ ಆಫ್ ದಿ ಮೋಸ್ಟ್ ಎಮಿನೆಂಟ್ ಆರ್ಡರ್ ಆಫ್ ದಿ ಇಂಡಿಯನ್ ಎಂಪೈರ್ (ಕೆ.ಸಿ.ಐ.ಇ.) ಎಂಬ ಪ್ರಶಸ್ತಿಯನ್ನು 1921 ರಲ್ಲೂ ದಯಪಾಲಿಸಿದರು.

ಸರ್ ಎಂ. ಕಾಂತರಾಜ ಅರಸಿನವರು ಸನ್ಮಾನಿತರಾಗಿ ುದ್ಯೋಗದಿಂದ ನಿವೃತ್ತರಾಗುವಲ್ಲಿ ಶ್ರೀಮನ್ ಮಹಾರಾಜ ವರ ಅಕುಟಿಲವಾದ ಪ್ರೀತಿವಿಶ್ವಾಸಕ್ಕೆ ಪಾತ್ರರಾಗಿರುವರಲ್ಲ , ಇವರು ಪಡೆದುಕೊಂಡಿರುವ ವಿಶ್ರಾಂತಿಸುಖವನ್ನು ಬಹು ಾಲದವರೆಗೆ ಅನುಭವಿಸಲು ಅನುಗ್ರಹಿಸಲ್ಪಡಲೆಂದು ಶ್ರೀಮ ಹಾರಾಜರವರು ಇಚ್ಛಿಸುತ್ತಾರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

To
THE PRESIDENT,
KARNATAKA SAHITYA PARISHAD,
BANGALORE CITY.

ir,

The Secretary of the Parishad has published in he papers that it holds its eigth sessions on the 2th, 13th & 14th of this month at Davangere under he presidency of Mr. M. Venkatakrishnaya of Iysore. Sir, need we say that this piece of inormation has shocked the intelligence and self espect of the public of Davangere owing to the act that they never before knew anything about he Parishad until the publication in the papers vas seen.

It is most surprising and strange that the Parihad authorities being men of position and influnce and fully cognisant of the constitutional nethods of organisation should thus publish an nportant advertisement even without the formal onsent and consultation of the public. Acting on he advice and invitation of stray individuals here nd there the Parishad authorities ought not to ave published the advertisement they have done. The election of Mr. Venkatakrishnaya as President s a matter of deep regret and supreme concern to ll lovers of the Karnatak by reason of his being he cause of so much unrest and dissension among he various classes of His Highness' subjects.

It is of no use to argue that Mr. Venkata Krishnaya, President—elect of the Parishad is a ifferent man from Mr. Venkatakrishnaya, Editor f Sadvi. Every one has undoubtedly a right to hold is own opinion on public questions, and accordingy the Parishad authorities might have elected Mr. Venkatakrishnaya as president who in their view night be a great man and contributor of much appiness to the Karnataka. The public of Davanere being the conveners of the conference ought o have an effective voice in the proceedings of the onference holding as they do opinions diametrically opposed to those of Mr. Venkatakrishnaya and f his comrades, it is against their conscience and heir best interests to consent to such an arbitrary xploitation of their unconcern and indifference as egards public questions.

It appears that one Mr. M. K. Raghuvendra Rao has invited the Parishad which has been eadily accepted relying entirely on his own indiidual self and thinking that he represents the vhole of Davangere. Even now no responsible nd leading member of the town has been officially nformed and duely consented on the matter. And is no prejudice on our part to say that only Brahmin members who can be counted on fingers re pressing the public with the influence of the ssistant Commissioner to co-operate in convening he conference.

With all this no progress has so far been chieved in enlisting the sympathy and support of he majority of the public. The latest information that the Deputy Commissioner whom the Pariad authorities and Mr. Raghavendra Rao equested to secure for them the support and coperation of the public has resigned his Chairmanhip of the Reception Committee. And the few nembers that reluctantly consented to co-operate the request of the Deputy Commissioner will no oubt follow suit. It remains to be seen what the ssistant Commissioner with his few friends is oing to do.

There is much talk in the town as regards the olding of the conference. Great agitation is being arried on against such unconstitutional methods nd strange to say the prospect of holding the conerence shortly should be another element not alculated to promote or create any unity between he Brahmins and non-Brahmins.

We, therefore, earnestly request you to immeditely revise the programme and duely consult the leading citizens on the matter. It is far from our desire and it is not so of any lover of progress to obstruct or oppose the working of such healthy institutions as promote the cultural and literary improvement of the people. If we may be permitted to suggest an alternative please change the date of the conference and elect another president with due consent of the local public. And we guarantee that the success of the conference is assured and the Parishad will have both the moral and financial support to an extent which it had never before had.

Davangere,
4th May 1922.

We beg to remain,
Sir,
Your most obedient servants,
Lovers of Kannada.

ದಾವಣಗೆರೆಯಲ್ಲಿ ನಡೆಯುವ ಕರ್ನಾಟಕ ಸಾಹಿತ್ಯ ಸಮ್ಮೇಳನದ ವಿಷಯ.

ದಾವಣಗೆರೆಯಲ್ಲಿ ಕರ್ನಾಟಕ ಸಾಹಿತ್ಯಪರಿಷತ್ತು ನಡೆಯುವುದಾಗಿಯೂ, ಮ|| ವೆಂಕಟಕೃಷ್ಣಯ್ಯನವರು ಅಧ್ಯಕ್ಷರಾಗುವರಾಗಿಯೂ ವಗೈರೆ ನಮೂದಿಸಿರುವುದು ವರ್ತಮಾನ ಪತ್ರಿಕೆಗಳ ಮೂಲಕ ತಿಳಿಯಬಂದಿರುತ್ತೆ. ಈ ಪರಿಷತ್ತನ್ನು ದಾವಣಗೆರೆಯಲ್ಲಿ ನಡೆಯಿಸಬೇಕೆಂದು ದಾವಣಗೆರೆಯವರು ಎಂದೂ ಸಭೆ ಮಾಡಿ ಎಲ್ಲಾ ಜನರನ್ನೂ ಸೇರಿಸಿ ಆಲೋಚನೆಯನ್ನು ಮಾಡಿರುವುದಿಲ್ಲ. ಹೀಗಿದ್ದು ಇಲ್ಲಿ ಕರ್ನಾಟಕ ಪರಿಷತ್ತು ನಡೆಯುವುದೆಂದು ಪ್ರಕಟಿಸಿರುವುದನ್ನು ನೋಡಿದರೆ ಯಾರೋ ಒಬ್ಬಿಬ್ಬರು ಇದನ್ನು ಕೃತ್ರಿಮದಿಂದ ನಡೆಯಿಸಿರುವಂತೆ ಕಾಣುತ್ತೆ. ಆದರೆ ಕೆಲವು ದಿವಸಗಳ ಮುಂಚೆ ಹಜರತ್ ಡೆಪ್ಯುಟಿಕಮಿಷನರ್ ಸಾಹೇಬರವರಿಗೆ ಮ|| ಕರ್ಪೂರ ಶ್ರೀನಿವಾಸರಾಯರು ದಾವಣಗೆರೆಯಲ್ಲಿ ಕರ್ನಾಟಕ ಪರಿಷತ್ತನ್ನು ನಡೆಯಿಸಬೇಕಾಗಿರುವುದರಿಂದ ಇದಕ್ಕೆ ಮದ್ರಾಸ್ ಕಡೆಯ ಒಬ್ಬ ಐ. ಸಿ. ಎಸ್. ರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಆಲೋಚಿಸಿರುವುದಾಗಿಯೂ, ಇದಕ್ಕೆ ಬೇಕಾಗುವ ಸೌಲಭ್ಯಗಳನ್ನು ಮಾಡಿಕೊಡಬೇಕೆಂಬುದಾಗಿಯೂ, ಸ್ವಾಗತಮಂಡಲಿಯ ಅಧ್ಯಕ್ಷತೆಯನ್ನು ತಾವೇ ವಹಿಸಬೇಕೆಂಬುದಾಗಿಯೂ, ಈ ವಿಷಯಗಳಲ್ಲಿ ತಮ್ಮ ಜವಾಬನ್ನು ನಿರೀಕ್ಷಿಸುತ್ತೇನೆಂತಲೂ ಕಾಗದ ಬರೆದಿರುತ್ತಾರೆಂದು ವರ್ತಮಾನ ಕೇಳಿದ್ದೆವು. ಸ್ವಲ್ಪದಿವಸಗಳಲ್ಲಿಯೇ ಹಜರತ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ಕೆಲವು ಮ್ಯುನಿಸಿಪಲ್ ಮೆಂಬರುಗಳಲ್ಲಿ ಯೋಚನೆ ಮಾಡಿದರಲ್ಲಿ ಮೆಂಬರುಗಳು ಇದು ಸಾರ್ವಜನಿಕವಾದ ವಿಷಯವಾಗಿರುವುದರಿಂದ ದೊಡ್ಡ ಮನುಷ್ಯರನ್ನೆಲ್ಲಾ ಕರೆಯಿಸಿ ಆಲೋಚಿಸಬೇಕೆಂದು ಹೇಳಿದಾಗ್ಯೂ, ನಡೆಯಿಸಿಯೇ ತೀರಬೇಕೆಂದು ಹೇಳಿದ್ದರಿಂದ ಅಧಿಕಾರಿಗಳ ದಾಕ್ಷಿಣ್ಯಕ್ಕೆ ಒಳಪಟ್ಟು ನಾಲ್ಕಾರು ಮೆಂಬರುಗಳು ಅನುಮೋದಿಸಿದ್ದಾಯಿತು. ಆ ಕೂಡಲೇ ಸ್ವಾಗತಸಂಘವನ್ನು ಮಾಡಿ ಅದಕ್ಕೆ ಡೆಪ್ಯುಟಿಕಮಿಷನರವರೇ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಷ್ಟರೊಳಗೆ ಯಾವ ಕಾರಣದಿಂದಲೋ ಒಬ್ಬಿಬ್ಬರು ಪರಿಷತ್ತಿಗೆ ಬರುವವರಿಗೆಲ್ಲಾ ತಮ್ಮ ಸ್ವಂತ ಖರ್ಚಿನಿಂದ ಊಟಕ್ಕೆ ಏರ್ಪಾಡು ಮಾಡುವುದಾಗಿ ಒಪ್ಪಿಕೊಂಡಿರೆಂದು ತಿಳಿಯಬಂದಿದೆ.

ಡೆಪ್ಯುಟಿಕಮಿಷನರ್ ಸಾಹೇಬರವರು ಇಲ್ಲಿಂದ ಹೋದ ೨-೩ ದಿನಗಳಲ್ಲಿಯೇ ಸ್ವಾಗತಸಂಘಾಧ್ಯಕ್ಷತೆಯನ್ನು ವಹಿಸಲು ತಮಗೆ ಇಷ್ಟವಿಲ್ಲವೆಂಬದಾಗಿ ಬರೆದಿರುತ್ತಾರೆಂದು ತಿಳಿಯಬಂದಿರುವುದನ್ನು ನೋಡಿದರೆ ಸಾಧ್ವಿ ಸಂಪದಭ್ಯುದಯ ಪತ್ರಿಕೆಗಳಲ್ಲಿ ಜಾತಿಮತದ್ವೇಷ ಹುಟ್ಟಿಸುವಂಥ ಲೇಖನಗಳನ್ನು ಬರೆದು ಜನರ ಪರಸ್ಪರ ಐಕಮತ್ಯಕ್ಕೂ ಪ್ರೀತಿವಿಶ್ವಾಸಕ್ಕೂ ಭಂಗವನ್ನುಂಟುಮಾಡುತ್ತಿರುವ ಮ|| ವೆಂಕಟಕೃಷ್ಣಯ್ಯನವರು ಅಧ್ಯಕ್ಷರಾಗುವ ಸಭೆಗೆ ತಾವು ಸೇರುವುದಿಲ್ಲವೆಂದು ತಿಳಿದೋ ಅಥವಾ ಮತ್ತಾವ ಕಾರಣದಿಂದಲೋ ಸ್ವಾಗತಮಂಡಲಿಯ ಅಧ್ಯಕ್ಷಪದವಿಯನ್ನು ಬಿಟ್ಟಿರಬಹುದೆಂದು ತೋರುತ್ತದೆ. ಏನೇ ಇರಲಿ, ಮೊದಲು ಮ|| ಕರ್ಪೂರಶ್ರೀನಿವಾಸರಾಯರು ಬರೆದ ಕಾಗದದಲ್ಲಿ ಮದ್ರಾಸಿನ ಕಡೆಯ ಒಬ್ಬ ಐ. ಸಿ. ಎಸ್. ರನ್ನು ಅಧ್ಯಕ್ಷತೆಗೆ ತರಬೇಕೆಂದು ಯೋಚಿಸಿರುವ ವಿಷಯವು ನೆಪಮಾತ್ರ ಬರವಣಿಗೆಯೆಂದು ಯೋಚಿಸಬೇಕಾಗುತ್ತೆ. ಈ ಪರಿಷತ್ತನ್ನು ದಾವಣಗೆರೆಯವರು ಮಾಡಲು ಇಷ್ಟಪಡದೆ ಇಲ್ಲಿ ನಡೆಯಲು ಏರ್ಪಡಿಸಿರುವುದನ್ನು ನೋಡಿದರೆ ಮೈಸೂರು ಸರ್ಕಾರದವರು ಹಿಂದುಳಿದವರ ಉದ್ಧಾರಕ್ಕಾಗಿ "ವಿದ್ಯಾಭ್ಯಾಸದ ಮೆಮೊರಾಂಡಂ" "ಮಿಲ್ಲರ್ ಕಮಿಟಿ ರಿಪೋರ್ಟು" ಏರ್ಪಾಡು ಮಾಡಿದ್ದನ್ನು ನೋಡಿ ಹಿಂದುಳಿದವರು ಅಭಿವೃದ್ಧಿಗೆ ಬರುತ್ತಾರಲ್ಲಾ ಎಂದು ಇವುಗಳನ್ನು ರದ್ದುಪಡಿಸಲು ತಮ್ಮ ಸಾಹಸವನ್ನು ಮಾಡಿ ಆ ಕಾರ್ಯವು ಈಡೇರದೆ ಎಲ್ಲರಿಗೂ ದ್ವೇಷಿಗಳಾದದ್ದಲ್ಲದೆ ಗೌರ್ನಮೆಂಟಿನವರಿಗೂ ಕೂಡ ದ್ವೇಷಿಯಾದ ಮ|| ವೆಂಕಟಕೃಷ್ಣಯ್ಯನವರಿಗೆ ಈ ಪರಿಷತ್ತಿನ ಅಧ್ಯಕ್ಷತೆಯನ್ನಾದರೂ ಕೊಟ್ಟು ಕರ್ನಾಟಕದಲ್ಲಿ ಇವರಿಗೆ ಗೌರವವನ್ನುಂಟುಮಾಡಬೇಕೆಂಬ ಉದ್ದೇಶದಿಂದ ನಡೆಯಿಸಿದ ಕೆಲವು ಬ್ರಾಹ್ಮಣರ ತಂತ್ರವೇ ಹೊರತು ಬೇರೆ ಇಲ್ಲವೆಂಬುದಾಗಿ ಕಾಣುತ್ತೆ. ಈ ಪರಿಷತ್ತಿನ ಅಧ್ಯಕ್ಷರು ಸರ್ವಾನುಮತದಿಂದ ಆರಿಸಲ್ಪಟ್ಟವರಲ್ಲವಾದುದರಿಂದಲೂ, ಈ ಸಾರಿಯ ಪರಿಷತ್ತೂ ಸಹ ಸರ್ವಾನುಮತದ್ದು ಅಲ್ಲದೆ ಇದು ಕೇವಲ ಬ್ರಾಹ್ಮಣ ತಂತ್ರದಿಂದ ನಡೆಯುವುದರಿಂದ ಇದಕ್ಕೆ ಹಿಂದುಳಿದವರು ಯಾರೂ ಸಮ್ಮತಿಸಲಾರರೆಂಬುದನ್ನು ಹೇಳಬೇಕಾದುದಿಲ್ಲ. ಅಲ್ಲದೆ ದಾವಣಗೆರೆಯಲ್ಲಿ ನಡೆಯಲಿಕ್ಕಿರುವ ಪರಿಷತ್ತು ಸಾರ್ವಜನಿಕವಾದುದಲ್ಲವೆಂದು ಪ್ರತಿಯೊಬ್ಬರೂ ಯೋಚಿಸದೆ ಇರಲಾರರು. ಮತ್ತು ಇದಕ್ಕೆ ಹಿಂದುಳಿದವರು ಯಾವ ವಿಧದಿಂದಲೂ ಸಹಾಯ ಮಾಡಲಾರರಾಗಿ ನಂಬಿದೆ.

ಯಥಾರ್ಥವಾದಿ.

ಅಪ್ರಾರ್ಥಿತ ಪೆನ್ಷನ್ ಇದೇತಾನೆ?

ದೇಶಾಭಿಮಾನಿ ಎಂಬುದರು ಮೈಸೂರುರಾಜ್ಯಭಾರ ಎಂಬ ಹೆಡ್ಡಿಂಗಿನಿಂದ ಒಂದು ಬಾತ್ಮಿಯನ್ನು ಕಳೆದ ೨೬ನೆ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಬರೆದಿರುವರು. ಅದರಲ್ಲಿ ಅವರು ಮ|| ಹೊಸಕೊಪ್ಪದ ಕೃಷ್ಣರಾಯರನ್ನು ಅಂಥವರು ಇಂಥವರು ಎಂದು ಹೊಗಳಿರುವದಲ್ಲದೆ ಕಳೆದ ತಿಂಗಳು ೨೮ನೆ ತಾರೀಖಿನ ಹಿಂದೂಪತ್ರಿಕೆಗೆ ಅವರು ಬರೆದಿರತಕ್ಕ ಲೇಖನವು ಮೈಸೂರು ದೇಶಾಭಿಮಾನಿಗಳಿಗೆಲ್ಲಾ ಅವಲೋಕನೀಯವಾದದ್ದು; ಕಳೆದ ೫೦ ವರ್ಷಗಳಿಂದ ಈ ಸಂಸ್ಥಾನದ ಏಳಿಗೆಗೋಸ್ಕರ ಅಹೋರಾತ್ರಿಗಳಲ್ಲಿಯೂ ಕೆಲಸಮಾಡಿ, ಶ್ರೀಮನ್ಮಹಾರಾಜರವರ ಮೆಚ್ಚಿಕೆಗೆ ಪಾತ್ರರಾಗಿ ಅಪ್ರಾರ್ಥಿತವಾಗಿ ಅವರಿಂದ ಹೊಂದಿದ ಪೆನ್ಷನ್ ನಿಲ್ಲಿಸುವ ವಿಷಯದಲ್ಲಿ ಸರ್ ಎಂ. ಕಾಂತರಾಜ ಅರಸಿನವರು ಹೇಗೆ ಮೆಹನತ್ತು ಮಾಡಿದರೋ, ಅದು ಹೇಗೆ ರಾಜದ್ರೋಹವಾಗಿ ಪರಿಣಮಿಸಿತೋ, ಅದಕ್ಕೆ ದೇವರು ಹೇಗೆ ಶಿಕ್ಷೆಯನ್ನು ಮಾಡಿದನೋ ಅದನ್ನು ಮ|| ಕೃಷ್ಣರಾಯರವರು ಧ್ವನಿಬರುವಂತೆ ತಿಳಿಸಿರುವರು ಎಂದು ಮೊದಲಾಗಿ ಬರೆದಿರುವರು.

ಮ|| ವೆಂಕಟಕೃಷ್ಣಯ್ಯನವರು ಕಳೆದ ೫೦ ವರ್ಷಗಳಿಂದಲೂ ಈ ಸಂಸ್ಥಾನದ ಏಳಿಗೆಗೋಸ್ಕರ ಅಹೋರಾತ್ರಿಗಳಲ್ಲಿಯೂ ಕೆಲಸಮಾಡಿ ಶ್ರೀಮನ್ಮಹಾರಾಜರವರಿಂದ ಅಪ್ರಾರ್ಥಿತವಾಗಿ ಪೆನ್ಷನ್ ಪಡೆದಿದ್ದರೆಂದೂ ಮ|| ಕೃಷ್ಣರಾಯರೂ ದೇಶಾಭಿಮಾನಿ ನಾಮಾಂಕಿತರೂ ಬರೆದಿರುವರಷ್ಟೆ. ಮ|| ವೆಂಕಟಕೃಷ್ಣಯ್ಯನವರು ೫೦ ವರ್ಷಗಳಿಂದ ಅಹೋರಾತ್ರಿ ಮಾಡಿದ ಮೆಹನತ್ತಿನಿಂದ ಮೈಸೂರುದೇಶಕ್ಕೆ ಉಂಟಾಗಿರುವ ಪ್ರಯೋಜನಗಳು ಯಾವವೆಂದು ಬಿಚ್ಚಿ ಹೇಳಿದ್ದರೆ ಮ|| ವೆಂಕಟಕೃಷ್ಣಯ್ಯನವರು ದೇಶೋದ್ಧಾರಕರಾದ ಮಹಾಪುರುಷರೆಂದು ತಿಳಿದು ಅವರನ್ನು ಪೂಜಿಸಬಹುದಾಗಿತ್ತು. ಮತ್ತು ಅಪ್ರಾರ್ಥಿತವಾಗಿಯೂ ಸಂತೋಷದಿಂದಲೂ ಶ್ರೀಮನ್ಮಹಾರಾಜರವರು ಪೆನ್ಷನನ್ನು ದಯಪಾಲಿಸಿದ್ದರೆಂದೂ ನಿಸ್ಸಂದೇಹವಾಗಿ ಹೇಳಬಹುದಾಗಿತ್ತು. ಅದೊಂದನ್ನೂ ತಿಳಿಸದೆ ಮ|| ವೆಂಕಟಕೃಷ್ಣಯ್ಯನವರಿಗೆ ಪೆನ್ಷನ್ ನಿಲ್ಲಿಸಲ್ಪಡಲು ಸರ್ ಎಂ. ಕಾಂತರಾಜ ಅರಸಿನವರು ಮೆಹನತ್ತು ಮಾಡಿದರೆಂದೂ ಅದಕ್ಕೆ ತಕ್ಕ ಶಿಕ್ಷೆಯನ್ನು ಅವರಿಗೆ ದೇವರು ಕೊಟ್ಟನೆಂದೂ ಬರೆದಿರುವದನ್ನೋದಿದರೆ, ದಿವಾನ್ ವೆಂಕಟೇಅರಸಿನವರಿಂದೀಚೆಗೆ ಬ್ರಾಹ್ಮಣರಿಂದಲೇ ಅನುಭವಿಸಲ್ಪಡುತ್ತಿದ್ದ ಸಂಸ್ಥಾನದ ದಿವಾನ್‌ಗಿರಿಗೆ ಮ|| ಕಾಂತರಾಜಅರಸಿನವರು ಬಂದರೆಂಬ ಅಸೂಯೆಯಿಂದಲೂ, ಬಹುಕಾಲದಿಂದಲೂ ಹಿಂದುಳಿದಿದ್ದ ಜನವರ್ಗದವರು ವಿದ್ಯಾಬುದ್ಧಿಯಲ್ಲೂ ಸರ್ಕಾರಿ ಅಧಿಕಾರದಲ್ಲೂ ಮುಂದುವರಿಯಲು ಅನುಕೂಲಪಡಿಸಿಕೊಟ್ಟರೆಂಬ ಹೊಟ್ಟೆಕಿಚ್ಚಿನಿಂದಲೂ ಮ|| ಅರಸಿನವರ ದಿವಾನ್‌ಗಿರಿಯನ್ನು ಖಂಡಿಸಿ ಮಹಾರಾಜರ ರಕ್ತಸಂಬಂಧದ ಮೇಲೂ ಗಮನವಿಡದೆ ದುರ್ಭಾಷೆಗಳಿಂದ ಮನಸ್ವೀ ನಿಂದಿಸಿ ತಮ್ಮ ಹೊಟ್ಟೆಯುರಿಯನ್ನು ಶಮನಮಾಡಿಕೊಳ್ಳುವದಕ್ಕಾಗಿಯೇ ಎಂದು ಸ್ಪಷ್ಟವಾಗಿ ತಿಳಿಯಬರುತ್ತದೆ.

ಮುಳುಗಿಹೋಗಿದ್ದ ಮೈಸೂರು ಸಂಸ್ಥಾನವನ್ನುದ್ಧರಿಸಿದವರೆಂದೂ ಈಗಿನ ಏಳಿಗೆಗೆ ಕಾರಣಭೂತರೆಂದೂ ಮಹಾತ್ಮಗಾಂಧಿಯವರ ಸಮಾನರೆಂದೂ ಸ್ವಂತ ಪತ್ರಿಕೆಗಳಲ್ಲಿ ಬರೆಯಿಸಿಕೊಳ್ಳುತ್ತಲೂ ಕೆಲ ಆಪ್ತೇಷ್ಟರಿಂದ ಹೊಗಳಿಸಿಕೊಳ್ಳುತ್ತಲೂ ತಮ್ಮ ಹೇಯವಾದ ಜನ್ಮಚರಿತ್ರೆಯನ್ನು ಮರೆಮಾಚಿ ತಮಗೆ ಉಪಕಾರಮಾಡಿದವರಲ್ಲಿ ದೋಷಾರೋಪಣೆಯನ್ನು ಕಲ್ಪಿಸಿ ನಿಂದಿಸುತ್ತ ಲೋಕವನ್ನು ವಂಚಿಸುತ್ತಿರುವ ಮ|| ವೆಂಕಟಕೃಷ್ಣಯ್ಯನವರು "ಕಳೆದ 50 ವರ್ಷಗಳಿಂದಲೂ ಪತ್ರಿಕೆಗಳನ್ನು ಹೊರಡಿಸುವುದರ ಮೂಲಕ ನಾನು ಪ್ರಜಾಸೇವೆ ಮಾಡುತ್ತಿದ್ದೇನೆ. ಇದರಿಂದ ನನಗೆ ಬಹಳ ನಷ್ಟವಾಯಿತು; ಮನೆಯನ್ನು ಸಹ ಮಾರಿಕೊಂಡೆನು. ಸಂಸಾರದೊಡ್ಡದು. ಜೀವನಕ್ಕೆ ಮರಿಮಲ್ಲಪ್ಪನ ಸ್ಕೂಲಿನಿಂದ ಬರುವಸಂಬಳದ ಹೊರತು ಬೇರೆ ಮಾರ್ಗವಿಲ್ಲ. ನನ್ನನ್ನು ಹೆಡ್ಮಾಸ್ತರಗಿರಿಯಿಂದ ರಿಟೈರ್ ಮಾಡಿಸಲು ಮ|| ರಾಮಲಿಂಗ ರೆಡ್ಡಿಯವರು ಟ್ರಸ್ಟಿಗಳ ಮೂಲಕ ಪ್ರಯತ್ನಿಸಿ ನೋಟೀಸು ಕೊಡಿಸಿರುವರು. ಸೀಮೆಯಲ್ಲಿ ಒಂದೇಸಮ ೦೦ ವರ್ಷಕಾಲ ಕೆಲಸಮಾಡಿದವರಿಗೆ ಪೆನ್ಷನನ್ನು ಕೊಡಲ್ಪಡುವದು. ನನಗೆ ಸ್ಕೂಲಿನಿಂದ ೫೦ ರೂ. ಪೆನ್ಷನ್ ಕೊಡಲು ಟ್ರಸ್ಟಿಗಳು ನಿರ್ಧರಿಸಿರುವುದಾಗಿ ತಿಳಿಯುತ್ತೇನೆ. ಇದು ದೊಡ್ಡ ಸಂಸಾರಿಯಾದ ನನಗೆ ಸಾಲದು. ನನ್ನ ದೊಡ್ಡ ಮಗನು ರೋಗಿಷ್ಠನಾಗಿ ತನ್ನ ಸಂಸಾರಸಮೇತ ನನ್ನ ಪೋಷಣೆಯಲ್ಲಿದ್ದಾನೆ. ಚಿಕ್ಕಮಗನಿಗೆ ಅವನ ಯೋಗ್ಯತೆಗೆ ತಕ್ಕ ಕೆಲಸ ದೊರೆತಿಲ್ಲ. ಪೇಪರುಗಳನ್ನು ನಡಿಸುವುದರಿಂದ ನನಗೆ ಅನೇಕರು ಶತ್ರುಗಳಾಗಿಪರಿಣಮಿಸಿರುತ್ತಾರೆ. ಈ ಕಷ್ಟಕಾಲದಲ್ಲಿ ಮಹಾಸ್ವಾಮಿಯವರು ಸಹಾಯಮಾಡದಿದ್ದರೆ ನಾನು ನನ್ನ [illegible] ವರ್ಷವಯಸ್ಸಿನಲ್ಲಿ ಪರದೇಶಕ್ಕೆಹೋಗಿ ಜೀವನಮಾಡಬೇಕಾಗುತ್ತದೆ. ಆದಕಾರಣ ಮರಿಮಲ್ಲಪ್ಪನ ಸ್ಕೂಲಿನಿಂದ ತಿಂಗಳಿಗೆ ೧೦೦ ರೂಪಾಯಿ ಪೆನ್ಷನ್ ಕೊಡುವಂತೆಯೂ ಸ್ಕೂಲಿನ ಉತ್ಪತ್ತಿಯು ಕಡಿಮೆಯಾದಲ್ಲಿ ಪೆನ್ಷನ್ ನಿಲ್ಲಿಸಲ್ಪಡಬಹುದಾದ್ದರಿಂದ ಸ್ಕೂಲಿಗೆ ಸರ್ಕಾರದಿಂದ ಸಲ್ಲುವ ಮೊಬಲಗಿನಲ್ಲೇ ಕೊಡುವಂತೆಯೂ ಮಹಾಸ್ವಾಮಿಯವರು ಮಾಡಿಸಿಕೊಡಬೇಕು; ಹಾಗಿಲ್ಲದಿದ್ದಲ್ಲಿ ನಾನು ನನ್ನ ದೇಹಧಾರಾಢ್ಯವಿರುವವರೆಗೂ ಹೆಡ್ಮಾಸ್ತರಾಗಿರುವಂತೆಯಾದರೂ ಅಪ್ಪಣೆಯಾಗಬೇಕು" ಇತ್ಯಾದಿಯಾಗಿ ಈಗ್ಗೆ ೪ ವರ್ಷದಲ್ಲಿ ಶ್ರೀಮನ್ಮಹಾರಾಜರವರು ಶ್ರೀನಗರಕ್ಕೆ ದಯಮಾಡಿಸಿದ್ದಾಗ ಅರ್ಜಿಯನ್ನು ಬರೆದುಕೊಂಡಿದ್ದುದರ ಮೇಲೆ "ನಿಮ್ಮನ್ನು ರಿಟೈರುಮಾಡಿಸುವ ವಿಚಾರದಲ್ಲಿ ಕಮಿಟಿಯವರು ಮಾಡಿರುವ ತೀರ್ಮಾನದ ಮೇಲೆ ನಾವೇನೂ ಮಾಡುವುದಕ್ಕಾಗುವುದಿಲ್ಲವು ಮತ್ತು ನೀವು ನಿಮ್ಮ ವೃದ್ಧಾಪ್ಯದಲ್ಲಿ ದೊಡ್ಡ ಸ್ಕೂಲಿನ ಹೆಡ್ಮಾಸ್ತರಾಗಿರಲು ಸಾಧ್ಯವಿಲ್ಲವೆಂಬುದನ್ನು ನೀವೇ ಬಲ್ಲಿರಿ. ಮರಿಮಲ್ಲಪ್ಪನವರ ಫಂಡಿನುತ್ಪತ್ತಿಯಿಂದ ನೀವು ಕೇಳುವಷ್ಟು ಪೆನ್ಷನ್ ಕೊಡಿಸಲು ಸಾಧ್ಯವಿಲ್ಲವು ಅಲ್ಲದೆ ಸರ್ಕಾರದಿಂದ ಕೊಡುವ ಗ್ರಾಂಟಿನಿಂದ ಕೊಡಿಸಲು ರೂಲ್ಸಿಗೆ ವಿರೋಧವಾಗಿರುವುದಲ್ಲದೆ ಹಿಂದಣ ನಿದರ್ಶನವ್ಯಾವದೂ ಇಲ್ಲವು. ಆದರೆ ನೀವು ರಿಟೈರಾದ ಮೇಲೆ ಸರ್ಕಾರದಿಂದ ನಿಮಗೆ ಪ್ರತ್ಯೇಕವಾದ ಗ್ರಾಂಟು ಕೊಡಲ್ಪಡುವ ವಿಚಾರವು ಶ್ರೀಮನ್ಮಹಾರಾಜರವರಿಂದ ಪರ್ಯಾಲೋಚಿಸಲ್ಪಡುವುದು" ಎಂದು ಉತ್ತರಬಂದಿರುವುದಾಗಿ ಮ|| ವೆಂಕಟಕೃಷ್ಣಯ್ಯನವರೇ ತಮ್ಮ ಆಪ್ತೇಷ್ಟರಿಗೆ ಹೇಳಿರುತ್ತಾರೆ. ಅಲ್ಲದೆ ಈ ಕರಿಸ್ಪಾಂಡೆನ್ಸನ್ನು ನಾನು ಚೆನ್ನಾಗಿ ಬಲ್ಲೆನು. ಅವಶ್ಯಬಿದ್ದಲ್ಲಿ ಅದು ಪ್ರಕಟಿಸಲ್ಪಡುವದು.

ಮ|| ವೆಂಕಟಕೃಷ್ಣಯ್ಯನವರು ಅನುಭವಿಸುತ್ತಿದ್ದ ಪೆನ್ಷನನ್ನು ಅಪ್ರಾರ್ಥಿತವಾದದ್ದೊ ಅಥವಾ ಅಂಗಲಾಚಿಬೇಡಿಕೊಂಡದ್ದೊ ಎಂಬದನ್ನು ಮ|| ಕೃಷ್ಣರಾಯರೂ ದೇಶಾಭಿಮಾನಿ ನಾಮಾಂಕಿತರೂ ಈಗಲಾದರೂ ತಿಳಿದು ಹೇಳಲಿ. ಈ ಪೆನ್ಷನನ್ನು ನಿಲ್ಲಿಸಲ್ಪಡಲು ಸರದಾರ್ ಕಾಂತರಾಜ ಅರಸಿನವರು ಕಾರಣಭೂತರೆಂದೂ, ಅದಕ್ಕಾಗಿ ಅವರು ದೇವರಿಂದ ಶಿಕ್ಷೆಯನ್ನು ಹೊಂದಿದರೆಂದೂ ನಾಚಿಕೆಯಿಲ್ಲದೆ ಬರೆದಿರುವರು. ಮ|| ಕಾಂತರಾಜ ಅರಸಿನವರ ಮನಸ್ಸು ಅತ್ಯಂತ ಕನಿಕರವುಳ್ಳದ್ದು. ಅವರು ಸರ್ ಶೇಷಾದ್ರಯ್ಯರ್ ಮತ್ತು ಮಾಧವರಾಯರಂತೆ ಕಠಿಣಹೃದಯರಾಗಿದ್ದಲ್ಲಿ ಮ|| ವೆಂಕಟಕೃಷ್ಣಯ್ಯನವರು ಉಪಕಾರಸ್ಮರಣೆಯಿಲ್ಲದೆ ಶ್ರೀಮನ್ಮಹಾರಾಜರವರಪಿಯಾಗಿ ರಾಜಬಂಧುಗಳನ್ನು ವಾಚಾಮಗೋಚರವಾಗಿ ನಿಂದಿಸಿದ್ದಕ್ಕಾಗಿ ಗಡೀಪಾರು ಮಾಡಿಸದೇ ಬಿಡುತ್ತಿರಲಿಲ್ಲ. ದುಷ್ಟಪ್ರಾಣಿಗಳಿಗೆ ದಯೆಯನ್ನು ತೋರಿಸಿದರೆ ಅನರ್ಥಕ್ಕೆ ಫಲವು ಇದೇ! ಮ|| ವೆಂಕಟಕೃಷ್ಣಯ್ಯನವರಿಗೆ ಸಲ್ಲುತ್ತಿದ್ದ ಪೆನ್ಷನ್ ನಿಲ್ಲಿಸಲು ಮೆಹನತ್ತು ಮಾಡಿದ ತಪ್ಪಿತಕ್ಕಾಗಿ ಅರಸಿನವರಿಗೆ ದೇವರಿಂದ ಶಿಕ್ಷೆಯಾಯ್ತು (ರೋಗಪ್ರಾಪ್ತವಾಗಿ ದಿವಾನಗಿರಿ ತಪ್ಪಿತು) ಎಂದು ಬರೆದಿರುತ್ತಾರೆ. ಪೆನ್ಷನ್ ತಪ್ಪಿಸಲು ಪ್ರಯತ್ನಪಟ್ಟಮಾತ್ರಕ್ಕೆ ಅರಸಿನವರಿಗೆ ಇಂತ ಶಿಕ್ಷೆಯಾಗಬೇಕಾಗಿದ್ದಲ್ಲಿ ವೆಂಕಟಕೃಷ್ಣಯ್ಯನವರ ಮಹಾತ್ಮೆಯು ಎಂತಾದ್ದಾಗಿರಬೇಕು! ಇಂತಹ ಮಹಿಮಾಪುರುಷರ ಮಗಳಿಗೆ ವೈಧವ್ಯವೂ, ಅಳಿಯ ಮಕ್ಕಳಿಗೆಲ್ಲಾ ಅಕಾಲಮರಣವೂ, ದೊಡ್ಡಮಗನಿಗೆ ಬುದ್ಧಿಭ್ರಾಂತಿಯೂ, ಚಿಕ್ಕಮಗನಿಗೆ ಅಪಮೃತ್ಯುವೂ, ಮನೆಯನ್ನು ಮಾರಿಕೊಂಡು ಯಾಚಿಸುವ ಸ್ಥಿತಿಯೂ ಯಾತಕ್ಕೆ ಲಭ್ಯವಾಗಬೇಕು? ಇವನ್ನು ವೆಂಕಟಕೃಷ್ಣಯ್ಯನವರ ಕಡೆ ವಕಾಲತ್ತನ್ನು ವಹಿಸಿರುವ ಮ|| ಹೊಸಕೊಪ್ಪದ ಕೃಷ್ಣರಾಯರು ಮೊದಲಾದವರು ವಿವರಿಸಿ ಹೇಳಬೇಕಾಗಿದೆ. ಪತ್ರಿಕಾವಿಸ್ತಾರವಾದದ್ದರಿಂದ ಸದ್ಯಕ್ಕೆ ನಿಲ್ಲಿಸಿ ಮಹಾತ್ಮರಾದ ವೆಂಕಟಕೃಷ್ಣಯ್ಯನವರ ಪರಿಶುದ್ಧವಾದ ಪೂರ್ವಚರಿತ್ರೆಯನ್ನು ಮುಂದೆ ಬರೆಯುತ್ತೇನೆ. ಆಗ್ಗೆ ಅವರ ಕಪಟನಾಟಕವೆಲ್ಲವೂ ತಾನಾಗಿಯೇ ಪ್ರದರ್ಶನವಾಗುವದು.

[illegible]